ಕರ್ನಾಟಕ ವಿಧಾನಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಕರ್ನಾಟಕ ರಾಜ್ಯ ಪತ್ರಾಗಾರ
ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು
ಕ್ರ.ಸಂ. ....ದಿನಾಂಕ 31/8/95
20,648

ಅಧಿಕೃತ ವರದಿ

OFFICIAL REPORT

ಒಂಭತ್ತನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE NINTH LEGISLATIVE ASSEMBLY

ಸಂಪುಟ ೫ (ಕ್ರಮಾಂಕ ೧ರಿಂದ ೫)

Volume 5 (Nos. 1 TO5)

(೧೯ರಿಂದ ೨೧ನೇ ಮಾರ್ಚ್, ೧೯೯೨ ಮತ್ತು ೨೩ರಿಂದ ೨೪ನೇ ಮಾರ್ಚ್, ೧೯೯೨)

(19th to 21st March, 1992 and 23rd to 24th March, 1992)

ಕರ್ನಾಟಕ ವಿಧಾನಮಂಡಲದ ಕಾರ್ಯಾಲಯ, ಬೆಂಗಳೂರು

Karnataka Legislature Secretariat, Bangalore.

CONTENTS TO THE
KARNATAKA LEGISLATIVE ASSEMBLY DEBATES
Volume - 5 (Nos. 1 to 5)

(೧೯ರಿಂದ ೨೧ನೇ ಮಾರ್ಚ್ ೧೯೯೨, ೨೩ನೇ ಮತ್ತು ೨೪ನೇ ಮಾರ್ಚ್ ೧೯೯೨ರವರೆಗೆ)

ಗುರುವಾರ, ೧೯ನೇ ಮಾರ್ಚ್ ೧೯೯೨

೧.	ವಿತ್ತೀಯ ಕಾರ್ಯಕಲಾಪಗಳು ೧೯೯೨-೯೩ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ, ಉತ್ತರ ಹಾಗೂ ಮತಕ್ಕೆ ಹಾಕುವುದು (ಲೇಖನ ಸಾಮಗ್ರಿ ಮತ್ತು ಮುದ್ರಣ, ಉಚ್ಚ ಶಿಕ್ಷಣ, ಸೆಕೆಂಡರಿ ಶಿಕ್ಷಣ, ರಾಜ್ಯ ವಿಧಾನಮಂಡಲ, ನ್ಯಾಯ ಪರಿಪಾಲನೆ)	...	1-33
೨.	ಮಂತ್ರಿಗಳಿಂದ ಚರ್ಚೆಗೆ ಉತ್ತರ	...	33-95
೩.	ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿಯನ್ನು ವಿಸ್ತರಿಸುವುದು (೧೯೯೦ನೇ ಸಾಲಿನ ಹಿಂದೂ ಉತ್ತರಾಧಿಕಾರ (ಕರ್ನಾಟಕ) ತಿದ್ದುಪಡಿ ವಿಧೇಯಕದ ಬಗ್ಗೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿಯನ್ನು ೧೯೯೨ನೇ ಜೂನ್ ಅಂತ್ಯದವರೆಗೆ ವಿಸ್ತರಿಸುವುದು)	...	95-97
೪.	ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು	...	97-133
೫.	ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು	...	133-141
೬.	ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು	...	141-162
೭.	ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ:-		
	ವಿಷಯ: (೧) ಹೊಗೆಸೊಪ್ಪಿನ ಬೆಳೆಗಾರರಿಗೆ ಆಗಿರುವ ತೊಂದರೆ	...	162-167
	(೨) ಮಂಗಳೂರು ರಸಗೊಬ್ಬರ ಕಾರ್ಖಾನೆಯ ನೌಕರರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ	...	167-168
೮.	ನಿಯಮ ೩೩೪ ಮೇರೆಗೆ		
	ವಿಷಯ (೧) ಮೈಸೂರು ಜಿಲ್ಲೆಯಲ್ಲಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳ ಭರ್ತಿ	...	168
	(೨) ಮೂಡಬಿದ್ರೆಯ ಇರುವೈಲಿಗೆ ಆರೋಗ್ಯ ಕೇಂದ್ರ	...	168-169

(೩) ಬೆಂಗಳೂರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ
ದಕ್ಷಿಣ ರೈಲ್ವೆ, ಅಡ್ವಾನ್ಸ್ ಬುಕ್ಕಿಂಗ್ ಕೇಂದ್ರದಲ್ಲಿ
ಕಂಪ್ಯೂಟರ್ ವ್ಯವಸ್ಥೆ ಜಾರಿ ... 169

(೪) ಚೆನ್ನಪಟ್ಟಣ ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸುಗಳನ್ನು
ಹೆಚ್ಚು ಹಾಕಿ ಓಡಿಸುವ ಬಗ್ಗೆ ... 169-171

೬. ವಿತ್ತೀಯ ಕಾರ್ಯಕಲಾಪಗಳು
೧೯೯೨-೯೩ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ.
(ವ್ಯವಸಾಯ (ತೋಟಗಾರಿಕೆ ಹೊರತು) ತೋಟಗಾರಿಕೆ, ಪಶು
ಸಂಗೋಪನಾ ಮತ್ತು ಡೈರಿ ಅಭಿವೃದ್ಧಿ, ಮೀನುಗಾರಿಕೆ,
ರೇವು ಮತ್ತು ಜಲಸಾರಿಗೆ ಸೇವೆಗಳು, ಅರಣ್ಯ) ... 171-212

ಶುಕ್ರವಾರ ೨೦ನೇ ಮಾರ್ಚ್ ೧೯೯೨

೧. ವಿತ್ತೀಯ ಕಾರ್ಯಕಲಾಪಗಳು
೧೯೯೨-೯೩ನೇ ಸಾಲಿಗೆ ಸಂಬಂಧಿಸಿದ ಇಲಾಖಾ ಬೇಡಿಕೆಗಳ
ಮೇಲಿನ ಚರ್ಚೆಗೆ ಮಂತ್ರಿಗಳಿಂದ ಉತ್ತರ.
(ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಡೈರಿ ಬಗ್ಗೆ,
ಮೀನುಗಾರಿಕೆ, ರೇವು ಮತ್ತು ಜಲಸಾರಿಗೆ ಸೇವೆಗಳು ಹಾಗೂ
ಅರಣ್ಯ) ... 213-264

೨. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು ... 264-299

೩. ಶಾಸನಾತ್ಮಕ ನಿರ್ಣಯ
ವಿಷಯ: ೧೯೯೧ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ
ವಿಧೇಯಕ, ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿ ವಿಸ್ತರಣೆ ... 299-300

೪. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು ... 300-352

೫. ನಿಯಮ ೩೩೪ರ ಮೇರೆಗೆ
ವಿಷಯ: ೧) ಪಾಲಿಟೆಕ್ನಿಕ್‌ಗಳಲ್ಲಿ ಅಧ್ಯಾಪಕರಿಗೆ ಬಡ್ತಿ ನೀಡುವುದು
೨) ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಾರ್ ಮತ್ತು
ವೈನ್‌ಶಾಪ್‌ಗಳಿಗೆ ಅನುಮತಿ ನೀಡಿರುವುದರಿಂದ ಸಾರ್ವಜನಿಕರಿಗೆ
ತೊಂದರೆ ... 352-353

೩) ಗುಲ್ಬರ್ಗ ಜಿಲ್ಲೆಯ ಸೇಡಂ ನಗರದ ಸಮೀಪದಲ್ಲಿರುವ ಸಿಮೆಂಟ್
ಕಾರ್ಖಾನೆಗಳಿಂದ ಹೊರಸೂಸುವ ಹೊಗೆಯಿಂದ ಜನರ ಆರೋಗ್ಯದ
ಮೇಲುಂಟಾಗಿರುವ ದುಷ್ಪರಿಣಾಮ ... 354

೪) ಲೋಕಸೇವಾ ಆಯೋಗ ನಡೆಸಿದ ಇಲಾಖಾ ಪರೀಕ್ಷೆಯಲ್ಲಿ ತಪ್ಪು
ಪ್ರಶ್ನೆ ಪತ್ರಿಕೆಯನ್ನು ನೀಡಿರುವುದು ... 352-355

೫) ಬೆಂಗಳೂರಿನ ಜಯನಗರ ಬಸ್ ನಿಲ್ದಾಣದ ಪರಿಸ್ಥಿತಿಯನ್ನು
ಉತ್ತಮಪಡಿಸುವ ಬಗ್ಗೆ ... 355

೬) ಹೇಮಾವತಿ ಎಡದಂತೆ ನಾಲೆಯಿಂದ ಮಂಡ್ಯ ಜಿಲ್ಲೆಗೆ
ನೀರು ಸರಬರಾಜು ಮಾಡುವುದು ... 355-356

೭) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ
ಕಲಾ ಪದವೀಧರರಿಗೆ ಸೌಲಭ್ಯವನ್ನು ಒದಗಿಸುವುದು ... 356-357

೬. ಸಭೆಯ ಮುಂದಿಡಲಾದ ಕಾಗದ ಪತ್ರಗಳು ... 357-358

೭. ವರದಿಯನ್ನೊಪ್ಪಿಸುವುದು ...

೮. ೧೯೯೧-೯೨ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಗಳ 358-359
ಪ್ರಸ್ತಾವಗಳನ್ನೊಪ್ಪಿಸುವುದು ...

೯. ಮಂತ್ರಿಗಳ ಹೇಳಿಕೆ
ವಿಷಯ: ಕರ್ನಾಟಕ ರಾಜ್ಯದ ಹೊಗೆಸೊಪ್ಪು ಬೆಳೆಗಾರರ ಸಮಸ್ಯೆ ಬಗ್ಗೆ ... 359

೧೦. ವಿತ್ತೀಯ ಕಾರ್ಯಕಲಾಪಗಳು.
೧೯೯೨-೯೩ನೇ ಸಾಲಿನ ಇಲಾಖಾ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ
(ಸಹಕಾರ, ಕ್ರಮಪಡಿಸಿದ ಮಾರುಕಟ್ಟೆಗಳು, ಕಾರ್ಮಿಕ ಮತ್ತು ಉದ್ಯೋಗ,
ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು) ... 359-431

ಶನಿವಾರ, ೨೧ನೇ ಮಾರ್ಚ್ ೧೯೯೨

೧. ವಿತ್ತೀಯ ಕಾರ್ಯಕಲಾಪಗಳು
೧೯೯೨-೯೩ನೇ ಸಾಲಿನ ಅನುದಾನದ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ
ಹಾಗೂ ಮತಕ್ಕೆ ಹಾಕುವುದು ...

ಅ) ಮಾನ್ಯ ಸಹಕಾರ ಸಚಿವರಿಂದ ಉತ್ತರ ... 431-440

ಆ) ಮಾನ್ಯ ಕಾರ್ಮಿಕ ರಾಜ್ಯ ಸಚಿವರಿಂದ ಉತ್ತರ ... 440-461

ಇ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಿಂದ ಉತ್ತರ ... 461-480

೨. ಶಾಸನ ರಚನಾ ಕಾರ್ಯಕಲಾಪಗಳು
ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು
೧) ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿಗಳು,
ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿ (ತಿದ್ದುಪಡಿ)
ವಿಧೇಯಕ, ೧೯೯೨ ... 480-496

ಸೋಮವಾರ ೨೩ನೇ ಮಾರ್ಚ್ ೧೯೯೨

೧. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ
ನೀಡಲಾದ ಉತ್ತರಗಳು ... 497-519

೨. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು ... 519-531

೩. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು ... 531-556

೪. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ:
ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ವಿಷಮ ಜ್ವರದಿಂದ ಬಳಲುತ್ತಿರುವ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಒದಗಿಸುವುದು. ... 556

೫. ನಿಯಮ ೩೩೪ರ ಮೇರೆಗೆ
ವಿಷಯ: ೧) ದಾವಣಗೆರೆ ನಗರ ಸಭೆಯ ಅಭಿವೃದ್ಧಿ ಯೋಜನೆಗಳಿಗೆ ವಿಶ್ವಬ್ಯಾಂಕ್‌ನಿಂದ ನೆರವು. ... 556-557

೨) ಗುಲ್ಬರ್ಗ ಜಿಲ್ಲೆಯ ಸೇಡಂ ಮತಕ್ಷೇತ್ರದಲ್ಲಿ ಇರುವ ಪಶುವೈದ್ಯ ಶಾಲೆಗಳಿಗೆ ಸಾಕಷ್ಟು ಔಷಧಿಗಳನ್ನು ಸರಬರಾಜು ಮಾಡುವುದು ... 557-558

೩) ಗುಬ್ಬಿ ನಗರದ ಶ್ರೀ ಚೆನ್ನಬಸವೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಹಾದುಹೋಗುವ ೩ ಕಿ. ಮೀ. ಶಿಥಿಲವಾಗಿರುವ ರಸ್ತೆಯನ್ನು ದುರಸ್ತಿಗೊಳಿಸುವುದು. ... 558

೪) ಬೆಂಗಳೂರು ದಕ್ಷಿಣ ತಾಲ್ಲೂಕು ಕೋಲೂರು ಸರ್ಕಾರಿ ಶಾಲೆಯಲ್ಲಿ ಮಕ್ಕಳು ಶಾಲೆ ಪ್ರವೇಶಿಸಿದ ಕೂಡಲೇ ಪ್ರಜ್ಞೆ ತಪ್ಪಿ ಬೀಳುತ್ತಿರುವುದರಿಂದ ಉದ್ಭವಿಸಿರುವ ಪರಿಸ್ಥಿತಿ ಕುರಿತು ... 558-559

೫) ಚನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವು ನಷ್ಟವನ್ನು ಅನುಭವಿಸುತ್ತಿರುವುದು ... 559-560

೬) ಶಾಸನ ರಚನಾ ಕಾರ್ಯಕಲಾಪಗಳು.
ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು
ಕರ್ನಾಟಕ ಅನುಸೂಚಿತ ಜಾತಿಗಳು ಹಾಗೂ ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ವಿಧೇಯಕ, ೧೯೯೨ ... 560-568

೭. ವಿತ್ತೀಯ ಕಾರ್ಯಕಲಾಪಗಳು.
ಎ) ೧೯೯೧-೯೨ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳ ಬಗ್ಗೆ ಚರ್ಚೆ ಹಾಗೂ ಮತಕ್ಕೆ ಹಾಕುವುದು ... 568-569

ಬಿ) ೧೯೯೨-೯೩ನೇ ಸಾಲಿನ ಇಲಾಖಾ ಬೇಡಿಕೆಗಳ ಮಂಡನೆ, ಚರ್ಚೆ ಹಾಗೂ ಮತಕ್ಕೆ ಹಾಕುವುದು
(ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಹೊರತುಪಡಿಸಿ) ನಗರಾಭಿವೃದ್ಧಿ ಇತ್ಯಾದಿ, ನಗರ ಪಾಲಿಕೆಗಳು ಮತ್ತು ಪಟ್ಟಣ ಪುರಸಭೆಗಳಿಗೆ ಪರಿಹಾರ ಹಾಗೂ ಅನುದಾನ, ಆಹಾರ ಮತ್ತು ನಾಗರೀಕ ಸರಬರಾಜುಗಳು, ಯುವಜನ ಸೇವೆಗಳು, ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ) ... 569-711

ಮಂಗಳವಾರ, ೨೪ನೇ ಮಾರ್ಚ್ ೧೯೯೨

೧. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು ... 713-746

೨. ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು ... 746-758

೩. ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ: ರೈತರ ಸಾಲ ಮನ್ನಾ ಮಾಡುವುದು ... 758-759

೪. ಅರ್ಜಿಗಳನ್ನೊಪ್ಪಿಸುವುದು ... 759-760

೫. ನಿಯಮ ೩೩೪ರ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

೧) ಭದ್ರಾವತಿ ಹಳೇ ನಗರಕ್ಕೆ ನೀರು ಪೂರೈಕೆ ಯೋಜನೆ ಕಾರ್ಯಗತಗೊಳಿಸುವ ಬಗ್ಗೆ ... 760-767

೨) ಬೆಳ್ತಂಗಡಿ, ಉಜಿರೆ ಮತ್ತು ಧರ್ಮಸ್ಥಳಗಳಲ್ಲಿ ಬಸ್ ನಿಲ್ದಾಣವನ್ನು ರಚಿಸುವ ಬಗ್ಗೆ ... 767-768

೩) ಬೆಂಗಳೂರಿನ ಲಕ್ಕಸಂದ್ರದ ಬಂಡೆಯ ಬಳಿ ಕೂಡಲೇ ಕಲ್ಲು ಚಪ್ಪಡಿಗಳನ್ನು ಹಾಕುವ ಬಗ್ಗೆ ... 768-769

೪) ನಾಗರಹೊಳೆ ಬೆಂಕಿ ದುರಂತಕ್ಕೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ... 769

೫) ಕಾಲುವೆಯ ಬಗ್ಗೆ ... 770-771

೬) ಬೆಂಗಳೂರಿನ ಸಂಜಯಗಾಂಧಿ ಆಸ್ಪತ್ರೆಯಲ್ಲಿ ೧೯೮೭ರಿಂದಲೂ ಪರಿಶಿಷ್ಟರಿಗೆ ಮೀಸಲಿಟ್ಟ ಅಸಿಸ್ಟೆಂಟ್ ಪ್ರೊಫೆಸರ್ (ಆರ್ಥೋಪೆಡಿಕ್) ಬ್ಯಾಕ್‌ಲಾಗ್ ಹುದ್ದೆಯ ಬಗ್ಗೆ ... 771

೭) ಚನ್ನಪಟ್ಟಣ ತಾಲ್ಲೂಕು ಕನ್ನಮಂಗಲ ಗ್ರಾಮದ ಸರ್ವೆ ನಂ. ೧೪೮ರ ಜಮೀನನ್ನು ಮಂಜೂರು ಮಾಡುವ ಬಗ್ಗೆ ... 772-723

೬. ಶಾಸನ ರಚನಾ ಕಾರ್ಯಕಲಾಪಗಳು: ೧೯೯೨ರ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ವಿಧೇಯಕ (ಮಂಡನೆಗೆ ಅನುಮತಿಗಾಗಿ ಕೋರಿಕೆ) ... 773-74

೭. ವಿತ್ತೀಯ ಕಾರ್ಯಕಲಾಪಗಳು: ೧೯೯೨-೯೩ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು ... 774-907

೮. ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಸಮಿತಿಯ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ ... 908

೯. ಬೇಡಿಕೆಗಳ ಮೇಲಿನ ಚರ್ಚೆಗಳಿಗೆ ಮಂತ್ರಿಗಳಿಂದ ಉತ್ತರ ... 908-934

೧೦. ಅನುಬಂಧ ... 934-942

ಕರ್ನಾಟಕ ವಿಧಾನ ಸಭೆ

ಗುರುವಾರ, ದಿನಾಂಕ, ೧೯ನೇ ಮಾರ್ಚ್ ೧೯೮೨

ಸದನವು, ವಿಧಾನಸೌಧದ ಮೊದಲನೆಯ ಮಹಡಿಯಲ್ಲಿರುವ ವಿಧಾಸ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೧೧ ಗಂಟೆ ೧೩ ನಿಮಿಷಕ್ಕೆ ಆರಂಭವಾಯಿತು.

(ಸನ್ಮಾನ್ಯ ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ವಿತ್ತೀಯ ಕಾರ್ಯಕಲಾಪಗಳು.

೧೯೮೨-೮೩ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

(ಲೇಖನ ಸಾಮಗ್ರಿ ಮತ್ತು ಮುದ್ರಣ, ಉಚ್ಚ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಸೆಕೆಂಡರಿ ಶಿಕ್ಷಣ, ರಾಜ್ಯ ವಿಧಾನ ಮಂಡಲ, ನ್ಯಾಯ ಪರಿಪಾಲನೆ).

ಶ್ರೀ ಮಂಜುನಾಥ್ ಕುನ್ನೂರು (ಶಿಗ್ಗಾಂವ್):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಶಿಕ್ಷಣ ಸಚಿವರು ಹಾಗೂ ಕಾನೂನು ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸುತ್ತಾ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮೊದಲನೆಯದಾಗಿ, ಶಿಕ್ಷಣ ಸಚಿವರು ಈ ಶಿಕ್ಷಣರಂಗ ಮತ್ತು ಹೊಸತಿರುವು ೧೯೮೧-೮೨ ಎಂಬ ಪುಸ್ತಕದಲ್ಲಿ ಈ ಇಲಾಖೆಯ ಬಗ್ಗೆ ಸರಕಾರದವರು ಮಾಡಿರುವ ಕಾರ್ಯಕ್ರಮಗಳನ್ನು ಮತ್ತು ಹೊಸದಾಗಿ ಹಾಕಿಕೊಂಡಿರುವ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಇವುಗಳನ್ನು ನೋಡಿದಾಗ ಶಿಕ್ಷಣ ರಂಗದಲ್ಲಿ ಇವರು ಒಂದು ಆಂದೋಲನವನ್ನೇ ಮಾಡುವರೇನೋ ಎಂಬ ಸಂತೋಷದ ಸಂಗತಿ ಹೊರಬರುತ್ತಿದೆ. ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಸುಮಾರು ೧೧ ಸಾವಿರ ಶಿಕ್ಷಕರನ್ನು ನೇಮಕಾತಿ ಮಾಡಬೇಕೆಂದು, ಈ ರೀತಿ ಶಿಕ್ಷಕರನ್ನು ನೇಮಕಾತಿ ಮಾಡುವಾಗ ಮೆರಿಟ್ ಆಧಾರದ ಮೇಲೆ, ವಯಸ್ಸಿನ ಆಧಾರದ ಮೇಲೆ ಗ್ರಾಮೀಣ ಪ್ರದೇಶದಲ್ಲಿ ವಿಶೇಷವಾಗಿ ವಾಸಿಸತಕ್ಕವರಿಗೆ ನೂರಕ್ಕೆ ೧೫ರಷ್ಟು ಬೋನಸ್ ಮಾರ್ಕ್ಸ್‌ಗಳನ್ನು ಕೂಡಾ ಕೊಟ್ಟು ಈ ಒಂದು ವ್ಯವಸ್ಥೆ ಮಾಡಿದ್ದಾರೆ. ಇದರ ಶ್ರೇಯಸ್ಸು ನಮ್ಮ ಸರಕಾರದ್ದಾಗಿದೆ ಎಂದು ಬಹಳ ಹೆಮ್ಮೆಯಿಂದ ಹೇಳುತ್ತಿದ್ದೇನೆ. ಜೊತೆಗೆ ಶಿಕ್ಷಣದ ಕಡತ ಯಜ್ಞ ನೋಡಿದಾಗ ಅನೇಕ ಪ್ರಕರಣಗಳನ್ನು ವಿಲೇವಾರಿ ಮಾಡಿ, ಶೈಕ್ಷಣಿಕಮಟ್ಟದಲ್ಲಿ ಅಧಿಕಾರಿಗಳು ಇನ್ನೂ ಚುರುಕಾಗಿ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಹಾಗೂ ಜನ ಸಾಮಾನ್ಯರಿಗೆ ಅವರವರ ಕೆಲಸಗಳು ತೀವ್ರಗತಿಯಲ್ಲಿ ಆಗಬೇಕೆಂಬ ಉದ್ದೇಶದಿಂದ ಈ ಶಿಕ್ಷಣ ಕಡತ ಯಜ್ಞ ಮಾಡಲಾಗಿದೆ. ಇಂತಹ ಯೋಜನೆಗಳನ್ನು ನೋಡಿದಾಗ, ಮಂತ್ರಿಗಳು ಆಯಾ ಖಾತೆಗೆ ಬರುತ್ತಾರೆ, ಹೋಗುತ್ತಾರೆ ಆದರೆ ನಿರಂತರವಾಗಿ ಅಧಿಕಾರಿಗಳು ಕೆಲಸವನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಈ ಒಂದು ವಿಚಾರದಲ್ಲಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಪ್ರಜಾ ಪ್ರಭುತ್ವ ರಾಷ್ಟ್ರದಲ್ಲಿ ಹಾಕಿಕೊಂಡಾಗ ಆಯಾಯಾ ಇಲಾಖೆಗಳು, ಸಂಬಂಧಪಟ್ಟ ಅಧಿಕಾರಿಗಳು ಹೆಚ್ಚಿನ ಗಮನವನ್ನು

ಕೊಟ್ಟು ಆ ಒಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲಿಕ್ಕೆ ಬೇಕಾದಂತಹ ಸಹಕಾರ ಕೊಡಬೇಕಾಗುತ್ತದೆ. ಅದು ಅವರ ಆದ್ಯ ಕರ್ತವ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ. ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ನಾವು ವಿಶೇಷವಾದ ಪುರಸ್ಕಾರಗಳನ್ನು ಕೂಡ ಕೊಡಬೇಕಾಗುತ್ತದೆ. ಜೊತೆಗೆ ಯಾವ ಅಧಿಕಾರಿಗಳು ತಪ್ಪು ಮಾಡುತ್ತಾರೆ ಅಂತಹವರ ಮೇಲೆ ಒಂದು ಶಿಸ್ತಿನ ಕ್ರಮ ಕೈಗೊಳ್ಳುವುದು ಅಷ್ಟೇ ಅವಶ್ಯಕತೆ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ. ನಮಗೆ ಸ್ವಾತಂತ್ರ್ಯ ಸಿಕ್ಕಿ ೪೫ ವರ್ಷಗಳು ಗತಿಸಿದರೂ ಕೂಡ ಇವತ್ತು ನಮ್ಮ ಅಕ್ಷರಸ್ಥರ ಸಂಖ್ಯೆ ನೋಡಿದಾಗ ಕೇವಲ ೩೫ರಿಂದ ೪೦ ಪರ್ಸೆಂಟ್ ಶಿಕ್ಷಣವನ್ನು ಹೊಂದಿದ್ದೇವೆ. ಇಡೀ ರಾಜ್ಯದಲ್ಲಿ ಸುಮಾರು ೬೦ ಪರ್ಸೆಂಟ್ ನಿರಕ್ಷರಿಗಳನ್ನು ಅಕ್ಷರಸ್ಥರನ್ನಾಗಿ ಮಾಡತಕ್ಕಂಥ ಒಂದು ಹೊಣೆಗಾರಿಕೆ ನಮ್ಮ ಮೇಲೆ ಇದೆ. ಆ ದೃಷ್ಟಿಯಿಂದ ಪ್ರಪಂಚದಲ್ಲಿ ಎಲ್ಲಾ ರಾಷ್ಟ್ರಗಳಲ್ಲೂ ಕೂಡ ಶಿಕ್ಷಣಕ್ಕೆ ಪ್ರಾಧಾನ್ಯತೆ ಕೊಡಲಾಗಿದೆ. ಇವತ್ತು ಶಿಕ್ಷಣ ಈ ದೇಶದ ಒಂದು ಭದ್ರಬುನಾದಿ ಮತ್ತು ಎಲ್ಲಾ ದೇಶಗಳ ಬಂಡವಾಳ ಎನ್ನತಕ್ಕಂಥ ಉದ್ದೇಶದಿಂದ ಸಾಕಷ್ಟು ಹಣವನ್ನು ಶಿಕ್ಷಣಕ್ಕೆ ಮಿಸಲಿಟ್ಟಿರುತ್ತಾರೆ, ಮತ್ತು ಖರ್ಚು ಮಾಡುತ್ತಾರೆ. ಆದರೆ ಸಾಕ್ಷರತಾ ಆಂದೋಳನ ಕಾರ್ಯಕ್ರಮವನ್ನು ನೋಡಿದಾಗ ಇವತ್ತು ನಾವು ಆಮೆ ನಡಿಗೆಯಲ್ಲಿ ಸಾಗುತ್ತಿದ್ದೇವೆ ಎಂದು ಹೇಳಿದರೆ ತಪ್ಪಾಗಲಾರದು. ಈ ಒಂದು ನಿರಕ್ಷರತೆಯನ್ನು ಹೋಗಲಾಡಿಸುವ ಸಲುವಾಗಿ ವಿಶೇಷವಾಗಿ ಈ ವರ್ಷ ನಮ್ಮ ಸರ್ಕಾರ ಹಾಕಿಕೊಂಡಂತಹ ಕಾರ್ಯಕ್ರಮಗಳನ್ನು ನಾವು ನೋಡಿದಾಗ ಹೆಚ್ಚು ವೇಗದಿಂದ ಓಡಲಿಕ್ಕೆ ಪ್ರಯತ್ನವನ್ನು ಮಾಡಿದ್ದೇವೆ ಎನ್ನತಕ್ಕಂಥ ಒಂದು ವಿಚಾರ ಕೂಡ ನನಗೆ ಬರುತ್ತಿದೆ. ಇವತ್ತು ಶಿಕ್ಷಣ ಅಂದರೆ ಒಂದು ಜ್ಯೋತಿ ಇದ್ದಂತೆ. ಮನುಷ್ಯನಲ್ಲಿ ಅಜ್ಞಾನ ಎಂಬ ಕತ್ತಲನ್ನು ಹೊಡೆದು ಓಡಿಸಿ ಜ್ಞಾನವೆಂಬ ಬೆಳಕನ್ನು ಚೆಲ್ಲತಕ್ಕಂಥಾದ್ದು. ಆದ್ದರಿಂದ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು. ಇವತ್ತು ರಾಷ್ಟ್ರದ ಸರ್ವತೋಮುಖ ಪ್ರಗತಿ, ಕೀರ್ತಿ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಬೇಕಾದರೆ ಸಾಕ್ಷರತೆಯನ್ನು ನಾವು ಸಾರ್ವತ್ರಿಕವಾಗಿ ನೀಡಬೇಕಾಗುತ್ತದೆ. ಸಾಕ್ಷರತೆಯ ಬಗ್ಗೆ ಸರ್ವಜ್ಞ ಕೂಡ ಹೇಳಿದ್ದಾನೆ. "ವಿದ್ಯೆಯುಳ್ಳವನ ಮುಖ ಮುತ್ತು ಬರುವಂತಿಕ್ಕು, ವಿದ್ಯೆ ಇಲ್ಲದವನ ಬರೀ ಮುಖವು ಹಾಳೂರ ಹದ್ದಿನಂತಿಕ್ಕೂ ಕಡೆ ಸರ್ವಜ್ಞ" ಎಂದು ಸರ್ವಜ್ಞ ಹೇಳಿದ್ದಾನೆ. ಇವತ್ತು ವಿದ್ಯೆ ಇದ್ದಂತಹವನ ಮುಖವನ್ನು ನೋಡಿದಾಗ ಬಹಳ ಗಾಂಭೀರ್ಯದಿಂದ ಅವನ ಮುಖ ಕಾಣಿಸುತ್ತದೆ. ಈ ಸಮಾಜಕ್ಕೆ ಒಂದು ಕೊಡುಗೆ ಕೊಡತಕ್ಕಂಥ ಸಾಮರ್ಥ್ಯ ಆ ಮನುಷ್ಯನಲ್ಲಿ ಬರುತ್ತದೆ. ಅದೇ ವಿದ್ಯೆ ಇಲ್ಲದವನ ಮುಖ ನೋಡಿದಾಗ ಒಂದು ಹಾಳೂರು ಇದ್ದಂತೆ, ಆ ಹದ್ದಿಗಿಂತಲೂ ಕಡೆ ಎನ್ನತಕ್ಕಂಥ ಅಭಿಪ್ರಾಯವನ್ನು ನಾವು ಇವತ್ತು ನೋಡುತ್ತಿದ್ದೇವೆ. ಹೀಗಾಗಿ ಇವತ್ತು ನಾವು ಹೆಚ್ಚು ಮಹತ್ವ ವಿದ್ಯೆಗೆ ಕೊಡಬೇಕಾಗುತ್ತದೆ. ಇವತ್ತು ಅನೇಕ ನಿರಕ್ಷರಿಗಳು ತಮ್ಮ ಬದುಕನ್ನು ಭಯದ ನೆರಳಲ್ಲಿ ನಡೆಸುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಆ ಒಂದು ಭಯವನ್ನು ನಾವು ದೂರ ಮಾಡಬೇಕು. ಈ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಯಶಸ್ವಿಯಾಗ ಬೇಕಾದರೆ ಶಿಕ್ಷಣಕ್ಕೆ ನಾವು ಹೆಚ್ಚು ಒತ್ತು ಕೊಟ್ಟು, ನಮ್ಮ ಪರಿಸರದಲ್ಲಿರತಕ್ಕಂಥ ಅನೇಕ ಜನ ನಿರಕ್ಷರಿಗಳನ್ನು ನಾವು ಇವತ್ತು ಅಕ್ಷರಸ್ಥರನ್ನಾಗಿ ಮಾಡತಕ್ಕಂಥಾದ್ದು ಆಯಾ ಭಾಗಗಳಲ್ಲಿ ವಾಸ ಮಾಡತಕ್ಕಂಥ ಜನಸಾಮಾನ್ಯರ ಒಂದು ಹೊಣೆಗಾರಿಕೆ ಮತ್ತು ಕರ್ತವ್ಯ ಕೂಡ ಆಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಜೊತೆಗೆ ಇವತ್ತು ಸಮಾಜ ನಿಂತ ನೀರಿನಂತೆ ಇರುವುದಿಲ್ಲ. ನಿರಂತರವಾಗಿ ಬದಲಾವಣೆಯನ್ನು ಕೂಡ ಹೊಂದುತ್ತಾ ಇರುತ್ತದೆ. ಹೀಗಾಗಿ ಶಾಲೆ ಮತ್ತು ಸಮಾಜವನ್ನು

ಹೊಂದಾಣಿಕೆ ಮಾಡಿಕೊಂಡು ಹೋಗುವ ಜವಾಬ್ದಾರಿ ಶಿಕ್ಷಕರ ಮೇಲೆ ಇದೆ ಎನ್ನುವುದನ್ನು ನಾವು ಮರೆಯಬಾರದು. ಶಿಕ್ಷಕನ ಒಂದು ಜವಾಬ್ದಾರಿ ಎಂದರೆ, ಹಡಗನ್ನು ನಡೆಸುವ ನಾವಿಕನಿದ್ದಂತೆ. ನಾವಿಕನ ಜವಾಬ್ದಾರಿ ಎಷ್ಟು ಇರುತ್ತದೋ ಹಾಗಿಯೇ ಶಿಕ್ಷರದ್ದೂ ಸಹ ಕರ್ತವ್ಯ ಆಗಿರುತ್ತದೆನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಇವತ್ತು ಗ್ರಾಮೀಣ ಪ್ರದೇಶ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳ ನಡುವೆ ಮಧುರ ಬಾಂಧವ್ಯ ಬೆಳೆದು ಬರಬೇಕಾದರೆ, ಜೊತೆಗೆ ಒಂದು ಕರ್ತವ್ಯ ಪ್ರಜ್ಞೆ ಮೂಡಿ ಬರಬೇಕಾದರೆ ಅವರೆಲ್ಲರ ನಡುವೆ ಹೊಂದಾಣಿಕೆ ಇರಬೇಕಾಗುತ್ತದೆ. ಈ ಹೊಂದಾಣಿಕೆಯ ಕೊಂಡಿ ಇವತ್ತು ಕಳಚಿಕೊಳ್ಳತಕ್ಕಂಥ ಅನೇಕ ಸಂದರ್ಭಗಳನ್ನು ನಾವು ನೋಡುತ್ತಿದ್ದೇವೆ. ಆ ದೃಷ್ಟಿಯಿಂದ ಈ ಒಂದು ವಿಚಾರದಲ್ಲಿ ಶಿಕ್ಷಣ ತಜ್ಞರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಕೊಠಾರಿ ಆಯೋಗವನ್ನು ನೇಮಿಸಿದ್ದಾರೆ. ಮತ್ತು ಜೆ. ಪಿ. ನಾಯಕ್ ಆಯೋಗ ನೇಮಿಸಿದ್ದಾರೆ. ಈ ಆಯೋಗದವರು ಕೊಟ್ಟಂತಹ ವರದಿಗಳನ್ನು ಪರಿಶೀಲನೆ ಮಾಡಿ ನೋಡಿದಾಗ ನಿಜವಾಗಿ ಶಿಕ್ಷಣ ಕ್ಷೇತ್ರದಲ್ಲಿ ನಾವು ಏನು ಮಾಡಬೇಕು ಎನ್ನತಕ್ಕಂಥ ಬಗ್ಗೆ ಸಂಪೂರ್ಣವಾದ ಸಮಗ್ರವಾದ ಚಿಂತನೆ ಮಾಡಿ ಅವರು ವರದಿಗಳನ್ನು ಸಲ್ಲಿಸಿದ್ದಾರೆ ಎಂದು ತಿಳಿದು ಬರುತ್ತದೆ. ನಾವು ಅನೇಕ ಸಂದರ್ಭದಲ್ಲಿ ಇಲ್ಲಿ ಬಂದು ಭಾಷಣ ಮಾಡಬಹುದು, ಹೋಗಬಹುದು. ಆದರೆ ನಮ್ಮ ಕಳಕಳಿಯನ್ನು ತಿಳಿದುಕೊಳ್ಳತಕ್ಕಂಥಾದ್ದೂ ಕೂಡ ಈ ಸರ್ಕಾರದ ಮತ್ತು ಅಧಿಕಾರಿಗಳ ಒಂದು ಕರ್ತವ್ಯವಾಗಿದೆ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ.

ಉಪಾಧ್ಯಕ್ಷಿಣಿಯವರು:- ಇನ್ನೂ ೪ ಜನ ಮಾತನಾಡುವವರಿದ್ದಾರೆ. ಅವರು ಈಗ ರಿಪ್ಲೈ ಕೊಡಬೇಕಾಗುತ್ತದೆ. ದಯವಿಟ್ಟು ತಾವು ಸಹಕರಿಸಿ. ಇನ್ನು ೨-೩ ನಿಮಿಷದಲ್ಲಿ ಮುಗಿಸಿ.

ಶ್ರೀ ಮಂಜುನಾಥ ಸಿ. ಕುನ್ನೂರ:- ಈ ಒಂದು ಕೊಠಾರಿ ಆಯೋಗದ ವರದಿಯನ್ನು ನೋಡಿದಾಗ, ಇವತ್ತು ಸಾಮಾನ್ಯ ಜನರಲ್ಲಿ, ಹಳ್ಳಿಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ತೊಂದರೆಗಳು ಏನಿವೆ ಎನ್ನತಕ್ಕಂಥಾದ್ದನ್ನು ವಿಮರ್ಶೆ ಮಾಡಿದ್ದಾರೆ. ಒಂದೊಂದು ತರಗತಿಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಇರುವುದು, ಜೊತೆಗೆ ಸರಿಯಾದ ಪಾಠೋಪಕರಣಗಳು ಇಲ್ಲದೆ ಇರುವುದು, ಶಾಲಾ ಪರಿಸರದ ಆಕರ್ಷಣೆ ಇಲ್ಲದೆ ಇರುವುದು, ತರಬೇತಿಯುಳ್ಳ ಶಿಕ್ಷಕರ ಕೊರತೆ ಇರುವುದು ಮತ್ತು ಪರೀಕ್ಷಾ ಪದ್ಧತಿಯ ಒಂದು ದೋಷ ಕೂಡ ಇರುವುದು. ಹೀಗೆ ಹಲವಾರು ವಿಚಾರಗಳನ್ನು ಈ ಕೊಠಾರಿ ಆಯೋಗ ವರದಿಯಲ್ಲಿ ತಿಳಿಸಿದ್ದಾರೆ. ಇವುಗಳನ್ನು ಸಂಬಂಧಿಸಿದ ಅಧಿಕಾರಿಗಳು ಪರಿಶೀಲಿಸಿ ಅವರಿಗೆ ಇದ್ದಂಥ ಕರ್ತವ್ಯವನ್ನು ನಿರ್ವಹಿಸಿದ್ದೇ ಆದರೆ ನಿಜಕ್ಕೂ ನಾವು ಮಹಾಕೊಡುಗೆಯನ್ನು ಈ ಶಿಕ್ಷಣ ರಂಗದಲ್ಲಿ ನೀಡಿದಂಥಾಗುತ್ತೆಂದು ನಾನು ಹೇಳಬಯಸುತ್ತೇನೆ. ಇನ್ನು 'ಅಕ್ಷಯ' ಯೋಜನೆ ಕೂಡ ನಮ್ಮ ಸರ್ಕಾರದವರು ಹಾಕಿಕೊಂಡು ಉತ್ತಮವಾದಂಥ ಕಾರ್ಯವನ್ನು ಮಾಡಿದ್ದಾರೆ. ಈ ಯೋಜನೆಗಾಗಿ ಇವತ್ತು ೮೦ ಕೋಟಿ ರೂಪಾಯಿಗಳನ್ನು ನೀಡಲು ನಮ್ಮ ಆಯವ್ಯಯ ಪತ್ರದಲ್ಲಿ ಮಂಡನೆ ಮಾಡಿದ್ದಾರೆ ಕಳೆದ ವರ್ಷ ೨೦ ಕೋಟಿ ರೂಪಾಯಿಗಳನ್ನು ಈ ಒಂದು ಯೋಜನೆಗೆ ಮೀಸಲಾಗಿಟ್ಟು, ಈಗಾಗಲೆ ಸರ್ಕಾರದಿಂದ ಬಿಡುಗಡೆ ಕೂಡ ಮಾಡಲಾಗಿದೆ. ಅಕ್ಷಯ ಯೋಜನೆಯಿಂದ ಬ್ಯಾಂಕುಗಳಲ್ಲಿ ಅಕೌಂಟ್ ತೆಗೆಯುವುದಕ್ಕೆ ತೊಂದರೆಯಾಗುತ್ತದೆ, ಜೊತೆಗೆ ಈ ಹಣ ದುರುಪಯೋಗವಾಗುತ್ತದೆ ಎನ್ನುವ ಆಪಾದನೆಗಳನ್ನು ನಾವು ಕೇಳುತ್ತಿದ್ದೇವೆ. ಆದರೆ, ಒಮ್ಮಿಂದೊಮ್ಮೆಗೆ ಈ ಯೋಜನೆ ಬಗ್ಗೆ ನಿರ್ಧಾರ ಕೊಡುವುದಕ್ಕಿಂಥಾ

ಒಂದೆರಡು ವರ್ಷ ಕಾಲ ಕಾದು ನೋಡಬೇಕಾಗಿದೆ. ಇವತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಬಡ ಜನರ ಮಕ್ಕಳು ಶಾಲೆಗೆ ಬರಬೇಕಾದಂಥ ಒಂದು ದೃಶ್ಯವನ್ನು ನಾವು ನೋಡಬೇಕಾಗಿದೆ. ಅವರ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಇಂಥಾ ಯೋಜನೆಗಳನ್ನು ಹಾಕಿಕೊಂಡಾಗಲೇ ಇದು ಒಂದು ಯಶಸ್ವಿಯಾಗುತ್ತದೆ ಮತ್ತು ಈ ಅಕ್ಷಯದ ಯೋಜನೆಯ ಸಸಿ ಏನು ಬೆಳೆಯುತ್ತಿದೆಯೋ ಅದು ಹೆಮ್ಮರವಾಗಿ ಖಂಡಿತವಾಗಿ ಬೆಳೆಯುತ್ತದೆ ಎನ್ನತಕ್ಕಂಥ ಒಂದು ಆಶಾಭಾವನೆಯನ್ನು ನಾನು ಹೊಂದಿದ್ದೇನೆ. ಜೊತೆಗೆ ಇವತ್ತು ನಮ್ಮ ಸರ್ಕಾರದವರು ೭೯೧೮ ಶಾಲೆಗಳಿಗೆ ೪೫೯೭ ಉಪಾಧ್ಯಾಯರುಗಳನ್ನು ನೇಮಕ ಕೂಡ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ೬೭೬೧ ಶಾಲಾ ಕೊಠಡಿಗಳ ನಿರ್ಮಾಣವನ್ನು ಕೂಡ ಮಾಡತಕ್ಕಂಥ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ವಿದ್ಯಾ ವಿಕಾಸ ಯೋಜನೆಯಲ್ಲಿ ೧೯೯೧-೯೨ರಲ್ಲಿ ಕೇವಲ ೧೬೪ ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಇಟ್ಟರೆ ೧೯೯೨-೯೩ರಲ್ಲಿ ೩೫೨.೫೦ ಲಕ್ಷ ರೂಪಾಯಿಗಳನ್ನು ಇಟ್ಟಂಥ ಮಹಾ ಕೀರ್ತಿ ಇವತ್ತು ನಮ್ಮ ಸರ್ಕಾರಕ್ಕೆ ಸಲ್ಲತಕ್ಕದ್ದು ಎಂಬ ಮಾತನ್ನು ಹೇಳಬಯಸುತ್ತೇನೆ. ಅನಕ್ಷರತೆಯನ್ನು ಹೋಗಲಾಡಿಸುವ ಸಲುವಾಗಿ ಒಂದು ಸಾಕ್ಷರತಾ ಆಂದೋಲನವನ್ನು ೧೯೯೧ರ ಡಿಸೆಂಬರ್ ವೇಳೆಗೆ ನಮ್ಮ ರಾಜ್ಯದಲ್ಲಿ ಮಾದರಿಯಾಗಿ ದಕ್ಷಿಣ ದನ್ನಡ ಜಿಲ್ಲೆಯಲ್ಲಿ ಮಾಡಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಕೂಡ ಇದನ್ನು ಹಾಕಿಕೊಂಡಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಈ ಆಂದೋಲನ ಬೆಳೆದು ನಿರಕ್ಷರಸ್ತರನ್ನು ಅಕ್ಷರಸ್ತರನ್ನಾಗಿ ಮಾಡುವಲ್ಲಿ ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನು ವಿದ್ಯಾರ್ಥಿಗಳ ಒಂದು ಪಠ್ಯಪುಸ್ತಕಗಳಲ್ಲಿ ವಿದ್ಯಾರ್ಥಿಗಳಿಗೆ ಕೇವಲ ಓದು ಬರಹದ ಕಡೆಗೆ ಮಾತ್ರ ಉತ್ತೇಜನ ಕೊಡದೆ, ಈ ಯೋಗ ಶಿಕ್ಷಣದ ಬಗ್ಗೆ ಹಾಗೂ ಆಧ್ಯಾತ್ಮಿಕ ವಿಚಾರದ ಬಗ್ಗೆ ಕೂಡ ಒಂದು ವಿಚಾರಧಾರೆ ಹರಿಸತಕ್ಕಂಥ ಒಂದು ಕೆಲಸವನ್ನು ಪಠ್ಯ ಪುಸ್ತಕಗಳ ಬದಲಾವಣೆಯಲ್ಲಿ ಮಾಡಿರತಕ್ಕಂಥಾದ್ದು ಕೂಡ ಬಹಳ ಸ್ವಾಗತಾರ್ಹವಾದ ವಿಷಯ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನು ಕರ್ನಾಟಕ ರಾಜ್ಯದಲ್ಲಿ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಮಾಡಿ ಕನ್ನಡಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂಬ ಉದ್ದೇಶದಿಂದ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದ್ದಾರೆ. ಅದರ ಕೀರ್ತಿಯು ಎಲ್ಲಾಕಡೆಗೂ ಹರಡಿ ಕನ್ನಡ ಸರ್ವತೋಮುಖ ಅಭಿವೃದ್ಧಿಯಾಗಲಿ ಎಂದು ಹೇಳ ಬಯಸುತ್ತೇನೆ.

ಇನ್ನು ಗ್ರಂಥಾಲಯಗಳ ಇಲಾಖೆ. ಕಳೆದ ೨೫ ವರ್ಷಗಳ ಹಿಂದೆ ಈ ಇಲಾಖೆ ಪ್ರಾರಂಭವಾಗಿ ಅದು ಬೆಳ್ಳಿ ಹಬ್ಬವನ್ನು ಆಚರಿಸತಕ್ಕಂಥ ವಿಚಾರವನ್ನು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಈ ಗ್ರಂಥಾಲಯಗಳು ಕೇವಲ ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿ ಮಾತ್ರವಲ್ಲ, ಮಂಡಳ ಪಂಚಾಯತ್‌ಗಳ ಮಟ್ಟದಲ್ಲೂ ಕೂಡ ಗ್ರಂಥಾಲಯಗಳನ್ನು ಪ್ರಾರಂಭ ಮಾಡಿ, ಹಳ್ಳಿಗಳ ಜನರಿಗೂ ಅನುಕೂಲ ಮಾಡಿಕೊಡುವ ಬಗ್ಗೆ ತಾವು ಪ್ರಯತ್ನಿಸಬೇಕೆಂದು ಹೇಳ ಬಯಸುತ್ತೇನೆ.

ಇನ್ನು ಸ್ಕೌಟ್ಸ್ ಅಂಡ್ ಗೈಡ್ಸ್ ವಿಚಾರದಲ್ಲಿ ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಇವೊತ್ತು ಸೇವಾದಳದವರು ಯಾವ ರೀತಿಯಾಗಿ ಒಳ್ಳೆಯ ಸೇವೆಯನ್ನು ಮಾಡತಕ್ಕಂಥ ಭಾವನೆಯಿಂದ ಕೆಲಸ ಮಾಡುತ್ತಿರುತ್ತಾರೋ ಅದೇ ರೀತಿಯಲ್ಲಿ ಅನೇಕ ಶಿಕ್ಷಕರು ಕೂಡ ಆಯಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಅಂತಹ ವಿದ್ಯಾರ್ಥಿಗಳಲ್ಲಿ ಕೂಡ ಶಿಸ್ತು ಮೂಡಿಸತಕ್ಕಂಥ ಒಂದು ಕಾರ್ಯಕ್ರಮವನ್ನು ಇವೊತ್ತು ಅವರು ಹಾಕಿಕೊಂಡಿದ್ದಾರೆ. ಹೀಗಿರುವಾಗ ಸ್ಕೌಟ್ಸ್ ಮತ್ತು ಗೈಡ್ಸ್‌ಗೆ

ವಿಶೇಷ ಅನುದಾನವನ್ನು ಕೊಟ್ಟು ಶಿಕ್ಷಕರಿಗೆ ಪ್ರೋತ್ಸಾಹವನ್ನು ಕೊಡಬೇಕೆಂಬ ಮಾತನ್ನು ಹೇಳ ಬಯಸುತ್ತೇನೆ.

ಇನ್ನು ತಾಂತ್ರಿಕ ಶಿಕ್ಷಣದ ವಿಚಾರದಲ್ಲಿ ನಮ್ಮ ಸರಕಾರವು ಡಾ. ಶ್ರೀನಾಥ್‌ರವರ ಅಧ್ಯಕ್ಷತೆಯಲ್ಲಿ ಒಂದು ತಜ್ಞರ ಸಮಿತಿಯನ್ನು ನೇಮಿಸಿ ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡುವ ಬಗ್ಗೆ ಹೇಳಿದ್ದಾರೆ. ಈ ಒಂದು ವಿಚಾರದಲ್ಲಿ ಡಿಪ್ಲೋಮ ಮಟ್ಟದಲ್ಲಿ ಹ್ಯಾಂಡ್‌ಲೂಮ್ ಟೆಕ್ನಾಲಜಿ, ಮಶೀನ್ ಟೆಕ್ನಾಲಜಿ, ಸಿಲ್ಕ್ ಟೆಕ್ನಾಲಜಿ ಹೀಗೆ ಅನೇಕ ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡತಕ್ಕಂಥ ಒಂದು ವಿಚಾರ ಬಹಳ ಸ್ವಾಗತಾರ್ಹವಾದುದು. ಇನ್ನು ವೃತ್ತಿ ಶಿಕ್ಷಣದಲ್ಲಿಯೂ ಕೂಡ ೧೯೯೧-೯೨ರಲ್ಲಿ ೫೪೩ ಕೋರ್ಸ್‌ಗಳನ್ನು ಪ್ರಾರಂಭ ಮಾಡಿದ್ದರೆ, ೧೯೯೨-೯೩ನೇ ಇಸವಿಯಲ್ಲಿ ೩೧೫ ಹೆಚ್ಚುವರಿ ಕೋರ್ಸ್‌ಗಳನ್ನು ಪ್ರಾರಂಭ ಮಾಡಿದ್ದಾರೆ. ಹೀಗಾಗಿ ವೃತ್ತಿ ಶಿಕ್ಷಣವು ಕೂಡ ಎಷ್ಟೊಂದು ಅವಶ್ಯಕತೆ ಇದೆ, ಅದನ್ನು ಕೂಡ ಇವೊತ್ತು ನಾವು ಮಾಡುತ್ತಾ ಇರುವುದು ಬಹಳ ಹೆಮ್ಮೆ ತರುವಂಥ ವಿಚಾರವಾಗಿದೆ. ಅದರಂತೆ ಪಾಲಿಟೆಕ್ನಿಕ್ ಮತ್ತು ಐಟಿಐ ಕೋರ್ಸ್‌ಗಳನ್ನು ಪ್ರತಿಯೊಂದು ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿ ಸರಕಾರದ ವತಿಯಿಂದ ಪ್ರಾರಂಭ ಮಾಡತಕ್ಕಂಥಾದ್ದು ಅತ್ಯಾವಶ್ಯಕವಾಗಿದ್ದು ಈ ಬಗ್ಗೆ ಸರಕಾರ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿಶ್ವ ವಿದ್ಯಾಲಯದ ಶಿಕ್ಷಣದ ಬಗ್ಗೆ ಅಧ್ಯಯನ ಮಾಡಲು ಡಾ. ರಾಮೇಗೌಡರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದ್ದಾರೆ. ಅಲ್ಲಿಯೂ ಕೂಡ ಎಲ್ಲಾ ವಿಶ್ವ ವಿದ್ಯಾಲಯಗಳಿಗೂ ಅನುಕೂಲವಾಗುವಂಥ ಒಂದೇ ಘಟನಾವಳಿಯನ್ನು ಮಾಡತಕ್ಕಂಥಾದ್ದು ಸ್ವಾಗತಾರ್ಹವಾದ ವಿಚಾರ. ಜೊತೆಗೆ ರಾಷ್ಟ್ರಮಟ್ಟದಲ್ಲಿ ನಡೆಯುವ ಸ್ಪರ್ಧಾತ್ಮಕ ಪರಿಕ್ಷೆಗಳಲ್ಲಿ ರಾಜ್ಯದವರು ಕನಿಷ್ಠ ಮಟ್ಟದಲ್ಲಿ ಪಾಸ್ ಆಗುತ್ತಿದ್ದಾರೆ ಎಂಬುದನ್ನು ಅರಿತು ಸರಕಾರದವರು ವಿಶ್ವವಿದ್ಯಾಲಯಗಳ ಮೂಲಕ ವಿಶೇಷ ಕೋಚಿಂಗ್‌ಗನ್ನು ಕೊಡತಕ್ಕಂಥ ವಿಶೇಷ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಈ ವರದಿಯಲ್ಲಿ ಹೇಳಿರುವುದು ಬಹಳ ಸಂತೋಷಕರವಾದಂಥ ವಿಚಾರವಾಗಿದೆ.

ಕಾನೂನು ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ, ಇವತ್ತು ನ್ಯಾಯವಾದವು ಬಹಳ ವಿಳಂಬವಾಗಿ ಸಿಗುತ್ತಿರುವುದರಿಂದ ಅನೇಕ ಜನರು ಇದರಿಂದ ಕೊರಗುತ್ತಿದ್ದಾರೆ ಎಂಬ ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಜಸ್ಟೀಸ್ ಡಿಲೇಡ್ ಈಸ್ ಜಸ್ಟೀಸ್ ಡಿನೈಡ್ ಎನ್ನುವಂಥ ಒಂದು ವಿಚಾರದಲ್ಲಿ ನ್ಯಾಯವು ತೀವ್ರವಾಗಿ ಸಿಗತಕ್ಕಂಥ ಒಂದು ಟೈಂಬೌಂಡ್ ಕಾರ್ಯಕ್ರಮವನ್ನು ಸರಕಾರ ಮತ್ತು ಹೈಕೋರ್ಟ್‌ನವರು ಈ ಬಗ್ಗೆ ವಿಚಾರ ಮಾಡಿ ಹಾಕಿಕೊಳ್ಳಬೇಕಾಗಿದೆ. ಸಂವಿಧಾನಾತ್ಮಕವಾಗಿ ಕಾರ್ಯಾಂಗ, ರಾಜ್ಯಾಂಗ, ನ್ಯಾಯಾಂಗ ಪ್ರತ್ಯೇಕವಾಗಿ ಇದ್ದರೂ ಕೂಡ, ಈ ಒಂದು ವಿಚಾರದಲ್ಲಿ ಟೈಮ್‌ಬೌಂಡ್ ವಿಚಾರವನ್ನು ಹಾಕಿಕೊಳ್ಳತಕ್ಕಂಥಾದ್ದು ಬಹಳ ಮಹತ್ವ ಇದೆ ಎಂದು ಹೇಳ ಬಯಸುತ್ತೇನೆ. ನಮ್ಮ ಸರಕಾರದವರು ಜನತಾ ನ್ಯಾಯಾಲಯಗಳನ್ನು ಮಾಡಿ ಅನೇಕ ಜನರಿಗೆ ನ್ಯಾಯದಾನ ಬೇಗ ಸಿಗತಕ್ಕಂಥ ವ್ಯವಸ್ಥೆಯನ್ನು ಕೂಡ ಹಾಕಿಕೊಂಡಿದ್ದಾರೆ. ಜೊತೆಗೆ ಸರಕಾರಿ ವಕೀಲರ ನೇಮಕಾತಿ ಬಗ್ಗೆ ಹೇಳಬೇಕಾದರೆ, ನಾನು ಕೂಡ ನ್ಯಾಯವಾದಿಯಾಗಿ, ಸುಮಾರು ಹನ್ನೆರಡು ವರ್ಷಗಳ ಕಾಲದ ಅನುಭವದ ಹಿನ್ನೆಲೆಯಲ್ಲಿ ಹೇಳುವುದೆಂದರೆ, ನಿಜವಾಗಿಯೂ ನಮ್ಮ

ಸರಕಾರದಿಂದ ನೇಮಕಾತಿಯಾದಂಥ ನ್ಯಾಯವಾದಿಗಳು ಸರಿಯಾಗಿ ತಮ್ಮ ಕರ್ತವ್ಯವನ್ನು ಯಾವುದೇ ನ್ಯಾಯಾಲಯದಲ್ಲಿ ಮಾಡಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಸರಕಾರದವರು ಅವರನ್ನು ನೇರವಾಗಿ ನೇಮಕ ಮಾಡುವುದಕ್ಕಿಂತ ಒಂದು ವಿಶೇಷವಾದ ಸಮಿತಿಯನ್ನು ರಚನೆ ಮಾಡಿ ಹೈಕೋರ್ಟ್‌ನ ಮುಖಾಂತರ ಈ ಸರಕಾರಿ ಪ್ಲೀಡರ್ಸ್‌ಗಳನ್ನು ಸೆಲೆಕ್ಷನ್ ಮಾಡುವುದು ಅವಶ್ಯಕವಾಗಿದೆ. ನಮ್ಮ ಸರಕಾರದಲ್ಲಿ ಸುಮಾರು ಎರಡು, ಮೂರು ವರ್ಷಗಳಿಂದ ಒಂದೊಂದು ನ್ಯಾಯಾಲಯದಲ್ಲಿ ಎಜಿಪಿಗಳನ್ನು ಮಾಡತಕ್ಕಂಥ ಒಂದು ಕಾರ್ಯವೂ ಕೂಡ ಬಹಳ ವಿಳಂಬವಾಗಿ ಸಾಗುತ್ತಾ ಇದೆ. ಆದುದರಿಂದ ಸಮರ್ಪಕವಾಗಿ ಎಜಿಪಿಗಳ ನೇಮಕಾತಿಯನ್ನು ಮಾಡಬೇಕು. ಜೊತೆಗೆ ನನ್ನ ಮತಕ್ಷೇತ್ರದಲ್ಲಿ ಮುನ್ಸೀಫ್ ಕೋರ್ಟಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲಿ ಮುನ್ಸೀಫ್ ನ್ಯಾಯಾಲಯ ಆಗಬೇಕೆಂದು ಸರ್ಕಾರದ ಪಾಲಿಸಿ ಇರುವುದರಿಂದ ಶಿಗ್ಗಾವಿಯಲ್ಲೂ ಕೂಡ ನೂತನ ಕೋರ್ಟ್‌ನ್ನು ಕೂಡಲೆ ಪ್ರಾರಂಭ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಹುಬ್ಬಳ್ಳಿ ಧಾರವಾಡ ಮಹಾನಗರವು ಈ ರಾಜ್ಯದಲ್ಲಿ ಎರಡನೇ ದೊಡ್ಡ ನಗರವಾಗಿದೆ. ಉತ್ತರ ಕರ್ನಾಟಕದಲ್ಲಿ ಒಂದು ನ್ಯಾಯ ಪೀಠವನ್ನು ಸ್ಥಾಪನೆ ಮಾಡಬೇಕೆನ್ನುವಂತಹ ಬೇಡಿಕೆ ಬಹು ದಿನಗಳಿಂದ ರಾಜ್ಯಸರ್ಕಾರದಲ್ಲಿದೆ. ಆ ಕಾರಣ ಇಂದು ಹುಬ್ಬಳ್ಳಿ-ಧಾರವಾಡ ಉತ್ತರಕರ್ನಾಟಕದಲ್ಲಿ ಕೇಂದ್ರ ಬಿಂದುವಾದುದರಿಂದ ಮತ್ತು ಅಲ್ಲಿ ಎಲ್ಲ ತರಹದ ಸಕಲ ಸವಲತ್ತುಗಳು ಇವೆ. ಜಸವಂತ್ ಸಿಂಗ್ ಕಮಿಶನ್ ಅನ್ನು ಹಿಂದೆ ಕೇಂದ್ರಸರ್ಕಾರ ನಿಯಮಿಸಿದ್ದು ಅದೂ ಸಹ ವರದಿ ಕೊಟ್ಟಿದೆ. ಆದರ ಆಧಾರದ ಮೇಲೆ ಹುಬ್ಬಳ್ಳಿ-ಧಾರವಾಡದಲ್ಲಿ ಒಂದು ಹೈಕೋರ್ಟ್ ಪೀಠ ಸ್ಥಾಪನೆ ಮಾಡಬೇಕೆಂದು ನಾನು ಕೇಳಿಕೊಂಡು ಕೇಳುತ್ತೇನೆ. ಸಚಿವರು ಸಕಲ ವಿಚಾರಗಳನ್ನೂ ಕ್ರೋಢೀಕರಿಸಿ ಇಂದು ಕ್ರಾಂತಿಕಾರಕ ಬದಲಾವಣೆ ಮಾಡುತ್ತಾ ಇದ್ದಾರೆ. ಆ ದೃಷ್ಟಿಯಿಂದ ಮಾನ್ಯ ಶಿಕ್ಷಣ ಸಚಿವರಿಗೆ ಅನಂತ ವಂದನೆಗಳನ್ನು ಸಲ್ಲಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೂ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ದಿವಸ ನಮ್ಮ ಮುಂದೆ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ. ಮೊದಲನೆಯದಾಗಿ ಸರ್ಕಾರದಲ್ಲಿ ಶಾಲೆಗಳನ್ನು ರೆಕಗ್ನೈಸ್ ಮಾಡಿ ಅವರಿಗೆ ಹಣಕಾಸಿನ ಬೆಂಬಲ ಕೊಡುವಾಗ, ಪಾಪ ಹಿಂದುಳಿದಿರುವ ಎಸ್.ಸಿ, ಎಸ್. ಟಿ. ಮತ್ತಿತರ ಹಿಂದುಳಿದ ವರ್ಗಗಳಿಗೆ ಶಾಲೆಗಳಿಗೆ ರೆಕಗ್ನಿಶನ್ ಕೊಟ್ಟು ಅವರಿಗೆ ಮೊದಲಿಂದಲೂ ಗ್ರಾಂಟ್ ಕೊಡುವ ರೀತಿಯಲ್ಲಿ ಮಾಡಬೇಕು. ಏಕೆಂದರೆ ರಾಜ್ಯಾಂಗದ ಡೈರೆಕ್ಷನ್‌ನಲ್ಲಿ ಸಹ ಈ ಜನಗಳ ಆರ್ಥಿಕ ಮತ್ತು ಶೈಕ್ಷಣಿಕ ವಿಚಾರದಲ್ಲಿ ಸರ್ಕಾರ ಆದ್ಯ ಗಮನಕೊಟ್ಟು ಅವರನ್ನು ಪ್ರೊಟೆಕ್ಟ್ ಮಾಡಬೇಕೆಂದು ಹೇಳಿದೆ. ಈ ನಿರ್ದೇಶನದ ಪ್ರಕಾರವಾದರೂ ಸಹ ಅವರಿಗೆ ಈ ಸೌಲಭ್ಯ ಒದಗಿಸಿಕೊಡಬೇಕು. ಮೊದಲೆಲ್ಲ ಇತ್ತು, ಈಗ ಅದನ್ನು ಕಿತ್ತು ಹಾಕಿದ್ದೀರಿ. ಆದುದರಿಂದ ದಯಮಾಡಿ ಇದನ್ನು ಮತ್ತೆ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಪ್ರಮೋಶನ್‌ಗಳ ವಿಚಾರ. ಇದು ದೊಡ್ಡ ಇಲಾಖೆಯಾದ್ದರಿಂದ ಬೇಕಾದಷ್ಟು ಪ್ರಮೋಶನ್ಸ್ ಅಪಾಯಿಂಟ್‌ಮೆಂಟ್ಸೂ ಇರುತ್ತವೆ. ಈ ವಿಚಾರದಲ್ಲಿ ಡೈರೆಕ್ಟ ನೇಮಕದಲ್ಲಿ ಅರ್ಧ ಭಾಗ, ಪ್ರಮೋಷನ್‌ನಲ್ಲಿ ಅರ್ಧಭಾಗ ಇರತಕ್ಕಂಥ ಅನೇಕ ಕೇಡರ್‌ಗಳಿವೆ ಎಂದು ಹೇಳಿದ್ದೀರಿ. ಪ್ರಮೋಶನ್ ವಿಚಾರದಲ್ಲಿ ಮಾತ್ರ ಡಿಫರೆಂಟ್ ಕೇಡರ್ಸ್‌ನಲ್ಲಿ ಸಹ ರಾಜ್ಯಾಂಗದ ೧೬ನೇ ಆರ್ಟಿಕಲ್

ರೀತಿ ಅವರಿಗೆ ಪ್ರಮೋಶನ್ ಅವಕಾಶ ಹೆಚ್ಚಿಗೆ ಸಿಗುವಂತೆ ಮಾಡಬೇಕು ಏಕೆಂದರೆ, ಆದರಲ್ಲಿ ನಾನಾ ಕೇಡರ್ ಮತ್ತು ಗ್ರೇಡ್‌ಗಳಿರುತ್ತವೆ. ಆ ಸಂದರ್ಭದಲ್ಲಿ ಪ್ರಮೋಶನ್ ಮತ್ತು ಡೈರೆಕ್ಟ್ ನೇಮಕಗಳ ಜೊತೆಗೆ ಸಲೆಕ್ಷನ್ ಪ್ರಮೋಶನ್‌ಗಳನ್ನೂ ಕೆಲವು ಕ್ರಿಯೇಟ್ ಮಾಡಿ ಅವಕಾಶಗಳನ್ನು ಜಾಸ್ತಿ ಮಾಡಲಿಕ್ಕೆ ಸರ್ಕಾರ ಪರಿಶೀಲನೆ ಮಾಡಬೇಕು. ಏಕೆಂದರೆ, ಇದು ಬಹಳ ಪ್ರಮುಖವಾದುದು. ಹಿಂದುಳಿದ ಈ ಜನರಿಗೆ ಏನಾದರೂ ಸವಲತ್ತು ಸಿಗಬೇಕೆಂದು ಅಂದರೆ ಆರ್ಥಿಕ ರಂಗಕ್ಕಿಂತ ಸರ್ವಿಸ್ ಮ್ಯಾಟರ್ಸ್ ಮೂಲಕ ಇವರ ಆರ್ಥಿಕ ಸ್ಥಿತಿಯನ್ನು ಇಂಪ್ರೂವ್ ಮಾಡುವ ಅವಕಾಶ ಇದೆ. ಆದ್ದರಿಂದ ತಾವು ಇದರ ಬಗ್ಗೆ ಸ್ವಲ್ಪ ಗಮನ ಕೊಟ್ಟು ಮತ್ತೆ ಕೇಡರ್ ಮತ್ತು ನೇಮಕಾತಿ ರೂಲ್ಸನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಿ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಗೆ ತರಬೇತಿ ಕೊಡುವಾಗ ಸತ್ತು ಹೋದವರ ಕುಟುಂಬ ವರ್ಗದವರಿಗೆ ಕಂಪ್ಯಾಶನೇಟ್ ಆಧಾರದಲ್ಲಿ ನೇಮಕಾತಿ ಕೊಡುತ್ತೀರಿ. ಇದು ಎಷ್ಟೋ ಸಲ ಜನಗಳಿಗೆ ಕಷ್ಟ ಇರುವಾಗ ಅನುಕಂಪ ತೋರಿಸಿ ಅವಕಾಶ ಮಾಡಿ ಕೊಡಬೇಕಾದ್ದೇನೋ ನಿಜ. ಇದು ಈ ಒಂದೇ ಇಲಾಖೆಗೆ ಸರ್ಕಾರಿ ನೌಕರರಿಗೆ ಹಾಗೆ ಆದರೆ ಸತ್ತು ಹೋದವರಿಗೆ ವಾಸ್ತವವಾಗಿ ಪರಿಶೀಲನೆ ಮಾಡುವ ಹಾಗಿದ್ದರೆ ಅವರಿಗೆ ಗ್ರಾಚ್ಯುಟಿ ಬರುತ್ತದೆ. ಪೆನ್‌ಶನ್ ಬರುತ್ತದೆ. ಫ್ಯಾಮಿಲಿ ಪೆನ್‌ಶನ್ ಬರುತ್ತದೆ ಮತ್ತು ಇದಲ್ಲದೆ ಬೇರೆ ಪ್ರಾವಿಷನ್ ಇದ್ದರೂ ಇರಬಹುದು. ಇಂಥದೆಲ್ಲವನ್ನೂ ನೋಡಿ ಅವರಿಗೂ ಕೊಡಿ. ಇಷ್ಟು ಅನುಕೂಲ ಇರುವವರಿಗೆ ನೀವು ಅನುಕಂಪದ ಆಧಾರದಲ್ಲಿ ಕೊಡುತ್ತಾ ಹೋದರೆ ಒಂದೇ ವರ್ಗದ ಜನರಿಗೆ ಈ ರೀತಿಯ ಸೌಲಭ್ಯ ದೊರಕುವ ಅವಕಾಶವೇ ಜಾಸ್ತಿ ಇರುತ್ತದೆ. ಸರ್ಕಾರಿ ನೌಕರಿಯಲ್ಲಿರುವವರಿಗೆ ಈ ಅವಕಾಶ ಜಾಸ್ತಿ ಇರುತ್ತದೆ. ಇದರ ಜೊತೆಗೆ ಪ್ರಜಾಪ್ರಭುತ್ವದಲ್ಲಿ ಇದು ಹೆರಿಡಿಟರಿ ಅಪಾಯಿಂಟ್‌ಮೆಂಟ್ಸ್ ಕಂಟಿನ್ಯೂ ಮಾಡುವಂತಹ ಒಂದು ಪ್ರಾವೆನ್ಸಿಟ್ ಉಂಟಾಗುತ್ತದೆ. ಆದುದರಿಂದ ಕೊಡುವುದರಲ್ಲಿ ಇದನ್ನು ತಾವು ಗಮನದಲ್ಲಿಟ್ಟುಕೊಂಡರೆ ಒಳ್ಳೆಯದು. ಇದು ಒಂದು ಕ್ಷೇತ್ರಕ್ಕೆ ಇಷ್ಟು ಗಮನವಾದರೆ, ಅನೇಕ ಬಡ ಜನಗಳು, ಬಡವರ್ಗಗಳಿರುತ್ತವೆ. ಆ ವರ್ಗದ ಜನಗಳಿಗೂ ಕಂಪ್ಯಾಶನೇಟ್ ಗ್ರೌಂಡ್ಸ್‌ನ್ನು ಸ್ವಲ್ಪ ಎಕ್ಸ್‌ಟೆಂಡ್ ಮಾಡಿದರೆ ಒಳ್ಳೆಯದು ಅಲ್ಲವೇ? ಇದನ್ನು ಎಕ್ಸ್‌ಟೆಂಡ್ ಮಾಡುವಾಗ ತಾವು ಈ ಕಂಪ್ಯಾಶನೇಟ್ ಗ್ರೌಂಡ್ಸ್ ಮೇಲೆ ತೆಗೆದುಕೊಳ್ಳತಕ್ಕಂಥವರಿಗೆ ಟೆಸ್ಟೇ ಇಲ್ಲ, ನೇರವಾಗಿ ತೆಗೆದುಕೊಳ್ಳುತ್ತೀರಿ. ಸರ್ಕಾರಿ ನೌಕರಿಗೆ ತೆಗೆದುಕೊಂಡಾಗ ಮಾತ್ರ ಕಾಂಪಿಟಿಟೇವ್ ಎಕ್ಸಾಮಿನೇಷನ್ ಆಗಬೇಕು. ಇದು ಯಾವ ರೀತಿ ಆಗುತ್ತದೆ. ಈ ಜನರು ಅಂದರೆ ಕಂಪ್ಯಾಶನೇಟ್ ಗ್ರೌಂಡ್ಸ್‌ನಲ್ಲಿ ಸರ್ಕಾರದಲ್ಲಿ ಕೆಲಸ ಮಾಡುವಾಗ ಅವರಿಗೆ ಕೊಟ್ಟಿರತಕ್ಕಂಥ ಕೆಲಸ ಕಾರ್ಯಗಳನ್ನು ಎಫಿಷಿಯೆಂಟ್ ಆಗಿ ನಿರ್ವಹಣೆ ಮಾಡುತ್ತಾರೆಯೆ? ಹೇಗೆ? ಹೀಗಿರುವಾಗ ಬೇರೆ ರೀತಿಯ ರೆಕ್ರೂಟ್‌ಮೆಂಟ್‌ಗಳನ್ನು ಮಾಡುವಾಗ ಬಡವರ್ಗದ ಜನರನ್ನೂ ಸಹನೀವು ಸ್ವಲ್ಪ ಲೀನಿಯೆಂಟ್ ಆಗಿ ನೋಡಬೇಕು. ಏಕೆಂದರೆ, ಇವತ್ತಿನ ದಿವಸ ಇದು ಎಲ್ಲರಿಗೂ ತಿಳಿದಿರುವ ಹಾಗೆ, ಎಫಿಷಿಯೆನ್ಸಿ ಎನ್ನತಕ್ಕಂಥದ್ದು ಪರೀಕ್ಷೆಗಳಲ್ಲಿ ನಂಬರನ್ನು ತೆಗೆದುಕೊಳ್ಳತಕ್ಕಂಥದ್ದು ಅಷ್ಟೆ. ಹೆಚ್ಚಿಗೆ ಮಾರ್ಕ್ಸ್‌ಗಳನ್ನು ತೆಗೆದು, ಅವನಿಗೆ ಹೆಚ್ಚಿಗೆ ಮಾರ್ಕ್ಸ್ ಬಂದರೆ ಎಫಿಷಿಯೆಂಟ್ ಎಂದು ಜಡ್ಜ್ ಮಾಡುವುದಾಗಿದ್ದರೆ ಅದು ಸರಿಯಾದ ಜಡ್ಜ್‌ಮೆಂಟೇ, ಅದು ಸರಿಯಾದ ಸ್ಟಾಂಡರ್ಡ್ವೇ ಎನ್ನತಕ್ಕಂಥದ್ದನ್ನು ಸರ್ಕಾರ ಈಗಲಾದಲೂ ಪರಿಶೀಲನೆಯನ್ನು ಮಾಡಬೇಕು. ಏತಕ್ಕೆಂದರೆ, ಬಹುಶಃ ಈ ಕೆಲಸದ ಎಫಿಷಿಯೆಂನ್ಸಿ ಏನೆಂದರೆ, ಅವನಿಗೆ ಕೊಟ್ಟಿರತಕ್ಕಂಥ ಕಾರ್ಯವನ್ನು ಸರಿಯಾದ ರೀತಿಯಲ್ಲಿ ಪ್ರಾಮಾಣಿಕವಾಗಿ ಕಷ್ಟಪಟ್ಟು

ದುಡಿದು ಸರಿಯಾಗಿ ಕೆಲಸವನ್ನು ಮಾಡುತ್ತಾನೋ ಇಲ್ಲವೋ ಎಂದು ನೋಡಿ ಸರ್ಕಾರಿ ನೌಕರಿಗೆ ಪ್ರಾಮುಖ್ಯವಾಗಿ ನಾವು ತೆಗೆದುಕೊಳ್ಳಬೇಕಾದಂಥ ವಿಚಾರ ಇದು. ಇವತ್ತಿನ ದಿವಸ ಈ ಸರ್ಕಾರಿ ನೌಕರಿಗೆ ತೆಗೆದುಕೊಳ್ಳುವಾಗ ಯಾವುದೋ ಕೆಲವು ಪರೀಕ್ಷೆಗಳನ್ನು ಪಾಸು ಮಾಡಿ, ಅದರಲ್ಲಿ ಯಾರಿಗೆ ಹೆಚ್ಚಿಗೆ ಮಾರ್ಕ್ಸ್ ಬಂತು ಎನ್ನತಕ್ಕಂಥ ಸ್ಟಾಂಡರ್ಡ್ ಮೇಲೆ ನೇಮಕ ಮಾಡತಕ್ಕಂಥದ್ದು ಅಷ್ಟು ಸರಿಯಾಗಿಲ್ಲ ಎಂದು ನನ್ನ ಅಭಿಪ್ರಾಯ. This is not a right standard. ಆದುದರಿಂದ ಇದರ ಬಗ್ಗೆ ಸರ್ಕಾರ ಹೆಚ್ಚಿಗೆ ಗಮನವನ್ನು ಹರಿಸಿ ಮಾಡತಕ್ಕಂಥದ್ದು ಒಳ್ಳೆಯದು ಎಂದು ಹೇಳುತ್ತೇನೆ. ಇದಕ್ಕೆ ಒಂದು ನಿದರ್ಶನವನ್ನು ನಾನು ಕೊಡುತ್ತೇನೆ. ನಾನು ಟೀಚರ್ಸ್ ರೆಕ್ರೂಟ್‌ಮೆಂಟ್ ಕಮಿಟಿಯಲ್ಲಿ ಎರಡು ಸಾರಿ ಇದ್ದೆ. ಅಲ್ಲಿ ಡಿ. ಡಿ. ಪಿ. ಐ. ಇದ್ದರು. ಬೇರೆ ಅಧಿಕಾರಿ ವರ್ಗದವರೂ ಸಹಾ ಇದ್ದರು. ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು, ಸೋಷಿಯಲ್ ವೆಲ್‌ಫೇರ್‌ನ ಅಧಿಕಾರಿಗಳು ಎಲ್ಲರೂ ಇದ್ದರು. ಅಲ್ಲಿ ಸಂದರ್ಶನಕ್ಕೆ ಬರುವ ವಿದ್ಯಾರ್ಥಿಗಳಿಗೆ ಗಂಗಾನದಿ ಎಲ್ಲಿ ಹುಟ್ಟುತ್ತದೆ ಎಂದು ಕೇಳಿದರೆ ಏನೂ ಹೇಳುವುದಿಲ್ಲ. ಅವರುಗಳು ಓದಿರತಕ್ಕಂಥ ಸಬ್ಜೆಕ್ಟ್‌ನ ಮೇಲೆ ಇರತಕ್ಕಂಥ ಪ್ರಶ್ನೆಗಳನ್ನೇ ನಾನು ಕೇಳುತ್ತಿದ್ದೆ. ಕೆಲವರಿಗೆ ಹಗಲು ರಾತ್ರಿ ಹೇಗೆ ಆಗುತ್ತದೆ ಎಂದು ಕೇಳಿದರೆ, ಇದು ದೇವರು ಮಾಡಿರತಕ್ಕಂಥ ಕೆಲಸ, ಆ ರೀತಿಯಲ್ಲಿ ಅದರ ಕಾರ್ಯನಿರ್ವಹಣೆಯಾಗುತ್ತದೆ, ನೀವು ಇದನ್ನೆಲ್ಲಾ ಕೇಳುತ್ತೀರಲ್ಲಾ, ದೇವರು ಮಾಡಿದ್ದು ಯಾರಿಗೆ ಗೊತ್ತು ಎಂದು ಹೇಳುತ್ತಿದ್ದರು. ನೀನು ಹೇಳಿದ್ದು ಸರಿ, ನನಗೆ ಜಿಯಾಗ್ರಫಿಯಲ್ಲಿ ಹೇಳಿಕೊಟ್ಟಿರುವ ರೀತಿಯಲ್ಲಿ ಯಾವ ರೀತಿ ಹಗಲು ರಾತ್ರಿ ಆಗುತ್ತದೆ ಎಂದು ಕೇಳಿದಾಗ ಅದನ್ನು ಓದಿ ಎಷ್ಟೋ ದಿವಸಗಳಾಗಿವೆ, ನಮಗೆ ಗೊತ್ತಿಲ್ಲ ಸಾರ್ ಎಂದು ಹೇಳುತ್ತಿದ್ದರು. ಜೊತೆಗೆ ಇಂಥ ನದಿಗಳು ಎಲ್ಲಿ ಹುಟ್ಟುತ್ತದೆ ಎಂದು ಮ್ಯಾಪ್‌ನಲ್ಲಿ ತೋರಿಸಿ ಎಂದು ಹೇಳಿದರೆ, ಸಮುದ್ರದಲ್ಲಿರತಕ್ಕಂಥ ಅಕ್ಷಾಂಶ, ರೇಖಾಂಶ ರೇಖೆಗಳಲ್ಲಿ ಸಮುದ್ರದಲ್ಲಿ ಹುಟ್ಟಿ ನೆಲದ ಮೇಲೆ ಹರಿದುಕೊಂಡು ಹೋಗುವ ರೀತಿಯಲ್ಲಿ ವಿದ್ಯಾರ್ಥಿಗಳು ತೋರಿಸಿದ್ದಾರೆ. ಇನ್ನೊಬ್ಬರಿಗೆ ಆಸ್ಟ್ರೇಲಿಯಾ ಖಂಡ ಎಲ್ಲಿದೆ ಎಂದು ತೋರಿಸಿ ಎಂದು ಕೇಳಿದೆ. ಕೆಲವು ಟೀಚರ್ಸ್ ಲೋಕಲ್ ಕ್ಯಾಂಡಿಡೇಟ್ ಆಗಿ ಕೆಲಸ ಮಾಡುತ್ತಿದ್ದಂಥವರು. ಅವರಿಗೆ ಈಗ ರೆಗ್ಯುಲರೈಸ್ ಆಗಬೇಕಾಗಿದೆ. ಡಿ. ಡಿ. ಪಿ. ಐ. ಅವರು ಇಂಥ ಟೀಚರ್‌ಗೆ ಒಮ್ಮೆ ರೆಕಮೆಂಡ್ ಮಾಡಿದರು. ಪಾಪ, ಅವರಿಗೆ ಬಹಳ ಕಷ್ಟ ಇದೆ. ಈಕೆಯನ್ನು ಸ್ವಲ್ಪ ಪರೀಕ್ಷೆ ಮಾಡಿ ಎಂದು ಹೇಳಿದರು. ನಾನು ಆಗಬಹುದು ಎಂದು ಹೇಳಿದೆ. ಕೆಲವು ಮೆಂಬರ್‌ಗಳು ಕಂಪ್ಯಾಶನೇಟ್ ಗ್ರೌಂಡ್ ಮೇಲೆ ನೇಮಕ ಆಗಿದ್ದವರ ಬಗ್ಗೆ ತಾವು ಹೇಳುವ ರೀತಿಯಲ್ಲಿ ಒಪ್ಪಿಕೊಂಡರು. ಆಸ್ಟ್ರೇಲಿಯಾ ಖಂಡ ಎಲ್ಲಿದೆ ಎಂದು ತೋರಿಸಿ ಎಂದರೆ ಅಮೇರಿಕಾ ದೇಶವನ್ನು ತೋರಿಸುತ್ತಾರೆ. ಆಗ ಡಿಡಿಪಿಐ ಪಕ್ಕದಲ್ಲಿ ಕುಳಿತಿದ್ದಾಗ ಕೇಳಿದೆ. ಏನು ಸ್ವಾಮಿ, ಈ ರೀತಿ ಆಗಿದೆಯಲ್ಲಾ ಎಂದರೆ ಆಗ ಅವರು ಸಿದ್ದಯ್ಯನವರೇ ಒಂದೂ ನೋಡುವುದಿಲ್ಲ, ಮ್ಯಾಪ್‌ಗಳನ್ನು ಕಟ್ಟಿ ಹಾಗೆಯೇ ಇಟ್ಟಿರುತ್ತಾರೆ, ನಾವು ಹೋದ ದಿವಸ ಮಾತ್ರ ಅದನ್ನು ತೆಗೆಯುತ್ತಾರೆ, ಇದು ಯಾರಿಗೂ ಗೊತ್ತಿಲ್ಲ ಎಂದು ಹೇಳಿದರು. ನಾನು ಹೇಳತಕ್ಕಂಥ ವಿಚಾರ ಏನೆಂದರೆ, ಸ್ಕೂಲ್‌ಗಳಲ್ಲಿ ಪಾಠ ಹೇಳುತ್ತಿದ್ದಂಥ ಮೇಷ್ಟ್ರು ಈ ರೀತಿಯಾದರೆ ಹೇಗೆ? ಆದುದರಿಂದ ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಎಫಿಷಿಯೆನ್ಸಿ ಎನ್ನತಕ್ಕಂಥದ್ದು ಬೀದಿಗೆ ತೋರಿಕೆಗೆ ತೋರಿಸಿ ಒಳಾಂತರದಲ್ಲಿ ಬೇರೆ ರೀತಿಯಲ್ಲಿ ಆಗತಕ್ಕಂಥದ್ದು ಇರುತ್ತದೆ. ಅನೇಕ ಬಡ ಜನರು ಇವತ್ತು ಕಷ್ಟದಲ್ಲಿರುತ್ತಾರೆ. ಅವರಿಗೆ ಬಹಳ ಕಷ್ಟ ಇದೆ. ಈ ಬಡ ವರ್ಗದ ಜನರು ಈ ಒಂದು ಎಫಿಷಿಯೆನ್ಸಿ ಟೆಸ್ಟ್‌ನಲ್ಲಿ ಸಿಕ್ಕಿಕೊಂಡು ನರಳುತ್ತಿದ್ದಾರೆ. ಹೊಟ್ಟೆಗೆ

ಇಲ್ಲದೆ, ಬಟ್ಟೆಗೆ ಇಲ್ಲದೆ ಕೂಲಿ ಮಾಡಿಕೊಂಡು ತಿನ್ನುವುದಕ್ಕೂ ಸಿಗದೆ ಬಹಳ ಕಷ್ಟದಲ್ಲಿದ್ದಾರೆ. ಜೊತೆಗೆ ಈ ಎಲ್ಲಾ ದೆಸೆಗಳಿಂದಾಗಿ ಅನೇಕರಿಗೆ ಎಜ್ ಬಾರ್ ಆಗಿ ಆ ಕೆಲಸ ಸಿಗತಕ್ಕಂಥ ಅವಕಾಶವೂ ಇಲ್ಲದಂತಾಗಿ ಅವರು ಇವತ್ತಿನ ದಿವಸ ಗುಲಾಮಗಿರಿ ಸನ್ನಿವೇಶದಲ್ಲಿ ಜೀವನವನ್ನು ಕಳೆಯಬೇಕಾಗುತ್ತದೆ. ದಯಮಾಡಿ ಈ ವಿಚಾರದಲ್ಲಿ ಎಫಿಷಿಯೆನ್ಸಿಯಲ್ಲಿ ತಾವು ನಿಗಾ ವಹಿಸಿ ಕೆಲಸ ಮಾಡಿದರೆ ಪಾಪ ಅನೇಕ ಬಡ ಜನಗಳಿಗೆ ಒಳ್ಳೆಯದಾಗುತ್ತದೆ. ಅಲ್ಲದಿದ್ದರೆ ಬಡತನ ವಿಪರೀತವಾಗಿ ಅದನ್ನು ತಡೆದುಕೊಳ್ಳುವುದಕ್ಕಾಗದೆ ಅನೇಕ ದೇಶಗಳು ಈ ಒಂದು ಗುಲಾಮಗಿರಿ ಸನ್ನಿವೇಶದಲ್ಲಿದ್ದು ಪ್ರಜಾಪ್ರಭುತ್ವವೇ ಹಾಳಾಗಿರತಕ್ಕಂಥ ಸನ್ನಿವೇಶ ಉಂಟಾದರೂ ಆಗಬಹುದು. ಇವತ್ತಿನ ದಿವಸ ನಮ್ಮ ಸಮಾಜದಲ್ಲಿ ಹೇಗಿದೆಯೆಂದರೆ, ನಿನ್ನೆ ಡಿಮ್ಯಾಂಡ್ ಮೇಲೆ ಹೇಳಿದ ರೀತಿಯಲ್ಲಿ ಅನೇಕ ಕಡೆ ಪೋಲೀಸ್ ಸ್ಟೇಷನ್‌ಗಳಲ್ಲಿ ಆಗುವಂತಹದನ್ನು ನೋಡಿದರೆ ಬಹುಶಃ ಈ ದೇಶದಲ್ಲಿ ಎಷ್ಟರಮಟ್ಟಿಗೆ ಪೀಸ್ ಅಂಡ್ ಆರ್ಡರ್ ಸ್ಥಿತಿ ಇದೆ ಎನ್ನತಕ್ಕದ್ದು ನಿಮ್ಮೆಲ್ಲರಿಗೂ ಗೊತ್ತಾಗುತ್ತದೆ. ಆದ್ದರಿಂದ ಬಡತನದ ವಿಚಾರದಲ್ಲಿ ಮಾತ್ರ ಹೆಚ್ಚಿಗೆ ಗಮನವನ್ನು ಕೊಡಬೇಕಾಗಿದ್ದರೆ ಬಡವರಿಗೆ ಇವತ್ತಿನ ದಿವಸ ಸರ್ವೀಸ್ ಮ್ಯಾಟರ್ಸ್‌ನಲ್ಲಿ ತಾವು ಲೀನಿಯೆಂಟ್ ಆಗಿ ನೋಡಬೇಕೆಂದು ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ ತಮಗೆ ಹೇಳಬೇಕಾಗಿರುವುದು ಏನೆಂದರೆ, ಸರ್ಕಾರೀ ನೌಕರರ ಬಗ್ಗೆ ಅನೇಕ ಪೆಂಡಿಂಗ್ ಫೈಲ್ಸ್ ಇದೆ. ಅವೆಲ್ಲವನ್ನೂ ಬೇಗ ಬೇಗನೆ ಡಿಸ್‌ಪೋಸ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದು ತಾವು ಹೇಳುತ್ತಿದ್ದೀರಿ. ನಿಜ, ಇದು ಅಷ್ಟು ಸುಲಭವಾಗಿ ಬಗೆ ಹರಿಸುವಂತಹ ವಿಚಾರವೂ ಅಲ್ಲ. ಇಂತಹ ಕೆಲವು ಕೇಸ್‌ಗಳು ಇರುತ್ತದೆ. ಉದಾಹರಣೆಗೆ, ಅನೇಕರು ತಮಗೆ ಬರತಕ್ಕ ಸಂಬಳ ಸಾರಿಗೆ ವಗ್ಯೆರೆ ಅಥವಾ ಟಿ. ಎ. ಡಿ. ಎ.ಗಳು ಅಥವಾ ಹಿಂದೆ ಬರಬೇಕಾದಂತಹ ಯಾವುದಾದರೂ ಸರ್ಕಾರದ ಹಣ ಇದ್ದಾಗ ಆ ಫೈಲ್‌ಗಳೆಲ್ಲ ಬಂಡಲು ಬಂಡಲಾಗಿ ಬಿದ್ದಿರುತ್ತವೆ. ಕ್ರೋನಾಲಾಜಿಕಲ್ ಆರ್ಡರನಲ್ಲಾದರೂ ಈ ಫೈಲ್‌ಗಳನ್ನು ಡಿಸ್‌ಪೋಸ್ ಮಾಡುವುದಕ್ಕೆ ಏನು ಕಷ್ಟ? ಒಂದು ವೇಳೆ ವಿಶೇಷವಾದ ಪರಿಸ್ಥಿತಿ ಇದ್ದು ಕೊಡಲೇ ಅದನ್ನು ತಾವು ಡಿಸ್‌ಪೋಸ್ ಮಾಡಬೇಕಾದಂಥದ್ದು ಇದ್ದರೆ ಅಂಥ ಸನ್ನಿವೇಶದಲ್ಲಿ ಕೆಲಸಕ್ಕೆ ಸ್ಪೆಷಲ್ ಸರ್‌ಕಮ್‌ಸ್ಟೆನ್ಸ್‌ನಲ್ಲಿ ತಾವು ಬೇಗ ಡಿಸ್‌ಪೋಸ್ ಮಾಡುವ ರೀತಿಯಲ್ಲಿ ಮಾಡಿ. ಅದನ್ನು ಬಿಟ್ಟು ನೀವು ಯಾರು ದುಡ್ಡು ಕೊಡುತ್ತಾರೆ ಅವರದನ್ನು ತೆಗೆದು ತೆಗ್ಗೆದು ಫೈಲ್‌ಗಳಲ್ಲಿ ಹುಡುಕುತ್ತಿದ್ದರೆ ಈ ಕರಪ್ಟ್ ಪ್ರಾಕ್ಟೀಸಸ್ ಹೋಗುವುದೂ ಇಲ್ಲ ಆ ಬಡವರಿಗೆ ಜಸ್ಟೀಸ್ ಸಿಗುವುದೂ ಇಲ್ಲ. ಆದ್ದರಿಂದ ಇದನ್ನು ಎಕ್ಸಾಮಿನ್ ಮಾಡಿಸಿ. ಈ ಕ್ರೋನೋಲಾಜಿಕಲ್ ಆರ್ಡರ್ ಮೇಲೆ, ಪ್ರಿಯಾರಿಟಿ ಮೇಲೆ ಏತಕ್ಕೆ ಇದನ್ನು ಮಾಡಬಾರದು ಎಂದು ಎಕ್ಸಾಮಿನ್ ಮಾಡಿ. ಈ ರೀತಿ ಆಗುವುದರಿಂದ ಏನಾಗುತ್ತದೆ ಎಂದು ಹೇಳಿದರೆ, ಪ್ರಮೋಷನಲ್ ಮ್ಯಾಟರ್ಸ್‌ನಲ್ಲಿ ಜೂನಿಯರ್ ಆಗಿರುವವರಿಗೆ ಪ್ರಮೋಷನ್ ಕೊಡುವುದು, ಸೀನಿಯರ್ ಆಗಿರುವವರನ್ನು ಅಲ್ಲೇ ಬಿಟ್ಟು ಬಿಡುವುದು. ಅವರು ಅಪೀಲು ಹಾಕಿಕೊಂಡರೂ ಪಾಪ ಎಷ್ಟೊಂದು ಕೇಳಿಕೊಂಡರೂ ಅದು ಹಾಗೆಯೇ ಬಿದ್ದಿರುವುದು. ಆಮೇಲೆ ಕೋರ್ಟಿಗೆ ಹೋದಮೇಲೆ ಅದು ತೀರ್ಮಾನವಾಗಿ ತಪ್ಪಾಗಿದೆ, ಆದ್ದರಿಂದ ನೀವು ಬ್ಯಾಕ್‌ವೇಜಸನ್ನು ಕೊಡಿ ಎಂದು ಹೇಳುವುದು. ಇದು ಸರ್ಕಾರಕ್ಕೆ ಎಷ್ಟಾಗುತ್ತದೆ? ಇಂಥ ಕೆಲಸಗಳಿಗೆಲ್ಲ ಯಾರು ಕಾರಣ? ಇದಕ್ಕೆಲ್ಲ ಸರ್ಕಾರಿ ಅಧಿಕಾರಿಗಳೇ ಕಾರಣ. ರೂಲ್ ಇದ್ದರೂ ಎತಕ್ಕೆ ಇದನ್ನು ಮಾಡುತ್ತಾರೆ? ನಾನು ಕೆ. ಎಸ್. ಆರ್. ಟಿ. ಸಿ.ಯಲ್ಲಿ ಎಂಟು-ಒಂಭತ್ತು ವರ್ಷ ಇದ್ದೆ. ಆ ಸನ್ನಿವೇಶದಲ್ಲಿ ಏನಾಯಿತು ಎಂದರೆ, ಇಂಥ ಸನ್ನಿವೇಶವೇ ಒಂದು ಲಕ್ಷಾಂತರ

ರೂಪಾಯಿಗಳನ್ನು ಕೆ. ಎಸ್ ಆರ್. ಟಿ. ಸಿ. ಕೊಡಬೇಕಾಗಿ ಬಂತು. ಆ ಕೋರ್ಟಿನವರು ಹೇಳುವುದು ಏನೆಂದರೆ, ಆಗ ಇದ್ದ ಜನರಲ್ ಮ್ಯಾನೇಜರನ್ನು ನೀವು ಕೊಡುತ್ತೀರೋ ಬಿಡುತ್ತೀರೋ? ನಮ್ಮ ಆರ್ಡರನ್ನು ನೀವು ಇಂಪ್ಲಿಮೆಂಟ್ ಮಾಡಬೇಕು ಇಲ್ಲದಿದ್ದರೆ ಕಂಟೆಮ್ಪ್ಟ್ ಆಫ್ ಕೋರ್ಟಿಗೆ ಹಾಕುತ್ತೇವೆ. ಆಗದೇ ಹೋದ ಪಕ್ಷದಲ್ಲಿ ದುಡ್ಡು ಕೊಡಿ ಎಂದು ಹೇಳುತ್ತಾರೆ. ದುಡ್ಡು ಕೊಡುವುದಕ್ಕೆ ಕೆ. ಎಸ್. ಆರ್. ಟಿ. ಸಿ. ಮ್ಯಾನೇಜ್‌ಮೆಂಟ್ ಒಪ್ಪುವುದಿಲ್ಲ. ನಾವು ಕೋಟಿಗಟ್ಟಲೆ ದುಡ್ಡನ್ನು ಕೊಡುವುದಿಲ್ಲ ಎಂದು ಹೇಳುತ್ತಾರೆ. ಆ ಮ್ಯಾನೇಜರ್ ಏನಾಗಬೇಕು. ಈ ರೀತಿ ಒಂದು ರೆಜಲ್ಯೂಷನ್ ತಂದರು. ಆಗ ನಾನು ಈ ಕೆಲಸಗಳನ್ನೆಲ್ಲ ಮಾಡುವುದಕ್ಕೆ ಯಾರು ಕಾರಣ, ಆಪೀಸರುಗಳು ಕಾರಣ, ಅವರಿಗೆ ರೆಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡಿ, ಹಣವನ್ನು ರಿಕವರಿ ಮಾಡಿ ಎಂದು ಹೇಳಿದ ಮೇಲೆ ರೆಜಲ್ಯೂಷನ್ ಬಿದ್ದು ಹೋಯಿತು. ಅಲ್ಲಿಗಲ್ಲಿಗೆ ಸಮಾಧಾನವಾಗಿಬಿಟ್ಟರು. ಯಾರೂ ಕೇಳಲಿಲ್ಲ. ಇಂತಹ ಪರಿಸ್ಥಿತಿ ಆಗತಕ್ಕದ್ದಕ್ಕೆ ನೌಕರರೇ ಕಾರಣರು? ಇದನ್ನು ಏತಕ್ಕೆ ಇವರು ನೋಡಬಾರದು? ಕಾನೂನು ಇತಿಮಿತಿಯಲ್ಲಿ ಅವರು ಮಾಡಿದ್ದರೆ ಇಂತಹ ಅವಕಾಶಗಳೆಲ್ಲ ಆಗುವುದಿಲ್ಲ. ಇನ್ನೂ ಬೇಕಾದಷ್ಟು ಪೆಂಡಿಂಗ್ ಇದೆ. ನಾವೇನೊ ಮಾಡುತ್ತಿದ್ದೇವೆ ಎಂದು ಹೇಳುತ್ತೀರಿ. ಆದ್ದರಿಂದ ಬಹುಶಃ ನಾನು ಹೇಳತಕ್ಕ ಸಲಹೆಯನ್ನು ನೋಡಿ ಈ ಕೆಲಸಗಳನ್ನೆಲ್ಲ ಮಾಡಿದಕ್ಕೆ ಯಾರು ಕಾರಣರು ಎನ್ನತಕ್ಕದ್ದನ್ನು ಪತ್ತೆಹಚ್ಚಿ ಅದರ ರೆಸ್ಪಾನ್‌ಸಿಬಿಲಿಟಿಯನ್ನು ಸಂಬಂಧಪಟ್ಟ ಅಧಿಕಾರಿಗಳ ಮೇಲೆಯೇ ಹಾಕಿದರೆ ಇಂತಹದ್ದು ಆಗುವುದಿಲ್ಲ. ಆದ್ದರಿಂದ ಇದನ್ನು ಇನ್ನು ಮುಂದಾದರೂ ಮಾಡಿದರೆ ಒಳ್ಳೆಯದು. ಇನ್ನು ಮುಂದೆ ಮಾಡುತ್ತೇವೆಂದಿದ್ದೀರಿ. ಅದು ಎಷ್ಟರಮಟ್ಟಿಗೆ ಆಗುತ್ತದೆಯೋ ಗೊತ್ತಿಲ್ಲ. ಈ ಕ್ರಾನಾಲಾಜಿಕಲ್ ಆರ್ಡರ್‌ನಂತೆ ತಾವೇನಾದರೂ ಮಾಡಿದರೆ ಇಂತಹ ಸನ್ನಿವೇಶವನ್ನು ತಪ್ಪಿಸಬಹುದೆಂದು ನನ್ನ ಭಾವನೆಯಾಗಿದೆ. ಇನ್ನು ಬಿ. ಎಡ್. ಕಾಲೇಜನ್ನು ಮಾಡುತ್ತೇವೆಂದು ಹೇಳಿದ್ದೀರಿ. ಅದರ ಜೊತೆಗೆ ಟೆಕ್ನಿಕಲ್ ಎಜುಕೇಶನ್ ಅನ್ನು ಅದೇ ತರಹ ಕೊಡುತ್ತಿದ್ದೀರಿ. ಇದನ್ನು ಕೊಡುವುದರ ಜೊತೆಗೆ, ಟೆಕ್ನಿಕಲ್ ಎಜುಕೇಶನ್‌ಗೆ ಟ್ರೈನಿಂಗ್ ಕೊಟ್ಟವರಿಗೆ ಯಾವುದೋ ಒಂದು ಜಾಬ್ ಸಿಕ್ಕಬೇಕು ಅಥವಾ ಅವರು ಯಾವುದೋ ಒಂದು ಕಸಬನ್ನಾದರೂ ಮಾಡುತ್ತಾರೆ ಅಂದಮೇಲೆ ನೀವು ವಿದ್ಯಾರ್ಥಿಗಳಿಗೆ ಕೆಲಸವನ್ನು ಯಾವ ಉದ್ದೇಶಕ್ಕೆ ಕೊಟ್ಟಿದ್ದೀರಿ, ಅವರು ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದನ್ನು ನೋಡಬೇಕು. ಒಂದು ವೇಳೆ ಟ್ರೈನಿಂಗ್ ತೆಗೆದುಕೊಂಡು ಏನು ಆಗದೇ ಹೋದರೆ, ನಾವು ಖರ್ಚು ಮಾಡಿದ ಹಣ ಅಷ್ಟೊ ನಿರರ್ಥಕವಾಗುತ್ತದೆ. ಆದ್ದರಿಂದ ಇದರ ಮೇಲೆ ಗಮನಹರಿಸಿ, ಇನ್ನು ಮೇಲಾದರೂ ಈ ಹಣ ಖರ್ಚಾಗಲಿ. ಸದುಪಯೋಗವಾಗಲಿ. ಯಾವ ವಿದ್ಯಾರ್ಥಿಗಳಿಗೆ ನಾವು ಇಲ್ಲಿ ಟ್ರೈನಿಂಗ್ ಕೊಟ್ಟಿದ್ದೇವೆ ಅವರು ಜೀವನವನ್ನು ಸಾಗಿಸುವಂತಹ ರೀತಿಯಲ್ಲಿ ಆಗಲಿ. ಇಷ್ಟು ಕೊಟ್ಟರೂ ಅವರು ಮಾಡಿಕೊಳ್ಳಲು ಆಗದೇ ಇದ್ದ ಮೇಲೆ ಅಂತಹ ಟ್ರೈನಿಂಗ್ ಅನ್ನು ಏತಕ್ಕೆ ಕೊಡಬೇಕು. ಇಷ್ಟೆಲ್ಲಾ ಕೊಟ್ಟಿದ್ದೇವೆ ಎಂದು ತೋರಿಸಬೇಕು. ಬರೇ ಪ್ರೊಗ್ರಾಂಗೋಸ್ಕರ ನಾವು ತೋರಿಸುತ್ತೇವೆ ಎನ್ನುವುದ್ದಾಗಿದ್ದರೆ ಮಾಡಿ. ಅದು ಪ್ರಯೋಜನವೇ? ದೇಶದ ಹಣದ ಮುಗ್ಗಟ್ಟಿನ ಸ್ಥಿತಿಯಲ್ಲಿರಬೇಕಾದರೆ ಇಂತಹ ಸ್ಕೀಮ್‌ಗಳನ್ನೆಲ್ಲಾ ಹಾಕಿಕೊಂಡರೆ ಯಾವ ರೀತಿಯಾಗುತ್ತದೆ. ಇದರ ಬಗ್ಗೆ ತಾವು ಪರಿಶೀಲನೆ ಮಾಡಿ ಅದರಲ್ಲಿಯೂ ಇರತಕ್ಕ ಅನೇಕ ಸಮಸ್ಯೆಗಳು ಪ್ರಾಕ್ಟಿಕಲ್ಲಾಗಿ ಆಡಳಿತಗಾರರ ಮುಂದೆ ಬಂದಾಗ ಗೊತ್ತಾಗುತ್ತದೆ. ಆ ದೃಷ್ಟಿಯಿಂದ ಅವರು ಈ ವಿಚಾರವನ್ನು ಪುನಃ ಪರಿಶೀಲನೆ ಮಾಡಿದರೆ ಬಹಳ ಒಳ್ಳೆಯದೆಂದು ನಾನು ಹೇಳುತ್ತೇನೆ. ಇನ್ನೊಂದು ವಿಚಾರ ಅಂದರೆ ಹಿಂದುಳಿದ

ವರ್ಗದವರಿಗೆ ಎಜುಕೇಶನ್‌ನಲ್ಲಿ ಬಹಳ ಪ್ರಿಯಾರಿಟಿ ಕೊಟ್ಟು ಇದರ ಬಗ್ಗೆ ಸ್ಪೆಷಲ್ ಕೇರ್ ತೆಗೆದುಕೊಂಡು ನೋಡಿ ಎಂದು ಹೇಳಿದ್ದರೂ ನೋಡಿಲ್ಲ. ಆದರೆ, ಬಿ. ಎಡ್. ಕಾಲೇಜಿಗೆ ಅಡ್ಮಿಶನ್ ಆಗಬೇಕಾಗಿದ್ದರೆ ೪೦ ಪರ್ಸೆಂಟ್ ಬರಬೇಕು. ಅದೇ ಟಿ. ಸಿ. ಎಚ್‌ಗೆ ೩೫ ಪರ್ಸೆಂಟ್ ಬರಬೇಕು. ಹೈಸ್ಕೂಲಿನಲ್ಲಿ ಓದತಕ್ಕಂಥ ವಿದ್ಯಾರ್ಥಿಗಳು ಮತ್ತು ಅದರಲ್ಲಿರತಕ್ಕಂಥ ಟೀಚರ್‌ಗಳ ಸಂಖ್ಯೆಯಲ್ಲಿ ವಿದ್ಯಾ ಇಲಾಖೆಯಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನವರು ಬಹಳ ಕಡಿಮೆ. ಆದುದರಿಂದ, ಅವರಿಗೆ ಮಿನಿಮಮ್ ಪರ್ಸೆಂಟೇಜ್ ಕೊಟ್ಟು, ಅವರಿಗೆ ಅಡ್ಮಿಶನ್ ಕೊಟ್ಟು, ಅವರ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು. ಮಾನ್ಯ ವಿದ್ಯಾಮಂತ್ರಿಗಳು ಸ್ಪೆಷಲ್ ಕೇರ್ ತೆಗೆದುಕೊಂಡು ಕಂಡೀಷನ್ ಅನ್ನು ಸ್ವಲ್ಪ ಸಡಿಲಗೊಳಿಸಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಇದು ತೋರಿಕೆಗೋಸ್ಕರ ಇಷ್ಟು ಕೊಡುತ್ತೇವೆಂದು, ರಿಸಲ್ಟ್ ಸೈಡ್‌ನಲ್ಲಿ ಚೆಕ್ ಮಾಡಿದರೆ ಏನೂ ಸಿಗುವುದಿಲ್ಲ. ಜನರು ಕಡಿಮೆ ಇರುವಾಗ ಎಜುಕೇಶನ್ ಮ್ಯಾಟರ್‌ನಲ್ಲಿ ಏತಕ್ಕೆ ಈ ತರಹ ನಿರ್ಬಂಧ ಹಾಕುತ್ತೀರಿ? ಇಲ್ಲದಿದ್ದರೆ, ಅಡ್ಮಿಶನ್‌ಗಾದರೂ ಪರ್ಸೆಂಟೇಜ್ ಅನ್ನು ಜಾಸ್ತಿ ಕೊಡಿ. ೧೫ ಪರ್ಸೆಂಟ್ ಏತಕ್ಕೆ? ಕೃಷಿ ಕ್ಷೇತ್ರದಲ್ಲಾಗಲಿ, ವಾಣಿಜ್ಯ ಕ್ಷೇತ್ರದಲ್ಲಾಗಲಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿಲ್ಲಾ ಅವರಿಗೂ ೧೫ ಪರ್ಸೆಂಟ್ ಇದೆಯೇ? ಆ ೧೫ ಪರ್ಸೆಂಟ್ ಬರಬೇಕಾಗಿದ್ದರೆ ರೂಲ್ ಅಪ್ಲೈ ಮಾಡಬೇಕು, ಸಮಾಜದಲ್ಲಿ ಈಕ್ವಲ್ ಸರ್ಕಮ್‌ಸ್ಟೆನ್ಸಸ್ ಇರಬೇಕು. ಇವರು ಆ ಸ್ಥಿತಿಯಲ್ಲಿರದ ಕಾರಣ, ಇವರಿಗೆ ಸ್ಪೆಷಲ್ ಕೇರ್ ಬೇಕಾಗಿದೆ. ೧೫ ಪರ್ಸೆಂಟ್ ಎಂದರೆ ಎಜುಕೇಶನಲ್ ಮ್ಯಾಟರ್‌ನಲ್ಲಿ ಕಷ್ಟವಾಗುತ್ತದೆ. ಇನ್ನು ವಿಶ್ವವಿದ್ಯಾನಿಲಯದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಿನ್ನೆ ದಿವಸ ಮಾನ್ಯ ಸದಸ್ಯರೊಬ್ಬರು ಮಾತನಾಡಿದರು. ಇದು ಆಟಾನಮಸ್ ಬಾಡಿ, ಏನು ಮಾಡುವುದಕ್ಕಾಗುವುದಿಲ್ಲವೆಂದರು. ಇದು 'ಆಟಾನಮಸ್ ಬಾಡಿ' ಆಗಿರುವುದು ಸರಿ. ಇದು ಯಾವುದರಲ್ಲಿ ಆಟಾನಮಿ? ಯಾವುದರಲ್ಲಿ ನೀವು ಅವರಿಗೆ ಕೆಲವು ಪವರ್ಸ್ ಕೊಟ್ಟಿದ್ದೀರಿ, ಆ ಪವರ್ಸ್ ಒಳಗಡೆ ಆಟಾನಮಿಯೇ ಹೊರತು, ಅನ್‌ಲಿಮಿಟೆಡ್ ಪವರ್ಸ್ ಏನೂ ಕೊಟ್ಟಿಲ್ಲ. ಇದು ಪ್ಯಾರಲಲ್ ಗೌವರ್ನಮೆಂಟ್ ಅಲ್ಲ, ಸಾವರಿನ್ ಬಾಡಿಯೂ ಅಲ್ಲ. ಆದುದರಿಂದ, ಇವರಿಗೆ ಕೊಟ್ಟಿರತಕ್ಕಂಥ ಮಿತಿಯಲ್ಲಿ ಅವರು ಸರಿಯಾಗಿ ಕೆಲಸ ಮಾಡಿದ್ದಾರೆಯೇ? ಅಥವಾ ಇಲ್ಲವೆ? ಎಂದು ನೋಡುವುದಾದರೂ ಬೇಡವೇ? ಒಂದು ವೇಳೆ ಅಂತಹ ಸಂದರ್ಭ ಬಂದರೆ, ನಿನ್ನೆ ದಿವಸ ನಮ್ಮ ಸದಸ್ಯರು ಹೇಳಿದ ಹಾಗೆ, ಇದು ಆಟಾನಮಸ್ ಬಾಡಿ, ನಾವೇನು ಮಾತನಾಡುವ ಹಾಗಿಲ್ಲವೆಂದರೆ, ಮತ್ತೊಂದು ಮಾತನ್ನು ಹೇಳುತ್ತಿದ್ದರು. ಯೂನಿವರ್ಸಿಟಿ ಜಾತಿ ಮತ, ಬೇದಗಳಿಂದ ಸಾಕಷ್ಟು ತುಂಬಿಹೋಗಿದೆ ಎಂದು ಹೇಳುತ್ತಿದ್ದರು. ಅವರು ಹೇಳಿರತಕ್ಕಂಥ ಮಾತು ನಿಜವೇ, ಅಲ್ಲವೆ ಎಂಬುದನ್ನು ಕಾರ್ಯರೂಪದಲ್ಲಿ ಪರೀಕ್ಷಿಸಿ ನೋಡಿ. ಅಲ್ಲಿ ಯಾವ ರೀತಿ ರಿಕ್ರೂಟ್ ಮಾಡಿದ್ದಾರೆ? ಏನೇನು ಕೆಲಸಗಳಾಗಿವೆ? ಎನ್ನುವುದನ್ನು ನೋಡಿ. ಜೊತೆಗೆ ಇನ್ನೊಂದು ವಿಚಾರವನ್ನು ತಮಗೆ ಹೇಳುತ್ತೇನೆ. ಈ ಇಂಜಿನಿಯರಿಂಗ್ ಕಾಲೇಜುಗಳ ಕೆಲವು ಅಡ್ಮಿಶನ್ ಫಾರಂಗಳಲ್ಲಿ Admission form for Schedule Caste ಎಂದು ಬರೆದಿರುತ್ತಾರೆ. ಇದು ಯಾರಾದರೂ ಮಾಡುವ ಕೆಲಸವೇ? ಈ ರೀತಿ ಅಡ್ಮಿಶನ್ ಫಾರಂಗಳಲ್ಲಿ ಬರೆದರೆ ಅವರು ಕಾಪಿ ಮಾಡುವಾಗಲೂ ಸಹ ಎಸ್. ಸಿ. ಅಲ್ಲದಿದ್ದವರಿಗೆ, ಬೇರೆಯವರು ಕಾಪಿ ಮಾಡುತ್ತಿದ್ದರೆ ಸುಮ್ಮನಿರುವುದು. ಎಸ್. ಸಿ. ವಿದ್ಯಾರ್ಥಿಯಾಗಿರುವವರನ್ನು ಹಿಡಿದು ಹೊರಗಡೆ ಕಳುಹಿಸುವುದು. ಇದು ಯಾವ ಕೆಲಸ? ಜೊತೆಗೆ ಎಸ್. ಸಿ. ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತು ಕೊಳ್ಳುವಾಗ, ಪತ್ರಿಕೆ

ಜನರನ್ನು ಒಂದೇ ರೂಮಿನಲ್ಲಿ ಹಾಕುತ್ತಾರೆ. ಇದನ್ನು ನಾನು ಹೇಳುತ್ತಿರುವಾಗ ಯಾವುದೆಂದು ನೀವು ಕೇಳಬಹುದು. ಆದರೆ, ಹೇಳುವುದು ಕಷ್ಟ. ಏಕೆಂದರೆ, ಹುಡುಗರು ಅಲ್ಲಿ ಕೇಳಿಕೊಳ್ಳುತ್ತಾರೆ ದಯವಿಟ್ಟು, ಈ ವಿಚಾರ ಹೇಳಬೇಡಿ, ನಮಗೆ ಬಹಳ ತೊಂದರೆ ಕೊಟ್ಟು ಫೇಲ್ ಮಾಡುತ್ತಾರೆ' ಎಂದು ಹೇಳುತ್ತಾರೆ. ಆದಕ್ಕೋಸ್ಕರವೇ ಇವೊತ್ತಿನ ಕಾಲೇಜುಗಳಲ್ಲಿ ಗಲಾಟೆಯಾಗುತ್ತಿರುವುದು. ಇಂಥಾದ್ದು ಆಗಬಾರದು. ಇವುಗಳ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಿ ವಿಶೇಷವಾಗಿ ಇಂಜಿನಿಯರಿಂಗ್ ಕಾಲೇಜುಗಳು ಮೆಡಿಕಲ್ ಕಾಲೇಜುಗಳು ಮತ್ತು ಟೆಕ್ನಿಕಲ್ ಕಾಲೇಜುಗಳ ಬಗ್ಗೆ ಪರಿಶೀಲನೆ ಮಾಡಿ ನೋಡಿ, ಅನಂತರ ಈ ರೀತಿ ನಡೆಯುತ್ತಿದೆಯೋ ಇಲ್ಲವೋ ಎಂಬುದು ಗೊತ್ತಾಗುತ್ತದೆ. ನಾವು ನಿಮಗೆ ಬೇಕಾದರೆ ವಿಶೇಷವಾಗಿ ರಹಸ್ಯವಾಗಿ ಹೇಳಿಕೊಡುತ್ತೇವೆ. ವಿದ್ಯಾರ್ಥಿಗಳು ಬೀದಿಪಾಲಾಗದ ಹಾಗೆ ನೋಡಿಕೊಳ್ಳಬೇಕು. ಅವರಿಗೆ ತೊಂದರೆಯಾಗಬಾರದು. ಆದುದರಿಂದ, ತಾವು ಇದರ ಬಗ್ಗೆ ಸ್ವಲ್ಪ ಪರಿಶೀಲಿಸಬೇಕು. ಕೊನೆಯದಾಗಿ, ಜುಡಿಶಿಯರಿ ಬಗ್ಗೆ ಮಾತನ್ನಾಡಿ ನನ್ನ ಮಾತುಗಳನ್ನ ಮುಗಿಸುತ್ತೇನೆ. ಎಸ್. ಸಿ., ಎಸ್. ಟಿ.ಯವರು ಎಲ್ಲಾ ಇಲಾಖೆಗಳಲ್ಲಿರುವುದಕ್ಕಿಂತ ಜುಡಿಶಿಯರಿ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಅವರಿಗೆ ಸೆಕ್ಯೂರಿಟಿ ಸಿಗಬೇಕಾಗಿದ್ದರೆ, ಅಡ್ಮಿನಿಸ್ಟ್ರೇಶನ್ ಆಫ್ ಜಸ್ಟೀಸ್ ಬಹಳ ಮುಖ್ಯವಾದುದು. ಕೆಲವು ಡಿಪಾರ್ಟ್‌ಮೆಂಟ್‌ಗಳು ಸೆಕ್ಯೂರಿಟಿ ಡಿಪಾರ್ಟ್‌ಮೆಂಟ್‌ಗಳಾಗಿವೆ. ಅವುಗಳೆಂದರೆ, ರೆವಿನ್ಯೂ, ಪೋಲೀಸ್, ಮೆಜಿಸ್ಟ್ರೇಸಿ. ಮ್ಯಾಜಿಸ್ಟ್ರಿಗಳಲ್ಲಿ ಅವರಿಗೆ ಪ್ರಾತಿನಿಧ್ಯ ಇಲ್ಲದೇ ಹೋದರೆ ತೊಂದರೆಯಾಗುತ್ತದೆ. ಆದುದರಿಂದ, ಮುನ್ಸಿಫ್ ಮತ್ತು ಬೇರೆ ಹೈಯರ್ ಕೇಡರ್‌ಗಳಲ್ಲಿ ಸ್ವಲ್ಪ ಲೀನಿಯಂಟ್ ಆಗಿ ಆ ಜನಗಳನ್ನು ನೇಮಕ ಮಾಡಿ, ಅವರಿಗೆ ತರಬೇತಿಗೆ ಅವಕಾಶ ಕೊಟ್ಟು ರಿಸರ್ವ್ ಮಾಡಿರತಕ್ಕಂಥ ಹುದ್ದೆಗಳು ಭರ್ತಿಯಾಗುವಂಥ ರೀತಿಯಲ್ಲಿ ಮಾಡಬೇಕು. ತಮಗೆ ಮತ್ತೊಂದು ವಿಚಾರವನ್ನು ಹೇಳುತ್ತೇನೆ. ನಾನು ೨೦-೩೦ ವರ್ಷ ಲಾಯರ್ ಕೆಲಸ ಮಾಡಿದ ಅನುಭವವಿರುವುದರಿಂದ ಹೇಳುತ್ತಿದ್ದೇನೆ. ತಾವು ಸಹ ಲಾಯರ್ ಆಗಿದ್ದೀರಿ. ಒಂದು ಸಲ ಏನಾಯಿತೆಂದರೆ, ಒಬ್ಬ ಮುನ್ಸಿಫ್‌ರಿಂದ ಒಂದು ಆದೇಶ ಬಂತು. ಅವರ ಆದೇಶದ ಮೇಲೆ ಡಿಸ್ಟ್ರಿಕ್ಟ್ ಕೋರ್ಟಿಗೆ ಅಪೀಲ್ ಬಂತು. ಹಾಗೆ ಬರುವಂಥ ಕಾಲದಲ್ಲಿ ಏನಾಯಿತೆಂದರೆ, ಎದುರುಗಡೆ ನನ್ನ ಸ್ನೇಹಿತರಾದ ಜಡ್ಜ್ ಇದ್ದರು. ಅವರು ಸ್ವಾಮಿ, ವಾರಂಟ್ ಕೇಸ್‌ಗೆ ಛಾರ್ಜ ಫ್ರೇಮ್ ಮಾಡಬೇಕಾಗಿತ್ತು, ಇನ್ನು ಛಾರ್ಜ್ ಫ್ರೇಮ್ ಮಾಡಿಲ್ಲ, ಇದರಲ್ಲಿ ಏನೋ ಆಗಿದೆ ಎಂದು ಹೇಳಿದರು. ಆಗ ಡಿಸ್ಟ್ರಿಕ್ಟ್ ಜಡ್ಜ್ ಏನು ಮಾಡಿದರೆಂದರೆ "ಹಾಗೆಂದರೆ ಏನು?'' ಇಂತಹ ಜಡ್ಜ್ ಉಂಟೇ ಸ್ವಾಮಿ? 'ಅವನು ಯಾರು' ಎಂದು ಅವರು ಫೈಲ್ ಅನ್ನು ತೆಗೆದು ನೋಡಿದಾಗ, ಕೆಲಸ ಮಾಡುವ ಆ ಮುನ್ಸಿಫರು ಅವರ ಜಾತಿಯವರಾಗಿದ್ದರು. ಆದಾದ ನಂತರ ಫೈಲನ್ನು ಸುಮ್ಮನೆ ತಿರುಗಿಸಿ ನೋಡಿ ಹಾಗೆಯೇ ಸುಮ್ಮನಾಗಿಬಿಟ್ಟರು. ನನ್ನ ಪಕ್ಕದಲ್ಲಿದ್ದ ವಕೀಲರಿಗೆ ನಾನು ನೋಡಿದಿರಾ ಸಾರ್ ಎಂದು ಹೇಳಿದಾಗ ಅವರು ಏನು ಮಾಡುತ್ತೀರಿ ಸಿದ್ದಯ್ಯನವರೇ ಎಂದರು. ಈ ರೀತಿಯ ಸನ್ನಿವೇಶವೂ ಉಂಟು. ಈ ರೆವಿನ್ಯೂ ಮ್ಯಾಟರ್‌ನಲ್ಲಿ ಒಂದು ವಿಚಾರ ಬಂತು. ಅವರು ಸೀನಿಯರ್ ಪೋಸ್ಟ್ ಡಿವಿಷನಲ್ ಕಮಿಷನರ್. ಅವರು ಏನು ಮಾಡಿದರೆಂದರೆ, ಒಂದು ಅಪೀಲ್ ಕೇಸ್‌ನಲ್ಲಿ ಅಪೀಲ್ ಹಾಕಿರತಕ್ಕಂಥ Respondent - Sir, it is not in my limitations ಎಂದರು. ಅದಕ್ಕೆ ನಮ್ಮ ಡಿವಿಷನಲ್ ಕಮೀಷನರ್‌ರವರು ಏನು ಹೇಳಿದರೆಂದರೆ, ಲಿಮಿಟೇಷನ್ ಹೇಗೆ ಎಂದು ಹೇಳಿ ಎಂದು ಕುಳಿತುಕೊಂಡರು. ಅದನ್ನು ನಾವೆ ಮಾಡುವವರು, ಯಾರು ಅಪೀಲನ್ನು ಹಾಕಿದ್ದಾರೋ ಅವರು.

Appeal is within the time limit ಎನ್ನತಕ್ಕ ಬರ್ಡನ್ ಅವರ ಮೇಲಿದೆ ಎಂದು ಹೇಳಿ ಆ ಲಾಯರ್ ಒಪ್ಪಿದರೂ ಕೂಡ ಈ ಡಿವಿಜನಲ್ ಕಮಿಷನ್‌ರವರು ಬಿಡಲಿಲ್ಲ. ನೋ ನೋ ನೀವು ಮಾಡಿ ಎಂದರು. ಇಂಥ ಜಡ್ಜ್‌ಗಳು ಉಂಟು. ಆದುದರಿಂದ ಎಫಿಷಿಯನ್ಸಿ ವಿಚಾರದಲ್ಲಿ ತರಬೇತಿಯನ್ನು ಕೊಡಬೇಕು. ಎಷ್ಟೋಸಲ ಎಫಿಷಿಯನ್ಸಿ ಬಿಟ್ಟು ತಮ್ಮ ಸ್ವಂತವಾಗಿ personal influence, bribery ವಗ್ಯೆರೆ ಇಂಥಾದ್ದರಲ್ಲೂ ಆಗುವುದುಂಟು. ಈ ದಿಸೆಯಲ್ಲಿ ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಈ ಇಲಾಖೆಯಲ್ಲಿ ಈ ಜನಗಳ ಪ್ರಾತಿನಿಧ್ಯ ಬಹಳ ಕಡಿಮೆ ಇರುವುದರಿಂದ ಅವರಿಗೆ ಸರಿಯಾದ ತರಬೇತಿಯನ್ನು ಕೊಟ್ಟು ಮಾಡಿಸಬೇಕು. ಏನಾದರೂ ಇಬ್ಬರು ಲಾಯರ್‌ಗಳಿದ್ದರೆ ಅವರಿಬ್ಬರೂ ಕೂಡ ಹೇಳಿಕೆ ಕೊಡುತ್ತಾರೆ. ಒಂದು ವೇಳೆ ಜಡ್ಜ್‌ಗೆ ಅದು ಗೊತ್ತಿಲ್ಲದಿದ್ದರೆ ಕ್ಲಾರಿಫಿಕೇಷನ್ ಕೇಳಿ ತಿಳಿದುಕೊಳ್ಳತಕ್ಕ ಅವಶ್ಯ ಉಂಟು. ಯಾವುದೇ ಜಡ್ಜ್ ನೇಮಕಾತಿಯಾಗಿ ಬರುವಾಗ ಸಂಪೂರ್ಣವಾಗಿ ಪರಿಣಿತನಾಗಿರುವುದಿಲ್ಲ. ಆ ರೀತಿ ಇದ್ದರೆ ಸಿವಿಲ್ ಕೋರ್ಟ್‌ನಲ್ಲಿ ಅಪೀಲ್‌ಗಳೇ ಇರುತ್ತಿರಲಿಲ್ಲ. ಆದುದರಿಂದ ಈ ವಿಚಾರದಲ್ಲಿ ಸ್ವಲ್ಪ ನೋಡಿ. ಈ ಇಲಾಖೆಯಲ್ಲಿ ಅವರ ಪ್ರಾತಿನಿಧ್ಯ ಕಡಿಮೆ ಇರುವುದರಿಂದ ಇದರ ಬಗ್ಗೆ ಸ್ವಲ್ಪ ಸೂಕ್ತ ಕ್ರಮ ತೆಗೆದುಕೊಂಡು ಸರಿಯಾದ ತರಬೇತಿಯನ್ನು ಕೊಟ್ಟು ಮೀಸಲು ಹುದ್ದೆಗಳನ್ನು ತುಂಬುವ ರೀತಿಯಲ್ಲಿ ಮಾಡಬೇಕೆಂದು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕರಿಯಣ್ಣ (ಬಾಳೆಹೊನ್ನೂರು):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ವಿದ್ಯಾ ಇಲಾಖೆ ಮತ್ತು ನ್ಯಾಯಾಂಗ ಇಲಾಖೆಗಳ ಬೆಂಬಲವನ್ನು ನೀಡುತ್ತಾ, ವಿದ್ಯಾ ಇಲಾಖೆಯ ಮೇಲೆ ಕೆಲವು ವಿಚಾರಗಳನ್ನು ಮಾನ್ಯ ಶಿಕ್ಷಣ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಪ್ರಾಥಮಿಕ ಶಾಲೆಗಳಲ್ಲಿ ಒಂದನೆಯ ತರಗತಿಯಿಂದ ನಾಲ್ಕನೆ ತರಗತಿಯವರೆಗೆ ಕನ್ನಡದಲ್ಲಿ ಶಿಕ್ಷಣ ಆಗಬೇಕೆಂದು ನಮ್ಮ ಶಿಕ್ಷಣ ಮಂತ್ರಿಗಳು ಈಗ ತಾನೆ ಹೇಳಿದರು. ಏಕೆಂದರೆ, ನಿನ್ನೆ ದಿನ ಆಂಗ್ಲ ಮಾಧ್ಯಮ ಬೇಕೆಂದು ಹೇಳಿದಾಗ ಅವರು ಇದನ್ನು ಹೇಳಿದರು. ವಿದ್ಯಾ ಮಂತ್ರಿಗಳು ಬಹಳ ಕಷ್ಟಕಾಲದಲ್ಲಿ ಈ ಖಾತೆಯನ್ನು ತೆಗೆದುಕೊಂಡರೆಂದು ಕಾಣುತ್ತದೆ. ಕಾರಣವೇನೆಂದರೆ. ಎಷ್ಟೋ ಟೆಕ್ಸ್ಟ್ ಪುಸ್ತಕಗಳು ಇಲ್ಲದ ಕಾಲದಲ್ಲಿ ಅದನ್ನು ಸಮರ್ಪಕವಾಗಿ ನೀಡಿದ್ದಾರೆ. ಅನೇಕ ಕಷ್ಟಗಳು ವಿದ್ಯಾ ಇಲಾಖೆಯಲ್ಲಿತ್ತು. ಮಂತ್ರಿಗಳನ್ನು ದರ್ಶನ ಮಾಡುವುದೇ ಕಷ್ಟವಾಗಿತ್ತು. ಓಪನ್ನಾಗಿ ಬಾಗಿಲು ತೆರದು, ಜನ ಅದನು ಮುರಿದರೂ ಚಿಂತೆ ಇಲ್ಲ, ಅದನ್ನು ಪೋಲಿಸ್‌ನವರಿಗೆ ಕೊಡದೆ ನಮಗೆ ರಕ್ಷಣೆಯನ್ನು ತಂದಿದ್ದಾರೆ. ಅದು ಬಹಳ ಸಂತೋಷದ ವಿಚಾರ. ಇಷ್ಟಾದರೂ ಸಹ ೧೯೯೦-೯೧ರಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ೧ ರಿಂದ ೪ನೇ ತರಗತಿಯವರೆಗೆ ೪೮ ಲಕ್ಷದ ೩೨ ಸಾವಿರ ಇದ್ದದ್ದು ೧೯೯೧-೯೨ರಲ್ಲಿ ೪೭ ಲಕ್ಷದ ೯೫ ಸಾವಿರಕ್ಕೆ ಇಳಿದುಬಿಟ್ಟಿದೆ. ಅಂದರೆ ಸುಮಾರು ಒಂದು ಲಕ್ಷ ಚಿಲ್ಲರೆ ಮಕ್ಕಳು ಓದಲು ಬರಲಿಲ್ಲ. ಇದಕ್ಕೆ ಕಾರಣವೆಂದರೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಹಳ ಕಡುಬಡಮಕ್ಕಳಿಗೆ ಸಾಕಷ್ಟು ಸವಲತ್ತುಗಳನ್ನು ಮಾಡಿ ಕೊಡದಿರುವುದರಿಂದ ವಿದ್ಯಾ ಇಲಾಖೆಯಲ್ಲಿ ಈ ಒಂದು ವಿದ್ಯಾಭ್ಯಾಸ ಇಳಿದುಹೋಯಿತು. ಉದಾಹರಣೆಗೆ ನನ್ನ ಜಿಲ್ಲೆಯಲ್ಲಿ ಹಳ್ಳಿಗಳಲ್ಲಿ ಪಾಠಶಾಲೆಗಳಿದ್ದರೂ, ಹಳ್ಳಿಗಳ ಪಕ್ಕದಲ್ಲಿಯೇ ಅಂದರೆ ರೆವಿನ್ಯೂ ಹಳ್ಳಿಗಳ ಪಕ್ಕದಲ್ಲಿಯೇ ಕ್ಯಾಂಪ್‌ಗಳು ಪ್ರಾರಂಭವಾಗಿದೆ. ಏಕೆಂದರೆ, ರೆವಿನ್ಯೂ ಹಳ್ಳಿಗಳಲ್ಲಿ ನೀವೇಶನಗಳಿಲ್ಲ, ಆದರೆ ಕ್ಯಾಂಪ್‌ಗಳಿವೆ, ಅಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ ಇದೆ. ಅಲ್ಲಿ ಶಾಲೆಗಳನ್ನು ಮಾಡಿ ಎಂದರೆ ನಮಗೆ

ಅದನ್ನು ಮಾಡಲು ಕಾನೂನಿನಲ್ಲಿ ಪ್ರಾವಿಷನ್ ಇಲ್ಲವೆಂದು ಹೇಳಿ ಬ್ರಾಂಚ್ ಶಾಲೆಗಳನ್ನು ಮಾಡಿದ್ದಾರೆ. ಅವುಗಳಿಗೆ ಕಟ್ಟಡವಿಲ್ಲದೆ ಗುಡಿಸಲುಗಳಲ್ಲಿ ನಡೆಸಬೇಕಾಗಿದೆ. ಆ ಬ್ರಾಂಚ್ ಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ ಇದೆ. ಒಬ್ಬ ಉಪಾಧ್ಯಾಯರನ್ನು ಕೊಟ್ಟು ೧ ರಿಂದ ೭ನೇ ತರಗತಿಯವರೆಗೆ ನೋಡಿಕೊಳ್ಳಬೇಕೆಂದು ಹೇಳುತ್ತಾರೆ. ನಮ್ಮಲ್ಲಿ ೭೧ ಬ್ರಾಂಚ್ ಶಾಲೆಗಳಿವೆ. ಆ ೭೧ ಶಾಲೆಗಳಿಗೂ ಕಟ್ಟಡವಿಲ್ಲ, ಉಪಾಧ್ಯಾಯರುಗಳಿಲ್ಲ. ಆ ಕಾರಣದಿಂದ ವಿದ್ಯಾರ್ಥಿಗಳ ಇಳುವರಿಗೆ ಕಾರಣವಾಗಿದೆ. ಆ ಮಕ್ಕಳು ಶಾಲೆಗೆ ಬಂದರೆ ಎಲ್ಲಿ ಓದಬೇಕು? ಮಕ್ಕಳನ್ನು ೧ರಿಂದ ೭ನೇ ತರಗತಿಯವರೆಗೆ ಕೂಡಿಹಾಕತಕ್ಕ ಪರಿಸ್ಥಿತಿ ಇದೆ. ಆದುದರಿಂದ ೧ ರಿಂದ ೪ನೇ ತರಗತಿಯವರೆಗೆ ಶಾಲೆಗೆ ಬರತಕ್ಕ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಇದರ ಜೊತೆಯಲ್ಲಿ ಉರ್ದು ಶಾಲೆಗಳನ್ನು ತೆರೆದಿದ್ದಾರೆ. ೧ ರಿಂದ ೭ನೇ ತರಗತಿಯವರೆಗೆ ಬಂದಿದೆ. ೭ನೇ ತರಗತಿಯಿಂದ ಪ್ರೌಢಶಾಲೆಯವರೆಗೆ ಬಂದಿದೆ. ಆದರೆ ಉರ್ದು ತರಗತಿಯಲ್ಲಿರತಕ್ಕಂತಹ ಉಪಾಧ್ಯಾಯರುಗಳನ್ನು ಮಾತ್ರ ಇದುವರೆಗೆ ರಿಕ್ರೂಟ್‌ಮೆಂಟ್ ಮಾಡಲಿಲ್ಲ, ಪೋಸ್ಟ್ ಕ್ರಿಯೇಟ್ ಮಾಡಲಿಲ್ಲ. ಏತಕ್ಕೋಸ್ಕರ ಈ ಪೋಸ್ಟನ್ನು ಕ್ರಿಯೇಟ್ ಮಾಡಲಿಲ್ಲವೆಂದರೆ ಆದೇನೋ ಶಾಲೆಗಳು ಒಂದಕ್ಕೊಂದು ಜಾಸ್ತಿಯಾಗಬಹುದು, ಆದ್ದರಿಂದ ಈ ಪೋಸ್ಟ್‌ಕ್ರಿಯೇಟ್ ಮಾಡಿಲ್ಲವೆಂದು ಹೇಳುತ್ತಾರೆ. ಈ ಕಡೆ ಉರ್ದು ಟೀಚರ್ಸ್ ಇಲ್ಲ, ಕನ್ನಡ ಟೀಚರ್ಸ್ ಇಲ್ಲ. ಕನ್ನಡ ಟೀಚರ್‌ಗಳನ್ನು ತೆಗೆದುಕೊಂಡು ಹೋಗಿ ಉರ್ದು ಶಾಲೆಗೆ ಕನ್ನಡ ಕಲಿಯುವುದಕ್ಕೆ ಹಾಕೋಣವೆಂದರೆ ಅವರೂ ಇಲ್ಲ. ಈ ರೀತಿ ಶಿವಮೊಗ್ಗ ಜಿಲ್ಲೆಯಲ್ಲಿ ನನ್ನ ಕ್ಷೇತ್ರವಾದ ಹೊಳೆಹೊನ್ನೂರಿನಲ್ಲಿ ೧೭ ಶಾಲೆಗಳಿವೆ. ಇಲ್ಲಿ ಉರ್ದು ಉಪಾಧ್ಯಾಯರೂ ಇಲ್ಲ, ಕನ್ನಡದ ಉಪಾಧ್ಯಾಯರೂ ಇಲ್ಲ. ಆದರೆ ೧ನೇ ತರಗತಿಯಿಂದ ೭ನೇ ತರಗತಿಯವರೆಗೆ ಮಾತ್ರ ಇದೆ. ಅದನ್ನು ಬೇರೆ ಸ್ಕೂಲ್‌ಗಳಿಂದ ಡೆಪುಟೇಷನ್ ಅಂತ ಹಾಕುತ್ತಾರೆ. ಅವರನ್ನು ವರ್ಷದ ಕೊನೆಯಲ್ಲಿ ಅಥವಾ ಮಧ್ಯದ ವರ್ಷದಲ್ಲಿ ಬದಲಾಯಿಸಿ ಆ ಮಕ್ಕಳು ಓದದೇ ಇರತಕ್ಕಂತಹ ಪರಿಸ್ಥಿತಿ ಮಾಡಿದ್ದಾರೆ. ಕನ್ನಡದ ಬಗ್ಗೆ ನಾವೆಲ್ಲರೂ ಬಹಳ ಅಭಿಮಾನ ಇಟ್ಟು ಮಾತನಾಡುತ್ತೇವೆ. ಕನ್ನಡ ಶಾಲೆಗಳು ಬಹಳ ಚೆನ್ನಾಗಿರಬೇಕೆಂದು ಹೇಳುತ್ತಿದ್ದೇವೆ. ಇಂಗ್ಲಿಷ್ ಶಾಲೆಗಳು ಬೇಡವೆಂದು ಹೇಳುತ್ತಿದ್ದೇವೆ. ಇವರು ಕೊಟ್ಟಂತಹ ಅಂಕಿ ಅಂಶಗಳನ್ನು ನಾವು ಗಮನಿಸಿದರೆ, ಎಸ್. ಎಸ್. ಎಲ್. ಸಿ.ಯಲ್ಲಿ ಕನ್ನಡ ಮೀಡಿಯಂನಲ್ಲಿ ೫೮ ಪರ್ಸೆಂಟ್ ಪಾಸಾಗಿದ್ದರೆ ಇಂಗ್ಲಿಷ್ ಮೀಡಿಯಂನಲ್ಲಿ ಮಕ್ಕಳು ೭೨ ಪರ್ಸೆಂಟ್‌ನಲ್ಲಿ ಪಾಸಾಗಿದ್ದಾರೆ. ಇದಕ್ಕೆ ಅರ್ಥವೇನು? ಅಂದರೆ ಖಾಸಗಿ ಶಾಲೆಗಳಲ್ಲಿ ಇಂಗ್ಲಿಷ್ ಮೀಡಿಯಂನವರು ಕಷ್ಟಪಟ್ಟು ಕೆಲಸ ಮಾಡುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಕಷ್ಟಪಟ್ಟು ಕೆಲಸ ಮಾಡದೇ ಇರುವುದರಿಂದ ಅಂದರೆ ಆ ಮಕ್ಕಳಿಗೆ ಕನ್ನಡವನ್ನು ಸಮರ್ಪಕವಾಗಿ ಕಲಿಸದೇ ಇರುವುದರಿಂದ, ಕನ್ನಡ ನಾಡಿನಲ್ಲಿ ಕನ್ನಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಸಾಗದೇ ಇರತಕ್ಕಂತಹ ಒಂದು ಪರಿಸ್ಥಿತಿ ಬಂದಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಮನ ಹರಿಸುತ್ತಾರೆಂದು ನಂಬಿರುತ್ತೇನೆ. ಅವರಿಗೆ ಎಜುಕೇಷನ್ ಅಲ್ಲ ಯಾವ ಇಲಾಖೆ ಕೊಟ್ಟರೂ ಸಹ ಅವರು ಹೆಚ್ಚಿನ ರೀತಿಯಲ್ಲಿ ಗಮನ ವಹಿಸುತ್ತಾರೆ. ಕನ್ನಡಕ್ಕೆ ಅಗೌರವ ಬರತಕ್ಕಂತಹ ಪರಿಸ್ಥಿತಿಯಲ್ಲಿ ಪಾಸ್ ಮಾಡತಕ್ಕಂತಹ ಶಾಲೆಗಳು ಏನು ಇವೆ, ಇವಕ್ಕೆ ಏನಾದರೂ ಸ್ವಲ್ಪ ಹೊಸ ಅಸ್ತ್ರಗಳನ್ನು ಉಪಯೋಗಿಸಿ ಕನ್ನಡದಲ್ಲಿ ಹೆಚ್ಚಿನ ರೀತಿಯಲ್ಲಿ ಉತ್ತೀರ್ಣರಾಗುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಮಕ್ಕಳೇ ಕನ್ನಡ ಮೀಡಿಯಂನಲ್ಲಿ ಜಾಸ್ತಿ ಇರುವವರು. ಏಕೆಂದರೆ,

ಇಂಗ್ಲೀಷ್ ಮೀಡಿಯಂ ಈ ನಗರ ವಾಸಿಗಳಲ್ಲಿ ಇರತಕ್ಕಂತಹ ಜನಗಳಿಗೆ ಸಿಕ್ಕಿದೆ. ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ಸ್ಕೂಲ್ ಬಿಲ್ಡಿಂಗ್‌ಗಳು ಇರುವುದಿಲ್ಲ, ಮಕ್ಕಳು ಕೂರುವುದಕ್ಕೆ ಕುರ್ಚಿಗಳಿಲ್ಲ. ಶಾಲೆಗಳಲ್ಲಿ ಪಾಠ ಮಾಡುವುದಕ್ಕೆ ಎಷ್ಟೋ ಉಪಾಧ್ಯಯರುಗಳು ಶಾಲೆಗೆ ಬರುವುದಿಲ್ಲ. ಅದನ್ನು ಸರಿಯಾಗಿ ಇನ್‌ಸ್ಪೆಕ್ಷನ್ ಸಹ ಮಾಡುವುದಿಲ್ಲ. ಈ ತರಹ ಅವ್ಯವಸ್ಥೆ ಇರುವುದರಿಂದ ಕನ್ನಡದ ಪರಿಸ್ಥಿತಿ ಈ ದುಸ್ಥಿತಿಗೆ ಇಳಿದಿದೆ. ಇನ್ನೊಂದು ವಿಚಿತ್ರವಾದ ಸಂಗತಿಯೆಂದರೆ ಐವತ್ತೂರು ಅಥವಾ ಐವತ್ತೆಂಟು ವಿದ್ಯಾರ್ಥಿಗಳು ೨೦ ರ್ಯಾಂಕ್‌ಗಳನ್ನು ಪಡೆದಿದ್ದಾರೆಂದು ತಮ್ಮ ವರದಿಯಲ್ಲಿ ಕೊಟ್ಟಿದ್ದೀರಿ. ಆದರೆ ಅದರಲ್ಲಿ ಕನ್ನಡ ಮೀಡಿಯಂನಲ್ಲಿ ಒಬ್ಬನೇ ಒಬ್ಬ ರ್ಯಾಂಕ್ ತೆಗೆದುಕೊಂಡಿದ್ದಾನೆ. ಅವನು ಎಷ್ಟನೇ ರ್ಯಾಂಕ್ ತೆಗೆದುಕೊಂಡಿದ್ದಾನೆ ಎಂದು ಹೇಳಲೇ ಇಲ್ಲ. ೨೦ ರ್ಯಾಂಕ್‌ಗಳನ್ನು ೫೩ ಜನ ವಿದ್ಯಾರ್ಥಿಗಳು ತೆಗೆದುಕೊಂಡಿದ್ದು ಅದರಲ್ಲಿ ಒಬ್ಬನೇ ಒಬ್ಬ ಕನ್ನಡದಲ್ಲಿ ರ್ಯಾಂಕ್ ತೆಗೆದುಕೊಂಡಿದ್ದಾನೆ ಎಂದರೆ ಈ ಕನ್ನಡ ಶಾಲೆಗಳ ಪರಿಸ್ಥಿತಿ ಯಾವ ರೀತಿ ಇದೆ ಎಂದು ತಾವು ಪರಿಶೀಲನೆ ಮಾಡಬೇಕು. ಏಕೆಂದರೆ ಈಗಾಗಲೇ ಕಡತ ವಿಲೇವಾರಿ ಮಾಡಲು ಹೊರಟ್ಟಿದ್ದೀರಿ. ಅದರ ಜೊತೆಯಲ್ಲಿ ಇದನ್ನು ಸಹ ವಿಲೇವಾರಿ ಮಾಡಿ, ಇದರ ಸ್ಟ್ಯಾಂಡರ್ಡ್‌ನ್ನು ಹೆಚ್ಚಿನ ರೀತಿಯಲ್ಲಿ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನೇಮಕಾತಿಯ ಬಗ್ಗೆ ಈಗಾಗಲೆ ಹೇಳಿದ್ದೀರಿ. ಈಗ ೬೬೧೪ ನೇಮಕಾತಿಗಳನ್ನು ಮಾಡಿದ್ದೀರಿ, ಇನ್ನು ಮುಂದೆ ೧೨೫೦೮ ನೇಮಕಾತಿಗಳನ್ನು ಮಾಡುವವರಿದ್ದೀರಿ. ಇವರನ್ನು ಆದಷ್ಟು ಬೇಗ ನೇಮಕಾತಿ ಮಾಡಿದರೆ ಉತ್ತಮ. ಏಕೆಂದರೆ ಬಹಳಷ್ಟು ಶಾಲೆಗಳಲ್ಲಿ ಉಪಾಧ್ಯಾಯರುಗಳು ಇಲ್ಲವೇ ಇಲ್ಲ. ಆದರೂ ಸಹ ಈ ಸರ್ಕಾರ ಬಂದ ಮೇಲೆ ತಾವು ಅದರಲ್ಲೂ ಯಾವುದೇ ಒಂದು ನಿಷ್ಠೂರಕ್ಕೆ ಒಳಗಾಗದೇ, ಯಾರಿಗೂ ದುಡ್ಡು ಕೊಡಲಿಲ್ಲ ಎನ್ನುವ ಒಂದು ಆಪಾದನೆಯನ್ನು ಬಿಟ್ಟು ಮೆರಿಟ್ ಇದ್ದವರಿಗೆ ಯೋಗ್ಯರಿದ್ದವರಿಗೆಲ್ಲರಿಗೂ ಒಂದು ನೌಕರಿ ಸಿಗುವಂತಹ ವ್ಯವಸ್ಥೆ ಮಾಡಿದ್ದೀರಿ, ತುಂಬಾ ಸಂತೋಷ. ಇದಲ್ಲದೆ ಈ ಸ್ಟಾಟಿಸ್ಟಿಕಲ್ ಇನ್‌ಫರ್‌ಮೇಶನ್‌ನಲ್ಲಿ ಬಹಳ ಒಂದು ವಿಚಿತ್ರವಾಗಿ ಕೊಟ್ಟಿದ್ದಾರೆ. ತಾವು ಎಸ್. ಸಿ. ಎಸ್. ಟಿ ಕಮಿಟಿಯಲ್ಲಿದ್ದಾಗ ಪ್ರಾಥಮಿಕ ಶಾಲೆಗಳು ಸರ್ಕಾರದ ಮಟ್ಟದಲ್ಲಿ ಎಷ್ಟಿವೆ, ಖಾಸಗಿ ಮಟ್ಟದಲ್ಲಿ ಎಷ್ಟಿವೆ? ಇದರಲ್ಲಿ ಇರತಕ್ಕಂತಹ ನೌಕರರ ಸಂಖ್ಯೆ ಎಷ್ಟು? ಇದರಲ್ಲಿ ಹರಿಜನ ಗಿರಿಜನರು ಸರ್ಕಾರದ ಮಟ್ಟದಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ, ಖಾಸಗಿ ಸಂಸ್ಥೆಗಳಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆಂದು ಕೇಳಿದಾಗ ಅದರ ಅಂಕಿ ಅಂಶಗಳು ನಮಗೆ ಸಿಗಲಿಲ್ಲ. ಪ್ರೌಢಶಾಲೆಯ ಮಟ್ಟದವರೆಗೂ ಅಂಕಿ ಅಂಶಗಳು ಸಿಗಲಿಲ್ಲ, ಆದರೆ ಇಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅದು ಯಾವ ಮಟ್ಟದಲ್ಲಿ ಕೊಟ್ಟಿದ್ದಾರೆಂದರೆ, ನನಗೆ ತಿಳಿದ ಹಾಗೆ, ಕಾಲೇಜು ಮಟ್ಟದಲ್ಲಿ ಅಂಕಿ ಅಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ಕಾಲೇಜು ಮಟ್ಟದಲ್ಲಿ ಕೊಟ್ಟಿರತಕ್ಕಂತಹ ಅಂಕಿ ಅಂಶಗಳ ಪ್ರಕಾರ, ಸರ್ಕಾರ ಅನೇಕ ವಿಚಾರಗಳಲ್ಲಿ ಹರಿಜನ ಗಿರಿಜನರಿಗೆ ಸಹಾಯ ಮಾಡುತ್ತದೆ, ಅವರು ನಮ್ಮ ರಕ್ಷಣೆಗೆ ಬರುತ್ತಾರೆಂದರೆ, ಸರ್ಕಾರದ ಇಲಾಖೆಯಲ್ಲಿಯೂ ಸಹ ರೋಸ್ಟರ್ ಸಿಸ್ಟಂನ್ನು ಫಾಲೊ ಮಾಡುವುದಕ್ಕೆ ಆಗಿಲ್ಲ. ಇದರ ಅರ್ಥವೇನೆಂದು ನನಗೆ ಗೊತ್ತಾಗಲಿಲ್ಲ. ಪೇಜ್ ನಂಬರ್ ೩೮ರಲ್ಲಿ ಏಜ್ ಗ್ರೂಪ್‌ನಲ್ಲಿ ತಾವು ಕೊಟ್ಟಂತೆ ೮೬೩ ಜನ ಅಂದರೆ ಖಾಸಗಿ ಶಾಲೆಗಳಲ್ಲಿ ೨೭೯ ಜನ ಇದ್ದಾರೆ. ಅಲ್ಲಿಗೆ ಐದುನೂರು ಜನ ಹರಿಜನ ಗಿರಿಜನರು ಇರಬೇಕಾಗಿತ್ತು. ಬರೀ ೪೩ ಪ್ಲಸ್ ೭ = ೫೦ ಜನ ಇದ್ದಾರೆ. ಅಲ್ಲಿಗೆ ೪೫೦ ಹರಿಜನರು ಮೊದಲನೆಯ ಪೋಸ್ಟ್‌ನಲ್ಲಿ, 'ಎ' ಗ್ರೂಪ್‌ನಲ್ಲಿ ಅಂದರೆ ಹೆಡ್‌ಮಾಸ್ಟರ್ ೧ ಅಥವಾ ಕ್ಲಾಸ್ ೨

ನಲ್ಲಿ ಬರುತ್ತಾರೆ. ಈಗ ಏನೆಂದರೆ, ಇಷ್ಟೊಂದು ಎಲ್ಲಾ ನೌಕರಿಗಳನ್ನು ಪ್ರೈವೇಟ್ ಕಾಲೇಜ್ ಆದರೂ ಸಹಿತ ನಮ್ಮ ಇಲಾಖೆಯ ಅಧಿಕಾರಿಗಳೇ ಮಂಜೂರು ಮಾಡಬೇಕು ಎಂದು ನಿಯಮಾವಳಿ ಇಟ್ಟಿದ್ದೀರಿ. ಇಷ್ಟೊಂದು ಇಲಾಖೆಯ ಅಧಿಕಾರಿಗಳನ್ನು ಇಟ್ಟಿರೂ ಸಹಿತ ಹರಿಜನ-ಗಿರಿಜನರಿಗೆ ಅನ್ಯಾಯ ಮಾಡಿ, ಎಲ್ಲವನ್ನೂ ಬೇರೆ ಜನಾಂಗದವರಿಗೆ ಅವರು ಒಪ್ಪಿಗೆ ಕೊಡುವುದಾದರೆ ಕಾನೂನು ಏಕೆ ಬೇಕು? ನಮ್ಮ ಹಳ್ಳಿಕಡೆ ಒಂದು ಗಾದೆ ಹೇಳುತ್ತಾರೆ. ಹೊಲಕ್ಕೆ ಬೇಲಿ ಹಾಕಿದರೆ, ಬೇಲಿ ಫಸಲು ಕಾಪಾಡುತ್ತದೆ ಎಂದು, ಆದರೆ ಬೇಲಿಯೇ ಎದ್ದು ಫಸಲನ್ನು ತಿನ್ನಿತು ಎನ್ನುವ ರೀತಿಯಲ್ಲಿ, ನಮ್ಮ ಸರ್ಕಾರ ನಮಗೆ ರಕ್ಷಣೆ ಕೊಡುತ್ತದೆ ಅಂದರೆ ಸರ್ಕಾರವೇ ಹರಿಜನ-ಗಿರಿಜನರ ಮೇಲೆ ಶೋಷಣೆ ಮಾಡುವುದಾದರೆ ನಾವು ಇನ್ನು ಯಾರ ಹತ್ತಿರ ಹೋಗಬೇಕು. ಈ ಪರಿಸ್ಥಿತಿಯಾಗಿದೆ. ಅದೇ ರೀತಿಯಲ್ಲಿ 'ಬಿ' ಗ್ರೂಪ್‌ನವರನ್ನು ನೋಡಿದರೆ, ೫೦೯೫ ಜನ ಖಾಸಗಿಯಲ್ಲಿ ಇದ್ದಾರೆ. ಆದರೆ ನಮ್ಮಲ್ಲಿ ತೆಗೆದುಕೊಳ್ಳ ಬೇಕಾದ್ದು ಹೆಚ್ಚು ಕಡಿಮೆ ಪರ್‌ಸೆಂಟೇಜ್ ಸಾವಿರದ ಎಂಭತ್ತು ಜನರನ್ನು ತೆಗೆದುಕೊಳ್ಳಬೇಕಾಗಿತ್ತು. ಕೇವಲ ೨೭೦ ಜನ ತೆಗೆದುಕೊಂಡಿದೆ. ಅಲ್ಲಿಗೆ ಇನ್ನೂ ೭೦೦ ಜನರ ಕೊರತೆ ಇದೆ. ಹಾಗೆಯೇ ಹೋಗುತ್ತಾ 'ಸಿ' ಗ್ರೂಪ್‌ನಲ್ಲೂ ಸಿಕ್ಕಿಲ್ಲ. ಬೇಡ 'ಡಿ' ಗ್ರೂಪ್ ಅಂತೂ ಕಸ ಹೊಡೆಯುವುದಕ್ಕೆ ಎಲ್ಲಿ ಬೇಕೊ ಜನ ಸಿಗುತ್ತಾರೆ. ಕಸ ಹೊಡೆಯುವುದಕ್ಕೂ ಸಹ ಅರ್ಧಕ್ಕೆ ಅರ್ಧ ತೆಗೆದುಕೊಂಡಿಲ್ಲ. ಇದರಲ್ಲಿ ೫೬೦ ಕೊರತೆಯಾಗಿದೆ. ಈ ವಿದ್ಯಾ ಇಲಾಖೆ ಬೃಹದಾಕಾರವಾದ ಇಲಾಖೆ. ಏಕೆಂದರೆ, ಇಡೀ ರಾಜ್ಯದಲ್ಲಿ ಯಾವುದಾದರೂ ಒಂದು ದೊಡ್ಡ ಇಲಾಖೆ ಇದೆ ಎಂದರೆ ಅದು ವಿದ್ಯಾ ಇಲಾಖೆ. ಈ ವಿದ್ಯಾ ಇಲಾಖೆಯಲ್ಲಿ ಈ ತರಹದ ಶೋಷಣೆ ಆದರೆ ನಮಗೆ ಹರಿಜನ-ಗಿರಿಜನರಿಗೆ ಯಾವ ರೀತಿಯ ನ್ಯಾಯ ಸಿಗುತ್ತದೆ. ನಮಗೆ ನಮ್ಮ ವಿದ್ಯಾ ಮಂತ್ರಿಗಳ ಬಗ್ಗೆ ತುಂಬಾ ವಿಶ್ವಾಸವಿದೆ. ಅವರು ಈ ಕೊರತೆಯನ್ನು ಯಾವ ರೀತಿ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾರಣ ಇಷ್ಟೆ, ಈಗಾಗಲೇ, ನೌಕರಿ ತುಂಬುವುದಕ್ಕೆ ತಮ್ಮ ಹತ್ತಿರ ಲಿಸ್ಟ್ ರೆಡಿ ಇದೆ. ಆದರೆ ಒಂದು ಸಾರಿ ಇದೇ ರೀತಿಯಲ್ಲಿ ಹರಿಜನ-ಗಿರಿಜನರಿಗೆ ಷಾರ್ಟ್‌ಫಾಲ್ ಬಿದ್ದಿದ್ದರಿಂದ, ಬ್ಯಾಕ್‌ಲಾಗ್‌ಗೆ ಬಿದ್ದಿದ್ದರಿಂದ ಹಿಂದೆ ಎಜುಕೇಷನ್ ಮಿನಿಷ್ಟರ್ ಆಗಿದ್ದ ಶ್ರೀಯುತ ಮಲ್ಲಿಕಾರ್ಜುನ ಖರ್ಗೆಯವರು ಆಗ ಈ ನೌಕರಿ ತುಂಬಬೇಕಾದರೆ ೫೦ ಪರ್‌ಸೆಂಟ್ ಹರಿಜನರಿಗೆ ಕೊಟ್ಟು ಬ್ಯಾಕ್‌ಲಾಗನ್ನು ತುಂಬಿದ್ದರು. ಆ ರೀತಿಯಲ್ಲಿ ತಾವೂ ಸಹಿತ ಏನಾದರೂ ಮಾಡಿ ೫೦ ಪರ್‌ಸೆಂಟ್ ಕೊಡುವುದರ ಮುಖಾಂತರ ಈ ಬ್ಯಾಕ್‌ಲಾಗ್‌ನ್ನು ತುಂಬಲಿಕ್ಕೆ ತಾವು ಭರವಸೆಯನ್ನು ಕೊಡಬೇಕು ಎಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಅಲ್ಲದೆ ತಮ್ಮ ಖಾತೆಗೆ ಡಿಪ್ಲೊಮಾಗಳು, ಇಂಜಿನಿಯರಿಂಗ್ ಕಾಲೇಜುಗಳು ಎಲ್ಲಾ ಬರುತ್ತವೆ. ತಾವು ಇಂಜಿನಿಯರಿಂಗ್ ಕಾಲೇಜುಗಳ ಸೀಟುಗಳನ್ನು ಜಾಸ್ತಿ ಮಾಡುತ್ತಲೇ ಹೋಗುತ್ತಿದ್ದೀರಿ. ಸರ್ಕಾರ ಕ್ಯಾಪಿಟೇಷನ್ ಫೀ ಎಂದು ಮಾಡಿದೆ ಸರ್ಕಾರ ಆ ಒಂದು ಕ್ಯಾಪಿಟೇಷನ್ ಫೀ ಮಾಡಿದ ಮೇಲೆ ಇಂಜಿನಿಯರಿಂಗ್ ಕಾಲೇಜಿನ ಎಲ್ಲಾ ಸೀಟುಗಳನ್ನು ಸರ್ಕಾರವೇ ಹಂಚತಕ್ಕಂಥ ಕೆಲಸವನ್ನು ಮಾಡಬೇಕಾಗುತ್ತದೆ. ಕೆಲವನ್ನು ಖಾಸಗಿ ಕಾಲೇಜಿನವರಿಗೆ ಬಿಟ್ಟಿರುವುದರಿಂದ, ಅಲ್ಲಿ ಹರಿಜನ-ಗಿರಿಜನರು ೪೦ ಪರ್ಸೆಂಟ್‌ಗಿಂತ ಕಡಿಮೆ ಇರಬಾರದು ಎಂದು ಮಾಡಿರುವುದರಿಂದ ಬಹಳಷ್ಟು ಸೀಟುಗಳನ್ನು ಅವರು ಕೊಡುವುದಿಲ್ಲ. ದಯಮಾಡಿ ನೀವು ಆ ಸೀಟುಗಳನ್ನು ಕೊಡುವುದಕ್ಕೆ ಆ ಪರ್ಸೆಂಟೇಜ್‌ನ್ನು ಕಡಿಮೆ ಮಾಡಬೇಕು. ಎಲ್ಲಾ ಹರಿಜನ ಗಿರಿಜನರಿಗೆ ಕಡೆಯ ಪಕ್ಷ ಓದುವುದಕ್ಕಾದರೂ ಅವಕಾಶ ಸಿಕ್ಕಬೇಕು. ಅಂಥ ಪರಿಸ್ಥಿತಿಯನ್ನು ತಾವು

ನಿರ್ಮಾಣ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದು ಅಲ್ಲದೆ, ಪಠ್ಯಪುಸ್ತಕಗಳನ್ನು ತಾವು ಬದಲಾವಣೆ ಮಾಡಬೇಕೆಂದು ಹೊರಟ್ಟಿದ್ದೀರಿ. ಇದು ಬಹಳ ಸಂತೋಷವಾದ ವಿಚಾರ. ಯಾವುದೋ ಬ್ರಿಟಿಷರ ಕಾಲದಲ್ಲಿ ಇದ್ದಂಥ ಪಠ್ಯ ಪುಸ್ತಕಗಳನ್ನು ನಾವು ಓದುತ್ತಿದ್ದೆವು. ಬರೀ ಅಕ್ಷರ ಮಾಲೆಯನ್ನೆ ಕಲಿಯುವುದಕ್ಕೆ ನಾವು ಇದ್ದೇವೇನೋ, ಅಕ್ಷರ ಮಾಲೆಯನ್ನು ಕಲಿತುಬಿಟ್ಟು ಪೇಪರ್ ಓದುವುದಕ್ಕೋ ಅಥವಾ ಯಾವುದೋ ಒಂದು ಪುಸ್ತಕ ಓದುವುದಕ್ಕೋ ಮೀಸಲಾದಂತಹ ವಿದ್ಯಾಭ್ಯಾಸದ ಪದ್ಧತಿ ಇವತ್ತು ನಮ್ಮಲ್ಲಿ ಬಂದು ಹೋಗಿದೆ. ಈಗ ನಾವು ಪ್ರಾಥಮಿಕ ವಿದ್ಯಾಭ್ಯಾಸ ಮುಗಿದ ಕೂಡಲೆ ಪ್ರೌಢಶಾಲೆಗೆ ಬಂದರೆ, ಉದ್ಯೋಗಕ್ಕೆ ಮೀಸಲಾದಂತಹ ವಿದ್ಯಾಭ್ಯಾಸ ನಮಗೆ ಬೇಕಾಗಿದೆ. ಆ ಉದ್ಯೋಗಕ್ಕೆ ಮೀಸಲಾದಂತಹ ಯಾವುದೇ ಕೈಗಾರಿಕೆ ಇರಬಹುದು, ಅಥವಾ ಒಂದು ಟ್ರ್ಯಾಕ್ಟರ್ ರಿಪೇರಿ ಇರಬಹುದು, ಸೈಕಲ್ ಮೋಟಾರ್ ರಿಪೇರಿ ಇರಬಹುದು, ಸ್ಕೂಟರ್ ರಿಪೇರಿ ಇರಬಹುದು. ಹಾಗೆ ಒಂದು ಮಗು ಪ್ರಾಥಮಿಕ ಹಂತದಲ್ಲಿ ಬರಬೇಕಾದರೆ ತನ್ನ ಉದ್ಯೋಗಕ್ಕೆ ಸೀಮಿತವಾದಂತಹ ವಿದ್ಯಾಭ್ಯಾಸವನ್ನು ಕಲಿಯುವುದಕ್ಕೆ ಪ್ರಯತ್ನ ಆಗತಕ್ಕಂಥ ಪುಸ್ತಕಗಳನ್ನು ನಾವು ನೀತಿ ಶಾಸ್ತ್ರಗಳು ಇವೆಲ್ಲದರ ಜೊತೆಯಲ್ಲಿ ಅದನ್ನೂ ಸಹಿತ ತಾನು ಮುಂದೆ ಉದ್ಯೋಗವನ್ನು ಸೃಷ್ಟಿ ಮಾಡಿಕೊಳ್ಳುವುದಕ್ಕೆ ಏನು ಅನುಕೂಲ ಬೇಕೋ ಅಂತಹ ಒಂದು ವಿದ್ಯಾಭ್ಯಾಸಕ್ಕೆ ಅನುಕೂಲ ಆಗತಕ್ಕಂತ ಪುಸ್ತಗಳನ್ನು ಸೃಷ್ಟಿ ಮಾಡಿ ಮುಂದೆ ಈ ವಿದ್ಯೆ ಉದ್ಯೋಗಕ್ಕೆ ಸೀಮಿತವಾಗುವಂತೆ ಸೃಷ್ಟಿ ಮಾಡಬೇಕೆಂದು ಹೇಳುತ್ತೇನೆ. ಇದಲ್ಲದೆ, ಅನೇಕ ಶಾಲೆಗಳಿಗೆ ಸಿಪಿಎಡ್; ಬಿಪಿಎಡ್; ಟಿಸಿಹೆಚ್; ಬಿಎಡ್; ಇನ್ನೂ ಮುಂತಾದವನ್ನು ಕೊಡುತ್ತಿದ್ದೀರಿ. ಬಿಎಡ್ ಮಾಡಿಕೊಂಡವರಿಗೆ ಹೈಸ್ಕೂಲಿನಲ್ಲಿ ಉದ್ಯೋಗವನ್ನು ಕೊಡಬೇಕು; ಬಿಪಿಎಡ್, ಸಿಪಿಎಡ್ ಮಾಡಿಕೊಂಡವರಿಗೆ ವ್ಯಾಯಾಮ ಶಿಕ್ಷಕರ ಉದ್ಯೋಗವನ್ನು ಕೊಡಬೇಕು. ಆದರೆ ಇವತ್ತು ವ್ಯಾಯಾಮ ಶಿಕ್ಷಕರು ಕೆಲಸವಿಲ್ಲದೆ ಮನೆಗಳಲ್ಲಿ ಉಳಿದಿದ್ದಾರೆ. ಈ ರೀತಿ ಅನಾವಶ್ಯಕವಾಗಿ ಟ್ರೈನಿಂಗ್ ಕೊಟ್ಟು ಅವರು ಮನೆಯಲ್ಲಿ ಉಳಿಯವಂಥ ಪರಿಸ್ಥಿತಿಗೆ ಏಕೆ ತಳ್ಳುತ್ತಿದ್ದೀರಿ? ನಮ್ಮ ರಾಜ್ಯಕ್ಕೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟು ಸೀಟುಗಳಿಗೆ ಮಿತಿಗೊಳಿಸಿ ತರಬೇತಿಯನ್ನು ಕೊಡಿ. ಇಲ್ಲದಿದ್ದರೆ ಖಾಸಗಿ ಸಂಸ್ಥೆಗಳವರು ದುಡ್ಡು ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಉದ್ಯೋಗಗಳಲ್ಲಿ ಮೀಸಲಾತಿ ಇಲ್ಲದಂತೆ ಮಾಡಿದರೆ ಆ ತರಬೇತಿಗೆ ಬೆಲೆಯೇ ಇಲ್ಲದಂತಾಗುತ್ತದೆ. ಆದುದರಿಂದ ಬಿಪಿಎಡ್; ಸಿಪಿಎಡ್; ಟಿಸಿಹೆಚ್; ಬಿಎಡ್ ಕಾಲೇಜುಗಳಿಗೆ ಅನುಮತಿ ಕೊಡುವುದನ್ನು ನಿಲ್ಲಿಸುವುದು ಉತ್ತಮ. ಇಲ್ಲದೇ ಹೋದರೆ ಆ ವಿದ್ಯಾರ್ಥಿಗಳು ಟ್ರೈನಿಂಗ್‌ನ್ನು ಮುಗಿಸಿಕೊಂಡು ಈಚೆಗೆ ಬಂದು ನಮ್ಮ ಮೇಲೆ, ನಿಮ್ಮ ಮೇಲೆ ಚಳುವಳಿಯನ್ನು ಮಾಡಿಕೊಂಡು ಸರ್ಕಾರದವರು ನಮಗೆ ಉದ್ಯೋಗವನ್ನು ಕೊಟ್ಟಿಲ್ಲ ಎಂದು ಫೋಟೋಗಳನ್ನು ಹಿಡಿದುಕೊಂಡು ವಿಧಾನಸೌಧದ ಎದುರಿಗೆ ಬರತಕ್ಕ ಪರಿಸ್ಥಿತಿ ಬರುತ್ತದೆ. ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರೆಂದು ನಂಬಿದ್ದೇನೆ.

ಇನ್ನು ಅನೇಕ ಹೊಸ ತಾಂತ್ರಿಕ ವಿಚಾರಗಳನ್ನು ವಿಶ್ವವಿದ್ಯಾನಿಲಯಗಳ ಮೂಲಕ ಅಥವಾ ಡಿಪ್ಲೊಮಾ ಮೂಲಕ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದೀರಿ. ನಮ್ಮ ಶಿವಮೊಗ್ಗಾ ಜಿಲೆಯ ಭದ್ರಾವತಿಯಲ್ಲಿ ಷುಗರ್ ಡಿಪ್ಲೊಮಾ ಮತ್ತು ಪೇಪರ್ ಡಿಪ್ಲೊಮಾ ಎಂದು ಎರಡು ಕೋರ್ಸ್‌ನ್ನು ತೆರೆದಿದ್ದೀರಿ. ಆದರೆ ಈ ಎರಡು ಡಿಪ್ಲೊಮಾಗಳನ್ನು ಮಾಡಿಕೊಂಡವರಿಗೆ ಯಾವ ಉದ್ಯೋಗವನ್ನು ಮೀಸಲಿಡುವಂತೆ ನೀವು ನಿಗದಿಮಾಡಿಲ್ಲ. ಇವತ್ತು ಬಿ. ಎಸ್‌ಸಿ. ಮಾಡಿಕೊಂಡವನು ಕೆಮಿಸ್ಟ್ ಆಗುವುದಕ್ಕೆ ಅರ್ಹತೆ

ಇದೆ, ಬಿ. ಎ. ಮಾಡಿಕೊಂಡವನು ಬಿ. ಎಡ್ ಮಾಡಿಕೊಂಡರೆ ಉಪಾಧ್ಯಾಯ ಆಗುವುದಕ್ಕೆ ಅರ್ಹತೆ ಇದೆ. ಆದರೆ ಈಗ ನೀವು ತಂದಿರತಕ್ಕ ಈ ಸ್ಕೀಂನಲ್ಲಿ ಸಾವಿರಾರು ಜನರು ತರಬೇತಿ ಪಡೆದು ಹೊರಗೆ ಬಂದಿದ್ದಾರೆ. ಷುಗರ್ ಡಿಪ್ಲೊಮಾ ಮಾಡಿದವರಿಗೆ ಷುಗರ್ ಫ್ಯಾಕ್ಟರಿಯಲ್ಲಿ ಏನಾದರೂ ಉದ್ಯೋಗಕ್ಕೆ ಕರೆದರೆ ಅದಕ್ಕೆ ಸಂಬಂಧಪಟ್ಟಂತೆ ಮೀಸಲಿಡತಕ್ಕದ್ದು ಇದರಲ್ಲಿಲ್ಲ. ಇದೇ ರೀತಿ ಪೇಪರ್ ಡಿಪ್ಲೊಮೊ ಮಾಡಿದವರಿಗೆ ಅದಕ್ಕೆ ಸಂಬಂಧಪಟ್ಟಂತೆ ಮೀಸಲಾತಿ ಇಲ್ಲ. ಆದುದರಿಂದ ತಾವು ಯಾವ ಯಾವ ಡಿಪ್ಲೊಮಾಗಳನ್ನು ಹೊಸದಾಗಿ ಉದ್ಯೋಗಕ್ಕನುಗುಣವಾಗಿ ಸೃಷ್ಠಿ ಮಾಡುತ್ತೀರೊ ಆ ಉದ್ಯೋಗಗಳಿಗೆ ಅರ್ಜಿಗಳನ್ನು ಕರೆದಾಗ ತಾವು ಆದ್ಯತೆ ಕೊಡಬೇಕು. ಇದೇ ರೀತಿ ಕೋ-ಅಪರೇಟೀವ್ ಡಿಪಾರ್ಟ್‌ಮೆಂಟ್‌ನಲ್ಲಿ ಜಿ. ಡಿ. ಸಿ; ಹೆಚ್. ಡಿ. ಸಿ. ಎಂದು ಮಾಡುತ್ತಾರೆ ಅವರು ಮಾಡಿಕೊಳ್ಳುವುದು ಅಷ್ಟೇ ಹೊರತು ಅವರಿಗೆ ಕೋ-ಆಪರೇಟೀವ್ ಡಿಪಾರ್ಟ್‌ಮೆಂಟ್‌ನಲ್ಲಿ ಉದ್ಯೋಗವೇ ಸಿಕ್ಕುವುದಿಲ್ಲ. ಇಂಥ ಪರಿಸ್ಥಿತಿ ಆಗಬಾರದು. ಇದರ ಬಗ್ಗೆ ತಾವು ಯೋಚನೆ ಮಾಡಿ ಕ್ರಮ ತೆಗೆದುಕೊಳ್ಳಬೇಕು.

ಇನ್ನು ನಮ್ಮಲ್ಲಿ ಕುವೆಂಪು ವಿಶ್ವವಿದ್ಯಾನಿಲಯವಿದೆ. ಅದನ್ನು ತಾವು ಹೊಸದಾಗಿಕೊಟ್ಟಿದ್ದೀರಿ. ಆದರೆ ಅದು ಆಮೆಯ ವೇಗದಲ್ಲಿ ಹೋಗುತ್ತಿದೆ. ತಾವೇ ಒಮ್ಮೆ ಅದನ್ನು ಪರಿಶೀಲನೆ ಮಾಡಿದ್ದೀರಿ. ಆದರೂ ಕೂಡ ತಾವು ಆ ಕಟ್ಟಡವನ್ನು ಕಟ್ಟುವುದಕ್ಕೆ ಯಾವುದೋ ಒಂದು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ಕೊಟ್ಟಿದ್ದೀರಿ. ಈ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನವರು ಕಳೆದ ೫ ವರ್ಷಗಳಿಂದ ಆ ಕಟ್ಟಡವನ್ನು ಪೂರ್ತಿ ಮಾಡಿಲ್ಲ. ಇದರಿಂದಾಗಿ ಅಲ್ಲಿ ಯಾವುದೇ ರೀತಿಯ ಪ್ರೋಗ್ರೆಸ್ ಆಗಿಲ್ಲ. ಅಲ್ಲಿರತಕ್ಕ ವೈಸ್‌ಛಾನ್ಸಲರ್‌ರವರಿಗೆ ನಿರ್ದೇಶನ ನೀಡಿ ಆದಷ್ಟು ಬೇಗ ಆ ಕಟ್ಟಡ ಮುಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಿಳಿಸಬೇಕು. ಈ ಕುವೆಂಪು ವಿಶ್ವ ವಿದ್ಯಾನಿಲಯ ಮಲೆನಾಡು ಪ್ರದೇಶದಲ್ಲಿರುವುದರಿಂದ ಇದರ ಕೆಲಸವನ್ನು ಆದಷ್ಟು ಜಾಗ್ರತೆ ಮುಗಿಸಲು ಗ್ರ್ಯಾಂಟ್‌ನ್ನು ಕೊಟ್ಟು ಇದನ್ನು ಅಭಿವೃದ್ಧಿ ಪಡಿಸುವುದಕ್ಕೆ ಕ್ರಮ ತೆಗೆದು ಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಸಾಕ್ಷರತಾ ಯೋಜನೆಯ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ಬಹಳ ಚರ್ಚೆ ಆಗುತ್ತದೆಂದು ಅನೇಕ ಮಾನ್ಯ ಸದಸ್ಯರು ಹೇಳಿದರು. ನನಗಂತೂ ಈ ಸಾಕ್ಷರತಾ ಯೋಜನೆಯ ಬಗ್ಗೆ ಬಹಳ ಸಂತೋಷವಾಯಿತು. ಕಾರಣ ಏನೆಂದರೆ, ವಿದ್ಯೆಯನ್ನು ಕಲಿಯಬೇಕೆಂಬುದನ್ನು ಅವಿದ್ಯಾವಂತರಿಗೆ ನಾಟಕದ ರೂಪದಲ್ಲಿ, ಲಾವಣಿಯ ರೂಪದಲ್ಲಿ ಜನರಿಗೆ ತಿಳಿಸುತ್ತಿದ್ದಾರೆ. ಇವತ್ತು ವಿದ್ಯೆ ಇಲ್ಲದಿದ್ದರೆ ಬದುಕುವುದಕ್ಕೆ ಸಾಧ್ಯವಿಲ್ಲ. ನಮಗೆ ಗಾಳಿ ನೀರು ಎಷ್ಟು ಮುಖ್ಯವೋ ನಮ್ಮ ಜೀವನದಲ್ಲಿ ನಾವು ಬದುಕಬೇಕಾದರೆ ಈ ವಿದ್ಯೆ ಕೂಡ ಅಷ್ಟೇ ಪ್ರಾಮುಖ್ಯವಾದುದು. ಯಾವುದೇ ಜಮೀನಿನಲ್ಲಿ ಕೆಲಸಮಾಡಬೇಕಾದರೆ, ಗೊಬ್ಬರ ಹಾಕಬೇಕಾದರೆ, ಔಷಧಿಯನ್ನು ಸಿಂಪಡಿಸಬೇಕಾದರೂ ಕೂಡ ವಿದ್ಯೆ ಬೇಕು. ಏಕೆಂದರೆ, ಔಷಧಿಯನ್ನು ಎಷ್ಟು ಪ್ರಮಾಣದಲ್ಲಿ ಸಿಂಪಡಿಸಬೇಕೆಂಬುದನ್ನು ತಿಳಿದುಕೊಳ್ಳಬೇಕಾದರೂ ವಿದ್ಯೆಯ ಅವಶ್ಯಕತೆ ಇದೆ. ಆಶ್ರಯ ಯೋಜನೆ ಎಂದು ಏನು ಮಾಡಿದ್ದೀರಿ, ಅದರಲ್ಲಿ ಒಂದು ಸೈಟನ್ನು ತೆಗೆದುಕೊಳ್ಳುವುದಕ್ಕೆ ಅರ್ಜಿಯನ್ನು ಕೊಡಬೇಕಾದರೂ ವಿದ್ಯೆ ಬೇಕು. ವಿದ್ಯೆ ಇಲ್ಲದೇ ಇರತಕ್ಕ ಜನರಿಗೋಸ್ಕರ ನೀವು ಸಾಕ್ಷರತಾ ಯೋಜನೆಯನ್ನು ಮಾಡಿದ್ದೀರಿ. ಅದರಲ್ಲಿ ಮನೆ ಮನೆಗೂ ಹೋಗಿ ಆ ಮನೆಯಲ್ಲಿ ಎಷ್ಟು ಜನರಿದ್ದಾರೆ ಎಂಬುದನ್ನು ಮಕ್ಕಳಿಂದ ಸರ್ವೆ ಮಾಡಿಸಿ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿಸಿದ್ದೀರಿ. ಇದು ತುಂಬಾ ಉತ್ತಮ ಯೋಜನೆಯಾಗಿದೆ. ಇದನ್ನು ಇನ್ನೂ ಹೆಚ್ಚು ಮಾಡತಕ್ಕದ್ದು ಒಳ್ಳೆಯದೆಂದು ವಿನಂತಿ

ಮಾಡಿಕೊಳ್ಳುತ್ತೇನೆ.

ಇನ್ನು ಮಿಡ್‌ಡೇ ಮೀಲ್ಸ್ ವಿಚಾರದಲ್ಲಿ ಹೇಳುವುದಾದರೆ, ಈಗಾಗಲೇ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳಿಗೆ ೨೫ ದಿವಸದವರೆಗೆ ಅಟೆಂಡ್ ಆದವರಿಗೆ ಒಂದು ರೂಪಾಯಿ ಕೊಡಬೇಕೆಂದು ಮಾಡಿದ್ದೀರಿ. ಇದರಿಂದಾಗಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕೂಡ ಹೆಚ್ಚಿಗೆ ಆಗುತ್ತದೆ. ಜೊತೆಗೆ ಮಕ್ಕಳು ತಲೆಗೆ ಎಣ್ಣೆ ಹಾಕಿಕೊಂಡು, ಬಟ್ಟೆಯನ್ನು ಶುಭ್ರವಾಗಿ ಒಗೆದು ಹಾಕಿಕೊಂಡು ಬರುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ತಾವೂ ಕುಳಿತು ಬಹಳ ಉತ್ತಮವಾದ ಯೋಜನೆಯನ್ನು ಮಾಡಿದ್ದೀರಿ. ಆದರೆ ಮಿಡ್‌ಡೇ ಮೀಲ್ ಎಂದು ಬೇರೆ ದೇಶದಿಂದ ಬರುವಂಥ ಆಹಾರವನ್ನು ತಾವು ತಂದು ಪ್ರಿಪೇರ್ ಮಾಡುವುದಕ್ಕೆ ೫ ಪೈಸೆಯ ಪ್ರಕಾರ ನಿಗದಿಮಾಡಿದ್ದೀರಿ. ತಮಗೂ ಗೊತ್ತಿದೆ, ಈ ೫ ಪೈಸೆಯಲ್ಲಿ ಏನು ಬರುತ್ತದೆ ಎಂಬುದು. ಇವತ್ತು ಭಿಕ್ಷುಕನಿಗೆ ೫ ಪೈಸೆಯನ್ನು ಹಾಕಿದರೆ ಅವನೂ ಕೂಡ ಕಣ್ಣು ತೆಗೆದು ನೋಡಿ ವಾಪಸು ಬಿಸಾಕುತ್ತಾನೆ. ನಾಲ್ಕಾಣೆ ಹಾಕಿದ್ದರೆ ಇಟ್ಟುಕೊಳ್ಳುತ್ತಾನೆ. ಅಂದಮೇಲೆ ಈ ೫ ಪೈಸೆಯಲ್ಲಿ ಯಾವರೀತಿ ಮಕ್ಕಳಿಗೆ ತಿಂಡಿಯನ್ನು ತಯಾರು ಮಾಡಿಕೊಡಬೇಕು? ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುತ್ತಾರೆಂದು ಶಾಲೆಗಳಿಗೆ ಹೆಚ್ಚು ಮಕ್ಕಳು ಬರುತ್ತಿರುವಾಗ ನೀವು ಇದಕ್ಕೆ ೫ ಪೈಸೆ ಎಂದು ಕೊಟ್ಟರೆ ಏನು ಮಾಡಬೇಕು. ಆದುದರಿಂದ ಈಗ ೫ ಪೈಸೆ ಎಂದು ಏನು ಕೊಡುತ್ತೀರಿ, ಇದನ್ನು ೨೫ ಪೈಸೆಗೆ ಏರಿಸಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಲೈಬ್ರರಿಯನ್ನು ಜಿಲ್ಲಾಮಟ್ಟದಲ್ಲಿ ರಾಜ್ಯ ಮಟ್ಟದಲ್ಲಿ ಮಾತ್ರ ತೆರೆಯುತ್ತಿದ್ದೀರಿ. ಇದು ಗ್ರಾಮ ಮಟ್ಟಕ್ಕೆ ಇನ್ನೂ ಮುಟ್ಟಲಿಲ್ಲ. ಕಡೇ ಪಕ್ಷ ಹೋಬಳಿ ಮಟ್ಟಕ್ಕಾದರೂ ಒಂದೊಂದು ಲೈಬ್ರರಿ ಕೊಡುವ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನರು ಸಹಿತ ಈ ಲೈಬ್ರರಿಯ ಸದುಪಯೋಗವನ್ನು ಪಡೆದುಕೊಳ್ಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಮಾದರಿ ಶಾಲೆಗಳು, ಈ ಮಾದರಿ ಶಾಲೆಗಳನ್ನು ತಾಲ್ಲೂಕಿಗೆ ಒಂದು ಇಟ್ಟು ಬಿಟ್ಟಿದ್ದೀರಿ. ದಯವಿಟ್ಟು ತಾಲ್ಲೂಕಿಗೆ ಒಂದನ್ನು ಇಡಬೇಡಿ. ಪ್ರತಿಯೊಂದು ಕ್ಷೇತ್ರಕ್ಕೆ ಒಂದನ್ನಾದರೂ ತಾವು ಮಾಡಿ ಕೊಡಬೇಕು. ಜೊತೆಗೆ ಶಾಲೆಗಳನ್ನು ತೆರೆಯಲು ಪಟ್ಟಣಕ್ಕೆ ಆದ್ಯತೆ ಕೊಡುವುದನ್ನು ಕಡಿಮೆ ಮಾಡಬೇಕು. ಕಾರಣವೇನೆಂದರೆ ಪಟ್ಟಣಗಳಲ್ಲಿ ಇಂಗ್ಲೀಷ್ ಶಾಲೆಗಳನ್ನು, ಕನ್ನಡ ಶಾಲೆಗಳನ್ನು ಹಣಕ್ಕಾಗಿ ಓಪನ್ ಮಾಡಿಕೊಂಡು ಹಣಕ್ಕಾಗಿಯೇ ಮಾಡುತ್ತಿದ್ದಾರೆ. ಅಲ್ಲಿ ಹಣವನ್ನು ಕೊಟ್ಟು ಹೋಗತಕ್ಕಂಥ ಸಿರಿವಂತರು ಇದ್ದಾರೆ. ಕೊಳಚೆ ಪ್ರದೇಶಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಬಡ ಮಕ್ಕಳ ಅಭಿವೃದ್ಧಿಗಾಗಿ ಮಾದರಿ ಶಾಲೆಗಳನ್ನು ಗ್ರಾಮಾಂತರ ಪ್ರದೇಶ ಮತ್ತು ಕೊಳಚೆ ಪ್ರದೇಶಗಳಲ್ಲಿಯೂ ತೆರೆಯಲು ತಾವು ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಈ ಡೊನೇಷನ್ ಪಿಡುಗನ್ನು ತಪ್ಪಿಸುವುದಕ್ಕೆ ತಾವು ಬಹಳ ಸಮರ್ಥರಾಗಿದ್ದೀರಿ. ಏನಾದರೂ ಮಾಡಿ ಈ ಡೊನೇಷನ್ ಪಿಡುಗನ್ನು ತಪ್ಪಿಸಬೇಕು. ಇನ್ನೇನು ಏಪ್ರಿಲ್, ಮೇ ಬಂದ ತಕ್ಷಣವೇ ಎಲ್ಲರೂ ಮಕ್ಕಳನ್ನು ಶಾಲೆಗಳಿಗೆ ಸೇರಿಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಡೊನೇಷನ್ ಪಿಡುಗನ್ನು ತಪ್ಪಿಸಲು ತಮಗೂ ಆಗುವುದಿಲ್ಲವೆಂದು ಹೇಳುತ್ತಾರೆ. ಆದರೆ ನಿಮಗೆ ಆ ಶಕ್ತಿ ಇದೆ. ಮುಂದಿನ ತಿಂಗಳು ಶಾಲೆಗಳು ಪ್ರಾರಂಭವಾದರೆ ಅಧಿಕಾರಿಗಳಿಗೂ ಕಷ್ಟ ನಮಗೂ ಕಷ್ಟ. ಯಾವ ಶಾಲೆಗೆ ಯಾವ ಮಕ್ಕಳನ್ನು ಸೇರಿಸಬೇಕು ಎಂದು ಯೋಚನೆ ಶುರುವಾಗುತ್ತದೆ. ಈಗ ಎಂ. ಎಲ್. ಎ.ಯನ್ನೂ ಕೇಳುವುದಿಲ್ಲ, ಮಿನಿಸ್ಟರ್‌ರನ್ನೂ ಕೇಳುವುದಿಲ್ಲ. ನಿಮ್ಮ ಮಗನನ್ನು ಈ ಶಾಲೆಗೆ ಸೇರಿಸಬೇಕಾದರೆ ಇಷ್ಟು ಸಾವಿರ

ರೂಪಾಯಿ ಕೊಡಬೇಕೆಂದು ಹೇಳುತ್ತಾರೆ. ಇಂಗ್ಲೀಷ್ ಮೀಡಿಯಂ ಶಾಲೆಗಳ ಬಗ್ಗೆ ತಾವು ಹೇಳಿದಿರಿ. ಒಂದರಿಂದ ನಾಲ್ಕನೇ ತರಗತಿವರೆಗೆ ಕನ್ನಡ ಕಲಿಯಲೇಬೇಕಾಗುತ್ತದೆ, ಮತ್ತೆ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಕೊಡುವ ಬಗ್ಗೆ ಯೋಚನೆ ಮಾಡಬೇಕಾಗುತ್ತದೆಂದು ಹೇಳಿದ್ದೀರಿ. ನಿಜವಾಗಿಯೂ ಇಂಗ್ಲೀಷ್ ಶಾಲೆಗಳನ್ನು ಕೊಟ್ಟು ಬಿಡಿ. ಇಲ್ಲವೆಂದರೆ ಇರುವ ಇಂಗ್ಲೀಷ್ ಶಾಲೆಗಳನೆಲ್ಲಾ ರದ್ದು ಮಾಡಿ. ಈಗಿರತಕ್ಕಂಥ ಇಂಗ್ಲೀಷ್ ಶಾಲೆಗಳು ಏನು ಮಾಡುತ್ತಿದ್ದಾರೆಂದರೆ, ಮೊದಲು ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಿದ್ದರು. ಇವತ್ತು ೨೦-೨೫ ಸಾವಿರ ರೂಪಾಯಿಗಳನ್ನು ಎಲ್. ಕೆ. ಜಿ. ಮತ್ತು ಯು. ಕೆ. ಜಿ ಗೆ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಹೆಚ್ಚಿಗೆ ಇಂಗ್ಲೀಷ್ ಶಾಲೆಗಳು ಇದ್ದರೆ ಕ್ವಾಲಿಟಿ ಇಂಪ್ರೂವ್ ಆಗುತ್ತದೆ. ಆಗ ಯಾವುಯಾವುದು ಹೋಪ್‌ಲೆಸ್ ಆಗಿವೆಯೋ ಅವುಗಳನ್ನೆಲ್ಲ ತಾವು ರಿಜೆಕ್ಟ್ ಮಾಡಬಹುದು. ಈಗ ಕನ್ನಡ ಶಾಲೆಗಳು ಇಲ್ಲವೆಂದರೆ, ಒಂದರಿಂದ ನಾಲ್ಕನೇ ತರಗತಿಯವರೆಗೆ ಈಗಿರತಕ್ಕಂಥ ಇಂಗ್ಲೀಷ್ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ತರಬೇಕೆನ್ನತಕ್ಕಂಥ ಆರ್ಡರನ್ನು ತಾವು ಮಾಡಿ, ಇಂಗ್ಲೀಷ್ ಶಾಲೆಗಳಿಗೆ ಅನುಮತಿಯನ್ನು ಕೊಡುವಂತೆ ತಾವು ಮಾಡಬೇಕಾಗುತ್ತದೆ. ಯಾವುದೋ ರಿಪೋರ್ಟನ್ನು ಕಾಯ್ದುಕೊಂಡು ಕುಳಿತುಕೊಳ್ಳುವುದು ಬೇಕಾಗಿಲ್ಲ. ಈಗ ನಮ್ಮ ಶಾಲೆಗಳ ಗತಿ ಏನಾಗಿದೆ ಎನ್ನುವುದು ಗೊತ್ತಿದೆ. ೨೦ ರ್‍ಯಾಂಕ್‌ಗಳಲ್ಲಿ ಕನ್ನಡದಲ್ಲಿ ಓದಿದವನು ಒಬ್ಬನೇ ಒಬ್ಬನು ಎಂದರೆ ಏನು ಅರ್ಥ. ಅದೇ ಪಿ. ಯು. ಸಿ. ಫಲಿತಾಂಶವನ್ನು ನೋಡಿದರೆ ೭೨ ಪರ್ಸೆಂಟ್ ಇಂಗ್ಲೀಷ್ ಮೀಡಿಯಂನವರು ಬಂದಿದ್ದಾರೆ. ೨೮ ಪರ್ಸೆಂಟ್ ಕನ್ನಡ ಮೀಡಿಯಂನವರು ಬಂದಿದ್ದಾರೆ. ಈ ರೀತಿ ಕನ್ನಡ ಕಲಿಸುವುದಾದರೆ ನಾವು ಯಾವ ರೀತಿ ಅವರಿಗೆ ಹೇಳಬೇಕು. ಆದುದರಿಂದ ತಾವು ಇದನ್ನು ಪರಿಶೀಲನೆ ಮಾಡಿ ತಾವು ಬೇರೆ ಏನು ಕ್ರಮ ತೆಗೆದುಕೊಳ್ಳುತ್ತೀರೋ ಅದು ತಮಗೆ ಬಿಟ್ಟಿದ್ದು. ನಾವೆಲ್ಲ ಶಾಸಕರು ಸಹಿತ ಇದು ಆಗುವುದಿಲ್ಲವೆಂದು ಹೇಳುತ್ತಿದ್ದೇವೆ. ನನಗೆ ಆಗುತ್ತದೆ ಎನ್ನುವ ಭರವಸೆ ತಮ್ಮ ಮೇಲೆ ಇದೆ. ತಾವು ಕ್ಯಾಪಿಟೇಷನ್ ಫೀಸನ್ನು ತಪ್ಪಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನ್ಯಾಯಾಂಗ ಇಲಾಖೆಯಲ್ಲಿ ತಾವು ಅದಾಲತ್‌ಗಳೆಂದು ಮಾಡುತ್ತಿದ್ದೀರಿ. ಇದು ತುಂಬಾ ಒಳ್ಳೆಯ ಕೆಲಸ. ವರ್ಷಕ್ಕೆ ಒಂದು ಸಾರಿ, ಎರಡು ಸಾರಿ ಮಾಡುವ ಬದಲು ಪ್ರತಿ ತಿಂಗಳಿಗೆ ಒಂದು ಸಾರಿ ಅದಾಲತ್‌ಗಳ ಮೀಟಿಂಗನ್ನು ಮಾಡಿದರೆ ಅನೇಕ ನ್ಯಾಯಗಳು ವಿತರಣೆಯಾಗುವುದಕ್ಕೆ ಅನುಕೂಲವಾಗುತ್ತದೆ. ಅದರಲ್ಲಿ ಬಡವರಿಗೆ ಅನುಕೂಲವಾಗುತ್ತದೆ. ಆಮೇಲೆ ಹರಿಜನ-ಗಿರಿಜನರಿಗೆ ಉಚಿತ ನ್ಯಾಯವನ್ನು ಕೊಟ್ಟಿದ್ದೇವೆಂದು ಪುಸ್ತಕದಲ್ಲಿ ಹೇಳಿದ್ದೀರಿ. ಅದು ಪುಸ್ತಕದಲ್ಲಿಯೇ ಉಳಿದಿದೆ. ಅನೇಕ ಹರಿಜನ-ಗಿರಿಜನರಿಗೆ ಉಚಿತ ನ್ಯಾಯ ಸಿಕ್ಕಿಲ್ಲ. ಅವರಿಗೆ ಏನಾಗಿದೆ ಎಂದರೆ, ಪ್ರಚಾರ ಕೊರತೆ ಮತ್ತು ಯಾರು ಹರಿಜನರು ಗಿರಿಜನರು ಇದ್ದಾರೆ ಅವರಿಗೆ ಬಂದೇ ಕೇಳಬೇಕೆನ್ನತಕ್ಕಂಥ ವಿಚಾರವೇ ಗೊತ್ತಿಲ್ಲ. ಇದನ್ನು ನಿಮ್ಮ ಇಲಾಖೆಯವರು ಮಾಡುತ್ತಾರೋ, ಸೋಷಿಯಲ್ ವೆಲ್‌ಫೇರ್ ಇಲಾಖೆಯವರು ಮಾಡುತ್ತಾರೋ ಅಥವಾ ಎಜುಕೇಷನ್ ಡಿಪಾರ್ಟಮೆಂಟ್‌ನವರು ಮಾಡುತ್ತಾರೋ ಎನ್ನುವುದು ಯಾರಿಗೂ ಗೊತ್ತಿಲ್ಲ. ಏತಕ್ಕೆಂದರೆ, ಹರಿಜನ ಗಿರಿಜನರ ಎಲ್ಲಾ ಕೆಲಸ ಸೋಶಿಯಲ್ ವೆಲ್‌ಫೇರ್ ಡಿಪಾರ್ಟಮೆಂಟನಲ್ಲಿಯೇ ಇದೆ ಎಂದು ತಿಳಿದುಕೊಂಡಿರುತ್ತಾರೆ. ಅದು ನ್ಯಾಯಾಂಗ ಇಲಾಖೆಯಲ್ಲಿ ಇದೆಯೆಂದು ಅವರಿಗೆ ಗೊತ್ತಾಗಿಲ್ಲ. ಅದಕ್ಕೆ ಯಾವ ರೀತಿ ಪ್ರಚಾರ ಕೊಡಬೇಕೋ ಕೊಟ್ಟು ಉಚಿತ ನ್ಯಾಯ ಹರಿಜನ-

ಗಿರಿಜನರಿಗೆ ಸಿಗುವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ಇಷ್ಟು ವೇಳೆಯನ್ನು ಕೊಟ್ಟಿದಕ್ಕೆ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಶಿಕ್ಷಣ ಇಲಾಖೆಯನ್ನು ವಹಿಸಿಕೊಂಡಮೇಲೆ ಹೊಸ ತಿರುವು ಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಇವತ್ತು ಮಾನ್ಯ ಕಾನೂನು ಸಚಿವರು ಮಾನ್ಯ ವಿದ್ಯಾ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಬೆಂಬಲಿಸಿ ಕೆಲವು ಸಲಹೆಗಳನ್ನು ಕೊಡಲು ಇಚ್ಛೆ ಪಡುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಶಿಕ್ಷಣ ಸಚಿವರಾದ ಮೇಲೆ ಬೇರೆಯವರಿಗೆ ತೃಪ್ತಿಯಾಗಿರಬಹುದು; ನನಗಂತೂ ತೃಪ್ತಿಯಾಗಿಲ್ಲ. ಏಕೆಂದರೆ ವೀರಪ್ಪ ಮೊಯಿಲಿಯವರ ಕಾಲದಲ್ಲಾದರೂ ಈ ಇಲಾಖೆ ಪೂರ್ಣಸ್ಥಿತಿಗೆ ಬರದೆಹೋದರೆ ಇನ್ನು ಯಾರ ಕಾಲದಲ್ಲೂ ಪೂರ್ಣ ಸ್ಥಿತಿಗೆ ಬರುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುತ್ತೇನೆ. ಆದುದರಿಂದ ಸನ್ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ ಈ ಇಲಾಖೆಯ ತಳ ಮೇಲೆ ಏರಬೇಕೆಂಬುದು ನಮ್ಮೆಲ್ಲರ ಬಯಕೆ ಎಂದರೆ ತಪ್ಪಾಗುವುದಿಲ್ಲ. ರಾಜ್ಯದ ಒಟ್ಟು ವರಮಾನವನ್ನು ಲೆಕ್ಕ ಹಾಕಿದಾಗ ಅದರ ಕಾಲು ಭಾಗ ಹಣವನ್ನು ಅಂದರೆ ೧೨೦೦ ಕೋಟಿ ರೂಪಾಯಿಗಳನ್ನು ವಿದ್ಯಾ ಇಲಾಖೆಗೆ ಖರ್ಚು ಮಾಡುತ್ತಿದ್ದೇವೆ. ಇದರಲ್ಲಿ ಸಾವಿರ ಕೋಟಿ ರೂಪಾಯಿ ಸಂಬಳಕ್ಕೆ ಹೋಗುತ್ತಿದೆ. ಕಳೆದ ಹತ್ತು ವರ್ಷಗಳಿಂದ ಇದು ಬಹಳ ತುಳಿತಕ್ಕೆ ಒಳಗಾಗಿದ್ದ ಇಲಾಖೆ. ಜನತಾ ಸರ್ಕಾರದ ಆಳ್ವಿಕೆಯಲ್ಲಿ ಈ ಇಲಾಖೆ ಸಂಪೂರ್ಣವಾಗಿ ನಿರ್ನಾಮವಾಗಿತ್ತು. ಯಾವುದಾದರೂ ಊರಿಗೆ ಹೋಗಿ, ಆ ಊರಿನಲ್ಲಿ ಶಾಸಕರು ಮರ್ಯಾದೆಯಾಗಿ ನಿಂತುಕೊಳ್ಳತಕ್ಕಂಥ ಶಕ್ತಿಯನ್ನು ಕಳೆದುಕೊಂಡಿದ್ದರು. ಕಳೆದ ೬-೭ ತಿಂಗಳಿಂದ ಈಚೆಗೆ ಮಾನ್ಯ ವೀರಪ್ಪ ಮೊಯಿಲಿಯವರ ಈ ಒಂದು ಇಲಾಖೆಗೆ ಹೊಸ ಕಾಯಕಲ್ಪ ಕೊಟ್ಟಿದ್ದಾರೆಂದರೆ ತಪ್ಪಾಗುವುದಿಲ್ಲ. ಇದು ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕು. ಈ ಇಲಾಖೆಯಲ್ಲಿ ಹೇಳಿಕೊಳ್ಳತಕ್ಕ ಭ್ರಷ್ಟಾಚಾರ ಇಲ್ಲವೆಂದು ನಾವೆಲ್ಲ ತಿಳಿದುಕೊಂಡಿದ್ದೇವೆ. ರಾಜ್ಯದ ಎಲ್ಲಾ ಇಲಾಖೆಗಳನ್ನು ನೋಡಿಕೊಂಡು ಬಂದಾಗ ಶಿಕ್ಷಣ ಇಲಾಖೆ ಭ್ರಷ್ಟಾಚಾರದಿಂದ ಹೊರತಾಗಿದೆ ಎಂದರೆ ತಪ್ಪಾಗಲಾರದು. ಈ ಮಾತನ್ನು ನಾನು ಅವರ ಮುಖಸ್ತುತಿಗಾಗಿ ಹೇಳುತ್ತಿಲ್ಲ. ಶಿಕ್ಷಣ ಮಂತ್ರಿಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಆ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು. ಅವರು ಬಹಳ ಚೆನ್ನಾಗಿ ಅಚ್ಚುಕಟ್ಟಾಗಿ ಕೆಲಸ ಮಾಡುತ್ತಿದ್ದಾರಲ್ಲದೆ ಅಂಥವರೇ ಅಲ್ಲಿ ಸೇರಿದ್ದಾರೆಂದರೆ ತಪ್ಪಾಗುವುದಿಲ್ಲ. ಬೇರೆ ಇಲಾಖೆಗಳಲ್ಲಿ ಭ್ರಷ್ಟಾಚಾರ ಇದ್ದರೂ ಈ ಇಲಾಖೆಯಲ್ಲಿ ಭ್ರಷ್ಟಾಚಾರ ಇಲ್ಲವೆಂದು ನಾವು ಈ ಸದನದಲ್ಲಿ ಹೇಳತಕ್ಕ ಸಂರ್ಭದಲ್ಲಿ ಈ ಇಲಾಖೆ ಇನ್ನೂ ಬಹಳಷ್ಟು ಮಟ್ಟಿಗೆ ಮುಂದಕ್ಕೆ ಹೋಗಬೇಕು. ಇವತ್ತಿನ ದಿವಸ ವಿಶ್ವವಿದ್ಯಾನಿಲಯಗಳು ಭ್ರಷ್ಟಾಚಾರದ ಕೂಟವಾಗಿವೆ, ಜಾತೀಯತೆ ಎದ್ದಾಡುತ್ತಿದೆ. ವಿಶ್ವವಿದ್ಯಾನಿಲಯಗಳಲ್ಲಿ ಅಶಾಂತಿ ವಾತವರಣ ಏನಿದೆ ಅದನ್ನು ಸರಿಪಡಿಸತಕ್ಕ ಕೆಲಸವನ್ನು ಮಾನ್ಯ ವಿದ್ಯಾ ಮಂತ್ರಿಗಳು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಕಾಲಾವಕಾಶ ಕಡಿಮೆ ಇರುವುದರಿಂದ ಮುಖ್ಯವಾಗಿ ಒಂದನ್ನು ವಿನಂತಿಸುತ್ತೇನೆ. ಸಮಾಜವಾದ ತತ್ವದ ಆಧಾರದ ಮೇಲೆ ಅಧಿಕಾರಕ್ಕೆ ಬಂದಿರತಕ್ಕ ಬಂಗಾರಪ್ಪನವರು, ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಏನು ನೋವು-ನಲಿವು ಇದೆ ಎಂದು ಅರಿತಿರತಕ್ಕ ವೀರಪ್ಪ ಮೊಯಿಲಿಯವರು ಇವರಿಬ್ಬರೂ ಇರತಕ್ಕ ಸಂದರ್ಭದಲ್ಲಿ ಗ್ರಾಮಾಂತರ-ಪ್ರದೇಶದ ರೈತರಿಗೆ ಸಾಕಷ್ಟು ಸಹಾಯ ಮಾಡುತ್ತಾ ಬಂದಿದ್ದಾರೆ. ಆದರೆ ರೈತರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ನೀವು ಏನು

ಮಾಡಿದ್ದೀರಿ ಎಂಬ ಪ್ರಶ್ನೆ ಇದೆ. ನಮ್ಮ ಊರಿನ ಪಕ್ಕ ಬೋಗಾಜಿ ಎಂಬ ಊರಿದೆ. ಆ ಊರಿನಲ್ಲಿರತಕ್ಕ ಕಾಲೇಜಿನಲ್ಲಿ ೪ ವರ್ಷಗಳಿಂದ ಮ್ಯಾಥ್‌ಮೆಟಿಕ್ಸ್ ಲೆಕ್ಚರರ್ ಇಲ್ಲ. ಈಗ ೬-೭ ತಿಂಗಳಿಂದ ಒಬ್ಬ ಲೆಕ್ಚರರನ್ನು ಹಾಕಿದ್ದಾರೆ. ಬೆಳ್ಳೂರು ಎಂಬ ಊರಿದೆ. ಅಲ್ಲಿರತಕ್ಕ ಕಾಲೇಜಿನಲ್ಲಿ ೩ ವರ್ಷಗಳಿಂದ ಇಂಗ್ಲಿಷ್ ಲೆಕ್ಚರರ್ ಇಲ್ಲ. ಅದಕ್ಕೂ ಸಹ ಕಳೆದ ವರ್ಷ ವೀರಪ್ಪ ಮೊಯಿಲಿಯವರು ಕೊಟ್ಟಿದ್ದಾರೆ. ನಾಗಮಂಗಲದಲ್ಲಿ ಇವತ್ತಿಗೂ ಸಹ ಕೆಮಿಸ್ಟ್ರಿ ಲೆಕ್ಚರರ್ ಇಲ್ಲ. ಕಮಿಷನರನ್ನು ಕೇಳಿದರೆ ಹೇಳುತ್ತಾರೆ, ಆರ್ಟಿಕಲ್ ೩೦ರಲ್ಲಿ ಏನಾದರೂ ಪ್ರಾವಿಷನ್ ಇದ್ದರೆ ಹುಡುಕುತ್ತೇನೆ, ಇಲ್ಲದಿದ್ದರೆ ಏನು ಮಾಡೋಣ. ಕೆಮಿಸ್ಟ್ರಿ ಲೆಕ್ಚರರ್ ಇಲ್ಲವೆಂದು ಅವರು ತಮ್ಮ ಅಸಹಾಯಕತೆಯನ್ನು ತೋರಿಸುತ್ತಾರೆ. ಕೆಲವು ಕಡೆ ಸರಿಯಾದ ಶಾಲಾ ಕಟ್ಟಡಗಳು ಇಲ್ಲ. ನಮ್ಮ ಊರಿನ ಹತ್ತಿರ ಬಡನ್‌ವಿಲೆ ಎಂಬ ಊರಿನಲ್ಲಿ ಹೈಸ್ಕೂಲ್ ಇದೆ. ಅಲ್ಲಿ ಮೇಷ್ಟ್ರುಗಳು ಇದ್ದರೆ ಒಬ್ಬ ಅಟೆಂಡರ್ ಇಲ್ಲ, ಲೈಬ್ರರಿಯನ್ ಇಲ್ಲ, ಸ್ಪೋರ್ಟ್ಸ್ ಕಲಿಸತಕ್ಕ ಮೇಷ್ಟ್ರು ಇಲ್ಲ, ಪ್ರಯೋಗಶಾಲೆ ಇಲ್ಲ, ದೈಹಿಕ ಶಿಕ್ಷಕರು ಇಲ್ಲ, ಲೈಬ್ರರಿ ಇಲ್ಲ, ಮ್ಯಾಥಮ್ಯಾಟಿಕ್ಸ್ ಲೆಕ್ಚರರ್ ಇಲ್ಲ, ಇಂಗ್ಲೀಷ್ ಲೆಕ್ಚರರ್ ಇಲ್ಲ, ಕೆಮಿಸ್ಟ್ರಿ ಲೆಕ್ಚರರ್ ಇಲ್ಲ. ಇದು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವಿದ್ಯಾ ವ್ಯವಸ್ಥೆ. ಆದೇ ಬೆಂಗಳೂರಿಗೆ ಬನ್ನಿ, ಸರ್ಕಾರಿ ವಾಹನಗಳಲ್ಲಿ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಿ ಬಿಡುತ್ತಾರೆ. ಪುಸ್ತಕ ಹೊರುವುದಕ್ಕೆ ಸರ್ಕಾರಿ ಅಧಿಕಾರಿಗಳ ಮನೆಯಲ್ಲಿ ಕೆಲಸ ಮಾಡುವವರು ಇದ್ದಾರೆ. ಅವರು ಪುಸ್ತಕಗಳನ್ನು ಹೊತ್ತುಕೊಂಡು ಹೋಗಿ ಮಕ್ಕಳನ್ನು ಶಾಲೆಗೆ ಬಿಟ್ಟು ಬರುತ್ತಾರೆ. ಬಿಷಪ್ ಕಾಟನ್, ಬಾಲ್ಡ್‌ವಿನ್, ಸೋಫಿಯಾ, ಪೂರ್ಣಪ್ರಜ್ಞ ಶಾಲೆಗಳಲ್ಲಿ ಮಕ್ಕಳು ಓದುತ್ತಾರೆ. ಈ ಮಕ್ಕಳ ಜೊತೆ ನಮ್ಮ ಗ್ರಾಮಾಂತರ ಪ್ರದೇಶದ ಮಕ್ಕಳು ಹೋರಾಟಕ್ಕೆ ಇಳಿಯಬೇಕು. ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳಿಗೆ ಹೋಗಬೇಕೆಂದರೆ ನಗರದ ಮಕ್ಕಳೊಡನೆ ಗ್ರಾಮಾಂತರ ಪ್ರದೇಶದ ಮಕ್ಕಳು ಹೋರಾಟಕ್ಕೆ ಇಳಿಯಬೇಕು. ನಮ್ಮ ಸರ್ಕಾರ ಇಷ್ಟೆಲ್ಲ ಗ್ರಾಮಾಂತರ ಪ್ರದೇಶದ ರೈತರಿಗೆ ಸಹಾಯ ಮಾಡುತ್ತೇವೆಂದು ಹೇಳುತ್ತಿದೆ. ಈ ಸಂದರ್ಭದಲ್ಲಿ ಕೆ. ಎಸ್. ಆರ್. ಟಿ. ಸಿ.ಯ ಛೇರ್ಮನ್ನರು ಇಲ್ಲಿಯೇ ಇದ್ದಾರೆ. ಇವತ್ತಿನ ದಿವಸ ಕೆ. ಎಸ್. ಆರ್. ಟಿ. ಸಿ.ಯಲ್ಲಿ ಡ್ರೈವರ್, ಕಂಡಕ್ಟರ್ ಆಗತಕ್ಕ ಶಕ್ತಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಇಲ್ಲ. ಬೆಂಗಳೂರು, ಮೈಸೂರು, ಹಾಸನದಲ್ಲಿ ಓದತಕ್ಕ ಮಕ್ಕಳಿಗೆ ನೀವು ವಿದ್ಯಾಭ್ಯಾಸ ಕೊಟ್ಟು ಆ ಮಕ್ಕಳಿಗೆ ಉದ್ಯೋಗ ಕೊಡುವುದಾದರೆ, ಗ್ರಾಮಾಂತರ ಪ್ರದೇಶದ ಮಕ್ಕಳ ಗತಿ ಏನಾಗಬೇಕೆಂಬುದು ನನ್ನ ಪ್ರಶ್ನೆ. ಈ ದಿಸೆಯಲ್ಲಿ ಒಂದು ಹೊಸ ವಿಧಾನವನ್ನು ಅಳವಡಿಸಬೇಕೆಂದು ಸರ್ಕಾರಕ್ಕೆ ನಾನು ಒತ್ತಾಯಿಸುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಓದಿದಂತಹ ಮಕ್ಕಳಿಗೆ ಗ್ರೇಸ್ ಮಾರ್ಕ್ಸ್ ಕೊಡಿ. ಈ ಬಗ್ಗೆ ಕಳೆದ ೩ ಸಾರಿಯಿಂದ ಭಾಷಣ ಮಾಡುತ್ತಿದ್ದೇನೆ. ಇದು ಮೊಯಿಲಿಯವರ ಕಾಲದಲ್ಲಿ ಆಗದೆ ಹೋದರೆ ಪ್ರಾಮಾಣಿಕವಾಗಿ ಹೇಳುತ್ತೇನೆ ಇನ್ನು ಯಾವ ಕಾಲಕ್ಕೂ ಇದು ಬುಡ ಮುಟ್ಟುವುದಿಲ್ಲ. ೧೫ ಪರ್ಸೆಂಟ್ ಗ್ರೇಸ್ ಮಾರ್ಕ್ಸ್ ಅನ್ನು ಗ್ರಾಮಾಂತರ ಪ್ರದೇಶದಲ್ಲಿ ಓದಿರತಕ್ಕ ಮಕ್ಕಳಿಗೆ ಕೊಡುತ್ತೇವೆಂದು ಈ ಸದನದಲ್ಲಿ ಅನೌನ್ಸ್ ಮಾಡಬೇಕು. ಒಂದು ವೇಳೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಈ ಒಂದು ಗ್ರೇಸ್ ಮಾರ್ಕ್ಸ್ ಅನ್ನು ಕೊಡದೇ ಹೋದರೆ ಅಲ್ಲಿರತಕ್ಕ ನಿರುದ್ಯೋಗಿಗಳು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಇವತ್ತು ಆಂಧ್ರದಲ್ಲಿ ನಕ್ಸಲೈಟ್ಸ್ ನೋಡುತ್ತೇವೆ. ಪಂಜಾಬಿನಲ್ಲಿ ಉಗ್ರಗಾಮಿಗಳನ್ನು ನೋಡುತ್ತೇವೆ. ಇವತ್ತು ಕರ್ನಾಟಕದಲ್ಲೂ ಸಹಿತ ಹೊಸ ನಕ್ಸಲೈಟ್ಸ್ ತಯಾರಾಗುತ್ತಾರೆ. ನಮ್ಮನ್ನು ಗುಂಡಿಟ್ಟು ಕೊಲ್ಲುತ್ತಾರೆ. ನಮ್ಮನ್ನು

ಹೊಡೆಯುತ್ತಾರೆ. ಶಾಸಕರಿಗೆ ತಿರುಗಾಡುವುದಕ್ಕೆ ಬಿಡುವುದಿಲ್ಲ. ನಾನು ವಿನಂತಿ ಮಾಡುತ್ತೇನೆ, ನೀವು ಇದನ್ನು ತಡೆಗಟ್ಟಬೇಕಾದರೆ ಇವತ್ತು ಗ್ರೇಸ್ ಮಾರ್ಕ್ಸ್ ಕೊಡಿ. ಇಲ್ಲವೇ ಗ್ರಾಮಾಂತರ ಪ್ರದೇಶದಲ್ಲಿ ಹೊಸ ಒಂದು ಪರೀಕ್ಷಾ ವಿಧಾನವಾಗಿ ಮಾಡಿ. ಕೆಲವು ಮ್ಯಾನೇಜ್‌ಮೆಂಟ್‌ನಲ್ಲಿ ನಡೆಯುತ್ತಿದೆ, ಬಾಗಿಲು ಹಾಕಿಕೊಂಡು ಕಾಪಿ ಹೊಡೆಸುತ್ತಾರೆ. ಪ್ರಿನ್ಸಿಪಾಲರುಗಳು ಸೇರಿ ಬರೆಯಿಸುತ್ತಾರೆ. ಅಂಥ ಒಂದು ವಿಧಾನ ಇದೆ. ಅದಕ್ಕೆ ನೀವು ಮಾರು ಹೋಗುವುದಾದರೆ ನಮ್ಮದು ಅಡ್ಡಿ ಇಲ್ಲ. ಒಟ್ಟಿನಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಉದ್ಯೋಗ ಸಿಗತಕ್ಕ ವಿಚಾರದಲ್ಲಿ ತಾವು ಬಹಳ ಯೋಚನೆ ಮಾಡಬೇಕಾಗಿದೆ, ಚಿಂತನೆ ಮಾಡಬೇಕಾಗಿದೆ ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಇವತ್ತು ಯಾವ ಬಡ ಬೋರೇಗೌಡನ ಮಗನಿಗೂ ಕೆಲಸ ಸಿಗುತ್ತಿಲ್ಲ. ಇವತ್ತು ತಾವು ಯೋಚನೆ ಮಾಡಿದ್ದೀರಿ. ಮೊನ್ನೆ ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರತಕ್ಕ ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಅವರಿಗೆ ೧೫ ಅಂಕಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿರುವುದು ಸ್ವಾಗತಾರ್ಹ. ಆದರೆ ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು ಓದತಕ್ಕ ವಿದ್ಯಾರ್ಥಿಗಳ ಪರಿಸ್ಥಿತಿ ಏನು.? ನಾನು ಕೇಳುತ್ತೇನೆ ಸ್ವಾಮಿ, ಇವತ್ತು ಐ. ಎ. ಎಸ್. ನಿಂದ ಈಚೆಗೆ ಬರತಕ್ಕವರು ಕೆ. ಎ. ಎಸ್.ನಿಂದ ಈಚೆಗೆ ಬರತಕ್ಕವರು, ಉನ್ನತ ಪದವಿಯಲ್ಲಿ ಓದತಕ್ಕವರು ಏನಿದ್ದಾರೆ ಅವರಲ್ಲಿ ಕೇವಲ ೩ ಪರ್ಸೆಂಟ್ ಇವತ್ತು ಗ್ರಾಮಾಂತರ ಪ್ರದೇಶದ ಮಕ್ಕಳು ಬರುವುದಿಲ್ಲ. ಈ ಒಂದು ತಾರಮ್ಯವನ್ನು ನಮ್ಮ ಸರ್ಕಾರ ಕಣ್ಣೆಟ್ಟು ಮಾಡತಕ್ಕದ್ದೇ ಆದರೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಎಲ್ಲಿ ನ್ಯಾಯ ಸಿಗುತ್ತದೆ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ನಾನು ಒಂದನ್ನು ವಿನಂತಿ ಮಾಡಬೇಕಾಗುತ್ತದೆ. ಇವತ್ತು ಉದ್ಯೋಗ ಕೊಡಿಸತಕ್ಕ ಶಕ್ತಿ ನಮ್ಮ ಸರ್ಕಾರಕ್ಕಿಲ್ಲ. ಲಕ್ಷಾಂತರ ವಿದ್ಯಾರ್ಥಿಗಳು ಉದ್ಯೋಗವನ್ನು ಬಯಸಿ ರೋಡು ರೋಡಿನಲ್ಲಿ ಅಲೆಯುತ್ತಿದ್ದಾರೆ. ನಾನು ಈಗಲೂ ವಿನಂತಿ ಮಾಡುತ್ತೇನೆ. ನಮ್ಮ ಸರ್ಕಾರದವರು ಆ ನಿಟ್ಟಿನಲ್ಲಿ ಅರಣ್ಯ ಕಾಲೇಜು ಮಾಡಿದ್ದೀರಿ. ತೋಟಗಾರಿಕೆ ಕಾಲೇಜು ಮಾಡಿದ್ದೀರಿ. ರೇಷ್ಮೆ ಕಾಲೇಜು ಮಾಡಿದ್ದೀರಿ. ಕೃಷಿ ಕಾಲೇಜಿಗೆ ಜಾಸ್ತಿ ಆದ್ಯತೆ ಕೊಡುತ್ತಿದ್ದೀರಿ. ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಆದ್ಯತೆ ಕೊಡುತ್ತಾ ಇದ್ದೀರಿ. ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ. ಇದು ಶಿಕ್ಷಣ ತರಬೇತಿ, ಸೈನಿಕ ತರಬೇತಿ ಕೊಡಿ. ಅಮೆರಿಕಾ ದೇಶದಲ್ಲಿ ೧೮ ವರ್ಷ ಆದರೆ ಆ ಒಬ್ಬ ವಿದ್ಯಾರ್ಥಿ ಹೊರಗೆ ಹೊರಟು ಹೋಗಿಬಿಟ್ಟರೆ ಅವರ ಅಪ್ಪನನ್ನೂ ಕೇಳುವುದಿಲ್ಲ, ಅವರ ಅಮ್ಮನನ್ನೂ ಕೇಳುವುದಿಲ್ಲ, ಇಲ್ಲಿ ೪೦ ವರ್ಷವಾದರೂ ಅವನ ಹೆಂಡತಿಗೆ ಸೀರೆ ಬಟ್ಟೆ ತಂದುಕೊಡತಕ್ಕ ವ್ಯವಸ್ಥೆ ಈ ರಾಜ್ಯದಲ್ಲಿದೆ, ಈ ದೇಶದಲ್ಲಿದೆ. ಏಕೆಂದರೆ ನಮ್ಮ ಶಿಕ್ಷಣದ ವ್ಯವಸ್ಥೆ ಹೀಗಿದೆ. ಇದನ್ನು ನಿಮ್ಮ ಕಾಲದಲ್ಲಿ ಬದಲಾವಣೆ ನಿರೀಕ್ಷಣೆ ಮಾಡದೇ ಹೋದರೆ ನಾವು ಯಾರ ಕಾಲದಲ್ಲಿ ಬದಲಾವಣೆ ಮಾಡಿಕೊಳ್ಳುತ್ತೇವೋ ನನಗಂತೂ ಗೊತ್ತಿಲ್ಲ. ಇವತ್ತು ಇದಕ್ಕೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಶಿಕ್ಷಣ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಒಂದು ಹೊಸ ಆಯಾಮವನ್ನು ತಾವು ಮಾಡದೇ ಹೋದರೆ ಆಗುವುದಿಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶಿಕ್ಷಣ ಇಲಾಖೆಯಲ್ಲಿ ಎ. ಇ. ಓ.ಗಳಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಒಬ್ಬರು ಎ. ಇ. ಓ. ಇದ್ದಾರೆ. ಬೆಳಗ್ಗೆ ೮ ಘಂಟೆಗೇ ಹಾಕುತ್ತಾನೆ. ೮ ಘಂಟೆಗೇ **ತೆಗೆದುಕೊಳ್ಳುತ್ತಾನೆ.**

ಶ್ರೀ ಎಂ. ವೀರಪ್ಪ ಮೊಯಿಲಿ:- ಏನು?

ಶ್ರೀ ಎಲ್. ಆರ್ ಶಿವರಾಮೇಗೌಡ:- ಏಸ್ಸಿ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ

ಎ. ಇ. ಒ.ನಲ್ಲಿರತಕ್ಕ...

ಶ್ರೀ ಎಂ. ವೀರಪ್ಪ ಮೊಯಿಲಿ:- ಅಪ್‌ಗ್ರೇಡ್ ಆಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ವಿಸ್ಕಿ ಕುಡಿಯುವುದರಲ್ಲಿ ಅಪ್‌ಗ್ರೇಡ್ ಆಗಿರಬಹುದು. ನಾನು ಒಂದು ಮಾತು ಹೇಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಒಬ್ಬರು ಎ. ಇ. ಒ. ಇದ್ದಾರೆ. ನಾನು ಶಾಸಕನಾದಮೇಲೆ ನನ್ನ ಹತ್ತಿರ ಎಲ್ಲಾ ಟೀಚರ್ಸ್ ಬಂದರು. ನಮ್ಮ ಎ. ಇ. ಒ.ರನ್ನು ಯಾವ ಕಾರಣಕ್ಕೂ ಛೇಂಜ್ ಮಾಡಕೂಡದು ಎಂದು ಹೇಳಿದರು. ಮೇಷ್ಟ್ರುಗಳನ್ನು ಎದರು ಹಾಕಿಕೊಂಡರೆ ಗೊತ್ತಿದೆ ನಮಗೆ ನಿಮಗೆ ಕಷ್ಟ. ಚುನಾವಣೆ ಟೈಂನಲ್ಲಿ ನಮ್ಮನ್ನು ತೀರಿಸಿಬಿಡುತ್ತಾರೆ. ಆದಕ್ಕೋಸ್ಕರ ನಾನೇನು ಮಾಡಿದೆ ಅಂದರೆ, ಆಯಿತು ಬಿಡಪ್ಪ ಇರಲಿ ಎಂದು ಹೇಳಿದೆ. ಆಗ ಸನ್ಮಾನ್ಯ ರಂಗನಾಥ್ ಅವರು ವಿದ್ಯಾಮಂತ್ರಿಗಳಾಗಿದ್ದರು. ನಾನು ಬರೆದು ಕೊಟ್ಟೆ, ಅವರು ಉಳಿಸಿದರು. ಈ ವರ್ಷವೂ ತಾವು ಉಳಿಸಲೇಬೇಕು. ಇಲ್ಲದೇ ಹೋದರೆ ನಾನು ಅಲ್ಲಿ ಉಳಿಯುವಹಾಗಿಲ್ಲ. ನಮ್ಮ ಊರಿನಲ್ಲಿ ಒಬ್ಬರು ಎ. ಇ. ಒ. ಇದ್ದಾರೆ. ಅವರನ್ನು ಉಳಿಸಿಕೊಡಿ ಎಂದು ಮಾನ್ಯ ರಂಗನಾಥ್ ಅವರು ಸಚಿವರಾಗಿದ್ದಾಗ ಕೇಳಿದೆ. ಅವರು ಉಳಿಸಿಕೊಟ್ಟರು. ನಾನು ಈಗ ತಮಗೆ ಪತ್ರ ಬರೆಯುತ್ತಿದ್ದೇನೆ. ಅವರನ್ನು ಅಲ್ಲೇ ಉಳಿಸಬೇಕು, ಇಲ್ಲದೇಹೋದರೆ ನಾನು ಉಳಿಯುವಹಾಗಿಲ್ಲ. ಏಕೆಂದರೆ ಅವರು ಒಂದು ಸ್ಕೂಲಿಗೆ ಹೋಗಿ ಚೆಕ್ ಮಾಡುವುದಿಲ್ಲ. ಅವರು ಒಂದು ಸ್ಕೂಲನ್ನೂ ಚೆಕ್ ಮಾಡುವಹಾಗಿಲ್ಲ. ಒಬ್ಬ ಮೇಷ್ಟ್ರು ಹೇಗೆ ಪಾಠ ಮಾಡುತ್ತಾನೆ ಎಂದು ನೋಡುವುದಿಲ್ಲ. ಮೇಷ್ಟ್ರುಗಳಿಗೂ ಅದೇಬೇಕು.

ಶ್ರೀ ಕೆ. ಎಚ್. ರಂಗನಾಥ್:- ಅಂಥಹವರನ್ನು ಉಳಿಸಿಕೊಂಡಿದ್ದರಿಂದ ಅರ್ಥ ಏನಾಯಿತು?

ಶ್ರೀ ಎಲ್. ಆರ್. ಶಿವರಾಮೇಗೌಡ:- ನಾನು ಹೇಳುತ್ತಿದ್ದೇನೆ. ನನ್ನ ಪರಿಸ್ಥಿತಿ ಹೇಗಿದೆ ಎಂದರೆ ಅವರನ್ನು ಆಚೆಗೆ ಕಳುಹಿಸುವುದಕ್ಕೆ ಚಿಂತನೆ ಮಾಡುತ್ತಿದ್ದೇನೆ. ಚಿಂತನೆ ಮಾಡಿ ಏನಾದರೂ ಅವರನ್ನು ಛೇಂಜ್ ಮಾಡಿಸಿದರೆ ಅಲ್ಲಿ ೭೦೦ ಜನ ಮೇಷ್ಟ್ರುಗಳಿದ್ದಾರೆ. ಹೆಚ್ಚು ಕಡಿಮೆ ೫೦೦ ಜನ ನನ್ನ ತಾಲ್ಲೂಕಿನವರು. ಎಲ್ಲರೂ ನನಗೆ ತಿರುಗಿಸಿ ಮುಂದಿನ ಸಾರಿ ಟಿಕೆಟ್ ಕೊಟ್ಟುಬಿಡುತ್ತಾರೆ. ಆ ಭಯಕ್ಕೆ ನಾನು ಅವರಿಗೆ ಟ್ರಾನ್ಸ್‌ಫರ್ ಮಾಡಿಸಿಕೊಡುತ್ತಿದ್ದೇನೆ. ನಾನು ವಿನಂತಿ ಮಾಡುತ್ತೇನೆ. ವಿಸ್ಕಿ ಕುಡಿಯುವುದರಲ್ಲಿ ಎ. ಇ. ಒ.ಗಳ ಸ್ಟ್ಯಾಂಡರ್ಡ್ ಇರಬಹುದು. ಕೆ. ಎ. ಎಸ್. ಅಧಿಕಾರಿಗಳ ಲೆವಲ್‌ನಲ್ಲಿ ಇರತಕ್ಕವರನ್ನು ದಯಮಾಡಿ ಎ. ಇ. ಒ. ಗಳಾಗಿ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಇವತ್ತು ಎ. ಇ. ಒ.ಗಳು ಏನು ಮಾಡುತ್ತಾರೆ? ಚೆನ್ನಾಗಿರುವ ಎ. ಇ. ಒ. ಇರಬಹುದು. ಅವನು ಒಂದು ಸ್ಕೂಲ್ ಚೆಕ್ ಮಾಡುವುದಕ್ಕೆ ಹೋಗಬೇಕಾದರೆ ಯಾರಾದರೂ ಒಬ್ಬ ಮೇಷ್ಟ್ರನ್ನು ಕರೆಯಬೇಕು. ಲೂನಾ ಇಟ್ಟಿರುವವರನ್ನೋ, ಸುವೇಗ ಇಟ್ಟಿರುವವನನ್ನೋ, ಸ್ಕೂಟರ್ ಇಟ್ಟಿರುವವರನ್ನೋ ಕರೆಸಿಕೊಳ್ಳಬೇಕು. ಅವನು ಪಾಠ ಮಾಡಿದಹಾಗೆ ಮಾಡಿಸಿಕೊಳ್ಳಬೇಕು. ಅವನ ಸ್ಕೂಟರ್‌ನಲ್ಲಿ ಹೋಗಿ ಚೆಕ್ ಮಾಡಬೇಕು. ಈ ಪರಿಸ್ಥಿತಿ ಇದೆ. ಆದ್ದರಿಂದ ದಯಮಾಡಿ ತಾವು ಎ.ಇ.ಒ. ಆಫೀಸ್‌ಗೆ ಒಂದೊಂದು ವೆಹಿಕಲ್ಸ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಬ್ಲಾಕ್ ಬೋರ್ಡ್ ಆಪರೇಷನ್‌ನಲ್ಲಿ ಸ್ಕೂಲ್‌ಗಳನ್ನು ಕಟ್ಟಿಸಿದ್ದಾರೆ. ಅವುಗಳನ್ನು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಕೊಟ್ಟು ಆಗಲೇ ಹೆಚ್ಚು ಕಡಿಮೆ ಅರ್ಧ ಬಿದ್ದುಹೋಗಿರಬೇಕು ಎಂದು ಕಾಣುತ್ತದೆ. ಕಪ್ಪು ಹಲಗೆ ಯೋಜನೆಯಲ್ಲಿ ಕಟ್ಟಿರತಕ್ಕ ಶಾಲಾ

ಕೊಠಡಿಗಳಿಗೆ. ಇವತ್ತು ಕೊಟ್ಟಿರತಕ್ಕ ಹಣ ಸಾಲದು. ಕಟ್ಟಿರತಕ್ಕ ಒಂದು ಬಿಲ್ಡಿಂಗ್‌ಗಳ ಗುಣಮಟ್ಟ ಕಳಪೆಯಾಗಿದ್ದು ಈಗಾಗಲೇ ಬಿದ್ದು ಹೋಗುವ ಮಟ್ಟಕ್ಕೆ ಬಂದಿದೆ. ಆದಕ್ಕಾಗಿ ವಿನಂತಿ ಮಾಡುತ್ತೇನೆ. ಇವತ್ತು ನೂರಾರು ಕೊಠಡಿಗಳನ್ನು ಕಟ್ಟುವ ಬದಲು ೫೦ನ್ನು ಚೆನ್ನಾಗಿ ಕಟ್ಟಿಸಬೇಕೆಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಲಿ:- ಇದು ಬಹಳ ಜವಾಬ್ದಾರಿಯುತವಾದ ಸದನ ತಾವು ಬಹಳ ಗಂಭೀರವಾದ ಆಪಾದನೆಯನ್ನು ಒಬ್ಬ ಎ.ಇ.ಒ. ಬಗ್ಗೆ ಮಾಡಿದ್ದೀರಿ. ಬೆಳಿಗ್ಗೆ ಎಂಟು ಗಂಟೆಗೆ ವಿಸ್ಕಿ ಕುಡಿದು ಕಛೇರಿಗೆ ಬರುತ್ತಾರೆಂದು ಹೇಳಿದ್ದೀರಿ. ಅದೂ ಕೂಡ ಒಬ್ಬ ಶಾಸಕರು ಹೇಳತಕ್ಕಂಥ ಮಾತು ಇದು. ತಮ್ಮ ಹೇಳಿಕೆಯನ್ನು ನಾನು ಬಹಳ ಜವಾಬ್ದಾರಿಯಿಂದ ಸ್ವೀಕರಿಸಬೇಕಾಗುತ್ತದೆ. It is apparent by your statement, I will have to immediately suspend him, not just transfer. After all it is an important House and Hon'ble Member is making a serious allegation. If you stand by your allegation, if you want me to make an enquiry, I will make an enquiry. But you have directly made an allegation. I think I am duty bound, to suspend him immediately on the spot, I will have to supend him, if you stand by your statement. It is a serious allegation. I don't think even for a minute I can wait. I have to suspend him and order for an enquiry. I don't want to tolerate any officer if he is indulging in that, that too when a responsible MLA of the constituency is making allegation. ನಾನು ಅದಕ್ಕೆ ಅಷ್ಟೇ ಬೆಲೆ ಕೊಡಬೇಕಾಗುತ್ತದೆ. ಅದಕ್ಕೆ ಘನತೆ ಇದೆ ಆದುದರಿಂದ if you stand by the statement, I will immediately order the suspension of that officer and order for enquiry. ಒಂದು ವೇಳೆ ತಾವು ಇಲ್ಲ ಅದರಲ್ಲಿ ಸ್ವಲ್ಪ ವಿಚಾರ ಮಾಡಬೇಕಾಗುತ್ತದೆ, ಬೇರೆಯುವರು ಹೇಳಿದ್ದು, ಅದರ ಮೇಲೆ ನಾನು ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆಂದು ಹೇಳಿದರೆ ನಾನು ಎನ್‌ಕ್ವಯರಿ ಮಾಡುತ್ತೇನೆ. ಅದು ಸರಿ ಎಂದು ಕಂಡ ಮೇಲೆ I will take action. The ball is in your court. ಎರಡರಲ್ಲಿ ಒಂದು ಛೂಸ್ ಮಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾತನಾಡುವ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳನ್ನು ಒಂದು ದಿವಸಕ್ಕೆ ಖರ್ಚು ಮಾಡಿ ಸಭೆ ನಡೆಸುತ್ತೇವೆ. ಈ ಸದನ ಗೌರವಯುತವಾದ ಸದನ. ಈ ರಾಜ್ಯದ ಉನ್ನತವಾದ ಸಭೆ. ಈ ಸಭೆಯಲ್ಲಿ ನಿಂತು ಮಾತನಾಡತಕ್ಕ ಸಂದರ್ಭದಲ್ಲಿ ಬಹಳ ಜವಾಬ್ದಾರಿಯಿಂದಲೇ ಮಾತುಗಳನ್ನು ಆಡುತ್ತಿದ್ದೇನೆ. ಇದರಲ್ಲಿ ಎರಡನೇ ಮಾತೇ ಇಲ್ಲ. ನಾನು ವಿನಂತಿ ಮಾಡುತ್ತೇನೆ. ನಾನು ಆಗಲೇ ಹೇಳಿದ್ದೇನೆ. ಆ ಎ.ಇ.ಒ. ಬೆಳಗ್ಗೆ ಹೊತ್ತು ಕುಡಿಯುವುದರಲ್ಲಿ ಯಾವ ಸಂಶಯವೂ ಇಲ್ಲ. ನಾನು ಕಣ್ಣಾರೆ ನೋಡಿದ್ದೇನೆ. ೧೦ ಗಂಟೆಗೆ ಕುಡಿದು ಬರತಕ್ಕದ್ದು ಇದೆ. ಆದರೂ ನಾನು ವಿನಂತಿ ಮಾಡುತ್ತೇನೆ. ಇವತ್ತು ನನ್ನ ಉಳಿವನ್ನು ನೀವು ಪ್ರಶ್ನೆ ಮಾಡಬೇಕಾಗುತ್ತದೆ, ಆ ಕ್ಷೇತ್ರದಲ್ಲಿ ನನ್ನ ಉಳಿವು ಇದೆಯಲ್ಲ

ಅದನ್ನು ನಿಮಗೇ ಬಿಡುತ್ತೇನೆ. ನಾನು ಎರಡನ್ನೂ ನಿಮಗೇ ಬಿಡುತ್ತೇನೆ. ನೀವು ಎರಡರಲ್ಲಿ ಒಂದನ್ನು ಛೂಸ್ ಮಾಡಿ ಎಂದು ನನಗೆ ಹೇಳ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಲಿ:- ನೀವು ಅಲ್ಲಿ ಉಳಿವ ಅಳಿವ ಪ್ರಶ್ನೆ ಅಲ್ಲ. ಒಬ್ಬ ಎ. ಇ. ಓ.ನಿಂದ ತಾವು ಉಳಿವ ಅಳಿವ ಪ್ರಶ್ನೆ ಅಲ್ಲ. ಪ್ರಶ್ನೆ ಏಂದರೆ, ಒಬ್ಬ ಎ. ಇ. ಓ. ಬೇಜವಾಬ್ದಾರಿಯಿಂದ ಬೆಳಗ್ಗೆ ೮ ಗಂಟೆಯಿಂದ ಕುಡಿದುಕೊಂಡು ಬರತಕ್ಕದ್ದು ಇದ್ದರೆ, Governmnet cannot sit quiet because you are making a direct allegation. ಅದು ತಮ್ಮ ಪ್ರತಿಷ್ಠೆ, ನಮ್ಮ ಪ್ರತಿಷ್ಠೆಯಾಗಿ ಇಲ್ಲಿ ಉಳಿದಿಲ್ಲ. ಇದು ನಿಮ್ಮ ನಮ್ಮ ಪ್ರತಿಷ್ಠೆ ಅಲ್ಲ. ವಿದ್ಯಾ ಇಲಾಖೆಯ ಒಬ್ಬ ಅಧಿಕಾರಿ ಅಲ್ಲಿ ಈ ರೀತಿ ಕೆಲಸ ಮಾಡುವುದಾದರೆ ತಮಗೆ ಇದು ನೇರವಾಗಿ ಗೊತ್ತಿದ್ದರೆ, If you stand by your allegation, I will have no option but to suspend him and then order for an enquiry. ಇಲ್ಲ ಇದನ್ನು ಸ್ವಲ್ಪ ನಾನು ವಿಚಾರ ಮಾಡಬೇಕು ಅಥವಾ ಸರ್ಕಾರ ಕೂಡ ವಿಚಾರ ಮಾಡಬೇಕಾಗಿದೆ ಎಂದು ತಮ್ಮ ಅಭಿಪ್ರಾಯವಾದರೆ I will order for an enquiry and then take action. ಏಕೆಂದರೆ, ನೇರವಾಗಿ ನಿಮಗೇ ಈ ವಿಚಾರ ಪರ್ಸ್ನಲ್ಲಾಗಿ ಗೊತ್ತಿದೆ. ದಯವಿಟ್ಟು ನಾವು ನಿಮ್ಮನ್ನು ಸಂದಿಗ್ದ ಪರಿಸ್ಥಿತಿಯಲ್ಲಿ ಹಾಕುತ್ತಿದ್ದೇವೆಂದು ದಯಮಾಡಿ ತಿಳಿದುಕೊಳ್ಳಬಾರದು. ಪ್ರಶ್ನೆ ಏನೆಂದರೆ, ಸ್ವಾಭಿಮಾನದ ಗೌರವದ ಪ್ರಶ್ನೆ. ತಾವು ಶಿಕ್ಷಣ ವ್ಯವಸ್ಥೆಯನ್ನು ತಿಳಿದುಕೊಳ್ಳಬೇಕು. ಇಂತಹದ್ದು ನಮ್ಮ ಮೂಗಿನ ನೇರಕ್ಕೆ, ನಮ್ಮ ಕಣ್ಣಿನ ನೇರಕ್ಕೆ ಇವತ್ತು ನಡೆಯುವುದಿದ್ದರೆ ಹತಾಶ ಪರಿಸ್ಥಿಯಲ್ಲಿ ಯಾವ ಇಲಾಖೆ ಕೂಡ ಇರಬಾರದು. ಆದುದರಿಂದ if you stand by your allegation, if you know directly that he is doing that, I am going to suspend him on the spot. ಅಥವಾ ತಾವು ಇನ್ನೂ ಸ್ವಲ್ಪ ವಿಚಾರ ಮಾಡಿ ನನಗೆ ಹೇಳುವುದು ಇದ್ದರೆ I will wait for you. Otherwise, I will have to suspend him, right now, on the spot.

ಶ್ರೀ ಡಿ. ಹಲಗೇಗೌಡ:- ಇದರಲ್ಲಿ ನಾನು ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಸದಸ್ಯರು ಅವರ ಕ್ಷೇತ್ರದ ವಿಷಯ ಎ. ಇ. ಓ. ಬಗ್ಗೆ ಹೇಳುತ್ತಿದ್ದಾರೆ. ಅವರು ಏನು ಹೇಳುತ್ತಿದ್ದಾರೆ ಹೇಳಿಬಿಡಲಿ.

ಶ್ರೀ ಕೆ. ಹೆಚ್. ರಂಗನಾಥ್:- ಅವನು ಬರುವಾಗಲೇ ಕುಡಿದು ಬರುತ್ತಾನೆಂದು ಈ ಸದನದಲ್ಲಿ ಸದಸ್ಯರು ಅಪಾದನೆಯನ್ನು ಮಾಡುತ್ತಿದ್ದಾರೆ. ಹಾಗೆ ಹೇಳಿದರೆ ಇದು ಒಬ್ಬ ಅಧಿಕಾರಿಯ ಮತ್ತು ಅವನಿಗೆ ಸಂಬಂಧಪಟ್ಟಿದ್ದು ಆಗುವುದಿಲ್ಲ. ಇದು ಇಲಾಖೆಗೆ ಸಂಬಂಧಪಟ್ಟಿದ್ದು ಆಗುತ್ತದೆ. ಅವರು ನನಗೆ ಗೊತ್ತು ಹಾಗೆಂದು ಹೇಳಿದ್ದಾರೆ. ಅದು ಪ್ರೊಸೀಡಿಂಗ್ಸ್‌ನಲ್ಲಿ ಹೋಗಿದೆ. ಹೀಗಿರುವಾಗ, ಮಾನ್ಯ ಮಂತ್ರಿಗಳು ವಿಚಾರ ಮಾಡಿ ಹೇಳಿರೆಂದು ಹೇಳಿದರು. ಆದರೂ ಕೋಡ that Officer deserves to be punished. He should be immediately kept under suspension, enquiry conducted and sent out, if possible, if evidence is there. ಆದ್ದರಿಂದ ಇದು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು

ಆಗುವುದಿಲ್ಲ, ಇಲಾಖೆಗೆ ಸಂಬಂಧಪಟ್ಟಂತೆ ಆಗುತ್ತದೆ. ಮಕ್ಕಳನ್ನು ಇಂತಹವರ ಕೈಗೆ ಕೊಟ್ಟರೆ ಇಂತಹವರು ಮೇಲ್ವಿಚಾರಣೆಯನ್ನು ಮಾಡುತ್ತಾ ಇದ್ದರೆ, ಅಂತಹ ಜನ ನಿಮ್ಮ ಇಲಾಖೆಯಲ್ಲಿದ್ದರೆ ಅದನ್ನು ಸಹಿಸಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ?

ಉಪಾಧ್ಯಕ್ಷರು:- ಮಾನ್ಯ ಸದಸ್ಯರಾದ ಶಿವರಾಮೇ ಗೌಡರು ತಾವು ಮುಗಿಸಿ.

An Hon'ble Member:- you must stand by your statements.

(interruptions)

ಶ್ರೀ ಎಲ್. ಆರ್. ಶಿವರಾಮೇಗೌಡ:- ಈಗ ನಾನು ಹೇಳಿರತಕ್ಕ ವಿಚಾರದಲ್ಲಿ ಯಾವುದೇ ತರಹದಲ್ಲಿ ಬದಲಾವಣೆಯಿಲ್ಲ. ಯಾರೋ ಹೇಳಿದ ಮಾತನ್ನು ಕೇಳಿ ನಾನು ಹೇಳಿರತಕ್ಕ ಮಾತಲ್ಲ. ಆದರೆ ನಾನು ತಮ್ಮಲ್ಲಿ ಇನ್ನೊಂದು ವಿನಂತಿ ಮಾಡುತ್ತೇನೆ. ತಾವು ಸಹಿತ ಈವೊಂದು ಸಲಹೆಗೆ ಒಪ್ಪಿಕೊಂಡಿದ್ದೀರಿ. ತಾವು ಈಗ ಸಸ್ಪೆಂಡ್ ಮಾಡಿದರೆ ಅವನು ಮನೆಗೆ ಹೋಗುತ್ತಾನೆ, ಅದಕ್ಕೇನೂ ಅಡ್ಡಿಯಿಲ್ಲ. ಕೇವಲ ಮೂರ್‍ನಾಲ್ಕು ದಿವಸಗಳಲ್ಲಿ ನೀವು ಎನ್‌ಕ್ವಾಯರಿ ಮಾಡಿಸಿ ಅವನನ್ನು ಸಸ್ಪೆಂಡ್ ಮಾಡಿಸಿ. ಇವತ್ತು ನನಗೆ ನೋವು ಏನಾಗಿದೆ ಅಂದರೆ...

ಶ್ರೀ ಆರ್. ದಯಾನಂದರಾವ್:- ನೀವು ಈ ರೀತಿ ಮಾಡುತ್ತೀರಿ ಎಂದು ನನಗೆ ಗೊತ್ತಿತ್ತು.

ಶ್ರೀ ಜಿ. ಹೆಚ್. ಜುಟ್ಟಲ್:- ಎಂಟು ಗಂಟೆಗೆ ಕುಡಿಯುತ್ತಾನೆಂದು ಒಂದು ಸಾರಿ ಹೇಳಿದ್ದಾರೆ. ೧೦ ಗಂಟೆಗೆ ಕುಡಿದು ಬರುತ್ತಾನೆಂದು ಒಂದು ಸಾರಿ ಹೇಳಿದ್ದಾರೆ. ಇದು ಸದನದ ಗೌರವದ ಪ್ರಶ್ನೆಯಾಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ನಾನು ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಡಿಯೆಂದು ಹೇಳುತ್ತಿಲ್ಲ. ಮೂರ್‍ನಾಲ್ಕು ದಿವಸಗಳಲ್ಲಿ ಎನ್‌ಕ್ವಾಯರಿ ಮಾಡಿ ಸಸ್ಪೆಂಡ್ ಮಾಡಿಯೆಂದು ನಾನೇ ಹೇಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು:- ಮಾನ್ಯ ಸದಸ್ಯರಾದ ಶಿವರಾಮೇಗೌಡರೆ, ಮುಂದಿನ ವಿಷಯಕ್ಕೆ ಹೋಗಿ. ತಾವು ಬೇಗ ಮುಗಿಸಿ.

(ಗೊಂದಲ)

ಉಪಾಧ್ಯಕ್ಷರು:- ಈ ವಿಷಯವನ್ನು ಮಾನ್ಯಸದಸ್ಯರಿಗೆ ಮತ್ತು ಮಿನಿಸ್ಟರ್‌ಗೆ ಬಿಡಿ. ಮಿನಿಸ್ಟರ್ ಏನೋ ಹೇಳುತ್ತಿದ್ದಾರೆ ಕೇಳೋಣ.

ಶ್ರೀ ಆರ್. ದಯಾನಂದ ರಾವ್:- ಮಾನ್ಯ ಸದಸ್ಯರು ನೇರವಾಗಿ ಎ. ಇ. ಓ. ಮೇಲೆ ಆಪಾದನೆ ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು:- ನಾನು ಮಾನ್ಯ ಸದಸ್ಯರಾದ ಮೂಡಗೇಕರ್ ದೇಸಾಯಿ ಅವರನ್ನು

ಕರೆದಿದ್ದೇನೆ, ಅವರು ಏನು ಹೇಳುತ್ತಾರೆ ನೋಡೋಣ.

Sri. K.C. Modgekar:- He has said that he had visited on a specific day. He should have complained with any authority on the same day. Because it is a very serious matter concerning the AEO, and the House should consider this also. He has not complained with any authority.

ಉಪಾಧ್ಯಕ್ಷರು:- ಶಿವರಾಮೇಗೌಡರೇ, ನೀವು ಈಗ ಮುಗಿಸಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ:- ಈ ವಿಚಾರದಲ್ಲಿ ನಾನು ಈಗಲೂ ಸ್ಪಷ್ಟ ಮಾಡುತ್ತೇನೆ. ನಾನು ಮಂತ್ರಿಗಳಿಗೆ ಇದನ್ನು ಬಿಡುತ್ತೇನೆ. ಮಂತ್ರಿಗಳು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಲಿ.

ಶ್ರೀ ಆರ್. ದಯಾಸುಂದರಾವ್:- ಅಜಾಗರೂಕತೆಯಿಂದ ಮಾತನಾಡುವುದಲ್ಲ. ಕರೆಕ್ಟ್ ಆಗಿ ಅವರು ಹೇಳಿದ್ದಾರೆ. He has charged the AEO. If he has got any evidence, let him prove it.

ಉಪಾಧ್ಯಕ್ಷರು:- ಶಿವರಾಮೇಗೌಡರೇ, ಈಗ ನೀವು ಮುಗಿಸಬೇಕು.

ಶ್ರೀ ಹಲಗೇಗೌಡ:- ಮಾನ್ಯ ಸದಸ್ಯರು ಮಾತನಾಡುತ್ತಾ ಆ ಅಧಿಕಾರಿ ಬೆಳಗೆ ಎಂಟು-ಹತ್ತು ಗಂಟೆಗೆ ಕುಡಿದು ಬರುತ್ತಾರೆ, ಕುಡಿದು ಬಂದರೂ ಕೂಡ, ಅವರ ವರ್ತನೆ ಬಗ್ಗೆ ಬಹಳ ಬೇಸರ ಪಟ್ಟುಕೊಂಡರೂ ಕೂಡ ಒತ್ತಡದಿಂದ ನಾನು ಮಾಜಿ ಮಂತ್ರಿಗಳ ಹತ್ತಿರ ಹೋಗಿ ಅವರನ್ನು ಅಲ್ಲೇ ಉಳಿಸಿದೆ. ಈಗಲೂ ಕೂಡ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ, ನಾನೂ ಕೂಡ ಉಳಿಯುವುದಿಲ್ಲವೆಂದು ತಮ್ಮ ಅಸಹಾಯಕತೆಯನ್ನು ತೋಡಿಕೊಂಡರು. ಒಬ್ಬ ಅಧಿಕಾರಿಯ ಬಗ್ಗೆ ಗೌರವಾನ್ವಿತರಾದ ಸದನದ ಸದಸ್ಯರು ಈ ರೀತಿ ಹೆದರಿ, ಈ ರೀತಿ ಅಸಹಾಯಕತೆಯನ್ನು ತೋರಿದರೆ ಅದು ಸದನಕ್ಕೆ ಅಗೌರವವನ್ನು ಮಾಡಿದ ಹಾಗೆ ಆಗಲಿಲ್ಲವೇ? ಅವರು ತಮ್ಮ ಸದಸ್ಯತ್ವಕ್ಕೆ ಅಗೌರವ ಮಾಡಿದ ಹಾಗೆ ಆಗಲಿಲ್ಲವೇ? ಒಬ್ಬ ಅಧಿಕಾರಿ ಬಗ್ಗೆ ಇಷ್ಟು ಹೆದರಿಕೆ, ಅಂಜುಬುರುಕುತನ ತೋರಿಸಿದರೆ ಹೇಗೆ? ಅವನು ಕೆಟ್ಟ ನಡತೆಯಿಂದ ನಡೆದುಕೊಂಡರೂ ಕೂಡ, ಅವನನ್ನು ಎದುರಿಸಿ ನಿಲ್ಲುವುದಕ್ಕೆ ಅವರಿಗೆ ಶಕ್ತಿ ಇಲ್ಲವೇ? ಇದರಲ್ಲಿ ನಮಗೆಲ್ಲರಿಗೂ ಅವಮಾನ ಆಗತಕ್ಕಂಥ ಪ್ರಶ್ನೆ ಅಡಗಿದೆ. ಈ ವ್ಯಾಖ್ಯಾನದ ಬಗ್ಗೆ ತಾವು ದಯವಿಟ್ಟು ತಮ್ಮ ರೂಲಿಂಗ್‌ನ್ನು ಕೊಡಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ:- ಈ ವಿಚಾರದಲ್ಲಿ ನಾನು ಸ್ಪಷ್ಟ ಮಾಡಿದ್ದೇನೆ. ನನ್ನ ಹೇಳಿಕೆಗೆ ನಾನು ಸ್ಟ್ಯಾಂಡ್ ಆಗಿದ್ದೇನೆ. ಇದರೊಳಗೆ ವ್ಯತ್ಯಾಸ ಏನೂ ಇಲ್ಲ. ಈ ವಿಚಾರದಲ್ಲಿ ಮಂತ್ರಿಗಳು ಏನು ಸಲಹೆ ಕೊಟ್ಟಿದ್ದಾರೆ, ಆದರದಷ್ಟೂ ಅವರಿಗೇ ಬಿಡುತ್ತೇನೆ. ಅವರು ಏನು ಬೇಕಾದರೂ ತೀರ್ಪು ತೆಗೆದುಕೊಳ್ಳಲಿ. ಇದರಲ್ಲಿ ಎರಡನೇ ಮಾತಿಲ್ಲ.

Sri. R. Dayanda Rao:- In what way, he will stand by his statement. Let him come out with a statement.

ಶ್ರೀ ಎ.ಕೆ. ಅನಂತಕೃಷ್ಣ:- ನಮ್ಮ ಸಭೆಯೊಳಗೆ ಮಾತನಾಡುವುದಾದರೆ ಒಬ್ಬ ಗೌರವಾನ್ವಿತ ಸದಸ್ಯರು ಒಬ್ಬ ಅಧಿಕಾರಿಯ ವಿರುದ್ಧ ಒಂದು ಆಪಾದನೆ ಮಾಡಿದ್ದಾರೆ ಎಂದರೆ, ಅದನ್ನು ಮಾನ್ಯ ಮಂತ್ರಿಗಳು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದರೆ, ಅದಕ್ಕೆ ಚರ್ಚೆಗೆ ಅವಕಾಶ ಇಲ್ಲವೆಂದು ನಾನಾದರೂ ಕೂಡ ತೀವ್ರವಾಗಿ ಭಾವಿಸುತ್ತೇನೆ. ಮಂತ್ರಿಗಳು ಏನು ಹೇಳಿದ್ದಾರೆ, ಅದನ್ನು ಅವರು ಜಾರಿಗೆ ತರಬೇಕು. ಆದರೆ ಅವರು ಸದಸ್ಯರು ಹೇಳಿದಹಾಗೆ ನಡೆದಿಲ್ಲ ಎನ್ನುವುದಾದರೆ ಅದಕ್ಕೆ ಮಾನ್ಯ ಸದಸ್ಯರು ಸರಿಯಾದ ಜವಾಬ್ದಾರಿಯನ್ನು ತೆಗೆದುಕೊಂಡು ಈ ಸದನಕ್ಕೆ ವಿವರಣೆಯನ್ನು ಕೊಡಬೇಕು. ಇಲ್ಲದಿದ್ದರೆ ನಮ್ಮ ಸದನದಲ್ಲಿ ಯಾವುದೇ ಒಬ್ಬ ಅಧಿಕಾರಿಯ ವಿಷಯದಲ್ಲಿ ಬಹಳ ಸಾಧಾರಣವಾಗಿ ನಾವು ಮಾತನಾಡಿದ ಹಾಗೆ ಆಗುತ್ತದೆ. ಮತ್ತೆ ಅದನ್ನು ವಾಪಾಸ್ಸು ತೆಗೆದುಕೊಂಡು ಬಿಟ್ಟಿದ್ದೇನೆ ಎಂದರೆ ಆಗ ನಾವು ಅಸಾಧಾರಣ ಸದಸ್ಯರಾಗಿ ಬಿಡುತ್ತೇವೆ. ಅದು ಸೂಕ್ತವಲ್ಲವೆಂದು ಹೇಳುತ್ತೇನೆ. ನಮ್ಮ ಪಂಚ ಸೂತ್ರ ಏನಿವೆ Corrupt practices, maladministration, inefficiency, indiscipline, ಅದನ್ನು ಸರಿಯಾಗಿ ಜಾರಿಗೆ ತರಬೇಕಾಗಿದ್ದರೆ, ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ, ಅದು ಕೇವಲ ಸದಸ್ಯರಿಗೆ ಮಾತ್ರ ಅಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಅವರ ಮೇಲೆ ಕ್ರಮ ತೆಗದುಕೊಳ್ಳಲೇಬೇಕು. ತೆಗೆದುಕೊಂಡಮೇಲೆ ಅದರ ಪರಿಣಾಮ ಏನಾಗುತ್ತದೆ, ಅದನ್ನು ನಾವೆಲ್ಲರೂ ಫೇಸ್ ಮಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಇದರಲ್ಲಿ ಮೂರು ವಿಚಾರಗಳಿವೆ. ಒಂದು, ಯಾವುದೇ ಅಧಿಕಾರಿ ಅಥವಾ ಈ ಸದನದ ಸದಸ್ಯರು ಅಲ್ಲದೆ ಇರತಕ್ಕಂಥ ವ್ಯಕ್ತಿಗಳ ವಿಚಾರದಲ್ಲಿ ವೈಯುಕ್ತಿಕವಾದಂಥ ಆಪಾದನೆಗಳನ್ನು ಮಾಡಬಾರದು. ಆ ರೀತಿ ಏನಾದರೂ ಅಪಾದನೆ ಮಾಡುವುದು ಇದ್ದರೂ ಕೂಡ ಸದನದಲ್ಲಿ ಆ ಬಗ್ಗೆ ಪುರಾವೆಗಳನ್ನು ಒದಗಿಸಬೇಕಾದದ್ದು ಒಂದು ಭಾಗ. ಇಲ್ಲಿ ಎರಡನೆಯ ಭಾಗ ಎಂದರೆ, ಯಾವುದೇ ಒಂದು ಆಪಾದನೆಯನ್ನು ಮಾಡಿದರೂ ಕೂಡ ಸನ್ಮಾನ್ಯ ಸದಸ್ಯರು ಅದರ ಬಗ್ಗೆ ಸರಿಯಾದಂಥ ವಿಚಾರವನ್ನು ಸಂಗ್ರಹಿಸಿ ಸತ್ಯಾ ಸತ್ಯತೆಗಳನ್ನು ವಿಮರ್ಶೆ ಮಾಡಿ ನಂತರ ಆಪಾದನೆಗಳನ್ನು ಮಾಡಬೇಕಾಗುತ್ತದೆ. ಗೌರವಾನ್ವಿತ ಸನ್ಮಾನ್ಯ ಸದಸ್ಯರು ಒಮ್ಮೆ ಇಲ್ಲಿ ಆಪಾದನೆ ಮಾಡಿದಮೇಲೆ ಅದನ್ನು ಗಂಭೀರವಾಗಿ ಪರಿಶೀಲನೆ ಮಾಡತಕ್ಕದ್ದು ನಮ್ಮ ಸರ್ಕಾರದ ಕರ್ತವ್ಯ ಇರುತ್ತದೆ. ನಾನು ತಿಳಿದುಕೊಂಡ ಹಾಗೆ, ತಾವು ಒಂದನೇ ಭಾಗದಂತೆ ತಮ್ಮ ಕರ್ತವ್ಯ ಏನಿದೆ ಅದನ್ನು ನಿರ್ವಹಣೆ ಮಾಡಿದ ಹಾಗೆ ಇಲ್ಲ. ಏಕೆಂದರೆ ತಾವು ಆಪಾದನೆಯನ್ನು ವೈಯುಕ್ತಿಕವಾಗಿ ಅಧಿಕಾರಿಯ ಬಗ್ಗೆ ಮಾಡುವಾಗ ಪರ್ಮಿಷನ್ ಕೇಳಬೇಕಾಗುತ್ತದೆ ಅಥವಾ ಬರೆದು ಕೊಡಬೇಕಾಗುತ್ತದೆ. ತಾವು ಅದನ್ನು ಮಾಡಿಲ್ಲ. ಎರಡನೇ ಭಾಗ ಎಂದರೆ, ತಾವು ನೇರವಾಗಿ ಹೇಳುತ್ತಿದ್ದೀರಿ. ತಮಗೆ ಗೊತ್ತಿದೆ, ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ಸ್ವತಃ ಅನುಭವದ ಮೇಲೆ ತಾವು ಹೇಳುತ್ತಿದ್ದೀರಿ. ಇದು ಗೊತ್ತಿದ್ದು, ತಾವು ಜವಾಬ್ದಾರಿಯಿಂದ ಆಪಾದನೆ ಮಾಡಿದಮೇಲೆ ನಮಗೆ ಎರಡನೇ ಭಾಗ, I have no other option but to take action. He cannot remain as AEO even for a minute, if I take your statement seriously. ಅದನ್ನು ನಮ್ಮ ಚಾಯ್ಸ್‌ಗೆ ಬಿಡಬೇಡಿ, if you stand by your statement ಎಂದು ಹೇಳಿದರೆ, ಅದರ ಬಗ್ಗೆ ಎನ್‌ಕ್ವೈರಿ ಮಾಡಿ ಬೇಕಾದ ಪುರಾವೆ ನಾನು ಒದಗಿಸುತ್ತೇನೆಂದು ಹೇಳಿದರೆ, I can wait; I can order for enquiry and

then take action. ಇಲ್ಲ, ನೇರವಾಗಿ ನನಗೆ ಗೊತ್ತಿದೆ, ನಾನು ಕ್ಷೇತ್ರದ ಶಾಸಕ ಇದ್ದೇನೆ, ವಿಚಾರಮಾಡಿ ತಿಳಿಸುತ್ತೇನೆಂದರೆ ನಥಿಂಗ್ ರಾಂಗ್. ತಾವು ಹೇಳಿದ ಪ್ರಕಾರ, ತಮ್ಮ ಮೇಲೆ ಪ್ರಭಾವ ಬೀರಿ, he got an extension ಎಂದರೆ ಅದು ತೀವ್ರವಾದ ಆರೋಪ, ಅಷ್ಟೇ ಸಾಕು, to keep him under suspension for exercising political influence on him. ರಾಜಕೀಯ ಪ್ರಭಾವವನ್ನು ಒಬ್ಬ ಅಧಿಕಾರಿ ನಿಮ್ಮ ಮೇಲೆ ಉಪಯೋಗ ಮಾಡಿದ್ದಾನೆಂದು ಹೇಳಿದರೆ, ಕುಡಿಯುವುದು ಎರಡನೇ ಭಾಗ. ಒಂದನೇ ಭಾಗದಲ್ಲಿಯೇ ಅವರನ್ನು ಅಮಾನತ್ತಿನಲ್ಲಿಡುವುದಕ್ಕೆ ಸಾಧ್ಯವಿದೆ. Even I can use that No. 1 charge. No. 2 charge, prima facie. ಆತ ಕುಡಿದುಕೊಂಡೇ ಬರುತ್ತಿದ್ದಾನೆ, ಸರಿಯಾಗಿ ಕರ್ತವ್ಯವನ್ನು ನಿರ್ವಹಿಸುವುದಿಲ್ಲವೆಂದು ತಾವು ಆರೋಪ ಮಾಡಿದ್ದೀರಿ, on these two allegations also, if you stand by on what you said, I will make an enquiry. Even for a minute he cannot remain in that position. I will see that he is suspended. We will order for an inquiry. ಇಲ್ಲ, ನಾನು ಇದರ ಬಗ್ಗೆ ಸ್ವಲ್ಪ ವಿಚಾರ ಮಾಡಬೇಕಾಗಿದೆ, ನಾನೇ ಇದರ ಬಗ್ಗೆ ಸ್ವತಃ ವಿಚಾರ ಮಾಡಿ ನಿಮಗೆ ತಿಳಿಸುತ್ತೇನೆಂದು ಹೇಳಿದರೆ, Nothing wrong. After all sometimes under some provocation, ಅವರಿಗೆ ಫಿಕ್ಸ್ ಮಾಡಬೇಕಾದ ಅವಶ್ಯಕತೆ ಇಲ್ಲ. excite ಮಾಡಿ, ನಿಮ್ಮ ಕ್ಷೇತ್ರದ ಬೇಡಿಕೆಯ ವಿಚಾರದಲ್ಲಿ ಸ್ಪಂದಿಸಿ, ಕೆಲವುಸಾರಿ ತಾವು ಪ್ರೊವೋಕೇಟೀವಾಗಿ ಮಾತನಾಡಬಹುದು. ಇದನ್ನು ತಪ್ಪಿಸಬಹುದು, ಕೆಲವು ಸಾರಿ ಸದನದಲ್ಲಿ ನಡೆಯುತ್ತದೆ...

(ಗೊಂದಲ)

ಶ್ರೀ ಆರ್. ದಯಾನಂದರಾವ್:- ನೀವೇನಾದರೂ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ, ಇವತ್ತು ವಿದ್ಯಾ ಇಲಾಖೆಗೇ ಕೆಟ್ಟ ಹೆಸರು ಬರುತ್ತದೆ.

Dr. Y. Nagappa:- He will not be excused for being under the influence of alcohol. In the court, one is not execused for murdering under the influence of alcohol. So, responsibility has to be fixed and he has to be punished.

ಶ್ರೀ ಎಂ. ವೀರಪ್ಪ ಮೊಯಿಲಿ:- ಏನಾದರೊಂದು ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ, ಒಂದು ಕಳಕಳಿಯ ದೃಷ್ಟಿಯಿಂದ, ತಾವು ಏನಾದರೂ ಪ್ರೊವೋಕೇಟೀವಾಗಿ ಏನಾದರೊಂದು ಹೇಳಿಕೆ ಕೊಟ್ಟಿದ್ದಿದ್ದರೆ, ಅದರ ವಿಚಾರವನ್ನು ಕೂಡ, We can believe you. ಆ ಜವಾಬ್ದಾರಿಯನ್ನು ತಾವು ನೇರವಾಗಿ ವಹಿಸಿಕೊಂಡಿದ್ದರಿಂದ, ಆ ಜವಾಬ್ದಾರಿಯನ್ನು ನಮಗೆ ಕೊಡಬೇಡಿ. ಎರಡಲ್ಲಿ ಒಂದನ್ನು You have to choose and you must tell me. ನೀವು ಹೇಳಿದ ಮೇಲೆ, ನಾವು ವರ್ಗಾವಣೆ ಮಾಡುವುದು ಅಥವಾ ಅಮಾನತ್ತಿನಲ್ಲಿಡುವುದು ಎಂದು ಅರ್ಥ ಆಗುವುದಿಲ್ಲ. ಆದರೆ ಅವನ ನಡವಳಿಕೆಯ ಮೇಲೆ ನಾವು ಅಮಾನತ್ತಿನಲ್ಲಿಡುತ್ತೇವೆ ಅಥವಾ ಎನ್‌ಕ್ವೈರಿ ಮಾಡುತ್ತೇವೆ.

(ಗೊಂದಲ)

ಉಪಾಧ್ಯಕ್ಷರು:- ಇದರ ಬಗ್ಗೆ ಚರ್ಚೆ ಬೇಡ, ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಇದು ಮುಗಿಯಿತು. ಇನ್ನು ತಾವು, ತಮ್ಮ ಮಾತನ್ನು ಮುಗಿಸಿ, ತಾವು ೫ ನಿಮಿಷದಲ್ಲಿ ಮುಗಿಸುತ್ತೇವೆಂದು ಹೇಳಿ, ಅರ್ಧ ಗಂಟೆ ತೆಗೆದುಕೊಂಡಿದ್ದೀರಿ.

ಶ್ರೀ ಆರ್. ದಯಾನಂದರಾವ್:- ನಾಳೆ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಮಂತ್ರಿಗಳಿಗೆ ಕೆಟ್ಟ ಹೆಸರು ಬರುತ್ತದೆ. It is not the question of AEO but it is the question of Department to-day.

ಶ್ರೀ ಎಲ್. ಆರ್. ಶಿವರಾಮೇಗೌಡ:- ನಾನು ಹೇಳಿರತಕ್ಕ ಹೇಳಿಕೆಗೆ ಈಗಾಗಲೇ ಸ್ಟ್ಯಾಂಡ್ ಬೈ ಆಗಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳಿಗೇ ಬಿಟ್ಟಿದ್ದೇನೆ. ಇದರ ಮೇಲೆ ಎನ್‌ಕ್ವೈರಿ ಮಾಡಿ ಅವರ ಮೇಲೆ ತುರ್ತು ಕ್ರಮ ತೆಗೆದುಕೊಳ್ಳುವುದನ್ನು ಮಾಡಬೇಕು. ಇದನ್ನು ಮಂತ್ರಿಗಳಿಗೆ ಬಿಡುತ್ತೇನೆ. ಇನ್ನು ಉಪಾಧ್ಯಾಯರ ತರಬೇತಿ ಕೇಂದ್ರಗಳು ಇವೆ. ಈ ಕೇಂದ್ರಗಳಲ್ಲಿ ಇವತ್ತು ಆಯ್ಕೆ ಸಮಿತಿ ಏನಿದೆ, ಈ ಆಯ್ಕೆ ಸಮಿತಿ ಹೇಗೆ ನಡೆಯುತ್ತಿದೆ, ಆಯ್ಕೆ ಯಾವ ರೀತಿಯಾಗುತ್ತಿದೆ ಎನ್ನುವುದೇ ಗೊತ್ತಾಗುವುದಿಲ್ಲ. ದಯಮಾಡಿ, ನೀವು ಅಧಿಕಾರಿಗಳನ್ನು ಏನು ಮಾಡಿದ್ದೀರಿ, ಈ ಅಧಿಕಾರಿಗಳ ಜೊತೆಗೆ, ಜವಾಬ್ದಾರಿಯುತವಾದ ತಾಲ್ಲೂಕು ಮಟ್ಟದಲ್ಲಿ ಒಬ್ಬರು ಅಥವಾ ಇಬ್ಬರು ಸದಸ್ಯರನ್ನು ಮಾಡಿದರೆ ಸುಲಭವಾಗುತ್ತದೆ. ಜೊತೆಗೆ, ಸ್ಥಳೀಯವಾಗಿರತಕ್ಕಂಥ ಸದಸ್ಯರಿಗೂ ಅವಕಾಶ ಕೊಟ್ಟಹಾಗೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ತಾನೆ, ಮಾನ್ಯ ಕರಿಯಣ್ಣನವರು ತಮ್ಮ ಭಾಷಣದಲ್ಲಿ ೬-೭ ಸಾವಿರ ಶಿಕ್ಷಕರನ್ನು ತೆಗೆದುಕೊಂಡಿದ್ದಾರೆ ಎಂಬ ಮಾತನ್ನು ಹೇಳಿದರು. ಆದರೆ, ಇನ್ನೂ ೧೨ ಸಾವಿರ ಶಿಕ್ಷಕರನ್ನು ಸರ್ಕಾರ ತೆಗದುಕೊಳ್ಳಬೇಕಾಗಿದೆ. ಇವತ್ತು ಹಳ್ಳಿಗಳ ಕಡೆ ಹೋದರೆ ಮಕ್ಕಳುಗಳು ಗೋಳೋ ಎಂದು ಅಳತಕ್ಕ ಪರಿಸ್ಥಿತಿ ಇದೆ. ಅವರ ಪೇರೆಂಟ್ಸ್ ಅಳತಕ್ಕಂಥ ಪರಿಸ್ಥಿತಿ ಇದೆ. ಆದ್ದರಿಂದ ಶೀಘ್ರವಾಗಿ ಪೋಸ್ಟುಗಳನ್ನು ತೆಗೆದುಕೊಳ್ಳತಕ್ಕಂಥ ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಇಂಗ್ಲಿಷ್ ಸ್ಕೂಲ್ಸ್ ಬಗ್ಗೆ ಬಹಳ ಜಿಜ್ಞಾಸೆ ಉಳಿದಿದೆ. ಇವತ್ತು ಕರ್ನಾಟಕ ಹೈಕೋರ್ಟ್‌ಗೆ ಅಪೀಲ್ ಮಾಡಿಕೊಂಡು ಇಂಗ್ಲಿಷ್ ಸ್ಕೂಲ್ಸ್‌ಗೆ ಪರ್ಮಿಷನ್ ತೆಗೆದುಕೊಳ್ಳುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಹೈಕೋರ್ಟ್ ಇಂಗ್ಲಿಷ್ ಸ್ಕೂಲ್ಸ್ ಮಾಡುವುದಕ್ಕೆ ಪರ್ಮಿಷನ್ ಕೊಡುವ ಸಂದರ್ಭದಲ್ಲಿ ಸರಕಾರ ಏತಕ್ಕೆ ಕಣ್ಣು ಮುಚ್ಚಿಕೊಂಡು ಕುಳಿತಿದೆ ಎಂದು ನನ್ನ ಪ್ರಶ್ನೆ. ನಾನು ಕಳೆದ ಅಧಿವೇಶನದಲ್ಲಿ ಇಂಗ್ಲಿಷ್ ಸ್ಕೂಲ್ಸ್ ಕೊಡುತ್ತೀರೋ ಇಲ್ಲವೋ ಎಂಬ ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು ಇದಕ್ಕಾಗಿ ಒಂದು ಸಮಿತಿ ಮಾಡಿದರು. ಇತ್ತೀಚೆಗೆ ಈ ಸಮಿತಿ ವರದಿ ಕೊಟ್ಟಿದೆ ಎಂಬುದನ್ನು ಪತ್ರಿಕೆಗಳಲ್ಲಿ ಓದಿ ಕೇಳಿದ್ದೇವೆ. ಈ ಸಮಿತಿಯ ವರದಿ ಏನಾಗಿದೆ ಎಂಬುದನ್ನು ತಾವು ಈ ಸದನದಲ್ಲಿ ಹೇಳಬೇಕು. ಇಂಗ್ಲಿಷ್ ಸ್ಕೂಲ್ಸ್ ಬಗ್ಗೆ ತಾರತಮ್ಯ ಬೇಕಾಗಿಲ್ಲ, ಕನ್ನಡ ವಿರೋಧಿಗಳು ನಾವಲ್ಲ. ನಾವು ಕನ್ನಡದ ಅಭಿಮಾನಿಗಳು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಮಕ್ಕಳ ಪರಿಸ್ಥಿತಿ ಯಾವ ಮಟ್ಟಕ್ಕೆ ಆಗಿದೆ ಎಂದು ಯೋಚನೆ ಮಾಡಿ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಮಕ್ಕಳು ಕನ್ನಡದಲ್ಲಿ ಕಲಿಯಬೇಕು. ನಗರ ಪ್ರದೇಶದಲ್ಲಿರತಕ್ಕಂಥ ಮಕ್ಕಳು ಇಂಗ್ಲಿಷ್‌ನಲ್ಲಿ ಕಲಿಯಬೇಕು. ಈ ತಾರತಮ್ಯಕ್ಕೆ ಸರಕಾರ ದಾರಿ ಮಾಡಿಕೊಟ್ಟ ಹಾಗೆ ಆಗಿದೆ. ಅದಕ್ಕಾಗಿ ತಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು. ಇಂಗ್ಲಿಷ್ ಸ್ಕೂಲ್‌ನ ಶೀಘ್ರವಾಗಿ ಕೊಡಬೇಕು. ಇಂಗ್ಲಿಷ್ ಓದಬೇಕೆ, ಬೇಡವೇ ಎಂಬುದನ್ನು

ಯೋಚನೆ ಮಾಡತಕ್ಕವರು, ಮಕ್ಕಳ ತಂದೆತಾಯಿಗಳೇ ಹೊರತು ಬೇರೆಯವರಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಾಕ್ಷರತಾ ಆಂದೋಲನದ ಬಗ್ಗೆ ನಾನು ರೂರಲ್ ಡೆವಲಪ್‌ಮೆಂಟ್ ಮತ್ತು ಕಂದಾಯ ಸಚಿವರ ಬೇಡಿಕೆ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದಾಗ, ಅವರು ವಿದ್ಯಾ ಇಲಾಖೆಯ ಬೇಡಿಕೆ ಬಂದ ಸಂದರ್ಭದಲ್ಲಿ ಹೇಳಿ ಎಂದು ಹೇಳಿದರು. ಇವತ್ತು ನಾನು ಹೇಳುತ್ತೇನೆ ಇದೊಂದು ಒಳ್ಳೆಯ ಯೋಜನೆ. ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲವೆಂದು ಈ ಯೋಜನೆಯನ್ನು ಕೇಂದ್ರ ಸರಕಾರ ಮಾಡುತ್ತಿದೆ. ಇದಕ್ಕಾಗಿ ೪-೬ ಕೋಟಿ ದುಡ್ಡು ಕೊಡುತ್ತಿದೆ. ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳೆರಡೂ ದುಡ್ಡು ಕೊಡುತ್ತಿವೆ. ಇದರ ಬಗ್ಗೆ ಏನಾಯಿತು ಎಂದರೆ ಬೀದಿ ಬೀದಿಯಲ್ಲಿ ಘೋಷಣೆಗಳನ್ನು ಬರೆದರು, ದುಡ್ಡು ತೆಗೆದುಕೊಂಡು ನಾಟಕ ಆಡಿದರು, ಬೋರ್ಡ್ ಬರೆದರು. ಇವತ್ತು ೧೦-೧೫ ಪರ್‌ಸೆಂಟ್ ಮೇಲೆ ನಮ್ಮ ತಾಲ್ಲೂಕಿನಲ್ಲಿ ನಮ್ಮ ಜಿಲ್ಲೆಯಲ್ಲಿ ಕಲಿಯುತ್ತಿಲ್ಲ. ಇದರ ಬಗ್ಗೆ ಬೇಕಾದರೆ ಎನ್‌ಕ್ವೈರಿ ಮಾಡಿಸಿ. ಅಲ್ಲಿ ದುಡ್ಡು ಲೂಟಿಯಾಗುತ್ತಿದೆ. ಇದರ ಬಗ್ಗೆ ಸಂಪೂರ್ಣವಾಗಿ ಪರಿಶೀಲನೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಈ ಹಣ ಲೋಪವಾಗದ ಹಾಗೆ ಮಾಡಿ, ಏನು ಕೇಂದ್ರ ಸರಕಾರ ಹಣ ಕೊಡುತ್ತಿದೆ, ಏನು ರಾಜ್ಯ ಸರಕಾರ ಮಾನೀಟರ್ ಮಾಡುತ್ತಿದೆ, ಈ ಹಣ ಫಲಪ್ರದವಾಗಬೇಕಾದರೆ, ವ್ಯವಸ್ಥಿತವಾಗಿ ಯೋಜನೆ ಮುಗಿಯಬೇಕಾಗಿದ್ದರೆ ಸರಿಯಾದ ರೀತಿಯಲ್ಲಿ ಆಗಬೇಕು. ಇನ್ನು ಉಳಿದಿರತಕ್ಕಂಥ ಎರಡು ಮೂರು ತಿಂಗಳಲ್ಲಿ ನಾವು ಸರಿಯಾದ ರೀತಿ ಸಾಕ್ಷರತಾ ಯೋಜನೆ ಮಾಡದೇ ಹೋದರೆ, ಕಲಿಸದೇ ಹೋದರೆ ಏನೂ ಒಳ್ಳೆಯದಾಗುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪರೀಕ್ಷಾ ವಿಧಾನದ ಬಗ್ಗೆ ಹೇಳಬೇಕಾದರೆ, ಈಗಿನ ಪರೀಕ್ಷಾ ವಿಧಾನದಲ್ಲಿ ನೀವು ಏನು ವಿಜಿಲೆನ್ಸ್ ಇಟ್ಟುಕೊಂಡು ಪರೀಕ್ಷೆ ಮಾಡಿದರೂ, ಏನು ಮಾಡಿದರೂ ಸಹ ಪ್ರಯೋಜನ ಇಲ್ಲ. ಪರೀಕ್ಷಾ ವಿಧಾನವನ್ನು ಬದಲಾವಣೆ ಮಾಡದೇ ಹೋದರೆ ಕಾಪಿ ಹೊಡೆಯುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಹಳ್ಳಿಗಳ ಕಡೆ ಕೆಲವು ಮ್ಯಾನೇಜ್‌ಮೆಂಟ್‌ನವರು ಬಾಗಿಲು ಹಾಕಿಸಿಕೊಂಡು ಕಾಪಿ ಹೊಡೆಸುತ್ತಾರೆ, ಪ್ರಿನ್ಸಿಪಾಲರೇ ಜೊತೆಯಾಗಿ ಕಾಪಿ ಹೊಡೆಸುತ್ತಾರೆ. ನಾನು ವಿನಂತಿ ಮಾಡುತ್ತೇನೆ, ಇವತ್ತು ವಿದ್ಯಾರ್ಥಿಯನ್ನು ಅಳೆಯಬೇಕಾಗಿದ್ದರೆ ಪುಸ್ತಕದಲ್ಲಿ ಎಲ್ಲೋ ನಾಲ್ಕು ಕೊಶ್ಚನ್ಸ್ ಕೊಟ್ಟರೆ ಸಾಧ್ಯವಿಲ್ಲ, ಇಡೀ ಪುಸ್ತಕವನ್ನೇ ಕೊಟ್ಟು ವಿದ್ಯಾರ್ಥಿಗಳನ್ನು ಅಳತೆ ಮಾಡಬೇಕಾಗಿದೆ. ಇವತ್ತು ಹೊರ ರಾಷ್ಟ್ರಗಳಲ್ಲಿ ಏನು ಪರೀಕ್ಷಾ ವಿಧಾನ ಇದೆ, ಅದನ್ನು ಅಳವಡಿಸಿಕೊಂಡರೆ ಸುಲಭವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯಲ್ಲಿ ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಿನ್ನೆ ಮಾನ್ಯ ಸದಸ್ಯರು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಡಾ. ಪರಮೇಶ್ವರ ಅವರು ಚೆನ್ನಾಗಿ ಹೇಳಿದರು. ನಮ್ಮ ರಾಜ್ಯದವರಾದರೆ, ನಮ್ಮ ಪಕ್ಕದವರಾದರೆ ಮೂರು ಲಕ್ಷ ರೂಪಾಯಿ, ಅಕ್ಕಪಕ್ಕದ ರಾಜ್ಯದವರಾದರೆ ೬ ಲಕ್ಷ ರೂಪಾಯಿ, ಹೊರ ರಾಷ್ಟ್ರದವರು ಇದ್ದರೆ ೧೦ ಲಕ್ಷ ರೂಪಾಯಿಗೆ ಇವತ್ತು ಸೀಟುಗಳ ಮಾರಾಟ ನಡೆಯುತ್ತಿದೆ. ಇವತ್ತು ಬಿಷಪ್ ಕಾಟನ್ ಸ್ಕೂಲಿನಲ್ಲಿ ಒಂದು ನರ್ಸರಿ ಸೀಟನ್ನು ೧೦ ಸಾವಿರ, ೧೫ ಸಾವಿರ, ೪೦ ಸಾವಿರ ರೂಪಾಯಿಗಳಿಗೆ ಹರಾಜು ಕೂಗುತ್ತಿದ್ದಾರೆ. ನಾನು ವಿನಂತಿ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಕ್ಯಾಪಿಟೇಷನ್ ಶುಲ್ಕ ನಿಷೇಧ ಮಾಡುವ ಆಕ್ಟ್ ಇದೆ. ೧೯೮೪ರಲ್ಲಿ ಈ ಒಂದು ಆಕ್ಟ್ ತಂದಿದ್ದಾರೆ. ಆದರೂ ಸಹ ಈ ಒಂದು ಡೆಮಾಕ್ರೆಟಿಕ್ ಸೆಟಪ್‌ನಲ್ಲಿ ಲಕ್ಷಾಂತರ ರೂಪಾಯಿ ಲೂಟಿ

ಹೊಡೆಯತಕ್ಕಂಥಾದ್ದು ನಡೆಯುತ್ತಿದೆ. ಇದರ ಬಗ್ಗೆ ಡಾ. ಪರಮೇಶ್ವರವರು ಒಂದು ಮಾತು ಚೆನ್ನಾಗಿ ಹೇಳಿದರು. ಯುನೈಟೆಡ್‌ಸ್ಟೇಟ್ಸ್ ಆಫ್ ಅಮೇರಿಕಾದಲ್ಲಿರತಕ್ಕಂಥ ಇಡೀ ಪ್ರಪಂಚದಲ್ಲಿ ಪ್ರಸಿದ್ಧಿಯಾಗಿರತಕ್ಕಂಥ ಹಾರ್‌ವರ್ಡ್ ಯೂನಿವರ್ಸಿಟಿಯಲ್ಲಿ ಒಂದು ವರ್ಷಕ್ಕೆ ೬-೭ ಸಾವಿರ ಡಾಲರ್‌ನ್ನು ಹಾನರ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಸೆಗೆದುಕೊಳ್ಳುತ್ತಾರೆ. ವಿದ್ಯಾಭ್ಯಾಸ ಮಾಡುವುದಕ್ಕೆ ಒಂದು ವರ್ಷಕ್ಕೆ ೬-೭ ಸಾವಿರ ಡಾಲರ್ ಅಲ್ಲಿ ನಿಗದಿ ಮಾಡಿ ಒಂದು ವ್ಯವಸ್ಥೆ ಮಾಡಿದ್ದಾರೆಂದು ಹೇಳಿದರು. ಇವತ್ತು ನೀವು ಏನಾದರೂ ಕ್ಯಾಪಿಟೇಷನ್ ಫೀಸ್ ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ನಿಗದಿ ಮಾಡಿದ್ದರೆ ನಾನು ಕೇಳುತ್ತೇನೆ ಈ ಕಾನೂನನ್ನು ಜಾರಿಗೆ ತನ್ನಿ. ಇಲ್ಲದಿದ್ದರೆ ಆ ಕಾನೂನನ್ನು ವಿತ್ ಡ್ರಾ ಮಾಡಿ. ಇದು ಯಾವುದಾದರೊಂದು ತೀರ್ಮಾನ ಆಗಬೇಕು. ಇವತ್ತು ಅವರು ಹೇಳುತ್ತಿದ್ದಾರೆ ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳದಿದ್ದರೆ ನಾವು ಹೇಗೆ ಕಾಲೇಜು ನಡೆಸುವುದು ? ಅದಕ್ಕೆ ನಮಗೆ ಒಂದು ಫೀ ಸ್ಟ್ರಕ್ಚರ್ ಆದರೂ ಮಾಡಿ ಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಚರ್ಚೆ ಮುಗಿದಿದೆ. ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಆರ್. ದಯಾನಂದರಾವ್:- ಆ ಎ.ಇ.ಓ. ಬಗ್ಗೆ ಹೇಳಬೇಕು.

ಉಪಾಧ್ಯಕ್ಷರು:- ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶಿಕ್ಷಣ ಸಚಿವರಿಂದ ಉತ್ತರ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಮತ್ತು ಇವತ್ತು ಶಿಕ್ಷಣ ಇಲಾಖೆ ಬಗ್ಗೆ ಮತ್ತು ಕಾನೂನು ಇಲಾಖೆ ಬಗ್ಗೆ ವ್ಯಾಪಕವಾದಂತಹ ಚರ್ಚೆ ನಡೆದಿದೆ. ಶಿಕ್ಷಣ ಇಲಾಖೆ ಬಗ್ಗೆ ನನಗೆ ಬಹಳ ಸಂತೋಷವೇನೆಂದರೆ, ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ವಿಧಾನದಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆದಂತಹ ಅಧಿಕಾರ ವಾಣಿಯಿಂದ ಮಾತನಾಡತಕ್ಕಂಥ, ಈ ಬಗ್ಗೆ ಕಳಕಳಿ ಇರತಕ್ಕಂಥ ಮತ್ತು ಸಾಕಷ್ಟು ಅಧ್ಯಯನ ಮಾಡಿರತಕ್ಕಂಥ ಸುಮಾರು ೧೫ ಜನ ಮಾನ್ಯ ಸದಸ್ಯರು ಶಿಕ್ಷಣ ಇಲಾಖೆಯ ಮೇಲೆ ಮತ್ತು ಇವತ್ತು ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಅವರಿಗೆಲ್ಲಾ ನಾನು ತಮ್ಮ ಮುಖಾಂತರ ವಿಶೇಷವಾದಂಥ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದರ ಜೊತೆಯಲ್ಲಿ ಮಾನ್ಯ ಸದಸ್ಯರು ನಮ್ಮ ಕಣ್ಣು ತೆರೆಸತಕ್ಕಂಥ ಮತ್ತು ಶಿಕ್ಷಣ ನೀತಿಯಲ್ಲಿ ವಿಶೇಷವಾಗಿ ಒಂದು ಭರವಸೆಯನ್ನು ಹುಟ್ಟಿಸಿ ಹೊಸ ಆಯಾಮಗಳನ್ನು ಸೃಷ್ಟಿ ಮಾಡುವಲ್ಲಿ ಅನೇಕ ಉಪಯುಕ್ತವಾದ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಶ್ರೀ ಎಸ್. ಎಂ. ಯಾಹ್ಯಾ, ಶ್ರೀ ಸಿ. ಎಂ. ಲಿಂಗಪ್ಪ, ಶ್ರೀ ಶಿವನಂಜಪ್ಪ, ಶ್ರೀ ಬಾಬುರಾವ್ ಚವಾಣ್, ಶ್ರೀಮತಿ ಮೊಟಮ್ಮ, ಶ್ರೀ ಮನೋಹರ ಐನಾಪುರೆ, ಶ್ರೀ ಕಮರುಲ್ ಇಸ್ಲಾಂ, ಶ್ರೀ ಶಫಿ ಅಹ್ಮದ್, ಡಾಕ್ಟರ್ ಪರಮೇಶ್ವರ, ಡೆಲ್ಲಿಕ್ ಫ್ಲಿನ್ಸ್‌ಫಾ, ಶ್ರೀ ಕರಿಯಣ್ಣ, ಶ್ರೀ ಜಿ. ಎಸ್ ಆಚಾರ್ ಮತ್ತು ನಮ್ಮ ಮಂಜುನಾಥ್ ಸಿ. ಕುನ್ನೂರ್ ಮತ್ತು ಶ್ರೀ ಕೆ. ಸಿದ್ದಯ್ಯ ಶ್ರೀಯುತರುಗಳೆಲ್ಲಾ ಮಾತನಾಡಿದ್ದಾರೆ. ಕೆಲವರು ಹೆಸರುಗಳನ್ನು ಬಿಟ್ಟಿರಬಹುದು ಕ್ಷಮಿಸಿ. ಕೊನೆಗೆ ಮಾತನಾಡಿದವರು ಸನ್ಮಾನ್ಯ ಶಿವರಾಮೇಗೌಡರು. ಎಲ್ಲರೂ ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ಅದು ನಮ್ಮ

ಶಿಕ್ಷಣ ಇಲಾಖೆಗೆ, ನಮಗೆ ಹೆಚ್ಚು ಪ್ರಯೋಜನವಾಗಿದೆ. ಶಿಕ್ಷಣದ ಬಗ್ಗೆ ನಡೆದ ಚರ್ಚೆಯ ವಿಧಿವಿಧಾನದಿಂದ ನಮ್ಮ ಶಿಕ್ಷಣ ಇಲಾಖೆ ಇನ್ನಷ್ಟು ಹೆಚ್ಚು ಸಂಪನ್ನವಾಗುತ್ತದೆ, ಇನ್ನಷ್ಟು ಶಕ್ತಿ ಬರುತ್ತದೆ ಎಂಬುದರಲ್ಲಿ ನನಗೆ ಯಾವ ಅನುಮಾನ ಕೂಡ ಇಲ್ಲ. ತಮ್ಮ ಸಲಹೆಗಳನ್ನು ನಾವು ಖಂಡಿತವಾಗಿ ಸ್ವೀಕಾರ ಮಾಡುತ್ತೇವೆ. ಮುಂದೆ ಬರತಕ್ಕಂಥ ವರ್ಷದಲ್ಲಿ ಈ ಸಲಹೆಗಳ ಹಿನ್ನಲೆಯಲ್ಲಿ ರತಕ್ಕಂಥ ಕಳಕಳಿಯನ್ನು ಅರ್ಥಮಾಡಿಕೊಂಡು ಸಲಹೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಕ್ರಿಯಾಶೀಲವಾಗಿ ನಾವು ಮಾಡುತ್ತೇವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. most illustrious persons have held this department. Persons like Sri K.H. Ranganath, ಜನತಾದಳ ಸರ್ಕಾರವಿದ್ದಾಗ ಚಂದ್ರಶೇಖರ್‌ರವರು, ಶ್ರೀ ಎಸ್. ಎಂ. ಯಾಹ್ಯಾರವರು, ಶ್ರೀ ಕೆ. ವಿ. ಶಂಕರೇಗೌಡರು, ಶ್ರೀ ಬದರೀನಾರಾಯಣರವರು, ಶ್ರೀ ಎಸ್. ಆರ್. ಕಂಠಿಯವರು ಇನ್ನು ಬೇರೆಯವರ ಹೆಸರುಗಳು ಬಿಟ್ಟು ಹೋಗಿದ್ದರೆ ದಯವಿಟ್ಟು ಕ್ಷಮಿಸಬೇಕು. ಇವರೆಲ್ಲಾ ಈ ಇಲಾಖೆಯನ್ನು ವಹಿಸಿಕೊಂಡು ಭದ್ರ ಬುನಾದಿಯನ್ನು ಭವ್ಯ ಪರಂಪರೆಯನ್ನು ಒಳ್ಳೆಯ ಮಾರ್ಗದರ್ಶನವನ್ನು ಖಂಡಿತವಾಗಿ ನಮಗೆ ಮಾಡಿಕೊಟ್ಟಿದ್ದಾರೆ. ನಾವು ಹೊಸದಾಗಿ ಯಾವುದನ್ನು ಮಾಡಿಲ್ಲ. ಎಲ್ಲಾ ಹಿಂದಿನ ಪರಂಪರೆ, ಹಿಂದೆ ಹಾಕಿ ಕೊಟ್ಟಂತಹ ಮಾರ್ಗದರ್ಶನ, ದಾರಿಯನ್ನಿತ್ತು ಅದಕ್ಕೆ ಸ್ಪಷ್ಟ ಸ್ವರೂಪ ಕೊಟ್ಟು ನಮ್ಮ ವ್ಯವಸ್ಥೆಯನ್ನು ಹೊಂದಿಸಿಕೊಂಡು ಹೋಗತಕ್ಕಂಥ ದೃಷ್ಟಿಯಲ್ಲಿ ಕೆಲವು ಕಾರ್ಯಕ್ರಮಗಳನ್ನು ನಾವು ಹಾಕಿಕೊಟ್ಟಿದ್ದೇವೆ. ಸನ್ಮಾನ್ಯ ಉಪಾಧ್ಯಕ್ಷಣಿಯವರೆ, ನಾನು ಕೊಡತಕ್ಕಂಥ ಉತ್ತರಕ್ಕೆ ಈ ಸದನದ ಸಮಯವನ್ನು ಹೆಚ್ಚು ತೆಗೆದುಕೊಳ್ಳಬಾರದು ಎಂಬ ಸದಿಚ್ಛೆಯಿಂದ ಒಂದು ಪುಸ್ತಿಕೆಯನ್ನು ಕೂಡ ನಾವು ಕೊಟ್ಟಿದ್ದೇವೆ. ಸಾಧಾರಣ ಇದನ್ನು ನನ್ನ ಭಾಷಣ ಎಂದು ತಿಳಿದುಕೊಳ್ಳಲಿ. ಭಾಷಣ ಎಂದು ನಾವು ಪ್ರಕಟಣೆ ಮಾಡಿಲ್ಲ. ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಏನೇನು ಕೆಲವು ಸಾಧನೆಗಳನ್ನು ಮಾಡಿದ್ದೇವೆ, ಟಾಕಿಂಗ್ ಪಾಯಿಂಟ್ಸ್ ಇದರಲ್ಲಿ ಇದೆ. 'ಶಿಕ್ಷಣ ರಂಗ ಹೊಸ ತಿರುವು ೯೧-೯೨'. ತಾವು ದಯಮಾಡಿ ಕ್ಷಮಿಸಿ, ಭಾಷಣ ಮಾಡುವಾಗ ನಾನು ಎಲ್ಲಾ ವಿಚಾರಗಳನ್ನು ಹೇಳಲಿಕ್ಕೆ ಹೋಗುವುದಿಲ್ಲ. ಬಹುಶಃ ರಿಪೀಟ್ ಮಾಡಬೇಕಾಂಥ ಅವಶ್ಯಕತೆ ಕೂಡ ಇಲ್ಲ. ಇದರಲ್ಲಿ ಏನು ಬರೆದಿದೆ ಅದನ್ನು ಪುನಃ ಉಚ್ಚರಿಸತಕ್ಕಂಥ ಒಂದು ಪ್ರಯತ್ನವನ್ನು ನಾನು ಮಾಡುವುದಿಲ್ಲ. ಅದಕ್ಕೆ ತಮ್ಮ ಒಪ್ಪಿಗೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಮತ್ತು ನಿನ್ನೆಯ ಚರ್ಚೆಯಲ್ಲಿ ಏನಾದರೂ ಪ್ರಶ್ನೆಗಳನ್ನು ತಾವು ಎತ್ತಿದ್ದರೆ ಅದಕ್ಕೆ ಸಮರ್ಪಕವಾದಂಥ ಉತ್ತರ ಅದರಲ್ಲಿ ಇದ್ದರೆ ನಾನು ಪುನಃ ಉತ್ತರ ಕೊಡತಕ್ಕಂಥ ಪ್ರಯತ್ನ ನಾನು ಮಾಡುವುದಿಲ್ಲ. ನಾವು ಯಾವ ದಾರಿಯಲ್ಲಿ ಹೋಗುತ್ತಿದ್ದೇವೆ ಎನ್ನುವುದು ಇದರಲ್ಲಿ ಇರುವ ಕಾರಣ, ಪುನಃ ಅದಕ್ಕೆ ಉತ್ತರ ಕೊಡಬೇಕಾದಂಥ ಅವಶ್ಯಕತೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಕೂಡ ಉತ್ತರ ಕೊಡಲೇಬೇಕು ಅಥವಾ ಕೆಲವು ವಿಷಯಗಳಲ್ಲಿ ಸ್ಪಷ್ಟೀಕರಣ ಬೇಕೆಂದು ತಮ್ಮ ಅಭಿಪ್ರಾಯವಿದ್ದರೆ ತಾವು ತಿಳಿಸಿದರೆ ಆಮೇಲೆ ಸ್ಪಷ್ಟೀಕರಣದ ಒಂದು ಸಂದರ್ಭದಲ್ಲಿ ಅದರ ಬಗ್ಗೆ ನಾನು ಬೇಕಾದರೆ ಸ್ಪಷ್ಟೀಕರಣ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ. ಇವತ್ತು ಮುಖ್ಯವಾಗಿ, ಮಾನ್ಯ ಶಾಸಕರಾದಂಥ ಎಸ್. ಎಂ. ಯಾಹ್ಯಾರವರು ಶಿಕ್ಷಣ ಇಲಾಖೆಯಲ್ಲಿ ಆದೂ ಕೂಡ ಪ್ರಾಥಮಿಕ ಹಂತದಲ್ಲಿ ನಮ್ಮ ಪ್ರಾಥಮಿಕ ಹಂತ ಎಂದರೆ ೧ ರಿಂದ ೪. ಈ ಪ್ರಾಥಮಿಕ ಹಂತದಲ್ಲಿ ಅನುಮತಿ ನೀಡುವ ಬಗ್ಗೆ ಸರಳ ಮತ್ತು ಉದಾರ ನೀತಿ ಏಕೆ ಅನುಸರಿಸಬಾರದು? ಉತ್ತಮ ಆಡಳಿತ ಸಂಸ್ಥೆಗಳು ಇದನ್ನು ಪ್ರಾರಂಭಿಸಲು

ಅವಕಾಶ ಮಾಡಿಕೊಡಿ. ಏಕೆ ಒಂದು ತರಹ ರೆಜಿಮೆಂಟೇಷನ್? ಈ ವ್ಯವಸ್ಥೆಯಲ್ಲಿ ಸಫೋಕೇಷನ್ ಇಟ್ಟುಕೊಳ್ಳಬೇಕಾದ ಆವಶ್ಯಕತೆ ಏಕೆ ಎಂದು ಹೇಳಿದರು. ಇವತ್ತು ರಾಷ್ಟ್ರದ ನಮ್ಮ ಪ್ರಧಾನಿ, ನೆಚ್ಚಿನ ಸನ್ಮಾನ್ಯ ಶ್ರೀ ಪಿ. ವಿ. ನರಸಿಂಹರಾಯರು ಮಾತ್ರವಲ್ಲದೆ, ೧೯೮೬ರಲ್ಲಿ ನಮ್ಮ ಇಡೀ ಶಿಕ್ಷಣ ವ್ಯವಸ್ಥೆಗೆ ಒಂದು ಹೊಸ ಸ್ವರೂಪವನ್ನು ನಮ್ಮ ದಿವಂಗತ ರಾಜೀವ್ ಗಾಂಧಿಯವರ ನೇತೃತ್ವದಲ್ಲಿ ನಾವು ಏನು ಕೊಟ್ಟಿದ್ದೇವೆ ಅದರ ಒಂದು ಸತ್ವ ಏನು ಇದೆ, ಅದರ ಒಂದು ಹಿನ್ನೆಲೆಯ ಸ್ಫೂರ್ತಿ ಏನಿದೆ, ಅದನ್ನು ಇವತ್ತು ಅನುಷ್ಠಾನ ಮಾಡಬೇಕಾಗುತ್ತದೆ. ರಾಷ್ಟ್ರದಲ್ಲಿ ಆರ್ಥಿಕ ನೀತಿಯನ್ನು ರೂಪಿಸುವಾಗ ಉದಾರತೆಯಿಂದ, ಉದಾರ ನೀತಿಯಿಂದ, ಉದಾರ ನೀತಿ ಬೆಳವಣಿಗೆ ದೃಷ್ಟಿಯಿಂದ ಮಾಡುವಾಗ ಸ್ವಲ್ಪ ರೆಗ್ಯುಲೇಟ್ ಮಾಡಬೇಕಾದ ಅವಶ್ಯಕತೆ ಇದೆ. ತಮಗೆ ಗೊತ್ತಿದೆ ಸನ್ಮಾನ್ಯ ಜವಹರಲಾಲ್ ನೆಹರೂರವರು ೧೯೫೧ರಲ್ಲಿ ಒಂದು ಪ್ರಥಮ ಯೋಜನೆ ಹಾಕುವಾಗ ಅವರ ಅಪ್ರೋಚ್ ಪೇಪರ್‌ನಲ್ಲಿ ಒಂದು ಮಾತನ್ನು ಹೇಳಿದರು. ಅದು ಏನೆಂದರೆ, ಯೋಜನೆ ಎಂದರೆ ಹುಲಿ ಮೇಲೆ ಸವಾರಿ ಮಾಡಿದ ಹಾಗೆ. ಹುಲಿ ಮೇಲೆ ಸವಾರಿ ಮಾಡಲಿಕ್ಕೆ ಪ್ರಾರಂಭ ಮಾಡಿದರೆ ನಾವು ಹೆಚ್ಚು ಹೆಚ್ಚು ವೇಗದಲ್ಲಿ ಹೋಗಬೇಕು. ಸ್ವಲ್ಪ ವೇಗ ಕಡಿಮೆ ಆದರೂ, ನಿಂತರೂ ಹುಲಿ ಮೇಲೆ ನೀವು ಸವಾರಿ ಮಾಡುವ ಬದಲು ಹುಲಿ ನಿಮ್ಮನ್ನು ಕಬಳಿಸಿಕೊಂಡುಬಿಡುತ್ತದೆ. ಅಂದರೆ ಅಷ್ಟು ವೇಗವನ್ನು ನಾವು ಮಾಡಬೇಕು. ಇಷ್ಟೆಲ್ಲಾ ಪ್ಲಾನ್ ಪಿರಿಯಡ್‌ನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬೆಳವಣಿಗೆ ಆದಮೇಲೆ ನಾವು ಇನ್ನೂ ಬಹಳ ಸ್ಪೀಡ್‌ನಲ್ಲಿ ಹೋಗಬೇಕಾಗುತ್ತದೆ. ಅದನ್ನು ಯಾರಾದರೂ ನಿಲ್ಲಿಸಲಿಕ್ಕೆ ಪ್ರಯತ್ನವನ್ನು ಮಾಡಿದರೆ, ಇವತ್ತು ಸಮುದಾಯದಲ್ಲಿರತಕ್ಕಂಥ, ಸಮುದಾಯದಲ್ಲಿ ಹುಟ್ಟತಕ್ಕಂಥ ಆಕ್ರೋಶಕ್ಕೆ ನಾವೆಲ್ಲಾ ಅಂದರೆ ಇಡೀ ಸಮಾಜವೇ ಬಲಿ ಆಗತಕ್ಕಂಥ ಪರಿಸ್ಥಿತಿ ಕೂಡ ಇದೆ. ಈ ಒಂದು ತತ್ವದ ಮೇಲೆ ಸನ್ಮಾನ್ಯ ಹಿರಿಯ ಸದಸ್ಯರಾದಂಥ, ಈ ಇಲಾಖೆಯನ್ನು ಹಿಂದೆ ಜವಾಬ್ದಾರಿಯಿಂದ ಬಹಳ ಯಶಸ್ವಿಯಾಗಿ ನಡೆಸಿಕೊಂಡು ಹೋಗಿದ್ದಂಥ ಸನ್ಮಾನ್ಯ ಯಾಹ್ಯಾರವರು ಏನು ಸೂಚನೆ ಕೊಟ್ಟಿದ್ದಾರೆ, ಅದರ ಬಗ್ಗೆ ನಿಮ್ಮದು ಮತ್ತು ನಮ್ಮದರಲ್ಲಿ ಸ್ವಲ್ಪ ವೇವ್ ಲೆಂತ್ ಇದ್ದು ನಮ್ಮ ಬಜೆಟ್ ಲೀಕ್ ತರಹ ನನ್ನ ಸ್ಪೀಚ್ ಲೀಕಾಗಿದೆ ಎಂದು ನನಗೆನ್ನಿಸುವುದಿಲ್ಲ. ಇಲ್ಲಿ ಸೈಕಾಲಜಿ ಲೀಕಾಗಿದೆ.

Sri K.H. Ranganath: Wave length ಒಂದೇ ಇದ್ದರೆ ಲೀಕ ಆಗಬೇಕಾದುದು ಅನಾವಶ್ಯಕ there is no need for leakage...

Sri. M. Veerappa Moily:- It is a good gesture... ಈಗ ನಮ್ಮ ಆಲೋಚನೆ ಕೂಡ ಈ ದಾರಿಯಲ್ಲಿ ನಡೆಯುತ್ತದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ನರ್ಸರಿ ಶಾಲೆಗಳನ್ನು ನಡೆಸಲು ಅನುಮತಿ ಮತ್ತು ಮಾನ್ಯತೆ ಪಡೆಯುವುದು ಅಗತ್ಯ ಇಲ್ಲ. ಈಗಾಗಲೆ ವಿಧಿ ಇದ. ಆದ್ದರಿಂದ ಮುಂದೆ ಬರತಕ್ಕಂಥ ವರ್ಷದಲ್ಲಿ ಆಂಗ್ಲಮಾಧ್ಯಮ ಶಾಲೆಗಳನ್ನು ಬಿಟ್ಟು ಉಳಿದವರು ಯಾರಾದರೂ ತಮ್ಮ ಮಾತೃಭಾಷೆಯಲ್ಲಿ ಒಂದನೇ ಕ್ಲಾಸ್‌ನಿಂದ ೪ನೇ ಕ್ಲಾಸ್‌ನ ವರೆಗೆ ಸ್ವತಃ ಪ್ರಾಥಮಿಕ ಶಾಲೆಗಳನ್ನು ಮಾಡುವುದಿದ್ದರೆ ಅವರು ಪೂರ್ವ ಅನುಮತಿಯನ್ನು ಪಡೆಯತಕ್ಕಂಥ ಅವಶ್ಯಕತೆ ಇಲ್ಲ. ಎರಡನೆಯದಾಗಿ, ಅವರು ಈ ರೀತಿಯಲ್ಲಿ ಪ್ರಾರಂಭ ಮಾಡಿದಮೇಲೆ ಕೇವಲ ನೊಂದಾವಣೆ ಮಾಡಿದರೆ ಸಾಕು. ಮತ್ತು ಮುಂದೆ ಅದು ಸಿಲಬಸ್ ವಿಚಾರದಲ್ಲಿ ಇರಬಹುದು, ಇನ್‌ಫ್ರಾಸ್ಟ್ರಕ್ಚರ್ ವಿಚಾರ ಇರಬಹುದು, ಅದಕ್ಕೆ ಸರಿಯಾದಂಥ ಮಾರ್ಗದರ್ಶನವನ್ನು ಕೊಟ್ಟು ಆ ಮಾರ್ಗದರ್ಶನವನ್ನು ಸಂಬಂಧಪಟ್ಟವರು ಪರಿಪಾಲಿಸದಿದ್ದರೆ ಮಾತ್ರ ಅವರ ಮೇಲೆ ಯಾವುದೇ

ರೀತಿಯ ನಿಯಮಾನುಸಾರ ಕಟ್ಟುಪಾಡುಗಳನ್ನು ಮಾಡಬೇಕಾಗಿದೆಯೋ ಹೊರತು ಪೂರ್ವಾನುಮತಿಯನ್ನು ಒಂದನೇ ಕ್ಲಾಸ್‌ನಿಂದ ೪ನೇ ಕ್ಲಾಸ್‌ವರೆಗೆ ಯಾರಾದರು ಖಾಸಗಿಯವರು ನಡೆಸಲಿಕ್ಕೆ ಬಂದರೆ ಇನ್ನು ಮುಂದೆ ೧೯೯೨-೯೩ನೇ ಸಾಲಿನಿಂದ ಅನುಮತಿಯನ್ನು ಪಡೆಯತಕ್ಕಂಥ ಅವಶ್ಯಕತೆ ಇಲ್ಲ ಎಂಬ ನೀತಿಯನ್ನು ನಾವು ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ ಮಾಡುತ್ತಾ ಇದ್ದೇವೆ. ತಮಿಳುನಾಡಿನಲ್ಲಿ ಈಗಾಗಲೇ ಈ ನೀತಿಯು ಜಾರಿಯಲ್ಲಿದೆ. ಅಲ್ಲಿ ಬಹಳ ಯಶಸ್ವಿಯಾಗಿ ನಡೆಯುತ್ತಾ ಇದೆ. ಅದನ್ನು ಕರ್ನಾಟಕ ರಾಜ್ಯದಲ್ಲಿ ಅನುಸರಿಸತಕ್ಕಂಥ ನೀತಿಯನ್ನು ಮಾಡುತ್ತಾ ಇದ್ದೇವೆ. ಬಹುಶಃ this will be the first step in response to the liberalised policy which is taken by the Hon'ble Pirme Minister Sri P.V. Narasimha Rao. ಆದ್ದರಿಂದ ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗೆ ಮಾತ್ರ ಇದು ಅನ್ವಯವಾಗುವುದಿಲ್ಲ. ಅಲ್ಲಿ ಭಾಷಾ ನೀತಿಯ ಪ್ರಶ್ನೆ ಬರುತ್ತದೆ. ಮಾತೃಭಾಷೆಯಲ್ಲಿ ಮಾತ್ರ ೧ ರಿಂದ ೪ನೇ ಕ್ಲಾಸ್‌ನವರೆಗೆ ಮಾಡಲು ಮಾತ್ರ ಸಾಧ್ಯತೆ ಇದೆ ಎಂಬುದನ್ನು ತಮಗೆ ತಿಳಿಸಲು ಇಷ್ಟಪಡುತ್ತೇನೆ. ಕನ್ನಡ ಭಾಷಾ ನೀತಿಯ ಅನ್ವಯ ಗೋಕಾಕ್ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಕ್ಕೆ ತಂದುದರ ಹಿನ್ನಲೆಯಲ್ಲಿ ಕನ್ನಡೇತರ ಶಾಲೆಗಳಲ್ಲಿ ಕನ್ನಡ ಶಿಕ್ಷಕರನ್ನು ನೇಮಿಸುವ ಬಗ್ಗೆ ಯಾವಾಗಲೂ ಒಂದು ರೀತಿಯ ವಿವಾದ ಮತ್ತು ಸಂಶಯ ಇದೆ. ಅದೂ ವಿಶೇಷತಃ ಉರ್ದು ಶಾಲೆಗಳಲ್ಲಿ ಇದೆ. ಈ ಬಗ್ಗೆ ಇಲ್ಲಿ ಹತ್ತು ವರ್ಷಗಳಿಂದಲೂ ಈ ಒಂದು ತರ್ಕ ನಡೆಯುತ್ತಾ ಇದೆ. ನಾವು ಕೂಡ ಈ ಸದನದಲ್ಲಿ, ಆ ಸದನದಲ್ಲಿ ಈ ಬಗ್ಗೆ ಬಂದ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಾ ಬಂದಿದ್ದೇವೆ. ಸ್ಟಾಫ್ ಪ್ಯಾಟರ್ನ್ ಒಳಗಡೆ ನೀವು ಕನ್ನಡ ಅರಿತ ಉರ್ದು ಟೀಚರ್ಸ್‌ನ್ನು ನೇಮಕ ಮಾಡಿ ಎಂದು ಹೇಳತಕ್ಕಂಥಾದ್ದು ಕೂಡ ಇದೆ. ಈ ಪ್ರಶ್ನೆಯು ಕಳೆದ ಹತ್ತು ವರ್ಷಗಳಿಂದ ಇದೆ. ಈಗ over and above the staff pattern ಒಬ್ಬ ಟೀಚರ್ಸ್‌ನ್ನು ನೇಮಕ ಮಾಡಿ ಕನ್ನಡ ಕಲಿಯಲು ಅವಕಾಶ ಮಾಡಿಕೊಡುವ ಒಂದು ನೀತಿಯನ್ನು ಕೂಡ ೧೯೯೨-೯೩ ರಿಂದ ಜಾರಿಗೊಳಿಸುತ್ತೇವೆ ಎಂದು ಹೇಳ ಬಯಸುತ್ತೇನೆ.

Sri. Azeez Sait (Minister for Transport and Wakfs):- As far as Kannada teachers are concerned, over and above staff pattern you have not permitted one Kannada Teacher. My request to the Hon'ble Minister is irrespective of number of students -- suppose I have 1200 students - there will be only one teacher. How can one teacher could manager this number. Irrespective of the staff strength one Kannada Teacher should be allowed to be appointed...

ಶ್ರೀ ಎಂ. ವೀರಪ್ಪ ಮೊಯಿಲಿ:- ವಿದ್ಯಾರ್ಥಿಗಳ ಸಂಖ್ಯೆ ಎಷ್ಟಿದೆ ಅದರ ಅನುಪಾತಕ್ಕೆ ಸರಿಯಾಗಿ ಹುದ್ದೆಗಳನ್ನು ಕೊಡುವುದರ ಜೊತೆಗೆ one Kannada teacher will be given. That is the decision of the Government. ಅದನ್ನು ನಾನು ಹೇಳುತ್ತಾ ಇದ್ದೇನೆ. ಇನ್ನು ಕರ್ನಾಟಕ ರಾಜ್ಯದಲ್ಲಿ ನೊಂದಾಯಿತ ಖಾಸಗಿ ಸಂಸ್ಥೆಯವರು ವಿವಿಧ ಭಾಷಾ ಮಾಧ್ಯಮ ಶಾಲೆಗಳನ್ನು ತೆರೆಯಲು ಸರಕಾರದ ಅನುಮತಿ ಪಡೆಯಬೇಕೆಂಬ ನೀತಿ

ಜಾರಿಯಲ್ಲಿ ಇರುವುದು ತಮಗೆ ಗೊತ್ತಿದೆ. ಈ ಪ್ರಶ್ನೆ ಇರುವುದು ೫ನೇ ಕ್ಲಾಸ್‌ನಿಂದ ಮಾತ್ರ. ಆದರೆ ಸ್ವಾಭಾವಿಕ ಬೆಳವಣಿಗೆಯ ಆಧಾರದ ಮೇಲೆ ಯಾರಾದರೂ ಮಾಡುವುದಿದ್ದರೆ ಮತ್ತು ಅದನ್ನು ನಾವು ನಿರಾಕರಿಸುವ ನಿದರ್ಶನಗಳು ಎಲ್ಲಾದರೂ ಕಂಡು ಬರುವುದಿದ್ದರೆ, ಅದರ ಬಗ್ಗೆ we are prepared to take a liberal attitude. ಇನ್ನು ಸ್ಕೂಲ್ ಮ್ಯಾಪಿಂಗ್ ಬಗ್ಗೆ ಹೇಳುವುದಾದರೆ, ಎಲ್ಲಿ ಖಾಸಗಿಯವರು ೧ ರಿಂದ ೪ನೇ ತರಗತಿಯವರೆಗೆ ಶಾಲೆಗಳನ್ನು ತೆರೆಯಲು ಮುಂದೆ ಬರುವುದಿಲ್ಲ, ಯಾವ ಕಡೆಗಳಲ್ಲಿ ಶಾಲೆಗಳ ಅವಶ್ಯಕತೆ ಇದೆ, ಅಲ್ಲಿ ಸರಕಾರವೇ ಶಾಲೆಗಳನ್ನು ತೆರೆಯತಕ್ಕಂಥ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಈ ಸಾರಿ ನಾವು ಕಂಪ್ಯೂಟರ್‌ನಲ್ಲಿ ಸ್ಕೂಲ್‌ನ ಅವಶ್ಯಕತೆ ಅಥವಾ ಬೇರೆ ಬೇರೆ ಹಂತದ ಕಾಲೇಜುಗಳ ಅವಶ್ಯಕತೆ ಇತ್ಯಾದಿಗಳ ಬಗ್ಗೆ ಸ್ಕೂಲ್ ಮ್ಯಾಪಿಂಗ್ ಮತ್ತು ಕಾಲೇಜ್ ಮ್ಯಾಪಿಂಗ್ ಮಾಡಿ ಕಂಪ್ಯೂಟರ್‌ನಲ್ಲಿ ಹಾಕಿ ಕಿರಿಯ ಪ್ರಾಥಮಿಕ ಶಾಲೆಗಳು, ೩೦೦ ವಿದ್ಯಾರ್ಥಿಗಳು ಇದ್ದರೆ ೧ ಕಿ. ಮೀ. ಅಂತರದಲ್ಲಿ ಹಿರಿಯ ಪ್ರಾಥಮಿಕ ಶಾಲೆ ೫೦೦ ವಿದ್ಯಾರ್ಥಿಗಳು ಇದ್ದರೆ ೨ ಕಿ. ಮೀ. ಅಂತರದಲ್ಲಿ, ಪ್ರೌಢಶಾಲೆ ೧೦೦೦ ವಿದ್ಯಾರ್ಥಿಗಳು ಇದ್ದರೆ ೫ ಕಿ. ಮಿ. ಅಂತರದಲ್ಲಿ ಪದವಿಪೂರ್ವ ಕಾಲೇಜಿಗೆ ೨ ಸಾವಿರ ಮಕ್ಕಳಿದ್ದರೆ ೮ ಕಿ. ಮೀ. ಅಂತರದಲ್ಲಿ ಖಾಸಗಿ ಶಾಲೆ ಅಥವಾ ಸರ್ಕಾರಿ ಶಾಲೆಗಳನ್ನು ಸ್ಥಾಪಿಸಲು ನಿರ್ದಿಷ್ಟವಾಗಿ ಆಯಾ ಜಿಲ್ಲೆ ತಾಲ್ಲೂಕು ಮಟ್ಟದಲ್ಲಿ ಮಾಹಿತಿಗಳನ್ನು ೧೯೯೨-೯೩ನೇ ಏಪ್ರಿಲ್ ತಿಂಗಳಲ್ಲಿ ಪ್ರಕಟಪಡಿಸಿ ಇದರನ್ವಯ ಯಾರಾದರೂ ಅರ್ಜಿ ಕೊಟ್ಟರೆ ಅದಕ್ಕೆ ಅನ್ವಯವಾದ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುವುದಕ್ಕೆ ಮುಂದಿನ ಹೆಜ್ಜೆ ಇಡುತ್ತೇನೆ. ಇನ್ನು ರಾಜ್ಯದಲ್ಲಿರುವ ಶಾಲೆಗಳಲ್ಲಿ ಸ್ಕೌಟ್ ಮತ್ತು ಗೈಡ್ ಶಿಕ್ಷರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಸಲಹೆ ಬಂತು. ಅವರ ಸೇವೆಯನ್ನು ಗುರ್ತಿಸಿ ಒಂದು ವಾರ್ಷಿಕ ಬಡ್ತಿ ನೀಡಲು ಸರ್ಕಾರ ನಿರ್ಣಯ ತೆಗೆದುಕೊಂಡಿದೆ. To those persons who join Scouts and Guides. This is only for teachers. ಇನ್ನು ೧೯೯೨-೯೩ನೇ ಸಾಲಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಕನ್ನಡ ಮಾಧ್ಯಮದ ಸರ್ಕಾರಿ ಮಾದರಿ ಶಾಲೆಗಳನ್ನು ಸ್ಥಾಪಿಸುವ ಯೋಜನೆಯನ್ನು ಈಗಾಗಲೇ ನಮೂದಿಸಿದ್ದೇವೆ. ಈ ಪುಸ್ತಕದಲ್ಲಿ ಕೂಡ ಕಾಣಿಸಿದ್ದೇವೆ. ಇದರ ಬಗ್ಗೆ ನಿನ್ನೆ ತಾವು ಒಂದು ಸಜೆಷನ್ ಕೊಟ್ಟಿದ್ದೀರಿ. ಕಡೇ ಪಕ್ಷ ಜಿಲ್ಲೆಗೊಂದರಂತೆ ಮಾದರಿ ಉರ್ದು ಶಾಲೆಗಳನ್ನು ಮಾಡಿ ಎಂದು. ಅಂದರೆ ೨೧ ಉರ್ದು ಶಾಲೆಗಳನ್ನು ಮಾಡಬೇಕಾಗುತ್ತದೆ. ಆದೂ ಕೂಡ ನಮ್ಮ ಗಮನದಲ್ಲಿ ಇತ್ತು. ಒಂದು ವಿಚಾರ ನಾವು ಮರೆಯಬಾರದು. ಏಕೆಂದರೆ ನಾವು ಯಾವಾಗಲೂ ಉರ್ದು ಶಾಲೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಮಾತನಾಡುತ್ತೇವೆ. ಆದರೆ ನಿಜವಾಗಿ ಉರ್ದು ಶಾಲೆಗಳನ್ನು ನೋಡಿದರೆ ಅವುಗಳ ಪರಿಸ್ಥಿತಿ ತುಂಬ ಕರುಣಾಜನಕವಾಗಿದೆ. ನಾವು ಅವಕ್ಕೆ ಇವತ್ತು ವಿಶೇಷವಾದ ಒತ್ತನ್ನು ಕೊಡಬೇಕಾಗಿದೆ. ಆದ್ದರಿಂದ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಮಾದರಿ ಶಾಲೆಗಳೆಂದರೆ, ನನ್ನ ಉದ್ದೇಶವೇನೆಂದರೆ, ಹಿಂದೆ ಕೂಡ ಮಾದರಿ ಶಾಲೆಗಳಿದ್ದವು. ಇದು ಹೊಸ ಕಾನ್‌ಸೆಪ್ಟೇನಲ್ಲ. ಆದರೆ ನಮ್ಮ ಮಾದರಿ ಶಾಲೆಗಳ ಕಾನ್‌ಸೆಪ್ಟ್ ಏನೆಂದರೆ, ಆಂಗ್ಲ ಮಾಧ್ಯಮ ಶಾಲೆಗಳು ಎಷ್ಟು ಆಕರ್ಷಣೀಯವಾಗಿವೆ ಎಂದು ತಾವು ತಿಳಿದುಕೊಂಡಿದ್ದರೂ, ನನ್ನ ಮಟ್ಟದಲ್ಲಿ ಅನೇಕ ಬಾರಿ ಅನೇಕ ಶಾಲೆಗಳು ಒಂದು ರೀತಿ ಮರೀಚಿಕೆಯಾಗಿವೆ. ಅಲ್ಲಿ ಯಾರು ಇಂಗ್ಲೀಷ್ ಕಲಿಸುತ್ತಾರೋ ಏನೋ. ಏಕೆಂದರೆ, ನಾನೇ ಒಂದೆರಡು ಆಂಗ್ಲ ಶಾಲೆಗಳಿಗೆ ಹೋಗಿದ್ದೆ. ಅಲ್ಲಿ ಅವರು ಮಾತನಾಡುವ ಇಂಗ್ಲೀಷ್ ನೋಡಿದರೆ ಹಿಂದೆ ಬಟ್ಲರ್ ಇಂಗ್ಲೀಷ್ ಎಂದು ಏನು

ಹೇಳುತ್ತಿದ್ದರು ಅದಕ್ಕೂ ಇದಕ್ಕೂ ಏನೂ ವ್ಯತ್ಯಾಸವೇ ಇಲ್ಲ. ಟೆಲಿಗ್ರಾಫ್ ಇಂಗ್ಲಿಷ್, ಬಟ್ಲರ್ ಇಂಗ್ಲಿಷ್ ಕಲಿತು ನಮ್ಮ ಮಕ್ಕಳ ಪರಿಸ್ಥಿತಿ ಯಾವ ದಾರಿಗೆ ಎಷ್ಟು ಎತ್ತರಕ್ಕೆ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಹರ್ಷ ಕುಮಾರಗೌಡ:- ಮಾನ್ಯ ಸಚಿವರೇ ಟೆಲಿಗ್ರಾಂ ಇಂಗ್ಲಿಷ್ ಹೇಳಿಕೊಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಅನೇಕ ಶಾಲೆಗಳಲ್ಲಿ ಯಾವ ತರಹ ಇಂಗ್ಲಿಷ್ ಕಲಿಸುತ್ತಾರೆ ಎಂದು ಹೇಳುತ್ತಿದ್ದೇನೆ. ಕೆಲವು ಒಳ್ಳೆಯ ಶಾಲೆಗಳೂ ಇವೆ.

ಶ್ರೀ ಡಿ. ಎ. ಚಿನ್ನಪ್ಪ:- ಮಾನ್ಯ ಅಧ್ಯಕ್ಷರೇ, ಕಾಲೇಜುಗಳಲ್ಲಿ ಒಂದು ಪಿರಿಯಡನ್ನು ಗ್ರಾಮರ್ ಹೇಳಿಕೊಡಲಿಕ್ಕೆ ಇಟ್ಟರೆ ಇದು ಸರಿಹೋಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಅದನ್ನು ಈ ಸಾರಿ ನಾವು ಮಾಡುತ್ತಿದ್ದೇವೆ. ಆದರೆ ಪ್ರಶ್ನೆ ಏನೆಂದರೆ, ಮಾದರಿ ಕನ್ನಡ ಶಾಲೆಗಳನ್ನು ಮಾಡಬೇಕೆಂದು ಏನು ಅಪೇಕ್ಷೆ ಪಡುತ್ತಿದ್ದೇವೆ ಇದರಲ್ಲಿ ಮಾದರಿ ಶಾಲೆಯಾಗಿ ಪರಿವರ್ತನೆಗೊಳ್ಳುವ ಶಾಲೆಯು ೧ ರಿಂದ ೭ನೇ ತರಗತಿಗಳನ್ನು ಹೊಂದಿರುವುದು, ಈ ಶಾಲೆಯನ್ನು ಸಾಧ್ಯವಾದ ಮಟ್ಟಿಗೆ ಜಿಲ್ಲಾ ಕೇಂದ್ರ ಸ್ಥಳದಲ್ಲಿ ಮಾಡುತ್ತೇವೆ. ಏಕೆಂದರೆ, ಜನರಿಗೆ ಹೆತ್ತವರಿಗೆ ತೋರಿಸಬೇಕಾಗುತ್ತದೆ, ಕನ್ನಡದ ಮಟ್ಟ ಎಷ್ಟಿದೆ ಎಂದರೆ ಮುಂದೆ ಅವರು ಪಡೆಯುವ ರ್‍ಯಾಂಕ್ ಇರಬಹುದು, ಕಲಿಸುವ ವಿದ್ಯಾಮಟ್ಟ ಇರಬಹುದು, ಅದನ್ನು ಅತ್ಯಂತ ಉನ್ನತ ಮಟ್ಟದಲ್ಲಿ ಕಲಿಸುವ ಅಧ್ಯಾಪಕರಿಗೆ ವಿಶೇಷವಾದ ತರಬೇತಿಯನ್ನು ನಾವು ಕೊಡುತ್ತಾ ಇದ್ದೇವೆ. ವಿಶೇಷವಾದ ತರಬೇತಿಯನ್ನು ಬೇರೆ ಬೇರೆ ಸಬ್ಜೆಕ್ಟ್‌ಗಳಲ್ಲಿ ಕೊಡುತ್ತೇವೆ. ಲ್ಯಾಬರೇಟರಿಯಲ್ಲಿ ಮಾಡುತ್ತೇವೆ. ಅಲ್ಲಿ ಗಾರ್ಡನ್ ಮಾಡುತ್ತೇವೆ ಅಲ್ಲಿ ಯೂನಿಫಾರಂ ಅನ್ನು ಇಂಟರ್‌ಡ್ಯೂಸ್ ಮಾಡುತ್ತೇವೆ. ಸಾಕಷ್ಟು ಕೊಠಡಿಗಳನ್ನು, ಇನ್‌ಫ್ರಾಸ್ಟ್ರಕ್ಚರ್‌ಅನ್ನು ಕೊಡುತ್ತೀವಿ. ಮತ್ತು ಹೊಸ ಶಿಕ್ಷಣ ವ್ಯವಸ್ಥೆಯಲ್ಲಿ ಏನು ಪ್ರಯೋಗ ಆಗುತ್ತದೆ, ಆ ಎಲ್ಲಾ ಪ್ರಾಯೋಗಿಕವಾದಂಥ ವ್ಯವಸ್ಥೆಯನ್ನೊಳಗೊಂಡ ಮಾದರಿ ಶಾಲೆಗಳನ್ನು ಮಾಡಿ, ಬಹುಶಃ ಇಂಥಾ ಕನ್ನಡದ ಶಾಲೆಗಳು ಮಾದರಿಯಾಗಿ ನಡೆಯತಕ್ಕಂಥ ಆಂಗ್ಲ ಮಾಧ್ಯಮ ಶಾಲೆಗಳಿಗೆ ಕಡಿಮೆ ಇಲ್ಲ ಎಂಬ ರೀತಿಯಲ್ಲಿ ಈ ಮಾದರಿ ಶಾಲೆಗಳನ್ನು ಮಾಡುತ್ತಿದ್ದೇವೆ. ಈ ಶಾಲೆಗಳಿಗೆ ಶಾಲಾ ಕೊಠಡಿಗಳನ್ನು ವಿಶೇಷವಾಗಿ ಕಟ್ಟಲಿಕ್ಕೆ ೧೯೯೨-೯೩ರಲ್ಲಿ ೩ ಕೋಟಿ ೪೦ ಲಕ್ಷ ರೂಪಾಯಿಗಳನ್ನು, ನಾವು ಪ್ರತ್ಯೇಕವಾಗಿ ಇಟ್ಟಿದ್ದೇವೆ. ಇಷ್ಟು ಮಾತ್ರವಲ್ಲದೆ, ಅಗತ್ಯ ಸಾಮಗ್ರಿಗಳನ್ನು ಒದಗಿಸಲಿಕ್ಕೆ ಇನ್ನೂ ೭೦ ಲಕ್ಷ ರೂಪಾಯಿಗಳನ್ನು ಇಟ್ಟಿದೆ. ಅಂದರೆ ೪ ಕೋಟಿ ೧೦ ಲಕ್ಷ ರೂಪಾಯಿಗಳನ್ನು, ಇಂಥಾ ಮಾದರಿ ಶಾಲೆಗಳನ್ನು ವಿಶೇಷವಾಗಿ ನಾವು ಪ್ರಾರಂಭ ಮಾಡಿ ಎಕ್ವಿಪ್ ಮಾಡತಕ್ಕಂಥ ರೀತಿಯಲ್ಲಿ ಕೊಡುತ್ತಿದ್ದೇವೆ. ಮತ್ತು ಪ್ರತಿ ಜಿಲ್ಲೆಗೆ ಒಂದರಂತೆ ೨೧ ಉರ್ದು ಮಾದರಿ ಶಾಲೆಗಳನ್ನು ಕೂಡ ನಾವು ಪ್ರಾರಂಭ ಮಾಡುತ್ತಿದ್ದೇವೆ. ಇನ್ನೂ ಒಂದು ವಿಚಾರ ಇದೆ. ಅದಕ್ಕೆ ನಾವು ಎಕ್ಸರ್‌ಸೈಸ್ ಮಾಡುತ್ತಲೇ ಇದ್ದೇವೆ. ನಮ್ಮ ಅನೇಕ ಸಹೋದ್ಯೋಗಿಗಳನ್ನು ಮತ್ತು ನಮ್ಮ ಉರ್ದು ಭಾಷೆ ಬಗ್ಗೆ ಅಭಿಮಾನ ಇರತಕ್ಕಂಥ ಶಾಸಕ ಮಿತ್ರರನ್ನೂ ನಮ್ಮ ಜೊತೆಯಲ್ಲಿ ಮಾತುಕತೆಗೆ ಕರೆದಿದ್ದೆ. ಅವರೊಡನೆ ಸಮಾಲೋಚನೆ ಮಾಡಿದೆ. ಅದಕ್ಕೆ ಪರಿಹಾರ ಈಗ ನಾವು ಕೊಡುತ್ತಿದ್ದೇವೆ. ಈ ಒಂದು ಅಲ್ಪಸಂಖ್ಯಾತ ಭಾಷಾ ಶಾಲೆಗಳ ಅನುಕೂಲತೆಗೆ ಒಂದು ವಿಶೇಷ ಉಪಯೋಜನೆ ಮಾಡಬೇಕೆಂದು ತಾವು ಸಲಹೆ ಕೊಟ್ಟಿದ್ದೀರಿ. ಇದು ಬಹಳ ಯೋಗ್ಯವಾಗಿದೆ. There must

be a thrust for this. ಇದಕ್ಕೆ ಬರೀ ಲಿಪ್ ಸಿಂಪತಿ ಇದ್ದರೆ ಸಾಲದು. ಆದರೆ ಯಾಂತ್ರಿಕವಾಗಿ ಯಾವುದೋ ಬದಲಾವಣೆ ಮಾಡುತ್ತೇವೆಂದರೆ ಅದು ಎಲ್ಲಿಯವರೆಗೆ ಬರುತ್ತದೆಂದು ಹೇಳುವುದಕ್ಕಾಗುವುದಿಲ್ಲ. It should be result oriented. ಆದ್ದರಿಂದ, ಈ ಗುಣ ಮಟ್ಟವನ್ನು ಪ್ರಸ್ತುತ ಉರ್ದು ಶಾಲೆಗಳು ಮುಖ್ಯವಾಗಿ ಸೇವಾನಿರತ ಶಿಕ್ಷರುಗಳಿಗೆ ಎಂಟು ತರಬೇತಿ ಕಾರ್ಯಕ್ರಮದ ಮೂಲಕ ಮಾಡುತ್ತಿದ್ದೇವೆ. ಅದು ಉರ್ದು ಮತ್ತು ಇನ್ನಿತರ ಅಲ್ಪ ಸಂಖ್ಯಾತರಿಗೆ ನಾವು ಏನು ಮಾಡಿದ್ದೇವೆ ಎಂದರೆ, ಎಂಟು ತರಬೇತಿ ಕಾರ್ಯಕ್ರಮಗಳ ಮೂಲಕ ೪೨೪ ಶಿಕ್ಷರುಗಳಿಗೆ ಅಲ್ಪಾವಧಿ ತರಬೇತಿಯನ್ನು ಈಗಾಗಲೇ ನಾವು ಕೊಟ್ಟಿದ್ದೇವೆ. ಉರ್ದು ಮತ್ತು ಮರಾಠಿ ಭಾಷೆಗಳಲ್ಲಿ ತಲಾ ೫ ಧ್ವನಿ ಸುರುಳಿಗಳನ್ನು ಸಿದ್ಧಪಡಿಸಿದ್ದು, ಅವುಗಳ ಮೂಲಕ ಮಕ್ಕಳಲ್ಲಿ ಉಚ್ಚಾರ, ಮಾತನಾಡುವ, ಓದುವಕಲೆಗಳನ್ನು ಇಲ್ಲಿ ಬಳಸಲಾಗಿದೆ. ೨೨೬ ಅಲ್ಪಸಂಖ್ಯಾತ ಶಾಲೆಗಳಿಗೆ ಭೂ ಪಟಗಳನ್ನು ಕೊಟ್ಟಿದ್ದೇವೆ. ೮೮ ಅಲ್ಪ ಸಂಖ್ಯಾತ ಶಾಲೆಗಳಿಗೆ ಟೇಪ್ ರೆಕಾರ್ಡ್ಸ್ ಕೂಡ ಕೊಟ್ಟಿದ್ದೇವೆ. ೧ ರಿಂದ ೧೦ನೇ ತರಗತಿಯಲ್ಲಿ ಓದುತ್ತಿರುವ ೬೮೩ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಕೂಡ ಮಾಡಲಾಗಿದೆ. ಜೊತೆಗೆ ಸಾಮಾನ್ಯ ಕಾರ್ಯಕ್ರಮಗಳಾದಂಥ ಶಾಲಾ ಕೊಠಡಿಗಳ ನಿರ್ಮಾಣ, ಶಿಕ್ಷಕರ ನೇಮಕಾತಿ, ತರಬೇತಿ, ಸಾಮಗ್ರಿಗಳ ಪೂರೈಕೆ ಇದನ್ನೆಲ್ಲಾ ಕೊಟ್ಟಿದ್ದೇವೆ. ಮುಖ್ಯವಾಗಿ ಉರ್ದು ಶಾಲೆಗಳ ಅಭಿವೃದ್ಧಿಗೆ ನಾವು ಉಪ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಆದರ ವಿವರವನ್ನು ಪ್ರತ್ಯೇಕವಾಗಿ ಕೊಡುತ್ತೇನೆ. ಉರ್ದು ಶಾಲೆಗಳ ಅಭಿವೃದ್ಧಿಗೆ, ಅದರ ಅನುಕೂಲತೆಗೆ ಒಂದು ಸಬ್ ಪ್ಲಾನ್ ಎಂದು ಮಾಡಿ ಅದಕ್ಕೆ ಪ್ರತ್ಯೇಕವಾದಂಥ ಹಣವನ್ನು ನಿಗದಿಸಿ, ಉರ್ದು ಶಾಲೆಗಳಿಗೆ ಹೊಸ ರೂಪಾಂತರಗಳನ್ನು, ಹೊಸ ವ್ಯವಸ್ಥೆಯನ್ನು ಮತ್ತು ಅವು ಸಮೃದ್ಧಿಯಾಗಿ ಬೆಳೆಯತಕ್ಕಂಥ ರೀತಿಯಲ್ಲಿ ನಾವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಮಗೆ ಗೊತ್ತಿದೆ, ಅನೇಕ ಬಾರಿ ಏನು ಮಾಡುತ್ತಿದ್ದೇವೆಂದರೆ, ಉರ್ದು ಶಾಲೆಗಳಲ್ಲಿ ೫ ಮಕ್ಕಳೂ ಇಲ್ಲ. ೧೦ ಮಕ್ಕಳೂ ಇಲ್ಲ. ಏಕೆಂದರೆ ನನಗೆ ಗೊತ್ತು. ನಮ್ಮ ಊರಿನಲ್ಲೇ ಒಂದು ಶಾಲೆ ಇತ್ತು. ಆ ಶಾಲೆಯನ್ನು ನಾನು ನೋಡಿದಾಗ ಒಮ್ಮೆ ೩೦೦ ಮಕ್ಕಳು ಇದ್ದವು. ಮತ್ತೊಮ್ಮೆ ನೋಡಿದಾಗ ೧೦ ಮಕ್ಕಳು ಇದ್ದವು. ಇದು ಉಪಾಧ್ಯಾಯರ ಕೊರತೆಯಿಂದಾಗುತ್ತದೆ. ಸರಿಯಾದಂಥ ಉಪಾಧ್ಯಾಯರು ಇಲ್ಲದೆ ಅದಾಗುತ್ತದೆ ಆದುದರಿಂದ ಇವತ್ತು ಉರ್ದು ಶಾಲೆಯಲ್ಲಿ ಸರಿಯಾದಂಥ ವ್ಯವಸ್ಥೆಯಲ್ಲಿ ನಾವು ಕಲಿಸದಿದ್ದರೆ ಬಹಳ ತೊಂದರೆಯಾಗುತ್ತಿದೆ. ಇನ್ನು ಕಪ್ಪು ಹಲಗೆ ವಿಚಾರದಲ್ಲಿ ಡಾ. ಪರಮೇಶ್ವರ್‌ರವರು ನಿನ್ನೆ ಕೆಲವು ವಿಚಾರಗಳನ್ನು ಹೇಳಿದರು. ತುಮಕೂರು ಜಿಲ್ಲೆಯಲ್ಲಿ ಸರಿಯಾದಂಥ ಕಾಮಗಾರಿ ನಡೆಯುತ್ತಿಲ್ಲವೆಂದು ಹೇಳಿದರು. ಅದು ಕುಂಠಿತವಾಗಲಿಕ್ಕೆ ಕಾರಣವೇನೆಂದರೆ, ಒಂದು ಹಂತದಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯವರು ಏನು ಮಾಡಿದರು ಎಂದರೆ, ೩ನೇ ಮತ್ತು ೪ನೇ ಹಂತದ ಕಪ್ಪು ಹಲಗೆ ಕಾರ್ಯಕ್ರಮವನ್ನು ನಿಲ್ಲಿಸಿಬಿಡುತ್ತೇವೆ, ಹಣವನ್ನು ಕೊಡುವುದಿಲ್ಲವೆಂದು ಹೇಳಿದ್ದರು. ಏಕೆಂದರೆ, ನಮ್ಮಲ್ಲೂ ಕೂಡ ಇಂಪ್ಲಿಮೆಂಟೇಷನ್ ಸ್ವಲ್ಪ ಸ್ಲೋ ಆಗಿತ್ತು. ಇನ್ನು ಮುಂದೆ ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಮಾಡುವುದಿಲ್ಲವೆಂದು ಬಹಳ ಪಟ್ಟು ಹಿಡಿದುಬಿಟ್ಟರು. ೭ನೇ ಯೋಜನೆಯಲ್ಲಿ ಥರ್ಡ್ ಅಂಡ್ ಫೋರ್ತ್ ನಾವು ಮಾಡುವುದಿಲ್ಲವೆಂದು ಹೇಳಿರುವಾಗ, ನಾವು ಕೆಲಸ ಪ್ರಾರಂಭ ಮಾಡಿರುವುದನ್ನು ನಿಲ್ಲಿಸಬೇಕು ಎಂದು ಅನಿಸಿತು. ಆದರೆ ನಾವು ಮೊನ್ನೆ ಹೋದಾಗ ಇದನ್ನು ಕ್ಲಿಯರ್ ಮಾಡಿದ್ದಾರ. ೩ನೇ ಹಂತದ ಮತ್ತು ೪ನೇ ಹಂತದ ಕಪ್ಪು ಹಲಗೆ ಯೋಜನೆಯನ್ನು ಕೂಡ

ನಾವು ಮಾಡುತ್ತೇವೆಂದು ಹೇಳಿದ್ದಾರೆ. ಅದು ಕುಂಠಿತವಾಗಲಿಕ್ಕೆ ಮುಖ್ಯ ಕಾರಣವೆಂದರೆ, ಒಂದು ಕೊಠಡಿಗೆ ೩೦ ಸಾವಿರ ಎಂದು ಇತ್ತು. ಈಗ ಅದನ್ನು ನಾವು ಬದಲಾವಣೆ ಮಾಡಿದ್ದೇವೆ: ಒಂದು ಕೊಠಡಿಗೆ ೬೦ ಸಾವಿರ, ಹಾಗೂ ಅವಳಿ ಕೊಠಡಿಗೆ ೧ ಲಕ್ಷ ೧೦ ಸಾವಿರ ಎಂದು ಪರಿಷ್ಕರಣೆಯನ್ನು ನಾವು ಮಾಡಿದ್ದೇವೆ. ತುಮಕೂರಿನಲ್ಲಿ ಮಂಜೂರಾದ ೧೭೩೯ ಕೊಠಡಿಗಳಲ್ಲಿ ೭೦೮ ಕೊಠಡಿಗಳು ಈಗಾಗಲೇ ಪೂರ್ಣಗೊಂಡಿದೆ. ವಿವಿಧ ಹಂತಗಳಲ್ಲಿ ನಿರ್ಮಾಣಗೊಂಡ ಕೊಠಡಿಗಳ ಸಂಖ್ಯೆ ೧೦೩೧. ಇದಕ್ಕೆ ಹಣವನ್ನು ನಾವು ಈಗ ಒದಗಿಸುತ್ತಿದ್ದೇವೆ. ಇದಕ್ಕೆ ನಮ್ಮ ರಾಜ್ಯದ ಪಾಲು ಇಡೀ ರಾಜ್ಯಕ್ಕೆ ೪೦ ಪಾಲನ್ನು ನಾವು ಬಿಡುಗಡೆ ಮಾಡಿ, ಜೆ. ಆರ್. ಓ. ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ನೆರವನ್ನು ಪಡೆಯುಲಿಕ್ಕೆ ನಾವೆಲ್ಲ ಪ್ರಯತ್ನಮಾಡಿ ಆ ಕಾರ್ಯಕ್ರಮಕ್ಕೆ ಮಂಜೂರಾತಿ ದೊರಕಿದೆ. ಆ ಕಾರ್ಯಕ್ರಮವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಇನ್ನು ಉರ್ದು ಏಕೋಪಾಧ್ಯಾಯ ಶಾಲೆಗಳಿಗೆ ಕಪ್ಪು ಹಲಗೆಯ ಕಾರ್ಯಚರಣೆಯಲ್ಲಿ ಮತ್ತೊಂದು ಶಿಕ್ಷಕರ ಹುದ್ದೆಯನ್ನು ಮಂಜೂರಾತಿ ಮಾಡಲಿಕ್ಕೆ ನಾವು ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಭಾಷಾ ನೀತಿ ಬಗ್ಗೆ ಇಲ್ಲಿ ಸ್ವಲ್ಪ ಚರ್ಚೆ ನಡೆದಿದೆ. ದಿನಾಂಕ ೧೯-೬-೮೯ರಂದು ಆದೇಶ ಹೊರಡಿಸಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಅನುಸರಿಸಬೇಕಾದ ಭಾಷಾ ನೀತಿಯನ್ನು ಸರ್ವೋನ್ನತ ನ್ಯಾಯಾಲಯದ ತೀರ್ಪನ್ನು ಕಾಯ್ದಿರಿಸಿ ನಾವು ಜಾರಿಗೊಳಿಸಿದ್ದೇವೆ. ಅದರ ಪ್ರಕಾರ ಪ್ರಾಥಮಿಕ ಶಾಲೆಯ ಒಂದರಿಂದ ನಾಲ್ಕನೆಯ ತರಗತಿಯಲ್ಲಿ ಸಾಮಾನ್ಯವಾಗಿ ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗಿರುವುದರಿಂದ ಮಾತೃಭಾಷೆಯನ್ನು ಕಲಿಯುವುದು. ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಹಿಂದಿ, ಉರ್ದು ಮತ್ತು ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದನ್ನು ತೆಗೆದುಕೊಳ್ಳಬಹುದು. ಕನ್ನಡೇತರ ಮಕ್ಕಳಿಗೆ ಮೂರನೆಯ ತರಗತಿಯಿಂದ ಕನ್ನಡವನ್ನು ಐಚ್ಛಿಕವಾಗಿ ಬೋಧಿಸುವುದು. ಇದನ್ನು ಕೇವಲ ಸ್ವಇಚ್ಛೆಯಿಂದ ಮತ್ತು ಶಾಲೆಯ ಇತರೆ ಯಾವುದೇ ಚಟುವಟಿಕೆಗಳಿಗೆ ಧಕ್ಕೆ ಆಗದಂತೆ ಬೋಧಿಸತಕ್ಕದ್ದು. ಎರಡನೆಯದಾಗಿ ಐದನೇ ತರಗತಿಯಿಂದ ಕೆಳಕಂಡ ಭಾಷೆಗಳಿಂದ ಎರಡನೆಯ ಭಾಷೆಯನ್ನು ಆಯ್ದುಕೊಳ್ಳತಕ್ಕದ್ದು. ಕನ್ನಡ, ತೆಲುಗು, ತಮಿಳು, ಮಲೆಯಾಳಂ, ಮರಾಠಿ, ಹಿಂದಿ, ಉರ್ದು, ಮತ್ತು, ಇಂಗ್ಲೀಷ್. ಕನ್ನಡೇತರ ವಿದ್ಯಾರ್ಥಿಗಳು ಕನ್ನಡವನ್ನು ಆಯ್ದುಕೊಳ್ಳತಕ್ಕದ್ದು. ಇದರಲ್ಲಿ ತೇರ್ಗಡೆಯಾಗುವುದು ಕಡ್ಡಾಯವಾಗಿರುತ್ತದೆ. ಮೂರನೆಯದು ಐದನೆಯ ತರಗತಿಯಿಂದಲೇ ಮೂರನೆಯ ಭಾಷೆಯನ್ನು ಸಹ ಕೆಳಗಿನ ಭಾಷೆಗಳಿಂದ ಆಯ್ದುಕೊಳ್ಳತಕ್ಕದ್ದು. ಕನ್ನಡ, ತೆಲುಗು, ತಮಿಳು, ಮಲೆಯಾಳಂ, ಮರಾಠಿ, ಹಿಂದಿ, ಉರ್ದು, ಇಂಗ್ಲೀಷ್, ಸಂಸ್ಕೃತ, ಅರೇಬಿಕ್ ಮತ್ತು ಪರ್ಷಿಯನ್. ಒಂದು ಮತ್ತು ಎರಡರಲ್ಲಿ ಆಯ್ದುಕೊಂಡ ಭಾಷೆಗಳನ್ನು ಬಿಟ್ಟು ೫ನೇ ತರಗತಿಯಿಂದ ೩ನೇ ಭಾಷೆಯು ಕಡ್ಡಾಯವಾಗಿರುತ್ತದೆ. ಆದರೆ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಕಡ್ಡಾಯವಿಲ್ಲ. ನಾಲ್ಕನೆಯದಾಗಿ ಪ್ರೌಢ ಶಾಲೆಗಳಲ್ಲಿ ೮ನೇ ತರಗತಿಯಿಂದ ೧೦ನೇ ತರಗತಿಯವರೆಗೆ ವಿದ್ಯಾರ್ಥಿಗಳು ಮೂರು ಭಾಷೆಗಳನ್ನು ಕಲಿಯುತಕ್ಕದ್ದು. ೧೨೫ ಅಂಕಗಳ ಪ್ರಥಮ ಭಾಷೆ, ೧೦೦ ಅಂಕಗಳ ದ್ವಿತೀಯ ಭಾಷೆ ಮತ್ತು ೧೦೦ ಅಂಕಗಳ ತೃತೀಯ ಭಾಷೆ. ತೃತೀಯ ಭಾಷೆಗೆ ೧೦೦ ಅಂಕಗಳು ಇವೆ. ಈ ಮೂರು ಭಾಷೆಗಳಲ್ಲಿ ತೇರ್ಗಡೆಯಾಗುವುದು ಕಡ್ಡಾಯ. ಜೊತೆಗೆ ಈ ಮೂರು ಭಾಷೆಗಳ ಪೈಕಿ ಕನ್ನಡವು ಒಂದು ಭಾಷೆಯಾಗಿರತಕ್ಕದ್ದು. ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಗೆ ಮತ್ತು ಹಿಂದಿ ಮಾತೃ ಭಾಷೆಯಲ್ಲದ ವಿದ್ಯಾರ್ಥಿಗಳಿಗೆ ಹಿಂದಿ ಭಾಷೆಗೆ ಫಲಿತಾಂಶ ನಿರ್ಣಯಿಸುವಾಗ ೧೫ ಗ್ರೇಸ್ ಮಾರ್ಕ್ಸ್,

ಕೊಡಬೇಕೆಂದು ಇದೆ. ಖನೆಯದಾಗಿ, ತಾತ್ಕಾಲಿಕವಾಗಿ ಕರ್ನಾಟಕ ರಾಜ್ಯಕ್ಕೆ ಬರುವ ಪಾಲಕರ ಮಕ್ಕಳಿಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಯುವುದರಿಂದ ವಿನಾಯಿತಿ ನೀಡುವುದು. ಏಕೆಂದರೆ, ಅವರು ಹೊರಗಿನಿಂದ ಬರುತ್ತಾರೆ, ಕನ್ನಡವನ್ನು ಕಡ್ಡಾಯ ಮಾಡಿದರೆ ಅವರಿಗೆ ಕಷ್ಟವಾಗುತ್ತದೆ. ಆದ್ದರಿಂದ ಈ ನೀತಿಯನ್ನು ನಾವು ಮಾಡಿದ್ದೇವೆ. ಅದೇ ಪ್ರಕಾರ ಪ್ರೌಢಶಾಲಾ ಹಂತದಲ್ಲಿ ಪ್ರಥಮ ಭಾಷೆ ೧೨೫, ದ್ವಿತೀಯ ಭಾಷೆ ೧೦೦, ತೃತೀಯ ಭಾಷೆ ೧೦೦ ಎಂದು ನಿಗದಿ ಇದ್ದರೂ ಕೂಡ ತೃತೀಯ ಭಾಷೆಯಾದಂತಹ ಹಿಂದಿ ಅಧ್ಯಾಪಕರುಗಳು ಎಲ್ಲಾ ಶಾಲೆಗಳಲ್ಲಿ ಇಲ್ಲದ ಕಾರಣ ೮ ಮತು ೯ನೇ ತರಗತಿಗಳಲ್ಲಿ ಹಾಗೂ ೧೯೯೧ರ ಮಾರ್ಚಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ೧೯೯೨ರ ಮಾರ್ಚಿ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ನಾವು ಸ್ವಲ್ಪ ಬದಲಾವಣೆಯನ್ನು ಮಾಡಬೇಕಾಯಿತು. ಅದರಲ್ಲಿ ಏನು ಮಾಡಿದ್ದೇವೆಂದರೆ, ಪ್ರಥಮ ಭಾಷೆಗೆ ೧೫೦, ದ್ವಿತೀಯ ಭಾಷೆಗೆ ೧೦೦, ತೃತೀಯ ಭಾಷೆಗೆ ೫೦. ಏಕೆಂದರೆ, ಹಿಂದಿ ಟೀಚರ್ಸ್‌ನ್ನು ಕೊಡದೆ ನೀವು ೧೦೦ ಅಂಕಗಳನ್ನು ಗಳಿಸಬೇಕೆಂದರೆ ಬಹಳ ಅನ್ಯಾಯವಾಗುತ್ತದೆಂದು ನಾವು ಅದಕ್ಕೆ ಹಾಗೆ ಮಾಡಿದ್ದೇವೆ. ಆದರೆ ಮುಂದೆ ಬರತಕ್ಕಂತಹ ವರ್ಷಗಳಲ್ಲಿ ನಾವು ಈ ವಿನಾಯಿತಿಗಳನ್ನು ಕೊಡುವುದಿಲ್ಲ. ಏಕೆಂದರೆ, ಈಗಾಗಲೇ ನಾವು ೬೮೮ ಹಿಂದಿ ಶಿಕ್ಷಕರ ಹುದ್ದೆಗಳನ್ನು ಮಂಜೂರಾತಿ ಮಾಡಿ ಮುಂದಿನ ವರ್ಷದಿಂದ ಭಾಷಾನೀತಿಯನ್ವಯ ಪ್ರಥಮ ಭಾಷೆಗೆ ೧೨೫, ದ್ವಿತೀಯ ಭಾಷೆಗೆ ೧೦೦, ತೃತೀಯ ಭಾಷೆಗೆ ೧೦೦ ಅಂಕಗಳನ್ನು ನಿಗದಿಗೊಳಿಸಲಾಗುವುದು. ಆದುದರಿಂದ ಮುಂದೆ ಅದು ನಡೆಯುವುದಿಲ್ಲ. ಏಕೆಂದರೆ, ಈಗ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಈಗ ರಿಯಾಯಿತಿ ಕೊಡದಿದ್ದರೆ ಮಕ್ಕಳಿಗೆ ಬಹಳ ಕಷ್ಟವಾಗುತ್ತದೆಂದು ನಾವು ತಿಳಿದುಕೊಂಡಿದ್ದೇವೆ. ಇನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಕಟ್ಟಡದ ದುರಸ್ತಿಯ ಬಗ್ಗೆ ಈಗಾಗಲೇ ನಾವು ೧೯೮೯-೯೦ರಲ್ಲಿ ೬ ಲಕ್ಷ ರೂಪಾಯಿಗಳನ್ನು ೧೯೯೦-೯೧ರಲ್ಲಿ ೫.೫೪ ಲಕ್ಷ ರೂಪಾಯಿಗಳನ್ನು ೧೯೯೧-೯೨ರಲ್ಲಿ ೮ ಲಕ್ಷ ರೂಪಾಯಿಗಳನ್ನು ಯೋಜನೇತರ ಶೀರ್ಷಿಕೆಯಲ್ಲಿ ಬಿಡುಗಡೆ ಮಾಡಿ, ಹಂತ ಹಂತವಾಗಿ ಆ ಕೆಲಸವನ್ನು ನಾವು ಮುಗಿಸುತ್ತೇವೆ. ಇನ್ನು ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕವಾಗಿ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಪ್ರಾರಂಭ ಮಾಡಬೇಕೆಂದು ತಾವು ಹೇಳಿದಿರಿ. ಈಗಾಗಲೇ ಕ್ಲೋಥಿಂಗ್ ಅಂಡ್ ಎಂಬ್ರಾಯಿಡರಿಯಲ್ಲಿ ೭೦ ಸಂಸ್ಥೆಗಳು ನಡೆಯುತ್ತಿದ್ದು, ಅದರಲ್ಲಿ ಒಂದೂವರೆ ಸಾವಿರ ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ. ಪ್ರೀ ಸ್ಕೂಲ್ ಎಜುಕೇಶನ್‌ನಲ್ಲಿ ೩೧ ಸಂಸ್ಥೆಗಳು ನಡೆಯುತ್ತಿದ್ದು ೭೦೦ ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ. ಅಂದರೆ, ೧೦೧ ಸಂಸ್ಥೆಗಳಲ್ಲಿ ೨೨೦೦ ವಿದ್ಯಾರ್ಥಿನಿಯರು ಸದರಿ ಕೋರ್ಸ್‌ಗಳಲ್ಲಿ ಕಲಿಯುತ್ತಿದ್ದಾರೆ. ತಾವು ಬಹುಶಃ ನಮ್ಮ ತಾಂತ್ರಿಕ ಶಿಕ್ಷಣದ ವರದಿಯನ್ನು ನೋಡಿದ್ದಿರೋ ಇಲ್ಲವೋ. ಅದರಲ್ಲಿ ಈ ಸಲ ಏನು ಮಾಡುತ್ತಿದ್ದೇವೆಂದರೆ, ಅನೇಕ ವಿದ್ಯಾರ್ಥಿನಿಯರಿಗೆ ಅನುಕೂಲವಾಗುವಂಥ ಕೆಲವು ಕೋರ್ಸ್‌ಗಳನ್ನು ಅದರಲ್ಲೂ ಮುಖ್ಯವಾಗಿ ಡಿಪ್ಲೊಮಾ ಕೋರ್ಸ್‌ಗಳನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ೧೯೯೨-೯೩ನೇ ಸಾಲಿನಿಂದ ಕೈಮಗ್ಗ ತಂತ್ರಜ್ಞಾನದಲ್ಲಿ ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಅಲ್ಲದೆ, ಫ್ಯಾಶನ್ ಟೆಕ್ನಾಲಜಿ ಕೋರ್ಸ್ ಕೂಡ ಪ್ರಾರಂಭಿಸುತ್ತಿದ್ದೇವೆ. ಬಹುಶಃ ಹೆಚ್ಚು ವಿದ್ಯಾರ್ಥಿನಿಯರು ಈ ಕೋರ್ಸ್‌ನಲ್ಲಿ ಸೇರುವುದಕ್ಕೆ ಸಾಧ್ಯವಾಗುತ್ತದೆ. ಹಿಂದೆ, ಹೆಣ್ಣು ಮಕ್ಕಳು ದೆಹಲಿ, ಬೊಂಬಾಯಿ, ಅಹಮದಾಬಾದ್ ಮುಂತಾದ ಕಡೆಗಳಿಗೆ ಹೋಗಿ ಕೋರ್ಸ್ ಕಲಿಯುತ್ತಿದ್ದರು. ಈಗ ಬೆಂಗಳೂರಿನಲ್ಲಿ ಫ್ಯಾಶನ್ ಟೆಕ್ನಾಲಜಿಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಸಿಲ್ಕ್ ಟೆಕ್ನಾಲಜಿಯಲ್ಲಿ ಡಿಗ್ರಿ ಕೋರ್ಸ್ ಅನ್ನು ಪ್ರಾರಂಭಿಸುವುದಕ್ಕಾಗಿ

೧೯೯೧-೯೨ನೇ ಸಾಲಿನಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ತೆಗೆದುಕೊಂಡಿದ್ದೇವೆ. ಸಿಲ್ಕ್ ಟೆಕ್ನಾಲಜಿಯಲ್ಲಿ ಡಿಪ್ಲೊಮಾಕೋರ್ಸ್ ಅನ್ನು ೧೯೯೨-೯೩ನೇ ಸಾಲಿನಿಂದ ತೆಗೆದುಕೊಳ್ಳುತ್ತಿದ್ದೇವೆ. ಬೇರೆ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಬೇಕಿದ್ದರೆ, ಅದನ್ನು ಪ್ರಾರಂಭಿಸೋಣ. ಇನ್ನಿತರ ಕೋರ್ಸ್‌ಗಳಾದ, ಟಿವಿ ಅಂಡ್ ರೇಡಿಯೋ ಸರ್ವಿಸಿಂಗ್, ಕಂಪ್ಯೂಟರ್ ಸೈನ್ಸ್, ಲ್ಯಾಬ್ ಟೆಕ್ನಿಷಿಯನ್, ಬ್ಯಾಂಕಿಂಗ್, ಎಕ್ಸ್‌ರೇ ಟೆಕ್ನಿಷಿಯನ್. ನಮ್ಮಲ್ಲಿ ಈಗಾಗಲೇ ಕೇಟರಿಂಗ್ ಕಾಲೇಜುಗಳಿವೆ. ಅವರು ಈ ಕೋರ್ಸ್‌ಗಳಲ್ಲಿ ಡಿಪ್ಲೊಮೊ ಮತ್ತು ಡಿಗ್ರಿ ಕೊಡುತ್ತಾರೆ.

ಶ್ರೀ ಕೆ. ಎಚ್. ರಂಗನಾಥ:- ನೀವು ವಿದ್ಯಾರ್ಥಿನಿಯರನ್ನು ಕೋರ್ಸ್‌ಗಳ ತರಬೇತಿಗಾಗಿ ತೆಗೆದುಕೊಳ್ಳುತ್ತಿದ್ದೀರಿ. ಆದರೆ, ಅವರುಗಳು ಕೋರ್ಸ್ ಕಲಿತ ನಂತರ ಮುಂದಿನ ಗತಿ ಏನು? ತಮ್ಮ ವರದಿಯನ್ನು ನೋಡುತ್ತಿದ್ದರೆ, ಈಗಾಗಲೇ ಬಿ. ಇ. ಡಿಗ್ರಿ ಕೋರ್ಸ್‌ಗಳಲ್ಲಿ ೧೯೮೮-೮೯ರಿಂದ ಒಟ್ಟು ೬೫೫೦೦ ಹುಡುಗರು ಅಡ್ಮಿಶನ್ ಆಗಿದ್ದಾರೆ. ಮತ್ತು ಡಿಪ್ಲೊಮಾ ಕೋರ್ಸ್‌ಗಳಲ್ಲಿ ಸುಮಾರು ೮೦ ಸಾವಿರ ವಿದ್ಯಾರ್ಥಿಗಳು ಅಡ್ಮಿಶನ್ ಪಡೆದಿದ್ದಾರೆ. ಈಗ ಓದುತ್ತಿರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ನಾಳೆ ಏನು ಮಾಡುತ್ತೀರಿ? It is alright. ಅದನ್ನು ಪ್ರೋಸೆಸ್ ಮಾಡೋಣ, ನೀವು ಪ್ರೋಸೆಸ್ ಮಾಡಬೇಕಾಗುತ್ತದೆ. ಅದಕ್ಕೋಸ್ಕರ, ನಿಮ್ಮ ಯೋಜನೆಯಲ್ಲಿ ಏನಾದರೂ ಒಂದು ವ್ಯವಸ್ಥೆ ಮಾಡಿಕೊಳ್ಳದೆ ಹೋದರೆ ನಾಳೆ ಏನಾಗುತ್ತದೆ? ತಮ್ಮ ವರದಿ ಪ್ರಕಾರ ಈಗಾಗಲೆ ೨೦೯೮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಡಿಗ್ರಿ ಆಗಿರುವವರಿದ್ದಾರೆ. ೨೫೭೪೦ ಜನ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಡಿಪ್ಲೊಮಾ ಪಾಸಾಗಿರತಕ್ಕಂಥವರು ಇದ್ದಾರೆ, waiting for the jobs. ಸರ್ಕಾರವೇ ಕೆಲಸವನ್ನು ಕೊಡುವುದಕ್ಕಾಗುವುದಿಲ್ಲ. ಆದರೂ ಕೂಡ ಅದನ್ನು ಅಬ್‌ಸ್ಸಾರ್ಬ್ ಮಾಡಬೇಕಾಗಿದೆ. ಇಲ್ಲದೆ ಹೋದರೆ, ಸುಮ್ಮನೆ ಅವರನ್ನು ತೆಗೆದುಕೊಂಡು ಮಾರ್ಕೆಟ್‌ಗೆ ಬಿಡುವುದಾದರೆ ಅವರು ಬೀದಿಪಾಲಾಗುತ್ತಾರೆ. ಅವರ ಬಗ್ಗೆ ಒಂದು ಯೋಜನೆ ಇಲ್ಲದೆ ಹೋದರೆ. In our educational policy this should occupy the most important place. ಇಲ್ಲದೇ ಹೋದರೆ, ಏನು ಪ್ರಯೋಜನವಾಗುತ್ತದೆ? ಟೆಕ್ನಿಕಲ್ ಎಜುಕೇಶನ್‌ನಲ್ಲಿ ಸಾಧನೆಯಾಗುತ್ತಿದೆ. ಆದರೆ, ಇವೋತ್ತು ಬಹಳಷ್ಟು ಪ್ರಮಾಣದಲ್ಲಿ ಡಿಗ್ರಿ ಮತ್ತು ಡಿಪ್ಲೊಮೊ ಪಡೆದವರಿದ್ದಾರೆ. ಅವರುಗಳಿಗೆಲ್ಲಾ ಏನು ವ್ಯವಸ್ಥೆ ಮಾಡಬೇಕೆಂದು ವಿಚಾರ ಮಾಡಿದ್ದೀರಿ? ತಮ್ಮ ವರದಿಯ ಪ್ರಕಾರ, ೧೯೯೧-೯೨ನೇ ಸಾಲಿನಲ್ಲಿ ಹೊಸದಾಗಿ ಸುಮಾರು ೩೫ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲು ತಾವು ಮಂಜೂರು ಮಾಡಿಕೊಟ್ಟಿದ್ದೀರಿ. ಮತ್ತು ಇನ್‌ಟೇಕ್ ಕೂಡ ಎಷ್ಟು ಸ್ಯಾಂಕ್ಷನ್ ಆಗಿದೆ ಎನ್ನುವ ವಿಚಾರ ಇದೆ. ತಾವು ೧೨೦ ಪಾಲಿಟೆಕ್ನಿಕ್ ಇನ್‌ಸ್ಟಿಟ್ಯೂಟ್‌ಗಳನ್ನು ತೆರೆಯಲು ಅನುಮತಿ ಕೊಟ್ಟಿದ್ದೀರಿ. ಇದಕ್ಕೇನಾದರೂ ಒಂದು ಯೋಜನೆ ಬೇಡವೆ? ಇಲ್ಲದೆ ಹೋದರೆ, ಅವರುಗಳೆಲ್ಲಾ ಏನು ಮಾಡಬೇಕು? ಇದರ ಬಗ್ಗೆ ಸರ್ಕಾರದಲ್ಲಿ ಚಿಂತನೆ ಇದೆಯೇ? ಅಥವಾ ಇದರ ಬಗ್ಗೆ ಮುಂದಿನ ವರ್ಷಕ್ಕೇನಾದರೂ ಹೊಸದಾಗಿ ವಿಚಾರ ಮಾಡಿದ್ದೀರಾ? ಹೇಗೆ? ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದಂಥ ಸನ್ಮಾನ್ಯ ರಂಗನಾಥ್‌ರವರು ಏನೊಂದು ವ್ಯಾಕುಲ ವ್ಯಕ್ತಪಡಿಸಿದ್ದಾರೆ, ಅದಕ್ಕೆ ನಾನು ನೂರಕ್ಕೆ ನೂರರಷ್ಟು ಸ್ಪಂದಿಸುತ್ತೇನೆ ಮತ್ತು ಅವರ ಮಾತುಗಳನ್ನು ಒಪ್ಪುತ್ತೇನೆ. ರಾಜ್ಯದ ಈ ವ್ಯವಸ್ಥೆಯಲ್ಲಿ ಬಹುಸಂಖ್ಯೆಯಲ್ಲಿ ಹೊರಬರತಕ್ಕ ತಾಂತ್ರಿಕ ಪದವೀಧರರು ಅಥವಾ ವೈದ್ಯಕೀಯ ಪದವೀಧರರು

ಅಥವಾ ಡಿಪ್ಲೊಮೊ ಪದವೀಧರರು ಅಥವಾ ಸರ್ಟಿಫಿಕೇಟ್ ಪದವೀಧರರು ರಾಜ್ಯದ ಇನ್ಯಾವುದೇ ಭಾಗದಲ್ಲಿ ಕೂಡ ಬರುತ್ತಿಲ್ಲ. ಈ ವಿಚಾರವನ್ನು ತಾವು ತಿಳಿದುಕೊಂಡು ಈಗಾಗಲೇ ಅಂತರ ವಿಶ್ವ ವಿದ್ಯಾಲಯದ ಒಂದು ಮಂಡಳಿಯಲ್ಲಿ ನಿರ್ಣಯವನ್ನು ಮಾಡಿದ್ದೇವೆ. ಅದರ ಬಗ್ಗೆ ಈ ಪುಸ್ತಕದ ಪೇಜ್ ನಂ. ೩೩ರಲ್ಲಿ ೬ನೇ ಪ್ಯಾರದಲ್ಲಿದೆ. ಅದರಲ್ಲಿ ನಾವು ಏನು ಮಾಡಿದ್ದೇವೆಂದರೆ ಒಂದು perspective planning ಮಾಡಬೇಕೆಂದು ಹೇಳಿದ್ದೇವೆ ೧೦ ವರ್ಷಗಳಲ್ಲಿ ಆಯಾಯ ವಿಶ್ವವಿದ್ಯಾಲಯದ ಒಂದು ಸರಹದ್ದಿನಲ್ಲಿ ಅವರು ಒಂದು ಮುನ್ನೋಟಕ್ಕೆ ಯೋಜನೆಯನ್ನು ಅಂದರೆ perspective planning for ten years ಮಾಡಬೇಕೆಂದು ಆಯಾಯ ವಿಶ್ವವಿದ್ಯಾಲಯಗಳಿಗೆ ಈಗಾಗಲೇ ಹೇಳಿದ್ದೇವೆ. ಈ ತಿಂಗಳ ಅಂತ್ಯಕ್ಕೆ each university will give a perspective manpower planning. ಅಂದರೆ ಆಯಾಯ ಜಿಲ್ಲೆಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಬಹುದು, ಆಯಾಯ ವಿಶ್ವವಿದ್ಯಾಲಯದ ಸರಹದ್ದನ್ನು ದೃಷ್ಟಿಯಲ್ಲಿಟ್ಟುಕೊಂಡು, ರಾಜ್ಯದ ದೃಷ್ಟಿಯನ್ನಿಟ್ಟುಕೊಂಡು, ರಾಷ್ಟ್ರವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಥವಾ ಇಡೀ ವಿಶ್ವದ ಖಾಸಗೀ ಅಥವಾ ಸಾರ್ವಜನಿಕ ರಂಗದ ದೃಷ್ಟಿಯನ್ನಿಟ್ಟುಕೊಂಡು ಯಾವ ತಾಂತ್ರಿಕ ವ್ಯವಸ್ಥೆಯ ಅಥವಾ ಯಾವುದೇ ಇನ್ನಿತರ ಕೋರ್ಸ್‌ಗಾಗಿ ಎಷ್ಟು ಜನರ ಬೇಡಿಕೆ ಇದಕ್ಕೆ ಬೇಕಾಗಿದೆ ಅಷ್ಟು ಸಂಖ್ಯೆಯಲ್ಲಿ ಇವತ್ತು ನಾವು ಪ್ರೊಡ್ಯೂಸ್ ಮಾಡಬೇಕಾಗುತ್ತದೆ. ಈ ರೀತಿಯಾದರೆ ವಿಶ್ವವಿದ್ಯಾನಿಲಯದ ಅಬ್‌ಸಾರ್‌ಷನ್‌ಗೆ ಸಾಕಾಗುತ್ತದೆಯೇ ಅಥವಾ ಯಾವ ರೀತಿಯಲ್ಲಿ ಅದನ್ನು ಸಜ್ಜುಗೊಳಿಸಬೇಕು ಎಂದು ಯೋಚಿಸಬೇಕಾಗುತ್ತದೆ. ಅದರ ಬಗ್ಗೆ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಒಬ್ಬ ಪ್ರಾಥಮಿಕ ಶಾಲೆಯಲ್ಲಿ ಕಲಿಯತಕ್ಕ ವಿದ್ಯಾರ್ಥಿ ಇರಲಿ, ವಿದ್ಯಾರ್ಥಿನಿಯಿರಲಿ ಅಥವಾ ವಿಶ್ವವಿದ್ಯಾಲಯ ಮಟ್ಟದಲ್ಲಿ ಕಲಿಯತಕ್ಕ ವಿದ್ಯಾರ್ಥಿ ವಿದ್ಯಾರ್ಥಿನಿಯಿರಲಿ. ಇವತ್ತು ಇಡೀ ವಿಶ್ವದ ಮಾರುಕಟ್ಟೆ ಇದೆ. ಇಡೀ ವಿಶ್ವದ ಮಾರುಕಟ್ಟೆಗೆ ನಾವು ಸಂಖ್ಯೆಯಲ್ಲಿ ಸ್ಪಂದಿಸುವಂಥ, ಮಾರುಕಟ್ಟೆಯಲ್ಲಿ ಮೌಲಿಕವಾಗಿ ಸ್ಪಂದಿಸುವಂಥ ವಿದ್ಯಾರ್ಥಿ ವಿದ್ಯಾರ್ಥಿನಿಯರ ಜನಾಂಗವನ್ನು, ಮಾನವ ಸಂಪನ್ಮೂಲವನ್ನು ಸಿದ್ಧಗೊಳಿಸತಕ್ಕಂಥ ವೇದಿಕೆ ನಮ್ಮ ಕರ್ನಾಟಕ ರಾಜ್ಯವಾಗಬೇಕು ಎಂಬ ವಿಚಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು manpower planning ಅನ್ನು ಆಯಾ ವಿಶ್ವವಿದ್ಯಾಲಯದವರು ಮಾಡಬೇಕು; ಮಾಡಿ ಆಯಾ ವಿಶ್ವ ವಿದ್ಯಾಲಯದವರು ಮಾರ್ಚ್ ೩೧ನೇ ತಾರೀಖು ವರದಿಯನ್ನು ಕೊಟ್ಟಮೇಲೆ ಆ ವಿಶ್ವ ವಿದ್ಯಾಲಯಗಳು ಮಾಡಿಕೊಟ್ಟಂಥ perspective planning ಅಥವಾ ಮುನ್ನೋಟ ಯೋಜನೆಯನ್ನು we will integrate into one State plan. ಇಡೀ ರಾಜ್ಯಕ್ಕೆ ಅನ್ವಯವಾಗತಕ್ಕ manpower perspective planning for ten years ಅನ್ನು ಮಾಡಬೇಕೆಂದು, ಅದಕ್ಕೆ ಅನುಗುಣವಾಗಿ ಯಾವ ರೀತಿ manpower planning ಮಾಡುತ್ತೇವೆ ಅಥವಾ ಬೇರೆ ಬೇರೆ ಐ. ಎ. ಎಸ್. ಇರಬಹುದು ಐ. ಪಿ. ಎಸ್. ಇರಬಹುದು ಅಥವಾ ರಾಷ್ಟ್ರ ಮಟ್ಟದ ಪರೀಕ್ಷೆಗಳಿರಬಹುದು ಅಥವಾ ಅಂತರರಾಷ್ಟ್ರ ಮಟ್ಟದ ಪರೀಕ್ಷೆಗಳು ಇರಬಹುದು, ರಾಜ್ಯಮಟ್ಟದ ಪರೀಕ್ಷೆಗಳು ಇರಬಹುದು. ಅಂಥ ರಾಜ್ಯಮಟ್ಟದ ಪರೀಕ್ಷೆಗಳಿಗೆ ಒಳ್ಳೆಯ ಕೋಚಿಂಗ್ ಕೊಡತಕ್ಕದ್ದನ್ನೂ ಕೂಡ ವಿಶ್ವ ವಿದ್ಯಾನಿಲಯದವರು ಜವಾಬ್ದಾರಿಯನ್ನು ತೆಗೆದುಕೊಂಡು ಮಾಡಬೇಕೆಂದು ಒಂದು ಭಾಗದಲ್ಲಿ ಮಾಡುವುದಾದರೆ, ಅದೇ ರೀತಿಯಲ್ಲಿ ನಮ್ಮ ಸಿಲಬಸ್ ಏನು ಇದೆ, ಮಕ್ಕಳಿಗೆ ಕಂಟೆಂಟ್ಸ್ ನಾವು under-graduate level ನಲ್ಲಿ ಅಂಥ

ಸಿಲಬಸ್‌ನ್ನು ಈ ಬುದ್ಧಿಮಟ್ಟವನ್ನು ಆ ಹಂತಕ್ಕೆ ನಮ್ಮ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಕೊಂಡು ಹೋಗತಕ್ಕ ದೃಷ್ಟಿಯಲ್ಲಿ ಸಿಲಬಸ್‌ನ್ನು ಬದಲಾವಣೆ ಮಾಡತಕ್ಕದ್ದು ಕೂಡ ಪ್ರೋಸಸ್ ಆಗಿ ಅದು ಬಹುಶಃ ಏಪ್ರಿಲ್ ೧೫ರಂದು ಎಲ್ಲಾ undergraduates ಕೋರ್ಸ್‌ಗಳ ಸಿಲಬಸ್‌ನ್ನು ಬದಲಾವಣೆ ಮಾಡತಕ್ಕ ಪ್ರತಿಕ್ರಿಯೆ ಮುಗಿದುಹೋಗುತ್ತದೆ. ಅದು ಇದಕ್ಕೆ ಪೂರಕವಾಗಿರುತ್ತದೆ. ನಮ್ಮ ಮಕ್ಕಳನ್ನು ಯಾವ ರೀತಿಯಲ್ಲಿ ಸಜ್ಜುಗೊಳಿಸಬೇಕು, ಯಾವ ಹಂತದಲ್ಲಿ ಹೋಗಬೇಕು, ನಾವು ಐ. ಎ. ಎಸ್., ಐ. ಪಿ. ಎಸ್. ರಾಷ್ಟ್ರ ಮಟ್ಟದಲ್ಲಿ, ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ನಮ್ಮ ಕರ್ನಾಟಕ ರಾಜ್ಯದ ಮಕ್ಕಳು ಆ ಮೂಲ ಪ್ರವಾಹದಲ್ಲಿ ಸೇರಿಕೊಳ್ಳತಕ್ಕ ಶಕ್ತಿ, ಸಂಪನ್ನತೆ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬರಬೇಕು. ಈ ರೀತಿ ನಮ್ಮ ಪ್ರಯತ್ನವಿದೆ. ತಾವು ತಾತ್ಕಾಲಿಕವಾಗಿ ಏನು ಮಾಡಿದ್ದೀರೆಂದು ಕೇಳಿದಿರಿ.

ಶ್ರೀ ಕೆ. ಹೆಚ್. ರಂಗನಾಥ್:- ಅದು ದೊಡ್ಡ ಬೃಹದಾಕಾರವಾಗಿದೆ. ತಮ್ಮ ವರದಿಯಲ್ಲಿ ೧೯೮೮-೮೯ರಲ್ಲಿ ಬಂದಂತಹವರಿಗೆ ಔಟ್ ಟರ್ನ್ ಎಂದು ಕೊಟ್ಟಿದ್ದೀರಿ. ನಾನು ಅದನ್ನೆಲ್ಲಾ ಕೂಡಿದೆ. ತಾವು ಹಾಕಿದ ೧೯೮೮-೮೯ರಲ್ಲಿ ಡಿಗ್ರಿಯಲ್ಲಿ ೪೯೬೫, ೧೯೮೯-೯೦ರಲ್ಲಿ ೫೨೭೮, ೧೯೯೦-೯೧ರಲ್ಲಿ ೫೪೪೭, ಹೀಗೆ ಸುಮಾರು ೨೦ ಸಾವಿರವಾಗುತ್ತದೆ. ಡಿಪ್ಲೊಮೊದಲ್ಲಿ ೨೫ ಸಾವಿರ ಆಗುತ್ತದೆ. ನಾನು ಇದನ್ನು ೧೯೮೮ರಿಂದ ಹೇಳಿದೆ ಇದರ ಹಿಂದೆ ಆಗಿರತಕ್ಕಂಥದ್ದು ಎಷ್ಟು ಇದೆಯೋ? ಒಂದು ಕಡೆ ಏನಾಗುತ್ತಿದೆಯೆಂದರೆ, ಇದು ಪ್ರೈವೇಟೈಜೇಷನ್ ಆಗಲಿ ಅಥವಾ ಪಬ್ಲಿಕ್ ಸೆಕ್ಟಾರ್ ಆಗಲಿ, ಆ ಇಂಡಸ್ಟ್ರೀಸ್ ಅಂದರೆ ಎಲ್ಲಿ ಇವರನ್ನು ಅಬ್ಸಾರ್ಬ ಮಾಡತಕ್ಕಂತಹ ಏರಿಯಾ ಇತ್ತು, ಆಕ್ಟಿವಿಟೀಸ್ ಇತ್ತು, ಅವು ಈಗ ನಿಂತು ಹೋಗಿವೆ. ಅಲ್ಲಿ ಅವರಿಗೆ ಅವೆನ್ಯೂಸ್ ಇಲ್ಲ, ಸರ್ಕಾರದ ವತಿಯಿಂದ ರಿಕ್ರೂಟ್‌ಮೆಂಟ್ ಇಲ್ಲ, ಇದರ ಬಗ್ಗೆ ಏನೂ ಚಿಂತನೆ ಇಲ್ಲ. ಮುಂದೆ ವಿಶ್ವ ವಿದ್ಯಾನಿಲಯ ಅದನ್ನು ವಿಚಾರ ಮಾಡಬೇಕು ಎಂದು ತಾವು ಹೇಳುತ್ತಿದ್ದೀರಿ. ಇಟ್ ಈಸ್ ಆಲ್ ರೈಟ್. ಅದು ಮುಂದಕ್ಕೆ ನಾವು ಪರಿಹಾರ ಮಾಡಿಕೊಳ್ಳುವುದಕ್ಕೆ ಒಂದು ಮಾರ್ಗವಾಯಿತು. ಈಗ ಹಾಲಿ ಇರುವಂಥಾದ್ದಕ್ಕೆ ಹೇಗೆ? ಅದಕ್ಕೆ ಪರಿಹಾರವಾಗಿ ನೀವು ಯಾವ ರೀತಿಯಿಂದ ವಿಚಾರ ಮಾಡುತ್ತಿದ್ದೀರಿ. ಇದು ಇಲ್ಲದೇ ಹೋದರೆ ಏನಾಗುತ್ತದೆ. ನಾವು ಒಂದು ಕಡೆ ಮಾತನಾಡುತ್ತೇವೆ. ಬಾರ್ಡರ್‌ನಲ್ಲಿ ನಕ್ಸಲೈಟ್ ಧಾಳಿ ಆಯಿತು ಎಂದು ಹೇಳುತ್ತೇವೆ. ತಾವು ವಿಚಾರ ಮಾಡಿರಬಹುದು. ಈಗ the best material has gone into the activity of Naxalite. ನೀವು ಅಂದ್ರುದ್ದನ್ನು ತೆಗೆದು ಓದಿದ್ದೀರಿ. The best students, the best brain is attracted by that activity. ಇಂತಹ ಪರಿಸ್ಥಿತಿ ಇರುವುದರಿಂದ ಇದು ಬಹಳ ಸೂಕ್ಷ್ಮವಾದ ವಿಚಾರವಾಗಿರುವುದರಿಂದ ಇದರ ಬಗ್ಗೆ ಚಿಂತನೆ ಮಾಡಬೇಕು. ಇದು ಹಾಲಿ ದೊಡ್ಡ ಪ್ರಮಾಣದಲ್ಲಿ ಇದೆ. ಇದಕ್ಕೆ ಏನು ವಿಚಾರ ಮಾಡುತ್ತೀರಿ? ಈಗ ಇದಕ್ಕೆ ಏನಾದರೂ ಪರಿಹಾರ ಇದೆಯೇ? ಏಕೆಂದರೆ, ತಮ್ಮ ಬಜೆಟ್‌ನಲ್ಲಿ ಲೀಕ್ ಆಗಿದ್ದರೂ ಅಷ್ಟೆ, ಲೀಕ್ ಆಗದೇ ಇದ್ದರೂ ಅಷ್ಟೇ. ಅದರಲ್ಲಿ ಇದಕ್ಕೆ ಏನೂ ಇಲ್ಲ. ಇದರ ಪರಿಹಾರಕ್ಕೆ ನಮಗೆ ಅದರಲ್ಲಿ ಏನೂ ಇಲ್ಲ. ಆದುದರಿಂದ ಇದರ ಬಗ್ಗೆ ಏನಾದರೂ ವಿಚಾರ ಮಾಡುತ್ತೀರಾ ಅಥವಾ ಮಾಡದೇ ಇದ್ದರೆ ಮುಂದಕ್ಕೆ ಏನಾದರೂ ಒಂದು ಹೊಸದಾಗಿ ಪರಿಹಾರ ಕಂಡುಹಿಡಿಯುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ವಿಚಾರವನ್ನು ಮನಗಂಡೇ ರಾಷ್ಟ್ರದಲ್ಲಿ ಉದಾರ ಕೈಗಾರಿಕಾ ನೀತಿಯನ್ನು ಇವತ್ತು ಮಾಡುತ್ತಿದ್ದಾರೆ. ಇದರಿಂದ ಈ ಮಾರ್ಕೆಟ್

ಟ್ರೆಂಡ್ಲೀ ಎಕಾನಮಿ ಎಂದು ಹೇಳಿ ಏನು ರಾಷ್ಟ್ರದಲ್ಲಿ ಒಂದು ರೀತಿಯ ಯುಗ ಧರ್ಮ ಪರಿವರ್ತನೆಗೆ ರಾಷ್ಟ್ರದ ಆರ್ಥಿಕ ನೀತಿಗೆ ಅನುಗುಣವಾಗಿ ಮಾಡುತ್ತಿದ್ದೇವೆ. It is for us. Respective states should evolve certain programmes for taking up industrialisation programme. ಅದನ್ನು ಇವತ್ತು ಮಾಡಬೇಕಾಗಿದೆ. ಬರೀ ಸರ್ಕಾರದ ಹುದ್ದೆಗಳನ್ನು ಸೃಷ್ಟಿ ಮಾಡುವುದಕ್ಕೆ ಅನುಗುಣವಾಗಿ ನಮ್ಮ ಶಿಕ್ಷಣ ಕ್ಷೇತ್ರವನ್ನು ನಾವು ಮಾಡುತ್ತಿಲ್ಲ. ಮುಂದೆ ಬರತಕ್ಕಂತಹ ಬದಲಾವಣೆಯ ವ್ಯವಸ್ಥೆಗೆ ಅನುಗುಣವಾಗಿ ಇದನ್ನು ಮಾಡುತ್ತಿದ್ದೇವೆ. ಒಂದು ಸಣ್ಣ ಉದಾಹರಣೆಯೆಂದರೆ, ಇದರಿಂದ ಎಲ್ಲಾ ಸಮಸ್ಯೆ ಪರಿಹಾರವಾಗುತ್ತದೆಂದು ನಾನು ಹೇಳುತ್ತಿಲ್ಲ. ಏಕೆಂದರೆ ನಾವು ಏನು ಮಾಡಿದ್ದೇವೆಂದರೆ, ೧೯೯೧-೯೨ರಲ್ಲಿ ಆನ್ ಎಕ್ಸ್‌ಪೆರಿಮೆಂಟಲ್ ಮೆಥೆಡ್ ಕರ್ನಾಟಕ ವಿಶ್ವವಿದ್ಯಾನಿಲಯದ ವೈಸ್ ಛಾನ್ಸ್‌ಲರ್ ಡಾ. ರಾಮೇಗೌಡರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದೇವೆ. ಆ ಸಮಿತಿಯು ಇನ್ನೂ ಒಂದು ರಿಪೋರ್ಟ್ ಬರುತ್ತಾ ಇದೆ. ಮೊದಲ ಹಂತದ ರಿಪೋರ್ಟ್ ಪ್ರಕಾರ ಈಗ ಆ ಮಕ್ಕಳು ಏನು ಇವೆ ಆ ಮಕ್ಕಳನ್ನು ನಾವು ಪಿ. ಯು. ಸಿ.ಗೆ ಕಳುಹಿಸುವುದಿಲ್ಲ. ನಾವು ಪ್ಲಸ್ ಟು ಸ್ಟೇಜ್‌ನಲ್ಲಿ we are directly sending the students to technical institutions like ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್. ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇದೆ ಮ್ಯಾನ್ ಪವರ್ ಇದೆ ಸುಮಾರು ೫೦ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್‌ಗಳನ್ನು ಆಯ್ಕೆ ಮಾಡಿ ಒಂದೂವರೆ ಸಾವಿರ ಎಸ್. ಎಸ್. ಎಲ್. ಸಿ. ತೇರ್ಗಡೆಯಾದ ವಿದ್ಯಾರ್ಥಿಗಳನ್ನು ನಾವು ನೇರವಾಗಿ ಅಲ್ಲಿಗೆ ಕಳುಹಿಸಿದ್ದೇವೆ. ಅವರು ಇವತ್ತು they are undergoing training in the respective institutions. ಅದು ಒಂದು ವರ್ಷ ಟ್ರೈನಿಂಗ್ ಆದಮೇಲೆ ಇನ್ನು ಉಳಿದಂಥ ಒಂದು ವರ್ಷದಲ್ಲಿ ಅವರು ಸಂಬಂಧಪಟ್ಟಂಥ ಕೈಗಾರಿಕೆಗಳಿಗೆ ಹೋಗುತ್ತಾರೆ. ಅದಕ್ಕೆ ನಮಗೆ ಭಯ, ಶಂಕೆ ಇತ್ತು. ಏಕೆಂದರೆ ಒಮ್ಮೆಲೆ ನಾವು ಹೆಚ್ಚು ಜನರನ್ನು ಸೇರಿಸಿದರೆ ಕೈಗಾರಿಕೆಯವರು ಅವರನ್ನು ತೆಗೆದುಕೊಳ್ಳಲಿಕ್ಕಿಲ್ಲ. ಇದರಿಂದ ನಮ್ಮ ಕಾರ್ಯಕ್ರಮ ವಿಫಲವಾಗಬಹುದು, ನಿಷ್ಫಲವಾಗಬಹುದು ಎಂಬ ಒಂದು ಶಂಕೆ ಇದ್ದುದರಿಂದ ಬರೀ ಒಂದೂವರೆ ಸಾವಿರ ಜನರನ್ನು ಮಾತ್ರ ಆನ್ ಆ್ಯನ್ ಎಕ್ಸ್‌ಪೆರಿಮೆಂಟಲ್ ಮೆಥೆಡ್‌ನಲ್ಲಿ ನಾವು ತೆಗೆದುಕೊಂಡೆವು. ನಂತರ ಛೇಂಬರ್ ಆಫ್ ಕಾಮರ್ಸ್ ಮತ್ತು ಪಬ್ಲಿಕ್ ಸೆಕ್ಟರ್ ಮತ್ತು ಪ್ರೈವೇಟ್ ಸೆಕ್ಟಾರಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರನೆಲ್ಲಾ ಕರೆದು we had a brain storming workshop. ಅವರೆಲ್ಲಾ ಬರುವ ವರ್ಷ ಸಿದ್ಧರಾಗುತ್ತಾರೆ, ನಿಮ್ಮ ಫ್ಯಾಕ್ಟರಿಯಲ್ಲಿ ನೀವು ತೆಗೆದುಕೊಳ್ಳಬೇಕೆಂದು ಹೇಳಿದಾಗ, ಅವರು ಬಹಳ ಸಂತೋಷದಿಂದ ಸ್ಪಂದಿಸಿದ್ದಾರೆ. ಅವರು ಎಲ್ಲರನ್ನೂ ನಾವು ತೆಗೆದುಕೊಳ್ಳುತ್ತೇವೆ, ಒಂದು ವರ್ಷದ ಪ್ರಾಕ್ಟಿಕಲ್ ಟ್ರೈನಿಂಗ್ ಕೊಡುತ್ತೇವೆಂದು ಹೇಳಿದ್ದಾರೆ. ಇದರಿಂದ ಎನ್‌ಕರೇಜ್ ಆದಂತಹ ನಾವು ೧೯೯೨-೯೩ರಲ್ಲಿ ಪ್ಲಸ್ ಟು ಸ್ಟೇಜ್‌ನಲ್ಲಿ ಏನು ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್‌ಗೆ ಮಕ್ಕಳನ್ನು ಕಳುಹಿಸುತ್ತೇವೆ, ಅವರನ್ನು ಒಂದೂವರೆ ಸಾವಿರದಿಂದ ಐದು ಸಾವಿರ ಜನರ ಸಂಖ್ಯೆಗೆ ಏರಿಸಿ ನಾವು ಅವರನ್ನು ಕಳುಹಿಸುತ್ತಿದ್ದೇವೆ. ಇದೇ ರೀತಿಯ ಎಕ್ಸರ್‌ಸೈಜ್ ಅನ್ನು ಬಹುಶಃ ನಾವು ಫ್ರೀಕ್ವೆಂಟ್ ಆಗಿ ಮಾಡಿದ್ದೇವೆ. ನಾವು ಅನೇಕ ಬಾರಿ ಏನು ಹೇಳುತ್ತೇವೆಂದರೆ, ಮಣ್ಣಿನ ಮಗನಿಗೆ ಕೆಲಸ ಕೊಡಬೇಕು ಎಂದು ಹೇಳುತ್ತೇವೆ. ಆದರೆ ಆಯಾಯ ಜಿಲ್ಲೆಯಲ್ಲಿ, ನಮ್ಮ ನಮ್ಮ ರಾಜ್ಯದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಯಾವ ಕೈಗಾರಿಕೆ ನಾವು ಮಾಡುತ್ತೇವೆ, ಅದಕ್ಕನುಗುಣವಾಗಿ ಜನರನ್ನು

ಸಿದ್ಧಪಡಿಸಬೇಕಾಗುತ್ತದೆ. ಇಂಜಿನಿಯರ್ಸ್‌ಗಳನ್ನು ಸಿದ್ಧಪಡಿಸಬೇಕಾಗುತ್ತದೆ, ಡಿಪ್ಲೊಮೋ ಹೋಲ್ಡರ್ಸ್‌ಗಳನ್ನು ಸಿದ್ಧಪಡಿಸಬೇಕಾಗುತ್ತದೆ, ಫೋರ್‌ಮೆನ್‌ಗಳನ್ನು ಸಿದ್ಧಪಡಿಸಬೇಕಾಗುತ್ತದೆ, ಸ್ಕಿಲ್ಡ್ ವರ್ಕರ್ಸ್‌ಗಳನ್ನು ಸಿದ್ಧಪಡಿಸಬೇಕಾಗುತ್ತದೆ. ಸ್ಕಿಲ್ಡ್ ವರ್ಕರ್ಸ್‌ಗಳನ್ನು ಸಿದ್ಧಪಡಿಸಲಿಕ್ಕೆ ಅಪಾರವಾದಂತಹ, ಇಂತಹ ಸ್ಕಿಲ್ಡ್ ಜನಗಳ ಅವಶ್ಯಕತೆ ನಮಗೆ ಇದೆ ಎಂದು ಅವರು ಹೇಳುತ್ತಿದ್ದರು. ಆದರೆ ನಮ್ಮಲ್ಲಿ ಇವತ್ತು ಇಲ್ಲ. ಅವರನ್ನು ಸಿದ್ಧಪಡಿಸುವ ದೃಷ್ಟಿಯಲ್ಲಿ ಏನು ಪ್ಲಸ್ ಟು ಸ್ಟೇಜ್‌ನಲ್ಲಿ ನಾವು ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್‌ಗಳಿಗೆ ಈ ಮಕ್ಕಳನ್ನು ಕಳುಹಿಸುತ್ತಿದ್ದೇವೆ, ಅವರು ಅತ್ಯುತ್ತಮವಾದಂಥ ಸ್ಕಿಲ್ಡ್ ವರ್ಕರ್ಸ್ ಆಗಿ, ಫೋರ್‌ಮೆನ್ ಆಗಿ ಇರತಕ್ಕಂಥ ಕೊರತೆಯ ಸ್ಥಾನವನ್ನು ಅವರು ತುಂಬಿಸುತ್ತಾರೆ ಎನ್ನುವ ವಿಶ್ವಾಸ ನಮಗೆ ಇದೆ. ಇದು ಒಂದು ರೀತಿಯಲ್ಲಿದೆ. ಇನ್ನು ಪ್ಲಸ್ ಟು ಸ್ಟೇಜ್‌ಸ್, ಪಿ. ಯು. ಸಿ.ಯಲ್ಲಿ ಟ್ರೇಡಿಷನಲ್ ಒಕೇಷನಲ್ ಕೋರ್ಸ್‌ಸ್‌ನಲ್ಲಿ ಕಲಿಯತಕ್ಕ ಮಕ್ಕಳಿಗೂ ಕೂಡ ಅನುಕೂಲವಾಗುವಂತೆ ಅನೇಕ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ನಾವು ಬದಲಾವಣೆ ಮಾಡಿದ್ದೇವೆ. ಹಿಂದೆ ಅವರಿಗೂ ಕೂಡ ಹೆಚ್ಚು ಕೆಲಸ ಕೊಡತಕ್ಕಂಥ ಪ್ರವೃತ್ತಿ ಇರಲಿಲ್ಲ. ಈಗ ಎಲ್ಲಾ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಅನ್ನು ಬದಲಾವಣೆ ಮಾಡಿದ್ದೇವೆ. ಹಿಂದೆ ಅವರಿಗೂ ಕೂಡ ಹೆಚ್ಚು ಕೆಲಸ ಕೊಡತಕ್ಕಂಥ ಪ್ರವೃತ್ತಿ ಇರಲಿಲ್ಲ. ಈಗ ಎಲ್ಲಾ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಎಲ್ಲಾ ಇಲಾಖೆಯಲ್ಲಿ ಬದಲಾವಣೆ ಮಾಡಿ, ಈಗಾಗಲೆ ಅನೇಕ ಇಲಾಖೆಗಳಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್‌ನ್ನು ನಾವು ಕಂಪ್ಲೀಟ್ ಮಾಡಿ, ಈ ಪ್ಲಸ್ ಟು ಸ್ಟೇಜಸ್‌ನಲ್ಲಿ ಏನು ಮಕ್ಕಳು ಕಲಿಯುತ್ತಿದ್ದಾರೆ, ಪಿ. ಯು. ಸಿ. ಯಲ್ಲಿ, ಒಕೇಷನಲ್ ಕೋರ್ಸ್‌ಸ್‌ನಲ್ಲಿ ಅವರನ್ನೂ ಕೂಡ ಹುದ್ದೆಗೆ ಅರ್ಹತೆಯನ್ನು ಮಾಡತಕ್ಕಂಥ ಕ್ರಮ ಕೂಡ ನಾವು ಈಗಾಗಲೆ ಕೈಗೊಂಡಿದ್ದೇವೆ. ತಾವು ಹೇಳಿದ್ದುದು ಕರೆಕ್ಟ್. ಏಕೆಂದರೆ ಈ ಸಂಪನ್ಮೂಲವನ್ನು ಅಂದರೆ ತಾಂತ್ರಿಕ ವಿದ್ಯೆಯನ್ನು ಪಡೆದಂತಹ ವಿದ್ಯಾರ್ಥಿಗಳನ್ನು ಅಪಾರ ಸಂಖ್ಯೆಯಲ್ಲಿ ಕೊಂಡು ಹೋಗುವಾಗ, ಈ ಸಮಸ್ಯೆ ಉಲ್ಬಣವಾಗಿ ಬೆಳೆಯತಕ್ಕ ಸಂದರ್ಭದಲ್ಲಿ ಅದಕ್ಕೆ ಒಂದೇ ಉತ್ತರ ಅಂದರೆ ಅಗಾಧವಾದಂತಹ ಕೈಗಾರಿಕೆಯ ಒಂದು ಪ್ರಕ್ರಿಯೆ ಇಡೀ ರಾಜ್ಯದಲ್ಲಿ ಬೆಳೆದಾಗ ಮಾತ್ರ ಬಹುಶಃ ಅದಕ್ಕೆ ಉತ್ತರವನ್ನು ಕೊಡಬಹುದೇ ಹೊರತು ಅನ್ಯಥಾ ಇಲ್ಲ. ಆದರೆ ಆ ಕೈಗಾರಿಕೆ ಬೆಳೆಯುವುದು ಒಂದು ಕಡೆಯಾದರೆ, ಈಗಲೂ ಕೂಡ ಅನೇಕ ಕೈಗಾರಿಕೆಗಳಲ್ಲಿ, ಅನೇಕ ವ್ಯವಹಾರಗಳಲ್ಲಿ ಏನಾಗಿದೆ ಎಂದರೆ, ಜನತೆಯ ಕೊರತೆ ಇದೆ, ಅಂದರೆ ಟ್ರೈನಿಂಗ್ ಆದಂತಹವರ ಕೊರತೆ ಇದೆ. ನಾವು ಇವತ್ತು ಅಂತಹ ಗ್ರೇ ಏರಿಯಾಸ್ ಏನಿದೆ, ಟ್ರೈನಿಂಗ್ ಆಗತಕ್ಕಂತಹ ಜನಗಳ ಬೇಡಿಕೆ ಏನಿದೆ ಅದನ್ನು ನಾವು ಸ್ಪಷ್ಟವಾಗಿ ಗುರುತಿಸಿ ಅಲ್ಲೇ ಎಷ್ಟು ಜನ ಬೇಕು ಅಂತಹ ಟ್ರೈನಿಂಗ್ ಮತ್ತು ಅದಕ್ಕೆ ಬೇಕಾದಂತಹ ಅಪ್‌ಡೇಟೆಡ್ ಟ್ರೈನಿಂಗ್ ಕೊಡತಕ್ಕಂಥಹ ಪ್ರಯತ್ನವನ್ನು, ನಾವು ವೊಕೇಷನಲ್ ಕೋರ್ಸ್‌ಗಳಲ್ಲಿ ಅಂದರೆ ನಮ್ಮ ತಾಂತ್ರಿಕ ಇಂಜಿನಿಯರಿಂಗ್ ಕಾಲೇಜ್ ಇರಬಹುದು, ಡಿಪ್ಲಮಾ ಕೋರ್ಸ್ ಇರಬಹುದು, ಅಲ್ಲೂ ಕೂಡ ನಮ್ಮ ಬೇಡಿಕೆಗಳಿಗೆ ಸ್ಪಂದಿಸತಕ್ಕಂತಹ ಸಿಲಬಸ್‌ಗಳನ್ನು ಮಾಡಬೇಕು ಎಂದು ಕೂಡ ಡಾ. ರಾಮೇಗೌಡ ಸಮಿತಿಯವರು ಈಗಾಗಲೇ ಅದಕ್ಕೆ ಅಂತಿಮವಾದ ಸೆಕೆಂಡ್ ರಿಪೋರ್ಟ್ ಏನು ಕೊಡುತ್ತಿದ್ದಾರೆ ಅದರಲ್ಲಿ ಇದೂ ಕೂಡ ಒಳಗೊಂಡಿದೆಯೆಂದು ನಾನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಆದರೂ ಕೂಡ the problems will continue to remain. ಆದರೆ ನಾವು ಅದನ್ನು ಪರಿಹಾರ ಮಾಡಬೇಕಾದರೆ, ಪಂಡಿತ್ ಜವಹಾರಲಾಲ್ ನೆಹರುರವರು ಮೊದಲನೇ ಪಂಚವಾರ್ಷಿಕ

ಯೋಜನೆಗೆ ಏನು ಕೊಟ್ಟರು, ಅದೇ ರೀತಿಯಲ್ಲಿ, ವ್ಯಾಪಕವಾದಂತಹ ಕೈಗಾರಿಕೆಯ ಅಥವಾ ಒಂದು ವ್ಯವಹಾರದ ಕ್ಷೇತ್ರವನ್ನು ನಾವು ಹಸನಾಗಿ ಮಾಡಿ ಸಿದ್ಧಪಡಿಸಿಕೊಳ್ಳದಿದ್ದರೆ ಬಹುಶಃ ಇದಕ್ಕೆ ಉತ್ತರ ಕಂಡು ಹಿಡಿಯುವುದಕ್ಕೆ ಇನ್ನೂ ಕಷ್ಟ ಆಗಬಹುದು. ಇನ್ನೊಂದು ವಿಷಯವೇನೆಂದರೆ, ತಮಗೆ ಗೊತ್ತಿದೆ, ತಮ್ಮ ಕಾಲಧಲ್ಲೇ ಮಾಡಿದ್ದೀರಿ. ನಾವು ಅದನ್ನು ಇನ್ನೂ ಹೆಚ್ಚು ಮುಂದುವರಿಸಿಕೊಂಡು ಹೋಗಿದ್ದೇವೆ. ಅದು ಏನೆಂದರೆ ಈಗ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳು ಇವೆ. ಕೆಲವು ಸಾರಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳಿಂದ ಅನೇಕ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ನಾವು ತಯಾರು ಮಾಡುವುದರಲ್ಲಿ ಅರ್ಥವಿಲ್ಲ ಎನ್ನಿಸುತ್ತದೆ. ಅದಕ್ಕೆ We are trying to introduce lot of professional courses in the very same colleges. ಏಕೆಂದರೆ, ಎಲ್ಲರೂ ಎಂಜಿನಿಯರಿಂಗ್ ಕಾಲೇಜುಗಳಲ್ಲೇ ಇರಬೇಕಾಗಿಲ್ಲ, ಅಥವಾ ಎಲ್ಲಾ ತಾಂತ್ರಿಕ ಕಾಲೇಜುಗಳಲ್ಲಿ ಇರಬೇಕಾಗಿಲ್ಲ. ತಾಂತ್ರಿಕ ಕಾಲೇಜುಗಳು ಅಥವಾ ಆ ಇಂಜಿನಿಯರಿಂಗ್ ಕಾಲೇಜುಗಳು they are in accesible to the common people and children coming from weaker sections.

(Hon'ble Dy., Speaker occupied the chair)

ಆದರೆ ಇಂತಹ ಆರ್ಟ್ಸ್ ಸೈನ್ಸ್ ಕಾಲೇಜುಗಳಲ್ಲಿ ಅವರಿಗೆ ಹೋಗಲಿಕ್ಕೆ ಸಾಧ್ಯವಾಗುತ್ತದೆ, ಅಲ್ಲಿ ಕಲಿಯಲಿಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಅಂತಹ ಜನರಲ್ ಕಾಲೇಜುಗಳಲ್ಲಿ ಕೂಡ ಪ್ರೊಫೆಷನಲ್ ಕೋರ್ಸ್‌ಗಳನ್ನು ಮಾಡಬೇಕಾಗಿದೆ. ಅದು ಕಂಪ್ಯೂಟರ್ ಇರಬಹುದು, ಟೆಲಿಕಮ್ಯೂನಿಕೇಶನ್ ಇರಬಹುದು. ಇದು ಯಾವುದನ್ನೂ ನಾವು ಹೆಚ್ಚಿನ ಮಟ್ಟಿಗೆ ಮ್ಯಾಕ್ಸಿಮೈಸ್ ಮಾಡಲಿಕ್ಕೆ ಸಾಧ್ಯವಿದೆ. ಆ ಒಂದು ದೃಷ್ಟಿಯಿಂದ ಡಾ. ರಾಮೇಗೌಡರು ಕೂಡ ಈ ವರದಿಯನ್ನು ಕೊಡುತ್ತಿದ್ದಾರೆ. ಮತ್ತು ಹೆಚ್ಚು ಹೆಚ್ಚು ಪ್ರೊಫೆಷನಲ್ ಕೋರ್ಸ್‌ಗಳನ್ನು ನಾವು ಅನೇಕ ಕೊಡುತ್ತಿದ್ದೇವೆ. ಅನೇಕ ಸಾರಿ ನಮ್ಮ ಶಾಸಕ ಮಿತ್ರರು ಬಂದಾಗ ಬಿ. ಎ. ಅಥವಾ ಆರ್ಟ್ಸ್ ಗೆ ಪರ್ಮಿಶನ್ ಕೊಡುವುದಿಲ್ಲ ಎಂದು ನಾನು ಹೇಳಿದ್ದೇನೆ. ನೀವು ಬರೇ ಪ್ರೊಫೆಷನಲ್ ಕೋರ್ಸ್‌ಗಳನ್ನು ಮಾಡಿರಿ ನಾನು ನಿಮಗೆ ಕಾಲೇಜು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ. ಆದರೆ ಇನ್ನು ಮುಂದೆ ಏನಾದರೂ ಫಸ್ಟ್ ಗ್ರೇಡ್ ಕಾಲೇಜು ಮಾಡುವುದು ಇದ್ದರೆ, ಹೆಚ್ಚಾಗಿ ಅಗತ್ಯ ಇರತಕ್ಕಂಥ, ಬೇಡಿಕೆ ಇರತಕ್ಕಂಥ ಪ್ರೊಫೆಷನಲ್ ಕೋರ್ಸ್‌ಗಳನ್ನು ಕೊಡತಕ್ಕ ಒಂದು ಪ್ರಯತ್ನವನ್ನು ನಾವು ಮಾಡುತ್ತೇವೆ ಎಂದೂ ಕೂಡ ನಾನು ಇವತ್ತು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಭಾಷಾ ಅಲ್ಪಸಂಖ್ಯಾತ ಶಾಲೆಗಳಿಗೆ ಒಂದು ಉಪಯೋಜನೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಯಾಹ್ಯರವರು ಮತ್ತು ಮಾನ್ಯ ಕಮುರಲ್ ಇಸ್ಲಾಂರವರು ಕೂಡ ಇದರ ಬಗ್ಗೆ ಹೇಳಿದ್ದಾರೆ. ಈ ಮೇಲ್ಕಂಡ ಯೋಜನೆಯನ್ವಯ ಮತ್ತೊಂದು ಒಳ್ಳೆಯ ಸಲಹೆಯನ್ನು ಮಾನ್ಯ ಯಾಹ್ಯರವರು ಕೊಟ್ಟಿದ್ದಾರೆ. ಅದು ಎಂದರೆ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಮತ್ತು ಆಲ್‌ಫರ್ಡ್ ಯೂನಿವರ್ಸಿಟಿಗಳ ರೀತಿ ಯಾವುದೇ ಒಂದು ಪ್ರಮುಖವಾದ ಭಾಷೆ ಅಭಿವೃದ್ಧಿಯಾಗಬೇಕಾದರೆ ಅದಕ್ಕೆ ಒಂದು ಪ್ರತ್ಯೇಕವಾದ ಹಾಲ್ ಇರಬೇಕು. ಉದಾಹರಣೆಗೆ ಉರ್ದು ಹಾಲ್ ಇರಬೇಕೆಂದು ಏನು ಹೇಳುತ್ತಿದ್ದೀರಿ, ಆ ಉರ್ದು ಹಾಲ್‌ನ್ನು ಕೊಡಲಿಕ್ಕೆ ಗದ್ಯದಲ್ಲಿ ನಾಮಿನಲ್‌ಆಗಿ ಐವತ್ತು ಸಾವಿರ ರೂಪಾಯಿಗಳನ್ನು ನಾವು ಇಟ್ಟಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್:- ಲ್ಯಾಂಗ್ವೇಜ್ ಡೆವಲಪ್‌ಮೆಂಟ್‌ಗೆ ಎಂದು...

ಶ್ರೀ ಎಂ ವೀರಪ್ಪ ಮೊಯಿಲಿ:- ಉರ್ದು ಹಾಲ್‌ಗೆ ಎಂದು ನಾವು ೫೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇದು ಐವತ್ತು ಸಾವಿರ ಅಲ್ಲ. ಇದನ್ನು ತಿದ್ದುಪಡಿ ಮಾಡಿಕೊಳ್ಳಿ.

ಶ್ರೀ ಕೆ. ಹೆಚ್. ರಂಗನಾಥ್:- ಸಂಸ್ಕೃತ, ವೇದಾಂತ, ದ್ವೈತ, ಅದ್ವೈತಗಳನೆಲ್ಲಾ ನಾವು ಈ ಇಪ್ಪತ್ತು ಲಕ್ಷದಲ್ಲಿ ಕಲಿಯುತ್ತಾ ಕುಳಿತರೆ ಆಗುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ:- ಉರ್ದು ಭಾಷೆ ಅಭಿವೃದ್ಧಿಗೆ ಉಪಯೋಜನೆ ಮಾಡುತ್ತೇವೆ ಎಂದು ನಾನು ಇಲ್ಲಿ ಭಾಷಣ ಮಾಡಿ ಹೋದರೆ ಅದು ಅಷ್ಟು ಪ್ರಯೋಜನವಾಗುವುದಿಲ್ಲವೆಂದು we have kept 50 lakhs for it. We have given a concrete shape to the sub-plan. ಹೊಸ ಕಟ್ಟಡ ನಿರ್ಮಾಣ, ಅಧಿಕ ಕೊಠಡಿಗಳ ನಿರ್ಮಾಣ, ನಿರ್ವಹಣೆ, ರಿಪೇರಿಗಾಗಿ ಒಂದು ಕೋಟಿ ರೂಪಾಯಿ, ಶಿಕ್ಷಕರ ತರಬೇತಿ ಕಾರ್ಯಕ್ರಮಗಳಿಗಾಗಿ ೫೦ ಲಕ್ಷ ರೂಪಾಯಿ, ಪೀಠೋಪಕರಣಗಳು ಮತ್ತು ಬೋಧನಾ ಸಾಮಗ್ರಿಗಳ ಪೂರೈಕೆಗಾಗಿ ಇನ್ನೂ ೨೫ ಲಕ್ಷ ರೂಪಾಯಿಗಳನ್ನು ಮತ್ತು ಉರ್ದು ಶಾಲೆ ಹಾಲ್‌ಗೆ ೫೦ ಲಕ್ಷ ರೂಪಾಯಿಗಳನ್ನು ನಾವು ಈಗ ಕೊಡುತ್ತಿದ್ದೇವೆ. ಎಂಟನೆಯ ಯೋಜನೆಯ ಉಳಿದ ವರ್ಷಗಳಲ್ಲಿ ಈ ಉಪ ಯೋಜನೆಯನ್ನು...

Sri. K. H. Ranganath:- It is stated that under language development that a sum of Rs. 20.00 lakhs has been provided for development of sanskrit education, namely academy of sanskrit research, Melkote-9.00 lakhs then another 9.00 lakhs, for Dwaita Vedanta studies, 20.00 lakhs has been provided. ಇದರಲ್ಲಿ ಉರ್ದು ಎಲ್ಲಿದೆ, ತೆಲುಗು ಎಲ್ಲಿದೆ, ತಮಿಳು ಎಲ್ಲಿದೆ, ಕನ್ನಡ ಎಲ್ಲಿದೆ, ಇಂಗ್ಲೀಷ್ ಎಲ್ಲಿದೆ.

Sri. M. Veerappa Moily:- It is not that I am making an announcement here. I have given a concrete shape for this sub-plan for the Urdu development. You cannot find it here either in this book or in that book. We are making a provision for this, that is a sub-plan for the Urdu development. ನಾವು ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಪುನರ್ ರಚನೆ ಮಾಡಬೇಕು, ರಿ ಆರ್ಗನೈಸ್ ಮಾಡಬೇಕೆಂದು ಅನೇಕ ಸಾರಿ ಹೇಳುತ್ತಲೇ ಬಂದಿದ್ದೇವೆ. ಇಷ್ಟು ಮಾತ್ರವಲ್ಲ; ಆಸ್ಟರಿಟಿ ಮೆಷರ್ ಮಾಡಬೇಕೆಂದು ಕ್ಯಾಬಿನೆಟ್‌ನಲ್ಲಿ ಕೂಡ ತೀರ್ಮಾನ ತೆಗೆದುಕೊಂಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ತಮ್ಮ ಬಜೆಟ್ ಭಾಷಣದಲ್ಲಿ ಸೇವಿಂಗ್ಸ್ ಮಾಡಬೇಕೆಂದು ಈಗಾಗಲೇ ಹೇಳಿದ್ದಾರೆ. Since I was the chairman of the cabinet sub-committee on austerity I thought I am duty bound to implement this decision first time in the government in my education department. We have taken that step.

Sri. K.H. Ranganath:- Suppose, if you look at the monies that you have provided for the universities, it is very very mearge. ತಾವು ಯೂನಿವರ್ಸಿಟಿಗಳಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎಂಬುದನ್ನು ತಾವೇ ನೋಡಿ. ಪ್ರತಿಯೊಂದು ಕೂಡ ೨೦ ಲಕ್ಷ, ೪೦ ಲಕ್ಷ, ೮೦ ಲಕ್ಷ ಎಂದು ಕೇವಲ ಲಕ್ಷದೊಳಗೇ ಇದೆ. ಆದ್ದರಿಂದ ತಮ್ಮ ಇಲಾಖೆಗೆ ಆಸ್ಪರಿಟಿ ಅಪ್ಲೈ ಆಗಬಾರದು. ಅದು ತಮ್ಮ ಇಲಾಖೆಗೆ ಅಪ್ಲೈ ಆದರೆ ಬಹಳ ಗೊಂದಲವಾಗುತ್ತದೆ. ಶಾಲಾ ಕಾಲೇಜುಗಳಲ್ಲಿ ಸ್ಯಾಂಕ್ಷನ್ ಆಗಿರತಕ್ಕ ಉಪಾಧ್ಯಾಯರ ಹುದ್ದೆಗಳನ್ನೇ ಈವರೆಗೂ ನಾವು ತುಂಬುವುದಕ್ಕೆ ಆಗಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಆಸ್ಪರಿಟಿ ಬಗ್ಗೆ ನಾನು ಹೇಳಿದಾಗ ತಾವು ಒಪ್ಪುತ್ತೀರೆಂದು ನಾನು ಅಂದುಕೊಂಡಿದ್ದೇನೆ. ತಮಗೆ ಗೊತ್ತಿರುವಂತೆ, ಕಳೆದ ವರ್ಷ ಪ್ಲಾನ್ ಪ್ರಾವಿಷನ್ under the education department, it was 92.32 crores. This year we have provided 192 crores and 4 lakhs. That means there is an increase of 108% from 91-92 to 92-93. There is an increase of 108% growth rate for the education department. It is unparallel in the history of Karnataka on education. ತಾವು ಹೇಳಿದ ಹಾಗೆ ಯೂನಿವರ್ಸಿಟಿ ಎಜುಕೇಶನ್...

ಶ್ರೀ ಕೆ. ಹೆಚ್. ರಂಗನಾಥ್:- ನಾವು ಎಲ್. ಎಸ್. ಪರೀಕ್ಷೆ ಎಂದರೆ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತುಕೊಳ್ಳುತ್ತಿದ್ದಾಗ ಏನಯ್ಯ ನಿಮ್ಮ ಸ್ಕೂಲ್‌ಗೆ ಎಷ್ಟು ರಿಸಲ್ಟ್ ಎಂದರೆ, ೧೦೦% ಎಂದು ಹೇಳುತ್ತಿದ್ದರು. ಅದು ಹೇಗೆ ಎಂದರೆ ಪರೀಕ್ಷೆಗೆ ಕುಳಿತಿದ್ದವನೇ ಒಬ್ಬನು ಪಾಸ್ ಆದವನೇ ಒಬ್ಬನು. ನೀವು ಪರ್ಸೆಂಟ್ ಹೇಳತಕ್ಕಂಥದ್ದು ಕೇಳಿದರೆ ಹೀಗೆ ಆಗುತ್ತದೆ ಎಂದರೆ ಈ ಡಿಪಾರ್ಟ್‌ಮೆಂಟ್‌ಗೆ ಹಣ ಜಾಸ್ತಿ ಬೇಕಾಗುತ್ತದೆ; ತುಂಬಾ ಹಣ ಬೇಕು. ಬಹಳವಾಗಿ ಹಾಳಾಗಿರುವ ಡಿಪಾರ್ಟ್‌ಮೆಂಟ್ ಎಂದರೆ ಎಜುಕೇಶನ್ ಡಿಪಾರ್ಟ್‌ಮೆಂಟ್. ನಿಮಗೆ ಒಂದು ಮೊನಿಯಾ ಶುರುವಾಗಿದೆ. ಯೂನಿವರ್ಸಿಟಿ ಪ್ರಾರಂಭ ಮಾಡುವುದು? ಏತಕ್ಕೆ ಯೂನಿವರ್ಸಿಟಿ ಪ್ರಾರಂಭ ಮಾಡುವುದು? ತಾವು ಎಷ್ಟು ಯೂನಿವರ್ಸಿಟಿಗಳನ್ನು ಪ್ರಾರಂಭ ಮಾಡಿ ಹಣ ಕೊಟ್ಟಿರುವುದು ಎಷ್ಟು? ಮೈಸೂರ್ ಯೂನಿವರ್ಸಿಟಿಗೆ ೪೦ ಲಕ್ಷ ಎತಕ್ಕೆಂದರೆ, construction work such as extension of the Yuvaraj's College; Karnataka University-Rs. 66.00 lakhs for construction of boys hostel, ladies hostel, ಇದರಿಂದ ಯೂನಿವರ್ಸಿಟಿ ಇಂಪ್ರೊವ್‌ಮೆಂಟ್ ಆಗುತ್ತದೆಯಲ್ಲಾ Bangalore University Rs. 40.00 Lakhs for Class-III and Class-IV employees quarters, Gulbarga University Rs. 90.00 lakhs for construction work of Institution of Kannada Studies, ಮಂಗಳೂರು ಯೂನಿವರ್ಸಿಟಿಗೆ ೧೦೦ ಕೋಟಿ ಕೊಟ್ಟಿದ್ದೀರಿ. ಏತಕ್ಕೆಂದರೆ, ಊರಿಗೆ ಹೋದರೆ ಬಯ್ಯುತ್ತಾರೆಂದು ಒಂದು ಕೋಟಿ ಜಾಸ್ತಿ ಮಾಡಿಕೊಂಡಿರುತ್ತೀರಿ. Establishment of Centre for Ecology and environment. ಅಲ್ಲಿ ಹೊಸ ಸಬ್ಜೆಕ್ಟ್ ಇಂಟ್ರಡ್ಯೂಸ್ ಆಗಿದೆ. ನಂತರ ಕುವೆಂಪು ಯೂನಿವರ್ಸಿಟಿಗೆ ೧೫೦ ಲಕ್ಷ ಕೊಟ್ಟಿದ್ದೀರಿ. ಕುವೆಂಪು ಯೂನಿವರ್ಸಿಟಿ ಹೊಸದಾಗಿ

ಪ್ರಾರಂಭವಾಯಿತು. ವೈಸ್‌ಚಾನ್ಸಲರ್ ವಗೈರೆ ಅಲ್ಲಿಗೆ ಕೊಟ್ಟ ಹಣವನ್ನು ಖರ್ಚು ಮಾಡಲೇ ಇಲ್ಲ. ಅಲ್ಲಿ ಬರೀ ಅಕಾಡೆಮಿಕ್ ಕೌನ್ಸಿಲ್ ಮೀಟಿಂಗ್, ಸಿಂಡಿಕೇಟ್ ಮೀಟಿಂಗ್ ವಗೈರೆ ವಗೈರೆ ನಡೆಯುತ್ತದೆಯೇ ವಿನಹ ಇನ್ನೂ ಏನೂ ಕೆಲಸ ನಡೆಯುತ್ತಿಲ್ಲ. ಮತ್ತೆ ಕನ್ನಡ ಯೂನಿವರ್ಸಿಟಿಯನ್ನು ಈಗ ಪ್ರಾರಂಭ ಮಾಡಿದ್ದೀರಿ. ಟೆಕ್ನಿಕಲ್ ಯೂನಿವರ್ಸಿಟಿ ಬರುತ್ತದೆ ಎಂದು ಬೇರೆ ಹೇಳುತ್ತಿದ್ದೀರಿ. ಮೆಡಿಕಲ್ ಯೂನಿವರ್ಸಿಟಿ ಬರುತ್ತದೆ ಎಂದು ಬೇರೆ ಹೇಳುತ್ತಿದ್ದೀರಿ. ಇದು ಯಾರೋ ರಿಟೈರ್ ಆಗಿರುವವರು ನನ್ನನ್ನು ವೈಸ್‌ಚಾನ್ಸಲರ್ ಮಾಡಿ ಎಂದು ಓಡಾಡುತ್ತಿದ್ದಾರೆಯೇ ವಿನಹ ಯೂನಿವರ್ಸಿಟಿಯಲ್ಲಿ ಆಗತಕ್ಕಂಥ ಅನುಕೂಲ ಏನೂ ಇರುವುದಿಲ್ಲ. ಯು. ಜಿ. ಸಿ.ಯಿಂದ ವಗೈರೆ ವಗೈರೆ ಸ್ವಲ್ಪ ಹಣ ಬರಬಹುದು. ಆದರೆ ನಿಮ್ಮಿಂದ ಏನು ಮಾಡುತ್ತೀರಿ. ತಾವು ಅವರಿಗೆ ದೊಡ್ಡ ಜವಾಬ್ದಾರಿಯನ್ನು ಕೊಡುತ್ತೇವೆಂದು ಹೇಳಿದಿರಿ. ಈಗ ಹತ್ತು ವರ್ಷಗಳ ಪ್ರಾಸ್ಪೆಕ್ಟೀವ್ ಪ್ಲಾನಿಂಗ್ ಅನ್ನು ವಿಚಾರ ಮಾಡಿ ಎಂದು ಹೇಳಿದಿರಿ. ಅದಕ್ಕೆ ಇದರಲ್ಲಿ ದುಡ್ಡು ಎಲ್ಲಿದೆ?

ಶ್ರೀ ಎಂ. ವೀರಪ್ಪ ಮೊಯಿಲಿ:- ದುಡ್ಡು ಸಾಕಾಗುವುದಿಲ್ಲ, ಅದನ್ನು ನಾನು ಒಪ್ಪುತ್ತೇನೆ. ಆದರೆ ಹೋದವರ್ಷಕ್ಕಿಂತ ಈ ವರ್ಷಕ್ಕೆ ೧೦೦ ಕೋಟಿ ೧ ಲಕ್ಷ ರೂಪಾಯಿ ಹೆಚ್ಚು ಮಾಡಿದ್ದೇವೆ. That is an increase which we have provided, that is a big jump, 108% jump.

ಶ್ರೀ ಕೆ. ಹೆಚ್. ರಂಗನಾಥ್:- ಮೈಸೂರು ಅರಮನೆಗೆ ೫೦೦ ಕೋಟಿ ಕೊಡುತ್ತೀರಿ, ಈಗ ಇದಕ್ಕೆ ೧೦೦ ಕೋಟಿ ಕೊಟ್ಟುಬಿಟ್ಟಿದ್ದೇವೆಂದು ನೀವು ಹೇಳಿ ಭುಜ ತಟ್ಟಿಕೊಂಡು ಬಿಟ್ಟರೆ ಆಯಿತೆ? ತಾವು ಕೊಟ್ಟಿರುವ ೫೦೦ನ್ನು ೫ ವರ್ಷಕ್ಕೆ ಲೆಕ್ಕಹಾಕಿಬಿಟ್ಟು ೧೫೦೦ ಎಂದು ಒಂದೊಂದು ಸಾರಿ ಹೇಳಿಬಿಡುತ್ತೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಹಣ ಸಾಕಾಗುವುದಿಲ್ಲ. ಇನ್ನೊಂದು ೫೦೦ ಕೋಟಿ ರೂಪಾಯಿಗಳನ್ನು ಕೊಟ್ಟರೂ ಸಾಕಾಗುವುದಿಲ್ಲ. ಎಜ್ಯುಕೇಷನ್ ಡಿಪಾರ್ಟ್‌ಮೆಂಟ್ ಆ ರೀತಿ ಇದೆ.

ಶ್ರೀ ಕೆ. ಹೆಚ್. ರಂಗನಾಥ್:- ಹೀಗಿರುವಾಗ, why that craze to establish universities?

ಶ್ರೀ ಎಂ. ವೀರಪ್ಪ ಮೊಯಿಲಿ:- ಉದಾಹರಣೆಗೆ ಹೇಳುವುದಾದರೆ, ಯೂನಿವರ್ಸಿಟಿ ಎಜ್ಯುಕೇಷನ್‌ಗೆ ೫೯ ಕೋಟಿ ಇದ್ದುದ್ದು ೬೦ ಕೋಟಿ ಆಗಿದೆ. ತಮಗೆ ಗೊತ್ತಿರುವ ಪ್ರಕಾರ, that is the increase we have provided. ತಾವು ಹೇಳಿದ ಹಾಗೆ ಸಾಕಾಗಲಿಲ್ಲ. ಯೂನಿವರ್ಸಿಟಿಯನ್ನು ಏತಕ್ಕೆ ಮಾಡಿದಿರಿ ಎಂದು ಕೇಳಿದಿರಿ.

ಶ್ರೀ ಕೆ. ಹೆಚ್. ರಂಟನಾಥ್:- ನಾವು ಮಾಡಬಾರದು ಎಂದು ಹೇಳುವುದಿಲ್ಲ; ಮಾಡೋಣ. ನಾವೇ ಎಲ್ಲ ಮಾಡಿಬಿಟ್ಟರೆ, ನಮ್ಮ ಮಕ್ಕಳು ದಡ್ಡರೇನು ಅಲ್ಲ. ಅವರು ಮಾಡುವುದಿಲ್ಲವೆಂದು ಹೇಳುವುದಕ್ಕೆ ಅವರು ಮಾಡುತ್ತಾರೆ. ಆದರೆ ಇರುವಂಥದ್ದನ್ನು ವ್ಯವಸ್ಥಿತವಾಗಿ ಮಾಡಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಪುನರ್‌ರಚನೆ ಮಾಡುವ ಬಗ್ಗೆ ನಾವು ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಕಾರ್ಯಕ್ರಮವೆಂದರೆ,

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,

ಎಜ್ಯುಕೇಷನ್ ಡೆವೆಲಪ್‌ಮೆಂಟ್ ಏನಿದೆ ಅದಕ್ಕೆ ಕಡಿಮೆ ಮಾಡುವುದಿಲ್ಲ. ಬೇರೆ ಬೇರೆ ಮಟ್ಟದಲ್ಲಿ ಕೆಲವು ಅನಾವಶ್ಯಕವಾದ ಹುದ್ದೆಗಳು ಇವೆ. ಉದಾಹರಣೆಗೆ ಹೇಳುವುದಾದರೆ, ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆಯ ನಿರ್ದೇಶಕರ ಕಾರ್ಯಾಲಯ ಇದೆ. ಇದರಲ್ಲಿ ಅನೇಕ ಅನಾವಶ್ಯವಾದ ಹುದ್ದೆಗಳು ಇವೆ. ಅದರಲ್ಲಿ ಸಹ ನಿರ್ದೇಶಕರು ಒಂದು, ಹಿರಿಯ ಸಹಾಯಕ ನಿರ್ದೇಶಕರು ಮೂರು, ಸಹಾಯಕ ನಿರ್ದೇಶಕರು ೫ ಇದೆಲ್ಲವನ್ನು ನಾವು ಬಿಟ್ಟು ಬಿಡುತ್ತಿದ್ದೇವೆ. ಏತಕ್ಕೆಂದರೆ, ಅನಾವಶ್ಯಕವಾದ ಹುದ್ದೆಗಳು ಬೇಕಾಗಿಲ್ಲ. ನಾವು ಆ ಹಣವನ್ನು ಉಳಿಸಿ ಯಾವುದಕ್ಕೆ ಖರ್ಚು ಮಾಡಬೇಕೆಂದು ಹೇಳುತ್ತೇನೆ. ಆಯುಕ್ತರ ಕಾರ್ಯಾಲಯದಲ್ಲಿ ಸಹ ನಿರ್ದೇಶಕರು, ಲೋಕ ಶಿಕ್ಷಣ ಎಂದು ಇದೆ. ಸಹಾಯ ನಿರ್ದೇಶಕರ ೬ ಹುದ್ದೆಗಳು ಇವೆ. ರಾಜ್ಯ ಸರ್ವೇಕ್ಷಣಾಧಿಕಾರಿ ಒಂದು ಇದೆ, ಕಿರಿಯ ಸರ್ವೇಷಣಾಧಿಕಾರಿ ಒಂದು. ಅದನ್ನು ಅಬಾಲಿಶ್ ಮಾಡುತ್ತಿದ್ದೇವೆ. ಇದು ಅನಾವಶ್ಯಕ. This exercise we have done in our department. It is not detrimental to the interest of the people. ಯಾರು ಹುದ್ದೆಗಳನ್ನು ಅಬಾಲಿಷ್ ಮಾಡುವುದಕ್ಕೆ ಹೆದರುತ್ತಾರೆ? ಅಗತ್ಯ ಎಷ್ಟಿದೆಯೋ ಅಷ್ಟಿರಲಿ. ಸುಮ್ಮನೆ ಅನಾವಶ್ಯಕ ಏಕೆ? ವಿಭಾಗ ಮಟ್ಟದಲ್ಲಿ ಜಂಟೀ ನಿರ್ದೇಶಕರ ಹುದ್ದೆಯನ್ನು ಅಬಾಲಿಷ್ ಮಾಡುತ್ತಿದ್ದೇವೆ. ಅದೇ ರೀತಿ ಸಹ ನಿರ್ದೇಶಕರು ೪, ಶಿಕ್ಷಣಾಧಿಕಾರಿಗಳು ೬, ಪತ್ರಾಂಕಿತ ಸಹಾಯಕರು ೪, ವಿಭಾಗೀಯ ವೈದ್ಯಾಧಿಕಾರಿಗಳು ೪ ಇವುಗಳೆಲ್ಲ ಅಗತ್ಯವಿಲ್ಲ. ಇದರಿಂದ ೧೪ ಲಕ್ಷದ ೪೧ ಸಾವಿರ ಮತ್ತು ಕಛೇರಿ ವೆಚ್ಚ ೮ ಲಕ್ಷ, ಒಟ್ಟು ೨೨ ಲಕ್ಷ ರೂಪಾಯಿ ಉಳಿತಾಯವಾಗುತ್ತದೆ. ಉಪನಿರ್ದೇಶಕರ ಕಾರ್ಯಾಲಯದಲ್ಲಿ ಅನೇಕ ಹುದ್ದೆಗಳು ಹೆಚ್ಚು ಕಡಿಮೆ ಇವೆ. ಕರ್ನಾಟಕ ರಾಜ್ಯದಲ್ಲಿರತಕ್ಕ ಆ ಒಂದು ಕಛೇರಿಯಲ್ಲಿ ೪೧ ಶಿಕ್ಷಣಾಧಿಕಾರಿಗಳು, ೪೨ ವಿಷಯ ಪರಿವೀಕ್ಷಕರ ಹುದ್ದೆಗಳನ್ನು ಅಬಾಲಿಷ್ ಮಾಡುತ್ತಿದ್ದೇವೆ. ಸೆಕೆಂಡರಿ ಶಾಲಾ ಉಪಾಧ್ಯಯರ ಹುದ್ದೆ ಅಂತಸ್ತಿನ ಏರಿಕೆ ಬಗ್ಗೆ ನಮಗೆ ಕೇಂದ್ರ ಸಂಪನ್ಮೂಲನ ಇಲಾಖೆಯಿಂದ ಯಾವಾಗಲೂ ಕೂಡ ಸೂಚನೆ ಬರುತ್ತಿದೆ. ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ೩೯ ಸಾವಿರ ಇದೆ. ಸರ್ಕಾರಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳು ೧೩೦೦ ಇವೆ. ಈಗ ನಾವು ಏನು ಮಾಡುತ್ತಿದ್ದೇವೆಂದರೆ, instead of more bureaucratisation, we would like to give an educational content for it. ಮುಖ್ಯೋಪಾಧ್ಯಾಯರ ಹುದ್ದೆಗಳು ೧೩೦೦ ಇರುವಾಗ ಒಬ್ಬೊಬ್ಬರಿಗೆ ೩೦ ಪ್ರಾಥಮಿಕ ಶಾಲೆಗಳ ಜವಾಬ್ದಾರಿಯನ್ನು ಕೊಡುತ್ತಿದ್ದೇವೆ. We are working on a School Complex. ಪ್ರಾಥಮಿಕ ಶಾಲೆಇಂದ ಹೈಸ್ಕೂಲ್ ವರೆಗೆ we are treating it as one unit of School Complex. ಎ. ಇ. ಒ.ಗೆ ಈ ಅಧಿಕಾರ ಬೇಕಾಗಿಲ್ಲ. ಎ. ಇ. ಒ.ಗಳ ಹತ್ತು ಹುದ್ದೆಗಳನ್ನು ಪ್ರಸ್ತುತ ಬಿ. ಹುದ್ದೆಗೆ ಸೇರಿದ ತಾಲ್ಲೂಕು ಸಹಾಯಕ ವಿದ್ಯಾಧಿಕಾರಿಗಳ ಹುದ್ದೆಯನ್ನು ಗ್ರೂಪ್ ಎ ಶ್ರೇಣಿಗೆ ಮೇಲ್ದರ್ಜೆಗೇರಿಸಿ ಅವರಿಗೆ ಪ್ರೌಢಶಾಲಾ ಪರಿವೀಕ್ಷಣೆ ಮತ್ತು ತನಿಖಾ ಕಾರ್ಯವನ್ನು ಕೊಡುತ್ತಿದ್ದೇವೆ. ಈ ಉದ್ದೇಶಿತ ಮೇಲ್ದರ್ಜೆಗೇರಿಸಿದ ಅಧಿಕಾರಿಗಳಿಗೆ ಪವರ್ಸ್ ಅನ್ನು ಡೆಲಿಗೇಟ್ ಮಾಡಿ ಕೊಡುತ್ತಿದ್ದೇವೆ. ಆಡಳಿತಾತ್ಮಕ, ಆರ್ಥಿಕ, ಶೈಕ್ಷಣಿಕ ಅಧಿಕಾರಿಗಳನ್ನು ನೀಡುವುದರ ಮೂಲಕ ತಾಲ್ಲೂಕು ಹಂತದಲ್ಲಿ ಆ ನೌಕರರ ಸಮಸ್ಯೆಗಳನ್ನು ಪರಿಹಾರ ಮಾಡತಕ್ಕ ಸಂಪೂರ್ಣ ಅಧಿಕಾರವನ್ನು ನಾವು ಕೊಡುತ್ತಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಕೂಡ ಅದೇ ರೀತಿ ಮಾಡುತ್ತಿದ್ದೇವೆ. ತಾಲ್ಲೂಕು ಹಂತದ ಆಡಳಿತವನ್ನು ಅದೇ ರೀತಿ

ಮಾಡುತ್ತಿದ್ದೇವೆ. ಜಿಲ್ಲಾ ಸಹ ನಿರ್ದೇಶಕರಿಗೆ ನೆರವಾಗಲು ಒಬ್ಬರು ಉಪ ನಿರ್ದೇಶಕರು ಹಾಗು ಇಬ್ಬರು ಪತ್ರಾಂಕಿತ ಸಹಾಯಕರನ್ನು ಕೊಡುತ್ತಿದ್ದೇವೆ. ಈ ಹುದ್ದೆಗಳನ್ನು ರದ್ದು ಮಾಡುವುದರಿಂದ ಒಟ್ಟು ನಮಗೆ ಉಳಿತಾಯವಾಗತಕ್ಕದ್ದು ೧೨೦ ಲಕ್ಷ ರೂಪಾಯಿ. ರೀಆರ್ಗನೈಸ್ ಮಾಡತಕ್ಕ ಕಾಸ್ಟ್ ೭ ಲಕ್ಷ. ೧೨೦ ಲಕ್ಷ ರೂಪಾಯಿ ಉಳಿತಾಯವಾಗುತ್ತದೆಂದರೆ ೧೧೩ ಲಕ್ಷ ರೂಪಾಯಿಗಳನ್ನು We are going to save every year and that will be used for the purpose of educational development. ಆದುದರಿಂದ ಇಂಥ ಒಂದು ಮಾರ್ಪಾಡು ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಬೆಟರ್‌ಮೆಂಟ್ ಕಮಿಟೀಸ್ ಎಂದು ಇದೆ. ಅದು ಎಲ್ಲಾ ಮಟ್ಟದಲ್ಲಿ ಕೂಡ ಇದೆ. ಆದರೆ ಇದು ಬಹಳ ಸಕ್ರಿಯವಾಗಿ ಕೆಲಸ ಮಾಡುವುದಿಲ್ಲ. ಅನೇಕ ಸ್ಥಳೀಯ ಸಮಸ್ಯೆಗಳನ್ನು ಅವರೇ ಪರಿಹಾರ ಮಾಡಲಿಕ್ಕೆ ಸಾಧ್ಯವಿದೆ. ಆದರೆ ಅದು ಅಷ್ಟು ಯಶಸ್ವಿಯಾಗಿ ನಡೆಯುತ್ತಿಲ್ಲ. ಅದಕ್ಕೆ ಕೇರಳದಲ್ಲಿ ಒಂದು ಸಿಸ್ಟಂ ಇದೆ. ಅಲ್ಲಿ ಪೋಷಕರ-ಶಿಕ್ಷಕರ ಸಂಘಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿವೆ. ಶಾಲೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಅವರು ಕೊಡುತ್ತಿದ್ದಾರೆ. ನಾವು ಸೀಡ್ ಮನಿ ಎಂದು ಸ್ವಲ್ಪ ಹಣ ಕೊಟ್ಟರೆ ಅವರು ಹೆಚ್ಚು ಹಣ ಹಾಕಿ ಬಹಳ ಯಶಸ್ವಿಯಾಗಿ ಮಾಡುತ್ತಿದ್ದಾರೆ. ನಾನು ಸ್ವತಃ ಕೇರಳದಲ್ಲಿ ನೋಡಿದ್ದೇನೆ. ನಮ್ಮ ರಾಜ್ಯದಲ್ಲೂ ಪೋಷಕ-ಶಿಕ್ಷಕರ ಸಂಘದ ರಚನೆಯನ್ನು ೯೨-೯೩ರಿಂದ ಮಾಡಿ ಪೋಷಕರು, ಶಾಲೆ, ಸರ್ಕಾರ ಇದನ್ನು ಬಹಳ ಹತ್ತಿರ ತರತಕ್ಕ ಒಂದು ಯಶಸ್ವಿಯಾದ ಕಾರ್ಯಕ್ರಮ ಎಲ್ಲಾ ಕಡೆ ಮಾಡಬೇಕೆಂದು ಮಾಡುತ್ತಿದ್ದೇವೆ. ಇನ್ನು ಉರ್ದು ನೋಯಿಂಗ್ ಡೈರೆಕ್ಟರನ್ನು ಮಾಡಬೇಕು ಮತ್ತು ಮೈನಾರಿಟಿ ಲ್ಯಾಂಗ್ವೇಜ್ ಡೈರೆಕ್ಟರ್‌ನ್ನು ಬಲಪಡಿಸಬೇಕು, ಅವರಿಗೆ ಆಡಳಿತಾತ್ಮಕ ಶಕ್ತಿ ಕೊಡಬೇಕು ಎಂದು ಹೇಳಿದ್ದಾರೆ. ನಾವು ಈಗಾಗಲೇ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ನಮ್ಮ ಬೆಂಗಳೂರಿನಲ್ಲಿ ಉರ್ದು ನೋಯಿಂಗ್ ಪ್ರೊಫೆಸರ್ ಸಿರಾಜುದ್ದೀನ್ ಎಂದು ಇದ್ದಾರೆ. ಅವರನ್ನು ಡೈರೆಕ್ಟರ್ ಆಫ್ ಉರ್ದು ಎಂದು ಇವತ್ತು ನೇಮಕ ಮಾಡಿ ಅವರಿಗೆ ಎಲ್ಲಾ ರೀತಿ ಆಡಳಿತಾತ್ಮಕವಾದ We are going to strengthen this directorate which will lookafter this problem.

ಲಿಟ್ರೆಸಿ ಕಾರ್ಯರ್ಕ್ರಮದ ಬಗ್ಗೆ ನಮ್ಮ ಸನ್ಮಾನ್ಯ ಐನಾಪುರ್ ರವರು ಭಾಷಣ ಮಾಡಿ ಹೋಗಿಬಿಟ್ಟಿದ್ದಾರೆ. ಇದು ಬಹಳ ಯಶಸ್ವಿಯಾದಂತಹ ಕಾರ್ಯಕ್ರಮ. ಬಹುಶಃ ೧೯೪೭ನೇ ಇಸವಿಯಲ್ಲಿ ಇಂತಹ ಕಾರ್ಯಕ್ರಮ ಪ್ರಾರಂಭವಾಗುತ್ತಾ ಇದ್ದರೆ ನಮ್ಮ ದೇಶದ ಪರಿಸ್ಥಿತಿಯೇ ಬೇರೆ ಆಗುತಿತ್ತು. ೧೯೮೮ರಲ್ಲಿ ಲಿಟ್ರೆಸಿ ಮಿಷಿನ್ ಎಂದು ದಿವಂಗತ ರಾಜೀವ ಗಾಂಧಿಯವರು ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಬಹುಶಃ ಈ ಕಾರ್ಯಕ್ರಮದ ಬಗ್ಗೆ ನಾವು ಸ್ವಲ್ಪ ವಿಶ್ವಾಸ ಇಡಬೇಕಾಗಿದೆ. ನಾನು ಹೇಳುವುದು ಏನೆಂದರೆ, ನಿಮ್ಮ ನಿಮ್ಮ ಜಿಲ್ಲೆಗಳ ಅಥವಾ ನಿಮ್ಮ ಪಕ್ಕದ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಕಲಿಕೆ ಕಾರ್ಯಕ್ರಮ ಆಗುತ್ತಿದೆ ತಾವು ದಯಮಾಡಿ ಅಲ್ಲಿ ಹೋಗಿ ನೋಡಬೇಕು. ನನಗೂ ಕೂಡ ಸಂಶಯ ಇತ್ತು. ಒಂಭತ್ತು ವರ್ಷದಿಂದ ೪೦ ವರ್ಷದವರಿಗೆ, ೬೦ ವರ್ಷದವರಿಗೆ ಏನು ಕಲಿಸುವುದು, ಅವರ ಮಕ್ಕಳು ಮೊಮ್ಮಕ್ಕಳು ಏನು ಕಲಿಸುತ್ತಿದ್ದಾರೆ ಎಂದು ನಾವು ಕೂಡ ಪರಿಹಾಸ್ಯ ಮಾಡಿದ್ದಿದೆ. ಆದರೆ ಅಲ್ಲಿ ಏನೊಂದು ಪ್ರಯೋಗ ಇದೆ ಅದನ್ನು ನೋಡಿದ ಮೇಲೆ ನನ್ನ ಮನಸ್ಸು ಬದಲಾಗಿದೆ. ಬಹುಶಃ ಅದೊಂದು ರೀತಿಯ ಹೊಸ ಯುಗಕ್ಕೆ ನಾವು ಪ್ರವೇಶ ಮಾಡುತ್ತಿದ್ದೇವೆ ಎಂದು ಅನಿಸುತ್ತದೆ. ಅನೇಕ ಅಂತರ ರಾಷ್ಟ್ರೀಯ ಸಂಸ್ಥೆಗಳು ಕೂಡ ಅಧ್ಯಯನ ಮಾಡಿವೆ. ತಮಗೆ ಗೊತ್ತಿರಬಹುದು, ಕರ್ನಾಟಕ

ರಾಜ್ಯದಲ್ಲಿ ಲಿಟ್ರೆಸಿ ೫೬ ಪರ್‌ಸೆಂಟ್ ಜಾಸ್ತಿಯಾಗಿದೆ. ಒಂದು ಪರ್‌ಸೆಂಟ್ ಜಾಸ್ತಿಯಾಯಿತು ಅಂದರೆ, do you know the ultimate economic value? 1% increase in literacy means 3% increase in the gross national product (GNP).

Shri. K.H. Ranganath:- Your drop out is 50%.

ಶ್ರೀ ಎಂ. ವೀರಪ್ಪ ಮೊಯಿಲಿ:- ನಾನು ಹೇಳುತ್ತೇನೆ, ಡ್ರಾಪ್ ಔಟ ಆಗುವುದಕ್ಕೆ ಕಾರಣ ಏನೆಂದರೆ ಪ್ರಜ್ಞಾವಂತ ಜನಾಂಗವಿಲ್ಲವಿರುವುದು. ಪ್ರಜ್ಞಾವಂತ ಜನಾಂಗ ಹೆತ್ತವರು, ಪೋಷಕರು ಇದ್ದರೆ, drop outs will get reduced. ಪ್ರಜ್ಞಾವಂತ ಜನಾಂಗ ಆದಾಗ ಶಿಕ್ಷಣದ ಮಹತ್ವ ಗೊತ್ತಾಗುತ್ತದೆ. ಈಗ ಪ್ರಜ್ಞಾವಂತ ಜನಾಂಗವನ್ನು ಏನು ಮಾಡುತ್ತಿದ್ದೇವೆ With this kind of literacy programme, drop-outs will be less. I have seen many of the localities ತಾವು ಹೇಳುವಂತಹ ಡ್ರಾಪ್‌ಔಟ್ಸ್ drastically it got reduced, automatically because of this litrecy movement. ಇದು ಇವತ್ತು ಆಗುತ್ತಿದೆ. ತಮಗೆ ಗೊತ್ತಿರಬಹುದು ಇದು ಅಂತರ ರಾಷ್ಟ್ರೀಯ ಅಧ್ಯಯನದಿಂದ ಕೂಡ ಬಂದಿದೆ. ಅದೇನೆಂದರೆ, 1/3rd of the income which is earned in a family is earned not by the elders, it is earned by the children within the age group, of 5 to 10 years. I repeat, 1/3rd of the family income in an average in this country is earned not by elders that means exploitation. ನಾನು ಹೇಳುತ್ತಿದ್ದೇನೆ ಇವತ್ತು ಮಾನವ ಸಂಪನ್ಮೂಲದ ದರೋಡೆ ಅವರ ಅವರ ಮನೆಯಲ್ಲೇ ಆಗುತ್ತಿದೆ. We have got to put a halt to it. but by what means? ಈ ತರಹದ ಸಾಕ್ಷಾರತಾ ಆಂದೋಲನದಿಂದ ಒಂದು ರೀತಿಯ ಪ್ರಜ್ಞಾವಂತ ಜನಾಂಗವನ್ನು ಮಾಡಿದಾಗ That kind of great exploitation could be stopped in this country, otherwise you cannot do it. ಒಂದು ಪುರಿಚೀಕೆ ಹಿಂದೆ ಹೋದಹಾಗೆ ಆಗುತ್ತದೆ. ತಮಗೆ ಗೊತ್ತಿದೆ, According to the survey made it is the economic value of this litrecy programme. ಈ ರೀತಿ ಅಕ್ಷರತೆ ಬಂದರೆ his earning capacity will be increased from 25% to 30% in respect of agricultural labourer and industrial labourer. ಈ ರೀತಿಯ ಒಂದು ವಾತಾವರಣವನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಕ್ರಿಯೇಟ್ ಮಾಡಲಿಕ್ಕೆ ಸಾಧ್ಯವಿದೆ. This has been a success. in Dakshina Kannada this has become a success. ಬಿಜಾಪುರದಲ್ಲಿಯೂ ಕೂಡ ಆಗಿದೆ. ಸನ್ಮಾನ್ಯ ಜನಾಪುರ್‌ರವರು ದಯವಿಟ್ಟು ಕಲಿಕೆ ಕೇಂದ್ರಗಳಿಗೆ ಹೋಗಬೇಕು. I want all our MLA's to participate in this, and involve yourselves. I don't think after the freedom movement, there is any other movement which is worth than this. This movement can reform the whole society, both economically and socially. This is the

greatest faith I have in this. ತಮಗೆ ಗೊತ್ತಿರಬಹುದು ಮಾವೋ ಅವರು ಚೈನಾದಲ್ಲಿ At one stage he said that all the students go out of the universities, involve themselves in the literacy, then only education at any level will become meaningful. ಅದು ಇವತ್ತು ಆಗಬೇಕಾಗಿದೆ. ಆ ಪ್ರಜ್ಞಾವಂತ ಸಮಾಜವನ್ನು ಸಿದ್ದಪಡಿಸತಕ್ಕ ಒಂದು ಕಾರ್ಯಕ್ರಮವನ್ನು ನಾವು ಮಾಡಬೇಕಾಗಿದೆ. ಅದಕ್ಕೆ ಹೆಚ್ಚು ವಿವರ ಕೊಡುವುದಕ್ಕೆ ಇಷ್ಟ ಪಡುವುದಿಲ್ಲ. ನನ್ನ ಉದ್ದೇಶವೇನೆಂದರೆ, ಡಿಸಂಬರ್ ೯೩ರೊಳಗೆ ಇಡೀ ಕರ್ನಾಟಕ ರಾಜ್ಯದಲ್ಲಿ ಪೂರ್ತಿಯಾಗಿ ಸಾಕ್ಷರತೆಯನ್ನು ಕಾಣಬೇಕಾಗುತ್ತದೆ. ಅದು ಆಗೇ ಆಗುತ್ತದೆ. ನಾವು ಅದನ್ನು ಮಾಡೇ ಮಾಡುತ್ತೇವೆ ಆದರೆ ಈ ಬಗ್ಗೆ ತಮ್ಮೆಲ್ಲರ ಸಹಾಯ ಬೇಕಾಗುತ್ತದೆ. ಈ ಬಗ್ಗೆ ತಮ್ಮಲ್ಲಿ ನಂಬಿಕೆ ಮತ್ತು ವಿಶ್ವಾಸ ಇರಬೇಕಾಗುತ್ತದೆ. ತಮ್ಮ ತಮ್ಮ ಜಿಲ್ಲೆಯಲ್ಲಿ ಏನಾಗುತ್ತದೆ ಆ ಬಗ್ಗೆ ತಾವೆಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗುತ್ತದೆ.

ಶ್ರೀಮತಿ ಮೊಟಮ್ಮ:- ಕೆಲವು ಕಡೆ ಬ್ಯಾನರ್ ಮತ್ತು ಪೋಸ್ಟರ್‌ನಲ್ಲೇ ಮುಗಿಯುತ್ತಿದೆ. ಕಲಿಯಿರಿ ಕಲಿಸಿರಿ ಎಂಬುದು ನಿಜವಾಗಿ ಸೀರಿಯಸ್ ಆಗಿ ಆಗುತ್ತಿಲ್ಲ. ಏನೋ ನಿಮ್ಮ ಜಿಲ್ಲೆಯಲ್ಲಿ ಆಗಿರಬಹುದು. ಆದರೆ ಉಳಿದ ಜಿಲೆಯಲ್ಲಿ ಅಷ್ಟು ತ್ವರಿತವಾಗಿ ಆಗುತ್ತಾ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ದಯಮಾಡಿ ತಾವು ತುಮಕೂರಿಗೆ ಹೋಗಿ ನೋಡಿ. ಮಂಡ್ಯಕ್ಕೆ ಹೋಗಿ ನೋಡಿ. ತಾವು ಹೇಳುವುದು ಸರಿಯಿಲ್ಲ. ಏನೋ ಬ್ಯಾನರ್ ಮಾಡುತ್ತಿದ್ದಾರೆ, ಏನೋ ಸ್ಲೋಗನ್ ಮಾಡುತ್ತಿದ್ದಾರೆ, ಏನೋ ಜಾಥ ಮಾಡುತ್ತಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ. ಇವತ್ತು ತಾವು ಸೌತ್ ಆಫ್ರಿಕಾವನ್ನು ನೋಡಿ. This is an experiment which started in South Africa. This is an experiment which started in the weakest countries and there it has become success. ಉದಾಹರಣೆಗೆ ಹೇಳುವುದಾದರೆ ಇತ್ತೀಚೆಗೆ ಸ್ವಾತಂತ್ರ್ಯ ಪಡೆದ ಕೆಲವು ರಾಜ್ಯಗಳ ಬಗ್ಗೆ ನಾವು ನೋಡುವುದಾದರೆ, ಆ ರಾಜ್ಯದಲ್ಲಿ ಜನರ ಸಾಕ್ಷರತೆ ಮಟ್ಟ ಹೆಚ್ಚು ಇರುವುದರಿಂದ, ಅವರು ಹೋರಾಟ ಮಾಡಿ ತಮ್ಮ ಹಕ್ಕನ್ನು ಹೇಳಿ ಸ್ವಾತಂತ್ರ್ಯವನ್ನು ಮರಳಿ ಪಡೆದುಕೊಂಡಿವೆ. ಆದ್ದರಿಂದ ಇದು ಸಾಧ್ಯವಾಗಿದೆ.

ಶ್ರೀ ಎಂ. ಮುನಿಸ್ವಾಮಿ:- ಇವತ್ತು ಕೇರಳದಲ್ಲಿ ಹೆಚ್ಚು ಲಿಟ್ರೆಸಿಯಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಕೇರಳದಲ್ಲಿ ಸೆಂಟ್ ಪರ್ಸೆಂಟ್ ಆಗಿದೆ. ಇಂತಹ ಕಾರ್ಯಕ್ರಮಗಳ ಬಗ್ಗೆ ಮೊದಲು ಶಾಸಕರಲ್ಲಿ ವಿಶ್ವಾಸ ಇರಬೇಕಾಗುತ್ತದೆ. ಇದನ್ನು ಯಾರು ಹೇಳುತ್ತಿದ್ದಾರೆ ಎಂದರೆ, ಇವತ್ತು ಪಟ್ಟಭದ್ರ ಹಿತಾಸಕ್ತಿಗಳು ಯಾವುವು ಇವೆ ಅವಕ್ಕೆ ಇವತ್ತು ಇದು ಬೇಡವಾಗಿದೆ. ಎಲ್ಲೆಲ್ಲಿ ಇದು ಆಗಿದೆ ಎಂದು ತಮಗೆ ಗೊತ್ತಿದೆ.

ಶ್ರೀಮತಿ ಮೊಟಮ್ಮ:- ನಾನು ಏಕೆ ಹೇಳುತ್ತಿದ್ದೇನೆಂದರೆ, ವಯಸ್ಕರ ಶಿಕ್ಷಣ ಸಮಿತಿ ಇದ್ದಾಗ ನಾವು ಹಣ ಕೊಟ್ಟು, ಅವರಿಗೆ ಸೀಮೆಎಣ್ಣೆಗೆ ಹಣ ಕೊಟ್ಟು ಕಲಿಸಿರಿ ಎಂದು ಹೇಳಿದರೂ ಅದು ಸಕ್ಸೆಸ್ ಆಗಲಿಲ್ಲ. ಇನ್ನು ವಾಲಂಟಿಯರ್ ಆಗಿ ಕಲಿಸಿ ಎಂದರೆ ಎಷ್ಟು ಜನ ಇದನ್ನು ಅರ್ಥಮಾಡಿಕೊಂಡು ಕಲಿಸುತ್ತಾರೆಂದು ನಾವು ಪ್ರಶ್ನೆ ಕೇಳಬೇಕಾಗುತ್ತದೆ.

Shri. M. Veerappa Moily : That you must go and see. Seeing is believing. Don't coment unless you see for yourself. If you see yourself, you will be convinced. ವಯಸ್ಕರ ಶಿಕ್ಷಣದಿಂದ ಹಣ ಪೋಲಾಗಿದೆ ಎಂದು ನನಗೆ ಗೊತ್ತಿದೆ. We are doing it. Chickmagalur will also be taken up. ಆದುದರಿಂದ ಇವತ್ತು ಬಿಜಾಪುರವನ್ನೂ ಕೂಡ ಟೋಟಲ್ ಲಿಟ್ರಸಿ ಜಿಲ್ಲೆಯನ್ನಾಗಿ ಮಾರ್ಪಾಟು ಮಾಡುವುದಕ್ಕೆ ಎಲ್ಲಾ ಸಿದ್ಧತೆ ನಡೆದಿದೆ. ಬರುವ ತಿಂಗಳಲ್ಲಿ ನಾವು ಹೋಗಿ We are going to declare it. ಆದುದರಿಂದ ವಯಸ್ಕರ ಶಿಕ್ಷಣದ ಎಕ್ಸ್‌ಪೆರಿಮೆಂಟ್ ನೋಡಿ. ದಯವಿಟ್ಟು ಇದರ ಪರ್‌ಫಾರ್‌ಮೆನ್ಸ್ ಅಳಿಯುವುದು ಬೇಡ. ತಾವು ಮಂಡ್ಯದಲ್ಲಿ ಹೋಗಿ ನೋಡಿ. ಎಲ್ಲಾ ಕಡೆ ನೋಡಿ ಹೇಳಿ. ಇಂತಹ ನ್ಯಾಷನ್ ಲಿಟ್ರಸಿ ಮುಖಾಂತರ ಏನು ಕಾರ್ಯಕ್ರಮ ಕೊಟ್ಟಿದ್ದಾರೆ ಈಗ ಎಲ್ಲಿ ಟೋಟಲ್ ಲಿಟ್ರಸಿ ಮುಗಿದಿದೆ ಮುಂದಿನ ಹೆಜ್ಜೆಯಾಗಿ ನಾವು ಕಂಟಿನ್ಯೂಯಿಂಗ್ ಎಜುಕೇಷನ್ ತೆಗೆದುಕೊಳ್ಳುತ್ತಿದ್ದೇವೆ. ನಿರಂತರ ಶಿಕ್ಷಣ ಕಾರ್ಯಕ್ರಮವನ್ನೂ ಕೂಡ ನಾವು ಪ್ರಾರಂಭ ಮಾಡಿದ್ದೇವೆ. ಬಿಜಾಪುರ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕಾರ್ಯಕ್ರಮವನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ.

ಶ್ರೀ ಡಿ. ಎ. ಚಿನ್ನಪ್ಪ:- ಇವತ್ತು ಎಲ್ಲಾ ಜಿಲ್ಲೆಗಳಲ್ಲಿ ೧೦೦ ಪರ್‌ಸೆಂಟ್ ಲಿಟ್ರಸಿ ಮಾಡಲು ಹೊರಟಿದ್ದೀರಿ. ಎಲ್ಲರಿಗೂ ಅವರ ಮಾತೃ ಭಾಷೆಯಲ್ಲಿ ಅಕ್ಷರ ಕಲಿಸಬೇಕಾಗುತ್ತದೆ. ಇವತ್ತು ನಮ್ಮಲ್ಲಿ ತಮಿಳರು, ಮಲೆಯಾಳಿಗಳು, ತೆಲುಗು ಮಾತನಾಡುವವರು ಇದ್ದಾರೆ. ಆ ಜನರಿಗೂ ಅವರ ಭಾಷೆಯಲ್ಲೇ ಅಕ್ಷರ ಕಲಿಸುವ ವ್ಯವಸ್ಥೆ ಇದರಲ್ಲಿ ಇದೆಯೇ? ಏಕೆಂದರೆ ನಮ್ಮ ಕೂರ್ಗ್‌ನಲ್ಲಿ ತಮಿಳರು ಹೆಚ್ಚು ಜನರು ಇದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಮಾತನಾಡುವವರಿಗೆ ತುಳು ಭಾಷೆಯಲ್ಲೇ ಶಿಕ್ಷಣ ಕೊಡಿಸುತ್ತಿದ್ದೇವೆ. ಹಾಗೇ ಕೊಂಕಣಿ ಮಾತನಾಡುವವರಿಗೂ ಕೊಂಕಣಿಯನ್ನು ಕಲಿಸುತ್ತಿದ್ದೇವೆ. ಅವರವರ ಭಾಷೆಯಲ್ಲಿ ಕಲಿಸುತ್ತಿದ್ದೇವೆ. That is what we are doing.

ಶ್ರೀ ಡಿ. ಎ. ಚಿನ್ನಪ್ಪ:- ಅಡಲ್ಟ್ ಎಜುಕೇಶನ್ ಕೌನ್ಸಿಲ್‌ನಲ್ಲಿ ಅದು ಫೆಲ್ಯೂರ್ ಆಗಿದೆ ಎಂದು ಹೇಳುತ್ತಿದ್ದಾರೆ. This is the reason why it has failed. ಈಗ ಮುಖ್ಯವಾಗಿ ಯೋಗ ಶಿಕ್ಷಣದ ಬಗ್ಗೆ, ಯೋಗ ಶಿಕ್ಷಣದ ಬಗ್ಗೆ ವಿವರ ಕೊಟ್ಟಿದ್ದೇನೆ. ಆದ್ದರಿಂದ ಅದನ್ನು ನಾನು ರಿಪೀಟ್ ಮಾಡುವುದಿಲ್ಲ. ಅದರ ಬಗ್ಗೆ ಜನಗಳಿಗೆ ಯಾವುದೇ ಶಂಕೆ ಬೇಕಾಗಿಲ್ಲ. ಏಕೆಂದರೆ ನಾನು ಉದಾಹರಣೆ ಹೇಳುತ್ತೇನೆ. ಯೋಗವನ್ನು ೫ನೇ ತರಗತಿಯಲ್ಲಿ ಇಂಟರ್‌ಡ್ಯೂಸ್ ಮಾಡುವಾಗ ಏನು ಮಾಡುತ್ತೇವೆ? ಸ್ಮರಣ ಶಕ್ತಿ ಅಭಿವೃದ್ಧಿಗೆ, ಸ್ಮರಣ ಶಕ್ತಿ ಪ್ರಾಮುಖ್ಯತೆಗೆ, ಸ್ಮರಣ ಶಕ್ತಿ ಸುಧಾರಣೆಗೆ ಶ್ರವಣ ಸ್ಮರಣೆ, ದೃಶ್ಯ ಸ್ಮರಣೆ, ಶ್ರವಣ-ದೃಶ್ಯ-ಸ್ಮರಣೆ ಅದನ್ನು ಮಾಡುತ್ತಿದ್ದೇವೆ. ಆಯಾ ಕ್ಲಾಸಿಗೆ ಸಂಬಂಧಪಟ್ಟಂತಹ ಯೋಗವನ್ನು ಮಾಡುತ್ತಿದ್ದೇವೆ. ಇದರಲ್ಲಿ ಯಾರದೂ ಮಿಸ್‌ಗಿವಿಂಗ್ಸ್ ಬೇಕಾಗಿಲ್ಲ. ಯೋಗದಲ್ಲಿ ಟ್ರೈನಿಂಗ್ ಆಗಿರತಕ್ಕ ಶಿಕ್ಷರನ್ನು ಎಲ್ಲಾ ಕಡೆ ಯೋಗ ಶಿಕ್ಷಣವನ್ನು ವ್ಯಾಪಕವಾಗಿ ಮಾಡುತ್ತೇವೆ. ಅದರ ವಿವರವನ್ನು ಈಗಾಗಲೇ ಅಲ್ಲಿ ಕೊಟ್ಟಿರುವುದರಿಂದ ಅದನ್ನು ಪುನರುಚ್ಚಾರ ಮಾಡುವುದಕ್ಕೆ ನಾನು ಇಷ್ಟ ಪಡುವುದಿಲ್ಲ.

ಇನ್ನು ಪರೀಕ್ಷಾ ಕೇಂದ್ರಗಳ ಬಗ್ಗೆ ಹೇಳುವುದಾದರೆ, ಮಾನ್ಯ ಬಾಬುರಾವ್ ಚವಾಣ್‌ರವರು ಈ ಕೇಂದ್ರಗಳನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿದ್ದಾರೆ. ಅದನ್ನು ಮುಂದುವರಿಸಿದ್ದೇವೆ. I don't think there is any grievence for Chavanji. We have increased it. ಆದರೆ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಗುಲ್ಬರ್ಗದಲ್ಲಿ ಇನ್ನೂ ಮೂರು ಎಸ್. ಎಸ್. ಎಲ್. ಸಿ. ಪರೀಕ್ಷಾ ಕೇಂದ್ರಗಳನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ಆಮೇಲೆ ಪ್ರಾಯೋಗಿಕವಾಗಿ ಪರೀಕ್ಷೆಗಳ ಹಾಗೂ ಶಿಕ್ಷಕರ ತರಬೇತಿ ಪಠ್ಯಕ್ರಮ ಸುಧಾರಣೆಯ ಬಗ್ಗೆ ಒಂದು ಸಮಿತಿಯನ್ನು ಕೂಡ ಮಾಡುತ್ತಿದ್ದೇವೆ. ಕೊಶ್ಚನ್ ಪೇಪರ್ ಸೆಟ್ ಮಾಡತಕ್ಕದ್ದು, ಅಧ್ಯಾಪಕರನ್ನು ತಯಾರು ಮಾಡತಕ್ಕದ್ದು ಇದರ ಬಗ್ಗೆ ಒಂದು ಟ್ರೈನಿಂಗ್ ಕೊಡಾ ಕೊಡತಕ್ಕ ಕಾರ್ಯಕ್ರಮವನ್ನು ನಾವು ಇಲ್ಲಿ ಹಾಕಿಕೊಂಡು ಮಾಡಿದ್ದೇವೆ, ಅದು ನಡೆಯುತ್ತಿದೆ. ೧೪ರಿಂದ ೧೮ನೇ ತಾರೀಖಿನವರೆಗೆ ಪ್ರಶ್ನೆ ಪತ್ರಿಕೆ ತಯಾರಕರ ಹಾಗೂ ಮೌಲ್ಯಮಾಪನ ಮಾಡತಕ್ಕವರ ಕಾರ್ಯಾಗಾರ ಮಾಡಿ ಸುಮಾರು ೧೫೦೦ ಜನ ಅಧ್ಯಾಪಕರು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಪ್ರಶ್ನೆ ಪತ್ರಿಕೆಗಳನ್ನು ತಯಾರು ಮಾಡತಕ್ಕವರಲ್ಲಿ, ಮೌಲ್ಯಮಾಪನ ಮಾಡತಕ್ಕವರಲ್ಲಿ ಇರತಕ್ಕ ದೋಷಗಳನ್ನು ಸಂಪೂರ್ಣವಾಗಿ ನಿವಾರಿಸತಕ್ಕ ಕಾರ್ಯಕ್ರಮವನ್ನು ನಾವು ಮಾಡುತ್ತಿದ್ದೇವೆ. ವಿಶ್ವ ವಿದ್ಯಾನಿಲಯಗಳಲ್ಲಿ ಕಾಪಿಯಿಂಗ್ ಅನ್ನು ಸಂಪೂರ್ಣವಾಗಿ ನಿವಾರಣೆ ಮಾಡಬೇಕೆಂದು ನಾವೇನು ಮಾಡುತ್ತಿದ್ದೇವೆಂದರೆ, we are computerising the whole system in Bangalore University. ಹಾಗೂ ಬೇರೆ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದರ ವಿವರ ಈಗ ಹೇಳಿದರೆ ಇನ್ನೂ ಹೆಚ್ಚಿನ ಸಮಯ ತೆಗೆದುಕೊಳ್ಳುವುದರಿಂದ ಅದರ ವಿವರ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀಮತಿ ದಮಯಂತಿ ಬೋರೇಗೌಡ:- ಮಾನ್ಯ ಮಂತ್ರಿಗಳು ದಯವಿಟ್ಟು ಬೆಂಗಳೂರಿನಲ್ಲಿ ವ್ಯಾಲ್ಯುಯೇಷನ್ ಸೆಂಟರ್ ಮಾಡದಿದ್ದರೆ ಒಳ್ಳೆಯದಾಗುತ್ತದೆ. ಅಲ್ಲಿ ಅವರು ಮೌಲ್ಯಮಾಪನ ಮಾಡದೆ, ನಿಮ್ಮ ಆಫೀಸ್‌ನಲ್ಲಿ ಮತ್ತು ಲೆಜಿಸ್‌ಲೇಟರ್ಸ್ ಹೋಮ್‌ನಲ್ಲಿ ಬರಿ ಟ್ರಾನ್ಸ್‌ಫರ್ಸ್‌ಗೋಸ್ಕರ ನಿಂತಿರುತ್ತಾರೆ. ಇಲ್ಲಿ ಸರಿಯಾಗಿ ಮೌಲ್ಯಮಾಪನ ನಡೆಯುತ್ತಿಲ್ಲ. ಆದ್ದರಿಂದ ಬೆಂಗಳೂರು ಸೆಂಟರನ್ನು ತೆಗೆದು ಹಾಕಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಆ ವಿಷಯದ ಬಗ್ಗೆ ಗಮನಹರಿಸೋಣ. ಯು. ಜಿ. ಸಿ.ಯವರು ನಮಗೆ ಅನೇಕ ಬಾರಿ ಹೇಳಿದ್ದರು. ಕಡೇ ಪಕ್ಷ ಪ್ರತಿಷ್ಠಿತವಾದಂಥ, ಚೆನ್ನಾಗಿ ನಡೆಯತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಇರತಕ್ಕಂಥ, ಒಳ್ಳೆಯ ಅಧ್ಯಾಪಕರು ಉಪನ್ಯಾಸಕರು ಇರತಕ್ಕಂಥ ಕಾಲೇಜುಗಳಿಗೆ ನೀವು ಆಟಾನಮಸ್ ಸ್ಟೇಟಸ್ ಕೊಡಬೇಕೆಂದು ಅನೇಕ ಸಮಯದಿಂದ ಹೇಳಲಾಗುತಿತ್ತು. ಇದರಿಂದ ಏನಾಗಿದೆ ಎಂದರೆ, ಕರ್ನಾಟಕ ರಾಜ್ಯದಲ್ಲಿ ಯು. ಜಿ. ಸಿ.ಯಿಂದ ಬರತಕ್ಕ ಅನುದಾನ ಬಹಳ ಕಡಿಮೆಯಾಗಿದೆ. ಮುಖ್ಯ ಕಾರಣ ಏನೆಂದರೆ, ಇತ್ತೀಚಿನವರೆಗೆ ಅನೇಕ ಕಾಲೇಜುಗಳಿಗೆ ಪರ್ಮನೆಂಟ್ ಅಫಿಲಿಯೇಷನ್ ಕೊಟ್ಟಿರಲಿಲ್ಲ. ಪರ್ಮನೆಂಟ್ ಅಫಿಲಿಯೇಶನ್ ಕೊಡದಿದ್ದರೆ ಅಥವಾ ಆಟಾನಮಸ್ ಸ್ಟೇಟಸ್ ಕೊಡದಿದ್ದರೆ ಏನಾಗುತ್ತದೆಂದರೆ, ನಮಗೆ ಯು. ಜಿ. ಸಿ.ಯಿಂದ ಹೆಚ್ಚು ಫಂಡ್ಸ್ ಬರುವುದಿಲ್ಲ. ಮೊನ್ನೆ ಕೂಡ ಯುಜಿಸಿಯಿಂದ ಬಂದಂತಹ ಟೀಮ್, ಅದರ ಉಪಾಧ್ಯಕ್ಷರು ನನ್ನ ಜೊತೆಯಲ್ಲಿ ಮಾತನಾಡಿದಾಗ ನಿಮಗೆ ಬರತಕ್ಕ ಅನುದಾನ ಬಹಳ ಕಡಿಮೆಯಿದೆ ಎಂದರು. ಕೇರಳ ಮತ್ತು ತಮಿಳುನಾಡುಗಳಿಗೆ [illegible]

ಸಿ.ಯಿಂದ ನಮಗೆ ಬರತಕ್ಕ ಅನುದಾನ ಬಹಳ ಕಡಿಮೆಯಿದೆ. ಆದ್ದರಿಂದ ಇದರ ಪ್ರಯೋಜನ ಪಡೆಯಬೇಕಾದರೆ ನಾವು ಇಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಪರ್ಮನೆಂಟ್ ಅಫಿಲಿಯೇಷನ್ ಕೊಡತಕ್ಕ ಕಾರ್ಯಕ್ರಮವನ್ನು ನಾವು ಬಹಳ ತೀವ್ರಗೊಳಿಸಿದ್ದೇವೆ. ಯಾರ್ಯಾರು ಕ್ವಾಲಿಫೈ ಮಾಡಿದ್ದಾರೆ ಅವರಿಗೆ ಯಾವುದೇ ಒಂದು ಅಡ್ಡಿ ಆತಂಕವಿಲ್ಲದೆ ಅದಕ್ಕೆ ಪರ್ಮನೆಂಟ್ ಅಫಿಲಿಯೇಷನ್ ಕೊಡಬೇಕೆಂದು ಹೇಳಿ ಈಗಾಗಲೇ ಸಾಕಷ್ಟು ಸಂಸ್ಥೆಗಳಿಗೆ ನಾವು ಪರ್ಮನೆಂಟ್ ಅಫಿಲಿಯೇಷನ್ ಕೊಟ್ಟಿದ್ದೇವೆ. ಇನ್ನು ಅಟಾನಮಸ್ ಸ್ಟೇಟಸ್ ಕೊಡಬೇಕೆಂದು ನಾವು ೧೦ ವರ್ಷಗಳಿಂದ ಮಾತನಾಡುತ್ತಾ ಬಂದಿದ್ದೇವೆ. ಯು. ಜಿ. ಸಿ.ಯವರು ನಮಗೆ ಹೇಳುತ್ತಾ ಬಂದಿದ್ದಾರೆ. ಆದರೆ ಯಾವುದೇ ಯೂನಿವರ್ಸಿಟಿಗೆ ಅಫಿಲಿಯೇಷನ್ ಕೊಡತಕ್ಕ ಕಾರ್ಯಕ್ರಮವನ್ನು ನಾವು ತೆಗೆದು ಕೊಂಡಿಲ್ಲ. ನಾನು ಬಹಳ ಸಂತೋಷದಿಂದ ಹೇಳುತ್ತಿದ್ದೇನೆ. For the first time we have now taken and the Chancellor i.e., the Governor has also approved the statute for enabling Mangalore University to grant autonomous status to the colleges with some qualifications. ಅದರ ಮೇನ್ ಅಬ್ಜೆಕ್ಟೀವ್, ಅದನ್ನೆಲ್ಲಾ ಯಾವರೀತಿ ಮಾಡಬೇಕೆಂದು ಸ್ಟ್ಯಾಚ್ಯೂಟ್ ಇದೆ ಆ ಪ್ರಕಾರ, ಆ ಸರಹದ್ದಿನಲ್ಲಿ ಬರತಕ್ಕ ಕಾಲೇಜುಗಳಿಗೆ ಅಟಾನಮಸ್ ಸ್ಟೇಟಸ್‌ನ್ನು ಕೊಡಬಹುದೆಂದು ಇದ್ದುದರಿಂದ ಇದೊಂದು ಡೀಸೆಂಟ್ರಲೈಸೇಷನ್ ಆಫ್ ಅಕಾಡೆಮಿಕ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಒಂದು ಮೈಲಿಗಲ್ಲು, ಒಂದು ಮಹತ್ವವಾದ ಹೆಜ್ಜೆಯನ್ನು ಇಟ್ಟಿದ್ದೇವೆ. ಉಳಿದ ಯೂನಿವರ್ಸಿಟಿಗಳು ಕೂಡ ತಮ್ಮ ಸ್ಟ್ಯಾಚ್ಯೂ ಮುಖಾಂತರ ನಿಯಮಾವಳಿಗಳನ್ನು ನಮ್ಮ ಸರ್ಕಾರಕ್ಕೆ ಕಳುಹಿಸಿದರೆ ಅದಕ್ಕೆ ಒಪ್ಪಿಗೆ ಕೊಡತಕ್ಕ ಕಾರ್ಯಕ್ರಮವನ್ನು ನಾವು ಇನ್ನು ಮುಂದೆ ಮಾಡುತ್ತೇವೆ. ಆದ್ದರಿಂದ ಕೊಲಿಜಿಯೇಟ್ ಎಜ್ಯುಕೇಶನ್‌ನಲ್ಲಿ ಅಥವಾ ವಿಶ್ವ ವಿದ್ಯಾನಿಲಯದ ಒಂದು ಪರಿಸ್ಥಿತಿಯಲ್ಲಿ ಅಟಾನಮಸ್ ಸ್ಟೇಟಸ್‌ನ್ನು ಕೊಡತಕ್ಕಂಥ ಒಂದು ಮೈಲಿಗಲ್ಲನ್ನು, ಒಂದು ಮಹತ್ವದ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿದೆ ಎಂದು ಹೇಳುವುದಕ್ಕೆ ನನಗೆ ಬಹಳ ಅಭಿಮಾನ ಎನಿಸುತ್ತದೆ. ಸನ್ಮಾನ್ಯ ಯಾಹ್ಯಾರವರು ಒಂದು ಮಾತನ್ನು ಹೇಳಿದರು. ಅದೇನೆಂದರೆ, ಉರ್ದು ಮತ್ತು ಅರೆಬಿಕ್ ಲೆಕ್ಚರರ್ಸ್, ಪ್ರೊಫೆಸರ್ಸ್ ಇರುವ ಕಡೆಗಳಲ್ಲಿ ರಿಸರ್ವೇಷನ್ ಪಾಲಿಸಿಯನ್ನು ಅಡಾಪ್ಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ನಾವು ಈಗಾಗಲೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಲ್ಲಿ ಉರ್ದು ಟೀಚರ್ಸ್ ಇಲ್ಲದೇ ಇದ್ದರೆ ಅಲ್ಲಿ ಎಕ್ಸಂಪ್ಟ್ ಮಾಡಹುದು ಎಂದುಮಾಡಿದ್ದೇವೆ. ಅದೇ ರೀತಿ ನಿರ್ಣಯವನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ತೆಗೆದುಕೊಳ್ಳುತ್ತೇವೆ. ಆ ನಿರ್ಣಯಕ್ಕೆ ನಮ್ಮ ಒಪ್ಪಿಗೆ ಇದೆ ಆ ನಿರ್ಣಯವನ್ನು ನಾವು ತೆಗೆದುಕೊಳ್ಳುತ್ತೇವೆ. ಇನ್ನು ಕ್ಯಾಪಿಟೇಶನ್ ಫೀಸ್ ಬಗ್ಗೆ ಅನೇಕರು ಹೇಳಿದ್ದಾರೆ. ಸನ್ಮಾನ್ಯ ಎಲ್ಲ ಸದಸ್ಯರೂ ಶ್ರೀ ಫುಲ್‌ಇನ್‌ಫಾರವರು ಪ್ರಾಹಿಬಿಷನ್ ಆಫ್ ಕ್ಯಾಪಿಟೇಷನ್ ಫೀಸ್ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು. Karnataka Educational Institutions (Prohibition of Capitation Fees) Act, 1984 ಆಗಿದೆ. ಆದರೆ ಅದರ ಅನುಷ್ಠಾನ ನಿಜವಾಗಿ, ಅರ್ಥಪೂರ್ಣವಾಗಿ ಅಥವಾ ಪರಿಣಾಮಕಾರಿಯಾಗಿ ಆಗಿದೆ ಎಂದು ನಾನು ಕೂಡ ಹೇಳುತ್ತಿಲ್ಲ. ಆದರೆ ಒಂದು ಏನಾಗಿದೆ ಎಂದರೆ, ಅದರ ಒಂದು ಅಂಶವನ್ನು ನಾವು ಜಾರಿ ಮಾಡಿದ್ದೇವೆ. ಏನೆಂದರೆ, ಫೀ ಫಿಕ್ಸ್

ಮಾಡುವಂಥಾದ್ದು. In lieu of capitation fees. ಈಗ ಫೀಸ್ ಜಾಸ್ತಿ ಸಿಗುತ್ತಿದೆ. ಕ್ಯಾಪಿಟೇಷನ್ ಫೀ ಅದಕ್ಕಿಂತ ಡಬಲ್ ಆಗಿಹೋಗಿದೆ. ಅವರು ಎರಡೂ ಕಡೆಯಿಂದ ಹೆಚ್ಚಿನ ಪ್ರಯೋಜನ ಪಡೆಯಲಿಕ್ಕೆ ದಾರಿಯಾಗಿದೆ. ಬಹುಶಃ ಅನೇಕರು ಇದರ ಬಗ್ಗೆ ಕೋರ್ಟಿಗೆ ಹೋಗಿ, they have struck down the clause. ಅದಕ್ಕೆ ಈಗ ನಾವು ಸ್ವಲ್ಪ ಎಕ್ಸ್‌ಸರ್‌ಸೈಸ್ ಮಾಡಿದ್ದೇವೆ ಇದನ್ನು ರೆಗ್ಯುಲೇಟ್ ಮಾಡುವುದಕ್ಕೆ ಅಡ್ಮಿನಿಸ್ಟ್ರೇಶನ್‌ನ್ನು ರೆಗ್ಯುಲೇಟ್ ಮಾಡಿಕೊಂಡು ಎಜ್ಯುಕೇಶನ್ ಇನ್ಸ್ಟಿಟ್ಯೂಶನ್ಸ್ ರೂಲ್ಸ್ ಮಾಡಿಕೊಂಡು ಇದನ್ನು ನಿಗ್ರಹ ಮಾಡುವುದಕ್ಕೆ we have framed draft rules and also some of the provisions of the Act should be amended. Draft rules have gone from our Department to the Law Department. ಇದು ಬಂದ ಕೂಡಲೇ ಬಹುಶಃ ೧೯೯೩-೯೪ರಿಂದ ನಾವು ಈ ಕ್ಯಾಪಿಟೇಶನ್ ಫೀ ಏನಿದೆ, ಅದು ಪ್ರಾಥಮಿಕ ಶಾಲೆ ಇಂಗ್ಲೀಷ್ ಮಾಧ್ಯಮದ್ದು ಇರಬಹುದು, ಬೇರೆ ಯಾವುದೇ ಇರಬಹುದು, ಅಲ್ಲಿಂದ ಕಾಲೇಜಿನವರೆಗೆ ಪ್ರೊಫೆಷನಲ್ ಕಾಲೇಜಸ್ ಸೇರಿ ಅದನು ಸಂಪೂರ್ಣವಾಗಿ ನಿಗ್ರಹಿಸತಕ್ಕಂಥ ಅಥವಾ ಹತೋಟಿಗೆ ತರತಕ್ಕಂಥ ಎಲ್ಲಾ ಕಾರ್ಯಕ್ರಮಗಳನ್ನು ೯೩-೯೪ನೇ ಸಾಲಿನಲ್ಲಿ ನಾವು ತೆಗೆದುಕೊಳ್ಳುತ್ತೇವೆ.

ಡಾ|| ಎನ್. ಬಿ. ಸಂಜಪ್ಪ:- ಕ್ಯಾಪಿಟೇಷನ್ ಫೀ ರದ್ದತಿಯಾಗಬೇಕೆಂದು ಹೇಳಿದ ಮೇಲೆ ೧೯೮೪ರಲ್ಲಿ ಆಯಿತು. ಆದಮೇಲೆ ತಾವು ಹೇಳಿದ ಹಾಗೆ ಈಗ ಎರಡೂ ಕಡೆಯಿಂದ ಹಣ ಬರುವ ಹಾಗೆ ಆಯಿತು. ಒಂದು ಕಡೆ ಕ್ಯಾಪಿಟೇಶನ್ ಫೀ ಜಾಸ್ತಿ ಬರುವಹಾಗೆ ಆಯಿತು. ಮತ್ತೆ ಈ ಫೀಸ್‌ನಿಂದ ಕೂಡ ಜಾಸ್ತಿ ಹಣ ಬರುವ ಹಾಗೆ ಆಯಿತು. ಆದರೆ ಬೇಸಿಕ್ ಆಗಿ ಯಾವುದೇ ಒಂದು ಪ್ರೈವೇಟ್ ಇನ್‌ಸ್ಟಿಟ್ಯೂಶನ್ ನಡೆಸಬೇಕಾದರೆ, ಈಗ ಒಂದು ಮೆಡಿಕಲ್ ಕಾಲೇಜು ನಡೆಸಬೇಕಾದರೆ ಅದಕ್ಕೆ ಕೋಟಿಗಟ್ಟಲೆ ಹಣ ಬೇಕು. ಅದನ್ನು ಸಮರ್ಪಕವಾಗಿ ನಡೆಸಬೇಕೆನ್ನುವುದಾದರೆ, ನನಗೆ ಗೊತ್ತಿರುವ ಹಾಗೆ ಒಂದು ಮೆಡಿಕಲ್ ಕಾಲೇಜಿಗೆ ಒಂದು ವರ್ಷಕ್ಕೆ ಒಂದೂವರೆ ಕೋಟಿ ರೂ ಬೇಕಾಗುತ್ತದೆ. ಕ್ಯಾಪಿಟೇಶನ್ ಫೀ ತೆಗೆದುಕೊಳ್ಳದೇ ಹೋದರೆ ಅವರು ಪ್ರೈವೇಟ್ ಇನ್ಸಿಟಿಟ್ಯೂಶನ್‌ನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಯಾವುದೇ ಪ್ರೈವೇಟ್ ಸ್ಕೂಲನ್ನೂ ನಡೆಸುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ನಾನು ಏನು ಹೇಳುತ್ತಿದ್ದೇನೆ ಎಂದರೆ, ಯಾವುದೇ ಕಾರಣದಿಂದ, ಪ್ರೈವೇಟ್ ಇನ್ಸ್ಟಿಟ್ಯೂಶನ್‌ನಲ್ಲಿ ಕ್ಯಾಪಿಟೇಶನ್ ಫೀ ತೆಗೆದುಕೊಳ್ಳದೇ ಅದನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ಪ್ರತಿಯೊಬ್ಬರಿಗೂ ಕೂಡ ಗೊತ್ತಿದೆ. ಈಗ ಕ್ಯಾಪಿಟೇಶನ್ ಫೀ ಕೊಡತಕ್ಕವರು ಯಾರು? ಉದಾಹರಣೆಗೆ ಬಾಪೂಜಿ ಎಜ್ಯುಕೇಶನ್ ಸೊಸೈಟಿಯಾಗಬಹುದು ಅಥವಾ ಮಂಗಳೂರು ಮೆಡಿಕಲ್ ಕಾಲೇಜ್ ಆಗಲಿ, ಇವತ್ತು ಅವರಿಗೆ ಇನ್ನೂರು-ಮೂನ್ನೂರು ಕೋಟಿ ರೂಪಾಯಿ ಆದಾಯ ಬಂದಿದೆ. ಹಣ ಇದ್ದವರು ಕೊಟ್ಟು ಓದಿಸಿದ್ದಾರೆ. ಎಲಿಜಿಬಿಲಿಟಿ ಇರತಕ್ಕಂಥ ವಿದ್ಯಾರ್ಥಿಗಳು ಅಲ್ಲಿ ಪ್ರವೇಶ ತೆಗೆದುಕೊಂಡಿದ್ದಾರೆ. ಆದ್ದರಿಂದ ಆದರ ಬಗ್ಗೆ ಯೋಚನೆ ಮಾಡುವುದಕ್ಕಿಂತ ಪ್ರೈವೇಟ್ ಇನ್ಸ್ಟಿಟ್ಯೂಶನ್‌ಗಳನ್ನು ಬೆಳೆಯುವುದಕ್ಕೆ ಬಿಟ್ಟು ಲಿಬರಲೈಸೇಷನ್ ಆಫ್ ಎಜುಕೇಶನ್ ಬಗ್ಗೆ ನೀವೇನು ಯೋಚನೆ ಮಾಡುತ್ತಿದ್ದೀರಿ, ಆ ರೀತಿ even if somebody wants to run a University, you must give them. ಎಲ್ಲಾ ಕಂಟ್ರೋಲ್ ನೀವು ಇಟ್ಟುಕೊಂಡು ವೆಸ್ಟರ್ನ್ ಕಂಟ್ರೀಸ್‌ನಲ್ಲಿ ಮಾಡುವ ತರಹ ಕಂಟ್ರೋಲ್ ನೀವು ಇಟ್ಟುಕೊಂಡು ಸ್ಟ್ಯಾಂಡರ್ಡ್ ಮೈನ್‌ಟೈನ್ ಮಾಡಿಕೊಂಡು ಅವರು ಎಷ್ಟಾದರೂ ಕ್ಯಾಪಿಟೇಶನ್ ಫೀ

ತೆಗೆದುಕೊಳ್ಳಲಿ, ಇರತಕ್ಕಂಥಹವರು ಕೊಡುತ್ತಾರೆ. ಆ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದೆಂದು ನನಗೆನ್ನಿಸುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್:- ಅವರು ಡಾಕ್ಟರ್ಸ್ ಮಾಡಿ ಬೀದಿಗೆ ಬಿಟ್ಟಿದ್ದಾರೇನು? ಅಲ್ಲಿ ಎಷ್ಟು ಜನ ಡಾಕ್ಟರ್ಸ್ ಅಪಾಯಿಂಟ್‌ಮೆಂಟ್ ಇಲ್ಲ, ಹಾಗೆ ಇಂಜಿನಿಯರ್ಸ್ ಗ್ರ್ಯಾಜುಯೇಟ್ಸ್‌ಗೆ ಅಪಾಯಿಂಟ್‌ಮೆಂಟ್ಸ್ ಇಲ್ಲ ಎಂದು ಇದ್ದಾರೆ

(ಗೊಂದಲ)

ಡಾ. ಎನ್. ಬಿ. ನಂಜಪ್ಪ:- ನಾನು ಮಾನ್ಯ ಸದಸ್ಯರಿಗೆ ಒಂದು ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಎಜುಕೇಶನ್ ಕೊಡತಕ್ಕಂಥಾದ್ದು It is for education, not for appointment. ಎಜುಕೇಶನ್ ಕೊಟ್ಟವರಿಗೆಲ್ಲಾ ಗೌರ್ನಮೆಂಟ್ ಅಪಾಯಿಂಟ್‌ಮೆಂಟ್ಸ್ ಕೊಟ್ಟು ಒಂದೊಂದು ಕುರ್ಚಿ ಹಾಕಿ ಕೊಟ್ಟು ಆಸ್ಪತ್ರೆಗಳನ್ನು ಮಾಡಿ ಕೂರಿಸಬೇಕೆಂದು ಏನೂ ಇಲ್ಲ. ಇಂಜನೀಯರ್ಸ್ ಮಾಡಿದರೆ ಅವರಿಗೆ ಅಪಾಯಿಂಟ್‌ಮೆಂಟ್ ಕೊಡಬೇಕೆಂದು ಏನೂ ಇಲ್ಲ. ಬಿ. ಎ. ಮಾಡಿದರೆ ಅಪಾಯಿಂಟ್‌ಮೆಂಟ್ಸ್ ಕೊಡಬೇಕೆಂದು ಹೇಳುವುದಲ್ಲ ...

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್:- ಅದನ್ನು ಇಲ್ಲಿ ಹೇಳುವುದಕ್ಕೆ ಬಹಳ ಚೆನ್ನಾಗಿದೆ. ಹೊರಗಡೆ ಹೋಗಿ ಹೇಳಿ.

(ಗೊಂದಲ)

Madam Deputy Speaker:- Please allow the minister to continue

(Interruptions)

Dr. N.B. Nanjappa:- Education is only for education. ಡಾಕ್ಟರ್ಸ್ ಮಾರಿದ್ದಾರೆ ಅವರಿಗೆ ಅಪಾಯಿಂಟ್‌ಮೆಂಟ್ಸ್ ಕೊಟ್ಟು ಹಳ್ಳಿಗಳಿಗೆ ಹೋಗಿ ಎಂದರೆ ಯಾರೂ ಹೋಗುತ್ತಿಲ್ಲ. ಎಷ್ಟು ಜನ ಅಪಾಯಿಂಟ್‌ಮೆಂಟ್ ಆರ್ಡರ್ಸ್ ತೆಗೆದುಕೊಂಡಿರುವವರು ಹೋಗಿ ರಿಪೋರ್ಟ್ ಮಾಡಿಕೊಂಡಿದ್ದಾರೆ? ಆದ್ದರಿಂದ ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಪ್ರೈವೇಟ್ ಎಜುಕೇಶನ್ ಅನ್ನು ಲಿಬರಲೈಜ್ ಮಾಡಿದರೆ ಅವರು ಯಾವ ತರಹ ಬೇಕಾದರೂ ನಡೆಸಿಕೊಂಡು ಹೋಗಲಿ. ಅದು ಬಿಟ್ಟು ಅದನ್ನು ತೆಗೆದು ಹಾಕುವುದು ಪ್ರಾಕ್ಟಿಕಲ್ ಅಲ್ಲ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಶ್ರೀ ಆರ್. ದಯಾನಂದ ರಾವ್:- ಅಲ್ಲಿ ಡೊನೇಶನ್ ತೆಗೆದುಕೊಳ್ಳುತ್ತಾರೆ ಆಮೇಲೆ ಕ್ಯಾಪಿಟೇಶನ್ ಫೀ ತಗೆದುಕೊಳ್ಳುವುದಕ್ಕೆ ಶುರು ಮಾಡುತ್ತಾರೆ.

(ಗೊಂದಲ)

ಶ್ರೀ ಕೆ. ಹರ್ಷಕುಮಾರ ಗೌಡ:- ಮಾನ್ಯ ಸಭಾಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ. ಈಗ ಮಾನ್ಯ ಸದಸ್ಯರಾದ ಡಾ. ನಂಜಪ್ಪನವರು ಕ್ಯಾಪಿಟೇಶನ್ ಫೀ ಅನ್ನು ಲಿಬರಲೈಜ್ ಮಾಡಬೇಕೆಂದು ಹೇಳಿದರು. ಆದರೆ ನಮ್ಮ ಪ್ರಶ್ನೆ ಏನೆಂದರೆ, ಈ ಸಮಾಜದಲ್ಲಿ ಶೇಕಡ ೮೦ರಷ್ಟು ಬಡ ಜನರು ಇರತಕ್ಕಂಥ ರಾಷ್ಟ್ರ ಇದು. ಅವರ ಬಗ್ಗೆ ಯೋಚನೆ ಮಾಡಿ ನಾವು ಈ ಒಂದು ಮಾಧ್ಯಮದಲ್ಲಿ ಕಾಪಿಟೇಶನ್ ಫೀ ಏನು ನಡೆಯುತ್ತಿದೆ, ಅದನ್ನು ತಡೆಯುವಂತಹ ವ್ಯವಸ್ಥೆ ಮಾಡಬೇಕಾಗುತ್ತದೆ. ಅಲ್ಲಿ ಬರೀ ದುಡ್ಡು ಮಾಡಿಕೊಂಡು ವ್ಯಾಪಾರ ದಂಧೆ ಮಾಡುವುದಕ್ಕೆ ಸರ್ಕಾರ ಬೇಕಾಗಿಲ್ಲ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಬಡವರೂ ಕೂಡ ಈ ಒಂದು ಮೆಡಿಕಲ್ ಎಜುಕೇಶನ್ ಆಗಲಿ, ಯಾವುದೇ ಒಂದು ಎಜುಕೇಶನ್ ಆಗಲಿ, ಓದುವಂತಹ ಮುಕ್ತ ಅವಕಾಶ ಇರುವಂತಹ ವಾತಾವರಣವನ್ನು ಸಮಾಜದಲ್ಲಿ ಸೃಷ್ಟಿ ಮಾಡಬೇಕಾಗುತ್ತದೆ. ಇದು ಸರ್ಕಾರದ ಜವಾಬ್ದಾರಿ. ದುಡ್ಡು ಕೊಟ್ಟು ಓದಿ ಎಂದರೆ ದುಡ್ಡು ಇರುವವರು ಕೊಡುತ್ತಾರೆ, ಅವರೇ ಡಾಕ್ಟರ್ಸ್ ಆಗುತ್ತಾರೆ, ಇಂಜನಿಯರ್ಸ್ ಆಗುತ್ತಾರೆ. ಅದಕ್ಕೆ ಅವಕಾಶ ಕೊಡಬಾರದು ಎಂದು ನಾನು ತಮ್ಮನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, capitation fees, I don't think anybody can justify. It is a big menace. ಅದನ್ನು ನಾವು ಜಸ್ಟಿಫೈ ಮಾಡಬೇಕಾದಂತಹ ಪ್ರಶ್ನೆ ಇಲ್ಲ. ಅವರು ಅದನ್ನು ಬೇರೆ ಕೈಗಾರಿಕೆ ಮಾಡಿಕೊಳ್ಳಲಿ. ಆದರೆ ಈ ಶಿಕ್ಷಣ ಕ್ಷೇತ್ರದಲ್ಲಿ ಕೈಗಾರಿಕೆ ಮಾಡಿಕೊಳ್ಳುವುದು ಬೇಡ. ಎಜುಕೇಶನ್ ಕೂಡ ಕೈಗಾರಿಕೆ ಎಂದು ವರ್ಗೀಕರಣ ಮಾಡಿದ ಮೇಲೆ ತಮ್ಮ ಪ್ರಶ್ನೆ ಉದ್ಭವವಾಗುತ್ತದೆ.

ಶ್ರೀ ಆರ್. ದಯಾನಂದರಾವ್:- ಮಾನ್ಯ ಮಂತ್ರಿಗಳು ಹೇಳಬೇಕು. ಕ್ಯಾಪಿಟೇಶನ್ ಫೀ ಡೊನೇಶನ್ ಯಾವಾಗ ತೆಗೆದು ಹಾಕುತ್ತೀರಿ ಎಂದು ಹೇಳಬೇಕು. ಅಬಾಲಿಶ್ ಯಾವಾಗ ಮಾಡುತ್ತೀರಿ ?

(ಗೊಂದಲ)

ಶ್ರೀ ಕೆ. ಹರ್ಷಕುಮಾರ್ ಗೌಡ:- ಲಿಕ್ಕರ್‌ಗಿಂತ lucurative salable commadity ಎಂದರೆ ಈ ಎಜುಕೇಶನ್ ಸೀಟ್ಸ್.

(ಗೊಂದಲ)

ಡಾ. ಎನ್. ಬಿ. ನಂಜಪ್ಪ- ಈಗ ನಾನು ಹೇಳುವುದೇನಂದರೆ, My son has secured 70% marks. He has got an eligibility. But, according to your rules, he cannot get into a medical college or an engineering college. I have got some property. I will sell the entire property and I want my son to get admission either in an engineering college or in a medical college. What objection you have got? There is a private institution. I will sell all my property and get myson admitted.

ಶ್ರೀ ಆರ್. ದಯಾನಂದ ರಾವ್:- ಡಾಕ್ಟರೇ ನೀವು ಒಬ್ಬರು ಇರಬಹುದು. ಬ್ಲಾಕ್ ಮನಿ ಹೊರಗಡೆ ಬರುತ್ತದೆ.

Dr. N.B. Nanjappa:- He has secured 70%. He has not taken 40%. He has secured 70%. But, he is not eligible to go to a Government medical college, because it closed only at 80%. How can you prevent my son to become a doctor? What right the Government or anybody has got, when he has got a constitutional right to become an educated man? He wants to become either an Engineer or a Doctor.

ಶ್ರೀ ಆರ್. ನಾರಾಯಣ್:- ಈಗ ಮಾನ್ಯ ಸಚಿವರು ಹೇಳಿದರು. ಅದು ಒಂದು ವಿದ್ಯಾಕ್ಷೇತ್ರ - ಕೈಗಾರಿಕಾ ಕ್ಷೇತ್ರ ಎಂದು ಹೇಳಿದರು. ಈಗ ನಮಗೆಲ್ಲಾ ಗೊತ್ತಿದೆ. ಆದರಲ್ಲಿ ಮುಚ್ಚುಮರೆ ಏನೂ ಇಲ್ಲ. ಅದನ್ನು ವಾಸ್ತವಿಕ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅದು ಹೆಚ್ಚು ಕಡಿಮೆ ಅನ್ ಅಫಿಷಿಯಲ್ ಆಗಿ ಇಂಡಸ್ಟ್ರಿ ಆಗಿ ಹೋಗಿದೆ. ಆದರೆ ಆ ರೀತಿ ತಾವು ಡಿಕ್ಲೇರ್ ಮಾಡಿ ಲೇಬಲ್ ಹಚ್ಚಿಲ್ಲ. ಇದು ಈಗ ಇರತಕ್ಕಂಥ ವಾಸ್ತವಿಕ ಸ್ಥಿತಿ. ಡಾ. ನಂಜಪ್ಪನವರು ಹೇಳತಕ್ಕಂಥಾದ್ದು ನೂರಕ್ಕೆ ನೂರರಷ್ಟು ಸತ್ಯವಾಗಿದೆ. ಕ್ಯಾಪಿಟೇಶನ್ ಶುಲ್ಕವನ್ನು ನಿರ್ಮೂಲನೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ತಾವು ಯಾವುದೇ ಕಾನೂನು ತನ್ನಿ. ನೀವು ಚಾಪೆ ಕೆಳಗಡೆ ನುಗ್ಗಿದರೆ ಅವರು ರಂಗೋಲಿ ಕೆಳಗೆ ನುಗ್ಗಿ ಬರುತ್ತಾರೆ. ಮಾನ್ಯ ಸಚಿವರೇ ಒಪ್ಪಿಕೊಂಡಿದ್ದಾರೆ. ಮಾನ್ಯ ಸಚಿವರು ಬಹಳ ಚೆನ್ನಾಗಿ ಒಪ್ಪಿಕೊಂಡಿದ್ದಾರೆ. ಇದು ಇರತಕ್ಕಂಥ ವಾಸ್ತವಾಂಶ. ಇದರ ಬಗ್ಗೆ ನೀವು ಹೆಚ್ಚು ಕಡಿವಾಣ ಹಾಕಬೇಕಾಗುತ್ತದೆ. ಕನಿಷ್ಟ ೫೦ ಪರ್ಸೆಂಟ್ ಸೀಟ್‌ಗಳನ್ನು ಪ್ರೈವೇಟ್ ಮೆಡಿಕಲ್ ಕಾಲೇಜುಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರದ ರಿಜರ್ವೇಶನ್ ಮೂಲಕ ಬಡವರಿಗೆ ಒದಗಿಸಿಕೊಡಬಹುದು. ಇನ್‌ಟೇಕ್‌ನಲ್ಲಿ ಐವತ್ತರಿಂದ ಅರವತ್ತು ಪರ್‌ಸೆಂಟ್ ಗೌರ್‍ನಮೆಂಟ್ ಸೀಟ್ ರಿಸರ್ವ್ ಮಾಡುವುದರ ಮೂಲಕ ಬಡವರಿಗೆ, ಅರ್ಹರಿಗೆ ಸೀಟ್ ಕೊಡಬಹುದೇ ಹೊರತು, ಮಾನ್ಯ ನಂಜಪ್ಪನವರು ಹೇಳುವುದು ವಾಸ್ತವಿಕವಾಗಿದೆ. ಇವತ್ತು ಬೆಂಗಳೂರು ನಗರದಲ್ಲಿ ಒಂದು ಸಣ್ಣ ಪ್ರೈಮರಿ ಸ್ಕೂಲ್, ನರ್ಸರಿ ಸ್ಕೂಲ್ ನಡೆಸಬೇಕಾದರೆ ಬಿಲ್ಡಿಂಗ್ ಬಾಡಿಗೆಯಾಗಲೀ, ಜಾಗ ಆಗಲಿ ತೆಗೆದುಕೊಳ್ಳುವುದಕ್ಕೆ ಪ್ರೈವೇಟ್‌ನವರಿಗೆ ಬಹಳ ಕಷ್ಟವಾಗಿದೆ. ಆದುದರಿಂದ ಇದನ್ನು ವಾಸ್ತವಾಂಶ ದೃಷ್ಟಿಯಿಂದ ನೋಡಬೇಕಾಗುತ್ತದೆ. ನಾವು ಇವತ್ತು ಇದರ ಬಗ್ಗೆ ಹೇಳುವುದಕ್ಕೆ, ನೋಡುವುದಕ್ಕೆ ಚೆನ್ನಾಗಿ ಇದೆ. ಆದರೆ ಒಂದು ಮೆಡಿಕಲ್ ಕಾಲೇಜ್ ನಡೆಸಬೇಕಾದರೆ ಕಷ್ಟ ಇದೆ. ಈಗ ನಮ್ಮ ಸ್ನೇಹಿತರಾದ ಪರಮೇಶ್ವರ್ ಅವರು ೩೦ ಕೋಟಿ ರೂಪಾಯಿ ಖರ್ಚು ಮಾಡಿ ಇಡೀ ನಮ್ಮ ರಾಜ್ಯಕ್ಕೇ ಮಾದರಿಯಾದ ಮೆಡಿಕಲ್ ಕಾಲೇಜ್ ಮಾಡಿರುತ್ತಾರೆ. ಅಲ್ಲಿ ಸೌಲಭ್ಯ ಚೆನ್ನಾಗಿದೆ, ಅನುಕೂಲ ಚೆನ್ನಾಗಿ ಇದೆ. ಅಲ್ಲಿ ಐದು ಲಕ್ಷ ರೂಪಾಯಿ ತೆಗೆದುಕೊಳ್ಳುತ್ತಾರೆ ಎರಡು ಲಕ್ಷ ರೂಪಾಯಿ ತೆಗೆದುಕೊಳ್ಳುತ್ತಾರೆ ಎಂದು ನಾವು ಮಾತನಾಡುತ್ತೇವೆ. ಆದರೆ ವಾಸ್ತವಸ್ಥಿತಿ ನೋಡಿದರೆ, ರಾಷ್ಟ್ರಕ್ಕೇ ಮಾದರಿಯಾದಂತ ಒಂದು ಬಿಲ್ಡಿಂಗ್ ಕಟ್ಟಿದ್ದಾರೆ. ಇದರ ಬಗ್ಗೆ ಪ್ರಾಮಾಣಿಕತೆಯಿಂದ ಏನು ಮಾಡಿದರೂ ಸಹ ಕಡಿಮೆಯೇ. ಮಾನ್ಯ ನಂಜಪ್ಪನವರು

ಹೇಳಿದ ರೀತಿಯಲ್ಲಿ ಬಡ ಮಕ್ಕಳಿಗೆ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ವಿದ್ಯಾಭ್ಯಾಸ ಸಿಗಬೇಕಾದರೆ ಸರಕಾರ ಹೆಚ್ಚಿನ ಹತೋಟಿಯನ್ನು ಇಟ್ಟು, ಪ್ರೈವೇಟ್ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜ್‌ಗಳಲ್ಲಿ ನೂರಕ್ಕೆ ಐವತ್ತಕ್ಕಿಂತ ಹೆಚ್ಚು ಸರಕಾರಿ ಕೋಟಾ ಅಳವಡಿಸಿಕೊಂಡರೆ ಮಾತ್ರ ಸಾಧ್ಯವೇ ಹೊರತು ಬೇರೆ ಆದರೆ, ಮಾತು ಮಾತಾಗಿಯೇ ಉಳಿಯುತ್ತದೆ. ಕ್ಯಾಪಿಟೇಷನ್ ಶುಲ್ಕ ಜಾಸ್ತಿಯಾಗುತ್ತಾ ಹೋಗುತ್ತದೆ. ಶಾಸಕರಾಗಿ ನಾವು ಇದನ್ನು ನೋಡುತ್ತಿದ್ದೇವೆ, ಇದು ನನ್ನ ಪ್ರಾಮಾಣಿಕ ಅನಿಸಿಕೆ. ಇದರಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ನಾನು ಖಡಾ ಖಂಡಿತವಾಗಿ ಹೇಳುತ್ತೇನೆ, ಕ್ಯಾಪಿಟೇಷನ್ ಶುಲ್ಕ ಇವತ್ತು ತೆಗೆಯಿರಿ, ನಾನು ನನ್ನ ಶಾಸನಸಭಾ ಸದಸ್ಯನ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಹೋಗುತ್ತೇನೆ. ಇವತ್ತು ಕ್ಯಾಪಿಟೇಷನ್ ತೆಗೆದಿದ್ದೇವೆ ಎಂದು ಇಡೀ ಸಭೆ ಒಪ್ಪಿಕೊಳ್ಳಬೇಕು, ನಾನು ಶಾಸನಸಭಾ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟು ಹೋಗುತ್ತೇನೆ.

Sri. M. Veerappa Moily:- I am not yielding. capitation fees, about this debate also should not go so wild. There should be some limit. I don't want that my debate would take that course. ನಾರಾಯಣ್ ಅವರಷ್ಟು ಹತಾಶ ಮನೋಭಾವದವನಲ್ಲ ನಾನು. I am a very optimistic person. Don't be pesimistic provided you and I have a mind. Then you see there is a course - will power - whether you or me or any government.

ಶ್ರೀ ಕೆ. ಹರ್ಷಕುಮಾರ್ ಗೌಡ:- ಬಡವರ ಮಕ್ಕಳಿಗೆ ಮೆಡಿಕಲ್ ಎಜುಕೇಶನ್ ಬೇಡವೇ? ಬಡವರ ಮಕ್ಕಳಿಗೆ ಏತಕ್ಕೆ ಕೊಡುವುದಿಲ್ಲ?

Sri. M. Veerappa Moily:- I am not yielding.

ಶ್ರೀ ಆರ್ ದಯಾನಂದ ರಾವ್:- ಮಾನ್ಯ ಉಪಾಧ್ಯಕ್ಷರೇ...

Madam Deputy Speaker:- Let the Minister complete.

ಶ್ರೀ ಎಂ. ವೀರಪ್ಪ ಮೊಯಿಲಿ:- ದಯಮಾಡಿ I don't want interruptions for some time. ನಾನು ೧೦-೧೫ ನಿಮಿಷಗಳಲ್ಲಿ ಕಂಪ್ಲೀಟ್ ಮಾಡಿಬಿಡುತ್ತೇನೆ. ಇದರಲ್ಲಿ ಹತಾಶ ಮನೋಭಾವದ ಅಗತ್ಯ ಇಲ್ಲ. ತಾವು ಏನು ಮಾಡುತ್ತಿದ್ದೀರಿ, ಇದರಲ್ಲಿ ಒಬ್ಬೊಬ್ಬರೂ ಅಸಹಾಯಕರು ನಾವೆಲ್ಲಾ ಕೂಡಿದರೆ ಶಕ್ತಿ ಬರುತ್ತದೆ. ಒಬ್ಬೊಬ್ಬರೇ ಇದ್ದರೆ ಆಗುವುದಿಲ್ಲ, ತಾವು ಹೇಳಿದ್ದುದು ಕರೆಕ್ಟ್. If there is a mind there is a way. Mr. Narayan alone cannot do. ನಾವು ಮಾತನಾಡಬೇಕು, ಇಲ್ಲ ನೀವು ಮಾತನಾಡಬೇಕು. ಇದರಲ್ಲಿ ಪ್ರಶ್ನೆ ಏನೆಂದರೆ ಇದು ಎಕ್ಸ್‌ಟ್ರೀಮ್ ವ್ಯೂಸ್‌ಗೆ ಹೋಗಬಾರದು. ಏತಕ್ಕೆಂದರೆ ಆಗುವುದೇ ಇಲ್ಲ, ಮಾಡಲೇ ಬೇಕು ಎಂದು ಈ ತರಹ ಹೋಗಬಾರದು. Private institutions should survive provided they have a public accountability. ಅವರು ಏನು ಕಲೆಕ್ಟ್ ಮಾಡುತ್ತಾರೆ, are they spending on the institutions? ಅದು ಮುಖ್ಯ. If they are not spending the money, if they only make profit out

of the institutions then the exploitation area comes.

ಶ್ರೀ ಆರ್ ದಯಾನಂದ ರಾವ್:- ಮಾನ್ಯ ಉಪಾಧ್ಯಕ್ಷರೇ ...

ಶ್ರೀ ಎಂ. ವೀರಪ್ಪ ಮೊಯಿಲಿ:- ಇಲ್ಲಿ ಕೇಳಿ, ಅದಕ್ಕೇ ಹೇಳುವುದು. That is what I mean. ನೀವು ಈ ರೀತಿ ಕುಳಿತುಕೊಂಡು ಕಾನ್ಫರೆನ್ಸ್ ಮಾಡಿದರೆ ಹೇಗೆ? There should be some discipline.

ಉಪಾಧ್ಯಕ್ಷರು:- ದಯಾನಂದ ರಾವ್ ಅವರೇ, ಅವರು ಈಲ್ಡ್ ಆಗದೇ ತಾವು ಮಾತನಾಡಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಏನೆಂದು ಹೇಳಿದರೆ, ನಾವು ಈ ದೇಶದಲ್ಲಿ ಮಾನವ ಸಂಪನ್ಮೂಲವನ್ನು ಚೆನ್ನಾಗಿ ರೂಪಿಸಬೇಕಾಗುತ್ತದೆ. ಕ್ಯಾಪಿಟೇಷನ್ ಫೀಸ್ ಪಿಡುಗು ಎಲ್ಲಿ ಬರುತ್ತದೆ ಎಂದರೆ, ಒಂದು ಸಂಸ್ಥೆ ಕಟ್ಟಬೇಕು, ಅದಕ್ಕೆ ಎಷ್ಟು ಹಣ ಬೇಕು, ಅಷ್ಟು ಹಣ ಕೊಡುವುದಕ್ಕೆ ಸರ್ಕಾರ ಕೂಡ ಅಡ್ಡ ಬರುವುದಿಲ್ಲ. ಯಾರೂ ಕೂಡ ಅಡ್ಡ ಬರುವುದಿಲ್ಲ. ಆದರೆ ಅದಕ್ಕಿಂತ ಹೆಚ್ಚು ನೀವು ವಸೂಲು ಮಾಡಿದರೆ ಆಗ ಕೊಶ್ಚನ್ ಆಫ್ ಎಕ್ಸ್‌ಪ್ಲಾಯ್‌ಟೇಷನ್ ಪ್ರಶ್ನೆ ಬರುತ್ತದೆ. ಇದು ಹಣ ಜನರೇಟ್ ಮಾಡತಕ್ಕಂಥ ಟಂಕಶಾಲೆ ಆಗಬಾರದು. ಇದು ಜನ ಶಕ್ತಿಯನ್ನು ಉತ್ಪಾದನೆ ಮಾಡತಕ್ಕಂಥ ಟಂಕಶಾಲೆ ಆಗಬೇಕು. ವ್ಯತ್ಯಾಸ ಇರುವುದು ಇಲ್ಲಿಯೇ. ಆ ಟಂಕಶಾಲೆಗೆ ಖರ್ಚಿದೆ. ಆ ಖರ್ಚನ್ನು it has to be provided when we make rules. ಸೂತ್ರ ಇರತಕ್ಕಂಥಾದ್ದು ಅಷ್ಟೇ. ಯಾರೂ ಕೂಡ ಮಾಡಲಿಕ್ಕೆ ಆಗುವುದಿಲ್ಲ, ಕೈ ಹಾಕಬೇಡಿ ಎನ್ನತಕ್ಕಂಥ ಭಾವನೆಯನ್ನೂ ಕೂಡ ನಾವು ಒಪ್ಪುವುದಿಲ್ಲ. ಆದ್ದರಿಂದ ಈ ಬಗ್ಗೆ ನಾವು ಈಗಾಗಲೇ ಡ್ರಾಫ್ಟ್ ರೂಲ್ಸ್ ಮಾಡಿದ್ದೇವೆ. ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. I am confident that everybody will co-operate with us. ಆಮೇಲೆ ಮಾನ್ಯ ಕಮರುಲ್ ಇಸ್ಲಾಂರವರು ಬಿ. ಜಿ. ಎಲ್. ಕೋರ್ಸ್ ಬಗ್ಗೆ ಕೇಳಿದರು. ಆ ಕೋರ್ಸನ್ನು ಬೆಂಗಳೂರು ಯೂನಿವರ್ಸಿಟಿಯಲ್ಲಿ ನಿಲ್ಲಿಸಿದ್ದಾರೆ. ಮೈಸೂರು ಯೂನಿವರ್ಸಿಟಿಯಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಕರೆಸ್ಪಾಂಡೆನ್ಸ್ ಕೋರ್ಸ್‌ನಲ್ಲಿ ಈ ಕೋರ್ಸ್ ಇದೆ. They can try to take it up. ಈ ಬಗ್ಗೆ ನಾವು ಕೂಡ ಬೆಂಗಳೂರು ವಿಶ್ವವಿದ್ಯಾನಿಲಯದವರ ಜೊತೆ ಮಾತನಾಡಿದ್ದೇವೆ. ಅವರು ಸಾಧ್ಯವಿಲ್ಲ ಎಂದು ಹೇಳಿದ್ದಾರೆ. Reviving will lead to lot of problems. Regarding allocation to Universities, ಸನ್ಮಾನ್ಯ ಹಿರಿಯ ಸದಸ್ಯರಾದಂತಹ ರಂಗನಾಥ್‌ರವರು ಹೇಳಿದ್ದಾರೆ. ಡಾಕ್ಟರ್ ಪರಮೇಶ್ವರ್ ಕೂಡ ಹೇಳಿದ್ದಾರೆ. ಈ ಬಗ್ಗೆ ನಾನು ವಿಚಾರ ಮಾಡಿದ್ದೇನೆ. ನಾನು ಈಗಾಗಲೇ ಹೇಳಿದಂತೆ we will try to provide some more money. ಈಗ ೭ ನೇ ಪಂಚವಾರ್ಷಿಕ ಯೋಜನೆಯಲ್ಲಿ ೯೨೫ ಲಕ್ಷ ರೂಪಾಯಿಗಳು ಇದ್ದರೆ ಈ ಸಾರಿ ೧೫೮೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಕ್ಸ್‌ಪೆಂಡಿಚರ್ ೧೫೮೦ ಲಕ್ಷ. ಈ ವರ್ಷ ನಾವು ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ೩೦ ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. There is a big increase; almost practically 100% increase from 7th five-year plan to 8th five year plan. ಇದು ಸ್ವಲ್ಪ ಜಾಸ್ತಿ ಕೊಟ್ಟಿದ್ದೇವೆ. ಅದು ಅಲ್ಲದೆ, ಓಪನ್

ಯೂನಿವರ್ಸಿಟಿ ಕೂಡ ಮಾಡುತ್ತೇವೆ ಎಂದು ಹೇಳಿದ್ದೇವೆ. ಈಗಾಗಲೇ ಮಸೂದೆ ಬರುತ್ತಿದೆ. ಅದನ್ನು ಪಾಸ್ ಮಾಡುತ್ತೇವೆ. AICTE Scale for polytechnics ಬಗ್ಗೆ ನಿನ್ನೆಯ ದಿವಸ ಉತ್ತರ ಕೊಟ್ಟಿದ್ದೇನೆ ಪುನಃ ಅದನ್ನು ಪುನರಾವರ್ತನೆ ಮಾಡುವುದಿಲ್ಲ. ಅದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಅದು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತದೆ ಎನ್ನುವುದನ್ನು ಹೇಳುವುದಕ್ಕಾಗುವುದಿಲ್ಲ. ಇನ್ನು ಉರ್ದು ಚೇರ್ಸ್ ಮಾಡುವುದಕ್ಕೆ ಮಾನ್ಯ ಕಮರುಲ್ ಇಸ್ಲಾಂರವರು ಹೇಳಿದರು. ಕರ್ನಾಟಕ ಯೂನಿವರ್ಸಿಟಿಯಲ್ಲಿ, ಮಂಗಳೂರು ಯುನಿವರ್ಸಿಟಿಯಲ್ಲಿ ಕೂಡ ಮಾಡ ಬೇಕೆಂದು ಹೇಳಿದರು. ಆದುದರಿಂದ ನಾವು ಆ ಯೂನಿವರ್ಸಿಟಿಯವರ ಜೊತೆ ಸಮಾಲೋಚನೆ ಮಾಡಿ ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಪಠ್ಯ ಪುಸ್ತಕಗಳ ರಚನೆ, ಮುದ್ರಣದ ಬಗ್ಗೆ ಈ ಪುಸ್ತಕದಲ್ಲಿ ಕಾಣಿಸಿದ್ದೇವೆ. ಆದ್ದರಿಂದ ಪುನಃ ಅದನ್ನು ನಾನು ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಆದರೆ ಒಂದು ವಿಷಯ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಇಚ್ಛೆ ಏನೆಂದರೆ, ಈಗ ನಾವು ಅದರ ಬಗ್ಗೆ ಒಂದು ಹೊಸ ನೀತಿಯನ್ನು ತೆಗೆದುಕೊಂಡು ನಾವು ಎಲ್ಲಾ ಪಠ್ಯ ಪುಸ್ತಕಗಳನ್ನು ಮಾರಾಟ ಮಾಡಲು ಆಸಕ್ತಿಯುಳ್ಳ ಯಾವುದೇ ಪುಸ್ತಕ ವ್ಯಾಪಾರಿಗಳಿಗೆ ಒಟ್ಟಾಗಿ ಇಲ್ಲವೆ ಸಣ್ಣ ಪ್ರಮಾಣದಲ್ಲಿ ಪುಸ್ತಕಗಳನ್ನು ಒದಗಿಸಿ ಮಾರಾಟ ಮಾಡಲು ಶಾಲೆಗಳು ಪ್ರಾರಂಭವಾಗುವುದಕ್ಕಿಂತ ಮೊದಲೇ ಪುಸ್ತಕಗಳನ್ನು ಅಚ್ಚಾಗಿ ಇರುವಂತೆ ಈ ವರ್ಷ ಎಲ್ಲಾ ರೀತಿಯ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿ ನಾವು ಕೊಟ್ಟಿದ್ದೇವೆ. ಈ ೩-೫-೮ ಕ್ಲಾಸ್‌ಗಳಿಗೆ ಹೊಸ ಪಠ್ಯ ಪುಸ್ತಕಗಳನ್ನು ಕೊಟ್ಟಿದ್ದೇವೆ. ಮತ್ತು ಹಿಂದೆ ಇದ್ದಂತಹ ಪುಸ್ತಕಗಳಲ್ಲಿ ಕೆಲವು ಹೊಸ ಅಂಶಗಳನ್ನು ಸೇರಿಸಿದೆ. ಅದು ಯೋಗ ಶಿಕ್ಷಣ ಇರಬಹುದು, ನೀತಿ ಶಿಕ್ಷಣ ಇರಬಹುದು ಮತ್ತು ನಾಡಗೀತೆ, ರಾಷ್ಟ್ರಗೀತೆ ಇರಬಹುದು. ಅದೆಲ್ಲಾ ತತ್ವಗಳನ್ನು ಒಳಗೊಂಡು ಕೆಲವು ಸುಧಾರಣೆಗಳನ್ನು ನಾವು ಹಳೆಯ ಪಠ್ಯಪುಸ್ತಕಗಳಲ್ಲಿ ಹೊಸದಾಗಿ ಇಂಟರ್‌ಡ್ಯೂಸ್ ಮಾಡಿ, ೧೯೮೬ರ ಹೊಸ ಶಿಕ್ಷಣ ನೀತಿ ಪ್ರಕಾರ ೩-೫-೮ನೇ ತರಗತಿಗಳಿಗೆ ಬುಕ್ ಮಾಡಿದ್ದೇವೆ. ಉಳಿದ ಭಾಗವನ್ನು ಬರುವ ವರ್ಷ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರಾದ ಜಿ. ಎಸ್. ಆಚಾರ್‌ರವರು, ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸುವ ದೃಷ್ಟಿಯಿಂದ ಯೋಗ ಶಿಕ್ಷಣ ಬಗ್ಗೆ ಮಾತನಾಡಿದರು. ನಾನು ಅದರ ಬಗ್ಗೆ ಈಗಾಗಲೆ ಹೇಳಿದ್ದೇನೆ. ರಾಜ್ಯದಲ್ಲಿ ಜಿಗಣಿ ಮತ್ತು ಮಲ್ಲಾಡಿಹಳ್ಳಿಯಲ್ಲಿರುವ ಯೋಗ ಕೇಂದ್ರಗಳಲ್ಲಿ...

ಶ್ರೀ ಕೆ. ಹೆಚ್. ರಂಗನಾಥ್:- ಕಾರಂತರು ಒಂದು ಮಾತು ಹೇಳಿದ್ದರಲ್ಲ...

ಶ್ರೀ ಎಂ. ವೀರಪ್ಪ ಮೊಯಿಲಿ:- ಕಾರಂತರಿಗೂ ನಮಗೂ ಭಿನ್ನಾಭಿಪ್ರಾಯ ಇಲ್ಲ. ಕಾರಂತರು ಸಣ್ಣ ಮಕ್ಕಳಿಗೆ ಯೋಗ ಶಿಕ್ಷಣ ಕೊಡಬೇಡಿ ಎಂದು ಹೇಳಿದರು. ಆದುದರಿಂದ ಒಂದರಿಂದ ೪ನೇ ತರಗತಿಯವರೆಗೆ ಕೊಡಬಾರದು, ೫ನೇ ತರಗತಿಯಿಂದ ಯೋಗ ಶಿಕ್ಷಣ ಕೊಡಬಹುದು ಎಂದು ತಜ್ಞರ ಅಭಿಪ್ರಾಯ ಇದೆ. ಆದರೆ ಯೋಗ ಶಿಕ್ಷಣವನ್ನು ಎಷ್ಟರ ಮಟ್ಟಿಗೆ ಕೊಡಬಹುದು, ಎಷ್ಟು ಕೊಡಬಹುದು, ಯಾರಿಗೆ ಕೊಡಬೇಕು ಎನ್ನುವುದನ್ನು ನಾವು ಪರಿಶೀಲನೆ ಮಾಡಿದ್ದೇವೆ. ಆದ್ದರಿಂದ ಕಾರಂತರಿಗೂ ನಮಗೂ ಯೋಗ ಶಿಕ್ಷಣ ಕೊಡುವುದರಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ನಾವು ಯೋಗ ಶಿಕ್ಷಣವನ್ನು ಕೊಡುತ್ತೇವೆ ಎಂದ ಕೂಡಲೆ ಒಂದನೆ ಕ್ಲಾಸ್‌ನಿಂದಲೇ ಕೊಡುತ್ತಾರೆಂಬ ಅಭಿಪ್ರಾಯ ಅವರಲ್ಲಿತ್ತು. ಆ ರೀತಿಯ ಅಭಿಪ್ರಾಯ ನಮ್ಮಲ್ಲಿ ಇಲ್ಲವೆಂದು ನಾವು ಅವರಿಗೆ ಹೇಳಿದ್ದೇವೆ. ಯೋಗ ಶಿಕ್ಷಣ ಯಾವ ಯಾವ ವಿದ್ಯಾರ್ಥಿಗಳಿಗೆ ಎಷ್ಟರ ಮಟ್ಟಿಗೆ ಕೊಡಬೇಕು, ಎಷ್ಟು ಕೊಡಬೇಕು, ಯಾವ ರೀತಿಯಲ್ಲಿ ಕೊಡಬೇಕು ಎಂಬ ಬಗ್ಗೆ ಸಿಲಬಸ್ ಇದೆ. ಇದಕ್ಕೆ ಸಂಬಂಧಪಟ್ಟ

ಯೋಗ ಶಿಕ್ಷಣ ತಜ್ಞರು ಪೂನಾದಲ್ಲಿ ಇದ್ದಾರೆ, ನಮ್ಮ ಮಲ್ಲಾಡಿಹಳ್ಳಿಯಲ್ಲಿದೆ. ಇಲ್ಲಿ ವಿವೇಕಾನಂದ ಯೋಗಾ ಕೇಂದ್ರವಿದೆ ಮತ್ತು ಧರ್ಮಸ್ಥಳದ ಯೋಗ ಕೇಂದ್ರವಿದೆ. ಅವರೇ ಪಠ್ಯಪುಸ್ತಕಕ್ಕೆ ಬೇಕಾದಂತಹ ಸಿಲಬಸ್ ಕೂಡ ತಯಾರು ಮಾಡಿಕೊಟ್ಟರು. ಇದನ್ನು ಈ ವರ್ಷ ಪ್ರಾಯೋಗಿಕವಾಗಿ ಮಾಡಿ ಸುಮಾರು ಒಂದೂವರೆ ಸಾವಿರ ಯೋಗ ಶಿಕ್ಷಕರನ್ನು ಬೇರೆ ಬೇರೆ ಜಿಲ್ಲೆಗಳಿಗೆ ಕೊಡುತ್ತಿದ್ದೇವೆ. ಇನ್ನು ೨-೩ ವರ್ಷಗಳಲ್ಲಿ ಎಲ್ಲಾ ಶಾಲೆಗಳಿಗೆ ಯೋಗ ಶಿಕ್ಷಕರ ಸೌಲಭ್ಯ ಒದಗಿಸಿಕೊಡುವ ಕಾರ್ಯಕ್ರಮ ಮಾಡುತ್ತಿದ್ದೇವೆ. ಮಾನ್ಯ ಶಿವನಂಜಪ್ಪನವರು ನೀತಿ ಶಿಕ್ಷಣ ಕೊಡಬೇಕೆಂದು ಹೇಳಿದರು ಮತ್ತು ಈಗ ನಾವು ಪಠ್ಯಪುಸ್ತಕಗಳಲ್ಲಿ ಅದನ್ನು ಸೇರಿಸುತ್ತಿದ್ದೇವೆ. ಅದರಲ್ಲಿ ನೀತಿ ಶಿಕ್ಷಣ, ಪರಿಸರದ ಬಗ್ಗೆ ಪರಿಜ್ಞಾನ, ಮತ್ತು ಗಾಂಧೀ ಜಯಂತಿ ದಿನದಿಂದ ಜನಜಾಗ್ರತಿ ಕಾರ್ಯಕ್ರಮ ಕೂಡ ಅದರಲ್ಲಿ ನಾವು ಮಾಡಿದ್ದೇವೆ. ಪಠ್ಯಪುಸ್ತಕದಲ್ಲಿ ನಾಡಗೀತೆ, ರಾಷ್ಟ್ರಗೀತೆ ನೈತಿಕ ವಿಚಾರ ಇರುತ್ತದೆ. ನಮ್ಮ ಅನೇಕ ಪುಸ್ತಕಗಳಲ್ಲಿ ಬಹಳ ಜೊಳ್ಳಾಗಿರುವುದನ್ನು ಅನೇಕ ಕಡೆಗಳಲ್ಲಿ ನಾವು ಕಾಣುತ್ತಿದ್ದೇವೆ. ಇದರಿಂದ ಏನಾಗುತ್ತದೆಯೆಂದರೆ, ಈ ರ್‍ಯಾಷನಲ್ ಥಿಂಕಿಂಗ್ ಮೈಂಡ್ ಆ ಮಕ್ಕಳಲ್ಲಿ ಬ್ಲರ್ ಆಗಿ ಹೋಗುತ್ತದೆ. ಏಕೆಂದರೆ, ಏನೋ ಮೂಢ ನಂಬಿಕೆಗಳನ್ನು ಕೂಡ ತುಂಬಿಸತಕ್ಕಂಥ ಕೆಲವು ಪಠ್ಯ ಪುಸ್ತಕಗಳು ಕೂಡ ಇವೆ. ನಾವು ಆದಷ್ಟು ಮಟ್ಟಿಗೆ ಅದನ್ನು ತೆಗೆದು, ಒಂದು ಚಿಂತನೆಯನ್ನು ಮಾಡತಕ್ಕಂಥ ನೈತಿಕ ಬುನಾದಿ ಇರತಕ್ಕಂಥ ಒಂದು ವ್ಯವಸ್ಥೆಯಲ್ಲಿ ಪಠ್ಯ ಪುಸ್ತಕಗಳನ್ನು ಬಹಳ ಕ್ರಾಂತಿಪೂರ್ವವಾಗಿ ಬದಲಾವಣೆ ಮಾಡತಕ್ಕಂಥ ಕಾರ್‍ಯಕ್ರಮವನ್ನು ಈ ವರ್ಷ ನಾವು ತೆಗೆದುಕೊಂಡಿದ್ದೇವೆ. ಇದನ್ನು ನಾನಾ ಸ್ಟೇಜ್‌ನಲ್ಲಿ ಬದಲಾವಣೆ ಮಾಡುತ್ತಿದ್ದೇವೆ. ಉದಾಹರಣೆಗೆ ಶಿವರಾಮ ಕಾರಂತರು ಮಾಡಿದಂಥ ಪುಸ್ತಕ ಏನು ಇದೆ, ಅದನ್ನು ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಈ ಎರಡೂ ಜಿಲ್ಲೆಗಳಲ್ಲಿ ಅದನ್ನು ಎಕ್ಸ್‌ಪೆರಿಮೆಂಟಲ್ ಆಗಿ ಪ್ರಾಯೋಗಿಕವಾಗಿ ಮಾಡುತ್ತಿದ್ದೇವೆ. ಇನ್ನು ಶಿಕ್ಷಕರ ತರಬೇತಿ ಬಗ್ಗೆ ಬಹಳ ಸಂತೋಷ. ಏಕೆಂದರೆ ಅನೇಕ ರಾಜ್ಯಗಳಲ್ಲಿ ಅಂದರೆ ಮಹಾರಾಷ್ಟ್ರ, ಕೇರಳ ಮುಂತಾದ ಎಲ್ಲಾ ರಾಜ್ಯಗಳಲ್ಲಿಯೂ ಶಿಕ್ಷಕರ ತರಬೇತಿಗೆ ಡೈಯೆಟ್ ಎಂದು ಹೇಳುತ್ತಾರೆ. ಇದು ಪ್ರಾಥಮಿಕ ಶಾಲೆಗಳಿಗೆ ಬೇಕಾದಂಥದ್ದು ಮತ್ತು ಮೂರು ವರ್ಷಗಳಿಗೆ ಒಮ್ಮೆ ಪ್ರತಿ ಪ್ರೈಮರಿ ಶಾಲಾ ಉಪಾಧ್ಯಾಯರು should undergo training from 5 days to 15 days. ಮತ್ತೆ ಸೆಕೆಂಡರಿ ಸ್ಕೂಲ್ ಟೀಚರ್ಸ್ ಐದು ವರ್ಷಗಳಿಗೊಮ್ಮೆ ಕಂಪಲ್‌ಸರಿಯಾಗಿ ಈ ತರಹ ಟ್ರೈನಿಂಗ್ ಆಯಾ ಜಿಲ್ಲೆಯಲ್ಲಿ ಮಾಡಬೇಕು. ಹೀಗೆ ಮೂರು ವರ್ಷಗಳಲ್ಲಿ ಎಲ್ಲಾ ಶಿಕ್ಷರಿಗೂ ಕೂಡ ಒಂದು ಅಪ್ ಡೇಟ್ ಟ್ರೈನಿಂಗ್‌ನ್ನು ಕೊಡತಕ್ಕಂಥ ಡೈಯೆಟ್ ಮತ್ತು ಸಿಟೀ ಟ್ರೈನಿಂಗ್‌ನಲ್ಲಿ ಎಂಟು ಡೈಯೆಟ್‌ಗಳಿಗೆ ಕ್ಷೇಂದ್ರ ಸರ್ಕಾರದವರು ಮಂಜೂರು ಮಾಡಿಕೊಟ್ಟಿದ್ದಾರೆ. ಅಂದರೆ ಹನ್ನೊಂದು ಸಂಸ್ಥೆಗಳನ್ನು ಮಾಡುವುದಕ್ಕೆ ನಮಗೆ ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆ. ಅದಕ್ಕೆ ೧೧ ಕೋಟಿ ರೂಪಾಯಿಗಳನ್ನು ಅವರು ಕೊಡುತ್ತಿದ್ದಾರೆ. ಇದಕ್ಕಾಗಿ ನಮ್ಮ ಅನೇಕ ಸ್ನೇಹಿತರು ಬಂದಾಗ, ನೀವು ಟಿಸಿಹೆಚ್ ಮಾಡಬೇಕು, ಇನ್‌ಟೇಕ್ ಜಾಸ್ತಿ ಮಾಡಬೇಕು, ಬಿಇಡಿ ಮಾಡಬೇಕು, ಬಿಇಡಿಗೆ ಇನ್‌ಟೇಕ್ ಜಾಸ್ತಿ ಮಾಡಬೇಕು ಎಂದು ಹೇಳಿದಾಗ ನಾವು ಸ್ವಲ್ಪ ಕಟ್ಟುನಿಟ್ಟಾಗಿ ಹೇಳಿದ್ದೇವೆ. ಏಕೆಂದರೆ, ಐ. ಎಂ. ಎಫ್. ಕಂಡೀಷನ್ ತರಹ ಕೇಂದ್ರಸರ್ಕಾರ ನಮಗೆ ಕಂಡೀಷನ್ಸ್‌ನ್ನು ಹಾಕಿದ್ದಾರೆ. ಇನ್‌ಟೇಕ್ ಇಲ್ಲದ ಟಿಸಿಹೆಚ್ ಮತ್ತು ಬಿ. ಎಡ್‌ಗಳನ್ನು ಜಾಸ್ತಿ ಮಾಡಬಾರದು ಎಂದು ಹೇಳಿದ್ದಾರೆ. ಇದನ್ನು ಮಾಡಿದರೆ ನಮಗೆ ಆ ಕಾರ್‍ಯಕ್ರಮ ಕೊಡುವುದಿಲ್ಲ. I am getting

about 20 crores under this programme. ಈಗ ಹನ್ನೊಂದು ಆಯಿತು. ಇನ್ನೊಂದು ಒಂಭತ್ತು ಜಿಲ್ಲೆಗಳಿಗೆ ನಮಗೆ ಸಿಗಬೇಕಾಗಿದೆ. ಈ ಕಾರ್ಯಕ್ರಮವನ್ನು ಈ ರೀತಿಯಾಗಿ ರಾಷ್ಟ್ರಮಟ್ಟ ಮತ್ತು ರಾಜ್ಯಮಟ್ಟದ ಒಂದು ರೆವ್ಯೂ ಪ್ರಕಾರ I must confess that our teaching standard is very much in the decline. ಏನೇನೂ ಸಾಲದು. ಇಂಥ ಟೀಚಿಂಗ್ ಸ್ಟಾಂಡರ್ಡ್‌ನ್ನು ಇಟ್ಟುಕೊಂಡು ನಾವು ಸಬ್ ಸ್ಟಾಂಡರ್ಡ್ ಸ್ಟೂಡೆಂಟ್ಸ್‌ನ್ನು ತಯಾರು ಮಾಡತಕ್ಕಂಥ ಸಂಸ್ಥೆಗಳು ಎಂದು ಒಂದು ಪ್ರತಿಕ್ರಿಯೆ ಏನು ಇದೆ, ಇದನ್ನು we must halt it. ಆದಕ್ಕೆ ನಿಮ್ಮೆಲ್ಲರ ಸಹಕಾರ ಬೇಕು. ಯಾರದರೂ ಟೀಚರ್ ಆಗಬಹುದು ಎಂದು ಹೇಳುವ ತರಹ ಆಗಬಾರದು.

ಶ್ರೀ ಕೆ. ಹೆಚ್. ರಂಗನಾಥ್:- ನಿಮ್ಮ ಹತ್ತಿರ ಹಣ ಇಲ್ಲ, ಎಕ್ವಿಪ್‌ಮೆಂಟ್ ಇಲ್ಲ, ಶಾಲೆ ಇಲ್ಲ, ಬಿಲ್ಡಿಂಗ್ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈ ಒಂದು ಡೈಯೆಟ್‌ಗೆ I am already getting Rs. 11 crores. Another 9 crores I am going to get. ಇದು ಯಶಸ್ವಿಯಾಗಿ ಆದರೆ to that extent there will be a dimensional change in the teaching standards ಇದು ಬರಬೇಕು. ಮತ್ತೊಂದು ಕಡೆ ಅಂದರೆ ತಾಂತ್ರಿಕ ಶಿಕ್ಷಣ ಮತ್ತು ಕಾಲೇಜು ಶಿಕ್ಷಣದಲ್ಲಿ ಇದರ ಪ್ರಯೋಗವನ್ನು ನಾವು ಮಾಡಬೇಕು ಎಂದು ವಿಶೇಷವಾದ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆ. ಮತ್ತೆ ಕೇಂದ್ರ ಸರ್ಕಾರದ ಇನ್ನೊಂದು ಯೋಜನೆ ಬರುತ್ತಿದೆ. ಅದು ಮೈಕ್ರೊ ಪ್ರಾಸೆಸಿಂಗ್ ಪ್ಲಾನ್ ಎಂದು ಬರುತ್ತಿದೆ. ಏಕೆಂದರೆ 1ರಿಂದ 8ನೇ ಕ್ಲಾಸ್‌ವರೆಗೆ ಎನ್‌ರೋಲ್ ಮಾಡತಕ್ಕಂಥ ಎಲ್ಲಾ ಮಕ್ಕಳೂ ಶಾಲೆಗೆ ಸೇರಬೇಕು. ಒಮ್ಮೆ ಸೇರಿದ ಮೇಲೆ there should not be any drop-outs. To ensure that ನಾವು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಟರನ್ನು ಜವಾಬ್ದಾರರನ್ನಾಗಿ ಮಾಡುತ್ತಿದ್ದೇವೆ. ಆದಕ್ಕೆ ಎಕ್ವಿಪ್‌ಮೆಂಟ್, ಕೊಠಡಿಗಳ ವ್ಯವಸ್ಥೆ ಮತ್ತು ಟೀಚರ್ಸ್‌ನ್ನು ತುಂಬತಕ್ಕಂಥ ಒಂದು ಕಾರ್ಯಕ್ರಮ ಕೂಡಾ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಸಾಕ್ಷರತಾ ಆಂದೋಲನವಾಗುತ್ತಿದೆ, ಆ ಜಿಲ್ಲೆಗಳಲ್ಲಿ ಇದನ್ನು ಮಾಡಬೇಕು ಎಂದು ಹೇಳಿದೆ. ಮೈಕ್ರೋ ಪ್ರಾಸೆಸಿಂಗ್ ಪ್ಲಾನ್ ಎಂಬ ಕಾರ್ಯಕ್ರಮ ಬರುತ್ತಿದೆ. ಈ ಹೊಸ ಕಾರ್ಯಕ್ರಮವನ್ನು ನಾನು ಪುಸ್ತಕದಲ್ಲಿ ಪ್ರತ್ಯೇಕವಾಗಿ ತೋರಿಸಿದ್ದೇನೆ. ಈ ಎಲ್ಲಾ ಕೆಲವು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ ಮತ್ತು ಟೀಚರ್ಸ್‌ಗೂ ಕೂಡ there should be some standard. ಅದಕ್ಕೆ ನಾವು ಟೀಚರ್ಸ್ ರೆಕ್ರೂಟ್‌ಮೆಂಟ್ ಮಾಡುತ್ತಿದ್ದೇವೆ. ಎಲ್ಲಾ ಪೋಸ್ಟ್‌ಗಳನ್ನು, ವೇಕೆನ್ಸೀಸ್‌ನ್ನು ನಾವು ತುಂಬುತ್ತಿದ್ದೇವೆ. By next academic year all vacant posts will be filled up. ಮತ್ತು ಖಾಸಗಿಯಲ್ಲೂ ಕೂಡ ವೇಕೆಂಟ್ ಪೋಸ್ಟ್‌ಗಳು ಯಾವುದು ಇದೆ, ಅದನ್ನು ಪುನಃ ಪರ್‌ಫಾರ್ಮೆನ್ಸ್ ಅಪ್ರೈಸಲ್ ತೆಗೆದುಕೊಂಡು ನಾವು ತುಂಬುತ್ತಿದ್ದೇವೆ. We are taking all those steps, but at the same time, ಈಗ ರೆಕ್ರೂಟ್‌ಮೆಂಟ್ ಮಾಡುವಾಗ ಈ ಸದನದ ಎಲ್ಲಾ ಮಾನ್ಯ ಸದಸ್ಯರಿಗೆ ನಾನು ಅಭಿನಂದನೆಗಳನ್ನು ತಿಳಿಸಬೇಕು. ತಾವುಗಳು ಪೂರ್ತಿಯಾಗಿ ಸಹಕರಿಸಿದ್ದೀರಿ. ಏಕೆಂದರೆ, ನನಗೆ ಭಯವಿತ್ತು. ಉಪಾಧ್ಯಾಯರ ನೇಮಕಾತಿಗೆ ಇಂಟರ್‌ವ್ಯೂ ಇರುವುದಿಲ್ಲ, ಏನೂ ಇರುವುದಿಲ್ಲ, ಕಷ್ಟವಾಗುತ್ತದೆ ಎಂದು ಭಯ ಇತ್ತು. ಇದನ್ನು ನೋಡಿದಾಗ ಬಹಳ ಸಮರ್ಪಕವಾಗಿ ಆಗಿದೆ. ಇದರಿಂದ ಏನಾಗುತ್ತದೆ, ಯಾವುದೇ ವರ್ಗಕ್ಕೆ

ಸೇರಿರಲಿ, ಆ ವರ್ಗಕ್ಕೆ ಸೇರಿದವರಲ್ಲಿ ಉತ್ತಮರಾದವರು, ಹೆಚ್ಚು ಮಾರ್ಕ್ಸ್‌ಗಳನ್ನು ತೆಗೆದು ಕೊಂಡವರು ಟೀಚರ್ಸ್ ಆಗಿ ಬಂದರೆ to that extent the whole system will be enriched.

ಶ್ರೀ ಕೆ. ಹೆಚ್. ರಂಗನಾಥ್:- ಆ ವರ್ಗದಲ್ಲಿ ಉತ್ತಮರಾದವರು ಎಂದು ಹೇಳಿದರೆ ಅದು ಸರಿಹೋಗುವುದಿಲ್ಲ. ಏಕೆಂದರೆ ಈ ಶಿಕ್ಷಣ ಕ್ಷೇತ್ರದಲ್ಲಿ ನಮಗೆ ಅಬ್ಜೆಕ್ಟೀವ್ ಔಟ್‌ಲುಕ್ ಬೇಕಾಗುತ್ತದೆ, ೬೫ ಪರ್‌ಸೆಂಟ್ ಇದ್ದು ಅವನಿಗೆ ಕೊಡುತ್ತೇವೆ ಎಂದು ಹೇಳಿದರೆ ೬೦ ಪರ್‌ಸೆಂಟ್ ಇದ್ದವರ ಗತಿ ಏನು? ವಯಸ್ಸಿನಲ್ಲಿಯೂ ೨೯ ವರ್ಷದವರೆಗೆ ಎಂದು ನಿಗದಿ ಮಾಡಿದ್ದೀರಿ. ೨೯ ವರ್ಷದ ಒಳಗಡೆ ಇರುವ ೬೦ ಪರ್‌ಸೆಂಟ್ ಮಾರ್ಕ್ಸ್ ತೆಗೆದುಕೊಂಡಂಥವನಿಗೆ ಸಿಗುತ್ತಾ ಇಲ್ಲ. ಅವನಿಗೆ ತೊಂದರೆ ಮಾಡಿದ ಹಾಗೆ ಆಯಿತು. ನಾವು ಮೆರಿಟ್‌ನ್ನು ಎಲ್ಲಿ ಗಮನದಲ್ಲಿಟ್ಟುಕೊಂಡ ಹಾಗೆ ಆಯಿತು? ಉತ್ತಮ ಉಪಾಧ್ಯಾಯರನ್ನು ನಾವು ಹೇಗೆ ಒದಗಿಸಿದ ಹಾಗೆ ಆಯಿತು?

Sri. M. Veerappa Moily:- That was one time act, ಅದನ್ನು ಮತ್ತೆ ಮುಂದುವರಿಸುವುದಕ್ಕೆ ಆಗುವುದಿಲ್ಲ. ಇನ್ನು ವರ್ಗಾವಣೆ ನಿಯಮಗಳ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ಆಗಿದೆ. ಅದರ ಪ್ರಕಾರ ದಿನಾಂಕ ೨೯-೩-೯೦ರಲ್ಲಿ ಒಂದು ವರ್ಗಾವಣೆ ನೀತಿಯನ್ನು ಕೊಟ್ಟಿದ್ದೇವೆ. ೧೫-೨೦ ವರ್ಷಗಳ ಕಾಲ ಬೇರೆ ಬೇರೆ ಕಛೇರಿಗಳಲ್ಲಿದ್ದಾರೆ ಅಧ್ಯಾಪಕರು ಇದ್ದಾರೆ ಎಂದು ತಾವುಗಳು ಹೇಳಿದ್ದೀರಿ. ನಾವು ಹೊಸ ನೀತಿಯನ್ನು ಮಾಡಬೇಕು ಮತ್ತು ಒಂದೇ ಸ್ಥಳದಲ್ಲಿ ಗರಿಷ್ಠ ನಿಲುಗಡೆ ಇದ್ದರೆ ಮತ್ತು ಬಹಳ ದೀರ್ಘಾವಧಿ ನಿಲುಗಡೆ ಇದ್ದರೆ ಅಂಥಹವರನ್ನು ಬದಲಾವಣೆ ಮಾಡುವಂಥ ಕಾರ್ಯದಲ್ಲಿ ತಾವುಗಳು ಕೊಟ್ಟಂಥ ಸಲಹೆಗಳನ್ನು ಅನುಸರಿಸಿ ಅದರ ಬಗ್ಗೆ ಹೊಸ ವರ್ಗಾವಣೆ ನೀತಿಯನ್ನು ಕೂಡ ನಾವು ಮಾಡಿದ್ದೇವೆ. ಇನ್ನು ನೇಮಕಾತಿಗಳಲ್ಲಿ, ಅದರಲ್ಲಿಯೂ ಅನುದಾನಿತ ವಿದ್ಯಾಸಂಸ್ಥೆಗಳಲ್ಲಿ, ಮಿಸಲಾತಿ ನಿಯಮಗಳಲ್ಲಿ ಬಹಳ ವಯೋಲೇಶನ್ಸ್ ಆಗುತ್ತಾ ಇದೆ ಎಂಬುದನ್ನು ನಾನು ಕೂಡ ಒಪಿಕೊಳ್ಳುತ್ತೇನೆ. ೧೯೯೦ರಿಂದ ಯಾರಾದರೂ ನೇಮಕಾತಿಯನ್ನು ಮೀಸಲಾತಿ ಹುದ್ದೆಗಳಿಗೆ ಮಾಡಿದ್ದರೆ ಎಂದಿಗೂ ಕೂಡ ಅದನ್ನು ರೆಗ್ಯುಲರೈಸ್ ಮಾಡುವುದಿಲ್ಲ ಎಂಬ ಸ್ಪಷ್ಟವಾದ ನೀತಿಯನ್ನು ಮಾಡಿದ್ದೇವೆ. ಆದ್ದರಿಂದ ಯಾವುದೇ ರೀತಿಯಲ್ಲಿ ಅದಕ್ಕೆ ರಿಲ್ಯಾಕ್ಸೇಶನ್ ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಆದರೆ ಕೆಲವು ಸಂದರ್ಭಗಳು ಇದ್ದರೆ, ನಿರ್ದಿಷ್ಟವಾದಂಥ ಕೆಲವು ಕಾರಣಗಳು ಇದ್ದರೆ, ಕೆಲವು ಸಾರಿ ಕೆಲವರು ಜೀರೋ ವೇಕೆನ್ಸಿ ಎಂದು ಕೊಟ್ಟಿದ್ದಾರೆ. ಸೆಕೆಂಡ್ ಡಿವಿಜನ್ ಕ್ಲರ್ಕ್‌ಗೂ ಕೂಡ ಜೀರೋ ವೆಕೆನ್ಸಿ ಬರುತ್ತಾ ಇದೆ. But we are not going to entertain any such thing. ಅದನ್ನು ನಾವು ಯಾವುದೇ ರೀತಿಯಿಂದ ಮಾಡುವುದಿಲ್ಲ.

ಶ್ರೀ ಸಿ. ಎಂ. ಲಿಂಗಪ್ಪ:- ಮಾನ್ಯ ಅಧ್ಯಕ್ಷರೇ, ನಮ್ಮದೂ ಕೂಡ ಒಂದು ಸಂಸ್ಥೆ ಇದೆ. ನಮ್ಮಲ್ಲಿ ಇದ್ದ ಆಂಗ್ಲ ಅಧ್ಯಾಪಕರೊಬ್ಬರು ರಾಜಿನಾಮೆ ಕೊಟ್ಟರು. ಅದು ಎಸ್. ಟಿ. ಮೀಸಲು ಇತ್ತು. ಪತ್ರಿಕೆಗಳಲ್ಲಿ ಕೂಡ ಹಾಕಿದೆವು. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದಲೂ ಕೂಡ ಹೆಸರುಗಳನ್ನು ತರಿಸಿದ್ದೆವು ಆರು ಜನರನ್ನು ಸಂದರ್ಶನಕ್ಕೆ ಕರೆದಿದ್ದೆವು. ಅದರಲ್ಲಿ ಇಬ್ಬರು ಬಂದರು. ಅವರು ಇಬ್ಬರೂ ಕೂಡ ನಮಗೆ ಇಲ್ಲಿ ಬರುವುದಕ್ಕೆ ಇಷ್ಟವಿಲ್ಲ. ಬೇರೆ ಕಡೆಗಳಲ್ಲಿ ನಮಗೆ ಉತ್ತಮವಾದ ಕೆಲಸ ಸಿಗುತ್ತದೆ ನಾವು ಹೋಗುತ್ತೇವೆ ಎಂದು ಹೇಳಿದರು. ಆ ಪೋಸ್ಟ್‌ಗೆ ಇನ್ನಾರೋ ಜನರಲ್ ಮೆರಿಟ್‌ನವರನ್ನು ನಾವು ತೆಗೆದುಕೊಂಡಿದ್ದೇವೆ. ಅಂಥ ಪರಿಸ್ಥಿಯಲ್ಲಿ ನಾವು ಏನು ಮಾಡಬೇಕೆಂದು

ನಮಗೆ ಮಾರ್ಗದರ್ಶನ ಮಾಡುತ್ತೀರೋ?

ಶ್ರೀ ಎಂ. ವೀರಪ್ಪ ಮೊಯಿಲಿ:- ಆ ಬಗ್ಗೆ ನಾವು ಹೆಚ್ಚು ಚರ್ಚೆ ಮಾಡುವುದು ಬೇಡ. ಆದರೆ ಒಂದು ಆಗತ್ಯತೆ ಕಂಡು ಬರುತ್ತಾ ಇದೆ. ಮೀಸಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ನಾವು ಅನುಸರಿಸದಿದ್ದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ, ಅದೊಂದು ಆಷಾಢಭೂತಿತನವಾಗುತ್ತದೆ. Let us try to organise it and do it strictlky. ಇನ್ನು ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳಿಗೆ ಪರ್ಮಿಶನ್ ಕೊಡುವ ಬಗ್ಗೆ ವಿಚಾರ ಮಾಡಬೇಕಾಗಿದೆ. ಸುಮಾರು ೬೦೦ ಶಾಲೆಗಳು ನಮ್ಮಲ್ಲಿ ಇವೆ. ಉದ್ದೇಶ ಇಷ್ಟೇ. ನಮ್ಮ ಭಾಷಾ ನೀತಿ ಇದೆ. ಕಡಿಮೆ ಪಕ್ಷ ಒಂದನೆಯ ವರ್ಗದಿಂದ ೪ನೇ ವರ್ಗದ ತನಕವಾದರೂ ಕೂಡ ಮಾತೃಭಾಷೆ ಶಿಕ್ಷಣಕ್ಕೆ ನಾವು ಅವಕಾಶವನ್ನು ಕೊಡಬೇಕಾಗುತ್ತದೆ. ಇಲ್ಲವಾದರೆ ಯಾವ ಬುನಾದಿಯೂ ಕೂಡ ಇರುವುದಿಲ್ಲ. We are just isolating the students from the region. ಆದ್ದರಿಂದ ಇದಕ್ಕೆ ಎಕ್ಸ್‌ಪರ್ಟ್ ಕಮಿಟಿಯನ್ನು ನಾವು ಮಾಡಿದ್ದೇವೆ. ಅದಕ್ಕೆ ಒಂದು ಸ್ವರೂಪ ಕೊಡಬೇಕೆಂಬ ವಿಚಾರವು ಕ್ಯಾಬಿನೆಟ್ ಮುಂದೆ ಇದೆ. ಅದಕ್ಕೆ ಬಹುಶಃ ಹೆಚ್ಚು ಸಮಯ ಹೋಗಲಿಕ್ಕಿಲ್ಲ. ಬಹುಶಃ ಏಪ್ರಿಲ್ ೧೫ನೇ ತಾರೀಖಿನ ಒಳಗಡೆ, ಮುಂದೆ ಬರತಕ್ಕಂಥ ಅಕಾಡಮಿಕ್ ವರ್ಷದ ಒಳಗಡೆ ಅನಿರ್ದಿಷ್ಟ ಮತ್ತು ಅತಂತ್ರತೆಯಲ್ಲಿರತಕ್ಕಂಥ ಈ ಕಾರ್ಯಕ್ರಮದ ಬಗ್ಗೆ ಸ್ಪಷ್ಟ ಸ್ವರೂಪವನ್ನು ನಾವು ಕೊಡುತ್ತೇವೆ. ಅಕ್ಷಯ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಹೇಳುವುದಾದರೆ ಬ್ಯಾಂಕ್‌ಗಳು ಸ್ವಲ್ಪ ವಯಾಬಿಲಿಟಿ ಬರುವುದಿಲ್ಲ, ಈಗಾಗಲೇ ನಮ್ಮ ಬ್ರಾಂಚ್‌ಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಆದ್ದರಿಂದ ನಮಗೆ ಅನುಷ್ಠಾನ ಮಾಡುವುದಕ್ಕಾಗುವುದಿಲ್ಲ ಎಂಬ ಆಕ್ಷೇಪಣೆ ಅವರದ್ದು ಇತ್ತು. ಇದರ ಬಗ್ಗೆ ಅವರ ಜೊತೆಯಲ್ಲಿ ನಾವು ಸಮಾಲೋಚನೆ ಮಾಡುತ್ತಾ ಇದ್ದೇವೆ. ತಮಗೆ ಹೇಳುವುದಾದರೆ, ಈಗಾಗಲೇ ಅಂದರೆ ಎರಡು ತಿಂಗಳಲ್ಲಿ ನಾವು ಸುಮಾರು ೨೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಮಗೆ ಬಂದ ಮಾಹಿತಿಗಳ ಪ್ರಕಾರ ನಾವು ಬಿಡುಗಡೆ ಮಾಡಿದ ೮೬ ಲಕ್ಷ ಹಣದಲ್ಲಿ ೭೬ ಲಕ್ಷ ರೂಪಾಯಿಗಳು ಆಯಾಯ ಫಲಾನುಭವಿಗಳ ಅಕೌಂಟಿಗೆ ಸೇರಿದೆ. That means there is practically 95% implementation. ಇದೇ ಪ್ರಕಾರ ಬೇರೆ ಬೇರೆ ಜಿಲ್ಲೆಗಳಿಂದ ಕೂಡ ಬರುತ್ತಾ ಇದೆ. ಈಗ ಅವರು ತೊಂದರೆ ಇದೆಯೆಂದು ಮುಂದೆ ಬಂದಿದ್ದಾರೆ. ಅವರ ಜೊತೆಯಲ್ಲಿ ನಾವು ಪುನಃ ಮಾತುಕತೆ ಮಾಡುತ್ತಾ ಇದ್ದೇವೆ. Perhaps in a month or two ... ಅದು ಹೊಸ ಕಾರ್ಯಕ್ರಮವಾದ್ದರಿಂದ, ಮತ್ತೆ ಈ ಕಾರ್ಯಕ್ರಮದ ಬಗ್ಗೆ ಮುಖ್ಯಮಂತ್ರಿಯವರು ಕೂಡ ವಿಶೇಷ ಆಸಕ್ತಿ ತೋರಿಸಿ ಪ್ರಧಾನ ಮಂತ್ರಿ ಮತ್ತು ಹಣಕಾಸಿನ ಮಂತ್ರಿಗಳೊಂದಿಗೆ ಈ ಬಗ್ಗೆ ಮಾತುಕತೆ ಮಾಡಿದ್ದಾರೆ. ಬಹುಶಃ ಬ್ಯಾಂಕಿನವರು ಸಂಪೂರ್ಣವಾದಂತಹ ಒಂದು ಸಹಾಯ, ಸಹಕಾರ ನಮಗ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲ ಸನ್ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲಾ ವಿಚಾರಗಳನ್ನು ನಾನು ಹೇಳಿದ್ದೇನೆ ಎಂದು ಹೇಳಲಿಕ್ಕಾಗುವುದಿಲ್ಲ. ಕೆಲವು ವಿಚಾರಗಳನ್ನು ಈ ಪುಸ್ತಕದಲ್ಲಿ ಹೇಳಿದ್ದೇನೆ. ಉಳಿದ ಕೆಲವು ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಕೊಟ್ಟಿದ್ದೇನೆ. ನನ್ನ ಭಾಷಣ ಸ್ಪಷ್ಟೀಕರಣದ ರೂಪದಲ್ಲಿ ಇರುವುದರಿಂದ ಆದಷ್ಟೂ ಉತ್ತರ ಕೊಟ್ಟಿದ್ದರಿಂದ, ಸಹಕಾರ ಕೊಟ್ಟಿದ್ದಕ್ಕೆ ಎಲ್ಲ ಸನ್ಮಾನ್ಯ ಸದಸ್ಯರಿಗೂ ತಮಗೂ ಕೂಡ ಕೃತಜ್ಞತೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಮೊಟಮ್ಮ:- ವಿಧಾನ ಮಂಡಲದ ಕಾರ್ಯಕಲಾಪಗಳ ಬಗ್ಗೆ ಮಾತನಾಡಲಿಲ್ಲವಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ವಿಧಾನ ಮಂಡಲದ ಕಾರ್ಯಾಲಯದ ಬಗ್ಗೆ ಇಲ್ಲಿ ಚರ್ಚೆ ಬಂತು. ಅದೇನೆಂದರೆ, I am in charge of Legislature also. ಇದರ ಬಗ್ಗೆ ತಮಗೆ ಗೊತ್ತಿದೆ. ಇದರ ಅಡ್ಮಿನಿಸ್ಟ್ರೇಷನ್ ಸನ್ಮಾನ್ಯ ಅಧ್ಯಕ್ಷರು ಮತ್ತು ಸನ್ಮಾನ್ಯ ಸಭಾಪತಿಗಳಿಗೆ ಸೇರಿದ್ದು. ಇದರಲ್ಲಿ ಸ್ಪೆಷಲ್ ಬೋರ್ಡ್ ಬಂದಿದೆ. ಅದರಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು, ನಾನು, ಅಧ್ಯಕ್ಷರು, ಸಭಾಪತಿಗಳು ಸದಸ್ಯರಾಗಿದ್ದಾರೆ, ಪ್ರಮುಖವಾದ ವಿಚಾರಗಳ ಬಗ್ಗೆ ತಾವು ಹೇಳಿದ್ದೀರಿ ಮತ್ತು ಅನೇಕ ಸನ್ಮಾನ್ಯ ಸದಸ್ಯರೂ ಹೇಳಿದ್ದಾರೆ. ಉಪಹಾರ ಮಂದಿರಗಳ ವಿಚಾರ ಇದೆ. ಅದು ಏನಾಗಿದೆ ಎಂದರೆ, ಟೆಂಡರ್ ಕರೆದು ಅವರಿಗೆ ಕೊಟ್ಟು ಬಿಟ್ಟಿದ್ದೇವೆ. ಕೆಲವು ಸಾರಿ ಬೆಲೆಯೇರಿಕೆಯಾಗುತ್ತದೆ. ಬೆಲೆ ಏರಿಕೆಯಾದ ಕೂಡಲೆ ಅವರು ಸ್ವಲ್ಪ ಹೆಚ್ಚು ಕಡಿಮೆ ಮಾಡಬಹುದು. ಮಾಂಸಾಹಾರ ಉಪಹಾರ ಮಂದಿರ ಕಳೆದ ೫ ವರ್ಷಗಳಿಂದ ಇದ್ದು ಈಗ ಅವರ ಅವಧಿ ಮುಗಿದಿದೆ. ಅವರ ಒಪ್ಪಂದದ ಪ್ರಕಾರ ೧೬.೧.೯೨ರಿಂದ ಅವರ ಪರವಾನಗಿಯನ್ನು ನವೀಕರಿಸಬೇಕಾಗಿದೆ. ಆದ್ದರಿಂದ ವಸತಿ ಸಮಿತಿಯ ಸದಸ್ಯರ ತೀರ್ಮಾನದಂತೆ ಕೊಡತಕ್ಕದ್ದು ತಮಗೆ ಬಿಟ್ಟಿದ್ದುದು. ಆಮೇಲೆ ರೊಟ್ಟಿ ಖಾನಾವಳಿಯ ಅವಧಿ ೯೨ರ ಸೆಪ್ಟೆಂಬರ್‌ನಲ್ಲಿ ಮುಗಿಯುತ್ತದೆ. ಸಸ್ಯಾಹಾರಿ ಉಪಹಾರ ಮಂದಿರದ ಅವಧಿ ಸೆಪ್ಟೆಂಬರ್ ೯೨ಕ್ಕೆ ಅಂತ್ಯವಾಗುತ್ತದೆ. ಮಹಿಳಾ ಸೇವಕಿಯರ ಬಗ್ಗೆ ತಾವು ಹೇಳಿದ್ದೀರಿ. ಶಾಸಕರಭವನದಲ್ಲಿ ಮಹಿಳಾ ಸೇವಕಿಯರ ಬಗ್ಗೆ ತಾವು ಹೇಳಿದ್ದೀರಿ. ಶಾಸಕರಭವನದಲ್ಲಿ ಮಹಿಳಾ ಸೇವಕಿಯರೆಂದು ಪ್ರತ್ಯೇಕವಾದ ಯಾವ ಕೇಡರ್ ಕೂಡ ಇಲ್ಲ. ಹಾಗೂ ಸ್ವೀಪರ್ ಹುದ್ದೆಯಲ್ಲಿರುವ ಕೆಲವು ಮಹಿಳಾ ನೌಕರರು ಮೂವರನ್ನು ಶಾಸಕಿಯರ ಸೇವೆಗಾಗಿ ಒದಗಿಸಲಾಗಿದೆ. ಮಹಿಳಾ ಶಾಸಕಿಯರು ೧೦ ಜನರಿದ್ದು ಅವರಲ್ಲಿ ೪ ಜನರಿಗೆ ಮಾತ್ರ ಮಹಿಳಾ ನೌಕರರನ್ನು ಒದಗಿಸಲಾಗಿದೆ. ಉಳಿದವರು ಯಾರೂ ಮಹಿಳಾ ನೌಕರರು ಬೇಕೆಂದು ಕೇಳಿರುವುದಿಲ್ಲ. ಅವರು ಕೇಳಿದರೆ...

(ಗೊಂದಲ)

ಉಪಾಧ್ಯಕ್ಷಿಣಿಯವರು:- ಕಾನೂನು ಸಚಿವರೇ ನೀವು ಉತ್ತರ ಕೊಟ್ಟುಬಿಡಿ.

ಕಾನೂನು ಸಚಿವರಿಂದ ಉತ್ತರ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾನೂನು ಸಚಿವರು):- ಮಾನ್ಯ ಉಪಾಧ್ಯಕ್ಷರೆ, ನಮ್ಮ ನ್ಯಾಯ ಪರಿಪಾಲನೆಯ ವಿಚಾರದಲ್ಲಿ ೭ ಜನ ಸನ್ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಶ್ರೀ ರಂಗನಾಥ್‌ರವರು ಹೇಳಿದಂತೆ ಹೆಚ್ಚಿನವರು ಮಾತನಾಡಿಲ್ಲ ಏಕೆಂದರೆ ನಮ್ಮ ಅಡ್ಮಿನಿಸ್ಟ್ರೇಷನ್ ಆಫ್ ಜಸ್ಟೀಸ್ ಸರಿಯಿದೆಯೇನೋ ಎಂದು ಅನಿಸುತ್ತದೆ. ಏಕೆಂದರೆ, ನಮ್ಮನ್ನು ಬಹಳಷ್ಟು ಹೊಗಳಿ ಮಾತನಾಡಿದ್ದಾರೆಯೇ ವಿನಹ ಟೀಕೆ ಬಹಳ ಕಡಿಮೆ ಇತ್ತು. ಅದರಲ್ಲಿ ಶ್ರೀ ಕಮುರುಲ್ ಇಸ್ಲಾಂರವರು, ಶ್ರೀಮತಿ ಮೊಟಮ್ಮನವರು, ಶ್ರೀ ಬಾಬುರಾವ್ ಚವಾಣ್‌ರವರು, ಶ್ರೀ ಶಿವನಂಜಪ್ಪನವರು, ಶ್ರೀ ಮಂಜುನಾಥ್ ಸಿ. ಕುನ್ನೂರ್‌ರವರು, ಶ್ರೀ ಪಿ. ಸಿ. ಸಿದ್ದನಗೌಡರು, ಶ್ರೀ ಕರಿಯಣ್ಣನವರು ಬಹಳ ಸಲಹೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಎಲ್ಲರ ಉದ್ದೇಶವೇನೆಂದರೆ, ಬೇಗನೆ ನ್ಯಾಯ ಇತ್ಯರ್ಥವಾಗಬೇಕು, ಜನರಿಗೆ ಬಡವರಿಗೆ ನ್ಯಾಯ ಸಿಗಬೇಕು, ಕಡಿಮೆ ಅವಧಿಯಲ್ಲಿ ಬೇಗನೆ ನ್ಯಾಯ ತೀರ್ಪು ಆಗಬೇಕೆಂದು ಅವರು ನಮಗೆ ಹೇಳಿದ್ದಾರ. ಅದರಲ್ಲಿ ಮುಖ್ಯವಾಗಿ ನಾನು

ಹೇಳಬೇಕಾದರೆ, ಲೋಕಾದಲತ್ ಎಂದು ನಾವು ಯಾವ ರೀತಿಯಲ್ಲಿ ಹೇಳುತ್ತಿದ್ದೆವೊ, ಆದನ್ನು ಒತ್ತಿ ಒತ್ತಿ ಹೇಳಿದ್ದಾರೆ. ಎಲ್ಲರ ಉದ್ದೇಶವೇನೆಂದರೆ, ಕೆಲವರು ಕೋರ್ಟಗಳು ಜಾಸ್ತಿಯಾಗಬೇಕೆಂದು ಹೇಳಿದ್ದಾರೆ. ನಾನು ಹೇಳಬೇಕಾದರೆ ನಮ್ಮ ಕರ್ನಾಟಕದಲ್ಲಿ ೧೭ ತಾಲ್ಲೂಕುಗಳನ್ನು ಬಿಟ್ಟರೆ ಉಳಿದ ಎಲ್ಲಾ ತಾಲ್ಲೂಕುಗಳಲ್ಲೂ ಕೋರ್ಟ್‌ಗಳು ಇವೆ. ಈ ವರ್ಷ ನಾವು ಬಹಳಷ್ಟು ಕೋರ್ಟ್‌ಗಳನ್ನು ಸ್ಥಾಪನೆ ಮಾಡಿದ್ದೇವೆ. ಸಾಧಾರಣ ೧೧ ಕಡೆಗಳಲ್ಲಿ ಈ ವರ್ಷ ಮಾರ್ಚಿ ಅಂತ್ಯದ ತನಕ ಕೋರ್ಟ್‌ಗಳನ್ನು ನಾವು ಸ್ಥಾಪನೆ ಮಾಡಿದ್ದೇವೆ. ಇದರಲ್ಲಿ ೫ ಹೊಸ ತಾಲ್ಲೂಕಿನಲ್ಲಿ ಈ ಕೋರ್ಟ್‌ಗಳನ್ನು ನಾವು ಸ್ಥಾಪನೆ ಮಾಡಿದ್ದೇವೆ. Regarding the vacnacies of District Judges and Munsiff's ಬಗ್ಗೆ ನಾನು ಹೇಳಬೇಕೆಂದರೆ, ಬಹಳಷ್ಟು ಪೋಸ್ಟ್‌ಗಳು ಏನು ಇವೆ, ಅವುಗಳನ್ನು ನಾವು ಆದಷ್ಟು ಬೇಗನೆ ಫಿಲಪ್ ಮಾಡುತ್ತೇವೆ. ಸುಮಾರು ೪೧ ಮುನ್ಸೀಫ್ ಹುದ್ದೆಗಳು ಇದ್ದವು. ೪೧ ಮುನ್ಸೀಫ್ ಹುದ್ದೆಗಳಲ್ಲಿ ಈಗತಾನೆ ೩೭ ಹೆಸರುಗಳನ್ನು ನಮಗೆ ಹೈಕೋರ್ಟ್‌ನಿಂದ ಕಳುಹಿಸಿದ್ದಾರೆ. ಆದನ್ನು ನಾವು ಪ್ರೊಸಸ್ ಮಾಡಿ ನೆಕ್ಸ್ಟ್ ಕ್ಯಾಬಿನೆಟ್‌ನಲ್ಲಿ ಇಟ್ಟು ಒಂದು ತಿಂಗಳೊಳಗಾಗಿ ಕ್ಲಿಯರ್ ಮಾಡಿದರೆ ಹೆಚ್ಚಿನ ಹುದ್ದೆಗಳನ್ನು ನಾವು ಕ್ಲಿಯರ್ ಮಾಡಿದ ಹಾಗೆ ಆಗುತ್ತದೆ. ಆದೇ ರೀತಿಯಲ್ಲಿ ಶ್ರೀಮತಿ ಮೋಟಮ್ಮನವರು ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು ನೇಮಕ ಮಾಡುವಾಗ ಮಹಿಳೆಯರಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು ಎಂದು ಹೇಳಿದ್ದಾರೆ. ಲೇಡಿ ಡಿಸ್ಟ್ರಿಕ್ಟ್ ಜಡ್ಜ್ ಕೋಲಾರದಲ್ಲಿ ಒಬ್ಬರು ಇದ್ದಾರೆ. ನಮ್ಮ ಉದ್ದೇಶವೇನೆಂದರೆ, ಮುಖ್ಯವಾಗಿ ವುಮೆನ್ಸ್ ಕೋರ್ಟ್‌ಗಳಿಗೆ ವಿಮೆನ್ಸ್ ಡಿಸ್ಟ್ರಿಕ್ಟ್ ಜಡ್ಜ್ ನಮಗೆ ಬೇಕು. ಹೆಚ್ಚಿನ ಹೆಣ್ಣುಮಕ್ಕಳು ಈಗ ಲಾ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಹಿಂದಿನ ಕಾಲದಲ್ಲಿ ಬಹಳಷ್ಟು ಕಡಿಮೆ ಇದ್ದರು. ಯಾವಾಗ ನಮಗೆ ಅವಕಾಶ ಸಿಗುತ್ತದೆ ಆ ಸಮಯದಲ್ಲಿ ಹೈಕೋರ್ಟ್‌ಗಾಗಲಿ, ಸರ್ಕಾರಕ್ಕಾಗಲಿ ಹೆಚ್ಚಿನ ಲೇಡೀಸ್ ಅನ್ನು ನೇಮಕ ಮಾಡಬೇಕೆಂದು ನಾವು ಸಲಹೆಯನ್ನು ಕೊಟ್ಟಿದ್ದೇವೆ. ಆದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ಚವಾಣ್‌ರವರು ಬಡಜನರಿಗೆ ಜಸ್ಟೀಸ್ ಸಿಗುವುದಿಲ್ಲ, ಅವರಿಗೆ ಕೇಸ್ ಫೈಲ್ ಮಾಡುವುದಕ್ಕೆ ಹಣ ಇರುವುದಿಲ್ಲ, ಆದ್ದರಿಂದ ಅವರಿಗೆ ಅನ್ಯಾಯವಾಗುತ್ತದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಹೇಳಬೇಕಾದರೆ, ನಮ್ಮಲ್ಲಿ ಲೀಗಲ್ ಏಡ್ ಎಂದು ಇದೆ. ಉಚಿತ ಕಾನೂನು ನೆರವಿನಲ್ಲಿ ಎಲ್ಲಾ ಕುಟುಂಬದವರಿಗೆ ಅವರ ವಾರ್ಷಿಕ ಆದಾಯ ಎಂಟು ಸಾವಿರ ರೂಪಾಯಿಗಳಿಗೂ ಕಡಿಮೆ ಇದ್ದರೆ ಅವರಿಗೆ ಉಚಿತವಾದ ಕಾನೂನಿನ ನೆರವು ಸಿಗುತ್ತದೆ. ಆದೇ ರೀತಿ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್‌ನವರಿಗೆ ಇನ್‌ಕಂ ಲಿಮಿಟ್ ಇಲ್ಲದೇ ಎಲ್ಲರಿಗೂ ಉಚಿತ ಕಾನೂನು ನೆರವು ಸಿಗುತ್ತದೆ. ಆದೇ ರೀತಿಯಲ್ಲಿ ಡಿಫೆನ್ಸ್ ಪರ್ಸನ್ಸ್‌ಗೂ ಉಚಿತ ಕಾನೂನು ನೆರವು ಸಿಗುತ್ತದೆ. ನಾನು ನಮ್ಮ ಶಾಸಕರುಗಳಲ್ಲಿ ಒಂದು ರಿಕ್ವೆಸ್ಟ್ ಮಾಡುವುದೇನೆಂದರೆ, ನಮ್ಮ ಕರ್ನಾಟಕದಲ್ಲಿ ೧೪೦ ಲೀಗಲ್ ಏಡ್ ಕಮಿಟಿಗಳು ಇದೆ. ಆದರಲ್ಲಿ ೧೯ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ೧೨೧ ತಾಲ್ಲೂಕು ಲೆವೆಲ್‌ನಲ್ಲಿ ಕಮಿಟಿಗಳು ಇರುವಾಗ ಎಲ್ಲಾ ಕಮಿಟಿಗಳಲ್ಲೂ ನಮ್ಮ ಎಂ. ಎಲ್. ಎ. ಅವರುಗಳು ಸದಸ್ಯರಾಗಿದ್ದಾರೆ. ನಾನು ಬೇಜಾರಿನಲ್ಲಿ ಹೇಳುವುದೇನೆಂದರೆ, ಹೆಚ್ಚಿನ ನಮ್ಮ ಶಾಸಕರುಗಳು ಇದರಲ್ಲಿ ಆಸಕ್ತಿ ತೆಗೆದುಕೊಳ್ಳುವುದಿಲ್ಲ. ನಾನು ಅವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇಂಥ ಒಂದು ಲೀಗಲ್ ಏಡ್ ಕಮಿಟಿಯಲ್ಲಿ ಅವರು ಆಸಕ್ತಿಯನ್ನು ತೆಗೆದುಕೊಂಡು ಕೆಲಸವನ್ನು ಮಾಡಿದರೆ ಬಹಳಷ್ಟು ನಮ್ಮ ಜನರಿಗೆ ಈ ಉಚಿತ ಕಾನೂನು ನೆರವನ್ನು ನಾವು ಕೊಡಬಹುದು. ಮಾತ್ರವಲ್ಲ, ಲೀಗಲ್ ಲಿಟ್‌ರೆಸಿ, ಲೀಗಲ್ ಅಡ್ವೈಸ್‌ಗಳನ್ನು ಉಚಿತವಾಗಿ ಕೊಡಬಹುದು. ನಮ್ಮ ಮಾನ್ಯ

ಸದಸ್ಯರಾದ ಕರಿಯಣ್ಣನವರು ಹೇಳಿದ ಹಾಗೆ, ಹೆಚ್ಚಿನ ಜನರಿಗೆ ಲೀಗಲ್ ಏಡ್‌ನ ವಿಷಯ ಗೊತ್ತಿಲ್ಲ. ನಾನು ನಿಜವಾಗಿ ಹೇಳಬೇಕಾದರೆ, ನಾವು ಲೀಗಲ್ ಸ್ಥಾಪನೆ ಮಾಡುವಾಗ ಲೋಕ್ ಅದಾಲತ್ ಮಾಡುವಾಗ, ನಾವು ಇದರ ವಿಷಯ ಮಾತನಾಡುವಾಗ ಬಹಳಷ್ಟು ಜನರಿಗೆ ಗೊತ್ತಿಲ್ಲ. ಇದರ ಬಗ್ಗೆ ನಾವು ಇನ್ನೂ ಸಹ ಪ್ರಚಾರ ಕೊಡಬೇಕಾಗುತ್ತದೆ. ನಾವು ಸಾಧಾರಣ ೧೫ ಬೇರೆ ಬೇರೆ ತರಹದ ಲೀಗಲ್ ಏಯ್ಡ್, ಈ ಕಾನೂನಿನ ವಿಷಯವನ್ನು ನಾವು ಹ್ಯಾಂಡ್ ಬಿಲ್ ಪಾಂಪ್ಲೆಟ್ಸ್ ಮಾಡಿ ವಿತರಣೆ ಮಾಡುತ್ತೇವೆ. ಈ ಸಲ ನಾವು ಒಂದು ಫಿಲಂ ಡಿವಿಜನ್ ಮುಖಾಂತರವಾಗಲಿ, ಥಿಯೇಟರ್‌ನಲ್ಲಾಗಲಿ, ಅದನ್ನು ನಾವು ಎಕ್ಸಿಬಿಟ್ ಮಾಡಿ ಜನರಿಗೆ ಉಚಿತ ಕಾನೂನು ನೆರವು ವಿಷಯ ಹಾಗೂ ಲೋಕ ಅದಾಲತ್ ವಿಷಯದ ಬಗ್ಗೆ ನಾವು ಹೆಚ್ಚಿನ ಮಾಹಿತಿಯನ್ನು ಕೊಟ್ಟು ಇದರಿಂದ ಜನರ ಸಮಸ್ಯೆಗಳನ್ನು ನಾವು ಪರಿಹಾರ ಮಾಡಲಿಕ್ಕೆ ನೋಡುತ್ತೇವೆ. ಹೋದ ವರ್ಷ ಜನರು ಹೇಳಿದ್ದನ್ನು ಕೇಳಿದ್ದೇವೆ. ಕೋರ್ಟ್‌ನಲ್ಲಿ ನಾವು ದಾವೆಯನ್ನು ಹಾಕಿದರೆ ೮-೧೦-೧೫ ವರ್ಷಗಳ ತನಕ ಇತ್ಯರ್ಥವಾಗುವುದಿಲ್ಲ ಎಂಬ ಮಾತನ್ನು ಜನರಿಂದ ಕೇಳುತ್ತಿದ್ದೇವೆ. ಮುಖ್ಯವಾಗಿ ಹೆಚ್ಚಾಗಿ ಕೇಸ್‌ಗಳು ಮುನಿಸಿಪಲ್ ಕೋರ್ಟಿನಲ್ಲಿವೆ. ಆರ್ಥಿಕ ಶಕ್ತಿ ಇರುವವರು ಕೇಸ್ ಹಾಕಿ ಮುಂದುವರಿಸುತ್ತಿದ್ದಾರೆ. ನಾವು ನಮ್ಮ ಜನರಿಗೆ ಒಂದು ಸರಿಯಾದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಹೇಳಬೇಕಾದರೆ, ಲೋಕಅದಾಲತ್ ಮಾಡುವಾಗ ಅಂದರೆ ಜನತಾ ನ್ಯಾಯಾಲಯದಲ್ಲಿ ನಮಗೆ ಗೊತ್ತಾಗುತ್ತದೆ. ಏಕೆಂದರೆ, ಕೆಲವರು ತಪ್ಪು ದಾರಿಗೆ ಎಸೆದು ಕೋರ್ಟ್‌ನಲ್ಲಿ ದಾವೆ ಹಾಕಿದರೆ ಅವರ ಸಮಸ್ಯೆ ಜಾಸ್ತಿಯಾಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ. ನಮ್ಮ ಲೀಗಲ್ ಏಯ್ಡ್ ಕೋರ್ಟ್ ಹಾಗೂ ನಮ್ಮ ಲೀಗಲ್ ಏಯ್ಡ್ ಕಮಿಟೀಸ್‌ನವರು ಬಹಳಷ್ಟು ಈ ತರಹ ವಿಷಯ, ನಮ್ಮ ಲೋಕದಳದ ವಿಷಯದ ಬಗ್ಗೆ ಕೆಲಸಮಾಡಿ ಈ ವರ್ಷ ಅಕ್ಟೋಬರ್‌ನಲ್ಲಿ ಒಂದು ಟಾರ್‌ಗೆಟ್ ಅನ್ನು ಕಮಿಟಿಗೆ ಇಟ್ಟು ಮಾರ್ಚಿ ಒಳಗೆ ೨೫೦ ಜಾಸ್ತಿ ಲೋಕಅದಾಲತ್ ಮಾಡಿ ೭೫೦ ನಮ್ಮ ಟಾರ್‌ಗೆಟ್ ಮಾಡಿದೆ. ನಮ್ಮ ಲೋಕಅದಾಲತ್ ೧೯೮೭ರಲ್ಲಿ ಪ್ರಾರಂಭವಾಯಿತು. ೧೯೮೭ರಿಂದ ಇಷ್ಟರವರೆಗೂ ಮುತುವರ್ಜಿಯನ್ನು ತೆಗೆದುಕೊಂಡು ಬಹಳಷ್ಟು ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ನಾವು ಅಕ್ಟೋಬರ್‌ನಿಂದ ಮಾರ್ಚಿಯ ತನಕ ೨೫೦ ಲೋಕ ಅದಾಲತ್ ಜಾಸ್ತಿ ಮಾಡಿದ್ದೇವೆ. ೭೫೦ ಮಾಡಬೇಕೆಂದು ಗುರಿಯನ್ನು ಇಟ್ಟು ನಮ್ಮ ಎಲ್ಲಾ ಕಮಿಟಿಯವರು ಕೆಲಸವನ್ನು ಮಾಡಲಿಕ್ಕೆ ಶುರು ಮಾಡಿದ್ದಾರೆ. ನಮ್ಮ ಲೀಗಲ್ ಬೋರ್ಡಿನ ಎಲ್ಲಾ ಸದಸ್ಯರು, ಮುಖ್ಯವಾಗಿ ಅವರ ಕಾರ್ಯದರ್ಶಿಯವರಾದ ಶ್ರೀ ವಾಸುದೇವ್ ಮೂರ್ತಿಯವರು ಹಾಗೂ ಎಲ್ಲರೂ ಇವರಲ್ಲಿ ಕೆಲಸ ಮಾಡಿ ಬಹಳಷ್ಟು ಯಶಸ್ವಿಯಾಗಿ ಬಂದಿದ್ದಾರೆ. ಈ ತಾರೀಖಿಗೆ ಸಕಲೇಶಪುರದಲ್ಲಿ ೨೫೦ ಮಾತ್ರ ಅಲ್ಲ, ೭೯೦ ಲೋಕ ಅದಾಲತ್ ಮಾಡುತ್ತಾರೆ. ನಮ್ಮ ಕಾರ್ಯಕ್ರಮದ ಪ್ರಕಾರ ಮಾರ್ಚಿಯೊಳಗೆ ನಾವು ೬೭೪ ಲೋಕಅದಾಲತ್ ಕಂಪ್ಲಿಟ್ ಮಾಡುತ್ತೇವೆ. ಒಂದೊಂದು ಲೋಕ ಅದಾಲತ್‌ನಲ್ಲಿ ಸರಾಸರಿ ಕಡಿಮೆ ಪಕ್ಷ ೬೦-೭೦ ಕೇಸ್‌ಗಳು ಇತ್ಯರ್ಥವಾಗುತ್ತವೆ. ಕೆಳ ಕೋರ್ಟಿನಲ್ಲಿ ಒಂದು ವರ್ಷಕ್ಕೆ ಅಷ್ಟು ಕೇಸ್‌ಗಳು ಇತ್ಯರ್ಥವಾಗುವುದಿಲ್ಲ. ಇದರಿಂದ ಜನರಿಗೆ ಬರೀ ನ್ಯಾಯ ಸಿಗುವುದು ಮಾತ್ರ ಅಲ್ಲ, ಬೇಗನೆ ನ್ಯಾಯ ಸಿಗುತ್ತದೆ. ಇದರಲ್ಲಿ ಯಾರದ್ದು ಸೋಲು ಗೆಲವು ಎಂದು ಅಲ್ಲ. ನಮ್ಮ ಶಾಸಕರುಗಳು ಬಹಳಷ್ಟು ಕೆಲಸವನ್ನು ಮಾಡಿ ಬಂದಿದ್ದಾರೆ. ಇದರಿಂದ ನಮ್ಮ ಕೋರ್ಟ್‌ಗಳಲ್ಲಿ ಏನು ಪೆಂಡೆನ್ಸಿ ಇದೆಯೋ ಅದನ್ನು ನಾವು ಬಹಳಷ್ಟು ಕಡಿಮೆಮಾಡಬಹುದು. ನಾವು ಯಾವಾಗ ನೋಡಿದರೂ, ಎಲ್ಲಿ ನೋಡಿದರೂ ಬಹಳಷ್ಟು ಪೆಂಡೆನ್ಸಿ ಕಾಣುತ್ತೇವೆ. ಲೋಕ

ಅದಾಲತ್ ಮುಖಾಂತರ ಜನರಿಗೆ ಸರಿಯಾದ ಮಾಹಿತಿ ಕೊಟ್ಟು ಜನರಿಗೆ ಅವರ ಹಕ್ಕುಗಳ ಬಗ್ಗೆ ಅರಿವನ್ನು ಮಾಡಿಕೊಟ್ಟು ಜನರಿಗೆ ಅವರ ಹಕ್ಕುಗಳು ಸರಿಯಾಗಿ ಸಿಗುವ ಹಾಗೆ ಅವರಲ್ಲಿ ಪ್ರಾರ್ಥನೆ ಮಾಡಬಹುದು. ಮಾತ್ರವಲ್ಲ ಬೇಗನೆ ಈ ಕೇಸ್‌ಗಳನ್ನು ನಾವು ಇತ್ಯರ್ಥ ಮಾಡಬಹುದು. ಈಗ ತಾನೆ ನಮ್ಮ ಹೈಕೋರ್ಟಿನವರು ಒಪ್ಪಿದ್ದಾರೆ. ಏನೆಂದರೆ, ಮೋಟಾರ್ ವೆಹಿಕಲ್ಸ್ ಕಾಂಪನ್‌ಸೇಷನ್ ಅಪೀಲು ಇದ್ದರೂ ಸಹ ಲೋಕಅದಾಲತ್ ಮುಖಾಂತರ ಇತ್ಯರ್ಥ ಮಾಡಲಿಕ್ಕೆ ತಯಾರಿದ್ದಾರೆ. ಈ ಮೋಟಾರ್ ವೆಹಿಕಲ್ಸ್ ಕಾಂಪನ್‌ಸೇಷನ್ ಆಕ್ಟ್ ಮುಖಾಂತರ, ಲೋಕ ಅದಾಲತ್ ಮುಖಾಂತರ, ಇಷ್ಟರವರೆಗೆ ಅಂದರೆ ಜನವರಿ ೧೯೯೨ರವರೆಗೆ ೨೧೭೬೪ ಕೇಸ್‌ಗಳು ಇತ್ಯರ್ಥವಾಗಿವೆ.

(ಶ್ರೀ ಜಿ. ಎಸ್. ಶಿವನಂಜಪ್ಪನವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅದರಲ್ಲಿ ೩೪,೦೧,೭೩,೨೬೮ ರೂಪಾಯಿಗಳ ಕಾಂಪನ್‌ಸೇಷನ್ ಕೊಟ್ಟಿದ್ದಾರೆ. ತಮಗೆ ಗೊತ್ತಿರುವ ಹಾಗೆ, ಬಹಳಷ್ಟು ಕೇಸ್‌ಗಳನ್ನು ನಾವು ನೋಡಿದ್ದೇವೆ. ಒಂದೊಂದು ಕೇಸ್ ಅನ್ನು ಇತ್ಯರ್ಥ ಮಾಡುವುದಕ್ಕೆ ೫-೧೦ ವರ್ಷಗಳು ಬೇಕಾಗುತ್ತದೆ. ಮೋಟಾರ್ ವೆಹಿಕಲ್ ಆಕ್ಸಿಡೆಂಟ್‌ನಲ್ಲಿ ಡಿಫಾರಮಿಟಿಯಾಗಿದ್ದು ಅಥವಾ ಸತ್ತು ಹೋಗಿದ್ದರೆ, ಅಂತಹವರಿಗೆ ನಿಜವಾಗಿಯೂ ಒಂದು ಪರಿಹಾರ ಸಿಗಬೇಕಾಗಿದೆ. ಅವರಿಗೆ ೫-೧೦ ವರ್ಷಗಳು ತಡವಾಗಿ ಪರಿಹಾರ ಸಿಕ್ಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಆದರೆ, ಲೋಕ ಅದಾಲತ್ ಮುಖಾಂತರ ನಾವು ಬಹಳಷ್ಟು ಕೇಸ್‌ಗಳನ್ನು ಕೈಗೆತ್ತಿಕೊಂಡು ಜನರಿಗೆ ಆದಷ್ಟು ಬೇಗ ಪರಿಹಾರ ಕೊಡುವ ಹಾಗೆ ಮಾಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್:- ಲೋಕ ಅದಾಲತ್ ಆಯಿತು. ಡಿಸ್ಟ್ರಿಕ್ಟ್ ಕೋರ್ಟ ಮತ್ತು ಮುನ್ಸಿಫ್ ಕೋರ್ಟ್‌ನಲ್ಲಿ ಪೆಂಡಿಂಗ್ ಕೇಸ್‌ಗಳು ಹಾಗೆಯೇ ಇವೆ. ಅಲ್ಲಿ ಜಡ್ಜ್‌ಗಳು ಇಲ್ಲ. ಹೈಕೋರ್ಟ್‌ನಲ್ಲಂತೂ ವಿಪರೀತ ಕೇಸುಗಳು ಪೆಂಡಿಂಗ್ ಇವೆ. ಅದರ ಬಗ್ಗೆ ತಾವು ಏನು ವ್ಯವಸ್ಥೆ ಮಾಡುತ್ತಿದ್ದೀರಿ? ಲೋಕ ಅದಾಲತ್‌ನಲ್ಲಿ ಸಿವಿಲ್ ಪ್ರೊಸೀಜರ್ ಕೋಡ್ ಇಲ್ಲ ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್ ಇಲ್ಲ. ಆದರೆ ಇಲ್ಲಿ ಯಾವಾಗ ಮಾಡುತ್ತೀರಿ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:- ನಾನು ಲೋಕ ಅದಾಲತ್ ವಿಷಯವನ್ನು ಏತಕ್ಕೆ ಹೇಳಿದನೆಂದರೆ, ನಮ್ಮ ದೇಶದಲ್ಲಿ ಒಂದು ಕಲ್ಚರ್ ಹುಟ್ಟ ಬೇಕಾಗುತ್ತದೆ. even in schools and factories ವಿಷಯದಲ್ಲಿ ಹೇಳಬೇಕಾದರೆ, ಮ್ಯಾನೇಜ್‌ಮೆಂಟ್ ಮತ್ತು ಲೇಬರ್ ವಿಷಯಗಳಲ್ಲಿ ಬಹಳಷ್ಟು ಘರ್ಷಣೆಗಳಾಗುತ್ತವೆ. ಇದರಲ್ಲಿ ಸಂಧಾನ ಮಾಡಿದರೆ ಬಹಳಷ್ಟು ಸಮಸ್ಯೆಗಳು ಪರಿಹಾರವಾಗುತ್ತದೆ. ಇದರ ಬಗ್ಗೆ ಕೋರ್ಟಿಗೆ ಹೋಗಬೇಕೆಂದಿಲ್ಲ. ಎಲ್ಲರ ಆಲೋಚನೆ ಏನೆಂದರೆ, ಯಾವುದೇ ಒಂದು ಸಮಸ್ಯೆ ಬಂದರೂ ಕೋರ್ಟಿಗೆ ಹೋಗುವುದು. ಅದು ತಪ್ಪು. ಅದಕ್ಕೋಸ್ಕರ ನಾವು ಲೋಕ ಅದಾಲತ್ ಮುಖಾಂತರ, ಲೀಗಲ್ ಏಡ್ ಮುಖಾಂತರ, ಲೀಗಲ್ ಲಿಟ್ರಸಿ ಮುಖಾಂತರ ವ್ಯಾಜ್ಯಗಳನ್ನು ಪರಿಹರಿಸುತ್ತಿದ್ದೇವೆ.

ಶ್ರೀ ಎಸ್. ಎಂ. ಯಾಹ್ಯ:- ಇತ್ತೀಚಿಗೆ ೧೦೨ ಜನ ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು ನೇಮಕ ಮಾಡಿದ್ದೀರಿ. ಅದನ್ನು ಹೈಕೋರ್ಟ್‌ನವರು ಸ್ಟ್ರೈಕ್‌ಡೌನ್ ಮಾಡುತ್ತಾರೆ. ಆ ಖಾಲಿ ಹುದ್ದೆಗಳು ಹಾಗೆಯೇ ಉಳಿಯುತ್ತದೆ. ಅದೇ ರೀತಿ ನೀವು ಯಾರನ್ನು ಮುನ್ಸೀಫ್ ಆಗಿ ಅಪಾಯಿಂಟ್ ಮಾಡುತ್ತಿದ್ದೀರಿ, ಅದು ಪುನಃ ಹೈಕೋರ್ಟಿಗೆ ಹೋಗಿ ಸ್ಟೇ ಸಿಗುತ್ತಿದೆ. ಆದಕ್ಕೆ ಕಾರಣವೇನು? ನೀವು ಪ್ರೊಸೀಜರ್ ಅನ್ನು ಸರಿಯಾಗಿ ಉಪಯೋಗಿಸುತ್ತಿಲ್ಲವೇ? ಇದೇ ರೀತಿ ಆಗುತ್ತಾ ಹೋದರೆ ಇನ್ನು

ಹುದ್ದೆಗಳು ಹೆಚ್ಚಾಗುತ್ತಾ ಹೋಗುತ್ತವೆ. ನೀವು ನೇಮಕ ಮಾಡಿದಾಗಲೆಲ್ಲಾ, ಹೈಕೋರ್ಟ್‌ನವರು ಸ್ಟ್ರೈಕಡೌನ್ ಮಾಡುತ್ತಿರುತ್ತಾರೆ. ಜಡ್ಜ್‌ಗಳು ಇರುವುದಿಲ್ಲ, ಮುನ್ಸೀಫ್‌ಗಳು ಇರುವುದಿಲ್ಲ. ಅನಂತರ, ನಿಮ್ಮ ಅರಿಯರ್ಸ್ ಹೆಚ್ಚಾಗುತ್ತಾ ಹೋಗುತ್ತದೆ. ಅದಕ್ಕೋಸ್ಕರ ಏನು ವ್ಯವಸ್ಥೆ ಮಾಡುತ್ತಿದ್ದೀರಿ ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:- ನಾನು ಈ ಒಂದು ವಿಷಯವನ್ನು ಮೊದಲು ಮುಗಿಸಿ ಬಿಡುತ್ತೇನೆ. ಏಕೆಂದರೆ ನಮ್ಮ ಇಡೀ ಭಾರತದಲ್ಲಿ ಲೋಕ ಅದಾಲತ್‌ನಲ್ಲಿ ಯಶಸ್ವಿಯಾದದ್ದು ನಮ್ಮ ಕರ್ನಾಟಕ ರಾಜ್ಯವೇ. ನಮ್ಮ ರಾಜ್ಯಕ್ಕೆ ಪ್ರಥಮ ಸ್ಥಾನ ಸಿಕ್ಕಿದೆ. ಮಾತ್ರವಲ್ಲ ಈಗ ಲ್ಯಾಂಡ ಅಕ್ವಿಜಿಶನ್ ಸಹ ಮಾಡುವುದಕ್ಕೆ ಪ್ರಾರಂಭಿಸಿದ್ದೇವೆ. ಮೊನ್ನೆ ತಾನೆ ಸರ್ಕಾರಿ ಆದೇಶದ ಪ್ರಕಾರ Bagur - Navile Tunnel - Hemavathi Left and right bank canal work, ಅಲ್ಲಿ ಅಡಿಷನಲ್ ಕಾಂಪನ್‌ಸೇಷನ್‌ಗೆ ಮೊನ್ನೆ ದಿವಸ ನಮ್ಮ ಒಂದು ತಂಡ ಅಲ್ಲಿಗೆ ಹೋಗಿ, ಅಲ್ಲಿ ೮ನೇ ತಾರೀಖಿನಿಂದ ೨೧ನೇ ತಾರೀಖಿನವರೆಗೆ ಲೋಕ ಅದಾಲತ್ ಇದ್ದು, ವ್ಯಾಜ್ಯಗಳನ್ನು ಬೇಗನೆ ಇತ್ಯರ್ಥ ಮಾಡಿ, ಆ ಒಂದು ಸ್ಥಳ ಕೊಟ್ಟರೆ ಸುಮಾರು ೪ ಲಕ್ಷ ಎಕರೆ ಜಮೀನಿಗೆ ನೀರಾವರಿ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್:- ಈಗ ಆರ್ಬಿಟ್ರೇಶನ್ ಆ್ಯಕ್ಟ್ ಪ್ರಕಾರ ಹೋದರೆ ನಮಗೆ ದೊಡ್ಡ ಅನ್ಯಾಯವಾಗುತ್ತದೆ. ಯಾವುದೆಂದರೆ, ಪಿ. ಡಬ್ಲ್ಯೂ. ಡಿ. ಕಂಟ್ರಾಕ್ಟ್ ಇಂತಹುದನ್ನು ಲೋಕ ಅದಾಲತ್‌ಗೆ ಹಾಕಿದರೆ, ಲೂಟಿ ಮಾಡುವುದಕ್ಕೆ ಇನ್ನು ಹೇಳಿ ಕೊಡಬೇಕಾದ್ದೇ ಇಲ್ಲ. ಆದುದರಿಂದ, I don't know why it was refered to Lok Adalath? ತಾವು ಹೇಳಿದ್ದು ಬಹಳ ಒಳ್ಳೆಯದಾಯಿತು. ತಾವು ಸಹಾಯ ಮಾಡಿದಿರಿ, ಅದು ನಮಗೆ ಗೊತ್ತಿರಲಿಲ್ಲ. ಬಾಗೂರು ನವಿಲೆಯದು ದೊಡ್ಡ ಹಗರಣ. ಇಂತಹುದನ್ನು ಲೋಕ ಅದಾಲತ್‌ಗೆ ಕಳುಹಿಸಿಬಿಟ್ಟು ೪ ಲಕ್ಷ ಎಕರೆ ಜಮೀನಿಗೆ ನೀರು ಕೊಡುವುದಕ್ಕೆ ಅನುಕೂಲವಾಯಿತೆಂದು ಹೇಳಿ ಅವರು ಕೊಟ್ಟಿದ್ದನ್ನು ತೆಗೆದುಕೊಂಡು ಬಂದು ಮಾಡಿದರೆ ಬಹಳ ಕಷ್ಟವಾಗುತ್ತದೆ. ಈ ಆರ್ಬಿಟ್ರೇಷನ್‌ನಲ್ಲೇ ನಮಗೆ ತುಂಬಾ ಅನಾಹುತ ಮತ್ತು ದೊಡ್ಡ ತೊಂದರೆಯಾಗಿದೆ. ತಾವು ಇದರ ಬಗ್ಗೆ ಏನಾದರೂ ಒಂದು ಸ್ಟೇಟ್‌ಮೆಂಟ್‌ನ್ನು ಈ ಸಭೆಯ ಮುಂದೆ ಮಂಡಿಸಿ. ಎಷ್ಟು ಕೇಸ್‌ಗಳನ್ನು ತಾವು ಆರ್ಬಿಟ್ರೇಷನ್‌ಗೆ ಕೊಟ್ಟಿದ್ದೀರಿ, ಅದರಲ್ಲಿ ಏನು ಜಡ್ಜ್‌ಮೆಂಟ್‌ನ್ನು ಕೊಟ್ಟಿದ್ದಾರೆ; ಅದರಲ್ಲಿ ಅವನು ಒಪ್ಪಿಕೊಂಡಂಥ ರೇಟಿಗೂ ತದನಂತರ ಆದದ್ದಕ್ಕೂ ಎಷ್ಟು ಕಷ್ಟವಾಯಿತು, ಯಾರು ತೊಂದರೆ ಮಾಡಿದರು ಎಂಬ ಬಗ್ಗೆ ಹೇಳಿ. ಕೆಲವು ಸಾರಿ ಏನಾಗುತ್ತದೆಂದರೆ ಕೆಲಸವನ್ನು ವಹಿಸಿಕೊಳ್ಳುವುದರಲ್ಲೇ ತಡವಾಗಿರುತ್ತದೆ, ಅವನಿಗೆ ರೇಟ್ ಹೋಗಿರುತ್ತದೆ, ಅದನ್ನೇ ಕಾರಣವನ್ನಾಗಿಟ್ಟುಕೊಂಡು ಅವರು ಆರ್ಬಿಟ್ರೇಷನ್‌ಗೆ ಹೋಗಿರುತ್ತಾನೆ. ಸೆಕ್ಷನ್ ೪ರಲ್ಲಿ ನೋಟಿಫಿಕೇಶನ್‌ಗೆ ಎಷ್ಟು ದಿವಸವಾಗುತ್ತದೆ, ಸೆಕ್ಷನ್ ೬ ರಲ್ಲಿ ಎಷ್ಟು ದಿನವಾಗುತ್ತದೆ, ಅವಾರ್ಡ್ ಪಾಸ್ ಮಾಡಲು ಎಷ್ಟು ದಿನವಾಗುತ್ತದೆ, ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಎಷ್ಟು ತಡ ಮಾಡುತ್ತಾರೆ, ಅಲ್ಲಿ ಏನೇನೋ ತೊಂದರೆಯನ್ನು ಮಾಡಿರುತ್ತಾರೆ. ಹೀಗೆಲ್ಲ ಮಾಡಿರುತ್ತಾರೆ. ಅದಕ್ಕೆ ತಾವು ಒಂದು ಕಾಲದ ಮಿತಿಯನ್ನು ಹಾಕಬೇಕಾಗುತ್ತದೆ. ಯಾವ ಇಲಾಖೆಯಿಂದ ಅಕ್ವೈರ್ ಆಗಬೇಕಾಗುತ್ತದೆ. ಇಷ್ಟು ತಿಂಗಳಲ್ಲಿ ಅದನ್ನು ಮಾಡಿ ಮುಗಿಸಬೇಕೆಂದು ಕಾಲದ ಮಿತಿಯನ್ನು ಹಾಕಿದರೆ ಈ ರೀತಿಯ ತೊಂದರೆಗಳಾಗುವುದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:- ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ರಂಗನಾಥ್ ಹೇಳಿದರು ನಾವು ಲೋಕ ಅದಾಲತ್ ಹಾಕಿದ್ದು ಏಕೆಂದರೆ, ಇದರಲ್ಲಿ ಕೇಸುಗಳು ಬೇಗನೆ ಇತ್ಯರ್ಥ ಆಗಬೇಕು ಎಂದು. ಇಲ್ಲದಿದ್ದರೆ ಕೋರ್ಟಿಗೆ ಹೋಗುತ್ತದೆ, ಅಲ್ಲಿ ಬಹಳಷ್ಟು ಸಮಯ ಬೇಕಾಗುತ್ತದೆ. ಅದಲ್ಲದೆ ಲೋಕ ಅದಾಲತ್‌ನಲ್ಲಿ ಯಾವರೀತಿಯ ಅನ್ಯಾಯವಾಗುವುದಿಲ್ಲ. It will be only a reasonable. ನಮಗೆ ಗೊತ್ತಿದೆ, ಆರ್ಬಿಟ್ರೇಷನ್‌ನಲ್ಲಿ ಬಹಳಷ್ಟು ಅನ್ಯಾಯವಾಗಿದೆ. ಹೈಕೋರ್ಟಿನವರು ಲ್ಯಾಂಡ್ ಅಕ್ವಿಜಿಶನ್ ಕೇಸನಲ್ಲಿ ಕೆಲವು ಜಡ್ಜ್‌ಗಳನ್ನು ಸಸ್ಪೆನ್ಸನ್‌ನಲ್ಲಿ ಇಟ್ಟಿದ್ದಾರ. Because of excessive payment, sanction of the price for the land. ಎಕ್ಸ್‌ಪರ್ಟ್ ಅಂದರೆ ರಿಟೈರ್ಡ್ ಜಡ್ಜ್ ಆಗಲಿ, ರಿಟೈರ್ಡ್ ಲಾ ಸೆಕ್ರೆಟರಿ ಆಗಲಿ, ಅವರನ್ನು ಕರೆಸಿ acquisition costs normally in Lok Adalat I feel it is cheaper than that is sanctioned by the Courts. ಇದರಲ್ಲಿ ಯಾವ ರೀತಿಯ ಅನ್ಯಾಯವಾಗುವುದಿಲ್ಲ.

ಶ್ರೀ ಎಸ್. ಎಂ. ಯಾಹ್ಯ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಆರ್ಬಿಟ್ರೇಷನ್‌ನ ವಿಚಾರದಲ್ಲಿ ಹೈಕೋರ್ಟ್‌ದೆ ಅಪೀಲ್ ಕೋರ್ಟ್‌ಗಳಿವೆ. ಆಗ ಗೊತ್ತಾಗುತ್ತದೆ. ಯಾವ ಜಡ್ಜ್, ಏನು ಮಾಡಿದ್ದಾರೆ, ಎಲ್ಲಿ ತಪ್ಪಾಗಿದೆ,ಸ್ಟ್ರಿಕ್ಚರ್ಸ್ ಪಾಸ್ ಮಾಡಿದ್ದಾರೆಯೇ ಎಂದು ಗೊತ್ತಾಗುತ್ತದೆ. ನಿಮ್ಮ ಲೋಕ ಅದಾಲತ್‌ನಲ್ಲಿ ಇಷ್ಟು ದೊಡ್ಡ ದೊಡ್ಡ ವ್ಯವಹಾರಗಳಾದರೆ ಅಪೀಲೆಬಲ್ ಇಲ್ಲದಿದ್ದರೆ ನಿಮಗೆ ಎಲ್ಲಿ ತಪ್ಪಾಗಿದೆ ಎಂದು ಕಂಡುಹಿಡಿಯಲು ಬರುತ್ತದೆಯೆ?

ಶ್ರೀ ಕೆ. ಹೆಚ್. ರಂಗನಾಥ್:- ಇಬ್ಬರೂ ಸಹ ಒಪ್ಪಿ ಕೊಂಡಿದ್ದಾರೆ. ಸರ್ಕಾರ ಮತ್ತು ಹಣವನ್ನು ತೆಗೆದುಕೊಳ್ಳುವವರು ಇಬ್ಬರೂ ಕೂಡ ಹೊಂದಿಕೊಂಡು ಬಿಟ್ಟಿದ್ದಾರೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:- ಲೋಕ ಅದಾಲತ್ ಬಗ್ಗೆ ಮಾನ್ಯ ಯಾಹ್ಯಾರವರಿಗೆ. ಹೇಳುವುದೇನೆಂದರೆ It is a compromise on both sides and unfortunately we do not want anybody to appeal. ಈಗ ಕೇಸ್‌ಗಳು ಪೆಂಡಿಂಗ್ ಆಗಲು ಕಾರಣವೇನೆಂದರೆ ಮುನ್ಸೀಫ್ ಕೋರ್ಟ್‌ನಲ್ಲಿ ಕೇಸನ್ನು ಹಾಕುವಾಗ ಬಡವನಾದರೂ ಸಹ ನಾನು ಸುಪ್ರೀಂ ಕೋರ್ಟ್‌ತನಕ ಹೋಗುತ್ತೇನೆಂದು ಹೇಳುತ್ತಾನೆ. That wrong ego that false prestige makes many people to go in the Courts and fight the cases unnecessarily.

ಶ್ರೀ ಕೆ. ಹೆಚ್ ರಂಗನಾಥ್:- ಲೋಕ ಅದಾಲತ್ ಪಟ್ಟಿಯನ್ನು ಅವರು ಹೇಳಲಿ. ಈ ರೀತಿ ಕೇಸ್‌ಗಳನ್ನು ತೀರ್ಮಾನಿಸಿದರೆ ಏನಾಗುತ್ತದೆ?

ಶ್ರೀ ಎಸ್. ಎಂ. ಯಾಹ್ಯ:- ಲೋಕ ಅದಾಲತ್‌ದು ಜ್ಯೂರಿಡಿಕ್ಷನ್ ಯಾವುದು ಇರಬೇಕೊ ಆಲ್ ಮೈನರ್ ಥಿಂಗ್ಸ್ ಮಾಡಬೇಕಾಗುತ್ತದೆ. ಅದನ್ನು ಇಟ್ಟುಕೊಂಡು ದೊಡ್ಡ ದೊಡ್ಡ ವಿಚಾರಗಳನ್ನು ಹಾಕಿಕೊಂಡು ಕಾಂಪ್ರಮೈಸ್ ಮಾಡುತ್ತೇವೆಂದರ ನಾಳೆ ಖಜಾನೆ ಖಾಲಿಯಾಗಬಹುದು. ಲೋಕ ಅದಾಲತ್ ಆಕ್ಟ್‌ನಲ್ಲಿ ಕೂಡ ಯಾವ ರೀತಿ ಕೇಸ್‌ಗಳು ಹೋಗಬೇಕೆಂದಿದೆ. ಈ ರೀತಿಯಲ್ಲಿ ಹೋದರೆ ನಾಳೆ ಹೈಕೋರ್ಟ್ ಬೇಡ ಸುಪ್ರೀಂ ಕೋರ್ಟ್ ಬೇಡ ಎಂದಾಗುತ್ತದೆ. ಎಲ್ಲವೂ ಕಾಂಪ್ರಮೈಸ್‌ನಲ್ಲಿ ನ್ಯಾಯ ಸಿಗುತ್ತದೆಂದು ನಾವು ತಿಳಿಯಲಿಕ್ಕೆ ಬರುವುದಿಲ್ಲ. We are in a

particular legal system. ಆ ಲೀಗಲ್ ಸಿಸ್ಟಂ ಪ್ರಕಾರ ವರ್ಕಔಟ್ ಮಾಡಬೇಕಾಗುತ್ತದೆ.

Mr. A.M. Belliyappa (Fisheries and Ports Minister):- With all respect to my good friends, Mr. Speaker Sir, if there is no complaint even the biggest of the cases, if the compromise takes place and there is no complaint, why should it go to Appellate Court our Supreme Court. Like that, why should there be a grievance to Mr. Yahya when there is no appeal. There is no appeal when there is compromise and when there is no complaint.

Sri.S.M. Yahya:- All these Lok Adalat Matters, they should be small, minor matters. Heavy matters, if you go on giving to Lok Adalat, Justice may not be done. That is what my contention. It is not appealable.

Mr. A.M. Belliyappa:- First thing is whether there is understanding between the parties to compromise the case. And if there is a compromise, what is the worry?

ಡಾ. ವೈ. ನಾಗಪ್ಪ:- ಮಾನ್ಯ ಅಧ್ಯಕ್ಷಿಣಿಯವರೇ, ಯಾವ ಸರ್‌ಕಮ್‌ಸ್ಟೆನ್ಸ್‌ನಲ್ಲಿ ಬಾಗೂರು ನವಿಲೆ ಎಗ್ಸಿಟ್ ಗೇಟ್ ಕೆನಾಲ್ ಅನ್ನು ಲೋಕ ಅದಾಲತ್‌ಗೆ ರೆಫರ್ ಮಾಡಿದ್ದಾರೆ ಎನ್ನುವುದನ್ನು ಹೇಳಿದರೆ ಮಾನ್ಯ ರಂಗನಾಥರವರಿಗೆ ಮತ್ತು ಯಾಹ್ಯಾರವರಿಗೆ ಸಂಶಯ ಕ್ಲಿಯರ್ ಆಗಬಹುದು. ಮಾನ್ಯ ನೀರಾವರಿ ಸಚಿವರು ಇಲ್ಲಿದ್ದಾರೆ. ಇದು ಬಹಳ ಪ್ರಮುಖವಾದಂತಹ ಪ್ರಶ್ನೆ. ತುಮಕೂರು ಜಿಲ್ಲೆಗೆ ಹೇಮಾವತಿ ನೀರು ಬರಬೇಕಾದರೆ ಆ ಎಗ್ಸಿಟ್ ಕೆನಾಲ್‌ನಿಂದ ಐದು ಕಿ. ಮೀ. ವ್ಯಾಪ್ತಿಯಲ್ಲಿ ಬರುತ್ತಾ ಇರತಕ್ಕಂತಹ ಅಕ್ವಿಜಿಷನ್ ಏನಾಗಿದೆಯೆಂದರೆ, ಎಗ್ಸಿಸ್ಟಿಂಗ್ ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನಲ್ಲಿ ಹೈಯರ್ ಕಾಂಪನ್‌ಸೇಷನ್ ಕೊಡುವುದಕ್ಕೆ ಬರುವುದಿಲ್ಲ. ಇದು ಬಹಳ ವರ್ಷಗಳಿಂದ ನನೆಗುದಿಗೆ ಬಿದ್ದು ಕಡೆಗೆ ಅಂತಿಮವಾಗಿ ಎಕ್ಸ್‌ಪರ್ಟ್ ಕಮಿಟಿ ಮಾಡಿ, ರಾಜ್ಯ ಮಟ್ಟದ ಉನ್ನತ ಮಟ್ಟದ ಸಮಿತಿ ಮಾಡಿ, ಆ ಜಿಲ್ಲೆಯ ಎಲ್ಲಾ ಶಾಸಕರು, ಆಬೇಸಿನ್‌ನಲ್ಲಿ ಬರತಕ್ಕಂತವರೆಲ್ಲರೂ ಒತ್ತಾಯ ಮಾಡಿ As an extra-ordinary decision ಮಾಡಿದ್ದಾರೆ. It may not be a precedent but it is inevitable. ಬಾಗಲೂರು ನವಿಲೆ ಟನಲ್ ಎಗ್ಸಿಟ್‌ನಲ್ಲಿ ಬರತಕ್ಕಂಥ ಲ್ಯಾಂಡ್ ಅಕ್ವೈರ್ ಮಾಡಬೇಕಾದರೆ ಲ್ಯಾಂಡ್ ಅಕ್ವಿಜಿಷನ್ ಆಕ್ಟನಲ್ಲಿ ಪ್ರಾವಿಜನ್ ಇಲ್ಲದೇನೆ ಮತ್ತು ಹೈಯರ್ ಕಾಂಪನ್‌ಸೇಷನ್ ಕೊಡುವುದಕ್ಕೆ ಅವಕಾಶ ಇಲ್ಲದೇ ಎಲ್ಲಾ ರೀತಿಯ ಮಾರ್ಗಗಳನ್ನು ಅನುಸರಿಸಿ ಕೊನೆಗೆ ಲೋಕ ಅದಾಲತ್‌ನಲ್ಲಿ ನಡೆಸಿ ಹೈಯರ್ ಕಾಂಪನ್‌ಸೇಷನ್ ಕೊಟ್ಟು ಮಾಡಿದ್ದಾರೆ. ಆ ಲ್ಯಾಂಡ್ ಬಹಳ ಕಾಸ್ಟ್ಲಿ ಲ್ಯಾಂಡ್. ಅದು ನಮ್ಮ ಹಾಸನ ಜಿಲೆಯವರಿಗೆ ಮತ್ತು ನಮ್ಮ ತುಮಕೂರು ಜಿಲ್ಲೆಯವರಿಗೆ ಗೊತ್ತು. ಇದು One of the compliment ಮಾಡತಕ್ಕಂಥ ಡಿಸಿಷನ್. ಈ ಡಿಸಿಷನ್ ನಮ್ಮ ಸರ್ಕಾರದವರು ತೆಗೆದುಕೊಂಡು ನಾಲ್ಕು ಲಕ್ಷ

ಎಕರೆಗೆ ನೀರು ಕೊಡತಕ್ಕಂತಹ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಅವರು ತಿಳಿದು ಕೊಂಡಿರುವ ರೀತಿಯಲ್ಲಿ ಇದು ಆರ್ಬಿಟ್ರೇಷನ್‌ದಲ್ಲ, ಮತ್ತೊಂದಲ್ಲ. ಈ ೫ ಕಿ. ಮೀ. ಸಮಸ್ಯೆ ಏನು ಇತ್ತು ಅದು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿತ್ತು. ಅದಕ್ಕೋಸ್ಕರ Just to overcome the particular five kilometer problem, in order to get rid of that legal and other lacunaes, they have thought of this and it is one of the best solution and we should compliment this decision of referring that particular bit of dispute to the Lok Adalat. Otherwise, immediately there is no other go to solve this. I will compliment this. ಮಾನ್ಯ ರಂಗನಾಥರವರಿಗೆ ಮತ್ತು ಮಾನ್ಯ ಯಾಹ್ಯಾರವರಿಗೆ ಸ್ವಲ್ಪ ಕನ್‌ಫ್ಯೂಷನ್ ಆಗಿದೆ. ಮಾನ್ಯ ಮಲ್ಲಾರಿಗೌಡ ಪಾಟೀಲರು ಅದನ್ನು ಕ್ಲಿಯರ್ ಮಾಡುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಸನ್ಮಾನ್ಯ ಅಧ್ಯಕ್ಷಿಣೆಯವರೇ ಇದು ಏನಾಗಿದ್ದೆಯೆಂದರೆ, ಸುಮಾರು ೨೪೬ ಎಕರೆ ಜಮೀನನ್ನು ಈಗಾಗಲೇ ಸರ್ಕಾರ ಅಕ್ವಿಜಿಷನ್ ಮಾಡಿದೆ. ಆ ವಿಷಯವೆಲ್ಲ ತಮಗೆ ಗೊತ್ತಿದೆ. ಆ ವಿಷಯವೆಲ್ಲಾ ಬೇಗ ಬಗೆಹರಿಯಬೇಕಾದರ ಬಗಾಯತ್ ಮತ್ತು ನಾನ್ ಬಾಗಾಯತ್ ಎನ್ನುವಂತಹ ಏನು ಶಬ್ದ ಇದೆ, ಅಲ್ಲಿ ಒಂದು ಹಣಕಾಸಿನ ವ್ಯವಸ್ಥೆ ಏನು ಆಗಬೇಕಾಗಿತ್ತು ಮತ್ತು ಅವರು ಕೋರ್ಟಿಗೆ ಹೋಗುವುದು ಆಮೇಲೆ ನಾವು ಪೇಮೆಂಟ್ ಮಾಡುವುದು, ಅಲ್ಲಿ ಬಂದು ಅಬ್‌ಸ್ಟ್ರಕ್ಷನ್ ಮಾಡುವುದು, ಇದೆಲ್ಲವನ್ನು ನೋಡಿ ನಾವು ಲೋಕಅದಾಲತ್‌ಗೆ ರೆಫರ್ ಮಾಡಿದ್ದೇವೆ. ನಿಜವಾಗಲೂ ಕೂಡ ಇದೊಂದು ಒಳ್ಳೆಯ ಮಾದರಿಯ ಲೋಕ ಅದಾಲತ್ ಆಗುತ್ತದೆ. ಆದ್ದರಿಂದ ಮುಂದೆ ನೀರಾವರಿ ಪ್ರದೇಶ ಏನು ಆಗಬೇಕಾಗಿದೆ,ಅದಕ್ಕೆ ಯೋಗ್ಯವಾದಂತಹ ನ್ಯಾಯ ದೊರಕಿಸುವ ಸಲುವಾಗಿ ಈ ಲೋಕ ಅದಾಲತ್ ಮಾಡಬೇಕೆಂದು ಹಲವಾರು ಶಾಸಕರು ನಮ್ಮ ಕಡೆಗೆ, ಮಾನ್ಯ ಮುಖ್ಯ ಮಂತ್ರಿಗಳ ಕಡೆಗೆ ಸನ್ಮಾನ್ಯ ಮೊಯಿಲಿಯವರ ಕಡೆಗೆ ಬಂದು ಕೂಡ ಹೇಳಿದ್ದರು. ಆದ್ದರಿಂದ ಇದು ಒಂದು ಒಳ್ಳೆಯ ನಿರ್ಣಯ ಬರಬಹುದೆಂಬ ಅಭಿಪ್ರಾಯದಿಂದ ಮಾಡಿದ್ದೇವೆ. Only limited to 'Y' alignment and not for other land acquisition proceedings.

ಶ್ರೀ ಎಸ್. ಎಂ. ಯಾಹ್ಯಾ:- ನಾನು the whole jurisdiction and the working of Lok Adalat ಬಗ್ಗೆ ಹೇಳುತ್ತಿದ್ದೇನೆ. ನೀವು ಕಾಂಪ್ರೊಮೈಸ್ ಮಾಡಬೇಕಿದ್ದರೆ ಲೋಕ ಅದಾಲತ್‌ಗೆ ಹೋಗಲೇಬೇಕಾದ್ದು ಇರಲಿಲ್ಲ. ಕಾಂಪ್ರೊಮೈಸ್ ಮಾಡುತ್ತೇವೆಂದು ಹೇಳುತ್ತೀರಿ. ಸರ್ಕಾರ ಅವರನ್ನು ಕೂರಿಸಿ ಕಾಂಪ್ರೊಮೈಸ್‌ನಲ್ಲಿ ಮಾಡಬಹುದು. ಅದಕ್ಕೆ ಈ ಪ್ರೊಸೀಜರ್ ಎಲ್ಲಾ ಏಕೆ ಮಾಡಬೇಕು?

ಶ್ರೀ ಕೆ. ಸೋಮಪ್ಪ ಸುವರ್ಣ:- ಪಂಚಾಯಿತಿಗೆ ಮಾಡುವವರು ಬೇಕಲ್ಲ, ಪಂಚಾಯಿತಿ ಮಾಡುವವರು ಲೋಕ ಅದಾಲತ್‌ನವರು.

ಡಾ. ಎಸ್. ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷಿಣೆಯವರೇ, ಲೋಕ ಅದಾಲತ್‌ನ್ನು ಬಾಗೂರು ನವಿಲೆ ಟನಲ್ ಆದಮೇಲೆ ಎಕ್ಸಿಟ್‌ನಲ್ಲಿ ಏಕೆ ಮಾಡಬೇಕಾಗಿ ಬಂತು ಎಂದರೆ, ಅದು ಮೊದಲಿನಿಂದಲೂ ಕೂಡ ಡಿಸ್‌ಪ್ಯೂಟ್ ಇತ್ತು. ಅದನ್ನು ಪ್ರಾರಂಭ ಮಾಡತಕ್ಕಂತಹ ಸಂದರ್ಭದಲ್ಲಿ

ದಿವಂಗತ ದೇವರಾಜ ಅರಸುರವರು ಅದನ್ನು ಓಪನಿಂಗ್ ಸೆರಮನಿ ಮಾಡಲು ಬಂದಿದ್ದ ದಿವಸ ಏನು ಹೇಳಿದರೆಂದರೆ, ಬೇಸಿಕ್ ಆಗಿ ಈ ಟನಲ್ ಡೀಪ್ ಕಟ್‌ನಲ್ಲಿ ಅಂದರೆ ೧೮೦ ಅಡಿ ಕೆಳಗಡೆ ಹೋಗುವುದರಿಂದ ೧೧ ಕಿ. ಮೀ ದೂರ ಹೋಗುವುದರಿಂದ ಅದರ ಸುತ್ತಮುತ್ತ ಇರತಕ್ಕಂತಹ ಪ್ರದೇಶಕ್ಕೆಲ್ಲಾ ಬಹಳ ತೊಂದರೆಯಾಗುತ್ತದೆ, ಎಗ್ಸಿಟ್‌ನಲ್ಲಿ ಕೂಡ ನಾವು '೦' ಅಲೈನ್‌ಮೆಂಟ್‌ನಲ್ಲಿ ಅದನ್ನು ತೆಗೆದುಕೊಂಡು ಹೋಗುತ್ತೇವೆಂದು ಹೇಳಿ ಒಂದು ಆಶ್ವಾಸನೆ ಕೊಟ್ಟರು. '೦' ಅಲೈನ್‌ಮೆಂಟ್‌ಅನ್ನು ಕಳೆದ ಸರ್ಕಾರ ತೆಗೆದುಕೊಂಡು ಹೋಗದೆ 'ವೈ' ಅಲೈನ್‌ಮೆಂಟ್‌ನಲ್ಲಿ ತೆಗೆದುಕೊಂಡು ಹೋದುದರಿಂದ ೧೪ ಸಾವಿರ ತೆಂಗಿನ ಗಿಡಗಳನ್ನು ಇವತ್ತು ಕಡಿಯಬೇಕಾಗಿದೆ. ಆ ಜಾಗದಲ್ಲಿ ಅದು ಏತಕ್ಕೆ ಬಂತು ಎಂದು ಮಂತ್ರಿಗಳಿಗೆ ನಾನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ೧೪ ಸಾವಿರ ತೆಂಗಿನ ಗಿಡಗಳನ್ನು ಕಡಿದು ಇವತ್ತು ಓಪನ್ ಕಟ್‌ಔಟ್ ಮಾಡಬೇಕಾಗಿದೆ. ಅದಕ್ಕೆ ಬೇಕಾದಷ್ಟು ಎಜಿಟೇಷನ್ಸ್ ಎಲ್ಲಾ ಆಗಿ ಇಲ್ಲಿಯವರೆಗೆ ನಾವು ಆ ಜಾಗದಲ್ಲಿ ನಮ್ಮ ರೈತರು ಕಾಲುವೆಯನ್ನು ತೆಗೆಯುವುದಕ್ಕೆ ಬಿಡಲಿಲ್ಲ. ಏಕೆಂದರೆ, ಒಳ್ಳೆಯ ಕಾಂಪನ್‌ಸೇಷನ್ ನಿಮಗೆ ಕೊಡುತ್ತೇವೆಂದು ಕೂಡ ಆಶ್ವಾಸನೆ ಕೊಟ್ಟಿದ್ದರು. ಇತ್ತೀಚೆಗೆ ಬಂದಂತಹ ಮಂತ್ರಿಗಳು ಕೂಡ ಕೊಟ್ಟರು. ಕಳೆದ ಸರ್ಕಾರ ಕೂಡ ಒಳ್ಳೆಯ ಕಾಂಪನ್‌ಸೇಷನ್ ಕೊಡುತ್ತೇವೆಂದು ಹೇಳಿದರು. ಈಗ ಏನು ಮಾಡಿದ್ದಾರೆಂದರೆ, They have equated with other properties. ಅದನ್ನು ಕೆರೆ ಹಿಂಭಾಗದಲ್ಲಿ ತರಿ ಜಮೀನು ಮತ್ತು ೧೪ ಸಾವಿರ ತೆಂಗಿನ ಗಿಡದ ತೋಟ ಇರತಕ್ಕಂತಹ ಜಾಗದಲ್ಲಿ ಇವತ್ತು ಕಾಲುವೆಯನ್ನು ಮಾಡುತ್ತಿದ್ದಾರೆ. '೦' ಅಲೈನ್‌ಮೆಂಟ್‌ನಲ್ಲಿ ಮಾಡುವುದಕ್ಕೆ ಅವಕಾಶವಿದ್ದರೂ ಕೂಡ ಅದನು It is a wrong decision taken by the previous Government. ಅದು ನಾವೆಲ್ಲರೂ ಪ್ರತಿಭಟನೆ ಮಾಡಿದ್ದೇವೆ. ಇವತ್ತು ಕೂಡ ಆ ಜಮೀನನ್ನು ರೈತರು ಬಿಡುತ್ತಿಲ್ಲ. ಆದುದರಿಂದ ಆದಷ್ಟು ಬೇಗ ತುಮಕೂರು ಜಿಲ್ಲೆಗೆ ನೀರನ್ನು ಕೊಡಬೇಕಾಗಿರುವುದರಿಂದ ನಾವು ವಯಾಮೀಡಿಯ ಅಂದರೆ ನನ್ನ ಮತಕ್ಷೇತ್ರದಲ್ಲಿ ಅದು ಇರುವುದರಿಂದ ನಾವು ಮತ್ತು ಅಲ್ಲಿರುವವರೂ ಸೇರಿ ಒಂದು ಸಮಿತಿಯನ್ನು ಮಾಡಿಕೊಂಡಿದ್ದೇವೆ. ಆ ಸಮಿತಿಯವರೆಲ್ಲರೂ ಸೇರಿ ಮಾತನಾಡಿ, ಅಲ್ಲಿಗೆ ಡೆಪ್ಯುಟಿ ಕಮಿಷನರ್‌ರವರನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲನೆ ಮಾಡಿದ ಮೇಲೆ, ಹಿಂದಿನ ಸರ್ಕಾರದ ಇರಿಗೇಷನ್ ಮಂತ್ರಿಗಳಿಂದ ಸ್ಥಳ ಪರಿಶೀಲನೆ ಮಾಡಿದ ಮೇಲೆ, ಇದನ್ನು ಯಾವುದೇ ಕಾರಣದಿಂದ ಮಾಡುವುದಕ್ಕಾಗುವುದಿಲ್ಲ, ಕೇವಲ ಲೋಕ್ ಅದಾಲತ್‌ನಿಂದ ಮಾತ್ರ ಇದನ್ನು ತೀರ್ಮಾನ ಮಾಡಿ ಒಳ್ಳೆಯ ಕಾಂಪನ್‌ಸೇಷನ್ ಕೊಟ್ಟರೆ ಬೇಗ ಕೆಲಸವನ್ನು ಪ್ರಾರಂಭ ಮಾಡಬಹುದು ಎಂದು ಒಂದು ತೀರ್ಮಾನಕ್ಕೆ ಬಂದಮೇಲೆ ಲೋಕ್ ಅದಾಲತ್‌ನ್ನು ಮಾಡಿ ಆಯಿತು. ಇದು ಇದುವರೆಗೆ ೨ ಮೀಟಿಂಗ್ ಮಾಡಿದ ಮೇಲೆ ಈಗ ಒಂದು ರೀತಿಯಲ್ಲಿ ತೀರ್ಮಾನ ಆಗತಕ್ಕಂಥ ಹಂತಕ್ಕೆ ಬಂದು ನಿಂತಿದೆ. ಈ ಸಮಸ್ಯೆ ಅದರಿಂದ ತೀರ್ಮಾನವಾಗಬೇಕೇ ಹೊರತು ಬೇರೆ ರೀತಿಯಲ್ಲಿ ತೀರ್ಮಾನವಾಗುವುದಕ್ಕೆ ಸಾಧ್ಯವಿಲ್ಲ. ಈಗ ಲೋಕ್ ಅದಾಲತ್ ಕೂಡ ಬಹಳ ಬೇಗ ಇದನ್ನು ತೀರ್ಮಾನ ಮಾಡಿದರೆ ಆ ಕೆಲಸ ಪ್ರಾರಂಭವಾಗುತ್ತದೆ.

Sri. Blasius M. D'souza:- There is a wrong conception about Lok Adalat and Lokayukta ಈ ವಿಚಾರದಲ್ಲಿ ನಾನು ಜಾಸ್ತಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಯಾಹ್ಯಾರವರು ದೊಡ್ಡ ದೊಡ್ಡ ವಿಚಾರಗಳನ್ನು ಲೋಕ್

ಅದಾಲತ್‌ಗಳಿಗೆ ಹೋಗಬಾರದೆಂದು ಹೇಳಿದ್ದಾರೆ. Lok Adalat is a very simple machinery where any case can come and compromise except, in criminal cases. Any case can come to Lok Adalat. In Mangalore, they have serttled 281 Motor Vehicle accident compensation cases and Rs. 61 lakhs were sanctioned. Do you mean to say, any accident case where there is a death, limb deformity is a small case? All these cases were decided in Lok Adalat. We should form a culture of the people as it was done before where everything was settled by the leader of the village i.e. patel of the community. If that culture comes we do not require more courts. It is a wrong conception that everything should go to courts. We are really happy that the Legal Aid Committee has done a very good job. Regarding vacancies in the District Court and Munsiff courts, as to-day, there are 20 vacancies in District Courts and 41 vacancies in Munsiff courts. ೨೦ ಜಿಲ್ಲಾ ನ್ಯಾಯಾಧೀಶರನ್ನೂ ಬೇಗನೆ ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ೪೧ ಮುನಿಸಿಫ್ ಕೋರ್ಟ್‌ಗಳಲ್ಲ ನಾನು ಹೇಳಿದಂತೆ ೩೭ ಹೆಸರುಗಳು ಸೆಲೆಕ್ಟ್ ಆಗಿ ನಮ್ಮ ಮುಂದಿವೆ. ಇನ್ನು ಒಂದು ತಿಂಗಳೊಳಗೆ ಕ್ಯಾಬಿನೆಟ್ ಮುಂದೆ ಇದರ ಬಗ್ಗೆ ತೀರ್ಮಾನವಾಗುತ್ತದೆ. ಇದನ್ನು ನೋಡಿದರೆ ಬಹಳಷ್ಟು ಕಡಿಮೆ ವೇಕೆನ್ಸೀಸ್ ನಮ್ಮ ಜ್ಯುಡಿಷಿಯಲ್‌ನಲ್ಲಿದೆ. ನಮ್ಮ ಒಬ್ಬ ಸದಸ್ಯರು ಹೇಳಿದ ಪ್ರಕಾರ, ಈ ಮುನ್ಸೀಫ್‌ರಿಗೆ ಟ್ರೈನಿಂಗ್ ಕೊಡಬೇಕಾಗುತ್ತದೆ. ನಾವು ಈ ಮುನ್ಸೀಫ್‌ರನ್ನು ಸೆಲೆಕ್ಟ್ ಮಾಡಿದ ನಂತರ ೩ ತಿಂಗಳ ಟ್ರೈನಿಂಗ್ ಕೊಟ್ಟು ಅವರನ್ನು ಪೋಸ್ಟಿಂಗ್ ಮಾಡುತ್ತೇವೆ. ಅದೇ ರೀತಿ ಬೇರೆ ಬೇರೆ ಕೇಡರ್‌ನವರಿಗೆ ನಾವು ರಿಫ್ರೆಷ್ ಕೋರ್ಸ್‌ನ್ನು ಮಾಡಬೇಕಾಗುತ್ತದೆ. ಅದರಲ್ಲಿ ವಿಶೇಷವಾಗಿ ಪ್ರಾಸಿಕ್ಯೂಟಿಂಗ್ ಆಫೀಸರ್‌ಗಳನ್ನು ಡಿಸೆಂಟ್ರಲೈಸ್ ಮಾಡಿ ಕೆಲಸ ಬೇಗ ಆಗುವಂತೆ ಮಾಡಬೇಕಾಗಿದೆ. As you know the Government is the biggest litigant. ಆದ ಕಾರಣ All the cases filed by Government must be looked after by the Prosecuting Officiers ಅವರಿಗೆ ಒಂದು ರಿಫ್ರೆಷರ್ ಕೋರ್ಸ್‌ನ್ನು ಕೊಟ್ಟು so that we strengthen our Judiciary and Litigation wing. The Legal Aid Committee has done lot of work. ನಾನು ಹೇಳುವುದಾದರೆ, ಬಹಳಷ್ಟು ಕೆಲಸವನ್ನು ನಮ್ಮ ಪ್ರಾಸಿಕ್ಯೂಟಿಂಗ್ ವಿಂಗ್‌ನವರು ಮಾಡಿದ್ದಾರೆ. ಇದೇ ರೀತಿ ನಮ್ಮ ಫ್ರೀ ಲೀಗಲ್ ಅಡ್ವೈಸ್ ಬಗ್ಗೆ ಹೇಳುವುದಾದರೆ, ಬಹಳಷ್ಟು ಜನರಿಗೆ ಫ್ರೀ ಲೀಗಲ್ ಅಡ್ವೈಸ್ ವಿಚಾರ ಗೊತ್ತಿಲ್ಲ. ಅದಕ್ಕೆ ನಾನು ನಮ್ಮ ಶಾಸಕರನ್ನು ಕೇಳುವುದೇನೆಂದರೆ ೧೭೧ ತಾಲ್ಲೂಕ್‌ಗಳಲ್ಲಿ, ತಾಲ್ಲೂಕ್ ಲೆವಲ್‌ನಲ್ಲಿ, ೧೯ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಇದ್ದ ಲೀಗಲ್ ಏಯ್ಡ್ ಕಮಿಟಿಯಲ್ಲಿ ಮೆಂಬರ್ ಆಗಿರುತ್ತಾರೆ. ದಯವಿಟ್ಟು ಇನ್ನೂ ಸ್ವಲ್ಪ ಗಮನಿಸಿ ಅದನ್ನು ಸ್ಟ್ರೆಂತನ್ ಮಾಡಬೇಕೆಂದು ನಿಮ್ಮ ಹತ್ತಿರ ಕೇಳಿಕೊಳ್ಳುತ್ತೇನೆ.

ನಮ್ಮ ಮಾಜಿ ಸ್ಪೀಕರ್‌ರವರು ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹಿರಿಯರು, ತುಮಕೂರು ಬಾರಿನ ವಕೀಲರು. ಅವರು ಜ್ಯುಡಿಷಿಯರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡಬೇಕೆಂದು ಹೇಳಿದ್ದಾರೆ. ನಾನು ಹೇಳಬೇಕಾದರೆ, ಅವರಿಗೆ ಯಾವ ರೀತಿ ಸವಲತ್ತುಗಳನ್ನು ಕೊಡಬೇಕೋ ಅದೇ ರೀತಿಯ ಸವಲತ್ತುಗಳನ್ನು ಕೊಟ್ಟುಕೊಂಡು ಬಂದಿದ್ದೇವೆ. ಈ ವರ್ಷವೇ ಜ್ಯುಡಿಷಿಯಲ್ ಕಾನ್‌ಫರೆನ್ಸ್‌ನಲ್ಲಿ ಹೋಮ್ ಆರ್ಡರ್ಲಿ ಅಲೋಯನ್ಸ್ ಒಂದು ತಿಂಗಳಿಗೆ ೨೦೦ ರೂಪಾಯಿ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ನ್ಯೂಸ್ ಪೇಪರ್ ಅಲೋಯನ್ಸ್ ತಿಂಗಳಿಗೆ ೧೫೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಅದೇ ರೀತಿಯಲ್ಲಿ ಬೇರೆ ಬೇರೆ ಕಡೆಗಳಲ್ಲಿರುವ ಮನೆಗಳಿಂದ ಕೋರ್ಟಿಗೆ ಜುಡಿಶಿಯಲ್ ಆಫೀಸರ್ಸ್‌ಗೆ ವಾಹನಗಳ ಸೌಕರ್ಯ ಇರಲಿಲ್ಲ. ಅದಕ್ಕೆ ನಾವು ಆರು ಮಿನಿ ಬಸ್‌ಗಳನ್ನು ಒದಗಿಸಿದ್ದೇವೆ. ಈ ಮಿನಿಬಸ್‌ಗಳಲ್ಲಿ ಬೆಂಗಳೂರಿಗೆ ಎರಡು ಹಾಗೂ ಮೈಸೂರು, ಮಂಗಳೂರು, ಹುಬ್ಬಳ್ಳಿ, ಧಾರವಾಡಕ್ಕೆ ಒಂದೊಂದು ಬಸ್ಸನ್ನು ನಾವು ಅವರಿಗೆ ಕೊಟ್ಟಿದ್ದೇವೆ. ಅದೇ ರೀತಿಯಲ್ಲಿ ಗುಬ್ಬಿ ಕೋರ್ಟಿಗೆ ಕಾಂಪೌಂಡ್ ವಾಲ್ ಇಲ್ಲ, ದನಕರುಗಳು ಒಳಗೆ ಬರುತ್ತವೆ ಎಂದು ಮಾನ್ಯ ಶಿವನಂಜಪ್ಪನವರು ಹೇಳಿದ್ದಾರೆ. ಅವರಿಗೆ ನಾನು ಹೇಳುವುದೇನೆಂದರೆ, ಇದರ ಬಗ್ಗೆ ನಾವು ಪಿ. ಡಬ್ಲ್ಯೂ. ಡಿ. ಗೆ ಬರೆದಿದ್ದೇವೆ. ಬೇಗನೆ ಕಾಂಪೌಂಡ್ ವಾಲನ್ನು ಕಟ್ಟಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆಂದು ನಿಮಗೆ ಆಶ್ವಾಸನೆಯನ್ನು ಕೊಡುತ್ತೇನೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ಮಂಜುನಾಥ್‌ರವರು ಶಿಗ್ಗಾಂವ್‌ನಲ್ಲಿ ಕೋರ್ಟ್ ಬೇಕೆಂದು ಕೇಳಿದ್ದಾರೆ. ಶಿಗ್ಗಾಂವ್‌ನಲ್ಲಿ ಕೋರ್ಟ್ ತೆಗೆಯಲು ಈಗ ತಾನೆ ಹೈಕೋರ್ಟಿಗೆ ಕಳುಹಿಸಿ ಕೊಟ್ಟಿದ್ದೇವೆ. ಯಾವ ಒಂದು ಮುನ್‌ಸೀಫ್ ಕೋರ್ಟ್ ಸ್ಯಾಂಕ್ಷನ್ ಆಗಬೇಕಾದರು ಅದಕ್ಕೆ ಅರ್ಹತೆ ಇದೆಯೆಂದು ಹೈಕೋರ್ಟ್‌ನಿಂದ ನಮಗೆ ರಿಪೋರ್ಟ ಬರಬೇಕಾಗುತ್ತದೆ. ರಿಪೋರ್ಟ ಬಂದಕೂಡಲೇ ನಾವು ಅದನ್ನು ಸರ್ಕಾರದಿಂದ ಬೇಗನೆ ಸ್ಯಾಂಕ್ಷನ್ ಮಾಡುತ್ತೇವೆ. ನಮ್ಮ ಮಾನ್ಯ ಕರಿಯಣ್ಣನವರು ಲೀಗಲ್ ಏಯ್ಡ್ ಫೆಸಿಲಿಟಿ ಎಸ್. ಟಿ. ಎಸ್. ಸಿಯವರಿಗೆ ಸಿಗುವುದಿಲ್ಲವೆಂದು ಹೇಳಿದ್ದಾರೆ. ನಾನು ಹೇಳಬೇಕಾದರೆ, ಎಸ್. ಟಿ. ಎಸ್. ಸಿ.ಯವರಿಗೆ ಲೀಗಲ್ ಎಯ್ಡ್ ಫೆಸಿಲಿಟಿ ಇದೆ. ಆದರೆ ಅದಕ್ಕೆ ಪ್ರಚಾರ ಸಾಕಷ್ಟು ಸಿಗುತ್ತಿಲ್ಲ. ನಾವು ಬಹಳಷ್ಟು ಪ್ರಚಾರ ಮಾಡುತ್ತಿದ್ದೇವೆ. ಅದು ಹಳ್ಳಿಗಳಿಗೆ ಮುಟ್ಟಬೇಕಾಗುತ್ತದೆ. ಟೌನ್‌ನಲ್ಲಿ, ಸಿಟಿಯಲ್ಲಿ ಅದಕ್ಕೆ ಹೆಚ್ಚಿನ ಪ್ರಚಾರ ಸಿಗಬಹುದು. ಹಳ್ಳಿಗಳಿಗೆ ಇದು ಮುಟ್ಟಬೇಕಾದರೆ ನಮ್ಮ ಎಲ್ಲಾ ಎಂ. ಎಲ್. ಎ.ಗಳು ಅವರ ಏರಿಯಾದಲ್ಲಿ ಸರಿಯಾದ ರೀತಿ ಪ್ರಚಾರವನ್ನು ಕೊಟ್ಟರೆ ಬಹಳ ಒಳ್ಳೆಯದು. ನಿಜವಾಗಿಯೂ ಸರ್ಕಾರ ಅದಕ್ಕೆ ಯಾವ ರೀತಿಯಲ್ಲೂ ಹಣವನ್ನು ಕಡಿಮೆ ಮಾಡಿಲ್ಲ. ಶ್ರೀಮತಿ ಮೊಟಮ್ಮನವರು ಉಚಿತ ಕಾನೂನು ನೆರವಿಗೆ ಹಣವಿಲ್ಲವೆಂದು ಹೇಳಿದುದು ತಪ್ಪು. ಇಷ್ಟರವರೆಗೆ ಯಾರು ಉಚಿತ ಕಾನೂನು ನೆರವು ಬೇಕೆಂದು ಮುಂದೆ ಬಂದರೂ ಅಂಥವರು ಯಾರನ್ನೂ ನಾವು ಹಿಂದೆ ಕಳುಹಿಸಿಲ್ಲ. ಯಾವಾಗಲೂ ನಾವು ಹಣವನ್ನು ಒದಗಿಸುತ್ತಾ ಬಂದಿದ್ದೇವೆ. ಮತ್ತೊಂದು ವಿಷಯವೆಂದರೆ, ನಮ್ಮ ನೋಟರಿ ಬಗ್ಗೆ ಹೇಳುವುದಾದರೆ ನೋಟರಿ ಆಕ್ಟ್‌ನಂತೆ ಇಲ್ಲಿಯವರೆಗೆ ಅಂದರೆ ೧೯೮೧ರಲ್ಲಿ ೭೦ ನೋಟರೀಸ್ ನಮ್ಮ ಇಡೀ ಕರ್ನಾಟಕಕ್ಕೆ ಸ್ಯಾಂಕ್ಷನ್ ಆಯಿತು. ಆದಾದ ನಂತರ ಸ್ಯಾಂಕ್ಷನ್ ಆಗಲಿಲ್ಲ. ಬಹಳಷ್ಟು ಜನರಿಂದ ನಮಗೆ ದೂರು ಬರುತಿತ್ತು. ಏನೆಂದರೆ ನೋಟರಿ ಸಾಕಾಗುವುದಿಲ್ಲವೆಂದು. ನೋಟರಿ ಅವರ ಅಟೆಸ್ಟೇಷನ್ ಆಗಲಿ, ಅಫಿಡವಿಟ್ ಆಗಲಿ ಅಗತ್ಯ ಬಿದ್ದಲ್ಲಿ ಸಿಕ್ಕದೆ ಬಹಳ ತೊಂದರೆಯಾಗಿದೆ, ಜನಸಂಖ್ಯೆ ಜಾಸ್ತಿಯಾಗಿದೆ, ಅದಕ್ಕೆ ತಕ್ಕಂತೆ ಇಲ್ಲ. ಇದಲ್ಲದೆ ಕೆಲವು ನೋಟರಿಯವರು ಮನಾಪಲಿಯಾಗಿದ್ದಾರೆ, ಅವರಿಗೆ ಪ್ರಿಸ್‌ಕ್ರೈಬಡ್

ಫೀಸ್ ಇದ್ದರೂ ಅವರು ಅದಕ್ಕಿಂತ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆಂದು ನಮಗೆ ದೂರು ಬಂದಿದೆ. ನಾನು ತಮ್ಮ ಮೂಲಕ ಹೇಳುತ್ತೇನೆ, ಅಂಥ ನೋಟರಿ ಯಾರು ಎಂದು ನಮ್ಮ ಗಮನಕ್ಕೆ ಬಂದರೆ ಮತ್ತು ಅವರು ಪ್ರಿಸ್ಕ್ರೈಬ್ಡ್ ಫೀಗಿಂತ ಜಾಸ್ತಿ ತೆಗೆದುಕೊಂಡರೆ ನಾವು ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ ಮಾತ್ರವಲ್ಲ, ಅವರ ನೋಟರಿಯನ್ನು ರದ್ದು ಮಾಡುತ್ತೇವೆ. ಈ ಸಾರಿ ನಮ್ಮ ಕ್ಯಾಬಿನೆಟ್‌ನಲ್ಲಿ ನಮ್ಮ ಮುಖ್ಯ ಮಂತ್ರಿಗಳ ಪ್ರೋತ್ಸಾಹದಿಂದ ೧೫೦ ನೋಟರಿಗಳನ್ನು ಜಾಸ್ತಿ ಮಾಡಿದ್ದೇವೆ. ೨೦೦ ನೋಟರಿಗಳು ಈಗ ಬೇಕಾಗಿದ್ದಾರೆ. ಯಾರು ವಕೀಲರು ಕನಿಷ್ಠ ೧೦ ವರ್ಷ ವಕೀಲರಾಗಿ ಪ್ರಾಕ್ಟೀಸ್ ಮಾಡಿದ್ದಾರೆ ಅಂಥವರು ನೋಟಿಫೈ ಆದಮೇಲೆ ಡಿಸ್ಟ್ರಿಕ್ಟ್ ಜಡ್ಜ್‌ಗೆ ಅಪ್ಲಿಕೇಷನ್ ಕೊಟ್ಟು ಅವರ ರೆಕಮೆಂಡೇಷನ್ ಸರ್ಕಾರಕ್ಕೆ ಬಂದು ಅದನ್ನು ಸರ್ಕಾರ ಪರಿಶೀಲಿಸಿ ಅವರಿಗೆ ನೋಟರಿ ಸ್ಯಾಂಕ್ಷನ್ ಮಾಡುತ್ತೇವೆ. ಈ ಬಗ್ಗೆ ಎಲ್ಲಾ ಕಡೆ ಡಿಸ್ಟ್ರಿಕ್ಟ್ ಜಡ್ಜರಿಗೆ ಬರೆದಿದ್ದೇವೆ ಮತ್ತು ಎಲ್ಲವನ್ನು ಅಲಾಟ್ ಮಾಡಿದ್ದೇವೆ. ಇದು ಬೇಗನೆ ಸರ್ಕಾರಕ್ಕೆ ಬಂದ ಕೂಡಲೇ ಅದನ್ನು ಸ್ಯಾಂಕ್ಷನ್ ಮಾಡಿ ಜಾಸ್ತಿ ನೋಟರಿಗಳನ್ನು ಮಾಡುತ್ತೇವೆ. ಇನ್ನು ನಮ್ಮ ಕೋರ್ಟ್‌ನಲ್ಲಿ ಹೆಚ್ಚು ಕೇಸುಗಳು ಬಾಕಿ ಇವೆ ಎಂದು ಹೇಳಿದ್ದಾರೆ. ಆದರೆ ನಮ್ಮಸ್ಟ್ಯಾಟಿಸ್ಟಿಕ್ಸ್ ಪ್ರಕಾರ Pending cases as on 1-4-991 is like this. Civil Cases - 5,19,464. New cases filed from 1.4.91 to 31.12.91 - 1,73,430, disposed of from 1.4.91 to 31.12.91 - 1,87,936. Pending cases as on 31.12.91 - 5,04,964. ಅದೇ ರೀತಿಯಲ್ಲಿ ಕ್ರಿಮಿನಲ್ ಕೇಸಸ್ ಸಬಾರ್ಡಿನೇಟ್ ಕೋರ್ಟಿನಲ್ಲಿ ಮತ್ತು ಹೈಕೋರ್ಟ್‌ನಲ್ಲಿ ಇದೆ. As on 1.4.91 it is 3,79,282. New cases from 1.4.91 to 31.12.91 - 3,38,084. Disposed from 1.4.91 to 31.12.91 - 2,92,496. Pending cases - 4,24,870. Total 8,19,746. New cases 5,11,520, disposed of 4,80,432, pending cases 9,29,834.

We have discussed with the judiciary, in the conference also we have asked them to see that more and more cases are disposed of and as such I feel there is an improvement in the disposal of the cases. Inspite of that there are many many more pending cases. I think with the co-operation of all and especially with the new system of Lok Adalats we will be able to dispose of many more cases and I should say that regarding appointment of judges and the munsiffs, our State has not lagged behind. Hence, I thank the hon'ble members for giving me very nice suggestions regarding certain new reforms. Regarding the disposal of the cases and also appointment of officers I would say that specially wherever we have the legal aid programmes our M.L.As have co-

operated, I don't say that they have not co-operated, and I request them to give us more and more co-operation so that we will be able to give easy and quick justice within short time and with minimum costs. With these words, I thank all the MLAs who have spoken and given the suggestions. I also thank the chair.

Sri. Derrick F. Fullinfaw:- Sir, a clarification...

Mr. Chairman:- No, you have spoken already.

ಶ್ರೀ ಬಾಬುರಾವ್ ಚವಾಣ್:- ಸನ್ಮಾನ್ಯ ಅಧ್ಯಕ್ಷರೇ...

ಛೇರ್ಮನ್:- ಬಹಳ ಡೀಟೈಲ್ ಆಗಿ ಚರ್ಚೆಯಾಗಿದೆ ಉತ್ತರವನ್ನೂ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಆದ್ದರಿಂದ discussion is over.

ಶ್ರೀ ಕೆ. ಹೆಚ್. ರಂಗನಾಥ್:- ಒಂದು ಸಣ್ಣ ಕ್ಲಾರಿಫಿಕೇಶನ್ ಮಾನ್ಯ ಅಧ್ಯಕ್ಷರೆ...

ಛೇರ್ಮನ್:- ಡಿಸ್ಕ್ಷನ್ ಮುಗಿದಿದೆ ಎಂದು ಹೇಳಿಬಿಟ್ಟಿದ್ದೇನೆ ಈಗ.

ಒಬ್ಬ ಮಾನ್ಯ ಸದಸ್ಯರು:- ಕ್ಲಾರಿಫಿಕೇಷನ್‌ಗೆ ಅವಕಾಶ ಬೇಕು.

ಶ್ರೀ ಕೆ. ಹೆಚ್. ರಂಗನಾಥ್:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಕನ್‌ಸ್ಟ್ರಕ್ಷನ್ ಕೆಲಸವನ್ನು ಲ್ಯಾಂಡ್ ಆರ್ಮಿಗೆ ಕೊಟ್ಟಿದ್ದಾರೆ, ಪಿ. ಡಬ್ಲ್ಯು. ಡಿ.ಗೆ ಕೊಟ್ಟಿದ್ದಾರೆ. In respect of construction of class rooms to LPS, number of works sanctioned is 701. ೭೦೧ ಕೊಟ್ಟಿದ್ದರೆ ಈಗ ಕಂಪ್ಲೀಟ್ ಆಗಿರುವುದು ೮೦. ಮತ್ತೆ ಹೈಯರ್ ಪ್ರೈಮರಿ ಸ್ಕೂಲ್ಸ್ ೬೭೩ ರೂಮ್ಸ್ ಕೊಟ್ಟಿದ್ದರೆ ೮೫ ಕಂಪ್ಲೀಟ್ ಆಗಿದೆ. It is very very poor. Completion of works is very very poor. ೧೬೭೨ಕ್ಕೆ ೧೯೫ ಆಗಿದೆ. ತಾವು ನೋಡಿರಬಹುದು. ಮತ್ತೆ ಪಿ. ಡಬ್ಲ್ಯು. ಡಿ.ಗೆ ಕೊಟ್ಟಿರುವುದು ಕೂಡ ಹಾಗೆಯೇ ಆಗಿದೆ. ಜೂನಿಯರ್ ಕಾಲೇಜಿನ ಕನ್‌ಸ್ಟ್ರಕ್ಷನ್ ವರ್ಕ್ ಸ್ಯಾಂಕ್ಷನ್ ೨ ಇದ್ದರೆ ಕಂಪ್ಲೀಷನ್ ಒಂದೂ ಇಲ್ಲ. ಹೊಸ ಪ್ರೌಢಶಾಲೆ ಕಟ್ಟಡಗಳು ೨೩ ಇದ್ದರೆ ಕಂಪ್ಲೀಷನ್ ಒಂದೂ ಇಲ್ಲ. ಕನ್‌ಸ್ಟ್ರಕ್ಷನ್ ಆಫ್ ಅಡಿಷನಲ್ ಕ್ಲಾಸ್ ರೂಮ್ಸ್ ೧೩೮ ಇದ್ದರೆ ೧೦ ಮಾತ್ರ ಕಂಪ್ಲೀಟ್ ಆಗಿದೆ. ಹೀಗಾದರೆ ಬಹಳ ತಡವಾಗುತ್ತದೆ. ೧೯೯೧-೯೨ರಲ್ಲಿ ಆನ್ ಗೋಯಿಂಗ್ ಸ್ಕೀಂಗಳಿಗೆ ಹಣ ಅಲೋಕೇಟ್ ಆಗಿರುವುದು ೪೫೨ ಲಕ್ಷ. For new works, it is 34 lakhs. ಈ ರೀತಿ ಕೆಲಸ ಸ್ಥಗಿತ ಆಗತಕ್ಕ ಪರಿಸ್ಥಿತಿ ಬರುತ್ತದೆ. ಇದು ಏತಕ್ಕೋಸ್ಕರ, ಏನು ಕಾರಣಕ್ಕೋಸ್ಕರ ಆಯಿತು ಎನ್ನುವುದು ಒಂದು. ಬ್ಲಾಕ್ ಬೋರ್ಡ್ ಆಪರೇಷನ್ ಸ್ಕೀಂನಲ್ಲಿ ಕನ್‌ಸ್ಟರಕ್ಷನ್ ಆಫ್ ಕ್ಲಾಸ್‌ರೂಮ್ಸ್‌ನಲ್ಲಿ ಫಸ್ಟ್ ಫೇಸ್‌ನಲ್ಲಿ ೨೨೪೦ ಎಂದು ಹೇಳಿದ್ದೀರಿ. ಸೆಕೆಂಡ್ ಫೇಸ್‌ನಲ್ಲಿ ಅಡಿಷನಲ್ ೬ ಸಾವಿರ, ಥರ್ಡ್ ಮತ್ತು ಫೋರ್ತ್ ಎಲ್ಲಾ ಸೇರಿದರೆ ೧೮೫೫೩ ಎಂದು ಹೇಳಿದ್ದೀರಿ. ಅದರಲ್ಲಿ ಎಷ್ಟು ಕಂಪ್ಲೀಟ್ ಆಗಿದೆ, ಮತ್ತೆ ಅದು ಹಾಗೇ ಇದೆಯೋ ಹೇಗೆ? ಟೀಚರ್ಸ್ ಅಪಾಯಿಂಟ್‌ಮೆಂಟ್‌ನಲ್ಲಿ ಕೂಡ ಹಾಗೆಯೇ ಆಗಿದೆ. ಏಂಬ ಟೀಚರ್ಸ್ 1611 second

and additional phase, teachers sanctioned 5003 appointed ಹೇಳಿದ್ದೀರಿ. ಕೆಳಗೆ ೨೭೧೨ ಮತ್ತು ೯೫೭೭ ಎಂದು ಇದೆ. ಆದರಲ್ಲಿ recruitment will be taken up shortly ಎಂದು ಹೇಳಿದ್ದೀರಿ. ಇದು ವಿತರ್ಕೋಸ್ಕರ, ಕಾರಣ ಏನು? ಇದು ಹಿಂದಿ ಟೀಚರ್ಸ್ ಆಯಿತು. ಬೇರೆ ಟೀಚರ್ಸ್‌ನ್ನು ಬ್ಲಾಕ್‌ಬೋರ್ಡ್ ಆಪರೇಷನ್ ಸ್ಕೀಂನಲ್ಲಿ ತೆಗೆದುಕೊಳ್ಳಬೇಕಾಗಿತ್ತು. ಅದು ಆಗಿದೆಯೋ ಹೇಗೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎ. ಕೆ. ಅನಂತಕೃಷ್ಣ:- ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ವಿದ್ಯಾ ಇಲಾಖೆ ಬಗ್ಗೆ ಮಾತನಾಡಬೇಕಾದರೆ ಇಂಗ್ಲೀಷ್ ಮೀಡಿಯಂ ಕಾನ್‌ವೆಂಟ್ಸ್‌ಗಳಲ್ಲಿ ಡೊನೇಷನ್ ತೆಗೆದುಕೊಳ್ಳುತ್ತಾರೆ ಎಂದುಒಂದು ಅಪಾದನೆ ಬಂತು. ಅದಕ್ಕೆ ಮುಂಚಿತವಾಗಿ ಒಬ್ಬ ಮಾನ್ಯ ಸದಸ್ಯರು ಸೋಫಿಯಾ ಕಾನ್‌ವೆಂಟ್‌ನಲ್ಲಿ ಕೂಡ ತೆಗೆದುಕೊಳ್ಳುತ್ತಾರೆ ಎಂದು ಹೇಳಿದಾಗ ಹಾಗೆ ಇಲ್ಲ ಎಂದು ನಮ್ಮ ವಿದ್ಯಾ ಸಚಿವರು ಹೇಳಿದರು. ನನ್ನದೇ ಆದ ಅನುಭವದಿಂದ ಹೇಳಬಯಸುತ್ತೇನೆ. ಇಂಗ್ಲೀಷ್ ಮೀಡಿಯಂ ಎಂದು ಅದು ಆಂಗ್ಲೋ ಇಂಡಿಯನ್ ಸ್ಕೂಲ್ ಆಗುವುದಿಲ್ಲ ಮತ್ತು ಕ್ರಿಶ್ಚಿಯನ್ ಕಮ್ಯುನಿಟಿ ಮಾಡಿರುವ ಸ್ಕೂಲೂ ಅಲ್ಲ. ಇಂಗ್ಲೀಷ್ ಮೀಡಿಯಂ ಸ್ಕೂಲ್ಸ್ ಎಲ್ಲರೂ ಮಾಡುತ್ತಿದ್ದಾರೆ. ಆದರೆ ಡೊನೇಷನ್ ಬಹುತೇಕ ಕ್ಯಾಥೋಲಿಕ್ ಇನ್‌ಸ್ಟಿಟ್ಯೂಷನ್ಸ್ ತೆಗೆದುಕೊಳ್ಳುತ್ತಿಲ್ಲ. ಸೋಫಿಯಾ ಕಾನ್‌ವೆಂಟ್ ಕೂಡ ಕ್ಯಾಥೋಲಿಕ್ ಇನ್‌ಸ್ಟಿಟ್ಯೂಷನ್. ಈ ಪ್ರೊಟೆಸ್ಟಂಟ್ ಕಾನ್ವೆಂಟ್ಸ್ ಏನಿವೆ ಅವು ಬಹಳ ಮಟ್ಟಿಗೆ ತೆಗೆದುಕೊಳ್ಳುತ್ತಿವೆ. ಈ ವಿಷಯವನ್ನು ನಾನು ಕ್ಲಾರಿಫೈ ಮಾಡುತ್ತಿದ್ದೇನೆ.

Derrick F. Fullinfaw:- Respected Speaker Sir, yesterday I had made a very serious charge with regard to the exploitation of the Anglo-Indian community by the Anglo-Indian schools in Banalore, Karnataka. I have also said that properties of these Anglo-Indian schools worth crores of rupees to the tune of 200 to 300 crores are today in the unlawful hands of non-Anglo-Indian managements. I was surprised that the Hon'ble Minister has not made any reference to this in his speach and as representative of the Anglo-Indial Community in this House, I demand that a High-Power Committee be constituted with some senior Members of this House, Educationists from within this community and outside this community, social workers and eminent jurists. Only then the fraud will be exposed. It is not an ordinary fraud. It is a fraud to the tune of 200 to 300 crores and it has affected the Anglo Indian Community and today we are suffering because of the exploitation of the community by the so-called Anglo-Indian schools. I demand that this matter be taken up seriously and

action may be taken in this regard.

ಶ್ರೀ ಪ್ರಭಾಕರ್ ಎಸ್. ರಾಣೆ:- ಮಾನ್ಯ ಅಧ್ಯಕ್ಷರೇ, ಈ ಪ್ಲಸ್ ೨ ಸ್ಟೇಜ್‌ನಲ್ಲಿ ವೃತ್ತಿಪರ ಶಿಕ್ಷಣ ವಿಷಯವಾಗಿ ರಾಮೇಗೌಡ ಸಮಿತಿಯವರು ಶಿಫಾರಸ್ಸು ಮಾಡಿದಂತೆ ವೃತ್ತಿಪರ ಕೋರ್ಸ್‌ಗಳನ್ನು ಕೇವಲ ಇಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿ ಮಾತ್ರ ಪ್ರಾರಂಭಿಸುವ ನಿರ್ಣಯವನ್ನು ಕೈಗೊಂಡಿದ್ದೇವೆಂದು ಹೇಳಿದ್ದಾರೆ. ಅನೇಕ ಗ್ರಾಮೀಣ ಭಾಗಗಳಲ್ಲಿ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ಪಾಲಿಟೆಕ್ನಿಕ್‌ಗಳು ಇಲ್ಲದೇ ಇರುವುದರಿಂದ ಈ ವೃತ್ತಿಪರ ಶಿಕ್ಷಣದ ಸೌಲಭ್ಯದಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ವಂಚಿತರಾಗುವುದಿಲ್ಲವೇ? ಆದುದರಿಂದ ಮಾನ್ಯ ಸಚಿವರು ಯಾವ ಗ್ರಾಮೀಣ ಭಾಗದಲ್ಲಿ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್‌ಗಳು ಇಲ್ಲವೋ ಅಂತಹ ಭಾಗದಲ್ಲಿ ಈ ವೃತ್ತಿಪರ ಶಿಕ್ಷಣದ ಸೌಲಭ್ಯವನ್ನು ಅಥವಾ ಕೋರ್ಸ್‌ಗಳನ್ನು ಪಿ. ಯು. ಸಿ ಕಾಲೇಜುಗಳಲ್ಲಿ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ? ಇನ್ನು ಎರಡನೆಯದಾಗಿ, ಅಕ್ಷಯ ಯೋಜನೆ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ. ಇಲ್ಲಿ ಬ್ಯಾಂಕ್‌ಗಳ ಸಹಕಾರ ಇಲ್ಲದೇ ಇರುವುದರಿಂದ ಅದನ್ನು ಸಂಪೂರ್ಣವಾಗಿ ಜಾರಿಗೆ ತರಲಿಕ್ಕೆ ಆಗಿಲ್ಲ ಎಂದು ಹೇಳಿದ್ದಾರೆ. ನಾನು ಕೇಳುವುದು ಏನೆಂದರೆ, ಅಕ್ಷಯ ಯೋಜನೆಯನ್ನು ಪ್ರಥಮವಾಗಿ ಘೋಷಣೆ ಮಾಡಿದಾಗ ಅದರ ಉದ್ದೇಶ ಏನೆಂದರೆ, ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟದ ಸೌಲಭ್ಯವನ್ನು ಕೊಡುವ ಒಂದು ಅಕ್ಷಯ ಯೋಜನೆ ಎಂದು ಘೋಷಣೆ ಆಯಿತು. ಆದುದರಿಂದ ಮಧ್ಯಾಹ್ನದ ಊಟದ ಯೋಜನೆಯನ್ನು ಬಿಟ್ಟು ದುಡ್ಡು ಕೊಡುವ ಯೋಜನೆಗೆ ಸರ್ಕಾರ ನಿರ್ಣಯ ಮಾಡುವುದಕ್ಕೆ ಕಾರಣ ಏನು? ಮತ್ತು ಈ ಮಧ್ಯಾಹ್ನದ ಊಟದ ಏನು ಯೋಜನೆ ಇದೆ ಇದನ್ನು ಜಾರಿಯಲ್ಲಿ ತರುವುದಕ್ಕೆ ಸರ್ಕಾರಕ್ಕೆ ಇರುವ ಅಡಚಣೆ ಏನು?

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಅಧ್ಯಕ್ಷರೇ, ಅಧ್ಯಾಪಕರ ವರ್ಗಾವಣೆ ವಿಚಾರವಾಗಿ ಸರ್ಕಾರವು ಒಂದು ಸೂಕ್ತ ನಿರ್ಧಾರವನ್ನು ಕೈಗೊಂಡಿದೆ ಎಂಬುದು ಬಹಳ ಸಂತೋಷದ ಸಂಗತಿ. ಆದರೆ ಪೇಟೆ ಮತ್ತು ಹಳ್ಳಿಗಳಲ್ಲಿರುವ ಶಾಲೆಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಂಖ್ಯಾ ಪ್ರಮಾಣವನ್ನು ಹೋಲಿಸಿ ನೋಡಿದರೆ ನಾವು ಬಹಳ ಅಂತರವನ್ನು ಕಾಣುತ್ತಿದ್ದೇವೆ. ಆದುದರಿಂದ ಪೇಟೆಯ ಅಧ್ಯಾಪಕರನ್ನು ಹಳ್ಳಿ ಕಡೆಗೆ ವರ್ಗಾವಣೆ ಮಾಡುವಾಗ ಹೆಚ್ಚಾಗಿ ಹೋಗದೆ ಪೇಟೆಯಲ್ಲೇ ಉಳಿದುಕೊಳ್ಳುವುದಕ್ಕೆ ನೋಡುತ್ತಾರೆ. ಇದಕ್ಕೆ ಕಾರಣ ಇಷ್ಟೇ. ಪೇಟೆಯಲ್ಲಿ ಇರುವ ಸೌಲಭ್ಯ ಹಳ್ಳಿಗಳಲ್ಲಿ ಇರುವುದಿಲ್ಲ. ಮಾತ್ರವಲ್ಲದೆ ಪೇಟೆಯಲ್ಲಿ, ಸಿಟಿಯಲ್ಲಿ ಇದ್ದರೆ ಅವರಿಗೆ ಹೆಚ್. ಆರ್. ಎ. ಇರುತ್ತದೆ. ಆದುದರಿಂದ ಈ ಹೆಚ್. ಆರ್. ಎ. ಯನ್ನು ರೂರಲ್ ಅಲೋವೆನ್ಸ್ ಎಂದು ಮಾಡಿದ್ದರೆ ಅಧ್ಯಾಪಕರು ಹೆಚ್ಚಾಗಿ ಹಳ್ಳಿಗಳಿಗೆ ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಅಂತಹ ಒಂದು ಬದಲಾವಣೆಯನ್ನು ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಯಾವ ಅಕ್ಷಯ ಯೋಜನೆಯಿಂದ ತಮಿಳುನಾಡಿನಲ್ಲಿ ಮಕ್ಕಳಿಗೆ ಊಟದ ವ್ಯವಸ್ಥೆ ಮಾಡಿದ್ದಾರೋ ಅಂತಹ ವ್ಯವಸ್ಥೆ ನಮ್ಮಲ್ಲಿ ಮಾಡಲು ಅಧ್ಯಾಪಕರು ಹಾಗೂ ಊರಿನವರ ಸಹಕಾರ ಸಿಕ್ಕಿಲ್ಲ ಎಂದರೆ ನಮಗೆ ಬಹಳ ನಾಚಿಕೆಯಾಗುತ್ತದೆ.ನಾನೂ ಕೂಡ ಅಧ್ಯಾಪಕನಾಗಿದ್ದೆ. ಮದ್ರಾಸ್ ಸರ್ಕಾರದವರು ಆ ಸಮಯದಲ್ಲಿ ನಮ್ಮ ಫಿಷರೀಸ್ ಶಾಲೆಗಳಲ್ಲಿ, ಲೇಬರರ್ಸ್ ಶಾಲೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಮಾಡಿದ್ದರು. ಅದು ಬಹಳ ಯಶಸ್ವಿಯಾಗಿತ್ತು. ಬಡವರಿಗೆ ಅದರಿಂದ

ಪ್ರಯೋಜನವಾಗಿತ್ತು. ಆದ್ದರಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಹಣದ ಬದಲಿಗೆ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಮಾಡಲಿಕ್ಕೆ ಸರ್ಕಾರ ದೃಢ ಸಂಕಲ್ಪವನ್ನು ಮಾಡಬೇಕೆಂದು ಈ ಕುರಿತು ಸರ್ಕಾರದ ಆಶಯವನ್ನು ನಾನು ಆಶಿಸುತ್ತೇನೆ.

Sri Qamarul Islam:- While making my speech, I had given some suggestions and the Hon'ble Minister has considered them. I am thankful to him. At the same time, I want one more clarification from the Hon'ble Minister. I had given a suggestion to the effect that the private Polytechnic institutions which are running from the last ten to twelve years are having full infrastructure. Will the Government upgrade them with the Engineering Colleges? Then regarding B.G.L. course, the Hon'ble Minister mentioned that it is existing in Mysore University. But I was specific that some of the Government servents have completed third year, have not approached for the examination in the Bangalore University. Will the Bangalore University allow them and clear them. These are the two suggestions I would like to make. I want a clarification from the Hon'ble Minister for Law about the High Court Branch in Hyderabad-Karnataka Area. This is a long pending demand of the Hyderabad-Karnataka people. Will the Hon'ble Minister consider this?

ಶ್ರೀ ಎಸ್. ಎಂ. ಯಾಹ್ಯ:- ಶಿಕ್ಷಣ ಸಚಿವರನ್ನು ನಾನು ವಂದಿಸುವುದಕ್ಕೆ ಇಲ್ಲಿ ನಿಂತಿದ್ದೇನೆ. ಅವರು ಹೇಳಿದರು, ಅವರ ಮತ್ತು ನನ್ನ ವೇವ್ ಲೈನ್ ಒಂದೆ ಇದೆ ಎಂದು. ಇದಕ್ಕೆ ಬಹಳಷ್ಟು ಕಾರಣಗಳಿವೆ. ನಾವಿಬ್ಬರೂ ವಕೀಲರು. ಒಂದೇ ಪ್ರಾಯದವರು. ಮತ್ತು ಇಬ್ಬರೂ ಈ ಮನೆಗೆ ೧೯೭೨ರಲ್ಲಿ ಆರಿಸಿ ಜೊತೆಯಲ್ಲಿ ಬಂದವರು. ನಾವು ಕರಾವಳಿಯವರು. ಸ್ವಲ್ಪಮಟ್ಟಿಗೆ ಮೀನು ತಿನ್ನುವವರು. ಆ ವೇವ್ ಲೈನ್ ಸರಿಯಾಗಲಿಕ್ಕೆ ಸಾಧ್ಯವಿದೆ. ನನ್ನ ಬೇಕಾದಷ್ಟು ಸಲಹೆಗಳನ್ನು ಅವರು ಒಪ್ಪಿಕೊಂಡಿದ್ದಾರೆ. ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಉರ್ದು ಇನ್ಸ್ಟಿಟ್ಯೂಟ್‌ಗೆ ಸಬ್ ಪ್ಲಾನ್ ಮಾಡುವುದಾಗಲಿ ಅಥವಾ ಉರ್ದು ಡೈರೆಕ್ಟರೇಟ್‌ಗೆ ಉರ್ದು ನೋಯಿಂಗ್ ಪರ್ಸನ್ ನೇಮಕ ಮಾಡುವುದಾಗಲೀ ಮತ್ತು ಉರ್ದು ಹಾಲ್ ಎಂದು ಹೇಳಿದರು. ನಾನು ಆಗ ಯೋಚನೆ ಮಾಡಲಿಲ್ಲ. ತಾವು ಅದನ್ನು ಒಪ್ಪಿಕೊಂಡು ಅದಕ್ಕೆ ೫೦ ಲಕ್ಷ ರೂಪಾಯಿ ಹಣವನ್ನೂ ಸಹ ಕೊಡುತ್ತಿದ್ದೀರಿ. ಇದಕ್ಕಾಗಿ ನಾನು ಸ್ವಲ್ಪ ತಿದ್ದುಪಡಿ ಮಾಡುತ್ತಿದ್ದೇನೆ. ನಾನು ಅದನ್ನು ಯೋಚನೆ ಮಾಡಲಿಲ್ಲ. ಒಪ್ಪುತ್ತೀರೋ ಇಲ್ಲವೋ ಎಂದು ಉರ್ದು ಹಾಲ್ ಎಂದು ಹೇಳಿದೆ. ಈಗ ಅವರು ೫೦ ಲಕ್ಷ ರೂಪಾಯಿಗಳನ್ನು ಕೊಡುವುದರಿಂದ ಉರ್ದು ಹಾಲ್‌ಗೆ ಬದಲಾಗಿ ಅದನ್ನು ಉರ್ದು ಅಕಾಡೆಮಿಯಾಗಿ ಮಾಡಬೇಕೆಂದು ನಾನು ಸೂಚನೆ ಕೊಡುತ್ತಿದ್ದೇನೆ. ಉರ್ದು

ಸೆಂಟರ್ ಅಥವಾ ಉರ್ದು ಅಕಾಡೆಮಿ ಮಾಡಬೇಕೆಂದು ನಾನು ಸೂಚನೆ ಕೊಡುತ್ತಿದ್ದೇನೆ. ಉರ್ದು ಸೆಂಟರ್ ಅಥವಾ ಉರ್ದು ಅಕಾಡೆಮಿ ಮಾಡಿ, ಉರ್ದು ಹಾಲ್ ಬೇಡ. If it is a small thing, it should have been Urdu hall. You have been so generous to allocate Rs. 50 lakhs. I will suggest that Urdu Hall may be converted into Urdu Academy or Urdu Centre. ಒಂದು ಮಾತು ಏನೆಂದರೆ, ನನ್ನ ಇನ್ನೊಂದು ಸಜೆಷನ್ ನೋಡಿ ಬಹಳ ಲಿಬರಲೈಸ್ ಮಾಡಿದ್ದಾರೆ. ಫಸ್ಟ್ ಸ್ಟ್ಯಾಂಡರ್ಡ್‌ನಿಂದ ಫೋರ್ತ್ ಸ್ಟ್ಯಾಂಡರ್ಡ್‌ವರೆಗೆ ಪರ್ಮಿಶನ್ ಇಲ್ಲದೆ ಸ್ಕೂಲ್‌ಗಳನ್ನು ತೆಗೆಯಲಿಕ್ಕೆ ಅವಕಾಶ ಕೊಡಬೇಕು. ನಾನು ಮತ್ತೊಂದು ವಿಚಾರ ಹೇಳುತ್ತಿದ್ದೇನೆ. ಇಂಗ್ಲೀಷ್ ಭಾಷೆ ನಮಗೆ ಈಗಲೂ ಬೇಕಾಗಿದೆ. ಈಗ ಇಂಗ್ಲೀಷ್ ಭಾಷೆಯ ಅಗತ್ಯವಿದೆ. ಇಂಗ್ಲೀಷ್ ಭಾಷೆಯ ಅಗತ್ಯವಿಲ್ಲದಿದ್ದರೆ ಅದು ಬೇರೆ ವಿಚಾರ. ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳನ್ನು ತೆಗೆಯುವುದಕ್ಕೆ ಪರ್ಮಿಷನ್ ಕೊಡಬೇಕು. ಇದರಲ್ಲಿ ಕನ್ನಡ ಮಾತೃಭಾಷೆ ಇರಬೇಕು. ಅದಕ್ಕೆ ೧೦೦-೧೦೦ ಅಂಕಗಳನ್ನು ಇಡಿ. ಉರ್ದು ಮೀಡಿಯಂ ಮತ್ತು ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗಳನ್ನು ೧ ರಿಂದ ೪ ನೇಯ ತರಗತಿಯವರೆಗೆ ಪರ್ಮಿಶನ್ ಇಲ್ಲದೆ ಓಪನ್ ಮಾಡುವುದಕ್ಕೆ ಅವಕಾಶ ಕೊಡಿ. ಇದು ಬಹಳ ಯೋಗ್ಯ. ಆಮೇಲೆ ಹೈಸ್ಕೂಲ್‌ಗೆ ಪರ್ಮಿಶನ್ ಕೊಡಬೇಕು. ಇಂಗ್ಲೀಷ್ ಈಗಲೂ ನಮಗೆ ಬೇಕಾಗಿದೆ. ನಂತರ ನೋಡುವ ಹಿಂದಿ ಬಂದು ಇಡೀ ರಾಜ್ಯದಲ್ಲಿ ಹಿಂದಿ ಯೋಗ್ಯವಾಗಿ ಕಂಡುಬಂದರೆ ಇಂಗ್ಲೀಷ್‌ನ್ನು ನಾವು ದೂರ ಮಾಡಬಹುದು. ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳನ್ನು ಬಹಳಷ್ಟು ಉದಾರವಾದ ಮನಸ್ಸಿನಿಂದ ಕೊಡಬೇಕು. ಮಾತೃಭಾಷೆಯನ್ನು ಮತ್ತು ಕನ್ನಡವನ್ನು ಕಡ್ಡಾಯವಾಗಿ ಫಸ್ಟ್ ಸ್ಟ್ಯಾಂಡರ್ಡ್‌ನಿಂದಲೇ ಮಾಡಿ. ಇಂಗ್ಲೀಷ್ ಮೀಡಿಯಂ ಸ್ಕೂಲ್‌ಗಳಿಗೆ ಆದಷ್ಟು ಪರ್ಮಿಶನ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಡಾ. ಎನ್. ಬಿ. ನಂಜಪ್ಪ:- ಮಾನ್ಯ ಅಧ್ಯಕ್ಷರೇ, ಈಗ ಇಂಗ್ಲೀಷ್ ಕಾನ್ವೆಂಟ್ ಶಾಲೆಗಳು ರೂರಲ್ ಏರಿಯಗಳಲ್ಲಿ ಬೇಕೆಂದು ಹೇಳಿ ಅನೇಕ ಜನ ಶಾಸಕರು ಈಗಾಗಲೇ ಮಂತ್ರಿಗಳಿಗೆ ಮತ್ತು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದಾರೆ. ನಾವೆಲ್ಲರೂ ಸೇರಿ ಸಲ್ಲಿಸಿದ್ದೇವೆ. ಆಮೇಲೆ ಈ ಸಾರಿಯೂ ಕೂಡ ಅನೇಕ ಜನರು ಇದರ ಬಗ್ಗೆ ಮಾತನಾಡಿದ್ದಾರೆ. ಈಗ ಶ್ರೀ ಯಾಹ್ಯಾ ಅವರೂ ಕೂಡ ಇದರ ಬಗ್ಗೆ ಮಾತನಾಡಿದ್ದಾರೆ. ನಾನಾದರೂ ಕೂಡ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. English is the international language. It is an unique language for our different states.

ಛೇರ್ಮನ್:- ಕ್ಲಾರಿಫಿಕೇಶನ್ ಕೇಳಿಬಿಡಿ ಸಾಕು.

ಡಾ. ಎನ್ ಬಿ. ನಂಜಪ್ಪ:- ಇದರಲ್ಲಿ ಏನು ಆಗಬೇಕು ಎಂದರೆ, ಯೂನಿಫಾರ್ಮ್ ಪಾಲಿಸಿಯಾಗಬೇಕು. ಇಲ್ಲದೇ ಹೋದರೆ ಇಂಗ್ಲೀಷ್ ಮೀಡಿಯಂ ಕೊಡುವುದಿಲ್ಲ ಎಂದರೆ ರಾಜ್ಯದಲ್ಲಿ ಎಲ್ಲಿಯೂ ಕೂಡ ಇಂಗ್ಲೀಷ್ ಮೀಡಿಯಂ ಸ್ಕೂಲ್ ಇರಕೂಡದು. ಅಥವಾ ಇಂಗ್ಲೀಷ್ ಮೀಡಿಯಂ ಸ್ಕೂಲ್ಸ್ ಎಲ್ಲಿಯಾದರೂ ತಾಲ್ಲೂಕು ಲೆವಲ್‌ನಲ್ಲಿ ಅಥವಾ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ, ಸಿಟಿ ಲೆವಲ್‌ನಲ್ಲಿ ಇದ್ದರೆ ಎಲ್ಲಾ ಕಡೆಗೂ ಕೂಡ ಅದನ್ನು ಅನ್ವಯಿಸಬೇಕು. ಈ ಎರಡರಲ್ಲಿ ಒಂದು ಆಗಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಂದ ಕ್ಲಾರಿಫಿಕೇಶನ್ ಕೇಳುತ್ತೇನೆ. ಅದೇ ರೀತಿ

ಪಿ. ಯು. ಸಿ. ಕಾಲೇಜ್‌ಗಳು ಏನಾಗಿದೆ ಎಂದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಬಹಳಷ್ಟು ಪ್ರಾರಂಭ ಮಾಡಿಯಾಯಿತು. ಬಸ್ ಪಾಸ್ ಕೊಡುವುದಕ್ಕೆ ಶುರುವಾದ ಮೇಲೆ ಅನೇಕ ಜೂನಿಯರ್ ಕಾಲೇಜುಗಳಲ್ಲಿ ಸ್ಟ್ರೆಂತ್ ಇಲ್ಲದೆ ಮುಚ್ಚಿಹೋಗಿವೆ. ಏಕೆಂದರೆ ಬಸ್ ಪಾಸ್ ತೆಗೆದುಕೊಂಡು ಹತ್ತಿರದ ಟೌನ್‌ಗಳಿಗೆ ಹೋಗತಕ್ಕಂಥ ಹವ್ಯಾಸವನ್ನು ಅನೇಕ ಜನ ವಿದ್ಯಾರ್ಥಿಗಳು ಇಟ್ಟು ಕೊಂಡಿರುವುದರಿಂದ ಅನೇಕ ಕಡೆ ತೊಂದರೆಯಾಗಿದೆ. ಇದರಿಂದ ಹೆಣ್ಣುಮಕ್ಕಳಿಗೆ ಹೆಚ್ಚು ತೊಂದರೆಯಾಗಿದೆ. ಗಂಡು ಮಕ್ಕಳಿಗೆ ಇದರಿಂದ ತೊಂದರೆಯಾಗುವುದಿಲ್ಲ. ಏಕೆಂದರೆ ಅವರು ಪಕ್ಕದ ಪಟ್ಟಣಗಳಿಗೆ ಹೋಗಿ ಓದುವ ಹವ್ಯಾಸವನ್ನು ಇಟ್ಟುಕೊಂಡಿದ್ದಾರೆ. ಅದಕ್ಕೆ ಏನು ಆಗಬೇಕು ಎಂದರೆ, ಬಸ್‌ಪಾಸ್ ಕೊಡತಕ್ಕಂಥ ಸಂದರ್ಭದಲ್ಲಿ ಅವರ ಮೇಲೆ ನಿರ್ಬಂಧ ತರತಕ್ಕಂಥ ವ್ಯವಸ್ಥೆ. ಆದರೆ, ಎಲ್ಲ ಜೂನಿಯರ್ ಕಾಲೇಜುಗಳು ಕೂಡ ರೂರಲ್ ಏರಿಯಾದಲ್ಲಿ ನಡೆಯುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಕ್ಲಾರಿಫಿಕೇಶನ್ ಕೊಟ್ಟರೆ ಒಳ್ಳೆಯದೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಶ್ರೀ ಹಲಗೇಗೌಡ:- ವಿದ್ಯಾ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಬಂದಾಗ ಈ ಮೈಸೂರು ವಿಶ್ವ ವಿದ್ಯಾನಿಲಯದವರು ಮಂಡ್ಯದಲ್ಲಿ ಒಂದು ಸ್ನಾತಕೋತ್ತರ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಒಂದು ವರ್ಷ ಆದರೂ ಕೂಡ ಸರ್ಕಾರದಿಂದ ಇನ್ನೂ ಅದಕ್ಕೆ ಅಪ್ಪಣೆ ದೊರೆತಿಲ್ಲ. ಇದನ್ನು ಕೂಡಲೆ ದೊರಕಿಸಿಕೊಡುತ್ತೀರಾ ? ಎರಡನೆಯದಾಗಿ, ಈಗಾಗಲೇ ಕೊಟ್ಟಿರುವ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಹಂತಹಂತವಾಗಿ ಕನ್ನಡೀಕರಣ ಗೊಳಿಸಬೇಕು ಎನ್ನತಕ್ಕಂಥ ತೀರ್ಮಾನ ಇರುವಾಗ, ಹೊಸದಾಗಿ ಶಾಲೆಗಳನ್ನು ಪಟ್ಟಣ ಪ್ರದೇಶಗಳಲ್ಲಾಗಲೀ, ಗ್ರಾಮಾಂತರ ಪ್ರದೇಶಗಳಲ್ಲಾಗಲೀ ತೆರೆಯುವಾಗ ಕನ್ನಡ ಮಾಧ್ಯಮ ಶಾಲೆಗಳಿಗೆ ಹೆಚ್ಚು ಒತ್ತು ಕೊಡುವುದರ ಮೂಲಕ ಮತ್ತು ಈಗಾಗಲೇ ಇರತಕ್ಕಂಥ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಕನ್ನಡ ಶಾಲೆಗಳನ್ನಾಗಿ ಪರಿವರ್ತನೆಗೊಳಿಸುವ ಕೆಲಸವನ್ನು ಮಾಡುತ್ತೀರಾ ? ಮೂರನೆಯದಾಗಿ ನಮ್ಮ ಮಾನ್ಯ ಸಚಿವರನ್ನು ಕೇಳುತ್ತೇನೆ. ಎಲ್ಲ ತಾಲ್ಲೂಕುಗಳಲ್ಲೂ ನ್ಯಾಯಾಲಯಗಳು ಇರಬೇಕೆಂದು ಸರ್ಕಾರದ ತೀರ್ಮಾನ ಆಗಿದೆಯೆಂದು ನಾನಾನದರೂ ಕೂಡ ಭಾವಿಸಿದ್ದೇನೆ. ಹಾಗಿದ್ದರೂ ಕೂಡ ಪಾಂಡವಪುರ ತಾಲ್ಲೂಕು ಭಾರತಕ್ಕೆ ಒಂದು ನ್ಯಾಯಾಂಗಕ್ಕೆ ಹೆಚ್ಚಿನ ಕೊಡುಗೆ ಕೊಟ್ಟಿರತಕ್ಕದ್ದು ಇದೆ. ಅಂತಹ ತಾಲ್ಲೂಕಿನಲ್ಲಿ ಒಂದೂ ನ್ಯಾಯಾಲಯ ಕೂಡ ಇಲ್ಲ. ಆದುದರಿಂದ ಅಲ್ಲಿ ಒಂದು ನ್ಯಾಯಾಲಯವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

(ಗೊಂದಲ)

ಚೇರ್ಮನ್:- ಯಾರಿಗೂ ಅವಕಾಶ ಇಲ್ಲ. ಮಂತ್ರಿಗಳು ಈಗ ಉತ್ತರ ಹೇಳಲಿ. ಸಿದ್ದಯ್ಯನವರೇ, ನೀವು ಈಗಾಗಲೇ ಮಾತನಾಡಿದ್ದೀರಿ.

ಶ್ರೀ ಕೆ. ಸಿದ್ದಯ್ಯ:- ನಮ್ಮ ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳನ್ನೇ ಎಲ್ಲ ಕಡೆಗೂ ಮಾಡಬೇಕೆಂಬ ವಾದವನ್ನು ನಾನು ಖಂಡಿತ ಒಪ್ಪಿಕೊಳ್ಳುತ್ತೇನೆ. ಆದರೆ ಇಂಗ್ಲಿಷ್ ಮೀಡಿಯಂನಲ್ಲಿ ಇರತಕ್ಕಂಥ ಸೈನ್ಸ್ ಅಂಡ್ ಟೆಕ್ನಾಲಜಿ ವಿಷಯಗಳನ್ನು ಕನ್ನಡದಲ್ಲಿ ಭಾಷಾಂತರ ಮಾಡಿ ನಂತರ

ಎಲ್ಲ ಇಂಗ್ಲೀಷ್ ಮೀಡಿಯಂ ಶಾಲೆಗಳನ್ನು ಕಿತ್ತು ಹಾಕಿಬಿಟ್ಟು ಕನ್ನಡ ಮೀಡಿಯಂ ಶಾಲೆಗಳನ್ನು ಮಾಡುತ್ತೀರಾ ?

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ:- ನ್ಯಾಯಾಲಯಗಳಲ್ಲಿ ಸರ್ಕಾರಿ ವಕೀಲರುಗಳು ಕಕ್ಷಿದಾರರ ಪರವಾಗಿ ಇಲ್ಲ ಎನ್ನುವ ಅಭಿಪ್ರಾಯ ಬಂದಿದೆ. ಆದ್ದರಿಂದ ಕಕ್ಷಿದಾರರು ಇಚ್ಛೆಪಡುವಂತಹ ಲಾಯರ್ಸ್‌ನ್ನು ಕೊಡತಕ್ಕಂಥ ವ್ಯವಸ್ಥೆ ತಾವು ಮಾಡುತ್ತೀರಾ? ಅತಿ ಶೀಘ್ರ ನ್ಯಾಯ ದೊರಕಿಸಿಕೊಡುತ್ತಾರೆ ಎನ್ನುವ ಉದ್ದೇಶದಿಂದ ಲೋಕ ಅದಾಲತ್‌ಗಳನ್ನು ಮಾಡಿದ್ದೀರಿ. ಆದರೆ ಪದೇ ಪದೇ ಕೋರ್ಟ್‌ಗಳಲ್ಲಿ ಹೋಗಿ ಪುನಃ ನ್ಯಾಯ ದೊರಕಿಸಿಕೊಡತಕ್ಕಂಥ ವ್ಯವಸ್ಥೆ ಆಗುತ್ತಿದೆ ಎನ್ನತಕ್ಕಂಥಾದ್ದು ತಮ್ಮ ಗಮನಕ್ಕೆ ಬಂದಿದೆಯೆ ?

(ಗೊಂದಲ)

ಶ್ರೀ ಬಿ. ಎಚ್. ಲಕ್ಷ್ಮಣಯ್ಯ:- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಶಿಕ್ಷಣ ಸಚಿವರು ದಯಮಾಡಿ ಗಮನಿಸಬೇಕು. ಹಾಸನಕ್ಕೆ ಮೈಸೂರು ಯೂನಿವರ್ಸಿಟಿಯವರು ಪಿ. ಜಿ. ಸೆಂಟರ್ ಕೊಡುವುದಕ್ಕೆ ಶಿಫಾರಸ್ಸು ಮಾಡಿದ್ದಾರೆ ದಯಮಾಡಿ ಅಲ್ಲಿಗೆ ಪಿ. ಜಿ. ಸೆಂಟರ್ ಮಾಡಿ ಕೊಡುತ್ತೀರಾ ?

(ಗೊಂದಲ)

ಛೇರ್ಮನ್:- ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಹರ್ಷಕುಮಾರ್ ಗೌಡ:- ಮಾನ್ಯ ಅಧ್ಯಕ್ಷರೇ, ನಾನು ಮಾಧ್ಯಮದ ಪ್ರಶ್ನೆ ಕೇಳುತ್ತಿದ್ದೇನೆ. ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುವುದು ಏನೆಂದರೆ, ಈಗ ಕರ್ನಾಟಕ ರಾಜ್ಯದಲ್ಲಿ ಶಾಸಕಾಂಗದಲ್ಲಿ ನಾವು ಶಾಸಕರುಗಳು ಏನಿದ್ದೇವೆ, ಮುಖ್ಯ ಮಂತ್ರಿಗಳಿಂದ ಹಿಡಿದು ಎಲ್ಲರೂ ಕೂಡ ಕನ್ನಡ ಮಾಧ್ಯಮದಲ್ಲಿ ಓದಿ ಈ ಹಂತಕ್ಕೆ ಬಂದಿರುವುದು. ಇವತ್ತು ಇಂಗ್ಲೀಷ್ ಮಾಧ್ಯಮದಲ್ಲಿ ಕಲಿತರೆ ಉದ್ಧಾರವಾಗುತ್ತಾರೆ ಎನ್ನುವ ಭಾವನೆ ಏನಾದರೂ ಸರ್ಕಾರಕ್ಕೆ ಇದೆಯ್ಯೇ? ಇಲ್ಲವೇ ೮೦ ಶತ ಗ್ರಾಮಾಂತರ ಪ್ರದೇಶಗಳಲ್ಲಿ ಜನತೆ ಇದ್ದಾರೆ ಅವರಿಗೆ ಇಂಗ್ಲೀಷ್ ಮೀಡಿಯಂ ಕೊಟ್ಟರೆ ವ್ಯಾಪಾರ ಮಾಡುವುದಕ್ಕೆ ಚಿಲ್ಲರೆ ಅಂಗಡಿಗಳಲ್ಲಿ ಸೇಲ್ ಮಾಡುವುದಕ್ಕೆ ಅನುಮತಿ ಕೊಟ್ಟಂತೆ. ಎರಡನೇ ವರ್ಗದ ಜನರನ್ನು ಸೃಷ್ಟಿ ಮಾಡುವುದಕ್ಕೆ ಅವಕಾಶವಾಗುತ್ತದಲ್ಲ ಅದನ್ನು ತಪ್ಪಿಸುವುದಕ್ಕೆ ಸರ್ಕಾರ ಪ್ರಯತ್ನಿಸುತ್ತಿದೆಯೇ? ಇವತ್ತು ಯಾವುದೇ ಸಂದರ್ಭದಲ್ಲಿ ಸರ್ಕಾರ ಇಂಗ್ಲೀಷ್ ಮಾಧ್ಯಮಕ್ಕ ಒತ್ತಾಯಕ್ಕೆ ಮಣಿಯಬಾರದು. ಮಣಿದರೆ ವಿದ್ಯೆಯನ್ನು ವ್ಯಾಪಾರ ಮಾಡಲಿಕ್ಕೆ ಅವಕಾಶ ಕೊಟ್ಟಂತೆ ಆಗುತ್ತದೆ. ಈ ರೀತಿ ಹಣ ಲೂಟಿ ಮಾಡುವುದನ್ನು ಶೋಷಣೆ ಮಾಡುವುದನ್ನು ತಪ್ಪಿಸುವುದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎಂದು ನಾನು ಮುಖ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಬಾಬುರಾವ್ ಚವ್ಹಾಣ್:- ಮಾನ್ಯ ಕಾನೂನು ಮಂತ್ರಿಗಳಲ್ಲಿ ಒಂದು ಸಣ್ಣ ಕ್ಲಾರಿಫಿಕೇಶನ್ ಕೇಳುತ್ತೇನೆ. ನ್ಯಾಯಾಲಯಗಳಲ್ಲಿರತಕ್ಕಂಥ ಗೌರ್ನಮೆಂಟ್ ಲಾಯರ್ಸ್ ಅಪೋಜಿಷನ್ ಪಾರ್ಟಿಕಡೆ ಶಾಮೀಲಾಗಿ ಕೇಸ್‌ನ್ನು ಲೂಜ್ ಮಾಡತಕ್ಕಂಥಾದ್ದು ಕೆಲವು ಕಡೆ ನಮ್ಮ ಗಮನಕ್ಕೆ ಬಂದಿದೆ. ಅಂತಹ ಸರ್ಕಾರಿ ಲಾಯರ್ಸ್ ಮೇಲೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ.

ಎರಡನೆಯದಾಗಿ, ಸನ್ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ನ್ಯಾಯಾಲಯಗಳ ಬಗ್ಗೆ ತಾಳ್ಮೆಯಿಂದ ಮಾತನಾಡಿದ್ದಾರೆ. ಸನ್ಮಾನ್ಯ ಬಸವಲಿಂಗಪ್ಪನವರು ನನ್ನ ಮತಕ್ಷೇತ್ರದಲ್ಲಿರತಕ್ಕಂಥ ಒಂದು ಸಿಮೆಂಟ್ ಕಾರ್ಖಾನೆಗೆ ಮುಚ್ಚಿ ಎಂದು ಒಂದು ಆದೇಶವನ್ನು ಲಾ ಚೌಕಟ್ಟಿನಲ್ಲಿ ಕೊಟ್ಟಿದ್ದಾರೆ. ಆದರೆ ಆಡಳಿತ ಮಂಡಳಿಯವರು ಅದೇ ಕಾಗದ ತೆಗೆದುಕೊಂಡು ಹೋಗಿ ನ್ಯಾಯಾಲಯದಲ್ಲಿ ಆರ್ಡರ್ ತೆಗೆದುಕೊಂಡು ಫ್ಯಾಕ್ಟರಿ ನಡೆಸುತ್ತಿದ್ದಾರೆ. ಇದು ನಿಮ್ಮ ಲಾ ಸರಿಯೋ, ಮಾನ್ಯ ಬಸವಲಿಂಗಪ್ಪನವರ ಕಾನೂನು ಸರಿಯೋ? ಇಬ್ಬರೂ ಮಂತ್ರಿಗಳು ಇಲ್ಲೇ ಇದ್ದಾರೆ. ಆ ಕಾರ್ಖಾನೆಯಿಂದ ಡಸ್ಟ್ ಬರುತ್ತದೆ ಬಂದ್ ಮಾಡಿ ಎಂದು ಇವರು ನೋಟಿಸ್ ಕೊಟ್ಟಿರುತ್ತಾರೆ. ಅದೇ ಗೌರ್ನಮೆಂಟ್ ಅಡ್ವೋಕೇಟ್ಸ್ ಆಡಳಿದ ಮಂಡಳಿಗೆ ಫೇವರ್ ಮಾಡಿ ಸ್ಟೇ ಆರ್ಡರ್ ಕೊಡಿಸಿ ಫ್ಯಾಕ್ಟರಿ ನಡೆಸುತ್ತಿದ್ದಾರೆ. ಇದರಲ್ಲಿ ಯಾರದು ಸರಿ ಎಂದು ಮಾನ್ಯ ಅಧ್ಯಕ್ಷರೇ ತಾವೇ ಹೇಳಬೇಕು.

ಶ್ರೀ ಎ. ನಾಗರಾಜು:- ಮಾನ್ಯ ಅಧ್ಯಕ್ಷರೇ, ಕೋಲಾರದಲ್ಲಿ ಸ್ನಾತಕೋತ್ತರ ಪದವಿಯನ್ನು ಓಪನ್ ಮಾಡುವ ಬಗ್ಗೆ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಕೆ. ಹೆಚ್. ರಂಗನಾಥ್‌ರವರು ಹೈದರಾಬಾದ್-ಕರ್ನಾಟಕ ಬೋರ್ಡ್‌ನಲ್ಲಿ ಶಾಲಾ, ಕೊಠಡಿಗಳ ರಚನೆ ಬಗ್ಗೆ ಒಂದೆರಡು ಮಾತು ಹೇಳಿದ್ದಾರೆ. ಈಗ ಹೈದರಾಬಾದ್ ಕರ್ನಾಟಕದಲ್ಲಿ ಏನಾಗಿದೆ ಅಂದರೆ; ಲ್ಯಾಂಡ್ ಆರ್ಮಿಯವರು ಕೆಲಸ ತೆಗೆದುಕೊಂಡಿದ್ದು ನವೆಂಬರ್-ಡಿಸೆಂಬರ್ ೯೦ರಲ್ಲಿ. ಅವರು ನಮಗೆ ಎರಡು ವರ್ಷ ಬೇಕೆಂದು ಹೇಳಿದ್ದಾರೆ. ಆಮೇಲೆ ಲೋಕೋಪಯೋಗಿ ಇಲಾಖೆಯವರೂ ಕೂಡ ಅವರಿಗೆ ಕೆಲಸವನ್ನು ಎಂಟ್ರಸ್ಟ್ ಮಾಡಿದ್ದು ೧೯೯೦ರ ಕೊನೆಯಲ್ಲಿ. ಈ ವರ್ಷ ನಾವು ಹೈದರಾಬಾದ್-ಕರ್ನಾಟಕಕ್ಕೆ ೭.೫ ಕೋಟಿ ಕೊಟ್ಟಿದ್ದೇವೆ. ಇದರ ಪ್ರೋಗ್ರೆಸ್ ಈ ತರಹ ಇದೆ. ಫಸ್ಟ್ ಫೇಸ್‌ನಲ್ಲಿ this is with regard to the Hyderabad Karnataka Board ಅದನ್ನು ತಕ್ಷಣ ನಾವು ಮಾನೀಟರ್ ಮಾಡುತ್ತಿದ್ದೇವೆ: ತಾವು ಹೇಳಿದ ಹಾಗೆ ನನಗೂ ತೃಪ್ತಿ ಇಲ್ಲ. ಪ್ರಮುಖವಾಗಿ ಈ ಲ್ಯಾಂಡ್ ಆರ್ಮಿಯವರು ಮಾಡತಕ್ಕ ಕೆಲಸ, ಪ್ರಗತಿ ನನಗೂ ತೃಪ್ತಿಕರವಾಗಿಲ್ಲ. ನಾನು ಅವರ ಜೊತೆಯಲ್ಲಿ ಮಾತನಾಡುತ್ತೇನೆ. ಬಹುಶಃ ಅವರಿಗೆ ಎಲ್ಲಿ ಸಾಧ್ಯವಾಗುತ್ತದೆ ಅಷ್ಟು ಕೆಲಸ ಮಾಡಲಿ. ಎಷ್ಟು ಕೆಲಸ ಆಗುವುದಿಲ್ಲ ಅದನ್ನು ಬೇರೆ ಏಜೆನ್ಸಿಗೆ ಎನ್‌ಟ್ರಸ್ಟ್ ಮಾಡುವಂತಹ ಕೆಲಸ ನಾವು ಮಾಡಬೇಕಾಗುತ್ತದೆ. ಇನ್ನು ಆಪರೇಷನ್ ಬ್ಲಾಕ್ ಬೋರ್ಡ್ ಬಗ್ಗೆ ಕೇಳಿದ್ದಾರೆ. ಫಸ್ಟ್ ಫೇಸ್‌ನಲ್ಲಿ ಕನ್‌ಸ್ಟ್ರಕ್ಟ್ ಮಾಡಬೇಕಾಗಿದ್ದುದು ೨೬೮೦ ಕೋಣೆಗಳು. ಅದರಲ್ಲಿ ೧೬೭೨ ಕೋಣೆಗಳು ಸಿದ್ದವಾಗಿವೆ. ಇನ್ನು ೧೯೦೮ ಕೋಣೆಗಳು ಆಗಬೇಕು; ಅವನ್ನು ಈ ವರ್ಷ ಮಾಡುತ್ತೇವೆ. ಸೆಕೆಂಡ್ ಫೇಸ್‌ನಲ್ಲಿ ೬೦೯೪ ಕೋಣೆಗಳ ಕೆಲಸ ತೆಗೆದು ಕೊಳ್ಳಲಾಗಿತ್ತು. ಅದರಲ್ಲಿ ೫೦೮೬ ಕೋಣೆಗಳು ಸಿದ್ದವಾಗಿವೆ, ೫೦೦೮ ಕೋಣೆಗಳು ಉಳಿದುಕೊಂಡಿವೆ. ಅದೂ ಈ ವರ್ಷ ಆಗುತ್ತದೆ. ಮೂರನೇ ಫೇಸ್‌ನಲ್ಲಿ ೫೪೫೮ ಕೋಣೆಗಳ ಕೆಲಸ ನಾವು ಕೈಗೊಂಡಿದ್ದವು; ಅದರಲ್ಲಿ ೧೧೭೨ ಕೋಣೆಗಳು ಸಿದ್ದವಾಗಿವೆ, ೨೬೬೬ ಉಳಿದಿದೆ. ನಾಲ್ಕನೇ ಫೇಸ್‌ನಲ್ಲಿ ಕನ್‌ಸ್ಟ್ರಕ್ಷನ್ ಆಗಬೇಕಾದುದು ೬೭೬೧. ಈಗತಾನೆ ಕೆಲಸ ಕೈಗೆ ತೆಗೆದುಕೊಂಡಿದ್ದೇವೆ. ಯಾವುದೂ ಸಿದ್ದವಾಗಿಲ್ಲ. ಅಂದರೆ ಒಟ್ಟು ೧೮೨೫೫ ಕೊಠಡಿಗಳನ್ನು ತೆಗದುಕೊಂಡಿದ್ದು ಅದರಲ್ಲಿ, ೫೯೫೦ ಕೋಣೆಗಳು ಸಿದ್ಧವಾಗಿವೆ. ೧೨೬೫೫ ಬ್ಯಾಲೆನ್ಸ್ ಆಗಿದೆ. ನಾನು ಒಪ್ಪುತ್ತೇನೆ. ಏತಕ್ಕೆಂದರೆ. ಬೇರೆ ಬೇರೆ ಏಜೆನ್ಸಿಗಳಿಗೆ ಕೊಟ್ಟು, ಜಿಲ್ಲಾ

ಪರಿಷತ್ ಕಡೆಯಿಂದ ಕೂಡ ಕೆಲಸ ಸಮರ್ಪಕವಾಗಿ ಮಾಡಿಲ್ಲ. ನಮಗೆ ಏನೂ ತೃಪ್ತಿ ಬಂದಿಲ್ಲ. ಆದರೆ ನಾವು ಎವೆರಿ ೧೫ ಡೇಸ್ ಅದನ್ನು ಹೈಯೆಸ್ಟ್ ಲೆವಲ್‌ನಲ್ಲಿ ರಿವ್ಯೂ ಮಾಡತಕ್ಕ ಕಾರ್ಯಕ್ರಮ ತೆಗೆದುಕೊಂಡು ಯಾವ ಯಾವ ಏಜೆನ್ಸಿ ಫೇಲ್ ಆಗುತ್ತದೆ, ಅದನ್ನು ಕೂಡಲೇ ರಿವೋಕ್ ಮಾಡಿ ಬೇರೆಯವರಿಗೆ ಕೊಡತಕ್ಕ ಕಾರ್ಯಕ್ರಮ ಕೂಡ ನಾವು ಮಾಡುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ್:- ಕೇಂದ್ರದವರು ಹಣ ಕೊಡುತ್ತಿದ್ದಾರಲ್ಲ ಅದು ಬರುತ್ತಿದೆಯೇ?

ಶ್ರೀ ವೀರಪ್ಪ ಮೊಯಿಲಿ:- ಹಣ ಬರುತ್ತಿದೆ, ತೊಂದರೆ ಇಲ್ಲ. ಒಂದು ಸಂದರ್ಭದಲ್ಲಿ ಮೂರು ನಾಲ್ಕನೇ ಹಂತದ ಯೋಜನೆಯನ್ನು ಕೈಬಿಡುವ ಆಲೋಚನೆ ಇತ್ತು. ನಮ್ಮ ಪ್ರಗತಿ ಅತೃಪ್ತಿಯಾಗಿದ್ದುದೂ ಒಂದು ಕಾರಣ. ಆದರೆ ಅದನ್ನು ನಾವು ಸರಿಪಡಿಸಿದ್ದೇವೆ. ಇನ್ನು ಹಿಂದಿ ಉಪಾಧ್ಯಾಯರ ಆಯ್ಕೆ ಬಗ್ಗೆ ನಾವು ಈಗಾಗಲೇ ಒಂದು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಎರಡು ತಿಂಗಳಲ್ಲಿ ಉಳಿದ ಹುದ್ದೆಗಳನ್ನು ನಾವು ಭರ್ತಿ ಮಾಡುತ್ತೇವೆ. ಉರ್ದು ಹಾಲ್ ಬಗ್ಗೆ ತಾವು ಹೇಳಿದ್ದೀರಿ. ನಾನು ಅದರ ಬಗ್ಗೆ ಹೇಳುವಾಗ ಸ್ವಲ್ಪ ಮಿಸ್ಟೇಕ್ ಆಗಿದೆ ಆನೇ ಪಂಚ ವಾರ್ಷಿಕ ಯೋಜನೆಯಲ್ಲಿ ೫೦ ಲಕ್ಷ ರೂಪಾಯಿ ಕೊಡುತ್ತೇವೆಂದು ಹೇಳಿದ್ದು Not for a year. ಅದು ಸ್ವಲ್ಪ ಮಿಸ್ಟೇಕಾಗಿದೆ. ಅದನ್ನು ದಯಮಾಡಿ ಕರೆಕ್ಟ್ ಮಾಡಿಕೊಳ್ಳಿ. ಅದನ್ನು ಆಲೋಚನೆ ಮಾಡೋಣ. ನಮ್ಮ ಉದ್ದೇಶ ಎಂದರೆ we would not like to have another routine academy. My idea is to work on some pattern like Oxford or Harward University. ಪ್ರಮುಖವಾಗಿ ಭಾಷೆಯ ಅಭಿವೃದ್ಧಿ ಬಗ್ಗೆ, ಸಂಶೋಧನೆಯ ಬಗ್ಗೆ ಇದನ್ನು ಮಾಡಬೇಕು. I would like to have a unique type of approach instead of having another academy. We have a vision and concept. ಅದರ ಬಗ್ಗೆ ತಮ್ಮ ಜೊತೆ ಮತ್ತು ತಜ್ಞರ ಜೊತೆ ಮಾತನಾಡುತ್ತೇನೆ. ಅದಕ್ಕೆ ಸ್ಪಷ್ಟ ಸ್ವರೂಪ ನಾವು ಕೊಡೋಣ. ಮಾನ್ಯ ಅನಂತಕೃಷ್ಣ ಅವರು ಹೇಳಿದ್ದಕ್ಕೆ ನನ್ನ ಸಹಮತ ಇದೆ. ಯಾರು ಯಾವ ವರ್ಗ ಆಂಗ್ಲ ಮಾಧ್ಯಮ ಶಾಲೆಗಳನ್ನು ಮಾಡುತ್ತಾರೆ, ಬಿಡುತ್ತಾರೆ, ಆದಕ್ಕೆ ನಾನು ಈಗ ಸರ್ಟಿಫಿಕೇಟ್ ಕೊಡುವುದಕ್ಕೆ ಆಗುವುದಿಲ್ಲ. ಕ್ಯಾಪಿಟೇಷನ್ ಫೀಸ್‌ಗೋಸ್ಕರ ಕೆಲವರು ಮಾಡುತ್ತಾರೆ. ಕೆಲವರು ಬಿಡುತ್ತಾರೆ, Mr. Ananthakrishna; you have said Catholic Institutions are collecting. I agree with you. But at the same time all the Protestent sponsored institutions ಕಲೆಕ್ಟ್ ಮಾಡುತ್ತಾರೆ. ಎಂದು ನಾವು ನೇರವಾಗಿ ಅಪಾದನೆ ಮಾಡುವುದಕ್ಕೆ ಆಗುವುದಿಲ್ಲ.

Sri. A.K. Anantha Krishna:- But most of them collect.

Sri M. Veerappa Moily:- May be, you are entitled to say.

ಸನ್ಮಾನ್ಯ ಫ್ರೀನ್‌ಫಾ ಅವರು exploitation by Anglo-Indian Management ಹಸ್ತಾಂತರವಾಗಿದೆ ಎಂದು ಹೇಳಿದರು. It is a matter of management dispute, between two parties or class of parties. Government

cannot be a party to it. ಅದು ಎಲ್ಲಿ ಎಕ್ಸ್‌ಪ್ಲಾಯ್‌ಟೇಷನ್ ಆಗಿದೆ ಎಂದು ನೋಡಿ ಕಾನೂನು ಪ್ರಕಾರ ಏನು ಮಾಡಬಹುದೋ ಅದನ್ನು ಮಾಡಬಹುದು. Better, I cannot institute an omnibus probe in a matter like this. It may be a personal dispute or dispute between two parties. So, the Government cannot be a party to instituting a probe one against any other. If there is any exploitation, kindly put up definite notice and give proper documents, because I cannot do across the table. ನೀವು ಹೇಳಿದ್ದೀರಿ ಎಂದು ಹೇಳಿ. I cannot institute an enquiry. It is a community matter. May be, for historical reasons... or Managements must have changed hands. We do not know about it. Government can intervene, provided the law permits.

An Hon. Member:- Moreover, they were started 100 years back.

Sri M. Veerappa Moily:- Now, managements have changed. I do not think, the Government can do anything. I do not know. But one thing, I will not institute an enquiry unless you give me a letter with proper evidence and proper points. ಅದನ್ನು ಅವರು ಕೊಟ್ಟರೆ ಪರಿಶೀಲನೆ ಮಾಡುತ್ತೇವೆ ಎಂದು ಹೇಳಬಹುದೇ ಹೊರತು, straight away I cannot order for enquiry and after all you should not forget that we are enteringin to a very sensitive area; intervening or causing intereference in the management of minority institutions, which the Constitution does not permit. We will have to be very slow and unless there is a very substantial reason, cogent evidence - you are a representative of minority community and when you represent it, all the more, you must advance the cause of the minority institution. Anyway you please give it in writing.

(Interruptions)

ಶ್ರೀ ವೀರಪ್ಪ ಮೊಯಿಲಿ:- ನಾನು ಅವರ ಜೊತೆಯಲ್ಲಿ ಮಾತನಾಡುತ್ತೇನೆ. These matters, you should come and discuss with us. If there is a real problem, we can look into the matter and across the Assembly, I do not think, on a matter like this very sensitive

one, which may even touch the very subtle area of the constitutional guarantee, I can give assurance or cause a probe to be done on this. Don't worry. It is not end-all of everything. There is still time. We will discuss and we will find out a solution. ಆಮೇಲೆ ಸನ್ಮಾನ್ಯ ಪ್ರಭಾಕರ ರಾಣೆಯವರು ಹೇಳಿದರು. ಬಹುಶಃ ನಾನು ಭಾಷಣ ಮಾಡುವಾಗ ಅವರು ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಪ್ಲಸ್ 2 ಸ್ಟೇಜ್ ಪಿ. ಯು. ಸಿ.ಯಲ್ಲಿ ವೊಕೇಶನ್ ಕೋರ್ಸ್ ಇದೆ. That will continue. ನಿಮಗೆ ಯಾರಾದರೂ ಜೂನಿಯರ್ ಕಾಲೇಜ್‌ಗಳು ಇದ್ದರೆ ವೊಕೇಶನ್ ಕೋರ್ಸ್‌ಸ್ ಬೇಕಾದರೆ we are prepared to give. There is no problem about it. ಪ್ಲಸ್ 2 ಪಿ. ಯು. ಸಿ. ಅಲ್ಲದೆ ಎಸ್. ಎಸ್. ಎಲ್. ಸಿ. ಆದಮೇಲೆ ನೇರವಾಗಿ ಇಂಜಿನಿಯರಿಂಗ್‌ಗೆ, ಪಾಲಿಟೆಕ್ನಿಕ್‌ಗೆ ಕೊಡುವಂಥಾದು ಏನಿದೆ ಅದು ಸೆಪರೇಟ್ ಸ್ಕೀಮ್. There is a conventional scheme of vocational education, That will be in the PUC class. There is a non-conventional scheme of vocational education, which will be with Engineering College. ಆದ್ದರಿಂದ ರೂರಲ್ ಏರಿಯಾ ಗ್ರಾಮಾಂತರ ಪ್ರದೇಶಗಳಲ್ಲಿ ಪಿ. ಯು. ಸಿ. ಕ್ಲಾಸಸ್ ಇದ್ದರೆ ಜೂನಿಯರ್ ಕಾಲೇಜುಗಳು ಇದ್ದರೆ there is no prohibition for giving any course, which you have asked. For your kind information, for the first time the Government of India has sanctioned as many as 312 new courses, which are available to you.

ಶ್ರೀ ಪ್ರಭಾಕರ ರಾಣೆ:- ಬಹುಶಃ ಪಿ. ಯು. ಸಿ. ಕಾಲೇಜಿನಲ್ಲಿ ಯಾವುದೂ ಕೊಟ್ಟಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈ ವರ್ಷ ಕೊಡುತ್ತಿದ್ದೇವೆ. We have got the sanction now. for the first time in the history of Karnataka, Government of India has sanctioned for 1992-93, 312 new courses. We have got that kind of sanction. ಅದನ್ನು ಖಂಡಿತವಾಗಿ ಮಾಡಲಿಕ್ಕೆ ಆಗುತ್ತದೆ. ಇನ್ನು ಅಕ್ಷಯ ಯೋಜನೆ ಬಗ್ಗೆ ತಾವು ಹೇಳಿದ್ದೀರಿ. ಮಧ್ಯಾಹ್ನದ ಊಟ ಏತಕ್ಕೆ ಮಾಡಿಲ್ಲ, ದುಡ್ಡು ಏತಕ್ಕೆ ಕೊಡುತ್ತೀರಿ ಎಂದು ಕೇಳಿದ್ದೀರಿ. In our own wisdom, we have introduced it. ಪ್ರಾಯೋಗಿಕವಾಗಿ ನಾವು ಮಾಡಿದ್ದೇವೆ. ಈ ಪ್ರಯೋಗ ಹೇಗೆ ಆಗುತ್ತದೆಂದು ನಾವು ನೋಡೋಣ. Then we can fall back upon mid-day meal programme.

ಶ್ರೀ ಪ್ರಭಾಕರ ರಾಣೆ:- ಮಧ್ಯಾಹ್ನದ ಊಟ ಪ್ರಾಯೋಗಿಕವಾಗಿ ಮಾಡಬಹುದಿತ್ತಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಇದೇ ಸರಿ ಎಂದು ನಾನು ಹೇಳುತ್ತಿಲ್ಲ. ಅಥವಾ ನಮ್ಮ ಯಾರದೂ ಅಭಿಪ್ರಾಯ ಇಲ್ಲ. Let us try it. ಒಂದು ವರ್ಷ ಅನುಷ್ಠಾನ ಮಾಡಿದರೆ ಅದರ ಸಾಧಕಬಾಧಕಗಳನ್ನು ನೋಡಿ ಆಮೇಲೆ ಮಿಡ್-ಡೇ ಮೀಲ್ ಮತ್ತೊಂದು ಮಾಡುವುದಕ್ಕೆ ಸಾಧ್ಯ

ಇದೆ. ಇದೇ ಖಾಯಂ ಆದಂತಹ ಕಾರ್ಯಕ್ರಮವೇನೂ ಅಲ್ಲ. ಇನ್ನು ಸೋಮಪ್ಪ ಸುವರ್ಣ **ಅವರು** ಹೇಳಿದ್ದು ಸರಿ. ಆದರೆ ರೂರಲ್ ಅಲೋಯನ್ಸ್ ಎಂದು ಕೊಡಲಿಕ್ಕೆ ಆಗುವುದಿಲ್ಲ. ಏಕೆಂದರೆ, ಬರೀ ಅಧ್ಯಾಪಕರ ಪ್ರಶ್ನೆ ಅಲ್ಲ. ಸಿಟಿ ಅಲೋಯೆನ್ಸ್ ಕೊಡತಕ್ಕಂಥಾದ್ದು ಎಲ್ಲಾ ಎಂಪ್ಲಾಯ್ಸ್ ಪ್ರಶ್ನೆ. It is a bigger question than this. ಆದ್ದರಿಂದ ಅವರು ಹೇಳಿದ್ದು ಸರಿ. ಆದಕ್ಕೆ ನಾವು ಈ ವರ್ಷ ಕಾಯಕಲ್ಪ ಮಾಡುತ್ತಿದ್ದೇವೆ. ಉದಾಹರಣೆಗೆ ನಮ್ಮ ಗುಲ್ಬರ್ಗದಲ್ಲಿ ಲೆಕ್ಕಾಚಾರ ಮಾಡಿ ನೋಡಿದಾಗ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಿಂತ ಅಧ್ಯಾಪಕರ ಸಂಖ್ಯೆ ಜಾಸ್ತಿ ಇದೆ. ಅದು ಟೌನ್‌ನಲ್ಲಿ ಬಹಳ ಇದೆ. ಅದನ್ನು ಈ ಸಾರಿ ನಾವು ರಿಪೇರಿ ಮಾಡುತ್ತೇವೆ. I am referring about Gulbarga Town. ನಾವು ಗುಲ್ಬರ್ಗ ಜಿಲ್ಲೆಗೆ ಹೇಳಲಿಲ್ಲ. ಗುಲ್ಬರ್ಗ ಟೌನ್‌ಗೆ ಹೇಳಿದ್ದು. ಅಲ್ಲಿ ಕೆಲವು ಶಾಲೆಗಳಲ್ಲಿ ಉಪಾಧ್ಯಾಯರ ಸಂಖ್ಯೆ ಹೆಚ್ಚಿದೆ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ. ಈ ಒಂದು ಪರಿಸ್ಥಿತಿ ಕೂಡ ಕೆಲವು ಕಡೆ ಇದೆ. ನಾವು ಬಹುಶಃ ಸಿಟಿ, ಟೌನ್, ಕಾಲೇಜು ಶಿಕ್ಷಣದಲ್ಲಿ ಇದನ್ನು ಮಾಡಿದ್ದೇವೆ. I will very firmly and strictly do it but I require the absolute co-operation from all the Members. ಆಮೇಲೆ ಸನ್ಮಾನ್ಯ ಕಮರುಲ್ ಇಸ್ಲಾಮ್‌ರವರು ಪ್ರೈವೇಟ್ ಪಾಲಿಟೆಕ್ನಿಕ್ ಅಪ್‌ಗ್ರೇಡ್ ಮಾಡುವ ಬಗ್ಗೆ ಹೇಳಿದರು. ಅದು ಯೂನಿವರ್ಸಿಟಿಗೆ ಬಿಟ್ಟಂಥಾದ್ದು. ಯೂನಿವರ್ಸಿಟಿಯವರು, because if the old polytechnics want to upgrade themselves as Engineering Colleges, let them apply to the University and let the bodies can go into it. We have also got a committee called L.S. Srinath Committee. I can also refer this matter provided the University recommends. ಯೂನಿವರ್ಸಿಟಿ ಅಫಿಲಿಯೇಷನ್‌ಗೆ ರೆಕಮೆಂಡ್ ಮಾಡಿದರೆ we will look into the matter. On merit, we can examine it. ಆಮೇಲೆ ಬಿ. ಜಿ. ಎಲ್. ಕೋರ್ಸ್ ಬಗ್ಗೆ ತಾವು ಹೇಳಿದ್ದೀರಿ. ಇದರ ಬಗ್ಗೆ ಯೂನಿವರ್ಸಿಟಿಯವರ ಹತ್ತಿರ ಇವತ್ತಿನ ಬೆಳಗ್ಗೆಯೂ ಮಾತನಾಡಿದ್ದೇನೆ. ಅವರು ಆಗುವುದೇ ಇಲ್ಲ ಎಂದು ಹೇಳುತ್ತಾರೆ. I will still persuade the University. What best they could do it. ಆಮೇಲೆ ಸನ್ಮಾನ್ಯ ಎಸ್. ಎಂ. ಯಾಹ್ಯಾರವರು ಅಕಾಡೆಮಿ ವಿಷಯ ಹೇಳಿದರು. ಅದು ಯಾವ ಸ್ವರೂಪದಲ್ಲಿ ಇರಬೇಕೆಂಬ ಬಗ್ಗೆ ಮಾತನಾಡೋಣ. ಆಮೇಲೆ ಡಾ. ನಂಜಪ್ಪನವರು ರೂರಲ್ ಏರಿಯಾ ಬಗ್ಗೆ ಹೇಳಿದ್ದಾರೆ. ಪಟ್ಟಣಕ್ಕೆ ಮಾತ್ರ ಆಂಗ್ಲ ಮಾಧ್ಯಮ ಶಾಲೆ ಕೊಡಬೇಕು, ಗ್ರಾಮಾಂತರಕ್ಕೆ ಕೊಡಬಾರದೆಂದು ಆ ತರಹ ಏನೂ ಇಲ್ಲ. ನಾವು ಏನು ನೀತಿ ರೂಪಿಸುತ್ತೇವೆ, ಏಪ್ರಿಲ್ ೧೫ನೇ ತಾರೀಖಿನೊಳಗೆ ನಾವು ಏನು ನೀತಿ ಘೋಷಣೆ ಮಾಡುತ್ತೇವೆ ಅದು ಎಲ್ಲರಿಗೂ ಸಮಾನ. ಪೇಟೆಯವರಿಗೆ ಮಾತ್ರ ಮಾಡುವ ರೀತಿಯಲ್ಲ. ಎಲ್ಲರಿಗೂ ಸಮಾನವಾದ ರೀತಿಯಲ್ಲೇ ಮಾಡುತ್ತಿದ್ದೇವೆ. ಸನ್ಮಾನ್ಯ ಹಲಗೇಗೌಡರು ಮತ್ತು ಸನ್ಮಾನ್ಯ ಲಕ್ಷ್ಮಣಯ್ಯನವರು ಮಂಡ್ಯ-ಹಾಸನ ಜಿಲ್ಲೆಗಳಿಗೆ ಸ್ನಾತಕೋತ್ತರ ಪದವಿ ಬೇಕೆಂದು ಹೇಳಿದ್ದಾರೆ. ಒಂದು ವರ್ಷದಲ್ಲಿ ಒಂದು ಯೂನಿವರ್ಸಿಟಿಯಲ್ಲಿ ಎರಡು ಪೋಸ್ಟ್ ಗ್ರಾಜುಯೇಟ್ಸ್ ಸೆಂಟರ್ ಮಾಡಲಿಕ್ಕೆ ನಮ್ಮ ಸಂಪನ್ಮೂಲ ಇಲ್ಲ. ನಿಮ್ಮನ್ನು ಒಂದೇ ಕೋಣೆಯಲ್ಲಿ ಕೂರಿಸಿ ನಿರ್ಣಯ ಮಾಡಿ ಒಂದು ಈ ವರ್ಷ, ಮತ್ತೊಂದು ಮುಂದಿನ ವರ್ಷ ಮಾಡಲಿಕ್ಕೆ ಇತ್ಯರ್ಥ ಮಾಡೋಣ. ಮೊದಲು ನೀವು ಸ್ವಲ್ಪ ಮಾತನಾಡಿಕೊಳ್ಳಿ.

ನಂತರ ನಾನು ನಿಮ್ಮ ಜೊತೆಯಲ್ಲಿ ಸೇರಿಕೊಳ್ಳುತ್ತೇವೆ. ಆಮೇಲೆ ತೀರ್ಮಾನ ಮಾಡೋಣ.

ಶ್ರೀ ಎ. ನಾಗರಾಜು:- ಕೋಲಾರದ್ದು ಲಿಸ್ಟ್‌ನಲ್ಲಿದೆ ಅದನ್ನು ದಯವಿಟ್ಟು ನೋಡಿ.

ಶ್ರೀ ವೀರಪ್ಪ ಮೊಯಿಲಿ:- ಕೋಲಾರದ್ದು ಬೆಂಗಳೂರು ಯೂನಿವರ್ಸಿಟಿಯದು ಅದನ್ನು ನೋಡೋಣ. ಈಗ ಕೋಲಾರದ್ದು ಮಾಡಿದ ತಕ್ಷಣ ನಮ್ಮ ತುಮಕೂರಿನಲ್ಲಿ ಮಾಡಿ ಎಂದು ನಮ್ಮ ಶಿವನಂಜಪ್ಪನವರು ಎದ್ದುಬಿಡುತ್ತಾರೆ. ಪ್ರತಿ ಜಿಲ್ಲೆಗೆ ಒಂದು ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಮಾಡಿದರೆ ಅದು ವೈಯಬಲ್ ಆಗುವುದಿಲ್ಲ. ಅದು ಸಮಂಜಸವೂ ಇಲ್ಲ. ಇದರಲ್ಲಿ ಒಂದು ಸೆಲೆಕ್ಷನ್ ಮಾಡಬೇಕಾಗುತ್ತದೆ. ಅದಕ್ಕೆ I think we may have to appoint ಶಿಕ್ಷಣ ತಜ್ಞರನ್ನು, ವಿಶ್ವವಿದ್ಯಾನಿಲಯವಾಗಲಿ ಅಥವಾ ಯಾರನ್ನಾದರೂ ನೇಮಕ ಮಾಡಿ ಅದರ ಬಗ್ಗೆ ಅಧ್ಯಯನ ಮಾಡಿ ಮಾಡುವುದು ಒಳ್ಳೆಯದು. ಅದೂ ರಾಜಕೀಯ ಮಟ್ಟದಲ್ಲಿ ಪೋಸ್ಟ್ ಗ್ರ್ಯಾಜುಯೇಟ್ ಸೆಂಟರ್ ಬಗ್ಗೆ ತೀರ್ಮಾನ ಮಾಡುವುದು ಅದು ಸಮಂಜಸವಾಗಿರುವುದಿಲ್ಲ. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದರ ಬಗ್ಗೆ ಆಲೋಚನೆ ಮಾಡುತ್ತೇನೆ. ಆಮೇಲೆ ಸನ್ಮಾನ್ಯ ಸಿದ್ದಯ್ಯನವರು, ಸನ್ಮಾನ್ಯ ಹರ್ಷಕುಮಾರ್ ಗೌಡರು ಆಂಗ್ಲ ಮಾಧ್ಯಮಶಾಲೆಗಳ ಬಗ್ಗೆ ಹೇಳಿದ್ದಾರೆ. ಬಹಳ ಸಂತೋಷ. ಅವರು ಹೇಳುವುದು ಸರಿ, ಹೌದು, ಸೈನ್ಸ್, ಟೆಕ್ನಾಲಜಿ ಬಗ್ಗೆ ನಾವು ಕನ್ನಡದಲ್ಲೇ ಹೆಚ್ಚು ಶಕ್ತಿಯುತವಾದ ಅಭ್ಯಾಸ, ಅಧ್ಯಯನ ಮಾಡಿದರೆ ಆಂಗ್ಲ ಮಾಧ್ಯಮಕ್ಕೆ ಯಾರೂ ಹೋಗುವುದಿಲ್ಲ. ಇದನ್ನು ಸ್ವಲ್ಪ ಹೆಚ್ಚು ಪ್ರಯೋಗ ಮಾಡಿ ಎಂದು ಸನ್ಮಾನ್ಯ ಹಿರಿಯ ಸದಸ್ಯರಾದಂಥ ಅವರು ಹೇಳಿದ್ದಾರೆ. ನಾನು ಒಪ್ಪುತ್ತೇನೆ. I would rather like to have a First Class Kannadiga than a Second Class or Third Class Englishman. ಥರ್ಡ್ ಕ್ಲಾಸ್ ಇಂಗ್ಲೀಷ್ ಮ್ಯಾನ್‌ಗಿಂಥ ಫಸ್ಟ್ ಕ್ಲಾಸ್, ಹೈ ಕ್ಲಾಸ್ ಕನ್ನಡಿಗ ಒಳ್ಳೆಯದು. ನಮ್ಮ ಶಿಕ್ಷಣದ ಸಮಗ್ರ ವ್ಯವಸ್ಥೆಯಲ್ಲಿ ಫಸ್ಟ್ ಕ್ಲಾಸ್, ಹೈ ಕ್ಲಾಸ್ ಕನ್ನಡಿಗನನ್ನು ಸಿದ್ಧಮಾಡತಕ್ಕಂಥ ವ್ಯವಸ್ಥೆ ನಾವು ಮಾಡೋಣ. ಅದರ ಬದಲು ಥರ್ಡ್ ಕ್ಲಾಸ್ ಇಂಗ್ಲೀಷ್ ಮ್ಯಾನ್‌ನ್ನು ತಯಾರು ಮಾಡಿ, ಮತ್ತೊಮ್ಮೆ ದಾಸ್ಯದ ಕೂಪದೊಳಗೆ ಹೋಗಿ ವಿಲ ವಿಲನೆ ಒದ್ದಾಡತಕ್ಕಂಥ ಪರಿಸ್ಥಿಗೆ ನಮ್ಮನ್ನು ಒಯ್ಯಬಾರದೆಂದು ನನ್ನ ಅಭಿಪ್ರಾಯ.

ಶ್ರೀ ಕೆ. ಹರ್ಷಕುಮಾರ್ ಗೌಡ:- ನಾನು ಕುವೆಂಪುರವರನ್ನು ಭೇಟಿ ಮಾಡಿದಾಗ ಒಂದು ಮಾತು ಹೇಳಿದರು. ರಾಷ್ಟ್ರ ಕವಿ ಕುವೆಂಪು ಹೇಳಿದರು. ತಮ್ಮ ಮಾತಿಗೆ ಸಹಮತ ವ್ಯಕ್ತಪಡಿಸುತ್ತಾ, ಇಂಗ್ಲೀಷ್ ಮಾಧ್ಯಮ ಬೇಡ ಎಂದು ನಾನು ಹೇಳುವುದಿಲ್ಲ. ಆದರೆ ಬೀಡಿ ಅಂಗಡಿ ಇಂಗ್ಲೀಷ್ ಮಾತ್ರ ನಮ್ಮ ದೇಶದಲ್ಲಿ ಬೇಡ ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಜಪಾನ್ ಈಗ ಸೈನ್ಸ್ ಅಂಡ್ ಟೆಕ್ನಾಲಜಿಯಲ್ಲಿ ಇಡೀ ವಿಶ್ವದಲ್ಲೇ ಮುಂಚೂಣಿಯಲ್ಲಿದ್ದಾರೆ. ಅವರು ಜಪಾನ್ ಭಾಷೆಯಲ್ಲೇ ಕಲಿಯುತ್ತಿದ್ದಾರೆ. ರಷ್ಯನ್ಸ್ they have also advanced in science. ಅದನ್ನು ರಷ್ಯನ್ ಭಾಷೆಯಲ್ಲೇ ಕಲಿಯುತ್ತಿದ್ದಾರೆ. Germans they are unparalleled ಅವರ ಭಾಷೆಯಲ್ಲೇ ಕಲಿಯುತ್ತಿದ್ದಾರೆ. ಎಲ್ಲೆಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಕಲಿಯುತ್ತಿದ್ದೇವೋ ಅದು ಕೂಡ ವಸಾಹತುಶಾಹಿ ಥರ್ಡ್ ಕ್ಲಾಸ್ ಇಂಗ್ಲೀಷ್‌ನ್ನು ಎಲ್ಲಾ ಕೊಟ್ಟು ಅವರು ಏನು ಹೋಗಿದ್ದಾರೆ ಅದರ ಬೆನ್ನು ಹತ್ತಿ ಹೋಗತಕ್ಕಂಥ ದಾಸರು ನಾವು ಆಗುವುದು ಬೇಡ.

ನಮಗೆ ಆಂಗ್ಲ ಭಾಷೆ ಬೇಕು, ಆದರೆ ಅದು ಎಷ್ಟರ ಮಟ್ಟಿಗೆ ಬೇಕೆಂಬುದನ್ನು ನೋಡಿ ನಾವು ಉನ್ನತ ಮಟ್ಟವನ್ನು ಅದರಲ್ಲಿ ಕಾಯ್ದುಕೊಂಡು ಹೋಗತಕ್ಕಂಥ ಆಂಗ್ಲ ಮಾಧ್ಯಮ ಶಾಲೆಗಳು ನಮಗೆ ಬೇಕೇ ಹೊರತು ಇವೊತ್ತು ಮಳೆ ಬಿದ್ದಲ್ಲಿ ಹಣಬೆಗಳು ಹುಟ್ಟಿಕೊಳ್ಳುವ ಹಾಗೆ, ಹಾಗೆ ಹುಟ್ಟಿದ ಹಣಬೆಗಳನ್ನು ಮನೆಯೊಳಗೆ ತಂದು ಅವುಗಳನ್ನು ನಮ್ಮ ಮಕ್ಕಳು ತಿಂದು ಹಾಳಾಗತಕ್ಕಂಥ ಒಂದು ಪ್ರವೃತ್ತಿಗೆ ನಾವು ನಮ್ಮ ಮಕ್ಕಳನ್ನು ಒಯ್ಯಬಾರದು ಎಂಬುದು ನನ್ನ ಅನಿಸಿಕೆಯಾಗಿದೆ. ಆಂಗ್ಲ ಮಾಧ್ಯಮ ಶಾಲೆಗಳು ನಮಗೆ ಬೇಡವೇ ಬೇಡ ಎಂದು ನಾನು ಹೇಳುವುದಿಲ್ಲ. ಇದಕ್ಕೆ ಬೇಕಾದಂಥ ಪರಿಮಿತಿಯನ್ನು, ನೀತಿಯನ್ನು ನಾವು ರೂಪಿಸುತ್ತೇವೆ. ಹಾಗೆ ರೂಪಿಸಿದಂಥ ನೀತಿಯು ಎಲ್ಲರಿಗೂ ಎಲ್ಲಾ ವರ್ಗದವರಿಗೂ ಕೂಡ ಒಪ್ಪಿಗೆ ಆಗುವಂಥ ನೀತಿಯಾಗುತ್ತದೆ. ಎಂಬ ವಿಶ್ವಾಸದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಸಚಿವರು ಬೇರೆ ದೇಶಗಳ ಉದಾಹರಣೆಗಳನ್ನು ಹೇಳಿದ್ದಾರೆ. ಜಪಾನ್, ರಷ್ಯ ದೇಶಗಳಲ್ಲಿನ ಭಾಷಾ ಶಿಕ್ಷಣದ ಬಗ್ಗೆ ಅವರು ಹೇಳಿದ್ದಾರೆ. ಆದರ ಅಂಥ ಕೆಲವು ದೇಶಗಳಲ್ಲಿ ಒಂದೇ ಭಾಷೆ ಇದೆ. ಆದ್ದರಿಂದ ಅವರಿಗೆ ತಮ್ಮ ಮಾತೃಭಾಷೆಯನ್ನು ಕಲಿಯಲು ಸುಲಭವಾಗಿದೆ. ಆದರೆ ನಮ್ಮದು ಬಹಳ ಭಾಷೆಗಳುಳ್ಳ ದೇಶ. ನಾವು ನಮ್ಮ ಪಕ್ಕದ ರಾಜ್ಯಕ್ಕೆ ಹೋದರೆ ಅಲ್ಲಿ ಬೇರ ಭಾಷೆಯು ಇರುತ್ತದೆ. ನಮಗೆ ಅಲ್ಲಿನ ಭಾಷೆಯ ಜ್ಞಾನವೂ ಇರಬೇಕಾಗುತ್ತದೆ. ಅಥವಾ ಇಂಗ್ಲೀಷ್‌ನ್ನಾದರೂ ತಿಳಿದಿರಲೇ ಬೇಕಾಗುತ್ತದೆ. ಇಂಗ್ಲೀಷ್ ಇದ್ದರೆ ಬೇರೆ ಯಾವುದೇ ರಾಜ್ಯಕ್ಕೆ ಹೋಗಿಯಾದರೂ ತಮ್ಮ ಜೀವನವನ್ನು ಮಾಡಿಕೊಳ್ಳಬಹುದು. ರಷ್ಯಾ, ಜಪಾನ್ ದೇಶಗಳ ಒಂದು ಪರಿಸ್ಥಿತಿಯು ನಮ್ಮಲ್ಲಿ ಇಲ್ಲವಾದ ಕಾರಣ ನಮಗೆ ಇಂಗ್ಲೀಷ್ ಶಾಲೆಗಳನ್ನು ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರಪ್ಪ ಮೊಯಿಲಿ:- ಮಾನ್ಯ ಲಿಂಗಪ್ಪನವರು ಬಹಳ ಸಿಟ್ಟು ಮಾಡಿಕೊಳ್ಳುತ್ತಾರೆ. ಗೌರವ ಶಿಕ್ಷಕರ ಬಗ್ಗೆ ಹೇಳಿಕೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಈ ಬಗ್ಗೆ ಕ್ಯಾಬಿನೆಟ್ ಕೂಡ ಕನ್ಸಿಡರ್ ಮಾಡಿ ಅವರುಗಳು ಸಲ್ಲಿಸಿದಂಥ ಸೇವೆಗೆ ಆರ್ಧ ಪರ್‌ಸೆಂಟ್‌ನಷ್ಟು ಅಂಕಗಳನ್ನು ಕೂಡ ತಕ್ಕಂಥ ನಿರ್ಣಯವನ್ನು ಮಾಡಿದ್ದೇವೆ. ಆ ಮೂಲಕ ಅವರಿಗೆ ಆದ್ಯತೆಯನ್ನು ಕೊಟ್ಟಿದ್ದೇವೆ. ನಾವು ಮಾಡತಕ್ಕಂಥ ನಿಯಮಗಳು ಏನಿವೆ ಅದರಲ್ಲಿ ಕನಿಷ್ಠ ಪಕ್ಷ ೫೦ ಪರ್‌ಸೆಂಟ್‌ನಷ್ಟಾದರೂ ಕೂಡ ಗೌರವ ಶಿಕ್ಷಕರು ಸೇರಿ ಹೋಗುತ್ತಾರೆ. ಇನ್ನೂ ಉಳಿದವರು ರಿಕ್ರೂಟ್‌ಮೆಂಟ್ ಮುಂದೆ ಹೇಗೋ ಆಗುತ್ತದೆ. ಗೌರವ ಶಿಕ್ಷಕರನ್ನು ಅಂದು ನೇಮಕ ಮಾಡಿಕೊಳ್ಳುವಾಗ ಇದು ಕಾನೂನಿಗೆ ವಿರೋಧವಾಗುತ್ತದೆ ನೇಮಕ ಮಾಡಬೇಡಿ ಎಂದು ಹೇಳಿದ್ದರೂ ಕೂಡ ಜಿಲ್ಲಾ ಪರಿಷತ್‌ಗಳವರು ಮಾಡಿಕೊಂಡಿದ್ದಾರೆ. ಆದರೂ ಕೂಡ ಮಾನವೀಯತೆಯ ದೃಷ್ಟಿಯಿಂದ ನಾವು ಆದ್ಯತೆಯ ವಿಚಾರವನ್ನು ತೆಗೆದುಕೊಂಡಿದ್ದೇವೆ. ಬಹುಶಃ ಇದು ಅವರುಗಳಿಗೆ ಸಮಾಧಾನವನ್ನು ತರಬಹುದು ಎಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರುಗಳಾದ ಕಮರುಲ್ ಇಸ್ಲಾಮ್‌ರವರು, ಶ್ರೀ ಮಂಜುನಾಥ ಕಣ್ಣೂರರವರು, ನಾರ್ತ್ ಕರ್ನಾಟಕ ಭಾಗದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡಬೇಕೆಂದು ಹೇಳಿಕೊಂಡಿದ್ದಾರೆ. ಈ ವಿಚಾರದಲ್ಲಿ ಸರಕಾರದವರು ಪಾಲಿಸಿ ಡಿಸಿಶನ್ ಒಂದು ತೆಗೆದುಕೊಂಡಿದೆ. ನಾರ್ತ್ ಕರ್ನಾಟಕ ಭಾಗದಲ್ಲಿ

ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವ ಬಗ್ಗೆ ಡಿಸಿಷನ್ ತೆಗೆದುಕೊಂಡಿದೆ. ಆದರೆ ಕೆಲವು ಫಾರ್ಮಾಲಿಟೀಸ್ ಮತ್ತು ಪ್ರೊಸೀಜರ್ಸ್ ಏನು ಇವೆ ಅದನ್ನು ಮಾಡಿ ಪೂರೈಸಬೇಕಾಗುತ್ತದೆ. ಅದನ್ನು ಬೇಗ ಮಾಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರಾದ ಹಲಗೇ ಗೌಡರು ಪಾಂಡವಪುರದಲ್ಲಿ ಒಂದು ಮುನ್ಸಿಫ್ ಕೋರ್ಟ್ ಸ್ಥಾಪನೆ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಆ ಬಗ್ಗೆ ಹೈಕೋರ್ಟ್‌ನಿಂದ ಪ್ರಸ್ತಾವನೆ ಬಂದರೆ ಹಾಗೂ ಅಲ್ಲಿ ಕಟ್ಟಡವನ್ನು ಒದಗಿಸಿಕೊಟ್ಟರೆ ಕೂಡಲೆ ಅಲ್ಲಿ ಮುನ್ಸಿಫ್ ಕೋರ್ಟ್‌ನ್ನು ಸ್ಥಾಪನೆಯನ್ನು ಮಾಡುತ್ತೇವೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರು ಲೀಗಲ್ ಏಯ್ಡ್ ಬಗ್ಗೆ ಹೇಳಿದ್ದಾರೆ. ಯಾರು ಈ ಲೀಗಲ್ ಏಯ್ಡ್ ತೆಗೆದುಕೊಳ್ಳುತ್ತಾರೆ, ಅವರು ಕೇಳಿದ ಲಾಯರ್‌ಗಳನ್ನು ಕೊಡಬೇಕೆಂದು ಹೇಳಿದ್ದಾರೆ. ನಮ್ಮ ರೂಲ್ಸ್ ಪ್ರಕಾರ ಎಲ್ಲಾ ಬಾರ್ ಅಸೋಸಿಯೇಷನ್‌ನಲ್ಲಿ ಪ್ಯಾನಲ್ ಆಫ್ ಲಿಸ್ಟ್ ಇದೆ. ಯಾರ್ಯಾರು ಫ್ರೀ ಲೀಗಲ್ ಏಯ್ಡ್ ಮಾಡುವ ವಕೀಲರು ಎಂದು ನಮೂದು ಆಗಿರುತ್ತಾರೆ, ಅಂಥ ಲಿಸ್ಟ್ ಇರುತ್ತದೆ. ಆ ಸಮಿತಿಯವರೇ ಲಿಸ್ಟ್‌ನ್ನು ನೋಡಿ ಕೇಸ್‌ಗಳಿಗೆ ಸಂಬಂಧಪಟ್ಟ ವಕೀಲರನ್ನು ಕೊಡುತ್ತಾರೆ. ಆದರೆ ಮಾನ್ಯ ಸದಸ್ಯರ ಸಲಹೆ ಒಳ್ಳೆಯದಿದೆ. ಅದನ್ನೂ ಸಹ ನಾವು ಪರಿಶೀಲನೆ ಮಾಡುತ್ತೇವೆ. ಅದೇ ರೀತಿಯಲ್ಲಿ ಮಾನ್ಯ ಚೌಹಾಣ್‌ರವರು, ಬಸವಲಿಂಗಪ್ಪನವರು ಸ್ಟೇ ಕೊಟ್ಟ ಕಾರ್ಖಾನೆಯವರು ಹೈಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದಾರೆ ಎಂದು ಹೇಳಿದ್ದಾರೆ. ಇದು ಯಾವ ಕಾನೂನಿಗೆ ಸರಿ ಎಂದು ಕೇಳಿದ್ದಾರೆ. ಈ ವಿಚಾರವನ್ನು ಇತ್ಯರ್ಥ ಮಾಡುವವರು ಹೈಕೋರ್ಟ್‌ನವರು. ನಾವು ಅಡ್ವೊಕೇಟ್ ಜನರಲ್‌ರವರನ್ನು ಕೇಳಿದ್ದೇವೆ. ಈ ಸ್ಟೇ ವೆಕೇಟ್ ಮಾಡುವುದಕ್ಕೆ ಅವರೇ ಅಪೀಲ್ ಹಾಕಬೇಕೆಂದು ಕೇಳಿಕೊಂಡಿದ್ದೇವೆ.

ಛೇರ್ಮನ್:- ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇವೆ. ಪ್ರಸ್ತಾವ ಏನೆಂದರೆ: ''ದಿನಾಂಕ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೯, ೧೦, ೧೩, ೧೪, ೩೫ ಮತ್ತು ೩೬ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡುವುದು''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ: ೯ ಲೇಖನ ಸಾಮಗ್ರಿ ಮತ್ತು ಮುದ್ರಣ:

'' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೇಖನ ಸಾಮಗ್ರಿ ಮತ್ತು ಮುದ್ರಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೭,೮೧,೭೯,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ ೧೦: ಉಚ್ಚ ಶಿಕ್ಷಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ

ಉಚ್ಚ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೯೯,೮೬,೨೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೫,೦೦,೦೦೦ ರೂಪಾಯಿಗಳಿಗಿಂತ ಮಿರದ ಮೊತ್ತವನ್ನು ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ: ೧೩, ಪ್ರಾಥಮಿಕ ಶಿಕ್ಷಣ.

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೩೨,೬೮,೮೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೧೪: ಸೆಕೆಂಡರಿ ಶಿಕ್ಷಣ:

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸೆಕೆಂಡರಿ ಶಿಕ್ಷಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೬೦,೭೬,೮೭,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೫: ರಾಜ್ಯ ವಿಧಾನ ಮಂಡಲ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯ ವಿಧಾನಮಂಡಲಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೦೬,೧೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ ೩೬: ನ್ಯಾಯಪರಿಪಾಲನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನ್ಯಾಯ ಪರಿಪಾಲನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೧,೮೧,೮೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು."

ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿಯನ್ನು ವಿಸ್ತರಿಸುವುದು.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಕಾನೂನು ಸಚಿವರು):- ಮಾನ್ಯ ಅಧ್ಯಕ್ಷರೇ, ೧೯೯೦ನೇ ಸಾಲಿನ ಹಿಂದೂ ಉತ್ತರಾಧಿಕಾರಿ (ಕರ್ನಾಟಕ ತಿದ್ದುಪಡಿ) ವಿಧೇಯಕದ ಬಗ್ಗೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಗೆ ೧೯೯೩ನೇ ಜೂನ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ೧೯೯೦ನೇ ಸಾಲಿನ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕದ ಬಗ್ಗೆ ರಚಿಸಲಾದ ಜಂಟಿ ಪರಿಶೀಲನ ಸಮಿತಿಗೆ ೧೯೯೩ನೇ ಜೂನ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ.

೧೯೯೨ರ ಜೂನ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಯಿತು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಹರಿಜನ-ಗಿರಿಜನರ ದರಖಾಸ್ತ್ ಜಮೀನು ಮಾರಾಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ೩೪೧ (೨೧೪೪) ಶ್ರೀ ಕರಿಯಣ್ಣ (ಹೊಳೆಹೊನ್ನೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಹರಿಜನ-ಗಿರಿಜನರ ದರಖಾಸ್ತು ಜಮೀನು ಮಾರಾಟದ ಕೇಸುಗಳು ಎಷ್ಟು ಬಾಕಿಇರುವುವು?

ಆ) ಬಾಕಿ ಇದ್ದರೆ ಎಷ್ಟು ವರ್ಷದಿಂದ ಇರುತ್ತವೆ? (ಜಿಲ್ಲಾವಾರು ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಇದುವರೆವಿಗೆ ಈ ಕೇಸುಗಳು ಬಾಕಿ ಉಳಿಯಲು ಕಾರಣವೇನು?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು):

ಅ) ೧,೩೭೦

ಆ) ಎಷ್ಟು ವರ್ಷಗಳಿಂದ ಬಾಕಿ ಇರುತ್ತದೆ ಎಂಬ ಬಗ್ಗೆ ಮಾಹಿತಿಯನ್ನು ಇದಕ್ಕೆ ಲಗತ್ತಿಸಿರುವ ಅನುಬಂಧದಲ್ಲಿ ಒದಗಿಸಿದೆ.

ಇ) ಇಂತಹ ಪ್ರಕರಣಗಳಲ್ಲಿ ಸೂಕ್ಷ್ಮ ದೃಷ್ಟಿಯಿಂದ ಪರಿಶೀಲಿಸಿ ನ್ಯಾಯ ಸಮ್ಮತವಾಗಿ, ಕರ್ನಾಟಕ ಪರಿಶಿಷ್ಟ ಜಾತಿ/ಪಂಗಡಗಳ ಕೆಲವು ಜಮಿನುಗಳ ಪರಭಾರೆ ನಿಷೇದ ಕಾಯ್ದೆ ೧೯೭೮ರ ಅಡಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಈ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಲು, ಸಾಕಷ್ಟು ಕಾಲಾವಕಾಶವು ತೆಗೆದುಕೊಳ್ಳುವುದು ಸಹಜವಾಗಿರುತ್ತದೆ ಮತ್ತು ವಿಳಂಬಕ್ಕೆ ಆಸ್ಪದ ಕೊಡುತ್ತದೆ, ಏಕೆಂದರೆ ಈ ಪ್ರಕರಣಗಳಲ್ಲಿ ದಾಖಲಾತಿಗಳನ್ನು ಒದಗಿಸಲು, ಸಾಕ್ಷಿಗಳನ್ನು ಕರೆತರಲು, ವಾದವನ್ನು ಮಂಡಿಸಲು, ಉಭಯತ್ರ ಪಾರ್ಟಿಗಳಿಗೂ ನ್ಯಾಯ ಸಮ್ಮತವಾಗಿ ಸಮಾನ ಕಾಲಾವಕಾಶ ಕೊಡಬೇಕಾಗುತ್ತದೆ. ಹಾಗೂ ನೊಂದ ಕಕ್ಷಿದಾರರು ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿಯನ್ನು ಅಥವಾ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್‌ನ್ನು ಸಲ್ಲಿಸುವುದರಿಂದ ಆ ನ್ಯಾಯಾಲಯಗಳಲ್ಲಿ ತೀರ್ಮಾನಗಳು ತೆಗೆದುಕೊಳ್ಳುವಲ್ಲಿ ಪ್ರಕರಣಗಳು ವಿಳಂಬವಾಗುವ ಸಂಭವವಿರುತ್ತದೆ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಾಕಿ ಇರುವ ಪ್ರಕರಣಗಳ	ಎಷ್ಟು ವರ್ಷಗಳಿಂದ ಬಾಕಿ ಇರುತ್ತದೆ
೧.	ಬೆಂಗಳೂರು (ನಗರ)	೯೨	೬ ತಿಂಗಳಿಂದ ೮ ವರ್ಷಗಳವರೆಗೆ
೨.	ಬೆಂಗಳೂರು (ಗ್ರಾಮಾಂತರ)	೨೧೪	೬ ತಿಂಗಳಿಂದ ೮ ವರ್ಷಗಳವರೆಗೆ
೩.	ಕೋಲಾರ	೪೦೫	೬ ತಿಂಗಳಿಂದ ೧೦ ವರ್ಷಗಳವರೆಗೆ

೪.	ತುಮಕೂರು	೧೩೪	೬ ತಿಂಗಳಿಂದ ೧೦ ವರ್ಷಗಳವರೆಗೆ
೫.	ಚಿತ್ರದುರ್ಗ	೧೦೩	೬ ತಿಂಗಳಿಂದ ೮ ವರ್ಷಗಳವರೆಗೆ
೬.	ಶಿವಮೊಗ್ಗ	೯೧	೬ ತಿಂಗಳಿಂದ ೧೨ ವರ್ಷಗಳವರೆಗೆ
೭.	ಮೈಸೂರು	೫೩	೬ ತಿಂಗಳಿಂದ ೧೨ ವರ್ಷಗಳವರೆಗೆ
೮.	ಮಂಡ್ಯ	೨೯	೬ ತಿಂಗಳಿಂದ ೧೦ ವರ್ಷಗಳವರೆಗೆ
೯.	ಹಾಸನ	೧೮೨	೬ ತಿಂಗಳಿಂದ ೧೦ ವರ್ಷಗಳವರೆಗೆ
೧೦.	ಚಿಕ್ಕಮಗಳೂರು	೧೭	ಒಂದು ವರ್ಷದಿಂದ
೧೧.	ದಕ್ಷಿಣ ಕನ್ನಡ	೨೫	೬ ತಿಂಗಳಿಂದ
೧೨.	ಕೊಡಗು	೯	೬ ತಿಂಗಳಿಂದ ೨ ವರ್ಷಗಳವರೆಗೆ
೧೩.	ಬೆಳಗಾಂ	೬	೨-೧/೨ ವರ್ಷಗಳಿದ.
೧೪.	ಬಿಜಾಪುರ	೧	೧ ತಿಂಗಳಿಂದ
೧೫.	ಧಾರವಾಡ	—	—
೧೬.	ಉತ್ತರ ಕನ್ನಡ	—	—
೧೭.	ಗುಲ್ಬರ್ಗ	—	—
೧೮.	ರಾಯಚೂರು	—	—
೧೯.	ಬಳ್ಳಾರಿ	—	—
೨೦.	ಬೀದರ್	೯	೬ ತಿಂಗಳಿಂದ ೨ ವರ್ಷಗಳವರೆಗೆ.

ಶ್ರೀ ಕರಿಯಣ್ಣ:- ಮಾನ್ಯ ಮಂತ್ರಿಗಳು ಉತ್ತರದಲ್ಲಿ ಕೋಲಾರದಲ್ಲಿ ೪೦೫ ಕೇಸ್‌ಗಳು ೧೦ ವರ್ಷಗಳಿಂದ ಇದೆ ಎಂದು ಹೇಳ್ತಿದ್ದಾರೆ. ಯಾವ ಕಾರಣದಿಂದ ಈ ೪೦೫ ಕೇಸ್‌ಗಳು ೬ರಿಂದ ೧೦ ವರ್ಷ ಇದೆಯೋ ತಿಳಿಸಲಿಲ್ಲ. ಅದನ್ನು ದಯಮಾಡಿ ತಿಳಿಸಬೇಕು ಎಂದು ಕೋರುತ್ತೇನೆ. ಇದಲ್ಲದೆ ಇಡೀ ರಾಜ್ಯದಲ್ಲಿ ೧೩೭೦ ಕೇಸ್‌ಗಳಿವೆ ಆದರಲ್ಲಿ ರೆವಿನ್ಯೂ ಇಲಾಖೆಯವರು ಕೋರ್ಟಿಗೆ ತಪ್ಪು ಅಭಿಪ್ರಾಯ ಕೊಡುವುದರಿಂದ ಈ ಕೇಸಿಗೆ ಧಕ್ಕೆಯಾಗುತ್ತದೆ. ಕಾರಣವೇನೆಂದರೆ, ಹೈಕೋರ್ಟ್‌ನಲ್ಲಿ ಕ್ರಾಪ್ ಇದೆ ಎಂದು ಹೇಳಿದ್ದರಿಂದ ಕ್ರಾಪ್ ಕಟಾವ್ ಆದಮೇಲೆ ಜಮೀನನ್ನು ಖಾಲಿ ಮಾಡಿಕೊಡಿ ಎಂದು ಆರ್ಡರ್ ಮಾಡಿರುತ್ತಾರೆ. ಇವರು ಏನು ಮಾಡುತ್ತಾರೆಂದರೆ ಕ್ರಾಪ್ ಕಟಾವ್ ಆದಮೇಲೆ ಮತ್ತೊಂದು ಸಾರಿ ಕಬ್ಬು ಚಿಗುರುತ್ತದೆ. ಆಗ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ತಹಸೀಲ್ದಾರ್‌ಗಳು ಮತ್ತೆ ಕಬ್ಬಿದೆ ಎಂದು ಬರೆದು ಕೊಡುತ್ತಾರೆ. ಮತ್ತೂ ಹೈಕೋರ್ಟಿನವರು ಸ್ಟೇ ಕೊಡುತ್ತಾರೆ. ಆಧಕ್ಕಾಗಿ ಇದಕ್ಕೇನಾದರೂ ಅಂತಿಮವಾಗಿ ಕಾನೂನು ಜಾರಿಗೆ ಬರುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದೊಂದು ಮಹತ್ವದ ಕಾನೂನು ಮತ್ತು ಇದರಡಿಯಲ್ಲಿ ಎಸ್. ಸಿ. ಮತ್ತು ಎಸ್. ಟಿ. ಜನಾಂಗದವರಿಗೆ ಸಾಕಷ್ಟು ಲಾಭವಾಗಿದೆ. ಒಟ್ಟು

ಕೇಸ್‌ಗಳಲ್ಲಿ ಡಿಟೆಕ್ಟ್ ಆಗಿದ್ದು ೪೦೦೧೪. ಅದರಲ್ಲಿ ಸುಮಾರು ೨೬,೯೮ರಲ್ಲಿ ಪೊಜಿಷನ್ ರೆಸ್ಟೋರ್ ಮಾಡಿದ್ದಾರೆ. ಮತ್ತು ರಿಜೆಕ್ಟಾಗಿದ್ದು ೧೨೩೪೬ ಅಂದರೆ ಕಂಡೀಷನ್ ಎಲ್ಲ ಸರಿಯಾಗಿದ್ದುದನ್ನು ನೋಡಿಕೊಂಡು ರಿಜೆಕ್ಟ್ ಮಾಡಿದಂಥವು ೧೨ ಸಾವಿರ. ಈಗ ಪೆಂಡಿಂಗ್ ಇರುವುದು ಕೇವಲ ೧೩೭೦ ಎಕ್ಸ್‌ಟೆಂಟ್ ಏನೆಂದರೆ ೩೭೪೫ ಇದಕ್ಕೆ ಡಿಲೇ ಆಗಲು ಕಾರಣಗಳು ಅನೇಕ ಇವೆ. ಕೇವಲ ಕಾರಣ ಒಂದು ಎಂದು ಹೇಳಲಿಕ್ಕಾಗುವುದಿಲ್ಲ. ಒಂದು ರೀಸನಬಲ್ ಆಪರ್ಚುನಿಟಿ ನಮಗೆ ಕೊಟ್ಟಿಲ್ಲ ಎಂದು ಅನೇಕ ಸಾರಿ ಪಾರ್ಟಿಗಳಾಗಲಿ ಅಥವಾ ಅವರ ಪರವಾಗಿರುವ ಅಡ್ವೋಕೇಟ್ಸ್‌ಗಳಾಗಲಿ ಒಂದು ಸ್ಟೇ ತೆಗೆದುಕೊಳ್ಳುತ್ತಾರೆ ಅಥವಾ ಟೈಂ ತೆಗೆದು ಕೊಳ್ಳುತ್ತಾರೆ. ಎರಡನೆಯದು ನಮಗೆ ನ್ಯಾಚುರಲ್ ಜಸ್ಟೀಸ್ ಸಿಗಬೇಕಾದರೆ ಒಂದು ಅವಕಾಶ ಕೊಡಿ, ಎರಡು ಅವಕಾಶ ಕೊಡಿ ಎಂದು ಕೇಳಿಕೊಂಡು ಅಡ್‌ಜರ್ನ್‌ಮೆಂಟ್ ತೆಗೆದುಕೊಳ್ಳುತ್ತಾರೆ. ಮೂರನೆಯದು, ಅಸಿಸ್ಟೆಂಟ್ ಕಮೀಶನರ್ಸ್‌ಗೆ ನಾವು ಟಾರ್ಗೆಟ್ ಪ್ರತಿ ತಿಂಗಳು ಕನಿಷ್ಠ ೨೫ ಕೇಸಾದರೂ ಮಾಡಬೇಕೆಂದು ಕೊಟ್ಟಿದ್ದೇವೆ. ಕೆಲವು ಎಸಿಗಳು ಮಾಡುತ್ತಾ ಇಲ್ಲ. ಅದಕ್ಕೆ ಪುನಃ ನಾನು ಅವರಿಗೆ ಒಂದು ಗುರಿಯನ್ನು ಕೊಟ್ಟು ಇಷ್ಟು ದಿವಸದಲ್ಲಿ ನೀವು ಇದನ್ನು ಮುಗಿಸಬೇಕೆಂದು ಮೂರು ತಿಂಗಳೋ ಆರು ತಿಂಗಳೋ ಟೈಂ ಕೊಟ್ಟು ನಿರ್ಬಂಧವನ್ನು ಹಾಕಿ ಸುತ್ತೋಲೆಯನ್ನು ಕಳಿಸುತ್ತೇವೆ. ಮತ್ತೆ ಕೆಲವು ಕೇಸಸ್ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇವೆ. ನಾನಾ ಕಾರಣಗಳಿಂದ ೧೩೭೦ ಕೇಸಸ್ ಮಾತ್ರ ಪೆಂಡಿಂಗ್ ಇದೆ.

ಶ್ರೀ ಕರಿಯಣ್ಣ:- ಒಂದು ಸಲ ಅಲ್ಲಿ ಕ್ರಾಪಿದೆ ಆ ಕ್ರಾಪ್ ಕಟಾವ್ ಆದಮೇಲೆ ಪೊಜಿಷನ್ ಹ್ಯಾಂಡ್‌ಓವರ್ ಮಾಡಿ ಎಂದು ಹೈಕೋರ್ಟ್ ಕೊಟ್ಟಿದ್ದಾರೆ. ಕ್ರಾಪ್ ಕಟಾವ್ ಆದಮೇಲೆ ಮತ್ತೊಂದು ಸಾರಿ ತೆಗೆದುಕೊಂಡು ಹೋಗಿ ಕೊಟ್ಟರು. ಕ್ರಾಪ್ ಇದೆಯೆಂದು ರೆವಿನ್ಯೂ ಆಫೀಸರ್ ರಿಪೋರ್ಟ್ ಬಂತು. ಮತ್ತೆ ಅದೇ ಜಮೀನಿಗೆ ಸ್ಟೇ ಕೊಡುತ್ತಾರೆ. ಅಂಥ ಕೇಸಸ್‌ಗ ತಾವು ಹೈಕೋರ್ಟ್‌ನವರಿಗೂ ತಿಳಿಸಬೇಕಾಗುತ್ತದೆ. ಒಂದು ಸಾರಿ ಅವರು ಸ್ಟೇ ಕೊಟ್ಟಿದ್ದಾರೆ. ಆಮೇಲೆ ಕಟಾವು ಆಯಿತು. ಕಟಾವು ಆದಮೇಲೆ ಪೊಜಿಷನ್ ಕೊಡಿ ಎಂದು ಅವರೇ ಆರ್ಡರ್ ಮಾಡಿದ್ದಾರೆ. ಪೊಜಿಷನ್ ಕೊಡುವಂಥ ಸಂದರ್ಭದಲ್ಲಿ ಮತ್ತೆ ಫಸಲು ಇದೆ, ಮತ್ತೆ ಅವನಿಗೆ ಮಾಡಿಕೊಡಿ ಎಂದು ಹೇಳುತ್ತಾರೆ. ಅಂಥ ಸಂದರ್ಭದಲ್ಲಿ ತಾವು ಅಡ್ವೊಕೇಟ್‌ಗಳಿಗೆ ಹೇಳಬೇಕು. ಏತಕ್ಕೆಂದರೆ ಸರ್ಕಾರಿ ಅಡ್ವೊಕೇಟ್ಸ್‌ಗಳು ಸಮರ್ಪಕವಾಗಿ ಕೋರ್ಟಿನಲ್ಲಿ ಅಟೆಂಡ್ ಆಗುವುದಿಲ್ಲ. ಹೀಗಾಗಿ ಈ ಕೇಸ್‌ಗಳು ಹತ್ತು ವರ್ಷ ಎಳೆಯುವುದಕ್ಕೆ ಕಾರಣವಾಗಿದೆ. ಈ ಕೇಸನ್ನು ಡೀಲ್ ಮಾಡತಕ್ಕಂಥ ಸರ್ಕಾರಿ ವಕೀಲರುಗಳಿಗೆ ತಾವು ಸರಿಯಾದ ರೀತಿಯಲ್ಲಿ ಅವರು ಅಟೆಂಡ್ ಆಗಬೇಕು ಮತ್ತು ಈ ಕೇಸಿನ ಬಗ್ಗೆ ಹೈಕೋರ್ಟ್ ಜಡ್ಜ್‌ಗಳಿಗೆ ಮಾಹಿತಿಯನ್ನು ತಿಳಿಸಬೇಕು ಎಂದು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ಒಳ್ಳೆಯ ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಅಡ್ವೊಕೇಟ್ ಜನರಲ್ ಅವರನ್ನು ಕರೆಯಿಸಿ ಮಾತನಾಡುತ್ತೇನೆ. ಕೆಲವು ಅಡ್ವೋಕೇಟ್ಸ್‌ನ್ನು ಸ್ಪೆಷಲ್ ಆಗಿ ಅಪಾಯಿಂಟ್ ಮಾಡಿಕೊಂಡು ಇದರ ಬಗ್ಗೆ ಆಸಕ್ತಿಯನ್ನು ವಹಿಸಿ ಈ ಕೇಸಸ್‌ನ್ನು ಡಿಸ್‌ಪೋಸ್ ಆಫ್ ಮಾಡುವುದಕ್ಕೆ ಪ್ರಯತ್ನ ಮಾಡಿಸುತ್ತೇನೆ.

ಮಟಕಿ ಕೆರೆಯಲ್ಲಿ ಬಿರುಕು.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ

ಪ್ರಶ್ನೆಗಳಿಗೆ ಉತ್ತರಿಸುವರೇ:-

ಅ) ಕಮಲಾಪುರದಲ್ಲಿರುವ ಬರುವ ಆಳಂದ್ ತಾಲ್ಲೂಕಿನ ಮಟಕಿ ಗ್ರಾಮದ ಕೆರೆ ೮೯ನೇ ಇಸವಿಯ ಜೂನ್ ತಿಂಗಳಲ್ಲಿ ಅತೀವೃಷ್ಟಿಯಿಂದಾಗಿ ಒಡೆದು ಆ ಭಾಗದ ೨೧೧ ರೈತರಿಗೆ ಹೆಚ್ಚಿನ ಪ್ರಮಾಣದ ಹಾನಿ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಒಡೆಯುವುದಕ್ಕೆ ಕಾರಣವೇನು ?

ಆ) ಈ ಬಗ್ಗೆ ಆಳಂದ್ ತಾಲ್ಲೂಕಿನ ತಹಶೀಲ್ದಾರರು ಸ್ಥಳ ಪರಿಶೀಲನೆ ನಡೆಸಿ ಗುಲ್ಬರ್ಗ ಜಿಲ್ಲಾಧಿಕಾರಿಯವರಿಗೆ ಹಾಗೂ ಜಿಲ್ಲಾಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೂ ಕ್ರಮವಾಗಿ ೨೧.೧.೯೦ ಹಾಗೂ ೨೧.೭.೯೦ ರಂದು ಶಿಫಾರಸ್ಸು ಮಾಡಿ ಪರಿಹಾರ ಧನದ ವಿವರಣೆಯೊಡನೆ ಕಳುಹಿಸಿದ್ದುದು ನಿಜವಲ್ಲವೆ ?

ಇ) ರೈತರಿಗೆ ಹಾನಿಯುಂಟಾಗಿದ್ದು ಎರಡು ವರ್ಷಗಳಾದರೂ ಅವರಿಗೆ ಪರಿಹಾರ ನೀಡದಿರುವುದರಿಂದ ರೈತರು ಕಂಗಾಲಾಗಿರುವುದು ನಿಜವಲ್ಲವೇ ?

ಈ) ಹಾಗಿದ್ದಲ್ಲಿ ಸದರಿ ರೈತರಿಗೆ ಕೂಡಲೇ ಪರಿಹಾರ ಧನ ಒದಗಿಸುವುದಲ್ಲದೆ ಕೆರೆ ಒಡೆಯುವುದಕ್ಕೆ ಕಾರಣರಾದವರು ಹಾಗೂ ಈ ವಿಳಂಬಕ್ಕೆ ಕಾರಣರಾರೆಂಬ ಬಗ್ಗೆ ಸರ್ಕಾರದವರು ತನಿಖೆ ನಡೆಸುವರೆ ? ಹಾಗೂ ತಪ್ಪಿಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸುವರೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರು):-

ಅ) ಹೌದು

ಆ) ಹೌದು

ಇ) ನೊಂದ ರೈತರಿಗೆ ಅಂದು ಜಾರಿಯಲ್ಲಿದ್ದ ನಿಯಮಗಳ ಪ್ರಕಾರ ಕೃಷಿ ಚೀಲಗಳನ್ನು ಒದಗಿಸಲು ಸರ್ಕಾರದಿಂದ ೧.೫೦ ಲಕ್ಷ ಹಣವನ್ನು ಬಿಡುಗಡೆ ಮಾಡಿದೆ. ಈ ಹಣವನ್ನು ಜಿಲ್ಲೆಯ ಪ್ರಧಾನ ಕೃಷಿ ಅಧಿಕಾರಿಗಳಿಗೆ ಕೃಷಿ ಚೀಲ ಒದಗಿಸಲು ಅನುಮತಿ ನೀಡಲಾಗಿದೆ. ಅವರು ಅರ್ಹ ರೈತರಿಗೆ ನೀಡಿರಬಹುದು.

ಈ) ಕೆರೆ ಒಡೆಯುವುದಕ್ಕೆ ಕಾರಣ ನೆರೆ ಹಾವಳಿ. ಇದಕ್ಕೆ ಪರಿಹಾರವನ್ನು ಕಂಡುಹಿಡಿಯಲು ಕೃಷಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯನ್ನು ಕೋರಲಾಗುವುದು. ಅಧಿಕಾರಿಗಳು ತಪ್ಪು ಮಾಡಿದ್ದಲ್ಲಿ ಅವರ ಬಗ್ಗೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಜಿ. ರಾಮಕೃಷ್ಣ:- ಮಾನ್ಯ ಅಧ್ಯಕ್ಷರೆ, ಈ ಕೆರೆ ಒಡೆದು ಸುಮಾರು ೨೧೧ ಮಂದಿ ರೈತರಿಗೆ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ತೊಂದರೆಯಾಗಿ ಅಲ್ಲಿರತಕ್ಕಂಥ ಸ್ಥಳೀಯ ಅಧಿಕಾರಿಗಳು ಆ ಕೆರೆಯನ್ನು ಹೋಗಿ ನೋಡಿದ ಮೇಲೆ ಎಷ್ಟು ಪ್ರಮಾಣದಲ್ಲಿ ಅಲ್ಲಿರತಕ್ಕ ರೈತರಿಗೆ ತೊಂದರೆಯಾಗಿದೆ, ಎಷ್ಟು ಹಾನಿಯಾಗಿದೆ ಎನ್ನತಕ್ಕ ರಿಪೋರ್ಟ್‌ನ್ನು ಕಳುಹಿಸಿ ಸುಮಾರು ಎರಡು ವರ್ಷವಾದರೂ ಸಹಿತ ಆ ರೈತರಿಗೆ ಪರಿಹಾರ ಧನ ಸಿಕ್ಕಿಲ್ಲ. ಈಗ ಇಲ್ಲಿ ಉತ್ತರದಲ್ಲಿ ಹೇಳಿರತಕ್ಕದ್ದು ಏನೆಂದರೆ ೧.೫೦ ಲಕ್ಷ ರೂಪಾಯಿಯ ಕೆಲವು ಕಿಟ್ಸ್‌ನ್ನು ಕೊಡಲಾಗಿದೆ. ಬಹುತೇಕ ರೈತರಿಗೆ

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು,

ನೀಡಿರಬಹುದು ಎಂದು ಉತ್ತರದಲ್ಲಿ ಇದೆ. ಆದನ್ನು ಖಚಿತವಾಗಿ ಕೊಟ್ಟಿದ್ದಾರೆ ಎನ್ನತಕ್ಕದ್ದು ಇಲ್ಲ. ಅಲ್ಲಿ ತಹಶೀಲ್ದಾರ್ ೨೪.೨.೯೨ರಲ್ಲಿ ಕಾಗದವನ್ನು ಬರೆದಿದ್ದಾರೆ. ಇಲ್ಲಿಯವರೆವಿಗೂ ಸರ್ಕಾರ ಯಾವುದೇ ಕ್ರಮ ತೆಗೆದು ಕೊಂಡಿಲ್ಲ, ನನಗೆ ಇದರ ಬಗ್ಗೆ ಯಾವುದೇ ತಿಳುವಳಿಕೆ ಬಂದಿಲ್ಲವೆಂದು ಹೇಳುತ್ತಾರೆ. ಅದಕ್ಕಾಗಿ ಉತ್ತರದಲ್ಲಿ ಇರತಕ್ಕಂಥದ್ದು ಬಹುತೇಕ ನನಗೆ ಅನ್ನಿಸುತ್ತದೆ. ಏನೆಂದರೆ, ಅವರು ಕೊಟ್ಟಂಥ ಹಣವಾಗಲೀ ಅಥವಾ ಬೀಜವಾಗಲೀ, ರೈತರಿಗೆ ಸಿಕ್ಕಿಲ್ಲ ಅನ್ನತಕ್ಕದ್ದು ಸ್ಪಷ್ಟವಾಗಿ ಕಾಣುತ್ತದೆ. ಅದಕ್ಕೆ ಸರ್ಕಾರ ಒಂದು ಸ್ಪಷ್ಟವಾದ ಉತ್ತರವನ್ನು ಕೊಟ್ಟರೆ ಬಹುತೇಕ ಅನುಕೂಲವಾಗುತ್ತದೆಂದು ನನಗೆ ಅನ್ನಿಸುತ್ತದೆ.

20,648

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನನ್ನ ಹತ್ತಿರ ಏನು ಮಾಹಿತಿ ಇದೆ ಅದರ ಪ್ರಕಾರ ಈ ಒಂದು ಕೆರೆ ಒಡೆದಿರುವುದರಿಂದ ಅನಾಹುತವಾಗಿದೆ, ೯೭ ರೈತರಿಗೆ ಅನಾನುಕೂಲವಾಗಿದೆ. ಆ ೯೭ರಲ್ಲಿ ೫೪ ಜನರಿಗೆ ನಮ್ಮ ಕಾನೂನಿನ ಪ್ರಕಾರ ಏನು ಗೈಡ್‌ಲೈನ್ಸ್ ಇದೆ ಆ ಗೈಡ್‌ಲೈನ್ಸ್ ಪ್ರಕಾರ ಸಹಾಯವನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದೇ ಪ್ರಶ್ನೆಯನ್ನು ಸುಮಾರು ಎರಡು ವರ್ಷದ ಹಿಂದೆ ಬಿ. ಆರ್. ಪಾಟೀಲರು ಕೌನ್ಸಿಲ್‌ನಲ್ಲಿ ಕೇಳಿದ್ದರು. ಆಗ ಇದ್ದಂತಹ ಮಂತ್ರಿಯವರು ಕೂಡ ಇದೇ ಉತ್ತರವನ್ನು ಕೊಟ್ಟಿದ್ದಾರೆ. ೯೭ ಜನರು ಹಾನಿಗೆ ಒಳಪಟ್ಟಿದ್ದಾರೆ. ಅದರಲ್ಲಿ In the instant calamity 97 farmers were affected. As against this 97 farmers 54 formers were eligible for relief. Accordingly, ಈ ಕಿಟ್ಸ್‌ನ್ನು ಕೊಡತಕ್ಕ ವ್ಯವಸ್ಥೆಯನ್ನು ಅವರು ಮಾಡಿದ್ದಾರೆ.

ಶ್ರೀ ಜಿ. ರಾಮಕೃಷ್ಣ:- ಮಾನ್ಯ ಅಧ್ಯಕ್ಷರೇ, ಇಲ್ಲಿ ರಿಪೋರ್ಟ್ ಪ್ರಕಾರ ಏನು ಅಲ್ಲಿ ಸ್ಥಳೀಯ ತಹಶೀಲ್ದಾರ್ ರಿಪೋರ್ಟ್ ಪ್ರಕಾರ ಅವರು ಸ್ಥಳಕ್ಕೆ ಹೋಗಿ ನೋಡಿದಮೇಲೆ ಅಲ್ಲಿ ಎಷ್ಟು ಲುಕ್ಸಾನಾಗಿದೆ ಎನ್ನತಕ್ಕಂಥ ವಿವರಣೆಯನ್ನು ಕೊಟ್ಟಿದ್ದಾರೆ. ಮಟ್ಕಿಯಲ್ಲಿ ೧.೭೪ ಲಕ್ಷ, ಹೋಬಳಿಯಲ್ಲಿ ೧೮೫೦೦, ಜಿರಳಿಯಲ್ಲಿ ೧೦೪೦೦ ರೂಪಾಯಿ, ಟೋಟಲ್ ಆಗಿ ಎರಡು ಲಕ್ಷ ಚಿಲ್ಲರೆ ಅಲ್ಲಿ ಹಾನಿಯಾಗಿದೆ, ಇದರಿಂದ ಸುಮಾರು ೨೧೧ ಮಂದಿ ರೈತರಿಗೆ ಬಹಳ ದೊಡ್ಡ ಪ್ರಮಾಣದಲ್ಲಿ ಎಫೆಕ್ಟ್ ಆಗಿದೆ ಎಂದು ರಿಪೋರ್ಟ್ ಕೊಟ್ಟಮೇಲೆ ಕೇವಲ ಬರೀ ೯೦ ಮಂದಿ ಎನ್ನತಕ್ಕಂಥದ್ದು ಬಹುತೇಕ ಸರಿಯಲ್ಲವೇನೋ ಎಂದು ನನಗೆನ್ನಿಸುತ್ತದೆ. ಆದಕ್ಕಾಗಿ ಇನ್ನೊಮ್ಮೆ ತಾವು ರಿಪೋರ್ಟ್ ಕಾಲ್‌ಫರ್ ಮಾಡಿ ಎಷ್ಟು ಮಂದಿಗೆ ಅಲ್ಲಿ ಸಹಾಯ ಸಿಗಬೇಕೋ ಅಷ್ಟು ಮಂದಿಗೆ ಕೊಟ್ಟರೆ ಅನುಕೂಲವಾಗುತ್ತದೆ. ೧೯೮೫-೮೬ರಲ್ಲಿ ಕೆರೆಯ ಕಟ್ಟೆಯ ಬಗ್ಗೆ ನಾನು ಹೇಳಿದ್ದೇನೆ. ಒಂದು ವೇಳೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಒಂದೆರಡು ವರ್ಷದಲ್ಲಿ ಕೆರೆ ಒಡೆಯತಕ್ಕಂಥ ಸನ್ನಿವೇಶ ಬರಬಹುದೆಂದು ಹೇಳಿತ್ತು. ಆಗಿದ್ದಂತಹ ಪಿ. ಡಬ್ಲ್ಯೂ. ಡಿ. ಮಿನಿಸ್ಟರ್ ಎನ್‌ಕ್ವೈರಿ ಕಂಡಕ್ಟ್ ಮಾಡಿದ್ದರೂ ಇಲ್ಲಿವರೆಗೂ ಎನ್‌ಕ್ವೈರಿ ಆಗಿಲ್ಲ, ಎನ್‌ಕ್ವೈರಿಯ ರಿಪೋರ್ಟ್ ಬಂದಿಲ್ಲ. ಈ ಕೆರೆ ಒಡೆದ ಮೇಲೆ ಎಷ್ಟು ರೈತರಿಗೆ ಹಾನಿಯಾಗಿದೆ? ದುರಸ್ತಿಯನ್ನು ತಕ್ಷಣ ಮಾಡಲಿಲ್ಲ ಅಂದರೆ ಪ್ರತಿವರ್ಷ ಆ ಭಾಗದಲ್ಲಿರತಕ್ಕಂಥ ರೈತರಿಗೆ ತೊಂದರೆ ಖಚಿತವಾದದ್ದು. ಅದ್ದಕ್ಕಾಗಿ ಸರ್ಕಾರ ತಕ್ಷಣ ರೀಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಮ್ಮಲ್ಲಿ ಇರುವ ಮಾಹಿತಿ ಪ್ರಕಾರ ನಾನು ಕಡಿಮೆ ಹಾನಿಯಾಗಿದೆ ಎಂದು ಹೇಳಲಿಲ್ಲ. ಸುಮಾರು ೭.೫೦ ಲಕ್ಷರೂಪಾಯಿಯಷ್ಟು ಲುಕ್ಸಾನ್ ಆಗಿದೆ

ಎಂದು ಹೇಳಿದ್ದಾರೆ. ಆದರೆ ಅಷ್ಟು ಲುಕ್ಸಾನ್ ಆದರೂ ಕಾನೂನಿನ ಪ್ರಕಾರ ಎಷ್ಟು ಜನ ಎಲಿಜಿಬಲ್ ಇದ್ದಾರೆ ಅವರಿಗೆ ಮಾತ್ರ ನಾವು ಸಹಾಯ ಮಾಡಿದ್ದೇವೆ. ಉಳಿದಂತಹವರಿಗೆ ಕಾನೂನಿನ ಅಡಿಯಲ್ಲಿ, ಗೈಡ್‌ಲೈನ್ಸ್ ಪ್ರಕಾರ ಅವರಿಗೆ ಸಹಾಯ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿ ಸಹಾಯ ಮಾಡಿಲ್ಲ. ಎರಡನೆಯ ಪ್ರಶ್ನೆಯಲ್ಲಿ ಒಡೆದು ಹೋದಂತಹ ಕೆರೆ ದುರಸ್ತಿ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ. ನಾನು ಚೀಫ್ ಸೆಕ್ರೆಟರಿಯವರಿಗೆ ಒಂದು ನಿರ್ದೇಶನ ಕೊಡುತ್ತೇನೆ. ಏಪ್ರಿಲ್‌ನಲ್ಲಿ ಬರುವ ಬಜೆಟ್‌ನಲ್ಲಿ ಇದರ ರಿಪೇರಿಗಾಗಿ ವ್ಯವಸ್ಥೆ ಮಾಡಬೇಕೆನ್ನತಕ್ಕ ಆದೇಶವನ್ನು ಕೊಡುತ್ತೇನೆ.

ಛೇರ್ಮನ್:- ಹರ್ಷ ಕುಮಾರ ಗೌಡರೆ ನಿಮ್ಮ ೧೯೨೮ನೇ ಪ್ರಶ್ನೆಗೆ ಮಂತ್ರಿಗಳು ಟೈಂ ಕೇಳಿದ್ದಾರೆ ಆದ್ದರಿಂದ ಅದನ್ನು ಮುಂದೆ ತೆಗೆದುಕೊಳ್ಳೋಣ.

ಒಣ ಭೂಮಿ ಬೇಸಾಯ ಅಭಿವೃದ್ಧಿ ಯೋಜನೆ.

೩೪೯ (೨೦೦೩) ಶ್ರೀ ಬಿ. ಶಿವರಾಮು (ಗಂಡಸಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಒಣಭೂಮಿ ಬೇಸಾಯ ಅಭಿವೃದ್ಧಿ ಯೋಜನೆಯಲ್ಲಿ ಜಲಾನಯನ ಕಾರ್ಯಕ್ರಮದ ಮೂಲ ಉದ್ದೇಶವೇನು ಮತ್ತು ಉದ್ದೇಶಿಸಿದ ರೀತಿಯಲ್ಲಿ ಕಾರ್ಯಕ್ರಮ ನಡೆದಿದೆಯೇ ಹಾಗೂ ನಡೆಯದಿದ್ದಲ್ಲಿ ಅದಕ್ಕೆ ಕಾರಣವೇನು?

ಆ) ಹಾಸನ ಜಿಲ್ಲೆಯಲ್ಲಿರುವ ದೇವಿ ಹಳ್ಳಿ ಜಲಾನಯನ ಯೋಜನೆಗೆ ಸೇರಿರುವ ಒಟ್ಟು ವಿಸ್ತೀರ್ಣ, ಯೋಜನೆ ಪೂರ್ಣಗೊಳಿಸಲು ಮಾಡಿರುವ ಅಂದಾಜು ಮತ್ತು ಹಾಲಿ ಖರ್ಚು ಮಾಡಿರುವ ಹಣವೆಷ್ಟು? (ವರ್ಷವಾರು ವಿವರವನ್ನು ಒದಗಿಸುವುದು).

ಇ) ನಿರ್ದಿಷ್ಟಿತ ಅಂದಾಜಿನಂತೆ ವರ್ಷವಾರು ಯೋಜನೆಯ ಕಾರ್ಯಕ್ರಮಗಳಿಗೆ ಖರ್ಚು ಮಾಡದೆ ಉಳಿದ ಕಾರ್ಯಕ್ರಮಗಳಲ್ಲೊಂದಾದ ಸಣ್ಣ ಜಲಾನಯನ (ಮೈಕ್ರೋ ವಾಟರ್‌ಶೆಡ್) ಕೆಲಸ ತೆಗೆದುಕೊಳ್ಳಲು ಸರ್ಕಾರದ ಆಲೋಚನೆ ಇದೆಯೇ ಮತ್ತು ಅದಕ್ಕೆ ಬೇಕಾಗುವ ಹಣವೆಷ್ಟು ಮತ್ತು ಇದನ್ನು ಈ ಅಯವ್ಯಯದಲ್ಲಿ ಸೇರಿಸಲಾಗಿದೆಯೇ?

ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):-

ಅ) ಒಣಭೂಮಿ ಅಭಿವೃದ್ಧಿ ಯೋಜನೆಯಲ್ಲಿ ಜಲಾನಯಲ ಕಾರ್ಯಕ್ರಮದ ಮೂಲ ಉದ್ದೇಶಗಳು ಈ ಕೆಳಕಂಡಂತಿವೆ:-

೧) ತೇವಾಂಶ ಅಥವಾ ನೀರು ಮತ್ತು ಮಣ್ಣು ಸಂರಕ್ಷಣೆ

೨) ಬೇಸಾಯ ಯೋಗ್ಯವಲ್ಲದ ಭೂಮಿಗಳನ್ನು (ಅರಣ್ಯ, ಗೋಮಾಳ ಮತ್ತು ಸಮುದಾಯ ಭೂಮಿಗಳು, ನಾಲೆಗಳು ಇತ್ಯಾದಿ) ಭೂ ಸಾಮರ್ಥ್ಯವನ್ನು ಆಧರಿಸಿ ಉಪಚರಿಸುವುದು ಮತ್ತು ಪರ್ಯಾಯ ಭೂ ಬಳಕೆಯಿಂದ ಸೂಕ್ತವಾದ ಬೆಳೆಗಳನ್ನು ಬೆಳೆಸುವುದು.

೩) ರೈತರಿಗೆ ಭೂಮಿಯಲ್ಲಿ ಉತ್ಪಾದತೆಯನ್ನು ಮತ್ತು ಉತ್ತಮ ಆದಾಯ ಬರುವಂತೆ ಮಾಡುವುದು. ಉದ್ದೇಶಿತ ರೀತಿಯಲ್ಲಿ ಕಾರ್ಯಕ್ರಮ ನಡೆಯುತ್ತಿದೆ.

ಆ) ದೇವಿ ಹಳ್ಳಿ ಜಲಾನಯನ ಯೋಜನೆಯ ಒಟ್ಟು ವಿಸ್ತೀರ್ಣ ೩೪.೯೮೮ ಹೆಕ್ಟೇರುಗಳು. ವರ್ಷವಾರು ಮಾಡಿರುವ ಅಂದಾಜು ಮತ್ತು ಹಾಲಿ ಖರ್ಚು ಈ ಕೆಳಕಂಡಂತಿವೆ.

ವರ್ಷ	ಅಂದಾಜು ಮೊತ್ತ	ಖರ್ಚುಮಾಡಿದ ಮೊತ್ತ (ಲಕ್ಷ ರೂ.)
೮೪-೮೫	೨.೯೬೦	೨.೯೬೦
೮೫-೮೬	೩೨.೫೬೦	೩೨.೫೬೦
೮೬-೮೭	೭೧.೫೩೦	೬೬.೮೨೭
೮೭-೮೮	೬೯.೪೯೦	೭೫.೪೮೫
೮೮-೮೯	೭೮.೦೬೪	೭೦.೯೦೨
೮೯-೯೦	೮೬.೫೩೦	೩೮.೧೪೦
೯೦-೯೧	೯೪.೨೫೭	೩೩.೧೫೦
೯೧-೯೨	೭೮.೦೦೨	೯.೯೩೦
ಒಟ್ಟು	೫೧೨.೪೯೩	೩೨೯.೯೫೪
೯೨-೯೩	೯೩.೬೬೦	—
೯೩-೯೪	೮೦.೨೫೦	—
೯೪-೯೫	೧೩.೯೦೦	
ಒಟ್ಟು	೧೮೭.೮೧೦	

೧೯೯೧-೯೨ನೇ ಸಾಲಿನಿಂದ ದೇವಿಹಳ್ಳಿ ಜಲಾನಯನ ಯೋಜನೆಗೆ ವಿಶ್ವ ಬ್ಯಾಂಕ್ ನೆರವಿನಿಂದ ಮುಂದುವರಿಸಲಾಗಿದೆ).

ಇ) ೧೯೯೧-೯೨ನೇ ಸಾಲಿನಿಂದ ದೇವಿಹಳ್ಳಿ ಜಲಾನಯನ ಯೋಜನೆಯನ್ನು ವಿಶ್ವ ಬ್ಯಾಂಕ್ ನೆರವಿನಿಂದ ಮುಂದುವರಿಸಲಾಗಿದೆ. ಅಂದರೆ ಹಿಂದಿನ ವರ್ಷಗಳಲ್ಲಿ ಡಿ. ಎಲ್. ವತಿಯಿಂದ ಕಾರ್ಯಗತಗೊಳಿಸಲ್ಪಟ್ಟ ಉಪ ಜಲಾನಯನಗಳಲ್ಲಿ ಉಳಿದ ಕಾರ್ಯ ಕ್ರಮಗಳನ್ನು ಪೂರ್ತಿಗೊಳಿಸಲು ಅಂದಾಜು ರೂ. ೭೭.೫೦ ಲಕ್ಷ ರೂ ಬೇಕಾಗುತ್ತದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಶಿವರಾಮುः- ಮಾನ್ಯ ಅಧ್ಯಕ್ಷರೆ, ಒಣಭೂಮಿ ಬೇಸಾಯ ಅಭಿವೃದ್ಧಿ ಯೋಜನೆಯಲ್ಲಿ ಜಲಾನಯನ ಕಾರ್ಯಕ್ರಮದ ಮೂಲ ಉದ್ದೇಶವೇನು ಎಂದು ಕೇಳಿದರೆ, ನೀರು, ಮಣ್ಣು ಸಂರಕ್ಷಣೆ, ಯೋಗ್ಯವಿಲ್ಲದ ಭೂಮಿಯಲ್ಲಿ ಸೂಕ್ತವಾದ ಬೆಳೆಯನ್ನು ಬೆಳೆಯುವುದು, ಭೂಮಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸತಕ್ಕದು ಎನ್ನತಕ್ಕಂಥ ಒಳ್ಳೆಯ ಉದ್ದೇಶಗಳನ್ನು ಕೊಟ್ಟು, ಉದ್ದೇಶಿಸಿದ ರೀತಿಯಲ್ಲಿ ಕಾರ್ಯಕ್ರಮವನ್ನು ನಡೆಸುತ್ತಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಂತರ ಎರಡನೆಯ ಪ್ರಶ್ನೆಗೆ ಉತ್ತರ ಕೊಡಬೇಕಾದರೆ, ೧೯೮೯-೯೦ರಲ್ಲಿ ೮೬ ಲಕ್ಷಕ್ಕೆ ೩೮ ಲಕ್ಷ ಒದಗಿಸಿದ್ದಾರೆ. ೧೯೯೦-೯೧ರಲ್ಲಿ ೯೪ ಕ್ಕೆ ೩೩ ಲಕ್ಷ ಒದಗಿಸಿದ್ದಾರೆ. ೧೯೯೧-೯೨ರಲ್ಲಿ ೭೮ ಲಕ್ಷಕ್ಕೆ

೯.೫ ಲಕ್ಷ ಒದಗಿಸಿದ್ದಾರೆ. ಆದರೆ ಮೊದಲು ನಾಲ್ಕುವರ್ಷಗಳ ಉತ್ತಮವಾದ ಅವರ ಯೋಜನೆ ಪ್ರಕಾರ ಏನು ವೆಚ್ಚ ಮಾಡಬೇಕಾಗಿತ್ತೋ ಆ ಹಣವನ್ನು ವೆಚ್ಚ ಮಾಡಿ ಆ ಉದ್ದೇಶವನ್ನು ಸಫಲ ಮಾಡತಕ್ಕ ಕೆಲಸವನ್ನು ಮಾಡಿದರು. ಇನ್ನು ಮೂರು ವರ್ಷಗಳಲ್ಲಿ ಅದರ ಯೋಜನೆಯ ಪ್ರಕಾರ ಏನು ಕಾರ್ಯಕ್ರಮವನ್ನು ಮಾಡಬೇಕಾಗಿತ್ತೋ ಆ ಕಾರ್ಯಕ್ರಮವನ್ನು ಮಾಡುವುದಕ್ಕೆ ಒಟ್ಟು ೧೨೮ ಕೋಟಿ ರೂಪಾಯಿಗಳನ್ನು ಒದಗಿಸಬೇಕು. ಆ ಹಣವನ್ನೇ ಒದಗಿಸಿಲ್ಲ ಅಂದರೆ ಮೂರು ವರ್ಷಗಳ ಆ ಯೋಜನೆಯ ಉದ್ದೇಶ ಸಫಲವಾಗಿರುತ್ತದೆಯೆ? ಉತ್ತರದಲ್ಲಿ ಮಂತ್ರಿಗಳು ಇದರ ಉದ್ದೇಶ ಸಫಲವಾಗಿದೆ ಎಂದು ಹೇಳಿದ್ದಾರಲ್ಲಾ ಈ ಹಣವನ್ನೇ ಒದಗಿಸದೆ ಅಲ್ಲಿ ಕೆಲಸ ಆಗಲಿಕ್ಕೆ ಸಾಧ್ಯವೇ? ಮೂರನೆಯ ಪ್ರಶ್ನೆಗೆ ೨೨.೫ ಲಕ್ಷ ಮಾತ್ರ ಒದಗಿಸಬೇಕೆಂದು ಉತ್ತರ ಹೇಳುತ್ತಾರೆ. ಅವರೇ ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ೧ ಕೋಟಿ ೨೮ ಲಕ್ಷ ಒದಗಿಸಬೇಕು. ಈ ಹಣವನ್ನು ಒದಗಿಸುತ್ತಾರೆಯೇ? ಮತ್ತೆ ಪರಿಶೀಲಿಸುತ್ತೇವೆ ಎನ್ನತಕ್ಕ ಉತ್ತರವನ್ನು ಹೇಳಿದ್ದಾರೆ. ಮೊದಲು ಮೂರು ವರ್ಷದಿಂದ ಹಣವನ್ನು ಒದಗಿಸದೇ ಇದನ್ನು ಪರಿಶೀಲಿಸತಕ್ಕದ್ದು ಯಾವುದು? ಈಗ ಕೊಟ್ಟಿರತಕ್ಕಂಥ ಪೂರ್ತಿ ಹಣ ಅಧಿಕಾರಿಗಳ ಸಂಬಳಕ್ಕೆ ಮತ್ತೆ ಅವರ ತಿರುಗಾಟಕ್ಕೇ ಖರ್ಚಾಗಿದೆ. ಇದನ್ನು ಯಾವ ರೀತಿ ಪರಿಶೀಲಿಸುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಎಸ್. ಚಿಕ್ಕೇಗೌಡ:- ಮಾನ್ಯ ಅಧ್ಯಕ್ಷರೇ, ಈ ಡಿ. ಎಲ್. ಡಿ. ಬಿ ಯೋಜನೆಯಲ್ಲಿ ಮಾನ್ಯ ಶಿವರಾಮುರವರ ಕ್ಷೇತ್ರ ಒಂದೇ ಅಲ್ಲ. ಇಡೀ ರಾಜ್ಯದಲ್ಲಿ ಇದಕ್ಕೆ ಬೇಕಾದಂತಹ ಹಣವನ್ನು ಒದಗಿಸುವುದಕ್ಕೆ ಹಣದ ಕೊರತೆ ಇದ್ದುದರಿಂದ ಈ ವಿಚಾರವನ್ನು ನಮ್ಮ ಮಾನ್ಯ ಸಚಿವರು ಬಹಳವಾಗಿ ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ನಾನು ಹೇಳಿದಹಾಗೆ ಇದೊಂದೆ ಕ್ಷೇತ್ರದಲ್ಲಿ ಅಲ್ಲ, ಇತರೆ ಪ್ರದೇಶದಲ್ಲಿಯೂ ಸಹ ಎಲ್ಲೆಲ್ಲಿ ಡಿ. ಎಲ್. ಡಿ. ಬಿ. ಯೋಜನೆ ಇದೆ ಅಲ್ಲಿ ಸಹಜವಾಗಿ ಬರೀ ಅಧಿಕಾರಿಗಳ ಸಂಬಳ ಕೊಡತಕ್ಕದ್ದು ಆಗಿದೆ. ಅದಕ್ಕೋಸ್ಕರ ಮುಂದಿನ ವರ್ಷದಲ್ಲಿ ೧೯೯೨-೯೩ರಲ್ಲಿ ಬರೀ ಅಧಿಕಾರಿಗಳಿಗೆ ಸಂಬಳ ಕೊಟ್ಟುಕೊಂಡು ಡಿ. ಎಲ್. ಡಿ. ಬಿ. ಸ್ಕೀಮ್‌ಗಳೆಂದು ಹೇಳುವುದರ ಜೊತೆಗೆ ಹೆಚ್ಚು ಹಣ ಒದಗಿಸಬೇಕೆಂದು ನಾನು ಈಗ ಸರ್ಕಾರದಲ್ಲಿ ತೀವ್ರವಾಗಿ ಯೋಚನೆ ಮಾಡಿ ಮುಂದಿನ ವರ್ಷದಲ್ಲಿ ಸಾಕಷ್ಟು ಹಣ ಒದಗಿಸುವುದಕ್ಕೆ ಸರ್ಕಾರ ತೀವ್ರತೆಯಿಂದ ಇದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಬಿ. ಶಿವರಾಮು:- ಇದು ಪ್ರಥಮವಾಗಿ ಕೇಳತಕ್ಕಂಥ ಪ್ರಶ್ನೆ ಅಲ್ಲ. ಇವತ್ತು ಮುಖ್ಯಮಂತ್ರಿಯಾಗಿರಬಹುದು, ಹಿಂದೆ ಕೃಷಿ ಸಚಿವರಾಗಿದ್ದಾಗ ನಾನು ಈ ಪ್ರಶ್ನೆಯನ್ನು ಒಂದು ಸಾರಿ ಕೇಳಿದ್ದೆ. ಆಗ ಅವರು ಸದನದಲ್ಲಿ ಇದಕ್ಕೆ ಬಹಳಷ್ಟು ಹಣವನ್ನು ಒದಗಿಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಕನಿಷ್ಠ ಈ ಯೋಜನೆಗೆ ಬೇಕಾಗಿರತಕ್ಕಂಥ ಹಣವನ್ನಾದರೂ ಒದಗಿಸುತ್ತೇನೆ. ಏಕೆಂದರೆ, ಇದು ಬಹಳ ಮುಖ್ಯವಾದಂಥ ಯೋಜನೆಯಾಗಿದ್ದು ಸತತವಾಗಿ ಬರಗಾಲ ಬರತಕ್ಕಂಥ ಏನು ಕ್ಷೇತ್ರಗಳಿವೆ, ಅಲ್ಲಿ ನಾವು ಉದ್ದೇಶಿತವಾಗಿ ತೆಗೆದುಕೊಂಡಿರುವ ೨೦ ಜಿಲ್ಲೆಗಳಲ್ಲಿ ಬಹಳ ಮುಖ್ಯವಾದ ಈ ಒಂದು ಯೋಜನೆಗೆ ಹಣವನ್ನು ಒದಗಿಸಿಯೇ ಒದಗಿಸುತ್ತೇವೆಂದು ಇಂದಿನ ಮುಖ್ಯಮಂತ್ರಿಗಳು ಅಂದಿನ ಕೃಷಿ ಸಚಿವರಾಗಿ ಆಶ್ವಾಸನೆ ಕೊಟ್ಟಿದ್ದರು. ೧೯೮೯-೯೦ರವರೆಗೆ ಒದಗಿಸಿರತಕ್ಕಂಥ ಹಣವನ್ನು ಬರೀ ಅಧಿಕಾರಿಗಳಿಗೆ ಸಂಬಳ ಮತ್ತು ತಿರುಗಾಡಲಿಕ್ಕೆ ಖರ್ಚು ಮಾಡಿದ್ದೀರೆಂದರೆ, ಈ ಯೋಜನೆಗೆ ೧೨೭ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಿ,

ಯಾವಾಗ ಈ ಯೋಜನೆಯನ್ನು ಪೂರ್ಣಗೊಳಿಸುತ್ತೀರಿ?

(ಶ್ರೀಮತಿ ದಮಯಂತಿ ಬೋರೇಗೌಡರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಅಥವಾ ಈ ಕಾರ್ಯಕ್ರಮವನ್ನು ಏನಾದರೂ ಕೈಬಿಡತಕ್ಕಂಥ ಕೆಲಸ ಮಾಡುತ್ತೀರಾ? ಎನ್ನತಕ್ಕಂಥ ಮಾತನ್ನು ಹೇಳಬೇಕು. ಏಕೆಂದರೆ, ನನಗಂತೂ ಪೂರ್ಣ ಅನುಮಾನ ಬಂದು ಹೋಗಿದೆ. ಈ ಯೋಜನೆ ಹೇಗಾಗಿದೆಯೆಂದರೆ, ಡ್ಯಾಮ್ ಅನ್ನು ಕಟ್ಟಿ, ೫-೬-೭ ಕಿಲೋಮೀಟರ್ ಚಾನೆಲ್‌ಗಳನ್ನು ತೆಗೆದು, ೮-೯ ಕಿಲೋಮೀಟರ್‌ನಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ಹಣ ಒದಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಮುಂದೆ ಹೇಳುತ್ತಾರೆ. ಆದರೆ, ಮಧ್ಯದಲ್ಲಿರತಕ್ಕಂಥ ಯೋಜನೆಯನ್ನು ನಿಜವಾಗಿಯೂ ಅನುಷ್ಠಾನಗೊಳಿಸದೆಹೋದರೆ, ಉದ್ದೇಶ ಏನು ಇದೆ, ಅದು ಸಫಲವಾಗುತ್ತದೆಯೇ? ಅಥವಾ ಮಂತ್ರಿಗಳು ಇದರ ಬಗ್ಗೆ ಏನು ಮಾಡುತ್ತಾರೆ? ಈ ಬಗ್ಗೆ ಏನಾದರೂ ಆಶ್ವಾಸನೆ ಕೊಟ್ಟರೆ ಅದೇ ರೀತಿ ನಡೆದುಕೊಳ್ಳುತ್ತೀರಾ? ಎಂಬುದನ್ನು ಕೇಳಬಯಸುತ್ತೇನೆ. ಏಕೆಂದರೆ, ನನಗೆ ಎರಡನೆ ಸಲ ಇದರ ಬಗ್ಗೆ ಸದನದಲ್ಲಿ ಉತ್ತರ ಸಿಗುತ್ತಿರುವುದು.

ಶ್ರೀ ಎಸ್. ಚಿಕ್ಕೇಗೌಡ:- ನಾನು ಈಗಾಗಲೇ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ. ಹಿಂದಿನ ವರ್ಷಗಳಲ್ಲಿ, ಚಾಲ್ತಿ ವರ್ಷದಲ್ಲಿ ಈ ಯೋಜನೆಗೆ ಸಾಕಷ್ಟು ಹಣವನ್ನು ಒದಗಿಸಿದ್ದೇವೆ. ೧೯೯೧-೯೨ನೇ ಸಾಲಿನಲ್ಲಿ ಬರೀ ಡಿ. ಎಲ್. ಡಿ. ಬಿ. ಅಧಿಕಾರಿಗಳಿಗೆ ಸಂಬಳ ಕೊಡುವುದಕ್ಕೆ ಮಾತ್ರ ಸಾಧ್ಯವಾಯಿತು. ಮುಂದಿನ ವರ್ಷದಲ್ಲಿ ಈ ಯೋಜನೆಯ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಬೇಕಾದಂಥ ಹಣವನ್ನು ಒದಗಿಸುವುದಕ್ಕೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಒದಗಿಸುತ್ತೇವೆ ಎಂದು ಮತ್ತೊಮ್ಮೆ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಸ್ಪಷ್ಟವಾದ ಉತ್ತರವನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಬಿ. ಶಿವರಾಮು:- ಬಹುಶಃ ಈ ಒಂದು ಯೋಜನೆಗೆ ಬೇಕಾಗಿರತಕ್ಕಂಥ ಹಣ ೧೮೦ ಲಕ್ಷ ರೂಪಾಯಿಗಳು. ಇಪ್ಪತ್ತು ಜಿಲ್ಲೆಗಳಲ್ಲಿ ಇಪ್ಪತ್ತು ಯೋಜನೆಗಳು ಕುಂಠಿತವಾಗಿವೆ. ಈ ದಿಸೆಯಲ್ಲಿ ನಾವು ಯೋಜನೆ ಮಾಡಿದರೆ ಈ ಯೋಜನೆಗಳೆಲ್ಲಾ ೩೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಈ ಆಯವ್ಯಯದಲ್ಲಿ ಇಷ್ಟು ಹಣ ಇಡುವಂಥ ವ್ಯವಸ್ಥೆಯನ್ನು ಮಂತ್ರಿಗಳು ಮಾಡಿದ್ದಾರೆಯೇ? ಆ ವ್ಯವಸ್ಥೆಯನ್ನು ಮಾಡಿದ್ದರೆ ಮಾತ್ರ ಹಣವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೆ ಹೋದರೆ ಬಹುಶಃ ನೀವು ಹೇಳತಕ್ಕಂಥಾದ್ದು ನಮ್ಮನ್ನು ಮೆಚ್ಚಿಸಲಿಕ್ಕೆಂದು ಆಗುತ್ತದೆ. ಈ ರೀತಿಯಲ್ಲಿ ೨೦ ಜಿಲ್ಲೆಗಳಿಗೂ ತೊಂದರೆಯಾಗಿದೆ. ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರು ಇಲ್ಲಿ ಕುಳಿತಿದ್ದಾರೆ, ಅವರೂ ಸಹ ಇದರ ಬಗ್ಗೆ ಉಪ ಪ್ರಶ್ನೆ ಕೇಳುವುದಕ್ಕೆ ತಯಾರಾಗಿದ್ದಾರೆಂದು ಕಾಣುತ್ತದೆ. ಅದಕ್ಕೋಸ್ಕರ ಆಯವ್ಯಯದಲ್ಲಿ ಮಂತ್ರಿಗಳು ಹಣವನ್ನು ಒದಗಿಸತಕ್ಕಂಥ ಕೆಲಸ ಮಾಡಿದ್ದೀರಾ? ಆ ರೀತಿ ಮಾಡಿದ್ದರೆ ಮಾತ್ರ ಸಾಧ್ಯ. ಇಲ್ಲದಿದ್ದರೆ, ನೀವು ಕೊಟ್ಟಿರತಕ್ಕಂಥ ಉತ್ತರ ಖಂಡಿತವಾಗಿಯೂ ಸರಿಯಾಗಿ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ತಮಗೆ ಹೇಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಈಗ ಮಾನ್ಯ ಸದಸ್ಯರಾದ ಶ್ರೀ ಬಿ. ಶಿವರಾಮುರವರು ಹೇಳಿದ ಹಾಗೆ ಇವೊತ್ತು ಆಯವ್ಯಯದಲ್ಲಿ ಇಟ್ಟಿರತಕ್ಕಂಥ ಹಣ ನೋಡಿದರೆ, ನನಗೊಂದು ಅನುಮಾನ ಇದೆ. ಅದಕ್ಕೆ ತಾವು ಸ್ಪಷ್ಟೀಕರಣ ಕೊಡಬೇಕು. ಡಿ. ಎಲ್. ಡಿ. ಬಿ. ಯನ್ನು ವೈಂಡ್-ಅಪ್ ಮಾಡದೆ ಹೋದರೆ, ಇದಕ್ಕೆ ಕಾಯಕಲ್ಪವೇನಾದರೂ ಕೊಡುತ್ತೀರಾ ಎಂದು

ಕೇಳುತ್ತಿದ್ದೇನೆ. ಕಾಯಕಲ್ಪವನ್ನು ಯಾವ ರೀತಿ ಕೊಡುತ್ತೀರಿ? ಎನ್ನತಕ್ಕಂಥಾದ್ದನ್ನು ತಾವು ದಯವಿಟ್ಟು ತಿಳಿಸಬೇಕು. ಮತ್ತು ಡಿ. ಎಲ್. ಡಿ. ಬಿ.ಯಲ್ಲಿ ಪಿಕ್-ಅಪ್ ಮತ್ತು ನಾಲಾಬಂಡ್ ಎನ್ನತಕ್ಕಂಥಾದ್ದನ್ನು ಕಟ್ಟುತ್ತಿದ್ದಾರೆ ನಿಮ್ಮ ಹತ್ತಿರ ಒಬ್ಬ ಇಂಜಿನಿಯರ್ ಸಹ ಇಲ್ಲ. ನಿಮ್ಮ ಹತ್ತಿರ ಏನು 'ಕುರುಡು ಪದ್ಧತಿಯ' ವರ್ಕ್ ಸಿಸ್ಟಮ್ ನಡೆಯುತ್ತಿದೆ, ಅದನ್ನು ಬದಲಾವಣೆ ಮಾಡುವುದಕ್ಕೆ ಇಂಜಿನಿಯರಿಂಗ್ ಸಿಸ್ಟಮ್ ಅನ್ನು ಅಳವಡಿಸಿಕೊಳ್ಳುತ್ತೀರಾ? ಅಥವಾ ಈಗ ಇರತಕ್ಕಂಥ ನಾರ್ಮ್ಸ್‌ನಲ್ಲಿಯೇ ತಾವು ನಾಲಾಬಂದ್ ಮತ್ತು ಪಿಕ್-ಅಪ್ ಅನ್ನು ಕಟ್ಟುತ್ತೀರಾ ಎನ್ನತಕ್ಕಂಥಾದ್ದರ ಬಗ್ಗೆ ಹೇಳಬೇಕು.

ಶ್ರೀ ಎಸ್ ಚಿಕ್ಕೇಗೌಡ:- ನಾವು ೧೯೯೨-೯೩ನೇ ಸಾಲಿನಲ್ಲಿ ಡಿ. ಎಲ್. ಡಿ. ಬಿ.ಯಲ್ಲಿ ಒಣಬೇಸಾಯ ಅಭಿವೃದ್ಧಿಗೋಸ್ಕರ ೭ ಕೋಟಿ ರೂಪಾಯಿಗಳು ಒದಗಿಸಿದ್ದೇವೆ. ಹಿಂದಿನ ಸಾಲಿನಲ್ಲಿ ೩ ಕೋಟಿ ರೂಪಾಯಿಗಳು ಒದಗಿಸಿದಂತೆ ಕಾಣುತ್ತದೆ. ಈಗ ೪ ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡಿದ್ದೇವೆ. ಸಾಕಷ್ಟು ಹಣವನ್ನು ಒದಗಿಸುವುದಕ್ಕೆ ಅವಕಾಶವಿಲ್ಲದಿದ್ದರೂ, ತಮ್ಮ ಇಚ್ಛೆ ಏನಿದೆ, ಅದರ ಪ್ರಕಾರ ಸ್ವಲ್ಪ ಭಾಗವಾದರೂ ಒದಗಿಸುವುದಕ್ಕೆ ಸಾಧ್ಯವಾಗುತ್ತದೆಂದು ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಬಿ. ಶಿವರಾಮು:- ಹೋದ ಸಲ ಡಿ. ಎಲ್. ಡಿ. ಬಿ. ಅಧಿಕಾರಿಗಳಿಗೋಸ್ಕರ ೩ ಕೋಟಿ ರೂಪಾಯಿಗಳು ಖರ್ಚಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದರು. ಬಹುಶಃ ಈಗ ಟಿಎ, ಡಿಎ, ಜಾಸ್ತಿಯಾಗಿದೆಯೆಂದು ಕಾಣುತ್ತದೆ. ಅದಕ್ಕೋಸ್ಕರ ೪ ಕೋಟಿ ರೂಪಾಯಿಗಳವರೆಗೆ ಏರಿಸಿ. ತಮ್ಮ ಅಂಕಿ-ಅಂಶಗಳ ಪ್ರಕಾರ ಈ ಯೋಜನೆಯಲ್ಲಿ ಕೆಲಸ ಮಾಡುವುದಕ್ಕೋಸ್ಕರ ೧ ಕೋಟಿ ೮೦ ಲಕ್ಷ ರೂಪಾಯಿಗಳು ಬೇಕೆಂದರೆ, ೨೦ ಜಿಲ್ಲೆಗಳಲ್ಲಿ ೨೦ ಯೋಜನೆಗಳಿರುವುದರಿಂದ ಎಷ್ಟು ಹಣ ಬೇಕಾಗುತ್ತದೆ? ಒಟ್ಟು ೩೬ ಕೋಟಿ ರೂಪಾಯಿಗಳು ಬೇಕು. ಬರೀ ೭ ಕೋಟಿ ರೂಪಾಯಿಗಳನ್ನಿಟ್ಟುಕೊಂಡು ಖರ್ಚು ಮಾಡುತ್ತೇವೆಂದು ಈ ಸದನದಲ್ಲಿ ಹೇಳುವುದಾದರೆ ಈ ಯೋಜನೆಗಳು ಕಾರ್ಯಗತವಾಗುತ್ತವೆಯೇ? ಬಹುಶಃ ಮಾನ್ಯ ಸದಸ್ಯರಾದ ಶ್ರೀ ಶಿವರಾಮೇಗೌಡರು ಹೇಳಿದ ಹಾಗೆ ಡಿ. ಎಲ್. ಡಿ. ಬಿ. ಯೋಜನೆಗಳನ್ನು ಮುಚ್ಚತಕ್ಕಂಥ ಕೆಲಸ ಏನಾದರೂ ಮಾಡಬೇಕೇ ವಿನಃ, ನನಗೆ ಒಂದು ಅನುಮಾನ ಏನೆಂದರೆ, ಈ ಯೋಜನೆಗೆ ವಿಶ್ವ ಬ್ಯಾಂಕ್ ನೆರವನ್ನು ತೆಗೆದುಕೊಂಡು ಕೆಲವು ಯೋಜನೆಗಳಿಗಾದರೂ ಮುಂದೆ ಬರತಕ್ಕಂಥ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನ ಹೇಳಿದ್ದಾರೆ. ಆದರೆ ಹಿಂದೆ ಇರತಕ್ಕ ಕೆಲಸವನ್ನು ಏನು ಮಾಡುತ್ತಾರೆ? ಹಣವನ್ನೇ ಒದಗಿಸದಿದ್ದರೆ ಹೇಗೆ ಕೆಲಸ ಆಗುತ್ತದೆ. ಹೋದ ವರ್ಷ ೩ ಕೋಟಿ ಈ ಸಲ ೭ ಕೋಟಿ, ಮುಂದಿನ ಸಲ ಸೊನ್ನೆ ಕೋಟಿ, ಕೊನೆಗೆ ಹಣವೇ ಇಲ್ಲದಂತಾಗುತ್ತದೆ. ಆ ಡಿ. ಎಲ್. ಡಿ. ಬಿ ಯೋಜನೆಯನ್ನು ಮುಗಿಸಲು ಆಗುವುದಿಲ್ಲ. ಇದರ ಬಗ್ಗೆ ಹೆಚ್ಚು ಸೂಕ್ತ ಕ್ರಮ ತೆಗೆದುಕೊಳ್ಳಬೇಕು, ಮತ್ತು ಇದರ ಬಗ್ಗೆ ಆಶ್ವಾಸನೆಯನ್ನು ಕೊಡಲೇಬೇಕೆಂದು ನಾನು ಈ ಸದನದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಈಗ ಡಿ. ಎಲ್. ಡಿ. ಬಿ. ಯನ್ನು ವೈಂಡ್ ಅಪ್ ಮಾಡುತ್ತೀರ ಹೇಗೆ? ಎನ್ನುವುದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಎರಡನೆಯದಾಗಿ ಡಿ. ಎಲ್. ಡಿ. ಬಿ.ಯಲ್ಲಿ ಪಿಕಪ್ ಮತ್ತು ನಾಲಾ ಬಂಡ್ ಎಂದು ಮಾಡುತ್ತಾರೆ. ನಿಮ್ಮ ಹತ್ತಿರ

ಇಂಜಿನಿಯರುಗಳಿಲ್ಲ, Agriculture Officer ಆಗಿರತಕ್ಕವರು ಇಲ್ಲಿ ಒಂದು ಸಿಮೆಂಟ್ ಕಟ್ಟಡವನ್ನು ಕಟ್ಟಿಸತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಇವತ್ತು ಕಳಪೆ ಕೆಲಸಗಳು ಈ ಡಿ. ಎಲ್. ಡಿ. ಬಿ.ನಲ್ಲಿ ನಡೆಯುತ್ತಿವೆ. ಆದಕ್ಕಾಗಿ ನಿಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ ಈ ಒಂದು ಖಾತೆಯನ್ನು ಹೊಂದಿರತಕ್ಕ ಸಂದರ್ಭದಲ್ಲಿ ವಸ್ತುಶಃ ತಾವು ವ್ಯವಸಾಗಾರರ ಕುಟುಂಬದಿಂದ ಬಂದವರು, ತಮಗೆ ನಾಲಾಬಂದ್ ಮತ್ತು ಪಿಕಪ್ ಇವೆಲ್ಲವೂ ಸಹ ಗೊತ್ತಿದೆ. ಆದ್ದರಿಂದ ನಾಲಾಬಂದ್ ಮತ್ತು ಪಿಕಪ್‌ನ್ನು ಕಟ್ಟಲು ಇಂಜಿನಿಯರುಗಳನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆ ಇದೆಯೇ? ಇದನ್ನು ಬದಲಾವಣೆ ಮಾಡಲು ಏನಾದರು ತೀರ್ಮಾನವನ್ನು ಮಾಡಿದ್ದೀರ?

ಶ್ರೀ ಎನ್. ಚಿಕ್ಕೇಗೌಡ:- ಉಪಾಧ್ಯಕ್ಷಿಣಿಯವರೆ, ಶ್ರೀಮಾನ್ ಶಿವರಾಮೇಗೌಡರು ಕೇಳಿರುವುದಕ್ಕೆ ಹೇಳುತ್ತಿದ್ದೇನೆ. ನಾವು ಈಗ ಇರತಕ್ಕ ಹಣಕಾಸಿನ ಪರಿಸ್ಥಿತಿಯಲ್ಲಿ ೪ ಕೋಟಿಯನ್ನು ಹೆಚ್ಚಾಗಿ ಕೊಟ್ಟಿದ್ದೇವೆ. ಇನ್ನೂ ಹೆಚ್ಚು ಕೊಡಲು ಮತ್ತೆ ಡಿ. ಎಲ್. ಡಿ. ಬಿ.ಯಲ್ಲಿ ಸ್ಥಗಿತವಾಗಿರತಕ್ಕ ಕೆಲಸವನ್ನು ಮಾಡಲು ಪ್ರಯತ್ನ ಮಾಡೋಣ. ಮಾನ್ಯ ಮುಖ್ಯ ಮಂತ್ರಿಗಳು ಹಣಕಾಸಿನ ಮಂತ್ರಿಗಳಾಗಿರುವುದರಿಂದ ಅವರ ಮೇಲೆಯೂ ಒತ್ತಾಯವನ್ನು ತಂದು ಆದರ ಬಗ್ಗೆ ಪರಿಶೀಲನೆ ಮಾಡುತ್ತೇವೆ. ಮಾನ್ಯ ಮುಖ್ಯ ಮಂತ್ರಿಗಳು ಹಣವನ್ನು ಒದಗಿಸಲು ಮನಸ್ಸು ಮಾಡಿದರೆ ಇನ್ನೂ ಹೆಚ್ಚು ಹಣವನ್ನು ಒದಗಿಸುತ್ತೇವೆ. ಮತ್ತೆ ಡಿ. ಎಲ್. ಡಿ. ಬಿ.ಯನ್ನು ವೈಂಡ್‌ಅಪ್ ಮಾಡಲು ನಾವು ಇಚ್ಛೆಪಟ್ಟಿಲ್ಲ. ಹೆಚ್ಚಿಗೆ ತೆಂಗಿನ ತೋಟಗಳು ಎಲ್ಲಿವೆ ಅಲ್ಲಿ ಪಿಕ್‌ಅಪ್ ಮತ್ತು ನಾಲಾಬಂದ್‌ಗಳು ಆಗುವುದಕ್ಕೆ ಅನುಕೂಲವಾಗಿದೆ ಎಂದು ಕಂಡುಬಂದಿದೆ. ಇದಕ್ಕೆ ಇಂಜಿನಿಯರ್ ನಮ್ಮ ಇಲಾಖೆಯಲ್ಲಿಯೇ ಇರಬೇಕೆಂದಿಲ್ಲ. ಬೇರೆಯಾವುದೇ ಇಲಾಖೆಯವರನ್ನು ಅಂದರೆ ಜಿಲ್ಲಾಪರಿಷತ್‌ನಲ್ಲಿರತಕ್ಕ ಇಂಜಿನಿಯರ್‌ಗಳನ್ನು ನಾವು ಎರವಲಾಗಿ ಪಡೆಯಬಹುದು. ಅದು ದೊಡ್ಡ ಸಮಸ್ಯೆಯಾಗುವುದಿಲ್ಲ. ಈ ಪಿಕ್‌ಅಪ್ ಮತ್ತು ನಾಲಾಬಂದ್‌ಗಳನ್ನು ಹಾಕುವುದಕ್ಕೆ ಬೇಕಾದಂಥ ಒಂದು ಉತ್ತಮವಾದ ಸಲಹೆ ಇದೆ. ನಾನು ಹಿಂದೆ ವ್ಯವಸಾಯ ಮಂತ್ರಿಯಾಗಿದ್ದಾಗ ೧೯೭೩ರಿಂದ ೭೭ರವರೆಗೂ ಅನೇಕ ಕಡೆ ತೆಂಗಿನ ತೋಟಗಳು ಇರುವ ಕಡೆ ನಾವು ಪಿಕ್‌ಅಪ್‌ಗಳನ್ನು ಹಾಕಿದ್ದೆವು. ಅದರಿಂದ ನೀರು ನಿಲ್ಲುತ್ತಿತ್ತು ಮತ್ತು ಜೊತೆಗೆ soil moisture ಹೆಚ್ಚಾಗುತ್ತಿತ್ತು. ಆದುದರಿಂದ ತಾವು ಏನು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದೀರಿ ಆದರ ಬಗ್ಗೆ ಈಗಾಗಲೆ ನಾನು ಅಧಿಕಾರಿಗಳ ಜೊತೆ ಚರ್ಚೆ ಮಾಡಿದ್ದೇನೆ. ಆದಕೋಸ್ಕರ ಈ ನಾಲಾ ಬಂದ್‌ಗೆ ಬೇಕಾದಂಥ ಇಂಜಿನಿಯರನ್ನು ಅಥವಾ ಪಿಕ್‌ಅಪ್‌ಗೆ ಬೇಕಾದಂಥ ಇಂಜಿನಿಯರ್‌ಗಳ ಒಂದು ಸ್ಟ್ರಕ್ಚರ್ ನಮ್ಮಲ್ಲಿ ಏನು ಇದೆ ಅವರನ್ನು ಮತ್ತು ಪಿ. ಡಬ್ಲ್ಯೂ. ಡಿ.ಯವರನ್ನು ಉಪಯೋಗಿಸಿಕೊಂಡು ನಾವು ಕೆಲಸ ಮಾಡುತ್ತೇವೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ತಾವು ಮುಂದೆ ಮಾಡುತ್ತೇವೆಂದು ಹೇಳತಕ್ಕ ಮಾತನ್ನು ನಾವು ಒಪ್ಪಿಕೊಳ್ಳುತ್ತೇವೆ. ಇವತ್ತು ಜಿಲ್ಲಾಪರಿಷತ್ತು ಮತ್ತು ಪಿ. ಡಬ್ಲ್ಯೂ. ಡಿ. ಹೊಂದಿರತಕ್ಕ ಇಂಜಿನಿಯರ್‌ಗಳನ್ನು ಉಪಯೋಗ ಮಾಡಿಕೊಂಡು ಕೆಲಸ ಮಾಡಬಹುದು. ಆದರೆ ಎಲ್ಲಿ ಡಿ. ಎಲ್. ಡಿ. ಬಿ. ಇದೆಯೋ ಅಲ್ಲಿಯೇ ಈ ಒಂದು ಇಂಜಿನಿಯರ್‌ಗಳ ಸ್ಟ್ರಕ್ಚರ್ ಇರಬೇಕು. ಡಿ. ಎಲ್. ಡಿ. ಬಿ.ನಲ್ಲಿ ಒಂದು ಇಂಜಿನಿಯರ್‌ಗಳ ಕೇಂದ್ರವಾಗಬೇಕು. ಅದು ಆದಾಗಲೆ ನಿಮಗೆ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಗುತ್ತದೆ. ದಯಮಾಡಿ ಇದರ ಬಗ್ಗೆ ಪರಿಶೀಲನೆ ಮಾಡಬೇಕು.

ಶ್ರೀ ಎನ್. ಚಿಕ್ಕೇಗೌಡ:- ಅದನ್ನು ಪರಿಶೀಲಿಸೋಣ.

ಶ್ರೀ ಬಿ. ಶಿವರಾಮು:- ಉಪಾಧ್ಯಕ್ಷಣಿಯರೆ, ಈಗ ವಿಶ್ವ ಬ್ಯಾಂಕ್‌ನ ನೆರವನ್ನು ತೆಗೆದುಕೊಂಡಿದ್ದೇವೆ ಎನ್ನತಕ್ಕ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಬಹುಶಃ ಎಷ್ಟು ಕಡೆಗಳಿಂದ ಹಣವನ್ನು ತೆಗೆದುಕೊಂಡು ಬಂದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಶ್ನೆ ಏನೆಂದರೆ, ಹಿಂದೆ ಉಳಿದಿರತಕ್ಕ ಕೆಲಸವೇನು ಇದೆ, ಆ ಬಾಕಿ ಕೆಲಸವನ್ನು ಮುಗಿಸಿಕೊಂಡು ನಂತರ ಮುಂದಿನ ಕೆಲಸಕ್ಕೆ ಏಕೆ ಹೋಗಬಾರದು? ಹಂತ ಹಂತವಾಗಿ ೯ ವರ್ಷಕ್ಕೆ ಒಂದು ಮೈಕ್ರೋ ವಾಟರ್‌ಶೆಡ್ ಎಂದು ಮಾಡಿಕೊಂಡಿದ್ದಾರೆ. ಮೊದಲ ೪ ವರ್ಷದಲ್ಲಿ ೪ ಮೈಕ್ರೋ ವಾಟರ್‌ಶೆಡ್ ಅನ್ನು ಕಂಪ್ಲೀಟ್ ಮಾಡಿ ಮಧ್ಯದಲ್ಲಿ ೩ನ್ನು ಬಿಟ್ಟು ಕೊನೆಯಲ್ಲಿ ಎರಡನ್ನು ಮಾಡುವುದಕ್ಕಿಂತ ಮುಂಚೆ ೪ನ್ನು ಮಾಡಿಯಾದಮೇಲೆ ನಂತರ ೫ - ೬ - ೭ಕ್ಕೆ ಕೆಲಸವನ್ನು ಮಾಡದೆ ಫೀಡ್ ಬ್ಯಾಕ್ ವರ್ಕ್ ಆಗಿ ಇಷ್ಟು ಕೆಲಸ ಆಗಬೇಕೆಂದು ಮಾಡಿದ್ದರೂ, ವಿಶ್ವಬ್ಯಾಂಕಿನಿಂದ ಹಣವನ್ನು ತೆಗೆದುಕೊಂಡು ಅದನ್ನು ಕಂಪ್ಲೀಟ್ ಮಾಡಿದ ನಂತರ ಮುಂದೆ ಹೋದರೆ ಹೇಗಿರುತ್ತದೆ? ಏಕೆ ಇದರ ಬಗ್ಗೆ ಗಮನ ಹರಿಸಿಲ್ಲ ಅಥವಾ ಇದಕ್ಕೆ ಇರತಕ್ಕ ತೊಂದರೆ ಏನು? ತಾಂತ್ರಿಕವಾದ ತೊಂದರೆ ಏನಾದರೂ ಇದೆಯೇ ಇದರ ಬಗ್ಗೆ ಮಂತ್ರಿಗಳು ದಯಮಾಡಿ ತಿಳಿಸಬೇಕು.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಟೆಕ್ನಿಕಲ್ ಪ್ರಾಬ್ಲಮ್ ಏನೂ ಇಲ್ಲ, ವಿಟಮಿನ್ ಪ್ರಾಬ್ಲಮ್ ಒಂದೇ ಇರುವುದು.

ಶ್ರೀ ಬಿ. ಶಿವರಾಮು:- ವಿಶ್ವ ಯೋಜನೆಗೆ ಹಣ ಕೊಟ್ಟಿದೆಯೆಂದು ಹೇಳಿದ್ದೀರಿ, ಅದನ್ನು ಮಾಡಬಹುದಲ್ಲ.

(ಉತ್ತರ ಇಲ್ಲ)

ರಾಜ್ಯದ ಮೀನುಗಾರರ ಕುಟುಂಬಗಳಿಗೆ ಕೇಂದ್ರ ಸರ್ಕಾರದ ಸಹಾಯ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೩೫೦ (೧೬೪೪) ಶ್ರೀ ಎಂ. ರುಕ್ಮಯ್ಯ ಪೂಜಾರಿ (ವಿಟ್ಲ)ಪರವಾಗಿ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ಮೀನುಗಾರರ ಕುಟುಂಬಗಳಿಗೆ ಕೇಂದ್ರ ಸರ್ಕಾರದ ಸಹಾಯದಿಂದ ಮೀನುಗಾರಿಕೆ ವಸತಿ ಯೋಜನೆಯನ್ವಯ ಎಷ್ಟು ಮನೆಗಳನ್ನು ಕಟ್ಟಲ್ಪಟ್ಟಿದೆ?

ಆ) ತಮಿಳುನಾಡು ಹಾಗೂ ಕೇರಳ ರಾಜ್ಯಗಳಿಗೆ ಈ ಉದ್ದೇಶಕ್ಕಾಗಿ ಕೇಂದ್ರದಿಂದ ಸಾಕಷ್ಟು ಸಹಾಯಧನ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ೧೯೯೬-೯೭ರಲ್ಲಿ ರಾಜ್ಯಕ್ಕೆ ಕೇಂದ್ರದಿಂದ ಅನುದಾನ ಬಂದಿದೆಯೇ?

ಈ) ಬಂದಿದ್ದರೆ ಅದನ್ನು ಎಲ್ಲಿ ಉಪಯೋಗಿಸಲಾಗಿದೆ.

ಶ್ರೀ ಎ. ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ರಾಜ್ಯ ಮಂತ್ರಿಗಳು).:-

ಅ) ಕೇಂದ್ರ ಪುರಸ್ಕೃತ ರಾಷ್ಟ್ರೀಯ ಮೀನುಗಾರರ ಕ್ಷೇಮಾಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ ಈವರೆಗೆ ಮೀನುಗಾರರ ಕುಟುಂಬದವರಿಗೆ ೩೦೦ ಮನೆಗಳನ್ನು ನಿರ್ಮಿಸಲಾಗಿದೆ

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಶ್ರೀ ಎ. ರುಕ್ಮಯ್ಯ ಪೂಜಾರಿಯವರ ಪರವಾಗಿ):- ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರದಲ್ಲಿ ೩೦೦ ಮನೆಗಳನ್ನು ನಿರ್ಮಿಸಲಾಗಿದೆಯೆಂದು ಹೇಳಿದ್ದೀರಿ. ಆದರೆ ಆ ೩೦೦ ಮನೆಗಳಲ್ಲಿ ಕರಾವಳಿಯಲ್ಲಿ ಕಟ್ಟಿದಂತಹ ನಿದರ್ಶನಗಳಿಲ್ಲ. ಏಕೆಂದರೆ ಜಿಲ್ಲಾಪರಿಷತ್ತಿನ ವತಿಯಿಂದ ದಕ್ಷಿಣ ಕನ್ನಡದ ಜಿಲ್ಲಾಪರಿಷತ್ತಿನಲ್ಲಿ ಕೆಲವುಕಡೆ ಅಪ್ಲಿಕೇಷನ್ಸ್ ಕಾಲ್‌ಫಾರ್ ಮಾಡಿದ್ದೀರಿ, ಆದರೆ ಮನೆ ಕಟ್ಟಿ ಕೊಟ್ಟಿಲ್ಲ. ಆದ್ದರಿಂದ ತಾವು ಎಲ್ಲಿ ಮನೆ ಕಟ್ಟಿದ್ದೀರಿ ಎನ್ನುವ ವಿಚಾರ ಹೇಳಬೇಕಾಗಿದೆ.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಈ ೩೦೦ ಮನೆಗಳಲ್ಲಿ ಹುಣಸೂರು ತಾಲ್ಲೂಕಿನ ಪಂಜೆ ಹಳ್ಳಿಯಲ್ಲಿ ೧೦೦ ಮನೆಗಳನ್ನು ಕಟ್ಟಿದ್ದೇವೆ, ಶ್ರೀರಂಗಪಟ್ಟಣದ ಆರೆಕೆರೆಯಲ್ಲಿ ೧೦೦ ಮನೆಗಳನ್ನು ಕಟ್ಟಿದ್ದೇವೆ, ಕೊಳ್ಳೇಗಾಲದಲ್ಲಿ ೧೦೦ ಮನೆಗಳನ್ನು ಕಟ್ಟಿದ್ದೇವೆ. ಶಹಾಪುರ ತಾಲ್ಲೂಕಿನ ಆಲಾಗ್‌ಸೂರ್‌ನಲ್ಲಿ ೧೦೦ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಶಿವಮೊಗ್ಗಾದ ಬಸವರಾಜಪುರದಲ್ಲಿ ಸಹ ೧೦೦ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಕೊಳ್ಳೇಗಾಲದ ಮುಳ್ಳೂರಿನಲ್ಲಿ ಪುನಃ ೧೦೦ ಮನೆಗಳನ್ನು ಕಟ್ಟುವುದಕ್ಕೆ ಸ್ಯಾಂಕ್ಷನ್ ಮಾಡಿದ್ದೇವೆ. ಅದಕ್ಕೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಅಪ್ರೂವಲ್ ಬಂದಿಲ್ಲ. ಹೀಗಾಗಿ ನಾವು ಒಟ್ಟು ೬೦೦ ಮನೆಗಳನ್ನು ಕಟ್ಟುವುದಕ್ಕೆ ತೀರ್ಮಾನ ತೆಗೆದುಕೊಂಡು ಆ ರೀತಿ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಈ ಕಡಲ ತೀರದಲ್ಲಿ ಏತಕ್ಕೋಸ್ಕರ ಮನೆಗಳನ್ನು ಕಟ್ಟಿಲ್ಲ, ಅರ್ಜಿಗಳನ್ನು ಕೊಟ್ಟರೂ ಸಹ ನೀವು ಕಟ್ಟಿಲ್ಲವೆಂದು ಕೇಳುತ್ತಿದ್ದಾರೆ. ಹಿಂದೆ ಇದೇ ಸದನದಲ್ಲಿ ಹೇಳಿದ್ದೇನೆ. ಈ ಮನೆಗಳನ್ನು ಕಟ್ಟುವುದಕ್ಕೆ ನಾರ್ಮ್ಸ್ ಇದೆ. ಆ ನಾರ್ಮ್ಸ್ ಏನೆಂದರೆ, ಅವರಿಗೆ ಸ್ವಂತವಾದ ಜಾಗವಿರಬೇಕು. ಆ ಒಂದು ಸ್ವಂತವಾದ ಜಾಗ ಇಲ್ಲದ ಕಾರಣ ಈ ಒಂದು ಕೆಲಸವನ್ನು ಮಾಡಲಿಲ್ಲ. ಆದರೆ ಮಾನ್ಯ ಸ್ನೇಹಿತರಿಗೆ ನಾನು ಅಶ್ಯೂರೆನ್ಸ್ ಮಾಡುತ್ತಿದ್ದೇನೆ. ಈ ವರ್ಷ ಇದೇ ಯೋಜನೆಯಲ್ಲಿ ಸುಮಾರು ಒಂದು ಸಾವಿರ ಮನೆಗಳನ್ನು ಕಟ್ಟುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ಈ ಮನೆಗಳನ್ನು ಕಟ್ಟುವಂತಹ ಸಂದರ್ಭದಲ್ಲಿ ನಿಮ್ಮ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಕನಿಷ್ಟ ಪಕ್ಷ ೩೦೦-೪೦೦ ಮನೆಗಳನ್ನಾದರೂ ಕೊಡಬೇಕೆಂದು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ತಮ್ಮ ಆಶ್ವಾಸನೆಗೆ ಧನ್ಯವಾದಗಳು. ಈಗ ತಾವೇನು ೩೦೦ ಮನೆಗಳನ್ನು ಕಟ್ಟಿದ್ದೀರಿ ಮತ್ತು ೩೦೦ ಮನೆಗಳನ್ನು ಕಟ್ಟುತ್ತಿದ್ದೀರಿ, ಅವುಗಳಲ್ಲಿ ಮೀನುಗಾರರ ವ್ಯಾಪ್ತಿಯಲ್ಲಿ ಬಂದಿರಬಹುದು. ಆದರೆ ಕರಾವಳಿ ಪ್ರದೇಶದ ಯಾವ ಕ್ಷೇತ್ರದಲ್ಲಿ ಅಥವಾ ಯಾವ ಗ್ರಾಮದಲ್ಲಿ ಕಟ್ಟಿದಂತಹ ವಿಚಾರ ನಮಗೆ ಗೊತ್ತಾಗಲಿಲ್ಲ. ಅದನ್ನು ತಾವು ಹೇಳಲಿಲ್ಲ. ಆದರೆ ಇನ್ನು ಬಾಕಿ ಇರತಕ್ಕಂತಹ ಮನೆಗಳನ್ನು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದವರಿಗೆ ಕೊಡುತ್ತೇವೆಂದು

ತಾವು ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಅದರಲ್ಲಿ ಅವರದೇ ಆದ ಸ್ವಂತ ಸ್ಥಳವಿಲ್ಲವೆಂಬ ವಿಚಾರ ಹೇಳಿದ್ದೀರಿ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರಾವಳಿಯ ಕೆಲವು ಮಂಡಳಿಗಳಿಗೆ ಅರ್ಜಿಗಳು ಬಂದಿವೆ. ಅವುಗಳಿಗೆ ಬೇಕಾದಂತಹ ದಾಖಲಾತಿಗಳನ್ನು ಈಗಾಗಲೇ ಸಂಬಂಧಪಟ್ಟ ಇಲಾಖೆಯ ವತಿಯಿಂದ ಜಿಲ್ಲಾಪರಿಷತ್ತಿನ ಮುಖಾಂತರ ಸರ್ಕಾರದ ಗಮನಕ್ಕೆ ಬಂದಿರಬಹುದು. ಆದರೆ ಸ್ಥಳವಿಲ್ಲ ಆದ್ದರಿಂದ ಕೊಟ್ಟಿಲ್ಲ ಎನ್ನುವಂಥಾದ್ದು ಸರಿಯಲ್ಲ. ತಾವು ಏನು ಕೊಡುತ್ತಿದ್ದೀರಿ, ಅದನ್ನು ಆದಷ್ಟು ಶೀಘ್ರವಾಗಿ ಕೊಡಿ. ಏಕೆಂದರೆ, ಒಂದು ಸಾರಿ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ ಬೇರೆ ಯೋಜನೆಗಳ ಅನ್ವಯ ಅರ್ಜಿಯನ್ನು ಹಾಕುವುದಕ್ಕೆ ಆಗುವುದಿಲ್ಲ. ಆದ್ದರಿಂದ ತಮ್ಮ ಮೀನುಗಾರಿಕಾ ಇಲಾಖೆಯ ವತಿಯಿಂದ ಕೊಡತಕ್ಕಂತಹ ಸೌಲಭ್ಯಗಳನ್ನು ಸ್ಪಷ್ಟವಾಗಿ ಹೇಳಬೇಕು, ಏಕೆಂದರೆ ಇದರ ಬಗ್ಗೆ ಗೊಂದಲವಿದೆ, ಅದು ಬರುತ್ತದೋ ಇಲ್ಲವೋ ಎನ್ನುವಂತಹ ಗೊಂದಲಗಳ ನಡುವೆ ಮೀನುಗಾರರು ಕಂಗಾಲಾಗುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಸ್ಪಷ್ಟವಾಗಿ ಇಂಥಿಂಥ ತಾಲ್ಲೂಕುಗಳಲ್ಲಿ, ಕರಾವಳಿ ಪ್ರದೇಶದಲ್ಲಿ ಇಂತಿಷ್ಟು ಮನೆಗಳನ್ನು ಕೊಡುತ್ತೇವೆ ಎನ್ನುವ ಸ್ಪಷ್ಟ ಚಿತ್ರವನ್ನು ಕೊಟ್ಟರೆ ಮೀನುಗಾರರಿಗೆ ಇರತಕ್ಕಂತಹ ಗೊಂದಲ ಕಡಿಮೆಯಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಮತ್ತು ತಮ್ಮ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ಈಗ ಹಲವಾರು ಸದಸ್ಯರುಗಳು ಹೇಳಿದ ಹಾಗೆ, ಫಿಷರೀಸ್ ಡಿಪಾರ್ಟ್‌ಮೆಂಟ್‌ನ ಅಸಿಸ್ಟೆಂಟ್ ಡೈರೆಕ್ಟರ್‌ಗಳಿಗೆ ನಾವು ಬರಹದ ಮೂಲಕ ಕಳುಹಿಸಿದ್ದೇವೆ. ಇದು ಏನೆಂದರೆ ಸಂಬಂಧಪಟ್ಟ ಶಾಸಕರು ಯಾರು ಯಾರು ಅರ್ಜಿಯನ್ನು ಕೊಟ್ಟಿದ್ದಾರೆ, ಇನ್ನು ಯಾರು ಕೊಡುತ್ತಾರೆ, ಅದನ್ನೆಲ್ಲಾ ವಿಚಾರ ಮಾಡಿ ಸ್ಟ್ಯಾಟಿಸ್ಟಿಕ್ಸ್ ತೆಗೆದು ಯಾರಿಗೆ ಮನೆ ಇಲ್ಲ, ಯಾರಿಗೆ ಜಾಗ ಇಲ್ಲ, ಯಾರು ಫಿಶರ್‌ಮೆನ್ ಕೋಆಪರೇಟೀವ್ ಸೊಸೈಟಿಯಲ್ಲಿ ಮೆಂಬರ್ಸ್ ಆಗಿದ್ದಾರೆ, ಆ ತರಹ ಸ್ಟ್ಯಾಟಿಸ್ಟಿಕ್ಸ್ ಕಳುಹಿಸಬೇಕು ಎಂದು ನಾವು ಒಂದು ಸುತ್ತೋಲೆ ಕಳುಹಿಸಿದ್ದೇವೆ. ಆ ಪ್ರಕಾರವಾಗಿ ಅಲ್ಲಿ ನಿಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಅಸಿಸ್ಟೆಂಟ್ ಡೈರೆಕ್ಟರ್ಸ್ ನಿಮ್ಮಲ್ಲಿ ಬಂದು ಕೇಳುತ್ತಾರೆ, ಆಗ ನೀವು ಅವರಿಗೆ ಸ್ಟ್ಯಾಟಿಸ್ಟಿಕ್ಸ್ ಕೊಟ್ಟು ಅದಕ್ಕೆ ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಸಹಕಾರ ಸಂಘದ ಸದಸ್ಯತ್ವವನ್ನು ಹೊಂದಿರಬೇಕೆಂದು ತಾವು ಹೇಳಿದಿರಿ. ಮಹಿಳೆಯರು ಆ ರೀತಿ ಸದಸ್ಯರಾಗುವುದಕ್ಕಾಗುವುದಿಲ್ಲ. ಯಾರು ಮೀನುಗಾರರು ಸಮುದ್ರದಲ್ಲಿ ದುಡಿಯುತ್ತಿದ್ದಾರೆ ಅವರು ಮಾತ್ರ ಸಹಕಾರ ಸಂಘದ ಸದಸ್ಯತ್ವ ಹೊಂದಿರುತ್ತಾರೆ ಒಂದು ವೇಳೆ ಭೂಮಿ ಅಂಥವರ ಮನೆಯ ಮಹಿಳೆಯರ ಹೆಸರನಲ್ಲಿದ್ದರೆ ಅಥವಾ ಅವರ ಹೆಂಗಸರ ಹೆಸರಿನಲ್ಲಿದ್ದರೆ ಅವರು ಈ ಸೌಲಭ್ಯದಿಂದ ವಂಚಿತವಾಗುವಂಥ ಸಾಧ್ಯತೆ ಇದೆ. ಆದುದರಿಂದ ಮೀನುಗಾರರ ಕುಟುಂಬದವರು ಸದಸ್ಯರಾಗಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಎಂ. ಬೆಳ್ಳಿಯಪ್ಪ:- ಈ ಯೋಜನೆ ಕೇಂದ್ರ ಸರ್ಕಾರದ ನೆರವಿನಿಂದ ಆಗತಕ್ಕದ್ದು. ಮನೆಗಳನ್ನು ಯಾವ ರೀತಿ ಕಟ್ಟಿಸಬೇಕು, ಯಾವರೀತಿ ಕಂಡೀಷನ್‌ಗಳನ್ನು ಪಾಲನೆ ಮಾಡಬೇಕೆಂದು ನಮಗೆ ಕೇಂದ್ರಸರ್ಕಾರದವು ತಿಳಿಸಿದ್ದಾರೆ. ಆ ರೀತಿಯಲ್ಲಿ ನಾವು ಅವರಿಗೆ

ಮನೆಗಳು ಇಲ್ಲದಿದ್ದರೆ ಅಥವಾ ಅವರಿಗೆ ಜಾಗ ಇಲ್ಲದಿದ್ದರೆ ಮಾತ್ರ ನಾವು ಕೊಡುತ್ತೇವೆ. ಆದರ ಬೇರೆ ಯಾರದ್ದೋ ಹೆಸರಿನಲ್ಲಿ ಜಾಗ ಇದ್ದರೆ ಅವರಿಗೆ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಇಲ್ಲಿ ಸಮಸ್ಯೆ ಏನೆಂದರೆ, ಒಂದು ಮೀನುಗಾರರ ಕುಟುಂಬದಲ್ಲಿ ಸಹಕಾರಸಂಘದ ಸದಸ್ಯತ್ವವನ್ನು ಹೊಂದಿರುವವರು ಸಮುದ್ರದಲ್ಲಿ ದುಡಿಯತಕ್ಕವರು. ಅವರ ಮನೆಯ ಹೆಂಗಸರ ಹೆಸರಿನಲ್ಲಿ ಭೂಮಿ ಇದ್ದರೆ ಅವರಿಗೆ ಕೊಡುವುದಕ್ಕಾಗುತ್ತದೆಯೇ? ಅಥವಾ ಇಲ್ಲವೇ?

ಶ್ರೀ ಎ. ಎಂ. ಬೆಳ್ಳಿಯಪ್ಪ:- ಹೆಂಗಸರು ಮೀನುಗಾರರಾಗಿದ್ದರೆ, ಅವರು ಸದಸ್ಯರಾಗಿದ್ದರೆ ನಾವು ಕೊಡುತ್ತೇವೆ.

ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂಗೆ ತುಂಗಭದ್ರ ನದಿಯಿಂದ ನೀರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೫೧ (೧೬೪೩)ಶ್ರೀ ಕೆ. ಹೆಚ್. ಕುರಡಗಿ ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಅಲ್ಲಿನ ನೀರಿನ ಸೌಕರ್ಯ ಕಡಿಮೆ ಇರುವುದರಿಂದ ತುಂಗಭದ್ರಾ ನದಿಯಿಂದ ನೀರು ಪೂರೈಸುವ ಯೋಜನೆ ಇದೆಯೇ;

ಆ) ಈಗ ಇರುವ ನೀರಿನಿಂದ ಭೂಮಿಯು ಸವಳಾಗಿ ಗಿಡಗಳ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲವಾದರೆ ಅಭಿವೃದ್ಧಿಗಾಗಿ ತುಂಗಭದ್ರಾ ಯೋಜನೆಯಿಂದ ನೀರು ಸರಬರಾಜು ಮಾಡಲಾಗುವುದೇ;

ಇ) ಗದಗ್ ತಾಲ್ಲೂಕಿನ ಬಿಂಗನ ಕೆರೆಯ ಹತ್ತಿರ ಸರ್ಕಾರಿ ಜಮೀನು ಇದ್ದು ಅಲ್ಲಿ ತೋಟಗಾರಿಕೆ ಫಾರಂ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಈ) ಗದಗ್ ತೋಟಗಾರಿಕೆ ಫಾರಂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಕೊಡುವ ವಿಚಾರ ಇದೆಯೇ? ಹಾಗಿದ್ದಲ್ಲಿ ಈ ಫಾರಂಅನ್ನು ಗದಗ್ ನೀರು ಸರಬರಾಜಾಗಿರುವಂತಹ ಸಿಂಗಟನ ಕೆರೆಯ ಹತ್ತಿರಕ್ಕೆ ವರ್ಗಾಯಿಸಲಾಗುವುದೆ?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಬಂದಿದೆ. ತುಂಗಭದ್ರಾ ನದಿಯಿಂದ ಈ ಕ್ಷೇತ್ರಕ್ಕೆ ನೀರು ಸರಬರಾಜು ಯೋಜನೆಯೊಂದನ್ನು ರೂಪಿಸಲಾಗಿದೆ.

ಆ) ಬಂದಿದೆ. ತುಂಗಭದ್ರಾ ನದಿಯಿಂದ ಈ ಕ್ಷೇತ್ರಕ್ಕೆ ನೀರು ಸರಬರಾಜು ಯೋಜನೆಯೊಂದನ್ನು ರೂಪಿಸಲಾಗಿದೆ.

ಇ) ಇಲ್ಲ.

ಈ) ಗದಗ್ ತೋಟಗಾರಿಕೆ ಫಾರಂನಲ್ಲಿ ಇರುವ ಸುಮಾರು ೨.೨೦ ಗುಂಟೆ ಜಮೀನನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವರ್ಗಾಯಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಹೆಚ್. ಕುರುಡಗಿ:- ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಎರಡನೇ ಪ್ರಶ್ನೆಗೆ ತುಂಗಭದ್ರಾ ನದಿಯಿಂದ ನೀರು ಸಪ್ಲೈ ಮಾಡತಕ್ಕ ಯೋಜನೆ ಇದೆ ಎಂದು ಹೇಳಿದ್ದೀರಿ. ಇದು ಎಷ್ಟು ವರ್ಷಗಳಲ್ಲಿ ಆಗಬಹುದು?

ಶ್ರೀ ಎಂ. ಎಸ್. ಆತ್ಮಾನಂದ:- ಈ ತೋಟಗಾರಿಕೆ ಕ್ಷೇತ್ರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರತಕ್ಕದ್ದು ಪ್ರಸ್ತುತ ಅಲ್ಲಿ ಏನು ನೀರು ಸರಬರಾಜಿನ ಸೌಲಭ್ಯ ಇದೆ ಅದು ಉತ್ತಮವಾಗಿಲ್ಲ ಎಂದು ಮಾನ್ಯ ಸದಸ್ಯರು ಅನೇಕಸಾರಿ ನನ್ನ ಗಮನಕ್ಕೆ ತಂದಿದ್ದಾರೆ. ಈ ತೋಟಗಾರಿಕೆ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡತಕ್ಕ ಕಾರ್ಯಕ್ರಮ ೧೯೯೨-೯೩ನೇ ಸಾಲಿನಲ್ಲಿ ಜಿಲ್ಲಾ ವಲಯದವರಿಗೆ ಆದೇಶ ನೀಡಿ ಇದನ್ನು ಕಾರ್ಯಗತ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಕುರುಡಗಿ:- ೩ನೇ ಪ್ರಶ್ನೆಯಲ್ಲಿ ಸಿಂಗಟನ ಕೆರೆಯಲ್ಲಿ ಸರ್ಕಾರಿ ಫಾರಂ ಮಾಡುತ್ತಿದ್ದಿರಾ ಎಂದು ನಾನು ಕೇಳಿರುವುದಕ್ಕೆ ಸದ್ಯಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಈಗ ಅಲ್ಲಿ ಸರ್ಕಾರಿ ಜಮೀನು ಇರುವುದರಿಂದ ಗದಗಿನ ಪರಿಯ ಕಡಿಮೆ ಇರುವುದರಿಂದ ಅಲ್ಲಿ ಹೊಸ ಫಾರಂ ಮಾಡಿದರೆ ತುಂಗಭದ್ರಾ ನೀರು ಅಲ್ಲಿಗೆ ಬರುವುದರಿಂದ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುತ್ತದೆ. ಗದಗ್ ಮತ್ತು ಮುಂಡರಗಿಯಲ್ಲಿ ರೈತರಿಗೆ ಬಹಳ ತೊಂದರೆ ಇದೆ. ಆದುದರಿಂದ ತಾವು ಇದನ್ನು ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ. ಎಸ್. ಆತ್ಮಾನಂದ:- ಈ ತೋಟಗಾರಿಕೆ ಕ್ಷೇತ್ರಗಳನ್ನು ಅವಶ್ಯಕತೆಗನುಗುಣವಾಗಿ ಮಾಡಬೇಕೆಂದು ಇಲಾಖೆಯಲ್ಲಿ ಇರತಕ್ಕದ್ದು. ಮಾನ್ಯ ಸದಸ್ಯರು ಹೇಳುವಂತೆ, ರೈತರಿಗೆ ಅವಶ್ಯಕತೆ ಇದ್ದರೆ ಸೂಕ್ತವಾದ ಜಮೀನನ್ನು ಒದಗಿಸಿಕೊಟ್ಟರೆ ಅಥವಾ ನಮಗೆ ಸೂಕ್ತವಾದ ಜಮೀನು ದೊರೆತರೆ ೯೨-೯೩ನೇ ಸಾಲಿನಲ್ಲಿ ಈ ಫಾರಂನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಎಚ್. ಕುರುಡಗಿ:- ಅಲ್ಲಿ ಸರ್ಕಾರಿ ಜಮೀನು ಸಾಕಷ್ಟಿದೆ. ಗೋಮಾಳದ ಜಾಗ ಇದೆ. ಸರ್ಕಾರದವರು ದುಡ್ಡು ಕೊಟ್ಟು ತೆಗೆದುಕೊಳ್ಳಬೇಕಾಗಿಲ್ಲ. ಆದುದರಿಂದ ಇದನ್ನು ತಾವು ಮಾಡಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ:- ಆಗಬಹುದು.

ಚಿಕ್ಕಮಗಳೂರು ನಗರಕ್ಕೆ ಹಾಲು ಮತ್ತು ಹಾಲು ಉತ್ಪನ್ನಗಳಿಗೆ ಬೇಡಿಕೆ

೩೫೨ (೧೮೩೦)ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಪಶುಸಂಗೋಪನ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕಮಗಳೂರು ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ನಗರಕ್ಕೆ ಬರುವ ಮತ್ತು ಮಾರಾಟವಾಗುತ್ತಿರುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಅಂಕಿ-ಅಂಶಗಳನ್ನು ಸರ್ಕಾರ ಸಂಗ್ರಹಿಸಿದೆಯೇ; ಇದ್ದಲ್ಲಿ ಚಿಕ್ಕಮಗಳೂರು ನಗರದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ

ಇರುವ ಬೇಡಿಕೆ ಪ್ರಮಾಣವೆಷ್ಟು;

ಆ) ಕೆ. ಎಂ. ಎಫ್. ವತಿಯಿಂದ ಹಾಸನ ಅಥವಾ ಶಿವಮೊಗ್ಗ ಡೈರಿ ವ್ಯಾಪ್ತಿಯಲ್ಲಿ ಚಿಕ್ಕಮಗಳೂರು ನಗರದಲ್ಲಿ ಹಾಲು ಶೇಖರಣಾ ಕೇಂದ್ರವನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಇ) ಈ ಬೇಡಿಕೆಯು ಕಳೆದ ಹಲವಾರು ವರ್ಷಗಳಿಂದ ಇರುವುದರಿಂದ ಸರ್ಕಾರ ಇದನ್ನು ಆದ್ಯತೆ ಮೇರೆಗೆ ಪ್ರಾರಂಭಿಸುವುದು ಸೂಕ್ತವಲ್ಲವೇ?

ಶ್ರೀ ಬಸವರಾಜ ಪಾಟೀಲ (ಪಶುಸಂಗೋಪನಾ ಮತ್ತು ಪಶು ವೈದ್ಯ ಸೇವೆ ಸಚಿವರು).

ಅ) ಇಲ್ಲ. ಬೇಡಿಕೆಯ ಅಂದಾಜು ದಿನಂಪ್ರತಿ ೨೧,೨೫೦ ಲೀಟರ್‌ಗಳು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್:- ಮಾನ್ಯ ಉಪಾಧ್ಯಕ್ಷಿಣಿಯವರೆ, ಚಿಕ್ಕಮಗಳೂರಿನ ಸುತ್ತಮುತ್ತ ಇರತಕ್ಕ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಹಾಲಿನ ಮಾರಾಟದ ಬಗ್ಗೆ ಬಹಳ ತೊಂದರೆಯಾಗಿದೆ. ಮಿಲ್ಕ್ ಮತ್ತು ಮಿಲ್ಕ್ ಪ್ರಾಡಕ್ಟ್‌ನ ಅಂಕಿಅಂಶಗಳನ್ನು ನೀವೇನಾದರೂ ಕಲೆಕ್ಟ್ ಮಾಡಿದ್ದೀರಾ ಎಂದು ನಾನು ಕೇಳಿರುವ ಪ್ರಶ್ನೆಗೆ 'ಇಲ್ಲ' ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಮತ್ತು ಹಾಲಿನ ಬೇಡಿಕೆ ಚಿಕ್ಕಮಗಳೂರು ಪಟ್ಟಣದಲ್ಲಿ ಎಷ್ಟಿದೆ ಎಂದರೆ ೨೧,೨೫೦ ಲೀಟರ್ ಎಂದು ಹೇಳಿದ್ದಾರೆ. ಇದರ ಜೊತೆಗೆ ಮಿಲ್ಕ್ ಕಲೆಕ್ಷನ್ ಸೆಂಟರನ್ನು ಚಿಕ್ಕಮಗಳೂರು ಪಟ್ಟಣದಲ್ಲಿ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಇನ್ನೊಂದು ಪ್ರಶ್ನೆಯಲ್ಲಿ ಹಾಸನ ಮತ್ತು ಶಿವಮೊಗ್ಗ ಡೈರಿ ವ್ಯಾಪ್ತಿಯಲ್ಲಿ ಕೆ. ಎಂ. ಎಫ್. ನ ಒಂದು ಶಾಖೆಯನ್ನು ಚಿಕ್ಕಮಗಳೂರು ಪಟ್ಟಣದಲ್ಲಿ ಮಾಡಲಿಕ್ಕೆ ಸಾಧ್ಯವೆ ಎಂದರೆ ಈ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರದಲ್ಲಿ ದಿನಕ್ಕೆ ೨೧,೨೫೦ ಲೀಟರ್ ಹಾಲು ಬೇಕಾಗಿದೆ ಎಂದು ಹೇಳಿದ್ದಾರೆ. ಗ್ರಾಮೀಣ ಪ್ರದೇಶಕ್ಕೆ ಇವತ್ತು ಸರ್ಕಾರ ಹಾಕಿಕೊಂಡಿರುವ ಅನೇಕ ಕಾರ್ಯಕ್ರಮಗಳಿಂದಾಗಿ ಅನೇಕ ಜನ ರೈತರು ಹಸುಗಳನ್ನು ಸಾಕಿರುವುದು ತಮಗೆಲ್ಲ ಗೊತ್ತಿರುವ ವಿಚಾರ. ಆದ್ದರಿಂದ ಇವತ್ತು ಕೆ. ಎಂ. ಎಫ್.ನ ಒಂದು ಬ್ರಾಂಚನ್ನು ಚಿಕ್ಕಮಗಳೂರು ಪಟ್ಟಣದಲ್ಲಿ ಮಾಡುವುದಕ್ಕೆ ಏನು ತೊಂದರೆ ಇದೆ ಎಂದು ಹೇಳಬೇಕು. ಅದರ ಜೊತೆಗೆ ಬಹುಶಃ ಹಾಸನ ಮತ್ತು ಶಿವಮೊಗ್ಗ ಕೆ. ಎಂ. ಎಫ್.ನ ಶಾಖೆ ದೂರವಾಗುತ್ತದೆ, ಅಲ್ಲಿ ನಾವು ಮಾಡಲಿಕ್ಕೆ ಬರುವುದಿಲ್ಲವೆಂದು ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಹಿಂದೆ ಎನ್. ಆರ್. ಪುರ ತಾಲ್ಲೂಕಿನ ಬಾಳೆಹಣ್ಣೂರು ಗ್ರಾಮದಲ್ಲಿ ಒಂದು ಮಿಲ್ಕ್ ಕಲೆಕ್ಷನ್ ಬ್ರ್ಯಾಂಚ್ ಮಾಡಿದ್ದರು. ಅದನ್ನು ಈಗ ಮುಚ್ಚಿದ್ದಾರೆ. ಅದನ್ನೇ ಚಿಕ್ಕಮಗಳೂರು ಪಟ್ಟಣಕ್ಕೆ ಏಕೆ ವರ್ಗಾಯಿಸಕೂಡದು ಎಂದು ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಸವರಾಜ ಪಾಟೀಲ್:- ಮಾನ್ಯ ಸದಸ್ಯರು ಚಿಕ್ಕಮಗಳೂರಿನಲ್ಲಿ ಹಾಲು ಎಷ್ಟು ಶೇಖರಣೆಯಾಗುತ್ತದೆ ಎಂದು ಕೇಳಿದ್ದಾರೆ. ಅಲ್ಲಿ ನಮ್ಮದು ಯಾವುದೂ ಸೆಂಟರ್ ಇಲ್ಲ. ಅದಕ್ಕಾಗಿ ನಾನು ಮಾಹಿತಿಯನ್ನು ಒದಗಿಸಿಲ್ಲ. ೨೧ ಸಾವಿರ ಲೀಟರ್ ಹಾಲು ಬೇಕಾಗುತ್ತದೆ ಎಂದು ಯಾವ

ಆಧಾರದ ಮೇಲೆ ಹೇಳಿದಯೆಂದರೆ ಜನಸಂಖ್ಯೆ ಆಧಾರದ ಮೇಲೆ ಹೇಳಿದೆ. ಪ್ರತಿಯೊಬ್ಬರಿಗೆ ಅಂದರೆ ಒಂದು ತಲೆಗೆ ೨೫೦ ಮಿಲಿ ಲೀಟರ್ ಹಾಲು ಬೇಕಾಗುತ್ತದೆ. ಆ ಪ್ರಕಾರ ೨೧ ಸಾವಿರ ಲೀಟರ್ ಹಾಲು ಇವತ್ತು ಒದಗಿಸಬೇಕಾಗುತ್ತದೆ. ಆ ಆಧಾರದ ಮೇಲೆ ತಮಗೆ ಮಾಹಿತಿ ಒದಗಿಸಲಾಗಿದೆ. ಈಗ ತಾವು ಕೇಳಿದಿರಿ. ಬೇರೆ ಕಡೆ ಎಲ್ಲೋ ಒಂದು ಹಾಲಿನ ಸೆಂಟರ್ ಇದೆ. ಅದನ್ನು ಈಗಾಗಲೇ ಮುಚ್ಚಲಾಗಿದೆ. ಅದನ್ನು ಚಿಕ್ಕಮಗಳೂರಿಗೆ ವರ್ಗಾಯಿಸಿದರೆ ಒಳ್ಳೆಯಾದಾಗುತ್ತದೆಂದು ತಾವು ಒಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಚಿಕ್ಕಮಗಳೂರಿನಲ್ಲಿ ಎಷ್ಟು ಹಾಲು ಕೂಡಿಸಲಿಕ್ಕೆ ಸಾಧ್ಯವಿದೆಯೋ ಮತ್ತು ಅಲ್ಲಿ ಯಾವ ರೀತಿಯಾಗಿ ಹಾಲು ಶೇಖರಣೆಯಾಗುತ್ತದೆ. ಸೊಸೈಟಿ ಅಥವಾ ಬೇರೆ ಕಡೆಯಿಂದ ಹಾಲನ್ನು ಕೂಡಿಸುವ ಪ್ರಮಾಣದ ಆಧಾರದ ಮೇಲೆ ಯಾವ ರೀತಿ ಮಾಡಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ನೋಡಿ ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಒದಗಿಸಿಕೊಡುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ವಾಡಿ ಪಟ್ಟಣದ ಮೇಲೆ ಬೀಳುವ ಸಿಮೆಂಟ್ ಧೂಳಿಗ ತಡೆ.

೩೫೩ (೧೯೮೨) ಶ್ರೀ ಬಾಬುರಾವ್ ಚವಾಣ್ (ಶಹಬಾದ್):- ಸನ್ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ವಾಡಿ ಪಟ್ಟಣದಲ್ಲಿರುವ ಎ. ಸಿ. ಸಿ. ಕಾರ್ಖಾನೆಯು ರಾತ್ರಿ ವೇಳೆಯಲ್ಲಿ ತನ್ನ ಧೂಳನ್ನು ವಾಡಿ ಪಟ್ಟಣದ ಮೇಲೆ ಬೀಳಿಸುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ;

೨) ಈ ವಿಷಯದ ಬಗ್ಗೆ ಅಧಿಕಾರಿಗಳು ಶಾಮೀಲಾಗಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

೩)

ಇದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು):-

೧) ಬಂದಿದೆ.

೨) ಬಂದಿಲ್ಲ.

೩) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೧೯೮೧ನ್ನು ರಾಜ್ಯದಲ್ಲಿ ೧೯೮೪ರಿಂದ ಅನುಷ್ಠಾನಗೊಳಿಸುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಿಮೆಂಟ್ ಕಾರ್ಖಾನೆಗಳಿಂದ ಹೊರ ಬರುವ ಧೂಳಿನ ಗುಣಮಾನಕಗಳ ಮಿತಿಯನ್ನು ಮೀರದಿರಲು ಸೂಕ್ತ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಲು ಕಾರ್ಖಾನೆಗೆ ಆದೇಶ ನೀಡಲಾಗಿದೆ. ಈ ಕಾರ್ಖಾನೆಯು, ಮಂಡಳಿಯು ನಿರ್ದೇಶಿಸಿದಂತೆ ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಪಟ್ಟ ಘಟಕಗಳನ್ನು ಅಳವಡಿಸದೆ ಇದ್ದ ಕಾರಣ ಮತ್ತು ಧೂಳಿನ ಪ್ರಮಾಣವು ಮಂಡಳಿಯು ನಿರ್ದೇಶಿಸಿದ ಗುಣಮಾನಕಗಳ ಮಿತಿಗಿಂತ ಹೆಚ್ಚಾಗಿರುತ್ತಿದ್ದ

ನ್ಯಾಯಾಲಯದಿಂದ ತೀರ್ಮಾನ ಇನ್ನೂ ಬರಬೇಕಾಗಿದೆ.

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಮೊದಲನೆ ಪ್ರಶ್ನೆಯಲ್ಲಿ ವಾಡಿ ಪಟ್ಟಣದಲ್ಲಿರುವ ಎ. ಸಿ. ಸಿ. ಕಾರ್ಖಾನೆಯು ರಾತ್ರಿ ವೇಳೆಯಲ್ಲಿ ತನ್ನ ಧೂಳನ್ನು ವಾಡಿ ಪಟ್ಟಣದ ಮೇಲೆ ಬೀಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದರೆ ಬಂದಿದೆ ಎಂದು ಹೇಳಿದ್ದಾರೆ. ಎರಡನೆ ಪ್ರಶ್ನೆಯಲ್ಲಿ ಈ ವಿಷಯದ ಬಗ್ಗೆ ಅಧಿಕಾರಿಗಳು ಶಾಮೀಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿರುವುದಕ್ಕೆ ಬಂದಿಲ್ಲವೆಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಕೊಟ್ಟಿದ್ದಾರೆ. ಮೂರನೆಯ ಪ್ರಶ್ನೆಯಲ್ಲಿ ಇದನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ಎಂದು ಕೇಳಿದ್ದಕ್ಕೆ ಒಂದು ಕತೆಯನ್ನೇ ಉದ್ದ ಮಾಡಿ ಅಧಿಕಾರಿಗಳು ಇದರಲ್ಲಿ ಬರೆದು ಬಿಟ್ಟಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಕೇಳತಕ್ಕಂಥ ಪ್ರಶ್ನೆ ಇಷ್ಟೇ. ವಾಡಿ ಪಟ್ಟಣದಲ್ಲಿರತಕ್ಕಂಥ ಎ. ಸಿ. ಸಿ. ಸಿಮೆಂಟ್ ಕಾರ್ಖಾನೆಗೆ ವಾಯು ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಪಟ್ಟ ಘಟಕಗಳನ್ನು ಅಳವಡಿಸಿದೆಯೇ ಎಂದರೆ, ಅಲ್ಲಿ ಘಟಕ ಇದೆ. ಆದರೆ ವಿದ್ಯುಚ್ಛಕ್ತಿ ಜಾಸ್ತಿ ಸುಡುತ್ತಿರುವುದರಿಂದ ರಾತ್ರಿ ಹೊತ್ತಿನಲ್ಲಿ ಸ್ವಿಚ್ ಆಫ್ ಮಾಡುತ್ತಾರೆ. ಅಲ್ಲಿ ಎಲ್ಲ ಧೂಳನ್ನು ಹೊರಗಡೆ ಬಿಡುತ್ತಾರೆ. ಅದು ಮನೆ ಮೇಲುಗಡೆ, ಗಿಡಗಳ ಮೇಲೆ ಮತ್ತು ಹೊರಗಡೆ ನಿಲ್ಲಿಸಿರುವ ಕಾರು, ಸ್ಕೂಟರ್ ಮುಟ್ಟಿದರೆ ಧೂಳು ಕೈಗೆ ಸಿಗುವಂಥ ಪರಿಸ್ಥಿತಿ ವಾಡಿ ಪಟ್ಟಣದಲ್ಲಿ ಇದೆ. ಈ ಪಟ್ಟಣದ ಅಧಿಕಾರಿಗಳು ಏನು ಮಾಡಿದ್ದಾರೆಂದರೆ ೬-೧೨-೧೯೮೮ರಲ್ಲಿ ಅದರ ಬಗ್ಗೆ ಮೊಕದ್ದಮ್ಮೆ ಹೂಡಿರುತ್ತಾರೆ. ೬-೧೨-೮೮ ಅಂದರೆ ೫ ವರ್ಷಗಳ ಕಾಲವಾಯಿತು ಮೊಕದ್ದಮ್ಮೆ ಹೂಡಿ. ಈ ಐದು ವರ್ಷಗಳಿಂದ ಇಲ್ಲಿವರೆಗೆ ತೀರ್ಮಾನವಾಗದೆ ಕೋರ್ಟಿನಲ್ಲಿದೆ ಎಂದು ಉತ್ತರದಲ್ಲಿದೆ. ಐದು ವರ್ಷಗಳಿಂದ ಧೂಳಿನಿಂದ ಅಲ್ಲಿರತಕ್ಕಂಥ ಜನ ಟಿ. ಬಿ., ಕ್ಯಾನ್ಸರ್ ಮತ್ತು ಆಸ್ತಮ ಮುಂತಾದ ಕಾಯಿಲೆಗಳಿಗೆ ಒಳಗಾಗಿ ರೋಗಗ್ರಸ್ತರಾಗುತ್ತಿದ್ದಾರೆ. ಆದರೆ ಇದು ಕೋರ್ಟಿನಲ್ಲಿರತಕ್ಕಂಥ ಮೊಕದ್ದಮೆ ಎಂದು ತಾವು ಉತ್ತರದಲ್ಲಿ ಕೊಟ್ಟರೆ ಅಲ್ಲಿಯ ಜನರಿಗೆ ನ್ಯಾಯ ಸಿಗುತ್ತದೆಯೇ? ನ್ಯಾಯ ಸಿಗುವುದಿಲ್ಲ. ಅಲ್ಲಿರತಕ್ಕಂಥ ಜನ ಊಟ ಮಾಡುವಾಗ ಸಿಮೆಂಟ್ ಡಸ್ಟ್‌ನ್ನು ತಿನ್ನಬೇಕಾಗುತ್ತದೆ, ಇಲ್ಲ ಊಟವನ್ನೇ ಬಿಟ್ಟು ಬಿಡಬೇಕಾಗುತ್ತದೆ. ಆದ್ದರಿಂದ ನಾನು ಸ್ಪಷ್ಟವಾಗಿ ಮಾನ್ಯ ಮಂತ್ರಿಗಳನ್ನು ಕೇಳುತ್ತಿರುವುದೇನೆಂದರೆ, ನಮ್ಮ ಸರ್ಕಾರದ ವತಿಯಿಂದ, ಕೆ. ಇ. ಬಿ.ಯಿಂದ ಅವರಿಗೆ ವಿದ್ಯುಚ್ಛಕ್ತಿಯನ್ನು ಪ್ರೊವೈಡ್ ಮಾಡುತ್ತೀರಿ, ನಮ್ಮ ನದಿಯಿಂದ ನೀರನ್ನು ಕೊಡುತ್ತೀರಿ, ನಮ್ಮ ಮೈನ್ಸ್ ಡಿಪಾರ್ಟ್‌ಮೆಂಟ್‌ನಿಂದ ಕಲ್ಲನ್ನು ಕೊಡುತ್ತೀರಿ. ಇವೆಲ್ಲವನ್ನೂ ತೆಗೆದುಕೊಂಡು ಅವರು ಸಿಮೆಂಟ್ ಮಾಡುತ್ತಿದ್ದಾರೆ. ಸರ್ಕಾರದಿಂದ ಎಲ್ಲ ಫೆಸಿಲಿಟೀಸ್ ಕೊಟ್ಟು ಅವರ ಮೇಲೆ ಕೇಸ್ ಹಾಕಿ ಕೋರ್ಟ್‌ನಲ್ಲಿದೆ ಎಂದು ಹೇಳುತ್ತಿದ್ದೀರಿ. ವಾಡಿಯಲ್ಲಿರತಕ್ಕಂಥ ಜನರಿಗೆ ಧೂಳನ್ನು ತಿನ್ನಿಸುತ್ತಿದ್ದೀರಿ. ಇದು ನಮಗೆ ನೋವಾಗುವುದಿಲ್ಲವೆ? ಆ ಜನತೆ ಬಗ್ಗೆ ಆಲಕ್ಷ್ಯ ಮಾಡಿದಂತಾಗುವುದಿಲ್ಲವೇ? ನೀವು ಕೋರ್ಟಿನಲ್ಲಿ ಕೇಸ್ ಹಾಕುವಂತೆ ಮಾಡಿದಿರಿ. ನಾನು ಇನ್ನೊಂದು ಫ್ಯಾಕ್ಟರಿ ವಿಷಯದಲ್ಲಿ ಕೇಳಿದೆ. ಕೇಸ್ ಹಾಕಿದರೂ ಅವರು ಸ್ಟೇ ಆರ್ಡರ್ ತರುತ್ತಾರೆ ಎಂದು ಹೇಳಿದಿರಿ. ಈ ರೀತಿಯಾದ ಚಕ್ಕಂದದ ಆಟ ಎಷ್ಟು ದಿವಸದವರೆಗೆ ನಡೆಯುತ್ತಿದೆ? ಇದರ ಬಗ್ಗೆ ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ - ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳೇ ಆಡಳಿತ ಮಂಡಳಿಗೆ ಪ್ರಚೋದನೆ ಮಾಡುತ್ತಾರೆ. ಅವರಿಗೆ ರೂಲ್ಸ್ ಹೇಳಿಕೊಡುತ್ತಾರೆ. ನಾವು ಈ ರೀತಿ ಬರೆಯುತ್ತೇವೆ, ನೀವು ಈ ರೀತಿ ಸ್ಟೇ ಆರ್ಡರ್ ತೆಗೆದುಕೊಂಡು ಬನ್ನಿ, ಈ ರೀತಿ ಮಾಡಿದರೆ

ಹೀಗಾಗುತ್ತದೆಂದು ನಿಮ್ಮ ಇಲಾಖೆಯ ಅಧಿಕಾರಿಗಳೇ ಶಾಮೀಲಾಗಿ ದಾರಿ ತೋರಿಸಿಕೊಡುತ್ತಿದ್ದಾರೆಂದು ಅವರ ಮೇಲೆ ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಒಟ್ಟಿನಲ್ಲಿ ನಮ್ಮ ವಾಡಿ ಪಟ್ಟಣಕ್ಕೆ, ಧೂಳು ಬೀಳದಂತೆ ಮಾಡಿಕೊಡಬೇಕು. ಇದರ ಬಗ್ಗೆ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ? ಆಡಳಿತ ಮಂಡಳಿಯವರು ನಿಮ್ಮ ಮಾತು ಕೇಳುತ್ತಿಲ್ಲವೆಂದರೆ ಕೆ. ಇ. ಬಿ.ಯವರಿಗೆ ಹೇಳಿ ವಿದ್ಯುತ್ ಡಿಸ್‌ಕನೆಕ್ಟ್ ಮಾಡಿ, ನೀರು ಕೊಡತಕ್ಕದ್ದನ್ನು ನಿಲ್ಲಿಸಿ, ಪ್ಯೂನ್ಸ್‌ನಿಂದ ತೆಗೆದುಕೊಳ್ಳತಕ್ಕ ಕಲ್ಲನ್ನು ಸ್ಟಾಪ್ ಮಾಡಿ. ಈ ಬಗ್ಗೆ ಮಾನ್ಯ ಸಚಿವರು ಖಚಿತವಾದ ಆಶ್ವಾಸನೆ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ:- ಈ ಪ್ರಶ್ನೆಯ ಬಗ್ಗೆ ನಾನು ಹಿಂದೆಯೇ ಉತ್ತರ ಕೊಟ್ಟಿದ್ದೇನೆ. ಅಲ್ಲಿ ಸ್ಥಳಕ್ಕೆ ಹೋಗಿ ಯಾವ ರೂಪದಲ್ಲಿ ಈ ಒಂದು ಮಾಲಿನ್ಯ ಉಂಟಾಗಿದೆ ಎಂದು ನೋಡಿದ್ದೇನೆ. ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕ ಆತಂಕ ನನಗೆ ಮನವರಿಕೆಯಾಗಿದೆ. ಅಲ್ಲಿನ ಜನರು ಪಡತಕ್ಕ ಕಷ್ಟವನ್ನು ನೋಡಿದ್ದೇನೆ. ಮಾನ್ಯ ಸದಸ್ಯರು ಹೇಳತಕ್ಕ ವಿಷಯಗಳೆಲ್ಲ ನನಗೆ ಒಪ್ಪಿಗೆ, ಆದರೆ ಒಂದು ವಿಷಯ ಹೊರತುಪಡಿಸಿ. ಅದೇನೆಂದರೆ ನಮ್ಮ ಇಲಾಖೆಯ ಅಧಿಕಾರಿಗಳು ಅದಕ್ಕೆ ಶಾಮೀಲಾಗಿದ್ದಾರೆಂದು ಹೇಳಿದ್ದಾರೆ. ಆ ರೀತಿ ಹೇಳಲಿಕ್ಕೆ ಕಾರಣ ಇರಬಹುದು. ಆದರೆ ಅದು ನನಗೆ ಗೊತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಸಿಮೆಂಟ್ ಫ್ಯಾಕ್ಟರಿಗಳು ಏನಿವೆ ಅದರಲ್ಲೂ ಗುಲ್ಬರ್ಗಾ ಪ್ರದೇಶದಲ್ಲಿ ಏನಿವೆ ಅವನ್ನು ಹಾಗೆಯೇ ನಡೆಸಿಕೊಂಡು ಬರುತ್ತಿದ್ದಾರೆ. ತಾವು ಹೇಳಿದ ಹಾಗೆ, ಅಲ್ಲಿರತಕ್ಕ ಖನಿಜಗಳನ್ನು ಉಪಯೋಗಿಸಿಕೊಂಡು ಹೊಗೆ ಮಾಲಿನ್ಯ ಮಾಡುತ್ತಿದ್ದಾರೆ; ಅದು ಹಾಗೆಯೇ ನಡೆದುಕೊಂಡು ಬಂದಿದೆ. ಅದನ್ನು ಸರಿಯಾಗಿ ನಿಯಂತ್ರಣ ಮಾಡಬೇಕಾಗಿತ್ತು; ಆದರೆ ಇದುವರೆಗೆ ನಿಯಂತ್ರಣ ಮಾಡಿಲ್ಲ. ನಾವು ಈಗ ನಿಯಂತ್ರಣ ಮಾಡುವುದಕ್ಕೆ ವಿಚಾರ ಮಾಡಿದ್ದೇವೆ, ಮಾಡುತ್ತೇವೆ. ಸಿಮೆಂಟ್ ಫ್ಯಾಕ್ಟರಿಯವರು ಏರ್ ಟ್ರೀಟ್‌ಮೆಂಟ್ ಪ್ಲಾಂಟ್ ಮಾಡುವುದು, ಚಿಮಣಿ ಎತ್ತರ ಮಾಡತಕ್ಕದ್ದು ಒಂದು ವಿಧಾನವಾದರೆ, ಪ್ರಿಸಿಪಿಟೇಟ್ ಎಂದು ಹೊಗೆ ಧೂಳು ರೂಪದಲ್ಲಿ ಉತ್ಪತ್ತಿಯಾದುದನ್ನು ನೀರಿನಲ್ಲಿ ಬೆರೆಸಿ ಬೇರೆ ರೀತಿಯಲ್ಲಿ ಉಪಯೋಗಿಸಬೇಕು, ಜನರಿಗೆ ಅದರಿಂದ ತೊಂದರೆಯಾಗಬಾರದು ಎಂದು ಈಗ ಸರ್ಕಾರದಿಂದ ಆದೇಶ ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಮತ್ತೆ ಕೇಸಿನ ವಿಚಾರದಲ್ಲಿ ೫ ವರ್ಷಗಳಿಂದ ಪೆಂಡಿಂಗ್ ಇದೆ ಎಂದು ಹೇಳಿದ್ದಾರೆ. ಕೋರ್ಟಿನ ವಿಚಾರ ಎಷ್ಟು ಹೇಳಿದರೂ ಅಷ್ಟೆ. ಅದು ಹಾಗೇ ಇದೆ. ಕೋರ್ಟಿನವರು ಪರಿಸರ ಮಾಲಿನ್ಯ ಮತ್ತು ಕಾರ್ಖಾನೆಗಳ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಬೇಕು. ಕೋರ್ಟಿನವರು ಸ್ಟೇ ಆರ್ಡರ್ ಕೊಟ್ಟಮೇಲೆ ಜಾಸ್ತಿ ವರ್ಷ ಕೇಸನ್ನು ಇತ್ಯರ್ಥ ಮಾಡದೆ ಇರಬಾರದು. ಸ್ಟೇ ಆರ್ಡರ್ ಕೊಟ್ಟರೆ ಒಂದೆರಡು ತಿಂಗಳಲ್ಲಿ ಕೇಸನ್ನು ಇತ್ಯರ್ಥ ಮಾಡತಕ್ಕ ಪದ್ಧತಿಯನ್ನು ಕೋರ್ಟ್‌ಗಳಿಗೆ ಹೇಳಬೇಕೆಂದು ಮಾಡುತ್ತಿದ್ದೇವೆ. ಇವತ್ತಿನ ದಿವಸ ಏರ್ ಪಲ್ಯೂಷನ್ ಆ್ಯಕ್ಟ್ ಇದೆ, ಪರಿಸರ ಮಾಲಿನ್ಯ ಕಾಯಿದೆ ಇದೆ. ಆದರ ಪ್ರಕಾರ ಕ್ರಮ ತೆಗೆದು ಕೊಳ್ಳಬಹುದು, ತಪ್ಪಿತಸ್ಥರನ್ನು ೫ ವರ್ಷ ಸಜಾ ಮಾಡಬಹುದು, ಜೈಲಿಗೆ ಕಳುಹಿಸಬಹುದು. ಕಠಿಣವಾದ ಕಾನೂನು ಇದೆ. ಅದನ್ನು ಅವರ ವಿರುದ್ಧವಾಗಿ ಉಪಯೋಗಿಸಿಲ್ಲ. ಮುಂದೆ ಉಪಯೋಗಿಸುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಮಂತ್ರಿಗಳು ಬಂದನಂತರ ೨-೩ ಕಾರ್ಖಾನೆಗಳ ಆಡಳಿತ ಮಂಡಲಿಯವರನ್ನು ಜೈಲಿಗೆ ಕಳುಹಿಸುತ್ತಾರೆಂಬ ಆಸೆ ಇದೆ. ನಿಮ್ಮ ಕಠೋರವಾದ ಡೈರೆಕ್ಷನ್ ಅನ್ನು ಆದೇಶವನ್ನು ಈಗ ನಿಮ್ಮ ಅಧಿಕಾರಿಗಳು ಪಾಲಿಸುತ್ತಿರಬಹುದೆಂಬ ಆಶಾಭಾವನೆ

ಇದೆ. ಆದರೆ ನಾನು ಹೇಳುತ್ತಿದ್ದೇನೆ ವಾಡಿ ಪಟ್ಟಣದ ಮೇಲೆ ಧೂಳು ಬೀಳಲಾರದ ಹಾಗೆ ಕಠಿಣವಾದ ಆದೇಶವನ್ನು ತಾವು ಕೊಡುತ್ತೀರಾ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಸದಸ್ಯರು ವ್ಯಕ್ತಪಡಿಸತಕ್ಕ ಆತಂಕ ನನಗೆ ಮನವರಿಕೆಯಾಗಿದೆ. ಆದರೆ ಧೂಳು ನಿಯಂತ್ರಣ ಮಾಡತಕ್ಕದ್ದರ ಬಗ್ಗೆ ಟ್ರೀಟ್‌ಮೆಂಟ್ ಪ್ಲಾಂಟ್ ಇಡುತ್ತಾರೆ. ಅದನ್ನು ಅವರು ಅಲ್ಲಿ ಇನ್ನೂ ಅಳವಡಿಸಿಲ್ಲ. ಅಲ್ಲಿ ಮತ್ತು ಬೇರೆಕಡೆ ಅಳವಡಿಸಬೇಕು ಎಂದು ಆದೇಶ ಕೊಡುತ್ತಿದ್ದೇವೆ. ಪ್ರಿಸಿಪಿಟೇಟರ್ಸ್ ಎಂದು ಧೂಳನ್ನು ನೀರು ಮಾಡಿ ನೆಲಕ್ಕೆ ಕೆಡವತಕ್ಕ ಯಂತ್ರ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಸ್ವಲ್ಪ ಟೈಂ ಕೊಡಿ. ನಾನು ಸ್ಥಳಕ್ಕೆ ಹೋಗಿ ನೋಡುತ್ತೇನೆ.

ಶ್ರೀ ಬಾಬುರಾವ್ ಚವಾಣ್:- ಎಷ್ಟು ದಿವಸದಲ್ಲಿ ಮಾಡಿಕೊಡುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ:- ಒಂದು ತಿಂಗಳಾಗಬಹುದು.

ಶ್ರೀ ಬಾಬುರಾವ್ ಚವಾಣ್:- ನಿಮ್ಮ ಆದೇಶವನ್ನು ಪಾಲನೆ ಮಾಡದೇ ಇದ್ದರೆ ಅವರಿಗೆ ನೀರು, ಲೈಟು ಮತ್ತು ಮೈನ್ಸ್‌ನಿಂದ ಕೊಡತಕ್ಕ ಕಲ್ಲು ಸ್ಟಾಪ್ ಮಾಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ:- ಒಂದು ತಿಂಗಳು ತಡೆಯಿರಿ.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಪಶು ಚಿಕಿತ್ಸಾಲಯಗಳ ಮೇಲ್ದರ್ಜೀಕರಣ

೩೫೪(೧೯೯೯)ಶ್ರೀ ವಸಂತ ವಿ. ಸಾಲ್ಯಾನ (ಕಾಪು) ಪರವಾಗಿ ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಎಷ್ಟು ಗ್ರಾಮೀಣ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಮತ್ತು ಇವುಗಳಿಗೆ ಸರ್ಕಾರದ ಮಂಜೂರಾತಿ ದೊರೆತಿದೆಯೇ?

ಆ) ಅವುಗಳಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಲಾಗಿದೆಯೇ?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನಾ ಪಶುವೈದ್ಯ ಸೇವಾ ಸಚಿವರು):-

ಅ) ೧೯೮೮-೮೯ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ ವತಿಯಿಂದ ೮ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಯಿತು. ಆದರೆ ಇದಕ್ಕೆ ಸರ್ಕಾರದ ಮಂಜೂರಾತಿ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ (ಶ್ರೀ ವಸಂತ ಸಾಲಿಯಾನ ಅವರ ಪರವಾಗಿ):- ಮೊದಲನೆ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಜಿಲ್ಲಾ ಪರಿಷತ್ತಿನವರು ಮಂಜೂರು ಮಾಡಿದಂಥ ಪಶು ಚಿಕಿತ್ಸಾಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಯಿತು, ಆದರೆ ಇದಕ್ಕೆ ಸರ್ಕಾರದ ಮಂಜೂರಾತಿ ನೀಡಿರುವುದಿಲ್ಲ ಎಂದುಹೇಳಿದ್ದಾರೆ. ಜಿಲ್ಲಾ ಪರಿಷತ್ತಿನವರು ಆ ಕೇಂದ್ರಗಳನ್ನು ಪರಿಶೀಲಿಸಿ ಅವುಗಳನ್ನು ಮೇಲ್ದರ್ಜೆಗೇರಿಸಿದ್ದಾರೆ ಜನತೆಗೆ ನಾವೆಲ್ಲಾ ಆಶ್ವಾಸನೆ ಕೊಟ್ಟಿದ್ದೇವೆ.

ಕೆಲವು ಕಡೆಗಳಲ್ಲಿ ಜಿಲ್ಲಾ ಪರಿಷತ್ತಿನವರೇ ಅವುಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಆದರೆ ಈಗ ಬೇಕಾದಂಥ ಅನುಕೂಲತೆಗಳು ಸಿಕ್ಕದೆ ಆ ಜನ ನಮ್ಮನ್ನು ದೂರುವಂಥ ಪರಿಸ್ಥಿತಿ ಬಂದಿದೆ. ಮುಂದಿನ ವರ್ಷವಾದರೂ ಯೋಜಿತ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಸೂಕ್ತ ಆಜ್ಞೆ ತಾವು ಕೊಡುತ್ತೀರೆಂದು ನಾನು ಆಶಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಜಿಲ್ಲಾ ಪರಿಷತ್ತಿನಿಂದ ಮಾಡಿದಂಥ ಅಥವಾ ಮೇಲ್ದರ್ಜೆಗೇರಿಸಿದಂಥ ಆಸ್ಪತ್ರೆಗಳನ್ನು ಸರ್ಕಾರದಿಂದ ಮಂಜೂರು ಮಾಡಿ ಅದಕ್ಕೆ ಸೌಲಭ್ಯಗಳು ಒದಗಿಸುತ್ತೀರಾ ಎಂದು ಕೇಳಿದ್ದಾರೆ. ಈಗಾಗಲೇ ಜಿಲ್ಲಾ ಪರಿಷತ್ತಿನವರು ಮಾಡಿರುವ ಆಸ್ಪತ್ರೆಗಳಿಗೆ ಸೌಲಭ್ಯಗಳನ್ನು ಒದಗಿಸಬೇಕು ಎಂದು ಬಹಳ ಕಳಕಳಿಯಿಂದ ಕೇಳಿಕೊಳ್ಳುತಿದ್ದಾರೆ. ಮಾನ್ಯ ಸದಸ್ಯರಷ್ಟೇ ಕಾಳಜಿ ನನಗೂ ಇದೆ. ಆದರೂ ಕಾನೂನು ಪ್ರಕಾರ ಎಲ್ಲೆಲ್ಲಿ ಮೇಲ್ದರ್ಜೆಗೆ ಏರಿಸುವುದಕ್ಕೆ ಸಾಧ್ಯವಿದೆಯೋ ಅದನ್ನು ನಮ್ಮ ಹಣಕಾಸಿನ ಪರಿಸ್ಥಿಗೆ ಅನುಗುಣವಾಗಿ, ಯಾವಾಗ ಮಾಡಲಿಕ್ಕೆ ಸಾಧ್ಯವಿದೆಯೋ ಅದಷ್ಟು ಬೇಗನೆ ಸೂಕ್ತ ಕ್ರಮ ತೆಗೆದುಕೊಳ್ಳಲು ವಿಚಾರ ಮಾಡಲಾಗುತ್ತದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ರಾಮನಗರ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿ

೩೫೫(೨೧೪೨)ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಮನಗರ ತಾಲ್ಲೂಕಿನಲ್ಲಿ ಈವರೆವಿಗೂ ಕರಡಿಗಳ ಆಕ್ರಮಣಕ್ಕೆ ಒಳಗಾದ ಜನರ ಸಂಖ್ಯೆ ಎಷ್ಟು;

ಆ) ಹಾನಿಗೀಡಾದ ವಿವಿಧ ಬೆಳೆಗಳ ಜಮೀನಿನ ವಿಸ್ತೀರ್ಣವೆಷ್ಟು;

ಇ) ಇದುವರೆವಿಗೂ ಆಕ್ರಮಣಕ್ಕೊಳಗಾದ ಜನರಿಗೆ ಮತ್ತು ಹಾನಿಗೀಡಾದ ಬೆಳೆಗಳಿಗೆ ಸರ್ಕಾರವು ಪರಿಹಾರ ನೀಡದಿರಲು ಕಾರಣವೇನು?

ಶ್ರೀ ಈಟಿ ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):-

ಅ) ೧೯೯೧-೯೨ನೇ ಸಾಲಿನಲ್ಲಿ ರಾಮನಗರ ತಾಲ್ಲೂಕಿನಲ್ಲಿ ೧೦ ಜನರು ಕರಡಿಯ ಆಕ್ರಮಣಕ್ಕೆ ಒಳಗಾಗಿದ್ದಾರೆ.

ಆ) ಕಬ್ಬು - ೭.೫ ಎಕರೆ ಮತ್ತು ಕಡಲೆ ೧.೦ ಎಕರೆ, ಒಟ್ಟು ೮.೫ ಎಕರೆ.

ಇ) ಕರಡಿಯಿಂದ ಆಕ್ರಮಣಕ್ಕೊಳಗಾದ ಜನರಿಗೆ ಮತ್ತು ಬೆಳೆ ನಷ್ಟಗಳ ಎಲ್ಲಾ ಪ್ರಕರಣಗಳಲ್ಲಿಯೂ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಸಿ. ಎಂ ಲಿಂಗಪ್ಪ:- ಸನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಈವರೆಗೆ ರಾಮನಗರ ತಾಲ್ಲೂಕಿನಲ್ಲಿ ಕರಡಿಗಳ ಹಾವಳಿಯಿಂದ ಎಷ್ಟು ಜನರಿಗೆ ಗಾಯಗಳಾಗಿವೆ ಎಂಬ ಪ್ರಶ್ನೆ ಕೇಳಿದೆ. ಅಧಿಕಾರಿಗಳು ಮಂತ್ರಿಗಳ ಮೂಲಕ ಬಹಳ ಬುದ್ಧಿವಂತಿಕೆಯಿಂದ ಕೇವಲ ೧೯೯೧-೯೨ನೇ ಸಾಲಿನದು ಮಾತ್ರ ಹೇಳಿದ್ದಾರೆ. ಬಹುಶಃ ಹಿಂದಿನಿಂದ ಎಷ್ಟು ಜನರಿಗೆ ಅದರ ಆಕ್ರಮಣದಿಂದ ತೊಂದರೆಯಾಗಿದೆಯೆಂದು ಹೇಳಿದ್ದರೆ ಪರಿಹಾರ ಕೊಟ್ಟಂಥ ಸಂಖ್ಯೆ ಬಹಳ ಕಡಿಮೆಯಾಗುತ್ತಿತ್ತು.

ಆದರೂ ಇಲ್ಲಿ ಒಂದು ಮುಖ್ಯವಾದ ಪ್ರಶ್ನೆ ಇದೆ. ಬಹುಶಃ ಅನೇಕ ಸದಸ್ಯರಿಗೆ ಇದು ಹಾಸ್ಯವಾಗಿ ಕಾಣಬಹುದು. ಮಾನ್ಯ ಶಿವರಾಮೇಗೌಡರನ್ನೂ ಕೂಡ ಓಡಿಸಿಕೊಂಡು ಬಂದಿತ್ತಂತೆ. ಆದರೆ ಪುಣ್ಯವಶಾತ್, ಕಾರಿನಲ್ಲಿ, ಬಸ್ಸಿನಲ್ಲಿ ಬರುವವರಿಗೆ ಏನೂ ತೊಂದರೆಯಾಗುವುದಿಲ್ಲ. ತೀರಾ ಅಮಾಯಕರು, ವ್ಯವಸಾಯ ಕೂಲಿಕಾರರು ಮತ್ತೆ ರೈತಾಪಿ ಜನಗಳಿಗೆ ಇದರಿಂದ ಹೇಳಲಾರದಷ್ಟು ಪ್ರಾಣಭಯ ಉಂಟಾಗಿದೆ. ಈಗ ವಿದ್ಯುಚ್ಛಕ್ತಿ ಅಭಾವದಿಂದ ಬೆಳಗಿನ ಹೊತ್ತು ವಿದ್ಯುಚ್ಛಕ್ತಿ ಇರುವುದಿಲ್ಲ. ಆದ್ದರಿಂದ ರಾತ್ರಿ ವೇಳೆ ಪಂಪ್‌ಸೆಟ್‌ನಿಂದ ವ್ಯವಸಾಯ ಮಾಡಬೇಕು ಎಂದು ಹೋದರೆ ಕರಡಿಗಳ ಭಯದಿಂದ ಅದೂ ಮಾಡುವುದಕ್ಕೆ ಆಗುತ್ತಿಲ್ಲ. ವನ್ಯ ಜೀವಿಗಳ ರಕ್ಷಣೆ ನೀತಿ ಇಟ್ಟುಕೊಂಡು ಇವತ್ತು ನಮ್ಮ ತಾಲ್ಲೂಕಿನಲ್ಲಿ ಮನುಷ್ಯನ ಪ್ರಾಣದ ಜೊತೆ ನಾವು ಚೆಲ್ಲಾಟ ಆಡುತ್ತಿದ್ದೇವೆ. ಇತ್ತೀಚೆಗೆ ಒಬ್ಬ ಗೃಹಿಣಿಯ ಕಿವಿಯನ್ನು ಕಿತ್ತು ಹಾಕಿತು. ಕಿವಿ ಕಿತ್ತು ಹಾಕಿ ಕಳುಹಿಸಿದರೆ ಪುಣ್ಯ. ಅದು ಪ್ರಾಣ ಕಳೆಯುತ್ತದೆ. ತಪ್ಪಿಸಿಕೊಂಡು ಬರುವುದೇ ದೊಡ್ಡ ಕಷ್ಟ. ಎಷ್ಟೋ ಜನರಿಗೆ ಆ ಗಾಬರಿಯಲ್ಲಿ ಹೃದಯಸ್ತಂಬನ ಆಗಿ ಸಾಯುವ ಸಂಭವ ಉಂಟಾಗುತ್ತದೆ. ಆದರೆ ಇಲಾಖೆಯವರು ನೀಡುತ್ತಾ ಇರತಕ್ಕ ಪರಿಹಾರವನ್ನು ಲೆಕ್ಕ ಹಾಕಿದಾಗ ಮತ್ತೆ ಆ ವಿಳಂಬ ನೀತಿಯನ್ನು ಲೆಕ್ಕ ಹಾಕಿದಾಗ ಆ ಪರಿಹಾರ ತೆಗೆದುಕೊಳ್ಳುವುದರಲ್ಲಿ ಅವರ ಎಲ್ಲಾ ಕಥೆ ಮುಗಿದು ಹೋಗುತ್ತದೆ. ಇತ್ತೀಚೆಗೆ ಅನೇಕ ಸಂದರ್ಭಗಳಲ್ಲಿ ಇಲಾಖಾ ಅಧಿಕಾರಿಗಳನ್ನು ಸಂಪರ್ಕ ಮಾಡಿದಾಗ ಖಾಯಂ ಊನ ಆಗಿರಬೇಕು ಎಂಬ ಮಾತನ್ನು ಹೇಳುತ್ತಾರೆ. ಇದನ್ನು ದಯವಿಟ್ಟು ಗಮನಿಸಬೇಕು. ಖಾಯಂ ಊನ ಎಂದರೆ ಕರಡಿ ಕೈಗೆ ಸಿಕ್ಕಿದಾಗ ಕರಡಿ ಏನಾದರೂ ಒಂದು ಖಾಯಂ ಊನ ಮಾಡುವವರೆಗೆ ಅದರ ಕೈಯಲ್ಲಿ ಒದೆ ತಿಂದು ಬಂದರೆ ಮಾತ್ರ ಪರಿಹಾರ ಕೊಡುತ್ತಾರಂತೆ. ಇದನ್ನು ಯೋಚನೆ ಮಾಡಬೇಕು. ಒಂದು ಕಬ್ಬಿನ ಗದ್ದೆಗೆ ಕರಡಿ ನುಗ್ಗಿದರೆ ೧೦ ಜಲ್ಲೆ ಕಬ್ಬು ನಾಶ ಮಾಡಬಹುದು, ೧೦ ಕುಂಟೆ ಬೆಳೆ ನಾಶ ಮಾಡಿ ಹೋಗುತ್ತದೆ. ಆದಕ್ಕೆ ಸನ್ಮಾನ್ಯ ಸಚಿವರನ್ನು ನಾನು ಕೇಳುತ್ತಿದ್ದೇನೆ. ನಾವು ವನ್ಯ ಜೀವಿಗಳನ್ನು ರಕ್ಷಣೆ ಮಾಡಬೇಕು ನಿಜ. ನಾನು ಹಿಂದೆ ಒಂದು ವಿಧಾನವನ್ನು ಸೂಚನೆಯನ್ನು ಮಾಡಿದ್ದೆ. ಇರತಕ್ಕ ಕರಡಿಗಳನ್ನೆಲ್ಲಾ ಹಿಡಿದು ಬೇರೆ ಕಡೆಗೆ ಸಾಗಿಸಿ ಎಂದು ಹೇಳಿದ್ದೆ. ಅದಕ್ಕೆ ಒಬ್ಬರು ಹೇಳಿದರು ಅವನ್ನು ಬೇರೆ ಕಡೆ ಬಿಟ್ಟರೆ ವಾತಾವರಣ ಅವಕ್ಕೆ ಸರಿ ಹೋಗುವುದಿಲ್ಲವಾದ್ದರಿಂದ ಅವು ಸತ್ತುಹೋಗುತ್ತವೆ ಎಂದು ಹೇಳಿದರು. ಇದು ರಾಮನಗರ, ಕನಕಪುರ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಇದು ಸೀಮಿತವಾಗಿದೆ ಎಂದು ಅಂದು ಕೊಂಡಿದ್ದೇನೆ. ಇವನ್ನು ಇಲ್ಲೇ ಉಳಿಸಿಕೊಳ್ಳಬೇಕಾದರೆ ಒಂದು ಕೆಲಸ ಮಾಡಿ. ತಾವು ಬನ್ನೇರುಘಟ್ಟದಲ್ಲಿ ಏನು ಹುಲಿ ವನ ಮಾಡಿದ್ದೀರೋ ಅದೇ ರೀತಿ ಒಂದು ವನವನ್ನು ಬೆಂಗಳೂರು-ಮೈಸೂರು ಹೆದ್ದಾರಿ ಪಕ್ಕದಲ್ಲಿ ಇರುವ ಹಂದಿಗುಂದಿ ಫಾರೆಸ್ಟ್ ಎಂದು ಏನಿದೆ ಅಲ್ಲಿ ಮಾಡಿ. ಅಲ್ಲಿ ಕರಡಿ ವನ ಮಾಡಿ ಒಂದು ಪ್ರೇಕ್ಷಣೀಯ ಸ್ಥಳವನ್ನಾಗಿ ಅದನ್ನು ಪರಿವರ್ತನೆ ಮಾಡುವುದಕ್ಕೆ ಅವಕಾಶವಿದೆ. ಇದನ್ನು ತಾವು ಸ್ವಲ್ಪ ಸೀರಿಯಸ್ಸಾಗಿ ಯೋಚನೆ ಮಾಡಬೇಕು. ಯಾರೇ ಕರಡಿಯ ಆಕ್ರಮಣದಿಂದ ಗಾಯಗೊಳ್ಳುತ್ತಾನೆ ಅವರ ಬಳಿಗೆ ಕೂಡಲೇ ಹೋಗಿ ಪರಿಹಾರ ಕೊಡುವ ಬಗ್ಗೆ ಈಗಿರತಕ್ಕ ಕಾನೂನಿನಲ್ಲಿ ಬದಲಾವಣೆ ಮಾಡಿ ಅದನ್ನು ತೀವ್ರಗೊಳಿಸಬೇಕು. ಮಾನ್ಯ ಸಚಿವರು ಇದನ್ನು ಆಗು ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಈಟಿ ಶಂಭುನಾಥ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರತಕ್ಕ ವಿಷಯ ಎಲ್ಲಾ ತೀವ್ರವಾಗಿದೆ. ಇದರಲ್ಲಿ ಪರ್ಮನೆಂಟ್ ಊನ ಆದವರಿಗೆ ೫ ಸಾವಿರರೂಪಾಯಿಗಳನ್ನು

ಕೊಡುತ್ತೇವೆ. ಬೇರೆ ರೀತಿ ಗಾಯ ಆದಾಗ ಆ ಗಾಯವನ್ನು ಗುಣ ಮಾಡಿಕೊಳ್ಳುವುದಕ್ಕೆ ಏನು ಬೇಕೋ ಆ ಖರ್ಚನ್ನು ಕೊಡತಕ್ಕ ರೀತಿಯಲ್ಲಿ ಪರಿಹಾರವನ್ನು ಕೊಡಲಾಗುತ್ತದೆ. ಮತ್ತೆ ಬನ್ನೇರುಘಟ್ಟದಲ್ಲಿರುವಂತೆ ಏನು ಪಾರ್ಕ್ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳಿದರು ಆ ರೀತಿ ಪಾರ್ಕ್ ಮಾಡುವ ಮೊದಲು ಅಲ್ಲಿ ಕರಡಿಗಳಿಗೆ ಬೇಕಾಗುವಂತಹ ಹಣ್ಣು ಹಂಪಲು ಕೊಡುವ ಮರಗಳನ್ನು ಬೆಳೆಸಬೇಕಾಗುತ್ತದೆ. ಅವನ್ನು ಬೆಳೆಸುವುದಕ್ಕೆ ಸುಮಾರು ೫೦-೬೦ ವರ್ಷಗಳು ಹಿಡಿಯುತ್ತದೆ. ಆ ಸಮಯಕ್ಕೆ ಬನೇರುಘಟ್ಟದ ಹುಲಿಗಳು ಮತ್ತು ಇನ್ನುಳಿದ ಪ್ರಾಣಿಗಳನ್ನು ಬಿಟ್ಟಹಾಗೆ ಅಲ್ಲಿಯೂ ಕರಡಿಯ ಜೊತೆ ಬೇರೆ ಪ್ರಾಣಿಗಳನ್ನು ಬಿಟ್ಟು ಪಾರ್ಕ್ ಮಾಡುವುದಕ್ಕೆ ಬರುತ್ತದೆ. ಆದರೆ ಅಷ್ಟು ದಿವಸಗಳವರೆಗೆ ಲಿಂಗಪ್ಪನವರು ಕಾಯಬೇಕಾಗುತ್ತದೆ. ಇನ್ನು ಎರಡನೆಯದಾಗಿ, ಪರಿಹಾರ ಕೊಡುವ ವಿಷಯ. ಈಗಿರುವ ಕಾನೂನಿನಲ್ಲೇ ಬೇಗ ಪರಹಾರ ಕೊಡಬೇಕೆಂದು ಇದೆ. ಅಧಿಕಾರಿಗಳ ಒಂದು ಅಲಕ್ಷ್ಯದಿಂದ ಬೇಗ ಪರಿಹಾರ ಕೊಡುವುದಕ್ಕೆ ಆಗಿರಲಿಲ್ಲ. ನಾನು ಬೇಗ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನು ಮಾಡಿಸಿಕೊಡುತ್ತೇನೆ.

ಛೇರ್ಮನ್:- ನೀವು ಪ್ರಶ್ನೆ ಕೇಳಿ. ಭಾಷಣವನ್ನು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿ. ಎಂ. ಲಿಂಗಪ್ಪ:- ಕರಡಿಗಳ ಬಗ್ಗೆ ವಿವರ ಹೇಳದೇ ಇದ್ದರೆ ಕರಡಿ ಕತೆ ಏನು ಎಂದು ಇವರಿಗೆ ಎಲ್ಲಿ ಗೊತ್ತಾಗುತ್ತದೆ. ಕರಡಿಯ ಕೈಯಲ್ಲಿ ಸಿಕ್ಕಿ ನೋಡಬೇಕು. ಯಾವ ಪ್ರಾಣಿ ಕೈಗೆ ಸಿಕ್ಕಿದರೂ ತಪ್ಪಿಸಿಕೊಂಡು ಬರಬಹುದು. ಈ ಕರಡಿ ಕೈಗೆ ಸಿಗಬಾರದು ಎಂದು ಹಳ್ಳಿ ಕಡೆ ಹೇಳುತ್ತಾರೆ. ಈ ಕರಡಿ ಕೈಗೆ ಸಿಕ್ಕಿ ಏಟು ತಿಂದರೆ ಬಹಳ ದರಿದ್ರ ಬರುತ್ತದೆಂದು ನಮ್ಮ ಕಡೆ ಪ್ರತೀತಿ ಇದೆ. ಸನ್ಮಾನ್ಯ ಸಚಿವರು ಹಣ್ಣು ಹಂಪಲು ಗಿಡಗಳನ್ನು ಬೆಳೆಯಲು ೫೦-೬೦ ವರ್ಷ ಬೇಕಾಗುತ್ತದೆ ಎಂದು ಹೇಳಿದರು. ಅದು ಸರಿಯಲ್ಲ. ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ವರ್ಷ ಪ್ರಾರಂಭ ಮಾಡಿದರೆ ಇನ್ನು ೫-೬ ವರ್ಷಗಳಲ್ಲಿ ಹಣ್ಣು ಬಿಡುವ ಅನೇಕ ಮರಗಳನ್ನು ಬೆಳೆಯಬಹುದು. ಇನ್ನು ೫೦-೬೦ ವರ್ಷಗಳು ಎಂದರೆ ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ರೈತರು ವ್ಯವಸಾಯ ಮಾಡುವುದನ್ನೇ ಬಿಡಬೇಕಾಗುತ್ತದೆ. ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ಇತ್ತೀಚೆಗೆ ಒಬ್ಬರಿಗೆ ಕರಡಿ ಕಿವಿಯನ್ನು ಕಿತ್ತುಹಾಕಿತು. ಅವರು ಈ ಬಗ್ಗೆ ಪರಿಹಾರ ಕೇಳಿ ೩ ತಿಂಗಳು ಆಗಿದೆ. ಅವರಿಗೆ ಏನಾಗಿದೆ ಎಂದು ಯಾರೂ ನೋಡುವುದಕ್ಕೆ ಆಗಿಲ್ಲ. ಒಬ್ಬರು ಕರಡಿ ಕೈಗೆ ಸಿಕ್ಕಿ ಏಟು ತಿಂದರೆ ಕನಿಷ್ಠ ಪಕ್ಷ ೧ ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕಾಗುತ್ತದೆ. ಅಂತಹವರಿಗೂ ನೀವು ಪರಿಹಾರವನ್ನು ಕೊಡಬೇಕಾಗುತ್ತದೆ. ಒಂದು ವಾರ ಚಿಕಿತ್ಸೆ ಪಡೆಯುವವರಿಗೂ ನೀವು ಪರಿಹಾರವನ್ನು ಕೊಡಬೇಕಾಗುತ್ತದೆ. ಇವತ್ತು ಈ ಕರಡಿಗಳು ನಿಮ್ಮವೋ ಅಲ್ಲವೋ ಎಂದು ಪ್ರಶ್ನೆ ಕೇಳುತ್ತೇನೆ. ಅವು ಸರ್ಕಾರದ ಕರಡಿಗಳೇ? ಅಲ್ಲವೇ? ಅಲ್ಲ ಎಂದರೆ ನಮಗೆ ಬಿಡಿ, ನಾವು ಅವನ್ನು ವಿಚಾರಿಸಿಕೊಳ್ಳುತ್ತೇವೆ. ಇವತ್ತು ಅವನ್ನು ನಾವು ಮುಟ್ಟುವುದಕ್ಕೆ ಆಗುವುದಿಲ್ಲ. ಮುಟ್ಟಿದರೆ ತಕ್ಷಣ ಬಂದು ಅರೆಸ್ಟ್ ಮಾಡುತ್ತೀರಿ; ಶಿಕ್ಷೆ ವಿಧಿಸುತ್ತೀರಿ. ಮುಟ್ಟದೆ ಇದ್ದರೆ ಆಗುವುದಿಲ್ಲ. ತಾವು ಈ ರೀತಿ ಉತ್ತರ ಕೊಟ್ಟರೆ ನಿಜವಾಗಿಯೂ ಸಮಾಧಾನವಾಗುವುದಿಲ್ಲ. ಇದು ಬಹಳ ತೀವ್ರವಾದ ವಿಚಾರ. ಅನೇಕರಿಗೆ ಇದು ಹಾಸ್ಯವಾಗಿ ಕಾಣಬಹುದು. ಇವತ್ತು ವ್ಯವಸಾಯ ಮಾಡಬೇಕೆ ಬೇಡವೇ, ಜೀವನ ಮಾಡಬೇಕೇ ಬೇಡವೇ ಎನ್ನುವ ಸನ್ನಿವೇಶದಲ್ಲಿ ನಾವು ಇದ್ದೇವೆ.

ಶ್ರೀ ಈಟಿ ಶಂಭುನಾಥ್:- ಮಾನ್ಯ ಸದಸ್ಯರು ಹೇಳಿದ ಪ್ರಕಾರ ಐದಾರು ವರ್ಷಗಳಲ್ಲಿ

ಕೆಲಸ ಆಗುತ್ತದೆಂದು ಹೇಳುತ್ತಿದ್ದಾರೆ. ಅಷ್ಟು ಬೇಗ ಆಗುವುದಿಲ್ಲ, ಆದರೂ ಕೂಡ ಅದನ್ನು ಪರಿಶೀಲಿಸಲಾಗುವುದು. ಆಮೇಲೆ ಗಾಯಾಳುಗಳಾಗಿ ಆಸ್ಪತ್ರೆಗೆ ಸೇರಿದ ಮೇಲೆ ಅದಕ್ಕೆ ಬೇಕಾದಂತಹ ಖರ್ಚು ಎಷ್ಟು ಬರುತ್ತದೆ ಅದನ್ನು ಕೊಡುವ ವ್ಯವಸ್ಥೆಯನ್ನು ನಾವು ಎಲ್ಲಾ ಕಡೆ ಮಾಡಿದ್ದೇವೆ. ಪರಿಹಾರ ಕೊಡದಿರುವ ಯಾವುದಾದರೂ ಒಂದು ಕೇಸ್ ಇದ್ದರೆ ತೋರಿಸಿ.

ಶ್ರೀ ಸಿ. ಎಂ. ಲಿಂಗಪ್ಪ:- ತಮ್ಮ ಕಛೇರಿಗೆ ಬಂದು ೧೦ ಕೇಸ್ ಕೊಡುತ್ತೇನೆ.

ಶ್ರೀ ಈಟಿ ಶಂಭುನಾಥ್:- ನಮ್ಮ ಬಳ್ಳಾರಿಯಲ್ಲಿರತಕ್ಕ ಕರಡಿಗಳಿಗೆ ಬಿಯರ್ ಸೆಂಚುರಿಯೆಂದು ಮಾಡುತ್ತಿದ್ದೇವೆ.

ಶ್ರೀ ಸಿ. ಎಂ. ಲಿಂಗಪ್ಪ:- ನಮ್ಮ ರಾಮನಗರದ ಕರಡಿಗಳಿಂದ ಗಾಯಗೊಂಡವರಿಗೆ, ಸತ್ತವರಿಗೆ ಪರಿಹಾರವನ್ನು ಕೊಡುವುದು ಏನೂ ಬೇಡ. ಅವುಗಳನ್ನು ಬಳ್ಳಾರಿಗೆ ತೆಗೆದುಕೊಂಡು ಹೋದರೆ ತಾಪತ್ರಯ ತಪ್ಪುತ್ತದೆ.

ಶ್ರೀ ಈಟಿ ಶಂಭುನಾಥ:- ನಿಮ್ಮ ರಾಮನಗರದ ಕರಡಿಗಳನ್ನು ಬಳ್ಳಾರಿಗೆ ತೆಗೆದುಕೊಂಡು ಹೋಗುತ್ತೇವೆ. ಬಳ್ಳಾರಿ ಮತ್ತು ರಾಯಚೂರು ಮಧ್ಯದಲ್ಲಿ ಒಂದು ಬಿಯರ್ ಸೆಂಚುರಿ ಸೆಂಟ್ರಲ್ ಗೌರ್ನಮೆಂಟ್‌ನಿಂದ ಸ್ಯಾಂಕ್ಷನ್ ಆಗಿದೆ. ನಮ್ಮಲ್ಲಿ ಕರಡಿಗಳಿಂದ ಪ್ರತಿನಿತ್ಯ ಏಟು ತಿನ್ನುತ್ತಾರೆ. ಅವರಿಗೆ ಸರಿಯಾದ ಪರಿಹಾರವನ್ನು ಕೊಡುತ್ತಿದ್ದೇವೆ. ಇಲ್ಲಿ ಏನಾದರೂ ತೊಂದರೆಯಾಗಿದ್ದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಸಿ. ಎಂ. ಲಿಂಗಪ್ಪ:- ನಮ್ಮ ಕರಡಿಗಳನ್ನು ದಯಮಾಡಿ ಅಲ್ಲಿಗೆ ತೆಗೆದುಕೊಂಡು ಹೋಗಿ. ನಮಗೇನೂ ಪರಿಹಾರ ಬೇಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಮಾನ್ಯ ಲಿಂಗಪ್ಪನವರ ಕರಡಿಗಳನ್ನು ಶಂಭುನಾಥ್‌ರವರು ತೆಗೆದುಕೊಂಡು ಹೋಗಬೇಕು, ಇಲ್ಲದಿದ್ದರೆ ಆಗುವುದಿಲ್ಲ.

ಶ್ರೀ ಈಟಿ ಶಂಭುನಾಥ:- ನಮ್ಮ ಕರಡಿ ನಿಮಗೆ ಕೊಡುತ್ತೇವೆ. ನಿಮ್ಮ ಕರಡಿ ನಾವು ತೆಗೆದುಕೊಂಡು ಹೋಗುತ್ತೇವೆ.

ಛೇರ್ಮನ್:- ದಯವಿಟ್ಟು ಈ ಸಂಬಂಧ ಬೆಳೆಸಬೇಡಿ. ಕರಡಿ ವನ ಮಾಡುವವರೆಗೆ ಕರಡಿಗಳನ್ನು ನೀವಾದರೂ ಬಳ್ಳಾರಿಗೆ ತೆಗೆದುಕೊಂಡು ಹೋಗಿ, ಇಲ್ಲವೇ ಕಾಡಿಗಾದರೂ ತೆಗೆದುಕೊಂಡು ಹೋಗಿ.

ಶ್ರೀ ಈಟಿ ಶಂಭುನಾಥ:- ಕರಡಿಗಳು ಆಗಿಂದಾಗ್ಗೆ ಊರುಗಳಿಗೆ ಬರುತ್ತಿರುತ್ತವೆ. ಅವುಗಳನ್ನು ಕಂಟ್ರೋಲ್ ಮಾಡಲು ನಾವು ಸರಿಯಾದ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ತೋಟಗಾರಿಕಾ ಅಭಿವೃದ್ಧಿಗೆ ಯೋಜನೆಗಳು

೩೫೯(೧೬೪೭)ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ಹಾಕಿಕೊಂಡಿರುವ ಯೋಜನೆಗಳು

ಯಾವುವು; (ಜಿಲ್ಲಾವಾರು ವಿವರ ನೀಡುವುದು)

ಆ) ೧೯೮೭-೮೮ನೇ ಸಾಲಿನಲ್ಲಿ ಈ ದಿಸೆಯಲ್ಲಿ ಖರ್ಚಾದ ಹಣವೆಷ್ಟು? ೧೯೮೮-೮೯ನೇ ಸಾಲಿನಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ನಾಗಮಂಗಲ ತಾಲ್ಲೂಕಿನಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಶ್ರೀ ವಿ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):-

ಅ) ರಾಜ್ಯದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ಒಟ್ಟು ೫೦ ಯೋಜನೆಗಳನ್ನು ಹಾಕಿಕೊಂಡಿದ್ದು, ಅವುಗಳಲ್ಲಿ ೨೧ ಯೋಜನೆಗಳನ್ನು ಜಿಲ್ಲಾ ವಲಯದಡಿ ಮತ್ತು ೨೯ ಯೋಜನೆಗಳು ರಾಜ್ಯ ವಲಯದಡಿ ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-೧ರಲ್ಲಿ ಲಗತ್ತಿಸಿದೆ.

ಆ) ೧೯೮೭-೮೮ನೇ ಸಾಲಿನಲ್ಲಿ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ರಾಜ್ಯದಲ್ಲಿ ಒಟ್ಟು ೩೩೦.೯೭ ಲಕ್ಷ ರೂ. ಹಣವನ್ನು ಖರ್ಚು ಮಾಡಿದೆ. ೧೯೮೮-೮೯ನೇ ಸಾಲಿನಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಜಿಲ್ಲಾ ವಲಯದಡಿ ೨೧೩.೨೨ ಲಕ್ಷ ರೂ.ಗಳನ್ನು ರಾಜ್ಯ ವಲಯದಡಿ ೧೪೧.೨೮ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಜಿಲ್ಲಾವಾರು ವಿವರಗಳಿಗೆ ಅನುಬಂಧ-೨ರಲ್ಲಿ ಲಗತ್ತಿಸಿರುವುದು ಅನ್ವಯಿಸುತ್ತದೆ.

ಇ) ನಾಗಮಂಗಲ ತಾಲ್ಲೂಕಿನಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ:

ಜಿಲ್ಲಾ ಪರಿಷತ್

೧. ಹನಿ ನೀರಾವರಿ ಯೋಜನೆಯಡಿಯಲ್ಲಿ ಇದುವರೆವಿಗೆ ೧೪ ಎಕರೆಗೆ ರೂ. ೩೫,೦೦೦-೦೦ ಗಳನ್ನು ಕೊಡಲಾಗಿದೆ.

೨. ಸಸ್ಯ ಸಂರಕ್ಷಣೆ ಕಾರ್ಯಕ್ರಮಕ್ಕೆ ಶೇ. ೫೦ ಭಾಗ ಸಹಾಯಧನದ ರೂಪದಲ್ಲಿ ಕೊಡಲು ರೂ. ೪,೨೦೦-೦೦ ರೂ.ಗಳನ್ನು ಕೊಡಲಾಗಿದೆ.

೩. ಪಂಪ್‌ಸೆಟ್ ಸಹಾಯಧನ ಯೋಜನೆಯಲ್ಲಿ ೧೪ ಫಲಾನುಭವಿಗಳಿಗೆ ೧೪,೦೦೦-೦೦ ರೂ.ಗಳನ್ನು ಕೊಡಲು ಫಲಾನುಭವಿಗಳನ್ನು ಗುರುತಿಸಿ, ರಾಜ್ಯ ಸರ್ಕಾರದಿಂದ ಕೊಡುವ ೫೦ ಭಾಗವನ್ನು ತೆಂಗು ಅಭಿವೃದ್ಧಿ ಮಂಡಳಿ, ಬೆಂಗಳೂರುರವರಿಗೆ ಉಳಿದ ೫೦ ಭಾಗವನ್ನು ಸೇರಿಸಲು ಫಲಾನುಭವಿಗಳ ಪಟ್ಟಿ ಕಳುಹಿಸಲಾಗಿದೆ.

೪. ವಿಶೇಷ ಘಟಕ ಯೋಜನೆಯಡಿಯಲ್ಲಿ ರೂ. ೬೪,೮೦೦-೦೦ ಗಳನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಫಲಾನುಭವಿಗಳಿಗೆ ರೂ. ೧೮,೦೦೦-೦೦ಗಳ ಖರ್ಚಿನಿಂದ ಅರ್ಧ ಎಕರೆ ತೆಂಗಿನ ತೋಟಗಳಿಗೆ ಒಟ್ಟು ೧೨೬ ಫಲಾನುಭವಿಗಳಿಗೆ ನೀಡಲಾಗಿದೆ.

೫. ವಿಶೇಷ ಘಟಕ ಯೋಜನೆಯಡಿಯಲ್ಲಿ (ಕೇಂದ್ರ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ

ವರ್ಗದ ೧೮,೦೦೦-೦೦ ರೂ.ಗಳ ಖರ್ಚಿನಿಂದ ಅರ್ಧ ಎಕರೆ ತೆಂಗಿನ ತೋಟವನ್ನು ಕೊಡಲಾಗಿದೆ.

೬. ರೈತರ ತರಕಾರಿ ತಾಕುಗಳಲ್ಲಿ ೧,೦೦೦-೦೦ ರೂ. ಗಳನ್ನು ಖರ್ಚು ಮಾಡಿ ತರಕಾರಿ ಬೆಳೆಗಳ ಕ್ಷೇತ್ರೋತ್ಸವನ್ನು ಆಚರಿಸಲಾಗಿದೆ.

೭. ರೈತರ ತರಬೇತಿ ಯೋಜನೆಯಡಿಯಲ್ಲಿ ೨೦ ಜನ ರೈತರಿಗೆ ೪,೦೦೦-೦೦ ರೂ.ಗಳ ಖರ್ಚಿನಲ್ಲಿ ತರಬೇತಿ ನೀಡಲು ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿದೆ.

೮. ತೆಂಗು ಕೃಷಿ ಪುನರ್ಧನ ಯೋಜನೆಯಡಿಯಲ್ಲಿ ೧೪೪ ಫಲಾನುಭವಿಗಳಿಗೆ ೩೫೪ ಎಕರೆಗಳಲ್ಲಿ ೨೩,೮೯,೫೦೦-೦೦ ರೂ.ಗಳು ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಮಂಜೂರಾಗಿದ್ದು, ಇಲ್ಲಿಯವರೆಗೆ ತೆಂಗು ಬೆಳೆಗೆ ೧೧,೧೨,೦೦೦-೦೦ ರೂ.ಗಳನ್ನು ವಿತರಿಸಲಾಗಿದೆ.

ರಾಜ್ಯ ವಲಯ

೧. ೧೦೦೦೦ ತೆಂಗಿನ ಸಸಿಗಳನ್ನು ರೈತರಿಗೆ ಮಾರಾಟ ಮಾಡಲಾಗಿದೆ.

೨. ೧೩೦೦೦ ಹಣ್ಣಿನ ಗಿಡಗಳನ್ನು ರೈತರಿಗೆ ವಿತರಣೆ ಮಾಡಲಾಗಿದೆ.

೩. ಜವರನಹಳ್ಳಿ ತೋಟಗಾರಿಕೆ ಕ್ಷೇತ್ರದಲ್ಲಿ ೫೫ ಎಕರೆ ವಿವಿಧ ಜಾತಿಯ ಹಣ್ಣಿನ ತೋಟ ಪೋಷಣೆ ಮಾಡಲಾಗುತ್ತಿದೆ.

೪. ಮಲ್ಲಸಂದ್ರ ಕಾವಲ್ ತೋಟಗಾರಿಕೆ ಕ್ಷೇತ್ರದಲ್ಲಿ ೮೮೭.೨೨ ಎಕರೆ ಪ್ರದೇಶದಲ್ಲಿ ವಿವಿಧ ಜಾತಿಯ ಹಣ್ಣಿನ ತೋಟ ಮಾಡಿ ಪೋಷಣೆ ಮಾಡಲಾಗುತ್ತಿದೆ.

ಅನುಬಂಧ - ೧.

ಕ್ರಮ ಸಂಖ್ಯೆ	ಯೋಜನೆಯ ವಿವರ	ಅನುಷ್ಠಾನದಲ್ಲಿರುವ ಜಿಲ್ಲೆಗಳು
	ಜಿಲ್ಲಾ ವಲಯ ಯೋಜನೆ	
೧.	ಬೀಜದ ತೆಂಗಿನಕಾಯಿ ಶೇಖರಣೆ ಮತ್ತು ತೆಂಗಿನ ವಿತರಣೆ	ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನದಲ್ಲಿದೆ.
೨.	ಪ್ಲಾಸ್ಟಿಕಲ್ಚರ್ ಅಭಿವೃದ್ಧಿ ಯೋಜನೆ	ದಕ್ಷಿಣ ಕನ್ನಡ, ಬೆಳಗಾಂ, ಬಿಜಾಪುರ, ಧಾರವಾಡ ಮತ್ತು ಉತ್ತರ ಕನ್ನಡ
೩.	ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಯೋಜನೆ.	ತುಮಕೂರು, ಮೈಸೂರು, ದಕ್ಷಿಣ ಕನ್ನಡ, ಬೆಳಗಾಂ, ಬಿಜಾಪುರ, ಧಾರವಾಡ, ಬಳ್ಳಾರಿ ಮತ್ತು ಬೀದರ್
೪.	ರೈತರಿಗೆ ತರಬೇತಿ	ದಕ್ಷಿಣ ಕನ್ನಡ ಮತ್ತು ಕೊಡಗು ಹೊರತು ಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಿವೆ
೫.	ಪ್ರಾತ್ಯಕ್ಷತೆಗಳು (ತೋಟಗಾರಿಕೆ ಪ್ರದೇಶ ವಿಸ್ತರಣೆ)	ಶಿವಮೊಗ್ಗ, ದಕ್ಷಿಣ ಕನ್ನಡ, ಬೆಳಗಾಂ, ಬಿಜಾಪುರ ಮತ್ತು ಉತ್ತರ ಕನ್ನಡ
೬.	ಅಣಬೆ ಬೇಸಾಯ ತರಬೇತಿ	ಶಿವಮೊಗ್ಗ ಮತ್ತು ಬೆಳಗಾಂ

೭. ತೋಟಗಾರಿಕೆ ಕ್ಷೇತ್ರ ಮತ್ತು ಸಸ್ಯ ಕ್ಷೇತ್ರಗಳಲ್ಲಿ ಮೂಲ ಸೌಕರ್ಯಗಳ ನಿರ್ಮಾಣ	ಬಿಜಾಪುರ ಹೊರತು ಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿದೆ.
೮. ಮಂಡಲಗಳಲ್ಲಿ ಸಸಿಧಾಮಗಳ ನಿರ್ಮಾಣ	ತುಮಕೂರು, ಧಾರವಾಡ ಮತ್ತು ಬೀದರ್
೯. ತೋಟಗಾರಿಕೆ ಬೆಳೆಗಳ ಸಸ್ಯೋತ್ಪಾದನೆ	ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನದಲ್ಲಿದೆ.
೧೦. ಸಾಮಾಜಿಕ ತೋಟಗಾರಿಕೆ ಯೋಜನೆ	ಚಿಕ್ಕಮಗಳೂರು
೧೧. ಸಸ್ಯ ಸಂರಕ್ಷಣಾ ಕ್ರಮಗಳು	ಎಲ್ಲಾ ಜಿಲ್ಲೆಗಳಲ್ಲಿ ಇದೆ.
೧೨. ಪ್ರಯೋಗಶಾಲೆಗಳ ಅಭಿವೃದ್ಧಿ	ತುಮಕೂರು, ಚಿಕ್ಕಮಗಳೂರು.
೧೩. ತೋಟಗಾರಿಕೆ ಕಟ್ಟಡಗಳು	ಕೋಲಾರ, ದ.ಕನ್ನಡ, ಕೊಡಗು, ಉ. ಕನ್ನಡ ಹೊರತು ಪಡಿಸಿ ಉಳಿದ ಜಿಲ್ಲೆಗಳಲ್ಲಿದೆ
೧೪. ಹಣ್ಣು ಮತ್ತು ತರಕಾರಿ ಶೇಖರಣೆ ಹಾಗೂ ಸಂಸ್ಕರಣೆ	ಬಿಜಾಪುರ
೧೫. ನೀರೆತ್ತುವ ಯಂತ್ರ ಪಂಪ್‌ಸೆಟ್ ಅಳವಡಿಸಲು ನೆರವು ಯೋಜನೆ	ಕೋಲಾರ, ಬೀದರ್ ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿದೆ.
೧೬. ವಿಶೇಷ ಘಟಕ ಯೋಜನೆ - ರಾಜ್ಯ ವಲಯ	ಕೋಲಾರ ಬಿಟ್ಟು ಉಳಿದ ಎಲ್ಲಾ ಜಿಲ್ಲೆಯಲ್ಲಿದೆ
೧೭. ವಿಶೇಷ ಘಟಕ ಯೋಜನೆ - ಕೇಂದ್ರ ವಲಯ	ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿದೆ.
೧೮. ಗಿರಿಜನ ಬುಡಕಟ್ಟು ಯೋಜನೆ - ರಾಜ್ಯ ವಲಯ	ಮೈಸೂರು, ಚಿಕ್ಕಮಗಳೂರು, ದ. ಕನ್ನಡ ಮತ್ತು ಕೊಡಗು
೧೯. ಗಿರಿಜನ ಬುಡಕಟ್ಟು ಯೋಜನೆ - ಕೇಂದ್ರ ವಲಯ	ಮೈಸೂರು, ಚಿಕ್ಕಮಗಳೂರು, ದ. ಕನ್ನಡ ಮತ್ತು ಕೊಡಗು
೨೦. ವಿಚಾರ ಸಂಕಿರಣ ಮತ್ತು ತೋಟಗಾರಿಕೆ ಪ್ರದರ್ಶನಗಳು	ಮಂಡ್ಯ
೨೧. ತೋಟಗಾರಿಕೆ ಬಗ್ಗೆ ಪ್ರಚಾರ ಮತ್ತು ಸಾಹಿತ್ಯ ಪ್ರದರ್ಶನಗಳು	ದ. ಕನ್ನಡ, ಹಾಸನ
ರಾಜ್ಯ ವಲಯ ಯೋಜನೆ	
೧. ತೆಂಗು ಅಭಿವೃದ್ಧಿ ಮಂಡಳಿ ಸಹಯೋಗದಲ್ಲಿ ತೆಂಗಿನ ಕಪ್ಪುತಲೆ ಹುಳು ನಿಯಂತ್ರಣಕ್ಕಾಗಿ ಸಮಗ್ರ ಯೋಜನೆ ಪ್ರಯೋಗಶಾಲೆಗಳು	ಚಿತ್ರದುರ್ಗ, ತುಮಕೂರು ದ. ಕನ್ನಡ
೨. ಕೇಂದ್ರ ವಲಯ ಸಮಗ್ರ ಸಾಂಬಾರು ಬೆಳೆಗಳ ಅಭಿವೃದ್ಧಿ ಯೋಜನೆ	ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು, ದ. ಕನ್ನಡ, ಹಾಸನ, ಉ. ಕನ್ನಡ.
೩. ಕೇಂದ್ರ ಪುರಸ್ಕೃತ ತಾಳೆ ಬೆಳೆ ಪ್ರಾತ್ಯಕ್ಷತೆ ಯೋಜನೆ	ಬೆಂಗಳೂರು ನಗರ ಗ್ರಾಮಾಂತರ, ಕೋಲಾರ, ತುಮಕೂರು, ದ. ಕನ್ನಡ, ಬೀದರ್ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

೪.	ಕೇಂದ್ರ ವಲಯ ಗೋಡಂಬಿ ಸಮಗ್ರ ಅಭಿವೃದ್ಧಿ ಯೋಜನೆ	ಮೈಸೂರು, ದ. ಕನ್ನಡ, ಉ. ಕನ್ನಡ
೫.	ಅಣಬೆ ಅಭಿವೃದ್ಧಿ ಯೋಜನೆ	ಬೆಳಗಾಂ
೬.	ಪುಷ್ಪಾಭಿವೃದ್ಧಿ ವಲಯ ಕೇಂದ್ರಗಳ ಅಭಿವೃದ್ಧಿ ಯೋಜನೆ	ಬೆಳಗಾಂ, ಬಿಜಾಪುರ
೭.	ವಿಸ್ತರಣ ಮತ್ತು ತರಬೇತಿ ಕಾರ್ಯಕ್ರಮ	ಬೆಂಗಳೂರು ನಗರ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿದೆ.
೮.	ತರಕಾರಿ ಬೀಜೋತ್ಪಾದನೆ ವಲಯ ಕೇಂದ್ರಗಳ ಅಭಿವೃದ್ಧಿ ಯೋಜನೆ	ಬೆಂಗಳೂರು ಗ್ರಾಮಾಂತರ, ಕೋಲಾರ, ಶಿವಮೊಗ್ಗ, ತುಮಕೂರು, ಮೈಸೂರು, ದ. ಕನ್ನಡ, ಕೊಡಗು, ಬೆಳಗಾಂ, ಧಾರವಾಡ, ಗುಲ್ಬರ್ಗ, ಬಳ್ಳಾರಿ
೯.	ಉತ್ತಮ ಗುಣಮಟ್ಟದ ತೋಟಗಾರಿಕಾ ಸಸಿ:ಕಸಿ ಗಿಡಗಳ ಉತ್ಪಾದನೆ	ಬೆಂಗಳೂರು (ನ) ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿಯೂ ಅನುಷ್ಠಾನದಲ್ಲಿದೆ.
೧೦.	ಇಲಾಖಾ ಪ್ರಯೋಗಶಾಲೆಗಳ ಅಭಿವೃದ್ಧಿ ಯೋಜನೆ	ಬೆಂಗಳೂರು (ಗ್ರಾ), ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು, ಹಾಸನ
೧೧.	ತೋಟಗಾರಿಕಾ ಉತ್ಪನ್ನಗಳು ಸಂಸ್ಕರಣೆ ಮತ್ತು ಮಾರಾಟ ಅಭಿವೃದ್ಧಿ ಯೋಜನೆ.	ಕೋಲಾರ
೧೨.	ಗಿರಿಧಾಮಗಳ ಅಭಿವೃದ್ಧಿ ಯೋಜನೆ	ಚಿಕ್ಕಮಗಳೂರು, ಕೋಲಾರ
೧೩.	ಬಟಾನಿಕಲ್ ಮತ್ತು ಗಾಂಡಯ್ಯ ವನಗಳ ತೋಟಗಳ ಅಭಿವೃದ್ಧಿ ಯೋಜನೆ	ಮಂಡ್ಯ, ಧಾರವಾಡ
೧೪.	ಲಾಲ್‌ಬಾಗ್ ಬಟಾನಿಕಲ್ ತೋಟದ ಅಭಿವೃದ್ಧಿ ಯೋಜನೆ.	ಲಾಲ್‌ಬಾಗ್
೧೫.	ಕೇಂದ್ರ ಆಡಳಿತ ಪ್ರದೇಶದಲ್ಲಿ ಉದ್ಯಾನವನಗಳ ಅಭಿವೃದ್ಧಿ ಯೋಜನೆ.	ಕಬ್ಬನ್ ಪಾರ್ಕ್ ಮತ್ತು ಇತರೆ
೧೬.	ಕರ್ನಾಟಕ ರಾಜ್ಯ ತೋಟಗಾರಿಕೆ ಅಭಿವೃದ್ಧಿ ನಿಗಮದ ಸ್ಥಾಪನೆಗೆ ಯೋಜನೆ (ಬಂಡವಾಳ ಹೂಡಿಕೆ)	ಇಡೀ ರಾಜ್ಯದ ಜಿಲ್ಲೆಗಳಲ್ಲಿ
೧೭.	ತೋಟದ ಬೆಳೆಗಾರರ ಮಾರುಕಟ್ಟೆಸಹಕಾರ ಸಂಘ ಮತ್ತು ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಸಹಯೋಗದೊಂದಿಗೆ ಹಣ್ಣು ತರಕಾರಿಗಳ ಮಾರಾಟ ಅಭಿವೃದ್ಧಿ ಯೋಜನೆ.	ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಮಂಡ್ಯ, ಹಾಸನ, ಮಂಗಳೂರು.
೧೮.	ಕೇಂದ್ರ ಪುರಸ್ಕೃತ ಯೋಜನೆ - ತಾಳೆ ಬೆಳೆ ಕೃಷಿ ಮತ್ತು ಸಂಸ್ಕರಣೆಗಾಗಿ ಪ್ರಾತ್ಯಕ್ಷತೆ ಯೋಜನೆ.	ಶಿವಮೊಗ್ಗ
೧೯.	ಕರ್ನಾಟಕದಲ್ಲಿ ಎಂಟನೇ ಪಂಚವಾರ್ಷಿಕ ಯೋಜನೆಯನ್ನು ತಾಳೆ ಬೆಳೆ ಅಭಿವೃದ್ಧಿಗಾಗಿ ಮುಂಚಿತ ನರ್ಸರಿ ಕಾರ್ಯಕ್ರಮ	ಶಿವಮೊಗ್ಗ

೨೦. ಕೇಂದ್ರ ಪುರಸ್ಕೃತ ಯೋಜನೆ - ಕಾಳು ಮೆಣಸು ಅಭಿವೃದ್ಧಿ ಯೋಜನೆ	ದ. ಕನ್ನಡ, ಉ. ಕನ್ನಡ, ಚಿಕ್ಕಮಗಳೂರು, ಹಾಸನ.
೨೧. ಕೇಂದ್ರ ಪುರಸ್ಕೃತ ಮೆಣಸಿನಕಾಯಿ ಯೋಜನೆ	ಧಾರವಾಡ ಮಾತ್ರ
೨೨. ಕೇಂದ್ರ ವಲಯದಡಿ ಟ್ರಾಪಿಕಲ್ ಮತ್ತು ಏರಿಡ್ ವಲಯದ ಹಣ್ಣು ಅಭಿವೃದ್ಧಿ ಯೋಜನೆ	ಎಲ್ಲಾ ಜಿಲ್ಲೆಗಳಲ್ಲಿ ಇದೆ.
೨೩. ಸಮಗ್ರ ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗನಿಯಂತ್ರಣ ಯೋಜನೆ	ಗುಲ್ಬರ್ಗ, ಬೆಳಗಾಂ, ಕೋಲಾರ, ಕೊಡಗು, ಧಾರವಾಡ ಹೊರತುಪಡಿಸಿ ಉಳಿದ ಜಿಲ್ಲೆಯಲ್ಲಿ ಇದೆ.
೨೪. ತೋಟಗಾರಿಕೆಯಲ್ಲಿ ಪ್ಲಾಸ್ಟಿಕಲ್ಚರ್ ಬಳಕೆಯನ್ನು ಪರಿಚಯಿಸುವುದು - ಹನಿ ನೀರಾವರಿ	ಎಲ್ಲಾ ಜಿಲ್ಲೆಗಳಲ್ಲಿಯೂ ಇದೆ.
೨೪(ಎ). ಕೇಂದ್ರೀಯ ಸಮಗ್ರ ಗೋಡಂಬಿ ಅಭಿವೃದ್ಧಿ ಯೋಜನೆ - ಗೋಡಂಬಿ ಸಸ್ಯ ಸಂರಕ್ಷಣೆ ಮತ್ತು ವಿಶೇಷ ಘಟಕ ಯೋಜನೆಯಡಿ ಪ್ರದೇಶ ವಿಸ್ತರಣೆ ಮತ್ತು ಸಾಮಾನ್ಯ ರೈತರ ಹಿಡುವಳಿಧಾತರಲ್ಲಿ ಪ್ರದೇಶ ವಿಸ್ತರಣೆ	ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಬೆಳಗಾಂ, ಕೋಲಾರ
೨೫. ಕೇಂದ್ರ ವಲಯ ಯೋಜನೆಯಡಿ ಸಮಗ್ರ ಸಾಂಬಾರು ಅಭಿವೃದ್ಧಿಗೆ ಕಿರು ಚೀಲ ಹಂಚುವುದು.	ಚಿಕ್ಕಮಗಳೂರು, ಹಾಸನ, ಶಿವಮೊಗ್ಗ, ಮೈಸೂರು, ಚಿತ್ರದುರ್ಗ, ಬಿಜಾಪುರ, ಬೀದರ್, ಧಾರವಾಡ, ಬೆಳಗಾಂ, ಬಳ್ಳಾರಿ, ಬೆಂಗಳೂರು (ಗ್ರಾ), ಕೋಲಾರ
೨೬. ಶುಂಠಿ ಮತ್ತು ಮೆಣಸಿನಕಾಯಿ ಉತ್ಪಾದನೆಗೆ ಪ್ರಾತ್ಯಕ್ಷತೆ ಯಾ ಬೀಜ ವೃದ್ಧೀಕರಣ ಯೋಜನೆ	ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು, ಬೆಂಗಳೂರು (ಗ್ರಾ), ಶಿವಮೊಗ್ಗ, ಬೀದರ್, ಮೈಸೂರು, ಚಿತ್ರದುರ್ಗ, ಬೆಳಗಾಂ, ಧಾರವಾಡ, ಬಿಜಾಪುರ, ಬಳ್ಳಾರಿ, ಗುಲ್ಬರ್ಗ
೨೭. ಕೇಂದ್ರ ವಲಯ ಯೋಜನೆಯಡಿ ಕಿರು ಚೀಲ ಹಂಚುವ ಮೂಲಕ ಹಣ್ಣು ಮತ್ತು ತರಕಾರಿ ಉತ್ಪಾದನೆ ಹೆಚ್ಚಿಸುವುದು.	ಬೆಂಗಳೂರು ನಗರ ಬಿಟ್ಟು ಉಳಿದ ಎಲ್ಲಾ ಜಿಲ್ಲೆಗಳಲ್ಲಿವೆ.
೨೮. ಕೇಂದ್ರವಲಯ ಕೋಕೋ ಅಭಿವೃದ್ಧಿ ಯೋಜನೆ	ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು
೨೯. ಕೇಂದ್ರ ವಲಯ ಅಡಿಕೆ ಅಭಿವೃದ್ಧಿ ಯೋಜನೆ	ಶಿವಮೊಗ್ಗ, ಉತ್ತರ ಕನ್ನಡ.

ಅನುಬಂಧ - ೨

ಕ್ರಮ ಸಂಖ್ಯೆ	ಜಿಲ್ಲೆ	೧೯೮೮-೮೯ನೇ ಸಾಲಿನಲ್ಲಿ ನಿಗದಿ ಪಡಿಸಿದ ಅಯ ವ್ಯಯ	
		ಜಿಲ್ಲಾವಲಯ	ರಾಜ್ಯವಲಯ
೧.	ಬೆಂಗಳೂರು (ನಗರ)	೩.೧೫	೩.೧೧
೨.	ಬೆಂಗಳೂರು (ಗ್ರಾಮಾಂತರ)	೮.೨೫	೦.೨೪

೩.	ಚಿತ್ರದುರ್ಗ	೧೦.೦೬	೧.೫೫
೪.	ಕೋಲಾರ	೧೨.೭೫	೩.೧೪
೫.	ಶಿವಮೊಗ್ಗ	೧೦.೭೫	೫.೫೯
೬.	ತುಮಕೂರು	೧೨.೬೯	೧೭.೫೯
೭.	ಮೈಸೂರು	೧೫.೨೭	೧೨.೬೭
೮.	ಚಿಕ್ಕಮಗಳೂರು	೧೧.೦೪	೨.೩೮
೯.	ದಕ್ಷಿಣ ಕನ್ನಡ	೧೦.೭೦	೨೬.೮೫
೧೦.	ಹಾಸನ	೧೦.೧೧	೭.೬೭
೧೧.	ಕೊಡಗು	೫.೬೩	೫.೨೧
೧೨.	ಮಂಡ್ಯ	೧೦.೯೯	೨೦.೯೯
೧೩.	ಬೆಳಗಾಂ	೧೦.೮೩	೮.೧೦
೧೪.	ಬಿಜಾಪುರ	೧೨.೭೩	೨.೪೨
೧೫.	ಧಾರವಾಡ	೧೮.೪೬	೩.೩೮
೧೬.	ಉತ್ತರ ಕನ್ನಡ	೫.೩೦	೫.೦೦
೧೭.	ಗುಲ್ಬರ್ಗ	೧೫.೩೫	೩.೯೭
೧೮.	ಬಳ್ಳಾರಿ	೯.೩೨	೩.೭೧
೧೯.	ಬೀದರ್	೬.೨೯	೦.೬೮
೨೦.	ರಾಯಚೂರು	೧೩.೫೪	೬.೫೮
	ಒಟ್ಟು	೨೧೩.೨೨	೧೪೧.೨೮

ಶ್ರೀ ಎಲ್. ಆರ್. ಶಿವರಾಮೇಗೌಡ:- ಸಭಾಧ್ಯಕ್ಷಿಣಿಯವರೇ, ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಪಡಿಸುವ ಸಲುವಾಗಿ ಹಾಕಿ ಕೊಂಡಿರತಕ್ಕ ಯೋಜನೆಗಳಾವುವು? ಯಾವ್ಯಾವ ವರ್ಷಕ್ಕೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಎಂದು ಪ್ರಶ್ನೆ ಕೇಳಿದಕ್ಕೆ ಉತ್ತರವಾಗಿ ೧೯೮೭-೮೮ರ ಬಗ್ಗೆ ತಾವು ಹೇಳಿದ್ದೀರಿ. ೧೯೮೯-೯೦, ೧೯೯೦-೯೧ ಮತ್ತು ೧೯೯೧-೯೨ನೇ ಸಾಲಿನಲ್ಲಿ ನೀವು ಎಷ್ಟು ಹಣವನ್ನು ತೋಟಗಾರಿಕೆ ಇಲಾಖೆಯಲ್ಲಿ ಖರ್ಚು ಮಾಡಿದ್ದೀರಿ? ಅದರಲ್ಲಿ ಮಂಡ್ಯ ಜಿಲ್ಲೆಗೆ ಎಷ್ಟು? ಅದರಲ್ಲಿ ನಾಗಮಂಗಲಕ್ಕೆ ಎಷ್ಟು ಎಂಬುದನ್ನು ದಯವಿಟ್ಟು ತಿಳಿಸಬೇಕು. ನಾಗಮಂಗಲ ತಾಲ್ಲೂಕಿನಲ್ಲಿ ಮಲ್ಲಸಂದ್ರ ಮತ್ತು ಜವರನ ಹಳ್ಳಿಯ ಎರಡು ಫಾರಂಗಳು ಇವೆ. ಮಲ್ಲಸಂದ್ರ ಫಾರಂ ೮೮೭ ಎಕರೆ ಇದೆ. ಜವರನಹಳ್ಳಿ ಫಾರಂ ೫೫ ಎಕರೆ ಇದೆ. ನಾಗಮಂಗಲ ತಾಲ್ಲೂಕು ಮಂಡ್ಯ ಜಿಲ್ಲೆಯಲ್ಲಿ ಬಹಳ ನಿಕೃಷ್ಟವಾದ ಮತ್ತು ಬರ ಬರತಕ್ಕ ತಾಲ್ಲೂಕು ಎಂದು ತಮಗೆ ಗೊತ್ತಿದೆ. ಅಲ್ಲಿ ಒಳ್ಳೆಯ ಹಣ್ಣಿನ ಗಿಡಗಳು ಇರತಕ್ಕದ್ದು ತಮಗೆ ಗೊತ್ತಿದೆ. ಇವತ್ತು ಅಲ್ಲಿ ಏನಾಗಿದೆ ಅಂದರೆ ಫಾರಂಗಳಲ್ಲಿ ನಮ್ಮ ಸಿಬ್ಬಂದಿ ನಾಲ್ಕಾರು ವರ್ಷಗಳಿಂದ ಕಲ್ಟಿವೇಷನ್ ಮಾಡುತ್ತಿಲ್ಲ ಅದನ್ನು ನೋಡುತ್ತಿಲ್ಲ.. ಅದನ್ನು ಪುಯನಶ್ಚೇತನಗೊಳಿಸುವ ಬಗ್ಗೆ ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ದಯಿವಿಟ್ಟು ತಿಳಿಸಬೇಕು.

ಶ್ರೀ ಎಂ. ಎಸ್. ಆತ್ಮಾನಂದ:- ಶ್ರೀಯುತ ಶಿವರಾಮೇಗೌಡರು ಕೇಳಿರತಕ್ಕ ಮೊದಲನೆಯ ಪ್ರಶ್ನೆಗೆ ಉತ್ತರ ಹೇಳುವುದಾದರೆ ಒಟ್ಟಾರೆ ರಾಜ್ಯದಲ್ಲಿ ೧೯೮೦-೯೦ನೇ ಸಾಲಿನಲ್ಲಿ

ಯೋಜನಾ ವೆಚ್ಚ ೩೪೦.೭೦ ಲಕ್ಷ ರೂಪಾಯಿಗಳು. ಯೋಜನೇತರ ವೆಚ್ಚ ೧೨೩.೭೬ ಲಕ್ಷ ರೂಪಾಯಿಗಳು. ಅದೇರೀತಿ ೧೯೯೦-೯೧ನೆ ಸಾಲಿನಲ್ಲಿ ಯೋಜನಾ ವೆಚ್ಚ ೩೭೭.೨೧ ಲಕ್ಷ ರೂಪಾಯಿ ಯೋಜನೇತರ ವೆಚ್ಚ ೧೩೬೧.೭೨ ಲಕ್ಷ ರೂಪಾಯಿಗಳು. ಹಾಗೆಯೇ ೧೯೯೧-೯೨ನೇ ಸಾಲಿನಲ್ಲಿ ಯೋಜನಾವೆಚ್ಚ ೬೮೫.೯೮ ಲಕ್ಷ ರೂಪಾಯಿಗಳು ಯೋಜನೇತರ ವೆಚ್ಚ ೧೯೭.೦೪ ಲಕ್ಷ ರೂಪಾಯಿಗಳು. ಈ ರೀತಿಯಾಗಿ ರಾಜ್ಯದಲ್ಲಿ ಹಣವನ್ನು ಖರ್ಚು ಮಾಡಿದ್ದೇವೆ. ಮಾನ್ಯ ಸದಸ್ಯರು ಮಂಡ್ಯ ಜಿಲ್ಲೆ ಅದರಲ್ಲೂ ನಾಗಮಂಗಲ ತಾಲ್ಲೂಕಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ನಾನು ಅವರಿಗೆ ಅದರ ಬಗ್ಗೆ ಪ್ರತ್ಯೇಕವಾಗಿ ಉತ್ತರ ಒದಗಿಸಿಕೊಡುತ್ತೇನೆ. ಮಲ್ಲಸಂದ್ರ ಫಾರಂ ಮಂಡ್ಯ ಜಿಲ್ಲೆಯಲ್ಲಿದೆ ಅದು ಅತಿ ಹೆಚ್ಚಿನ ವಿಸ್ತಾರವುಳ್ಳಂತಹ ಒಂದು ಕ್ಷೇತ್ರವಾಗಿದೆ. ಆವೊಂದು ಕ್ಷೇತ್ರಕ್ಕೆ ೧೯೯೧-೯೨ನೇ ಸಾಲಿನಲ್ಲಿ ಸುಮಾರು ೪.೮೦ ಲಕ್ಷ ರೂಪಾಯಿ ಹಣವನ್ನು ಖರ್ಚು ಮಾಡಿದ್ದೇವೆ. ಅಲ್ಲಿ ಇನ್ನೂ ಕೂಡ ಅಭಿವೃದ್ಧಿಯಾಗಬೇಕಾದ ಜಾಗ ಸಾಕಷ್ಟು ಇರುವುದರಿಂದ ೧೯೯೨-೯೩ನೇ ಸಾಲಿನಲ್ಲಿ ಮಾನ್ಯ ಶಾಸಕರ ಸಲಹೆಯನ್ನು ಪಡೆದುಕೊಂಡು ಈವೊಂದು ಕ್ಷೇತ್ರವನ್ನು ಅಭಿವೃದ್ಧಿ ಮಾಡಲು ಕ್ರಮ ಕೈಗೊಳ್ಳುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ. ಜವರನಹಳ್ಳಿ ಕ್ಷೇತ್ರ ನಮ್ಮ ಜಿಲ್ಲೆಯ ಬಹಳ ಹಳೆಯದಾದ ತೋಟಗಾರಿಕಾ ಕ್ಷೇತ್ರ. ಅಲ್ಲೂ ಕೂಡ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿದೆ. ಅದರ ಎದುರುಗಡೆ ಇತ್ತೀಚೆಗೆ ಬಾಲಗಂಗಾಧರನಾಥ ನಗರದಲ್ಲಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಕೂಡ ಬಂದಿದೆ. ಒಳರೋಗಿಗಳು ಅಲ್ಲಿ ವಿಶ್ರಾಂತಿ ತೆಗೆದುಕೊಳ್ಳ ತಕ್ಕ ದೃಷ್ಟಿಯಿಂದ ಅಲ್ಲೂ ಕೂಡ ರೋಗಿಗಳಿಗೆ ಸೌಲಭ್ಯವನ್ನು ಒದಗಿಸುವ ಕಾರ್ಯವನ್ನು ೧೯೯೨-೯೩ನೇ ಸಾಲಿನಲ್ಲಿ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಅವರಿಗೆ ತಿಳಿಸುತ್ತೇನೆ.

ಡ್ಯಾನಿಡಾ ಯೋಜನೆ

೩೬೦(೧೯೧೬)ಶ್ರೀ ಮಂಜುನಾಥ್ ಸಿ. ಕುನ್ನೂರರು (ಶಿಗ್ಗಾಂವ್):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದಲ್ಲಿ ಡ್ಯಾನಿಡಾ ಯೋಜನೆಯಡಿಯಲ್ಲಿ ಯಾವ ಯಾವ ಕ್ಷೇತ್ರಗಳನ್ನು ರಾಷ್ಟ್ರೀಯ ಜಲಾನಯನ ಕ್ಷೇತ್ರವೆಂದು ಆಯ್ಕೆ ಮಾಡಿಕೊಳ್ಳಲಾಗಿದೆ;

ಆ) ಸದರಿ ಯೋಜನೆಯಲ್ಲಿ ೯೧-೯೨ರಲ್ಲಿ ಎಷ್ಟು ಹಣ ರಾಜ್ಯ ಸರ್ಕಾರದಿಂದ ಖರ್ಚು ಮಾಡಲಾಗಿದೆ.

ಇ) ಧಾರವಾಡ ಜಿಲೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ, ಅದರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ;

ಈ) ಶಿಗ್ಗಾವ್ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಯಾವ ಯಾವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ; ಅದರಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ.

ಶ್ರೀ ಎಸ್. ಚಿಕ್ಕೇಗೌಡ (ಕೃಷಿ ಸಚಿವರು):-

ಅ) ರಾಜ್ಯದಲ್ಲಿ ಡ್ಯಾನಿಡಾ ನೆರವಿನಿಂದ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಯನ್ನು

೧೯೯೧-೯೨ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಈ ಯೋಜನಡಿಯಲ್ಲಿ ೧೪ ಜಲಾನಯನಗಳು ಆಯ್ಕೆಯಾಗಿದ್ದು ಅದರ ವಿವರಗಳು ಕೆಳಕಂಡಂತಿವೆ.

ಉತ್ತರ ಕನ್ನಡ ಜಿಲ್ಲೆ - ೨ ಜಲಾನಯನಗಳು (ಸಿದ್ದಾಪುರ, ಹಳಿಯಾಳ ತಾಲ್ಲೂಕುಗಳು)

ಧಾರವಾಡ ಜಿಲ್ಲೆ - ೬ ಹಾವೇರಿ, ಹಾನಗಲ್, ಶಿಗ್ಗಾಂವ್, ಬ್ಯಾಡಗಿ, ಹುಬ್ಬಳ್ಳಿ, ಧಾರವಾಡ ತಾಲ್ಲೂಕುಗಳು) ಸೌದತ್ತಿ, ರಾಮದುರ್ಗ.

ಬೆಳಗಾಂ ಜಿಲ್ಲೆ - ೬ ಖಾನಾಪುರ, ಬೆಳಗಾಂ, ಬೈಲ್‌ಹೊಂಗಲ್, ಹುಕ್ಕೇರಿ, ತಾಲ್ಲೂಕುಗಳಲ್ಲಿ.

ಆ) ಡ್ಯಾನಿಡಾ ಯೋಜನೆಗೆ ೧೯೯೧-೯೨ನೇ ಸಾಲಿಗೆ ರೂ. ೨೦೦ ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದ್ದು, ೨೯-೨-೯೨ರವರಿಗೂ ರೂ. ೧೩೯ ಲಕ್ಷಗಳು ಖರ್ಚಾಗಿದೆ.

ಇ) ಧಾರವಾಡ ಜಿಲ್ಲೆಗೆ ರೂ. ೪೫ ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ ಹಾಗೂ ೨೯-೨-೯೨ರವರವಿಗೂ ರೂ. ೩೫ ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಈ) ಶಿಗ್ಗಾವ್ ತಾಲ್ಲೂಕಿನಲ್ಲಿ ಡ್ಯಾನಿಡಾ ಯೋಜನೆಯಲ್ಲಿ ಶಿಶುವಿನಾಳ ಕ್ಷೇತ್ರವನ್ನು ಆಯ್ಕೆ ಮಾಡಲಾಗಿದೆ. ಇಲ್ಲಿವರೆವಿಗೂ ರೂ. ೬.೪೪ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಸವಣೂರು ತಾಲ್ಲೂಕು ಈ ಯೋಜನೆಯಲ್ಲಿ ಸೇರಿಲ್ಲ.

ಶ್ರೀ ಮಂಜುನಾಥ ಸಿ. ಕುನ್ನೂರು:- ಮಾನ್ಯ ಅಧ್ಯಕ್ಷಿಣಿಯವರೇ, ರಾಜ್ಯದಲ್ಲಿ ಡ್ಯಾನಿಡ ಯೋಜನೆಯಡಿಯಲ್ಲಿ ಯಾವ್ಯಾವ ಕ್ಷೇತ್ರಗಳನ್ನು ರಾಷ್ಟ್ರೀಯ ಜಲಾನಯನ ಪ್ರದೇಶಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ, ಉತ್ತರದಲ್ಲಿ ಒಟ್ಟು ಉತ್ತರ ಕನ್ನಡ ಜಿಲ್ಲೆಯಲ್ಲಿ ೨, ಧಾರವಾಡ ಜಿಲ್ಲೆಯಲ್ಲಿ ೬ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ೬ ಹೀಗೆ ೧೪ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನನ್ನ ಮತಕ್ಷೇತ್ರವಾದ ಶಿಗ್ಗಾಂವ್ ತಾಲ್ಲೂಕಿನ ಶಿಶುನಾಳ ಗ್ರಾಮವನ್ನು ರಾಷ್ಟ್ರೀಯ ಜಲಾಯನ ಯೋಜನೆಯಲ್ಲಿ ಅಳವಡಿಸಿದ್ದೇವೆ ಎಂದು ಹೇಳಿದ್ದಾರೆ. ಇದಕ್ಕೆ ಒಟ್ಟು ೬.೪೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಧಾರವಾಡ ಜಿಲ್ಲೆಯಲ್ಲಿ ಒಟ್ಟು ೩೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಮತ್ತು ೧೯೯೧-೯೨ರಲ್ಲಿ ಈ ೧೪ ಯೋಜನೆಗಳಿಗೆ ಈಗಾಗಲೇ ೧೩೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ ಡ್ಯಾನಿಡಾ ಯೋಜನೆಯೆಂದರೆ ಡೆನ್ಮಾರ್ಕ್ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಸಹಾಯಧನ ನೀಡುತ್ತಿದ್ದು ಅದರ ಯೋಜನೆಯಡಿ ೧೯೯೦-೯೧ನೇ ಸಾಲಿನಿಂದ ಈ ಒಂದು ಕಾರ್ಯಕ್ರಮ ಪ್ರಾರಂಭವಾಗಿದೆ. ಆದರೆ ಈ ಯೋಜನೆ ಬಗ್ಗೆ ನಮ್ಮ ಗ್ರಾಮೀಣ ಭಾಗದ ರೈತರಿಗೆ ಯಾವ ಪ್ರಚಾರವನ್ನೂ ಕೂಡ ಮಾಡಿರುವುದಿಲ್ಲ. ನಮ್ಮ ಈ ಯೋಜನೆಯಡಿ ಯ್ಯಾವ್ಯಾವ ಕೆಲಸಗಳನ್ನು ಕೈಗೊಂಡಿದ್ದಾರೆ ಎಂಬ ಮಾಹಿತಿ ಇಲ್ಲದೆ ಇರುವುದರಿಂದ ಮಾನ್ಯ ಸಚಿವರು ಯಾವ ಕ್ರಮ ಕೈಗೊಂಡಿದ್ದಾರೆ ಎಂದು ತಿಳಿಸಬೇಕೆಂದು ತಮ್ಮ ಮೂಲಕ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಚಿಕ್ಕೇಗೌಡ:- ಮಾನ್ಯ ಸದಸ್ಯರಾದ ಶ್ರೀ ಕುನ್ನೂರು ಅವರು ಈ ಡೆನಿಡಾ ಯೋಜನೆಗೆ ಎಷ್ಟು ಖರ್ಚಾಗಿದೆ, ಧಾರವಾಡ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿಗೆ ಎಷ್ಟು

ಖರ್ಚಾಗಿದೆಯೆಂದು ನಾನು ಸವಿಸ್ತಾರವಾಗಿ ಹೇಳಿದಂಥ ಉತ್ತರವನ್ನು ಮತ್ತೆ ಪುನರುಚ್ಚರಿಸಿದ್ದಾರೆ. ಈಗ ಈ ಯೋಜನೆ ಬಂದು ನಾಲ್ಕೂವರೆ ವರ್ಷವಾಗಿದೆ. ಇದಕ್ಕೆ ನೂರಕ್ಕೆ ನೂರರಷ್ಟು ಡ್ಯಾನಿಶ್ ಸರ್ಕಾರದವರು ಹಣ ಒದಗಿಸುತ್ತಾರೆ. ಈಗ ೧೯೯೧-೯೨ನೇ ಸಾಲಿನದ್ದು ಸೇರಿ ಇದುವರೆಗೆ ಈ ಡೆನಿಡಾ ಯೋಜನೆಯು ೮.೩ ಕೋಟಿ ರೂಪಾಯಿ ಇದ್ದು ೧೯೯೧-೯೨ನೇ ಸಾಲಿಗೆ ವಾಹನ ಮತ್ತು ಸಿಬ್ಬಂದ್ದಿ ಅಭಿವೃದ್ಧಿ ಕಾರ್ಯಗಳು ಎಲ್ಲ ಸೇರಿ ೨೦೦ ಲಕ್ಷ ರೂಪಾಯಿ ಖರ್ಚಾಗಿದೆ. ಮತ್ತು ಶಿಶುನಾಳ ತಾಲ್ಲೂಕಿನಲ್ಲಿ ೧೦ ಲಕ್ಷ ರೂಪಾಯಿ ಅನುದಾನ ಇದ್ದು ಇಲ್ಲಿಯವರೆಗೆ ೬.೪೪ ಲಕ್ಷ ರೂಪಾಯಿ ಖರ್ಚಾಗಿದೆ. ಇದು ಶಿಶುನಾಳ ಅವರ ಕ್ಷೇತ್ರಕ್ಕೆ ಸೇರಿದ್ದು.

ಇದು ನೂರಕ್ಕೆ ನೂರರಷ್ಟು ಡೆನಿಡಾ ಯೋಜನೆ. ಆದ್ದರಿಂದ ಅವರು ಇನ್ನೂ ಹೆಚ್ಚು ವಿವರ ಬೇಕೆಂದು ಮತ್ತೊಂದು ಸಾರಿ ಪ್ರಶ್ನೆ ಕೇಳಿದರೆ ಹೆಚ್ಚಿನ ಮಾಹಿತಿ ಬೇಕಾದರೆ ನಾನು ಕೊಡುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರು:- ಇದರ ವಿವರಗಳನ್ನು ನೋಡಲಾಗಿ ಇದು ರಾಷ್ಟ್ರೀಯ ಜಲಾಯನ ಪ್ರದೇಶ ಯೋಜನೆ ಎಂದು ಇದೆ. ಈ ೧೪ ಪ್ರದೇಶಗಳನ್ನು ಬಿಟ್ಟರೆ ಮತ್ತೆ ಬೇರೆ ಪ್ರದೇಶಗಳನ್ನು ಈ ಯೋಜನೆಯ ಮುಖಾಂತರ ಗುರುತು ಮಾಡುವುದಕ್ಕೆ ಆಗುತ್ತದೆಯೇ ಹೇಗೆ? ಮತ್ತು ಯಾವ ಇಲಾಖೆಯವರು ಈ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದಾರೆ ಎಂದು ದಯವಿಟ್ಟು ತಿಳಿಸಬೇಕೆಂದು ಮಾನ್ಯ ಸಚಿವರನ್ನು ಕೇಳಿಕೂಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ:- ಕೃಷಿ ಇಲಾಖೆಗೆ ಸಂಬಂಧಪಟ್ಟವರೇ ಈ ಎಲ್ಲ ಯೋಜನೆಗಳನ್ನು ಕಾರ್ಯಗತ ಮಾಡತಕ್ಕವರು ಎಂದು ಮಾನ್ಯ ಸದಸ್ಯರಿಗೆ ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರು:- ಈ ಪ್ರದೇಶಗಳನ್ನು ಯಾವ ಆಧಾರದ ಮೇಲೆ ಗುರುತು ಮಾಡಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ:- ಇದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದರೆ, ಯಾವ್ಯಾವ ಆಧಾರ ಇಟ್ಟುಕೊಂಡು ಈ ಪ್ರದೇಶಗಳನ್ನು ಸಮೀಕ್ಷೆ ನಡೆಸಿ, ಗುರುತಿಸಿದ್ದಾರೆ. ಮತ್ತು ಕಾರ್ಯಗತ ಮಾಡುತ್ತಿದ್ದಾರೆ ಎಂದು ಹೇಳುತ್ತೇನೆ.

ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್:- ಶಿಗ್ಗಾಂವ್ ತಾಲ್ಲೂಕಿನ ಶಿಶುನಾಳ ಮತ ಕ್ಷೇತ್ರ ನನಗೂ ಬರುತ್ತದೆ. ಅಲ್ಲಿರತಕ್ಕಂಥ ರೈತರಿಗೆ ಇದರಿಂದ ಸದುಪಯೋಗ ಆಗಿದೆಯೇ ಎಂದು ನಾನು ಕೇಳುತ್ತೇನೆ. ೬.೪೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಈ ಕೆಲಸ ಎಲ್ಲಿ ನಡೆದಿದೆ ಮತ್ತು ಇದರ ಪ್ರಯೋಜನ ರೈತರಿಗೆ ಆಗಿದೆಯೇ ಎಂದು ಮಾನ್ಯ ಸಚಿವರು ಹೇಳುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ:- ಹತ್ತು ಲಕ್ಷ ರೂಪಾಯಿ ಅನುದಾನವಿದ್ದು ಅದರಲ್ಲಿ ಖರ್ಚಾಗಿರುವುದು ೬ ಲಕ್ಷ ೪೪ ಸಾವಿರ ರೂಪಾಯಿಗಳು ಮಾತ್ರ. ನಿಮ್ಮ ಶಿಶುನಾಳ ಕ್ಷೇತ್ರದಲ್ಲಿ ಡೆನಿಡಾ ಯೋಜನೆಯಲ್ಲಿ ಇಷ್ಟು ಖರ್ಚಾಗಿದೆ.

ಶ್ರೀ ಗೋವಿಂದಪ್ಪ ಜುಟ್ಟಲ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಗಮನಕ್ಕೆ ನಾನು ತರಬಯಸುತ್ತೇನೆ. ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಕಚೇರಿಗೆ ಹುಡುಕುತ್ತಾ ಹೋದರೂ, ಆ

ಭಾಗದ ಒಬ್ಬ ಶಾಸಕನಾಗಿ ಆ ಅಧಿಕಾರಿಗಳಿಗೆ ಈ ಕೆಲಸ ತೆಗೆದುಕೊಳ್ಳಿ ಎಂದು ಹೇಳಿ ಕೊಟ್ಟರೂ ಸಹ ಇನ್ನೂ ಕೂಡ ಅವರು ಕಾರ್ಯ ಪ್ರವೃತ್ತರಾಗಿಲ್ಲ. ಈ ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ತಾವು ತುರ್ತಾಗಿ ಈ ಕೆಲಸ ಪ್ರಾರಂಭ ಮಾಡಲಿಕ್ಕೆ ಆದೇಶ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್ ಚಿಕ್ಕೇಗೌಡ:- ಖಂಡಿತವಾಗಿ ಕೊಡುತ್ತೇನೆ.

ಲಾಲ್‌ಬಾಗ್ ಹತ್ತಿರ ವಿದ್ಯುತ್ ಚಿತಾಗಾರದಿಂದ ಮಾಲಿನ್ಯ

೨೫೮(೧೬೪೯)ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕ ಪೇಟೆ):- ಮಾನ್ಯ ವಿಜ್ಞಾನ ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬೆಂಗಳೂರು ನಗರದಲ್ಲಿ ಲಾಲಬಾಗ್ ಗೇಟಿನ ಬಳಿ ಒಂದು ವಿದ್ಯುತ್ ಚಿತಾಗಾರ ಇದೆ ಎನ್ನುವುದು ನಿಜವೇ;

ಆ) ಈ ವಿದ್ಯುತ್ ಚಿತಾಗಾರದಲ್ಲಿ ಶವಗಳನ್ನು ಸುಡುವುದರಿಂದ ಉಂಟಾಗುವ ಕೆಟ್ಟ ವಾಸನೆಯುಳ್ಳ ಹೊಗೆಯಿಂದಾಗಿ ಅಲ್ಲಿನ ವಾತಾವರಣದಲ್ಲಿನ ಗಾಳಿಯು ಮಲಿನವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರವು ಈ ವಿದ್ಯುತ್ ಚಿತಾಗಾರವನ್ನು ಬೇರೆಡೆಗೆ ಸ್ಥಳಾಂತರಿಸುವ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ತಂತ್ರಜ್ಞಾನ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು):-

ಅ) ಹೌದು

ಆ) ಬಂದಿದೆ

ಇ) ಸ್ಥಳೀಯ ಜನರಿಂದ ದೂರುಗಳು ಬಂದಿದ್ದು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಚಿತಾಗಾರಕ್ಕೆ ಸೂಕ್ತವಾದ ನಿಯಂತ್ರಣ ಉಪಕರಣಗಳನ್ನು ಅಳವಡಿಸಲು ಕಮೀಷನರ್, ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಪತ್ರ ದಿನಾಂಕ ೧೦-೯-೯೦ ರಲ್ಲಿ ತಿಳಿಸಿರುತ್ತಾರೆ. ಇದರ ಬಗ್ಗೆ ಮಂಡಳಿ ಅರೆ ಸರ್ಕಾರಿ ಪತ್ರದ ಮೂಲಕ ದಿನಾಂಕ ೨೩-೩-೯೧ ರಂದು ಜ್ಞಾಪಿಸಲಾಗಿದೆ. ಈ ಬಗ್ಗೆ ಕಮೀಷನ್‌ರವರಿಂದ ಉತ್ತರ ಬಾರದೆ ಇದ್ದುದರಿಂದ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು ಮಾಲಿನ್ಯ ನಿಯಂತ್ರಣ ಖಾಯಿದೆ ೧೯೮೧ರ ಸೆಕ್ಷನ್ ೨೧ರ ಪ್ರಕಾರ ಹಾಗೂ ಜಲ ಮಾಲಿನ್ಯ ನಿಯಂತ್ರಣ ಖಾಯಿದೆ ೧೯೭೪ರ ಸೆಕ್ಷನ್ ೨೫:೨೬ರ ಅಡಿಯಲ್ಲಿ ಕಾನೂನು ಪ್ರಕಾರ ಏಕೆ ಕ್ರಮ ತೆಗೆದುಕೊಳ್ಳಬಾರದು ಎಂದು ಕಾರಣ ಕೇಳುವ ಸೂಚನಾ ಪತ್ರವನ್ನು ದಿನಾಂಕ ೨೭.೧.೯೨ರಂದು ಜಾರಿಗೊಳಿಸಲಾಗಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಏನೆಂದರೆ, ಬೆಂಗಳೂರು ಮಹಾನಗರದಲ್ಲಿ ಲಾಲ್‌ಬಾಗ್ ಗೇಟ್ ಹತ್ತಿರ ಒಂದು ಎಲೆಕ್ಟ್ರಿಕ್ ಕ್ರಿಮಿಟೋರಿಯಂ ಇದೆ. ಆದರ

ಸುತ್ತಮುತ್ತ ಬಡಾವಣೆಗಳಿವೆ. ವಿಲ್ಸನ್‌ಗಾರ್ಡನ್ ದೊಡ್ಡ ಬಡಾವಣೆ ಇದೆ. ಜಯನಗರ ದೊಡ್ಡ ಬಡಾವಣೆ ಇದೆ. ಸಿದ್ದಾಪುರ ದೊಡ್ಡ ಬಡಾವಣೆ ಇದೆ. ಈ ವಿದ್ಯುತ್ ಚಿತಾಗಾರದಲ್ಲಿ ಶವಗಳನ್ನು ಸುಡುವ ವಾಸನೆ ಲಾಲ್‌ಬಾಗ್ ಮೈನ್ ಗೇಟ್‌ವರೆಗೂ ಬರುತ್ತದೆ. ಅಲ್ಲಿ ತಮಿಳುನಾಡಿಗೆ ಹೋಗುವ ನ್ಯಾಷನಲ್ ಹೆದ್ದಾರಿ ಇದೆ. ಅಲ್ಲಿ ಯಾರು ಓಡಾಡಿದರೂ, ಫಾರಿನ್ ಟೂರಿಸ್ಟ್‌ಗಳು ಬಂದರೂ, ಡೊಮೆಸ್ಟಿಕ್ ಟೂರಿಸ್ಟ್‌ಗಳು ಬಂದರೂ ನಮ್ಮ ರಾಜ್ಯದ ಪ್ರವಾಸಿಗರು ಬಂದರೂ ಲಾಲ್‌ಬಾಗ್‌ಗೆ ಹೋಗಬೇಕಾದರೆ ಅಲ್ಲಿ ಹೆಣ ಸುಡುವ ವಾಸನೆ ತೆಗೆದುಕೊಂಡೇ ಲಾಲ್‌ಬಾಗ್ ಒಳಗೆ ಹೋಗಬೇಕಾಗಿದೆ. ಈ ಪರಿಸ್ಥಿತಿ ಇರುವಾಗ ನನ್ನ ಎರಡನೇ ಪ್ರಶ್ನೆಗೆ ಇದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಬಂದಿದ್ದರೆ ಏನು ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದರೆ ೯-ನೇ ಇಸವಿ ಸೆಪ್ಟಂಬರ್ ತಿಂಗಳಲ್ಲಿ ನೋಟಿಸ್ ಕೊಟ್ಟಿದ್ದೇವೆ, ನಂತರ ೧೯೯೧ನೇ ಮಾರ್ಚಿಯಲ್ಲಿ ಒಂದು ರಿಮೈಂಡರ್ ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ಮತ್ತೆ ಈಗ ನನ್ನ ಪ್ರಶ್ನೆ ಹೋದ ಮೇಲೆ ಜನವರಿ ೧೯೯೨ರಲ್ಲಿ ಕಾರ್ಪೋರೇಷನ್ ಕಮಿಷನರ್‌ಗೆ ಇನ್ನೊಂದು ಷೋಕಾಸ್ ನೋಟೀಸ್ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಎರಡು ವರ್ಷಗಳಿಂದ ಬರೀ ನೋಟೀಸ್‌ಗಳನ್ನು ಕೊಟ್ಟುಕೊಂಡೇ ಇದ್ದರೆ ವಾಯುಮಾಲಿನ್ಯ ಏನಾಗಿದೆ, ಬೆಂಗಳೂರು ಸಿಟಿ ಮಧ್ಯದಲ್ಲಿ ಜನಗಳು ಹೆಣ ಸುಡುವ ವಾಸನೆಯನ್ನು ಕುಡಿದುಕೊಂಡು ಓಡಾಡುತ್ತಿದ್ದಾರೆ. ನಿಮ್ಮ ಡಿಪಾರ್ಟ್‌ಮೆಂಟ್ ಸಿಬ್ಬಂದಿ ಏನು ಮಾಡುತ್ತಿದ್ದಾರೆ, ಇದಕ್ಕೆ ಏನಾದರೂ ಒಂದು ಸಲ್ಯೂಷನ್ ಹುಡುಕಿಕೊಡುತ್ತಾರೆಯೇ ಎಂದು ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ:- ಮಾನ್ಯ ಸದಸ್ಯರು ಒಳ್ಳೆಯ ಸ್ವಾರಸ್ಯಕರವಾದ ಪ್ರಶ್ನೆಯನ್ನು ಕೇಳಿದ್ದಾರೆ. ನಾನು ಆ ಸ್ಥಳದಲ್ಲಿ ಹೋಗಿ ಬರುವಾಗ ಮೂಗು ಹಿಡಿದುಕೊಂಡು ಹೋಗಿದ್ದೇನೆ, ಮೂಗು ಮುಚ್ಚಿಕೊಂಡು ಹೋಗಿದ್ದೇನೆ. ನೀವು ಹೇಳಿದ್ದೆಲ್ಲ ಸರಿ. ನಾನು ಮುನಿಸಿಪಲ್ ಕಮೀಷನರ್‌ರವರನ್ನು ಕರೆದು ನಿರ್ದೇಶನ ಕೊಟ್ಟಿದ್ದೇನೆ. ಅದನ್ನು ನಿಲ್ಲಿಸಿದ್ದಾರೆ. ಈಗ ಎತ್ತರ ಮಾಡಿದ್ದಾರೆ. ಈಗ ಸರಿಯಾಗಿದೆ. ಅದನ್ನು ಇನ್ನೂ ಜಾರಿಗೆ ಕೊಟ್ಟಿಲ್ಲವೆಂದು ಕಾಣುತ್ತದೆ. ಬಹುಶಃ ಇದೇ ರೀತಿ ಬೆಂಗಳೂರು ಸಿಟಿಯಲ್ಲಿ ಎಲ್ಲೆಲ್ಲಿ ಇಂತಹ ಕಾರ್‍ಯಾಗಾರಗಳು ಇವೆ ಅವೆಲ್ಲವುಗಳನ್ನು ಎತ್ತರ ಮಾಡಬೇಕು. ಅಲ್ಲಿ ಏನು ದುರ್ವಾಸನೆ ಬರುತ್ತದೆ ಅದನ್ನು ನಿಲ್ಲಿಸಬೇಕು ಎಂದು ಹೇಳಿದ್ದೇನೆ. ಅವರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದು ಒಂದು ಒಳ್ಳೆಯ ಸೂಚನೆ. ನಾನು ಕ್ರಮ ತೆಗೆದುಕೊಂಡ ಮೇಲೆ ತಾವು ಈ ಪ್ರಶ್ನೆ ಕೇಳುತ್ತಿರಲಿಲ್ಲವೆಂದು ಕಾಣಿಸುತ್ತದೆ. ನಾನು ಕ್ರಮ ತೆಗೆದುಕೊಂಡಿದ್ದೇನೆ. ಅವರಿಗೆ ಸೂಚನೆ ಕೊಟ್ಟಿದ್ದೇನೆ, ಕೆಲಸ ಮಾಡುತ್ತಿದ್ದಾರೆ. ಉಳಿದ ಕಾರ್‍ಯಾಗಾರಗಳನ್ನು ರಿಪೇರಿ ಮಾಡಬೇಕೆಂದು ಹೇಳಿದ್ದೇನೆ, ಮಾಡುತ್ತಿದ್ದಾರೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಅದು ರಿಪೇರಿಯಲ್ಲಿದೆ.

ಶ್ರೀ ಬಿ. ಬಸವಲಿಂಗಪ್ಪ:- ಲಾಲ್‌ಬಾಗ್‌ದು ಮುಗಿಸಿದ್ದಾರೆ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಅಧ್ಯಕ್ಷರೇ ಇದು ನನ್ನ ಕ್ಷೇತ್ರಕ್ಕೆ ಬರುತ್ತದೆ. ಅಲ್ಲಿ ಮೇಜರ್ ರಿಪೇರಿ ಆಗುತ್ತಿದೆ. ಅದರ ಚಿಮಣಿ ಇನ್ನೂ ಬಹಳ ಎತ್ತರಕ್ಕೆ ಹೋಗಬೇಕು. ಇಲ್ಲದೇ ಹೋದರೆ ಸುತ್ತಮುತ್ತ ವಾಸನೆ ಬರುತ್ತದೆ. ಈಗಿರುವ ಹೈಟ್ ಸಾಲದು, ಬಹಳ ಕಡಿಮೆ ಆಯಿತು, ಜಾಸ್ತಿ ಹೈಟ್ ಮಾಡಬೇಕು. ತಾವು ಇದರ ಬಗ್ಗೆ ಆದೇಶ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ:- ನಾನು ಒಪ್ಪುತ್ತೇನೆ. ಈಗ ಎತ್ತರ ಮಾಡಿದ್ದಾರೆ. ಅಲ್ಲಿ ಇನ್ನೂ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ಅದನ್ನು ಇನ್ನೂ ಎತ್ತರ ಮಾಡುವುದಾದರೆ ಮತ್ತೆ ಪರೀಕ್ಷೆ ಮಾಡಿ ಸೂಚನೆ ಕೊಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ತುಮಕೂರು ಜಿಲ್ಲಾ ಪರಿಷತ್ತಿನಿಂದ ತೆರೆದ ಪಶು ವೈದ್ಯಶಾಲೆಗಳು

೩೫೬(೧೮೩೨) ಶ್ರೀ ಮಾಧು ಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ತುಮಕೂರು ಜಿಲ್ಲಾಪರಿಷತ್ ವತಿಯಿಂದ ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ಎರಡು ವರ್ಷಗಳ ಹಿಂದೆ ಆರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅವುಗಳನ್ನು ಮುಂದುವರಿಸಿ, ಸಿಬ್ಬಂದಿ ನೇಮಕ ಮಾಡುವ ಆಲೋಚನೆ ಏನಾದರೂ ಇದೆಯೆ;

ಇ) ಇದ್ದಲ್ಲಿ ಎಂದಿನಿಂದ ಈ ಕೆಲಸ ಆರಂಭ ಮಾಡಬಹುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಹೌದು, ಆದರೆ ಇವುಗಳಿಗೆ ಸರ್ಕಾರದ ಮಂಜೂರಾತಿ ನೀಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಮಲಪ್ರಭಾ ಯೋಜನೆಯ ಪುನರ್‌ವಸತಿ ಕೇಂದ್ರಗಳಿಗೆ ಡ್ರಯನೇಜ್ ವ್ಯವಸ್ಥೆ

೩೫೭(೨೧೪೫)ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬೆಳಗಾವಿ ಜಿಲ್ಲೆ ಮಲಪ್ರಭಾ ಯೋಜನೆಯಲ್ಲಿ ಮುಡುಗಡೆಯಾದ ಏರಿ ಪುನರ್‌ವಸತಿಗೆ ಹೊಸದಾಗಿ ನಿರ್ಮಿಸಲಾದ ಪುನರ್ ವಸತಿ ಕೇಂದ್ರಗಳಾದ ಬೈಲಹೊಂಗಲ ತಾಲ್ಲೂಕು ದರ್ಬೂರ, ಗುಡದೂರ, ಅರವಳ್ಳಿ, ಚಿಕ್ಕಮುಳಕೂರು ಗ್ರಾಮಗಳಲ್ಲಿ ನೀರಾವರಿ ಇಲಾಖೆ ಇವರು ಅಂಡರ್ ಗ್ರೌಂಡ್ ಡ್ರಾಯನೇಜ್ ಯೋಜನೆಯನ್ನು ಮಾಡದೇ ಇರವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಯೋಜನೆಯನ್ನು ಮಾಡದೇ ಇರುವುದರಿಂದ ಜನರು ರಸ್ತೆಯ ಬದಿಗೆ ಮಲಮೂತ್ರ ವಿಳರ್ಜನೆ ಮಾಡುತ್ತಿದ್ದು ಅಲ್ಲಿಯ ಪರಿಸರ ಕೆಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪರಿಸರ ಮತ್ತು ಮಾಲಿನ್ಯ ಕಾಯಿದ ಪ್ರಕಾರ ಅಂಡರ್ ಗ್ರೌಂಡ್ ಡ್ರೈನೇಜ್‌ನ್ನು

ಹೊಸದಾಗಿ ನಿರ್ಮಿಸಲು ಪುನರ್‌ವಸತಿ ಕೇಂದ್ರಗಳಲ್ಲಿ ಮಾಡಬೇಕೆಂದಿದ್ದರೂ ಇದುವರೆಗೂ ಮಾಡದೇ ಇರುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದಿರುವ ಕಾರಣಗಳೇನು;

ಈ) ಇನ್ನು ಮುಂದೆಯಾದರೂ ಸರ್ಕಾರ ಜನರ ಆರೋಗ್ಯ ದೃಷ್ಟಿಯಿಂದ ಈ ಅಂಡರ್ ಗ್ರೌಂಡ್ ಡ್ರಾಯನೇಜ್ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ, ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಸಚಿವರು):-

ಅ) ಬಂದಿಲ್ಲ.

ಆ) ಬಂದಿಲ್ಲ

ಇ) ಈ ಕೆಲಸವು ಸಂಬಂಧಪಟ್ಟ ಪೌರಾಡಳಿತ/ನಗರ ಸಭೆಯ ಆದ್ಯ ಕೆಲಸವಾಗಿದ್ದು ಈ ವಿಷಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಈಗಾಗಲೇ ಸಂಬಂಧಪಟ್ಟ ಪೌರಾಡಳಿತ ಮುಖ್ಯಸ್ಥರಿಗೆ ಎಚ್ಚರಿಕೆಯನ್ನು ನೀಡಿ ಪುರಸಭೆಗಳ ಮತ್ತು ನಗರಸಭೆಗಳ ವ್ಯಾಪ್ತಿಗೆ ಒಳಪಟ್ಟ ಸ್ಥಳಗಳಲ್ಲಿ ಈ ವ್ಯವಸ್ಥೆಗಳನ್ನು ಮಾಡಬೇಕೆಂದು ಆದೇಶವನ್ನು ಕೊಡಲಾಗುವುದು.

ಈ) ಇದು ಈ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಪರಿಸರ ಸಂರಕ್ಷಣಾ ಕಾಯಿದೆಯನ್ವಯ ಪರಿಸರ ಕಾಪಾಡುವ ಸಲುವಾಗಿ, ಪರಿಸರ ಇಲಾಖೆಯವರು ಸಂಬಂಧಪಟ್ಟ ಇಲಾಖೆಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರಲಾಗಿದೆ. ಮತ್ತು ಜಲ ಕಾಯಿದೆ ಪ್ರಕಾರ ನಿರ್ದೇಶನ ಕೊಡಲಾಗುವುದು.

ಹರಪನ ಹಳ್ಳಿ ತಾಲ್ಲೂಕಿನ ಪಶುವೈದ್ಯ ಆಸ್ಪತ್ರೆಗಳ ಮೇಲ್ದರ್ಜೀಕರಣ

೩೫೮(೧೫೩೬) ಶ್ರೀ ಬಿ. ಹೆಚ್. ಯಂಕಾನಾಯ್ಕ್ (ಹರಪನಹಳ್ಳಿ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಪಶುಸಂಗೋಪನಾ ಆಸ್ಪತ್ರೆಗಳು ಇರುವುದು ಸರ್ಕಾರದ ಗಮನದಲ್ಲಿ ಇದೆಯೇ;

ಆ) ಹಾಗಿದ್ದಲ್ಲಿ ತಾಲ್ಲೂಕಿನಲ್ಲಿ ಮತ್ತು ಜಿಲ್ಲೆಯಲ್ಲಿ ಎಷ್ಟು ಮೇಲ್ದರ್ಜೆ ಆಸ್ಪತ್ರೆಗಳಾಗಿವೆ;

ಇ) ಸದರೀ ತಾಲ್ಲೂಕಿನಲ್ಲಿ ಕೆಳದರ್ಜೆಯ ಪಶು ಸಂಗೋಪನಾ ಆಸ್ಪತ್ರೆಗಳನ್ನು ಮೇಲಿನ ದರ್ಜೆಗೇರಿಸಲು ಯಾವ ಕ್ರಮ ತೆಗೆದು ಕೊಳ್ಳಲಾಗಿದೆ;

ಈ) ಹಾಗಿದ್ದಲ್ಲಿ ಅದನ್ನು ಮೇಲ್ದರ್ಜೆಯಾಗಿ ಯಾವಾಗ ಪರಿವರ್ತಿಸಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಹೌದು.

ಆ) ತಾಲ್ಲೂಕಿನಲ್ಲಿ ೨ ಇವೆ ಮತ್ತು ಜಿಲ್ಲೆಯಲ್ಲಿ ೧೭ ಇವೆ.

ಇ) ೩ ಕೇಂದ್ರಗಳಿಗೆ ಜಿಲ್ಲಾಪರಿಷತ್ತಿನಿಂದ ಪ್ರಸ್ತಾವನೆ ಬಂದಿದ್ದು ೧೯೯೨-೯೩ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು

ಈ) ೧೯೯೨-೯೩ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಬಿ. ಬಸವಲಿಂಗಪ್ಪ (ಪರಿಸರ ಮತ್ತು ತಂತ್ರಜ್ಞಾನ ಖಾತೆ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ ೧೮.೩.೯೨ನೇ ತಾರೀಖಿನಂದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ೧೮ನೇ ಪಟ್ಟಿಯಲ್ಲಿರುವ ೪೦ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ ೬೯೦, ೧೨೬೬, ೧೩೩೬, ೧೬೩೮, ೧೬೪೦, ೧೯೨೩, ೨೦೦೪, ೧೮೨೫, ೧೯೭೭, ೧೯೮೧ ಮತ್ತು ೧೩೭೦ ಈ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನು ಉಳಿದ ೨೯ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ದತ್ತಿ ಕಮಿಷನರ್ ಇಲ್ಲದೆ ತೊಂದರೆ.

೧೨೮೬(೨೧೪೭) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಧಾರ್ಮಿಕ ದತ್ತಿ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಬೆಳಗಾವಿ ಜಿಲ್ಲೆಯಲ್ಲಿ ದತ್ತಿ ಕಮಿಷನರು ಇಲ್ಲದೆ ಇರುವುದರಿಂದ ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ದತ್ತಿ ಕಮಿಷನರ್‌ರವರನ್ನು ನೇಮಕ ಮಾಡಲಾಗುವುದು;

ಇ) ಈಗ ಎಂದಿನಿಂದ ಈ ಹುದ್ದೆ ಖಾಲಿ ಇರುವುದು ಮತ್ತು ಈಗ ದತ್ತಿ ಕಮಿಷನರ್ ಇಲ್ಲದೇ ಇರುವಾಗ ಅವರ ಕೆಲಸವನ್ನು ಯಾರು ಮಾಡುತ್ತಿರುವರು;

ಈ) ಪ್ರಭಾರ ದತ್ತಿ ಕಮೀಷನರ್‌ಗೆ ಚೆಕ್ ಸಹಿ ಮಾಡುವ ಅಧಿಕಾರ ಇಲ್ಲದೇ ಇರುವುದರಿಂದ ಜನರಿಗೆ ಹಣವನ್ನು ಬಿಡುಗಡೆ ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ಹೌದು.

ಆ) ಜಿಲ್ಲಾ ನ್ಯಾಯಾಧೀಶರ ಕೇಡರ್ ಇರುವವರನ್ನು ಮಾತ್ರ ಬಿ. ಪಿ. ಟಿ. ಕಾಯ್ದೆಯ ಅನ್ವಯ ಚಾರಿಟೀ ಕಮೀಷನರ್ ಆಗಿ ನೇಮಿಸಬೇಕಿರುತ್ತದೆ. ಆದರಂತೆ ರಾಜ್ಯ ಉಚ್ಚ ನ್ಯಾಯಾಲಯದವರು ಒಬ್ಬ ಜಿಲ್ಲಾನ್ಯಾಯಾಧೀಶರ ಸೇವೆಯನ್ನು ರಾಜ್ಯ ಸರ್ಕಾರಕ್ಕೆ ನಿಯೋಜನೆ ಮೇರೆ ಬಿಟ್ಟು ಕೊಟ್ಟ ನಂತರ ಸರ್ಕಾರವು ಪುನಃ ಅದನ್ನು ಸದರಿ ಕಾಯ್ದೆ ಸೆಕ್ಷನ್ ೩ರ ಪ್ರಕಾರ ಚಾರಿಟಿ ಕಮೀಷನರ್ ಎಂದು ನೇಮಕ ಮಾಡುತ್ತದೆ.

ಇ) ದಿನಾಂಕ ೧-೭-೧೯೯೧ರಿಂದ ಖಾಲಿ ಇರುತ್ತದೆ. **ಸಹಾಯಕ ಚಾರಿಟಿ ಕಮೀಷನರ್**

ಅವರು ಪ್ರಭಾರದಲ್ಲಿದ್ದು ಬಿ. ಪಿ. ಟಿ. ಕಾಯ್ದೆ ಅನ್ವಯ ಬರುವ ಮೇಲ್ಮನವಿ, ರಿವಿಜನ್ ಹಾಗೂ ಇತರ ನ್ಯಾಯಾಂಗ ವಿಚಾರಣ ಹೊರತುಪಡಿಸಿ ದಿನ ನಿತ್ಯದ ಆಡಳಿತ, ಕಛೇರಿ ಕಾರ್ಯಗಳನ್ನು ನಿರ್ವಹಿಸುತ್ತಾರೆ.

ಈ) ಹೌದು. ಜನರ ಹಿತದೃಷ್ಟಿಯಿಂದ ಸಹಾಯಕ ಚಾರೀಟಿ ಕಮೀಷನರ್ ಅವರಿಗೆ ಚೆಕ್ ಸಹಿ ಮಾಡುವ ಅಧಿಕಾರವನ್ನು ನೀಡಲಾಗಿದೆ. ದಿನಾಂಕ ೮-೧-೯೨ರಿಂದ ಚೆಕ್‌ಗಳಿಗೆ ಸಹಿ ಮಾಡುತ್ತಿದ್ದಾರೆ.

ಗದ್ದಿ ಗೌಡರ ಸಮಿತಿ ಪ್ರಕಾರ ಕಿತ್ತೂರು ತಾಲ್ಲೂಕ ಕೇಂದ್ರವನ್ನಾಗಿ ಮಾಡುವ ಬಗ್ಗೆ.

೧೨೮೭(೨೧೪೮)ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಗದ್ದಿ ಗೌಡರ ಸಮಿತಿ ಪ್ರಕಾರ ಬೆಳಗಾವಿ ಜಿಲ್ಲೆಯ ಕಿತ್ತೂರ ಗ್ರಾಮವನ್ನು ತಾಲ್ಲೂಕ ಕೇಂದ್ರವನ್ನಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಕಿತ್ತೂರನ್ನು ತಾಲ್ಲೂಕ ಕೇಂದ್ರವನ್ನಾಗಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಸರ್ಕಾರವು ಗದ್ದಿ ಗೌಡರ ಸಮಿತಿ ಶಿಫಾರಸ್ಸನ್ನು ಒಪ್ಪಿಕೊಂಡಿದೆಯೇ ಮತ್ತು ಈ ಸಮಿತಿ ಸಲಹೆಗಳನ್ನು ಜಾರಿಗೆ ತರಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಕಿತ್ತೂರನ್ನು ತಾಲ್ಲೂಕವಾಗಿ ಮಾಡಬೇಕೆಂದು ಶಿಫಾರಸ್ಸು ಮಾಡಿರುವುದು ನಿಜ.

ಆ) ಪರಿಶೀಲಿಸಿ ಅಗತ್ಯವೆಂದು ಕಂಡುಬಂದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಕೂಲಂಕುಷ ಪರಿಶೀಲನೆಯ ನಂತರ.

ರಾಜ್ಯದಲ್ಲಿರುವ ಗ್ರಾಮ ಲೆಕ್ಕಿಗರ ಕೊರತೆ

೧೨೮೮(೧೬೪೬)ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ರಾಜ್ಯದಲ್ಲಿರುವ ಗ್ರಾಮಲೆಕ್ಕಿಗರ ಕೊರತೆ ಎಷ್ಟು;

ಆ) ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೨೦೩೪

ಆ) ೭೮

ಇ) ಶ್ರೇಷ್ಠ ನ್ಯಾಯಾಲಯದ ಆದೇಶ ಪ್ರಕಾರ ವಿವಿಧ ಇಲಾಖೆಗಳಲ್ಲಿ ಸಕ್ರಮಗೊಂಡು ಹೆಚ್ಚುವರಿಯಾದ ಅರ್ಹ ದಿನಗೂಲಿ ನೌಕರರನ್ನು ವರ್ಗಾವಣೆ ಮೂಲಕ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈ ಗೊಳ್ಳಲಾಗುತ್ತಿದೆ.

ಸರ್ವೆ ಇಲಾಖೆಯ ಜಮಿನು ನಕಾಶೆಗಳು ನಶಿಸಿರುವ ಬಗ್ಗೆ

೧೨೪೯(೨೧೮೩) ಶ್ರೀ ಕರಿಯಣ್ಣ (ಹೊಳೆಹೊನ್ನೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಸರ್ವೆ ಇಲಾಖೆಯಲ್ಲಿ ಮೂಲ ರೆಕಾರ್ಡುಗಳಾದ ಜಮಿನಿನ ನಕಾಶೆಗಳು ಸಂಪೂರ್ಣವಾಗಿ ನಾಶವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದಕ್ಕೆ ಯಾವ ಪರ್ಯಾಯ ವ್ಯವಸ್ಥೆ ಮಾಡಲಾಗುವುದು;

ಆ) ನಕಾಶೆಗಳು ಹೆಚ್ಚು ಕಾಲವಿರುವುದರಿಂದ ಸಂಪೂರ್ಣವಾಗಿ ನಾಶವಾಗಿದ್ದು ಮೂಲ ದಾಖಲೆನೇ ಇಲ್ಲದ ಈ ರಿಕಾರ್ಡುಗಳನ್ನು ಪುನರ್ನಿರ್ಮಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ನೂತನವಾಗಿ ಮುದ್ರಿಸಲಾಗುವುದು.

ಆ) ಉತ್ತರ 'ಅ'ನಲ್ಲಿದ್ದಂತೆ.

ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕು ಕೊಲಕುಂದ ಗ್ರಾಮದ ಹ್ಯಾಮಲೆಟ್ ಗ್ರಾಮವಾದ ಮಲ್ಕಾಪಲ್ಲಿಯನ್ನು ಪ್ರತ್ಯೇಕ ಕಂದಾಯ ಗ್ರಾಮವೆಂದು ಘೋಷಿಸುವ ಬಗ್ಗೆ

೧೨೫೦(೧೮೨೭)ಶ್ರೀ ಬಸವಂತ ರೆಡ್ಡಿ ಮೊತಕಪಲ್ಲಿ (ಸೇಡಂ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ:-

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕು ಕೊಲಕುಂದ ಗ್ರಾಮದ ಹ್ಯಾಮಲೆಟ್ ಗ್ರಾಮವಾದ ಎರಡು ಸಾವಿರ ಜನಸಂಖ್ಯೆಯುಳ್ಳ ಮಲ್ಕಾಪಲ್ಲಿ ಗ್ರಾಮವನ್ನು ಪ್ರತ್ಯೇಕ ಕಂದಾಯ ಗ್ರಾಮವೆಂದು ಘೋಷಿಸಲು ಪತ್ರ ವ್ಯವಹಾರ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದರ ಬಗ್ಗೆ ಸರ್ಕಾರದವರು ಜಿಲ್ಲಾಧಿಕಾರಿಗಳಿಗೆ ಬರೆದಿರುವ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು ಕೈಗೊಂಡಿರುವ ಕ್ರಮವೇನು;

ಇ) ಇದನ್ನು ಪ್ರತ್ಯೇಕವಾದ ಕಂದಾಯ ಗ್ರಾಮವೆಂದು ಘೋಷಿಸುವುದು ಯಾವಾಗ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಹೌದು

ಆ) ಅವಶ್ಯ ಮಾಹಿತಿಗಳನ್ನು ಸರ್ಕಾರಕ್ಕೆ ಒದಗಿಸಿರುತ್ತಾರೆ.

ಇ) ನಿಯಮಾನುಸಾರ ಅವಶ್ಯ ಕ್ರಮ ತೆಗೆದುಕೊಳ್ಳಲು ಆರಂಭಿಸಿದೆ.

ಗುಬ್ಬಿ ತಾಲ್ಲೂಕು ಭೂಸಾರ ಸಂರಕ್ಷಣ ಇಲಾಖೆಯ ಚಾರ್ಜ್ ಆಫೀಸ್ ಇಲ್ಲದೇ ಇರುವ ಬಗ್ಗೆ

೧೨೯೨(೧೩೩೫)ಶ್ರೀ ಎಸ್. ಶಿವನಂಜಪ್ಪ (ಗುಬ್ಬಿ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;

ಅ) ಗುಬ್ಬಿ ತಾಲ್ಲೂಕು ಭೂಸಾರ ಸಂರಕ್ಷಣಾ ಇಲಾಖೆಯ ಚಾರ್ಜ್ ಆಫೀಸ್ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸಿ. ಎಸ್. ಪುರ ಕೆರೆಯನ್ನು ನೀರಾವರಿ ಅಭಿವೃದ್ಧಿ ಪ್ರದೇಶವನ್ನಾಗಿ ಮಾಡಲು ರೈತರು ಮತ್ತು ಶಾಸಕರು ಒತ್ತಾಯ ತರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅದರ ಮಂಜೂರಾತಿ ಬಗ್ಗೆ ಅಂದಾಜು ಪಟ್ಟಿ ಕಳುಹಿಸಿದ್ದು, ಮಂಜೂರಾತಿ ನೀಡದೇ ಇರುವುದಕ್ಕೆ ಕಾರಣವೇನು;

ಈ) ಹಾಗಾದರೆ ಅದಕ್ಕೆ ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ಎಸ್. ಚಿಕ್ಕೇಗೌಡ (ಕೃಷಿ ಸಚಿವರು):-

ಅ) ಬಂದಿದೆ, ಆದಾಗ್ಯೂ ಗುಬ್ಬಿ ತಾಲ್ಲೂಕಿನಲ್ಲಿ ತಾತ್ಕಾಲಿಕ ಚಾರ್ಜ್ ಆಫೀಸ್ ಕಾರ್ಯನಿರ್ವಹಿಸುತ್ತಿದೆ.

ಆ) ಇಲ್ಲ.

ಇ) ಈ ಇಲಾಖೆಗೆ ಅಂದಾಜು ಪಟ್ಟಿ ಬಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

೧೯೯೨-೯೩ನೇ ಸಾಲಿನಲ್ಲಿ ಪಶುವೈದ್ಯಕೀಯ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ

೧೨೯೪(೧೫೩೪)ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೯೨-೯೩ರ ಸಾಲಿನಲ್ಲಿ ಎಷ್ಟು ಪಶು ವೈದ್ಯಕೀಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು (ಸ್ಥಳವಾರು ವಿವರ ನೀಡುವುದು);

ಆ) ಈ ಕೆಂದ್ರಗಳನ್ನು ಪ್ರಾಂಭಿಸುವ ಸಂದರ್ಭದಲ್ಲಿ ಕಟ್ಟಡ ಹಾಗೂ ಅದಕ್ಕೆ ಬೇಕಾಗುವ ಸಿಬ್ಬಂದಿಗಳನ್ನು ಒದಗಿಸಲಾಗುವುದೇ

ಶ್ರೀ ಬಸವರಾಜ್ ಪಾಟೀಲ್ (ಪಶು ಸಂಗೋಪನಾ ಮತ್ತು ಪಶುವೈದ್ಯ ಸೇವಾ ಸಚಿವರು):-

ಅ) ಇನ್ನೂ ನಿರ್ಧರಿಸಬೇಕಾಗಿದೆ

ಆ) ಉದ್ಭವಿಸುವುದಿಲ್ಲ.

ಸ್ಮಶಾನ ಭೂಮಿಗಳ ಅರ್ಜಿ

೧೨೯೫(೧೫೩೫) ಶ್ರೀ ಕೆ. ಸಿದ್ದಯ್ಯ (ಸಂತೆಮಾರನಹಳ್ಳಿ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸ್ಮಶಾನ ಭೂಮಿಗಾಗಿ ಬಹಳಷ್ಟು ಅರ್ಜಿಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಆದರಲ್ಲೂ ಪರಿಶಿಷ್ಟ ಜಾತಿಯವರಿಂದ;

ಆ) ಸ್ಮಶಾನ ಭೂಮಿ ಉದ್ದೇಶಕ್ಕಾಗಿ ಜಮೀನುಗಳನ್ನು ತುರ್ತುಗತಿಯಲ್ಲಿ ಭೂಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಸಂಬಂಧಿಸಿದ ನಿಯಮಗಳನ್ನು ತಿದ್ದುಪಡಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಹೌದು

ಆ) ಭೂ ಸ್ವಾಧೀನ ಕಾಯ್ದೆ ೧೮೯೪ರ ಕಲಂ ೧೭(೧)ರಡಿಯಲ್ಲಿ ಸ್ಮಶಾನಕ್ಕಾಗಿ ಜಮಿನುಗಳನ್ನು ಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಅವಕಾಶವನ್ನು ಕಲ್ಪಿಸಲಾಗಿದೆ. ಆದಕಾರಣ ಸದರಿ ನಿಯಮಗಳಿಗೆ ತಿದ್ದುಪಡಿ ಮಾಡುವ ವಿಚಾರ ಉದ್ಭವಿಸುವುದಿಲ್ಲ.

ನೆಲಮಂಗಲ ಕ್ಷೇತ್ರದಲ್ಲಿ ಅರಣ್ಯ ಇಲಾಖೆಯವರು ಸಸಿಗಳನ್ನು ನೆಡಲಾಗಿರುವುದು

೧೨೯೬(೧೫೩೭)ಶ್ರೀ ಅಂಜನಮೂರ್ತಿ (ನೆಲಮಂಗಲ):- ಮಾನ್ಯ ರಾಜ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ಅರಣ್ಯ ಇಲಾಖೆಯಡಿಯಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ;

ಆ) ಯಾವ ಯಾವ ಜಾತಿಯ ಸಸಿಗಳನ್ನು ನೆಡಲಾಗಿದೆ;

ಇ) ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ?

ಈ) ಈ ಸಸಿಗಳ ಪೈಕಿ ಎಷ್ಟು ಸಸಿಗಳು ಉಳಿದಿವೆ;

ಉ) ಈ ವರ್ಷ ಅದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಶ್ರೀ ಈಟಿ ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):-

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ೩ ವರ್ಷಗಳಲ್ಲಿ ಈ ಕೆಳಕಂಡಂತೆ ಸಸಿಗಳನ್ನು ನೆಡಲಾಗಿದೆ:

೧೯೮೯-೯೦ - ೪೮೦೦ ಸಸಿಗಳು

೧೯೯೦-೯೧ - ೫೮೦೯೮ ಸಸಿಗಳು

೧೯೯೧-೯೨ - ೧೮೮೦೦೦ ಸಸಿಗಳು

ಆ) ಈ ಕ್ಷೇತ್ರದಲ್ಲಿ ಸಿಸ್ಸು, ಗಾಳಿಮರ, ಹುಣಸೆ, ಹಿಪ್ಪೆ, ನೇರಳೆ, ಜಾಲಿ, ಮತ್ತಿ, ಫೆಲ್ಟೋಫಾರಂ, ಅಕೇಶಿಯಾ, ಬಿದಿರು, ಕರಿಜಾಲಿ, ಹೊಂಗೆ, ಹಲಸು, ಸೀಮೆ ತಂಗಡಿ, ಬನ್ನಿ

ಮುಂತಾದ ಸಸಿಗಳನ್ನು ನೆಡಲಾಗಿದೆ

ಇ) ಇದಕ್ಕಾಗಿ ಖರ್ಚಾದ ಹಣದ ವಿವರ ಕಳೆದ ೩ ವರ್ಷಗಳದ್ದು ಕೆಳಗಿನಂತಿದೆ

೧೯೮೯-೯೦ ರೂ. ೨೯,೬೩೬-೦೦

೧೯೯೦-೯೧ ರೂ. ೨೪,೪೭,೫೧೭-೦೦

೧೯೯೧-೯೨ ರೂ. ೭,೧೨,೨೧೩-೦೦

ಈ) ಈ ಸಸಿಗಳ ಪೈಕಿ ಶೇ. ೭೫ರಿಂದ ೮೦ ಸಸಿಗಳು ಉಳಿದುಕೊಂಡಿವೆ.

ಉ) ೧೯೯೧-೯೨ನೇ ಸಾಲಿನಲ್ಲಿ ಇದಕ್ಕಾಗಿ ಬಿಡುಗಡೆ ಮಾಡಲಾದ ಹಣ ರೂ. ೧೩,೨೦,೯೮೩ ಆಗಿರುತ್ತದೆ.

ಹೆಸರಘಟ್ಟದಲ್ಲಿರುವ ಮೀನು ಸಂಶೋಧನಾ ಇಲ್ಾಖೆಯಲ್ಲಿರುವ ದಿನಗೂಲಿ ನೌಕರರು

೧೨೯೭(೧೫೩೮)ಶ್ರೀ ಅಂಜನ ಮೂರ್ತಿ (ನೆಲಮಂಗಲ):- ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:-

ಅ) ಹೆಸರಘಟ್ಟದಲ್ಲಿರುವ ಮಿನು ಸಂಶೋಧನಾ ಇಲಾಖೆಯಲ್ಲಿ ಎಷ್ಟು ಜನ ದಿನಗೂಲಿ ನೌಕರರು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು) ಕೆಲಸ ಮಾಡುತ್ತಿದ್ದಾರೆ;

ಆ) ಅವರುಗಳು ಸುಮಾರು ೮-೧೦ ವರ್ಷಗಳಿಂದ ದಿನಕೂಲಿ ನೌಕರರಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಅವರು ಸುಮಾರು ಬಾಕಿ ಅರ್ಜಿ ಕೊಟ್ಟು ಅವರ ಕೆಲಸಗಳನ್ನು ನ್ಯಾಯಾಲಯದ ಆದೇಶದಂತೆ ಖಾಯಂಗೊಳಿಸಲು ಕೋರಿದ್ದರೂ ಕೂಡ, ಅವರ ಕೆಲಸವನ್ನು ಖಾಯಂ ಮಾಡದೇ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಕಾನೂನಿನ ಪ್ರಕಾರ ಮೇಲ್ಕಂಡ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ದಿನಗೂಲಿ ನೌಕರರ ಕೆಲಸ ಖಾಯಂಗೊಳಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎ. ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ರಾಜ್ಯ ಮಂತ್ರಿಗಳು):-

ಅ) ಒಬ್ಬರು

ಆ) ಹೌದು

ಇ) ಇವರುಗಳ ಸೇವೆಯನ್ನು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಖಾಯಂ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ರಾಜ್ಯದ ಪಟೇಲರುಗಳಿಗೆ ಗೌರವ ಧನ

೧೩೦೩(೧೯೨೫)ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):- ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ:-

ಅ) ರಾಜ್ಯದ ಪಟೇಲರುಗಳಿಗೆ ಸಿಗುತ್ತಿರುವ ಗೌರವ ಧನ ಬಹಳ ಕಡಿಮೆ ಎಂಬುದು ಸರ್ಕಾರದ ಗಮನದಲ್ಲಿದೆಯೆ;

ಆ) ಹಾಗಿದ್ದಲ್ಲಿ ಅದನ್ನು ಜಾಸ್ತಿ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ, ಇದ್ದರೆ ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ ಭೂಮಿ ಮತ್ತು ಕಟ್ಟಡ

೧೩೦೪(೧೬೪೫)ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಳಿಸುವರೇ?

ಅ) ಬೆಂಗಳೂರು ನಗರದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ಥಿಯಲ್ಲಿರುವ ಭೂಮಿ ಹಾಗೂ ಕಟ್ಟಡಗಳನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡಲಾಗಿದೆಯೇ;

ಆ) ಭೂಮಿ ಹಾಗೂ ಕಟ್ಟಡಗಳಿಂದ ಇಲಾಖೆಗೆ ಬರುತ್ತಿರುವ ಆದಾಯವೇನು (ಪ್ರತಿ ಗುತ್ತಿಗೆಯ ಪ್ರತ್ಯೇಕ ವಿವರಗಳನ್ನು ನೀಡುವುದು);

ಇ) ಮೇಲ್ಕಂಡ ಸ್ಥಳಗಳನ್ನು ಸರ್ಕಾರೀ ಇಲಾಖೆಗಳ ಕಛೇರಿಗಳಿಗಾಗಿ ಏಕೆ ನೀಡಬಾರದು?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ಹೌದು

ಆ) ಭೂಮಿ ಕಟ್ಟಡಗಳಿಂದ ಇಲಾಖೆಗೆ ಆದಾಯ ಬರುವುದಿಲ್ಲ. ಗುತ್ತಿಗೆಯಿಂದ ಬರುವ ಆದಾಯ ಸಂಬಂಧಪಟ್ಟ ಸಂಸ್ಥೆಗಳಿಗೆ ಜಮೆಯಾಗುತ್ತಿದೆ (ಪಟ್ಟಿ ಲಗತ್ತಿಸಿದೆ).

ಇ) ಸ್ಥಳಗಳನ್ನು ಗುತ್ತಿಗೆಗೆ ನೀಡಲು ಕೋರಿ ಸರ್ಕಾರೀ ಇಲಾಖೆಗಳಿಂದ ಯಾವುದೇ ಮನವಿ ಬಂದಿರುವುದಿಲ್ಲ. ಮನವಿಗಳು ಬಂದಲ್ಲಿ ಅವುಗಳನ್ನುಪರಿಶೀಲಿಸಲಾಗುವುದು.

ಬೆಂಗಳೂರು ನಗರದಲ್ಲಿ ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ಸೇರಿದ ಭೂಮಿ ಕಟ್ಟಡಗಳ ಗುತ್ತಿಗೆದಾರರ ಹೆಸರು ಬಾಡಿಗೆ ವಿವರದ ತಃಖ್ತೆ.

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
೧. ಸುಂದರ ಆಂಜನೇಯಸ್ವಾಮಿ	೧) ರಾಮಕೃಷ್ಣಯ್ಯ	೧೯೧.೫೦	೨೨೯೮.೦೦
	೨) ಬಿ. ಸಿ. ಅಣ್ಣಯ್ಯಪ್ಪ	೧೯೧.೫೦	೨೨೯೮.೦೦
	೩) ಚನ್ನಯ್ಯ	೩೬೩.೦೦	೪೩೫೬.೦೦
		೭೪೬.೦೦	೮೯೫೨.೦೦
೨. ಅಲಸೂರು ಆಂಜನೇಯ	೧) ಸಿ. ಆರ್. ಪಾಂಡುರಂಗಶೆಟ್ಟಿ	೮೦.೦೦	೯೬.೦೦
	೨) ವಾಸುದೇವ	೮೦.೦೦	೯೬೦.೦೦
	೩) ಕಾಂತರಾಜು	೮೦.೦೦	೯೬೦.೦೦
	೪) ಅಮರನಾಥ ಸಿಂಗ್	೮೦.೦೦	೯೬೦.೦೦
	೫) ಎಂ. ಬಾಬು	೮೦.೦೦	೯೬೦.೦೦
	೬) ಎಂ. ವಿ. ಕೃಷ್ಣಮೂರ್ತಿ	೮೦.೦೦	೯೬೦.೦೦
		೪೮.೦೦	೫೭೬೦.೦೦
೩. ಷಡಕ್ಷಣ ಶಿವಸುಬ್ರಮಣ್ಯ ಸ್ವಾಮಿ	೧) ಡಿ. ಶಿವಸುಬ್ರಮಣ್ಯ	೨೦೮೮.೦೦	೩೨೨೫೬.೦೦
	೨) ರಾಮಚಂದ್ರ	೧೯೫೦.೦೦	೨೩೪೦೦.೦೦
	೩) ಅಶ್ವತ್‌ನಾರಾಯಣ	೧೦೮೦.೦೦	೧೨೯೬೦.೦೦
	೪) ಷಣ್ಮುಗಂ	೩೬೦.೦೦	೪೩೨೦.೦೦
	೫) ಪೆರುಮಾಳ್	೮೪೦.೦೦	೧೦೦೮೦.೦೦
	೬) ಶಿವಕುಮಾರ್	೨೬೩.೦೦	೩೧೫೬.೦೦
		೭೧೮೧.೦೦	೮೬೭೨೧.೦೦
೪. ಸಂಪಂಗಿರಾಮಸ್ವಾಮಿ	೧) ಕೆ. ಆರ್. ವೆಂಕಟರಮಣ	೭೦೦.೦೦	೮೪೦೦.೦೦
	೨) ಕೆ. ಆರ್. ವೆಂಕಟರಮಣ	೨೮೦.೦೦	೩೩೬೦.೦೦
	೩) ಶೇಖರ್	೧೫೦.೦೦	೧೮೦೦.೦೦
	೪) ಕೆ. ಪಿ. ಹುಸೇನ್	೨೪೦.೦೦	೨೮೮೦.೦೦
		೧೩೭೦.೦೦	೧೬೪೪೦.೦೦
೫) ಶ್ರೀ ರಾಮಾಂಜನೇಯ ಸ್ವಾಮಿ, ಕೆ.ಆರ್ ಸರ್ಕಲ್	೧) ಚನ್ನಾರೆಡ್ಡಿ	೫೫.೦೦	೬೬೦.೦೦
	೨) ಶಿವಲಿಂಗಯ್ಯ	೪೭.೦೦	೫೬೪.೦೦
	೩) ಎಂ. ಪ್ರಭಾಕರ್	೭೫೦.೦೦	೯೦೦೦.೦೦
	೪) ಕೆ. ಆರ್ ಆಚಾರ್	೩೦.೦೦	೩೬೦.೦೦
	೫) ಮಂಜುನಾಥ್	೩೦.೦೦	೩೬೦.೦೦
		೯೧೨.೦೦	೧೦೯೪೪.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
೬) ದತ್ತಾತ್ರೇಯ ಸ್ವಾಮಿ	೧) ಕೃಷ್ಣಸ್ವಾಮಿ ರಾವ್	೮೦.೦೦	೯೬೦.೦೦
	೩) ಪಿಳ್ಳಪ್ಪ	೪೫.೦೦	೫೪೦.೦೦
	೨) ವೆಂಕಟಮ್ಮ ಮುನಿಯಮ್ಮ	೧೨೫.೦೦	೧೫೦೦.೦೦
೭) ಕಾಡುಮಲ್ಲೇಶ್ವರ ಮಲ್ಲೇಶ್ವರ	೧) ಸಾಯಿ ಮಂದಿರ	೨೫೦.೦೦	೩೦೦೦.೦೦
	೨) ಬೈರೋಜಿ ರಾವ್	೨೫.೦೦	೩೦೦.೦೦
	೩) ಕೃಷ್ಣೋಜಿ ರಾವ್	೨೫.೦೦	೩೦೦.೦೦
	೪) ಎಸ್. ಪಿ. ನಾಗರಾಜ್	೨೫೦.೦೦	೩೦೦೦.೦೦
	೫) ಎಸ್. ಜಯಪ್ರಕಾಶ್	೨೫೦.೦೦	೩೦೦೦.೦೦
	೬) ಕೆ.ಎಸ್.ಸಿ.ಎಸ್.ಸಿ.	೨೫೦.೦೦	೩೦೦೦.೦೦
	೭) ಬಿ. ಸುದರ್ಶನ್	೨೫೦.೦೦	೩೦೦೦.೦೦
	೮) ಬಿ. ಕೃಷ್ಣಮೂರ್ತಿ	೨೫೦.೦೦	೩೦೦೦.೦೦
	೯) ಎನ್.ಬಿ.ಇ.ಎಲ್. ರೆಡ್ಡಿ	೨೫೦.೦೦	೩೦೦೦.೦೦
	೧೦) ಬಿ. ಆರ್. ಸುಭಾಷ್‌ಚಂದ್ರ	೨೫೦.೦೦	೩೦೦೦.೦೦
	೧೧) ತ್ಯಾಗರಾಜ	೨೪೦.೦೦	೨೮೮೦.೦೦
	೧೨) ಸುಬ್ರಮಣ್ಯ	೨೪೦.೦೦	೨೮೮೦.೦೦
		೨೫೩೦.೦೦	೩೦೩೬೦.೦೦
೮) ರಾಘವೇಂದ್ರ ಆಂಜನೇಯ	೧) ಕೋತಾಸ್ ಎಂಟರ್‌ಪ್ರೈಸಸ್	೬೦೦.೦೦	೭೨೦೦.೦೦
	೨) ಹನುಮಾನ್ ಟೆಕ್ಸ್‌ಟೈಲ್ಸ್	೬೦೦.೦೦	೭೨೦೦.೦೦
	೩) ಮಿತ್ರ ಬಜಾರ್	೧೮೦೦.೦೦	೨೧೬೦೦.೦೦
	೪) ಮಹೇಂದ್ರ ವಸ್ತ್ರಾಲಯ	೧೮೦೦.೦೦	೨೧೬೦೦.೦೦
	೫) ಸಿಟಿ ಟಾಯಲೆಟ್ ಹೌಸ್	೬೦೦.೦೦	೭೨೦೦.೦೦
	೬) ಎಕ್ಸ್‌ಪರ್ಟ್ ಡಾರ್ನರ್ಸ್	೧೦೦.೦೦	೧೨೦೦.೦೦
	೭) ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ	೩೫೦೦.೦೦	೪೨೦೦೦.೦೦
	೮) ಹನುಮಾನ್ ಸ್ಟೋರ್ಸ್	೬೦೦.೦೦	೭೨೦೦.೦೦
	೯) ಶ್ರೀನಿವಾಸ ಬ್ಯಾಂಗಲ್ಸ್	೪೮೦.೦೦	೫೭೬೦.೦೦
	೧೦) ರಾಮರಾವ್	೫೦.೦೦	೬೦೦.೦೦
	೧೧) ವಾಸುದೇವ ಮೂರ್ತಿ	೧೦೦.೦೦	೧೨೦೦.೦೦
		೧೦೨೩೦.೦೦	೧೨೨೭೬೦.೦೦
೯) ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನ	೧) ವಿದ್ಯಾಮಂದಿರ ಎಜುಕೇಷನ್ ಸಂಸ್ಥೆ	೫೦೭೫.೦೦	೬೦೯೦೦.೦೦
	೨) ಕಸ್ತೂರಿಬಾ ಪಾಠಶಾಲೆ	೨೦೦.೦೦	೨೪೦೦.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೩) ಗಣೇಶರಾವ್	೧೨೭.೦೦	೧೫೨೪.೦೦
	೪) ತಿರುಮಲಾಚಾರ್	೧೫೦.೦೦	೧೮೦೦.೦೦
		೫೫೫೨.೦೦	೬೬೬೨೮.೦೦
೧೦) ಗೋದೂರಾಯ ಮಠ	೧) ಎ. ಎನ್. ಮುದ್ದುಕೃಷ್ಣ	೩೦೦.೦೦	೩೬೦೦.೦೦
೧೧) ಬಂಡಿಶೇಷಮ್ಮ ಛತ್ರ	೧) ಜಯಚಂದ್ರ	೧೮೦.೦೦	೩೧೬೦.೦೦
	೨) ಶ್ರೀನಿವಾಸಮೂರ್ತಿ	೨೧೦.೦೦	೨೫೨೦.೦೦
	೩) ರಘುನಾಥ್	೨೧೦.೦೦	೨೫೨೦.೦೦
	೪) ಎಸ್.ಕೆ. ವಿಜಯಕುಮಾರ್	೩೦೦.೦೦	೩೬೦೦.೦೦
	೫) ಓಜಾ	೪೧೦.೦೦	೪೯೨೦.೦೦
	೬) ಜಾವಿ ಪಾಷಾ	೪೮೪.೦೦	೫೮೦೮.೦೦
	೭) ಶ್ವೇತಾದ್ರಿ	೧೦೦.೦೦	೧೨೦೦.೦೦
	೮) ವೀರಶೈವ ಸಹಕಾರಿ ಸಂಸ್ಥೆ	೩೭೫.೦೦	೪೫೦೦.೦೦
	೯) ಕೆ. ಸಿ. ಮಮ್ಮು	೧೧೦.೦೦	೧೩೨೦.೦೦
	೧೦) ಡಿ. ಗುರುರಾಜ್	೪೦.೦೦	೪೮೦.೦೦
	೧೧) ವಿ. ಪ್ರಕಾಶ್	೧೩೦.೦೦	೧೫೬೦.೦೦
	೧೨) ಜೆ. ಜೆ. ಬಸಪ್ಪ	೧೧೦.೦೦	೧೩೨೦.೦೦
	೧೩) ಚಿಕ್ಕವೆಂಕಟರಮಣಪ್ಪ	೬೫.೦೦	೭೮೦.೦೦
	೧೪) ಎಲ್ ಸುರೇಶ್	೪೫೧.೦೦	೫೪೧೨.೦೦
		೩೧೭೫.೦೦	೩೮೧೦೦.೦೦
೧೨) ಲಕ್ಷ್ಮೀನರಸಿಂಹ ಬಳೇಪೇಟೆ	೧) ಮೆ: ಯುನೈಟೆಡ್ ಸರ್ವೀಸ್	೧೨೭೫.೦೦	೧೫೩೦೦.೦೦
	೨) ಮುನಿರಾಮಯ್ಯ	೫೦.೦೦	೬೦೦.೦೦
	೩) ಕುಂದಾನಪ್ಪ	೧೦೦.೦೦	೧೨೦೦.೦೦
		೧೪೨೫.೦೦	೧೭೧೦೦.೦೦
೧೩) ಶ್ರೀ ಸುಗ್ರೀವ ವೆಂಕಟರಮಣ	೧) ಪುಷ್ಪಾದೇವಿ	೧೦೦.೦೦	೧೨೦೦.೦೦
	೨) ಮೋತಿಲಾಲ್ ಜೈನ್	೧೦೦.೦೦	೧೨೦೦.೦೦
	೩) ನಾರಾಯಣಸ್ವಾಮಿ	೭೦.೦೦	೮೪೦.೦೦
	೪) ವೀರಭದ್ರಯ್ಯ	೭೦.೦೦	೮೪೦.೦೦
	೫) ನಾಗರಾಜ ಶೆಟ್ಟಿ	೯೦.೦೦	೧೦೮೦.೦೦
	೬) ಕಣ್ಣನ್	೯೦.೦೦	೧೦೮೦.೦೦
	೭) ವಿಶ್ವನಾಥಸ್ವಾಮಿ	೯೦.೦೦	೧೦೮೦.೦೦
	೮) ಜಾನಕಿರಾಮನಾಯ್ಡು	೧೧೦.೦೦	೧೩೨೦.೦೦
		೭೨೦.೦೦	೮೬೪೦.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
೧೪) ಲಾಲ್ ದಾಸ್ ವೆಂಕಟರಮಣ	೧) ಮಹಾಲಿಂಗಂ	೨೦೦.೦೦	೨೪೦೦.೦೦
	೨) ಮಹಮದ್‌ಗೌಸ್	೮೫.೦೦	೧೦೨೦.೦೦
	೩) ಮಹಮದ್‌ಪೀರ್	೮೫.೦೦	೧೦೨೦.೦೦
	೪) ಮಹಮದ್ ಷಫಿ	೮೫.೦೦	೧೦೨೦.೦೦
	೫) ಎಸ್. ಪ್ರಸಾದ್	೯೫.೦೦	೧೧೪೦.೦೦
	೬) ಪಿ. ಆರ್. ಜಗದೀಶ್	೩೦೦.೦೦	೩೬೦೦.೦೦
	೭) ನರಸಿಂಹಮೂರ್ತಿ	೨೨೦.೦೦	೨೬೪೦.೦೦
		೧೦೭೦.೦೦	೧೨೮೪೦.೦೦
೧೫) ಮೂಂಜಿಸೋಮೇಶ್ವರ	೧) ಹೆಚ್. ಎಸ್. ನಾರಾಯಣ ರಾವ್	೧೫.೦೦	೧೮೦.೦೦
	೨) ಕೃಷ್ಣಯ್ಯ ಶೆಟ್ಟಿ	೯.೦೦	೧೦೮.೦೦
		೨೪.೦೦	೨೮೮.೦೦
೧೬) ರಂಗನಾಥಸ್ವಾಮಿ ದೇವಸ್ಥಾನ	೧) ನಂಜುಂಡಸ್ವಾಮಿ	೧೦೦.೦೦	೧೨೦೦.೦೦
	೨) ಕೃಷ್ಣಯ್ಯ ಶೆಟ್ಟಿ	೯೦.೦೦	೧೦೮೦.೦೦
	೩) ಗೋಪಾಲ್	೯೦.೦೦	೧೦೮೦.೦೦
	೪) ಕೆ. ವಿ. ರಾಜು	೭೦.೦೦	೮೪೦.೦೦
	೫) ಮಹದೇವಪ್ಪ	೪೫.೦೦	೫೪೦.೦೦
	೬) ಕೃಷ್ಣನ್	೫೦.೦೦	೬೦೦.೦೦
	೭) ಚಿಕ್ಕಣ್ಣಾಚಾರ್	೭೫.೦೦	೯೦೦.೦೦
	೮) ಜಮೀರ್	೬೦.೦೦	೭೨೦.೦೦
	೯) ವಿಶ್ವೇಶರ ಸಾಪ್ಕಾರ್	೯೦.೦೦	೧೦೮೦.೦೦
	೧೦) ನಾಗಪ್ಪ ಶೆಟ್ಟಿ	೪೦.೦೦	೪೮೦.೦೦
	೧೧) ಎನ್. ರಾಜು	೪೫.೦೦	೫೪೦.೦೦
	೧೨) ಎಸ್. ಸಿ. ರಂಗಣ್ಣ	೧೭೫.೦೦	೨೧೦೦.೦೦
	೧೩) ಶಿವಪ್ರಸಾದ್	೫೦.೦೦	೬೦೦.೦೦
	೧೪) ಗಂಗಯ್ಯ	೪೦.೦೦	೪೮೦.೦೦
	೧೫) ಟಿ. ಮರಿಯಪ್ಪ	೬೦೦.೦೦	೭೨೦೦.೦೦
		೧೬೨೦.೦೦	೧೯೪೪೦.೦೦
೧೭) ಬಸವಣ್ಣ ದೇವರು	೧) ಗೋವಿಂದ ಶೆಟ್ಟಿ	೧೬೫.೦೦	೧೯೮೦.೦೦
	೨) ಪದ್ಮನಾಭ ಶೆಟ್ಟಿ	೧೬೫.೦೦	೧೯೮೦.೦೦
	೩) ಹರೀಶ್	೫೦.೦೦	೬೦೦.೦೦
	೪) ವೆಂಕಟರಾಮಯ್ಯ ಶಾಸ್ತ್ರಿ	೨೫.೦೦	೩೦೦.೦೦
		೪೦೫.೦೦	೪೮೬೦.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
೧೮) ರಾಮೇಶ್ವರಿ ಚೌಡೇಶ್ವರಿ	೧) ಪೆರಿಯಪ್ಪ	೫೦.೦೦	೬೦೦.೦೦
	೨) ಎಲ್. ಕೃಷ್ಣಯ್ಯಶೆಟ್ಟಿ	೫೨.೦೦	೬೨೪.೦೦
	೩) ಅಬ್ದುಲ್‌ಸುಬ್ಹಾನ್	೫೦.೦೦	೬೦೦.೦೦
		೧೫೨.೦೦	೧೮೨೪.೦೦
೧೯) ನಗರ್ತರಪೇಟೆ ವೆಂಕಟರಮಣ	೧) ಶ್ರೀ ದೇವಿ ಎಂಟರ್‌ಪ್ರೈಸಸ್	೧೧೦೦.೦೦	೧೩೨೦೦.೦೦
	೨) ರಾಮಚಂದ್ರ	೨೫.೦೦	೩೦೦.೦೦
	೩) ಕೃಷ್ಣಮೂರ್ತಿ	೭೦.೦೦	೮೪೦.೦೦
	೪) ಮತ್ತತ್ತೇಜರಾಜ್ ನೇತಾಜಿ	೭೦.೦೦	೮೪೦.೦೦
		೧೨೧೫.೦೦	೧೪೮೫೦.೦೦
೨೦) ಪ್ರಸನ್ನ ಗಂಗಾಧರಸ್ವಾಮಿ	೧) ಮೆಹಬೂಬ್‌ಖಾನ್	೨೫೦.೦೦	೩೦೦೦.೦೦
	೨) ಶೇಖರ್	೩೦೦.೦೦	೩೬೦೦.೦೦
	೩) ಬಿ. ವಿ. ಮುದ್ದಪ್ಪ	೩೦೦.೦೦	೩೬೦೦.೦೦
	೪) ವಿಶ್ವನಾಥ ಶೆಟ್ಟಿ	೩೦೦.೦೦	೩೬೦೦.೦೦
		೧೧೫೦.೦೦	೧೩೮೦೦.೦೦
೨೧) ವಿನಾಯಕವೆಂಕಟರಮಣ	೧) ಪಿ. ಹಮೀದ್	೪೦೦.೦೦	೪೮೦೦.೦೦
೨೨) ಲಕ್ಷ್ಮಿವೆಂಕಟರಮಣ	೧) ನಾರಾಯಣರಾವ್	೨೦೦.೦೦	೨೪೦೦.೦೦
	೨) ವೆಂಕಟೇಶ್	೨೦೦.೦೦	೨೪೦೦.೦೦
	೩) ಮಹಮದ್‌ಸಮೀಉಲ್ಲಾ	೨೦೦.೦೦	೨೪೦೦.೦೦
	೪) ಲೋಕನಾಥ್	೪೦೦.೦೦	೪೮೦೦.೦೦
	೫) ಜಗನ್ನಾಥ್	೨೦೦.೦೦	೨೪೦೦.೦೦
	೬) ನಟರಾಜ್	೪೦೦.೦೦	೪೮೦೦.೦೦
	೭) ನ್ಯಾಯಬೆಲೆ ಅಂಗಡಿ	೨೦೦.೦೦	೨೪೦೦.೦೦
		೧೮೦೦.೦೦	೨೧೬೦೦.೦೦
೨೩) ಕರುಮಾರಿಯಮ್ಮ	೧) ತಂಗರಾಜ್	೨೦೦.೦೦	೨೪೦೦.೦೦
	೨) ಜಯಮ್ಮ	೧೦೦.೦೦	೧೨೦೦.೦೦
		೩೦೦.೦೦	೩೬೦೦.೦೦
೨೪) ಅಲಸೂರು ಸುಬ್ರಹ್ಮಣ್ಯಸ್ವಾಮಿ	೧) ಮಂಜುನಾಥ್	೧೦೫೦.೦೦	೧೨೬೦೦.೦೦
	೨) ಇ. ವೇಣು	೩೩೫.೦೦	೪೦೨೦.೦೦
	೩) ನಾರಾಯಣ ನಾಯರ್	೧೩೫.೦೦	೧೬೨೦.೦೦
	೪) ಕಣ್ಣನ್	೧೭೫.೦೦	೨೧೦೦.೦೦
	೫) ಜಿ.ಕೆ. ಅಬ್ದುಲ್ಲ	೬೦.೦೦	೭೨೦.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೭) ಉಬೇದ್	೬೦.೦೦	೭೨೦.೦೦
	೮) ದೊರೆಸ್ವಾಮಿ ಅಣ್ಣಾಮ್ಮಾಳ್	೬೦.೦೦	೭೨೦.೦೦
	೯) ನಾರಾಯಣ ಅಯ್ಯರ್	೬೦.೦೦	೭೨೦.೦೦
	೧೦) ಬಕ್ಷಿಉಲ್ಲಾಖಾನ್	೬೦.೦೦	೭೨೦.೦೦
	೧೧) ಜಾನಕೀರಾಮ ರೆಡ್ಡಿ	೧೩೦.೦೦	೧೫೬೦.೦೦
	೧೨) ಬಿ. ಟಿ. ಎಸ್. ಕಛೇರಿ	೬೦.೦೦	೭೨೦.೦೦
	೧೩) ಜಯಮ್ಮ	೧೨೦.೦೦	೧೪೪೦.೦೦
	೧೪) ಮುನಿರಾಮಕ್ಕ	೧೫೦.೦೦	೧೮೦೦.೦೦
	೧೫) ಕೆ. ಎಸ್. ಸುರೇಶ್	೧೪೦.೦೦	೧೬೮೦.೦೦
	೧೬) ರಮೇಶ್	೧೨೫.೦೦	೧೫೦೦.೦೦
	೧೭) ಬೇಬಿ ಸರೋಜಿನಿ	೧೪೫.೦೦	೧೭೪೦.೦೦
	೧೮) ಶಿವಪ್ಪ	೨೨೫.೦೦	೨೭೦೦.೦೦
	೧೯) ಲಕ್ಷಮ್ಮ	೧೦.೦೦	೧೨೦.೦೦
	೨೦) ರಾಜಮ್ಮ	೫೦.೦೦	೬೦೦.೦೦
	೨೧) ರಾಮಸ್ವಾಮಿ	೫೦.೦೦	೬೦೦.೦೦
	೨೨) ದಾಮೋದರ್	೨೦.೦೦	೨೪೦.೦೦
	೨೩) ಎ. ಬಾಬು	೪೦.೦೦	೪೮೦.೦೦
	೨೪) ಮುನಿಚಿನ್ನಮ್ಮ	೫೦.೦೦	೬೦೦.೦೦
	೨೫) ಎನ್. ಪಾಪಯ್ಯ	೭೫.೦೦	೯೦೦.೦೦
	೨೬) ಕದಿರಿವೇಲು	೭೫.೦೦	೯೦೦.೦೦
	೨೭) ಎಂ. ಕುಮಾರನ್	೮೦.೦೦	೯೬೦.೦೦
	೨೮) ಸ್ವಾಮಿಯರ್ ಪಾಠಶಾಲೆ	೧೫೦.೦೦	೧೮೦೦.೦೦
	೨೯) ಮುನಿರಾಜು	೧೦೦.೦೦	೧೨೦೦.೦೦
		೩೮೫೦.೦೦	೪೬೨೦೦.೦೦
೨೫) ಅಲಸೂರು ಸೋಮೇಶ್ವರಸ್ವಾಮಿ	೧) ರಾಜಮ್ಮ	೨೫.೦೦	೩೦೦.೦೦
	೨) ಆನಂದರಾವ್ ದೇಶಮುಖ್	೧೨೦.೦೦	೧೪೪೦.೦೦
	೩) ಅಂತೋಣಿಗ್ರಾಸ್	೨೦.೦೦	೨೪೦.೦೦
	೪) ದೊರೆಸ್ವಾಮಿ	೧೦.೦೦	೧೨೦.೦೦
	೫) ಕೋದಂಡಪಾಣಿ	೧೦.೦೦	೧೨೦.೦೦
	೬) ನಾಯ್ಡು	೫೦.೦೦	೬೦೦.೦೦
	೭) ಅಮೀರ್	೧೫೦.೦೦	೧೮೦೦.೦೦
	೮) ಫಾಜಲ್	೧೫೦.೦೦	೧೮೦೦.೦೦
	೯) ಬಾಬು	೧೫೦.೦೦	೧೮೦೦.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೧೦) ಬೇಬಿಯಮ್ಮ	೧೫೦.೦೦	೧೮೦೦.೦೦
	೧೧) ಪುಟ್ಟಲಿಂಗಂ	೧೬೦.೦೦	೧೫೨೦.೦೦
	೧೨) ಮುನಿಸ್ವಾಮಿ	೧೬೦.೦೦	೧೫೨೦.೦೦
	೧೩) ರಾಜ್‌ಕುಮಾರ್	೧೫೦.೦೦	೧೮೦೦.೦೦
	೧೪) ಶ್ರೀನಿವಾಸ ಶೆಟ್ಟಿ	೧೬೦.೦೦	೧೯೨೦.೦೦
	೧೫) ತಿರುಪತಯ್ಯ	೧೬೦.೦೦	೧೯೨೦.೦೦
	೧೬) ಫಾಕಾರ್	೧೬೦.೦೦	೧೯೨೦.೦೦
	೧೭) ನಿಸ್ಸಾರ್ ಹುಸೇನ್	೧೬೦.೦೦	೧೯೨೦.೦೦
	೧೮) ಮನ್ಸೂರೆಹುಸೇನ್	೧೬೦.೦೦	೧೯೨೦.೦೦
	೧೯) ಕೆ. ರಾಧಮ್ಮ	೧೬೦.೦೦	೧೯೨೦.೦೦
	೨೦) ಹನೀದ್	೧೬೦.೦೦	೧೯೨೦.೦೦
	೨೧) ಅಕ್ಬರ್	೧೬೦.೦೦	೧೯೨೦.೦೦
	೨೨) ಅಲ್‌ತಫ್ ಅಹ್ಮದ್	೧೬೦.೦೦	೧೯೨೦.೦೦
	೨೩) ಸೋಮೇಶ್ವರನ್	೧೬೦.೦೦	೧೯೨೦.೦೦
	೨೪) ಬಾಲಕೃಷ್ಣ	೧೬೦.೦೦	೧೯೨೦.೦೦
	೨೫) ಯಶೋದಮ್ಮ	೧೬೦.೦೦	೧೯೨೦.೦೦
	೨೬) ಸಲೀಮ್ ಪಾಷಾ	೧೬೦.೦೦	೧೯೨೦.೦೦
	೨೭) ಕೆ. ಎ. ರವಿ	೧೫೦.೦೦	೧೮೦೦.೦೦
	೨೮) ಕೆ. ಕೋಯಾ	೧೬೦.೦೦	೧೯೨೦.೦೦
	೨೯) ಅಬ್ದುಲ್ಲಾಖಾನ್	೧೬೦.೦೦	೧೯೨೦.೦೦
	೩೦) ಶ್ರೀಕಾಂತ್	೧೫೦.೦೦	೧೮೦೦.೦೦
	೩೧) ಕೇಶವನ್	೧೬೦.೦೦	೧೯೨೦.೦೦
	೩೨) ಶಬೀರ್ ಅಹಮದ್	೧೫೦.೦೦	೧೮೦೦.೦೦
	೩೩) ಲಲಿತಾಬಾಯಿ	೧೫೦.೦೦	೧೮೦೦.೦೦
	೩೪) ಸಮೀಉಲ್ಲಾ	೧೬೦.೦೦	೧೯೨೦.೦೦
	೩೫) ಸನಾಉಲ್ಲಾ	೧೬೦.೦೦	೧೯೨೦.೦೦
	೩೬) ರಾಧಾಕೃಷ್ಣ	೧೬೦.೦೦	೧೯೨೦.೦೦
	೩೭) ನೂರ್ ಅಹ್ಮದ್	೧೬೦.೦೦	೧೯೨೦.೦೦
	೩೮) ಬಿ. ಕೆ. ಪೋಕರ್	೧೫೦.೦೦	೧೮೦೦.೦೦
	೩೯) ಟಿ. ಮೊಹಿದೀನ್	೧೫೦.೦೦	೧೮೦೦.೦೦
	೪೦) ಅನ್ವರ್	೧೬೦.೦೦	೧೯೨೦.೦೦
	೪೧) ಅಬ್ದುಲ್ ಕರೀಮ್	೧೫೦.೦೦	೧೮೦೦.೦೦
	೪೨) ಮುನಿಯಮ್ಮಾಳ್	೧೫೦.೦೦	೧೮೦೦.೦೦
	೪೩) ಕೆ. ಮುನಾವರ್	೧೬೦.೦೦	೧೯೨೦.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೪೪) ಷೇಕಉಲ್ಲಾ	೧೬೦.೦೦	೧೯೨೦.೦೦
	೪೫) ಅನ್ವರ್. ಆರ್	೧೬೫.೦೦	೧೯೮೦.೦೦
	೪೬) ಇಸ್ಮಾಯಿಲ್	೧೬೫.೦೦	೧೯೮೦.೦೦
	೪೭) ಕೆ. ಅನೀಫ್	೧೮೦.೦೦	೨೧೬೦.೦೦
		೬೭೪೫.೦೦	೮೦೯೪೦.೦೦
೨೬) ಕಾರಂಜಿ ಅಂಜನೇಯ	೧) ಬಿ.ಎಂ.ಎಸ್. ಮಹಿಳಾ ಕಾಲೇಜು	೨೫೦೦.೦೦	೩೦೦೦೦.೦೦
	೨) - " -	೨೦೦.೦೦	೨೪೦೦.೦೦
	೩) - " -	೧೦೦೦.೦೦	೧೨೦೦೦.೦೦
	೪) ಯುವಕರ ಸಂಘ	೨೫.೦೦	೩೦೦.೦೦
		೩೭೨೫.೦೦	೪೪೭೦೦.೦೦
೨೭) ಜಲಕಂಠೇಶ್ವರ	೧) ನಾಗಮ್ಮ	೬೫೦.೦೦	೭೮೦೦.೦೦
೨೮) ಗವಿಗಂಗಾಧರ	೧) ಹನುಮಂತರಾಜು	೬೦೦.೦೦	೭೨೦೦.೦೦
೨೯) ಜಾಬೀನ್ ಸುಬ್ಬರಾವ್	೧) ಶಶಿಕಲಾ ರಾವ್	೨೨೦.೦೦	೨೬೪೦.೦೦
	೨) ಮುಕ್ಕೋಜಿ ರಾವ್	೧೪೭.೦೦	೧೭೬೪.೦೦
	೩) ಶಿವಾಜಿ ರಾವ್	೧೬೨.೦೦	೧೯೪೪.೦೦
	೪) ಎಂ. ಮಂಜು	೧೪೭.೦೦	೧೭೬೪.೦೦
	೫) ಪಿ. ಶ್ರೀನಿವಾಸ್	೨೨೦.೦೦	೨೬೪೦.೦೦
	೬) ಕೆ. ಎಲ್ ಹನುಮಪ್ಪ	೨೨೦.೦೦	೨೬೪೦.೦೦
	೭) ಗೋಪಾಲಯ್ಯ	೨೨೦.೦೦	೨೬೪೦.೦೦
	೮) ವೆಂಕಟಾಚಲಪತಿ	೨೨೦.೦೦	೨೬೪೦.೦೦
	೯) ಕೃಷ್ಣೋಜಿ ರಾವ್	೨೨೦.೦೦	೨೬೪೦.೦೦
	೧೦) ದಶರಥರಾವ್	೧೩೩.೦೦	೧೫೯೬.೦೦
	೧೧) ಎಸ್. ಕೆ. ಪವಾರ್	೧೪೭.೦೦	೧೭೬೪.೦೦
	೧೨) ನಿರ್ಮಲ	೯೮.೦೦	೧೧೭೬.೦೦
		೨೧೫೪.೦೦	೨೪೮೪೮.೦೦
೩೦) ರಾಮೇಶ್ವರ ಸ್ವಾಮಿ ದೇವಸ್ಥಾನ	೧) ಎನ್.ವಿ. ಪ್ರಭು	೮೪೪.೮೦	೧೦೧೩೭.೬೦
	೨) ಕೆ. ಪ್ರಭಾಕರ್ ರಾವ್	೮೪೪.೮೦	೧೦೧೩.೦೭
	- " -	೮೪೪.೮೦	೧೦೧೩.೦೭
	೩) ಷಣ್ಮುಗಂ	೮೪೪.೮೦	೧೦೧೩.೦೭
	೪) ಶಂಕರನಾರಾಯಣ	೮೪೪.೮೦	೧೦೧೩.೦೭
	೫) ಇಂದಿರಾ ಪ್ರಭಾಕರ್	೮೪೪.೮೦	೧೦೧೩.೦೭

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೬) ಗೋಪಾಲಕೃಷ್ಣ	೨೧೭.೮೦	೨೬೧೩.೬೦
	೭) ಮುನಿರಂಗಪ್ಪ	೩೦೨.೫೦	೩೬೩೦.೦೦
	೮) ನಿರ್ಮಲಮ್ಮ	೪೪೦.೦೦	೫೨.೮೦.೦೦
	೯) ಮೋಹನ್‌ರಾಜ್	೪೪೦.೦೦	೫೨೮೦.೦೦
	೧೦) ಎನ್. ಲಕ್ಷ್ಮಣರಾವ್	೪೪೦.೦೦	೫೨೮೦.೦೦
	೧೧) ವೆಂಕಟಲಕ್ಷಮ್ಮ	೧೬೫.೦೦	೧೯೮೦.೦೦
	೧೨) ಕೆ. ಎನ್ ಬಾಲರಾಜು	೩೦೨.೫೦	೩೬೩೦.೦೦
	೧೩) ಮಾಡೆಲ್ ಸ್ಕೂಲ್	೧೫೦.೦೦	೧೮೦೦.೦೦
		೭೫೨೬.೮೦	೯೦೩೧೯.೨೦
೩೧) ರಾಯ ರಾಜ ಛತ್ರ	೧) ಚಿಕ್ಕ ನಂಜಪ್ಪ	೧೦೦.೦೦	೧೨೦೦.೦೦
	೨) ಮೆ. ಸ್ಟೀಲ್ ಕನ್‌ಸ್ಟ್ರಕ್ಷನ್ ಕಂ	೯೦೦.೦೦	೧೦೮೦೦.೦೦
	೩) ಬಿ.ವಿ. ನಗಾರಾಜು	೪೭.೦೦	೫೬೪.೦೦
	೪) ಹನುಮಂತಪ್ಪ	೫೨.೦೦	೬೨೪.೦೦
	೫) ಚಿಕ್ಕಣ್ಣಪ್ಪ	೪೯.೦೦	೫೮೮.೦೦
	೬) ನರಸಯ್ಯ	೫೦.೦೦	೬೦೦.೦೦
	೭) ಗಿರಿಯಪ್ಪ	೪೯.೦೦	೫೮೮.೦೦
	೮) ಜಯಣ್ಣ	೭೪.೦೦	೮೮೮.೦೦
	೯) ನರಸಯ್ಯ	೪೭.೦೦	೫೬೪.೦೦
	೧೦) ಮಂಚಯ್ಯ	೪೯.೦೦	೫೮೮.೦೦
	೧೧) ಅಮೀರ್	೫೪.೦೦	೪೬೮.೦೦
	೧೨) ಶಿವಮ್ಮ	೩೯.೦೦	೪೬೮.೦೦
	೧೩) ಜಿ.ವಿ. ಸರಸ್ವತಮ್ಮ	೧೫೦.೦೦	೧೮೦೦.೦೦
	೧೪) ಅಗಮತ್ರಯ ಮಹಾ ಮಂಡಲ	೧೫.೦೦	೧೮೦.೦೦
	- ” -	೨೭.೨೦	೩೨೬.೪೦
	೧೫) ದ್ವೈತ ವೇದಾಂತ	೧೦೦.೦೦	೧೨೦೦.೦೦
	೧೬) ಸೋದೆವಾದಿರಾಜ ಮಠ	೧೪೮.೦೦	೧೭೭೬.೦೦
	೧೭) ಪುಟ್ಟರಂಗಪ್ಪ	೮೧.೦೦	೯೭೨.೦೦
	೧೮) ಮುನಿಯಪ್ಪ	೧೦೨.೦೦	೧೨೨೪.೦೦
		೨೧೮೨.೨೦	೨೬೧೮೬.೪೦
೩೨) ದೊಡ್ಡಬಸವಣ್ಣ	೧) ಬಿ.ಎಂ.ಎಸ್. ಕಾಲೇಜು	೧೦೦೦.೦೦	೧೨೦೦೦.೦೦
	೨) ಶ್ರೀ ಶ್ರೀನಿವಾಸರಾವ್	೨೦೦.೦೦	೨೪೦೦.೦೦
	೩) ಕೆ. ಕೇಶವನಾಯಕ್	೧೫೬.೦೦	೧೮೭೨.೦೦
		೧೩೫೬.೦೦	೧೬೨೭೨.೦೦

ಗ್ರಂಥಾಲಯ,
ವಿಧಾನ ಸೌಧ, ಬೆಂಗಳೂರು.
ಪು.ಸಂ. .... ದಿನಾಂಕ ....

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
೩೩) ಮಿಂಟೋ ಆಂಜನೇಯ	೧) ಮಹದೇಶ್ವರ ಬೆಟ್ಟ	೭೫೦.೦೦	೯೦೦೦.೦೦
೩೪) ಕೋಟೆ ಆಂಜನೇಯ	೧) ಮಾದಪ್ಪ	೩೦.೦೦	೩೬೦.೦೦
	೨) ಕೆಂಪಯ್ಯ	೩೦.೦೦	೩೬೦.೦೦
	೩) ರಾಜಗೋಪಾಲ ನಾಯ್ಡು	೮.೦೦	೯೬.೦೦
		೬೮.೦೦	೮೧೬.೦೦
೩೫) ಪ್ರಸನ್ನ ವೆಂಕಟರಮಣ	೧) ಶಿವರುದ್ರಪ್ಪ	೧೬೦.೦೦	೧೯೨೦.೦೦
	೨) - " -	೧೦೦.೦೦	೧೨೦೦.೦೦
	೩) ಮುದ್ದುಗಂಗಯ್ಯ	೧೬೫.೦೦	೧೯೮೦.೦೦
	೪) ರಾಜಶೇಖರ್	೧೬೦.೦೦	೧೯೨೦.೦೦
	೫) ಪಾಂಡುರಂಗ	೨೮೦.೦೦	೩೩೬೦.೦೦
	೬) ಕೃಷ್ಣನ್	೧೪೦.೦೦	೧೬೮೦.-೦೦
	೭) ಗೀತಾ ಸ್ವಾಮಿ	೭೫.೦೦	೯೦೦.೦೦
	೮) ಶ್ರೀಧರ್	೨೨೫.೦೦	೨೭೦೦.೦೦
	೯) ಬಸವರಾಜ ಹೊರಟ್ಟಿ	೪೫೦.೦೦	೫೪೦೦.೦೦
	೧೦) ಶ್ರೀಕಾಂತ	೧೬೦.೦೦	೧೯೨೦.೦೦
	೧೧) ಲಕ್ಷ್ಮಿನಾರಾಯಣ	೧೨೪.೦೦	೧೪೮೮.೦೦
		೨೦೩೯.೦೦	೨೪೪೬೮.೦೦
೩೬) ಧರ್ಮರಾಯ	೧) ದೇವರಾಜು	೬೫.೦೦	೭೮೦.೦೦
	೨) ಸೀತಾರಾಮು	೧೦೦.೦೦	೧೨೦೦.೦೦
	೩) ಸತ್ಯನಾರಾಯಣ	೬೫.೦೦	೭೮೦.೦೦
	೪) ಶ್ರೀರಾಮುಲು	೬೫.೦೦	೭೮೦.೦೦
	೫) ನಿಸ್ಸಾರ್ ಅಹಮದ್	೬೫.೦೦	೭೮೦.೦೦
	೬) ಷಣ್ಮುಗಂ	೬೫.೦೦	೭೮೦.೦೦
	೭) ಹನುಮಂತರಾವ್	೧೬೦.೦೦	೧೯೨೦.೦೦
	೮) ನಂಜುಂಡರಾವ್	೧೬೦.೦೦	೧೯೨೦.೦೦
	೯) ವೆಂಕೋಬರಾವ್	೬೫.೦೦	೭೮೦.೦೦
	೧೦) ಮುನಿವೆಂಕಟಪ್ಪ	೬೫.೦೦	೭೮೦.೦೦
		೮೭೫.೦೦	೧೦೫೦೦.೦೦
೩೭) ಕಾಳಿಕಾ ಪರಮೇಶ್ವರಿ	೧) ಅಶ್ವಥರಾಮಾಚಾರ್	೭೦.೦೦	೮೪೦.೦೦
	೨) ನಂಜುಂಡಪ್ಪ	೨೦.೦೦	೨೪೦.೦೦
	೩) ಈಶ್ವರ ರಾವ್	೧೫೦.೦೦	೧೮೦೦.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೪) ನರಸಿಂಹರಾವ್	೭೦.೦೦	೮೪೦.೦೦
	೫) ಹಂಸ ವಾಚ್ ವರ್ಕ್ಸ್	೧೫೦.೦೦	೧೮೦೦.೦೦
	೬) ಬಾಪ್ಪ	೧೫೦.೦೦	೧೮೦೦.೦೦
	೭) ಬ್ರಹ್ಮಾಚಾರ್	೫೫.೦೦	೬೬೦.೦೦
		೬೬೫.೦೦	೭೯೮೦.೦೦
೩೮) ಕಾಶೀವಿಶ್ವೇಶ್ವರ	೧) ಎಸ್ ಎಂ. ಗೌಸ್	೨೨೫.೦೦	೨೭೦೦.೦೦
	೨) ಅಯ್ಯಂಗಾರ್	೨೨.೦೦	೨೬೪.೦೦
	೩) ಮಹಮದ್ ಇಸ್ಮಾಯಿಲ್	೭೦.೦೦	೮೪೦.೦೦
	೪) ರಾಜಶೇಖರ್	೪೫.೦೦	೫೪೦.೦೦
	೫) ನರಸಿಂಹಮೂರ್ತಿ	೧೬.೬೬	೨೦೦.೦೦
	೬) ಮೋಹನ್ ಶೆಟ್ಟಿ	೪೦೦.೦೦	೪೮೦೦.೦೦
		೭೭೮.೬೬	೯೩೪೪.೦೦
೩೯) ಕರೇಕಲ್ ಅಂಜನೇಯ	೧) ಮುದ್ದಪ್ಪ	೧೦೦೦.೦೦	೧೨೦೦೦.೦೦
	೨) ಭೀಮರಾವ್	೮.೦೦	೯೬.೦೦
	೩) ವೆಂಕಟರಾವ್	೫.೦೦	೬೦.೦೦
	೪) ಗೋಪಾಲಯ್ಯ ಬಿನ್ ವಸಂತಪ್ಪ	೬.೫೦	೭೮.೦೦
	೫) ವೆಂಕಟಪ್ಪ ಬಿನ್ ರಂಗಪ್ಪ	೬.೫೦	೭೮.೦೦
	೬) ರಾಮಯ್ಯ ಬಿನ್ ದೊಡ್ಡಮಾದಯ್ಯ	೬.೫೦	೭೮.೦೦
	೭) ಮಾರಪ್ಪ	೬.೦೦	೭೨.೦೦
	೮) ರಾಮಚಂದ್ರಪ್ಪ	೬.೫೦	೭೮.೦೦
	೯) ರಾಮಕೃಷ್ಣಮೂರ್ತಿ	೬.೫೦	೭೮.೦೦
	೧೦) ಸೀನಪ್ಪ	೬.೦೦	೭೨.೦೦
	೧೧) ಕುಪ್ಪಸ್ವಾಮಿ	೮.೦೦	೯೬.೦೦
	೧೨) ವೆಂಕಟರಂಗಯ್ಯ	೫.೦೦	೬೦.೦೦
	೧೩) ತಿಮ್ಮಪ್ಪ	೫.೦೦	೬೦.೦೦
	೧೪) ಭಾಗ್ಯಮ್ಮ	೫.೦೦	೬೦.೦೦
	೧೫) ನಾಗಯ್ಯ	೩.೦೦	೩೬.೦೦
	೧೬) ಪಾರ್ವತಮ್ಮ	೪೦.೦೦	೪೮೦.೦೦
	೧೭) ರಂಗಪ್ಪ	೬.೫೦	೭೮.೦೦
	೧೮) ಪೆರುಮಾಳ್	೬.೫೦	೭೮.೦೦
	೧೯) ಚೆನ್ನಮ್ಮ	೮.೦೦	೯೬.೦೦
	೨೦) ರೇವಣ್ಣ	೬.೦೦	೭೨.೦೦
	೨೧) ಲಕ್ಷ್ಮಮ್ಮ	೬.೦೦	೭೨.೦೦

ದೇವಸ್ಥಾನದ ಹೆಸರು	ಗುತ್ತಿಗೆದಾರರ ಹೆಸರು	ತಿಂಗಳ ಬಾಡಿಗೆ	ವರ್ಷದ ಬಾಡಿಗೆ
	೨೨) ಅಂಜನಮ್ಮ	೬.೦೦	೭೨.೦೦
	೨೩) ಮುತ್ತುಸ್ವಾಮಿ	೩೪.೦೦	೪೦೮.೦೦
	೨೪) ಹಮೀದ್	೫೦.೦೦	೬೦೦.೦೦
	೨೫) ಡಾ. ನೀಲಾ	೫೦.೦೦	೬೦೦.೦೦
	೨೬) ವಾಸುದೇವರಾವ್	೨೫.೦೦	೩೦೦.೦೦
	೨೭) ಸಂಜೀವಪ್ಪ	೮.೦೦	೯೬.೦೦
	೨೮) ಲಕ್ಷ್ಮೀ ನಾರಾಯಣಪ್ಪ	೭.೦೦	೮೪.೦೦
	೨೯) ಶ್ರೀ ರಗೋ	೫.೦೦	೬೦.೦೦
	೩೦) ಬಾಬುಸಿಂಗ್	೫.೭೫	೬೯.೦೦
	೩೧) ಹುಚ್ಚಪ್ಪ	೩.೦೦	೩೬.೦೦
	೩೨) ರಾಮಮೂರ್ತಿ	೫.೦೦	೬೦.೦೦
	೩೩) ರಾಜಗೋಪಾಲ್	೮.೦೦	೯೬.೦೦
		೧೩೬೩.೨೫	೧೬೩೫೯.೦೦
೪೦) ಕೋಡಿ ಆಂಜನೇಯ	೧) ಶ್ರೀ ರಾಮ ಕೋ.ಅಪರೇಟಿವ್ ಬ್ಯಾಂಕ್ ಲಿಮಿಟೆಡ್	೧೦೦.೦೦	೧೨೦೦.೦೦
೪೧) ಪ್ರಳಯಕಾಲದ ವೀರಭದ್ರ	೧) ಪ್ರಳಯಕಾಲದ ವೀರ ಭದ್ರಸ್ವಾಮಿ	೧೦೮.೦೦	೧೨೯೬.೦೦
		೧೦೮.೦೦	೧೦೮.೦೦
	ಒಟ್ಟು ಮೊತ್ತ ರೂ.	೭೬೫೪೨.೭೧	೯೧೮೫೧೨.೫೨

ಬೆಂಗಳೂರು ನಗರದಲ್ಲಿರುವ ಮುಜರಾಯಿ ಇಲಾಖೆಯಿಂದ ನಡೆಸಲ್ಪಡುತ್ತಿರುವ ಛತ್ರಗಳು

೧೩೦೫(೧೮೨೧)ಶ್ರೀ ಪೆರಿಕಲ್.ಎಂ. ಮಲ್ಲಪ್ಪ(ಚಿಕ್ಕಪೇಟೆ):- ಮಾನ್ಯ ಧಾರ್ಮಿಕ ದತ್ತಿ ರಾಜ್ಯ ಸಚಿವರು ದಯವಿಟ್ಟು ಈ ವಿಷಯಗಳನ್ನು ತಿಸುವರೇ?

ಅ) ಬೆಂಗಳೂರು ಮುಜರಾಯಿ ಇಲಾಖೆಯಿಂದ ನಡೆಸಲ್ಪಡುತ್ತಿರುವ ಛತ್ರಗಳ ಸಂಖ್ಯೆ ಎಷ್ಟು?

ಆ) ಖಾಸಗಿ ಟ್ರಸ್ಟ್ ಅಥವಾ ಖಾಸಗೀ ಜನರಿಂದ ನಡೆಸಲ್ಪಡುತ್ತಿರುವ ಛತ್ರಗಳ ಸಂಖ್ಯೆ ಎಷ್ಟು?

ಇ) ಖಾಸಗಿ ಸಮಿತಿ ಅಥವಾ ಖಾಸಗಿ ಜನರಿಂದ ನಡೆಸಲ್ಪಡುತ್ತಿರುವ ಛತ್ರಗಳಲ್ಲಿ ಮದುವೆಗಳಿಗೆ ವಿಧಿಸುವ ಶುಲ್ಕದ ಬಗ್ಗೆ ಷರತ್ತುಗಳೇನಾದರೂ ಇವೆಯೇ?

ಈ) ಪ್ರತಿಯೊಂದು ಮದುವೆಗ ಛತ್ರವನ್ನು ಕೊಡುವುದರಿಂದ ಸರ್ಕಾರಕ್ಕೆ ಆದಾಯವೇನಾದರೂ ಇದೆಯೇ?

ಶ್ರೀ ರಾಜಾ ಅಮರೇಶ ನಾಯಕ್ (ಧಾರ್ಮಿಕ ದತ್ತಿ ರಾಜ್ಯ ಸಚಿವರು):-

ಅ) ೭ ಛತ್ರಗಳು

ಆ) ಖಾಸಗಿ ಛತ್ರಗಳು ಈ ಇಲಾಖೆಯ ನಿಯಂತ್ರಣಕ್ಕೆ ಬರುವುದಿಲ್ಲ. ಆದರಿಂದಾಗಿ ಅವುಗಳ ಮಾಹಿತಿ ಇಲಾಖೆಯಲ್ಲಿ ಲಭ್ಯ ಇರುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ವಶಪಡಿಸಿಕೊಂಡಿರುವ ಗಂಧದ ಮರಗಳು.

೧೩೦೬(೧೮೨೨)ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ರಾಜ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ೧೯೯೦-೯೧ ಮತ್ತು ೯೧-೯೨ನೇ ಡಿಸೆಂಬರ್ ಅಖೈರುವರೆಗೆ ದಕ್ಷಿಣ ಕನ್ನಡದಲ್ಲಿ ಅರಣ್ಯ ಇಲಾಖೆಯವರು ವಶಪಡಿಸಿಕೊಂಡ ಕಳ್ಳ ಸಾಗಾಣಿಕೆಯ ಗಂಧ ಎಷ್ಟು? ಹಾಗೂ ಇದರ ಒಟ್ಟು ಬೆಲೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು).

ಆ) ಎಷ್ಟು ಪ್ರಕರಣಗಳು ಗಂಧ ಸಾಗಾಣಿಕೆಯಲ್ಲಿ ಈ ಅವಧಿಯಲ್ಲಿ ಆಗಿದೆ? ಎಷ್ಟು ಜನರಿಗೆ ಶಿಕ್ಷೆ ಹಾಗೂ ದಂಡ ವಿಧಿಸಲಾಗಿದೆ?

ಶ್ರೀ ಈಟಿ ಶಂಭುನಾಥ್ (ರಾಜ್ಯ ಅರಣ್ಯ ಸಚಿವರು):-

ಅ) ೧೯೯೦-೯೧ ಮತ್ತು ೧೯೯೧-೯೨ (ಡಿಸಂಬರ್ ೯೧ರ ಅಂತ್ಯದವರೆಗೆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಶಪಡಿಸಿಕೊಂಡ ಶ್ರೀಗಂಧದ ಪ್ರಮಾಣ ಮತ್ತು ಬಲೆ ಈ ರೀತಿ ಇದೆ.

	೧೯೯೦-೯೧		೧೯೯೧-೯೨ (ಡಿಸೆಂಬರ್ ೯೧ರವರೆಗೆ)	
ತಾಲ್ಲೂಕು	ಶ್ರೀಗಂಧ ಪ್ರಮಾಣ	ಬೆಲೆ ರೂ. ಲಕ್ಷಗಳಲ್ಲಿ	ಶ್ರೀಗಂಧ ಪ್ರಮಾಣ	ಬೆಲೆ ರೂ. ಲಕ್ಷಗಳಲ್ಲಿ
೧) ಮಂಗಳೂರು	೨.೦೦೦	೩.೦೦	-	-
೨) ಪುತ್ತೂರು	೫.೦೦೦	೭.೫೦	೦.೩	೦.೪೫
೩) ಸುಳ್ಯ	೭.೦೦೦	೧೦.೫೦	-	-
೪) ಬೆಳ್ತಂಗಡಿ	೩.೦೦೦	೪.೫೦	೦.೭೦೦	೧.೦೫
೫) ಕಾರ್ಕಳ	೩.೦೦೦	೪.೫೦	೪.೦೦೦	೬.೦೦೦
೬) ಕುಂದಾಪುರ	೧.೦೦೦	೧.೫೦	೦.೬೦೦	೦.೯೦
೭) ಉಡುಪಿ	೦.೬೦೦	೦.೯೦	೨.೬೦೦	೩.೯೦

ವಿವರ ಈ ರೀತಿ ಇದೆ

ತಾಲ್ಲೂಕು	೧೯೯೦-೯೧	೧೯೯೧-೯೨ (ಡಿಸೆಂಬರ್ ೯೧ರ ವರೆಗೆ)
೧) ಮಂಗಳೂರು	೨೧	-
೨) ಪುತ್ತೂರು	೧೩	೨೭
೩) ಸುಳ್ಯ	೮	-
೪) ಬೆಳ್ತಂಗಡಿ	೨೮	೩೨
೫) ಕಾರ್ಕಳ	೩೩	೧೦
೬) ಕುಂದಾಪುರ	೨೩	೯
೭) ಉಡುಪಿ	೧೪	೩

ಮೇಲಿನ ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಯ ವಿವಿಧ ಹಂತಗಳಲ್ಲಿರುವುದರಿಂದ ಇನ್ನೂ ಯಾರಿಗೂ ಶಿಕ್ಷೆ ವಿಧಿಸಿರುವುದಿಲ್ಲ.

ಸ್ಟಾಂಪ್ ವೆಂಡಾರ್ಸ್‌ಗೆ ಸ್ಟಾಂಪ್ ಕೋಟಾವನ್ನು ಹೆಚ್ಚಿಸುವ ಬಗ್ಗೆ

೧೩೮೯(೧೮೨೩)ಶ್ರೀ ರಾಮಲಿಂಗರೆಡ್ಡಿ:- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರವಿಸುರೇ?

ಅ) ರಾಜ್ಯದಲ್ಲಿ ಎಷ್ಟು ಮುದ್ರಿದಿ ಮುದ್ರಾಂಕ ಮಾರಾಟಗಾರರು (ಸ್ಟಾಂಪ್ ವೇಂಡಾರ್ಸ್) ಇದ್ದಾರೆ?

ಆ) ಮುದ್ರಾಂಕ ಮಾರಾಟಗಾರರಿಗೆ ಕನಿಷ್ಠ ಎಷ್ಟು ಮೊತ್ತದ ಸ್ಟಾಂಪ್ ಪೇಪರ್ ಮಾರಾಟಮಾಡಲು ಅವಕಾಶವಿದೆ?

ಇ) ರೂ. ೧೦೦೦೦ ಕ್ಕಿಂತ ಹೆಚ್ಚಿನ ಮೊತ್ತದ ಸ್ಟಾಂಪ್ ಪೇಪರ್ ಅನ್ನು ಕೊಳ್ಳಲು ಸಾರ್ವಜನಿಕರು ಬಾರ್ ಕೌನ್ಸಿಲ್ ಅನ್ನು ಸಂಪರ್ಕಿಸಬೇಕಾಗಿರುವುದು ನಿಜವೇ?

ಈ) ಸರ್ಕಾರವು ಸ್ಟಾಂಪ್ ವೆಂಡಾರ್ಸ್‌ಗೆ ಮಾರಾಟದ ಮಿತಿಯನ್ನು ರೂ. ೨೫೦೦೦-೦೦ ಗಳಿಗೆ ಹೆಚ್ಚಿಸುವುದರಿಂದ ಸಾರ್ವಜನಿಕರಿಗೆ ಸಹಾಯವಾಗುತ್ತದೆಯೇ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೨,೬೨೬

ಆ) 'ಎ' ದರ್ಜೆ ಮಾರಾಟಗಾರರು ರೂ. ೧೦,೦೦೦-೦೦

'ಬಿ'ದರ್ಜೆ ಮಾರಟಗಾರರು ರೂ. ೫,೦೦೦-೦೦

ಇ) ಲೀಗಲ್ ಬಾರ್ ಅಸೋಷಿಯೇಷ್‌ರವರು ಒಂದು ವ್ಯವಹಾರಕ್ಕೆ ೫೦೦೦೦-೦೦ ರೂ. ಗಳವರೆಗಿನ ಸ್ಟಾಂಪ್ ನೀಡಬಹುದು. ಇದು ಮಾತ್ರವಲ್ಲದೆ ಖಜಾನೆಗಳಿಂದಲೂ ಪಡೆಯಬಹುದು.

ಆ) ಪರಿಶೀಲಸಲಾಗುವುದು.

ಬೆಂಗಳೂರು ನಗರದಲ್ಲಿ ೧೦-೦೦ ರೂ. ಗಳ ಸ್ಟಾಂಪ್ ಪೇಪರ್ ಸಿಗದೇ ಇರುವ ಬಗ್ಗೆ.

೧೩೧೧(೨೦೦೬)ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಈ) ಬೆಂಗಳೂರು ನಗರದಲ್ಲಿ ರೂ..೧೦-೦೦ಗಳ ಸ್ಟಾಂಪ್ ಪೇಪರ್ ಸಿಗದೇ ಇರುವುದು ಸರ್ಕಾರಕ್ಕೆ ತಿಳಿದುಬಂದಿದೆಯಾ?

ಆ) ರೂ. ೧೦-೦೦ಗಳ ಸ್ಟಾಂಪ್ ಪೇಪರ್‌ನ್ನು ಕಾಳಸಂತೆಯಲ್ಲಿ (ಬ್ಲಾಕ್ ಮಾರ್ಕೆಟ್) ರೂ. ೧೪ ರಂತೆ ಮಾರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ರೂ. ೧೦-೦೦ಗಳ ಸ್ಟಾಂಪ್ ಪೇಪರ್‌ಗಳನ್ನು ಸ್ಟಾಂಪ್ ವೆಂಡಾರ್ಸ್‌ಗೆ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಇಲ್ಲಾ

ಆ) ಇಲ್ಲಾ

ಇ) ಕೊರತೆ ಇಲ್ಲಾ.

ಚಿತ್ರದುರ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿ ಕುರಿತು.

೧೩೧೩(೧೮೩೪)ಶ್ರೀ ಎನ್. ಜಿ. ನಾಯ್ಕ್ (ಮೊಳಕಾಲ್ಮೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಬಗರ್‌ಹುಕುಂ ಸಾಗುವಳಿದಾರರ ಸಂಖ್ಯೆ ಎಷ್ಟು?

ಆ) ಅವರು ಯಾವ ವರ್ಷದಿಂದ ಮಾಡುತ್ತಾ ಇದ್ದಾರೆ ಮತ್ತು ಆ ಭೂಮಿಯ ವಿಸ್ತೀರ್ಣವೆಷ್ಟು?

ಇ) ಈ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಹಾಗೂ ಅವರ ಸಾಗುವಳಿ ಭೂಮಿಯ ವಿಸ್ತೀರ್ಣವೆಷ್ಟು (ಪೂರ್ಣ ವಿವರಗಳನ್ನು ನೀಡುವುದು).

ಈ) ಬಗರ್ ಹುಕುಂನಿಂದ ಸಾಗುವಳಿ ಮಾಡುತ್ತಿರುವವರಿಗೆ ಖಾಯಂ ಮಾಡುವುದು ಸರ್ಕಾರದ ಗಮನದಲ್ಲಿದೆಯೇ? ಇದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೬೦೮೭೮

ಆ) ಅವರಲ್ಲಿ ಬಹಳಷ್ಟು ಜನ ೧೯೭೬-೭೭ನೇ ಸಾಲಿನಿಂದ ಸಾಗುವಳಿ ಮಾಡುತ್ತಿದ್ದಾರೆ. ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಒಟ್ಟು ವಿಸ್ತೀರ್ಣ ೧೭೪೦೨೧ ಎಕರೆ ೩೧ ಗುಂಟೆಗಳು.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ೩೭೪೪೪ ಜನರು ಮತ್ತು ವಿಸ್ತೀರ್ಣ ೧೦೫೭೫೮ ಎಕರೆ ೧೧ ಗುಂಟೆಗಳು.

ಈ) ಬಗರ್‌ಹುಕುಂ ಸಾಗುವಳಿ ಸಕ್ರಮಗೊಳಿಸಲು ಅನುಕೂಲವಾಗುವಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೯೪ಕ್ಕೆ ಸೂಕ್ತ ತಿದ್ದುಪಡಿಯನ್ನು ತರಲಾಗಿದ್ದು, ಅದರಂತೆ ಸಕ್ರಮಗೊಳಿಸಲು ತಾಲ್ಲೂಕು ಮಟ್ಟದ ಸಮಿತಿಯು ಸಮ ಪ್ರಾಧಿಕಾರವುಳ್ಳದ್ದಾಗಿರುತ್ತದೆ. ಸಕ್ರಮಗೊಳಿಸುವ ಅರ್ಜಿಗಳು ತಾಲ್ಲೂಕು ಮಟ್ಟದ ಸಮಿತಿಗಳ ಮುಂದೆ ಇದ್ದು ಸದರಿ ಅರ್ಜಿಗಳನ್ನು ವಿಲೇವಾರಿ ಮಾಡಲು ಸಮಿತಿಯ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚಿತ್ರದುರ್ಗ ಜಿಲ್ಲೆಯಲ್ಲಿ ದರಖಾಸ್ತದಾರರ ಸಂಖ್ಯೆ.

೧೩೧೪(೧೮೩೫)ಶ್ರೀ ಎನ್. ಜಿ. ನಾಯ್ಕ್ (ಮೊಳಕಾಲ್ಮೂರು):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ದರಖಾಸ್ತುದಾರರ ಸಂಖ್ಯೆ ಎಷ್ಟು ಮತ್ತು ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಮಂಜೂರಾಗಿದೆ?

ಆ) ಈ ಆಜ್ಞೆ ದರಖಾಸ್ತುದಾರರು ಹೊಂದಿರುವ ಆಜ್ಞೆ ಜಮೀನನ್ನು ಅವರಿಗೆ ಖಾಯಂ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೧೦೮೬೮೨೬ ಅರ್ಜಿಗಳು, ಅವುಗಳಲ್ಲಿ ೬೮೮೭೮ ಅರ್ಜಿಗಳು ಚಿತ್ರದುರ್ಗ ಜಿಲ್ಲೆಯಿಂದ ಬಂದಿರುತ್ತವೆ. ಭೂ ಸಕ್ರಮೀಕರಣ ಯೋಜನೆಯಡಿಯಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಈಗಾಗಲೇ ೧೮೩ ಜನ ಅರ್ಜಿದಾರರಿಗೆ ಜಮಿನನ್ನು ಮಂಜೂರು ಮಾಡಲಾಗಿದೆ.

ಆ) ಪ್ರಸ್ತುತದಲ್ಲಿ ಅರ್ಜಿಗಳನ್ನು ತಾಲ್ಲೂಕು ಮಟ್ಟದಲ್ಲಿರುವ ಸಮಿತಿಗಳು ಪರಿಶೀಲಿಸುತ್ತಿವೆ. ಅರ್ಹ ಪ್ರಕರಣಗಳನ್ನು ಸಕ್ರಮಗೊಳಿಸಲು ಭೂ ಸಕ್ರಮೀಕರಣ ಯೋಜನೆಯಡಿಯಲ್ಲಿ ಸಮಿತಿಯು ಪರಿಶೀಲಿಸಿ ತೀರ್ಮಾನ ಕೈಗೊಳ್ಳುವುದು.

ರಾಷ್ಟ್ರೀಯ ಹೆದ್ದಾರಿ ಹಾಗೂ ರಾಜ್ಯ ರಸ್ತೆ ಹೆದ್ದಾರಿಗಳಲ್ಲಿ ಬೇವಿನ ಗಿಡ, ಹುಣಸೇಗಿಡ ಇತ್ಯಾದಿ ಬೆಳೆಸುವುದು.

೧೩೧೫(೯೧೭)ಶ್ರೀ ಎಂ. ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ?

ಅ) ರಾಷ್ಟ್ರೀಯ ಹೆದ್ದಾರಿಗಳ ಮತ್ತು ರಾಜ್ಯ ರಸ್ತೆಯ ಬದಿಯಲ್ಲಿ ನೀಲಗಿರಿ ಗಿಡ ಹಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರಸ್ತೆಗಳ ಬದಿಯಲ್ಲಿ ಬೇವಿನ ಗಿಡ, ಹುಣಸೆ ಗಿಡ, ಮಾವಿನ ಗಿಡ, ನೀಲಗಿರಿ ಗಿಡ, ಇತ್ಯಾದಿ ಹಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನೀಲಗಿರಿ ಗಿಡ ಹಚ್ಚುವುದರಿಂದ ಅಪಾಯವೆಂದು ಸಾರ್ವಜನಿಕರಿಂದ ದೂರು

ಬಂದಿರುವುದು ನಿಜವಲ್ಲವೇ? ಹಾಗಿದ್ದಲ್ಲಿ, ಈ ಬಗ್ಗೆ ತಜ್ಞರ ಅಭಿಪ್ರಾಯ ಸಂಗ್ರಹಿಸಲಾಗಿದೆಯೇ?

ಶ್ರೀ ಈಟಿ ಶಂಭುನಾಥ (ಅರಣ್ಯ ಸಚಿವರು):-

ಅ) ಇಲ್ಲ.

ಆ) ಹೌದು

ಇ) ನಿಜ. ಈ ಸಂಬಂಧ ತಜ್ಞರ ಅಭಿಪ್ರಾಯ ಪಡೆಯಲಾಗಿದ್ದು, ಅದರ ಅಭಿಪ್ರಾಯದಂತೆ ನೀಲಗಿರಿ ಬೆಳೆಸುವುದು ಅಪಾಯಕಾರಿ ಎಂಬುದು ದೃಢಪಟ್ಟಿಲ್ಲ.

ಬಂಗಾರುಪೇಟೆ ತಾಲ್ಲೂಕಿನ ಉಪನೋಂದಣಿ ಕಛೇರಿ ಬಗ್ಗೆ.

೧೩೧೬(೨೦೦೦)ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೋಲಾರ ಜಿಲ್ಲೆಯ ಬಂಗಾರುಪೇಟೆ ತಾಲ್ಲೂಕಿನಲ್ಲಿ ಎಷ್ಟು ಉಪ-ನೋಂದಣಿ ಕಛೇರಿಗಳಿವೆ?

ಆ) ೧೯೮೯ರ ಜನವರಿಯಿಂದ ೧೯೯೧ರ ಡಿಸೆಂಬರ್ ಅಂತ್ಯದವರೆಗೆ ನೋಂದಾಯಿಸಲಾಗಿರುವ ಖಾಲಿ ಜಾಗಗಳು, ಮನೆಗಳು, ಕೃಷಿ ಜಮೀನು ಎಷ್ಟು?

ಇ) ಮೇಲೆ ಹೇಳಿದ ಅವಧಿಯಲ್ಲಿ ಈ ಉಪನೋಂದಣಿ ಕಛೇರಿಯಲ್ಲಿ ಆಸ್ತಿ ಅಪಮೌಲ್ಯಗೊಳಿಸಿ ದಾಖಲಿಸಿದ ಪತ್ತೆ ಮಾಡಿದ ದಸ್ತಾವೇಜುಗಳ ಸಂಖ್ಯೆ ಎಷ್ಟು?

ಈ) ಈ ರೀತಿ ಅಪಮೌಲ್ಯಗೊಳಿಸಿ ನೋಂದಾಯಿಸಿರುವುದನ್ನು ತಪ್ಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಉ) ಕಟ್ಟಡಗಳು ಇಲ್ಲದಿದ್ದರೂ, ಕಟ್ಟಡಗಳು ಇದೆ ಎಂದು ಘೋಷಿಸಿ ನೋಂದಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ಒಂದು

ಆ) ನೋಂದಾಯಿಸಲಾಗಿರುವ ಖಾಲಿ ಜಾಗಗಳು ೩೪೪೧, ಮನೆಗಳು ೫೮೬, ಕೃಷಿಜಮೀನುಗಳು ೮೦೮೩ ಒಟ್ಟು ೧೨೧೧೦.

ಇ) ೩೧೫ ಪ್ರಕರಣಗಳು.

ಈ) ಇಂತಹ ಪ್ರಕರಣಗಳಲ್ಲಿ ಕರ್ನಾಟಕ ಮುದ್ರಾಂಕ ಅಧಿನಿಯಮದ ಸೆಕ್ಷನ್ ೪೫-ಎ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಪರಿಮಿತಿಯನ್ನು ರಾಜ್ಯದಾದ್ಯಂತ ವಿಸ್ತರಿಸಿರುವುದರಿಂದ ಅಪಮೌಲ್ಯವನ್ನು ತಪ್ಪಿಸಬಹುದು.

ಉ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ರಾಜ್ಯದಲ್ಲಿ ಎಣ್ಣೆ ಕಾಳಿನ ಉತ್ಪಾದನೆಯ ಬೆಲೆ.

೧೩೧೮(೧೯೭೯)ಶ್ರೀ ಕೆ. ಹರ್ಷ ಕುಮಾರ ಗೌಡ (ಚಾಮರಾಜ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವರ್ಷ ಒಂದಕ್ಕೆ ಎಷ್ಟು ಲಕ್ಷ ಟನ್ ಎಣ್ಣೆಕಾಳು ಉತ್ಪಾದನೆಯಾಗುತ್ತದೆ ಮತ್ತು ಅದರ ಅಂದಾಜು ಬೆಲೆ ಎಷ್ಟು?

ಆ) ಎಣ್ಣೆ ಬೀಜಗಳಿಂದ ಎಣ್ಣೆ ಉತ್ಪಾದಿಸುವ ಕೈಗಾರಿಕೆಗಳು ರಾಜ್ಯದಲ್ಲಿ ಎಷ್ಟಿವೆ?

ಇ) ಪ್ರತಿ ವರ್ಷ ಹೊರ ರಾಜ್ಯಗಳಿಂದ ಆಮದು ಮಾಡಿಕೊಳ್ಳುತ್ತಿರುವ ಎಣ್ಣೆ ಬೆಲೆ ಎಷ್ಟು?

ಶ್ರೀ ಎನ್ ಚಿಕ್ಕೇಗೌಡ (ಕೃಷಿ ಸಚಿವರು):-

ಅ) ಕರ್ನಾಟಕ ರಾಜ್ಯದಲ್ಲಿ ೧೯೮೯-೯೦ನೇ ಸಾಲಿನಲ್ಲಿ ೧೩.೮೬ ಲಕ್ಷ ಟನ್ ಹಾಗೂ ೧೯೯೦-೯೧ನೇ ಸಾಲಿನಲ್ಲಿ ೧೩.೯೬ ಲಕ್ಷ ಟನ್ (ತಾತ್ಕಾಲಿಕ) ಉತ್ಪಾದನೆಯಾಗಿರುತ್ತದೆ.

ಆ) ಕರ್ನಾಟಕ ರಾಜ್ಯದಲ್ಲಿ ಒಟ್ಟು ೩೫೮ ಎಕ್ಸ್‌ಟ್ರಾಕ್ಷನ್ ಪ್ಲಾಂಟ್ ಪ್ರತಿ ದಿನಕ್ಕೆ ೫೩೭೦ ಮೆಟ್ರಿಕ್ ಟನ್‌ನಷ್ಟು ಎಣ್ಣೆ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

ಇ) ೪ ಲಕ್ಷ ಟನ್‌ಗಳಷ್ಟು ಎಣ್ಣೆಯನ್ನು ಹೊರರಾಜ್ಯಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಬೆಳೆಯುವ ತಂಬಾಕಿನ ಉತ್ಪಾದನೆಯ ಪ್ರಮಾಣ

೧೩೧೯(೧೯೮೦)ಶ್ರೀ ಕೆ. ಹರ್ಷ ಕುಮಾರ ಗೌಡ (ಚಾಮರಾಜ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ಬೆಳೆಯುವ ತಂಬಾಕಿನ ಪ್ರಮಾಣವೇನು? ಮತ್ತು ಅದರ ಅಂದಾಜು ಬೆಲೆ ಎಷ್ಟು?

ಆ) ಈ ಉತ್ಪಾಧಿತ ತಂಬಾಕನ್ನು ಖರೀದಿಸುವ ಪ್ರಮುಖ ರಾಜ್ಯಗಳು ಯಾವುವು?

ಇ) ರಾಜ್ಯದಲ್ಲಿ ಬೆಳೆದ ತಂಬಾಕನ್ನು ಕೊನೆಯ ಹಂತದವರೆಗೆ ಸಂಸ್ಕರಿಸುವ ಕೈಗಾರಿಕಾ ವ್ಯವಸ್ಥೆ ರಾಜ್ಯದಲ್ಲಿದೆಯೇ? ಇದ್ದರೆ ಅಂತಹ ಉದ್ಯಮಗಳ ಸಂಖ್ಯೆ ಎಷ್ಟು?

ಶ್ರೀ ಎನ್ ಚಿಕ್ಕೇಗೌಡ (ಕೃಷಿ ಸಚಿವರು):-

ಅ) ರಾಜ್ಯದ ಉತ್ಪಾದನೆ ೦.೩೮ ಲಕ್ಷ ಟನ್ ಹಾಗೂ ಇದರ ಅಂದಾಜು ಬೆಲೆ ರೂ. ೧೧೨.೧೭ ಕೋಟಿ.

ಆ) ಆಂಧ್ರ ಪ್ರದೇಶ, ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳು.

ಇ) ಇಲ್ಲ.

ಲಂಬಾಣಿ ತಾಂಡಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ.

೧೩೨೧(೨೦೦೨)ಶ್ರೀ ಜಿ. ಶಿವರಾಮು (ಗಂಡಸಿ): ಮಾನ್ಯ ಕಂದಾಯ ಸಚಿವರು ಈ

ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗಂಡಸೀ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಒಟ್ಟು ಲಂಬಾಣಿ ತಾಂಡಾಗಳೆಷ್ಟು ಮತ್ತು ಯಾವ ಹೋಬಳಿಗೆ ಸೇರಿದೆ?

ಆ) ಅವುಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ವೆ ನಡೆದಿದೆಯೇ? (ನಡೆದಿದ್ದಲ್ಲಿ ಅದರ ಮಾಹಿತು ಒದಗಿಸುವುದು).

ಇ) ಅವುಗಳಲ್ಲಿ ಎಷ್ಟು ತಾಂಡಾಗಳಿಗೆ ಕನಿಷ್ಠ ಅವಶ್ಯಕತೆಗಳಾದ ಶಾಲೆ, ನೀರು, ವಿದ್ಯುಚ್ಛಕ್ತಿ ಮತ್ತು ರಸ್ತೆ ಸೌಕರ್ಯಗಳನ್ನು ಒದಗಿಸಲಾಗಿದೆ?

ಈ) ಆ ತಾಂಡಾಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಯಾವುದಾದರೂ ಯೋಜನೆಗಳನ್ನು ರೂಡಿಸಿಕೊಂಡಿದ್ದರೆ ಅದರ ಕಾರ್ಯಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) ೧೨. ಗಂಡಸೀ ಹೋಬಳಿ - ೨, ಜಾವಗಲ್ ಹೋಬಳಿ - ೧೦.

ಆ) ಹೌದು

ಇ) ಶಾಲಾ ಸೌಲಭ್ಯವನ್ನು ಹೊರತು ಪಡಿಸಿ ಉಳಿದೆಲ್ಲಾ ಸೌಕರ್ಯವನ್ನು ಮೇಲೆ ಹೇಳಿದ ಎಲ್ಲಾ ತಾಂಡಾಗಳಿಗೆ ಒದಗಿಸಿದೆ.

ಈ) ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಸರ್ಕಾರ ಪರಿಶೀಲಿಸುತ್ತಿದೆ.

ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೇರಿದ ಗ್ರಾಮಗಳಿಗೆ ಪಶುವೈದ್ಯಶಾಲೆ ಮಂಜೂರಾತಿ.

೧೩೨೨(೨೦೦೫) ಶ್ರೀ ಡಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳ್ಳಂಬೆಳ್ಳ ಕ್ಷೇತ್ರಕ್ಕೆ ಸೇರಿದ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಎಳನಾಡು ಗ್ರಾಮ ಮತ್ತು ಶಿರು ತಾಲ್ಲೂಕಿನ ಮಾದೇನಹಳ್ಳಿ ನೇರಳೆಗುಡ್ಡ ಹಾಗೂ ಚಿಕ್ಕನ ಹಳ್ಳಿ ಗ್ರಾಮಗಳಿಗೆ ಮಶುವೈದ್ಯಶಾಲೆಯ ಮಂಜೂರಾತಿಗಾಗಿ ಅನೇಕ ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರೀ ಗ್ರಾಮಗಳಲ್ಲಿ ಪಶುವೈದ್ಯ ಕೇಂದ್ರ ಅವಶ್ಯಕತೆಯ ಬಗ್ಗೆ ಸರ್ಕಾರಕ್ಕೆ ತಿಳಿದಿದೆಯೇ?

ಇ) ಪಶುವೈದ್ಯ ಶಾಲೆಗಳಿಲ್ಲದೇ ಅಲ್ಲಿಯ ರೈತರುಗಳು ತೊಂದರೆಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸದರೀ ಗ್ರಾಮದಲ್ಲಿ ಮಶುವೈದ್ಯ ಶಾಲೆಗಳನ್ನು ತೆರೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೇ ಹಾಗೂ ಅದನ್ನು ಯಾವಾಗ ತೆರೆಯಲಾಗುವುದು?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನೆ, ಪಶುವೈದ್ಯ ಸಚಿವರು):-

ಅ) ಹೌದು

ಆ) ಹೌದು

ಇ) ಹೌದು

ಈ) ಶಿರಾ ತಾಲ್ಲೂಕಿನ ಲಕ್ಕನಹಳ್ಳಿಯಲ್ಲಿ ಈ ವರ್ಷ ಒಂದು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಉಳಿದ ಸ್ಥಳಗಳ ಕುರಿತು ೧೯೯೩-೯೪ರಲ್ಲಿ ಅವಶ್ಯಕತೆ ನೋಡಿ ಆದ್ಯತೆ ಮೇಲೆ ಪರಿಗಣಿಸಲಾಗುವುದು.

ಕುದರೆ ಕಣಿವೆ ಜಮೀನನ್ನು ಸಾಗುವಳಿದಾರರಿಗೆ ನೀಡುವುದು

೧೩೨೩(೨೦೦೭)ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು, ಹುಳಿಯೂರು ಹೋಬಳಿ, ತಮ್ಮಡಹಳ್ಳಿ ಗೊಲ್ಲರ ಹಟ್ಟಿ ಬನಿವಾಸಿಗಳು ಶ್ರೀರಾಂಪುರ ಹೋಬಳಿ (ಚಿತ್ರದುರ್ಗ ಜಿಲ್ಲೆ) ಕುದರೆ ಕಣಿವೆ ಸರ್ವೆ ನ. ೧ರಲ್ಲಿ ಕಳೆದ ೧೦ ವರ್ಷಗಳಿಂದ ೨೦೦ ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರುವುದು ನಿಜವೇ?

ಆ) ಸದರಿ ಜಮೀನಿನ ಮಾಲೀಕತ್ವಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬಗರ್ ಹುಕುಂ ರೀತ್ಯಾ ಪಟ್ಟಾ ನೀಡಲು ಅರ್ಜಿ ಸಲ್ಲಿಸಿದ್ದು ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಇ) ಸಾಗುವಳಿ ಮಾಡುತ್ತಿರುವ ಜಮೀನನ್ನು ಅರಣ್ಯ ಇಲಾಖೆಯವರು ಅವರ ಇಲಾಖೆಗೆ ಸಂಬಂಧಿಸಿದ ಜಮೀನು ಎಂದು ಅಲ್ಲಿಯ ರೈತರಿಗೆ ಹೆದರಿಸಿ ಗುಂಡಿ ತೋಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿ ೧೦ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದ ರೈತರಿಗೆ ಅರಣ್ಯ ಇಲಾಖೆಯವರು ಅನ್ಯಾಯ ಮಾಡಿದಂತಾಗುವುದಿಲ್ಲವೇ?

ಉ) ಹಾಗಿದ್ದಲ್ಲಿ, ಸದರಿ ಜಮೀನನ್ನು ಸಾಗುವಳಿದಾರರಿಗೆ ನೀಡಲು ಸರಕಾರದವರು ಕೈಗೊಂಡ ಕ್ರಮವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):-

ಅ) ಹೊಸದುರ್ಗ ತಾಲ್ಲೂಕು, ಕುದರೆ ಕಣಿವೆ ಗ್ರಾಮದ ಸರ್ವೆ ನ. ೧ರಲ್ಲಿ ೨೦೦ ಎಕರೆ ಜಮೀನನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು, ತಮ್ಮಡಿಹಳ್ಳಿ ಗೊಲ್ಲರಹಟ್ಟಿ ನಿವಾಸಿಗಳು ಕಳೆದ ೧೦ ವರ್ಷಗಳಿಂದ ಸಾಗುವಳಿ ಮಾಡುತ್ತಿರುವುದು ಸತ್ಯ ಸಂಗತಿಯಾಗಿರುವುದಿಲ್ಲ.

ಆ) ಚಿಕ್ಕನಾಯಕನ ಹಳ್ಳಿ ತಾಲ್ಲೂಕು, ತಮ್ಮಡಿಹಳ್ಳಿ ಗ್ರಾಮಸ್ಥರು ಅನಧಿಕೃತ ಸಾಗುವಳಿಯನ್ನು ಸಕ್ರಮೀಕರಣಗೊಳಿಸಲು ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ ಮತ್ತು ಈ) ಹೊಸದುರ್ಗ ತಾಲ್ಲೂಕು, ಶ್ರೀರಾಂಪುರ ಹೋಬಳಿ, ಕುದರೆಕಣಿವೆ ಗ್ರಾಮದ ಸರ್ವೆ ಸಂ. ೧ ರಲ್ಲಿನ ಭೂಮಿಯು ಕಾಯ್ದಿರಿಸಿದ ಅರಣ್ಯ ಪ್ರದೇಶವಾಗಿರುವುದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳು ಇಂತಹ ಅನಧಿಕೃತ ಸಾಗುವಳಿ ಮಾಡುವ ಪ್ರಯತ್ನವನ್ನು ತಡೆಯಲು,

ಕ್ರಮ ಕೈಗೊಂಡು ಗುಂಡಿಗಳನ್ನು ತೋಡಿ ಅರಣ್ಯ ಮರಗಿಡಗಳನ್ನು ಬೆಳೆಸಲು ಕ್ರಮ ಕೈಗೊಂಡಿದ್ದಾರೆ.

ಉ) ಉದ್ಭವಿಸುವುದಿಲ್ಲ.

ಚೇರ್ಮನ್:- ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳುನ್ನು ಸಭೆಯ ಮುಂದೆ ಮಂಡಿಸಲಾಯಿಯಿತು. ಈಗ ನಿಯಮ ೩೩೮ರ ಮೇರೆಗೆ ಸಭೆಯಲ್ಲಿ ಬರುವ ವಿಷಯಗಳು.

ಶ್ರೀ ಕೆ. ಎಸ್. ಕಾಳಮರೀಗೌಡ:- ಮಾನ್ಯ ಅಧ್ಯಕ್ಷರೆ, ಒಂದು ವಿಚಾರದ ಬಗ್ಗೆ ನಾವು ನಾಲ್ಕು ಜನ ನೋಟೀಸ್ ಕೊಟ್ಟಿದ್ದೇವೆ. ಅದನ್ನು ಮಂಡಿಸಲು ಅನುಮತಿ ಕೊಡಬೇಕೆಂದು ವಿನಂತಿಸುತ್ತೇನೆ.

ಚೇರ್ಮನ್:- ಹೇಳಿ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಹೊಗೆಸೊಪ್ಪಿನ ಬೆಳೆಗಾರರಿಗೆ ಆಗಿರುವ ತೊಂದರೆ.

ಶ್ರೀ ಕೆ. ಎಸ್. ಕಾಳಮರೀಗೌಡ(ಪಿರಿಯಾಪಟ್ಟಣ):-ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಸುಮಾರು ಮೇಜರ್ ಆಗಿ, ಪಿರಿಯಾಪಟ್ಟಣ, ಕೆ. ಆರ್. ನಗರ, ಅಡಕಲಗೂಡು, ಹುಣಸೂರು ತಾಲ್ಲೂಕು, ಶಿವಮೊಗ್ಗ ಜಿಲ್ಲೆ ಕೆಲವು ಭಾಗಗಳಲ್ಲಿ ಹೋಗೆಸೊಪ್ಪಿನ ಬೆಳೆಮಾಡುತ್ತಿದ್ದಾರೆ. ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಹತ್ತಾರು ವರ್ಷಗಳಿಂದ ಹೊಗೆಸೊಪ್ಪಿನ ಬೆಳೆ ಮಾಡಿಕೊಂಡು ಬ್ಯಾರನ್‌ಗೆ ಪರ್ಮಿಷನ್ ಕೊಡತಕ್ಕದ್ದಕ್ಕೆ ಸೆಂಟ್ರಲ್ ಬೋರ್ಡ್ ಇದೆ. ಬ್ಯಾರನ್ ಕಟ್ಟುವುದಕ್ಕೆ ಸೆಂಟ್ರಲ್ ಬೋರ್ಡ್‌ನವರು ಲೈಸೆನ್ಸ್ ಕೊಡಬೇಕು. ಮತ್ತು ಬ್ಯಾಂಕ್‌ಗಳ ಮುಖಾಂತರ ಡೆವೆಲಪ್‌ಮೆಂಟ್ ಲೋನ್ ಎಲ್ಲಾ ಕೊಟ್ಟು ಕೊಂಡು ಬರುತ್ತಿದ್ದಾರೆ. ಕಳೆದ ವರ್ಷ ಕೂಡ ಅದೇ ರೀತಿಯಾಗಿ ಪರ್ಮಿಷನ್ ಕೊಟ್ಟಿದ್ದರು. ಇದೊಂದು ಕಮರ್ಷಿಯಲ್ ಬೆಳೆ ಎಂಬುದು ಎಲ್ಲರಿಗೂ ಗೊತ್ತಿದೆ. ಕಳೆದ ವರ್ಷ ರೈತರು ಒಂದು ಬ್ಯಾರನ್‌ಗೆ ೩೦-೪೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡ ಕಟ್ಟಿದರು. ಬ್ಯಾರನ್ ಕಟ್ಟಿಡ ಕಟ್ಟಿದರು, ಬೆಳೆ ಕೂಡ ಮಾಡಿದರು. ಬೆಳೆಗೆ ಟೊಬ್ಯಾಕೊ ಬೋರ್ಡ್‌ನವರು ಪರ್ಮಿಷನ್ ಕೂಡ ಕೊಟ್ಟರು. ಬ್ಯಾಂಕ್‌ಗೆ ಟೈ ಅಪ್ ಅರೇಂಜ್‌ಮೆಂಟ್ ಎಂದು ಕೊಡಬೇಕಾಗುತ್ತದೆ. ಟೈ ಅಪ್ ಅರೇಂಜ್‌ಮೆಂಟ್‌ಗೆ ಇವರು ಬ್ಯಾರನ್ ಮಾಡಬಹುದು, ಹೊಗೆಸೊಪ್ಪಿನ ಬೆಳೆ ಮಾಡಬಹುದು ಎಂದು ಈ ಒಂದು ವ್ಯವಹಾರಕ್ಕೆ ಬ್ಯಾಂಕುಗಳಿಗೆ ಕೂಡ ಪರ್ಮಿಷನ್ ಕೊಟ್ಟರು. ಪರ್ಮಿಷನ್ ಕೊಟ್ಟು ಆದಮೇಲೆ ಪುನಃ ಮಾರ್ಕೆಟ್ ಮಾಡುವುದಕ್ಕೆ ಕೂಡ ಯಾರು ಯಾರು ಬ್ಯಾರೆನ್ ಕಟ್ಟಿದ್ದಾರೆ, ಯಾರು ಯಾರು ಹೊಗೆಸೊಪ್ಪನ್ನು ಬೆಳೆದಿದ್ದಾರೆ ಅಂತಹವರಿಗೆ ಮಾರ್ಕೆಟ್ ಮಾಡುವುದಕ್ಕೆ ಕೂಡ ಅವಕಾಶ ಕೊಟ್ಟರು. ಅದಕ್ಕೆ ಮೂರು ಪರ್‌ಸೆಂಟ್ ಸೆಸ್ ಕೂಡ ಹಾಕಿದರು. ಯಾರು ಯಾರು ಈ ವರ್ಷ ಹೊಸದಾಗಿ ಕಟ್ಟಿದ್ದಾರೆ ಅವರು ಮೂರು ಪರ್‌ಸೆಂಟ್ ಸೆಸ್ ಕೊಡಬೇಕೆಂದು ಹೇಳಿದರು. ಕಳೆದ ವರ್ಷ ಹೇಗೋ ಮಾರ್ಕೆಟ್ ಆಯಿತು. ಈ ವರ್ಷ ಈ ತಿಂಗಳಲ್ಲಿ ಇದನ್ನು ರಿನ್ಯೂ ಮಾಡಬೇಕಾಗುತ್ತದೆ. ಹೊಗೆಸೊಪ್ಪನ್ನು ಬೆಳೆ ಮಾಡತಕ್ಕವರು ಯಾರು ಯಾರು ಇದ್ದಾರೆ ಅವರು ಪ್ರತಿಯೊಬ್ಬರೂ ಪ್ರತಿ ವರ್ಷ, ಆಯಾ ವರ್ಷದ ಮಾರ್ಚ್ ತಿಂಗಳಲ್ಲಿ ಲೈಸೆನ್ಸ್ ರಿನ್ಯೂ ಮಾಡಿಸಬೇಕಾಗುತ್ತದೆ. ಈ ವರ್ಷ ಅವರು ಲೈಸೆನ್ಸ್ ರಿನ್ಯೂ ಮಾಡಿಸುವುದಕ್ಕೆ ಹೋದಾಗ, ಹೋದವರ್ಷ ನಿಮಗೆ ಕರ್ಮಿಷನ್

ಕೊಟ್ಟಿಲ್ಲ, ಲೈಸೆನ್ಸ್ ಕೊಟ್ಟಿಲ್ಲ, ಮಾರ್ಕೆಟಿಂಗ್ ಮಾಡುವುದಕ್ಕೆ ಮಾತ್ರ ಕೊಟ್ಟಿದ್ದೇವೆ ಎಂದು ಹೇಳಿದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ೩-೪ ಸಾವಿರ ಬ್ಯಾರೆನ್ಸ್ ಇರಬಹುದು. ನಾಲ್ಕೈದು ತಾಲೋಕುಗಳಲ್ಲಿ ಇರುವ ೩-೪ ಸಾವಿರ ಬ್ಯಾರೆನ್ಸ್ ಏನಿವೆ ಯಾರಿಗೂ ಸಹ ಪರ್ಮಿಷನ್ ಕೊಟ್ಟಿಲ್ಲ. ಹೀಗಾಗಿ ಇವತ್ತು ಎಲ್ಲಾ ಕಡೆ ಒಂದು ರೀತಿ ಹಾಹಾಕಾರದ ವಾತಾವರಣ ಇದೆ. ಹೋದಸಾರಿ ಪರ್ಮಷನ್ ಕೊಟ್ಟಿರುವುದು ಈ ವರ್ಷ ಪರ್ಮಿಷನ್ ಕೊಡಲಿಲ್ಲ, ನಮ್ಮ ಪರಿಸ್ಥಿತಿ ಏನು, ೪೦-೫೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಬ್ಯಾರನ್ ಕಟ್ಟಿಕೊಂಡಿದ್ದೇವೆ, ಏನಾದರೂ ಇದಕ್ಕೆ ಪರ್ಮಿಷನ್ ಕೊಡಲಿಲ್ಲ ಎಂದರೆ ೫೦ ಸಾವಿರ ಖರ್ಚು ಮಾಡಿ ಕಟ್ಟಿರತಕ್ಕಂಥ ಬ್ಯಾರೆನ್ಸ ಏನುಮಾಡಬೇಕು? ದನಗಳನ್ನು ಕಟ್ಟುವುದಕ್ಕೂ ಪ್ರಯೋಜನ ಇಲ್ಲದಂತಾಗುತ್ತದೆ. ನಮ್ಮ ಪರಿಸ್ಥಿತಿ ಏನು ಎಂದು ಯೋಚನೆ ಮಾಡಿ. ಕಳೆದ ೮-೧೦ ದಿವಸಗಳಲ್ಲಿ ಎಲ್ಲರೂ ಸಭೆ ಸೇರಿ ಟೊಬ್ಯಾಕೊ ಬೋರ್ಡ್‌ಗೆ ರೆಪ್ರೆಸೆಂಟ್ ಮಾಡಿದ್ದಾರೆ. ಡೈರೆಕ್ಟರ್ ಆಫ್ ಆಕ್ಷನ್ ಎಂಬ ಅಧಿಕಾರಿ ಬೆಂಗಳೂರಿನಲ್ಲಿ ಇದ್ದಾರೆ. ಅವರಿಗೂ ಸಹ ರೆಪ್ರೆಸೆಂಟ್ ಮಾಡಿರುತ್ತಾರೆ. ಅವರು ಕೂಡ ಅಲ್ಲಿ ಸ್ಥಳದಲ್ಲಿರತಕ್ಕಂಥ ಸೂಪರಿಂಟೆಂಡೆಂಟ್‌ರವರಿಗೇ ಆಗಲೀ, ಯಾರಿಗೇ ಆಗಲೀ ಯಾವುದೇ ರೀತಿಯ ಆದೇಶವನ್ನು ಕೊಟ್ಟಿಲ್ಲ. ಆದ್ದರಿಂದ ನಮ್ಮ ಕರ್ನಾಟಕ ರಾಜ್ಯ ಸರ್ಕಾರದವರು ಇದಕ್ಕೆ ವ್ಯವಸ್ಥೆ ಮಾಡಬೇಕು. ೩-೪ ಸಾವಿರ ಬ್ಯಾರನ್‌ಗಳನ್ನು ಕಟ್ಟಿಕೊಂಡಿರತಕ್ಕಂಥ ವರ್ಜೀನೀಯಾ ಹೊಗೆಸೊಪ್ಪು ಬೆಳಲಗಾರರಿಗೆ ರಿನ್ಯೂ ಮಾಡತಕ್ಕಂಥ ಆದೇಶ ಕೊಡಬೇಕು. ಕಳೆದ ವರ್ಷ ಬ್ಯಾರನ್ ಕಟ್ಟಿರುವವರೆಲ್ಲರೂ ಪುನಃ ಈ ವರ್ಷ ಕೂಡ ಬ್ಯಾರನ್‌ಗಳನ್ನು ಕಟ್ಟಿಕೊಂಡಿದ್ದಾರೆ. ಇದು ಒಳ್ಳೆಯ ಉತ್ತಮವಾದ ಬೆಳೆ, ಇದರಿಂದ ಸ್ವಲ್ಪ ಕೈಗೆ ಕಾಸು ಸಿಗಬಹುದು ಎನ್ನತಕ್ಕಂಥ ದೃಷ್ಟಿಯಿಂದ ಈ ವರ್ಷ ಕೂಡ ೪-೫ ಸಾವಿರ ಬ್ಯಾರನ್‌ಗಳನ್ನು ಹೊಸದಾಗಿಕಟ್ಟಿದ್ದಾರೆ. ಕಳೆದ ವರ್ಷ ಮಾರ್ಕೆಟಿಂಗ್ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರ ಜೊತೆಗೆ ಡೆವಲಪ್‌ಮೆಂಟ್ ಮಾಡುವುದಕ್ಕೆ ತಂಬಾಕು ಬೋರ್ಡ್‌ನವರು ಅನುಮತಿ ಕೊಟ್ಟಿದ್ದನ್ನು ರಿನ್ಯೂ ಮಾಡುವುದಕ್ಕೆ ಅವಕಾಶ ಮಾಡಿಲ್ಲ. ಈ ವರ್ಷದ ಪರಿಸ್ಥಿತಿಯನ್ನಂತೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಂತೂ ಇವರನ್ನು ಹತ್ತಿರ ಸೇರಿಸುತ್ತಿಲ್ಲ. ಅವರು ಅನೌನ್ಸ್ ಮಾಡಿದ್ದಾರೆ. ತಂಬಾಕು ಬೋರ್ಡ್‌ನವರು ಕೂಡ ಹೊಸದಾಗಿ ಬೆಳೆ ಮಾಡತಕ್ಕಂಥವರಿಗೆ ನಾವು ಪರ್ಮಿಷನ್ ಕೊಡುವುದಿಲ್ಲ ಎಂದು ಅನೌನ್ಸ್ ಮಾಡಿದ್ದಾರೆ ಆದರೂ ರೈತರು ಕಟ್ಟಿಕೊಂಡಿದ್ದಾರೆ. ಇದನ್ನು ಬೆಳೆಯತಕ್ಕಂಥ ಹಕ್ಕು ನಮಗೆ ಇದೆ ಎಂದು ಕಟ್ಟಿದ್ದಾರೆ. ಅವರಿಗೂ ಕೂಡ ಪರ್ಮಿಷನ್ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅವರು ಬಹಳ ಮಟ್ಟಿಗೆ ತೊಂದರೆಗೆ ಈಡಾಗುತ್ತಾರೆ, ಬಹಳ ನಷ್ಟಕ್ಕೆ ಈಡಾಗುತ್ತಾರೆ. ಆದ್ದರಿಂದ ಸರ್ಕಾರ ಯಾವುದೇ ರೀತಿಯಿಂದಲಾಗಲಿ ಮಧ್ಯೆ ಪ್ರವೇಶ ಮಾಡಿ ಅವರಿಗೆ ಲೈಸೆನ್ಸ್ ಹೊಸದಾಗಿ ಕೊಡತಕ್ಕಂಥ ಮತ್ತು ರಿನ್ಯೂ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೆ. ಆರ್. ನಗರದಲ್ಲಿ ಬಹಳಮಟ್ಟಿಗೆ ಹೊಗೆ ಸೊಪ್ಪನ್ನು ಬೆಳೆಯುತ್ತಿದ್ದಾರೆ. ಅರಕಲಗೂಡಿನಲ್ಲಿ ಕೂಡ ಇದು ಒಂದು ಮೇಜರ್ ಕ್ರಾಪ್ ಆಗಿದೆ. ಹುಣಸೂರಿನಲ್ಲೂ ಕೂಡ ಇದು ಒಂದು ಮೇಜರ್ ಕ್ರಾಪ್ ಆಗಿದೆ. ಹಾಗೆಯೇ ಶಿವಮೊಗ್ಗ, ಹೊನ್ನಾಳಿಯಲ್ಲೂಲ ಕೂಡ ಸುಮಾರು ೩೦ ಸಾವಿರ ಮಿಲಿಯನ್ ಬೆಳೆಯತಕ್ಕಂಥವರು ಇದ್ದಾರೆ. ಇದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಆದಾಯ ಬರುತ್ತದೆ. ರೈತರಿಗೂ ಕೂಡ ಆದಾಯ ಇರತಕ್ಕಂಥಾದ್ದು. ಆದ್ದರಿಂದ ಇದಕ್ಕೆ ಲೈಸೆನ್ಸ್ ಕೊಡಬೇಕು ಮತ್ತು ರಿನ್ಯೂ ಮಾಡುವುದಕ್ಕೆ ಅವಕಾಶ ಮಾಡಲು ಅವರ ಮೇಲೆ

ಒತ್ತಾಯ ತರಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

+ ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು):- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಕಾಳಮರಿಗೌಡರು ತಿಳಿಸಿದ ಹಾಗೆ ಈ ವರ್ಜೀನಿಯಾ ಹೊಗೆಸೊಪ್ಪು, ಸಿಗರೇಟು ಹೊಗೆಸೊಪ್ಪು ಎಂದು ಏನು ಹೇಳುತ್ತೇವೆ ಅದು ಬಹಳ ಉತ್ತಮವಾದ ವಾಣಿಜ್ಯ ಬೆಳೆ. ಇದು ವಿದೇಶಿ ವಿನಿಮಯ ಕೂಡ ನಮಗೆ ಹೆಚ್ಚಿನ ರೀತಿಯಲ್ಲಿ ದೊರಕಿಸಿಕೊಡುತ್ತಿದೆ. ೧೯೯೧-೯೨ನೇ ಸಾಲಿನಲ್ಲಿ ಅನೇಕ ರೈತರು ಮುಂದೆ ಬಂದು ತಂಬಾಕು ಹದ ಮಾಡತಕ್ಕಂಥ ಮನೆಗಳನ್ನು ಕಟ್ಟಿಕೊಂಡರು. ಒಂದು ಮನೆ ಕಟ್ಟಬೇಕಾದರೆ ಸುಮಾರು ೩೦ ಸಾವಿರ ವೆಚ್ಚವಾಗುತ್ತದೆ. ಆ ವೆಚ್ಚದಲ್ಲಿ ಮನೆ ಕಟ್ಟಿಕೊಂಡರು ಕಳೆದ ವರ್ಷ ಅವರು ಬೆಳೆಯುವುದಕ್ಕೆ ಮತ್ತು ಮಾರಾಟ ಮಾಡುವುದಕ್ಕೆ ಪರವಾನಿಗೆ ಕೊಟ್ಟಿರಿ. ಏಕೆಂದರೆ ಪರವಾನಿಗೆ ಕೊಡದಿದ್ದರೆ ಅವರು ಬೆಳೆದಂತಹ ತಂಬಾಕನ್ನು ಮಾರಾಟ ಮಾಡುವುದಕ್ಕಾಗುವುದಿಲ್ಲ. ಮತ್ತೆ ಬ್ಯಾಂಕುಗಳಲ್ಲಿ ಕೂಡ ಲೈಸೆನ್ಸ್ ಇಲ್ಲದೆ ಸಾಲ ಕೊಡುವುದಿಲ್ಲ. ಈ ದೃಷ್ಟಿಯಿಂದ ಕಳೆದ ವರ್ಷ ಜನರ ಬೇಡಿಕೆಯನ್ನು ತಂಬಾಕು ಮಂಡಲಿಯವರು ಗಮನಿಸಿ ಮಾರಾಟ ಮಾಡಲಿಕ್ಕೆ ಅನುಮತಿ ಕೊಟ್ಟರು. ಈ ವರ್ಷ ನಿರ್ಬಂಧ ಹಾಕಿದ್ದಾರೆ. ಕಳೆದ ವರ್ಷ ಯಾರ್ಯಾರಿಗೆ ಮಾರಟ ಮಾಡುವುದಕ್ಕೆ ಪರವಾನಿಗಿ ಕೊಟ್ಟಿದ್ದರೋ ಅವರಿಗೆ ೧೯೯೨-೯೩ನೇ ಸಾಲಿನಲ್ಲಿ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಈಗಾಗಲೇ ಕರಪತ್ರಗಳನ್ನು ಮುದ್ರಿಸಿ ಹಂಚಿದ್ದಾರೆ. ಪತ್ರಿಕೆಗಳಲ್ಲಿ ಕೂಡ ಆ ವಿಚಾರ ಬಂದಿದೆ. ಅವರು ಏನಾದರೂ ಈ ವರ್ಷ ಪಾವಾನಿಗೆ ಕೊಡುವುದನ್ನು ನಿಲ್ಲಿಸಿದರೆ ಸುಮಾರು ೩೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಹೊಗೆಸೊಪ್ಪು ಹದ ಮಾಡಲಿಕ್ಕೆ ಏನು ಮನೆಗಳನ್ನು ಕಟ್ಟಿದ್ದಾರೆ ಅವು ಯಾವುದಕ್ಕೂ ಕೂಡ ಉಪಯೋಗಕ್ಕೆ ಬರುವುದಿಲ್ಲ. ಅದು ಹೊಗೆ ಸೊಪ್ಪು ಹದ ಮಾಡಲಿಕ್ಕೆ ಕಟ್ಟಿರತಕ್ಕಂಥ ಮನೆ ಆದ್ದರಿಂದ ಮಾನ್ಯ ಸಚಿವರು ದಯಮಾಡಿ ತಂಬಾಕು ಮಂಡಳಿಯವರ ಜೊತೆ ವ್ಯವಹರಿಸಿ ಅವರಿಗೆ ಈ ವರ್ಷವೂ ಲೈಸೆನ್ಸ್ ಕೊಡುವ ಹಾಗೆ ಮಾಡಬೇಕು. ಹೊಗೆಸೊಪ್ಪನ್ನು ಹದ ಮಾಡಲಿಕ್ಕೆ ಯಾರ್ಯಾರು ಮನೆ ಕಟ್ಟಿಕೊಂಡಿದ್ದಾರೆ ಅವರೆಲ್ಲರಿಗೂ ತಂಬಾಕು ಬೆಳಿಯಲಿಕ್ಕೆ ಮತ್ತು ತಂಬಾಕನ್ನು ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸಚಿವರು ಈ ಕಡೆ ಗಮನ ಹರಿಸಬೇಕು. ತಂಬಾಕು ಮಂಡಲಿಗೆ ತಂಬಾಕು ಬೆಳೆಗಾರರ ಪೈಕಿ ಒಬ್ಬರನ್ನು ಡೈರೆಕ್ಟರ್ ಆಗಿ ನಾಮಕರಣ ಮಾಡುತ್ತಾರೆ. ಅದು ಆನ್ ಪ್ರಿನ್ಸಿಪಲ್ ಇರುವುದೇ ಹಾಗೆ. ಆದರೆ ಈ ಸಾರಿ ತಂಬಾಕು ಬೆಳೆಗಾರರು ಅಲ್ಲದೆ ಇರುವವರನ್ನು ಡೈರೆಕ್ಟರ್ ಆಗಿ ನಾಮಕರಣ ಮಾಡಿದ್ದಾರೆ. ಅವರು ತಂಬಾಕು ಬೆಳೆಗಾರರ ಹಿತರಕ್ಷಣೆ ಹೇಗೆ ಮಾಡುತ್ತಾರೆ ಎನ್ನುವುದನ್ನು ಹೇಳಲಿಕ್ಕೆ ನನಗೆ ಬಹಳ ವಿಷಾದವಾಗುತ್ತದೆ. ಇದನ್ನು ಮಾಡಿರುವವರು ನಾವಲ್ಲ, ಕೇಂದ್ರ ಸರ್ಕಾರದವರು ಮತ್ತು ತಂಬಾಕು ಮಂಡಲಿಯವರು ಎಂದು ಮಾನ್ಯ ಸಚಿವರು ಹೇಳಬಹುದು. ಈ ಜನರ ಹಿತರಕ್ಷಣೆ ಮಾಡುವ ಜವಾಬ್ದಾರಿ ಅವರ ಮೇಲೂ ಇದೆ. ಆ ದಿಸೆಯಲ್ಲೂ ಕೂಡ ಮಾನ್ಯ ಸಚಿವರು ಸೂಕ್ತವಾದ ಗಮನ ಕೊಡಬೇಕು. ತಂಬಾಕು ಬೆಳೆಗಾರರು ಯಾರೇ ಆಗಿರಲಿ ಅವರ ಹಿತರಕ್ಷಣೆ ಮಾಡತಕ್ಕಂಥವರು ಅವರಲ್ಲೇ ಒಬ್ಬರನ್ನು ನಾಮಕರಣ ಮಾಡಬೇಕು. ಏಕೆಂದರೆ, ಅಲ್ಲೂ ಕೂಡ ನಮ್ಮ ಪಕ್ಷದ ಸರ್ಕಾರ ಇದೆ, ಇಲ್ಲೂ ಕೂಡ ನಮ್ಮ ಪಕ್ಷದ ಸರ್ಕಾರ ಇದೆ. ನಮ್ಮ ಸರ್ಕಾರ ಇಲ್ಲದಿದ್ದರೆ ಇಲ್ಲಪ್ಪಾ ಅವರು ನಮ್ಮ ಮಾತು ಕೇಳುವುದಿಲ್ಲ ಎಂದು ಹೇಳಬಹುದಿತ್ತು. ಆ ರೀತಿ ಮಾಡಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಎಸ್. ಚಿಕ್ಕಮಾದು (ಹುಣಸೂರು):- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಹಿರಿಯ ಸದಸ್ಯರಾದಂಥ ಮಾನ್ಯ ಕಾಳಮರೀಗೌಡರು ಮತ್ತು ರಾಮಸ್ವಾಮಿವರು ಈಗತಾನೆ ಮಾತನಾಡಿದ್ದಾರೆ. ಅವರು ಹೇಳಿದ ಹಾಗೆ ನಮ್ಮ ತಾಲ್ಲೂಕಿನ ಹೆಚ್ಚಿನ ಭಾಗದಲ್ಲಿ ತಂಬಾಕು ಬೆಳೆಯುತ್ತಿದ್ದಾರೆ. ಇದು ಉತ್ತಮವಾದ ವಾಣಿಜ್ಯ ಬೆಳೆ. ಕಳೆದ ಬಾರಿ ನಮ್ಮ ತಾಲ್ಲೂಕು ಒಂದರಲ್ಲೇ ಸುಮಾರು ಒಂದುವರೆ ಸಾವಿರ ಬ್ಯಾರನ್‌ಗಳನ್ನು ಹೊಸದಾಗಿ ನಿರ್ಮಾಣ ಮಾಡಿದ್ದೇವೆ. ಈ ಸಾರಿ ಅದನ್ನು ರಿನ್ಯೂಯಲ್ ಮಾಡಿಕೊಡುವುದಕ್ಕೆ ಆ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ಇವತ್ತು ಹಿಂದು ಮುಂದು ನೋಡುತ್ತಿದ್ದಾರೆ. ಇದು ಕೇಂದ್ರ ವ್ಯಾಪ್ತಿಗೆ ಬರುವುದಾದರೂ ಕೂಡ ಪ್ರಾರಂಭದಲ್ಲಿ ಈ ಬೆಳೆ ಸ್ವಲ್ಪ ಕಷ್ಟದಲ್ಲಿ ಬಂದಂಥ ಬೆಳೆ. ಇತ್ತೀಚೆಗೆ ಮಾತ್ರ ಈ ವಾಣಿಜ್ಯ ಬೆಳೆಗೆ ಅತ್ಯುತ್ತಮವಾದಂಥ ಬೆಲೆಯನ್ನೂ ಕೂಡ ಕೊಡುತ್ತಿದ್ದಾರೆ. ಇದು ವಿದೇಶಿ ವಿನಿಮಯಕ್ಕೆ ಮಾನ್ಯತೆ ಪಡೆದಂಥ ಬೆಳೆ. ಕರ್ನಾಟಕ ರಾಜ್ಯದಲ್ಲಿ ಈ ಬೆಳೆ ಅತ್ಯುತ್ತಮವಾಗಿರುವ ದೆಸೆಯಿಂದ ಮತ್ತು ಕೇಂದ್ರ ಸರ್ಕಾರದಲ್ಲೂ ನಮ್ಮ ಪಕ್ಷ ಅಧಿಕಾರದಲ್ಲಿ ಇರುವುದರಿಂದ ಇಲ್ಲಿನ ನಮ್ಮ ಸಚಿವರು ದಯವಿಟ್ಟು ಕೇಂದ್ರಸರ್ಕಾರದೊಡನೆ ವ್ಯವಹರಿಸಿ ತಕ್ಷಣದಲ್ಲಿ ಈ ರೈತರಿಗೆ ಅನ್ಯಾಯವಾಗದಂಥ ರೀತಿಯಲ್ಲಿ ಲೈಸೆನ್ಸ್ ರಿನ್ಯೂ ಮಾಡಿಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಕೃಷ್ಣರಾಜನಗರ):- ಮಾನ್ಯ ಸಚಿವರಲ್ಲಿ ನಾನು ಒಂದು ವಿಷಯ ಹೇಳುತ್ತೇನೆ. ಇದು ಬಹಳ ಗಂಭೀರವಾದಂಥ ವಿಚಾರ. ಅದೇನೆಂದರೆ, ಈ ತಂಬಾಕು ಬೋರ್ಡ್‌ನ ಸೆಂಟ್ರಲ್ ಆಫೀಸ್ ಇರುವುದು ಆಂಧ್ರಪ್ರದೇಶದ ಗುಂಟೂರಿನಲ್ಲಿ ಈ ಸಾರಿ ಆಂಧ್ರ ಪ್ರದೇಶದಲ್ಲಿ ಟೊಬ್ಯಾಕೋದ ಬಂಪರ್ ಕ್ರಾಪ್ ಇದೆ. ಆಂಧ್ರ ಪ್ರದೇಶದ ರೈತರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಈ ಸಾರಿ ನಮ್ಮ ರೈತರುಗಳಿಗೆ ಲೈಸೆನ್ಸ್ ರಿನ್ಯೂಯಲ್ ಮಾಡುವುದಿಲ್ಲ ಎಂದು ರಿಜೆಕ್ಟ್ ಮಾಡುತ್ತಿದ್ದಾರೆ. ಆದ್ದರಿಂದ ಕರ್ನಾಟಕದ ಹೊಗೆಸೊಪ್ಪು ಬೆಳೆಗಾರರಿಗೆ ಸರಿಯಾದಂಥ ನ್ಯಾಯ ಸಿಗಬೇಕು. ಇದು ಪರಿಶೀಲನೆಯಲ್ಲಿದೆಯೆಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಬಾರದು. ೪ ಸಾವಿರ ಜನ ಹೊಗೆಸೊಪ್ಪು ಬೆಳೆಯುವ ರೈತರಿಗೆ ನ್ಯಾಯ ಕೊಡುತ್ತೇವೆ ಅನ್ನತಕ್ಕಂಥ ರೀತಿಯಲ್ಲಿ ಉತ್ತರ ಕೊಡಬೇಕು. ಮತ್ತೆ ನಮ್ಮ ವರ್ಜಿನೀಯಾ ಹೊಗೆ ಸೊಪ್ಪು ಏನಿದೆ ಅದು ಇಡೀ ಪ್ರಪಂಚದಲ್ಲಿಯೇ ಅತ್ಯುತ್ತಮವಾದಂಥ ಹೊಗೆಸೊಪ್ಪು ಇದು ಪಿರಿಯಾಪಟ್ಟಣ, ಕೆ. ಆರ್. ನಗರ, ಹುಣಸೂರಿನಲ್ಲಿ ಮತ್ತು ಅರಕಲಗೂಡಿನಲ್ಲಿ ಬೆಳೆಯತಕ್ಕಂಥಾದ್ದು ಉತ್ತಮವಾಗಿರುತ್ತದೆ. ಮತ್ತೆ ಅದರ ಜೊತೆಗೆ ಫಾರಿನ್ ಎಕ್ಸ್‌ಚೇಂಜ್ ಕೂಡ ಗಳಿಸಿಕೊಡತಕ್ಕಂಥಾದ್ದು. ಕರ್ನಾಟಕದ ರೈತರಿಗೆ ಅನ್ಯಾಯವಾಗದ ರೀತಿಯಲ್ಲಿ ಸಚಿವರು ಉತ್ತರ ಕೊಡಬೇಕು.

+ ಶ್ರೀ ಎನ್. ಚಿಕ್ಕೇಗೌಡ (ಕೃಷಿ ಸಚಿವರು):- ಮಾನ್ಯ ಸಭಾಧ್ಯಕ್ಷರೆ, ಈ ವರ್ಜಿನಿಯಾ ಟೊಬ್ಯಾಕೋ ಬೆಳೆ ಬಹಳ ಅಮೂಲ್ಯವಾದುದು. ಇದು ವಿದೇಶಿ ವಿನಿಮಯ ದೊರಕಿಸಿಕೊಡತಕ್ಕಂಥಾದ್ದು. ಈ ಬೆಳೆಯನ್ನು ಹುಣಸೂರು, ಅರಕಲಗೂಡು, ಪಿರಿಯಾಪಟ್ಟಣ ಮತ್ತು ಶಿವಮೊಗ್ಗದ ಕೆಲವು ಪ್ರದೇಶಗಳಲ್ಲೂ ಬೆಳೆಯತಕ್ಕಂಥಾದ್ದು ಸತ್ಯವಾದುದು. ಜೊತೆಗೆ ಇದ್ದಕ್ಕಿದ್ದ ಹಾಗೆ ೧೯೯೧-೯೨ನೇ ಸಾಲಿನಲ್ಲಿ ಈ ಬೆಳೆ ಬಹಳ ಚೆನ್ನಾಗಿ ಬಂತು. ಕೆಲವು ಪ್ರದೇಶದಲ್ಲಿ ಭಾರಿ ಮಳೆಯಾದ್ದರಿಂದ ಹಿಂಗಾರಿನಲ್ಲಿ ಸ್ವಲ್ಪ ಬೆಳೆ ನಷ್ಟವಾಯಿತು. ಆದರೆ ಒಳ್ಳೆಯ ಬೆಳೆ ಮತ್ತು ಬೆಲೆ ಎರಡೂ ದೊರಕಿತು. ಇದು ಮಾನ್ಯ ಸದಸ್ಯರಿಗೆ ಗೊತ್ತಿದೆ ಎಂದು ಕಾಣುತ್ತದೆ. ಈ ಬೆಳೆಗೆ ಸಂಬಂಧಪಟ್ಟಂತೆ ಏನು

ಬ್ಯಾರನ್‌ಗಳು ಇವೆ ಅವುಗಳ ಲೈಸೆನ್ಸ್‌ನ್ನು ರಿನ್ಯೂ ಮಾಡದೇ ಇರತಕ್ಕಂಥ ವಿಚಾರ ನನಗೆ ಈಗತಾನೆ ಗೊತ್ತಾಯಿತು. ನಮ್ಮ ಸದನದ ನಿಯಮಾವಳಿಗಳ ಅನುಸಾರವಾಗಿ ಮಾನ್ಯ ಸದಸ್ಯರುಗಳು ಕೊಟ್ಟಂಥ ಒಂದು ನೋಟಿಸ್‌ನಿಂದ ನನಗೆ ಈಗತಾನೆ ಗೊತ್ತಾಯಿತು. ನಾನು ಸ್ಪಷ್ಟವಾಗಿ ಹೇಳಬೇಕಾದರೆ, ನನ್ನ ಜವಾಬ್ದಾರಿಯಿಂದ ಜಾರಿಕೊಂಡು ಕೇಂದ್ರ ಸರ್ಕಾರದ ಮೇಲೆ ನಾನು ಹೇಳುವುದಕ್ಕೆ ಇಚ್ಛಿಪಡುವುದಿಲ್ಲ. ಕರ್ನಾಟಕದ ರೈತರು ಬೆಳೆದಂಥ ತಂಬಾಕು ಬೆಳೆಗೆ ಅನ್ಯಾಯ ಆಗುವಂತಿದ್ದರೆ ನಾವು ಸರ್ಕಾರದ ಪರವಾಗಿ ತೀವ್ರ ಪ್ರತಿಭಟನೆಯನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ ಮತ್ತು ರಿನ್ಯೂ ಮಾಡದೇ ಇರುವುದಕ್ಕೆ ಕಾರಣ ಏನು ಎಂದು ಕೇಳುತ್ತೇನೆ. ಮಾನ್ಯ ವಿಶ್ವನಾಥ್‌ರವರು ಹೇಳಿದಂತೆ ಗುಂಟೂರಿನಲ್ಲಿ ಟೊಬ್ಯಾಕೋ ಬೋರ್ಡ್‌ನ ಸೆಂಟ್ರಲ್ ಆಫೀಸನ್ನು ಕೇಂದ್ರ ಸರ್ಕಾರ ಮಾಡಿರುವುದು ನಿಜ ಹಾಗೂ ಸಹಜ. ನಮ್ಮಲ್ಲೂ ಬೆಂಗಳೂರಿನಲ್ಲಿ ಒಂದು ಕಛೇರಿ ಇದೆ. ಆ ಕಛೇರಿಯಲ್ಲಿ ಅಧಿಕಾರಿಗಳು ಇದ್ದಾರೆ. ನಮ್ಮ ವ್ಯವಸಾಯ ಇಲಾಖೆಯ ನಿರ್ದೇಶಕರು ಆಡಳಿತ ಮಂಡಳಿಯಲ್ಲಿ ಒಬ್ಬ ಸದಸ್ಯರಾಗಿದ್ದಾರೆ. ಇವತ್ತು ಅವರು ಇಲ್ಲೇ ಇದ್ದಾರೆ. ಅವರಿಗೆ ನಾನು ವಿಷಯ ತಿಳಿಸಿದ್ದೇನೆ. ತಕ್ಷಣ ಹೋಗಿ ಈ ರಿನ್ಯೂ ಏಕೆ ಮಾಡಲಿಲ್ಲ? ಮಾಡದೇ ಇರುವುದಕ್ಕೆ ಕಾರಣ ಏನು? ಬೇರೆ ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಇದಕ್ಕೆ ರಿನ್ಯೂ ಮಾಡದೇ ಇರತಕ್ಕಂಥಾದ್ದು ನ್ಯಾಯವೇ ಎಂದು ತಿಳಿದುಕೊಂಡು ಬನ್ನಿ ಎಂದು ಹೇಳಿದ್ದೇನೆ. ಈ ಒಂದು ವಿಚಾರದಲ್ಲಿ ತೀವ್ರ ಗಮನ ಹರಿಸಿ, ಬೇಕಾದರೆ ನಾನೂ ಸಹ ದೆಹಲಿಗೆ ಹೋಗಿ ಈ ವಿಚಾರದಲ್ಲಿ ಏನಾದರೂ ಅನ್ಯಾಯವಾಗಿದ್ದರೆ ಸಂಬಂಧಪಟ್ಟ ಮಂತ್ರಿಗಳನ್ನು ಕಂಡು ಇದಕ್ಕೆ ಸರಿಯಾದ ಪರಿಹಾರ ಹುಡುಕುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಮ್ಮ ರಾಮಸ್ವಾಮಿಯವರು ಒಂದು ವಿಚಾರ ಪ್ರಸ್ತಾಪ ಮಾಡಿದ್ದರು. ಟೊಬ್ಯಾಕೋ ಬೆಳೆಯದೇ ಇರತಕ್ಕಂಥವರು ಟೊಬ್ಯಾಕೋ ಬೋರ್ಡ್‌ನಲ್ಲಿ ಸದಸ್ಯರಾಗಿದ್ದಾರೆಂದು ಹೇಳಿದರು. ಆ ರೀತಿ ಸದಸ್ಯರಾಗಿರುವುದು ನಿಜ. ಮಾನ್ಯ ಸದಸ್ಯರು ಇದರ ಬಗ್ಗೆ ಅನೇಕ ಸಾರಿ ವಿಷಯವನ್ನು ಪ್ರಸ್ತಾಪ ಮಾಡಿ ತಿಳಿಸಿದಾಗ ನಾನು ಕೇಂದ್ರ ಸರ್ಕಾರಕ್ಕೆ ತಿಳಿಸಿ, ಅದರಲ್ಲಿರುವ ಒಬ್ಬ ಸದಸ್ಯರು ಟೊಬ್ಯಾಕೋ ಬೆಳೆಗಾರರಲ್ಲ, ಆದ್ದರಿಂದ ಅವರನ್ನು ನೀವು ಟೊಬ್ಯಾಕೋ ಬೋರ್ಡ್‌ನಲ್ಲಿ ಇಟ್ಟಿರತಕ್ಕಂಥಾದ್ದು ನ್ಯಾಯವಲ್ಲ ಎಂದು ಪತ್ರ ಬರೆದಿದ್ದೇನೆ. ಅವರು ನನಗೆ ಪತ್ರ ಬರೆದರು. ಇದೇನು ಗೌಪ್ಯದ ವಿಚಾರವಲ್ಲ. ಐದು ಜನ ಮಂತ್ರಿಗಳು, ನಿಮ್ಮ ರಾಜ್ಯ ಸರ್ಕಾರದವರು ತಿಳಿಸಿದ್ದಾರೆ, ಅದರ ಪ್ರಕಾರ ಅವರ ಹೆಸರು ಸೂಚಿಸಿ ನಾನು ಮಾಡಿದ್ದೇನೆ ಎಂದು ನನಗೆ ಪತ್ರ ಬರೆದರು. ಆ ಐದು ಜನ ರಾಜ್ಯದ ಮಂತ್ರಿಗಳು ಯಾರು ಎಂಬುದು ನನಗೂ ಗೊತ್ತಿಲ್ಲ. ಆದರೂ ಕೂಡ ಸಂಬಂಧಪಟ್ಟ ಸಚಿವರಾದ ಚಿದಂಬರಂರವರನ್ನು ಭೇಟಿ ಮಾಡಿ ಈ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಹೀಗೆ ಆ ಬೆಳೆಯ ಬಗ್ಗೆ ಹಿತಾಸಕ್ತಿ ಇಲ್ಲದವರು ಡೈರೆಕ್ಟರ್ ಆಗಿದ್ದರೆ ಅದು ಅನ್ಯಾಯವಾಗುತ್ತದೆ. ಅದನ್ನು ಸಹ ನಾನು ಪ್ರಸ್ತಾಪ ಮಾಡುತ್ತೇನೆ. ಈ ಟೊಬ್ಯಾಕೋ ಬೋರ್ಡ್‌ನವರು ರಿನ್ಯೂ ಮಾಡದೇ ಇರತಕ್ಕಂಥ ವಿಚಾರದಲ್ಲಿ ತಾವುಗಳು ೨-೩ ದಿವಸಗಳ ಕಾಲಾವಕಾಶ ಕೊಟ್ಟರೆ ನಾನು ಅದರ ಬಗ್ಗೆ ಒಂದು ದೀರ್ಘವಾದ ಒಂದು ಉತ್ತರವನ್ನು ಒದಗಿಸುತ್ತೇನೆ ಎಂದು ಹೇಳ ಬಯಸುತ್ತೇನೆ.

ಶ್ರೀ ಕೆ. ಎಸ್. ಕಾಳಮರಿಗೌಡ:- ೨-೩ ದಿವಸ ಆದಮೇಲೆ ನಾವು ಈ ವಿಷಯವನ್ನು ಪ್ರಸ್ತಾಪ ಮಾಡಬಹುದೇ? ಮಾನ್ಯ ರಾಮಸ್ವಾಮಿಗಳು ಹೇಳಿದ ಹಾಗೆ ಹೊಗೆ ಸೊಪ್ಪಿನ ಬಗ್ಗೆ ಗಂಧ ಗೊತ್ತಿಲ್ಲದವರು ತಂಬಾಕು ಮಂಡಳಿಯ ಡೈರೆಕ್ಟರ್ ಆಗಿದ್ದಾರೆ. ಸಾಮಾನ್ಯವಾಗಿ ನಮ್ಮ ರಾಜ್ಯ

ಸರ್ಕಾರದ ಕೃಷಿ ಮಂತ್ರಿಗಳು ಸರ್ಕಾರ ಶಿಫಾರಸ್ಸು ಮಾಡಬೇಕು. ಆ ಶಿಫಾರಸ್ಸಿನ ಆಧಾರದ ಮೇಲೆ ಕೇಂದ್ರ ಸರಕಾರದವರು ಡೈರೆಕ್ಟರನ್ನು ನಾಮಿನೇಟ್ ಮಾಡತಕ್ಕಂಥ ಪದ್ಧತಿ ಇದೆ. ಆದರೆ ಅವರವರ ಪ್ರಭಾವವನ್ನು ಉಪಯೋಗಿಸಿಕೊಂಡು ರಾಜ್ಯ ಸರಕಾರದ ಅನುಮತಿಯೇ ಇಲ್ಲದೆ, ಕೇಂದ್ರದ ಪ್ರಭಾವವನ್ನು ಉಪಯೋಗಿಸಿಕೊಂಡು ಬರುವುದಾದರೆ ಹೊಗೆ ಸೊಪ್ಪು ಬೆಳೆಯ ಅನುಭವ ಇಲ್ಲದಿರತಕ್ಕಂಥಹವರನ್ನು ನಾಮಿನೇಟ್ ಮಾಡಿದ್ದಕ್ಕೆ ಈಗ ಅದನ್ನು ನೀವು ಬರೆದು ತಕ್ಷಣದಲ್ಲಿ ವಜಾ ಮಾಡತಕ್ಕಂಥಾದ್ದನ್ನು ಮಾಡಿ, ಯಾರಿಗೆ ತಂಬಾಕು ವಿಚಾರದಲ್ಲಿ ಅನುಭವ ಇದೆ ಅಂಥಹವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ತಾವು ಏನು ವ್ಯವಸ್ಥೆ ಮಾಡುತ್ತೀರಿ? ಇನ್ನು ಈ ಬ್ಯಾರನ್‌ಗಳನ್ನು ರಿನ್ಯೂ ಮಾಡತಕ್ಕಂಥಾದ್ದು ಏನಿದೆ ಇನ್ನೆರಡು ಮೂರು ದಿವಸಗಳಲ್ಲಿ ಅದರ ಅವಧಿಯೂ ಮುಗಿಯುತ್ತದೆ. ಹೀಗೆ ಅದರ ಅವಧಿ ಮುಗಿದ ಮೇಲೆ ಟೊಬ್ಯಾಕೋ ಬೋರ್ಡ್‌ನವರು ಪರ್ಮಿಷನ್ ಕೊಡಬೇಕು, ಲೈಸೆನ್ಸ್ ರಿನ್ಯೂ ಮಾಡಬೇಕಾಗಿದ್ದರೆ ಕೇಂದ್ರದವರು ಪರ್ಮಿಶನ್ ಕೊಡಬೇಕು. ಆದ್ದರಿಂದ ಇವೊತ್ತೇ ನಿಮ್ಮ ಅಧಿಕಾರಿಗಳಿಗೆ ಹೇಳಿ, ರಿನ್ಯೂ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ತಾವು ಕೇಂದ್ರದವರ ಜೊತೆಯಲ್ಲಾಗಲೀ, ಬೋರ್ಡ್ ಚೇರ್ಮನ್‌ರ ಜೊತೆಯಲ್ಲಾದರೂ ಮಾತನಾಡಿ ಅಥವಾ ಬೆಂಗಳೂರಿನಲ್ಲಿ ಅದಕ್ಕೆ ಸಂಬಂಧಪಟ್ಟಂಥ ಡೈರೆಕ್ಟರ್ ಆಫ್ ಮಾರ್ಕೆಟಿಂಗ್ ಅವರಿದ್ದಾರೆ ಅವರೊಂದಿಗಾದರೂ ಮಾತನಾಡಿ ತಕ್ಷಣದಲ್ಲಿಯೇ ಇವೊತ್ತು, ನಾಳೆಯೊಳಗೆ ವ್ಯವಸ್ಥೆ ಮಾಡಬೇಕು.

ಶ್ರೀ ಎ. ಟಿ ರಾಮಸ್ವಾಮಿ:- ತಂಬಾಕು ಬೆಳೆಗಾರರಿಗೆ ಬ್ಯಾರನ್ಸ್ ರಿನ್ಯೂ ಮಾಡದೆ ಇರುವುದಕ್ಕೆ ಕಾರಣ ಕೇಳುತ್ತಿದ್ದೇನೆಂದು ಹೇಳಿದಿರಿ. ನನಗೆ ತಿಳಿದು ಬಂದ ಹಾಗೆ ಅದಕ್ಕೆ ಇರುವ ಕಾರಣಗಳು ಎರಡು. ಬೇಡಿಕೆ ಹೆಚ್ಚಿಗೆ ಇಲ್ಲವಾದ ಕಾರಣ ನಾವು ಲೈಸೆನ್ಸ್‌ಅನ್ನು ಕೊಡುವುದಿಲ್ಲ ಎಂಬುದು ಒಂದಾದರೆ, ಮತ್ತೊಂದು ಆಂಧ್ರದಲ್ಲಿ ಈ ವರ್ಷ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚು ಉತ್ಪಾದನೆಯಾಗಿದೆ. ಆ ಕಾರಣದಿಂದ ಕೊಡುವುದಿಲ್ಲ ಎಂದು ಹೇಳುತ್ತಾರೆ. ಆ ಸಬೂಬನ್ನು ತಾವು ಒಪ್ಪಿಕೊಂಡರೆ ರಾಜ್ಯದ ರೈತರ ಹಿತವನ್ನು ಹಾಳು ಮಾಡಿದ ಹಾಗೆ ಆಗುತ್ತದೆ ಮತ್ತು ಗೊಂದಲವೂ ಆಗುತ್ತದೆ. ಆ ಗೊಂದಲ ಸೃಷ್ಟಿಯಾಗುವುದಕ್ಕಿಂತ ಮುಂಚಿತವಾಗಿ ನೀವು ಅನುಮತಿಯನ್ನು ಕೊಡಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ...

ಉಪಾಧ್ಯಕ್ಷಿಣಿಯವರು:- ಐದು ಜನ ಮಂತ್ರಿಗಳ ರೆಕಮೆಂಡೇಷನ್ ಮೇಲೆ ಸೆಂಟ್ರಲ್ ಟೊಬ್ಯಾಕೋ ಬೋರ್ಡ್‌ಗೆ ನಾಮಿನೇಟ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಆ ಐದು ಜನ ಸಚಿವರ ಜೊತೆಯಲ್ಲಿ ತಾವು ಮಾತನಾಡಿ.

ಮಂಗಳೂರು ರಸಗೊಬ್ಬರ ಕಾರ್ಖಾನೆಯ ನೌಕರರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ.

ಶ್ರೀ ವಿಜಯಕುಮಾರ ಶೆಟ್ಟಿ (ಸೂರತ್ಕಲ್):- ನಮ್ಮ ಮಂಗಳೂರು ರಸಗೊಬ್ಬರ ಕಾರ್ಖಾನೆಯಲ್ಲಿ ನೌಕರರು ಕೆಲವೊಂದು ಬೇಡಿಕೆಗಳನ್ನು ಮ್ಯಾನೇಜ್‌ಮೆಂಟ್‌ಗೆ ಕೊಟ್ಟಿದ್ದಾರೆ. ಕೊಟ್ಟು ಎರಡು ತಿಂಗಳು ಆಗಿದೆ. ಆದರೆ ಇಷ್ಟರವರೆಗೆ ಯಾವುದೇ ಒಂದು ಸೆಟಲ್‌ಮೆಂಟ್ ಆಗಲಿಲ್ಲ. ಆದ್ದರಿಂದ ಈ ಪರಿಸ್ಥಿತಿಯು ವಿಕೋಪಕ್ಕೆ ಹೋಗುವ ಮೊದಲು ಸರಕಾರದವರು

ನೌಕರರ ಈ ನ್ಯಾಯಯುತವಾದ ಬೇಡಿಕೆಗಳನ್ನು ಮ್ಯಾನೇಜ್‌ಮೆಂಟ್ ಮತ್ತು ನೌಕರರನ್ನು ಕರೆದು ಒಂದು ತೀರ್ಮಾನವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ನಿಯಮ ೩೩೪ರ ಮೇರೆಗೆ

ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಉಪಾಧ್ಯಾಯರ ಹುದ್ದೆಗಳ ಭರ್ತಿ

೫.೪೦ ಪಿ. ಎಂ.

ಶ್ರೀ ಕೆ. ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ):- ಮೈಸೂರು ಜಿಲ್ಲೆಯಲ್ಲಿ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಖಾಲಿ ಹುದ್ದೆಗಳು ಎಷ್ಟಿವೆ? ಈಗಾಗಲೇ ಸರಕಾರದ ಎಲ್ಲಾ ಖಾಲಿ ಹುದ್ದೆಗಳನ್ನು ಇನ್ನು ಎರಡು ವಾರದಲ್ಲಿ ಭರ್ತಿ ಮಾಡುತ್ತೇವೆಂದು ಹೇಳಿ ಎರಡು ತಿಂಗಳಾದರೂ ಇನ್ನೂ ಭರ್ತಿ ಮಾಡಿಲ್ಲ ಮತ್ತು ಗ್ರಾಮಾಂತರ ಪ್ರದೇಶಗಳಿಂದ ಬಂದವರಿಗೆ ೧೫ ಪರ್ಸೆಂಟ್ ಸೇರಿಸುತ್ತೇವೆಂದು ಸರ್ಕಾರ ತೀರ್ಮಾನ ತೆಗೆದುಕೊಂಡರೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಇದರ ಬಗ್ಗೆ ಸಾರ್ವಜನಿಕರ ಹಿತದೃಷ್ಟಿಯಿಂದ ತಿಳಿಯಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ಶಿಕ್ಷಣ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಮೈಸೂರು ಜಿಲ್ಲೆಯಲ್ಲಿ ದಿನಾಂಕ ೩೧-೫-೯೧ರ ವೇಳೆಗೆ ೨೪೮೧ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಹಾಲಿ ನೇಮಕಾತಿ ನಿಯಮಗಳ ಪ್ರಕಾರ ಗ್ರಾಮೀಣ ಅಭ್ಯರ್ಥಿಗಳಿಗೆ ನೇಮಕಾತಿಯಲ್ಲಿ ಆದ್ಯತೆ ನೀಡಲು ಅವಕಾಶವಿಲ್ಲ. ಸರ್ಕಾರವು ಗ್ರಾಮೀಣ ಅಭ್ಯರ್ಥಿಗಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ೧೫ ಒತ್ತಾಸೆ ಅಂಕಗಳನ್ನು ನೀಡಬೇಕೆಂದು ತೀರ್ಮಾನ ಕೈಗೊಂಡಿದೆ.

ಈ ನಿರ್ಧಾರವನ್ನು ಅನುಸರಿಸಿ ಜಾಲ್ತಿ ನಿಯಮಗಳಿಗೆ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉಪಾಧ್ಯಕ್ಷಿಣಿಯವರು:- ಕೆ. ಹೆಚ್. ಹನುಮೇಗೌಡರ ವಿಷಯಕ್ಕೆ ೧೭ನೇ ತಾರೀಖು ಉತ್ತರ ಕೊಡಲಾಗಿದೆ. ಅದ್ದರಿಂದ ಇವತ್ತು ತೆಗೆಯುವುದಿಲ್ಲ.

ಮೂಡಬಿದ್ರೆಯ ಇರವೈಲಿಗೆ ಆರೋಗ್ಯ ಕೇಂದ್ರವನ್ನು ಒದಗಿಸುವ ಬಗ್ಗೆ

ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ):- ನನ್ನ ಕ್ಷೇತ್ರವಾದ ಮೂಡಬಿದಿರೆಯ ಇರವೈಲು ಎಂಬಲ್ಲಿಗೆ ಆರೋಗ್ಯ ಕೇಂದ್ರ ಒದಗಿಸುವಂತೆ ಜಿಲ್ಲಾ ಪರಿಷತ್ ಮಂಜೂರು ಮಾಡಿ ಸರ್ಕಾರದವರ ಅನುಮೋದನೆಗೆ ಕಳುಹಿಸಿದ್ದು ಇರವೈಲಿಗೆ ಮಂಜೂರಾತಿ ಕೊಟ್ಟಿರುವುದಿಲ್ಲ. ಈ ಬಗ್ಗೆ ಜಿಲ್ಲಾಪರಿಷತ್ ಇರವೈಲಿಗೆ ಆರೋಗ್ಯ ಕೇಂದ್ರ ಕೊಡಬೇಕಂದು ಪುನಃಪಿ ಮಂಜೂರು ಮಾಡಿ ಅನುಮೊದನೆ ಕೊಡಬೇಕೆಂದು ಸರ್ಕಾರಕ್ಕೆ ಕಳಿಹಿಸಿಕೊಟ್ಟಿದೆ. ಹೀಗಾಗಿ ಬಡವರೇ ಹೆಚ್ಚಾಗಿ ವಾಸಿಸುವ ಈ ವಿಭಾಗಕ್ಕೆ ಆರೋಗ್ಯ ಕೇಂದ್ರವು ಅತ್ಯಾವಶ್ಯಕವಾಗಿರುವ ಕಾರಣ ಸರ್ಕಾರ ಈ ಬಗ್ಗೆ ಕೂಡಲೇ ಮಂಜೂರಾತಿ ನೀಡಬೇಕೆಂದು ಶಿಫಾರಸ್ ಮಾಡಬೇಕು. ಇದರ ಬಗ್ಗೆ ಸರ್ಕಾರ ಏನು ಮಾಡುವುದೆಂದು ನಾನು ತಿಳಿಯಲಾಶಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಮಾನ್ಯ ಅಧ್ಯಕ್ಷಿಣಿಯವರೇ, ದಕ್ಷಿಣ ಕನ್ನಡ ಜಿಲ್ಲೆ ಮೂಡಬಿದ್ರೆ ತಾಲ್ಲೂಕು ಇರುವೈಲು ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವ ಬಗ್ಗೆ ಜಿಲ್ಲಾಪರಿಷತ್ತಿನಿಂದ ೧೯೯೧-೯೨ನೇ ಸಾಲಿನಲ್ಲಿ ಪ್ರಸ್ತಾವನೆಯು ಬಂದಿರುವುದಿಲ್ಲ. ೧೯೯೧-೯೨ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರ ತಾಲ್ಲೂಕು ಅಮಾಸೆಬೈಲು ಮತ್ತು ಸುಳ್ಯ ತಾಲ್ಲೂಕು ಅರಂತೋಡು ಗ್ರಾಮಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಬಂದಿದ್ದು ಸ್ಥಳೀಯ ಶಾಸಕರಿಂದ ಹಾಗೂ ಸಾರ್ವಜನಿಕರಿಂದ ಬಂದ ಮನವಿಗಳನ್ನು ಪರಿಶೀಲಿಸಿ ಸದರಿ ಜಿಲ್ಲೆಯ ಮಂಗಳೂರು ತಾಲ್ಲೂಕು ಬೆಂಗರೆ ಕಸಬಾ-ಬಜಾರ್ ಮತ್ತು ಬಂಟ್ವಾಳ್ ತಾಲ್ಲೂಕು ನಾವೂರು ಸ್ಥಳಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲಾಪರಿಷತ್ತಿನಿಂದ ಇರುವೈಲು ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಪ್ರಸ್ತಾವನೆಯು ಬಂದಲ್ಲಿ ಪರಿಶೀಲಿಸಲಾಗುವುದು.

ಬೆಂಗಳೂರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ದಕ್ಷಿಣ ರೈಲ್ವೆ ಅಡ್ವಾನ್ಸ್ ಬುಕ್ಕಿಂಗ್ ಕೇಂದ್ರದಲ್ಲಿ ಕಂಪ್ಯೂಟರ್ ವ್ಯವಸ್ಥೆಯನ್ನು ಜಾರಿಗೆ ತರುವ ಬಗ್ಗೆ

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಯನಗರದ ವಾಣಿಜ್ಯ ಸಂಕೀರ್ಣದಲ್ಲಿ ಒಂದು ದಕ್ಷಿಣ ರೈಲ್ವೆ ಅಡ್ವಾನ್ಸ್ ಬುಕ್ಕಿಂಗ್ ಕೌಂಟರ್ ಇದ್ದು, ಆದರಿಂದ ದಕ್ಷಿಣ ಭಾಗದ ಜನರಿಗೆ ಯಾವ ಪ್ರಮಾಣದ ಅನುಕೂಲವಾಗ ಬೇಕಾಗಿತ್ತೋ ಆ ಪ್ರಮಾಣದಲ್ಲಿ ಆಗುತ್ತಿಲ್ಲ. ಅಲ್ಲಿ ಕೇವಲ ರೈಲುಗಳ ಸ್ಥಳಗಳನ್ನು ಕಾದಿರಿಸಲಾಗುವುದು. ಇದರ ಜೊತೆಗೆ ಮೊದಲನೇ ದರ್ಜೆಗೆ ಸ್ಥಳವನ್ನು ಕಾದಿರಿಸಲಾಗುವುದಿಲ್ಲ. ಈ ಕೌಂಟರಿನ ವೇಳಾ ಸಮಯವು ಸಹ ಸಾರ್ವಜನಿಕರಿಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ಈ ಕೌಂಟರನ್ನು ವಿಸ್ತರಿಸಿ ಎಲ್ಲಾ ರೈಲುಗಳಿಗೂ ಸ್ಥಳವನ್ನು ಕಾದಿರಿಸಲು ವ್ಯವಸ್ಥೆ ಮಾಡಿ ಎಲ್ಲ ದರ್ಜೆಗಳಿಗೂ ಮುಂಗಡ ಬುಕ್ಕಿಂಗ್ ವ್ಯವಸ್ಥೆಯನ್ನು ಏರ್ಪಡಿಸಬೇಕು. ಇದರ ಜೊತೆಗೆ ಕಂಪ್ಯೂಟರ್ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಆದ್ದರಿಂದ ಕೇಂದ್ರದ ರೈಲ್ವೆ ಸಚಿವರೊಂದಿಗೆ ವ್ಯವಹರಿಸಿ ಕ್ರಮ ತೆಗೆದುಕೊಳ್ಳಲು ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ರಾಮಲಿಂಗರೆಡ್ಡಿಯವರ ಸೂಚನೆಗೆ ಈ ರೀತಿ ಹೇಳಿಕೆಯನ್ನು ಕೊಡಬಯಸುತ್ತೇನೆ "ಬೆಂಗಳೂರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ದಕ್ಷಿಣ ರೈಲ್ವೆ ಕೌಂಟರ್‌ನಲ್ಲಿ ಸೇವೆಯ ವೇಳೆಯನ್ನು ವಿಸ್ತರಿಸಲು ಹಾಗೂ ಪ್ರಥಮ ದರ್ಜೆ ಪ್ರಯಾಣಗಳನ್ನು ಒಳಗೊಂಡಂತೆ ಎಲ್ಲಾ ರೈಲುಗಳ ಸ್ಥಳವನ್ನು ಕಾದಿರಿಸಲು ಕ್ರಮವನ್ನು ತೆಗೆದುಕೊಳ್ಳಲು ಕೇಂದ್ರ ರೈಲ್ವೆ ಸಚಿವರೊಡನೆ ವ್ಯವಹರಿಸಲಾಗುವುದು...

ಚನ್ನಪಟ್ಟಣ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಬಸ್ಸುಗಳ ಸಂಚಾರ ನಿಲ್ಲಿಸಿದ್ದರಿಂದ ಜನರಿಗೆ ಉಂಟಾದ ಅನಾನುಕೂಲತೆ ಮತ್ತು ಇನ್ನೂ ಹೆಚ್ಚು ಬಸ್ಸುಗಳನ್ನು ಹಾಕಲು ಮನವಿ.

Sri. C.M. Lingappa:- On behalf of Sri Sadath Ali Khan, I would like to ask the Hon'ble Minister for Transport and Wakf

will be pleased to note that the number of Buses have been stopped to the rural areas in Channapatna Taluk, during the year 1990-91, 1991-92. The villagers are put into great trouble. What action has been taken to ply the buses to Garakahally, Makali, Chakklur, Mankunda-Kestur, Iggalur, Ambadally, Y.T. Hally, Bevoor Mandya, Sathnur and other villages?

What action has been taken by the government to ply the additional buses towards Bangalore to Mysore, Middle stop buses during the stoppage of trains due to Broadguage disturbance from May 1st of 1992. How many additional buses would be provided in these days?

What measures have beentaken to cover all the routes by the department to the above-mentioned places.

(Statement enclosed)

(Madam Deputy Speaker in the Chair)

Sri. N. Chikke Gowda (Minister for Agriculture):- On behalf of the Minister for Transport and Wakf, I make the following statement.

Bus services in Chennapatna Taluk have not been nationalised except the road section between Bangalore and Mysore, passing through Chennapatna Taluk. K.S.R.T.C. has provided adequate services on the route by operating 140 non-stop services, 327 Express Services, 6 Shuttle Services. These are adequately catering to the present needs on the road section.

In addition to the above K.S.R.T.C. is also operating the following trips from Bangalore to the villages in Chennapatna as indicated below:

Kesthur	.. 4 Trips
Kukkur	.. 5 Trips

Cheklur	.. 6 Trips
Kysapura	.. 2 Trips
Elethothadahalli	.. 2 Trips
Hambadihalli	.. 2 Trips
Kulagere	.. 2 Trips.

Eventhough the above villages are lying in non-monopoly sector, services are being operated to provide direct transport facility to the District Head Quarters.

In view of the proposed conversion of Railway Track from Meter. Guage to Broad Guage, the K.S.R.T.C. has proposed to operate 64 non-stop trips between Bangalore and Mysore, 12 Express Trips between Bangalore and Mandya and 8 Express trips between Bangalore and Srirangapatna.

To cater to the en-route passengers, it is proposed to operate the following shuttle trips.

Bangalore-Chennapatna	12 Trips
Bangalore-Ramanagara	32 Trips
Bangalore-Maddur,	24 Trips
Bangalore-Kengeri	20 Trips.

In all 172 additional trips will be operated on the road section between Bangalore and Mysore. These trips will be in addition to 473 trips under operation. The above arrangement could meet the demand when trains are suspended for conversion of track.

Regarding inadequacy of transport services in non-monopoly routes, the Regional Transport Authority, Bangalore District will be asked to examine the difficulties of the villagers and take action to issue more permits if private operates were to come forward to ply their buses in these places.

ವಿತ್ತೀಯ ಕಾರ್ಯಕಲಾಪಗಳು

೧೯೯೨-೯೩ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ (ವ್ಯವಸಾಯ ತೋಟಗಾರಿಕೆ ಹೊರತು), ತೋಟಗಾರಿಕೆ, ಪಶುಸಂಗೋಪನಾ ಪತ್ತು ಡೈರಿ ಅಭಿವೃದ್ಧಿ, ಮೀನುಗಾರಿಕೆ, ರೇವು ಮತ್ತು ಜಲಸಾರಿಗೆ ಸೇವೆಗಳು, ಅರಣ್ಯ).

ಅಭಿಯಾಚನೆ ಕ್ರಮಾಂಕ ೧ - ವ್ಯವಸಾಯ (ತೋಟಗಾರಿಕೆ ಹೊರತು)

ಶ್ರೀ ಎನ್ ಚಿಕ್ಕೇಗೌಡ (ಕೃಷಿ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯಕ್ಕೆ (ತೋಟಗಾರಿಕೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೭೭,೭೭,೬೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೦,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ ೨ - ತೋಟಗಾರಿಕೆ

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೦೮,೮೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೪,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ ೩ - ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪಶುಸಂಗೋಪನಾ ಮತ್ತು ಡೈರಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೬೩,೬೬,೮೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೊರುತ್ತೇನೆ.

ಅಭಿಯಾಚನೆ ಕ್ರಮಾಂಕ ೪ - ಮೀನುಗಾರಿಕೆ

ಶ್ರೀ ಕೆ. ಎಂ. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು ಮತ್ತು ಜಲಸಾರಿಗೆ ರಾಜ್ಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರುತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೬,೩೪,೬೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೫,೧೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೊರುತ್ತೇನೆ.

ಅಭಿಯಾಚನೆ ಕ್ರಮಾಂಕ ೪೬ - ರೇವು ಮತ್ತು ಜಲಸಾರಿಗೆ ಸೇವೆಗಳು

ಶ್ರೀ ಕೆ. ಎಂ. ಬೆಳ್ಳಿಯಪ್ಪ (ಮಿನುಗಾರಿಕೆದ ಬಂದರು ಮತ್ತು ಜಲಸಾರಿಗೆ ರಾಜ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷಿಣಿಯವರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗೆ ಸಹಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೦೦,೧೧,೦೦೦ ರೂಪಾಯಿಗಳಿಗಿಂದ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೫೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಭಿಯಾಚನೆ ಕ್ರಮಾಂಕ ೨೨ - ಅರಣ್ಯ

ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೧೭,೭೮,೮೧,೦೦೦ ರೂಪಾಯಿಗಳಿಗಿಂದ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೮,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:- ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ):- ಮಾನ್ಯ ಉಪಾಧ್ಯಕ್ಷಣಿಯವರೆ, ಈ ವರ್ಷದ ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖಲಗಳ ಬೇಡಿಕೆಗಳನ್ನು ಬೆಂಬಲಿಸುತ್ತೇನಲಐ ಇವತ್ತು ಈ ರಾಜ್ಯದ ಮತ್ತು ರಾಷ್ಟ್ರದ ೮೦ ಶತ ಗ್ರಾಮೀಣ ಜನತೆಯ ಬದುಕು, ಅಸ್ಥಿತ್ವ ಅವರ ಜೀವನವನ್ನು ಹಸನುಗೊಳಿಸುವಂತಹ ಇಲಾಖೆಗಳ ಬೇಡಿಕೆಯನ್ನು ಈ ಸದನದಲ್ಲಿ ಬೆಂಬಲಿಸುತ್ತೇನೆ. ವ್ಯವಸಾಯಗಾರರ ಕುಟುಂಬದಲ್ಲಿ ಜನಿಸಿ, ರೈತಾಪಿ ಬಾಂಧವರಾಗಿ ಆ ಇಲಾಖೆಯ ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಮಂತ್ರಿಗಳಾದ ಮಾನ್ಯ ಚಿಕ್ಕೇಗೌಡರು, ಇಲಾಖಲಯ ಏನು ಬೇಡಿಕೆ ಇದೆ ಅದರ ಮೇಲಿನ ಚರ್ಚೆಯನ್ನು ಪ್ರಾರಂಭಗೊಳಿಸುತ್ತಾ, ಅದರ ಜೊತೆಜೊತೆಗೆ ಇನ್ನೂ ನಾಲ್ಕು ಇಲಾಖೆಗಳ ಬೇಡಿಕೆಗಳಿವೆ. ಈ ಇಲಾಖೆಗಳು ಇಡೀ ರಾಜ್ಯದ ಶ್ರೀಸಾಮ್ಮಾನ್ಯನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಜೊತೆಗೆ ಅದನ್ನು ಕಾರ್ಯಗಳಗೊಳಿಸುವಂತಹ, ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಜೊತೆಗೆ ಅದನ್ನು ಕಾರ್ಯಗತಗೊಳಿಸುವಂತಹ, ಕಾರ್ಯಕ್ರಮಗಳನ್ನು ಅಳವಡಿಸುವಂತಹ ಕಾಳಜಿ ಹಾಗೂ ಶ್ರದ್ಧೆಯಿಂದ ಇಲಾಖೆಗಳು ಯಾವ ಬಂಡವಾಳವನ್ನು ಈ ಒಂದು ವರ್ಷಾವಧಿಯಲ್ಲಿ ತಮ್ಮ ಇಲಾಖೆಗಳ ಮೂಲಕ ಹಣವನ್ನು ಖರ್ಚುಮಾಡುತ್ತವೆ. ಅದನ್ನು ಸದುಪಯೋಗಪಡಿಸುವಂತಹ ದೃಷ್ಠಿಯಲ್ಲಿ, ಯಶಸ್ವಿಯಾಗಿ ಕಾರ್ಯಾಚರಣೆ ಮಾಡುವಂತಹ ಮನೋಭಾದ ಮಂತ್ರಿಗಳು ಇದ್ದಾರೆ. ಭಾರತ ಕೃಷಿ ಪ್ರಧಾನ ರಾಷ್ಟ್ರ. ಈ ರಾಷ್ಟ್ರದ ಬೆನ್ನೆಲುಬು ರೈತ. ಅವನನ್ನು ಮೂಲ ಉದ್ದೇಶವಾಗಿ ಇಟ್ಟುಕೊಂಡು, ನಾವು ಒಂದು ಒಳ್ಳೆಯ ಸಮೃದ್ಧ ರಾಜ್ಯವನ್ನು ಸೃಷ್ಟಿ ಮಾಡುವ ಒಂದು ಗುರಿಯನ್ನು ಇಟ್ಟುಕೊಳ್ಳುವುದಾದರೆ ನಮ್ಮ ಕೃಷಿಗೆ ಮೂಲವಸ್ತು ನೀರು. ಈ ನೀರಿನ ಪ್ರತಿಹನಿಯನ್ನು ಚಿನ್ನವಾಗಿ ಪರಿವರ್ತನೆ ಮಾಡಿಕೊಳ್ಳುವಂತಹ ವಾಟರ್ ಮ್ಯಾನೇಜ್‌ಮೆಂಟ್ ಮೂಲಕ, ನೀರಿನ ನಿರ್ವಹಣೆಯ ಮೂಲಕ

ಅದನ್ನು ಎಲ್ಲಾ ರೀತಿಯಲ್ಲಿ ಉಪಯೋಗಮಾಡಿಕೊಳ್ಳುವ ಮೂಲಕ, ನೀರಿನ ನಿರ್ವಹಣೆಯ ಮೂಲಕ ಅಂದರೆ ಕೃಷಿಯಿಂದ ಕೈಗಾರಿಕೆ, ಕೈಗಾರಿಕೆ ಮೂಲಕ ಉದ್ಯೋಗ, ಉದ್ಯೋಗದ ಮೂಲಕ ವಾಣಿಜ್ಯ, ವ್ಯಾಪಾರ ವಹಿವಾಟನ್ನು ಇಡೀ ರಾಜ್ಯದಲ್ಲಿ ಹತೋಟಿಯಲ್ಲಿ ಇಟ್ಟುಕೊಳ್ಳುವಂತಹ ಒಂದು ಶಕ್ತಿ. ಈ ರೀತಿ ಹಣ ಸಂಪತ್ತನ್ನು ಗಳಿಸುವ ಮೂಲಕ ಇಡೀ ರಾಜ್ಯವನ್ನು ಸಮೃದ್ಧಗೊಳಿಸುವ ಒಂದು ಶಕ್ತಿ ಈ ಇಲಾಖೆಗೆ ಇದೆ. ಉದಾಹರಣೆಗೆ ಹೇಳಬೇಕಾದರೆ ನನ್ನ ಕ್ಷೇತ್ರದಲ್ಲಿ ಕನ್ನೇಗೌಡನ ಕೊಪ್ಪಲು ಎಂದು ಇದೆ. ಅಲ್ಲಿ ಜನ ಹೇಳುತ್ತಿದ್ದಾರೆ ಏನೆಂದರೆ ''ಗುಟುಕು ಇದ್ದರೆ ಪುಟುಕು, ಪುಟುಕು ಇದ್ದರೆ ಮೆಡೆಗಾರಿಕೆ'' ಎಂದು ಹೇಳುತ್ತಾರೆ. ಗುಟುಕು ಅಂದರೆ ನೀರು. ನೀರು ಇದ್ದರೆ ಶಕ್ತಿ, ನೀರನ್ನು ಕುಡಿದಾಗ ಒಂದು ರೀತಿಯ ಶಕ್ತಿ ಬರುತ್ತದೆ. ಆ ಶಕ್ತಿಯ ಮೂಲಕ ಮನುಷ್ಯನಿಗೆ ದರ್ಪ ಬರುತ್ತದೆ. ನಮ್ಮ ನೀರಿನ ಮೂಲಕ ಶಕ್ತಿಯನ್ನು ಹೊರ ರಾಜ್ಯಗಳವರು ಬೆಳೆಸಿಕೊಂಡಿರುವ ಉದಾಹರಣೆಯನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ನಾವು ಕಳೆದು ಕೊಂಡಂಥ ನೀರಿನ ಮೂಲಕ ಹೊರ ರಾಜ್ಯಗಳವರು ನಮ್ಮನ್ನೇ ಶೋಷಣೆ ಮಾಡುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಇವೊತ್ತು ಅದಕ್ಕೆ ಪೂರಕವಾಗಿ ಹೇಳಬೇಕಾದರೆ, ನಮ್ಮ ರಾಜ್ಯದಲ್ಲಿ ರೇಷ್ಮೆ ಒಂದು ಕೃಷಿ ಉದ್ಯಮವಾಗಿದೆ. ಇವತ್ತು ರೇಷ್ಮೆ ಖಾತೆ ಇಲ್ಲದೆ ಇರಬಹುದು. ನಮ್ಮ ರೇಷ್ಮೆ ಬಗ್ಗೆ ಹೇಳಬೇಕಾದರೆ, ಇಡೀ ರಾಷ್ಟ್ರದಲ್ಲಿಯೇ ನಾವು ಬಂಗಾರದಂಥ ಅತ್ಯುತ್ಕೃಷ್ಟ ರೇಷ್ಮೆಯನ್ನು ಉತ್ಪಾದಿಸುತ್ತಿದ್ದೇವೆ. ನಾವು ಬೆಳೆದ ರೇಷ್ಮೆಯನ್ನು ಹೊರ ರಾಜ್ಯಗಳು ಖರೀದಿಸಿ, ಭಾರತದ ಉದ್ದಗಲಕ್ಕೂ ಫಿನಿಷ್ಡ್ ಗೂಡ್ಸ್‌ಗಳಾದ ರೇಷ್ಮೆ ಸೀರೆ, ರೇಷ್ಮೆ ಬಟ್ಟೆಗಳನ್ನು ವ್ಯಾಪಾರ ಮಾಡುವಂಥ ಹತೋಟಿಯನ್ನಿಟ್ಟುಕೊಂಡಿವೆ. ಉತ್ಪಾದರು ನಾವಾಗಿದ್ದು, ಫಿನಿಷ್ಡ್ ಗೂಡ್ಸ್‌ಗಳನ್ನು ಸಂಪೂರ್ಣವಾಗಿ ನಾವೇ ಪುನಃ ಖರೀದಿಸುವಂಥ ಅನಿವಾರ್ಯ ಪರಿಸ್ಥಿತಿಯನ್ನು ಎದುರಿಸುತ್ತಿದ್ದೇವೆ. ಇದು ಕೃಷಿ ಉತ್ಪಾದನೆಯಲ್ಲಾಗಿರತಕ್ಕಂಥ ಲೋಪವಾಗಿದೆ. ನಾವು ಉತ್ಪಾದನೆ ಮಾಡುವಂಥ ವಸ್ತುಗಳನ್ನು ಹೊರ ರಾಜ್ಯಗಳವರು ಖರೀದಿಸಿ, ಮತ್ತೆ ನಮಗೆ ಮಾರಾಟ ಮಾಡುವ ಮೂಲಕ ನಾವೇ ಶೋಷಣೆಗೆ ಒಳಗಾಗುವಂಥ ಪರಿಸ್ಥಿತಿಯನ್ನು ಇಡೀ ರೇಷ್ಮೆ ವ್ಯಾಪಾರದಲ್ಲಿ ಬೇರೆ ರಾಜ್ಯಗಳವರ ಕೈ ಹಿಡಿಯುವಂಥ ಒಂದು ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಈ ಸಂದರ್ಭದಲ್ಲಿ ಅತ್ಯಂತ ಸಮರ್ಥರಾದ, ಕೃಷಿಯಲ್ಲಿ ಬದುಕಿ, ಕೃಷಿ ಬೆಳೆಗಾರರಾಗಿ, ಕೃಷಿ ಕ್ಷೇತ್ರದಲ್ಲಿ ಅನುಭವಿಗಳಾದ ಸನ್ಮಾನ್ಯ ಶ್ರೀ ಚಿಕ್ಕೇಗೌಡರು ಇವೊತ್ತು ಕೃಷಿ ಮಂತ್ರಿಗಳಾಗಿದ್ದಾರೆ. ಈ ಕ್ಷೇತ್ರದಲ್ಲಿ ಆಗುತ್ತಿರುವ ಶೋಷಣೆಯನ್ನು ಯಾವ ರೀತಿ ತಪ್ಪಿಸಬೇಕು? ಆ ಮೂಲಕ ರಾಜ್ಯದ ರೈತರ ಹಿತವನ್ನು ಹೇಗೆ ರಕ್ಷಣೆ ಮಾಡಬೇಕು? ಅವರ ಅಭಿವೃದ್ಧಿಯನ್ನು ಹೇಗೆ ಸಂರಕ್ಷಿಸಬೇಕು? ಎನ್ನುವುದರ ಬಗ್ಗೆ ಅವರಿಗೆ ಮನವರಿಕೆಯಾಗಿದೆ ಮತ್ತು ಅದರ ಬಗ್ಗೆ ಅವರಿಗೆ ಕಾಳಜಿ ಇದೆಯೆಂದು ನಾನು ಭಾವಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ೧೫೦೦ ಕೋಟಿ ರೂಪಾಯಿಗಳ ಬಂಡವಾಳ ಹಾಕುತ್ತಿದ್ದು, ಅದು ನೇರವಾಗಿ ಬೇರೆ ರಾಜ್ಯಗಳಿಗೆ ಹರಿದು ಹೋಗುವಂಥ ಒಂದು ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ಇವೊತ್ತು ಉತ್ತರ ಕರ್ನಾಟಕ ರಾಜ್ಯದಲ್ಲಿ ಅತ್ಯುತ್ಕೃಷ್ಟವಾದ ಹತ್ತಿಯನ್ನು ಉತ್ಪಾದಿಸುತ್ತಿದ್ದೇವೆ. ಇವೊತ್ತು ಉತ್ತರ ಕರ್ನಾಟಕದ ರೈತಾಪಿ ಜನರು ಉತ್ಪಾದಿಸುವಂಥ ಹತ್ತಿಯನ್ನು ಹೊರ ರಾಜ್ಯಗಳು ಖರೀದಿಸುತ್ತವೆ. ಕರ್ನಾಟಕದ ಶೇಕಡ ೬೮ರಷ್ಟು ಜನರು ಉಪಯೋಗಿಸುವ ಹತ್ತಿ ಬಟ್ಟೆಗಳಾದ, ಮೈಮೇಲೆ ಹಾಕಿಕೊಳ್ಳುವ ಬನಿಯನ್‌ನಿಂದ ಹಿಡಿದು ಮನೆಯಲ್ಲಿ ಹಾಕಿಕೊಳ್ಳುವಂಥ ಪಂಚೆ, ಹಾಸಿಕೊಳುವಂಥ ಬಟ್ಟೆಗಳು, ಹೊದ್ದುಕೊಳ್ಳುವಂಥ ಬಟ್ಟೆಗಳು ಎಲ್ಲವೂ ಕೂಡ ತಮಿಳುನಾಡಿನಿಂದ ಬರುವಂಥ ಒಂದು

ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ನಮ್ಮ ಉತ್ಪಾದನೆ ಏನಿದೆ, ಅದೇ ಉತ್ಪಾದನೆ ಮಾಂಡೆಸ್ಟರ್ ಮತ್ತು ಲಂಕಾಶೆರ್ ತರಹ ಬೇರೆ ರಾಜ್ಯಗಳಿಗೆ ಹೋಗಿ, ಮತ್ತೆ ನಮ್ಮ ರಾಜ್ಯಕ್ಕೆ ಬಂದು ಅದನ್ನು ನಾವೇ ಖರೀದಿಸುವಂಥ ಒಂದು ಅನಿವಾರ್ಯ ದುರಂತ ಪರಿಸ್ಥಿಯನ್ನು ನಾವು ಎದುರಿಸುತ್ತಿದ್ದೇವೆ. ಇದರಿಂದ, ಇಡೀ ರಾಜ್ಯದ ರೈತಾಪಿ ಬಾಂಧವರು ಶೋಷಣೆಗೆ ಒಳಗಾಗುತ್ತಾರೆ. ಇದರ ಜೊತೆಗೆ ಇನ್ನೊಂದು ಉದಾಹರಣೆ ಹೇಳುವುದಾದರೆ, ಕರ್ನಾಟಕ ರೈತ ಏನು ಬಾಳೆಹಣ್ಣು ಬೆಳೆಯುತ್ತಿದ್ದಾನೆ, ಶೇಕಡ ೮೦ ಭಾಗ ಬಾಳೇಹಣ್ಣು ಬೇರೆ ರಾಜ್ಯದಿಂದ ಬರುತ್ತದೆ. ನಮ್ಮ ರಾಜ್ಯದಲ್ಲಿ ನಮ್ಮ ರೈತ ಬಂಡವಾಳ ಹಾಕಿಕೊಟ್ಟು ಕೃಷಿ ಅಭಿವೃದ್ಧಿಗಾಗಿ ಬಾಳೆಹಣ್ಣು ಬೆಳೆಯುವಂಥ ಒಂದು ವ್ಯವಸ್ಥೆ ಮಾಡಿಕೊಡುತ್ತೇವೆ. ಆ ರೈತ ಒಂದು ರೂಪಾಯಿಗೆ ನಾಲ್ಕು ಬಾಳೆಹಣ್ಣುಗಳನ್ನು ಮಾರಾಟ ಮಾಡುವಂಥ ಶಕ್ತಿ ಪಡೆದರೆ, ತಮಿಳು ನಾಡಿನ ರೈತ ರೂಪಾಯಿಗೆ ಎಂಟು ಬಾಳೆಹಣ್ಣನ್ನು ತಂದಿಟ್ಟರೆ, ಮುಂದಿನ ವರ್ಷ ನಮ್ಮ ರೈತ ಬಾಳೆಹಣ್ಣನ್ನು ಬೆಳೆಯುವುದಿಲ್ಲ. ಇದೇ ರೀತಿ ಕುಕ್ಕುಟ ಉದ್ಯಮದ ಬಗ್ಗೆ ಹೇಳಬೇಕಾದರೆ, ಮಾನ್ಯ ಪಶುಸಂಗೋಪನ ಮಂತ್ರಿಗಳು ಉಪಸ್ಥಿತರಿದ್ದಾರೆ. ಈ ಕುಕ್ಕುಟ ಉದ್ಯಮ ಕೂಡ ತಮಿಳುನಾಡಿನ ನಾಮಕಲ್‌ನಿಂದ ಬಂದಿದೆ. ಇದು ಮೊನೊಪಲಿ ಉದ್ಯಮವಾಗಿದೆ. ಇವೊತ್ತು ಮೈಸೂರು ನಗರದಲ್ಲಿ ಹಾಲಿಗೆ ಬರವಿದ್ದು, ಇಡೀ ಜಿಲ್ಲೆ ಈ ಸಮಸ್ಯೆಯನ್ನು ಎದುರಿಸುತ್ತಿದೆ. ಮೈಸೂರು ನಗರದಲ್ಲಿ ಕ್ಯೂ ನಿಂತುಕೊಂಡು ಹಾಲಿಗೋಸ್ಕರ ಪರಿತಪಿಸುವಂಥ ಪರಿಸ್ಥಿತಿ ಇದೆ. ಇದೇ ಸಂದರ್ಭದಲ್ಲಿ ತಮಿಳುನಾಡಿನಿಂದ ಹಾಲು ನೇರವಾಗಿ ಮೈಸೂರು ನಗರಕ್ಕೆ ಬರುವಂಥ ಒಂದು ದುರಂತ ವ್ಯವಸ್ಥೆಯನ್ನು, ಇಲಾಖೆಯ ಆಡಳಿತದ ಚುಕ್ಕಾಣಿ ಹಿಡಿದ ಅಧಿಕಾರಿಗಳು ತಪ್ಪಿಸಬೇಕಾಗುತ್ತದೆ. ಜೊತೆಗೆ ಹೊಗೆ ಸೊಪ್ಪಿನ ಬಗ್ಗೆ ಮಾನ್ಯ ಸದಸ್ಯರಾದ ಕಾಳಮರೀಗೌಡರು ಈಗ ತಾನೆ ಮಾತನಾಡಿದರು. ಪಿರಿಯಾಪಟ್ಟಣ, ಹುಣಸೂರು ಮತ್ತು ಶಿವಮೊಗ್ಗದ ಕೆಲವು ಭಾಗಗಳಲ್ಲಿ ಬೆಳೆದ ಹೊಗೆಸೊಪ್ಪನೆಲ್ಲ ಹೊರರಾಜ್ಯಗಳವರು ಖರೀದಿ ಮಾಡಿ ಪುನಃ ಫಿನಿಷ್ಡ್ ಗೂಡ್ಸನ್ನು ಅಂದರೆ ತಂಗಬಸ್ಮ ಹೊಗೆಸೊಪ್ಪು, ಆಂಡಾಳ್ ನಶ್ಯ, ಸಿಗಾರ್ ಎಲ್ಲವೂ ಕೂಡ ಹೊರರಾಜ್ಯಗಳಿಂದ ಬಂದು ನಮ್ಮ ರಾಜ್ಯ ವಾಣಿಜ್ಯಕೇಂದ್ರ, ವ್ಯಾಪರ ಕೇಂದ್ರವಾಗುವಂಥ ಒಂದು ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಕರ್ನಾಟಕದಲ್ಲಿ ಸರ್ಕಾರದವರು ಕಳೆದ ವರ್ಷ ೨ ಲಕ್ಷ ರೈತರ ಪಂಪು ಸೆಟ್ಟುಗಳಿಗೆ ವಿದ್ಯುತ್‌ನ್ನು ಕೊಡುತ್ತೇವೆಂದು ಹೇಳಿದರು. ನಮ್ಮ ಸರ್ಕಾರ ಒಂದರೆ ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ಬಂಗಾರಪ್ಪನವರು ಅವರಿಗೆ ವಿದ್ಯುತ್‌ನ್ನು ಕೊಡುತ್ತೇವೆಂದು ಹೇಳಿದರು. ಇದು ಬಹಳ ಸಂತೋಷದ ವಿಚಾರ. ಆದರೆ ನಮ್ಮ ಪರಿಸ್ಥಿತಿ ಏನು ಎಂದು ಒಂದು ಪ್ರಶ್ನೆಯನ್ನು ಸದನದ ಮೂಲಕ ಕೇಳಿದೆ. ಪ್ರತಿವರ್ಷ ನಮ್ಮ ರಾಜ್ಯದಲ್ಲಿ ಎಷ್ಟು ಪಂಪುಸೆಟ್ಟುಗಳು ಉತ್ಪಾದನೆಯಾಗುತ್ತವೆ ಎಂದು ಕೇಳಿದರೆ ಕರ್ನಾಟಕ ರಾಜ್ಯದಲ್ಲಿ ವಾರ್ಷಿಕವಾಗಿ ೩೦೦೦ ಪಂಪು ಸೆಟ್ಟುಗಳು ಉತ್ಪಾದನೆಯಾಗುತ್ತದೆಂದು ಹೇಳಿದ್ದಾರೆ. ಆದುದರಿಂದ ಅತ್ಯಂತ ಕಾಳಜಿಯಿಂದ ಈ ಸದನದ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಯಾವ ರೈತಾಪಿ ಜನ ನಮ್ಮ ಬೆನ್ನೆಲುಬು, ನಮ್ಮ ಅನ್ನದಾತ, ನಮ್ಮ ಬದುಕಿನ ಅಸ್ತಿತ್ವವಾಗಿ ಇದ್ದಾರೋ ಅವರಿಗೆ ಪಂಪುಸೆಟ್ಟುಗಳು ಕೂಡ ಹೊರ ರಾಜ್ಯಗಳಿಂದ ಬರತಕ್ಕಂಥ ಅನಿವಾರ್ಯ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ಈ ಪರಿಸ್ಥಿತಿಯನ್ನು ಕೃಷಿ ಮಂತ್ರಿಗಳು, ಕೈಗಾರಿಕಾ ಮಂತ್ರಿಗಳ ಸಹಯೋಗದ ಜೊತೆ ಸರಿಪಡಿಸಬೇಕು. ಇಂಥ ತೊಡಕುಗಳೇನಿವೆ, ಇಂಥ ತೊಂದರೆಗಳನ್ನು ನಮ್ಮ ರೈತಾಪಿ ಬಾಂಧವರು ಏನು ಅನುಭವಿಸುತ್ತಿದ್ದಾರೆ, ತಾವು ಸಮರ್ಥ ಮಂತ್ರಿಗಳಾಗಿದ್ದೀರಿ, ಆ

ಸಮಸ್ಯೆಗಳನ್ನು ತಾವು ಸರಿಪಡಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಎಣ್ಣೆ ಕಾಳುಗಳ ಬಗ್ಗೆ ಹೇಳುವುದಾದರೆ, ಸಾಮಾನ್ಯವಾಗಿ ಇಡೀ ರಾಜ್ಯದಲ್ಲಿ ನಮ್ಮ ರೈತ ಬಾಂಧವರು ಏನು ಕಡಲೆಕಾಯಿಯನ್ನು ಬೆಳೆಯುತ್ತಾರೆ ಅದು ಮಾರುಕಟ್ಟೆಗೆ ಬರುವ ಮೊದಲೇ ಖರೀದಿಯಾಗಿ ತಮಿಳುನಾಡಿಗೆ ಹೋಗುತ್ತದೆ. ಅದು ಅಲ್ಲಿನ ಪೊಲ್ಲಾಚಿ ಎನ್ನುವ ಪ್ರದೇಶಕ್ಕೆ ಹೋಗಿ ಅಲ್ಲಿ ಎಣ್ಣೆಯನ್ನು ತೆಗೆದು ಮತ್ತೆ ಎಣ್ಣೆ ಮತ್ತು ತುಪ್ಪದ ರೂಪದಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೆ ಬರತಕ್ಕಂಥ ಪರಿಸ್ಥಿತಿ ಇದೆ.

ಇನ್ನು ನಮ್ಮ ಪಶುಸಂಗೋಪನೆಯ ಸಚಿವರು ಇಲ್ಲೇ ಇದ್ದಾರೆ, ನಮ್ಮ ದನಗಳಿಗೆ ಬೇಕಾದಂಥ ಹೊಟ್ಟು ಬೂಸ ಸಹ ಹೂರ ರಾಜ್ಯದಿಂದ ಬರತಕ್ಕ ಅನಿವಾರ್ಯವಾದ ಪರಿಸ್ಥಿ ನಮ್ಮ ಕರ್ನಾಟಕ ರಾಜ್ಯದಲ್ಲಿದೆ. ಏಕೆಂದರೆ ನಾನು ಮೈಸೂರಿನ ಗೋಪಾಲಕರ ಸಂಘದ ಅಧ್ಯಕ್ಷನಾಗಿದ್ದೇನೆ. ನಮ್ಮ ಕರ್ನಾಟಕ ರಾಜ್ಯದ ಬೇಗೂರಿನ ಸುಣ್ಣ ಸಹ ತಮಿಳುನಾಡಿಗೆ ಹೋಗಿ ಅಲ್ಲಿಂದ ಮತ್ತೆ ರಾಜಾ ಬ್ರ್ಯಾಂಡ್ ಸುಣ್ಣವಾಗಿ ಬಂದರೆ ಮಾತ್ರ ನಮ್ಮಲ್ಲಿ ಮದುವೆಗಳು ನಡೆಯುತ್ತದೆ.

ಇನ್ನು ಶಿವಮೊಗ್ಗ ಭಾಗದಲ್ಲಿ ಬಂಗಾರದಂಥ ಅಡಿಕೆಯನ್ನು ಬೆಳೆಯುತ್ತಾರೆ. ಒಂದು ಕಡೆ ಪಂಪ, ಬನವಾಸಿ ದೇಶವೆಂದು ಹೇಳಿದ್ದಾರನೆ. ಅಲ್ಲಿನ ಸೊಗಸಾದ ಒಳ್ಳೆಯ ಅಡಿಕೆ ತಮಿತುನಾಡಿಗೆ ಹೋಗಿ ರೋಜಾ, ಅಶೋಕ ಅಡಿಕೆ ಪುಡಿಯಾಗಿ ಬಂದರೆ ಮಾತ್ರ ನಮ್ಮ ಮನೆಗಳಲ್ಲಿ ಮದುವೆಯಾಗುವಂಥ ದುರಂತ ವ್ಯವಸ್ಥೆಯನ್ನು ನಾವು ರಾಜ್ಯದಲ್ಲಿ ಕಾಣುತ್ತಿದ್ದೇವೆ. ಈ ಆಧಾರದ ಮೇಲೆ ಪ್ರತಿಯೊಬ್ಬ ಕನ್ನಡಿಗನು ಸಹ ನೇರವಾಗಿ ಹೊರರಾಜ್ಯಕ್ಕೆ ಪ್ರತಿ ದಿನ ೫೦ ಪೈಸೆಯನ್ನು ಕೊಡತಕ್ಕಂತ ಅನಿವಾರ್ಯ ಪರಿಸ್ಥಿತಿಯನ್ನು ನಾವು ಎದುರಿಸುತ್ತಿದ್ದೇವೆ. ನಮ್ಮ ಬದುಕಿಗೆ ಮೂಲಾಧಾರವಾದ ನಮ್ಮ ರಾಷ್ಟ್ರದ ಶಕ್ತಿಯಾದ ರೈತರು ಏನಿದ್ದಾರೆ ಆ ರೈತರ ಶಕ್ತಿಯನ್ನು ಬೆಳೆಸದೇ ಹೋದರೆ, ನಮ್ಮ ನಾಗರೀಕ ಪ್ರಪಂಚ ಏನಿದೆ ಅರ್‌ಬನ್ ಏರಿಯಾ ಏನು ಇದೆ ಅದೆಲ್ಲ ಡಾಂಬಿಕತೆಯಿಂದ ಕೂಡಿರುತ್ತದೆ. ನಮ್ಮ ರೆಏತರ ಬದುಕನ್ನು ಹಸನುಗೊಳಿಸದಿದ್ದರೆ, ಅವರ ಜೀವನವನ್ನು ಅಭಿವೃದ್ಧಿಗೊಳಿಸದೆ ಹೋದರೆ ಇಡೀ ರಾಷ್ಟ್ರದ ಶಕ್ತಿ ಕೂಡ ಕುಂಠಿತವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಬಗ್ಗೆ ಒತ್ತಿ ಹೇಳಬೇಕಾಗುತ್ತದೆ. ನಾವು ಈ ರಾಜ್ಯದ ಉದ್ದಗಲಕ್ಕೂ ಕೂಡ ಯಾವ ಬಂಡವಾಳವನ್ನು ಹಾಕುತ್ತೇವೆ ಅದು ನೇರವಾಗಿ ಬೇರೆ ರಾಜ್ಯಗಳಿಗೆ ಹರಿದುಹೋಗಿ ನಮಗೆ ನಾವೇ ಖರೀದಿಸುವಂಥ ಪರಿಪಾಠವನ್ನು, ವ್ಯವಸ್ಥೆಯನ್ನು ನಾವು ಅನಿವಾರ್ಯವಾಗಿ ತಲುಪಿದ್ದೇವೆ. ಆ ಮೂಲಕ ನಾವು ವಂಚಿತರಾಗಿದ್ದೇವೆ. ಕೃಷಿ ಪ್ರಧಾನವಾದಂಥ ವಾಟರ್ ಮ್ಯಾನೇಜಮೆಂಟ್ ಏನಿದೆ ನೀರಿನ ಸದುಪಯೋಗದ ನಿರ್ವಹಣೆ ಮತ್ತು ಸಮರ್ಥ ಬಳಕೆಯಿಂದ ಪಕ್ಕದ ರಾಜ್ಯದವರು ಸಮರ್ಥರಾಗಿದ್ದಾರೆ. ಆ ಮೂಲಕ ಆ ರಾಜ್ಯಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿಕೊಂಡಿದ್ದಾರೆ. ಅದರಿಂದಲೂ ಸಹ ನಾವು ವಂಚಿತರಾಗಿದ್ದೇವೆ. ಅವರ ಮಕ್ಕಳಿಗೆ ಉದ್ಯೋಗ ದೊರಕುತ್ತದೆ. ಆದರೆ ನಮ್ಮ ಮಕ್ಕಳಿಗೆ, ಯುವಕರಿಗೆ ಉದ್ಯೋಗವನ್ನೊದಗಿಸಲು ಕೂಡ ನಾವು ವಂಚಿತರಾಗಿದ್ದೇವೆ. ಆ ಮೂಲಕ ವಾಣಿಜ್ಯ ಮತ್ತು ವ್ಯಾಪಾರ ಎಲ್ಲಾ ಕೇಂದ್ರಗಳೆಲ್ಲೂ ಕೂಡ ಏಕಸ್ವಾಮ್ಯವನ್ನು, ಹತೋಟಿಯನ್ನು ಬೇರೆ ರಾಜ್ಯಗಳವರು ನಮ್ಮ ರಾಜ್ಯದ ಮೇಲೆ ಸಾಧಿಸಿದ್ದಾರೆ. ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ಶ್ರೀಮಾನ್ ಪಿ. ವಿ. ನರಸಿಂಹರಾವ್‌ರವರು ಏನು ಒಂದು ನಮ್ಮ ಕರ್ನಾಟಕ ರಾಜ್ಯದ 'ವಿಷ್ಣು'

ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದರು, ಆದರ ಮೇಲೂ ಕೂಡ ಬೇರೆ ರಾಜ್ಯಗಳ ಪ್ರಭಾವ ಇದೆ. ಹೀಗಿರುವಾಗ ನೀವು ಹೊರ ರಾಜ್ಯಗಳ ಪ್ರಭಾವವನ್ನು ತಡೆಗಟ್ಟದೆ ಹೋದಾಗ ನಮ್ಮ ಇಲಾಖೆಗಳು ಏನು ಹಣವನ್ನು ವಿನಿಯೋಗ ಮಾಡುತ್ತವೆ, ಹಣವನ್ನು ಖರ್ಚು ಮಾಡುತ್ತೇವೆ ಅವೆಲ್ಲವೂ ಕೂಡ ಫಲಶ್ರುತಿಯನ್ನು ಕೊಡಲಾರವು ಎಂದು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟನ್ನು ಹೇಳುತ್ತಾ, ಒಂದು ಸುಂದರವಾದ ಮನೆಯನ್ನು ಕಟ್ಟಬೇಕಾದರೆ ಆ ಮನೆಯಲ್ಲಿ ದೇವರ ಮನೆ ಹೇಗಿರಬೇಕು, ಹಾಲ್ ಹೇಗಿರಬೇಕು, ರೂಮ್‌ಗಳು ಹೇಗಿರಬೇಕು, ಎಲ್ಲಿ ಇರಬೇಕು ಎಂದು ನೋಡಿ ಕಟ್ಟುತ್ತೇವೆ. ಅದೇ ರೀತಿ ಒಂದು ಊರನ್ನು ಕಟ್ಟಬೇಕಾಗುತ್ತದೆ, ಒಂದು ನಗರವನ್ನು ಕಟ್ಟಬೇಕಾಗುತ್ತದೆ, ಒಂದು ರಾಜ್ಯವನ್ನು ಕಟ್ಟಬೇಕಾಗುತ್ತದೆ, ಒಂದು ರಾಷ್ಟ್ರವನ್ನು ಕಟ್ಟಬೇಕಾಗುತ್ತದೆ. ಆ ಒಂದು ಆಧಾರದ ಮೇಲೆ ಒಂದು ಜಿಲ್ಲೆಯನ್ನು ಕೇಂದ್ರವಾಗಿ ಇಟ್ಟುಕೊಂಡರೂ ನಾವು ಜಿಲ್ಲೆಯಲ್ಲಿ ಏನೇನು ಸಂಪತ್ತು ಇದೆ, ಅದು ಅರಣ್ಯ ಸಂಪತ್ತು ಇರಬಹುದು, ಜಲ ಸಂಪತ್ತು ಇರಬಹುದು, ಕೃಷಿ ಸಂಪತ್ತು ಇರಬಹುದು ಅಥವಾ ಮಾನವ ಸಂಪತ್ತು ಇರಬಹುದು - ಅದನ್ನು ಯಾವ ರೀತಿ ಬಳಕೆ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಯೋಜಿತ ರೀತಿಯಲ್ಲಿ ಇಲಾಖೆಗಳು ಯೋಜನೆಗಳನ್ನು ಹಾಕಬೇಕು. ಈ ಸಂದರ್ಭದಲ್ಲಿ ಅತ್ಯಂತ ಒಳ್ಳೆಯ ಕೆಲಸ ಮಾಡುವಂತಹ ಶಕ್ತಿಯ ಮನೋಭಾವವನ್ನು ಪಡೆದಿರುವಂತಹ ಶಾಸಕರಾದ ನಮ್ಮ ಕರ್ತವ್ಯವೇನೆಂದರೆ, ಅವರಿಗೆ ಇಂತಹ ಕೆಲಸಗಳನ್ನು ಇಂತಹ ದಾರಿಯಲ್ಲಿ ಮಾಡಿದಾಗ ಮಾತ್ರ ನಾವು ಗುರಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವೆಂದು ಹೇಳಬೇಕಾಗುತ್ತದೆ. ನಾವು ಈ ನಿಟ್ಟಿನಲ್ಲಿ ಯಾವ ಚಿಂತನೆ ವ್ಯಕ್ತಪಡಿಸುತ್ತಿದ್ದೇವೆ ಆದರ ಬಗ್ಗೆ ಕೃಷಿ ಇಲಾಖೆಯ ಮಂತ್ರಿಗಳು ಅತ್ಯಂತ ಯಶಸ್ವಿಯಾಗಿ ಕಾರ್ಯನಿರ್ವಹಿಸ ಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ. ಅರಣ್ಯ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವುದಕ್ಕಿಂತ ಮೊದಲು ಒಂದು ಶೋಷಣೆಯ ಬಗ್ಗೆ ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಗ್ರಾಮಾಂತರದಲ್ಲಿ ಕಡು ಬಡ ಜನರು ಯಾರಿದ್ದಾರೆ, ಬಡ ವರ್ಗಕ್ಕೆ ಸೇರಿತ ರೈತಾಪಿ ಜನ ಯಾರಿದ್ದಾರೆ, ಅವರು ಏನು ಒಂದು ಉತ್ಪಾದನೆಯನ್ನು ಮಾಡುತ್ತಾರೆ, ಅಂದರ ಸಾಮಾನ್ಯವಾಗಿ ಕಾಳುಗಳನ್ನಾಗಲಿ ನಮ್ಮ ಮೆಣಸಿನಕಾಯಿಯಾಗಲಿ ಏನನ್ನು ಬೆಳೆಯುತ್ತಾರೆ, ಅವೆಲ್ಲವೂ ದಳ್ಳಾಳಿಗಳ ಶೋಷಣೆಗೆ ಒಳಗಾಗುತ್ತವೆ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಯಾವ ರೀತಿ ಟೊಬ್ಯಾಕೋ ಬೋರ್ಡ್ ಮಾಡಿದ್ದೀರಿ, ಯಾವ ರೀತಿ ತೆಂಗಿನ ನಾರಿನ ಅಭಿವೃದ್ಧಿ ಬೋರ್ಡ್ ಮಾಡಿದ್ದೀರಿ, ಅದೇ ರೀತಿ ಈ ರಾಜ್ಯದಲ್ಲಿ ಹುರಳಿಕಾಳಿಗೂ ಕೂಡ ಬೋರ್ಡ್ ಮಾಡಬೇಕಾಗುತ್ತದೆ. ಏಕೆಂದರೆ ಅತ್ಯಂತ ಕಡಿಮೆ ವಿಸ್ತೀರ್ಣ ಭೂಮಿಯನ್ನು ಹೊಂದಿರುವಂತಹ ರೈತ ಮಾತ್ರ ಹುರಳಿ ಬೆಳೆಯುತ್ತಾನೆ. ನಮ್ಮಲ್ಲಿ ಮೆಣಸಿನಕಾಯಿ ಬೋರ್ಡ್ ಮಾಡಬೇಕಾಗುತ್ತದೆ. ನಮ್ಮ ಕುಂದಗೋಳದ ಗೋವಿಂದಪ್ಪ ಹುಮಂತಪ್ಪ ಜುಟ್ಟಲ್‌ರವರು ಇದ್ದಾರೆ ಅವರ ಕ್ಷೇತ್ರದಲ್ಲಿ ಅತ್ಯಂತ ಹೆಚ್ಚಿಗೆ ಮೆಣಸಿನಕಾಯಿ ಬೆಳೆಯುತ್ತಾರೆ. ಹೊರರಾಜ್ಯದವರು ನೇರವಾಗಿ ಖರೀದಿಸುತ್ತಾರೆ. ರೈತರು ನೇರವಾಗಿ ಶೋಷಣೆಗೆ ಒಳಗಾಗುವಂತಹ ಒಂದು ವ್ಯವಸ್ಥೆ ಇದೆ. ಇದನ್ನು ತಪ್ಪಿಸಬೇಕಾದರೆ ದ್ವಿದಳ ಧಾನ್ಯಗಳ ಬೋರ್ಡ್ ಮಾಡಬೇಕಾಗುತ್ತದೆ. ಈಗ ಏನು ರೈತ ಬಾಂಧವರು ಬೆಳಲ ಉತ್ಪಾದನೆ ಮಾಡುತ್ತಾರೆ, ಆದಕ್ಕೆಲ್ಲಾ ತಾವು ಬೋರ್ಡ್‌ಗಳನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ಬೇಡಿಕೆ ಬಗ್ಗೆ ಹೇಳುವುದಾದರೆ, ನಮ್ಮ ಶಂಭುನಾಥ್‌ರವರು

ಅರಣ್ಯ ಮಂತ್ರಿಗಳಾಗಿದ್ದಾರೆ. ಈ ರಾಜ್ಯದಲ್ಲಿ ವನ ಸಂಪತ್ತು ಏನು ಇದೆ, ವನ್ಯ ಜೀವಿಗಳನ್ನು ಸಂರಕ್ಷಿಸುವುದು ಅರಣ್ಯ ಸಂಪತ್ತನ್ನು ಸಂರಕ್ಷಿಸುವಂತ ಜವಾಬ್ದಾರಿ, ಪ್ರಕೃತಿಯ ಸೌಂದರ್ಯವನ್ನು ಕಾಪಾಡುವಂತಹ ಜವಾಬ್ದಾರಿ, ಖನಿಜ ಸಂಪತ್ತನ್ನು ನೋಡಿಕೊಳ್ಳುವಂತಹ ಜವಾಬ್ದಾರಿ ಈ ಇಲಾಖೆಗೆ ಇದೆ. ಜೊತೆಗೆ ಕಾಡಿನ ಜನಾಂಗದ ಹಿತಾಸಕ್ತಿಯನ್ನು ಕೂಡ, ಕಾಡಿನ ಜಾತಿ ಜನಾಂಗಗಳು ಏನಿದೆ, ಉಪ ಜಾತಿಗಳು ಏನು ಇವೆ, ಅವುಗಳ ಹಿತಾಸಕ್ತಿಯನ್ನು ಕಾಪಾಡುವಂತಹ ಜವಾಬ್ದಾರಿ ಕೂಡ ಈ ಇಲಾಖೆಗೆ ಸೇರುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದಲಾ ಅರಣ್ಯವನ್ನು ಉಳಿಸುವಂತಹ, ಬೆಳೆಸುವಂತಹ, ಸಂರಕ್ಷಿಸುವಂತಹ ಮೂಲಭೂತ ಉದ್ದೇಶವೂ ಕೂಡ ಈ ಒಂದು ಇಲಾಖೆಗೆ ಇರಬೇಕು. ಇವತ್ತು ಏನಾಗಿದೆಯೆಂದರೆ, ಈಗ ನೀಲಗಿರಿಯನ್ನು ಸದ್ಯದ ಪರಿಸ್ಥಿತಿಯಲ್ಲಿ ಬೆಳೆಸುತ್ತಿಲ್ಲ. ಆದರೆ ಯಾವುದೇ ಕಾಡಿನಲ್ಲಿ ಗಿಡಗಳನ್ನು ನೆಡುವಂತಹ ಉದ್ದೇಶ, ಬೆಳೆಸುವಂತಹ ಉದ್ದೇಶವಿದೆಯೇ ಹೊರತು ಅವುಗಳನ್ನು ಕಡಿಯುವಂತಹ ಉದ್ದೇಶದಿಂದಲ್ಲ, ಅವುಗಳನ್ನು ನಾಶಪಡಿಸುವಂತಹ ಉದ್ದೇಶದಿಂದಲ್ಲ. ಅವುಗಳನ್ನು ಈ ನಾಡಿಗೋಸ್ಕರ, ಈ ಸಮಾಜಕ್ಕೋಸ್ಕರ ಉಳಿಸಿ ಬೆಳೆಸುವಂಥ ಪ್ರಾಮಾಣಿಕ ಉದ್ದೇಶ ಈ ಅರಣ್ಯ ಸಂರಕ್ಷಣೆ, ಅರಣ್ಯದ ಅಸ್ತಿತ್ವದ ಪರಿಕಲ್ಪನೆ. ನಾವು ಕೆಲವುಕಡೆ ನೋಡುತ್ತಿದ್ದೇವೆ. ನೀಲಗಿರಿ ಅರಣ್ಯಗಳನ್ನು ಬೆಳೆಸುವಂಥ ಕಾರ್ಯಕ್ರಮವನ್ನು ಇಡೀ ದೇಶದಲ್ಲೇ ಹಾಕಿಕೊಂಡರು. ಆದರೆ ಅದರ ಜೊತೆಯಲ್ಲೇ ನೀಲಗಿರಿ ಮರಗಳನ್ನು ಕಡಿಯುವ ಕಾರ್ಯಕ್ರಮಗಳನ್ನೂ ಹಾಕಿಕೊಂಡಿದ್ದರು. ಪ್ರತಿಯೊಂದು ಮರವೂ ನಮ್ಮ ತಾಯಿಯ ಸಮಾನ, ಪ್ರತಿಯೊಂದು ಸಸಿಯೂ ಕೂಡ ಮಗುವಿನ ಸಮಾನ. ನಾವು ಮರಗಳನ್ನು ನಾಶಮಾಡುತ್ತೇವೆಂದರೆ ಅದು ನಮ್ಮ ತಾಯಿಯನ್ನು ನಮ್ಮ ಮಗುವನ್ನು ಹತ್ಯೆ ಮಾಡಿದಂತಾಗುತ್ತದೆ. ಅದು ಅರಣ್ಯ ನಾಶವೇ ಇರಬಹುದು, ಪ್ರಕೃತಿ ನಾಶವೇ ಇರಬಹುದು, ಇದು ಒಂದು ಹತ್ಯೆ ಎನ್ನತಕ್ಕ ಒಂದು ಪರಿಕಲ್ಪನೆಯನ್ನು ನಾವು ಸಮಾಜದಲ್ಲಿ ಇಟ್ಟು ಕೊಳ್ಳಬೇಕು. ನಾನು ಗ್ರಾಮಾಂತರ ಪ್ರದೇಶಗಳಲ್ಲಿ ಹುಟ್ಟಿ ಬೆಳೆದವನು. ಹಿಂದೆ ಸಾಮಾನ್ಯವಾಗಿ ಎಲ್ಲ ಹೊಲ, ಗದ್ದೆಗಳ ಪಕ್ಕದಲ್ಲಿ ಮರಗಿಡಗಳನ್ನು ಬೆಳೆಸುತ್ತಿದ್ದರು. ಆ ಮರಗಳನು ಕಡಿಯಬೇಕಾದರೆ ಕೇವಲ ಮದುವೆ ಅಥವಾ ತಿಥಿ ಕಾರ್ಯಗಳಿಗೆ ಮಾತ್ರ ಕಡಿಯುತ್ತಿದ್ದರು. ಆದರೆ ಇವತ್ತು ಏನಾಗಿದೆ ಎಂದರೆ ಮರಗಿಡಗಳನಲ್ಲೇ ನೆಡದೇ ಇರುವಂಥ ಒಂದು ಮನೋಭಾವನೆ ನಮ್ಮ ರೈತರಲ್ಲಿ ಬೆಳೆದಿದೆ. ನನಗೆ ತಿಳಿದ ಮಟ್ಟಿಗೆ ಮೊದಲು ಒಂದು ಊರು ಎಂದರೆ ಒಂದು ತೋಪು, ಒಂದು ಗೋಮಾಳ, ಒಂದು ಕೆರೆ ಇವು ಇರಬೇಕೆಂದು ಒಂದು ಪರಿಕಲ್ಪನೆಯನ್ನು ಜನರು ಹೊಂದಿದ್ದರು. ಇವತ್ತು ಆ ಪರಿಕಲ್ಪನೆ ಹೋಗಿದೆ. ಕಾಡಿಗೆ ಬದಲಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಕಾಡಿನ ಸೌದೆ ಸಿಕ್ಕದಿದ್ದರ ಗ್ಯಾಸ್‌ನ ವ್ಯವಸ್ಥೆ, ಗ್ಯಾಸೂ ಸಿಗದಿದ್ದರೆ ಸೋಲಾರ್ ಎನರ್ಜಿಗೆ ವ್ಯವಸ್ಥೆ ಮಾಡಿಕೊಳ್ಳುವಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇದಕ್ಕೆ ಬದಲಾಗಿ ಕಾಡು ನಮ್ಮ ಬದುಕಿನ ಒಂದು ಅವಿಭಾಜ್ಯ ಅಂಗ ಎಂದು ತಿಳಿದುಕೊಳ್ಳಬೇಕು. ನಮ್ಮ ರಾಜ್ಯದ ಸಂಪತ್ತು ಎಂದರೆ ಅದು ಕಾಡಿನ ಸಂಪತ್ತು ಇರಬಹುದು, ಪ್ರಾಣಿ ಸಂಪತ್ತು ಇರಬಹುದು ಅಥವಾ ಮರಗಿಡಗಳ ಸಂಪತ್ತು ಇರಬಹುದು, ಕಾಡಿನಲ್ಲಿ ಸಿಕ್ಕತಕ್ಕ ಜೇನು ಅಂದರೆ ಸಮಾಜದ ಬಳಕೆಗೆ ಬರತಕ್ಕ ಪದಾರ್ಥಗಳೇನಿವೆ ಅವೆಲ್ಲವನ್ನೂ ಕೂಡ ಸಂರಕ್ಷಿಸುವ ಜೊತೆಗೆ ರೈತರು ಬೆಳೆ ಏನು ಬೆಳೆಯುತ್ತಾರ ಅದನ್ನೆಲ್ಲಾ ಉಳಿಸಬೇಕು. ಪಶುಪಕ್ಷಿಗಳೂ ಕೂಡ ಆ ಕಾಡಿನಲ್ಲಿ ಬದುಕುತ್ತವೆ. ಕ್ರಿಮಿಕೀಟಗಳೂ ಕೂಡ ಬದುಕುವ ವ್ಯವಸ್ಥೆ ಈ ಕಾಡಿನಿಂದಾಗುತ್ತದೆ. ಆ ಮೂಲಕ ಮಳೆಯನ್ನು ಪಡೆಯುವಂಥ ನೈಸರ್ಗಿಕ ವ್ಯವಸ್ಥೆ ಕೂಡ ಈ

ಕಾಡಿನಿಂದ ಆಗುತ್ತದೆ. ಇದನ್ನು ಶ್ರೀಸಾಮಾನ್ಯರಿಗೆ ನಾವು ಪದೇ ಪದೇ ಒತ್ತಿ ಹೇಳಬೇಕಾಗುತ್ತದೆ. ನಾವು ಜನತೆಯ ಜವಾಬ್ದಾರಿಯನ್ನು ಜ್ಞಾಪಕ ಮಾಡಬೇಕಾಗುತ್ತದೆ. ಕಾಡಿನ ಸಂಪತ್ತಿನ ಉಪಯೋಗ ಯಾವ ರೀತಿ ಆಗುತ್ತದೆಂದರೆ, ಮರಮುಟ್ಟುಗಳ ಜೊತೆಗೆ ಪ್ರಕೃತಿ ಸಂಪತ್ತನ್ನು ಉಳಿಸುವುದರ ಜೊತೆಗೆ ಪಶುಪಕ್ಷಿಗಳು, ಕ್ರಿಮಿಕೀಟಗಳು ಬದುಕುವಂಥ ವ್ಯವಸ್ಥೆ ಇದೆ ಆದರೆ ಅವು ರೈತಾಪಿ ಜನರು ಏನು ಬೆಳೆಯನ್ನು ಬೆಳೆಯುತ್ತಾರೆ ಅದನ್ನು ನಾಶಪಡಿಸದೇ ಇರತಕ್ಕ ವ್ಯವಸ್ಥೆ ನಮಗೆ ಬೇಕು. ಮಾನ್ಯ ಅರಣ್ಯ ಮಂತ್ರಿಗಳು, ಕೃಷಿ ಮಂತ್ರಿಗಳೂ ಇವರ ಜೊತೆಯಲ್ಲಿರಬೇಕಾಗುತ್ತದೆ. ಕಾಡು ಚೆನ್ನಾಗಿದ್ದರೆ ಊರೂ ನಾಶವಾಗುವುದಿಲ್ಲ. ತಮಗೆಲ್ಲಾ ಗೊತ್ತಿರುವಂತೆ ಮೊನ್ನೆ ನಮ್ಮ ನಾಗರಹೊಳೆ ಕಾಡಿಗೆ ಬೆಂಕಿ ಬಿತ್ತು. ಅಲ್ಲಿನ ಕೆಟ್ಟ ಅಧಿಕಾರಿಯೊಬ್ಬನ ಕರ್ತವ್ಯ ಲೋಪದಿಂದ ಇಡೀ ನಾಗರಹೊಳೆ ಪ್ರದೇಶವೇ ಇವತ್ತು ಅತ್ಯಂತ ಪ್ರಕ್ಷುಬ್ಧವಾಗಿದೆ. ನಾಗರಹೊಳೆಗೆ ಬೆಂಕಿ ಬಿದ್ದ ಮೇಲೆ ಅಲ್ಲಿದ್ದಂಥ ಕಾಡುಪ್ರಾಣಿಗಳು ಇವತ್ತು ತೋಟಗಳನ್ನು ಸೇರುತ್ತಿವೆ ಆದುದರಿಂದ ಇವತ್ತು ನಮ್ಮ ಕಾಡಿನ ಸಂರಕ್ಷಣೆ ಅತ್ಯಂತ ಅಗತ್ಯವಾಗಿದೆ. ತಾವೆಲ್ಲರೂ ಮಹಾಭಾರತವನ್ನು ಕೇಳಿದ್ದೀರಿ. ದ್ರೋಣರು ಏಕಲವ್ಯನನ್ನು ಕೇಳುತ್ತಾರೆ, ನೀನು ಕಾಡಿನ ಪುತ್ರ, ನಿನಗೇಕೆ ಧನುರ್ವಿದ್ಯೆ ಬೇಕು ಎಂದು ಕೇಳುತ್ತಾರೆ. ಅದೇ ರೀತಿ ಅರ್ಜುನನ್ನು ಕೇಳಿದಾಗ ಅವನು ಹೇಳುತ್ತಾನೆ, ನಾನು ಇಡೀ ಪ್ರಪಂಚದಲ್ಲೇ ಅದ್ವಿತೀಯ ಬಿಲ್ಲುಗಾರನಾಗಬೇಕು ನನ್ನ ಮುಂದೆ ಯಾರೂ ಕೂಡ ಧನುರ್ವಿದ್ಯಾ ಪಾರಂಗತರಿರಬಾರದು ಎಂದು ಹೇಳುತ್ತಾನೆ. ಆದರೆ ಏಕಲವ್ಯನನ್ನು ಕೇಳಿದಾಗ, ಅವನು ಹೇಳುತ್ತಾನೆ ನಾನು ಕಾಡಿನ ಮಗನಾಗಿದ್ದರೂ ಕೂಡ ನನ್ನ ಜನಾಂಗವನ್ನು ರಕ್ಷಣೆ ಮಾಡುವುದಕ್ಕೆ, ಈ ಪ್ರಾಣಿ ಸಂಪತ್ತನ್ನು ಪಶು ಪಕ್ಷಿಗಳ ಸಂಪತ್ತನ್ನು ಸಂರಕ್ಷಿಸುವದಕ್ಕೆ ನನಗೆ ಈ ಧನುರ್ವಿದ್ಯೆ ಬೇಕೆಂದು ಹೇಳುತ್ತಾನೆ. ಅಂದರೆ ಈ ವಿದ್ಯೆಯನ್ನು ಕಲಿಯುವ ಉದ್ದೇಶ ಇವರಿಬ್ಬರಲ್ಲಿದ್ದರೂ ಕೂಡ ಒಬ್ಬನಲ್ಲಿ ಸ್ವಾರ್ಥಕ್ಕಾಗಿ ಮತ್ತುನ ಇನ್ನೊಬ್ಬನಲ್ಲಿ ಸಮಾಜಕ್ಕಾಗಿ ವಿದ್ಯೆ ಕಲಿಯುವ ಉದ್ದೇಶವಿರುತ್ತದೆಂಬುದನ್ನು ನಾವು ಮರೆಯಬಾರದು. ಇದೇ ರೀತಿ ನಮ್ಮ ಯುವ ಮಂತ್ರಿಗಳಾದ ಮಾನ್ಯ ಶಂಭುನಾಥ್‌ರವರೂ ಕೂಡ ಕಾಡಿನ ಸಂರಕ್ಷಣೆಯನ್ನು ಜವಾಬ್ದಾರಿಯನ್ನು ಹೊತ್ತಿದ್ದಾರೆ. ಈ ಕಾಡಿನ ಜವಾಬ್ದಾರಿಯನ್ನು ಇವರು ನಿಜವಾಗಿಯೂ ನಿರ್ವಹಿಸುತ್ತಾರೆಂಬ ಆತ್ಮ ವಿಶ್ವಾಸ ನನಗಿದೆ. ಅವರು ಪ್ರಾಮಾಣಿಕ ಮತ್ತು ಕಾಳಜಿ ಇರತಕ್ಕ ಯುವ ಮಂತ್ರಿಗಳು. ಅವರು ಏಕಲವ್ಯನ ರೀತಿಯಲ್ಲಿ ಕಾಡಿನ ಸಂಪತ್ತನ್ನು ಸಂರಕ್ಷಿಸುತ್ತಾರೆ, ಕಾಡಿನ ಸಂಪತ್ತನ್ನು ವೀರಪ್ಪನ್‌ನಿಂದ ಉಳಿಸುತ್ತಾರೆ, ಪ್ರಾಣಿ ಸಂಪತ್ತನ್ನು ಉಳಿಸುವ ಶಕ್ತಿಯನ್ನೂ ಮತ್ತು ಆ ಮನೋಭಾವನೆಯನ್ನೂ ತೋರಿಸುತ್ತಾರೆಂದು ನಾನು ಭಾವಿಸುತ್ತೇನೆ. ಈ ಒಂದು ಅರಣ್ಯ ಇಲಾಖೆಯಲ್ಲಿ ಏನು ತಾರತಮ್ಯವಾಗುತ್ತಿದೆ, ಏನು ಲೋಪದೋಷಗಳು ಇವೆ ಅದನ್ನೆಲ್ಲ ಸರಿಪಡಿಸಿ ನಮ್ಮ ರಾಜ್ಯದ ವನ ಸಂಪತ್ತನ್ನು ಅರಣ್ಯ ಸಂಪತ್ತನ್ನು, ಪ್ರಾಣಿ ಸಂಪತ್ತನ್ನು ಮತ್ತು ಖನಿಜ ಸಂಪತ್ತನು ಸಂರಕ್ಷಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ತೋಟಗಾರಿಕೆ ಇಲಾಖೆಯ ಬಗ್ಗೆ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ನನ್ನ ಮಿತ್ರರು, ಯುವ ಮಂತ್ರಿಗಳಾದ ಆತ್ಮಾನಂದರವರು ಅತ್ಯಂತ ಚಟುವಟಿಕೆ ಮತ್ತು ಸೌಜನ್ಯಯುತರಾದ ಮಂತ್ರಿಗಳು. ಅವರು ಹಣ್ಣು ಮತ್ತು ತರಕಾರಿಯನ್ನು ಬೆಳೆಯತಕ್ಕಂಥ ಒಳ್ಳೆಯ ಇಲಾಖೆಯನ್ನು ಹೊಂದಿರುತ್ತಾರೆ. ನಮ್ಮ ರೈತರು ಏನು ಬೆಳೆಯನ್ನು ಬೆಳೆಯುತ್ತಾರೆ ಹಣ್ಣು ಮತ್ತು ತರಕಾರಿಗಳನ್ನು ಅವರು ಮಾತ್ರ ತಿನ್ನುವುದಿಲ್ಲ. ಪಾಪ ರೈತರು ಒಳ್ಳೆಯ ಬೆಳೆಯನ್ನು ಬೆಳೆದು ಪಟ್ಟಣ ಪ್ರದೇಶಗಳಲ್ಲಿಯ ಜನರಿಗೆ ಒದಗಿಸುತ್ತಾರೆ. ಇಸ್ರೇಲ್‌ನಂತ ಒಂದು ಸಣ್ಣ ರಾಷ್ಟ್ರ ಇಡೀ

ಯೂರೋಪಿನ ಯಾವ ಹಣ್ಣು ಮತ್ತು ತರಕಾರಿಯ ಮಾರ್ಕೆಟ್‌ನಲ್ಲಿ ಏಕಸೌಮ್ಯವನ್ನು ಪಡೆದಿದೆ. ಅದು ಮರಳುಗಾಡು ಆಗಿದ್ದು ಹನಿ ನೀರಾವರಿಯಿಂದ ಮತ್ತು ಕೆಲಸ ಮಾಡುವ ಸಂಕಲ್ಪದ ಮನೋಭಾವನೆ ಕೂಡ ಇದೆ. ಆ ಶಕ್ತಿ ಮನೋಭಾವನೆ ಆ ಜನಗಳಿಗೆ ಇರುವುದರಿಂದ ಇಡೀ ಯೂರೋಪಿನ ಮಾರ್ಕೆಟ್‌ನ್ನು ಹಿಡಿದಿದ್ದಾರೆ. ಸನ್ಮಾನ್ಯ ಆತ್ಮಾನಂದರವರು ನಮ್ಮ ರಾಜ್ಯದಲ್ಲಿ ತೋಟಗಾರಿಕಾ ಸಚಿವರಾಗಿದ್ದಾರೆ. ಇವತ್ತು ನಾನು ಕೇಳುತ್ತೇನೆ, ಆ ರೈತರು ಇನ್ನೊಂದು ಸಾರಿ ಈ ಬೆಳೆಗಳನ್ನು ಬೆಳೆಯಲೇ ಬಾರದು ಎನ್ನುವ ಪರಿಸ್ಥಿತಿಗೆ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಏತಕ್ಕೆಂದರೆ, ಅವನು ಏನು ಬೆಳೆಯನ್ನು ಬೆಳೆಯುತ್ತಾನೆ ಅದಕ್ಕೆ ಮಾರ್ಕೆಟ್ ಇನ್‌ಫ್ರಾಸ್ಟ್ರಕ್ಚರ್ ಇಲ್ಲದಿದ್ದರೆ, ಅವನಿಗೆ ಮಾರಾಟ ಮಾಡುವಂಥ ವ್ಯವಸ್ಥೆ ಇಲ್ಲದಿರುವಾಗ, ಅವನು ಟೊಮ್ಯಾಟೋ ಬೆಳೆಯಬಹುದು, ಬದನೆಕಾಯಿ ಬೆಳೆಯಬಹುದು, ಬೆಂಡೇಕಾಯಿ ಬೆಳೆಯಬಹುದು, ಈ ರೀತಿ ಬೆಳೆದ ಬೆಳೆಯನ್ನು ಅವರು ಕುಯ್ಯಲು ಮಾಡುವುದಕ್ಕೆ ತಗಲುವ ಖರ್ಚು ಸಹ ಬಾರದಿದ್ದಾಗ ಮುಂದಿನ ಸಾರಿ ತರಕಾರಿ ಬೆಳೆಯುವುದಿಲ್ಲ. ಇಂತಹ ಪರಿಸ್ಥಿತಿಯನ್ನು ನಮ್ಮ ಮೈಸೂರು ನಗರದ ಸುತ್ತಮುತ್ತಲು ಕಾಣುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಈ ವ್ಯವಸ್ಥೆಯಿದೆ. ಇವತ್ತಿನ ದಿವಸ ಯಾವ ಉತ್ಪಾದನೆ ಇದೆ, ಕೃಷಿಕ ಏನು ಉತ್ಪಾದನೆ ಮಾಡುತ್ತಾನೆ, ಅದನ್ನು ಮಾರಾಟ ಮಾಡುವಂಥ ಒಂದು ವ್ಯವಸ್ಥೆಯೂ ಕೂಡ ಸಮರ್ಥವಾಗಿ ಇಲ್ಲದೆ ಹೋದಾಗ ಕೃಷಿಕ ನಾಶವಾಗುತ್ತಾನೆ. ಅವನು ಆ ಬದುಕನ್ನು ಬಿಟ್ಟು ಪಟ್ಟಣಗಳಿಗೆ ಬಂದರೆ ಇಲ್ಲೂ ಕೂಡ ಕೆಲಸವಿಲ್ಲದೆ ಅಲೆಯುವಂಥ ಅನಿವಾರ್ಯ ದುರಂತವನ್ನು ನಾವು ಇವತ್ತು ನೋಡುತ್ತಿದ್ದೇವೆ. ಇವತ್ತು ತಾವು ೪-೫ ಮಂತ್ರಿಗಳು ಏನು ಬೇಡಿಕೆಗಳನ್ನು ಇಟ್ಟಿದ್ದೀರಿ ಅವು ಅತ್ಯಂತ ಬಲಿಷ್ಠವಾದ ಇಲಾಖೆಗಳು. ಗ್ರಾಮಾಂತರ ಪ್ರದೇಶದ ಯುವಕರು ಕೆಲಸವಿಲ್ಲದೆ ಇದ್ದಾರೆ. ಇವತ್ತು ಸರ್ಕಾರ ಕೆಲಸ ಕೊಡುವುದನ್ನು ಬ್ಯಾನ್ ಮಾಡಿದೆ. ಕೆಲಸಗಳಿಲ್ಲ. ಆ ಯುವಕರು ಶಾಸಕರ ಹತ್ತಿರ ಬಂದು ಕೆಲಸಗಳನ್ನು ಕೇಳುತ್ತಿರುತ್ತಾರೆ. ಗ್ರಾಮಾಂತರ ಪ್ರದೇಶದ ಯುವಕರು ಬಂದು ನಮಗೆ ಕೆಲಸ ಕೊಡಿ ಎಂದು ಕೇಳುತ್ತಾರೆ. ಸರ್ಕಾರದವರು ಕೊಡುವುದನ್ನು ನಿಲ್ಲಿಸಿರುತ್ತಾರೆ. ಆದ್ದರಿಂದ ಒಂದೆರಡು ಎಕರೆ ಹಿಡುವಳಿಯಲ್ಲಿ ಒಬ್ಬ ಯುವಕ ಬದುಕುವಂಥ, ಅವನು ಜೀವನ ಸಾಗಿಸುವಂಥ ಸ್ವಯಂ ಉದ್ಯೋಗ ಸೃಷ್ಟಿ ಮಾಡುವಂಥ ಪರಿಕಲ್ಪನೆಯನ್ನು ನಾವು ರೂಢಿಸಬೇಕಾಗುತ್ತದೆ. ಇದನ್ನು ಕೃಷಿ ಇಲಾಖೆಯವರು ಮಾಡಬೇಕು, ತೋಟಗಾರಿಕೆ ಇಲಾಖೆಯವರು ಮಾಡಬೇಕು. ಯಾವ ನೆಲ ಸಂಪತ್ತಿದೆ, ಯಾವ ಜಲಸಂಪತ್ತಿದೆ, ಅದನ್ನು ಸಮರ್ಥ ರೀತಿಯಲ್ಲಿ, ದಕ್ಷ ರೀತಿಯಲ್ಲಿ, ಉಪಯೋಗಿಸಿಕೊಂಡಾಗ ನಮ್ಮ ಗ್ರಾಮಾಂತರ ಪ್ರದೇಶದ ಯುವಕರು ಇವತ್ತು ಬೀದಿಪಾಲಾಗುವಂಥ ಪರಿಸ್ಥಿತಿಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಒಂದು ಸಾಧನೆಯನ್ನು ಜಪಾನ್‌ನಂಥ ರಾಷ್ಟ್ರಗಳು, ಇಸ್ರೇಲ್‌ನಂಥ ರಾಷ್ಟ್ರಗಳು ಮಾಡಿವೆ. ಆ ದಿಸೆಯಲ್ಲಿ ನಮ್ಮ ಇಲಾಖೆಗಳು ಕಾರ್ಯನಿರ್ವಹಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಈ ಸಂದರ್ಭದಲ್ಲಿ ಮಾವಿನಂಥ ಯಾವ ಆಧುನಿಕ ವ್ಯವಸಾಯ ಮಾಡುವಲ್ಲಿ ಎಲ್ಲಿ ನೀರು ಸಿಗುವುದಿಲ್ಲ ಅಂಥ ಜಾಗದಲ್ಲಿ ಮವನ್ನು ಬೆಳೆಯುವುದನ್ನು ನಾವು ಆಂಧ್ರ ಪ್ರದೇಶದಲ್ಲಿ ಕಾಣುತ್ತಿದ್ದೇವೆ. ಮಾವಿನ ಸಸಿಗಳನ್ನು ಕೊಡುವಂಥ ಒಂದು ಕೇಂದ್ರ ಕೂಡ ಇಡೀ ರಾಷ್ಟ್ರದಲ್ಲಿ ಆಂಧ್ರದಲ್ಲಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಅದು ಇದೆಯೋ ಇಲ್ಲವೋ ಎನ್ನುವ ಬಗ್ಗೆ ನನ್ನ ಹತ್ತಿರ ಸರಿಯಾದ ಮಾಹಿತಿ ಇಲ್ಲ. ಆದರೆ ನಾನು ಪ್ರಾರ್ಥನೆ ಮಾಡುತ್ತೇನೆ. ಯಾವ ಬಂಜರು ಭೂಮಿಯನ್ನು ಕಾಣುತ್ತೇವೆ, ಅಂಥ ಭೂಮಿಯಲ್ಲಿಯೂ ಕೂಡ ಸೊಗಸಾದ ಮಾವಿನ ಸಸಿಗಳನ್ನು

ಹಾಕುವಂಥ ಒಂದು ವ್ಯವಸ್ಥೆಯನ್ನು ತೋಟಗಾರಿಕೆ ಇಲಾಖೆ ಮಾಡಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅಲ್ಲಿ ಏನು ಒಂದು ಕಾರ್ಯಕ್ರಮವಾಗಿದೆ, ಅದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲೂ ಮಾಡಬೇಕೆಂದು ನಾನು ಮಾನ್ಯ ಆತ್ಮಾನಂದರವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಪಶುಸಂಗೋಪನಾ ಇಲಾಖೆಯ ಬಗ್ಗೆ ಹೇಳುವುದಾದರೆ ನಿತ್ಯೋಪಯೋಗಿ ಪ್ರಾಣಿಗಳಾದ ಹಸು, ಕುರಿ, ಕೋಳಿ, ಆಡು ಮುಂತಾದವುಗಳು ಏನಿವೆ ಮತ್ತು ಅವುಗಳಿಗೆ ಕೊಡತಕ್ಕ ಆಹಾರ ವಸ್ತುಗಳು ಏನಿವೆ ಅದರ ಬಗ್ಗೆ ಹೇಳಬಯಸುತ್ತೇನೆ. ಶ್ರೀ ಬಸವರಾಜ್ ಪಾಟೀಲರ ಮೈಸೂರು ನಗರದ ಹಾಲು ಉತ್ಪಾದಕರ ಸಂಘದ ಅಂದರೆ ಗೋಪಾಲಕರ ಸಂಘದ ಅಧ್ಯಕ್ಷನಾಗಿದ್ದೇನೆ. ಪ್ರತಿ ಸಾರಿ ನಾನು ನೋಡುತ್ತೇವೆ, ತಮ್ಮ ಇಲಾಖೆಯಿಂದ ಒಂದು ಬಾಬಿಗೆ ಕೊಡತಕ್ಕ ಸೌಲಭ್ಯ ಏನೇನು ಸಾಲದು. ಮೈಸೂರು ನಗರ ಪ್ರದೇಶದಲ್ಲಿ ಉದ್ಯೋಗವಿಲ್ಲದ ಯುವಕರು, ಜನ ಪಶುಸಂಗೋಪನೆಯನ್ನು ಒಂದು ಉಪ ಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಅವರ ಬದುಕಿಗೆ ಅದು ಅನಿವಾರ್ಯ. ಪಶುಸಂಗೋಪನೆ ಮಾಡಿ ಹಾಲು ಕರೆದು ವ್ಯಾಪಾರ ಮಾಡಿಕೊಂಡು ಬರುತ್ತಿರತಕ್ಕ ಜನ ಅವರು. ಮೈಸೂರು ನಗರದ ಜನಸಂಖ್ಯೆ ಎಷ್ಟಿದೆ ಅಷ್ಟೇ ಪ್ರಾಣಿಗಳು, ಪಕ್ಷಿಗಳು ಇವೆ. ಈ ಪ್ರಕಾರ ರಾಜ್ಯದ ಎಲ್ಲಾ ನಗರಗಳಲ್ಲೂ ಇವೆ. ಅವುಗಳ ವ್ಯವಸ್ಥೆಯನ್ನು ನಮ್ಮ ಇಲಾಖೆಯವರು ನೋಡಿಕೊಳ್ಳಬೇಕಾಗುತ್ತದ. ಮನುಷ್ಯರನ್ನು ನೋಡುವುದು ಮುಖ್ಯವಲ್ಲ, ನಮ್ಮ ಜೊತೆ ಯಾವ ಪಶುಪಕ್ಷಿಗಳು ಬದುಕುತ್ತವೆ ಅವನ್ನೂ ಸಹ ನೋಡಬೇಕಾಗುತ್ತದೆ. ಈ ಒಂದು ಇಲಾಖೆಯನ್ನು ನಂಬಿಕೊಂಡು ಆ ಒಂದು ಕೃಷಿಯಲ್ಲಿ ಜನರು ಏನು ಬದುಕು ಸಾಗಿಸುತ್ತಿದ್ದಾರೆ ಅವರು ಇವತ್ತು ನಿರಾಳವಾಗಿ ಬದುಕುವುದಕ್ಕೆ ಸಾಧ್ಯವಾಗುವುದಿಲ್ಲ. ಅವರಿಗೆ ಸರಿಯಾಗಿ ಹುಲ್ಲು ದೊರಕುವುದು ಕಷ್ಟವಾಗಿದೆ. ಪಶುಗಳಿಗೆ ಬೇಕಾದ ಹೊಟ್ಟು, ಬೂಸ ಇವತ್ತಿನ ದಿವಸ ನೇರವಾಗಿ ತಮಿಳ್ನಾಡಿನಿಂದ ಬರಬೇಕಾಗಿದೆ. ಕರ್ನಾಟಕ ರಾಜ್ಯದಲ್ಲಿ ಪಶು ಆಹಾರವನ್ನು ಉತ್ಪಾದಿಸುವ ಕಾರ್ಯವನ್ನು ಆಗ್ರೋ ಇಂಡಸ್ಟ್ರೀಸ್‌ನಲ್ಲಿ ಮತ್ತಿತರ ಉದ್ದಿಮೆಗಳಲ್ಲಿ ಮಾಡುತ್ತಾರೆ. ಆದರೆ ಅಲ್ಲಿ ಶೋಷಣೆ ನಡೆಯುತ್ತಿದೆ. ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರುಗಳು ಏನಿರುತ್ತಾರೆ ಅವರು ತಮಿಳ್ನಾಡಿನಿಂದ ನೇರವಾಗಿ ಫುಡ್ ಪ್ರಾಡಕ್ಟ್ ಅನ್ನು ತರುವುದರಿಂದ ಇಲ್ಲಿ ಇಂಡಸ್ಟ್ರೀಸ್ ರನ್ ಆಗುವುದಿಲ್ಲ. ತಮಿಳ್ನಾಡಿನವರಿಗೆ ನಮ್ಮ ವ್ಯಾಪಾರ ವಾಣಿಜ್ಯವನ್ನು ಹತೋಟಿಗೆ ಕೊಡುವಂಥ ವ್ಯವಸ್ಥೆ ಇದೆ. ಕೈಗಾರಿಕೆಯಲ್ಲಿ ವಾಣಿಜ್ಯದಲ್ಲಿ ಕೃಷಿಯಲ್ಲಿ ಎಲ್ಲದರಲ್ಲೂ ನಾವು ಶೋಷಣೆಗೆ ಒಳಗಾಗುವಂಥ ವ್ಯವಸ್ಥೆಯನ್ನು ನೋಡುತ್ತಿದ್ದೇವೆ. ಇದನ್ನು ತಪ್ಪಿಸಬೇಕು. ಇದನ್ನು ತಪ್ಪಿಸಬೇಕಾದರೆ ನಮ್ಮ ದೇಶೀಯ ಉದ್ದಿಮೆಗಳನ್ನು ಬಲಪಡಿಸಬೇಕಾಗುತ್ತದೆ. ಆಗ ಮಾತ್ರ ನಮ್ಮ ಜನರಿಗೆ ನಾವು ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಬರೀ ಸೂಪರ್‌ವಿಷನ್ ಮಾಡುವುದಕ್ಕೆ ಅಲ್ಲ ಇಲಾಖೆ ಇರುವುದು. ಏನೇನು ಸಮಸ್ಯೆಗಳಿವೆ ಅವನ್ನು ವೈಜ್ಞಾನಿಕವಾಗಿ ನೋಡಿ ಅವೆಲ್ಲವನ್ನು ನಾವು ಬಗೆಹರಿಸಬೇಕಾಗುತ್ತದೆ. ಆ ಬಗ್ಗೆ ಸರಿಯಾದ ಮಾಹಿತಿ ಕೊಟ್ಟು ಮಾರ್ಗದರ್ಶನ ಮಾಡಿದಾಗ ಮಾತ್ರ ರೈತನಿಗೆ ಒಳ್ಳೆಯ ರೀತಿಯಲ್ಲಿ ಬದುಕನ್ನು ಮಾಡುವುದಕ್ಕೆ ಸಾಧ್ಯ. ಆಗ ಇಲಾಖೆಯ ಉದ್ದೇಶವೂ ಸಾರ್ಥಕವಾಗುತ್ತದೆ. ಕೊನೆಯದಾಗಿ ಮೀನುಗಾರಿಕೆ. ಅದು ಕೂಡ ಒಂದು ಒಳ್ಳೆಯ ಆಹಾರ ಪದಾರ್ಥ. ನಮ್ಮ ಮಂತ್ರಿಗಳು ಮಲೆನಾಡಿನಿಂದ ಬಂದವರಾದರೂ ಅವರಿಗೆ ಮೀನುಗಾರಿಕೆ ಇಲಾಖೆಯ ಜವಾಬ್ದಾರಿ ಇದೆ. ಅವರಿಗೆ ಕಾಡು, ಪರಿಸರದ ಬಗ್ಗೆ ಹೆಚ್ಚಿಗೆ ತಿಳಿವಳಿಕೆ ಇದ್ದರೂ, ಆ ಕಾಡಿನಿಂದ ಹೊರಗಡೆ ಹೋಗಿ ಸಮುದ್ರ ತೀರ, ಅಲ್ಲಿನ ಮೀನು, ಬಂದರು, ರೇವುಗಳ ಬಗ್ಗೆ

ಗಮನ ಕೊಡಬೇಕಾಗಿದೆ. ಆ ಒಂದು ಇಲಾಖೆಯ ಜವಾಬ್ದಾರಿ ಅವರಿಗೆ ಇರುತ್ತದೆ. ಇಡೀ ರಾಜ್ಯದಲ್ಲಿ ತಾವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಮೀನಿನ ಮರಿಗಳನ್ನು ಉತ್ಪಾದನೆ ಮಾಡುವುದು, ಅವನ್ನು ಬೆಳೆಸುವುದು ಎಲ್ಲ ಇದೆ. ಆದರೂ ಯುವಕರ ಒಂದು ಸ್ವಯಂ ಉದ್ಯೋಗ ದೃಷ್ಟಿಯಿಂದ ತಮಲ್ಲಿ ಪ್ರಾರ್ಥಿಸುತ್ತೇನೆ. ಮೀನುಗಾರಿಕೆ ಇಲಾಖೆಯಲ್ಲಿ ಏನು ಕಾರ್ಯಕ್ರಮ ಇಟ್ಟುಕೊಂಡಿದ್ದೀರಿ, ಅದು ಯುವಕರಿಗೆ ನೇರವಾಗಿ ತಲುಪುವಂತೆ ಅದರಲ್ಲೂ ನಿರುದ್ಯೋಗಿ ಯುವಕರಿಗೆ ತಲುಪುವ ಮೂಲಕ, ಆ ಯೋಜನೆಯ ಫಲವನ್ನು ಪಡೆಯುವ ಮೂಲಕ ಅವರ ಬದುಕನ್ನು ಹಸನುಗೊಳಿಸಬಹುದು. ಆ ಮೂಲಕ ಸಮಾಜಕ್ಕೂ ಉತ್ಪಾದನೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಇವತ್ತು ೫ ಇಲಾಖೆಗಳ ಬೇಡಿಕೆಗಳ ಮೇಲೆ ನಾನು ಮಾತನಾಡುವಾಗ, ಹಲವಾರು ಸಲಹೆಗಳನ್ನು ಕೊಟ್ಟಿರಬಹುದು, ಕೆಲವು ಮಾತುಗಳನ್ನು ಹೇಳಿರಬಹುದು. ತಾವು ಒಳ್ಳೆಯ ಸಮರ್ಥ ನಾಯಕತ್ವ ಇರುವ ಮಂತ್ರಿಗಳಿದ್ದೀರಿ. ನಾನು ಕಡೆಯದಾಗಿ ಪ್ರಾರ್ಥಿಸುತ್ತೇನೆ, ನಮ್ಮ ರಾಜ್ಯದ ಶೇಕಡ ೮೦ ಭಾಗ ಕೃಷಿಕರು, ವ್ಯವಸಾಯಗಾರರು ಗ್ರಾಮಾಂತರ ಪ್ರದೇಶಗಳಲ್ಲಿದ್ದಾರೆ. ಅವರೇ ಈ ದೇಶದ, ಈ ಇಲಾಖೆಗಳ ಬೆನ್ನೆಲುಬು. ಅವರಿಗಾಗಿ ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಏನಿವೆ ಅವನ್ನು ಕಾರ್ಯಗತಗೊಳಿಸಿದರ ಸರ್ಕಾರದ ಉದ್ದೇಶ ಸಾರ್ಥಕವಾಗುತ್ತದೆ. ಆಗ ಜನತೆಗಾಗಿ ಏನು ಒಂದು ಕಾರ್ಯಕ್ರಮಗಳನ್ನು ಸರ್ಕಾರ ಹೇಳಿದೆ ಅದನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗುತ್ತದೆ. ಯಶಸ್ವಿಯಾಗುವ ಮೂಲಕ ಮಹಾಜನರು ನಮಗೆ ಈ ಕೆಲಸಗಳನ್ನು ಮಾಡಬೇಕು. ಸಮಾಜವನ್ನು ಈ ದರಿಯಲ್ಲಿ ಕೊಂಡೊಯ್ಯಬೇಕೆಂದು ಏನು ಆಶೀರ್ವಾದ ಮಾಡಿದ್ದಾರೆ ಅವರ ಆಸೆ, ಅನಿಸಿಕೆ ಆಕಾಂಕ್ಷೆ ಏನಿದೆ ಅದಕ್ಕೆ ತಕ್ಕಂತೆ ಕೆಲಸ ಮಾಡುವುದರಲ್ಲಿ ಸಫಲವಾಗುತ್ತೀರೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ವಿ. ರವೀಂದ್ರನಾಥಬಾಬು (ಕೊಟ್ಟೂರು):- ಮಾನ್ಯ ಅಧ್ಯಕ್ಷರೇ, ನಾನು ಅರಣ್ಯದ ಬಗ್ಗೆ ಕೆಲವು ವಿಷಯಗಳನ್ನು ಮಾತನಾಡುತ್ತೇನೆ. ಮೊದಲನೆಯದು, ನಮ್ಮಲ್ಲಿರುವ ಅರಣ್ಯ ಹಾಳಾಗಿ ಹೋಗುತ್ತಾ ಇರುವುದನ್ನು ನಾವು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡತಕ್ಕದ್ದು. ಅರ್ಬನ್ ಏರಿಯಾಗಳಲ್ಲಿ ನಮಗೆ ಸಾಕಷ್ಟು ಅನುಕೂಲತೆ ಇದೆ. ಗ್ಯಾಸ್, ಎಲೆಕ್ಟ್ರಿಸಿಟಿ ಅಡಿಗೆ ಮಾಡಿಕೊಳ್ಳುವುದಕ್ಕೆ ಮತ್ತು ನೀರು ಕಾಯಿಸಿಕೊಳ್ಳುವುದಕ್ಕೆ ಅನುಕೂಲತೆ ನಾವು ಮಾಡಿಕೊಂಡಿದ್ದೇವೆ. ಅರಣ್ಯ ಪಕ್ಕದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರು ಪ್ರತಿಯೊಂದಕ್ಕೂ ಅರಣ್ಯವನ್ನೇ ಅವಲಂಬಿಸಿದ್ದಾರೆ. ಈ ಸೌಲಭ್ಯಗಳನ್ನು ನಾವು ಅವರಿಗೆ ಮಾಡಿಕೊಡತಕ್ಕ ಯೋಚನೆಯನ್ನೇ ನಾವು ಮಾಡುವುದಿಲ್ಲ. ನಾವು ಅವರಿಗೆ ಅರಣ್ಯಕ್ಕೆ ಹೋಗಬಾರದು ಎಂದು ಅವರನ್ನು ತಡೆಗಟ್ಟುವುದು ಮಾತ್ರ ಮಾಡುತ್ತಿದ್ದೇವೆ. ಫಾರೆಸ್ಟ್ ಗಾರ್ಡ್ಸ್ ಹಾಕುತ್ತೇವೆ. ಅರಣ್ಯಕ್ಕೆ ಹೋಗಬಾರದು ಎಂದು ಹೇಳುತ್ತೇವೆ. ಆದರೂ ಕೂಡ ಅರಣ್ಯದಿಂದ ಕಟ್ಟಿಗೆ ಕಡೆದುಕೊಂಡುಬಂದು ಮಾರಾಟ ಮಾಡುತ್ತಾ ಅದೊಂದು ಕಮರ್ಷಿಯಲ್ ಬಿಸನೆಸ್ ಆಗಿ ಕೆಲವರು ಮಾಡಿಕೊಂಡಿದ್ದಾರೆ. ಕೆಲವರು ಅರಣ್ಯಕ್ಕೆ ಹೋಗಿ ಕಟ್ಟಿಗೆ ತೆಗೆದುಕೊಂಡು ಬರುವುದಕ್ಕೆ ಆಗದಿದ್ದರೆ ಅನುಕೂಲತೆ ಇರುವವರಿಗೆ ನೀವೇ ತೆಗೆದುಕೊಂಡು ಬನ್ನಿ, ನಾವು ತಿಂಗಳಿಗೆ ಇಷ್ಟು ಎಂದು ಕೊಡುತ್ತೇನೆಂದು ಹೇಳಿ ಏರ್ಪಾಡು ಮಾಡಿಕೊಳ್ಳುತ್ತಾರೆ. ಮೊನ್ನೆ ಪೇಪರ್‌ನಲ್ಲಿ ಒಂದು ಸ್ಟೇಟ್‌ಮೆಂಟ್ ಓದಿದೆ. ಮಂತ್ರಿಗಳು ಪ್ರತಿವರ್ಷ ಹಳ್ಳಿಗಳ ಕಡೆ ೩೦ ಸಾವಿರ ಹೆಕ್ಟೇರ್ಸ್‌ನಲ್ಲಿ ಪ್ಲಾಂಟೇಷನ್ ಮಾಡುತ್ತೇವೆಂದು ಹೇಳಿದ್ದಾರೆ.

ಪ್ಲಾಂಟೇಷನ್ ಮಾಡಿದರೂ ಕೂಡ ಅದು ಉಳಿಯುವುದಕ್ಕೆ ಸಾಧ್ಯವಿಲ್ಲ. ರೈತರು ಮತ್ತು ಹಳ್ಳಿಯಲ್ಲಿ ಎಲ್ಲರೂ ಅದನ್ನು ಕಡಿದು ಹಾಕುತ್ತಾರೆ. ಇದಕ್ಕೆ ಫಾಸ್ಟ್ ಗ್ರೋಯಿಂಗ್ ಫ್ಯೂಯಲ್ ಬೆಲ್ಟ್ ಮಾಡಬೇಕಾಗುತ್ತದೆ. ನಮ್ಮಲ್ಲಿ ಗ್ರೀನ್‌ಬೆಲ್ಟ್ ಎಂದು ನಾವು ಏನು ಮಾಡಿಕೊಳ್ಳುತ್ತೇವೆ ಆ ರೀತಿ ಪ್ರತಿ ಗ್ರಾಮದಲ್ಲಿ ಫ್ಯೂಯಲ್ ಬೆಲ್ಟ್ ಮಾಡಬೇಕಾಗುತ್ತದೆ. ಫ್ಯೂಯಲ್ ಯಾವರೀತಿ ಅಂದರೆ ಅದಕ್ಕೆ ಪ್ಲಾನ್ ಮಾಡಿಕೊಳ್ಳಬೇಕಾಗುತ್ತದೆ. ಫಾಸ್ಟ್ ಗ್ರೋಯಿಂಗ್ ಇರಬೇಕು. ಸರ್ವೆ ತೋಪು ಅಂಥದ್ದಾಗಲೀ, ಮತ್ತೆ ಇನ್ನು ಕೆಲವು ಮಾದರಿಯ ಗಿಡಗಳನ್ನು ಹಾಕಿಕೊಂಡು, ಒಂದು ಕಡೆಯಿಂದ ಅದನ್ನು ಕಡಿದುಕೊಂಡು ಬಂದರೆ ಮತ್ತೊಂದು ಕಡೆ ಹಾರ್ವೆಸ್ಟ್‌ಗೆ ರೆಡಿಯಾಗುತ್ತದೆ. ಆ ರೀತಿ ಪ್ಲಾನ್ ಮಾಡಿಕೊಂಡು ಹಳ್ಳಿಗಳು ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಈ ರೀತಿ ಏರ್ಪಾಡು ಮಾಡಿಕೊಂಡರೆ ಅವರಿಗೆ ಬೇಕಾಗಿರುವುದನ್ನು ನಾವು ಕೊಡುವುದಕ್ಕಾಗುತ್ತದೆ. ಮತ್ತು ಅವರು ಫಾರಸ್ಟ್‌ಗೆ ಹೋಗುವುದನ್ನು ತಡೆಗಟ್ಟುವುದಕ್ಕಾಗುತ್ತದೆಂದು ನಾನು ಒಂದು ಸಲಹೆ ಕೊಡುತ್ತಿದ್ದೇನೆ. ಇನ್ನೊಂದು ಡೆವೆಲಪಿಂಗ್ ಫಾರೆಸ್ಟ್. ಇರತಕ್ಕ ಅರಣ್ಯವನ್ನು ಯಾವ ರೀತಿ ಅಭಿವೃದ್ಧಿಪಡಿಸಬೇಕು ಎಂಬುದು ಒಂದು. ಇದನ್ನು ನಾವು ನ್ಯಾಚುರಲ್ ಪ್ರೋಸೆಸ್‌ನಲ್ಲಿ ಡೆವಲಪ್ ಮಾಡುತ್ತಾ ಹೋಗಬೇಕಾಗುತ್ತದೆ. ನಮಗೆ ತಿಳಿದಹಾಗೆ ಆರ್ಟಿಫಿಷಿಯಲ್ ನರ್ಸರಿಗಳನ್ನು ಇಲ್ಲಿ ನಾವು ಬೆಳೆಯುತ್ತೇವೆ. ಆದರೆ ಅಲ್ಲಿ ಭಾವಿಗಳ ಅನುಕೂಲ ಇರುತ್ತದೆ, ರೋಡ್ ಪಕ್ಕ ಇರುತ್ತದೆ, ಮನೆಗಳಿರುತ್ತವೆ. ಆದ್ದರಿಂದ ಅಲ್ಲಿ ಮಾತ್ರ ನೀರು ಹಾಕಿಕೊಂಡು ನರ್ಸರಿಗಳನ್ನು ಚೆನ್ನಾಗಿ ಬೆಳೆಯುತ್ತಾರೆ. ಆದರೆ ಇಂಟೀರಿಯರ್ ಫಾರೆಸ್ಟ್‌ನಲ್ಲಿ ಯಾವಾಗ ನಾವು ಟ್ರಾನ್ಸ್‌ಪ್ಲಾಂಟ್ ಮಾಡುತ್ತೇವೋ ಟ್ರಾನ್ಸ್‌ಪ್ಲಾಂಟ್ ಮಾಡಿದಮೇಲೆ ಫಾಲೋ ಅಪ್ ಇರುವುದಿಲ್ಲ. ಆದ್ದರಿಂದ ಮಾರ್ಟಾಲಿಟಿ ಬಹಳ ಜಾಸ್ತಿ ಇರುತ್ತದೆ. ಇದಕ್ಕೆ ಹೀಗೆ ಮಾಡಬೇಕು? ಉದಾಹರಣೆಗೆ ಹೈ ಆಲ್ಟಿಟ್ಯೂಡ್ಸ್‌ನಲ್ಲಿ ಕೆಲವು ಪೀಕ್ಸ್ ಇದೆ. ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಾಬಾಬುಡನ್‌ಗಿರಿಯಲ್ಲಿ ಮತ್ತು ಕೆಮ್ಮಣ್ಣು ಗುಂಡಿಯಲ್ಲಿ ಇವೆ. ಕೂರ್ಗ್‌ನಲ್ಲಿ ಗಾಳಿಬೀಡ್ ಇದೆ. ಈ ರೀತಿ ಎಷ್ಟೋ ವರ್ಷಗಳಿಂದ ಆ ಗುಡ್ಡಗಳು ಆಲ್‌ಟಿಟ್ಯೂಡ್ಸ್‌ನಲ್ಲಿ ಬೋಳು ಗುಡ್ಡಗಳು ಆಗಿಬಿಟ್ಟಿವೆ. ಹೀಗೆ ಏತಕ್ಕಾದವು ಎಂದು ಇಲಾಖೆಯವರಿಗೂ ಗೊತ್ತಿಲ್ಲ ಎಂದು ಕಾಣುತ್ತದೆ. ಬಹುಶಃ ಆಗಿನ ಕಾಲದಲ್ಲಿ ಬ್ರಿಟಿಷರ ಕಾಲದಲ್ಲಿ ಹೈ ಆಲ್ಟಿಟ್ಯೂಡ್ಸ್‌ನಲ್ಲಿ I don't think even the department knows. May be they were wanting to grow some plantation crops. ಆದರೆ ಅದು ಫೈಲೂರ್ ಆಗಿ ಮತ್ತೆ ಪ್ಲಾಂಟ್ ಮಾಡುವುದಕ್ಕೆ ಅವಕಾಶ ಇಲ್ಲದೆ ಅದು ಹಾಗೇ ಬಿಟ್ಟಿರುವುದರಿಂದ ಫಾರೆಸ್ಟ್ ಏರಿಯಾ ಟಾಪ್ ಸಾಯಿಲ್ ಏನಿದೆ ಅದು ಕೊಚ್ಚಿಹೋಗಿರುತ್ತದೆ. ಟಾಪ್ ಸಾಯಿಲ್ ಇಲ್ಲದೇ ಇದ್ದರೆ ಮಾತ್ರ ನಾವು ಏನೂ ಬೆಳೆಯುವುದಕ್ಕೆ ಬರುವುದಿಲ್ಲ. ನಾವು ಹೊಸದಾಗಿ ಗಿಡ ಹಾಕಿದಾಗ ಎಳೆ ಬೇರು ಆರೇಳು ಅಂಗುಲ ಆಳದಲ್ಲಿ ಟಾಪ್ ಸಾಯಿಲ್‌ನಲ್ಲಿದ್ದರೆ ಚೆನ್ನಾಗಿ ಬೆಳೆಯುತ್ತದೆ. ಆಮೇಲೆ ಮುಂದೆ ಬೇರು ಕೆಳಗೆ ಇಳಿದ ಮೇಲೆ ಚೆನ್ನಾಗಿ ಹೋಗುತ್ತದೆ. ಟಾಪ್ ಸಾಯಿಲ್ ಕೊಚ್ಚಿಹೋದ ಮೇಲೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಬಹುಶಃ ಅದಕ್ಕೆ ಮಾಡಬೇಕಾಗಿರುವ ಪ್ರಯತ್ನ ಏನೆಂದರೆ, ಸುತ್ತ ಟ್ರೆಂಚಸ್ ಹೊಡೆದು ಮಣ್ಣು ಗಿಣ್ಣು ತುಂಬಿ, ಬ್ಯಾಕ್ಟೀರಿಯಾಕಲ್ಚರ್ ಎಂದು ಸಿಗುತ್ತದೆ. ಅದರ ಕೆಲಸ ಏನೆಂದರೆ, absorbs the nutrients from the atmosphere and fixes in the root zone of the plant. They only exist in the soil where the depth is 6-7 feet.

ಈ ರೀತಿ ನಾವು ಅದನ್ನು ಹಾಕಿ ಗಿಡವನ್ನು ಬೆಳೆಸಲು ಪ್ರಯತ್ನ ಮಾಡಿದರೆ ಅವು ಚೆನ್ನಾಗಿ ಬೆಳೆಯುತ್ತವೆ. ಸ್ವಲ್ಪ ವರ್ಷ ಆದಮೇಲೆ ಆ ಕ್ಯಾನೋಪಿ ಡೆವಲಪ್ ಆಗುತ್ತದೆ. ಆ ಇರೋಷನ್ ಇರುವುದಿಲ್ಲ. ಗಿಡಗಳನ್ನು ಚೆನ್ನಾಗಿ ಬೆಳೆಯಬಹುದು. ಈ ರೀತಿ ಫ್‌ರೆಸ್ಟ್ ಡೆವಲಪ್‌ಮೆಂಟ್ ಈಸ್ ಆಸ್ ಎ ನ್ಯಾಚ್ಯರಲ್ ಇದನ್ನು ನಾವು ನೋಡಬೇಕಾಗುತ್ತದೆ. ಇನ್ನೊಂದು ನಾವು ಕೆಲವು ಏಜೆನ್ಸಿಗಳನ್ನು ಹೊಂದಿದ್ದೇವೆ ಗಿಡಗಳನ್ನು ಹಾಕುವುದಕ್ಕೆ ನಾವು ಕೂಲಿ ಕೊಟ್ಟು ಮಾಡಿಸುತ್ತೇವೆ, ಏಜೆನ್ಸಿಗಳ ಮುಖಾಂತರ ಮಾಡಿಸುತ್ತೇವೆ. ಈ ರೀತಿ ಮಾಡಿಸುತ್ತೇವೆ. ಈ ರೀತಿ ಮಾಡುವಾಗ ಸಾಧಾರಣ ಮನುಷ್ಯ ದಟ್ಟ ಕಾಡಿನ ಒಳಕ್ಕೆ ಹೋಗುವುದಿಲ್ಲ. ಗಿಡಗಳನ್ನು ಹಾಕಿ ಬಂದಿದ್ದೇವೆಂದು ರಿಪೋರ್ಟ್ ಕೊಡುತ್ತಾರೆ. ಆಮೇಲೆ ಅಲ್ಲಿ ಗಿಡಗಳು ಬೆಳೆದವೋ ಇಲ್ಲವೋ ಎಂದು ನೋಡುವುದಕ್ಕೆ ಹೋಗುವುದಿಲ್ಲ. ಇವತ್ತು ನ್ಯಾಚುರಲ್ ಏಜೆನ್ಸಿಗಳು ಕೆಲವು ಕೆಲಸ ಮಾಡುತ್ತಿವೆ. It is nothing but birds. Proprotionately we have to develop bird sanctuaries. ನಾವು ಎಲೆಲ್ಲಿ ಸಾಧ್ಯವೋ ಅದನ್ನು ನೋಡಿಕೊಂಡು ಅದಷ್ಟು ಪಕ್ಷಿಧಾಮಗಳನ್ನು ಅಭಿವೃದ್ಧಿ ಮಾಡಬೇಕಾಗುತ್ತದೆ. ಇವನ್ನು ಡೆವಲಪ್ ಮಾಡಬೇಕಾದರೆ ಹಣ್ಣುಬಿಡುವ ಮರಗಳನ್ನು ಹೆಚ್ಚು ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕಾಗುತ್ತದೆ. ಬರ್ಡ್ಸ್ ಸ್ಯಾಂಚ್ಯುಯರಿಗಳಲ್ಲಿ ಬರ್ಡ್ಸ್ ಜಾಸ್ತಿಯಾದಾಗ ಏನು ಹಣ್ಣನ್ನು ತಿನ್ನುತ್ತವೆ ಮತ್ತೆ ಎಲ್ಲಾದರೂ ಹೋಗಿ ಡ್ರಾಪಿಂಗ್ಸ್ ಹಾಕಿದಾಗ, ಫರ್ಟಿಲೈಸರ್ ಸಮೇತ ಡ್ರಾಪಿಂಗ್ಸ್ ಬಿದ್ದಾಗ ಅಲ್ಲಿ ಶೇಕಡ ೯೯.೯ರವರೆಗೆ ತೊಂದರೆಯಿಲ್ಲದೆ ಜರ್ಮಿನೇಟ್ ಆಗುತ್ತದೆ. ನಾವು ಪ್ಲಾಂಟೇಷನ್ಸ್ ಎಲ್ಲೇ ಹಾಕಲಿ ಈ ಮೂಲಕ ಮಾಡುವುದರಿಂದ ಫಾರೆಸ್ಟ್ ಚೆನ್ನಾಗಿ ಡೆವಲಪ್ ಆಗುತ್ತದೆ. ಈ ರೀತಿ ಇಂಟೀರಿಯರ್ ಜಂಗಲ್ಸ್‌ನಲ್ಲೂ ಕೂಡ ಚೆನ್ನಾಗಿ ಗಿಡಗಳನ್ನು ಬೆಳೆಸಬಹುದು. ಇವತ್ತು ನಾವು ಗೇಮ್ ಸ್ಯಾಂಚ್ಯುಯರೀಸ್‌ನಲ್ಲಿ ಟೀಕ್, ಸಿಲ್ವರ್ ಓಕ್, ನೀಲಗಿರಿ ಮರಗಳನ್ನು ಬೆಳೆಯುತ್ತೇವೆ. ಗೇಮ್ಸ್ ಸ್ಯಾಂಚುಯರೀಸ್‌ನಲ್ಲಿ ಇಂತಹದ್ದು ಬೆಳೆಯುವುದರಿಂದ ಹರ್ಬಿವರಸ್‌ಗೆ ಯಾವ ರೀತಿಯ ಅನುಕೂಲ ಆಗುವುದಿಲ್ಲ. ಅದಕ್ಕೆ ಇವತ್ತು ಫ್ರೂಟ್ ಬಿಯೆರಿಂಗ್ ಟ್ರೀಸ್ ಹಾಕಬೇಕಾಗುತ್ತದೆ. ಫಾಢರ್ ಕೊಡುವ ಪ್ಲಾಂಟ್ಸ್ ಹಾಕಬೇಕು. ಹಾಗೆ ಮಾಡಿದರೆ ಅನಿಮಲ್ಸ್ ಕಾಡಿನಲ್ಲಿ ಇರುತ್ತವೆ. ಅದನ್ನು ಅಲ್ಲಿ ಪ್ರೊವ್ಯಾಡ್ ಮಾಡದೇ ಹೋದರೆ ಅವು ಕಬ್ಬಿನ ಗದ್ದೆಗೆ, ಜೋಳದ ತೆನೆ ತಿನ್ನುವುದಕ್ಕೆ ಬಂದು ಬೆಳೆ ಡ್ಯಾಮೇಜ್ ಆಗುತ್ತದೆ. ಇವುಗಳನ್ನು ನಾವು ಅಲ್ಲೇ ಇಟ್ಟು ಕೊಳ್ಳಬೇಕಾದರೆ ಅವುಗಳಿಗೆ ಆಹಾರ ಸಿಗುವ ಗಿಡಗಳನ್ನೂ ಜಾಸ್ತಿ ಬೆಳೆಸಬೇಕು. ಇವತ್ತು ಕಮರ್ಷಿಯಲ್ ಕ್ರಾಪ್ ಆದಂತಹ ಸಿಲ್ವರ್ ಓಕ್, ಟೀಕ್ ಪ್ಲಾಂಟೇಷನ್‌ನ್ನು ನಾವು ಸೆಪರೇಟಾಗಿ ಬಯಲು ಜಾಗದಲ್ಲೂ ಬೆಳೆಯಬಹುದು. ಹಾಗೆ ಮಾಡಿ ಫಾರೆಸ್ಟ್‌ಗೂ ರೆವಿನ್ಯೂ ಬರತಕ್ಕದ್ದನ್ನು ಮಾಡಬಹುದು. ಇವತ್ತು ಟೀಕ್ ಪ್ಲಾಂಟ್ ಕೊಯಿಲಿಗೆ ಬರಬೇಕಾದರೆ ೬೦ ವರ್ಷಗಳು ಬೇಕಾಗುತ್ತದೆಂದು ಹೇಳುತ್ತಾರೆ. ನಾನು ಕೆಲವು ಪುಸ್ತಕಗಳಲ್ಲಿ ಓದಿರುವ ಪ್ರಕಾರ ಇವು ೩೫ ವರ್ಷಗಳಿಗೇ ಮೆಚ್ಯೂರಿಟಿಗೆ ಬರುತ್ತದೆ. ನಾವು ಇವುಗಳ ಬಗ್ಗೆ ಸ್ಪೆಷಲ್ ಇಂಟರೆಸ್ಟ್ ಕೊಟ್ಟು ಮಾಡಿದರೆ ಈ ರೀತಿ ಮಾಡಬಹುದು ಎಂದು ಇದೆ. ಇದರಿಂದ ಗ್ಯೆಮ್ ಗ್ಯಾಪ್ ಕಡಿಮೆ ಮಾಡಿದಂತಾಗುತ್ತದೆ, ಮತ್ತು ಅರಣ್ಯದಿಂದ ಹೆಚ್ಚು ಆದಾಯ ಕೂಡಾ ಸರ್ಕಾರಕ್ಕೆ ಬರುವ ಹಾಗಲ ಆಗುತ್ತದೆ. ಈ ರೀತಿ ನೋಡಿಕೊಂಡು ಹೋಗಬೇಕೆಂದು ನಾನು ಸಲಹೆ ಮಾಡುತ್ತೇನೆ. ಇನ್ನು ಪ್ರಾಜೆಕ್ಟ್ ಟೈಗರ್ ಎಂದು ಏನು ಮಾಡುತ್ತಿದ್ದೇವೆ ಅದರ ಬಗ್ಗೆ ನೋಡಬೇಕು. ಆದಷ್ಟು ಇಂತಹ ಕಡೆ ಪ್ರಾಣಿಗಳನ್ನು ಸ್ಯಾಂಚ್ಯುಯರಿಗಳಲ್ಲಿ ನ್ಯಾಚುರಲ್‌ಆಗಿ ಹಾಗೆಯೇ ಬಿಡಬೇಕಾಗುತ್ತದೆ.

ಆದೇನೋ ಹುಲಿಗಳಿಗೆ ರೇಡಿಯೋ ಕಾಲರ್ ಹಾಕಿ ಅದರ ಚಲನವಲನ ಕಂಡು ಹಿಡಿಯುತ್ತಾರೆಂದು ನಾನು ಪತ್ರಿಕೆಯಲ್ಲಿ ಓದಿದೆ. ಹಾಗೆ ರೇಡಿಯೋ ಕಾಲರ್ ಹಾಕಿ ಅದನ್ನು ಫಾಲೋ ಮಾಡುವುದು ತುಂಬಾ ಅನ್‌ನ್ಯಾಚ್ಯುರಲ್. ನಾಯಿಗೆ ಬೆಲ್ಟ್ ಹಾಕಿ, ಚೈನ್ ಹಾಕಿ ಕಟ್ಟಿದ ಹಾಗೆ ಅದು ಆಗುತ್ತದೆ. ಅಂತಹದ್ದು ಯಾವುದೂ ಇಲ್ಲದೇಯಾವ ರೀತಿ ಡಿಸ್‌ಟರ್ಬೆನ್ಸ್ ಇಲ್ಲದೇ ಆರ್ಟಿಫಿಶಿಯಲ್ಲಾಗಿ ಏನೂ ತೊಡಿಸದೇ ಅಲ್ಲಿ ಅವನ್ನು ಓಡಾಡುವುದಕ್ಕೆ ಬೆಳೆಯಲಿಕ್ಕೆ ಬಿಡಬೇಕು. ಆಗ ಅದು ಪ್ರಾಜೆಕ್ಟ್ ಟೈಗರ್ ಎನಿಸಿಕೊಳ್ಳುತ್ತದೆ. ಯಾರು ಏನೇ ಹೇಳಿದರೂ ಕೂಡ ಬೆಲ್ಟ್ ಹಾಕಿ, ರೇಡಿಯೋ ಕಾಲರ್ ಹಾಕುವುದು ತುಂಬಾ ಕೆಟ್ಟದ್ದು, ಅದು ಪ್ರಕೃತಿಗೆ ವಿರುದ್ಧವಾದುದು ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ಇದುವರೆಗೂ ಅವರು ಏನು ಕಂಡುಹಿಡಿದಿದ್ದಾರೆ ಎಂದರೆ, ಅದು ಎಲ್ಲಿ ಹೋಗುತ್ತದೆ ಏನು ಮಾಡುತ್ತದೆ ಅಕಸ್ಮಾತ್ ತಪ್ಪಿಸಿಕೊಂಡು ಹಳ್ಳಿಗಳ ಕಡೆಗೆ ಹೋಗುತ್ತದೆಯೇ ಎಂದು ಅಲ್ಲ, ಅದೆಲ್ಲ ಏನೂ ಇಲ್ಲ. ಅದು ಎಲ್ಲಿ ಹೋಗಿ ಸತ್ತಿದೆ ಎಂಬುದನ್ನು ಮಾತ್ರ ಇದುವರೆಗೂ ಕಂಡು ಹಿಡಿಯುತ್ತಿದ್ದೇವೆ. ಆದುದರಿಂದ ಪ್ರಾಜೆಕ್ಟ್ ಟೈಗರ್‌ನಲ್ಲಿ ನ್ಯಾಚುರಲ್ ಆಗಿ ಬಿಟ್ಟರೆ ಅದಕ್ಕೆ ಅಷ್ಟು ಒಳ್ಳೆಯದು. ಟೈಗರ್ ಪ್ರಾಜೆಕ್ಟ್‌ನಲ್ಲಿ ಪಾಪ್ಯುಲೇಷನ್ ಇನ್‌ಕ್ರೀಸ್ ಆಗಬೇಕಾದರೆ ಆರ್ಟಿಫಿಷಿಯಲ್ ಆಗಿ ಹಾಕಿ ಮಾಡುವುದರಿಂದ ಏನೂ ನಡೆಯುವುದಿಲ್ಲ. ಮತ್ತೆ ಅದಕ್ಕೆ ರಿಸ್ಟ್ರಿಕ್ಟ್ ಮಾಡಿದ ಹಾಗೆ ಆಗುತ್ತದೆ. ಆದಷ್ಟು ನೀವು ಅದನ್ನು ಅವಾಯ್ಡ್ ಮಾಡುವುದು ಒಳ್ಳೆಯದು. ಮತ್ತೆ ಎಲಿಫೆಂಟ್ಸ್‌ದು ಏನಿ ಮಾಡುತ್ತಾರಂತೆ ಅದು ಮಾಡುವುದು ತಪ್ಪು ಎಂದು ಅನಿಸುತ್ತದೆ, ಅದು ಮಾಡಬಾರದು ಎಂದು ನಾನು ಹೇಳುತ್ತೇನೆ. ಫಾರೆಸ್ಟ್‌ನಲ್ಲಿ ವೈಲ್ಡ್‌ಲೈಫ್ ಮತ್ತು ಫಾರೆಸ್ಟ್ ರೀಸರ್ಚ್ ಸ್ಟೇಶನ್ ಇದೆಯೆಂದು ಗೊತ್ತಿಲ್ಲ. ಇದು ಬಹುಶಃ ಫಾರೆಸ್ಟ್‌ಗೆ ಇರಬಹುದು, ವೈಲ್ಡ್‌ಲೈಫ್‌ಗೆ ಇರುವುದು ಗೊತ್ತಿಲ್ಲ. ೧೯೯೧-೨ನೇ ಸಾಲಿನ ವಾರ್ಷಿಕ ವರದಿಯನ್ನು ಈಗ ಕೊಟ್ಟಿದ್ದಾರೆ ನಾವು ಅದನ್ನು ಕಂಪ್ಲೀಟ್ ಆಗಿ ನೋಡುವುದಕ್ಕೆ ಆಗಿಲ್ಲ. ರೀಸರ್ಚ್‌ನಲ್ಲಿ ವೈಲ್ಡ್ ಲೈಫ್ ಅವು ಯಾವರೀತಿ ಇರುತ್ತವೆ, ಯಾವ್ಯಾವ ಅನಿಮಲ್ಸ್ ಯಾವ್ಯಾವ ತರಹ ಇರುತ್ತವೆ, ಅವುಗಳ ಕ್ಯಾರೆಕ್ಟರ್ ಏನು ಎನ್ನುವುದನ್ನು ಪ್ರತಿಯೊಂದನ್ನು ರೀಸರ್ಚ್ ಮಾಡುವುದೊಂದೇ ಅಲ್ಲ, ರೀಸರ್ಚ್ ಮಾಡುವುದರಿಂದ ಅದನ್ನು ಯಾವ ರೀತಿ ಹೆಚ್ಚು ಮಾಡಬಹುದು, ಯಾವರೀತಿ ಫಾರೆಸ್ಟನ್ನು ಪ್ರೊಟೆಕ್ಟ್ ಮಾಡಬಹುದು ಎನ್ನುವುದು ಕೂಡ ಅದರಲ್ಲಿ ಬರುತ್ತದೆ. ಏಕೆಂದರೆ, ನಾನು ಮೊನ್ನೆ ನೋಡಿದ ಹಾಗೆ ಕಿನ್ಯಾ ಇನ್ ಸೌತ್ ಆಫ್ರಿಕಾದಲ್ಲಿ ಅವರ ರೀಸರ್ಚ್‌ನಲ್ಲಿ they have found out that elephants can transmit ultra waves upto 1.5 to 2 Kms. ಅದು ನಮಗೆ ಗೊತ್ತೇ ಇರಲ್ಲಿ. ಅದು ಯಾರಿಗೂ ಗೊತ್ತಿದ್ದು ಇಲ್ಲ. ಅದರೆ ಅದು ರೀಸರ್ಚ್‌ನಲ್ಲಿ ಬಂದಿದೆ. Any danger located on the planes they can transmit. ಈ ರೀತಿ ಮೆಸೇಜ್ ಕಳುಹಿಸುವುದಕ್ಕೆ ಅದಕ್ಕೆ ಯೋಗ್ಯತೆಯಿದೆಯೆಂದು ಹೇಳುತ್ತೇವೆ. ಈಗ ಅದನ್ನು ನೋಡಿದ ಮೇಲೆ ನಂಬಲಿಕ್ಕೆ ಆಗುತ್ತದೋ ಇಲ್ಲವೋ ಎನ್ನುವ ಅನುಮಾನ ಬರುತ್ತದೆ. ಆದರೆ ನಾವು ಹಳ್ಳಿಗಳಲ್ಲಿ ಒಂದು ಎತ್ತಿನ ಗಾಡಿಯ ರಸ್ತೆಯಲ್ಲಿ ಹೋಗುತ್ತಿರುವಾಗ ಎಲ್ಲಿಯಾದರೂ ಹಳ್ಳ ಬಂದಾಗ ಅದರಲ್ಲಿ ನೀರಿದ್ದರೆ, ಅದರೊಳಗೆ ಗುಂಡಿ ಇದ್ದರೆ ಎತ್ತುಗಳು ಮುಂದೆ ಹೋಗುವುದಿಲ್ಲ. ಅದು ನಮಗೂ ಕಾಣುವುದಿಲ್ಲ, ಅದಕ್ಕೂ ಕಾಣುವುದಿಲ್ಲ. It has got that sense. ಅವು ಹೋಗುವುದಿಲ್ಲ. ಇದು ಹೇಗೆ ಆಗಬಹುದು? ಅದೇ ರೀತಿ ಇದು ಕೂಡ ಆಗಲಿಕ್ಕೆ ಅವಕಾಶ ಉಂಟು. ಆದ್ದರಿಂದ ರೀಸರ್ಚ್ ಸ್ಟೇಶನ್ ಇಂತಹುದು ಸ್ವಲ್ಪ ಹೆಚ್ಚಿನ ಮಟ್ಟದಲ್ಲಿ ಮಾಡಬೇಕೆಂದು

ಹೇಳುತ್ತೇನೆ. ಆಮೇಲೆ ವಾರ್ಷಿಕ ವರದಿಯಲ್ಲಿ ನೋಡಿದಾಗ, ಟೀ ಪ್ಲಾಂಟೇಷನ್‌ಗಾಗಿ ಕೊಡಗಿನಲ್ಲಿ ಸುಮಾರು ೧ ಕೋಟಿ ರೂಪಾಯಿ ಖರ್ಚುಮಾಡಿ ಹಣಕಾಸಿನಲ್ಲಿ ಏನೋ ಸ್ವಲ್ಪ ಕಡಿಮೆ ಆಯಿತು ಎಂದು ರಿಪೋರ್ಟ್‌ನಲ್ಲಿ ಬಂತು. ಆ ರೀತಿ ಬಂದಿದ್ದರಿಂದ ಅದನ್ನು ಹಾಗೆಯೇ ನಿಲ್ಲಿಸಿದ್ದಾರೆಂದು ನನಗೆ ಸುದ್ದಿ ಬಂದಿದೆ. ಸುಮಾರು ಒಂದು ಒಂದೂವರೆ ಕೋಟಿ ರೂಪಾಯಿಗಳನ್ನು ಇನ್‌ಫ್ರಾಸ್ಟ್ರಕ್ಚರ್‌ಗೆ ಖರ್ಚುಮಾಡಿ ಹಾಗೆಯೇ ನಿಲ್ಲಿಸುವುದಕ್ಕಿಂತ ಅದನ್ನು ಪ್ರಾರಂಭಮಾಡಿ ಅದರಲ್ಲಿ ಆದಾಯ ಬರುವ ಹಾಗೆ ಮಾಡುವುದು ಬಹಳ ಒಳ್ಳೆಯದು. ಟೀ ಪ್ಲಾಂಟೇಶನ್ ಮಾಡಿ ನಿಲ್ಲಿಸಿರುವುದರಿಂದ ಇಟ್ ಈಸ್ ಅಬೌಟ್ ೮೦೦ ಹೆಕ್ಟೇರ್ಸ್ ಎಂದು ಕಾಣುತ್ತದೆ. ನಾಗರಹೊಳೆಯ ಮುರ್ಕಲ್ಲು ಹತ್ತಿರ ೧ ಕೋಟಿ ೭೫ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಫಾರೆಸ್ಟ್ ಗೆಸ್ಟ್‌ಹೌಸ್ ಮಾಡುತ್ತಿದ್ದಾರೆ. ಅಲ್ಲಿ ಹೋಗಿ ಇರತಕ್ಕವರು ನಾವು ನಮಗಾಗಲಿ ಅಫಿಷಿಯಲ್ಸ್‌ಗಾಗಿ ಅದು ಏಕೆ ಬೇಕು? ಫಾರೆಸ್ಟನಲ್ಲಿ ನ್ಯಾಚುರಲ್ ಆಗಿ ಯಾವ ರೀತಿ ಇರಬೇಕೋ ಆ ರೀತಿ ಇರೋಣ. ಒಂದು ಮುಕ್ಕಾಲು ಕೋಟಿ ರೂಪಾಯಿ ಏತಕ್ಕೆ ಖರ್ಚು ಮಾಡಬೇಕು? ಅದು ಯಾರಿಗೆ ಬೇಕು? ಹಟ್ಸ್ ಮಾಡಿ ಅದಕ್ಕೆ ಪ್ರೊಟೆಕ್ಷನ್ ಕೊಟ್ಟಿದ್ದರೆ ಸಾಕಾಗುತಿತ್ತು. ಫಾರೆಸ್ಟ್‌ನಲ್ಲಿ ಪ್ರಾಣಿಗಳನ್ನು ನೋಡುವುದಕ್ಕೆ ರೋಟ್ಸ್ ಮಾಡುವುದನ್ನು ಏನು ಬೇಕೋ ಅದನ್ನು ಮಾಡಲಿ, ವೆಹಿಕಲ್ಸ್ ಇಡೋಣ. ಇಟ್ ಶುಡ್‌ಬಿ ರಿಸ್ಟ್ರಿಕ್ಟೆಡ್. ಇನ್ನು ಅಗ್ರಿಕಲ್ಚರ್ ಬಗ್ಗೆ ಎರಡು ವಿಷಯಗಳನ್ನು ಮಾತನಾಡುತ್ತೇನೆ. ನಾನು ಗ್ರೌಂಡ್ ವಾಟರ್ ಬಗ್ಗೆ ಹೇಳುವುದಾದರೆ, ನನ್ನ ಕೂಡ್ಲಗಿ ತಾಲ್ಲೂಕಿನಲ್ಲಿ, ನನ್ನ ಕ್ಷೇತ್ರದಲ್ಲಿ for example, we have about 10,000 borewells. The depth might have gone upto 150 to 200 feet ಹೋಗಿರಬಹುದು. ಈಗಾಗಲೇ ಆ ಬೋರ್‌ವೆಲ್‌ಗಳು ಡ್ರೈ ಆಗುತ್ತಾ ಬರುತ್ತಿವೆ. ಇದಕ್ಕೆ ಕಾರಣವೇನು? ಜಿಯಾಲಿಜಿಸ್ಟ್ ತನ್ನ ಕೆಲಸದಲ್ಲಿ ಫೇಲ್ ಆಗಿದ್ದಾನೋ ಅಥವಾ ಬೋರ್ ಹಾಕಿದ ಮೇಲೆ ಜಿಯಾಲಿಜಿಸ್ಟ್ ತನ್ನ ಕೆಲಸದಲ್ಲಿ ಫೇಲ್ ಆಗಿದ್ದಾನೋ ಅಥವಾ ಬೋರ್ ಹಾಕುವವರು ೨೦೦ ಅಡಿ ಹಾಕಬೇಕೆಂದು ಇದ್ದರೆ ೧೦೦-೧೫೦ ಅಡಿಗೆ ಹಾಕಿ ಅಷ್ಟೇ ಹೋಗಿರುವುದು ಅಷ್ಟೇ ನೀರು ಎಂದು ಹೇಳಿ ಅವರೇನಾದರೂ ಮೋಸ ಮಾಡುತ್ತಿದ್ದಾರೋ? ಈ ಕೇಸಿಂಗ್ ಪೈಪ್ ಇಷ್ಟು ಹಾಕಬೇಕೆಂದು ಸ್ಪೆಸಿಫಿಕೇಶನ್ ಕೊಟ್ಟಿದ್ದರೂ ಅವರು ೨೦ ಅಡಿ ಬಿಟ್ಟು ೧೦ ಅಡಿ ಹಾಕಿ ಒಳಗೆ ಲೂಸ್ ಸಾಯಿಲ್ ಇದ್ದು ಕೊಲ್ಯಾಪ್ಸ್ ಆಗಿ ಬಾವಿ ಮುಚ್ಚಿಕೊಂಡು ಹೋಗಿದ್ದರೆ ಅದೂ ಫೇಲ್ಡ್ ವೆಲ್ ಆಗುತ್ತದೆ. ಒಟ್ಟಿನಲ್ಲಿ ತೊಂದರೆಗೊಳಗಾಗುವವರು ರೈತರು. ಆದರೆ ಇದು ಹೇಗೆ ಆಯಿತು? ಇವೆಲ್ಲ ಕಾರಣಗಳಿವೆ. ಅಥವಾ ರಿಯಲ್ ಆಗಿ ಗ್ರೌಂಡ್ ವಾಟರ್ ಒಳಗೆ ಹೋಗುತ್ತಿದೆಯೇ? ರಿಚಾರ್ಜಿಂಗ್ ಆಯಿತೆ ಇಲ್ಲವೇ? ನಾವೇನು ೧೦ ಸಾವಿರ ಬೋರ್‌ವೆಲ್‌ಗಳಲ್ಲಿ ಡಿಸ್ಚಾರ್ಜ್ ಮಾಡುತ್ತಿದ್ದೇವೆ. ಅಷ್ಟು ರಿಚಾರ್ಜ್ ಇದೆಯೇ ಇಲ್ಲವೇ? ಇದನ್ನು ನಾವು ಪರೀಕ್ಷೆ ಮಾಡಬೇಕೆಂದರೂ ಏನು ಮಾಡಬೇಕು? ಇನ್ನು ಹತ್ತು ವರ್ಷ ಹೋದಮೇಲೆ ೧೫೦-೨೦೦ ಅಡಿಯಲ್ಲಿ ನೀರು ಸಿಗದೇ ಹೋದರೆ we have to go to a depth of another 200 ft.. All the ten thousand borewells plus new borewells will have to be sunk again. What will be the investment? ದುಡ್ಡು ಎಷ್ಟು ಆಗುತ್ತದೆ? ಸುಮಾರು ೨೦-೨೫ ಸಾವಿರ ಬೋರ್‌ವೆಲ್‌ಗಳನ್ನು ಮತ್ತೆ ಹತ್ತು ವರ್ಷಕ್ಕೆ ಹಾಕಬೇಕಾದರೆ ಹೊಸದಾಗಿಯೇ ಹಾಕಬೇಕಾಗುತ್ತದೆ. ಅದೇ ಬೋರ್‌ವೆಲ್‌ಗಳನ್ನು ಡೀಪನ್ ಮಾಡುವುದಕ್ಕೆ ಬರುವುದಿಲ್ಲ. ಆಗ ಏನು ವೆಚ್ಚವಾಗುತ್ತದೆ/

ಆವಾಗಲಾದರೂ ನಮಗೆ ಭೂಮಿಯಲ್ಲಿ ವಾಟರ್ ರಿಚಾರ್ಜ್ ಇರುತ್ತದೆಯೇ? ರೀಚಾರ್ಜ್ ಇರ್ಲದೇ ಹೋದರ ಮುಂದಕ್ಕೆ ನಮ್ಮ ಗತಿ ಏನು? ಇದರ ಬಗ್ಗೆ ನಾನು ಒಂದು ಪ್ರಶ್ನೆ ಹಾಕಿದ್ದಕ್ಕೆ ಅದನ್ನು ಅನ್‌ಸ್ಟಾರ್ಡ್ ಮಾಡಿ ಉತ್ತರ ಬಂದಿದೆ. ನಮ್ಮಲ್ಲಿ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಎಂದು ಎರಡು ಸೆಂಟ್ರಲ್ ಪ್ರಾಜೆಕ್ಟ್ ಇವೆ. ಈ ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ನಮಗೆ ಕೊಡುತ್ತಿದ್ದಾರೆ. Dryland and Wasteland, it is a boon to the farmers, I can say, provided it is very well implemented. ನಮ್ಮ ತಾಲ್ಲೂಕಿನಲ್ಲಿ ಎಲ್ಲ ಡ್ರೈ ಇದೆ. ಅಂತಹ ಕಡೆ ಸುಮಾರು ೧೦ ರಿಂದ ೧೨ ಕೋಟಿ ರೂಪಾಯಿಗಳನ್ನು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಸಲುವಾಗಿ ಖರ್ಚು ಮಾಡಿದ್ದಾರೆ. ನಮ್ಮಲ್ಲಿ ಓಪನ್ ವೆಲ್ಸ್ ಡ್ರೈ ಆಗಿ, ಬೋರ್‌ವೆಲ್ಸ್ ಡ್ರೈ ಆಗಿ ಎಲ್ಲ ಹೋಗಿಬಿಟ್ಟಿವೆ, ಏನೇನೂ ಇಲ್ಲ. ಅಲ್ಲಿ ಗ್ರೌಂಡ್ ವಾಟರ್ ಇದ್ದಿಲ್ಲ. ಅಂಥಾದ್ದು ಅಲ್ಲಿ ಡಿ. ಎಲ್. ಡಿ. ಬಿ. ಪ್ರಾಜೆಕ್ಟನ್ನು ಇಂಪ್ಲಿಮೆಂಟ್ ಮಾಡಿದಮೇಲೆ I have seen it personally and I have gone to that place. ಅಲ್ಲಿ ಫಾರಸ್ಟ್ ಎಲ್ಲಾ ಡಿಪಾರ್ಟ್‌ಮೆಂಟ್ಸ್ ಮಾಡುತ್ತಾರೆ. ಅಲ್ಲಿ ಅವರು ಪ್ಲಗ್ಗಿಂಗ್ ಮಾಡುತ್ತಾರೆ. ಪರ್ಕ್ಯೂಲೇಶನ್ ಟ್ಯಾಂಕ್ಸ್ ಎಂದು ಮಾಡುತ್ತಾರೆ. ಇದೆಲ್ಲ ಮಾಡುವುದರಿಂದ ಬಂದ ಮಳೆ ನೀರಾಗಲಿ, ಅಥವಾ ನಾವು ಏನು ಗ್ರೌಂಡ್ ವಾಟರ್‌ನಿಂದ ಹೊರಗೆ ಸರ್ಫೇಸ್‌ಗೆ ಲಿಫ್ಟ್ ಮಾಡುತ್ತೇವೆ. It is not washed straight away. ಅದು ಅಲ್ಲೆ ತಡೆಗಟ್ಟುತ್ತದೆ. ತಡೆಗಟ್ಟಿ ನೀರು ತುಂಬಿ ಅದು ಸೋಕ್ ಆಗುತ್ತದೆ. ಮತ್ತೆ ಅದಕ್ಕೆ ಓವರ್‌ಫ್ಲೋ ಇಲ್ಲ. ಅಷ್ಟೂಪ್ರಾಜೆಕ್ಟ್ ಏರಿಯಾ ತನುವಾಗುತ್ತದೆ. ತನುವಾದ ಮೇಲೆ ಆಟೋಮ್ಯಾಟಿಕ್ ಆಗಿ ಯಾವ್ಯಾವ ಒಪನ್‌ವೆಲ್‌ಗಳು ಒಣಗಿ ಹೋಗಿದ್ದುವು, ಇವತ್ತು ಅಲ್ಲಲ್ಲಿ ಬೇಕಾದಷ್ಟು ನೀರು ಬಂದಿದೆ. ಅಲ್ಲಿ ರೈತರು ಸಾಕಷ್ಟು ಬೆಳೆದುಕೊಳ್ಳುತ್ತಿದ್ದಾರೆ. ಅಲ್ಲಿ ಗ್ರೌಂಡ್‌ವಾಟರ್ ಒಳ ಅಡಿಗೆ ಬಂದಿದೆ, ಒಳ ಅಡಿಗೇ ನೀರು ಸಿಗುತ್ತದೆ. where it had gone to nearly about 60-70 ft. depth. ಅಷ್ಟು ಚೆನ್ನಾಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಅವಕಾಶ ಇದೆ. ಹಾಗೆ ಮಾಡಿದರೆ ಮಾತ್ರ it is a boon to the farmers ಎಂದು ನಾನು ಹೇಳಿದೆ. ಈಗ ವೇಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ನಲ್ಲಿ ಸೆಂಟ್ರಲ್ ಗವರ್ನಮೆಂಟ್‌ನವರು ನನ್ನ ಕ್ಷೇತ್ರದಲ್ಲಿ ಒಂದು ಜಾಗದಲ್ಲಿ ಸರ್ವೆಮಾಡಿ ೮ ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟನ್ನು ಕೊಟ್ಟಿದ್ದಾರೆ. ಈ ೮ ಕೋಟಿ ಪ್ರಾಜೆಕ್ಟ್‌ನಲ್ಲಿ ಅವರು ಹತ್ತು ಲಕ್ಷ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಅಲ್ಲಿ ಫಾರಸ್ಟ್ ಮತ್ತು ಹಾರ್ಟಿಕಲ್ಚರ್ ಎರಡನ್ನು ಚೆನ್ನಾಗಿ ಇಂಪ್ಲಿಮೆಂಟ್ ಮಾಡಬೇಕು. ಇದೇ ಅಲ್ಲಿ ಕೆಲಸ ಮಾಡತಕ್ಕಂಥ ಡಿಪಾರ್ಟ್‌ಮೆಂಟ್‌ಗಳು. ಹಾರ್ಟಿಕಲ್ಚರ್‌ನವರು ಇಂತಹ ಏರಿಯಾದಲ್ಲಿ ಚೆನ್ನಾಗಿ ಗಿಡಗಳನ್ನು, ಹಣ್ಣಿನ ಗಿಡಗಳನ್ನು ಬೆಳೆಸಿದರೆ ಬರೇ ಪಟ್ಟಣಗಳಿಗೆ ಕಳಿಸುವುದಷ್ಟೇ ಅಲ್ಲ ಸುತ್ತಮುತ್ತಲಿನ ಹಳ್ಳಿಗಳಿಗೆ ಕೂಡ ಅವರು ಹಣ್ಣುಗಳನ್ನು ಕಳಿಹಿಸಬಹುದು. ಈ ರೀತಿ ಮಾಡಲಿಕ್ಕೆ ಒಳ್ಳೆಯ ಅವಕಾಶ ಇದೆ. ಇದು ಬಹಳ ಒಳ್ಳೆಯ ಪ್ರಾಜೆಕ್ಟ್. ಈ ವೇಸ್ಟ್‌ಲ್ಯಾಂಡ್ ಡೆವಲಪ್‌ಮೆಂಟ್‌ಗೆ ಇದುವರೆಗೆ ಬೋರ್ಡ್‌ನ್ನು ಕಾನ್ಸ್ಟಿಟ್ಯೂಟ್ ಮಾಡಿಲ್ಲ. ಎಲ್ಲಿಂದಲೋ ದುಡ್ಡು ಬರುತ್ತದೆ, ಯಾರೋ ಅದನ್ನು ತರುತ್ತಾರೆ. ಏನೋ ಸ್ವಲ್ಪ ಕೆಲಸ ಆಗುತ್ತದೆ, ನಂತರ ಸಡನ್ ಆಗಿ ಕೆಲಸ ನಿಂತು ಹೋಗುತ್ತದೆ. ನನ್ನ ಕ್ಷೇತ್ರದಲ್ಲಿ ೮ ಕೋಟಿ ಸ್ಯಾಂಕ್ಷನ್ ಆಗಿದ್ದು, ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನುಳಿದ ದುಡ್ಡು ಅಲ್ಲಿ ಬಂದಿಲ್ಲ. ಕಾರಣ ಏನೆಂದು ಯಾರನ್ನು ಕೇಳಬೇಕೆಂದು ನಮಗೆ ಗೊತ್ತಾಗುತ್ತಿಲ್ಲ. ಒಂದು ವೇಳೆ ಈ ಪ್ರಾಜೆಕ್ಟ್

ಇಂಪ್ಲಿಮೆಂಟ್ ಆಗಿದ್ದರೆ, ನಮಗೆ ಇನ್ನು ಐದಾರು ವರ್ಷಗಳಲ್ಲಿ ಅಲ್ಲಿ ಗ್ರೌಂಡ್ ವಾಟರ್ ಲೆವಲ್ ರೈಸ್ ಆದರೆ entire constituency is covered where we have no water to drink. Now water level is risen and we are happy with it. ಆದರೆ ಪ್ರಾಪರ್ ಇಂಪ್ಲಿಮೆಂಟೇಷನ್ ಇಲ್ಲ. ಆ ಡಿ. ಎಲ್. ಡಿ. ಬಿ. ಯದು ಚೆನ್ನಾಗಿ ಆಯಿತು. ಆದರೆ ವೇಸ್ಟ್ ಲ್ಯಾಂಡ್‌ದ್ದು ವೇಸ್ಟ್ ಆಗಿ ಹೋಯಿತು. ಪ್ರಾಜೆಕ್ಟ್ ಸರಿಯಾಗಿ ಇಂಪ್ಲಿಮೆಂಟೇಷನ್ ಆಗುತ್ತಿಲ್ಲ. ಈಗ ಮಾನ್ಯ ಕೃಷಿಸಚಿವರು ಇಲ್ಲ. ವೇಸ್ಟ್ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡನ್ನು ಕಾನಿಟಟ್ಯೂಟ್ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನನಗೆನ್ನಿಸುತ್ತದೆ.

ಇಲ್ಲಿ ಮಾನ್ಯ ಮಂತ್ರಿಗಳಾದ ಮೊಯ್ಲಿಯವರು ಇದ್ದಾರೆ. ಅವರಾದರೂ ಅವರಿಗೆ ತಿಳಿಸಲಿ. waste land, it is worth of crores of rupees. crores of rupees. ಪ್ರಾಜೆಕ್ಟ್ ಅದು. ಅದು ವೇಸ್ಟ್ ಆಗಿ ಹೋಗಬಾರದು. ಆ ಬೋರ್ಡ್ ಕಾನ್‌ಸ್ಟಿಟ್ಯೂಟ್ ಮಾಡಿದರೆ ಒಳ್ಳೆಯ ರೀತಿಯಿಂದ ಇಂಪ್ಲಿಮೆಂಟೇಷನ್ ಮಾಡಬಹುದು ಎಂದು ಹೇಳಿ ಈ ಸಂದರ್ಭದಲ್ಲಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ):- ಸನ್ಮಾನ್ಯ ಅಧ್ಯಕ್ಷರೇ, ಇಂದಿನ ಬೇಡಿಕೆಗಳಲ್ಲಿ ಫಿಶ್ ಲ್ಯಾಂಡ್‌ನವನಾದ ನಾನು ಕೇವಲ ಫಿಶರೀಸ್ ಡಿಪಾರ್ಟ್‌ಮೆಂಟ್ ವಿಚಾರದಲ್ಲಿ ಮಾತ್ರ ಮಾತನಾಡುವಂತಹ ಒಂದು ಯೋಚನೆಯನ್ನು ಮಾಡಿಕೊಂಡಿದ್ದೇನೆ. ಮಾನ್ಯ ಮಂತ್ರಿವರ್ಯರು ಮುಂದಿನ ವರ್ಷಕ್ಕೆ ನಮ್ಮ ಸರ್ಕಾರದ ವತಿಯಿಂದ ಬಹಳಷ್ಟು ಹೆಚ್ಚಿನ ಹಣವನ್ನು ಕೊಡುವುದರ ಜೊತೆಗೆ ನಮ್ಮ ಕರ್ನಾಟಕ ರಾಜ್ಯದ ೩೦೦ ಕಿಲೋಮೀಟರ್ ಉದ್ದದ ಮಡುಕಡಲ ನಡುವಿನಲ್ಲಿ ವಾಸಿಸುವ ಮೀನುಗಳ ಹಿಡಿತವನ್ನು ಬಲಪಡಿಸಿ ಕರ್ನಾಟಕದಾದ್ಯಂತ ಅಲ್ಲ, ಜಗತ್ತಿನ ಮೂಲೆ ಮೂಲೆಗಳಿಗೆ ಮೀನನ್ನು ಕಳುಹಿಸುವಂತಹ ಒಂದು ಸಂದರ್ಭಕ್ಕೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಈ ವರ್ಷ ಕೇವಲ ೮ ಕೋಟಿ ರೂಪಾಯಿಗಳ ಯೋಜನೆ ಇರುವಂತಹ ಮೀನುಗಾರಿಕಾ ಇಲಾಖೆ ಮುಂದಿನ ವರ್ಷದಲ್ಲಿ ೨೪ ಕೋಟಿ ರೂಪಾಯಿಗಳ ಯೋಜನೆಯನ್ನು ರೂಪಿಸಿಕೊಂಡು ಹಲವಾರು ತರಹದ ಕೆಲಸಗಳನ್ನು ಈ ಮೀನುಗಾರಿಕೆಯಲ್ಲಿ ಅಳವಡಿಸಿಕೊಂಡು ಸಮುದ್ರದ ಕರಾವಳಿ ಪ್ರದೇಶ ಮಾತ್ರವಲ್ಲದೆ ನಡಿನೀರಿನ ಅದರೊಟ್ಟಿಗೆ ಕೆರೆ ಕುಂಟೆಗಳ ಮೀನು ತಳಿಗಳ ಉದ್ಧಾರ ಅದರೊಟ್ಟಿಗೆ ಮೀನು ಹಿಡಿದು ತಿನ್ನುವ ಜನಗಳಿಗೆ ಹೆಚ್ಚಿನ ಆಹಾರವನ್ನು ಕೊಡುವಂತಹ ಭಾಗ್ಯ ಮಾತ್ರವಲ್ಲದೆ, ಜಗತ್ತಿಗೆ ನಮ್ಮ ಯಾವ ಮೀನು ಉಂಟು ಅವುಗಳ ರಫ್ತು ಮಾಡಿ ಡಾಲರ್ ಸಂಪಾದಿಸುವಂತಹ ಒಂದು ಒಳ್ಳೆಯ ಯೋಜನೆಯನ್ನು ನಮ್ಮ ಈ ಬಜೆಟ್‌ನಲ್ಲಿ ಕಲ್ಪಿಸಿಕೊಟ್ಟಿದ್ದಾರೆ. ಆದ್ದರಿಂದ ಇಂತಹ ಸುಂದರ ಬಜೆಟ್‌ನ್ನು ಕೊಟ್ಟಂತಹ ಮಾನ್ಯ ಮಂತ್ರಿವರ್ಯರನ್ನು ನಾನು ಅಭಿನಂದಿಸುತ್ತೇನೆ. ನಮ್ಮ ಆಸೆ ಇತ್ತು. ಫಿಶ್‌ಲ್ಯಾಂಡ್‌ನವರೇ ಫಿಶರೀಸ್ ಮಿನಿಸ್ಟರ್ ಆದರೆ ಅವರಿಗೆ ಫಿಷ್‌ಗಳ ವಿಷಯ ಹೆಚ್ಚು ಗೊತ್ತಿದ್ದ ಕಾರಣ ನಮ್ಮ ಕೆಲಸ ಸುಲಭವಾಗುತ್ತದೆ ಎಂದು ಆಸೆ ಇತ್ತು. ಬಹುಶಃ ಕಾಫಿ ಲ್ಯಾಂಡ್‌ಸವರಿಗೆ ಫಿಶರೀಸ್ ಡಿಪಾರ್ಟ್‌ಮೆಂಟ್ ಕೊಟ್ಟು ಅವರು ಎತ್ತರದ ಗುಡ್ಡದಲ್ಲಿ ನೀಲಿ ಸಮುದ್ರ ನೋಡಿ ಗಾಳ ಹಾಕಿ ಮೀನು ಹಿಡಿಯುವಂತಹ ಒಂದು ಒಳ್ಳೆಯ ಸಂದರ್ಭ ಅವರಿಗೆ ಬಂದಿದೆ. ಅದಕ್ಕೆ ನಾನು ಸಂತೋಷ ಪಡುತ್ತೇನೆ. ಶ್ರೀ ಬೆಳ್ಳಿಯಪ್ಪನವರು

ಮೀನುಗಾರಿಕಾ ಸಚಿವರಾದ ಮೇಲೆ ಹಲವಾರು ಬಾರಿ ಪಡುಕಡಲ ತಡಿಯಲ್ಲಿರುವ ಮೀನುಗಾರರ ಸಮಸ್ಯೆಗಳನ್ನು ತಿಳಿದು ಶಾಸಕರ ಅನುಭವವನ್ನು ಪಡೆದು ಇಂದು ಮೀನುಗಾರಿಕೆಯಲ್ಲಿ ಒಂದು ಹೆಜ್ಜೆ ಇಟ್ಟಿದ್ದಾರೆ. ಆದ್ದರಿಂದ ಕಾಫಿ ಲ್ಯಾಂಡ್‌ನವರಾದ ಅವರನ್ನು ಫಿಶ್ ಲ್ಯಾಂಡ್‌ನವನಾದ ನಾನು ಅಭಿನಂದಿಸಲು ಸಂತೋಷಪಡುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ೧೯೯೧-೯೨ರಲ್ಲಿ ನಮ್ಮ ಮೀನುಗಾರಿಕೆಗೆ ೮ ಕೋಟಿ ರೂಪಾಯಿಗಳು ಇತ್ತು. ೧೯೯೨-೯೩ರಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆಗೆ ೨೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದ್ದಾರೆ. ನಮ್ಮ ಕರ್ನಾಟಕದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದಲ್ಲಿ ಕಡಲಿನ ಒಡಿಯಲ್ಲಿ ಹಿಂದಿನ ಕಾಲದಲ್ಲಿ ಯಾವ ರಂಪಣಿ ಬಲೆ, ಪಟ್ಟೆ ಬಲೆ, ಮಾರಿ ಬಲೆ ಅಥವಾ ಬೀಸಣ ಬಲೆ ಎಂಬ ಈ ಬಲೆಗಳನ್ನು ಉಪಯೋಗ ಮಾಡಿ ಸಾಮೂಹಿಕವಾದ ಒಂದು ಪದ್ಧತಿಯನ್ನು ಅಳವಡಿಸಿಕೊಂಡು ಮೀನುಗಾರಿಕೆ ಕಸುಬನ್ನು ಮಾಡುತ್ತಿರುವ ಮೀನುಗಾರರ ಧೈರ್ಯ, ಸಾಹಸ, ಒಗ್ಗಟ್ಟು ಮಾತ್ರವಲ್ಲದೆ ಅವರ ಶ್ರಮ ನಾವೆಲ್ಲಾ ಬಲ್ಲೆವು. ಕಾಲ ಚಕ್ರದ ಬದಲಾವಣೆಯೊಂದಿಗೆ ಯಾಂತ್ರಿಕತೆಯ ಯುಗ ಆರಂಭವಾದಾಗ ಮಾರಿ ಬಲೆ, ಪಟ್ಟೆ ಬಲೆ, ರಂಪಣಿ ಬಲೆಗಳು ಇಂದು ಮೂಲೆ ಗುಂಪಾದವು. ಅದರೊಟ್ಟಿಗೆ ಯಾಂತ್ರೀಕೃತವಾದಂಥ ಪರ್ಸಿಷನ್ ಬೋಟ್ಸ್, ಬಿಡು ಬಲೆಗಳು, ಸಿಗಡಿ ಡಾಲರ್ಸ್, ನಾಡ ದೋಣಿಗಳು ಇಂದು ಬಹಳಷ್ಟು ಪ್ರಗತಿಯನ್ನು ಹೊಂದಿವೆ. ಆ ಫಿಗರ್ಸ್ ನೋಡಿದಾಗ ಸಂತೋಷವಾಗುತ್ತದೆ. ಸುಮಾರು ೯೫೫ ಪರ್ಸಿಯನ್ ಬೋಟ್ಸ್‌ಗಳು, ೮೮೦ ಬಿಡಬಲೆಗಳು, ೧೯೬೪ ಸಿಗಡಿ ಟ್ರ್ಯಾಲರ್‌ಗಳು, ೧೨ ಸಾವಿರ ನಾಡದೋಣಿಗಳು ನಮ್ಮ ೩೦೦ ಕಿಲೋಮೀಟರ್ ಪಡುಕಡಲಿನಲ್ಲಿ ಆಳ ಸಮುದ್ರದಲ್ಲಿ ಮೀನುಗಳನ್ನು ಹಿಡಿದು ನನಗೆ ಕರ್ನಾಟಕ ರಾಜ್ಯಕ್ಕೆ ಕೊಟ್ಟು ಕರ್ನಾಟಕದ ಸಂಪತ್ತನು ಬಲಪಡಿಸಲಿಕ್ಕೆ ಇಂದು ಕಾರಣೀಭೂತವಾಗಿದೆ. ಆದರೆ ಯಾಂತ್ರೀಕೃತ ಮೀನುಗಾರಿಕೆ ಪ್ರಾರಂಭವಾಗಿ ಇಂದು ಸರಕಾರದ ಲೆಕ್ಕದ ಪ್ರಕಾರ ನಮ್ಮ ಮೀನುಗಾರಿಕೆಯಲ್ಲಿ ಶೇಕಡ ೮೫ ರಷ್ಟು ಯಾಂತ್ರೀಕೃತಗೊಂಡಿದೆ ಎಂಬುದು ಸಂತಸದ ಸಂಗತಿಯಾದರೂ, ಪಡು ಕರಾವಳಿಯ ಜನಜೀವನವನ್ನು ನೋಡುವಾಗ, ಈ ಯಾಂತ್ರೀಕೃತ ಮೀನುಗಾರಿಕೆಯಿಂದ ನನ್ನ ಜಿಲ್ಲೆಯಲ್ಲಿ ನೋಡುವುದಾದರೆ, ಹಿಂದಿನ ಕಾಲದಲ್ಲಿ ಕಡಲಿನ ಉದ್ದಕ್ಕೂ ಬದಿಯಲ್ಲಿ ಹೋಗುವಾಗ ಎಲ್ಲರೂ ಮೀನು ಹಿಡಿದು, ಮೀನು ಒಣಗಿಸಿ ಮೀನನ್ನು ಮಾರುತ್ತಿದ್ದ ಸುಂದರ ದೃಶ್ಯವನ್ನು ಕಾಣುತ್ತಿದ್ದೆವು. ಇಂದು ಯಾಂತ್ರೀಕೃತ ಜಗತ್ತಿನಲ್ಲಿ ಸಿಟಿಗಳು ಹೆಚ್ಚಾಗಿ ಬೆಳೆದು ಹಳ್ಳಿಗಳು ಹೇಗೆ ಮೂಲೆಪಾಲಾಗುತ್ತಿದೆಯೋ ಅದೇ ಪ್ರಕಾರ ನನ್ನ ಜಿಲ್ಲೆಯಲ್ಲಿ ಸಮುದ್ರದ ಉದ್ದಕ್ಕೂ ನೋಡುವಾಗ, ಮಂಗಳೂರು ಬಂದರು ಮತ್ತು ಮಲ್ಪೆ ಬಂದರುಗಳಲ್ಲಿ ಪರ್ಸಿಯನ್ ಬೋಟುಗಳು, ಟ್ರಾಲಿಗಳು ಇದ್ದು ಕೆಲವೇ ಜನ ಮೀನುಗಾರರು ಅಲ್ಲಿ ಇದ್ದಾರೆ. ಇದೊಂದು ಅತ್ಯಂತ ದುರ್ದೈವದ ಸಂಗತಿ, ಉಳಿದ ಕಡೆಗಳಲ್ಲಿ ನೋಡುವಾಗ ಮೀನುಗಾರರ ಜೀವನ ಬಹಳಷ್ಟು ಕಷ್ಟವಾಗಿದೆ. ಏತಕ್ಕೆಂದರೆ ಈ ಜನಗಳು ಮಂಗಳೂರು, ಮಲ್ಪೆ ಅಥವಾ ಗಂಗೊಳ್ಳಿಯಲ್ಲಿ ಹೋಗಿ ಮೀನನ್ನು ಹಿಡಿಯಬೇಕಾಗುತ್ತದೆ. ಅಲ್ಲೇ ಮೀನನ್ನು ಮಾರಾಟ ಮಾಡಬೇಕಾಗುತ್ತದೆ. ಹೀಗಾಗಿ ಇಲ್ಲಿ ದುಡಿಯುತ್ತಿರುವ ಮಹಿಳೆಯರಿಗೆ ಕೆಲಸ ಇಲ್ಲ. ಮೀನನ್ನು ಹಿಡಿದು ಒಣಗಿಸುವುದಕ್ಕೆ ಯಾವ ಮೊದಲಿನ ಕೆಲಸಗಾರರು ಇದ್ದರು ಅವರು ಇಂದು ಕೆಲಸವನ್ನು ಕಳೆದು ಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ನಾನು ಮಾನ್ಯ ಮಂತ್ರಿವರ್ಯರಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ. ನಮ್ಮ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಣ್ಣ ಸಣ್ಣ ನದಿಗಳು ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಅರಬ್ಬಿ ಸಮುದ್ರವನ್ನು ಸೇರುತ್ತದೆ,

ಉದ್ದಕ್ಕೂ ನಮ್ಮಲ್ಲಿ ಅಳಿವೆಗಳು ಇವೆ. ಉದಾಹರಣೆಗೆ ಹೇಳುವುದಾದರೆ, ನನ್ನ ಕಾನ್‌ಸ್ಟಿಟ್ಯುಯನ್ಸಿಗೆ ಸೇರಿದ ಮುಲ್ಕಿಯಲ್ಲಿ ಹಿಂದೆ ಸುಮಾರು ೨೫ ರಂಪಣ ಬಲೆಗಳು ಇದ್ದವು, ನೂರಾರು ಮಾರಿಯಬಲೆ ದೋಣಿಗಳು ಇದ್ದವು, ಬೀಸಣ ಬಲೆಗಳು ಲೆಕ್ಕ ಇಲ್ಲದಷ್ಟು ಇದ್ದವು. ಅದು ದೊಡ್ಡ ಮೀನುಗಾರಿಕೆ ಕೇಂದ್ರವಾಗಿತ್ತು. ಆದರೆ ಈಗ ಅಣೆಕಟ್ಟು ಕಟ್ಟಿದ ಕಾರಣ ನೀರು ಹರಿಯುವಿಕೆ ಕಡಿಮೆಯಾಗಿ ಮುಲ್ಕಿ ಅಳಿವೆಯ ಆಳ ಕಡಿಮೆ ಆಯಿತು. ಪರ್ಸಿಯನ್ ಬೋಟ್‌ಗಳು ಅಲ್ಲಿ ಒಳಗೆ ಬರುವುದಿಲ. ಹೀಗಾಗಿ ಮೀನುಗಾರರು ಆ ಊರನ್ನು ಬಿಟ್ಟು ಮಂಗಳೂರು ಅಥವಾ ಉಡುಪಿ ಕಡೆ ಹೋಗಿ ಮೀನು ಹಿಡಿಯುವ ಪರಿಸ್ಥಿತಿ ಈಗ ಬಂದೊದಗಿದೆ. ಸ್ವಲ್ಪ ಖರ್ಚು ಮಾಡಿದರೆ, ಮುಲ್ಕಿ ಅಳಿವೆಯನ್ನು ಆಳ ಮಾಡಬಹುದು, ಗಂಗೊಳ್ಳಿ ಅಳಿವೆಯನ್ನು ಆಳಮಾಡಬಹುದು, ಇನ್ನೂ ಉದ್ದಕ್ಕೂ ಸಮುದ್ರ ಕರಾವಳಿಯಲ್ಲಿರುವಂತಹ ಅನೇಕ ಬಂದರುಗಳನ್ನು ಆಳಪಡಿಸಿದರೆ ಮೀನುಗಾರರು ತಮ್ಮ ಮನೆಯಲ್ಲಿಯೇ ಇದ್ದು ಕಡಿಮೆ ಖರ್ಚು ಮಾಡಿ ಮೀನನ್ನು ಹಿಡಿದು ಇನ್ನೂ ಹೆಚ್ಚಿನ ಶ್ರಮದಲ್ಲಿ ದುಡಿಯುವುದಕ್ಕೆ ಸಾಧ್ಯ ಉಂಟು. ಒಂದು ಡ್ರೆಡ್ಜರ್ ತಂದು ಮಲ್ಕಿ ಅಳಿವೆಯನ್ನು ಆಳ ಮಾಡಿದರೆ ಸ್ವಾಭಾವಿಕವಾಗಿ ೩೦ ಕಿಲೋಮೀಟರ್ ದೂರ ಇರುವಂತ ಮಂಗಳೂರಿಗೋ, ೩೦ ಕಿಲೋಮೀಟರ್ ದೂರ ಇರುವಂತಹ ಮಲ್ಪೆಗೋ ನಮ್ಮ ಜನಗಳು ಹೋಗುವ ಬದಲು ಮುಲ್ಕಿಯಲ್ಲಿ ನೆಲೆ ನಿಂತು ಹೆಚ್ಚು ಮೀನನ್ನು ಹಿಡಿಯುವುದಕ್ಕೆ ಸಾಧ್ಯವಾಗುತ್ತಿತ್ತು. ದುರಾದೃಷ್ಟವಶಾತ್ ನಮ್ಮ ಕರ್ನಾಟಕ ಸರಕಾರದಲ್ಲಿ ಡ್ರೆಡ್ಜರ್‌ನ್ನು ಈ ತನಕ ತರಿಸುವುದಕ್ಕೆ ಆಗಲಿಲ್ಲ ಎಂದು ಹೇಳುವುದು ಬೇಸರದ ಸಂಗತಿ. ಮಂಗಳೂರು ಅಳಿವೆಯಲ್ಲಿ ಪ್ರತಿವರ್ಷ ಹಲವಾರು ಮರಣಗಳನ್ನು ಈ ಮೀನುಗಾರರಿಗೆ ಆಗುವಂತಹ ಸಂಗತಿಯನ್ನು ತಾವು ಬಲ್ಲವರಾಗಿದ್ದೀರಿ. ಮುಖ್ಯವಾಗಿ ಅಳಿವೆಯ ತೊಂದರೆ ಈ ಮೀನುಗಾರರ ಜೀವನದ ಸಂಚಿಗೆ ಕಾರಣವಾಗಿರುತ್ತದೆ. ಒಂದು ವೇಳೆ ಡ್ರೆಡ್ಜರ್ ಬಂದಿದ್ದರೆ ಇಂತಹ ಅಪಾಯಕಾರಿಯಾದ ಸನ್ನಿವೇಶ ಖಂಡಿತವಾಗಿ ಬರುವುದಕ್ಕೆ ಸಾಧ್ಯ ಇರುತ್ತಿರಲಿಲ್ಲ ಎಂದು ಹೇಳುತ್ತೇನೆ. ನಾನು ಮಾನ್ಯ ಮಂತ್ರಿವರ್ಯರಲ್ಲಿ ಹೇಳುವುದು ಇಷ್ಟೇ. ನೀವು ಸುಮಾರು ೨೪ ಕೋಟಿ ರೂಪಾಯಿಗಳನ್ನು ಮೀನುಗಾರಿಕೆಗೆ ಇಟ್ಟು ಹಲವಾರು ಯೋಜನೆಗಳನ್ನು ಮಾಡಿರುತ್ತೀರಿ. ಏತಕ್ಕೆ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಡ್ರೆಡ್ಜರ್ ತಂದು ನಮ್ಮ ಸುಂದರವಾದ ಪಡುಕಡಲ ತಡಿಯಲ್ಲಿರುವ ಅನೇಕ ಬಂದರುಗಳನ್ನು ಆಳಪಡಿಸಿ ಮೀನುಗಾರರ ಜೀವನವನ್ನು ಯಾವ ಕೇಂದ್ರೀಕೃತವಾದ ಮಲ್ಪೆ ಮತ್ತು ಮಂಗಳೂರುಗಳಿಂದ ವಿಕೇಂದ್ರೀಕರಿಸಿ ಹಳ್ಳಿಹಳ್ಳಿಯ ಜೀವನವನ್ನು ಸೊಂಪಾಗಿ ಸುಂದರವಾಗಿ ಮಾಡುವಂತಹ ಒಂದು ಒಳ್ಳೆಯ ಕೆಲಸವನ್ನು ಏತಕ್ಕೆ ಮಾಡಬಾರದು. ನೀವು ಒಂದು ಡ್ರೆಡ್ಜರ್ ತಂದು ಈ ಅಳಿವೆಗಳನ್ನು ಆಳ ಮಾಡಿದರೆ ಅಂದರೆ ನಮ್ಮ ಮಂಗಳೂರಿನಿಂದ ಉತ್ತರ ಕಾರವಾರದ ತನಕ ೧೫ ಅಳಿವೆಗಳನ್ನು ಆಳಪಡಿಸಿ ಮೀನುಗಾರರಿಗೆ ಬೇಕಾದ ಪ್ರೋತ್ಸಾಹ ಕೊಡಬೇಕು. ನನ್ನ ಊರಿನ ಅನೇಕ ಮೊಗವೀರರು ಮೀನುಗಾರರು ಏನು ಮಾಡುತ್ತಿದ್ದಾರೆಂದರೆ ಮಲ್ಪೆಗೆ ಹೋಗಿ ಅಲ್ಲಿ ಖರ್ಚು ಮಾಡಿ, ಇದ್ದ ಸಂಪಾದನೆಯನ್ನು ಹಾಳು ಮಾಡುವುದಕ್ಕಿಂತ, ಈ ಊರನ್ನೇ ಬಿಟ್ಟು ದುಬಾಯಿಗೆ ಅಥವಾ ಬೇರೆ ದೇಶಕ್ಕೆ ಅಥವಾ ಬೊಂಬಾಯಿಗೆ ಹೋದರೆ ಸ್ವಲ್ಪ ಸುಖ ಸಿಗುತ್ತದೆ, ಸಂಪಾದನೆಯಾಗುತ್ತದೆ ಎಂದು ಮೀನುಗಾರಿಕೆಯ ಕಡೆಗೆ ಸ್ವಲ್ಪ ಅಲಕ್ಷ್ಯ ಭಾವನೆ ತೋರುವಂತಹ ಸಂದರ್ಭ ಬಂದಿದೆ. ಇದಕ್ಕೆ ಒಂದೇ ಒಂದು ಮೂಲ ಸೂತ್ರ ಏನೆಂದರೆ ಇರುವಂತಹ ಅಳಿವೆಗಳನ್ನು ಆಳ ಮಾಡಿ ಅಲ್ಲಲ್ಲಿ ಜೆಟ್ಟಿಗಳನ್ನು ನಿರ್ಮಿಸಿ, ಈ ಮೀನುಗಾರರ ಜೀವನವನ್ನು ಸುಖಮಯ ಮಾಡುವುದಕ್ಕೆ ನೀವು ಪ್ರಯತ್ನಮಾಡಿ. ಇದನ್ನು ನೀವು

ಮಾಡುತ್ತೀರಿ ಎಂದು ನಾನು ನಂಬುತ್ತೇನೆ. ಕೊಡಗಿನ ಜನಗಳು ಕಡುಗಲಿಗಳು ಎಂದು ಹೇಳುತ್ತಾರೆ ತಾವು ಪ್ರಯತ್ನ ಪಟ್ಟು ಕೇಂದ್ರ ಸರ್ಕಾರದಿಂದಾಗಲಿ ಅಥವಾ ರಾಜ್ಯ ಸರ್ಕಾರದ ಮಂತ್ರಿಮಂಡಲದಲ್ಲಾಗಲಿ ಒತ್ತಡ ತಂದು ಈ ಡ್ರೆಡ್ಜರ್‌ನ್ನು ಮಿನುಗಾರರಿಗೆ ಕೊಟ್ಟು ನೀವು ಒಳ್ಳೆಯ ಕೀರ್ತಿ ಪಡೆಯಿರಿ. ಆ ರೀತಿ ಮಾಡುತ್ತೀರಿ ಎಂದು ನಿಮ್ಮ ಮೇಲೆ ವಿಶ್ವಾಸ ತಾಳಿ, ನಿಮ್ಮ ಭರವಸೆಯ ಅಥವಾ ಡ್ರೆಡ್ಜರ್ ಕೊಡುವ ವಿಶ್ವಾಸದ ನಿಮ್ಮ ಮಾತನ್ನು ಕೇಳಲಿಕ್ಕೆ ನಿಮ್ಮ ಉತ್ತರವನ್ನು ಕೇಳಲಿಕ್ಕೆ ನಾನು ಕಾತುರನಾಗಿದ್ದೇನೆ. ನಾನು ಆಗಲೇ ಹೇಳಿದ ಹಾಗೆ ನಮ್ಮ ಮೀನುಗಾರರಿಗೆ ಯಾವ ಅಳಿವೆ ಉಂಟು ೧೦ ಕಿಲೋಮೀಟರ್‌ಗಳಿಗೆ ಒಂದು ಅಳಿವೆ ಆಗುವ ಹಾಗೆ ನೀವು ಮಾಡಿಕೊಡಲು ಪ್ರಯತ್ನಿಸಬೇಕೆಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಈಗ ಇರುವಂತಹ ಯಾವತ್ತೋ ನಮ್ಮ ಪರ್ಸಿಯನ್ ಬೋಟ್‌ಗಳಾಗಲಿ, ಅವುಗಳನ್ನು ಬ್ಯಾಂಕ್‌ಗಳಿಂದ ಸಾಲ ಪಡೆದು ಜನ ಪಡೆದಂತಹ ಬೋಟ್‌ಗಳಾಗಿವೆ. ಈ ಸಾರಿ ಡೀಜಲ್ ಕ್ರಯ ಸ್ವಲ್ಪ ಏರಿ ಅವರಿಗೆ ಸ್ವಲ್ಪ ಸಮಯ ಸಾಲವನ್ನು ಕಟ್ಟಲಿಕ್ಕೆ ಸಾಧ್ಯವಾಗಿಲ್ಲ. ಮೀನುಗಾರರು ಯಾವ ಗಂಗೆಯ ಪುತ್ರರು ಎಂದು ನಾವು ಹೇಳುತ್ತೇವೆ. ಆ ಗಂಗೆಯ ಮಕ್ಕಳು ಎಂದು ನಾವು ಹೇಳುತ್ತೇವೋ ಅವರು ಸತ್ಯವಂತರು, ಬಹಳ ಸಜ್ಜನರು, ದೃಢಕಾಯರು. ಮಾತ್ರವಲ್ಲದೆ, ಒಳ್ಳೆಯ ಕೆಲಸ ಮಾಡುವಂತಹ ಧೀಮಂತ ಕೆಲಸಗಾರರು. ಅಂತಹ ಜನಗಳು ಮೋಸ ಮಾಡುವವರಲ್ಲ. ಕೆಲವೊಂದು ತೊಂದರೆಗಳಿಂದ ಮೀನು ಕಡಿಮೆಯಾಗಿ ಅವರಿಗೆ ಸಾಲ ಕಟ್ಟಲಿಕ್ಕೆ ಸ್ವಲ್ಪ ತೊಂದರೆಯಾಗಿ, ಈಗ ಬ್ಯಾಂಕ್‌ನವರು ಪರ್ಸಿಯನ್ ಬೋಟ್ಸ್‌ನ್ನು ಪಡೆಯಲಿಕ್ಕೆ ಆತಂಕವಾಗಿ ಆದೆಷ್ಟೋ ನವಯುವಕರು ಸಾಲ ಪಡೆಯಲು ಸಾಧ್ಯವಾಗದೆ ಪರ್ಸಿಯನ್ ಉದ್ಯೋಗವನ್ನು ಇನ್ನೂ ಹೆಚ್ಚು ಮಾಡಲಿಕ್ಕೆ ಅಸಾಧ್ಯವಾದಂತಹ ಪರಿಸ್ಥಿತಿ ಉಂಟು. ಸ್ವಾಮಿ ಮಂತ್ರಿಗಳೇ, ನಿಮಗೆಲ್ಲಾ ಗೊತ್ತುಂಟು. ನಮ್ಮ ಸೊಸೈಟಿಗಳ ವಿಚಾರವನ್ನು ತಿಳಿದರೆ ನಾನು ನಂಬುತ್ತೇನೆ. ಮೀನುಗಾರರ ಸೊಸೈಟಿಯಲ್ಲಿ ಸಾಲದ ವಸೂಲಾತಿ ಸುಮಾರು ೬೫ ಪರ್ಸೆಂಟ್ ಆಗಿದೆ ಎಂದು ನಾನು ನಂಬುತ್ತೇನೆ. ಇದನ್ನೂ ಮತ್ತು ಕರ್ನಾಟಕ ರಾಜ್ಯದ ಬಾಕಿ ಸಾಲಗಳ ವಾಪಸಾತಿಯನ್ನು ನಾವು ತುಲನೆ ಮಾಡಿ ನೋಡಿದರೆ ೬೬ ಪರ್ಸೆಂಟ್ ವಸೂಲಾಗಿದೆಯೆಂದರೆ ನಮ್ಮ ಮೀನುಗಾರರು ಸಾಲ ಕೊಟ್ಟರೂ ಹಣವನ್ನು ವಾಪಸ್ಸು ಕೊಡುತ್ತಾರೆಂಬ ವಿಶ್ವಾಸ ನಿಮಗೆ ಖಂಡಿತ ಬರುವುದರಲ್ಲಿ ತೊಂದರೆ ಇಲ್ಲ. ಆದ್ದರಿಂದ ಇನ್ನೂ ಹೆಚ್ಚಾಗಿ ಬರುವಂತಹ ಮೀನುಗಾರರಿಗೆ ಬ್ಯಾಂಕ್ ಸಾಲ ಅಥವಾ ಸೊಸೈಟಿ ಸಾಲ ಸಿಗದಿದ್ದರೆ ಸರ್ಕಾರದಿಂದಲೆ ಅವರಿಗೆ ಸಾಲದ ಅವಶ್ಯಕತೆಗಳನ್ನು ಪೂರೈಸಿ ಇನ್ನೂ ಹೆಚ್ಚು ಮೀನುಗಾರಿಕೆಯನ್ನು ನೀವು ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ನೀವು ಸ್ವಲ್ಪ ಪುಣ್ಯವಂತರೆಂದು ನಾನು ಆಗ ಕೇಳಿದ್ದೆ. ಕಾರಣ ಇಷ್ಟೇ. ಈ ವರ್ಷ ಒಳ್ಳೆಯ ಮೀನು ಬಂದಿದೆ. ನನ್ನ ಲೆಕ್ಕಾಚಾರದ ಪ್ರಕಾರ ಕಳೆದ ವರ್ಷ ಸುಮಾರು ೫೮ ಕೋಟಿ ರೂಪಾಯಿಗಳ ಮೀನಿನ ಹಿಡಿತವಾಗಿದ್ದರೆ ಈ ವರ್ಷ ಡಿಸೆಂಬರ್ ಒಳಗೆ ೬೪ ಕೋಟಿ ರೂಪಾಯಿಗಳಾಗಿದೆ. ನಾನು ನಂಬುತ್ತೇನೆ. ಜನವರಿ ಫೆಬ್ರವರಿ, ಮಾರ್ಚಿಯಲ್ಲಿ ಒಳ್ಳೆಯ ಮೀನು ಪಡುಕಡಲಲ್ಲಿ ಬಂದಿದೆ. ಕಳೆದ ವರ್ಷ ೫೮ ಕೋಟಿ ರೂಪಾಯಿಗಳು ಇದ್ದದ್ದು ಈ ವರ್ಷ ೮೦ ಕೋಟಿ ರೂಪಾಯಿಗಳ ಮೀನು ಹಿಡಿಯುವಂತಹ ಒಂದು ಒಳ್ಳೆಯ ಕಾಲ ನಮ್ಮ ಕರ್ನಾಟಕದ ಕರಾವಳಿಗೆ ಬಂದಿದೆ. ಇದು ಒಂದು ನಿಮ್ಮ ಭಾಗ್ಯಕ್ಕೆ ಒಳ್ಳೆಯ ಲಕ್ಷಣದ ಶುಭ ಸೂಚನೆ ಎಂದು ನಾನು ಹೇಳುತ್ತೇನೆ. ಈಗ ಇಷ್ಟು ಮೀನು ಹಿಡಿದಿದ್ದನ್ನು ನಾವು ಮಾರಾಟ ಮಾಡುತ್ತಿದ್ದೇವೆ. ಇಂದು ಪಡುಕರಾವಳಿಗೆ ಹೋದರೆ ಮೀನಿನ ಕೊರತೆಯನ್ನು ನಾವು ಕಾಣುತ್ತಿದ್ದೇವೆ. ಇನ್ನೂ ಮೀನು

ಹಿಡಿಯಲಿಕ್ಕೆ ಸಾಧ್ಯವುಂಟು. ಯಾವುದಕ್ಕಾದರೂ ನಾವು ಸ್ವಲ್ಪ ಕಷ್ಟಪಡಬೇಕು. ಒಂದು ವೇಳೆ ಭತ್ತದ ಬೀಜ ಹಾಕಿ ಬೆಳೆಯಬೇಕಾದರೆ ಗೊಬ್ಬರ ಎಲ್ಲ ಹಾಕಬೇಕು. ಆದರೆ ಮೀನಿನ ಮಟ್ಟಿಗೆ ನಮಗೆ ಯಾವ ತೊಂದರೆ ಇಲ್ಲ. ನಾವು ಯಾವ ತರಹದ ಸಾಕಣೆ, ಸಲಹಣೆ, ಮಾಡದೆ ಹಾಗೆಯೇ ಸಮುದ್ರ ರಾಜ ನಮಗೆ ಮೀನು ಕೊಡುತ್ತಾನೆ. ಧರ್ಮಕ್ಕೆ ಸಿಗುವಂತಹ ಸಮುದ್ರದ ಉಜ್ವಲ ಕೊಡುಗೆಯನ್ನು ನಾವು ಆದಷ್ಟು ಪಡೆದು ನಮ್ಮ ಕರ್ನಾಟಕ ರಾಜ್ಯದ ಅಭ್ಯುದ್ಯಕ್ಕೆ ನಾನು ಕಾರಣೀಭೂತನಾಗಬೇಕಾದರೆ ನಮ್ಮ ಮಾನ್ಯ ಬಂಗಾರಪ್ಪನವರ ಸರ್ಕಾರದವರು ಈಗ ಯಾವ ೨೪ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡಿದ್ದಾರೋ, ಅವರು ಇನ್ನೂ ಸ್ವಲ್ಪ ಉದಾರ ಮನಸ್ಸು ಮಾಡಿದರೆ ಯಾವ ನಮ್ಮ ಈ ವರ್ಷದ ಆಲೋಚನೆ ಪ್ರಕಾರ ೮೦ ಕೋಟಿ ರೂಪಾಯಿಗಳ ಮೀನು ಹಿಡಿಯುವ ಹಂತಕ್ಕೆ ನಾವು ಬಂದಿದ್ದೇವೋ ಮುಂದಿನ ವರ್ಷ ಅದು ಖಂಡಿತವಾಗಿ ೧೦೦ ಕೋಟಿ ರೂಪಾಯಿಗಳ ದಾಖಲೆಯನ್ನು ಕರ್ನಾಟಕ ರಾಜ್ಯದಲ್ಲಿ ನಿರ್ಮಿಸಬಹುದೆಂಬ ವಿಶ್ವಾಸವನ್ನು ನಾನು ಪಡುತ್ತಿದ್ದೇನೆ. ಇನ್ನು ಮೀನು ನಾವು ಪಡೆದಿದ್ದೇವೆ. ಆದರೆ ಅದರ ಮಾರಾಟದ ವ್ಯವಸ್ಥೆ ಇನ್ನೂ ಸಹ ಸರಿಯಾಗಿ ಆಗಲಿಲ್ಲ. ಅದಕ್ಕೆ ಕಾರಣ ಇಷ್ಟೇ. ಮೀನನ್ನು ಜೋಪಾನವಾಗಿ ಇಡಬೇಕಾದರೆ ನಾವು ಏನು ಮಾಡಬೇಕೆಂದರೆ ಐಸ್ ಹಾಕಬೇಕು. ಈಗ ಐಸಿನ ರೇಟು ಬಹಳಷ್ಟು ಹೆಚ್ಚಾಗಿದೆ. ಐಸ್ ಫ್ಯಾಕ್ಟರಿಯವರ ಹತ್ತಿರ ಕೇಳುವಾಗ ಅವರು ಹೇಳುತ್ತಾರೆ, ಎಲ್ಲದಕ್ಕೂ ಸರ್ಕಾರದವರು ಈ ಎಲೆಕ್ಟ್ರಿಸಿಟಿ ರೇಟ್ ಕಡಿಮೆ ಮಾಡಿದ್ದಾರೆ, ಅಂದರೆ ಅಗ್ರಿಕಲ್ಚರಿಸ್ಟ್‌ಗೆ ಕಡಿಮೆ ಮಾಡುತ್ತಾರೆ, ಧರ್ಮಕ್ಕೆ ಎಲೆಕ್ಟ್ರಿಸಿಟಿ ಕೊಟ್ಟಿದ್ದಾರೆ. ಆದರೆ ಮೀನುಗಾರರಿಗೆ ಬೇಕಾದಂಥ ಐಸ್‌ಗೆ ಕಮರ್ಷಿಯಲ್ ರೇಟ್ ಇರುವ ಕಾರಣ, ರೇಟ್ ಹೆಚ್ಚಾಗಿದೆಯೆಂದು ಹೇಳುತ್ತಾರೆ. ಐಸ್ ರೇಟ್‌ಗಳು ಬಹಳಷ್ಟು ಹೆಚ್ಚಾಗಿದೆ. ಆದ್ದರಿಂದ I request the Hon'ble Minister just to think over to reduce the rate of Ice blocks for the present. It is too much. It is costly. ಆದ್ದರಿಂದ ಐಸ್‌ಗೆ ರೇಟ್ ಕಡಿಮೆ ಮಾಡಲಿಕ್ಕೆ ಹೇಗೆ ಪ್ರಯತ್ನ ಮಾಡಬಹುದೆಂದು ತಾವು ಆಲೋಚಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದರೊಟ್ಟಿಗೆ ನಮ್ಮಲ್ಲಿ Fisheries Federation ಒಂದು ಉಂಟು. ಒಳ್ಳೆಯ ಉದ್ದೇಶದಿಂದ ಕೋಆಪರೇಟೀವ್ ಬೇಸಿಸ್‌ನಲ್ಲಿ ಫಿಷರೀಸ್ ಕಾರ್ಪೊರೇಷನ್ ಅನ್ನು ನೀವು ಮಾಡಿದ್ದೀರಿ. ಸುಂದರವಾದಂಥ ಕಟ್ಟಡ ಮಂಗಳೂರಿನಲ್ಲಿ ಉಂಟು. ಬೇಕಾದಂಥ ಮೆಷಿನರಿಗಳನ್ನು ನೀವು ಕೊಟ್ಟಿದ್ದೀರಿ. ಉತ್ತಮ ರೀತಿಯಲ್ಲಿ ಮೀನುಗಳನ್ನು ಎಕ್ಸ್‌ಪೋರ್ಟ್ ಮಾಡುವಂಥ ಅನುಕೂಲತೆಗಳನ್ನು ನೀವು ಮಾಡಿದ್ದೀರಿ. ಪ್ರಾಯಶಃ ತಾವು ಅಲ್ಲಿಗೆ ಸಂದರ್ಶಿಸಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ಈ ವರ್ಷವಾದರೂ ತಾವು ಸಂದರ್ಶಿಸಬೇಕು. ಕೋಟಿಗಟ್ಟಲೆ ಖರ್ಚುಮಾಡಿ ಹಾಕಿದಂಥ ಮೆಷಿನರಿಗಳು ಕೆಲವೊಂದು ಸಣ್ಣ ತಾಂತ್ರಿಕ ತೊಂದರೆಯಿಂದ ಕೆಲಸ ಮಾಡುವಂಥ ಪರಿಸ್ಥಿತಿಯನ್ನು ಅಲ್ಲಿ ಪಡೆದಿದ್ದೇವೆ. ಆದರೆ, ಯಾರದು ತಪ್ಪು, ಯಾರದು ದೋಷ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಏನೂ ಅನುಭವ ಇಲ್ಲದವರು ಅದರ ಎಂ. ಡಿ. ಆಗಿದ್ದುಕೊಂಡು, ಅವರು ಮೀನು ಬಂದದ್ದನ್ನೆಲ್ಲಾ ಯಾರು ಯಾರಿಗೋ ಕೊಟ್ಟು, ಆ ಮೀನು ಪಡೆದವರು ಹಣ ಕೊಡದೆ ಈಗ ಸ್ವಲ್ಪ ಲಾಸ್‌ನಲ್ಲಿ ಇದೆ. ಸರ್ಕಾರದವರು ಹಣ ಕೊಡುವುದಿಲ್ಲ. ಮೀನುಗಾರರು ಅಲ್ಲಿ ಕೆಲಸ ಮಾಡುವವರಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲ. ಆ ಮೆಷಿನರಿಗಳನ್ನು ರನ್ ಮಾಡಲಿಕ್ಕೆ ಆಗುವುದಿಲ್ಲ. ಕರೆಂಟ್ ಫೀಸ್ ಕಟ್ಟದೆ ಬಹುಶಃ ಡಿಸ್‌ಕನೆಕ್ಟ್ ಮಾಡಿದ್ದಾರೆ ಎಂಬ ವರ್ತಮಾನ ನಾನು ಕೇಳಿದೆ. ಆದ್ದರಿಂದ ಕಾರ್ಪೊರೇಷನ್ ಬಿಲ್ಡಿಂಗ್‌ಗೆ ಅದು ಉಪಯೋಗ

ಆಗುವಂತೆ ತಾವು ಅದಕ್ಕೆ ಕಾಯಕಲ್ಪವನ್ನು ಕೊಡಬೇಕು. ಸರ್ಕಾರದಿಂದ ಧನ ಸಹಾಯವನ್ನು ನೀವು ಮಾಡಿ ಅದನ್ನು ಪುನರಪಿ ಜೀವಕಳೆಗೆ ತರಬೇಕೆಂದು ನಾನು ನಿಮ್ಮ ಹತ್ತಿರ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಈ ಫಿಷ್ ಎಂದು ನಾವು ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಡೋಂಟ್ ಫಿಷ್ ಇಟ್ ಎಂದು ಹೇಳುತ್ತೇವೆ. ಎಂದರೆ ಹಾಳು ಮಾಡುತ್ತೀರಿ, ಕನಫ್ಯೂಸ್ ಮಾಡುತ್ತೀರಿ ಎಂದು ಹೇಳುವಂಥದ್ದು. ಅದೇ ಪ್ರಕಾರ ಇಂದು ಜೀವನದಲ್ಲಿ ಸಹ ಉಂಟು. ಯಾರಾದರೂ ಮೀನುಗಾರರು ಮೀನಿನ ಬುಟ್ಟಿಯನ್ನು ಬಸ್‌ನಲ್ಲಿ ಇಟ್ಟರೆ ಥೂ ವಾಸನೆ ಎಂದು ನಾವು ದೂರ ಸರಿಯುತ್ತಿದ್ದೇವೆ. ಹೀಗಿರುವಾಗ ಮೀನಿನ ಮಾರ್ಕೆಟ್ ಮಾಡಬೇಕಾದರೆ ತಲೆ ಮೇಲೆ ಹೊತ್ತುಕೊಂಡು ಪಾಪದ ಆ ಹೆಣ್ಣುಮಕ್ಕಳು ದೂರದವರೆಗೆ ಹೋಗಬೇಕಾಗಿದೆ. ಆದ್ದರಿಂದ ಅಲ್ಲಲ್ಲಿ ನೀವು ಮಾರ್ಕೆಟ್‌ನ್ನು ಮಾಡಬೇಕಾಗಿದೆ. ಈಗ ಹೊಸ ಯೋಜನೆಯಲ್ಲಿ ಅದಕ್ಕೆ ಬೇಕಾದಷ್ಟು ಸಹಕಾರವನ್ನು ಕೊಡುವಂಥ ದೃಢ ಸಂಕಲ್ಪ ಮಾಡಿದ್ದು ಬಹಳ ಸಂತೋಷ. ಇಳಿದಾಣ, ತಂಗುದಾಣಗಳ ಸೌಲಭ್ಯವನ್ನೂ ಮಾಡತಕ್ಕಂಥ ಆಲೋಚನೆ ಮಾಡಿರುವುದು ಸಂತೋಷ. ಅವುಗಳನ್ನು ಇನ್ನೂ ಹೆಚ್ಚು ಹೆಚ್ಚು ಮಾಡಿ ಪ್ರತಿಯೊಂದು ಪೇಟೆಯಲ್ಲೂ ಮೀನಿನ ಮಾರ್ಕೆಟ್ ಮಾಡಿ ಮೀನನ್ನು ಎಲ್ಲಾ ಜನಗಳಿಗೂ ತಿನ್ನಿಸಿ, ಇದು ಬಹಳ ಒಳ್ಳೆಯದು. ಏಕೋ ಮಾನ್ಯ ಸಚಿವರಾದ ಚಿಕ್ಕೇಗೌಡರು ನಗುತ್ತಿದ್ದಾರೆ. ಮೀನು ತಿನ್ನುವ ಜನರು ಬಹಳಷ್ಟು ಬುದ್ಧಿವಂತರಿರುತ್ತಾರೆ. ಏಕೆಂದರೆ ಅದರ ಸೇವನೆಯಿಂದ ಮೆದುಳಿನ ಶಕ್ತಿ ಹೆಚ್ಚಾಗುತ್ತದೆ.

ಶ್ರೀ ಎಸ್. ಚಿಕ್ಕೇಗೌಡ:- ಮೀನುಗಾರರ ಬಗ್ಗೆ ನಿಮಗೆ ಕಾತುರತೆ ಇದೆ. ನಾನು ಮೀನುಗಾರರ ಬಗ್ಗೆ ನಗುತ್ತಿಲ್ಲ. ಮೀನು ಬಹಳ ಮುಖ್ಯವಾದುದು. ಬುದ್ಧಿಶಕ್ತಿ ಹೆಚ್ಚಿಸತಕ್ಕಂಥಾದ್ದು, ಮೀನು ತಿನ್ನುವವರು ಬಹಳ ಬುದ್ಧಿವಂತರು.

ಶ್ರೀ ಸೋಮಪ್ಪ ಸುವರ್ಣ:- ಧನ್ಯವಾದಗಳು. ಏಕೆಂದರೆ, ಮೀನು ಮತ್ತು ಕೃಷಿ ಒಟ್ಟೊಟ್ಟಿಗೆ ಬರುವಂಥಾದ್ದು. ಅಂಥಾ ಒಳ್ಳೆಯ ಮಾತುಗಳನ್ನು ನಮ್ಮ ಮಂತ್ರಿವರ್ಯರು ಹೇಳಿದ್ದಾರೆ. ನಿಮಗೆ ತುಂಬಾ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಹೀಗಿರುವಾಗ ಅಲ್ಲಲ್ಲಿ ಮೀನಿನ ಮಾರ್ಕೆಟ್‌ಗಳನ್ನು ಮಾಡಿ ಮೀನು ಕೊಂಡೊಯ್ಯುವುದಕ್ಕೆ ಲಾರಿ, ವ್ಯಾನುಗಳನ್ನು ಕೊಟ್ಟು ಆ ಜನಗಳ ಕಷ್ಟವನ್ನು ದೂರೀಕರಿಸಿ. ಸಾಧ್ಯವಾದರೆ ಕೋಆಪರೇಟೀವ್ ಬೇಸಿಸ್‌ನಲ್ಲಿ ವ್ಯಾನಗಳನ್ನು ಕೊಟ್ಟು, ಎಲ್ಲಾ ಕಡೆಗೆ ಮೀನುಗಳನ್ನು ಸಾಗಿಸುವಂಥ ಒಂದು ಯೋಜನೆಯನ್ನು ರೂಪಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ನನಗೆ ಒಂದು ಬಹಳ ದುಃಖದ ವಿಚಾರವೇನೆಂದರೆ, ಇಷ್ಟು ಉದ್ದದ ಕರಾವಳಿ ಉಂಟು. ಇಷ್ಟು ಜನ ನಾವು ಮೀನು ತಿನ್ನುವವರಲ್ಲಾ ಇದ್ದೇವೆ. ಇಷ್ಟು ಕೋಟಿ ರೂಪಾಯಿಗಳ ಮೀನು ಮಾರಿದ್ದೇವೆ. ಆದರೆ ನಮ್ಮ ಬೆಂಗಳೂರಿನಲ್ಲಿರುವ ಫಿಷ್ ಅಕ್ವೇರಿಯಂ ಈಗ ಪ್ರಾಯಶಃ ಮಲಗಿಕೊಂಡಿದೆಯೆಂದು ನನಗೆ ಕಾಣಿಸುತ್ತಿದೆ. ಏಕೆಂದರೆ ಎಲ್ಲಿಂದಲಾದರೂ ಬಂದವರಿಗೆ ನಾವು ತೋರಿಸುವಂಥಾದ್ದು ಈ ಫಿಷ್ ಅಕ್ವೇರಿಯಂ. ಅದನ್ನು ನಾವು ಬಹಳಷ್ಟು ಸುಂದರಗೊಳಿಸಬೇಕಾಗಿದೆ. ಅಂಡಮಾನ್ ಅಂಥಾ ಸಣ್ಣ ದ್ವೀಪದಲ್ಲಿನ ಅಕ್ವೇರಿಯಂ ಅನ್ನು ನೋಡಿದಾಗ ನಮಗೆ ಸಂತೋಷವಾಗುತ್ತದೆ. ಬೊಂಬಾಯಿಯಲ್ಲಿ ಇರುವುದನ್ನು ನೋಡಿ ನಾವು ಸಂತೋಷಪಡುತ್ತೇವೆ. ನಾನು ಇಂಗ್ಲೆಂಡ್ ಮತ್ತು ಅಮೆರಿಕಾಕ್ಕೆ ಹೋದಾಗ ಎಲ್ಲಕ್ಕಿಂತ ನಾನು ಹೆಚ್ಚಾಗಿ ಮೆಚ್ಚಿದ್ದು ಎಂದರೆ ಅಲ್ಲಿನ ಫಿಸ್ ಅಕ್ವೇರಿಯಂ. ಅಲ್ಲಿ ಜೀವಂತವಾಗಿರುವ ದೊಡ್ಡ ದೊಡ್ಡ ಮೀನುಗಳನ್ನು ಇಟ್ಟಿರುವ ರೀತಿಯನ್ನು ನೋಡುವಾಗ ನಮಗೆ ಅಲ್ಲಿಂದ ಹೊರಗೆ

ಬರಲಿಕ್ಕೇ ಮನಸ್ಸು ಬರುವುದಿಲ್ಲ. ಹಾಗಿರುವಾಗ ಸುಂದರ ಕನ್ನಡ ನಾಡಿನ ಒಳ್ಳೆಯ ಮೀನುಗಳ ಸುಂದರ ರೂಪವನ್ನು ಲಾಲ್‌ಬಾಗಿನ ಬದಿಯಲ್ಲಿ ಹೊರದೇಶದಿಂದ ಬರುವ ಜನಗಳು ನೋಡಬೇಕು. ಆ ಮೀನುಗಳನ್ನು ನೋಡಿಯಾದರೂ ಬಾಯಿಯಲ್ಲಿ ರುಚಿ ಸವಿಯಬೇಕು. ಆದ್ದರಿಂದ ನಮ್ಮ ಅಕ್ವೇರಿಯಂ ಅನ್ನು ಸುಂದರಗೊಳಿಸಿ ಆಕರ್ಷಣೀಯಗೊಳಿಸಿ, ಅದೊಂದು ಮಾದರಿಯಾಗುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಒಂದೇ ಕಡೆಯಲ್ಲಿ ಇರುವುದು ಸಾಲದು. ಮಂಗಳೂರಿಗೆ ತುಂಬ ಜನ ಬರುತ್ತಾರೆ. ಅಲ್ಲಿ ಒಳ್ಳೆಯ ಅಕ್ವೇರಿಯಂಅನ್ನು ಮಾಡಿ ಸಾಧ್ಯವಾದರೆ ಕಾರವಾರದಲ್ಲೂ ಮಾಡಿ.

ಶ್ರೀ ಎ. ಎಂ. ಬೆಳ್ಳಿಯಪ್ಪ (ಮೀನುಗಾರಿಕಾ ಸಚಿವರು):- ಕಾರವಾರದಲ್ಲಿ ಈಗಾಗಲೇ ಅಕ್ವೇರಿಯಂ ಓಪನ್ ಮಾಡಿದ್ದೇವೆ. ಸುಮಾರು ೨೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಕ್ವೇರಿಯಂ ಕಟ್ಟಿ ಕಳೆದ ತಿಂಗಳಲ್ಲಿ ಓಪನ್ ಆಗಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಬಹಳ ಸಂತೋಷ. ನಮ್ಮ ಫಿಶರೀಸ್ ಕೋಸ್ಟ್ ಲೈನ್‌ನಲ್ಲಿ ಶಾಲೆಗಳನ್ನು ಮದ್ರಾಸ್ ಸರ್ಕಾರದವರು ನಡೆಸುತ್ತಿದ್ದರು. ನಮಗೆ ಆ ಶಾಲೆಗಳಲ್ಲಿ ಫಿಶರೀಸ್ ಟೆಕ್ನಾಲಜಿ ಬಗ್ಗೆ ಮಾತ್ರವಲ್ಲ, ಫಿಶರೀಸ್ ಸೈನ್ಸ್ ಬಗ್ಗೆ ಒಂದು ಸಬ್ಜೆಕ್ಟ್ ಇತ್ತು. ನಮಗೆ ಮೀನುಗಳನ್ನು ಹಿಡಿಯುವಿಕೆ, ಅವುಗಳನ್ನು ಜೋಪಾನ ಮಾಡುವಿಕೆ, ಸಾಕುವಿಕೆ ಬಗ್ಗೆ ಪಾಠ ಹೇಳುತ್ತಿದ್ದರು. ಈಗ ಆ ಶಾಲೆಗಳನ್ನೆಲ್ಲ ಶಿಕ್ಷಣ ಇಲಾಖೆಯವರು ತೆಗೆದುಕೊಂಡಿದ್ದಾರೆ.ಈಗ ಬೋರ್ಡ್ ಮಾತ್ರ ಫಿಶರೀಸ್ ಸ್ಕೂಲ್ ಎಂದು ಇದೆ. ಪಾಠ ಎಲ್ಲ ಬಾಕಿ ಶಾಲೆಯದು. ಆದ್ದರಿಂದ ಸಾಧ್ಯವಾದರೆ ಈ ಫಿಶರೀಸ್ ಸಬ್ಜೆಕ್ಟ್‌ನ್ನು ಕೋಸ್ಟ್‌ಲೈನ್‌ನಲ್ಲಿರುವ ಫಿಶರೀಸ್ ಶಾಲೆಗಳಲ್ಲಿ ಕಲಿಸುವಂತಹ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಮಂಗಳೂರಿನಲ್ಲಿ ಫಿಶರೀಸ್ ಟೆಕ್ನಾಲಜಿ ಕಾಲೇಜ್ ಒಂದು ಉಂಟು, ಅದೊಂದೇ ಸಾಲದು. ಎಲ್ಲ ಜನರ ಅದರ ವಿಷಯದಲ್ಲಿ ಸ್ವಲ್ಪ ಟೆಕ್ನಾಲಜಿ ಪಡೆಯುವಂತೆ ಫಿಶರೀಸ್ ಶಾಲೆಗಳಲ್ಲಿ ಫೋಶರೀಸ್ ಸಬ್ಜೆಕ್ಟನ್ನು ಇಟ್ಟುಕೊಂಡರೆ ಒಳ್ಳೆಯದು ಎಂದು ನಾನು ಹೇಳುತ್ತಿದ್ದೇನೆ. ಇನ್ನು ಮೀನುಗಾರಿಕೆ ಎನ್ನುವುದು ಜೀವದೊಡನೆ ಬರುತ್ತಾನೆ ಎನ್ನುವ ವಿಶ್ವಾಸ ನಮಗಿಲ್ಲ. ಏಕೆಂದರೆ ಪಕ್ಕನೆ ತೂಫಾನು ಬಂದು ದೋಣಿ ಮುಳಗಿತು ಎಂದರೆ ಅವನು ವಾಪಸ್ಸಿಲ್ಲ. ಅಥವಾ ವಾಪಸ್ ಬರುವಾಗ ಏನಾದರೂ ಬಂಡೆ ತಾಕಿತು ಎಂದರೆ ಅವನ ಜೀವಕ್ಕೆ ಸಂಚಕಾರ. ಅಳಿವೆಯಲ್ಲಿ ತೊಂದರೆಯಾಯಿತು ಎಂದರೆ ಅವನ ದೇಹದ ಲವಲೇಶ ನಮಗೆ ಸಿಗದು. ಆದ್ದರಿಂದ ಇಂತಹ ಅಪಘಾತಗಳು ನಡೆಯುವಾಗ ತಾವು ಇನ್‌ಶೂರೆನ್ಸನ್ನು ಕಡ್ಡಾಯವಾಗಿ ಸರ್ಕಾರದ ವತಿಯಿಂದ ಮಾಡಿಸುವ ಕೆಲಸ ಮಾಡಿದ್ದೀರಿ. ನನ್ನ ಕ್ಷೇತ್ರದಲ್ಲಿ ಕಳೆದ ಬಾರಿ ಮೂರು ದೋಣಿಗಳು ಅಪಘಾತವಾಗಿ ಸಮುದ್ರಕ್ಕೆ ತುತ್ತಾದವು. ಸುಮಾರು ೭ ಜನ ದೈವಾಧೀನರಾದರು. ಆದರೆ ಅವರಿಗೆ ಸಿಕ್ಕಂತಹ ಪರಿಹಾರ ಏನೇನೂ ಸಾಲದು. ಬಹುಶಃ ಈ ವರ್ಷದಲ್ಲಿ ೨೦ಸಾವಿರ ಕೊಡುತ್ತೇವೆ ಎಂದು ಇದರಲ್ಲಿ ಕಾಣಿಸಿದ್ದೀರಿ. ನಾನು ನಂಬುತ್ತೇನೆ. ಇಂತಹ ಜನಗಳಿಗೆ ಉದಾರ ಮನಸ್ಸಿನಿಂದ ಸಹಾಯ ಕೊಡಬೇಕು. ಆ ಕುಟುಂಬಕ್ಕೆ ನೆರವನ್ನು ನೀವು ಹೆಚ್ಚಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನೊಂದು ಯೋಜನೆ ನಾನು ಬಹಳ ಮೆಚ್ಚಿದ್ದು ಎಂದರೆ ಮೀನುಗಾರರಿಗೆ ಮನೆ ಕಟ್ಟಿ ಕೊಡುವಂತಹ ಯೋಜನೆ. ಮೀನುಗಾರರು ಎಷ್ಟು ಕಷ್ಟಪಡುತ್ತಾರೆ ಎನ್ನುವುದು ನೀವು ಮೀನುಗಾರರ ಮನೆಗೆ ಹೋದರೆ ಕಾಣುತ್ತದೆ. ತಂದೆ ದುಡಿಯುವುದು, ತಾಯಿ

ದುಡಿಯುವುದು, ಮಕ್ಕಳು ದುಡಿಯುವುದು ಇಷ್ಟಾದರೂ ಅವರಿಗೆ ಸುಂದರವಾದಂಥ ಮನೆ ಇಲ್ಲ. ಅವರ ಮನೆಗಳ ಗೋಡೆಗಳು ಇಂದೂ ಸಹ ತಟ್ಟಿಯ ಗೋಡೆಗಳಾಗಿವೆ. ಮಾಡು ಮುರಿಯುವಂತಾಗಿದೆ. ನೆಲಕ್ಕೆ ಸಿಮೆಂಟ್ ಕಾಣಲಿಲ್ಲ. ಇಂತಹ ಜನಗಳಿಗೆ ಮನೆ ಕಟ್ಟಿಕೊಡುವಂತಹ ಒಂದು ಸುಂದರ ಯೋಜನೆಯನ್ನು ನೀವು ರೂಪಿಸಿದ್ದೀರಿ. ಹಾಗೆ ಯೋಜನೆ ರೂಪಿಸಿದ್ದರೂ ಕೇಂದ್ರ ಸರ್ಕಾರದಿಂದ ೫೦ ಪರ್ಸೆಂಟ್ ಸಬ್ಸಿಡಿ ಕೊಡುವ ಯೋಜನೆ ಏನಿದೆ ಅದನ್ನು ನಮ್ಮ ಜನರಲ್ಲಿ ಒಬ್ಬರೂ ಈ ತನಕ ಪಡೆಯಲು ಆಗಲಿಲ್ಲ ಎಂದು ನಾನು ಬಹಳ ಪಶ್ಚಾತಾಪ ಪಡುತ್ತಿದ್ದೇನೆ. ಇನ್‌ಲ್ಯಾಂಡ್ ಫಿಶರೀಸ್‌ನವರು ೬೦೦ ಜನ ಮನೆಯನ್ನು ಪಡೆದಿದ್ದಾರೆ ಎಂದು ವರದಿಯನ್ನು ನೋಡುವಾಗ ಓದಿದೆ. ನಮ್ಮ ಕೋಸ್ಟ್‌ಲೈನ್‌ನಲ್ಲಿ ಅದಷ್ಟುದ್ದಕ್ಕೆ ಸಾವಿರಾರು ಮನೆಗಳಿದ್ದರೂ ಒಂದೇ ಒಂದು ಮನೆ ಆಗಲಿಲ್ಲ ಎಂದರೆ ನಾವೆಲ್ಲ ಶಾಸಕರು ಪ್ರಯೋಜನ ಇಲ್ಲವೋ ಅಥವಾ ಇದು ದುರ್ದೈವವೋ ಎಂದು ಹೇಳಬೇಕಾಗಿದೆ. ನಾನು ಸಂಬಂಧಿಸಿದ ಫಿಶರೀಸ್ ಇಲಾಖೆಯ ಅಧಿಕಾರಿಗಳನ್ನು ಕಂಡಿದ್ದೆ. ನನ್ನ ಕ್ಷೇತ್ರದಲ್ಲಿ ೩೦ ಮನೆಗಳನ್ನಾದರೂ ಕೊಡಿ ಎಂದು ಕೇಳಿದ್ದೆ, ಕೊಡುತ್ತೇನೆ ಎಂದು ಹೇಳಿದ್ದರು. ಆದರೆ ಕಡೆಗೆ ಅವರ ಶಿಫಾರಸ್ ಬಂತು. ನೀವು ತೋರಿಸಿದ ಸರ್ಕಾರಿ ಸ್ಥಳ ಸಮುದ್ರದ ದಡದಲ್ಲಿದೆ ಅಲ್ಲಿ ಮನೆ ಕಟ್ಟಿಕೊಂಡರೆ ಸಮುದ್ರ ರಾಜ ಗರ್ಜಿಸಿ ಮೇಲೆ ಬಂದರೆ ಮನೆಗಳು ನೀರುಪಾಲಾಗುತ್ತವೆ. ಅದು ಎಷ್ಟು ಮಾತ್ರಕ್ಕೂ ಕೊಡಲಿಕ್ಕೆ ಸಾಧ್ಯವಿಲ್ಲ ಎಂದರು. ಈ ದೃಷ್ಟಿಕೋನವನ್ನು ಅಧಿಕಾರಿಗಳು ಸ್ವಲ್ಪ ಬದಲಾಯಿಸಬೇಕು. ಸಾಮಾನ್ಯವಾಗಿ ಮೀನುಗಾರರು ವಾಸಿಸುವುದು ಸಮುದ್ರ ದಂಡೆಯಲ್ಲಿ ನನ್ನ ಕ್ಷೇತ್ರದಲ್ಲಿ ಒಂದು ಬದಿಯಲ್ಲಿ ಪವಿತ್ರವಾದಂಥ ಶಾಂಭವಿ ನದಿ ಹರಿಯುತ್ತಿದೆ. ಪಡುಬದಿಯಲ್ಲಿ ಕಡಲರಾಣಿ ಇದೆ. ನಡುವಿನಲ್ಲಿ ಸ್ವಲ್ಪ ಭಾಗ ಮಾತ್ರ ಭೂಮಿ ಇರುವುದು. ಸಾವಿರಾರು ಮನೆಗಳು ನಮ್ಮಲ್ಲಿವೆ. ಅವು ಹಾಗೇ ಇವೆ. ಆದರೆ ಸರ್ಕಾರದ ಮನೆ ಕಟ್ಟಿ ಕೊಡಲು ನಿಮಗೇನು ಹೆದರಿಕೆ ಎಂದು ನನಗೆ ಗೊತ್ತಾಗುವುದಿಲ್ಲ. ಆದ್ದರಿಂದ ಈ ಅಧಿಕಾರಿಗಳ ದೃಷ್ಟಿ ಕೋನವನ್ನು ನೀವು ಸ್ವಲ್ಪ ಬದಲಾಯಿಸಿ. ಸಮುದ್ರ ರಾಜ ಬಂದು ನಮ್ಮ ಬದುಕನ್ನೇ ಕೊಂಡು ಹೋಗುವಾಗ ನಿಮ್ಮ ಸರ್ಕಾರದಿಂದ ಕಟ್ಟಿಕೊಡುವ ೧೧ ಸಾವಿರ ರೂಪಾಯಿಗಳ ಮನೆ ಹೋದರೆ ದೊಡ್ಡದಾ. ನಮ್ಮ ಜೀವ ಹೋಗುವುದು ದೊಡ್ಡದಾ? ಆದ್ದರಿಂದ ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಿ ಸಮುದ್ರ ಪಕ್ಕದಲ್ಲಾದರೂ ಈ ಮನೆಗಳನ್ನು ಕಟ್ಟಿ ಕೊಡಲಿಕ್ಕೆ ಇಲಾಸ್ಟಿಕ್ ಆಗಬೇಕು. ನಿಯಮಗಳನ್ನು ಸಡಿಲಗೊಳಿಸಬೇಕು. ಮುಂದಿನ ವರ್ಷ ಇನ್‌ಲ್ಯಾಂಡ್ ಫಿಶರೀಸ್‌ನಲ್ಲಿ ೬೦೦ ಮನೆಗಳನ್ನು ಮಾಡುತ್ತೀರಿ, ಕೋಸ್ಟ್‌ಲೈನ್‌ನಲ್ಲಿ ೩೦೦ ಕಿ. ಮೀ ಉದ್ದಕ್ಕೆ ೧೦೦೦ ಮನೆಗಳನ್ನು ನೀವು ಮಾಡುವಂತೆ ಸೂಕ್ತ ನಿರ್ದೇಶನವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಕೊಡಬೇಕು, ಆ ಕಾನೂನನ್ನು ಸಡಿಲಿಸಬೇಕು. ಪ್ರಾಯಶಃ ಈ ಮನೆಗಳನ್ನು ನೀವು ಸಬ್ಸಿಡಿ ರೂಪದಲ್ಲಿ ಮಾಡಿದರೆ ಒಳ್ಳೆಯದು ಏಕೆಂದರೆ ಕೇಂದ್ರ ಸರ್ಕಾರದ ಗ್ರಾಂಟ್ ಇದಕ್ಕೆ ಬರುತ್ತದೆ. ಅದು ೧೧ ಸಾವಿರ ಎಂದು ನನ್ನ ಹತ್ತಿರ ಹೇಳಿದರು. ಈಗ ನಮ್ಮ ಆಶ್ರಯ ಯೋಜನೆಯಡಿಯಲ್ಲಿ ೧೧ ಸಾವಿರಕ್ಕೆ ಮನೆ ಸಿಗುತ್ತದೆ. ೫ ಸಾವಿರ ರೂಪಾಯಿ ಸಬ್ಸಿಡಿ ಸಿಗುತ್ತದೆ. ನಿಮ್ಮಲ್ಲಿ ಎಷ್ಟು ಸಬ್ಸಿಡಿ ಕೊಡುತ್ತೀರಿ? ಏನು ಪ್ರಯೋಜನ? ನಮ್ಮ ಮೀನುಗಾರರಿಗೆ ಅನುಕೂಲ ಮಾಡುತ್ತೀರಿ ಎಂದು ಗೊತ್ತಿಲ್ಲ. ನಾನು ನಂಬುತ್ತೇನೆ. ಮಾನ್ಯ ಬೆಳ್ಳಿಯಪ್ಪನವರು ಆಶ್ರಯ ಯೋಜನೆಯ ಮನೆಗಿಂತ ಹೆಚ್ಚಿನ ಪ್ರಯೋಜನದ ಉತ್ತಮ ಮನೆಗಳನ್ನು ನಮ್ಮ ಮೀನುಗಾರರಿಗೆ ಕೊಡುವ ಹಾಗೆ ದೊಡ್ಡ ಮನಸ್ಸು ಮಾಡಬೇಕೆಂದು ಕಳಕಳಿಯಿಂದ ಮೀನುಗಾರರ ಪರವಾಗಿ ಪ್ರಾರ್ಥಿಸುತ್ತೇನೆ. ಇದೆಲ್ಲ ಸಾಮೂಹಿಕವಾಗಿ ಹೇಳಿದ ವಿಚಾರ. ಇನ್ನು

ನನ್ನದೇ ಆದ ನನ್ನ ಕ್ಷೇತ್ರದ ಒಂದು ವಿಚಾರ. ನನ್ನ ಕ್ಷೇತ್ರ ಮುಲ್ಕಿ ಅಲ್ಲಿ ಬಹಳ ಉದ್ದವಾದ ಅಳಿವೆ ಇದೆ. ಇಂಗ್ಲಿಷರು ಆಳುತ್ತಿದ್ದಾಗ ಸ್ಟೀಮರ್ ಅಲ್ಲಿಗೆ ಬಂತಂತೆ. ಮಲ್ಪೆಯಲ್ಲಿ ಸ್ಟೀಮರ್ ತಂಗಿದರೆ ಮಂಗಳೂರಿಗೆ ಹೋಗುವ ಮೊದಲು ಕೋಸ್ಟಲ್ ಟ್ಯಾಂಕ್ ಇತ್ತು. ಕಸ್ಟಮ್ಸ್ ಇತ್ತು. ಆದರೆ ದುರ್ದೈವದಿಂದ ನಮ್ಮ ಅಳಿವೆಯ ಆಳ ಬಹಳ ಕಡಿಮೆಯಾಗಿದೆ. ಕಾರಣ ಫಲಿಮಾರ್‌ನಲ್ಲಿ, ಸಂದಿಕೂರ್‌ನಲ್ಲಿ ಅಣೆಕಟ್ಟನ್ನು ಕಟ್ಟಿದ ಕಾರಣ ನೀರಿನ ರಭಸ ಕಡಿಮೆಯಾಗಿ ಅಳಿವೆ ಹಾಳಾಯಿತು. ನಾನು ನಿಮ್ಮ ಹತ್ತಿರ ರಿಕ್ವೆಸ್ಟ್ ಮಾಡುವುದು ಎನೆಂದರೆ ಲನೇ ಯೋಜನೆಯಲ್ಲಿ ಮುಲ್ಕಿ ಅಳಿವೆಯನ್ನು ಆಳ ಮಾಡುವಂತಹ ಯೋಜನೆ ಹಾಕಿಕೊಂಡಿದ್ದೀರಿ, ಲನೇ ಪ್ಲಾನ್‌ಗೆ ಕಾಯುವ ಅವಕಾಶವನ್ನು ನಮಗೆ ಕೊಡದೆ. ಈ ವರ್ಷವೇ ಮುಲ್ಕಿಗೆ ಒಂದು ಜೆಟ್ ಅನ್ನು ಕಟ್ಟಿಸಿಕೊಡಿ, ಆ ಅಳಿವೆಯನ್ನು ಆಳ ಮಾಡಿ. ನಮ್ಮ ಮೀನುಗಾರರ ಜೀವನಕ್ಕೆ ಒಳ್ಳೆಯ ಸಂದೇಶವನ್ನು ನಿಮ್ಮ ಉತ್ತರದಲ್ಲಿ ಕರುಣಿಸಿರಿ ಎಂದು ಈ ಸಂದರ್ಭದಲ್ಲಿ ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ನಾನು ಉದ್ದವಾಗಿ ಮಾತನಾಡಲಿಕ್ಕೆ ಪ್ರಯತ್ನಿಸುವುದಿಲ್ಲ. ಕೇವಲ ಮೀನುಗಾರರ ಜೀವನ ಚಿಂತೆ ಮಾತ್ರ ಮಾಡಿ, ಮುಂದಿನ ವರ್ಷದ ನಿಮ್ಮ ೨೪ ಕೋಟಿ ರೂಪಾಯಿಗಳ ಯೋಜನೆಯಲ್ಲಿ ೧೫ ಕಾರ್ಯಕ್ರಮಗಳು ಬಹಳ ಸುಂದರವಾಗಿವೆ, ಅವನ್ನು ಅಧಿಕಾರಿಗಳು ತಯಾರಿಸಿಕೊಟ್ಟಿದ್ದಾರೆ. ಒಳ್ಳೆಯ ಚಿಂತನೆಯನ್ನು ಮೀನುಗಾರರ ಅಭ್ಯುದಯದ ಬಗ್ಗೆ ನಿಮ್ಮ ಇಲಾಖೆಯವರು ಖಂಡಿತ ಮಾಡಿದ್ದಾರೆಂದು ಹೇಳುತ್ತೇನೆ. ಏಕೆಂದರೆ ಈಗ ಡೈರೆಕ್ಟರ್ ಆಗಿರುವ ಶ್ರೀಮಾನ್ ಗಾನಲೀಲ ಅವರು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಅಧಿಕಾರಿಯಾಗಿದ್ದು ಆ ಸಮಯದಲ್ಲಿ ನಮ್ಮೆಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಅವರ ಸಲಹೆ ಸೂಚನೆಗಳನ್ನು ಪಡೆದು ಈ ಕರಾವಳಿಯನ್ನು ಸುಂದರವಾಗಿ ಮಾಡಲಿಕ್ಕೆ, ಅಲ್ಲಿನ ಜನರ ಜೀವನವನ್ನು ಸುಖಮಯವನ್ನಾಗಿ ಮಾಡಲಿಕ್ಕೆ ಅದರೊಟ್ಟಿಗೆ ಕರ್ನಾಟಕದ ಮೀನಿನ ಸಂಪತ್ತನ್ನು ಉತ್ತಮಗೊಳಿಸಿ ಬೆಳೆಸುವುದಕ್ಕೆ ನಿಮ್ಮ ಶಕ್ತಿ ಸಾಗಲಿ, ದೇವರು ನಿಮ್ಮ ಪ್ರಯತ್ನದಲ್ಲಿ ಖಂಡಿತ ಸಹಭಾಗಿಯಾಗುತ್ತಾನೆ. ಆ ಬಡ ಮೀನುಗಾರರ ದುಃಖದುಮ್ಮಾನಗಳನ್ನು ದೂರೀಕರಿಸಿದಲ್ಲಿ ನಿಮ್ಮ ಹೆಸರನ್ನು ಸದಾ ಸ್ಮರಿಸುವಂತಹ ಭಾಗ್ಯ ಜನತೆಗೆ ಬರಲಿ ಎಂದು ಆಶಿಸುತ್ತೇನೆ. ಕೊನೆಯದಾಗಿ ನಾವು ೪-೫ ವಿಭಾಗಗಳಲ್ಲಿರುವಾಗ, ಮಾನ್ಯ ಚಿಕ್ಕೇಗೌಡರಾಗಲಿ ನಮ್ಮ ಮಿತ್ರರಾದಂತಹ ಆತ್ಮಾನಂದರವರಾಗಲಿ, ಅರಣ್ಯ ಸಚಿವರಾದಂತಹ ಶಂಭುನಾಥ್‌ರವರಾಗಲಿ ಅವರು ಯಾವತ್ತೋ ಕೆಲಸಗಳನ್ನು ಈಗಾಗಲೇ ಬಾಕಿಯವರು ಕೊಂಡಾಡಿದ್ದಾರೆ. ಇವತ್ತಿನ ದಿವಸ ಹಳ್ಳಿಯ ಜನರಿಗೆ ಬಹಳಷ್ಟು ತೊಂದರೆಯಾಗಿದೆ. ಪೇಟೆಯಲ್ಲಿರುವವರು ನಾವು, ಕಾನೂನು ಮಾಡುವವರು ನಾವು, ಆಳುವವರು ನಾವು, ಸಹಕಾರ ಮಾಡುವವರು ನಾವಾಗಿದ್ದೇವೆ. ಹೀಗಾಗಿ ನಿಜವಾಗಿ ಹಳ್ಳಿಯ ಶೋಷಣೆ ಕುಂಠಿತವಾಗುತ್ತಿದೆ. ಅವರು ಬೆಳೆಯುವಂತಹ ಬೆಳೆಗಳಿಗೆ ಸರಿಯಾದ ಬೆಲೆ ಸಿಗುವುದಿಲ್ಲ, ಹಳ್ಳಿಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳಿಗೆ ಸಂಬಳ ಕಡಿಮೆ, ಅವರಿಗೆ ಸೀಮೆ ಎಣ್ಣೆ ಕಡಿಮೆ, ಸಕ್ಕರೆ ಕಡಿಮೆ, ಅಕ್ಕಿ ಕಡಿಮೆ, ರೇಷನ್‌ನಲ್ಲಿ ಕೊರತೆ ಇದೆ. ಆ ಹಳ್ಳಿಯ ಜನರು ಏನು ಪಾಪ ಮಾಡಿದ್ದಾರೆ. ಆದ್ದರಿಂದ ನಾವು ಈ ಡಿಸ್‌ಕ್ರಿಮಿನೇಷನ್ನು ದೂರೀಕರಿಸಬೇಕು. ಪೇಟೆಯ ನೌಕರರಿಗೆ ಹೆಚ್. ಆರ್. ಎ. ಕೊಡುತ್ತಿದ್ದೀರೋ, ಅದಕ್ಕಿಂತಲೂ ಸ್ವಲ್ಪ ಉತ್ತಮ ಮಟ್ಟದಲ್ಲಿ ಅವರಿಗೆ ರೂರಲ್ ಅಲೋಯನ್ಸ್ ಕೊಡಬೇಕು. ಗ್ರಾಮಾಂತರ ಪ್ರದೇಶಕ್ಕೆ ಅಧಿಕಾರಿಗಳು ಟ್ರಾನ್ಸ್‌ಫರ್ ಅಲ್ಲಿ ಅವರು ಸಂತೋಷದಿಂದ ಸುಂದರ ವಾತಾವರಣದಲ್ಲಿ ಜೀವನ ನಡೆಸುವಂತಹ ಸಂದರ್ಭವನ್ನು ಕಾಣುವಂತಹ ಭಾಗ್ಯವನ್ನು ನೀವು ಕೊಡಿ ಎಂದು ಹೇಳುತ್ತಾ ನನ್ನ ಮಾತುಗಳನ್ನು

ಮುಗಿಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ನಾನು ಕಾಡು ಮತ್ತು ಮೀನಿನ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ಏಕೆಂದರೆ, ನಮ್ಮ ಕೋಲಾರಕ್ಕೂ ಕಾಡಿಗೂ ಬಹಳ ದೂರ. ಮೀನಿಗೂ ಕೋಲಾರಕ್ಕೂ ಬಹಳ ದೂರ. ಆದರೂ ಸಹ ಎರಡು ಸಲ ಕೋಲಾರ ಜಿಲ್ಲೆಯಿಂದ ಮೀನುಗಾರಿಕೆ ಮಂತ್ರಿಗಳಾಗಿದ್ದರು; ಶ್ರೀಮಾನ್ ಲಿಂಗಾರೆಡ್ಡಿಯವರು ಮತ್ತು ಬೈರೇಗೌಡರು. ಮಂಗಳೂರಿನಲ್ಲಿ ಮೀನು ಹಿಡಿದರೂ ಕೂಡ ಕೋಲಾರದವರನ್ನು ಎರಡು ಸಲ ಮೀನುಗಾರಿಕೆ ಮಂತ್ರಿಗಳನ್ನಾಗಿ ಮಾಡಿದ್ದರು. ಆದರೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂಥ ಈ ಡೈರಿ ಮತ್ತು ತೋಟಗಾರಿಕೆ ವಿಷಯದ ಬಗ್ಗೆ ರೈತರ ಪ್ರತಿನಿಧಿಯಾಗಿ ಬಂದು ನಾನು ಮಾತನಾಡದೇ ಇದ್ದರೆ ನನ್ನ ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ. ಇಲ್ಲಿ ಡೈರಿ ಬಗ್ಗೆ ಯಾವ ಒಂದು ವಿಷಯದಲ್ಲೂ ನಮಗೆ ಡೀಟೈಲ್ಸ್ ಕೊಟ್ಟಿಲ್ಲ. ತೋಟಗಾರಿಕೆಗೆ ಮತ್ತು ಅಗ್ರಿಕಲ್ಚರ್‌ಗೆ ಡೀಟೈಲ್ಸ್ ಇದೆ. ಆದರೆ ಡೈರಿ ಬಗ್ಗೆ ಮಾತ್ರ ನಾವು ಡೀಟೈಲ್ಸ್ ಕೊಟ್ಟಿಲ್ಲ. ಆದರೂ ಕೂಡ ನನಗೆ ಗೊತ್ತಿರುವ ಮಟ್ಟಿಗೆ ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ೧೯೬೬ನೇ ಇಸವಿಯಲ್ಲಿ ಈ ಬೆಂಗಳೂರು ಡೈರಿ ಪ್ರಾರಂಭವಾದಾಗ, ಈಗ ವ್ಯವಸಾಯ ಮಂತ್ರಿಗಳಾಗಿರುವ ಶ್ರೀಮಾನ್ ಚಿಕ್ಕೇಗೌಡರು, ದೊಡ್ಡಬಳ್ಳಾಪುರದ ಶ್ರೀಮಾನ್ ರಾಮೇಗೌಡರು, ನಾವೆಲ್ಲಾ ಎಲೆಕ್ಟೆಡ್ ಡೈರೆಕ್ಟರ್ಸ್ ಆಗಿದ್ದೆವು. ೧೯೬೬ನೇ ಇಸವಿಯಿಂದ ೧೯೭೪ನೇ ಇಸವಿಯವರೆಗೆ ಬೆಂಗಳೂರು ಡೈರಿಗೆ ಎಲೆಕ್ಟೆಡ್ ಡೈರೆಕ್ಟರ್ಸ್ ಆಗಿದ್ದೆವು. ಆಗ ಸುಮಾರು ಐದು ಸಾವಿರ ಲೀಟರ್‌ನಿಂದ ಪ್ರಾರಂಭವಾದ ಈ ಡೈರಿ ಈಗ ಸುಮಾರು ನಾಲ್ಕು ಲಕ್ಷ ಲೀಟರ್ ಹಾಲು ಬರೀ ಕೋಲಾರ ಜಿಲ್ಲೆಯೊಂದರಿಂದಲೇ ಬರುತ್ತದೆಯೆಂದರೆ ಸುಮಾರು ೨೬ ವರ್ಷಗಳಲ್ಲಿ ಈ ಬೆಂಗಳೂರು ಡೈರಿ ಮತ್ತು ರಾಜ್ಯದಾದ್ಯಂತ ಇರುವ ಇತರೆ ಡೈರಿಗಳು ಬೆಳವಣಿಗೆಯಾಗಿವೆ ಎನ್ನುವುದನ್ನು ನಾವು ಅವಲೋಕಿಸಬೇಕಾಗಿದೆ. ಈ ಡೈರಿ ಬರೀ ಐದು ಸಾವಿರ ಲೀಟರ್‌ನಿಂದ ಪ್ರಾರಂಭವಾಯಿತು. ನನಗೆ ಗೊತ್ತಿರುವ ಹಾಗೆ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಬೆಂಗಳೂರು ಡೈರಿ ಪ್ರಾರಂಭ ಮಾಡಿದಾಗ ಕೇವಲ ಐದು ಸಾವಿರ ಲೀಟರ್ ಹಾಲಿನಿಂದ ಪ್ರಾರಂಭವಾಯಿತು. ಇದು ಸನ್ಮಾನ್ಯ ಚಿಕ್ಕೇಗೌಡರಿಗೂ ಸಹ ಗೊತ್ತಿದೆ. ಈಗ ನಾಲ್ಕು ಲಕ್ಷ ಹಾಲು ಬರೀ ಕೋಲಾರ ಜಿಲ್ಲೆಯೊಂದರಿಂದಲೇ ಸರಬರಾಜು ಆಗುತ್ತಿದೆ. ಇದರ ಜೊತೆಗೆ ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್‌ನಿಂದ ನಾಲ್ಕು ಲಕ್ಷ ಲೀಟರ್ ಹಾಲು ಸರಬರಾಜು ಆಗುತ್ತಿದೆ. ಅಂದರೆ ಬೆಂಗಳೂರು ಡೈರಿಗೆ ಸುಮಾರು ಎಂಟು ಲಕ್ಷ ಲೀಟರ್ ಹಾಲನ್ನು ಸರಬರಾಜು ಮಾಡುತ್ತಿದ್ದೇವೆ. ಇಷ್ಟು ಹಾಲನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಗಳಿಂದ ಪೂರೈಸಲಾಗುತ್ತಿದೆ. ನನಗೆ ತಿಳಿದಿರುವ ಮಟ್ಟಿಗೆ ಈಗ ಬೆಂಗಳೂರು ನಗರಕ್ಕೆ ಸುಮಾರು ೧೫ ಲಕ್ಷ ಲೀಟರ್ ಹಾಲು ಬೇಕೆಂದು ಗೊತ್ತಾಗಿದೆ. ಗ್ರಾಮಾಂತರ ಜಿಲ್ಲೆ ಮತ್ತು ಕೋಲಾರ ಜಿಲ್ಲೆಯಿಂದ ಸಪ್ಲೈ ಮಾಡುತ್ತಿರುವುದು ಇವತ್ತು ಎಂಟು ಲಕ್ಷ ಲೀಟರ್. ಆದರೆ ೧೫ ಲಕ್ಷ ಲೀಟರ್ ಡಿಮ್ಯಾಂಡಿದೆ. ಇನ್ನು ಉಳಿದ ಏಳು ಲಕ್ಷ ಲೀಟರ್‌ನ್ನು ಪ್ರೈವೇಟ್‌ನವರು ಸಪ್ಲೈ ಮಾಡುತ್ತಿರುವುದು ಸಾಲದು. ಆದ್ದರಿಂದ ಸರ್ಕಾರದವರೇ ಈ ಡೈರಿಗಳನ್ನು ಇನ್ನೂ ಹೆಚ್ಚು ಹೆಚ್ಚು ಮಾಡಬೇಕು. ಏಕೆ ಹೆಚ್ಚು ಮಾಡಬೇಕೆಂದರೆ, ಉದಾಹರಣೆಗೆ ನಮ್ಮ ಜಿಲ್ಲೆಯ ಶಿಡ್ಲಘಟ್ಟ ತಾಲ್ಲೂಕ್‌ನಲ್ಲಿ ೧೬೮ ಸೊಸೈಟಿಗಳಿವೆ. ಅದೇ ನಮ್ಮ ತಾಲ್ಲೂಕಿನಲ್ಲಿ ಬರೀ ೬೮-೭೦ ಸೊಸೈಟಿಗಳಿವೆ. ಇದಕ್ಕೆಲ್ಲಾ ಕಾರಣವೇನೆಂದರೆ, ನಾನು ಶಾಸಕನಾಗಿ ಚುನಾಯಿತನಾಗಿ ಎರಡು ವರ್ಷ ನಾಲ್ಕು ತಿಂಗಳು ಆದಮೇಲೆ ಅಲ್ಲಿಗೆ ಸುಮಾರು ೨೦ ಸಲ

ಹೋಗಿದ್ದೇನೆ. ಕೋಲಾರದಲ್ಲಿ ಡೈರಿ ಯೂನಿಯನ್ ಏನು ಇದೆ ಅಲ್ಲಿಗೆ ೨೦ ಸಲ ಹೋಗಿದ್ದೇನೆ. ಅವರಿಗೆ ಎನ್‌ಕರೇಜ್‌ಮೆಂಟ್ ಇಲ್ಲ. ಬೇರೆ ಸೊಸೈಟಿಯನ್ನು ಪ್ರಾರಂಭ ಮಾಡಬೇಕೆನ್ನುವುದು ಇದೆ. ನಾನು ಹೋಗಿ ತಿರುಗಿ ತಿರುಗಿ ಬೆದರಿಸಿದ್ದೇನೆ. ಅವರು ಹೋಗುವುದೇ ಇಲ್ಲ. ಅವರು ಏನೋ ಒಂದು ಕಾರಣವನ್ನು ಕೊಟ್ಟು ಮುಂದಕ್ಕೆ ಹಾಕುತ್ತಿದ್ದಾರೆ. ಎರಡು ವರ್ಷದಲ್ಲಿ ನಮಗೆ ೧೦ ಸೊಸೈಟಿಯನ್ನು ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಆದಕ್ಕೋಸ್ಕರ ನನ್ನ ಸಲಹೆ ಏನೆಂದರೆ, ಸರ್ಕಾರದವರೇ ಗುಜರಾತ್‌ನಲ್ಲಿರುವ ಆನಂದ್ ಡಿಸ್ಟ್ರಿಕ್‌ನಲ್ಲಿ ಏನಿದೆ ಅದನ್ನು ಮಾನ್ಯ ಚಿಕ್ಕೇಗೌಡರು ನೋಡಿದ್ದಾರೆ. ಡೆನ್ಮಾರ್ಕ್‌ನಲ್ಲಿರುವಂತೆ ನಮ್ಮ ಇಂಡಿಯಾ ದೇಶದಲ್ಲಿ ಆನಂದ್ ಕುರಿಯನ್ ಎನ್ನುವವರು ಈ ಡೈರಿ ಡೆವಲಪ್‌ಮೆಂಟ್‌ಗೆ ಏನು ಮಾಡಿದರು ಎನ್ನುವುದನ್ನು ಆನಂದ್ ಜಿಲ್ಲೆಗೆ ಹೋಗಿ ನೋಡಿ ಕೊಂಡು ಬಂದರೆ ಒಳ್ಳೆಯದು. ದಯವಿಟ್ಟು ಮಾನ್ಯ ಮಂತ್ರಿಗಳು ಆನಂದ್ ಜಿಲ್ಲೆಗೆ ಕರ್ನಾಟಕ ರಾಜ್ಯದಿಂದ ರೈತರನ್ನು ಕಳುಹಿಸಿಕೊಡಬೇಕು. ಅಲ್ಲಿ ಯಾವ ರೀತಿ ನಡೆಯುತ್ತಿದೆ, ಕೋಆಪರೇಟಿವ್ ಸೊಸೈಟೀಸ್ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಅವರು ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು. ಒಂದು ಸಾವಿರ ಪಾಪುಲೇಷನ್ ಯಾವ ಹಳ್ಳಿಯಲ್ಲಿ ಇದೆಯೋ ಅಲ್ಲಿ ಕಂಪಲ್‌ಸರಿಯಾಗಿ ಒಂದು ಡೈರಿ ಮಾಡಬೇಕು. ಒಂದೊಂದು ಸಾವಿರ ಜನಸಂಖ್ಯೆ ಇರುವ ಕಡೆ, ಯಾವುದೇ ಊರಾಗಲಿ, ಯಾವುದೇ ತಾಲ್ಲೂಕಾಗಲಿ, ಒಂದೊಂದು ಡೈರಿಯನ್ನು ಪ್ರಾರಂಭ ಮಾಡಬೇಕು. ನಾವು ಅದಕ್ಕೆ ಅರ್ಜಿಯನ್ನು ಕೊಟ್ಟರೆ ಅಲ್ಲಿನ ಗ್ರಾಮ ಸೇವಕರಿಗೆ ಕೊಡಬೇಕು. ಅಲ್ಲಿ ಇವತ್ತು ೫೬ ರಾಜಕೀಯಗಳು ಬಂದು ಬಿಟ್ಟಿವೆ. ಹೀಗೆ ಮುಂದಕ್ಕೆ ಹಾಕಿಹಾಕಿ ತೊಂದರೆಯಾಗುತ್ತಿದೆ. ಆದಕ್ಕೋಸ್ಕರ ಸರ್ಕಾರದವರೇ ಕಂಪಲ್‌ಸರಿಯಾಗಿ ಒಂದು ಸಾವಿರ ಜನಸಂಖ್ಯೆ ಇದ್ದರೆ ಅಲ್ಲೊಂದು ಡೈರಿಯನ್ನು ಪ್ರಾರಂಭ ಮಾಡಬೇಕು. ಬೆಂಗಳೂರು ಮತ್ತು ಕೋಲಾರ ಜಿಲ್ಲೆಯಲ್ಲಿ ಯಾವುದೇ ಮಹಾ ನದಿಗಳು ಇಲ್ಲ. ಕಾವೇರಿ ನದಿಯಾಗಲಿ, ತುಂಗಭದ್ರನದಿಯಾಗಲಿ, ಕೃಷ್ಣ ನದಿಯಾಗಲಿ, ನಮ್ಮ ಕೊಲಾರ ಜಿಲ್ಲೆಯಲ್ಲಿ ಇಲ್ಲ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಇಲ್ಲ. ನಮ್ಮ ಜಿಲ್ಲೆಯಲ್ಲಿ ಯಾವುದೋ ಪಾಲಾರ್ ನದಿ, ಶಿಂಷಾ ನದಿ, ಕಣ್ವನದಿ ಇದೆ. ಅವು ಸೆಪ್ಟಂಬರ್, ಆಕ್ಟೋಬರ್ ನವೆಂಬರ್ ಮೂರು ತಿಂಗಳು ಹರಿದು ಆಮೇಲೆ ನಿಂತು ಹೋಗಿಬಿಡುತ್ತದೆ. ನಮ್ಮ ಜಿಲ್ಲೆಯಲ್ಲಿ ಜನಸಂಖ್ಯೆ ಎಷ್ಟಿದೆ ಎಂದರೆ ಬೆಂಗಳೂರು ಸಿಟಿ, ಬೆಂಗಳೂರು ಗ್ರಾಮಾಂತರ, ತುಮಕೂರು ಮತ್ತು ಕೋಲಾರ ಸೇರಿದರೆ ನಮ್ಮ ರಾಜ್ಯದ ನಾಲ್ಕನೆಯ ಒಂದು ಭಾಗ ಅಂದರೆ ಒಂದು ಕೋಟಿ ಜನ ಸಂಖ್ಯೆ ಇದೆ. ನಮ್ಮ ರಾಜ್ಯದ ಜನಸಂಖ್ಯೆ ೧೯೯೧ನೇ ಇಸವಿಯ ಪ್ರಕಾರ ೪ ಕೋಟಿ ೪೮ ಲಕ್ಷ ಇದೆ. ಈ ನಾಲ್ಕು ಜಿಲ್ಲೆ ಸೇರಿದರೆ ಒಂದು ಕೋಟಿಯಾಗುತ್ತದೆ. ಅಂದರೆ ರಾಜ್ಯದ ನಾಲ್ಕನೆಯ ಒಂದು ಭಾಗದಷ್ಟು ಪ್ರಜಾಸಂಖ್ಯೆ ಇರುವ ಜಿಲ್ಲೆಗಳಲ್ಲಿ ಜೊತೆಗೆ ಯಾವುದೇ ರೀತಿಯಾದ ದೊಡ್ಡ ದೊಡ್ಡ ನದಿಗಳು ಇಲ್ಲದೇ ಇರುವಾಗ ಅಂತಹ ಸಮಯದಲ್ಲಿ ನಮ್ಮ ಜಿಲ್ಲೆಗಳಿಗೆ ಅನುಗುಣವಾದ ಲೋಕಲ್ ಪ್ರಾಡಕ್ಟ್ಸ್ ಏನಿದೆ, ಡೈರಿ ಇದರ ಜೊತೆಗೆ ತೋಟಗಾರಿಕೆ ಆಮೇಲೆ ಬರುತ್ತೇನೆ. ಒಂದು ಕೋಟಿ ಜನ ಸಂಖ್ಯೆ ಇರುವ ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಡೆನ್ಮಾರ್ಕ್‌ನಲ್ಲಿ ಏನು ಪ್ರಾರಂಭವಾಗಿದೆ ಆ ರೀತಿ ಲೋಕಲ್ ರಾಮೆಟೀರಿಯಲ್ ಏನು ಸಿಗುತ್ತದೆ ಅದನ್ನು ನೀವು ಡೆವಲಪ್ ಮಾಡುವುದಕ್ಕೆ ಪ್ರಾರಂಭ ಮಾಡಬೇಕೇ ಹೊರತು ಅದು ಮಾಡುತ್ತೇವೆ, ಇದು ಮಾಡುತ್ತೇವೆಂದರೆ ಏನೂ ಪ್ರಯೋಜನ ಇಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು ೬೦೦ ಸೊಸೈಟಿಗಳು ಇವೆ. ೨೧ ಸೊಸೈಟಿಗಳಿಂದ ಇವತ್ತು ೬೦೦

ಸೊಸೈಟಿಗಳಾಗಿವೆ. ಬಹುಶಃ ಎಲ್ಲಾ ಕೋಆಪರೇಟೀವ್ ಇನ್‌ಸ್ಟಿಟ್ಯೂಷನ್ಸ್ ಲಾಸ್ ಆದರೂ ಕೂಡ ಡೈರಿ ಸೊಸೈಟಿಗಳಿಗೆ ಶೇಕಡ ೯೫ ಭಾಗ ಬಂದಿದೆ. ಮಾನ್ಯ ಎಂ. ವಿ. ಕೃಷ್ಣಪ್ಪನವರು ಹೇಳುತ್ತಿದ್ದರು. ಡೆನ್ಮಾರ್ಕ್‌ನಲ್ಲಿ ಮತ್ತು ಗುಜರಾತ್‌ನಲ್ಲಿ ಅವರು ಹೋಗಿ ನೋಡುವಾಗ ಸೊಸೈಟಿಯ ಮುಂದೆ ಬೆಳಿಗ್ಗೆ, ಸಾಯಂಕಾಲ ಮತ್ತು ರಾತ್ರಿ ಹೊತ್ತು ಹೆಂಗಸರು, ಮಕ್ಕಳು ಬಕೀಟುಗಳಲ್ಲಿ, ಚೆಂಬುಗಳಲ್ಲಿ ಹಾಲನ್ನು ತೆಗೆದುಕೊಂಡು ನಿಂತಿರುವ ದೃಶ್ಯವನ್ನು ನೋಡುವುದಕ್ಕೆ ಬಹಳ ಸುಂದರವಾಗಿರುತಿತ್ತು ಎಂದು ಹೇಳುತ್ತಿದ್ದರು. ಆ ದೃಶ್ಯವನ್ನು ನಾವು ಇವತ್ತಿನ ದಿವಸ ನೋಡುತ್ತಿದ್ದೇವೆ. ಡೆನ್ಮಾರ್ಕ್‌ನಲ್ಲಿ, ಗುಜರಾತಿನಿಲ್ಲಿ ಅವರು ನೋಡಿದ್ದರೆಂದು ಏನು ಹೇಳುತ್ತಿದ್ದರು ಅದನ್ನು ಇವತ್ತು ನಾವು ಬೆಂಗಳೂರು ಗ್ರಾಮಾಂತರ ಜಿಲ್ಲೆ, ಕೋಲಾರ ಜಿಲ್ಲೆ, ತುಮಕೂರು ಜಿಲ್ಲೆಗಳಲ್ಲಿ ನೋಡುತ್ತಿದ್ದೇವೆ. ಆದರೆ ಇದಕ್ಕೆ ಸರ್ಕಾರದವರು ಉತ್ತೇಜನ ಸರಿಯಾಗಿಲ್ಲ. ನೀವು ಒಂದು ಸಾವಿರ ಜನಸಂಖ್ಯೆ ಇರುವ ಕಡೆ ಒಂದೊಂದು ಸೊಸೈಟಿಯನ್ನು ಕಂಪಲ್ ಸರಿಯಾಗಿ ಮಾಡಬೇಕು. ನಾವು ಅಪ್ಲಿಕೇಶನ್ ಹಾಕಿದ ಮೇಲೆ ನೀವು ಪ್ರಾರಂಭ ಮಾಡಬೇಡಿ. ಅದಕ್ಕೆ ೫೬ ಕಂಟಕಗಳನ್ನು ತರುತ್ತಿದ್ದಾರೆ. ಮಂತ್ರಿಗಳಲ್ಲ, ಅಧಿಕಾರಿಗಳು ಕಂಟಕಗಳನ್ನು ತರುತ್ತಿದ್ದಾರೆ. ಏಕೆಂದರೆ ನನಗೆ ಅನುಭವವಾಗಿದೆ ನಾನು ೧೯೭೬ ರಿಂದ ೮೪ರವರೆಗೆ ಎಂಟು ವರ್ಷಗಳ ಕಾಲ ಎಲೆಕ್ಟೆಡ್ ಡೈರೆಕ್ಟರ್ ಆಗಿದ್ದೆ. ೧೯೮೪ರಲ್ಲಿ ಕೌನ್ಸಿಲ್ ಚೇರಮನ್ ಆದಮೇಲೆ ನಾನು ಸ್ವತಃ ರಾಜಿನಾಮೆಯನ್ನು ಕೊಟ್ಟು ಬಿಟ್ಟೆ. ಜೊತೆಗೆ ನಮ್ಮ ಜಿಲ್ಲೆಗಳಲ್ಲಿ ಇದನ್ನು ಪ್ರಾರಂಭ ಮಾಡಬೇಕೆಂದು ಹೇಳದೆ ಇದ್ದರೆ ಸಾಧುವಾದುದಲ್ಲ. ಆದಕ್ಕೋಸ್ಕರ ಕಂಪಲ್‌ಸರಿಯಾಗಿ ಡೈರೀಸ್ ಅನ್ನು ಮಾಡಬೇಕು. ನಾವು ಅಪ್ಲಿಕೇಶನ್ ಹಾಕಿದ ಮೇಲೆ ನೀವು ಪ್ರಾರಂಭ ಮಾಡಬೇಡಿ. ನೀವೇ ಪ್ರಾರಂಭ ಮಾಡಬೇಕು. ಜೊತೆಗೆ ಪಟ್ಟಣದವರಿಗೂ ಮತ್ತು ಹಳ್ಳಿಯವರಿಗೂ ಹಾಲಿನ ಬೆಲೆಯಲ್ಲಿ ಸ್ವಲ್ಪ ವ್ಯತ್ಯಾಸಗಳು ಬರುತ್ತಿದೆ. ಇಲ್ಲಿ ಬೆಂಗಳೂರು ನಗರದಲ್ಲಿ ಅಧಿಕಾರಿಗಳು ಏನು ಮಾಡುತ್ತಾರೆಂದರೆ "ಹೋ ಹಾಲಿನ ಬೆಲೆ ಜಾಸ್ತಿಯಾಯಿತು ಎಂದು ಹೇಳುತ್ತಾರೆ. ಆದರೆ ಅದೇ ರೀತಿ ಅಲ್ಲಿ ಹಸುಗಳಾಗಲಿ, ಎಮ್ಮೆಗಳಾಗಲಿ, ನಾವು ಕೊಡುವ ಆಹಾರ ಪದಾರ್ಥಗಳು ಬೆಲೆಗಳು ಜಾಸ್ತಿಯಾಗಿವೆ. ರೈತ ಕೊಳ್ಳುವಂತಹ ಪ್ರತಿಯೊಂದು ಸಾಮಾನಿನ ಬೆಲೆಯೂ ಸಹ ಜಾಸ್ತಿಯಾಗುತ್ತಿರುವಾಗ, ಅಧಿಕಾರಿಗಳಿಗೆ ಆರು ತಿಂಗಳಿಗೊಂದು ಸಲ ಪ್ರೈಸ್ ಇಂಡೆಕ್ಸ್ ಜಾಸ್ತಿಯಾಯಿತು ಎಂದು ಡಿ. ಎ. ಟಿ. ಎ. ಜಾಸ್ತಿ ಮಾಡಬಹುದು ಆದರೆ ಹಸು ಎಮ್ಮೆಗಳಿಗೆ ಕೊಡುವ ಆಹಾರ ಪದಾರ್ಥಗಳ ಬೆಲೆ ಜಾಸ್ತಿಯಾದಾಗ ಅವರಿಗೆ ಜಾಸ್ತಿ ಮಾಡಬಾರದಾ? ಆದಕ್ಕೋಸ್ಕರ ಒಂದು ಕೆಲಸ ಮಾಡಿ. ಆಫೀಸರ್ಸ್ ಮತ್ತು ರೈತರ ಪ್ರತಿನಿಧಿಗಳು ಯಾರಿದ್ದಾರೆ ಅವರನ್ನೊಳಗೊಂಡ ಒಂದು ಪರ್ಮನೆಂಟ್ ಬಾಡಿ ಮಾಡಿ. ಅದರಲ್ಲಿ ಅಧಿಕಾರಿಗಳು ಪ್ರತಿನಿಧಿಗಳು ಇರಲಿ, ರೈತರ ಪ್ರತಿನಿಧಿಗಳು ಇರಲಿ ಸರ್ಕಾರದ ಪ್ರತಿನಿಧಿಗಳು ಇರಲಿ ಆಹಾರ ಉತ್ಪತ್ತಿ ಮಾಡುವವರ ಪ್ರತಿನಿಧಿಗಳು ಇರಲಿ. ಇವರೆಲ್ಲರೂ ಸೇರಿ ೬ ತಿಂಗಳಿಗೊಮ್ಮೆ ಇದನ್ನು ನ್ಯಾಯವಾಗಿ ಮಾಡಿದ್ದಾರಾ? ಅನ್ಯಾಯವಾಗಿ ಮಾಡಿದ್ದಾರಾ ಎನ್ನುವುದನ್ನು ಕಂಡು ಹಿಡಿಯುವುದಕ್ಕೋಸ್ಕರ ಒಂದು ಬೋರ್ಡ್‌ನ್ನು ಮಾಡಬೇಕೆಂದು ಕೇಳುತ್ತೇನೆ. ಏಕೆಂದರೆ, ಯಾವಾಗಲೂ ಗಲಾಟೆಯಾಗುತ್ತದೆ. ನಾವು ಹಳ್ಳಿಗಳ ಕಡೆಯಿಂದ ಬಂದವರು ಬೆಲೆಯನ್ನು ಜಾಸ್ತಿ ಮಾಡಬೇಕೆಂದರೆ, ಸಿಟಿಯಲ್ಲಿ ಎಲೆಕ್ಟ್ ಆಗಿರುವ ಶಾಸಕರಿಗೆ ಎಲ್ಲಿ ತೊಂದರೆಯಾಗುತ್ತದೆ ಎಂದು ಭಯ. ಅದು ಬೇಕಾಗಿಲ್ಲ. ನೀವು ಆರು ತಿಂಗಳಿಗೊಮ್ಮೆ ಪ್ರೈಸ್ ಇಂಡೆಕ್ಸ್‌ನಂತೆ ಯಾವಾಗ ಅಧಿಕಾರಿಗಳಿಗೆ ಸಂಬಳವನ್ನು ಜಾಸ್ತಿ ಮಾಡುತ್ತೀರೋ, ಅದೇ ಸಮಯದಲ್ಲಿ ಇಲ್ಲೇನಾದರೂ ಬೆಲೆಗಳು ಜಾಸ್ತಿ ಆಗಿದೆಯೇ ಎನ್ನುವುದರ ಬಗ್ಗೆ ಪರಿಶೀಲಿಸಲು

ಒಂದು ಬೋರ್ಡನ್ನು ಮಾಡಬೇಕು. ಹಾಲಿಗೆ ಮೇ, ಜೂನ್ ಮತ್ತು ಜುಲೈ ಲೀನ್ ಪೀರೀಡ್ ಬರುತ್ತದೆ. ನನಗೆ ಈಗಾಗಲೇ ಸ್ವಲ್ಪ ಗೊತ್ತಾಯಿತು. ರೈತ ಮಾರುವ ಹಾಲಿಗೆ ಸರಿಯಾದ ಬೆಲೆ ಸಿಗದೇ ಇದ್ದರೆ he will switch on to some other business. ಆತ ತೋಟಗಾರಿಕೆ ಕಡೆ ವಾಲುತ್ತಾನೆ. ನಮ್ಮ ಜಿಲ್ಲೆಯಲ್ಲಿ ವರ್ಷಕ್ಕೆ ೨೫ ಕೋಟಿ ರೂಪಾಯಿಗಳ ತರಕಾರಿ ಬೆಳೆಯುತ್ತಾರೆ. ಆಗ ಎಲ್ಲರೂ ಅತ್ತ ಕಡೆ ಹೋಗುತ್ತಾರೆ. ರೇಷ್ಮೆ ಬೆಲೆ ಈಗ ೫೦ ರೂಪಾಯಿಯಿಂದ ೨೫೦ ರೂಪಾಯಿಗಳಷ್ಟು ಜಾಸ್ತಿಯಾಗುತ್ತಿದೆ. ರೈತನಿಗೆ ಯಾವ ಕಡೆ ಜಾಸ್ತಿ ಲಾಭ ಬರುತ್ತದೋ, ಅತ್ತ ಕಡೆ 'ಸ್ವಿಚ್ ಆನ್'' ಮಾಡುತ್ತಾನೆ. ಬಹುಶಃ ಮುಂದೆ ಒಂದು ಕಾಲ ಬಂದರೂ ಬರಬಹುದು. ಏನೆಂದರೆ, ಬೆಂಗಳೂರು ಗ್ರಾಮಾಂತರದವರು ಮತ್ತು ಕೋಲಾರ ಜಿಲ್ಲೆಯವರು ಹಾಲನ್ನು ಸರಬರಾಜು ಮಾಡದೆ ಇದ್ದರೆ ಬೇಂಗಳೂರಿನ ಜನತೆ ಹಾಲು ಮತ್ತು ಕಾಫಿಗೆ ಬದಲಾಗಿ ಕಾವೇರಿ ನೀರನ್ನು ಮಾತ್ರ ಕುಡಿಯಬೇಕಾಗುತ್ತದೆ. ಸರ್ಕಾರದವರು ಮುಂದಾಲೋಚನೆ ಮಾಡಿ, ದಯವಿಟ್ಟು ಸರಿಯಾದ ಬೆಲೆಯನ್ನು ಅವರಿಗೆ ಕೊಟ್ಟರೆ ಅವರು ಅತ್ತ ಕಡೆ ಹಾಲು ಉತ್ಪತ್ತಿಗೋಸ್ಕರ ಹಸುವಾಗಲಿ, ಕ್ರಾಸ್‌ಬ್ರೀಡ್ ಎಮ್ಮೆಯಾಗಲಿ ಸಾಕುತ್ತಾರೆ ಎಂದು ನಾನು ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಕಾವೇರಿ ನೀರು ಸಹ ಕುಡಿಯುವುದಕ್ಕೆ ಸಿಗುವುದಿಲ್ಲವೆಂದು ಹೇಳುತ್ತಿದ್ದಾರೆ. ಮೇ, ಜೂನ್ ಮತ್ತು ಜುಲೈ ತಿಂಗಳುಗಳಲ್ಲಿ ಹಾಲು, ಕಾಫಿ, ಟೀ ಗೆ ಬದಲಾಗಿ ಕಾವೇರಿ ನೀರನ್ನು ಕುಡಿಯುವ ಸಂದರ್ಭ ಬಂದೀತು. ಈ ವರ್ಷ ಎಲ್ಲಾ ಜಿಲ್ಲೆಗಳಲ್ಲೂ ಮಳೆ ಜಾಸ್ತಿ ಬಂದರೂ ಸಹ, ಈ ಲೀನ್ ಪೀರಿಡ್‌ನಲ್ಲಿ ಹಾಲಿನ ಸರಬರಾಜು ಕಡಿಮೆಯಾಗುವ ಸಂಭವವಿದೆಯಂದು ನನಗೆ ಗೊತ್ತಾಗಿದೆ. ನಾನು ಒಂದು ದಿವಸ ಮಂತ್ರಿಗಳ ಹತ್ತಿರ ಮಾತನಾಡುವಾಗ ಈ ವಿಷಯ ಪ್ರಸ್ತಾಪಕ್ಕೆ ಬಂತು. ಆದಕ್ಕೋಸ್ಕರ ನೀವು ಬೆಲೆಯನ್ನು ಹೆಚ್ಚು ಮಾಡಬೇಕು. ಅನಂತರ ಹಾಲು ಉತ್ಪಾದಿಸಿ, ಜಿಲ್ಲಾ ಕೇಂದ್ರಗಳಿಗೂ ಕೂಡ ಕಳುಹಿಸಿಕೊಡಬೇಕು. ಬರೀ ಬೆಂಗಳೂರು ನಗರದಲ್ಲಿರುವವರೇ ಹಾಲು ಕುಡಿಯಬೇಕೆಂಬ ಕಾನೂನಿಲ್ಲ. ಇಲ್ಲಿ ಪ್ರೋಸೆಸ್ ಮಾಡಿ ಎಲ್ಲಾ ಸಿದ್ಧ ಮಾಡುತ್ತಾರೆ. ಉದಾಹರಣೆಗೆ, ಕೆ.ಜಿ.ಎಫ್., ಕೋಲಾರ, ಚೆನ್ನಪಟ್ಟಣ, ದೊಡ್ಡಬಳ್ಳಾಪುರ ಇಂತಹ ದೊಡ್ಡ ದೊಡ್ಡ ನಗರಗಳಲ್ಲಿ ೫೦೦೦೦-೬೦೦೦೦ ಜನಸಂಖ್ಯೆ ಏನಿದ್ದಾರೆ, ಅಂತಹ ಕಡೆ ಹಾಲನ್ನು ಕಳುಹಿಸಿಕೊಡಬೇಕು. ಈ ಡೈರಿ ವಿಚಾರವಾಗಿ ಕೊನೆಯ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಡೈರಿ ಸ್ಥಾಪನೆಯಾಗಿ ೨೬ ವರ್ಷಗಳಾಯಿತು. ಅನೇಕ ಫ್ಯಾಕ್ಟರಿಗಳಾಗಲಿ ಇತರೆ ಸಂಘ-ಸಂಸ್ಥೆಗಳಾಗಲಿ ೨೫ ವರ್ಷವಾದರೆ ಬೆಳ್ಳಿಹಬ್ಬವನ್ನು ಆಚರಿಸುತ್ತವೆ. ಇಲ್ಲಿ ಎಲ್ಲಿ ಬೆಳ್ಳಿ ಹಬ್ಬ ಮಾಡುತ್ತಾರೆ? ರೈತನನ್ನು ಯಾರು ಕೇಳುವವರಿಲ್ಲ. ನಾನು ಒಂದು ಸಲ ಕೇಳಿದೆ. ನಾನು ಆಗ ಡೈರಿಯಲ್ಲಿ ಆರು ವರ್ಷ ಡೈರೆಕ್ಟರ್ ಆಗಿದ್ದೆ. 'ಸ್ವಾಮಿ, ೨೫ ವರ್ಷವಾಯಿತು, ಬೆಳ್ಳಿಹಬ್ಬವನ್ನು ಆಚರಿಸುವುದಕ್ಕೆ ಏನಾದರೂ ಏರ್ಪಾಡು ಮಾಡಿ' ಎಂದು ಕೇಳಿದೆ. ಪ್ರತಿಯೊಂದು ಸೊಸೈಟಿಯೂ ಲಾಭದಲ್ಲಿದೆ. ಇವೊತ್ತು ಪ್ರತಿಯೊಂದು ಸೊಸೈಟಿಯಲ್ಲಿರತಕ್ಕವರು ಸ್ವಂತವಾಗಿ ಬಿಲ್ಡಿಂಗ್ ಕಟ್ಟಿಕೊಂಡು ಸಂತೋಷದಿಂದ್ದಾರೆ. ಉದಾಹರಣೆಗೆ, ಪ್ರತಿ ದಿವಸ ಕೋಲಾರ ಜಿಲ್ಲೆಯಿಂದ ೪ ಲಕ್ಷ ಲೀಟರ್ ಹಾಲು ಬರುತ್ತದೆ. ಒಂದು ಲೀಟರ್‌ಗೆ ನಾಲ್ಕು ರೂಪಾಯಿಗಳು. ಅಂದರೆ, ಒಂದು ದಿವಸಕ್ಕೆ ೧೬ ಲಕ್ಷ ರೂಪಾಯಿಗಳಾಯಿತು, ತಿಂಗಳಿಗೆ ೪ ಕೋಟಿ ೮೦ ಲಕ್ಷ ರೂಪಾಯಿಗಳಾಯಿತು, ವರ್ಷಕ್ಕೆ ಸ್ವಲ್ಪ ಹೆಚ್ಚು-ಕಡಿಮೆ ಸರಾಸರಿ ೬೦ ಕೋಟಿ ರೂಪಾಯಿಗಳಾಯಿತು. ಇಷ್ಟು ದುಡ್ಡು ಯಾರಿಗೆ ಸೇರುತ್ತದೆ? ಬಡವ, ಮಿಡ್ಲ್ ಅಂಡ್ ಲೋಯರ್ ಮಿಡ್ಲ್ ಕ್ಲಾಸ್, ಪೂರರ್ ಸೆಕ್ಷನ್,

ಹರಿಜನ-ಗಿರಿಜನರು ಮತ್ತು ಲೋಯರ್ ಕ್ಲಾಸ್ ಪೀಪಲ್‌ಗೆ ಸೇರುತ್ತಿದೆಯೇ ಹೊರತು ಸಾಹುಕಾರರಿಗೆ ಸೇರುತ್ತಿಲ್ಲ. ಅಂತಹ ಬಡ-ಬಗ್ಗರಿಗೆ [illegible] ಹಾಲಿನ ಉತ್ಪತ್ತಿ[illegible] ಜೊತೆಗೆ ಹೆಚ್ಚಾಗಿ ಹಸು, ಎಮ್ಮೆಗಳನ್ನು ತೆಗೆದುಕೊಡಬೇಕು. ಅದೇ ರೀತಿ ಔಷಧಿಗಳು, ಜೊತೆಗೆ ಪ್ರಾಣಿಗಳಿಗೆ ಏನು ಆಹಾರ ಬೇಕೋ ಅದನ್ನು ಒದಗಿಸಿಕೊಟ್ಟು, ಅವರು ಹಾಲನ್ನು ತಂದು ಕೊಡುವಾಗ ಅದೇ ವ್ಯಾನಿನಲ್ಲಿ ಫಾಢರ್‌ನ್ನು ವಾಪಸ್ಸು ಕಳುಹಿಸಿಕೊಡಬೇಕು. ತಾವು ಆನಂದ ಜಿಲ್ಲೆಗೆ ಹೋಗಿದ್ದೀರಿ ಎಂದು ಕಾಣುತ್ತದೆ. ತಾವು ಹೋಗದೆ ಇದ್ದರೆ ಒಂದು ಸಲ ಹೋಗಿ ಬನ್ನಿ. ನೀವು ಬೆಳ್ಳಿ ಹಬ್ಬವನ್ನು ಆದಷ್ಟು ಬೇಗ ಮಾಡಬೇಕು. ಏಕೆಂದರೆ, ನಾನು ಮತ್ತು ಸನ್ಮಾನ್ಯ ಶ್ರೀ ಚಿಕ್ಕೇಗೌಡರು ಅದರಲ್ಲಿ ಇದ್ದವರು. ಇವೊತ್ತು ಆರ್ಡಿನರಿ ಮತ್ತು ಗೌರ್ನಮೆಂಟ್ ಫ್ಯಾಕ್ಟರಿಗಳೆಲ್ಲಾ ಬೆಳ್ಳಿಹಬ್ಬವನ್ನು ಆಚರಿಸುತ್ತವೆ. ಇಂತಹ ಒಂದು ಕೋಟಿ ಜನರಿಗೆ ಅನುಕೂಲವಾಗುವಂತೆ ಬೆಂಗಳೂರು ಡೈರಿ ಬೆಳ್ಳಿ ಹಬ್ಬವನ್ನು ಆಚರಿಸಲಿಲ್ಲವೆಂದರೆ ಏನರ್ಥ ? ಆದುದರಿಂದ, ತಾವು ಆದಷ್ಟು ಬೇಗ ಬೆಳ್ಳಿಹಬ್ಬವನ್ನು ಮಾಡಬೇಕು. ಇಷ್ಟು ವಿಷಯವನ್ನು ಡೈರಿಯ ಬಗ್ಗೆ ಮಾತನಾಡಿ, ಇನ್ನು ತೋಟಗಾರಿಕೆ ಬಗ್ಗೆ ನಾನು ಮಾತನಾಡಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಸುಮಾರು ೬೦೦೦೦ ಎಕರೆಯಲ್ಲಿ ಮಾವಿನ ಗಿಡಗಳು ಮಾತ್ರ ಇವೆ. ೬೦ ಸಾವಿರ ಎಕರೆಯಲ್ಲಿ ಬರೀ ಮಾವಿನ ಗಿಡಗಳು ಕೋಲಾರ ಜಿಲ್ಲೆಯಲ್ಲಿದೆ. ಅದರ ಜೊತೆಗೆ ಬೆಂಗಳೂರು ಜಿಲ್ಲೆ, ಚೆನ್ನಪಟ್ಟಣ, ರಾಮನಗರ, ತುಮಕೂರು ಜಿಲ್ಲೆಗಳೆಲ್ಲಾ ಸೇರಿ ಹೆಚ್ಚು-ಕಡಿಮೆ ಒಂದೂವರೆ ಲಕ್ಷ ಎಕರೆಗಳು ಈ ೨-೩ ಜಿಲ್ಲೆಗಳಲ್ಲಿವೆ. ಇಲ್ಲಿ ನಮಗೆ ಸರಿಯಾದ ಅನುಕೂಲಗಳಿಲ್ಲ. ಕೋಲ್ಡ್ ಸ್ಟೋರೇಜ್ ಬೇಕಾಗಿದೆ. ಉದಾಹರಣೆಗೆ, ಇಲ್ಲಿ ಪ್ರಾಪರ್ ರೀಸರ್ಚ್ ಸ್ಟೇಶನ್ ಇಲ್ಲ. ಬಹುಶಃ ತೋಟಗಾರಿಕೆ ಸಚಿವರಾದ ಶ್ರೀ ಆತ್ಮಾನಂದರವರು ಇನ್ನು ಯುವಕರಾಗಿದ್ದಾರೆ. ಇಂಡೋ-ಅಮೇರಿಕನ್ ಚೀಫ್ ಎಂದು ಶ್ರೀ ಮನೋಹರರಾವ್‌ರವರು ಇದ್ದಾರೆ. ತಾವು ಒಂದು ಸಲ ಹೋಗಿ ಅವರನ್ನು ಬೇಟಿ ಮಾಡಬೇಕು. ಬಹುಶಃ ಏಷ್ಯಾ ಖಂಡದಲ್ಲೇ ಅಂತಹ ಒಂದು ರೀಸರ್ಚ್ ಸ್ಟೇಶನ್ ಇಲ್ಲ ಎಂದು ನನಗನ್ನಿಸುತ್ತದೆ. ವರ್ಷಕ್ಕೆ ನಾಲ್ಕು ವಿಶೇಷ ವಿಮಾನಗಳಲ್ಲಿ ಇಲ್ಲಿಂದ ಗಲ್ಫ್ ಕಂಟ್ರೀಸ್‌ಗೆ ಮಾವಿನ ಗಿಡಗಳನ್ನು ಕಳುಹಿಸಿಕೊಡುತ್ತಾರೆ. ಅದು ಪ್ರೈವೇಟ್ ಫರ್ಮ್. It is not a Government farm. ಅವರು ಗಲ್ಫ್ ಕಂಟ್ರೀಸ್‌ಗೆ ಹೂವಿನ ಗಿಡಗಳನ್ನು ಕಳುಹಿಸಿಕೊಡುತ್ತಾರೆ. ಅದೇ ರೀತಿ ಸರ್ಕಾರದವರೂ ಕೂಡ ಮಾವಿನ ಗಿಡವಾಗಲಿ, ಸೀಬೆ ಗಿಡವಾಗಲಿ, ತೆಂಗಿನ ಗಿಡವಾಗಲಿ, ಹೂವಿನ ಗಿಡಗಳನ್ನಾಗಲಿ ಮಾಡಬೇಕು. ಈ ರೀತಿ ರಿಸರ್ಚ್ ಸ್ಟೇಷನ್ ಪ್ರಾರಂಭ ಮಾಡಿದರೆ ಸರ್ಕಾರಕ್ಕೂ ಲಾಭವಾಗುತ್ತದೆ. ಜೊತೆಗೆ ಸುತ್ತ ಮುತ್ತ ಇರುವ ಈ ೪ ಜಿಲ್ಲೆಗಳ ಬಗ್ಗೆ ನಾನು ಏನು ಡ್ಯಾನಿಷ್ ಡಿಸ್ಟ್ರಿಕ್ಟ್ ಬಗ್ಗೆ ಹೇಳಿದ್ದೆ ಆ ರೀತಿಯಲ್ಲಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆ ರೀತಿ ರಿಸರ್ಚ್ ಸ್ಟೇಷನ್ಸ್ ಹೆಚ್ಚಾಗಿ ಮಾಡಬೇಕು.

ಇನ್ನು ಕೋಲ್ಡ್ ಸ್ಟೋರೇಜ್ ಅನುಕೂಲತೆಯ ಬಗ್ಗೆ ಹೇಳಬೇಕಾಗಿದೆ. ಬಹುಶಃ ಎರಡು ಜಿಲ್ಲೆಗಳಲ್ಲಿ ಅಂದರೆ ತುಮಕೂರು, ಕೋಲಾರ ಮತ್ತು ಬೆಂಗಳೂರಿನ ರೂರಲ್ ಭಾಗಗಳಲ್ಲಿ ತಾಲ್ಲೂಕಿಗೆ ಒಂದರಂತೆ ಈ ವರ್ಷದಲ್ಲಿ ೪ ಕೋಲ್ಡ್ ಸ್ಟೋರೇಜ್‌ನ್ನು ಮಾಡಬೇಕು. ಬೆಂಗಳೂರಿಗೆ ತರಕಾರಿ ತರಬೇಕೆಂದರೆ ರೈತರಿಗೆ ಸರಿಯಾದ ಸೌಕರ್ಯವಿಲ್ಲ. ಹಾಲನ್ನು ಬೆಂಗಳೂರಿಗೆ ಯಾವ ರೀತಿ ಸಾಗಿಸುತ್ತಿದ್ದೀರೋ ಅದೇ ರೀತಿ ತರಕಾರಿಗಳನ್ನು ಸಾಗಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ಉದಾಹರಣೆಗೆ ನಮ್ಮ ಜಿಲ್ಲೆಯಿಂದ, ನಮ್ಮ ತಾಲ್ಲೂಕಾದ ಮುಳಬಾಗಿಲಿನಲ್ಲಿ ವರ್ಷಕ್ಕೆ ಸುಮಾರು

೫ **ಕೋಟಿ** ರೂಪಾಯಿಯ ಟೊಮ್ಯಾಟೊವನ್ನು ಬೆಳೆಯುತ್ತಾರೆ. ಈ ೫ ಕೋಟಿ ರೂಪಾಯಿಗಳ **ಟೊಮ್ಯಾಟೊಗಳು** ಎಲ್ಲಿಗೆ ಹೋಗುತ್ತವೆ ಎಂದರೆ ಅವೆಲ್ಲವೂ ಸಹ ವಿಜಯವಾಡ, ತಿರುಪತಿ, ಮದರಾಸ್, ಕಲ್ಕತ್ತಾ ಮತ್ತು ದೆಹಲಿಗಳಿಗೆ ಹೋಗುತ್ತದೆ. ನಮ್ಮ ಮುಳಬಾಗಿಲು ಟೌನ್‌ನಿಂದ ದಿನಕ್ಕೆ ೨೫ ಲಾರಿ ಲೋಡ್ ಹೋಗುತ್ತದೆ. ನಮ್ಮ ಒಂದು ಹಳ್ಳಿಯಿಂದಲೆ ೧೯೭೨ನೇ ಇಸವಿಯಲ್ಲಿ ಸುಮಾರು ೧೦ ಲಕ್ಷ ಬೆಲೆ ಬಾಳುವ ಟೊಮ್ಯಾಟೋವನ್ನು ನಾವು ಕಿಸಾನ್ ಫ್ಯಾಕ್ಟರಿಗೆ ಕಳಿಸಿದ್ದೆವು. Tomatoes worth Rs. 10 lakhs were supplied to Kissan Factory. ಅದು ಮಾನ್ಯ ಚಿಕ್ಕೇಗೌಡರಿಗೂ ಸಹ ಗೊತ್ತಿದೆ. ಅವರ ಊರಿನಿಂದಲೂ ಸಹ ೧೦ ಲಕ್ಷ ರೂಪಾಯಿಗಳ ಟೊಮ್ಯಾಟೊವನ್ನು ಸಪ್ಲೈ ಮಾಡಿದ್ದರು. ನಾವು ಅವರೂ ಸ್ವಂತವಾಗಿ ಬೆಳೆದಿರುವುದು ಕೊಂಡು ಕೊಂಡು ಮಾಡಿರುವುದಲ್ಲ. ನಾವೆಲ್ಲಾ ಸ್ವಂತವಾಗಿ ಬೆಳೆದಿದ್ದೇವೆ. ಅದಕ್ಕೋಸ್ಕರ ವಿಶೇಷವಾಗಿ ಈ ಎರಡು ಜಿಲ್ಲೆಗಳಲ್ಲಿನ ಒಂದೊಂದು ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿ ಒಂದೊಂದು ಕೋಲ್ಡ್ ಸ್ಟೋರೇಜ್ ಮಾಡಲೇಬೇಕು. ಏಕೆಂದರೆ ಹೂವು ಇರುತ್ತದೆ, ತರಕಾರಿ ಇರುತ್ತದೆ, ಆಲೂಗಡ್ಡೆ ಇರುತ್ತದೆ, ಮೆಣಸಿನಕಾಯಿ ಇರುತ್ತದೆ. ಬೆಂಗಳೂರು ನಗರಕ್ಕೆ ಪ್ರತಿಯೊಂದು ತರಕಾರಿಯೂ ಸಹ ಈ ಎರಡು ಜಿಲ್ಲೆಗಳಿಂದಲೇ ಬರಬೇಕಾಗುತ್ತದೆ. ಅದಕ್ಕೋಸ್ಕರ ಕೋಲ್ಡ್ ಸ್ಟೋರೇಜ್‌ನ್ನು ಮಾಡಬೇಕು.

ಇನ್ನು ಮಾವಿನ ತೋಟದ ಬಗ್ಗೆ ಹೇಳುತ್ತೇನೆ. ಉದಾಹರಣೆಗೆ ಪೂನಾದ ಹತ್ತಿರವಿರುವ ರತ್ನಗಿರಿ ಆಲ್‌ಫಂಜ್ ಎನ್ನುವ ಒಳ್ಳೆಯ ವೈರೈಟಿಯ ಮಾವಿನ ಹಣ್ಣು ೧ ಕೆ. ಜಿ.ಗೆ ಸುಮಾರು ೨೦-೩೦ ರೂಪಾಯಿಗೆ ಹೋಗುತ್ತದೆ. ಆ ರೀತಿಯ ಮಾವಿನ ೫೦೦ ಗಿಡಗಳನ್ನು ನಾನು ಹಾಕಿದ್ದೇನೆ. ಇದರ ಜೊತೆ ಸೀಬೆ ಗಿಡ ಸಹ ಇದೆ. ನಾವು ಸ್ವತಃ ಕೃಷಿಗಾರಿಕೆಯ ಕುಟುಂಬದಿಂದ ಬಂದವರು. ಈಗ ಹೊಸದಾಗಿ ಮಲ್ಲಿಕಾ ಮಾವಿನ ತಳಿ ಬಂದಿದೆ. ಮಾನ್ಯ ತೋಟಗಾರಿಕೆಯ ಸಚಿವರಾದ ಶ್ರೀಮಾನ್ ಆತ್ಮಾನಂದರವರು ದಯಮಾಡಿ ಇಂಡೋ-ಅಮೇರಿಕನ್ ಸೀಡ್ಸ್ ಕೇಂದ್ರಕ್ಕೆ ಹೋಗಬೇಕು. ಹೋಗಿ ಅವೆಲ್ಲವನ್ನು ನೋಡಿಕೊಂಡು ಬರಬೇಕು. ಇನ್ನು ಪ್ರೊಸೆಸಿಂಗ್ ಯೂನಿಟ್ ಕಿಸಾನ್ ಫ್ಯಾಕ್ಟರಿಯೊಂದನ್ನು ಬಿಟ್ಟರೆ ನಮ್ಮ ಬೆಂಗಳೂರಿನ ಸುತ್ತ ಮುತ್ತ, ಅಕ್ಕಪಕ್ಕದಲ್ಲೆಲ್ಲೂ ಇಲ್ಲ. ಏಕೆಂದರೆ ಸಾವಿರಾರು ಟನ್ ಮಾವಿನ ಹಣ್ಣು ಏನಿದೆ ಅವೆಲ್ಲವನ್ನೂ ಯಾರೋ ಬಂದು ಕೊಂಡುಕೊಳ್ಳುತ್ತಾರೆ. ೨-೩ ವರ್ಷಕ್ಕೆ ಒಂದೊಂದುಸಲ ಮಾವಿನ ತೋಪನ್ನು ಅನೇಕ ವ್ಯಾಪಾರಸ್ಥರು ಕೊಂಡು ಕೊಳ್ಳುವವರಿದ್ದಾರೆ. ಪಾಪ ರೈತರ ಹತ್ತಿರ ಹಣ ಇರುವುದಿಲ್ಲ ಅವರಿಗೆ ಈ ರೀತಿ ಮಾವಿನ ತೋಪನ್ನು ಕೊಟ್ಟು ಬಿಟ್ಟರೆ ಅವರಿಗೆ ಸುಮಾರು ೩-೪ ರಷ್ಟು ಆದಾಯ ಬರುತ್ತದೆ ಅದಕ್ಕೋಸ್ಕರ ಪ್ರೊಸೆಸಿಂಗ್ ಯುನಿಟ್ ಮಾಡಬೇಕು. ಈಗ ೧೫ ಕೋಟಿ ವೆಚ್ಚದಲ್ಲಿ ಶ್ರೀನಿವಾಸಪುರದ ಹತ್ತಿರ ಪ್ರೊಸೆಸಿಂಗ್ ಯೂನಿಟ್ ಪ್ರಾರಂಭವಾಗುತ್ತದೆಂದು ಹೇಳಿದ್ದೀರಿ. ಇದನ್ನು ಎಲ್ಲಾ ಜಿಲ್ಲೆಗಳಲ್ಲಿಯೂ ಮಾಡಿ. ಬೆಂಗಳೂರಿನ ಸುತ್ತ ಮುತ್ತ ಮಾಡಿ. ಬೆಂಗಳೂರು ಸುತ್ತ ಮುತ್ತ ಹೆಚ್ಚಾಗಿ ತೋಟಗಳಿರುವಾಗ ಪ್ರೊಸೆಸಿಂಗ್ ಯೂನಿಟ್ ಮಾಡಿದರೆ ತಪ್ಪೇನಿದ? ಇವತ್ತು ಪ್ರೊರ್ರಸೆಸಿಂಗ್ ಯುನಿಟ್ಸ್ ಮತ್ತು ಕೋಲ್ಡ್ ಸ್ಟೋರೇಜ್‌ಸ್ ಹೆಚ್ಚಾದರೆ ನಮ್ಮ ೨-೩ ಜಿಲ್ಲೆಗಳಿಂದ ಬರತಕ್ಕ ರೈತರಿಗೆ ಅನುಕೂಲವಾಗುತ್ತದೆ. ಒಂದು ಅಸಮಾಧಾನವೇನಂದರೆ, ಶೇಕಡ ೮೦ರಷ್ಟು ರೈತರ ಪ್ರತಿನಿಧಿಗಳು ಇಲ್ಲಿರುವಾಗ ಇವತ್ತು ಕೇವಲ ೨೦ ಜನರಿಗ ಈ ವಿಷಯವನ್ನು ಹೇಳಬೇಕಾಗಿದೆಯಲ್ಲ ಎಂದು ನನಗೆ ವ್ಯಥೆಯಾಗುತ್ತಿದ. ಆದರೂ ಪರವಾಗಿಲ್ಲ. That is a different issue. ಇನ್ನು ಬೆಂಗಳೂರಿನ ಸುತ್ತಮುತ್ತ

ಸುಮಾರು ದ್ರಾಕ್ಷಿಯನ್ನು ಬೆಳೆಯುತ್ತಾರೆ. ಸೀಡ್‌ಲೆಸ್ ಅನಾಭಿಷಾಹಿ ಮುಂತಾದ ದ್ರಾಕ್ಷಿಯನ್ನು ಬೇಕಾದಷ್ಟು ಪ್ರಮಾಣದಲ್ಲಿ ಮೊದಲಿನಿಂದಲೂ ಬೆಳೆಯುತ್ತಿದ್ದಾರೆ. ಆದರೆ ಇತ್ತೀಚೆಗೆ ಅದನ್ನೆಲ್ಲಾ ರೈತರು ಕಡಿಯುತ್ತಿದ್ದಾರೆ. ಏಕೆಂದರೆ, ಇದರ ಬಗ್ಗೆ ಸರಿಯಾಗಿ ರೀಸರ್ಚ್ ಮಾಡಿಲ್ಲವೋ? ಅಥವಾ ಬೆಂಗಳೂರಿನ ವಾತಾವರಣ ಅದಕ್ಕೆ ಸರಿ-ಹೊಂದುವುದಿಲ್ಲವೇನೋ? ಈ ಎಲ್ಲಾ ತೊಂದರೆಗಳಾಗುತ್ತಿದೆ. ವ್ಯವಸಾಯ ಮಂತ್ರಿಗಳಾದ ಶ್ರೀಮಾನ್ ಚಿಕ್ಕೇಗೌಡರನ್ನು ಹಳ್ಳಿಯಲ್ಲಿದ್ದಾಗ ಹೋಗಿ ನೋಡಿದರೆ ಅವರು ಗುರುತೇ ಸಿಕ್ಕುವುದಿಲ್ಲ. ಬರೀ ನಿಕ್ಕರ್ ಹಾಕಿಕೊಂಡು ವ್ಯವಸಾಯಕ್ಕೆ ಇಳಿದು ಬಿಟ್ಟಿರುತ್ತಾರೆ. ಗುದ್ದಲಿ ಹಿಡಿದಿರುತ್ತಾರೆ ಅಥವಾ ತೋಟಕ್ಕೆ ನೀರನ್ನು ಹಾಯಿಸುತ್ತಾ ಇರುತ್ತಾರೆ. ಅದನ್ನು ನಾನು ಕಣ್ಣಾರೆ ನೋಡಿದ್ದೇನೆ. ಅವರನ್ನು ಕೃಷಿ ಮಂತ್ರಿಗಳಾಗಿ ಮಾಡಿರುವುದು ಬಹಳ ಒಳ್ಳೆಯದು. ಏಕೆಂದರೆ ಅವರು ಕೃಷಿಗಾರರ ಕುಟುಂಬದಿಂದ ಬಂದಿದ್ದಾರೆ. ವ್ಯವಸಾಯದ ವಿಷಯ ಗೊತ್ತಿರುವವರನ್ನು ವ್ಯವಸಾಯ ಮಂತ್ರಿಗಳನ್ನಾಗಿ ಮಾಡಿದರೆ ಒಳ್ಳೆಯದು. ಯಾರೋ ಬೇರೆಯವರನ್ನು ಕೃಷಿ ಮಂತ್ರಿಗಳನ್ನಾಗಿ ಮಾಡಿದರೆ ಪ್ರಯೋಜನವಾಗುವುದಿಲ್ಲ. ಅದೇ ಪ್ರಕಾರ ನಮ್ಮ ತೋಟಗಾರಿಕೆ ಸಚಿವರಾದ ಆತ್ಮಾನಂದರವರು ಅಷ್ಟೆ. ಅವರ ತಂದೆ ಬಹಳ ಒಳ್ಳೆಯ ಜನ. ನೀವು ಇನ್ನು ಯುವಕರಾಗಿದ್ದೀರಿ, ಈ ತೋಟಗಾರಿಕೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ಒಂದು ವಿಷಯವನ್ನು ಹೇಳುತ್ತೇನೆ. ಈ ವಿಧಾನಸೌಧದ ಮುಂದೆ ದಿವಸಕ್ಕೆ ಸಾವಿರಾರು ಜನರು ಬಂದು ಹೋಗುತ್ತಾರೆ, ವಿಧಾನಸೌಧ ನೋಡಬೇಕು, ಹೈಕೋರ್ಟ್ ನೋಡಬೇಕು ಎಂದು ಬಂದು ಹೋಗುತ್ತಾರೆ. ಇಲ್ಲಿ ಸಮ್ಮರ್ ಪ್ರಾರಂಭವಾದಾಗ ಮಾರ್ಚ್, ಏಪ್ರಿಲ್, ಮೇ, ಜೂನ್ ತಿಂಗಳವರೆಗೂ ಅಂದರೆ ಮಳೆ ಬರುವವರೆಗೂ ಹಸಿರು ಇರುವುದಿಲ್ಲ. ಅಟ್‌ಲೀಸ್ಟ್ ವಿಧಾನಸೌಧದ ಮುಂದೆ ಬಿಟ್‌ವೀನ್ ಹೈಕೋರ್ಟ್ ಮತ್ತು ವಿಧಾನಸೌಧದ ಮಧ್ಯದಲ್ಲಿ ಏನು ಇದೆ ಗ್ರೀನರಿ, ಅದಕ್ಕೆ ಸ್ವಲ್ಪ ನೀರನ್ನಾದರೂ ಹಾಯಿಸಿ ಜನತೆಯ, **not only the citizens of Bangalore but** ಔಟ್‌ಸೈಡ್‌ನಿಂದ ಬರುತ್ತಾರೆ ಏಕೆಂದರೆ ನಾವು ವಾಷಿಂಗ್‌ಟನ್ ನೋಡಿದ್ದೇವೆ, ಇಂಗ್ಲೆಂಡ್‌ನಲ್ಲಿ ನೋಡಿದ್ದೇವೆ, ಆಮೇಲೆ ಟೋಕಿಯೋದಲ್ಲಿ ನೋಡಿದ್ದೇವೆ. ಎಂಥ ಸಮ್ಮರ್‌ನಲ್ಲಿ ಹೋಗಲಿ, ಅಲ್ಲಿ ಬಹಳ ಗ್ರೀನರಿಯಾಗಿರುತ್ತದೆ. ವಾಷಿಂಗ್‌ಟನ್‌ನಲ್ಲಿ ನಾವು ಹೋಗಿದ್ದಾಗ ಅಷ್ಟು ಗ್ರೀನ್ ಇತ್ತು. ಇಲ್ಲಿ ನೀವು ಕಬ್ಬನ್ ಪಾರ್ಕ್ ಎಲ್ಲಾ ಗ್ರೀನರಿ ಮಾಡಿ ಎಂದು ನಾನು ಹೇಳುವುದಿಲ್ಲ. ಬಿಟ್‌ವೀನ್ ಹೈಕೋರ್ಟ್ ಮತ್ತು ವಿಧಾನಸೌಧದಲ್ಲಿ ಇಲ್ಲಿ ಮಾತ್ರ ಮಾಡಬೇಕು. ಸಾಟರ್‌ಡೆ ಸಂಡೇ ನೀರು ಬಿಡುತ್ತಾರೆ. ಈಗ ಬೇಕಾದರೆ ಹೋಗಿ ನೋಡಿ. ಎಲ್ಲ ಒಣಗಿ ಹೋಗಿದೆ. ಅಟ್‌ಲೀಸ್ಟ್ ನೀವು ಮನಸ್ಸು ಮಾಡಿದರೆ ಇನ್ನೆಂಟು ಹತ್ತು ದಿವಸಕ್ಕೆ ಬೇಕಾದರೆ ಮಾಡಬಹುದು. ನೀರು ಬೋರ್‌ವೆಲ್‌ನಲ್ಲಿ ಬರುತ್ತದೆ. ಅಲ್ಲಿಂದ ನೀರನ್ನು ತೆಗೆದುಕೊಂಡು ಬಿಟ್‌ವೀನ್ ಹೈಕೋರ್ಟ್ ಮತ್ತು ವಿಧಾನಸೌಧ ಮಧ್ಯದಲ್ಲಿ ಸ್ವಲ್ಪ ಗ್ರೀನಿಷ್ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷಣಿಯವರಿಗೆ ನಾನು ಹೆಸರನ್ನು ಕೊಟ್ಟಿರಲಿಲ್ಲ. ಆದರೆ ಮಾತನಾಡಬೇಕು ಎಂದು ಆಸೆಯಾಯಿತು. ಏಕೆಂದರೆ ನಮ್ಮ ಜಿಲ್ಲೆಯ ಬಗ್ಗೆ ಹೇಳಬೇಕು ಎಂದು ಇದ್ದೆ. ತಾವು ಅವಕಾಶವನ್ನು ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಎಸ್. ಜಿ. ಸಂಜಪ್ಪ (ಶ್ರವಣಬೆಳಗೊಳ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ದಿವಸದ ಕೃಷಿ ಮತ್ತು ಮೀನುಗಾರಿಕೆ, ಅನಿಮಲ್ ಹಸ್ಬೆಂಡರಿ ಮತ್ತು ತೋಟಗಾರಿಕೆ ಇಲಾಖೆಯ**

ಬಜೆಟ್ ಡಿಮ್ಯಾಂಡ್ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅದನ್ನು ಸಮರ್ಥಿಸುತ್ತಾ ನಾನು ಕೆಲವು ವಿಷಯಗಳನ್ನು ಮಾತ್ರ ಕೃಷಿ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶ ಕೃಷಿಯನ್ನೇ ಅವಲಂಬಿಸಿ, ಕೃಷಿಗೆ ಹೆಸರಾಗಿ ಮತ್ತು ನೂರಕ್ಕೆ ಎಂಭತ್ತರಷ್ಟು ಜನಸಂಖ್ಯೆ ಕೃಷಿಯ ಆಧಾರದ ಮೇಲೆ ಜೀವನವನ್ನು ನಡೆಸತಕ್ಕಂಥ ದೇಶ. ಈ ಕೃಷಿ ಸಾವಿರಾರು ವರ್ಷಗಳಿಂದ ಜನಜನಿತವಾಗಿ, ನಮ್ಮ ದೇಶ ಅದರ ಆಧಾರದಮೇಲೆ ನಿಂತಿರುವಂಥ ದೇಶ ಎಂದರೆ ತಪ್ಪಾಗಲಾರದು. ನಾವು ಪ್ರಪಂಚದಲ್ಲಿ ದೊಡ್ಡ ಇತಿಹಾಸವನ್ನು ಹೊಂದಿದ್ದರೂ ಕೂಡ ಅನೇಕ ಶಿಲ್ಪಕಲೆಗೆ, ಸಂಸ್ಕೃತಿಗೆ ಹೆಸರಾದರೂ ಕೂಡ ನಮ್ಮ ಬೇಸಿಕ್ ಜನಜೀವನ ವ್ಯವಸಾಯ. ಅದಕ್ಕೋಸ್ಕರ ಇಂಡಿಯಾ ದೇಶದಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ, ಪ್ರತಿಯೊಬ್ಬ ರಾಜಕಾರಣಿಯೂ ರೈತನೇ ಈ ದೇಶದ ಬೆನ್ನೆಲುಬು, ಅವನಿಗೆ ಬಹಳ ತೊಂದರೆಯಾಗಿಬಿಟ್ಟಿದೆ, ಅವನನ್ನು ನಾವು ಬಹಳ ಕಡೆಗಾಣಿಸಿದ್ದೇವೆ, ಅವನನ್ನು ಬಹಳ ಚೆನ್ನಾಗಿ ನೋಡಿಕೊಳ್ಳಬೇಕು ಎಂದು ಹೇಳಿ ಕಣ್ಣೀರನ್ನು ಹರಿಸತಕ್ಕಂಥ ಅನೇಕ ರಾಜಕಾರಣಿಗಳ ಭಾಷಣಗಳನ್ನು ಪ್ರತಿ ದಿವಸ ಇಲ್ಲಿ ನಾವು ಕೇಳುತ್ತೇವೆ. ಇಂಥ ಒಂದು ವ್ಯವಸಾಯವನ್ನೇ ತನ್ನ ಜನ ಜೀವನವನ್ನಾಗಿ ಮಾಡಿಕೊಂಡಿರತಕ್ಕಂಥ ದೇಶದಲ್ಲಿ ೧೯೪೭ರ ಹಿಂದೆ ವ್ಯವಸಾಯದ ಗತಿ ಏನಾಗಿತ್ತು, ನಮಗೆ ಸ್ವಾತಂತ್ರ್ಯ ಬಂದ ನಂತರ, ಮೊದಲನೆ ಪಂಚವಾರ್ಷಿಕ ಯೋಜನೆ ಪ್ರಾರಂಭವಾದ ನಂತರ ಈ ವ್ಯವಸಾಯಕ್ಕೆ ಏನಾದರೂ ನಮ್ಮ ದೇಶದಲ್ಲಿ ಬದಲಾವಣೆಗಳಾಗಿವೆಯೇ ಎನ್ನುವುದರ ಬಗ್ಗೆ ನಾವು ಅವಲೋಕನವನ್ನು ಮಾಡತಕ್ಕಂಥದ್ದು ನಮ್ಮಗಳೆಲ್ಲರ ಕರ್ತವ್ಯ ಎಂದು ನಾನಾದರೂ ಕೂಡ ಭಾವಿಸುತ್ತೇನೆ. ಹೀಗೆ ನೋಡಿದಾಗ ಏನು ೩೩ ಕೋಟಿ ಜನ ನಾವು ಇದ್ದೆವೋ, ಸ್ವಾತಂತ್ರ್ಯವನ್ನು ಸಂಪಾದನೆ ಮಾಡುವುದಕ್ಕೆ ಮುಂಚೆ ಆಗ ನಮಗೆ ಅನ್ನ ಸಾಕಾದಷ್ಟು ಇರದೆ ಎರಡು ಹೊತ್ತಿಗೆ ಊಟ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯನ್ನು ಪ್ರಪಂಚವೇ ಕಂಡಿತ್ತು. ನಮಗೆಲ್ಲರಿಗೂ ಕೂಡ ಗೊತ್ತು ಅಂತಹ ಒಂದು ಪರಿಸ್ಥಿತಿಯಲ್ಲಿದ್ದಂಥ ಈ ದೇಶವನ್ನು, ಈ ಕೃಷಿಯನ್ನೇ ಆಧಾರವಾಗಿಟ್ಟುಕೊಂಡಂಥ ದೇಶವನ್ನು ಏನಾದರೂ ಮಾಡಿ ಈ ವ್ಯವಸಾಯದಲ್ಲಿ ಮುಂದೆ ತರಬೇಕು ಎಂದು ಹೇಳಿ, ನಮ್ಮ ಪ್ರಪ್ರಥಮ ಪ್ರಧಾನಮಂತ್ರಿ ದಿವಂಗತ ಪಂಡಿತ್ ಜವಹರಲಾಲ ನೆಹರೂರವರು ಅದಕ್ಕೆ ಒಂದು ಬುನಾದಿಯನ್ನು ಹಾಕಿದರು. ಆ ಬುನಾದಿ ಏನು ಎಂದರೆ, ವ್ಯವಸಾಯ ಮಾಡುವುದಕ್ಕೆ ನೀರನ್ನು ಉಪಯೋಗ ಮಾಡಿಕೊಳ್ಳದೇ ನದಿಗಳ ನೀರು ತಾನೇತಾನಾಗಿ ಸಮುದ್ರಕ್ಕೆ ಹರಿದು ಹೋಗುತ್ತಿದ್ದಾಗ ಬಾಕ್ರಾನಂಗಲ್, ತುಂಗಭದ್ರಾ, ಹಿರಾಕುಡ್, ಮುಂತಾದ ಅಣೆಕಟ್ಟುಗಳನ್ನು ಕಟ್ಟತಕ್ಕಂಥ ವ್ಯವಸ್ಥೆ ಮಾಡಿದರು. ಈ ರೀತಿ ಹರಿದು ಹೋಗತಕ್ಕ ನೀರಿನಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ ಅದನ್ನು ಒಂದು ಕಡೆ ಇಂಡಸ್ಟ್ರೀಸ್ ಪ್ರಾರಂಭ ಮಾಡುವುದಕ್ಕೆ, ಇನ್ನೊಂದು ಕಡೆ ವ್ಯವಸಾಯಕ್ಕೆ ಉಪಯೋಗಿಸಿಕೊಳ್ಳತಕ್ಕ ಶಕ್ತಿಯನ್ನು ರೈತರಿಗೆ ಕೊಡತಕ್ಕ ಕೆಲಸವನ್ನು ಮಾಡಿ ಅವರು ತಳಹದಿಯನ್ನು ಹಾಕಿದರು. ಆ ತಳಹದಿಯ ಮೇಲೆ ದಿವಂಗತ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಈ ದೇಶದಲ್ಲಿ ಹಸಿರು ಕ್ರಾಂತಿಯನ್ನು ಮಾಡಬೇಕೆಂದು ಯೋಜನೆ ಮಾಡಿದರು. ವೈಜ್ಞಾನಿಕ ತಳಹದಿಯಮೇಲೆ ಈ ವ್ಯವಸಾಯಕ್ಕೆ ಒಂದು ಒಳ್ಳೆಯ ಉತ್ತೇಜನ ಕೊಟ್ಟಿದ್ದಲ್ಲದೆ ನಮ್ಮ ಇಡೀ ಪ್ರಪಂಚದ ರಾಷ್ಟ್ರಗಳೇ ಆಶ್ಚರ್ಯಪಡತಕ್ಕ ರೀತಿಯಲ್ಲಿ ಒಂದು ಗ್ರೀನ್ ರೆವಲ್ಯೂಷನ್ ಶ್ರೀಮತಿ ಇಂದಿರಾಗಾಂಧಿಯವರ ಕಾಲದಲ್ಲಿ ಆಯಿತೆಂದರೆ ತಪ್ಪಾಗಲಾರದು. ಅವರು ಇದಕ್ಕೆ ಅಷ್ಟೊಂದು ಮನ್ನಣೆಯನ್ನು ಕೊಟ್ಟ ಮೇಲೆ ಇವತ್ತು ೮೫ ಕೋಟಿ ಜನರಿಗೆ ಅನ್ನವನ್ನು ಒದಗಿಸುವುದಕ್ಕೆ ಅವಕಾಶವಾಯಿತು. ನಮ್ಮ

ಭಾರತ ದೇಶದಲ್ಲಿ ಇವತ್ತು ಆಹಾರ ಸ್ವಾವಲಂಬನೆಯ ಶಕ್ತಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗಿದೆ. ಈಗ ನಮಗೆ ಸ್ವಲ್ಪಮಟ್ಟಿಗೆ ಪಲ್ಸಸ್ ಮಾತ್ರ ಕೊರತೆ ಇದೆ. ಕಳೆದ ೮-೯ ವರ್ಷಗಳಿಂದ ಇಡೀ ದೇಶದಲ್ಲಿ ಬರಗಾಲ ಪರಿಸ್ಥಿತಿ ಇದ್ದರೂ ಕೂಡ ನಾವು ಆಹಾರಕ್ಕೆ ತೊಂದರೆ ಪಡತಕ್ಕ ಪರಿಸ್ಥಿತಿ ಅಷ್ಟಾಗಿ ಇಲ್ಲ. ಇದಕ್ಕೆ ಕಾರಣ ಸರ್ಕಾರ ಸಾಕಷ್ಟು ಹಣವನ್ನು ಕೊಟ್ಟು, ಉತ್ತೇಜನವನ್ನು ಕೊಟ್ಟಿದ್ದರಿಂದ ಈ ಹಸಿರು ಕ್ರಾಂತಿ ಆಗಿದೆ ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನೂ ಅನೇಕ ವಿಷಯಗಳಲ್ಲಿ ನಾವು ಮುನ್ನಡೆಯನ್ನು ಸಾಧಿಸಬೇಕಾಗಿದೆ. ಇದರ ಜೊತೆಗೆ ಇನ್ನೂ ೫೦ ಲಕ್ಷ ಎಕರಲ ಪ್ರದೇಶವನ್ನು ನೀರಾವರಿಯಾಗಿ ಮಾಡತಕ್ಕ ಶಕ್ತಿಯನ್ನು ನಮ್ಮ ಕರ್ನಾಟಕ ರಾಜ್ಯ ಪಡೆದಿದೆ. ಆದರೆ ನಾವು ಇವತ್ತು ಎಷ್ಟು ಸಾಧಿಸಿದ್ದೇವೆ ಎಂದರೆ ಕೇವಲ ೨೦ ಲಕ್ಷ ಎಕರೆಯಷ್ಟು ನೀರಾವರಿಯನ್ನು ಮಾಡಿ, ಎರಡು ಬೆಳೆಯನ್ನು ಬೆಳೆಯತಕ್ಕ ಶಕ್ತಿಯನ್ನು ನಮ್ಮ ಕರ್ನಾಟಕ ರಾಜ್ಯ ಇನ್ನೂ ಪಡೆದಿಲ್ಲ. ಇಷ್ಟೆಲ್ಲಾ ಮಾಡಿದರೂ ಇನ್ನೂ ನಾವು ಒಣ ಬೇಸಾಯವನ್ನು ಅವಲಂಬಿಸಿ ಮಳೆಯನ್ನು ಕಾಯುತ್ತಾ ಕುಳಿತಿದ್ದೇವೆ. ನಮ್ಮಲ್ಲಿ ಸಾಕಷ್ಟು ಅಂತರ್ಜಲ ಇದೆ. ಇದನ್ನು ಎಕ್ಸ್‌ಪ್ಲಾಯ್ಟ್ ಮಾಡುತ್ತಿಲ್ಲ. ಅದನ್ನು ಎಕ್ಸ್‌ಪ್ಲಾಯಟ್ ಮಾಡಬೇಕು. ಇದಕ್ಕೆ ಸರ್ಕಾರ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂಬುದನ್ನು ಚಿಂತನೆ ಮಾಡಬೇಕಾಗುತ್ತದೆ. ಇನ್ನು ನಮಗೆಲ್ಲಾ ಗೊತ್ತಿರುವಂತೆ ಕಾವೇರಿ ನೀರಿನ ವಿವಾದದಲ್ಲಿ ನಮಗೆ ಬರತಕ್ಕ ಪಾಲಿನಲ್ಲೂ ಕೂಡ ಕುಂಠಿತವಾಗತಕ್ಕ ಸಂದರ್ಭ ಬಂದೊದಗಿದೆ. ಅದು ಏನಾಗುತ್ತದೆ ಎಂದು ನಾವು ಕಾದು ನೋಡೋಣ. ಹಿಂದೆ ರಾಜ ಮಹಾರಾಜರ ಕಾಲದಲ್ಲಿ ಮಾಡಿರತಕ್ಕಂಥ ಕೆರೆಕಟ್ಟೆಗಳನ್ನು ಅಭಿವೃದ್ಧಿ ಮಾಡತಕ್ಕದ್ದು ಮತ್ತು ಮಳೆ ನೀರಿನಿಂದ ಇಂಪೌಂಡಿಂಗ್ ರೇನ್ ವಾಟರ್‌ನಿಂದ ಎಷ್ಟೆಷ್ಟು ಅನುಕೂಲಗಳಾಗುತ್ತವೆಂಬುದನ್ನು ನಾವು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ. Impounding of rain water is most important. ಏಕೆಂದರೆ, ಅದು ನೀರನ್ನು ತಡೆಹಿಡಿಯುವುದಲ್ಲದೆ, ೬ ತಿಂಗಳು ಅಥವಾ ಒಂದು ವರ್ಷಕಾಲ ವ್ಯವಸಾಯಕ್ಕೆ ಮತ್ತು ಅಲ್ಲಿರತಕ್ಕ ಜನರಿಗೆ ಅನುಕೂಲ ಮಾಡಿಕೊಡುತ್ತದೆ. ಅಲ್ಲದೆ, the percolation increases the sub-soil water. ನಮ್ಮ ಕರ್ನಾಟಕ ರಾಜ್ಯದಲ್ಲಿ ನಮಗೆ ಏನು ಅಂತರ್ಜಲವಿದೆ ಅದನ್ನು ಸರಿಯಾದ ರೀತಿಯಲ್ಲಿ ಟ್ರ್ಯಾಪ್ ಮಾಡಿದರೆ ಅದರಲ್ಲಿ ಇನ್ನೂ ಸುಮಾರು ೫೦ ಲಕ್ಷ ಎಕರೆಯನ್ನು ನೀರಾವರಿಯಾಗಿ ಪರಿವರ್ತನೆ ಮಾಡಬಹುದೆಂಬುದನ್ನು ಕೇವಲ ೫ ವರ್ಷಗಳಲ್ಲಿ ನಾವು ಕೊರೆದಿರತಕ್ಕ ಕೊಳವೆಬಾವಿಗಳು ತೋರಿಸಿಕೊಡುತ್ತವೆ. ಉದಾಹರಣೆಗೆ ಹೇಳುವುದಾದರೆ, ನನ್ನ ತಾಲ್ಲೂಕಿನಲ್ಲಿ ೬ ಸಾವಿರ ಪಂಪ್ ಸೆಟ್‌ಗಳು ಕೆಲಸ ಮಾಡುತ್ತಿವೆ. ಕೇವಲ ೫ ವರ್ಷಗಳಲ್ಲಿ ೬ ಸಾವಿರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ ಮೇಲೆ ಈ ವರ್ಷ ಸುಮಾರು ೨ ಲಕ್ಷ ಟನ್ ಕಬ್ಬನ್ನೂ ಕೂಡ ಬೆಳೆಯುತ್ತಿದ್ದೇವೆ. ಎಲ್ಲಿ ಹುರಳಿಯನ್ನೂ ಬೆಳೆಯಲಿಕ್ಕೆ ಆಗುತ್ತಿರಲಿಲ್ಲವೋ ಅಂತಹ ಜಾಗದಲ್ಲಿ ಇವತ್ತು ಉತ್ತಮವಾದ ಕಬ್ಬನ್ನು ಬೆಳೆಯುವಂಥ ವ್ಯವಸ್ಥೆ ನನ್ನ ಒಂದು ತಾಲ್ಲೂಕಿನಲ್ಲಾಗಿದೆ. ಎರಡೂವರೆ ಲಕ್ಷ ಟನ್ ಕಬ್ಬನ್ನು ಅರಿಯತಕ್ಕ ಶಕ್ತಿಯನ್ನು ನಮ್ಮ ಹೇಮಾವತಿ ಷುಗರ್ ಫ್ಯಾಕ್ಟರಿ ಪಡೆದಿದೆ ಎಂದರೆ ನನ್ನ ಒಂದು ತಾಲ್ಲೂಕಿನಲ್ಲಿ ೫ ವರ್ಷಗಳಲ್ಲಿ ಎಂಥ ರೆವಲ್ಯೂಷನ್ ಆಗಿದೆ ಎಂಬುದನ್ನು ಯೋಚನೆ ಮಾಡಿ. ನಮ್ಮಲ್ಲಿರತಕ್ಕ ರಿಸೋರ್ಸ್‌ಸ್‌ನ್ನು ಸರಿಯಾಗಿ ಉಪಯೋಗ ಮಾಡಿಕೊಂಡರೆ ರೈತರ ಜೀವನ ಎಷ್ಟರ ಮಟ್ಟಿಗೆ ಉತ್ತಮವಾಗಬಹುದುದೆಂಬುದನ್ನು ಈ ಒಂದು ಉದಾಹರಣೆಯಿಂದ ಕಾಣಬಹುದೆಂದು ನಾನು ಈ

ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವರ್ಷ ಕೃಷಿಗೆ ೧೮೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೂ ಕೂಡ ಅದು ಅಷ್ಟೊಂದು ಸಾಕಾಗುವುದಿಲ್ಲವೆಂದು ನನಗನ್ನಿಸುತ್ತದೆ. ನಮಗೆ ಆಹಾರ ಉತ್ಪಾದನೆ ಮಾಡತಕ್ಕಂಥಾದ್ದಕ್ಕೆ ಇಷ್ಟು ಪೋಟೆನ್‌ಶಿಯಾಲಿಟಿ ಇರುವುದಲ್ಲದೆ, ಈಗ ನಮ್ಮ ಡಿಸ್ಟ್ರಿಕ್ಟ್‌ನಲ್ಲಿ ತೆಗೆದುಕೊಂಡರೆ ನಮಗೆ ಕಾಫಿ ಬೆಳೆ ಇದೆ, ತೆಂಗು ಇದೆ, ನಮ್ಮಲ್ಲಿ ಹಾರ್ಟಿಕಲ್ಚರ್ ಸ್ವಲ್ಪ ಇದೆ. ಆದರೆ ಹಾರ್ಟಿಕಲ್ಚರ್‌ನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಚೆನ್ನಾಗಿ ಮಾಡಬಹುದು. ಅದಕ್ಕೆ ಬಹಳ ಉತ್ತಮವಾದ ವಾತಾವರಣ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದೆ. ಆದರೆ ಅದು ಕುಂಠಿತವಾಗಿ ನಡೆಯುತ್ತಿದೆ ಅಂದರೆ ತಪ್ಪಾಗಲಾರದು. ಅಲ್ಲಿ ಇಲ್ಲಿ ಸ್ವಲ್ಪ ಸ್ಯಾಂಪಲ್‌ಗೋಸ್ಕರ ಗೌರ್ನಮೆಂಟ್ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಮೂಲಕ ಕಲವು ಹಣ್ಣಿನ ತೋಟಗಳನ್ನು ಮಾಡಿರುವುದನ್ನು ಬಿಟ್ಟರೆ ರೈತರಿಗೆ ಮೂಲಭೂತವಾಗಿ ಏನೊಂದು ಎನ್‌ಕರೇಜ್‌ಮೆಂಟ್ ಮತ್ತು ಎಜ್ಯುಕೇಷನ್ ಕೊಡುತ್ತಿಲ್ಲ. ಅವನಿಗೆ ಇರತಕ್ಕಂಥ ಬೋರ್ ಹೊಲಗಳಲ್ಲೆಲ್ಲ ಹಣ್ಣಿನ ಗಿಡಗಳನ್ನು ಹಾಕತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇ ಆದರೆ ಕರ್ನಾಟಕ ರಾಜ್ಯದಲ್ಲಿ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನ್ನು ಬಹಳ ಚೆನ್ನಾಗಿ ಉತ್ತಮಪಡಿಸಬಹುದು. ಅದನ್ನು ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಮತ್ತು ಸರ್ಕಾರ ಚಿಂತನೆ ಮಾಡಬೇಕು, ಅದು ಹೇಗೆಂದರೆ, 'ಪ್ರತಿ ರೈತರಿಗೆ ಸಬ್‌ಸಿಡಿಯಲ್ಲಿ ಹಣ್ಣಿನ ತೋಟವನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಹಣ್ಣಿನ ಗಿಡಗಳನ್ನು ಅವರಿಗೆ ಉಚಿತವಾಗಿ ಹಂಚತಕ್ಕಂಥ ವ್ಯವಸ್ಥೆಯಾಗಬೇಕು. ಹೀಗೆ ಮಾಡಿದ್ದೇ ಆದರೆ ೫-೧೦ ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಸುಮಾರು ೧೦೦-೧೨೦-೧೩೦ ತಾಲ್ಲೂಕುಗಳಲ್ಲಿ ರೈನ್‌ಶಾಡೋ ಏರಿಯಾ ಇದೆ. ಅಲ್ಲಿ ಯಾವಾಗಲೂ ಕೂಡ ೫ ವರ್ಷಗಳಿಗೆ ಒಂದು ಸಾರಿ ಮಳೆಯಾಗುತ್ತದೆ. ಆದರೆ ೫-೬ ವರ್ಷಗಳ ಕಾಲ ಡ್ರಾಟ್ ಸಿಚ್ಯುಯೆಷನ್‌ಗೆ ಒಳಗಾಗಿರತಕ್ಕಂಥ ಅನೇಕ ತಾಲ್ಲೂಕುಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಇವೆ. ಈ ರೈನ್‌ಶಾಡೋ ಏರಿಯಾ ಮಾಡಿ, ಏನು ವಾಟರ್ ಷೆಡ್ ಪ್ರೋಗ್ರಾಂ ಎಂದು ಮಾಡುತ್ತಿದ್ದಿರೋ ಆ ಏರಿಯಾಗಳನ್ನು ಗುರುತಿಸಿ ಅಲ್ಲಿ ಹಾರ್ಟಿಕಲ್ಚರ್ ಡೆವಲಪ್ ಮಾಡಿದರೆ ಆದರಿಂದ ಬಹಳಷ್ಟು ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ವಿಷಯ ಸಬ್‌ಸಾಯಿಲ್ ಅಂದರೆ ಗ್ರೌಂಡ್ ವಾಟರ್ ಏನು ಇದೆ ಆ ಅಂಡರ್‌ಗ್ರೌಂಡ್ ವಾಟರನ್ನು ಉಪಯೋಗಿಸುವ ಬಗ್ಗೆ ಹೇಳುತ್ತೇನೆ. ಇಂಡಿವಿಷಿಯಲ್ ರೈತರು ಅಲ್ಲಿ ಬಾವಿಗಳನ್ನು ತೆಗೆದು ಎರಡು ಎಕರೆ, ಎರಡೂವರೆ ಎಕರೆ ಮೂರು ಎಕರೆ ಜಮೀನು ಇದ್ದರೂ ಅವನು ೪೦-೫೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒಂದು ಬೋರ್‌ವೆಲ್ ಹಾಕಿಸಿದರೆ ಬಹಳ ಚೆನ್ನಾಗಿ ವ್ಯವಸಾಯ ಮಾಡತಕ್ಕಂಥ ಒಂದು ವ್ಯವಸ್ಥೆ ಇವತ್ತು ಇದೆ. ಆ ವ್ಯವಸ್ಥೆ ಪ್ರತಿ ಗ್ರಾಮಗಳಲ್ಲಿ ಎಲ್ಲೆಲ್ಲಿ ನೀರು ಚೆನ್ನಾಗಿ ಸಿಗುತ್ತದೆ ಅಲ್ಲಿ ೪-೫ ಬೋರ್‌ವೆಲ್‌ಗಳನ್ನು ತೋಡಿಸಿ ಎತ್ತರವಾದ ಸ್ಥಳಗಳಲ್ಲಿ ಇವತ್ತು ಮೇಜರ್ ವಾಟರ್ ಸಪ್ಲೈ, ಡ್ರಿಂಕಿಂಗ್ ವಾಟರ್ ಸಪ್ಲೈಯನ್ನು ಯಾವರೀತಿ ಮಾಡಿದ್ದಾರೆ ಆ ರೀತಿ ಹೈಯೆಸ್ಟ್ ಪಾಯಿಂಟ್‌ನಲ್ಲಿ ಟ್ಯಾಂಕುಗಳನ್ನು ಕಟ್ಟಿ ಮಳೆಗಾಲದಲ್ಲಿ ಮಾತ್ರ ನೀರನ್ನು ವ್ಯವಸಾಯಕ್ಕೆ ಉಪಯೋಗಿಸತಕ್ಕಂಥ ವ್ಯವಸ್ಥೆಯನ್ನು ಪ್ರತಿ ಊರಿನಲ್ಲಿ ಸುಮಾರು ೧೦೦ ಎಕರೆಯಿಂದ ೫೦೦ ಎಕರೆಗಳವರೆಗೆ ಮಾಡಿದರೆ ನಾವು ಅಗ್ರಿಕಲ್ಚರ್‌ನಲ್ಲಿ ಒಂದು ರೆವಲ್ಯೂಷನ್ ಮಾಡಬಹುದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏತಕೆಂದರೆ. ಆದನು ಮಾಡತಕಂಥ ವ್ಯವಸೆ ಯಾವ ರೀತಿಯಾಗಬೇಕೆಂದರೆ, ಅದಕ್ಕೆ ಸೆಪರೇಟ್

ಕಾರ್ಪೋರೇಷನ್ ಇರಬೇಕು. ನೀರನ್ನು ಬಿಡತಕ್ಕಂಥ ವ್ಯವಸ್ಥೆಯಾಗಬೇಕು. ಅಗ್ರಿಕಲ್ಚರ್ ಟ್ಯಾಕ್ಸ್‌ನ್ನು ನೀವು ಕಲೆಕ್ಟ್ ಮಾಡತಕ್ಕಂಥ ಸಂದರ್ಭದಲ್ಲಿ ಏನು ರೈತರಿಗೆ ನೀವು ಖರ್ಚುಮಾಡುತ್ತೀರಿ ಆ ಹಣವನ್ನು ರೈತರಿಗೆ ಒಂದು ಎಕರೆ ಇದ್ದರೆ ಎರಡು ಎಕರೆ ಇದ್ದರೆ ಅಥವಾ ಮಳೆಗಾಲದಲ್ಲಿ ಸೆಮಿಡ್ರೈಕ್ರಾಪ್ ಬೆಳೆಯತಕ್ಕಂಥವರಿಗೆ ಇಷ್ಟು ಎಂದು ಫಿಕ್ಸ್‌ಮಾಡಿದ ಹಣವನ್ನು ರೈತರಿಂದ ಕಲೆಕ್ಟ್ ಮಾಡಿದ್ದೇ ಆದರೆ ಪ್ರತಿ ಹಳ್ಳಿಯಲ್ಲಿ ೧೦೦-೧೫೦ರಿಂದ ೫೦೦ ಎಕರೆಗಳವರೆಗೆ ಒಂದು ಗ್ರೀನ್ ರೆವಲ್ಯೂಷನ್ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅದೇ ರೀತಿಯಲ್ಲಿ ಹಾರ್ಟಿಕಲ್ಚರ್ ಬಗ್ಗೆ ನಾನು ಮಾನ್ಯ ಮಂತ್ರಿಗಳಿಗೆ ಮತ್ತೆ ನಿವೇದನೆ ಮಾಡಿಕೊಳ್ಳುವುದೇನೆಂದರೆ, ಹಾರ್ಟಿಕಲ್ಚರ್‌ಗೆ ಬಹಳ ಒಳ್ಳೆಯ ಪೊಟೆನ್‌ಷಿಯಾಲಿಟಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದೆ. ಇದಕ್ಕೆ ಒಂದು ಸ್ಕೀಮ್‌ನ್ನು ತೆಗೆದುಕೊಂಡು ಬಂದು ಅದಕ್ಕೆ ಸಬ್‌ಸಿಡಿ ಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಒಳ್ಳೊಳ್ಳೆಯ ಹಣ್ಣಿನ ಗಿಡಗಳನ್ನು ಆಯಾ ಸ್ಥಳಗಳಿಗೆ ಸಪ್ಲೈ ಮಾಡತಕ್ಕಂಥದ್ದಾಗಬೇಕು. ಹಾಗೆ ಮಾಡಿದರೆ ಇವತ್ತು ನಿಜವಾಗಿಯೂ ಕೂಡ ರೈತ ಬಹಳ ಕಷ್ಟಪಟ್ಟು ಕೆಲಸ ಮಾಡತಕ್ಕಂಥ ಒಂದು ಯೋಜನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನೀರನ್ನು ಹುಡುಕಿಕೊಂಡು ತಿರುಗಾಡತಕ್ಕಂಥದ್ದು, ಮತ್ತು ಅದಕ್ಕೆ ಎಷ್ಟು ಹಣವನ್ನು ಬೇಕಾದರೂ ಖರ್ಚು ಮಾಡತಕ್ಕಂಥ ಒಂದು ಕಾತುರ ರೈತರ ಮನಸ್ಸಿನಲ್ಲಿ ಕಾಣುತ್ತಿದೆ ಎನ್ನುವುದು ನನಗೆ ಮನದಟ್ಟಾಗಿದೆ. ಆದುದರಿಂದ ಈ ಸಂದರ್ಭದಲ್ಲಿ, ವ್ಯವಸಾಯ ಮತ್ತು ತೋಟಗಾರಿಕೆ ಸಚಿವರಿಬ್ಬರೂ ಕೂಡ ಈ ಬಗ್ಗೆ ಯೋಚನೆ ಮಾಡಿದರೆ ಒಂದು ಕಡೆ ಆಹಾರೋತ್ಪಾದನೆ, ಇನ್ನೊಂದು ಕಡೆ ತೋಟಗಾರಿಕೆ ಇಲಾಖೆಯನ್ನು ಇಂಪ್ರೂವ್ ಮಾಡಿ, ಹಳ್ಳಿಗಳಲೆಲ್ಲ ಹಣ್ಣಿನ ಗಿಡಗಳನ್ನು ಬೆಳೆಸತಕ್ಕದ್ದು ಮತ್ತೊಂದು ಕಡೆ ಫುಡ್‌ಗ್ರೈನ್ಸ್ ಇನ್‌ಕ್ರೀಸ್ ಮಾಡುವುದಕ್ಕೆ ಏನೇನುಮಾಡಬೇಕೋ ಅದನ್ನು ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ನಮ್ಮ ಕರ್ನಾಟಕ ರಾಜ್ಯ ತಮಿಳುನಾಡಿನವರನ್ನು ನೋಡಿ ಕಲಿತರೆ ಸಾಕು ಅನ್ನಿಸುತ್ತದೆ. ಏಕೆಂದರೆ, ತಮಿಳುನಾಡಿನಲ್ಲಿ ನೋಡಿದ್ದೇವೆ, ಅಲ್ಲಿ ಇಂಟೆನ್ಸೀವ್ ಆಗಿ ಫಾರೆಸ್ಟನ್ನು ಇಂಪ್ರೂವ್ ಮಾಡುತ್ತಿದ್ದಾರೆ. ಪ್ಲಾಂಟೆಡ್ ಟೀಕ್‌ವುಡ್ ಫಾರೆಸ್ಟನ್ನು ಕ್ರಿಯೇಟ್ ಮಾಡಿದ್ದಾರೆ. ರೆಡ್‌ಗಂ ಫಾರೆಸ್ಟನಲ್ಲಿ ಬೆಳೆಯುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ ಟೀಕ್‌ವುಡ್ ಫಾರೆಸ್ಟನ್ನು ಸಾವಿರಾರು ಎಕರೆ ಮಾಡಿದ್ದಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದ ಅರಣ್ಯ ಇಲಾಖೆಯಲ್ಲಿ ಅಷ್ಟೊಂದು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಎಂಬ ಮಾತನ್ನು ಹೇಳುತ್ತೇನೆ. ಅವರು ಇತ್ತೀಚೆಗೆ ಕೊಟ್ಟ ವರ್ಲ್ಡ್ ಬ್ಯಾಂಕ್ ಏಯ್ಡ್ ಏನಿದೆ ಅದರಿಂದ ಹಾಕಿರುವ ಅನೇಕ ಮರಗಿಡಗಳನ್ನು ಇವತ್ತು ನೋಡುತ್ತಿದ್ದೇವೆ. ಸೋಷಿಯಲ್ ಫಾರೆಸ್ಟ್ರಿ ಬಂದ ಮೇಲೆ ಅನೇಕ ಗಿಡಮರಗಳನ್ನು ನೋಡುತ್ತಿದ್ದೇವೆ. ಸರ್ವನಾಶವಾಗಿದ್ದ ಹಳ್ಳಿಗಳಲ್ಲಿ ಇವತ್ತು ಗಿಡ ಮರಗಳನ್ನು ನೋಡುತ್ತಿದ್ದೇವೆ. ಅದನ್ನು ನರ್ಸರಿ ಮಾಡತಕ್ಕದ್ದರಲ್ಲಿ, ಮತ್ತು ಅವರು ಬೆಳೆಸಿದ ಗಿಡಮರಗಳನ್ನು ಕೊನೆಯವರೆಗೆ ಕಾಪಾಡತಕ್ಕ ವ್ಯವಸ್ಥೆ ಅರಣ್ಯ ಇಲಾಖೆಯಿಂದಲೇ ಆಗಬೇಕು. ಬೇರೆ ಯಾವ ಏಜೆನ್ಸಿ ಫಿಕ್ಸ್ ಮಾಡಿದರೂ ಸರಿಯಾದ ರೀತಿಯಲ್ಲಿ ನಡೆಯುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏತಕ್ಕೆಂದರೆ ನಮಗೆಲ್ಲ ಗೊತ್ತಿರುವ ಹಾಗೆ ಎಕಾಲಾಜಿಕಲ್ ಬ್ಯಾಲೆನ್ಸ್ ಮೇಲೆ ಮಾತನಾಡುತ್ತೇವೆ, ಅರಣ್ಯವೆಲ್ಲ ಸರ್ವನಾಶವಾಗಿದೆ ಎಂದು ಹೇಳುತ್ತೇನೆ. ನಮಗೆ ಸಾಕಾದಷ್ಟು ಗ್ರೀನರಿ ಇಲ್ಲದಿದ್ದರೆ ಎಕಾಲಾಜಿಕಲ್ ಬ್ಯಾಲೆನ್ಸ್ ಆಗುವುದಿಲ್ಲ. ಈಗಾಗಲೆ ಸೌತ್‌ನಲ್ಲಿ

ಓಜೂನ್ ಸ್ವೇರ್‌ನಲ್ಲೂ ಕೂಡ ತೂತು ಬಿದ್ದಿದೆ ಎಂದು ಮಾತನಾಡುತ್ತೇವೆ, ಪತ್ರಿಕೆಗಳಲ್ಲಿ ಓದುತ್ತೇವೆ. ಓಜೂನ್ ಸ್ವೇರ್‌ಗೆ ಅಫೆಕ್ಟ್ ಆಗಿದೆ ಎಂದು ಎಷ್ಟು ಜನರಿಗೆ ಗೊತ್ತಿದೆ. ನಾಳೆ ಆಸಿಡ್ ರೈನ್ ಬರಬಹುದೆಂದು ಎಷ್ಟು ಜನರಿಗೆ ಗೊತ್ತಿದೆ. ಇದರಿಂದ ನಾವು ತಪ್ಪಿಸಿಕೊಳ್ಳಬೇಕಾದರೆ ಫಾರೆಸ್ಟ್ರಿ ಬಹಳ ಮುಖ್ಯ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಎಷ್ಟು ರಸ್ತೆಗಳು ಇವೆಯೋ ಅವುಗಳ ಅಕ್ಕಪಕ್ಕ ಎರಡೂ ಸಾಲು ಮರಗಳನ್ನು ನೆಟ್ಟು ಅರಣ್ಯ ಇಲಾಖೆಯವರು ಅವುಗಳನ್ನು ಬೆಳೆಸತಕ್ಕ ವ್ಯವಸ್ಥೆ ಮಾಡಿದರೆ ಲಕ್ಷೋಪಲಕ್ಷ ಎಕರೆ ಫಾರೆಸ್ಟನ್ನು ನಮ್ಮ ರೋಡಸೈಡ್‌ನಲ್ಲಿ ಕ್ರಿಯೇಟ್ ಮಾಡಬಹುದು. ಕೃಷ್ಣ ಮತ್ತು ಕಾವೇರಿ ನದಿಯಲ್ಲಿ ಅನೇಕ ಕಾಲುವೆಗಳನ್ನು ತೋಡಿದ್ದಾರೆ. ಆ ಕಾಲುವೆಗಳ ಬದಿಯಲ್ಲಿ ಮರಗಳನ್ನು ಬೆಳೆಸಿದರೆ ಎಷ್ಟೋ ಅರಣ್ಯವನ್ನು ನಾವು ಹೊಂದಬಹುದು. ಯಾವಾಗಲೂ ನಾವು ಥಿಂಕ್ ಮಾಡತಕ್ಕದ್ದು ಫಾರೆಸ್ಟ್ ಏರಿಯಾ ಮಾತ್ರ. ನಮಗೆ ಎಲ್ಲಿ ಬ್ಯಾರನ್ ಲ್ಯಾಂಡ್ ಇದೆಯೋ ಎಲ್ಲಿ ಗುಡ್ಡಗಾಡುಗಳ ಮಧ್ಯೆ ಉಳಿದಿವೆಯೋ, ಎಲ್ಲಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಾಗ ಇದೆಯೋ ಅಲ್ಲೆಲ್ಲ ಗಿಡಮರಗಳನ್ನು ನೆಟ್ಟು ಅರಣ್ಯ ಇಲಾಖೆಯವರಿಗೆ ಅದನ್ನು ಕಾಪಾಡತಕ್ಕ ವ್ಯವಸ್ಥೆ ಮಾಡಿದ್ದೇ ಆದರೆ ಅರಣ್ಯ ಬೆಳೆಯುತ್ತದೆ. ಯಾರು ಬಹಳಷ್ಟು ಜನ ಈ ಕೆಲಸ ಮಾಡುತ್ತಾರೆ ಮತ್ತು ಅದಕ್ಕೆ ಅಷ್ಟು ಹಣ ಖರ್ಚಾಗುತ್ತದೆ ಇಷ್ಟು ಹಣ ಖರ್ಚಾಗುತ್ತದೆ, ಅದು ದುರುಪಯೋಗವಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತದೆ. ಆದರೆ ಅದಕ್ಕೆಲ್ಲ ಕಡಿವಾಣ ಹಾಕಿ ಹತ್ತು ವರ್ಷಗಳಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದರೆ ಹಳ್ಳಿಗಾಡಿನಲ್ಲಿ ಮರಗಿಡಗಳು, ಸಸ್ಯಗಳು ಬೆಳೆಯುವುದನ್ನು ಖಂಡಿತ ನೋಡಬಹುದು. ಅದು ಇನ್ನೂ ಚೆನ್ನಾಗಿ ಬದಲಾವಣೆ ಆಗಬೇಕೆಂದರೆ, ಅರಣ್ಯ ಇಲಾಖೆ ಅದನ್ನು ಇಂಟೆನ್ಸಿಫೈ ಮಾಡಿ ಅಲ್ಲಿರತಕ್ಕ ಸಿಬ್ಬಂದಿ ವರ್ಗವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ವರ್ಲ್ಡ್ ಬ್ಯಾಂಕ್ ಎಯ್ಡ್‌ನಿಂದ ಬರತಕ್ಕ ಹಣವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದ್ದೇ-ಆದರೆ ಖಂಡಿತ ಎಕಾಲಾಜಿಕಲ್ ಬ್ಯಾಲೆನ್ಸ್ ಅನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸೋಷಿಯಲ್ ಫಾರೆಸ್ಟ್ರಿ ಬಗ್ಗೆ ಹೇಳುವುದಾದರೆ, ಶಾಲಾ ಕಟ್ಟಡಗಳ ಸುತ್ತಮುತ್ತ ಮರಗಿಡಗಳನ್ನು ಹಾಕಿರತಕ್ಕದ್ದನ್ನು ಕೆಲವು ಊರುಗಳಲ್ಲಿ ನಾನು ನೋಡಿದ್ದೇವೆ. ಆದರೆ ಆ ಜಾಗಗಳಲ್ಲಿ ಏನಾಗಿದೆ ಎಂದರೆ, ಸೋಷಿಯಲ್ ಫಾರೆಸ್ಟ್ರಿಯನ್ನು ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಹ್ಯಾಂಡ್ ಓವರ್ ಮಾಡಿದ ಮೇಲೆ ಮಿಸ್‌ಯೂಸ್ ಆಗಿದೆಯಲ್ಲದೆ ಸರಿಯಾದ ರೀತಿಯಲ್ಲಿ ಬೆಳವಣಿಗೆಯಾಗುತ್ತಿಲ್ಲ. ಯಾವಾಗಲೂ ಮಿಕ್ಸ್ ಟೈಪ್ ಮಾಡಿ ಒಬ್ಬೊಬ್ಬರಿಗೆ ಜವಾಬ್ದಾರಿ ಕೊಡುವುದಕ್ಕಿಂತ ಅರಣ್ಯ ಅಂದರೆ ಅರಣ್ಯ ಇಲಾಖೆಯವರೇ ಅದನ್ನು ನೋಡಬೇಕು, ಮರಗಿಡಗಳ ಸಂರಕ್ಷಣೆಯನ್ನು ಅರಣ್ಯ ಇಲಾಖೆಯವರೇ ಮಾಡಬೇಕು. ಇರಿಗೇಷನ್ ಅನ್ನು ಇರಿಗೇಷನ್ ಇಲಾಖೆಯವರೇ ನೋಡಿಕೊಳ್ಳಬೇಕು. ಅದು ಎರಡುಎಕರೆ ಆಗಬಹುದು ಅಥವಾ ಸಾವಿರ ಎಕರೆ ಆಗಬಹುದು. ಈಗ ಏನೋ ವರ್ಕ್ ಡಿಸ್ಟ್ರಿಬ್ಯೂಟ್ ಮಾಡುತ್ತೇವೆಂದು ಸಣ್ಣ ಕೆರೆಗಳನ್ನು ಅವರಿಗೆ ಕೊಡಿ, ಚಿಕ್ಕ ಕೆರೆಗಳನ್ನು ಇವರಿಗೆ ಕೊಡಿ ಎಂದು ಹೇಳಿ ಎಲ್ಲವನ್ನೂ ಸ್ಪಾಯಿಲ್ ಮಾಡತಕ್ಕ ವ್ಯವಸ್ಥೆ ಇದೆ. ಅದು ಕೂಡ ಬಹಳ ಮುಖ್ಯವಾಗಿ ಬದಲಾವಣೆಯಾಗಬೇಕು. ಈಗ ವ್ಯವಸಾಯಕ್ಕೆ ನೀರು ಬಹಳ ಮುಖ್ಯ. ನೀರಿಲ್ಲದೇ ಹೋದರೆ ವ್ಯವಸಾಯವನ್ನು ಮಾಡಿ ಏತಕ್ಕೂ ಪ್ರಯೋಜನವಾಗುವುದಿಲ್ಲ. ಇವತ್ತು ರೈತ ಬದುಕಬೇಕಾದರೆ ಅವನಿಗೆ ನೀರನ್ನು ಒದಗಿಸುವ ಕೆಲಸ ಆಗಬೇಕು. ನೀರನ್ನು ಒದಗಿಸುವುದಕ್ಕೆ ಕರ್ನಾಟಕ ಸರ್ಕಾರ ಈಗ ಸಾಕಾದಷ್ಟು ಹಣವನ್ನು ವೆಚ್ಚ

ಮಾಡುತ್ತಿದೆ. ನಮ್ಮಲ್ಲಿರತಕ್ಕ ರಿಸೋರ್ಸ್‌ನಲ್ಲಿ ಒಂದೇ ವರ್ಷದಲ್ಲಿ ಐದು ಸಾವಿರ ಕೋಟಿ ರೂಪಾಯಿಗಳನ್ನು ಯಾರಿಗೂ ಕೊಡುವುದಕ್ಕೆ ಆಗುವುದಿಲ್ಲ. ನಮ್ಮಲ್ಲಿರತಕ್ಕ ಬಜೆಟರಿ ಪ್ರಾವಿಷನ್‌ನಲ್ಲಿ ಬಹುತೇಕ ಹಣವನ್ನು ನೀರಾವರಿಗೆ ಕೊಟ್ಟಿದ್ದಾರೆ. ಇದರಿಂದ ಡೈರೆಕ್ಟಾಗಿ ಅಗ್ರಿಕಲ್ಚರ್‌ಗೆ ಸಹಾಯವಾಗುತ್ತದೆ. ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಆಗಬೇಕಾದರೆ ನೀರಿನ ಸವಲತ್ತು ಮತ್ತು ವಿದ್ಯುಚ್ಛಕ್ತಿ ಸವಲತ್ತು ಇಷ್ಟನ್ನೂ ಕೂಡ ಸರ್ಕಾರ ಒದಗಿಸಿದರೆ ಅಗ್ರಿಕಲ್ಚರ್ ಮತ್ತು ಹಾರ್ಟಿಕಲ್ಚರ್ ಎರಡೂ ಸರಿಯಾದ ರೀತಿ ಉತ್ತಮಗೊಳ್ಳುತ್ತದೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಅನಿಮಲ್ ಹಸ್ಬೆಂಡರಿ. ನಮ್ಮ ದೇಶದಲ್ಲಿರತಕ್ಕ ಕ್ಯಾಟಲ್ ಹೆಡ್ಸ್ ಎಣಿಸಿದರೆ ನಮ್ಮಲ್ಲಿರುವಷ್ಟು ಪ್ರಾಣಿಗಳು ಪ್ರಪಂಚದಲ್ಲಿ ಇನ್ನು ಯಾವ ದೇಶದಲ್ಲೂ ಇಲ್ಲ. ಒಂದು ಕಡೆ ನಾವು ಬೆಳೆಸತಕ್ಕ ಪ್ರಾಣಿಗಳು ಇದ್ದರೆ, ಇನ್ನೊಂದು ಕಡೆ ನಾವು ಬೆಳೆಸದೇ ಇರುವ ಪ್ರಾಣಿಗಳು ಇವೆ. ಕೆಲವರು ಕರಡಿಗಳು ಜಾಸ್ತಿ ಇದೆ ಎಂದು ಹೇಳುತ್ತಾರೆ, ಕೆಲವರು ಆನೆಗಳು ಜಾಸ್ತಿಯಾಗಿವೆ ಎಂದು ಹೇಳುತ್ತಾರೆ, ಕೆಲವರು ತೋಳಗಳು ಜಾಸ್ತಿಯಾಗಿದೆ ಎಂದು ಹೇಳುತ್ತಾರೆ, ಕೆಲವರು ಚಿರತೆಗಳು ಜಾಸ್ತಿಯಾಗಿವೆ ಎಂದು ಹೇಳುತ್ತಾರೆ. ಹೀಗೆ ನಮ್ಮಲ್ಲಿ ಎಲ್ಲಾ ಪ್ರಾಣಿಗಳೂ ಜಾಸ್ತಿ ಇದೆ. ಅದೇ ರೀತಿ ಕ್ಯಾಟಲ್ ಹೆಡ್ಸ್ ಕೂಡ ಜಾಸ್ತಿ ಇದೆ. ಕ್ಯಾಟಲ್ ಹೆಡ್ಸ್ ಜಾಸ್ತಿ ಇದ್ದರೂ ಈಗ ಮಾತ್ರ ಸ್ವಲ್ಪ ಬದಲಾವಣೆಯನ್ನು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನಲ್ಲಿ ನಾವು ನೋಡುತ್ತಿದ್ದೇವೆ. ಹಳ್ಳಿಗಳಲ್ಲಿ ಹೋದಾಗ ಕ್ರಾಸ್ ಬ್ರೀಡ್ ತಳಿಗಳನ್ನು ಕಾಣುತ್ತಿದ್ದೇವೆ. ಹಿಂದೆ ಇದ್ದ ತಳಿಗಳನ್ನು ಸಾಕತಕ್ಕ ವಿಧಾನ, ನಾವು ಉತ್ಪಾದನೆ ತೆಗೆದುಕೊಳ್ಳತಕ್ಕ ವಿಧಾನ ನಮ್ಮದು ಕಡಿಮೆ. ಪ್ರಪಂಚದಲ್ಲಿ ಯಾವುದೇ ದೇಶಕ್ಕೆ ಹೋಲಿಸಿದರೆ ನಮ್ಮಲ್ಲಿ ಹೆಚ್ಚು ಪ್ರಾಣಿಗಳಿವೆಯೇ ಹೊರತು ಯಾವುದನ್ನೂ ಸರಿಯಾಗಿ ಸಾಕತಕ್ಕ ವ್ಯವಸ್ಥೆ ನಮ್ಮ ದೇಶದಲ್ಲಿ ಇದುವರೆಗೆ ಇನ್ನೂ ಆಗಿಲ್ಲ. ಇನ್ನು ಮುಂದಾದರೂ ಆಗಬೇಕಾಗಿದೆ. ಮಾನ್ಯ ವೆಂಕಟಪ್ಪನವರು ಅನಿಮಲ್ ಹಸ್ಬೆಂಡರಿ ಬಗ್ಗೆ ಹೇಳಿದ್ದಾರೆ. ಅನಿಮಲ್ ಹಸ್ಬೆಂಡರಿಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ಈಗ ಬದಲಾವಣೆಯನ್ನು ನೋಡುತ್ತಿದ್ದೇವೆ. ಈಗ ಹಾಲು ಉತ್ಪಾದನೆ ಎಲ್ಲ ಕಡೆ ಆಗುತ್ತಿದೆ. ಹಾಲು ಉತ್ಪಾದನೆಗೆ ಇನ್ನು ಕೂಡ ಬಹಳಷ್ಟು ಉತ್ತೇಜನವನ್ನು ಸರ್ಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ, ಕೇವಲ ೧೦-೧೫ ವರ್ಷಗಳಲ್ಲಿ ಮಿಶ್ರತಳಿ ನಮ್ಮ ದೇಶಕ್ಕೆ ಬಂದಮೇಲೆ ಬಹಳಷ್ಟು ಬದಲಾವಣೆಯನ್ನು ನಾವು ನೋಡುತ್ತಿದ್ದೇವೆ. ಹಾಲು ಉತ್ಪಾದನೆ ಯಾವ ಮಟ್ಟಕ್ಕೆ ಹೋಗಿತ್ತು ಎಂದರೆ ೧೫-೨೦ ವರ್ಷಗಳ ಹಿಂದೆ ಒಂದು ಊರಿನಲ್ಲಿ ಹೋಗಿ ಒಂದು ಲೀಟರ್ ಹಾಲು ಯಾರೂ ಕೊಂಡು ಕೊಂಡು ಅದನ್ನು ಮಕ್ಕಳಿಗೆ ಉಪಯೋಗಿಸುವುದಕ್ಕೆ ಆಗುತ್ತಾ ಇರಲಿಲ್ಲ. ಈಗ ಪ್ರತಿ ಊರಿನಲ್ಲಿ ಹೋದರೆ ಹಾಲನ್ನು ಅವರು ಉಪಯೋಗಿಸುವುದಲ್ಲದೆ ಹಾಲು ಮಾರತಕ್ಕ ವ್ಯವಸ್ಥೆಯನ್ನು ಪ್ರತಿ ಗ್ರಾಮಗಳಲ್ಲಿ ನಾವು ನೋಡುತಿ ್ತದ್ದೇವೆ. ಹಾಲು ಉತ್ಪಾದನೆ ನಮಗೆ ಬಹಳ ಮುಖ್ಯ. ನ್ಯೂಟ್ರಿಷನಲ್ ಪಾಯಿಂಟ್‌ನಿಂದ ಹಣ್ಣು, ಹಾಲು ಮುಖ್ಯವಾಗಿರುವುದರಿಂದ ಹಾಲು ಉತ್ಪಾದನೆಯಿಂದಲೂ ಆಹಾರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯ, ಆದ್ದರಿಂದ ಪುಷ್ಟಿಕರವಾದ ಆಹಾರ ಸಿಗಬೇಕು ಎಂದರೆ ಹಾಲು, ಮೊಟ್ಟೆ, ಪೌಲ್ಟ್ರಿ, ಪಿಗ್ಗರಿ ಎಲ್ಲದಕ್ಕೂ ಕೂಡ ಉತ್ತೇಜನ ಕೊಟ್ಟರೆ ಬಹಳ ಒಳ್ಳೆಯದು. ಇದರಿಂದ ಅನೇಕ ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳಬಹುದು. ಇದರಿಂದ ಇನ್ನೂ ಕೂಡ ಅನೇಕ ಬಡಮಕ್ಕಳಿಗೆ ನ್ಯೂಟ್ರಿಷಿಯಸ್ ಫುಡ್ ಕೊಡುವುದಕ್ಕೆ ಏನು ಸಾಧ್ಯವಾಗಿಲ್ಲವೋ ಅದೆಲ್ಲಾ ಫುಲಫಿಲ್ ಮಾಡುವುದಕ್ಕೆ ಸಾಧ್ಯ. ಹಾರ್ಟಿಕಲ್ಚರ್

ಡಿಪಾರ್ಟ್‌ಮೆಂಟ್ ಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳೇ, ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ಕಡೆ ಗುಂಡು ತೋಪುಗಳು, ಸೊಪ್ಪಿನ ಮಡಿಗಳು ಇವೆ, ತುರು ಮಂದೆಗಳಿವೆ. ಅದು ಸರ್ಕಾರದ ಜಮೀನಾಗಿದ್ದರೂ ಕೂಡ ಅದೆಲ್ಲವನ್ನೂ ಅನೇಕರು ಆಕ್ಯುಪೈ ಮಾಡಿಕೊಂಡು ಅದೆಲ್ಲವೋ ಪ್ರಯೋಜನಕ್ಕೆ ಬಾರದಂಥ ಯಾರದೋ ಸ್ವತ್ತಾಗಿ ಉಳಿಯುವ ವ್ಯವಸ್ಥೆಯಾಗಿದೆ, ಇಲ್ಲದಿದ್ದರೆ ಅದು ಬರಡು ಭೂಮಿಯಾಗಿರುವ ವ್ಯವಸ್ಥೆಯಾಗಿದೆ. ನಮ್ಮ ಪೂರ್ವಿಕರು ಅಂಥ ಗುಂಡುತೋಪುಗಳಲ್ಲಿ ಮಾವಿನ ಮರಗಳನ್ನು, ನೇರಳೆ ಮರಗಳನ್ನು ಹಾಕಿ ಹಣ್ಣಿನ ಗಿಡಗಳನ್ನು ಬೆಳೆಸುತ್ತಿದ್ದರು. ಪ್ರತಿ ಗ್ರಾಮದವರು ಆ ಹಣ್ಣುಗಳನ್ನು ಆ ಸಮಯದಲ್ಲಿ ಉಪಯೋಗಿಸುತ್ತಿದ್ದರು. ಈಗ ಆ ಜಮೀನುಗಳನ್ನೆಲ್ಲಾ ರಿಸರ್ವ್ ಮಾಡುವುದಕ್ಕೆ ಗೆಜೆಟ್ ನೋಟಿಫಿಕೇಷನ್ ಆಗಿರುವುದರಿಂದ ಆ ಜಾಗಗಳನ್ನೆಲ್ಲಾ ಹಾರ್ಟಿಕಲ್ಚರ್ ಡಿಪಾಟ್‌ಮೆಂಟ್‌ನವರು ವಹಿಸಿಕೊಂಡು ಅಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಬೇಕು. ಮಾವಿನ ಮರ ಎಂದರೆ ಕಾಡು ಮಾವಿನ ಮರ ನೆಟ್ಟರೂ ಪರ್ವಾಗಿಲ್ಲ, ಒಳ್ಳೆಯ ತಳಿಗಳನ್ನೇ ನೆಡಬೇಕೆಂದೇನೂ ಇಲ್ಲ. ಹುಣಸೆ ಗಿಡ, ಮಾವಿನ ಗಿಡ, ನೇರಳೆ ಗಿಡ, ಹಲಸಿನ ಗಿಡಗಳನ್ನು ನೆಟ್ಟರೆ ಆ ಗ್ರಾಮಗಳಿಗೆ ಹಣ್ಣನ್ನು ಒದಗಿಸುವ ವ್ಯವಸ್ಥೆಯಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರ ಈಗ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕು. ಈಗಿರತಕ್ಕ ನಮ್ಮ ಬಜೆಟರಿ ಪ್ರಾವಿಷನ್‌ನಲ್ಲಿ ಅದಕ್ಕೆ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ನಾವು ಅದಕ್ಕಿಂತಲೂ ಜಾಸ್ತಿ ಕೊಡಬೇಕೆಂದರೆ ಇಂಟರ್‌ನಲ್ ರಿಸೋರ್ಸ್‌ಸ್ ಇದ್ದರೆ ಮಾಡಬಹುದು. ಆದರೆ ನೀವು ಬೇರೆ ಯಾವುದಾದರೂ ಮಾನಿಟರಿ ಆರ್ಗನೈಸೇಷನ್‌ನಿಂದ ಈ ಸ್ಕೀಮ್‌ಗಳಿಗೆ ಹಣವನ್ನು ತಂದು ಮಾಡುವುದಾದರೆ ಬಹಳ ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್.

ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ದಿವಸ ಈ ಹಿಂದೆ ಕೃಷಿ ಇಲಾಖೆ ಬಗ್ಗೆ ಮಾತನಾಡಿದ ಸದಸ್ಯರುಗಳು ದೇಶದಲ್ಲಿ ವ್ಯವಸಾಯ ಹಾಗೂ ಕೃಷಿ ಇಲಾಖೆಗಳ ಮಹತ್ವದ ಬಗ್ಗೆ, ಕೃಷಿ ನಮ್ಮ ದೇಶಕ್ಕೆ ಎಷ್ಟು ಪ್ರಾಮುಖ್ಯವಾದುದು ಎಂದು ತಿಳಿಸಿದ್ದಾರೆ. ಇವತ್ತಿನ ದಿವಸ ನಮ್ಮ ಈ ಕೃಷಿ ಇಲಾಖೆಯ ವಾರ್ಷಿಕ ವರದಿಯಲ್ಲಿ ಸರ್ಕಾರ ಕೊಟ್ಟಿರುವ ರೀತಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಅದರಲ್ಲೂ ಸಹ ಈ ಸಾರಿ ಕೃಷಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ನಾನು ಇನ್ನೂ ಹೆಚ್ಚಿನ ರೀತಿಯಲ್ಲಿ ಏನೇನು ಕೆಲಸ ಕಾರ್ಯಗಳು ಆಗಬೇಕೆನ್ನುವುದರ ಬಗ್ಗೆ ಕೆಲವು ಸಲಹೆಗಳನ್ನು ಸರ್ಕಾರದ ಮುಂದೆ ಇಡಬೇಕೆಂದಿದ್ದೇನೆ. ನಮ್ಮ ರಾಜ್ಯಾಂಗದ ರಚನೆಯಲ್ಲೂ ಕೂಡ ಕೃಷಿ ಮತ್ತು ಪಶು ಸಂಗೋಪನೆ ವಿಷಯವಾಗಿ ಒಂದು ಡೈರೆಕ್ಷನ್ ಕೊಟ್ಟಿರುವುದು ತಮಗೆಲ್ಲಾ ಗೊತ್ತಿರತಕ್ಕಂಥ ವಿಚಾರ. ರಾಜ್ಯಾಂಗದಲ್ಲಿ ಸರ್ಕಾರ ಸೈಂಟಿಫಿಕ್ ಮತ್ತು ಮಾಡ್ರನ್ ಮೆಥಡ್‌ನಲ್ಲಿ ವ್ಯವಸಾಯವನ್ನು ಮತ್ತು ಪಶು ಸಂಗೋಪನೆಯನ್ನು ಇಂಪ್ರೂವ್ ಮಾಡಬೇಕೆಂದು ಡೈರೆಕ್ಷನ್ ಇದೆ. ಇವತ್ತಿನ ದಿವಸ ನಾವು ನಡೆಸುತ್ತಿರತಕ್ಕ ರೀತಿಯಲ್ಲಿ ಎಷ್ಟರಪಟ್ಟಿಗೆ ಸೈಂಟಿಫಿಕ್ ಮತ್ತು ಮಾಡ್ರನ್ ಆಗಿದೆ ಎನ್ನುವುದನ್ನು ನೋಡಿದರೆ, ಇವತ್ತಿನ ದಿವಸ ವ್ಯವಸಾಯಗಾರರು ಉಪಯೋಗ ಮಾಡತಕ್ಕ ಸಲಕರಣೆಗಳು, ಗೊಬ್ಬರ ವಗ್ಗೆರೆ ಮತ್ತು ಮಣ್ಣಿನ ವಿಚಾರ, ನೀರು ಮೇನೇಜ್‌ಮೆಂಟ್ ವಗ್ಗೆರೆ ವಿಚಾರದಲ್ಲಿ ಪರದೇಶಗಳಿಗೆ ಹೋಲಿಸಿದರೆ ಅಷ್ಟು ಹೆಚ್ಚಿನ ಸೈಂಟಿಫಿಕ್ ಪತ್ತು ಮಾಡರ್ನ್ ಮೆಥಡ್

ಆಗುತ್ತಿಲ್ಲ ಎಂದು ಭಾವಿಸುತ್ತೇನೆ. ಆದುದರಿಂದ ಇವತ್ತು ನಮ್ಮ ಸ್ನೇಹಿತರು ಹೇಳಿದಹಾಗೆ, ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಬಹಳವಾಗಿ ಬೆಳೆಯುತ್ತಿದೆ, ಜೊತೆಗೆ ಪಾಪ್ಯುಲೇಷನ್ ಹೆಚ್ಚಾಗುತ್ತದೆ. ಎಂಪ್ಲಾಯ್‌ಮೆಂಟ್ ದೃಷ್ಟಿಯಲ್ಲಿ ನಾವು ನೋಡಿದರೆ ಈ ವ್ಯವಸಾಯ ಕ್ಷೇತ್ರದಲ್ಲಿ ಮಾತ್ರ ಬಹಳ ಹೆಚ್ಚಿನ ಜನರಿಗೆ ನಾವು ಎಂಪ್ಲಾಯ್‌ಮೆಂಟ್ ಕೊಡಬಹುದು ಎಂದು ಅನೇಕ ತಜ್ಞರು ಈ ವಿಚಾರದಲ್ಲಿ ಅವರ ಅಭಿಪ್ರಾಯಗಳನ್ನು ಕೊಟ್ಟಿರತಕ್ಕ ವಿಚಾರ ಅನೇಕರಿಗೆ ಗೊತ್ತಿದೆ. ಆದುದರಿಂದ ಈ ವ್ಯವಸಾಯವನ್ನು ಎಷ್ಟರಮಟ್ಟಿಗೆ ಮಾಡರ್ನ್ ಮತ್ತು ಸೈಂಟಿಫಿಕ್ ಮೆಥೆಡ್‌ನಲ್ಲಿ ಹೈಯೆಸ್ಟ್ ಪಾಯಿಂಟ್ ಆಫ್ ಪ್ರೊಡಕ್ಷನ್‌ಗೆ ಏರಿಸಬಹುದೆಂಬ ಬಗ್ಗೆ ನಾನು ತಮ್ಮ ಮುಂದೆ ಕೆಲವು ಸಲಹೆಗಳನ್ನು ಸರ್ಕಾರದ ಪರಿಶೀಲನೆಗೆ ಇಡುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಬಹಸ ಪ್ರಾಮುಖ್ಯವಾಗಿ ನಾವು ಕೋಆಪರೇಟೀವ್ ಫಾರ್ಮಿಂಗನ್ನು ಈ ದೇಶದಲ್ಲಿ ಅಳವಡಿಸಿಕೊಂಡರೆ ಎಲ್ಲಾ ಜನರಿಗೂ ಕೂಡ ಎಂಪ್ಲಾಯ್‌ಮೆಂಟ್ ಕೊಡಬಹುದು. ಆದರೆ ಜೊತೆಗೆ ಈ ವ್ಯವಸಾಯದಲ್ಲಿ ನಾವು ವ್ಯವಸಾಯಗಾರರು ಎಂದು ಹೇಳುವ ಜನ ಬಹಳ ದುಡಿಯುತ್ತೇವೆ ಎಂದು ಹೇಳುತ್ತಾರೆ. ನಾನೂ ಒಬ್ಬ ಸಣ್ಣ ವ್ಯವಸಾಯಗಾರ. ನಿಜವಾಗಿಯೂ ಸಹ ಕೃಷಿಯಲ್ಲಿ ಬೇರೆ ದೇಶದಲ್ಲಿ ಇರುವ ರೀತಿಯಲ್ಲಿ ಜಮೀನು ಇಟ್ಟುಕೊಂಡಿರತಕ್ಕ ಜನ ಆಕ್ಚುಯಲಿ ಅವರ ಸಂಸಾರದಲ್ಲಿ ಇರುವವರಾಗಲೀ, ಅವರಾಗಲೀ ವ್ಯವಸಾಯದಲ್ಲಿ ದುಡಿಯತಕ್ಕ ಜನ ಬಹಳ ಕಡಿಮೆಯಾಗುತ್ತಿದ್ದಾರೆ. ಅವರೆಲ್ಲರೂ ವ್ಯವಸಾಯದ ಜಮೀನನ್ನು ಇಟ್ಟುಕೊಂಡಿದ್ದರೂ ಸದಾ ಆಕ್ಚುಯಲ್ ಆಗಿ ದುಡಿಯುವ ಜನರಲ್ಲ. ಈ ದಿಸೆಯಲ್ಲಿ ಈ ವ್ಯವಸ್ಥೆಯಲ್ಲಿ ಬಹಳ ಹೆಚ್ಚಿಗೆ ಖರ್ಚು ತಗುಲತಕ್ಕದು ಮತ್ತು ವ್ಯವಸಾಯವನ್ನು ಮಾಡದೇ ಇರತಕ್ಕ ಅಂದರೆ ಕಾಯಕವನ್ನೇ ಮಾಡದೆ ಕೈಲಾಸದ ಸುಖವನ್ನೇ ಅನುಭವಿಸತಕ್ಕ ಜನಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಇದೂ ಒಂದು ಕಾರಣ. ಆದುದರಿಂದ ಅನೇಕ ತತ್ವಜ್ಞಾನಿಗಳು ಹೇಳಿದ ಹಾಗೆ, ಅದರಲ್ಲೂ ಬಸವಣ್ಣನವರು ಹೇಳಿದ ಹಾಗೆ ಮತ್ತು ಇವತ್ತಿನ ದಿವಸಗಳಲ್ಲಿ ಮಾಡ್ರನ್ ಕಮ್ಯುನಿಸಂ ಸಹ ಈ ಥಿಯರಿಯನ್ನೇ ಅಳವಡಿಸಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಏಕೆಂದರೆ, ಕಾಯಕ ಅನುಭವಿಸತಕ್ಕ ಜನ, ಕೈಲಾಸವನ್ನು ಕೇಳತಕ್ಕ ಜನ, ಕಾಯಕವನ್ನು ಮಾಡಿದರೇನೇ ಸರಿಹೋಗುವುದು. ಕಾಯಕ ಮತ್ತು ಕೈಲಾಸವನ್ನು ಸೆಪರೇಟ್ ಮಾಡಿದರೆ ಸಮಾಜಕ್ಕೆ ಅನೇಕ ಕುಂದು ಕೊರತೆ, ತೊಂದರೆಗಳಿಗೆ ಈಡಾಗತಕ್ಕ ಸಂಭವ ಇದೆ. ಆದ್ದರಿಂದ ಈ ವಿಚಾರದಲ್ಲಿ ಕೋಆಪರೇಟೀವ್ ಕಲೆಕ್ಟೀವ್ ಫಾರ್ಮಿಂಗ್ ಮಾಡಿದರೆ ಇವತ್ತಿನ ದಿವಸ ತುಂಡು ಭೂಮಿ ಹೋಗತಕ್ಕದ್ದು ಇದೆ. ಕನ್‌ಸಾಲಿಡೇಟ್ ಫಾರ್ಮಿಂಗ್, ಜಾಯಿಂಟ್ ಫಾರ್ಮಿಂಗ್ ಇರತಕ್ಕದ್ದನ್ನು ಬಿಟ್ಟು ಬಿಟ್ಟಿದ್ದೇವೆ. ಜೊತೆಗೆ ಸಣ್ಣ ಪುಟ್ಟ ಹಿಡುವಳಿದಾರರು ಲೆಜಿಸಲೇಷನ್ ದೆಸೆಯಿಂದ ಮಾಯವಾಗುತ್ತಿದ್ದರೆ. ದಿನೇ ದಿನೇ ಲ್ಯಾಂಡ್‌ಲೆಸ್ ಪೀಪಲ್ಸ್ ಆಗಿ ಎಲ್ಲರೂ ಕೂಲಿಗಾರರು ಆಗುತ್ತಿದ್ದಾರೆ. ಆ ದೃಷ್ಟಿಯಿಂದ ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಸಮನಾದ ಸ್ಟೇಟಸ್‌ನ್ನು ಕೊಡಬೇಕೆಂದು ಏನು ಹೇಳಿದ್ದಾರೆ, ಅದನ್ನು ನಾವು ಸಾಧನೆ ಮಾಡಲಿಕ್ಕೆ ಆಗುವುದಿಲ್ಲ. ರಾಜ್ಯಾಂಗ ರಚನೆಯಲ್ಲಿ ಹೇಳಿರುವ ಇನ್ನೊಂದು ಡೈರೆಕ್ಷನ್ ಏನೆಂದರೆ, ೧೯೭೬ನೇ ಇಸವಿಯಲ್ಲಿ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರು ಸಂವಿಧಾನಕ್ಕೆ ತಿದ್ದುಪಡಿಯನ್ನು ತಂದಿರತಕ್ಕಂಥಾದ್ದು ಏನೆಂದರೆ, ಈ ದೇಶದಲ್ಲಿರುವ ಬಡತನವನ್ನು ಹೋಗಲಾಡಿಸಬೇಕಾದರೆ ಗ್ರೂಪ್ ಮತ್ತು ಇಂಡಿವಿಜಿಲ್‌ನಲ್ಲಿರತಕ್ಕ ಇನ್‌ಕಂನ ಬಹಳ ವ್ಯತ್ಯಾಸವನ್ನು ಸರಿಪಡಿಸಬೇಕಾದರೆ ಮಾತ್ರ ದೇಶದ ಸಂವಿಧಾನದಲ್ಲಿ ಹೇಳಿರುವ ಪ್ರಕಾರ ಸೋಷಿಯಲ್‌ಸ್ಟಿಕ್ ಡೆಮಾಕ್ರಟಿಕ್

ಸೊಸೈಟಿಯನ್ನು ಮಾಡುವುದಕ್ಕೆ ಸಾಧ್ಯ ಆದರಿಂದ ಈ ಒಂದು ಘನ ಉದ್ದೇಶವನ್ನು ಸಾಧನೆ ಮಾಡಿದ ಹಾಗೆ ಆಗುತ್ತದೆ. ಎಲ್ಲ ಜನಗಳಿಗೆ, ಇಂಡಿವಿಜಿಯಲ್‌ಸೆಗೆ ಈಕ್ವಲ್ ಸ್ಟೇಟಸ್, ಈಕ್ವಲ್ ಇನ್‌ಕಂ ಬರುವಂತೆ ಮಾಡಲು ಈವೊಂದು ಉದ್ದೇಶವನ್ನು ಸಾಧಿಸಲಿಕ್ಕೆ ನಾವು ಈ ದಿಸೆಯಲ್ಲಿ ಹೆಜ್ಜೆಯನ್ನಿಟ್ಟ ಹಾಗೆ ಆಗುತ್ತದೆ. ಇದು ಅಲ್ಲದೆ ಬಡತನದಲ್ಲಿ ಸಿಕ್ಕಿರತಕ್ಕ ಅನೇಕ ಜನಗಳಿಗೆ ಬಡತನವನ್ನು ನಿರ್ಮೂಲನ ಮಾಡಬೇಕು ಎನ್ನುವ ಉದ್ದೇಶವಿದೆಯೆಲ್ಲ ಅದನ್ನೂ ಸಹ ಒಟ್ಟಿಗೆ ಸಾಧನೆ ಮಾಡುವುದಕ್ಕೆ ಅವಕಾಶವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಕಲೆಕ್ಟೀವ್ ಫಾರ್ಮಿಂಗ್‌ನಿಂದ ಏನಾಗುತ್ತದೆಯೆಂದರೆ, ನಮ್ಮ ರಾಷ್ಟ್ರದ ಪ್ರತಿಯೊಂದು ಜನಾಂಗದಲ್ಲೂ ಸಮಾಜದಲ್ಲೂ ಸಹ ಸೋಷಿಯಲ್ ಸೆಕ್ಯುರಿಟಿ ಉಂಟಾಗುತ್ತದೆ. ಇದರಿಂದ, ಈ ರೀತಿ ಒಬ್ಬೊರಿಗೊಬ್ಬರಿಗ ಹೊಡೆದಾಟ, ಗಲಾಟೆ ಆಗತಕ್ಕ ಸನ್ನಿವೇಶಗಳು ಬಹುಮಟ್ಟಿಗೆ ಕಡಿಮೆಯಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಸರ್ಕಾರ ಈ ಕಲೆಕ್ಟೀವ್ ಫಾರ್ಮಿಂಗ್‌ನಿಂದ ಏನಾಗಬಹುದು ಎನ್ನವುದನ್ನು ಸಹ ಹೆಚ್ಚಿನ ರೀತಿಯಲ್ಲಿ ಪರಿಣತರು ಇದ್ದಾರೆ. ಅವರೊಡನೆ ಯೋಚನೆ ಮಾಡಿದರೆ ಒಳ್ಳೆಯದೆಂದು ನಾವು ತಿಳಿದುಕೊಂಡು ಸರ್ಕಾರಕ್ಕೆ ಇದೊಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಜೊತೆಗೆ ನಮ್ಮ ಸ್ನೇಹಿತರು ಹಿಂದೆ ಹೇಳಿದಹಾಗೆ, ಅಗ್ರಿಕಲ್ಚರ್ ಒಂದು ಬೇಸಿಕ್ ಇಂಡಸ್ಟ್ರಿ ಇದನ್ನು ಒಂದು ಆಕ್ಯುಪೇಷನ್ ಆಗಿ ನಾವು ಮಾಡುತ್ತಿದ್ದೇವೆ. ಇದನ್ನು ಇಂಡಸ್ಟ್ರೀಸ್ ಬೇಸಿಸ್ ಮೇಲೆ ಆವೊಂದು ಕಾನ್‌ಸ್ಟಂಟ್ ಮೇಲೆ ಮಾಡಿದರೆ ಇನ್ನಷ್ಟು ಪ್ರೊಡಕ್ಷನ್ ಮಾಡುವುದಕ್ಕೆ ಸಾಧ್ಯ. ಆದ್ದರಿಂದಲೇ ಸಂವಿಧಾನದ ಡೈರೆಕ್ಷನ್‌ನಲ್ಲಿ ಮಾಡ್ರನ್ ಅಂಡ್ ಸೈಂಟಿಫಿಕ್ ಮೆಥೆಡ್‌ನಲ್ಲಿ ಮಾಡಿದರೆ ಇದು ಆಗುತ್ತದೆ ಎಂದು ಇರುವುದರಿಂದ ನಾವು ಈ ದಿಶೆಯಲ್ಲಿ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಜೊತೆಗೆ ಅವರು ಹೇಳಿದ ಹಾಗೆ ತೋಟಗಾರಿಕೆ, ಪೌಲ್ಟ್ರಿಫಾರಂ, ಪಿಗರಿ ವಗೈರೆಯಂತಹ ಒಂದು ಸಬ್ಸಿಡರಿ ಆಕ್ಯುಪೇಷನ್‌ನಿಂದ ಅಗ್ರಿಕಲ್ಚರ್ ಡೆವಲಪ್ ಮಾಡಿದರೆ, ಈಗ ಹೇಳಿರುವಂತಹ ವಿಚಾರಗಳನ್ನು ಸಬ್ಸಿಡರಿ ಇಂಡಸ್ಟ್ರೀಸ್ ರೀತಿಯಲ್ಲಿ ನಾವು ಮಾಡಿಕೊಂಡರೆ ಆಗ ಅಗ್ರಿಕಲ್ಚರ್‌ಗೆ ಸಹ ಹೆಚ್ಚಿನ ಒಂದು ಪ್ರಾತಿನಿಧ್ಯ ಬಂದು ಇವತ್ತಿನ ದಿವಸ ಬೃಹದಾಕಾರವಾಗಿ ಬೆಳೆಯುತ್ತಿರುವ ನಿರುದ್ಯೋಗ ಸಮಸ್ಯೆ ಮತ್ತು ಬಡತನ ನಿರ್ಮೂಲನ ಮಾಡಲಿಕ್ಕೆ ಬಹುಶಃ ಹೆಚ್ಚಾಗಿ ಸಾಧನೆಯಾಗತಕ್ಕ ಮಾರ್ಗವಾಗುತ್ತದೆಂದು ಹೇಳಿ, ನಾನು ಆದನ್ನು ನಂಬಿ, ತಾವು ನಾನು ಮಾತನಾಡಲು ಇಷ್ಟು ಸಮಯವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಚರ್ಚೆ ಮುಕ್ತಾಯವಾಗಿದೆ. ಸಭೆಯನ್ನು ಈಗ ಮುಂದೂಡಲಾಗಿದೆ. ನಾಳೆ ಬೆಳಗ್ಗೆ ಪುನಃ ೧೧ ಗಂಟೆಗೆ ಸಭೆ ಸಮಾವೇಶಗೊಳ್ಳುವುದು.

(ಸದನವು ರಾತ್ರಿ ೮ ಗಂಟೆ ೯ ನಿಮಿಷಗಳಿಗೆ ಮುಕ್ತಾಯವಾಗಿ ಪುನಃ ದಿನಾಂಕ ೨೦ನೇ ಮಾರ್ಚಿ ಮಾಹೆ ೧೯೭೨ರ ಶುಕ್ರವಾರದಂದು ಬೆಳಗ್ಗೆ ೧೧.೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನಸಭೆ

ಶುಕ್ರವಾರ 20ನೇ ಮಾರ್ಚ್ 1992 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.15 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು ಶ್ರೀಮತಿ ನಾಗಮ್ಮ.ಸಿ.ಕೇಶವಮೂರ್ತಿ ಅವರು ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆಗೆ ಮಂತ್ರಿಗಳಿಂದ ಉತ್ತರ.
(ವ್ಯವಸಾಯ, ತೋಟಗಾರಿಕೆ, ಪಶುಸಂಗೋಪನೆ ಮತ್ತು ಡೈರಿ, ಮೀನುಗಾರಿಕೆ, ರೇವು ಮತ್ತು ಜಲಸಾರಿಗೆ ಸೇವೆಗಳು ಹಾಗೂ ಅರಣ್ಯ)

+ ಶ್ರೀ ಎನ್.ಚಿಕ್ಕೇಗೌಡ:- (ಕೃಷಿ ಮಂತ್ರಿಗಳು) ಸನ್ಮಾನ್ಯ ಅಧ್ಯಕ್ಷಿಣಿಯವರೇ, ವ್ಯವಸಾಯ ಇಲಾಖೆಯ ಬೇಡಿಕೆಯ ಬಗ್ಗೆ ಸುಮಾರು ಆರುಜನ ಸದಸ್ಯರು ನಿನ್ನೆ ಮಾತನಾಡಿದ್ದಾರೆ. ಇನ್ನೂ ಹೆಚ್ಚು ಜನ ಮಾತನಾಡಲಿಕ್ಕೆ ಕಾತುರರಾಗಿದ್ದರೂ ಕೂಡ. ಸಮಯದ ಅಭಾವದಿಂದ ಅನೇಕ ಮಾನ್ಯ ಸದಸ್ಯರು ಮಾತನಾಡಲಿಕ್ಕೆ ಆಗಲಿಲ್ಲವೆಂದು ನಾನಾದರೂ ಭಾವಿಸುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೇ, ನಮ್ಮ ಕರ್ನಾಟಕದಲ್ಲಿಯಾಗಲಿ , ಭಾರತದಲ್ಲಿಯಾಗಲಿ ವ್ಯವಸಾಯ ವೃತ್ತಿಯಲ್ಲಿರತಕ್ಕಂಥವರು ಮತ್ತು ನೇರವಾಗಿ ರೈತ ಕಾರ್ಮಿಕರಾಗಿರತಕ್ಕಂಥವರು ರಾಷ್ಟ್ರದಲ್ಲಿ 100ಕ್ಕೆ 75 ರಿಂದ 85 ರಷ್ಟು ಜನ ಇದ್ದಾರೆ. ವ್ಯವಸಾಯ ಉತ್ಪಾದನೆ ಇಲ್ಲದೆಹೋದರೆ ಯಾವ ಒಬ್ಬ ಮನುಷ್ಯ ರಾಷ್ಟ್ರದಲ್ಲಿಯೇ ಅಲ್ಲ, ಅಂತರಾಷ್ಟ್ರದಲ್ಲಿಯೇ ಆಗಲೀ ಬದುಕಲಿಕ್ಕೆ ಸಾಧ್ಯವಾಗುವುದಿಲ್ಲ. ದೇಶಕ್ಕೆ ಅನ್ನವನ್ನು ಕೊಡತಕ್ಕಂಥವನು ವ್ಯವಸಾಯಗಾರ. ದೇಶದ ಬೆನ್ನು ಮೂಳೆ ವ್ಯವಸಾಯಗಾರ. ವ್ಯವಸಾಯದಲ್ಲಿ ನಿರತರಾಗಿರತಕ್ಕಂಥವರಿಗೆ ನಾನಾದರೂ ಮಂತ್ರಿಯಾಗಿ ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ, ನಾನು ಹಿಂದುಮುಂದು ನೋಡುವುದಿಲ್ಲ. ಅವರಿಗೆ ದೊರಕಬೇಕಾದಂಥ ಅನೇಕ ಸೌಲಭ್ಯಗಳು ದೊರೆತಿಲ್ಲವೆಂದು ಹೇಳಿದರೆ ಮಾನ್ಯ ಸದಸ್ಯರಾಗಲಿ ಯಾರೇ ಆಗಲಿ ಅನ್ಯತಾಭಾವಿಸುವುದಿಲ್ಲವೆಂದು ನಾನು ತಿಳಿಸಿದ್ದೇನೆ. ನಾನು ಬೇರೆ ರಾಷ್ಟ್ರಗಳನ್ನು ನೋಡಿದ್ದೇನೆ. ಅನೇಕ ರಾಷ್ಟ್ರಗಳಿಗೆ 4-5 ಸಾರಿ ಹೋಗಿ ಬಂದಿದ್ದೇನೆ. ಅಲ್ಲಿರತಕ್ಕಂಥ ಸೌಲಭ್ಯಗಳೆಂದರೆ ಒಬ್ಬ ರೈತ ಒಂದು ಫಾರಂ ಇಟ್ಟುಕೊಂಡಿರುವವನು ಸುಮಾರು 15-20-50 ಮೈಲಿ ಇದ್ದರೆ ಅವನಿಗೆ ಒಂದು ರಸ್ತೆ, ಅವನಿಗೆ ಒಂದು ಟೆಲಿಫೋನ್, ಅವನಿಗೆ ಓಡಾಡುವುದಕ್ಕೆ ಒಂದು ಕಾರು, ಆಹಾರ ಉತ್ಪಾದನೆಗೆ ಬೇಕಾದಂಥ ಯಂತ್ರೋಪಕರಣಗಳ ಸೌಲಭ್ಯಗಳನ್ನು ಆ ರಾಷ್ಟ್ರದ ಸರ್ಕಾರ ಒದಗಿಸಿಕೊಡುತ್ತದೆ. ಇಲ್ಲೂ ಸಹ ಇಲ್ಲವೆಂದು ಹೇಳುವುದಿಲ್ಲ. ಆ ದಿಸೆಯಲ್ಲಿ ಪ್ರಯತ್ನ ಮಾಡಿದ್ದೇವೆ. ನಮ್ಮ ರಾಷ್ಟ್ರದಲ್ಲಿರತಕ್ಕಂಥ, ನಮ್ಮ ರಾಜ್ಯದಲ್ಲಿರತಕ್ಕಂಥ ರೈತರು ಹಸಿರುಕ್ರಾಂತಿಯನ್ನು ಸಾಧಿಸಿದ್ದಾರೆ. ಸ್ವಾತಂತ್ರ್ಯ ಮುನ್ನ ನಾವು ಪರದೇಶಕ್ಕೆ ಹೋಗಿ ಭಿಕ್ಷಾಟನೆಯನ್ನು ಮಾಡುತ್ತಿದ್ದೆವು. ಪಿ.ಎಲ್. 480 ಹಡಗು ಬರುವುದನ್ನೇ ಕಾಯುತ್ತಿದ್ದೆವು. ಗೋಧಿ ಬರುವುದನ್ನೇ ಕಾಯುತ್ತಿದ್ದೆವು. ಜೋಳ, ಮುಸುಕಿನ ಜೋಳ, ಕೆಂಪು ಜೋಳ ಇವತ್ತು ಆ ರಾಷ್ಟ್ರಗಳಲ್ಲಿ ದನಗಳಿಗೆ, ಕೋಳಿಗಳಿಗೆ, ಹಂದಿಗಳಿಗೆ ಹಾಕುತ್ತಿದ್ದ ಮೇವು, ಅದನ್ನು ನಮ್ಮ ರಾಷ್ಟ್ರದಲ್ಲಿ ಅನೇಕ ವರ್ಷಗಳಕಾಲ ನಮ್ಮ ಜನತೆಗೆ ನಾವು ಕೊಡುತ್ತಿದ್ದೆವು. ಅನೇಕರು ಹೇಳುತ್ತಿದ್ದರು ಏನಪ್ಪ ಇದು ಮುಸುಕಿನ ಜೋಳ ತಿಂದರೆ ಕಜ್ಜಿ ಬಂದುಬಿಡುತ್ತದೆಂದು. ನಿಜ, ಮುಸುಕಿನ ಜೋಳದ ಅಭ್ಯಾಸವಿಲ್ಲದಿರತಕ್ಕಂಥ ಜನರಿಗೆ ಅದನ್ನು ಕೊಟ್ಟು, ಈ ದೇಶದಲ್ಲಿ ಅನೇಕ ಜನರು ರೋಗಗ್ರಸ್ತರಾದುದನ್ನು ನಾವು ಕಣ್ಣಾರೆ ನೋಡಿದ್ದೇನೆ. ಡಿಪೋಗಳ ಮುಂದೆ ರೈತರು ಚೀಲಗಳನ್ನು ಹಿಡಿದುಕೊಂಡು ಪರದೇಶದ ರೇಷನನ್ನು ಪಡೆಯುತ್ತಿದ್ದುದನ್ನು ನೋಡಿದ್ದೇನೆ. ನಮ್ಮ ರಾಷ್ಟ್ರದಲ್ಲಿ ಹಸಿರುಕ್ರಾಂತಿಯಾಗುವುದಕ್ಕೆ ನಮ್ಮ ರೈತರು, ನಮ್ಮ ವಿಜ್ಞಾನಿಗಳು, ಈ ವ್ಯವಸಾಯ ಕ್ಷೇತ್ರದಲ್ಲಿರತಕ್ಕಂಥ ಎಲ್ಲಾ ಅಧಿಕಾರಿಗಳೂ

ಕಾರಣಕರ್ತರಾಗಿದ್ದಾರೆ. ಅವರನ್ನು ನಾನು ಅಭಿನಂದಿಸಬೇಕಾಗುತ್ತದೆ. ನಮ್ಮ ಆಹಾರದ ಉತ್ಪನ್ನ ಹೆಚ್ಚಾಗಿದ್ದು, ಸ್ವಾವಲಂಬನೆ ಆಗಿರುವುದು ಮಾತ್ರವಲ್ಲದೆ ಈ ದೇಶದಲ್ಲಿ ಹಾಲಿನ ಉತ್ಪಾದನೆಯಲ್ಲೂ ಕ್ರಾಂತಿಯನ್ನು ಮಾಡಿದ್ದೇವೆ. ಹಾಲಿನ ಉತ್ಪಾದನೆ ಬಗ್ಗೆ ನಾನು ಅದರ ಸಂಬಂಧಪಟ್ಟ ಮಂತ್ರಿಯಲ್ಲದಿದ್ದರೂ ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಇವತ್ತು ಹಸಿರುಕ್ರಾಂತಿ ಹಾಲಿನ ಉತ್ಪಾದನೆಯಲ್ಲಿ ಕ್ರಾಂತಿಯನ್ನು ಈ ದೇಶದಲ್ಲಿ ನಾವು ಸೆಲ್ಫಸಫಿಷಿಯೆಂಟ್ ಆಗಿರತಕ್ಕಂಥ ಮಹಾಸಾಧನೆಯನ್ನು ಮಾಡದೆಹೋಗಿದ್ದರೆ, ಬಹುಶಃ ನಮ್ಮ ದೇಶದಲ್ಲಿ ಸ್ವಾತಂತ್ರಕ್ಕೆ ಮೊದಲು ಪಶ್ಚಿಮ ಬಂಗಾಳದಲ್ಲಿ ಸಾವಿರಾರು ಜನರು ಸತ್ತಿದ್ದನ್ನು ನಾವು ಕೇಳಿದ್ದೇವೆ. ಅದು ಮುಂದುವರಿಯುತ್ತಿತ್ತು. ಆ ರೀತಿ ಇವತ್ತು ಅನ್ನದ ಅಭಾವದಿಂದ, ಅನ್ನವಿಲ್ಲದೆ, ಸತ್ತಂಥ ಘಟನೆ ಈ ದೇಶದಲ್ಲಿ ಒಂದೂ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಎಲ್ಲೋ ಅಲ್ಲಿ ಇಲ್ಲಿ ಒಬ್ಬರು ರೋಗರುಜಿನಬಂದು ಸತ್ತರೆ, ಅನ್ನವಿಲ್ಲದೆ, ನೀರಿಲ್ಲದೆ, ಸತ್ತುಬಿಟ್ಟನೆಂದು ಹೇಳುತ್ತಾರೆ, ಅದು ಸತ್ಯಾಂಶಕ್ಕೆ ದೂರವಾದ ವಿಚಾರವೆಂದು ಹೇಳಲೇಬೇಕಾಗಿದೆ. ನಮ್ಮ ರಾಷ್ಟ್ರದ, ನಮ್ಮ ರಾಜ್ಯದ ರೈತರನ್ನು ನಾವು ಅಭಿನಂದಿಸಿ ಅವರಿಗೆ ಗೌರವಸಲ್ಲಿಸುವುದು ನಮ್ಮ ಪ್ರಥಮ ಕರ್ತವ್ಯ ನಾನು ಒಬ್ಬ ರೈತನಾಗಿ, ರೈತನ ಮಗನಾಗಿ ಈ ಮಾತನ್ನು ಹೇಳದೆ ಹೋದರೆ ನಾನು ಕರ್ತವ್ಯ ಲೋಪ ಮಾಡಿದಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀಮತಿ ಇಂದಿರಾಗಾಂಧಿಯವರು ನಮ್ಮ ಪ್ರಧಾನಿಯಾಗಿದ್ದ ಕಾಲದಲ್ಲಿ ಫುಡ್ ಪ್ರೊಡಕ್ಷನ್ ಜ್ಯೂಬಿಲಿಗೆ ಬಂದಿದ್ದರು. ನಮ್ಮ ಕರ್ನಾಟಕ ರಾಜ್ಯದಲ್ಲಿ ನಾನು ಆಗ ವ್ಯವಸಾಯ ಮತ್ತು ಪಶುಪಾಲನಾ ಮಂತ್ರಿಯಾಗಿದ್ದೆ. ಆಗ ಶ್ರೀಮತಿ ಇಂದಿರಾಜಿಯವರು ಅಂದು ಹಾಲಿನ ಉತ್ಪಾದನೆಯ ಬಗ್ಗೆ ಸಮೀಕ್ಷೆ ನಡೆಸಿದರು. ಅವರು ಈ ರಾಷ್ಟ್ರದ, ರಾಜ್ಯದ ಜನತೆ, ರೈತರು ಸಾಧಿಸಿರತಕ್ಕ ಮಹತ್ಸಾಧನೆ ಬಗ್ಗೆ ಒಳ್ಳೆಯ ಮಾತನ್ನು ಹೊಗಳತಕ್ಕ ಮಾತನ್ನು ಹೇಳಿದ್ದನ್ನು ಕೇಳಿದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರು ಬಂದಿದ್ದಾಗ ಅವರು ಹೇಳಿದ ಇನ್ನೊಂದು ಮಾತನ್ನು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಶ್ರೀ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರನ್ನು ಹೆಸರುಘಟ್ಟದ ಫಾರಂಗೆ ಕರೆದುಕೊಂಡು ಹೋಗಿದ್ದೆ. ಅವರು ಅಲ್ಲೇ ಎರಡು ಗಂಟೆಗಳ ಕಾಲ ಕಳೆದರು ಮತ್ತು ಇಡೀ ಭರತ ಖಂಡದಲ್ಲೇ ಇಂಥ ಫಾರಂ ಅನ್ನು ನೋಡಿರಲಿಲ್ಲವೆಂದರು. ದನಗಳನ್ನು , ಕೋಳಿಗಳನ್ನು ಸಾಕುವುದರ ಬಗ್ಗೆ ಬಹಳ ಆಸಕ್ತಿ ವಹಿಸಿ ಕೇಳಿದರು. ಅಲ್ಲಿ ಹೊರದೇಶಗಳಿಂದ ತರಿಸಿರತಕ್ಕ ತಳಿಗಳು ಇವೆ, ಅದನ್ನು ಕ್ರಾಸ್ ಬ್ರೀಡ್ ಮಾಡಿ ಅವುಗಳಿಂದ ಹೆಚ್ಚು ಹಾಲು ಪಡೆಯುವುದನ್ನು ನೋಡಿ ಬಹಳ ಮೆಚ್ಚಿದರು. ಅಲ್ಲಿದ್ದ ಗೂಳಿಗಳನ್ನು ನೋಡಿ ಲೋಕಲ್ ಹಸುಗಳಿಗೆ ಕ್ರಾಸ್‌ಬ್ರೀಡ್ ಮಾಡಿದರೆ ಹೇಗಾಗುತ್ತದೆಂದು ಕೇಳಿದರು. ನಾನು ಜಪಾನಿಗೆ ಹೋಗಿದ್ದಾಗ ಅಲ್ಲಿ ಕಡಿಮೆ ನೀರನ್ನು ಉಪಯೋಗಿಸಿ ಹೆಚ್ಚು ಭತ್ತದ ಬೆಳೆ ಬೆಳೆಯುವುದನ್ನು ನೋಡಿಕೊಂಡು ಬಂದೆ. ನಮ್ಮಲ್ಲಿ ಪ್ರಾಜೆಕ್ಟ್ ನೀರು ಹೆಚ್ಚು ಪೋಲಾಗುವುದನ್ನು ನೋಡಿದ್ದೇನೆ. ಅದನ್ನು ತಡೆಗಟ್ಟುವುದಕ್ಕೆ ಅಧಿಕಾರಿಗಳು ರೈತರು ಸಹಕರಿಸಬೇಕಾಗಿದೆ. ನೀರಿಲ್ಲದೆ ವ್ಯವಸಾಯ ಇಲ್ಲ. ನೂರಕ್ಕೆ 75 ರಷ್ಟು ಏನು ಭೂಮಿ ಇದೆ ಅದು ಒಣ ಬೇಸಾಯ ಮಾಡತಕ್ಕದ್ದು ಅಂದರೆ, ಮಳೆ ಆಧಾರಿತ ಬೇಸಾಯ. ಇನ್ನು 25 ಪರ್ಸೆಂಟ್ ಇರಿಗೇಷನ್ ಪ್ರಾಜೆಕ್ಟ್, ಬೋರ್‌ವೆಲ್ ಮತ್ತು ಕೆರೆಗಳಿಂದ ಆಗಬಹುದು. ಹೆಚ್ಚಿನ ಪ್ರಮಾಣದ್ದು ಮಳೆ ಆಶ್ರಿತ ಜಮೀನು. ಕರ್ನಾಟಕ ರಾಜ್ಯದಲ್ಲಿರತಕ್ಕ 290 ಲಕ್ಷ ಹೆಕ್ಟೇರ್ ಭೂಮಿಯಲ್ಲಿ 105 ಲಕ್ಷ ಹೆಕ್ಟೇರ್ ಕಲ್ಟಿವಬಲ್ ಲ್ಯಾಂ ಡ್ ;ಅದರಲ್ಲಿ 80 ಲಕ್ಷ ಹೆಕ್ಟೇರ್ ಮಳೆ ಆಶ್ರಿತ 25 ಲಕ್ಷ ಹೆಕ್ಟೇರ್ ಇರಿಗೇಟೆಡ್. ಇದು ಇರತಕ್ಕ ಪರಿಸ್ಥಿತಿ. ಆದುದರಿಂದ ಮಳೆ ಆಶ್ರಿತ ಬೆಳೆಗಳಿಗೆ ಹೆಚ್ಚು ಮಳೆಯನ್ನು ನೆಚ್ಚಿಕೊಳ್ಳದೆ ಇರಿಗೇಷನ್‌ನಿಂದ ನೀರು ಕೊಟ್ಟರೆ ನಮ್ಮ ದೇಶದಲ್ಲಿ ಒಂದಕ್ಕೆ 4 ಪಟ್ಟು ಬೆಳೆ ಬೆಳೆಯತಕ್ಕ ಶಕ್ತಿ ರೈತರಿಗೆ ಇದೆ. ನಮ್ಮ ದೇಶದಲ್ಲಿ ಬಂದಿರತಕ್ಕ ಶಕ್ತಿಮಾನ್ ಬೆಳೆಗಳು, ಸಂಕೀರ್ಣ ಜಾತಿ ಬೆಳೆಗಳು, ಹೈಬ್ರೀಡ್‌ನಿಂದ ಮತ್ತು ಹೆಚ್ಚು ಇಳುವರಿ ಕೊಡತಕ್ಕ ಬೆಳೆಗಳು ಹಾಗೂ ಹೆಚ್ಚಿನ ಜಮೀನಿನಲ್ಲಿ ಮಳೆ ಆಶ್ರಯದಲ್ಲಿ ಸೂರ್ಯಕಾಂತಿ ಬೆಳೆಗಳನ್ನು ಒಂದಕ್ಕೆ ಮೂರು ಪಟ್ಟು ಬೆಳೆಯುವುದನ್ನು ನೋಡಿದ್ದೇನೆ. ಆದುದರಿಂದ ಈ ವಿಚಾರದಲ್ಲಿ ಇಷ್ಟು ಹೇಳುತ್ತಾ.

ಋತುಮಾನದ ಬಗ್ಗೆ ಹೇಳುವುದಾದರೆ, 1991-92ರಲ್ಲಿ ನಮ್ಮ ರಾಜ್ಯದಲ್ಲಿ ಕೆಲವು ಪ್ರದೇಶಗಳಲ್ಲಿ ಹೆಚ್ಚಾಗಿ ಮುಂಗಾರು ಮಳೆ ಆಯಿತು. ಹೈದರಾಬಾದ್, ಕರ್ನಾಟಕ, ಬಾಂಬೆ ಕರ್ನಾಟಕ ಹಾಗೂ ಹಳೆ ಮೈಸೂರು ಭಾಗಗಳಲ್ಲಿ ಕಡಿಮೆ ಜೂನ್, ಜುಲೈ, ಆಗಸ್ಟ್‌ನಲ್ಲಿ ಮಳೆ ಆಯಿತು. ಗುಲ್ಬರ್ಗಾ, ಬಳ್ಳಾರಿ ಭಾಗಗಳಲ್ಲಿ ಮಳೆ ಜಾಸ್ತಿ ಆಯಿತು. ಎಂದೂ ಕಾಣದ ಮಳೆ ಗುಲ್ಬರ್ಗಾ ಬೀದರ್ ಕಡೆ ಆಯಿತು. ಈಗ ಮುಂಗಾರು ಮುಗಿದು ಹಿಂಗಾರು ಮಳೆ ಬಂತು. ವಿಂಟರ್ ಕ್ರಾಪ್‌ನಲ್ಲಿ ಮಳೆ ಕಡಿಮೆಯಾಗಿ ಬೆಳೆ ಆಗಲಿಲ್ಲ. ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಭಾರಿ ಮಳೆಯಾಗಿ ಬೆಳೆ ನಷ್ಟವಾಗಿದೆ; ಮನೆಗಳು ಬಿದ್ದು ಹೋದವು; ಕೆರೆ ಕಟ್ಟೆಗಳು ಕಿತ್ತುಹೋದವು. ಕೆಲವು ಕಡೆ ಜೂನ್, ಜುಲೈ, ಆಗಸ್ಟ್‌ನಲ್ಲಿ ಮಳೆ ಆಗಲಿಲ್ಲ. ಇಂಥ ಪರಿಸ್ಥಿತಿ ಇದ್ದರೂ ನಮ್ಮ ರೈತರು ಬಹಳ ಸಹನೆಯಿಂದ ಬೆಳೆಗಳನ್ನು ತೆಗೆದಿದ್ದಾರೆ, ಒಳ್ಳೆಯ ಉತ್ಪಾದನೆ ಆಗಿದೆ. ಅಂಕಿ ಅಂಶಗಳನ್ನು ನಂತರ ಹೇಳುತ್ತೇನೆ. ಕೋಲಾರ, ತುಮಕೂರು, ಮೈಸೂರು ಈ ಭಾಗಗಳಲ್ಲಿ, ಅಕ್ಟೋಬರ್‌ನಲ್ಲಿ ಬಂಗಾಳಕೊಲ್ಲಿಯಲ್ಲಿ ಡಿಪ್ರೆಷನ್ ಆಗಿ ಮಳೆ ಜಾಸ್ತಿಯಾಗಿ ಬೆಳೆ ಎಲ್ಲಾ ನಾಶವಾಯಿತು. ಕೈಗೆ ಬಂದ ಬೆಳೆ ಕಠಾವಿಗೆ ಬಾರದೆ ಮುಂಚೆ ನಾಶವಾಯಿತು. ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ, ಬೀದರ್ ಗುಲ್ಬರ್ಗಾದಲ್ಲಿ ಅಕ್ಟೋಬರ್, ನವೆಂಬರ್‌ನಲ್ಲಿ ಮಳೆ ಆಗದೆ ಹಿಂಗಾರು ಬೆಳೆ ಬೆಳೆಯತಕ್ಕದ್ದು ಕಡಿತವಾಯಿತು. ಈ ರೀತಿ ಇವತ್ತು ವಿಚಿತ್ರ ಋತುಮಾನವಾಗಿದೆ. ಆದರೂ ಸಹ ನಮ್ಮ ಗುರಿ ಏನು ಇಟ್ಟುಕೊಂಡಿದ್ದೇವೆ ಅದನ್ನು ಸಾಧಿಸುವ ಪ್ರಯತ್ನದಲ್ಲಿದ್ದೇವೆ. ಈ ಬಗ್ಗೆ ಒಂದೆರಡು ಅಂಶಗಳನ್ನು ಹೇಳಿದರೆ ತಪ್ಪಾಗಲಾರದು. ನಮ್ಮ ರಾಜ್ಯದಲ್ಲಿ 90-91 ರಲ್ಲಿ ದ್ವಿದಳಧಾನ್ಯ 57.40 ಲಕ್ಷ ಟನ್ ಉತ್ಪಾದನೆಯಾಗಿದೆ. 1991-92 ರಲ್ಲಿ 70 ಲಕ್ಷ 41 ಸಾವಿರ ಟನ್. 1992-93ರಲ್ಲಿ ಗುರಿ ಇಟ್ಟುಕೊಂಡಿರುವುದು 80 ಲಕ್ಷ 95 ಸಾವಿರ ಟನ್, ದ್ವಿದಳ ಧಾನ್ಯಗಳು - 1990-91 ರಲ್ಲಿ 6 ಲಕ್ಷ 35 ಸಾವಿರ ಟನ್. 1991-92ರಲ್ಲಿ 7 ಲಕ್ಷ 63 ಸಾವಿರ ಟನ್. 1992-93 8 ಲಕ್ಷ 35 ಸಾವಿರ ಟನ್. 1990-91ರಲ್ಲಿ ಎಲ್ಲ ಧಾನ್ಯಗಳ ಆಹಾರೋತ್ಪಾದನೆ 63 ಲಕ್ಷ 75 ಸಾವಿರ ಟನ್. 1991-92ರಲ್ಲಿ 78 ಲಕ್ಷ 4 ಸಾವಿರ ಟನ್. 1992-93ರಲ್ಲಿ ಗುರಿ 89 ಲಕ್ಷ 30 ಸಾವಿರ ಟನ್. ಇವತ್ತು 78 ಲಕ್ಷ 4 ಸಾವಿರ ಟನ್ ಗುರಿ ಇದ್ದರೂ ನಮ್ಮ ಮುಂಗಾರಿನಲ್ಲಿ ಸ್ವಲ್ಪ ಮಳೆಯಾಗಿದೆ. ಮಳೆ ಈ ಕಡೆ ಹೆಚ್ಚಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಮಳೆ ಕಡಿಮೆಯಾಗಿ ಹಿಂಗಾರಿನಲ್ಲಿ ಉತ್ಪಾದನೆ ಗುರಿ ಕಡಿಮೆಯಾಗಿದ್ದರೂ ಸಹ ಕರ್ನಾಟಕ ರಾಜ್ಯದಲ್ಲಿ ಅನೇಕ ಕೆರೆಕಟ್ಟೆಗಳು ತುಂಬಿರುವುದರಿಂದ ಏನು ಷಾರ್ಟ್‌ಫಾಲ್ ಇದೆ ಅದನ್ನು ಈ ಬೇಸಿಗೆಯಲ್ಲಿ ತುಂಬುವುದಕ್ಕೆ ಸಾಧ್ಯವಾಗಿದೆ. ಹೆಚ್ಚು ಕಡಿಮೆ ಗುರಿ 78 ಲಕ್ಷ 4 ಸಾವಿರ ಟನ್ ಮುಟ್ಟುವುದಕ್ಕೆ ಸಾಧ್ಯ ಎಂದು ಅಂಕಿಸಂಖ್ಯೆಗಳಿಂದ ಹೇಳುತ್ತೇನೆ. ಅದೇರೀತಿ ಎಣ್ಣೆಕಾಳುಗಳು. ದ್ವಿದಳ ಧಾನ್ಯ ಮತ್ತು ಎಣ್ಣೆಕಾಳುಗಳ ಕೊರತೆ ಕರ್ನಾಟಕ ರಾಜ್ಯದಲ್ಲಿದೆ. ಇದ್ದರೂ ಸಹ 1990-91ರಲ್ಲಿ 13 ಲಕ್ಷ 96 ಸಾವಿರ ಟನ್, 1991-92ರಲ್ಲಿ 17ಲಕ್ಷ 53 ಸಾವಿರ 1992-93ರಲ್ಲಿ 20 ಲಕ್ಷ 35 ಸಾವಿರ ಟನ್ ಗುರಿ ಇಟ್ಟುಕೊಂಡಿದ್ದೇವೆ. ಮತ್ತು ಹತ್ತಿ ಬಹಳ ಮುಖ್ಯವಾದ ಬೆಳೆ. 1990-91ರಲ್ಲಿ 6 ಲಕ್ಷ 40 ಸಾವಿರ ಬೇಲ್, 1991-92ರಲ್ಲಿ 6 ಲಕ್ಷ 51ಸಾವಿರ ಬೇಲ್ ಇದೆ. ಒಂದು ಬೇಲ್ 120 ಕೆ.ಜಿ. ಇರುತ್ತದೆ. 1992-93ರಲ್ಲಿ 8 ಲಕ್ಷ 70 ಸಾವಿರ ಬೇಲ್. ಕಬ್ಬು 1990-91ರಲ್ಲಿ 224 ಲಕ್ಷ 5 ಸಾವಿರ ಟನ್, 1991-92ರಲ್ಲಿ 185 ಲಕ್ಷ 14 ಸಾವಿರ ಟನ್, 1992-93ರಲ್ಲಿ ಗುರಿ 200 ಲಕ್ಷ ಟನ್. ತಂಬಾಕು 1990-91ರಲ್ಲಿ 30 ಸಾವಿರ ಟನ್, 1991-92ರಲ್ಲಿ 36 ಸಾವಿರ ಟನ್, 1992-93ರಲ್ಲಿ 59 ಸಾವಿರ ಟನ್ ಗುರಿ ಇಟ್ಟುಕೊಂಡಿದ್ದೇವೆ. ಎಣ್ಣೆಕಾಳಿನಲ್ಲಿ ಮತ್ತು ದ್ವಿದಳ ಧಾನ್ಯದಲ್ಲಿ ನಾವು ಕಡಿಮೆ ಇದ್ದೇವೆ. ಉತ್ಪಾದನೆ ನಮಗೆ ಬೇಕಾದುದಕ್ಕಿಂತ ಕಡಿಮೆ ಇದೆ. ಕಡ್ಲೇಕಾಯಿ ಆಗಲೀ ಕುಸುಬೆ ಆಗಲೀ ಮತ್ತೊಂದು ಯಾವುದೇ ಎಣ್ಣೆಕಾಳಾಗಲೀ ಅದೆಲ್ಲಕ್ಕಿಂತ ಸೂರ್ಯಕಾಂತಿ ಬೆಳೆ ಬೆಳೆಯುವುದರಿಂದ ಅದರಲ್ಲೂ ಸಂಕೀರ್ಣ ಜಾತಿ ಮತ್ತು ಮಾಮೂಲಿ ವೆರೈಟಿ ಬೆಳೆಯುವುದರಿಂದ ಹೆಚ್ಚು ಅನುಕೂಲವಾಗುತ್ತದೆ. 1991-92ರಲ್ಲಿ 11 ಲಕ್ಷ ಹೆಕ್ಟೇರ್‌ನಲ್ಲಿ ನಾವು ಸೂರ್ಯಕಾಂತಿ ಬೆಳೆದಿದ್ದೇವೆ.

ಬಹುಶಃ ಇಡೀ ಭರತಖಂಡದಲ್ಲಿ ಎಲ್ಲೂ ಇಷ್ಟೊಂದು ಜಮೀನಿನಲ್ಲಿ ಸೂರ್ಯಕಾಂತಿ ಬೆಳೆಯುವುದಕ್ಕೆ ಆಗಲಿಲ್ಲ ಮತ್ತು ಅದಕ್ಕೆ 900 ರಿಂದ 1100 - 1200 ರೂಪಾಯಿ ಒಂದು ಕ್ವಿಂಟಾಲ್ ಬೆಲೆ ಇತ್ತು. ಸೂರ್ಯಕಾಂತಿ ಎಣ್ಣೆಯಲ್ಲಿ ಕೊಲೆಸ್ಟ್ರಾಲ್ ಸಮಸ್ಯೆ ಇಲ್ಲ. ಆದ್ದರಿಂದ ಇದನ್ನು ಹೆಚ್ಚು ಉತ್ತೇಜನ ಮಾಡುತ್ತಿದ್ದೇವೆ. ಅನೇಕರಿಗೆ ಮಧ್ಯಮವರ್ಗದವರು ಮತ್ತು ಸಾಹುಕಾರರಿಗೆ ಕೊಲೆಸ್ಟ್ರಾಲ್ ಇಲ್ಲದ ಎಣ್ಣೆ ಬೇಕು. ಆದ್ದರಿಂದ ಅವರಿಗೆ ಬೇಕಾದ ಬೇಡಿಕೆ ಏನಿದೆ ಅದನ್ನು ಮುಟ್ಟುವುದಕ್ಕೆ ಸಾಧ್ಯವಿದೆ. ಕರ್ನಾಟಕದಲ್ಲಿ ಕರ್ನಾಟಕ ಆಯಿಲ್ ಫೆಡರೇಷನ್ ಮೂಲಕ ಸೂರ್ಯಕಾಂತಿ ಎಣ್ಣೆಯನ್ನು ಮಾರಾಟ ಮಾಡುತ್ತಿದ್ದೇವೆ. ಅದೇರೀತಿ ಇವತ್ತಿನ ದಿವಸ ನಮ್ಮಲ್ಲಿ ಇದಕ್ಕೆ ಬೇಕಾದ್ದು ಮುಖ್ಯವಾಗಿ ಬೀಜ. ಒಳ್ಳೆಯ ಬೀಜ ಒದಗಿಸದೇಹೋದರೆ ರೈತರಿಗೆ ಹೆಚ್ಚು ಉತ್ಪಾದನೆಯಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ಬೀಜ ಒದಗಿಸುವ ಕಾರ್ಯದಲ್ಲಿ 40 ಸಾವಿರ ಟನ್ ಸರ್ಟಿಫೈಡ್ ಟ್ರೂತ್‌ಫುಲ್ ಲೇಬಲ್ ಸೀಡ್ಸನ್ನು 1991-92ರಲ್ಲಿ ನಾವು ಗುರಿ ಮುಟ್ಟಿ ಅದನ್ನು ಇವತ್ತು ಒದಗಿಸಿದ್ದೇವೆ. ಮತ್ತು ಈ ಮುಂದಿನ ವರ್ಷಗಳಲ್ಲಿ 6840 ಕ್ವಿಂಟಾಲ್ foundation seeds ಒದಗಿಸುವುದಕ್ಕೆ ನಮ್ಮ ಇಲಾಖೆಯವರು ಕ್ರಮ ತೆಗೆದುಕೊಳ್ಳುತ್ತಾರೆ. ಮತ್ತು 42,000 ಟನ್ certified truthfully labelled seeds ನ್ನು 1992-93ನೇ ಸಾಲಿನಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ವರ್ಷ ಮಳೆ ಚೆನ್ನಾಗಿ ಆಗಿದೆ. ಕೆರೆ ಕಟ್ಟೆಗಳಲ್ಲಿ ನೀರು ತುಂಬಿರುವುದರಿಂದ ಕಳೆದ 2-3 ವರ್ಷಗಳಲ್ಲಿ ಬಿತ್ತಿಲ್ಲದ ರೈತರು ಈ ವರ್ಷ ಭತ್ತದ ಬೇಡಿಕೆಯನ್ನು ಹೆಚ್ಚು ಇಟ್ಟಿದ್ದಾರೆ. ಪರ್ಟಿಕ್ಯುಲರ್ ವೆರೈಟಿ ಬೀಜಗಳನ್ನು ಹೆಚ್ಚಾಗಿ ಸಾಧ್ಯವಾದಷ್ಟು certified ಮತ್ತು truthfully labelled ಸೀಡ್ಸನ್ನು ಒದಗಿಸಿದ್ದೇವೆ. ನಾವು ಏನು ಕರ್ನಾಟಕ ಬೀಜ ನಿಗಮದ ಮೂಲಕ ಒದಗಿಸುತ್ತಿದ್ದೇವೆ ಅವು ಗುಣಮಟ್ಟದಲ್ಲಿ ಸಾಕಷ್ಟು ಒಳ್ಳೆಯವು ಇರಬೇಕು. ರೈತರಿಂದ ದೂರ ಬರಬಾರದು, ಕೆಟ್ಟಬೀಜ ಒದಗಿಸಬಾರದು ಎಂದು ಪ್ರಯತ್ನ ಮಾಡಿದ್ದೇವೆ. ಅದಕ್ಕೋಸ್ಕರವಾಗಿ ಈ ಬೀಜಗಳನ್ನು ಟೆಸ್ಟ್ ಮಾಡತಕ್ಕ ಎರಡು ಸೀಡ್ ಟೆಸ್ಟಿಂಗ್ ಲ್ಯಾಬೋರೇಟರಿಗಳನ್ನು ಮಂಗಳೂರು ಮತ್ತು ಧಾರವಾಡದಲ್ಲಿ ಇಟ್ಟಿದ್ದೇವೆ. ಮತ್ತೆ ಇವತ್ತಿನದಿವಸ ರೈತರು ಹೆಚ್ಚಾಗಿ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುತ್ತಿದ್ದಾರೆ. ನಮ್ಮ ಆರ್ಗಾನಿಕ್ ಮೆನ್ಯೂರ್, ಸಾವಯವ ಗೊಬ್ಬರ ಒದಗಿಸತಕ್ಕದ್ದು ಕಡಿಮೆಯಾಗುತ್ತಿದೆ. ಏಕೆಂದರೆ ದೇಶದಲ್ಲಿ ರತಕ್ಕ ಪಶು ಸಂಪತ್ತು, ದನಸಂಪತ್ತು, ಮತ್ತೆ ಇತರೇ ಆರ್ಗಾನಿಕ ಮೆನ್ಯೂರ್ ಕಡಿಮೆಯಾಗಿರುವುದರಿಂದ ಇವತ್ತು ರಾಸಾಯನಿಕ ಗೊಬ್ಬರ ಒದಗಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಅನೇಕ ಜನರು ನಿರೀಕ್ಷೆ ಮಾಡಿದ್ದರು. ಮೊನ್ನೆ ಕೇಂದ್ರದಲ್ಲಿ ಆಯವ್ಯಯ ಮಂಡನೆ ಮಾಡುವ ಕಾಲದಲ್ಲಿ ರಸಗೊಬ್ಬರದ ಬೆಲೆ ಹೆಚ್ಚು ಮಾಡುತ್ತಾರೆ ಇದರಿಂದ ರೈತರು ಕಂಗಾಲಾಗುತ್ತಾರೆ ಎಂದು ತಿಳಿದಿದ್ದರು. ಮಾನ್ಯ ವಿರೋಧ ಪಕ್ಷದ ಸ್ನೇಹಿತರು ದುರ್ದೈವವಶಾತ್ ಇಲ್ಲಿ ಇಲ್ಲ. ಅವರು ಇದ್ದಿದ್ದರೆ ಹೇಳುತ್ತಿದ್ದರು ನಿಮ್ಮ ಕೇಂದ್ರ ಸರ್ಕಾರ, ನರಸಿಂಹರಾಯರ ಸರ್ಕಾರ, ಗೊಬ್ಬರದ ಬೆಲೆ ಏರಿಸಿದ್ದಾರೆ, ಸಬ್ಸಿಡಿ ಕಡಿಮೆ ಮಾಡಿದರು ಎಂದು ಕೂಗಾಟ ಮಾಡುತ್ತಿದ್ದರು. ನಾವೂ ಏನು ನಿರೀಕ್ಷೆ ಮಾಡಿದ್ದೆವು? ನಾನೂ ಕೂಡ ಆ ಬಗ್ಗೆ ಕುತೂಹಲಿಗನಾಗಿದ್ದೆ. ಆ ಸಮಯದಲ್ಲಿ ನಾನು ಮಂಜುನಾಥ್ ಅವರ ಜೊತೆ ತಿಪಟೂರಿನಲ್ಲಿ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಆ ಸಮಯದಲ್ಲಿ ನಾನೂ ಕಾತುರನಾಗಿದ್ದು ಮನಮೋಹನ್ ಸಿಂಗ್ ಅವರ ಭಾಷಣವನ್ನು ನಾನು ರೇಡಿಯೋದಲ್ಲಿ ಕೇಳಿದೆ. ಅವರು ರಸಗೊಬ್ಬರದ ಬೆಲೆ ಹೆಚ್ಚು ಮಾಡಿಲ್ಲ, ಸಬ್ಸಿಡಿ ಬಗ್ಗೆಯೂ ಮುಟ್ಟಲಿಲ್ಲ. ರಸಗೊಬ್ಬರದ ಬೆಲೆ ಏರಿಸದಿರುವುದರಿಂದ ರೈತರು ಸಂತೋಷವಾಗಿದ್ದಾರೆ. ನಾನು ರಸಗೊಬ್ಬರದ ಬಗ್ಗೆ ಅಂಕಿಅಂಶ ಹೇಳುವುದಕ್ಕೆ ಹೋಗುವುದಿಲ್ಲ. ಕೇಂದ್ರ ಸರ್ಕಾರ ಈ ಬಗ್ಗೆ ಎಷ್ಟು ಸಬ್ಸಿಡಿ ಕೊಟ್ಟಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇವತ್ತು ನಾವು ರಸಗೊಬ್ಬರವನ್ನೇ ಹೆಚ್ಚು ಉಪಯೋಗಿಸಬೇಕಾಗಿದೆ. ಮಳೆ ಬಿಟ್ಟ ನಂತರ ಸೈಕಲ್‌ನಲ್ಲಿ, ಎತ್ತಿನಗಾಡಿಯಲ್ಲಿ, ಟ್ರಾಕ್ಟರ್, ಲಾರಿಗಳ ಮೇಲೆ ಗೊಬ್ಬರದ ಮೂಟೆಗಳನ್ನು ಸಾಗಾಣಿಕೆ ಮಾಡುವುದನ್ನು ನಾವು ಕಾಣುತ್ತೇವೆ. ಇದು ಇಲ್ಲದೇ ಏನು ಮಾಡಿದರೂ ಆಗುವುದಿಲ್ಲ. ಕೊಟ್ಟಿಗೆ ಗೊಬ್ಬರ ಅಥವಾ ಬೇರೆ ಗೊಬ್ಬರ ಉಪಯೋಗಿಸುವುದು ಕಡಿಮೆ ಆಗಿದೆ. ಆದರೆ ರಸಗೊಬ್ಬರವನ್ನು ಹೆಚ್ಚು

ಉಪಯೋಗಿಸಬಾರದು ಎಂದು ವಾದ ಇದೆ. ಇವತ್ತು ರಾಸಾಯನಿಕ ಗೊಬ್ಬರವನ್ನು ಸತತವಾಗಿ ಉಪಯೋಗಿಸಿದರೆ ಮಣ್ಣಿನ ಏನು ರಚನೆ ಇದೆ ಅದು ಹಾಳಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ರಸಗೊಬ್ಬರವನ್ನು ಹೆಚ್ಚು ಉಪಯೋಗ ಮಾಡಬಾರದು ಎಂದು ಹೇಳುತ್ತಾರೆ. ಇದನ್ನು ಸತತವಾಗಿ ಉಪಯೋಗಿಸುವ ಬದಲು ಕಡಿಮೆ ಉಪಯೋಗ ಮಾಡಬೇಕೆಂದು ಹೇಳುತ್ತಾರೆ. ಮಣ್ಣಿನ ರಚನೆ ಕೆಟ್ಟರೆ ಮುಂದೆ ಏನೂ ಬೆಳೆಯುವುದಕ್ಕಾಗುವುದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಏನೆಂದು ನಾನು ನೋಡಿದ್ದೇನೆ. 1952 ರಲ್ಲಿ ನಾನು ಅಮೇರಿಕಾಕ್ಕೆ ಹೋಗಿದ್ದಾಗ ಅಲ್ಲಿ ಕೊಟ್ಟಿಗೆ ಗೊಬ್ಬರವನ್ನು ಉಪಯೋಗಿಸುತ್ತಾ ಇರಲಿಲ್ಲ. ಈಗ ಅಲ್ಲಿ ಏನು ಮಾಡುತ್ತಿದ್ದಾರೆಂದರೆ, ಡೈರಿಗಳಲ್ಲಿ ಸಿಗುವ ದನದ ಗೊಬ್ಬರವನ್ನು ಬಾವಿಗೆ ಬಿಟ್ಟು ಅದನ್ನು ಲಿಕ್ವಿಡ್ ಮೆನ್ಯೂರ್ ಮಾಡಿ ಅದನ್ನು ಟ್ಯಾಂಕ್ ನಲ್ಲಿ ತುಂಬಿ ಸ್ಪ್ರೇ ಮಾಡುತ್ತಿದ್ದರು. ನನ್ನ ಅನುಭವಕ್ಕೆ ಬಂದಹಾಗೆ ಇವತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಕೊಟ್ಟಿಗೆ ಗೊಬ್ಬರದಿಂದ ಬೆಳೆದ ಕಾಯಿಪಲ್ಯೆಗಳಿಗೆ ಹೆಚ್ಚು ಬೆಲೆ. ರಸಗೊಬ್ಬರ ಹಾಗೂ ಕೀಟನಾಶಕ ಉಪಯೋಗಿಸಿ ಬೆಳೆದ ಹಣ್ಣು ಹಂಪಲುಗಳಿಗೆ ಕಡಿಮೆ ಬೆಲೆ ಇದ್ದರೆ, ಕೊಟ್ಟಿಗೆ ಗೊಬ್ಬರ ಮುಂತಾದ ಸಾವಯವಗಳಿಂದ ಬೆಳೆದ ತರಕಾರಿ, ಹಣ್ಣು ಹಂಪಲುಗಳಿಗೆ ಹೆಚ್ಚು ಬೆಲೆ ಕೊಟ್ಟು ಕೊಳ್ಳಬೇಕಾಗಿದೆ. ಈ ರೀತಿ ಅಂತರಾಷ್ಟ್ರೀಯಮಟ್ಟದಲ್ಲಿ ರಾಸಾಯನಿಕ ಗೊಬ್ಬರದಿಂದ ಬೆಳೆದ ವಸ್ತುಗಳಿಗೆ ಕಡಿಮೆ ಬೆಲೆ. ಕಾರಣ ಕೀಟನಾಶಕ ಸಿಂಪಡಿಸಿದ ಪದಾರ್ಥಗಳಿಂದ ಆರೋಗ್ಯ ಕೆಡುತ್ತದೆ ಎನ್ನುವ ವಿಚಾರ ಹೇಳಿದ್ದಾರೆ. ಜಪಾನಿನ ಸಂಸ್ಥೆ ಒಂದು ನಮ್ಮಲ್ಲಿಗೆ ಬಂದಿದೆ. ಆ ಸಂಸ್ಥೆಯನ್ನು ಎಂ.ಒ.ಎ. ಎಂದು ಹೇಳುತ್ತಾರೆ. ಅವರು ನ್ಯಾಚುರಲ್ ಫಾರ್ಮಿಂಗ್ ಬಗ್ಗೆ ಹೆಚ್ಚು ಒತ್ತುಕೊಡುತ್ತಿದ್ದಾರೆ. ಅವರು ಬಂದು ನನ್ನ ಜೊತೆ ಚರ್ಚೆ ಮಾಡಿದರು. ಅಗ್ರಿಕಲ್ಚರ್ ಮಿನಿಸ್ಟರ್ ಆಗಿ ನಾನು ಜಮೀನು ಕೊಡುತ್ತೇನೆ. ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಉಪಯೋಗಿಸದೇ ಬೆಳೆ ಬೆಳೆದು ಅದರ ಒಂದು ಪ್ರಯೋಜನ ಮತ್ತು ಫಲವನ್ನು ತಿಳಿಸಬೇಕೆಂದು ನಾನು ಅವರಿಗೆ ಹೇಳಿದ್ದೇನೆ. ಅದಕ್ಕೆ ನಾನು ಒಂದು ಸಮಿತಿಯನ್ನು ಮಾಡಿದ್ದೇನೆ. ಎಕ್ಸ್‌ಪರ್ಟ್ ಕಮಿಟಿ ಆನ್ ನ್ಯಾಚುರಲ್ ಫಾರ್ಮಿಂಗ್ ಆ ಸಮಿತಿ ಸಭೆ ಸೇರಬೇಕಾಗಿದೆ. ಒಂದೆರಡು ವಾರದಲ್ಲಿ ಸಭೆ ಸೇರುತ್ತದೆ. ಈ ರೀತಿ ಇರುವುದರಿಂದ ರಸಗೊಬ್ಬರವನ್ನು ಹೇಗೆ ಬಳಸುತ್ತಿದ್ದಾರೆಂದರೆ 1956-57 ರಲ್ಲಿ ನಮ್ಮ ರಾಜ್ಯದಲ್ಲಿ 4500 ಮೆಟ್ರಿಕ್ ಟನ್ ಎನ್‌ಪಿಕೆಯನ್ನು ಉಪಯೋಗಿಸುತ್ತಿದ್ದರು. 1991-92ರಲ್ಲಿ ಎಷ್ಟು ಉಪಯೋಗ ಮಾಡುತ್ತಿದ್ದಾರೆಂದರೆ 5 ಲಕ್ಷದ 45 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರ ಎನ್‌ಪಿಕೆಯನ್ನು ಉಪಯೋಗಿಸುತ್ತಿದ್ದಾರೆ. ಈ ವರ್ಷ 9 ಸಾವಿರ ಟನ್ ಎನ್‌ಪಿಕೆ ಯನ್ನು ಉಪಯೋಗಿಸುತ್ತಿದ್ದಾರೆ. ಅಂದರೆ ಕಳೆದ ವರ್ಷಕ್ಕೆ ಹೋಲಿಸಿದರೆ 9.12 ಪರ್ಸೆಂಟ್ ಜಾಸ್ತಿ ಉಪಯೋಗಿಸುತ್ತಿದ್ದಾರೆ. ಇವತ್ತು ಅದನ್ನೇ ಕೇಳುತ್ತಿದ್ದಾರೆ. ಅನೇಕ ಜನ ಮಾನ್ಯಸದಸ್ಯರು ಹೇಳುತ್ತಾ ಇದ್ದರು ರಸಗೊಬ್ಬರಗಳ ಬೆಲೆಯನ್ನು ಕಳೆದ 7-8 ತಿಂಗಳಲ್ಲಿ ಏರಿಸಿದ್ದರಿಂದ ರಸಗೊಬ್ಬರವನ್ನು ರೈತರು ಉಪಯೋಗಿಸುವುದು ಕಡಿಮೆಯಾಗುತ್ತದೆಂದು ಹೇಳಿದರು. ಏನೂ ಕಡಿಮೆಯಾಗಿಲ್ಲ. ಇನ್ನೂ ಹೆಚ್ಚಾಗುತ್ತಾ ಹೋಗುತ್ತಿದೆ. ಗೊಬ್ಬರದ ಬೆಲೆ ಏರಿಕೆಯ ನೀತಿ ದ್ವಿಮುಖ ನೀತಿ. ಸಣ್ಣ ಮತ್ತು ಅತಿ ಸಣ್ಣ ರೈತರು ನಾರ್ಮಲ್ ಫಾರ್ಮರ್ಸ್ ರಸಗೊಬ್ಬರವನ್ನು ಉಪಯೋಗಿಸುವುದು ಕಡಿಮೆಯೇನೂ ಆಗಿಲ್ಲ. ಇನ್ನು ಹೆಚ್ಚುತ್ತಾ ಹೋಗುತ್ತಿದೆ. ನಮ್ಮ ರಾಜ್ಯದಲ್ಲಿ ಕೇಂದ್ರಸರ್ಕಾರದವರು 24-7-1991ರಲ್ಲಿ 30 ಪರ್ಸೆಂಟ್ ಗೊಬ್ಬರದ ಬೆಲೆಯನ್ನು ಹೆಚ್ಚಿಸಿದ್ದಾರೆ. 30-34 ಪರ್ಸೆಂಟ್ ಹೆಚ್ಚಿಸಿದರೂ ಅದನ್ನು ಸಣ್ಣ ಮತ್ತು ಅತಿ ಸಣ್ಣ ಮತ್ತು ಸಾಮಾನ್ಯ ರೈತರಿಗೆ ಸಬ್ಸಿಡಿ ಮೂಲಕ ಕೊಟ್ಟಿದ್ದೇವೆ. ನಮ್ಮಲ್ಲಿರುವ ದೊಡ್ಡ ರೈತರು ಮತ್ತು ರೈತ ಸಂಘದವರು ಗೊಬ್ಬರದ ಬೆಲೆಯನ್ನು ಏರಿಸಿದ್ದಾರೆಂದು ಚಳುವಳಿಯನ್ನು ಮಾಡುವುದಕ್ಕೆ ಹೊರಟರು. ಬೆಲೆ ಏರಿಸಿದಂತಹ ಸಂದರ್ಭದಲ್ಲಿ ನಮ್ಮ ಹತ್ತಿರ 87,870 ಟನ್ ಹೋಲ್‌ಸೇಲ್ ಮತ್ತು ರೀಟೇಲ್ ಬೆಲೆಯ ಗೊಬ್ಬರ ಸ್ಟಾಕ್ ಇತ್ತು. ಆ ಸಂದರ್ಭದಲ್ಲಿ ನಮ್ಮ ಸರ್ಕಾರ ಒಂದು ತೀರ್ಮಾನ ತೆಗೆದುಕೊಂಡು ಹಳೆಯ ಸ್ಟಾಕ್‌ನ್ನು ಹಳೆಯ ರೇಟಿನಲ್ಲಿಯೇ ಮಾರಾಟ ಮಾಡಬೇಕೆಂದು ಹೇಳಿದ್ದರಿಂದ 87,870 ಟನ್ ಗೊಬ್ಬರವನ್ನು ರೈತರಿಗೆ ಹಳೆಯ ರೇಟಿನಲ್ಲಿಯೇ ಕೊಟ್ಟಿದ್ದೇವೆ.

ಅದರಿಂದ 8 ಕೋಟಿ ರೂಪಾಯಿ ನಮ್ಮ ರೈತರಿಗೆ ಉಳಿಯಿತು. ನಮ್ಮ ರೈತರು ಚಳುವಳಿಯನ್ನು ಮಾಡುತ್ತೇವೆಂದು, ಶಿವಮೊಗ್ಗದಲ್ಲಿ ಮಾಡುತ್ತೇವೆಂದು ಹೊರಟರು. ಆಗ ಮುಖ್ಯಮಂತ್ರಿಗಳು ದೆಹಲಿಯಲ್ಲಿದ್ದರು. ನಾನು ದೂರವಾಣಿಯ ಮೂಲಕ ಸಂಪರ್ಕ ಮಾಡಿದಾಗ, ಮುಖ್ಯಮಂತ್ರಿಗಳು ಹೇಳಿದರು, ಚಿಕ್ಕೇಗೌಡರೇ ನೀವು ಹಳೆಯ ರೇಟಿನಲ್ಲಿಯೇ ಗೊಬ್ಬರವನ್ನು ಮಾರಿಬಿಡಿಯೆಂದು ಹೇಳಿದರು. ನಾನು ಕೇಂದ್ರ ಸರ್ಕಾರಕ್ಕೆ ಸ್ಟಾಕ್ ಇರಲಿಲ್ಲವೆಂದು ಹೇಳಿಬಿಡೋಣ. ಅಥವಾ ಹಣ ಕೊಡುವುದಕ್ಕೆ ಹೇಳೋಣವೆಂದರು. ಇದರಿಂದ ನಮ್ಮ ರೈತರಿಗೆ 8 ಕೋಟಿ ರೂಪಾಯಿ ಉಳಿಯಿತು. ಈ ರೀತಿಯಾಗಿ ನಮ್ಮ ರೈತರಿಗೆ ಉತ್ತೇಜನ ಕೊಡುತ್ತಿದ್ದೇವೆ. ನಮ್ಮ ಸರ್ಕಾರ ಚಾಲ್ತಿ ಹಣಕಾಸು ವರ್ಷದಲ್ಲಿ ಏನೇನು ಮಾಡುತ್ತೇವೆ ಎಂಬುದನ್ನು ಕೊನೆಯಲ್ಲಿ ನಾನು ಪ್ರತ್ಯೇಕವಾಗಿ ಹೇಳುತ್ತೇನೆ. ರೈತರಿಗೆ ದೊರಕುವ ಸೌಲಭ್ಯ ಮತ್ತು ಸವಲತ್ತುಗಳ ಬಗ್ಗೆ ಮಾತನಾಡುತ್ತೇವೆ. ಮುಂದಿನ ವರ್ಷ 1992-93 ರಲ್ಲಿ 9 ಲಕ್ಷದ 70 ಸಾವಿರ ಟನ್ ಎನ್‌ಪಿಕೆ ಗೊಬ್ಬರವನ್ನು ರೈತರಿಗೆ ಒದಗಿಸಬೇಕೆನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ನಾನು ಆಗಲೇ ಹೇಳಿದಹಾಗೆ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರಿಗೆ ಕೇಂದ್ರ ಸರ್ಕಾರದವರು ಸಬ್ಸಿಡಿಯನ್ನು ಕೊಟ್ಟಿದ್ದಾರೆ. 8 ಕೋಟಿ 42 ಲಕ್ಷ ರೂಪಾಯಿ ಸಬ್ಸಿಡಿಯನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಅದನ್ನು ನಾವು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಡಬೇಕೆಂದು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿದ್ದೇವೆ. 34 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರು ಏನಿದ್ದಾರೆ ಅವ ರಿಗೆ 8 ಕೋಟಿ 42 ಲಕ್ಷ ರೂಪಾಯಿಗಳ ಸಬ್ಸಿಡಿ ಕೊಡಲಿಕ್ಕೆ ತೀರ್ಮಾನ ಮಾಡಿದ್ದೇವೆ. ಸುಮಾರು 34 ಲಕ್ಷ ರೈತರಿಗೆ 37 ಲಕ್ಷ ಹೆಕ್ಟೇರ್ ಭೂಮಿಗೆ ಈ ಸಬ್ಸಿಡಿ ಕೊಡುವುದರಿಂದ ಅನುಕೂಲವಾಗುತ್ತದೆ, ಇದನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಇದನ್ನು ಮುಂದಿನ ವರ್ಷದಲ್ಲಿ ಇನ್ನೂ ಹೆಚ್ಚಿಗೆ ಕೊಡಬೇಕೆಂದು ನಾನು ಕೇಳುತ್ತೇನೆ. ಅವರದು ಏನು ನೀತಿ ಎಂಬುದು ಇನ್ನೂ ತೀರ್ಮಾನವಗಿಲ್ಲ ಅದು ಬಂದಮೇಲೆ ನಾವು ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಈಗ ಕೊಟ್ಟಿರತಕ್ಕ ಸಬ್ಸಿಡಿ ಹಣವನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಂಚುತ್ತೇವೆ. ರಸಗೊಬ್ಬರದಲ್ಲಿ ಕಲಬೆರೆಕೆ ಮಾಡುತ್ತಾರೆ. ಸಬ್ ಸ್ಟ್ಯಾಂಡರ್ಡ್ ಗೊಬ್ಬರ ಕೊಡುತ್ತಾರೆಂದು ತಿಳಿದು ಅದನ್ನು ಟೆಸ್ಟ್ ಮಾಡುವುದಕ್ಕೆ ಧಾರವಾಡ ಮತ್ತು ಬೆಂಗಳೂರು ಈ ಎರಡು ಕಡೆ ಲ್ಯಾಬೋರೇಟರಿ ಮಾಡಿ ಸುಮಾರು 3076 ಸ್ಯಾಂಪಲ್ಸ್ ಅನಾಲೈಸ್ ಮಾಡಿದ್ದೇವೆ. ಅದರಲ್ಲಿ 177 ಸ್ಯಾಂಪಲ್ಸ್ ಕಲಬೆರೆಕೆಯಾಗಿದೆಯೆಂದು ಗೊತ್ತಾಗಿದೆ. ಇನ್ನೊಂದು ಮಾನ್ಯ ಮಂಗಳೂರು ಶಾಸಕರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ರಸಗೊಬ್ಬರ ಟೆಸ್ಟ್ ಮಾಡತಕ್ಕ ಲ್ಯಾಬೋರೇಟರಿಯನ್ನು ಮಂಗಳೂರಿನಲ್ಲಿ ನಾವು ಪ್ರಾರಂಭ ಮಾಡುತ್ತೇವೆ. ಸಸ್ಯ ಸಂರಕ್ಷಣೆ ಬಹಳ ಮುಖ್ಯವಾದದ್ದು. ಮಗು ಹುಟ್ಟಿದಾಗಲೇ ಫೀಡಿಂಗ್ ಬಾಟಲ್ ರೆಡಿಯಾಗಿರುವಂತೆ, ಗಿಡವನ್ನು ನರ್ಸರಿಯಲ್ಲಿ ಬೆಳೆಸುವುದಕ್ಕೆ ಪ್ರಾರಂಭಮಾಡುವಾಗಲೇ ಕೀಟನಾಶಕಗಳನ್ನು ಹೊಡೆಯಬೇಕು. ಏಕೆಂದರೆ ಹೆಚ್ಚು ಇಳುವರಿ ಕೊಡುವ ಸಂಕೀರ್ಣ ಜಾತಿಯ ಬೆಳೆಗಳಿಗೆ ಔಷಧಿ ಹೊಡೆಯದೇ ವಿಧಿ ಇಲ್ಲ. ಇಲ್ಲದಿದ್ದರೆ ಬೆಳೆ ಕೈಗೆ ಬರುವುದಿಲ್ಲ. ನಮ್ಮ ಶ್ರೀಆತ್ಮಾನಂದ ಅವರ ಖಾತೆಗೆ ಬಂದರೆ, ಮೊದಲು ಹಳ್ಳಿಗಳಲ್ಲಿ ಟೊಮ್ಯಾಟೋ ಏನೆಂದು ಗೊತ್ತಿರಲಿಲ್ಲ. ಎಲ್ಲೋ ತಿಪ್ಪೆಗುಂಡಿಯಲ್ಲಿ ಸಣ್ಣದು ಗೋಲಿಗಾತ್ರದ ಟೊಮ್ಯಾಟೋ ಬೆಳೆಯುತ್ತಿತ್ತು. ಈಗ ಸಂಕೀರ್ಣ ಜಾತಿಯ, ಹೈಬ್ರೀಡ್ ಜಾತಿಯ ಟೊಮ್ಯಾಟೊ ಎಂದರೆ ಅದು ಎಷ್ಟು ದಪ್ಪ ಇದೆ. ಒಂದಕ್ಕೆ ಏಳು-ಎಂಟು ಪಟ್ಟು ಇಳುವರಿ ಕೊಡತಕ್ಕದ್ದು ಇವೆ. ಇದೇರೀತಿ ಸೂರ್ಯಕಾಂತಿ ಮತ್ತು ಇನ್ನೂ ಅನೇಕ ಬರುತ್ತಿವೆ. ನಮ್ಮ ಭತ್ತದ ಬಗ್ಗೆ ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿಲ್ಲ. ಭತ್ತದಲ್ಲೂ ಸಹ ಸಂಕೀರ್ಣ ಜಾತಿಯ ಹೈಬ್ರೀಡ್ ಭತ್ತ ಬಂದಿದೆ. ಮನಿಲಾದಲ್ಲಿ ಇಂಟರ್‌ನ್ಯಾಷನಲ್ ರೈಸ್ ರೀಸರ್ಚ್ ಇನ್ಸಿಟ್ಯೂಟ್ ಎಂದು ಇದೆ. ಅದರ ಮೀಟಿಂಗ್‌ಗೆ ಹೋಗಿದ್ದೆ. ಅಲ್ಲಿ ಈಗಾಗಲೇ ಇದರ ಬಗ್ಗೆ ಪ್ರಯೋಗ ನಡೆದು ಸಂಕೀರ್ಣ ಜಾತಿಯ ಭತ್ತವನ್ನು ಚೈನಾದಲ್ಲಿ ನೂರಕ್ಕೆ ಐವತ್ತರಷ್ಟು ಬೆಳೆಯುತ್ತಿದ್ದಾರೆ. ಅದರಿಂದ ಒಂದು ಹೆಕ್ಟೇರ್‌ನಲ್ಲಿ ಒಂದಕ್ಕೆ ಹತ್ತು ಕ್ವಿಂಟಲ್ ಹೆಚ್ಚು ಇಳುವರಿ ಬರುತ್ತದೆ. ಭೂಮಿಯನ್ನಂತೂ ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ನಾವು ನಮ್ಮ

ಮಂಡ್ಯದಲ್ಲಿ ತಂದು ಪ್ರಯೋಗ ನಡೆಸುತ್ತಿದ್ದೇವೆ. ಅದು ಯಶಸ್ವಿಯಾದರೆ ಅದನ್ನು ನಮ್ಮ ರೈತರಿಗೆ ಹಂಚುತ್ತೇವೆ. ಮಲ್ಟಿಪ್ಲಿಕೇಶನ್ ಬಹಳ ಕಷ್ಟವಾಗುತ್ತದೆ. ಅದು ಆದರೆ ನಮ್ಮ ವಾತಾವರಣ ಪರಿಸ್ಥಿತಿಗೆ, ಭೂಮಿಯ ಗುಣಕ್ಕೆ, ಹೊಂದಿಕೊಂಡರೆ ನಾವು ಅದನ್ನು ಸಹಿತ ನಮ್ಮ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಪ್ರಾಜೆಕ್ಟ್ಸ್ ಇವೆ, ಅಲ್ಲಿ ಇದನ್ನು ಪ್ರಾರಂಭ ಮಾಡುತ್ತೇವೆ. ನೂರಕ್ಕೆ ಐವತ್ತರಷ್ಟು ಹೇಗೆ ಚೈನಾದಲ್ಲಿ ಮಾಡುತ್ತಿದ್ದಾರೆ, ಹಾಗೆ ನಮ್ಮ ರೈತರು ಬೆಳೆದರೆ ಒಂದು ಹೆಕ್ಟೇರ್‌ಗೆ ಅಂದರೆ ಎರಡೂಕಾಲು ಎಕರೆಗೆ ಹತ್ತು ಕ್ವಿಂಟಾಲ್ ಜಾಸ್ತಿ ಎಂದರೆ ಸಾಮಾನ್ಯವಾಯಿತೆ ? ಈ ರೀತಿಯ ಸಂಕೀರ್ಣ ಜಾತಿ ಬಂದಿದೆ. ಇವುಗಳಿಗೆ ಔಷಧಿ ಗಳನ್ನು ಕೊಡತಕ್ಕದ್ದು, ಔಷಧಿಗಳನ್ನು ಒದಗಿಸತಕ್ಕದ್ದು - ಇವುಗಳ ಬಗ್ಗೆ ಅಂಕಿಅಂಶ ಪ್ರಕಾರ ಹೇಳಬೇಕೆಂದರೆ, 1991-92ರಲ್ಲಿ 3600 ಮೆಟ್ರಿಕ್ ಟನ್ ಪ್ರೆಸ್ಟಿಸೈಡ್ಸ್‌ನ್ನು ನಾವು ನಮ್ಮ ಕರ್ನಾಟಕ ರಾಜ್ಯದಲ್ಲಿ ಉಪಯೋಗಿಸಿದ್ದೇವೆ. 1992-93 ರಲ್ಲಿ 4200 ಮೆಟ್ರಿಕ್ ಟನ್ ಗುರಿಯನ್ನು ಇಟ್ಟುಕೊಂಡಿದ್ದೇವೆ. ಅದೇರೀತಿ ಕೀಟನಾಶಕಗಳ ಗುಣನಿಯಂತ್ರಣ ಬಹಳ ಮುಖ್ಯವಾದುದು. ರೈತರಿಗೆ ಬಹಳ ಶೋಷಣೆ ಮಾಡುತ್ತಿದ್ದಾರೆ. ಎಂ-45 ಅನ್ನುತ್ತಾರೆ, ಮೆಟಾಸಿಡ್-2 ಅನ್ನುತ್ತಾರೆ. ಆದರೆ ಔಷಧಿಗಳ ಗುಣಮಟ್ಟ ಏನಿದೆಯೆಂದು ಗೊತ್ತಿರುವುದಿಲ್ಲ. ಆದಕಾರಣ ನಾವು ಸ್ಯಾಂಪಲ್ಸ್ ತೆಗೆದು ಬೆಂಗಳೂರು ಮತ್ತು ಬಳ್ಳಾರಿಯಲ್ಲಿರುವ ಲ್ಯಾಬೋರೇಟರಿಗಳಲ್ಲಿ ಡಿಸೆಂಬರ್ 91ರವರೆಗೆ ಪರೀಕ್ಷೆ ಮಾಡಿ 1177 ಪ್ರಕರಣಗಳಲ್ಲಿ ಸಬ್‌ಸ್ಟ್ಯಾಂಡರ್ಡ್ ಇದೆಯೆಂದು ತಿಳಿದು ಕೋರ್ಟ್‌ನಲ್ಲಿ ಕ್ರಿಮಿನಲ್ ಕೇಸ್ ಹಾಕಿದ್ದೇವೆ. ಈ ರೀತಿ ಕ್ರಮ ತೆಗೆದುಕೊಂಡಿರುವುದರಿಂದ ಅವರು ಬಹಳ ಎಚ್ಚರಿಕೆ ವಹಿಸಬೇಕಾಗಿದೆ. ಅದೇರೀತಿ ಇನ್ನೊಂದು ಲ್ಯಾಬೋರೇಟರಿಯನ್ನು ಮುಂದಿನವರ್ಷ ಧಾರವಾಡದಲ್ಲಿ ನಾವು ಪ್ರಾರಂಭ ಮಾಡುತ್ತೇವೆ. ಇವತ್ತು ಪರತಂತ್ರ ಜೀವಿ ನಮ್ಮ ಪಾರ್ಥೇನಿಯಂ ಮೇಲೆ ಮತ್ತು ತೆಂಗಿನ ಗಿಡಗಳಲ್ಲಿ ಬರತಕ್ಕಂಥ ಬ್ಲಾಕ್‌ಹೆಡೆಡ್ ಕ್ಯಾಟರ್‌ಪಿಲ್ಲರ್, ಇವುಗಳ ಮೇಲೆ ಪರತಂತ್ರಜೀವಿ, ಈ ನ್ಯಾಚುರಲ್ ಪ್ಯಾರಾಸೈಟ್ಸ್‌ನ್ನು ಲ್ಯಾಬ್‌ನಲ್ಲಿ ಪರೀಕ್ಷೆ ಮಾಡಿ ಇವುಗಳ ಮೇಲೆ ಬಿಟ್ಟರೆ ಈ ರೋಗಗಳ ಹತೋಟಿಯಾಗುತ್ತದೆ. ಲ್ಯಾಬೋರೇಟರಿಯಲ್ಲಿ ಇದನ್ನು ಪ್ರಯೋಗ ಮಾಡಿದ್ದಾರೆ. ಈ ಜೈವಿಕ ಅನಿಲ ಗೊಬ್ಬರದ ಬಗ್ಗೆ ನಾನು ಹೇಳಿದ ನ್ಯಾಚುರಲ್ ಫಾರ್ಮಿಂಗ್ ಅನುಸರಿಸುವುದರಿಂದ ನಾವು ರಸಗೊಬ್ಬರಗಳನ್ನು ಉಪಯೋಗಿಸುವುದನ್ನು ಕಡಿಮೆ ಮಾಡಬಹುದು. ಅವುಗಳನ್ನು ರೈತರಿಗೆ ಪುಕ್ಕಟೆಯಾಗಿ ಕೆಲವು ಕಡೆ ಹಂಚುತ್ತಿದ್ದೇವೆ. ನಾವು 1992-93ರಲ್ಲಿ ಆರು ಸಾರಿ ಹೆಕ್ಟೇರ್ ಪ್ಯಾಡಿಯಲ್ಲಿ ಜೈವಿಕ ಅನಿಲ ಗೊಬ್ಬರವನ್ನು ಉಪಯೋಗಿಸುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಅದನ್ನು ನಮ್ಮ ರೈತರಿಗೆ ಒದಗಿಸುತ್ತೇವೆ. ಅದೇರೀತಿ ಬಯೋಗ್ಯಾಸ್, ಈಗ ಕಟ್ಟಿಗೆ ಇಲ್ಲ ಎಂದು ಮಾನ್ಯ ಸದಸ್ಯರು ಮಾತನಾಡುತ್ತಿದ್ದರು. ಎಲ್ಲ ಕಾಡು ಹೊರಟುಹೋಗಿದೆ. ಮೊನ್ನೆ ನಾಗರಹೊಳೆ ಕಾಡಿನಲ್ಲಿ ಬೆಂಕಿ ಹಚ್ಚಿದರು. ಈ ರೀತಿ ಅನೇಕ ಸಮಸ್ಯೆಗಳು ಬಂದಿದೆ. ಈ ಸಮಸ್ಯೆಗೆ ಉತ್ತರ ಜೈವಿಕ ಅನಿಲ. ಬಯೋ ಗ್ಯಾಸ್. ಕೆಲವರು ಹೇಳಬಹುದು ನಮ್ಮಲ್ಲಿ ಹಸು ಇಲ್ಲ, ಎಲ್ಲಿಂದ ಸಗಣಿ ತರುವುದು ಎಂದು ಕೇಳಬಹುದು. ದಾರಿಯಲ್ಲಿ ಅನೇಕ ಕಡೆ ಸಗಣಿ ಬಿದ್ದಿರುತ್ತದೆ. ಮಲೆನಾಡಿನಲ್ಲಿ ಬೆಟ್ಟಗುಡ್ಡಗಳಲ್ಲಿ ದನಕರುಗಳನ್ನು ಬೆಳಗಿನಿಂದ ಸಂಜೆಯವರೆಗೆ ಮೇಯಲು ಬಿಟ್ಟು ಸಾಯಂಕಾಲ ಹೊಡೆದುಕೊಂಡು ಹಾಲು ಕರೆದುಕೊಳ್ಳುತ್ತಾರೆ. ಈ ಪಶುಗಳ ಸಗಣಿ ರಸ್ತೆಯಲ್ಲಿ ಬಿದಿರುತ್ತದೆ. ಅದನ್ನು ಕೂಡಿ ಹಾಕಿದರೆ ಒಂದು ಬಯೋಗ್ಯಾಸ್ ಪ್ಲಾಂಟ್ ಮಾಡಬಹುದು. ಅದಿಲ್ಲದೇ ಹೋದರೆ ಕಟ್ಟಿಗೆ ಸಮಸ್ಯೆ ಬಹಳ ಬೃಹದಾಕಾರವಾಗುತ್ತದೆ. ಉತ್ತರ ಇಂಡಿಯಾದ ಅನೇಕ ಕಡೆ ನಾನು ನೋಡಿದ್ದೇನೆ. ಸಗಣಿಯನ್ನು ತಂದು ಬೆರಣಿ ಮಾಡಿ ದೊಡ್ಡ ದೊಡ್ಡ ರೀತಿಯಲ್ಲಿ ಸ್ಟೋರ್ ಮಾಡಿ ಉರಿಸಿ ದೇಶದ ಸಂಪತ್ತನ್ನು ಹಾಳು ಮಾಡುತ್ತಾರೆ. ಪಶುಗಳ ಗಂಜಲವನ್ನು ಉಪಯೋಗಿಸುವುದರಿಂದ ಯೂರಿಯಾ ಗೊಬ್ಬರದ ದೊಡ್ಡ ಸಮಸ್ಯೆಯನ್ನು ನಾವು ಪರಿಹರಿಸಬಹುದು. ಅದನ್ನು ಶೇಖರಣೆ ಮಾಡಿ, ತಿಪ್ಪೆಗುಂಡಿಗೆ ಹಾಕಿ ಅಥವಾ ಮಣ್ಣಿನ ಮೇಲೆ ಹಾಕಿ ಅದನ್ನು ಉಪಯೋಗಿಸಿದರೆ ಎಷ್ಟೋ ಒಳ್ಳೆಯ ಗೊಬ್ಬರವಾಗುತ್ತದೆ. ಒಂದು ಮೂಟೆ ಯೂರಿಯಾ ತೆಗೆದುಕೊಳ್ಳುವ ಬದಲು ಒಂದು ಟ್ಯಾಂಕ್ ಗಂಜಲ ಶೇಖರಣೆ ಮಾಡಿ ಅದನ್ನು ಉಪಯೋಗಿಸಿದರೆ ಸರಿಯಾಗಿ ಅದರಿಂದ ಎಷ್ಟೋ

ಹಣ ಉಳಿಯುತ್ತದೆ. ಒಂದು ಮೂಟೆ ಯೂರಿಯಾ 50 ಕಿಜಿದು 110-120 ರೂಪಾಯಿ ಇದೆ, ಅದಕ್ಕೋಸ್ಕರ ಈ ಸಾರಿ ನಮ್ಮ ಇಲಾಖೆಯವರು 91-92ರಲ್ಲಿ 91,844 ಬಯೋ ಗ್ಯಾಸ್ ಪ್ಲಾಂಟ್ಸ್ ಇನ್‌ಸ್ಟಾಲ್ ಮಾಡಿರುತ್ತೇವೆ. ಇದು ಅಂಡರ್ ಡಿಪಾರ್ಟ್‌ಮೆಂಟ್ ಪ್ರೋಗ್ರಾಂ, ಈ ಸಾರಿ91,844. 92-93ರಲ್ಲಿ 4500 ಬಯೋ ಗ್ಯಾಸ್ ಪ್ಲಾಂಟ್ಸ್ ನಾವು ಕೊಡುವುದಲ್ಲದೆ ಬ್ಯಾಂಕ್‌ನವರೂ ಕೊಡುತ್ತಾರೆ, ಬೇರೆ ಇಲಾಖೆಯವರೂ ಕೊಡುತ್ತಾರೆ. ಅದನ್ನು ಕೊಟ್ಟು ಗೊಬ್ಬರ ಹಾಗೂ ಕಟ್ಟಿಗೆ ಸಮಸ್ಯೆಯನ್ನು ನಾವು ಬಗೆ ಹರಿಸಬೇಕೆಂಬುದು ತೀರ್ಮಾನ ಮಾಡಿರುತ್ತೇವೆ. ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ, ಮಣ್ಣಿನ ಪರೀಕ್ಷೆ ಮಾಡಿ, ಆ ಮಣ್ಣಿನಲ್ಲಿ ಏನು ಕೊರತೆ ಇದೆ, ಏನು ಸಮಸ್ಯೆ ಇದೆ ಎಂದು ತಿಳಿದುಕೊಳ್ಳಬೇಕಾದುದು ಮುಖ್ಯ. ಮಣ್ಣನ್ನು ಪರೀಕ್ಷೆ ಮಾಡಿದ ನಂತರ ಅದನ್ನು ತಿಳಿದುಕೊಂಡು, ಆ ಮಣ್ಣಿಗೆ ಏನೇನು ಗೊಬ್ಬರ ಉಪಯೋಗಿಸಬೇಕು, ನೈಟ್ರೋಜನ್ ಆಗಲೀ, ಫಾಸ್ಫರಸ್ ಆಗಲೀ, ಪೊಟ್ಯಾಷ್ ಆಗಲೀ ಉಪಯೋಗಿಸಬಹುದು. ಮಣ್ಣಿನಲ್ಲಿ ಏನು ಸಮಸ್ಯೆ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಮೂಲಭೂತವಾಗಿ ನಾವು ಪ್ರಯತ್ನಿಸಬೇಕು. ಮೂಲಭೂತ ಸಮಸ್ಯೆಯನ್ನು ತಿಳಿದುಕೊಂಡರೆ ನಾವು ಅದಕ್ಕೆ ತಕ್ಕ ಕೃತಕ ಗೊಬ್ಬರಗಳನ್ನು, ರಸಗೊಬ್ಬರಗಳನ್ನು ಉಪಯೋಗಿಸಲು ಅನುಕೂಲವಾಗುತ್ತದೆ. ಮಣ್ಣನ್ನು ಟೆಸ್ಟ್ ಮಾಡಿದರೆ ಮಣ್ಣಿನಲ್ಲಿರತಕ್ಕ ಸಮಸ್ಯೆ ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದಕ್ಕಾಗಿ ಎರಡು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಗಳು ಬೆಂಗಳೂರು ಮತ್ತು ಬಳ್ಳಾರಿಯಲ್ಲಿವೆ. ಇದರ ಜೊತೆಗೆ ಮತ್ತೊಂದು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಮಾಡಬೇಕು ಮತ್ತು ಮಣ್ಣನ್ನು ಪರೀಕ್ಷೆ ಮಾಡತಕ್ಕ ಕಾರ್ಯ ಕೈಗೊಳ್ಳಬೇಕು ಎಂಬುದಕ್ಕೆ 92-93ನೇ ಸಾಲಿನಲ್ಲಿ ಬಜೆಟ್‌ನಲ್ಲಿ ಹೆಚ್ಚುವರಿಯಾಗಿ 120 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇವತ್ತು ಹಣ ಒದಗಿಸುವುದರ ಜೊತೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು ಬಜೆಟ್ ಮಂಡನೆ ಮಾಡುವಾಗ ಒಂದು ವಿಚಾರ ಹೇಳಿದರು. ಮೊಬಾಯಿಲ್ ಸಾಯಿಲ್ ಟೆಸ್ಟಿಂಗ್ ವ್ಯಾನ್ ಮಾಡುತ್ತೇವೆ, ಇದಕ್ಕೆ "ಭೂ ಗುಣ" ಎಂದು ನಾಮಾಂಕಿತ ಮಾಡಿರುತ್ತೇವೆ ಎಂದು ಹೇಳಿದರು. ಇದರಿಂದ ಮಣ್ಣನ್ನು ಪರೀಕ್ಷೆ ಮಾಡಿ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರಿಗೆ ಒಂದು ಕಾರ್ಡ್ ಕೊಟ್ಟು ರೇಷನ್ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ಕೊಟ್ಟಹಾಗೆ ಒಂದು ಕಾರ್ಡ್ ಕೊಡುತ್ತೇವೆ. ಇದರಿಂದ ಆ ಮಣ್ಣಿನಲ್ಲಿ ಏನು ಕೊರತೆ ಇದೆ, ಎಷ್ಟು ಗೊಬ್ಬರ ಹಾಕಬೇಕು ಎಂದು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. 1973 ರಲ್ಲಿ ನಾನು ವ್ಯವಸಾಯಮಂತ್ರಿ ಆಗಿದ್ದಾಗ ರಸಗೊಬ್ಬರದ ಕೊರತೆ ಬಂದಿತ್ತು. ಆಗ ನಾನು ಫರ್ಟಿಲೈಸರ್ ಕಾರ್ಡ್ ಎಂದು ಇಂಟ್ರಡ್ಯೂಸ್ ಮಾಡಿದ್ದೆ, ಅದರಲ್ಲಿ ಆ ರೈತನ ಜಮೀನಿನಲ್ಲಿರುವ ಮಣ್ಣಿನಲ್ಲಿ ಏನು ಕೊರತೆ ಇದೆ, ಯಾವ ಗೊಬ್ಬರ ಬೇಕು ಎಂಬುದನ್ನು ಸಮೂದಿಸಿ ಕೊಟ್ಟೆವು, ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಿದ್ದುದು ಒಂದು ವಾರದಲ್ಲಿ ನಿಂತು ಹೋಯಿತು, ಅದೇ ರೀತಿ ಮಣ್ಣಿನ ಭೂಗುಣವನ್ನು ಪರೀಕ್ಷೆ ಮಾಡಿ ರೈತನಿಗೆ ಕಾರ್ಡ್ ಕೊಟ್ಟರೆ ಅದರಿಂದ ಅವನಿಗೆ ಇರುವ ಸಮಸ್ಯೆ ಬಗೆಹರಿಯುತ್ತದೆ. ಅವನು ಕಾರ್ಡ್ ಇಟ್ಟುಕೊಂಡು ಉಪಯೋಗಿಸುವುದಕ್ಕೆ ಆಗುತ್ತದೆ, ಅದಕ್ಕೆ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಉತ್ತೇಜನ ಕೊಟ್ಟಿದ್ದಾರೆ. ಹಣ ಒದಗಿಸಿದ್ದಾರೆ, ಅದೇ ರೀತಿ ನಮ್ಮ ಕೃಷಿ ವೆರೈಟೀಸ್ ಮತ್ತು ಬೇಳೆಕಾಳು ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ಇವತ್ತು ನಾವು ಹೇಳಿದ್ದೇವೆ ಈಗಾಗಲೇ ಹೈ ಈಲ್ಡಿಂಗ್ ವೆರೈಟೀಸ್, ಹೈಬ್ರೀಡ್ ವೆರೈಟೀಸ್ ಬಗ್ಗೆ ಅಂಕಿಸಂಖ್ಯೆಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಬೇಳೆಕಾಳು ಕೊರತೆ ಇದೆ. ಅದನ್ನು ಹೆಚ್ಚಾಗಿ ಉತ್ಪಾದನೆ ಮಾಡುವ ದೃಷ್ಟಿಯಿಂದ1992-93ರಲ್ಲಿ 17 ಲಕ್ಷ ಹೆಕ್ಟೇರ್ ಎಕರೆ ಗುರಿ ಇಟ್ಟುಕೊಂಡಿದ್ದೇವೆ. 8 ಲಕ್ಷ 35 ಸಾವಿರ ಟನ್ ಉತ್ಪಾದನಾ ಗುರಿ ಇಟ್ಟುಕೊಂಡಿದ್ದೇವೆ. ಎಣ್ಣೆಕಾಳುಗಳ ಬಗ್ಗೆ ಈಗಾಗಲೇ ಹೇಳಿದ್ದೇನೆ. ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಕಡ್ಲೆಕಾಯಿ ಮತ್ತು ಸೂರ್ಯಕಾಂತಿ ನೈಸರ್, ಕ್ಯಾಸ್ಟರ್ ರೇಪು, ಮಸ್ಟರ್ಡ್ ಸೋಯಾಬಿನ್ ಸನ್‌ಫ್ಲವರ್, ಲಿನಸೀಡ್ ಇವೆಲ್ಲಾ ಬೆಳೆಯತಕ್ಕಂಥ ಬೆಳೆ. ಚಿಕ್ಕ ಚಿಕ್ಕ ಬೆಳೆಗಳು ಹೆಚ್ಚಾಗಿ ಕಡ್ಲೆಕಾಯಿ, ಸೂರ್ಯಕಾಂತಿ ಕುಸಬೆ ಮತ್ತು ಹರಳು ಬೆಳೆಯತಕ್ಕಂಥಾದ್ದು. ಇವುಗಳನ್ನು ಕೊಡಗು ಜಿಲ್ಲೆ ಬಿಟ್ಟರೆ

ನಮ್ಮ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ. 1992-93 ರಲ್ಲಿ ನಮ್ಮ ಉತ್ಪಾದನಾ ಗುರಿ ಇಟ್ಟುಕೊಂಡಿರುವುದು 20 ಲಕ್ಷ 35 ಸಾವಿರ ಟನ್ ಸುಮಾರು 23 ಲಕ್ಷ 60 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯುವುದಕ್ಕೆ ಗುರಿ ಇಟ್ಟುಕೊಂಡಿದ್ದೇವೆ. ಆಮೇಲೆ ಸಮಗ್ರ ಭತ್ತದ ಅಭಿವೃದ್ಧಿ ಕಾರ್ಯಕ್ರಮ. ಇದಕ್ಕಾಗಿ ರಾಜ್ಯದ 13 ಜಿಲ್ಲೆಗಳ 75 ತಾಲ್ಲೂಕುಗಳಲ್ಲಿ 1991-92ರಲ್ಲಿ 173 ಲಕ್ಷ 86 ಸಾವಿರ ರೂಪಾಯಿಗಳ ಹಣ ನಾವು ಇಟ್ಟುಕೊಂಡು ಅದನ್ನು ಇವತ್ತಿನದಿವಸ ಖರ್ಚು ಮಾಡುವುದಕ್ಕೆ ಹೊರಟಿದ್ದೇವೆ. ಅದೇ ರೀತಿಯಾಗಿ ವಿಶೇಷವಾಗಿ ಆಹಾರ ಉತ್ಪಾದನಾ ಕಾರ್ಯಕ್ರಮ ಇಟ್ಟುಕೊಂಡಿದ್ದೇವೆ. ಮತ್ತು ಹತ್ತಿ ಬೆಳೆ ನಮ್ಮ ರಾಜ್ಯದಲ್ಲಿ ಡಿ.ಸಿ.ಹೆಚ್ ಮತ್ತು ಇತರೇ ಬಹಳ ಉತ್ತಮವಾದ ಹತ್ತಿ ಬೆಳೆಯತಕ್ಕಂಥಾದ್ದು ನಮ್ಮ ರಾಜ್ಯದಲ್ಲಿ ಇದೆ. ನಾವು ವರಲಕ್ಷ್ಮಿ ಕಾಟನ್ ಬೆಳೆಯುತ್ತಿದ್ದೆವು. ಈಗ ಡಿ.ಸಿ.ಎಚ್. ಬಂದಿದ್ದೇವೆ. ಈ ಬೆಳೆ ಬಂದ ಮೇಲೆ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ನಮಗೆ ಫಾರಿನ್ ಎಕ್ಸ್‌ಚೇಂಜ್ ಇದೆ. ಇದು ಬಹಳ ಉತ್ತಮವಾದಂತಹ ಕಮರ್ಷಿಯಲ್ ಕ್ರಾಪ್. ಇವತ್ತು 5 ಲಕ್ಷ 38 ಸಾವಿರ ಹೆಕ್ಟೇರ್‌ನಲ್ಲಿ ಹೈಬ್ರೀಡ್ ಕಾಟನ್ ಹತ್ತಿ ಬೆಳೆಯತಕ್ಕಂಥ ಗುರಿ ಇಟ್ಟುಕೊಂಡಿದ್ದೇವೆ. ಮತ್ತು ಉತ್ಪಾದನೆ 9 ಲಕ್ಷ ಬೇಲ್ಸ್. ನಮ್ಮ ಕೇಂದ್ರ ಸರ್ಕಾರದಿಂದ ನಮಗೆ ಹೆಚ್ಚಿಗೆ ಹಣ ಖರ್ಚು ಮಾಡಿ 5 ಡಿಸ್ಟ್ರಿಕ್ಟ್‌ಗಳಲ್ಲಿ 1991-92ರಲ್ಲಿ ಹೆಚ್ಚಿಗೆ ನಾವು ಈ ಹತ್ತಿ ಬೆಳೆಯತಕ್ಕಂಥ ಯೋಜನೆ ಮಾಡಿದ್ದೇವೆ. ಅದಕ್ಕೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ. ಅಷ್ಟೇ ಅಲ್ಲ, ಮತ್ತೊಂದು ಮುಖ್ಯವಾದ ಬೆಳೆ ಕಬ್ಬು, ಮಂಡ್ಯ ಇರಿಗೇಟೆಡ್ ಏರಿಯಾ ಮತ್ತು ಅಲ್ಲಿ ಪ್ರಾಜೆಕ್ಟ್‌ಗಳು ಇವೆ. ನಾನು ಎಲ್ಲಾ ಜಿಲ್ಲೆಗಳ ಹೆಸರು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು 2ಲಕ್ಷ 39 ಸಾವಿರ ಹೆಕ್ಟೇರ್‌ನಲ್ಲಿ ನಾವು ಕಬ್ಬು ಬೆಳೆಯುತ್ತೇವೆ. with an anticipated production of 250 lakh tonnes as against the target of 185 lakh tonnes of the previous year. ನಮ್ಮ ಮುಂದಿನ ಸಾಲಿನ ಗುರಿ 250 ಲಕ್ಷ ಟನ್. ಕಬ್ಬು ಬಹಳ ಮುಖ್ಯವಾದ ಬೆಳೆ. ಕಬ್ಬು ಬೆಳೆಗೆ ನಾವು ಒಳ್ಳೆಯ ಸವಲತ್ತು ಕೊಟ್ಟಿದ್ದೇವೆ. ರೈತರು ಹೊರರಾಜ್ಯಕ್ಕೆ ಕಬ್ಬು ತೆಗೆದುಕೊಂಡು ಹೋಗುವುದು ಏನೊಂದು ಇತ್ತು ಇದಕ್ಕಿಂತ ಮೊದಲು ಪರ್ಚೇಸ್ ಟ್ಯಾಕ್ಸ್ ಇತ್ತು ಅದನ್ನು ತೆಗೆದಿದ್ದೇವೆ. ಮತ್ತು ಹೊರರಾಜ್ಯಗಳಿಗೆ ಹೋಗುತ್ತಿದ್ದ ಕಬ್ಬಿಗೆ ಎಂಟ್ರಿ ಟ್ಯಾಕ್ಸ್ ತೆಗೆದಿದ್ದೇವೆ. ಗೋವಾ ಮತ್ತು ಮಹಾರಾಷ್ಟ್ರ ಈ ಭಾಗದ ರೈತರಿಗೆ ಹೆಚ್ಚು ಕಬ್ಬು ಬೆಳೆದು ಒಣಗಿ ಹೋಗುವಂತಹ ಪರಿಸ್ಥಿತಿ ಇತ್ತು ರೈತರು ಕೇಳಿದ್ದಕ್ಕೆ ನಮ್ಮ ಮುಖ್ಯಮಂತ್ರಿಗಳು ಹಣಕಾಸಿನ ಸಚಿವರು ಅವರೇ ಆಗಿರುವುದರಿಂದ ಅದಕ್ಕೆ ಉದಾರವಾದ, ಈ ಎರಡು ಸೌಲತ್ತುಗಳನ್ನು ಒದಗಿಸಿ ಕೊಟ್ಟಿದ್ದಾರೆ. ತಂಬಾಕು ಬೆಳೆ ಬಗ್ಗೆ ನಮ್ಮ ಕೆಲವು ಸ್ನೇಹಿತರು ಹೇಳಿದ್ದಾರೆ ಅದು ವರ್ಜೀನಿಯಾ ತಂಬಾಕು. ನಮ್ಮ ರಾಜ್ಯದಲ್ಲಿ 1991-92ರಲ್ಲಿ 51 ಸಾವಿರ ಹೆಕ್ಟೇರ್‌ನಲ್ಲಿ ಈ ಬೆಳೆ ಬೆಳೆದಿದ್ದಾರೆ. 36ಸಾವಿರ ಟನ್ ನಮ್ಮ ಗುರಿ. ಉತ್ಪಾದನಾ ಗುರಿ ಇದರಲ್ಲಿ ವರ್ಜೀನಿಯಾ ಮತ್ತು ನಾರ್ಮಲ್ ತಂಬಾಕು ಬರುತ್ತದೆ. ವರ್ಜೀನಿಯಾ ಬಗ್ಗೆ ನಿನ್ನೆ ಹೇಳಿದರೂ ಹುಣಸೂರು ಅರಕಲಗೂಡು ಶಿವಮೊಗ್ಗ ಕೆಲವು ಭಾಗ ಮತ್ತು ಈ ಭಾಗಗಳಲ್ಲಿರತಕ್ಕಂಥವರು ಏನು ಬ್ಯಾರಲ್ ಕಟ್ಟಿ ಲೈಸೆನ್ಸ್ ಪಡೆದಿದ್ದಾರೆ. ಈ ವರ್ಷ ರಿನೀವಲ್‌ಗೆ ಹೋದರೆ ಅವಕಾಶ ಮಾಡಿಲ್ಲವೆಂದು ನಿನ್ನೆ ಅವರು ಹೇಳಿದ ತಕ್ಷಣ ನಾನು ಇವತ್ತು ಬೆಳಿಗ್ಗೆ ಕೇಂದ್ರ ಸರ್ಕಾರದ ಕಾಮರ್ಸ್ ಮಿನಿಸ್ಟರ್ ಶ್ರೀಮಾನ್ ಚಿದಂಬರಂಗೆ ಒಂದು ಟೆಲೆಕ್ಸ್ ಕಳುಹಿಸಿಕೊಟ್ಟಿದ್ದೇನೆ. ಕಳೆದ ವರ್ಷದಂತೆ 1991 ರಲ್ಲಿ ಏನು ಬ್ಯಾರಲ್ ಕಟ್ಟಿದ್ದಾರೆ, ಹಿಂದೆ ಏನು ಲೈಸೆನ್ಸ್ ಇತ್ತು ಆ ಲೈಸೆನ್ಸ್ ರಿನೀವಲ್ ಮಾಡಬೇಕು. ಉತ್ಪಾದನೆ ಹೆಚ್ಚಾಗಿದೆ ಆಮೇಲೆ ಬೆಳೆ ಚೆನ್ನಾಗಿ ಆಗಿದೆ, ಆಂಧ್ರ ಪ್ರದೇಶದಲ್ಲಿ ಉತ್ಪಾದನೆ ಹೆಚ್ಚಾಗಿದೆ. ಗುಂಟೂರಿನಲ್ಲಿರತಕ್ಕ ಅಧ್ಯಕ್ಷರು ನಮ್ಮ ರಾಜ್ಯದ ತಂಬಾಕು ಕೊಳ್ಳುವುದಿಲ್ಲ ಲೈಸೆನ್ಸ್ ರಿನೀವಲ್ ಮಾಡುವುದಿಲ್ಲವೆಂದರೆ ಅರ್ಥವೇನು ? ಈಗ ಅವರಿಗೆ ಪ್ರೊಟೆಸ್ಟ್ ಮಾಡಿ ರಿನ್ಯೂ ಮಾಡಬೇಕು ಎಂದು ನಾನು ಕೇಂದ್ರ ಸರ್ಕಾರದ ಕಾಮರ್ಸ್ ಮಿನಿಸ್ಟರ್ ಶ್ರೀ ಚಿದಂಬರಂರವರಿಗೆ ಮತ್ತು ಗುಂಟೂರಿನಲ್ಲಿರತಕ್ಕಂಥ ಟೊಬ್ಯಾಕೋ ಬೋರ್ಡ್ ಅಧ್ಯಕ್ಷರಿಗೂ ಟೆಲೆಕ್ಸ್ ಕಳುಹಿಸಿಕೊಟ್ಟಿದ್ದೇವೆ. ಅವರು ಏನಾದರೂ ರಿನ್ಯೂ ಮಾಡದೇ ಇದ್ದರೆ ನಾನು

ಡೆಲ್ಲಿಗೆ ಹೋಗಿ ಈ ಒಂದು ದಿಸೆಯಲ್ಲಿ ಕಾರ್ಯ ವೇಗವಾಗಿ ಆಗುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ತಂಬಾಕು ಬೆಳೆಗಾರರ ಪ್ರತಿನಿಧಿಗಳಾಗ ಶಾಸಕರುಗಳಿಗೆ ಅಥವಾ ಆ ಬೆಳೆ ಬೆಳೆಯತಕ್ಕಂಥವರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಮುಂದಿನ ವಾರ ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದೆ. ಅದನ್ನು ಈಗಾಗಲೇ ತಿಳಿಸಿಬಿಟ್ಟಿದ್ದೇನೆ. ಅರಕಲಗೂಡು ಶಾಸಕರೂ ಇಲ್ಲಿಯೇ ಇದ್ದಾರೆ. ಶಿವಮೊಗ್ಗದವರೂ ಇಲ್ಲಿಯೇ ಇದ್ದಾರೆ. ಬಳ್ಳಾರಿಯವರೂ ಇಲ್ಲಿಯೇ ಇದ್ದಾರೆ. ಯಾರು ಇಲ್ಲಿ ಇರಲಿ ಇಲ್ಲದೇ ಹೋಗಲಿ ನಾವು ರೈತರಿಗೆ ಹೇಳಲೇಬೇಕಾಗುತ್ತದೆ. ನಾವು ನೀವು ಎಲ್ಲರೂ ಗ್ರಾಮಾಂತರ ಪ್ರದೇಶದಿಂದ ಬಂದಿರುವವರೇ ಆಗಿದ್ದೇವೆ. ಎಲ್ಲೋ ನೂರಕ್ಕೆ 10 ಜನ ಮಾತ್ರ ಪಟ್ಟಣದ ಶಾಸಕರು ಇದ್ದಾರೆ. ಮಿಕ್ಕವರೆಲ್ಲಾ ಹಳ್ಳಿಗಳ ಕಡೆಯಿಂದಲೇ ಬಂದಿರತಕ್ಕವರು. ನಾವುಗಳು ಕಬ್ಬು ಬೆಳೆಯುತ್ತೇವೆ. ಇಲ್ಲಾ ಭತ್ತ ಬೆಳೆಯುತ್ತೇವೆ, ತಂಬಾಕು ಬೆಳೆಯುತ್ತೇವೆ. ಎಲ್ಲರದೂ ಒಂದೇ ಸಮಸ್ಯೆ ಬರೀ ಅರಕಲಗೂಡುನವರದು ಮಾತ್ರ ಅಲ್ಲ. ಇನ್ನು ಆಗ್ರೋ ಸರ್ವೀಸ್ ಸೆಂಟರ್, ಇದು ಚೆನ್ನಾಗಿ ಕೆಲಸ ಮಾಡುತ್ತದೆಂದು ನನಗೂ ಕಾಣುವುದಿಲ್ಲ. ಚೆನ್ನಾಗಿ ಕೆಲಸ ಮಾಡಬೇಕಾದರೆ ಇನ್ನೂ ಹೆಚ್ಚಿಗೆ ರೈತರಿಗೆ ಅನುಕೂಲ ಆಗಬೇಕು. ರೈತರ ಕೃಷಿ ಸೇವಾ ಕೇಂದ್ರಗಳು ತ್ವರಿತವಾಗಿ, ಪರಿಣಾಮಕಾರಿಯಾದ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿ ನಮ್ಮ ಇಲಾಖೆಯವರಿಗೂ ಒಂದು ಕಿವಿ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಷ್ಟೇ ಅಲ್ಲ , ಭೂ ಸಾರ ಸಂರಕ್ಷಣಾ ಕೇಂದ್ರ, soil service, field trial, dry farming ಇವೆಲ್ಲಾ ನಡೆಯುತ್ತಿವೆ. ಮತ್ತು ನಮ್ಮ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ, National Agriculture Extension Scheme ಇದಕ್ಕೆ ನಮ್ಮ ಕೇಂದ್ರ ಸರ್ಕಾರದವರು 3.5 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಅದನ್ನು ಉಪಯೋಗಿಸಿ ನಾವು ಈ ಒಂದು ದಿಸೆಯಲ್ಲಿ ಕೃಷಿ ವಿಸ್ತರಣಾ ಯೋಜನೆಗೆ ಬೇಕಾದಂಥ ಈ ಹಣವನ್ನು ಖರ್ಚು ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆ. ಮತ್ತೊಂದು ಮುಖ್ಯವಾದುದು, ಈ ರೈತರಿಗೆ ತರಬೇತಿ, ಈ ತರಬೇತಿ ಕೇಂದ್ರಗಳು ಬಹಳ ಇವೆ. Indo Japanese Farm ನಮ್ಮ ಮಂಡ್ಯಾದಲ್ಲಿದೆ. ಮತ್ತೆ ಇವತ್ತಿನ ದಿವಸ ರೈತರಿಗೆ ತರಬೇತಿ ಕೊಡುವುದರ ಜೊತೆಗೆ ರೈತರ ಮಹಿಳೆಯರಿಗೆ ತರಬೇತಿ ಕೊಡಬೇಕು. ಇದು ಬಹಳ ಮುಖ್ಯವಾದುದು. ನೂರಕ್ಕೆ 60 ರಷ್ಟು ವ್ಯವಸಾಯದ ಕೆಲಸವನ್ನು ಮಾಡತಕ್ಕವರು ಮಹಿಳೆಯರು. ಈ ಮಾತನ್ನು ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ಕಾಣುತ್ತದೆ. ಉಳುವುದು ಒಂದು ಬಿಟ್ಟರೆ, ಉಳುವುದನ್ನೂ ಕೂಡ ಧಾರವಾಡ ಮತ್ತು ರಾಣಿಬೆನ್ನೂರು ಕಡೆ ಹೆಣ್ಣು ಮಕ್ಕಳೇ ಕಚ್ಚೆ ಹಾಕಿಕೊಂಡು ಉಳುತ್ತಿರುತ್ತಾರೆ. ನಾನು ನೋಡಿದ್ದೇನೆ. ಅಲ್ಲವೆ ? 60 ಪರ್ಸೆಂಟ್ ಮಹಿಳೆಯರು ವ್ಯವಸಾಯದಲ್ಲಿ ಕೆಲಸ ಮಾಡುತ್ತಾರೆ. ಕೊಯಿಲಿನಿಂದ ಹಿಡಿದು ಮತ್ತು ಬಿತ್ತನೆ ಬೀಜ ಶೇಖರಿಸಿ ಸರಿಯಾದ ರೀತಿಯಲ್ಲಿ ಕೊಡುವವರೆಗೂ ಹೆಣ್ಣು ಮಕ್ಕಳೇ ಕೆಲಸ ಮಾಡುತ್ತಾರೆ. ಕಳೆ ತೆಗೆಯುವುದು, ಒಕ್ಕಣೆ ಮಾಡುವುದು, ಆದ್ದರಿಂದ ಅವರಿಗೆ ನಾವು ಇವತ್ತಿನ ದಿವಸ ತರಬೇತಿ ಕೊಡಬೇಕೆಂದು ಯೋಚಿಸಿದ್ದೇವೆ. ನಾನು ಕೃಷಿ ಮಂತ್ರಿಯಾದ ಮೇಲೆ, ಎರಡು ಮೂರು ಕಡೆ ಹೋಗಿದ್ದೆ. ಹೊಸಕೋಟೆ, ದೇವನಹಳ್ಳಿ, ತಿಪಟೂರಿಗೆ ಹೋಗಿದ್ದೆ. ಅಲ್ಲಿ 2 ಸಾವಿರ ಜನ ಹೆಣ್ಣು ಮಕ್ಕಳು ಬಂದಿದ್ದರು. ನಾ ಮುಂದೆ ತಾ ಮುಂದೆ ಎಂದು ಬಂದಿದ್ದರು. ದೇವನಹಳ್ಳಿಯಲ್ಲಿ ಒಂದು ಕಲ್ಯಾಣ ಮಂಟಪದಲ್ಲಿ ಮಾಡಿದ್ದೆವು. ಅಲ್ಲಿ ಜಾಗವೇ ಇರಲಿಲ್ಲ. ಹೊರಗಡೆ ನಿಂತುಕೊಂಡಿದ್ದರು ಮಹಿಳೆಯರು. ಈ ವ್ಯವಸಾಯ ವಿಚಾರದಲ್ಲಿ ನಾವೂ ತಿಳಿದುಕೊಳ್ಳಬೇಕು ಎನ್ನು ಕಾತುರತೆ ಹೆಣ್ಣುಮಕ್ಕಳಲ್ಲಿ ಇದೆ. ಈ ನವೀನ ರೀತಿಯಲ್ಲಿ ಏನು ಇದೆ, ಯಾವ ರೀತಿ ಗೊಬ್ಬರ, ಕೀಟನಾಶಕಗಳನ್ನು ಉಪಯೋಗಿಸಬೇಕು, ಯಾವ ಕಾಲದಲ್ಲಿ ಉಪಯೋಗಿಸಬೇಕು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಮಹಿಳೆಯರು ಬಹಳ ಕಾತರರಾಗಿದ್ದಾರೆ. ಇದಕ್ಕೆ ನಮ್ಮ ಡೆನ್ಮಾರ್ಕ್ ಸರ್ಕಾರ ನೂರಕ್ಕೆ ನೂರರಷ್ಟು, Women & Youth Training Programme ಗೆ ಹಣ ಒದಗಿಸುತ್ತಾರೆ. ನಾನೂ ಸಹಿತ ಡೆನ್ಮಾರ್ಕ್‌ಗೆ ಹೋಗಿದ್ದೆ ನಮ್ಮ ಇಲಾಖೆಯ 4 ಜನ ಹೆಣ್ಣುಮಕ್ಕಳು ಅಧಿಕಾರಿಗಳು ಅಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಇನ್ನೂ ಹಂತ ಹಂತವಾಗಿ ಕಳುಹಿಸುತ್ತೇವೆ. ಬಹಳ ಜನ ಅಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಅಲ್ಲಿನ ಪ್ರಿನ್ಸಿಪಾಲರು ಅವರ ಬಗ್ಗೆ ಒಳ್ಳೆಯ ಮಾತನ್ನು ಹೇಳಿದರು. ಅದರಿಂದ ನನಗೂ ಸಂತೋಷವಾಯಿತು. ರೈತ ಮಹಿಳೆಯರು ಹೆಚ್ಚಿಗೆ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಆದ್ದರಿಂದ, ಅವರು ಇದರಲ್ಲಿ ಹೆಚ್ಚಿಗೆ involve ಮಾಡತಕ್ಕಂಥಾದ್ದು ನಮ್ಮ ಕರ್ತವ್ಯ. ಮತ್ತು ಗುರಿ ಇಷ್ಟನ್ನು ಇವತ್ತು ಹೇಳುತ್ತಾ soil conservation ಇದು ಬಹಳ ಮುಖ್ಯವಾದುದು. ನಾವು ಡ್ಯಾನಿಡಾ ಯೋಜನೆಯಲ್ಲಿ ಮಾಡುತ್ತೇವೆ. World Bank Assistance ನಲ್ಲಿ ಮಾಡುತ್ತೇವೆ. ಒಣ ಬೇಸಾಯ ಅಭಿವೃದ್ಧಿಯಲ್ಲಿ ಮಾಡುತ್ತೇವೆ. ಇವೆಲ್ಲವನ್ನು ಮಾಡಬೇಕಾದರೆ ನಮಗೆ ಹೆಚ್ಚಿಗೆ ಹಣ ಬೇಕಾಗುತ್ತದೆ. ಇದು ಬಹಳ ಮುಖ್ಯವಾದಂಥ ಕೆಲಸ. ಈ ದಿಸೆಯಲ್ಲಿ ನಮಗೆ ಅನೇಕ ಪ್ರಾಜೆಕ್ಟ್ಸ್ ಇವೆ. ಅವುಗಳನ್ನು ನಾವು ಇವೊತ್ತು ಕೈಗೆತ್ತಿಕೊಂಡಿದ್ದೇವೆ. ಸುಮಾರು 87 ಲಕ್ಷ ಹೆಕ್ಟೇರ್‌ಗಳಲ್ಲಿ, ಎಲ್ಲಿ ಕಡಿಮೆ ಮಳೆ ಬರುತ್ತದೆ, ಎಲ್ಲಿ ಒಣಬೇಸಾಯ ಇದೆ, ಅಲ್ಲಿ ಮಳೆಗಾಲದಲ್ಲಿ ಹೇಗೆ ನೀರು ಶೇಖರಿಸುತ್ತದೆ ? ಹಳ್ಳಗಳು, ನಾಲಬಂದ್‌ಗಳು ಮುಂತಾದುವುಗಳನ್ನು ಮಾಡಲು ನಮ್ಮ ಕೇಂದ್ರ ಸರಕಾರದವರು ಪ್ರಾಜೆಕ್ಟ್ ಮಾಡಿದ್ದಾರೆ, ಡೆನಿಡಾ ದವರು ಹಣ ಕೊಟ್ಟಿದ್ದಾರೆ, ವಿಶ್ವಬ್ಯಾಂಕ್‌ನವರು ಕೊಟ್ಟಿದ್ದಾರೆ, ಮತ್ತು ಕೇಂದ್ರ ಸರಕಾರದವರು ಮತ್ತು ರಾಜ್ಯ ಸರಕಾರದವರು ಸೇರಿ ಮಳೆ ಆಶ್ರಿತ ಜಲಾನಯನ ಅಭಿವೃದ್ಧಿಯ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ನಮ್ಮ ಬಡ ಜನರಿಗಾಗಿ ಸ್ಪೆಶಲ್ ಕಾಂಪೋನೆಂಟ್ ಸ್ಕೀಮ್ ಇದೆ. ಅದರಲ್ಲಿ ಬಡವರಿಗೆ ನೇಗಿಲು ಕೊಡುವುದು ಸ್ಪ್ರೇಯರ್ ಕೊಡುವುದು, ಗೊಬ್ಬರ ಕೊಡುವುದು, ಇವೆಲ್ಲಾ ಬರುತ್ತದೆ. ಅದೇರೀತಿಯಲ್ಲಿ ಎಸ್‌ಜಿಪಿ ಪ್ರೊಗ್ರಾಂ ಇದೆ. ಅದಕ್ಕೆ 36 ಲಕ್ಷ 56 ಸಾವಿರ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. 1992-93ನೇ ಸಾಲಿಗೂ ಕೂಡ ಇನ್ನೂ ಹೆಚ್ಚಿಗೆ ಗುರಿಯನ್ನು ಮಾಡಬೇಕೆಂದು ಹೊರಟಿದ್ದೇವೆ. ಅದಕ್ಕೆ ಸಬ್‌ಪ್ಲಾನ್ ಇದೆ. ಟ್ರೈನಿಂಗ್ ಸೆಂಟರ್ಸ್ ಎಂದು ಭೂಸಾರ ಸಂರಕ್ಷಣ ತರಬೇತಿ ಕೇಂದ್ರಗಳನ್ನು ಮಾಡಿದ್ದೇವೆ. ಸಣ್ಣ ನೀರಾವರಿ ಮತ್ತು ನೀರಿನ ಉಪಯುಕ್ತತೆಯ ತರಬೇತಿ ಕೇಂದ್ರ ಸಾಯಿಲ್ ಸರ್ವೆ, ಮತ್ತೆ ನಾವು ಹೊಸದಾಗಿ ಒಂದು ಸ್ಕೀಮನ್ನು ತೆಗೆದು ಕೊಂಡಿದ್ದೇವೆ. Pests and Diseases Control Survelliance . . . . ರಿಮೋಟ್ ಕಂಟ್ರೋಲ್ ಮತ್ತು ಕಂಪ್ಯೂಟರ್ ಯುಗದಲ್ಲಿ ನಾವುಗಳು ಇರುವ ಕಾಲದಲ್ಲಿ ನಾವು ದೂರ ಸಂವೇದಿಯ ಮೂಲಕ ಕೀಟ ಹಾಗೂ ರೋಗಗಳ ಬಗ್ಗೆ ನಿಗಾ ವಹಿಸುತ್ತೇವೆ. ಏಕೆಂದರೆ ಕೀಟಗಳು ನಮ್ಮ ಉತ್ತರ ಭಾರತದಲ್ಲಿ ಬಂದು ಬಿಡುತ್ತವೆ. ನಂತರ ಪಾಕಿಸ್ತಾನದಿಂದ ಬರುತ್ತವೆ. ದೊಡ್ಡ ಸಮರೋಪಾದಿಯಲ್ಲಿ ಅವುಗಳು ಬಂದುಬಿಡುತ್ತವೆ. ಅವುಗಳನ್ನು ನಾವು ತಡೆಗಟ್ಟತಕ್ಕಂಥಾದ್ದು ಇದೆ. ನಮ್ಮ ರಾಜ್ಯದಲ್ಲಿಯೂ ಕೂಡ ಭತ್ತಕ್ಕೆ ಮತ್ತು ಜೋಳಕ್ಕೆ ಕೀಟಗಳ ಬಾಧೆ ಬರುತ್ತದೆ. ಇವುಗಳ ಬಗ್ಗೆ ಬಹಳ ಜಾಗ್ರತೆ ಇರಬೇಕಾಗುತ್ತದೆ. ಅಂಥ ರೋಗಗಳು ಹೇಗೆ ಬರುತ್ತವೆ ಮತ್ತು ಅದಕ್ಕಾಗಿ ಏನು ಮುನ್ನೆಚ್ಚರಿಕೆಯನ್ನು ಮಾಡಬೇಕು ಎಂಬುದಕ್ಕೆ ನಾವು ರಿಪೋರ್ಟ್ ಸರ್ವೆಸನ್ಸ್ ಸೆನ್ನಿಂಗ್ ಕಂಟ್ರೋಲ್ ಸ್ಕೀಮನ್ನು ತಂದಿದ್ದೇವೆ. ಹಾಗೆಯೇ ಈ ನಮ್ಮ ತಾಂತ್ರಿಕ ಪಧವೀಧರರುಗಳನ್ನು ಕೃಷಿ ಉಪಯುಕ್ತ ಉದ್ಯೋಗಗಳಲ್ಲಿ ತೊಡಗಿಸುವುದು. ಅವರಿಗೆ ನಾವು ಫಾರ್ಮ್ ಕನ್‌ಸಲ್ಟೆನ್ಸಿ, ಲೊಕೇಶನ್ ಆಫ್ ಸ್ಪೆಸಿಫಿಕ್ ಟ್ರೈನಿಂಗ್ ಸೆಂಟರ್ಸ್, ವಗೈರೆ ಮತ್ತು ವಿಶ್ವ ಬ್ಯಾಂಕ್‌ನ ನೆರವಿನಿಂದ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಯನ್ನು ನಾವು ಈಗ ಕಾರ್ಯಗತ ಮಾಡುತ್ತಾ ಇದ್ದೇವೆ. ಇನ್ನೊಂದು ಮುಖ್ಯವಾದ ವಿಚಾರ ಅಂದರೆ ಈ ಜಿನುಗು ನೀರಾವರಿ ಯೋಜನೆ. ಮೈಕ್ರೋ ಬೈವಾಲ್ಸ್, ಡ್ರಿಪ್ ಇರಿಗೇಶನ್ ಮತ್ತು ಸ್ಪಿಂಕ್ಲರ್ ಇರಿಗೇಶನ್‌ನ್ನು ತೋಟಗಾರಿಕಾ ಇಲಾಖೆಯವರು ಮಾಡಿದ್ದಾರೆ. ನಾವು ವ್ಯವಸಾಯ ಇಲಾಖೆಯಲ್ಲಿ ಮಾಡಲಿದ್ದೇವೆ. ಅದನ್ನು ಮಹಾರಾಷ್ಟ್ರ ಭಾಗದಲ್ಲಿ ಬೈವಾಲ್ಸ್ ಸಿಸ್ಟಂ ಆಫ್ ಇರಿಗೇಶನ್ ಮೂಲಕ ಶುಗರ್‌ಕೇನ್ ಮಾಡುತ್ತಾ ಇದ್ದಾರೆ, ಬಹಳ ಉಪಯುಕ್ತವಾಗಿದೆ. ಇದರಲ್ಲಿ ನೀರು ಕಡಿಮೆ ಉಪಯೋಗಿಸಿ ಇಳುವರಿಯನ್ನು ಹೆಚ್ಚು ತೆಗೆದುಕೊಳ್ಳಬಹುದು. ಅದನ್ನು ನಮ್ಮ ರಾಜ್ಯದಲ್ಲಿಯೂ ಕೂಡ ಮಾಡಬೇಕೆಂದು ಇದ್ದೇವೆ. ಸಬ್ಸಿಡಿ ಕೊಡುವ ವಿಚಾರದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಎಸ್.ಸಿ / ಎಸ್.ಟಿ ಆದರೆ 50 ಪರ್ಸೆಂಟ್ ಸಬ್ಸಿಡಿ, ಸ್ಮಾಲರ್ ಮತ್ತು ಮಾರ್ಜಿನಲ್ ಫಾರ್ಮರ್ಸ್ ಆದರೆ ಮೂರನೇ ಒಂದು ಭಾಗ ಸಬ್ಸಿಡಿ,

ಜನರಲ್ ಕೆಟಗರಿಯವರಿಗೆ 25 ಪರ್‌ಸೆಂಟ್ ಎಂದು ಮಾಡಿದ್ದೇವೆ. ಇದಕ್ಕೋಸ್ಕರ ಈ ವರ್ಷ ಸಾಂಕೇತಿಕವಾಗಿ ಎರಡೂವರೆ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದ್ದೇವೆ. ಅದೇ ರೀತಿಯಲ್ಲಿ ತುಂತುರು ನೀರಾವರಿಗೂ ಕೂಡ 65 ಲಕ್ಷ ರೂಪಾಯಿಗಳನ್ನು ನಾವು ಒದಗಿಸಿದ್ದೇವೆ. ಅದಕ್ಕೆ 50 ಪರ್‌ಸೆಂಟ್ ಸಬ್ಸಿಡಿ ಇದೆ. ಹಾಗೆಯೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥಾದ್ದನ್ನು ನಾನು ಮತ್ತೆ ಅದನ್ನು ಒತ್ತಿ ಹೇಳಬೇಕಾಗಿದೆ. ಇವೊತ್ತು ಒಳ್ಳೆಯ ರೈತರು, ಕೃಷಿಪಂಡಿತರು ಪ್ರೊಗ್ರೇಸಿವ್ ಫಾರ್ಮರ್ಸ್, ಅವರಿಗೆ ತಾಲ್ಲೂಕು ಮಟ್ಟದಲ್ಲಿ 25 ಸಾವಿರ ರೂಪಾಯಿಗಳು, ಜಿಲ್ಲಾ ಮಟ್ಟದಲ್ಲಿ 50 ಸಾವಿರ ರೂಪಾಯಿಗಳು, ರಾಜ್ಯಮಟ್ಟದಲ್ಲಿ ಒಂದು ಲಕ್ಷ ರೂಪಾಯಿಗಳು ಹೀಗೆ ಕೊಡತಕ್ಕಂಥಾದ್ದನ್ನು ನಾವು ಜಾರಿಗೆ ತರುತ್ತಿದ್ದೇವೆ. ಹಿಂದೆ ನಾವು ಕೃಷಿಯಲ್ಲಿ ಪಂಡಿತರಾಗಿದ್ದವರಿಗೆ ಮಾತ್ರ ರಾಜ್ಯೋತ್ಸವ ಅವಾರ್ಡ್‌ನ್ನು ಕೊಡುತ್ತಾ ಇದ್ದೆವು. ಇದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಜಾರಿಗೆ ತಂದಿದ್ದಾರೆ, ಇದು ರೈತರಿಗೆ ಒಂದು ರೀತಿಯಲ್ಲಿ ಪ್ರೋತ್ಸಾಹವನ್ನು ಕೊಡತಕ್ಕಂಥ ಕಾರ್ಯಕ್ರಮವಾಗಿದೆ.

ಮತ್ತೊಂದು ಮುಖ್ಯ ವಿಚಾರವಾಗಿ ನಮ್ಮ ರಾಜ್ಯದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಬ್ಬ ಮೊಡೆಲ್ ಫಾರ್ಮರ್‌ನ್ನು ಗುರುತಿಸಿ ಅವರಿಗೆ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಸಹಾಯವನ್ನು ಕೊಟ್ಟು ಪ್ರೋತ್ಸಾಹಿಸುವುದು. 175 ತಾಲ್ಲೂಕುಗಳಲ್ಲಿನ 175 ಜನ ಮೊಡೆಲ್‌ಫಾರ್ಮರ್ಸ್‌ನ್ನು ಗುರುತಿಸತಕ್ಕಂಥಾದ್ದು ಮತ್ತು ಅವರಿಗೆ ಸರ್ವಾಂಗೀಣ ಸಹಾಯವನ್ನು ಕೊಡುವುದಕ್ಕೋಸ್ಕರ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದನ್ನು ನಾನು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆ. ಶ್ರೀಮಾನ್ ಬಂಗಾರಪ್ಪನವರು ಕೌನ್ಸಿಲ್‌ನಲ್ಲಿ ಭಾಷಣ ಮಾಡುತ್ತಾ ಹೇಳಿದರು, ಮಾಡೆಲ್‌ಫಾರ್ಮರ್ಸ್ ಎಂದು ಹೆಸರು ಇಟ್ಟು ಏನಾದರೂ ಒಂದು ಯೋಜನೆ ಮಾಡಿ ಎಂದು ಹೇಳಿದ್ದರು. ನಾನು ಈಗ 5 ನಿಮಿಷದ ಕೆಳಗೆ ಒಳಗೆ ಇಲ್ಲಿ ಬರುವ ಮುಂಚೆ ಹೇಳಿದರು, ಒಂದೊಂದು ತಾಲ್ಲೂಕಿಗೆ ಒಬ್ಬೊಬ್ಬ ಮಾಡೆಲ್ ಫಾರ್ಮರ್ ಎಂದು ಗುರ್ತಿಸಿ ಅವರಿಗೆ ಎಲ್ಲಾ ಸೌಲಭ್ಯ ಕೊಟ್ಟು ಅದರಿಂದ ಬೇರೆಯವರೂ ಪ್ರಭಾವಿತರಾಗಿ ಅವರೂ ಅದೇ ರೀತಿಯಲ್ಲಿ ಕೃಷಿ ಮಾಡಲಿಕ್ಕೆ ಅನುಕೂಲವಾಗಲಿ ಎಂದು ನಾವು ಸ್ಕೀಮ್ ತರ್‍ತಾ ಇದ್ದೇವೆ ಮತ್ತೆ ತಮಗೆ ಗೊತ್ತಿದ್ದಂತೆ ಕಬ್ಬಿನ ಮೇಲೆ ಮಾರಾಟ ತೆರಿಗೆ ಅಬಾಲಿಷ್ ಮಾಡಿರುವುದು ಮುಖ್ಯವಾದದ್ದು. ರೈತರ ಪಂಪ್‌ಸೆಟ್ ಮೇಲೆ 10 ಹೆಚ್‌ಪಿವರೆಗೂ ಏನೂ ಟ್ಯಾಂಫಿಲ್ಲ. ಎಂಬುದು ಪ್ರಗತಿದಾಯಕವಾದ ಹೆಜ್ಜೆ. ನಮ್ಮ ಬಂಗಾರಪ್ಪನವರ ಸರ್ಕಾರ ಮಾಡಿರುವುದು. ಹಿಂದೆ ಶ್ರೀ ಗುಂಡೂರಾಯರು ಒಂದು ಹೆಚ್‌ಪಿಗೆ 50 ರೂ ಮಾಡಿದರು ಮತ್ತೆ ಜನತಾದಳದವರು 75 ರೂ ಮಾಡಿದರು ಇವತ್ತು ಇಲ್ಲ ಅವರಿದ್ದಿದ್ದರೆ ಬಹಳ ಚೆನ್ನಾಗಿತ್ತು. ಇದರಿಂದ ನಮ್ಮ ಕಡೆಯೆಲ್ಲಾ ಬಹಳ ಸಂತೋಷವಾಗಿದ್ದಾರೆ ಏಕೆಂದರೆ 10 ಹೆಚ್‌ಪಿವರೆಗೆ ಕರೆಂಟ್ ಚಾರ್ಜ್ ಇಲ್ಲವೆಂದರೆ ಪುಕ್ಕಟೆ ಕೊಡ್ತೇವೆ ಎಂದರೆ ಕೆಲವರು ರೈತರು ಹೇಳ್ತಾರೆ. ಸ್ವಾಮಿ ಬಹಳ ಒಳ್ಳೆಯ ಕೆಲಸ ಮಾಡಿದಿರಿ. ನಾವು ಬೇರೆ ಪಕ್ಷದಲ್ಲಿರೋದು ನಿಮ್ಮ ಕಾಂಗ್ರೆಸ್‌ಗೆ ಬಂದುಬಿಡುತ್ತೇವೆ ಎಂದು ಹೇಳ್ತಿದ್ದಾರೆ. ಜನತಾದಳದಲ್ಲಿರೋರು ನಮ್ಮ ಕ್ಷೇತ್ರದಲ್ಲಿ ಹೇಳಿದರು ನಾವು ಕಾಂಗ್ರೆಸ್ ಸೇರಿಬಿಡ್ತೀವಿ ಅಂತ ಬೆಳಗಾಂ ಧಾರವಾಡ ಕಡೆ ಅಂತ ಹೇಳಿದರು. ಮತ್ತೆ ಸ್ಪ್ರಿಂಕ್ಲರ್ ಡ್ರಿಪ್ ಇರಿಗೇಶನ್, ಹನಿತನೆ, ಈ ಯೋಜನೆಗೆ 1 ಕೋಟಿ ರೂ ಒದಗಿಸಿದ್ದಾರೆ ನಮ್ಮ ವಿತ್ತ ಮಂತ್ರಿ ಶ್ರೀ ಬಂಗಾರಪ್ಪನವರು. ಮತ್ತೆ ರೈತಕಾರ್ಮಿಕರಿಗ ಶ್ರಮಕಲ್ಯಾಣ ನಿಧಿ 5 ಕೋಟಿ ರೂ ಇಟ್ಟಿದ್ದೇವೆ. ರೈತ ಕಾರ್ಮಿಕರನ್ನು ಯಾರೂ ಕೇಳೋರೆ ಇಲ್ಲ. ಮೊದಲು ಜೀತ ಪದ್ಧತಿ ಇದ್ದುದು ಹೋದ ಮೇಲೆ ಅವರನ್ನು ಕೇಳೋರೆ ಇಲ್ಲ. ಡಿಸಾರ್ಗನೈಸ್ಡ್ ಸೆಕ್ಟರ್ ಇವತ್ತು ಅದನ್ನು ಆರ್ಗ್‌ನೈಸ್ಡ್ ಸೆಕ್ಟಾರಾಗಿ 5 ಕೋಟಿ ಕೊಟ್ಟು ಇನ್ನೂ ಅದಕ್ಕೆ ರಿವಾಲ್ವಿಂಗಾಗಿ ಸೇರಿಸಲು ಮಾಡಿರುವುದು ಬಹಳ ಉತ್ತೇಜನಕಾರಿಯಾದ ವಿಷಯ ಅದಕ್ಕೆ 5 ಕೋಟಿ ಒದಗಿಸಿದ್ದಾರೆ. ಅದೇ ರೀತಿ ಕೆರೆಕಲ್ಯಾಣ ಇವತ್ತು ಕೆರೆಗಳ ಹೂಳೆತ್ತುವುದು ನಾನು ಹಿಂದೆ ಮಂತ್ರಿಯಾಗಿದ್ದಾಗ ವಿಶ್ವಬ್ಯಾಂಕಿನವರು ಹೇಳುತ್ತಾ ಇದು desilting of tanks is not economical. ಇವತ್ತು ಅವರೇ ಒಪ್ಪಿಕೊಂಡು ಅನೇಕ ತಜ್ಞರು ಹೊಸ ಕೆರೆ ಕಟ್ಟಲು

ಜಾಗವಿಲ್ಲ, ಅದಕ್ಕಾಗಿ 5 ಕೋಟಿ ಒದಗಿಸಿದ್ದಾರೆ, ಹಣಕಾಸಿನ ಬಜೆಟ್‌ನಲ್ಲಿ ನಮ್ಮ ಮುಖ್ಯಮಂತ್ರಿಗಳು ಹೇಳಿದರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ ಹಾವೇರಿ ಮತ್ತು ಗುಲ್ಬರ್ಗದಲ್ಲಿ ಮಾಡುತ್ತಿದ್ದೇವೆ. ಅದೇ ರೀತಿ ಪಲ್ಸಸ್ ರೀಸರ್ಚ್‌ಸ್ಟೇಷನ್ಸ್ ಬಗ್ಗೆ ಗುಲ್ಬರ್ಗದಲ್ಲಿ ತೆರೆಯ ಬೇಕೆಂದು ಅನೇಕ ಮಾನ್ಯ ಸದಸ್ಯರುಗಳು ಕೇಳುತ್ತಾ ಇದ್ದಾರೆ. ಅಸಿಸ್ಟೆಂಟ್ ಡೈರೆಕ್ಟರ್ ಆಫಿಸ್‌ಗಳನ್ನು ತೆರೆಯಬೇಕೆಂದು. ಈ ವರ್ಷ, ಮುಂದಿನ ವರ್ಷದಲ್ಲೇ ಮಾಡ್ತೀನಿ. ತೀರ್ಥಹಳ್ಳಿ, ಹೊಸಕೋಟೆ, ತುರುವೇಕೆರೆ, ಬಾಲ್ಕಿ, ಶಿರಹಟ್ಟಿ, ಬ್ಯಾಡಗಿ, ಆನೇಕಲ್, ಗೌರಿಬಿದನೂರು, ಚಿತ್ರದುರ್ಗ, ಚಿಕ್ಕನಾಯಕನಹಳ್ಳಿ, ಗುಬ್ಬಿ ಮತ್ತು ಬೇಲೂರು ಇಷ್ಟು ಕಡೆಗಳಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಆಫೀಸ್‌ಗಳನ್ನು 91ರಲ್ಲಿ ಒಂದೆರಡು ಕಡೆ ಪ್ರಾರಂಭ ಮಾಡಿದ್ದೇವೆ. 92-93ರಲ್ಲಿ ಎಲ್ಲಾ ಕಡೆ ಪ್ರಾರಂಭಿಸುತ್ತೇವೆ. ಇಷ್ಟನ್ನು ಹೇಳುತ್ತಾ ನಮ್ಮ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಇದು ಬಹಳ ಮುಖ್ಯ. ಏಕೆಂದರೆ ಒಣ ಬೇಸಾಯ ಪದ್ಧತಿ ಬಹಳ ಮುಖ್ಯವಾದದ್ದು. ನಮ್ಮ ಕೃಷಿ ಇಲಾಖೆಗೆ ಸೇರಿದ ಅನೇಕ ಸಬ್ಸಿಡಿಯು ಪ್ರೋಗ್ರಾಂ ಈ ಇಲಾಖೆ ವ್ಯಾಪ್ತಿಗೆ ಬರುತ್ತದೆ. ಇಂದು ವಿಶ್ವಬ್ಯಾಂಕ್ ನೆರವಿನ ಯೋಜನೆಯಲ್ಲಿ ಜಲಾನಯನ ಅಭಿವೃದ್ಧಿ ಪ್ರದೇಶ ಕ್ರಮ ಹಾಗೂ ಖುಷ್ಕಿ ಭೂ ಅಭಿವೃದ್ಧಿ ಬಹಳ ಮುಖ್ಯವಾದದ್ದು ನಮ್ಮ ಕನಕಪುರ ಮತ್ತು ಮಳುವಳ್ಳಿ ತಾಲ್ಲೂಕು ಸೇರಿದ ಹಾಗೆ ಕಬ್ಬವಾಳ ಅಲ್ಲಿ 91-92ರಿಂದ ಪ್ರಾರಂಭ ಮಾಡಿದ್ದೇವೆ. 190 ಲಕ್ಷ 641 ಸಾವಿರ ರೂ ವಿಶ್ವಬ್ಯಾಂಕ್ ನೆರವು ಯೋಜನೆಯಲ್ಲಿ ಪ್ರಾರಂಭ ಮಾಡಿದ್ದೇವೆ. 92ರ ಫೆಬ್ರವರಿಗೆ 143.51 ಲಕ್ಷ ಅಷ್ಟು ಹಣವನ್ನು ಖರ್ಚುಮಾಡಿದ್ದೇವೆ ಇದರಿಂದ 4775 ಹೆಕ್ಟೇರ್ ಭೂಮಿಯಲ್ಲಿ ಇದಕ್ಕೆ ಅನುಕೂಲವಾಗುತ್ತದೆ. ಹಾಗೆಯೇ ಮೂವತ್ತೂರು ಕೆರೆ, ಕಲ್ಯಾಣಕೆರೆ, ತುಮಕೂರು, ಕೊರಟಗೆರೆ, ಅನೇಕಲ್, ಮಾಗಡಿ, ದೊಡ್ಡಬಳ್ಳಾಪುರ, ನೆಲಮಂಗಲ ತಾಲ್ಲೂಕು ಇದರ ಅಡಿಯಲ್ಲಿ 10,118 ಹೆಕ್ಟೇರ್ ಭೂಮಿಗೆ ಅನುಕೂಲವಾಗುತ್ತದೆ. ಆನ್ಯುಯಲ್ ಆಕ್ಷನ್ ಪ್ಲಾನ್‌ನಲ್ಲಿ 250 ಲಕ್ಷ 623 ಸಾವಿರ ರೂಪಾಯಿಗಳು ಇದಕ್ಕೆ ಲಭ್ಯವಾಗುತ್ತದೆ. 40 ರಿಂದ 50 ಸಾವಿರ ಹೆಕ್ಟೇರ್ ಐದು ವರ್ಷದಲ್ಲಿ 1040 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಅದನ್ನು ನಾವು ಕಾರ್ಯಗತ ಮಾಡುತ್ತೇವೆ. ಅದೇ ರೀತಿ ವಿಶ್ವಬ್ಯಾಂಕ್‌ನ ಯೋಜನೆಯಲ್ಲಿ ಕೋಲಾರ ಡಿಸ್ಟ್ರಿಕ್ಟ್, ಚಿತ್ರಾವತಿ, ಓರೇಹಳ್ಳ, ಶಿವಮೊಗ್ಗ ಡಿಸ್ಟ್ರಿಕ್ಟ್, ಬಿಂದನಹಳ್ಳಿ, ಲೋಕಪಾವನಿ, ಮಂಡ್ಯ ಡಿಸ್ಟ್ರಿಕ್ಟ್, ದೇವಿಹಳ್ಳಿ ಹಾಸನ ಡಿಸ್ಟ್ರಿಕ್ಟ್‌ನಲ್ಲಿ ವಿಶ್ವಬ್ಯಾಂಕ್‌ನ ಯೋಜನೆಯಿಂದ ನಾವು ಸುಮಾರು 226 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 51,426 ಹೆಕ್ಟೇರ್ ಭೂಮಿಯಲ್ಲಿ ಇದಕ್ಕೆ ಅನುಕೂಲವಾಗುವ ರೀತಿಯಲ್ಲಿ ಮಾಡುತ್ತೇವೆ. ಅದೇ ರೀತಿ ವಾಟರ್ ಷೆಡ್ಸ್ ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಹಿಂದೆ ಇತ್ತು. ಇವತ್ತಿಗೂ ಅವುಗಳನ್ನು ಕಾರ್ಯಗತ ಮಾಡುತ್ತಿದ್ದೇವೆ. ಸುಮಾರು ಫೆಬ್ರವರಿ 92 ರಿಂದ 180 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿ, 18 ಡಿಸ್ಟ್ರಿಕ್ಟ್‌ನಲ್ಲಿ ಈ ಕಾರ್ಯವನ್ನು ಮಾಡುತ್ತಿದ್ದೇವೆ.

ಇವತ್ತು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಹೇಳುತ್ತೇನೆ. ಇದು ನಮ್ಮ ಧಾರವಾಡದವರು, ಬೆಂಗಳೂರಿನ ಸ್ನೇಹಿತರು ಕೇಳುತ್ತಿದ್ದಾರೆ. ಈ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನಲ್ಲಿ ಒಂದು ಇದೆ. ಮತ್ತೆ ಧಾರವಾಡದಲ್ಲಿ ಒಂದು ಇದೆ. ಈ ಕಾಲೇಜು ಪ್ರಾರಂಭವಾದಾಗಿನಿಂದ ಬೆಂಗಳೂರು ಡಿಸ್ಟ್ರಿಕ್ಟ್, ಮೈಸೂರು, ಮಂಗಳೂರು, ಶಿವಮೊಗ್ಗ, ಮಂಡ್ಯ, ಮೂಡಿಗೆರೆ ಇವೆಲ್ಲಾ ಜಿಲ್ಲೆಗಳಿಗೂ ಕಾರ್ಯವಿಸ್ತರಣೆಯಾಗಿ ಸುಮಾರು 17 ಅಗ್ರಿಕಲ್ಚರಲ್ ರೀಸರ್ಚ್ ಸ್ಟೇಷನ್‌ಗಳು, 33 ರೀಸರ್ಚ್ ಪ್ರಾಜೆಕ್ಟ್‌ಗಳು 34 ICAR adoptions, 38 other agencies, 323 funded by University. . . . ಇವುಗಳೆಲ್ಲಾ ಈ ಒಂದು ಕಾರ್ಯವ್ಯಾಪ್ತಿಯಲ್ಲಿ ಈ ಸಂಶೋಧನೆಗಳು ನಡೆಯುತ್ತಿವೆ. 91-92 ರಲ್ಲಿ ನಾವು 495 ಸ್ಟೂಡೆಂಟ್ಸ್ ಅಂಡರ್ ಗ್ರಾಜುಯೇಟ್ ಪ್ರೋಗ್ರಾಂನಲ್ಲಿ , 285 ಮಾಸ್ಟರ್ಸ್ ಡಿಗ್ರಿ ಪ್ರೋಗ್ರಾಂನಲ್ಲಿ, 78 ಪಿಹೆಚ್‌ಡಿ ಮತ್ತು 19 ಜನ ಇನ್ನಿತರೆ ವಿಷಯಗಳಲ್ಲಿ ನಾವು ಅವರಿಗೆ ತರಬೇತಿಯನ್ನು ಕೊಟ್ಟು, ಪದವೀಧರರು ಪೂರ್ವ ಪದವೀಧರರು ಮತ್ತು ಪಿಹೆಚ್‌ಡಿ ಆಗಿದ್ದಾರೆ. ಮತ್ತೆ ಈ ಚಾಲ್ತಿ ವರ್ಷ 91-92ರಲ್ಲಿ ನಾನು ತೀರ್ಮಾನವನ್ನು ಮಾಡಿದೆ. ಈ ಗ್ರಾಮೀಣ

ಪ್ರದೇಶದಲ್ಲಿ ಬರತಕ್ಕಂಥ ಈ ರೈತರ ಮಕ್ಕಳಿಗೆ ರಿಸರ್ವೇಷನನ್ನು ಕೊಟ್ಟಾಯಿತು. ಹಿಂದೆ 15 ಪರ್‌ಸೆಂಟ್ ಇತ್ತು. ಶ್ರೀಮಾನ್ ಬಂಗಾರಪ್ಪನವರು ವ್ಯವಸಾಯದ ಮಂತ್ರಿಗಳಾದಮೇಲೆ 20 ಪರ್‌ಸೆಂಟ್ ಆಯಿತು. ನಾನು ಅದನ್ನು 25 ಪರ್‌ಸೆಂಟ್‌ಗೆ ಏರಿಸಿದ್ದೇನೆ. ಅಂದರೆ 100 ಕ್ಕೆ 25 ಜನ ರೈತರ ಮಕ್ಕಳು ಈ ಒಂದು ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶವನ್ನು ಪಡೆಯುವುದಕ್ಕೆ ಅನುಕೂಲವಾಗಿದೆ. ಅದನ್ನು ಈ ವರ್ಷದಿಂದ ನಾವು ಚಾಲ್ತಿಗೆ ತರುತ್ತೇವೆ. ಅದೇ ರೀತಿಯಲ್ಲಿ ಇವತ್ತು ಅನೇಕ ರೀಸರ್ಚ್ ವರ್ಕ್‌ಗಳು ನಡೆಯುತ್ತಿವೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಮಹದೇವ್ :- ಅಗ್ರಿಕಲ್ಚರ್ ಕಾಲೇಜಿನ ಬಗ್ಗೆ ಹೇಳಲಿಲ್ಲ.

ಶ್ರೀ ಎನ್. ಚಿಕ್ಕೇಗೌಡ :- ಅಗ್ರಿಕಲ್ಚರ್ ಕಾಲೇಜಿನ ಬಗ್ಗೆಯೂ ಹೇಳುತ್ತೇನೆ. ಮೊದಲು ಯೂನಿವರ್ಸಿಟಿಯ ಬಗ್ಗೆ, ಅದರ ಬಗ್ಗೆ ಆಮೇಲೆ ಹೇಳುತ್ತೇನೆ. ನಮ್ಮ ಮಹದೇವ್ ರವರು ಬಹಳ ಕಾತುರರಾಗಿದ್ದಾರೆ. ನಂಜನಗೂಡಿನಲ್ಲಿ ಒಂದು ಅಗ್ರಿಕಲ್ಚರ್ ಕಾಲೇಜನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತಾರೆ. ಅಲ್ಲಿ ಶ್ರೀಕಂಠೇಶ್ವರ ದೇವಾಲಯ ಇದೆ.

ಶ್ರೀ ಎಂ. ಮಹದೇವ್ :- ದೇವರು ಒಳ್ಳೆಯದನ್ನು ಮಾಡಬೇಕಾಗಿದ್ದರೆ, ನಂಜುಂಡೇಶ್ವರ ಒಳ್ಳೆಯದನ್ನು ಮಾಡಬೇಕಾಗಿದ್ದರೆ ನಂಜನಗೂಡಿಗೆ ಒಂದು ಅಗ್ರಿಕಲ್ಚರ್ ಕಾಲೇಜನ್ನು ಕೊಡಬೇಕು. ಆಗ ನಿಜವಾಗಿಯೂ ನಿಮಗೆ ಒಳ್ಳೆಯದಾಗುತ್ತದೆ. ಏಕೆಂದರೆ ಅಲ್ಲಿ ತಾಂತ್ರಿಕವಾಗಿ, ನಮಗೆ ನದಿಗಳು ಇದ್ದಾವೆ, ಭೂಮಿ ಸಿಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ನಿರುದ್ಯೋಗಿ ಯುವಕರೂ ಇದ್ದಾರೆ.

ಉಪಾಧ್ಯಕ್ಷಿಣಿಯವರು:- ಅವರು ಮಾತನಾಡಲಿ. ಆಮೇಲೆ ಕೇಳಿ.

ಶ್ರೀ ಎಂ.ಮಹದೇವ್:- ಅವರೇ ಯೀಲ್ಡ್ ಆಗಿದ್ದಾರೆ. ಮೇಡಂನವರಿಗೆ ನಮ್ಮ ಮೇಲೆ ಏತಕ್ಕೆ ಇಷ್ಟೊಂದು ಸಿಟ್ಟು. ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ಒಂದು ರಿಕ್ವೆಸ್ಟ್ ಏನೆಂದರೆ ನಿಮಗೆ ನಂಜುಂಡೇಶ್ವರ ಒಳ್ಳೆಯದನ್ನು ಮಾಡುತ್ತಾನೆ, ನಂಜನಗೂಡಿಗೆ ಒಂದು ಅಗ್ರಿಕಲ್ಚರ್ ಕಾಲೇಜನ್ನು ಕೊಡುತ್ತೇವೆ ಎನ್ನತಕ್ಕಂಥ ಒಂದು ಭರವಸೆಯನ್ನು ಕೊಡಿ.

ಶ್ರೀ ಆರ್.ದಯಾನಂದರಾವ್:- ಇವತ್ತು ಮಂತ್ರಿಗಳು ಸೂಟ್ ಹಾಕಿಕೊಂಡು ಬಹಳ ಸ್ಮಾರ್ಟ್ ಆಗಿ ಬಂದು ಬಿಟ್ಟಿದ್ದಾರೆ. ನಮಗೆ ಗುರ್ತುಹಿಡಿಯಲಿಕ್ಕೆ ಆಗಲಿಲ್ಲ.

SRI H. CHIKKEGOWDA :- Thank you ನಮ್ಮ ಬೆಂಗಳೂರಿನಲ್ಲಿರತಕ್ಕ ಕೃಷಿ ವಿಶ್ವಿದ್ಯಾನಿಲಯದ ಅಡಿಯಲ್ಲಿ ಮಂಡ್ಯದಲ್ಲಿ ಒಂದು ಅಗ್ರಿಕಲ್ಚರ್ ಕಾಲೇಜು, ಮೂಡಿಗೆರೆಯಲ್ಲಿ ಒಂದು ಹಾರ್ಟಿಕಲ್ಚರ್ ಕಾಲೇಜನ್ನು ಮೊನ್ನೆ ತಾನೆ ನಮ್ಮ ಮುಖ್ಯಮಂತ್ರಿಯವರು ಪ್ರಾರಂಭ ಮಾಡಿದರು, ಮಂಡ್ಯದಲ್ಲಿ ಈಗಾಗಲೇ ಪ್ರಾರಂಭವಾಗಿ ವಿದ್ಯಾರ್ಥಿಗಳನ್ನು ಸೇರಿಸಿಬಿಟ್ಟಿದ್ದೇವೆ. ಅಲ್ಲಿ ಕಾಲೇಜು ನಡೆಯುತ್ತಿದ್ದು ವಿದ್ಯಾರ್ಥಿಗಳಿಗೆ ವ್ಯಾಸಂಗ ನಡೆಯುತ್ತಿದೆ. ರೇಷ್ಮೆ ಕಾಲೇಜನ್ನು ಕೋಲಾರ ಜಿಲ್ಲೆಯಲ್ಲಿ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ನಮ್ಮ ಮುಖ್ಯಮಂತ್ರಿಗಳು ರೇಷ್ಮೆ ವ್ಯವಸಾಯಗಾರರಿಗೆ ಬಹಳವಾಗಿ ಉದಾರವಾದ ನೀತಿಯಿಂದ ಈ ಕಾಲೇಜನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ವಿವರಗಳನ್ನು ಹೆಚ್ಚಾಗಿ ಹೇಳಲಿಕ್ಕೆ ಹೋಗುವುದಿಲ್ಲ. ಧಾರವಾಡದ ಕಾಲೇಜು 1986 ರಲ್ಲಿ ಪ್ರತ್ಯೇಕ ಯೂನಿವರ್ಸಿಟಿಯಾಯಿತು. ಅದು ಆದಮೇಲೆ ಅಲ್ಲಿ ಬಿ.ವಿ.ಎಸ್.ಸಿ., ಬಿ.ಟೆಕ್., ಬಿ.ಎಸ್.ಸಿ., ಅಗ್ರಿಕಲ್ಚರಲ್ ಮಾರ್ಕೇಟಿಂಗ್, ಫಾರೆಸ್ಟ್ರಿ ಎಲ್ಲಾ ಸೇರಿ 5-6 ಸೆಮಿಸ್ಟಾರ್ ಡಿಸಿಪ್ಲಿನ್ಸ್ ನಡೆಯುತ್ತಿದೆ. ಇದು ಅಲ್ಲದೆ ನಮ್ಮ ಧಾರವಾಡ ಅಗ್ರಿಕಲ್ಚರ್ ಯೂನಿವರ್ಸಿಟಿ ಕೆಳಗೆ ಮೂರು ಅಗ್ರಿಕಲ್ಚರಲ್ ಕಾಲೇಜುಗಳು ಇವೆ. ಒಂದು ಕಾಲೇಜ್ ಆಫ್ ರೂರಲ್ ಹೋಂ ಸೈನ್ಸ್ ಮತ್ತು ವೆಟರ್ನರಿ ಕಾಲೇಜು ಬೀದರ್‌ನಲ್ಲಿ ಇದೆ. ಒಂದು ಅಗ್ರಿಕಲ್ಚರ್ ಇಂಜಿನಿಯರಿಂಗ್ ಕಾಲೇಜು ರಾಯಚೂರಿನಲ್ಲಿ ನಡೆಯುತ್ತಿದೆ. ಒಂದು ಫಾರೆಸ್ಟ್ರಿ ಡಿಗ್ರಿ ಕಾಲೇಜು ಸಿರಿಸಿನಲ್ಲಿದೆ. ಮೊದಲು ಧಾರವಾಡದಲ್ಲಿ ಇತ್ತು. ಈಗ ಅದನ್ನು

ಸಿರಸಿಗೆ ವರ್ಗಾವಣೆಯನ್ನು ಮಾಡಿದ್ದೇವೆ. ಒಂದನೇ ತರಗತಿಯಿಂದ ಡಿಗ್ರಿವರೆಗೂ ಅಲ್ಲೇ ನಡೆಯುತ್ತದೆ. ಅಲ್ಲಿ 16 ಡಿಸಿಪ್ಲಿನ್ಸ್ 320 ಅಂಡರ್ ಗ್ರಾಜುಯೆಟ್ಸ್, 150 ಪೋಸ್ಟ್ ಗ್ರಾಜುಯೇಟ್ಸ್, 250 ಅಂಡರ್ ಗ್ರಾಜುಯೇಟ್ಸ್ ಶಿಕ್ಷಣ ಪಡೆಯುತ್ತಿದ್ದಾರೆ. Crop Research Work - green gram IET 7,99-1 MH 179, ಬಾಜ್ರಾ ವಗ್ಯೆರೆ ಬಗ್ಗೆ ಅಲ್ಲಿ ಸಂಶೋಧನೆಯಾಗುತ್ತಿದೆ. ನಮ್ಮ ಬೆಂಗಳೂರು ಯೂನಿವರ್ಸಿಟಿಯವರು ರಾಗಿಯಲ್ಲಿ ಇಂಡಾಫ್ 15 ಮತ್ತು ಇಂಡಾಫ್ ಜೊತೆಗೆ ಐ.ವೈ.ಇ.ಟಿ. ರಾಗಿ 60 ಕ್ವಿಂಟಾಲ್ ಇಳುವರಿ ಬರುತ್ತದೆ. ಒಬ್ಬರು ಲಕ್ಷ್ಮಣಯ್ಯ ಅಂತ ರಾಗಿ ಸಂಶೋಧಕರು ಇದ್ದಾರೆ. ಇಂಡಾಫ್ ಒಂದರಿಂದ ಹಿಡಿದು ರಾಗಿ ಎಲ್ಲಾ ತಳಿಗಳನ್ನು ಕಂಡುಹಿಡಿದಂತಹ ಬ್ರೀಡರ್ ಅವರಿಗೆ ನಾನು ಇಂಧಿರಾಗಾಂಧಿಯವರು ಇದ್ದಾಗ ನಾನು ಲಾಲ್‌ಬಾಗ್‌ನಲ್ಲಿ ಅವರಿಗೆ ಒಂದು ಪ್ರಶಸ್ತಿಯನ್ನು ಕೊಡಿಸಿ ಅವರಿಗೆ ಸನ್ಮಾನ ಮಾಡಿಸಿದ್ದೆ. ಅದೇರೀತಿ ವರಲಕ್ಷ್ಮಿ ಕಾಟನ್ ಮತ್ತು ಡಿಸಿಹೆಚ್ ಹತ್ತಿ ಕಂಡುಹಿಡಿದಂತಹ ಡಾ:ಕಾತರಕಿ ಅವರಿಬ್ಬರನ್ನು ನಾನು ಈ ಸಂದರ್ಭದಲ್ಲಿ ಸದನದಲ್ಲಿ ನೆನೆಸಿಕೊಳ್ಳಬೇಕಾದ್ದು ನನ್ನ ಕರ್ತವ್ಯ. ಅಕ್ಕಿಬೆಳೆಗೆ ಒಬ್ಬ ಬ್ರೀಡರ್ ಇದ್ದಾರೆ. ಡಾ:ಮಹದೇವಪ್ಪ ಇವರು ಒಳ್ಳೆಯ ಪರಿಶೋಧನೆ ಮಾಡಿದ್ದಾರೆ. ಇವರುಗಳನ್ನು ಈ ಸದನದಲ್ಲಿ ನಾನು ನೆನೆಸಿಕೊಂಡು ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾದ್ದು ನನ್ನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಯೂನಿವರ್ಸಿಟಿಗಳಲ್ಲಿ ಅನೇಕ ಟೆಕ್ನಿಕಲ್ ಪೋಸ್ಟ್‌ಗಳು ಇದ್ದಾವೆ. ಹಾರ್ಟಿಕಲ್ಚರಲ್ ಕಾಲೇಜ್ ಬೆಳಗಾಂನಲ್ಲಿ, ಸಿರಿಕಲ್ಚರ್ ಕಾಲೇಜ್ ಗುಲ್ಬರ್ಗದಲ್ಲಿ ಕೊಡಬೇಕೆಂದು ಕೇಳಿದ್ದಾರೆ. ಡೈರಿ ಸೈನ್ಸ್ ಕಾಲೇಜು ಬಳ್ಳಾರಿಗೆ ಕೊಡಬೇಕೆಂದು ಬೇಡಿಕೆ ಇದೆ. ಅದರ ಬಗ್ಗೆ ನಾನು ಏನನ್ನೂ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಅದರ ಬಗ್ಗೆ ಮಂತ್ರಿಮಂಡಲದಲ್ಲಿ ಸರ್ಕಾರದಲ್ಲಿ ಮುಖ್ಯಮಂತ್ರಿಗಳಾದಿಯಾಗಿ ನಾವೆಲ್ಲಾ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಇದಾದ ನಂತರ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದು ರೈತರಿಗೆ ಆಗ್ರೋ ಸಪ್ಲೈಸ್ ಆಗ್ರೋ ಇಂಜನಿಯರಿಂಗ್ ಮಾರ್ಕೆಟಿಂಗ್, ಆಗ್ರೋ ಫ್ರೂಟ್ಸ್ ಇಷ್ಟು ಬ್ರಾಂಚಸ್ ಇದೆ. ಇದಲ್ಲದೆ ಫರ್ಟಿಲೈಜರ್ಸ್, ಫೆಸ್ಟಿಸೈಡ್ಸ್, ಸೀಡ್ಸ್, ಪ್ಲಾಂಟ್ ಪ್ರೊಟೆಕ್ಷನ್ ಎಕ್ವಿಪ್‌ಮೆಂಟ್ಸ್ ಇವೆಲ್ಲಾ ಮಾಡುತ್ತಿದ್ದಾರೆ. ಈ ಆಗ್ರೋ ಇಂಡಸ್ಟ್ರೀಸ್ ಬಗ್ಗೆ ಸಾಕಷ್ಟು ಟೀಕೆಗಳು ಬಂದಿವೆ. ಇದು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರು ಒದಗಿಸುವ ರಿಗ್ಸ್ ಆಗಲಿ, ಬುಲ್ಡೋಜರ್ಸ್ ಆಗಲಿ ಸರಿಯಾಗಿ ಕೆಲಸ ಮಾಡುವುದಿಲ್ಲ. ಅವರು ಕೊಡತಕ್ಕಂಥ ಸರ್ವೀಸ್ ಚಾರ್ಜಸ್ ಪ್ರೈವೇಟ್ ಚಾರ್ಜ್‌ಗಿಂತ ಜಾಸ್ತಿ ಮತ್ತು ರೈತರಿಗೆ ಇರತಕ್ಕಂಥ ಕೆಲವೇ ರಿಗ್ಸ್ ಮತ್ತು ಬುಲ್ಡೋಜರ್‌ಗಳಿಂದ ಆಗ್ರೋ ಸರ್ವೀಸ್ ಕಡಿಮೆಯಾಗಿದೆ. ಮತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಹಳೆಯ ಸ್ಟಾಕ್ ಇಟ್ಟುಕೊಂಡು ಅನೇಕ ಅವ್ಯವಹಾರಗಳು ಅಲ್ಲಿ ನಡೆದಿವೆ. ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಬೇಕೆಂದು ನಾನು ಹಿಂದೆ ಕೃಷಿ ಮಂತ್ರಿಯಾಗಿದ್ದವರಿಗೆ ಹೇಳಿದ್ದೆ. ನಾನು ಈಗ ಕೃಷಿ ಮಂತ್ರಿಯಾದ ತಕ್ಷಣ ಹೆಬ್ಬಾಳಕ್ಕೆ ಹೋಗಿ ಭೇಟಿ ಕೊಟ್ಟಿದ್ದೇನೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ನೋಡಿದ್ದೇನೆ. ಆಗ ನನಗನ್ನಿಸಿತು ಈ ಕಾರ್ಪೊರೇಷನ್ ಇದೇ ರೀತಿ ಮುಂದುವರೆದರೆ ಈ ' ಬಿಳಿ ಆನೆ 'ಯನ್ನು ಸಾಕುವುದರ ಬದಲು ಮುಚ್ಚುವುದು ಸರಿಯೇ, ಅಲ್ಲವೇ ಎನ್ನತಕ್ಕಂಥ ವಿಚಾರವನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತಿದೆ. ಇದರ ಬಗ್ಗೆ ನಾವು ಒಂದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ. ಶ್ರೀ ವೀರಪ್ಪ ಮೊಯಿಲಿ ಆ ಸಮಿತಿಗೆ ಅಧ್ಯಕ್ಷರಾಗಿದ್ದು ನಾನು ಒಬ್ಬ ಸದಸ್ಯನಾಗಿದ್ದೇನೆ. ಆಸ್ಟಿರಿಟಿ ಮೆಷರ್ಸ್‌ನಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ. ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಸರಿಯಾಗಿ ಕೆಲಸ ಮಾಡುತ್ತಿದೆಯೇ ಇದನ್ನು ಪುನಶ್ಚೇತನಗೊಳಿಸುವುದಕ್ಕಾಗುತ್ತದೆಯೇ ಅಥವಾ ಪುನಶ್ಚೇತನಗೊಳಿಸುವುದಕ್ಕೆ ಆಗದೆ ಹೋದರೆ ಪೂರ್ತಿಯಾಗಿ ಆಪರೇಷನ್ ಮಾಡಿ ಮುಗಿಸಬೇಕೇ ಎನ್ನತಕ್ಕಂಥ ವಿಚಾರವನ್ನು ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ.

(ಶ್ರೀಮತಿ ದಮಯಂತಿ ಬೋರೇಗೌಡರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ನಾನು ಇದರ ಬಗ್ಗೆ ಕೊನೆಯ ಮಾತನ್ನು ಹೇಳಿಲ್ಲ. ಬಹುಶಃ ಹೇಳಿದರೆ ಆಸ್ಟಿರಿಟಿ ಮೆಷರ್ಸ್ ಬಗ್ಗೆ ಕ್ಯಾಬಿನೆಟ್

ಸಬ್ ಕಮಿಟಿ ತೀರ್ಮಾನ ತೆಗೆದುಕೊಳ್ಳುವುದರಲ್ಲಿ ಹಿಂದು ಮುಂದು ನೋಡುವುದಿಲ್ಲ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಅದರ ಸಾಧನೆ ಸಾಕಷ್ಟು ಆಗಿಲ್ಲ. ನಾನು ಸರ್ಕಾರದ ಪರವಾಗಿ ಒಪ್ಪಿಕೊಳ್ಳುತ್ತೇನೆ. ಮತ್ತೊಂದು ವಿಚಾರ, ಈ ಆಗ್ರೋ ಫ್ರೂಟ್ಸ್ ಬಗ್ಗೆ. ಅದು ಒಂದು ದಿನಕ್ಕೆ 5 ಟನ್ ಫ್ರೂಟ್ಸ್ ಪ್ರೋಸೆಸಿಂಗ್ ಮಾಡುತ್ತಿದೆ. ಅದನ್ನು ಮುಚ್ಚುವುದು ಸರಿಯೆಂದು ನಾನು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇನೆ. ಕ್ವಾಲಿಟಿ ಇರುವುದು ಬೇರೆ ವಿಷಯ. 5 ಟನ್ ಮಾಡಿದರೆ ಎಕನಾಮಿಕಲ್ ಅಲ್ಲ. ನಿಮಗೆ ಗೊತ್ತಿದೆ. ಕಿಸಾನ್ ಫ್ಯಾಕ್ಟರಿಗೆ ನಾವು ನೀವು ಟೊಮ್ಯಾಟೋ ಹಣ್ಣುಗಳನ್ನು ಸರಬರಾಜು ಮಾಡಿದವರು. ಅವರು ಒಂದು ದಿನಕ್ಕೆ ಎಷ್ಟು ಟನ್ ಅರೆಯುತ್ತಾರೆ. ಎಷ್ಟು ಟನ್ ಕಿತ್ತಲೆ ಹಣ್ಣುಗಳನ್ನು ಪ್ರೋಸೆಸ್ ಮಾಡಿ ರಷ್ಯಾದಂತಹ ದೇಶಕ್ಕೆ ಕಳುಹಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಮಾವಿನ ಹಣ್ಣು ಸೀಸನ್‌ನಲ್ಲಿ ಎಷ್ಟು ಮಾವಿನ ಹಣ್ಣುಗಳನ್ನು ಹಾಗೂ ಟೊಮ್ಯಾಟೋ ಹಣ್ಣುಗಳನ್ನು ನಾವು ಸರಬರಾಜು ಮಾಡುತ್ತಿರುವುದು ಗೊತ್ತಿದೆ. ದಿನಕ್ಕೆ ಬರೀ 5 ಟನ್ ಆದರೆ, ಅದು ಎಕನಾಮಿಕಲ್ ಆಗುವುದಿಲ್ಲ. ಅಲ್ಲಿನ ಕೆಲಸ ಸಾಕಷ್ಟು ಆಗಿಲ್ಲ, ನನ್ನ ಮನಸ್ಸಿಗಂತೂ ಒಪ್ಪಿಲ್ಲ. ನಾನು ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಇದರ ಬಗ್ಗೆ ಈಗಾಗಲೇ ನಾನು ತೀರ್ಮಾನ ಮಾಡಿದ್ದೇನೆ. ಈ ಆಗ್ರೋ ಫ್ರೂಟ್ಸ್ ಮುಚ್ಚಿ ಎಂದು ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಹೇಳಿದ್ದೇನೆ. ಇದನ್ನು ಮುಚ್ಚುವ ತೀರ್ಮಾನ ತೆಗೆದುಕೊಂಡಿದ್ದೇವೆ. ಅದೇ ರೀತಿ ಇನ್ನೊಂದು ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ನಡೆಯುತ್ತಿದೆ. ಇದನ್ನು ನಾನು 1975-76 ರಲ್ಲಿ ರೈತರಿಗೆ ಗೊಬ್ಬರ ದೊರಕಲೆಂದು ಪ್ರಾರಂಭ ಮಾಡಿದೆ. ಬೆಂಗಳೂರಿನಲ್ಲಿ ಸಾಕಷ್ಟು ತರಕಾರಿ ಎಲೆಗಳು ಗೊಬ್ಬರ ಮಾಡುವುದಕ್ಕೆ ಬೇಕಾದಂಥ ಕಚ್ಚಾ ಪದಾರ್ಥ ಸಿಗುತ್ತದೆಂದು ನಾವು ಹೊಸೂರು -ಆನೇಕಲ್ ರಸ್ತೆಯಲ್ಲಿ ಪ್ರಾರಂಭ ಮಾಡಿದೆವು. ಅದನ್ನು ಪ್ರಾರಂಭಿಸಿದಂದಿನಿಂದ ಬೆಂಗಳೂರಿನ ಸುತ್ತ - ಮುತ್ತಲಲ್ಲಿ ಇರತಕ್ಕಂಥವರು, ಕೋಲಾರ ರಸ್ತೆ, ಮೈಸೂರು ರಸ್ತೆ, ಆನೇಕಲ್ ರಸ್ತೆ, ಬಳ್ಳಾರಿ ರಸ್ತೆಯಲ್ಲಿರುವ ರೈತರಿಗೆ ಕಾಂಪೋಸ್ಟ್ ಮಾಡಿ, ಅದನ್ನು ತೆಗೆದುಕೊಳ್ಳುವುದಕ್ಕೆ ಅವರು ತರಕಾರಿ ಲಾರಿಗಳಲ್ಲಿ ಮತ್ತು ಟ್ರಾಕ್ಟರುಗಳಲ್ಲಿ ಬರುತ್ತಾರೆ. ಹಣ್ಣು - ಹಂಪಲು, ತರಕಾರಿ ತುಂಬಿಕೊಂಡು ಬಂದವರು ವಾಪಸ್ಸು ಹೋಗುವಾಗ ಗೊಬ್ಬರ ತುಂಬಿಕೊಂಡು ಹೋಗಲಿ. Well prepared compost, well cooked compost. ಎಂದು ಮಾಡಿದ್ದೇವೆ. ಅದನ್ನು ಈಗ ಎಲ್ಲಾ ಕಡೆ ಮಾಡುವುದಕ್ಕಾಗುವುದಿಲ್ಲ. ನಾನು ಅಷ್ಟನ್ನು ಮಾಡಿ ಬಿಟ್ಟೆ. ಅದು ಇನ್ನೂ ಅಲ್ಲೇ ಇದೆ. ಆ ರೈಲು ಅಲ್ಲಿಯೇ ನಿಂತಿದೆ. ಇನ್ನೂ ಮದ್ರಾಸ್ ಮುಟ್ಟಿಲ್ಲ. ಆ ರೀತಿ ಇರತಕ್ಕಂಥಾದ್ದನ್ನು ಇಟ್ಟುಕೊಂಡು ಏನು ಮಾಡಬೇಕು ? ಅಲ್ಲಿ 20 ಜನ ಕೆಲಸ ಮಾಡುತ್ತಾರೆ. ರೆವಿನ್ಯೂ 25 ಲಕ್ಷ ಬರುತ್ತದೆ, ಇದರ ನಷ್ಟ 84.78 ಲಕ್ಷ. ಅದೇ ರೀತಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ದ್ದು ಅಷ್ಟೇ. ಅದರ ಅಕ್ಯುಮುಲೇಟೆಡ್ ಲಾಸ್ 17 ಕೋಟಿ ರೂಪಾಯಿಗಳು. ಅಲ್ಲಿ 60 ಜನ ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನ್ನು ಬೆಂಗಳೂರು ಸಿಟಿ ಕಾರ್ಪೋರೇಷನ್‌ಗೆ ವಿಲೀನಗೊಳಿಸಬೇಕೆಂದು ನಾನು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇನೆ. ವಿಲೀನಗೊಳಿಸಿ ಅದನ್ನು ಅವರೇ ಮಾಡಲಿ. ಏಕೆಂದರೆ, ವೇಸ್ಟ್ ಎಲ್ಲಾ ಅವರಲ್ಲಿಯೇ ಬರುವುದು. ಅವರೇ ಗೊಬ್ಬರವನ್ನು ತಯಾರು ಮಾಡಿ ರೈತರಿಗೆ ಮಾರಾಟ ಮಾಡಲಿ. ಅದರ ಬಗ್ಗೆ ಬಹಳ ಬೇಡಿಕೆ ಇದೆ. ಈ ರೀತಿಯ ತೀರ್ಮಾನ ಮಾಡಿದ್ದೇವೆ. ಈ ಬಿಳಿಯಾನೆಯನ್ನು ಸಾಕಿಕೊಂಡು ಲಾಸ್ ಆದರೂ ಹಾಗೆ ಮುಂದುವರೆಸಿಕೊಂಡು ಹೋದರೆ, ಇದೊಂದು ತರಹ ಎಪಿಡಮಿಕ್ ಡಿಸೀಸ್ ಕ್ಯಾನ್ಸರ್ ಇದ್ದ ಹಾಗೆ, ಎಂದಿಗೂ ವಾಸಿಯಾಗುವುದಿಲ್ಲ. ಆದುದರಿಂದ ಅದನ್ನೂ ಮುಚ್ಚಬೇಕೆಂದು ತೀರ್ಮಾನ ಮಾಡಿದ್ದೇವೆ. ಈ ರೀತಿ ಮಾಡಿದರೆ ರೈತರಿಗೆ ಸಹಾಯವಾಗುತ್ತದೆ. ಅದೇ ರೀತಿ ಸಬ್ಸಿಡಿರಿವಿಚಾರದ ಬಗ್ಗೆ. ನಮ್ಮ ಆಗ್ರೋ ಕಾರನ್ ಸಪರೇಟ್ ಆಗಿದೆ. ಇದನ್ನು ನಾವು ಪ್ರಾರಂಭ ಮಾಡಿದ್ದೇವೆ. ಇದು ಒಳ್ಳೆಯ ಕೆಲಸ ಮಾಡಿದೆ. ಆಗ್ರೋ ಫುಡ್ಸ್, ಮಾವಿನ ಫುಡ್ಸ್ ಇದೆಲ್ಲಾ ಆಗಿ ಇದರಲ್ಲಿ ವ್ಯಾಪಾರ ಚೆನ್ನಾಗಿದೆ. ಮತ್ತು ಇದು 45 ಲಕ್ಷ ರೂಪಾಯಿಯ ಲಾಭದಲ್ಲಿದೆ. ಅಲ್ಲಿ ಏನೇನು ಮಾಡುತ್ತಾರೆಂದರೆ

ಅನಿಮಲ್ ಫೀಡ್, ಬಾಲ ಆಹಾರವನ್ನು ಮಾಡುತ್ತಾರೆ. ಮತ್ತು ಅನೇಕ ಮೇಜ ಪ್ರಾಡಕ್ಟ್ಸ್‌ನ್ನು ಕಾರ್ನ ಫೂಡ್ಸ್ ಮಾಡುತ್ತಾರೆ. ಅವುಗಳು ಮಾರಾಟವಾಗುತ್ತಿವೆ. ಇದು ಚೆನ್ನಾಗಿ ಕೆಲಸ ಮಾಡುತ್ತಿದೆ. ಇದರ ವಾರ್ಷಿಕ ವಹಿವಾಟು ಏನು ಎಂಬುದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇದರ ಲಾಭ 45 ಲಕ್ಷ ಇದೆ.

ಇನ್ನು ನಮ್ಮ ಆಗ್ರೋ ಸೀಡ್ಸ್ ಕಾರ್ಪೊರೇಷನ್ ಬಹಳ ಮುಖ್ಯವಾದುದು. ಏಕೆಂದರೆ ನಾವು ಸರಿಯಾದ ಬೀಜಗಳನ್ನು ರೈತರಿಗೆ ಕೊಡದಿದ್ದರೆ ಅವನು ಅದನ್ನೇ ಬಿತ್ತಿ ಇಡೀ ವರ್ಷವನ್ನು ಹಾಳು ಮಾಡಿಕೊಳ್ಳುತ್ತಾನೆ. ಅನವ ಜೀವನವೇ ಮುಗಿದು ಹೋಗುತ್ತದೆ.

ಶ್ರೀ ಕೆ.ಹೆಚ್.ಹನುಮೇಗೌಡ :- ಉಪಾಧ್ಯಕ್ಷಿಣಿಯವರೆ, ಈ ಬೀಜ ನಿಗಮದಲ್ಲಿ ಸುಮಾರು 2,3 ಕೋಟಿ ಹಣಕ್ಕೆ ಲೆಕ್ಕವಿಲ್ಲ, ಪತ್ರವಿಲ್ಲ ಅದರ ಬಗ್ಗೆ ಯಾವ ಪುಸ್ತಕಗಳಿಲ್ಲ. ಅದು ಏನಾದರೂ ಸಿಗುತ್ತದೆಯೆ ? ನೀವು ಹೇಳುತ್ತಿರುವ ಬೀಜ ನಿಗಮದಲ್ಲಿ ದುಡ್ಡಿನ ರಸೀದಿ ಪುಸ್ತಕವೇ ಇಲ್ಲ. ಎಲ್ಲವನ್ನೂ ನುಂಗಿಹಾಕಿದ್ದಾರೆ. ಸುಮಾರು ಮೂರು ಮೂರುವರೆ ಕೋಟಿಯಷ್ಟಕ್ಕೆ ಲೆಕ್ಕಪತ್ರವಿಲ್ಲ.

ಶ್ರೀ ಎನ್.ಚಿಕ್ಕೇಗೌಡ :- ಮಾನ್ಯ ಹನುಮೇಗೌಡರು ಅದರ ಬಗ್ಗೆ ಒಂದು ಸಣ್ಣ ನೋಟನ್ನು ಕೊಟ್ಟರೆ ಇವತ್ತೇ ಅದರ ಬಗ್ಗೆ ಪ್ರೋಬ್ ಮಾಡಲಿಕ್ಕೆ ಪ್ರಾರಂಭ ಮಾಡುತ್ತೇನೆ. ಅಲ್ಲಿ ನಮ್ಮ ಅಧಿಕಾರಿಗಳಿದ್ದಾರೆ, ಅಧಿಕಾರೇತರರು ಇದ್ದಾರೆ, ನಮ್ಮ ಖಾಸಗಿ ಪ್ರತಿನಿಧಿಗಳೂ ಸಹ ಸ್ವಾಗತ ಮಂಡಳಿಯಲ್ಲಿ ನಿರ್ದೇಶಕರಾಗಿದ್ದಾರೆ. ಮಾನ್ಯ ಹನುಮೇಗೌಡರು ಅದರ ಬಗ್ಗೆ ಒಂದು ನೋಟನ್ನು ಕೊಟ್ಟರೆ ಸಾಕು ನಾನು ಅದನ್ನು ತನಿಖೆ ಮಾಡಿಸುತ್ತೇನೆ. ಇವತ್ತು ಈ ಕಾರ್ಪೊರೇಷನ್‌ನಿಂದ ಸುಮಾರು 70 ಸಾವಿರ ಕ್ವಿಂಟಾಲ್ ಸರ್ಟಿಫೈಸ್ ಬೀಜಗಳನ್ನು 1991-92ರಲ್ಲಿ ರೈತರಿಗೆ ಒದಗಿಸಿದ್ದೇವೆ. ಈ ಕಾರ್ಪೊರೇಷನ್‌ನ ಅವಶ್ಯಕತೆ ನಿಜವಾಗಿಯೂ ಬೇಕಾಗಿದೆ. ಅದರಲ್ಲಿ ನ್ಯೂನತೆಗಳೇನಾದರೂ ಇದ್ದರೆ ಅದನ್ನು ಸರಿಪಡಿಸೋಣ. ಇದನ್ನು ಮುಚ್ಚಿಬಿಟ್ಟರೆ ಆಮೇಲೆ ಬೀಜಗಳನ್ನು ಒದಗಿಸಲು ಬೇಸ್ ಏನಿರುತ್ತದೆ ? ಆದುದರಿಂದ ಈ ಕಾರ್ಪೊರೇಷನ್ ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ. ನ್ಯೂನತೆಗಳೇನಾದರೂ ಇದ್ದರೆ ಅದನ್ನು ಸರಿಪಡಿಸಿಸೋಣ, ಅದಕ್ಕೆ ನಾವು ಹಳ್ಳಿಕಡೆ ಒಂದು ಮಾತನ್ನು ಹೇಳುತ್ತೇವೆ. ಮೊದಲು ಬಾವಿ ಇತ್ತು, ಅದರಲ್ಲಿ ಬಿಂದಿಗೆ ಬಿದ್ದರೆ ಅದನ್ನು ಪಾತಾಳಭೈರವಿ ಎಂದು ಹಾಕಿ ತೆಗೆಯುತ್ತಿದ್ದರು, ಬಹುಶಃ ನಿಮ್ಮಲ್ಲಿ ಅನೇಕರಿಗೆ ಇದು ಗೊತ್ತಿದೆ. ಆ ರೀತಿಯಲ್ಲಿ ಮಾಡೋಣ. ಆ ಕಾರ್ಪೊರೇಷನ್ ಅನ್ನು ಬಿಡಲು ಆಗುವುದಿಲ್ಲ. ಅದರಲ್ಲಿ ಒಂದು ಕೋಟಿ ಎರಡು ಕೋಟಿ ದುರುಪಯೋಗವಾಗಿದೆ ಎಂದರೆ ಅದನ್ನು ಬಿಡುವುದಕ್ಕೆ ಆಗುವುದಿಲ್ಲ. ಅನೇಕ ಬಡವರಿಗೆ ಎರಡು ಕೋಟುಗಳಿರುವುದಿಲ್ಲ. ಆ ರೀತಿ ಇರತಕ್ಕದ್ದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇನೆ.

ಇವತ್ತು 1992-93ಕ್ಕೆ production, distribution of certified seeds 1 ಲಕ್ಷ ಕ್ವಿಂಟಾಲ್ ಕೊಡಬೇಕೆಂದು ಮಾಡಿದ್ದೇವೆ. ಅಲ್ಲಿ pulses, ... ಸೀರಿಯಲ್ಸ್ ಮತ್ತು ಈ ಸೂರ್ಯಕಾಂತಿ ಬೀಜಕ್ಕೆ ಬಹಳ ಬೇಡಿಕೆ ಇದೆ.

ಶ್ರೀ ಕೆ.ಹೆಚ್.ಹನುಮೇಗೌಡ :- ಬೀಜಗಳನ್ನು ಕೊಂಡುಕೊಳ್ಳುವಾಗ ಸರ್ಟಿಫೈಯ್‌ಡ್ ಸೀಡನ್ನೇ ಅವರು ಕೊಂಡು ಕೊಳ್ಳಬೇಕು. ಇದಕ್ಕೆ ಟ್ರೂತ್‌ಫುಲ್ ಲೇಬಲ್ ಹಾಕಿ ಸಂತೆಯಲ್ಲಿ ತುಂಬಿಕೊಂಡು ಬಂದು ಮಾರಾಟ ಮಾಡಲು ಏರ್ಪಾಡನ್ನು ಮಾಡುತ್ತಿದ್ದಾರಂತೆ ? ದಯಮಾಡಿ, ತಾವು ರೈತರ ಮಕ್ಕಳು ಆ ರೀತಿಯಾಗುವುದಕ್ಕೆ ಅವಕಾಶವನ್ನು ಮಾಡಿಕೊಡಬೇಡಿ. ಇದರಿಂದ ಲಕ್ಷಾಂತರ ರೈತರು ಹಾಳಾಗಿ ಹೋಗುತ್ತಾರೆ.

ಶ್ರೀ ಎನ್. ಚಿಕ್ಕೇಗೌಡ :- ಒಳ್ಳೆಯ ಸಲಹೆ. ನಾವು ಸರ್ಟಿಫೈಡ್ ಸೀಡ್ಸ್ ಎಂದು ಟ್ರೂತ್ ಫುಲ್ ಸೀಡ್ಸ್ ಎಂದು ಕೊಟ್ಟರೂ ಕೂಡ ಯಾವ ರೈತನಿಗೆ ಅದನ್ನು ಕೊಡುತ್ತೇವೊ ಆ ರೈತ ಅದರ ಲೇಬಲ್‌ನ್ನು ಇಟ್ಟುಕೊಳ್ಳಬೇಕು. ಅವನು ಆ ಲೇಬಲ್‌ನ್ನು ತಂದು ಕೊಟ್ಟರೆ ಅವನಿಗೆ ಪೂರ್ಣವಾದ ಪರಿಹಾರವನ್ನು ಕೊಡುತ್ತೇವೆ. ಮತ್ತು ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಆ ರೀತಿ ಈಗಾಗಲೆ

ಸಾಕಷ್ಟು ಮಾಡಿದ್ದೇವೆ. ನಮ್ಮ ಬೀಜ ನಿಗಮದ ಮೂಲಕ ಏನು ಬೀಜಗಳನ್ನು ಮಾಡುತ್ತೇವೋ ಅದರ ಬಗ್ಗೆ ಏನಾದರೂ ದೂರುಗಳಿದ್ದರೆ ಅದನ್ನು ನಾವು ಬಿಡುವುದಿಲ್ಲ. ಇವತ್ತು ಸಂಕೀರ್ಣ ಜಾತಿಯ ಸೂರ್ಯಕಾಂತಿ ಬೀಜ ಸಿಗುವುದಿಲ್ಲ. ಅದಕ್ಕೆ ಬೇಡಿಕೆ ಬಹಳವಾಗಿದೆ. ನಾನು ಇವರ ಮಂತ್ರಿಯಾದ ಎರಡೇ ದಿನಕ್ಕೆ ನನಗೆ ಮೈಹಿಕೊಗೆ ಬರೆದುಕೊಡಿ, ಸ್ಕ್ಯಾಂಡೋಜ್ ಬರೆದುಕೊಡಿ ನಮಗೆ ಬೀಜಗಳಿಲ್ಲವೆಂದು ಶಾಸಕರುಗಳೇ ಬಂದಿದ್ದಾರೆ. ಆದುದರಿಂದ ಈ ವರ್ಷ ಮುಂಜಾಗರೂಕತೆಯಾಗಿ ಎರಡುವರೆ ಸಾವಿರ ಕ್ವಿಂಟಾಲ್ ಬೀಜವನ್ನು ಕೊಂಡುಕೊಳ್ಳುತ್ತೇವೆ. ಆ ರೀತಿ ಮಾಡಿದ್ದೇವೆ. ಬೇರೆ ಎಷ್ಟೋ ಕಂಪನಿಗಳಿಂದ ಬಂದರೂ ನಾವು ಅದನ್ನು ತೆಗೆದುಕೊಳ್ಳುವುದಿಲ್ಲ. ಇವತ್ತು ಬೀಜಗಳು ಬಹಳ ಮುಖ್ಯವಾದುದು. ನಮ್ಮ ಧಾರವಾಡ ಮತ್ತು ಹೆಬ್ಬಾಳದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಬೀಜಗಳನ್ನು ಉತ್ಪಾದನೆ ಮಾಡುತ್ತಾರೆ. ಅದರಲ್ಲಿಯೂ ಅವರಿಗೆ ಸರ್ಟಿಫೈಡ್ ಬೀಜಗಳನ್ನೇ ಉತ್ಪಾದನೆ ಮಾಡಲು ಏರ್ಪಾಡು ಮಾಡಬೇಕೆಂದು ತಿಳಿಸಿದ್ದೇವೆ. ಮತ್ತು ಡಿ.ಸಿ.ಹೆಚ್. 32 ಹತ್ತಿ. ನಮ್ಮಲ್ಲಿ ಸಾಕಷ್ಟು ಸ್ಟಾಕ್ ಇದೆ. ಇದು ಇನ್ನೂ ಬರುತ್ತಿದೆ, ನಾವು ಒಂದು ಕೆ.ಜಿಗೆ. 135 ರೂಪಾಯಿಯಂತೆ ಕೊಡುತ್ತಿದ್ದೇವೆ. ಡಿ.ಸಿ.ಹೆಚ್. ಕಾಟನ್ ಗುಜರಾತಿನಲ್ಲಿ ಸರ್‌ಪ್ಲಸ್ ಆಗುತ್ತದೆ. ರೇಟ್ ಹೆಚ್ಚಿಸಿ ಅಂತ ಮಾನ್ಯ ಸದಸ್ಯರು ಅಥವಾ ರೈತರ ಪ್ರತಿನಿಧಿಗಳು ಬಂದರೆ ಇದು ಕಷ್ಟವಾಗುತ್ತದೆ. ಅದಕ್ಕಾಗಿ ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಈ ಸೀಡ್ ಸರ್ಟಿಫಿಕೇಷನ್ ಬಹಳ ಮುಖ್ಯವಾದುದು, ಅದಕ್ಕೆ ಈ ಬೀಜಗಳ ಗುಣಮಟ್ಟವನ್ನು ಪರೀಕ್ಷೆ ಮಾಡಿ ಅದನ್ನು ನಿಯಂತ್ರಣ ಮಾಡುವುದಕ್ಕೆ ಒಂದು ಏಜೆನ್ಸಿಯನ್ನು ಮಾಡಿದ್ದೇವೆ. ಈ ಏಜೆನ್ಸಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇದು ಆದಾಯದಲ್ಲಿದೆ, ಎಲ್ಲಾ ಆದಾಯದಲ್ಲಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಸೀಡ್ ಸರ್ಟಿಫಿಕೇಷನ್‌ನಲ್ಲಿ 17 ಲಕ್ಷ ರೂಪಾಯಿ ಆದಾಯವಿದೆ. ಬೀಜ ಗುಣನಿಯಂತ್ರಣ ಮಾಡುವಂಥ ಒಂದು ಸಂಸ್ಥೆ ಹೆಬ್ಬಾಳದಲ್ಲಿದೆ. ಮತ್ತು ನಮ್ಮ ಕರ್ನಾಟಕ ಆಯಿಲ್ ಸೀಡ್ಸ್ ಗ್ರೋಯರ್ಸ್ ಕೋ ಆಪರೇಟಿವ್ ಫೆಡರೇಷನ್ ಇದು ನಮ್ಮ 4-5 ಜಿಲ್ಲೆಯ ರೈತರು ಹಳ್ಳಿಯ ಮಟ್ಟದಲ್ಲಿ ಒಂದು ಸೊಸೈಟಿ, ಜಿಲ್ಲಾ ಮಟ್ಟದಲ್ಲಿ ಮತ್ತು ಸ್ಟೇಟ್ ಮಟ್ಟದಲ್ಲಿ ಒಂದು ಯೂನಿಯನ್ ಮಾಡಿದ್ದಾರೆ. ಇದು ಆಯಿಲ್ ಪ್ರೊಡಕ್ಷನ್ಸ್, ಆಯಿಲ್ ಸೀಡ್ಸ್, ಆಯಿಲ್ ಕ್ರಾಪ್ಸ್ ಪ್ರೊಡಕ್ಷನ್ ಮತ್ತು ಸೀಡ್ಸ್ ಪ್ರೊಸೆಸಿಂಗ್ ಇದರ ಕಾರ್ಯ ಮಾಡುತ್ತಿದೆ. ಇದು ನಮ್ಮ ಬೆಂಗಳೂರು ಡೈರಿಯ ಮಿಲ್ಕ್ ಪ್ರೊಡ್ಯೂಸ್ ಕೋ ಆಪರೇಟೀವ್ ರೀತಿಯಲ್ಲಿ ನಡೆಯುತ್ತಿದೆ. ಇದು ಹೊಸಪೇಟೆಯಲ್ಲಿದೆ. ಇನ್ನೊಂದು ರಾಯಚೂರಿನಲ್ಲಿತ್ತು. ಅದನ್ನು ಸಹ ತೆಗೆದುಕೊಂಡು ಇದರಲ್ಲಿ ಹೆಚ್ಚಿಗೆ ಬೀಜಗಳನ್ನು ಸಂಸ್ಕರಣೆ ಮಾಡಿ, ಎಣ್ಣೆಯನ್ನು ಉತ್ಪಾದನೆ ಮಾಡಿ ನಾವು ಮಾರಾಟ ಮಾಡುತ್ತಿದ್ದೇವೆ. ಸಫಲ್, ಸನ್ ಗೋಲ್ಡ್, ಕೋಲಾಸ್ಟ್ರಿಲ್ ಆಯಿಲ್ಸ್ ಮತ್ತು ಅದೂ ಅಲ್ಲದೆ ನಾವು ಅಮೂಲ್, ಧಾರಾ ಅಂತ ನಮ್ಮ ನ್ಯಾಷನಲ್ ಡೈರಿ ಡೆವಲಪ್‌ಮೆಂಟ್ ಬೋರ್ಡ್‌ನವರಿಗೆ ನಾವು ಆಯಿಲ್ ಪ್ರೊಸೆಸ್ ಮಾಡಿ ಸ್ಟಾಕ್ ಮಾಡಿ ಧಾರಾ ಅಂತ ಮಾರುತ್ತೇವೆ. ಅದಕ್ಕೆ ಒಳ್ಳೆಯ ಮಾರುಕಟ್ಟೆ ಇದೆ. ಬೊಂಬಾಯಿ, ದೆಹಲಿ, ಕಲ್ಕತ್ತಾ ಈ ಕಡೆ ಅವರು ಮಾರುತ್ತಿದ್ದಾರೆ. ಆ ಎಣ್ಣೆಯನ್ನು ಒದಗಿಸಿ ಪ್ಯಾಕ್ ಮಾಡಿ ಕೊಡುತ್ತೇವೆ. ಅದನ್ನು ಚಾರ್ಜಸ್ ಮಾಡುತ್ತಾರೆ. ಇದು ಚೆನ್ನಾಗಿ ಕೆಲಸಮಾಡುತ್ತಿದೆ. ಇದು ಕಳೆದ 4 ವರ್ಷಗಳಿಂದ ಸ್ವಲ್ಪ ನಷ್ಟದಲ್ಲಿದೆ. ಅದು ಒಂದು ಕೋಟಿ ಚಿಲ್ಲರೆ ಲಾಸ್ ಇದೆ. ಈಗ ಪ್ರಾಫಿಟ್ ಸೈಡ್ ಬರುತ್ತಿದೆ, ಇದು ಒಳ್ಳೆಯ ಕೆಲಸಮಾಡುತ್ತಿದೆ. ಈ ಎಣ್ಣೆ ಕಾಳುಗಳನ್ನು ಬೆಳೆಯತಕ್ಕಂತಹ ಜಿಲ್ಲೆಗಳಾದ ಧಾರವಾಡ, ರಾಯಚೂರು, ಬಿಜಾಪುರ, ಗುಲ್ಬರ್ಗಾ, ಬಳ್ಳಾರಿ, ಚಿತ್ರದುರ್ಗ, ಬೆಳಗಾಂ, ಬೀದರ್ ಮತ್ತು ತುಮಕೂರು ಇದು 1934 ರಲ್ಲಿ ಪ್ರಾರಂಭವಾಯಿತು. ಇವೆಲ್ಲಾ ಸಹಕಾರ ಸಂಘಗಳು ರೈತರ ಪ್ರತಿನಿಧಿಗಳು ಅದರಲ್ಲಿ ಇದ್ದಾರೆ. ಆಡಳಿತ ಮಂಡಲಿಯಲ್ಲಿ ಅವರು ರೆಪ್ರಸೆಂಟಿಟೀವ್ ಆಗಿರುವುದರಿಂದ ಮುಂದೆ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅದಕ್ಕೆ ಪುನಃಶ್ಚೇತನ ಕಲ್ಪಿಸಿಕೊಡುತ್ತೇನೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಟೊಬ್ಯಾಕೋ ಬಗ್ಗೆ ಹೇಳುವುದಾದರೆ ನಮ್ಮ ಮೈಸೂರು ಟೊಬ್ಯಾಕೋ ಕಂಪನಿಯನ್ನು ತಾವು ಅನೇಕರು ಕೇಳಿರಬಹುದು. ಇದು 1937 ರಲ್ಲಿ ಪ್ರಾರಂಭವಾಯಿತು, ನನ್ನ ಕ್ಷೇತ್ರದಲ್ಲಿ ಇದೆ. ಟೊಬ್ಯಾಕೋ ಗ್ರೇಡಿಂಗ್ ಮತ್ತು ಅದನ್ನು ಹದ

ಮಾಡುವುದು ಎಲ್ಲಾ ಅಲ್ಲಿ ಇತ್ತು. ಅದನ್ನು ಹಿಂದೆ ಜನತಾ ಸರ್ಕಾರದವರು, ನಮ್ಮ ಕಾಂಗ್ರೆಸ್ ಸರ್ಕಾರ ಬರುವುದಕ್ಕೆ ಮುಂಚೆ ಮಾರಾಟ ಮಾಡಿದ್ದರು. ಅದನ್ನು ಒಬ್ಬ ಧನುಕ ಎನ್ನುವವನು ತೆಗೆದುಕೊಂಡಿದ್ದನು. ನಾವು 9 ರೂಪಾಯಿ ಷೇರಿನಂತೆ ತೆಗೆದುಕೊಂಡು ನಡೆಸುತ್ತಿದ್ದೆವು. ಮತ್ತೆ ಅದನ್ನು ಮುಚ್ಚಿಬಿಟ್ಟರು. ಇದರಲ್ಲಿ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಷೇರ್ ಇದೆ. ಗೌರ್ನಮೆಂಟ್ ಆಫ್ ಕರ್ನಾಟಕದ್ದು ಇದೆ, ಪ್ರೈವೇಟ್ ಷೇರ್ ಹೋಲ್ಡರ್ಸ್ ಇದ್ದಾರೆ, ಈಗ ಇದು ಪೂರ್ತಿಯಾಗಿ ಮುಚ್ಚಿಬಿಟ್ಟಿದೆ. ಇದಕ್ಕೆ ಅನೇಕ ಪ್ರಾಪರ್ಟಿ ಇದೆ. ಅರಕಲಗೂಡಿನಲ್ಲಿದೆ, ಹುಣಸೂರಿನಲ್ಲಿದೆ, ಮಾಯಕೊಂಡ ಹಂಚಿನಲ್ಲಿದೆ. ನಮ್ಮ ಉಪಾಧ್ಯಕ್ಷಿಣಿಯವರ ಕ್ಷೇತ್ರದಲ್ಲಿದೆ . ಮತ್ತು ದೊಡ್ಡ ವೇರ್‌ಹೌಸಸಸ್‌ನಲ್ಲಿದೆ. ನಮ್ಮ ವೈಟ್‌ಫೀಲ್ಡ್‌ನಲ್ಲಿದೆ, ನನ್ನ ಕ್ಷೇತ್ರದಲ್ಲಿ ಇದೆ, ರಿಚ್‌ಮೆಂಡ್ ಸರ್ಕಲ್ ಮುಂದೆ ರೋಡ್‌ನಲ್ಲಿ ಒಂದು ಪ್ರಾಪರ್ಟಿ ಇದೆ. ಒಂದು ದೊಡ್ಡ ಸೈಟ್‌ನಲ್ಲಿ ಒಂದು ಬಿಲ್ಡಿಂಗ್ ಇದೆ, ಅದನ್ನು ವ್ಯಾಲ್ಯುಯೇಷನ್ ಮಾಡಿಸಿದ್ದೇವೆ. ಅದನ್ನು ಅಕ್ವಿಡೇಟ್ ಮಾಡುವುದೇ ಅಥವಾ ಟೆಂಡರ್ ಕರೆದು ಹರಾಜು ಹಾಕುವುದೆ ಎಂದು ಯೋಚನೆ ಮಾಡುತ್ತಿದ್ದೇವೆ. ಇದು ಬಹಳ ದೊಡ್ಡ ಆಸ್ತಿ. ಈಗ ನಾವು ಕೆಲವರಿಗೆ ಆಯಿಲ್ ಪ್ರೊಸೆಸಿಂಗ್‌ಗೆ ಕೊಟ್ಟಿದ್ದೇವೆ. ಕೆಲವು ಗೌರ್ನಮೆಂಟ್ ಆಫ್ ಇಂಡಿಯಾದವರಿಗೆ ವೇರ್ ಹೌಸಿಂಗ್ ಫೆಸಿಲಿಟೀಸ್ ಕೊಟ್ಟಿದ್ದೇವೆ. ದೊಡ್ಡ ದೊಡ್ಡ ಪ್ರಾಪರ್ಟಿ ಹುಣಸೂರಿನಲ್ಲಿದೆ. ಇದನ್ನು ಕೂಡ ಏನು ಮಾಡಬೇಕೆಂದು ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ. ಚೀಫ್ ಸೆಕ್ರೆಟರಿಯವರ ನೇತೃತ್ವದಲ್ಲಿ ಸಬ್ ಕಮಿಟಿ ಮಾಡಿದ್ದೇವೆ. ಅವರ ವರದಿ ಬಂದಿದೆ. ಕೆಲವು ಕೋರ್ಟ್‌ನಲ್ಲಿವೆ, ಇವುಗಳನ್ನೆಲ್ಲಾ ನಾವು ಪರಿಶೀಲಿಸಿ ಮುಂದೆ ಇದನ್ನು ಏನು ಮಾಡಬೇಕೆಂಬ ರೀತಿಯಲ್ಲಿ ಯೋಚನೆ ಮಾಡುತ್ತಿದ್ದೇವೆ. ಹಿಂದೆ ನಮ್ಮ ಮಂಗಳೂರು ಕೆಮಿಕಲ್ಸ್, ಫರ್ಟಿಲೈಸರ್ಸ್ ಅವರಿಗೆ ಕೊಡಬೇಕು ಎಂದು ಮಾಡಿದ್ದೆವು. ಅವರು ಏನೋ ಒಂದು ರೇಟ್ ಕೊಟ್ಟು ಹೋದರು, ಅಷ್ಟರಲ್ಲಿ ಅವರು ಬಿಟ್ಟು ಹೋದರು. ನಾವು ಮತ್ತೆ ಕೊಡುವುದಿಲ್ಲ ಎಂದು ಹೇಳಿದೆವು. ಇಷ್ಟೊಂದು ಸಂಸ್ಥೆಗಳು ನನ್ನ ಒಂದು ಕೃಷಿ ಇಲಾಖೆಯಲ್ಲಿ ನನ್ನ ಪೋರ್ಟ್‌ಪೋಲಿಯೋದಲ್ಲಿ ಬರುತ್ತವೆ. ನಾನು ಸುಮಾರು 1 ಗಂಟೆ 35 ನಿಮಿಷಗಳ ವಿಚಾರವನ್ನು ಹೇಳಿದ್ದೇನೆ. ತಾವುಗಳು ಸಮಾಧಾನವಾಗಿ ಕೇಳಿದ್ದೀರಿ. ನಮ್ಮ ಸಭಾಧ್ಯಕ್ಷಿಣಿಯವರು ಅವಕಾಶವನ್ನು ಕೊಟ್ಟು ಇವತ್ತಿನ ದಿವಸ ನಮ್ಮ ಈ ವ್ಯವಸಾಯ ಬೇಡಿಕೆಯೊಂದನ್ನು ತಾವುಗಳೆಲ್ಲಾ ಒಮ್ಮತದಿಂದ ಅಂಗೀಕರಿಸಬೇಕು ಎಂದು ಹೇಳಿ ನಮ್ಮ ಇಲಾಖೆಯ ಕಾರ್ಯಚಟುವಟಿಕೆಗಳು ಮತ್ತು ಏನು ಮಾಡಬೇಕು ಎಂದು ಇದ್ದೇವೆ. . . .

ಶ್ರೀ ಎಂ. ಮಹದೇವ :- ನಿಮಗೆ ವ್ಯವಸಾಯದ ಬಗ್ಗೆ ಬಹಳ ಕಳಕಳಿ ಇದೆ, ಬಹಳ ಆಸಕ್ತಿ ಇದೆ. ಆದ್ದರಿಂದ ಚಟುವಟಿಕೆಗಳು ಪ್ರಾರಂಭವಾಗಿವೆ. ಈ ಚಟುವಟಿಕೆಗಳನ್ನು ನಾವೆಲ್ಲಾ ನಿರೀಕ್ಷೆ ಮಾಡುತ್ತಿದ್ದೇವೆ. ಫಲಪ್ರದವಾದ ಚಟುವಟಿಕೆಗಳನ್ನು ನೀವು ಮಾಡುತ್ತೀರಿ ಎಂದು ನಂಬಿಕೆ ಇದೆ. ಅದಕ್ಕೆ ಒಂದು ಒಳ್ಳೆಯ ಸುಧಾರಣೆಯನ್ನು ಮಾಡಿ ಎಂದು ನಾವು ಕೇಳುವುದು.

ಶ್ರೀ ಎಸ್. ಚಿಕ್ಕೇಗೌಡ :- ಮಾನ್ಯ ಸಭಾಧ್ಯಕ್ಷಿಣಿಯವರೆ, ಇಷ್ಟು ಹೊತ್ತು ಅವಕಾಶ ಕೊಟ್ಟು ಕೇಳಿದ್ದಕ್ಕೆ ಮತ್ತು ಮಾನ್ಯ ಸದಸ್ಯರು ನಮ್ಮ ಇಲಾಖೆ ಏನು 1991-92ರ ಕಾರ್ಯಚಟುವಟಿಕೆಗಳು ಮತ್ತು ಅದರ ಆಡಳಿತ ಮತ್ತು ಆ ಒಂದು ಆಡಳಿತದಲ್ಲಿ ಇರತಕ್ಕಂಥ ನ್ಯೂನತೆಗಳ ಬಗ್ಗೆ ನಾನು ಮುಚ್ಚುಮರೆಯಿಲ್ಲದೆ ವಿಚಾರಗಳನ್ನು ಹೇಳಿದ್ದೇನೆ. ಆದ್ದರಿಂದ ಮಾನ್ಯ ಸಭಾ ಸದಸ್ಯರು ಎಲ್ಲರೂ ಒಮ್ಮತದಿಂದ ಅಂಗೀಕರಿಸಿ ಮುಂದಿನ 1992-93ರಲ್ಲಿ ಇನ್ನು ಹೆಚ್ಚು ಫಲಕಾರಿಯಾಗಿ ರೈತನ ಮನೆ ಬಾಗಿಲಿಗೆ, ರೈತರಿಗೆ ಈ ಒಂದು ಪ್ರಯೋಗ, ತಂತ್ರಜ್ಞಾನ. ವಿಜ್ಞಾನದ ಅನುಭವವನ್ನು ಮುಟ್ಟಿಸತಕ್ಕಂಥ ದಿಶೆಯಲ್ಲಿ ಅಧಿಕಾರಿಗಳು ಪ್ರಯತ್ನ ಮಾಡುತ್ತಾರೆ. ಇನ್ನು ಒಂದು ಮುಖ್ಯವಾದ ವಿಚಾರ ಮುಂದಿನ ವರ್ಷ, ಯುಗಾದಿ ಇನ್ನೇನು ಹತ್ತಿರ ಬರುತ್ತಾ ಇದೆ, 4ನೇ ತಾರೀಖು, ಹೊಸವರ್ಷ ಪ್ರಾರಂಭವಾಗುತ್ತಿದೆ. ಯುಗಾದಿ ನಂತರ ದೇವರ ಕೃಪೆಯಿಂದ, ವರುಣನ ಕೃಪೆಯಿಂದ ಚೆನ್ನಾಗಿ ಮಳೆಯಾಗಲಿ. ಚೆನ್ನಾಗಿ ಬೆಳೆಯಾಗಲಿ ಎಂದು ಈ ಸಂದರ್ಭದಲ್ಲಿ ದೇವರನ್ನು ಪ್ರಾರ್ಥನೆ ಮಾಡಿಕೊಂಡು

ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್:- ಈಗ ತೋಟಗಾರಿಕೆ ಸಚಿವರು ಉತ್ತರ ಕೊಡಬೇಕು.

ಡಾ. ವೈ. ನಾಗಪ್ಪ :- ಸಾಯಿಲ್ ಪಲ್ಯೂಷನ್, ಅದರಿಂದ ಆಗುವ ಒಂದು ಕೆಟ್ಟ ಪರಿಣಾಮ ಆಹಾರ ಪದಾರ್ಥಗಳ ಬೆಳವಣಿಗೆ ವಿಷಯದಲ್ಲಿ ತಾವು ಏನಾದರೂ ಒಂದು ಹೇಳಿದರೆ ಚೆನ್ನಾಗಿ ಇತ್ತು.

ಛೇರ್ಮನ್:- ಎಲ್ಲಾ ರಿಪ್ಲೈಸ್ ಮುಗಿದ ಮೇಲೆ ಕ್ಲಾರಿಫಿಕೇಷನ್ ಕೇಳಿ.

ಡಾ. ವೈ. ನಾಗಪ್ಪ :- ಸಭಾಧ್ಯಕ್ಷಿಣಿಯವರೆ, ಈಗ ಕೃಷಿ ಇಲಾಖೆ, ಅದರ ಮೇಲೆ ಕ್ಲಾರಿಫಿಕೇಷನ್ ಕೇಳಬೇಕಲ್ಲ.

ಛೇರ್ಮನ್:- ಈ ರಿಪ್ಲೈಸ್ ಮುಗಿದ ಮೇಲೆ ದಯವಿಟ್ಟು ಕ್ಲಾರಿಫಿಕೇಷನ್ ಕೇಳಿ.

(ಗೊಂದಲ)

ಡಾ. ವೈ. ನಾಗಪ್ಪ :- ತೋಟಗಾರಿಕೆ ಆದಮೇಲೆ, ಫಾರೆಸ್ಟ್ ಆದಮೇಲೆ ಎಲ್ಲಾ ಒಟ್ಟಿಗೆ ಕೇಳುವುದಕ್ಕೆ ಸಮಯ 4.00 ಗಂಟೆ ಆಗುತ್ತದೆ. ಆದಕ್ಕೆ ಕೃಷಿ ಇಲಾಖೆ ಬಗ್ಗೆ ಮೊದಲು ಕ್ಲಾರಿಫಿಕೇಷನ್ ಆಗಲಿ.

(ಗೊಂದಲ)

ಛೇರ್ಮನ್:- ಈಗ ತೋಟಗಾರಿಕೆ ಸಚಿವರು ಉತ್ತರ ಹೇಳಬೇಕು.

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ತೋಟಗಾರಿಕೆ ಇಲಾಖೆ ಮೇಲೆ ಹಿರಿಯ ಶಾಸಕರುಗಳು ಮಾತನಾಡಿ ತಮ್ಮ ಸಲಹೆಗಳನ್ನು ಅವರ ಅನುಭವವನ್ನು ಹೇಳಿದ್ದಾರೆ. ನಾನು ಅವರಿಗೆ ಪ್ರಥಮದಲ್ಲಿ ಧನ್ಯವಾದಗಳನ್ನು ಹೇಳುತ್ತಾ ಸನ್ಮಾನ್ಯ ಸಭೆಯ ಗೌರವಾನ್ವಿತ ಸದಸ್ಯರ ಸಹಕಾರ, ಸಲಹೆ, ಮಾರ್ಗದರ್ಶನ ಈ ಇಲಾಖೆ ನಡೆಸುವಲ್ಲಿ ಇರಲಿ, ತನ್ಮೂಲಕ ಈ ಇಲಾಖೆಯ ಸರ್ವತೋಮುಖ ಅಭಿವೃದ್ಧಿಗೆ ಅವರ ಸಹಕಾರ ಇರಲಿ ಎಂದು ಹೇಳಿ ನಾನಾದರೂ ಕೂಡ ಅವರಲ್ಲಿ ವಿನಂತಿ ಮಾಡಿಕೊಂಡು, ಕರ್ನಾಟಕ ರಾಜ್ಯದಲ್ಲಿ ಸುಮಾರು 107 ಲಕ್ಷ ಹೆಕ್ಟೇರ್ ಪ್ರದೇಶಗಳಷ್ಟು ಕೃಷಿಗೆ ಯೋಗ್ಯ ಭೂಮಿ ಇದ್ದು 43 ಲಕ್ಷ ರೈತ ಕುಟುಂಬಗಳು ಈ ಒಂದು ವ್ಯವಸಾಯವನ್ನು ಅವಲಂಬನೆಯಾಗಿ ತನ್ನ ಜೀವನ ನಿರ್ವಹಣೆಯನ್ನು ಮಾಡುತ್ತಾ ಇದ್ದಾರೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದರಲ್ಲಿ ಸುಮಾರು 11.88 ರಷ್ಟು ಪ್ರದೇಶ ತೋಟಗಾರಿಕಾ ಕ್ಷೇತ್ರದ ವ್ಯಾಪ್ತಿಗೆ ಇದ್ದು, ಅದರ ಒಟ್ಟಾರೆ ವಿಸ್ತೀರ್ಣ 12.72 ಲಕ್ಷ ಹೆಕ್ಟೇರ್‌ಗಳಾಗಿದೆ. ಕೃಷಿಯ ಒಟ್ಟು ವರಮಾನದಿಂದ ಬರತಕ್ಕ ಶೇಕಡ 34 ರಷ್ಟು ಎಂದು ಹೇಳಿದರೆ 2 ಸಾವಿರದ ನೂರು ಕೋಟಿ ರೂಪಾಯಿಗಳ ವರಮಾನವನ್ನು ನಾವು ತೋಟಗಾರಿಕೆಯ ಒಂದು ವಲಯದಿಂದ ಪಡೆಯುತ್ತಿದ್ದೇವೆಂದು ಹೇಳಿದರೆ ಇದರ ಒಂದು ಮಹತ್ವವನ್ನು ನಾವಾದರೂ ಕೂಡ ಮನಗಾಣಬಹುದು. ತೋಟಗಾರಿಕೆಗಳ ಉತ್ಪನ್ನ ಒಟ್ಟಾರೆ 1082.50 ಲಕ್ಷ ಟನ್‌ಗಳಷ್ಟು ವಾರ್ಷಿಕವಾಗಿ ಬರುತ್ತದೆ. ನಮ್ಮ ತೋಟಗಾರಿಕೆ ಕ್ಷೇತ್ರವನ್ನು ಹವಾಗುಣದ ಆಧಾರದ ಮೇಲೆ ಸುಮಾರು 6 ವಿಭಾಗಗಳಾಗಿ ವಿಂಗಡಿಸಲಾಗಿದೆ. ಈ ತೋಟಗಾರಿಕೆ ಕ್ಷೇತ್ರದಲ್ಲಿ ಉತ್ತಮ ಹವಾಗುಣ ನಮ್ಮ ಕರ್ನಾಟಕದಲ್ಲಿ ಇರುವುದರಿಂದ ಈ ತೋಟಗಾರಿಕೆ ಬೆಳೆಗಳನ್ನು ಅವಲಂಬಿಸಿರುವವರಿಗೆ ಉದ್ಯೋಗವನ್ನು ಒದಗಿಸುವುದೇ ಅಲ್ಲದೆ ವಿದೇಶಿ ವಿನಿಮಯವನ್ನೂ ಕೂಡ ಹಲವಾರು ಬೆಳೆಗಳು ಗಳಿಸಿಕೊಡುತ್ತಿವೆ. ಅದೇರೀತಿ ಶ್ರೀಸಾಮಾನ್ಯನಿಗೂ ಕೂಡ ಪೌಷ್ಠಿಕಾಂಶವನ್ನು ಇದು ಒದಗಿಸಿಕೊಡುತ್ತದೆ. ಈ ತೋಟಗಾರಿಕೆ ಮಹತ್ವವನ್ನು ತಿಳಿದಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳು ತೋಟಗಾರಿಕೆ ಇಲಾಖೆಗೆ ಈ ವರ್ಷ ಸುಮಾರು 6.5 ಕೋಟಿ ರೂ.ಗಳಷ್ಟು ಹೆಚ್ಚಿನ ಅನುದಾನವನ್ನು ಕೊಟ್ಟು ಈ ಇಲಾಖೆಯನ್ನು ಹೆಚ್ಚು ಬಲಿಷ್ಠವಾಗಿ ಕೆಲಸಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದುದರಿಂದ ಅವರಿಗೆ ನಾನು ಅಭಿನಂದನೆಗಳನ್ನು ರೈತರ ಪರವಾಗಿ ಹೇಳಬಯಸುತ್ತೇನೆ. ಈ ವರ್ಷ ಪ್ರತ್ಯೇಕವಾಗಿ ಕೃಷಿ ಸಚಿವರು ಸಭೆಯ ಮುಂದೆ ಹೇಳಿದ್ದಾರೆ. ತೋಟಗಾರಿಕೆ ಕಾಲೇಜನ್ನೂ ಕೂಡ ಮೂಡಿಗೆರೆಯಲ್ಲಿ ಪ್ರಾರಂಭ ಮಾಡಿದ್ದೇವೆಂದು. ನಮ್ಮ

ತೋಟಗಾರಿಕೆ ಕ್ಷೇತ್ರಕ್ಕೆ ಪೂರಕವಾಗಿ ರಾಜ್ಯದಲ್ಲಿ 393 ತೋಟಗಾರಿಕೆ ಕ್ಷೇತ್ರಗಳಿದ್ದು ಇದರಲ್ಲಿ 262 ಕ್ಷೇತ್ರಗಳು ರಾಜ್ಯ ವಲಯದಲ್ಲಿ ಮತ್ತು 161 ಕ್ಷೇತ್ರಗಳು ಜಿಲ್ಲಾ ವಲಯದಲ್ಲಿದ್ದು ಒಟ್ಟು ವಿಸ್ತೀರ್ಣ ಸುಮಾರು 17,500 ಎಕರೆಯಷ್ಟು ಇದೆ. ಇದುವರೆಗೆ 8,500 ಎಕರೆ ಪ್ರದೇಶವನ್ನು ನಾವು ಅಭಿವೃದ್ಧಿಪಡಿಸಿದ್ದು ಇನ್ನೂ 9 ಸಾವಿರ ಎಕರೆ ಪ್ರದೇಶವನ್ನು ಅಭಿವೃದ್ಧಿ ಮಾಡಬೇಕಾಗಿದೆ. ಈ ಕ್ಷೇತ್ರಗಳಿಂದ 40 ಲಕ್ಷ ಸಸಿಗಳನ್ನು ಪ್ರಸಕ್ತ ವರ್ಷದಲ್ಲಿ ಉತ್ಪಾದನೆ ಮಾಡಿ ಮುಂದಿನ ವರ್ಷದಲ್ಲಿ ರೈತರಿಗೆ ಕೊಡಬೇಕೆಂಬ ಯೋಜನೆಯನ್ನು ಇಲಾಖೆ ಹೊಂದಿದೆ. ಇದೇರೀತಿ 92-93ನೇ ಸಾಲಿನ ಗುರಿ 125 ಲಕ್ಷ ಸಸಿಗಳನ್ನು ತೋಟಗಾರಿಕೆ ಇಲಾಖೆ ಉತ್ಪತ್ತಿ ಮಾಡತಕ್ಕ ಯೋಜನೆಯನ್ನು ಹೊಂದಿದೆ. ತೋಟಗಾರಿಕೆ ಕ್ಷೇತ್ರದಲ್ಲಿ ಒಟ್ಟಾರೆ 50 ಯೋಜನೆಗಳಿದ್ದು 29 ಯೋಜನೆಗಳು ರಾಜ್ಯ ವಲಯದಲ್ಲಿ 21 ಯೋಜನೆಗಳು ಜಿಲ್ಲಾವಲಯದಲ್ಲಿವೆ. ಒಟ್ಟು 10 ಲಕ್ಷ ತೆಂಗಿನ ಸಸಿಗಳನ್ನು ಉತ್ಪಾದನೆ ಮಾಡಿ ರೈತರಿಗೆ ಪ್ರತಿ ವರ್ಷ ಹಂಚುತ್ತಿದೆ. ತೋಟಗಾರಿಕೆ ಕ್ಷೇತ್ರದಿಂದ 91-92ನೇ ಸಾಲಿಗೆ ಸುಮಾರು 2.80 ಕೋಟಿ ರೂ. ಆದಾಯವನ್ನು ಗಳಿಸಿ 93-93 ರ ಸಾಲಿನಲ್ಲಿ 4 ಕೋಟಿ ಆದಾಯವನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. 90-91ರವರೆಗೆ 79 ಕೋಟಿ ರೂ.ಗಳ ಸಾಲಸೌಭ್ಯವನ್ನು ಒದಗಿಸಿ 1.90 ಲಕ್ಷ ಎಕರೆ ಪ್ರದೇಶವನ್ನು ಅಭಿವೃದ್ಧಿ ಮಾಡಿ ಪ್ರಸಕ್ತ ವರ್ಷದಲ್ಲಿ ಅಂದರೆ 91-92ರಲ್ಲಿ 401.85 ಲಕ್ಷದಲ್ಲಿ 10,500 ಎಕರೆ ಪ್ರದೇಶವನ್ನು ಸಾಲಸೌಲಭ್ಯಕ್ಕೆ ಒಳಪಡಿಸಿ ಅಭಿವೃದ್ಧಿಪಡಿಸಬೇಕೆಂದು ಯೋಜನೆ ಹಾಕಿಕೊಂಡಿದ್ದೇವೆ. ಇದೇರೀತಿ 92-93ನೇ ಸಾಲಿನಲ್ಲಿ 12,100 ಎಕರೆ ಪ್ರದೇಶಕ್ಕೂ ಈ ಸಾಲವನ್ನು ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ನಿನ್ನೆ ಮಾತನಾಡಿದಂಥ ಎಲ್ಲ ಮಾನ್ಯ ಸದಸ್ಯರೂ ಈ ತೋಟಗಾರಿಕೆ ಕ್ಷೇತ್ರಕ್ಕೆ ಬಹಳ ಪ್ರಮುಖವಾದ ಸಂಸ್ಕರಣ ಘಟಕ ಮತ್ತು ಶೀತಲ ಗೃಹಗಳ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಮುಂದಿನ 8ನೇ ಯೋಜನೆಯಲ್ಲಿ ಶೀತಲಗೃಹಗಳಿಗೆ ಮತ್ತು ಸಂಸ್ಕರಣ ವ್ಯವಸ್ಥೆಗೆ ಹೆಚ್ಚಿನ ಒತ್ತು ಕೊಡುತ್ತಿದ್ದೇವೆ. ರಾಷ್ಟ್ರದಲ್ಲಿ ಅವ್ಯವಸ್ಥಿತ ಸಾಗಾಣಿಕೆ, ಸಂಗ್ರಹಣೆ, ಶೀತಲ ಗೃಹಗಳ ಕೊರತೆ ಇದ್ದು ಸುಮಾರು 3000 ಕೋಟಿ ರೂ.ಗಳಷ್ಟು ತೋಟಗಾರಿಕೆ ಉತ್ಪನ್ನ ಹಾಳಾಗುತ್ತಿದೆ. ಇದೇರೀತಿ ರಾಜ್ಯದಲ್ಲಿ ಕೂಡ 375 ಕೋಟಿಯಷ್ಟು ಹಣ್ಣು, ತರಕಾರಿ ಮತ್ತಿತರ ಪದಾರ್ಥಗಳು ಈ ವ್ಯವಸ್ಥೆ ಇಲ್ಲದೆ ನಾಶವಾಗುತ್ತಿವೆ. ಇದನ್ನು ಮನಗಂಡು ಸರ್ಕಾರ ಪ್ರಥಮವಾಗಿ ಪ್ರತ್ಯೇಕವಾಗಿ 92-93ನೇ ಸಾಲಿನಲ್ಲಿ ಸುಮಾರು 3 ಕೋಟಿಯಷ್ಟು ಹಣವನ್ನು ಶೀತಲಗೃಹಗಳ ನಿರ್ಮಾಣಕ್ಕಾಗಿ ಇಟ್ಟಿದೆ. ನಮ್ಮ ಇಂದಿನ ಕಾರ್ಯಕ್ರಮಗಳಾದ ಸಸ್ಯಸಂರಕ್ಷಣೆ ವಿಶೇಷ ಘಟಕ ಯೋಜನೆ, ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ, ಬರಪೀಡಿತ ಪ್ರದೇಶದ ಯೋಜನೆಗಳನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಪ್ರಸಕ್ತ ಸಾಲಿನಲ್ಲಿ ಮತ್ತು ಮುಂದಿನ ಸಾಲಿನಲ್ಲಿ ನಿರ್ವಹಿಸುತ್ತೇವೆಂದು ಈ ಮಾನ್ಯ ಸಭೆಗೆ ತಿಳಿಸಬಯಸುತ್ತೇನೆ. ಇತ್ತೀಚೆಗೆ ಹಣಬೆ ಕೂಡ ಪೌಷ್ಟಿಕಾಂಶವನ್ನು ಹೊಂದಿದೆ ಎಂದು ತಿಳಿದುಬಂದಿರುವುದರಿಂದ ಇದು ಜನಸಾಮಾನ್ಯರಲ್ಲಿ ಅತ್ಯಂತ ಪ್ರಿಯವಾಗುತ್ತಿದೆ. ನಮ್ಮ ಲಾಲ್‌ಬಾಗ್‌ನಲ್ಲಿ ಹಣಬೆ ಬೀಜೋತ್ಪಾದನಾ ಕೇಂದ್ರ ಇದ್ದು ಈ ವರ್ಷ ಬೆಳಗಾಂನಲ್ಲಿ ಸುಮಾರು16,500 ಲಕ್ಷ ರೂ. ವೆಚ್ಚದಲ್ಲಿ ಹಣಬೆ ಬೀಜೋತ್ಪಾದನಾ ಕೇಂದ್ರವನ್ನು ಪ್ರಾರಂಭ ಮಾಡಿ ಸುಮಾರು 35 ಸಾವಿರ ಬಾಟ್ಲಿಗಳಷ್ಟು ಹಣಬೆ ಬೀಜವನ್ನು ಉತ್ಪಾದನೆ ಮಾಡಿ ಯಾರು ಹಣಬೆ ವ್ಯವಸಾಯವನ್ನು ಮಾಡುತ್ತಾರೆ ಅವರಿಗೆ ಹಂಚುತ್ತಿದ್ದೇವೆ.

12.45 ಪಿ.ಎಂ.

ಇದರಿಂದ ಅನೇಕ ನಿರುದ್ಯೋಗಿಗಳಿಗೂ ಕೂಡ ಈ ಒಂದು ಹಣಬೆ ವ್ಯವಸಾಯದಿಂದ ಸಾಕಷ್ಟು ಫಲ ಸಿಗುತ್ತದೆಂದು ಈ ಸಮಯದಲ್ಲಿ ತಿಳಿಸಬಯಸುತ್ತೇನೆ.

ಇನ್ನು ಹಣ್ಣು ಮತ್ತು ತೋಟಗಾರಿಕೆ ಏನಿದೆ ಆ ತೋಟಗಾರಿಕೆ ಉತ್ಪನ್ನಗಳಿಗೆ ಮಾರ್ಕೆಟನ್ನು ಒದಗಿಸತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಈ ದಿಸೆಯಲ್ಲಿ ತೋಟದ ಬೆಳೆಗಾರರ ಸಹಕಾರಿ ಸಂಘ ಅವರ ವ್ಯಾಪ್ತಿ ಪ್ರಸಕ್ತ ಕರ್ನಾಟಕ ರಾಜ್ಯದಲ್ಲಿ ಸುಮಾರು ಆರು ಜಿಲ್ಲೆಗಳಲ್ಲಿ ಇವೆ. ಬೆಂಗಳೂರು, ದಕ್ಷಿಣ ಕನ್ನಡ,

ಮಂಡ್ಯ, ತುಮಕೂರು, ಕೋಲಾರ ಮತ್ತು ಮೈಸೂರು, ಈ ಆರು ಜಿಲ್ಲೆಗಳ ವ್ಯಾಪ್ತಿಯಲ್ಲಿದ್ದು ಈವರೆಗೆ 200 ವಿತರಣಾ ಮಳಿಗೆಗಳನ್ನು ಪ್ರಾರಂಭಮಾಡಿ ರೈತರ ಉತ್ಪಾದನೆಗಳಿಗೆ ಮಾರುಕಟ್ಟೆಯನ್ನು ದೊರಕಿಸುತ್ತಿರುವುದಲ್ಲದೆ ಗ್ರಾಹಕರಿಗೂ ಕೂಡ ಯೋಗ್ಯ ಬೆಲೆಯನ್ನು ಕೊಡುತ್ತಿರತಕ್ಕಂಥದ್ದು ಒಂದು ರೀತಿಯ ವಿಶೇಷವಾಗಿರುತ್ತದೆ. ಈಗಿರತಕ್ಕಂಥ ಸಾಮರ್ಥವೆಂದರೆ ದಿನಕ್ಕೆ 100 ರಿಂದ 125 ಟನ್ ತರಕಾರಿಗಳನ್ನು ಇದು ಕೊಂಡು ಮಾರುವುದಕ್ಕೆ ಶಕ್ತಿ ಇದೆ. ಮತ್ತು ಇನ್ನೂ ಕೂಡ ಸಾಮರ್ಥ್ಯವನ್ನು ಬಲಪಡಿಸುವ ದಿಸೆಯಲ್ಲಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ಸಹಯೋಗದೊಡನೆ ಮೂರೂವರೆ ಕೋಟಿ ವೆಚ್ಚದಲ್ಲಿ 165 ವಿತರಣಾ ಮಳಿಗೆಗಳು 21 ಸಂಗ್ರಹಣ ಕೇಂದ್ರಗಳು ಅಂತೆಯೇ 5 ಕೇಂದ್ರ ಉಗ್ರಾಣಗಳನ್ನು ನಾವು ಪ್ರಾರಂಭ ಮಾಡಬೇಕೆಂದು ಹೇಳಿ ಒಂದು ಕಾರ್ಯ ರೂಪದಲ್ಲಿ ಮಾಡಬೇಕೆಂದಿದ್ದೇವೆ. ಇದು ಜೂನ್ 1992ಕ್ಕೆ ಮುಕ್ತಾಯ ಮಾಡಬೇಕು. ಎಲ್ಲಾ ಕಾರ್ಯಕ್ರಮಗಳು ನಿರೀಕ್ಷಿಸಿದ ವೇಳೆಯಲ್ಲಿ ಮುಗಿದರೆ ಈಗಿರತಕ್ಕಂಥ ಸಾಮರ್ಥ್ಯ ಹೆಚ್ಚಾಗಿ ಸುಮಾರು 250 ಟನ್‌ಗಳಷ್ಟು ನಮ್ಮ ತೋಟಗಾರಿಕಾ ಉತ್ಪಾದನೆಗಳನ್ನು ವ್ಯವಸ್ಥಿತವಾಗಿ ಮಾರುಕಟ್ಟೆ ಮಾಡಿ ಸಂಗ್ರಹಣೆ ಮಾಡಿ ರೈತರಿಗೆ ಸಹಕಾರವಾಗಲಿಕ್ಕೆ ಈ ಒಂದು ದಿಸೆಯಲ್ಲಿ ಬರುತ್ತದೆನ್ನುವ ಮಾತನ್ನು ನಾನು ಸಭೆಗೆ ತಿಳಿಸಬಯಸುತ್ತೇನೆ. ಇನ್ನೂ ಕೂಡ ರಾಜ್ಯದಲ್ಲಿ ಈ ಒಂದು ತೋಟಗಾರಿಕೆ ಉತ್ಪನ್ನಗಳಿಗೆ ವ್ಯಾಪಕವಾದ ಮಾರುಕಟ್ಟೆ ಬಹಳ ಅವಶ್ಯಕವಾಗಿರುತ್ತದೆ. ಇದನ್ನು ಮನಗಂಡಿರತಕ್ಕಂಥ ಇಲಾಖೆ ಎನ್ ಸಿ ಡಿ ಸಿ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮದ ಸಹ ಯೋಗದೊಡನೆ ಎನ್ ಸಿ ಡಿ ಸಿ 4ನೇ ಪ್ರಾಜೆಕ್ಟ್‌ನಲ್ಲಿ 12.81 ಕೋಟಿ ರೂಪಾಯಿ ವೆಚ್ಚದಲ್ಲಿ ಉಳಿದ 13 ಜಿಲ್ಲೆಗಳಿಗೂ ಕೂಡ ವಿಸ್ತಾರ ಮಾಡಬೇಕೆನ್ನುವ ಆಶಯಹೊಂದಿದ್ದು ನಮ್ಮ ಸರ್ಕಾರ ಎನ್ ಸಿ ಡಿಸಿ ಅವರ ಅಪ್ರೂವಲ್‌ಗೆ ಅಥವಾ ಅವರ ಮಂಜೂರಾತಿಗಾಗಿ ಹೋಗಿರತಕ್ಕಂಥ ವಿಚಾರ ಇರುತ್ತದೆ. ಅದು ಬಂದ ಮೇಲೆ ಈ ಒಂದು ವ್ಯವಸ್ಥಿತವಾದ ವ್ಯಾಪಾರವನ್ನು ತೋಟಗಾರಿಕೆ ಇಲಾಖೆ ಉತ್ಪನ್ನಗಳಿಗೆ ಇಡೀ ರಾಜ್ಯದಲ್ಲಿ ಒದಗಿಸುವ ಸಲುವಾಗಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ತಿಳಿಸಬಯಸುತ್ತೇನೆ.

ಇನ್ನು ತಾಳೆ ಎಣ್ಣೆಯೋಜನೆ. ಇದು ಬಹಳ ಹೆಗ್ಗಳಿಕೆಯ ಯೋಜನೆ. ನಮ್ಮ ದೇಶದಲ್ಲಿ ನಮ್ಮ ಬೇಡಿಕೆ 45 ಲಕ್ಷ ಟನ್‌ಗಳಷ್ಟು ಬೇಡಿಕೆ ಇದೆ. ಇದರಲ್ಲಿ ನಾವು ಆಂತರಿಕವಾಗಿ ಎಲ್ಲಾ ಮೂಲೆಗಳಿಂದ 35 ಲಕ್ಷ ಟನ್‌ಗಳಷ್ಟು ಎಣ್ಣೆ ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಪ್ರತಿವರ್ಷ 1200 ರಿಂದ 1500 ಕೋಟಿ ರೂಪಾಯಿಗಳನ್ನು ವಿದೇಶಿವಿನಿಮಯ ವೆಚ್ಚದಲ್ಲಿ ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ. ಈ ಒಂದು ತಾಳೆ ಏನಿದೆ ಇದು ಅತಿ ಹೆಚ್ಚು ಎಣ್ಣೆಯನ್ನು ಕೊಡತಕ್ಕ ಒಂದು ಬೆಳೆ. ಒಂದು ಹೆಕ್ಟೇರ್ ಪ್ರದೇಶದಲ್ಲಿ ನಾಲ್ಕು ಮೆಟ್ರಿಕ್ ಟನ್‌ಗಳಷ್ಟು ತಾಳೆ ಬೆಳೆ ಕೊಡುತ್ತದೆ. ಇದಕ್ಕಾಗಿ ರಚಿಸಿರತಕ್ಕಂಥ ಉನ್ನತ ಸಮಿತಿಯವರು ಕೂಡ ತಾಳೆ ಬೆಳೆ ಬೆಳೆಯಲು ಕರ್ನಾಟಕ ಒಂದು ಸೂಕ್ತವಾದ ಸ್ಥಳವೆಂದು ಹೇಳಿ ನಿಗದಿಮಾಡಲು ನಮ್ಮ ರಾಜ್ಯದಲ್ಲಿರತಕ್ಕಂಥ ಜಲಾನಯನ ಪ್ರದೇಶಗಳಾದ ಭದ್ರಾ, ತುಂಗಭದ್ರಾ ,ಮಲಪ್ರಭಾ,ಘಟಪ್ರಭಾ ,ಕೃಷ್ಣಾ ಮೇಲ್ದಂಡೆ ಪ್ರದೇಶ, ಕಾವೇರಿ ಈ ಒಂದು ಪ್ರದೇಶಗಳಲ್ಲಿ ಸುಮಾರು ಎರಡೂವರೆ ಲಕ್ಷ ಹೆಕ್ಟೇರ್ ಪ್ರದೇಶಗಳನ್ನು ತಾಳೆ ಬೆಳೆಯಲಿಕ್ಕೆ ಒಳಪಡಿಸಬೇಕೆಂದು ಹೇಳಿ ಅದನ್ನೂ ಕೂಡ ಗುರುತಿಸಿದ್ದಾರೆ. ಮೊದಲನೆಯ ಹಂತದ ಯೋಜನೆಗಾಗಿ ಭದ್ರಾ ಜಲಾಶಯದಲ್ಲಿ ಸುಮಾರು 1100 ಹೆಕ್ಟೇರು ಪ್ರದೇಶದಲ್ಲಿ ಒಂಭೈನೂರು ರೈತರು ಒಂದು ತಾಳೆ ಬೆಳೆಯ ವ್ಯಾಪ್ತಿಗೆ ಬಂದು ಬಹಳ ಚನ್ನಾಗಿ ಬೆಳೆ ಬಂದು ರಾಜ್ಯದ ಇನ್ನಿತರ ರೈತರಿಗೆ ಮಾರ್ಗದರ್ಶನರಾಗಿದ್ದಾರೆಂದು ಈ ಸಂದರ್ಭದಲ್ಲಿ ನಾನು ಕೂಡ ಅಭಿನಂದಿಸಬಯಸುತ್ತೇನೆ. ಆ ಒಂದು ರೈತರಿಗೋಸ್ಕರ ಬಹುತೇಕ 1993ನೇ ಇಸವಿಯ ಮಧ್ಯಭಾಗದಲ್ಲಿ ಬರಬಹುದು, ಈ ತಾಳೆ ಬೆಳೆ ಬಂದ ಮೇಲೆ ಸಂಸ್ಕರಣಾ ಘಟಕಗಳ ಆವಶ್ಯಕತೆ ಬಹಳವಾಗಿರುತ್ತದೆ. ಅದಕ್ಕೆ ಪೂರಕವಾಗಿ ಕರ್ನಾಟಕ ರಾಜ್ಯದ ಕೈಗಾರಿಕಾ ಬಂಡವಾಳ ಹೂಡಿಕೆ ನಿಗಮದ ಮತ್ತು ಆಸ್ಪಾಲ್ ಆಫ್ ಇಂಡಿಯಾ ಲಿಮಿಟೆಡ್ ಇವರ ಸಹಯೋಗದೊಡನೆ ಸುಮಾರು 9 ಕೋಟಿ ರೂಪಾಯಿ ವೆಚ್ಚದಲ್ಲಿ

ಸಂಸ್ಕರಣಾ ಘಟಕವನ್ನು ಕೂಡ ಪ್ರಾರಂಭ ಮಾಡಬೇಕೆಂದು ಹೇಳಿ ಇತ್ತೀಚೆಗೆ ಅದರ ಶಂಕುಸ್ಥಾಪನೆಯನ್ನೂ ಕೂಡ ನೆರವೇರಿಸಲಾಗಿದೆ. ಈ ತಾಳೆ ಬೆಳೆ ವ್ಯಾಪಕವಾಗಿ ರಾಜ್ಯದಲ್ಲಿ ಬರಬೇಕೆಂದು ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರದ ಬಯೋ ಟೆಕ್ನಿಕಲ್ ಅಂಡ್ ಟೆಕ್ನಾಲಜಿಕಲ್ ವಿಭಾಗದ ಸಹಯೋಗದೊಡನೆ ಹಾಗೂ ಆರ್ಥಿಕ ನೆರವಿನೊಡನೆ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಫ್ರಂಟ್‌ಲೈನ್ ಡೆಮಾನ್‌ಸ್ಟ್ರೇಷನ್ ಪ್ರಾಜೆಕ್ಟ್ ಎಂದು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಭೀಮನಕೊಲ್ಲಿ ತೋಟಗಾರಿಕಾ ಕ್ಷೇತ್ರದಲ್ಲಿ 72 ಲಕ್ಷ ರೂಪಾಯಿ ವೆಚ್ಚದಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡುತ್ತಿದ್ದೇವೆ. ಇದರಲ್ಲಿ 200 ಎಕರೆ ಪ್ರದೇಶದಲ್ಲಿ ತಾಳೆ ಬೆಳೆದು ಅದನ್ನು ಪ್ರಾಯೋಗಾತ್ಮಕವಾಗಿ ಮಾಡಿ ನೀರಿನ ನಿರ್ವಹಣೆ, ಸಸ್ಯ ಸಂರಕ್ಷಣಾ ವಿಚಾರದಲ್ಲಿ ರೈತರಿಗೆ ಮಾರ್ಗದರ್ಶನ ಮಾಡಬೇಕೆಂದು ನಾವು ಕಾರ್ಯೋನ್ಮುಖರಾಗಿದ್ದೇವೆ. ಇಷ್ಟೆಲ್ಲ ಆಗಬೇಕಾದರೆ ತಾಳೆ ಸಸಿಗಳ ಅವಶ್ಯಕತೆ ಬಹಳ ಬೇಕಾಗುತ್ತದೆ. ಅದಕ್ಕೆ ಪೂರ್ವಭಾವಿಯಾಗಿ ಈ ರಾಜ್ಯದಲ್ಲಿ ಪೂರ್ವಭಾವಿ ಸಸ್ಯಾಗಾರ ಎನ್ನುವ 3 ಯೋಜನೆಗಳನ್ನು ಮಂಜೂರಾತಿ ಮಾಡಿ ಭದ್ರಾ ಜಲಾಶಯದ ಬಳಿ ಮುಲ್ಲೂರು, ಕಾವೇರಿ ಕಣಿವೆಯ ಗೋರೂರು ಮತ್ತು ಕೃಷ್ಣ ಮೇಲ್ದಂಡೆಯ ಪ್ರದೇಶಗಳಲ್ಲಿ ತಲಾ ಒಂದು ಕೋಟಿ 7 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 3 ಲಕ್ಷ 40 ಸಾವಿರ ಸಸಿಗಳನ್ನು ಉತ್ಪಾದನೆ ಮಾಡತಕ್ಕ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇನ್ನೂ 10 ಲಕ್ಷದ 20 ಸಾವಿರ ತಾಳೆ ಸಸಿಗಳು ಬೇಕಾಗುತ್ತವೆ. ಅದಕ್ಕೆ 7 ಲಕ್ಷ ಮೊಳಕೆ ಬೀಜಗಳನ್ನು ವಿದೇಶದಿಂದ ತರಿಸಿಕೊಳ್ಳುತ್ತಿದ್ದೇವೆ. 3 ಲಕ್ಷ ಬೀಜಗಳನ್ನು ಕೇರಳದ ಪಾಲೋಡಿನಿಂದ ತರಿಸಿಕೊಂಡು ತಾಳೆ ಬೆಳೆಯನ್ನು ಹೆಚ್ಚು ಮಾಡಬೇಕೆಂಬ ದಿಸೆಯಲ್ಲಿ ಕಾರ್ಯೋನ್ಮುಖರಾಗುತ್ತಿದ್ದೇನೆ. ಅಂತೆಯೇ ತಾಳೆ ಬೀಜೋತ್ಪಾದನಾ ಕೇಂದ್ರವನ್ನು ತಾರಕ ಜಲಾಶಯದಲ್ಲಿ 57 ಲಕ್ಷ ರೂಪಾಯಿ ವೆಚ್ಚದಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಹೆಚ್ಚು ಪ್ರದೇಶ ಈ ಬೆಳೆ ವ್ಯಾಪ್ತಿಗೆ ಬರಬೇಕೆಂದು ಕಾವೇರಿ ಕಣಿವೆ 1-2, ಭದ್ರಾ, ತುಂಗಭದ್ರಾ, ಕೃಷ್ಣ ಮೇಲ್ದಂಡೆ ಪ್ರದೇಶದಲ್ಲಿ ತಲಾ 5 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ 33 ಕೋಟಿ ರೂಪಾಯಿಗಳ ವೆಚ್ಚದ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ನಾವು ಕಳುಹಿಸಿಕೊಟ್ಟಿದ್ದೇವೆ. ಅದೂ ಕೂಡ ಮಂಜೂರಾತಿಯ ನಿರೀಕ್ಷಣೆಯಲ್ಲಿದ್ದೇವೆ. ಈ ರೀತಿ ತಾಳೆ ಬೆಳೆಗೆ ಹೆಚ್ಚು ಒತ್ತು ಕೊಟ್ಟಿರುವುದರಿಂದ ರೈತರು ಬಹಳ ಉತ್ಸಾಹಪೂರಕವಾಗಿ ಒಳ್ಳೆಯ ಪ್ರತಿಕ್ರಿಯೆಯನ್ನು ತೋರಿದ್ದಾರೆ. ಇನ್ನೊಂದು ಬಹಳ ಪ್ರಾಮುಖ್ಯವಾದುದೆಂದರೆ ಈ ಬೆಳೆಯನ್ನು ಬೆಳಸಿ ಉಳಿಸಬೇಕಾದುದು ಅತ್ಯವಶ್ಯ. ಈ ದಿಸೆಯಲ್ಲಿ ಕಡಿಮೆ ನೀರಿನಲ್ಲಿ ಸಮರ್ಪಕವಾಗಿ ಬೆಳಸಿ ಹೆಚ್ಚಿನ ತೋಟಗಾರಿಕೆ ಪ್ರದೇಶಗಳನ್ನು ನೀರಾವರಿ ವ್ಯಾಪ್ತಿಗೆ ತರಬೇಕೆಂದು ರಾಜ್ಯದಲ್ಲಿ ಹನಿ ನೀರಾವರಿ ಯೋಜನೆಗಳನ್ನು ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಣೆ ಮಾಡಿ ಪ್ರಾರಂಭಿಸಲಾಗಿದೆ. ಈ ಯೋಜನೆಯನ್ನು ಒಂದರಿಂದ ಹತ್ತು ಎಕರೆ ಪ್ರದೇಶದಲ್ಲಿ ಅಳವಡಿಸಿ ಶೇಕಡ 50 ರಷ್ಟಾದರೂ ಗುರಿ ಮುಟ್ಟಬೇಕೆಂದು ಇದೆ. ಈ ಕಾರ್ಯಕ್ರಮವನ್ನು ಒಂದು ಕೋಟಿ 16 ಲಕ್ಷ ರೂಪಾಯಿ ವೆಚ್ಚದಲ್ಲಿ 1991-92ರ ಸಾಲಿನಲ್ಲಿ ಅನುಷ್ಠಾನಕ್ಕೆ ತರುತ್ತಿದ್ದೇವೆ. ರೈತರಿಗೆ ಪ್ರೋತ್ಸಾಹ ಕೊಡಬೇಕೆಂದು ಮಾರಾಟ ತೆರಿಗೆಯಲ್ಲಿ ರಿಯಾಯಿತಿ ಕೊಡುತ್ತಿದ್ದೇವೆ. ಮುಂಬರುವ ಸಾಲಿನಲ್ಲಿ ರೈತರ ಉತ್ಸಾಹ, ಇದರ ಬೇಡಿಕೆ ನೋಡಿ ಕೇಂದ್ರ ಸರ್ಕಾರದ ಸಹಯೋಗದೊಡನೆ 2 ಕೋಟಿ 70 ಲಕ್ಷ ರೂಪಾಯಿ ವೆಚ್ಚದಲ್ಲಿ ಹನಿ ನೀರಾವರಿ ಯೋಜನೆಯನ್ನು ವ್ಯಾಪಕವಾಗಿ ಅಳವಡಿಸಬೇಕೆಂದು ಕಾರ್ಯೋನ್ಮುಖರಾಗಿದ್ದೇವೆ. 8ನೇ ಪಂಚವಾರ್ಷಿಕ ಯೋಜನೆಯಲ್ಲಿ ತೋಟಗಾರಿಕಾ ಬೆಳೆಗಳ ಪ್ರದೇಶವನ್ನು ಇನ್ನೂ 5 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ವಿಸ್ತರಿಸಬೇಕೆನ್ನುವ ಆಶಯ ಇದ್ದು ಅದರ ಗುರಿ ಈ ರೀತಿ ಇದೆ. ಹಣ್ಣಿನ ಬೆಳೆ ವಿಸ್ತೀರ್ಣ ಒಂದೂವರೆ ಲಕ್ಷ ಹೆಕ್ಟೇರ್‌ಗಳಿಗೆ, ತರಕಾರಿ 2 ಲಕ್ಷ ಹೆಕ್ಟೇರ್‌ಗಳಿಗೆ, ಸಾಂಬಾರು ಮತ್ತು ತೋಟದ ಬೆಳೆಗಳನ್ನು 1.25 ಲಕ್ಷ ಹೆಕ್ಟೇರ್‌ಗಳಿಗೆ ವಾಣಿಜ್ಯ ಪುಷ್ಪಗಳ ವಿಸ್ತೀರ್ಣ 2.5 ಲಕ್ಷ ಹೆಕ್ಟೇರ್‌ಗಳಿಗೆ ವಿಸ್ತರಿಸತಕ್ಕ ಗುರಿ ಇದ್ದು ಇದಕ್ಕೆ ಯೋಜನೇತರ ವೆಚ್ಚ ಸುಮಾರು 47 ಕೋಟಿ ರೂಪಾಯಿಗಳಾಗುತ್ತದೆ. ಈ ರೀತಿ ತೋಟಗಾರಿಕೆಗೆ ಹೆಚ್ಚಿನ ಒತ್ತನ್ನು ಕೊಟ್ಟು ರಾಜ್ಯದಲ್ಲಿ ತೋಟಗಾರಿಕೆ ವಲಯಕ್ಕೆ ಹೆಚ್ಚು ಹೆಚ್ಚು ರೈತರು ಬರಲಿ ಎಂಬ ಮಾತನ್ನು ಹೇಳುತ್ತೇನೆ. 1992-93ನೇ

ಸಾಲಿನಲ್ಲಿ ಈ ಒಂದು ಬೆಳೆ ವಿಮಾ ಯೋಜನೆಯನ್ನು ಪ್ರಾಯೋಗಿಕವಾಗಿ ಆಲೂಗಡ್ಡೆ ಬೆಳೆಗೆ ಮಾಡಬೇಕೆಂದು ಯೋಜನೆ ತಯಾರ್ಮಾಡುತ್ತಿದ್ದೇವೆ. ಮತ್ತು ಹೊಸದಾಗಿ ಸಂಶೋಧನೆ ಆಗಿರತಕ್ಕ ಆಲೂಗಡ್ಡೆ ಕೃಷಿಯಲ್ಲಿ ಬಿತ್ತನೆ ಗೆಡ್ಡೆಯ ಬದಲು ಬೀಜವನ್ನು ಯಶಸ್ವಿಯಾಗಿ ಬೆಳೆಸಬಹುದು ಎಂದು ಸಂಶೋಧನೆಯಿಂದ ತಿಳಿದುಬಂದು ಅದನ್ನು ರಾಜ್ಯದಲ್ಲಿ ಅಳವಡಿಸಲು ತೋಟಗಾರಿಕೆ ಕ್ಷೇತ್ರ ಹಾಗೂ ಬೆಳೆಗಾರರ ಜಮೀನುಗಳಲ್ಲಿ 60 ಡೆಮಾನ್‌ಸ್ಟ್ರೇಷನ್ ಪ್ಲಾಂಟ್‌ಗಳನ್ನು 28 ಸಾವಿರ ರೂಪಾಯಿ ವೆಚ್ಚದಲ್ಲಿ ಮಾಡಲು ಆಲೋಚಿಸಲಾಗಿದೆ. 1992-93ನೇ ಇಸವಿಯಲ್ಲಿ ಅಂದರೆ ಮುಂಬರುವ ಆರ್ಥಿಕ ವರ್ಷದಲ್ಲಿ ನಾವು ಅನೇಕ ಯೋಜನೆಗಳಿಗೆ ಮಂಜೂರಾತಿಯನ್ನು ನಿರೀಕ್ಷಿಸಿದ್ದೇವೆ. ಅದರಲ್ಲಿ ಸಮಗ್ರ ತೆಂಗು ಅಭಿವೃದ್ಧಿ ಯೋಜನೆ. ಕರ್ನಾಟಕ ರಾಜ್ಯ ನಮ್ಮ ರಾಷ್ಟ್ರದಲ್ಲಿ ತೆಂಗು ಬೆಳೆ ಪ್ರದೇಶದ ವಿಸ್ತಾರದಲ್ಲಿ ಎರಡನೇ ಪ್ರದೇಶ. ಆದರೆ ಉತ್ಪಾದನೆಯಲ್ಲಿ ಮೂರನೆಯ ಸ್ಥಾನವನ್ನು ತಮಿಳುನಾಡಿನ ನಂತರ ಇದ್ದೇವೆ. ಈ ಒಂದು ಸಮಗ್ರ ತೆಂಗು ಅಭಿವೃದ್ಧಿ ಯೋಜನೆಯಲ್ಲಿ 15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಉತ್ಪಾದನೆ ಹೆಚ್ಚಿಸುವ ಒಂದು ಕಾರ್ಯಕ್ರಮವನ್ನು ಮತ್ತು 5 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹೊಸ ಅಭಿವೃದ್ಧಿ ಪ್ರದೇಶವನ್ನು ತೆಂಗಿನ ಬೆಳೆ ವ್ಯಾಪ್ತಿಯಲ್ಲಿ ತರತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಯೂರೋಪಿಯನ್ ಆರ್ಥಿಕ ಸಮುದಾಯದವರು ಈಗಾಗಲೇ ಬಂದು ಅವರ ಪ್ರತಿನಿಧಿಗಳು ನಮ್ಮ ರಾಜ್ಯದ ಎಲ್ಲಾ ಕಡೆ ಭೇಟಿ ಇತ್ತು ಪೂರ್ವಭಾವಿ ಸಮಾಲೋಚನೆ ಮಾಡಿದ್ದಾರೆ. ತಾತ್ವಿಕವಾಗಿ ಈ ಯೋಜನೆಗೆ ಅನುಮೋದನೆ ಸಿಗುತ್ತದೆಂಬ ಆಶಯ ಇದೆ. ಇದರ ವೆಚ್ಚ 53.48 ಕೋಟಿ ರೂಪಾಯಿ. ಬಹುತೇಕ ನವೆಂಬರ್ 1992ರಿಂದ ಈ ಯೋಜನೆ ಪ್ರಾರಂಭವಾಗುವ ನಿರೀಕ್ಷೆ ಇದೆ. ನಿನ್ನೆ ಮಾತನಾಡಿದಂಥ ಸದಸ್ಯರು ಖಾಸಗಿ ಬೀಳು ಭೂಮಿ ಹಾಗೂ ಸರ್ಕಾರಿ ಬೀಳು ಭೂಮಿಗಳನ್ನು ತೋಟಗಾರಿಕೆ ಬೆಳೆಗಳಿಗೆ ಅಳವಡಿಸಿಕೊಳ್ಳಬೇಕು, ಉಪಯೋಗವಿಲ್ಲದಿರುವ ಭೂಮಿಯನ್ನು ಉಪಯೋಗ ಮಾಡಿಕೊಳ್ಳಬೇಕು ಎಂಬ ಮಾತನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ವರ್ಷ ರಾಜ್ಯದ ಖಾಸಗಿ ಮತ್ತು ಸರ್ಕಾರಿ ಬೀಳು ಭೂಮಿಗಳನ್ನು ಹಾಗೂ ರಸ್ತೆ ಪಕ್ಕದ ಸ್ಥಳಗಳಲ್ಲಿ ತೋಟಗಾರಿಕೆ ಅಭಿವೃದ್ಧಿಪಡಿಸುವ ಯೋಜನೆಯನ್ನು ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮದ ಸಹಯೋಗದಿಂದ 100 ಕೋಟಿ ರೂಪಾಯಿ ವೆಚ್ಚದಲ್ಲಿ 5 ವರ್ಷದ ಯೋಜನೆಯಾಗಿ ಪ್ರಾರಂಭ ಮಾಡುತ್ತಿದ್ದೇವೆ. ಈ ಯೋಜನೆ ಇಡೀ ರಾಜ್ಯಕ್ಕೆ ವ್ಯಾಪಿಸಿರತಕ್ಕದ್ದು. 25 ಸಾವಿರ ಹೆಕ್ಟೇರ್ ಪ್ರದೇಶ ಖಾಸಗಿ ಬೀಳು ಭೂಮಿಗಳು ಹಾಗೆಯೇ 25 ಸಾವಿರ ಹೆಕ್ಟೇರ್ ಪ್ರದೇಶದಲ್ಲಿನ ಸರ್ಕಾರಿ ಬೀಳು ಭೂಮಿ, 2 ಸಾವಿರ ಕಿಲೋಮೀಟರ್ ರಸ್ತೆ ಪಕ್ಕದಲ್ಲಿರತಕ್ಕ ಜಮೀನಿನಲ್ಲಿ ತೋಟಗಾರಿಕೆ ಗಿಡಮರಗಳನ್ನು ಬೆಳೆಸಿ ತೋಟಗಾರಿಕೆ ಪದಾರ್ಥಗಳ ಸುವ್ಯವಸ್ಥಿತ ಮಾರುಕಟ್ಟೆ, ಸಂಗ್ರಹಣೆ ಹಾಗೂ ಸೌಲಭ್ಯವನ್ನು ಕಲ್ಪಿಸತಕ್ಕ ಸರ್ಕಾರಿ ಮತ್ತು ಖಾಸಗೀ ತೋಟಗಳಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಯೋಜನೆಯಲ್ಲಿ ಮಾಡಲಾಗಿದೆ. 5 ವರ್ಷದ ಅವಧಿಯ ಈ ಉದ್ದೇಶಿತ ಯೋಜನೆಯ ಅಂದಾಜು ವೆಚ್ಚ ಸುಮಾರು 101 ಕೋಟಿ ರೂಪಾಯಿಗಳು. ಅನೇಕ ಸದಸ್ಯರು ಈ ಒಂದು ತೋಟಗಾರಿಕೆ ಪದಾರ್ಥಗಳಿಗೆ ರಫ್ತು ಯೋಜನೆಯನ್ನು ಮಾಡಬೇಕೆಂಬ ಆಶಯ ವ್ಯಕ್ತಪಡಿಸಿದರು. ತೋಟಗಾರಿಕೆ ಪದಾರ್ಥಗಳ ಉತ್ಪಾದನೆ, ಮತ್ತು ರಫ್ತು ಯೋಜನೆಗೆ ವಿಶ್ವ ಬ್ಯಾಂಕಿನ ನೆರವನ್ನು ಕೋರಲಾಗಿದ್ದು ಈ ಯೋಜನೆಯನ್ನು ಸಮಗ್ರ ಕೃಷಿ ಅಭಿವೃದ್ಧಿಯ ನಕ್ಷೆಗೆ ಒಳಪಡಿಸಲಾಗಿದ್ದು ಇದರಲ್ಲಿ ಹಣ್ಣು ಮತ್ತು ತರಕಾರಿ ಹಾಗೂ ಪುಷ್ಪಗಳನ್ನು ಬೆಳೆದು ಅವುಗಳನ್ನು ರಫ್ತು ಮಾಡಲು ಉದ್ದೇಶಿಸಲಾಗಿದೆ. ಪ್ರಾಯೋಗಿಕವಾಗಿ ಕೃಷ್ಣ ಮೇಲ್ದಂಡೆ ಪ್ರದೇಶ, ಮಂಡ್ಯ ಹಾಗೂ ಗುಂಡ್ಲು ಪೇಟೆ ತಾಲ್ಲೂಕುಗಳು, ಬಿಜಾಪುರ ಜಿಲ್ಲೆ ಹಾಗೂ ಬೆಂಗಳೂರು ಜಿಲ್ಲೆಗಳನ್ನು ಮಾದರಿ ಪ್ರದೇಶಗಳೆಂದು ಆಯ್ಕೆ ಮಾಡಿ ಐದು ವರ್ಷದ ಅವಧಿಗೆ 20 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಯೋಜನೆ ಮಾಡಿದೆ. ಸಮಗ್ರ ತೋಟಗಾರಿಕೆ ಅಭಿವೃದ್ಧಿಯ ಒಂದು ಯೋಜನೆ ಬಹಳ ದಿವಸಗಳಿಂದ ನನೆಗುದಿಗೆ ಬಿದ್ದಿತ್ತು. ಅದರ ವಿವರ ಈ ರೀತಿ ಇದೆ. ಮಾವು, ಸೀಬೆ, ಕಿತ್ತಳೆ ಹಾಗೂ ಅನಾನಸ್ ಹಣ್ಣುಗಳ ಕ್ಷೇತ್ರ, ವಿಸ್ತರಣೆ ಹಾಗೂ ಪುನರುಜ್ಜೀವನಕ್ಕೋಸ್ಕರ 9100 ಹೆಕ್ಟೇರ್ ಪ್ರದೇಶ [illegible] 4400

ಹೆಕ್ಟೇರ್ ಪ್ರದೇಶದಲ್ಲಿ ತೆಗೆದುಕೊಳ್ಳಲು ಯೋಜನೆಯ ಮೂಲ ಉದ್ದೇಶವಾಗಿದೆ. ಅದರಲ್ಲಿ 25 ಸಾವಿರ ಸಸ್ಯಗಳ ಅಭಿವೃದ್ಧಿ, 10 ಕೋಟಿ 20 ಲಕ್ಷ ಸಸಿಗಳನ್ನು ಬೆಳೆಸುವುದು ಒಟ್ಟು 214 ಸಹಕಾರ ಮಾರಾಟ ಕೆಂದ್ರಗಳನ್ನು ಸ್ಥಾಪನೆ ಮಾಡುವುದು. ಈ ಯೋಜನೆಗೆ 50 ಕೋಟಿ ರೂಪಾಯಿಗಳ ವೆಚ್ಚ ಆಗಲಿದೆ. ಅದನ್ನು ಪರಿಷ್ಕರಿಸಿ ಕಳುಹಿಸಬೇಕೆಂದು ಇಲಾಖೆಗೆ ಸೂಚಿಸಿದ್ದರ ಮೇರೆಗೆ ಇದನ್ನು ಕೂಡ ಕಳುಹಿಸಲಾಗಿದೆ. ಹೀಗೆ ತೋಟಗಾರಿಕೆ ಕಾರ್ಯಕ್ರಮವನ್ನು ನಾನು ಸಭೆಯ ಮುಂದೆ ಇಟ್ಟಿದ್ದೇನೆ. ಈ ತೋಟಗಾರಿಕೆ ಬೆಳೆಗಳ ಕಾರ್ಯಕ್ರಮಕ್ಕೆ ಸದಸ್ಯರು ಕೂಡ ಆಸಕ್ತಿಯನ್ನು ತೋರಿಸಬೇಕು ಮತ್ತು ರೈತರಿಗೆ ಸಹಕಾರಿಯಾಗಬೇಕು ಎಂದು ವಿನಂತಿಸಿ ಈ ಇಲಾಖೆಗಳ ಬೇಡಿಕೆಯನ್ನು ಮಂಜೂರು ಮಾಡಬೇಕೆಂದು ಸದಸ್ಯರಲ್ಲಿ ವಿನಂತಿಸುತ್ತೇನೆ.

ಛೇರ್ಮನ್:- ಈಗ ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ ಮಂತ್ರಿಗಳಿಂದ ಉತ್ತರ.

+ ಶ್ರೀ ಬಸವರಾಜ ಪಾಟೀಲ್ (ಮಾನ್ಯ ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ನನ್ನ ಖಾತೆಯ ಬೇಡಿಕೆ ಮೇಲೆ ಮಾನ್ಯ ಸದಸ್ಯರು ಕೆಲವು ಸಲಹೆ ಸೂಚನೆಗಳನ್ನು ನಿನ್ನೆ ಮಾಡಿದ್ದಾರೆ. ಆದರೂ ಸಾಕಷ್ಟು ಸದಸ್ಯರು ನನ್ನ ಖಾತೆಯ ಮೇಲೆ ಸಾಕಷ್ಟು ಸಲಹೆಗಳನ್ನು ಕೊಟ್ಟಿಲ್ಲವೆಂದು ನನಗನ್ನಿಸುತ್ತದೆ. ಅದರಲ್ಲೂ ಮಾನ್ಯ ಹಿರಿಯ ಸದಸ್ಯರಾದ ವೆಂಕಟಪ್ಪನವರು ಬಹಳ ಮಹತ್ವವಾದ ಸಲಹೆಗಳನ್ನು ಹಾಲು ಉತ್ಪಾದನೆ ವಿಷಯದಲ್ಲಿ, ಹಾಲು ಒಕ್ಕೂಟದ ವಿಷಯದಲ್ಲಿ ಮತ್ತು ಮಹಾಮಂಡಲಗಳ ವಿಷಯದಲ್ಲಿ ಕೊಟ್ಟಿದ್ದಾರೆ. ಹಾಗೆಯೇ ಹರ್ಷಕುಮಾರಗೌಡರೂ ಕೂಡ ಸಲಹೆಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಮೊದಲು ಡೈರಿ ಅಭಿವೃದ್ಧಿ, ಹಾಲು ಮಹಾಮಂಡಲ ಹಾಗೂ ಹಾಲು ಒಕ್ಕೂಟಗಳಿಂದಲೇ ನನ್ನ ಉತ್ತರವನ್ನು ಪ್ರಾರಂಭ ಮಾಡುತ್ತೇನೆ. ಈಗಾಗಲೇ ಫ್ಲಡ್ ಆಪರೇಷನ್ ಮೂರರಿಂದ 1989 ರಿಂದ 1994 ರವರೆಗೆ ಎನ್ ಡಿ ಡಿ ಬಿ ಯವರು 100 ಕೋಟಿ ಸಾಲವನ್ನು ನಮ್ಮ ಸರ್ಕಾರದ ಮುಖಾಂತರ, ಕೆ ಎಂ ಎಫ್ ಮುಖಾಂತರ ಈ 13 ಜಿಲ್ಲೆಗಳು ಏನಿವೆ ಆ ಜಿಲ್ಲೆಗಳಿಗೆ ಕೊಟ್ಟಿದ್ದಾರೆ. ಈಗಾಗಲೇ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ ಹಾಗೂ ಇನ್ನೂ ಸಾಧಿಸಬೇಕಾಗಿದೆ. ಉದಾಹರಣೆಗೆ, ನಮಗೆ ಇರತಕ್ಕ ಕೆಪಾಸಿಟಿಗಿಂತ ಸಾಕಷ್ಟು ಕಡೆ ಬೆಂಗಳೂರು ಸಿಟಿಯಲ್ಲಾಗಲೀ, ಮದರ್ ಡೈರಿಯಲ್ಲಾಗಲೀ ಅಥವಾ ಮಂಡ್ಯಾದಲ್ಲಾಗಲೀ, ಗುಲ್ಬರ್ಗಾದಲ್ಲಾಗಲೀ, ಶಿವಮೊಗ್ಗದಲ್ಲಾಗಲೀ ಹೆಚ್ಚು ಸಾಧಿಸಿದ್ದೇವೆ. ಬೆಂಗಳೂರು ಮದರ್ ಡೈರಿಯಲ್ಲಿ 2 ಸಾವಿರ ಲೀಟರ್ ಏನು ಪ್ರತಿನಿತ್ಯ ಇತ್ತು ಅದನ್ನು 4 ಸಾವಿರ ಲೀಟರ್‌ಗೆ ಈ ಎನ್ ಡಿ ಡಿ ಬಿ ಸಾಲ ಸೌಕರ್ಯ ತಂದು ಬೆಳೆಸುತ್ತಿದ್ದೇವೆ. ಅದೇ ಪ್ರಕಾರ ಬೆಂಗಳೂರು ಒಕ್ಕೂಟದ ಒಂದೂವರೆ ಲಕ್ಷ ಲೀಟರ್ ಸಾಮರ್ಥ್ಯ ಏನಿತ್ತು ಅದನ್ನು ಮೂರೂವರೆ ಲಕ್ಷಕ್ಕೆ ಏರಿಸುತ್ತಿದ್ದೇವೆ. ಹಾಗೆಯೇ ಮಂಡ್ಯ ಹಾಲು ಒಕ್ಕೂಟ ಹಾಗೂ ಎಲ್ಲಾ ನಮ್ಮ 13 ಒಕ್ಕೂಟಗಳಿಂದ 17 ಡೈರಿಗಳು ಏನಿವೆ ಅವು ಪ್ರತಿಯೊಂದಕ್ಕೂ ಸಾಮರ್ಥ್ಯ ಹೆಚ್ಚು ಮಾಡಬೇಕು. ಮತ್ತು ಚಿಲ್ಲಿಂಗ್ ಪ್ಲಾಂಟ್ ಅವಶ್ಯಕತೆ ಎಲ್ಲಿದೆಯೋ ಅಲ್ಲಿ ಚಿಲ್ಲಿಂಗ್ ಪ್ಲಾಂಟ್ ಹಾಕಬೇಕು. ಹೀಗಾಗಿ ಒಟ್ಟು 100 ಕೋಟಿ ರೂಪಾಯಿ ಎನ್ ಡಿ ಡಿ ಬಿ ಸಹಾಯದಿಂದ ನಮ್ಮ ರಾಜ್ಯದಲ್ಲಿ ಈ ಹಾಲು ಉತ್ಪಾದನೆ ಮಾಡಿ ಜನರಿಗೆ ಹಾಲು ಒದಗಿಸುವ ಸೌಕರ್ಯ ಮಾಡುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಅದರಲ್ಲಿ ವಿಶೇಷವಾಗಿ ಕೆಲವು ಸಲಹೆಗಳನ್ನು ವೆಂಕಟಪ್ಪನವರು ಕೊಟ್ಟಿದ್ದಾರೆ. ಈ ಹಾಲಿನ ದರವನ್ನು ಹೆಚ್ಚಿಸಬೇಕು, ರೈತರಿಗೆ ಮೇವಿನ ಬೆಲೆ ಹೆಚ್ಚಾಗಿದೆ, ಪಶು ಆಹಾರದ ಬೆಲೆ ಹೆಚ್ಚಾಗಿದೆ, ಅದಕ್ಕಾಗಿ ಹಾಲಿನ ದರ ಹೆಚ್ಚು ಮಡಬೇಕೆಂಜು ಹೇಳಿದರು. ಅದರ ಜೊತೆಗೆ ಅಧಿಕಾರಿಗಲು ಮತ್ತು ರೈತರನ್ನು ಸೇರಿಸಿ ಒಂದು ಸಮಿತಿಯನ್ನು ಮಾಡಬೇಕೆಂದೂ, ಆ ಸಮಿತಿ 6 ತಿಂಗಳಿಗೆ ಒಂದು ಸಾರಿ ಸೇರಬೇಕೆಂದು ಸಲಹೆ ಕೊಟ್ಟಿದ್ದಾರೆ. ಆ ಬಗ್ಗೆ ನಾನು ಇನ್ನೊಂದು ವಿಚಾರ ಮಾಡುವುದು ಏನೆಂದರೆ, ಬರೀ ರೈತರು ಹಾಗೂ ಅಧಿಕಾರಿಗಳದ್ದು ಅಷ್ಟೇ ಅಲ್ಲ, ಗ್ರಾಹಕರು ಅದರಲ್ಲಿ ಕನ್ಸ್ಯೂಮರ್ಸ್ ಸೇರಿಸಿ 31 ಸಮಿತಿಗಳನ್ನು ಮಾಡಬೇಕೆಂದು ನಾನು ಯೋಚನೆ ಮಾಡಿದ್ದೇನೆ. ಆದರೆ ಈಗಾಗಲೇ ಬೆಲೆ ಏರಿಸಬೇಕೆಂದರ 3 ತಿಂಗಳ ಹಿಂದೆ 1 ರೂಪಾಯಿ ಪ್ರತಿ ಲೀಟರ್‌ಗೆ ನಮ್ಮ

ರಾಜ್ಯದಲ್ಲಿ ಎಲ್ಲಾ ಯೂನಿಯನ್‌ಗಳಲ್ಲಿ ಏರಿಸಿದೆವು. ಮತ್ತೆ 2 ತಿಂಗಳಲ್ಲಿ ಮತ್ತೊಂದು ಸಲ ಏರಿಸಬೇಕೆಂದರೆ ಇದು ಸೂಕ್ತ ಎನಿಸುವುದಿಲ್ಲ. ಆದರೂ ನಾನು ಎಲ್ಲೇ ಹೋದರೂ ಅಲ್ಲಿ ರೈತರಿಂದ ಬೇಡಿಕೆ ಬರುತ್ತಿದೆ. ಈಗ ಒಂದು ರೂಪಾಯಿ ಏನು ಹಾಲಿನ ದರ ಏರಿಸಿದ್ದೀರೋ ಅದು ಇವತ್ತಿನ ಪರಿಸ್ಥಿತಿಯಲ್ಲಿ ನಮಗೆ ಅದರಿಂದ ಉಪಯೋಗ ಆಗುತ್ತಾ ಇಲ್ಲ, ಸಾಕಷ್ಟು ತೊಂದರೆ ಇದೆಯೆಂದು ರೈತರಿಂದ, ಗೋಪಾಲಕರಿಂದ, ಹಾಲು ಉತ್ಪಾದನೆ ಮಾಡತಕ್ಕ ಜನರಿಂದ ಕೂಗು ಕೇಳಿಬರುತ್ತಾ ಇದೆ.

ಶ್ರೀ ಕೆ. ಹೆಚ್. ರಂಗನಾಥ್ :- ಸಬ್ಸಿಡೈಸ್ ಮಾಡಿ ಕನ್ಸೂಮರ್ಸ್‌ಗೆ ಕೊಟ್ಟರೆ ಯಾರು ಬೇಡವೆಂದು ಹೇಳುತ್ತಾರೆ ? ರೈತರಿಂದ ಕೊಂಡುಕೊಳ್ಳುವ ಬೆಲೆಯನ್ನು ಜಾಸ್ತಿ ಮಾಡಿ ಡೈರಿಯವರು ನೀವು ಲಾಭ ಸಂಪಾದನೆಯನ್ನು ಮಾಡಿ, ಅಥವಾ ಸಬ್ಸಿಡೈಸ್ ಮಾಡಿ ಕೊಟ್ಟರೆ ಸರ್ಕಾರಕ್ಕೆ ತೊಂದರೆಯಾಗುವುದಿಲ್ಲ. ಬಳಕೆದಾರರಿಗೂ ತೊಂದರೆಯೇನೂ ಆಗುವುದಿಲ್ಲ. ನಿಮ್ಮ ಡೈರಿ ನಷ್ಟದಲ್ಲಿಯೇ ಇದೆಯಲ್ಲ. ಇದನ್ನು ಮಾಡಲಿಕ್ಕೆ ಹೇಳಿ.

ಶ್ರೀ ಬಸವರಾಜ್ ಪಾಟೀಲ್ :- ಮಾನ್ಯ ಹಿರಿಯ ಸದಸ್ಯರು ಹೇಳಿದ ಸೂಚನೆಯನ್ನು ಪರಿಶೀಲಿಸಲಾಗುವುದು. ಈಗಾಗಲೇ ಅವರು ಹೇಳಿರುವ ಪ್ರಕಾರ ಇಷ್ಟು ದಿವಸಗಳವರೆಗೆ ಎಲ್ಲಾ ಕಡೆ ಇರುವ ನಮ್ಮ ಒಕ್ಕೂಟಗಳು ಡೈರಿಗಳು ಏನಿವೆ ಅವು ಬಹುತೇಕವಾಗಿ ಸ್ವಲ್ಪ ನಷ್ಟವನ್ನು ಅನುಭವಿಸುತ್ತಾ ಇವೆ. ಬೆಂಗಳೂರು ಒಕ್ಕೂಟ ಈ ವರ್ಷ ಲಾಭ ಮಾಡುತ್ತಿದೆ. ಅದು ಲಾಭ ಪಡೆದು ಹಾಲು ಕೊಡತಕ್ಕ ರೈತರಿಗೆ ಹಾಲು ಉತ್ಪಾದನೆ ಮಾಡತಕ್ಕ ಸದಸ್ಯರಿಗೆ ಬೋನಸ್ ರೂಪದಲ್ಲಿ ಕೆಲವು ರೇಟ್ ಹೆಚ್ಚು ಕೊಡುತ್ತಾ ಇದ್ದೇವೆ. ಇನ್ನು ಸರ್ಕಾರದ ವತಿಯಿಂದ ಸಬ್ಸಿಡಿ ಕೊಡಲಾಗಿದೆ. ಹಾಲಿನ ರೇಟನ್ನು ಹೆಚ್ಚು ಮಾಡಿ ರೈತರಿಗೆ ಕೊಡಬೇಕು. ಸರ್ಕಾರದ ವತಿಯಿಂದ ಸಬ್ಸಿಡಿ ಕೂಡ ಬೇಕು ಅದನ್ನು ಹೆಚ್ಚು ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇನೆಂದು ಹೇಳುತ್ತೇನೆ. ಈಗಾಗಲೇ ಮಾನ್ಯಸದಸ್ಯರು ಕೊಟ್ಟ ಸಲಹೆಯ ಪ್ರಕಾರ 1 ಸಾವಿರ ಜನಸಂಖ್ಯೆ ಎಲ್ಲಿರುತ್ತದೆ ಅಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಮಾಡಬೇಕೆಂದು ಹೇಳಿದ್ದಾರೆ. ಅದರ ಹೊರತಾಗಿ ನಾನು ಇಚ್ಛೆಪಟ್ಟಿದ್ದು ಏನೆಂದರೆ ಜನಗಳು ಹೆಚ್ಚು ಇದ್ದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಮಾಡಿದರೆ ಅಷ್ಟು ಉಪಯುಕ್ತವಾಗುವುದಿಲ್ಲ. ಎಲ್ಲಿ 100 ಲೀಟರ್‌ಗಿಂತ ಹೆಚ್ಚು ಹಾಲು ಸಿಗುತ್ತದೆ ಅಲ್ಲಿ ಮಾಡಬೇಕೆಂದಿದ್ದೇನೆ. ಈಗ ಯೂನಿಯನ್‌ದವರು ಸಾಕಷ್ಟು ಪ್ರತಿಭಟನೆ ಮಾಡಿದರೂ ಹಾಲು ಉತ್ಪಾದಕರ ಸಂಘ ಮಾಡುತ್ತಿಲ್ಲ ಅಲ್ಲಿಂದ ಹಾಲು ಒಯ್ಯುತ್ತಿಲ್ಲ ಅದರಿಂದ ಕಷ್ಟವಾಗುತ್ತಿದೆಂದು ಸದಸ್ಯರು ಹೇಳಿದರು. ಗುಜರಾತಿನಲ್ಲಿ ಅಮೂಲ್ ತಯಾರು ಮಾಡತಕ್ಕ ಘಟಕವಿದೆ. ಡಾ: ಕುರಿಯನ್‌ರವರು ಒಂದು ಅಮೂಲ್ ಘಟಕ ಮಾಡಿದ್ದಾರೆ. ಅದು ಈ ದೇಶದಲ್ಲಿಯೇ ಒಂದು ಮಾದರಿಯಾಗಿದೆ. ನಮ್ಮ ದೇಶದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಅದರ ಒಂದು ಪ್ಯಾಟ್ರನ್ ನಲ್ಲಿ ಇವತ್ತು ನಡೆಯುತ್ತಿದೆ. ರೈತರಿಗೆ, ಹಾಲು ಉತ್ಪಾದಕರ ಸಂಘದವರಿಗೆ ಅಲ್ಲಿಗೆ ಕಳುಹಿಸಿ ಒಂದು ಟ್ರೈನಿಂಗ್ ಕೊಡಿಸುವ ಮತ್ತು ಅದನ್ನು ತೋರಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಸಲಹೆಯನ್ನು ಹೇಳಿದ್ದಾರೆ. ಈಗಾಗಲೇ ಆ ಕಾರ್ಯ ಪ್ರಾರಂಭವಾಗಿದೆ, ಪ್ರತಿಯೊಂದು ಹಾಲು ಉತ್ಪಾದಕರ ಸಂಘ ಏನಿದೆ ಅದರಿಂದ ಒಂದೊಂದು ಸಂಘದಿಂದ ಇಬ್ಬರಿಗೆ ಆಯ್ಕೆ ಮಾಡಿ ಗುಜರಾತಿನ ಅಮೂಲ್ ಘಟಕಕ್ಕೆ ಕಳುಹಿಸಿ ಅಲ್ಲಿ ಯಾವರೀತಿಯಿಂದ ಹಾಲು ಪ್ರಗತಿ ಮಾಡಲಿಕ್ಕೆ ಯಾವ್ಯಾವ ಕಾರ್ಯ ಪ್ರಾರಂಭ ಮಾಡಿದ್ದಾರೆ, ಯಾವರೀತಿಯಿಂದ ಹಾಲು ಪ್ರಗತಿ ಮಾಡಲಿಕ್ಕೆ ಯಾವ್ಯಾವ ಕಾರ್ಯ ಪ್ರಾರಂಭ ಮಾಡಿದ್ದಾರೆ, ಯಾವರೀತಿಯಿಂದ ಹಾಲು ಹೆಚ್ಚು ಉತ್ಪಾದನೆ ಮಾಡಬಹುದು ಎನ್ನುವುದನ್ನು ತಿಳಿಯಬೇಕಾಗುತ್ತದೆ. ಕರ್ನಾಟಕ ಮಹಾ ಮಂಡಳಿಯ ಆಶ್ರಯದಲ್ಲಿ 5,475 ಸೊಸೈಟಿಗಳಿವೆ, ಪ್ರತಿಯೊಂದು ಸೊಸೈಟಿಯಿಂದ ಇಬ್ಬರು ಅಂದರೆ ಕನಿಷ್ಠ ವರ್ಷಕ್ಕೆ 11 ಸಾವಿರ ಜನಗಳಿಗೆ ಗುಜರಾತ್ ಅಮೂಲ್ ಘಟಕಕ್ಕೆ ಟ್ರೈನಿಂಗ್ ತೆಗೆದುಕೊಳ್ಳುವುದಕ್ಕೆ ಕಳುಹಿಸಬಹುದು. ಈಗಾಗಲೇ ಆ ಕಾರ್ಯಕ್ರಮವನ್ನು ಹಾಕಿಕೊಂಡು ಕಳುಹಿಸುತ್ತಿದ್ದೇವೆ. ಹಾಲು ಉತ್ಪಾದನೆ ಮಾಡಿ ಹಳ್ಳಿಯ ಜನ

ಪಟ್ಟಣಗಳಿಗೆ ಕಳುಹಿಸುತ್ತಾರೆ. ಬರೀ ದೊಡ್ಡ ದೊಡ್ಡ ಪಟ್ಟಣ ಪ್ರದೇಶಗಳಲ್ಲಿ ಹಾಲು ಮಾರಾಟ ಮಾಡಿ ಹಳ್ಳಿಯ ಜನರಿಗೆ ಪೂರೈಸದಿದ್ದರೆ ಹೇಗೆ ಹಳ್ಳಿಯ ಜನರಿಗೆ ಸವಲತ್ತುಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಕೂಡ ಈಗಾಗಲೇ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಅವಶ್ಯಕ ಅನಿಸುತ್ತದೆ ಅಲ್ಲೂ ಹಾಲಿನ ಸರಬರಾಜು ಮಾಡಿ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗುತ್ತದೆಂದು ಹೇಳುತ್ತೇನೆ. ಈ ಹಾಲು ಉತ್ಪಾದಕರಿಗೆ ಯಾವರೀತಿಯಿಂದ ನಾವು ಸವಲತ್ತು ಕೊಡಬೇಕೆಂದು ಕೆಲವರು ಹೇಳಿದ್ದಾರೆ. ಅವರಿಗೆ ಪಶು ಆಹಾರ ಏನಿದೆ, ಅದನ್ನು ಒದಗಿಸಬೇಕು, ರೀಸನೆಬಲ್ ರೇಟ್‌ನಲ್ಲಿ ಮೇವಿನ ಬೀಜದ ಸಹಾಯ ಮಾಡಬೇಕು, ಅವರ ಹಸು, ಎಮ್ಮೆ ಮುಂತಾದ ಪ್ರಾಣಿಗಳಿಗೆ ಯಾವುದೇ ರೀತಿಯಿಂದ ರೋಗ ಬಾರದಂತೆ ಕೆ.ಎಂ.ಎಫ್. ವತಿಯಿಂದ ಔಷಧೋಪಚಾರ ಕೂಡ ಮಾಡಬೇಕೆಂದು ಹೇಳಿದ್ದಾರೆ. ಪ್ರತಿವರ್ಷ 3 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಎಲ್ಲಾ ಪಶು ಸಂಚಾರಿ ವಾಹನಗಳ ಮುಖಾಂತರ ಸಾಧ್ಯವಾದಷ್ಟು ಆಹಾರವನ್ನು ನಾವು ಒದಗಿಸುತ್ತಿದ್ದೇವೆ. ಇದಕ್ಕಾಗಿ ಈಗಾಗಲೇ ಹೇಳಿದ ಹಾಗೆ 1992-93ರಲ್ಲಿ ಮೂರು ಕೋಟಿ ರೂಪಾಯಿಗಳ ಹಣ ನಿಗದಿಪಡಿಸಲಾಗಿದೆ. ಇನ್ನೊಂದು ಏನು ಹೇಳಿದ್ದಾರೆ ಎಂದರೆ 25-50 ವರ್ಷಗಳನ್ನು ಕಳೆದ ಸಹಕಾರ ಸಂಘಗಳಲ್ಲಿ ಬೆಳ್ಳಿ ಹಬ್ಬ ಆಚರಣೆ ಮಾಡುತ್ತಾರೆ. ಆದರೆ ಹಾಲು ಮಹಾ ಮಂಡಳಿಯವರು ಅಥವಾ ಬೆಂಗಳೂರು ಹಾಲು ಒಕ್ಕೂಟದವರು ಇದುವರೆಗೂ ಯಾವುದೇ ಹಬ್ಬವನ್ನು ಆಚರಣೆ ಮಾಡಿಲ್ಲ ಎಂದು ಈ ಬೆಳ್ಳಿಹಬ್ಬ ಆಚರಣೆ ಮಾಡುವುದಕ್ಕೆ ಆದಷ್ಟು ಬೇಗನೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಕೊಟ್ಟಿದ್ದಾರೆ. ನಾನು ಈ ಬಗ್ಗೆ ವಿಚಾರಿಸಿದಾಗ ಬೆಂಗಳೂರು ಮಹಾ ಮಂಡಳಿಯವರು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಆದಷ್ಟು ಬೇಗನೆ ಈ ಬೆಳ್ಳಿಹಬ್ಬವನ್ನು ಆಚರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಶ್ರೀ ಹರ್ಷಕುಮಾರಗೌಡ ಅವರು ಮಾತನಾಡುವಾಗ ಹೇಳಿದರು, ಮೈಸೂರಿನಲ್ಲಿ ಹಾಲಿನ ಕೊರತೆ ಇದೆ, ಅಲ್ಲಿ ಡೈರಿ ಮಾಡುವುದಕ್ಕೆ ಆಗಿಲ್ಲವೆಂದು ಇದರಿಂದ ಅಲ್ಲಿನ ಜನರಿಗೆ ತೊಂದರೆಯಾಗುತ್ತಿದೆ ಎಂದು ಕೂಡ ಅವರು ಹೇಳಿದ್ದಾರೆ. ಅಧ್ಯಕ್ಷರೇ ಈಗಾಗಲೇ ಬೆಂಗಳೂರಿನಲ್ಲಿ ಒಂದು ಲಕ್ಷ ಲೀಟರ್ ಹಾಲಿನ ಒಂದು ಡೈರಿ ಇದೆ. ಅದನ್ನು ಒಂದೂವರೆ ಲಕ್ಷಕ್ಕೆ ಏರಿಸಲಿಕ್ಕೆ ಎನ್ ಡಿ ಡಿ ಬಿ ಯಿಂದ ಸಾಲ ಮಂಜೂರಾಗಿದೆ. ಅದರ ಕೆಲಸ ನಡೆದಿದೆ. ಮೈಸೂರು ನಗರದಲ್ಲಿ ಈಗ 80 ಸಾವಿರ ಲೀಟರ್ ಹಾಲಿನ ಅವಶ್ಯಕತೆ ಇದೆ. ಬೇಸಿಗೆಯಲ್ಲಿ ಹಾಲಿನ ಕೊರತೆ ಇರುವುದರಿಂದ ಅಲ್ಲಿಗೆ 65 ಸಾವಿರ ಲೀಟರ್ ಹಾಲನ್ನು ಪ್ರತಿದಿನ ಪೂರೈಸಲಾಗುತ್ತಿದೆ. ಇನ್ನೂ ಹದಿನೈದು ಲೀಟರ್ ಹಾಲನ್ನು ಪೌಡರ್ ಮುಖಾಂತರವಾಗಲಿ, ಬೇರೆ ಕೆಲವು ಮೂಲಗಳಿಂದ ಪೂರೈಸಲು ವ್ಯವಸ್ಥೆ ಮಾಡುತ್ತಿದ್ದೇವೆ. ಈಗಾಗಲೇ ಕರ್ನಾಟಕ ಹಾಲು ಮಹಾಮಂಡಳಿಯ ವತಿಯಿಂದ ರೈತರಿಗೆ ಆಗಲಿ, ಹಾಲು ಉತ್ಪಾದನೆ ಮಾಡತಕ್ಕಂಥ ಜನರಿಗೆ ಆಗಲಿ, ಮತ್ತು ಈ ನಿಗಮಗಳಿಗಾಗಲೀ, ಯೂನಿಯನ್‌ಗಳಿಗಾಗಲೀ, ಸಾಕಷ್ಟು ರೀತಿಯಿಂದ ಹಣ ಒದಗಿಸಿ ಸೌಲಭ್ಯಗಳನ್ನು ಕೊಟ್ಟು ನಮ್ಮ ಕರ್ನಾಟಕ ರಾಜ್ಯದಲ್ಲಿ ಹಾಲು ಹೆಚ್ಚಿಗೆ ಉತ್ಪಾದನೆ ಮಾಡಲು ಸಾಕಷ್ಟು ಪ್ರಗತಿಪರ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ನಮ್ಮ ಪಶುಸಂಗೋಪನೆ ವಿಷಯದಲ್ಲಿ 1991-92ನೇ ಸಾಲಿನಲ್ಲಿ ಮಾಡಿದಂಥ ಪ್ರಗತಿಕಾರ್ಯ ಮತ್ತು 1992-93ರಲ್ಲಿ ಮಾಡಬೇಕಾದಂಥ ಕೆಲವು ವಿಷಯಗಳನ್ನು ಸನ್ಮಾನ್ಯ ಸದಸ್ಯರ ಎದುರುಗಡೆ ತರುತ್ತಿದ್ದೇನೆ. ಈಗಾಗಲೆ ನನಗೆ ಅನ್ನಿಸಿದ ಮಟ್ಟಿಗೆ, ಪಶುಸಂಗೋಪನೆ ಇಲಾಖೆಯಲ್ಲಿ 1989-90ರ ತನಕ ಏಳೆಂಟು ವರ್ಷಗಳಿಂದ ಯಾವುದೇ ಹೊಸ ಆಸ್ಪತ್ರೆ ಆಗಿರಲಿಲ್ಲ. 1989-90, 1991-92 ಮತ್ತು ಈ ವರ್ಷ 1992-93ನೇ ಸಾಲಿಗೆ ಅಷ್ಟರಮಟ್ಟಿಗೆ ಹೇಳುವುದಾದರೆ ಹೊಸ ಪ್ರಾಥಮಿಕ ಪಶು ಚಿಕಿತ್ಸಾಲಯಗಳಾಗಲೀ, ಅವುಗಳನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಕಾರ್ಯಕ್ರಮವನ್ನು ಈ ಮೂರು ವರ್ಷಗಳಲ್ಲಿ ಹಾಕಿಕೊಳ್ಳಲಾಗಿದೆ. 1991-92ನೇ ಸಾಲಿನಲ್ಲಿ ಎರಡು ನೂರು ಪ್ರಾಥಮಿಕ ಪಶುವೈದ್ಯಶಾಲೆಗಳನ್ನು ಮಂಜೂರು

1.15 ಪಿ. ಎಂ

ಮಾಡಲಾಗಿದೆ. 80 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಉನ್ನತೀಕರಿಸಲಾಗಿದೆ. 92-93ನೇ ಸಾಲಿನಲ್ಲಿ

200 ಹೊಸ ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ತೆಗೆದುಕೊಳ್ಳಬೇಕೆಂದು, 100 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೇರಿಸಬೇಕೆಂದು ಈ ವರ್ಷದ ಬಜೆಟ್‌ನಲ್ಲಿ ಇನ್‌ಕ್ಲೂಡ್ ಮಾಡಿರುತ್ತೇವೆ. ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಬರೀ ಆಸ್ಪತ್ರೆಗಳನ್ನು ತೆರೆಯುತ್ತಿದ್ದೀರಿ, ಸಾಕಷ್ಟು ಕಡೆ ಡಾಕ್ಟರ್ಸ್ ಪೋಸ್ಟ್ ವೇಕೆಂಟ್ ಇದೆ, ಕಾಂಪೌಂಡರ್ಸ್ ಪೋಸ್ಟ್ ವೇಕೆಂಟ್ ಇದೆ ಎಂದು ಮಾನ್ಯ ಸದಸ್ಯರು ಕೇಳಬಹುದು.

ಶ್ರೀ ಕೆ. ಹಚ್. ರಂಗನಾಥ್ :- ರೆಕ್ರೂಟ್ ಮಾಡಬೇಕು.

ಶ್ರೀ ಬಸವರಾಜ ಪಾಟೀಲ್ :- ಈಗಾಗಲೇ ನಾವು 45 ಡಾಕ್ಟರ್ಸ್‌ಗಳನ್ನು ಅಪಾಯಿಂಟ್ ಮಾಡಿಕೊಂಡು ಒಂದು ವಾರದ ಹಿಂದೆ ಆರ್ಡರ್ಸ್ ಕಳುಹಿಸಿದ್ದೇವೆ. ಇನ್ನೂ 50 ಜನ ಡಾಕ್ಟರ್ಸ್‌ಗಳನ್ನು ಆಯ್ಕೆ ಮಾಡಿ ಕಳುಹಿಸುವಂತೆ ಕೆ.ಪಿ.ಎಸ್.ಸಿ.ಗೆ ಬರೆದಿದ್ದೇವೆ. ಇನ್ನು ಹೊಸದಾಗಿ 80 ಪ್ರಾಥಮಿಕ ಪಶು ಚಿಕಿತ್ಸಾಲಯಗಳು ಎಂದು ಏನು ಮಾಡಿದ್ದೇವೆ ಅದಕ್ಕೂ ಕೂಡಾ ಆದಷ್ಟು ಬೇಗ ಡಾಕ್ಟರ್‌ಗಳನ್ನು ಆಯ್ಕೆ ಮಾಡಲು ಕೆ.ಪಿ.ಎಸ್.ಸಿ.ಗೆ ಕಳುಹಿಸುತ್ತೇವೆ. ಹೀಗೆ 45, 80, 50 ಒಟ್ಟು175 ಪಶುವೈದ್ಯರನ್ನು ನೇಮಕ ಮಾಡಿಕೊಂಡು ಎಲ್ಲೆಲ್ಲಿ ಆಸ್ಪತ್ರೆಗಳನ್ನು ತೆಗೆದಿದ್ದೇವೆ, ಯಾವ ಯಾವ ಆಸ್ಪತ್ರೆಗಳಲ್ಲಿ ಪಶುವೈದ್ಯರ ಹುದ್ದೆಗಳು ಖಾಲಿ ಇವೆ, ಅಲ್ಲಿಗೆ ಆದಷ್ಟು ಬೇಗನೆ ಅಪಾಯಿಂಟ್‌ಮೆಂಟ್ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಂ. ಯಾಹ್ಯಾ :- ನಮ್ಮಲ್ಲಿ ವೆಟರ್‌ನರಿ ಡಾಕ್ಟರ್ಸ್ ಬಹಳ ಹೆಚ್ಚಾಗಿದ್ದಾರೆ. ಅವರಿಗೆ ಎಂಪ್ಲಾಯ್‌ಮೆಂಟ್ ಇಲ್ಲ. ಅನ್‌ಎಂಪ್ಲಾಯ್ಡ್ ಆಗಿದ್ದಾರೆ. ಈಗ ನೀವು ಒಂದು ರೀತಿಯಲ್ಲಿ 150-160 ಡಾಕ್ಟರ್ಸ್‌ನ್ನು ರೆಕ್ರೂಟ್ ಮಾಡುತ್ತಿದ್ದೀರಿ. ಇನ್ನೊಂದು ರೀತಿಯಲ್ಲಿ ಏನಾಗಿದೆ ಯಾವ ಹಾಸ್ಪಿಟಲ್‌ನಲ್ಲಿ ವೆಟರ್‌ನರಿ ಡಾಕ್ಟರ್ಸ್ ಇರಬೇಕು, ಅಲ್ಲಿ ನಾನ್ ವೆಟರ್‌ನರಿ ಜನರನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದೀರಿ. ಇವರು ಕ್ವಾಲಿಫೈಡ್ ಆಗಿದ್ದರೆ ಮಾತ್ರ ಇವರಿಂದ ಹೆಚ್ಚು ಪ್ರಯೋಜನ ಆಗುವುದಕ್ಕೆ ಸಾಧ್ಯ ಇದೆ. ಅಂತಹವರಿಗೆ ಅಲ್ಲಿಗೆ ಕಳುಹಿಸಿ ಕೊಟ್ಟು ನಾನ್‌ವೆಟರ್‌ನರಿ ಯಾರು ಇದ್ದಾರೆ ಅವರನ್ನು ತಪ್ಪಿಸುವುದು ಒಳ್ಳೆಯದೆಂದು ಕಾಣುತ್ತದೆ. ಪ್ರೈಮರಿ ವೆಟರ್‌ನರಿ ಹೆಲ್ತ್ ಸೆಂಟರ್‌ನಲ್ಲಿ ನಾನ್‌ವೆಟರ್‌ನರೀಸ್ ಇದ್ದಾರೆ, ಅದನ್ನಾದರೂ ಸರಕಾರ ಯೋಚನೆ ಮಾಡಿ ಒಂದು ಸೈಂಟಿಫಿಕ್ ಆದ ರೀತಿಯಲ್ಲಿ ಕಾರ್ಯಗತ ಮಾಡಬೇಕೆಂದು ಹೇಳುತ್ತೇನೆ.

ಛೇರ್ಮನ್:- ರಿಪ್ಲೈ ಮುಗಿದಮೇಲೆ ತಾವು ದಯವಿಟ್ಟು ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಸವರಾಜ ಪಾಟೀಲ್ :- ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ನನ್ನ ಗಮನಕ್ಕೆ ಬಂದಿದೆ. ಕೆಲವು ಕಡೆ ವೆಟರ್‌ನರಿ ಗ್ರಾಜುಯೇಟ್ಸ್ ಟ್ರೈನಿಂಗ್ ಪಡೆದಂಥವರು ಯಾವ ಸ್ಥಳಕ್ಕೆ ಹೋಗಬೇಕು ಅಲ್ಲಿ ಬೇರೆ ಜನರಿಗೆ ಮಾಡಿದ್ದೇವೆ, ಇದು ನನ್ನ ಗಮನಕ್ಕೆ ಬಂದಿದೆ. ಅವರು ಹೇಳಿದ ಸಲಹೆ ಉಪಯುಕ್ತವಾದುದು. ಆದಷ್ಟು ಬೇಗನೆ ಏನು ತೊಂದರೆ ಇದೆ ಅದನ್ನು ಸರಿ ಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳುತ್ತಿದ್ದೇನೆ. ಈಗಾಗಲೇ ತಾವು ಹೇಳಿದ ಹಾಗೆ ವೆಟರ್‌ನರಿ ಸರ್ಜನ್ಸ್ ನಿರುದ್ಯೋಗಿಗಳಾಗಿ ಬಹಳ ಜನ ಇದ್ದಾರೆ. ಈ ಪ್ರಾಬ್ಲಂ ಸಾಲ್ವ್ ಮಾಡುವುದಕ್ಕೆ ಕೇಂದ್ರ ಸರ್ಕಾರ ಹೊಸದಾಗಿ ಒಂದು ಕಾರ್ಯಕ್ರಮ ಹಾಕಿಕೊಂಡಿದೆ. ವೆಟರ್‌ನರಿ ಗ್ರಾಜುಯೇಟ್ಸ್ ಏನಿದ್ದಾರೆ, ಅವರು ಎಲ್ಲಿ ನಮ್ಮ ಹಳ್ಳಿಗಳಲ್ಲಿ ಆಸ್ಪತ್ರೆಗಳು ಇರುವುದಿಲ್ಲ, ಅಲ್ಲಿ ಹೋಗಿ, ಅವರೇನಾದರೂ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ತಯಾರಾಗಿದ್ದರೆ, ಅವರಿಗೆ ಐದು ವರ್ಷದವರೆಗೆ ತಿಂಗಳಿಗೆ ಎರಡು ಸಾವಿರ ರೂಪಾಯಿಗಳನ್ನು ಧನಸಹಾಯ ರೂಪದಲ್ಲಿ ಕೊಡುತ್ತೇವೆಂದು ಘೋಷಣೆ ಮಾಡಿರುತ್ತಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 33 ಪಶು ವೈದ್ಯರುಗಳಿಗೆ ಪ್ರತಿ ತಿಂಗಳು, ಅವರು ಹಳ್ಳಿಯಲ್ಲಿ ಹೋಗಿ ಸೇವೆ ಸಲ್ಲಿಸುವುದಕ್ಕೆ ಸಿದ್ಧರಿದ್ದಾರೆ, ಅವರಿಗೆ ತಿಂಗಳಿಗೆ ಎರಡು ಸಾವಿರ ರೂಪಾಯಿ ಕೊಡುತ್ತಿದ್ದೇವೆ. ಸಾಕಷ್ಟು ಡಾಕ್ಟರ್‌ಗಳಿಗೆ ನಾವೂ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತಿದ್ದೇವೆ. ಡಾಕ್ಟರ್ಸ್ ಒಂದೇ ಅಲ್ಲ ಇನ್ನೂ ಕೆಲವು ಹುದ್ದೆಗಳು ಇದರಲ್ಲಿ ಏನಿದೆ, ಪ್ರಾಥಮಿಕ ಪಶು ಚಿಕಿತ್ಸಾಲಯಗಳಲ್ಲಿ. ಕಾಂಪೌಂಡರ್ಸ್ ಲೈವ್‌ಸ್ಟಾಕ್ ಇನ್‌ಸ್ಪೆಕ್ಟರ್ಸ್, ಈ ಹುದ್ದೆಗಳೂ

ಕೂಡಾ ಸಾಕಷ್ಟು ಸ್ಥಳಗಳು ಖಾಲಿ ಇವೆ, ಇದಕ್ಕೆ ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಒಂದು ಕಮಿಟಿ ಇದೆ. ಈ ಕಮಿಟಿ ಮುಖಾಂತರ ನಮ್ಮಲ್ಲಿ ಟ್ರೈನಿಂಗ್ ಪಡೆದಂಥ 120 ಪಶು ಪರೀಕ್ಷಕರನ್ನು, 118 ಪಶು ಸಹಾಯಕರನ್ನು ಶೀಘ್ರವೇ ಆಯ್ಕೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿದ ಮೇಲೂ ಇವತ್ತು ನಮ್ಮ ಪರಿಸ್ಥಿತಿ ಏನಿದೆ ಅಂದರೆ ಟ್ರೈನಿಂಗ್ ಪಡೆದಂತಹ ಸಾಕಷ್ಟು ಜನ ಅಭ್ಯರ್ಥಿಗಳು ಇಲ್ಲ. ಅದಕ್ಕಾಗಿ ನಾವು ಈ ವರ್ಷ ಹೊಸದಾಗಿ ಒಂದು ಯೋಜನೆಯನ್ನು ಹಾಕಿಕೊಂಡು ಈಗಾಗಲೇ 480 ಜನ ಪಶು ಪರೀಕ್ಷಕರಿಗೆ 480 ಜನ ಪಶು ಸಹಾಯಕರಿಗೆ 12 ಸೆಂಟರ್ಸ್‌ಗಳಲ್ಲಿ ಟ್ರೈನಿಂಗ್ ಕೊಟ್ಟು, ಈ ವರ್ಷ ಸಮೀಪ ಒಂದು ಸಾವಿರ ಜನಗಳಿಗೆ ಇದೇ ತಿಂಗಳಿಂದ ಟ್ರೈನಿಗ್ ಕೊಟ್ಟು, ಮುಂದೆ ಹೊಸದಾಗಿ ಮಾಡುವಂತಹ ಆಸ್ಪತ್ರೆಗಳಿಗೆ ನೇಮಕ ಮಾಡಿಕೊಳ್ಳಲಿಕ್ಕೆ ಅನುಕೂಲವಾಗಬೇಕೆಂಬ ಒಳ್ಳೆಯ ಉದ್ದೇಶದಿಂದ ಇಷ್ಟು ಜನಗಳಿಗೆ ಟ್ರೈನಿಂಗ್ ಪ್ರಾರಂಭ ಮಾಡಲಾಗಿದೆ. ಅದರಲ್ಲೂ ವಿಶೇಷವಾಗಿ ಈ ವರ್ಷ ಹೊಸದಾಗಿ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಟ್ರೈನಿಂಗ್ ಪಡೆಯತಕ್ಕ ಜನರಲ್ಲಿ ಯಾರಾದರೂ ಎಸ್.ಸಿ / ಎಸ್.ಟಿ. ಅಭ್ಯರ್ಥಿಗಳಿದ್ದರೆ ಅವರಿಗೆ 400 ರೂಪಾಯಿ ಸ್ಟೈಫಂಡ್ ಕೊಡಬೇಕೆಂದು ಸಹ ಸರ್ಕಾರದ ವತಿಯಿಂದ ಈ ವರ್ಷ ನಾವು ಪ್ರಾರಂಭ ಮಾಡುತ್ತಿದ್ದೇವೆ. ಹೊಸದಾಗಿ ಕೆಲವು ಕಾರ್ಯಕ್ರಮಗಳನ್ನು ಸರ್ಕಾರದವರು ರೂಪಿಸಿದ್ದಾರೆ. ನಮ್ಮ ಜಾನುವಾರುಗಳಿಗೆ ಬರತಕ್ಕಂಥ ರೋಗಗಳು, ಆ ರೋಗಗಳು ಬರುವುದಕ್ಕೆ ಮೊದಲೇ ಮುಂಜಾಗ್ರತಾವಾಗಿ ತಡೆಯುವುದಕ್ಕೆ ಮುಂಜಾಗ್ರತಾ ಕ್ರಮವಾಗಿ ಪರೀಕ್ಷೆ ಮಾಡಬೇಕು ಆದಷ್ಟು ಬೇಗ ಎಲ್ಲಾ ಹಳ್ಳಿಗಳಲ್ಲಿ ರತಕ್ಕಂಥ ಭಾಗಗಳಿಗೆ ಹೋಗಿ ಪ್ರಾಣಿಗಳಿಗೆ ಲಸಿಕೆ ಕೊಟ್ಟು ಮುಂದೆ ಆ ರೋಗ ಬರದಂತೆ ನೋಡಿಕೊಂಡು ಹೋಗಬೇಕೆನ್ನುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಹೆಬ್ಬಾಳದಲ್ಲಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಗಳಲ್ಲಿ ಅನಿಮಲ್ ಹೆಲ್ತ್ ಇನ್‌ಸ್ಟಿಟ್ಯೂಟ್ ಅಂತ ಒಂದು ಇದೆ ಅವರು ಸಾಕಷ್ಟು ಒಳ್ಳೆಯ ರೀತಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ನಮ್ಮ ಜಾನುವಾರುಗಳಿಗೆ ರೋಗ ಬರದಂತೆ ಮುಂಜಾಗ್ರತಾ ಕ್ರಮವಾಗಿ ತೆಗೆದುಕೊಳ್ಳುವುದಕ್ಕೆ ಸಾಕಷ್ಟು ಲಸಿಕೆ ತಯಾರು ಮಾಡಿದ್ದಾರೆ. ನಮ್ಮ ರಾಜ್ಯದ ಮೂಲೆ ಮೂಲೆಯಲ್ಲಿರುವ ಪಶು ಆಸ್ಪತ್ರೆಗಳಿಗೆ ಸಂಚಾರಿ ಆಸ್ಪತ್ರೆಗಳಿಗೆ ಕೃತಕ ಗರ್ಭಧಾರಣೆ ಕೇಂದ್ರಗಳಿಗೆ ಈ ಲಸಿಕೆಗಳನ್ನು ಸರಬರಾಜು ಮಾಡಿದರೆ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ. ಇನ್ನು ನಮ್ಮ ದೇಶದಲ್ಲಿ ದೊಡ್ಡ ರೋಗ ಎಂದು ಒಂದು ಇದೆ. ಇದು ಒಂದು ಕೆಟ್ಟ ಬ್ಯಾನಿ. ಬಹುತೇಕ ನಮ್ಮ ಡಾಕ್ಟರ್ಸ್ ಹೇಳುತ್ತಾರೆ. ಅವರು ಹೇಳುವ ಪ್ರಕಾರ ಈ ಬ್ಯಾನಿ ಬಹಳ ಕೆಟ್ಟದ್ದು ಇದೆ. ಇದು ಬಂತು ಅಂದರೆ ಜಾನುವಾರುಗಳು ಒಳ್ಳೆಯ ರೀತಿಯಿಂದ ಆಗಬೇಕು ಸುಧಾರಣೆ ಆಗಬೇಕೆಂದರೆ ಬಹಳ ಕಷ್ಟ ಇದೆ. ದೊಡ್ಡ ರೋಗ ಬರದಂತೆ ಮೊದಲು ಮುಂಜಾಗ್ರತೆಯಾಗಿ ನೋಡಿಕೊಂಡು ಹೋಗಬೇಕೆಂದು ಹೇಳಿ ಈಗಾಗಲೇ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಕ್ಕೆ ಹೇಳಿ ಈ ಕಾರ್ಯಕ್ರಮ ಹಾಕಿ ಕೊಂಡಿದ್ದಾರೆ. ಈಗ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಹೇಗೆ ದೇವಿ ತೋರಿಸಿ ಒಂದು ಸಾವಿರ ರೂಪಾಯಿ ಬಹುಮಾನ ಪಡೆಯಿರಿ ಎಂದು ಹೇಳುತ್ತಾರೋ ಹಾಗೆ ಅನಿಮಲ್‌ಗಳಿಗೆ ಈ ದೊಡ್ಡ ರೋಗ ಬರಬಾರದು ಅಂತ ಹೇಳಿ ಈ ವರ್ಷ ಕೇಂದ್ರ ಸರ್ಕಾರದಿಂದ ನಮಗೆ 50 ಲಕ್ಷ ರೂಪಾಯಿಗಳನ್ನು ಈಗಾಗಲೇ ನಮಗೆ ಕೊಟ್ಟಿದ್ದಾರೆ. ಇದು ಲಸಿಕೆ ಹಾಕಬೇಕು ಈ ಕಾರ್ಯಕ್ರಮ 5 ವರ್ಷಗಳಲ್ಲಿ 6 ತಿಂಗಳಲ್ಲಿ ಒಂದೊಂದು ಸಲ ಲಸಿಕೆ ಕೊಡಬೇಕು ಈ ಔಷದೋಪಚಾರಕ್ಕೆ ಯಾವ ರೀತಿ ಮಾಡಬೇಕು ದೊಡ್ಡ ರೋಗ ಬರದಂತೆ ನೋಡಿಕೊಂಡು ಹೋಗಬೇಕು ಎಂದು ಹೇಳಿ ಈ ವರ್ಷದಿಂದ 5 ವರ್ಷದವರೆಗೆ ಕೇಂದ್ರ ಸರ್ಕಾರ ನಮಗೆ 50 ಲಕ್ಷ ರೂಪಾಯಿಗಳ ಒಂದು ಸ್ಕೀಮ್‌ಗೆ ಕೊಟ್ಟಿದ್ದಾರೆ. ಇನ್ನೊಂದು ಹೆಸರುಘಟ್ಟದಲ್ಲಿ ರಾಷ್ಟ್ರೀಯ ಜಾನುವಾರುಗಳ ಪೌಷ್ಟಿಕ ಆಹಾರ ಫಿಯಾಲಜಿ ಸಂಸ್ಥೆಯನ್ನು ಸ್ಥಾಪನೆ ಮಾಡಲು ನಮ್ಮ ಸರ್ಕಾರ ಅನುಮತಿ ಕೊಟ್ಟಿದೆ. ಈ ಸಂಸ್ಥೆಯಿಂದ ಪೌಷ್ಟಿಕ ಆಹಾಯ ತಯಾರಿಸುವುದು ಮತ್ತು ಸಂಶೋಧನೆ ನಡೆಸುವ ಉದ್ದೇಶದಿಂದ ಈ ಸಂಸ್ಥೆಯನ್ನು ಭಾರತ ಕೃಷಿ ಸಂಶೋಧನಾ ಕೇಂದ್ರ ನವದೆಹಲಿ ಇದರಿಂದ ಸ್ಥಾಪನೆ ಮಾಡಲಾಗುವುದು, ಈ ಸಂಸ್ಥೆಯ ಉದ್ದೇಶ ಜಾನುವಾರುಗಳಿಗೆ ಪೌಷ್ಟಿಕ ಆಹಾರದ ಬೆಲೆ

ಕಡಿಮೆ ಮಾಡಿ, ಪ್ರಾಣಿಗಳ ಉತ್ಪಾದನೆಯನ್ನು ಹೆಚ್ಚು ಮಾಡುವುದು ಹಾಲು, ಮಾಂಸ, ಮೊಟ್ಟೆ ಉತ್ಪಾದನೆ ಹೆಚ್ಚು ಮಾಡುವುದು. ಈ ಸಂಸ್ಥೆಯ ವೆಚ್ಚವನ್ನು ಭಾರತ ಕೃಷಿ ಸಂಶೋಧನಾ ಕೇಂದ್ರವೇ ಭರಿಸುವುದು. ನಮ್ಮ ಕರ್ನಾಟಕ ಸರ್ಕಾರ ಮಂಜೂರಾತಿ ಕೊಟ್ಟು 100 ಎಕರೆ ಜಮೀನು ಕೇಳಿದ್ದಾರೆ. ಹೆಸರುಘಟ್ಟದಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಕೊಡಲು ಒಪ್ಪಿಗೆ ಕೊಟ್ಟು ಕೇಂದ್ರ ಸರ್ಕಾರದ ಕಂಡೀಷನ್ಸ್ ಏನಿದೆ ಅದರ ಪ್ರಕಾರ ಜಮೀನನ್ನು ಕೊಡಲು ಒಪ್ಪಿದ್ದೇವೆ .

ಶ್ರೀ ಕೆ. ಹೆಚ್. ರಂಗನಾಥ್ :- ಯಾವುದೂ ಮಾಡಿಲ್ಲ. ಎಲ್ಲಾ ಹಾಗೆಯೇ ಇದೆ.

ಶ್ರೀ ಬಸವರಾಜ ಪಾಟೀಲ್ :- ಭೂಮಿ ಎಲ್ಲಾ ಅಲ್ಲಿ ಇದೆ. ಇದ್ದದ್ದನ್ನೂ ಬಿಟ್ಟರೆ ಬೇರೆ ಕಡೆ ಹೋಗಬೇಕು.

ಶ್ರೀ ಕೆ. ಹೆಚ್. ರಂಗನಾಥ್ :- ಎಲ್ಲವೂ ಇಲ್ಲೇ ಇದೆ.

ಶ್ರೀ ಬಸವರಾಜ ಪಾಟೀಲ್ :- ಈಗ ಹಿರಿಯ ಸದಸ್ಯರು ಹೇಳಿದ ಪ್ರಕಾರ ಬೇರೆ ಕಡೆಯೂ ಸಾಕಷ್ಟು ನಮ್ಮ ಅನಿಮಲ್ ಹಸ್‌ಬೆಂಡರಿ ಭೂಮಿ ಇದೆ. ಎಲ್ಲಾ ಭಾಗದಲ್ಲಿ, ಈ ಸಂಸ್ಥೆಗಳನ್ನು , ಒಂದೊಂದು ಮೂಲೆ ಮೂಲೆಯಲ್ಲೂ, ಬೇರ ಬೇರೆ ಡಿವಿಷನ್‌ನಲ್ಲಿ ಸ್ಥಾಪನೆ ಮಾಡಲಿಕ್ಕೆ ಕಾರ್ಯಕ್ರಮ ರೂಪಿಸಲಾಗುತ್ತಿದೆ. ಮಾನ್ಯ ಸದಸ್ಯರದು ಒಳ್ಳೆಯ ಸಲಹೆ ಇದೆ. ಏಕೆಂದರೆ ನಾವು ಎಲ್ಲವನ್ನೂ ಬೆಂಗಳೂರು ನಗರದಲ್ಲೇ ಮಾಡುವುದಕ್ಕಿಂತ ಎಲ್ಲಾ ಡಿವಿಷನ್ ಭಾಗದಲ್ಲಿ ಮಾಡಿದರೆ ಒಳ್ಳೆಯದಿದೆಯೆಂದು ಅನಿಸುತ್ತದೆ. ಸನ್ಮಾನ್ಯ ಅಗ್ರಿಕಲ್ಚರ್ ಮಿನಿಸ್ಟರ್ ಹೇಳುತ್ತಿದ್ದಾಗ ಹೇಳಿದರು, ಈ ಹಳ್ಳಿಯಲ್ಲಿರತಕ್ಕಂಥ ಜನರಿಗೆ ಕಟ್ಟಿಗೆ ಸಮಸ್ಯೆ ಇದೆ, ಆದ್ದರಿಂದ ಅನಿಲ ಉತ್ಪಾದನೆ ಮಾಡಬೇಕು, ಪಶುಗಳ ಗೊಬ್ಬರ ಬೇಕು. ವಮ್ಮ ಬಜೆಟ್‌ನಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳು 13 ಕೋಟಿ ರೂಪಾಯಿಯ ಈ 'ಕ್ಲಂಪ್ಸ್' ಎಂದು ಹೊಸ ಯೋಜನೆ ಮಾಡಿದ್ದಾರೆ. ಅದರಲ್ಲಿ ದನಗಳಿಗೆ ಸಾಮೂಹಿಕವಾಗಿ ಕೊಟ್ಟಿಗೆಗಳನ್ನು ಕಟ್ಟಬೇಕು. ಅದಕ್ಕೆ ಮೇವು ಸರಬರಾಜು ಮಾಡಬೇಕು. ನಮ್ಮ ಬೀದರ್ ಭಾಷೆಯಲ್ಲಿ ಗೋಳೆಯಾದ ಹೆಂಡಿಯಲ್ಲ ಇದರಲ್ಲಿ ಕೂಡಿಸಿ ಅನಿಲ ಉತ್ಪಾದನೆ ಮಾಡಿ ಪ್ರತಿಯೊಂದು ಮನೆಗೂ ಕನೆಕ್ಷನ್ ಕೊಡಬೇಕು. ಅದರಿಂದ ಈ ಕಟ್ಟಿಗೆ ಪ್ರಾಬ್ಲಂ ಸಾಲ್ವ್ ಆಗುತ್ತದೆ. ಮತ್ತು ಈ ಎಲ್ಲಾ ಹಸುಗಳು ಒಂದು ಕಡೆ ಇದ್ದು, ಹಾಲು ಏನು ಇದೆ, ಹೆಚ್ಚಿಗೆ ಕೊಡುವಂಥ ಅವಕಾಶ ಕೂಡ ಇರುತ್ತದೆ. ಇದು ಒಂದೇ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟದ್ದಲ್ಲ. ಬಹುತೇಕ ಇದು ಅಗ್ರಿಕಲ್ಚರ್, ಇದು ಬಹಳ ದೊಡ್ಡ ಸ್ಕೀಮು ಇದೆ. ಇದು 2ನೂರು ಕೋಟಿ ರೂಪಾಯಿ ಸ್ಕೀಮು. ಇದು 5 ವರ್ಷದಲ್ಲಿ ಪೂರೈಕೆಯಾಗುವಂಥ ಒಂದು ಹೊಸ ಸ್ಕೀಮು ಇದೆ. ಈ ಬಜೆಟ್‌ನಲ್ಲಿ ನಮ್ಮದೇ ಆದಂಥ ಅನಿಮಲ್ ಬಸ್ಬೆಂಡರಿ ಡಿಪಾರ್ಟ್‌ಮೆಂಟಿಗೆ 13 ಕೋಟಿ ರೂಪಾಯಿಯನ್ನು ಈ ಬಜೆಟ್‌ನಲ್ಲಿ ಹೆಚ್ಚಿಗೆ ಮಾಡಿದ್ದಾರೆ. ಈಗ ಪ್ರಾರಂಭ ಹಂತದಲ್ಲಿ ಇದೆ. ಇನ್ನು ಮುಂದೆ 92-93ರಲ್ಲಿ ಇದು ಪ್ರಾರಂಭವಾಗುತ್ತದೆ. ಸಾಕಷ್ಟು ಕಾರ್ಯಕ್ರಮವನ್ನು ನಮ್ಮ ಡಿಪಾರ್ಟ್‌ಮೆಂಟ್‌ನಿಂದ ಕೈಗೊಳ್ಳಲಾಗಿದೆ. ಕೃತಕ ಗರ್ಭಧಾರಣಾ ಕೇಂದ್ರಗಳು ಇವೆ. ಒಳ್ಳೆಯ ತಳಿ ತಯಾರು ಮಾಡುವುದಕ್ಕೆ ಈಗಾಗಲೇ ಪ್ರತಿ ವರ್ಷ 10 ಲಕ್ಷಕ್ಕಿಂಥ ಹೆಚ್ಚು ಹೆಚ್ಚು ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಮಾಡಲಾಗಿದೆ. 1990-91ರಲ್ಲಿ 2 ಲಕ್ಷದ 54 ಸಾವಿರದ 49 ಒಳ್ಳೆಯ ಕರುಗಳು ಹುಟ್ಟಿವೆ. ತಮ್ಮ ಹಸುಗಳಿಗೆ ಕೃತಕ ಗರ್ಭಧಾರಣೆ ಮಾಡಿಕೊಂಡು ಹೋಗುವವರು ಸರಿಯಾಗಿ ಬಂದು ರಿಪೋರ್ಟ್ ಕೊಡುವುದಿಲ್ಲ. ಇವತ್ತು ಒಳ್ಳೆಯ ರೀತಿಯಿಂದ ಈ ಕೃತಕ ಗರ್ಭಧಾರಣಾ ಕೇಂದ್ರಗಳು ನಮ್ಮಲ್ಲಿ ಕೆಲಸ ಮಾಡುತ್ತಿವೆ. ಆಮೇಲೆ ' ವಾಪ್ಕೋ' ಇದು ಒಂದು ಒಳ್ಳೆಯ ಆಧುನಿಕ ಕಸಾಯಿ ಖಾನೆ, ಸ್ವಚ್ಛವಾದಂಥ ಕಸಾಯಿ ಖಾನೆ ಮಾಡಬೇಕೆಂದು, ಕೇಂದ್ರ ಸರ್ಕಾರದವರು, ಬೆಂಗಳೂರು ಕಾರ್ಪೊರೇಷನ್‌ನವರು, ರಾಜ್ಯ ಸರ್ಕಾರದವರು ಈಗಾಗಲೇ ಒಂದು ಯೋಜನೆ ಹಾಕಿಕೊಂಡಿದ್ದಾರೆ. ಇದಕ್ಕಾಗಿ ಕಾಚರಕನಹಳ್ಳಿಯಲ್ಲಿ ಭೂಮಿ ಕೊಟ್ಟಿದ್ದಾರೆ. ಆದರೆ ಏನೋ ಕೆಲವು ಅನಾನುಕೂಲತೆಗಳು ಬಂದು ಆಧುನಿಕ ಕಸಾಯಿ ಖಾನೆಯನ್ನು ಇನ್ನೂ ಕಟ್ಟಲಿಕ್ಕೆ ಸಾಧ್ಯವಾಗಿಲ್ಲ. ಈಗಾಗಲೇ ಕೇಂದ್ರ ಸರ್ಕಾರ, ಕಾರ್ಪೊರೇಷನ್,

ರಾಜ್ಯ ಸರ್ಕಾರಗಳು ಸೇರಿ 40 ಲಕ್ಷ ರೂಪಾಯಿಯವರೆಗೆ ಹಣ ಕೂಡ ಬಿಡುಗಡೆ ಮಾಡಿವೆ. ಕಾಚರಕನಹಳ್ಳಿ ಜನರು ರಾಮಮಂದಿರ ಕಟ್ಟಿ, ನಾವು ಕಸಾಯಿಖಾನೆ ಮಾಡುವುದಕ್ಕೆ ಬಿಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಇನ್ನು ಬೇಕಾದರೆ ಯಾವುದಾದರೂ ಇಂಡಸ್ಟ್ರೀ ಹಾಕಿರಿ ಅಥವಾ ಇನ್ನು ಯಾವುದೇ ಕೆಲಸಕ್ಕೆ ಉಪಯೋಗ ಮಾಡಿರಿ ಎಂದು ಊರಿನ ಜನರು ಹೇಳುತ್ತಿದ್ದಾರೆ. ಅದರ ಬಗ್ಗೆ ಅನಿಮಲ್ ಅಸ್ಬೆಂಡರಿ ಡಿಪಾರ್ಟ್‌ಮೆಂಟಿನವರು ಮಾತುಕಥೆ ಮಾಡುತ್ತಿದ್ದಾರೆ. ಆದಷ್ಟು ಬೇಗ ಇದನ್ನು ಪರಿಹರಿಸಿ ಆ ಸ್ಕೀಮ್‌ನ್ನು ಕೈಗೊಳ್ಳಲಾಗುತ್ತದೆ. ಆಮೇಲೆ 'ಕ್ಲಮ್ಸ್' ಯೋಜನೆ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಯವರು ಹೊಸದಾಗಿ ಸ್ಕೀಮ್ ಮಾಡಿದ್ದಾರೆ. ಅದರ ವಿಷಯದಲ್ಲೂ ನಾನು ಹೇಳಿದ್ದೇನೆ. ಈ ವರ್ಷ ಮಾಡಬೇಕೆಂದು ಇದ್ದೇವೆ. 91-92ರಲ್ಲಿ ಮಾಡಿದಂಥ ಆಸ್ಪತ್ರೆಗಳಿಗೆ ಬೇಕಾದಂಥ ಸ್ಟ್ಯಾಫ್ ವಿಷಯದಲ್ಲೂ ಆದಷ್ಟು ಬೇಗನೆ ಬಗೆಹರಿಸುತ್ತೇವೆಂದು ಹೇಳಿದ್ದೇನೆ. ಈಗ ಎನ್ ಡಿ ಡಿಬಿ ಮುಖಾಂತರ ನಮ್ಮ ಕೆ.ಎಂ.ಎಫ್ ಹಾಲು ವಿತರಣೆ ಮಾಡುತ್ತದೆ. ಹಾಲು ಪ್ರತಿಯೊಬ್ಬರಿಗೂ ಅವಶ್ಯಕವಾಗಿ ಬೇಕಾದಂಥ ವಸ್ತು. ಹಿರಿಯ ಸದಸ್ಯರಾದ ವೆಂಕಟರಮಣರವರು ಹೇಳಿದ ಹಾಗೆ ಅದರಲ್ಲಿ ಬೆಳ್ಳಿ ಹಬ್ಬವನ್ನು ಆಚರಣೆ ಮಾಡುವಂಥ ತೀರ್ಮಾನವನ್ನು ಕೂಡ ಮಾಡಲಾಗಿದೆ. ಗುಜರಾತ್‌ನ ಆನಂದ ಡೈರಿಗೆ ರಾಜ್ಯದ ರೈತರುಗಳನ್ನು ಟ್ರೈನಿಂಗ್‌ಗಾಗಿ ಕಳುಹಿಸಿ ಕೊಡುವ ವಿಚಾರದಲ್ಲಿ ಹೇಳಿದ್ದೀರಿ. ಅದನ್ನು ಕೂಡ ಈಗ ಒಂದೊಂದು ಸೊಸೈಟಿಯಲ್ಲಿ ಇಬ್ಬರು ಸದಸ್ಯರುಗಳನ್ನು ಕಳುಹಿಸಿಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ. ನಮ್ಮಲ್ಲಿ ಕೆ.ಎಂ.ಎಫ್ ನಲ್ಲಿ 5,475 ಹಾಲು ಉತ್ಪಾದಕರ ಸೊಸೈಟಿಗಳು ಇವೆ. ಅವುಗಳಲ್ಲಿನ ಇಬ್ಬಿಬ್ಬರು ಸದಸ್ಯರುಗಳಿಗೆ ಸೊಸೈಟಿಯವರು ಖರ್ಚು ಕೊಟ್ಟು ಟ್ರೈನಿಂಗ್ ಮಾಡಿಸುವ ಯೋಚನೆ ನಡೆಯುತ್ತಾ ಇದೆ. ಕೋಲಾರ ಡೈರಿಗೆ ಹಣ ಮಂಜೂರಾತಿಯು ಆಗಿದೆ. ವರ್ಕ್ ಪ್ರಾರಂಭವಾಗಿದೆ. ಆದಷ್ಟು ಬೇಗ ಆ ಕೆಲಸವನ್ನು ಮಾಡಿ ಮುಗಿಸುತ್ತೇವೆ. ಮಾನ್ಯ ಸದಸ್ಯರುಗಳು ಎಲ್ಲರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಜಾರಿಗೊಳಿಸಲು ಪ್ರಯತ್ನ ಪಡುತ್ತೇನೆ. ಇನ್ನು ಅನಿಮಲ್ ಫುಡ್ ವಿಚಾರದಲ್ಲಿಯೂ ಕೂಡ ಹೇಳಿದ್ದೀರಿ. ನಾವು ಅದನ್ನು ಈಗಾಗಲೇ ಸಪ್ಲೈ ಮಾಡುತ್ತಾ ಇದ್ದೇವೆ. ಹಾಗೆಯೇ ಪಶುಗಳ ಔಷಧಿಯ ವಿಚಾರದಲ್ಲಿಯೂ ಪ್ರಸ್ತಾಪ ಮಾಡಿದ್ದಾರೆ. ಮೂರು ಕೋಟಿ ರೂಪಾಯಿಗಳನ್ನು ಬರೀ ಕೆ.ಎಂ.ಎಫ್.ಗೆ ಹಾಲು ಸರಬರಾಜು ಮಾಡುವಂಥ ಯೂನಿಯನ್‌ಗಳ ಮುಖಾಂತರ ಔಷಧಿಗಳಿಗಾಗಿ ಒದಗಿಸಲಾಗಿದೆ. ಈ ಬಗ್ಗೆ ಈಗಾಗಲೇ ಸಾಕಷ್ಟು ವಿವರಗಳನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ :- ನಮ್ಮಲ್ಲಿ ಕೋಳಿ ಸಾಕಾಣಿಕೆ ಬಹಳ ಚೆನ್ನಾಗಿ ನಡೆಯುತ್ತಾ ಇದೆ. ಈ ದೇಶದಲ್ಲಿ ಕೋಳಿಸಾಕಾಣಿಕೆಯ ಅಭಿವೃದ್ಧಿಯೂ ಆಗುತ್ತಾ ಇದೆ. ಇದರ ಬೆಲೆಯು ಕೆಲವು ಸಂದರ್ಭದಲ್ಲಿ ಜಾಸ್ತಿಯಾದರೆ ಕೆಲವು ಸಂದರ್ಭಗಳಲ್ಲಿ ಕಡಿಮೆಯಾಗುತ್ತದೆ. ಹೋದಸಾರಿ ಮಾನ್ಯ ಸಚಿವರು ಒಬ್ಬರು ಎಗ್‌ಬೋರ್ಡ್‌ನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದರು. ಅದರ ಮೂಲಕ ಮೊಟ್ಟೆ ಮಾರಾಟದ ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಕೂಡ ಹೇಳಿದ್ದರು. ಆದ್ದರಿಂದ ಈ ಬಗ್ಗೆ ಏನಾದರೂ ಕ್ರಮಗಳನ್ನು ತೆಗೆದುಕೊಳ್ಳುತ್ತೀರಾ ?.

ಶ್ರೀ ಬಸವರಾಜ ಪಾಟೀಲ್ :- ಈ ಬಗ್ಗೆ ನಾನೇ ಕಳೆದ ಸಾರಿ ಹೇಳಿದ್ದೇನೆ. ಎಗ್‌ಬೋರ್ಡ್‌ನ್ನು ಮಾಡುವ ವಿಚಾರ ಪರಿಶೀಲಿಸುತ್ತೇವೆ. ಈ ಬಗ್ಗೆ ಈಗಾಗಲೇ ಪ್ಲಾನಿಂಗ್ ಮತ್ತು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರೊಂದಿಗೆ ವಿಚಾರ ಮಾಡಲಾಗಿದೆ. ಆ ಬಗ್ಗೆ ಸೂಕ್ತ ಕಾಲದಲ್ಲಿ ಕ್ರಮ ಜರುಗಿಸಲಾಗುವುದು. ಇದುವರೆಗೆ ಸಾಕಷ್ಟು ಸಲಹೆಗಳನ್ನು ಕೊಟ್ಟು ಮಾನ್ಯ ಸದಸ್ಯರುಗಳಿಗೆ ಹಾಗೂ ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ. ಎಂ. ಚೆಲ್ಲಿಯಪ್ಪ (ಬಂದರು ಮತ್ತು ಮೀನುಗಾರಿಗಾ ಸಚಿವರು) :- ಮಾನ್ಯ ಅಧ್ಯಕ್ಷಿಣಿಯವರೇ, ನನ್ನ ಖಾತೆಗಳ ಮೇಲೆ ಬಹಳ ಜನ ಮಾನ್ಯ ಸದಸ್ಯರುಗಳು ಮಾತನಾಡಿಲ್ಲ. ಮಾನ್ಯ

ಸೋಮಪ್ಪ ಸುವರ್ಣರವರು ಮತ್ತು ಶ್ರೀ ಹರ್ಷಕುಮಾರ್ ಗೌಡರವರು ಮಾತನಾಡಿದ್ದಾರೆ. ಹರ್ಷಕುಮಾರ ಗೌಡರವರು ತಮ್ಮ ದೀರ್ಘ ಭಾಷಣದ ಕೊನೆಗಳಿಗೆಯಲ್ಲಿ ಮಾತ್ರ ಈ ವಿಷಯವಾಗಿ ಮಾತನಾಡಿದ್ದಾರೆ. ಅವರು ಅಷ್ಟೇ ವಿಷಯವನ್ನು ನನ್ನ ಖಾತೆಯ ಬಗ್ಗೆ ಹೇಳಿದ್ದರೂ ಕೂಡ ಬಹಳ ಅರ್ಥಗರ್ಭಿತವಾಗಿ ಮಾತನಾಡಿದ್ದಾರೆ. ಮೀನುಗಾರಿಕೆ ಉತ್ಪಾದನೆಯನ್ನು ಜಾಸ್ತಿ ಮಾಡಬೇಕು, ಗ್ರಾಮೀಣ ಜನರಲ್ಲಿ, ನಿರುದ್ಯೋಗಿ ಯುವಕರು ಯಾರಿದ್ದಾರೆ ಅವರಿಗೆ ಈ ಮೀನುಗಾರಿಕೆ ಯೋಜನೆಗಳಲ್ಲಿ ಭಾಗವಹಿಸುವಂಥ ಆಸ್ಪದವನ್ನು ಮಾಡಿಕೊಡಬೇಕು, ಗ್ರಾಮಾಂತರ ಪ್ರದೇಶಗಳಲ್ಲಿ ಯುವಕರು ಕಷ್ಟದಲ್ಲಿದ್ದಾರೆ ಎಂಬ ಒಂದು ಅಭಿಪ್ರಾಯವನ್ನು ಅವರು ಒಂದು ವಾಕ್ಯದಲ್ಲಿ ಹೇಳಿದ್ದಾರೆ. ಇಂಥ ವಿಚಾರದಲ್ಲಿ ನಮ್ಮ ಇಲಾಖೆಯು ಬಹಳ ಉತ್ತಮ ಕೆಲಸಕಾರ್ಯಗಳನ್ನು ಮಾಡುತ್ತಾ ಇದೆ. ಜಿಲ್ಲಾ ಮಟ್ಟದಲ್ಲಿ ಫಿಶ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಅಂದರೆ ಮೀನು ಕೃಷಿಗಾರರ ಅಭಿವೃದ್ಧಿ ಸಂಘವನ್ನು ಮಾಡಿದ್ದೇವೆ. ಅದರ ಮೂಲಕ ನಿರುದ್ಯೋಗಿಗಳಿಗೆ ಗ್ರಾಮೀಣ ಯುವಕರಿಗೆ ತರಬೇತಿಯನ್ನು ಕೊಡುತ್ತಾ ಇದ್ದೇವೆ. ಕೆರೆಗಳನ್ನು ಅವರಿಗೇ ಗುತ್ತಿಗೆ ಕೊಡುತ್ತಾ ಇದ್ದೇವೆ. ಉಪಕರಣಗಳು ಮತ್ತು ಗೊಬ್ಬರ ಅಂದರೆ ಮೀನುಗಾರಿಕೆಗೆ ಬೇಕಾದಂಥ ತಿಂಡಿಗಳನ್ನು ಕೊಡುತ್ತಾ ಇದ್ದೇವೆ. ವಿಶೇಷ ಘಟಕ ಯೋಜನೆ ಮತ್ತು ಗಿರಿಜನರ ಉಪಯೋಜನೆಯಲ್ಲಿಯೂ ಕೂಡ ಹಲವಾರು ಯೋಜನೆಗಳನ್ನು ಈ ಬಗ್ಗೆ ತೆಗೆದುಕೊಂಡಿದ್ದೇವೆ. ಇಷ್ಟರವರೆಗೂ ನಾವು ಕೃಷ್ಣರಾಜ ಸಾಗರ, ಕಬಿನಿ, ಭದ್ರಾ ಪ್ರದೇಶದಲ್ಲಿ ಮತ್ತು ಕೋಲಾರ ಜಿಲ್ಲೆಯ, ಬೇತಮಂಗಲದಲ್ಲಿ ಹೀಗೆ ಸುಮಾರು ನಾಲ್ಕು ಸಾವಿರ ಚಿಲ್ಲರೆ ಯುವಕರಿಗೆ ನಾವು ಟ್ರೈನಿಂಗ್‌ನ್ನು ಕೊಡುತ್ತಾ ಇದ್ದೇವೆ. ಹೀಗೆ ಟ್ರೈನಿಂಗ್ ಕೊಟ್ಟಂಥ ಯುವಕರಿಗೆ ನಾವು ಎಲ್ಲಾ ಸವಲತ್ತುಗಳನ್ನು ಕೊಡುತ್ತಾ ಇದ್ದೇವೆ, ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯ ಯುವಕರಿಗೆ ಬ್ಯಾಂಕ್‌ಗಳ ಮೂಲಕ 10 ಸಾವಿರ ರೂಪಾಯಿಗಳ ಸಹಾಯವನ್ನು ಒದಗಿಸಿಕೊಟ್ಟು 100 ರಷ್ಟು ಸಬ್ಸಿಡಿಯನ್ನು ಕೊಟ್ಟು, ಕೆರೆಗಳನ್ನು ಕೊಟ್ಟು ಅವರುಗಳನ್ನೂ ಕೂಡ ಈ ಮೀನು ಉತ್ಪಾದನೆ ಕೆಲಸದಲ್ಲಿ ತೊಡಗಿಸಲು ನಾವು ಪ್ರಯತ್ನ ಮಾಡುತ್ತಾ ಇದ್ದೇವೆ. ಇದಲ್ಲದೇ ವಿದ್ಯಾವಂತ ಯುವಕರು ಇದ್ದರೆ ಅವರೂ ಕೂಡ ಈ ಮೀನುಗಾರಿಕೆಯಲ್ಲಿ ಭಾಗವಹಿಸಲು ಉತ್ತೇಜನ ಕೊಡುವುದಕ್ಕೋಸ್ಕರವಾಗಿ ಒಂದು ಸ್ಕೀಮನ್ನು ನಾವು ಹಾಕಿಕೊಂಡಿದ್ದೇವೆ. ಅದು ಏನೆಂದರೆ, ಅವರು ಮೀನು ಮರಿ ಉತ್ಪಾದನಾ ಕಾರ್ಯದಲ್ಲಿ ತೊಡುಗುವುದಾದರೆ ಅವರಿಗೆ ಒಂದು ಲಕ್ಷ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತೇವೆ.

ಒಂದು ಹೆಕ್ಟೇರ್ ಜಾಗಲ್ಲಿ ಅವರು ಮೀನುಮರಿ ಉತ್ಪಾದನೆ ಮಾಡಲು ಮುಂದೆ ಬಂದರೆ ಅವರಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುವ ಒಂದು ಯೋಜನೆ ನಮ್ಮಲ್ಲಿ ಇದೆ. ಅದೇ ರೀತಿಯಲ್ಲಿ ಮೀನು ಮರಿ ಸಾಕಾಣಿಕೆ ಮಾಡುವಂಥವರು ಮುಂದೆ ಬಂದರೆ ಅವರಿಗೆ 75 ಸಾವಿರ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಾ ಇದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ಒಂದೊಂದು ಕೆರೆ ಸ್ವಂತ ಜಾಗದಲ್ಲಿ ತೆಗೆಯುವುದದಾರೆ ಅವರಿಗೆ 10 ಸಾವಿರ ರೂಪಾಯಿಗಳನ್ನು ಸಬ್ಸಿಡಿ ಕೊಡುವಂಥ ಯೋಜನೆಯು ಕೂಡ ಇದೆ. ಆ 10 ಸಾವಿರ ರೂಪಾಯಿಗಳನ್ನು 20 ಸಾವಿರ ರೂಪಾಯಿಗಳಿಗೆ ಏರಿಸಬೇಕೆಂಬ ಅಭಿಪ್ರಾಯವೂ ಇದೆ. ಈಗಾಗಲೇ ಈ ಬಗ್ಗೆ ವಿಚಾರ ಮಾಡಿದ್ದೇವೆ. ಈ ವಿಚಾರದಲ್ಲಿ ಇಂಥ ಯುವ ಜನತೆಯು ಮುಂದೆ ಬರಬೇಕು. ಮತ್ತು ಯೋಜನೆಗಳನ್ನು ತರುವಲ್ಲಿ ಸಹಕಾರವನ್ನು ನೀಡಬೇಕು. ಮೊನ್ನೆ ತಾನೆ ಹೊನ್ನಾಳಿಯಲ್ಲಿ ಒಂದು ದೊಡ್ಡದಾದ ಘಟನೆ ನಡೆಯಿತು. 13ನೇ ತಾರೀಖಿನ ಪೇಪರ್‌ನಲ್ಲಿ ಬೇಕಾದಷ್ಟು ಮೀನುಗಳು ಸತ್ತು ಹೋಗಿವೆಯೆಂದು ಹೇಳುವಂಥ ಒಂದು ರಿಪೋರ್ಟ್ ಬಂತು. ಅದರಲ್ಲಿ ಮೀನುಗಳ ಪಿಕ್ಚರ್ಸ್ ಕೂಡ ಹಾಕಿದ್ದರು. ನಾನು ಹೊನ್ನಾಳಿ ಹತ್ತಿರವಿರುವ ಹೊಸಳ್ಳಿ ಎಂಬ ಗ್ರಾಮಕ್ಕೆ ಹೋದೆ. ಅಲ್ಲಿಗೆ ಹೋಗಬೇಕಾದರೆ ಜನಗಳು ಹೇಳಿದರು. ಇಷ್ಟು ವರ್ಷಗಳಿಂದ in our living memory, ಇಷ್ಟು ಮೀನು ಸತ್ತಿದ್ದಿಲ್ಲ ಸ್ವಾಮಿ ಎಂದು ಬೇಳಿದರು. ಈ ಸ್ಥಳದಲ್ಲಿ ನಾಲ್ಕೈದು ಲೋಡ್ ಮೀನುಗಳು ಬಂದು ಬಿದ್ದಿತ್ತು. ಅದೇ ರೀತಿ ಭದ್ರಾ ನದಿಯಲ್ಲೂ ಕೂಡಾ

ಮೀನುಮರಿಗಳು ಸತ್ತುಹೋಗಿವೆ ಎಂಬ ವಿಷಯವನ್ನು ಹೇಳಿದರು. ನಾನು ಹೋಗಲೇಬೇಕಾದರೆ ನಮ್ಮ ಡೈರೆಕ್ಟರ್ ಅವರನ್ನೂ ಕರೆದುಕೊಂಡು ಹೋಗಿದ್ದೆ. ನಮ್ಮ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಫಿಷರೀಸ್ ಅಗ್ರಿಕಲ್ಚರ್ ಒಬ್ಬ ಇಂಜಿನಿಯರ್‌ನ್ನೂ ಕೂಡ ಕರೆದುಕೊಂಡು ಹೋಗಿದ್ದೆ. ಅದೇ ರೀತಿ ಪಲ್ಯೂಷನ್ ಬೋರ್ಡ್‌ನಿಂದ ಕೆಲವು ಸೈಂಟಿಸ್ಟ್‌ಗಳನ್ನೂ ಮತ್ತೆ ಕೆಲವು ಅಫಿಷಿಯಲ್‌ಗಳನ್ನೂ ಕೂಡ ಕರೆದುಕೊಂಡು ಹೋಗಿದ್ದೆ. ಇವತ್ತು ಅಲ್ಲಿನ ರಿಪೋರ್ಟ್‌ನ್ನು ತರಿಸುವುದಕ್ಕೆ ಎಕ್ಸಾಮಿನ್ ಮಾಡುತ್ತಿದ್ದಾರೆ, ಇನ್ನೂ ಸಿಕ್ಕಿಲ್ಲ. ಅದಕ್ಕೆ ಕಾರಣವೇನೆಂದರೆ ನನ್ನ ಅಭಿಪ್ರಾಯದಲ್ಲಿ ಅಥವಾ ಜನಗಳು ಹೇಳಿದ ರೀತಿಯಲ್ಲಿ it is on accout of pollution from sugar factories. ಸಕ್ಕರೆ ಕಾರ್ಖಾನೆಗಳಿಂದ, ಟಿಂಬರ್ ಪಲ್ಪ್ ಕಾರ್ಖಾನೆಗಳಿಂದ ಅಥವಾ ಪೇಪರ್ ಮಿಲ್ಸ್‌ನಿಂದ ಬಂದಿರತಕ್ಕಂಥ ಪಲ್ಯೂಷನ್ ಏನು ಉಂಟು, ಅಲ್ಲಿ ಫ್ಲೋರೈಡ್ ಕಂಟೆಂಟ್ ಜಾಸ್ತಿಯಾಗಿ ಇದರಿಂದ ಮೀನುಗಳು ಸತ್ತವು ಎಂದು ಹೇಳುವಂಥ ಒಂದು ಸಂಶಯ ಕೂಡ ಉಂಟು. ಅದೇ ರೀತಿಯಲ್ಲಿ ಬೇರೆ ಹೊಲಗಳಲ್ಲೂ ಕೂಡ ಡೈನಮೆಂಟನ್ನು ಹಾಕುತ್ತಿದ್ದಾರೆ. ಕಾಪರ್ ಸಲ್ಫೇಟ್ ಮಿಕ್ಸ್ ಮಾಡಿ, ಇನ್‌ಸೆಕ್ಟಿಸೈಡ್ಸ್ ಮತ್ತು ಪೆಸ್ಟಿಸೈಡ್ಸ್‌ನ್ನು ಹಾಕಿ ಮೀನುಗಳನ್ನು ಕೊಲ್ಲುತ್ತಿದ್ದಾರೆ. ಹೊನ್ನಾಳಿಯಲ್ಲಿ ಅಲ್ಲಿರುವ ಫ್ಯಾಕ್ಟರಿಗೂ ಕೂಡ ಹೋಗಿದ್ದೆವು. ಅಲ್ಲಿರುವ ಫಿಷರೀಸ್ ಅಸೋಸಿಯೇಷನ್‌ನವರು ಈ ಒಂದು ಪುಕಾರನ್ನೂ ಕೂಡ ಹೇಳಿದರು. ಈ ರೀತಿ ಆಗ ಬೇಕಾದರೆ ನಮಗೆ ಬೇಕಾದದ್ದು ಜನಗಳ ಸಹಾಯ ಮತ್ತು ಸಹಕಾರ ಬೇಕು. ಕರ್ನಾಟಕ ರಾಜ್ಯದಲ್ಲಿ ನಾನು ಭಾಷಣದಲ್ಲಿ ಹೇಳಿದ ಹಾಗೆ ಸುಮಾರು 4.57 ಲಕ್ಷ ಹೆಕ್ಟೇರ್‌ನಷ್ಟು ಜಲಾನಯನ ಪ್ರದೇಶಗಳು ಇವೆ. ನಮ್ಮ ಕರ್ನಾಟಕದಲ್ಲಿ ಒಳನಾಡಿನಲ್ಲಿ ಸಿಗತಕ್ಕಂಥದ್ದು ಬರೀ ಅರವತ್ತು ಸಾವಿರ ಟನ್ ಮೀನು. ಅದೇ ಪ್ರದೇಶ ಅಥವಾ ಅದಕ್ಕಿಂತ ಕಡಿಮೆ ಪ್ರದೇಶ ಹೊಂದಿರುವ ವೆಸ್ಟ್‌ಬೆಂಗಾಲ್‌ಗೆ ಹೋದರೆ ಈ ಒಂದು ಒಳನಾಡು-ಜಲಾನಯನ ಪ್ರದೇಶಗಳಲ್ಲಿ ಸುಮಾರು ಐದೂವರೆ ಲಕ್ಷ ಟನ್ ಮೀನುಗಳನ್ನು ಅವರು ಸಂಪಾದನೆ ಮಾಡುತ್ತಿದ್ದಾರೆ. ಬರೀ ನಮಗೆ ಸಿಗುವುದು ಅರವತ್ತು ಸಾವಿರ ಟನ್. ಇನ್ನು ಹೆಚ್ಚಿನ ಉತ್ಪಾದನೆ ಈ ಒಂದು ಒಳನಾಡಿನಲ್ಲಿ ನಾವು ಮಾಡಬೇಕಾಗಿದೆ. ಈ ಜಲಾನಯನ ಪ್ರದೇಶಗಳಲ್ಲಿ, ಇದನ್ನು ಮಾಡಬೇಕಾದರೆ ನಮಗೆ ಇರುವಂಥ ಕುಂದುಕೊರತೆಗಳು, ತೊಂದರೆಗಳೇನು ? ಎಂದು ಹೇಳುವಂಥದ್ದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಮೊದಲನೆಯದಾಗಿ ನಾನು ಹೇಳಿದ್ದು ಪಲ್ಯೂಷನ್. ಈ ಒಂದು ಪಲ್ಯೂಷನ್ ಕಂಟ್ರೋಲ್‌ನ್ನು ಮಾಡಬೇಕಾಗಿದೆ. ಇದಕ್ಕೆ ಫ್ಯಾಕ್ಟರಿ ಓನರ್‌ಗಳು, ಜನಗಳು ನಮಗೆ ಸಹಕಾರವನ್ನು ಕೊಡಬೇಕಾಗಿದೆ. ಎರಡನೆಯದು, ನಮ್ಮ ಈ ಕರ್ನಾಟಕದಲ್ಲಿ ನಾನು ಈಗಾಗಲೇ ಕೆಲವು ಸ್ಥಳಗಳಿಗೆ ಹೋಗಿದ್ದೇನೆ. ಕಣ್ಣಾರೆ ನೋಡಿದ್ದೇನೆ. ಸುಮಾರು 240 ಚಿಲ್ಲರೆ ಮೀನು ಮರಿಗಳನ್ನು ಉತ್ಪಾದನೆ ಮಾಡತಕ್ಕಂಥ ಕೆರೆಗಳು, ಪಾಂಡ್ಸ್‌ಗಳು ಇದೆ. ಬಹಳ ವರ್ಷಗಳಿಂದ 1957 ನೇ ಇಸವಿಯಿಂದಲೂ ಈ ಒಂದು ಕೆಲಸವನ್ನು ಸರ್ಕಾರ ಮಾಡುತ್ತಲೇ ಬಂದಿದೆ. 2500 ಈ ಒಂದು ಪಾಂಡ್ಸ್ ಇದ್ದರೂ ಕೂಡ ಅಥವಾ ಕೊಳಗಳು ಇದ್ದರೂ ಕೂಡ ಇವತ್ತು ಎಲ್ಲಾ ಕೊಳಗಳು. ಪಾಂಡ್ಸ್‌ಗಳು ವಾಣಿವಿಲಾಸ ಸಾಗರಕ್ಕೆ ಹೋಗಿವೆ, ನಿಮ್ಮಲ್ಲಿ ಹೋಗಿದೆ. 134 ಕೊಳಗಳು ಇವೆ. 1952ನೇ ಇಸವಿಯಿಂದ ಈಚೆಗೆ ಮಾಡಿರತಕ್ಕಂಥ ಕೊಳಗಳು. ಅದೇ ರೀತಿ ಮುನಿರಾಬಾದ್‌ಗೆ ಹೋಗಿದ್ದೆ, ಶಿವಪುರಕ್ಕೆ ಹೋಗಿದ್ದೆ, ನಾನು ನುಗು ಜಲಾಶಯಕ್ಕೆ ಹೋಗಿದ್ದೆ. ತಾರಕಕ್ಕೆ ಹೋಗಿದ್ದೆ. ಇಂಥ ಸ್ಥಳಗಳಿಗೆ ಹೋಗಿ ನೋಡಿದರೆ ಅಲ್ಲಿ ಕೆರೆಗಳನ್ನು, ಕೊಳಗಳನ್ನು ಸರ್ಕಾರ ಸ್ಥಾಪನೆ ಮಾಡಿದ್ದರೂ ಸಹ ಎಲ್ಲವೂ ರಿಪೇರಿಗಾಗಿ ನಿಂತಿವೆ. ಯಾವ ಕೊಳಗಳಲ್ಲೂ ಕೂಡ ನೀರು ಇಲ್ಲ. ನೀರು ನಿಲ್ಲುವುದಕ್ಕೆ ಸಾಧ್ಯವಿಲ್ಲ. ಈ ಒಂದು ಕೊಳಗಳನ್ನು ಹಾಗೆ ಇಟ್ಟುಕೊಂಡು ಬರುತ್ತಿದ್ದೇವೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಸುಮಾರು 80 ಕೋಟಿ ಮೀನುಮರಿಗಳು ಬೇಕು. ಈ 80 ಕೋಟಿ ಮೀನು ಮರಿಗಳನ್ನು ಬಿಟ್ಟರೆ ಇಡೀ ದೇಶದಲ್ಲಿಯೇ ಐದು ಲಕ್ಷ, ಐದೂವರೆ ಲಕ್ಷ ಟನ್ ಅಲ್ಲ, 10-15 ಲಕ್ಷ ಮೆಟ್ರಿಕ್ ಟನ್‌ಗಳಷ್ಟು, ನಾವು ಮೀನನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯ. ಜನರ ನಿರುದ್ಯೋಗದ ಒಂದು ಸಮಸ್ಯೆ ಏನುಂಟು. ಅದೂ ಕೂಡ ಇಲ್ಲದಂತಾಗುತ್ತದೆ.

1.45 ಪಿ.ಎಂ

ಇದರಿಂದ ಜನರಿಗೆ ಪೌಷ್ಟಿಕವಾದ ಆಹಾರ ಸಿಗುತ್ತದೆ. ನಾವು ಕೆರೆಗಳಲ್ಲಿ ಕೊಳಗಳಲ್ಲಿ 80 ಕೋಟಿ ಮೀನುಮರಿಗಳನ್ನು ತಯಾರು ಮಾಡಬೇಕಾಗಿದ್ದು ಇವತ್ತು 6-7-8 ಕೋಟಿಯಷ್ಟು ಮಾತ್ರ ಉತ್ಪನ್ನ ಮಾಡುತ್ತಿದ್ದೇವೆ. ಇದರಿಂದಾಗಿ ಮೀನು ಮರಿಗಳನ್ನು ಜಲಾನಯನ ಪ್ರದೇಶಗಳಿಗೆ ಬಿಡುವುದಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ಇವತ್ತು ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ನಾನು ಇದರ ಬಗ್ಗೆ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಹೇಳಿದ್ದೇನೆ. ಈ ರೀತಿಯಾಗಿ ನಮ್ಮ ಕೆರೆಗಳು ಕೊಳಗಳು ಆಗಿವೆ. ನೀರು ನಿಲ್ಲದೆ ನಾವು ಮೀನುಮರಿಯನ್ನು ಉತ್ಪಾದನೆಯನ್ನು ಮಾಡುವುದಕ್ಕಾಗುವುದಿಲ್ಲ. ನಾನು ಈ ಖಾತೆಯ ಮಂತ್ರಿಯಾದಮೇಲೆ ಮುಖ್ಯ ಮಂತ್ರಿಯವರ ಹತ್ತಿರ ಹೋಗಿ 8 ಕೋಟಿ ಮೀನುಮರಿಗಳನ್ನು ಬಿಟ್ಟರೆ ಏನೂ ಪ್ರಯೋಜನವಾಗುವುದಿಲ್ಲ ನೀವು ದಯವಿಟ್ಟು ಸ್ವಲ್ಪ ಹಣವನ್ನು ಕೊಡಬೇಕೆಂದು ಕೇಳಿದಾಗ ಅವರು ಬಹಳ ದೊಡ್ಡ ಮನಸ್ಸಿನಿಂದ ಒಂದು ಕೋಟಿ ರೂಪಾಯಿಗಳನ್ನು ಮೀನುಮರಿಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ಕೊಟ್ಟರು. 56 ಲಕ್ಷ ರೂಪಾಯಿಯ ಮೀನುಮರಗಳನ್ನು ತೆಗೆದುಕೊಂಡು ಇವತ್ತು ಸುಮಾರು 12 ಕೋಟಿ ಮೀನು ಮರಿಗಳನ್ನು ಇವತ್ತು ನಾವು ಕೆರೆಗೆ ಬಿಟ್ಟಿದ್ದೇವೆ. ಕಳೆದ 3-4 ವರ್ಷಗಳಿಗಿಂತ ಈ ವರ್ಷ ಅತಿ ದೊಡ್ಡ ಸಂಖ್ಯೆ ಮೀನುಮರಿಗಳನ್ನು ಕೆರೆಗಳಿಗೆ ಬಿಟ್ಟಿದ್ದೇವೆ. But there is a measure. ಆ ಮೆಷರ್ ಪ್ರಕಾರ 500 ಮರಿ ಎಂದು ನಿಗದಿ ಮಾಡಿದ್ದಾರೆ, ಆ ರೀತಿ 500 ಮರಿಗಳನ್ನು ತೆಗೆದು ಬಿಡುತ್ತಾರೆ.

ಮಾನ್ಯ ಸದಸ್ಯರು :- ಕಳ್ಳತನ ವಾಗುತ್ತದೆ . . . .

ಶ್ರೀ ಎ. ಎಂ. ಬೆಳ್ಳಿಯಪ್ಪ :- ಕಳ್ಳತನ ಈ ದೇಶ ಹುಟ್ಟುವಾಗಲೇ ಶುರುವಾಗಿದೆ. ಅದು ಇವತ್ತು ಬಂದಿದ್ದು ಅಲ್ಲ, ಯಾವಾಗಲೂ ಇದೆ. Somehow or the other, we have to tolerate with these things and we have to adjust to the officers, we have to educate the concerned officers at the taluk level. ಆ ರೀತಿ ಮಾಡದೇ ಹೋದರೆ ಅದು ಆಗುವುದಿಲ್ಲ. ನಾವು ಸಂಶಯಪಟ್ಟುಕೊಂಡು ಹೋದರೆ ಏನೂ ಆಗುವುದಿಲ್ಲ. ಈ ರೀತಿಯಲ್ಲಿ ನಾವು ಮೀನುಮರಿಗಳ ಉತ್ಪಾದನೆಯನ್ನು ಜಾಸ್ತಿ ಮಾಡಬೇಕಾಗಿದೆ. ಆ ಕೆಲಸವನ್ನು ಮಾಡಲಿಕ್ಕೋಸ್ಕರ ಈ ವರ್ಷ ಸನ್ಮಾನ್ಯ ಮುಖ್ಯಮಂತ್ರಿಗಳು ಮೀನುಗಾರರ ಸಂಕಷ್ಟಗಳನ್ನು ಅರಿತು ಆ ಇಲಾಖೆಗಳಲ್ಲಿ ಆಗಬೇಕಾದ ಕೆಲಸಗಳನ್ನು ಅರಿತು ಈ ಇಲಾಖೆಯನ್ನು ಇನ್ನೂ ಮುಂದಕ್ಕೆ ತೆಗೆದುಕೊಂಡು ಹೋಗಬೇಕೆನ್ನತಕ್ಕ ಅಭಿಪ್ರಾಯದಿಂದ ಕಳೆದ ವರ್ಷ 8.5 ಕೋಟಿ ರೂಪಾಯಿಯನ್ನು ಕೊಟ್ಟಿದ್ದರು, both revenue and capital outlay. ಈ ವರ್ಷ ಅದು 24 ಕೋಟಿಗೆ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಮೀನುಗಾರಿಕೆ ಇಲಾಖೆಯನ್ನು ಬೆಳೆಸಬೇಕು ಅಭಿವೃದ್ಧಿ ಪಡಿಸಬಕೆಂದು ಮೀನುಗಾರರ ಸಂಕಷ್ಟಗಳು ಹೋಗಬೇಕು ಮೀನುಗಾರರು ಬಡವರು, ಬೆಸ್ತರು ಇಂತಹವರ ಸಂಕಷ್ಟವನ್ನು ನಿವಾರಿಸುವುದಕ್ಕೋಸ್ಕರ ನನ್ನ ಬಜೆಟ್ 24 ಕೋಟಿ ರೂಪಾಯಿ ಇದೆ. ಈ ಬಜೆಟ್ ಮೂಲಕವಾಗಿ ಸುಮಾರು ಒಂದು ಸಾವಿರ ಮನೆಗಳನ್ನು ಬೆಸ್ತರಿಗೋಸ್ಕರ ಕರ್ನಾಟಕ ರಾಜ್ಯದಲ್ಲಿ ಕಟ್ಟಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಅದೇ ಪ್ರಕಾರ ಮೀನುಗಾರರಿಗೆ ಬೇಕಾದಂತಹ 150 ಕಿ.ಮೀ ರಸ್ತೆಯನ್ನು ತೆಗೆದುಕೊಳ್ಳುವಂತಹ ಅಭಿಪ್ರಾಯವನ್ನು ನಾವು ತೆಗೆದುಕೊಂಡಿದ್ದೇವೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಜಟ್ಟಿಗಳು ಹಾಗೂ fish-landing centres. ಆಗಬೇಕಾಗಿದೆ. ಅವುಗಳನ್ನು ಕೂಡ ಕಟ್ಟಲಿಕ್ಕೋಸ್ಕರ 2 ಕೋಟಿ ರೂಪಾಯಿ ಹಣವನ್ನು ವಿನಿಯೋಗಿಸುವ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿದ್ದೇವೆ. ಸುಮಾರು 4-5 ಜೆಟ್ಟಿಗಳನ್ನು ಕಟ್ಟಬಹುದು. ಅದೇರೀತಿಯಲ್ಲಿ 8ನೇ ಪಂಚವಾರ್ಷಿಕಯೋಜನೆಯಲ್ಲಿ ಎರಡು ಫಿಷ್ ಲ್ಯಾಂಡಿಗ್ ಸೆಂಟರ್ ಮೈನರ್ ಫಿಷ್ ಹಾರ್ಬರ್ಸ್ ಸಣ್ಣ ಮೀನು ಬಂದರುಗಳು. ಒಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಡುವಂತಹ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ.

ಮಾನ್ಯ ಸೋಮಪ್ಪ ಸುವರ್ಣರವರು ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದಂತಹ ಶಾಸಕರು, ಅವರದೇ ಆದಂತಹ ಧಾಟಿಯಲ್ಲಿ ಅವರೇ ಆದಂತಹ ಶೈಲಿಯಲ್ಲಿ ಬಹಳ ಚೆನ್ನಾಗಿ ನಿನ್ನೆ ಮಾತನಾಡಿದರು. ಅವರು ನನ್ನನ್ನು ಕುರಿತು ಎತ್ತರದ ಮಾತುಗಳನ್ನಾಡಿದರು. ಅವರಿಗೆ ನನ್ನ ಅಭಿನಂದನೆಗಳನ್ನ ಹೇಳುತ್ತಾ ಆ ಒಂದು ಹೊಗ್ಗಳಿಕೆಯ ಮಾತುಗಳಿಗೆ ನಾನು ಪಾತ್ರನಲ್ಲ. ಬಹುಶಃ ಹೇಳಬೇಕೆಂದರೆ, ಮುಖ್ಯ ಮಂತ್ರಿಗಳ ಒಂದು ಉದಾರ ಮನಸ್ಸಿನಿಂದ, ಅವರ ಒಳ್ಳೆಯತನದಿಂದ ಈ ಒಂದು ದೊಡ್ಡ ಬಜೆಟ್ ಸಿಕ್ಕಿತು ಎಂದು ಹೇಳುತ್ತಾ, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಬೇಕಾದಷ್ಟು ಕೆಲಸ ಮಾಡಬೇಕಾಗಿದೆ. ನಾನು ಆಗಲೇ ಹೇಳಿದ ಹಾಗೆ ಆ ಒಂದು ಪ್ರದೇಶದಲ್ಲಿ ಬೇಕಾದಷ್ಟು ಸಂಪನ್ಮೂಲಗಳನ್ನು ಮಾಡುವಂಥ ಅವಕಾಶ ಇದ್ದರೂ ಕೂಡ, ಬೇಕಾದಷ್ಟು ಸಂಪತ್ತುಗಳನ್ನು ಸಮುದ್ರದಿಂದ, ಏನೊಂದು ದುಡ್ಡನ್ನು ಹಾಕದೆ ಒಳನಾಡು ಮೀನಿನ ಅಭಿವೃದ್ಧಿಯನ್ನು ಮಾಡಬೇಕಾದರೆ, ಅದರಿಂದ ಒಳ್ಳೆಯದಾಗಬೇಕಾದರೆ ನಾವು ದುಡ್ಡನ್ನು ಹಾಕಬೇಕಾಗುತ್ತದೆ. ಆದರೆ, ಸಮುದ್ರದಲ್ಲಿ ಬೆಳೆಯುವ ಮೀನುಗಳಿಗೆ ನಾವು ಯಾವುದೇ ದುಡ್ಡನ್ನು ಹಾಕಬೇಕಾಗಿಲ್ಲ. ಆದರೆ, ನಾವು ಕರಾವಳಿಯಲ್ಲಿರುವ ಮೀನುಗಾರರಿಗೆ ಸಫಿಷಿಯೆಂಟ್ ಇನ್‌ಫ್ರಾಸ್ಟ್ರಕ್ಚರ್ ಕೊಡಬೇಕಾಗಿದೆ. ಆ ಸಫಿಷಿಯೆಂಟ್ ಇನ್‌ಫ್ರಾಸ್ಟ್ರಕ್ಚರ್ ಕೊಡುವಂಥ ವ್ಯವಸ್ಥೆಯಿಲ್ಲ. ಅಲ್ಲಿ ಎರಡು ಬಂದರುಗಳಿವೆ. ಒಂದು ಮಲ್ಪೆಯಲ್ಲಿ ಒಂದು ಸಣ್ಣ ಬಂದರು, ಇನ್ನೊಂದು ಸಣ್ಣ ಬಂದರು ಮಂಗಳೂರಿನಲ್ಲಿದೆ. ಮತ್ತು ಇಡೀ ಕರಾವಳಿಯುದ್ದಕ್ಕೂ ಬೇಕಾದಷ್ಟು ಸ್ಥಳಗಳಲ್ಲಿ ಫಿಷ್ ಲ್ಯಾಂಡಿಂಗ್ ಸೆಂಟರ್, ಜಟ್ಟಿಗಳನ್ನು ಮಾಡಬೇಕಾಗಿದೆ. ಬಹುಶಃ ನಿನ್ನೆ ದಿವಸ ಶ್ರೀ ಸೋಮಪ್ಪನವರು ಅವರ ಮನಸ್ಸಿನಲ್ಲಿದ್ದ ದುಗುಡವನ್ನು ಹೇಳಿದರು. 'ಎಲ್ಲರೂ ಸ್ಥಳಗಳನ್ನು ಬಿಟ್ಟು ಮಂಗಳೂರಿಗೆ ಮತ್ತು ಮಲ್ಪೆಗೆ ಹೋಗುತ್ತಿದ್ದಾರೆ ಮಲ್ಪೆಯಲ್ಲಿ ವೃತ್ತಿಯಲ್ಲಿರುವಂಥ ಜನರೂ ಕೂಡ ಅತ್ತ ಕಡೆ ಹೋಗಿದ್ದಾರೆ. ಏತಕ್ಕೋಸ್ಕರ ಹೀಗಾಯಿತು ಎಂದರೆ, ದೋಣಿಗಳಿಗೆ ತಂಗುದಾಣಗಳಿಲ್ಲ, ಅಥವಾ ಮೀನುಗಳನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವಂಥ ಒಂದು ವಿಷಯ ಹೇಳಿದರು. ಬಹುಶಃ ನಾವು ಕರಾವಳಿ ಪ್ರದೇಶಗಳಲ್ಲಿ ಸ್ವಲ್ಪ ದುಡ್ಡನ್ನು ವಿನಿಯೋಗಿಸಿದರೆ ಇವೊತ್ತು ಏನು 39 ಕೋಟಿ ರೂಪಾಯಿಗಳ ವಿದೇಶಿ ವಿನಿಮಯ ಗಳಿಸುತ್ತಿದ್ದೇವೆ, ಅದು 39 ಕೋಟಿ ರೂಪಾಯಿಗಳಲ್ಲಿ ಬಹುಶಃ 390 ಕೋಟಿ ರೂಪಾಯಿಗಳನ್ನು ಸಹ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂಬ ವಿಷಯವನ್ನು ಹೇಳುತ್ತಿದ್ದೇನೆ. ನಾನು ಕಳೆದ ತಿಂಗಳು ಕೇರಳಕ್ಕೆ ಹೋಗಿದ್ದೆ. ಅಲ್ಲಿ ಸುಮಾರು 500 ಕಿಲೋಮೀಟರ್ ಉದ್ದದ ಕರಾವಳಿ ಪ್ರದೇಶವಿದ್ದು 350 ಕೋಟಿ ರೂಪಾಯಿಗಳನ್ನು ಸಂಪಾದಿಸುತ್ತಿದ್ದಾರೆ. ನಮ್ಮಲ್ಲಿ 310 ಕಿಲೋಮೀಟರ್ ಕರಾವಳಿ ಪ್ರದೇಶವಿದ್ದರೂ ನಮಗೆ ಸಿಕ್ಕುತ್ತಿರುವುದು ಕೇವಲ 39 ಕೋಟಿ ರೂಪಾಯಿಗಳು ಮಾತ್ರ. ಅದಕ್ಕೋಸ್ಕರ ಇವೊತ್ತು ದೀರ್ಘವಾಗಿ ಆಲೋಚನೆ ಮಾಡಿ ಕರಾವಳಿ ಪ್ರದೇಶವನ್ನು ದುಡ್ಡು ಹಾಕಿ ಒಳನಾಡು ಪ್ರದೇಶಗಳಲ್ಲಿ ಮೀನುಗಳನ್ನು ಸಂಗ್ರಹಣೆ ಮಾಡಿ ಉತ್ಪಾದನೆ ಮಾಡಬೇಕೆಂದು ಯೋಚಿಸುತ್ತಿದ್ದೇವೆಯೋ ಅದೇ ರೀತಿಯಲ್ಲಿ ಕರಾವಳಿ ಪ್ರದೇಶದಲ್ಲಿ ಇನ್ನಷ್ಟು ಸ್ವಲ್ಪ ಹಣವನ್ನು ಹಾಕಿ ಆ ಒಂದು ಪ್ರದೇಶವನ್ನು ನಾವು ಅಭಿವೃದ್ಧಿಪಡಿಸಿದರೆ ಬಹುಶಃ ನಮ್ಮ ಕರ್ನಾಟಕ ರಾಜ್ಯದ ವಿದೇಶಿ ವಿನಿಮಯ ಹಣ ಬಹಳ ಜಾಸ್ತಿಯಾಗುತ್ತದೆ, ಜನರ ಆರ್ಥಿಕ ಪರಿಸ್ಥಿತಿ ಕೂಡ ಬಹಳ ಚೆನ್ನಾಗಿರುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಲ್ಲದೆ, ಬ್ರ್ಯಾಕಿಷ್ ವಾಟರ್‌ನಲ್ಲಿ ಸೀಗಡಿ ಮರಿಗಳ ಉದ್ದಿಮೆಯನ್ನು ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವಿದೆ. ಅದಕ್ಕಾಗಿ ಫಿಶ್ ಫಾರ್ಮರ್ಸ್ ಡೆವಲಪ್‌ಮೆಂಟ್ ಅಸೋಸಿಯೇಷನ್ ಮತ್ತು ಬ್ರ್ಯಾಕಿಷ್ ವಾಟರ್ ಫಿಷ್ ಡೆವಲಪ್‌ಮೆಂಟ್ ಏಜೆನ್ಸಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಸುಮಾರು 8,000 ಎಕರೆಯ ಇಂತಹ ಒಂದು ಪ್ರದೇಶವಿದೆ. ಸೀಗಡಿ ಮೀನುಗಳನ್ನು ಬೆಳೆಸುವುದಕ್ಕೆ ಯೋಗ್ಯವಾದಂಥ ಭೂಮಿಗಳಿವೆ. ಅದರಲ್ಲಿ ಸುಮಾರು 4,000 ಹೆಕ್ಟೇರುಗಳಲ್ಲಿ ಸೀಗಡಿ ಮರಿಗಳನ್ನು ಉತ್ಪಾದಿಸಬಹುದೆಂದು ಹೇಳುವಂಥ ಒಂದು ಸಮೀಕ್ಷೆ ಕೂಡ ನಡೆದಿದೆ. ಈ ಒಂದು ಸಮೀಕ್ಷೆ ಪ್ರಕಾರ ಸುಮಾರು 800-900 ಹೆಕ್ಟೇರ್ಸ್ ಮಾತ್ರ ಸರ್ಕಾರದ ಭೂಮಿಯಾಗಿದೆ. ಉಳಿದದ್ದೆಲ್ಲಾ ಖಾಸಗಿ ಜನರಿಗೆ ಸೇರಿದುದಾಗಿದೆ. ಈ ದಿಸೆಯಲ್ಲಿ ನಾವೇನು

ಮಾಡುತ್ತಿದ್ದೇವೆಂದರೆ ಭೂಮಿಗಳನ್ನು ಅಲಾಟ್ ಮಾಡಬೇಕೆಂದು ಹೇಳುವ ಅಭಿಪ್ರಾಯದಿಂದ ಒಂದು ಸಮಿತಿಯನ್ನು ಮಾಡಿ, ಅಲ್ಲಿ ಈಗಾಗಲೇ ಬ್ರಾಕಿಷ್ ವಾಟರ್ ಮಾಡಿ ಸೀಗಡಿ ಉದ್ಯಮವನ್ನು ಕೈಗೊಳ್ಳುತ್ತಿದ್ದೇವೆ. ಈ ಮಧ್ಯೆ ಸೀಗಡಿ ವ್ಯಾಪಾರ ಸರಿಪಡಿಸುವುದಕ್ಕೆ ಲ್ಯಾಂಡ್ ಅಲಾಟ್‌ಮೆಂಟ್ ಮಾಡುವುದಕ್ಕೋಸ್ಕರ ಅಥವಾ ಖಾಸಗಿ ಜನರ ಬ್ರಾಕಿಷ್ ವಾಟರ್ ಏರಿಯಾದಲ್ಲಿ ಸೀಗಡಿ ಮೀನುಗಳನ್ನು ಬೆಳೆಸುವುದಕ್ಕೆ ಅನುಕೂಲವಾಗುವಂತೆ ಕಾರ್ಯರೂಪಕ್ಕೆ ತಂದರೆ ಒಳ್ಳೆಯದು. ಇರಿಗೇಷನ್ ಆಕ್ಟ್ ಅನ್ನು ಅಮೆಂಡ್‌ಮೆಂಟ್ ಮಾಡಿ, ಮತ್ತು ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅನ್ನು ಅಮೆಂಡ್‌ಮೆಂಟ್ ಮಾಡಿ, ಲ್ಯಾಂಡ್ ರೂಲ್ಸ್ ಎಲ್ಲವನ್ನೂ ಅಮೆಂಡ್‌ಮೆಂಟ್ ಮಾಡಿದ್ದೇವೆ. ಆ ಒಂದು ವಿಷಯದಲ್ಲಿ ಖಾಸಗಿ ಜನರು ಹೆಚ್ಚು ಹೆಚ್ಚಾಗಿ ಮುಂದೆ ಬಂದು ಸೀಗಡಿ ಉದ್ಯಮವನ್ನು ಕೈಗೊಳ್ಳಬೇಕೆಂಬ ಅಭಿಪ್ರಾಯ ಪಟ್ಟಿದ್ದೇವೆ ಮತ್ತು ತೀರ್ಮಾನ ಸಹ ತೆಗೆದುಕೊಂಡಿದ್ದೇವೆ. ಸೀಗಡಿ ಉದ್ದಿಮೆಯಲ್ಲಿ ಬೇಕಾದಷ್ಟು ಉತ್ಪತ್ತಿ ಇದೆ. ಆಂಧ್ರ ಪ್ರದೇಶದಲ್ಲಿ 1 ಹೆಕ್ಟೇರ್‌ನಲ್ಲಿ 10 ಟನ್ ಸೀಗಡಿ ಮೀನುಗಳನ್ನು ಉತ್ಪಾದಿಸುತ್ತಿದ್ದಾರೆ. ಅಲ್ಲಿ 1 ಟನ್ ಸೀಗಡಿ ಮೀನಿಗೆ ಕ್ರಯ ಎಷ್ಟಿದೆ ಎಂದರೆ ಒಂದು ಲಕ್ಷ ರೂಪಾಯಿ. ಅಂದರೆ, 1 ಹೆಕ್ಟೇರ್‌ಗೆ 10 ಲಕ್ಷ ರೂಪಾಯಿಗಳ ಉತ್ಪಾದನೆಯಾಯಿತು. ಆದರೆ, ನಮ್ಮ ಕರ್ನಾಟಕದಲ್ಲಿ ಸಿಗುವುದು ಎಷ್ಟೆಂದರೆ, ಕೇವಲ 875 ಕಿಲೋಗ್ರಾಮ್ಸ್ ಸೀಗಡಿ ಉತ್ಪಾದನೆಯನ್ನು 14 ಎಕರೆ ಪ್ರದೇಶದಲ್ಲಿ ಉತ್ಪಾದಿಸುತ್ತಿದ್ದೇವೆ. ಅದಕ್ಕೋಸ್ಕರ intensive cultivation ಆಗಬೇಕು, ಜನಗಳಿಗೆ intensive cultivation ವಿಷಯದಲ್ಲಿ ಹೇಳಿಕೊಡಬೇಕು ಎನ್ನತಕ್ಕ ಅಭಿಪ್ರಾಯದಿಂದ ಅಥವ ಒಳ್ಳೆಯ ಮೀನು ಮರಿಗಳನ್ನು, ಸೀಗಡಿ ಮರಿಗಳನ್ನು ಕೊಡಬೇಕು ಎನ್ನತಕ್ಕ ಅಭಿಪ್ರಾಯದಿಂದ ಸುಮಾರು 52 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕುಮಟಾದಲ್ಲಿ ಒಂದು ಕೇಂದ್ರವನ್ನು ತೆರೆಯಬೇಕೆಂದಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್ :- ಮೀನಿನ ಬೆಲೆ ತುಂಬಾ ಜಾಸ್ತಿಯಾಗುತ್ತಿದೆ. ಒಂದು ಕೆ.ಜಿ. ಮೀನಿನ ಬೆಲೆ 50 ರೂಪಾಯಿಯಾಗಿದೆ. ಇದರ ಬಗ್ಗೆ ಏನು ಹೇಳುತ್ತೀರಿ ?

Sri A.M. BELLIYAPPA :- I want to tell about it. Unfortunately, though I have sopken so much about this fish, about inland and marine fishing, to my utter surprise, when I took over charge, I found that there was no Fisheries Act inthe State of Karnataka. ಅಲ್ಲಿಂದ ಇಲ್ಲಿಯವರೆಗೆ ಅಂದರೆ 1952 ರಿಂದ 1992ರವರೆಗೆ ಸುಮಾರು 40 ವರ್ಷಗಳು ಕಳೆದರೂ ಕೂಡ, ಫಿಷರೀಸ್ ಡಿಪಾರ್ಟ್‌ಮೆಂಟ್ ಪ್ರಾರಂಭವಾಗಿ 40 ವರ್ಷಗಳಾದರೂ ಕೂಡ ಇಲ್ಲಿಯವರೆಗೆ ಒಂದು ಫಿಷರೀಸ್ ಆಕ್ಟ್ ಇಲ್ಲ. ಅದರ ಬಗ್ಗೆ ನಾನು ನಮ್ಮ ನಿರ್ದೇಶಕರನ್ನು ಕೇಳಿದೆ.

ಶ್ರೀ ಕೆ. ಹೆಚ್. ರಂಗನಾಥ್ :- ಆಕ್ಟನ್ನು ಮಾಡಿದರೆ ಅವೆಲ್ಲವನ್ನು ಕಂಟ್ರೋಲ್ ಮಾಡಬಹುದು. ಆದರೆ ಮೀನಿನ ಬೆಲೆಯನ್ನು ಕಡಿಮೆ ಮಾಡಲು ಏನು ಮಾಡುತ್ತೀರಿ ?

ಶ್ರೀ ಎ. ಎಂ. ಬೆಳ್ಳಿಯಪ್ಪ :- ಹೌದು ಆಕ್ಟ್‌ನಿಂದ ಸರ್ಕಾರ ಕಂಟ್ರೋಲ್ ಮಾಡಬಹುದು. I cannot go to a fisherman and ask him to down the rate by fout rupees ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. What is the control I have? I am just asking you. Pollution Board is there, Pollution control is there.

ಶ್ರೀ ಕೆ. ಹೆಚ್. ರಂಗನಾಥ್:- ಆ ರೀತಿ ಮಾಡದಿದ್ದರೆ ನೀವು ಆಕಾಶಕ್ಕೆ ಮುಖವನ್ನು ಮಾಡಿಕೊಂಡು ದೇವರನ್ನು ಪ್ರಾರ್ಥನೆ ಮಾಡಲು ಆಗುವುದಿಲ್ಲವೇ ನಾನು ಏನು ಮಾಡಲಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ ಅದಕ್ಕೆ ಉಪಾಧ್ಯಕ್ಷಣಿಯವರೆ ನೀವು ಏನು ಹೇಳುತ್ತೀರಿ? ಸುಮ್ಮನೆ ಹೊರಗಡೆ ಹೋಗಿ ದೇವರನ್ನು ಪ್ರಾರ್ಥನೆ ಮಾಡಿ ಎಂದು ಹೇಳಬೇಕಾಗುತ್ತದೆ.

Mr. A. M. BELLIYAPPA :- I do not agree with the senior leader Mr. Ranganath. ಮಾನ್ಯ ರಂಗನಾಥ್ ರವರಿಗೆ ನಾನು ಉತ್ತರವನ್ನು ಕೊಡುತ್ತೇನೆ 1952 ರಿಂದಲೂ ಸಹ ಫಿಷರೀಸ್ ಆಕ್ಟ್ ಎನ್ನುವುದು ಇಲ್ಲ. ಯಾವ ರೀತಿ ಪೊಲ್ಯೂಷನ್ ಕಂಟ್ರೋಲ್ ಮಾಡಬಹುದು ಎಂದು ನಾನು ಹೇಳುವುದಿಲ್ಲ. ಅದನ್ನು ಮಾನ್ಯ ರಂಗನಾಥ್‌ರವರು ಹೇಳಿಕೊಳ್ಳಲಿ. What control I have so far as people who are polluting the waters ? I am just asking you ? ನಾನು ಪೊಲ್ಯೂಷನ್ ಇಲಾಖೆಯವರ ಹತ್ತಿರ ಹೋಗಬೇಕು, ಅಲ್ಲಿನ ಮಂತ್ರಿಗಳ ಹತ್ತಿರ ಹೋಗಬೇಕು, ಪೊಲ್ಯೂಷನ್ ಬೋರ್ಡ್‌ಗೆ ಹೋಗಬೇಕು ಅವರತ್ತಿರ ಹೋಗಿ ಹಾಗೆ ಮಾಡಿ ಹೀಗೆ ಮಾಡಿ ಎಂದು ಅವರನ್ನು ಕೇಳಿಕೊಳ್ಳಬೇಕೆ ಹೊರತು ನಾನು ನನ್ನ ಮಟ್ಟದಲ್ಲಿ ಏನು ಮಾಡಬೇಕಾಗುತ್ತದೆ. What control I have? What powers I have as a Fisheries Minister to control the situation?

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :- ಮೀನುಗಾರರಿಗೆ ತಮ್ಮ ಇಲಾಖೆಯಲ್ಲಿ ಕೊಡುಗೆಯೂ ಕಡಿಮೆ ಮತ್ತೆ ಕಂಟ್ರೋಲ್ ಸಹ ಕಡಿಮೆ. ಕೊಡುಗೆಯನ್ನೇನಾದರೂ ಕೊಟ್ಟರೆ ಕಂಟ್ರೋಲ್ ಮಾಡಿ.

ಶ್ರೀ ಎ. ಎಂ. ಬೆಳ್ಳಿಯಪ್ಪ :- ಮೀನುಗಾರರಿಗೆ ಕೊಡುಗೆಯನ್ನು ಕೊಡುವುದಕ್ಕೋಸ್ಕರ ಇವತ್ತು ಒಳ್ಳೆಯ ಅಭಿವೃದ್ಧಿ ಕೆಲಸವನ್ನು ಮಾಡಿದ್ದೇವೆ. ಅವರಿಗೆ 150 ಕಿ. ಮೀ. ರಸ್ತೆಯನ್ನು , ಒಂದು ಸಾವಿರ ಮನೆಗಳನ್ನು ಮಾಡುತ್ತೇವೆ. fish landing centres ಕಟ್ಟಿಸಿಕೊಡುತ್ತೇವೆ. ಇಂಥ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಯಾವುದಕ್ಕೋಸ್ಕರ ? ನಿಮಗೆ ಮತ್ತು ಮೀನುಗಾರರಿಗೆ ಕೊಡುಗೆಯನ್ನು ಕೊಡಬೇಕು ಎನ್ನತಕ್ಕ ಅಭಿಪ್ರಾಯದಿಂದ ಮಾಡಿದ್ದೇವೆ.

ಶ್ರೀ ಕೆ. ಹೆಚ್. ರಂಗನಾಥ್ :- ಶ್ರೀಮಾನ್ ಶೆಟ್ಟಿಯವರಿಗೆ ರಸ್ತೆಯಾಯಿತು ಆದರೆ ನಮಗೆ ಮೀನನ್ನು ಕಡಿಮೆ ಬೆಲೆಯಲ್ಲಿ ಕೊಡಿಸಬೇಕು.

Sri A. M. BELLIYAPPA:- I confess my inability to control the price, except through Mandal Panchayat and these people can make because I must see that the Fisheries Act is passed and then only . . . .ಅದಕ್ಕೋಸ್ಕರ ಫಿಷರೀಸ್ ಆಕ್ಟ್‌ನ ಒಂದು ಡ್ರಾಫ್ಟನ್ನು ಮಾಡಿದ್ದೇವೆ ಆ ಆಕ್ಟು ಈಗ ಲಾ-ಡಿಪಾರ್ಟ್‌ಮೆಂಟ್‌ಗೆ ಹೋಗಿದೆ ಅದು ನಿಮ್ಮ ಹತ್ತಿರ ಬರುತ್ತದೆ. ನೀವೇ ಅದನ್ನು ಪಾಸ್ ಮಾಡಬೇಕು ಆಗ ಅದಕ್ಕೆ ಏನು ಮಾಡಿಕೊಳ್ಳಬೇಕೋ ಅದನ್ನು ಮಾಡಿಕೊಳ್ಳಿ.

ಶ್ರೀ ಆರ್. ಎನ್. ನಾಯಕ್:- ಮಾನ್ಯ ರಂಗನಾಥ್‌ರವರು ಕಡಿಮೆ ಬೆಲೆಯಲ್ಲಿ ಮೀನನ್ನು ಒದಗಿಸಬೇಕೆಂದು ಹೇಳಿದ್ದಾರೆ ಅದನ್ನು ಮಾಡಬೇಕು. ಮತ್ತೆ ಮೀನುಗಳು ಹೆಚ್ಚಾಗಿ ಸಾಯುತ್ತಿವೆ. ಇದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಎಂ. ಬೆಳ್ಳಿಯಪ್ಪ :- ಅದನ್ನು ಮಾಡುತ್ತೇನೆ.

ಶ್ರೀ ಪ್ರತಾಪ ಚಂದ್ರ ಶೆಟ್ಟಿ :- ತಾವು ರೈತರಿಗೆ ಬೆಲೆಯನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೀರಿ ಆದರೆ ಮೀನುಗಾರರಿಗೆ ಬೆಲೆಯನ್ನು ಜಾಸ್ತಿ ಮಾಡಿದ ಕೂಡಲೇ ಕಡಿಮೆ ಮಾಡಬೇಕೆಂದು ಹೇಳುತ್ತೀರಿ ಇದರಿಂದ ಒಂದು ದ್ವಂದ್ವವಾದ ನಿಲುವು ಆಗುತ್ತದೆ. ಈ ಎರಡೂ ಸಹ ಕೃಷಿ ಇಲಾಖೆಗೆ ಸಂಬಂಧಪಟ್ಟಿದ್ದು. ರೈತರಿಗೆ ಬೆಂಬಲ ಬೆಲೆಯನ್ನು ಕೊಡಬೇಕೆಂದು ಒತ್ತಾಯ ಮಾಡುವಾಗ, ಮೀನುಗಾರರಿಗೆ ಮೀನಿನ ಬೆಲೆಯನ್ನು ಹೆಚ್ಚು ಮಾಡಿ.

ಶ್ರೀ ಎ. ಎಂ. ಬೆಳ್ಳಿಯಪ್ಪ :- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಸನ್ಮಾನ್ಯ ಸ್ನೇಹಿತರಾದಂತಹ ನಾಯಕ್‌ರವರು ಒಳ್ಳೆಯ ಸಲಹೆ ಕೊಟ್ಟರು. ನಾನು 6-7 ತಿಂಗಳ ಹಿಂದೆ ನಮ್ಮ ಊರಿನಲ್ಲಿ ಒಂದು ಮೀಟಿಂಗ್‌ಗೆ ಹೋಗಿದ್ದೆನು. ಆಗ ಮೀನುಗಳು ಸಾಯುವುದು ಶುರು ಆಗಿತ್ತು. ಜನರು ಏನು ಹೇಳಿದರೆಂದರೆ ಬೆಳ್ಳಿಯಪ್ಪನವರು

ಮಂತ್ರಿಯಾದಮೇಲೆ ಮೀನುಗಳೆಲ್ಲಾ ಸಾಯುವುದಕ್ಕೆ ಶುರುವಾಯಿತು ಎಂದು ಹೇಳಿದರು. ಅದರ ಸಲುವಾಗಿ ಈಗ ನನ್ನ ಊರಿನಲ್ಲಿ ಸಹ ಮೀನು ಸಾಯುವುದಕ್ಕೆ ಶುರುವಾಗಿದೆ. Because it comes to one generation and it vanishes after another generation. ಇದರ ಬಗ್ಗೆ ಒಂದು ದೊಡ್ಡ ಎಕ್ಸಾಮ್ ಮಾಡಿಸಿದ್ದೇವೆ. ಈ ಖಾಯಿಲೆ ಒಂದು ಜನರೇಷನ್‌ಗೆ ಮಾತ್ರ ಬರುತ್ತದೆ ಒಂದು ವರ್ಷ ಅದಮೇಲೆ ಪುನಃ ಸರಿ ಹೋಗುತ್ತದೆಂದು ಸೈಂಟಿಸ್ಟಂ ಹೇಳುತ್ತಾರೆ. There need not be any apprehension with regard to that. ಈಗ ಶ್ರೀಮಾನ್ ನಾಯಕ್‌ರವರು ಹೇಳಿರುವುದಕ್ಕೆ ನನ್ನ ಉತ್ತರವೇನೆಂದರೆ ಇದನ್ನು ಸರ್ಕಾರವೇ ವಹಿಸಿಕೊಂಡು ಕಡಿಮೆ ಬೆಲೆಗೆ ಮಾರಬೇಕು ಎನ್ನುವ ಅಭಿಪ್ರಾಯವನ್ನು ನೀವು ಹೇಳಿದೀರಿ, ಇದನ್ನು ಸರ್ಕಾರ ಮಾಡುವುದಕ್ಕೆ ಆಗುತ್ತದೆಯೇ ಎಂದು ನನ್ನ ಒಂದು ಅಭಿಪ್ರಾಯ. ಏಕೆಂದರೆ ಮಂಗಳೂರು ಕಾರ್ಪೋರೇಷನ್ ಇದೇ ಕೆಲಸವನ್ನು ಮಾಡುತ್ತಿದೆ. ಮೀನು ತೆಗೆದುಕೊಳ್ಳುವುದು, ಅದನ್ನು ಮಾರುವುದು, ಆದಷ್ಟು ಕಡಿಮೆ ದರದಲ್ಲಿ ಇವತ್ತು ಮಾರುತ್ತಿದ್ದಾರೆ. ಇವತ್ತು ಕಾರ್ಪೋರೇಷನ್ ಹಾಳಾಗಿದೆ, ಇದೇ ರೀತಿಯಲ್ಲಿ ಫೆಡರೇಷನ್ ಎಲ್ಲಾ ಹಾಳಾಗಿದೆ. ಈ ವಿಷಯದಲ್ಲಿ ಶ್ರೀಮಾನ್ ನಾಯಕ್‌ರವರು ಹೇಳಿದರೂ ಕೂಡ ನಾನು ಹೆಚ್ಚಿಗೆ ನಂಬಿಕೆ ಮಾತುಗಳನ್ನು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಬಸವರಾಜ್ :- ಮಾನ್ಯ ಸಚಿವರೇ, ನೀವು ಮತ್ಸ್ಯ ಉದ್ಯಮವನ್ನು ಕೃಷಿ ಉದ್ಯಮವನ್ನಾಗಿ ಟ್ರೀಟ್ ಮಾಡಿದರೆ ಆಗ ಬೆಂಬಲ ಬೆಲೆ ಕೊಡುವುದಕ್ಕೆ ಆಗುತ್ತದೆ. ಅದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಎಂ. ಬೆಳ್ಳಿಯಪ್ಪ :- ಸನ್ಮಾನ್ಯ ನನ್ನ ಮಿತ್ರರು ಏನು ಸಲಹೆ ಕೊಟ್ಟರು ಈ ವಿಷಯ ಈಗಾಗಲೇ ತೀರ್ಮಾನವಾಗಿದೆ. ಈ ಒಂದು ಕೃಷಿಯ ಜೊತೆಯಲ್ಲಿ ಮತ್ಸ್ಯವನ್ನು ಕೂಡ ಒತ್ತು ಮಾಡಬೇಕೆಂದು ಹೇಳುವಂತಹ ತೀರ್ಮಾನವನ್ನು ಈಗ ತೆಗೆದುಕೊಂಡಿದ್ದೇವೆ. ಈಗ ಅದು ರಾಜ್ಯಪಾಲರ ಹತ್ತಿರ ಇದೆ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ:- ಹಾಗಾದರೆ ನಮ್ಮ ಮೀನುಗಾರರ ಸಾಲವೂ ಮನ್ನವಾಗುತ್ತದೆ.

Sri A. M. BELLIYAPPA :- You have brought the fishing culture into the category of agriculture. Already decision is taken

ಶ್ರೀ ಆರ್. ಎನ್. ನಾಯಕ್ :- ಈಗ ಸರ್ಕಾರಕ್ಕೆ ಬೆಂಬಲ ಕೊಟ್ಟು ಮೀನು ಪೂರೈಕೆ ಮಾಡುವುದಕ್ಕೆ ಅದು ಸಾಧ್ಯವಾಗದೇ ಹೋದರೂ ಸಹ ಮೀನನ್ನು ಹಿಡಿಯುವುದಕ್ಕೆ ಹೆಚ್ಚು ಬೆಳೆಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕಾಗುತ್ತದೆ. ಅದಕ್ಕೆ ಏನಾದರೂ ಮಾಡುತ್ತೀರಾ ? ದಯವಿಟ್ಟು ಹೇಳಿ. ಏಕೆಂದರೆ ಸಮುದ್ರದಲ್ಲಿ ಒಂದೊಂದು ಸಲ ಮೀನು ಹಿಡಿಯುವ ಪ್ರಶ್ನೆ ಬಂದಾಗ ಮೀನು ಬಂದ ಹಾಗೆ ಲಕ್ ಇದ್ದರೆ ಬರುತ್ತದೆ, ಕೆಲವು ವರ್ಷ ಬರುತ್ತದೆ, ಕೆಲವು ವರ್ಷ ಬರುವುದಿಲ್ಲ. ಇನ್ನೊಂದು ಏನೆಂದರೆ 'ಮೀನನ್ನು ಜಾಸ್ತಿ ಮಾಡುವುದಕ್ಕೆ ಏನೆಲ್ಲಾ ಪ್ರಯತ್ನ ಮಾಡಬಹುದು, ಅದನ್ನು ಸಹ ಸರ್ಕಾರ ಮಾಡಬಹುದು. ಇನ್ನೊಂದು ಹೇಳಬೇಕೆಂದು ನೀವು ಎಷ್ಟು ಮಾಡಿದರೂ ಸಹ ನಮ್ಮ ಟೀಕೆ ತಪ್ಪುವುದಿಲ್ಲ. ಏಕೆಂದರೆ ಯಾವುದಕ್ಕೆ ಸಬ್ಸಿಡಿ ಕೊಟ್ಟರೂ ಸಹ ಸರ್ಕಾರ ಆ ಹಣವನ್ನು ಟ್ಯಾಕ್ಸ್ ಮೂಲಕ ಅಥವಾ ಬೇರೆ ರೀತಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಸದಸ್ಯರು ಟ್ಯಾಕ್ಸ್ ಜಾಸ್ತಿ ಹಾಕುತ್ತಾರೆಂದು ಹೇಳುತ್ತಾರೆ. ನೀವು ಎಲ್ಲರನ್ನು ತೃಪ್ತಿಮಾಡುವುದಕ್ಕೆ ಸಾಧ್ಯ ಇಲ್ಲದೇ ಹೋದರೂ ಸಹ ತಾವು ಏನು ಮಾಡಬೇಕೆಂದರೆ ಮೀನಿನ ಉತ್ಪನ್ನವನ್ನು ಜಾಸ್ತಿ ಮಾಡುವುದಕ್ಕೆ ಏನೇನು ಪ್ರಯತ್ನ ಆಗಬೇಕು ಅದನ್ನು ಮಾಡಿಸಿ.

ಶ್ರೀ ಎ. ಎಂ. ಬೆಳ್ಳಿಯಪ್ಪ :- ಈ ಮೀನು ಉತ್ಪನ್ನವನ್ನು ಒಳನಾಡಿನಲ್ಲಿ ಜಾಸ್ತಿ ಮಾಡುವ ವಿಷಯ ಏನು ಮಾಡಬಹುದೆಂದು ನಾನು ಹೇಳಿದೆ. ಈ marine fishing. ಇದರಲ್ಲಿ ಯಾವ ರೀತಿ ಉತ್ಪನ್ನ ಜಾಸ್ತಿ ಮಾಡಬೇಕೆಂದು ಹೇಳಿದರೆ ಇನ್ನು We are doing inland fishing and offshore fishing.

ಯಾವ ಸ್ಥಳಕ್ಕೆ ನಾವು ಹೋಗುತ್ತಿರುವುದೆಂದರೆ ಡೀಪ್ ಸೀಫಿಷಿಂಗ್‌ಗೆ ನಾವು ಇನ್ನೂ ಹೋಗಿಲ್ಲ. ಡೀಪ್ ಸೀಫಿಷಿಂಗ್ ಸರ್ಕಾರಕ್ಕೆ ಮಾಡುವುದಕ್ಕಾಗುವುದಿಲ್ಲ. ಡೀಪ್ ಸೀ ಫಿಷಿಂಗ್ ಮಾಡಬೇಕಾದರೆ ನಾವು We have to discuss with the private entrepreneurs or individuals. ಅದಕ್ಕೆ ಖಾಸಗಿಯವರ ಜೊತೆ ಮಾತನಾಡಿ ಆದಷ್ಟು ಜನಗಳನ್ನು ಅಟ್ರ್ಯಾಕ್ಟ್ ಮಾಡಿ ಆ ಒಂದು ವಿಷಯದಲ್ಲಿ ಅವರನ್ನು ಈ ಉದ್ಯಮದಲ್ಲಿ ತೊಡಗಿಸಬೇಕಾಗುತ್ತದೆ. ಹಾಗೆ ಮಾಡಿದರೆ ಮೀನಿನ ದೊಡ್ಡ ಉತ್ಪತ್ತಿ ಬರುತ್ತದೆ. ವಿದೇಶಿವಿನಿಮಯ ಪ್ರಾರಂಭವಾಗುತ್ತದೆ. ಜನಗಳಿಗೂ ಕೂಡ ಕೆಲಸ ಸಿಗುತ್ತದೆ ಎನ್ನುವಂತಹ ವಿಷಯವನ್ನು ಹೇಳುತ್ತೇನೆ. ಇನ್ನೂ ಎರಡು ಡಿಪಾರ್ಟ್‌ಮೆಂಟ್‌ಗಳ ಬಗ್ಗೆ ಹೇಳುವುದಿದೆ. ಮೊದಲನೆಯದು ಪೋರ್ಟ್ಸ್ ಮತ್ತು ಎರಡನೆಯದು ಇನ್‌ಲ್ಯಾಂಡ್ ಮ್ಯಾನ್ ಟ್ರಾನ್ಸ್‌ಪೋರ್ಟ್. ಈ ಎರಡು ಇಲಾಖೆಗಳ ಬಗ್ಗೆ ಯಾರೂ ಮಾತನಾಡಲಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನೀವು ಬರುವುದಕ್ಕಿಂಥ ಮುಂಚೆ ಮಾನ್ಯ ನರಸಿಂಹ ಮೂರ್ತಿಯವರು ಮೀನುಗಾರಿಕೆ ಮಂತ್ರಿಗಳಾಗಿದ್ದಾಗ ಎಲ್ಲ ಶಾಸಕರೂ ಮೀನು ತಿನ್ನಬೇಕು, ಅದು ಬಹಳ ಚೆನ್ನಾಗಿರುತ್ತದೆಂದು ಹೇಳುತ್ತಿದ್ದರು. ನೀವು ಇದರ ಬಗ್ಗೆ ಗಮನಹರಿಸಲಿಲ್ಲ. ಈಗಲಾದರೂ ತಾವು ವ್ಯವಸ್ಥೆ ಮಾಡಿ.

ಉಪಾಧ್ಯಕ್ಷಿಣಿಯವರು:- ಎಲ್ಲ ಶಾಸಕರೂ ಅಲ್ಲ.

ಶ್ರೀ ಎ. ಎಂ. ಬೆಳ್ಳಿಯಪ್ಪ :-ನಾನು ಈಗಾಗಲೇ ಹೇಳಿದಂತೆ ಕರಾವಳಿ ಪ್ರದೇಶ ಡ್ರೆಡ್ಜಿಂಗ್ ಆಗಬೇಕಾಗಿದೆ. ಇದು ಬಹಳ ಅವಶ್ಯಕವಿದೆ. ನಾವು ಡ್ರೆಡ್ಜಿಂಗ್ ಯಂತ್ರವನ್ನು ತೆಗೆದುಕೊಳ್ಳುವುದಕ್ಕೆ ಪರ್ಮಿಷನ್ ಕೊಟ್ಟು ಬಜೆಟ್‌ನಲ್ಲಿ ಅಲಾಟ್‌ಮೆಂಟ್ ಮಾಡಬೇಕೆಂದು ನಾನು ಕೇಳಿಕೊಂಡೆ. ಆದರೆ ದುರ್ದೈವವಶಾತ್ ಈ ವರ್ಷ ಹಣ ಸಿಕ್ಕಲಿಲ್ಲ. ಇದಕ್ಕೆ ಸುಮಾರು 10 ಕೋಟಿ ರೂ. ಬೇಕಾಗುತ್ತದೆ. ಅದು ಸಿಕ್ಕಿದರೆ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಹಾಗೂ ಮೀನುಗಾರರು ಏನು ಕಷ್ಟಬೀಳುತ್ತಿದ್ದಾರೆ, ಅವರ ಮನಸ್ಸಿನ ದುಗುಡ ಏನಿದೆ ಅದನ್ನು ಪರಿಹಾರ ಮಾಡಬಹುದಿತ್ತು. ಇವರ ಸಹಾಯದ ಜೊತೆಗೆ ದಕ್ಷಿಣ ಕನ್ನಡ ಜಿಲ್ಲೆಯ 3 ಜನ ಮಂತ್ರಿಗಳು ಯಾರಿದ್ದಾರೆ ಅವರ ಸಹಾಯವನ್ನೂ ಕೂಡ ತೆಗೆದುಕೊಂಡು ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಹೋಗಿ ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಸ್ವಲ್ಪ ಹಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಬಯಸುತ್ತೇನೆ. ಕೇವಲ ಕೆಲವೇ ಜನ ಮಾನ್ಯ ಸದಸ್ಯರು ಮಾತನಾಡಿದರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾನು ಅವರಿಗೆ ಅಭಿನಂದಿಸಿ ನನ್ನ ಇಲಾಖೆಯ ಬೇಡಿಕೆಗಳಾದ ಬಂದರು, ಇನ್‌ಲ್ಯಾಂಡ್ ಫಿಷರೀಸ್, ಟ್ರ್ಯಾನ್ಸ್‌ಪೋರ್ಟ್ ಈ ಎಲ್ಲ ಬೇಡಿಕೆಗಳಿಗೂ ಮಾನ್ಯ ಸಭೆಯು ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಈ. ಟಿ. ಶಂಭುನಾಥ್ (ಅರಣ್ಯ ಖಾತೆ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಹಲವಾರು ಮಾನ್ಯ ಸದಸ್ಯರು ಅರಣ್ಯ ಇಲಾಖೆಯಮೇಲೆ ಬಹಳಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಅರಣ್ಯ ಇಲಾಖೆ ಸಾಮಾನ್ಯವಾಗಿ ಎಲ್ಲಾ ಇಲಾಖೆಯಂತೆ ಒಂದು ಇಲಾಖೆ ಅಲ್ಲ. ಮೀನು ಇಲ್ಲ ಎಂದರೆ ತಕ್ಷಣ ಗೊತ್ತಾಗುತ್ತದೆ, ಆಹಾರ ಇಲ್ಲ ಎಂದರೆ ತಕ್ಷಣ ಗೊತ್ತಾಗುತ್ತದೆ. ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಬಹುದು. ಆದರೆ ಅರಣ್ಯದ ರೀತಿ ಹಾಗಲ್ಲ. ಇದು ಬಹಳ ವರ್ಷಗಳಾದಮೇಲೆ ಅನುಭವಕ್ಕೆ ಬರುತ್ತದೆ. ನಾವು ಇದನ್ನು ಅನುಭವಿಸುತ್ತಿದ್ದೇವೆ. ಈಗ ಇದರ ಬಗ್ಗೆ ನಾವು ಜಾಗೃತಿಯನ್ನು ವಹಿಸುತ್ತಿದ್ದೇವೆ. ಸಾಮಾನ್ಯವಾಗಿ 33 ಪರ್ಸೆಂಟ್ ಇದ್ದಂಥ ಅರಣ್ಯ ಈಗ ನಾಶವಾಗಿ ನಮ್ಮ ಕರ್ನಾಟಕದಲ್ಲಿ ಕೇವಲ 20 ಪರ್ಸೆಂಟ್‌ಗೆ ಇಳಿದಿದೆ. ಇದು ಕೇವಲ ರಾಜ್ಯಮಟ್ಟದ ವ್ಯವಸ್ಥೆ ಅಲ್ಲ. ರಾಷ್ಟ್ರಮಟ್ಟದಲ್ಲಿ ಕೂಡ ಅರಣ್ಯವನ್ನು ಕಾಪಾಡುವುದಕ್ಕೆ ವ್ಯವಸ್ಥೆ ಇಲ್ಲ. ಅರಣ್ಯ ಬೆಳೆಸಲು ಎಲ್ಲಾ ರೀತಿಯ ಸಹಕಾರವನ್ನೂ ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. 20 ಪರ್ಸೆಂಟ್ ಅರಣ್ಯ ಇರುವುದರಲ್ಲಿ 11 ಪರ್ಸೆಂಟ್ ಮಾತ್ರ ಉತ್ತಮ ನಿತ್ಯ ಹರಿದ್ವರ್ಣದ ಅರಣ್ಯ ಇರತಕ್ಕದ್ದು. ಪಶ್ಚಿಮ

ಘಟ್ಟಗಳಲ್ಲಿ. ಇನ್ನುಳಿದದ್ದು ಎಂದರೆ ಕೇವಲ ಕುರುಚಲು ಗಿಡ ಮತ್ತು ಪೊದೆಗಳು ಇರತಕ್ಕ ಅರಣ್ಯ. ಅದರಲ್ಲೂ ತುಮಕೂರು, ಚಿತ್ರದುರ್ಗ, ಬಳ್ಳಾರಿ , ರಾಯಚೂರು ಜಿಲ್ಲೆಗಳಲ್ಲಿ ಹೋಗಿ ಯಾರಾದರೂ ನೋಡಿದರೆ ಕಾದಿಟ್ಟ ಅರಣ್ಯ ಎಂದು ಬೋರ್ಡ್ ಹಾಕಿರುತ್ತಾರೆ. ಅಲ್ಲಿ ಕೇವಲ ಬೆಟ್ಟಗಳಿರುತ್ತವೆ ಅಥವಾ ದೊಡ್ಡ ದೊಡ್ಡ ಗ್ರ್ಯಾನೈಟ್ ಬಂಡೆಗಳು ಮಾತ್ರ ಕಾಣುತ್ತವೆ. ಅಲ್ಲಿ ಯಾವ ಮರವೂ ಇರುವುದಿಲ್ಲ. ಆ ಇದು ಕಾದಿಟ್ಟ ಅರಣ್ಯದ ಒಂದು ಪರಿಸ್ಥಿತಿ. ಇದೇ ಪರಿಸ್ಥಿತಿ ಮುಂದುವರಿದರೆ ಇನ್ನು ಕೆಲವೇ ವರ್ಷಗಳಲ್ಲಿ ಪರಿಸರದ ಮಲಿನತೆಯಿಂದಾಗಿ ನಾವು ಉಸಿರಾಡುವುದಕ್ಕೂ ಕೂಡ ಕಷ್ಟವಾಗಬಹುದು. ಬೆಂಗಳೂರಿನಲ್ಲಿ ದಿನನಿತ್ಯ ಉತ್ಪತ್ತಿಯಾಗತಕ್ಕ ಕಾರ್ಬನ್ ಡೈ ಆಕ್ಸೈಡ್‌ನ್ನು ನಿಯಂತ್ರಿಸುವುದಕ್ಕೆ, ನಮ್ಮ ರಾಜ್ಯದಲ್ಲಾಗಲಿ, ರಾಷ್ಟ್ರದಲ್ಲಾಗಲಿ ಇದನ್ನು ಪರಿಶುದ್ಧಗೊಳಿಸುವಂಥ ಯಂತ್ರಗಳನ್ನು ತರಿಸುವಷ್ಟು ಶ್ರೀಮಂತ ದೇಶ ಅಲ್ಲ. ಅದನ್ನು ಪರಿಶುದ್ಧ ಗೊಳಿಸುವುದಕ್ಕೆ ಅವತ್ತಿನಿಂದಲೇ ನಾವು ಮರಗಳನ್ನು ಬೆಳೆಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗಿದೆ. ಅದು ಕೇವಲ ಅರಣ್ಯ ಇಲಾಖೆಯಿಂದಲೇ ಸಾಧ್ಯವಿಲ್ಲ. ಇದರಲ್ಲಿ ಪೂರಕವಾಗಿ ಆರ್ಬಿಕಲ್ಚರ್ ಮತ್ತು ಅಗ್ರಿಕಲ್ಚರ್ ಕೂಡ ಅದರ ಕೊಡುಗೆಯನ್ನು ಕೊಡಬೇಕಾಗುತ್ತದೆ. ನಾವು ಈಗ ಲೆಕ್ಕ ಹಾಕಿದ ಪ್ರಕಾರ ಪ್ರತಿ 222 ಸ್ಕ್ವಯರ್ ಮೀಟರ್‌ಗೆ ಎರಡು ಮರಗಳು ಇರಬೇಕೆಂದು ಲೆಕ್ಕ ಹಾಕಿದ್ದೇವೆ. ಅದು ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಪ್ರತಿಯೊಂದು ಹೆಕ್ಟೇರಿಗೂ 10 ಮರಗಳನ್ನು ಇಡಬೇಕೆಂದು ಲೆಕ್ಕ ಮಾಡಿದ್ದೇವೆ. ಇಂಡಸ್ಟ್ರಿಯಲ್ ಏರಿಯಾ ಎಂದು ಪ್ರತಿಯೊಂದು ಹೆಕ್ಟೇರಿಗೂ 30 ಗಿಡಗಳು ಇರಬೇಕೆಂದು ಲೆಕ್ಕ ಹಾಕಿದ್ದೇನೆ ಇವುಗಳೆಲ್ಲವನ್ನು ನಾವು ಪಾಲಿಸಿಕೊಂಡು ಹೋಗಬೇಕಾಗುತ್ತದೆ. ಈ ಹಂತದಲ್ಲಿ ಇವತ್ತು ನಮ್ಮ ಅರಣ್ಯ ಇಲಾಖೆಯಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದೇವೆಂದು ಹೇಳಲಿಕ್ಕೆ ಬರುವುದಿಲ್ಲ. ಬಹುದಿವಸಗಳಿಂದಲೂ ಈ ಖಾತೆಯನ್ನು ವಹಿಸಿಕೊಂಡಿರತಕ್ಕಂಥ ಸಚಿವರುಗಳು ಹಾಗೂ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅದಕ್ಕೆ ಪೂರಕ ಸಾಕ್ಷಿ ಎಂದರೆ ಶ್ರೀಮಾನ್ ಕೆ. ಹೆಚ್. ಪಾಟೀಲರು. 1974ನೇ ಇಸವಿಯಲ್ಲಿ ಒಂದು ಕಾನೂನನ್ನು ಜಾರಿಗೆ ತಂದರು. ಯಾವುದೇ ಒಂದು ಅರಣ್ಯ ಭೂಮಿಯನ್ನು ಅರಣ್ಯೇತರ ಭೂಮಿಯನ್ನಾಗಿ ಪರಿವರ್ತಿಸಬೇಕಾದರೆ ಅದು ಕೇವಲ ಒಬ್ಬ ಮಂತ್ರಿಯಿಂದಾಗಲಿ ಅಥವಾ ಕ್ಯಾಬಿನೇಟಿನಿಂದಾಗಲಿ ಮಂಜೂರಾತಿ ಆಗದೇ ಎರಡು ಸದನದ ಒಪ್ಪಿಗೆ ಪಡೆಯಬೇಕೆನ್ನುವ ಧೀರ ನಿಲುವನ್ನು ಇಡೀ ರಾಷ್ಟ್ರಕ್ಕೆ ತಂದುದು, ಕರ್ನಾಟಕ ಸರ್ಕಾರ ಮೊಟ್ಟಮೊದಲಿಗೆ. ಇಂಥ ಒಂದು ವ್ಯವಸ್ಥೆಯನ್ನು ದೃಷ್ಟಿಯಲ್ಲಿಟ್ಟುಕೊಂಡು 1980ರಲ್ಲಿ ಭಾರತಸರ್ಕಾರ ಫಾರೆಸ್ಟ್ ಕನ್‌ಸರ್ವೇಷನ್ ಆಕ್ಟ್‌ನ್ನು ಜಾರಿಗೆ ತಂದಿತು. ಆನಂತರ ನಮ್ಮ ಕರ್ನಾಟಕ ರಾಜ್ಯ ಅರಣ್ಯ ಇಲಾಖೆಯಲ್ಲಿ ಭಾರತಸರ್ಕಾರಕ್ಕೆ ಮಾದರಿಯಾಗಿ ಈ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಅದೇ ರೀತಿಯಲ್ಲಿ ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರು ಅಧಿಕಾರದಲ್ಲಿದ್ದಾಗ ಹಲವಾರು ಕಾನೂನುಗಳನ್ನು ತಂದರು. ಕಳ್ಳಸಾಗಾಣಿಕೆ ಆದಂಥ ಸಮಯದಲ್ಲಿ ಆ ವಾಹನಗಳನ್ನು ಮುಟ್ಟುಗೋಲು ಹಾಕಿ ಕೊಳ್ಳತಕ್ಕಂಥ ವ್ಯವಸ್ಥೆಯನ್ನು ಜಾರಿಗೆ ತಂದರು. ಮತ್ತು 1981-84ರಲ್ಲಿ ಮರಗಳನ್ನು ಹಸಿರುಗಿಡಗಳನ್ನು ಯಾರು ಕಡಿದರು ಅದಕ್ಕೆ ಹತ್ತುಪಟ್ಟು ಮರಗಳನ್ನು ಬೆಳೆಯಬೇಕೆಂದು ಕಾನೂನನ್ನು ಜಾರಿಗೆ ತಂದರು. ಆ ತರುವಾಯ 1976 ರಲ್ಲಿ ಅರಣ್ಯ ಪ್ರದೇಶಗಳನ್ನು ಅರಣ್ಯೇತರ ಪ್ರದೇಶಗಳನ್ನಾಗಿ ಉಪಯೋಗಿಸಿಕೊಳ್ಳಬೇಕೆಂದರೆ ಕಂಪನ್‌ಸೇಟರಿ ಅಫ್ಫರ್ ಸ್ಟೇಷನ್ ಎಂಬ ಒಂದು ಕಾನೂನನ್ನು ಜಾರಿಗೆ ತಂದರು. ಅದರ ಪ್ರಕಾರ ನಮ್ಮ ಕರ್ನಾಟಕದಲ್ಲಿ, ಇಡೀ ರಾಷ್ಟ್ರದಲ್ಲಿ ಕಂಪನ್‌ಸೇಟರಿ ಅಫೇರ್ ಸ್ಟೇಷನ್ ಮಾಡತಕ್ಕಂಥ ವ್ಯವಸ್ಥೆಯಲ್ಲಿ ಮೊದಲನೆ ಸ್ಥಾನ ಪಡೆದಿದೆ. ನಮಗೆ ಹಿಂದಿನ ವರ್ಷದಲ್ಲಿ ಕೊಟ್ಟಿರತಕ್ಕಂಥ 9,850 ಹೆಕ್ಟೇರ್ ಅರಣ್ಯ ಪ್ರದೇಶಗಳನ್ನು ಅಭಿವೃದ್ಧಿ ಮಾಡಬೇಕಾಗಿತ್ತು. ಆದರೆ ನಾವು 8,780 ಹೆಕ್ಟೇರು ಪ್ರದೇಶಗಳನ್ನು ಅರಣ್ಯೀಕರಿಸಿದ್ದೇವೆ. ಇದರಿಂದ 98 ಪರ್ಸೆಂಟ್ ಸಾಧನೆಯಾಗಿದೆ. ಇದಲ್ಲದೆ ನಮ್ಮ ಅರಣ್ಯದಲ್ಲಿ ಸಸಿ ನೆಡುವ ವ್ಯವಸ್ಥೆಯಲ್ಲಿ ಸುಮಾರು 5 ವರ್ಷಗಳಿಂದ ಸೆನ್ಸಸ್ ಮಾಡಿದಾಗ ಕೇಂದ್ರ ಸರ್ಕಾರದವರು ಈ ಸೆನ್ಸಸ್ ಮಾಡಿದ್ದಾರೆ. ಅದರ ಪ್ರಕಾರ ಕರ್ನಾಟಕ

ರಾಜ್ಯದಲ್ಲಿ 82 ಪರ್ಸೆಂಟ್ ಜಯಶೀಲರಾಗಿದ್ದಾರೆ. ಇದರಿಂದ ಅರ್ಥವಾಗುವುದೇನೆಂದರೆ ನಮ್ಮ ಇಲಾಖೆಯಲ್ಲಿರುವ ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಸುವ್ಯವಸ್ಥೆಯದಾಗಿದೆ, ಹಾಗೂ ಎಲ್ಲಾ ಅಭಿವೃದ್ಧಿ ಕಾರ್ಯಗಳತ್ತ ಗಮನಹರಿಸುತ್ತಿದ್ದೇವೆಂದು ಇದರ ಮೂಲಕ ನಾವು ತಿಳಿದುಕೊಳ್ಳಬೇಕಾಗಿದೆ.

2.15 ಪಿ.ಎಂ

1983 ರಿಂದ ಬಂದಂಥ ಸೋಷಿಯಲ್ ಫಾರೆಸ್ಟ್ರಿಯ ಸಾಗರೋತ್ತರ ಯೋಜನೆ ಅಡಿಯಲ್ಲಿ ಬಂದಂಥ ಹಣವನ್ನು ಉಪಯೋಗಿಸಿಕೊಂಡು ಸೋಷಿಯಲ್ ಫಾರೆಸ್ಟ್ರಿ ಮೂಲಕ ನಾವು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಇಲ್ಲಿಯವರೆಗೆ ಆ ವ್ಯವಸ್ಥೆಯಲ್ಲಿ ಅದರ ಗುರಿ ಪ್ರಕಾರ 33,500 ಹೆಕ್ಟೇರ್ ಭೂಮಿಯನ್ನು ಅರಣ್ಯೀಕರಣಗೊಳಿಸಬೇಕಾಗಿತ್ತು. ಆದರೆ ನಾವು ಇನ್ನೂ ಮುಂದೆ ಹೋಗಿ 43,630 ಹೆಕ್ಟೇರ್ ಭೂಮಿಯನ್ನು ಅರಣ್ಯೀಕರಣಗೊಳಿಸಿ ಗುರಿ ಮೀರಿ ಪ್ರಗತಿ ಸಾಧಿಸಿದ್ದೇವೆ. ಈ ವ್ಯವಸ್ಥೆ ಇದೇ ತಿಂಗಳ ಕೊನೆಗೆ ಮುಕ್ತಾಯಗೊಳ್ಳುತ್ತದೆ. ಇನ್ನೂ ಕೆಲವು ಅಳಿದುಳಿದ ವ್ಯವಸ್ಥೆಗಳನ್ನು ಪೂರ್ಣಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರ ಈ ಯೋಜನೆಯನ್ನು ಇನ್ನೂ ಒಂದು ವರ್ಷ ಮುಂದುವರಿಸುವಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ವ್ಯವಸ್ಥೆಯಿಂದ ನಾವು ಇವತ್ತು ಹಳ್ಳಿ ಅಗಾಡಿನಲ್ಲಿ ಇರತಕ್ಕ ಜನರಿಗೆ ಅರಣ್ಯದ ಬಗ್ಗೆ ಪ್ರೀತಿ ವಿಶ್ವಾಸ ಮೂಡುವಂತೆ ಮಾಡುವುದು ಮತ್ತು ಅವರ ಅವಶ್ಯಕತೆಗಳಾದ ಉರುವಲು ಕಟ್ಟಿಗೆ ಮತ್ತು ರೈತರಿಗೆ ಬೇಕಾದ ಉಪಕರಣಗಳಿಗೆ ಕಟ್ಟಿಗೆ, ದನಗಳಿಗೆ ಬೇಕಾದ ಮೇವು, ಹೊಲಗಳಿಗೆ ಬೇಕಾದ ಗೊಬ್ಬರ ಉತ್ಪಾದನೆ ಮಾಡುವುದಕ್ಕೆ ವ್ಯವಸ್ಥಿತ ರೀತಿಯಲ್ಲಿ ಈ ಯೋಜನೆ ಅಡಿಯಲ್ಲಿ ನೆಡುತೋಪುಗಳನ್ನು ಮಾಡಿದ್ದೇವೆ. ಈ ನೆಡುತೋಪುಗಳನ್ನು ಕೇವಲ ಅರಣ್ಯ ಇಲಾಖೆಯವರೇ ಮಾಡುತ್ತಿಲ್ಲ. ಅದರ ಜೊತೆಯಲ್ಲಿ ಜನರ ಸಹಕಾರ ತೆಗೆದು ಕೊಂಡಿದ್ದೇವೆ. ಹಾಗೂ ಇತ್ತೀಚೆಗೆ ನಾವು 33 ಪರ್ಸೆಂಟ್ ಅರಣ್ಯೀಕರಣಗೊಳಿಸುವ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ಣಗೊಳಿಸುವುದಕ್ಕೆ ಯೋಜನೆ ಹಾಕಿದ್ದೇವೆ. ಅಂದರೆ ನಮ್ಮಲ್ಲಿ ಈಗ ಕೇವಲ 38 ಲಕ್ಷ ಹೆಕ್ಟೇರ್ ಮಾತ್ರ ಅರಣ್ಯ ಪ್ರದೇಶ ಇದೆ. 33 ಪರ್ಸೆಂಟ್ ನಾವು ಕೂಡ ಬೇಕಾದರೆ ಇನ್ನೂ 22 ಲಕ್ಷ ಹೆಕ್ಟೇರ್ ಅರಣ್ಯ ಪ್ರದೇಶ ಬೇಕಾಗುತ್ತದೆ. 22 ಲಕ್ಷ ಹೆಕ್ಟೇರ್ ಅನ್ನು ನಾವು ಎಷ್ಟು ವರ್ಷಗಳಲ್ಲಿ ಗುರಿ ಮುಟ್ಟಬಹುದೆಂಬ ಉದ್ದೇಶದಿಂದ ಯೋಜನೆ ಹಾಕಿಕೊಂಡು ಪ್ರತಿ ವರ್ಷ 30 ರಿಂದ 35 ಸಾವಿರ ಹೆಕ್ಟೇರ್ ಭೂಮಿಯನ್ನು ಅರಣ್ಯೀಕರಣಗೊಳಿಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದರ ಪ್ರಕಾರ ಕೇವಲ ಅರಣ್ಯ ಪ್ರದೇಶ ಒಂದೇ ಅಲ್ಲ, ಅರಣ್ಯೇತರ ಪ್ರದೇಶಗಳಲ್ಲೂ ಹಾಗೂ ರಸ್ತೆಗಳ ಬದಿಗಳಲ್ಲಿ ಶಾಲಾ ಮೈದಾನಗಳಲ್ಲಿ ಮತ್ತು ಡೀಗ್ರೇಡೆಡ್ ಸಿ ಅಂಡ್ ಡಿ ಲ್ಯಾಂಡ್‌ಗಳಲ್ಲಿ ಅರಣ್ಯೀಕರಣಗೊಳಿಸುವ ವ್ಯವಸ್ಥೆಯನ್ನು ಯಶಸ್ವಿಯಾಗಿ ಮಾಡುವುದಕ್ಕೆ ಯೋಜನೆ ಹಾಕಿಕೊಂಡಿದ್ದೇವೆ. ಇದರ ಜೊತೆಯಲ್ಲಿ 5 ಕೋಟಿ ಸಸಿಗಳನ್ನು ಪ್ರತಿ ವರ್ಷ ರೈತರಿಗೆ ಹಂಚುವ ವ್ಯವಸ್ಥೆ ಮಾಡಿದ್ದೇವೆ. 5 ಕೋಟಿ ಸಸಿಗಳನ್ನು ಕೇವಲ ರೈತರಿಗೆ ಹಂಚುವ ವ್ಯವಸ್ಥೆಯೇ ಹೊರತು ನಾವು 30 ಸಾವಿರ ಹೆಕ್ಟೇರ್‌ಗಳಲ್ಲಿ ಹಾಕತಕ್ಕ ಸಸಿಗಳು ಅಲ್ಲ. ಅದಕ್ಕೆ ನಾವು ಜೇರಿ ಸಸಿಗಳನ್ನು ಬೆಳೆಯುತ್ತಿದ್ದೇವೆ. ಇಷ್ಟೆಲ್ಲ ವ್ಯವಸ್ಥೆ ಮಾಡಿದರೂ ಕೂಡ ನಾವು ಈ ಗುರಿ ಮುಟ್ಟಬೇಕಾದರೆ ಇನ್ನೂ 8-10 ವರ್ಷಗಳು ಬೇಕಾಗುತ್ತದೆ. ಆ ಹಂತದತ್ತ ನಾವು ಮುಂದುವರಿಯುತ್ತಿದ್ದೇವೆ. ಯಾರೂ ಹಸಿರು ಗಿಡಗಳನ್ನು ಕಡಿಯಬಾರದೆಂದು ಕರ್ನಾಟಕ ಸರ್ಕಾರದವರು ಕಾನೂನು ಮಾಡಿದ್ದೇವೆ. 3-4 ವರ್ಷ ಯಾರೂ ಹಸಿರು ಗಿಡಗಳನ್ನು ಕಡಿಯಬಾರದೆಂದು ಕಾನೂನು ಮಾಡಿದ್ದರಿಂದ ನಮ್ಮ ಅರಣ್ಯ ಇಲಾಖೆಯ ಉತ್ಪನ್ನ ಕಡಿಮೆಯಾಗಿದೆ. ಅದಕ್ಕಾಗಿ ಕೇಂದ್ರ ಸರ್ಕಾರವನ್ನು ವಿನಂತಿಸಿದ್ದೇವೆ, ನಮಗೆ ಆಗತಕ್ಕ ನಷ್ಟದಲ್ಲಿ 50 ಪರ್ಸೆಂಟ್ ಆದರೂ ತುಂಬಿಕೊಡಬೇಕೆಂದು ವಿನಂತಿ ಮಾಡಿದ್ದೇವೆ. ಹಸಿರುಗಿಡ ಕಡಿಯಬಾರದೆಂದು ಕಾನೂನು ತಂದಿದ್ದರಿಂದ ಅರಣ್ಯ ಇಲಾಖೆಗೆ ಸುಮಾರು 50 ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಈಗ ಕೇವಲ ನಾವು ಡೆಡ್ ಅಂಡ್ ಫೌಲನ್ ಟ್ರೀಸ್ ಮಾತ್ರ ಹೊರತೆಗೆದು ಜನರ ಉಪಯೋಗಕ್ಕೆ ಕೊಡುತ್ತಿದ್ದೇವೆ. ಆದರೆ ಈ ವ್ಯವಸ್ಥೆಯಿಂದ ನಮ್ಮ ರಾಜ್ಯದ ಜನತೆಗೆ ಬೇಕಾದ

ಸಂಪೂರ್ಣವಾಗಿ ಅವರ ಬೇಡಿಕೆಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದುದರಿಂದ ಅರಣ್ಯ ಇಲಾಖೆಯ ಮುಖಾಂತರ ಬೇರೆ ರಾಜ್ಯಗಳಿಂದ, ಪರ ದೇಶಗಳಿಂದ ಈ ಜನರಿಗೆ ಬೇಕಾದ ಕಟ್ಟಿಗೆಯನ್ನು ತರಿಸಿಕೊಡತಕ್ಕ ವ್ಯವಸ್ಥೆಯನ್ನು ಕೂಡ ನಾವು ಮಾಡಿದ್ದೇವೆ. ಇದರ ಜೊತೆಯಲ್ಲಿ ಡೆನೇಡಾ ಯೋಜನೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡಿದ್ದೇವೆ. ಈ ವರ್ಷ ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಒ.ಡಿ.ಎ. ಸಹಾಯದಿಂದ 84.24 ಕೋಟಿ ರೂಪಾಯಿಗಳನ್ನು ಉಪಯೋಗಿಸಿ ಕೊಂಡು ಇದನ್ನು ಆರು ವರ್ಷದಲ್ಲಿ ಪೂರ್ಣಗೊಳಿಸುವಂತೆ ವ್ಯವಸ್ಥೆ ಮಾಡುತ್ತಿದ್ದೇವೆ. ಇದರಿಂದ ನಾವು ಏನೆಲ್ಲಾ ಸಾಧಿಸಬಹುದು ಎಂದರೆ ಪರಿಸರ ಸಂರಕ್ಷಣೆ ಹಾಗೂ ಪ್ರಕೃತಿದತ್ತವಾದ ಸಂಪತ್ತಾದ ಅರಣ್ಯದ ವೃದ್ಧೀಕರಣ ಮತ್ತು ಅಲ್ಲಿರತಕ್ಕ ಜನರಿಗೆ ಹಲವಾರು ವರ್ಷಗಳಾದರೂ ಕೂಡ ಅರಣ್ಯ ಸಂಪತ್ತಿನಿಂದ ಬದುಕುವಂಥ ವ್ಯವಸ್ಥೆಯನ್ನು ನಿರ್ಮಾಣ ಮಾಡತಕ್ಕ ಒಂದು ಯೋಜನೆಯನ್ನು ಇದರಲ್ಲಿ ರೂಪಿಸಲಾಗಿದೆ. ಈ ಯೋಜನೆಯನ್ನು ಸದ್ಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಿಸಲಾಗುತ್ತಿದೆ. ಇದರ ಜೊತೆಯಲ್ಲಿ ಅಲ್ಲಿರತಕ್ಕ ಸಂಘಸಂಸ್ಥೆಗಳು ಮತ್ತು ಜನತೆಯ ಸಹಕಾರದಿಂದ ಈ ಯೋಜನೆಯಲ್ಲಿ ಅವರನ್ನು ತೊಡಗಿಸಲಾಗುತ್ತದೆ. ಅವರಿಗೆ ಇದರ ಮುಖಾಂತರ ತರಬೇತಿ ನೀಡುವುದು, ಅರಣ್ಯವನ್ನು ಇವತ್ತಿನ ಮಾದರಿಯಲ್ಲಿ ಯಾವರೀತಿ ಬೆಳೆಸಬೇಕೆಂಬ ಉದ್ದೇಶದಿಂದ ಹಾಗೂ ಬೀಜಗಳನ್ನು ತಯಾರಿಸಿ ಒಳ್ಳೆಯ ಪರಿಶುದ್ಧವಾದ ಹಾಗೂ ಅಭಿವೃದ್ಧಿಪಡಿಸಿದ ತಳಿಗಳನ್ನು ಬೆಳೆಸಲಿಕ್ಕೆ ಈ ಯೋಜನೆಯಲ್ಲಿ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಇದು ಕೇವಲ ಪಶ್ಚಿಮ ಘಟ್ಟದ ಯೋಜನೆ ಆಯಿತು. ಇನ್ನು ಮೈದಾನ ಪ್ರದೇಶದಲ್ಲಿರತಕ್ಕ ಹಲವಾರು ಜಿಲ್ಲೆಗಳಿಗೆ ಇನ್ನೊಂದು ಹೊಸ ಯೋಜನೆಯನ್ನು ನಾವು ತಯಾರಿಸುತ್ತಿದ್ದೇವೆ. ಈ ಯೋಜನೆಯ ಪ್ರಕಾರ ಕ್ಷೀಣಿತ ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸುವುದು ಹಾಗೂ ಇನ್ನೂ ಹೆಚ್ಚಿನ ಅರಣ್ಯೀಕರಣವನ್ನು ಕೈಗೊಳ್ಳುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಈ ಯೋಜನೆಯಡಿಯಲ್ಲಿ ನೆಡುತೋಪುಗಳನ್ನು ನೆಡುವುದು ಹಾಗೂ ರಸ್ತೆ ಬದಿಯಲ್ಲಿರತಕ್ಕ ಸ್ಥಳಗಳಲ್ಲಿ ಮರಗಳನ್ನು ನೆಡುವುದು ಹಾಗೂ ಕಾಲುವೆ ಬದಿಯಲ್ಲಿ ಮರಗಳನ್ನು ನೆಡುವುದು, ರೈತರ ಬದುಗಳಲ್ಲಿ ಗಿಡಗಳನ್ನು ನೆಡತಕ್ಕ ಕಾರ್ಯಕ್ರಮವನ್ನು ತಯಾರಿಸಲಾಗಿದೆ. ಈ ಯೋಜನೆಗಳಲ್ಲದೆ ಜವಾಹರ್ ರೋಜ್‌ಗಾರ್ ಯೋಜನೆ. ಬರಗಾಲಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ. ಮಣ್ಣು ಕೊಚ್ಚಣೆ ತಡೆಗಟ್ಟಲು ಅರಣ್ಯೀಕರಣ ಈ ಯೋಜನೆಯನ್ನು ಕೂಡ ಜಾರಿಗೆ ತರುತ್ತಿದ್ದೇವೆ. ಈಗ ನದಿ ಕೊಚ್ಚುವ ಅರಣ್ಯ ಯೋಜನೆ ಎಂದರೆ ಸಾಮಾನ್ಯವಾಗಿ ಕೆಲವು ಗಣಿ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಮಣ್ಣು ಕೊಚ್ಚಿ ನದಿಗಳಿಗೆ ಹರಿದು ನದಿಯಲ್ಲಿ ಶಿಲ್ಟ್ ಅಪ್ ಆಗುವ ವ್ಯವಸ್ಥೆ ಇದೆ. ಇದನ್ನು ತಡೆಗಟ್ಟಲು ಅರಣ್ಯ ಯೋಜನೆ ಅಡಿಯಲ್ಲಿ ಶಿಲ್ಟ್ ತನ್ನಷ್ಟಕ್ಕೆ ತಾನು ಅಲ್ಲಿಗೆ ಹೋಗದಂತೆ ತಡೆಗಟ್ಟಲು ನಮ್ಮ ಅರಣ್ಯ ಯೋಜನೆಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ. ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ 100ಕ್ಕೆ 100 ರಷ್ಟು ಸಹಾಯಧನ ಸಿಗುತ್ತಿದೆ. ಈ ಯೋಜನೆಯನ್ನು ಮೂರು ಜಿಲ್ಲೆಗಳಲ್ಲಿ ಜಾರಿಗೊಳಿಸುತ್ತಿದ್ದೇವೆ. ಬಳ್ಳಾರಿ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ. ಈ ಅಭಿವೃದ್ಧಿ ಯೋಜನೆ ಅಡಿಯಲ್ಲಿ 12.55 ಕೋಟಿ ರೂಪಾಯಿ ಮಂಜೂರಾಗಿದೆ. ಈಗಾಗಲೇ ಸ್ವಲ್ಪ ಹಣ ಕೂಡ ಬಂದಿದೆ. ಈ ಯೋಜನೆ ಪ್ರಕಾರ ಮಣ್ಣು ಸವಕಳಿ ತಡೆಗಟ್ಟುವುದು ಹಾಗೂ ಅಲ್ಲಿಯ ಭೂಮಿಯನ್ನು ಫಲವತ್ತಾಗಿ ಮಾರ್ಪಡಿಸುವ ಯೋಜನೆ ಇವೆಲ್ಲವನ್ನೂ ಮಾಡುವುದರ ಜೊತೆಯಲ್ಲಿ ಪರ್ಕ್ಯುಲೇಷನ್ ಟ್ಯಾಂಕ್ಸ್, ಗಲ್ಲಿ ಟ್ರಾಪ್ಸ್ ಅಂಥದ್ದನ್ನು ನಿರ್ಮಾಣ ಮಾಡಿ ಅಲ್ಲಿ ಅಂಡರ್‌ಗ್ರೌಂಡ್ ವಾಟರ್ ಅಂತರ್ಜಲ ಅಭಿವೃದ್ಧಿಪಡಿಸತಕ್ಕದ್ದು. ಈ ಯೋಜನೆ ಹಾಕಿಕೊಂಡಿದ್ದರಿಂದ ಅಂತರ್ಜಲದ ಅಭಿವೃದ್ಧಿಯಾಗಿ ಅಲ್ಲಿರತಕ್ಕ ಜನರಿಗೆ ಅನುಕೂಲವಾಗುತ್ತದೆ. ಇದರ ಜೊತೆಗೆ ಅರಣ್ಯ ಅಭಿವೃದ್ಧಿ ಕೂಡ ಆಗುತ್ತದೆ. ಇಷ್ಟೆಲ್ಲಾ ಅಲ್ಲದೆ ಇನ್ನೂ ಹಲವಾರು ಯೋಜನೆಗಳನ್ನು ಕೈಗೊಳ್ಳುತ್ತಿದ್ದೇವೆ. ಇವತ್ತು ಯೂಕ್ಲಿಪ್ಟಸ್ ಸಾಮಾನ್ಯವಾಗಿ ಕೋಲಾರ, ಬೆಂಗಳೂರು, ತುಮಕೂರು ಜಿಲ್ಲೆಯಲ್ಲಿ ರೈತರೇ ಹೆಚ್ಚಾಗಿ ಬೆಳೆಯುತಕ್ಕ ಒಂದು ಮರವಾಗಿದೆ. ಇದನ್ನು ಹಲವಾರು

ಫ್ಯಾಕ್ಟರಿಗಳಿಗೆ, ಮೈಸೂರು ಪೇಪರ್ ಮಿಲ್ಸ್‌ಗೆ, ಹರಿಹರ ಪಾಲಿಫೈಬರ್ಸ್‌ಗೆ, ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್‌ಗೆ ಇವತ್ತಿನ ದಿವಸ ಇಲ್ಲಿಂದ ತೆಗೆದುಕೊಂಡು ಹೋಗುತ್ತಿದ್ದಾರೆ. ಅದನ್ನು ತೆಗೆದುಕೊಂಡು ಹೋಗುವುದಕ್ಕೆ ರೈತರಿಗೆ ಬಹಳ ತೊಂದರೆ ಆಗುತ್ತಿದೆ. ಏಕೆಂದರೆ ಟ್ರಾನ್ಸ್‌ಪೋರ್ಟ್ ಪರ್ಮಿಟ್ ಎಂದು ಕೊಡಬೇಕಾಗುತ್ತದೆ. ಅದನ್ನು ಕೊಡುವಾಗ ರೈತರು ಹಲವಾರು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಇವತ್ತು ನೀಲಗಿರಿ ಮರವನ್ನು ಹಸಿ ಇದ್ದಾಗ ಕೂಡ ಅದೇ ತೂಕ ತೆಗೆದುಕೊಳ್ಳುತ್ತಾರೆ, ಒಣಗಿದರೂ ಕೂಡ ಅದೇ ತೂಕ ತೆಗೆದುಕೊಳ್ಳುತ್ತಿದ್ದಾರೆ. ಆ ಗಿಡವನ್ನು ಕಡಿದುಹಾಕಿದ 3 ತಿಂಗಳಲ್ಲಿ ಅದು 66 ಪರ್ಸೆಂಟ್ ತನ್ನ ತೂಕವನ್ನು ಕಳೆದುಕೊಳ್ಳುತ್ತದೆ. ಆದರಿಂದ ರೈತನಿಗೆ ತುಂಬಾ ತೊಂದರೆ ಆಗುತ್ತದೆ. ಇದನ್ನು ಗಮನಿಸಿ ರೈತರಿಗೆ ಅನುಕೂಲ ಆಗಲಿ ಎಂದು ಹೇಳಿ ಟ್ರಾನ್ಸ್‌ಪೋರ್ಟ್ ಪರ್ಮಿಟ್ಟನ್ನು ತೆಗೆದುಹಾಕಬೇಕೆಂದು ಸರ್ಕಾರ ನಿರ್ಧಾರ ತೆಗೆದುಕೊಂಡಿದೆ. ನಾವು ಅರಣ್ಯ ಅಭಿವೃದ್ಧಿ ಮಾಡುವುದರಿಂದ ಅರಣ್ಯ ಕಾಪಾಡುವುದಕ್ಕೆ ಸಾಧ್ಯವಿಲ್ಲ. ರೈತರಿಗೆ ಅವಶ್ಯಕವಾದ ಗೋಮಾಳ ಇರತಕ್ಕ ಪ್ರದೇಶದಲ್ಲಿ ಒತ್ತುವರಿ ಮಾಡಿದ್ದಾರೆ. ಹಳ್ಳಿಗಳಲ್ಲಿ ಇರತಕ್ಕ ದನಗಳಿಗೆ ಇವತ್ತು ಮೇಯಲು ಸ್ಥಳ ಇಲ್ಲ. ನಮ್ಮ ಅರಣ್ಯದ ಹೊರವಲಯದಲ್ಲಿ ಸ್ವಲ್ಪ ಭಾಗವನ್ನು ದನಕರುಗಳ ಮೇವಿಗೆ ಮತ್ತು ಜನರ ಉರುವಲು ಕಟ್ಟಿಗೆಗೆ ಬಿಟ್ಟು ಉಳಿದ ಭಾಗವನ್ನು ಕೋರ್ ಏರಿಯಾ ಎಂದು ನಿರ್ಮಾಣ ಮಾಡಿ ಸಂಪೂರ್ಣ ರಕ್ಷಿತ ಅರಣ್ಯ ಎಂದು ಘೋಷಿಸಿ ಅಭಿವೃದ್ಧಿ ಮಾಡುವ ವ್ಯವಸ್ಥೆ ಮಾಡಬೇಕು ಎನ್ನುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದರ ಜೊತೆಯಲ್ಲಿ ನಮ್ಮ ಅರಣ್ಯ ಇಲಾಖೆಯಿಂದ ಬೇಕಾದಷ್ಟು ಜನರು ಅರಣ್ಯ ಸಂರಕ್ಷಣೆಗಾಗಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಅವರುಗಳೆಂದರೆ, ಅರಣ್ಯ ರಕ್ಷಕ ದಿವಂಗತ ಶ್ರೀ ಮೋಹನಯ್ಯ, ವಲಯ ಅರಣ್ಯ ಅಧಿಕಾರಿ ಶ್ರೀ ಅರವಿಂದ ಹೆಗ್ಡೆ, ಶ್ರೀ ರಂಗರಾಜು ಹಾಗೂ ವಿಭಾಗಾಧಿಕಾರಿ ಶ್ರೀ ಶ್ರೀನಿವಾಸ್‌ರವರು. ಕೇವಲ 2-3 ವರ್ಷದಲ್ಲಿ ಆದ ಪ್ರಕರಣಗಳು. ಎಂದರೆ ನಮ್ಮ ಇಲಾಖೆಯಿಂದ ತಮ್ಮ ಪ್ರಾಣವನ್ನು ಬಲಿಕೊಟ್ಟು ಅರಣ್ಯ ರಕ್ಷಿಸಬೇಕೆಂದು ಮನೋಭಾವದಿಂದ ಹೋರಾಟ ಮಾಡುವ ಜನರು ಇರುವುದರಿಂದ ಇವತ್ತು ಕರ್ನಾಟಕದ ಅರಣ್ಯ ಸಂರಕ್ಷಿತವಾಗಿದೆ. ಭಾರತ ಸರ್ಕಾರದ ಹೇಳಿಕೆ ಪ್ರಕಾರ, ಸ್ಯಾಟಲೈಟ್ ವರದಿ ಪ್ರಕಾರ ಊರ್ಜಿತಾವಸ್ಥೆಯಲ್ಲಿರತಕ್ಕ ವ್ಯವಸ್ಥೆ ಕರ್ನಾಟಕ, ಮೀಜೋರಾಂ ಹಾಗೂ ಹಿಮಾಚಲಪ್ರದೇಶದಲ್ಲಿ ಇದೆ ಎನ್ನುವ ಒಂದು ಹೆಮ್ಮೆಯ ಪ್ರಶಸ್ತಿಯನ್ನು ನಮಗೆ ಕೊಟ್ಟಿದ್ದಾರೆ. ಅದರ ಜೊತೆಗೆ ಬೆಂಗಳೂರು ನಗರದಲ್ಲಿ ಇವತ್ತಿನ ದಿವಸ ನಾವು ಮಾಡಿದ ಗ್ರೀನರಿಯಿಂದ ನಾವು ಬೆಳೆದಂಥ ಮರಗಳಿಂದ ನಮಗೆ ಇಂದಿರಾಪ್ರಿಯದರ್ಶಿನಿ ಅವಾರ್ಡ್‌ನ್ನು ಭಾರತ ಸರ್ಕಾರ ನಮ್ಮ ಇಲಾಖೆಗೆ ಕೊಟ್ಟಿದೆ.

ಡಾ. ವೈ. ನಾಗಪ್ಪ :- ನಿಮ್ಮ ಇಲಾಖೆಯಿಂದ ಅಷ್ಟೇ ಅಲ್ಲ, ಪೋಲೀಸ್ ಇಲಾಖೆಯ ಸುಮಾರು ಪೋಲೀಸ್ ಅಧಿಕಾರಿಗಳು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ.

ಶ್ರೀ ಈ. ಟಿ. ಶಂಭುನಾಥ್ :- ಆ ಇಲಾಖೆಯನ್ನು ನನಗೆ ವಹಿಸಿಕೊಟ್ಟಿಲ್ಲ. ನನಗೆ ಪೋಲೀಸ್ ಇಲಾಖೆಯನ್ನು ವಹಿಸಿಕೊಟ್ಟಿಲ್ಲ.

ಡಾ. ವೈ. ನಾಗಪ್ಪ :- ಆ ಇಲಾಖೆ ಇಲಾಖೆ ಎಂದಲ್ಲ. ನಿಮ್ಮ ಅರಣ್ಯ ರಕ್ಷಣೆಗೋಸ್ಕರ ಸತ್ತಿರತಕ್ಕ ಪೋಲೀಸ್ ಇಲಾಖೆ ಅಧಿಕಾರಿಗಳ ಬಗ್ಗೆ ಹೇಳಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :-ಅವರು ಎಲ್ಲವನ್ನೂ ಸಂರಕ್ಷಿಸುತ್ತಾರೆ.

ಶ್ರೀ ಈ. ಟಿ. ಶಂಭುನಾಥ್ :- ಈಗ ವಿಶ್ವ ಯೋಜನೆ ಅಡಿಯಲ್ಲಿ ನಮ್ಮ ಅರಣ್ಯ ಇಲಾಖೆಯಿಂದ ನಿಯಮಿತ ದರದಲ್ಲಿ ಗಂಧ, ಬೆತ್ತ ಹಾಗೂ ಬಿದಿರು ಇನ್ನೂ ಮುಂತಾದ ಮರಗಳನ್ನು ಕನ್‌ಸೆಷನ್ ರೇಟ್‌ನಲ್ಲಿ ಅವರಿಗೆ ಕೊಡುವ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಸರ್ಕಾರದ ವಶದಲ್ಲಿ ಈಗ 4 ಸಾವಿರ ಟನ್ ಗಂಧ ಇದೆ. ಇದರಲ್ಲಿ ಮೊನ್ನೆ 44 ಟನ್ ಗಂಧವನ್ನು ಪಬ್ಲಿಕ್ ಆಕ್ಷನ್‌ನಲ್ಲಿ ಮಾರಾಟ ಮಾಡಿದ್ದೇವೆ. ಅದು 2,39,500 ರೂಪಾಯಿಗಳಿಂದ ಹಿಡಿದು 1,30,000 ರೂಪಾಯಿಗಳವರೆಗೆ ಒಂದು ಟನ್‌ಗೆ ಹೋಗಿದೆ.

ಇದರಲ್ಲಿ ನಾನಾ ತರಹದ ವರ್ಗಗಳು ಇವೆ. ಇದರ ಜೊತೆ 12 ಪರ್ಸೆಂಟ್ ಅರಣ್ಯಾಭಿವೃದ್ಧಿ ತೆರಿಗೆ. 13 ಪರ್ಸೆಂಟ್ ವಾಣಿಜ್ಯ ತೆರಿಗೆಯನ್ನು ಅವರಿಗೆ ಹಾಕಲಾಗಿದೆ. ಈ ಸಾರಿ ಅದರಿಂದ ಬರತಕ್ಕ ಮೊತ್ತ 10 ಕೋಟಿವರೆಗೂ ಆಗುತ್ತದೆ. ಈಗಾಗಲೇ 2 ಕೋಟಿ ರೂಪಾಯಿ ಸಂದಾಯವಾಗಿದೆ. ಮುಂದಿನ ವರ್ಷಕ್ಕೆ ಏಳೂವರೆ ಕೋಟಿ ಬರುವಂತಹ ವ್ಯವಸ್ಥೆಯಿದೆ. ಇದು ಅಲ್ಲದೆ ನಮ್ಮಲ್ಲಿ ಸುಮಾರು ಕಾಯ್ದಿಟ್ಟ ಅಭಯಾರಣ್ಯಗಳಿವೆ. ಆ ಅಭಯಾರಣ್ಯಗಳು 20 ಪರ್ಸೆಂಟ್ ಇದೆ. ಇದರಲ್ಲಿ ಬಂಡೀಪುರದ ಹುಲಿ ಯೋಜನೆ, ನಾಗರಹೋಳೆಯ ಹುಲಿ ಯೋಜನೆ, ಆನೆ ಯೋಜನೆಯನ್ನು ಸುಮಾರು 5 ಸಾವಿರ ಚದರ ಕಿಲೋಮೀಟರ್‌ನಲ್ಲಿ ನಡೆಸುತ್ತಿದ್ದೇವೆ. ಹಿಂದೆ ಆನೆ ಅಥವಾ ಹುಲಿ ಹಾವಳಿಯಿಂದ ಸತ್ತವರಿಗೆ 10 ಸಾವಿರ ಕೊಡತಕ್ಕ ಪರಿಹಾರಧನವನ್ನು ಈ 25 ಸಾವಿರ ರೂಪಾಯಿಗಳಿಗೆ ಏರಿಸಲಾಗಿದೆ. ಗಂಧ, ಬೀಟೆ, ತೇಗದ ಮರಗಳನ್ನು ಸ್ಮಗ್ಲಿಂಗ್ ಮಾಡುವಾಗ ಯಾರಾದರೂ ಹಿಡಿದರೆ ಅವರಿಗೆ ಶೇಕಡ 10 ರಷ್ಟು ಬೋನಸ್ ಹಣವನ್ನು ಕೊಡತಕ್ಕ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಒತ್ತುವರಿ ಮಾಡಿದ ಭೂಮಿಯ ಬಗ್ಗೆ ಹೇಳಬೇಕಾದರೆ ಅರಣ್ಯ ಪ್ರದೇಶದಲ್ಲಿ ಇದುವರೆಗೆ 1978ರ ಹಿಂದೆ ಯಾರಾದರೂ ಒತ್ತುವರಿ ಮಾಡಿದ್ದರೆ ಆ ಜನರಿಗೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ನಮ್ಮ ಸರ್ಕಾರ ಇದನ್ನು ರೆಗ್ಯುಲರೈಸ್ ಮಾಡುವುದಕ್ಕಾಗಿ ಭಾರತ ಸರ್ಕಾರವನ್ನು ಕೋರಿದೆ. ಅವರು ನಮಗೆ ಪರ್ಮಿಶನ್ ಕೊಟ್ಟ ತಕ್ಷಣ ಆ ಭೂಮಿಯನ್ನು ರೆಗ್ಯುಲರೈಸ್ ಮಾಡಲಿಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಇನ್ನೂ ಹಲವಾರು ಯೋಜನೆಗಳನ್ನು ನಾವು ಹಾಕಿಕೊಂಡಿದ್ದೇವೆ. ಇದರಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಿಂದ ಸುಮಾರು 8700 ಎಕರೆ ಭೂಮಿಯಲ್ಲಿ ನೆಡು ತೋಪುಗಳನ್ನು ಬೆಳೆಸುತ್ತಿದ್ದೇವೆ. ಈ ನೆಡು ತೋಪುಗಳನ್ನು ಬೆಳೆಸಿ ಸಾಮಾನ್ಯವಾಗಿ ಅರ್ಬನ್ ಏರಿಯಾಗಳಿಗೆ ಉರುವಲು ಕಟ್ಟಿಗೆ ಸರಬರಾಜು ಮಾಡುವಂತಹ ಯೋಜನೆ ಇದರಲ್ಲಿದೆ. ಬಂಬು ಕಮ್ ಟೀಕ್ ನೆಡುತೋಪುಗಳಿವೆ. ರೂರಲ್ ಏರಿಯಾಗಳಲ್ಲಿ ಸ್ಮಾಲ್ ಟಿಂಬರ್ ಯೋಜನೆ ಅಡಿಯಲ್ಲಿ ಉರುವಲು ಕಟ್ಟಿಗೆ ಬೆಳೆಸತಕ್ಕ ಯೋಜನೆ ಇದೆ. ಈ ಯೋಜನೆಯ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಕೋಕೋ ನೆಡುತೋಪುಗಳಿವೆ. ಟೀ ನೆಡುತೋಪುಗಳಿವೆ. ಟೀ ನೆಡುತೋಪು ಯೋಜನೆಯಲ್ಲಿ ಸುಮಾರು 18 ಸಾವಿರ ಹೆಕ್ಟೇರ್ ಭೂಮಿಯನ್ನು ಟೀ ನೆಡುತೋಪು ಪ್ರದೇಶವನ್ನಾಗಿ ಮಾಡಬೇಕೆಂದು ಒಂದು ಯೋಜನೆ ಮಾಡಿದ್ದರು. ಆದರೆ ಈಗ ನಾವು ಒಂದು ನಿರ್ಧಾರ ತೆಗೆದುಕೊಂಡು ಈಗಿರತಕ್ಕ 55 ಹೆಕ್ಟೇರ್ ಪ್ರದೇಶದಲ್ಲಿ ಟೀ ಪ್ಲಾಂಟೇಶನ್ ಅನ್ನು ಉಳಿಸಿ ಉಳಿದ ಜಾಗದಲ್ಲಿ ಪ್ಲಾಂಟೇಶನ್ ಮಾಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರ ಜೊತೆಯಲ್ಲಿ ಟೀ ಪ್ಲಾಂಟೇಶನ್ ಅನ್ನು ಯಾರಿಗಾದರೂ ಗುತ್ತಿಗೆ ಕೊಡತಕ್ಕ ಒಂದು ನಿರ್ಧಾರವನ್ನನು ಕೂಡ ಮಾಡಿದ್ದೇವೆ. 380.06 ಹೆಕ್ಟೇರ್‌ನಲ್ಲಿ ಬರ್ಸೇರ ನೆಡುತೋಪುಗಳನ್ನು ನೆಟ್ಟಿದ್ದೇವೆ. ಆ ನೆಡು ತೋಪಿನಿಂದ ಅಸ್ಕನ್ನು ಪಡೆದು ಭಟ್ಟಿ ಇಳಿಸಿ ಬರ್ಸೇರ ಎಣ್ಣೆಯನ್ನು ತಯಾರು ಮಾಡುತ್ತಿದ್ದೇವೆ. ಅದೇರೀತಿಯಲ್ಲಿ ನೀಲಗಿರಿ ಎಣ್ಣೆಯನ್ನು ತಯಾರಿಸುತ್ತಿದ್ದೇವೆ. ನಾಗರ ಹೊಳೆಯ ಹತ್ತಿರ ಸ್ವಾಗತಕೇಂದ್ರ ಮುರ್ಕಲ್ ಕಾಂಪ್ಲೆಕ್ಸ್ ನಿರ್ಮಾಣವಾಗಿದೆ. ಅಲ್ಲಿ ಜನರಿಗೆ ಹೋಗಲಿಕ್ಕೆ ಬರಲಿಕ್ಕೆ ಅನುಕೂಲವಾಗುವಂತೆ ತಂಗುದಾಣ ನಿರ್ಮಾಣ ಮಾಡುವ ಯೋಜನೆ ಕೂಡ ಇದೆ. ಇದೂ ಅಲ್ಲದೆ ಪ್ರತಿಯೊಂದು ದೊಡ್ಡ ಸಿಟಿಗಳಿಗೆ ಬೆಂಗಳೂರು ನಗರಕ್ಕೆ 5600 ಹೆಕ್ಟೇರ್ ಪ್ರದೇಶದಲ್ಲಿ ಉರುವಲು ಕಟ್ಟಿಗೆ ಬೆಳೆದು ಬೆಂಗಳೂರು ನಗರಕ್ಕೆ ಒದಗಿಸತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದೇ ರೀತಿಯಲ್ಲಿ ಪ್ರತಿಯೊಂದು ಸಿಟಿಗೆ ಈ ಯೋಜನೆಯನ್ನು ರೂಪುಗೊಳಿಸುವುದಕ್ಕೆ ವ್ಯವಸ್ಥೆಯನ್ನು ಕೂಡ ಅರಣ್ಯ ಅಭಿವೃದ್ಧಿ ನಿಗಮದಿಂದ ಮಾಡುವ ಒಂದು ವ್ಯವಸ್ಥೆಯಿದೆ.

ಇನ್ನು ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದಿಂದ ನಮ್ಮಲ್ಲಿ ಗುತ್ತಿಗೆ ಕೊಡತಕ್ಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಅರಣ್ಯದಲ್ಲಿ ಲಾಡ್ಜಿಂಗ್ ವ್ಯವಸ್ಥೆಯನ್ನು ಮತ್ತು ಡಿಪೋಗಳನ್ನು ನಡೆಸತಕ್ಕ ವ್ಯವಸ್ಥೆಯನ್ನು ರಾಜ್ಯ ಕೈಗಾರಿಕಾ ನಿಗಮಕ್ಕೆ ವಹಿಸಿಕೊಡಲಾಗಿದೆ. ರಾಜ್ಯ ಕೈಗಾರಿಕಾನಿಗಮದವರು ಮರಕೊಯ್ಯುವ

ಗಿರಣಿಗಳನ್ನು ನಡೆಸುತ್ತಿದ್ದಾರೆ. ಮತ್ತು ಮರ ಸಂರಕ್ಷಣೆ ಸ್ಥಾವರಗಳನ್ನು ನಡೆಸುತ್ತಿದ್ದಾರೆ. ಸೌದೆಯನ್ನು ನ್ಯಾಯಬೆಲೆಯಲ್ಲಿ ಬಳಕೆದಾರರಿಗೆ ಒದಗಿಸುತ್ತಿದ್ದಾರೆ. ಮತ್ತು ಸಸಿ ನೆಡುವುದಕ್ಕೆ ಬೇಕಾದಂಥ ಪಾಲಿಥಿನ್ ಚೀಲಗಳನ್ನು ತಯಾರಿಸುವ ವ್ಯವಸ್ಥೆ ಇದೆ. ಮತ್ತು ಮನೆಗಳಿಗೆ ಬೇಕಾದಂಥ ಬಾಗಿಲು, ಕಿಟಕಿಗಳನ್ನು ತಯಾರು ಮಾಡುವಂಥ ವ್ಯವಸ್ಥೆ ಇದೆ. ಗಂಧದ ಬಿಳಿಚಕ್ಕೆ ಮತ್ತು ಗಂಧ ರಫ್ತು ಮಾಡತಕ್ಕಂಥ ವ್ಯವಸ್ಥೆಯನ್ನೂ ಕೂಡ ಈ ನಿಗಮ ಕೈಗೊಳ್ಳುತ್ತಿದೆ. ಇದಲ್ಲದೆ ಈಗ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿಯನ್ನು ಕೂಡ ವಹಿಸಿಕೊಳ್ಳತಕ್ಕಂಥ ಒಂದು ಯೋಜನೆಯನ್ನು ಕೂಡ ಈ ನಿಗಮದಿಂದ ಮಾಡಲಾಗುತ್ತಿದೆ. ಈ ನಿಗಮದಿಂದ ಹಿಂದೆ 1989-90 ರಲ್ಲಿ 38.14 ಲಕ್ಷ ರೂಪಾಯಿ ನಷ್ಟವಾಗಿತ್ತು. 1990-91ರಲ್ಲಿ 33.83 ಲಕ್ಷ ರೂಪಾಯಿ ನಷ್ಟವಾಗಿತ್ತು. ಆದರೆ1991-92 ಡಿಸೆಂಬರ್‌ವರೆಗೆ 21.2 ಲಕ್ಷ ರೂಪಾಯಿ ಲಾಭವಾಗಿದೆ. ಈ ನನ್ನ ಇಲಾಖೆಯ ಬೇಡಿಕೆಗಳ ಬಗ್ಗೆ ಶ್ರೀಮಾನ್ ಹರ್ಷಕುಮಾರಗೌಡ ಅವರು ಮಾತನಾಡಿದ್ದಾರೆ. ಅವರು ಅರಣ್ಯ ಬಗ್ಗೆ ಏಕಲವ್ಯನ ಕಳಕಳಿಯನ್ನು ಹೇಳಿದರು. ಒಳ್ಳೆಯ ಸೊಗಸಾದ ಕಥೆ ಹೇಳಿ ಎಲ್ಲರಿಗೂ ತಿಳಿಸಿಕೊಟ್ಟರು. ಏಕಲವ್ಯ ಏಕೆ ವಿದ್ಯೆ ಕಲಿತ ಎಂದರೆ ಈ ಅರಣ್ಯ ಸಂಪತ್ತಿನ ಸಂರಕ್ಷಣೆ ನಡೆಯಬೇಕು ಎಂದು. ಆಗ ದ್ರೋಣಾಚಾರ್ಯ ಬಂದರು. ಆದರೆ ದ್ರೋಣಾಚಾರ್ಯರಂಥ ಗುರು ಮಾತ್ರ ಇರಬಾರದು. ಏಕಲವ್ಯನಂಥ ಶಿಷ್ಯ ಇರಲಿ. ಅವನು ಅರಣ್ಯ ಸಂರಕ್ಷಣೆಗಾಗಿ ವಿದ್ಯೆ ಕಲಿತು ತನ್ನ ಬೆರಳನ್ನು ಕತ್ತರಿಸಿಕೊಡಬೇಕಾಯಿತು. ಆವತ್ತಿನಿಂದ ನಮ್ಮ ಅರಣ್ಯ ಹೋಗಿರಬೇಕೆಂದು ಅನಿಸುತ್ತದೆ. ಅವರು ತಮ್ಮ ಸಲಹೆಗಳಲ್ಲಿ ಅರಣ್ಯಪ್ರಾಣಿಗಳ ಬಗ್ಗೆ ಹೇಳಿದ್ದಾರೆ. ವನ್ಯ ಪ್ರಾಣಿ ಸಂರಕ್ಷಣೆಗೆ ಐದು ರಾಷ್ಟ್ರೀಯ ಅರಣ್ಯಗಳು ಮತ್ತು 19 ವನ್ಯಧಾಮಗಳು ಇವೆ. ದಕ್ಷಿಣ ಭಾರತದಲ್ಲಿರತಕ್ಕಂಥ ಎಲ್ಲಾ ವನ್ಯಪ್ರಾಣಿಗಳೂ ಕೂಡ ನಮ್ಮ ಅಭಯಾರಣ್ಯಗಳಲ್ಲಿವೆ. ಶ್ರೀಮಾನ್ ರವೀಂದ್ರನಾಥ ಬಾಬು ಅವರು ಪಕ್ಷಿಧಾಮಗಳಲ್ಲಿ ಒಳ್ಳೆಯ ಹಣ್ಣುಹಂಪಲು ಬಿಡತಕ್ಕಂಥ ಮರಗಳನ್ನು ಬೆಲೆಯಬೇಕು ಎಂದು ಹೇಳಿದ್ದಾರೆ. ನಮ್ಮಲ್ಲಿ ನಾಲ್ಕು ಪಕ್ಷಿಧಾಮಗಳು ಇವೆ. ರಂಗನತಿಟ್ಟು, ಘಟಪ್ರಭ, ಆದಿಚುಂಚನಗಿರಿ ಮತ್ತು ಗುಡವಿ ಇವು ಪಕ್ಷಿಧಾಮಗಳು. ಇವುಗಳ ಕ್ಷೇತ್ರ ಮಾತ್ರ ಬಹಳ ಸಣ್ಣದಾಗಿದೆ. ಅಲ್ಲಿ ಹಣ್ಣಿನ ಮರಗಳನ್ನು ಈಗಾಗಲೇ ನೆಟ್ಟಾಗಿದೆ. ವನ್ಯಧಾಮಗಳಲ್ಲಿ ತೇಗದ ಮರಗಳನ್ನು ಸಿರಿಕಲ್ಚರ್ ಹಾಗೂ ಇನ್ನಿತರ ವಾಣಿಜ್ಯ ಮರಗಳನ್ನು ಬೆಳೆಯಬಾರದು ಎಂದು ಅವರು ಸಲಹೆ ಮಾಡಿದ್ದಾರೆ. ಆದರೆ ಇವುಗಳನ್ನು ವನ್ಯಧಾಮಗಳೆಂದು ನಿರ್ಧಾರ ಮಾಡುವುದಕ್ಕೆ ಮುಂಚೆಯೇ ಬೆಳೆಸಿರತಕ್ಕಂಥ ಒಂದು ವ್ಯವಸ್ಥೆಯೇ ಹೊರತು ವನ್ಯಧಾಮಗಳೆಂದು ನಿರ್ಧಾರ ಆದಮೇಲೆ ನಾವು ಈ ತೇಗದ ಮರ ಅಥವಾ ಸಿಲ್ವಿಕಲ್ಚರ್ ಮರಗಳಾಗಲಿ ಬೆಳೆಸತಕ್ಕಂಥ ವ್ಯವಸ್ಥೆ ಮಾಡುತ್ತಿಲ್ಲ. ವನ್ಯಪ್ರಾಣಿಗಳಿಗೆ ರೇಡಿಯೋ ಕಾಲರ್ ಅಳವಡಿಸಬಾರದು ಎಂದು ಅವರು ಸಲಹೆ ಕೊಟ್ಟಿದ್ದಾರೆ. ನಾವು ಕೂಡ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈಗ ಉಳಿದಿರತಕ್ಕಂಥ ಒಂದು ಹುಲಿ ಮಾತ್ರ ರೇಡಿಯೋ ಕಾಲರ್ ಇರತಕ್ಕದ್ದು. ಅದನ್ನು ಮಾತ್ರ ಪರಿಶೀಲಿಸುವುದಕ್ಕೆ ಅವರು ಹೈಕೋರ್ಟಿನಿಂದ ಪರ್ಮಿಶನ್ ತಂದಿದ್ದಾರೆ. ಅದಕ್ಕಾಗಿ ಅವರು ನಡೆಸುತ್ತಿದ್ದಾರೆ. ಈಗ ರಾಜ್ಯದಲ್ಲಿರತಕ್ಕಂಥ ವನ್ಯಪ್ರಾಣಿಗಳ ವಿವರ ಕೇಳಿದ್ದರು. ಸುಮಾರು 1990ರ ಸೆನ್ಸಸ್ ಪ್ರಕಾರ ಹುಲಿಗಳು 257, ಚಿರತೆಗಳು283, ಆನೆಗಳು 4418, ಕಾಡುಕೋಣಗಳು 5,473. ಈ ವರ್ಷ 1991-92ರಲ್ಲಿ ನಮ್ಮ ಅರಣ್ಯ ಇಲಾಖೆಯಿಂದ ಬಂದಂಥ ಉತ್ಪನ್ನ 6531 ಲಕ್ಷ ಮತ್ತು ಈ ವರ್ಷ ಅಂದಾಜು ಮಾಡಿರತಕ್ಕಂಥಾದ್ದು ಸುಮಾರು 100 ಕೋಟಿ. ಇದರಲ್ಲಿ ಗಂಧದ ಮರಗಳ ಮಾರಾಟವೂ ಸೇರಿದೆ. ಇದೂ ಅಲ್ಲದೆ ಈ ವರ್ಷ ನಾವು ಬೇಡಿರತಕ್ಕಂಥಾದ್ದು 6275 ಮತ್ತು ಈ ಬೇಡಿಕೆಗಳ ಬಗ್ಗೆ ನಾವು ಇನ್ನೂ ಹೆಚ್ಚಿನ ಕಾರ್ಯ ಮಾಡಬೇಕಾಗಿದೆ. ಆದರೆ ಕೊಟ್ಟಿರತಕ್ಕಂಥ ಅನುದಾನ ಬಹಳ ಕಡಿಮೆ. ಅದೂ ಅಲ್ಲದೆ ನಾವು ಬೇರೆ ಕಡೆಯಿಂದ ಹಣವನ್ನು ಕ್ರೋಢೀಕರಿಸಿ ಕೇಂದ್ರ ಸರ್ಕಾರದಿಂದ ಮತ್ತು ಹಲವಾರು ವಿವಿಧ ಸಂಸ್ಥೆಗಳಿಂದ ನಮ್ಮ ಹಣವನ್ನು ಕ್ರೋಢೀಕರಿಸಿ ಅಭಿವೃದ್ಧಿ ಪಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ನಿಮ್ಮ ಮುಖೇನ ಸಭೆಯನ್ನು ನಮ್ಮ ಬೇಡಿಕೆಗಳ ಮೇಲಿನ ಎಲ್ಲಾ ವಿಷಯಗಳ ಮೇಲೆ

ಮಂಜೂರಾತಿ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ಈಗ ಸಾಕಷ್ಟು ಚರ್ಚೆಯಾಗಿದೆ. ಈಗ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಈಗ ಬೇಡಿಕೆಗಳ ಮೇಲಿನ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ 1, 2, 3, 4, 46 ಮತ್ತು 22 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿದಂತೆ, ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕು.

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕೃತವಾಯಿತು ಹಾಗೂ ಬೇಡಿಕೆಗಳ ಸಂಖ್ಯೆ 1, 2, 3, 4, 46 ಮತ್ತು 22 ಇವುಗಳಿಗೆ ಅನುಮೋದನೆ ದೊರಕಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರು ಮಾಡಿದ ಅಭಿಯಾಚನೆ ಸಂಖ್ಯೆ ಹಾಗೂ ಅವುಗಳ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ - 1

ವ್ಯವಸಾಯ (ತೋಟಗಾರಿಕೆ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವ್ಯವಸಾಯಕ್ಕೆ (ತೋಟಗಾರಿಕೆ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 177,77,68,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 20,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ - 2

ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ತೋಟಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 32,08,82,000 ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 4,00,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 3

ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.93ರಂದು ಕೊನೆಗೊಳ್ಳುವ ಆರ್ಥಿಕವರ್ಷದಲ್ಲಿ ಪಶುಸಂಗೋಪನೆ ಮತ್ತು ಡೈರಿ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 76,36,83,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 4

ಮೀನುಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮೀನುಗಾರಿಕೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 16,34,63,000 ರೂ.ಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ 7,51,50,000

ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 46

ರೇವು ಮತ್ತು ಜಲಸಾರಿಗೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 2,00,11,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,50 ,00,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ - 22

ಅರಣ್ಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31.3.1993 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಅರಣ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 117,78,81,000ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 28,00,000ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಉಪಾಧ್ಯಕ್ಷರು :- ನಿಮ್ಮ ಪ್ರಶ್ನೆ 361 (2042) ಇದಿನಬ್ಬನವರೇ, ಸಮಾಜ ಕಲ್ಯಾಣ ಮಂತ್ರಿಗಳು ಇಲ್ಲ. ಆಮೇಲೆ ಅವರು ಏನಾದರೂ ಬಂದರೆ ತೆಗೆದುಕೊಳ್ಳಬಹುದು. ಎಜುಕೇಷನ್ ಮಿನಿಸ್ಟರ್ ಬಂದರೆ ತೆಗೆದುಕೊಳ್ಳೋಣ.

ಶ್ರೀ ಎಂ. ವಿ. ವೆಂಕಟಪ್ಪನವರೇ ತಮ್ಮ ಪ್ರಶ್ನೆಗಳು, ಎಜುಕೇಷನ್ ಮಿನಿಸ್ಟರ್‌ರವರು ಆನ್ಸರ್ ಮಾಡುತ್ತಾರೆ, ಈಗ ಬರುತ್ತಾರೆ, ಕೊನೆಯಲ್ಲಿ ತೆಗೆದುಕೊಳ್ಳುತ್ತೇನೆ. ಕೊಶ್ಚನ್ ಎಲ್ಲಾ ಮುಗಿಸಿ ನಂತರ ನಿಮ್ಮನ್ನು ಕರೆಯುತ್ತೇನೆ.

ವಿಷಯ: ರಾಜ್ಯದಲ್ಲಿನ ಬೆಂಕಿ ಕಡ್ಡಿ ಕಾರ್ಖಾನೆಗಳು

Starred L.A.Quesion No. 370 (2023)

Sri K.Harshakumra Gowda (Chamaraj). Will the Minister of State for Samll Scale Industries he pleased to state.

a) No. of Match Box Industries in the State ?

b) What is the amount of production of Match box by these Industries ?

c) Which are all lthe neighbouring State that are experting Match boxes to out State ? From these States, what is the amount of Match Boxes imported to out State ?

Sri Nazeer Ahemed (Minister of State for Small Scale Industries.)

a) There are 32 Match Box Indtustries in the State.

b) Rs. 108.15 lakhs amount of Match boxes are produced per year by the above 32 Industries.

c) Information is not available with the Commerce & Industries

Department.

2.45 ಪಿ.ಎಂ

ಶ್ರೀ ಕೆ. ಹರ್ಷಕುಮಾರ ಗೌಡ :- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಕರ್ನಾಟಕದಲ್ಲಿ ಬೆಂಕಿ ಕಡ್ಡಿ ತಯಾರು ಮಾಡತಕ್ಕಂಥ ಕಾರ್ಖಾನೆಗಳ ಸಂಖ್ಯೆ ಎಷ್ಟಿದೆ ಎಂದು ಕೇಳಿದ್ದೆ. ಉತ್ತರದಲ್ಲಿ 32 ಉದ್ಯಮಗಳು ಅಂತ ಹೇಳಿದ್ದಾರೆ. ಆದರ ಒಟ್ಟು ವಾರ್ಷಿಕ ಆದಾಯ ವಹಿವಾಟು ಒಂದು ಕೋಟಿ 8 ಲಕ್ಷ ಚಿಲ್ಲರೆ ಎಂದು ಕೂಡ ಹೇಳಿದ್ದಾರೆ. ಕಡೆಯದಾಗಿ ಹೊರರಾಜ್ಯದಿಂದ ನಮ್ಮ ರಾಜ್ಯಕ್ಕೆ ಆಮದು ಎಷ್ಟು ಮಾಡಿ ಕೊಳ್ಳಲಾಗುತ್ತಿದೆ, ಮತ್ತು ನಮ್ಮ ರಾಜ್ಯದಿಂದ ಹೊರರಾಜ್ಯಕ್ಕೆ ಎಷ್ಟು ಪ್ರಮಾಣದಲ್ಲಿ ಬೆಂಕಿ ಕಡ್ಡಿಗಳನ್ನು ರಫ್ತು ಮಾಡುತ್ತೀರಿ; ಎಂದು ನಾನು ಪ್ರಶ್ನೆ ಕೇಳಿದೆ ,ಅದಕ್ಕೆ ಉತ್ತರವನ್ನು ಕೊಡುವುದಕ್ಕಾಗಿಲ್ಲ. ಉತ್ತರ ಸಿಕ್ಕಿಲ್ಲ, ಇದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಬರುತ್ತದೆ ಎಂದು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆದರೆ ನಮ್ಮ ಉದ್ದೇಶ ಇಡೀ ರಾಜ್ಯದಲ್ಲಿ ಯಾವ ತಾಯಂದಿರು ಅವರು ಪ್ರತಿನಿತ್ಯ ಹಚ್ಚುವ ಬೆಂಕಿ ಪೆಟ್ಟಿಗೆ ಯಾವ ಗ್ರಾಮಾಂತರ ಪ್ರದೇಶದ ಜನತೆಯ ಒಂದು ಉದ್ಯಮವಾದಬೇಕಾಗಿತ್ತೋ ಇದರಿಂದ ಅವರು ವಂಚಿತರಾಗಿಲ್ಲವೇ ? ಮತ್ತೆ ಹೊರರಾಜ್ಯದಿಂದ ನಮ್ಮ ಅರಾಜ್ಯಕ್ಕೆ ಎಷ್ಟು ಪ್ರಮಾಣದಲ್ಲಿ ಈ ಒಂದು ಬೆಂಕಿಪೆಟ್ಟಿಗೆ ಬರುತ್ತದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಈ ಕೈಗಾರಿಕೆ ಸ್ಥಾಪನೆಯಾಗಬೇಕಾಗಿತ್ತು. ನಮ್ಮ ರಾಜ್ಯದ ಯುವಕರಿಗೆ ಉದ್ಯೋದಗ ಸಿಗಬೇಕಾಗಿತ್ತು. ಅವರು ಇದರಿಂದ ವಂಚಿತರಾಗಿಲ್ಲವೇ ?

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕಾ ಸಚಿವರು):- ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸ್ಪಷ್ಟವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಆದರೆ ನಮ್ಮ ರಾಜ್ಯಕ್ಕೆ ಹೊರರಾಜ್ಯದಿಂದ ಬರತಕ್ಕಂಥ ಬೆಂಕಿ ಕಡ್ಡಿ ಅದರ ಒಂದು ಲೆಕ್ಕಾಚಾರ ನಮ್ಮಲ್ಲಿ ಇರುವುದಿಲ್ಲ. ಅದು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿರುತ್ತದೆ. ಆದ್ದರಿಂದ ಆ ಲೆಕ್ಕಾಚಾರವನ್ನು ನಾವು ನಮ್ಮ ಇಲಾಖೆಯಿಂದ ಕೊಡಲಿಕ್ಕೆ ಆಗಲಿಲ್ಲ. ಮತ್ತು ವಿಶ್ವ ಯೋಜನೆಯಲ್ಲಿ ಭಾರಿ ದೊಡ್ಡ ಪ್ರಮಾಣದಲ್ಲಿ ಈಗಾಗಲೇ ಬೆಂಕಿ ಕಡ್ಡಿ ಉತ್ಪಾದನೆ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಇನ್ನು 6 ತಿಂಗಳಲ್ಲಿ ನಾವು ನಮ್ಮ ರಾಜ್ಯದಲ್ಲಿರತಕ್ಕಂಥ ಡಿಮ್ಯಾಂಡ್ ಎಷ್ಟು ಇದೆ ಅದಕ್ಕೆ ಸರಿಯಾಗಿ ಉತ್ಪತ್ತಿ ಮಾಡವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಹರ್ಷಕುಮಾರ ಗೌಡ:- ಬಹಳ ಸಂತೋಷ, ವಿಶ್ವ ಯೋಜನೆಯ ಅಡಿಯಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಹೊಸದಾಗಿ ಉದ್ಯೋಗವನ್ನು ಸೃಷ್ಟಿ ಮಾಡುತ್ತೇವೆಂದು ಹೇಳಿದ್ದಾರೆ ಸಂತೋಷದ ವಿಷಯ. ನಾನು ಪ್ರಶ್ನೆ ಕೇಳಿದ ಉದ್ದೇಶ ಇಷ್ಟೇ. ತಮಿಳುನಾಡು ರಾಜ್ಯ ನಮ್ಮ ಅರಣ್ಯ ಕಡ್ಡಿಗಳನ್ನು ಮರವನ್ನು ಉಪಯೋಗಿಸಿಕೊಂಡು ಆಮದು ಮಾಡಿಕೊಂಡು ಅದಕ್ಕೆ ಮತಾಪು ಹಚ್ಚಿ ಇಡೀ ರಾಷ್ಟ್ರವನ್ನೆ ಈ ಉದ್ಯಮ ಹಿಡಿದಿದೆ. ತಮಿಳುನಾಡು ಅಸ್ಸಾಂ ಗುಜರಾತಿನ ಜೇಬ್ರುಗಳ ತನಕ ಸಪ್ಲೈ ಮಾಡತಕ್ಕಂಥ ಹಾದಿಯಲ್ಲಿ ಶಕ್ತಿ ಪಡೆದಿದೆ. ಅವರು ಕೈಗಾರಿಕೆಯನ್ನು ಮಾಡಿಕೊಂಡು ಆಮೂಲಕ ವಾಣಿಜ್ಯ ಮತ್ತು ವ್ಯಾಪಾರ ಹಿಡಿದು ಹಣ ಸಂಪಾದನೆ ಮಾಡುತ್ತಿದ್ದಾರೆ. ಈ ಒಂದು ಉದ್ದೇಶದಿಂದ ನಮ್ಮ ವಿಶ್ವ ಕಾರ್ಯಕ್ರಮವೂ ಕೂಡ ಯಶಸ್ವಿಯಾಗಬೇಕಾದರೆ ಈ ಉದ್ಯಮವನ್ನು ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪನೆ ಮಾಡಿದರೆ ಆಗ ಯುವಕರಿಗೆ ಕೆಲಸ ಕೊಡುವುದರ ಜೊತೆಗೆ ಹೊರರಾಜ್ಯ ಪಡೆದುಕೊಂಡಿರುವ ಏಕಸ್ವಾಮ್ಯವನ್ನು ತಡೆಯಲು ಸಾಧ್ಯವಾಗುವುದಿಲ್ಲವೇ ? ಇದನ್ನು ತಡೆಯದೆ ಹೋದರೆ ನಮ್ಮ 'ವಿಶ್ವ' ಯೋಜನೆಗೆ ಇದು ಕುಂಠಿತವಾಗುವುದಿಲ್ಲವೇ?

ಶ್ರೀ ನಜೀರ್ ಅಹಮದ್ :- ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಈಗ ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದು ಸೂಕ್ತವಾದ ಸಲಹೆ ನಾನು ಪರಿಶೀಲನೆ ಮಾಡುತ್ತೇನೆ.

ವಿಷಯ: ಮನ್ನಾಳಿಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ 372 (2011)

ಶ್ರೀ ನಾರಾಯಣ / ಮನ್ನಾಳಿ (ಬೀದರ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ಬೀದರ್ ತಾಲ್ಲೂಕಿನ ಮನ್ನಾಳಿಯಲ್ಲಿರುವ ಪ್ರಸ್ತುತ ಆಸ್ಪತ್ರೆಯು ಸುತ್ತಮುತ್ತಲಿನ 35,000 ಜನಸಂಖ್ಯೆಯುಳ್ಳ, 16 ಗ್ರಾಮಗಳಿಗೆ, ಕನಿಷ್ಠ ವೈದ್ಯಕೀಯ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮವೇನು ?

ಇ) ಯಾವಾಗ ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ನಾರಾಯಣರಾವ್, ಮನ್ನಾಳಿ :- ಮಾನ್ಯ ಅಧ್ಯಕ್ಷರೇ, ಸರಿಯಾದಂಥ ಉತ್ತರವನ್ನು ಮಾನ್ಯ ಮಂತ್ರಿಯವರು ಕೊಟ್ಟಿಲ್ಲ. ಏಕೆಂದರೆ, ಬೀದರ್ ತಾಲ್ಲೂಕಿನ ಮನ್ನಾಳಿಯಲ್ಲಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಮಾಡಬಹುದೇ ಎಂದು ನಾನು ಕೇಳಿದ್ದೇನೆ. 'ಇಲ್ಲ'ವೆಂದು ಹೇಳಿದ್ದಾರೆ. ಅಲ್ಲಿ ಬಹುಶಃ 35 ಸಾವಿರ ಪಾಪ್ಯುಲೇಷನ್ ಇರತಕ್ಕಂಥ, ಸುತ್ತಮುತ್ತ 16 ಗ್ರಾಮಗಳಿವೆ. ಮನ್ನಾಳಿಯಲ್ಲಿರತಕ್ಕಂಥ ಆಸ್ಪತ್ರೆಯನ್ನು ನೀವು ಏಕೆ ಮೇಲ್ದರ್ಜೆಗೆ ಏರಿಸಬಾರದು ? ಅಲ್ಲಿರತಕ್ಕಂಥ 16 ಹಳ್ಳಿ ಜನರು ಖಾಯಿಲೆ ಬಂದರೆ ಬೀದರ್‌ಗೆ ಹೋಗಬೇಕಾಗುತ್ತದೆ. ಆ ಗ್ರಾಮದಲ್ಲಿರತಕ್ಕಂಥ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿದರೆ ಏನು ತೊಂದರೆ ? ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಏಕೆ ಮಾಡಬಾರದೆಂದು ನನ್ನ ಪ್ರಶ್ನೆ. ಮಾನ್ಯ ಮಂತ್ರಿಗಳಿಗೆ ಅದನ್ನು ಅಪ್‌ಗ್ರೇಡ್ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರ ಪ್ರಶ್ನೆ, ಕನಿಷ್ಟ ವೈದ್ಯಕೀಯ ಸವಲತ್ತುಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಎಂದು ಕೇಳಿದ್ದಾರೆ. ಸರ್ಕಾರದ ಪರಿಯಿಂದ ಇಲ್ಲವೆಂದು ಹೇಳಿದ್ದೇವೆ. ಅಲ್ಲಿರತಕ್ಕಂಥ ಪ್ರಾಥಮಿಕ ಕೇಂದ್ರ 6 ಹಾಸಿಗೆಯುಳ್ಳಂಥಾದ್ದು ಅದು ತನ್ನದೇ ಆದ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿದೆ. ವರ್ಷಕ್ಕೆ ಸುಮಾರು 30 ಸಾವಿರಕ್ಕೂ ಹೆಚ್ಚು ಔಷಧಿಗಳನ್ನು ಅಲ್ಲಿಗೆ ಕೊಡುತ್ತಿದ್ದೇವೆ. ಆದ್ದರಿಂದ ಕನಿಷ್ಟ ಸವಲತ್ತು ಆಗಿಲ್ಲ ಎನ್ನುವುದು ಸರಿಯಲ್ಲವೆಂದು ಹೇಳಿದ್ದೇನೆ. ಮತ್ತೊಂದು ಅವರು ಕೇಳಿದ್ದಾರೆ. 35 ಸಾವಿರ ಪ್ರಜಾ ಸಂಖ್ಯೆ ಇದೆ. 16 ಗ್ರಾಮಗಳು ಅದಕ್ಕೆ ಸುತ್ತಾ ಬರತಕ್ಕಂಥ ಹಿನ್ನೆಲೆಯಲ್ಲಿ ಏಕೆ ಮಾಡಬಾರದು ಎಂದೂ ಕೂಡ ಕೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತಿನವರು ಅವರ ಜಿಲ್ಲಾ ಯೋಜನೆಯಲ್ಲಿ ಹಣವನ್ನು ಕಾದಿಟ್ಟು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದರೆ ಅದನ್ನು ಕನ್ಸಿಡರ್ ಮಾಡಬಹುದು. ಆ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ಪ್ರಯತ್ನ ಮಾಡಲಿ. ಸರ್ಕಾರಕ್ಕೆ ಪ್ರಸ್ತಾವನೆ ಬಂದ ನಂತರ ಇದನ್ನು ಪರಿಶೀಲಿಸಲಾಗುವುದು.

ಶ್ರೀ ನಾರಾಯಣರಾವ್ :- ಜಿಲ್ಲಾ ಪರಿಷತ್ತು ಮಾಡತಕ್ಕಂಥಾದ್ದು ತಮಗೆ ಗೊತ್ತಿದೆ. ಜಿಲ್ಲಾ ಪರಿಷತ್ತು ಬರಬೇಕಾದರೆ ಇನ್ನೂ ಕಾಲಾವಕಾಶ ಬಹಳಷ್ಟು ಇದೆ. ಮಾನ್ಯ ಆರೋಗ್ಯ ಮಂತ್ರಿಗಳು, ನಮ್ಮ ಆರೋಗ್ಯವನ್ನು ಕಾಪಾಡತಕ್ಕಂಥ ಕರ್ತವ್ಯ ತಮಗೆ ಇದೆ. ಆರೋಗ್ಯದ ವಿಷಯದ ಬಗ್ಗೆ ತಾವು ಗಟ್ಟಿ ಮನಸ್ಸು ಮಾಡಿ ಇರತಕ್ಕಂಥ ಹಾಸ್ಪಿಟಲ್‌ನ್ನು ಅಪ್‌ಗ್ರೇಡ್ ಮಾಡಲಿಕ್ಕೆ ಏನೂ ತೊಂದರೆ ಇಲ್ಲ. ಅಪ್‌ಗ್ರೇಡ್ ಮಾಡುತ್ತೇವೆಂದು ಆಶ್ವಾಸನೆ

ಕೊಟ್ಟರೆ ತೊಂದರೆ ಏನಿಲ್ಲವೆಂದು ನನಗನಿಸುತ್ತದೆ. 16 ಹಳ್ಳಿಗಳ ಜನರ ಆರೋಗ್ಯವನ್ನು ನೋಡಿಕೊಂಡು ಅಪ್‌ಗ್ರೇಡ್ ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ಮಾನ್ಯ ಅಧ್ಯಕ್ಷರೇ, ಅಪ್‌ಗ್ರೇಡ್ ಮಾಡುವುದರಲ್ಲಿ ಸರ್ಕಾರದ ವಿರೋಧ ಏನಿಲ್ಲ. ಆದರೆ, ಅದಕ್ಕೆ ಬೇಕಾದಂಥ ನಿಯಮಗಳನ್ನು ನಾವು ಅನುಸರಿಸಬೇಕಾಗುತ್ತದೆ. ಜಿಲ್ಲಾಪರಿಷತ್ತಿನವರು ಅವರ ಆಯವ್ಯಯದಲ್ಲಿ ಜಿಲ್ಲಾ ಯೋಜನೆಯಲ್ಲಿ ಸೇರಿಸಿ ಅಳವಡಿಸಿ ಸರ್ಕಾರಕ್ಕೆ ಶಿಫಾರಸ್ ಮಾಡಿದಾಗ ಆ ಒಂದು ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸತಕ್ಕಂಥ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಉಪಾಧ್ಯಕ್ಷಿಣಿಯವರು:- ಶ್ರೀ ವೈ. ನಾಗಪ್ಪ, ನಿಮ್ಮ ಪ್ರಶ್ನೆಗೆ ಎಜುಕೇಷನ್ ಮಿನಿಸ್ಟರ್ ರಿಪ್ಲೈ ಕೊಡಬೇಕು. ಅವರು ಬಂದ ಮೇಲೆ ಇದನ್ನು ತೆಗೆದುಕೊಳ್ಳುತ್ತೇನೆ. ಶ್ರೀ ಎ. ಬಿ. ಮಲಕರೆಡ್ಡಿ, ನಿಮ್ಮ ಪ್ರಶ್ನೆಗೆ ಟೈಮ್ ಬೇಕೆಂದು ಕೇಳಿದ್ದಾರೆ. ಶ್ರೀ ಎಂ. ವಿ. ವೆಂಕಟಪ್ಪ : ಇದಕ್ಕೂ ಸಹಾ ಟೈಮ್ ಕೇಳಿದ್ದಾರೆ.

ವಿಷಯ: ನಿಮ್ಹಾನ್ಸ್ ಆಸ್ಪತ್ರೆಗೆ ಕನಿಷ್ಠ ತುರ್ತು ಸೌಲಭ್ಯಗಳನ್ನು ಕಲ್ಪಿಸುವುದು.

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ 377 (2040)

ಶ್ರೀ ಬಿ. ಶಿವರಾಂ (ಗಂಡಸಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕನಿಷ್ಟ ಸೌಲಭ್ಯಗಳೊಂದಿಗೆ 24 ಗಂಟೆಯೂ ನಿಮಾನ್ಸ್ ಆಸ್ಪತ್ರೆಯು ಕಾರ್ಯ ನಿರ್ವಹಿಸುತ್ತದೆಯೇ? ಹಾಗಿದ್ದಲ್ಲಿ ಕನಿಷ್ಠ ತುರ್ತು ಶುಶ್ರೂಷೆಗೆ ಒದಗಿಸಿರುವ ಸೌಲಭ್ಯಗಳು ಯಾವುವು ?

ಆ) 24 ಗಂಟೆಯೂ ರಕ್ತ ನಿಧಿ ಸ್ಕ್ಯಾನಿಂಗ್ ಮತ್ತು ಕ್ಷ-ಕಿರಣ ಘಟಕ ಮುಂತಾದುವುಗಳನ್ನು ಒದಗಿಸಲಾಗಿದೆಯೇ ?

ಇ) ಶುಲ್ಕವನ್ನು ವಿಧಿಸಿ ಅಥವಾ ವಿಧಿಸದೆಯೆ ಒಬ್ಬ ಮನುಷ್ಯನನ್ನು ಅಪಾಯದಿಂದ ಪಾರು ಮಾಡಲು ಸರ್ಕಾರವು ಮೇಲ್ಕಂಡ ಸೌಲಭ್ಯಗಳನ್ನು 24 ಗಂಟೆಯೂ ಒದಗಿಸಿಕೊಟ್ಟಿದೆಯೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

24 ಗಂಟೆಯೂ ನಿಮಾನ್ಸ್ ಕಾರ್ಯ ನಿರ್ವಹಿಸುತ್ತದೆ. ಆ ಸಮಯದಲ್ಲಿ ಸೈಕಿಯಾಟ್ರಿಕ್, ನ್ಯೂರಾಲಜಿ, ಮತ್ತು ನ್ಯೂರೋ ಸರ್ಜರಿ ಸೌಲಭ್ಯಗಳು ದೊರೆಯುತ್ತವೆ. ರೋಗಿಗಳಿಗೆ ತುರ್ತು ವಿಭಾಗಕ್ಕೆ ಪ್ರವೇಶ ನೀಡುವುದರೊಂದಿಗೆ ವಿಶೇಷ ಡಾಕ್ಟರುಗಳಿಂದ ತುರ್ತು ಸೇವೆ ನೀಡಲಾಗುತ್ತಿದೆ. ಅಲ್ಲದೆ ತುರ್ತು ಶಸ್ತ್ರ ನೀಡಲಾಗುತ್ತಿದೆ. ಅಲ್ಲದೆ ತುರ್ತು ಶಸ್ತ್ರ ಚಿಕಿತ್ಸೆ ಸಹ ಕೈಗೊಳ್ಳಲಾಗುತ್ತದೆ. ಸಂಬಂಧಪಟ್ಟ ರೋಗಿಗೆ ಆಗತ್ಯವಾದ ಎಲ್ಲಾ ರೀತಿಯ ಚಿಕಿತ್ಸೆ ನೀಡಲಾಗುತ್ತದೆ.

ಆ) ಹೌದು.

ಇ) ಹೌದು.

ತುರ್ತು: ಆಕಸ್ಮಿಕ ಸೇವೆಗಳಿಗೆ ಯಾವುದೆ ರೀತಿಯ ಶುಲ್ಕ ಇರುವುದಿಲ್ಲ.

ಶ್ರೀ ಬಿ. ಶಿವರಾಂ :- ಮಾನ್ಯ ಅಧ್ಯಕ್ಷರೇ, ಉತ್ತರವನ್ನು ಸರಿಯಾದ ರೀತಿಯಲ್ಲಿ ಒದಗಿಸಿದ್ದಾರೆ. ಬಹುಶಃ ನಾನು ಕೇಳುತ್ತಿರುವ ಉದ್ದೇಶ ಏನೆಂದು ಅರ್ಥ ಮಾಡಿಕೊಂಡಿದೆ. ಆ ಹಿನ್ನೆಲೆಯಲ್ಲಿ ಏನು ಸಮಸ್ಯೆ ಇದೆಯೆಂದು ಮಂತ್ರಿಗಳಿಗೆ ಗೊತ್ತಾಗುತ್ತದೆ. ಅಫಿಷಿಯಲ್ ಆಗಿ ಎಲ್ಲಾ ಆಸ್ಪತ್ರೆಗಳಲ್ಲಿ ಎಲ್ಲಾ ವ್ಯವಸ್ಥೆ ಇದೆ ಅನ್ನತಕ್ಕಂಥಾದ್ದು ನಿಜ. ಆದರೆ ಅನ್ ಅಫಿಷಿಯಲ್ ಆಗಿ ಏನು ನಡೆಯುತ್ತಿದೆ ಎನ್ನತಕ್ಕಂಥಾದ್ದರ ಹಿನ್ನೆಲೆಯನ್ನು ನಾವು ಅರ್ಥಮಾಡಿಕೊಳ್ಳಬೇಕು. ಸಾಮಾನ್ಯವಾಗಿ ಏನಾದರೂ ಆಕ್ಸಿಡೆಂಟ್ ಆಗಿ ದೂರದಿಂದ ಬಂದರೆ 12 ಗಂಟೆ

1 ಗಂಟೆಗೆ ಹೋದರೆ ಡಾಕ್ಟರುಗಳು ಇರುವುದಿಲ್ಲ. ಒಂದು ಪಕ್ಷ ಇದ್ದರೆ ಅವರುಗಳನ್ನು ಮೆಡಿನೋವಾಗೆ, ಮತ್ತೊಂದಕ್ಕೆ ಬರೆದು ಕಳುಹಿಸಿಕೊಡತಕ್ಕಂಥಾದ್ದು ಸಾಮಾನ್ಯವಾಗಿದೆ. ಇದು ಅವರ ಗಮನಕ್ಕೂ ಕೂಡಾ ಬಂದಿದೆಯೆಂದು ತಿಳಿದುಕೊಂಡಿದ್ದೇನೆ. ಇದು ಬಹಳ ಜನಕ್ಕೆ ಅನುಭವವೂ ಆಗಿರಬೇಕು. 24 ಗಂಟೆ ಸರ್ವೀಸ್ ಇದೆಯೆಂದು ಹೇಳಿ ಮೆಡಿನೋವಾಗೆ ಬರೆದುಕೊಡುವುದು, ಅವರ ಜೊತೆಯಲ್ಲಿ ಬಂದವರಿಗೆ ಎಷ್ಟು ಟೆನ್‌ಷನ್ ಆಗಿರುತ್ತದೆ ? ನನ್ನ ಗಮನಕ್ಕೆ ಎರಡು ಮೂರು ಕೇಸ್ ಬಂದ ಹಿನ್ನೆಲೆಯಲ್ಲಿ ಈ ಪ್ರಶ್ನೆ ಹಾಕಿದ್ದೇನೆಯೇ ವಿನಃ ಅಲ್ಲಿ ಸರ್ವೀಸ್ ಇಲ್ಲ ಅನ್ನತಕ್ಕಂಥಾದ್ದು ಅಲ್ಲ. ಅದರ ಜೊತೆಗೆ ತಮ್ಮ ಗಮನಕ್ಕೂ ಕೂಡ ಇದು ಬಂದಿರಬಹುದು. ಕೆಲವು ಹೆಚ್ಚು ಸೀನಿಯರ್ ಸ್ಪೆಷಲಿಸ್ಟ್‌ಗಳು, ಪ್ರೊಫೆಸರ್‌ಗಳು ಏನಿದ್ದಾರೆ ಅವರು ಬರೆದು ಕೊಡಬೇಕಾದರೆ ಪ್ರೈವೇಟ್ ಹಾಸ್ಪಿಟಲ್‌ಗೆ ಬರೆದು ಕೊಡತಕ್ಕಂಥಾದ್ದು ಅವರ ಗಮನಕ್ಕೂ ಬಂದಿದೆ. ಈ ಹಿನ್ನೆಲೆಯಲ್ಲಿ ಅನ್ ಅಫಿಷಿಯಲ್ ಆಗಿ ಆಗತಕ್ಕಂಥ ಈ ತೊಂದರೆಯನ್ನು ಮಂತ್ರಿಗಳು ಯಾವ ರೀತಿ ನಿವಾರಣೆ ಮಾಡುತ್ತಾರೆಂದು ನಾನು ಪ್ರಶ್ನೆಯನ್ನು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:- ಮಾನ್ಯ ಅಧ್ಯಕ್ಷರೇ, ನಿಮ್ಹಾನ್ಸ್‌ನ್ನು ಬೇರೆ ಆಸ್ಪತ್ರೆಯನ್ನು ಹೋಲಿಕೆ ಮಾಡಿ ನೋಡಿದರೆ ಇಲ್ಲಿ ಉತ್ತಮವಾದಂಥ ಸೇವೆ ಸಿಗುತ್ತದೆ ಎಂಬುದು ಶ್ರೀಸಾಮಾನ್ಯನ ಅಭಿಪ್ರಾಯವಾಗಿದೆ. 24 ಗಂಟೆಗಳ ಕಾಲವೂ ಕೆಲಸ ಮಾಡತಕ್ಕಂಥ ವ್ಯವಸ್ಥೆಯೂ ಅಲ್ಲಿ ಇದೆ. ಒಂದು ಶಿಫ್ಟ್‌ಗೆ ಅಲ್ಲಿ ಆರು ಜನ ಡಾಕ್ಟರ್‌ಗಳು ಕೆಲಸ ಮಾಡುತ್ತಾ ಇರುತ್ತಾರೆ. ಕೆಲವೊಮ್ಮೆ ಪೇಶಂಟ್‌ಗಳು ಜಾಸ್ತಿ ಪ್ರಮಾಣದಲ್ಲಿ ಬರತಕ್ಕಂಥ ಹಿನ್ನೆಲೆಯೊಳಗೆ ಸ್ವಲ್ಪ ಮಟ್ಟಿಗೆ ಕಾಯಬೇಕಾದ ಸಂದರ್ಭವೂ ಬಂದಿರಬಹುದು. ಮತ್ತೆ ಕೆಲವು ಸಂದರ್ಭಗಳಲ್ಲಿ ಎಕ್ಸ್‌ರೇ ಮತ್ತು ಕೆಲವು ಉಪಕರಣಗಳು ಕೆಟ್ಟು ಹೋಗಿರುವುದರ ಪರಿಣಾಮವಾಗಿ ಅಂಥವುಗಳು ತುರ್ತಾಗಿ ಬೇಕಾಗಿರುವುದರಿಂದ ಬೇರೆ ಕಡೆಗೆ ಮಾಡಿಸಿಕೊಂಡು ಬರುವಂತೆ ಹೇಳಿದ ನಿದರ್ಶನಗಳು ಕೂಡ ನಮ್ಮ ಗಮನಕ್ಕೆ ಬಂದಿವೆ. ಇದಕ್ಕೆ ಪೂರಕವಾದಂಥ ವ್ಯವಸ್ಥೆಯನ್ನು ಮಾಡತಕ್ಕಂಥಾದ್ದನ್ನು ಸರಕಾರದ ವತಿಯಿಂದ ನಾವು ಮಾಡುತ್ತಾ ಇದ್ದೇವೆ. ಮಾನ್ಯ ಸದಸ್ಯರು ಹೇಳಿದಂಥ ವಿಚಾರವನ್ನು ಸರಕಾರದವರು ತೀವ್ರವಾಗಿ ಪರಿಶೀಲಿಸುತ್ತಾರೆ ಎಂಬುದನ್ನು ಹೇಳಬಯಸುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ :- ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆಯು ನನ್ನ ಕ್ಷೇತ್ರಕ್ಕೆ ಬರುತ್ತದೆ. ನನಗೆ ಅಲ್ಲಿನ ವಿಚಾರಗಳು ಚನ್ನಾಗಿ ಗೊತ್ತು. ಹಿಂದೆ ಅಲ್ಲಿ ಬಹಳಷ್ಟು ಒಳ್ಳೆಯ ಡಾಕ್ಟರ್‌ಗಳು ಇದ್ದರು. ಹಿಂದಿನ ಸರ್ವೀಸ್ ಏನಿತ್ತು ಅದು ಈಗ ಸಿಗುತ್ತಾ ಇಲ್ಲ. ಮಾನ್ಯ ಸಚಿವರ ಹತ್ತಿರ ಇದರ ಬಗ್ಗೆ ಹಲವಾರು ಬಾರಿ ಮಾತನಾಡಿದ್ದೇನೆ. ಮಧ್ಯರಾತ್ರಿಯ ಮೇಲೆ ಹೋದರೆ ಅಲ್ಲಿ ಹೇಳುವವರು ಕೇಳುವವರು ಯಾರು ಇರುವುದಿಲ್ಲ. ರಾತ್ರಿ ಹೋದವರು ಅನ್‌ಕಾನ್‌ಶಿಯಸ್ ಆಗಿ ಹಾಗೆಯೇ ಬಿದ್ದಿರುತ್ತಾರೆ. ಆಕ್ಸಿಡೆಂಟ್ ಮುಂತಾಗಿ ತಲೆಗೆ ಏಟು ಬಿದ್ದವರು ಇಲ್ಲಿಗೆ ಹೆಚ್ಚಾಗಿ ಬರುತ್ತಾರೆ. ಆದ್ದರಿಂದ ಅಲ್ಲಿ ರಾತ್ರಿಯ ಹೊತ್ತಿನ ಸರ್ವೀಸ್ ಅಷ್ಟು ಚೆನ್ನಾಗಿ ಇಲ್ಲ, ಹಿಂದೆ ತುಂಬಾ ಚೆನ್ನಾಗಿ ಇತ್ತು. ಈಗ ಅಲ್ಲಿ ಸ್ವಲ್ಪ ಗುಂಪುರಾಜಕೀಯ ಕಟ್ಟಿಕೊಂಡು, ಆಸ್ಪತ್ರೆಯ ಒಳರಾಜಕೀಯಗಳಿಂದ ಜನಗಳಿಗೆ ಅಂಥ ಒಳ್ಳೆಯ ಸೇವೆ ಲಭ್ಯವಾಗುತ್ತಿಲ್ಲ. ಇದರ ಬಗ್ಗೆ ಸ್ವಲ್ಪ ಕ್ರಮ ತೆಗೆದುಕೊಳ್ಳಬೇಕು, ಇದಕ್ಕೆ ಕೇಂದ್ರ ಮಂತ್ರಿಗಳು ಅಧ್ಯಕ್ಷರು ಇರಬಹುದು, ನಮ್ಮ ಸಚಿವರು ಉಪಾಧ್ಯಕ್ಷರು ಇರಬಹುದು, ಇದರ ಬಗ್ಗೆ ತೀವ್ರ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಬೆಂಗಳೂರಿನಲ್ಲಿರತಕ್ಕಂಥ ಬೇರೆ ಆಸ್ಪತ್ರೆಗಳನ್ನು ಹೋಲಿಕೆ ಮಾಡಿಕೊಂಡಾಗ ನಿಮ್ಹಾನ್ಸ್ ಆಸ್ಪತ್ರೆಯು ಬಹಳ ಪ್ರಾಮುಖ್ಯವಾಗಿರತಕ್ಕಂಥ ಆಸ್ಪತ್ರೆಯಾಗಿದೆ. ಅಪಘಾತಗಳ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಈ ಆಸ್ಪತ್ರೆಯು ಬೇಕಾಗುತ್ತದೆ. ಇಲ್ಲಿ ಎಕ್ಸ್‌ರೇ ಯುನಿಟ್ ಮತ್ತಿತರ ಉಪಕರಣಗಳು ಅತ್ಯಗತ್ಯವಾಗಿ ಬೇಕಾಗಿರತಕ್ಕಂಥ ವಿಚಾರವಾಗಿದೆ. ಇದನ್ನು ಕೂಡ ಸರಕಾರದವರು ಹೇಳುವ ಹಾಗೆ ಪರಿಶೀಲನೆ ಮಾಡುತ್ತೇವೆ ಎನ್ನುವ ರೀತಿಯಲ್ಲಿ ತೆಗೆದುಕೊಳ್ಳುವುದಾದರೆ ಬಹಳ ಕಷ್ಟವಾಗುತ್ತದೆ.

ಆದ್ದರಿಂದ ಅಲ್ಲಿಗೆ ಬೇಕಾದಂಥ ಸಲಕರಣೆಗಳನ್ನು ನಿರ್ಧಿಷ್ಟವಾಗಿ ಕೊಟ್ಟು ಒಳ್ಳೆಯ ಸೇವೆಯನ್ನು ಕೊಡುವಂತೆ ಮಾಡಿ ಮೈಡನೋವ ಮುಂತಾದ ಕಡೆಗಳಿಗೆ ಜನರು ಹೋಗುವಂಥ ಪ್ರಸಂಗವನ್ನು ತಪ್ಪಿಸಬೇಕು, ಅಂಥ ಒಂದು ಒಳ್ಳೆಯ ವ್ಯವಸ್ಥೆ ತಾವುಗಳು ಮಾಡಿಸಿಕೊಡಬೇಕೆಂದು ತಮ್ಮನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಶಿವರಾಂ :- ಅಧ್ಯಕ್ಷಿಣಿಯವರೇ, ಇದನ್ನು ನಾನು ಪ್ರಮುಖವಾಗಿ ಏತಕ್ಕೆ ಕೇಳಿದ್ದೇನೆ ಎಂಬುದನ್ನು ತಾವುಗಳು ಅರ್ಥಮಾಡಿಕೊಳ್ಳಬೇಕು. ಬೆಂಗಳೂರಿನಲ್ಲಿ ಬಹಳಷ್ಟು ಆಸ್ಪತ್ರೆಗಳು ಇವೆ. ಆದರೆ ನಿಮ್ಹಾನ್ಸ್ ಬಗ್ಗೆ ವಿಶೇಷತಃ ಕೇಳತಕ್ಕಂಥ ಕೆಲಸವನ್ನು ಮಾಡಿದ್ದೇನೆ. ನನಗೆ ಈ ಹಿನ್ನೆಲೆಯಲ್ಲಿ ಎರಡು ನಿದರ್ಶನಗಳು ಸಿಕ್ಕಿರುವುದರ ಜೊತೆಗೆ ಮಾನ್ಯ ಸಚಿವರು ಒಂದು ಮಾತನ್ನು ಹೇಳಿದರು. ಒಂದೊಂದು ಸಾರಿ ಎಕ್ಸ್‌ರೇ ಯುನಿಟ್ ಮುಂತಾದವು ಕೆಟ್ಟು ಹೋಗಿ ಈ ತರಹ ಆಗಿರಬಹುದು ಎಂದು ಹೇಳಿದ್ದಾರೆ. ಆದರೆ ಇದು ಒಂದೊಂದು ಸಾರಿ ಅಲ್ಲ, ಸದಾ ಈ ರೀತಿ ಆಗುತ್ತಾ ಇದೆ ಎಂದು ನಮಗೆ ಕಾಣಿಸುತ್ತಾ ಇದೆ. ನಿಮ್ಹಾನ್ಸ್ ಒಂದು ವಿಶಿಷ್ಟವಾದ ಆಸ್ಪತ್ರೆ ಬಹಳ ಚೆನ್ನಾಗಿ ನಡೆಯುತ್ತಿತ್ತು ಎಂದು ಮಾನ್ಯ ಸಚಿವರು ಏನು ಹೇಳುತ್ತಿದ್ದಾರೆ, ಅಲ್ಲಿ ಈಗ ನಮ್ಮ ಮಾನ್ಯ ಸದಸ್ಯ ಮಿತ್ರರು ಹೇಳಿದ ಹಾಗೆ ಯಾವಾಗಲೂ ಇಂಥ ಪ್ರಶ್ನೆ ಉದ್ಭವಿಸುತ್ತಾ ಇದೆ. ಒಂದು ಪ್ರಾಮುಖ್ಯ ಆಸ್ಪತ್ರೆಯಾಗಿ ಜನಗಳಿಗೆ ಯಾವ ರೀತಿ ಸೇವೆಯನ್ನು ಸಲ್ಲಿಸಬೇಕಾಗಿದೆಯೋ ಅದನ್ನು ಮಾಡುತ್ತಾ ಇಲ್ಲ, ಅದಕ್ಕೋಸ್ಕರ ಹೆಚ್ಚಿಗೆ ಗಮನಹರಿಸಿ ಇದನ್ನು ಸರಿಪಡಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಾಬುರಾವ್ ಚವಾಣ್:- ಆ ಆಸ್ಪತ್ರೆಯಲ್ಲಿರುವ ಡಾಕ್ಟರ್ಸ್ ಆಸ್ಪತ್ರೆಯಲ್ಲಿ ಲಕ್ಷ್ಯಕೊಟ್ಟು ರೋಗಿಗಳನ್ನು ನೋಡುವುದಿಲ್ಲ. ಆದರೆ ಅವರು ಪ್ರೈವೇಟ್‌ನಲ್ಲಿ ಲಕ್ಷ್ಯಕೊಟ್ಟು ನೋಡುತ್ತಾರಲ್ಲ ಏಕೆ ? ಅದೇ ಲಕ್ಷ್ಯವನ್ನು ಆಸ್ಪತ್ರೆ ರೋಗಿಗಳಿಗೂ ಕೊಟ್ಟು ನೋಡುವಂತೆ ಮಾಡ್ತೀರಾ ಸಚಿವರೇ ?

ಶ್ರೀ ರಾಮಲಿಂಗಾ ರೆಡ್ಡಿ :- ಅದು ಲಂಚದ ಪ್ರಶ್ನೆ ಅಲ್ಲ, ನನಗೆ ತಿಳಿದಮಟ್ಟಿಗೆ ಎರಡು ಫರ್ಲಾಂಗ್ ದೂರದಲ್ಲೇ ನನ್ನ ಮನೆ. ಒಳ್ಳೆಯ ವೈದ್ಯರಿಲ್ಲ ಅಲ್ಲಿ.

ಶ್ರೀ ಬಾಬುರಾವ್ ಚವಾಣ್ :- ಅಧ್ಯಕ್ಷರೇ ನಾನು ಲಂಚ ಅನ್ನಲಿಲ್ಲ ಲಕ್ಷ್ಯ ಅಂತ ಹೇಳಿದ್ದು.

ಶ್ರೀ ಎಚ್. ವಿಶ್ವನಾಥ್ :- ಈ ತರಹದ ಪ್ರಶ್ನೆ ಈ ತರದ ಉತ್ತರ ಹೌದೌದು, ನಡೀತಿದೆ, 24 ಗಂಟೇನೂ ಇದೆ ಅನ್ನೋದು. ಇದೇನು ಪ್ರಶ್ನೆ ಕೇಳಿರೋದು ಹುಚ್ಚರೋ ? ಪ್ರಶ್ನೆಗೆ ಉತ್ತರ ಬರೆದು ಕೊಟ್ಟೋರು ಹುಚ್ಚರೋ ? ಅಥವಾ ಪ್ರಶ್ನೆಗೆ ಉತ್ತರ ಹೇಳೋರು ಹುಚ್ಚರೋ ಗೊತ್ತಾಗ್ತಾ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ಹಾಗೆ ಕ್ಲಾರಿಫಿಕೇಶನ್ ಕೇಳೋರು ಹುಚ್ಚರೋ ಅಂತಾನೂ ಸೇರಿಸಿಕೊಳ್ಳಬೇಕಾಗುತ್ತದೆ. ನಿಮ್ಹಾನ್ಸ್ ಆಸ್ಪತ್ರೆ ಬಗ್ಗೆ ಸಾಕಷ್ಟು ಜನ ಶಾಸಕರು ಸರ್ಕಾರದ ಗಮನ ಸೆಳೆದಿದ್ದಾರೆ. ಪ್ರಮುಖವಾಗಿ ರೆಡ್ಡಿಯವರು ಶಿವರಾಮೇಗೌಡರು ಡಾ.ನಾಗಪ್ಪನವರು , ಶಿವರಾಮು ಅವರು. ಕರ್ನಾಟಕದಲ್ಲಿ ಇದೊಂದು ಪ್ರತಿಷ್ಠಿತ ಆಸ್ಪತ್ರೆ ದಕ್ಷಿಣ ರಾಜ್ಯಗಳಲ್ಲೇ ಒಂದಾದ ಆಸ್ಪತ್ರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಯೋಗದಿಂದ ನಡೆಯುತ್ತಿರುವ ಆಸ್ಪತ್ರೆ. ಈ ಆಸ್ಪತ್ರೆಯಲ್ಲಿ ತನ್ನದೇ ಆದ ನೀತಿಸಂಹಿತೆಯನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಸನ್ಮಾನ್ಯ ರೆಡ್ಡಿಯವರು ಮತ್ತು ನಾಗಪ್ಪನವರು ಹೇಳಿದಂತೆ ಈ ಆಸ್ಪತ್ರೆಗಳಿಗೆ ರೋಗಿಗಳ ಒತ್ತಡ ಇತ್ತೀಚಿನ ದಿನಗಳಲ್ಲಿ ಬಹಳ ಜಾಸ್ತಿಯಾಗಿದೆ. ಜನರಲ್ ಆಸ್ಪತ್ರೆಯಲ್ಲಿರೋಷ್ಟು ಜನವೇ ಅಲ್ಲಿದ್ದು ರೋಗಿಗಳಿಗೆ ಚಿಕಿತ್ಸೆ ಕೊಡುವುದಕ್ಕೆ ಸ್ವಲ್ಪ ಕಷ್ಟವಾಗಿದೆ ಅನ್ನೋದನ್ನು ಸರ್ಕಾರ ಗಮನಿಸಿದೆ. ಆದರೆ ಅಲ್ಲಿರುವ ಡಾಕ್ಟರ್ ಬೇರೆ ಕಡೆ ಕೆಲಸ ಮಾಡ್ತಾರೆ , ಇಲ್ಲಿ ಬಂದರೆ ಅಲಕ್ಷ್ಯ ಮಾಡ್ತಾರೆನ್ನುವ ಮಾತು ಈ ಆಸ್ಪತ್ರೆಗೆ ಸೀಮಿತಗೊಳಿಸಿ ನನಗೆ ಸಾಕಷ್ಟು ಸಮಾಧಾನ ತರಲಿಲ್ಲ ಅನ್ನೊದನ್ನು ಈ ಸಮಯದಲ್ಲಿ ಹೇಳುತ್ತೇನೆ. ಏಕೆಂದರೆ ಅಲ್ಲಿರುವವರು, ಬಹುತೇಕ ಹೊರರಾಜ್ಯದ ಡಾಕ್ಟರ್ ಇದ್ದಾರೆ. ನಮ್ಮ ರಾಜ್ಯದವರೂ ಇದ್ದಾರೆ. ಸ್ವಲ್ಪ ಶ್ರದ್ಧೆಯಿಂದ ಕೆಲಸ ಮಾಡುವ ವಾತಾವರಣ ಇವತ್ತು ಆ ಆಸ್ಪತ್ರೆಯಲ್ಲಿದೆ ಎಂದು ವೈಯಕ್ತಿಕವಾಗಿ ತಿಳಿದಿದ್ದೇನೆ

ಅಂತೂ ಒಂದು ನಿಜ, ಸ್ವಲ್ಪ ಮಟ್ಟಿಗೆ ಗುಂಪುಗಾರಿಕೆ ಆಲಕ್ಷ್ಯದ ಬಗ್ಗೆ ಗಮನಕ್ಕೆ ತಂದಿದ್ದಾರೆ. ಜಾಗೃತ ವ್ಯವಸ್ಥೆಯನ್ನು ಮಾಡುವ ಮೂಲಕ ಇರುವ ದೋಷವನ್ನು ಶೀಘ್ರದಲ್ಲಿಯೇ ಬಗೆಹರಿಸುವುದಕ್ಕೆ ಪ್ರಯತ್ನ ಮಾಡ್ತೇನೆ.

ಉಪಾಧ್ಯಕ್ಷಿಣಿಯವರು:-ಶ್ರೀ ನಜೀರ್ ಅಹಮದ್ - ನಿಮ್ಮ ಪ್ರಶ್ನೆ 864 ಇದನ್ನು ಮುಂದೆ ತಗೊಳ್ತೀನಿ. ಮಿನಿಸ್ಟ್ರಿಲ್ಲ. ಈಗ ಮೊದಲಿಂದ ತಗೋತೀನಿ.

ವಿಷಯ:ರಾಜ್ಯದಲ್ಲಿರುವ ಆಶ್ರಮ ಶಾಲೆಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 361 (2042)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ರವರ ಪರವಾಗಿ ಶ್ರೀ ಜಿ. ಎಸ್. ಆಚಾರ್ (ಬೈಂದೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಆಶ್ರಮ ಶಾಲೆಗಳು ಎಷ್ಟು ? ಇವುಗಳು ಕಾರ್ಯ ಮಾಡುತ್ತಿರುವ ಸ್ಥಳಗಳು ಮತ್ತು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದರೆ ಅಂತಹ ಶಾಲೆಗಳಿಗಾಗಿ ಖರ್ಚು ಮಾಡುತ್ತಿರುವ ಹಣ ಎಷ್ಟು ?

ಇ) ಈ ಶಾಲೆಗಳ ಸುಧಾರಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ?

ಈ) ದಕ್ಷಿಣ ಕನ್ನಡದಲ್ಲಿ ಇಂತಹ ಶಾಲೆಗಳು ಇವೆಯೇ ? ಇದ್ದರೆ ಎಲ್ಲೆಲ್ಲಿ ? ಅದಕ್ಕೆ ಖರ್ಚು ಮಾಡಿದ ಹಣವೆಷ್ಟು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖೆ ನಡೆಸುತ್ತಿರುವ ಆಶ್ರಮ ಶಾಲೆಗಳು ಸಂಖ್ಯೆ 62.
(ಪರಿಶಿಷ್ಟ ವರ್ಗದ ಮಕ್ಕಳಿಗಾಗಿ)
ಕಾರ್ಯ ಮಾಡುತ್ತಿರುವ ಸ್ಥಳ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಬಗ್ಗೆ ಪಟ್ಟಿ ಲಗತ್ತಿಸಲಾಗಿದೆ.
(ಅನುಬಂಧ-1)

ಆ) ಈ ಶಾಲೆಗಳನ್ನು ನಡೆಸಲು ಒಟ್ಟು 1,88,87,000-00 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ.

ಇ) ಆಶ್ರಮಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಗೆ ಮಾಸಿಕ 100 ರೂ.ಗಳನ್ನು ಊಟದ ವೆಚ್ಚಕ್ಕಾಗಿ ಖರ್ಚು ಮಾಡಲಾಗುತ್ತಿದೆ. ವಾರ್ಷಿಕ ಎರಡು ಜೊತೆ ಬಟ್ಟೆ, ಪಠ್ಯಪುಸ್ತಕ, ಲೇಖನಸಾಮಗ್ರಿ ಮತ್ತು ಆರೋಗ್ಯ ತಪಾಸಣೆ, ಬೋಧನ ಉಪಕರಣ ಮತ್ತು ಕ್ರೀಡಾ ಸಾಮಗ್ರಿಗಳನ್ನು ಒದಗಿಸಲಾಗುತ್ತಿದೆ.

ಈ) ಹೌದು - ಶಾಲೆಗಳು ನಡೆಯುತ್ತಿರುವ ಸ್ಥಳದ ಬಗ್ಗೆ ಪಟ್ಟಿ ಲಗತ್ತಿಸಲಾಗಿದೆ(ಅನುಬಂಧ-2) ಜನವರಿ 92ರ ಅಂತ್ಯದವರೆಗೆ ರೂ. 21.05 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಅನುಬಂಧ-1

ಪರಿಶಿಷ್ಟ ವರ್ಗಗಳ ಆಶ್ರಮಶಾಲೆಗಳ ಜಿಲ್ಲಾವಾರು ಪಟ್ಟಿ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಆಶ್ರಮಶಾಲೆಯ ಸ್ಥಳ	ಮಂಜೂರಾತಿ ಸಂಖ್ಯೆ
1	ಮೈಸೂರು	ಕೊಳ್ಳೇಗಾಲ	1) ಮಹದೇಶ್ವರ ಬೆಟ್ಟ	75
			2) ತಾಳಬೆಟ್ಟ	75

		3) ಗಾಣಿಗಮಂಗಲ	50
		4) ರಾಚಪ್ಪಾಜಿನಗರ	25
		5) ಬೈಲೂರು	50
		6) ಹಿರೆಯಬಾಲ	25
	ಹೆಚ್.ಡಿ.ಕೋಟೆ	7) ದಿಬ್ಬೂರು	100
		8) ಮಟ್ಟಕೆರೆ	50
		9) ಜಕ್ಕಳಿ (ಗುಂಡ್ರ)	50
		10) ವೆಂಜಹಳ್ಳಿ	75
	ಚಾಮರಾಜನಗರ	11) ರಂಗಸಂದ್ರ	100
		12) ಜೇದಗುಳಿ	50
		13) ಕೆಂಗುಡಿ	50
	ನಂಜನಗೂಡು	14) ನಾಗಣಾಪುರ	50
		15) ವೆಂಕಟಗಿರಿ (ಬಂಕಳ್ಳಿ)	50
	ಹುಣಸೂರು	16) ನೆಲ್ಲೂರುಪಾಲ	125
		17) ನೇರಳಕುಪ್ಪೆ	50
	ಗುಂಡ್ಲುಪೇಟೆ	18) ಮದ್ದೂರು	50
		19) ಬಂಡೀಪುರ	50
	ಪಿರಿಯಾಪಟ್ಟಣ	20) ಮುತ್ತೂರು	50
ಕೊಡಗು	ವಿರಾಜಪೇಟೆ	21) ಗೋಣಿಗಡ್ಡೆ	125
		22) ಮೇದನೂರು ಬೇಗೂರು	100
		23) ಕೊತ್ತೂರು	50
		24) ನಾಗರಹೊಳೆ	125
		25) ಮರೂರುತಿತಿಮತಿ	125
		26) ಜಾಗಿಬಳವನಹಳ್ಳಿ	50
	ಸೋಮವಾರಪೇಟೆ	27) ಆದಿನಾದೂರು	75
		28) ಬಸವನಹಳ್ಳಿ	75
		29) ಐಗೂರು ಸಜ್ಜನಹಳ್ಳಿ	50
		30) ವೂಳಂಬ	50
	ಮಡಿಕೇರಿ	31) ಕುದ್ರೆಪಾಯ	50
		32) ಕರಿಕೆ	50
ದಕ್ಷಿಣ ಕನ್ನಡ	ಉಡುಪಿ	33) ಉಡುಪಿ	125
		34) ಕುಡಪಡವು	50
		35) ಮಂಗಳೂರು	50
	ಮಂಗಳೂರು	36) ಧರ್ಮಸ್ಥಳ	100

			37) ನೆರಿಯಾ	100
		ಬೆಳ್ತಂಗಡಿ	38) ಸಾರ್ವೆ	75
			39) ಶಿಶಿಲ	50
		ಸೂಳ್ಯ	40) ಬಾಲಿಯಾ	50
			41) ಆಲಟ್ಟಿ	50
		ಸುಬ್ರಮಣ್ಯ	42) ಸುಬ್ರಮಣ್ಯ	50
		ಪುತ್ತೂರು	43) ಬಟನರಲ್	75
		ಕುಂದಾಪುರ	44) ಕುಂದಾಪುರ	75
		ಕಾರ್ಕ್ಕಳ	45) ಹೆಬ್ರಿ	50
			46) ದುರ್ಗಾ	50
			47) ಕಾರ್ಕಳ	75
4	ಶಿವಮೊಗ್ಗ	ಸಾಗರ	48) ಹಿರೇಮಣೆ	100
		ಚನ್ನಗಿರಿ	49) ಗೋಪನಾಳ	50
			50) ಸೊರಬ	
5	ಬೆಂಗಳೂರು(ಗ್ರಾ)	ರಾಮನಗರ	51) ಯರೇಹಳ್ಳಿ	75
			52) ಬಸವನಪುರ	25
		ಆನೇಕಲ್	53) ಭೂತನಹಳ್ಳಿ	50
		ಮಾಗಡಿ	54) ಮಾಗಡಿ	25
		ಕನಕಪುರ	55) ಸಾತನೂರು	50
6	ಚಿಕ್ಕಮಗಳೂರು	ಮೂಡಿಗೆರೆ	56) ಸಂಸ	50
			57) ಹೊಸಪುರ	50
			58) ಹೊರನಾಡು	50
		ಕೊಪ್ಪ	59) ಬಸರಿಕಟ್ಟೆ	50
		ಶೃಂಗೇರಿ	60) ನಮ್ಮೂರ	50
7	ವಿಜಾಪುರ	ಇಂಡಿ	61) ಇಂಡಿ	50
8	ಮಂಡ್ಯ	ಮಂಡ್ಯ	62) ಶಿವಾರ	50
			ಒಟ್ಟು	3900

ಅನುಬಂಧ - 2

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆಯುತ್ತಿರುವ ಆಶ್ರಮಶಾಲೆಗಳ ಸ್ಥಳ ಮತ್ತು ಮಕ್ಕಳ ಸಂಖ್ಯೆಯನ್ನು ಈ ಕೆಳಕಂಡಂತೆ ತೋರಿಸಿದೆ.

ತಾಲ್ಲೂಕು	ಸ್ಥಳ	ಮಂಜೂರಾತಿ ಸಂಖ್ಯೆ
ಉಡುಪಿ	1) ಉಡುಪಿ	125
	2) ಕುಜಪಡವು	50
ಬೆಂಗಳೂರು	3) ಮಂಗಳೂರು	50
ಬೆಳ್ತಂಗಡಿ	4) ಧರ್ಮಸ್ಥಳ	100
	5) ನೆರಿಯಾ	100
	6) ಸಾರ್ವಿ	75
	7) ಶಿಶಿಲ	50
ಸೂಳ್ಯ	8) ಬಾಲಿಯಾ	50
	9) ಆಲಟ್ಟಿ	50
	10) ಸುಬ್ರಮಣ್ಯ	50
ಪುತ್ತೂರು	11) ಒಟನರಲ್	75
ಕುಂದಾಪುರ	12) ಕುಂದಾಪುರ	75
ಕಾರ್ಕಳ	13) ಹೆಬ್ರಿ	50
	14) ದುರ್ಗಾ	50
	15) ಕಾರ್ಕಳ	75
	ಒಟ್ಟು	1025

ಶ್ರೀ ಜಿ. ಎಸ್. ಆಚಾರ್ (ಶ್ರೀ ಬಿ. ಎಂ. ಇದಿನಬ್ಬರ ಪರವಾಗಿ): ಈಗ ಇವಂತಹ 62 ಆಶ್ರಮ ಶಾಲೆಗಳಿಗೆ 1.88 ಕೋಟಿ 87 ಸಾವಿರ ಖರ್ಚಾಗುತ್ತಿದೆ. ಜಿಲ್ಲಾವಾರುಪಟ್ಟಿ ನೋಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳು ಜಾಸ್ತಿ ಇದ್ದು ಇನ್ನೂ ಹೆಚ್ಚಿಗೆ ಆಶ್ರಮ ಶಾಲೆಗಳನ್ನು ಮಾಡಲು ಅವಕಾಶ ಇದೆ. ಅದರಲ್ಲೂ ಕುಂದಾಪುರ ತಾಲೂಕಿನಲ್ಲಿ ಒಂದೇ ಆಶ್ರಮ ಶಾಲೆ ಇದೆ. ಇದೆಲ್ಲ ಪರಿಶೀಲಿಸಿ ಸರ್ಕಾರದವರು ಇನ್ನೂ ಹೆಚ್ಚಿಗೆ ಆಶ್ರಮ ಶಾಲೆ ಮಾಡುತ್ತಾರೆಯೇ ಅಂತ ಕೇಳ್ತಿದ್ದೀನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು, ಸಮಾಜ ಕಲ್ಯಾಣ ಮಂತ್ರಿಗಳ ಪರವಾಗಿ) :- ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗ ಹೊಸದಾಗಿ ಆಶ್ರಮ ಶಾಲೆಗಳನ್ನು ಮಾಡುವಂಥ ಪ್ರಶ್ನೆ ಇದಲ್ಲ. ಆದರೂ ಕೂಡ ಅಂಥ ಸೂಚನೆಗಳು ಬಂದರೆ ಅದನ್ನು ಪರಿಶೀಲನೆ ಮಾಡಬಹುದು.

ಉಪಾಧ್ಯಕ್ಷರು :- ಮಾನ್ಯ ಎಲ್. ಆರ್. ಶಿವರಾಮೇಗೌಡರು. ತಮ್ಮ ಪ್ರಶ್ನೆಗೆ ಮಂತ್ರಿಗಳು ಇಲ್ಲ, ಮುಂದೆ ತೆಗೆದುಕೊಳ್ಳೋಣ. 23ನೇ 24ನೇ ತಾರೀಖಿಗೆ ಅವರು ಬಂದ ಮೇಲೆ ತೆಗೆದುಕೊಳ್ಳೋಣ.

ವಿಷಯ :- ಮಂಡಲ ವರದಿಯ ಪ್ರಕಾರ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿಸಲಾದ ಜಾತಿಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 365 (1539)

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೇಂದ್ರ ಸರ್ಕಾರದವರು ನೇಮಿಸಿದ್ದ ಮಂಡಲ್ ವರದಿಯ ಪ್ರಕಾರ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಯಾವ ಯಾವ ಜಾತಿಗಳನ್ನು ಸೇರಿಸಲಾಗಿದೆ,

ಆ) ಮಂಡಲ ವರದಿಯ ಬಗ್ಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದ ಅಭಿಪ್ರಾಯ ಕುರಿತು ಪತ್ರವೇನಾದರೂ ಬಂದಿದೆಯೇ,

ಇ) ಬಂದಿದ್ದಲ್ಲಿ ಆ ಪತ್ರದ ಸಾರಾಂಶಗಳೇನು ?

ಶ್ರೀ ಬಿ. ಶಿವಣ್ಣ. (ಸಮಾಜ ಕಲ್ಯಾಣ ಸಚಿವರು)

ಅ) ಮಂಡಲ್ ವರದಿಯ ಪ್ರಕಾರ ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿಸಲಾಗಿರುವ ಜಾತಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ಆ) ಬಂದಿದೆ.

ಇ) ಮಂಡಲ್ ವರದಿಯನ್ನು ಅನುಷ್ಠಾನಗೊಳಿಸುವಲ್ಲಿ ಹಿಂದುಳಿದಿರುವಿಕೆಯನ್ನು ನಿರ್ಧರಿಸುವಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯವನ್ನು ಕೋರಲಾಗಿತ್ತು.

LIST OF BACKWARD CASTES INCLUDED IN MANDAL COMMISSION REPORT IN KARNATAKA

Sl. No.	Name of O.B.Cs.
1	Adiya (excluding Coorg Dist.)
2	Agasa, Madivala, Sakala, Sakalvadu, Shakala, Tsakala, Vannan, Dhobi, Parti,Rajaka.
3	Agahori, Karkarmunda.
4	Agnani.
5	Ambalakarma, Ambalakaran.
6	Andh.
7	Anduram.
8	Ansari, Julai (Muslims).
9	Aranadan.
10	Atar.
11	Atazri
12	Baagawan Tamboli (Muslims)
13	Badaga.
14	Bagalu.

16	Baira
17	Bailapatar, Bailaptar, Bikapatar.
18	Bairagi, Bava, Bavaji, Byragi, Bavani.
19	Bajania, Bajenia.
20	Bakadra
21	Balija, Balajiga, Naidu, Bogam Telaga, Telaga, Balaja, Setty Balaja, Kasban, Mannur, Munnur, Mutrasi, Matracha, Janapan, Balegara.
22	Balasanthoshi
23	Balasanthanam
24	Banna, Bannagar
25	Bant (excluding Belgaum, Bijapur Dharwar and North Kanara District)
26	Bantu
27	Barda
28	Bariki
29	Barjur
30	Bathal, Battal, Batler Battar
31	Bathini
32	Battada
33	Bavuri
34	Bawtar
35	Bazigar
36	Beda, Bedaru, Valimiki, Barki Bedar, Parivara, Bendar, Boya Bedar, Nayak Bedar Nayak, Naikomakkalu, Naikwadi, Palegar Romoehi, Talwar, Valmiki, Valmiki makkalu, Vedan.
37	Begari
38	Bellara
39	Behurupi
40	Berad (Bedar)
41	Beri (Muslims)
42	Beria .
43	Beshtar, Bunda-Bestar
44	Bhamta, Bhompta, Pradeshi, Bhampta, Bhamtra, Takar

Uchillian, Rajput Bhamta.
45 Bhoat, Bhatraju, Bhatraj, Bohrot.
46 Bhardi, Bharagi.
47 Bhavin.
48 Bhottadas, Boto Bhottada, Muria Bhottad,Sano Bhottada.
49 Bhumias-Bhuri-Bhumia and Bodo Bhumia.
50 Binapatta
51 Bindli
52 Bingi
53 Bissory, Barangi Jodia, Bennagi, Dadua, Frangi, Hollar, Jhoriya, Kollai, Konde, Paranga, Penga Jodia, Sodo and Takora.
54 Bogad-Bogadi, Bagodi, Bagadi, Bagdi, Bogodi.
55 Budbukk, Budbukdki, Budbukkala, Devari, Joshi, Burbock.
56 Byagari.
57 Chachati.
58 Chakrawadya Dasar.
59 Chamboti.
60 Cham Bukutti
61 Chandal.
62 Chapparband, Chapparbanda (Muslims).
63 Chaptegar, Chaptegara.
64 Chara, Chhar, Chhara.
65 Charodi, Mestha.
66 Chintala.
67 Chitrakathi-joshi.
68 Chitra, Chitrakar.
69 Chuhar or Chuhra.
70 Chunchar.
71 Dandasi.
72 Dang-Dasar.
73 Darzi (Hindu and Muslims), Bhavasar, Kshatriya Chippi, Chippiga, Simpi, Shimpi, Shiv Shimpi, Sai, Mirai, Rangari, Rangrez, Nilari, Namdev, Rangare, Neelagar.
74 Darvesa.
75 Dasari, Desri.

76 Davadiga, Devadigar, Moili, Moyili, Devadig, Devaili Sappaliga, Sheregar, Servegar, Suplig, Ambalatasi.
77 Devang, Challiyan, Chilliyan, Koshti, Hutgar, Jed, Winkar, Julahi, Hutkar, Hatgar.
78 Dhanka (Including Tadvi, Tetaria and Valvi.)
79 Dher.
80 Dhobi (Muslims)
81 Dhodia
82 Dholi
83 Digwan, Jinger.
84 Dombs-Audhiya, Dombs-Audiniya, Dombs-Christian, Dombs-Chanel, Dombs-Miragani, Dombs-Oriya, Dombs-Ponaka, Domns_Telaga, Dombs-Ummia.
85 Donga Yerukalas
86 Dombidasa.
87 Durgamurga-Burburchal
88 Easlija, Daavat.
89 Faqir (Muslims)
90 Gadaba, Gadabasboda, Gadaba-Cerilam, Gadaba-Franji, Gadaba Jodia, Gadaba Olaro, Gadaba Pangi.
91 Dandla, Teli.
92 Gangani, Gabit, Gabbit, Gapit, Gasbit.
93 Gangakule, Gangemakkalu, Gowrmihatha, Ambig, Ambiga, Kabbaliga, Kabbili, Kabber, Kabbera, Kharvi, Bhoyi, Boyi, Thoreya, Harakanthra, Harikanthra, Kahar, Meenagar, Kharia, Sunnagar, Siviyar, Bestha, Gangaatha, Gangaputra, Bhoi, Parivara, Eravva, Brudebestaru, Mogaveera.
94 Ganiga, Chakkam, Teli.
95 Ghadi.
96 Ghadsi, Ghadshi
97 Ghasi or Haddi, Relli, Sachandi, Ghasi, Boda Ghasi and Sanghasi.
98 Gatti.
99 Ghisadi
100 Ghondali, Gondaliga, Gondhali, Gondhalli.

101 Giddildki, Pingle, Pingale.
102 Godagali
103 Godari
104 Gogra
105 Golla, Gouli, Gopal, Yadava Asthana Golla, Yadava, Adavi Golla, Gopala, Gopali, Hanabaru, Krishna Golla, Anubaru, Atanaburu, Hanbar. Hanabar, Dudhigola.
106 Gondi-Modya Gond and Rajagond.
107 Gondus-Bato, Bhirithya, Dudho, Kouria, Hato Jatako and Joria
108 Gondali
109 Goniga, Sadusetty
110 Gosavi, Gosayi, Gosain, Atit.
111 Gudigar
112 Gujar, Guzar (Masons)
113 Gurav, Gurov, Tambli, Tamballa, Gurava, Gurout, Gurrat
114 Halawakki, Wakkal, Vakkal, Gram Vakkal, Gam-Gowda, Gam-Gawada, Gvada, Karevakkal, Kunchavakal, Attevakkal, Shilwakkal, Halakkivakkal.
115 Hallfee
116 Handevazir
117 Handervut
118 Haranshikari, Chigaribetegar, Vaghri, Wagiri, Nirshikari Bagri, Baori, Phasachari, Vagri.
119 Helava.
120 Hill Reddi
121 Holeva.
122 Holya, Helava, Helavamalkur, Helavagolla, Handihelava, Pitchiguntalu, Helvaru.
123 Honniyar
124 Hovadiga, Hugar, Hoogar, Mallgar, Mali, Phoolmali, Phulmali, Phulari, PholeJeer.
125 Howgar, Hawagar, Howadi
126 LLiga, Halepaik, Billave Devar, Malayali-Billave Deevar,

Idiga-Kalal, Diviga, Eliga, Kommarpaik

127 Jadapus

128 Jaggal

129 Jatapus

130 Javeri, Jawari, Johari

131 Jogi, Jogar, Sanjogi, Joger, Sanyasi

132 Kadan

133 Kadar

134 Kadu-Konkani

135 Kalloda

136 Kamati, Kanian

137 Kammara (excluding kollegal taluk of Mysore Dist)

138 Kanate

139 Kanbi, Kulwadi, kunbi

140 Kanjar, Kanjari, Kanjir, Khanjarbhat.

141 Kanisan, Kanyan (excluding kollegal taluk of Mysore Dist)., Kaniyar.

142 Kapumaries

143 Karikudumbi

144 Karimpalan

145 Karuve

146 Kasai, Katik, Khatik, Katuka, Katuga, Kasab, Aray, Kulal

147 Kasar, Kansar, Kancheri, Kanchara, Kanchugara, Bogar

148 Kasbin

149 Kashikappi, Kashi Kapadi Tirumali.

150 Katabu, Katabar

151 Karipaula

152 Kavadi

153 Kavatiyan

154 Kelkari, Khelkari

155 Khond.

156 Kichagara

157 Kodalo

158 Kodu

160 Kolayiri, Kolari
161 Koli Mahadeo
162 Kolla, Kollaha
163 Kolthati, Kolhatigi
164 Komakpu
165 Kommar.
166 Kond (kuli)
167 Konda Dhora, konda Reddis
168 Kondh, Desaya, Kondhs, Dongria, Kondhs, Kuttiya, Kondhs, Tikiria
169 Konga, Kongadi
170 Konkna Yenity
171 Kaikadi, Koragar, Yerkala, Eraksla, Kunchi, Koerva, Koramasetty, Yerukala.
172 Kosalya Goudus, Bosothoria, Goudus, Chitti Goudus, Dangayath Goudus, Dodukamariya, Dodukamaro, Adiya Goudus & Pullosariya Godus.
173 Kotari, Kottari
174 Kotekshatriya.
175 Kotia-Bartika, Benthooriya, Dhulia or Dulia, Holva paiko, Putiya, Sanrona and Sidho Paiko
176 Koyava
177 Kudubi, Kudubi-koyi
178 Kubara, Kummara, Khumbhar, Kambhar, Kulala, Kulalar, Moolya, Kusavan
179 Kunchi Korwa
180 Kurichchan
181 Kuraban, Kurumban, Kurumba, Hulumatha, Dhangar Bharwad, Gorava.
182 Kurma, Kurmi
183 Kutuma
184 Kuruva, Kurub, Kurab, Kurubar.
185 Ladar, Lad Ladaru, Yelegar.
186 Lippara.
187 Lingayat Sections namely Shimpi, Shivashimpi, Neelagar,

Koshti, Hatagar, Jeda, Bilijeda, Neygi, Kurunhinashetty, Bilimagga, Nayinda, Navi, Kshonrada, Kelsasi, Hadapad, Nadig, Mangala, Kummar, Badagi, Agasa, Modivala, Rajake, Gurav, Tambli, Kumbar, Kambhar Kulal, Banagar, Nagalika, Gowli, (Cowherd), Hugar, Jeer, Malagar, Teligar, Pujar, Mathpatis amongst Jangams, Ganigar, Shuddashiva Shivarechka, Jhammadi.

188 Lonari

189 Magatha Goudus, Bernia-Goudus, Boodo Magatha, Dongayath Goudu, Lady Goudu Pona Magatha and Sana Magatha.

190 Mahasari.

191 Maidhasi

192 Malis, Korchiamalis, Paiko Malis and Pedda Malis

193 Maniyani, Muniyani

194 Manna Dhora

195 Mannan

196 Marayan, Maravanr

197 Marta

198 Marathi (excluding South Kanara Dist)

199 Masaniayogi

200 Medara, Medari, Burud, Gauriga, Medara.

201 Mitha Ayyalvar

202 Modiga, Modikara, Modikar

203 Mondiwar, Mondi waru

204 Modugar or Muduvan

205 Mudhar

206 Mukha Dhora or Nooka-Dhora

207 Mukkavan

208 Muliya, Murja

209 Murrari

210 Nadafs, Ladafs, Dhuya, Mansuri, Pinjar or Pinjari (Muslims)

211 Nadora, Nadar, Uppunador, Troke Nador.

212 Nat, Natuva.

213 Nalki

214 Nalband (Muslims)

215 Nandiwala, Fullmali
216 Nathpanthi, Dauri Gosavi
217 Nav-Buddhists, Neo-Buddhists
218 Nayinda, Nyanaja Kshatriya, Hajjam Nhavi, Nadig Ambettan Managala, Kelasi, Kshowrad, Kshihowrik, Chouriya, Navaliga Napithe, Bhandari.
219 Nelakanavaru.
220 Neygi, Kuruhinashetti, Bilimagga, Thogata, Soniga, Jamkhana, Ayiri, Avir, Sale, Saale, Kaikolan Neikar, Jadar, Jandra Swakulasale.
221 Ostha.
222 Otari
223 Pancha Bhotla. Pacha Botla
224 Padampari
225 Padamsali-Margude, Setty, Devanga.
226 Padatti
227 Padia, Padiyar
228 Padit
229 Pagadai
230 Paigarapu
231 Painda
232 Paky
233 Palasi
234 Palli
235 Pamidi
236 Pamula
237 Panaba
238 Panan
239 Panasa, Panssa
240 Pandaram, Pandar, Pandara
241 Pan Devakulan
242 Panika, Panikkar
243 Papmelara Konkani
244 Parudhan
245 Pasi

246 Patra
247 Patramela
248 Patavekari, Pategar, Pattegar.
249 Pentia
250 Pichati, Pichari
251 Pindaras or Pendaris (Muslims)
252 Pincgunta, Picchiguntala, Pichuguntala
253 Pomla
254 Porjas, Bondas, Daruva, Didua, Mundili, Pengu, Pund and Saliya
255 Poroja-Boda Poroja, Sadia Poroja, Sano Poroja, Joddi Poroja and Parenga Poroja.
256 Powara
257 Pulayan.
258 Pullavan
259 Puthirai Vannan
260 Qureshi (Kassab) Muslims
261 Rajapuri, Rajpur, Balavalikar.
262 Rajput
263 Raval, Ravalia Raul.
264 Rawat, Raya, Rewath.
265 Reddi Dhora.
266 Reinudas
267 Relli Orsachandi
268 Rona
269 Sadajoshi
270 Sangari
271 Santal
272 Saniyar
273 Sansi
274 Sansia
275 Saora
276 Sare
277 Sarodi, Saroda
278 Sarania

279 Satarkar
280 Satani, Chattada, Srivaishnava.
281 Savarsa, Kapusavara, Khuttosavara, Maliya Savar
282 Seerithi Goudu
283 Semman
284 Shanan
285 Shingdav or Shingadya
286 Shikkaligar of Sikkaligar
287 Sholagar
288 Sindhor
289 Sochi
290 Soliga
291 Sonar, Arya (Koli)
292 Sore
293 Sunna, Sunnai
294 Surava
295 Sudir, Sudra
296 Sutsali
297 Sweepers (Muslims)
298 S.C. (Converted to Christianity)
299 Tachavire
300 Takankar
301 Takaras (Muslims)
302 Talavia
303 Telaga
304 Teruvan, Chillya
305 Thottia-Naicks
306 Thotewadu
307 Tigala, Thigala, Tigaler, Vannikula Kshatriya, Shanbhukula Kshatriya, Dharmaraja, Kapu Kuravean, Pallai Agnikula Kshatriya
308 Tilari, Tirali
309 Tilvi
310 Timali
311 [illegible]

312 Turi
313 Uppaliga Settey-Reey
314 Uppara, Uppear, Uppiliyan, Beldar, Sagara, Chunar, Gavandi, Govandi, Govadi, Goundi, Melusakkare.
315 Vadi
316 Vaidu
317 Vajluthedan
318 Valayar
319 Valvai
320 Vathiriyan
321 Vasudev
322 Vettuvan
323 Vir, Veer, Veeramasti
324 Vishwa Brhman, Sarpa, Daivagnya-Brahman, Kammar, Ausala, Kammalan, Kamsal, Kamsala, Panchal, Panchala, Sutar, Badagi, Badiwadli, Soni, Pattar, Gejjigar, Silipi
325 Veishwakarma - Luhar, Akkasale, Achari, Sivachar, Ahru
326 Vitholia
327 Vokkaliga (Rural Areas only)
328 Yandi.
329 Yeklar, Yaklar, Yekkali, Egalika
330 Yeralu
331 Yeragolawad or Thella Pamalwada
332 Yenadiwaos
333 Zaragars (Muslims)

ಶ್ರೀ ಎಂ. ವಿ. ವೆಂಕಟಪ್ಪ :-ಮಾನ್ಯ ಉಪಾಧ್ಯಕ್ಷಿಣಿಯವರೇ, ತಮ್ಮ ಉತ್ತರದಲ್ಲಿ ಮಂಡಲ್ ವರದಿಯನ್ನು ಅನುಷ್ಠಾನಗೊಳಿಸುವಲ್ಲಿ ಹಿಂದುಳಿದಿರುವಿಕೆಯನ್ನು ನಿರ್ಧರಿಸುವಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ರಾಜ್ಯ ಸರ್ಕಾರದ ಅಭಿಪ್ರಾಯಗಳನ್ನು ಕೋರಲಾಗಿತ್ತು ಎಂದು ಹೇಳಿದ್ದೀರಿ. ಅದಕ್ಕೆ ರಾಜ್ಯ ಸರ್ಕಾರದವರು ಏನು ಉತ್ತರವನ್ನು ಕೊಟ್ಟಿದ್ದಾರೆ ಸ್ವಾಮಿ.

ಶ್ರೀ ಎಂ. ವೀರಪ್ಪ ಮೊಯಿಲಿ (ಸಮಾಜ ಕಲ್ಯಾಣ ಮಂತ್ರಿಗಳ ಪರವಾಗಿ):- ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಅವರು ಕೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಅಭಿಪ್ರಾಯವನ್ನು ಒದಗಿಸಿದ್ದಾರೆ.

ಶ್ರೀ ಎಂ. ವಿ. ವೆಂಕಟಪ್ಪ :- ಎರಡನೆಯ ಪ್ರಶ್ನೆ,, ಮಂಡಲ ಕಮೀಷನ್ ರಿಪೋರ್ಟ್‌ನಲ್ಲಿ ನಮ್ಮ ಕರ್ನಾಟಕದಲ್ಲಿ 333 ಜಾತಿಗಳನ್ನು ಮಂಡಲ ಕಮೀಷನರ್‌ರವರು ಓಬಿಸಿ ಎಂದು ಮಾಡಿದ್ದಾರೆ. Other Backward class ಎಂದು. ನಾಳೆ ನಮ್ಮ ಸ್ಟೇಟ್‌ನಲ್ಲಿ ಬ್ಯಾಕ್‌ವರ್ಡ್‌ಕ್ಲಾಸಸ್ ಕಮೀಷನ್ ಮಾಡಿದರೆ.

ಅವರು ಈ ಜಾತಿಗಳನ್ನು ವಿಂಗಡಣೆ ಮಾಡುವಾಗ ಮಂಡಲ ಕಮೀಷನ್ ರಿಪೋರ್ಟ್‌ನಲ್ಲಿ ಏನು ಇತ್ತೋ ಅದೇ ಪ್ರಕಾರ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಕೇಂದ್ರಸರ್ಕಾರಕ್ಕೆ ಒಂದು ಉದಾಹರಣೆಗೆ ಒಕ್ಕಲಿಗ ಆಗಲೀ ಅಥವಾ ಬೇರೆ ಬ್ಯಾಕ್‌ವರ್ಡ್‌ಕ್ಲಾಸಸ್ ಯಾವುದೇ ಒಂದು ಜಾತಿಯಾಗಲಿ, ಸೆಂಟ್ರಲ್ ಗೌರ್‍ನಮೆಂಟ್‌ನವರು ಮಂಡಲ ಕಮೀಷನ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್ ಅಂಥ ಅವರುಗಳ ಕ್ಯಾಟಗರಿಯಲ್ಲಿ ಸೇರಿಸಿರುತ್ತಾರೆ. ಇದನ್ನು ನೀವು ಕರ್ನಾಟಕದಲ್ಲಿ ಫಾರ್‌ವರ್ಡ್ ಕ್ಲಾಸ್ ಎಂದು ಮಾಡುವುದಕ್ಕಾಗುವುದಿಲ್ಲ ಅದಕ್ಕೋಸ್ಕರ ಅಂಥದ್ದು ಏನಾದರೂ ಬಂದಾಗ ಅಲ್ಲಿ ಮಂಡಲ ಕಮೀಷನ್ ರವರು ಏನು ಹೇಳಿದ್ದಾರೋ, ಅದನ್ನು ತಾವು ಫಾಲೋ ಮಾಡುತ್ತೀರಾತಾನೇ?

ಶ್ರೀ ಎಂ. ವೀರಪ್ಪ ಮೊಯಿಲಿ :- ಕೇಂದ್ರ ಸರ್ಕಾರದ ಉದ್ಯೋಗಗಳಿಗೆ ಸೀಮಿತವಾಗಿ ಒಂದು ಮಾಹಿತಿಯನ್ನು ಮಂಡಲ ಆಯೋಗದವರು ಅನುಷ್ಠಾನ ಮಾಡಿದ್ದಾರೆ. ಈಗ ನಮ್ಮಲ್ಲಿ ನ್ಯಾಯಮೂರ್ತಿಗಳಾದಂಥ ಓ. ಚಿನ್ನಪ್ಪರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಒಂದು ಕಮೀಷನ್ ಆಗಿದೆ. ತಮಗೆ ಗೊತ್ತಿರುವ ಪ್ರಕಾರ ಈ ಮೀಸಲಾತಿ ಪ್ರಮಾಣ ಹಿಂದುಳಿದವರಿಗೆ ಮತ್ತು ಯಾವ ವರ್ಗದವರಿಗೆ ಕೊಡಬೇಕೊ ಅದು ಅಲ್ಲಿ ಕೇಂದ್ರ ಸರ್ಕಾರ ಮಂಡಲ ಸಮಿತಿಯಲ್ಲಿ ಕೊಟ್ಟಂಥ ಪ್ರಮಾಣಕ್ಕೂ ಇಲ್ಲಿನ ಪ್ರಮಾಣಕ್ಕೂ ಹೆಚ್ಚು ಕಡಿಮೆ ಆಗಬಹುದು, ಅಷ್ಟೇ ಪ್ರಮಾಣ ಎಂದು ಹೇಳಲಿಕ್ಕೆ ಆಗದು. ಏಕೆಂದರೆ 27 ಪರ್‌ಸೆಂಟ್‌ನ ಅಲ್ಲಿ ಕೊಟ್ಟಿದ್ದು. ಇಲ್ಲಿ 27 ಪರ್‌ಸೆಂಟ್‌ಗೆ ಸೀಮಿತಗೊಳಿಸಬೇಕಾದಂಥ ಅವಶ್ಯಕತೆ ಇಲ್ಲ. ಆದುದರಿಂದ ಅದಕ್ಕೆ ಮಂಡಲದ ಪ್ಯಾರಾಮೀಟರ್ಸ್ ಕಟ್ಟುಪಾಡು ಆಗಲಿಕ್ಕಿಲ್ಲ. ಇಲ್ಲಿ ಆಯಾ ಒಂದು ಪ್ರದೇಶಕ್ಕೆ ಅನುಸಾರವಾಗಿ ಅದು ಚಿನ್ನಪ್ಪರೆಡ್ಡಿಯವರ ಕಮೀಷನ್ ಏನು ಇದೆ. ಆ ಆಧಾರದ ಮೇಲೆ ಮಂಡಲ ಕಮೀಷನ್‌ನಲ್ಲಿ ಇರತಕ್ಕಂಥ ಕೆಲವು ಸತ್ವಗಳನ್ನೂ ಕೂಡ ಕ್ಯಾಬಿನೆಟ್ ಅಥವಾ ಸರ್ಕಾರ ಅದನ್ನು ಗಮನಿಸಬಹುದೇ ಹೊರತು, ಪ್ರಮುಖವಾಗಿ ಆ ಚಿನ್ನಪ್ಪರೆಡ್ಡಿ ಕಮೀಷನ್ ಏನು ಇದೆ, ಅದರ ಬಗ್ಗೆ ಈಗಾಗಲೇ ಕ್ಯಾಬಿನೆಟ್ ಸಬ್ ಕಮಿಟಿ ಅಧ್ಯಯನ ಮಾಡುತ್ತಿದೆ, ಅದನ್ನು ಅಧ್ಯಯನ ಮಾಡಿಕೊಂಡು ಬಹುಶಃ ಚಿನ್ನಪ್ಪರೆಡ್ಡಿ ಕಮೀಷನ್‌ನ ಆಧಾರದ ಮೇಲೆ ಏನು ನಿರ್ಣಯವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬಹುದು. ಪ್ರಮುಖವಾದ ಆಧಾರ. ಮಂಡಲ ಕಮೀಷನ್ ರೆಕಮೆಂಡೇಷನ್ ಕೂಡ It may influence or it may not influence the implementation of Backward Classes Report in Karnataka. . . .

ಶ್ರೀ ಎಂ. ವಿ. ವೆಂಕಟಪ್ಪ :-ಮಾನ್ಯ ಉಪಾಧ್ಯಕ್ಷಿಣಿಯವರೇ, ನನ್ನ ಪ್ರಶ್ನೆ ಏನೆಂದರೆ ಮಂಡಲ ಕಮೀಷನ್ ಪ್ರಕಾರ 333 ಜಾತಿಗಳನ್ನು ಸೆಂಟ್ರಲ್ ಗೌರ್‍ನಮೆಂಟ್ ಎಂಪ್ಲಾಯ್‌ಮೆಂಟಿಗೆ ತೆಗೆದುಕೊಳ್ಳಬೇಕಾಗಿದ್ದರೆ ಆ ಒಂದು ಆಧಾರದಮೇಲೆ ಅವರು ಸೆಲೆಕ್ಟ್ ಮಾಡುತ್ತಾರೆ. ಅದೇ ಜಾತಿಗಳನ್ನು ನೀವು ಇಲ್ಲಿ ಫಾರ್‌ವರ್ಡ್ ಎಂದು ಹೇಗೆ ಮಾಡುತ್ತೀರಿ ? ನಾಳೆ ಕೋರ್ಟಿಗೆ ಹೋಗುತ್ತಾರೆ. ಸುಪ್ರೀಂ ಕೋರ್ಟಿಗೆ ಹೋಗಬಹುದು. ಸುಪ್ರೀಂ ಕೋರ್ಟ್‌ಗೆ ಹೋಗುವ ಛಾನ್ಸ್ ಇರುತ್ತದೆ. ಅವರು ಮಾಡಿರುವುದು ಸೆಂಟ್ರಲ್ ಗೌರ್‍ನಮೆಂಟ್ ಎಂಪ್ಲಾಯ್‌ಮೆಂಟ್‌ಗೆ ಎಂದು ಇಟ್ಟುಕೊಳ್ಳೋಣ ಅವರು ವೇರಿಯಸ್ ಫ್ಯಾಕ್ಟರೀಸ್ ಲೈಕ್ ಬಿಇಎಲ್, ಹೆಚ್.ಎಂ.ಟಿ. ಅವೆಲ್ಲಾ ಇದೆಯೆಲ್ಲಾ, ಅವರು ಮಾಡಿದಾಗ ನೀವು ಅದೇ ಜಾತಿಯನ್ನು ನೀವು ಫಾರ್‌ವರ್ಡ್ ಎಂದು ಹೇಳಿದರೆ ಹೇಗೆ ಮಾಡುವುದಕ್ಕಾಗುತ್ತದೆ ? ನಾಳೆ ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಹೋಗಿ ಅದನ್ನು ಹೊಡೆಸಿಹಾಕುತ್ತಾರೆ. ಅದಕ್ಕೋಸ್ಕರ ದಯವಿಟ್ಟು ಅದನ್ನು ನೀವು ಪುನರ್ ಆಲೋಚನೆ ಮಾಡಿ ಚಿನ್ನಪ್ಪ ರೆಡ್ಡಿ ಕಮೀಷನ್ ಆದರೂ ಮಾಡಿ, ಏನಾದರೂ ಮಾಡಿ. we have no objection ಲಾಸ್ಟ್ ಟೈಮ್ ಒಂದು ಸಲ ಇದೇ ಸಭೆಯಲ್ಲಿ ಮಾನ್ಯ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಮಂಡಲ ಕಮೀಷನ್ ರಿಪೋರ್ಟ್‌ನಲ್ಲಿ ಯಾವ ಯಾವ ಜಾತಿಯಗಳನ್ನು ಸೇರಿಸಿದ್ದಾರೋ ಅದರ್ ಬ್ಯಾಕ್‌ವರ್ಡ್ ಕ್ಲಾಸಸ್ ಎಂದು (ಒಬಿಸಿ) ಅಂಥ ಜಾತಿಗಳನ್ನು ನಾವು ಕೂಡ ಬ್ಯಾಕ್‌ವರ್ಡ್ ಕ್ಲಾಸಸ್ ಎಂದು ಕರೆಯುತ್ತೇವೆ ಎಂದು ಅವರು ಹೇಳಿದ್ದಾರೆ. ಪ್ರೊಸೀಡಿಂಗ್ಸ್‌ನ್ನು ತಾವು ದಯವಿಟ್ಟು ತೆಗೆಸಿ ನೋಡಿ. ಅದನ್ನು ಕೂಲಂಕುಷವಾಗಿ ಆಲೋಚನೆ

ಮಾಡಿ ಆಮೇಲೆ ಮಾಡಬೇಕು ಎಂದು ನನ್ನ ಪ್ರಶ್ನೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೆ, ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿಯವರ ವರದಿಯ ಶಿಫಾರಸ್ಸನ್ನು ನಾವು ಇನ್ನು ಅನುಷ್ಠಾನ ಮಾಡಿಲ್ಲ. ಅದು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಇದೆ. ಕ್ಯಾಟಗರಿ 1-2-3 ಅಂತ ಹೇಳಿ ಕ್ಲಾಸಿಫೈ ಮಾಡಿದೆ. ಆ ಪ್ರಕಾರ ಶಿಫಾರಸ್ಸು ಅವರು ಕೊಟ್ಟಿದ್ದಾರೆ. ಆ ಶಿಫಾರಸ್ಸಿನ ಮೇಲೆ ಸರ್ಕಾರದ ನಿರ್ಣಯ ನಾವು ಮಾಡಿಲ್ಲ. ಆ ಶಿಫಾರಸ್ಸು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದಿದೆ ತಾವೇನು ಈ ವಿಚಾರಗಳನ್ನು ಹೇಳಿದ್ದೀರಿ, ಆ ವಿಚಾರಗಳು ಕ್ಯಾಬಿನೆಟ್ ಸಬ್ ಕಮಿಟಿ ತನ್ನ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವಾಗ ಆಲೋಚನೆ ಮಾಡುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ವರದಿಯ ಶಿಫಾರಸ್ಸನ್ನು ತಾವೇ ಕ್ಯಾಬಿನೆಟ್ ಸಬ್ ಕಮಿಟಿಯ ಮುಂದೆ ಇದೆ ಎಂದು ಹೇಳುತ್ತೀರಿ ? ಮಾನ್ಯ ವೀರೇಂದ್ರ ಪಾಟೀಲರವರ ಸರ್ಕಾರ ಇದ್ದಾಗ ಚಿನ್ನಪ್ಪರೆಡ್ಡಿ ಆಯೋಗದ ವರದಿ ಕೊಟ್ಟಿರತಕ್ಕದ್ದು. ಅದನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳಿದಾಗ ಇಡೀ ರಾಜ್ಯದಲ್ಲಿ ಅದರ ಬಗ್ಗೆ ನಾವೆಲ್ಲರೂ ಸಹಿತ ಇದನ್ನು ಪರಿಶೀಲನೆ ಸರ್ಕಾರ ಮಾಡಬೇಕು ಅನ್ನತಕ್ಕ ಮಾತನ್ನು ಹೇಳಿದ್ದೇವೆ. ಈಗ ಅದು ಏನು ಕ್ಯಾಬಿನೆಟ್ ಸಬ್ ಕಮಿಟಿಯ ಮುಂದಿದೆ. ಈಗಲೂ ನಾನು ವಿನಂತಿ ಮಾಡುತ್ತೇನೆ. ಅದನ್ನು ಮರುಪರಿಶೀಲನೆ ಮಾಡಿ ಎಲ್ಲರಿಗೂ ಸಹಿತ ಸರಿ ಹೊಂದಿಸಿ ತಾವು ಈಚೆಗೆ ತರಬೇಕೇ ಹೊರತು ಇಲ್ಲದೇ ಹೋದರೆ ತಿರುಗ ಮತ್ತೆ ಇಡೀ ರಾಜ್ಯದಲ್ಲಿ ಅದಕ್ಕೆ ವಿರೋಧ ಮಾಡತಕ್ಕದ್ದು ದೂರ ಇಲ್ಲ ಎನ್ನುವುದನ್ನು ಸರ್ಕಾರ ತಿಳಿದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷಿಣಿಯವರೆ, ನನಗೂ ಗೊತ್ತಿದೆ ಸನ್ಮಾನ್ಯ ವೀರೇಂದ್ರ ಪಾಟೀಲರು ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಆಗಾಗ ಕಮೀಷನ್ ಮಾಡುವ ಉದ್ದೇಶ ಏನಿದೆ ಅಂದರೆ ಒಂದು ಕಮೀಷನ್ ಮಾಡಿದಮೇಲೆ ಅದರ ಮೇಲೆ ವಿಶ್ವಾಸ ಇಡಬೇಕಾಗುತ್ತದೆ. ಇಲ್ಲದಿದ್ದರೆ ಯಾರು ಮುಂದೆ ಕಮೀಷನ್ ಅಧ್ಯಕ್ಷರಾಗಿರಲಿಕ್ಕೆ ಮುಂದೆ ಬರಲಿಕ್ಕೆ ಇಲ್ಲ. ಏಕೆಂದರೆ ವೆಂಕಟಸ್ವಾಮಿ ಕಮೀಷನ್ ಮಾಡಿದ್ದು ಅದನ್ನು ನಾವು ರದ್ದು ಮಾಡಿದ್ದೇವೆ. ಚಿನ್ನಪ್ಪರೆಡ್ಡಿಯವರ ವರದಿ ಈಗ ಮುಂದೆ ಇದೆ. ತಾವು ಹೇಳತಕ್ಕಂಥ ಸಾಧಕ ಬಾಧಕಗಳನ್ನು ಕ್ಯಾಬಿನೆಟ್ ಸಬ್ ಕಮಿಟಿ ಅದನ್ನು ಪರಿಶೀಲಿಸಿ ನೋಡಿ ಚಿನ್ನಪ್ಪ ರೆಡ್ಡಿ ಕಮೀಷನ್ ವರದಿ ನಮ್ಮ ಮುಂದೆ ಇದೆ. ಅವರು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿದ್ದವರು ಅತ್ಯಂತ ಅನುಭವ ಇದ್ದವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಮುಂದೆ ಇಟ್ಟುಕೊಂಡು ಅದರ ಸಾಧಕಬಾಧಕಗಳನ್ನು ನೋಡಬೇಕು. ತಾವು ಇನ್ನು ಬೇಕಾದರೂ ಸೂಚನೆಗಳನ್ನು ಕೊಡಬಹುದು. ಮಂಡಲ್ ಸಮಿತಿಗಿಂತಲೂ ನಮ್ಮ ಕರ್ನಾಟಕದಲ್ಲಿ ಹಿಂದುಳಿದ ವರ್ಗದವರ ಬಗ್ಗೆ ಇನ್ನೂ ಹೆಚ್ಚಿನ ಮೈಲಿಗಲ್ಲನ್ನು ನಾವು ಸ್ಥಾಪನೆ ಮಾಡಿದ್ದೇವೆ. There willnot be any conflict. After all lit is a process. Manda! Commission with regard to the Government of India, it is only a small step in that direction. But we have taken so amny steps in that direction. ಕೇಂದ್ರ ಸರ್ಕಾರ ಕೂಡ ಮಂಡಲ್ ಕಮೀಷನ್ ಆಯೋಗ ಅನುಷ್ಠಾನ ಮಾಡುವಾಗ I think many of the parameters of Chinnappa Reddy Commission had been accepted. Whatever practice which has been practiced in Karnataka has been by and large the basis for consideration before the Government of India also.

ಶ್ರೀ ಬಿ. ಶಿವರಾಮು :- ಸ್ಟೇ ತರದ ಹಾಗೆ ಮಾಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಜನ ಬೀದಿಗೆ ಇಳಿಯದ ಹಾಗೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಅಧ್ಯಕ್ಷರೇ, ಇದು ಬೀದಿಗಿಳಿದು ಮಾಡುವುದಲ್ಲ. ಎಲ್ಲರಿದೂ ಅನುಕೂಲವಾಗತಕ್ಕದ್ದು. ಸಮಾಜದಲ್ಲಿ ಎಲ್ಲರೂ ಹಿಂದುಳಿದವರು. ಒಂದು ನದಿಗೆ ಅನೇಕ ಉಪನದಿಗಳು ಸೇರಿಯೇ ನದಿಯಾಗುವುದು. ಉಪನದಿಗಳು ಇಲ್ಲದಿದ್ದರೆ ನದಿಯಾಗುವುದಿಲ್ಲ. ಆದರೆ ಈ ಉಪನದಿಗಳು ಸಣ್ಣ ಸಣ್ಣ ತೊರೆಗಳು ಬತ್ತಿ ಹೋದರೆ ನಿಮ್ಮ ನದಿ ದೊಡದಾಗುವುದಿಲ್ಲ. ರಾಷ್ಟ್ರದ ಮೂಲ ಪ್ರವಾಹ ಅದು. ಸಂಪನ್ನ ಆಗಬೇಕಾದರೆ ಎಲ್ಲಾ ಸಣ್ಣ ಜಾತಿಯವರು ಈ ಮೂಲ ಪ್ರವಾಹಕ್ಕೆ ಸೇರಲೇಬೇಕಾಗುತ್ತದೆ. ಸೇರಬೇಕಾದರೆ ಎಡರುತೊಡರು, ಮಧ್ಯೆ ಕಲ್ಲು ಬಂಡೆ ಇದ್ದರೆ ಅದನ್ನೆಲ್ಲಾ ಸರಿಮಾಡಿ ಆಮೇಲೆ ಡ್ಯಾಮ್ ಕಟ್ಟಬೇಕು. ನಿಮ್ಮ ಡ್ಯಾಮ್‌ಗೆ ನೀರೇ ಇರುವುದಿಲ್ಲ. ಉಪನದಿಗಳು ತೊರೆ ಮತ್ತೊಂದು ಸೇರದಿದ್ದರೆ ನಿಮ್ಮ ಡ್ಯಾಮ್‌ಗೆ ನೀರೇ ಇರುವುದಿಲ್ಲ. ಆ ರೀತಿ ಆಗಬಾರದು. ದೇಶದಲ್ಲಿ ಡ್ಯಾಮ್‌ಗಳಿಗೆ ನೀರು ತುಂಬಬೇಕು ಆಗ ಸಂಪತ್ತು ಬರುತ್ತದೆ. ಇಲ್ಲ ಬರೀ ನಾವು ಕಬಿನಿ ನದಿ, ಕಾವೇರಿ ನದಿ ಎಂದು ಮಾತ್ರ ಹೇಳತಕ್ಕದ್ದಲ್ಲ. ಕಾವೇರಿ ನದಿಗೆ ಅನೇಕ ಉಪನದಿಗಳು ಸೇರುತ್ತವೆ. ಆದ್ದರಿಂದ ಈ ದೇಶದಲ್ಲಿ ಮೂಲ ಪ್ರವಾಹಕ್ಕೆ ಎಲ್ಲಾ ಜನ ಕಷ್ಟದವರು, ದುರ್ಬಲರು, ಕಾಲಿಲ್ಲದವರು, ಕೈ ಇಲ್ಲದವರು, ಸೇರಬೇಕಲ್ಲಾ. ಕಾಲಿಲ್ಲದವರನ್ನು ಡಿಸ್‌ಕ್ವಾಲಿಫೈ ಮಾಡಿ you are unfit to join the main stream of the society. ಅಂತ ಹೇಳಿದರೆ ನಮ್ಮ ರಾಷ್ಟ್ರ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ನಾವು ಬೀದಿಗಿಳಿಯುವ ಪ್ರಶ್ನೆ ಬರುವುದಿಲ್ಲ. Let us give that sanctity to the Commission. Whatever the Commission's Report. ಸರ್ಕಾರ ಅದನ್ನು ಅನುಷ್ಠಾನ ಮಾಡುವಾಗ ಯಾವರೀತಿಯಲ್ಲಿ ಮಾಡಬೇಕೋ ಆ ರೀತಿ ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತದೆ.

Sri. QUMARUL ISLAM :- How long it will take for impliementation of Chinnappa Reddy's Commission report. . . .

Sri M.VEERAPPA MOILY :- It is before the Cabinet Sub-Committee.

ವಿಷಯು :- ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆಯ ಖಾಸಗೀಕರಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 364 (1853)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸ್ವಾಮ್ಯದ ಕರ್ನಾಟಕ ವಿದ್ಯುತ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವತ್ತ ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮಗಳೇನು ;

ಆ) ಮೇಲ್ಕಂಡ ಕಾರ್ಖಾನೆಯನ್ನು ಯಾರಿಗೆ ವಹಿಸಲು ಉದ್ದೇಶಿಸಲಾಗಿದೆ ;

ಇ) ಕರ್ನಾಟಕ ವಿದ್ಯುತ್ ಕಾರ್ಖಾನೆ ಬೆಂಗಳೂರು ನಗರದಲ್ಲಿ ಹೊಂದಿರುವ ಭೂಮಿ ಮತ್ತು ಕಟ್ಟಡಗಳ ಅಂದಾಜು ಮೌಲ್ಯವೆಷ್ಟು ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)- ರವರ ಪರವಾಗಿ ಶ್ರೀ ಬ್ಲೇಸಿಯಸ್.ಎಂ. ಡಿಸೋಜ (ಕಾನೂನು ಸಚಿವರು)

ಅ) ಕರ್ನಾಟಕ ವಿದ್ಯುತ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸುಮಾರು 279.21 ಲಕ್ಷ ರೂ.ಗಳು

3.15 ಪಿ. ಎಂ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ರಾಜ್ಯದಲ್ಲಿ ಪ್ರತಿಷ್ಠಿತವಾಗಿರತಕ್ಕಂಥ ಕವಿಕಾ, ಎನ್ ಜಿ ಇ ಎಫ್ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುತ್ತೀರಾ ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಇಲ್ಲವೆಂದು ಹೇಳಿದ್ದಾರೆ. ಈಗ ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವುದಕ್ಕಿಂತ ಮಿಗಿಲಾಗಿ, ಕಾರ್ಖಾನೆ ಮುಂದಿರತಕ್ಕಂಥ ಜಾಗವನ್ನು ಖಾಸಗೀಕರಣಗೊಳಿಸತಕ್ಕಂಥ ಒಂದು ಸಂಚು ನಡೆಯುತ್ತಿದೆ. ಇದು ನಿಜವೇ ? ಮತ್ತು 1989-90 ಮತ್ತು 90-91ರಲ್ಲಿ ಎನ್ ಜಿ ಇ ಎಫ್ ಕಾರ್ಖಾನೆಯ ಲಾಭ-ನಷ್ಟ ಏನೆಂದು ತಿಳಿಸುತ್ತೀರಾ ?

ಶ್ರೀ ಬ್ಲೇಸಿಯಸ್. ಎಂ. ಡಿಸೋಜ (ಭಾರೀ ಕೈಗಾರಿಕಾ ಸಚಿವರ ಪರವಾಗಿ) ಮಾನ್ಯ ಉಪಾಧ್ಯಕ್ಷಿಣಿಯವರೆ, ಕವಿಕಾ ಕಾರ್ಖಾನೆಯನ್ನು ಖಾಸಗೀಕರಣಗೊಳಿಸುವುದಕ್ಕೆ ಸರ್ಕಾರದ ಮುಂದೆ ಯಾವ ಪ್ರಸ್ತಾವನೆಯೂ ಇಲ್ಲ. ಮತ್ತು ಲಾಭದ ವಿಷಯ ಹೇಳಬೇಕೆಂದರೆ ಕಂಪನಿ 1987-88ರವರೆಗೆ ಸರಾಗವಾಗಿ ಲಾಭ ಮಾಡಿದೆ. ಮತ್ತು ಜಾಗವನ್ನು ಖಾಸಗೀಕರಣ ಮಾಡುವುದರ ಬಗ್ಗೆ ಪ್ರಶ್ನೆ ಕೇಳಿದ್ದಾರೆ. ಅವರು ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಸರಿಯಾದ ಉತ್ತರ ಒದಗಿಸಿಕೊಡುತ್ತೇನೆ.

ವಿಷಯ :- ರಾಣಿಬೆನ್ನೂರು ಆಸ್ಪತ್ರೆಯ ಮೇಲ್ದರ್ಜೀಕರಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 367 (1863)

ಶ್ರೀ ಕೆ. ಬಿ. ಕೋಳಿವಾಡಿ (ರಾಣಿಬೆನ್ನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಣಿಬೆನ್ನೂರು ನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ 30 ಹಾಸಿಗೆ ಇದ್ದು ಅದನ್ನು 100 ಹಾಸಿಗೆಗೆ ಪರಿವರ್ತಿಸಲು ಸರ್ಕಾರಕ್ಕೆ ಮನವಿಗಳು ಬಂದಿದೆಯೆ ?

ಆ) ಹಾಗಿದ್ದಲ್ಲಿ, ಹಿಂದಿನ ಸರ್ಕಾರವು ಭರವಸೆ ಕೊಟ್ಟಿರುವುದು ನಿಜವೇ ?

ಇ) ಹಾಗಿದ್ದರೆ ಸರ್ಕಾರದವರು ಈವರೆಗೆ ಕೈಗೊಂಡಿರುವ ಕ್ರಮಗಳೇನು ?

ಈ) 1992-93ರಲ್ಲಿ ಈ ಕಾರ್ಯವನ್ನು ಮುಗಿಸಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.

ಆ) 30 ರಿಂದ 50 ಹಾಸಿಗೆ, ಸಾರ್ವಜನಿಕ ಆಸ್ಪತ್ರೆಯಾಗಿ ಪರಿವರ್ತಿಸಲು ಮಾತ್ರ ಭರವಸೆ ನೀಡಲಾಗಿದೆ.

ಇ) ಪರಿಶೀಲನೆಯಲ್ಲಿದೆ.

ಈ) ಈ ಹಂತದಲ್ಲಿ ಹೇಳಲು ಸಾಧ್ಯವಿಲ್ಲ.

ಶ್ರೀ ಹೆಚ್. ಡಿ. ಲಮಾಣಿ : (ಶ್ರೀ ಕೆ. ಬಿ. ಕೋಳಿವಾಡ್‌ರವರ ಪರವಾಗಿ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, 'ಅ' ದಲ್ಲಿ ಭರವಸೆಯನ್ನು ಕೊಡಲಾಗಿದೆಯೆಂದು ಹೇಳುತ್ತಾರೆ. ಮತ್ತು 1992-93ನೇ ಸಾಲಿನಲ್ಲಿ ಇದನ್ನು ಮುಗಿಸುತ್ತೀರಾ ? ಎಂದು ಕೇಳಿದ್ದಕ್ಕೆ ಉತ್ತರವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ. ಈಗ ಏನಾಗಿದೆಯೆಂದರೆ, ಶಾಸಕರು ಮತ್ತು ಮಂತ್ರಿಗಳು ಏನೋ ಒಂದು ಆಶ್ವಾಸನೆ ಕೊಡುತ್ತಾರೆ. ಅದಕ್ಕೆ ಯಾವುದೇ ರೀತಿಯ ಬೆಲೆ ಇಲ್ಲದಂತಾಗಿದೆ. ಆಶ್ವಾಸನೆಗಳನ್ನು ಕೊಟ್ಟ ನಂತರ ಅವುಗಳನ್ನು ಈಡೇರಿಸಿದರೆ ಆಶ್ವಾಸನೆಗಳಿಗೂ ಬೆಲೆ ನಮಗೂ ಬೆಲೆ ಇರುತ್ತದೆ. ಆದರೆ, ಹೋದ ವರ್ಷ ಆಶ್ವಾಸನೆ ಕೊಟ್ಟಾಯಿತು. ಈ ವರ್ಷ ಅದನ್ನು ಮುಗಿಸುವುದಕ್ಕಾಗುವುದಿಲ್ಲ ಎಂದರೆ ಇದು ಅಷ್ಟೊಂದು ಸರಿಯಾದ ಹೇಳಿಕೆಯಾಗುವುದಿಲ್ಲ. ನಾನು ಆರೋಗ್ಯ ಮಂತ್ರಿಗಳನ್ನು ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇನೆ. ರಾಣಿಬೆನ್ನೂರು ವ್ಯಾಪಾರ ಕೇಂದ್ರವಾಗಿ ದೊಡ್ಡದಾಗಿ ಬೆಳೆಯುತ್ತಿದೆ. ಅಲ್ಲಿನ ಆಸ್ಪತ್ರೆಗೆ 30 ರಿಂದ 50 ರವರೆಗೆ ಹಾಸಿಗೆಗಳನ್ನು ಒದಗಿಸಿಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ. ನಾವು 100 ಹಾಸಿಗೆಗಳನ್ನು ಕೇಳುತ್ತಿದ್ದೇವೆ. ಕನಿಷ್ಠ ಪಕ್ಷ 50

ಹಾಸಿಗೆಗಳನ್ನಾದರೂ ಮಾಡಬೇಕೆಂದು ಕೇಳಿಕ್ಕೊಳ್ಳುತ್ತಿದ್ದೇನೆ. ಹಾಗೆ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, 100 ಹಾಸಿಗೆಗಳನ್ನು ಒದಗಿಸುವ ಬಗ್ಗೆ ಸರ್ಕಾರ ಎಂದೂ ಭರವಸೆ ಕೊಟ್ಟಿಲ್ಲ. 50 ಹಾಸಿಗೆಗಳಿಗೆ ಏರಿಸುವುದಕ್ಕೆ ಸರ್ಕಾರ ಭರವಸೆ ಕೊಟ್ಟಿದೆ. ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಬೇಕಾದರೆ ಜಿಲ್ಲಾ ಪರಿಷತ್‌ನವರು ತಮ್ಮ ಆಯವ್ಯಯದಲ್ಲಿ ಹಣವನ್ನು ಕಾದಿರಿಸಿ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಬೇಕಾಗುತ್ತದೆ. ಆ ರೀತಿ ಜಿಲ್ಲಾ ಪರಿಷತ್ತಿನಿಂದ ಪ್ರಸ್ತಾವನೆ ಇದುವರೆವಿಗೂ ಸರ್ಕಾರಕ್ಕೆ ಬಂದಿಲ್ಲ. ಆದುದರಿಂದ, ಅಲ್ಲಿಂದ ಪ್ರಸ್ತಾವನೆ ಬಂದನಂತರ ಸರ್ಕಾರ ಕೊಟ್ಟಿರುವ ಭರವಸೆಯನ್ನು ಖಂಡಿತ ಈಡೇರಿಸುತ್ತದೆ. ಎನ್ನುವ ಮಾತನ್ನು ತಿಳಿಸಬಯಸುತ್ತೇನೆ.

ಶ್ರೀ ಹೆಚ್. ಡಿ. ಲಮಾಣಿ:- ಆಶ್ವಾಸನೆ ಕೊಟ್ಟಿದ್ದುದು ಸರ್ಕಾರವೇ ಹೊರತು ಜಿಲ್ಲಾ ಪರಿಷತ್ ಅಲ್ಲ. ಏಕೆಂದರೆ, ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಶಾಸಕರು ಬೇರೆ ಬೇರೆಯಾಗಿರುತ್ತಾರೆ. ಜಿಲ್ಲಾ ಪರಿಷತ್‌ನ ಅಧ್ಯಕ್ಷರಾದಂತಹವರು ಶ್ರೀ ಬಿ. ಜಿ. ಪಾಟೀಲರು. ಅವರ ಆಶ್ವಾಸನೆ ಕೊಡುವುದಕ್ಕೆ ಸಾಧ್ಯವಿಲ್ಲ. ಅವರು ಮಾಡಲಿಕ್ಕೂ ಸಹ ಸಾಧ್ಯವಿಲ್ಲ. ಆಶ್ವಾಸನೆ ಕೊಟ್ಟದ್ದುದು ಸರ್ಕಾರ. ಸರ್ಕಾರವೇ ಅದನ್ನು ಮಾಡಬೇಕಾಗುತ್ತದೆ. ಜಿಲ್ಲಾ ಪರಿಷತ್ ಹೋಗಿರುವುದರಿಂದ ಇದನ್ನು ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ತನ್ನದೇ ಆದಂಥ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಸರ್ಕಾರ ಭರವಸೆಯನ್ನು ಈಡೇರಿಸ ಬೇಕಾದರೆ ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಬರಬೇಕಾಗುತ್ತದೆ. ಆ ಪ್ರಸ್ತಾವನೆ ಜಿಲ್ಲಾ ಪರಿಷತ್‌ನಿಂದ ಬಾರದಿದ್ದುದರಿಂದ ಭರವಸೆಯನ್ನು ಈಡೇರಿಸುವುದಕ್ಕಾಗಲಿಲ್ಲ. ಮಾನ್ಯ ಪ್ರೊಫೆಸರ್‌ರವರು ಹೇಳಿದ ಹಾಗೆ ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಬಂದನಂತರ ಭರವಸೆಯನ್ನು ಖಂಡಿತವಾಗಿ ಈಡೇರಿಸಲಾಗುತ್ತದೆ.

ಶ್ರೀ ಹೆಚ್. ಡಿ. ಲಮಾಣಿ :- ಜಿಲ್ಲಾ ಪರಿಷತ್ ಹೋಗಿದೆ. ಆಡಳಿತಾಧಿಕಾರಿಗಳು ಅಲ್ಲಿದ್ದಾರೆ. ಅವರಿಂದ ಪ್ರಸ್ತಾವನೆ ತರಿಸಿಕೊಂಡು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ :-ಜಿಲ್ಲಾ ಪರಿಷತ್ ಹೋದರೂ ಕೂಡ ವ್ಯವಸ್ಥೆ ಹಾಗೆಯೇ ಉಳಿದಿದೆ. ಆದುದರಿಂದ, ಜಿಲ್ಲಾ ಪರಿಷತ್‌ನಿಂದ ಪ್ರಸ್ತಾವನೆ ಬರಬೇಕು ಆದರೂ ಕೂಡ ಸರ್ಕಾರಕ್ಕೆ ಪ್ರತಾವನೆಯನ್ನು ಜಿಲ್ಲಾ ಪರಿಷತ್‌ನಿಂದ ತರಿಸಿಕೊಳ್ಳತಕ್ಕಂಥ ಕೆಲಸ ಮಾಡುತ್ತಿದ್ದೇವೆ.

ಶ್ರೀಮತಿ ಮೋಟಮ್ಮ :- ಪ್ರಸಕ್ತ ಸಾಲಿನಲ್ಲಿ ಎಷ್ಟು ಆಸ್ಪತ್ರೆಗಳನ್ನು ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಮೇಲ್ದರ್ಜೆಗೇರಿಸುವ ಯೋಚನೆ ಸರ್ಕಾರಕ್ಕಿದೆ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ಇದರ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಅಂಕಿ ಸಂಖ್ಯೆ ಒದಗಿಸುತ್ತೇನೆ.

MADAM DEPUTY SPEAKER :- Particularly it is a question pertaining to Ranebennur Hospital.

ಶ್ರೀ ಬಿ. ಶಿವರಾಮು :- ಉಪಾಧ್ಯಕ್ಷಿಣಿಯವರೇ, ಮಾನ್ಯ ಮಂತ್ರಿಗಳು ಸಾಮೂಹಿಕ ಆರೋಗ್ಯ ಕೇಂದ್ರಗಳ ಬಗ್ಗೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಗ್ಗೆ ಒಂದು ಮಾತನ್ನು ಹೇಳಿದರು. ಅದೇನೆಂದರೆ ಜಿಲ್ಲಾ ಪರಿಷತ್ತಿನಲ್ಲಿ ಆಯವ್ಯಯಕ್ಕೆ ಸಂಬಂಧಪಟ್ಟಂತೆ ಒಂದು ವ್ಯವಸ್ಥೆಯನ್ನು ಮಾಡಿ ಕಳಿಸಿ ಕೊಟ್ಟನಂತರ ನಾವು ಅವರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದರು. ಜಿಲ್ಲಾ ಪರಿಷತ್ತಿಗೆ ಅಲೋಕೇಷನ್‌ನ್ನನ್ನು ಇಲ್ಲಿಂದಲೇ ಕೊಡತಕ್ಕ ಕಾಲದಲ್ಲಿ, ಆಯಾಯ ಜಿಲ್ಲೆಗಳಿಗೆ30-50-100 ಹಾಸಿಗ ಗಳಿರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹಣವನ್ನು ಇಲ್ಲಿಂದ ಒದಗಿಸಿದ ಮೇಲೆಯೇ ಅದು ತೀರ್ಮಾನವಾಗುತ್ತದೆ. ಹೀಗೆ ಒದಗಿಸತಕ್ಕ ಕಾಲದಲ್ಲಿ ಹಾಸನ ಜಿಲ್ಲೆಗೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಒದಗಿಸಿಬಿಟ್ಟರೆ ಬಹುಶಃ ಅಲ್ಲಿಂದ ಪ್ರಸ್ತಾವನೆಯನ್ನು ಕಳಿಸಬೇಕಾದರೆ ಏನುಮಾಡುತ್ತಾರೆ.

ಒಂದಕ್ಕೆ ಪ್ರಸ್ತಾವನೆಯನ್ನು ಕಳಿಸುತ್ತಾರೆ. ಆದುದರಿಂದ ತಮ್ಮ ಮೂಲಕ ಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ ಆಯಾಯ ಜಿಲ್ಲೆಗೆ ಈ 30-50-100 ಹಾಸಿಗೆಯುಳ್ಳ ಪ್ರಾಥಮಿಕ ಕೇಂದ್ರಗಳಿವೆ, ಹೆಚ್ಚಿನ ಹಣವನ್ನು ಒದಗಿಸಿದರೆ ಬಹುಶಃ ಅವರು ಹೆಚ್ಚಿನ ಪ್ರಸ್ತಾವನೆಯನ್ನು ಕಳಿಸತಕ್ಕಂಥ ಕೆಲಸವಾಗುತ್ತದೆ. ಆದುದರಿಂದ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಹೆಚ್ಚಾಗಿ ಹಣವನ್ನು ಆಯಾಯ ಜಿಲ್ಲೆಗಳಿಗೆ, ಜಿಲ್ಲಾ ಪರಿಷತ್ತುಗಳಿಗೆ ಇದರ ಸಲುವಾಗಿ ಕೊಡತಕ್ಕಂಥ ಕೆಲಸವನ್ನು ಮಾಡಿದರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ :- ಉಪಾಧ್ಯಕ್ಷಿಣಿಯವರೇ, ಜಿಲ್ಲಾ ಪರಿಷತ್ತುಗಳಿಗೆ ಹಣವನ್ನು ಸ್ವೇಚ್ಛೆಯಾಗಿ ಕೊಡಲು ಬರುವುದಿಲ್ಲ. ಯೋಜನಾ ಇಲಾಖೆಯವರೆ ಇಂಥ ಸಾಮೂಹಿಕ ಆಸ್ಪತ್ರೆಗಳು ಏರಿಸುವುದಕ್ಕೆ ಎಲ್ಲೆಲ್ಲಿ ಆಗತ್ಯವಾಗಿ ಆಗಬೇಕಾಗಿದೆ, ಅದರ ನಿಯಮಗಳೇನು, ನಮ್ಮ ಆರ್ಥಿಕ ಇತಿಮಿತಿಯೊಳಗೆ ನಮ್ಮ ರಾಜ್ಯದಲ್ಲಿ ಎಷ್ಟು ಇಂಥ ಆಸ್ಪತ್ರೆಗಳನ್ನು ಮಾಡಬೇಕು, ಆಸ್ಪತ್ರೆಗಳ ಸಂಖ್ಯೆಯನ್ನು ಎಷ್ಟಕ್ಕೆ ಏರಿಸಬೇಕು ಎನ್ನುವುದರ ಬಗ್ಗೆ ಅಧ್ಯಯನ ಮಾಡಿ ಜಿಲ್ಲಾವಾರು ಯೋಜನೆಯನ್ನು ತಯಾರು ಮಾಡಿ ಇಂಥ ಜಿಲ್ಲೆಗೆ ಇಷ್ಟು ಹಣವನ್ನು ಕೊಡಬೇಕೆಂದು ಹೇಳುತ್ತಾರೆ ಆ ರೀತಿ ನಾವು ಮಾಡುತ್ತೇವೆ. ಅದು ನಮ್ಮ ಇಲಾಖೆಗೆ ಬರುವುದಿಲ್ಲ. ಅದು Dostrict Sector ನಲ್ಲಿ transfer ಆಗುತ್ತದೆ. ಆದುದರಿಂದ ನಾವು ಆಯಾಯ ಜಿಲ್ಲೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ಅಲ್ಲಿಂದ ಪ್ರಸ್ತಾವನೆಯನ್ನು ತರಿಸಿಕೊಂಡು ಆ ಶಿಫಾರಸನ್ನು ಮಂಜೂರು ಮಾಡತಕ್ಕ ಪ್ರಶ್ನೆಯೇ ಉದ್ಭವವಾಗುವುದಿಲ್ಲ.

ವಿಷಯ:- ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಗೆ ಸೇರ್ಪಡೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 373 (2018)

ಶ್ರೀ ವೈ. ನಾಗಪ್ಪ (ಹರಿಹರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳನ್ನು ಮಕ್ಕಳ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒಳಪಡಿಸಲಾಗಿದೆ ; ಯಾವ ಯಾವ ವರ್ಷಗಳಿಂದ ಜಾರಿಯಾಗಿದೆ,

ಆ) ಹರಿಹರ ತಾಲ್ಲೂಕನ್ನು 1992-93ನೇ ಆರ್ಥಿಕ ಸಾಲಿನಲ್ಲಿಯೇ ಈ ಯೋಜನೆಯಡಿ ಸೇರ್ಪಡೆ ಮಾಡಲಾಗುವುದೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಜಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ 1991-92 ಹಿರಿಯೂರು 1982-83, ಹೊಸದುರ್ಗ 1983-84 ಚಳ್ಳಕೆರೆ 85-86 ಜಗಳೂರು 88-89 ಚಿತ್ರದುರ್ಗ 1988-89 ದಾವಣಗೆರೆ 1990-91 ಮತ್ತು ಮೊಳಕಾಲ್ಮುರು 1991-92ಈ 8 ತಾಲ್ಲೂಕುಗಳನ್ನು ಅವುಗಳ ಮುಂದೆ ನಮೂದಿಸಿರುವ ವರ್ಷದಿಂದ ಮಕ್ಕಳ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಒಳಪಡಿಸಲಾಗಿದೆ.

ಆ) ಈ ಯೋಜನೆಯನ್ನು ಕೇಂದ್ರ ಸರ್ಕಾರ ಈ ತಾಲ್ಲೂಕಿಗೆ ಮಂಜೂರು ಮಾಡಿದಾಗ ಪ್ರಾರಂಭಿಸಲಾಗುವುದು.

ಡಾ. ವೈ. ನಾಗಪ್ಪ :- ಉಪಾಧ್ಯಕ್ಷಿಣಿಯವರೇ, ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಮ್ಮ ಮಂತ್ರಿಗಳು ಇಲ್ಲಿ ಇಲ್ಲ. ಈ ಒಂದು ಅಂಗನವಾಡಿ ಕೇಂದ್ರವನ್ನು ತೆರೆಯುವುದು It is a rational thing. ಸಮಗ್ರ ಗ್ರಾಮೀಣ ಅಭಿವೃದ್ಧಿ ಆಗಬೇಕಾದರೆ. ಕೇವಲ ರಸ್ತೆಗಳಲ್ಲ, ಸಾರಿಗೆ ಸೌಕರ್ಯವಲ್ಲ ಆಸ್ಪತ್ರೆಗಳಲ್ಲ , ಇವತ್ತು ಹಳ್ಳಿಗಾಡಿನಲ್ಲಿರತಕ್ಕ economically weaker sections, SC/STs, these children should come up in life. ಈ ಒಂದು ಅಂಗನಾವಾಡಿ ಕೇಂದ್ರವನ್ನು ತಮ್ಮ ದಾವಣಗೆರೆಯಲ್ಲಿ ಮಂಜೂರು ಮಾಡಿಸಿ ಕೊಂಡಿದ್ದೀರಿ ,ದಾವಣಗೆರೆಯಲ್ಲಿ ಎಲ್. ಕೆ .ಜಿ. ಮತ್ತು ಯು.ಕೆ.ಜಿ ಸ್ಕೂಲ್‌ಗಳು ಬೇಕಾದಷ್ಟಿವೆ. ಇದು ನಿಜವಾಗಿಯೂ ಹಳ್ಳಿಗಾಡಿನ ಜನರಿಗೆ ಬಹಳ ಉಪಯೋಗವಾಗತಕ್ಕ. ಸಂಸೆ

ಅದು ನನ್ನ ತಾಲ್ಲೂಕಿನಲ್ಲಿ ಆಗಿಲ್ಲ. ನನ್ನ ತಾಲ್ಲೂಕಿನಲ್ಲಿ ಹಿಂದುಳಿದ ಜನಾಂಗದವರು, ಅಲ್ಪಸಂಖ್ಯಾತರು ಪರಿಶಿಷ್ಟ ವರ್ಗದವರು ಮತ್ತು ಪರಿಶಿಷ್ಟ ಜಾತಿಯಮಕ್ಕಳು ಬಹಳ ಹೆಚ್ಚಾಗಿದ್ದಾರೆ. ಅದಕ್ಕೋಸ್ಕರ ಇದು ಬೇಗ ಆಗಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಸಮಾಜ ಕಲ್ಯಾಣ ಸಚಿವರ ಪರವಾಗಿ):- ಉಪಾಧ್ಯಕ್ಷಿಣಿಯವರೇ, ಅದು ಮೊದಲನೆಯದಾಗಿ ಐ.ಸಿ.ಡಿ.ಎಸ್. ಕಾರ್ಯಕ್ರಮವಾಗಿ ಪ್ರಾರಂಭವಾದಾಗ ಪ್ರಮುಖವಾಗಿ ಪರಿಶಿಷ್ಟ ಜನಾಂಗ,ಪರಿಶಿಷ್ಟ ವರ್ಗದ ಜನಾಂಗ ಏನು ಇದೆ ಅದರ ಆಧಾರದ ಮೇಲೆ, ಮತ್ತು ಬರಗಾಲ ಪ್ರದೇಶ ಹಾಗೂ tribal areas ಮತ್ತು educationally, nutrionally backward areas ಪ್ರದೇಶಗಳನ್ನು ಹೊಂದಿಸಿಕೊಂಡು ಹೊಸ ಯೋಜನೆಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿತ್ತು. ಆದರೆ ಇತ್ತೀಚೆಗೆ criteria ಪ್ರಕಾರ ಈ ದೇಶದಲ್ಲಿರತಕ್ಕ below the poverty line people ಏನು ಇದ್ದಾರೆ ಅಂಥ ತಾಲ್ಲೂಕುಗಳನ್ನು ರಾಷ್ಟ್ರಮಟ್ಟದಲ್ಲಿ ಗುರ್ತಿಸಿ ಅವರಿಗೆ ಮಂಜೂರು ಮಾಡುತ್ತಿದ್ದೇವೆ. ಈಗಾಗಲೇ ಕರ್ನಾಟಕ ರಾಜ್ಯಕ್ಕೆ ಈ ಹಿಂದೆ 106 ತಾಲ್ಲೂಕುಗಳನ್ನು ಈ ಕಾರ್ಯಕ್ರಮದಲ್ಲಿ ಸೇರಿಸಿದ್ದರೆ, ಇತ್ತೀಚೆಗೆ ಆರು ತಾಲ್ಲೂಕುಗಳನ್ನು ಮತ್ತು ಮೊನ್ನೆ ತಾನೆ ಪುನಃ ಆರು ತಾಲ್ಲೂಕುಗಳನ್ನು ಅಂದರೆ 118 ತಾಲ್ಲೂಕುಗಳನ್ನು ಈ ಕಾರ್ಯಕ್ರಮದಲ್ಲಿ ಸೇರಿಸಿದ್ದಾರೆ. ಅದು ದೇಶದ ರಾಷ್ಟ್ರಮಟ್ಟದಲ್ಲಿ ಈ ಪಟ್ಟಿಯನ್ನು ಇಟ್ಟುಕೊಂಡು ಆ ಆಧಾರದ ಮೇಲೆ ಬಿಲೋ ದಿ ಪಾವರ್ಟಿ ಲೈನ್ ಜನ ಯಾವ ತಾಲ್ಲೂಕುಗಳಲ್ಲಿ ಹೆಚ್ಚು ಇದ್ದಾರೆ ಆ ಆದ್ಯತೆಯನ್ನು ಅನುಸರಿಸಿಕೊಂಡು ಅವರು ಮಂಜೂರು ಮಾಡುತ್ತಿದ್ದಾರೆ. ಬಹುಶಃ ರಾಜ್ಯ ಸರ್ಕಾರಕ್ಕೆ ಇಂತಹ ಪ್ರದೇಶಗಳನ್ನೇ ಸೇರಿಸಬೇಕು ಇಂತಹ ಪ್ರದೇಶಗಳನ್ನು ಬಿಡಬೇಕು ಎಂದು ಹೇಳುವ ಆ ಚಾಯ್ಸ್, ಆ ಆಯ್ಕೆ ಈಗ ರಾಜ್ಯಸರ್ಕಾರದಲ್ಲಿ ಇಲ್ಲ. the total number of population below the poverty line divided by the total population below the poverty line in the country. ಈ ಮಾರ್ಗದರ್ಶನದಲ್ಲಿ ಮಾಡುವುದರಿಂದ ಇದು ಆಗುತ್ತದೆಯೇ ಹೊರತು ತಮ್ಮ ತಾಲ್ಲೂಕು ಬೇರೆಯಾವುದೇ ತಾಲ್ಲೂಕು ಇರಲಿ, ಕೇಂದ್ರ ಸರ್ಕಾರದ ಯೋಜನೆಯಲ್ಲಿ ಬರುವುದಿಲ್ಲ ನಮ್ಮ ತಾಲ್ಲೂಕು ಇಲ್ಲ. ನಮ್ಮ ತಾಲ್ಲೂಕು ಸ್ಟೇಟ್ ಸೆಕ್ಟಾರ್‌ನಲ್ಲಿ ಇದೆ, ಸ್ಟೇಟ್ ಸೆಕ್ಟಾರ್‌ನಲ್ಲಿ ಬರೀ 100 ಬಾಲವಾಡಿ ಮಾಡುವುದಕ್ಕೆ ಮಾತ್ರ ಸಾಧ್ಯವಿದೆ. ಆದರೆ ಕೇಂದ್ರದ ಯೋಜನೆಯಲ್ಲಿ 233 ತಾಲ್ಲೂಕುಗಳನ್ನು ಸೇರಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಬಡತನ ರೇಖೆಯ ಒಳಗಡೆ ಇರತಕ್ಕಂತಹ ತಾಲ್ಲೂಕುಗಳನ್ನು ಅಲ್ಲಿ ಜನಸಂಖ್ಯೆಯನ್ನು ಹೊಂದಿ ಅವರು ವಿಂಗಡಣೆ ಮಾಡುತ್ತಾರೆ. ಮತ್ತು ಆಯ್ಕೆ ಮಾಡುತ್ತಾರೆ. ಅದರಲ್ಲಿ ಹೆಚ್ಚು ಆಯ್ಕೆಗೆ ಮಾಡುವಂಥಾದ್ದು ನಮ್ಮ ಕೈಯಲ್ಲಿ ಬಹುಶಃ ವಿಶೇಷವಾದಂತಹ discretinary ಪವರ್ಸ್ ಇಲ್ಲ.

ಡಾ. ವೈ. ನಾಗಪ್ಪ :- ಆಯಿತು ಸ್ವಾಮಿ ಈಗ ನಿಮ್ಮ ಉತ್ತರವನ್ನು ನಾವು ಒಪ್ಪಿಕೊಳ್ಳುತ್ತೇವೆ, ನಿಮ್ಮ ದೃಷ್ಟಿಯಲ್ಲಿ ದಾವಣಗೆರೆಯಲ್ಲಿ ಯಾವ ಕ್ರೈಟೀರಿಯಾ ಮೇಲೆ ಕೇಂದ್ರ ಸರ್ಕಾರ ಕೊಟ್ಟಿದೆ, ತಮಗೆ ಗೊತ್ತಿದ್ದ ಹಾಗೆ ಬಿಲೋದ ಪಾವರ್ಟಿ ಒಂದು ಜನಸಂಖ್ಯೆ ತಾಲ್ಲೂಕು ಮಟ್ಟದಲ್ಲಿ ಹೋಬಳಿ ಮಟ್ಟದಲ್ಲಿ ಇದೆ. ಆ ಒಂದು ಕ್ರೈಟೀರಿಯಾ ತೆಗೆದುಕೊಂಡರೆ ಇದು ಹರಿಹರಕ್ಕೆ ಬಹಳ ಅವಶ್ಯಕತೆಯಾಗಿ ಆಗಬೇಕಿತ್ತು ಮತ್ತು ತಮ್ಮ ಈಗ 18 ತಾಲ್ಲೂಕು ಸೇರಿಸಿದ್ದೇವೆಂದು ಹೇಳಿದ್ದೀರಿ. ಅದರಲ್ಲಿ ಹರಿಹರ ತಾಲ್ಲೂಕು ಇದೆಯೋ ಇಲ್ಲವೋ ಅದು ನಮಗೆ ಬೇಕಾಗಿದೆ. ಅದಕ್ಕೆ ಉತ್ತರ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸಭಾಧ್ಯಕ್ಷಿಣಿಯವರೇ, 106 ತಾಲ್ಲೂಕುಗಳು ಹಿಂದೆ ಇತ್ತು. ಈ 106 ತಾಲ್ಲೂಕು ಇರುವಾಗ ಸ್ವಲ್ಪdiscretionary ಪವರ್ಸ್ ಇರಬಹುದಿತ್ತು. ಏಕೆಂದರೆ ಆ ಕ್ರೈಟೀರಿಯಾ drought prone area ಟ್ರೈಬಲ್ ಏರಿಯಾ ಮತ್ತು ಷೆಡ್ಯೂಲ್ ಕ್ಯಾಸ್ಟ್ ಪಾಪ್ಯುಲೇಷನ್ ಇದಲ್ಲಾ ಇರುವುದರಿಂದ ಸ್ವಲ್ಪ discretion ಗೆ ಅವಕಾಶವಿತ್ತು. ಆದರೆ ಈಗ ಒಂದೇ ಒಂದು ಕ್ರೈಟೀರಿಯಾ

ಬಿಲೋ ದಿ ಪಾವರ್ಟಿ ಲೈನ್ ಇದ್ದುದರಿಂದ ಇಡೀ ದೇಶದಲ್ಲಿ ತಾಲ್ಲೂಕುಗಳನ್ನು ಆ ಪಾಪ್ಯುಲೇಷನ್ ಬಿಲೋ ದಿ ಪಾವರ್ಟಿ ಲೈನ್ ಹಾಕಿ ಬಿಡುತ್ತಾರೆ. ಅದರ ಪ್ರಕಾರ ಮಾಡಿದ್ದಾರೆ. ಹಿಂದೆ 106 ತಾಲ್ಲೂಕು ಇತ್ತು, ಈಗ 12 ತಾಲ್ಲೂಕುಗಳನ್ನು ಸೇರಿಸಿದ್ದಾರೆ. ಒಂದನೆಯ ಹಂತದ ಆರು ತಾಲ್ಲೂಕುಗಳಲ್ಲಿ ಹೊಸನಗರ, ಸಿಂಧನೂರು, ಎನ್. ಆರ್. ಪುರ, ಬಳ್ಳಾರಿ ರೂರಲ್, ಹಗರಿಬೊಮ್ಮನಹಳ್ಳಿ, ಶಿಗ್ಗಾಂವ್ ಸೇರಿದೆ. ಇನ್ನೊಂದು ಆರು ಹಿಂದೆ ಕೊಟ್ಟಿರುವುದರಲ್ಲಿ ರಾಯಚೂರು, ಗುಡಿಬಂಡೆ, ಶಿಕಾರಿಪುರ, ಕಲ್‌ಘಟಗಿ, ತರೀಕೆರೆ, ಶಿರಗುಪ್ಪ ಇದೆ. ಇದರಲ್ಲಿಯೂ ಕೂಡ ನಿಮ್ಮ ತಾಲ್ಲೂಕು ಇಲ್ಲ, ನನ್ನ ತಾಲ್ಲೂಕು ಇಲ್ಲ, ಏನು ಮಾಡುತ್ತೀರಿ.

ಶ್ರೀಮತಿ ಮೋಟಮ್ಮ :- ಸಿಟಿಗೆ ಪ್ರಾತಿನಿದ್ಯ ಕೊಟ್ಟಿದ್ದೀರಿ, ತಾಲ್ಲೂಕು ಅಂದರೆ ದಾವಣಗೆರೆಗೆ ಹೇಗೆ ಕೊಟ್ಟಿದ್ದೀರಿಂದು ಅವರು ಕೇಳಿದ್ದುದು.

ಉಪಾಧ್ಯಕ್ಷಿಣಿಯವರು:- ಅರ್ಬನ್ ಪ್ರಾಜೆಕ್ಟ್ಸ್ ಅಂತ ಬೇರೆಯೇ ಇತ್ತು That is a different category.

ಶ್ರೀಮತಿ ಮೋಟಮ್ಮ :- ಅದನ್ನು ಅವರು ಹೇಳಲಿಲ್ಲ, ದಾವಣಗೆರೆ ಸಿಟಿಗೆ ಯಾವ ಕ್ರೈಟೀರಿಯಾ ಮೇಲೆ ಕೊಟ್ಟಿದ್ದೀರಿ. ಹರಿಹರಕ್ಕೆ ಏಕೆ ಕೊಡಲಿಲ್ಲವೆಂದು ಅವರು ಕೇಳಿದರು.

ಡಾ. ವೈ. ನಾಗಪ್ಪ :- ಸಭಾಧ್ಯಕ್ಷಿಣಿಯವರೇ, ನನ್ನ ಮೂಲಭೂತ ಪ್ರಶ್ನೆಯೇನೆಂದರೆ ಯಾವ ಕ್ರೈಟೀರಿಯಾ ಮೇಲೆ ದಾವಣಗೆರೆಗೆ ಇದು ಸಿಕ್ಕಿತ್ತು. Dvanagere is a Cosmopolitan City.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಅದು ಈಗ ಪ್ರಶ್ನೆ ಏನೆಂದರೆ ಹರಿಹರ ತಾಲ್ಲೂಕು ಸೇರಿಸಬೇಕು, ದಾವಣಗೆರೆ ಈ ಆರು ಮತ್ತು ಮತ್ತೊಂದು ಪಟ್ಟಿಯಲ್ಲಿ ಇಲ್ಲ. ಅದು 106ರ ಪಟ್ಟಿಯಲ್ಲಿದೆ. 106 ರ ಪಟ್ಟಿಯಲ್ಲಿ ಆ ಎಲ್ಲಾ ಕ್ರೈಟೀರಿಯಾ ಮಾಡಿದ್ದೇವೆ. ಯಾವುದೇ ಈ drought prone area, ಷೆಡ್ಯೂಲ್ ಕ್ಯಾಸ್ಟ್ ಪಾಪ್ಯುಲೇಷನ್ ಟ್ರೈಬಲ್ ಏರಿಯಾ, ಎಜುಕೇಷನಲ್ಲಿ ಬ್ಯಾಕ್‌ವರ್ಡ್‌ನೆಸ್ ಆ ಕ್ರೈಟೀರಿಯಾದಲ್ಲಿ ದಾವಣಗೆರೆ ಸೇರಿದೆ. ಅದು ಏಕೆ ಸೇರಿದೆ ಎಲ್ಲಿ ಸೇರಿದೆ ಎಲ್ಲಿ ತಪ್ಪಾಗಿದೆ ಎನ್ನುವುದನ್ನು ಬೇಕಾದರೆ ಒಂದು ಸಂಶೋಧನೆ ಮಾಡೋಣ. ಹರಿಹರ ತಾಲ್ಲೂಕು ಮುಂದೆ ಬರತಕ್ಕಂತಹ ಆದ್ಯತೆಗಳ ಪಟ್ಟಿಯಲಿ ಎಲ್ಲಿ ಇದೆ ಅಂತ ಸ್ವಲ್ಪ ನೋಡೋಣ, ತಾವು ಏನು ಹೇಳುತ್ತಿದ್ದೀರಿ ಹರಿಹರ ತಾಲ್ಲೂಕು ಕೂಡ ಈಗ 12 ತಾಲ್ಲೂಕುಗಳಲ್ಲಿ ಸೇರಿದೆ. ಬಹುಶಃ ಹರಿಹರ ತಾಲ್ಲೂಕು ಹತ್ತಿರದಲ್ಲಿ ಇರಲಿಕ್ಕೆ ಸಾಕು, ನನ್ನ ಹತ್ತಿರ ಪಟ್ಟಿ ಇಲ್ಲ. ಅದು ರಾಷ್ಟ್ರ ಮಟ್ಟದಲ್ಲಿ ಒಂದು ಪಟ್ಟಿ ಮೇಂಟೇನ್ಸ್ ಮಾಡಿದ್ದಾರೆ. ನಾವು ಅದನ್ನು ಪರಿಶೀಲನೆ ಮಾಡೋಣ. ಆದರೆ ಇದರಲ್ಲಿ ನಾನು ಈಗಾಗಲೇ ಹೇಳಿದಂತೆ ಇಚ್ಛಾನುಸಾರವಾಗಿ ಈಗಂತೂ ಸೇರಿಸುವುದಕ್ಕೆ ಆಗುವುದಿಲ್ಲ. ಹಿಂದೆ ಬರಗಾಲ ಪ್ರದೇಶ ಅಂತ ಮಾಡಿದ್ದಾರೆ. There would have been some scope for some changes. ಆದರೆ ಇದು ಈಗ ರಾಷ್ಟ್ರಮಟ್ಟದಲ್ಲಿ ಇರುವುದರಿಂದ ನಮ್ಮ ಉದ್ದೇಶವೇನೆಂದರೆ ಎಲ್ಲಾ ತಾಲ್ಲೂಕುಗಳನ್ನು ಈ ನಕ್ಷೆಯಲ್ಲಿ ಸೇರಿಸಬೇಕೆಂಬ ಉದ್ದೇಶವಿದೆ. ಅದನ್ನು ಕೇಂದ್ರ ಸರ್ಕಾರಕ್ಕೆ ನಾವು ಬರೆದಿದ್ದೇವೆ, ಇನ್ನೊಂದು ಸಾರಿ ಬರೆದಾಗ ಪುನಃ ಅವರ ಆ ಬೇಡಿಕೆಯನ್ನು ಸಲ್ಲಿಸಿ, ಹರಿಹರ ತಾಲ್ಲೂಕು ಕೂಡ ಈ ಆದ್ಯತೆಯಲ್ಲಿ ಬರಬೇಕೆಂದು ನಮ್ಮ ನಾಗಪ್ಪನವರು ಹೇಳುವ ಪ್ರಕಾರ ಬಿಲೋ ದಿ ಪಾವರ್ಟಿ ಲೈನ್ ಜಾಸ್ತಿ ಇದ್ದಾರೆ, ಅದರ ಅಂಕಿ ಸಂಖ್ಯೆ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೆ ನೀವು ಸೇರಿಸಿ ಮಾಡಿ ಎಂದು ನಾವು ಹೇಳುತ್ತೇವೆ.

ವಿಷಯ:- ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 375 (1864)

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯನ್ನು ಸರ್ಕಾರ ಕೈಗಾರಿಕಾ ರಹಿತ (ನಾನ್-ಇಂಡಸ್ಟ್ರಿಯಲ್ ಡಿಸ್ಟ್ರಿಕ್ಟ್) ಜಿಲ್ಲೆಯೆಂದು ಘೋಷಿಸಿರುವುದು ನಿಜವೇ ?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ಕೈಗಾರಿಕಾ ಬೆಳವಣಿಗೆಗೆ ಸರ್ಕಾರದಿಂದ ಕೈಗೊಳ್ಳಲಾಗಿರುವ ಕ್ರಮಗಳೇನು ?

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲವಾಗುವಂತೆ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (ಕೆ. ಎಸ್ ಎಸ್. ಐ. ಡಿ. ಸಿ.) ಅಥವಾ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗಳ ವತಿಯಿಂದ ವಸಾಹತುಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವೇನಾದರೂ ಇದೆಯೇ?

ಈ) ಜಿಲ್ಲೆಯಲ್ಲಿ ಈಗಿನ ಉತ್ಸಾಹಿತ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳೇನು ?

ಶ್ರೀಮತಿ ಮನೋರಮ ಮದ್ವರಾಜ್ (ಭಾರಿ ಮತ್ತು ಮದ್ಯಮ ಕೈಗಾರಿಕಾ ಸಚಿವರು)

ಅ) ಇಲ್ಲ, ಚಿಕ್ಕಮಗಳೂರು ಜಿಲ್ಲೆಯು ಕೈಗಾರಿಕೆಯಲ್ಲಿ ಹಿಂದುಳಿದ ಜಿಲ್ಲೆಯೆಂದು ಪರಿಗಣಿಸಲಾಗಿದೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಈ ಜಿಲ್ಲೆಗೆ 1991-92ನೇ ಸಾಲಿನಲ್ಲಿ ರೂ.3.50 ಲಕ್ಷಗಳ ಸಹಾಯಧನವನ್ನು 15 ಕೈಗಾರಿಕೆಗಳಿಗೆ ಕೊಡಲಾಗಿದೆ.

ಇ) ಚಿಕ್ಕಮಗಳೂರು ತಾಲ್ಲೂಕಿನ ಕಂಬಳಿ ಗ್ರಾಮದಲ್ಲಿ ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವತಿಯಿಂದ 55 ಎಕರೆ 4ಗುಂಟೆ ಸರ್ಕಾರಿ ಜಮೀನನ್ನು ಸ್ವಾಧೀನ ಪಡಿಸಿಕೊಡಲಾಗಿದೆ. ಈ ಜಮೀನು ಚಿಕ್ಕಮಗಳೂರು ಪಟ್ಟಣಕ್ಕೆ 7.50 ಕಿ. ಮೀ. ದೂರದಲ್ಲಿರುತ್ತದೆ. ಅದೇ ರೀತಿ ಕೆ.ಎಸ್.ಎಸ್.ಐ.ಡಿ.ಸಿ. ಇವರು ಚಿಕ್ಕಮಗಳೂರಿನಲ್ಲಿ 10 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು 16 ಷೆಡ್‌ಗಳನ್ನು ಈ ವಸಾಹತುವಿನಲ್ಲಿ ನಿರ್ಮಿಸಿರುತ್ತಾರೆ ಕಡೂರು ಬೀರೂರಿನಲ್ಲಿ 11.25 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು 10 ಷೆಡ್‌ಗಳನ್ನು ಈಗಾಗಲೇ ವಸಾಹತುವಿನಲ್ಲಿ ನಿರ್ಮಿಸಲಾಗಿದೆ. 20 ಕೈಗಾರಿಕಾ ಪ್ಲಾಟ್‌ಗಳನ್ನು ಅಭಿವೃದ್ಧಿಪಡಿಸಿ 15 ಪ್ಲಾಟ್‌ಗಳನ್ನು ಚಿಕ್ಕಮಗಳೂರು ಕೈಗಾರಿಕಾ ವಸಾಹತುವಿನಲ್ಲಿಯೂ 15 ಕೈಗಾರಿಕಾ ಪ್ಲಾಟ್‌ಗಳನ್ನು ಅಭಿವೃದ್ಧಿಪಡಿಸಿ 9 ಪ್ಲಾಟ್‌ಗಳನ್ನು ಕಡೂರು ಬೀರೂರಿನ ಕೈಗಾರಿಕಾ ವಸಾಹತುವಿನಲ್ಲಿಯೂ ಹಂಚಲಾಗಿದೆ.

ಈ) ರಾಜ್ಯ ಸರ್ಕಾರದ ಆದೇಶದ ಸಂಖ್ಯೆ : ಸಿಐ 138 ಎಸ್‌ಪಿಸಿ 90 ದಿನಾಂಕ27-9-90 ರಂದು ಹೊರಡಿಸಿ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ವಲಯ 3ರಲ್ಲಿ ಸೇರಿಸಿ ಕೈಗಾರಿಕೆಯಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಪರಿಗಣಿಸಲಾಗಿದೆ. ಈ ತಾಲ್ಲೂಕಿನ ಉತ್ಸಾಹಿತ ಕೈಗಾರಿಕೋದ್ಯಮಿಗಳು ಸ್ಥಾಪಿಸುವ ಕೈಗಾರಿಕೆಗಳಿಗೆ ಈ ಕೆಳಕಂಡ ಸಹಾಯ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) ಸ್ಥಿರಾಸ್ತಿ ಮೇಲೆ ಹೂಡಿದ ಬಂಡವಾಳದ ಮೇಲೆ ಶೇಕಡಾ 20 ರ ರಾಜ್ಯ ಸಹಾಯಧನವನ್ನು ರೂ. 20 ಲಕ್ಷಕ್ಕೆ ಮೀರದಂತೆ ಕೊಡಲಾಗುತ್ತಿದೆ.

2) 4ವರ್ಷಗಳವರೆಗೆ ಮಾರಾಟ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ.

3) ನೋಂದಣಿ ಶುಲ್ಕ ಮನ್ನಾ ಮತ್ತು ಸಣ್ಣ ಕೈಗಾರಿಕೆಗಳಿಗೆ ವ್ಯವಸಾಯೇತರ ಭೂಮಿ ಪರಿವರ್ತನೆ ಶುಲ್ಕ ಮನ್ನಾ ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ.

4) 6ವಾರಗಳ ದೀರ್ಘ ಮತ್ತು 2 ವಾರಗಳ ಅಲ್ಪಕಾಲದ ಉದ್ಯಮಶೀಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯಾ ಜಿಲ್ಲೆಯ ಸ್ಥಳೀಯ ಅಭ್ಯರ್ಥಿಗಳಿಗೆ ಕೊಡಲಾಗುವುದು. ಈ ತರಬೇತಿಯ ಕಾಲದಲ್ಲಿ ಕೈಗಾರಿಕೆಯನ್ನು ಸ್ಥಾಪಿಸುವ ಕ್ರಮದ ಬಗ್ಗೆ ತಿಳಿಸಲಾಗುವುದು.

ಶ್ರೀ ಸಿ. ಆರ್. ಸಾಗೀರ್ ಅಹಮದ್ :- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಚಿಕ್ಕಮಗಳೂರು ಜಿಲ್ಲೆಯು ಕೈಗಾರಿಕಾ ಕ್ಷೇತ್ರದಲ್ಲಿ ಬಹಳ ಹಿಂದೆ ಉಳಿದಿದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಜೊತೆಗೆ ಹಿಂದುಳಿದಿದೆಯೆಂದು ಪರಿಗಣಿಸಲಾಗಿದೆ ಎಂದು ಒಂದು ಕಡೆ ಹೇಳುತ್ತಿದ್ದಾರೆ. ಮತ್ತೆ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನೇಕ ಕಡೆ ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಅನೇಕ ಕೈಗಾರಿಕಾ ಕ್ಷೇತ್ರದಲ್ಲಿ ದುಡಿಯುತ್ತಿರುವಂಥ ವ್ಯಕ್ತಿಗಳಿಗೆ ನಾವು ಹಂಚಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ, ಚಿಕ್ಕಮಗಳೂರು ಜಿಲ್ಲೆ ನಿಜಕ್ಕೂ ಹೇಳುವುದಾದರೆ, ಕೈಗಾರಿಕಾ ಒಂದು ಕ್ಷೇತ್ರದಲ್ಲಿ ಬಹಳ ಹಿಂದೆ ಉಳಿದಿದೆ. ಇದಕ್ಕಾಗಿ ಸರ್ಕಾರ ಯಾವರೀತಿಯ ಒಂದು ನಿಲುವನ್ನು ತೆಗೆದುಕೊಂಡಿದೆಯೆಂದು ಸ್ಪಷ್ಟವಾಗಿ ಹೇಳುವಂಥ ವಿಚಾರ ಯಾವುದೂ ಅವರ ಉತ್ತರಗಳಲ್ಲಿ ಹೇಳಲಿಲ್ಲ. ಜೊತೆಗೆ, ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವಂಥದ್ದು ಮತ್ತು ಹಂಚಿರತಕ್ಕಂಥದ್ದು ಬಹುಶಃ 10-12 ವರ್ಷಗಳ ಹಿಂದೆ ಇದು ಜಮೀನನ್ನು ವಶಪಡಿಸಿಕೊಂಡಿರತಕ್ಕಂಥ ವಿಚಾರವೆಂದು ನನಗೆ ತಿಳಿದಿದೆ. ಆದರ ಅಲ್ಲಿ ಆಗಬೇಕಾದಂತಹ ಇಂಡ್ರಸ್ಟೀಯಲ್ ಶೆಡ್ಡುಗಳು ಮತ್ತು ಕೈಗಾರಿಕೆಯ ಒಂದು ಅಭಿವೃದ್ಧಿಗೆ ಸರ್ಕಾರ ಏನು ನಿಲುವನ್ನು ತೆಗೆದುಕೊಂಡಿದೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು. ಕರ್ನಾಟಕ ರಾಜ್ಯ ಸರ್ಕಾರದವರು ಈ 'ವಿಶ್ವ' ಕಾರ್ಯಕ್ರಮ ಏನು ಹಾಕಿಕೊಂಡಿದ್ದಾರೆ ಇದರಲ್ಲಿ ಒಂದು ಸಾವಿರ ಶೆಡ್‌ಗಳನ್ನು ಕಟ್ಟುವ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರಲ್ಲಿ ಏನಾದರೂ ನಮ್ಮ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಈ ಶೆಡ್ಡುಗಳನ್ನು ಸ್ಯಾಂಕ್ಷನ್ ಮಾಡಿ ಕಟ್ಟಿಸಿಕೊಡುವ ಆಲೋಚನೆ ಏನಾದರೂ ಸರ್ಕಾರ ಮಾಡಿದೆಯೆ ಎಂದು ಮಾನ್ಯ ಮಂತ್ರಿಗಳು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ):- ಸನ್ಮಾನ್ಯ ಅಧ್ಯಕ್ಷರೇ, ಸಗೀರ್ ಅಹಮದ್ ಅವರ ಪ್ರಶ್ನೆಗೆ ಬಹಳಷ್ಟು ವಿಸ್ತಾರವಾಗಿ ಉತ್ತರ ಕೊಟ್ಟಿದ್ದಾರೆ. ಅದು ಗ್ರೂಪ್ 3 ರಲ್ಲಿ ಇಂಡಸ್ಟ್ರೀಸ್‌ನಲ್ಲಿ ಬರುತ್ತದೆ. ಅದೇ ಪ್ರಕಾರ ಚಿಕ್ಕಮಗಳೂರು, ಕಡೂರು, ಬೀರೂರುನಲ್ಲಿ ಸ್ಥಳ ಸ್ವಾಧೀನ ಮಾಡಿ ಅಲ್ಲಿ ಶೆಡ್ಡು ಕಟ್ಟಲಿಕ್ಕೆ ತಯಾರಿ ಮಾಡಿದ್ದಾರೆ. ಚಿಕ್ಕಮಗಳೂರಿನಲ್ಲಿ 55 ಎಕರೆ 4 ಗುಂಟೆ ಸರ್ಕಾರಿ ಜಮೀನನ್ನು ಸ್ವಾಧೀನ ಮಾಡಿಕೊಂಡಿದ್ದಾರೆ. ಅದರಲ್ಲೂ ಸಹ ಇಷ್ಟರವರೆಗೆ ಸಾಕಷ್ಟು ಬೇಡಿಕೆ ಅಲ್ಲಿ ಇರಲಿಲ್ಲ. ಅದಕ್ಕೆ ನಾನು ಸನ್ಮಾನ್ಯ ಶಾಸಕರಿಗೆ ಹೇಳುವುದು ಏನೆಂದರೆ, ಆದಷ್ಟು ಯುವಕರಿಗೆ ಬೇರೆ ಬೇರೆ ಕೈಗಾರಿಕೆಗಳನ್ನು ಮಾಡಲಿಕ್ಕೆ ಪ್ರೋತ್ಸಾಹ ಕೊಡಬೇಕು. ಸರ್ಕಾರದಿಂದ ಅವರಿಗೆ ಯಾವರೀತಿಯಲ್ಲಿ ಸಲಹೆ, ಸಹಕಾರ, ಸಹಾಯ ಬೇಕೋ ಅದನ್ನು ಕೊಡುತ್ತೇವೆ. ಅಲ್ಲಿ ಬರುವ ಅಭ್ಯರ್ಥಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲ ಆಗುವಂತೆ ದೀರ್ಘವಾದ ಮತ್ತು ಅಲ್ಪಕಾಲಿಕವಾದ ಉದ್ಯಮಶೀಲ ಅಭಿವೃದ್ಧಿ ತರಬೇತಿಯ ಕಾರ್ಯಕ್ರಮಗಳನ್ನು ಪ್ರತಿ ವರ್ಷವೂ ಅಲ್ಲಿ ಕೋರ್ಸ್‌ನ್ನು ಮಾಡುತ್ತಾರೆ. ಎಲ್ಲದಕ್ಕೂ ಸಹ ನೀವು ಆ ಯುವಕರನ್ನು ತರಬೇತಿ ಕೇಂದ್ರಗಳಿಗೆ ಕಳುಹಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಸನ್ಮಾನ್ಯ ಉಪಸಭಾಪತಿಯವರೇ, ವಿಶ್ವ ಕಾರ್ಯಕ್ರಮದಲ್ಲಿ ಈ ಶೆಡ್‌ಗಳನ್ನು ಕಟ್ಟುವ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಆದುದರಿಂದ ಅವರ ಉತ್ತರವನ್ನು ನಾನು ನಿರೀಕ್ಷಿಸುತ್ತಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ವಿಶ್ವ ಕಾರ್ಯಕ್ರಮವನ್ನು ಸಣ್ಣ ಕೈಗಾರಿಕಾ ಮಂತ್ರಿಗಳಾದ ಶ್ರೀ ನಜೀರ್ ಅಹಮದ್ ಅವರು ನೋಡಿಕೊಳ್ಳುತ್ತಿದ್ದಾರೆ. ದಯಮಾಡಿ ನಾವು ಅವರಿಗೆ ಒಂದು ಪ್ರಶ್ನೆ ಹಾಕಿದರೆ

ಸರಿಯಾದ ಉತ್ತರ ನಿಮಗೆ ಸಿಗುತ್ತದೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು

ವಿಷಯ :-ನಿಮ್ನ ಜಾತಿ - ವರ್ಗಗಳ ರೈತರಿಗೆ ಬೋರ್‌ವೆಲ್ ಮಂಜರಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 363 (1838)

ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯಾದ್ಯಂತ ಪರಿಶಿಷ್ಟ ಜಾತಿ ವರ್ಗಗಳವರ ರೈತರ ಅನುಕೂಲಕ್ಕಾಗಿ ಕಾರ್ಪೋರೇಷನ್ ವತಿಯಿಂದ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ.

ಆ) ಸದರಿ ಬೋರ್‌ವೆಲ್‌ಗಳಲ್ಲಿ ಎಷ್ಟು ಉತ್ತಮವಾಗಿ ಕೆಲಸ ಮಾಡುತ್ತಿವೆ : ಎಷ್ಟು ಸ್ಥಗಿತಗೊಂಡಿವೆ.

ಇ) ಹೀಗೆ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಯಾವ ಏಜೆನ್ಸಿಯನ್ನು ಸರ್ಕಾರ ಗೊತ್ತು ಪಡಿಸಿದೆ

ಈ) ಹೊಳಲ್ಕೆರೆ ತಾಲ್ಲೂಕಿನಲ್ಲಿ ಎಷ್ಟು ಫಲಾನುಭವಿಗಳಿಗೆ ಇದರಿಂದ ಲಾಭ ದೊರೆತಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) 1984-85ನೇ ಸಾಲಿನಿಂದ ಫೆಬ್ರುವರಿ 92ರ ಕೊನೆಯುವರೆಗೆ ಒಟ್ಟು 856 ಕೊಳವೆ ಬಾವಿಗಳನ್ನು ತೋಡಿಸಲಾಗಿದೆ.

ಆ) ಉತ್ತಮವಾಗಿ ಕೆಲಸ ಮಾಡುತ್ತಿರುವ ಬೋರ್‌ವೆಲ್‌ಗಳು 755

ಇನ್ನೂ ವಿದ್ಯುದ್ದೀಕರಣವಾಗಬೇಕಾದ ಬೋರ್‌ವೆಲ್‌ಗಳು 85

ಸ್ಥಗಿತಗೊಂಡ ಬೋರ್‌ವೆಲ್‌ಗಳು 16

ಇ) 1991-92ನೇ ಸಾಲಿಗೆ ಈ ಕೆಳಕಂಡ ಕಂಪನಿಗಳಿಗೆ ಕೊಳವೆ ಬಾವಿ ಕೊರೆಯುವ ಕಾರ್ಯಕ್ರಮವನ್ನು ವಹಿಸಲಾಗಿದೆ.

1) ಮೆ:ವಿಜಯಲಕ್ಷ್ಮಿ ಬೋರ್‌ವೆಲ್ಸ್ ಜೋಗಿಮಠ ರಸ್ತೆ, ಚಿತ್ರದುರ್ಗ

2) ಮೆ:ಜಲವಾಹಿನಿ ಬೋರ್‌ವೆಲ್ ಕಂ. ದಾವಣಗೆರೆ.

ಈ) 84-85 ರಿಂದ ಒಟ್ಟು 81

ವಿಷಯ :- ವಿಶ್ವ ಯೋಜನೆ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 362 (2208)

ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ವಿಶ್ವ ಯೋಜನೆಯಡಿಯಲ್ಲಿ ಎಷ್ಟು ಕುಶಲ ಕರ್ಮಿಗಳನ್ನು ಗುರುತಿಸಲಾಗಿದೆ ? ಹಾಗೂ ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ಇಲ್ಲಿಯವರೆಗೆ ಫಲಾನುಭವಿಗಳಿಗೆ ಕೊಟ್ಟಿರುವ ಹಣದ ನೆರವಿನ ಪ್ರಮಾಣ ಎಷ್ಟು ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಒಟ್ಟು 160 ಫಲಾನುಭವಿಗಳನ್ನು ಗುರುತಿಸಲಾಗಿದ್ದು ಈ ಕೆಳಗಿನಂತೆ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಕುಂಬಾರಿಕೆ, ಕೈಮಗ್ಗ, ಬಡಗಿತನ, ಉಣ್ಣೆ, ನೇಯ್ಗೆ, ರೇಷ್ಮೆ ಟ್ವಿಸ್ಟಿಂಗ್, ಸಿದ್ಧ ಪಡಿಸಿದ ಉಡುಪುಗಳು, ಪೊಟಾಟೋ ಚಿಪ್ಸ್ ತಯಾರಿಕೆ, ವಲ್ಕನೈಸಿಂಗ್, ವಿದ್ಯುತ್ ಮಗ್ಗಗಳು ಇತರೆ.

ಆ) ಒಟ್ಟು 4.58 ಲಕ್ಷ ರೂ.ಗಳಷ್ಟು ಹಣದ ನೆರವನ್ನು ಫಲಾನುಭವಿಗಳಿಗೆ ಒದಗಿಸಲಾಗಿರುತ್ತದೆ.

ವಿಷಯ:- ಕಾರ್ಮಿಕ ನ್ಯಾಯಾಲಯದ ನ್ಯಾಯಾಧೀಶರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 366 (1839)

ಶ್ರೀ ಹಲಗೇಗೌಡ (ಪಾಂಡವಪುರ) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಮೈಸೂರಿನ ಕಾರ್ಮಿಕ ನ್ಯಾಯಾಲಯದಲ್ಲಿ ಬಹಳ ಕಾಲದಿಂದಲೂ ನ್ಯಾಯಾಧೀಶರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹೀಗೆ ನ್ಯಾಯಾಧೀಶರಿಲಲದಿರುವುದರಿಂದ ಈ ವ್ಯಾಪ್ತಿಗೆ ಬರುವ ಬಡ ಕಾರ್ಮಿಕರಿಗೆ ತೊಂದರೆಯಲ್ಲವೇ?

ಇ) ನ್ಯಾಯಾಧೀಶರನ್ನು ನೇಮಿಸಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು)

ಅ) ಹೌದು, 1991ನೇ ಇಸವಿ ಏಪ್ರಿಲ್ ತಿಂಗಳಿನಿಂದ.

ಆ) ಹೌದು.

ಇ) ಅತ್ಯಲ್ಪ ಕಾಲಾವಧಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

ವಿಷಯ:- ರಾಜ್ಯದಲ್ಲಿರುವ ಐ.ಟಿ.ಐ ಕೇಂದ್ರಗಳ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 368 (2205)

ಶ್ರೀ ಆರ್. ಎಸ್. ಸರ್‌ನಾಯಕ್ (ಭಟ್ಕಳ) ಮಾನ್ಯ ಕಾರ್ಮಿಕ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ ಸಂಖ್ಯೆ ಎಷ್ಟು ? ಅವು ಎಲ್ಲೆಲ್ಲಿವೆ.

ಆ) ಹೊನ್ನಾವರ ಕೈಗಾರಿಕಾ ತರಬೇತಿ ಸಂಸ್ಥೆ ಕೇಂದ್ರದಲ್ಲಿ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಇ) ವಿವಿಧ ಪಠ್ಯ ಕ್ರಮಗಳನ್ನು ತೆರೆದು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವಿದೆಯೇ ? ಈ ಬಗ್ಗೆ ಸರ್ಕಾರದ ಯೋಜನೆ ಏನು ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು)

ಅ) 39 ವಿವರ ಅನುಬಂಧದಲ್ಲಿ ಕೊಡಲಾಗಿದೆ.

ಆ) 64

ಇ) ಯಂತ್ರೋಪಕರಣ, ಶಿಕ್ಷಕರು, ಅನುದಾನ ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು 1992ನೇ ಸಾಲಿನ ಪ್ರವೇಶ ಸಮಯದಲ್ಲಿ ಪರಿಶೀಲಿಸಲಾಗುವುದು.

ಅನುಬಂಧ

ಜಿಲ್ಲಾವಾರು ಕೈಗಾರಿಕಾ ತರಬೇತಿ ಸಂಸ್ಥೆ : ಕೇಂದ್ರಗಳ ವಿವರ

1.ಬೆಂಗಳೂರು ಜಿಲ್ಲೆ :-

(1)	ಕೈಗಾರಿಕಾ ತರಬೇತಿ ಸಂಸ್ಥೆ,	ಹೊಸೂರು ರಸ್ತೆ, ಬೆಂಗಳೂರು-29
(2)	- ಡಿಟೋ -	ತುಮಕೂರು ರಸ್ತೆ, ಬೆಂಗಳೂರು-22
(3)	- ಡಿಟೋ -	ದೇವನಹಳ್ಳಿ
(4)	- ಡಿಟೋ -	ಕನಕಪುರ

2.ಬೆಳಗಾಂ ಜಿಲ್ಲೆ:-

(5)	- ಡಿಟೋ -	ಬೆಳಗಾಂ (ಪುರುಷರು)

(6)	- ಡಿಟೋ -	ಬೆಳಗಾಂ (ಮಹಿಳಾ)

3.ಬಳ್ಳಾರಿ ಜಿಲ್ಲೆ:-

(7)	- ಡಿಟೋ -	ಬಳ್ಳಾರಿ
(8)	- ಡಿಟೋ -	ಹೂವಿನಬಡಗಲಿ

4.ಬೀದರ್ ಜಿಲ್ಲೆ :-

(9)	- ಡಿಟೋ -	ಬೀದರ್

5.ಬಿಜಾಪುರ ಜಿಲ್ಲೆ :-

(10)	- ಡಿಟೋ -	ಬಿಜಾಪುರ
(11)	- ಡಿಟೋ-	ನಲವತ್ತವಾಡ

6.ಚಿಕ್ಕಮಗಳೂರು ಜಿಲ್ಲೆ :-

(12)	- ಡಿಟೋ-	ಚಿಕ್ಕಮಗಳೂರು

7.ಚಿತ್ರದುರ್ಗ ಜಿಲ್ಲೆ :-

(13)	- ಡಿಟೋ-	ದಾವಣಗೆರೆ

8.ದಕ್ಷಿಣ ಕನ್ನಡ ಜಿಲ್ಲೆ :-

(14)	- ಡಿಟೋ-	ಮಂಗಳೂರು

9.ಧಾರವಾಡ ಜಿಲ್ಲೆ :-

(15)	- ಡಿಟೋ-	ಹುಬ್ಬಳ್ಳಿ
(16)	- ಡಿಟೋ-	ಗದಗ್

10.ಗುಲ್ಬರ್ಗಾ ಜಿಲ್ಲೆ :-

(17)	- ಡಿಟೋ-	ಗುಲ್ಬರ್ಗಾ (ಪುರುಷರು)
(18)	- ಡಿಟೋ-	ಗುಲ್ಬರ್ಗಾ (ಮಹಿಳೆಯರು)
(19)	- ಡಿಟೋ-	ವಾಡಿ, ಚಿತ್ತಾಪುರ ತಾಲ್ಲೂಕು

11.ಹಾಸನ ಜಿಲ್ಲಾ :-

(20)	- ಡಿಟೋ-	ಹಾಸನ
(21)	- ಡಿಟೋ-	ಹೊಳೇನರಸೀಪುರ

12.ಕೊಡಗು ಜಿಲ್ಲೆ :-

(22)	ಕೈಗಾರಿಕಾ ತರಬೇತಿ ಸಂಸ್ಥೆ ,	ಮಡಿಕೇರಿ
(23)	- ಡಿಟೋ-	ಪೊನ್ನಂಪೇಟೆ (ಮಹಿಳಾ)

13.ಕೋಲಾರ ಜಿಲ್ಲಾ :-

(24)	- ಡಿಟೋ-	ಬಿ.ಇ.ಎಂ.ಎಲ್ ನಗರ ಅಂಚೆ, ಕೆ.ಜಿ.ಎಫ್
(25)	- ಡಿಟೋ-	ದೇವರಾಯ ಸಮುದ್ರ
(26)	- ಡಿಟೋ-	ಗೌರಿಬಿದನೂರು (ಮಹಿಳಾ)

14.ಮಂಡ್ಯ ಜಿಲ್ಲೆ :-

(27)	- ಡಿಟೋ-	ಮಂಡ್ಯ

(28)	- ಡಿಟ್ಟೋ-	ಮಳವಳ್ಳಿ

15.ಮೈಸೂರು ಜಿಲ್ಲೆ :-

(29)	- ಡಿಟ್ಟೋ-	ಮೈಸೂರು
(30)	- ಡಿಟ್ಟೋ-	ಗುಂಡ್ಲುಪೇಟೆ

16.ರಾಯಚೂರು ಜಿಲ್ಲೆ :-

(31)	- ಡಿಟ್ಟೋ-	ರಾಯಚೂರು
(32)	- ಡಿಟ್ಟೋ-	ಕುಕನೂರು,ಯಲಬುರ್ಗಾ ತಾಲ್ಲೂಕು, ರಾಯಚೂರು ಜಿಲ್ಲೆ

17.ಶಿವಮೊಗ್ಗ ಜಿಲ್ಲೆ:-

(33)	- ಡಿಟ್ಟೋ-	ಶಿವಮೊಗ್ಗ (ಮಹಿಳಾ)
(34)	- ಡಿಟ್ಟೋ-	ಭದ್ರಾವತಿ

18.ತುಮಕೂರು ಜಿಲ್ಲೆ :-

(35)	- ಡಿಟ್ಟೋ-	ತುಮಕೂರು
(36)	- ಡಿಟ್ಟೋ-	ಅಮ್ಮಸಂದ್ರ

19.ಉತ್ತರ ಕನ್ನಡ ಜಿಲ್ಲೆ :-

(37)	- ಡಿಟ್ಟೋ-	ಕಾರವಾರ
(38)	- ಡಿಟ್ಟೋ-	ಹೊನ್ನಾವರ
(39)	- ಡಿಟ್ಟೋ-	ಹಳಿಯಾಳ

ವಿಷಯ:- ಗುಲ್ಬರ್ಗಾ ಜಿಲ್ಲೆಯಲ್ಲಿ ಕುಷ್ಠರೋಗ ನಿವಾರಣೆಯಾದ ಜನರ ದೇಯಾಂಶದತ್ತಿಯಲ್ಲಿ ನಗರ ವ್ಯಕ್ತಿಗಳ ನೇಮಕಾತಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 369 (2036)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಗುಲ್ಬರ್ಗಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಂದ ಕೆಲವು ಮಂದಿ ಕುಷ್ಠರೋಗದಿಂದ ಗುಣ ಹೊಂದಿದವರಿಗೆಂದು ಮೀಸಲಾತಿ ಇರುವ ಕೋಟಾದಲ್ಲಿ ನೇಮಕಾತಿ ಹೊಂದಿರುವುದು ನಿಜವೇ ?

ಆ) ಹಾಗಾದರೆ ಕುಷ್ಠರೋಗದಿಂದ ಗುಣ ಹೊಂದಿದವರ ಮೀಸಲಾತಿಯಲ್ಲಿ ನೇಮಕಾತಿ ಹೊಂದಿದವರ ಸಂಖ್ಯೆ ಎಷ್ಟು?

ಇ) ಕುಷ್ಠರೋಗದಿಂದ ಗುಣಹೊಂದಿದವರೆಂದು ನಕಲಿ ವೈದ್ಯಕೀಯ ಪ್ರಮಾಣ ಪತ್ರ ತಂದ ಕೆಲವರು ಗುಲ್ಬರ್ಗಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರಿಂದ ನೇಮಕಾತಿ ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಾದರೆ ಅಂತಹ ನೇಮಕಾತಿಗಳನ್ನು ಪತ್ತೆ ಹಚ್ಚಲು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಶಿಕ್ಷಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) 98

ಇ) ಹೌದು

ಈ) ಗುಲ್ಬರ್ಗಾ ವಿಭಾಗೀಯ ಜಂಟಿ ನಿರ್ದೇಶಕರಿಂದ ತನಿಖೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲು ವರದಿ ಕಳುಹಿಸಲು ಕೋರಿದೆ.

ವಿಷಯ:- ಕರ್ನಾಟಕ ಟೆಲಿಕಾಮ್ ನಿಯಮಿತ ಅಡಿಯಲ್ಲಿ ವಿಸ್ತರಣಾ ಕಾರ್ಯಕ್ರಮ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 374 (2015)

ಶ್ರೀ ಸಿ. ಭೈರೇಗೌಡ (ವೇಮಗಲ್) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) 1990 ರಿಂದ ಇಲ್ಲಿಯವರೆಗೆ ಕರ್ನಾಟಕ ಟೆಲಿಕಾಂ ಸಂಸ್ಥೆ ಕೈಗೊಂಡ ವಿಸ್ತರಣಾ ಯೋಜನೆಗಳು ಯಾವುವು ?

ಆ) ಇವುಗಳಲ್ಲಿ ಎಷ್ಟು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ:

ಇ) ಇವುಗಳಲ್ಲಿ ತೊಡಗಿಸಿರುವ ಬಂಡವಾಳ ಎಷ್ಟು ಮತ್ತು ಕೊಂಡಿರುವ ಯಂತ್ರಾದಿಗಳ ವಿವರ ಕೊಡುವುದು (ಯಂತ್ರಗಳನ್ನು ಯಾರಿಂದ ಕೊಳ್ಳಲಾಯಿತು ಮತ್ತು ಎಷ್ಟು ವೆಚ್ಚದಲ್ಲಿ ಕೊಳ್ಳಲಾಯಿತು ಎಂಬ ವಿವರವನ್ನು ಕೊಡುವುದು):

ಈ) ಪ್ರಾಜೆಕ್ಟ್ ವರದಿಗಳನ್ನು ತಯಾರಿಸಿದ ದಿನಾಂಕಗಳು ಯಾವುವು ?

ಉ) ವರದಿಗಳಿಗೆ ಕಂಪನಿಯು ಬೋರ್ಡ್ : ಸರ್ಕಾರದಿಂದ ಅನುಮತಿ ಪಡೆದಿದೆಯೇ ?

ಶ್ರೀಯುತ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಕೈಗೊಂಡ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ:

1)ಐಎಲ್‌ಟಿ-512 (ಒಂದನೇ ಹಂತ)
2)ಐಎಲ್‌ಟಿ-512 (ಎರಡನೇ ಹಂತ)
3) 10ಚಾನಲ್ ಯುಹೆಚ್‌ಎಫ್ ರೇಡಿಯೋ ರಿಲೇ ಎಕ್ವ್ಯುಪ್‌ಮೆಂಟ್
4)ಸಿ-ಡಾಟ್ 512 (ಮ್ಯಾಕ್ಸ್)

ಆ) ಇವುಗಳಲ್ಲಿ, ಒಂದು ಯೋಜನೆಯನ್ನು ಪೂರ್ಣಗಳಿಸಲಾಗಿದೆ.

ಇ)
1) ಐಎಲ್‌ಟಿ 512 (1 ನೇ ಹಂತ)ರೂ. 37,45,166-87
2) ಐಎಲ್‌ಟಿ 512 (2ನೇ ಹಂತ)ರೂ. 50,00,000-00
3) 10ಚಾನಲ್ ಯುಹೆಚ್‌ಎಫ್ ರೂ. 4,09,996-20
ರೇಡಿಯೋ ರಿಲೇ ಎಕ್ವಿಪ್‌ಮೆಂಟ್
4) ಸಿ-ಡಾಟ್-512 (ಮ್ಯಾಕ್ಸ್) ರೂ.10,00,000-00
5) (ಉಳಿದ ವಿವರಗಳನ್ನು ಪಟ್ಟಿಯಲ್ಲಿ ನೀಡಿದೆ)

ವಿವರಗಳು ಈ ಕೆಳಕಂಡಂತೆ ಇದೆ :-

1) ಐಎಲ್‌ಟಿ-512 (ಒಂದನೇ ಹಂತ) 9-2-1990
2) ಐಎಲ್‌ಟಿ-512 (ಎರಡನೇ ಹಂತ) 12-7-1991
3). 10 ಚಾನಲ್ ಯುಹೆಚ್‌ಎಫ್ ರೇಡಿಯೋ ರಿಲೇ ಎಕ್ವ್ಯುಪ್‌ಮೆಂಟ್ 12-7-1991
4) ಸಿ-ಡಾಟ್ 512 (ಮ್ಯಾಕ್ಸ್) 25-10-1991

ಉ) ಬೋರ್ಡ್‌ನಿಂದ ಅನುಮತಿ ಪಡೆಯಲಾದ ದಿನಾಂಕಗಳು ಈ ಕೆಳಕಂಡಂತೆ ಇದೆ.

1) ಐಎಲ್‌ಟಿ-512 (ಒಂದನೇ ಹಂತ)
2) ಐಎಲ್‌ಟಿ-512 (ಎರಡನೇ ಹಂತ)
30-7-1991

ಇವುಗಳ ವೆಚ್ಚ ಕಂಪನಿಗಳ ವ್ಯಾಪ್ತಿಯಲ್ಲಿ ಬರುತ್ತದೆ.

3) 10ಚಾನಲ್ ಯುಹೆಚ್‌ಎಫ್ ರೇಡಿಯೋ ರಿಲೇ ಎಕ್ವ್ಯೂಪ್‌ಮೆಂಟ್ 20-7-1991 ಈ ಯೋಜನೆಗೆ ಸರ್ಕಾರದಿಂದ ದಿನಾಂಕ 31-12-91ರಂದು ಹೊರಡಿಸಿದ ಆದೇಶ ಕ್ರಮಾಂಕ :ಸಿಐ 99 ಸಿಇಎಲ್ 91ರಲ್ಲಿ ಅನುಮೋದನೆ ನೀಡಲಾಗಿದೆ.

4) ಸಿ-ಡಾಟ್-512 (ಮ್ಯಾಕ್ಸ್) 31-10-1991 ಸರ್ಕಾರದ ಅನುಮೋದನೆಯು ಪರಿಶೀಲನೆಯಲ್ಲಿದೆ.

STATEMENT OF CAPITAL EXPENDITURE INCURRED FOR I.L.T- 512 PROJECT AND OTHER DETAILS.

Sl. No.	Description of Machineries Purchased.	Amount	Particulars of Suppliers
1	Technical Know how fee	10,00,000-00	I.T.I. Bangalore.
2	Osciloscope	5,48,925-75	Scientific Industrial Equipment
3	Technical documentation	5,46,420-25	I.T.I.Bangalore.
4	Training Charges	98,500-00	I.T.I.Bangalore.
5	Float cum boost Charger.	3,65,187-15	Afco Industrial Chemical.
6	ECTA Jigs.	1,98,867-15	M/L.c I.T.I. Bangalore
7	Signal Analysor.	20,564-00	Saptagiri Enterprises.
8	Electronic Load.	1,12,320-00	Jai Sales Corporation.
9	Frequency Counter Multineter Bench Centre	74,290-10	Saptagiri Enterprises.
10	Push Button Telephones.	13,467-30	Swede India.
11	Computers, PC-KT, Dotmatrix Printer, Programmer Key Board, Operative Table Operative Chair.	2,96,739-85	Pertech Company,HCL Limited MRD Marketing, Bangalore Steel Corpora-

12 D.C.Regulated Power Supply	. 2,15,483-55	Powertech Numeric Engineers.
13 Krycard 10 KVA Stabilixer	33,519-75	Computer Point.
14 Temperature Control Soldering Station	89,856-00	Yesh Enterprises.
15 Micro Processer Trainer	10,833-70	Advance Electronic supply.
16 Typewriting Machine	7,524-00	Latham India.
17 Exhaust Fan.	6,695-00	Ahuja Associates.
18 UPS System.	17,021-45	Premier Control.
19 Weighing Machine.	24,432-85	Essae Terroka.
20 Pallet Truck	18,645-00	Ferro Industries.
21 Filing Cabinet	6,300-00	Varpaur Engineering.
22 Fire Extinguisher.	8,704-80	Steelage Industries.
23 Filing Cabinet	11,237-85	Dimensons Technology.
24 Furniture	19,631-20	Benaka Engineering.
Total	37,45,166-87	

PLANT AND MECHINERY
CAPITAL EXENDITURE FOR UHF 10 CHANNEL PROJECT

PARTICULARS	AMOUNT	PAID TO
1. Techical know how fee	3,00,000-00	M/Lc I.T.I. Bangalore
2. Frequency Counter	32,900-00	Scientific Industrial Equipment
3. Antistatic	77,096-20	M/Lc Birla 3 M.Ltd.,
	4,09,996-20	

CAPITAL EXPENDITURE FOR ILT 512 PHASE II

Diesel Capture Generator	1,00,000-00	Philips India
Electronic Test Measuring Equipment. (General)	40,00,000-00	Philips India.
Wave Soldering Machine PCM	5,00,000-00	Philips India.
Furniture and Fixtures	4,00,000-00	Philips India.
	50,00,000-00 (Exclusive of Sales Tax)	

CAPITAL EXPENDITURE FOR C-DOT 512 (MAX)

Technical Know how fee	10,00,000-00	C-DOT.

ವಿಷಯ: ಕಾಪು ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರದ ಮೇಲ್ದರ್ಜೇಕರಣ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 376 (2034)

ಶ್ರೀ ವಿ. ವಸಂತ ವಿ. ಸಾಲಿಯಾನ (ಕಾಪು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಕಾಪು ಕ್ಷೇತ್ರ ಶಿರ್ವಾ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆಸ್ಪತ್ರೆಯಾಗಿ ಮೇಲ್ದರ್ಜೇಗೇರಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? ಇದರ ವಿಳಂಬಕ್ಕೆ ಕಾರಣವೇನು ?

ಆ) ಬೆಳಪು ಗ್ರಾಮೀಣ ಚಿಕಿತ್ಸಾಲಯಕ್ಕೆ ಖಾಯಂ ವೈದ್ಯರು ಮತ್ತು ಸಿಬ್ಬಂದಿಗಳನ್ನು ಒದಗಿಸಿ ಪ್ರಾಥಮಿಕ ಆರೋಗ್ಯ ಕೇಂದ್ರವಾಗಿ ಬಡ್ತಿ ನೀಡಲು ಸರ್ಕಾರ ಪರಿಶೀಲಿಸಿದೆಯೆ ? ಈ ವಿಚಾರವಾಗಿ ಮಾಡಿದ ಮನವಿಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪರಿಶೀಲನೆಯಲ್ಲಿದೆ.

ಆ) ಈ ವಿಚಾರವಾಗಿ ಜಿಲ್ಲಾ ಪರಿಷತ್ತಿನಿಂದ ಮನವಿ ಬಂದಿಲ್ಲ.

Sub: Number of Industries Established under Industrial Scheme.

Starred L. A. Question No. 378 (2204)

Sri Sadath Ali Khan (Channapatna) Will the Minister of State for small scale Industries be pleased to state.

a) The number of talukas in the State wherein the Industries are being established under the Industrial scheme of one industry to each taluk.

c) Whether the districts, which are industrially backward have been identified in the State;

d) The action taken by the Government to establish and industry at Channapatna Taluk.

Sri Nisar Ahamed (Minister of State for Small Scale Industries)

a) No such scheme is in existence

b) Not applicable

c) No, however, talukas have been classified into zones depending on the backwardness of the taluk i.e, Zone-I, Zone-II, Zone-III & Zone-IV, incentives on the capital investment made by the unit between 15% to 25% subject to a maximum of Rs.15.00 lakhs to Rs. 25.00 lakhs respectively is being ex tended and also sales tax exemption between 3 to 6 years is being extended in addition to the stamp duty exemption, conversion fine waiver etc.

d) The Channapatna Taluk has been clasified under Zone-II taluk and investment subsidy of 15% subject to a maximum of Rs.15.00 lakhs is being extended for the new units that are being established after 1.10.90. The sales tax exemption for a period of 3 years is also being estended in addition to exemption of stamp duty and concessional registratiion charges for loan documents, lease/sale deeds to be executed by the new units in favour of State Government agencies/financial institutions. Regular Industrial Campaign/Seminars are being conducted to guide the entrepreneurs for starting of Industries. In addition one entrepreneural Development Programme has been conducted to train 34 prospective enterepreneurs for starting of Industries. The promoters/Industrialists who comes forward for establishment of Medium and Large Scale Industries are being encouraged by providing of infrastructural facilities and incentives.

ವಿಷಯ: ರಾಜ್ಯದಲ್ಲಿ ಮಕ್ಕಳ ಸಾವು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 379 (755)

ಶ್ರೀ ಜಿ. ರಾಜುಗೌಡ (ಹನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹುಟ್ಟುವ ಪ್ರತಿ ಸಾವಿರ ಮಕ್ಕಳಿಗೆ ಎಷ್ಟು ಮಕ್ಕಳು ಸಾಯುತ್ತಿದ್ದಾರೆ?

ಆ) ಇದನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಹುಟ್ಟುವ ಪ್ರತಿ ಸಾವಿರ ಮಕ್ಕಳಿಗೆ ಒಂದು ವರ್ಷದ 71 ಮಕ್ಕಳು ಸಾಯುತ್ತಿದ್ದಾರೆ.

ಆ) ಮಕ್ಕಳು ಸಾಯುವುದನ್ನು ಕಡಿಮೆ ಮಾಡಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಅ)ನವಜಾತು ಶಿಶುವಿನಲ್ಲಿ ಧನುರ್‌ವಾಯುವನ್ನು ತಡೆಯುವುದಕ್ಕೆ ತಾಯಿಗೆ ಧನುರ್ವಾಯು ನಿರೋಧಕ ಚುಚ್ಚುಮದ್ದು ಕೊಡಲಾಗುತ್ತಿದೆ.

ಆ)ಮಗುವಿನ ಉಳಿವಿಗಾಗಿ ಪ್ರಸವಪೂರ್ವ, ಪ್ರಸವಕಾಲ ಹಾಗೂ ಪ್ರಸವೋತ್ತರ ಸೇವೆಯನ್ನು ಮಹಿಳೆಯರಿಗೆ ಒದಗಿಸಲಾಗುತ್ತಿದೆ.

ಇ)ಅಪಕ್ವತೆ ಹಾಗೂ ಕಡಿಮೆ ತೂಕದ ಕಾರಣಗಳಿಂದ ಮಕ್ಕಳು ಸಾಯುವುದನ್ನು ತಡೆಗಟ್ಟಲು (ತಾಯಂದಿರಲ್ಲಿ ಬರುವ ರಕ್ತ ಹೀನತೆಯಿಂದ ಉಂಟಾಗುವ) ಗರ್ಭಿಣಿಯರಿಗೆ ಕಬ್ಬಿಣ ಮತ್ತು ಫೋಲಿಕ್ ಆಮ್ಲದ ಮಾತ್ರೆಗಳನ್ನು ಕೊಡಲಾಗುತ್ತಿದೆ.

ಈ)ನಂಜಿನಿಂದ ಮಗು ಸಾಯುವುದನ್ನು ತಡೆಗಟ್ಟಲು, ನಂಜುರಹಿತ ಹೆರಿಗೆ ನಿರ್ವಹಿಸಲು ದಾದಿಯರಿಗೆ ತರಬೇತಿ ನೀಡಲಾಗುತ್ತಿದೆ.

ಉ)6 ಮಾರಕ ರೋಗಗಳಿಂದ ಆಗುವ ಮರಣಗಳನ್ನು ತಪ್ಪಿಸಲು ಮಕ್ಕಳಿಗೆ ವರ್ಷ ತುಂಬುವುದರೊಳಗಾಗಿ ಲಸಿಕೆಗಳನ್ನು ನೀಡಲಾಗುತ್ತಿದೆ.

ಊ)ಅತಿಸಾರ ಭೇದಿಯಿಂದಾಗುವ ಮರಣಗಳನ್ನು ತಡೆಯಲು ಅತಿಸಾರ ಭೇದಿಯಿಂದ ನರಳುವ ಮಕ್ಕಳಿಗೆ ಕೊಡಲು ಈ ಮೌಖಿಕ ಪುನರ್ಜಜೀಕರಣದ ಪೊಟ್ಟಣಗಳನ್ನು ವಿತರಿಸಲಾಗುತ್ತಿದೆ.

ಋ)ನ್ಯುಮೋನಿಯದಿಂದಾಗುವ ಮರಣಗಳನ್ನು ತಡೆಯಲು ನ್ಯೂಮೋನಿಯಾದಿಂದ ನರಳುವ ಮಕ್ಕಳುಗಳಿಗೆ 'ಕೊಟ್ರೈಮೆಕ್ಸೊಜಾಲ್' ಮಾತ್ರೆಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 1991-92ನೆ ಇಸವಿಯಿಂದ ಕೊಡಲಾಗುತ್ತಿದೆ.

ೠ)ತಾಯಿ ಮತ್ತು ಮಕ್ಕಳಲ್ಲಿ ಸಂಭವಿಸಬಹುದಾದ ಸಾವುಗಳನ್ನು ತಪ್ಪಿಸಲು 'ಮಕ್ಕಳ ಉಳಿಮೆ ಮತ್ತು ಸುರಕ್ಷಿತ ತಾಯ್ತನ' ಎಂಬ ಹೊಸ ಕಾರ್ಯಕ್ರಮವನ್ನು 1992 ಏಪ್ರಿಲ್ ತಿಂಗಳಿಂದ 7 ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗುವುದು. ನಂತರ ಕ್ರಮವಾಗಿ ಉಳಿದ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗುವುದು.

ಎ)ಪೌಷ್ಠಿಕ ಆಹಾರ, ಲಸಿಕಾ ಕಾರ್ಯಕ್ರಮ ಹಾಗೂ ಮಕ್ಕಳಲ್ಲಿ ಉದ್ಭವಿಸಬಹುದಾದ ಸಮಸ್ಯೆಗಳಾದ ಅತಿಸಾರ ಭೇದಿ ನ್ಯೂಮೋನಿಯಾದ ಬಗ್ಗೆ ಕಾಳಜಿ ಮಹಿಸುವ ಕುರಿತು ತಾಯಂದಿರಿಗೆ ಆರೋಗ್ಯ ಶಿಕ್ಷಣದ ಮುಖಾಂತರ ಮಾಹಿತಿ ನೀಡಲಾಗುತ್ತಿದೆ.

ಶಾಸನಾತ್ಮಕ ನಿರ್ಣಯ

ಜಂಟಿ ಪರಿಶೀಲನಾ ಸಮಿತಿಯ ಕಾಲಾವಧಿ ವಿಸ್ತರಣೆ.

ಉಪಾಧ್ಯಕ್ಷಿಣಿಯವರು:- 1991ನೇ ಇಸವಿಯ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು 1992ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲು ಸಭೆಯು ಅನುಮತಿ ನೀಡಬೇಕೆಂದು ಸಭೆಯ ಮುಂದಿರುವ ಪ್ರಸ್ತಾವ :

ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ. ವೀರಪ್ಪ ಮೊಯಿಲಿ :- ಉಪಸಭಾಪತಿಯವರೆ, ದಿನಾಂಕ 20-3-92ರ ಲಿಖಿತ ಮೂಲಕ ಉತ್ತರಿಸುವ 19ನೇ ಪಟ್ಟಿಯಲ್ಲಿರುವ 67 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ 53 ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ವಿಷಯ: ನೆಲಮಂಗಲ ಮತ ಕ್ಷೇತ್ರದಲ್ಲಿರುವ ಕಲ್ಲುಗಣಿ ಗುತ್ತಿಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1325 (1540)

ಶ್ರೀ ಅಂಜನಮೂರ್ತಿ (ನೆಲಮಂಗಲ) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ನೆಲಮಂಗಲ ಮತ ಕ್ಷೇತ್ರದಲ್ಲಿ ಎಷ್ಟು ಜನಕ್ಕೆ ಕಲ್ಲು ಗಣಿ ಗುತ್ತಿಗೆ ನೀಡಲಾಗಿದೆ ?

ಆ) ಆ ಗುತ್ತಿಗೆದಾರರು ಹೆಚ್ಚು ಭಾಗ ಒತ್ತುವರಿ ಮಾಡಿ ಕಲ್ಲು ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ಗುತ್ತಿಗೆದಾರರಿಂದ ಸರ್ಕಾರಕ್ಕೆ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಅ) ನೆಲಮಂಗಲ ತಾಲ್ಲೂಕಿನಲ್ಲಿ ಸದ್ಯ ಚಾಲ್ತಿಯಲ್ಲಿರುವ ಗುತ್ತಿಗೆಗಳು ಒಟ್ಟು73 ಜನಕ್ಕೆ ಮಂಜೂರು ಮಾಡಿದೆ. ಅದರಲ್ಲಿ ಕಟ್ಟಡದ ಕಲ್ಲು 60 ಗುತ್ತಿಗೆಗಳು ಇಟ್ಟಿಗೆ ಮಣ್ಣು 12 ಗುತ್ತಿಗೆಗಳು ಒಂದು ಪಿಂಗ್ ಗ್ರಾನೈಟ್ ಗುತ್ತಿಗೆ.

ಆ) ಹೆಚ್ಚುವರಿ ಪ್ರದೇಶದಲ್ಲಿ ಅನಧಿಕೃತವಾಗಿ ಕೆಲಸ ಮಾಡುತ್ತಿರುವ ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ಇಂತಹ ಕಲ್ಲು ಗಣಿ ಕೆಲಸ ಮಾಡುವುದನ್ನು ಗುರ್ತಿಸಿ, ಕಲ್ಲು ಗಣಿ ಕೆಲಸಗಳನ್ನು ನಿಲ್ಲಿಸಲಾಗುತ್ತಿದೆ. ಅಂತಹವರಲ್ಲಿ ಕಟ್ಟಡದ ಕಲ್ಲು, ಇಟ್ಟಿಗೆ ಇವುಗಳ ಅನಧಿಕೃತ ಕೆಲಸ ಮಾಡುತ್ತಿರುವ ಹಾಗೂ ಕಲ್ಲು ಗಣಿಗಾರಿಕೆಯ ಮೇಲೆಯೇ ಜೀವನ ನಡೆಸುತ್ತಿರುವವರನ್ನು ಗುರ್ತಿಸಿ, ಅಧಿಕೃತ ಕೆಲಸ ಮಾಡುವಂತೆ ಅವರಿಂದ ಅರ್ಜಿಗಳನ್ನು ಪಡೆದು ಗುತ್ತಿಗೆಗಳನ್ನು ಹಿಂದಿನ ಅನಧಿಕೃತವಾಗಿ ಮಾಡಿದ ಗಣಿಗಾರಿಕೆಗೆ ದಂಡ ವಿಧಿಸಿ, ರಾಜಧನವನ್ನು ವಸೂಲು ಮಾಡಿ ಮಂಜೂರು ಮಾಡಲಾಗುತ್ತಿದೆ. ಅನಧಿಕೃತವಾಗಿ ಗ್ರಾನೈಟ್ ಕಲ್ಲುಗಳನ್ನು ಸಾಗಿಸುವವರ ಮೇಲೆ ರಾಜಧನ ಮತ್ತು ರಾಜಧನದ ಐದು ಪಟ್ಟು ಹಣ ದಂಡವಾಗಿ ವಸೂಲು ಮಾಡಲು ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ಚೆಕ್ ಪೋಸ್ಟ್‌ಗಳನ್ನು ಉಪಯೋಗಿಸಿಕೊಂಡು ಇತರೆ ಖನಿಜಗಳ ರವಾನೆಯನ್ನು ಪೂರ್ಣ ನಿಯಂತ್ರಣಕ್ಕೊಳಪಡಿಸುವ ಉದ್ದೇಶ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 1991-92ನೇ ಸಾಲಿನಲ್ಲಿ ರೂ. 3,13,475.00 ರಾಜಧನ ಸಮದಾಯವಾಗಿದೆ.

ವಿಷಯ:- ನೆಲಮಂಗಲ ಕ್ಷೇತ್ರದಲ್ಲಿರುವ ಆಯುರ್ವೇದಿ ಆಸ್ಪತ್ರೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1326 (1541)

ಶ್ರೀ ಅಂಜನಮೂರ್ತಿ (ನೆಲಮಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ನೆಲಮಂಗಲ ಮತಕ್ಷೇತ್ರದಲ್ಲಿ ಎಷ್ಟು ಆಯುರ್ವೇದಿಕ್ ಆಸ್ಪತ್ರೆಗಳಿವೆ ? (ಹೋಬಳಿವಾರು, ಗ್ರಾಮವಾರು ಮಾಹಿತಿ ನೀಡುವುದು)

2. [illegible]

ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

3. ಹಾಗಿದ್ದಲ್ಲಿ ಮೇಲ್ಕಂಡ ಯಾವ ಯಾವ ಆಸ್ಪತ್ರೆಗಳಿಗೆ ಪ್ರತಿ ವರ್ಷ ಎಷ್ಟು ಮೊತ್ತದ ಔಷಧಿಗಳನ್ನು ಒದಗಿಸಲಾಗುತ್ತಿದೆ ? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1. ಎರಡು.

   1. ಮೋಟಗಾನಹಳ್ಳಿ (ಸೋಲೂರು ಹೋಬಳಿ)
   2. ಮಾಚೋಹಳ್ಳಿ (ದಾಸನಪುರ ಹೋಬಳಿ)

2. ಇಲ್ಲ.

3. ಪ್ರತಿಯೊಂದು ಔಷಧಾಲಯಕ್ಕೆ ಆಯವ್ಯಯದಲ್ಲಿ ಒಟ್ಟು ರೂ.8,000-00ಗಳ ಮೊತ್ತದ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ. ಅದರಲ್ಲಿ ಶೇಕಡಾ 60 ರಂತೆ ರೂ. 4,800-00ಗಳ ಮೌಲ್ಯದ ಆಯುರ್ವೇದ ಔಷಧಿಗಳನ್ನು ಬೆಂಗಳೂರಿನ ಸರ್ಕಾರಿ ಕೇಂದ್ರೀಯ ಔಷಧಾಗಾರದಿಂದ ಸರಬರಾಜು ಮಾಡಲಾಗಿದೆ. ಉಳಿದ ಶೇಕಡಾ 40ರ ರೂ. 3,200-00 ಗಳ ಮೌಲ್ಯದ ದರ ಗುತ್ತಿಗೆಯ ಔಷಧಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಂಗಳೂರು (ಗ್ರಾಮಾಂತರ) ಮತ್ತು ಬೆಂಗಳೂರು (ನಗರ) ಜಿಲ್ಲೆ ಇವರು ಈ ತಿಂಗಳಲ್ಲಿ ಖರೀದಿಸಿ ಸರಬರಾಜು ಮಾಡುವುದಾಗಿ ತಿಳಿಸಿರುತ್ತಾರೆ.

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯಲ್ಲಿ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಂದ ಬರುವ ಆದಾಯದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1327 (1542)

ಶ್ರೀ ಅಂಜನಾ ಮೂರ್ತಿ (ನೆಲಮಂಗಲ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿ ವ್ಯಾಪ್ತಿಯಲ್ಲಿ ಬರುವ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳೆಷ್ಟು ?

ಆ) ಇವುಗಳಲ್ಲಿ ಯಾವ ಯಾವ ಕೈಗಾರಿಕೆ, ಉದ್ಯಮಗಳಿಗೆ ಎಷ್ಟೆಷ್ಟು ಕಂದಾಯವನ್ನು ನಿಗಧಿ ಮಾಡಲಾಗಿದೆ. (1987 ರಿಂದ 1991ರವರೆಗೆ ಕೈಗಾರಿಕೆ ಉದ್ಯಮಗಳ ಹೆಸರು ಮತ್ತು ನಿಗಧಿಪಡಿಸಲಾದ ಕಂದಾಯದ ಮೊತ್ತದ ಪೂರ್ಣ ಮಾಹಿತಿ ಒದಗಿಸುವುದು)

ಇ) ಇದುವರೆವಿಗೆ ವಸೂಲಾದ ಒಟ್ಟು ಮೊತ್ತವೆಷ್ಟು ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 13 ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು 5 ಮಧ್ಯಮ ಮತ್ತು ಭಾರಿ ಪ್ರಮಾಣದ ಕೈಗಾರಿಕೆಗಳು ದಾಸನಪುರ ಹೋಬಳಿ ವ್ಯಾಪ್ತಿಯಲ್ಲಿವೆ.

ಆ) ಈ ಪ್ರಶ್ನೆಯು ಈ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ:-ನೆಲಮಂಗಲ ತಾಲ್ಲೂಕಿನಲ್ಲಿ ಕೈಗಾರಿಕೋದ್ಯಮಿಗಳಿಗೆ ನೀಡಿರುವ ಸಾಲದ ಮೊತ್ತ.

ಚುಕ್ಕೆ ಗುರುತಿಲ್ಲ ಪ್ರಶ್ನೆ 1328 (1543)

ಶ್ರೀ ಅಂಜನಾ ಮೂರ್ತಿ (ನೆಲಮಂಗಲ) ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಯಲ್ಲಿ ಎಷ್ಟು ಜನ ಕೈಗಾರಿಕೋದ್ಯಮಿಗಳಿಗೆ ಎಷ್ಟು ಸಾಲ ಮಂಜೂರು ಮಾಡಲಾಗಿದೆ. (ಕೈಗಾರಿಕೆ ಮತ್ತು ಮಾಲೀಕರ ಹೆಸರು ಒಟ್ಟು ಮೊತ್ತ ಪೂರ್ಣ ಮಾಹಿತಿ ನೀಡುವುದು);

ಆ) ಅವುಗಳಲ್ಲಿ ಎಷ್ಟು ಜನ ಮಾಲೀಕರು ಮರುಪಾವತಿ ಮಾಡಿರುವವರು ;

ಇ) ಯಾವ ಯಾವ ಕೈಗಾರಿಕೆಗಳ ಮಾಲೀಕರು ಎಷ್ಟು ಹಣ ಬಾಕಿ ಉಳಿಸಿಕೊಂಡಿದ್ದಾರೆ ;

ಈ) ಹಾಗಿದ್ದಲ್ಲಿ, ಅವರುಗಳಿಂದ ಮರು ಪಾವತಿಗಾಗಿ ಸರಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು)

ಅ) ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಯಲ್ಲಿ 11 ಕೈಗಾರಿಕೋದ್ಯಮಿಗಳಿಗೆ ರೂ. 1,39,967-00ಗಳ ರಾಜ್ಯ ನೆರವು ಸಾಲ ಹಾಗೂ ಬೀಜಧನ ಸಾಲ ಮಂಜೂರು ಮಾಡಲಾಗಿದೆ. (ವಿವರ ಕೆಳಗಿನಂತಿದೆ)

1) ಶ್ರೀಕಂಠಯ್ಯ, ದಾಮಕೋಟಿ ಆರ್ಟ್‌ವರ್ಕ್ಸ್ ನೆಲಮಂಗಲ.
2) ಶ್ರೀ ಗಂಗಯ್ಯ, ನಾರ್ತಸ್ಟ್ರೀಟ್, ನೆಲಮಂಗಲ
3) ಎಸ್.ಡಿ.ಅಂಜನಪ್ಪ, ಸೀತಾರಾಮ ಭಟ್ಟರಪಾಳ್ಯ
4) ಅಮೀತ್ ಬ್ರೀಕ್ಸ್ ಅಂಡ್ ಟೈಲ್ಸ್, ನೆಲಮಂಗಲ
5) ಭಾಗ್ಯಲಕ್ಷ್ಮೀ ಸಿಲ್ಕ್‌ಹೌಸ್, ವೀವರ್ಸ್, ಕಾಲೋನಿ
6) ಅಭಿಲಾಸ್ ಸೀಲ್ಕ್ ಇಂಡಸ್ಟ್ರೀಸ್ ಅರಿಶಿನಕುಂಟೆ
7) ಬಸವೇಶ್ವರ ಸಿಲ್ಕ್ ಇಂಡಸ್ಟ್ರೀಸ್, ನೆಲಮಂಗಲ
8) ರಾಜೇಶ್ವರಿ ಗ್ರಾನೈಟ್ಸ್, ನೆಲಮಂಗಲ
9) ವೆಂಕಟೇಶ್ವರ ಇಂಡಸ್ಟ್ರೀಸ್, ನೆಲಮಂಗಲ
10) ಶ್ರೀನಿವಾಸ ಆಗ್ರೋ ಸರ್ವಿಸ್ ಸೆಂಟರ್
11) ರಂಗನಾಥ್ ವುಡ್ ಇಂಡಸ್ಟ್ರೀಸ್.

ಆ) ಇದುವರೆಗೂ ಯಾರು ಮರು ಪಾವತಿ ಮಾಡಿರುವುದಿಲ್ಲ. ಸಹಾಯಕ ನಿರ್ದೇಶಕರು ದೊಡ್ಡಬಳ್ಳಾಪುರ ರವರು ವಸೂಲಾತಿಗೆ ಕ್ರಮ ಕೈಗೊಂಡಿದ್ದಾರೆ.

ಇ) 7 ಕೈಗಾರಿಕೆಗಳು ಬಾಕಿ ಉಳಿಸಿಕೊಂಡಿರುತ್ತಾರೆ. (ವಿವರ ಕೆಳಕಂಡಂತಿದೆ) ಉಳಿದ 4 ಕೈಗಾರಿಕೋದ್ಯಮಿಗಳು ಮರುಪಾವತಿ ಮಾಡಲು ಇನ್ನೂ ಕಾಲಾವಕಾಶವಿದೆ.

1)	ಶ್ರೀಕಂಠಯ್ಯ, ನೆಲಮಂಗಲ	2,000-00
2)	ಸಿ. ಗಂಗಯ್ಯ, ನೆಲಮಂಗಲ	2,000-00
3)	ಎಸ್.ಡಿ.ಅಂಜನಪ್ಪ, ಸೀತಾರಾಮ ಭಿ ಪಾಳ್ಯ	1,500-00
4)	ರಾಜೇಶ್ವರಿ ಗ್ರಾನೈಟ್ಸ್, ಮೈಲಾನಹಳ್ಳಿ	12,200-00
5)	ಶ್ರೀನಿವಾಸ ಆಗ್ರೋ ಸೆಂಟರ್ ನೆಲಮಂಗಲ	11,887-00
6)	[illegible]	9,600-00

7)	ವೆಂಕಟೇಶ್ವರ ಇಂಡಸ್ಟ್ರೀಸ್, ನೆಲಮಂಗಲ	9,300-00
	ಒಟ್ಟು	48,487-00

ಈ) ಈಗಾಗಲೇ ಘಟಕಗಳಿಗೆ ತಿಳುವಳಿಕೆ ಪತ್ರಗಳನ್ನು ನೀಡಲಾಗಿದ್ದು, ಮರುಪಾವತಿ ಆಗದೆ ಇರುವ ಕಾರಣ ಬಾಕಿ ಇರುವ ಹಣವನ್ನು ಭೂ ಕಂದಾಯ ವಸೂಲಿ ರೀತಿಯಲ್ಲಿ ವಸೂಲಿ ಮಾಡಲು, ಜಿಲ್ಲಾಧಿಕಾರಿಗಳಿಗೆ ಕಳುಹಿಸಿ ಕೊಡಲಾಗುವುದು.

ವಿಷಯ:- ಸಾಮಾಜಿಕ ಬಹಿಷ್ಕಾರದ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 1329 (1545)

ಶ್ರೀ ಕೆ. ಸಿದ್ದಯ್ಯ (ಸಂತೆ ಮಾರನಹಳ್ಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಾಗರಿಕ ಹಕ್ಕುಗಳನ್ನು ಚಲಾಯಿಸಿದ್ದಕ್ಕಾಗಿ ಪರಿಶಿಷ್ಟ ಜಾತಿ ಜನರಿಗೆ ಅನೇಕ ಗ್ರಾಮಗಳಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಾಮಾಜಿಕ ಬಹಿಷ್ಕರ ನಡೆದ ಗ್ರಾಮಗಳಾವುವು (ಗ್ರಾಮಗಳ ಹೆಸರುಗಳನ್ನು ನಮೂದಿಸುವುದು)

ಇ) ಸಾಮಾಜಿಕ ಬಹಿಷ್ಕಾರಕ್ಕೊಳಗಾದ ಜನರು ಉಪವಾಸದಿಂದ ನರಳುತ್ತಿರುವುದು ನಿಜವಲ್ಲವೇ ?

ಈ) ಶೋಷಣೆ ಮತ್ತು ಕಿರುಕುಳದಿಂದ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದ ಜನರಿಗೆ ರಕ್ಷಣೆ ನೀಡುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಮೈಸೂರು ಜಿಲ್ಲೆ : 1)ಮಾದಪುರ 2)ಆಲಹಳ್ಳಿ, 3)ಮುಸುವಿನಕೊಪ್ಪಲು, 4) ಚಿಲಕವಾಡಿ, 5)ಬನ್ನೂರು 6) ಅರಕಲವಾಡಿ

ಮಂಡ್ಯ ಜಿಲ್ಲೆ : ಮಾಚನಾಯಕನಹಳ್ಳಿ

ಇ) ಇಲ್ಲಿಯವರೆವಿಗೆ ಅಂತಹ ಘಟನೆಗಳ ವರದಿ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ದೌರ್ಜನ್ಯ ಎಸಗುವವರ ವಿರುದ್ಧ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ(ದೌರ್ಜನ್ಯ ನಿವಾರಣಾ) ಕಾಯ್ದೆ 1989 ರ ಮೂಲಕ ಕಠಿಣ ಕ್ರಮಕ್ಕೈಗೊಳ್ಳಲಾಗುತ್ತದೆ ನಾಗರಿಕ ಹಕ್ಕು ಸಂರಕ್ಷಣಾ ಘಟಕದ ಮೂಲಕ ಸಂವಿಧಾನದತ್ತವಾದ ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಕ್ರಮಕ್ಕೈಗೊಳ್ಳಲಾಗುತ್ತದೆ.

ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರ ಜನರು ಶೋಷಣೆಗೆ ಈಡಾಗದಂತೆ ಸರ್ಕಾರ ಅವರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳ ಮೂಲಕ ಸಹಾಯ ನೀಡುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಕುಡಿಯುವ ನೀರಿಗೆ ತೊಂದರೆಯಾಗದಂತೆ ಅವರು ಹೆಚ್ಚಾಗಿ ವಾಸಿಸುವ ಸ್ಥಳಗಳಲ್ಲೇ ಕುಡಿಯುವ ನೀರಿನ ಬಾವಿ ಒದಗಿಸಲಾಗುತ್ತಿದೆ. ಅಗತ್ಯ ವಸ್ತುಗಳು ದೊರಕುವಂತಾಗಲು ನ್ಯಾಯ ಬೆಲೆ ಅಂಗಡಿಗಳನ್ನು ಸ್ಥಾಪಿಸಲಾಗುತ್ತಿದೆ. ಹಾಗೂ ಕೂಲಿಗೆ ಕರೆಯದೆ ಬಹಿಷ್ಕರಿಸಿದ ಸಂದರ್ಭದಲ್ಲಿ ಜವಾಹರ್ ರೋಜಗಾರ್ ಯೋಜನೆ ಮುಖಾಂತರ ಕೆಲಸ

ವಿಷಯ:- ರಾಜ್ಯದಲ್ಲಿರುವ ಡೆಂಟಲ್ ಹಾಗೂ ಮೆಡಿಕಲ್ ಕಾಲೇಜುಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1330 (1847)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಈಗಾಗಲೇ ಪರವಾನಗಿ ನೀಡಿರುವ ಡೆಂಟಲ್, ಮೆಡಿಕಲ್ ಕಾಲೇಜುಗಳೆಷ್ಟು ? (ವರ್ಷವಾರು, ಕಾಲೇಜುವಾರು ವಿವರ ನೀಡುವುದು)

ಆ) ಇನ್ನೂ ಪರವಾನಗಿ ಕೊಡುವ ಯೋಜನೆ ಸರ್ಕಾರದ ಮುಂದಿದೆಯೇ ?ಇದ್ದಲ್ಲಿ ಎಲ್ಲೆಲ್ಲಿ (ವಿವರ ನೀಡುವುದು)

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ದಂತ ಕಾಲೇಜುಗಳು -24

ವೈದ್ಯಕೀಯ ಕಾಲೇಜುಗಳು -18

ವಿವರಗಳನ್ನು ಅನುಬಂಧ-1 ಮತ್ತು 2 ರಲ್ಲಿ ನೋಡಬಹುದು.

ಆ) ಇನ್ನು 3 ವರ್ಷಗಳ ಕಾಲ ಯಾವುದೇ ವೈದ್ಯಕೀಯ ಕಾಲೇಜುಗಳನ್ನು ಮಂಜೂರು ಮಾಡಬಾರದೆಂದು ದಿನಾಂಕ 15-9-1990ರಂದು ನಿರ್ಧರಿಸಲಾಗಿದೆ.

ದಂತ ಕಾಲೇಜುಗಳನ್ನು ಪ್ರಾರಂಭಿಸಲು 1992ನೇ ಸಾಲಿನಲ್ಲಿ ಸ್ವೀಕೃತವಾದ ಇನ್ನೂ 22 ಅರ್ಜಿಗಳು ಸರ್ಕಾರದ ಪರಿಶೀಲನೆಯಲ್ಲಿರುತ್ತವೆ. ಈ ಅರ್ಜಿಗಳ ವಿವರಗಳನ್ನು ಅನುಬಂಧ 3ರಲ್ಲಿ ನೋಡಬಹುದು.

ಅನುಬಂಧ-1

ರಾಜ್ಯದಲ್ಲಿರುವ ದಂತ ಕಾಲೇಜುಗಳಿಗೆ ಪರವಾನಗಿ ನೀಡಿರುವ ಬಗ್ಗೆ ವಿವರಣಾ ಪಟ್ಟಿ (ವರ್ಷಾವಾರು : ಕಾಲೇಜುವಾರು)

ಕ್ರ.ಸಂ.	ದಂತ ಕಾಲೇಜುಗಳ ಹೆಸರು	ವರ್ಷ
ಸರ್ಕಾರಿ		
1	ಸರ್ಕಾರಿ ದಂತ ಮಹಾವಿದ್ಯಾಲಯ, ಬೆಂಗಳೂರು	1958
ಖಾಸಗೀ		
1	ಕಾಲೇಜ್ ಆಫ್ ಡೆಂಟಲ್ ಸರ್ಜರಿ, ಮಣಿಪಾಲ	1965
2	ಬಿ. ಇ. ಡೆಂಟಲ್ ಕಾಲೇಜು, ದಾವಣಗೆರೆ	1977
3	ಕೆ. ಎಲ್. ಇ. ದಂತ ಕಾಲೇಜು, ಬೆಳಗಾಂ	1985
4	ಎ. ಬಿ. ಶೆಟ್ಟಿ, ಸ್ಮಾರಕ ದಂತ ಕಾಲೇಜು, ಮಂಗಳೂರು	1985
5	ಎಚ್. ಕೆ. ಇ. ದಂತ ಕಾಲೇಜು, ಗುಲ್ಬರ್ಗ	1986
6	ಎಸ್. ಡಿ. ಎಂ. ದಂತ ಕಾಲೇಜು, ಧಾರವಾಡ	1986
7	ಮಾತೃಶ್ರೀ ರಮಾಬಾಯಿ ದಂತ ಕಾಲೇಜು, ಬೆಂಗಳೂರು	1986
8	ಒಕ್ಕಲಿಗರ ಸಂಘ, ದಂತ ಕಾಲೇಜು, ಬೆಂಗಳೂರು	1986
9	ಎಸ್. ಜೆ. ಎಂ. ದಂತ ಕಾಲೇಜು. ಚಿತ್ರದುರ್ಗ	1986
10	ಜೆ. ಎಸ್. ಎಸ್. ದಂತ ಕಾಲೇಜು. ಮೈಸೂರು	1986

11	ಪಿ. ಎಂ. ನಾಡಗೌಡ ಸ್ಮಾರಕ ದಂತ ಕಾಲೇಜು, ಬಾಗಲಕೋಟೆ	1987
12	ಕೆ. ಎಂ. ಸಿ. ಮಂಗಳೂರು (ದಂತ ವಿಭಾಗ)	1987
13	ಕೆ. ವಿ. ಜಿ. ದಂತ ಕಾಲೇಜು; ಸುಳ್ಯ (ದ. ಕ)	1991
14	ಸೋಮನಾಥ ಎಜುಕೇಶನ್ ಸೊಸೈಟಿ ದಂತ ಕಾಲೇಜು, ಬೀದರ್	1991
15	ಹಾಸನಾಂಬ ಎಜುಕೇಷನ್ ಟ್ರಸ್ಟ್ . ಹಾಸನ	1991
16	ಮಹಾತ್ಮಾ ಗಾಂಧಿ ವಿದ್ಯಾಪೀಠ, ಬೆಂಗಳೂರು	1991
17	ಗೋಕುಲ ಎಜುಕೇಶನ್ ಫೌಂಡೇಶನ್, ಬೆಂಗಳೂರು	1991
18	ಎಸ್ .ಜಿ. ಆರ್ ಎಜುಕೇಶನ್ ಟ್ರಸ್ಟ್ ಬೆಂಗಳೂರು	1991
19	ಪಿ. ಸಿ. ದಂತ ಕಾಲೇಜು, ಬೆಂಗಳೂರು	1991
20	ಸಂಭ್ರಮ್ ಚಾರಿಟೇಬಲ್ ಟ್ರಸ್ಟ್, ಕೆಜಿಎಫ್, ಕೋಲಾರ	1991
21	ವಿಜ್ಞಾನ್ ಇನ್ಸ್‌ಟಿಟ್ಯೂಟ್ ಆಫ್ ದಂತ ವಿಜ್ಞಾನ, ಬೆಂಗಳೂರು	1991
22	ಅಕಾಡೆಮಿ ಎಫ್ ಲಿಬರಲ್ ಎಜುಕೇಶನ್, ರಾಯಚೂರು	1991
23	ಆಲ್ ಅಮೀನ್ ಚಾರಿಟೇಬಲ್ ಫಂಡ್, ವಿಜಾಪುರ	1991

ಅನುಬಂಧ-2

ರಾಜ್ಯದಲ್ಲಿ ಪರವಾನಗಿ ನೀಡಿರುವ ವೈದ್ಯಕೀಯ ಕಾಲೇಜುಗಳ ವಿವರಣಾ ಪಟ್ಟಿ(ವರ್ಷಾವಾರು)

ಕ್ರ.ಸಂ.	ವೈದ್ಯಕೀಯ ಕಾಲೇಜುಗಳ ಹೆಸರು	ವರ್ಷ
ಸರ್ಕಾರಿ ವೈದ್ಯಕೀಯ ಕಾಲೇಜುಗಳ ಹೆಸರು		
1	ಮೈಸೂರು ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು	1924
2	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	1955
3	ಕೆ. ಎಂ. ಸಿ. ಹುಬ್ಬಳ್ಳಿ	1959
4	ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ	1961
ಖಾಸಗೀ ವೈದ್ಯಕೀಯ ಕಾಲೇಜು		
1	ಕೆ. ಎಂ. ಸಿ. ಮಣಿಪಾಲ ವಿಭಾಗ	1953
2	ಸೆಂಟ್‌ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	1963
3	ಜೆ. ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	1963
4	ಎಂ. ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	1963
5	ಜೆ. ಜೆ. ಎಂ. ವೈದ್ಯಕೀಯ ಕಾಲೇಜು, ದಾವಣಗೆರೆ	1965
6	ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು, ಬೆಂಗಳೂರು	1979
	ಕೆ. ಎಂ. ಸಿ. ಮಂಗಳೂರು ವಿಭಾಗ	1977
7	ಕೆಂಪೇಗೌಡ ವೈದ್ಯಕೀಯ ವಿದ್ಯಾಸಂಸ್ಥೆ, ಬೆಂಗಳೂರು	1980
8	[illegible]	1981

9	ಆಲ್ ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	1984
10	ಜೆ. ಎಸ್. ಎಸ್. ವೈದ್ಯಕೀಯ ಕಾಲೇಜು, ಮೈಸೂರು	1984
11	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಸಂಸ್ಥೆ , ಬೆಳ್ಳೂರು	1985
12	ಬಿ. ಎಲ್. ಡಿ. ಇ. ವೈದ್ಯಕೀಯ ಕಾಲೇಜು, ಬಿಜಾಪುರ	1986
13	ಶ್ರೀ ದೇವರಾಜ ಅರಸ್ ವೈದ್ಯಕೀಯ ಕಾಲೇಜು, ಕೋಲಾರ	1986
14	ಶ್ರೀ ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	1988

ಅನುಬಂಧ - 3

1991ನೇ ಸಾಲಿನಲ್ಲಿ ಹೊಸ ದಂತ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಬಂದಿರುವ ಅರ್ಜಿಗಳು

1) ಕಾಲೇಜ್ ಆಫ್ ಡೆಂಟಲ್ ಸರ್ಜರಿ, ಮಣಿಪಾಲ್
2) ಕರ್ನಾಟಕ ಪೀಪಲ್ ಎಜುಕೇಷನ್ ಸೊಸೈಟಿ, ರಾಯಚೂರು
3) ಆರ್.ವಿ. ಡೆಂಟಲ್ ಕಾಲೇಜ್, ಜಯನಗರ , ಬೆಂಗಳೂರು
4) ಶ್ರೀ ದೇವರಾಜ ಅರಸ್ ಎಜುಕೇಷನಲ್ ಟ್ರಸ್ಟ್ , ಕೋಲಾರ
5) ಶ್ರೀ ರಮಣಶ್ರೀ ಚಾರಿಟೆಬಲ್ ಫೌಂಡೇಶನ್, ಬೆಂಗಳೂರು
6) ಶ್ರೀ ಭಾರತೀಯ ವಿದ್ಯಾರ್ಥಿನಿಲಯ ವಿದ್ಯಾ ಸಂಸ್ಥೆ, ಕೋಲಾರ
7) ಅಮೃತ ಎಜುಕೇಷನಲ್ ಟ್ರಸ್ಟ್, ಬೆಂಗಳೂರು (ಕೆಜಿಎಫ್)
8) ಒಕ್ಕಲಿಗರ ಸಂಘ ಆಡಳಿತ ಮಂಡಳಿ, ತುಮಕೂರು
9) ಶ್ರೀ ಪಾರ್ಶ್ವನಾಥ ಎಜುಕೇಷನ್ ಸೊಸೈಟಿ, ಚಳ್ಳಕೆರೆ
10) ಪರಂಜ್ಯೋತಿ ಎಜುಕೇಷನಲ್ ಟ್ರಸ್ಟ್ , ಬೆಂಗಳೂರು
11) ನವಭಾರತಿ ವಿದ್ಯಾಪೀಠ ಟ್ರಸ್ಟ್, ಅಫಜಲಪುರ, ಗುಲ್ಬರ್ಗಾ
12) ಸದ್ಗುರು ಶ್ರೀ ಕೋಡಿಮಠ ಮಹಾವಿದ್ಯಾಪೀಠ, ಅರಸೀಕೆರೆ
13) ಇಂದಿರಾ ಪ್ರಿಯದರ್ಶಿನಿ ಎಜುಕೇಷನ್ ಸೊಸೈಟಿ, ಕೋಲಾರ
14) ಶ್ರೀ ಕೃಷ್ಣದೇವರಾಯ ಎಜುಕೇಷನ್ ಟ್ರಸ್ಟ್ ,ಹುಣಸೇಮಾರನಹಳ್ಳಿ, ಬೆಂಗಳೂರು
15) ಎಂ. ಎಂ. ಕಾಲೇಜ್ ಆಫ್ ಫಾರ್ಮಸಿ, ಕೆ. ಕೆ. ದೊಡ್ಡಿ, ರಾಮನಗರ
16) ಡಾ. ಬಿ. ಎಂ. ತಿಪ್ಪೇಸ್ವಾಮಿ ಮೆಮ್ಮೋರಿಯಲ್ ಎಜುಕೇಷನ್ ಅಸೋಸಿಯೇಷನ್, ಬೆಂಗಳೂರು
17) ಶರಬೇಶ್ವರ ವಿದ್ಯಾಪೀಠ, ಬಳ್ಳಾರಿ
18) ಇಸ್ಲಾಮಿಕ್ ಅಕಾಡೆಮಿ ಆಫ್ ಎಜುಕೇಷನ್, ಮಂಗಳೂರು
19) ರಾಷ್ಟ್ರೀಯ ರಚನಾತ್ಮಕ ಸಮಿತಿ, ಬೀದರ್
20) ವಿಶ್ವೇಶ್ವರ ಎಜುಕೇಷನ್ ಟ್ರಸ್ಟ್, ಬೆಂಗಳೂರು
21) ಮರಾಠ ಮಂಡಳ, ಬೆಳಗಾಂ
22) ರಾಷ್ಟ್ರೀಯ ಶಿಕ್ಷಣ ಸಮಿತಿ, ಶಿವಮೊಗ್ಗ

ವಿಷಯ:- ಕೈಗಾರಿಕಾ ಉದ್ಯಮಗಳ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1331 (1848)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು

ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿರುವ ಎಷ್ಟು ಕೈಗಾರಿಕಾ ಉದ್ಯಮಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲಾಗಿದೆ? (ಮಾರಾಟ ಮೊತ್ತ ಸಹಿತ ವಿವರ ನೀಡುವುದು)

ಆ) ಮಾರಾಟ ಮಾಡಿದ ಉದ್ಯಮಗಳಲ್ಲಿ ಇದ್ದ ಕಾರ್ಮಿಕರ ಹಿತಚಿಂತನೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಯಾವುದು ಅಲ್ಲ

ಆ) ಉದ್ಭವಿಸುವುದಿಲ್ಲ.

ವಿಷಯ:- ಶುಶ್ರೂಷಾ ಯೋಜನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1332 (1849)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದ ಹೊಸ ಕಾರ್ಯಕ್ರಮ ಶುಶ್ರೂಷಾ ಯೋಜನೆಯಲ್ಲಿ ಕುಂದಾಪುರ ಕ್ಷೇತ್ರದಲ್ಲಿ ಈಗಾಗಲೇ ವೈದ್ಯಕೀಯ ಇಲಾಖೆಯವರು ಭೇಟಿ ಇತ್ತ ಗ್ರಾಮಗಳೆಷ್ಟು? (ಗ್ರಾಮವಾರು, ದಿನಾಂಕವಾರು ವಿವರ ನೀಡುವುದು)

ಆ) ಈ ಭೇಟಿಯ ಕಾಲದಲ್ಲಿ ತಪಾಸಣೆ ಮಾಡಿದ ರೋಗಿಗಳೆಷ್ಟು? (ಗ್ರಾಮವಾರು, ದಿನಾಂಕವಾರು ವಿವರ ನೀಡುವುದು)

ಇ) ಇದಕ್ಕೆ ತಗುಲಿದ ವೆಚ್ಚವೆಷ್ಟು? (ಗ್ರಾಮವಾರು, ಔಷಧಿಯ ಮೊತ್ತ, ತಂಡದವರ ಖರ್ಚಿನ ವಿವರ ನೀಡುವುದು)

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 8 (ಗ್ರಾಮವಾರು, ದಿನಾಂಕವಾರು ವಿವರಗಳನ್ನು ಲಗತ್ತಿಸಿದ ತಃಖ್ತೆಯಲ್ಲಿ ನೀಡಿದೆ)

ಆ) 811

(ಗ್ರಾಮವಾರು, ದಿನಾಂಕವಾರು ವಿವರಗಳನ್ನು ತಃಖ್ತೆಯಲ್ಲಿ ನೀಡಿದೆ)

ಇ) ಇಲ್ಲ.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಕ್ಷೇತ್ರದ ಶುಶ್ರೂಷಾ ಕಾರ್ಯಕ್ರಮದ ವರದಿ

ಕ್ರಮ ಸಂಖ್ಯೆ	ಗ್ರಾಮಗಳ ಹೆಸರು	ಶುಶ್ರೂಷಾ ಕಾರ್ಯಕ್ರಮ ಜರುಗಿದ ದಿನಾಂಕ	ಮೊದಲನೆ ಬಾರಿಗೆ ವೈದ್ಯಕೀಯ ತಪಾಸಣೆ ಹೊಂದಿದವರ ಸಂಖ್ಯೆ
1	ಬೆಳ್ವೆ	29-10-91	80
2	ಗಂಗೊಳ್ಳಿ	22-10-91	126
3	ಅಂಪಾರು	20-10-91	84
4	ಬಸ್ರೂರು	26-10-91	120
5	ಸಿದ್ದಾಪುರ	15-11-91	82
6	ಕುರ್ಕುಂಜೆ	28-11-91	94
7	ಕೋಟೇಶ್ವರ	25-11-91	33
8	ಅಮಾಸೆಬೈಲು	20-11-91	192
	ಮೊತ್ತ		811

ವಿಷಯ :- ಕಿರಿಯ ಆರೋಗ್ಯ ಸಹಾಯಕಿಯರ ನೇಮಕಾತಿ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1333 (1850)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ದಕ್ಷಿಣ ಕನ್ನಡ ಜಿಲ್ಲೆಯ ಕಿರಿಯ ಆರೋಗ್ಯ ಸಹಾಯಕಿಯರ ನೇಮಕಾತಿ ಬಗ್ಗೆ ಮಂಗಳೂರಿನಲ್ಲಿ ಸಂದರ್ಶನ ಮುಗಿದಿದ್ದು ಇವರ ನೇಮಕಾತಿಯನ್ನು ಯಾವಾಗ ಮಾಡಲಾಗುವುದು ?
2. ಈ ಸಂದರ್ಶನದಲ್ಲಿ ಅಭ್ಯರ್ಥಿಗಳ ಆಯ್ಕೆಯಲ್ಲಿ ನೀತಿ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ದೂರುಗಳಿರುವುದಾಗಿ ಕೇಳಿ ಬರುತ್ತಿರುವುದು ನಿಜವೇ ?
3. ನಿಜವಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)

1. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಕೊಡಲು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ಸಂದರ್ಶನವು ಮಂಗಳೂರಿನಲ್ಲಿ ಮುಗಿದಿರುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ವರದಿಗಳು ಬಂದ ಕೂಡಲೇ ಅವುಗಳನ್ನು ಕೂಲಂಕುಷವಾಗಿ ತೆಗೆದುಕೊಳ್ಳಲು ಆದೇಶ ಹೊರಡಿಸಲಾಗುವುದು.
2. ಈವರೆವಿಗೆ ಯಾವುದೇ ದೂರು ಬಂದಿರುವುದಿಲ್ಲ.
3. ಉದ್ಭವಿಸುವುದಿಲ್ಲ.

ವಿಷಯ:- ಜಯ ಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಧರ್ಮಶಾಲೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1335 (1826)

ಶ್ರೀ ಪೆರಿಕಲ್. ಎಂ. ಮಲ್ಲಪ್ಪ (ಚಿಕ್ಕಪೇಟೆ ಕ್ಷೇತ್ರ) ಮಾನ್ಯ ಆರೋಗ್ಯ ಮಂತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಶ್ರೀ ಜಯಚಾಮರಾಜೇಂದ್ರ ಭಾರತೀಯ ವೈದ್ಯಕೀಯ ಸಂಸ್ಥೆಯಲ್ಲಿ ಹಾಸಿಗೆಗಳ ಸಂಖ್ಯೆ ಎಷ್ಟು ?
2. ಒಳರೋಗಿಗಳನ್ನು ನೋಡಿಕೊಳ್ಳಲು ಬರುವವರಿಗೆ ಧರ್ಮ ಶಾಲೆ ಇದೆಯೆ?
3. ಇಲ್ಲವಾದಲ್ಲಿ ಈ ಆಸ್ಪತ್ರೆಯ ಆವರಣದಲ್ಲಿ ಸಾಕಾಗುವಷ್ಟು ಜಾಗ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?
4. ಸರ್ಕಾರದ ಧರ್ಮಶಾಲೆಯನ್ನು ಕಟ್ಟಿಸಲು ಮತ್ತು ಡಾಕ್ಟರುಗಳಿಗೆ, ನರ್ಸ್‌ಗಳಿಗೆ ವಸತಿ ಗೃಹಗಳನ್ನು ಕಟ್ಟಿಸಲು ಕ್ರಮ ಕೈಗೊಂಡಿದೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1. 315 ಹಾಸಿಗೆಗಳ ಸೌಲಭ್ಯವಿರುತ್ತದೆ.
2. ಇಲ್ಲ
3. ಆಸ್ಪತ್ರೆಯ ಆವರಣದಲ್ಲಿ ಹೆಚ್ಚಿನ ಜಾಗ ಖಾಲಿ ಇರುವುದಿಲ್ಲ.
4. ಈಗಿರುವ ಜಾಗದಲ್ಲಿ ಆಸ್ಪತ್ರೆಯ ಡಾಕ್ಟರುಗಳಿಗೆ ಮತ್ತು ಸಿಬ್ಬಂದಿಗೆ ವಸತಿಗೃಹಗಳನ್ನು ಕಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈಗ ಸದ್ಯಕ್ಕೆ ಧರ್ಮ ಶಾಲೆಯ ಅವಶ್ಯಕತೆ ಇರುವುದಿಲ್ಲ.

ವಿಷಯ :- ಗ್ರಾನೈಟ್ ಕಲ್ಲುಗಳ ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1336 (1842)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ

ಅ) ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆ ನಡೆಯುತ್ತಿರುವುದು ನಿಜವಲ್ಲವೇ ?

ಆ) ಇದನ್ನು ತಡೆಗಟ್ಟಲು ಸರ್ಕಾರ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದೆಯೇ ? ಹಾಗಿದ್ದರೆ ಅದರ ವಿವರಗಳನ್ನು ನೀಡುವುದು ?

ಇ) ಸರ್ಕಾರಕ್ಕೆ ಗ್ರಾನೈಟ್ ಗುತ್ತಿಗೆಯಿಂದ 1987-88, 1988-89, 1989-90, 1990 91ರಲ್ಲಿ ಎಷ್ಟು ಆದಾಯ ಬಂದಿರುತ್ತದೆ. (ವಿವರ ಒದಗಿಸುವುದು)

ಈ) ಗುಪ್ತವಾಗಿ ಅಕ್ರಮದಿಂದ ಗ್ರಾನೈಟ್ ಸಾಗಿಸುತ್ತಿರುವುದನ್ನು ನಿಲ್ಲಿಸಲು ಕ್ರಮ ತೆಗೆದುಕೊಂಡು ಯಾರಿಗಾದರೂ ಶಿಕ್ಷೆ ಅಥವಾ ದಂಡ ವಿಧಿಸಲಾಗಿದೆಯೇ ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು)

ಅ) ಕೆಲವೊಂದು ಪ್ರಕರಣಗಳು ಗಮನಕ್ಕೆ ಬಂದಿವೆ.

ಆ) ಅನಧಿಕೃತ ಗ್ರಾನೈಟ್ ಗಣಿಗಾರಿಕೆ ಹಾಗೂ ಸಾಗಾಣಿಕೆಯನ್ನು ತಡೆಯಲು ಗ್ರಾನೈಟ್ ನಿಕ್ಷೇಪದ ಸ್ಥಳಗಳಿಗೆ ಅನಿರೀಕ್ಷಿತ ದಾಳಿ ನಡೆಸಿ, ದಿಮ್ಮಿಗಳನ್ನು ಜಪ್ತಿ ಮಾಡಲಾಗುತ್ತಿದೆ. ಮಂಗಳೂರಿನ ಬಳಿ 4 ಚೆಕ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಖನಿಜ ರವಾನೆಯ ಮೇಲೆ ನಿಗಾ ಇಡಲಾಗಿದೆ. ಖನಿಜ ರವಾನೆ ಪರ್ಮಿಟ್‌ನ್ನು ಕಡ್ಡಾಯಗೊಳಿಸಲಾಗಿದ್ದು, ಪರ್ಮಿಟ್ ಇಲ್ಲದ ಗ್ರಾನೈಟ್ ದಿಮ್ಮಿಗಳಿಗೆ ರಾಜಧನದ ಐದರಷ್ಟನ್ನು ದಂಡವನ್ನಾಗಿ ವಸೂಲಿ ಮಾಡಲಾಗುತ್ತಿದೆ. ಕಾರವಾರದ ಬಂದರಿನಲ್ಲಿ ಪ್ರತಿ ಗ್ರಾನೈಟ್ ದಿಮ್ಮಿಗಳನ್ನು ಪರ್ಮಿಟ್ ಹೊಂದಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ತಪಾಸಣೆ ಮಾಡಲಾಗುತ್ತಿದೆ. ಮಂಗಳೂರು ಬಂದರಿನಲ್ಲಿ ಎರಡನೇ ಬಾರಿಗೆ ರಫ್ತಾಗುವ ಮುನ್ನ ತಪಾಸಣೆಗೆ ಒಳಪಡಿಸಲು ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳಿಗೆ ಅಧಿಕಾರ ನೀಡುವಂತೆ ಬಂದರು ಪ್ರಾಧಿಕಾರವನ್ನು ಕೋರಲಾಗಿದೆ. ಅಲ್ಲದೆ ವಾಣಿಜ್ಯ ತೆರಿಗೆ ಇಲಾಖೆಯ ಹಾಲಿ ಇರುವ ಚೆಕ್ ಪೋಸ್ಟ್‌ನ ಅಧಿಕಾರಿಗಳಿಗೆ ಖನಿಜ ರವಾನೆಯ ವಾಹನಗಳನ್ನು ತಪಾಸಣೆ ಮಾಡಲು ಮತ್ತು ದಂಡ ವಸೂಲಿ ಮಾಡಲು ಅಧಿಕಾರ ನೀಡುವ ಯೋಚನೆ ಸರ್ಕಾರಕ್ಕಿದೆ. ಕಂದಾಯ ಇಲಾಖೆಯ ಅಧಿಕಾರಿಗಳಿಗೂ ತಪಾಸಣೆ ಮಾಡುವ ಜಪ್ತಿ ಮಾಡುವ ಹಾಗೂ ದಂಡ ವಸೂಲಿ ಮಾಡುವ ಅಧಿಕಾರವನ್ನು ಕೆ. ಎಂ. ಎಂ. ಸಿ. ಆರ್. ನಿಯಮಾವಳಿ 1969 ರಡಿಯಲ್ಲಿ ನೀಡಲಾಗಿದೆ. ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ಅನಧಿಕೃತ ಚಟುವಟಿಕೆಗಳನ್ನು ತಡೆಯಲು ತೆಗೆದುಕೊಳ್ಳಲಾಗುತ್ತಿದೆ.

ಇ) ಸರ್ಕಾರಕ್ಕೆ 1987 ರಿಂದ ಗ್ರಾನೈಟ್ ರಫ್ತಿನಿಂದ ಬಂದ ರಾಜಧನದ ವಿವರ ಕೆಳಗಿನಂತಿದೆ :

1987-88	27.98 ಲಕ್ಷಗಳು
1988-89	60.17 ಲಕ್ಷಗಳು
1989-90	56.92 ಲಕ್ಷಗಳು
1990-91	133.00 ಲಕ್ಷಗಳು
1991-92 (ಫೆಬ್ರವರಿ ವರೆಗೆ)	240.00 ಲಕ್ಷಗಳು

ಈ) ಶಿಕ್ಷೆಯಾಗಿಲ್ಲ. ಆದರೆ ದಂಡ ವಿಧಿಸಲಾಗಿದೆ.

ವಿಷಯ:-ಮರಳು , ಕಲ್ಲು ತೆಗೆಯಲು ಪರವಾನಿಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1337 (1924)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ದಕ್ಷಿಣ ಕನ್ನಡ ಜಿಲ್ಲೆಯ ಖಾಸಗಿ ಸ್ಥಳದಿಂದ ಮತ್ತು ಸಮುದ್ರ ದಡದಿಂದ ಮರಳು ಮತ್ತು ಕಲ್ಲು ತೆಗೆಯಲು ಸರ್ಕಾರ ಪರವಾನಗಿ ಕೊಟ್ಟಿದೆಯೇ ?
2. ಹಾಗಿದ್ದಲ್ಲಿ ಅವರ ವಿಳಾಸ ಮತ್ತು ಸ್ಥಳದ ವಿಸ್ತೀರ್ಣ, ಸರ್ವೆ ನಂ. ಮತ್ತು ಎಲ್ಲೆಲ್ಲಿ ಎಂಬ ವಿವರಗಳನ್ನು ನೀಡುವುದು.
3. ಪರವಾನಗಿ ಇಲ್ಲದೆ ಸಮುದ್ರದ ಕಿನಾರೆ ಮತ್ತು ಖಾಸಗಿ ಸ್ಥಳದಿಂದ ಮರಳು ಕಲ್ಲು ತೆಗೆಯುವರನ್ನು ಪತ್ತೇ ಹಚ್ಚಲಾಗಿದೆಯೇ ?
4. ಅಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿನೆಯೇ ?
5. ಅಂತಹವರ ಶೋಧನೆಗಾಗಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳು ಏನು ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸಮುದ್ರ ದಡದಿಂದ ಸುಮಾರು 500 ಮೀಟರು ಆಚೆಗೆ ಸಿಲಿಕಾ ಮರಳಿಗಾಗಿ 31 ಗಣಿ ಗುತ್ತಿಗೆಗಳನ್ನು ಖನಿಜ ರಿಯಾಯಿತಿ ನಿಯಮಗಳ ಮೇರೆಗೆ ಸರ್ಕಾರ ಮಂಜೂರು ಮಾಡಿದೆ. ಸಮುದ್ರದಡದಲ್ಲಿ ಕಲ್ಲು ಗಣಿಗಳನ್ನು ಮಂಜೂರು ಮಾಡಿರುವುದಿಲ್ಲ. ಆದರೆ ಕಲ್ಲು ಗಣಿಗಳಿಗಾಗಿ ಖಾಸಗಿ ಜಮೀನಿನಲ್ಲಿ 47 ಗುತ್ತಿಗೆಗಳನ್ನು ನೀಡಲಾಗಿದೆ.
2. ವಿವರಗಳ ಪಟ್ಟಿಯನ್ನು ಲಗತ್ತಿಸಿದೆ.
3. ಇಲ್ಲ, ಪರವಾನಗಿ ಇಲ್ಲದೇ ಅನಧಿಕೃತ ಕೆಲಸದ ಪ್ರಕರಣಗಳು ನಡೆಯದಂತೆ ನಿಗಾವಹಿಸಲಾಗುವುದು.
4. ಇಲ್ಲ.
5. ನಿಯತಕಾಲಿಕ ಹಾಗೂ ಅನಿರೀಕ್ಷಿತ ತಪಾಸಣೆಗಳನ್ನು ನಡೆಸಿ ಪರವಾನಗಿ ಇಲ್ಲಗೆ, ಮರಳು ಕಲ್ಲು ತೆಗೆಯುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿ ಮಂಜೂರಾದ ಕಲ್ಲಣಿ ಗುತ್ತಿಗೆಗಳ ವಿವರದ ಪಟ್ಟಿ (ಇಲಾಖೆಯಲ್ಲಿ ಪುನರ್‌ವಿಂಗಡಣೆಯಾದ ಬಳಿಕ)

ತಾಲೂಕುವಾರು ಪಟ್ಟಿ ಮಂಗಳೂರು ತಾಲೂಕು

ಂ.	ಕಲ್ಲಣಿ ಗುತ್ತಿಗೆದಾರರ ಹೆಸರು ವಿಳಾಸ	ಕ.ಗು.ಸಂ	ಗ್ರಾಮ	ಸ.ನಂ.	ಖನಿಜ	ವಿಸ್ತೀರ್ಣ	ಅವಧಿ	ಇಂದ
	ಸುಂದರ ಆರ್ ಶೆಟ್ಟಿ, ಉಳ್ಳಾಲಬೈಲು,ಉಳ್ಳಾಲ,ಮಂಗಳೂರು	015	ಹರೇಕಳ		ಕಟ್ಟಡಕಲ್ಲು	0.10	5	06-10-90
2	ಕೆ. ಕೆ. ಲೋನಪ್ಪಸ್, ಕೊಟ್ಟಾರ ಚೌಕಿ, ಮಂಗಳೂರು	024	ಮರಕಡ	88:2	"	0.25	5	15-10-90
3	ದೇವಾನಂದ ಶೆಟ್ಟಿ, ಮರ್ದನಹೌಸ್, ಕುತ್ತೆತ್ತೂರು ಅಂಚೆ,ಚಂದ್ರಹಾಸ ನಗರ, ಮಂಗಳೂರು.	028	ಪೆರ್ಮುದೆ	195:1	"	0.50	5	"
4	ಶ್ರೀಮತಿ ಮೇರಿ ಲೋಬೋ,4-89 ಎಂ ಎಂ ಟೆಂಪಲ್ ರಸ್ತೆ ಉಡುಪಿ	029 24:2ಬಿ	ತಿರುಮಲೈ	24:1ಬಿ 3ಎ	" "	0.25	5	"
5	ಆಲ್ವಿನ್ ಡಿಸೋಜ, ಫೆಲಿಕ್ಸ್ ಡಿಸೋಜ ಮಗ, ಪಡುಗ್ರಾಮ, ಮಂಗಳೂರು	030	ಬೊಂಡತಿಲ	288:2	"	0.20	5	16-10-90
6	ಮೆ.ಮಂಗಳೂರು ಗ್ರಾನೈಟ್ ಪಾರ್ಟ್‌ನರ್ ಜಾರ್ಜ್ ಕೆ ತೊಡು ಕುಂಬ್ಳೆ , ಮಂಗಳೂರು	040	ಕೊಳಂಬೆ	252	"	0.50	5	30-10-90
7	ಬಿ.ಕೃಷ್ಣ ಶೆಟ್ಟಿ, ಭಂಡಾರಿ ಶೆಟ್ಟಿಯವರ ಮಗ, ಮಡ್ಯರಮನೆ ಕೋಟೆಕಾರ ಮಂಗಳೂರು.	049	ಸೋಮೇಶ್ವರ	166:2	"	0.30	5	07-11-90
8	ಡಿ ಅಬೂಬ್‌ಕರ್, ಪಿ.ಹಸಕುಂಜ್ಞ ಮಗ, ದೇರಳಕಟ್ಟೆ ಅಂಚೆ, ಮಂಗಳೂರು	056	ಬೆಳ್ಮ	10:5ಬಿ	"	0.50	5	13-11-90
9	ವಿನೋದ್ ಎಸ್ ಸಾಲ್ಯಾನ್, ಸೀತಾರಾಂ ಕೋಟ್ಯಾನ್‌ರ ಮಗ, ಹುಣ್ಸೆ ಕಟ್ಟೆ, ಎಕ್ಕಾರೆ ಗ್ರಾಮ, ಪೆರ್ಮುದೆ ಅಂಚೆ, ಮಂಗಳೂರು	071	ತೆಂಕಎಕ್ಕಾರ್	32:2	"	0.50	5	19-11-90
10	ಬಿ.ರಾಘವೇಂದ್ರ ಅಮೀನ್, ಮಂಗಳ ಬೋಳಾರ ಮುಳಿಹಿತ್ಲು ಮಂಗಳೂರು	073	ಬಜ್ಪ	143:4	"	0.50	5	19-11-90

LEGISLATIVE ASSEMBLY

1 ಗೋಡೆಫ್ರಿ ಕ್ರಾಸ್ತ, ಜಾನ್ ಕ್ರಾಸ್ತರ ಮಗ, ಗ್ರಾಯ್ನಡು, ಮಂಗಳೂರು.	076	ಬಡಗಶಿಪಡೆ	56	ಕಟ್ಟಡಕಲ್ಲು	0.50	5	28-11-90
2 ಎ.ಎ.ಭಟ್,ಇಂಜಿನಿಯರು, ಕಂಟ್ರಾಕ್ಟರ್, ಕಂಕನಾಡಿ,ಮಂಗಳೂರು	091	ಮೂಡಶೆಡ್ಡಿ	27:1ಬಿ	"	0.50	5	12-12-90
3 ಬಿ.ಕೆ.ವಿಶ್ವನಾಥ, ಹೋಟೇಲ್ ದೇವಿಪ್ರಸಾದ್, ಕೂಳೂರು ಮಂಗಳೂರು.	098	ದೇರೆಬೈಲ್	141:1ಬಿ	"	0.50	5	13-12-90
4 ಆಲ್ಬಿನ್ ಡಿಸೋಜ, ಆಂತೋನಿ ಡಿಸೋಜರ ಮಗ, ಬಂಗಾರುಮನೆ ಕೂಳೂರು ಅಂಚೆ, ಮಂಗಳೂರು.	014	ಕೊಸಾಜೆ	109:2	"	0.25	5	18-12-90
5 ಲಾರೆನ್ಸ್ ಡಿಸೋಜರ ಮಗ, ಕೆಂಗಾವಲ್, ಮಂಗಳೂರು	131	ತಾಳಿಪಾಡಿ	314:ಎ	"	0.25	5	22-12-90
6 ಕೆ.ರಾಮ, ಶಂಕರ್‌ರವರ ಮಗ, ಮುತ್ರಕೋಡಿ ಮನೆ, ಕೊಂಚಾಡಿ ಮಂಗಳೂರು	186	ತೆಂಕೆಎಕ್ಕಾಡು	98	"	0.25	5	21-02-91
7 ಬೆನೆಡಿಕ್ಟ್ ಫಿನೆಷನ್, ರಾಬರ್ಟ್ ಮಿನೆಜಸ್‌ರ ಮಗ, ಪಚ್ಚನಾಡಿ, ಬೊಂದೆಲ್, ಮಂಗಳೂರು.	187	"	30:5ಎ	"	0.50	5	"
ಲಾರೆನ್ಸ್ ಪೆರ್ನಾಡಿಸ್, ಗ್ರೆಗರಿ ಪೆರ್ನಾಂಡಿಸ್‌ರ ಮಗ, ತೆಂಕಎಡಪದವು, ಸ್ಯಾಬರಕಟ್ಟೆ, ಮಂಗಳೂರು.	194	ಮೂಡುಪದವು	70:1	"	0.50	5	25-02-91
ಪ್ರಭಾಕರ ಮಲ್ಲಿ, ಜಗನ್ನಾಥ ಮಲ್ಲಿ ಮಗ, ತೋಕೂರು, ಜೋಕಟ್ಟೆ, ಮಂಗಳೂರು	196	ತೋಕೂರು	37:ಎ	"	0.25	5	25-02-91
ಜಾನ್ ಸಲ್ಡಾನ, ಪಿ. ಸಲ್ಡಾನರ ಮಗ, ಕದ್ರಿ ಮಲ್ಲಿಕಟ್ಟೆ, ಮಂಗಳೂರು	237	ನೀರೆಮಾರ್ಗ	193:2	"	0.25	5	27-03-91
ಇವೆಂಟ್ ಒನಸ್ಕಾಲ್ಡ್ ಡಿಸೋಜ, ಮೇರಮಜಲು ಗ್ರಾಮ,ಬಂಟ್ವಾಳ ಮಂಗಳೂರು	238	ನೀರ್‌ಮಾರ್ಗ	193:2ಬಿ	"	0.25	5	30-03-91
ಮ್ಯಾಕಿಂ ಡಿಸೋಜ, ರಾಬರ್ಟ್ ಡಿಸೋಜರ ಮಗ, ದೀಪಕ್ ಫಾರ್ಮ್, ಪಡುಮಲೆ ಅಂಚೆ, ಮಂಗಳೂರು.	283	ಕೊಳಂಬೆ	171:2	"	0.50	5	30-04-91

26TH MARCH 1992

23	**ಶಾಂತರಾಮ ಶೆಟ್ಟಿ** ಎಂ, ಮಡ್ಕ ಮನೆ ಕಲೆಕಾರ್ ಅಂಚೆ,ಮಂಗಳೂರು	4872	ಸೋಮೇಶ್ವರ		ಕಟ್ಟಡಕಲ್ಲು	0.30	5	29-04-86
24	**ರಾಘವೇಂದ್ರ** ಕೋಟ್ಯಾನ್ ಕೊಪ್ಪಲಮನೆ, ಕೊಂಚಾಡಿ, ಮಂಗಳೂರು	5300	ತೆಂಕಎಡಪದವು	178:1ಎ2	"	0.30	5	02-03-88
25	**ಜಲಿವರ್** ಡಿಸೋಜಾ, ಖಂಗ್ರಕೊರೂರುದೋಟಮನೆ, ಕೂಳೂರು ಅಂಚೆ ಮಂಗಳೂರು	114	ಕೊಳಾಜೆ	109:2	ಲ್ಯಾಟ್‌ರೈಟ್	0.25	5	18-12-90
26	ಎ.ಎಲ್.ರೋಚ್ ಸನ್ಸ್, ಇಂಜಿನಿಯರ್ ಕಂಟ್ರಾಕ್ಟರ್ ಬರ್ಕೂರು ಅಂಚೆ, ಉಡುಪಿ	130	ಕೂರ್ಗೆ	120:1	ಕಟ್ಟಡಕಲ್ಲು	0.25	5	22-12-90
27	ಶ್ರೀಧರ ಮದ್ಯಾರು ಮಂಜಯ್ಯನವರ ಮಗ, ಹುದ್ದಕ್ ತಗ್ಗವರ್ ಅಂಚೆ ಕುಂದಾಪುರ ತಾಲ್ಲೂಕು.	134	ತೆಗ್ಗರು	282:2		1.00	5	27-12-90
28	ಪ್ರಭಚಂದ್ರ ಅಜ್ರಿ, ಸೇರೆ ಪದ್ಪುಮನೆ, ಮಾವಿನಕಟ್ಟೆ ಅಂಚೆ ಸಿದ್ದಕಟ್ಟೆ ಬಂಟ್ವಾಳ	050	ನೆಲ್ಕರೆ	218:2	"	0.50	5	08-11-90
29	ರಾಘವೇಂದ್ರ ಕೊಟ್ಯಾನ್, ಕೊಪ್ಪಲಮನೆ ಕೊಂಚಾಡಿ, ಮಂಗಳೂರು	052	ಇರುವೈಲ್	151:6	"	0.25	5	12-11-90
30	ಗಿಲ್ಬರ್ಟ್ ಪಿರೇರಾ, ಬೆಳುವಾಯಿ, ಮಳೆಬೆಟ್ಟು,ಕಾರ್ಕಳ,ಮಂಗಳೂರು	151	ಬೆಳುವಾಯಿ, ಕಾರ್ಕಳ	109:2	"	0.50	5	16-01-91
31	ರಹಮಾನ್ ಕೆ ಸಾಹೇಬ್, ರೆಹಮಾನ್ ಮಂಜಿಲ್, ಕಾಂತಾವರ ರಸ್ತೆ ಬೆಳುವಾಯಿ	152	"	109:2	"	0.50	5	"
32	ಪೀರ್‌ಕಾಸ್ ಸಾಹೇಬ್, ಬೆಳುವಾಯಿ, ಕಾರ್ಕಳ	172	ಬೆಳುವಾಯಿ	85:2	"	0.25	5	08-02-91
33	ಮಹಮದ್ ಹನೀಫ್ ಸಾದ್ರಿ, ಸಾಹೇಬರ ಮಗ, ಬೆಳಮಾಯಿ ಕಾರ್ಕಳ	173	"	113:2	"	0.25	5	"
34	ಕೆ.ಆರ್. ಗುರುಸ್ವಾಮಿ, ಕೋಟೆಬೈಲೂರು, ಮಾರ್ಪಾಡಿ ಅಂಚೆ ಮೂಡಬಿದ್ರೆ , ಮಂಗಳೂರು.	278	ಮಾರ್ಪಾಡಿ	332:1	"	0.50	5	25-04-91
35	ಶ್ರೀಮತಿ ಕಲ್ಯಾಣ, ಉಗ್ಗಗುಡ್ಡ ಮನೆ, ಮಾರ್ಪಾಡಿ ಗ್ರಾಮ ಮೂಡಬಿದ್ರಿ , ಕಾರ್ಕಳ , ಮಂಗಳೂರು	5824	"	262:3	ಲ್ಯಾಟ್ರೈಟ್	0.20	5	16-08-89
36	ಗಜಾನಂದ ಕೋಟ್ಯಾನ್,ಕೊಪ್ಪಲಮನೆ, ಕೊಂಚಾಡಿ, ಮಂಗಳೂರು	031	ಕರಿಯಂಗಳ	61:5	ಕಟ್ಟಡಕಲ್ಲು	0.20	5	16-10-90
37	ಎಂ.ರಮೇಶ್ ಸೇಣವ, ಚಕ್ರಕೋಡಿ ಮನೆ, ಬಾಕೆಮಣಿ,ಬಂಟ್ವಾಳ	044	ಕುರ್ನಾಡು	152:3ಎ	"	0.50	5	03-11-90

3	ಕೆ.ಗಂಗಯ್ಯ, ಬಾಬು ಪೂಜಾರಿ ಮಗ, ಕಲ್ಲಡನೆ ಅಂಚೆ ಪಡು ಬಂಟ್ವಾಳ	193	ಪಡು	106:1	ಕಟ್ಟಡಕಲ್ಲು	0.25	5	25-03-91
9	ಜಾನ್ ಸಲ್ಡಾನ, ಮಲ್ಲಿಕಟ್ಟೆ, ಕದ್ರಿ, ಮಂಗಳೂರು	239	ಮೆರಮಜಲು	107:1ಸಿ	"	1.00	5	30-03-91
0	ಶ್ರೀಮತಿ ಆರ್‌ವೀಮ್ಮಾಳ್ ಆರ್ ರಂಗಸ್ವಾಮಿ,ಪತ್ನಿ ಬಂಟ್ವಾಳ ಮೂಡ	248	ಬಂಟ್ವಾಳ ಮೂಡ	233:1	"	0.20	5	05-04-91
1	ಅನಂತಪೈ, ರಮೇಶ್ ಪೈ ಮಗ ವಾಮದಪದವು ಬಂಟ್ವಾಳ	326	ಚಮಲೂರು	122:1	"	0.60	5	14-06-91
2	ಎಂ.ರಮೇಶ ಸೆಣವ, ಚಕ್ರಕೋಡಿ, ಬಾಳೆಪುಣೆ ಬಂಟ್ವಾಳ	4872	ಕುರ್ನಾಡು		"	1.00	5	30-04-86
3	ಗೋಪಾಲಕೃಷ್ಣ ಭಟ್ಟ, ಸುಬ್ರಾಯ ಭಟ್ಟರಮಗ, ಮೂಡ್ಯ ಮನೆ, ಈಶ್ವರ ಮಂಗಳ, ಸೆಟ್ಟಸೆಯಮೂಡ್ನೂರು,ಪುತ್ತೂರು.	028	ನೆತ್ತರಿಗೆ ಮೂಡ್ನೂರು	498:2	"	0.25	5	27-10-90
4	ಅ.ಕೃಷ್ಣ ಭಟ್ಟ, ಮಂಡಲಮನೆ, ಈಶ್ವರಮಂಗಳ, ಪುತ್ತೂರು	034	ನಿಟ್ಟಣಿಗೆಚೆಲ್ನಾರು	498:2	"	0.10	5	27-10-90
5	ವಿ.ವಿ.ಬಾಲನ್ ಮೇಸ್ತ್ರಿ,ಕುಂಜಂಬರ ಮಗ, ಸಂಪಾಜೆ ಅಂಚೆ,ಸುಳ್ಯ	308	ಅಜ್ಜಾವರ	165	ಲ್ಯಾಟ್ರೈಟ್	0.25	5	21-05-91
6	ಬಿ.ವಿಠಲ, ಬಿ.ರಾಮಪ್ಪರಮಗ, ಟುಚ್ಚಿಯಡ್ಕಮನೆ,ಅಜ್ಜಾವರ,ಸುಳ್ಯ	315	"	249:2	ಕಟ್ಟಡಕಲ್ಲು	0.25	5	04-06-91
7	ವಿ.ವಿ.ಬಾಲನ್ ಮೇಸ್ತ್ರಿ,ಕಲ್ಲಗುಡ್ಡ, ಸಂಪಾಜೆ, ಸುಳ್ಯ	316	ಸಂಪಾಜೆ	146:4ಸಿ	"	0.25	5	"

STATEMENT OF MINING LEASES GRANTED FOR SILICA SEND IN DAKSHINA KANNADA DISTRICT

SL. NO.	NAME OF THE LESSEE	M.L. NO.	EXTENT IN HECT	LOCATION
1	Mangalore Mineral Traders Aroza, Buildings, Hampanakate Mangalore	2048	29.74	Malur Vg. Udupi Taluk
2	-do- -do- Mangalore	1714	6.09	Surath Kalu Udupi
3	-do- -do- -do-	1095	8.11	Kapupadu Udupi
4	-do- -do- -do-	1105	49.51	Surathkal M'lore
5	-do- -do- -do-	1342	257.72	Bijadi Kundapura
6	-do- -do- -do-	1096	113.79	Hejmadi Udupi
7	-do- -do- -do-	1565	20.29	Kapupadu Udupi
8	R.D. Mendon & Sons	914	11.52	Padu Udupi
9	Koppala Godi camp S.K.	968	10.30	-do- "
10	" " "	1195	8.80	Udyavan Udupi
11	" " "	2073	2.38	Katapady "
12	" " "	1205	246.92	Tenka "
13	Darbar Chemical and Industries	1582	29.80	Kapupadu "
	Balur M'lore-3	/947	53.76	Nadisal Udupi
14	B.G. Mendon	1020	23.29	Uliyargoli "
15	G.T. Road Kudralli Mangalore -3	1356	76.89	Uliyargoli "

16	G.D. Saheb and Sons	1059	5.13	Koteshwara	Kindapur
17	Bellapu At & post Kundapur	1356	76.89	Badanidiyar	Udupi
18	" " "	1357	10.72	"	"
19	Mangalore Mineral Traders Aroza Buildings, Hampanakatte M'lore	2051	80.53	Koteshwar	Kundapur
20	UUR. Venkat Rao Varthak Villas Bandar M'lore	1085	8.72	Surathkal	Mangalore
21	Karnataka Mineral Trading Co., Kolikatta Bazar, Bandar M'lore	1765	239.50	Chitrapa	M'lore Tq
22	Mangalore Mineral Traders Aroza Building Hamapana katta M'lore.	1796	21.04	Katapadi	Udupi
23	Srinivasa Kedilaya, Dharvilla Bandar Mangalore.	1767	16.77	Parampalli	Udupi
24	Bharath Minerals Hemavathi Buildings Balamatti, M'lore.	1872	222.56	Tekkatte	Kundapur
25	P.N.Prashakhar Rao Light-House Hills Mangalore-1	1892	32.64	Kadi	Udupi

6	Mysore rare Earths Bijie Mangalore-4	1845	149.93	Huliyar	Udupi	
7	Bharath Mineral Trading co., Hemavathi Buildings Balamatta, M'lore.	1973	101.17	Kambashi	"	Kundapura
8	Karnataka Mineral Trading Co., Kolikatti, Bandar, Mangalore.	1976	194.25	Kargal	"	"
9	Clifford 'D' Souza Nillavalli Balur Main Rd M'lore.	2094	188.12	Gopadi	"	"
0	Mangalore Mineral Trader	2109	142.30	Mannur	Udupi	
1	R.D.Mendon & Sons Balur Mangalore-3	2073	3.28	Gopadi	Kundapura	
	Total		2376.49 Hectares.			

ವಿಷಯ: ರಾಜ್ಯದಲ್ಲಿರುವ ಅಂಗವಿಕಲ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1338 (2041)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಅಂಗವಿಕಲರು ಎಷ್ಟು.

ಆ) ಇವರ ಅಭಿವೃದ್ಧಿಗಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು.

ಇ) ಅಂಗವಿಕಲರು ದೈಹಿಕವಾಗಿ ಅಸಮರ್ಥರಿದ್ದರೂ ವಿದ್ಯಾವಂತರಿಗೆ ಹುದ್ದೆ ಗಳಲ್ಲಿ ಮೀಸಲಾತಿ ಸೌಲಭ್ಯ ಒದಗಿಸುವುದೇ ?

ಈ) ದಕ್ಷಿಣ ಕನ್ನಡ ವಿದ್ಯಾವಂತ ಅಂಗವಿಕಲರಿಗೆ ಸರ್ಕಾರ ಏನಾದರೂ ಸೌಲಭ್ಯ ಒದಗಿಸಿದೆಯೇ ? ಹಾಗಿದ್ದಲ್ಲಿ, ಅದರ ವಿವರ ಒದಗಿಸುವುದು.

ಶ್ರೀ ಬಿ. ಶಿವಣ್ಣ. (ಸಮಾಜ ಕಲ್ಯಾಣ ಸಚಿವರು)

ಅ) 3,43,898

ಆ) ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ :-

1) ಶಿಕ್ಷಣ ಮತ್ತು ತರಬೇತಿ
2) ಅಂಗವಿಕಲ ವಿದ್ಯಾರ್ಥಿಗಳಿಗೆಲ್ಲಾ ವಿದ್ಯಾರ್ಥಿ ವೇತನ
3) ಅಂಗವಿಕಲರಿಗಾಗಿ 'ಸಿ' ಮತ್ತು 'ಡಿ' ವರ್ಗ ಹುದ್ದೆಗಳಲ್ಲಿ ಪ್ರತಿಶತ 4 ರಷ್ಟು ಮೀಸಲಾತಿ
4) ಅಂಗವಿಕಲರಿಗೆ ಮಾಸಿಕ ರೂ. 50-00 ರಂತೆ ಪೋಷಣಾ ಭತ್ಯೆ
5) ಅಂಗವಿಕಲರಿಗೆ ಸಾಧನ ಸಲಕರಣೆಗಳು ಅಂದರೆ ತ್ರಿಚಕ್ರ ವಾಹನ, ಕ್ಯಾಲಿಫರ್ಸ್, ವೀಲ್ಸ್‌ಛೇರ್, ಶ್ರವಣ ಸಾಧನಗಳು ಮತ್ತು ಅಂಧರಿಗೆ ಬ್ರೈಲ್ ವಾಚುಗಳು ಮೊದಲಾದುವುಗಳ ಹಂಚಿಕೆ.
6) ಸ್ವಯಂ ಉದ್ಯೋಗಕ್ಕಾಗಿ ಆರ್ಥಿಕ ನೆರವು. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ರೂ.25,000 ರವರೆಗೆ ಶೇಕಡ 25ರಷ್ಟು ಸಬ್ಸಿಡಿಯಲ್ಲಿ ಸಾಲ.
7) ಬ್ರೈಲ್ ಮುದ್ರಣ ಪುಸ್ತಕಗಳ ಪೂರೈಕೆ
8) ವೃತ್ತಿ ತರಬೇತಿ.
9) ಪ್ರತಿಭಾನ್ವಿತ ಅಂಗವಿಕಲ ವಿದ್ಯಾರ್ಥಿಗಳಿಗೆ ಬಹುಮಾನ ಯೋಜನೆ
10) ಅಂಗವಿಕಲ ನೌಕರರು ಮತ್ತು ತರಬೇತಿದಾರರಿಗೆ ವಸತಿ ಸೌಕರ್ಯ

ಇ) ಹೌದು.

ಈ) ರಾಜ್ಯದಲ್ಲಿ ಅಂಗವಿಕಲರಿಗಾಗಿ - ಮತ್ತು 'ಡಿ'ಹುದ್ದೆಗಳಲ್ಲಿ ಪ್ರತಿಶತ 4 ರಷ್ಟು ಮೀಸಲಾತಿ ಸೌಲಭ್ಯ ಒದಗಿಸಲಾಗಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಗೂ ಅನ್ವಯಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯವರಿಗಾಗಿಯೇ ಪ್ರತ್ಯೇಕ ಮೀಸಲಾತಿ ಒದಗಿಸಿಲ್ಲ. ಆದುದರಿಂದ ವಿವರಗಳನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಮೈಸೂರು ಲ್ಯಾಂಪ್ ವರ್ಕ್ಸ್ ಸಂಸ್ಥೆಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ನಿರ್ವಹಿಸುತ್ತಿರುವರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1340 (1843)

ಶ್ರೀ ರಾಮಲಿಂಗ ರೆಡ್ಡಿ (ಜಯನಗರ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜನವರಿ 1991 ರಿಂದ ಡಿಸೆಂಬರ್ 1991ರ ಅವಧಿಯಲ್ಲಿ ಮೈಸೂರು ಲ್ಯಾಂಪ್ ವರ್ಕ್ಸ್ ಸಂಸ್ಥೆಯಲ್ಲಿ ದಿನಗೂಲಿ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ;

ಆ) ಅವರುಗಳಿಗೆ ನೀಡಿರುವ ದಿನಗೂಲಿ ಎಷ್ಟು ;

ಇ) ಯಾವ ಅರ್ಹತೆ ಆಧಾರದ ಮೇಲೆ ಇವರನ್ನು ನೇಮಕ ಮಾಡಿಕೊಳ್ಳಲಾಗಿದೆ ;

ಈ) ಇವರ ಹೆಸರುಗಳನ್ನು ಉದ್ಯೋಗ ವಿನಿಮಯ ಕೇಂದ್ರದಿಂದ ತರಿಸಿಕೊಳ್ಳಲಾಗಿದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಇಬ್ಬರು.

ಆ) ರೂ. 17,272-00

ಇ) ಕಳೆದ 10 ವರ್ಷಗಳ ಹಿಂದೆ ಸಂಸ್ಥೆಯ ಉಪಹಾರ ಗೃಹದ ದವಸ ಧಾನ್ಯ ಸ್ವಚ್ಛ ಮಾಡುವ ಕಾರ್ಯಕ್ಕೆ ಈ ಇಬ್ಬರನ್ನು ನೇಮಕ ಮಾಡಿಕೊಂಡಿರುವುದರಿಂದ, ಅವರ ಯಾವುದೇ ನಿರ್ದಿಷ್ಟವಾದ ಅರ್ಹತೆಯನ್ನು ಪರಿಗಣಿಸಿರುವುದಿಲ್ಲ.

ಈ) ಇಲ್ಲ.

ವಿಷಯ:-ರಾಜ್ಯ ಸ್ವಾಮ್ಯದ ಕೈಗಾರಿಕೆಗಳಲ್ಲಿ ಆಗಿರುವ ನಷ್ಟದ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1343 (1852)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಸ್ವಾಮ್ಯದ ಕರ್ನಾಟಕ ಸಾಬೂನು ಕಾರ್ಖಾನೆಯಲ್ಲಿ ಈವರೆಗೆ ಆಗಿರುವ ನಷ್ಟದ ಪ್ರಮಾಣವೆಷ್ಟು?

ಆ) ಈ ನಷ್ಟಕ್ಕೆ ಕಾರಣರಾಗಿರುವ ಅಧಿಕಾರಿಗಳು ಯಾರೆಂದು ವಿಧಾನ ಮಂಡಲದ ಸಾರ್ವಜನಿಕ ಉದ್ಯಮ ಸಮಿತಿ ತನ್ನ ವರದಿಯಲ್ಲಿ ಗುರುತಿಸುವುದು ನಿಜವೇ :

ಇ) ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡಿರುವ ಇಲಾಖಾ ಹಾಗೂ ಕಾನೂನು ಕ್ರಮಗಳೇನು?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ರೂ. 8,140.33 ಲಕ್ಷಗಳು (ಜನವರಿ 1992ರ ಅಂತ್ಯದವರೆಗೆ)

ಆ) ಸದರಿ ವರದಿಯಲ್ಲಿ ಸಮಿತಿಯು ಅಭಿಪ್ರಾಯ ಪಟ್ಟಿರುವಂತೆ ಈ ಕಂಪನಿಯು ಅನುಭವಿಸುತ್ತಿರುವ ನಷ್ಟಕ್ಕೆ ಮುಖ್ಯ ಕಾರಣ "ಸೋಪ್ ಎಕ್ಸ್‌ಟೆನಷನ್ ಪ್ರಾಜೆಕ್ಟ್" ಅನುಷ್ಠಾನದಲ್ಲಿ ಉಂಟಾದ ಅಕ್ರಮಗಳು ಈ ಬಗ್ಗೆ ಆಗಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿ. ಜಯಪ್ಪ , ಆಗಿನ ಟೆಕ್ನಿಕಲ್ ಅಧಿಕಾರಿಗಳನ್ನು ಇದಕ್ಕೆ ಜವಬ್ದಾರರು ಎಂಬುದಾಗಿ ಸಮಿತಿ ಹೇಳಿದೆ.

ಇ) ಈ ಬಗ್ಗೆ ತನಿಖೆ ಮಾಡಿ ವರದಿ ನೀಡಲು ಜಸ್ಟೀಸ್ ಮಹೇಂದ್ರ ಕಮೀಷನ್ ಆಫ್ ಎನ್‌ಕ್ವೈರಿಯನ್ನು ಸರ್ಕಾರವು ನೇಮಿಸಿದೆ. ಈ ಕಮಿಷನ್ ಈಗ ತನಿಖೆ ಕೆಲಸವನ್ನು ಮಾಡುತ್ತಿದೆ.

ವಿಷಯ: ರಾಜ್ಯದಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯದ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1344 (1855)

ಶ್ರೀ ಎಲ್ . ಆರ್. ಶಿವರಾಮೇಗೌಡ (ನಾಗಮಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವೈದ್ಯಕೀಯ ವಿಶ್ವವಿದ್ಯಾನಿಲಯ ಸ್ಥಾಪಿಸುವ ವಿಚಾರ ಸರ್ಕಾರದ ಮುಂದಿದೆಯೇ ?

ಆ) ಈ ವಿಶ್ವವಿದ್ಯಾನಿಲಯ ಸ್ಥಾಪನೆಗಾಗಿ ಸರ್ಕಾರ ಕೈಗೊಂಡಿರುವ ನಿರ್ಧಿಷ್ಟ ಕಾರ್ಯಕ್ರಮಗಳೇನು ?

ಇ) ಮೇಲ್ಕಂಡ ವಿಶ್ವವಿದ್ಯಾನಿಲಯವನ್ನು ಎಲ್ಲಿ ಸ್ಥಾಪಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ವಿಷಯ: ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1345 (1856)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಮೇಲ್ಕಂಡ ಕಾಲೇಜುಗಳಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಕ್ಲಿನಿಕಲ್ ಸೌಲಭ್ಯಕ್ಕಾಗಿ ಉಪಯೋಗಿಸುತ್ತಿರುವ ಕಾಲೇಜುಗಳ ಸಂಖ್ಯೆ ಎಷ್ಟು ?

ಇ) ಈ ಕಾಲೇಜುಗಳು ಮೇಲ್ಕಂಡ ಸೌಲಭ್ಯಗಳಿಗಾಗಿ ಸರ್ಕಾರಕ್ಕೆ ನೀಡಬೇಕಾಗಿರುವ ಬಾಕಿ ಹಣದ ಮೊತ್ತವೆಷ್ಟು ?

ಈ) 1990-91, 1991-92 ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ವೈದ್ಯಕೀಯ ಕಾಲೇಜುಗಳಿಗೆ ನೀಡಿರುವ ಸೀಟುಗಳೆಷ್ಟು, ಕಾಲೇಜುವಾರು ವಿವರ ನೀಡುವುದು ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 14 (ಹದಿನಾಲ್ಕು)

ಆ) ಹನ್ನೊಂದು - ಕ್ಲಿನಿಕಲ್ ಶುಲ್ಕವನ್ನು ವೈದ್ಯಕೀಯ ವಿದ್ಯಾಲಯಗಳು ಪಾವತಿ ಮಾಡದೆ ಇದ್ದ ಕಾರಣ ಸರ್ಕಾರಿ ಆಜ್ಞೆ ಸಂಖ್ಯೆ ಹೆಚ್‌ಎಫ್‌ಡಬ್ಲ್ಯೂ 343 ಎಂಎಸ್‌ಎಫ್ 90, ದಿನಾಂಕ 6-3-1992 ರಂತೆ ಕ್ಲಿನಿಕಲ್ ಸೌಲಭ್ಯವನ್ನು ರದ್ದು ಪಡಿಸಲಾಗಿದೆ.

ಇ) ದಿನಾಂಕ 16-3-1992 ರಂದು ಪರಿಶೀಲನಾ ಷರತ್ತಿಗೊಳಪಟ್ಟು ರೂ. 203.19 ಲಕ್ಷಗಳು.

ಈ) ವಿವರಗಳನ್ನು ಅನುಬಂಧದಲ್ಲಿ ನೋಡಬಹುದು.

ಅನುಬಂಧ

		1990- 91	1991-92
1)	ಬೆಂಗಳೂರು ವೈದ್ಯಕೀಯ ಕಾಲೇಜು.	200	200
2)	ಮೈಸೂರು ವೈದ್ಯಕೀಯ ಕಾಲೇಜು,	175	175
3)	ಕರ್ನಾಟಕ ವೈದ್ಯಕೀಯ ಕಾಲೇಜು,	130	130

4)	ಬಳ್ಳಾರಿ ವೈದ್ಯಕೀಯ ಕಾಲೇಜು, ,	130	130
5)	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಣಿಪಾಲ	250	250
	ಕಸ್ತೂರಬಾ ವೈದ್ಯಕೀಯ ಕಾಲೇಜು, ಮಂಗಳೂರು	300	300
6)	ಸೆಂಟ್‌ಜಾನ್ಸ್ ವೈದ್ಯಕೀಯ ಕಾಲೇಜು, ಬೆಂಗಳೂರು	60	60
7)	ಜೆ.ಎಸ್. ವೈದ್ಯಕೀಯ ಕಾಲೇಜು, ಬೆಳಗಾಂ	175	175
8)	ಎಂ. ಎಸ್. ರಾಮಯ್ಯ ವೈದ್ಯಕೀಯ ಕಾಲೇಜು,ಬೆಂಗಳೂರು	100	100
9)	ಎಂ. ಆರ್. ವೈದ್ಯಕೀಯ ಕಾಲೇಜು, ಗುಲ್ಬರ್ಗಾ	175	185
10)	ಜೆ ಜೆ ಎಂ ವೈದ್ಯಕೀಯ ಕಾಲೇಜು,ದಾವಣಗೆರೆ	300	320
11)	ಕೆಂಪೇಗೌಡ ವೈದ್ಯಕೀಯ ಕಾಲೇಜು, ಬೆಂಗಳೂರು	100	120
12)	ಡಾ. ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಬೆಂಗಳೂರು	100	120
13)	ಆಲ್ .ಅಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ	120	130
14)	ಜೆ ಎಸ್ ಎಸ್ ವೈದ್ಯಕೀಯ ಕಾಲೇಜು,ಮೈಸೂರು	200	200
15)	ಆದಿಚುಂಚನಗಿರಿ ವೈದ್ಯಕೀಯ ಕಾಲೇಜು, ಬೆಳ್ಳೂರು	150	195
16)	ಬಿಎಲ್‌ಡಿಇಎ ವೈದ್ಯಕೀಯ ಕಾಲೇಜು, ಬಿಜಾಪುರ	160	180
17)	ದೇವರಾಜಅರಸ್ ವೈದ್ಯಕೀಯ ಕಾಲೇಜು,ಕೋಲಾರ	150	150
18)	ಸಿದ್ಧಾರ್ಥ ವೈದ್ಯಕೀಯ ಕಾಲೇಜು, ತುಮಕೂರು	175	195

ವಿಷಯ: ಅಂಗನವಾಡಿ ಕಾರ್ಯಕರ್ತೆಯರ ಸೇವೆ ಖಾಯಂ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1346 (1857)

ಶ್ರೀ ಬಸವರಾಜ ರಾಯರೆಡ್ಡಿ (ಯಲ್‌ಬುರ್ಗಾ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ :

ಆ) ಅವರು ದಿನಗೂಲಿ ಅಥವಾ ಖಾಯಂ ನೇಮಕಾತಿ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆಯೇ ಮತ್ತು ಅವರಿಗೆ ಕೊಡುತ್ತಿರುವ ಸಂಬಳವೆಷ್ಟು ?

ಇ) ಸರ್ಕಾರವು ಇವರನ್ನು ಖಾಯಂಗೊಳಿಸಲು ಯೋಚಿಸಿದೆಯೇ ?

ಈ) ಹಾಗಿದ್ದಲ್ಲಿ, ಯಾವಾಗ ?

ಶ್ರೀ ಬಿ. ಶಿವಣ್ಣ (ಮಾನ್ಯ ಸಮಾಜ ಕಲ್ಯಾಣ ಸಚಿವರು)

ಅ) 22113

ಆ) ಇಲ್ಲ , ಅಂಗನವಾಡಿ ಕಾರ್ಯಕರ್ತೆಯಲು ಗೌರವ ಕಾರ್ಯಕರ್ತೆಯರಾಗಿದ್ದು, ಅವರಿಗೆ ಮಾಹೆಯಾನ ಅರ್ಹತೆ ಹಾಗೂ ಅನುಭವದ ಆಧಾರದ ಮೇಲೆ ರೂ. 225 ರಿಂದ 325ರವರೆಗೆ ಗೌರವ ಧನ ಕೊಡಲಾಗುತ್ತಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ವಿಷಯ: ಪ್ರತಿ ತಾಲ್ಲೂಕಿನಲ್ಲಿ ಸಾಮಾನ್ಯ ಚಾಕಿ ಕೇಂದ್ರಗಳ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1347 (1858)

ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ) ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ರೇಷ್ಮೆ ಬೆಳೆಗಾರರ ಅನುಕೂಲಕ್ಕೆ, ಪ್ರತಿ ತಾಲ್ಲೂಕಿನಲ್ಲಿ ಚಾಕಿ ಕೇಂದ್ರಗಳನ್ನು ಒದಗಿಸಲು ಆಲೋಚಿಸುತ್ತಿದೆಯೆ ?

ಆ) ಹಾಗಿದ್ದಲ್ಲಿ ಯಾವಾಗಿನಿಂದ ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ಕೃಷಿ ರಾಜ್ಯ ಸಚಿವರು)

ಅ) ಸರ್ಕಾರದ ವತಿಯಿಂದ ಬಿತ್ತನೆ ವಲಯದಲ್ಲಿ ಹೊಸ ಚಾಕಿ ಕೇಂದ್ರ ತೆರೆಯುವ ಕಾರ್ಯವಿದೆ. ಬೇರೆ ಕೇಂದ್ರದಲ್ಲಿ ಖಾಸಗಿಯವರು ಚಾಕಿ ಸಾಕಣೆ ಕೇಂದ್ರಗಳನ್ನು ತೆರೆಯಲು ಮುಂದೆ ಬಂದರೆ ಅಂಥವರಿಗೆ ಸರ್ಕಾರ ಪ್ರೋತ್ಸಾಹ ನೀಡುತ್ತದೆ.

ಆ) ಚಾಲ್ತಿಯಲ್ಲಿದೆ.

ವಿಷಯ:ರಾಜ್ಯದಲ್ಲಿನ ವಿವಿಧ ಗಣಿಗಳಲ್ಲಿ ಉತ್ಪಾದಿಸಲಾದ ಚಿನ್ನದ ಪ್ರಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1348 (1859)

ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗಾ) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. 1990-91ಮತ್ತು 1991-92ನೇ ಸಾಲಿನಲ್ಲಿ ರಾಜ್ಯದಲ್ಲಿನ ವಿವಿಧ ಗಣಿಗಳಲ್ಲಿ ಉತ್ಪಾದಿಸಲಾದ ಚಿನ್ನವೆಷ್ಟು ? (ಗುತ್ತಿಗೆವಾರು ವಿವರಣೆ ಕೊಡಿ)
2. ಒಂದು ಗ್ರಾಂ ಚಿನ್ನ ತೆಗೆಯಲು ಎಷ್ಟು ವೆಚ್ಚ ತಗಲುತ್ತದೆ ?
3. ಚಿನ್ನವನ್ನು ತೆಗೆಯಲು ಸಾಧ್ಯವಿರುವ ಬೇರೆ ಸ್ಥಳಗಳು ರಾಜ್ಯದಲ್ಲಿ ಇವೆಯೇ ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ಮೆಸರ್ಸ್ ಹಟ್ಟಿ ಗೋಲ್ಡ್ ಮೈನ್ಸ್ ಎಂ. ಎಲ್. ನಂ. 1305 ಮಂಗಳೂರು ಮೈನ್ಸ್, (ಗುಲ್ಬರ್ಗ ಜಿಲ್ಲೆ)

1990-91	1991-92 (ಫೆಬ್ರುವರಿ 92ರವರೆಗೆ)
30.90 ಕೆ.ಜಿ.	14.49ಕೆ.ಜಿ

2. ಮೆ:ಹಟ್ಟಿ ಗೋಲ್ಡ್‌ಮೈನ್ಸ್ ಎಂ. ಎಲ್. ನಂ. 1734 ಹಟ್ಟಿ ಗಣಿ(ರಾಯಚೂರು ಜಿಲ್ಲೆ)

1990-91	1991-92
885.12ಕೆ.ಜಿ.	992.09 ಕೆ. ಜಿ

3. ಮೆ:ಭಾರತ್‌ಗೋಲ್ಡ್‌ಮೈನ್ಸ್ ಎಂ. ಎಲ್. ನಂ. 1154 ನಂದಿ ದುರ್ಗ ಮತ್ತು ಚಾಂಪಿಯನ್ ರೀಫ್ ಕೆ.ಜಿ.ಎಫ್. ಕೋಲಾರ ಜಿಲ್ಲೆ.

1990-91	1991-92
404.49ಕೆ.ಜಿ	249.46 ಕೆ. ಜಿ.

2. ಹಟ್ಟಿ ಚಿನ್ನದ ಗಣಿಯಲ್ಲಿ 90-91ರ ವರ್ಷದಲ್ಲಿ ಒಂದು ಗ್ರಾಂ ಚಿನ್ನವನ್ನು ಉತ್ಪಾದಿಸಲು ತಗಲುವ ವೆಚ್ಚ ರೂ. 246.00 ಇರುತ್ತದೆ. ಇದೇ ವೆಚ್ಚ 1991-92ರ ವರ್ಷಕ್ಕೆ ಎಷ್ಟು ಎಂಬುದನ್ನು ವರ್ಷ

ಮುಗಿದ ನಂತರ ಗೊತ್ತಾಗುತ್ತದೆ. ಭಾರತ ಚಿನ್ನದ ಗಣಿಯಲ್ಲಿನ ವೆಚ್ಚದ ವಿವರಗಳು ನಮ್ಮಲ್ಲಿ ಸಧ್ಯ ಲಭ್ಯವಿಲ್ಲ.

3. ರಾಜ್ಯದಲ್ಲಿ ಕೆಲವು ಸ್ಥಳಗಳು ಇವೆ. ಅವುಗಳಲ್ಲಿ ಕೆಲವು ಪ್ರಮುಖ ಸ್ಥಳಗಳನ್ನು ಕೆಳಗೆ ಕೊಡಲಾಗಿದೆ.

1.ಮೆ:ಹಟ್ಟಿಗೋಲ್ಡ್ ಮೈನ್ಸ್ ಎಂ.ಎಲ್.ನಂ. 2031 ವಂದಲಿ ಗ್ರಾಮ ದೇವದುರ್ಗ ರಾಯಚೂರು ಜಿಲ್ಲೆ	ಕೆಲಸ ಆರಂಭಿಸಿಲ್ಲ.
2.ಮೆ:ಹಟ್ಟಿ ಗೋಲ್ಡ್ ಮೈನ್ಸ್ ಎಂ.ಎಲ್.ನಂ. 2126, ಊಟಿ ಗ್ರಾಮ, ರಾಯಚೂರು ಜಿಲ್ಲೆ ದೇವದುರ್ಗತಾ:	ಕೆಲಸ ಆರಂಭಿಸಿಲ್ಲ.
3.ಮೆ:ಮೈಸೂರು ಮೈನ್ಸ್	ಗದಗ್ ಗೋಲ್ಡ್ ಫೀಲ್ಡ್, ಮಹಾಲಿಂಗಪುರ ಶಿರಹಟ್ಟಿ ತಾ: ಧಾರವಾಡ ಜಿಲ್ಲೆ.
4.ಮೆ:ಸಾಂಗಲಿ ಮೈನ್ಸ್	ಗದಗ್ ಗೋಲ್ಡ್ ಫೀಲ್ಡ್ ಶಿರಹಟ್ಟಿ, ತಾ:ಧಾರವಾಡ ಜಿಲ್ಲೆ.
5.ಮೆ:ಕೆಂಪಿನಕೋಟೆ	ಹಾಸನ ಜಿಲ್ಲೆ
6.ಮೆ :ಅಜ್ಜನಹಳ್ಳಿ	ಸಿರಾ ತಾಲ್ಲೂಕ್, ತುಮಕೂರು ಜಿಲ್ಲೆ.

ವಿಷಯ:ರಾಜ್ಯದಲ್ಲಿ ಹಲವಾರು ಆಸ್ಪತ್ರೆಗಳನ್ನು ಮೇಲ್ದರ್ಜೆಗೊಳಿಸಲು ಸರ್ಕಾರವು ವಿಶ್ವ ಬ್ಯಾಂಕಿನಿಂದ ನೆರವು ಪಡೆಯುವ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ 1349 (1860)

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಲವಾರು ಆಸ್ಪತ್ರೆಗಳನ್ನು ಮೇಲ್ದರ್ಜೆಗೊಳಿಸಲು ಸರ್ಕಾರವು ವಿಶ್ವ ಬ್ಯಾಂಕಿನಿಂದ ನೆರವನ್ನೇನಾದರೂ ಪಡೆಯುತ್ತಿದೆಯೇ ?

ಆ) ಹಾಗಿದ್ದಲ್ಲಿ ಗುರ್ತಿಸಲಾದ ಆಸ್ಪತ್ರೆಗಳಾವುವು ?

ಇ) ಈ ಆಸ್ಪತ್ರೆಗಳಿಗೆ ಸೌಕರ್ಯಗಳನ್ನು ಯಾವಾಗ ಒದಗಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ: ದ. ಕನ್ನಡ ಜಿಲ್ಲೆಯಲ್ಲಿ ಸ್ವಯಂ ಉದ್ಯೋಗ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1339 (2043)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1989-90, 1990-91,ನೇ ಡಿಸೆಂಬರ್ ಅಖೈರುವರೆಗೆ ಸ್ವಯಂ ಉದ್ಯೋಗ ಯೋಜನೆಯಲ್ಲಿ ಎಷ್ಟು ಜನರಿಗೆ ಉದ್ಯೋಗ ಒದಗಿಸಿಕೊಡಲಾಗಿದೆ ?

ಆ) ಈ ಯೋಜನೆಗೆ ಮೇಲ್ಕಂಡ ಸಾಲಿನಲ್ಲಿ ಬಿಡುಗಡೆಯಾದ ಹಣವೆಷ್ಟು ?

ಇ) ಸ್ವಯಂ ಉದ್ಯೋಗ ಅಭ್ಯರ್ಥಿಗಳಿಗೆ ಆಯ್ಕೆಯಲ್ಲಿ ಅನ್ಯಾಯವಾಗುತ್ತಿದೆ ಎಂಬ ದೂರುಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಸ್ವಯಂ ಉದ್ಯೋಗ ಅಭ್ಯರ್ಥಿಗಳಿಗೆ ಈ ಓಜನೆಯ ಫಲ ಸರಿಯಾಗಿ ದೊರಕಲು ಆಯ್ಕೆ ಸಮಿತಿಯಲ್ಲಿ ಅಧಿಕಾರೇತರರಿಗೆ ಅವಕಾಶ ಕಲ್ಪಿಸಿ ಕೊಡಲಾದುವುದೇ ?

ಶ್ರೀ ನಸೀರ್ ಅಹಮದ್ (ಸಣ್ಣ ಕೈಗಾರಿಕಾ ರಾಜ್ಯ ಸಚಿವರು)

ಅ)

ವರ್ಷ	ಫಲಾನುಭವಿಗಳ ಸಂಖ್ಯೆ
1989-90	400
1990-91	223
ಒಟ್ಟು	623

ಆ) ಈ ಯೋಜನೆಗೆ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ. ಆದರೆ ವಾಣಿಜ್ಯ ಬ್ಯಾಂಕ್‌ಗಳು ಈ ಅಭ್ಯರ್ಥಿಗಳಿಗೆ ಸಾಲಗಳನ್ನು ಮಂಜೂರು ಮಾಡುತ್ತಿವೆ.

ಇ) ಬಂದಿದೆ.

ಈ) ಈ ಯೋಜನೆಯಡಿಯಲ್ಲಿ ಭಾರತ ಸರ್ಕಾರದ ಕಾರ್ಯ ಸೂಚಿಯಂತೆ ಅಧಿಕಾರೇತರರಿಗೆ ಆಯ್ಕೆ ಸಮಿತಿಯಲ್ಲಿ ಅವಕಾಶ ಇರುವುದಿಲ್ಲ.

ವಿಷಯ: ಉದ್ಯೋಗ ವಿನಿಮಯ ಕೇಂದ್ರದಲ್ಲಿ ಸೇರ್ಪಡೆಯಾದವರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1351 (1862)

ಶ್ರೀ ಎನ್. ಚಿನಾಯ್ಕ (ಮೊಳಕಾಲ್ಮುರು) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಈವರೆಗೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಲ್ಪಟ್ಟಿರುವವರ ಸಂಖ್ಯೆ ಎಷ್ಟು ?

ಆ) 1989-90, 1990-91ನೇ ಸಾಲಿನಲ್ಲಿ 3ನೇ ಮತ್ತು 4ನೇ ದರ್ಜೆಯ ಹುದ್ದೆಗಳು ಎಷ್ಟು ಜನಕ್ಕೆ ಉದ್ಯೋಗ ವಿನಿಮಯದಿಂದ ದೊರಕಿವೆ ?

ಇ) 1989-90, 1990-91ನೇ ವರ್ಷದಲ್ಲಿ 3ನೇ ಮತ್ತು 4ನೇ ದರ್ಜೆಯ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು ?

ಈ) ಈ ಪೈಕಿ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ಪ್ರವರ್ಗದವರಿಗೆ ಎಷ್ಟು ಹುದ್ದೆಗಳು ದೊರಕಿವೆ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು)

ಅ) 1991ನೇ ಡಿಸೆಂಬರ್ ಅಂತ್ಯಕ್ಕೆ 14,23,280.

ಆ) 1989,1990 ಹಾಗೂ 1991ನೇ ಸಾಲಿನಲ್ಲಿ ಕ್ರಮವಾಗಿ 8,423, 8,398ಹಾಗೂ 14,084 ಅಭ್ಯರ್ಥಿಗಳಿಗೆ ಗುಂಪು 'ಸಿ'ಮತ್ತು 'ಡಿ' ಹುದ್ದೆಗಳಲ್ಲಿ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ.

ಇ) ಈ ಇಲಾಖೆಯಲ್ಲದೆ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಂದ ಮಾಹಿತಿಯನ್ನು ದೀರ್ಘ ಸಮಯ ಬೇಕಾಗಿರುವುದರಿಂದ ಸದ್ಯಕ್ಕೆ ಮಾಹಿತಿಯು ಲಭ್ಯವಿರುವುದಿಲ್ಲ.

ಈ) 1989,90 ಹಾಗೂ 1991ನೇ ಸಾಲಿನಲ್ಲಿ ಉದ್ಯೋಗ ಪಡೆದ ಒಟ್ಟು ಅಭ್ಯರ್ಥಿಗಳ ಪೈಕಿ 7724 ಹಿಂದುಳಿದ ವರ್ಗ ಹಾಗೂ 7581 ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಾಗಿರುತ್ತಾರೆ.

ವಿಷಯು:ಮೊಳಕಾಲ್ಮೂರು ತಾಲ್ಲೂಕನ್ನು ಕತ್ತಲೆ ಪ್ರದೇಶವೆಂದು ಘೋಷಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1352 (1928)

ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ. ?

1. ಮೊಳಕಾಲ್ಮುರು ತಾಲ್ಲೂಕು ಕತ್ತಲೆ ಪ್ರದೇಶವೆಂದು ಘೋಷಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?
2. ಹಾಗಿದ್ದಲ್ಲಿ ಯಾವಾಗ ಘೋಷಿಸಲಾಯಿತು ಮತ್ತು ಇದಕ್ಕೆ ಕಾರಣಗಳೇನು?
3. ಕತ್ತಲೆ ಪ್ರದೇಶವೆಂದು ಘೋಷಿಸಿರುವುದನ್ನು ತೆಗೆಯುವುದಕ್ಕೆ ಏನಾದರೂ ಕ್ರಮ ಸರ್ಕಾರ ದಲ್ಲಿದೆಯೇ ?
4. ಹಾಗಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ಬಂದಿದೆ.
2. 1987 ರಲ್ಲಿ ಘೋಷಿಸಲಾಯಿತು. ಅಂತರ್ಜಲ ಬಳಕೆಯ ಪ್ರಮಾಣವು ವಾರ್ಷಿಕ ದೊರಕುವ ಭೂಜಲ ಪ್ರಮಾಣದ ಶೇಕಡಾ 85ಕ್ಕೂ ಹೆಚ್ಚಾಗಿದ್ದೇ ಇದಕ್ಕೆ ಕಾರಣ.
3. ಇಲ್ಲ.
4. ಉದ್ಭವಿಸುವುದಿಲ್ಲ.

ವಿಷಯ: 1992-93ನೇ ಸಾಲಿನಲ್ಲಿ ಮೆಡಿಕಲ್ ಕಾಲೇಜುಗಳ ಸ್ಥಾಪನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1353 (1930)

ಶ್ರೀ ಎನ್. ಜಿ. ನಾಯಕ್‌ರವರು (ಮೊಳಕಾಲ್ಮುರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1992-93ನೇ ಸಾಲಿನಲ್ಲಿ ಮೆಡಿಕಲ್ ಕಾಲೇಜುಗಳನ್ನು ತೆಗೆಯಲು ಸರ್ಕಾರ ಉದ್ದೇಶಿಸಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಕಾಲೇಜುಗಳನ್ನು ತೆರೆಯಲಾಗುವುದು ಮತ್ತು ಯಾವ ಯಾವ ಜನಾಂಗಕ್ಕೆ ಎಂಬುದರ ಮಾಹಿತಿ ನೀಡುವುದು ?

ಇ) ಚಿತ್ರದುರ್ಗದ ಮಡಿಕೇರಿ ವಿದ್ಯಾ ಸಂಸ್ಥೆಯ ಹೆಣ್ಣು ಮಕ್ಕಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೆಡಿಕಲ್ ಕಾಲೇಜು ತೆರೆಯ ಬೇಕೆಂದು ಕುವೆಂಪು ವಿಶ್ವವಿದ್ಯಾನಿಲಯದ ಮುಖಾಂತರ ಅರ್ಜಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ, ಈ ವಿಚಾರದ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ವಿಷಯ: ವಿಟ್ಲ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1355 (1926)

ಶ್ರೀ ರುಕ್ಮಯ್ಯ ಪೂಜಾರಿ (ವಿಟ್ಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಟ್ಲ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕಿದೆಯೇ ಹಾಗೂ ಇದರ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇದ್ದರೆ ಯಾವಾಗ ಮಾಡಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:ಪ್ರತಿ ತಾಲ್ಲೂಕಿನಲ್ಲಿ ಸರ್ಕಾರಿ ವಿದ್ಯಾರ್ಥಿನಿಲಯದ ಪ್ರಾರಂಭ.

ಚುಕ್ಕೆ ಗುರುತಿಲ್ಲ ಪ್ರಶ್ನೆ ಸಂಖ್ಯೆ 1356 (2008)

ಶ್ರೀ ನಾರಾಯಣರಾವ್ ಮನ್ನೋಪಳ್ಳಿ (ಬೀದರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ತಾಲ್ಲೂಕು ಕೇಂದ್ರ ಸ್ಥಾನದಲ್ಲಿ ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಕಾರ್ಯಗತಗೊಳಿಸಲಾಗುವುದು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1358 (2010)

ಶ್ರೀ ನಾರಾಯಣರಾವ್ (ಬೀದರ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪರಿಶಿಷ್ಟ ಜಾತಿ :ಪರಿಶಿಷ್ಟ ವರ್ಗ ವಿದ್ಯಾರ್ಥಿಗಳಿಗೆ ತಿಂಗಳಿಗೆ 200 ರೂ.ಗಳಂತೆ ಹಣ ಸಂದಾಯ ಮಾಡುವ ಬಗ್ಗೆ ಒಂದು ಸರ್ಕಾರದ ಆದೇಶವಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ಅಂದರೆ. 1989-90, 1990-91ಮತ್ತು 1991 92ರಲ್ಲಿ ವಿದ್ಯಾರ್ಥಿಗಳಿಗೆ ನೀಡಿರುವ ಹಣವೆಷ್ಟು ?

ಇ) ಈ ಹಣವನ್ನು ಭಾರತ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಕೊಡಲಾಗುತ್ತಿದೆಯೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಕಳೆದ ಮೂರು ವರ್ಷಗಳಿಂದ ನೀಡಿರುವ ಹಣದ ವಿವರ ಈ ಕೆಳಕಂಡಂತಿದೆ.

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ	ಒಟ್ಟು
1989-90	33.00ಲಕ್ಷ	4.40 ಲಕ್ಷ	37.40 ಲಕ್ಷ
1990-91	41.47ಲಕ್ಷ	4.59ಲಕ್ಷ	45.76 ಲಕ್ಷ
1991-92 (ಆಂಟಿಸಿಪೇಟೆಡ್)	40.62ಲಕ್ಷ	3.80ಲಕ್ಷ	44.42 ಲಕ್ಷ
ಒಟ್ಟು	114.79	12.79	127.58

ವಿಷಯ:ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿರುವ ನಿರುದ್ಯೋಗಿಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1359 (2012)

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಉದ್ಯೋಗ ವಿನಿಮಯ ಕಛೇರಿ ಹಾಗು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿರುವ ಒಟ್ಟು ನಿರುದ್ಯೋಗಿ ಅಭ್ಯರ್ಥಿಗಳ ಸಂಖ್ಯೆ ಎಷ್ಟು ? (ಇವತ್ತಿನ ಹಾಗೂ ವರ್ಗವಾರು ಮಾಹಿತಿ ನೀಡುವುದು?)

ಆ) ಕಳೆದು ಮೂರು ವರ್ಷಗಳಲ್ಲಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಎಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಡಲಾಗಿದೆ ?

ಇ) ಈ ನಿರುದ್ಯೋಗಿ ಯುವಕರಿಗೆ ಸಾಕಷ್ಟು ಉದ್ಯೋಗ ದೊರಕಿಸಲು ನಿಖರವಾದ ಯೋಜನೆಗಳೇನು ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು)

ಅ) 1991ನೇ ಡಿಸಂಬರ್ ಅಂತ್ಯಕ್ಕೆ ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 14,23,280

ಬೀದರ್ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ 35,772

	ಪ. ಜಾತಿ	ಪ.ಪಂ.
ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ	1,59,450	19,530
ಬೀದರ್ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿಯಲ್ಲಿ	6,931	35

ಆ) 30,905

ಇ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದವರಿಗೆ ಉದ್ಯೋಗ ಒದಗಿಸಲು ಯಾವುದೇ ವಿಶಿಷ್ಟ ಕಾರ್ಯಕ್ರಮವು ಇರುವುದಿಲ್ಲ. ವಿವಿಧ ನೇಮಕಾತಿ ಮೂಲಗಳಿಂದ ಆಗಿಂದಾಗ್ಗೆ ಬರುವ ಬೇಡಿಕೆಗಳಿಗೆ ನೋಂದಾಯಿಸಿಕೊಂಡ ಅಭ್ಯರ್ಥಿಗಳ ಹೆಸರನ್ನು ಕಳುಹಿಸಿಕೊಡಲಾಗುತ್ತಿದೆ.

ವಿಷಯ: ಕರ್ನಾಟಕ ಟೆಲಿಕಾಂ ಸಂಸ್ಥೆಯು ನೇಮಿಸಿ ಕೊಂಡಿರುವ ಸಲಹೆಗಾರರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1360 (2014)

ಶ್ರೀ ಸಿ. ಬೈರೇಗೌಡ (ವೇಮಗಲ್) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಟೆಲಿಕಾಂ ಸಂಸ್ಥೆಯು ನೇಮಿಸಿಕೊಂಡಿರುವ ಸಲಹೆಗಾರರ ಸಂಖ್ಯೆ ಎಷ್ಟು ? (ಅವರುಗಳ ಹೆಸರು ಮತ್ತು ಸಲ್ಲಿಸಿದ ಸೇವೆ ಅವಧಿಯ ವಿವರ ಒದಗಿಸುವುದು)

ಆ) ಇವರುಗಳಿಗೆ ಮಾಡಿರುವ ಒಟ್ಟು ವೆಚ್ಚ ಎಷ್ಟು ?

ಇ) ಹೀಗೆ ನೇಮಿಸಿಕೊಂಡಾಗ ಸಲಹೆಗಾರರ ವಯಸ್ಸು, ವಿದ್ಯಾರ್ಹತೆ ಮತ್ತು ಅನುಭವಗಳ ವಿವರ ಕೊಡುವುದು ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 7, (ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ)

ಆ) ರೂ.7,45,550-00ಗಳು.

ಇ) ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ.

STATEMENT SHOWING THE DETAILS OF CONSULTANTS OF K.T.L.

Sl. No.	Name	Period	Total amount of Remuneration	Age	Qualification	Experience
1	C.S.S.Rao	01-11-84 to 31-8-93 16 Months	Rs.4,58,800-00	60 Yrs	B.E Mysore University	1) Ex.caps M/S Indian Telephone Industries Ltd Bangalore. 2) 35 years of experience in the field of Tele-communication
2	P.N.S.Iyengar	01-11-84 to 30-6-90 68 Months	Rs.1,80,000-00	59 Yrs	Sr.Intermediate Diploma Mysore University	1) Ex Chief Mana-ger, M/S ITI Bangalore. 2) 37 Yrs experience in Tele-cummunication.
3	Lakshminarayan	9-8-89 to 30-6-90 15 Months	Rs. 30,000-00	58 Yrs	B.com	1) 30 yrs of Experience in

						Telecommunication. 2) Marketing Division M/S ITI, B'lore.
4	R.Nagaraju	30-6-89 to 30-6-90 12 Months	Rs. 42,000-00	58 Yrs	B.Sc(PCM) AMIE	1)Ex.Addl.G.M (PCM) Project ITI.Bangalore, 36 yrs, Experie-nce in Telecu-mmunication.
5	T.Ranganna	11-4-90 to 30-6-90 3 Months	Rs. 8,250-00	58 Yrs	B.Sc D.IISc	1) Ex-Chief works Manager ITI.B'lore, 35 years experi-ence in Tele-cummunication.
6	N.M.Sundaram	01-1-91 to 31-1-91 1 Month	Rs. 5,500-00	59 Yrs	B.E	1) Ex-Addl. Director, ITI B'lore 35 yrs experience in Telecummunication

7	A.Gajaraju	21-10-91 to 20-4-92 6 Months	Rs. 21,000-00	58 Yrs	M.Sc caps	1) Ex-Dy. General Manager M/S ITI B'lore, 30 yrs in Telecummu-nication.
			Rs. 7,45,550-00			

ವಿಷಯ: ಮಲೆಬೆನ್ನೂರಿನ ಸಾರ್ವಜನಿಕ ವಿದ್ಯಾರ್ಥಿನಿಲಯದ ಕಟ್ಟಡ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1362 (2032)

ಶ್ರೀ ವೈ. ನಾಗಪ್ಪ (ಹರಿಹರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಿಹರ ತಾಲ್ಲೂಕಿನ ಮಲೆಬೆನ್ನೂರು ಗ್ರಾಮದಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ಯಾವ ವರ್ಷ ಪ್ರಾರಂಭಿಸಲ್ಪಟ್ಟಿದೆ ?

ಆ) ಸದರಿ ನಿಲಯದ ಈ ಕಟ್ಟಡ ಕಾರ್ಯ ಯಾವ ಹಂತದಲ್ಲಿದೆ. ವಿಳಂಬಕ್ಕೆ ಕಾರಣಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಮಲೆಬೆನ್ನೂರು ಗ್ರಾಮ, ಹರಿಹರ ತಾಲ್ಲೂಕು ಇಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯವನ್ನು 1983-84ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

ಆ) ನಿರ್ಮಾಣ ಹಂತವು ತಾರ್ಸಿ ಮಟ್ಟದಲ್ಲಿದ್ದಾಗ, ನಿವೇಶನದ ಬಗ್ಗೆ ತಕರಾರು ಉದ್ಭವಿಸಿ ಉಚ್ಚ ನ್ಯಾಯಾಲಯದಲ್ಲಿ ಕಟ್ಟಳೆ ಪ್ರಾರಂಭವಾಗಿ ತಡೆಯಾಜ್ಞೆ ನೀಡಲಾಗಿತ್ತು. ದಿನಾಂಕ 28-2-92 ರಂದು ತಡೆಯಾಜ್ಞೆಯನ್ನು ತೆರವುಗೊಳಿಸಿರುವುದರಿಂದ ನಿರ್ಮಾಣ ಕಾರ್ಯವನ್ನು ಪುನರಾರಂಭಿಸಲು ಕರ್ನಾಟಕ ಭೂಸೇನಾ ನಿಗಮಕ್ಕೆ ದಿನಾಂಕ 29-2-92ರಂದು ಸೂಚನೆ ನೀಡಲಾಗಿದೆ.

ವಿಷಯ: ಹರಿಹರ ಸಾರ್ವಜನಿಕ ಆಸ್ಪತ್ರೆ ಸಿಬ್ಬಂದಿ ವಸತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1363 (2033)

ಶ್ರೀ ವೈ. ನಾಗಪ್ಪ (ಹರಿಹರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹರಿಹರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಕಟ್ಟಡ ಒರ್ವ ದಾನಿಯಿಂದ ಕಟ್ಟಿಸಲ್ಪಟ್ಟಿದೆಯಲ್ಲವೆ; ವೈದ್ಯಾಧಿಕಾರಿಗಳ ಮತ್ತು ಇತರ ಸಿಬ್ಬಂದಿ ವಾಸದ ಮನೆಗಳ ಕಟ್ಟಡಗಳನ್ನು ಈ ಆಸ್ಪತ್ರೆ ಹೊಂದಿದೆಯೇ; ಹಾಗಿಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ?

ಆ) ಒರ್ವ ದಾನಿ ಕ್ಷ-ಕಿರಣ ಕೊಠಡಿ ಕಟ್ಟಡದ ನಿರ್ಮಾಣಕ್ಕೆ 25 ಸಾವಿರ ರೂಪಾಯಿಗಳನ್ನು ನೀಡಿದ್ದಾಗ್ಯೂ ಇಂದಿಗೂ ಕಟ್ಟಡದ ಕಾರ್ಯ ಪ್ರಾರಂಭಿಸಲಾಗಿಲ್ಲದಿರುವುದಕ್ಕೆ ಕಾರಣಗಳೇನು ?

ಇ) ದಾನಿಗಳಿಂದ ಆಸ್ಪತ್ರೆಯ ಕಟ್ಟಡ ಇತರ ಕಟ್ಟಡಕ್ಕೆ ಹಣ ಸಂಗ್ರಹಿಸಿ ಪಾವತಿ ಮಾಡಿದ್ದಾಗ್ಯೂ, ಉಳಿದ ಸೌಲಭ್ಯಗಳ ನೀಡಿಕೆಯಲ್ಲಿ ಸರ್ಕಾರ ತಾತ್ಸಾರ ಮಾಡಿರುವುದು ಸರಿಯೆ ; ಹಾಗಿದ್ದಲ್ಲಿ ಈ ವರ್ಷವೇ ಈ ಸೌಲಭ್ಯಗಳನ್ನು ಒದಗಿಸುವಲ್ಲಿ ಆದ್ಯತೆ ನೀಡಲಾಗುವುದೇ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಹಳೆಯ ಆಸ್ಪತ್ರೆಯ ಆವರಣದಲ್ಲಿ 9 ವಸತಿ ಗೃಹಗಳು ಇವೆ.

ಇ) ದಾನಿಗಳು 20,000ರೂ. ವಂತಿಕೆಯನ್ನು ಮಾತ್ರ ನೀಡಿರುತ್ತಾರೆ. ಈ ಮೊತ್ತವು ಸಾಕಾಗದಿರುವುದರಿಂದ ಕ್ಷ-ಕಿರಣ ಕಟ್ಟಡದ ಕಾರ್ಯ ಪ್ರಾರಂಭವಾಗಿಲ್ಲ.

ಈ) ಹಣದ ಅಭಾವದಿಂದ ಈ ವರ್ಷ ಈ ಸೌಲಭ್ಯವನ್ನು ಒದಗಿಸುವುದು ಸಾಧ್ಯವಿಲ್ಲ.

ವಿಷಯ: ರಾಜ್ಯದ ಬೃಹತ್ ಕೈಗಾರಿಕೆಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1364 (2019)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿರುವ ಬೃಹತ್ ಕೈಗಾರಿಕೆಗಳ ಸಂಖ್ಯೆ ಎಷ್ಟು ;

ಆ) ಈ ಉದ್ದಿಮೆಗಳಿಂದ ಪ್ರತಿ ವರ್ಷ ಎಷ್ಟು ಮೌಲ್ಯದ ಸರಕುಗಳನ್ನು ಉತ್ಪಾದಿಸಲಾಗುತ್ತಿದೆ ;

ಇ) ಈ ಕೈಗಾರಿಕೆಗಳಲ್ಲಿ ದುಡಿಯುವ ಒಟ್ಟು ಕಾರ್ಮಿಕ ಸಂಖ್ಯೆ ಎಷ್ಟು ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 678 ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು.

ಆ) ರೂ. 6,05,190-00ಲಕ್ಷಗಳು.

ಇ) ಒಟ್ಟು 2,70,211 ಜನ.

ವಿಷಯ: ಕೈಗಾರಿಕಾ ಬೋರ್ಡ್‌ನವರು ಸ್ವಾಧೀನ ಪಡಿಸಿಕೊಂಡ ನಂತರ ರೈತ ಮಕ್ಕಳಿಗೆ ಉದ್ಯೋಗ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1365 (2020)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಭೂ ಸ್ವಾಧೀನಪಡಿಸಿಕೊಳ್ಳಲು ರೈತರಿಗೆ ಪ್ರತಿ ಎಕರೆಗೆ ಕೊಡುವ ಅಂದಾಜು ಬೆಲೆ ಏನು ;

ಆ) ಭೂಸ್ವಾಧೀನದ ನಂತರ ರೈತರಿಗೆ ಆ ಸ್ಥಳದಲ್ಲಿ ಸ್ಥಾಪಿತವಾದ ಕೈಗಾರಿಕೆಗಳಲ್ಲಿ ಆದ್ಯತೆಯ ಮೇಲೆ ಉದ್ಯೋಗವನ್ನು ನೀಡಲಾಗುತ್ತಿದೆಯೇ ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) ಭೂ ಸ್ವಾಧೀನಪಡಿಸಿಕೊಳ್ಳಲು ಭೂಮಿಗಳಿಗೆ ಪ್ರತಿಯೊಂದು ಭೂಮಿಗೂ ಭೂಮಿಯ ಗುಣಮಟ್ಟ, ಭೂಮಿಯ ಅಭಿವೃದ್ಧಿ ಹೊಂದಿರುವುದು ಮತ್ತು ಭೂಮಿಯ ಸ್ವರೂಪ, ಸುತ್ತಮುತ್ತಲಿನ ಭೂಮಿಗಳ ಮಾರಾಟ, ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಭೂ ಸ್ವಾಧೀನ ಕಾಯ್ದೆಯನ್ವಯ ಪರಿಹಾರಧನವನ್ನು ನಿಗಧಿ ಪಡಿಸಲಾಗುವುದು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಇಲ್ಲಿಯವರೆಗೆ ಕನಿಷ್ಠ ಸುಮಾರು ರೂ. 5,000-00ಗಳಿಂದ ಗರಿಷ್ಠ 1.00ಲಕ್ಷದವರೆಗೆ ಪ್ರತಿಯೊಂದು ಎಕರೆಗೆ ಪರಿಹಾರಧನವನ್ನು ಆಯಾಯ ಭೂಮಿಗಳ ಅನುಸಾರವಾಗಿ ಪರಿಹಾರಧನವನ್ನು ಕೊಡಲಾಗಿದೆ.

ಆ) ಭೂಸ್ವಾಧೀನ ಕ್ರಮದಿಂದ ಭೂಮಿಯನ್ನು ಕಳೆದುಕೊಂಡ ರೈತರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಅವರ ವಿದ್ಯಾರ್ಹತೆ ಮತ್ತು ಸೂಕ್ತತೆಗನುಗುಣವಾಗಿ ಆದ್ಯತೆ ಮೇರೆಗೆ ಉದ್ಯೋಗವನ್ನು ನೀಡಬೇಕೆಂಬ ಷರತ್ತನ್ನು ಉದ್ಯಮಿಗಳೊಡನೆ ನೆರವೇರಿಸುವ ಗುತ್ತಿಗೆ ಮತ್ತು ಕರಾರು ಪತ್ರದಲ್ಲಿ ಅಳವಡಿಸಲಾಗುತ್ತದೆ.

ಇಂತಹ ರೈತರು ಅಥವಾ ಅವರ ಅವಲಂಬಿತರಿಂದ ಬಂದ ಅರ್ಜಿಗಳನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತತ್ಸಂಬಂಧ ಕೈಗಾರಿಕೆಗೆ ಕಳುಹಿಸಿ ಸೂಕ್ತ ನಿರ್ದೇಶನವನ್ನೂ ಸಹ ನೀಡಲಾಗುವುದು.

ವಿಷಯ: ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರೈತರಿಂದ ಭೂಸ್ವಾಧೀನ ಮಾಡಿಕೊಳ್ಳುವ ಬೆಲೆಯ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1366 (2021)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದ ಸುತ್ತ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರೈತರಿಂದ ಸ್ವಾಧೀನಪಡಿಸಿಕೊಂಡ ಭೂಮಿ ಎಷ್ಟು ?

ಆ) ಇವರಿಗೆ ಪ್ರತಿ ಎಕರೆಗೆ ಕೊಡುತ್ತಿರುವ ಬೆಲೆ ಎಷ್ಟು ?

ಇ) ಈ ಸ್ವಾಧೀನ ಮಾಡಿದ ಸ್ಥಳದಲ್ಲಿ ಸ್ಥಾಪಿಸಲಾಗುವ ಕೈಗಾರಿಕೆಗಳಲ್ಲಿ ರೈತರ ಮಕ್ಕಳಿಗೆ ಎಷ್ಟು ಜನರಿಗೆ ಉದ್ಯೋಗ ಕೊಡಲಾಗಿದೆ ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) 4,333 ಎಕರೆ 05 ಗುಂಟೆಗಳು.

ಆ) ಭೂ ಸ್ವಾಧೀನಪಡಿಸಿಕೊಳ್ಳುವ ಭೂಮಿಗಳಿಗೆ ಪ್ರತಿಯೊಂದು ಭೂಮಿಗೂ ಆ ಭೂಮಿಯ ಗುಣಮಟ್ಟ, ಭೂಮಿ ಅಭಿವೃದ್ಧಿ ಹೊಂದಿರುವುದು ಮತ್ತು ಭೂಮಿಯ ಸ್ವರೂಪ ಹಾಗೂ ಸುತ್ತ ಮುತ್ತಲಿನ ಭೂಮಿಗಳ ಮಾರಾಟ ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಭೂ ಸ್ವಾಧೀನ ಕಾಯ್ದೆ ಅನ್ವಯ ಪರಿಹಾರ ಧನವನ್ನು ನಿಗಧಿಪಡಿಸಲಾಗುವುದು. ಮಂಡಳಿ ಯಲ್ಲಿ ಇಲ್ಲಿಯವರೆವಿಗೆ ಕನಿಷ್ಠ ಸುಮಾರು 3,000-00ರೂ.ಗಳಿಂದ ಗರಿಷ್ಠ 65,000-00ರೂ.ಗಳವರೆಗೆ ಪ್ರತಿಯೊಂದು ಎಕರೆಗೆ ಪರಿಹಾರಧನವನ್ನು ಆಯಾಯ ಭೂಮಿಗಳ ಅನುಸಾರವಾಗಿ ಪರಿಹಾರ ಧನವನ್ನು ಕೊಡಲಾಗುತ್ತಿದೆ.

ಇ) ಭೂಸ್ವಾಧೀನ ಕ್ರಮದಿಂದ ಭೂಮಿಯನ್ನು ಕಳೆದುಕೊಂಡ ರೈತರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಅವರ ವಿದ್ಯಾರ್ಹತೆ ಮತ್ತು ಸೂಕ್ತತೆಗನುಗುಣವಾಗಿ ಆದ್ಯತೆ ಮೇರೆಗೆ ಕಾರ್ಖಾನೆಗಳಲ್ಲಿ ಉದ್ಯೋಗವನ್ನು ನೀಡಬೇಕೆಂಬ ಷರತ್ತನ್ನು ಉದ್ಯಮಿಗಳೊಡನೆ ನೆರವೇರಿಸುವ ಗುತ್ತಿಗೆ ಮತ್ತು ಕರಾರು ಪತ್ರದಲ್ಲಿ ಅಳವಡಿಸಲಾಗಿದೆ.

ಇಂತಹ ರೈತರು ಅಥವಾ ಅವರ ಅವಲಂಬಿತರಿಂದ ಬಂದ ಅರ್ಜಿಗಳನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ತತ್ಸಂಬಂಧ ಕಾರ್ಖಾನೆಗಳಿಗೆ ಕಳುಹಿಸಿ ಸೂಕ್ತ ನಿರ್ದೇಶನವನ್ನೂ ಸಹ ನೀಡಲಾಗುವುದು.

ವಿಷಯ: ರಾಜ್ಯದ ಅಲೆಮಾರಿ ಜನಾಂಗದ ಅಭಿವೃದ್ಧಿಗೆ ಕಾರ್ಯಕ್ರಮಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 1367 (2022)

ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಲೆಮಾರಿ ಜನಾಂಗಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಕಾರ್ಯಕ್ರಮಗಳಲ್ಲಿ ರಾಜ್ಯ ಸರ್ಕಾರ ಎಷ್ಟು ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದೆ ಮತ್ತು ಕಾರ್ಯಕ್ರಮಗಳನ್ನು ಅಳವಡಿಸಿರುವ ಸ್ಥಳಗಳು ಯಾವುವು ;

ಆ) ಈ ಕಾರ್ಯಕ್ರಮದ ಸೌಲಭ್ಯ ಪಡೆದ ನಿರ್ದಿಷ್ಟ ಫಲಾನುಭವಿಗಳ ಸಂಖ್ಯೆ ಎಷ್ಟು ;

ಇ) ಈ ಯೋಜನೆಗಳಲ್ಲಿ ಕಾರ್ಯಗತವಾಗದೆ ಕೈತಪ್ಪಿ ಹೋದ ಯೋಜನೆಗಳೆಷ್ಟು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಅಲೆಮಾರಿ ಜನಾಂಗಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಯೋಜನೆಗಳನ್ನು ಯೋಜಿಸಲು ಯೋಚಿಸಿದ್ದು, ಈ ಬಗ್ಗೆ ಹಲವಾರು ಮಾಹಿತಿಗಳನ್ನು ರಾಜ್ಯ ಸರ್ಕಾರದಿಂದ ಕೋರಿದೆ. ಈ ಮಾಹಿತಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ತರಿಸಲಾಗುತ್ತಿದ್ದು ಕ್ರೋಢೀಕರಿಸಿ ಕೇಂದ್ರ ಸರ್ಕಾರಕ್ಕೆ

ಕಳುಹಿಸಿಕೊಡಲಾಗುವುದು. ಇಷ್ಟೇ ಹೊರತು, ಕೇಂದ್ರ ಸರ್ಕಾರ ಇನ್ನೂ ಯಾವುದೇ ಯೋಜನೆಗಳನ್ನು ಈ ಬಗ್ಗೆ ಪ್ರಾರಂಭಿಸಿರುವುದರ ಮಾಹಿತಿ ರಾಜ್ಯ ಸರ್ಕಾರಕ್ಕೆ ಬಂದಿರುವುದಿಲ್ಲ.

ಆ) 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) 'ಅ'ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ: ಕೋಲಾರ ಜಿಲ್ಲೆಯಲ್ಲಿ ಟ್ರೈಸಂ ಯೋಜನಾ ಅಡಿಯಲ್ಲಿ ತೆರೆಯಲಾದ ಕೈಗಾರಿಕಾ ಘಟಕಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1369 (2037)

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ (ಡಿಸೆಂಬರ್-91ರವರೆಗೆ) (ಟ್ರೈಸಂ)ಯೋಜನೆಯಡಿಯಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಿದೆ(ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಇವುಗಳಿಗೆ ತಗುಲಿದ ವೆಚ್ಚವೆಷ್ಟು ?

ಇ) ಈ ಯೋಜನೆಯಿಂದ ಎಷ್ಟು ಜನರಿಗೆ ಅನುಕೂಲವಾಗಿದೆ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು)

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಕೋಲಾರ ಜಿಲ್ಲೆಯಲ್ಲಿ 1991-92ನೇ ಸಾಲಿನಲ್ಲಿ(ಡಿಸೆಂಬರ್91ರವರೆಗೆ)(ಟ್ರೈಸಂ) ಯೋಜನೆಯಡಿಯಲ್ಲಿ 874 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ತಾಲ್ಲೂಕು ಹೆಸರು	ಫಲಾನುಭವಿಗಳ ಸಂಖ್ಯೆ
1) ಕೋಲಾರ	81
2) ಮಾಲೂರು	65
3) ಮುಳಬಾಗಿಲು	86
4) ಬಂಗಾರಪೇಟೆ	93
5) ಶ್ರೀನಿವಾಸಪುರ	79
6) ಗೌರಿಬಿದನೂರು	86
7) ಚಿಕ್ಕಬಳ್ಳಾಪುರ	76
8) ಗುಡಿಬಂಡೆ	53
9) ಸಿದ್ಲಘಟ್ಟ	103
10) ಚಿಂತಾಮಣಿ	72
11) ಬಾಗೆಪಲ್ಲಿ	80
ಒಟ್ಟು	874

ಆ) ಇವುಗಳಿಗೆ ತಗುಲಿದ ವೆಚ್ಚ ರೂ. 15,29,122-00

ಇ) ಈ ಯೋಜನೆಯಡಿಯಲ್ಲಿ ಕೋಲಾರ ಜಿಲ್ಲೆಯಲ್ಲಿ 1837ಜನರಿಗೆ ಅನುಕೂಲವಾಗಿದೆ.
ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ:

ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ
1) ಕೋಲಾರ	159
2) ಮಾಲೂರು	93
3) ಮುಳಬಾಗಿಲು	160
4) ಬಂಗಾರಪೇಟೆ	131
5) ಶ್ರೀನಿವಾಸಪುರ	133
6) ಗೌರಿಬಿದನೂರು	199
7) ಚಿಕ್ಕಬಳ್ಳಾಪುರ	203
8) ಗುಡಿಬಂಡೆ	130
9) ಶಿಡ್ಲಘಟ್ಟ	201
10) ಚಿಂತಾಮಣಿ	116
11) ಬಾಗೇಪಲ್ಲಿ	311
ಒಟ್ಟು	1837

ವಿಷಯ: ಸರಕಾರಿ ಹಾಗೂ ಖಾಸಗಿ ಐ.ಟಿ.ಐ ಕಾಲೇಜುಗಳ ಮಾಹಿತಿ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1372 (2030)

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಐ.ಟಿ.ಐ ಕಾಲೇಜುಗಳ ಸಂಖ್ಯೆ ಎಷ್ಟು ಇದೆ.

ಆ) ಜಿಲ್ಲಾವಾರು ಕಾಲೇಜುಗಳ ಹೆಸರು ಮತ್ತು ವಿವರ ಕೊಡುವುದು.

ಇ) ರಾಜ್ಯದಲ್ಲಿರುವ ಖಾಸಗಿ ಐ.ಟಿ.ಐ. ಕಾಲೇಜುಗಳ ಸಂಖ್ಯೆ ಎಷ್ಟು ;

ಈ) ಸದರಿ ಖಾಸಗಿ ಐ.ಟಿ.ಐ ಕಾಲೇಜುಗಳಿಗೆ ಸರ್ಕಾರದಿಂದ ಅನುದಾನ ಕೊಡಲಾಗುವುದೆ ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ಸಚಿವರು)

ಅ) 39

ಆ) ಜಿಲ್ಲಾವಾರು ವಿವರ ಅನುಬಂದದಲ್ಲಿ ಕೊಡಲಾಗಿದೆ.

ಇ) 141

ಈ) ಅನುದಾನ ನೀಡುವ ಸಾಧ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಅನುಬಂಧ

ಜಿಲ್ಲಾವಾರು ಕೈಗಾರಿಕಾ ತರಬೇತಿ ಸಂಸ್ಥೆ : ಕೇಂದ್ರ ... ವಿವರ

1. ಬೆಂಗಳೂರು ಜಿಲ್ಲೆ:-
   (1) ಕೈಗಾರಿಕಾ ತರಬೇತಿ ಸಂಸ್ಥೆ, ಹೊಸೂರು ರಸ್ತೆ, ಬೆಂಗಳೂರು-29
   (2) -ಡಿಟೋ- ತುಮಕೂರು ರಸ್ತೆ, ಬೆಂಗಳೂರು-22
   (3) -ಡಿಟೋ- ದೇವನಹಳ್ಳಿ
   (4) -ಡಿಟೋ- ಕನಕಪುರ
2. ಬೆಳಗಾಂ ಜಿಲ್ಲೆ:-
   (5) -ಡಿಟೋ- ಬೆಳಗಾಂ (ಪುರುಷರು)
   (6) -ಡಿಟೋ- ಬೆಳಗಾಂ (ಮಹಿಳಾ)
3. ಬಳ್ಳಾರಿ ಜಿಲ್ಲೆ :-
   (7) -ಡಿಟೋ- ಬಳ್ಳಾರಿ
   (8) -ಡಿಟೋ- ಹೂವಿನಹಡಗಲಿ
4. ಬೀದರ್ ಜಿಲ್ಲೆ :-
   (9) -ಡಿಟೋ- ಬೀದರ್
5. ಬಿಜಾಪುರ ಜಿಲ್ಲೆ :-
   (10) -ಡಿಟೋ- ಬಿಜಾಪುರ
   (11) -ಡಿಟೋ- ನಲವತ್ತವಾಡ
6. ಚಿಕ್ಕಮಗಳೂರು ಜಿಲ್ಲೆ :-
   (12) -ಡಿಟೋ- ಚಿಕ್ಕಮಗಳೂರು
7. ಚಿತ್ರದುರ್ಗ ಜಿಲ್ಲೆ
   (13) -ಡಿಟೋ- ದಾವಣಗೆರೆ
8. ದಕ್ಷಿಣ ಕನ್ನಡ ಜಿಲ್ಲೆ :-
   (14) -ಡಿಟೋ- ಮಂಗಳೂರು
9. ಧಾರವಾಡ ಜಿಲ್ಲೆ :-
   (15) -ಡಿಟೋ- ಹುಬ್ಬಳ್ಳಿ
   (16) -ಡಿಟೋ- ಗದಗ್
10. ಗುಲ್ಬರ್ಗಾ ಜಿಲ್ಲೆ :-
    (17) -ಡಿಟೋ- ಗುಲ್ಬರ್ಗಾ (ಪುರುಷರು)
    (18) -ಡಿಟೋ- ಗುಲ್ಬರ್ಗಾ (ಮಹಿಳಾ)
    (19) -ಡಿಟೋ- ವಾಡಿ, ಚಿತ್ತಾಪುರ ತಾಲ್ಲೂಕು.
11. ಹಾಸನ ಜಿಲ್ಲೆ :-
    (20) -ಡಿಟೋ- ಹಾಸನ
    (21) -ಡಿಟೋ- ಹೊಳೇನರಸೀಪುರ
12. ಕೊಡಗು ಜಿಲ್ಲೆ :-
    (22) ಕೈಗಾರಿಕಾ ತರಬೇತಿ ಸಂಸ್ಥೆ, ಮಡಿಕೇರಿ

----

(23) -ಡಿಟೋ- ಪೊನ್ನಂಪೇಟೆ (ಮಹಿಳಾ)

13. ಕೋಲಾರ ಜಿಲ್ಲೆ :-

(24) -ಡಿಟೋ- ಬಿ.ಇ.ಎಂ.ಎಲ್. ನಗರ ಅಂಚೆ, ಕೆ.ಜಿ.ಎಫ್

(25) -ಡಿಟೋ- ದೇವರಾಯಸಮುದ್ರ

(26) -ಡಿಟೋ- ಗೌರಿಬಿದನೂರು (ಮಹಿಳಾ)

14. ಮಂಡ್ಯ ಜಿಲ್ಲೆ :-

(27) -ಡಿಟೋ- ಮಂಡ್ಯ

(28) -ಡಿಟೋ- ಮಳವಳ್ಳಿ

15. ಮೈಸೂರು ಜಿಲ್ಲೆ :-

(29) -ಡಿಟೋ- ಮೈಸೂರು

(30) -ಡಿಟೋ- ಗುಂಡ್ಲುಪೇಟೆ

16. ರಾಯಚೂರು ಜಿಲ್ಲೆ :-

(31) -ಡಿಟೋ- ರಾಯಚೂರು

(32) -ಡಿಟೋ- ಕುಕನೂರು, ಯಲಬುರ್ಗಾ ತಾಲ್ಲೂಕು, ರಾಯಚೂರು ಜಿಲ್ಲೆ

17. ಶಿವಮೊಗ್ಗ ಜಿಲ್ಲೆ :-

(33) -ಡಿಟೋ- ಶಿವಮೊಗ್ಗ (ಮಹಿಳಾ)

(34) -ಡಿಟೋ- ಭದ್ರಾವತಿ

18. ತುಮಕೂರು ಜಿಲ್ಲೆ :-

(35) -ಡಿಟೋ- ತುಮಕೂರು

(36) -ಡಿಟೋ- ಅಮ್ಮಸಂದ್ರ

19. ಉತ್ತರ ಕನ್ನಡ ಜಿಲ್ಲೆ :-

(37) -ಡಿಟೋ- ಕಾರವಾರ

(38) -ಡಿಟೋ- ಹೊನ್ನಾವರ

(39) -ಡಿಟೋ- ಹಳಿಯಾಳ

ವಿಷಯ:-ವೈದ್ಯಕೀಯ ಕಾಲೇಜುಗಳ ಸಂಖ್ಯೆ ಹಾಗೂ ಪ್ರವೇಶಾವಕಾಶದ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1373 (2031)

ಶ್ರೀ ಮಂಜುನಾಥ ಸಿ. ಕೂನ್ನೂರು (ಶಿಗ್ಗಾಂವ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಮಹಾವಿದ್ಯಾಲಯಗಳ ಸಂಖ್ಯೆ ಎಷ್ಟು ? ಇವುಗಳಲ್ಲಿ ಒಟ್ಟು ಪ್ರವೇಶಾವಕಾಶ ಸಂಖ್ಯೆ ಎಷ್ಟು ?

ಆ) ಇದರಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಯೊಂದು ವಿದ್ಯಾಲಗಳಲ್ಲಿ ಎಷ್ಟು ಪ್ರವೇಶಾವಕಾಶವನ್ನು ಕೊಡಲಾಗಿದೆ. ಹಾಗೂ ಖಾಸಗಿ ವೈದ್ಯಕೀಯ ವಿದ್ಯಾಲಯಗಳಲ್ಲಿ ಸರಕಾರದ ಪ್ರವೇಶಾವಕಾಶದ ಸಂಖ್ಯೆ ಎಷ್ಟು ?

ಇ) ಖಾಸಗಿ ಕಾಲೇಜುಗಳ ಮಂಜೂರಾತಿಗಾಗಿ ಬಂದಿರುವ ಅರ್ಜಿಗಳೆಷ್ಟು ?

ಈ) ಯಾವುದೇ ಖಾಸಗಿ ವಿದ್ಯಾಸಂಸ್ಥೆಗೆ ಸರಕಾರ ಮಂಜೂರಾತಿ ಮಾಡಲಾಗುವುದೇ ?

ಉ) ಈ ಬಗ್ಗೆ ಸರಕಾರದ ನಿಲುವು ಏನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಿ ವೈದ್ಯಕೀಯ ಕಾಲೇಜುಗಳು 4

ಖಾಸಗಿ ವೈದ್ಯಕೀಯ ಕಾಲೇಜುಗಳು 14

ಒಟ್ಟು 18

ಪ್ರವೇಶಾವಕಾಶದ ಒಟ್ಟು ಸಂಖ್ಯೆ : 3395

ಆ) ಪ್ರತ್ಯೇಕ ಪಟ್ಟಿ ಲಗತ್ತಿಸಿದೆ.

ಇ) 34

ಈ) ಸಧ್ಯಕ್ಕೆ ಇಲ್ಲ.

ಉ) ಸಧ್ಯಕ್ಕೆ ರಾಜ್ಯದಲ್ಲಿ ಯಾವುದೇ ಹೊಸ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಬಾರದೆಂದು ತೀರ್ಮಾನ ತೆಗೆದುಕೊಂಡಿದೆ.

ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾವಕಾಶದ ಮತ್ತು ಖಾಸಗೀ ವೈದ್ಯಕೀಯ ಕಾಲೇಜುಗಳಲ್ಲಿರುವ ಸರ್ಕಾರ ಸ್ಥಾನಗಳ ವಿವರಗಳ ಪಟ್ಟಿ .

ಕ್ರ.ಸಂ.	ವೈದ್ಯಕೀಯ ಮಹಾವಿದ್ಯಾಲಯದ ಹೆಸರು	ಪ್ರವೇಶ ಸಾಮರ್ಥ್ಯ	ಖಾಸಗೀ ವೈದ್ಯಕೀಯ ಮಹಾವಿದ್ಯಾಲಯದಲ್ಲಿರುವ ಸರ್ಕಾರಿ ಸ್ಥಾನಗಳು.
1)	ಸರ್ಕಾರಿ ವೈದ್ಯಕೀಯ ಕಾಲೇಜುಗಳು		
1)	ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	200	
2)	ಮೈಸೂರು ವೈದ್ಯಕೀಯ ಮಹಾವಿದ್ಯಾಲಯ , ಮೈಸೂರು	175	
3)	ಕೆ. ಎಂ. ಸಿ. ಹುಬ್ಬಳ್ಳಿ	130	
4)	ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ	130	
2)	ಖಾಸಗೀ ವೈದ್ಯಕೀಯ ಕಾಲೇಜುಗಳು		
1)	ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	120	10
2)	ಅಲ್‌ಅಮೀನ್ ವೈದ್ಯಕೀಯ ಮಹಾವಿದ್ಯಾಲಯ, ಬಿಜಾಪುರ	130	30
3)	ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಸಂಸ್ಥೆ, ಬೆಳ್ಳೂರು	195	29
4)	ದೇವರಾಜಅರಸ್ ವೈದ್ಯಕೀಯ ಮಹಾವಿದ್ಯಾಲಯ, ಕೋಲಾರ	150	17
5)	ಕೆಂಪೇಗೌಡ ವೈದ್ಯಕೀಯ ವಿಜ್ಞಾನಸಂಸ್ಥೆ, ಬೆಂಗಳೂರು	100	14
6)	ಕೆ. ಎಂ. ಸಿ. ಮಂಗಳೂರು	300	36

ಕೆ. ಎಂ. ಸಿ. ಮಣಿಪಾಲ	300	--
7) ಬಿ. ಎಲ್. ಡಿ. ಇ. ವೈದ್ಯಕೀಯ ಮಹಾವಿದ್ಯಾಲಯ,ಬಿಜಾಪುರ	180	--
8) ಜೆ. ಜೆ. ಎಂ. ವೈದ್ಯಕೀಯ ಮಹಾವಿದ್ಯಾಲಯ, ದಾವಣಗೆರೆ	320	72
9) ಜೆ. ಎನ್. ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾಂ	195	50
10) ಎಂ. ಆರ್. ವೈದ್ಯಕೀಯ ಮಹಾವಿದ್ಯಾಲಯ, ಗುಲ್ಬರ್ಗಾ	175	50
11) ಎಂ.ಎಸ್. ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯ,ಬೆಂಗಳೂರು	110	--
12) ಸೆಂಟ್‌ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು	60	--
13) ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯ , ತುಮಕೂರು	195	22
14) ಜೆ. ಎಸ್. ಎಸ್. ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು	200	5

ವಿಷಯ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೇಲ್ದರ್ಜೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1374 (2035)

ಶ್ರೀ ವಸಂತ. ವಿ. ಸಾಲಿಯಾನ (ಕಾಪು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್ ಅಸ್ತಿತ್ವಕ್ಕೆ ಬಂದ ನಂತರ ಎಷ್ಟು ಪ್ರಾಥಮಿಕ ಆರೋಗ್ಯ ಘಟಕಗಳನ್ನು ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೆ ಏರಿಸಲಾಗಿದೆ . ಇದಕ್ಕೆ ಸರ್ಕಾರದ ಮಂಜೂರಾತಿ ಇದೆಯೇ; ಇವುಗಳಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಲಾಗಿದೆಯೆ ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) 67, ಇವುಗಳಲ್ಲಿ 45 ಆರೋಗ್ಯ ಕೇಂದ್ರಗಳಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸಲಾಗಿದೆ. ಇನ್ನುಳಿದ 22 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕನಿಷ್ಠ ಸೌಲಭ್ಯಗಳನ್ನು ಒದಗಿಸುವ ವಿಷಯವು ಪರಿಶೀಲನೆಯಲ್ಲಿದೆ.

ವಿಷಯ: ಗಾರ್ಮೆಂಟ್ ಎಕ್ಸ್‌ಪೋರ್ಟ್ ಉದ್ಯಮಗಳಲ್ಲಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1375 (2058)

ಶ್ರೀ ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಗಾರ್ಮೆಂಟ್ ಎಕ್ಸ್‌ಪೋರ್ಟ್ ಉದ್ದಿಮೆಗಳೆಷ್ಟು ?

ಆ) ಈ ಉದ್ದಿಮೆಗಳು ಕನಿಷ್ಠ ವೇತನ ನೀಡದೇ ಇರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ , ಈ ಉದ್ದಿಮೆಗಳಲ್ಲಿ ಕನಿಷ್ಠ ವೇತನ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು)

ಅ) 600

ಆ) ಹೌದು.

ಇ) ಕೆಲವು ಉದ್ದಿಮೆಗಳಲ್ಲಿ ಕನಿಷ್ಠ ವೇತನ ನೀಡದ ಬಗ್ಗೆ ದೂರುಗಳು ಬಂದಿದ್ದು, ಅವುಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ಸರ್ಕಾರಿ ಸೇವೆಯಲ್ಲಿರುವ ವೈದ್ಯರಿಗೆ ಖಾಸಗಿ ಪ್ರಾಕ್ಟೀಸ್ ಬಂದ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1329 (2064)

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ನೇಸರಗಿಯಲ್ಲಿ ಮೊದಲು ಟಿ.ಡಿ.ಬಿ.ಗೆ ಸೇರಿದ ನೇಸರಗಿ ಹೆರಿಗೆ ಆಸ್ಪತ್ರೆಯು ಜಿಲ್ಲಾ ಪರಿಷತ್ ಅಧೀನದಲ್ಲಿರುವುದು ನಿಜವೇ ;

ಆ) ಈ ಹೆರಿಗೆ ಆಸ್ಪತ್ರೆಗೆ ಸ್ವತಂತ್ರವಾದ ಉತ್ತಮ ಕಟ್ಟಡ ಇಲ್ಲದಿರುವುದು ನಿಜವೇ

ಇ) ಈ ಹೆರಿಗೆ ಆಸ್ಪತ್ರೆಯಲ್ಲಿ ಎಷ್ಟು ಜನ ಸಿಬ್ಬಂದಿ ಇರುವುದು ;

ಈ) ಈ ಹೆರಿಗೆ ಆಸ್ಪತ್ರೆಯಲ್ಲಿ ಸರ್ಕಾರದ ಆದೇಶ ಪ್ರಕಾರ ಓ.ಓ.ಡಿ ಮೇಲೆ ಮೆಡಿಕಲ್ ಆಫೀಸರನ್ನು ಪೋಸ್ಟಿಂಗ್ ಮಾಡಿರುವುದು ನಿಜವೇ ;

ಉ) ಹಾಗಿದ್ದಲ್ಲಿ ಹೆರಿಗೆ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮಾಡಿ ಖಾಯಂ ಆಗಿ ವೈದ್ಯಾಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರದವರು ಆದೇಶ ಹೊರಡಿಸುವರೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಹೌದು.

ಇ) ಕಿರಿಯ ಹಾಗೂ ಆರೋಗ್ಯ ಸಹಾಯ-1
ಗುಮಾಸ್ತ -1
ಗ್ರೂಪ್ ಡಿ ನೌಕರರು -2

ಈ) ಹೌದು.

ಉ) ಜಿಲ್ಲಾ ಪರಿಷತ್ ಬೆಳಗಾವಿ ಅವರಿಂದ ಪ್ರಸ್ತಾವನೆ ಬಂದ ನಂತರ ಪರಿಶೀಲಿಸಲಾಗುವುದು.

Subject:- Sugar Factories in Karnataka

Un-starred L.A. Question No. 1381 (2150)

Sri Ajayakumar Saranaik (Bagalkot) Will the Minister for Large & Medium Industries be pleased to State.

a) The number of sugar factories are there in the State ;

b) The number of sugar factories come under co-operative sector;

c) Are the sugar Factories Price Given to the Sugar Cane to the Farmers for the past three years (details factory wise and year wise be furnished)

d) The number of such factories which have distillery licence ?

Smt MANORAMA MADHWARAJ (Minister for Large & Medium Industries)

a) There are 28 established sugar factories in the State and 27 of them are working.

b) 16 sugar factories come under co-operative sector and of them, 15 are working.

c) The details regarding payment of cane price to farmers by sugar factories during the past three years is enclosed in Annexure.

d) The number of sugar factoreies having distillery licence is given below : (Sector wise)

Co-operative sector	4
Joint Sector	-
Public Sector	1
Private Sector	4
Total	9

ANNEXURE

Statement showing the cane price paid by sugar factories over the past 3 years.

Sl. No.	Name of the Sugar Factories.	Cane Price paid by the sugar factories per Metric Tonne of cane supplied. 1990-91 Es-factory	Ex-field	1989-90 Ex-factory	Ex-field	1988-89 Ex-factory	Ex-field
I.	Co-operative Sector						
1.	Bidar, SSK	-	345/-	-	350/-	-	280/-
2.	Pandavapura SSK	360/-	-	428/-	-	366/-	-
3.	Kampli SSK	380/-	-				
		405/- (Early Plantation)	-	340/-	-	300/-	-
4.	Hemavathy SSK	375/-	-	325/-	-	285/-	-
5.	Brahmavar SSK	345/-	-	315/-	-	285/-	-
6.	Sankeshwar SSK	-	495/-		505/-	-	425/-
7.	Chikodi SSK	-	490/-**		465/-	-	400/-
8.	Malaprabha	-	425/-**		475/-	-	400/-
9.	Gokak SSK	-	360/-**		400/-	-	305/-
10.	Raibag SSK	-	360/-**		380/-	-	285/-
11.	Halasiddanatha SSK	-	360/-**		404/-	-	315/-

12. Karnataka SSK	370/-	-	325/-	-	300/-	-
13. Sri Srirama SSK	380/-	-	325/-	-	300/-	-
14. Bhadra SSK	390/-	-	315/-	-	300/-	-
15. Aland SSK	360/-	-	325/-	-	-	-
2. Public Sector :						
16. Mysore Sugar Co.	390/-	-	345/-	-	300/-	-
17. M.P.M	395/-	-	335/-	-	285/-	-
3. Joint Sector:						
18. Davanagere Sugar Co.	390/-	-	335/-	-	300/-	-
19. Gangavathi Sugar Co.	415/-	-	350/-	-	300/-	-
4. Private Sector:						
20.Chamundeshwari	390/-	-	335/-	-	315 -	-
21. Godawari	-	360/-	-	418/-	-	358/-
22. Ugar Sugar Co	-	400/-	-	425/-	-	375/-
23. I.S.R	400/-	-	365/-	-	308/-	-
24. Siraguppa	398/-	-	361/-	-	302/-	-
25. Gowribidanur	360/-	-	350/-	-	300/-	-
26. Thungabhadra	395/-	-	340/-	-	300/-	-
27. Mahadeshwara	380/-	-	335/-	-	300/-	-

** Final cane price not yet paid.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1382 (2188)

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) ಮಾನ್ಯ ರೇಷ್ಮೆ ಕೃಷಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನ ರೈತರು ಹೆಚ್ಚು ರೇಷ್ಮೆ ಉತ್ಪಾದನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಿರೇಕೆರೂರು ತಾಲ್ಲೂಕಿನಲ್ಲಿದ್ದ ರೇಷ್ಮೆ ಅಧಿಕಾರಿಯ ಹುದ್ದೆಯನ್ನು ಕಡಿಮೆ ಮಾಡಲಿಕ್ಕೆ ಕಾರಣವೇನು?

ಇ) ತಾಲ್ಲೂಕಿನಲ್ಲಿ ರೇಷ್ಮೆ ವ್ಯವಸಾಯ ತೀವ್ರವಾಗಿ ಹೆಚ್ಚುತ್ತಿರುವುದರಿಂದ ಕೂಡಲೇ ರೇಷ್ಮೆ ಅಧಿಕಾರಿಗಳ ಹುದ್ದೆಯನ್ನು ಮಂಜೂರು ಮಾಡುವುದು ಅವಶ್ಯಕವೆಂಬುದನ್ನು ಸರ್ಕಾರ ಅರಿತಿದೆಯೆ?

ಈ) ಹಾಗಿದಲ್ಲಿ ರೇಷ್ಮೆ ಅಧಿಕಾರಿ ಹುದ್ದೆಯನ್ನು ಮೊದಲಿದ್ದಂತೆ ಮಂಜೂರು ಮಾಡಿ ಕೂಡಲೇ ಭರ್ತಿ ಮಾಡಲಾಗುವುದೆ ?

ಉ) ಹಿರೇಕೆರೂರು ತಾಲ್ಲೂಕಿಗೆ ರೇಷ್ಮೆ ಅಧಿಕಾರಿಯವರ ಕಛೇರಿ ಕಟ್ಟಡವನ್ನು 1992-93ನೇ ಸಾಲಿನ ಆಯವ್ಯಯದಲ್ಲಿ ಮಂಜೂರು ಮಾಡಿ ಕಟ್ಟಡ ಕೆಲಸವನ್ನು ಪ್ರಾರಂಭಿಸಲಾಗುವುದೇ ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು)

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಉತ್ಪನ್ನವಾಗುವ ಗೂಡಿನ ಶೇಕಡ 9 ರಷ್ಟು ಮಾತ್ರ ಉತ್ಪನ್ನವಾಗುತ್ತಿದೆ.

ಆ) ರೇಷ್ಮೆ ಇಲಾಖೆಯಲ್ಲಿ ಅನೇಕ ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳು ಸೃಷ್ಟಿಗೊಂಡಿದ್ದರೂ ಕೆಲವಾರು ವರ್ಷಗಳಿಂದ ಈ ಹುದ್ದೆಗಳು ಭರ್ತಿ ಯಾಗದೆ ಉಳಿದಿದ್ದರಿಂದ ಜೊತೆಗೆ ಹುದ್ದೆಗಳ ಅವಶ್ಯಕತೆ ಕಂಡುಬರಲಿಲ್ಲವಾದ್ದರಿಂದ ಸದರಿ ಹುದ್ದೆಗಳನ್ನು ರುದ್ದುಪಡಿಸಲಾಗಿದೆ.

ಇ) 1992-93ನೇ ಸಾಲಿನಲ್ಲಿ ಹಿರೇಕೆರೂರಿನಲ್ಲಿ ಒಂದು ತಾಂತ್ರಿಕ ಸೇವಾ ಕೇಂದ್ರವನ್ನು ಸ್ಥಾಪಿಸಲು ರಾಷ್ಟ್ರೀಯ ರೇಷ್ಮೆ ಯೋಜನೆ (ಕೆ. ಎಸ್. ಸಿ) 2ನೇ ಹಂತದಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ವರ್ಗ ಮಂಜೂರಾಗಿರುತ್ತೆ.

1. ರೇಷ್ಮೆ ಕೃಷಿ ವಿಸ್ತರಣಾಧಿಕಾರಿ
2. ರೇಷ್ಮೆ ಕೃಷಿ ನಿರೀಕ್ಷಕರು
3. ರೇಷ್ಮೆ ಕೃಷಿ ಪ್ರದರ್ಶಕರು

ಈ) ಮಂಜೂರಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಉ) ಕಛೇರಿ ಕಟ್ಟಡವನ್ನು ನಿರ್ಮಿಸಲು ಅಗತ್ಯವಾದ ಒಂದು ಗುಂಟೆ ನಿವೇಶನವನ್ನು ತಾಲ್ಲೂಕು ಪಂಚಾಯಿತಿಯವರು ಇಲಾಖೆಗೆ ಕೊಡಲು ತೀರ್ಮಾನಿಸಿದ್ದಾರೆ. ನಿವೇಶನ ತೆಗೆದುಕೊಂಡ ನಂತರ 92-93ನೇ ಸಾಲಿನಲ್ಲಿ ಕಛೇರಿ ಕಟ್ಟಡ ಕಟ್ಟುವ ಕೆಲಸವನ್ನು ಪ್ರಾರಂಭಿಸಲಾಗುವುದು.

ವಿಷಯ: ಹಿರೇಕೆರೂರು ತಾಲ್ಲೂಕಿನ ನೇಕಾರರಿಗೆ ವಸತಿ ಕಾರ್ಯಾಗಾರದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1383 (2189)

ಶ್ರೀ ಬಿ. ಹೆಚ್. ಬನ್ನಿಕೋಡ (ಹಿರೇಕೆರೂರು) ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನ 23 ಜನ ನೇಕಾರರಿಗೆ ಕಾರ್ಯಾಗಾರದ ನಿರ್ಮಾಣದ ಪ್ರಸ್ತಾವ 21-2-91 ರಂದು ವ್ಯವಸ್ಥಾಪಕರು ಖಾದಿ ಗ್ರಾಮೋದ್ಯೋಗ ಜಿಲ್ಲಾ ಪರಿಷತ್ತು, ಧಾರವಾಡ. ಇವರಿಂದ [illegible] ?

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಇ) ಸದರಿ ನೇಕಾರರಿಗೆ ತಮ್ಮ ಉಪ ಜೀವನ ನಡೆಸಲು ಅದರಿಸಿರುವ ನೇಕಾರರಿಗೆ ಆವಶ್ಯವಿರುವ ವಸತಿ ಕಾರ್ಯಾಗಾರಗಳಿಗೆ ಸರ್ಕಾರದಿಂದ ಸಿಗುವ ಸಹಾಯಧನದ ಮೊತ್ತವೆಷ್ಟು ಹಾಗೂ ಸಾಲ ವೆಷ್ಟು ಮತ್ತು ಒಟ್ಟು ವೆಚ್ಚವೆಷ್ಟು ?

ಈ) ನೇಕಾರರಿಗೆ ಅವಶ್ಯವಿರುವ ವಸತಿ ಕಾರ್ಯಾಗಾರಗಳನ್ನು ಮಂಜೂರು ಮಾಡಿ ಕಾರ್ಯಾಗಾರ ನಿರ್ಮಿಸುವ ಬಗ್ಗೆ ತೀವ್ರ ಕ್ರಮ ಕೈಗೊಳ್ಳುವುದೇ ?

ಉ) ಈ ಕಾರ್ಯಾಗಾರಗಳನ್ನು ಎಷ್ಟು ಅವಧಿಯಲ್ಲಿ ನಿರ್ಮಿಸಲಾಗುವುದು.

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು)

ಅ) ಹೌದು.

ಆ) ಈ ಸಂಘದ ಪ್ರಸ್ತಾವವನ್ನು ಪರಿಶೀಲಿಸಲಾಗಿ ಕೇಂದ್ರ ಸರ್ಕಾರದ ವಸತಿ ಮತ್ತು ಕಾರ್ಯಾಗಾರ ನಿರ್ಮಾಣ ಯೋಜನೆ ಮಾರ್ಗ ಸೂಚಿ ಪ್ರಕಾರ ಸದರಿ ಸಂಘವು ಅರ್ಹವಿರುವುದಿಲ್ಲ ಮತ್ತು ಹಿರೇಕೆರೂರು ತಾಲ್ಲೂಕು ಮಟ್ಟದ ಕುಶಲ ಕರ್ಮಿಗಳ ವಿವಿದೋದ್ದೇಶ ಸಹಕಾರ ಸಂಘವು ಶೃಂಗ ಸಂಘದ ಸದಸ್ಯರಾಗಲು ಬರುವುದಿಲ್ಲದ ಕಾರಣ ಪ್ರಸ್ತಾವನೆಯನ್ನು ಪರಿಗಣಿಸಿರುವುದಿಲ್ಲ.

ಇ)

		ಗ್ರಾಮಾಂತರ ಪ್ರದೇಶ	ನಗರ ಪ್ರದೇಶ
1.	ಒಂದು ಮನೆ ಮತ್ತು ಕಾರ್ಯಾಗಾರದ ವೆಚ್ಚ	15,700-00	25,000-00
2.	ರಾಜ್ಯ ಸರ್ಕಾರದ ಸಹಾಯಧನ	3,000-00	2,500-00
3.	ಕೇಂದ್ರ ಸರ್ಕಾರದ ಸಹಾಯಧನ	3,000-00	2,500-00
4.	ಹುಡ್ಕೋ ಸಾಲ	9,700-00	19,500-00
5.	ಫಲಾನುಭವಿಗಳ ವಂತಿಕೆ		500-00

ಈ) ಈ ಸಂಘದ ಸದಸ್ಯರಿಗೆ ಕಂಡಿಕೆ (ಆ) ಉತ್ತರಿಸಿರುವಂತೆ ಈ ಯೋಜನೆ ಕಾರ್ಯ ರೂಪಕ್ಕೆ ತರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಉ) ಈ ಸಂಘದ ಸದಸ್ಯರಿಗೆ ಕಂಡಿಕೆ (ಆ) ಉತ್ತರಿಸಿರುವಂತೆ ಈ ಯೋಜನೆ ಕಾರ್ಯರೂಪಕ್ಕೆ ತರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ವಿಷಯ: ಹಿರೇಕೆರೂರಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳ ವಸತಿಗೃಹ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1384 (2190)

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿಗೃಹದ ಸರ್ಕಾರಿ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಸದರಿ ಕಟ್ಟಡದ ನಿರ್ಮಾಣಕ್ಕೆ ವೆಚ್ಚವಾಗುವ ಅಂದಾಜು ವೆಚ್ಚವೆಷ್ಟು?

ಈ) ಸದರಿ ಕಟ್ಟಡವನ್ನು ಯಾವಾಗ ಕಟ್ಟಲು ಪ್ರಾರಂಭಿಸಲಾಗುವುದು ಹಾಗೂ ಪೂರ್ಣಗೊಳಿಸಲು ಬೇಕಾಗುವ ಸಮಯವೆಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಹೌದು.

ಆ) ಹೌದು.

ಇ) ಕಟ್ಟಡ ಕಟ್ಟಲು ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ತಯಾರಿಸಿದ ನಂತರವೇ ನಿರ್ದಿಷ್ಟವಾದ ಅಂದಾಜು ವೆಚ್ಚ ತಿಳಿಯುತ್ತದೆ.

ಈ) ಸೂಕ್ತ ನಿವೇಶನ ಆಯ್ಕೆ ಮಾಡಿದ ನಂತರ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಸರ್ಕಾರಿ ಆಡಳಿತಾತ್ಮಕ ಮಂಜೂರಾತಿ ಪಡೆದು ಕಾಮಗಾರಿ ಪ್ರಾರಂಭಿಸಲಾಗುವುದು. ಆದಷ್ಟು ಬೇಗ ಕಟ್ಟಡವನ್ನು ಪೂರ್ಣಗೊಳಿಸಲಾಗುವುದು.

ವಿಷಯ: ಹಿರೇಕೆರೂರು ತಾಲ್ಲೂಕಿನ ಮೇದೂರು ಮತ್ತು ಕುಡಪಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1385 (2191)

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿರೇಕೆರೂರು ತಾಲ್ಲೂಕು ಮೇದೂರು ಮತ್ತು ಕುಡಪಲಿ ಗ್ರಾಮಗಳ ಆರೋಗ್ಯ ಕೇಂದ್ರಗಳಿಗೆ ಸರ್ಕಾರಿ ಕಟ್ಟಡಗಳಿಲ್ಲದೆ ಜನರಿಗೆ ತೊಂದರೆಯಾಗುತ್ತಿರುವುದನ್ನು ಸರಕಾರ ಗಮನಿಸಿದೆಯೆ ?

ಆ) 1992-93ನೇ ಸಾಲಿನ ಆಯವ್ಯಯದಲ್ಲಿ ಮೇದೂರು ಮತ್ತು ಕುಡಪಲಿ ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳ ಕಟ್ಟಡಗಳನ್ನು ಮತ್ತು ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಗಳ ವಸತಿ ಗೃಹ ಕಟ್ಟಡಗಳನ್ನು ಕಟ್ಟಿಸಲು ಆಯವ್ಯಯದಲ್ಲಿ ಸೇರ್ಪಡಿಸಲಾಗಿದೆಯೆ ?

ಇ) ಸದರಿ ಕಟ್ಟಡಗಳ ನಿರ್ಮಾಣ ಕಾರ್ಯಗಳನ್ನು ಎಂದು ಪ್ರಾರಂಭಿಸಲಾಗುವುದು ಹಾಗೂ ಪೂರ್ಣಗೊಳಿಸಲು ಬೇಕಾಗುವ ಕಾಲಾವಕಾಶವೆಷ್ಟು ?

ಶ್ರೀ ಜಿ. ಪುಟ್ಟಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಇಲ್ಲ.

ಇ) ಜಿಲ್ಲಾ ಪರಿಷತ್ ತನ್ನ ಆಯವ್ಯಯದಲ್ಲಿ ಹಣ ಒದಗಿಸಿದ ನಂತರ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ವಿಷಯ: ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1386 (2199)

ಶ್ರೀಮತಿ ಮೋಟಮ್ಮ (ಮುಡಿಗೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೆಳಕಂಡ ಸಂಘ ಸಂಸ್ಥೆಗಳಿಗೆ ರಾಜ್ಯ ಸಮಾಜ ಕಲ್ಯಾಣ ಮಂಡಳಿಯಿಂದ ಯಾವ ಯಾವ ಕಾರ್ಯಕ್ರಮಗಳಿಗೆ ಅನುದಾನವನ್ನು ಬಿಡುಗಡೆ ಮಾಡಿರುವರು ?

ಆ) ಗ್ರ್ಯಾಂಟ್-ಇನ್-ಏಡ್ ನಿಯಮ ಪಾಲಿಸಿದ್ದೀರಾ ?

ಇ) ಈ ದೇ ಹೊಂದನೆ ಕಾರಣಗಳನ್ನು ಕೊಡಿ

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ)

	ವರ್ಷ	ಕಾರ್ಯಕ್ರಮ	ಮಂಜೂರು	ಬಿಡುಗಡೆ
1) ಪ್ರಿಯಾ ಮಹಿಳಾ ಮಂಡಳಿ ಮೂಡಲಪಾಳ್ಯ, ಬೆಂಗಳೂರು	1991-92	ಎಸ್.ಇ.ಪಿ. ಸಾಮಾಜಿಕ ಆರ್ಥಿಕ ಕಾರ್ಯಕ್ರಮ, (ಡೈರಿ)	83,480-00	77,240-00
2) ಕೃಪಾಸಾಗರ್, ಬೆಂಗಳೂರು	1991-92	ಸಾಮಾಜಿಕ, ಆರ್ಥಿಕ ಕಾರ್ಯಕ್ರಮ. (ಸ್ವಯಂ ಉದ್ಯೋಗ) ಸೋಪು ಗಾಪಿ.	1,29,500-00	1,27,250-00
	1990-91	ಜಾಗೃತಿ ಮೂಡಿಸುವ ಕಾರ್ಯಕ್ರಮ.	20,000-00	20,000-00
	1991-92	"	50,000-00	ಮಾಡಬೇಕಾಗಿದೆ
	1990-91	ವಾರ್ಷಿಕ ವರಮಾನ	750-00	750-00
	1991-92	"	9,000-00	9,000-00
	1991-92	ಪೌಷ್ಟಿಕ ಆಹಾರ	7,650-00	3,825-00
	1991-92	ಸಂಕ್ಷಿಪ್ತ ಶಿಕ್ಷಣ	63,037-00	50,000-00
3) ಆಲಿ ಎಜುಕೇಷನ್ ಸೊಸೈಟಿ, ಬೆಂಗಳೂರು	1990-91	ಜಾಗೃತಿ ಮೂಡಿಸುವ ಕಾರ್ಯಕ್ರಮ	20,000-00	20,000-00
	1991-92	" "	50,000-00	ಬಿಡುಗಡೆಮಾಡಬೇಕಾಗಿದೆ
	1990-91	ವಾರ್ಷಿಕ ಅನುದಾನ	9,600-00	9,600-00
	1991-92	" "	9,600-00 3,000-00 (ಸಲಕರಣೆ ಸೇರಿ)	12,600-00
	1991-92	ಪೌಷ್ಟಿಕ ಆಹಾರ	18,900-00	9,450-00
	1991-92	ವೃತ್ತಿ ಶಿಕ್ಷಣ (ಟೈಲರಿಂಗ್)	60,800-00	50,000-00

4) ಐಡಿಯಲ್ ಎಜುಕೇಷನ್ ಸೊಸೈಟಿ ಗುಲ್ಬರ್ಗ — ಈ ಹೆಸರಿನ ಸಂಸ್ಥೆಗೆ ಯಾವುದೇ ತೆರವಾದ ಅನುದಾನವನ್ನು ಮಂಡಳಿಯಿಂದ ನೀಡುತ್ತಿಲ್ಲ.

5) ಮಾಣಿಕ್ ಪ್ರಭು, ಗುಲ್ಬರ್ಗ 1991-92 ಸಂಕ್ಷಿಪ್ತ ಶಿಕ್ಷಣ 67,975-00 ಬಿಡುಗಡೆ ಮಾಡಬೇಕಾಗಿದೆ.
1990-91 ಶಿಶುಪಾಲನಾ ಕೇಂದ್ರ 30 ಕೇಂದ್ರಗಳನ್ನು ಕೇಂದ್ರ ಸಮಾಜ ಕಲ್ಯಾಣ ಮಂಡಳಿಯು ಮಂಜೂರು ಹಾಗೂ ಬಿಡುಗಡೆ ಮಾಡಲ್ಪಟ್ಟಿದೆ.

ಆ) ಹೌದು.

ಇ) ಉದ್ಭವಿಸುವುದಿಲ್ಲ.

ವಿಷಯ:ರೇಷ್ಮೆ ಬೆಳೆಗಾರರಿಗೆ ರೋಗದಿಂದ ಕೂಡಿದ ಬಿತ್ತನೆ ಸರಬರಾಜು ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1388 (2203)

ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಉತ್ಪಾದನೆಯಾದ ರೇಷ್ಮೆ ? (ವರ್ಷವಾರು ಮತ್ತು ಜಿಲ್ಲಾವಾರು ವಿವರ ಒದಗಿಸುವುದು)

ಆ) ರೇಷ್ಮೆ ಬಿತ್ತನೆ ಕೋಠಿಗಳಿಂದ ರೋಗ ರಹಿತ ಬಿತ್ತನೆ ಮೊಟ್ಟೆಗಳ ಸರಬರಾಜಿಲ್ಲದ ರೇಷ್ಮೆ ಉತ್ಪಾದನೆಯು ಶೇ. 50 ರಿಂದ 60 ರಷ್ಟು ಕಡಿಮೆಯಾಗಿರುವುದು ಗಮನಕ್ಕೆ ಬಂದಿದೆಯೆ ?

ಇ) ಬಿತ್ತನೆ ಪ್ರದೇಶಗಳಲ್ಲಿ ಉತ್ಪಾದಿಸುವ ಬಿತ್ತನೆ ಗೂಡುಗಳ ಮೇಲೆ ನಿಯಂತ್ರಣವಿದೆಯೇ ?

ಈ) ರೋಗರಹಿತ ಬಿತ್ತನೆ ಗೂಡುಗಳನ್ನು ಉತ್ಪಾದಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು)

ಅ) ಅನುಬಂಧ 'ಅ'ದಲ್ಲಿ ವಿವರ ಒದಗಿಸಿದೆ.

ಆ) ರೋಗರಹಿತ ಬಿತ್ತನೆ ಮೊಟ್ಟೆಗಳನ್ನು ಒದಗಿಸಲಾಗುತ್ತಿದೆ. ವಾತಾವರಣ ವೈಪರೀತ್ಯದಿಂದ, ಸುಣ್ಣಕಟ್ಟು, ಸಪ್ಪೆ, ಹಾಲು ಮತ್ತು ಗಂಟು ರೋಗಗಳಿಂದ ಕೆಲವೊಂದು ಬೆಳೆಗಳು ಕೆಟ್ಟಿರುವುದರಿಂದ ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದಾಗ ರೇಷ್ಮೆ ಉತ್ಪಾದನೆ ಅಂದಾಜು ಶೇ 10.8ರಷ್ಟು ಕಡಿಮೆಯಾಗಿದೆ.

ಇ) ಹೌದು

ಈ) ಗಂಟು ರೋಗವನ್ನು ತಡೆಯಲು ಅನುಸರಿಸುತ್ತಿರುವ ಕ್ರಮಗಳನ್ನು ತೀವ್ರಗೊಳಿಸಲಾಗಿದೆ. ಈ ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಬಿತ್ತನೆ ವಲಯದಲ್ಲಿ ಹುಳು ಸಾಕಣೆ ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣದಿಂದ ಪ್ರತಿ ಬೆಳೆಯ ನಂತರ ಮತ್ತು ಬೆಳೆಗಿನ ಮುನ್ನ ಸಿಂಪಡಿಸಲಾಗುತ್ತದೆ. ಮಾರುಕಟ್ಟೆಗೆ ಬಂದ ಗೂಡುಗಳನ್ನು ಪರೀಕ್ಷಿಸಿ ಗಂಟು ರೋಗಕಣಗಳು ಕಾಣ ಬಂದರೆ ಆ ಗೂಡನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ತೀರ್ಮಾನಿಸಲಾಗುತ್ತದೆ. ಬಿತ್ತನೆ ಗೂಡನ್ನು ಉತ್ಪನ್ನ ಮಾಡುವಾಗ ರೋಗ ಬರದಂತೆ ಮುನ್ನೆಚ್ಚರಿಕೆ ವಹಿಸಿ ಸೆಲ್ಯೂಲಾರ್ ಸಾಗಾಣಿಕೆ ಕ್ರಮವನ್ನು ಅನುಸರಿಸಲಾಗುತ್ತಿದೆ ಮತ್ತು ಪ್ರತಿ ರೈತರು ಹುಳು ಸಾಕಾಣೆ ಕ್ರಮವನ್ನು ವೀಕ್ಷಿಸಿ ಆಚರಣೆಗೆ ತರಲು ವ್ಯವಸ್ಥೆ ಮಾಡಲಾಗಿದೆ. ಮಿಶ್ರತಳಿ ಪ್ರದೇಶದಲ್ಲಿ ಗಂಟುರೋಗವನ್ನು ತಡೆಗಟ್ಟಲು ಪ್ರತಿ ಬೆಳೆಯಾದ ನಂತರ ಎಲ್ಲಾ ರೇಷ್ಮೆ ಬೆಳೆಗಾರರು ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣ ಸಿಂಪರಣೆ ಮಾಡಲಾಗುತ್ತಿದೆ. ಒಂದು ಪಂಗಡದಲ್ಲಿ ತಯಾರಾದ ಮೊಟ್ಟೆಗಳನ್ನು ಬಿತ್ತನೆ ಬೆಳೆಗಾರರಿಗೆ ವಿತರಣೆ ಮಾಡಿ ಅದರ ಸಾಕಾಣಿಕೆಯುಲ್ಲಿ ಯಾವುದೇ ಬಿತ್ತನೆ ಬೆಳೆಗಾರರ ಬೆಳೆಯಲ್ಲಿ ಗಂಟುರೋಗ ಕಾಣಬಂದರೆ ಆ ಪಂಗಡದ ಎಲ್ಲಾ ಬೆಳೆಗಳನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ನೂಲು ಬಿಚ್ಚಾಣಿಕೆಗೆ ಕೊಡಲಾಗುತ್ತಿದೆ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಉತ್ಪಾದನೆಯಾದ ರೇಷ್ಮೆಯ ಜಿಲ್ಲಾವಾರು ವಿವರ
(ಉತ್ಪಾದನೆ : ಮೆಟ್ರಿಕ್ ಟನ್‌ಗಳಲ್ಲಿ)

ಕ್ರ.ಸಂ.	ಜಿಲ್ಲೆ	1988-89	1989-90	1990-91	1991-92(ಫೆಬ್ರವರಿ 92ರ ಅಂತ್ಯದವರೆಗೆ)
1	ಬೆಂಗಳೂರು ನಗರ ಜಿಲ್ಲೆ	67	135	151	108
2	ಬೆಂಗಳೂರು ಗ್ರಾಮಾಂತರ	1168	1252	1251	1079
3	ಬೆಳಗಾಂ	13	28	29	23
4	ಬಳ್ಳಾರಿ	25	28	29	25
5	ಬೀದರ್	3	6	6	5
6	ವಿಜಾಪುರ	19	33	35	20
7	ಚಿಕ್ಕಮಗಳೂರು	8	12	20	18
8	ಚಿತ್ರದುರ್ಗ	81	96	127	114
9	ದಕ್ಷಿಣ ಕನ್ನಡ	11	15	17	15
10	ಧಾರವಾಡ	25	29	32	24
11	ಗುಲ್ಬರ್ಗಾ	18	36	37	23
12	ಹಾಸನ	45	71	93	101
13	ಕೊಡಗು	6	8	9	7
14	ಕೋಲಾರ	1344	1564	1542	1394
15	ಮಂಡ್ಯ	769	830	830	540
16	ಮೈಸೂರು	1375	1478	1485	1100
17	ರಾಯಚೂರು	7	13	18	13
18	ಶಿವಮೊಗ್ಗ	14	14	14	11
19	ತುಮಕೂರು	306	419	430	366
20	ಉತ್ತರ ಕನ್ನಡ	8	9	9	7
	ಒಟ್ಟು	5317	6076	6214	4993

ವಿಷಯ: ಚಾಮರಾಜನಗರ ತಾಲ್ಲೂಕು ಜೋತಿಗೊಂಡನಪುರದಲ್ಲಿ ಕರಿಕಲ್ಲು ಕ್ವಾರಿಯ ಕೆಲಸ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1389 (2243)

ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನಕೋಟೆ) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಚಾಮರಾಜನಗರ ತಾಲ್ಲೂಕು ಜೋತಿಗೊಂಡನಪುರದ ಸರ್ವೆ ನಂ. 184

2. ಹಾಗಿದ್ದಲ್ಲಿ ಅಲ್ಲಿ ಕ್ವಾರಿಯ ಕೆಲಸ ಮಾಡುತ್ತಿರುವವರು ಯಾರು ?

3. ಕ್ವಾರಿಯ ಕೆಲಸ ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು(ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ರೀತ್ಯಾ) ?

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

1. ಹೌದು.

2. ಲಭ್ಯವಿರುವ ಮಾಹಿತಿ ಪ್ರಕಾರ ಶ್ರೀಯುತರಾದ ಬಿಯಾ-ಉಲ್-ಹಕ್-ಮಂಚೇಗೌಡ ಮತ್ತು ಮೆ :ಗ್ರಾನೈಟ್ ಇಂಡಿಯಾ ಪ್ರೈ. ಲಿ. ಇವರು ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಕೆಲಸ ನಿರ್ವಹಿಸುತ್ತಿದ್ದಾರೆ.

3. ಮಂಜೂರಾದ ಗುತ್ತಿಗೆ ಪ್ರದೇಶದಲ್ಲಿ ಕೆಲಸ ನಿರ್ವಹಿಸದಿರುವಂತೆ ಈಗಾಗಲೇ ಸೂಚನೆ ನೀಡಲಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನೆ ಪರ್ಮಿಟ್‌ನ್ನು ನೀಡದಿರುವಂತೆ ಮಾಡುವ ಗ್ರಾನೈಟ್‌ನ್ನು ತಡೆದು ಕಾನೂನಿನನ್ವಯ ಕ್ರಮವನ್ನು ಮಂಗಳೂರಿನ ಬಳಿ 5 ಚೆಕ್ ಪೋಸ್ಟ್‌ಗಳನ್ನು ತೆರೆಯುವ ಮೂಲಕ ತೆಗೆದುಕೊಂಡು, ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗಲಾಗುತ್ತಿದೆ.

ಉಪಾಧ್ಯಕ್ಷಿಣಿಯವರು :- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

ನಿಯಮ 334ರ ಮೇರೆಗೆ

ವಿಷಯ: (1)ಪಾಲಿಟೆಕ್ನಿಕ್‌ನಲ್ಲಿ ಅಧ್ಯಾಪಕರಿಗೆ ಬಡ್ತಿ.

ಶ್ರೀ ಪಿ. ಬಸವರಾಜ್ :- ತಾಂತ್ರಿಕ ಶಿಕ್ಷಣ ಇಲಾಖೆಯ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೋಮ-ಇನ್-ಕಮರ್ಶಿಯಲ್ ಪ್ರಾಕ್ಟೀಸ್ ಎಂಬ ಒಂದು ಕೋರ್ಸ್ ಇದ್ದು ಇದರಲ್ಲಿ ಕನ್ನಡ ಮತ್ತು ಇಂಗ್ಲೀಷ್ ಶೀಘ್ರಲಿಪಿ ಮತ್ತು ಬೆರಳಚ್ಚು ವಿಷಯಗಳು ಒಳಗೊಂಡಿವೆ. ಈ ವಿಷಯಗಳಿಗೆ ಅಧ್ಯಾಪಕರುಗಳನ್ನು ನೇಮಕ ಮಾಡಿಕೊಳ್ಳುವಾಗ ಅವರಿಗೆ ಅರ್ಹತೆಯಾಗಿ : ಎಸ್ ಎಸ್ ಎಲ್ ಸಿ ಹಾಗೂ ಟೈಪ್‌ರೈಟಿಂಗ್ ಮತ್ತು ಶೀಘ್ರಲಿಪಿ ಸೀನಿಯರ್ ಗ್ರೇಡ್ ಅಥವಾ ಡಿಪ್ಲೋಮ ಇನ್ ಕಮರ್ಶಿಯಲ್ ಪ್ರಾಕ್ಟೀಸ್‌ನಲ್ಲಿ ತೇರ್ಗಡೆಯಾಗಿರಬೇಕೆಂದು ನಿಗದಿಪಡಿಸಿ ನೇಮಕ ಮಾಡಿಕೊಂಡಿದ್ದರು. ಹೀಗೆ ಕೆಲಸ ಮಾಡುತ್ತಿರುವ ಸಹ ಉಪನ್ಯಾಸಕರುಗಳಿಗೆ ಕೊಟ್ಟಮೇಲೆ ಅವರನ್ನು ಅದೇ ಕೋರ್ಸ್‌ನ ಇತರ ವಿಷಯಗಳಿಗೆ ಭೋದಿಸಲು ನಿಯುಕ್ತಿ ಮಾಡಲಾಗುತ್ತಿದೆ. ಹೀಗೆ ಮಾಡುವುದರಿಂದ ಅರ್ಹತೆ ಇಲ್ಲದ ಸಹ ಉಪನ್ಯಾಸಕರುಗಳು ಮತ್ತು ವಿದ್ಯಾರ್ಥಿಗಳು ಇಬ್ಬರೂ ತೊಂದರೆಗೆ ಒಳಪಡಬೇಕಾಗುತ್ತದೆ. ಆದುದರಿಂದ ದಯಮಾಡಿ ಯಾವ ಅರ್ಹತೆಯ ಮೇಲೆ ನೇಮಕ ಹೊಂದಿರುತ್ತಾರೋ ಅವರಿಗೆ ಅರ್ಹತೆ ಇಲ್ಲವಾದಲ್ಲಿ ಅಂಥ ಇತರ ವಿಷಯಗಳನ್ನು ಭೋದಿಸಲು ನಿಯುಕ್ತಿ ಮಾಡಬಾರದು ಮತ್ತು ಅವರಿಗೆ ಬಡ್ತಿ ಕೊಟ್ಟಾದ ಮೇಲೆಯೂ ಲೆಕ್ಚರರ್ ಇನ್ ಶಾರ್ಟ್‌ಹ್ಯಾಂಡ್ ಅಂಡ್ ಟೈಪರೈಟಿಂಗ್ ಎಂಬ ಹುದ್ದೆಯಲ್ಲಿ ಮುಂದುವರಿಯಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಶಿಕ್ಷಣ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, ದಿನಾಂಕ 3-9-87ಕ್ಕೆ ಹಿಂದೆ ಜಾರಿಯಲ್ಲಿದ್ದ ವರ್ಗ ಮತ್ತು ನೇಮಕಾತಿ ನಿಯಮಗಳಲ್ಲಿ ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕ ಹುದ್ದೆಯನ್ನು ಸಹಾಯಕ ಉಪನ್ಯಾಸಕರಿಂದ ಬಡ್ತಿ ಮೇರೆಗೆ ತುಂಬಲು ಕಾಮರ್ಸ್‌ನಲ್ಲಿ ಡಿಗ್ರಿ ಮತ್ತು ಸಹಾಯಕ ಉಪನ್ಯಾಸಕರ ಹುದ್ದೆಯಲ್ಲಿ 2 ವರ್ಷಗಳ ಸೇವಾ ಅನುಭವ ನಿಗದಿಪಡಿಸಲಾಗಿತ್ತು. ಇದರಿಂದ ಕಾಮರ್ಸ್ ಡಿಗ್ರಿ ವಿದ್ಯಾರ್ಹತೆ ಹೊಂದಿರದೇ ಇದ್ದ ಸಹಾಯಕ ಉಪನ್ಯಾಸಕರಿಗೆ ಬಡ್ತಿ ಅವಕಾಶ ದೊರೆಯದೇ ಅವರುಗಳು ಸಹಾಯಕ ಉಪನ್ಯಾಸಕ ವರ್ಗದಲ್ಲೇ ಕೊನೆಯವರೆಗೂ ಉಳಿಯುವ ಸಂಭವವಿತ್ತು.

ಆದರೆ ದಿನಾಂಕ 3-9-87 ರಿಂದ ಜಾರಿಯಾದ ವರ್ಗ ಮತ್ತು ನೇಮಕಾತಿ ನಿಯಮಗಳಲ್ಲಿ

... ಸಹಾಯಕ ಉಪನ್ಯಾಸಕರಿಂದ ಬಡ್ತಿ ಮೇರೆಗೆ

ತುಂಬಲು ಸಹಾಯಕ ಉಪನ್ಯಾಸಕರ ಹುದ್ದೆಯಲ್ಲಿ 5 ವರ್ಷ ಸೇವಾ ಅನುಭವ ನಿಗದಿಪಡಿಸಿದೆ.

ಆದ್ದರಿಂದ ಬಿ.ಕಾಂ. , ವಿದ್ಯಾರ್ಹತೆ ಹೊಂದಿಲ್ಲದೇ ಇದ್ದರೂ ಎಸ್.ಎಸ್.ಎಲ್.ಸಿ. ಸೀನಿಯರ್ ಟೈಪ್‌ರೈಟಿಂಗ್ ಶಾರ್ಟ್‌ಹ್ಯಾಂಡ್ ಅಥವಾ ಡಿಪ್ಲೋಮಾ ವಿದ್ಯಾರ್ಹತೆ ಹೊಂದಿರುವ ಸಹಾಯಕ ಉಪನ್ಯಾಸಕರು 5 ವರ್ಷಗಳ ಸೇವಾ ಅನುಭವದೊಂದಿಗೆ ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಬಹುದು. ಆದಾಗ್ಯೂ ಶೈಕ್ಷಣಿಕ ಕರ್ತವ್ಯ ನಿರ್ವಹಣೆಗೆ ಒಟ್ಟಾರೆ ತೊಂದರೆಯಾಗುವುದಿಲ್ಲ. ಹಾಲಿ ಬಿ. ಕಾಂ., ಪದವಿ ಅಥವಾ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ವಿದ್ಯಾರ್ಹತೆ ಹೊಂದಿಲ್ಲದೇ ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಿರುವ ಉಪನ್ಯಾಸಕರ ಹುದ್ದೆಗೆ ಬಡ್ತಿ ಹೊಂದಿರುವರ ಸಂಖ್ಯೆ ಕೇವಲ 2 ಮಾತ್ರ.

ಕಮರ್ಷಿಯಲ್ ಪ್ರಾಕ್ಟೀಸ್ ಉಪನ್ಯಾಸಕರ ಹುದ್ದೆಯಲ್ಲಿ ಬಿ.ಕಾಂ., ಎಂ. ಕಾಂ., ವಿದ್ಯಾರ್ಹತೆ ಹೊಂದಿರುವ ಉಪನ್ಯಾಸಕರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಮತ್ತು ಕಮರ್ಷಿಯಲ್ ಪ್ರಾಕ್ಟೀಸ್ ಕೋರ್ಸ್‌ನ ಪಠ್ಯಕ್ರಮದಲ್ಲಿ ಟೈಪ್‌ರೈಟಿಂಗ್ ಶಾರ್ಟ್‌ಹ್ಯಾಂಡ್ ವಿಷಯವೂ ಸಹ ಇರುವುದರಿಂದ ಆಯಾ ಸಂಸ್ಥೆಯ ಪ್ರಿನ್ಸಿಪಾಲರು ಉಪನ್ಯಾಸಕರುಗಳಿಗೆ ವಿಷಯ ಬೋಧನೆ ಹಂಚಿಕೆ ಮಾಡುವಾಗ ಅವರುಗಳ ವಿದ್ಯಾರ್ಹತೆಗೆ ತಕ್ಕಂತೆಯೇ ಬೋಧನಾ ವಿಷಯದ ಹಂಚಿಕೆ ಮಾಡುವರು ಮತ್ತು ಶೈಕ್ಷಣಿಕ ಕೆಲಸವನ್ನು ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ.

(2) ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಾರ್ ಮತ್ತು ವೈನ್ ಶಾಪ್‌ಗಳಿಗೆ ಅನುಮತಿ ನೀಡುವುದರಿಂದ ಸಾರ್ವಜನಿಕರಿಗೆ ತೊಂದರೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):-ಬೆಂಗಳೂರು ಹಾಗೂ ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಬಾರ್ ಮತ್ತು ವೈನ್ ಶಾಪ್‌ಗಳಿಗೆ ಲೈಸನ್ಸ್‌ಅನ್ನು ನೀಡಿರುವುದರಿಂದಾಗಿ ಜನತೆಯ ಆರೋಗ್ಯಕ್ಕೆ ಹಾನಿಯಾಗುತ್ತಿರುವುದಲ್ಲದೆ, ದಿನಬೆಳದಾಗರೆ ಕುಡುಕರ ಹಾವಳಿಯಿಂದ ಅವರ ದುರ್ನಡತೆಯಿಂದ ಬೆಂಗಳೂರು ಹಾಗೂ ಸುತ್ತಮುತ್ತಲಿನ ಜನತೆ ದಿಕ್ಕುಕಾಣದೆ ಆಶಾಂತಿಯ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಆದುದರಿಂದ ಇನ್ನು ಮುಂದೆ ಬೆಂಗಳೂರು ಮತ್ತು ಬೆಂಗಳೂರು ಗ್ರಾಮಾಂತರದಲ್ಲಿ ಬಾರ್ ಮತ್ತು ವೈನ್ ಶಾಪ್‌ಗಳನ್ನು ತೆರೆಯಲು ಅನುಮತಿ ನೀಡಕೂಡದೆಂದು ಅಬ್ಕಾರಿ ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡುವುದರ ಮೂಲಕ ಜನತೆಯ ಆರೋಗ್ಯ ಹಾಗೂ ಶಾಂತಿ ವಾತಾವರಣ ಹೆಚ್ಚುವಂತೆ ಮಾಡಬೇಕೆಂದು ಈ ಮೂಲಕ ಮಾನ್ಯ ಅಬ್ಕಾರಿ ಸಚಿವರಲ್ಲಿ ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ :- ಉಪಸಭಾಪತಿಯವರೆ, ಅಬಕಾರಿ ಸಚಿವರ ಪರವಾಗಿ ಈ ಹೇಳಿಕೆಯನ್ನು ಕೊಡುತ್ತಿದ್ದೇನೆ. ಚಿಲ್ಲರೆ ವ್ಯಾಪಾರದ ವೈನ್ ಶಾಪ್‌ಗಳಿಗೆ ಸಿಎಲ್-2ಎಂದು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳಿಗೆ ಕೊಡುವ ಲೈಸನ್ಸ್ ಸಿಎಲ್-9 ಎಂದು ಸಾಮಾನ್ಯವಾಗಿ ಕರೆಯಲಾಗುತ್ತದೆ. ಎಕ್ಸೈಸ್ ನಿಯಮಗಳ ಪ್ರಕಾರ ಒಂದು ಪ್ರದೇಶದ ಜನಸಂಖ್ಯೆಗೆ ಅನುಗುಣವಾಗಿ ಆ ಪ್ರದೇಶದಲ್ಲಿ ಕೊಡಬಹುದಾದ ಒಟ್ಟು ಲೈಸೆನ್ಸ್‌ಗಳ ಸಂಖ್ಯೆಯನ್ನು ನಿರ್ಧರಿಸಲಾಗುತ್ತದೆ. ಈ ನಿಯಮದ ಪ್ರಕಾರ ನಗರ ಪ್ರದೇಶದಲ್ಲಿ 15 ಸಾವಿರ ಜನಸಂಖ್ಯೆಗೆ ಒಂದು ಸಿಎಲ್-2 ಅಂಗಡಿಯು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಏಳೂವರೆ ಸಾವಿರ ಜನಸಂಖ್ಯೆಗೆ ಒಂದು ಸಿಎಲ್-2 ಅಂಗಡಿ ಕೊಡಬಹುದೆಂದು ನೀತಿಯಾಗಿದೆ. ಈ ನೀತಿಯ ಅನುಸಾರ 30-6-87 ರಲ್ಲಿ ಆಗ ಇದ್ದ ಜನಸಂಖ್ಯೆಯ ಪ್ರಮಾಣವನ್ನು ಅನುಸರಿಸಿ ಸರ್ಕಾರ ಕೊಡಬಹುದಾದ ಲೈಸೆನ್ಸ್‌ಗಳ ಪ್ರಮಾಣವನ್ನು ಕೋಟಾ ನಿರ್ಧರಿಸಿದೆ. ಈ ನಿರ್ಧಾರದಂತೆ ಬೆಂಗಳೂರು ನಗರ ಮತ್ತು ಗ್ರಾಮಾಂತರ ಗಳಿಗೆ ನಿಗದಿಪಡಿಸಲಾದ ಕೋಟಾ ಮತ್ತು ಕೊಡಲಾಗಿರುವ ಲೈಸೆನ್ಸ್‌ಗಳ ವಿವರ ಹೀಗಿದೆ. ಬೆಂಗಳೂರು ಅರ್ಬನ್ ... 878 ... 863 ...

ಖೋಟಾ 154, ಕೊಟ್ಟ ಲೈಸನ್ಸ್‌ಗಳ ಸಂಖ್ಯೆ 136. ಈ ಮೇಲಿನ ಅಂಕೆಸಂಖ್ಯೆಗಳ ಪ್ರಕಾರ ಕೊಟ್ಟಿರುವ ಲೈಸೆನ್ಸ್‌ಗಳ ಸಂಖ್ಯೆಯಾಗಿದೆ. ನೀತಿಯ ಪ್ರಕಾರ 1991ರ ಜನಗಣತಿಯ ಪ್ರಕಾರ 1988ರಲ್ಲಿ ಗೊತ್ತುಪಡಿಸಿದ ಸಂಖ್ಯೆಗಿಂತ ಇನ್ನೂ ಹೆಚ್ಚಿನ ಅಂಗಡಿಗಳಲ್ಲಿ ಲೈಸೆನ್ಸ್‌ನ್ನು ಕೊಡಬಹುದಾಗಿದ್ದರೂ ಸಹ 88ರಲ್ಲಿ ಗೊತ್ತಾದ ಖೋಟಾಗಿಂತಲೂ ಕಡಿಮೆ ಲೈಸೆನ್ಸ್‌ಗಳನ್ನು ಕೊಡಲಾಗಿದೆ. ಸಿಎಲ್-9 ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಇಂತಿಷ್ಟೇ ಎಂಬ ಖೋಟಾ ನಿಯಮ ಇರುವುದಿಲ್ಲ. ಇತ್ತೀಚೆಗೆ ಕೆಲವು ಅಂಗಡಿಗಳಲ್ಲಿ ವ್ಯವಸ್ಥಿತವಾಗಿರುವ ಸ್ಥಳಗಳು ಅನಪೇಕ್ಷಿತ ಸ್ಥಳಗಳು ಇವೆ ಎಂದು ಈ ಮನೆಯ ಮಾನ್ಯ ಸದಸ್ಯರು ಮತ್ತು ಸಾರ್ವಜನಿಕರಿಂದಲೂ ದೂರುಗಳು ಬಂದಿದ್ದು ಇಂತಹ ಸ್ಥಳಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅನಪೇಕ್ಷಿತ ಸ್ಥಳಗಳಲ್ಲಿ ಇದ್ದರೆ ಅಂತರ ಸ್ಥಳಗಳಿಂದ ಅವುಗಳನ್ನು ಬೇರೆ ಸ್ಥಳಗಳಿಗೆ ವರ್ಗಾಹಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಅಬ್ಕಾರಿ ಕಮಿಷನ್‌ರವರಿಗೆ ಈಗಾಗಲೇ ಆದೇಶ ನೀಡಲಾಗಿದೆ. ಅಬ್ಕಾರಿ ಕಮಿಷನ್‌ರವರು ಸಹ ಈ ಸಂಬಂಧದಲ್ಲಿ ಅಗತ್ಯ ಸುತ್ತೋಲೆಯೊಂದನ್ನು ಕಳುಹಿಸಿದ್ದಾರೆ.

(3)ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಸಮೀಪದಲ್ಲಿರುವ ಸೀಮೆಂಟ್ ಕಾರ್ಖಾನೆಗಳಿಂದ ಹೊರಸೂಸುವ ಹೊಗೆಯಿಂದ ಜನರ ಆರೋಗ್ಯದ ಮೇಲುಂಟಾಗುವ ದುಷ್ಪರಿಣಾಮವನ್ನು ತಪ್ಪಿಸುವ ಬಗ್ಗೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಗುಲ್ಬರ್ಗಾ ಜಿಲ್ಲೆಯ ಸೇಡಂ ನಗರದ ಸಮೀಪವಿರುವ ವಾಸವದತ್ತಾ ಹಾಗೂ ಮಲಖೇಡ ಸಮೀಪವಿರುವ ರಾಜಶ್ರೀ ಇತ್ಯಾದಿ, ಸಿಮೆಂಟ್ ಕಾರ್ಖಾನೆಗಳ ಹೊರಬರುವ ಹೊಗೆ, ಅನಿಲ, ಧೂಳಿನಿಂದ ಸುತ್ತಮುತ್ತಲಿನ ಗ್ರಾಮಗಳ ಜನರ ಆರೋಗ್ಯದ ಮೇಲೆ, ದನಕರುಗಳ ಆರೋಗ್ಯದಮೇಲೆ ಹಾಗೂ ಬೆಳೆಗಳ ಮೇಲೆ ದುಷ್ಪರಿಣಾಮ ಬೀಳುವ ಬಗ್ಗೆ ಪ್ರಶ್ನೆಗಳನ್ನು ಕೇಳಿ ಪತ್ರವ್ಯವಹಾರ ಮಾಡಿದರೆ, ಆಯುಕ್ತರು, ಸರ್ಕಾರದ ಕಾರ್ಯದರ್ಶಿ, ವಿಜ್ಞಾನ ಯಂತ್ರಕಲಾ ಮತ್ತು ಇಂಧನ ಇಲಾಖೆಯವರು ತಮ್ಮ ಪತ್ರ ನಂ. ಸಿಎಸ್‌ಇಟಿ 85-91 ದಿನಾಂಕ: 12-3-91 ರಂದು ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ವರದಿಯನ್ನು ಸಲ್ಲಿಸಲು ಕೋರಿದರೆ ಯಾವ ಕ್ರಮವೂ ಇಲ್ಲ. ಅಲ್ಲದೆ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳ ಪತ್ರ ನಂ. ಎಎಂಐಎಲ್:6198:90 ದಿನಾಂಕ 26-11-91 ರಂದು ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಸರ ಖಾತೆ ಸಚಿವರು ಹಾಗೂ ಆಯುಕ್ತರು ಹಾಗೂ ಕಾರ್ಯದರ್ಶಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿ ಖಾತೆ ಪರಿಸರ ಇಲಾಖೆಯವರಿಗೆ, ಜಿಲ್ಲಾಧಿಕಾರಿಗಳು ಹಾಗೂ ಶಾಸಕರ ಸಮಕ್ಷಮದಲ್ಲಿ ಸ್ಥಳ ತನಿಖೆಮಾಡಿ ಕೂಲಂಕಷವತದಿ ತರಿಸಿ ಗಂಭೀರವಾದ ಕ್ರಮ ಕೈಗೊಳ್ಳಲು ಕೋರಿದ್ದಾರೆ. ಯಾವ ಕ್ರಮವೂ ಇದುವರೆಗೂ ಇಲ್ಲದಿರುವುದಕ್ಕೆ ಕಾರಣವೇನು ? ಇದರಿಂದ ದಿನನಿತ್ಯ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬಿದ್ದು ಕ್ಷಯ ಹಾಗೂ ಕ್ಯಾನ್ಸರ್ ಇತ್ಯಾದಿ ರೋಗಗಳಿಗೆ ಒಳಗಾಗುವ ಪರಿಸ್ಥಿತಿ ಉಂಟಾಗಿ ಮತ್ತು ಪ್ರತಿವರ್ಷ ಈ ಧೂಳಿನಿಂದ ಆ ಭಾಗದ ಜನರ ಆರೋಗ್ಯ ಮುಖ್ಯವೇ ? ಅಥವಾ ಕಾರ್ಖಾನೆಗಳವರು ಗಳಿಸುವ ಲಾಭ ಮುಖ್ಯವೇ ? ಈ ಹೊಗೆಯ ಧೂಳಿನಿಂದ ದುಷ್ಪರಿಣಾಮ ತಪ್ಪಿಸುವ ವ್ಯವಸ್ಥೆ ಆಗುವವರೆಗೆ ಕಾರ್ಖಾನೆಗಳನ್ನು ಮುಚ್ಚಿಸುವ ವ್ಯವಸ್ಥೆ ಮಡಿ ಜನರ ಆರೋಗ್ಯವನ್ನು ಕಾಪಾಡಲು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) (ಪರಿಸರ ಮಾಲಿನ್ಯ ನಿಯಂತ್ರಣ ಖಾತೆ ಸಚಿವರ ಪರವಾಗಿ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರಾದ ಬಸವಂತರೆಡ್ಡಿ ಮೋತಕಪಲ್ಲಿಯವರು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಮಾಲಿನ್ಯ ನಿಯಂತ್ರಣ ಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ಈ ವಿಚಾರವನ್ನು ನಾನು ಅವರ ಗಮನಕ್ಕೆ ತಂದು ಸೂಕ್ತ ಕಾರ್ಯಾಚರಣೆ ಕೈಗೊಳ್ಳಲು ತಿಳಿಸುತ್ತೇನೆ.

3.45 ಪಿ. ಎಂ.

ನೀಡಿರುವ ಬಗ್ಗೆ.

ಶ್ರೀ ಶಿವಶೇಖರಪ್ಪ ಗೌಡ ಶಿರವಾಳ:- (ಶಹಾಪೂರ)- ದಿನಾಂಕ24-12-1991ರಂದು ಲೋಕಸೇವಾ ಆಯೋಗದಿಂದ ನಡೆಸಿದ ಇಲಾಖಾ ಪರೀಕ್ಷೆಯ ಅಕೌಂಟ್ಸ್ ಹೈಯರ್ ಪ್ರಶ್ನೆಪತ್ರಿಕೆ ಭಾಗ-1 ಪ್ರಶ್ನೆ ಸಂಖ್ಯೆ 2ರಲ್ಲಿ ಕನ್ನಡ ಭಾಷೆಯಲ್ಲಿ ಪರಿವರ್ತಿತ ರಜೆ 18-1-1989ರಿಂದ 12-2-1989 ಎಂದಿರುವುದು. ಆದರೆ ಅದೇ ಪ್ರಶ್ನೆಯು ಆಂಗ್ಲ ಭಾಷೆಯಲ್ಲಿ 18-11989 ರಿಂದ 2-1-1989ರಂದು ಎಂದು ಮುದ್ರಿತವಾಗಿರುವುದು. ಪ್ರಶ್ನೆಪತ್ರಿಕೆಯಂತೆ ಉತ್ತರವೂ ಸಹ ಎರಡು ಭಾಷೆಗಳಲ್ಲಿ ಬರೆಯಬಹುದಾಗಿದೆ. ಹೀಗಾಗಿ ಒಂದೇ ಪ್ರಶ್ನೆಗೆ ಎರಡು ರೀತಿಯ ಉತ್ತರ ನೀಡಲು ಅವಕಾಶವಿರುವುದು. ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಲೋಕಸೇವಾ ಆಯೋಗದವರು 12-2-1989 ಎಂದು ತಿದ್ದುಪಡಿ ಮಾಡಿಕೊಳ್ಳಲು ತಿಳಿಸಿರುತ್ತಾರೆ. ಆದರೆ ಜಯನಗರದ ಎಸ್. ಎಸ್. ವಿ. ಕೆ. ಹೈಸ್ಕೂಲ್ ಪರೀಕ್ಷಾ ಕೇಂದ್ರದಲ್ಲಿ ತಿದ್ದುಪಡಿಯನ್ನು ಮಾಡಲು ತಿಳಿಸಿಲ್ಲ. ಹೀಗಾಗಿ ಲೋಕಸೇವಾ ಇಲಾಖೆಯವರೇ ಈ ರೀತಿಯ ತಪ್ಪು ಪ್ರಶ್ನೆ ಪತ್ರಿಕೆಯನ್ನು ನೀಡಿ ವಿದ್ಯಾರ್ಥಿಗಳಲ್ಲಿ ಗೊಂದಲಮಯ ವಾತಾವರಣ ಸೃಷ್ಟಿಸಿ ವಿದ್ಯಾರ್ಥಿಗಳ ಎರಡು ರೀತಿಯಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಿದ ಉತ್ತರಗಳಿಗೆ ದೊರಕಬೇಕಾದ ಅಂಕಗಳನ್ನು ಸಂಪೂರ್ಣವಾಗಿ ನೀಡಲು ಲೋಕಸೇವಾ ಆಯೋಗವು ಕ್ರಮ ಕೈಗೊಳ್ಳಬೇಕೆಂದು ಹಾಗೂ ಈ ರೀತಿ ತಪ್ಪು ಪ್ರಶ್ನೆ ಪತ್ರಿಕೆ ನೀಡಿದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಂಡು, ಇನ್ನು ಮುಂದೆ ಈ ರೀತಿ ತಪ್ಪು ಪ್ರಶ್ನೆ ಪತ್ರಿಕೆಯನ್ನು ನೀಡದಂತೆ ಕ್ರಮ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಏನು ಮಾನ್ಯ ಸದಸ್ಯರು ವಿಚಾರ ಎತ್ತಿದ್ದಾರೆ ಈ ವಿಷಯವನ್ನು ಕರ್ನಾಟಕ ಲೋಕಸೇವಾ ಆಯೋಗದ ಗಮನಕ್ಕೆ ತರಲಾಗುವುದು.

(5)ಬೆಂಗಳೂರಿನ ಜಯನಗರದ ಬಸ್ ನಿಲ್ದಾಣದ ಅಭಿವೃದ್ಧಿ.

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಬೆಂಗಳೂರು ಜಯನಗರದ ಬಸ್ ನಿಲ್ದಾಣ ಬಹಳ ಚಿಕ್ಕದಾಗಿದ್ದು ಇದರಿಂದ ಬಹಳ ಅನಾನುಕೂಲ ಉಂಟಾಗಿದೆ. ಪ್ರತಿದಿನ 150ಕ್ಕೂ ಹೆಚ್ಚು ಬಸ್‌ಗಳು ಹಾಗೂ 1400 ಕ್ಕೂ ಹೆಚ್ಚು ಟ್ರಿಪ್‌ಗಳು ಈ ನಿಲ್ದಾಣದಲ್ಲಿ ಬರುತ್ತಾ ಇದ್ದು ಒಂದು ಬಸ್ ನಿಂತರೆ ಮತ್ತೊಂದು ಬಸ್ ಮುಂದಕ್ಕೆ ಹೋಗಲು ಅಸಾಧ್ಯವಾಗಿದೆ. ಆದ್ದರಿಂದ ಕೂಡಲೇ ಈ ಬಸ್ ನಿಲ್ದಾಣವನ್ನು ಅಭಿವೃದ್ಧಿಗೊಳಿಸಬೇಕು. ಪವಿತ್ರ ಹೋಟೆಲ್ ಮುಂದೆ ಇರತಕ್ಕ ರಸ್ತೆಯಲ್ಲಿ ಶಿವಾಜಿನಗರಕ್ಕೆ ಹೋಗತಕ್ಕ ಬಸ್ ನಿಲ್ದಾಣವನ್ನು ಪ್ರಾರಂಭಿಸಬೇಕು. 2-3 ಕಡೆಗಳ ಪ್ರತ್ಯೇಕ ಬಸ್ ನಿಲ್ದಾಣಗಳನ್ನು ಮಾಡಿದರೆ ಅದರಿಂದ ಪ್ರಯೋಜನವಾಗುತ್ತದೆ. ಕೂಡಲೇ ಜಯನಗರ ಬಸ್ ನಿಲ್ದಾಣದ ಪರಿಸ್ಥಿತಿಯನ್ನು ಉತ್ತಮಪಡಿಸಲು 2-3 ರಸ್ತೆಗಳಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಬೇಕೆಂದು ಸನ್ಮಾನ್ಯ ಸಾರಿಗೆ ಸಚಿವರನ್ನು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಸದಸ್ಯರಾದ ರಾಮಲಿಂಗಾರೆಡ್ಡಿಯವರು ಎತ್ತಿದಂಥ ಸಮಸ್ಯೆಯನ್ನು ಸಾರಿಗೆ ಮತ್ತು ವಕ್ಫ್ ಸಚಿವರ ಗಮನಕ್ಕೆ ತರಲಾಗುವುದು.

(6) ಹೇಮಾವತಿ ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಗೆ ನೀರು.

ಶ್ರೀ ಎನ್. ತಮ್ಮಣ್ಣ (ಕಿರೆಗೋಡು):- ಹೇಮಾವತಿ ಎಡದಂಡೆ ನಾಲೆಯಿಂದ ಮಂಡ್ಯ ಜಿಲ್ಲೆಯ ಬಸರಾಳು ಮತ್ತು ದುದ್ದ ಹೋಬಳಿಯ ಕೆಲವು ಭಾಗಗಳಿಗೆ ಅಂದರೆ ಸುಮಾರು 25,000 ಎಕರೆ ಪ್ರದೇಶಗಳಿಗೆ ಡಿಸೆಂಬರ್ 1991ರ ಒಳಗಾಗಿ ನೀರು ಸರಬರಾಜು ಮಾಡಬೇಕಾಗಿತ್ತು. ಆದರೆ ಚಟ್ಟಂಗೆರೆ ಬಳಿ ಇರುವ ಸುರಂಗ ಮಾರ್ಗದ ಕಾಮಗಾರಿಯಲ್ಲಾದ ಲೋಪದೋಷಗಳ ಬಗ್ಗೆ ತನಿಖೆ ನಡೆಸಲು ಲೋಕಾಯುಕ್ತಕ್ಕೆ ವಹಿಸಿ ಸುಮಾರು ವರ್ಷಗಳಾಗಿವೆ. ಈ ಕಾರಣದಿಂದ ಈ ಭಾಗದ ರೈತರಿಗೆ ನಿಗದಿತ ವೇಳೆಯಲ್ಲಿ ನೀರು ಲಭಿಸದೆ ತೊಂದರೆಗೊಳಗಾಗುವುದರಿಂದ ಆದಷ್ಟು ಬೇಗ ಲೋಕಾಯುಕ್ತದವರಿಂದ ಒಪ್ಪಿಗೆ ಪಡೆದು ಉಳಿದಿರುವ ಕಾಮಗಾರಿ ಕೆಲಸಗಳನ್ನು ಬೇಗ ಮಾಡಿ ಪೂರೈಸಲು ವ್ಯವಸ್ಥೆಯನ್ನು ಮಾಡಿ ಅಭಾವಪೀಡಿತ ಪ್ರದೇಶಕ್ಕೊಳಗಾಗಿರುವ

ರೈತರ ನೀರಿನ ಬವಣೆಯನ್ನು 1992ನೇ ಜೂನ್ ತಿಂಗಳ ಒಳಗಾಗಿ ಪರಿಹರಿಸಬೇಕೆಂದು ತಮ್ಮ ಮೂಲಕ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರನ್ನು ಒತ್ತಾಯಮಾಡುತ್ತೇನೆ.

ಶ್ರೀ ಮಲ್ಲಾರಿಗೌಡ. ಎನ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-ಮಾನ್ಯ ಅಧ್ಯಕ್ಷರೇ, ಚಟ್ನಂಗೆರೆ ಸುರಂಗವು ಹೇಮಾವತಿ ಎಡದಂಡೆ ನಾಲೆಯ 152ನೇ ಕಿ. ಮೀ. ನಲ್ಲಿದೆ. ಈ ಸುರಂಗದ ನಿರ್ಮಾಣ ಕೆಲಸವನ್ನು ಟೆಂಡರ್ ಆಧಾರದ ಮೇಲೆ ಮಾರ್ಚ್ 85ರಲ್ಲಿ ವಹಿಸಿಕೊಡಲಾಯಿತು. ಕೆಲಸವನ್ನು ಏಪ್ರಿಲ್ 85ರಲ್ಲಿ ಆರಂಭಿಸಲಾಯಿತು. ಸುರಂಗದ ಅಗೆತದ ಕೆಲಸವು ಪೂರ್ಣ ಗೊಳ್ಳುವ ಹಂತದಲ್ಲಿದ್ದಾಗ ಕಾಮಗಾರಿಯಲ್ಲಿ ಕೆಲವು ಲೋಪದೋಷಗಳು ಕಂಡು ಬಂದದ್ದರಿಂದ ಸೆಪ್ಟೆಂಬರ್ 88ರಲ್ಲಿ ಲೋಕಾಯುಕ್ತರವರ ತನಿಖೆಗೆ ವಹಿಸಲಾಯಿತು. ಸೆಪ್ಟೆಂಬರ್ 88ರವರೆಗೆ ಆದ ವೆಚ್ಚ ರೂ. 2.48 ಕೋಟಿ ತನಿಖೆಯ ಪ್ರಗತಿಯಲ್ಲಿದ್ದು ವರದಿ ನಿರೀಕ್ಷಿಸಲಾಗಿದೆ. ಸುರಂಗದ ಲೈನಿಂಗ್ ಕೆಲಸ ಉಳಿದಿದ್ದು ಇದನ್ನು ಪೂರ್ಣಗೊಳಿಸಿದಲ್ಲಿ ಮುಂದಿನ ಭಾಗದ ಸುಮಾರು 30,000 ಎಕರೆ ಪ್ರದೇಶಕ್ಕೆ ನೀರೊದಗಿಸಲು ಸಾಧ್ಯವಾಗುತ್ತದೆ. ಈ ಅಂಶವನ್ನು ಮನಗಂಡು ಸರ್ಕಾರವು ಲೋಕಾಯುಕ್ತರವರ ತನಿಖೆಯಿಂದ ಉದ್ಭವಿಸಿದ ಕೆಲವು ಸಮಸ್ಯೆಗಳ ಬಗ್ಗೆ ನಿರ್ಧಾರ ತೆಗೆದುಕೊಂಡು ಸುರಂಗದ ಕೆಲಸಗಳನ್ನು ಮುಂದುವರೆಸಿ ಪೂರ್ಣಗೊಳಿಸಲು ಆದೇಶ ನೀಡಿದೆ. ಸದಸ್ಯರು ಪ್ರಸ್ತಾಪಿಸಿರುವ ಮಂಡ್ಯ ಜಿಲ್ಲೆಯ ಬಸರಾಳು ಮತ್ತು ದುದ್ದ ಹೋಬಳಿಯ ಭಾಗಗಳಿಗೆ 1993-94ರಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

(7)ಕರ್ನಾಟಕತ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲಾ ಪದವೀಧರರಿಗೆ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಶ್ರೀ ಬಾಬುರಾವ್ ಚವಾಣ್:-ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿಜ್ಞಾನ ಮತ್ತು ವಾಣಿಜ್ಯ ಪದವೀಧರರ ಸಹಾಯಕ ಉಗ್ರಾಣಿಕರಿಗೆ ಮಂಡಲಿಯ ಆದೇಶ ಸಂಖ್ಯೆ ಕವಿಮಃಡಬ್ಲ್ಯೂಃಎಲ್‌ಪಿಸಿ: 18: 74-75 ದಿನಾಂಕ 27-7-1976ರ ಮೇರೆಗೆ ಪ್ರಸ್ತುತ ನಾಲ್ಕು ಹೆಚ್ಚುವರಿ ವೇತನ ಮುಂಬಡ್ತಿಯನ್ನು ನೀಡಲಾಗುತ್ತಿತ್ತು ಈ ಸೌಲಭ್ಯವನ್ನು ಕಲಾ ಪದವೀಧರರಿಗೆ ಕೊಡಲಾಗುತ್ತಿಲ್ಲ ಏಕೆ? ಮಂಡಲಿಯು ನೇಮಕಾತಿ ನಿಯಮಾವಳಿಗಳನ್ನು ಸೃಷ್ಟಿಸುವಾಗ (ಸಹಾಯಕ ಉಗ್ರಾಣಿಕ ಹುದ್ದೆಗೆ) ಪದವಿಯ ಬಗ್ಗೆ ನಿರ್ದಿಷ್ಟವಾದ ಸೂಚನೆಯನ್ನು ನಿಗದಿಪಡಿಸಿರುವುದಿಲ್ಲ. ಆದರೆ ನೇಮಕಾತಿ ಹೊಂದಿದ ನಂತರ ಸಹಾಯಕ ಉಗ್ರಾಣಿಕ ಪಡೆದಿರುವ ಪದವಿಯಲ್ಲಿ ತಾರತಮ್ಯ ಮಾಡಿ ಕೇವಲ ವಾಣಿಜ್ಯ ಮತ್ತು ವಿಜ್ಞಾನ ಪದವೀಧರರಿಗೆ ಮಾತ್ರ ಹೆಚ್ಚುವರಿ ವೇತನ ಮುಂಬಡ್ತಿ ನೀಡಿ ಈ ಸೌಲಭ್ಯದಿಂದ ಕಲಾ ಪದವೀಧರರಿಗೆ ವಂಚಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಸಮಾನ ಪದವಿಯನ್ನು ಹೊಂದಿ ಈ ಮೇಲೆ ಹೇಳಿದ ಸೌಲಭ್ಯದಿಂದ ವಂಚಿತವಾಗಿರುವ ಕಲಾ ಪದವೀಧರರಿಗೆ ಇದನ್ನು ವಿಸ್ತರಿಸಲು ಮಂಡಳಿಗೆ ಇರುವ ತೊಂದರೆ ಏನು ? ಹಾಗಿದ್ದಲ್ಲಿ ಇದನ್ನು ಈಗಲಾದರೂ ಸರ್ಕಾರ ಸರಿಪಡಿಸಿ ಸದರಿ ಸೌಲಭ್ಯವನ್ನು ಕಲಾ ಪದವೀಧರರಿಗೂ ವಿಸ್ತರಿಸುವುದೇ ? ಅಂದರೆ ಇದನ್ನು ಯಾವಾಗ ಅಮಲಿನಲ್ಲಿ ತರಲಾಗುತ್ತದೆ ? ಈ ಮಂಡಳಿಯಲ್ಲಿ ಗುಮಾಸ್ತ ಸಿಬ್ಬಂದಿ ಅಥವಾ ಖಜಾನೆ ಶಾಖೆಯಲ್ಲಿ ಕಲಾ ಪದವಿಯನ್ನು ಹೊಂದಿರುವ ಸಿಬ್ಬಂದಿಯು ಪ್ರಸ್ತುತ ನಾಲ್ಕು ವೇತನ ಹೆಚ್ಚುವರಿ ಮುಂಬಡ್ತಿಗಳನ್ನು ಪಡೆಯುತ್ತಿದ್ದು ಈ ಸೌಲಭ್ಯದಿಂದ ಸಮಾನ ಪದವಿ ಹಾಗೂ ಹುದ್ದೆಯನ್ನು ಹೊಂದಿರುವ ಸಹಾಯಕ ಉಗ್ರಾಣಿಕರಿಗೆ ಇದನ್ನು ನೀಡುತ್ತಿಲ್ಲ ಏಕೆ ? ಸರ್ಕಾರ ಇದನ್ನು ಈಗಲಾದರೂ ಸರಿಪಡಿಸಿ ಅಮಲಿನಲ್ಲಿ ತರಲು ಯೋಚಿಸಿದೆಯೆ ? ಅಂದರೆ ಯಾವಾಗ ಇದನ್ನು ಕೃತಿಯಲ್ಲಿ ಜಾರಿಗೊಳಿಸಲಾಗುತ್ತಿದೆ ?

ಶ್ರೀ ಎಂ. ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು ಎತ್ತಿದಂತ ವಿಚಾರವನ್ನು ಇಂಧನ ಖಾತೆಯ ಮಂತ್ರಿಗಳ ಗಮನಕ್ಕೆ ತರಲಾಗುವುದು.

ಶ್ರೀ ಬಾಬುರಾವ್ ಚವಾಣ್:- ಇದು ಮಹತ್ವದ ಪ್ರಶ್ನೆ. ಈ ರೀತಿಯಾದರೆ ಪತ್ರ ಬರೆದು ಕೇಳಬಹುದಾಗಿತ್ತು. ನನಗೆ ಉತ್ತರ ಬೇಕಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಉತ್ತರ ಕಳುಹಿಸಿಕೊಡುತ್ತೇವೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಮುಖ್ಯ ಮಂತ್ರಿಗಳ ಹೆಸರಿನ ಮುಂದಿರತಕ್ಕ

1984ನೇ ಸಾಲಿನ ಕರ್ನಾಟಕ ಲೋಕಾಯುಕ್ತ ಅಧಿನಿಯಮದ 12(7)ನೇ ಕಲಮಿನ ಮೇರೆಗೆ;

1990-91ನೇ ಸಾಲಿನ ಕರ್ನಾಟಕ ಲೋಕಾಯುಕ್ತದ ಕ್ರೋಢೀಕರಿಸಿದ 5ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಮಾನ್ಯ , ಸಾರಿಗೆ, ವಕ್ಫ್ ಮತ್ತು ಹಜ್ ಸಮಿತಿ ಮಂತ್ರಿ ಅವರ ಹೆಸರಿನ ಮುಂದಿರತಕ್ಕ

1950ನೇ ಸಾಲಿನ ರಸ್ತೆ ಸಾರಿಗೆ ಸಂಸ್ಥೆ ಅಧಿನಿಯಮದ 35(3)ನೇ ಕಲಮಿನ ಮೇರೆಗೆ ;

1990-91ನೇ ಸಾಲಿನ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 30ನೇ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

3. ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ (ಗೃಹ ಹಾಗೂ ಅಬಕಾರಿ ಮಂತ್ರಿ)

ಮಾನ್ಯ ಉಪಾಧ್ಯಕ್ಷಿಣಿಯವರೆ,

1963ನೇ ಸಾಲಿನ ಕರ್ನಾಟಕ ಪೋಲೀಸ್ ಅಧಿನಿಯಮದ 163(4)ನೇ ಕಲಮಿನ ಮೇರೆಗೆ ;

ಅಧಿಸೂಚನೆ ಕ್ರಮಾಂಕ ಹೆಚ್‌ಡಿ 74 ಪಿಇಟಿ 91 ದಿನಾಂಕ 19ನೇ ಡಿಸೆಂಬರ್ 1991.

1991ನೇ ಸಾಲಿನ ಕರ್ನಾಟಕ ಮೀಸಲು ಪೋಲೀಸ್ (ನೇಮಕಾತಿ ಹಾಗೂ ಸೇವಾ ಷರತ್ತುಗಳು) ತಿದ್ದುಪಡಿ ನಿಯಮಗಳನ್ನು ಸಭೆಯ ಮುಂದಿಡುತ್ತೇನೆ.

1964ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 22ನೇ ಕಲಮಿನ ಮೇರೆಗೆ ;

ಅ)ಆದೇಶ ಸಂಖ್ಯೆ :ಹೆಚ್‌ಡಿ 5 ಸಿಎಸ್‌ಎ 92 ದಿನಾಂಕ 24-2-1992

ಹರಿಹರ ಪಾಲಿಫೈಬರ್ಸ್ ಆಡಿಟೋರಿಯಂನಲ್ಲಿ ನೌಕರರ ಸಲುವಾಗಿ 35 ಎಂ ಎಂ ಚಲನಚಿತ್ರ ಪ್ರದರ್ಶಿಸಲು ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮದ 4ನೇ ಕಲಮಿನಿಂದ ವಿನಾಯಿತಿ ನೀಡುವ ಬಗ್ಗೆ;

ಆ)ಅಧಿಸೂಚನೆ ಸಂಖ್ಯೆ : ಹೆಚ್‌ಡಿ 4 ಸಿಎಸ್‌ಎ 92 ದಿನಾಂಕ 15-2-1992

ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ತಂಬ್ರಹಳ್ಳಿಯ ಶಿವರಾಮಕೃಷ್ಣ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸಲು ದಿನಾಂಕ 18-11-1991ರವರೆಗೆ ಆಗಿರುವ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ ;

ಇ)ಅಧಿಸೂಚನೆ ಸಂಖ್ಯೆ :ಹೆಚ್‌ಡಿ: 26 ಸಿಎಸ್‌ಎ: 92 ದಿನಾಂಕ 5-3-1992.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಲ್ಲಿರುವ ಪ್ರಕಾಶ್ ಸಂಚಾರಿ ಚಿತ್ರಮಂದಿರವನ್ನು ಅರೆ ಕಾಯಂ ಆಗಿ ಪರಿವರ್ತಿಸುವ ಬಗ್ಗೆ ನಿರಾಕ್ಷೇಪಣಾ ಪತ್ರದ ಅವಧಿಯನ್ನು ವಿಸ್ತರಿಸುವ ಬಗ್ಗೆ ;

ಈ)ಅಧಿಸೂಚನೆ ಸಂಖ್ಯೆ : ಹೆಚ್‌ಡಿ 315 ಸಿಎಸ್‌ಎ 91 ದಿನಾಂಕ 20-1-1992.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕು ಹೊಸದರೋಜಿಯ ಶ್ರೀ ರೇವಣಸಿದ್ದೇಶ್ವರ ಸಂಚಾರಿ ಚಿತ್ರಮಂದಿರದ ಮಾಲೀಕರು ತಮ್ಮ ಸಂಚಾರಿ ಚಿತ್ರಮಂದಿರವನ್ನು ತಾತ್ಕಾಲಿಕ ಚಿತ್ರಮಂದಿರವನ್ನಾಗಿ ಪರಿವರ್ತಿಸಲು ಅರ್ಜಿ ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡುವ ಬಗ್ಗೆ : ಹಾಗೂ

ಉ)ಅಧಿಸೂಚನೆ ಸಂಖ್ಯೆ :ಹೆಚ್‌ಡಿ 153 ಸಿಎಸ್‌ಎ 90 ದಿನಾಂಕ 14-5-1991

1991ನೇ ಸಾಲಿನ ಕರ್ನಾಟಕ ಸಿನಿಮಾ (ನಿಯಂತ್ರಣ) ತಿದ್ದುಪಡಿ ನಿಯಮದ ಬಗೆಗಿ ಅಧಿಸೂಚನೆಗಳನ್ನು ಸಭೆಯ ಮುಂದಿಡುತ್ತೇನೆ.

ಮಾನ್ಯ ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಅವರ ಹೆಸರಿನ ಮುಂದಿರತಕ್ಕ

1983ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕ್ ಪಂಚಾಯತ್ ಸಮಿತಿ, ಮಂಡ ಪಂಚಾಯತ್ ಹಾಗೂ ನ್ಯಾಯ ಪಂಚಾಯತ್ ಅಧಿನಿಯಮದ309 (3)ನೇ ಕಲಮಿನ ಮೇರೆಗೆ ;

ಅ) 1990-91ನೇ ಸಾಲಿನ ಕೋಲಾರ, ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲಾ ಪರಿಷತ್ತುಗಳ ವಾರ್ಷಿಕ ಆಡಳಿ ವರದಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಕ್ರಮ ಕೈಗೊಂಡಿರುವ ವಿವರಣೆಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯರೇ, ಮಾನ್ಯ ಬೃಹತ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿ ಅವರ ಹೆಸರಿನ ಮುಂದಿರತಕ್ಕ.

1956ನೇ ಸಾಲಿನ ಕಂಪನಿಗಳ ಅಧಿನಿಯಮದ 619 (ಎ) ಕಲಮಿನ ಮೇರೆಗೆ ;

ಅ) 1990-91ನೇ ಸಾಲಿನ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತದ 46ನೇ ವಾರ್ಷಿಕ ವರದಿ;

ಆ) 1990-91ನೇ ಸಾಲಿನ ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ ನಿಯಮಿತದ 14ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ ಅವರ ಹೆಸರಿನ ಮುಂದಿರತಕ್ಕ.

1987ನೇ ಸಾಲಿನ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮದ 48 (5)ನೇ ಕಲಮಿ ಮೇರೆಗೆ ;

1990-91ನೇ ಸಾಲಿನ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

7.ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಮಂತ್ರಿ) ಮಾನ್ಯ ಉಪಾಧ್ಯಕ್ಷಿಣಿಯವರೆ 1966ನೇ ಸಾಲಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ(ನಿಯಂತ್ರಣ) ಅಧಿನಿಯಮದ 153ನೇ ಕಲಮಿನ ಮೇರೆಗೆ ;

ಅಧಿಸೂಚನೆ ಸಂಖ್ಯೆ ; ಸಿಎಂಡಬ್ಲ್ಯೂ 95 ಎಂಆರ್‌ಇ 89 ದಿನಾಂಕ29-11-1989

1965ನೇ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮದ ಅನುಸೂಚಿಯ ತಿದ್ದುಪಡಿಯನ ಸಭೆಯ ಮುಂದಿಡುತ್ತೇನೆ.

ವರದಿಯನ್ನೊಪ್ಪಿಸುವುದು.

ಉಪಾಧ್ಯಕ್ಷಿಣಿಯವರು:- ಖಾಸಗಿ ಸದಸ್ಯರ ವಿಧೇಯಕಗಳು ಮತ್ತು ನಿರ್ಣಯಗಳಿಗೆ ಸಂಬಂಧಿಸಿ ಸಮಿತಿಯ 4ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಪೆರಿಕಲ್. ಎಂ. ಮಲ್ಲಪ್ಪ :- ಮಾನ್ಯ ಉಪಾಧ್ಯಕ್ಷಿಣಿಯವರೇ. ಅಧೀನ ಶಾಸನ ರಚನಾ ಸಮಿತಿ 16ನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ವರದಿಗಳನ್ನು ಒಪ್ಪಿಸಲಾಯಿತು.

1991-92ನೇ ಸಾಲಿಗೆ ಸಂಬಂಧಿಸಿದಂತೆ ಅನುಪೂರಕ ಅಂದಾಜುಗಳ ಪ್ರಸ್ತಾವಗಳನ್ನೊಪ್ಪಿಸುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):- ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಭಾ ಸಂವಿಧಾನ 205ನೇ ಅನುಚ್ಛೇದದ ಮೇರೆಗೆ1991-92ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜು

ಬಗ್ಗೆ ಪ್ರಸ್ತಾವಗಳನ್ನು ಸಭೆಗೆ ಒಪ್ಪಿಸಲಾಗಿದೆ.

ಮಂತ್ರಿಗಳ ಹೇಳಿಕೆ

ವಿಷಯ: ಕರ್ನಾಟಕ ರಾಜ್ಯದ ಹೊಗೆಸೊಪ್ಪು ಬೆಳೆಗಾರರ ಸಮಸ್ಯೆ.

ಶ್ರೀ ಎಂ. ಚಿಕ್ಕೇಗೌಡ (ವ್ಯವಸಾಯ ಮಂತ್ರಿಗಳು):- ನಿನ್ನೆ ಈ ಸದನದಲ್ಲಿ ಒಂದು ಪ್ರಾಮುಖ್ಯವಾದ ವಿಚಾರ ಬಂದಿತ್ತು. ಅದಕ್ಕೆ ಈಗ ಸೂ-ಮೋಟೋ ಸ್ಟೇಟ್ ಮೆಂಟ್ ಮಾಡುತ್ತೇನೆ. ಕರ್ನಾಟಕ ರಾಜ್ಯದ ಹೊಗೆಸೊಪ್ಪು ಬೆಳೆಗಾರರ ಸಮಸ್ಯೆ ಬಗ್ಗೆ ನಿನ್ನೆ ಮಾನ್ಯ ಸದಸ್ಯರಾದ ಶ್ರೀ ಕಾಳಮರಿಗೌಡರು ಸದನದಲ್ಲಿ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನನ್ನ ಹೇಳಿಕೆ ಈ ರೀತಿ ಇದೆ.

MADAM DEPUTY SPEAKER:- During the year 1991-92, Tobacco Board had fixed a production quota of 20 million kgks. of V F C Tobacco. Due to the attractive prices received by the farmers during 1990 season and favourable seasonal conditions during 1991-92, farmers unauthorisedly cultivated additional areas without regisration and production increased to 26.4 million kgs. There by exceding the authorised production quota by 6 million kgs. Which Tobacco Board arranged to be soldafter levying service charges.

During 1992-93, Tobacco Board, after reviewing the situation of glut of 1991-92, has ffxed the production quota at 20 million kgs. Hence the farmer who had cultivated Tobacco unauthorisedly during 1991-92 season have been denied registration during 1992-93.

However the State Government has taken up the issue with the Ministry of Commerce, Government of India and the Tobacco Board, Guntur to mitigate the hardship caused to the Tobacco growers in the State. A telex messags has already been sent today, i.e. 20-3-92, to the Hon'ble Minister or Commerce, Government of India and Chairman, Tobacco Board to maintain the quota at the production level of 1991-92 which is 26.4 million kgs, against the allotted quota of 20 million kgs. fixed by the Tobacco Board. This will be persaed further with Government of India and Tobacco Board.

ವಿತ್ತೀಯ ಕಾರ್ಯಕಲಾಪಗಳು.

1992-93ನೇ ಸಾಲಿಗೆ ಸಂಬಂಧಿಸಿದ ಇಲಾಖಾ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ (ಸಹಕಾರ, ಕಾರ್ಮಿಕ ಮತ್ತು ಉದ್ಯೋಗ, ವೈದ್ಯಕೀಯ ಕುಟುಂಬ ಕಲ್ಯಾಣ ಮತು ಜನಾರೋಗ್ಯ ಸೇವೆಗಳು)

ಅಭಿಯಾಚನೆ ಕ್ರಮಾಂಕ 53-54 ಸಹಕಾರ ಮತ್ತು ಕ್ರಮಪಡಿಸಿದ ಮಾರುಕಟ್ಟೆಗಳು.

ಶ್ರೀ ಎಸ್. ಆರ್. ಮೋರೆ (ಸಹಕಾರಿ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 64,42,88,000ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 25,15,28,000ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 57 ಕಾರ್ಮಿಕ ಮತ್ತು ಉದ್ಯೋಗ

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1993ರಂದು ಕೊನೆಗೊಳ್ಳುವ ಆರ್ಥಿಕ ರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ 49,25,01,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ 29 ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ31-3-1993ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 354,68,36,000ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು(ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

1992-93ನೇ ಸಾಲಿನ ಈ ಮೇಲ್ಕಂಡ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭ

+ಡಾ. ಎ. ಬಿ. ಮಲಕರೆಡ್ಡಿ (ಯಾದ್ಗೀರ್):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಸದನದಮುಂದೆ ಸನ್ಮಾನ್ಯ ಆರೋಗ್ಯ ಮಂತ್ರಿಗಳು, ಸಹಕಾರ ಮಂತ್ರಿಗಳು ಮತ್ತು ಕಾರ್ಮಿಕ ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಂಡಿಸಿದ್ದಾರೆ. ಈ ಬೇಡಿಕೆಗಳಿಗೆ ಅನುಮೋದನೆ ಸೂಚಿಸುತ್ತಾ ಕೆಲವು ವಿಚಾರಗಳನ್ನು ಈ ಸದನದಲ್ಲಿ ವ್ಯಕ್ತ ಮಾಡಲು ನಿಂತಿದ್ದೇನೆ. ಪ್ರಥಮತಃ ಏನು ಕಾರಣವೋ, ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ವಾರ್ಷಿಕ ವರದಿಯನ್ನು ಈ ವರ್ಷ ಕೊಟ್ಟಿಲ್ಲ.

ಉಪಾಧ್ಯಕ್ಷಿಣಿಯವರು:- ಕೊಟ್ಟಿದೆ.

ಡಾ. ಎ. ಬಿ. ಮಲಕರೆಡ್ಡಿ :- ಕೊಟ್ಟಿಲ್ಲ. ಸಹಕಾರಿ ಮಂತ್ರಿಗಳದ್ದು, ಕಾರ್ಮಿಕ ಮಂತ್ರಿಗಳದ್ದು ಸಂಬಂಧಪಟ್ಟ ವಾರ್ಷಿಕ ವರದಿ ಬಂದಿದೆ. ಆದರೆ ಆರೋಗ್ಯಮಂತ್ರಿಗಳದ್ದು ವಾರ್ಷಿಕ ವರದಿ ಬಂದಿಲ್ಲ. 1990 91ನೇ ವಾರ್ಷಿಕ ವರದಿ ಮತ್ತು ಈ ವರ್ಷದಲ್ಲಿ ಆರೋಗ್ಯ ಇಲಾಖೆಗೆ ಮಾನ್ಯ ಮಂತ್ರಿಗಳು ಸರ್ಕಾರದಿಂದ ಜನರಿಗೆ ಒದಗಿಸಿಕೊಟ್ಟ ಸೇವೆಯ ಆಧಾರದ ಮೇಲೆ ಎಷ್ಟರಮಟ್ಟಿಗೆ ಮಾತನಾಡಲು ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಮಾತನಾಡಲು ಇಚ್ಛೆಪಡುತ್ತೇನೆ. ಇತ್ತೀಚಿನ ಎರಡು ವರ್ಷಗಳ ವಾರ್ಷಿಕ ವರದಿಯನ್ನು ನೋಡಿದಾಗ ನಮಗೆ ಕಂಡುಬರುವುದು ಏನೆಂದರೆ, ಸುಮಾರು ವರ್ಷಗಳ ವಾರ್ಷಿಕ ವರದಿಯನ್ನು ನೋಡಿದ ನಮಗೆ ಈ ಎರಡು ವರ್ಷಗಳದ್ದು ತಾವು ಏನು ಒದಗಿಸಿದ್ದೀರೋ ಅದು ಸಮರ್ಪಕವಾಗಿದೆ. ಸರಿಯಾದ ಮಾಹಿತಿ ಅದರಲ್ಲಿ ದೊರೆಯುತ್ತಿಲ. ಹಿಂದೆ 4-5 ವರ್ಷಗಳು ಮಾಹಿತಿಯನು ಬಹಳ ಚೆನಾಗಿ ಕೊಡುತ್ತಿದ್ದಿರಿ. Annual

expenditure, allocation of funds etc., ಇಂತಹದ್ದನ್ನೆಲ್ಲಾ ಡೀಟೈಲ್ ಆಗಿ ಕೊಡುತ್ತಿದ್ದೀರಿ. ಇತ್ತೀಚಿನ ವರದಿ ಸಂಕ್ಷಿಪ್ತವಾಗಿ ಮತ್ತು ಓದತಕ್ಕ ಸದಸ್ಯರಿಗೇ ಏನೂ ಅರ್ಥವಾಗದ ರೀತಿಯಲ್ಲಿ ಇರುತ್ತದೆ. ಆರೋಗ್ಯ ಇಲಾಖೆ ಒಂದು ತಾಂತ್ರಿಕ ಇಲಾಖೆ. ಪ್ರತಿಯೊಂದು ವಿಷಯದ ಮೇಲೂ ಸ್ಪಷ್ಟ ಟಿಪ್ಪಣಿ ಕೊಟ್ಟು ಅದರ ಬಗ್ಗೆ ಪೂರ್ವಾಪರ ವಿಷಯವನ್ನು ಪ್ರಸ್ತಾಪ ಮಾಡಿದರೆ ಸದಸ್ಯರಿಗೆ ಅರ್ಥವಾಗುತ್ತೆ. ಹೀಗಾಗಿ ವಾರ್ಷಿಕ ವರದಿಯಲ್ಲಿ ಇನ್ನೊಂದು ಪ್ರಮುಖವಾದ ಸೂಚನೆ ಮಾಡುವುದು ಏನೆಂದರೆ, ನಾನು ಎಲ್ಲವನ್ನು ವಿವರವಾಗಿ ಓದಿದ್ದೇನೆ. ಹೋದವರ್ಷ ಎಷ್ಟು ಹಣವನ್ನು ಕೊಟ್ಟಿದ್ದರು ಮತ್ತು ಇಲಾಖೆ ಎಷ್ಟು ಖರ್ಚು ಮಾಡಿಗೆ ಎಂಬುದನ್ನು ಸಾಮಾನ್ಯವಾಗಿ ಪ್ರತಿಯೊಬ್ಬರೂ ನೋಡಿದಾಗ ಸಾಮಾನ್ಯವಾಗಿ ಪ್ರತಿಯೊಂದು ಇಲಾಖೆಯವರು ನಮ್ಮ ಇಲಾಖೆಗೆ ಹಣ ಕಡಿಮೆ ಎಂದು ತಿಳಿದು ಆಕ್ಷೇಪಣೆ ಮಾಡುವ ಈ ಕಾಲದಲ್ಲಿ ಈ ಆರೋಗ್ಯ ಇಲಾಖೆಗೆ ಏನು ಹಣವನ್ನು ಕೊಟ್ಟಿದ್ದಾರೆ ಅದನ್ನು ಖರ್ಚು ಮಾಡಿರುವುದಿಲ್ಲ. ಇದರಲ್ಲಿ 25 ಕೋಟಿ ರೂಪಾಯಿ ಲ್ಯಾಪ್ಸ್ ಮಾಡಿದ್ದಾರೆ. ವಾರ್ಷಿಕ ಹಣಕಾಸು ತಃಖ್ತೆಯನ್ನು ನೋಡಿದಾಗ ಇದು ತಿಳಿದುಬರುತ್ತದೆ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷಪೀಠವನ್ನಲಂಕರಿಸಿದರು)

ಈಗ ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ, ಜಿಲ್ಲಾ ಆರೋಗ್ಯ ಕೇಂದ್ರಗಳಿಗೆ, ಆಸ್ಪತ್ರೆಗಳಿಗೆ ಮತ್ತು ದೊಡ್ಡ ಆಸ್ಪತ್ರೆಗಳಿಗೆ ಏನು ಹಣವನ್ನು ಕೊಟ್ಟಿದ್ದೇವೆ ಹಾಗೂ ಎಷ್ಟು ಖರ್ಚು ಮಾಡಿದ್ದಾರೆಂಬುದನ್ನು ಹುಡುಕಬೇಕಾದರೆ ಒಂದೊಂದು ಬಾಬತ್ತಿನಲ್ಲಿ ಹುಡುಕಬೇಕಾದರೆ ಸುಮಾರು ಅರ್ಧ ತಾಸು ಬೇಕಾಗುತ್ತದೆ. ಸುಮಾರು 25 ಪುಸ್ತಕಗಳನ್ನು ತೆಗೆದುಕೊಂಡು ಹುಡುಕಬೇಕಾಗುತ್ತದೆ. ಮೊದಲು ಅನ್ಯುಯಲ್ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ ತೆಗೆದುಕೊಳ್ಳಬೇಕು. ಆಮೇಲೆ ಡಿಟೈಲ್ಡ್ ಎಕ್ಸ್‌ಪೆಂಡೀಚರ್ ಬುಕ್ ನೋಡಬೇಕು. ಅದನ್ನು ನೋಡಿದ ಮೇಲೆ ಮತ್ತೆ ಇಂಡಿವಿಜ್ಯುಯಲ್ ಎಕ್ಸ್‌ಪೆಂಡೀಚರ್ ಬುಕ್ ಎಂದು ಇದೆ. ಓೀಗೆ ನಾಲ್ಕೈದು ಪುಸ್ತಕಗಳನ್ನು ನೋಡಿದಮೇಲೆ ಅವರು ಕೊಟ್ಟದ್ದು ಎಷ್ಟು, ಉಪಯೋಗ ಮಾಡಿದ್ದು ಎಷ್ಟು ಎಂದೂ ಪೂರ್ಣ ಗೊತ್ತಾಗುವುದಿಲ್ಲ. ಕಾರಣ ಕೆಲವು ಸಾರಿ ಖೋತಾ ಕೂಡ ಮಾಡಿದ್ದಾರೆ. ರೀ-ಅಪ್ರೋಪ್ರಿಯೋಷನ್ ಮಾಡುತ್ತಾರೆ. ಅದನ್ನು ಕಂಡುಹಿಡಿಯಬೇಕಾದರೆ ಬಡ್ಜೆಟ್ ಮೆಮೊರ್ಯಾಂಡಂಗೆ ಹೋಗಬೇಕು. ಹೀಗಾಗಿ ಎಲ್ಲಾ ಗೊಂದಲಮಯ. ಹೀಗಾಗಿ ಯಾರೂ ಪುಸ್ತಕ ಮುಟ್ಟುವುದಕ್ಕೆ ಧೈರ್ಯ ಮಾಡುವುದಿಲ್ಲ. ಆದ್ದರಿಂದ ನನ್ನ ಸೂಚನೆ ಏನೆಂದರೆ, ಹೀಗೀದ್ದರೂ ತಾವು ವಾರ್ಷಿಕ ವರದಿಯನ್ನು ಕೊಡುತ್ತಿದ್ದೀರಿ. ಅದಕ್ಕೆ ಸ್ಟೇಷನರಿಯನ್ನು ಖರ್ಚುಮಾಡುತ್ತಿದ್ದೀರಿ. ಪುಸ್ತಕ ಪ್ರಿಂಟ್ ಮಾಡುತ್ತಿದ್ದೀರಿ. ಅದರಲ್ಲೇ ಕಳೆದ 2-3 ವರ್ಷಗಳಲ್ಲಿ ವಿವಿಧ ಬಾಬುಗಳಲ್ಲಿ ಎಂದರೆ ದೊಡ್ಡ ಹಾಗೂ ಚಿಕ್ಕ ಆಸ್ಪತ್ರೆಗಳಿಗೆ, ಮೆಡಿಕಲ್ ಕಾಲೇಜುಗಳಿಗೆ, ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಕೇಂದ್ರಗಳಿಗೆ ಎಷ್ಟು ಹಣ ಕೊಟ್ಟಿದ್ದೀರಿ ಹಾಗೂ ಎಷ್ಟು ಹಣ ಖರ್ಚು ಆಗಿದೆ ಎಂಬ ವಿವರವನ್ನು ಆನ್ಯುವಲ್ ರಿಪೋರ್ಟ್‌ನಲ್ಲೆ ಕೊಡಬಹುದಲ್ಲವೇ ? ತಮ್ಮಲ್ಲಿ ಬೇಕಾದಷ್ಟು ಜನ ಎಕ್ಸ್‌ಪರ್ಟ್ಸ್ ಇದ್ದಾರೆ. ತಾವು ಮಾಹಿತಿ ಏನೇನೂ ಕೊಟ್ಟಿಲ್ಲ. ಆದರೆ ಕೇಂದ್ರ ಸರ್ಕಾರದ ಕುಟುಂಬ ಯೋಜನೆ ಬಗ್ಗೆ ಕೊಟ್ಟಿದ್ದೀರಿ, ಅದಕ್ಕೇ ನಾನು ವಿನಂತಿ ಮಾಡುವುದು ಏನೆಂದರೆ, ಒಂದಲ್ಲ ಎಂದು ಪರ್ಫಾಮೆನ್ಸ್ ಬಜೆಟ್, ವಾರ್ಷಿಕ ವರದಿ ಕೊಡುತ್ತೀರಿ. ಎರಡರಲ್ಲೂ ಕೂಡ ಬಡ್ಜೆಟ್ ವಿಶ್ಲೇಷಣೆ ನಿಮ್ಮ ಖಾತೆಗೆ ಸಂಬಂಧಪಟ್ಟಹಾಗೆ ಕೊಡಬೇಕೆಂದು ನಾನು ಒಂದು ಪ್ರಮುಖವಾದ ಸೂಚನೆಯನ್ನು ಕೊಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ವಾರ್ಷಿಕ ವರದಿಯ ಕಂಪ್ಯಾರಿಟೀವ್ ಸ್ಟೇಟ್‌ಮೆಂಟಿನ ಪುಟ 2 ಮತ್ತು 3ನ್ನು ನೋಡಿ.

ಡಾ. ಎ. ಬಿ. ಮಲಕರೆಡ್ಡಿ :- ಈ ವರ್ಷದ್ದು ನಾನು ನೋಡಿಲ್ಲ. ಹಿಂದಿನ3-4 ವರ್ಷಗಳ ವರದಿ ಮೇಲೆ ನಾನು ಹೇಳಿದೆ. ಅದು ಕೊಟ್ಟಿದ್ದರೆ ಸಂತೋಷ. ಆರೋಗ್ಯ ಇಲಾಖೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಎಂದು ಎರಡು ಪ್ರಮುಖ ವಿಭಾಗಗಳು ಇವೆ. ಇವುಗಳ ಮುಖಾಂತರ ಜನರಿಗೆ ಸೇವೆ ಒದಗಿಸುತ್ತಿದ್ದೀರಿ. ಪ್ರಮುಖವಾಗಿ ಶಾಸಕರಾಗಿ ನಾವು ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಮಾಡಬೇಕಾಗಿದೆ.

ರಾಜ್ಯ ಮಟ್ಟದಲ್ಲಿ ಮೊದಲು ಮಂತ್ರಿಗಳು, ಕಾರ್ಯದರ್ಶಿಗಳು ಮತ್ತು ದೊಡ್ಡ ದೊಡ್ಡ ಅಧಿಕಾರಿಗಳು ಬರುತ್ತಾರೆ. ಇವತ್ತು ಒಂದು ಗೊತ್ತುಗುರಿ ಒಂದು ನಿರ್ದೇಶನ ಎಂದರೆ ಡೈರೆಕ್ಷನ್, ಸೆನ್ಸ್ ಆಫ್ ಡೈರೆಕ್ಷನ್ ಮತ್ತು ಒಂದು ನಿಯಂತ್ರಣ ಇಲ್ಲದೇ ಇದ್ದರೆ ಆರೋಗ್ಯ ಇಲಾಖೆ ಚೆನ್ನಾಗಿ ನಡೆಯುವುದಕ್ಕಾಗುವುದಿಲ್ಲ. ಏಕೆಂದರೆ ರಾಜ್ಯಮಟ್ಟದಿಂದ ಹಳ್ಳಿಯವರಿಗೆ ತಮ್ಮ ನಿಖರವಾದ ವಿಚಾರ ಮುಟ್ಟಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಆದರೆ ಯಾವ ವ್ಯಕ್ತಿ ಇದನ್ನು ನಿಯಂತ್ರಣ ಮಾಡುತ್ತಾನೋ, ಅವರು ಕಾರ್ಯದರ್ಶಿಯಾಗಿರಬಹುದು ಅಥವಾ ಸಚಿವರಾಗಿರಬಹುದು. ತಾವು ಕೊಡತಕ್ಕ ಸೇವೆ ವಿಷಯದಲ್ಲಿ ಸ್ಪಷ್ಟವಾದ ವಿಚಾರ ಇದ್ದರೆ ಅವರು ಉತ್ತಮವಾದ ಮಾರ್ಗದರ್ಶನ ಮತ್ತು ಸ್ಫೂರ್ತಿಯನ್ನು ತಮ್ಮ ಚಟುವಟಿಕೆಯಲ್ಲಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಆರೋಗ್ಯ ಇಲಾಖೆ ಮುಖಾಂತರ ಮಿನಿಮಮ್ ನೀಡ್ಸ್ ಪ್ರೋಗ್ರಾಮ್ ಪ್ರಕಾರ ರೂರಲ್ ಕಾಂಪೊನೆಂಟ್ ಆಫ್ ದಿ ಮಿನಿಮಮ್ ನೀಡ್ಸ್ ಪ್ರೋಗ್ರಾಮ್. ನಮ್ಮ ದೇಶದಲ್ಲಿ ಬಡತನ ರೇಖೆಗಿಂತ ಕೆಳಗೆ ಇರತಕ್ಕ ಜನಸಂಖ್ಯೆ ಎಷ್ಟು? ದೇಶದಲ್ಲಿ 48 ಪರ್ಸೆಂಟ್ ಅಷ್ಟು ಜನರು ಇವತ್ತು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿ ಇದ್ದಾರೆ. ಬಡತನ ರೇಖೆ ಅಂದರೆ ಅವರ ಆದಾಯ ವರ್ಷಕ್ಕೆ ಭಾರತದೇಶದ ಇನ್‌ಕಂ ಪರ್ ಕ್ಯಾಪಿಟಾ 2 ಸಾವಿರ ಆಗುತ್ತದೆ. 2 ಸಾವಿರ ಅಂದರೆ ತಿಂಗಳಿಗೆ 160 ರೂಪಾಯಿ ಆದಾಯ. 160 ರೂಪಾಯಿ ಆದಾಯದಲ್ಲಿ ಅವನು ಜೀನವ ಹೇಗೆ ನಡೆಸಬೇಕು? ಅದಕ್ಕಾಗಿ ಎಕಾನಮಿಕ್ ನೀಡ್ಸ್ ಪ್ರೋಗ್ರಾಮ್‌ನಲ್ಲಿ ಎಕಾನಮಿಕ್, ಸೋಷಿಯಲ್, ಹೆಲ್ತ್ ನಮ್ಮ ಹೆಲ್ತ್ ಎಕಾನಮಿಕ್ ನೀಡ್ಸ್ ಪ್ರೋಗ್ರಾಮ್ ಅಂದರೆ ಹೆಲ್ತ್ ಸಬ್ ಸೆಂಟರ್ಸ್ ಮುಖಾಂತರ , ಪಬ್ಲಿಕ್ ಹೆಲ್ತ್ ಸೆಂಟರ್ ಮುಖಾಂತರ ನಾವು ಬಡ ಜನರಿಗೆ ಕಮ್ಯುನಿಟಿ ಹೆಲ್ತ್ ಸೆಂಟರ್ ಮುಖಾಂತರ ಈ ಮೂರು ಸಂಸ್ಥೆಗಳ ಮುಖಾಂತರ ನಾವು ಬಡ ಜನರಿಗೆ ಆರೋಗ್ಯವನ್ನು ಮುಟ್ಟಿಸಲು ಅವರ ಸೇವೆಯನ್ನು ಮಾಡಲಿಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದಕ್ಕೆ ಭಾರತ ಸರ್ಕಾರ ಕೂಡ ಯಥೇಚ್ಛವಾಗಿ ತಮಗೆ ಅನುದಾನವನ್ನು ಕೊಡುತ್ತಿದೆ. ಅದರ ಅನುಪಾತ ಅಂದರೆ 5 ಸಾವಿರ ಜನಸಂಖ್ಯೆಗೆ ಒಂದು ಸಬ್ ಸೆಂಟರ್ಸ್‌ನ್ನು ನಾವು ಮಾಡುತ್ತೇವೆ. ಈ ಕಾನ್‌ಸೆಪ್ಟ್‌ನ್ನು ನಾವು ಸರಿಯಾಗಿ ತಿಳಿದುಕೊಂಡಾಗ ಸರಿಯಾಗಿ ಸೇವೆ ಒದಗಿಸುವುದಕ್ಕೆ ಅನುಕೂಲವಾಗುತ್ತದೆ ಮತ್ತು ನಿಯಂತ್ರಣ ಮಾಡುವುದಕ್ಕೆ ಕೂಡ ಎಲ್ಲಿ ಮಿಸ್ಟೇಕ್ ಆಗಿದೆ ಎಂಬುದನ್ನು ಕಂಡು ಹಿಡಿಯಬಹುದು. ವಾಲೆಂಟರಿಯಾಗಿ ಮಾಡಿದರೆ ಅನುಕೂಲವಾಗುತ್ತದೆ. ನಾನು ವೈದ್ಯನಾಗಿರುವುದರಿಂದ ಸದನಕ್ಕೆ ಸ್ಪಷ್ಟವಾದ ವಿಚಾರ ಕೊಡತಕ್ಕದ್ದು ನನ್ನ ಆಧ್ಯ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. 5ಸಾವಿರ ಜನಸಂಖ್ಯೆಗೆ ಒಂದು ಸಬ್ ಸೆಂಟರ್ ಮಾಡಿ ಇಟ್ಟಿದ್ದೀರಿ. ಇಂತಹ ಆರು ಸೆಂಟರ್ ಕೂಡಿ ಒಂದು ಪಬ್ಲಿಕ್ ಹೆಲ್ತ್ ಸೆಂಟರ್ ಮಾಡಿದರೆ ಸುಮಾರು 30 ಸಾವಿರ ಜನಸಂಖ್ಯೆಗೆ ಮತ್ತು ಮಿನಿಮಮ್ ನೀಡ್ಸ್ ಪ್ರೋಗ್ರಾಮ್‌ನಲ್ಲಿ ಕನಿಷ್ಠ ಅವಶ್ಯಕತೆಯನ್ನು ಒದಗಿಸಿ ಕೊಡತಕ್ಕ ಕಾನ್‌ಸೆಪ್ಟ್ ಏನಿದೆ, ಏಕೆಂದರೆ ಬೋರ್ ಕಮಿಟಿ ರಿಪೋರ್ಟ್ ಬಂದಮೇಲೆ 1944ನೇ ಇಸವಿಯಲ್ಲಿ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಬೋರ್ ಕಮಿಟಿ ಒಂದು ರಿಪೋರ್ಟ್ ಸಬ್‌ಮಿಟ್ ಮಾಡಿದೆ. ಆ ಕಮಿಟಿ ರಿಪೋರ್ಟ್ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೆ ಪ್ರತಿಯೊಂದು ಕುಟುಂಬಕ್ಕೆ ಅವರ ಮನೆಯ ಬಾಗಿಲಿಗೆ ಆರೋಗ್ಯ ಸೇವೆಯನ್ನು ಒದಗಿಸಿ ಕೊಡಬೇಕೆನ್ನುವ ಕಾನ್ಸೆಪ್ಟ್ ವಿಚಾರವನ್ನು ಮಂಡನೆ ಮಾಡಿದೆ ಅದನ್ನು ಆಗಿನ ಭಾರತ ಸರ್ಕಾರ ಒಪ್ಪಿಕೊಂಡಿದೆ. ಅದಕ್ಕಿಂತ ಒಂದು ಹೆಜ್ಜೆ ನಾವು ಮುಂದೆ ಹೋಗಿದ್ದೇವೆ. 1978ನೇ ಇಸವಿಯಲ್ಲಿ ಒಂದು ಕಾನ್ಫರೆನ್ಸ್ ಆಯಿತು. ಅದರಲ್ಲಿ ನಾವು ವಾಗ್ದಾನ ಮಾಡಿದ್ದೇವೆ. ಅದಕ್ಕೆ ಬದ್ಧರಾಗಿದ್ದೇವೆ. ಬಹಳ ಆದರ್ಶವಾದ ವಿಚಾರ ಅದರಲ್ಲಿದೆ. ಇಟೋಪಿಯನ್ ಕಾನ್‌ಸೆಪ್ಟ್ ಇದೆ. ಆದರೂ ಕೂಡ ಅದರಲ್ಲಿ ನಾವೇನು ಹೇಳಿದ್ದೇವೆ ? ಆಲ್‌ಮೇಟಾ ಕಾನ್ಫರೆನ್ಸ್‌ದಲ್ಲಿ ನಾವು ಸಿಗ್ನೇಚರ್ ಮಾಡಿದ್ದೇವೆ. 250-500 ಜನರಿಗೆ ಒಬ್ಬರು ಡಾಕ್ಟರ್ ಕೊಡಬೇಕೆಂದು ಅದರಲ್ಲಿದೆ. ಪ್ರವೆಂಟಿವ್ ಆಸ್‌ಪೆಕ್ಟ್ ಬಗ್ಗೆ ಹೆಚ್ಚಾಗಿ ಕ್ಯುರೇಟಿವ್ ಅಲ್ಲ ಟ್ರೆಸ್ ತಿಳಿದುಕೊಂಡು ಪ್ರಿವೆಂಟಿವ್ ಆಸ್ಪೆಕ್ಟ್ ಕೊಡಬೇಕೆಂದು ಅದರಲ್ಲಿದೆ. ನಮ್ಮದು ಏನಿದೆ ಅಕ್ಯುರೇಟಿವ್ ಆಸ್ಪೆಕ್ಟ್ ಬಗ್ಗೆ ದೊಡ್ಡ ದೊಡ್ಡ ಸಂಸ್ಥೆಗಳನ್ನು ಕಟ್ಟುವುದು ಆಸ್ಪತ್ರೆಗಳನ್ನು ಕಟ್ಟುವುದು, ದೊಡ್ಡ

ದೊಡ್ಡ ಕ್ವಾಲಿಫೈಡ್ ಡಾಕ್ಟರುಗಳನ್ನು ಅಪಾಯಿಂಟ್ ಮಾಡುವುದು, ಆಸ್ಪತ್ರೆಗಳಿಗೆ ಸಾಕಷ್ಟು ಔಷಧಿಗಳನ್ನು ಕೊಡುವುದಕ್ಕೆ ಹಣವಿಲ್ಲವೆಂದು ಹೇಳುವುದು. ಮತ್ತು ಆಧುನಿಕ ಉ ಪಕರಣಗಳು ಇಲ್ಲವೆಂದು ತಿಳಿದುಕೊಂಡು ಅದಕ್ಕಾಗಿ ಹಣ ಖರ್ಚು ಮಾಡುವುದು. ಅಂತಹದ್ದಕ್ಕೆ ನಾವು ಹೆಚ್ಚು ಹಣ ಖರ್ಚು ಮಾಡುತ್ತಿದ್ದೇವೆ. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ ಸರ್ಕಾರಕ್ಕೆ, ಪ್ರಿವೆಂಟಿವ್ ಆಸ್‌ಪೆಕ್ಟ್‌ನಲ್ಲಿ ತಮಗೂ ಅನಿಸಿರಬೇಕು ಸರ್ಕಾರದ ವತಿಯಿಂದ ಹಣವನ್ನು ಹೆಚ್ಚು ಖರ್ಚು ಮಾಡಬೇಕು ಎಂದು ಪ್ರವೆಂಟಿವ್ ಮೆಡಿಸನ್‌ಗಾಗಿ ತಾವು 50 ಕೋಟಿ ರೂಪಾಯಿ ಖರ್ಚು ಮಾಡಿದರೆ, ಬಡ ಜನರ ಹಣ 100 ಕೋಟಿ ಉಳಿದಿರುತ್ತದೆ. ಇಡೀ ರಾಜ್ಯದಲ್ಲಿ ತಾವು ಪ್ರಿವೆಂಟೀವ್ ಆಸ್‌ಪೆಕ್ಟ್ ಮೇಲೆ ಖರ್ಚು ಮಾಡುವುದಿಲ್ಲ. ಆದ್ದರಿಂದ ಬಡವರ ಹಣ ಉಳಿಯುವುದಿಲ್ಲ. ಬಡ ಜನರ ಹಣ 100 ಕೋಟಿ ರೂಪಾಯಿ ಉಳಿಯುತ್ತದೆ ಅದು ಹೇಗೆ ? ಅದು ಹೇಗೆಂದು ನಾನು ಸಬ್‌ಸ್ಟ್ಯಾನ್ಷಿಯೋಟ್ ಮಾಡುತ್ತಿದ್ದೇನೆ. ಹಳ್ಳಿಯಲ್ಲಿ ಪ್ರಾಕ್ಟೀಸ್ ಮಾಡುವ ಕಾಲಕ್ಕೆ ನಾಲ್ಕಾರು ತಿಂಗಳು ಬೇಸಿಗೆ ಮತ್ತು ಮಳೆಗಾಲ ನಮ್ಮದು ಬಲ್ಕ್ ಪ್ರಾಕ್ಟೀಸ್ ಏನು ಮಾಡುತ್ತಾ ಇದ್ದೆವು ಗ್ಯಾಸ್ಟ್ರೋ ಎನ್‌ಟ್ರೈಟೀಸ್ ಪೇಸೆಂಟ್ ಇಡುತ್ತಾ ಇದ್ದರು. ಶೇಕಡ 50 ಪರ್ಸೆಂಟ್ ಆಸ್ಪತ್ರೆಗಳಲ್ಲಿ 50% of the practice was from the Gastro Entro-enteritis patients ಸುಮಾರು ಆರೇಳು ವರ್ಷಗಳ ಹಿಂದೆ, ಅದು ಇತ್ತೀಚೆಗೆ ಏನಾಗಿದೆ ಅಂದರೆ ಡಾಕ್ಟರುಗಳು ಪ್ರಾಕ್ಟೀಸ್‌ಗೆ ಬರುವುದಿಲ್ಲ. ತಾಲ್ಲೂಕು ಮಟ್ಟದಲ್ಲಿ ಮತ್ತು ಪಬ್ಲಿಕ್ ಹೆಲ್ತ್ ಸೆಂಟರ್ಸ್ ಮಟ್ಟಗಳಲ್ಲಿ ಈಗ ಅವರ ಪ್ರಾಕ್ಟೀಸ್ 40%ಗೆ ಬಂದಿದೆ. ಅಂದರೆ ಈ ಹಣ ಹೇಗೆ ಹೋಯಿತು ? ಇಷ್ಟು ಜನರು ರೋಗಗ್ರಸ್ಥರಾದ ಮೇಲೆ ಅವರು ಎಲ್ಲಿಗೆ ಬರಬೇಕು ? ನಮ್ಮ ಆಸ್ಪತ್ರೆಗಳಲ್ಲಿ ಮೆಡಿಸನ್ ಇರುವುದಿಲ್ಲ. ಡಿಸ್ಟ್ರಿಕ್ಟ್ ಆಸ್ಪತ್ರೆಗಳಲ್ಲಿ ಇರುವುದಿಲ್ಲ. ಟೀಚಿಂಗ್ ಆಸ್ಪತ್ರೆಗಳಲ್ಲಿ ಮೆಡಿಸನ್ ಇರುವುದಿಲ್ಲ. ರೂರಲ್ ಸೈಡ್‌ನಲ್ಲಿ ಮೆಡಿಸನ್ ಇರುವುದಿಲ್ಲ. ಡಾಕ್ಟರುಗಳು ಪ್ರಿಸ್ಕ್ರಿಪ್‌ಷನ್ ಬರೆದುಕೊಟ್ಟರೆ ಅವರಿಗೆ ಹಣ ಎಷ್ಟುಖರ್ಚಾಗುತ್ತದೆ? ವರ್ಷವಿಡೀ ಜನ ರೋಗಗ್ರಸ್ಥರಾಗುತ್ತಾರೆ. ಏಕೆಂದರೆ ಸುಮಾರು 40 ಪರ್ಸೆಂಟ್ ರೋಗಗಳು ವಾಟರ್‌ನಿಂದ ಬರತಕ್ಕವು ಇರುತ್ತವೆ. ನೀರಿನಿಂದ ಹಬ್ಬತಕ್ಕ ರೋಗಗಳಿವೆ. ಉಳಿದ 40 ಪರ್ಸೆಂಟ್ ರೋಗಗಳು water borne ಆಗುತ್ತವೆ. 40 of Another diseases airborne ಆಗಿರುತ್ತವೆ. Auto matically you have got 40% of the diseases in the rural side. ಮತ್ತೆ ಅವರಿಗೆ ನೀವು ಎಷ್ಟು ಅನುಕೂಲ ಮಾಡಿಕೊಟ್ಟಹಾಗೆ ಆಯಿತು ? ಎಂತಹ ಮಹದುಪಕಾರ ಮಾಡಿದಹಾಗೆ ಆಯಿತು ಸರ್ಕಾರ ? ಈಗ ಪ್ರತಿಯೊಂದು ಹಳ್ಳಿಯಲ್ಲಿ ಮೂರು ನಾಲ್ಕು ಬೋರ್‌ವೆಲ್ಸ್ ಇವೆ. ಜನರು ಅಲ್ಲಿ ಸ್ವಚ್ಛ ನೀರು ಕುಡಿಯುತ್ತಾರೆ. ಅವರಿಗೆ ರೋಗವೇ ಇಲ್ಲ. ಮಳೆಗಾಲದಲ್ಲಿ ಮಾತ್ರ ಎರಡು ಮೂರು ತಿಂಗಳು ಏನಾದರೂ ರೋಗರುಜಿನಗಳು ಬರಬಹುದು, ಇಷ್ಟೇ. ರೈತರು ಹೊಲದಲ್ಲಿ ಕೆಲಸ ಮಾಡುವ ಕಾಲಕ್ಕೆ ನಿಂತ ನೀರನ್ನು ಕುಡಿಯುತ್ತಾರೆ. ಅದಕ್ಕೆ ಎರಡು ತಿಂಗಳು ಮಾತ್ರ , ಜೂನ್ ಜುಲೈನಲ್ಲಿ ಗ್ಯಾಸ್ಟ್ರೋ ಎಂಟ್ರಸೈಟೀಸ್ ಪೇಶಂಟ್ಸ್‌ನ್ನು ಅವಧಿಯಲ್ಲಿ ನೋಡುತ್ತೇವೆ. ಎರಡನೆಯದು ಹೆಚ್ಚಾಗಿ ಗ್ಯಾಸ್ಟ್ರೋ ಎಂಟ್ರಸೈಟೀಸ್ ಹೆಚ್ಚಾಗಿ ಎಲ್ಲಿ ನೋಡುತ್ತೇವೆ ಎಂದರೆ, ಪಟ್ಟಣಗಳಲ್ಲಿ. ಈ ಬಗ್ಗೆ ನಾವು ಅಸೆಂಬ್ಲಿಯಲ್ಲಿ ಒಂದು ಪ್ರಶ್ನೆ ಹಾಕಿದ್ದೆ. ಎರಡನೇ ಸಲ ಅದು ಹೆಲ್ಡ್ ಓವರ್ ಆಗಿತ್ತು. ಮಳೆನೀರು ಹೋಗುವುದಕ್ಕೆ ಟ್ರೆಂಚಸ್ ಹೊಡೆಯುತ್ತಾರೆ. ಈಗ ಹೊಸ ಕಾಲೋನಿಗಳಲ್ಲಿ ಏನು ಮಾಡಿದ್ದಾರೆ ಎಂದರೆ, ಅಂಡರ್‌ಗ್ರೌಂಡ್ ಡ್ರೈನೇಜ್‌ನ್ನು ಕಂಪ್ಲೀಟ್ ಮಾಡಿಲ್ಲ. ಏಕೆಂದರೆ ಈ ಸೊಸೈಟಿಗಳು ಹಣ ಲೂಟಿ ಮಾಡಿರುತ್ತಾರೆ. ಜನರಿಗೆ ಅವರು ಸೌಲಭ್ಯಗಳನ್ನು ಒದಗಿಸಿ ಕೊಡುವುದಿಲ್ಲ. ನಮ್ಮ ಒಳಚರಂಡಿ ಮಂಡಳಿಯವರೂ ಸಹ ಅಂಡರ್‌ಗ್ರೌಂಡ್ ಡ್ರೈನೇಜ್ ಕಂಪ್ಲೀಟ್ ಮಾಡಿರುವುದಿಲ್ಲ. ಇವರು ಏನು ಮಾಡುತ್ತಾರೆ ಎಂದರೆ, ಮನೆಯಿಂದ ತೆಗೆದುಕೊಂಡ ಡ್ರೈನೇಜ್‌ಗೆ, ಈ ಟ್ರೆಂಚಸ್‌ನ್ನು ಹೊಡೆದಿರುತ್ತೀರಲ್ಲ ಅದರಲ್ಲಿ ಒಳಚರಂಡಿ ನೀರು ಮತ್ತು ಈ ನೀರನ್ನು ಬಿಟ್ಟುಬಿಡುತ್ತಾರೆ. 12 ತಿಂಗಳೂ ನೀವು ಆ ಏರಿಯಾ ಹೊಲಸು ಮಾಡುವುದು ಅಲ್ಲದೆ ಮತ್ತೊಂದು ನೀವು ಏನು ಮಾಡುತ್ತೀರಿ ಎಂದರೆ ಮಳೆಗಾಲದಲ್ಲಿ ಈ ನೀರು ಇಲ್ಲಿಂದಲೇ

ತಿಪ್ಪಗೊಂಡನಹಳ್ಳಿಗೆ ಹೋಗಬೇಕು. ಮತ್ತೆ ನೀರು ಬರುವುದಿಲ್ಲ. ಇದು ವರ್ಷವಿಡೀ ಜನರನ್ನು ರೋಗಗಳಿಂದ ನರಳುವಂತೆ ಮಾಡುತ್ತದೆ. ಇದಕ್ಕಾಗಿ ಪಟ್ಟಣಗಳಲ್ಲಿ ಗ್ಯಾಸ್ಟ್ರೋ ಎಂಟಸ್ಟೈಟೀಸ್ ಹೆಚ್ಚಾಗಿ ಇರುತ್ತದೆಯೇ ಹೊರತು ಹಳ್ಳಿಗಳಲ್ಲಿ ಇಲ್ಲ. ಹಳ್ಳಿಗಳಲ್ಲಿ ಕೇವರ ಎರಡು ತಿಂಗಳು ಇರುತ್ತದೆ. For economic and social developement point of view this preventive medicine is very, very important. That is how in western countries they spend 60% of the budget for preventive medicine. ಈಗ ಪ್ರಿವೆಂಟಿವ್ ಮೆಡಿಸಿನ್‌ನಲ್ಲಿ ನಾವು ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ, ನಾನು ತಮ್ಮ ಮೂಲಕ ಮಾನ್ಯ ಆರೋಗ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. You must strengthen sub-centres, primary health centres. ಅಂದರೆ ಮಾತ್ರ 80 ಪರ್ಸೆಂಟ್ ಪಾಪ್ಯುಲೇಶನ್‌ನನ್ನು ಈ ದಿಸೆಯಲ್ಲಿ ಮುಟ್ಟಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಸಹ ಆಗುವುದಿಲ್ಲ. ನಾನು ಇಲ್ಲಿ ಅಂಕಿಅಂಶಗಳನ್ನು ತಂದಿದ್ದೇನೆ. ಇನ್ನು ಆಸ್ಪತ್ರೆಗಳಲ್ಲಿ ಔಟ್‌ಪೇಶಂಟ್ಸ್, ಇನ್‌ಪೇಶಂಟ್ಸ್ ಇರುತ್ತಾರೆ. ನಮ್ಮದು ಏನಾಗಿದೆ ಎಂದರೆ, ಎಲ್ಲಾ ಲ್ಯಾಪ್ಸ್ ಆಗಿದೆ. ಪ್ರೈಮರಿ ಎಜುಕೇಶನ್ ಮಂತ್ರಿಗಳು ಇಲ್ಲಿ ಇಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ 80 ಪರ್ಸೆಂಟ್ ಖರ್ಚು ಮಾಡುತ್ತಾರೆ. 20 ಪರ್ಸೆಂಟ್‌ನಷ್ಟು ಹೈಯರ್ ಎಜಕೇಷನ್‌ಗೆ ಖರ್ಚು ಮಾಡುತ್ತಾರೆ. ಅಮೇರಿಕಾದಲ್ಲಿ ಗವರ್ನಮೆಂಟ್ ಕಾಲೇಜುಗಳೇ ಇಲ್ಲ. It is not the responsibility of the State to provide higher education. The responsibility of the Government is to provide basic education. It is not the responsibility of the Government to provide every form of curative treatment. As far as preventive medicine is concerned, whether it is urban or rural, it is your primary responsibility. That is why you must give equal importance and you must apportion the amount so as to be equal to the curative as well as preventive system of medicine. ಈಗ ಆಸ್ಪತ್ರೆಗಳ ಬೆಡ್ ವಿಷಯ ತೆಗೆದುಕೊಂಡರೆ ರೂರಲ್‌ನಲ್ಲಿ 5 ಸಾವಿರ ಜನರಿಗೆ ಒಂದು ಬೆಡ್ ಪ್ರೊವಾಯ್ಡ್ ಮಾಡಿದ್ದೀರಿ. ಅರ್ಬನ್‌ನಲ್ಲಿ 551 ಜನ ರೋಗಿಗಳು ಇದ್ದರೆ ಅಥವಾ ಜನಸಂಖ್ಯೆ ಇದ್ದರೆ ಒಂದು ಬೆಡ್ ಪ್ರೊವಾಯ್ಡ್ ಮಾಡಿದ್ದೀರಿ. ಎಷ್ಟು ವ್ಯಾತ್ಯಾಸ ಆಯಿತು ನೋಡಿ. 80% of the population gets hardly 20 beds. 80% of the beds are cornered by the urban people. ಇನ್ನು 22,708 ಜನಸಂಖ್ಯೆಗೆ ಒಂದು ಆರೋಗ್ಯ ಸಂಸ್ಥೆ ಇದೆ. ಅರ್ಬನ್‌ಗೆ 1,490 ಜನಸಂಖ್ಯೆಗೆ ಒಂದು ಬೆಡ್ ಇದೆ. ಸಂಸ್ಥೆಗಳ ಲೆಕ್ಕಾಚಾರದಿಂದ ಅಥವಾ ಬೆಡ್‌ಗಳ ಲೆಕ್ಕಾಚಾರದಿಂದ ಹೇಳುವುದಾದರೆ ಇದು ಎಲ್ಲಾ ಲ್ಯಾಪ್ಸ್ ಆಗಿದೆ. ಹಳ್ಳಿಗಳಿಗೆ ವಿಶೇಷವಾದ ಗಮನ ಕೊಡುತ್ತಿಲ್ಲ. ಹಳ್ಳಿಗಳಲ್ಲಿ ನಾವು ಗಮನ ಕೊಡತಕ್ಕದ್ದು ಪ್ರಿವೆಂಟಿವ್ ಮೆಡಿಸಿನ್‌ಗೆ. ಅದಕ್ಕಾಗಿ ಹಳ್ಳಿಗಳಲ್ಲಿ ಅಷ್ಟು ರೋಗಗಳು ಇರುವುದಿಲ್ಲ. ಅದಕ್ಕಾಗಿ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗ ಪ್ರತಿಯೊಂದು ಸಬ್‌ಸೆಂಟರ್‌ನಲ್ಲಿ ಒಬ್ಬ ಜೂನಿಯರ್ ಮೇಲ್ ಅಸಿಸ್ಟೆಂಟ್ ಮತ್ತು ಒಬ್ಬ ಜೂನಿಯರ್ ಫಿಮೆಲ್ ಹೆಲ್ತ್ ಅಸಿಸ್ಟೆಂಟ್ ಇರುತ್ತಾರೆ.

ಚೇರ್ಮನ್:- ಮೆಡಿಸಿನ್ ಸಪ್ಲೈ ಸಹ ರೂರಲ್‌ಗೆ ಕಡಿಮೆ ಇದೆ.

ಡಾ. ಎ. ಬಿ. ಮಲಕರೆಡ್ಡಿ :- ಮೆಡಿಸಿನ್ಸ್ ಕೂಡ ಮಾನ್ಯ ಸಭಾಧ್ಯಕ್ಷಿಣಿಯವರು ಹೇಳಿದಂತೆ ಇದೆ, ಅವರೂ ಕೂಡ ಒಳ್ಳೆಯ ರೆಸ್ಪಾನ್ಸಿಬಿಲಿಟಿ ಉಳ್ಳವರಾಗಿದ್ದಾರೆ. ನೀವು ಒಂದು ಪಿ.ಹೆಚ್.ಸಿ.ಗೆ. 30 ಸಾವಿರ ರೂಪಾಯಿಗಳ ಮೆಡಿಸಿನ್ಸ್ ಕೊಡುತ್ತೀರಿ. 30 ಸಾವಿರ ಜನಸಂಖ್ಯೆಗೆ ಒಂದು ಪಿ.ಹೆಚ್.ಸಿ. ಕೊಡುತ್ತೀರಿ. ಅಂದರೆ ಒಬ್ಬ ಮನುಷ್ಯನಿಗೆ ಒಂದು ರೂಪಾಯಿಯನ್ನು ಔಷಧಿಗಾಗಿ ಖರ್ಚು ಮಾಡುತ್ತೀರಿ. ಒಬ್ಬ ಮನುಷ್ಯನಿಗೆ ಒಂದು ರೂಪಾಯಿಯನ್ನು ಔಷಧಿಗಾಗಿ ಖರ್ಚು ಮಾಡುತ್ತೀರಿ. ಒಬ್ಬ ಮನುಷ್ಯನಿಗೆ ಒಂದು ರೂಪಾಯಿ ಎಂದರೆ ಏನು ಬರಬೇಕು ? ಒಂದು ಆಸ್ಪಿರಿನ್ ಗುಳಿಗೆ ಕೊಂಡುಕೊಳ್ಳಬೇಕಾದರೆ 70 ಪೈಸೆ ಬೇಕು.. ಒಬ್ಬ ಮನುಷ್ಯನಿಗೆ ಒಂದು ವರ್ಷಕ್ಕೆ ಒಂದು ರೂಪಾಯಿ ಎಂದರೆ ಬಹಳ ಕಡಿಮೆ. ಈ ರೇಷಿಯೋ ಯಾವ ಕಾಲಕ್ಕೆ ಫಿಕ್ಸ್ ಮಾಡಿದ್ದರೋ ಗೊತ್ತಿಲ್ಲ. ಅದನ್ನು ರಿವೈಸ್ ಮಾಡಬೇಕು. ಒಂದು ರೂಪಾಯಿ ಬೆಲೆ ಕೂಡಾ ಕಡಿಮೆಯಾಗಿದೆ. ಒಂದು ರೂಪಾಯಿಗೆ 17 ಪೈಸೆ ಎಂದು ಕಳೆದ 10 ವರ್ಷಗಳಿಂದ ಹೇಳುತ್ತಿದ್ದಾರೆ. ಈಗ ಇದು ಇನ್ನೂ ಕಡಿಮೆಯಾಗಿರಬಹುದು, 10 ಪೈಸೆ ಆಗಿರಬಹುದು. ಔಷಧದ ದೃಷ್ಟಿಯಿಂದ ಒಬ್ಬ ವ್ಯಕ್ತಿಗೆ ಹತ್ತು ಪೈಸೆ ಖರ್ಚು ಮಾಡುತ್ತೀರಿ ಅದಕ್ಕಾಗಿ ಇದನ್ನು ಕೂಡ ತಾವು ರಿವೈಸ್ ಮಾಡಬೇಕು. ಇನ್ನು ಪ್ರೈಮರಿ ಸಬ್‌ಸೆಂಟರ್‌ನಲ್ಲಿ ವಿಲೇಜ್ ಲೆವೆಲ್‌ನಲ್ಲಿ ಕೆಲಸ ಮಾಡತಕ್ಕ ಜೂನಿಯರ್ ಹೆಲ್ತ್ ಅಸಿಸ್ಟೆಂಟ್ ಮೇಲ್ ಮತ್ತು ಫೀಮೇಲ್ ಇವರ ಬಗ್ಗೆ ಹೇಳುವುದಾದರೆ, ಮೇಲ್ ಜೂನಿಯರ್ ಹೆಲ್ತ್ ಅಸಿಸ್ಟೆಂಟ್ ಕೆಲಸ ಏನು ಎಂದರೆ, ಮಲೇರಿಯಾ ಬಗ್ಗೆ, ಫೈಲೇರಿಯಾ ಬಗ್ಗೆ, ಲೆಪ್ರಸಿ ಬಗ್ಗೆ , ಟ್ಯೂಬರ್‌ಕ್ಯೂಲಾಸಿಸ್ ಬಗ್ಗೆ, ಗಿನಿ ವರ್ಮ್ ಬಗ್ಗೆ, ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕ್ರಿಮಿಗಳಿಂದಲೇ ಬಹಳಷ್ಟು ರೋಗಗಳು ಹಬ್ಬುತ್ತವೆ, ಅವುಗಳನ್ನು, ಅಥವಾ ಬೇರೆ ಇನ್ನಿತರ ಕಾರಣಗಳಿಂದ ರೋಗಗಳು ಏನು ಹಬ್ಬುತ್ತವೆ ಅದನ್ನು ಕಂಡುಹಿಡಿದು ತಕ್ಷಣ ಆರೋಗ್ಯಾಧಿಕಾರಿಯವರಿಗೆ ಆತ ರಿಪೋರ್ಟ್ ಮಾಡಬೇಕು. ಫಿಮೇಲ್ ಹೆಲ್ತ್ ಅಸಿಸ್ಟೆಂಟ್ ಕೆಲಸ ಏನು ಎಂದರೆ , ತಾಯಿ ಮತ್ತು ಮಕ್ಕಳ ಆರೋಗ್ಯ ರಕ್ಷಣೆ, ಗರ್ಭಿಣಿ ಮತ್ತು ಚಿಕ್ಕ ಕೂಸುಗಳ ಕಡೆಗೆ ಲಕ್ಷ್ಯಕೊಡುವುದು. ಪ್ರಮುಖವಾಗಿ ಇಮ್ಯೂನೈಜೇಷನ್ ಪ್ರೋಗ್ರಾಂ ಅವಳ ಕೆಲಸ, ಹಾಗೂ ಪೋಸ್ಟ್ ಮೆಟರನಲ್ ಚೆಕ್‌ಅಪ್. ಇಂತಹ ಕೆಲಸಗಳನ್ನು ಗ್ರಾಮ ಗ್ರಾಮಗಳಿಗೆ ತಿರುಗಿ, ಜನಗಳಿಗೆ ಅನುಕೂಲತೆಗಳನ್ನು ಒದಗಿಸಿಕೊಡುವುದು, ಶಿಕ್ಷಣ ಒದಗಿಸಿಕೊಡುವುದು, ತರಬೇತಿ ಕೊಡುವುದು, ಮಾಹಿತಿ ಕೊಡುವುದು ಇದು ಅವರ ಕೆಲಸ. ಆದರೆ ಇಲ್ಲಿ ಏನಾಗಿದೆ ಎಂದರೆ ನಿನ್ನೆ ಇದರ ಬಗ್ಗೆ ಒಂದು ಇನ್‌ಫರ್ಮೇಷನ್ ತೆಗೆದುಕೊಳ್ಳುವುದಕ್ಕೆ ನನಗೆ ಸಾಧ್ಯವಾಯಿತು. 414 ಸ್ಟಾಫ್ ನರ್ಸ್‌ಸ್ ಕೊರತೆ ನಮ್ಮಲ್ಲಿ ಇದೆ. ಸ್ಯಾಕ್ಷನ್ಡ್ ಸ್ಟ್ರೆಂಥ್ 4007 ಇದೆ, ಇದೇ ಕಡಿಮೆ, ಆದರೆ ಸ್ಟಾಂಡರ್ಡ್ ಪ್ರಕಾರ ಪ್ರತಿ ಹತ್ತು ಜನರಿಗೆ ಒಬ್ಬರು ನರ್ಸ್ ಇರಬೇಕು, ಈ ಲೆಕ್ಕದ ಪ್ರಕಾರ ಈ 4007 ಸ್ಯಾಂಕ್ಷನ್ಡ್ ಸ್ಟ್ರೆಂಥ್ ಏನಿದೆ ಇದು ಬಹಳ ಕಡಿಮೆ ಇದೆ. 20 ಪೇಷಂಟ್‌ಗೆ ಒಂದು ನರ್ಸ್ ಆಗುತ್ತಿಲ್ಲ, ಆದರೆ 10 ಪೇಷಂಟ್‌ಗೆ ಒಬ್ಬ ನರ್ಸ್ ಬೇಕು. ಇಂತಹ ಕೊರತೆ ಪ್ರಮಾಣದಲ್ಲೂ ಕೂಡಾ ನೀವು 414 ನರ್ಸಸ್ ಅಪಾಯಿಂಟ್‌ಮೆಂಟ್ ಮಾಡಬೇಕಾಗಿದೆ. ತಾವು ಏನು ಮಾಡುತ್ತಿದ್ದೀರಿ ? ಟ್ಯೂಬೆಕ್ಟಮಿ, ಲೆಪ್ರೋಸ್ಕೋಪಿ, ನ್ಯಾಷನಲ್ ಫ್ಯಾಮಿಲಿ ಪ್ಲಾನಿಂಗ್ ಪ್ರೋಗ್ರಾಂ ಇವುಗಳಲ್ಲಿ ನರ್ಸ್‌ಸ್ ಇಲ್ಲದೇ ಕೆಲಸ ಹೇಗೆ ನಡೆಯಬೇಕು. ಪ್ರೈಮರಿ ಹೆಲ್ತ್ ಸೆಂಟರ್ಸ್‌ನಲ್ಲಿ ಆಪರೇಷನ್ ಮಾಡಿ ಎಂದು ಹೇಳುತ್ತಿದ್ದೀರಿ. ಅಲ್ಲಿ ಅನ್‌ಎಜುಕೇಟೆಡ್, ನಾನ್ ಟೆಕ್ನಿಕಲ್ ಮನುಷ್ಯ ಅಸಿಸ್ಟ್ ಮಾಡುತ್ತಿರುತ್ತಾನೆ. ಪೋಸ್ಟ್ ಆಪರೇಟೀವ್ ಕೇರ್ ಅನವು ಯಾವರೀತಿ ಕೊಡಬಲ್ಲ? ನಿಮಗೆ ತೊಂದರೆ ಏನೋ ಗೊತ್ತಿಲ್ಲ, ತಾವು ತಕ್ಷಣ ನರ್ಸ್‌ಸ್ ಹುದ್ದೆಗಳನ್ನು ಭರ್ತಿ ಮಾಡಬೇಕು. ಎರಡನೆಯದು ಮೇಲ್ ಅಂಡ್ ಫೀಮೇಲ್ ಜೂನಿಯರ್ ಹೆಲ್ತ್ ಅಸಿಸ್ಟೆಂಟ್ ಪೋಸ್ಟ್ಸ್ ಎರಡೂ ಕೂಡಿ ಸುಮಾರು 1300 ಪೋಸ್ಟ್ಸ್ ವೇಕೆಂಟ್ ಇದೆ. ಅಂದರೆ ಹಳ್ಳಿಯಲ್ಲಿ ನೀವು ಪ್ರಾಕ್ಟಿಕಲ್ ಆಗಿ ಸಬ್‌ಸೆಂಟರ್ಸ್ ಮಾಡುತ್ತಿದ್ದೀರಿ. ಪ್ರೈಮರಿ ಹೆಲ್ತ್ ಸೆಂಟರ್ಸ್ ಮಾಡಿದ್ದೀರಿ. ಕೇವಲ ಪ್ರತಿಷ್ಠೆಗಾಗಿ ಸಂಸ್ಥೆ ಸ್ಥಾಪನೆ ಮಾಡಿದಹಾಗೆ

ಆಗಿದೆಯೋ ಹೊರತಾರಿ ಎಫೆಕ್ಟೀವ್ ಆಗಿ, ಮಿನಿಮಮ್ ನೀಡ್ಸ್ ಪ್ರೋಗ್ರಾಂ ಪ್ರಕಾರ 2000ನೇ ಇಸವಿಯ ಒಳಗೆ, ಅಂದರೆ ಇನ್ನು ಎಂಟು ವರ್ಷದಲ್ಲಿ ಈ ದೇಶದಲ್ಲಿ ಎಲ್ಲಾ ಅನುಕೂಲತೆಗಳನ್ನು ಮಾಡಿಕೊಡಬೇಕು. ಆದರೆ, ನೀವು ಸ್ಟಾಫ್ ಪ್ರೊವಾಯ್ಡ್ ಮಾಡಿಕೊಲಲಿಲ್ಲ. ಅಂದಮೇಲೆ 80 ಪರ್ಸೆಂಟ್ ಪಾಪ್ಯುಲೇಷನ್‌ಗೆ ಆರೋಗ್ಯ ಇಲಾಖೆ ಯಾವರೀತಿ ಮುಟ್ಟಿದಹಾಗೆ ಆಗುತ್ತದೆ. ಹೆಲ್ತ್ ಸೆಂಟರ್ ಮತ್ತು ಸಬ್‌ಸೆಂಟರ್‌ಗಳಲ್ಲಿ ಸರಿಯಾದ ಪ್ರಮಾಣದಲ್ಲಿ ಸ್ಟಾಫ್ ಇಲ್ಲ. ಅದರಲ್ಲೂ ನಮ್ಮ ಗುಲಬರ್ಗಾ ಡಿವಿಜನ್‌ನಲ್ಲಿ ಸ್ಟಾಫ್ ಇಲ್ಲ. ನನ್ನ ಕ್ಷೇತ್ರದಲ್ಲಿ 6 ಪ್ರೈಮರಿ ಹೆಲ್ತ್ ಸೆಂಟರ್ ಇವೆ. ಅದರಲ್ಲಿ 50 ಪರ್ಸೆಂಟ್ ಸಿಬ್ಬಂದಿ ಕೊರತೆ ಇದೆ. ಲೇಡಿ ಡಾಕ್ಟರ್ಸ್ ಇಲ್ಲವೇ ಇಲ್ಲ. ಹೆಲ್ತ್ ಅಸಿಸ್ಟೆಂಟ್ಸ್ ಇಲ್ಲವೇ ಇಲ್ಲ. ಈಗಂತೂ ಮಲ್ಟಿಪರ್‌ಪಸ್ ಸ್ಕೀಮ್ ಅಳವಡಿಸಿದ್ದಾರೆ. ಟಿ.ಬಿ.ಗೇ ಬೇರೆ, ಲೆಪ್ರೊಸಿಗೇ ಬೇರೆ, ಫೈಲೇರಿಯಾಕ್ಕೇ ಬೇರೆ ಇರುತ್ತಿತ್ತು. ಈಗ ಹೆಲ್ತ್ ಅಸಿಸ್ಟೆಂಟ್ಸ್ ಎಲ್ಲಾ ಕೆಲಸಗಳನ್ನೂ ಮಾಡಬೇಕು. ಪ್ರವೆಂಟಬಲ್, ಕಮ್ಯುನಿಕಬಲ್ ಡಿಸೀಸಸ್ ಬಗ್ಗೆ ಮಾಹಿತಿ ಕೊಡುವುದು, ರಿಪೋರ್ಟ್ ಮಾಡುವುದು, ಹ್ಯೆಯರ್ ಸೆಂಟರ್ಸ್ ಮಾಡುವುದು ಇವರೇ, ಮಾಡಬೇಕು. ಸ್ಟಾಫ್ ಇಲ್ಲದೆ ಮಿನಿಮಮ್ ನೀಡ್ಸ್ ಪ್ರೋಗ್ರಾಂ ನಮ್ಮಲ್ಲಿ ಫೇಲ್ ಆಗಿದೆ ಎಂದು ಇದರಲ್ಲಿ ಅರ್ಥವಾಗುತ್ತದೆ.

ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಪ್ರೈಮರಿ ಹೆಲ್ತ್ ಸಬ್ ಸೆಂಟರ್ಸ್ ಏನಿದ್ದಾವೆ ಅದರ ಕಡೆ ತಾವು ಲಕ್ಷ್ಯ ಕೊಡಬೇಕು. ನಮ್ಮ ಕರ್ನಾಟಕ ರಾಜ್ಯದಲ್ಲಿ 7793 ಪ್ರೈಮರಿ ಸಬ್ ಸೆಂಟರ್ಸ್ ಇವೆ. ವೈದ್ಯರುಗಳು ಹಳ್ಳಿಗೆ ಬರಬೇಕಾಗುತ್ತದೆ. ಅವರು ಆ ಜನರ ಸಮೀಪ ಇರಬೇಕಾಗುತ್ತದೆ. ಜನರ ಸಮೀಪ ಇರಬೇಕಾದರೆ ಅವರಿಗೆ ಕ್ವಾರ್ಟರ್ಸ್ ಬೇಕು. ಕ್ವಾರ್ಟರ್ಸ್ ಎಷ್ಟು ಇವೆ. 2500 ಸಬ್ ಸೆಂಟರ್ಸ್‌ಗಳಲ್ಲಿ ಮಾತ್ರ ಕ್ವಾರ್ಟರ್ಸ್‌ಗಳು ಇವೆ. ಇನ್ನೂ 5 ಸಾವಿರ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಬೇಕು. ಇವೊತ್ತು ಆಶ್ರಯ ಯೋಜನೆಯಲ್ಲಿ ಸಾವಿರಾರು ಮನೆ ಕಟ್ಟಿಸಿಕೊಡುತ್ತಿದ್ದೀರಿ. ಪ್ರತಿಯೊಂದು ಹಳ್ಳಿಗೂ ಅನೇಕ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೀರಿ. ಆಶ್ರಯಾ ಯೋಜನೆಯಲ್ಲಿ ತಾವು ಮಾನ್ಯ ಮುಖ್ಯಮಂತ್ರಿಗಳ ಮನ ಒಲಿಸಿ ತಮ್ಮ ಸಚಿವ ಸಂಪುಟದ ಸದಸ್ಯರ ಮನ ಒಲಿಸಿ ಈ ಬಿಲ್ಡಿಂಗ್‌ಗಳನ್ನು ಕಟ್ಟಿಸಿಕೊಡಲು ತಮಗೆ ಅನಾನುಕೂಲತೆ ಏನಿದೆ ? ಒಂದು ತಾಲ್ಲೂಕಿನಲ್ಲಿ 30-40 ಸಬ್‌ಸೆಂಟರ್ ಬರುತ್ತದೆಂದು ಕಾಣುತ್ತದೆ. ಅದು ಪ್ರೈಮರಿ ಹೆಲ್ತ್ ಸೆಂಟರ್ ಇರಲಿ ಯಾವುದೇ ಇರಲಿ, ಒಂದು ತಾಲ್ಲೂಕಿನಲ್ಲಿ 30-40 ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡುವುದಕ್ಕೆ ತೊಂದರೆ ಏನು ? ಇದು ಸ್ಪಷ್ಟವಾದ ವಿಚಾರ. ಇದರಿಂದ ತಮಗೂ ಕೂಡ ಅನುಕೂಲವಾಗುತ್ತದೆ. ತಾವು ನಮ್ಮ ಸಚಿವ ಸಂಪುಟದ ಸದಸ್ಯರಿಗೆ ತಿಳಿಸಿ ಹೇಳಿ ಮಾನ್ಯ ಮುಖ್ಯಮಂತ್ರಿಗಳ ಮನ ಒಲಿಸಿದರೆ ಅನುಕೂಲವಾಗುತ್ತದೆ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಗುಲ್ಬರ್ಗದಲ್ಲಿ ಸಾಕಷ್ಟು ಕ್ವಾರ್ಟರ್ಸ್ ಇದೆ. ಅದಕ್ಕೆ ಕಾರಣ ಇಷ್ಟೇ. ವರಲ್ಡ್ ಬ್ಯಾಂಕ್ ಏಡ್‌ನಿಂದ ಬಂದ ಪ್ರೋಗ್ರಾಂ ಅದು. ವರಲ್ಡ್ ಬ್ಯಾಂಕ್‌ನವರು ಬ್ಯಾಕ್‌ವರ್ಡ್ ಏರಿಯಾ ಎಂದು ಐಡೆಂಟಿಫೈ ಮಾಡಿ ಸುಮಾರು 60 ಕೋಟಿ ರೂಪಾಯಿ ಕೊಟ್ಟರು. ಆಗ ಅವುಗಳನ್ನು ಕಟ್ಟಿಸಿಕೊಟ್ಟರು. ಗುಲ್ಬರ್ಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಉಳಿದ ಜಿಲ್ಲೆಗಳಲ್ಲಿ ಇಲ್ಲ. ಅದಕ್ಕೆ ಆ ಜನಗಳಿಗೆ ಯಾವ ರೀತಿಯ ಸವಲತ್ತು ಗಳನ್ನು ಒದಗಿಸಬೇಕಾಗಿದೆ ಈ ಪ್ರೋಗ್ರಾಂನಲ್ಲಿ ಅದು ಆಗಿಲ್ಲ ಇಮ್ಯೂನೈಜೇಷನ್ ಪ್ರೋಗ್ರಾಂ ಸರಿಯಾಗಿ ಆಗುತ್ತಿಲ್ಲ. ಆಮೇಲೆ ಗ್ಯಾಸ್ಟ್ರೋ ಎಂಟಿಟೀಸ್ ಕೇಸಸ್ ಮಲೇರಿಯಾ ಈಗ ಮಲೇರಿಯಾ ಹಬ್ಬುತ್ತಿದೆ. ಮಲೇರಿಯಾ ಕೂಡ ಎಲ್ಲಾ ಕಡೆ ಬೆಳೆಯುತ್ತಿದೆ. ಅದೇ ರೀತಿ ಟಿ.ಬಿ. ಅಂತೂ ಆ ಜನರ ಸತ್ವವನ್ನು ಹೀರುತ್ತದೆ. ಒಂದು ಸಲ ಮಲೇರಿಯಾ ಆಗಲಿ ಅಥವಾ ಟಿ.ಬಿ. ಆಗಲಿ ಬಂದರೆ ಆ ಜನರ ಸತ್ವವನ್ನು ಹೀರಿಬಿಡುತ್ತದೆ. ಅದಕ್ಕೆ ಒಂದು ಸಲ ಟಿ.ಬಿ. ಬಂದಮೇಲೆ ಒಂದು ವಾರ ಎರಡು ವಾರ ಒಂದು ತಿಂಗಳು ಎರಡು ತಿಂಗಳು ಔಷಧಿ ತೆಗೆದುಕೊಂಡರೆ ಮಾಡತಕ್ಕಂಥ ರೋಗ ಅಲ್ಲ. ಅದಕ್ಕೆ ದೀರ್ಘಕಾಲ ಚಿಕಿತ್ಸೆ ಮಾಡಿಸಬೇಕಾಗುತ್ತದೆ. ಸರ್ಕಾರದಲ್ಲಿ ಸಾಕಷ್ಟು ಔಷಧಿಗಳು ಸಿಗುವುದಿಲ್ಲ. ಮತ್ತು ಕೊಂಡುಕೊಳ್ಳಬೇಕಾದರೆ ಆ ಬಡ ಪ್ರಾಣಿಯಲ್ಲಿ ಹಣ ಇರುವುದಿಲ್ಲ. ಹೀಗಾಗಿ ನಮ್ಮ ಪಾಪ್ಯುಲೇಶನ್ ಏನಾಗುತ್ತದೆ ಅಂದರೆ ನನಗೆ ತಿಳಿದ ಮಟ್ಟಿಗೆ ನಾನು ಒಬ್ಬ ವೈದ್ಯನಾಗಿ ಕೆಲಸ

ಮಾಡಿದ್ದೇನೆ ಅವರು 5 ಪರ್ಸೆಂಟ್ of the total population is suffering from TB whatever may be your statistics here. ಮುಂದೆ ಇದರಿಂದ ತೊಂದರೆಯಾಗುತ್ತದೆ. ಅದಕ್ಕೆ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿ ಸಬ್ ಸೆಂಟರ್ಸ್‌ನ್ನು ತಾವು ಸ್ಟ್ರೆಂತನ್ ಮಾಡದಿದ್ದರೆ ನಾವು ರೋಗಗಳನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಮ್ಮ ಪ್ರಿವೆಂಟೀವ್ ಆಸ್‌ಪೆಕ್ಟ್ ಆಗಿ ಈ ದುರ್ಭಾಗ್ಯ ಜನರ ಸಲುವಾಗಿ ಏನು ಮಾಡಬೇಕೆಂದರೆ 30 ಸಾವಿರ ಜನಗಳಿಗೆ ಒಂದು ಪ್ರೈಮರಿ ಹೆಲ್ತ್ ಸೆಂಟರ್ ಒದಗಿಸುತ್ತಿದ್ದೀರಿ. ಅಲ್ಲಿ ಒಬ್ಬ ಡಾಕ್ಟರ್ ಇರುತ್ತಾರೆ ಇಲ್ಲ ಇಬ್ಬರು ಡಾಕ್ಟರ್ಸ್ ಇರುತ್ತಾರೆ. ನಮ್ಮ ದಾಮಾಷಾ ಪ್ರಕಾರ 500 ದನ ಸಂಖ್ಯೆಗೆ ಒಬ್ಬ ಡಾಕ್ಟರ್ ಕೊಡಬೇಕೆಂದು ಇದೆ. ಆದರೆ ನಮ್ಮ 8ನೇ ಪಂಚವಾರ್ಷಿಕ ಯೋಜನೆಯನೆಯಲ್ಲಿ ಈ ರೇಶಿಯೋ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡ ಕನಿಷ್ಠಪಕ್ಷ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಏನು ಸೌಲತ್ತುಗಳನ್ನು ಒದಗಿಸಿಕೊಡಬೇಕೋ ಅವುಗಳನ್ನು ಸಂಪೂರ್ಣವಾಗಿ ನಾವು ಒದಗಿಸಿಕೊಡಬೇಕು. ಈಗ ಡಾಕ್ಟರ್ಸ್‌ನ್ನು ರೀಸೆಂಟ್ ಆಗಿ ನೇಮಕಾತಿ ಮಾಡಿದ್ದೀರಿ. ಇನ್ನು ಸುಮಾರು200-300 ಜನ ನೇಮಕಾತಿ ಮಾಡಬೇಕಾಗಿದೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠಕ್ಕೆ ಬಂದರು)

ಅದರಲ್ಲಿ ಲೇಡಿ ಮೆಡಿಕಲ್ ಆಫೀಸರ್ಸ್ ಕೊರತೆ ಇದೆ. ಈಗ ತಾವು ತಕ್ಷಣ ಸಿ ಅಂಡ್ ಆರ್ ರೂಲ್ಸ್ ಬೇರೆ ಬೇರೆ ಪ್ರೊಸೀಜರ್ ಅದು ಏನೇ ಇರಲಿ ಅವುಗಳನ್ನು ಸಿಂಪ್ಲಿಫೈ ಮಾಡಿ ಪ್ಯಾರಾ ಮೆಡಿಕಲ್ ಸ್ಟಾಫ್ ಮತ್ತು ಮೆಡಿಕಲ್ ಸ್ಟಾಫ್ ತಕ್ಷಣ ಅಪಾಯಿಂಟ್ ಮಾಡಿ. ಈಗ ಎಕಾನಮಿ ಡ್ರೈವ್‌ನಲ್ಲಿ ತಾವು ಅನೇಕ ನೇಮಕಾತಿಗಳನ್ನು ತಡೆ ಹಿಡಿದಿದ್ದೀರಿ. ಈ ಎಕಾನಮಿ ಡ್ರೈವ್ ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಅನ್ವಯವಾಗುವುದಿಲ್ಲ. ದಯಮಾಡಿ ನಮ್ಮಲ್ಲಿ ಟೋಟಲ್ 6 ಸಾವಿರ ವೆಕೆನ್ಸಿಗಳು ಏನಿದೆ ಬೋತ್ ಟೆಕ್ನಿಕಲ್, ನಾನ್‌ಟೆಕ್ನಿಕಲ್ ಕೊರತೆ ಇಟ್ಟುಕೊಂಡು ನೀವು ಉತ್ತಮ ಸೇವೆ ಕೊಡಲಿಕ್ಕೆ ಹೇಗೆ ಸಾಧ್ಯ. ಸ್ಯಾಂಕ್ಷನ್ ಸ್ಟ್ರೆಂತ್ 54 ಸಾವಿರ ಇದೆ. ಸಮರ್ಪಕವಾಗಿ ಸಾಕಷ್ಟು ಪ್ರಮಾಣದಲ್ಲಿ ಸಿಬ್ಬಂದಿ ಇಲ್ಲ. ಅದರಲ್ಲೂ ಕೂಡ ಆರೂವರೆ ಸಾವಿರ ಕೊರತೆ ಅಂದ ಮೇಲೆ ಕೇವಲದ ನಿಮಿತ್ತ ಈ ಸಂಸ್ಥೆಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆದು ಈಗ ಸಾಕಷ್ಟು ಸೌಲತ್ತುಗಳನ್ನು ಒದಗಿಸಿಕೊಡಲು ಸಾಧ್ಯವಿಲ್ಲ ಎಂದು ತಿಳಿದುಕೊಳ್ಳಬೇಕಾಗಿದೆ. ಪ್ರೈಮರಿ ಹೆಲ್ತ್ ಸೆಂಟರ್ಸ್‌ಗಳಲ್ಲಿ ಈಗ ಈ ಏಯ್ಡ್ಸ್ ಜಪಾನಿಸ್ ವೈರಲ್ ಎನ್‌ಕ್ಯಾಫಲಿಟೀಸ್, ಏಯ್ಡ್ಸ್ ನಿಮ್ಮ ಅಧಿಕಾರಿಗಳ ಪ್ರಕಾರ 72,807ಏಯ್ಡ್ಸ್ ಡಿಸಿಜಿನ್ ಕರ್ನಾಟಕ ರಾಜ್ಯದಲ್ಲಿ ಇದೆ ಎಂದು ಒಂದು ಸ್ಟೇಟ್‌ಮೆಂಟ್ ಬಂದಿದ್ದು ಪತ್ರಿಕೆಗಳಲ್ಲಿ ನಾನು ಓದಿದ್ದೇನೆ. ಆಮೇಲೆ ಪ್ರೊವ್ಡ್ ಕೇಸಸ್ 180 ಎಂದು ಹೇಳಿದ್ದಾರೆ. ಆಮೇಲೆ ವೈರಲ್ ಎನ್‌ಕ್ಯಾಫೇಲಿಟೀಸ್, ಇಂತಹ ರೋಗಗಳನ್ನು ನಾವು ಭೀಕರವಾದ ರೋಗವೆಂದು ಹೇಳಬಹುದು. ನಮ್ಮ ಸಿಸ್ಟಂ ಅನ್ನು ನಾವು ಇಂಪ್ಲಿಮೆಂಟ್ ಮಾಡಬೇಕು. ಈ ರೋಗದ ಬಗ್ಗೆ ಇನ್‌ವೆಸ್ಟಿಗೇಷನ್ ಏನು ನಡೆಯುತ್ತದೆ ಅದು ಜಿಲ್ಲಾ ಆಸ್ಪತ್ರೆಯಲ್ಲಿ ವ್ಯವಸ್ಥೆ ಇರಬೇಕು. ಆದರೆ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಬೇಸಿಕ್ ಆಗಿ ಒಂದು ಮಲೇರಿಯಾ ಬಗ್ಗೆ ಪರೀಕ್ಷೆ ಮಾಡುವುದಕ್ಕೆ ವ್ಯವಸ್ಥೆಗಳು ಇಲ್ಲದೆ ಜಿಲ್ಲಾ ಆಸ್ಪತ್ರೆಗೆ ಕಳುಹಿಸಬೇಕಾಗುತ್ತದೆ. ಯಾವ ನ್ಯಾಯ ಅಧ್ಯಕ್ಷಿಣಿಯವರೆ ? ಏಳು, ಎಂಟು ನೂರು ಕೊಟ್ಟರೆ ಒಂದು ಮೈಕ್ರೋಸ್ಕೋಪ್ ಸಿಗುತ್ತದೆ. ಅದಕ್ಕೆ ಬೇಕಾದ ಫಿಲ್ಮಗೆ 5 ಸಾವಿರ ರೂಪಾಯಿ 6 ಸಾವಿರ ರೂಪಾಯಿ ಕೂಡ ಖರ್ಚಾಗುವುದಿಲ್ಲ. ಆಮೇಲೆ ಉದಾಹರಣೆಗೆ ಸ್ಟೇನ್ ಮಾಡುವುದು, ಮೈಕ್ರೋಸ್ಕೋಪ್‌ನಲ್ಲಿ ಅದನ್ನು ನೋಡುವುದು, ಅದಕ್ಕಾಗಿ ಡಿಸ್ಟ್ರಿಕ್ಟ್ ಆಸ್ಪತ್ರೆಗೆ ಏಕೆ ಹೋಗಬೇಕು ? ತಾಲ್ಲೂಕು ಲೆವೆಲ್‌ನಲ್ಲಿ ಕೂಡ ಲ್ಯಾಬೋರೇಟರಿ ಫೆಸಿಲಿಟೀಸ್ ಇಲ್ಲಾ ಮ್ಯಾಡಮ್. ಟೆಕ್ನೀಷಿಯನ್ಸ್ ಅಂತೂ ಇಲ್ಲ. ಲ್ಯಾಬ್ ಟೆಕ್ನೀಷಿಯನ್ಸ್ ಇಲ್ಲ. ಎಕ್ಸರೇ ಟೆಕ್ನೀಷಿಯನ್ಸ್ ಇಲ್ಲ. ಮತ್ತೆ ಆಸ್ಪತ್ರೆಗಳನ್ನು ಏಕೆ ತೆಗೆದಿದ್ದೀರಿ ? ಯಾವ ಸೆಂಟರ್ ಎಂದು ನನಗೆ ಗೊತ್ತಿದೆ. ಏಕೆಂದರೆ, ಗೌರ್ನಮೆಂಟ್ ಆಫ್ ಇಂಡಿಯಾದವರು ಎಸ್ಟಾಬಿಲಿಷ್‌ಮೆಂಟ್‌ಗೆ ಎಂದು ಕೊಡುತ್ತಾರೆ, ಕಟ್ಟಡಕ್ಕೆ, ಕೆಲವು ಪೀಠೋಪಕರಣಗಳಿಗೆ ಕೊಡುತ್ತಾರೆ. 40 ಪರ್‌ಸೆಂಟ್ ರೊಕ್ಕದ ಆಸೆಗಾಗಿ ನಿಮ್ಮ 60%

ಹಣವೂ ಹಾಳಾಗುತ್ತಿದೆ ಮತ್ತು ಜನರಿಗೆ ಸೌಲಭ್ಯ ಕೂಡ ಸಿಗುವುದಿಲ್ಲ. ಒಂದಕ್ಕೊಂದು ತಾಳ ಮೇಳ ಇಲ್ಲ. ಪ್ರೈಮರಿ ಹೆಲ್ತ್ ಸೆಂಟರ್ ಬಗ್ಗೆ ನಾನು ಹೇಳುತ್ತೇನೆ, ಪ್ರತಿಯೊಂದು ಹೆಲ್ತ್ ಸೆಂಟರ್‌ನಲ್ಲಿ ಗೌರ್ನಮೆಂಟ್ ಆಫ್ ಇಂಡಿಯಾ ನಾರ್ಮ್ಸ್ ಪ್ರಕಾರ 6 ಬೆಡ್ಸ್ ಇರಬೇಕೆಂದು ಇದೆ. ಏಕೆಂದರೆ ಎಮರ್ಜನ್ಸಿಯಾಗಿ ಪೇಷೆಂಟ್ಸ್‌ಗಳು ಹಳ್ಳಿಗಳಿಂದ ಬಂದರೆ ಬೇಕಾಗುತ್ತದೆ ಎಂದು. 30 ಸಾವಿರ ಜನಸಂಖ್ಯೆ ಇರುವ ಪ್ರೈಮರಿ ಹೆಲ್ತ್ ಸೆಂಟರ್‌ಗೆ ಸೀರಿಯಸ್ ಆಗಿ ಯಾರಾದರೂ ಪೇಷೆಂಟ್ಸ್ ಬಂದರೆ ಅವರಿಗೆ ಬೆಡ್ಸ್ ಒದಗಿಸಬೇಕಾಗುತ್ತದೆ. ಇಂಡೋರ್ ಪೇಷಂಟ್ಸ್ ಎಂದು ಅವರಿಗೆ ಇಲಾಜ್ ಮಾಡಬೇಕಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರೈಮರಿ ಹೆಲ್ತ್ ಸೆಂಟರ್‌ಗಳು 1148 ಇವೆ. 1148 ಹೆಲ್ತ್ ಪ್ರೈಮರಿ ಸೆಂಟರ್‌ನಲ್ಲಿ ಪ್ರತಿ ಆಸ್ಪತ್ರೆಯಲ್ಲಿ 6 ಬೆಡ್ ಇರಬೇಕೆಂದು ಮಾಡಿದ್ದಾರೆ. ಆದರೆ ನಾವು ಎಷ್ಟು ಪ್ರೊವೈಡ್ ಮಾಡಿದ್ದೇವೆ? ಕೇವಲ 275 ಪ್ರೈಮರಿ ಹೆಲ್ತ್ ಸೆಂಟರ್ಸ್‌ನಲ್ಲಿ ಅಷ್ಟೇ 6 ಬೆಡ್ಸ್ ಇವೆ. ಸುಮಾರು 6 ನೂರು 7 ನೂರು ಊರುಗಳ ಪ್ರೈಮರಿ ಹೆಲ್ತ್ ಸೆಂಟರ್ಸ್‌ನಲ್ಲಿ ಸೂಕ್ತವಾದ ಸೇವೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ನಾನು ಹೇಳುವುದೇನೆಂದರೆ, ಉಚ್ಚ ಮಟ್ಟದವರು ಆದ ನಾವು ರಾಜ್ಯ ಮಟ್ಟದಲ್ಲಿ ಒಂದು ಸ್ಪಷ್ಟ ನೀತಿ ಧೋರಣೆ ಇಟ್ಟುಕೊಂಡರೆ ಯಾವ ಡಾಕ್ಟರ್ ಎಲ್ಲಿ ಕೆಲಸ ಮಾಡಬೇಕು ? ಯಾವ ಕ್ವಾಲಿಫಿಕೇಷನ್ ಇದ್ದವರು ಯಾವ ಮಟ್ಟದಲ್ಲಿ ಇರಬೇಕು ? ಎಂದು ತಿಳ್ಕೊಂಡು ವಿವೇಚನೆ ಮಾಡಿ ಪೋಸ್ಟಿಂಗ್ ಮಾಡಬೇಕು. ಎಲ್ಲ ಅಸ್ತವ್ಯಸ್ತವಾಗಿ ಬಿಟ್ಟಿದೆ. ಈಗ ಜನತಂತ್ರವ್ಯವಸ್ಥೆಯಲ್ಲಿ ಶಾಸಕರ ಒತ್ತಡವೋ ಸಾರ್ವಜನಿಕರ ಕೆಲಸ ಮಾಡುವವರ ಒತ್ತಡಾನೋ ಬರ್ತದೆ ಅದಕ್ಕೆ ಮಣಿದು ತಾವು ಕೂಡ ಬೇಕಂತಾನೇ ಮಾಡ್ತೀರ ಅಂತ ನಾನು ಹೇಳೋದಿಲ್ಲ, ಅನೇಕ ಸಲ ನೀನು ನಾರ್ಮ್ಸ್ ಹಾಕಿಕೊಂಡೇ ಕೆಲಸ ಮಾಡ್ತಾಯಿದ್ದಿರಿ ಅಂತ ತಿಳ್ಕೊಳಿ. ಆ ದಿಸೆಯಲ್ಲಿ ನಾಗರತ್ನಮ್ಮನವರು ಆರೋಗ್ಯ ಸಚಿವೆಯಾಗಿದ್ದಾಗ ಪ್ರಯತ್ನಿಸುತ್ತಿದ್ದರು. ಈಗೇನು ಆಗುತ್ತಿದೆ, ಒಬ್ಬ ಆರ್ಥೋಪೆಡಿಕ್ಸ್ ಕ್ವಾಲಿಫಿಕೇಶನ್ಸ್ ಇರ್‍ತಾನೆ ಅಥವಾ ಒಬ್ಬ ಎಂಡಿ ಅನಸ್ತೇಶಿಯಾ ಇರ್‍ತಾನೆ ಅವರು ಪ್ರೈಮರಿ ಆಸ್ಪತ್ರೆಯಲ್ಲಿ ಏನು ಕೆಲಸ ಮಾಡುತ್ತಾರೆ ಅವರ ಉಪಯೋಗ ಏನಿದೆ? ಯಾವ ಕ್ವಾಲಿಫಿಕೇಶನಿದ್ದರೆ ಯಾವ ಆಸ್ಪತ್ರೆಗೆ ಇರಬೇಕೆಂದು ಸಮಗ್ರವಾದ ವಿಚಾರ ಮಾಡಿ. ಈಗ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ತಾವು ನಾಲ್ಕು ಸ್ಪೆಷಲಿಸ್ಟ್ ಪೋಸ್ಟ್ ಕ್ರಿಯೇಟ್ ಮಾಡಿ ಸೇವೆ ಒದಗಿಸಬೇಕೆಂದು ವ್ಯವಸ್ಥೆ ಮಾಡಿದ್ದೀರಿ. ಜನರಲ್ ಮೆಡಿಸಿನ್, ಜನರಲ್ ಸರ್ಜರಿ ಗೈನಿಕಾಲಜಿ ಮತ್ತು ಡೆಂಟಲ್ ಸರ್ಜರಿ, ನಮ್ಮಲ್ಲಿ ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿ ಸಾಕಷ್ಟು ಜನ ಎಂಡಿಗಳಿದ್ದಾರೆ. ಎಷ್ಟೋ ಕಮ್ಯುನಿಟಿ ಹೆಲ್ತ್ ಸೆಂಟರ್‌ಗಳಿವೆ ಕೊಟ್ಟಿದ್ದೀರಿ ತಾವೇ ಹೇಳಬೇಕು. ಈ ನಾಲ್ಕು ವಿಶೇಷ ತಜ್ಞರು ಅನೇಕ ಕಡೆ ಇದ್ದಾರೆ, 170-180 ಕಮ್ಯುನಿಟಿ ಹೆಲ್ತ್ ಸೆಂಟರಿವೆ. ಅಂಕಿ ಸಂಖ್ಯೆ ನಿಮಗೆ ಗೊತ್ತು, ಅವರೆಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿಯೇ ಇದ್ದಾರೆ, ಅಥವಾ ಯಾರಿಗೆ ಪ್ರಭಾವ ಇರುವುದಿಲ್ಲ ಅವರು ಪ್ರೈಮರಿ ಹೆಲ್ತ್ ಸೆಂಟರ್‌ನಲ್ಲಿರುತ್ತಾರೆ. ಹೀಗಾಗಿ ಒಂದಕ್ಕೊಂದು ತಾಳಮೇಳ ಇಲ್ಲದಂತಾಗಿ ಯಾವ ಪ್ರಮಾಣದಲ್ಲಿ ನ್ಯೂ ಲಿಸ್ಟ್ ಪ್ರಕಾರ ಭಾರತ ಸರ್ಕಾರ ಯಾವ ಉದ್ದೇಶದಿಂದ ಈ ವಿಚಾರ ನಿರೂಪಣೆ ಮಾಡಿ ನಮಗೆ ಒದಗಿಸಿಕೊಟ್ಟಿದ್ದಾರೆ ಅಥವಾ ಸಹಕಾರ ಅನುದಾನ ಕೊಡ್ತಾರೆ ಅದರ ಮಟ್ಟಿಗೆ ನಾವು ಬರಲಿಕ್ಕೆ ಸಾಧ್ಯವಾಗಿಲ್ಲ ಅದಕ್ಕಾಗಿ ನಾವು ಪ್ರೈಮರಿ ಹೆಲ್ತ್ ಸೆಂಟರ್ ಮತ್ತು ಕಮ್ಯುನಿಟಿ ಹೆಲ್ತ್ ಸೆಂಟರ್ ಮತ್ತು sub-centre ಈ ಮೂರಕ್ಕೆ ತಾವು ಹೆಚ್ಚು ಒತ್ತು ಕೊಟ್ಟು ಪ್ರಿವೆಂಟೀವ್ ಮೆಡಿಸಿನ್‌ಗೆ ತಾವು ಹೆಚ್ಚು ಒತ್ತು ಕೊಟ್ಟು ಸಾಕಷ್ಟು ಪ್ರಮಾಣದಲ್ಲಿ ಸಿಬ್ಬಂದಿ ಒದಗಿಸಿಕೊಟ್ಟು ಲ್ಯಾಬರೇಟರಿ ಒದಗಿಸಿಕೊಟ್ಟಾಗ ನನಗೆ ತಿಳಿದಂತೆ 70 ಪರ್ಸೆಂಟ್ ರೋಗವನ್ನು ತಡೆಹಿಡಿಯಬಹುದು. ಈಗ ಸುಮಾರು 79 ಪರ್ಸೆಂಟ್ ರೋಗ ತಡೆಹಿಡಿದಾಗ ನಾಲ್ಕು ಕೋಟಿ ಜನಸಂಖ್ಯೆ ಇರುವ ನಮ್ಮ ರಾಜ್ಯದಲ್ಲಿ ನಾವು social and economical conditions of the people and also their living standards we can raise. ಲಿವಿಂಗ್ ಸ್ಟಾಂಡರ್ಡ್ ಎಂದರೆ ಕೇವಲ ಫಲಕ ಕೊಟ್ಟು ಪಗಾರ ಕೊಟ್ಟು ಅವರಿಗೆ ದಿನಗೂಲಿ ಕೊಟ್ಟಿ ಹೆಚ್ಚುಮಾಡುವಂತಿಲ್ಲ. ಜನರಿಗೆ ತೊಂದರೆ ಬರದಂತೆ, ರೋಗ ಬರದಂತೆ ನೋಡಿಕೊಂಡಾಗ ಅವರು ಸದೃಢರಾಗಿ ಹೆಚ್ಚಿನ ದುಡಿಮೆ ದುಡೀತಾರೆ ಮತ್ತು

ಆರೋಗ್ಯ ಖಾಯಿಲೆಗಳಿಗೆ ಖರ್ಚಾಗುವುದು ನಿಲ್ಲುತ್ತದೆ. ಅದಕ್ಕಾಗಿ ದಯಮಾಡಿ ಈ ಆಸ್ಪತ್ರೆಗೆ ತಾವು ಹೆಚ್ಚು ಲಕ್ಷ್ಯ ಕೊಡಬೇಕು. ಸಾಕಷ್ಟು ತಜ್ಞರಿದ್ದಾರೆ ಈಗ ಪ್ಯಾರಾಮೆಡಿಕಲ್ ಸ್ಟಾಫ್ ಅಂತ ಬಹಳ ಬಂದಿವೆ ಅದರ ಬಗ್ಗೆ ತಕ್ಷಣ ಗಮನಕೊಡಬೇಕು. ನಾನು ಇದರ ಬಗ್ಗೆ ಪದೇ ಪದೇ ಏಕೆ ಹೇಳ್ತಿದ್ದೀನಿ ಅಂದರೆ ಎಕಾನಮಿ ಡ್ರೈವ್ ದಯಮಾಡಿ ರಿಲ್ಯಾಕ್ಸ್ ತಾವು ಮಾಡಿ, ಪ್ರಭಾವ ಶಾಲಿಗಳು ಮಂತ್ರಿಗಳು ಮಿತ್ರರಿದ್ದಾರೆ, ಅವರೂ ಕೂಡ ತಮಗೆ ಸಹಕಾರ ಕೊಡ್ತಾರೆ ಅಂತ ತಿಳ್ಕೊಂಡಿದ್ದೀನಿ. ಈಗ ನಮ್ಮ ಸರ್ಕಾರ ಇದೆ ಪ್ರಜಾತಂತ್ರವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಅನೇಕ ಜನ ಅಧಿಕಾರಕ್ಕೆ ಬರ್ತೇವೆ. ಅಧಿಕಾರದಲ್ಲಿದ್ದವರು ಅದರಲ್ಲೂ ಸಚಿವಸ್ಥಾನದಲ್ಲಿದ್ದವರೂ ನಮ್ಮ ನಮ್ಮ ಜನರಿಗೆ ಸಹಾಯ ಮಾಡುವುದು ಸಹಜ. ಅದರಲ್ಲೇನೂ ತೊಂದರೆ ಇಲ್ಲ, ಆದರೆ ನಾರ್ಮ್ಸ್ ಮಾಡುವಾಗ ನಮ್ಮ ಜನಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬಾರದು. ಇದಕ್ಕಿಂತ ದೊಡ್ಡ ಮಹಾ ಪಾಪ ಇನ್ನೊಂದಿಲ್ಲ. ಒಂದು ಪಾಪ ನಡೀತಿದೆ ತಾವು ಅದಕ್ಕೆ ಪ್ರೋತ್ಸಾಹ ಕೊಡ್ತಾ ಇಲ್ಲ ಅಂತ ನಾನು ಕೇಳಿದ್ದೀನಿ. ಇವತ್ತು ಜಿ.ಓ. ನನ್ನ ಕೈಲಿ ಇದೆ. ಏನು ಮಾಡ್ತಾ ಇದ್ದೀರಿ, ನನ್ನ ಹತ್ತಿರ ಬಹಳ ಡಾಕ್ಟರುಗಳು ಬಂದಿದ್ದರು ಈಗ ಕೆಲವು ಗವರ್ನಮೆಂಟ್ ಆರ್ಡರ್ ಚೇಂಜ್ ಮಾಡಿ ಕೇಡರ್ ಮತ್ತು ರೆಕ್ರೂಟ್‌ಮೆಂಟ್ ರೂಲ್ಸ್ ಚೇಂಜ್ ಮಾಡಿ ಹೈಯರ್ ಪೋಸ್ಟ್, ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ಸ್, ಅಸಿಸ್ಟೆಂಟ್ ಹೆಲ್ತ್ ಆಫೀಸರ್ಸ್, ಡೆಪ್ಯೂಟಿ ಸರ್ಜನ್ಸ್ ಈ ಕೇಡರ್ ಏನಿದ್ದಾರೆ ಎಲ್ಲವನ್ನೂ ಅಸ್ತವ್ಯಸ್ತ ಮಾಡ್ತಾ ಇದ್ದೀರಿ. ಸಂಪೂರ್ಣ ಅಸ್ತವ್ಯಸ್ತ ಮಾಡುವುದಲ್ಲದೆ, pending amendment to cadre and recruitment rules you have already prepared the list of promotees. ನಾಗರೀಕತೆ ಸರ್ಕಾರ ಮಾಡುವ ಕೆಲಸವೇ ? pending change in the C&R rules --ಕರ್ನಾಟಕದ ಸರ್ಕಾರದಲ್ಲಿ ಒಳ್ಳೊಳ್ಳೆಯ ಆದರ್ಶ ವ್ಯಕ್ತಿಗಳು ಆಳಿ ಹೋಗಿದ್ದಾರೆ. ಅದನ್ನು ಗಾಳಿಗೆ ತೂರಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲಿದ್ದಾಗಲೇ ಅನೇಕ ಜನರಿಗೆ ಪ್ರೋಮೋಷನ್ ಆಗುವುದು ಬಹಳ ಕಷ್ಟ ಇದೆ. ತಾವು ಇದಕ್ಕೆ ವಿರುದ್ಧ ಅಂತ ನನಗೆ ಗೊತ್ತಿದೆ ನೀವೇನಾದರೂ ಇದನ್ನು ಚೇಂಜ್ ಮಾಡಿದ್ರೇ ಆದಲ್ಲಿ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿಯಾಗುತ್ತದೆ. ಆರೋಗ್ಯ ಇಲಾಖೆ. ಸೇವೆ ಅಸ್ತವ್ಯಸ್ತವಾಗುತ್ತದೆ ಏನಾಗುತ್ತದೆ ಗೊತ್ತೇನು ? ಇದೊಂದು ಪಿರಮಿಡಲ್ ಸ್ಟ್ರಕ್ಚರ್ ರೂರಲ್ ಹೆಲ್ತ್ ಸೆಂಟರ್ ಪ್ರೈಮರಿ ಹೆಲ್ತ್ ಸೆಂಟರ್ ಕಮ್ಯುನಿಟಿ ಹೆಲ್ತ್ ಸೆಂಟರ್ ಡಿಸ್ಟ್ರಿಕ್ಟ್ ಹಾಸ್ಪಿಟಲ್ ಇದು ಪಿರಮಿಡಲ್ ಸ್ಟ್ರಕ್ಚರ್ ಈಗ ನಾಲ್ಕು ಪ್ರೈಮರಿ ಹೆಲ್ತ್ ಸೆಂಟರ್‌ಗೆ ಒಂದು ಕಮ್ಯುನಿಟಿ ಹೆಲ್ತ್ ಸೆಂಟರ್ ಮಾಡಿ ಆಮೇಲೆ ಡಿಸ್ಟ್ರಿಕ್ಟ್ ಆಸ್ಪತ್ರೆ ಮಾಡಿದ್ದೀರಿ. ಇದು ಮಾಡುವುದರಿಂದ ಏನಾಗುತ್ತದೆ ಎಂದರೆ ಎಂಬಿಬಿಎಸ್ ಇದ್ದ ಮನುಷ್ಯ 16 ವರ್ಷದಲ್ಲೇ ಡಿಸ್ಟ್ರಿಕ್ಟ್ ಸರ್ಜನ್ ಆಗಿಬಿಡುತ್ತಾನೆ. 15 ವರ್ಷಕ್ಕೇ ಡಿಸ್ಟ್ರಿಕ್ಟ್ ಸರ್ಜನ್ ಅಲ್ಲಿ ಯಾರೂ ಅಸಿಸ್ಟೆಂಟ್ ಸರ್ಜನ್ನೇ ಇರೋದಿಲ್ಲ ಡಿಸ್ಟ್ರಿಕ್ಟ್ ಸರ್ಜನ್ ಮೂರು ಸಾವಿರ ಇರುತ್ತಾರೆ, ಒಂದು ಸಾವಿರ ಅಸಿಸ್ಟೆಂಟ್ ಸರ್ಜನ್ ಇರ್ತಾರೆ. ಇದು inverted pyramid ಆಗುತ್ತದೆ. ಅವರು ನಿನ್ನೆ ಬಂದಿದ್ದರು ಅವರೇನು ಹೇಳ್ತಾರೆ ? ಡಿಪ್ಲೋಮಾ ಹೋಲ್ಡರ್ ಆದವನು ಒಂದು ವರ್ಷ ಟ್ರೈನಿಂಗ್ ತಗೊಂಡು ನಮ್ಮ ಮೇಲೆ ಡಿಹೆಚ್‌ಓ ಆಗ್ತಾನೆ ನಾವು 20-25 ವರ್ಷ ಸೇವೆ ಮಾಡಿದ್ದೇವೆ ಅವರ ಕೆಳಗೆ ಕೆಲಸ ಹ್ಯಾಗೆ ಮಾಡಬೇಕು ಮತ್ತು ಡಿಪ್ಲೋಮಾ ಡಿಗ್ರಿ ತಗೊಬ್ಬಾಡಂತ ಯಾರು ಹೇಳ್ತಾರೆ, 20-30 ವರ್ಷಕ್ಕೆ ಇವರು ಡಾಕ್ಟರ್ ಪ್ರಾಕ್ಟೀಸ್ ಮಾಡಿ ಹಣಾನೂ ಗಳಿಸಬೇಕು 25 ವರ್ಷ ಆಮೇಲೆ ಸರ್ಕಾರದ ಮೇಲೆ ಈ ರೀತಿ ಪ್ರಭಾವ ತಂದು ಯಾರಾದರೂ ಮಂತ್ರಿಗಳ ಸಂಬಂಧೀಕರು ಇರ್ತಾರೆ ಈ ತರದ ಅಮೆಂಡ್‌ಮೆಂಟ್ ಮಾಡಿಸಿ ದೊಡ್ಡ ಅಧಿಕಾರವಂತನಾಗಬೇಕು. ಆ ಮನುಷ್ಯ ಏನಿರ್ತಾರೆ ಸುಮಾರು 2-3 ಸಾವಿರ ಡಿಸ್ಟ್ರಿಕ್ಟ್ ಸರ್ಜನ್ ಆಗ್ತಾರೆ. ಅವರಿಗೆ ಎಲ್ಲಿ ಪೋಸ್ಟ್ ಕೊಡ್ತೀರಿ ನಮ್ಮಲ್ಲಿ 20 ಜಿಲ್ಲೆಗಳಿವೆ ಅಂದರೆ there is a cloud.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಇಲ್ಲಿ ಒಂದು ಪ್ರಶ್ನೆ ಅಡಗಿದೆ ಸೇವಾ ಹಿರಿತನಕ್ಕೆ ಆದ್ಯತೆ ಕೊಡಬೇಕೆಂದು ಈ ತೀರ್ಮಾನದ ಹಿನ್ನೆಲೆ 20-25 ವರ್ಷ ಕೆಲಸ ಮಾಡಿದವರಿಗೆ ಪ್ರಮೋಶನ್ನೇ ಇಲ್ಲ ಅವರು ಕ್ಲಿನಿಕಲ್ ಸೈಡ್ ಇರೋರು ಅಲ್ಲೇ ಉಳೀಬೇಕಾಗುತ್ತದೆ. ಹೀಗಿರುವಾಗ ಬಹುಶಃ ಅದನ್ನು ಪರಿಶೀಲಿಸಿ ಆಡಳಿತದ

ದಕ್ಷತೆ ಕುಗ್ಗಿರೋ ಹಿನ್ನೆಲೆಯಲ್ಲಿ ಈ ಚಿಂತನೆ ಮಾಡಿದ್ದೇವೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಡಾ. ವೈ. ನಾಗಪ್ಪ:- ಸಚಿವರು ಹೇಳಿದ್ದು ಕರೆಕ್ಟ್, ಏಕೆಂದರೆ ಇವತ್ತು ಪ್ರತಿ ಇಲಾಖೆಯಲ್ಲಿ 10-12 ವರ್ಷಕ್ಕೆ ಪ್ರಮೋಷನ್ ಇದೆ ಈ ಆರೋಗ್ಯ ಇಲಾಖೆಯಲ್ಲಿ ಕಮ್ಮಿ ಇದೆ. ನೀವು ಮಾಡಿದ್ದು ಸ್ವಾಗತಾರ್ಹ, ಇದರ ಬಗ್ಗೆ ನಮ್ಮ ಆತಂಕ ಏನೂ ಇಲ್ಲ. ಸೀನಿಯಾರಿಟಿ ಇರುವವನು ಡಿಸ್ಟ್ರಿಕ್ಟ್ ಸರ್ಜನ್ ಆಗುತ್ತಾನೆ.

ಡಾ. ಎ. ಬಿ. ಮಲಕರೆಡ್ಡಿ :- ಇದರಲ್ಲಿ ಪ್ರಾಕ್ಟಿಕಲ್ ಡಿಫಿಕಲ್ಟಿ ಏನಾಗುತ್ತದೆ ಎಂದರೆ ಅವರು ಅಂಕಿ ಸಂಖ್ಯೆ ನೋಡಿಲ್ಲ ಎಂದು ಕಾಣುತ್ತದೆ. ಆಡಳಿತದಲ್ಲಿ ಏನು ತೊಂದರೆ ಬರುತ್ತದೆ ಎಂದು ನಾಳೆ ಹೇಳುತ್ತೇನೆ. ಏಕೆಂದರೆ ನಾನು ಕೆಲಸಮಾಡಿದವನಿದ್ದೇನೆ. ಈಗ ಯಾರು ಯಾರ ಮಾತು ಕೇಳಬೇಕು ಸ್ವಾಮಿ. ಒಂದು ಉದಾಹರಣೆ ತಗೋಳೋಣ. ಗುಲ್ಬರ್ಗದಲ್ಲಿ ಸುಮಾರು 150 ಡಾಕ್ಟರ್ಸ್ ಕೆಲಸ ಮಾಡ್ತಾರೆ ಅದರಲ್ಲಿ 130 ಜನ ಡಿಸ್ಟ್ರಿಕ್ಟ್ ಸರ್ಜನ್ ಅವರು. 20 ಜನ ಅಸಿಸ್ಟೆಂಟ್ ಸರ್ಜನ್ ಆದರು. ಯಾರ ಮಾತು ಯಾರು ಕೇಳ್ತಾರೆ ಸ್ವಾಮಿ? ಹೇಳಿ ನೀವೇ ನೋಡೋಣ. ಎಷ್ಟೇ ಜನ ಮಾಡಿದರೂ ಇನ್‌ಕ್ರಿಮೆಂಟ್ ಇರುತ್ತದೆ. ಸಾಕಷ್ಟು ಪಗಾರ ಬಂದೇ ಬರುತ್ತಲ್ಲ. ಪ್ರತಿಯೊಬ್ಬರೂ ಹೆಡ್ ಮಾಸ್ಟರು ಆಗಲಿಕ್ಕೆ ಆಗುತ್ತದೆಯೇ ? ಒಂದೊಂದು ಸ್ಕೂಲಿನಲ್ಲಿ ನಾಲ್ಕು ಜನ ಹೆಡ್‌ಮಾಸ್ತರು ಸಿಗುತ್ತಾರೆಯೇ ? ಆ ರೀತಿ ಆಗುತ್ತದೆ ಇಲ್ಲಿ.. ಒಂದು ತಾಲ್ಲೂಕಿಗೆ ಎಷ್ಟು ಮಂದಿ ತಹಸೀಲ್ದಾರ್ ಮಾಡಬಹುದು ?. ಒಂದು ಜಿಲ್ಲೆಗೆ ಎಷ್ಟು ಡಿಸಿ ಮಾಡಬಹುದು ? ಆ ದೃಷ್ಟಿಯಿಂದ ಆಡಳಿತದಲ್ಲಿ ಡಿಸಿಪ್ಲೀನ್ ಹೋಗಿಬಿಡುತ್ತದೆ ಏಕೆಂದರೆ ನಾನು ಡಿಸ್ಟ್ರಿಕ್ಟ್ ಸರ್ಜನ್ ನೀನೂ ಡಿಸ್ಟ್ರಿಕ್ಟ್ ಸರ್ಜನ್ ಯಾರ ಮಾತು ಯಾರು ಕೇಳಬೇಕು? ಎಲ್ಲರೂ ಈಕ್ವಲ್ಸ್ ಇಲ್ಲಿ. ಅದಕ್ಕೇ ನಾನು ಹೇಳ್ತಾಇದ್ದೇನೆ ನೀವು ಬೇಕಾದರೆ ಇನ್‌ಸೆಂಟೀವ್ ನೀಡಿ ಡಬಲ್ ಇನ್‌ಕ್ರಿಮೆಂಟ್ ಕೊಡ್ರಿ ಜ್ಯೇಷ್ಠತೆ ಮೇಲೆ ಬೇಡ ಅಂತ ಅನ್ನೋದಿಲ್ಲ ಕೊಡಬೇಕಾದ್ದು ನಿಮಗೆ ಬಿಟ್ಟಿದ್ದು, ಆದರೆ ನೀವೇನು ಮಾಡ್ತೀರಿ, ಅವರಿಗೆ ಡಿಸ್ಟ್ರಿಕ್ಟ್ ಸರ್ಜನ್ ಕೊಡ್ತಾ ಇದೀರಿ. ಇದು inverted pyramid -- ಆಗುತ್ತದೆ. ಈಗ ಒಬ್ಬ ಐಎಎಸ್ ಆಫೀಸರ್ ಇರುತ್ತಾನೆ, ಅವನು 25 ವರ್ಷಗಳೂ ಆಫೀಸರ್ ಆಗಿಯೇ ಇರುತ್ತಾನೆ. ಅಥವಾ ಜಿಲ್ಲಾ ಆಫೀಸಿನಲ್ಲಿ ಅವನು ಕೆಲಸವನ್ನು ಮಾಡುವುದಿಲ್ಲ. He presides over so many district meetings. ಅಥವಾ ವಯಸ್ಸು ಸಣ್ಣದು ಇದೆ ಎಂದು ತಿಳಿದುಕೊಂಡು ಯಾರಾದರೂ ಅಬ್ಜೆಕ್ಷನನ್ನು ಮಾಡಿದ್ದಾರೆಯೇ ? ಈ ಪದ್ಧತಿಯನ್ನು ಏನು ಮಾಡುತ್ತಿದ್ದೀರಿ, ಇದು ಬಹಳ ತಪ್ಪು. ಇದರ ಪರಿಣಾಮವೇನಾಗುತ್ತದೆ ಎಂಬುದನ್ನು ನೋಡಿ. ಇದರ ಬಗ್ಗೆ ರಿಸರ್ವೇಷನ್ ಇದೆ ಎಂದು ನಾನು ಕೇಳಿದೆ. ಆದರೂ ಕೂಡ ಈ ರೀತಿ ಆರ್ಡರ್ ಬಂದಿದೆ. ದಯಮಾಡಿ ಇದರ ಬಗ್ಗೆ ಪುನರ್ ಪರಿಶೀಲನೆಯನ್ನು ತಾವು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ವೈದ್ಯಕೀಯ ಶಿಕ್ಷಣದ ಬಗ್ಗೆ ಹೇಳುವುದಾದರೆ ಇದು ಬಹಳ ವಿವರಣಾತ್ಮಕವಾದ ವಿಷಯ. ಕ್ಯಾಪಿಟೇಷನ್ ಅಬಾಲಿಷ್ ಬಗ್ಗೆ ನಿನ್ನೆ ಅನೇಕ ಜನ ಮಿತ್ರರು ಮಾತನಾಡಿದರು. ನಾನು ನಾಳೆ ಮಾತನಾಡೋಣ ಎಂದು ಸುಮ್ಮನೆ ಕುಳಿತುಕೊಂಡೆ. ಮತ್ತೆ ಕ್ಯಾಪಿಟೇಷನ್ ಶುಲ್ಕದ ಆಧಾರದ ಮೇಲೆ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ದೊರೆಯುತ್ತಿದ್ದುದು 1955ನೇ ಇಸವಿಯಿಂದಲೂ ನಡೆಯುತ್ತಿದೆ. ಆದರೆ 1955ನೇ ಇಸವಿಯಿಂದ ಖಾಸಗಿ ಕಾಲೇಜು, ಪ್ರೈವೇಟ್ ಮೆಡಿಕಲ್ ಕಾಲೇಜುಗಳು ನಡೆಯುತ್ತಿದ್ದಾಗ ಆಗ ಒಂದು ಕಂಪ್ಲೇಂಟೂ ಕೂಡ ಇರಲಿಲ್ಲ. ಈಗ ಸುಮಾರು ಹತ್ತು ವರ್ಷಗಳಿಂದ ಅದರಲ್ಲಿಯೂ ಕಳೆದ ಒಂಭತ್ತು ವರ್ಷಗಳಿಂದ ಇಷ್ಟು ಕಂಪ್ಲೇಂಟ್ ಏತಕ್ಕೆ ಬರುತ್ತಿದೆ ? ಇದನ್ನು ನಾವು ಸ್ವಲ್ಪ ಸೂಕ್ಷ್ಮವಾಗಿ ವಿಚಾರ ಮಾಡಬೇಕು. ಸುಮ್ಮನೆ ನಮ್ಮ ಎಲೆಕ್ಷನ್ ಮ್ಯಾನಿಫೆಸ್ಟೋನಲ್ಲಿಯೂ ಕೂಡ ಕಾಂಗ್ರೆಸ್ ಪಕ್ಷದಿಂದ ಹೇಳಿದ್ದೇವೆ, ನಾವು ಅಧಿಕಾರಕ್ಕೆ ಬಂದಿದ್ದಾರೆ ನಾವು ಕ್ಯಾಪಿಟೇಷನ್ ಅಬಾಲಿಷನ್ ಮಾಡುತ್ತೇವೆಂದು ಆದರೆ ನಾವು ಏನು ಮಾಡುತ್ತಿದ್ದೇವೆ. ನಮ್ಮ ಸರ್ಕಾರ ಬಂದಮೇಲೆ ಅನೇಕ ಕ್ಯಾಪಿಟೇಷನ್ ಬೇಸ್ಡ್ ಕಾಲೇಜಸ್‌ನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಸ್ಪಷ್ಟ ವಿಚಾರ ಇರುವುದು ಬಹಳ ಅವಶ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಸಾಕಷ್ಟು ಸಲ ಇದರ ಬಗ್ಗೆ ಡಿಬೇಟ್ ಆಗಿದೆ.

ನನ್ನ ಮಿತ್ರರಾದ ಡಾ. ಪರಮೇಶ್ವರ್ ಇದ್ದಾರೆಯೋ ಇಲ್ಲವೋ ಗೊತ್ತಿಲ್ಲ. ಅವರು ಇಲ್ಲ ಎಂದು ಕಾಣುತ್ತದೆ. ಅವರೇನೋ ಡಿಸ್ಕ್ರಿಪ್ಷ್ ಮಾಡಿದರು. ಏನು ಮಾಡಿದರು, ಅಮೇರಿಕಾದಲ್ಲಿ ಹಾರ್ವರ್ಡ್ ಯೂನಿವರ್ಸಿಟಿಯದನ್ನು ಒಂದು ಎಕ್ಸಾಂಪಲ್ ಆಗಿ ಕೋಟ್ ಮಾಡಿದರು. ಏನು ಕೋಟ್ ಮಾಡಿದರು, ಅಲ್ಲಿ ಫೀ ಸಿಸ್ಟಂ ಇಟ್ಟಿದೆ, ಒಬ್ಬ ವಿದ್ಯಾರ್ಥಿ ಅಲ್ಲಿ ಶಿಕ್ಷಣವನ್ನು ಪಡೆಯಬೇಕಾದರೆ ಸುಮಾರು ಒಂದು ವರ್ಷಕ್ಕೆ 28 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ ಎಂದು ಹೇಳಿದರು. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ತೊಂದರೆ ಏಗೆಂದು ಗೊತ್ತೇನು ? ನಾನು ಹೇಳಿದ್ದೇನಲ್ಲಾ, ಹೈಯರ್ ಎಜುಕೇಷನ್ ಅಮೇರಿಕಾದಲ್ಲಿ it is not the duty of the Government to proveide higher education to the citizens. There is no single Government college there . There is no single Government hosipital in the entire America except Walter Retd Military Hospital. ಅದೊಂದು ಬಿಟ್ಟರೆ ಇನ್ನೊಂದು ಗೌರ್ನಮೆಂಟ್ ಆಸ್ಪತ್ರೆಯೂ ಇಲ್ಲ. ಗೌರ್ನಮೆಂಟ್ ಕಾಲೇಜು ಇಲ್ಲ. ಅಲ್ಲಿ ನಾಲ್ಕು ಯೂನಿವರ್ಸಿಟಿಗಳು ಮಾತ್ರ ಸ್ಟೇಟ್ ಓನ್ಡ್ ಯೂನಿವರ್ಸಿಟಿಗಳಿವೆ. Only four. 19ನೇ ಶತಮಾನದ earlier part ನಲ್ಲಿ State-owned universitites - - ಆಗ ಎಸ್ಟಾಬ್ಲಿಷ್ ಆದವು. ಆವು ನಾಲ್ಕು ಸ್ಟೇಟ್ ಓನ್ಡ್ ಯೂನಿವರ್ಸಿಟಿಗಳನ್ನು ಬಿಟ್ಟರೆ ಅಲ್ಲಿ ಒಂದು ಯೂನಿವರ್ಸಿಟಿಯೂ ಇಲ್ಲ. ಎಲ್ಲಾ ಎಂಡೋಮೆಂಟ್ ಯೂನಿವರ್ಸಿಟಿಗಳೆಂದು ಇವೆ. ಪಬ್ಲಿಕ್‌ಗೆ ಹೇಗೆ ಎಂದರೆ ಡೊನೇಷನ್‌ನಿಂದ ಎಂಡೋಮೆಂಟ್ಸ್‌ನಲ್ಲಿ ನಡೆಯತಕ್ಕಂಥ ಯೂನಿವರ್ಸಿಟಿಗಳು ಇದ್ದಾವೆ. ಅಂದಮೇಲೆ ಅವರು 28 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅವರ ಫಿಲಾಸಫಿಯೇ ಹಾಗೆ ಇದೆ. ನಮ್ಮಲ್ಲಿ ಹಾಗೆ ಇಲ್ಲ. We give to ourselves a democratic socialist republic ಎಂದು ನಾವು ಕಾನ್ಸ್‌ಟಿಟ್ಯೂಷನ್ ಅಮೆಂಡ್ ಮಾಡಿ ಸೋಷಿಯಲಿಸ್ಟ್ ಎಂದು ಬರೆದುಕೊಂಡೆವು. ಕಾಲೇಜು ಡೊನೇಷನ್ ಕೂಡಾ ನಮ್ಮ ಜವಾಬ್ದಾರಿ ಎಂದು ಮಾಡಿದೆವು. ಜನರಲ್ಲಿ ಒಂದು ತಾರತಮ್ಯದ ಭಾವನೆ ಉದ್ಭವವಾಗಿದೆ. ಅದರಲ್ಲಿಯೂ ತರುಣರಲ್ಲಿ ಉದ್ಭವವಾಗಿದೆ. ಇಲ್ಲಿ ಒಂದು ದೋಷ ಏನೆಂದರೆ, ಎರಡನೆಯ ದೋಷ ಏನಾಗುತ್ತಿದೆ ಎಂದರೆ ತಾವು ಏನು ಮಾಡುತ್ತಿದ್ದೀರಿ, ತಮ್ಮ ಕೆಲಸದ ಜವಾಬ್ದಾರಿಯೇನು ? ಕ್ಯಾಪಿಟೇಷನ್ ಕಾಲೇಜುಗಳಿಗೆ ಪರ್ಮಿಷನ್ ಕೊಟ್ಟಕೊಡಲೇ ನಮ್ಮ ಜವಾಬ್ದಾರಿ ಮುಗಿಯಿತು ಎಂದು ತಿಳಿದುಕೊಂಡು ಬಿಟ್ಟಿರಿ. ದೋಷ ಬಂದಿದ್ದು ಅಲ್ಲೇ. ನಾನೂ ಕೂಡ ಒಂದು ಕ್ಯಾಪಿಟೇಷನ್ ಕಾಲೇಜಿನ ಅಧ್ಯಕ್ಷನಾಗಿದ್ದೆ. ಅದರ ಬಗ್ಗೆ ಸಮಗ್ರ ಮಾಹಿತಿ ನನ್ನಲ್ಲಿದೆ, ಇಲ್ಲ ಎಂದು ಹೇಳುವುದಿಲ್ಲ. ನಾನು ಮೊದಲಿಗೇ ಹೇಳಿದೆ, ಒಂಭತ್ತು ವರ್ಷಗಳಿಂದ ಏತಕ್ಕೆ ಕಂಪ್ಲೇಂಟ್ ಬರುತ್ತಿರಲಿಲ್ಲ? ಆಗ ಕ್ಯಾಪಿಟೇಷನ್ ಕಾಲೇಜುಗಳು ಆಗಲೂ ಅಡ್ಮಿಷನನ್ನು ತೆಗೆದುಕೊಳ್ಳುತ್ತಿದ್ದವು. ಆಗ ಕಂಪ್ಲೇಂಟ್ ಆಗುತ್ತಿರಲಿಲ್ಲ. ಈಗ ನಾನು ಮಾನ್ಯ ಆರೋಗ್ಯ ಮಂತ್ರಿಗಳ ಗಮನವನ್ನು ತಮ್ಮ ಮುಖಾಂತರ ಸೆಳೆಯುವುದಕ್ಕೆ ಬಯಸುತ್ತೇನೆ. ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುತ್ತಿದ್ದರೂ ಕೂಡ ಮೆರಿಟ್‌ನ್ನು ಬಿಟ್ಟಿದ್ದಿಲ್ಲ. ಆದರೆ ತಾವು ಏನು ಮಾಡಿದ್ದೀರಿ, ಬರೀ ಮೋಸ, ವಂಚನೆ ಇದು ಎಲ್ಲಿಯವರೆಗೆ ನಾವು ಇದನ್ನು ಮಾಡುವುದು ?

4.45 ಪಿ. ಎಂ.

1988ರಲ್ಲಿ ನೀವು ಕ್ಯಾಪಿಟೇಷನ್ ಫೀಯನ್ನು ಅಬಾಲಿಷ್ ಮಾಡಿದ್ದೀರಿ. ಅಬಾಲಿಷ್ ಮಾಡಿದ ಮೇಲೆ ನೆಸೆಸಿಟಿ ಏನಿದೆ. ನೀವು ಅಡ್ಮಿಷನ್ ಫೀಯನ್ನು ಪೇ ಮಾಡಬೇಕು. ಇದುವರೆಗೂ ನೀವು ಏತಕ್ಕೆ ಮಾಡಿಲ್ಲ. ನಾಲ್ಕು ವರ್ಷಗಳಿಂದ ನೀವು ಅಡ್ಮಿಷನ್ ರೂಲ್ಸ್ ಅನ್ನು ಏತಕ್ಕೆ ಫ್ರೇ ಮಾಡಿಲ್ಲ. ಹೈಕೋರ್ಟ್ ಜಡ್ಜ್‌ಮೆಂಟ್ ಪಾಸ್ ಮಾಡುತ್ತಾರೆಯೇ ? ನೀವು ಮಾಡುವುದಿಲ್ಲ ನನಗೆ ಗೊತ್ತಿದೆ ಇದು ಬಹಳ ತಪ್ಪು. ದುರ್ದೈವಕ್ಕೋ ಅಥವಾ ಸುದೈವಕ್ಕೋ ನಾವು ಚುನಾವಣೆ ಪ್ರಣಾಳಿಕೆಯಲ್ಲಿ ಅದನ್ನು ಇಟ್ಟಿದ್ದೇವೆ. ಕ್ಯಾಪಿಟೇಷನ್ ಕಾಲೇಜುಗಳನ್ನು ನಾವು

ಅಬಾಲಿಷ್ ಮಾಡಿ ಎಂದು ಹೇಳುವುದಿಲ್ಲ. ನೀವು ನಿಯಂತ್ರಣವನ್ನು ಮಾಡಿ . ಅಡ್ಮಿಷನ್ ರೂಲ್ಸ್ frame ಮಾಡಿ. ಮೆರಿಟ್ ಪ್ರಕಾರ ಮಾಡಿ. ಮೆರಿಟ್ ಕಂ ಕ್ಯಾಪಿಟೇಷನ್ ಮಾಡಿ. ಯಾರು ಅರ್ಜಿ ಹಾಕುತ್ತಾರೆ. ಆ ವಿದ್ಯಾರ್ಥಿಗಳಲ್ಲಿ ನೀವು ಮೆರಿಟ್ ಅನ್ನು ನೋಡಬೇಕು. They are called capitation-cum-merit seats. . . ನಾನು ಒಂದು ಮೆಡಿಕಲ್ ಕಾಲೇಜಿನ ಚೇರ್ಮನ್ ಆಗಿದ್ದಾಗ ಈ ರೀತಿ ಮಾಡುತ್ತಿದ್ದೆವು. ಅದಕ್ಕೆ ಗೌರ್ನಮೆಂಟ್ ಆಫೀಸರ್ ಒಬ್ಬರು ಚೇರ್ಮನ್ ಆಗಿದ್ದರು, ನಾನು ಮೆಂಬರ್ ಆಗಿದ್ದೆ. ಆ ರೀತಿ ನೀವು ಏತಕ್ಕೆ ಮಾಡುವುದಿಲ್ಲ ? ಹೈಕೋರ್ಟ್ ನಿಮಗೆ ಡೈರೆಕ್ಷನ್ ಕೊಟ್ಟಿಲ್ಲವೇ you frame the rules for admission. ನೀವು ಇದುವರೆಗೂ ಏತಕ್ಯಕೆ ಮಾಡಲಿಕ್ಕೆ ಆಗಲಿಲ್ಲ ? ನಾನು 1990ರಲ್ಲಿಯೂ ಸದನದಲ್ಲಿ ಮಾತನಾಡಿದ್ದೇನೆ. ಜನತಾ ಸರ್ಕಾರದಲ್ಲಿ ಮಾನ್ಯ ಸಿಂಧ್ಯರವರು ಆರೋಗ್ಯ ಮಂತ್ರಿಯಾಗಿದ್ದಾಗ ಬಹಳ ಅಸ್ತವ್ಯಸ್ತ ಮಾಡಿದ್ದರು. ನಂತರ ಗೌರ್ನರ್ ಆಡಳಿತದಲ್ಲಿ ಮತ್ತಷ್ಟು ದುರಂತವಾಯಿತು. ಮೊದಲು 1 ಲಕ್ಷ 60 ಸಾವಿರ ಕ್ಯಾಪಿಟೇಷನ್ ತೆಗೆದುಕೊಳ್ಳಬಹುದು ಎಂದು ಆರ್ಡರನ್ನು ಮಾಡಿದ್ದರು, for foreign students and outside Karnataka students. For Karnataka Students Rs. 50,000/- refundable. ಕ್ಯಾಪಿಟೇಷನ್ ಫೀ ಅಬಾಲಿಷ್ ನೆಪದಲ್ಲಿ ಈಗ ಏನಾಗಿದೆ ಅಂದರೆ ನಾನು ಹೊಡೆದ ಹಾಗೆ ಮಾಡುತ್ತೇನೆ. ನೀನು ಅತ್ತಹಾಗೆ ಮಾಡು ಎನ್ನುವ ಗಾದೆಯಂತಾಗಿದೆ. ನಾವು ಹೇಳುತ್ತಾ ಬಂದರೂ ಈ ನೀತಿಯಲ್ಲಿ ಬದಲಾವಣೆಯಾಗಿಲ್ಲ. ಈ ಸದನದಲ್ಲಿ ಪ್ರತಿಸಾರಿಯೂ ತಾವು ಆಶ್ವಾಸನೆಯನ್ನು ಕೊಡುತ್ತಿದ್ದೀರಿ. ಹಿಂದಿನ ಸರ್ಕಾರ ಇದ್ದಾಗಲೂ ನಾವು ಮುಂದಿನ ವರ್ಷ ಮಾಡುತ್ತೇವೆ ; ಮುಂದಿನ ವರ್ಷ ಮಾಡುತ್ತೇವೆಂದು ಹೇಳುತ್ತಲೇ ಬಂದರು. ಯಾವಾಗ ಮಾಡುವುದು ? ಅದೊಂದು ದೊಡ್ಡ ಶಾಸ್ತ್ರವೇ ? ಅದೊಂದು ದೊಡ್ಡ ಟೆಕ್ನಿಕಲ್ ಮ್ಯಾಟರಾ ? ಎರಡು ಗಂಟೆಯ ಕೆಲಸ, ಈ ಎರಡು ಗಂಟೆಯ ಕೆಲಸಕ್ಕಾಗಿ ನೀವು ಮೂರು ವರ್ಷದ ಸಮಯವನ್ನು ಏತಕ್ಕೆ ಹಾಳುಮಾಡಿದ್ದೀರಿ. ತಾವು ಲಾ ಮಾಡಿದ್ದೀರಿ. ಹೈಕೋರ್ಟ್ ಕೂಡ ನಿಮಗೆ ಡೈರೆಕ್ಷನ್ ಕೊಟ್ಟಿದೆ. ಖಾಸಗಿ ವೃತ್ತಿ ಕಾಲೇಜುಗಳಿಗೆ ನೀವು ಅನುಮತಿಯನ್ನು ಕೊಟ್ಟಾಗ ನಮ್ಮ ಅನುಭವದಲ್ಲಿ ಕ್ಯಾಪಿಟೇಷನ್ ಎಕ್ಸ್‌ಪೆಂಡಿಚರ್ ಮಾಡಲಿಕ್ಕೆ ಏನೇನು ಬಂಡವಾಳವಿಲ್ಲ. ಆದರೆ ಯೂನಿವರ್ಸಿಟಿ ಆಕ್ಟ್ ಸೆಕ್ಷನ್ 63ರ ಪ್ರಕಾರ ಯಾವ್ಯಾವ ಸಂಸ್ಥೆಗೆ ಕ್ಯಾಪಿಟಲ್ ಎಕ್ಸ್‌ಪೆಂಡಿಚರ್ ಮಾಡತಕ್ಕಂಥ ಯೋಗ್ಯತೆ ಇದೆ ಅದಕ್ಕಷ್ಟೇ ಅನುಮತಿ ಕೊಡಬೇಕೆಂದು ಯೂನಿವರ್ಸಿಟಿಯ ರೂಲ್ಸ್ ಇದೆ. ಆದರೆ ಇವತ್ತು ನಮ್ಮ ದುರ್ದೈವ ಏನಾಗಿದೆ ಅಂದರೆ ಯೂನಿವರ್ಸಿಟಿ ರೂಲ್ಸ್ ಅನ್ನೇ ಫಾಲೋ ಮಾಡುತ್ತಿಲ್ಲ, ಸರ್ಕಾರದವರಂತೂ ಮೊದಲೇ ಮಾಡುತ್ತಿಲ್ಲ. Universities, they are playing second fiddle to the Government and the managements. I am sorry to make this grave charge. Our Universities are trying to subserve the interest of the managements and some of the greedy in the society. ನಮ್ಮಲ್ಲಿ 21 ಮೆಡಿಕಲ್ ಕಾಲೇಜುಗಳು ಇವೆ. ಮಹಾರಾಷ್ಟ್ರ, ಯು.ಪಿ. ನಮಗಿಂತಲೂ ನಾಲ್ಕು ಪಟ್ಟು ದೊಡ್ಡದಿದೆ. ಅಲ್ಲಿ 10-11 ಮೆಡಿಕಲ್ ಕಾಲೇಜುಗಳು ಇವೆ. ಇಷ್ಟೊಂದು ಮೆಡಿಕಲ್ ಕಾಲೇಜು ನಮ್ಮ ಕರ್ನಾಟಕದ ಮಕ್ಕಳಿಗೆ ಅವಶ್ಯಕತೆ ಇರಲಿಲ್ಲ. ಅವಶ್ಯವಿಲ್ಲ ಅಂದಮೇಲೆ ವಿನಾಕಾರಣವಾಗಿ ಡೆಂಟಲ್ ಕಾಲೇಜ್, ಫಾರ್ಮಸಿ ಕಾಲೇಜನ್ನು ಕೊಟ್ಟು ಏತಕ್ಕೆ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತಂದುಕೊಳ್ಳುತ್ತೀರಿ. ಇದರಲ್ಲಿ ಎಷ್ಟೋ ಹಣ ವಿನಿಮಯವಾಗುತ್ತದೆಂದು ಹೇಳುತ್ತಾರೆ. ಅದನ್ನು ನಾನು ನಂಬುವುದಕ್ಕೆ ಹೋಗುವುದಿಲ್ಲ. ಯಾವುದೋ ಗೊತ್ತಿಲ್ಲದ ವಿಷಯವನ್ನು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನೀವು ಮಾಡಬಾರದೆಲ್ಲಾ ಮಾಡುವುದಕ್ಕೆ ಹೋದರೆ ವಿನಾಕಾರಣ ಆರೋಪಗಳಿಗೆ ಗುರಿಯಾಗುತ್ತೀರಿ. ಯೂನಿವರ್ಸಿಟಿಯವರು ಏನು ಮಾಡುತ್ತಿದ್ದಾರೆಂದರೆ, ಎಷ್ಟು ಜನ ಅರ್ಜಿಗಳನ್ನು ಹಾಕುತ್ತಾರೋ, ಅಷ್ಟು ಜನರ ಅರ್ಜಿಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಸರ್ಕಾರದವರಾದ

ನೀವು ಏನು ಮಾಡುತ್ತಿದ್ದೀರಿ ? ಯೂನಿವರ್ಸಿಟಿಯವರು ಶಿಫಾರಸ್ಸು ಮಾಡಿ ಕಳುಹಿಸಿದ್ದಾರೆ, ನಾವೇನು ಮಾಡೋಣ ನಾವು ಮಾಡಿಬಿಟ್ಟೆವು, ಎಂದು ನೀವು ಹೇಳುತ್ತೀರಿ. ಈಗ ವಿಶ್ವವಿದ್ಯಾನಿಲಯದವರು ತಮ್ಮ ಜವಾಬ್ದಾರಿಯನ್ನು ಮತ್ತು ಆದ್ಯ ಕರ್ತವ್ಯವನ್ನು ಸಂಪೂರ್ಣ ಮರೆತು ರಾಜಕಾರಣಿಗಿಂತಲೂ ಕೆಳಮಟ್ಟದಲ್ಲಿದ್ದಾರೆ. ಅದಕ್ಕಾಗಿ ತಾವು ಏನು ಈ ವಿಧೇಯಕವನ್ನು ತರುತ್ತಿದ್ದೀರಿ. ಅದನ್ನು ನಾವು ಸ್ವಾಗತ ಮಾಡುತ್ತಿದ್ದೇನೆ. ನೀವು ವಿಧೇಯಕವನ್ನು ತೆಗೆದುಕೊಂಡು ಬನ್ನಿ, ನಾನು ಸಂಪೂರ್ಣ ಸ್ವಾಗತಿಸುತ್ತಿದ್ದೇನೆ. ಇದೇ ವಿಧೇಯಕ 1971ರಲ್ಲೂ ಕೂಡ ಪಾಸ್ ಆಗಿತ್ತು. ಈಗ ಏನು ಮಾಡಿದ್ದಾರೆಂದರೆ, ಮೊನ್ನೆ ದಿವಸ ಬೆಂಗಳೂರಿನಲ್ಲಿ ಮೆಡಿಕಲ್ ಕಾಲೇಜಿನ ಒಬ್ಬ ಮಿತ್ರರು ಮಾತನಾಡುತ್ತಿದ್ದರು. ಮೆಡಿಕಲ್ ಕಾಲೇಜು ಕೊಡುವುದು ಅವಶ್ಯಕತೆ ಇದೆಯೋ ಇಲ್ಲವೋ ಎಂದು. ಅವಶ್ಯಕತೆಯಿದೆ ಎಂದು ಹೇಳಿದರು. ನಾನು ಹೇಗೆಂದು ಕೇಳಿದೆ. ಅವರು ಸೋಶಿಯಲ್ ಜಸ್ಟೀಸ್ ಎಂದು ಹೇಳಿದರು. ಹಾಗೆಂದರೇನೆಂದು ಕೇಳಿದಾಗ ಅವರು ಇಂತಿಂತಹ ಕಮ್ಯೂನಿಟಿಯವರು ಇಷ್ಟು ಸಡೆಸುತ್ತಿದ್ದಾರೆ, ಅಂಬೇಡ್ಕರ್ ಮತ್ತು ಕೆಂಪೇಗೌಡ ಮೆಡಿಕಸ್ ಕಾಲೇಜುಗಳನ್ನು ಕೊಟ್ಟಾಗ, ಅದಕ್ಕೆ ಯಾರು ಅಬ್ಜೆಕ್ಷನ್ ಮಾಡಲಿಲ್ಲ. ಕೆಲವು ಮಂದಿ ಮಾಡಿದರು. ಈಗ ಏನಾಗಿದೆಯೆಂದರೆ, ಇಂತಿಂತಹ ಕಮ್ಯೂನಿಟಿಗೆ ಇಂತಿಷ್ಟು ಕಾಲೇಜುಗಳೆಂದು ಕೊಟ್ಟಿದ್ದಾರೆ. ಉದಾಹರಣೆಗೆ, ಹಿಂದುಳಿದ ವರ್ಗದವರಿಗೆ ಇಷ್ಟು. ಎಸ್‌ಸಿ:ಎಸ್‌ಟಿ ಯವರಿಗೆ ಇಷ್ಟು ಎಂದು ಕೊಟ್ಟಾಗ ಸೋಷಿಯಲ್ ಜಸ್ಟೀಸ್ ಆಗುತ್ತಾ ? ಇದೇನೆಂದು ನನಗೆ ಅರ್ಥವಾಗುತ್ತಿಲ್ಲ. ಲೂಟಿ ಮಾಡುವುದು ಸೋಷಿಯಲ್ ಜಸ್ಟೀಸೆ ? ಸಮಾಜಕಲ್ಯಾಣ ಮಾಡುವುದು ಸೋಶಿಯಲ್ ಜಸ್ಟೀಸೆ ? ಅಥವಾ ನ್ಯಾಯ ಕೊಡುವುದರಲ್ಲಿ ಸೋಷಿಯಲ್ ಜಸ್ಟೀಸೆ ? ಅಥವಾ ಸರ್ಕಾರ ಕೆಟ್ಟ ಹೆಸರು ತರುವುದರಲ್ಲಿ ಸೋಶಿಯಲ್ ಜಸ್ಟೀಸೆ ? ಇದು ಅರ್ಥವಾಗುತ್ತಿಲ್ಲ. ಅದಕ್ಕೋಸ್ಕರ ಈ ಕ್ಯಾಪಿಟೇಶನ್ ಪಾಲಿಸಿಯಲ್ಲಿ ತಕ್ಷಣ ಒಂದು ಬದಲಾವಣೆ ತರಬೇಕಾಗಿದೆ. ಏನೆಂದರೆ, ಈಗ ಫೀಸ್ ತೆಗೆದುಕೊಳ್ಳುವುದರ ಬಗ್ಗೆ ಸರ್ಕಾರಿ ಆದೇಶ ಮಾಡಿದ್ದೀರಿ. ಕರ್ನಾಟಕದವರಾದರೆ ವರ್ಷಕ್ಕೆ 25,000 ರೂಪಾಯಿಗಳನ್ನು ಕೊಡಬೇಕು, ಹೊರಗಿನವರು 80,000 ಅಥವಾ 1,00,000 ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದೀರಿ. ಇದನ್ನು ತಾವು ಫೀಸ್ ಎಂದು ಕರೆಯುತ್ತಿದ್ದೀರಿ. ಯಾವುದೋ ಒಂದು ಫೀಸ್ ಎಂದು ಕರೆದುಕೊಳ್ಳಿ ನಾನೇನು ಬೇಡ ಎನ್ನುವುದಿಲ್ಲ ಆದರೆ, ಮ್ಯಾನೇಜ್‌ಮೆಂಟ್ ಏನು ಮಾಡುತ್ತಿದೆ. ನೀವು ಅಡ್ಮಿಷನ್ ರೂಲ್ಸ್ ಅನ್ನು ಫ್ರೇಮ್ ಮಾಡದೆ ಇದ್ದ ಕಾರಣ, ಮೆರಿಟ್ ಇಲ್ಲದ ಕಾರಣ ಅವರು ಏನು ಮಾಡುತ್ತಾರೆಂದರೆ ಅವರ ಹತ್ತಿರ 1,25,000 ರೂಪಾಯಿಗಳ ಫೀಸ್ ಅನ್ನು ತೆಗೆದುಕೊಳ್ಳುತ್ತಾರೆ. ಕರ್ನಾಟಕದಿಂದ ಹೊರಗಿನವರಾಗಿದ್ದರೆ ಅವರಿಂದ ಎರಡುವರೆಲಕ್ಷ ರೂಪಾಯಿಗಳನ್ನು, ಮತ್ತು ಹೊರಗಿನವರಿಂದ 3 ಲಕ್ಷ 70 ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಹಣವನ್ನು ಲಂಪ್‌ಸಮ್ ಮೇಲೆ ತೆಗೆದುಕೊಳ್ಳುವುದಲ್ಲದೆ, ಎಕ್ಸ್‌ಟ್ರಾ ಡೊನೇಶನ್ ಕೂಡ ಕಲೆಕ್ಟ್ ಮಾಡುತ್ತಾರೆ. ನಾನು ಇದರ ಬಗ್ಗೆ 1990ನೇ ಸಾಲಿನಲ್ಲಿ ಮಾತನಾಡಿದ್ದೆ. ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಒಂದು ಆಶ್ವಾಸನೆ ಕೊಟ್ಟಿದ್ದರು. ಏನೆಂದರೆ ಇನ್ನೊಂದು ತಿಂಗಳಲ್ಲಿ ಜಿ.ಓ.ವನ್ನು ಮಾಡಿಫೈ ಮಾಡುತ್ತೇವೆ ಎಂದು. ಆದರೆ, ಮಾರ್ಚಿ 1992ಕಳೆದರೂ ಇನ್ನೂ ಮಾಡಿಫೈ ಆಗಿಲ್ಲ. ಇದರಲ್ಲೂ ಕೂಡ ಏನು ಅಬ್ಜೆಕ್ಷನ್ ಇಲ್ಲ. ಜಿ. ಓ. ವನ್ನು ಏತಕ್ಕೆ ವಿತ್‌ಡ್ರಾ ಮಾಡಬಾರದು? ಕ್ಯಾಪಿಟೇಶನ್ ತೆಗೆದುಕೊಳ್ಳುವುದಕ್ಕೆ ರೂಲ್ಸ್ ಇದೆ, ಅದರ ಪ್ರಕಾರ ತೆಗೆದುಕೊಳ್ಳುತ್ತಾರೆ. ಈಗ ಅಡ್ಮಿಶನ್ ರೂಲ್ಸ್ ಅನ್ನು ಫ್ರೇಮ್ ಮಾಡಿದ್ದೀರಿ. ಅದರಿಂದ ಕರ್ನಾಟಕದ ವಿದ್ಯಾರ್ಥಿಗಳಿಗೂ ಕೂಡ ಬಹಳ ತೊಂದರೆಯಾಗುತ್ತಿದೆ. ಕರ್ನಾಟಕದ ವಿದ್ಯಾರ್ಥಿಗಳು ಡೊನೇಶನ್ ಅನ್ನು ಡಬಲ್ ಆಗಿ ಕೊಡಬೇಕಾಗಿದೆ ಮತ್ತು ತಾವು ನಿಗದಿ ಮಾಡಿದಂಥ 25,000 ರೂಪಾಯಿಗಳನ್ನು ಪ್ರತಿ ವರ್ಷ ಕೊಡಬೇಕಾಗಿದೆ. ಈ ರೀತಿ ಫೀಸ್ ಅನ್ನು ತೆಗೆದುಕೊಳ್ಳುವುದು ಸಮಾಜದಲ್ಲಿ ಕಳವಳಕ್ಕೆ ಗುರಿಯಾಗಿದೆ. ಅದರಲ್ಲೂ ತಾವು ಆರೋಗ್ಯ ಸಚಿವರಾಗಿದ್ದೀರಿ. ತಮಗೆ ಅದರ ಜವಾಬ್ದಾರಿ ಇರಲಿ, ಬಿಡಲಿ, ಆದರೆ ನೈತಿಕ

ಜವಾಬ್ದಾರಿಯಂತೂ ಇದೆ. ಇದರಿಂದ ತಮಗೂ ಕೂಡ ಕೆಟ್ಟ ಹೆಸರು ಬರುತ್ತದೆ. ಆದುದರಿಂದ, ದಯಮಾಡಿ ಜಿ.ಓ. ವನ್ನು ಮಾಡಿಫೈ ಮಾಡಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಆಡ್ಮಿಶನ್ ರೂಲ್ಸ್ ಫ್ರೇಮ್ ಮಾಡುವುದರ ಬಗ್ಗೆ ತಾವು ಸಾಕಷ್ಟು ಬೆಳಕನ್ನು ಚೆಲ್ಲಿದ್ದೀರಿ. ಸರ್ಕಾರ ಈ ಕುರಿತು ತೀರ್ಮಾನ ತೆಗೆದುಕೊಂಡಾಗ ಪ್ರೈವೇಟ್ ಮೆಡಿಕಲ್ ಕಾಲೇಜ್ ಅಸೋಸಿಯೇಶನ್‌ನವರು ಕೋರ್ಟಿಗೆ ಹೋದರು. ಕೋರ್ಟ್‌ನವರು ಸ್ಟೇ ಮಾಡಿದರು. ರೂಲ್ಸ್ ಅನ್ನು ಆದಷ್ಟು ಬೇಗ ಮಾಡಿ ಎಂದು ಪುನಃ ನಿರ್ದೇಶನ ಕೊಟ್ಟರು. ನಾವು ರೂಲ್ಸ್ ಮಾಡಿ ಕಳುಹಿಸಿ ಕೊಟ್ಟಿದ್ದೇವೆ. ಆದರೂ ಪುನಃ ಅವರು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಸ್ಟೇ ವೆಕೇಟ್ ಮಾಡಿಸತಕ್ಕಂಥ ಪ್ರಯತ್ನ ತೀವ್ರವಾಗಿ ನಡೆಯುತ್ತಿದೆ. ಅದಾದ ತಕ್ಷಣ ತಾವು ಹೇಳಿದ ಹಾಗೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ಡಾ. ಎ. ಬಿ. ಮಲಕರೆಡ್ಡಿ :- ಅಡ್ಮಿಶನ್ ವಿಚಾರದಲ್ಲಿ ಮೆಡಿಕಲ್ ಕಾಲೇಜುಗಳಲ್ಲಿ ನಡೆಯುತ್ತಿರತಕ್ಕಂಥ ಅವ್ಯವಹಾರಗಳ ಬಗೆ ಹೇಳಬೇಕಾದರೆ, ಮತ್ತು ಮೆಡಿಕಲ್ ಕಾಲೇಜುಗಳು ಪ್ರಾರಂಭವಾದ ನಂತರ ಅಲ್ಲಿ ಶಿಕ್ಷಣದ ಗುಣಮಟ್ಟ ಸರಿಯಾಗಿ ನಡೆಯುತ್ತಿದೆಯೇ ? ಇಲ್ಲವೇ ? ಎಂಬುದನ್ನು ತಿಳಿದುಕೊಂಡು ಸರ್ಕಾರದವರು ಇನ್‌ಸ್ಪೆಕ್ಷನ್ ಮಾಡುವುದು ಒಳ್ಳೆಯದು. ತಾವು ಇದರ ಬಗ್ಗೆ ಏನು ವ್ಯವಸ್ಥೆ ಮಾಡಿದ್ದೀರಿ. ಅಲ್ಲಿ ಶಿಕ್ಷಣ ಕೊಡತಕ್ಕಂಥ ಗುಣಮಟ್ಟ ಉತ್ತಮ ತರಗತಿಯದಾಗಿರಬೇಕು. ಏಕೆಂದರೆ, ಒಬ್ಬ ವೈದ್ಯನಾದವನಿಗೆ ಒಬ್ಬ ರೋಗಿಯ ಜೀವನಸ್ಮರಣದ ಪ್ರಶ್ನೆ ಎದುರಾದಾಗ ಅವನು ಏನಾದರೂ ಮಾಡಬೇಕಾಗುತ್ತದೆ. ಅವನ ಪ್ರಾಣ ಉಳಿಸಬೇಕಾದಂಥ ಪ್ರಸಂಗವಿರುತ್ತದೆ. ಆ ಹಂತದಲ್ಲಿ ಸರಿಯಾದ ಗುಣಮಟ್ಟವನ್ನು ತೆಗೆದುಕೊಂಡು ಹೋಗದ, ಶಾಲಾ ಕಾಲೇಜುಗಳಿಂದ ಅಂಥ ವಿದ್ಯಾರ್ಥಿ ಪಾಸಾಗಿ ಬಂದಾಗ ಅವನು ಎಂಥ ಮಟ್ಟದ ವೈದ್ಯನಾಗಬಹುದು ಎಂಬುದನ್ನು ಪರಿಗಣಿಸಬೇಕು. ಇದನ್ನು ಸರ್ಕಾರದ ವತಿಯಿಂದ ಸೂಚನೆ ಮಾಡಬೇಕೆಂದಿಲ್ಲ. ಆದರೆ ಶಿಕ್ಷಣದ ಗುಣಮಟ್ಟವನ್ನು ಸುಧಾರಣೆ ಮಾಡಬೇಕಾಗುತ್ತದೆ. ಆದುದರಿಂದ ಇವೆಲ್ಲವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ಹೆಲ್ತ್ ಯುನಿವರ್ಸಿಟಿಯನ್ನು ಮಾಡಬೇಕು. ತಾವು ಇದರ ಬಗ್ಗೆ ಹಿಂದೆಯೇ ತರಬೇಕೆಂದು ಏನು ವಿಚಾರ ಮಾಡಿದ್ದೀರಿ ಅದು ಸ್ವಾಗತಾರ್ಹವಾದುದು. ಆ ಒಂದು ವಿಶ್ವವಿದ್ಯಾನಿಲಯ ಅವಶ್ಯಕವಾಗಿ ಆಗಬೇಕು. ಈಗ ಸುಮಾರು 105 ವೈದ್ಯಕೀಯ ವಿದ್ಯಾ ಸಂಸ್ಥೆಗಳಿವೆ. ಗಜೇಂದ್ರ ಗಡ್ಕರ್ ಸಮಿತಿಯವರು 50 ಕಾಲೇಜುಗಳಿದ್ದರೆ ಒಂದು ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಹೇಳಿದ್ದಾರೆ. ಆದರೆ ಇಲ್ಲಿ 20 ಅಲೋಪತಿ ಮೆಡಿಕಲ್ ಕಾಲೇಜು, 24 ಡೆಂಟಲ್ ಮೆಡಿಕಲ್ ಕಾಲೇಜು, 51 ಫಾರ್ಮಸಿ ಕಾಲೇಜು ಇವೆ. ಮತ್ತೆ ಆಲ್ ಇಂಡಿಯಾ ಡಿಮ್ಯಾಂಡ್ಸ್ ಸಹ ಇದೆ ಅದೇ ಒಂದು ರೀತಿಯ ವಿಶ್ವವಿದ್ಯಾನಿಲಯದ ಪ್ರಮಾಣದಲ್ಲಿದೆ. ಇದಲ್ಲದೆ ಕಿದ್ವಾಯ್ ಸಂಸ್ಥೆ ಇದೆ. ಇವೆಲ್ಲಾ ಒಟ್ಟು ಸೇರಿ 103 ಸಂಸ್ಥೆಗಳಿವೆ. ಮತ್ತೆ Indian System of Medicine ನಲ್ಲಿ 9 ಆಯುರ್ವೇದ ಕಾಲೇಜು, 8 ಹೋಮಿಯೋಪತಿ ಕಾಲೇಜು ಮತ್ತೆ 1 ಯೂನಾನಿ ಕಾಲೇಜು ಇವೆಲ್ಲಾ ಒಟ್ಟು ಸೇರಿಸಿ 120-125 ಕಾಲೇಜುಗಳಾಗುತ್ತವೆ. ಆದುದರಿಂದ ಅವುಗಳೆಲ್ಲದರಲ್ಲಿಯೂ ಕೂಡ ಒಂದು ಸಮಾನತೆ ಬರಬೇಕಾದರೆ, ಶಿಕ್ಷಣದ ಗುಣಮಟ್ಟವನ್ನು ಕಾಯ್ದುಕೊಂಡು ಹೋಗಬೇಕಾದರೆ, ಪರೀಕ್ಷಾ ಮಟ್ಟವನ್ನು ಕಾಯ್ದುಕೊಂಡು ಹೋಗಬೇಕಾದರೆ ಹೆಲ್ತ್ ಯೂನಿವರ್ಸಿಟಿಯು ಬಹಳ ಅವಶ್ಯಕವಾಗಿ ಆಗಬೇಕಾಗಿದೆ. ಆದುದರಿಂದ ಇದೇ ಸದನದಲ್ಲಿ ತಾವು ಅದನ್ನು ತಂದು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಅಂಥ ಸಂಸ್ಥೆಗಳ ಮೇಲೆ ನಿಯಂತ್ರಣ ಮಾಡಲು ಸಾಧ್ಯವಾಗುತ್ತದೆ ಮತ್ತು ವೈದ್ಯಕೀಯ ಶಿಕ್ಷಣದ ಮಟ್ಟವನ್ನು ಸುಧಾರಿಸಿದಂತಾಗುತ್ತದೆಂದು ಸೂಚನೆ ಮಾಡುತ್ತಿದ್ದೇನೆ. ಉಪಾಧ್ಯಕ್ಷಿಣಿಯವರೆ, ನನಗೆ ಈಗಾಗಲೆ ಮಾತನಾಡಲು ಸಾಕಷ್ಟು ಸಮಯವನ್ನು ಕೊಟ್ಟಿದ್ದೀರಿ, ಇನ್ನೂ ಸಹ ಅನೇಕ ಬೇಡಿಕೆಗಳಿವೆ ತಮಗೆ ಪುನಃ ಧನ್ಯವಾದಗಳನ್ನು ಹೇಳುತ್ತಾ ಮತ್ತು ಈ ಆರೋಗ್ಯ ಇಲಾಖೆಯ ಬೇಡಿಕೆಯನ್ನು ಮಂಡನೆ ಮಾಡಿದಂಥ ಆರೋಗ್ಯ

ಮಂತ್ರಿಗಳಿಗೆ ವಂದಿಸಿ ಮತ್ತು ಬೇಡಿಕೆಗಳಿಗೆ ಅನುಮೋದನೆಯನ್ನು ಸೂಚಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಯು. ಕೆ. ಶಾಮಣ್ಣ (ಶೃಂಗೇರಿ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಆರೋಗ್ಯ ಇಲಾಖೆಯ ಬೇಡಿಕೆಯನ್ನು ಸಂಪೂರ್ಣವಾಗಿ ಬೆಂಬಲಿಸಿ, ನುರಿತ ಮತ್ತು ಹಿರಿಯ ಆರೋಗ್ಯ ಮಂತ್ರಿಗಳ ಸೇವೆಯನ್ನು ಸ್ಮರಿಸುತ್ತ, ಅವರು ಇನ್ನೂ ಶಕ್ತಿಯುತವಾಗಿ ಕೆಲಸ ಮಾಡುವಂಥ ಅವಕಾಶ ಸರ್ಕಾರದ ಮೂಲಕವಾಗಿ ನಡೆಯಲಿ ಎಂದು ಮತ್ತೊಮ್ಮೆ ಹಾರೈಸಿ ನಾನು ಸರ್ಕಾರದ ಗಮನಕ್ಕೆ ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ತರಲು ಈ ಸಂದರ್ಭದಲ್ಲಿ ಬಯಸುತ್ತೇನೆ.

ಮೊದಲನೆಯದಾಗಿ, ನಿನ್ನೆ ತಮ್ಮ ಗಮನಕ್ಕೆ ಕಾಲಿಂಗ್ ಅಟೆನ್‌ಷನ್ ಕೇಳುವ ಮೂಲಕ ನನ್ನ ಕ್ಷೇತ್ರವಾದ ಶೃಂಗೇರಿಯಲ್ಲಿನ ಕೊಪ್ಪ ತಾಲ್ಲೂಕಿನ ಕುಂಚೂರು ಗ್ರಾಮವೆಂದು ಹೇಳತಕ್ಕ ಪ್ರದೇಶದಲ್ಲಿ ಮಂಗನ ಕಾಯಿಲೆ ಎಂದು ನಾವು ಏನು ಕರೆಯುತ್ತೇವೆ ಅದು ಈಗ 15 ದಿನದಿಂದ ಬಹಳ ಭೀಕರವಾಗಿ ಹುಟ್ಟಿಕೊಂಡು ಜನರಲ್ಲಿ ಭೀತಿಯನ್ನು ಹುಟ್ಟಿಸುವಂಥ ಮಟ್ಟಕ್ಕೆ ಬಂದಿದೆ. ಈ ವಿಚಾರವನ್ನು ನಾನು ಸದನದ ಮೂಲಕವಾಗಿ ಆರೋಗ್ಯ ಮಂತ್ರಿಗಳ ಗಮನಕ್ಕೆ ತಂದಿದ್ದು, ಆ ಖಾಯಿಲೆಯನ್ನು ಹೋಗಲಾಡಿಸುತ್ತಾರೆಂದು ಆಶಿಸುತ್ತೇನೆ.

ಕೊಪ್ಪ ತಾಲ್ಲೂಕಿನ ಕುಂಚೂರು ಗ್ರಾಮವು ಸುಮಾರು 300 ರಿಂದ 500 ರವರೆಗೆ ಜನಸಂಖ್ಯೆಯನ್ನು ಹೊಂದಿರತಕ್ಕ ಪ್ರದೇಶವಾಗಿದೆ. ಅಲ್ಲಿ ಮಂಗನಿಗೆ ಖಾಯಿಲೆ ಬಂದು ಈಗಾಗಲೆ 506 ಮಂಗಗಳು ಸತ್ತಿವೆ. ಈ ರೀತಿ ಮಂಗಗಳು ಸತ್ತ ಪ್ರದೇಶದಲ್ಲಿ ಹಸುಗಳು ಹೋದಾಗ ಮಂಗಗಳ ಮೈಮೇಲೆ ಕುಳಿತುಕೊಳ್ಳತಕ್ಕ ಸಣ್ಣ ಚಿಗಟಗಳು ಹಸುಗಳ ಮೇಲೆ ಕುಳಿತುಕೊಳ್ಳುತ್ತವೆ. ಮತ್ತು ಮಲೆನಾಡು ಪ್ರದೇಶದ ಜನರು ಗೊಬ್ಬರ ಮಾಡುವುದಕ್ಕೆ ಕಾಡಿಗೆ ಹೋಗಿ ಒಣಗಿದ ಎಲೆಗಳನ್ನು ತರುವಂಥ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಮತ್ತ ಈ ಭಾಗದ ಹೆಚ್ಚಿನ ಮಹಿಳೆಯರು ಕಾಡಿಗೆ ಹೋಗಿ ತರಗನ್ನು ತಂದು ದನಗಳ ಕೊಟ್ಟಿಗೆಗೆ ಹಾಕತಕ್ಕ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ. ಈ ರೀತಿಯ ಕೆಲವು ಸಂಪ್ರದಾಯಗಳು ನಮ್ಮ ಮಲೆನಾಡು ಪ್ರದೇಶದಲ್ಲಿವೆ. ಇದರಿಂದಾಗಿ, ನಮ್ಮ ಮಲೆನಾಡಿನಲ್ಲಿ ಮಂಗನ ಖಾಯಿಲೆ ಮನುಷ್ಯನಿಗೆ ಬಂದಿದೆ. ಇವತ್ತು ದಿನಕ್ಕೆ 15-20ಜನರು ಕೊಪ್ಪದ ಆಸ್ಪತ್ರೆಗೆ ಬಂದು ಸೇರುತ್ತಿದ್ದಾರೆ. ಆ ಖಾಯಿಲೆ ನಮ್ಮ ಭಾಗದಲ್ಲಿ ಇದುವರೆಗೆ ಇರಲಿಲ್ಲ. ಕಳೆದ ಎರಡು ವರ್ಷಗಳ ಹಿಂದೆ ಶಿವಮೊಗ್ಗಾದ ಸೊರಬ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಈ ಖಾಯಿಲೆ ಬಹಳ ಭೀಕರವಾಗಿ ಹಬ್ಬಿ ತನ್ಮೂಲಕ ನಶಿಸಿಹೋಗಿತ್ತು. ಆದರೆ ದುರಾದೃಷ್ಟವಶಾತ್ ಈಗ ನಮ್ಮ ಭಾಗಕ್ಕೆ ಬಂದಿದೆ. ಈ ಖಾಯಿಲೆಯು ಮೊದಲು ತಲೆ ನೋವಿನಿಂದ ಪ್ರಾರಂಭವಾಗುತ್ತದೆ. ತಲೆನೋವು ಪ್ರಾರಂಭವಾಗುತ್ತಿದ್ದ ಹಾಗೆಯೇ ಭೀಕರವಾಗಿ ಜ್ವರ ಪ್ರಾರಂಭವಾಗಿ 104-105 ಡಿಗ್ರಿಯವರೆಗೆ ಜ್ವರ ಬರುತ್ತದೆ. ಅದು ಆದಮೇಲೆ ಯಾರು ಆ ಖಾಯಿಲೆಗೆ ತುತ್ತಾಗಿರುತ್ತಾರೋ ಅವನು ಕಾಲಿನ ಶಕ್ತಿಯನ್ನು ಕಳೆದುಕೊಳ್ಳುತ್ತಾನೆ. ಅದು ಆದಮೇಲೆ ಸೊಂಟನೋವನ್ನು ಅನುಭವಿಸುತ್ತಾ ಮಲಗಿಕೊಳ್ಳಬೇಕಾದಂತಹ ಒಂದು ಪ್ರಮೇಯ ಬಂದು ಅವನು ಬಹಳವಾಗಿ ನರಳಬೇಕಾಗುತ್ತದೆ. ಜೊತೆಗೆ ಅವನ ತಲೆ ಕೂದಲೂ ಸಹ ಉದುರಿ ಹೋಗುವಂತಹ ಪ್ರಸಂಗಗಳನ್ನು ನಾವು ನೋಡಿದ್ದೇವೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಂಥ ಪ್ರಸಂಗವನ್ನು ನಾವು ನೋಡಿದ್ದೇವು. ಈ ಭೀಕರವಾದ ಖಾಯಿಲೆ ನಮ್ಮ ತಾಲ್ಲೂಕಿಗೂ ಬರುತ್ತದೆ ಎಂದು ಹೇಳುವಂಥ ಭೀತಿ ನಮಗೆ ಬಹಳವಾಗಿದೆಯೆಂದು ಹೇಳುವುದಕ್ಕೆ ಭೀತಿಯಾಗುತ್ತಿದೆ. ಏಕೆಂದರೆ ಈ ಕಾಯಿಲೆಯಿಂದ ಯಾರು ಮಲಗಿದ್ದಾರೋ ಅವರಿಗೆ ಮೊದಲು ವಾಂತಿ ಪ್ರಾರಂಭವಾಗುತ್ತದೆ, ವಾಂತಿ ಮಾಡುವಂಥ ಸಂದರ್ಭದಲ್ಲಿ ಬ್ಲಡ್‌ನ್ನು ವಾಂತಿ ಮಾಡುತ್ತಾನೆ. ಮೂಗಿನಲ್ಲೂ ಸಹ ಬ್ಲಡ್ ಬರುವುದನ್ನು ನಾವು ನೋಡಿದ್ದೇವೆ. ಮಲದಲ್ಲೂ ಸಹ ಹೋಗುವುದನ್ನು ನೋಡಿದ್ದೇವೆ. ಈ ರೀತಿ ಈ ಖಾಯಿಲೆಯ ಲಕ್ಷಣಗಳಿವೆ. ಕೊಪ್ಪ ಆಸ್ಪತ್ರೆಗೆ ಒಂದು ದಿವಸಕ್ಕೆ 15 ರಿಂದ 20 ಜನ ಈ ಖಾಯಿಲೆಯಿಂದ ನರಳುವವರು ಬರುತ್ತಿದ್ದಾರೆ. ಬಹುಶಃ ಈಗಾಗಲೇ ಅಲ್ಲಿ ಜಾಗವಿಲ್ಲ. ವೈದ್ಯರ ಸಂಖ್ಯೆಯೂ ಬಹಳ ಕಡಿಮೆ

ಇದೆ. ಜೊತೆಗೆ ವಾತಾವರಣ ಶುದ್ಧಿ ಅವರನ್ನು ನೋಡುವುದಕ್ಕೆ ಬಂದವರಿಗೆ ಆ ಖಾಯಿಲೆ ಹರಡುತ್ತದೆಂದು ಹೇಳುವಂತಹ ಮಟ್ಟಕ್ಕೆ ಬಂದಿದೆ. ಆದ್ದರಿಂದ ದಯವಿಟ್ಟು ನಾನು ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ, ಅವರಿಗೆ ಫಸ್ಟ್ ಏಯ್ಡ್‌ನ್ನು ಏನು ಕೊಡಬೇಕು ಎನ್ನುವುದನ್ನು ಮಾಡಿಲ್ಲ. ಅದನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಾನು ಕಳೆದ ಭಾನುವಾರದಂದು ಆಸ್ಪತ್ರೆಗೆ ಹೋಗಿ ವಿಚಾರಿಸಿದಾಗ ವೈದ್ಯರು ಇದು 21 ದಿವಸದವರೆಗೆ ಇದ್ದವರಿಗೆ ನಾವು ಆ ಬ್ಲಡ್‌ನ್ನು ಟೆಸ್ಟ್ ಮಾಡಬೇಕು, ಟೆಸ್ಟ್ ಮಾಡಿ ಇದು ಮಂಗನ ಖಾಯಿಲೆ ಹೌದು ಎಂದು ಸರಿಯಾಗಿ ಗೊತ್ತಾದ ಮೇಲೆ ನಾವು ಇದಕ್ಕೆ ಚಿಕಿತ್ಸೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು, ಅಲ್ಲಿಯವರೆಗೆ ಮಂಗನ ಕಾಯಿಲೆಗೆ ನಾವು ಚಿಕಿತ್ಸೆ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಬಹುಶಃ ಅವರು ಹೇಳಿದ ರೀತಿ ನೀತಿಗಳಲ್ಲಿ ಸರಿಯೆಂದು ನಾನು ಭಾವಿಸಿಕೊಳ್ಳುತ್ತೇನೆ. ಏಕೆಂದರೆ ಅವರು ಹೇಳುತ್ತಾರೆ, ರಕ್ಷಣೆ ಕೊಟ್ಟರೂ ಸಹ ರಿಯಾಕ್ಷನ್ ಆಗಿ ಅದಕ್ಕೆ ಮನುಷ್ಯ ಆಹುತಿಯಾಗಬಹುದು ಎನ್ನುವ ಒಂದು ಭೀತಿ ಇದೆ. ಆದ್ದರಿಂದ ಅದು ಬೇಡವೆಂದು ಹೇಳುತ್ತೇನೆ. ಮೇಲ್ಮಟ್ಟದ ಅಧಿಕಾರಿಗಳ ಮೂಲಕವಾಗಿ, ತಜ್ಞರ ಮೂಲಕವಾಗಿಯಾಗಲಿ ಅವರಿಂದ ಆದೇಶ ಬಂದರೆ ಮಾತ್ರ ಇದಕ್ಕೆ ಚಿಕಿತ್ಸೆ ಕೊಡುತ್ತೇವೆಂಬ ಮಾತನ್ನು ಹೇಳಿದ್ದಾರೆ. ಆದರೆ ಊರಿನ ಜನ ಏನು ಮಾಡಿದ್ದಾರೆ, ಇವತ್ತು 10 ಜನ ನಾಳೆ 15 ಜನ ಹೀಗೆ ಆಸ್ಪತ್ರೆಗೆ ಹೋಗುತ್ತಿದ್ದಾರೆ. ಹೀಗೆ ಪ್ರತಿದಿವಸ ಹೆಚ್ಚಿನ ಸಂಖ್ಯೆಯಲ್ಲಿ ಹೋಗುವುದರಿಂದ ಬಹುಶಃ ಇಡೀ ಊರು ಮತ್ತು ಆಜುಬಾಜಿನ ತಾಲ್ಲೂಕಿನಲ್ಲೂ ಜನರು ಭೀತಿಗೆ ತುತ್ತಾಗಿದ್ದಾರೆ. ಆದ್ದರಿಂದ ಮುಖ್ಯವಾಗಿ ಪ್ರಿವೆಂಟೀವ್ ಮೆಡಿಸಿನ್‌ನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅದನ್ನು ಕೊಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮಂಗ ಸತ್ತು ಬಿದ್ದಿರುವಂತಹ ಪ್ರದೇಶದಲ್ಲಿ ಈ ಕಾಯಿಲೆ ಹರಡುತ್ತದೆ. ನಾನು ಈಗಾಗಲೇ ಬುಕ್‌ಲೆಟ್‌ಗಳನ್ನು ನೋಡಿದ್ದೇನೆ. ಅದರಲ್ಲಿ ಇನ್ನು ಮುಂದೆ ಈ ಕಾಯಿಲೆ ಹರಡದ ಹಾಗೆ ಅಲ್ಲಿಗೆ ಔಷಧಿ ಸ್ಪ್ರೇ ಮಾಡಬೇಕು. ಅಥವಾ ಇನ್ನಿತರ ಕ್ರಿಮಿಕೀಟಗಳು ಬರದ ಹಾಗೆ ಸ್ಪ್ರೇ ಮಾಡಬೇಕು. ಆದರೆ ನಮ್ಮ ಭಾಗದಲ್ಲಿ ಇನ್ನು ಔಷಧಿಯನ್ನು ಸ್ಪ್ರೇ ಮಾಡಿಲ್ಲ. ಆದ್ದರಿಂದ ಆ ಕಾಡಿನ ಪ್ರದೇಶದಲ್ಲಿ ಎಲ್ಲೆಲ್ಲಿ ಮಂಗಗಳು ಸತ್ತಿದ್ದಾವೋ ಅಲ್ಲೆಲ್ಲಾ ಔಷಧಿಯನ್ನು ಸ್ಪ್ರೇ ಮಾಡಿಸುವಂತಹ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈಗ ವ್ಯಾಕ್ಸಿನ್‌ನ್ನು ಹಾಕಬೇಕೆಂದು ಕೇಳಿದಾಗ 21 ದಿವಸ ಕಾಯುವಂತಾದ್ದು ಯೋಗ್ಯವಲ್ಲ. ಬಹುಶಃ ಕಾಯಿಲೆಯ ಮಟ್ಟ ಜಾಸ್ತಿಯಾಗಬಹುದು. ಆದ್ದರಿಂದ ಈ ಕಾಯಿಲೆ ಊರೆಲ್ಲಾ ಸ್ಪ್ರೆಡ್ ಆಗುವಂತಹ ಮಟ್ಟಕ್ಕೆ ಬರುತ್ತದೆಂದು ಹೇಳಿದರೆ ತಪ್ಪಿಲ್ಲವೆಂದು ನನಗನಿಸಿದೆ. ಏಕೆಂದರೆ ಕುಂಚೂರನ್ನು ಬಿಟ್ಟು ಹಾಗೆಯೇ ನಾರ್ವೆ ಕಡೆಗೆ ಹೋಗುತ್ತಿದೆಯೆಂದು ಕೇಳಿದ್ದೇವೆ. ರಾತ್ರಿ ಫೋನಿನಲ್ಲಿ ಮಾತನಾಡುವಾಗ ನಾರ್ವೆ ಭಾಗದ ಜನರಿಗೂ ಅದು ತಲುಪಿದೆಯೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಹಗುರವಾಗಿ ಯೋಚನೆ ಮಾಡದೇ ಬಹಳ ಜಾಗರೂಕತೆಯಿಂದ ಇದರ ಬಗ್ಗೆ ಗಮನ ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಜೊತೆಗೆ ಆಸ್ಪತ್ರೆಯಲ್ಲಿ ಮಲಗುವುದಕ್ಕೂ ಕಷ್ಟವಾಗಿದೆ, ಅಂದರೆ ಆಸ್ಪತ್ರೆಯಲ್ಲಿ ಹೆಚ್ಚು ಜನರು ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿರುವುದರಿಂದ ಜಾಗವಿಲ್ಲದಾಗಿದೆ. ಒಂದು ವಾರ್ಡ್‌ನ್ನು ಸಂಪೂರ್ಣವಾಗಿ ಅವರಿಗೆ ಕೊಟ್ಟಿದ್ದಾರೆ ಬೇರೆ ಬೇರೆ ಕಡೆ ಅವರನ್ನು ಹಾಕಬೇಕೆಂದರೆ ಅಲ್ಲಿ ಸೇರಿಸುವುದಿಲ್ಲ. ಹೊರಗಡೆ ಹಾಕಬೇಕಾಗುತ್ತದೆ, ಆದರೂ ಚಿಂತೆ ಇಲ್ಲ ಹಾಕಿ ಎಂದು ಹೇಳಿ ಅದಕ್ಕೆ ಚಪ್ಪರ ಇನ್ನಿತರ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಆ ವ್ಯವಸ್ಥೆಯನ್ನು ಮಾಡಿದರೂ ಕೂಡ ಆ ಕಾಯಿಲೆ ಹರಡುತ್ತದೆ ಎಂಬ ಭೀತಿ ಇದೆ. ನೋಡಿಕೊಳ್ಳುವುದಕ್ಕೂ ಸಹ ಜನ ಬರುತ್ತಿಲ್ಲ. ಇದನ್ನು ಏತಕ್ಕೆ ಹೇಳುತ್ತೇನೆಂದರೆ ಅವರಿಗೆ ವ್ಯಾಕ್ಸಿನ್‌ನ್ನು ಕೊಡಬೇಕು, ಅವರು ಆ ಕಾಯಿಲೆಯವರ ಜೊತೆ ಹೋಗುವಂತಹ ಸಂದರ್ಭದಲ್ಲಿ ಈಗಾಗಲೇ ಈ ಬುಕ್‌ಲೆಟ್‌ನಲ್ಲಿ ಇರುವ ಹಾಗೆ ಮೈಯಿಗೆ ಹಚ್ಚಿಕೊಳ್ಳುವುದಕ್ಕೆ ಕೆಲವು ಔಷಧಿಗಳನ್ನು ಕೊಡಬೇಕು. ಅದು ಏಕೆ

ಬರೀ ಪುಸ್ತಕದಲ್ಲಿ ಇದೆ ಅಂತ ನನಗೆ ಗೊತ್ತಿಲ್ಲ. ಆದ್ದರಿಂದ ಅದನ್ನು ಸಹ ಕಳುಹಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ವೈದ್ಯರು, ಈ ಕಾಯಿಲೆ ಬಂದಂತಹವರಿಗೆ ಮೊದಲನೆಯ ಡ್ರಿಪ್ಸ್‌ನ್ನು ಅವರು ಹಾಕಬೇಕು. ಬಹುಶಃ ಬಡವರಿಗೆ ಈ ಕಾಯಿಲೆ ಬಂದಿರುವುದರಿಂದ ಯಾರು ದುಡ್ಡು ಕೊಟ್ಟು ಡ್ರಿಪ್ಸ್ ಹಾಕಿಸುವಂತಹ ಸ್ಥಿತಿಯಲ್ಲಿ ಇಲ್ಲ. ಚಿಕ್ಕಮಗಳೂರಿನಲ್ಲಿ ಈಗ ಏನು ಒಂದು ಡ್ರಿಪ್ಸ್‌ಗಳಿವೆ, ಅವೆಲ್ಲಾ ರಿಜೆಕ್ಟ್ ಡಿಪ್ಸ್ ಇದ್ದಾವೆ. ಗ್ಲೂಕೋಸ್‌ನ್ನು ಕೊಡುವುದು ಬೇಡವೆಂದು ಆದೇಶ ಬಂದಿದೆ, ಆದ್ದರಿಂದ ನಾವು ಕೊಡುವುದಕ್ಕೆ ಆಗುವುದಿಲ್ಲವೆಂದು ವೈದ್ಯರು ಹೇಳುತ್ತಾರೆ, ಅದು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ. ಇದು ಬಡವರಿಗೆ ಬಂದಿರತಕ್ಕ ಕಾಯಿಲೆ. ಬಡವರ ಕಷ್ಟವನ್ನು ನಾವು ನಿವಾರಿಸುತ್ತೇವೆಂದು ಹೇಳುತ್ತಿರುವುದರಿಂದ ಅವರ ಕಷ್ಟದಲ್ಲಿ ನಾವು ಸಹಾಯ ಮಾಡದಿದ್ದರೆ ಅವರಿಗೆ ಕಷ್ಟವಾಗುತ್ತದೆ. ಆದುದರಿಂದ ಅವರಿಗೆ ಡ್ರಿಪ್ಸ್‌ನ್ನು ಕೊಡತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಸರ್ಕಾರವನ್ನು ಕೇಳುತ್ತಿದ್ದೇನೆ. ನಾನು ಇಲ್ಲಿ ಆಸ್ಪತ್ರೆಯ ಬಗ್ಗೆ ಹೇಳಿದರೆ ತಪ್ಪಾಗುತ್ತದೆಂದು ಯಾರಾದರೂ ಭಾವಿಸುತ್ತಾರೆಂದು ನನಗೆ ಅನಿಸಿದರೂ, ಮತ್ತೊಂದು ಕಡೆಯಿಂದ ನನಗೆ ಧೈರ್ಯವಿದೆ. ಏಕೆಂದರೆ ರಾಜ್ಯದ ಆರೋಗ್ಯಮಂತ್ರಿಗಳೂ ಮತ್ತು ಕೇಂದ್ರದ ಆರೋಗ್ಯ ಮಂತ್ರಿಗಳೂ ಕೂಡ ನನ್ನ ಕ್ಷೇತ್ರವಾದ ಎನ್.ಆರ್. ಪುರ, ಶೃಂಗೇರಿ ಮತ್ತು ಕೊಪ್ಪ ಈ 3 ಆಸ್ಪತ್ರೆಗಳನ್ನೂ ಅವರು ವೀಕ್ಷಣೆ ಮಾಡಿಕೊಂಡು ಬಂದಿದ್ದಾರೆ. ನಾನು ಹೇಳುವುದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ. ಅಲ್ಲಿ ಒಬ್ಬ ರೋಗಿ ಮಲಗಿದರೆ ಅವನ ಕಾಯಿಲೆ ಕಡಿಮೆಯಾಗುವುದು ಇರಲಿ, ಅವನು ದೇವರೇ ನನ್ನನ್ನು ಸಾಕುಮಾಡಿ ನಿನ್ನಲ್ಲಿಗೆ ಕರೆದುಕೋ ಎನ್ನತಕ್ಕ ಮಟ್ಟಕ್ಕೆ ಬರಬಹುದೆಂಬುದನ್ನು ಅವರು ಕಣ್ಣಾರೆ ನೋಡಿದ್ದಾರೆ. ಆದುದರಿಂದ ಅವರು ನನ್ನ ಕ್ಷೇತ್ರದ ಜನರಿಗೆ ಸಹಾಯ ಮಾಡಬೇಕೆಂದು ಆಸ್ಪತ್ರೆ ರಿಪೇರಿಗಾಗಿ 5 ಲಕ್ಷ ರೂ.ಗಳ ಒಂದು ಎಸ್ಟಿಮೇಟ್‌ನ್ನು ಮಾಡಿ ಕಳುಹಿಸಿಕೊಡಿ ಅದನ್ನು ನಾನು ಮಾಡಿಸಿ ಕೊಡುತ್ತೇನೆಂದು ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದಲ್ಲಿ ಹೇಳಿ ಬಂದಿದ್ದಾರೆ. ಬಹುಶಃ ಇದು ಆ ಕ್ಷೇತ್ರದ ಶಾಸಕನಾದ ನನ್ನ ದುರ್ದೈವ ಎಂದು ತಿಳಿದುಕೊಂಡಿದ್ದೇನೆ. ನಾನು ಬಹಳ ಕಷ್ಟಪಟ್ಟು ಇಂಜಿನಿಯರಿಂಗ್ ಇಲಾಖೆಗಳನ್ನು ಹಿಡಿದು ಎಸ್ಟಿಮೇಟ್ ಮಾಡಿಸಿ ಅದನ್ನು 8 ದಿವಸದಲ್ಲಿ ಕಳುಹಿಸಿಕೊಟ್ಟರೂ ಕೂಡ ಅದು ಮಾನ್ಯ ಮಂತ್ರಿಗಳ ಟೇಬಲ್‌ಗೆ ಇನ್ನೂ ಬಂದಿಲ್ಲ. ಇದು ನನ್ನ ದುರ್ದೈವ ಎಂದರೆ ತಪ್ಪಲ್ಲ. ನಾನು ಇದರ ಬಗ್ಗೆ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗೂ ಮತ್ತು ಆನಂದರಾವ್ ಸರ್ಕಲ್‌ಗೂ 4-5 ಸಾರಿ ಸುತ್ತಿ ಬಂದಿದ್ದೇನೆ. ಬಹುಶಃ ನನ್ನ ಸ್ನೇಹಿತರು ಯಾರಾದರೂ ನೋಡಿದರೆ ಇವನು ಏನಾದರೂ ಏಜೆಂಟಗಿರಿ ಮಾಡುತ್ತಾನೆಂದು ಹೇಳುತ್ತಾರೇನೋ ಎನ್ನತಕ್ಕ ಶಂಕೆ ನನಗೆ ಬಂತು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ. . .

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಕೊಪ್ಪ ಆಸ್ಪತ್ರೆಯನ್ನು ದುರಸ್ತಿ ಮಾಡತಕ್ಕದ್ದು ಅಗತ್ಯವಿದೆ. ಏಕೆಂದರೆ ಅದು ಬಹಳ ಹೀನ ಸ್ಥಿತಿಯಲ್ಲಿದೆ. ಆದರೆ ಈ ದುರಸ್ತಿ ಕಾಮಗಾರಿಗಳನ್ನು ಮಾಡುವುದಕ್ಕೆ ಜಿಲ್ಲಾ ಯೋಜನೆಯಲ್ಲಿ ಜಿಲ್ಲಾ ಪರಿಷತ್ತಿನವರು ಹೊಣೆಗಾರರು. ಇದರ ಉಸ್ತುವಾರಿ, ಇದರ ನಿಯಂತ್ರಣ ಮತ್ತು ಇದರ ದುರಸ್ತಿ ಮಾಡತಕ್ಕ ಕೆಲಸ ಜಿಲ್ಲಾ ಪರಿಷತ್ತಿಗೆ ಸಂಬಂಧಪಟ್ಟದ್ದು. ಜಿಲ್ಲಾ ಪರಿಷತ್ತಿನ ಡಿಸ್ಟ್ರಿಕ್ಟ್ ಹೆಡ್‌ನಲ್ಲಿರತಕ್ಕ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕಷ್ಟು ಸೇವಿಂಗ್ಸ್ ಇದೆ. ತಮ್ಮ ಸೇವಿಂಗ್‌ನಲ್ಲಿ ಈ ದುರಸ್ತಿ ಕಾರ್ಯವನ್ನು ಮಾಡಬೇಕೆಂದು ಸ್ಪಷ್ಟವಾಗಿ ನಿರ್ದೇಶನವನ್ನು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಈಗಾಗಲೇ ಸ್ಥಳೀಯವಾಗಿ ಕೊಟ್ಟಿದ್ದೇನೆ ಮತ್ತು ಅಧಿಕೃತವಾಗಿ ಕೂಡ ಕೊಟ್ಟಿದ್ದೇನೆ. ಜಿಲ್ಲಾಪರಿಷತ್ತುಗಳಿಂದ ಈ ಕೆಲಸ ಆಗಬೇಕೇ ಹೊರತು ಇದು ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಇಲ್ಲಾಗಲಿ, ವಿಧಾನ ಸೌಧದಲ್ಲಾಗಲಿ ಆಗತಕ್ಕ ಕೆಲಸವಲ್ಲ. ಆದರೂ ಮಾನ್ಯ ಸದಸ್ಯರು ಎಸ್ಟಿಮೇಟ್‌ನ್ನು ಇಲ್ಲಿಗೆ ಕಳುಹಿಸಿದ್ದೇನೆಂದು ಹೇಳುತ್ತಿದ್ದಾರೆ. ಆದುದರಿಂದ ಸೂಕ್ತ ನಿರ್ದೇಶನವನ್ನು ಸಂಬಂಧಪಟ್ಟವರಿಗೆ ನಾಳೆಯೇ ಕಳುಹಿಸಿಕೊಡುತ್ತೇನೆಂದು ತಮ್ಮ ಮುಖಾಂತರ ಅವರಿಗೆ ವಾಗ್ದಾನವನ್ನು ಕೊಡಬಯಸುತ್ತೇನೆ.

ಶ್ರೀ ಯು. ಕೆ. ಶಾಮಣ್ಣ :-ತಮ್ಮ ನಿರ್ದೇಶನದ ಮುಖಾಂತರ ಅದು ಆದಷ್ಟು ಜಾಗ್ರತೆ ರಿಪೇರಿ ಆಗಲಿ

ಎಂದು ಆಶಿಸುತ್ತೇನೆ. ಆಸ್ಪತ್ರೆಗೆ ಸಂಬಂಧಪಟ್ಟಂತೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಲ್ಯಾವೆಟ್ರಿಗಳಿಗೆ 4 ಇಂಚು ಪೈಪುಗಳನ್ನು ಹಾಕಿ ಅವು ಬ್ಲಾಕ್ ಆಗಿ ನೀರು ಹೊರಗಡೆ ಬಂದು ಅವ್ಯವಸ್ಥೆಯಾಗಿದೆ. ಇದು ಜಿಲ್ಲಾ ಪರಿಷತ್ತಿನವರು ಮಾಡತಕ್ಕದ್ದು, ನಾವು ಮಾಡುವುದಲ್ಲ ಎಂದು ಅವತ್ತೂ ಕೂಡ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಇಲಾಖೆಯವರನ್ನು ಚುರುಕುಗೊಳಿಸಿ ಈ ಕೆಲಸವನ್ನು ಮಾಡಿಸಬೇಕೆಂದು ಒತ್ತಾಯಮಾಡುತ್ತೇನೆ. ನಮ್ಮ ಮಲೆನಾಡು ಭಾಗದ ಅನೇಕ ಆಸ್ಪತ್ರೆಗಳ ವ್ಯವಸ್ಥೆ ಇವತ್ತು ಹದಗೆಟ್ಟಿಗೆ. ಅಲ್ಲಿನ ಅವ್ಯವಸ್ಥೆಯನ್ನು ರಿಪೇರಿ ಮಾಡಿಸಲು ಬೇಕಾದಂಥ ಹಣ ಜಿಲ್ಲಾ ಪರಿಷತ್ತಿನಲ್ಲಿದೆ, ಆದರೆ ಅವರು ಖರ್ಚುಮಾಡಿಲ್ಲ ಎನ್ನತಕ್ಕದ್ದನ್ನು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಯಾವುದೇ ಕಾರಣಕ್ಕಾಗಲಿ ಅವರು ಕೊಡದೇ ಇರುವುದರಿಂದ ಅವರನ್ನು ಇನ್ನೂ ಚುರುಕುಗೊಳಿಸಿ ಈ ಕೆಲಸವನ್ನು ಮಾಡಿಸುವುದು ಸೂಕ್ತವೆಂದು ನನಗನಿಸಿದೆ. ನಮ್ಮ ಮಲೆನಾಡು ಪ್ರದೇಶದ ಆಸ್ಪತ್ರೆಗಳಲ್ಲಿ ಬಹಳ ಜನ ವೈದ್ಯರಿಲ್ಲ. ಮಂತ್ರಿಗಳು ಬಹಳಷ್ಟು ಪ್ರಯತ್ನಮಾಡಿ ಎಲ್ಲ ಆಸ್ಪತ್ರೆಗಳಿಗೂ ವೈದ್ಯರನ್ನು ನೇಮಿಸಿದರು. ಆದರೆ ಅವರು ಯಾರೂ ಅಲ್ಲಿಗೆ ಹೋಗಿ ಛಾರ್ಜ್ ತೆಗೆದುಕೊಂಡಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಜೊತೆ ಕೆಲವು ಸಂದರ್ಭದಲ್ಲಿ ವಾದಮಾಡಿದ್ದೇನೆ, ಒಂದು ಸಾರಿ ಒಬ್ಬರನ್ನು ಹಾಕಿದಮೇಲೆ ಮತ್ತೆ ಅವರನ್ನು ಬೇರೆಕಡೆ ಹೇಗೆ ವರ್ಗಮಾಡಿದರೆಂದು ಕೇಳಿದಾಗ ಒಂದಲ್ಲೊಂದು ಕಾರಣದಿಂದ ಅವರು ಬೇರೆಕಡೆ ಹೋಗಿದ್ದಾರೆಂದು ಹೇಳಿದರು. ಕಂಟ್ರಾಕ್ಟ್ ಬೇಸಿಸ್‌ಮೇಲೆ ವೈದ್ಯರನ್ನು ನೇಮಿಸಿಕೊಂಡು ಎಲ್ಲ ಆಸ್ಪತ್ರೆಗಳಿಗೂ ಹಾಕುತ್ತೇವೆನ್ನುವಂಥದ್ದನ್ನು ಈಗಾಗಲೇ ಅವರು ತಿಳಿಸಿದ್ದಾರೆ. ಇದು ಒಂದು ಬಹಳ ಉತ್ತಮವಾದ ಕೆಲಸ, ತಾವು ಈಗಲಾದರೂ ಬೇಗ ವೈದ್ಯರನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಬಹುಶಃ ಎಲ್ಲಾ ಆಸ್ಪತ್ರೆಗಳಲ್ಲೂ ಸ್ಟಾಫ್ ನರ್ಸ್‌ಗಳ ತೊಂದರೆ ಇದೆ ಮಾನ್ಯ ಸಚಿವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾನಾದರೂ ಕೇಳುತ್ತಿದ್ದೇನೆ, ಕೊಪ್ಪದಲ್ಲಿ ಉದಾಹರಣೆಗೆ ನನ್ನ ಕ್ಷೇತ್ರದ ಎಲ್ಲಾ ಭಾಗಗಳಲ್ಲೂ ಸಹ ಇವತ್ತು ಏನು ಸ್ಟಾಫ್ ನರ್ಸ್ ಕೊರತೆ ಇದೆ ಅದನ್ನು ತಪ್ಪಿಸಬೇಕು. ಒಂದು ಇಂಜಕ್ಷನ್ ಕೊಡಬೇಕಾದರೂ ಕಷ್ಟ ಇದೆ. ಕಾರಣ, ಏನಾದರೂ ರಿಯಾಕ್ಷನ್ ಬಂತು ಎಂದರೆ ಅಲ್ಲಿ ಡಾಕ್ಟರ್ಸ್ ಇರುವುದಿಲ್ಲ, ಇಂಥ ಒಂದು ಪರಿಸ್ಥಿತಿ ಇದೆ. ಮಲೆನಾಡು ಪ್ರದೇಶದ ಆಸ್ಪತ್ರೆಗಳಲ್ಲಿ ಡಾಕ್ಟರುಗಳ ಸಂಖ್ಯೆ ಕಡಿಮೆ ಇರುವುದರಿಂದ, ಸ್ಟಾಫ್ ನರ್ಸ್‌ಗಳಾದರೂ ಇದ್ದರೆ ಬಹಳ ಅನುಕೂಲವಾಗುತ್ತದೆಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ಆದ್ದರಿಂದ ಸ್ಟಾಫ್ ನರ್ಸ್‌ಸ್ ಸಹ ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಎ.ಎನ್.ಎಂ.ಎಸ್ ಬಗ್ಗೆ ಹೇಳುವುದಾದರೆ ಮಲೆನಾಡು ಪ್ರದೇಶಗಳಲ್ಲಿ ಬಹಳವಾಗಿ ಕೊರತೆ ಇದೆ. ಇವತ್ತು ನಮ್ಮ ರಾಷ್ಟ್ರದಲ್ಲಿ ಅದರಲ್ಲೂ ನಮ್ಮ ಅಭಿವೃದ್ಧಿ ಕಾರ್ಯದಲ್ಲಿ ಮೊದಲನೆ ಕಾರ್ಯವಾಗಿ ಜನನನಿಯಂತ್ರಣವನ್ನು ಮಾಡಬೇಕೆನ್ನುವಂಥ ಒಂದು ದೊಡ್ಡ ಕಾರ್ಯಕ್ರಮವನ್ನು ಹೊಂದಿರುವಂಥ ಸಂದರ್ಭದಲ್ಲಿ ಸಹ ನಾವು ಎ.ಎನ್.ಎಂ.ಎಸ್ ಕೊರತೆಯನ್ನು ಇಟ್ಟುಕೊಂಡು ಮಾಡುವಂಥದ್ದು ಸೂಕ್ತವಲ್ಲ. ಅವರ ಸೇವೆ ಬಹಳವಾಗಿ ಸಮಾಜಕ್ಕೆ ಬೇಕೆಂದು ಹೇಳುವುದನ್ನು ಅರ್ಥಮಾಡಿಕೊಂಡು ಆದಷ್ಟು ಬೇಗ ಅವರನ್ನು ತುಂಬಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ಅನೇಕಜನ ಹಳೆಯ ಎ.ಎನ್.ಎಂ.ಎಸ್ ಇದ್ದಾರೆ. ಅನೇಕಜನರಿಗೆ ಈಗಾಗಲೇ ವರ್ಗಾವಣೆ ಇಲ್ಲದೆ ಬಹುಶಃ ಎ.ಎನ್.ಎಂ.ಎಸ್. ಕೊರತೆ 6-7 ವರ್ಷಗಳಿಂದಲೂ ಇದೆ. ಅನೇಕ ಕಡೆ ಎ.ಎನ್.ಎಂ.ಎಸ್‌ಗಳು ಹಳ್ಳಿಗಳಿಗೆ ಹೋಗುವುದಿಲ್ಲ. ಅಂಥವರನ್ನು ಕೂಡಲೆ ಬದಲಾವಣೆ ಮಾಡದೆಹೋದರೆ ಬಹುಶಃ ಆ ಭಾಗಕ್ಕೆ ಹೊಂದಿಕೊಂಡು ಅವರ ಕಾರ್ಯ ಬಹಳವಾಗಿ ಸ್ಥಗಿತವಾಗಿದೆ. ಆದ್ದರಿಂದ ಆದಷ್ಟು ಹಳೆಯ ಎ.ಎನ್.ಎಂ.ಎಸ್.ಗಳು ಏನಿದ್ದಾರೆ ಅವರುಗಳನ್ನೆಲ್ಲ ವರ್ಗಾವಣೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ಆರೋಗ್ಯವೇ ಭಾಗ್ಯ ಎಂದು ಹೇಳುತ್ತಿದ್ದೇವೋ ಮಲೆನಾಡು ಪ್ರದೇಶದ ಜನರಿಗೆ ಬಹಳವಾಗಿ ಮುಖ್ಯವಾಗಿ ವೈದ್ಯರ ಒಂದು ಸವಲತ್ತನ್ನು ತಾವು ಮಾಡಿಕೊಡಬೇಕು. ಇಲ್ಲದೆಹೋದರೆ ನಾವು

ನಗೆಪಾಟಲಿಗೆ ಗುರಿ ಆಗುತ್ತೇವೆಂದು ಹೇಳಿದರೆ ತಪ್ಪಲ್ಲ. ನನ್ನ ಕ್ಷೇತ್ರದಲ್ಲಿ ಮೊನ್ನೆ ಒಂದು ಒಂದೂವರೆ ತಿಂಗಳ ಹಿಂದೆ ಒಂದು ಬಸ್ ಆಕ್ಸಿಡೆಂಟ್ ಆಯಿತು. ಆ ಬಸ್‌ನಲ್ಲಿ ಸಾಮಾನ್ಯವಾಗಿ 25-30 ಜನರಿಗೆ ಗಾಯಗಳಾಗಿ ಅವರಿ ಫಸ್ಟ್ ಏಡ್ ಕೊಡಲಿಕ್ಕೆ ಆಗಲಿಲ್ಲ. ಫಸ್ಟ್‌ಏಡ್ ಕೊಡಲಿಕ್ಕೆ ಡಾಕ್ಟರುಗಳು ಇಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ತಾಲ್ಲೂಕ್ ಕೇಂದ್ರಗಳಲ್ಲಿ ಫಸ್ಟ್ ಏಡ್ ಕೊಡುವುದಕ್ಕೆ ಡಾಕ್ಟರುಗಳಿಗಾಗಿ ಬೇರೆ ತಾಲ್ಲೂಕಿಗೆ ಹೋಗಬೇಕೆಂದರೆ ಇದು ನಗೆಪಾಟಲ ಕೆಲಸವಾಗುತ್ತದೆ. ಆದ್ದರಿಂದ ನಾವು ಪ್ರೈವೇಟ್‌ನವರನ್ನು ಸಹ ಸೇರಿಸಿಕೊಂಡು ಕೆಲಸ ಮಾಡಿದ್ದೇವೆ. ಇಂಥ ತೊಂದರೆಗಳಾಗದ ಹಾಗೆ ಕೆಲಸ ಮಾಡಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ತಮಗೆ ಭಗವಂತನು ಹೆಚ್ಚಿನ ಸೇವೆ ಮಾಡಲು ಇನ್ನೂ ಹೆಚ್ಚಿನ ಶ್ರದ್ಧೆ ಕೊಡಲೆಂದು ಹೇಳಿ ಈ ಒಂದು ಕೋಆಪರೇಟೀವ್ ಇಲಾಖೆಯ ಬಗ್ಗೆ ನಾನು ಸಹ ಒಂದೆರಡು ಅಭಿಪ್ರಾಯಗಳನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೇ ಪುತ್ತೂರು ಗ್ರಾಮದಲ್ಲಿ ಭಯಂಕರವಾದ ಪರಿಸ್ಥಿತಿ ಅಂದರೆ ಮಂಗನ ಕಾಯಿಲೆಯಿಂದ ಜನ ಭಯಭೀತರಾಗಿದ್ದಾರೆ. ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆನ್ನುವ ಮಾತನ್ನು ಹೇಳಿದ್ದಾರೆ. ಈ ಬಗ್ಗೆ ತಮ್ಮ ಮೂಲಕ ಸರ್ಕಾರ ತೆಗೆದುಕೊಂಡಿರತಕ್ಕಂಥ ಕಾರ್ಯಕ್ರಮದ ಬಗ್ಗೆ ಅವರಿಗೆ ಒಂದೆರಡು ಮಾತುಗಳಲ್ಲಿ ಹೇಳಬಯಸುತ್ತೇನೆ. ಈಗಾಗಲೇ ವ್ಯಾಕ್ಸಿನೇಷನ್ ಹಾಕತಕ್ಕಂಥ ಕಾರ್ಯಕ್ರಮ ಶುರು ಮಾಡಿದ್ದೇವೆ. ಸುಮಾರು ಇನ್ನೂರು ಜನರಿಗೆ ಒಳ್ಳೆಯ ಚಿಕಿತ್ಸೆಯನ್ನು ಈಗಾಗಲೇ ಈ ಕಾರ್ಯಕ್ರಮದ ಮೂಲಕ ಮಾಡಿದ್ದೇವೆ. ಸಾಕಷ್ಟು ಡ್ರಗ್ಸ್‌ನ್ನು ಸಪ್ಲೈ ಮಾಡಿದ್ದೇವೆ. ಟ್ರೈನಿಂಗ್ ಕೊಟ್ಟಿದ್ದೇವೆ. ಅದನ್ನು ಹತೋಟಿಗೆ ತರುವುದಕ್ಕೆ ತೀವ್ರತರವಾದ ಕಾರ್ಯಕ್ರಮವನ್ನು ಈಗಾಗಲೇ ಕೈಗೊಂಡಿದ್ದೇವೆ ಎನ್ನುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಯು. ಕೆ. ಶಾಮಣ್ಣ :- ಸನ್ಮಾನ್ಯ ಅಧ್ಯಕ್ಷರೇ, ಉತ್ತಮ ಕಾರ್ಯವನ್ನು ಮಾಡುತ್ತಿರುವಂಥ ಶ್ರೀಮಾನ್ ಮೋರೆಯವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಕೆಲಸ ಮಾಡುವಂಥ ಶಕ್ತಿ ಕೊಡಲಿ ಎಂದು ಹಾರೈಸಿ, ಮೊದಲನೆಯದಾಗಿ ಸೇವಾ ಸಹಕಾರಿ ಸಂಘಗಳು ಉತ್ತಮವಾದ ಕೆಲಸವನ್ನು ಮಾಡಬೇಕಾದರೆ ಅಲ್ಲಿ ಕೆಲಸ ಮಾಡುವಂಥ ಸೆಕ್ರೆಟರಿಗಳನ್ನು ವರ್ಗಾವಣೆ ಮಾಡುವಂಥ ಒಂದು ನೀತಿಯನ್ನು ತಾವು ಕಡ್ಡಾಯವಾಗಿ ತರದೆಹೋದರೆ ಈ ಸೇವಾ ಸಹಕಾರಿ ಸಂಘಗಳು ಕುಂಠಿತವಾಗಿ ಮೇಲೆ ಬರಲು ಸಾಧ್ಯವಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ಇಷ್ಟಪಡುತ್ತೇನೆ. ಕಾರಣ ನನ್ನ ಊರಲ್ಲಿ ಸೊಸೈಟಿಗಳು ಇದೆ. ಬಹುಶಃ ಅಲ್ಲಿ 100 ರೂಪಾಯಿ ಸಂಬಳಕ್ಕೆ ಸೇರಿಸಿಕೊಂಡಿರುವವರು ಸಹ ಇದ್ದಾರೆ. ಇವತ್ತು ಅವರಿಗೆ 500 ರೂಪಾಯಿಗಳನ್ನು ಕೊಡುತ್ತಿದ್ದೇವೆ. ಬಹುಶಃ ಇವತ್ತು ಅವರ ಕಾರ್ಯವೈಕರಿಗಳು ಅವರ ಒಂದು ಸವಲತ್ತುಗಳನ್ನು ನಾವು ಗಮನಿಸಿದಾಗ ಬಹುಶಃ ಬಹಳ ಬೇಸರವಾಗುತ್ತದೆ.

5. 15 ಪಿ. ಎಂ.

ಏಕೆಂದರೆ ಅಲ್ಲಿ ಬರೀ ಬೋರ್ಡ್ ಮಾತ್ರ ಉಳಿದಿದೆ. ಒಳಗಡೆ ಏನೂ ಇಲ್ಲ. ಇದು ಸರಿಯಾಗಬೇಕಾದರೆ, ಆರ್ಥಿಕ ನೀತಿಯನ್ನು ಸರಿ ಮಾಡಿಕೊಳ್ಳಬೇಕಾದರೆ ಅಲ್ಲೇ ಬೇರು ಬಿಟ್ಟಿರತಕ್ಕ ಸೆಕ್ರೆಟರಿಗಳನ್ನು ದಯಮಾಡಿ ವರ್ಗಾವಣೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ. ಇನ್ನು ಆಡಿಟ್ ಬಗ್ಗೆ ಹೇಳುವುದಾದರೆ ಪ್ರತಿ 3 ತಿಂಗಳಿಗೊಮ್ಮೆ ಯಾದರೂ ಎಲ್ಲಾ ಸೊಸೈಟಿಗಳನ್ನು ಆಡಿಟ್ ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಡೈರೆಕ್ಟರೇಟ್‌ಗಳನ್ನು ಮಾಡುತ್ತೇವೆ. ಎಲ್ಲವನ್ನು ಸಂಪೂರ್ಣವಾಗಿ ತಿಳಿದುಕೊಂಡಿರುವ ಡೈರೆಕ್ಟರುಗಳು ಸಿಗುವುದು ಕಷ್ಟವಾಗುತ್ತದೆ. ಏತಕ್ಕೆ ಹೇಳುತ್ತಿದ್ದೇನೆಂದರೆ ಏನು ಪರ್ಚೇಸ್ ಕಮಿಟಿಗಳನ್ನು ಮಾಡಬೇಕೆಂದರೂ ಸೆಕ್ರೆಟರಿಗಳು ಒಪ್ಪುವುದಿಲ್ಲ. ಅದಕ್ಕೆ ಬಿಲ್ ಹಾಕುವ ವ್ಯವಸ್ಥೆ ಸರಿಯಾಗಿರುವುದಿಲ್ಲ.

ತಮ್ಮಷ್ಟಕ್ಕೆ ತಾವೇ ವ್ಯವಹಾರ ಮಾಡಿಕೊಂಡು ಹೋಗುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಆದ್ದರಿಂದ ವರ್ಗಾವಣೆ ಮತ್ತು ಆಡಿಟ್ ಈ ಎರಡನ್ನು ಕಡ್ಡಾಯವಾಗಿ ಮಾಡಬೇಕೆಂದು ಹೇಳಿ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಡಾ. ಡಿ. ಬಿ. ಗಂಗಪ್ಪ (ಹೊನ್ನಾಳಿ):- ಮಾನ್ಯ ಉಪಾಧ್ಯಕ್ಷಿಣಿಯವರೆ, 1992-93ನೇ ಸಾಲಿನ ವೈದ್ಯಕೀಯ ಇಲಾಖೆಯ ಬೇಡಿಕೆಗಳನ್ನು ಮಾನ್ಯ ಆರೋಗ್ಯ ಸಚಿವರು ಏನು ಸಭೆಯ ಮುಂದೆ ಮಂಡಿಸಿದ್ದಾರೆ ಅದನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ನಾನು ಆ ಒಂದು ಇಲಾಖೆಗೆ ಸಂಬಂಧಪಟ್ಟಂತೆ ಒಂದೆರಡು ಸೂಚನೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಈಗಾಗಲೇ ಹಿರಿಯರು ಮತ್ತು ನನಗೆ ಉಪಾಧ್ಯಾಯರೂ ಆಗಿದ್ದ ಡಾ. ಮಲಕರೆಡ್ಡಿಯವರು ಮಾತನಾಡಿ ಹೆಚ್ಚಿನ ಎಲ್ಲಾ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿದ ಹಾಗೆ ನಮ್ಮ ಈ ಒಂದು ವೈದ್ಯಕೀಯ ಇಲಾಖೆ ಕೆಳಮಟ್ಟದಿಂದ ಬರಬೇಕಾಗಿದೆ. ನಾವು ಏನು ಹೇಳುತ್ತೇವೆ, prevention is better than ccure ಎಂದು, ಆ ರೀತಿ ನಾವು ನಮ್ಮ ಆರೋಗ್ಯ ಇಲಾಖೆಯನ್ನು ಸರಿಪಡಿಸಬೇಕಾಗಿದೆ. ಕಾರಣವಿಷ್ಟೆ, ನಮ್ಮ ಡಾ. ಮಲಕ ರೆಡ್ಡಿಯವರು ಹೆಚ್ಚಾಗಿ ಪಟ್ಟಣದಲ್ಲಿ ಪ್ರಾಕ್ಟೀಸ್ ಮಾಡಿರಬಹುದು. ನಾನು ನೂರಕ್ಕೆ ನೂರು ಹಳ್ಳಿಗಾಡಿನಲ್ಲಿ ಪ್ರಾಕ್ಟೀಸ್ ಮಾಡಿ ಅಲ್ಲಿಯ ಜನರ ಕಷ್ಟ ಮತ್ತು ಅಲ್ಲಿನ ವೈದ್ಯಕೀಯ ಇಲಾಖೆಯ ಕುಂದುಕೊರತೆಗಳನ್ನು ಅರಿತಿದ್ದೇನೆ. ಅವರು ಹೇಳಿದ ಹಾಗೆ, ಹಳ್ಳಿಗಾಡಿನಲ್ಲಿ ವೈದ್ಯಕೀಯ ಸೌಲಭ್ಯ ಅಥವಾ ಸರ್ಕಾರೀ ಆಸ್ಪತ್ರೆಗಳು ದೊರೆಯತಕ್ಕ ಅನುಕೂಲಗಳು ಬಹಳ ಕಡಿಮೆ. ಮುಂಚೆಯೇ ತಾಲ್ಲೂಕು ಮಟ್ಟದಲ್ಲಿ, ಹಳ್ಳಿಗಾಡಿನಲ್ಲಿ ಆಸ್ಪತ್ರೆಗಳು ಬಹಳ ಕಡಿಮೆ ಇರುತ್ತವೆ. ಸರ್ಕಾರದಿಂದ ಬರತಕ್ಕ ಔಷಧಿ ಪ್ರಮಾಣ ಬಹಳ ಕಡಿಮೆ ಇರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಹಳ್ಳಿಗಾಡಿನಲ್ಲಿ ವಿಶೇಷವಾಗಿ ಅವಿದ್ಯಾವಂತರು ಹೆಚ್ಚಾಗಿದ್ದಾರೆ. ನಾವು ಅಲ್ಲಿ ವೈದ್ಯಕೀಯ ಸೌಲಭ್ಯ ಒದಗಿಸಿದರೆ ಅವರಿಗೆ ತಲುಪದೆ ಇರತಕ್ಕ ಪರಿಸ್ಥಿತಿ ಅಲ್ಲಿ ಇದೆ. ಅವರು ಹೇಳಿದ ಹಾಗೆ ನಾವು ಈ ಒಂದು ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು, ಹೆಲ್ತ್ ಯೂನಿಟ್‌ಗಳನ್ನು, ಮತ್ತು ಸಮುದಾಯ ಆಸ್ಪತ್ರೆಗಳನ್ನು ಬಹಳ ಶಕ್ತಿಯುತವಾಗಿ ಮಾಡಬೇಕಾಗಿದೆ. ಇಲ್ಲದಿದ್ದರೆ ಹಳ್ಳಿಗಾಡಿನಲ್ಲಿ ಪ್ರಾಕ್ಟೀಸ್ ಮಾಡಬೇಕಾದರೆ, ವೃತ್ತಿ ಮಾಡಬೇಕಾದರೆ ಹೆಚ್ಚಿನ ರೋಗಿಗಳನ್ನು ಪಟ್ಟಣಕ್ಕೆ ಕಳುಹಿಸಬೇಕಾದ ಪರಿಸ್ಥಿತಿ ಬರುತ್ತದೆ. ಇದಕ್ಕೆ ನಾನು ಹೇಳುವುದು ಇಷ್ಟೆ, ಈ ಒಂದು ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ಸ್ಥಾಪಿಸಬೇಕಾದರೆ ಅವಕ್ಕೆ ಸರಿಯಾದ ವೈದ್ಯಕೀಯ ಸೌಲಭ್ಯವನ್ನು ಕೊಡಲು ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆಂದು ಮಾನ್ಯ ಆರೋಗ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಕೆಲವೊಂದು ಸಾರಿ ಈ ಒಂದು ಆಸ್ಪತ್ರೆಗಳನ್ನು ರಾಜಕೀಯ ಒತ್ತಡಕ್ಕೋ ಅಥವಾ ಮತ್ತೆ ಯಾವುದೋ ಒತ್ತಡಕ್ಕೆ ಮಣಿದು ಎಲ್ಲಿ ಸ್ಥಾಪಿಸಬೇಕಾಗಿತ್ತೋ ಅಲ್ಲಿ ಸ್ಥಾಪಿಸದೆ ರೋಗಿಗಳು ಆ ಆಸ್ಪತ್ರೆಗೆ ಹೋಗದಂತೆ ಮಾಡುತ್ತಾರೆ. ಕಾರಣ ಇಷ್ಟೆ. ನಾನು ಸುಮಾರು ಆಸ್ಪತ್ರೆಗಳನ್ನು ನೋಡಿದ್ದೇನೆ. ಅದನ್ನು ಎಲ್ಲಿ ತೆರೆಬೇಕೋ ಅಲ್ಲಿ ತೆರೆಯುತ್ತಿಲ್ಲ. ಎಲ್ಲಿ ಸ್ಥಾಪಿಸಬೇಕೋ ಅಲ್ಲಿ ಸ್ಥಾಪಿಸುತ್ತಿಲ್ಲ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಸುಮಾರು 10ಪ್ರೈಮರಿ ಹೆಲ್ತ್ ಯೂನಿಟ್‌ಗಳು ಮತ್ತು ಎರಡು ಪ್ರೈಮರಿ ಹೆಲ್ತ್ ಸೆಂಟರ್ ಇದೆ. ಒಂದು ಹೆಲ್ತ್ ಯೂನಿಟ್ಟನ್ನು ಮಾನ್ಯ ಸಿಂಧ್ಯಾ ಅವರು ಆರೋಗ್ಯ ಮಂತ್ರಿಗಳಾಗಿದ್ದಾಗ ಬಂದು ಪ್ರಾರಂಭ ಮಾಡಿದ್ದರು. ಸರ್ಕಾರ ಆ ಪ್ರೈಮರಿ ಹೆಲ್ತ್ ಯೂನಿಟ್‌ಗೆ ಲಕ್ಷಾಂತರ ರೂಪಾಯಿ ಹಾಕುತ್ತದೆ. ಆದರೆ ಆ ಆಸ್ಪತ್ರೆಗೆ ದಿವಸಕ್ಕೆ 8 ರಿಂದ 10 ರೋಗಿಗಳೂ ಸಹ ಬರುವುದಿಲ್ಲ. ಪಕ್ಕದಲ್ಲೇ ಒಂದು ಕಿಲೋಮೀಟರ್‌ನಲ್ಲಿ ಒಂದು ಆಯುರ್ವೇದ ಆಸ್ಪತ್ರೆ ಇದೆ. ಅಂಥ ಕಡೆ ಪ್ರೈಮರಿ ಹೆಲ್ತ್ ಯೂನಿಟ್ ಮಾಡಿ ಸರ್ಕಾರದ ದುಡ್ಡು ಸರ್ಕಾರದ ಔಷಧಿ ಹಾಳು ಮಾಡುತ್ತಿದ್ದಾರೆ. ನಾನು ನನ್ನ ಸ್ನೇಹಿತರಲ್ಲಿ, ಶಾಸಕ ಮಿತ್ರರಲ್ಲಿ ಕೇಳಿಕೊಳ್ಳುವುದಿಷ್ಟೆ. ನಾವು ಕೂಡ ಅಷ್ಟೇ ಜವಾಬ್ದಾರಿಯಿಂದ ನಮ್ಮ ಆರೋಗ್ಯ ಮಂತ್ರಿಗಳಿಗೆ ಮತ್ತು ಆರೋಗ್ಯ ಇಲಾಖೆಗೆ ಸಹಕಾರ ಕೊಟ್ಟು ಏನು ಒಂದು ನಾರ್ಮ್ಸ್ ಮಾಡಿಕೊಂಡಿದ್ದಾರೆ 30 ಸಾವಿರ ಜನಸಂಖ್ಯೆಗೆ ಒಂದು ಹೆಲ್ತ್ ಸೆಂಟರ್ ಕೊಡಬೇಕೆಂದು ಅವರು ಏನು ಮಾಡುತ್ತಾರೆಂದರೆ ಆಸ್ಪತ್ರೆ

ಕೇಳಿದೆವು ಎಂದು ಆ ಗ್ರಾಮದಲ್ಲಿ ಆಸ್ಪತ್ರೆ ಓಪನ್ ಮಾಡಬೇಕಾದರೆ ಸುಮಾರು 20 ಕಿಲೋಮೀಟರ್ ಆ ಕಡೆ ಇರುವ ಹಳ್ಳಿಯ ಜನಸಂಖ್ಯೆಯನ್ನೂ ಅಲ್ಲಿ ಸೇರಿಸಿರುತ್ತಾರೆ. ಜೊತೆಗೆ ಈ ತೊಂದರೆ ತಪ್ಪಿಸಬೇಕಾದರೆ ನ್ಯಾಯವಾಗಿ ಎಲ್ಲಿ ನಾವು ಸರಿಯಾಗಿ ಕೊಡಬೇಕೋ ಅಲ್ಲಿ ಕೊಟ್ಟು ಜನರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕು. ಅದೇರೀತಿ ಡಾಕ್ಟರು ಹೇಳಿದಹಾಗೆprevention is better than cure ಎಂದು ಹೇಳುತ್ತಾರಲ್ಲ ಹಾಗೆ ಹಳ್ಳಿಗಾಡಿನಲ್ಲಿ ನಾನು ಪ್ರಾಕ್ಟೀಸ್ ಮಾಡಬೇಕಾದರೆ ಏರ್‌ಬಾರ್ನ್ ಡಿಸೀಸಸ್ ಮತ್ತು ವಾಟರ್ ಬಾರ್ನ್ ಡಿಸೀಸಸ್ ಹೆಚ್ಚಾಗಿ ಕಾಣುತ್ತಿತ್ತು. ಹಳ್ಳಿಗ್ರಾಡಿನಲ್ಲಿ 8-10 ವರ್ಷದಿಂದ ಅಲ್ಲೂ ಕೂಡ ಪಟ್ಟಣದ ಹಾಗೆ ಕ್ಯಾನ್ಸರ್ ಖಾಯಿಲೆ ಬರುತ್ತಿದೆ. ಹಾರ್ಟ್ ಅಟಾಕ್ ಬರುತ್ತಿದೆ. ಕಿಡ್ನಿ ಫೇಲ್ಯೂರ್ ಸಹ ಬರುತ್ತಿದೆ. ಆದರೆ ಅಲ್ಲಿ ಹೆಚ್ಚಾಗಿ ಬರುತ್ತಿರುವುದು Gastro enteritis, pneumonia, janndice, typhoid & leprosy ಈ ತರಹ ಕೆಳಮಟ್ಟದ ಕಾಯಿಲೆಗಳು. ಹಳ್ಳಿಗಾಡಿನಲ್ಲಿ ಬರತಕ್ಕ ಕಾಯಿಲೆಗಳಿಗೆ ಹೆಚ್ಚು ಗಮನ ಕೊಟ್ಟು ನಮ್ಮ ಆರೋಗ್ಯ ಇಲಾಖೆಯನ್ನು ಸಧಾರಿಸಬೇಕಾಗಿದೆ. 1976ರಿಂದ ಸುಮಾರು 1982ನೇ ಇಸವಿಯವರೆಗೆ ಹಳ್ಳಿಗಾಡಿನಲ್ಲಿ ಪ್ರಾಕ್ಟೀಸ್ ಮಾಡಬೇಕಾದರೆ ಒಂದು ದಿವಸಕ್ಕೆ 50 ರಿಂದ 100 ಗ್ಲೂಕೋಸ್ ಬಾಟಲ್ ಕೊಟ್ಟಿದ್ದೇವೆ. Gastro Enteritis, ಅಮೀಬಿಕ್ ಡೀಸೆಂಟ್ರಿ ಈ ತರಹ ಕಾಯಿಲೆ ಹೆಚ್ಚು ಇರುತ್ತದೆ. ಜಾಂಡೀಸ್ ಸಹ ಹಳ್ಳಿಗಾಡಿನಲ್ಲಿ ಬರುತ್ತಿದೆ. ಹಳ್ಳಿಗಾಡಿನಲ್ಲಿ ಓಪನ್ ವೆಲ್ ವಾಟರ್ ಕುಡಿಯಬೇಕಾದರೆ Jandiceಅಥವಾ Gastro enteritis ಬರುತ್ತಿತ್ತು. 8-10 ಹಳ್ಳಿಗಳಲ್ಲಿ ಏಪ್ರಿಲ್ ತಿಂಗಳು ಬಂತು ಎಂದರೆ ಈ ರೋಗಗಳು ಖಾಯಂ ಆಗಿ ಬರುತ್ತಿತ್ತು. ಈಗ ಬೋರ್‌ವೆಲ್ ಮತ್ತು ಬೇರೆ ಒಳ್ಳೆ ನೀರು ಕುಡಿಯುತ್ತಿರುವುದರಿಂದ ಆ ಕಾಯಿಲೆಗಳು ಕಡಿಮೆಯಾಗಿವೆ. ಅದರಲ್ಲೂ ವಿಶೇಷವಾಗಿ ರೂರಲ್ ಡೆವಲಪ್ಮೆಂಟ್ ಮಿನಿಸ್ಟರನ್ನು ಅಭಿನಂದಿಸಬೇಕಾಗುತ್ತದೆ. ಜೊತೆಗೆ ಅವರನ್ನು ಕೇಳಿಕೊಳ್ಳುತ್ತೇನೆ ವಾಟರ್ ಕಂಟಾಮಿನೇಟ್ ಡಿಸೀಸ್ ಬರದಹಾಗೆ ಹಳ್ಳಿಗಳಲ್ಲಿ ರೂರಲ್ ಡೆವಲಪ್ಮೆಂಟ್‌ನಿಂದ ಯಾರಿಗೇ ಆಗಲೀ ಹೊಸ ಮನೆ ಕಟ್ಟಿಸಿದರೆ ಅಲ್ಲಿ ಒಂದು ಕಕ್ಕಸ್ಸು ಕಡ್ಡಾಯವಾಗಿ ಕಟ್ಟಿಸಬೇಕು. ಪ್ಲಾನ್‌ನಲ್ಲಿ ಅದು ಇಲ್ಲದಿದ್ದರೆ ಅವರಿಗೆ ಲೈಸೆನ್ಸ್ ಕೊಡಬಾರದು ಎಂದು ಮಂಡಲಪಂಚಾಯಿತಿಗೆ ಸೂಚನೆ ಕೊಡಬೇಕು. ಅದರಿಂದಲೂ ಕಾಯಿಲೆ ತಡೆಗಟ್ಟಬಹುದು. ಒಂದು ಒಂದೂವರೆ ಸಾವಿರ ರೂಪಾಯಿಗೆ ಹಳ್ಳಿಗಾಡಿನಲ್ಲಿ ಕಕ್ಕಸ್ಸು ಕಟ್ಟಿಸಬಹುದು. ಯಾರೇ ಲೈಸೆನ್ಸ್‌ಗೆ ಅಪ್ಲೈ ಮಾಡಿದರೆ ಕಂಪಲ್ಸರಿಯಾಗಿ ಕಕ್ಕಸ್ಸು ಇರುವಂತೆ ಡೈರೆಕ್ಷನ್ ಕೊಡಬೇಕು. ಕಾಯಿಲೆ ತಪ್ಪಿಸುವುದಲ್ಲದೆ ಮಾನವೀಯತೆ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಇದನ್ನು ಮಾಡುವುದಕ್ಕೆ ಕಷ್ಟವಾಗುವುದಿಲ್ಲ. ಮನೆಗಳಿಗೆ ಲೈಸೆನ್ಸ್ ಕೊಡುವಾಗ ಮಂಡಲಪಂಚಾಯಿತಿ ಸೆಕ್ರೆಟರಿಗಳಿಗೆ ಅಥವಾ ಪಂಚಾಯಿತಿ ಛೇರ್ಮನ್ನರಿಗೆ ಕಂಪಲ್ಸರಿಯಾಗಿ ಕಕ್ಕಸ್ಸು ಇಡುವಂತೆ ನೋಡಿಕೊಳ್ಳಬೇಕೆಂದು ಡೈರೆಕ್ಷನ್ ಕೊಟ್ಟರೆ ಇನ್ನೂ ಒಳ್ಳೆಯ ಕೆಲಸವಾಗುತ್ತದೆ. ಶ್ರೀಮತಿ ಮೋಟಮ್ಮನವರು ಪ್ರೈಮರಿ ಹೆಲ್ತ್ ಯೂನಿಟ್‌ಗೆ ಸರ್ಕಾರದಿಂದ 30 ಸಾವಿರ ರೂಪಾಯಿನ ಔಷಧಿ ಕೊಡುತ್ತಾರೆಂದು ಹೇಳಿದರು. ಆದರೆ ಒಂದು ಪ್ರೈಮರಿ ಹೆಲ್ತ್ ಯೂನಿಟ್‌ಗೆ 30ಸಾವಿರ ರೂಪಾಯಿನ ಔಷಧಿ ಪೂರಾ ಬರುವುದಿಲ್ಲ. ಅದರಲ್ಲಿ ಡ್ರೆಸ್ಸಿಂಗ್ಸ್ ಬರಬೇಕು, ಆಯಿಂಟ್‌ಮೆಂಟ್ ಬರಬೇಕು, ಟ್ಯಾಬ್ಲೆಟ್ಸ್ ಬರಬೇಕು, ಗ್ಲೂಕೋಸ್ ಬರಬೇಕು, ಆದರೆ ಹಳ್ಳಿಗಾಡಿನಲ್ಲಿ ಬರತಕ್ಕ ರೋಗಗಳಿಗೆ ನಿಜವಾಗಿಯೂ ಬೇಕಾದ ಔಷಧಿಗಳು, ಟ್ಯಾಬ್ಲೆಟ್ಸ್, ಇಂಜೆಕ್ಷನ್ಸ್ ಬರುವುದಿಲ್ಲ. ನಮ್ಮ ಸರ್ಕಾರದಲ್ಲಿ ಸೆಂಟ್ರಲ್ ಡ್ರಗ್ ಕಂಟ್ರೋಲ್ ಆಫೀಸ್ ಏನಿದೆ ಅಲ್ಲಿಂದ ಡಿ.ಹೆಚ್.ಓ ಆಫೀಸಿಗೆ ಹೋಗುತ್ತದೆ. ಡಿ.ಎಚ್.ಓ. ಆಫೀಸಿನಿಂದ ಪಿ.ಎಚ್.ಸಿ.ಗೆ ಬರುತ್ತದೆ. ಇಲ್ಲಿ ಬರಬೇಕಾದರೆ ಏನಾಗುತ್ತದೆಂದರೆ . . . .

ಶ್ರೀಮತಿ ಮೋಟಮ್ಮ :- ರೇಟ್ ಆಫ್ ಮೆಡಿಸಿನ್ಸ್ ನಾಲ್ಕು ವರ್ಷದ ಹಿಂದೆ ಫಿಕ್ಸ್ ಮಾಡಿರುವುದು ಎಲ್ಲಾ ಆಸ್ಪತ್ರೆಗಳಿಗೆ. ಈಗ ಅದನ್ನು ರಿವೈಸ್ ಮಾಡಿದರೆ ಒಳ್ಳೆಯದು.

ಡಾ. ಡಿ. ಬಿ. ಗಂಗಪ್ಪ :- 30 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆ ಕೊಟ್ಟು ಆಸ್ಪತ್ರೆಗೆ 30 ಸಾವಿರ

ರೂಪಾಯಿ ಫಿಕ್ಸ್ ಮಾಡುತ್ತಾರೆ. ಇಡೀ ಒಂದು ವರ್ಷಕ್ಕೆ ಕೊಟ್ಟಾಗ 30 ಸಾವಿರದಲ್ಲಿ 15-20 ಸಾವಿರದವರೆಗೂ . . . . ಏಕೆಂದರೆ ಡ್ರಗ್ಸ್‌ಗಿಂತ ಸೆಂಟ್ರಲ್ ಆಫೀಸ್‌ನವರಿಗೆ ಡ್ರೆಸ್ಸಿಂಗ್ಸ್, ಡಿಸ್ಟಿಲ್ಡ್ ವಾಟರ್ ಮತ್ತು ಆಯಿಂಟ್‌ಮೆಂಟ್‌ನಲ್ಲಿ ಹೆಚ್ಚು ಅನುಕೂಲವಾಗುತ್ತದೆ. ಅವರಿಗೆ ಇದರಲ್ಲಿ ಮಾಲ್‌ಪ್ರಾಕ್ಟೀಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಂತಹವರಿಗೆ ಮಾಲ್ ಪ್ರಾಕ್ಟೀಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಅದಕ್ಕೆ ಹೆಚ್ಚು ಕೊಡುತ್ತಾರೆ. ಇವತ್ತು ನಾವು 30 ಸಾವಿರ ರೂಪಾಯಿಗಳ ಮೆಡಿಸನ್ಸ್ ಕೊಟ್ಟಿದ್ದೇವೆಂದು ಹೆಲ್ತ್ ಯೂನಿಟ್ಸ್‌ಗೆ ಹೋದರೆ ಅವರು ಡಾಕ್ಟರ್‌ಗಳು ಏನು ತೋರಿಸುತ್ತಾರೆಂದರೆ ಬರೀ ಡ್ರೆಸ್ಸಿಂಗ್ಸ್ ತೋರಿಸುತ್ತಾರೆ, ಆಯಿಂಟ್‌ಮೆಂಟ್ ತೇರಿಸುತ್ತಾರೆ, ಜೊತೆಗೆ ಇನ್ನೂ ಬೇರೆ ಕೆಲವು ಔಷಧಿಗಳನ್ನು ತೋರಿಸುತ್ತಾರೆ. ಪೇಷೆಂಟ್ಸ್‌ಗೆ ನಿಜವಾಗಿಯೂ ಬೇಕಾದ ಔಷಧಿಗಳು ಇರುವುದಿಲ್ಲ. ಆದುದರಿಂದ ನಾನು ಕೇಳುವುದು ಇಷ್ಟೇ. ಅವರು ಏನಾದರೂ 30 ಸಾವಿರ ರೂಪಾಯಿಗಳ ಮೆಡಿಷನ್ಸ್ ಆಸ್ಪತ್ರೆಗೆ ಕೊಟ್ಟರೆ, ಆಸ್ಪತ್ರೆಯಲ್ಲಿ ಇಷ್ಟೇ ಇಂಜೆಕ್ಷನ್ಸ್ ಇರಬೇಕು, ಇಷ್ಟೇ ಟ್ಯಾಬ್ಲೆಟ್ಸ್ ಇರಬೇಕು, ಇಷ್ಟೇ ಕಾಸ್ಟ್ ಆಫ್ ಡ್ರಗ್ಸ್ ಇರಬೇಕು. ಇಷ್ಟೇ ಕಾಸ್ಟ್‌ನ ಕಾಟನ್ ಇರಬೇಕು, ಎಂದು ಡೈರೆಕ್ಷನ್ ಇರಬೇಕು. ಇವತ್ತು ಏನೋ 30 ಸಾವಿರ ರೂಪಾಯಿಯಷ್ಟು ಕೊಡಬೇಕೆಂದು ಹೇಳಿ 20 ಸಾವಿರ ರೂಪಾಯಿ ಬೆಲೆಬಾಳುವಷ್ಟು ಕಾಟನ್, ಡ್ರೆಸ್ಸಿಂಗ್ಸ್ ಕೊಟ್ಟುಬಿಟ್ಟರೆ, ಡಿಸ್ಟಿಲ್ಡ್ ವಾಟರ್ ಕೊಟ್ಟುಬಿಟ್ಟರೆ, ಆ ಡಾಕ್ಟರ್ ಏನು ಟ್ರೀಟ್‌ಮೆಂಟ್ ಕೊಡುತ್ತಾನೆ ? ಜೊತೆಗೆ ನಾನು ನೋಡಿದಹಾಗೆ ನಮ್ಮ ಈ ಒಂದು ಕೆಳಮಟ್ಟದ ಆಸ್ಪತ್ರೆಗಳು ಏನಿವೆಯೋ ಅಲ್ಲಿ ಡಾಕ್ಟರುಗಳು ಇರುತ್ತಾರೆ. ಅವರೇ ಅಲ್ಲಿಯ ಡೈರೆಕ್ಟರುಗಳು. ಇವತ್ತು ನಿಯರ್ಲಿ ಎಕ್ಸ್‌ಪೈರಿಂಗ್ ಡ್ರಗ್ಸ್ ಬರುತ್ತವೆ. ನಾಳೆ, ಒಂದು ವಾರ ಅಥವಾ 10 ದಿವಸ ಅಥವಾ 3 ತಿಂಗಳಿಗೆ ಎಕ್ಸ್‌ಪೈರ್ ಆಗುವ ಡ್ರಗ್ಸ್ ನಮ್ಮ ಜಿಲ್ಲಾ ಗೋಢನ್‌ಗೆ ಬಂದು ಅಲ್ಲಿಂದ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಬರುತ್ತವೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ. ಯಾವುದೇ ಡ್ರಗ್ಸ್ ಪರ್ಚೇಸ್ ಮಾಡಿದರೂ ಮಿನಿಮಮ್ 6 ತಿಂಗಳಿಂದ 1 ವರ್ಷದವರೆಗೆ ಅವನ್ನು ಉಪಯೋಗಿಸುವ ಅವಕಾಶ ಇರಬೇಕಾಗುತ್ತದೆ. ಅದು ಬಿಟ್ಟು ನಾಳೆ ಎಕ್ಸ್‌ಪೈರಿ ಆಗುವ ಮೆಡಿಷನ್ಸ್‌ನ್ನು ಡಿ ಹೆಚ್ ಓ ಅವರು ಮೆಡಿಕಲ್ ಆಫೀಸರ್ಸ್‌ಗೆ ಬೈ ಫೋರ್ಸ್ ಖರ್ಚು ಮಾಡಬೇಕೆಂದು, ಯಾವುದು ಇವರು ಇಂಡೆಂಟ್ ಹಾಕಿರುತ್ತಾರೋ ಆ ಮೆಡಿಷನ್ಸ್ ಬಿಟ್ಟು ಎಕ್ಸ್‌ಪೈರಿ ಆಗುವ ಸ್ಟೇಜ್‌ಗೆ ಬಂದಿರುವ ಔಷಧಿಗಳನ್ನು ಪುಷ್ ಮಾಡುತ್ತಾರೆ. ಅನಿವಾರ್ಯವಾಗಿ ಇವರು ಅದನ್ನು ಕೊಡಬೇಕಾಗಿದೆ. ಏಕೆಂದರೆ ಡಿಹೆಚ್‌ಓ ಅವರು ಅವರ ಹೈಯ್ಯರ್ ಆಫೀಸರ್ ಇರುತ್ತಾರೆ. ನಾಳೆ ಅವ ರು ಇವರಿಗೆ ತೊಂದರೆ ಕೊಡಬಹುದು. ಆದ್ದ ರಿಂದ ಮಿನಿಮಮ್ 6 ತಿಂಗಳಿಂದ 1 ವರ್ಷದವರೆಗೆ ವೇಳೆ ಇರುವ ಔಷಧಿಗಳನ್ನು ಜಿಲ್ಲಾ ಆಸ್ಪತ್ರೆಗಳಿಗೆ ಕಳುಹಿಸಿಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ. ನಾನು ನಮ್ಮ ಜಿಲ್ಲಾಪರಿಷತ್ತಿನಲ್ಲಿ ಒಂದು ವಿಚಾರ ಕೇಳಿದೆ. 30 ಸಾವಿರ ರೂಪಾಯಿ ಬೆಲೆಬಾಳುವ ಔಷಧಿ ಏನು ತರಿಸಿದ್ದರು ಅದರಲ್ಲಿ ಬರೀ Cartizol ಮತ್ತು ಜಂಟಾಮೈಸಿನ್ ಇಂಜೆಕ್ಷನ್‌ಗಳನ್ನು ಸುಮಾರು 10 ಸಾವಿರ ರೂಪಾಯಿ ಬೆಲೆಬಾಳುವಷ್ಟು ಕಳುಹಿಸಿದ್ದಾರೆ. ನಾವು ದಿನಬಳಕೆಯಲ್ಲಿ ಯಾವ ಆಸ್ಪತ್ರೆಯಲ್ಲೂ ಕೂಡ Cartizol ಆಗಲೀ ಅಥವಾ ಜಂಟಾಮೈಸಿನ್ ಆಗಲೀ ಉಪಯೋಗಿಸುವುದಿಲ್ಲ. ನಾವು ನಮ್ಮ ಆಸ್ಪತ್ರೆಗಳಿಗೆ ಬರುವ ರೋಗಿಗಳಿಗೆ ಹೊಟ್ಟೆನೋವಿಗೆ Anti spasmodic ಇರಬಹುದು, Antibiotics ಇರಬಹುದು, Pencillin ಇರಬಹುದು. ಏನು ಮಾಡಿದ್ದಾರೆ ಎಂದರೆ ಈ Cartizol or Gontomycin ಏನು ಇವೆ ಇವು ಬಾಂಬೆ ಕಂಪೆನಿಯವು. ಬಾಂಬೆ ಕಂಪನಿಯವರು ಪರ್ಸೆಂಟೇಜ್ ಹೆಚ್ಚು ಕೊಡುತ್ತಾರೆ. ಒಂದಕ್ಕೆ ಡಬಲ್ ಕೊಡುತ್ತಾರೆ. ಆದ್ದರಿಂದ ಏನು ನಾವು 30 ಸಾವಿರ ರೂಪಾಯಿಯ ಔಷಧಿ ಕೊಡುತ್ತೇವೆಂದು ಹೇಳುತ್ತೇವೆ ಅದರಲ್ಲಿ 10 ಪೈಸೆಯ ಮೆಡಿಷನ್ ಕೂಡ ನಿಜವಾದ ಪೇಷೆಂಟ್‌ಗೆ ಮುಟ್ಟುವುದಿಲ್ಲ. ಉದಾಹರಣೆಗೆ ಹೇಳಬೇಕೆಂದರೆ ಬಿಫೋರ್ ಲಾಸ್ಟ್ ಟೈಮ್ ಹೆಲ್ತ್ ಯೂನಿಟ್‌ಗೆ 1 ಸಾವಿರ ಮಲ್ಟಿಡೋಸ್ ಪೆನಿಸ್ಸುಲೀನ್ ಕೊಡುತ್ತಿದ್ದರು. ಆದರೆ ಹೋದವರ್ಷ ಹಾಗೂ ಈ ವರ್ಷ ಜಿಲ್ಲಾಪರಿಷತ್ತಿಗೆ ಪವರ್ ಬಂದಮೇಲೆ ಪೆನಿಸಿಲಿನ್ನೂ ಇಲ್ಲ, ಬೇರೆ Cartizol ಇಲ್ಲ ಎಂದು ಹೇಳಬೇಕಾಗಿದೆ.

ಶಿವಮೊಗ್ಗ ಜಿಲ್ಲೆಯಲ್ಲಿ ನಾನು ಒಂದು ಸಾರಿ ಶ್ರೀಮತಿ ನಾಗರತ್ನಮ್ಮನವರು ಹೆಲ್ತ್ ಮಿನಿಸ್ಟರ್ ಆಗಿದ್ದಾಗ ಅವರ ಜೊತೆಯಲ್ಲಿ ಒಂದು ಗೋಡನ್‌ಗೆ ಭೇಟಿ ಕೊಟ್ಟಿದ್ದೆವು. ಅಲ್ಲಿ ಸುಮಾರು 1 ಲಕ್ಷ ಡಿಸ್ಟಿಲ್ಡ್ ವಾಟರ್ Ampules ಇನ್ನುಮೂರು ದಿವಸದಲ್ಲಿ ಎಕ್ಸ್‌ಪೈರಿ ಆಗುವುದಕ್ಕೆ ಇತ್ತು. ಇಷ್ಟು ಎಲ್ಲಾ ಏಕೆ ಪರ್ಚೇಸ್ ಮಾಡಿದ್ದೀರಿ ಎಂದರೆ, ಇಲ್ಲಾ ಇದು ನಮಗೆ ಬೆಂಗಳೂರಿನ ಗೋಡನ್‌ನಿಂದ ಬಂದಿದೆ ಎಂದು ಹೇಳಿದ್ದು ಆ ಬಗ್ಗೆ ಆಮೇಲೆ ವಿಚಾರಿಸಿದಾಗ ಅಲ್ಲೇ ಪರ್ಚೇಸ್ ಮಾಡಿದ್ದುದು ಎಂದು ಗೊತ್ತಾಯಿತು. ಈ ರೀತಿ ಎಷ್ಟೇ ಔಷಧಿ ಕೊಟ್ಟರೂ ಅದು ಹಳ್ಳಿಯಲ್ಲಿರುವ ಬಡವರಿಗೆ ಮುಟ್ಟುವುದಿಲ್ಲ. ಆದುದರಿಂದ ಎಷ್ಟೋ ಸಾರಿ ನಿಜವಾದ ಒಬ್ಬ ವೈದ್ಯರು ಅಥವಾ ಡಾಕ್ಟರ್ ಹಳ್ಳಿಯಲ್ಲಿ ಪ್ರಾಕ್ಟೀಸ್ ಮಾಡಬೇಕಾದರೆ ಒಬ್ಬ ರೋಗಿಯ ನೋವನ್ನು ನಿವಾರಣೆ ಮಾಡಬೇಕಾದರೆ ಹೊರಗಡೆ ಪ್ರಿಸ್ಕ್ರಿಪ್ಷನ್ ಕೊಟ್ಟು ಮೆಡಿಷನ್ ತರಿಸಲೇಬೇಕಾಗುತ್ತದೆ. ನಾವು ಇಲ್ಲಿ ವೈದ್ಯರು ಹಣ ತೆಗೆದುಕೊಳ್ಳುತ್ತಾರೆ, ಟ್ರೀಟ್‌ಮೆಂಟ್ ಕೊಡುವುದಿಲ್ಲ ಎಂದೆಲ್ಲಾ ಕೆಲವೊಂದು ಸಾರಿ ಕಂಪ್ಲೇಂಟ್ ಮಾಡಿದ್ದೇವೆ. ಇದು ಎಷ್ಟೋ ಸಾರಿ ನಿಜವಿರಬಹುದು. ಆದರೆ ಪ್ರಾಕ್ಟೀಸ್ ಮಾಡತಕ್ಕ ನಿಜವಾದ ವೈದ್ಯರಿಗೆ ಬಹಳ ತೊಂದರೆಯಾಗುತ್ತದೆ. ನಮ್ಮ ಮಿತ್ರರು ಒಬ್ಬರು ಡೆಂಟಿಸ್ಟ್ ಇದ್ದಾರೆ. ಅವರು ಬರೀ 40 ರೂಪಾಯಿ ಬೆಲೆಬಾಳುವ ಔಷಧಿ ಇಲ್ಲ ಎಂದು ಬರೆದುಕೊಟ್ಟು ಕಂಪ್ಲೀಟ್ ಟ್ರೀಟ್‌ಮೆಂಟ್ ಕೊಟ್ಟರೂ ಸಹ ಅದೇನೋ ಕಾರಣ ಹೇಳಿ ಅವರನ್ನು ಹಿಡಿಸಿಬಿಟ್ಟು ಡಿಸ್‌ಮಿಸ್ ಮಾಡಿದ್ದಾರೆ. ಈ ರೀತಿ ಹಳ್ಳಿಗಾಡಿನಲ್ಲಿ ವೈದ್ಯರಿಗೆ ತೊಂದರೆಯಾಗುತ್ತಿದೆ. ಅದನ್ನು ನಿವಾರಣೆ ಮಾಡಬೇಕಾದರೆ ಇವತ್ತು ಏನು 30 ಸಾವಿರ ರೂಪಾಯಿಗಳನ್ನು ಏನು ಪ್ರತಿ ಆಸ್ಪತ್ರೆಗೆ ಕೊಡುತ್ತಿದ್ದೀರಿ ಅದನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ಔಷಧಿಗಳನ್ನು ಕೊಡಬೇಕಾದರೆ ತಾವು ಒಂದನ್ನು ಮಾಡಬಹುದು. ಇವತ್ತು ಪ್ರತಿ ಡಾಕ್ಟರುಗಳಿಂದ ಡಿಹೆಚ್‌ಓ ಅವರಿಗೆ ಇಂತಿಂತಹ ಔಷಧಿಗಳು ಬೇಕೆಂದು ಇಂಡೆಂಟ್ ತರಿಸಿಕೊಳ್ಳಲಾಗುತ್ತಿದೆ. ಈ ಇಂಡೆಂಟ್‌ಗಳು ಡಿಹೆಚ್‌ಓ ಮೂಲಕ ಬೆಂಗಳೂರಿನ ಡ್ರಗ್ ಕಂಟ್ರೋಲರ್‌ಗೆ ಬರುತ್ತದೆ. ಇವತ್ತು ಪ್ರತಿಯೊಬ್ಬ ಡಾಕ್ಟರಿಂದ ಏನೇನು ಇಂಡೆಂಟ್ ಔಷಧಿಗಳ ಬಗ್ಗೆ ಬರುತ್ತದೆ ಅದೇ ಪ್ರಕಾರವಾಗಿ ಒಬ್ಬೊಬ್ಬರಿಗೆ ಸಪರೇಟ್ ಪ್ಯಾಕೇಟ್ ಮಾಡಿ ಅವರಿಗೆ ಔಷಧಿಗಳನ್ನು ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಎಲ್ಲಾ ಆಸ್ಪತ್ರೆಗಳಿಗೆ ಒಂದೇ ತರಹ ಮೆಡಿಸನ್ ಕಳುಹಿಸುತ್ತಾರೆ. ಎಲ್ಲಾ ಆಸ್ಪತ್ರೆಗಳಿಗೆ ಒಂದೇ ತರಹ ಗುಳಿಗೆ ಕಳುಹಿಸುತ್ತಾರೆ. ಆದರಿಂದ ಏನಾಗುತ್ತದೆಂದರೆ, ಬಿಜಾಪುರದಲ್ಲಿ ಕೆಲವು ಕಾಯಿಲೆಗಳು ಇರುತ್ತವೆ. ಶಿವಮೊಗ್ಗದಲ್ಲಿ ಬೇರೆ ಖಾಯಿಲೆಗಳು ಇರುತ್ತವೆ. ಶಿವಮೊಗ್ಗದಲ್ಲಿ ಕ್ಯಾಸಿನೋ ಫಾರೆಸ್ಟ್ ಡಿಸೀಸ್ ಇರುತ್ತದೆ. ಬಿಜಾಪುರದಲ್ಲಿ ಪೈಲರಿಸ್ ಡಿಸೀಸ್ ಇರುತ್ತದೆ. ಟ್ರೀಟ್‌ಮೆಂಟ್ ಮಾಡಲಿಕ್ಕೆ ಎಲ್ಲಾ ಕಡೆಗೆ ಒಂದೇ ತರಹದ ಔಷಧಿಗಳನ್ನು ಕಳುಹಿಸಿದರೆ ಅದು ಹೇಗೆ ಸಾಧ್ಯ ? ಆದ್ದರಿಂದ ನಾನು ಹೇಳುವುದು ಇಷ್ಟೆ, ಪ್ರತಿಯೊಬ್ಬ ಡಾಕ್ಟರುಗಳಿಂದ ಅವರ ಆಸ್ಪತ್ರೆಗೆ ಯಾವ ತರಹದ ರೋಗಿಗಳು ಬರುತ್ತಾರೆ, ಆ ರೋಗಿಗಳಿಗೆ ಯಾವ ತರಹ ಟ್ರೀಟ್‌ಮೆಂಟ್ ಬೇಕು, ಅದಕ್ಕೆ ಮೆಡಿಸನ್ ಯಾವುದು ಬೇಕು ಎಂಬುದನ್ನು ತಿಳಿದುಕೊಂಡು ಅವರಿಂದ ಒಂದು ಇಂಡೆಂಟ್ ತರಿಸಿಕೊಂಡು ಡಿಹೆಚ್‌ಓ ಮುಖಾಂತರ ಅವರಿಗೆ ಬೇಕಾದಂತಹ ಔಷಧಿಗಳನ್ನು ಕೊಡಬೇಕು. ಆಗ ಏನು ಕಾಯಿಲೆ ಇರುತ್ತದೆ ಅದಕ್ಕೆ ಪ್ರತ್ಯೇಕವಾಗಿ ನಾವು ಟ್ರೀಟ್‌ಮೆಂಟ್ ಕೊಡುವುದಕ್ಕಾಗುತ್ತದೆ. ಅದನ್ನು ಬಿಟ್ಟು ಬಿಟ್ಟು ಗುಲ್ಬರ್ಗಕ್ಕೂ ಒಂದೇ ತರಹ ಮೆಡಿಸನ್ ಆಮೇಲೆ ಶಿವಮೊಗ್ಗಕ್ಕೆ ಒಂದೇ ತರಹ ಮೆಡಿಸನ್ ಹೋದರೆ, ಶಿವಮೊಗ್ಗದಲ್ಲಿ ಕ್ಯಾಸಿನೋ ಫಾರೆಸ್ಟ್ ಡಿಸೀಸ್ ಇರುತ್ತದೆ. ಮಂಗಳೂರು ಅಲ್ಲಿ ಆನೆಕಾಲು ರೋಗ ಇರುತ್ತದೆ. ಆದ್ದರಿಂದ ಈವೊಂದು ವ್ಯವಸ್ಥೆಯನ್ನು ತಪ್ಪಿಸಬೇಕು. ಪ್ರತಿಯೊಂದು ಡಾಕ್ಟರುಗಳಿಂದ ಇಂಡೆಂಟ್ ತರಿಸಿಕೊಂಡು ಅವರೇನು ಕೇಳುತ್ತಾರೆ ಆ ತರಹ ಡ್ರಗ್ಸ್ ಕೊಡಿ. ಟ್ಯುಬರ್‌ಕ್ಯುಲಸಸ್‌ಗೆ ಎಷ್ಟು ಇಂಜೆಕ್ಷನ್ ಇರಬೇಕು ಡ್ರೆಸ್ಸಿಂಗ್ ಎಷ್ಟಿರಬೇಕು ಎಷ್ಟೆಷ್ಟು ಕಾಸ್ಟ್ ಎಂದು ತೋರಿಸಬೇಕು. ಲೈಫ್‌ಸೇವ್ಡ್ ಡ್ರಗ್ಸ್ ಕೆಲವು ಆಸ್ಪತ್ರೆಗಳಲ್ಲಿರುವುದಿಲ್ಲ. ನಾನು ಕಳೆದ ವರ್ಷ ಹೇಳಿದ ಔಷಧಿಗಳಲ್ಲಿ ಒಂದನ್ನು ಪರ್ಚೇಸ್ ಮಾಡಿಲ್ಲ. ಜೆಬಿಎಲ್ ಆಲ್ಡರಿನ್ ಸಹ ಪರ್ಚೇಸ್ ಮಾಡಿಲ್ಲ. ಗೋಡೋನ್‌ನಲ್ಲಿ

ವಿಚಾರಿಸಿದಾಗ ಒಂದು ಸಿಂಗಲ್ ಆಂಪ್ಯುಯಲ್ ಆಲ್ಡರಿನ್ ಸಹ ಆಸ್ಪತ್ರೆಗೆ ಪರ್ಚೇಸ್ ಮಾಡಿಲ್ಲ. ಅದರ ಕಾಸ್ಟ್ ಸಹ ಒಂದು ರೂಪಾಯಿ ಇರುತ್ತದೆ. ವೆರಿ ನಿಯರೆಸ್ಟ್ ಎಕ್ಸ್‌ಪೈರಿ ಇರುತ್ತದೆ. ಇಟ್ ಎಸ್ ಎ ಲೈಫ್ ಸೇವ್ ಡ್ರಗ್. ಆಸ್ಡರಿನ್ ಜಸ್ಟ್ 50 ಎನ್‌ಪಿ. ಅದನ್ನು ಪರ್ಚೇಸ್ ಮಾಡಿದರೆ ಹೆಚ್ಚಾಗಿ ಕಮೀಷನ್ ಸಿಗುವುದಿಲ್ಲ. ಏಕೆಂದರೆ ಡಿಹೆಚ್‌ಓಗಳಿಗಾಲಿ, ಬೇರೆ ಯಾರೇ ಪರ್ಚೇಸ್ ಮಾಡಿದರೂ ಪರ್ಚೇಸ್ ಮಾಡುವವರಿಗೆ ಡೆಂಟಾಮೈಸಿನ್ ಅಥವಾ ಕಾರ್ಟಿಯಾರ್ಟ್‌ಲಿ ಪರ್ಟಿಕ್ಯುಲರ್ ಆಗಿ ಇಂಥಿಂಥ ಮೆಡಿಸನ್ ಬೇಕೆಂದು ತಾವು ಗೈಡ್‌ಲೈನ್ಸ್ ಕೊಟ್ಟರೆ ಲೈಫ್‌ಸೇವಿಂಗ್ ಮೆಡಿಸನ್ 8 ಆಣೆ ಇದೆ ಅಂತಹದನ್ನು ಅವರು ತಮ್ಮ ಗೈಡ್‌ಲೈನ್ಸ್ ಪ್ರಕಾರ ಪರ್ಚೇಸ್ ಮಾಡಲಿಕ್ಕೆ ಹೇಳಬೇಕು. ಅದನ್ನು ಬಿಟ್ಟು ಬಿಟ್ಟು ಯಾವುದೋ ಒಂದು ಮೆಡಿಸಿನ್ ಪರ್ಚೇಸ್ ಮಾಡಿ ಕೊಡುತ್ತಾರೆ. ಲೈಫ್‌ಸೇವಿಂಗ್ ಡ್ರಗ್ಸ್ 8 ಆಣೆ ಅದನ್ನು ಸಹ ಪರ್ಚೇಸ್ ಮಾಡುತ್ತಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ರಾಜ್ಯದ ಎಲ್ಲಾ ಭಾಗಗಳಿಗೆ ಒಂದೇ ರೀತಿಯಾದ ಔಷಧಿ ಮತ್ತು ಗುಳಿಗೆಗಳನ್ನು ಕೊಡುತ್ತಿದ್ದಾರೆ. ವಿಭಿನ್ನವಾದ ಔಷಧಿಗಳು ಬೇಕಾದರೂ ಕೂಡ ಅದರ ಬಗ್ಗೆ ವ್ಯವಸ್ಥೆಯಾಗಿಲ್ಲ ಒಂದೇ ರೀತಿಯಾದ ಔಷಧಿಗಳನ್ನು ಸರ್ಕಾರ ಒದಗಿಸುತ್ತಿದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅವರು ಇದನ್ನು ಗಮನಿಸಬೇಕು. ಸರ್ಕಾರ ಶೇಕಡ 40 ರಷ್ಟು ಔಷಧಿಗಳನ್ನು ಕೊಂಡುಕೊಳ್ಳಲಿಕ್ಕೆ ಆಯಾಯ ಜಿಲ್ಲಾ ಪರಿಷತ್‌ನವರಿಗೆ, ಅವರಿಗೆ ಬೇಕಾದ ಆಸ್ಪತ್ರೆಗಳಿಗೆ ಅಗತ್ಯವಾದ ಔಷಧಿಗಳನ್ನು ಜೀವ ರಕ್ಷಕ ಔಷಧಿಗಳನ್ನು ಶೇಕಡ 40 ರಷ್ಟು ಕೊಳ್ಳತಕ್ಕ ಒಂದು ನಿರ್ದೇಶನದ ಮೇರೆಗೆ ಹಣವನ್ನು ನಾವು ಅವರಿಗೆ ಕೊಡುತ್ತಿದ್ದೇವೆ. ರಾಜ್ಯಮಟ್ಟದ ಜಿಎಂಎಸ್ ಶೇಕಡ 60 ರಷ್ಟು ಕೊಂಡುಕೊಳ್ಳುತ್ತಿದೆ. ಅದಕ್ಕೂ ಡಿಹೆಚ್‌ಓಗಳು ರಿಕ್ವೈರ್‌ಮೆಂಟ್ ಕಳುಹಿಸತಕ್ಕ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಶೇಕಡ 40 ರಷ್ಟು ಔಷಧಿಗಳನ್ನು ಕೊಳ್ಳತಕ್ಕ ಕೆಲಸವನ್ನು ಆಯಾ ಜಿಲ್ಲಾಪರಿಷತ್‌ನವರು ಮಾಡುತ್ತಾರೆ. ಡಿಹೆಚ್‌ಓಗಳು ಜಿಲ್ಲಾಪರಿಷತ್‌ನ ಮುಖ್ಯ ಕಾರ್ಯದರ್ಶಿಯವರ ಮುಖಂಡತ್ವದಲ್ಲಿ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಮಾನ್ಯ ಸದಸ್ಯರು ಕೂಡ ಸದಸ್ಯರಾಗಿರುತ್ತಾರೆ. ಪರ್ಚೇಸ್ ಮಾಡುವ ತೀರ್ಮಾನ ಏನು ತೆಗೆದುಕೊಳ್ಳುತ್ತಾರೆ ಆ ಸಮಿತಿಗೆ ಎಂಎಲ್‌ಎಗಳು ಕೂಡ ಸದಸ್ಯರಾಗಿದಿರುದಾರೆ. ಈ ಕೆಲಸ ತಮ್ಮಿಂದ ವ್ಯವಸ್ಥಿತವಾಗಿ ಆಗಬೇಕಾದರೆ ತಾವು ಕೂಡ ಆ ಹಂತದಲ್ಲಿ ಆಸ್ಪತ್ರೆಗಳಿಗೆ ಆ ಪ್ರದೇಶಗಳಿಗೆ ಬೇಕಾದ ಔಷಧವನ್ನು ಕೊಳ್ಳತಕ್ಕ ಒಂದು ವ್ಯವಸ್ಥೆಯನ್ನು ಸರಿಯಾದ ದರದಲ್ಲಿ ಕೊಳ್ಳತಕ್ಕ, ಸರಿಯಾಗಿ ಹಂಚತಕ್ಕ ವ್ಯವಸ್ಥೆ ತಮ್ಮಿಂದ ಆಗಬೇಕೆಂದು ನಾನು ನಿರೀಕ್ಷೆ ಮಾಡುತ್ತೇನೆ.

ಡಾ. ಡಿ. ಬಿ. ಗಂಗಪ್ಪ :- ನಾನು ಮಾನ್ಯ ಆರೋಗ್ಯ ಮಂತ್ರಿಗಳು ಹೇಳುವುದನ್ನು ಒಪ್ಪುತ್ತೇನೆ. ನಾನು ಸಹ ಹೋದಸಾರಿ ಜಿಲ್ಲಾಪರಿಷತ್‌ನ ಮೀಟಿಂಗ್‌ನಲ್ಲಿ ಈವೊಂದು ವಿಚಾರವಾಗಿ ಅವರು ಕೇಳಿದಾಗ ಅವರೇನು ಔಷಧಿಗಳನ್ನು 40 ಪರ್ಸೆಂಟ್ ಕೊಂಡುಕೊಳ್ಳುತ್ತಾರೆ ಅದರಲ್ಲಿ ಈ ತರಹ ನಡೆದಿದೆ. ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಜೊತೆಗೆ ಅವರು ಏನು ಪರ್ಚೇಸ್ ಮಾಡಬೇಕಾದರೆ ಎಲ್ಲಿಯಾದರೂ ಸಹ ಡಿಹೆಚ್‌ಓ ಡಾಕ್ಟರುಗಳ ಇನ್‌ಡೆಂಟ್ ಪ್ರಕಾರ ಪರ್ಚೇಸ್ ಮಾಡಬೇಕೆಂದು ಸರ್ಕಾರದಿಂದ ಇನ್‌ಸ್ಟ್ರಕ್ಷನ್ ಹೋದರೆ ಒಳ್ಳೆಯದೆಂದು ನಾನು ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಈಗಾಗಲೇ ಆ ಇನ್‌ಸ್ಟ್ರಕ್ಷನ್ ಹೋಗಿದೆ.

ಡಾ. ಡಿ.ಬಿ. ಗಂಗಪ್ಪ :- ಮೆಡಿಸನ್ ವಿಚಾರವಾಗಿ ಮಾತನಾಡಿದ್ದೇನೆ. ಜೊತೆಗೆ ಟ್ರಾನ್ಸ್‌ಫರ್ ಬಗ್ಗೆ ಮಾತನಾಡುತ್ತೇನೆ. ತಾಲ್ಲೂಕುಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲವು ಫೆಸಿಲಿಟೀಸ್‌ಗಳನ್ನು ಕೊಡುತ್ತಾ ಇದ್ದೀರಿ. ತಾವು ಹೆಚ್ಚಾಗಿ ಸಾಮೂಹಿಕ ಕೇಂದ್ರಗಳನ್ನು ಕೊಡುತ್ತಾ ಇದ್ದೀರಿ. ಸಾಮೂಹಿಕ ಕೇಂದ್ರಗಳಿಗೆ ಒಬ್ಬರು ಫಿಜಿಸಿಯನ್. ಒಬ್ಬರು ಸರ್ಜನ್ ಒಬ್ಬರು ಗೈನಾಕಲಜಿಸ್ಟ್, ಒಬ್ಬರು ಡೆಂಟಿಸ್ಟ್ ಕೊಡಬೇಕು. ಇತ್ತೀಚೆಗೆ ಸೈಕ್ಯಾಟ್ರಿಕ್, ಪ್ರಾಬ್ಲಮ್ಸ್ ಹೆಚ್ಚಾಗಿರುವುದರಿಂದ ಸೈಕ್ಯಾಟ್ರಿಕ್ಸ್ ಡಾಕ್ಟರು ಒಬ್ಬರನ್ನು ಈ ಆಸ್ಪತ್ರೆಗಳಿಗೆ ಸೇರಿಸಿದರೆ

ಬಹಳ ಒಳ್ಳೆಯದು. ಈಗಿನ ಕಾಲದಲ್ಲಿ ಸೈಕ್ಯಾಟ್ರಿಕ್ಸ್ ಪ್ರಾಬ್ಲಮ್ಸ್ ಬಹಳ ಹೆಚ್ಚಾಗುತ್ತಿದೆ. ಅದು ಮೊದಲಿಂದಲೂ ಇರುತ್ತಾ ಇತ್ತು. ಈಗ ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಾ ಬಂದಿದೆ. ಸೈಕ್ಯಾಟ್ರಿಕ್ಸ್ ಪ್ರಾಬ್ಲಮ್ಸ್ ಇರುವುದರಿಂದ ಒಂದು ಹ್ಯಾಂಡನ್ನು ಕೊಡಬೇಕು. ಜೊತೆಗೆ ಕಡ್ಡಾಯವಾಗಿ ಸಮುದಾಯ ಆಸ್ಪತ್ರೆ ಮತ್ತು ಹೆಲ್ತ್ ಸೆಂಟರ್‌ಗಳಿಗೆ ಗೈನಕಾಲಜಿಸ್ಟ್‌ನ್ನು ತಾವು ಕೊಡಲೇಬೇಕಾಗುತ್ತದೆ. ಕೆಲವು ಸ್ನೇಹಿತರು ಕಂಪ್ಲೇಂಟ್ ಮಾಡುತ್ತಿದ್ದಾರೆ. ಇದು ನಿಜ ಇರಬಹುದು. ಎಷ್ಟೋ ಡಾಕ್ಟರುಗಳು ದುಡ್ಡಿನ ಜೊತೆಗೆ ಸಿಜರಿನ್ ಆಪರೇಶನ್ ಮಾಡುತ್ತಾರೆ, ಸುಮ್ಮನೆ ಮಾಡುತ್ತಾರೆ ಎಂದು ಎಷ್ಟೋ ಜನ ಕಂಪ್ಲೇಂಟ್ ಮಾಡಿದ್ದನ್ನು ನೋಡುತ್ತೇವೆ. ಇದು ಸತ್ಯ ಇರಬಹುದು. ಆದರೆ ಈಗಿನ ಒಂದು ಆಧುನಿಕ ಕಾಲದಲ್ಲಿ ನಾನು ಒಬ್ಬ ಡಾಕ್ಟರ್ ಆಗಿ ಹೇಳುತ್ತಿದ್ದೇನೆ. ಹಿಂದೆ ಹಳ್ಳಿಗಾಡಿನಲ್ಲಿ ಯಾವ ರೀತಿಯ ಜೀವನಕ್ರಮ ಇತ್ತು, ಆ ತರಹ ಇಂದು ಇಲ್ಲ. ನಮ್ಮ ಲೈಫ್ ಇಂದು ಸ್ಟೇಗ್ನೇಟ್ ಆಗಿದೆ. ಸುಮ್ಮ ಸುಮ್ಮನೆ ಯಾರೂ ಸಿಜರಿನ್ ಮಾಡುವುದಕ್ಕೆ ಹೋಗುವುದಿಲ್ಲ. ಹಳ್ಳಿಗಾಡಿನಲ್ಲಿ ಒಬ್ಬ ಗೈನಕಾಲಜಿಸ್ಟ್‌ನ್ನು ಕೊಟ್ಟರೆ ಅವರು ಎಲ್ಲಾ ಪೇಶಂಟ್ಸ್‌ನ್ನು ನೋಡಿಬಿಟ್ಟು, ಡೆಲಿವರಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದೇರೀತಿ ಹಳ್ಳಿಗಾಡಿನಲ್ಲಿ ಮೆಡಿಕೋಲೀಗಲ್ ಕೇಸಸ್. ಯಾವುದೋ ಒಂದು ಊರಿನಲ್ಲಿ ಒಬ್ಬ ಪ್ರಭಾವಿತರ ಮನೆಯಲ್ಲಿ ಯಾರೋ ಒಬ್ಬರದ್ದು ಪಾಯಿಸನ್ ಕೇಸ್ ಆಯಿತು ಎಂದರೆ, ಯಾರಾದರೂ ಉರುಳುಹಾಕಿಕೊಂಡು ಸತ್ತರೆ ಯಾವ ಡಾಕ್ಟರ್ ಕೂಡ ಸಿಗುವುದಿಲ್ಲ. ಮೂರು ನಾಲ್ಕು ಜನ ಡಾಕ್ಟರುಗಳು ಇದ್ದರೂ ಅವರು ರಜಾ ಅರ್ಜಿಹಾಕಿಬಿಟ್ಟು ಹೋಗಿಬಿಡುತ್ತಾರೆ. ಜೊತೆಗೆ ಈ ಮನುಷ್ಯ ಸತ್ತಿರುವ ನೋವು ಇರುತ್ತದೆ. ನೋವಿನ ಜೊತೆಗೆ ಎರಡು ದಿವಸಗಟ್ಟಲೆ ಹೆಣವನ್ನು ಹಾಕಿಕೊಂಡು ಕುಳಿತಿರುತ್ತಾರೆ. ಈ ದಿಸೆಯಲ್ಲಿ ತಾವು ಏನಾದರೂ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅನೇಕ ಮಂದಿ ಡಾಕ್ಟರುಗಳು ಇದ್ದರೂ ಸಹ ಸಾಹುಕಾರರ ಮನೆಯಲ್ಲಿ ಯಾರಾದರೂ ಸತ್ತಿದ್ದಾರೆ ಎಂದರೆ, ಈ ಉಸಾಬರಿ ಬೇಡ ಎಂದು ರಜ ಹಾಕಿಬಿಡುತ್ತಾರೆ. ಎರಡು ದಿವಸವಾದರೂ ಹೆಣ ಹಾಗೆಯೇ ಇರುತ್ತದೆ. ಜೊತೆಗೆ ಫಾರೆನ್ಸಿಕ್ ಮೆಡಿಸಿನ್‌ನಲ್ಲಿ ಯಾರು ಡಿಪ್ಲೋಮಾ ಮಾಡಿರುತ್ತಾರೆ, ಅಂತಹ ಒಬ್ಬರೋ ಇಬ್ಬರನ್ನು ಅಪಾಯಿಂಟ್ ಮಾಡುತ್ತೀರಾ ಎಂದು ಕೇಳಿದ್ದೇನೆ. ಅವರು ಈ ಪೋಸ್ಟ್‌ಮಾರ್ಟಮ್ ಕೆಲಸ ಮಾಡುತ್ತಾರೆ. ಆದ್ದರಿಂದ ಈ ವ್ಯವಸ್ಥೆಯನ್ನು ತರುವುದಕ್ಕೆ ಯೋಚನೆ ಮಾಡಿದರೆ ಒಳ್ಳೆಯದಾಗುತ್ತದೆ. ಏಕೆಂದರೆ ಎಷ್ಟೋ ಸಾರಿ ಹಳ್ಳಿಗಾಡಿನಲ್ಲಿ, ನನಗೆ ಗೊತ್ತಿರುವ ಹಾಗೆ ಎರಡು ದಿವಸಗಟ್ಟಲೆ ಹೆಣ ಇರುತ್ತದೆ. ಸತ್ತ ಹೆಣಗಳನ್ನು ನೋಡಿಕೊಂಡು ಇರಬೇಕಾಗುತ್ತದೆ. ಇನ್ನು ಜಿಲ್ಲಾ ಆಸ್ಪತ್ರೆಗಳಲ್ಲಿ ಯಾರನ್ನಾದರೂ ಸರ್ಜನನ್ನು ಟ್ರಾನ್ಸ್‌ಫರ್ ಮಾಡಬೇಕಾದರೆ, ಅವರನ್ನು ಟ್ರಾನ್ಸಫರ್ ಮಾಡಿ ಅವರ ಜಾಗಕ್ಕೆ ಫಿಸಿಶಿಯನ್ ಅನ್ನು ಹಾಕುತ್ತೀರಿ. ಫಿಸಿಶನ್‌ನ್ನು ಟ್ರಾನ್ಸ್‌ಫರ್ ಮಾಡಿ ಅವರ ಜಾಗಕ್ಕೆ ಸರ್ಜನ್‌ರನ್ನು ಹಾಕುತ್ತೀರಿ. ನಾನು ತಮಗೆ ಸಲಹೆ ಕೊಡುವುದೇನೆಂದರೆ, ಪ್ರತಿಯೊಂದು ಜಿಲ್ಲಾ ಆಸ್ಪತ್ರೆಗೆ ಮೂರು ಜನ ಸರ್ಜನ್‌ಗಳು, ಮೂರು ಜನ ಫಿಸಿಶಿಯನ್ಸ್, ಮೂರು ಜನ ಗೈನಕಾಲಜಿಸ್ಟ್‌ನ್ನು ಕೊಟ್ಟು, ಯಾರು ಟ್ರಾನ್ಸ್‌ಫರ್ ಆಗುತ್ತಾರೆ, ಅದೇ ಪೋಸ್ಟ್‌ಗೆ ಅಂತಹವರನ್ನೇ ಹಾಕಬೇಕು. ಇಲ್ಲದಿದ್ದರೆ ಒಂದೊಂದು ಸಾರಿ ಆರು ಜನ ಫಿಸಿಶನ್ ಇರುತ್ತಾರೆ, ಇಲ್ಲ ಆರು ಜನ ಸರ್ಜನ್ಸ್ ಇರುತ್ತಾರೆ. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಯಾವ ಪೋಸ್ಟ್‌ನಲ್ಲಿ ಟ್ರಾನ್ಸ್‌ಫರ್ ಆಗುತ್ತದೋ, ಅಲ್ಲಿ ಅಂತಹವರನ್ನೇ ಹಾಕುವುದಕ್ಕೆ ತಾವು ತಮ್ಮ ಇಲಾಖೆಗೆ ಡೈರೆಕ್ಷನ್ ಕೊಟ್ಟರೆ ಒಳ್ಳೆಯದು. ಇಷ್ಟು ಹೇಳಿ ತಮ್ಮ ಮೆಡಿಕಲ್ ಎಜುಕೇಶನ್ ಬಗ್ಗೆ ಹೇಳಬೇಕೆಂದರೆ, ಸುಮಾರು 1952ನೇ ಇಸವಿಯಲ್ಲಿ ಬಳ್ಳಾರಿ ಕಾಲೇಜು ಆಯಿತು. ಇಲ್ಲಿಯವರೆಗೆ ಇನ್ನೊಂದು ಆಗಿಲ್ಲ. ಆದರೆ ಪ್ರೈವೇಟ್ ಕಾಲೇಜುಗಳು 15 ಅಥವಾ 16 ನಮ್ಮ ರಾಜ್ಯದಲ್ಲಿ ಆಗಿವೆ. ಈ ಗವರ್ನಮೆಂಟ್ ಕಾಲೇಜುಗಳಲ್ಲಿ ಮೆರಿಟ್ ಸ್ಟೂಡೆಂಟ್ಸ್ ನಮ್ಮ ರಾಜ್ಯದಿಂದ ಜಾಸ್ತಿ ಬರುತ್ತಾರೆ. ಅಲ್ಲಿಂದ ಇಲ್ಲಿಯವರೆಗೆ ಅದೇನು 950 ಸೀಟುಗಳು ಇವೆ, ಅಷ್ಟೇ ಇವೆ. ಹೆಚ್ಚಿಗೆ ಆಗಿಲ್ಲ. ನಾನು ಕೇಳುವುದು ಇಷ್ಟೆ. ನಮ್ಮ ರಾಜ್ಯದಲ್ಲೇನು ವಿದ್ಯಾರ್ಥಿಗಳ ಮಟ್ಟ ಹೆಚ್ಚಿಗೆ ಆಗಿಲ್ಲವೇ ? ಈಗಂತೂ ಹೆಚ್ಚು ಹೆಚ್ಚಿಗೆ ಜನರು ಬರುತ್ತಿದ್ದಾರೆ. ಆದ್ದರಿಂದ ಗವರ್ನಮೆಂಟ್ ಕಾಲೇಜನ್ನು ಓಪನ್ ಮಾಡಿ ಅಥವಾ ಇರುವ

ಸೀಟುಗಳನ್ನಾದರೂ ಹೆಚ್ಚು ಮಾಡಿ. ಆದರೆ ಪ್ರೈವೇಟ್ ಕಾಲೇಜುಗಳನ್ನು ಮಾತ್ರ ಕೊಡುತ್ತಿದ್ದೀರಿ. ಹಿಂದೆ ಒಂದು ರೀತಿಯ ಸೆಲೆಕ್ಷನ್ ಇತ್ತು. ನಾವು ಓದಬೇಕಾದರೆ ಬೆಂಗಳೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ, ಮತ್ತು ಮೈಸೂರು ವಿಶ್ವವಿದ್ಯಾನಿಲಯ ಈ ಮೂರು ವಿಶ್ವವಿದ್ಯಾನಿಲಯಗಳು ಇದ್ದವು. ಆಗ ಏನು ಮಾಡಿದ್ದರು ಎಂದರೆ, ಗವರ್ನಮೆಂಟ್ ಸೀಟ್ಸ್ ಹಂಚಬೇಕಾದರೆ, ಈ ಮೂರು ಯೂನಿವರ್ಸಿಟಿಗಳಿಗೆ 330-330 ಸೀಟುಗಳು ಅಂತ ಹಂಚಿದ್ದರು. ಆಗ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ಈ ಸೀಟುಗಳು ಸಿಗುತ್ತಿತ್ತು. ಗವರ್ನಮೆಂಟ್ ಸೀಟುಗಳು 990 ಇದ್ದರೆ, ಅದರಲ್ಲಿ 110-150 ರಾಜ್ಯದ ಬೇರೆ ಭಾಗಗಳಿಗೆ ಹೋಗುತ್ತಿದ್ದವು. ಆದರೆ ಈಗ ಅರರಿಂದ ಎಂಟುನೂರು ಸೀಟುಗಳು ಬರೀ ಬೆಂಗಳೂರು, ಮೈಸೂರು ಮತ್ತು ಮಂಗಳೂರು ಈ ಮೂರು ಭಾಗದ ವಿದ್ಯಾರ್ಥಿಗಳಿಗೆ ಹೋಗುತ್ತದೆ. ಆವಾಗ ಪ್ರತಿಯೊಂದು ವಿಶ್ವವಿದ್ಯಾನಿಲಯಗಳಿಗೆ330 ಸೀಟುಗಳು ಅಂತ ಇದ್ದು, ಪ್ರತಿಯೊಂದು ಭಾಗದ ವಿದ್ಯಾರ್ಥಿಗಳಿಗೆ ಸಹ ಅವಕಾಶ ಸಿಗುತ್ತಿತ್ತು; ಆಗ ಹಳ್ಳಿಗಾಡಿನ ವಿದ್ಯಾರ್ಥಿಗಳು ಡಾಕ್ಟರಾದ ಮೇಲೆ ಅವರನ್ನು ಎಲ್ಲಿಗೆ ಹಾಕಿದರೂ ಅವರು ಹೋಗುತ್ತಿದ್ದರು. ಈಗ ಡಾಕ್ಟರುಗಳೆಲ್ಲರೂ ಮೈಸೂರು, ಬೆಂಗಳೂರಿನವರು ಆಗಿದ್ದು ಅವರನ್ನು ಟ್ರಾನ್ಸ್‌ಫರ್ ಮಾಡಿದರೆ ಅವರು ಹೋಗುವುದಿಲ್ಲ. ಅವರು ಮತ್ತೆ ಮತ್ತೆ ಟ್ರಾನ್ಸ್‌ಫರ್ ಕೇಳುತ್ತಾರೆ. ಇವತ್ತು ಪಿ.ಎಸ್.ಸಿ ಸೆಲೆಕ್ಷನ್ ಆದರೂ ಸಹ ಇವರು ಹೋಗುವುದಿಲ್ಲ. ಆದ್ದರಿಂದ ನಾನು ಇಷ್ಟು ಕೇಳಿಕೊಳ್ಳುತ್ತೇನೆ. ಅಟ್‌ಲೀಸ್ಟ್ ಯೂನಿವರ್ಸಿಟಿ ವೈಸ್ ಇಲ್ಲದಿದ್ದರೂ ಡಿವಿಜನ್‌ವೈಸ್ ಮಾಡಿ. ಡಿವಿಜನ್‌ಗೆ ಇಷ್ಟು ಎಂದು ಕೊಡಿ. ಗುಲ್ಬರ್ಗಾ ಡಿವಿಜನ್‌ಗೆ 300 ಸೀಟ್ಸ್, ಮೈಸೂರು ಡಿವಿಜನ್‌ಗೆ 300 ಸೀಟ್ಸ್, ಬೆಂಗಳೂರು ಡಿವಿಜನ್‌ಗೆ 300 ಸೀಟ್ಸ್ ಎಂದರೆ ಇಡೀ ರಾಜ್ಯದ ಎಲ್ಲಾ ಭಾಗದ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತದೆ. ಈಗೇನಾಗಿದೆ ಬರೀ ಬೆಂಗಳೂರು, ಮೈಸೂರು ಮಂಗಳೂರು ಇವರೇ ಇದ್ದಾರೆ. ನೀವು ಬೇಕಾದರೆ ನಾಲ್ಕಾರು ವರ್ಷದ ಲಿಸ್ಟ್ ತೆಗೆಸಿ ನೋಡಿ. ಇಲ್ಲಿರತಕ್ಕಂಥವರು ಬರೀ ಶ್ರೀಮಂತರ ಮಕ್ಕಳೇ. ಏತಕ್ಕೆಂದರೆ ಅವರ ವಿದ್ಯಾಭ್ಯಾಸದ ಮಟ್ಟ, ಆ ಮಟ್ಟದಲ್ಲಿದೆ. ನಮ್ಮ ಹಳ್ಳಿಗಾಡಿನಲ್ಲಿ ಒಂದು ತಾಲೋಕಿನಲ್ಲಿ ಒಬ್ಬ ವಿದ್ಯಾರ್ಥಿ ಸಹ ಗೌರ್ನಮೆಂಟ್ ಮೆಡಿಕಲ್ ಸೀಟ್ ತೆಗೆದುಕೊಳ್ಳುತ್ತಿಲ್ಲ. ಸೀಟ್ ಸಿಗುವುದಿಲ್ಲ. ಎಲ್ಲೋ ಎರಡು ವರ್ಷಕ್ಕೆ, ಮೂರು ವರ್ಷಕ್ಕೆ ಒಬ್ಬರು ಇಬ್ಬರು ಮೆಡಿಕಲ್ ಎಜುಕೇಷನ್‌ಗೆ ಹೋಗುತ್ತಾರೆ. ನಾವು ಮೋಸ ಮಾಡಿದಹಾಗೆ ಆಗುತ್ತಿದೆ. ಹಿಂದೆ ಏನು ವ್ಯವಸ್ಥೆ ಇತ್ತೋ ಅದನ್ನು ಮಾಡಿ. ಯೂನಿವರ್ಸಿಟಿ ವೈಸ್ ಹಂಚುವ ಬದಲು ಡಿವಿಜನ್ ವೈಸ್ ಹಂಚಿದರೆ ಎಲ್ಲರಿಗೂ ಒಂದು ಅನುಕೂಲ ದೊರಕುತ್ತದೆ ಎಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಮೆಡಿಸಿನ್ಸ್ ಬಗ್ಗೆ ಹೇಳಬೇಕಾದರೆ, ನಿನ್ನೆ ಸಂಯುಕ್ತ ಕರ್ನಾಟಕದಲ್ಲಿ ಒಂದು ವರದಿ ಬಂದಿದೆ. ಭಾರತಕ್ಕೆ ಬಂದು ಬೀಳುತ್ತಿರುವ ಕಳಪೆ ಔಷಧಿಗಳು ಎಂದು ಬಂದಿದೆ. ಈ ಔಷಧಿಗಳ ಬಗ್ಗೆ ಹೇಳಬೇಕಾದರೆ, ಇದು ಹೆಚ್ಚಾಗಿ ಸೆಂಟ್ರಲ್ ಗೌರ್ನಮೆಂಟ್‌ಗೆ ಸೇರುತ್ತದೆ. ಅವರ ಒಂದು ಕಂಟ್ರೋಲ್‌ನಲ್ಲಿ ನಾವು ಇದು ಮಾಡಬೇಕಾಗುತ್ತದೆ. ನಮ್ಮ ದೇಶದಲ್ಲಿ ಒಂದು ವರ್ಷಕ್ಕೆ ಈ ಒಂದು ಔಷಧ ವ್ಯಾಪಾರದ ಹಣ 3500 ಕೋಟಿ ರೂಪಾಯಿ ಇದೆ. ಈ 3500ಕೋಟಿ ರೂಪಾಯಿ ವ್ಯವಹಾರ ಸುಮಾರು ಮೂರು ಸಾವಿರ ಕಂಪನಿಗಳಲ್ಲಿ ನಡೆಯುತ್ತದೆ. ಈ ಮೂರು ಸಾವಿರ ಕಂಪೆನಿಗಳಲ್ಲಿ ಕೇವಲ 25 ಕಂಪೆನಿಗಳು 50 ಪರ್‌ಸೆಂಟ್ ತೆಗೆದುಕೊಳ್ಳುತ್ತವೆ. ಅದೇನೇ ಇರಲಿ, ಈ ವ್ಯವಹಾರದ ಜೊತೆಗೆ, ಸುಮಾರು 60 ಸಾವಿರ ಮೆಡಿಸಿನ್ಸ್ ಇವತ್ತು ನಮ್ಮ ದೇಶದ ಮಾರ್ಕೆಟ್‌ನಲ್ಲಿವೆ. ಆದರೆ ನಮಗೆ ಬೇಕಾಗಿರುವುದು ಬರೀ 250 ಮೆಡಿಸಿನ್ಸ್ ಮಾತ್ರ. ಆದರೆ ನಮ್ಮಲ್ಲಿ 60 ಸಾವಿರ ಮೆಡಿಸಿನ್ಸ್ ನಾವು ತಯಾರು ಮಾಡಿಕೊಡುತ್ತೇವೆ. ಅದರಲ್ಲಿ 750 ಔಷಧಿಗಳು ಮಾತ್ರ ಮೆಡಿಕಲ್ ಸಂಬಂಧಪಟ್ಟಿದ್ದು. ಉಳಿದೆಲ್ಲಾ ಒಂದೇ ರೀತಿಯ ಔಷಧಗಳನ್ನು ನಾನಾ ರೂಪದಲ್ಲಿ ಮಿಶ್ರಣ ಮಾಡಿ ಜನಗಳಿಗೆ ಮೋಸ ಮಾಡುತ್ತಿದ್ದಾರೆ. ಇದರಲ್ಲಿ ನಮ್ಮ ಒಂದು ರಿಪೋರ್ಟ್ ಹೇಳುತ್ತದೆ, 50 ಪರ್ಸೆಂಟ್ ಡೂಪ್ಲಿಕೇಟ್ ಅಥವಾ ಖೋಟಾ ಮೆಡಿಸಿನ್ಸ್ ಎಂದು ಹೇಳುತ್ತದೆ. ಈ 50 ಪರ್ಸೆಂಟ್‌ನಲ್ಲಿ ಸಹ 20 ಪರ್‌ಸೆಂಟ್ ಖೋಟಾ ಇದೆ. ನಮ್ಮ ಪಾರ್ಲಿಮೆಂಟರಿ ಜೋರ್ಡ್ ಕಮಿಟಿ ಮಾಡಿ ಇನ್‌ವೆಸ್ಟಿಗೇಷನ್ ಮಾಡಿದಾಗ 24 ಪರ್‌ಸೆಂಟ್

ಜೋಟಾ ಮೆಡಿಸಿನ್ಸ್ ಎಂದು ಆ ಪಾರ್ಲಿಮೆಂಟರಿ ಕಮಿಟಿ ರಿಪೋರ್ಟ್ ಕೊಟ್ಟಿದೆ. ಅದೇರೀತಿ 1979ನೇ ಇಸವಿಯಲ್ಲಿ ಒಂದು ಕಮಿಟಿ ಮಾಡಿದಾಗ ಇದರಲ್ಲಿ ಎಷ್ಟು ಲಾಭ ಮಾಡುತ್ತಾರೆ, ಈ ತರಹ ಔಷಧಗಳು ಏತಕ್ಕೆ ಬರುತ್ತವೆ ಎಂದರೆ ಫಾರಿನ್‌ನಲ್ಲಿ ಎಷ್ಟೋ ಔಷಧಿಗಳು ಬ್ಯಾನ್ ಮಾಡಿರುತ್ತಾರೆ. ಅವುಗಳನ್ನು ನಾವು ಜನರಿಗೆ ಕೊಡುತ್ತೇವೆ. ಪೇಷಂಟ್ಸ್‌ಗೆ ಔಷಧ ಕೊಡುತ್ತೇವೋ ಅಥವಾ ವಿಷ ಕೊಡುತ್ತೇವೋ ಗೊತ್ತಾಗುತ್ತಿಲ್ಲ. ಅನಾಲ್ಜಿನ್ ಜೊತೆಗೆ ವಿಟಮಿನ್ ಎರಡನ್ನೂ ಕಾಂಬಿನೇಷನ್ ಮಾಡಿ ಜನಗಳಿಗೆ ಮೋಸ ಮಾಡುವುದು ನಡೆದಿದೆಯೇ ಹೊರತು, ಮೂಲ ಔಷಧಿ ಏನು ಬೇಕು, ಜನಗಳಿಗೆ ಎಷ್ಟು ಕೊಟ್ಟರೆ ಸಾಕು, ಎಂಬುದನ್ನು ನೋಡಬೇಕು. ಇದು ತಮ್ಮ ವ್ಯಾಪ್ತಿಯಲ್ಲಿ ಬರುತ್ತದೆ. ಜೊತೆಗೆ ತಾವೂ ಇದನ್ನು ಕೇಂದ್ರ ಸರಕಾರದ ಗಮನಕ್ಕೆ ತಂದು ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಜೊತೆಗೆ ನಾವು ಏನು ಒಂದು ಕಂಪೆನಿಗೆ ಮೆಡಿಸಿನ್ಸ್ ತಯಾರು ಮಾಡುವುದಕ್ಕೆ ಲೈಸೆನ್ಸ್ ಕೊಟ್ಟಾಗ ಟಾನಿಕ್ ತಯಾರು ಮಾಡಿ, ಜೀವರಕ್ಷಕ ಔಷಧಿ ತಯಾರು ಮಾಡಿ ಎಂದು ಕೊಡುತ್ತೇವೆ, ಆದರೆ ಅವರು ಜೀವ ರಕ್ಷಕ ಔಷಧಿ ಎಂದು ಹೇಳಿಬಿಟ್ಟು, ಬರೀ ಟಾನಿಕ್ ಮಾಡುತ್ತಾರೆ. ಇವತ್ತು ಮೂರು ಸಾವಿರ ಟೈಪ್ ಟಾನಿಕ್ ನಮ್ಮಲ್ಲಿ ದೊರೆಯುತ್ತದೆ. ಅದರಿಂದ ಏನೂ ಉಪಯೋಗ ಇಲ್ಲ. ಅದರಲ್ಲಿ ಎಷ್ಟೋ ಮೆಡಿಸಿನ್ಸ್ ನಮಗೆ ಬೇಕಾಗಿಲ್ಲದಿರುವುದನ್ನು ನಾವು ನುಂಗುತ್ತೇವೆ. ಈ ಕಾಂಬಿನೇಷನ್ ಡ್ರಗ್ಸ್ ಎಲ್ಲಾ ಮಾಡಿ ನಮಗೆ ಬೇಕಾಗಿಲ್ಲದಿರುವುದನ್ನು ನಾವು ನುಂಗುತ್ತೇವೆ. ಇದರ ಬಗ್ಗೆ ಕೇಂದ್ರ ಸರಕಾರದ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಈ ಬೇಡಿಕೆಗಳನ್ನು ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಿ. ಎಸ್. ಆಚಾರ್ (ಬೈಂದೂರು):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಸಹಕಾರ, ಮಾರುಕಟ್ಟೆ, ಕಾರ್ಮಿಕ, ಉದ್ಯೋಗ, ವೈದ್ಯಕೀಯ, ಕುಟುಂಬ ಕಲ್ಯಾಣ, ಜನಾರೋಗ್ಯ ಇವೇ , ಇತ್ಯಾದಿ ಇತ್ಯಾದಿ ಬೇಡಿಕೆಗಳನ್ನು ಬೆಂಬಲಿಸುತ್ತಾ, ಪ್ರಥಮವಾಗಿ ಸಹಕಾರ ಇಲಾಖೆಯನ್ನು ಕುರಿತು ಕೆಲವು ಮಾತುಗಳನ್ನಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. 87 ವರ್ಷಗಳ ಇತಿಹಾಸವಿರುವ ಸಹಕಾರಿ ರಂಗ ಅನೇಕ ಬದಲಾವಣೆಗಳನ್ನು ಅನೇಕ ಬೆಳವಣಿಗೆಗಳನ್ನೂ ಕಂಡಿದೆ. ಕರ್ನಾಟಕದಲ್ಲಿ ಸಹ ಬೇರೆ ಮಹಾರಾಷ್ಟ್ರ ಮತ್ತು ಗುಜರಾತ್‌ನಷ್ಟು ಉತ್ತಮವಾಗಿಲ್ಲದಿದ್ದರೂ ಸಹ ಸಾಕಷ್ಟು ಸಂಘಗಳು ಇವೆ. 3158ಕೋಟಿ ರೂಪಾಯಿ ಚಲಾವಣಾ ಬಂಡವಾಳ ಇದೆ. 53 ಪರ್‌ಸೆಂಟ್ ಶೇಕಡಾ ಸಹಕಾರಿ ಸದಸ್ಯರಿದ್ದಾರೆ. ಪೂರ್ಣ ಸದಸ್ಯತ್ವ ಹೊಂದಬೇಕೆಂಬ ಕಾನೂನು ಮತ್ತು ಯೋಜನೆ ಇದ್ದರೂ ಕೂಡಾ

5. 45. ಪಿ. ಎಂ.

ಸಂಪೂರ್ಣ ಸದಸ್ಯತ್ವ ಹೊಂದಿಲ್ಲ ಅದರ ಬಗ್ಗೆ ನಮ್ಮ ಸರ್ಕಾರ 8ನೇ ಯೋಜನೆಯಲ್ಲಿ ಸಹಕಾರಿ ರಂಗದ ಶೀರ್ಷಿಕೆಗೆ 15,775 ಕೋಟಿ ರೂಪಾಯಿಗಳನ್ನು ಮೀಸಲಾಗಿರಿಸಿದ್ದನ್ನು ತಿಳಿಯುವಾಗ ಸಹಕಾರ ಕುರಿತು ಆಶಾ ಭಾವನೆ ಮೂಡುತ್ತದೆ. ಕೃಷಿಕರಿಗೆ ಅಲ್ಪಾವಧಿ ದೀರ್ಘಾವಧಿ ಆರ್ಥಿಕ ನೆರವು, ಮಾರುಕಟ್ಟೆ ವ್ಯವಸ್ಥೆ ಬಳಕೆ ಸಾಮಗ್ರಿಗಳ ವಿತರಣೆ, ಉತ್ಪಾದನೆ ಸಂಸ್ಕರಣೆ ಘಟಕಗಳು ಮಹಿಳೆಯರು, ವಿದ್ಯಾರ್ಥಿಗಳು, ಮೀನುಗಾರರು, ಉದ್ದಿಮೆದಾರರು, ಕಾರ್ಮಿಕರು, ಹರಿಜನ ಮತ್ತು ಗಿರಿಜನರು ಮೂರ್ತೆದಾರರು, ಮನೆ ಕಟ್ಟುವವರು, ಬೀಡಿ ಕಟ್ಟುವವರು, ಜೇನು ಸಾಕುವವರು, ಕೋಳಿ ಸಾಕುವವರು, ರೇಷ್ಮೆ ಉತ್ಪಾದಕರು ಹಾಲು ಉತ್ಪಾದಕರು ಹೀಗೆ ವಿವಿಧ ವರ್ಗಗಳು ಸಂಘಟಿತ ಸಾಮಾಜಿಕ ಅಭಿವೃದ್ಧಿಯ ಸುಂದರ ಸುಯೋಜಿತ ಸೋಪಾನ ಈ ಸಹಕಾರಿ ರಂಗ. ಇವತ್ತು, ಇಷ್ಟಾದರೂ ಸಹ ಈ ಉದ್ಯಮಗಳನ್ನು ಒಳ್ಳೆಯ ಉದ್ದೇಶದಿಂದ ಸ್ಥಾಪನೆ ಮಾಡಿದರೂ ಸಹ ಇವುಗಳ ಉದ್ದೇಶ ಈಡೇರಿಸಲಿಕ್ಕೆ ಸಾವಿರ ವಿಘ್ನಗಳು ಇವೆ. ಉದ್ದೇಶ ಕುರಿತು ಸಂಶಯ ಬರುವಷ್ಟರ ಮಟ್ಟಿಗೆ ಟೀಕೆಗಳು ಆಗುತ್ತಿವೆ. ಸಹಕಾರ ರಂಗ ಕುರಿತು ಮಾತೆತ್ತಿದರೆ ಟೀಕೆ ಟೀಕೆ ಟೀಕೆ. ಸಹಕಾರ ಸಂಘದಲ್ಲಿರುವವರೆಲ್ಲಾ ಪಟ್ಟಭದ್ರಹಿತಾಸಕ್ತಿಗಳು, ಅಲ್ಲಿ ನಡೆಯುತ್ತಿರುವುದೆಲ್ಲಾ ಭ್ರಷ್ಟಾಚಾರ, ಅಲ್ಲಿ ನಡೆಯುತ್ತಿರುವುದೆಲ್ಲಾ ಅವ್ಯವಹಾರ,

ಎನ್ನುವ ಟೀಕೆ ವಿಪರೀತವಾಗಿ ಬರುತ್ತಿದೆ. ದೇಶದ ಅನೇಕ ಕಡೆಗಳಲ್ಲಿ ಅನೇಕ ರಂಗಗಳಲ್ಲಿ ಭ್ರಷ್ಟಾಚಾರ ಇದೆ. ಇವತ್ತು ಇದು ಒಂದು ಫ್ಯಾಶನ್ ಆಗಿ ಹೋಗಿದೆ. ಒಟ್ಟು ಈ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಹಾಸುಹೊಕ್ಕಾಗುವ ಇದೊಂದು ಸಂಸ್ಕೃತಿ ಆಗುವ ರೀತಿ ಇದೆ. ಸಹಕಾರ ಸಂಘದಲ್ಲಿ ಇರಬೇಕೆಂದು ಏನು ನಾನು ಹೇಳುತ್ತಿಲ್ಲ. ಬೇರೆ ರಂಗದಲ್ಲಿ ಈ ಭ್ರಷ್ಟಾಚಾರ ಬೆಳೆದು ಬಂದ ಹಾಗೆ ಇಲ್ಲೂ ಬಂದಿದೆ ಎಂದು ಮಾತ್ರ ನಾನು ಹೇಳುತ್ತೇನೆ. ಸರ್ಕಾರಿ ವಲಯದ ಉದ್ಯಮದಲ್ಲಿ, ಕೈಗಾರಿಕಾ ರಂಗದಲ್ಲಿ ಕೋಟ್ಯಾಂತರ ರೂಪಾಯಿ ಹಣ ತೊಡಗಿಸಿ ಕೋಟಿಗಟ್ಟಲೆ ನಷ್ಟವಾಗಿರುತ್ತದೆ ಅಲ್ಲಿ ಭ್ರಷ್ಟಾಚಾರವಾಗಿರುತ್ತದೆ. ಆ ಕುರಿತು ಅಷ್ಟು ಪ್ರಸ್ತಾಪ ಇಲ್ಲ ಪ್ರಚಾರ ಇಲ್ಲ. ಚಕಾರ ಶಬ್ದ ಎತ್ತುವವರು ಇಲ್ಲ. ಸಹಕಾರಿ ರಂಗ ಕುರಿತು ಇದು ಆದಾಗ ವ್ಯಾಪಕ ಪ್ರಚಾರ. ಇದು ಏತಕ್ಕೆ ? ಏಕೆಂದರೆ, ಜನಗಳ ಸಹಭಾಗಿತ್ವ ಇದರಲ್ಲಿದೆ. ಬೇರೆ ವ್ಯವಸ್ಥೆಯಲ್ಲಿ ಜನರ ಸಹಭಾಗಿತ್ವ ಇಲ್ಲ ಸಹಕಾರಿ ರಂಗದಲ್ಲಿ ಜನರು ಕಟ್ಟಿದಂತಹ ಸಂಸ್ಥೆಗಳಾದ್ದರಿಂದ ಮಹಾಸಭೆಯಲ್ಲಿ ಸಂಪೂರ್ಣವಾಗಿ ಚರ್ಚೆಯಾಗಿ ಲೆಕ್ಕಪತ್ರಗಳ ಪರಿಶೋಧನೆಯಾಗಿ ನ್ಯೂನ್ಯತೆಗಳನ್ನು ಸಂಪೂರ್ಣವಾಗಿ ಮುದ್ರಿಸಿ ಹಂಚಿ ಚರ್ಚೆಯಾಗಿರುವುದರಿಂದ ಗೊತ್ತಾಗುತ್ತದೆ. ಅದು ಪ್ರಚಾರವಾಗಬಾರದು ಅಂತ ನಾನು ಹೇಳುತ್ತಿಲ್ಲ. ಭ್ರಷ್ಟಾಚಾರ ತಡೆಯಬೇಕು. ಅದಕ್ಕೆ ನಾಂದಿ ಆಗುವುದಾದರೆ, ಈ ರೀತಿಯಾದ ಪ್ರಚಾರ ಇರಲಿ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಭ್ರಷ್ಟಾಚಾರ ಮತ್ತು ಅವ್ಯವಹಾರ ಕಡಿಮೆ ಆಗಬೇಕಾದರೆ ನಮ್ಮ ಸದಸ್ಯರಿಗೂ ಸಹ ಸಾಕಷ್ಟು ಅರಿವು ಮೂಡಿ ಬರಬೇಕು. ಅವರ ಜವಾಬ್ದಾರಿ ಏನು ? ಹಕ್ಕುಬಾಧ್ಯತೆಗಳು ಏನು ? ಇದರ ಕುರಿತಾಗಿ ಸಹಕಾರ ಶಿಕ್ಷಣ ಅಂತ ಇದೆ ನಮ್ಮಲ್ಲಿ ಇದೆ. ಆ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲ. ಸಹಕಾರ ಶಿಕ್ಷಣ ಕುರಿತು ಜನರೇ ಕಟ್ಟಿ ಬೆಳೆಸಿದ ಪೋಷಿಸಿದ ಕ್ಷೇತ್ರ ಇದು ಆದುದರಿಂದ ಇದು ಸರ್ಕಾರದ ಕೈಗೊಂಬೆ ಅಲ್ಲ. ಸರ್ಕಾರದ ಕೃಪಾಪೋಷಿತ ವ್ಯವಸ್ಥೆ ಅಲ್ಲ. ಅಂತ ತೋರಿಸುವುದಕ್ಕೆ ಶಿಕ್ಷಣ ಮತ್ತು ಪ್ರಚಾರ ಸಮರ್ಪಕವಾದ ರೀತಿಯಲ್ಲಿ ನಡೆಯಬೇಕು. ಸಹಕಾರ ಯೂನಿಯನ್‌ಗಳು ಅಂತ ಇದ್ದಾವೆ. ಜಿಲ್ಲಾಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ರಾಷ್ಟ್ರಮಟ್ಟದಲ್ಲಿ ಅಂತರರಾಷ್ಟ್ರಮಟ್ಟದಲ್ಲಿ ಸಹ ಇವೆ. ಈ ಒಂದು ಯೂನಿಯನ್ ಸರಿಯಾಗಿ ಇವೆ ಇವು ಸಹಕಾರ ಸಂಘಗಳು ಅಲ್ಲ. ದುರ್ದೈವವಶಾತ್ ನಮ್ಮ ರಾಜ್ಯದಲ್ಲಿ ಜಿಲ್ಲೆಗಳಲ್ಲಿ ತೆಗೆದುಕೊಂಡರೆ ಎಷ್ಟು ಕೋ - ಆಪರೇಟಿವ್ ಸೊಸೈಟಿಗಳು ಎನ್ನತಕ್ಕಂಥಾದ್ದು ಇದೆ. ನನ್ನ ಭಾವನೆಯಲ್ಲಿ ಅವು ಅಲ್ಲವೇ ಅಲ್ಲ. ಅದು ಸಹಕಾರ ಸೊಸೈಟಿ ಕಕ್ಷೆಯಲ್ಲಿ ಒಂದು ರಿಜಿಸ್ಟರ್ ಆಗಬಹುದು ಸಂಸ್ಥೆಗಳಾದರೂ ಸಹ/ಶಿಕ್ಷಣ ಮತ್ತು ಪ್ರಚಾರಕ್ಕಾಗಿ ಇರುವಂತಹ ಮೂಲ ಭೂತ ವ್ಯವಸ್ಥೆ ಒಂದು ಸಂಸ್ಥೆಗಳು ಎನ್ನುವುದು ಮೊದಲು ತಿಳಿದುಕೊಳ್ಳಬೇಕು. ಇವತ್ತು ಸಹಕಾರ ಯೂನಿಯನ್ ಅಥವಾ ಫೆಡರೇಷನ್ ವ್ಯವಸ್ಥೆ ಏನು ಆಗಿದೆ ಅಂದರೆ ಇದರ ಮುಖ್ಯಸ್ಥರೆಂದು ಈಗ ಮುಖ್ಯಸ್ಥರೇ ಇಲ್ಲ ಸೂಪರ್‌ಸೀಡ್ ಆಗಿ ಅಡ್ಮಿನಿಸ್ಟರೇಟರ್ಸ್ ಹಾಕಿದ್ದಾರೆ. ಅಲ್ಲಿ ಸಿಬ್ಬಂದಿಗೆ ಸಂಬಳಕ್ಕೆ ಅಥವಾ ಎಲ್ಲಾ ಟ್ರೈನಿಂಗ್ ಸೆಂಟರ್ಸ್ ಅಧ್ಯಾಪಕರುಗಳ ಸಂಬಳಕ್ಕೆ ಪ್ರಚಾರ ಕೆಲಸಕ್ಕೆ ಪ್ರತಿ ತಿಂಗಳು ವಿಧಾನ ಸೌಧದ ಕಂಬ ಸುತ್ತಬೇಕಾಗಿದೆ. ಅದಕ್ಕೆ ಕೊಡಬೇಕಾದ ಹಣ ರಿಲೀಜ್ ಮಾಡಿ ಎಂದು. ಇಂತಹ ಒಂದು ಮಾತ್ರ ಸಂಸ್ಥೆಗಳಿಗೆ ಶಿಕ್ಷಣ ಮೂಲಭೂತವಾದ ವ್ಯವಸ್ಥೆಯನ್ನು ನೋಡಿಕೊಳ್ಳುವ ಸಂಸ್ಥೆಗಳಿಗೆ ವಾರ್ಷಿಕ ಅನುದಾನ ಏನಿದೆ ಸರ್ಕಾರದಿಂದ ನೀಡಬೇಕಾದರೆ, ಆಫೀಸಿನಿಂದ ಆಫೀಸಿಗೆ ತೆರಳಿ ಹೋಗಬೇಕಾಗುತ್ತದೆ. ಏಕೆಂದರೆ ಇದೇ ಒಂದು ಫೆಡರೇಷನ್‌ನಲ್ಲಿ ನಾನು ಹಿಂದೆ ನಿರ್ದೇಶಕನಾಗಿದ್ದುದರಿಂದ ಅದರ ವಿಚಾರ ಸ್ವಲ್ಪಮಟ್ಟಿಗೆ ನನಗೆ ಗೊತ್ತಿದೆ. ಅದೇ ರೀತಿ ಈಗಲೂ ಮುಂದುವರಿಯುತ್ತಿರುತ್ತದೆಂದು ನನ್ನ ಭಾವನೆ. ಇವತ್ತು ಅಡ್ಮಿನಿಸ್ಟ್ರೇಟರ್ಸ್‌ನ್ನು ಹಾಕಿದರೂ ಸಹ ಬದಲಾವಣೆ ಆಗಲಿಕ್ಕೆ ಸಾಧ್ಯವಿಲ್ಲ. ವ್ಯವಸ್ಥೆ ಆ ತರಹ ಬಂದಿದೆ. ಈ ರೀತಿ ಆಗಬಾರದು ವಯಸ್ಕರ ಶಿಕ್ಷಣಕ್ಕೆ ಒಂದು ಪೈಲೆಟ್ ಪ್ರಾಜೆಕ್ಟ್ ಇದೆ. ಸಂಪೂರ್ಣ ಸಾಕ್ಷರತಾಗೆ ಒಂದು ಪೈಲೆಟ್ ಪ್ರಾಜೆಕ್ಟ್ ಇದೆ. ಸಹಕಾರಕ್ಕೆ ಒಂದು ಪೈಲೆಟ್ ಪ್ರಾಜೆಕ್ಟ್ ಮಾಡಿ ಒಂದು ವ್ಯವಸ್ಥಿತವಾಗಿ ಏತಕ್ಕೆ ಇದನ್ನು ಕೊಡಬಾರದು. ಸಹಕಾರ ಮತ್ತು ಗ್ರಾಮೀಣಾಭಿವೃದ್ಧಿ. ಇವು ನಮ್ಮ ಗ್ರಾಮಗಳ ಅಭಿವೃದ್ಧಿಗೆ ಎರಡು ಕಣ್ಣುಗಳು. ಗ್ರಾಮೀಣಾಭಿವೃದ್ಧಿ ಕುರಿತು ರೈತರ ಅಭಿವೃದ್ಧಿಗೆ ಒಂದು ಸರಿಯಾದ ಟ್ರೈನಿಂಗ್ ಆಗಬೇಕು.

ಸಹಕಾರ, ಗ್ರಾಮೀಣಾಭಿವೃದ್ಧಿ ಇಲಾಖೆಗಳನ್ನು ಬೇಕಾದರೆ ಕ್ಲಬ್ ಮಾಡಿ. ಈ ರೀತಿ ಒಂದು ಟ್ರೈನಿಂಗ್ ನಡೆಸುವಂಥ ವ್ಯವಸ್ಥೆ ಇವತ್ತು ಆಗಬೇಕು. ಇವತ್ತು ನಮ್ಮ ವೈಕುಂಠಲಾಲ್ ಮೆಹತಾ ಇನ್‌ಸ್ಟಿಟ್ಯೂಟ್ ಇದೆ, ಎನ್.ಸಿ.ಡಿ.ಟಿ. ಇದೆ ಐ.ಸಿ.ಎ. ಅಂಥಾ ಮಾಡಿದಂಥ ವ್ಯವಸ್ಥೆ ಇದೆ. ಇದರ ಆಧಾರದ ಮೇಲೆ ಮಾಡಲಿಕ್ಕೆ ಬರುತ್ತದೆ. ನಮ್ಮ ತಾಲ್ಲೂಕು ಲೆವೆಲ್‌ನಲ್ಲಿ ಸಹಕಾರಿ ಶಿಕ್ಷಕರಿಲ್ಲ. ಅನೇಕ ಕಡೆಗಳಲ್ಲಿ ಮಹಿಳಾ ಶಿಕ್ಷಕರಿಲ್ಲ. ಎಸ್.ಸಿ., ಎಸ್.ಟಿ, ಇದರ ಬಗ್ಗೆ ಯೋಜನೆಗಳಿವೆ. ಅದಕ್ಕೆ ಟ್ರೈನಿಂಗ್ ಕೊಡಬೇಕು. ಅದರೆ ಶಿಕ್ಷಕರಿಲ್ಲ. ಅದು ಯಾವಾಗ ಆಗುತ್ತದೆಂದು ನನಗೆ ಗೊತ್ತಿಲ್ಲ. ಸಹಕಾರ ಶಿಕ್ಷಣ ಅನ್ನುವಂಥಾದ್ದು ಒಂದು ಕೊನೆಯ ಅಂಶವೆನ್ನುವ ಭಾವನೆ ಇದ್ದರೆ ಅದು ದೊಡ್ಡ ತಪ್ಪು. ನಮ್ಮ ಮಂತ್ರಿಗಳು ದಯವಿಟ್ಟು ಅದನ್ನು ಗಮನಿಸಿ ಸಹಕಾರಿ ಶಿಕ್ಷಣದ ಬಗ್ಗೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ನಾನು ಈಗಾಗಲೇ ಹೇಳಿದ ಹಾಗೆ ಸಹಕಾರಿ ಕೋ-ಆಪರೇಟಿವ್ ಫೆಡರೇಷನ್ ಎಂದು ಇದೆ. ಅದಕ್ಕೆ ಚುನಾವಣೆ ಇಲ್ಲ. ಆಡಳಿತಾಧಿಕಾರಿಗಳನ್ನು ಹಾಕಿದ್ದಾರೆ. ಅದರಲ್ಲಿ ಸ್ಥಾನ ನಿಮಿತ್ತವಾಗಿ ಕೆಲವು ನಾನ್‌ಅಫಿಷಿಯಲ್ ಡೈರೆಕ್ಟರ್ಸ್ ಇರುತ್ತಾರೆ. ಕೋರಂ ಇಲ್ಲವೆಂದು ಹೇಳಿ ಕೆಲವು ಅಧಿಕಾರಿಗಳನ್ನು ನಾಮಿನೇಟ್ ಮಾಡಲಾಯಿತು. ಈಗ ಅಧ್ಯಕ್ಷರನ್ನು ಆಯ್ಕೆ ಮಾಡಬೇಕೆಂದರೆ ನಾಮಿನೇಟ್ ಮಾಡಿದ ಅಧಿಕಾರಿಗಳಿಗೆ ನಿರ್ದೇಶನವನ್ನು ಸರ್ಕಾರ ಕೊಡುತ್ತಿಲ್ಲ. ಅವರಿಗೆ ನಿರ್ದೇಶನ ಕೊಡಬೇಕಂತೆ. To elect a president, they must have a direction. ಸರ್ಕಾರ ಕೊಡಲಿಲ್ಲ ಉಳಿದವರು, ಅವರಿಗೆ ಕೋರಂ ಆಗುವುದಿಲ್ಲ. ಇವರೂ ಕೋರಂ ಮಾಡಿಕೊಳ್ಳಲಿಲ್ಲ. ಇನ್ನೂ ಅಧ್ಯಕ್ಷರನ್ನು ಆಯ್ಕೆ ಮಾಡಲಿಲ್ಲ ಎನ್ನುವ ಒಂದೇ ಕಾರಣಕ್ಕಾಗಿ ಅದನ್ನು ಪರಿಸಮಾಪ್ತಿ ಮಾಡುವುದಕ್ಕೆ ಅಧಿಕಾರಿಗಳ ಕೈಗೆ ಕೊಡಲಾಯಿತು. ಇದು ಯಾವ ಸಹಕಾರಿ ವ್ಯವಸ್ಥೆ ? ಇಂಥ ಸಹಕಾರಿ ವ್ಯವಸ್ಥೆ ಇರಬಾರದು. ಅದೇ ಬೇರೆ ಸಹಕಾರ ಸಂಸ್ಥೆಗಳಲ್ಲಿ ಅಧಿಕಾರಿಗಳು, ಅಧ್ಯಕ್ಷರ ಚುನಾವಣೆ ಆಗುವಂಥ ಸಂದರ್ಭದಲ್ಲಿ ಯಾವ ಡೈರೆಕ್ಷನ್ ಇಲ್ಲದೆ ಹೋದದ್ದು ಇದೆ. ಅದು ಹೇಗೆ ನಡೆಯುತ್ತದೆಂದು ಮಾನ್ಯ ಮಂತ್ರಿಗಳ ಹತ್ತಿರ ನಾನು ಕೇಳಲಿಕ್ಕೆ ಬಯಸುತ್ತೇನೆ. ಈ ದ್ವಿಮುಖವಾದ ಧೋರಣೆ ಇರಬಾರದು. ಈ ರೀತಿ ಸಹಕಾರ ರಂಗದಲ್ಲಿ ಮಾತೃ ಸಂಸ್ಥೆಯಂತೆ ಇರುವ ಯೂನಿಯನ್ ಅಥವಾ ಫೆಡರೇಶನ್ ಸತ್ತುಹೋಗುವಂಥ ವ್ಯವಸ್ಥೆಯಾಗಬಾರದು. ಬಹುಶಃ ಅಧಿಕಾರಿಯಾಗಿ ಯಾರಿದ್ದಾರೆ ಅದು ಅವರಿಗೂ ಕೂಡ ಮುಳ್ಳಿನ ಹಾಸಿಗೆಯಾಗಿದೆ. ಅದು ಕಷ್ಟದ ಕೆಲಸ. ಅದರ ಬದಲಿಗೆ ತಾವು ಚುನಾವಣೆ ಮಾಡಿ. ಇದು ನಮ್ಮ ರಾಜ್ಯಕ್ಕೆ ಭೂಷಣವಾಗುವುದಿಲ್ಲ. ಚುನಾವಣೆ ನಡೆಸಿ ಆದಷ್ಟು ಬೇಗ ಅಧಿಕಾರಿಗಳ ಕೈಯಿಂದ ಬಿಡಿಸಿ ಚುನಾಯಿತ ಆಡಳಿತ ಮಂಡಳಿ ಬರುವ ಹಾಗೆ ಮಾಡಿ ಎಂದು ಕೇಳುತ್ತೇನೆ. ಮತ್ತೆ ಸಹಕಾರಿ ಆಡಳಿತ ವ್ಯವಸ್ಥೆ ಕುರಿತು ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಡಿವಿಜನ್ ಮಟ್ಟದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳು ಇದ್ದಾರೆ. ವಿಪರೀತ ಕೆಲಸ ಅವರಿಗೆ. ಎರಡು, ಮೂರು ತಾಲ್ಲೂಕುಗಳು ಅವರಿಗೆ. ಅನೇಕ ಸಭೆಗಳಿಗೆ ಅಟೆಂಡ್ ಮಾಡಬೇಕು. ಮಾತೆತ್ತಿದರೆ ಸಭೆಗಳು. ಹೀಗಾಗಿ ಅವರು ಸಭೆಗಳಿಗೆ ಹೋಗುತ್ತಾರೆ. ಅವರು ಸಭೆಗಳಿಗೆ ಹೋದಲ್ಲಿ ಇಲ್ಲಿ ಆಫೀಸ್‌ನಲ್ಲಿ ಯಾರೂ ಜವಾಬ್ದಾರಿಯುತ ಅಧಿಕಾರಿಗಳು ಇರುವುದಿಲ್ಲ. ನನ್ನ ಡಿವಿಷನ್ ಅನುಭವದ ಮೇಲೆ ನಾನು ಹೇಳುತ್ತಿದ್ದೇನೆ. ತಾಲ್ಲೂಕಿಗೆ ಒಬ್ಬ ಕೋ-ಆಪರೇಟಿವ್ ಡೆವಲಪ್‌ಮೆಂಟ್ ಆಫೀಸರ್ ಎಂದು ಮಾಡಿದ್ದೀರಿ. ಅದೇ ಡೆವಲಪ್‌ಮೆಂಟ್ ಆಫೀಸರ್ ಗ್ರೇಡ್‌ನ ಒಬ್ಬರನ್ನು ಹೆಡ್‌ಕ್ವಾರ್ಟರ್‌ನಲ್ಲಿ ಅಸಿಸ್ಟೆಂಟ್ ಎಂದು ಮಾಡಿ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಇಲ್ಲದೇ ಇದ್ದಾಗ ಜವಾಬ್ದಾರಿಯಿಂದ ಉತ್ತರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಅದನ್ನು ಡಿವಿಷನ್ ಮಟ್ಟದಲ್ಲಿ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ, ಡೆಪ್ಯುಟಿ ರೀಜಿಸ್ಟ್ರಾರ್ ಆಫೀಸ್‌ಗಳಲ್ಲಿ ಸಿಬ್ಬಂದಿಗಳು ಇಲ್ಲ. ಈ ಸಿಬ್ಬಂಧಿಗಳ ನೇಮಕವಾಗಬೇಕು. ಯಾವುದೇ ಸಿಬ್ಬಂದಿಗಳ ನೇಮಕ ಇಲ್ಲದಿದ್ದರೆ ಯಾವ ಆಫೀಸ್‌ನಲ್ಲೂ ಕೆಲಸವಾಗುವುದಿಲ್ಲ. ಕೋ-ಆಪರೇಟಿವ್ ಡೆವಲಪ್‌ಮೆಂಟ್ ಆಫೀಸರ್ ಯಾರಿದ್ದಾರೆ. ಅವರಿಗೆ ಅಡ್ರೆಸ್ ಇಲ್ಲ, ಆಫೀಸ್ ಇಲ್ಲ. ಅವರು ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿದ್ದಾರೆಂದು ಒಬ್ಬರು

ಹೇಳುತ್ತಾರೆ, ಟಿ.ಎ.ಪಿ.ಸಿ.ಎಂ.ಎಸ್.ನಲ್ಲಿ ಇದ್ದಾರೆಂದು ಒಬ್ಬರು ಹೇಳುತ್ತಾರೆ, ಪಿ.ಎಲ್.ಡಿ ಬ್ಯಾಂಕ್‌ನಲ್ಲಿ ಇದ್ದಾರೆಂದು ಒಬ್ಬರು ಹೇಳುತ್ತಾರೆ, ತಾಲ್ಲೂಕು ಪಂಚಾಯ್ತಿ ಸಮಿತಿಯಲ್ಲಿ ಇದ್ದಾರೆಂದು ಒಬ್ಬರು ಹೇಳುತ್ತಾರೆ. ಅವರನ್ನು ಹುಡುಕಿ ಹುಡುಕಿ ಸಾಕಾಗುತ್ತದೆ. ಅವರು ಬಗಲಿನಲ್ಲಿ ತನ್ನ ಫೈಲ್‌ಗಳನ್ನು ಇಟ್ಟುಕೊಂಡು ತಿರುಗುತ್ತಾರೆ. ಆದ್ದರಿಂದ ಅವರಿಗೆ ಒಂದು ಆಫೀಸ್ ವ್ಯವಸ್ಥೆ ಮಾಡಬೇಕು. ಇದರ ಬಗ್ಗೆ ಒಂದು ಸಲ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೆ. ಮಾಡಿದ್ದೇವೆಂದು ಹೇಳಿದ್ದರು. ಮಾಡಿದ್ದರೂ ಇನ್ನೂ ಅನುಷ್ಠಾನಕ್ಕೆ ಬರಬೇಕು. ಇಂಥಾ ಒಂದು ವ್ಯವಸ್ಥೆ ಮೇಲ್ಮಟ್ಟದಲ್ಲಿ ಆದರೆ ಅನುಷ್ಠಾನಕ್ಕೆ ಬಂದುಬಿಡುತ್ತದೆ. ಕೆಲವು ಮಟ್ಟದಲ್ಲಿ ಅದು ಅನುಷ್ಠಾನಕ್ಕೆ ಬರುವುದಿಲ್ಲ ಇದನ್ನು ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ ಮಟ್ಟದಲ್ಲಿ ಅನೇಕ ಅಪೀಲ್ ಕೇಸ್‌ಗಳು ಪೆಂಡಿಂಗ್ ಇರುತ್ತವೆ. ಚುನಾವಣಾ ತಕರಾರು ಅರ್ಜಿಗಳು ಪೆಂಡಿಂಗ್ ಇರುತ್ತವೆ. ಮತ್ತೊಂದು ಚುನಾವಣೆ ಬರುವಾಗಲೇ ಇದು ತೀರ್ಮಾನವಾಗುವಂಥದ್ದು. ಇದು ಆಗಬಾರದು. ಬಹಳ ಬೇಗ ಚುನಾವಣೆ ಆಗಬೇಕು. ಒಂದು ಉದಾಹರಣೆ, ಶಿರಿಹಾಳ ಎಂದು ನನ್ನ ಮಿತ್ರರಾದ ಪ್ರತಾಪಚಂದ್ರಶೆಟ್ಟಿಯವರ ಮತ ಕ್ಷೇತ್ರ, ಒಂದು ಸೊಸೈಟಿಯಲ್ಲಿ ಚುನಾವಣೆ ನಡೆದು ಅಧ್ಯಕ್ಷರ ಆಯ್ಕೆ ಆಗುವಾಗ ರಿಜಿಸ್ಟರ್ಡ್ ಅಂಚೆ ಮೂಲಕ ನೋಟೀಸ್ ಕಳುಹಿಸಬೇಕೆಂದು ಇದೆ. ರಿಜಿಸ್ಟರ್ಡ್ ಪೋಸ್ಟನ್ನು ಕಳುಹಿಸಲೂ ಇಲ್ಲ. ಆರ್ಡಿನರಿ ಪೋಸ್ಟನಲ್ಲಿ ಕಳುಹಿಸಿದ್ದು ಕೆಲವರಿಗೆ ಸಿಗಲೇ ಇಲ್ಲ. ಸಿಕ್ಕಿದ್ದರೂ ಇರಬಹುದು. ತಮಗೆ ಸಿಕ್ಕಿಲ್ಲ ಎಂದು ಕೆಲವರು ಅರ್ಜಿಕೊಟ್ಟರು. 3-4 ತಿಂಗಳಿಂದ ಹಾಗೆಯೇ ಪೆಂಡಿಂಗ್‌ನಲ್ಲಿ ಇದೆ. ಇಷ್ಟು ಸಣ್ಣ ಚುನಾವಣಾ ತಕರಾರನ್ನು ನಿಮಗೆ ವೆರಿಫೈ ಮಾಡುವುದಕ್ಕೆ ಏಕೆ ಕಷ್ಟವಾಗುತ್ತದೆ ? ಈ ರೀತಿಯಾಗಿ ತಕರಾರು ಮತ್ತೊಂದಕ್ಕೆ ಏತಕ್ಕಾಗಿ ಆಸ್ಪದ ಕೊಡಬೇಕು? ಈ ರೀತಿಯಲ್ಲಿ ಇತಕ್ಕಂಥ ಪೆಂಡಿಂಗ್‌ಗೆ ಸ್ಟೇ ಇದ್ದರೆ ಆ ಸ್ಟೇಯನ್ನು ವೆಕೇಟ್ ಮಾಡುವುದು ಯಾರ ಕೆಲಸ ? ಇದನ್ನೆಲ್ಲಾ ನಾನ್ ಆಫೀಶಿಯಲ್ಸ್ ಕೆಲಸ ಎಂದು ತಿಳಿದುಕೊಂಡರೆ ಈ ಕೋ - ಆಪರೇಟಿವ್ ಮೂವ್‌ಮೆಂಟ್ ಹೀಗೆ ಆಗುವುದಿಲ್ಲ. ಇದರ ಕುರಿತು ನಾವು ಹೆಚ್ಚಿಗೆ ಆಸೆಯನ್ನು ಇಟ್ಟುಕೊಳ್ಳುವುದು ಕಷ್ಟವಾಗುತ್ತದೆ. ಆದ್ದರಿಂದ ಸರಕಾರ ಮತ್ತು ಅಧಿಕಾರಿಗಳ ಮಟ್ಟದಲ್ಲಿ ತೀರ್ಮಾನ ಮಾಡಿಸುವಂತಾದ್ದು ಆರೋಪಗಳು ತಕರಾರುಗಳು ಯಾವುವು ಇವೆ ಅವುಗಳನ್ನು ಸರಿಪಡಿಸುವ ಬಗ್ಗೆ ನೋಡಬೇಕು. ನಮ್ಮ ಡೆಪ್ಯೂಟಿ ರಿಜಿಸ್ಟ್ರಾರ್‌ಗಳನ್ನು ಜಾಯಿಂಟ್ ರಿಜಿಸ್ಟ್ರಾರ್‌ಗಳನ್ನು ಬೇರೆ ಬೇರೆ ಸಂಸ್ಥೆಗಳಿಗೆ ಹಾಕುತ್ತೀರಿ ಡಿಸಿಸಿ ಬ್ಯಾಂಕ್‌ಗೆ , ಶುಗರ್ ಫ್ಯಾಕ್ಟರಿಗಳಿಗೆ , ಸ್ಪಿನ್ನಿಂಗ್‌ಮಿಲ್‌ಗಳಿಗೆ , ಮಾರ್ಕೆಟಿಂಗ್ ಸಂಸ್ಥೆಗಳಿಗೆ, ಅನೇಕ ಸೊಸೈಟಿಗಳಿಗೆ ಹಾಕುತ್ತೀರಿ. ಆದರೆ ದುರಾದೃಷ್ಟವಶಾತ್ ಒಂದು ವರ್ಷದಲ್ಲಿ ಬದಲಾವಣೆಯಾಗುತ್ತದೆ. ಅವರು ಅಲ್ಲಿಗೆ ಹೋಗಿ ಜ್ಞಾನ ಪಡೆದುಕೊಳ್ಳುವುದರಲ್ಲಿ, ಅಥವಾ ಕಲವು ಸಲ ಟ್ರೈನಿಂಗ್ ಪಡೆದುಕೊಳ್ಳುವುದರಲ್ಲಿ, ಬೇರೆ ಬೇರೆ ಕಡೆಗಳಿಗೆ ಹೋಗಿ ಟ್ರೈನಿಂಗ್ ಪಡೆಯುತ್ತಾರೆ. ಹಿಂದೆ ಒಮ್ಮೆ ರಾಷ್ಟ್ರಮಟ್ಟದಲ್ಲಿ ಒಬ್ಬರು ಅಧಿರಾರಿಗಳು ವಿದೇಶಕ್ಕೆ ಕೂಡ ಹೋಗಿ ಬಂದರು. ಅಲ್ಲಿಂದ ತಿರುಗಿ ಬಂದ ಮರುದಿನ ಮೈಸೂರ್‌ಲ್ಯಾಂಪ್‌ವರ್ಕ್ಸ್‌ಗೆ ಹಾಕಿದರು. ಇವರು ಏನು ಅನುಭವವನ್ನು ಪಡೆದುಕೊಂಡು ಬಂದರು ಅದು ಲ್ಯಾಂಪ್‌ವರ್ಕ್ಸ್‌ಗೆ ಉಪಯೋಗ ಕೂಡ ಆಗುವುದಿಲ್ಲ. ಈ ರೀತಿ ಆಗಬಾರದು. ಸಹಕಾರಿ ಇಲಾಖೆಗಳಲ್ಲಿ ಇಲ್ಲದಿರುವ ಒಂದು ವ್ಯವಸ್ಥೆಯು ಬೇರೆ ಇಲಾಖೆಗಳಲ್ಲಿ ಇದೆ ಎಂದು ನಾನು ಕೇಳಿದ್ದೇನೆ. ನಮ್ಮಲ್ಲಿ ಅಡಿಶನಲ್ ರಿಜಿಸ್ಟ್ರಾರ್ಸ್ ಎಂದು ಇದ್ದಾರೆ. ಹೆಡ್ಸ್ ಆಫ್ ದಿ ಡಿಪಾರ್ಟ್‌ಮೆಂಟ್ಸ್ ಆಗಿದ್ದಾಗಿ ಅವರು ಈ ಹುದ್ದೆಯು ನೋಟಿಫೈ ಆಗಬೇಕು. ಅವರು ಡಿಪಿಎಆರ್ ಕಂಟ್ರೋಲ್‌ನಲ್ಲಿ ಬರುತ್ತಾರೆ. ಬೇರೆ ಇಲಾಖೆಯಲ್ಲಿರುವ ಈ ಪದ್ಧತಿಯು ಈ ಇಲಾಖೆಯಲ್ಲಿ ಏಕೆ ಇಲ್ಲ ? ಇನ್ನು ಮಿಸ್‌ಅಪ್ರೋಪ್ರಿಯೇಶನ್ ಆದಂಥ ಸಂದರ್ಭದಲ್ಲಿ ನೀವು ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು. ನಮ್ಮ ಜಿಲ್ಲೆಯ ಶಿರ್ತಾಡಿ ಸೊಸೈಟಿಯಲ್ಲಿ 10-15 ವರ್ಷಗಳ ಹಿಂದೆ ಮಿಸ್ ಅಪ್ರೋಪ್ರಿಯೇಶನ್ ಆದಂಥ ಸಂದರ್ಭದಲ್ಲಿ ಕೆಲವು ಲಕ್ಷ ರೂಪಾಯಿಗಳ ದುರುಪಯೋಗವಾದ ಬಗ್ಗೆ ವರದಿ ಬಂತು. ಅನೇಕ ಮಂದಿ ಸ್ನೇಹಿತರು ಇಲ್ಲಿ ಮಾತನಾಡಿದರು ಮಾನ್ಯ ಶ್ರೀಕಂಠಯ್ಯನವರು ಮಂತ್ರಿಗಳಾಗಿದ್ದರು. ಮಾನ್ಯ ಹನುಮೇಗೌಡರಿಗೆ

ಈ ವಿಷಯನ್ನು ನಾನೇ ತಂದುಕೊಟ್ಟಿದ್ದೆನು. ನನಗೆ ಅವರ ಪರಿಚಯ ಇಲ್ಲದಿದ್ದರೂ ಕೂಡ ಈ ವಿಚಾರ ಸಭೆಯಲ್ಲಿ ಹೇಳಿ ಎಂದು ಕೇಳಿಕೊಂಡಿದ್ದೆ.

ಶ್ರೀ ಕೆ. ಹೆಚ್. ಹನುಮೇಗೌಡ :- ಅದು ಇನ್ನೂ ಹಾಗೆಯೇ ಇದೆಯೇ ? ಹಾಗಿದ್ದರೆ ಅವರಿಗೆ ಅವಾರ್ಡ್ ಕೊಡಬೇಕಾಗುತ್ತದೆ.

ಶ್ರೀ ಜಿ. ಎಸ್ ಆಚಾರ್ :- ಸಿಒಡಿ ಎನ್‌ಕ್ವಾಯರಿಗೆ ಹೋಗಿದೆ, ಸಿಒಡಿ ಅಧಿಕಾರಿಗಳನ್ನು ಬದಲು ಮಾಡಲಾಯಿತು. ಫೈನಲ್ ರಿಪೋರ್ಟ್ ಬರುತ್ತಾ ಇಲ್ಲ, ಹೆಜ್ಜೆ ಹೆಜ್ಜೆಗೆ ಸ್ಟೇ ಬರುತ್ತಾ ಇದೆ. ಇದು ಕೆಲವು ಲಕ್ಷ ರೂಪಾಯಿಗಳು ಅವ್ಯವಹಾರದ ಒಂದು ಪ್ರಶ್ನೆ. ದಕ್ಷಿಣ ಕನ್ನಡ ಜಿಲ್ಲೆಯು ಸಹಕಾರಿ ರಂಗದಲ್ಲಿ ಆದಷ್ಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂಥ ಜಿಲ್ಲೆಯಾಗಿದೆ. ಅಲ್ಲಿ ಇಂಥ ಒಂದೆರಡು ಬ್ಲಾಕ್‌ಮಾರ್ಕ್ ಬಂದಾಗ ಅದನ್ನು ಜನರು ಎತ್ತಿ ತೋರಿಸುತ್ತಾರೆ, ನಿಮಗೆ ಓಡಿತ ಇಲ್ಲವೇ ಎಂದು ಕೇಳುತ್ತಾರೆ. ಇಂಥ ಒಂದು ವ್ಯವಸ್ಥೆಯನ್ನು ನಾವು ಸರಿ ಮಾಡದಿದ್ದರೆ ಇನ್ನು ಯಾರು ಮಾಡಬೇಕು ? ಇದರ ಬಗ್ಗೆ ಏನು ಚಿಂತನೆ ನಡೆದಿದೆ ? 10-15 ವರ್ಷಗಳಿಂದ ಮಂತ್ರಿಗಳ ಮಟ್ಟದಲ್ಲಿ, ಅಧಿಕಾರಿಗಳ ಮಟ್ಟದಲ್ಲಿ ಏನು ಚಿಂತನೆ ನಡೆದಿದೆ ? ಅದನ್ನು ತಾವುಗಳು ಹೇಳಬೇಕು. ಅನೇಕ ಸಂಘಗಳಲ್ಲಿ ಕೆಲವಾರು ಅಕ್ರಮಗಳು ನಡೆಯುತ್ತವೆ, ಚುನಾವಣಾ ಅಕ್ರಮಗಳು ನಡೆಯುತ್ತವೆ. ಚುನಾವಣೆ ಅಕ್ರಮಗಳ ಬಗ್ಗೆ ಕೆಲವು ಉದಾಹರಣೆಗಳನ್ನು ನಾನು ಕೊಡುತ್ತೇನೆ. ಮಾರ್ಕೆಟಿಂಗ್ ಸೊಸೈಟಿಯಲ್ಲಿ ತರಕಾರಿ, ಹಣ್ಣು ಹಂಪಲುಗಳನ್ನು ಉತ್ಪಾದಿಸಿ ಆ ಸಂಘಕ್ಕೆ ಮಾರಿದವರು ಇರಬೇಕು. ಮಿಲ್ಕ್ ಸೊಸೈಟಿಯಲ್ಲಿ ಹಾಲು ಉತ್ಪಾದನೆ ಮಾಡಿ ಆ ಸಂಘಕ್ಕೆ ಕೊಟ್ಟವರು ಇರಬೇಕು. ಶುಗರ್‌ಫ್ಯಾಕ್ಟರಿ ಸದಸ್ಯರಾಗುವವರು ಡೈರೆಕ್ಟರ್ ಆಗುವವರು ಕಬ್ಬು ಬೆಳೆದವರು ಮತ್ತು ಶುಗರ್ ಫ್ಯಾಕ್ಟರಿಗೆ ಮಾರಿದವರು ಇರಬೇಕು. ಆದರೆ ಅಂಥವರು ಇಲ್ಲ. ಇದಕ್ಕೆ ಎಷ್ಟು ನಿದರ್ಶನಗಳನ್ನು ಬೇಕಾದರೂ ಕೊಡಬಹುದು. ನಮ್ಮ ಜಿಲ್ಲೆಯ ನಿದರ್ಶನಗಳನ್ನು ಕೊಡುತ್ತೇನೆ. ಇದನ್ನು ನೀವು ಯಾರಿಗಾದರೂ ಹೇಳಿದರೆ ಚುನಾವಣಾ ತಕರಾರು ಹಾಕಿ ಇಂಥ ಸಂಬಂಧ ಪಡದ ಇರುವವರು ಬರುವಾಗ ಇದಕ್ಕೆ ಚುನಾವಣೆ ತಕರಾರು ಬೇಕೆ ? ಬೈಲಾದಲ್ಲಿ ಸ್ಪಷ್ಟವಾಗಿ ಅನರ್ಹರು ಎಂದು ಹೇಳಿದವರು ಇರಬೇಕೆ ? ಏಕೆ ಚುನಾವಣೆ ತಕರಾರು ಹಾಕಬೇಕು ? ಹಾಕಿದರ ಏನಾಗುತ್ತದೆ ಎಂಬುದು ನಮಗೆ ಗೊತ್ತಿದೆ. ಇಂಥಾದ್ದನ್ನು ದಯಮಾಡಿ ನಮ್ಮ ಸರಕಾರದವರು ಸರಿಪಡಿಸಬೇಕು ಇಲ್ಲದಿದ್ದರೆ ಇದಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ, ಸಹಕಾರಿ ರಂದ ಸತ್ತು ಹೋಗುತ್ತದೆ, ಎಂಬ ಭಾವನೆಯು ಬರುತ್ತದೆ. ಕೆಲವೊಂದು ಸಂಸ್ಥೆಗಳಲ್ಲಿ 4-5 ಸಾವಿರ ಸದಸ್ಯರು ಇರುತ್ತಾರೆ. ಅದಕ್ಕೆ ರೆಪ್ರಸೆಂಟೇಶನ್ ಜನರಲ್ ಬಾಡಿ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಬೋಗಸ್ ಓಟ್ ಆಗುತ್ತದೆ. ನಿಷ್ಕ್ರಿಯ ಸಂಘಗಳ ಸಮಾಪನವಾಗಬೇಕು. ಇಲ್ಲದಿದ್ದರೆ ರಬ್ಬರ್ ಸ್ಟಾಂಪ್‌ನ್ನು ಕೆಲವರು ಕಿಸೆಯಲ್ಲಿ ಹಾಕಿಕೊಂಡು ಅದರ ನಾಮಿನೇಶನ್‌ನ್ನು ಅವರೇ ಹಾಕಿಕೊಂಡು ಅವರೇ ಓಟ್ ಹಾಕಿ ಗೆದ್ದು ಬರುತ್ತಾರೆ. ಇಂಥಾದ್ದು ನಡೆಯುತ್ತದೆ. ಚುನಾವಣೆಯ ಮೊದಲನೇ ದಿವಸ ಡೆಲಿಗೇಟ್ ಬದಲಾವಣೆಯಾಗುತ್ತದೆ. ಚಿಕ್ಕರೈತರು, ಕೃಷಿಕಾರ್ಮಿಕರುಗಳ ಪಟ್ಟಿ ನಮ್ಮ ವಿಎಸ್‌ಎಫ್‌ಎಸ್ ಮತ್ತು ಎಫ್‌ಎಸ್‌ಎಫ್‌ಗಳ ಚುನಾವಣೆಗಳಲ್ಲಿ ಯಾವುತ್ತೋ ಓಬಿರಾಯನ ಕಾಲದಲ್ಲಿ ಮಾಡಿತಂಥ ಪಟ್ಟಿಯು ಇದೆ. ಅದಕ್ಕೆ ಮತ್ತೊಂದು ಬದಲಾವಣೆಯನ್ನು ಸೂಚಿಸಿದ್ದಾರೆ ಆದರೆ ಅದು ಅನುಷ್ಠಾನಕ್ಕೆ ಬರುತ್ತಾ ಇಲ್ಲ. ಈ ಓಟರ್ಸ್ ಲಿಸ್ಟ್‌ನ್ನು ಒಂದು ತಿಂಗಳ ಮೊದಲೇ ಮಾಡಲು ನಿಮಗೆ ಇರುವ ತೊಂದರೆಗಳು ಏನು ? ಇಂಥಿಂಥವರು ಡೆಲಿಗೇಟ್ ಎಂದು ಮಾಡಲಿಕ್ಕೆ ನಿಮಗೇನು ತೊಂದರೆ ? ಜನರಲ್ ಇಲೆಕ್ಷನ್‌ನಲ್ಲಿ ಇರುವ ಹಾಗೆ ಮಾಡಬೇಕು. ಶಾಸನಬದ್ಧವಾಗಿ ವರ್ಷಕ್ಕೊಮ್ಮೆ ಲೆಕ್ಕಪರಿಶೋಧನೆಯಾಗಬೇಕೆಂದು ಇದೆ. ಆದರೆ 31-11-1991ಕ್ಕೆ 12,982ಪ್ರಕರಣಗಳು ಬಾಕಿ ಇದ್ದಾವೆ. ಇದು ನಮಗೆ ಶೋಭೆ ತರತಕ್ಕಂಥ ವಿಚಾರವೇನೂ ಅಲ್ಲ. ಈಗ ಅದರಲ್ಲಿ ಅವ್ಯವಹಾರಗಳು ಆಗಿದ್ದರೆ ಹೇಗೆ ಮತ್ತು ಎಲ್ಲಿ ಗೊತ್ತಾಗುತ್ತದೆ ? ಅವ್ಯವಹಾರ ಆಗಿದ್ದರೂ ಆಡಿಟ್ ಆಗಿದ್ದರೂ ಕೂಡ ಗೊತ್ತಾಗುವುದಿಲ್ಲ. 4-5 ವರ್ಷಗಳ ನಂತರ ಗೊತ್ತಾಗುತ್ತದೆ. ಅಪೆಕ್ಸ್ ಬ್ಯಾಂಕಿನ ಒಂದು

ಬ್ರಾಂಚ್‌ನಲ್ಲಿ ಎಷ್ಟೋ ಕೋಟಿ ಅವ್ಯವಹಾರದ ಬಗ್ಗೆ ಈಚೆಗೆ ಅದು ಗೊತ್ತಾಯಿತು. ನಾನೂ ಕೂಡ ಒಬ್ಬ ನಿರ್ದೇಶಕನಾಗಿದ್ದೇನೆ. ಹಾಗಿದ್ದರೆ ಈ ಆಡಿಟ್ ಅಂದರೆ ಏನು ? ಅದರ ಬಗ್ಗೆ ಹೇಳುವುದಕ್ಕೆ ಹೋದರೆ ಅದು ಬಹಳ ದೊಡ್ಡ ವಿಚಾರವಾಗುವುದರಿಂದ ನಾನು ಹೇಳುವುದಿಲ್ಲ, ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ, ಪೋಲೀಸ್ ಕಂಪ್ಲೈಂಟ್ ಆಗಿದೆ, ರಿಕವರಿ ಬಗ್ಗೆ ವ್ಯವಸ್ಥೆಯಾಗಿದೆ. ನಾನು ಇಲ್ಲಿ ಆಡಿಟ್‌ಗೆ ಮಾತ್ರ ಸೀಮಿತವಾಗಿ ಹೇಳುವಂಥಾದ್ದು. ಈ ರೀತಿಯಾಗಿ ಆಡಿಟ್ ಆದಲ್ಲಿಯೂ ಏಕೆ ಆಯಿತು ? ಇದು ಮೂಲ ಭೂತವಾಗಿ ಸಂಶೋಧನೆ ಮಾಡತಕ್ಕಂಥ ಒಂದು ವಿಚಾರವಾಗುತ್ತದೆ. ಮತ್ತು ಆಡಿಟ್‌ಶುಲ್ಕವನ್ನು ನಾವು ವಿಧಿಸುವಂಥಾದ್ದು ಬಹುಶಃ ಅಶಾಸ್ತ್ರೀಯವಾಗಿ ಇದೆ. ನಮ್ಮ ಬ್ರಹ್ಮಾವರ ಶುಗರ್‌ಫ್ಯಾಕ್ಟರಿಯು ನಷ್ಟದಲ್ಲಿ ಇದೆ, ಆದರೆ ಈ ಶುಲ್ಕವು ನಷ್ಟದಲ್ಲಿರುವವರಿಗೆ, ಲಾಭದಲ್ಲಿರುವವರಿಗೆ ಒಂದೇ ತರದಲ್ಲಿ ಬರುತ್ತದೆ. ಇವರಿಗೆ ಸುಮಾರು ಮೂರು ಲಕ್ಷ ರೂಪಾಯಿಗಳ ಆಡಿಟ್‌ಫೀಸ್ ಬರುತ್ತದೆ. ಲಾಭದಲ್ಲಿರುವ ಫ್ಯಾಕ್ಟರಿಗೂ ಹಾಗೆ, ನಷ್ಟದಲ್ಲಿರುವ ಫ್ಯಾಕ್ಟರಿಗೂ ಹಾಗೆ. ಇದಕ್ಕೆ ಒಂದು ಯಾರ್ಡ್‌ಸ್ಟಿಕ್ ಬೇಕು. ಯಾವುದೋ ಕಣ್ಣುಮುಚ್ಚಿ ಮಾಡುವುದಿಲ್ಲ. ಸಣ್ಣ ಸಣ್ಣ ಸೊಸೈಟಿಗಳಿಗೂ ಒಂದೆರಡು ದಿವಸಗಳ ಆಡಿಟ್ ಮಾಡಿ ಕೆಲವು ಸಾವಿರ ರೂಪಾಯಿಗಳನ್ನು ಹಾಕುತ್ತಾರೆ. ಈ ಆಡಿಟ್ ಶುಲ್ಕ ಸಹ 1991-92 ಸಾಲಿನಲ್ಲಿ ತಗಾದೆ 4.87 ಕೋಟಿ, ವಸೂಲಿ 2.85 ಕೋಟಿ, 2 ಕೋಟಿ ಬಾಕಿ ಇದೆ. ಏಕೆ ಹೀಗೆ? ನಮ್ಮ ಈ ಮೂರು ಡಿಮ್ಯಾಂಡ್‌ಗಳ ವಿಚಾರ ಮಾಹಿತಿಗಳು, ಸರಕಾರದ ವರದಿ ಬಂದಿದೆ, ಅದನ್ನು ಅಧ್ಯಯನ ಮಾಡಿ ಹೇಳುವಂಥ ಅವಕಾಶವು ಬರುವುದಿಲ್ಲ, ಆದರೆ ಸಹಕಾರಿ ಕಾನೂನಿಗೆ ಕಾಂಪ್ರಹೆನ್ಸೀವ್ ಅಮೆಂಡ್‌ಮೆಂಟ್ ಬರುತ್ತದೆ, ಬರುತ್ತದೆ ಎಂದು ಕೇಳಿ ಕೇಳಿ ನಮಗೆ ಸಾಕಾಯಿತು. ವರದಿಗಳ ಮೇಲೆ ವರದಿಗಳು ಬಂದವು. ಕೆ.ಹೆಚ್. ಪಾಟೀಲರು ಇಲ್ಲಿದ್ದಾಗ ಈ ಸದನದ ಎಲ್ಲಾ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿದರು, ಅವರು ಹೊರಟು ಹೋದರು. ಹಿರಿಯ ಸಹಕಾರಿಗಳಾದ ಕೆ.ಹೆಚ್.ಪಾಟೀಲರ ಆತ್ಮಕ್ಕೆ ಶಾಂತಿ ನೀಡಲು ನಾವು ಮಾಡಬೇಕಾದ ಕರ್ತವ್ಯ ಒಂದೇ, ಕರ್ನಾಟಕ ಸಹಕಾರಿ ಕಾನೂನಿಗೆ ಸಮಗ್ರವಾದ, ಸಂಪೂರ್ಣವಾದ ಒಳ್ಳೆಯ ರೀತಿಯ ತಿದ್ದುಪಡಿಯನ್ನು ಮಾಡುವಂಥಾದ್ದು. ಇಷ್ಟು ಮಾತ್ರ ಹೇಳುತ್ತೇನೆ. ಹೀಗೆ ಮಾಡುವಾಗ ಕೆಲವೊಂದು ಲೋಪದೋಷಗಳು ಇವೆ ಅವುಗಳನ್ನು ಸರಿಪಡಿಸಬೇಕು. 30ಬಿ ಡೈರೆಕ್ಷನ್ಸ್ ಇವೊತ್ತು ಕೊಡುವಂಥಾದ್ದು ಇದೆ, ಅದನ್ನು ತೆಗೆಯ ಬೇಕೆಂದು ಹೇಳಿದ್ದೇವೆ, ಅದನ್ನು ಒಂದು ಕಡೆಯಿಂದ ತೆಗೆದರೆ ಇನ್ನೊಂದು ಕಡೆಯಿಂದ ಬರುತ್ತಾ ಇದೆ. 3-ಬಿ-ಡೈರೆಕ್ಷನ್ಸ್ ಆಲ್ ವಿಥ್‌ಡ್ರಾನ್ ಎಂದು ಮತ್ತೊಂದು ಸುತ್ತೋಲೆಯು ರಿಜಿಸ್ಟ್ರಾರ್‌ರಿಂದ ಬರುತ್ತಾ ಇದೆ. ಅದರಲ್ಲಿ ಏನು ಇದೆ ಅದನ್ನೇ ಹಾಕಿಕೊಂಡು ಆ ಸುತ್ತೋಲೆಗಳು ಬರುತ್ತಾ ಇವೆ. ಇದನ್ನು ತಾವುಗಳು ಸರಿಪಡಿಸಬೇಕು. ಆ ಮೇಲೆ ನಾಮಕರಣದ ವಿಚಾರ. ಇಲ್ಲಿ ಕನಿಷ್ಟ ಎಷ್ಟು ಬೇಕೋ ಅಷ್ಟೇ ಹೊರತು, ಒಂದು ಸಂಸ್ಥೆಯ ಪ್ರತಿನಿಧಿಗಳು ಅವರು ಯಾವುದೇ ಪಕ್ಷದಿಂದ ಆರಿಸಿ ಬರಲಿ, ಚುನಾಯಿತ ಪ್ರತಿನಿಧಿಗಳ ಹಕ್ಕನ್ನು ಮೊಟಕುಗೊಳಿಸುವಂಥ ನಾಮಕರಣ ವ್ಯವಸ್ಥೆಯು ಸರಿಯಲ್ಲ. ಡಿಫಾಲ್ಟರ್ಸ್‌ಗೆ ಓಟು. ಎಲ್ಲರೂ ಸೇರಿ ಡಿಫಾಲ್ಟರ್ಸ್‌ಗೆ ಓಟು ಕೊಡುವಂತಾದ್ದು ಆ ಡಿಫಾಲ್ಟರ್ಸ್ ಆರಿಸಿ ಬಂದು ಸಂಸ್ಥೆಯನ್ನು ನಡೆಸುವಂಥಾದ್ದು, ಇದು ಆಗುವುದಾದರೆ; ಇದರಿಂದ ಯಾವ ವ್ಯವಸ್ಥೆಯು ಆಗುತ್ತದೆ ? ಅದು ಸರಿಯಲ್ಲ. ನಮ್ಮ ದೇಶದ ಪ್ಲಾನಿಂಗ್ ಕಮಿಶನ್‌ನವರು ಮಾಡೆಲ್ ಕೋಆಪರೇಟಿವ್ ಸೊಸೈಟೀಸ್ ಆಕ್ಟ್ ಎಂದು ಮಾಡಿದ್ದಾರೆ. ಆದರಲ್ಲಿ ಸೂಚ್ಯವಾಗಿ ಸ್ಟೇಟ್ ಪಾಲಿಸಿ ಅಂಡ್ ಕೋ - ಆಪರೇಟಿವ್ಸ್ ಎಂದು ಹೇಳುತ್ತಾರೆ. ' It shall be the policy of the State to promote co-operatives which are as instruments of equity, social justice and economic developement in fulfillment of the Directive Princilples of the State as enshrined in the Indian Constitution. The State shall not interfere in the management

and operation of Co-operative Socities as democratc instituions owned, managed and controlled by members of the economic social betterment operating their business based on mutually co-operative principles. . .
ಇಷ್ಟು ವಿಚಾರ [illegible] ಸದಸ್ಯರ ಸಭೆಗಳು ಕಾಲಕಾಲಕ್ಕೆ ಆಗಬೇಕು. [illegible] :- ಈ ಸರ್ಕಾರದ ಹಸ್ತಕ್ಷೇಪ ಮಾಡಬಾರದು. ಇದನ್ನು ಮುಂದುವರೆಸಬಾರದು. ಅನೇಕ ಕಡೆ ಈಗ ಸ್ಟೇ ಆಗಿದೆ. ಮುಂದುವರಿಸಿದ ಸಂದರ್ಭದಲ್ಲಿ ಸ್ಟೇ ಆಗಿದೆ. ಡಿಸ್ಟ್ರಿಕ್ಟ್ ಲೆವೆಲ್ ಸ್ಟೇಟ್ ಲೆವೆಲ್‌ನಲ್ಲಿ ಎಲ್ಲಾ ಈ ರೀತಿ ಆಗಿದೆ. ಒಂದು ವೇಳೆ ಮಂಡಲ ಪಂಚಾಯತ್, ಜಿಲ್ಲಾ ಪರಿಷತ್ ಆಕ್ಟ್‌ಗೆ ಅಮೆಂಡ್‌ಮೆಂಟ್ ಬಂತು, ಅದೇ ತರಹ ಯಾರೋ ಆ ಕಾಲಕ್ಕೆ ಸರಿಯಾಗಿ ಜನರಲ್ ಬಾಡಿ ಮಾಡಲಿಲ್ಲ ಎಂದರೆ ಅಲ್ಲಿ ಸ್ಪೆಷಲ್ ಆಫೀಸರ್ಸ್‌ನ್ನು ಹಾಕಿ. ಅಂಥ ಪ್ರಸಂಗದಲ್ಲಿ ಯಾರೂ ಕೋರ್ಟಿಗೆ ಹೋಗುವುದಿಲ್ಲ. ಸ್ಟೇ ಕೂಡಾ ಆಗುವುದಿಲ್ಲ. ಆ ಕಾನೂನಿಗೆ ಅಮೆಂಡ್‌ಮೆಂಟನ್ನು ತಂದುಬಿಡಿ. ಆರು ವರ್ಷಗಳ ಮಧ್ಯದಲ್ಲಿ ಒಬ್ಬ ಪದಾಧಿಕಾರಿ ಆರು ವರ್ಷ ಇದ್ದವನು ಮತ್ತೆ ಬರಬಾರದು ಎನ್ನುವ ಕಾನೂನು ಇದೆ. ಸಹಕಾರ ಸಂಘಗಳಿಗೆ ಮಾತ್ರ ಏತಕ್ಕೆ ಇದು? ಮಂಡಲ ಪಂಚಾಯಿತಿಯಲ್ಲಿ ಇಲ್ಲ, ಜಿಲ್ಲಾ ಪರಿಷತ್ತಿನಲ್ಲಿ ಇಲ್ಲ. ಅಸೆಂಬ್ಲಿಯಲ್ಲೂ ಇಲ್ಲಾ. ಮತ್ತೆ ಮೇಲೆ ಎಲ್ಲಿಯೂ ಕೂಡಾ ಇಲ್ಲ. ಸಹಕಾರ ಸಂಘಗಳ ಬಗ್ಗೆ ಹದ್ದಿನ ಕಣ್ಣಿನಿಂದ ಅವರು ಕೆಟ್ಟವರು, ಆರು ವರ್ಷದ ಮೇಲೆ ಇರಬಾರದು. ಇದೊಂದು ಏತಕ್ಕೆ ? ಇದು ಯಾವ ನ್ಯಾಯ ? ಇನ್ನು ಕೆಲವು ಆರ್ಬಿಟ್ರೇಷನ್ ಕೇಸಸ್ ಬೇಗ ಬೇಗ ಆಗಬೇಕು. ಬಹಳ ಪೆಂಡಿಂಗ್ ಇದೆ. ಜಿಲ್ಲಾ ಮಟ್ಟದಲ್ಲಿ ಸಹಕಾರಿ ಕೋರ್ಟ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ತಾವು ಆಲೋಚನೆಯನ್ನು ಮಾಡಬೇಕು. ಅನೇಕ ಪ್ರಸ್ತಾವನೆಗಳು ಬಹಳ ಕಾಲದಿಂದ ಬಾಕಿ ಇರುತ್ತವೆ. ಸಿಬ್ಬಂದಿ ನೇಮಕದ ಪ್ರಸ್ತಾವನೆ, ವೇತನ ಹೆಚ್ಚಳದ ಪ್ರಸ್ತಾವನೆ, ಖಾಲಿ ಹುದ್ದೆಗಳನ್ನು ತುಂಬಿಸುವಂಥ ಪ್ರಸ್ತಾವನೆ, ಅಲ್ಲಿ ಸಂಸ್ಥೆಗಳು ನಡೆಯುವುದಿಲ್ಲ. ಸರ್ಕಾರದ ನೆರವು ಇಲ್ಲದ ಸಂಸ್ಥೆಗಳು ಸರ್ಕಾರ ಯಾವ ನೆರವನ್ನೂ ಕೊಡುವುದು ಬೇಡ. ಮೂರು ವರ್ಷದ ಬ್ಯಾಲೆನ್ಸ್ ಸೀಟನ್ನು ತೆಗೆದು ನೋಡಿ. ಬಹಳ ಲಾಭದಾಯಕವಾಗಿ ನಡೆಯುತ್ತಿದೆ. ತಾವು ಯಾವುದಕ್ಕೂ ಅನುಮತಿಯನ್ನು ಕೊಡದೆ ಪೆಂಡಿಂಗ್ ಇಟ್ಟುಕೊಂಡರೆ ಸಂಸ್ಥೆಗಳು ಹೇಗೆ ನಡೆಯುತ್ತವೆ ? ಇದನ್ನು ತಾವು ನೋಡಬೇಕು. ಹಿಂದೆ ಕೋ-ಆಪರೇಟೀವ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಇತ್ತು. ಮಾನ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದಲ್ಲಿ ನಡೆಯುತ್ತಿತ್ತು. ಇದೊಂದು ರೀತಿ ಥಿಂಕ್ ಟ್ಯಾಂಕ್. ಕೋ-ಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಸಹಕಾರಿ ರಂಗಂಲ್ಲಿ ಇರುವಂಥ ಅಪಾರ ಅನುಭವಿಗಳು, ನಿವೃತ್ತ ಅಧಿಕಾರಿಗಳು, ಸಾಧಕರು, ಇವರನ್ನೆಲ್ಲಾ ಸೇರಿಸಿ ಒಂದು ಸಮಿತಿ ಅದನ್ನು ರಿವೈವ್ ಮಾಡಲಿಕ್ಕೆ ಆಗುತ್ತದೆಯೋ ಇಲ್ಲವೋ ಎನ್ನುವುದನ್ನು ಕುರಿತು ತಾವು ಆಲೋಚನೆಯನ್ನು ಮಾಡಬೇಕು. ನಮ್ಮ ಪ್ರಾಥಮಿಕ ಸಹಕಾರಿ ಸಂಘಗಳು ಇಂಟೆಗ್ರೇಟೆಡ್ ರೂರಲ್ ಕ್ರೆಡಿಟ್ ಏಜೆನ್ಸೀಸ್ ಆಗಬೇಕು ಎಂದು ಹೇಳಿ ಗೋರವಾಲ ಕಮಿಟಿ ರಿಪೋರ್ಟ್ ಬಂದಿತ್ತು. ಅದರಲ್ಲಿ ಒಂದು ವಿಚಾರವನ್ನು ಹೇಳಿದರು. ಬಹಳ ಹಳೆಯ ರಿಪೋರ್ಟ್ ಅದು. 'Though co-operative has failed, it must succeed only when co-operative can provede integrated schemê of rural develop-ment. . . .'ಎನ್ನುವಂಥದ್ದನ್ನು ಹೇಳಿದರು. ಈ ಇಂಟೆಗ್ರೇಟೆಡ್ ರೂರಲ್ ಕ್ರೆಡಿಟ್ ಸಿಸ್ಟಂ ಜಾರಿಗೆ ತರುವ ದೃಷ್ಟಿಯಿಂದ ಅನೇಕ ಸಮಿತಿಗಳು ಬಂದಿವೆ. ಅನೇಕ ಶಿಫಾರಸ್ಸುಗಳು ಕೂಡ ಆಗಿವೆ. 1945 ರಿಂದ ಹಿಡಿದು 54, 58, 60, 69, 71, 89 ಇದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನ್ಯಾಷನಲ್ ಕಮಿಟಿಗಳು ಹಾಗೂ ಇತ್ತೀಚಿನ . . . . .

ಉಪಾಧ್ಯಕ್ಷ ಸ್ಥಾನದಲ್ಲಿ ನಿಯವರು:- ಅರ್ಧ ಗಂಟೆ ಆಯಿತು.

ಶ್ರೀ ಜಿ. ಎಸ್. ಆಚಾರ್ :- ಇನ್ನು ಹತ್ತು ನಿಮಿಷದಲ್ಲಿ ಮುಗಿಸುತ್ತೇನೆ. ಇತ್ತೀಚಿನದು. ಅಗ್ರಿಕಲ್ಚರ್ ಕ್ರೆಡಿಟ್ ರಿವ್ಯೂ ಕಮಿಟಿ 89 ರದ್ದು PDS SS ಹೇಗೆ ಮಾಡಬೇಕು ನೇಚರ್ ಆಫ್ ಕ್ರೆಡಿಟ್ ಯಾವುದು ? ಟೈಪ್ ಆಫ್ ಬೆನಿಫಿಸಿಯರಿ ಹೇಗೆ ಇರಬೇಕು ? nature of non-credit business management ಹೇಗೆ ಇರಬೇಕು ? ಬಹುಶಃ ನಮ್ಮಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾನ್ಯ ರಂಗನಾಥ್‌ರವರು ಸಹಕಾರಿ ಸಚಿವರಾಗಿದ್ದಾಗ ಒಂದು ಸಲ ರೀ ಆರ್ಗನೈಜೇಷನ್ ಆಯಿತು. ರಾಜ್ಯದ ಒಂದೆರಡು ಜಿಲ್ಲೆಗಳಲ್ಲೇ ಆಗಲಿಲ್ಲ. ಬೇರೆ ಕಡೆಯಲ್ಲಾ ಆಯಿತು. ಸಮಗ್ರವಾದ ಒಂದು ರೂಪ ಬರಲಿಲ್ಲ. ಈಗಲಾದರೂ ಒಂದು ಕಮಿಟಿಯ ರೆಕಮೆಂಡೇಷನ್ ಆಧಾರದ ಮೇಲೆ ತಾವು ಪರಿಶೀಲನೆ ಮಾಡಬೇಕೆಂದು ಹೇಳಬಯಸುತ್ತೇನೆ. ನಮ್ಮ ಸಹಕಾರಿ ಸಂಸ್ಥೆಗಳು ಈ ಸರ್ಕಾರದ ಕೆಲವು ಧೋರಣೆಗಳಿಂದಾಗಿ ಸಾಲ ಮನ್ನಾ, ಬಡ್ಡಿ ರಿಯಾಯಿತಿ, ಪೂರ್ತಿ ಬಡ್ಡಿ ರಿಯಾಯತಿ, ಬಡ್ಡಿಯಲ್ಲಿ ಸ್ವಲ್ಪ ಅಂಶ ರಿಯಾಯಿತಿ ಇವೆಲ್ಲಾ ಘೋಷಣೆಗಳನ್ನು ಮಾಡಿದ್ದರಿಂದ ಮತ್ತು ಘೋಷಣೆಗಳ ಪ್ರಕಾರ ಸರ್ಕಾರ ಕೊಡಬೇಕಾದ ಹಣವನ್ನು ಕಾಲಕಾಲಕ್ಕೆ ಕೊಡದೇ ಇದ್ದುದ್ದರಿಂದ ಇವತ್ತು ಪ್ರೈಮರಿ ಅಗ್ರಿಕಲ್ಚರಲ್‌ಕ್ರೆಡಿಟ್ ಸೊಸೈಟಿಸೇ ಆಗಲಿ ಸಿ.ಎಲ್.ಡಿ ಬ್ಯಾಂಕ್‌ಗಳಾಗಲಿ, ಡಿ.ಸಿ.ಸಿ. ಬ್ಯಾಂಕ್‌ಗಳಾಗಲಿ, ಅನೇಕ ಡಿ.ಸಿ.ಸಿ ಬ್ಯಾಂಕುಗಳು ನಷ್ಟದಲ್ಲಿದ್ದಾರೆ. ಸತ್ತುಹೋಗುವ ಪರಿಸ್ಥಿತಿಯಲ್ಲಿದ್ದಾರೆ. ಇದಕ್ಕೆ ಪುನಃಚ್ಚೇತನಕ್ಕೆ ಸಭೆ ಮಾತ್ರ ಆಗಿದೆಯೇ ಹೊರತು ಪುನಃಚ್ಚೇತನವಾಗಲಿಲ್ಲ, 177 ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ಬರೀ 46 ಮಾತ್ರ ಅನಿರ್ಭಂದಿತವಾಗಿ ಸಾಲ ಪಡೆಯಲಿಕ್ಕೆ ಅರ್ಹತೆಯನ್ನು ಪಡೆಯುತ್ತಾವೆ. 8 ಡಿ.ಸಿ.ಸಿ. ಬ್ಯಾಂಕುಗಳು ಸಾಲವನ್ನು ಪಡೆಯಲಿಕ್ಕೆ ಅರ್ಹತೆಯನ್ನು ಪಡೆದಿಲ್ಲ. ಹೀಗಾದರೆ ಹೇಗೆ ? ನಮ್ಮಲ್ಲಿ ಬೆಳೆ ವಿಮೆಯನ್ನು ಪ್ರೊಡಕ್ಷನ್ ಇನ್‌ಸೆಂಟಿವ್ ಅಂತ ಈ ಸಲ ಮಾಡಿದ್ದೀರಿ. ಇದು ಮಾರ್ಚಿ ಎಂಡ್‌ವರೆಗೆ ಮಾತ್ರ ಇದೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಒಂದು ತಿಂಗಳು ಎಕ್ಸ್‌ಟೆಂಡ್ ಮಾಡುತ್ತೇವೆಂದು ಹೇಳಿದ್ದಾರೆ. ಯಾವ ರಿಯಾಯಿತಿ ರೈತರಿಗೆ ಕೊಡುತ್ತಾರೆ. ವಿಧಾನಸಭೆಯಲ್ಲಿ ಇನ್ನೊಂದು ಪಕ್ಷದವರು ಕೂಗಿದ ಕೂಡಲೇ ನಾವು ಮಾಡುವಂತಹ ಕ್ರಮ ಆಗಬಾರದು. ಒಂದು ಕಾನೂನನ್ನು ಮಾಡಬೇಕು. ರಿಜರ್ವ್ ಬ್ಯಾಂಕ್‌ನಿಂದ ಅಥವಾ ನಬಾರ್ಡ್‌ನಿಂದ ಎಷ್ಟು ಮಟ್ಟಕ್ಕೆ ನಾವು ಹಣ ತರುತ್ತೇವೆ, ರೈತರಿಗೆ ಎಷ್ಟು ರಿಯಾಯಿತಿ ಸಿಗುತ್ತದೆಂದು ರೈತರಿಗೆ ಗೊತ್ತಿರಬೇಕು. ಈ ವರ್ಷದ್ದಾರೂ ಮಾರ್ಚಿ ಎಂಡಿದೆ ಮಾಡದೆ, ಅಕ್ಟೋಬರ್ ವರೆಗೆ ಯಾರು ಕಟ್ಟಿದ್ದಾರೆ ಅವರಿಗೆ ಈ ಫೆಸಿಲಿಟಿ ಸಿಗುವುದಿಲ್ಲ. ಪ್ರಾಮಾಣಿಕವಾಗಿ ಕಟ್ಟಿದವರಿಗೆ ವ್ಯವಸ್ಥೆ ಸಿಗಬೇಕು. ಆದ್ದರಿಂದ ಅದನ್ನು ಕುರಿತು ಆಲೋಚನೆ ಮಾಡಬೇಕೆಂದು ನಾನು ಹೇಳಿಕ್ಕೆ ಬಯಸುತ್ತೇನೆ. ಬೆಳೆ ವಿಮೆ ಎನ್ನುಂತಹ ವ್ಯವಸ್ಥೆ ಇದೆ. ಅದು ಮಲೆನಾಡು ನೀರಾವರಿ ಸೌಕರ್ಯ ಇರುವಲ್ಲಿ ಪ್ರಯೋಜನ ಇಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೆಗೆದುಕೊಂಡರೆ ಯಾವತ್ತೂ ಅಣ್ಣೆವಾರಿ ಡಿಕ್ಲೇರ್ ಆಗುವುದಿಲ್ಲ. 15 ಲಕ್ಷ ರೂಪಾಯಿಯನ್ನು ರೈತರು ಕಟ್ಟುತ್ತಿದ್ದಾರೆ. ಬೈ ವೇ ಆಫ್ ಪ್ರಿಮಿಯಂ, ಇದು ನಿಜವಾಗಿಯೂ ಅನ್ಯಾಯ. ಅದೇ ರೀತಿ ಪಿ.ಎಲ್.ಡಿ ಬ್ಯಾಂಕ್‌ಗಳಲ್ಲೆ ವಿಫಲವಾಗಿ ಸರಿಯಾಗಿ ಸಭೆ ನಡೆಯದೆ ಹಣ ಪಾವತಿಯಾಗಿಲ್ಲ. ಪಿಎಲ್‌ಡಿ ಬ್ಯಾಂಕ್‌ನವರು ಅವರೇ ಕೊಳವೆ ಬಾವಿಗಳನ್ನು ತೋಡಿಸಲಿ, ಸ್ಪ್ರಿಂಕ್‌ಲರ್ ಹಾಕಿಸಲಿ, ಕೃಷಿ ಉಪಕರಣಗಳನ್ನು ಕೊಡಲಿ, ಅಲ್ಲೇ ರೈತರಿಗೆ ಆನ್ ದಿ ಸ್ಪಾಟ್ ಸಾಲದ ಅಪ್ಲಿಕೇಶನ್ ಅನ್ನು ತೆಗೆದುಕೊಂಡು ಬಿಲ್ಡಪ್ ಮಾಡುವಂತಹ ಒಂದು ಕ್ರಾಂತಿಕಾರಕ ಹೆಜ್ಜೆಯನ್ನು ಏತಕ್ಕೆ ಮಾಡಬಾರದು. ಹಳೆಯ ಹೆಜ್ಜೆಯನ್ನೇ ನಾವು ಹಾಕಿಕೊಂಡು ಹೋಗುತ್ತಿದ್ದೇವೆ. ನಮ್ಮಲ್ಲಿ ಗ್ರಾಹಕರ ಸಂಘಗಳು ಇವೆ. ಮಾರಾಟ ಸಹಕಾರ ಸಂಘಗಳು ಇವೆ. ಸರ್ಕಾರ ಕಂಟ್ರೋಲ್ ಕಮಾಡಿಟಿಸ್ ಅವರ ಮೂಲಕ ಮಾಡಬೇಕೆಂದು ತೀರ್ಮಾನಮಾಡಿದೆ. ಅವರ ಹತ್ತಿರ ರಾಮನ ಲೆಕ್ಕ ಕೃಷ್ಣನ ಲೆಕ್ಕ ಮಾಡಲಿಕ್ಕೆ ಬರುವುದಿಲ್ಲ. ಸೇಲ್ಸ್ ಟ್ಯಾಕ್ಸ್‌ನಲ್ಲಿ ಸ್ವಲ್ಪ ಎಕ್ಸಮ್‌ಷನ್ ಕೊಡಬೇಕು. ಟರ್ನ್‌ಓವರ್ ಟ್ಯಾಕ್ಸ್ ದಕ್ಷಿಣಕನ್ನಡದಲ್ಲಿ ಕೆಲವು ಸೊಸೈಟಿಗಳಲ್ಲಿ ಪಾಮೋಲಿನ್ ಮಾಡಿದ್ದಕ್ಕೆ ಟರ್ನ್‌ಓವರ್ ಟ್ಯಾಕ್ಸ್ ಹಾಕಿದ್ದಾರೆ. ಕೆಲವರಿಗೆ ಇಲ್ಲ. ಒಂದು

ರಾಜ್ಯದಲ್ಲಿ ಎರಡು ನೀತಿ ಏತಕ್ಕೆ ? ಲಕ್ಷಗಟ್ಟಲೆ ರೂಪಾಯಿಯನ್ನು ಸಾಲವನ್ನಾಗಿ ಕೊಟ್ಟು ಅಕ್ಕಿ ಗಿರಣಿಯನ್ನು ಮಾಡಿಸಿದ್ದಾರೆ. ಆ ಅಕ್ಕಿಗಿರಣಿಯಲ್ಲಿ ಭತ್ತ ಇಲ್ಲ. ಜನರಿಗೆ ಬೇಕಾದಂತಹ ಕೊಡಬೇಕಾದಂತಹ ಅಕ್ಕಿ ಯಾವುದು ಇದೆ, ಆ ಅಕ್ಕಿಯನ್ನು ರಾಯಚೂರಿನಿಂದ ಶಿವಮೊಗ್ಗದಿಂದ ಕಳುಹಿಸಿಕೊಡುತ್ತಾರೆ. ಆ ಅಕ್ಕಿ ವಾಸನೆ ಇದ್ದು ತಿನ್ನಲಿಕ್ಕೆ ಆಗುವುದಿಲ್ಲ ಅನ್ನುತ್ತಾರೆ. ಟಿ.ಎ.ಪಿ.ಎಂ ನಲ್ಲಿ ಗಿರಣಿಗಳು ಇದ್ದಾವೆ. ಇಲ್ಲಿಗೆ ಭತ್ತವನ್ನು ಕೊಡಿ ಇವರೇ ಅಕ್ಕಿ ಮಾಡಿಸುತ್ತಾರೆ. ನಮ್ಮ ಸಹಕಾರ ರಂಗದಲ್ಲಿ ಪ್ರಾರಂಭವಾದ ಸಂಸ್ಥೆಗಳಿಗೂ ಅನುಕೂಲವಾಗುತ್ತದೆಂದು ಕೇಳಿಕೊಂಡಿದ್ದಾರೆ. ಇದನ್ನು ಅವರು ಮಾಡಿಸುವುದಿಲ್ಲ. ಇದನ್ನು ಮಾಡಿಸುವಹಾಗೆ ಮಾಡಬೇಕು. ಅದೇರೀತಿ ಇನ್ನೂ ವಿಶಿಷ್ಯವಾದ ಸಂಸ್ಥೆಗಳು ಇದ್ದವೆ. ಕೆ. ಟೆಕ್ಸ್ ಇಂಡಸ್ಟ್ರಿಯಲ್ ಬ್ಯಾಂಕ್, ಬಿ.ಡಿ.ಓ. ಸೊಸೈಟೀಸ್, ಫಿಷ್ ಮಾರ್ಕೆಟಿಂಗ್ ಫೆಡರೇಷನ್‌ಗಳು.

ಉಪಾಧ್ಯಕ್ಷಿಣಿಯವರು:- ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ ತಾವು ಬೇಗ ಮುಗಿಸಿ.

ಶ್ರೀ ಜಿ. ಎಸ್. ಆಚಾರ್ :- ಇವೆಲ್ಲಾ ಹಾಳಾಗಿಹೋಗಿದೆ. ಸಹಕಾರಿ ರಂಗದಲ್ಲಿ ಅದ್ಭುತ ಯೋಜನೆಗಳನ್ನು ಇಟ್ಟುಕೊಂಡು ಕೆಲವು ಸಂಸ್ಥೆಗಳನ್ನು ಮಾಡಿದ್ದರೆ ಇವುಗಳು ಹಾಳಾಗಿ ಹೋಗಿವೆ. ಸ್ವಲ್ಪ ಕಲ್ಪನೆಯ ವಾತಾವರಣ ದೃಷ್ಟಿಯಿಂದ ನಾವು ನೋಡಬೇಕು. ಇನ್ನು ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಮೀಟಿಂಗ್‌ಗೆ ಹೋದಾಗ ಕೆಲವು ವರದಿಗಳು ಬರುತ್ತವೆ. ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಮುಂದುವರಿಯುವುದಕ್ಕೆ ಸಾಧ್ಯವೇ ಇಲ್ಲ. ಜನ ಕಬ್ಬು ಬೆಳೆಸುವುದು ಇಲ್ಲ. ಮೂರು ತಿಂಗಳ ಹಿಂದೆ ಮಾನ್ಯ ಸಚಿವರ ಛೇಂಬರ್ ನಲ್ಲಿ ಒಂದು ಸಭೆ ನಡೆದಾಗ ಸರ್ಕಾರದಿಂದ ನೆರವು ಕೊಡಬೇಕು, ಕೇಂದ್ರ ಸರ್ಕಾರದಿಂದ ಬಂದಂತಹ ಕೇನ್ ಡೆವಲಪ್‌ಮೆಂಟಿಗೆ ರೀಪೆಂಟಿಗೆ 1.75 ಕೋಟಿ ಕೊಡಬೇಕು ಅನ್ನುವ ಪತ್ರ ಇನ್ನು ಆಫೀಸಿನಲ್ಲಿ ತಿರುಗುತ್ತಿದೆ. ದಯವಿಟ್ಟು ತಾವು ಕೊಟ್ಟಂತಹ ಕಮಿಟ್‌ಮೆಂಟ್ ಅನ್ನು ಕೂಡಲೇ ಅದನ್ನು ಮಂಜೂರು ಮಾಡಿಸಿ ಕೊಡಬೇಕು. ಹೌಸಿಂಗ್ ವಿಚಾರದಲ್ಲಿ ಒಂದು ವಿಚಾರವನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುತ್ತಿದ್ದೇನೆ. ಹೌಸಿಂಗ್ ವಿಚಾರದಲ್ಲಿ ನಾನು ರಾಜ್ಯಮಟ್ಟದ ಅಧ್ಯಕ್ಷನಾಗಿದ್ದರಿಂದ ನಾನು ಹೇಳದೇ ಇದ್ದರೆ ತಪ್ಪಾಗುತ್ತದೆ. ಯಾವ ಹೌಸಿಂಗ್ ಸಂಸ್ಥೆಗಳಲ್ಲಿ ಅವ್ಯವಹಾರಗಳನ್ನು ಮಾಡಿದರು ಎನ್.ಆರ್.ಐ ಗಳ ಹೆಸರಿನಲ್ಲಿ ತೊಂದರೆ ಆಯಿತು. ಅಥವಾ ಹಣಕಾಸಿನ ಲಾಭವನ್ನು ಮಾಡಲಿಕ್ಕೆ ಮಾಡಿದರು. ಸೈಟುಗಳನ್ನು ಪಡೆದುಕೊಂಡರು ಅನ್ನುವ ದೃಷ್ಟಿಯಿಂದ ಹೋಲ್‌ಸೇಲ್ ಆಗಿ ಎಲ್ಲಾ ಹೌಸಿಂಗ್ ಸಂಸ್ಥೆಗಳು ಕೆಟ್ಟವು ಎನ್ನುವ ಭಾವನೆಯನ್ನು ಸರ್ಕಾರ ಇಟ್ಟುಕೊಳ್ಳಬಾರದು.

6.15 ಪಿ. ಎಂ.

ನಾವು ಮೂರು ಜನರ ಸಮಿತಿ ಮಾಡಿ ತೀರ್ಮಾನ ಮಾಡುತ್ತೇವೆಂಬ ಮಾತು ಬಹಳ ದಿವಸಗಳಿಂದ ಬಂದಿದೆ. ಬಹಳಷ್ಟು ಕಡೆಗಳಲ್ಲಿ ಜನರು ಲಕ್ಷಾಂತರ ರೂಪಾಯಿಗಳನ್ನು ಬಹಳ ಕಷ್ಟದಿಂದ ಕಟ್ಟಿದ್ದಾರೆ. ನಮಗೆ ಒಂದು ಸೈಟ್ ಸಿಗುತ್ತದೆ, ನಿವೃತ್ತಿಯ ಕೊನೆ ಕಾಲದಲ್ಲಿ ಆಸರೆಯಾಗಿರುವುದಕ್ಕೆ ನಾವು ಒಂದು ಕಟ್ಟಡ ಕಟ್ಟಬೇಕು ಎಂಬ ಆಸೆಯಿಂದ ದುಡ್ಡನ್ನು ಕಟ್ಟಿದ್ದಾರೆ. ಇದರ ಬಗ್ಗೆ 4.1 ನೋಟಿಫಿಕೇಶನ್ ಆಗಿದೆ ಮತ್ತು 6.1 ನೋಟಿಫಿಕೇಶನ್ ಆಗಿದೆ. ಬಹುಶಃ ಮೂರು ಜನರ ಸಮಿತಿ ಯಾವೊತ್ತು ಕೂಡ ಮೀಟ್ ಆಗಲಿಲ್ಲವೇನೋ ಎಂದು ನನಗೆ ಗೊತ್ತಾಗುತ್ತದೆ. ಅದು ಬೆಂಗಳೂರಿನಲ್ಲಿ ಮಾತ್ರವಲ್ಲ, ಶಿವಮೊಗ್ಗದಲ್ಲಿದೆ, ದಾವಣಗೆರೆ, ಬೆಳಗಾಂ, ಕೋಲಾರ, ಮಂಗಳೂರು ಜಿಲ್ಲೆಯಲ್ಲಿದೆ. ಹೌಸಿಂಗ್ ಸೊಸೈಟಿಗಳನ್ನು ಮಾಡಬಾರದೆನ್ನುವ ತೀರ್ಮಾನ ಏಕೆ ? ಬಹುಶಃ ಸೊಸೈಟಿಯಿಂದ ಹೊಸದಾಗಿ ಸೈಟ್‌ಗಳನ್ನು ಕೊಡಬಾರದೆನ್ನುವ ತೀರ್ಮಾನವೇಕೆ ? ಈಗ ಎಸ್‌ಸಿ : ಎಸ್‌ಟಿ ಹೌಸಿಂಗ್ ಫೆಡರೇಶನ್ ಇದೆ. ಅದನ್ನು ನಮ್ಮ ಹಿಂದಿನ ಸರ್ಕಾರ ಪ್ರಾರಂಭಿಸಿದ್ದುದು 175 ತಾಲ್ಲೂಕುಗಳಲ್ಲಿ ಎಸ್‌ಸಿ : ಎಸ್‌ಟಿ ಹೌಸಿಂಗ್ ಸೊಸೈಟಿಗಳಿವೆ. ಕೆಲವು ಕಡೆ ಅರ್ಧ ಮನೆ ಕಟ್ಟಿದ್ದಾರೆ, ಕೆಲವು ಅರ್ಧ ಪಾವತಿ ಮಾಡಿದ್ದಾರೆ. ಅದನ್ನು ರಿವೈಸ್ ಮಾಡಬೇಕು. ನಾವು ಬೇಕಾದಷ್ಟು ಹಣವನ್ನು ರಿಯಾಯಿತಿಯಾಗಿ ಕೊಡುತ್ತೇವೆ. ಬಡ್ಡಿ ರಿಯಾಯಿತಿ ಕೊಡುತ್ತೇವೆ. ಚಿಕ್ಕ-ಚಿಕ್ಕ ಮನೆಗಳಿಗೆ 10 ಸಾವಿರ

ರೂಪಾಯಿಯೊಳಗೆ ರಿಯಾಯಿತಿ ಕೊಡುತ್ತೇವೆ. ಆದರೆ, ಮನೆಗಳ ಬಗ್ಗೆ ಲೀಗಲ್ ಆಗಿ ಒಂದು ಕಲ್ಪನೆ ಇದ್ದಂತಿಲ್ಲ. ಕಳೆದ 10 ವರ್ಷಗಳಿಂದ ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದಾಗ, ನನ್ನನ್ನು ಅಧ್ಯಕ್ಷರೆಂದರು. ಆದರೆ, ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಇವೊತ್ತು ಎಲ್ಲಾ ಸೂಪರ್‌ಸೀಡ್ ಆಗಿದೆ. ಹರಿಜನ ಗಿರಿಜನರ ಹೆಸರಿನಲ್ಲಿ ನಾವು ಬೇಕಾದಷ್ಟು ಕೆಲಸ ಮಾಡುತ್ತೇವೆಂದು ಹೇಳುವ ಸರ್ಕಾರ ಇಂತಹ ಒಂದು ಹೌಸಿಂಗ್ ಫೆಡರೇಶನ್‌ನ್ನು ಉದ್ಧಾರ ಮಾಡಲಿಕ್ಕೆ ಆಗದೆಹೋದರೆ ಹೇಗೆ ? ಅಲ್ಲಿಗೆ ಒಳ್ಳೆಯವರನ್ನು ಹಾಕಿ. ಈ ಒಂದು ಸಂಸ್ಥೆಯನ್ನು ನಾವು ಮೇಲಕ್ಕೆ ತರಬೇಕೆಂದು ಹೇಳಬಯಸುತ್ತೇನೆ.

ಇನ್ನು ಆರೋಗ್ಯ ಮತ್ತು ಕಾರ್ಮಿಕ ಇಲಾಖೆ ಬಗ್ಗೆ ಸ್ವಲ್ಪ ಹೇಳಬೇಕಾಗಿದೆ. ಈಗ ನ್ಯಾಶನಲ್ ಹೌಸಿಂಗ್ ಫೆಡರೇಶನ್ ಇದೆ. ಹೌಸಿಂಗ್ ಕಾರ್ಯಕ್ರಮಕ್ಕೆ ಕೊಡುವಂಥ ಸಾಲ ಮತ್ತು ಬಡ್ಡಿದರ ಕುರಿತು ಎಲ್‌ಐಸಿಯವರು ನಮ್ಮ ರಾಜ್ಯ ಸರ್ಕಾರದಿಂದ ಅಭಿಪ್ರಾಯ ಹೋಗಲಿಲ್ಲ, ಹೋಗಬೇಕಾಗಿದೆ. ಇನ್ನು ಸ್ಟಾಂಪ್ ಡ್ಯೂಟಿ ವಿಚಾರದ ಬಗ್ಗೆ. ರೈತ ಸಾಲ ಪಡೆದುಕೊಂಡಿದ್ದಕ್ಕೆ ಅಥವಾ ಪಿಎಲ್‌ಡಿಬಿ ಯಲ್ಲಿ ಸಾಲ ಪಡೆದುಕೊಂಡಿದ್ದಕ್ಕೆ ಮತ್ತೆ ಮತ್ತೆ ಸ್ಟಾಂಪ್ ಡ್ಯೂಟಿ ಕಟ್ಟುವಂಥ ವ್ಯವಸ್ಥೆ ಯಾವ ರೀತಿ ಇದೆ. ಅದರ ಬಗ್ಗೆ ನಾನು ಮೊನ್ನೆ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಹೇಳಿದೆ. ಒಬ್ಬ ರೈತ ಅಥವಾ ಒಂದು ಸಲ ಯಾರೋ ಒಬ್ಬ ಭೂಮಿಯನ್ನು ಖರೀದಿ ಮಾಡಿದರೆ ಅವನು ಸರ್ಕಾರಕ್ಕೆ ಸ್ಟಾಂಪ್ ಡ್ಯೂಟಿ ಕಟ್ಟಬೇಕು. ಬೇಕಾದರೆ ಸ್ಟಾಂಪ್ ಡ್ಯೂಟಿಯನ್ನು ಹೆಚ್ಚಿಗೆ ಹಾಕಿ. ಇನ್ನೊಂದು ಸಲ ಭೂಮಿಯನ್ನು ಮಾರಿದಾಗ ತೆಗೆದುಕೊಂಡವನು ಸ್ಟಾಂಪ್ ಡ್ಯೂಟಿ ಕಟ್ಟಬೇಕು. ಮತ್ತು ಆತನ ಅಗತ್ಯತೆಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆಲ್ಲಾ ವಿಪರೀತವಾಗಿ ಸ್ಟಾಂಪ್ ಡ್ಯೂಟಿ ಹೊರೆ ಹಾಕುವಂಥ ವ್ಯವಸ್ಥೆಯಾಗಬಾರದು. Co-operation is an ideal not a mere system and therefore it can give rise to innumbrable methods of application....ಎಂದು ರವೀಂದ್ರನಾಥ ಠಾಗೂರರು ಹೇಳಿದ್ದಾರೆ. ಆ ಒಂದು ಆಧಾರದ ಮೇಲೆ ಜನತೆಯ ಸಾಮಾಜಿಕ ಚಳುವಳಿಯಾಗಬೇಕು, ರಾಜಕಾರಣಿಗಳ ಚಳುವಳಿಯಲ್ಲ, ಅಧಿಕಾರಿಗಳ ಚಳುವಳಿಯೂ ಅಲ್ಲ. ಕೋ-ಆಪರೇಶನ್ ಕಾರ್ಪೋರೇಷನ್ ಆಗಬಾರದು. ಬಡವರ, ಶೋಷಿತರ ಬದುಕಿನಲ್ಲಿ ಭರವಸೆಯ ಹೊಂಗನಸು ಮೂಡಿಸುವ ಬಜೆಟ್ ಶ್ರೀಮಾನ್ ಬಂಗಾರಪ್ಪನವರದು. ಇದನ್ನು ಒಂದೇ ವರ್ಷದಲ್ಲಿ ಮಾಡುವುದಕ್ಕೆ ಸಾಧ್ಯವಾಗಿದ್ದರೂ, ಆದಷ್ಟು ಅದನ್ನು ಆರಂಭ ಮಾಡುವ ಕನಸನ್ನು ಹೊತ್ತಿದ್ದಾರೆ. ಅದೇ ರೀತಿ ಸಹಕಾರಿ ರಂಗದಲ್ಲಿ ಹೊಸ ನೀತಿ, ಹೊಸ ರೂಪು, ಹೊಸ ತತ್ವ, ಹೊಸ ಶಕ್ತಿ, ಹೊಸ ನಾಡನ್ನು ಕಟ್ಟಬೇಕು. ಹೊಸ ನಾಡನ್ನು ಕಟ್ಟುವ ಕುರಿತು ಕಟ್ಟುವೆವು ನಾವು ಎಂದು ಕವಿಗಳಾದ ಪ್ರೊ : ಗೋಪಾಲಕೃಷ್ಣ ಅಡಿಗರು ಹೇಳಿದ್ದಾರೆ. ಇರುವುದನ್ನೆಲ್ಲಾ ಜನತೆಗೆ ತೆರವಾಗಿಸುವ, ಸಮ ಬಗೆಯ ಸಮ ಸುಖದ ಸಮ ದುಃಖದ ಸಾಮರಸ್ಯದ ಸಾಮಗಾನ ಲಹರಿಯ ಮೇಲೆ ತೇಲಿ ಬರಬೇಕು ಎಂದು ಹೇಳಿದ್ದಾರೆ. ಅದೇ ರೀತಿ ಸಹಕಾರಿ ರಂಗವು ತೇಲಿ ಬರಬೇಕೆಂದು ಹಾರೈಸುತ್ತೇನೆ. ಇನ್ನು ಮಾರುಕಟ್ಟೆ ವಿಚಾರವಾಗಿ ಒಂದು ಮಾತನ್ನು ಹೇಳಬೇಕಾಗಿದೆ. ಬೆಳೆಗಾರರಿಗೆ ಸ್ಪರ್ಧಾತ್ಮಕ ಬೆಲೆ, ಉತ್ಪನ್ನಗಳ ವೈಜ್ಞಾನಿಕ ವರ್ಗೀಕರಣ, ಉಗ್ರಾಣಗಳ ಅನುಕೂಲತೆ ದೃಷ್ಟಿಯಿಂದ ಮಾಡಿದಂಥ ಇಲಾಖೆ. ಎಪಿಎಂಸಿಗೆ ಚುನಾವಣೆ ಆಗಲಿಲ್ಲ. ಚುನಾವಣೆ ಮಾಡಬೇಕು. ದಕ್ಷಿಣ ಕನ್ನಡ ಎಪಿಎಂಸಿ ವಿಭಜಿಸಬೇಕು. ಮಾರಾಟವಾದೊಡನೆ ಹಣ ಪಾವತಿಯಾಗುವುದಿಲ್ಲ. 15-20 ದಿವಸಗಳವರೆಗೆ ನಾಟ್ ಸೇಲ್ ಎಂದು ಮಾಡಿ, ಕಮೀಷನ್ ಏಜೆಂಟ್ಸ್, ಟ್ರೇಡರ್ಸ್ ಕೆಲವು ಸಾರಿ ಸಿಬ್ಬಂದಿಯವರು ಶಾಮೀಲಾಗಿ ರೈತರಿಗೆ ಕಷ್ಟವಾಗುತ್ತಿದೆ. ಆದುದರಿಂದ , ದಯವಿಟ್ಟು, ಅದರ ಬಗ್ಗೆ ವ್ಯವಸ್ಥೆ ಮಾಡಿಸಿಕೊಡಬೇಕು. ಆರೋಗ್ಯವನ್ನು ಕುರಿತು ಎರಡು ಮಾತನ್ನು ಹೇಳುತ್ತೇನೆ. ಎರಡು ಸಾವಿರ ಇಸವಿಯೊಳಗೆ ಎಲ್ಲರಿಗೂ ಆರೋಗ್ಯ ಇತ್ಯಾದಿ, ಇತ್ಯಾದಿ ಎಂದು ಇದರಲ್ಲಿ ಇದೆ. ಆದರೆ ಇದು ಕಳೆದ ವರ್ಷದಲ್ಲಿಯೇ ಇತ್ತು. ಎರಡು ವರ್ಷದಿಂದ ಇದು ಬರುತ್ತಿದೆ. ಒಬ್ಬ ಪುಟ್ಟ ಹುಡುಗ ನಮ್ಮ ಮನೆಯಲ್ಲಿ ಇದನ್ನು ಓದಿ ಎರಡು ಸಾವಿರ ಇಸವಿಯವರೆಗೆ ಆರೋಗ್ಯವೇ ಇಲ್ಲವೆ ಎಂದು

ಕೇಳಿಯೇ ಬಿಟ್ಟ. ಆದುದರಿಂದ ಈ ಕೆಲಸ ತೀವ್ರವಾಗಿ ಆಗಬೇಕೆಂದು ಮಾನ್ಯ ಸಚಿವರಿಗೆ ಹೇಳುತ್ತೇನೆ. ವ್ಯಕ್ತಿಯ, ಕುಟುಂಬದ ಸಮಾಜದ ಸ್ವಾಸ್ಥ್ಯದ, ದೇಹ,ಮನಸ್ಸಿನ ಸ್ವಾಸ್ಥ್ಯ ಇವುಗಳ ಬಗ್ಗೆ ದೀರ್ಘವಾಗಿ ಚಿಂತನೆಯಾಗಬೇಕು, ಇದು ತೀವ್ರ ವೇಗವಾಗಿ ಕಾರ್ಯನಿರ್ವಹಣೆಯಾಗಬೇಕು. ಎರಡು ಸಾವಿರ ಇಸವಿಯವರೆಗೆ ನಮಗೆ ಅಧಿಕಾರವಿದೆ ಎಂದು ಇದನ್ನು ತಡಮಾಡಬಾರದು ಎನ್ನುವಂಥದ್ದನ್ನು ಹೇಳಬಯಸುತ್ತೇನೆ. ಈ ರೋಗನಿಯಂತ್ರಣ ಚಿಕಿತ್ಸೆಗೆ ವೈದ್ಯಕೀಯ ಶಿಕ್ಷಣವಿದ್ದರೂ ಸಹ ಅದು ತೀವ್ರವಾಗಿ ಆಗಬೇಕು.

MADAM DEPUTY SPEAKER :- Please conclude. I have to call the next person . . . . ನೀವು ಈ ರೀತಿ ಮಾತನಾಡಿದರೆ ಬೇರೆಯವರಿಗೆ ಮಾತನಾಡಲು ಅವಕಾಶ ಸಿಗುವುದಿಲ್ಲ.

ಶ್ರೀ ಜಿ. ಎಸ್. ಆಚಾರ್:- ಮೆಡಿಕಲ್ ಕಾಲೇಜಿನ ವಿಚಾರವಾಗಿ ಇರತಕ್ಕ ಮೆಡಿಕಲ್ ಕಾಲೇಜುಗಳು ಒಳ್ಳೆಯ ರೀತಿಯಲ್ಲಿ ನಡೆಯಬೇಕು ಎಂದು ನಮ್ಮ ಅನೇಕ ಮಿತ್ರರು ಹೇಳಿದರು.

(ಅಧ್ಯಕ್ಷರ ಪೀಠವನ್ನು ಶ್ರೀಮತಿ ದಮಯಂತಿ ಬೋರೇಗೌಡರವರು ಅಲಂಕರಿಸಿದರು)

ಎರಡನೆಯದಾಗಿ ಇದನ್ನು ಜಾತಿಯ ಮತ್ತು ವೃತ್ತಿಯ ಆಧಾರದ ಮೇಲೆ ನೋಡುವುದು ಚೆನ್ನಾಗಿರುವುದಿಲ್ಲ. ನಾವು ಇಡೀ ವಿಶ್ವಕ್ಕೆ ಮೆಡಿಕಲ್ ಪದವೀಧರರನ್ನು ಕೊಡುತ್ತೇವೆಂದು sab standard ---- ಇರುವವರನ್ನು ತಯಾರು ಮಾಡಿ ಕೊಡುತ್ತೇವೆಂದು ಹರಕೆಯನ್ನು ಹೊತ್ತಿಲ್ಲ. ಇರತಕ್ಕದ್ದು ಒಳ್ಳೆಯ ರೀತಿಯಲ್ಲಿ ಆಗಬೇಕು. ನಾವು ಮಾಡುವುದನ್ನು ಜನ ನೋಡಿ ಉಗಿಯುವಂಥ ಪರಿಸ್ಥಿತಿ ಬರುತ್ತದೆ, ಅದು ಆಗಬಾರದು ಎಂದು ಹೇಳಬಯಸುತ್ತೇನೆ.

ಮಾರುಕಟ್ಟೆಯಲ್ಲಿ ಅನೇಕ ಕಳಪೆ ದರ್ಜೆಯ ಔಷಧಿಗಳು ತಯಾರಾಗುತ್ತಿವೆ. ಔಷಧಿಗಳಲ್ಲಿ ಕಲಬೆರಕೆಯ ಜಾಲವಿದೆ ಇದನ್ನು ತಡೆ ಗಟ್ಟಬೇಕು. ಇಲ್ಲದಿದ್ದರೆ ಜೀವವನ್ನು ರಕ್ಷಿಸತಕ್ಕ ಔಷಧಿಗಳು ಜೀವ ಭಕ್ಷಿಯಾಗುತ್ತವೆ. drug addiction ---- ಜಾಸ್ತಿಯಾಗುತ್ತಿದೆ. ರಾಷ್ಟ್ರದಲ್ಲಿನ ತರುಣರಲ್ಲಿ ಮಾದಕವಸ್ತುಗಳ ಸೇವನೆಯು ವಿಪರೀತವಾಗುತ್ತಿದೆ ಇದು ಸಾಮಾಜಿಕ ಒಂದು ದುರಂತ. ರಾಷ್ಟ್ರಕ್ಕೆ ಇದು ಒಂದು ಸವಾಲಾಗುವಂಥ ಪರಿಸ್ಥಿತಿಯಾಗಿದೆ. ಎಲ್ಲಾ ಕಡೆ, ಬ್ರೌನ್‌ಶುಗರ್, ಹಿರಾಯಿನ್ ಯುವಕ ಯುವತಿಯರು ತಿಂದು, ಮುಂದಿನ ಜನಾಂಗವೆಂದು ಯಾರು ಇದ್ದಾರೆ ಅವರು ಇದಕ್ಕೆ ಬಲಿ ಬೀಳಬಾರದು ಈ ವಿಷವರ್ತುಲವನ್ನು ಭೇದಿಸಬೇಕು. ಇದು ಗೃಹಖಾತೆಯ ಒಂದು ಕೆಲಸವಾಗಿರಬಹುದು ಆದರೆ ಇದರ ಚಿಕಿತ್ಸೆಗೆ ಬೇಕಾದಂಥ ವ್ಯವಸ್ಥೆ ನಮ್ಮಲ್ಲಿ ಆಗಬೇಕು. ಏಡ್ಸ್‌ನ್ನು ತಡೆಗಟ್ಟಲು 1992-93ನೇ ಸಾಲಿನಲ್ಲಿ 1 ಕೋಟಿ 77 ಲಕ್ಷ ಹಣವನ್ನು ಒದಗಿಸಿರುವುದನ್ನು ನಾನು ನೋಡಿದ್ದೇನೆ. ಆದರೆ ಅದರಲ್ಲಿ 1991-92ರಲ್ಲಿ ಭಾರತ ಸರ್ಕಾರದವರು ನೀಡಿದಂಥ 27 ಲಕ್ಷ ರೂಪಾಯಿ ರಕ್ತ ನಿಧಿ ಕೇಂದ್ರಗಳ Zonal Service Centre ಉಪಯೋಗಿಸಲಾಗುವುದೆಂದು ತಿಳಿಸಿದ್ದೀರಿ. ಅಷ್ಟು ಹಿಂದಿನ ಹಣ ಇನ್ನೂ ಉಪಯೋಗವಾಗಿಲ್ಲ. ಇದು ತಪ್ಪು. ಈ ರೋಗ ಬಹಳ ವ್ಯಾಪಕವಾಗಿ ಹರಡುತ್ತದೆ. ಇದರ ಬಗ್ಗೆ ಒಂದು ಗಹನವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಇನ್ನು ಶುಶ್ರೂಶ ಕಾರ್ಯಕ್ರಮ :- ನಮ್ಮ ಹಳ್ಳಿಗಳಲ್ಲಿ ಇದು ಬಹಳ ಉಪಯೋಗವಾಗಿದೆ. ಇದರ ಜೊತೆಗೆ ಒಂದು ಮೊಬೈಲ್ ಯೂನಿಟ್‌ನ್ನು ಒಂದೊಂದು ತಾಲ್ಲೂಕಿಗೆ ಮಂಜೂರು ಮಾಡಬೇಕು. ಏಕೆಂದರೆ ಬೇರೆ ಸಮಯದಲ್ಲಿ ಶುಶ್ರೂಷ ಕಾರ್ಯಕ್ರಮಕ್ಕೆ ಎಲ್ಲಾ ವೈದ್ಯಾಧಿಕಾರಿಗಳು ಹೋಗುತ್ತಾರೆ ಅದೇ ರೀತಿ ವಾರಕ್ಕೆ ಒಂದು ದಿನವಾದರೂ ಔಷಧಿಗಳೊಂದಿಗೆ ಮೊಬೈಲ್ ಯುನಿಟ್ ಹೋಗತಕ್ಕಂಥ ವ್ಯವಸ್ಥೆಯಾಗಬೇಕೆಂದು ಹೇಳಬಯಸುತ್ತೇನೆ.

ಇನ್ನು ಕಾರ್ಮಿಕ ಇಲಾಖೆಯನ್ನು ಕುರಿತು ಎರಡು ಮಾತನ್ನು ಹೇಳುತ್ತೇನೆ1991-92ರಲ್ಲಿ 20 ಸಾವಿರ ವಾದವಿವಾದಗಳು ಇತ್ಯರ್ಥವಾಗಿದೆ 12 ಸಾವಿರಕ್ಕೂ ಮೇಲ್ಪಟ್ಟು ಬಾಕಿ ಇದೆ ಎಂದಿದ್ದಾರೆ. ಮತ್ತು

ಕಾರ್ಮಿಕ ಪರಿಹಾರ ಕಾಯಿದೆಯ ಪ್ರಕಾರ ಈ ವರ್ಷದಲ್ಲಿ ಇನ್ನು 2,172 ಅರ್ಜಿಗಳು ಬಾಕಿ ಇದೆ ಮತ್ತು ಈ ವರ್ಷದಲ್ಲಿ 1528 ಅರ್ಜಿಗಳನ್ನು ಪರಿಹರಿಸಿ 3.94 ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ಪಾವತಿಯಾಗಿದೆ ಎಂದಿದ್ದಾರೆ. 1921ಕ್ಕೂ ಹಿಂದಿನ 2172 ಅರ್ಜಿಗಳನ್ನು ಪರಿಹರಿಸಿದ್ದರೆ ಮತ್ತೆ 5-6 ಕೋಟಿ ರೂಪಾಯಿಗಳು ಪರಿಹಾರವಾಗಿ ಸಿಗುತ್ತಿತ್ತು. ಇದನ್ನು ಏಕೆ ವಿಳಂಬ ಮಾಡುತ್ತಾರೆ ? ನಮ್ಮ ನ್ಯಾಯಾಂಗ ಸಚಿವರು ಇಲ್ಲಿ ಇಲ್ಲ. ಎಲ್ಲದಕ್ಕೂ ಲೋಕ ಅದಾಲತ್ ಕಲ್ಚರ್‌ನ್ನು ತರಲು ಆಗುವುದಿಲ್ಲವೋ ಎಂದು ಕೇಳಬಯಸುತ್ತೇನೆ ?

ಬಾಲಕಾರ್ಮಿಕರ ಬಗ್ಗೆ ನಮ್ಮ ಶಾಸಕರ ಭವನದಲ್ಲಿನ ಹೋಟೆಲ್‌ನಲ್ಲಿ ಬಾಲಕಾರ್ಮಿಕರನ್ನು ನೋಡುತ್ತೇವೆ. ಬಾಲ ಕಾರ್ಮಿಕರು ಅಲ್ಲಿದ್ದಾರೆ. ಇದನ್ನು ಯಾವಾಗ ತಡೆಗಟ್ಟುತ್ತೀರಿ ? ಸರ್ಕಾರದವರು ಕನಿಷ್ಟ ವೇತನವನ್ನು , ಕೂಲಿಯನ್ನು ನಿದಗಿ ಮಾಡಿದ್ದರೂ ಕೂಡ ಸರ್ಕಾರದ ಕಾರ್ಯಕ್ರಮಗಳಾದ ಎನ್ ಆರ್ ಇ ಪಿ ಯಾಗಲಿ ಆರ್ ಎಲ್ ಡಿ ಪಿ ಯಲ್ಲಾಗಲಿ ಅಂಗನವಾಡಿಯಲ್ಲಾಗಲಿ ಸರ್ಕಾರ ಪರಿಷ್ಕೃತ ದರಗಳಲ್ಲಿ ಕನಿಷ್ಟ ವೇತನ, ಕೂಲಿಯನ್ನು ತಂದಿದ್ಧಾರೆಯೆ ? ನಮ್ಮಲ್ಲಿ ವಿಶ್ವ ಯೋಜನೆ ಬಂದಿದೆ ಈ ವಿಶ್ವ ಯೋಜನೆಯಲ್ಲಿ ಯಾರು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮ್ಮ ಹೆಸರನ್ನು ನೊಂದಾಯಿಸಿರುತ್ತಾರೆ ಅವರನ್ನು ಅಳವಡಿಸಿಕೊಳ್ಳುವಂಥ ಒಂದು ಕೆಲಸವನ್ನು ಮಾಡಬೇಕು. ದಕ್ಷಿಣ ಕನ್ನಡದ ಅನೇಕ ಕಡೆ ಗೋಡಂಬಿಯ ಕಾರ್ಖಾನೆಗಳಿವೆ. ಇಲ್ಲಿ ಮಹಿಳಾ ಕಾರ್ಮಿಕರಿದ್ದಾರೆ ಇವರುಗಳೂ ಸಹ ಕ್ಯಾಜುಯಲ್ ಬೇಸ್ ಮೇಲೆ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಸರ್ಕಾರದ ಮಸ್ಟರ್ಡ್ ರೋಲ್‌ನಲ್ಲಿ ಅವರ ಹೆಸರು ನೊಂದಾವಣೆಯಾಗಿಲ್ಲ. ಇವೆಲ್ಲವುಗಳನ್ನು ಸ್ವಲ್ಪ ನೋಡಬೇಕು. ಮಂಗಳೂರಿನಲ್ಲಿ ಶಿಶುಕು ತರಬೇತಿ ವಿಧಿವತ್ತಾಗಿ ಅನುಷ್ಠಾನಗೊಳಿಸಲು ಒಂದು ವಿಭಾಗ ಕಛೇರಿ ಇದೆ. ಅದು ಏನೋ ಬದಲಾವಣೆ ಆಗುತ್ತದೆಂದು ಒಂದು ಕೂಗು ಇದೆ. ಇಡೀ ಡೀಸೆಲ್ ಜಾಸ್ತಿ ಉದ್ಯಮಿಗಳಿರುವುದು ಮಂಗಳೂರಿನಲ್ಲಿ, ಆದ್ದರಿಂದ ಅದನ್ನು ಬದಲಾವಣೆ ಮಾಡಬಾರದು, ಇಷ್ಟು ವಿಚಾರಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ವಂದನೆಗಳು.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ತಾವು ಈ ತರಹ ತಾರತಮ್ಯ ಮಾಡಬಾರದು. ನನ್ನ ಹೆಸರು ಹೇಳುತ್ತೀರೆಂದು ಬೆಳಿಗ್ಗಿಯಿಂದ ಕುಳಿತಿದ್ದೇನೆ. ನಾನು ಒಂದು ವಾರದಿಂದ ಮಾತನಾಡಿಲ್ಲ. ಗ್ರಾಮಾಂತರ ಪ್ರದೇಶದಿಂದ ಬಂದಂತಹ ನಾವು ಏನಾದರೂ ಪ್ರಮುಖವಾದ ವಿಷಯವನ್ನು ಮಾತವಾಡಬೇಕೆಂದು ಇರುತ್ತೇವೆ. ತಮ್ಮ ಮನಸ್ಸಿಗೆ ಬಂದ ಹಾಗೆ ಅವಕಾಶ ಕೊಡುವುದಾದರೆ ನಾನು ಇಲ್ಲಿ ಕಾಯುತ್ತಿರಲಿಲ್ಲ, ಇದು ಏನೆಂದು ನನಗೆ ಅರ್ಥವಾಗುತ್ತಿಲ್ಲ. ಈಗಲೂ ಹೇಳಿ ನನಗೆ ಅವಕಾಶ ಉಂಟೋ ಇಲ್ಲವೋ ? ಇಲ್ಲಿ ಕುಳಿತುಕೊಂಡು ಕುರ್ಚಿ, ಕಿಟಕಿ, ಬಾಗಿಲುಗಳಿಗೆ ಹೇಳಬೇಕಾಗುತ್ತದೆ. ತಾವು ಹೀಗೆ ಮಾಡುವುದರಿಂದ ನಮಗೆ ಮನಸ್ಸು ತೀರಾ ರೇಗಿ ಹೋಗಿದೆ. ಇಂತಹ ತಾರತಮ್ಯ ಮಾಡಬಾರದು.

+ ಡಾ. ಎನ್. ಬಿ. ನಂಜಪ್ಪ (ಶ್ರವಣಬೆಳಗೊಳ):- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಪ್ರಪ್ರಥಮವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡುತ್ತಿದ್ದೇನೆ. ನಾನು ಐದು ನಿಮಿಷದಲ್ಲಿ ಮಾತನಾಡುವುದಾದರೆ ಇದರ ಸಿಂಹಾವಲೋಕನವನ್ನು ಮಾಡಿ ಅದರಲ್ಲಿ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂಬ ಮಾತನ್ನು ಅಧ್ಯಕ್ಷಿಣಿಯವರಿಗೆ ತಿಳಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷಿಣಿಯವರೇ, ಕ್ರಿ. ಶ. ಎರಡು ಸಾವಿರ ವರ್ಷದ ಒಳಗೆ ಎಲ್ಲರಿಗೂ ಆರೋಗ್ಯವನ್ನು ಕೊಡತಕ್ಕಂತಹ ಭರವಸೆಯನ್ನು ಈಗಾಗಲೇ ಸರ್ಕಾರ ಜನತೆಗೆ ಕೊಟ್ಟಿದೆ. ಹಾಗೆ, ಕೊಟ್ಟಂತಹ ಸಂದರ್ಭದಲ್ಲಿ ಈಗಾಗಲೇ ಸಾಕಾದಷ್ಟು ವ್ಯವಸ್ಥೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿ ಆಗಿವೆ. ಈ ರೋಗಗಳು ಬಂದರೆ ಅದನ್ನು ನಿವಾರಣೆ ಮಾಡುವುದಕ್ಕೆ ಮತ್ತು ರೋಗಗಳು ಬರುವುದಕ್ಕಿಂತ ಮುಂಚೆ ತಡೆಗಟ್ಟುವುದಕ್ಕೆ preventive aspect of the subject and curative aspect . . . . ಈ ಎರಡರ ಒಂದು ವ್ಯವಸ್ಥೆಯಲ್ಲಿ ಈಗಾಗಲೇ ನನ್ನ ಮಿತ್ರರು ಈ ವ್ಯವಸ್ಥೆ ಬಗ್ಗೆ ಮಾತನಾಡಿದ್ದಾರೆ. ನಾನು ಅದರ

ಗೋಜಿಗೆ ಹೋಗುವುದಿಲ್ಲ. ಈಗ ಮೇಲೆ ಕಾಣತಕ್ಕಂತಹ ಒಂದು ವ್ಯವಸ್ಥೆಯಲ್ಲಿ ಡಿಸ್ಟ್ರಿಕ್ಟ್ ಮಟ್ಟದಿಂದ ತೆಗೆದುಕೊಂಡರೆ ಡಿಸ್ಟ್ರಿಕ್ಟ್ ಆಸ್ಪತ್ರೆ ಇದೆ. ತಾಲ್ಲೂಕು ಆಸ್ಪತ್ರೆ ಇದೆ, ಅಲ್ಲಿಂದ ಪಿ.ಹೆಚ್.ಸಿ.ಸಿ.. ಇದೆ, ಪಿ.ಹೆಚ್.ಯು.ಸಿ. ಇದೆ, ಸಬ್ ಸೆಂಟರ್ಸ್ ಇದೆ, ಹೀಗೆ ಅನೇಕ ವ್ಯವಸ್ಥೆಗಳಾಗಿವೆ. ಇದನ್ನು ನಾವು ನೋಡಿದಾಗ ಈ ವ್ಯವಸ್ಥೆ ಇದ್ದರೂ ಕೂಡ ಅಲ್ಲಿ ಇರತಕ್ಕಂತಹ ಜನಗಳಿಗೆ ಆರೋಗ್ಯದ ಬಗ್ಗೆ ಏನು ಪ್ರಾಬ್ಲಮ್ ಇದೆ ಅದರ ಬಗ್ಗೆ ಸಮರ್ಪಕವಾಗಿ ಯಾವುದೂ ಕೂಡ ನಡೆಯುತ್ತಿಲ್ಲ ಎನ್ನುವ ಮಾತನ್ನು ನಾವು ಹೇಳಬೇಕಾಗುತ್ತದೆ. ಏಕೆಂದರೆ ಅದಕ್ಕೆ ಖರ್ಚುಮಾಡತಕ್ಕಂಥ ಹಣ ಅದಕ್ಕೆ ಇರತಕ್ಕಂತಹ ವ್ಯವಸ್ಥೆಯಲ್ಲಿ ನನ್ನ ಮಿತ್ರರು ಹೇಳಿದ ಹಾಗೆ ಒಂದು ವರ್ಷಕ್ಕೆ ಒಬ್ಬ ಪೇಷಂಟ್‌ಗೆ ಒಂದು ರೂಪಾಯಿ ಸಿಗುತ್ತಿಲ್ಲ ಎನ್ನುವ ಮಾತನ್ನು ನನ್ನ ಮಿತ್ರರು ಹೇಳಿದರು. ಈ ವ್ಯವಸ್ಥೆ ಇರತಕ್ಕಂತಹ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಹಳ್ಳಿಗಳಲ್ಲಿ ಇರತಕ್ಕಂತಹ ಕಾಮನ್ ಡೀಸೀಸಸ್ ತಡೆಗಟ್ಟುವುದಕ್ಕೆ ನಾವು ಏನು ಕ್ರಮವನ್ನು ಮಾಡಿದ್ದೇವೆ ಎನ್ನುವುದರ ಬಗ್ಗೆ ಯೋಚನೆ ಮಾಡಿದರೆ ಬಹಳ ಮುಖ್ಯವಾದ ಈ ಗ್ಯಾಸ್ಟ್ರೋ ಎಂಟರ್‌ಟೀಸ್ ಡೀಸೆಂಟ್ರಿ, ಮಲೇರೀಯಾ, ಫ್ಲೂ, ಟ್ಯುಬರ್‌ಕಿಲೋಸಿಸ್, ಬ್ಲಡ್ ಪ್ರೆಶರ್, ಡಯಾಬಿಟೀಸ್, ಆಂಕಿಲೋಟೋಮಿಯಾಗಿಲ್, ಕ್ಯಾನ್ಸರ್, ಇನ್ನು ಮುಂತಾದ ರೋಗಗಳು ಇರುವುದನ್ನು ನಾವು ನೋಡಿದ್ದೇವೆ. ತಾಲ್ಲೂಕು ಆಸ್ಪತ್ರೆಯಿಂದ ಹಿಡಿದು ಹಳ್ಳಿ ಆಸ್ಪತ್ರೆಯವರೆಗೆ ತೆಗೆದುಕೊಂಡರೂ ಕೂಡ ಅದು ಕಟ್ಟಡದಿಂದ ಹಿಡಿದು, ಔಷಧಿಯಿಂದ ಹಿಡಿದು ಯಾವುದೇ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂಬುದನ್ನು ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ಆದರೂ ಕೂಡ ನಮ್ಮ ದೇಶದಲ್ಲಿ ಏನೂ ಆಗಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ1947 ರಲ್ಲಿ ನಮ್ಮ ದೇಶದಲ್ಲಿ ಅನೇಕ ಸಾಂಕ್ರಾಮಿಕ ರೋಗಗಳು ನಮ್ಮನ್ನು ಕಾಡುತ್ತಿದ್ದುವು. ಆ ಎಲ್ಲ ಸಾಂಕ್ರಾಮಿಕ ರೋಗಗಳನ್ನೂ ತಡೆಗಟ್ಟುವ ಕೆಲಸ ಇವತ್ತು ಆಗಿದೆ. ಈಗ ಅನೇಕ ಸಂಕ್ರಾಮಿಕ ರೋಗಗಳು ನಮ್ಮ ದೇಶವನ್ನು ಬಿಟ್ಟು ಹೋಗಿವೆ. ಉದಾಹರಣೆಗೆ ಹೇಳುವುದಾದರೆ, ಸ್ಮಾಲ್‌ಫಾಕ್ಸ್, ಕಾಲರಾ, ಪ್ಲೇಗು, ಸಿಡುಬು ಇನ್ನೂ ಮುತಾದುವು. ಹಾಗೆಯೇ ನೋಡಿದಾಗ, ಈ ವೈದ್ಯಕೀಯ ದಿಸೆಯಲ್ಲಿ ಸಾಕಷ್ಟು ಕೆಲಸಕಾರ್ಯಗಳಾಗಿವೆ. ಆದುದರಿಂದಲೇ ಹಿಂದೆ ಅವರೇಜ್ ಏಜ್ 26 ವರ್ಷ ಇದ್ದುದು ಇವತ್ತು 62 ವರ್ಷಕ್ಕೆ ತಲುಪುವುದಕ್ಕೆ ಸಾಧ್ಯವಾಗಿದೆ, ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ನಮಗಿರತಕ್ಕ ಬೃಹತ್ ಸಮಸ್ಯೆಗಳನ್ನು ಎದುರಿಸುವುದಕ್ಕೆ ಸಾಕಷ್ಟು ಹಣದ ಅವಶ್ಯಕತೆ ಇದೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಈ ಬಜೆಟ್ ಅಲಾಟ್‌ಮೆಂಟ್‌ನ್ನು ನೋಡಿದರೆ ವೈದ್ಯಕೀಯ ಕ್ಷೇತ್ರಕ್ಕೆ ಸಿಕ್ಕತಕ್ಕದ್ದು ಎಂದರೆ 3.17 ಪರ್ಸೆಂಟ್ ಮಾತ್ರ. ಅಂದಾಗ ಈ ರೀತಿಯ ಬೃಹತ್ ಸಮಸ್ಯೆಯನ್ನು ಎದುರಿಸುವುದಕ್ಕೆ ಈ ಹಣ ಏನೇನೂ ಸಾಲದು. ಆದುದರಿಂದಲೇ ಇದಕ್ಕೆ ಈ ಸ್ಥಿತಿ ಬಂದಿದೆ ಎಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕು. ಏನಾದರೂ ಮಾಡಿ ಇದಕ್ಕೆ ಹೆಚ್ಚಿನ ಹಣವನ್ನೊದಗಿಸಬೇಕು. ಏಕೆಂದರೆ, the Health is a very important sujbect. It is not an ordianry subject. ಆರೋಗ್ಯ ಎಂಬುದು ಬಹಳ ಮುಖ್ಯವಾದುದು. ನಮಗೆ ಆಹಾರ ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಆರೋಗ್ಯ ಕೂಡ. ಇದನ್ನು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಸಾಮಾನ್ಯವಾಗಿ ಯಾರಿಗೂ ಕೂಡ ಜ್ವರವೂ ಬರದಂತೆ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಏಕೆಂದರೆ, ಒಬ್ಬನಿಗೆ ಏನಾದರೂ ಜ್ವರ ಬಂದರೆ ಅದು ಇಡೀ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆಯೇ ದುಷ್ಪರಿಣಾಮವನ್ನು ಬೀರುತ್ತದೆಂಬುದನ್ನು ಅವರು ತಿಳಿದು ಕೊಂಡಿದ್ದಾರೆ. ಏಕೆಂದರೆ ಜ್ವರ ಬಂದಂಥ ಮನುಷ್ಯ ಫ್ಯಾಕ್ಟರಿಯೊಳಗೆ ಪ್ರವೇಶ ಮಾಡಿದರೆ ಅಲ್ಲಿ ಇಪ್ಪತ್ತು ಜನರಿಗೆ ಈ ಕಾಯಿಲೆ ಅಂಟಿಕೊಳ್ಳುತ್ತದೆ. ಇದರಿಂದ ಒಟ್ಟಾರೆ ಫ್ಯಾಕ್ಟರಿಯ ಪ್ರೊಡಕ್ಷನ್ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ, ಪ್ರೊಡಕ್ಷನ್ ಕಡಿಮೆಯಾಗುತ್ತದೆ ಎನ್ನತಕ್ಕ ಲೆಕ್ಕಾಚಾರವನ್ನು ಹಾಕತಕ್ಕ ಸಂದರ್ಭದಲ್ಲಿ ಇಂಥ ಅನೇಕ ಖಾಯಿಲೆಗಳಿಂದ ನರಳುತ್ತಿರುವ ಜನಸಾಮಾನ್ಯರ ಮಾನವ ಶಕ್ತಿ ಏನಿದೆ ಅದೆಲ್ಲಾ ಹಾಳಾಗುತ್ತದೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಆದುದರಿಂದ ಈಗಿರತಕ್ಕ ಆಸ್ಪತ್ರೆಯ ವ್ಯವಸ್ಥೆ, ಡ್ರಗ್ ಸಪ್ಲೈ, ಲಿನನ್ ಆಗಲೀ ಸ್ಟಾಫ್ ಪ್ಯಾಟ್ರನ್ ಆಗಲೀ, ಬಹಳಷ್ಟು

ಡಿಫೆಕ್ಟ್ಸ್ ಇರುವುದರಿಂದ ಇದನ್ನು ಪ್ರತ್ಯೇಕವಾಗಿ ಇಡಬೇಕು. ಈಗ ಹೆಲ್ತ್ ಯೂನಿವರ್ಸಿಟಿಯನ್ನು ಏನು ಮಾಡಬೇಕೆಂದಿದ್ದಾರೆ ಇದರಲ್ಲಿ ಒಂದು ದೊಡ್ಡ ಕನ್‌ಫ್ಯೂಷನ್ ಇದೆ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ, ಏನು ಕ್ಯುರೆಟಿವ್ ಆಸ್ಪೆಕ್ಟ್ ಮತ್ತು ಪ್ರಿವೆಂಟಿವ್ ಆಸ್ಪೆಕ್ಟ್ ಇದೆ ಇದನ್ನು ಸಂಪೂರ್ಣವಾಗಿ ಬೈಫರ್ಕೇಟ್ ಮಾಡಬೇಕು. There is a very bigh confusion. For preventive aspect, there should be a separate staff. It should not be clubbed. Totally it must be bifurcated. ಇದಕ್ಕೆ ಬೇರೆ ಸ್ಟ್ಯಾಫ್ ಇರಬೇಕಾಗುತ್ತದೆ. ಬರತಕ್ಕ ರೋಗಿಗಳನ್ನು ನೋಡಿ ಕ್ಯೂರ್ ಮಾಡತಕ್ಕದ್ದು ಅವರನ್ನು ಅಡ್ಮಿಟ್ ಮಾಡಿಕೊಳ್ಳತಕ್ಕದ್ದು ಅವರಿಗೆ ಅಡ್ವೈಸ್ ಮಾಡತಕ್ಕದ್ದು ಹೀಗೆ ಮೊದಲು ಏನು ವ್ಯವಸ್ಥೆ ಇತ್ತು ಆ ರೀತಿ ಮಾಡಿ. ಇದೇ ರೀತಿ ಪ್ರಿವೆಂಟಿವ್ ಆಸ್ಪೆಕ್ಟ್‌ಗೆ ಪ್ರತ್ಯೇಕವಾದ ಸ್ಟ್ಯಾಫ್‌ನ್ನು ಇರತಕ್ಕ ಇನ್‌ಸ್ಟಿಟ್ಯೂಷನ್‌ನಲ್ಲೇ ಮಾಡಿದರೆ ಒಂದು ಕಡೆ ಪ್ರಿವೆಂಟಿವ್ ಆಸ್ಪೆಕ್ಟ್‌ನ್ನೂ ಚನ್ನಾಗಿ ಅಟೆಂಡ್ ಮಾಡುವುದಕ್ಕೆ ಇನ್ನೊಂದುಕಡೆ ಕ್ಯೂರೆಟಿವ್ ಅಸ್ಪೆಕ್ಟ್‌ನ್ನೂ ಅಟೆಂಡ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈ ಕನ್‌ಫ್ಯೂಷನ್ ಕಂಟಿನ್ಯೂ ಆಗುತ್ತದೆಂದು ಹೇಳಬಯಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ಫ್ಯಾಮಿಲಿ ಪ್ಲಾನಿಂಗ್ ಆಪರೇಷನ್ಸ್ ಇದೆ. ಯಾವ ವೈದ್ಯ ಈ ಆಸ್ಪತ್ರೆಯಲ್ಲಿ ಔಟ್ ಪೇಷಂಟ್, ಇನ್‌ಪೇಷಂಟ್‌ಗಳನ್ನೂ ನೋಡಿಕೊಳ್ಳಬೇಕೋ ಅದೇ ವೈದ್ಯ ಫ್ಯಾಮಿಲಿ ಪ್ಲಾನಿಂಗ್ ಕ್ಯಾಂಪ್‌ಗಳಿಗೂ ಕೂಡ ವಾರದಲ್ಲಿ 2-3 ದಿನ ಹೋಗಬೇಕಾಗುತ್ತದೆ. ಅಂದರೆ ಸ್ವಲ್ಪ ಹೆಚ್ಚೂಕಡಿಮೆ ಆ ಆಸ್ಪತ್ರೆಯ ಬಾಗಿಲನ್ನು ಹಾಕಿದಂತೆಯೇ ಆಗುತ್ತದೆ. ಆಗ ಕ್ಯೂರೋಟೀವ್ ಆಸ್ಪೆಕ್ಟನ್ನೂ he cannot attend to it. ಆಮೇಲೆ there are so many Atatistical problems immunistation work ಎಲ್ಲಾ ಇರುತ್ತದೆ, ಅದೆಲ್ಲ ಇರುವುದರಿಂದ ಏನಾಗುತ್ತದೆಂದರೆ ಯಾವುದನ್ನು ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಕೂಡ ಸಮರ್ಪಕವಾಗಿ ಅಟೆಂಡ್ ಮಾಡುವುದಕ್ಕಾಗುವುದಿಲ್ಲ. ಅದನ್ನೂ ಕೂಡ ಸಮರ್ಪಕವಾಗಿ ಅಟೆಂಟ್ ಮಾಡುವುದಕ್ಕೆ ಆಗದಿರುವುದರಿಂದ ಈ ಕನ್‌ಫ್ಯೂಶನ್ ಏನಿದೆ ಇದನ್ನು ತಪ್ಪಿಸಿದರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ, infrastructure is there. Buildings are there only the bifurcation of the works is to be done. ಆ ಒಂದು ವರ್ಕ್‌ನ್ನು ಬೈಫರ್ಕೇಟ್ ಮಾಡಿ ಅದನ್ನು ಕ್ಲೀಯರ್‌ಕಟ್ ಆಗಿ ಯಾರು ಪ್ರಿವೆಂಟೀವ್ ಆಸ್ಪೆಕ್ಟ್ ನೋಡಿಕೊಳ್ಳಬೇಕು. ಯಾರು ಕ್ಯೂರೇಟೀವ್ ಆಸ್ಪೆಕ್ಟ್‌ನ್ನು ನೋಡಿಕೊಳ್ಳಬೇಕೆಂದು ಹೇಳಿ ಸ್ಟಾಫ್ ಪ್ಯಾಟರ್ನ್‌ನ್ನು ಸರಿಮಾಡಿದರೆ ಅದು ಚೆನ್ನಾಗಿ ನಡೆಯುವುದಕ್ಕೆ ಅನುಕೂಲವಾಗುತ್ತದೆ, ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಳ ಮುಖ್ಯವಾಗಿ ಪಾಪ್ಯುಲೇಷನ್ ಎಕ್ಸ್‌ಪ್ಲೋಷನ್ ಏನಿದೆ it is very dangerous.

ಒಂದು ಆಟಮ್‌ಬಾಂಬ್‌ಗಿಂತ, ಒಂದು ಹೈಡ್ರೋಜನ್ ಬಾಂಬಿಗಿಂತಲೂ ಡೇಂಜರ್ ಎಂದು ತಿಳಿದುಕೊಂಡರೆ ಬಹಳ ಒಳ್ಳೆಯದೆಂದು ನನಗಾದರೂ ಅನಿಸುತ್ತದೆ. ಈಗ ನಮ್ಮ ಜನಸಂಖ್ಯೆ ಆಸ್ಫೋಟನೆ ಏನಿದೆ ಅದನ್ನು ನಾವು ತಪ್ಪಿಸುವುದಕ್ಕೆ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ಹೋದರೆ ಇದರಿಂದ ಏನು ಪ್ರಯೋಜನವಾಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಲ್ಲರೂ ಕೂಡ ಇಂಡಿಯಾ ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ಪ್ರಜೆಯೂ ಕೂಡ ಈ ದೇಶಕ್ಕೆ ಸೇರಿದವನ್ನು ಫ್ಯಾಮಿಲಿ ಪ್ಲಾನಿಂಗಿಗೆ there is no caste, creed or religion ಎನ್ನತಕ್ಕಂಥ ತೀರ್ಮಾನವನ್ನು ಈ ಸರ್ಕಾರ ತೆಗೆದುಕೊಳ್ಳದೇಹೋದರೆ ಈ ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ನಾವು ಸಕ್ಸಸ್ ಆಗುವುದಕ್ಕೆ ಸಾಧ್ಯವೇ ಇಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಒಂದು ದೇಶದ ಪಾಪ್ಯುಲೇಷನ್ ಗ್ರೋತ್ ಕಂಟ್ರೋಲ್ ಮಾಡಬೇಕೆನ್ನುವುದಾದರೆ ರಿಲಿಜಿಯಸ್ ಆಸ್‌ಪೆಕ್ಟನ್ನು ಅದಕ್ಕೆ ಅಳವಡಿಸಿಕೊಳ್ಳಬೇಕಾಗುತ್ತದೆ. ನಾನು ಖುರಾನ್‌ನ್ನು ಓದಿದ್ದೇನೆ. ಖುರಾನ್‌ನಲ್ಲಿ ಯಾರೂ ಕೂಡ ಫ್ಯಾಮಿಲಿ ಪ್ಲಾನಿಂಗ್ ಮಾಡಿಸಿಕೊಳ್ಳಬಾರದೆಂದು

ಎಲ್ಲಿಯೂ ಹೇಳಿಲ್ಲ. ಗರ್ಭಪಾತ ಮಾಡಲಿಕ್ಕೆ ಮಾತ್ರ ರಿಸ್ಟ್ರಿಕ್ಷನ್ ಇದೆಯೇ ಹೊರತು ಖುರಾನ್‌ನಲ್ಲಿ ಎಲ್ಲಿಯೂ ಇಲ್ಲ. ಬೈಬಲನ್ನು ಓದಿದ್ದೇನೆ, ಬೈಬಲ್‌ನಲ್ಲಿ ಕೂಡ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಹೇಳಿಲ್ಲ. ನಮ್ಮ ಭಗವದ್ಗೀತೆಯನ್ನು ಕಂಪೇರ್ ಮಾಡಿದರೆ ಅಲ್ಲೂ ಕೂಡ ಹೇಳಿಲ್ಲ. ಆದ್ದರಿಂದ ಇದೆಲ್ಲಾ ಪೂಜಾರಿಗಳು ಮಾಡಿರುವ ಒಂದು ವ್ಯವಸ್ಥೆ. ಈ ಪೂಜಾರಿಗಳಿಗೆ ಬುದ್ಧಿ ಹೇಳಿ ಈ ದೇಶಕ್ಕೆ ಒಳ್ಳೆಯದಾಗಬೇಕೆನ್ನುವುದಾದರೆ ನಾವು ಇದನ್ನೆಲ್ಲ ಮರೆತು ನಾವು ಒಂದು ಯೂನಿಫಾರಮ್ ಪಾಲಿಸಿಯನ್ನು ತರಬೇಕೆನ್ನುವ ಮಾತನ್ನು ಟಾಪ್‌ಲೆವೆಲ್‌ಗೆ ಮುಟ್ಟಿಸಿ, ಪಾರ್ಲಿಮೆಂಟ್‌ಗೆ ಮುಟ್ಟಿಸಿ ಒಂದು ಅಮೆಂಡ್‌ಮೆಂಟನ್ನು ತಂದರೂ ಕೂಡ ಬಹಳ ಒಳ್ಳೆಯದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಈ ಪಾಪ್ಯುಲೇಷನ್ ಎಕ್ಸ್‌ಪ್ಲೋಷನ್ ಎಲ್ಲಿಯವರೆಗೆ ಆಗುತ್ತಿದೆ ಎನ್ನುವುದನ್ನು ಹೇಳುವುದಾದರೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಸ್ಟಾಟಿಸ್ಟಿಕ್ಸ್ ಕೊಡುವುದಾದರೆ ಅರಬಿಯನ್ ಸಮುದ್ರಕ್ಕೆ ಒಂದು ಕ್ಯೂ ನಿಲ್ಲಿಸಿ, ಕುರಿಗಳನ್ನು ನಾವು ನೀರಿಗೆ ಹಾಕುವುದಕ್ಕೆ ಯಾವ ರೀತಿ ನಿಲ್ಲಿಸುತ್ತೇವ ಆ ರೀತಿ ಬೆ ಆಫ್ ಬೆಂಗಾಲ್‌ಗೆ ಒಂದು ಕ್ಯೂ ಅನ್ನು ನಿಲ್ಲಿಸಿ ನಾವು ಜನರನ್ನು ಆಕಡೆಯಿಂದ ಈ ಕಡೆಯಿಂದ ಇಬ್ಬರನ್ನು ಬಿಟ್ಟು ತಳ್ಳುತ್ತಾಹೋದರೆ ಎರಡು ಸಮುದ್ರಕ್ಕೆ ಕ್ಯೂಮಾತ್ರconstant ಆಗಿ ಹಾಗೆಯೇ ಇಂಡಿಯಾದೇಶದಲ್ಲಿ ಉಳಿಯುತ್ತದೆ ಎನ್ನುವುದನ್ನು ನಾವು ಯಾರೂ ಕೂಡ ಮರೆಯುವಂತಿಲ್ಲ. ಅಂದಮೇಲೆ ನಾವು ಒಂದು ದಿವಸಕ್ಕೆ ಒಂದು ವರ್ಷಕ್ಕೆ ಒಂದು ಆಸ್ಟ್ರೇಲಿಯಾ ಪಾಪ್ಯೂಲೇಷನ್ ಪ್ರೊಡ್ಯೂಸ್ ಮಾಡುತ್ತೇವೆ. ಇದನ್ನೆಲ್ಲಾ ಹೇಳುವುದಕ್ಕಿಂತ ಇಂಥ ಒಂದು ಬೃಹತ್ ಸಮಸ್ಯೆ ಇರುವುದರಿಂದ ಈ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆ ಬಹಳಷ್ಟು ಚಿಂತನೆಯನ್ನು ಈ ಹೆಲ್ತ್ ಡಿಪಾರ್ಟ್‌ಮೆಂಟ್ ಮಾಡಬೇಕೆಂದು ನಮ್ಮ ಮಾನ್ಯ ಮಂತ್ರಿಗಳಿಗೆ ತಿಳಿಸಬಯಸುತ್ತೇನೆ.

ಇನ್ನು ಮೆಡಿಕಲ್ ಕಾಲೇಜ್ ವೈದ್ಯಕೀಯ ಸಂಸ್ಥೆಗಳು ಸಾಕಷ್ಟು ನಮ್ಮ ಕರ್ನಾಟಕರಾಜ್ಯದಲ್ಲಿ ಭಾರತದ ಎಲ್ಲಾ ರಾಜ್ಯಗಳಿಗಿಂತಲೂ ಹೆಚ್ಚಾಗಿದೆ ಎಂದು ಕಾಣುತ್ತದೆ. ನಾನು ಕಲ್ಕತ್ತಾದಲ್ಲಿ ಓದುತ್ತಿರತಕ್ಕಂಥ ಸಂದರ್ಭದಲ್ಲಿ ಒಂದೇ ಒಂದು ಪ್ರೈವೇಟ್ ಮೆಡಿಕಲ್ ಕಾಲೇಜು ಇತ್ತು. ನಾಲ್ಕು ಮೆಡಿಕಲ್ ಕಾಲೇಜುಗಳು ಇಡೀ ಸ್ಟೇಟ್‌ನಲ್ಲಿದೆ ಎಂದು ಹೇಳುತ್ತಿದ್ದರು. ಆದರೆ ಇವತ್ತು ಕರ್ನಾಟಕ ರಾಜ್ಯದ ನಾನಾ ಮೂಲೆಗಳಲ್ಲಿ ಮೆಡಿಕಲ್ ಕಾಲೇಜುಗಳು ಇವೆ. ಇನ್ನು ಎಷ್ಟೋ ಅಪ್ಲಿಕೇಷನ್‌ಗಳು ಪೆಂಡಿಂಗ್ ಇದೆಯೊ ಏನೋ ನನಗಂತೂ ಗೊತ್ತಿಲ್ಲ. ಆದರೆ ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುವುದೆಂದರೆ ನೀವು ಮೆಡಿಕಲ್ ಕಾಲೇಜುಗಳನ್ನು ಕರ್ನಾಟಕ ರಾಜ್ಯದಲ್ಲಿ ಮಾಡುವುದಾದರೆ ಪ್ರತಿ ಡಿಸ್ಟ್ರಿಕ್ಟ್‌ನ ಆಸ್ಪತ್ರೆಗೆ ಒಂದು ಮೆಡಿಕಲ್ ಕಾಲೇಜನ್ನು ಅಟ್ಯಾಚ್‌ಮಾಡಿ, ಡಿಸ್ಟ್ರಿಕ್ಟ್ ಆಸ್ಪತ್ರೆಯಲ್ಲಿ 1000 ಬೆಡ್ ಹಾಸ್ಪಿಟಲ್ ಮೊದಲೇ ಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಟೀಚಿಂಗ್ ಇನ್‌ಸ್ಟಿಟ್ಯೂಷನ್ ಬಂದರೆ ಡಿಸ್ಟ್ರಿಕ್ಟ್‌ನಲ್ಲಿರತಕ್ಕಂಥ ಪ್ರತಿಯೊಬ್ಬರಿಗೂ ಒಳ್ಳೆಯ ವೈದ್ಯಕೀಯ ಸೌಕರ್ಯ ಸಿಕ್ಕುವುದಕ್ಕೆ ಬಹಳ ನಾಂದಿ ಯಾಗುತ್ತದೆ. ಅಲ್ಲಿ ಏನು ಸ್ಟೂಡೆಂಟ್ ಪಾಪ್ಯುಲೇಷನ್ ಇರುತ್ತದೆ ಅವರು ಪೇಶಂಟ್ಸ್‌ನ್ನು ನೋಡಿ ಕೊಳ್ಳುವುದಕ್ಕೂ, ಹೌಸ್ ಸರ್ಜನ್ಸ್ ಪೇಶಂಟ್ಸ್‌ನ್ನು ನೋಡಿಕೊಳ್ಳುವುದಕ್ಕೂ ಅನುಕೂಲವಾಗುತ್ತದೆ. ಆಮೇಲೆ ಎಲ್ಲಾ ರೀತಿ ಸೌಕರ್ಯಗಳನ್ನು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಪಡೆಯುವುದಕ್ಕೂ ಸಾಧ್ಯವಾಗುತ್ತದೆ. In all the 19 districts you start a medical college, stage by stage if you cannot start all of a sudden. ಈಗ ಕೆಲವು ಡಿಸ್ಟ್ರಿಕ್ಟ್‌ನಲ್ಲಿ ಮೆಡಿಕಲ್ ಕಾಲೇಜುಗಳು ಇದೆ. ಯಾವ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸನಲ್ಲಿ ಇಲ್ಲವೋ ಆ ಆಸ್ಪತ್ರೆಯನ್ನು ಅಟಾಚ್ ಮಾಡಿ ಈ ರೀತಿ ಒಂದು ಡೆವಲಪ್‌ಮೆಂಟ್ ಮಾಡಿದ್ದೇ ಆದರೆ 20-25 ವರ್ಷಗಳಲ್ಲಿ ನಾವು ಏನೊಂದು ಮೆಡಿಕಲ್ ಫೆಸಿಲಿಟೀಸ್ ಪ್ರತಿಯೊಬ್ಬ ಹಳ್ಳಿಗರಿಗೂ ಕೊಡುವುದಕ್ಕೆ ಅನುಕೂಲವಾಗುತ್ತದೆ. ಏತಕ್ಕೆಂದರೆ, ಆ ರೀತಿ ಮಾಡುವುದರಿಂದ ಮೆಡಿಕಲ್ ಕಾಲೇಜುಗಳಲ್ಲಿ ಮಶ್ರೂಂ ಗ್ರೋತ್ ಏನಿದೆಯೋ ಅದು ತಪ್ಪುತ್ತದೆ. ಮತ್ತು ಒಳ್ಳೆಯ ಮೆಡಿಕಲ್ ಫೆಸಿಲಿಟೀಸ್ ಅನ್ನು ಜನರಿಗೆ ಕೊಡತಕ್ಕ ವ್ಯವಸ್ಥೆ

ಅದರಲ್ಲಿ ಆಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕ್ಯಾಪಿಟೇಷನ್ ಫೀ ಬಗ್ಗೆ ಆಗಲೇ ನಾನು ನನ್ನ ನಿರ್ದಿಷ್ಟವಾದ ಅಭಿಪ್ರಾಯವನು ಹೇಳಿದ್ದೇನೆ. ಎಲ್ಲಿಯವರೆಗೆ ಖಾಸಗೀಯವರಿಗೆ ಮೆಡಿಕಲ್ ಕಾಲೇಜುಗಳನ್ನು ಕೊಡುತ್ತೀರೋ ಅಲ್ಲಿವರೆಗೆ ಕ್ಯಾಪಿಟೇಷನ್ ಫೀ ಅನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನನ್ನ ನಂಬಿಕೆ. ಏಕೆಂದರೆ ಆ ಮೆಡಿಕಲ್ ಕಾಲೇಜುಗಳನ್ನು ಹಣ ಇಲ್ಲದೆ ನಡೆಸುವುದಕ್ಕೆ ಸಾಧ್ಯವಿಲ್ಲ. ಒಂದು ವೇಳೆ ಕ್ಯಾಪಿಟೇಷನ್ ಫೀ ರದ್ದು ಮಾಡುವುದಾದರೆ ಸರ್ಕಾರವೇ ಆ ಕಾಲೇಜುಗಳನ್ನ ವಹಿಸಿಕೊಂಡು ನಡೆಸುವುದಕ್ಕೆ ಮುಂದೆ ಬರಬೇಕಾಗುತ್ತದೆ. ಆದುದರಿಂದ ಕ್ಯಾಪಿಟೇಷನ್ ಫೀ ತಪ್ಪಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. ಇನ್ನು ಹೆಲ್ತ್ ಅಂಡ್ ಎಜುಕೇಷನ್ ಏನಿದೆ ಇದನ್ನು ಸಾಕಷ್ಟು ಲಿಬರೈಸ್ ಮಾಡಿದರೆ ಆಗ ಸರ್ಕಾರದ ಹೊಣೆ ಕಡಿಮೆಯಾಗಿ ಬೇರೆ ಡೆವಲಪ್‌ಮೆಂಟಲ್ ಪ್ರೋಗ್ರಾಂಗಳಿಗೆ, ಹಳ್ಳಿಗಳ ಉದ್ಧಾರಕ್ಕೆ ಆ ಹಣವನ್ನು ಉಪಯೋಗಿಸುತಕ್ಕ ಶಕ್ತಿ ಸರ್ಕಾರಕ್ಕೆ ಬರುತ್ತದೆ. ಆದುದರಿಂದ ಎಲ್ಲರೂ ಕೂಡ ಸೇರಿ ಬಹಳ ದೀರ್ಘವಾಗಿ ಇದರ ಬಗ್ಗೆ ಯೋಚನೆ ಮಾಡಿ ಹೆಲ್ತ್ ಅಂಡ್ ಎಜುಕೇಷನ್ ಎಷ್ಟರಮಟ್ಟಿಗೆ ಲಿಬರಲೈಸ್ ಮಾಡುವುದಕ್ಕೆ ಸಾಧ್ಯವೋ ಅಷ್ಟು ಮಾಡಬೇಕು. ಎಷ್ಟರ ಮಟ್ಟಿಗೆ ಇಂಡಸ್ಟ್ರೀಸ್ ಅನ್ನು ಪ್ರೈವೇಟೈಸೇಷನ್ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೀರೋ ಆ ರೀತಿ ಹೆಲ್ತ್ ಅಂಡ್ ಎಜುಕೇಷನ್ ಅನ್ನು ಲಿಬರಲೈಸ್ ಮಾಡಿ ಯಾರು ಇಂಟರೆಸ್ಟೆಡ್ ಪೀಪಲ್ ಇದ್ದಾರೋ ಅವರು ಅದನ್ನು ಚನ್ನಾಗಿ ನಡೆಸಿಕೊಂಡು ಹೋಗತಕ್ಕ ವ್ಯವಸ್ಥೆ ಮಾಡಿದರೆ ಒಳ್ಳೆಯದೆಂದು ಹೇಳುವುದಕ್ಕೆ ಇಷ್ಟಪಡುತ್ತೇವೆ. ಈಗ ಏನು ವೈದ್ಯಾಧಿಕಾರಿಗಳನ್ನು ನೇಮಿಸುತ್ತೀರೋ ಅವರಲ್ಲಿ ಬಹಳಷ್ಟು ಜನ ಪೋಸ್ಟ್ ಗ್ರಾಜುಯೇಟ್ಸ್, ಎಂ. ಎಸ್. ಎಂ. ಡಿ. ಮಾಡಿರತಕ್ಕವರು , ಗೈನಿಕಾಲಜಿ ಡಿಗ್ರಿ ಇರತಕ್ಕವರು, ಜನರಲ್ ಸರ್ಜರಿ ಮಾಡಿರತಕ್ಕವರು ಮುಂತಾದವರನ್ನು ಪಿ.ಹೆಚ್.ಯು.ಗಳಲ್ಲಿ ನೇಮಿಸತಕ್ಕ ಪದ್ಧತಿ ಇದೆ. ಅದನ್ನು ತಪ್ಪಿಸಿ, ಅವರನ್ನು ತಾಲ್ಲೂಕು ಮಟ್ಟದ ಮೇಲಿನ ಆಸ್ಪತ್ರೆಗಳಿಗೆ ಸ್ಪೆಷಲಿಸ್ಟ್‌ನ್ನು ಪೋಸ್ಟ್ ಮಾಡಿದರೆ ಒಳ್ಳೆಯ ವೈದ್ಯಕೀಯ ಸೌಕರ್ಯವನ್ನು ಹಳ್ಳಿಗಾಡಿನ ಜನರಿಗೆ ಒದಗಿಸಿದಂತಾಗುತ್ತದೆ. ಏನಾದರೂ ವಿಶೇಷ ಕಾಯಿಲೆ ಇದ್ದಾಗ ಪಿಹೆಚ್‌ಯು ಮತ್ತು ಪಿಹೆಚ್‌ಸಿ ಯಿಂದ ತಾಲ್ಲೂಕು ಆಸ್ಪತ್ರೆಗಳಿಗೆ ರೆಫರ್ ಮಾಡಿದರೆ ಅಲ್ಲಿ ರೋಗಿಗಳನ್ನು ನೋಡುವುದಕ್ಕೆ ಅನುಕೂಲವಾಗುತ್ತದೆ. ತಾಲ್ಲೂಕು ಆಸ್ಪತ್ರೆಗಳನ್ನು ಕ್ಯೂರೇಟೀವ್ ಹಾಸ್ಪಿಟಲ್‌ಗಳಾಗಿ ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಕ್ಯೂರೇಟೀವ್ ಹಾಸ್ಪಿಟಲ್‌ಗೆ ಯುಟಿಲೈಸ್ ಮಾಡತಕ್ಕ ವ್ಯವಸ್ಥೆ ಆದರೆ, ಎಂತಹ ಕಾಯಿಲೆ ಬಂದರೂ ಅಲ್ಲೇ ಹೋಗಿ ಒಳ್ಳೆಯ ಸೌಲಭ್ಯ ಪಡೆಯುವುದಕ್ಕೆ ಸಹಾಯವಾಗುತ್ತದೆಂದು ಹೇಳುತ್ತೇನೆ. ಬಹಳ ಮುಖ್ಯವಾಗಿ ಈಗ ಇರತಕ್ಕ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್ ಇಲಾಖೆ ಏನಿದೆ ಅದನ್ನು ಬೈಫರ್‌ಕೇಟ್ ಮಾಡಿ ಮೆಡಿಕಲ್ ಅಂಡ್ ಪ್ರಿವೆಂಟೀವ್ ಮೊದಲು ಇದ್ದ ಹಾಗೆ ಮಾಡಬೇಕು. ಅದನ್ನು ಏತಕ್ಕಕೆ ಕಂಬೈನ್ಡ್ ಮಾಡಿದರು ಎಂದು ನನಗೆ ಗೊತ್ತಿದೆ. ನಾನೂ ಕೂಡ ಟೀಚಿಂಗ್ ಮ್ಯಾನ್. ನಾನು ಕೂಡ ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿದ್ದೆ. ಕೆಲವರು ಇಂಟರೆಸ್ಟೆಡ್ ಪೀಪಲ್ ಟಾಪ್ ಇನ್ ಮೆಡಿಕಲ್ ಟೀಚಿಂಗ್ ಫೀಲ್ಡ್‌ನವರು ಸರ್ಕಾರವನ್ನು ಮಿಸ್‌ಗೈಡ್ ಮಾಡಿದ್ದಾರೆಂದರೆ ತಪ್ಪಾಗುವುದಿಲ್ಲ. ಏಕೆಂದರೆ ಅವರ ಡೈರೆಕ್ಟರೇಟ್‌ನಲ್ಲಿ ಅವರ ಸ್ಥಾನ ಪಡೆದುಕೊಳ್ಳವುದಕ್ಕೆ ಇದನ್ನು ಕಂಬೈನ್ಡ್ ಮಾಡಿ ಈ ಒಂದು ಕನ್‌ಫ್ಯೂಷನ್ ಕ್ರಿಯೇಟ್ ಮಾಡಿದರು. ಅದಕ್ಕೆ ಸರ್ಕಾರ ಒಪ್ಪಿದೆ. ಈಗಲೂ ಕೂಡ ತಡವಾಗಿಲ್ಲ. ಇದರ ಬಗ್ಗೆ ಚಿಂತನೆ ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಇದಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ. ಇವತ್ತು ಎಲ್ಲಾ ಸೌಕರ್ಯ ಕೇಳತಕ್ಕ ಸಂದರ್ಭದಲ್ಲಿ ಆಸ್ಪತ್ರೆಗಳಿಗೆ ಬಿಲ್ಡಿಂಗ್‌ಗಳು ಬೇಕು. ಎಲ್ಲಾ ಆಸ್ಪತ್ರೆ ಕಟ್ಟಡಗಳು ಬಿರುಕು ಬಿಟ್ಟಿವೆ, ರಿಪೇರಿ ಆಗಿಲ್ಲ. ಏತಕ್ಕೆ ಆಗಿಲ್ಲವೆಂದರೆ ಹಣ ಇಲ್ಲ ಸರ್ಕಾರದಲ್ಲಿ ಬಡ್ಜೆಟ್ ತಯಾರಿಸತಕ್ಕ ಸಂದರ್ಭದಲ್ಲಿ ಬಹಳ ಮುಖ್ಯವಾಗಿ ಈ ಬಾಬಿಗೆ ಹಣ ಕೊಡತಕ್ಕ ವ್ಯವಸ್ಥೆ ಆಗಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ

6. 45 ಪಿ. ಎಂ

ಛೇರ್ಮನ್ :- ಶ್ರೀ ಹನುಮೇಗೌಡರು . . . .

ಶ್ರೀ ಕೆ. ಹೆಚ್. ಹನುಮೇಗೌಡ :- ನಾನು ನಾಳೆ ಬೆಳಿಗ್ಗೆ ಮಾತನಾಡುತ್ತೇನೆ. ಈಗ ಆಗುವುದಿಲ್ಲ.

ಛೇರ್ಮನ್:- ಡಿಸ್ಕಷನ್ ಇವತ್ತು ಮುಗಿದು ಹೋಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ :- ಬೆಳಗ್ಗೆಯಿಂದ ಕಾಯ್ದುಕೊಂಡು ಕುಳಿತಿದ್ದೇನೆ. ಕೊನೆಯಲ್ಲಿ ಮಾತನಾಡು ಎಂದರೆ ನಾನು ಮಾತನಾಡುವುದಿಲ್ಲ. ಬೆಳಗ್ಗೆ ಮಾತನಾಡಬೇಕು. ದಯವಿಟ್ಟು ನಾಳೆ ಅವಕಾಶ ಕೊಡಿ.

+ಡಾ. ವೈ. ನಾಗಪ್ಪ (ಹರಿಹರ):- ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಇವತ್ತಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬೇಡಿಕೆಗಳ ವರದಿಯನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡಲಿಚ್ಚಿಸುತ್ತೇನೆ. ನಾನು ಸಹ ಒಬ್ಬ ವೈದ್ಯ. ಈ ಒಂದು ಇಲಾಖೆಯ ಕುಂದುಕೊರತೆಗಳನ್ನು ನ್ಯೂನತೆಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ಇಚ್ಛಿಸುತ್ತೇನೆ. ಈ ಒಂದು ಇಲಾಖೆ ನಿಜವಾಗಿಯೂ ಹೇಳಬೇಕೆಂದರೆ it is the most neglected department; Neglect ಎಂದು ಹೇಳುವುದು may be an orphanage department because ಹಾರ್ಸ್ ಆದರೆ there is no revenue to the Government from this department. ನಾವು 30 ವರ್ಷದ ಹಿಂದೆ ಸರ್ವೀಸ್‌ಗೆ ಸೇರಿಕೊಂಡಾಗ ಆ ಜನಸಂಖ್ಯೆಗೆ ತಕ್ಕ ಹಾಗೆ ಬರೀ ಒಂದು ಡೈರೆಕ್ಟರ್ ಆಫ್ ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್ ಎಂದು ಪೋಸ್ಟ್ ಡೈರೆಕ್ಟೋರೇಟ್‌ನಲ್ಲಿತ್ತು. ಅದರ ಜೊತೆಗೆ ಜಾಯಿಂಟ್ ಡೈರೆಕ್ಟರ್, ಅಸಿಸ್ಟೆಂಟ್ ಡೈರೆಕ್ಟರ್‌ಗಳು ಎಂದು ಕೆಲವೇ ಕೆಲವು ಹುದ್ದೆಗಳಿದ್ದವು. ಈಗ ಈ ಒಂದು ಇಲಾಖೆಗೆ ಆಯವ್ಯಯದಲ್ಲಿ ಕೊಡತಕ್ಕ ಹಣದಲ್ಲಿ ಸುಮಾರು 40 ರಿಂದ 45 ಪರ್ಸೆಂಟ್ ಅಲ್ಲಿರತಕ್ಕ ಅಧಿಕಾರಿಗಳಿಗೆ, ಸಿಬ್ಬಂದಿವರ್ಗಕ್ಕೆ ಹೋಗುತ್ತದೆ. There is a greatest lacune in it ಇವತ್ತು ಈ ಆರೋಗ್ಯ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ನಾನು ಹೇಳುತ್ತಿದ್ದೇನೆ. ನಾನು ಡಾಕ್ಟರು ಎಂದು ಹೇಳುತ್ತಿಲ್ಲ. it is the most sacred servicing department ಒಂದು ಮಾನವತೆಯುಳ್ಳ ಇಲಾಖೆ ಇದು. ಈ ಮಾನವತೆ ಬರೀ ಬಾಯಲ್ಲಿ ಅಲ್ಲ. ನಮ್ಮ ಇಲಾಖೆಯಲ್ಲಿ ಕೆಲಸ ಮಾಡತಕ್ಕ ವೈದ್ಯರುಗಳು ಇವತ್ತು ಮಾನವತೆಯನ್ನು ಅಳವಡಿಸಿಕೊಂಡು ಸಾಮಾನ್ಯ ಜನರಿಗೆ ಸೇವೆ ಸಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಈ ಒಂದು ಇಲಾಖೆ ನಾನು ಈಗಾಗಲೇ ಹೇಳಿದಹಾಗೆ it was bifurcated ನಮ್ಮ ನಂಜಪ್ಪನವರು ಹೇಳಿದರು ಮೆಡಿಕಲ್ ಒಂದು ಕಡೆ ಹೆಲ್ತ್ ಅಂಡ್ ಫ್ಯಾಮಿಲಿ ಪ್ಲಾನಿಂಗ್ ಇನ್ನೊಂದು ಕಡೆ ಎಂದು. ಬರೀ ಇಲಾಖೆಗಳು ಹೆಚ್ಚಾಯಿತೇ ಹೊರತು ಆ ಒಂದು ಇಲಾಖೆಯಿಂದ ಜನಗಳಿಗೆ ಸರಿಯಾದ ಸೇವೆ ಸಲ್ಲುತ್ತಿಲ್ಲ. ಸರ್ಕಾರಿ ವೈದ್ಯನಾಗಿ ನನ್ನ ಸರ್ವೀಸ್‌ನಲ್ಲಿ ಸುಮಾರು 15 ವರ್ಷಗಳು ನಾನು ಹಳ್ಳಿಯಲ್ಲಿ ಸೇವೆ ಸಲ್ಲಿಸಿದ್ದೇನೆ. ನಮ್ಮ ಸ್ನೇಹಿತರಾದ ಗಂಗಣ್ಣನವರು ಹೇಳಿದರು. ಇದರಲ್ಲಿ ಹೇಳಿದ್ದೇ ಹೇಳಬೇಕಾಗುತ್ತದೆಂದು. ಪುನಃ ಪುನಃ ಹೇಳದೇ ನಿರ್ವಾಹವಿಲ್ಲ. ಇವತ್ತು ಯಾವುದೇ ಸರ್ಕಾರ ಇರಲಿ ಸರ್ಕಾರವನ್ನು ಟೀಕೆ ಮಾಡಬೇಕೆಂದು ನಾನು ಹೇಳುತ್ತಾ ಇಲ್ಲ. ಇವತ್ತು ಯಾವುದೇ ಸರ್ಕಾರ ಇದ್ದರೂ ಈ ಇಲಾಖೆ ಕಡೆಗೆ, ಜನಸಾಮಾನ್ಯರ ಆರೋಗ್ಯ ಕಾಪಾಡುವುದಕ್ಕೆ ಅಷ್ಟೊಂದು ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾ ಇಲ್ಲ. ನನ್ನ ದೃಷ್ಟಿಯಲ್ಲಿ ಹೇಳಬೇಕೆಂದರೆ ಸರ್ಕಾರದವರು ಔಷಧಿಗಳನ್ನು ಕೊಡುತ್ತಿದ್ದಾರಲ್ಲಾ ಇದು ನಮ್ಮ ರಾಜ್ಯದಲ್ಲಿ ಇರತಕ್ಕ ಒಬ್ಬ ರೋಗಿಗೆ, ಜನಸಂಖ್ಯೆಯ ಆಧಾರವನ್ನು ಇಟ್ಟುಕೊಂಡು ಕೊಟ್ಟರೆ ಒಂದು ಪೈಸೆಯಷ್ಟು ಕೂಡ ಔಷಧಿ ಬರುವುದಿಲ್ಲ. ಅಷ್ಟೊಂದು ಕಡಿಮೆ. ಹೀಗಿರುವಾಗ ಇವತ್ತು ಹಳ್ಳಿಗಾಡಿನಲ್ಲಿ ಇರುವ ವೈದ್ಯರು ಹೇಗೆ ಸೇವೆ ಸಲ್ಲಿಸಬೇಕೆನ್ನುವುದರ ಬಗ್ಗೆ ತಾವೇ ಯೋಚನೆ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿರುವ ಹಾಗೂ ಹಳ್ಳಿಮಟ್ಟದಲ್ಲಿರುವ ಆಸ್ಪತ್ರೆಗಳನ್ನು ನೋಡಿದರೆ ನಿಜಕ್ಕೂ ದುಃಖವಾಗುತ್ತದೆ, ಕಣ್ಣೀರು ಬರುತ್ತದೆ. ಏಕೆಂದರೆ it is the fundamental duty of a doctor

and the para-medical staff to serve. Unless /you give basic facilities to serve for the rural hospitals, it is highly impossible to serve to the satisfaction of the patient; not to the satisfaction of the doctor. ಏಕೆಂದರೆ ತಾವು ಪ್ರೈಮರಿ ಹೆಲ್ತ್ ಯೂನಿಟ್‌ಗಳನ್ನು ತೆಗೆಯುತ್ತಿದ್ದೀರಿ. ಪ್ರೈಮರಿ ಹೆಲ್ತ್ ಸೆಂಟರ್‌ಗಳನ್ನು ತೆಗೆಯುತ್ತಿದ್ದೀರಿ. ಆ ಆಸ್ಪತ್ರೆಗಳಿಗೆ ತಾವು ಕೊಡತಕ್ಕ ಔಷಧಿ ಸಾಕಾಗುವುದಿಲ್ಲವೆಂದು ನಾನು ಆಗಲೇ ಹೇಳಿದೆ. ಮತ್ತೆ ಹೊರರೋಗಿಗೆ, ಅದರಲ್ಲೂ ಇವತ್ತು ನಾವು ಯಾವುದಾದರೂ ಒಂದು ಸೀರಿಯಸ್ ಇರತಕ್ಕ ಒಬ್ಬ ಪೇಷೆಂಟನ್ನು ಅಡ್ಮಿಟ್ ಮಾಡಿಕೊಂಡರೆ ಆ ಪೇಷೆಂಟನ್ನು ನಾವು ಬದುಕಿಸಬೇಕಾದರೆ, ಸಾವು ಉಳಿವಿನ ಹೋರಾಟದಲ್ಲಿ ನಾವು ಅವನನ್ನು ಬದುಕಿಸಬೇಕಾದರೆ ಸಾಕಷ್ಟು ನಮ್ಮಲ್ಲಿ ಎಮರ್ಜೆನ್ಸಿ ಡ್ರಗ್ಸ್ ಇರುವುದಿಲ್ಲ. ಏಕೆಂದರೆ ಇವತ್ತು ತಾವು ಕೊಡುವ ಹಣದಲ್ಲಿ ಒಬ್ಬ ರೋಗಿಗೆ ಒಂದು ನಯಾಪೈಸೆಯಷ್ಟು ಔಷಧಿಯನ್ನು ಕೊಡುವುದಕ್ಕಾಗುವುದಿಲ್ಲ. ಹೀಗಿರುವಾಗ, ರೋಗಿಯನ್ನು ಯಾವ ರೀತಿ ಬದುಕಿಸಬೇಕೆಂಬುದನ್ನು ತಾವು ಯೋಚನೆ ಮಾಡಬೇಕು. ಆಮೇಲೆ ಈ ಕೆಲವು ಚುಚ್ಚುಮದ್ದುಗಳು . ಇಮ್ಯುನೈಜೇಷನ್ ಚುಚ್ಚುಮದ್ದುಗಳು. ನನ್ನ ದೃಷ್ಟಿಯಲ್ಲಿ ಹೇಳಬೇಕೆಂದರೆ ಈ ಚುಚ್ಚುಮದ್ದುಗಳ ಕೊರತೆ ಇಲ್ಲ. ಅವನ್ನು ಸರಿಯಾಗಿ ಇಡುವ ವ್ಯವಸ್ಥೆ ಇಲ್ಲ. ಏಕೆಂದರೆ, ಸುಮಾರು ಆಸ್ಪತ್ರೆಗಳಲ್ಲಿ ರೆಫ್ರಿಜಿರೇಟರ್ಸ್ ಇಲ್ಲ. ಕೆಲವು ಕಡೆ ರೆಫ್ರಿಜಿರೇಟರ್ಸ್ ಇದ್ದರೂ ಅವು ಕೆಟ್ಟುಹೋಗಿರುವುದರಿಂದ ಅವು ಕೆಲಸಕ್ಕೆ ಬರುತ್ತಿಲ್ಲ. ರಿಪೇರಿ ಆಗದಿರುವ ಎಷ್ಟೋ ರೆಫ್ರಿಜರೇಟರ್ಸ್ ಇವತ್ತು ಆಸ್ಪತ್ರೆಗಳಲ್ಲಿ ಇವೆ. ಇನ್ನು ಹುಚ್ಚು ನಾಯಿ ಕಚ್ಚಿದರೆ ಕೊಡಬೇಕಾದ ಚುಚ್ಚು ಮದ್ದು ಏನಿದೆ ಆ ಔಷಧಿಯ ಕೊರತೆ ಇವತ್ತು ಸುಮಾರು ನಮ್ಮ ರಾಜ್ಯದ ಪ್ರತಿಯೊಂದು ಆರೋಗ್ಯ ಘಟಕದಲ್ಲೂ ಇದೆ. ಒಂದು ಔಷಧಿ ಇವತ್ತು ಸಿಗುತ್ತಾ ಇಲ್ಲ. ಆ ಔಷಧಿ ಇವತ್ತು ಇಲ್ಲವೇ ಇಲ್ಲ ಎಂದು ಹೇಳಿದರೂ ತಪ್ಪಾಗಲಾರದು. ಇದರ ಬಗ್ಗೆ ನಿಗಾವಹಿಸಿ ಆ ಒಂದು ಕೊರತೆಯನ್ನು ತಾವು ತುಂಬುತ್ತೀರೆಂದು ನನಗೆ ನಂಬಿಕೆ ಇದೆ. ಎಕ್ಸ್‌ರೇ ತಾಲ್ಲೂಕು ಮಟ್ಟದಲ್ಲಿ ವ್ಯವಸ್ಥಿತ ರೂಪದಲ್ಲಿರಬೇಕು. ಕೈಕಾಲುಗಳನ್ನು ಮುರಿದುಕೊಂಡು ಹಳ್ಳಿಗಾಡಿನಿಂದ ಬರತಕ್ಕ ಜನಗಳು ನಿಮೋನಿಯಾ ಮತ್ತು ಕ್ಷಯ ರೋಗವಿರತಕ್ಕ ರೋಗಿಗಳು ತಾಲ್ಲೂಕು ಆಸ್ಪತ್ರೆಗೆ ಬಂದರೆ ಅಲ್ಲಿ ಎಕ್ಸ್‌ರೇ ಇರುವುದಿಲ್ಲ. ಎಕ್ಸ್‌ರೇ ಯಂತ್ರ ಇದ್ದರೂ ಅದು ಕೆಟ್ಟಿರುತ್ತದೆ. ರಕ್ತವನ್ನು ಪರೀಕ್ಷೆ ಮಾಡಲಿಕ್ಕೆ ಲ್ಯಾಬೋರೇಟರಿ ಮುಖ್ಯ. ಸರ್ವೇಸಾಮಾನ್ಯವಾಗಿ ಪಬ್ಲಿಕ್ ಹೆಲ್ತ್ ಸೆಂಟರ್ಸ್ ಮತ್ತು ಸಬ್ ಸೆಂಟರ್ಸ್‌ಗಳಲ್ಲಿ ಲ್ಯಾಬೋರೇಟರಿ ಇದೆ. ಇಲ್ಲವೆಂದು ನಾನು ಹೇಳುತ್ತಾ ಇಲ್ಲ. ಹಳ್ಳಿಗಾಡಿನಲ್ಲಿರತಕ್ಕ ಸಬ್ ಸೆಂಟರ್ಸ್‌ಗಳಲ್ಲಿ ರಕ್ತ, ಮೂತ್ರ ಪರೀಕ್ಷೆ ಮಾಡತಕ್ಕ ಈವೊಂದು ಲ್ಯಾಬೋರೇಟರಿಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇವತ್ತು ಸಾಕಷ್ಟು ಫೆಸಿಲಿಟೀಸ್‌ಗಳು ಇದೆ. ಸಾಕಷ್ಟು ಡಾಕ್ಟರುಗಳು ಪೋಸ್ಟ್ ಗ್ರಾಜುಯೇಟ್ ಮಾಡಿರತಕ್ಕವರು ಇದ್ದಾರೆ. ಅವರುಗಳನ್ನು ಟೀಚಿಂಗ್ ಇನ್ಸಿಟ್ಯೂಟ್‌ಗಳಿಗೆ ಅಸಿಸ್ಟೆಂಟ್ ಸರ್ಜನ್‌ಗಳಾಗಿ ಹಾಕುತ್ತಾ ಇದ್ದೀರಿ ಅದು ಹೋಗಬೇಕು. ಅವರ ಸೇವೆಯನ್ನು ತಾಲ್ಲೂಕಮಟ್ಟದ ಆಸ್ಪತ್ರೆಗಳಿಗೆ ಎರವಲು ಸೇವೆಯ ಆಧಾರದ ಮೇಲೆ ಕೊಡಬೇಕೆಂದು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಳ್ಳಿಗಾಡಿನ ಜನರು ಜಿಲ್ಲಾ ಆಸ್ಪತ್ರೆಗಳಿಗೆ ಹೋಗುವುದಕ್ಕೆ ಅವರಲ್ಲಿ ದುಡ್ಡು ಇರುವುದಿಲ್ಲ. ಹಣದ ಕೊರತೆಯಿಂದ ಎಷ್ಟೋ ಜನ ಅವರ ಪ್ರಾಣವನ್ನು ಕಳೆದುಕೊಳ್ಳುತ್ತಾರೆ. ಸ್ಪೆಷಲಿಸ್ಟ್ ಸರ್ವೀಸ್ ಅನ್ನು ತಾಲ್ಲೂಕು ಮಟ್ಟಕ್ಕೂ ಕೊಡಬೇಕಾಗುತ್ತದೆ. ಸ್ಟ್ಯಾಫ್ ಪ್ಯಾಟ್ರನ್ ಮಾಡಿಕೊಂಡು ಪ್ರತಿಯೊಂದು ತಾಲ್ಲೂಕು ಆಸ್ಪತ್ರೆಗೆ ಒಬ್ಬರು ಫಿಜಿಸಿಯನ್, ಒಬ್ಬರು ಸರ್ಜನ್, ಗೈನಾಕಲಜಿಸ್ಟ್, ಒಬ್ಬರು ನೇತ್ರ ತಜ್ಞರು ಸ್ಕಿನ್ ಸ್ಪೆಷಲಿಸ್ಟ್, ಚಿಲ್ಡ್ರನ್ ಸ್ಪೆಷಲಿಸ್ಟ್, ಈ ರೀತಿಯಾಗಿ ಸ್ಟ್ಯಾಫ್ ಪ್ಯಾಟ್ರನ್ ಕೊಡಬೇಕೆಂದು ತಮಗೆ ಸಲಹೆ ಕೊಡುತ್ತಿದ್ದೇನೆ. ಮಾನ್ಯ ಸದಸ್ಯರಾದ ಡಾ: ನಂಜಪ್ಪನವರು ಹೇಳಿದಹಾಗೆ ಒಂದು ಜಿಲ್ಲಾ ಆಸ್ಪತ್ರೆಗೆ ಯಾವರೀತಿಯಾಗಿ ಮೆಡಿಕಲ್ ಕಾಲೇಜುಗಳಲ್ಲಿ ಇರತಕ್ಕ ಆಸ್ಪತ್ರೆಗಳು ರೆಫರಲ್ ಆಸ್ಪತ್ರೆಗಳಾಗಿವೆ. ಪ್ರತಿಯೊಂದು ಜಿಲ್ಲಾ ಆಸ್ಪತ್ರೆಯನ್ನು ಅಪ್‌ಗ್ರೇಡ್ ಮಾಡಿ 500 ರಿಂದ 1000 ಬೆಡ್‌ಗಳನ್ನು ಕೊಟ್ಟು ರೆಫರಲ್ ಆಸ್ಪತ್ರೆಗಳನ್ನು

ಮಂಜೂರು ಮಾಡಬೇಕೆಂದು ಈ ಸಮಯದಲ್ಲಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಅದೇರೀತಿಯಲ್ಲಿ ಕ್ಯಾನ್ಸರ್ ಟ್ರೀಟ್‌ಮೆಂಟ್‌ಗೆ ರೋಗಿಗಳು ದೊಡ್ಡ ದೊಡ್ಡ ಆಸ್ಪತ್ರೆಗಳಿಗೆ ಹೋಗಬೇಕು. ಅದನ್ನು ತಾವು ತಪ್ಪಿಸಬೇಕು. ಪ್ರತಿ ಜಿಲ್ಲಾ ಮಟ್ಟದಲ್ಲಿ ಒಂದು ಕ್ಯಾನ್ಸರ್ ವಿಭಾಗವನ್ನು ತೆಗೆದು ಕ್ಯಾನ್ಸರ್ ರೋಗಿಗಳಿಗೆ ಟ್ರೀಟ್‌ಮೆಂಟ್ ಕೊಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ತಮಗೆ ನೇರವಾಗಿ ಒಂದು ಪ್ರಶ್ನೆಯನ್ನು ಹಾಕುತ್ತಿದ್ದೇನೆ ತಾವು ಸಾಕಷ್ಟು ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಕೊಟ್ಟಿದ್ದೀರಿ. ಕೊಡುವ ಹಂತದಲ್ಲಿ ಇದ್ದೀರಿ. ಸಧ್ಯದಲ್ಲಿ ಕೋರ್ಟ್‌ನಲ್ಲಿ ಸ್ಟೇ ಆರ್ಡರ್ ಬಂದಿದೆ. ಅದರ ಬಗ್ಗೆ ಅಷ್ಟೊಂದು ಗಮನಹರಿಸಿಲ್ಲ. ನನ್ನ ದೃಷ್ಟಿಯಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳು ಅನಾವಶ್ಯಕ. ಏನಾದರೂ ಮೆಡಿಕಲ್ ಕಾಲೇಜುಗಳನ್ನು ತೆಗೆಯುವುದಾದರೆ ಸರ್ಕಾರದ ವತಿಯಿಂದ ತೆಗೆಯಿರಿ. ಸರ್ಕಾರದ ವತಿಯಿಂದ ಮೆಡಿಕಲ್ ಕಾಲೇಜುಗಳನ್ನು ತೆಗೆದರೆ ಗ್ರಾಮಾಂತರ ಪ್ರದೇಶದಲ್ಲಿ ರತಕ್ಕವರಿಗೆ ಮೆಡಿಕಲ್ ಕಾಲೇಜುಗಳಲ್ಲಿ ಪ್ರವೇಶ ಸಿಗುತ್ತದೆ. ಹಾಗೆ ಮಾಡುವುದರಿಂದ ಹಿಂದುಳಿದ ವರ್ಗದವರಿಗೆ ಪ್ರವೇಶ ಸಿಗುವುದು ಸಾಧ್ಯವಾಗುತ್ತದೆ. ಖಾಸಗಿ ಮೆಡಿಕಲ್ ಕಾಲೇಜುಗಳು ಬಿಳಿಯಾನೆಗಳು ಇದ್ದಹಾಗೆ, after this congress Government came to power, we have rooted out this monarchy. ಈ ರಾಜರನ್ನು, ನವಾಬರನ್ನು, ದಿವಾನರುಗಳನ್ನು ಮನೆಗೆ ಕಳಿಸಿದ್ದಾರೆ. ಈ ಸರ್ಕಾರ ಬಂದಮೇಲೆ ಖಾಸಗಿ ಮೆಡಿಕಲ್ ಕಾಲೇಜುಗಳನ್ನು ಕೊಟ್ಟು ಅವರನ್ನು ನವಾಬರು, ದಿವಾನರನ್ನಾಗಿ ಮಾಡುವುದಕ್ಕೆ ಹೊರಟಿದೆ. ಅವರು ಆ ರೀತಿಯಲ್ಲಿ ಶೋಷಣೆ ಮಾಡುತ್ತಿದ್ದಾರೆ. ಒಂದು ಸೀಟಿಗೆ ಐದು ಲಕ್ಷ, ಹತ್ತು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಶೋಷಣೆ ಮಾಡುತ್ತಿದ್ದಾರೆ. ಈ ಶೋಷಣೆಯನ್ನು ತಪ್ಪಿಸಬೇಕು. ಖಾಸಗಿ ಮೆಡಿಕಲ್ ಕಾಲೇಜು ಕೊಡುವುದನ್ನು ಬಿಟ್ಟು, ಸರ್ಕಾರದಿಂದ ಮೆಡಿಕಲ್ ಕಾಲೇಜುಗಳನ್ನು ತೆಗೆದು ಹಳ್ಳಿಗಳಲ್ಲಿ ರತಕ್ಕಂಥ, ವಂಚಿತರಾಗಿರತಕ್ಕಂಥ ವಿದ್ಯಾರ್ಥಿಗಳಿಗೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಡಾಕ್ಟರರೇ, ಬೇಗ ಮುಗಿಸಿ.

ಡಾ. ವೈ. ನಾಗಪ್ಪ :- ನನಗೆ ಗೊತ್ತಿರುವ ಹಾಗೆ ಈ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ promotion is a rare opportunity. ಆಗಿಬಿಟ್ಟಿದೆ. ಎಷ್ಟೋ ಜನ ಡಾಕ್ಟರುಗಳು 30-35 ವರ್ಷ ಸೇವೆ ಸಲ್ಲಿಸಿ ಬರೀ ಅಸಿಸ್ಟೆಂಟ್ ಸರ್ಜನ್ ಆಗಿ ನಿವೃತ್ತಿ ಹೊಂದಿದ್ದಾರೆ. ಆದ್ದರಿಂದ ಅವರಿಗೆ ಸಕಾಲಕ್ಕೆ ಹತ್ತು ವರ್ಷಗಳಿಗೆ ಒಮ್ಮೆ ಮುಂಭಡ್ತಿ ಕೊಟ್ಟು, ಪೋಸ್ಟ್‌ಗಳು ಇಲ್ಲದಿದ್ದರೂ ಕೂಡ ತಾವು, ಅಫಿಸಿಯೇಟಿಂಗ್ ಪೋಸ್ಟ್ ಕ್ರಿಯೇಟ್ ಮಾಡಿ ಅವರಿಗೆ ಅನುಕೂಲ ಮಾಡಿಕೊಬೇಕೆಂದು ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ಇವತ್ತು ನಾವು ನಿಜವಾಗಿಯೂ ಅಮೂಲ್ಯವಾದ ಸೇವೆ ಸಲ್ಲಿಸಬೇಕಾದರೆ ರಾಜಕಾರಣಿಗಳಿರಲಿ, ಅಧಿಕಾರಿಗಳು ಇರಲಿ, ಸಮಾಜ ಸೇವಕರು ಇರಲಿ unless we approach alll the problems philosophically, we cannot solve them. Therefore we have to adopt philosophy, we must preach philosophy and we must be students of philosophy till our last breath. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಈ ಸಮಾಜದಲ್ಲಿ ಕೆಲಸ ಮಾಡಿದರೆ ಅಮೂಲ್ಯವಾದ ಸೇವೆ ಸಲ್ಲಿಸಿದಂತಾಗುತ್ತದೆಂದು ಹೇಳುತ್ತೇನೆ. ಇವತ್ತು ನನಗೆ ಚರ್ಚೆ ಮಾಡುವುದಕ್ಕೆ ಸಾಕಷ್ಟು ವಿಷಯಗಳು ಇದ್ದವು. ಆದರೆ ವಿರೋಧಪಕ್ಷದವರೂ ಇಲ್ಲ, ನಮಗೂ ಅವಕಾಶ ಇಲ್ಲ. ಸಭಾಧ್ಯಕ್ಷಿಣಿಯವರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಾಬುರಾವ್ ಚವಾಣ್ (ಶಹಾಬಾದ್):- ಸನ್ಮಾನ್ಯ ಅಧ್ಯಕ್ಷಿಣಿಯವರೇ, ನನ್ನ ಮಿತ್ರ ಬಾಂಧವರು ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ.

ಛೇರ್ಮನ್ :- ನಿಮಗೆ ಹತ್ತು ನಿಮಿಷ ಇದೆ. ಹತ್ತು ನಿಮಿಷಕ್ಕಿಂತ ಒಂದು ನಿಮಿಷ ಕೂಡ ಹೆಚ್ಚು

ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಾಬುರಾವ್ ಚವಾಣ್:- ನಾನು ಜಾಸ್ತಿ ಮಾತನಾಡುವುದಿಲ್ಲ. ನಾನು ಆರೋಗ್ಯ ಇಲಾಖೆಯ ಮೇಲೆ ಮಾತನಾಡಲು ಇಷ್ಟಪಡುವುದಿಲ್ಲ. ಆದರೆ ಕಾರ್ಮಿಕ ಮಂತ್ರಿಗಳ ಇಲಾಖೆಯ ಬಗ್ಗೆ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನಾನು ಕಾರ್ಮಿಕ ರಂಗದಿಂದ ಬಂದಿದ್ದೇನೆ. ಕಾರ್ಮಿಕರ ನೋವು, ಕಾರ್ಮಿಕರ ಸಮಸ್ಯೆ ಬಗ್ಗೆ ಮಾನ್ಯ ಮಂತ್ರಿಗಳಿಗೆ ಕೆಲವು ಸಲಹೆಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಭಾಗದಲ್ಲಿ ಸಿಮೆಂಟ್

ಕಾರ್ಖಾನೆಗಳು ಹೆಚ್ಚಾಗಿವೆ. ಸಿಮೆಂಟ್ ಕಾರ್ಖಾನೆ ಸ್ಥಾಪನೆ ಮಾಡುವಾಗ ಆಡಳಿತ ಮಂಡಲಿಯವರು ಅಸಿಸ್ಟೆಂಟ್ ಲೇಬರ್ ಕಮೀಷನರ್ ಆಫೀಸಿನಲ್ಲಿ ಒಂದು ಸ್ಟ್ಯಾಂಡಿಂಗ್ ಆರ್ಡರ್ ಎಂದು ಮಾಡಿಕೊಂಡು, ಲೇಬರ್ ಯೂನಿಯನ್‌ಗಳು ಟ್ರೇಡ್ ಯೂನಿಯನ್‌ಗಳು, ಮತ್ತು ಆಡಳಿತ ಮಂಡಲಿಯವರು , ಲೇಬರ್ ಕಮೀಷನರ್ ಆಫೀಸ್‌ನಲ್ಲಿ ಹೋಗಿ, ಅಗ್ರಿಮೆಂಟ್‌ಗೆ ರುಜು ಹಾಕತಕ್ಕಂಥ ಒಂದು ರೂಲ್ ಇದೆ. ಹೊಸದಾಗಿ ನಿರ್ಮಾಣವಾದ ಸಿಮೆಂಟ್ ಫ್ಯಾಕ್ಟರಿಯಲ್ಲಿದ್ದ ಕಾರ್ಮಿಕರು ಬಂದು, ಲೇಬರ್ ಕಮೀಷನರ್ ಆಫಿಸ್‌ನಲ್ಲಿ ಸೈನ್ ಹಾಕುವಾಗ, ಸ್ಟ್ಯಾಂಡಿಂಗ್ ಆರ್ಡರ್ ಬಗ್ಗೆ ಆ ಕಾಮಿಕರಿಗೆ ಏನು ಗೊತ್ತು ಸ್ವಾಮಿ. ಹೊಸದಾಗಿ ನಿರ್ಮಾಣವಾದ ಫ್ಯಾಕ್ಟರಿಯಲ್ಲಿ, ಹೊಸದಾಗಿ ಸೇರಿದ ಕಾರ್ಮಿಕರಿಗೆ ಹೇಗೆ ಬೈಫರ್ಕೇಷನ್ ಮಾಡುತ್ತೀರಿ, ಸ್ಟ್ಯಾಂಡಿಂಗ್ ಆರ್ಡರ್ ನ್ಯೂನತೆಗಳೇನು, ದೋಷಗಳು ಏನು ಎಂದು ಹೇಗೆ ತೀರ್ಮಾನ ಮಾಡುವುದಕ್ಕೆ ಆಗುತ್ತದೆ, ಈ ವಿಷಯದಲ್ಲಿ ಸರ್ಕಾರ ಪರಿಶೀಲಿಸಿ, ಸ್ಟ್ಯಾಂಡಿಂಗ್ ಆರ್ಡರ್ ಯಾವರೀತಿ ಮಾಡಬೇಕು, ಯಾವರೀತಿ ಲೇಬರ್ ಫೇವರ್ ಆಗಿ ಮಾಡಬೇಕೆಂದು, ಸರಕಾರ ಕಟ್ಟುನಿಟ್ಟಾದ ಒಂದು ನಿರ್ಬಂಧವನ್ನು ಹಾಕಿ . ಈ ಸ್ಟ್ಯಾಂಡಿಂಗ್ ಆರ್ಡರ್‌ಗೆ ರುಜು ಹಾಕುವುದಕ್ಕೆ, ಇನ್ ಫೇವರ್ ಆಫ್ ಲೇಬರರ್ಸ್ ಇದನ್ನು ಮಾಡಬೇಕೆಂದು ನನ್ನ ವಿಚಾರ. ಲೇಬರ್ ಕಮೀಷನರ್‌ರವರು ಸರಕಾರದ ಪರವಾಗಿ ಇರುತ್ತಾರೆ. ಲೇಬರ್ ಕಮೀಷನರ್ ಮೀಡಿಯೇಟರ್ ಮ್ಯಾನ್. ಟ್ರೇಡ್ ಯೂನಿಯನ್‌ನವರು ಏನು ಹೇಳುತ್ತಾರೆ, ಆಡಳಿತ ಮಂಡಲಿಯವರು ಏನು ಹೇಳುತ್ತಾರೆ ಎಂದು ಕೇಳಿಕೊಂಡು, ಇಬ್ಬರಿಗೂ ಕಾಂಪ್ರೊಮೈಸ್ ಆದರೆ, ಸೈನ್ ಹಾಕುತ್ತಾರೆ. ಇಲ್ಲದೇ ಹೋದರೆ ಇಲ್ಲ ಎಂದು ಹೇಳುತ್ತಾರೆ. ಕರ್ನಾಟಕ ಕರಾಜ್ಯದಲ್ಲಿ ಯಾವ ಕಾರ್ಮಿಕರಿಗೂ ಕಾನೂನು ಗೊತ್ತಿಲ್ಲ, ಯಾವ ಲೇಬರರ್ಸ್‌ಗೂ ಚೆನ್ನಾಗಿ ಲೇಬರ್ ಆಕ್ಟ್ ಗೊತ್ತಿಲ್ಲ. ಈ ವಿಷಯದಲ್ಲಿ ಸರಕಾರದಿಂದ ಕಾರ್ಮಿಕರಿಗೆ ತಿಳಿಸಿಹೇಳಿ, ಸ್ಟ್ಯಾಂಡಿಂದ್ ಆರ್ಡರ್‌ನಲ್ಲಿ ಕಾರ್ಮಿಕರಿಗೆ ಸಹಾಯ ಆಗುವ ಹಾಗೆ ತಾವು ಮಾಡಬೇಕೆಂದು ಕಾರ್ಮಿಕ ಮಂತ್ರಿಯವರಿಗೆ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಸೇಫ್ಟಿ ಆಫ್ ದಿ ವರ್ಕರ್ಸ್, ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ಎಷ್ಟರಮಟ್ಟಿಗೆ ಸೇಫ್ಟಿ ಇದೆ ಎಂಬುದು ಸನ್ಮಾನ್ಯ ಮಂತ್ರಿಯವರಿಗೆ ಬಹುಶಃ ಗೊತ್ತಿರಬೇಕು. ನಿಜವಾಗಿ ಹೇಳಬೇಕಾದರೆ ಕಾರ್ಮಿಕರ ಶೋಷಣೆಯಲ್ಲಿ, ದಬ್ಬಾಳಿಕೆಯಲ್ಲಿ ಕಾರ್ಮಿಕರ ರಕ್ತವನ್ನು ಆಡಳಿತ ಮಂಡಲಿಯವರು ಹೀರುತ್ತಿದ್ದಾರೆ. ಆದರೆ ಕಾರ್ಮಿಕರ ನೋವು ಕಾರ್ಮಿಕರ ಗೋಳು ಯಾರೂ ಕೇಳುತ್ತಿಲ್ಲ. ಸೇಫ್ಟಿ ಏನು ಕೊಡುತ್ತಿದ್ದಾರೆ ಅವರು ? ಕಾರ್ಮಿಕರಿಗೆ ಕೊಡಬೇಕಾಗಿರತಕ್ಕ ಸೇಫ್ಟಿ ಯಾರೂ ಕೊಡುತ್ತಿಲ್ಲ. ಅವರಿಗೆ ರೇನ್ ಕೋಟ್ಸ್, ಡಬಲ್ ಶೂಸ್ ಮತ್ತು ಆಲ್ ಕೈಂಡ್ ಆಫ್ ಫೆಸಿಲಿಟೀಸ್ ಏನು ಕೊಡಬೇಕು ಅದನ್ನು ಕೊಡುತ್ತಿಲ್ಲ. ಎಷ್ಟೋ ಕಾರ್ಮಿಕರು ಸಿಮೆಂಟ್ ಡಸ್ಟ್ ತಿನ್ನುತ್ತಿದ್ದಾರೆ. ಎಷ್ಟೋ ಕಾರ್ಮಿಕರು ಪೇಷಂಟ್ಸ್ ಆಗುತ್ತಿದ್ದಾರೆ. ಆದರೂ ಆಡಳಿತ ಮಂಡಲಿಯವರು ಇವರಿಗೆ ಸೇಫ್ಟಿ ಕೊಡುತ್ತಿಲ್ಲ. ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು. ಇನ್ನು ಆಕ್ಸಿಡೆಂಟ್ಸ್ ಇನ್ ಫ್ಯಾಕ್ಟರೀಸ್. ಫ್ಯಾಕ್ಟರಿಗಳಲ್ಲಿ ಆಕ್ಸಿಡೆಂಟ್ ಆದ ತಕ್ಷಣ ಆಡಳಿತ ಮಂಡಲಿಯವರು ಏನು ಮಾಡುತ್ತಾರೆ ಎಂದರೆ ವ್ಯಾನ್‌ನಲ್ಲಿ ತೆಗೆದುಕೊಂಡು ಹೋಗಿ ಗೌರ್ನಮೆಂಟ್ ಹಾಸ್ಪಿಟಲ್‌ಗೆ ಸೇರಿಸಿಬಿಡುತ್ತಾರೆ.

ಏತಕ್ಕೆ ಸ್ವಾಮಿ, ಆಕ್ಸಿಡೆಂಟ್ಸ್ ಆದ ತಕ್ಷಣ ಹಾಸ್ಪಿಟಲ್‌ಗೆ ಸೇರಿಸುತ್ತಾರೆ, ಎರಡು ದಿವಸ ಯಾರಿಗೂ ಹೇಳುವುದಿಲ್ಲ. ಅವರ ಬಂಧುಗಳಿಗೆ, ಪೇರೆಂಟ್ಸ್‌ಗಳಿಗೆ ಕರೆಸಿ, ಇಮ್ಮಿಡಿಯಟ್ ಆಗಿ ಅವರ ರುಜು ತೆಗೆದುಕೊಂಡು ಬಿಡುತ್ತಾರೆ. ಏತಕ್ಕೆ ಸ್ವಾಮಿ ಈ ರೀತಿ ಅನ್ಯಾಯ ? ಅವರಿಗೆ ಒಂದು ಮೋಸಕ್ಕೆ ಗುರಿ ಮಾಡಿ ಕನ್‌ವಿನ್ಸ್ ಮಾಡಿ ಅವರ ಬಂಧುಬಳಗದವರು, ಅವರನ್ನು ಇವರನ್ನು ಕರೆಸಿ, ಅನ್ ಎಜುಕೇಟೆಡ್ ಇರುವ ಕಾರ್ಮಿಕರ ಕಡೆಯಿಂದ ರುಜು ತೆಗೆದುಕೊಂಡು ತಮ್ಮ ಕಡತದಲ್ಲಿ ಇಟ್ಟುಕೊಂಡು ಕಾರ್ಮಿಕರಿಗೆ ಮೋಸ ಮಾಡುತ್ತಾರೆ. ಅವರ ನೋವನ್ನು ನಾನು ಎಷ್ಟೋ ನೋಡಿದ್ದೇನೆ. ಅವರಿಗೆ ಸರಿಯಾದ ಕಂಪೆನ್‌ಸೇಷನ್ ಸಿಗುತ್ತಿಲ್ಲ. ಅವರು ರುಜು ಮಾಡಿದ ತಕ್ಷಣ ಆಮೇಲೆ ಅವರು ಕ್ಲೇಮ್ ಮಾಡುವುದಕ್ಕೆ ಬರುವುದಿಲ್ಲ. ಲೇಬರ್ ಆಕ್ಟ್‌ನಲ್ಲಿ ಈ ರೀತಿ ಇದೆ. ಆದುದರಿಂದ ಆಕ್ಸಿಡೆಂಟ್ ಇನ್ ಫ್ಯಾಕ್ಟರೀಸ್ ಆದ ತಕ್ಷಣ ಫ್ಯಾಕ್ಟರಿಯಲ್ಲಿ ನಮ್ಮ ಕಾರ್ಮಿಕ ಇಲಾಖೆಯ ಒಬ್ಬರನ್ನು ಪರ್ಮನೆಂಟ್ ಆಗಿ ನಮ್ಮ ಸರಕಾರದ ವತಿಯಿಂದ ಹಾಕಬೇಕು, ಒಬ್ಬ ಇನ್‌ಸ್ಪೆಕ್ಟರ್‌ರವರು ಅಲ್ಲೇ ಇರಲಿಕ್ಕೆ ತಾವು ವ್ಯವಸ್ಥೆ ಮಾಡಬೇಕು ಇದು ನನ್ನ ಸಲಹೆ. ಏತಕ್ಕೆಂದರೆ ಆಡಳಿತ ಮಂಡಲಿಯವರು, ಯಾರು ಫ್ಯಾಕ್ಟರಿ ನಡೆಸುವವರು ಇದ್ದಾರೆ ಅವರು ಬಹಳಷ್ಟು ನಿಪುಣರು ಬಹಳಷ್ಟು ಶಾಣೇರು ಇರುತ್ತಾರೆ. ಬಹಳಷ್ಟು ಕಾನೂನು ಬಲ್ಲವರಿದ್ದಾರೆ. ಆದರೆ ಕಾರ್ಮಿಕರು ಕಾನೂನು ಬಲ್ಲವರು ಇರುವುದಿಲ್ಲ, ಓದಿರುವಂತಹ ಕಾರ್ಮಿಕರು ಇರುವುದಿಲ್ಲ. ಆದುದರಿಂದ ನಾನು ನೊಂದು ಹೇಳುತ್ತಿದ್ದೇನೆ. ಯಾವ ಫ್ಯಾಕ್ಟರಿಯಲ್ಲಿ ಆಕ್ಸಿಡೆಂಟ್ ಆಗದಹಾಗೆ, ಅನಾಹುತ ಆಗದಹಾಗೆ ತಮ್ಮ ಇಲಾಖೆಯಿಂದ ನೋಡತಕ್ಕಂಥವರು ಇದ್ದಾರೆ, ಇಲ್ಲ ಎಂದು ಹೇಳುವುದಿಲ್ಲ, ಆದರೆ ಅವರು ನೋಡತಕ್ಕಂಥ ರೀತಿ ಸರಿಯಾಗ ಮಾರ್ಗದಲ್ಲಿ ಇಲ್ಲ. ನಾನು ಹೇಳುವುದು ಆಕ್ಸಿಡೆಂಟ್ ಆದ ತಕ್ಷಣ ಆ ಫ್ಯಾಕ್ಟಕಿಯಲ್ಲಿ ಸರಕಾರ ವತಿಯಿಂದ ಒಬ್ಬ ರೆಪ್ರೆಸೆಂಟಿಟೇವ್ ಇರಬೇಕೆಂದು ಕಳಕಳಿಯಿಂದ ಕಾರ್ಮಿಕರ ಪರವಾಗಿ ತಮ್ಮಲ್ಲಿ ಮನವಿ ಮಾಡಿಕೊಂಡು ಹೇಳುತ್ತಿದ್ದೇನೆ. ಇನ್ನು ಮೈನ್ಸ್‌ನಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರ ಸಂಬಳ ಎಷ್ಟು ಗೊತ್ತೆ, ಕೇವಲ 1200 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಾರೆ. ಮೈನ್ಸ್ ಆಕ್ಟ್ ಏನು ಹೇಳುತ್ತದೆಂದು ತಮಗೆ ಗೊತ್ತಿರಬಹುದು. ತಮ್ಮ ಅಧಿಕಾರಿಗಳು ಇಲ್ಲೇ ಇದ್ದಾರೆ. ಮೈನ್ಸ್‌ನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಮೂರು ಸಾವಿರ, ನಾಲ್ಕುಸಾವಿರ, ಐದುಸಾವಿರ ಸಂಬಳ ಕೊಡಬೇಕೆಂದು ಇದೆ. ನಾನೂ ಫ್ಯಾಕ್ಟರಿಯಲ್ಲಿ ಟ್ರೇಡ್ ಯೂನಿಯನ್‌ನಲ್ಲಿ ಕೆಲಸ ಮಾಡಿದ್ದೇನೆ. ಮೈನ್ಸ್‌ನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಏನು ಮೋಸ ಮಾಡುತ್ತಿದ್ದಾರೆ ಎಂದರೆ ಕಾರ್ಮಿಕರಿಗೆ ಲೇಬರರ್ ಎಂದು ಅಪಾಯಿಂಟ್‌ಮೆಂಟ್ ಆರ್ಡರ್ ಕೊಡುತ್ತಾರೆ , ಅಟೆಂಡರ್ ಎಂದು ಅಪಾಯಿಂಟ್‌ಮೆಂಟ್ ಆರ್ಡರ್ ಕೊಡುತ್ತಾರೆ. ಆದರೆ ಅವರಿಂದ ಕೆಲಸ ತೆಗೆದುಕೊಳ್ಳುವುದು ಏನು ಎಂದರೆ ಅವರಿಂದ ದೊಡ್ಡ ದೊಡ್ಡ ಡಂಪರ್‌ಗಳನ್ನು ನಡೆಸುತ್ತಾರೆ. ನಾಲ್ಕು ಐದು ಸಾವಿರ ರೂಪಾಯಿ ಸಂಬಳದ ಕೆಲಸವನ್ನು ಲೇಬರ್‌ನಿಂದ ಮಾಡಿಸುತ್ತಿದ್ದಾರೆ. ಇದರ ಬಗ್ಗೆ ಗಮನ ಹರಿಸಿದ್ದೀರಾ ? ಇದು ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಚೆನ್ನಾಗಿ ಗೊತ್ತಿದೆ. ಇಲ್ಲ ಎಂದು ಹೇಳುವುದಿಲ್ಲ. ನಾನೇ ನನ್ನ ಸ್ವಂತ ಎಕ್ಸಾಂಪಲ್ ಕೊಡುತ್ತೇನೆ. ನನ್ನ ತಮ್ಮ ರಾಜಶ್ರೀ ಸಿಮೆಂಟ್ ಫ್ಯಾಕ್ಟರಿಯಲ್ಲಿ ಅಟೆಂಡರ್ ಎಂದು ಕೆಲಸ ಮಾಡುತ್ತಿದ್ದಾನೆ. ಅವನು 1200 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದಾನೆ. ಅವನ ಹೆಸರು ನರಸಿಂಗ ಚವಾಣ್ ಎಂದು. ಅವನಿಂದ ದೊಡ್ಡ ವಾಹನ ನಡೆಸುತ್ತಾರೆ, 4 ಸಾವಿರ ರೂಪಾಯಿ ಸಂಬಳ ಕೊಡತಕ್ಕ ವಾಹನವನ್ನು ಅವನ ಕೈಯಲ್ಲಿ ನಡೆಸುತ್ತಿದ್ದಾರೆ. ಇದು ನ್ಯಾಯವೇ? ನಮ್ಮ ರಾಜ್ಯದಲ್ಲಿ ಮೈನ್ಸ್ ಆಕ್ಟ್ ಇದೆ. ಆದರೆ ಅಧಿಕಾರಿಗಳು ಅದನ್ನು ಬಿಟ್ಟು ಕೊಟ್ಟಿದ್ದಾರೆ. ಅವರ ಮೇಲೆ ಹಿಡಿತ ತೆಗೆದುಕೊಳ್ಳುವುದು ನಿಮ್ಮ ಜವಾಬ್ದಾರಿ ಎಂಬುದನ್ನು ನೀವು ಮರೆಯುತ್ತಿದ್ದೀರಿ. ಏನು ಮಾಡುತ್ತಿದ್ದಾರೆ ನಿಮ್ಮ ಲೇಬರ್ ಡಿಪಾರ್ಟ್‌ಮೆಂಟ್‌ನವರು ? ಇದೊಂದು ಎಕ್ಸಾಂಪಲ್ ನಾನು ಹೇಳುತ್ತಿದ್ದೇನೆ. ಅವರು ಏತಕ್ಕೆ ಈ ರೀತಿ ಮಾಡುತ್ತಿದ್ದಾರೆ ? ಐದು ಸಾವಿರ ರೂಪಾಯಿ ಸಂಬಳ ಕೊಡತಕ್ಕ ಮೈನ್ಸ್‌ನಲ್ಲಿ ಕೇವಲ 1200 ರೂಪಾಯಿಗೆ ದುಡಿಸುತ್ತಿದ್ದಾರೆ. ಅವರಿಗೆ ದುಡ್ಡು ಸಂಪಾದನೆ ಆಗುತ್ತಿದೆ. ದುಡ್ಡು ಸೇವ್ ಮಾಡತಕ್ಕದ್ದು ಅವರ ಕರ್ತವ್ಯ.

ಆದರೆ ನಮ್ಮ ಸರಕಾರದ ಕಡೆಯಿಂದ ಬಡ ಕಾರ್ಮಿಕರಿಗೆ ರಕ್ಷಣೆ ಕೊಡತಕ್ಕದ್ದು, ಸಂಬಳ ಜಾಸ್ತಿ ಮಾಡತಕ್ಕದ್ದು ನಾವು ಮಾಡುತ್ತಿಲ್ಲ. ಅದಕ್ಕೆ ನಾನು ತಮಗೆ ನೇರವಾಗಿ ಹೇಳುತ್ತಿದ್ದೇನೆ. ಮೈನ್ಸ್‌ನಲ್ಲಿ ಕೆಲಸ ಮಾಡತಕ್ಕಂಥ ಪ್ರತಿಯೊಂದು ಕಾರ್ಮಿಕನಿಗೆ ಅವರು ಏನೆಂದು ಅಪಾಯಿಂಟ್‌ಮೆಂಟ್ ಆರ್ಡರ್ ಕೊಟ್ಟಿದ್ದಾರೆ ಅದೇ ರೀತಿ ಅವರು ಕೆಲಸ ಮಾಡಬೇಕು. ಅದನ್ನು ಮಾಡಲಿಲ್ಲ, ಎಂದರೆ ಮಾಲೀಕರ ಮೇಲೆ ಕೇಸ್ ಹಾಕಿ, ಕಾರ್ಮಿಕರಿಗೆ ಬರತಕ್ಕ ನಾಲ್ಕು ಸಾವಿರ ಐದು ಸಾವಿರ ಸಂಬಳ ಕೊಡಿಸಬೇಕು. ಈ ಕೆಲಸ ತಾವು ಮಾಡಬೇಕೆಂದು ತಮಗೆ ನೇರವಾಗಿ ಸಲಹೆ ಮಾಡುತ್ತಿದ್ದೇನೆ. ಇನ್ನು ಹೈದರಾಬಾದ್ ಕರ್ನಾಟಕದಲ್ಲಿ ಇರತಕ್ಕಂಥ ಫ್ಯಾಕ್ಟರೀಸ್‌ನಲ್ಲಿ ಹೆಣ್ಣುಮಕ್ಕಳು ಕೆಲಸ ಮಾಡುತ್ತಿದ್ದಾರೆ. ಸ್ವಾಮಿ ಲೇಬರ್ ಆಕ್ಟ್‌ನಲ್ಲಿ ಹೆಣ್ಣುಮಕ್ಕಳು ಸಿಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಬಾರದೆಂದು ಇದೆ. ಆದರೆ ರಾತ್ರಿ ಹೊತ್ತಿನಲ್ಲಿ, ಸಾಯಂಕಾಲದ ಟೈಮ್‌ನಲ್ಲಿ ಹೆಣ್ಣುಮಕ್ಕಳು ಲೇಬರರ್ಸ್‌ನ್ನು ಕರೆದುಕೊಂಡು ಹೋಗಿ ಕೆಲಸ ಮಾಡಿಸುತ್ತಿದ್ದಾರೆ. ಏನು ಮಾಡುತ್ತಿದ್ದಾರೆ ನಿಮ್ಮ ಕಾರ್ಮಿಕ ಇಲಾಖೆಯವರು ? ಲೇಬರ್ ಆಕ್ಟ್ ಏನು ಹೇಳುತ್ತಿದೆ ? ಹೆಣ್ಣು ಮಕ್ಕಳಿಂದ ಫ್ಯಾಕ್ಟರಿಯಲ್ಲಿ ಕೆಲಸ ತೆಗೆದುಕೊಳ್ಳುತ್ತಿದ್ದಾರೆ. ಇದು ನಿಮ್ಮ ಗಮನಕ್ಕೆ ಬರಲಿಲ್ಲವೇ ? ನಿಮ್ಮ ಅಧಿಕಾರಿಗಳಿಗೆ ಇದು ಗೊತ್ತಿದೆ. ಹೆಣ್ಣು ಮಕ್ಕಳನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ಆಕ್ಟ್ ಇದೆ. ಈ ಬಗ್ಗೆ ಕಟ್ಟುನಿಟ್ಟಾದ ಒಂದು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸರಕಾರಕ್ಕೆ ಒತ್ತಾಯ ಮಾಡುತ್ತೇನೆ. ನನ್ನ ಭಾಗದಲ್ಲಿರತಕ್ಕಂಥ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಕೆಲಸ ಕೊಡುತ್ತಿಲ್ಲ. ಏತಕ್ಕೆ ಸ್ವಾಮಿ ? ನಮ್ಮ ಕರ್ನಾಟಕ ರಾಜ್ಯದಲ್ಲಿ ಸಿಮೆಂಟ್ ಫ್ಯಾಕ್ಟರಿಗಳನ್ನು ಅವರು ಸ್ಥಾಪನೆ ಮಾಡುತ್ತಿದ್ದಾರೆ, ನಮ್ಮ ರಾಜ್ಯದ ಕಲ್ಲು ತೆಗೆದುಕೊಳ್ಳುತ್ತಿದ್ದಾರೆ, ನೀರು ತೆಗೆದುಕೊಳ್ಳುತ್ತಿದ್ದಾರೆ, ಮಣ್ಣು ತೆಗೆದುಕೊಳ್ಳುತ್ತಿದ್ದಾರೆ, ಎಲೆಕ್ಟ್ರಿಸಿಟಿ ತೆಗೆದುಕೊಳ್ಳುತ್ತಿದ್ದಾರೆ, ಆದರೆ ಕನ್ನಡಿಗರಿಗೆ ನೌಕರಿ ಕೊಡುವುದಿಲ್ಲ. ಏತಕ್ಕೆ ಕನ್ನಡಿಗರು ಚೆನ್ನಾಗಿಲ್ಲವೇ ? ರಾಜಾಸ್ಥಾನ, ಗುಜರಾತ್, ಬಾಂಬೆಯಿಂದ ಕರೆಸಿ ಕೆಲಸಮಾಡಿಸಿಕೊಳ್ಳುತ್ತಿದ್ದಾರೆ. ಲೇಬರ್ ಕೆಲಸವನ್ನೂ ಅವರು ನಮಗೆ ಕೊಡುತ್ತಿಲ್ಲ. ಏತಕ್ಕೆ ಕೊಡುತ್ತಿಲ್ಲ ಎಂದರೆ ಲೋಕಲ್ ಆಗಿ ಅಪಾಯಿಂಟ್‌ಮೆಂಟ್ ಕೊಟ್ಟರೆ ಅಲ್ಲಿ ನಾಳೆ ಯೂನಿಯನ್ಸ್ ಸ್ಟ್ರಾಂಗ್ ಆಗಿ ನಮಗೆ ಕಷ್ಟ ಬರುತ್ತದೆ ಎಂಬ ದೃಷ್ಟಿಯಿಂದ ಅವರು ಕನ್ನಡಿಗರಿಗೆ ಕೆಲಸ ಕೊಡುತ್ತಿಲ್ಲ. ಇದನ್ನು ತಾವು ವೆರಿಫಿಕೇಷನ್ ಮಾಡಬೇಕು. ನಮ್ಮ ರಾಜ್ಯದ ಎಲ್ಲಾ ಖನಿಜ ಸಂಪತ್ತು ತೆಗೆದುಕೊಂಡು ಸಿಮೆಂಟ್ ಮಾಡಿ ಅವರು ಶ್ರೀಮಂತರಾಗುತ್ತಿದ್ದಾರೆ. ಆದರೆ ಕನ್ನಡಿಗರಿಗೆ ನೌಕರಿ ಕೊಡುತ್ತಿಲ್ಲ ಎಂದರೆ ಇದು ದುಃಖದ ವಿಷಯ. ಈ ಬಗ್ಗೆ ವೆರಿಫಿಕೇಷನ್ ಮಾಡಿ ಕನ್ನಡಿಗರಿಗೆ ನೌಕರಿ ಸಿಗುವ ಹಾಗೆ ಮಾಡಬೇಕು. ಅಕೌಂಟ್ಸ್ ಆಫೀಸ್ ಲೆವೆಲ್‌ನಲ್ಲಿ ಅವರು ಅಕೌಂಟ್ಸ್ ಇಡತಕ್ಕಂಥ ಪ್ರವೃತ್ತಿ ನೋಡಿದರೆ ನಮ್ಮ ಸರಕಾರಕ್ಕೆ ಅವರು ಮೋಸ ಮಾಡುತ್ತಿದ್ದಾರೆಂದು ನಾನು ತಮ್ಮಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ನಮ್ಮ ಕನ್ನಡಿಗರು ಯಾರೂ ಇಲ್ಲ. ನಂಬರ್ ಒನ್ ರೆಕಾರ್ಡ್ಸ್, ನಂಬರ್ ಟು ರೆಕಾರ್ಡ್ಸ್, ನಂಬರ್ ಥ್ರೀ ರೆಕಾರ್ಡ್ಸ್ ಎಷ್ಟು ರೆಕಾರ್ಡ್ಸ್ ಇದೆ ನಮಗೆ ಗೊತ್ತಿಲ್ಲ. ಅವರದ್ದು ಎಷ್ಟು ಸಿಮೆಂಟ್ ಟ್ರಕ್ಸ್ ಹೊರಗಡೆ ಹೋಗುತ್ತದೆ, ಲೆಕ್ಕ ಇಲ್ಲ, ಬರುವುದೂ ಲೆಕ್ಕ ಇಲ್ಲ. ಸ್ವಾಮಿ ನಮ್ಮ ಕಾರ್ಮಿಕರು ಅಲ್ಲಿ ಬೆವರು ಸುರಿಸಿ ಕಷ್ಟಪಟ್ಟು, ದುಡಿದು ಕೆಲಸ ಮಾಡಿ ಅವರಿಗೆ ಕೊಡುತ್ತಿದ್ದಾರೆ. ಅಂತಹವರ ಮೇಲೆ ನಿಗಾ ಇಡಬೇಕು. ಕಟ್ಟುನಿಟ್ಟಾದ ಹಿಡಿತ ಇಡಬೇಕೆಂದು ಕೇಳುತ್ತೇನೆ. ಈ ಕಾರ್ಖಾನೆಯಲ್ಲಿರತಕ್ಕಂಥ ಕಾರ್ಮಿಕರಿಗೆ ವಸತಿ ಸೌಕರ್ಯ ಇಲ್ಲ. ಏತಕ್ಕೆ ಸ್ವಾಮಿ ಇವರಿಗೆ ವಸತಿ ಸೌಕರ್ಯ ಕೊಡುತ್ತಿಲ್ಲ. ಪರ್ಮನೆಂಟ್ ಆಗಿ ದುಡಿಸಿಕೊಳ್ಳುತ್ತಿದ್ದಾರೆ, ಅವರಿಂದ ಕೆಲಸ ತೆಗೆದುಕೊಳ್ಳುತ್ತಾರೆ, ಆದರೆ ಅವರಿಗೆ ಇರುವುದಕ್ಕೆ ಮನೆ ಕೊಡುವುದಿಲ್ಲ. ಏತಕ್ಕೆ ಕೊಡುವುದಿಲ್ಲ, ಆದರೆ ಅವರ ಕಾರ್ಖಾನೆಗೆ ಡೆಲ್ಲಿಯಿಂದ ಬಂದರೆ ಬಾಂಬೆಯಿಂದ ಬಂದರೆ, ಎಸ್ ಪಿ ಸಾಹೇಬರು ಬಂದರೆ, ಡಿ.ಐ.ಜಿ. ಸಾಹೇಬರು ಬಂದರೆ, ಡಿ.ಸಿ. ಸಾಹೇಬರು ಬಂದರೆ, ಫಸ್ಟ್‌ಕ್ಲಾಸ್ ಬಂಗಲೆ ಕೊಡುತ್ತಾರೆ. ನಮ್ಮ ಕಾರ್ಮಿಕರಿಗೆ ಏತಕ್ಕೆ ಕೊಡುವುದಿಲ್ಲ, ನಮ್ಮ ಕಾರ್ಮಿಕರಿಗೆ ವಸತಿ ಸೌಕರ್ಯ ಕೊಡುವುದಕ್ಕೆ ಏನಾಗಿದೆ?

7. 15 ಪಿ. ಎಂ.

ನಮ್ಮ ಕಾರ್ಮಿಕರಿಗೆ ಏಕೆ ಮನೆಗಳನ್ನು ಕೊಡುತ್ತಿಲ್ಲ ಅವರು ? ಯಾವ ಕಾರ್ಮಿಕ ಫ್ಯಾಕ್ಟರಿಯಲ್ಲಿ ದುಡಿಯುತ್ತಾನೋ ಅವನಿಗೆ ವಸತಿ ಸೌಕರ್ಯ ಕೊಡುವುದಿಲ್ಲವೆಂದರೆ ಇದು ಅನ್ಯಾಯದ ವಿಷಯ. ಪರ್ಮನೆಂಟ್ ಆಗಿರತಕ್ಕಂಥ ಕಾರ್ಮಿಕರಿಗೆ ಪರ್ಮನೆಂಟ್ ವಸತಿ ಸೌಕರ್ಯ ಕೊಡುವುದಕ್ಕೆ ತಾವು ಏರ್ಪಾಡು ಮಾಡಿಕೊಡಬೇಕು. ಇದು ತಮ್ಮ ಗಮನಕ್ಕೆ ಬಂದಿಲ್ಲವೆಂದರೆ ತಮ್ಮ ಗಮನಕ್ಕೆ ತಂದುಕೊಡತಕ್ಕಂಥ ಕರ್ತವ್ಯ ನನ್ನದು. ಹೈದರಾಬಾದ್ ಕರ್ನಾಟಕದ ಭಾಗದಲ್ಲಿರತಕ್ಕಂಥ ಫ್ಯಾಕ್ಟರಿ ಸಮಸ್ಯೆ ನನಗೆ ಗೊತ್ತಿದೆ. ಈ ಕಡೆ ಹೇಗಿದೆಯೋ ನನಗೆ ಗೊತ್ತಿಲ್ಲ. ಆದರೆ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಎಲ್ಲಾ ಫ್ಯಾಕ್ಟರಿಗಳಲ್ಲಿ ಪರ್ಮನೆಂಟ್ ಆಗಿರತಕ್ಕಂಥ ಕಾರ್ಮಿಕರಿಗೆ ವಸತಿ ಸೌಕರ್ಯ ಕೊಡತಕ್ಕಂಥ ವ್ಯವಸ್ಥೆ ತಾವು ಮಾಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ. ಕಾರ್ಖಾನೆಗಳಲ್ಲಿ ಕಾಂಟ್ರಾಕ್ಟ್ ಲೇಬರ್‌ಗಳ ರಕ್ತವನ್ನು ಫ್ಯಾಕ್ಟರಿಯವರು ಹೀರುತ್ತಿದ್ದಾರೆ. ಕಾಂಟ್ರಾಕ್ಟ್ ಲೇಬರ್ ಆಕ್ಟನ್ನು ಅಬಾಲಿಷ್ ಮಾಡಿ. ಪರ್ಮನೆಂಟ್ ಕೆಲಸವನ್ನು ಕಂಟ್ರಾಕ್ಟ್ ಲೇಬರ್‌ಗಳಿಂದ ತೆಗೆದುಕೊಳ್ಳುತ್ತಿದ್ದಾರೆ. ಇದು ನ್ಯಾಯ ಇದೆಯೇ ಸ್ವಾಮಿ ? ಎಲ್ಲಿಯವರೆಗೆ ಫ್ಯಾಕ್ಟರಿ ಓಡುತ್ತಿರುತ್ತದೋ ಅಲ್ಲಿಯವರೆಗೆ ಲೋಡಿಂಗ್ ಕೆಲಸ ಇದ್ದೇ ಇರುವುದರಿಂದ ಈ ಕಾಂಟ್ರಾಕ್ಟ್ ಲೇಬರ್ಸ್‌ನಿಂದ ಲೋಡಿಂಗ್ ಕೆಲಸ ಏಕೆ ಮಾಡಿಸುವುದು ಸ್ವಾಮಿ. ಕಾಂಟ್ರಾಕ್ಟ್ ಲೇಬರ್ ಆಕ್ಟ್‌ನ್ನು ತೆಗೆದುಹಾಕಿ. ಕೇವಲ 600 ರೂ ಸಂಬಳ ಕೊಟ್ಟು ತಿಂಗಳಾನುಗಟ್ಟಲೆ ದುಡಿಸಿ ಕೊಳ್ಳುತ್ತಿದ್ದಾರೆ. ಇದು ಅನ್ಯಾಯ. ಇದನ್ನು ತೆಗೆದುಹಾಕಿ. ಕಾಂಟ್ರಾಕ್ಟ್ ಮೇಲೆ ಮಾಡಿಸುವುದು ಚಿಕ್ಕ ಕೆಲಸಗಳನ್ನು ಮಾತ್ರ. ಚಿಕ್ಕ ಕೆಲಸಗಳನ್ನು ಪೀಸ್ ವರ್ಕ್ ಮೇಲೆ ಮಾಡಿಸಿ. ವರ್ಷಾನುಗಟ್ಟಲೆ ಇರತಕ್ಕಂಥ ಕೆಲಸವನ್ನು ಕಾಂಟ್ರಾಕ್ಟ್ ಮೇಲೆ ಮಾಡಿಸಬಾರದು. ಈ ಜಾಗಕ್ಕೆ ಪರ್ಮನೆಂಟ್ ಎಂಪ್ಲಾಯಿಸ್ ನೇಮಕ ಮಾಡಬೇಕು. ಫ್ಯಾಕ್ಟರಿಯವರು ಕಾರ್ಮಿಕರ ರಕ್ತವನ್ನು ಹೀರುತ್ತಿದ್ದಾರೆ. ನನ್ನ ಫ್ಯಾಕ್ಟರಿಯಲ್ಲೇ 180 ಕಾಂಟ್ರಾಕ್ಟ್ ಲೇಬರ್ಸ್ ಇದ್ದಾರೆ. ಪರ್ಮನೆಂಟ್ ಕೆಲಸ ಮಾಡತಕ್ಕಂಥ 180 ಜನ ಎಂಪ್ಲಾಯಿಸ್ ಇದ್ದಾರೆ. ಕಾಂಟ್ರಾಕ್ಟ್‌ದಾರರು 180, ಇದು ಎಂಥಾ ನ್ಯಾಯ ? ಫ್ಯಾಕ್ಟರಿಯಲ್ಲಿ ಮಾಡತಕ್ಕಂಥ ಕೆಲಸವನ್ನು 75 ಭಾಗ ಕಂಟ್ರಾಕ್ಟ್ ಸಿಸ್ಟಮ್ ಮೇಲೆ ಮಾಡಿಸುತ್ತಿದ್ದಾರೆ. 25 ಪರ್‌ಸೆಂಟ್ ಮಾತ್ರ ಹೆಸರಿಗೆ ಪರ್ಮನೆಂಟ್ ವರ್ಕ್ಸ್ ಎಂದು ಇಟ್ಟುಕೊಂಡು 75 ಪರ್‌ಸೆಂಟ್ ಕಾರ್ಮಿಕರು ಏನು ಮಾಡುತ್ತಿದ್ದಾರೆ ಅದನ್ನು ಕಾಂಟ್ರಾಕ್ಟ್ ಸಿಸ್ಟಮ್ ಮೇಲೆ ಮಾಡಿಸುತ್ತಿದ್ದಾರೆ. ಇದನ್ನು ತೆಗೆದುಹಾಕಿ 25 ಪರ್‌ಸೆಂಟ್ ಮಾತ್ರ ಕಾಂಟ್ರಾಕ್ಟ್ ಸಿಸ್ಟಮ್ ಮೇಲೆ ಇಡಿ. 75 ಪರ್‌ಸೆಂಟನಷ್ಟು ಪರ್ಮನೆಂಟ್ ವರ್ಕರ್ಸ್ ಮಾಡಬೇಕೆಂದು ನಾನು ಕೇಳುತ್ತಾ ಇನ್ನು ಯೂನಿಯನ್ ಮತ್ತು ಟ್ರೇಡ್ ಯೂನಿಯನ್ ಫ್ಯಾಕ್ಟರಿಯಲ್ಲಿ ಯಾವ ತರಹ ಇದೆ? ತಮಗೆ ಸ್ವಲ್ಪ ಮಟ್ಟಿಗೆ ಗೊತ್ತಿರಬಹುದು. ತಾವು ಲೇಬರ್ ಮಿನಿಸ್ಟರ್ ಆದ ನಂತರ ಚೆನ್ನಾಗಿ ಸ್ಟಡಿಮಾಡಿರಬೇಕು. ಇದೇ ಟ್ರೇಡ್ ಯೂನಿಯನ್‌ನಲ್ಲಿ ನಾನು 5 ವರ್ಷ ಕೆಲಸ ಮಾಡಿದ್ದೇನೆ. ಈ ಟ್ರೇಡ್ ಯೂನಿಯನ್ ಆಕ್ಟ್‌ನಲ್ಲಿ , ಒಂದು ಯೂನಿಯನ್, 2 ಯೂನಿಯನ್, 2ಯೂನಿಯನ್, 3 ಯೂನಿಯನ್, 4 ಯೂನಿಯನ್, ಐದು, ಹತ್ತು, 20 ಯೂನಿಯನ್ ಮಾಡಬಹುದು. ಇದು ಆಕ್ಟ್‌ನಲ್ಲಿದೆ. ಬಹಳ ಬೆಸ್ಟ್ ಯೂನಿಯನ್ ಮಾಡಬಹುದು. ಆದರೆ ಇದರ ದುರುಪಯೋಗವನ್ನು ಆಡಳಿತ ಮಂಡಳಿಯವರು ತೆಗೆದುಕೊಳ್ಳುತ್ತಿದ್ದಾರೆ, ಮಾಡಲಿ. ಆದರೆ ಎಷ್ಟು ಯೂನಿಯನ್ ಮಾಡಿದರೂ ಚುನಾವಣೆ ವರ್ಷಕ್ಕೆ ಒಮ್ಮೆ ಆಗಲೇಬೇಕು. ಇದು ಆಗುತ್ತಿಲ್ಲ. ಏಕೆ ? ಯೂನಿಯನ್ ಯೂನಿಯನ್ ಮಧ್ಯೆ ಜಗಳ ಹಚ್ಚಿ, ಅವರಿಗೆ ಕೊಲೆ ಮಾಡಿಸಿ, ಆಡಳಿತ ಮಂಡಳಿಯವರು ತಮ್ಮ ಕೆಲಸವನ್ನು , ಪ್ರೊಡಕ್ಷನ್ ಅನ್ನು ಚೆನ್ನಾಗಿ ತೆಗೆದುಕೊಳ್ಳುತ್ತಿದ್ದಾರೆ ಸ್ವಾಮಿ. ಆಡಳಿತ ಮಂಡಳಿಯವರು ಜಗಳ ಮಾಡುವುದಕ್ಕೆ ಬರುವುದಿಲ್ಲ. ಆದರೆ ಬಡ ಕಾರ್ಮಿಕರು, ದುಡಿಯತಕ್ಕಂಥ ವರ್ಕರ್ಸ್ ಹೊಡೆದಾಡಿ ಸಾಯುತ್ತಿದ್ದಾರೆ ಈ ವಿಷಯದಲ್ಲಿ. ವರ್ಷಕ್ಕೆ ಒಮ್ಮೆ ಎಲೆಕ್ಷನ್ ಮಾಡತಕ್ಕಂಥ ಯೂನಿಯನ್ ಆಕ್ಟ್‌ನ್ನು ಅಮೆಂಡ್‌ಮೆಂಟ್ ಮಾಡಿ. ಯಾವ ಯೂನಿಯನ್ ಗೆದ್ದು ಬರುತ್ತದೋ ಆ ಯೂನಿಯನ್‌ಗೆ ಒಳ್ಳೆಯ ಸ್ಥಾನವನ್ನು ಕೊಟ್ಟು ಆ ಕಾರ್ಖಾನೆಯಲ್ಲಿ ಮಾನ್ಯತೆಯನ್ನು ಕೊಡಬೇಕು ಸ್ವಾಮಿ. ರೆಕಗ್ನೇಷನ್ ಅನ್ನು ಅವರ ಮನಸ್ಸಿಗೆ ಬಂದವರಿಗೆ ಕೊಡುತ್ತಾರೆ. ನಾವು ಹೇಳುವವರಿಗೆ

ರೆಕಗ್‌ನೇಷನ್ ಕೊಡುವುದಿಲ್ಲ. ಏಕೆ ಸ್ವಾಮಿ ? ಯಾವ ಯೂನಿಯನ್‌ಗೆ ಮೆಜಾರಿಟಿ ಇದೆಯೋ ಅವರಿಗೆ ರೆಕಗ್‌ನೇಷನ್ ಕೊಡಿ. ಮೆಜಾರಿಟಿ ಇಲ್ಲವೆಂದರೆ ಬೇಡ. ಎಲೆಕ್ಷನ್ ಮಾಡುವುದಿಲ್ಲ, ರೆಕಗ್‌ನೇಷನ್ ಕೊಡುವುದಿಲ್ಲ. ಸುಮಾರು ಫ್ಯಾಕ್ಟರಿಗಳಲ್ಲಿ ಇದು ನಡೆಯುತ್ತಿದೆ. ಇದನ್ನು ತೆಗೆದುಹಾಕಿ. ಪ್ರತಿ ವರ್ಷ ಎಲೆಕ್ಷನ್ ಮಾಡತಕ್ಕಂಥ ಸಿಸ್ಟಮ್ ಮಾಡಿ. ಆ ಎಲೆಕ್ಷನ್ ನಮ್ಮ ಸರ್ಕಾರದಿಂದ ಆಗಬೇಕು. ಅವರಿಗೆ ಕಟ್ಟಡ ಇರುವುದಿಲ್ಲ. ಪಾಪ, ಒದ್ದಾಡುತ್ತಾ ಇರುತ್ತಾರೆ. ಕಂಪನಿಯಲ್ಲಿ ಯಾವ ಯೂನಿಯನ್ ಗೆದ್ದು ಬರುತ್ತದೋ ಆ ಯೂನಿಯನ್‌ಗೆ ಕಟ್ಟಡ ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಈ ಮೂಲಕ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಕಾರ್ಮಿಕರ ಕಾಯಿದೆಯ ಬಗ್ಗೆ ಅವರಿಗೆ ಸರಕಾರದ ವತಿಯಿಂದ ತಿಳಿಸಿ ಹೇಳ ಬೇಕಾದ ಒಂದು ವ್ಯವಸ್ಥೆಯನ್ನು ಇಂದು ಮಾಡಬೇಕಾದ ಅವಶ್ಯಕತೆಯು ಇದೆ.

ಕಾರ್ಮಿಕರು ಹೆಚ್ಚಿಗೆ ವಿದ್ಯಾಭ್ಯಾಸವನ್ನು ಪಡೆದವರು ಇರುವುದಿಲ್ಲ. 4 ಮತ್ತು 5ನೇ ಕ್ಲಾಸ್‌ವರೆಗೆ ಓದಿರುವವರು ಇರುತ್ತಾರೆ. ಅವರಿಗೆ ಕಾನೂನು ಅಂದರೆ ಏನೆಂದು ಗೊತ್ತಿಲ್ಲ. ಅವರು ದಿನವಿಡೀ ಮೈಕೊಟ್ಟು ದುಡಿಯುತ್ತಾರೆ, ಊಟ ಮಾಡಿ ಮಲಗಿಬಿಡುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಆದರೆ, ಅವರಿಗೆ ಕಾರ್ಮಿಕರ ಕಾನೂನು ಅಂದರೆ ಏನು ? ಫ್ಯಾಕ್ಟರಿ ಆಕ್ಟ್ ಅಂದರೆ ಏನು ? ಹಾಗೂ ಮತ್ತಿತರ ಕಾರ್ಮಿಕರ ಹಿತಾಸಕ್ತಿಯ ಬಗ್ಗೆ ತಿಳಿಹೇಳಲು ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಕ್ಲಾಸ್‌ಗಳನ್ನು ತೆಗೆದುಕೊಳ್ಳಬೇಕು ಹೀಗೆ ಅವರಿಗೆ ತಿಳುವಳಿಕೆ ನೀಡಿದರೆ ಅವರು ತಮ್ಮ ಸಮಸ್ಯೆಗಳ ಬಗ್ಗೆ ಅರ್ಜಿ ಯಾವ ತರಹದಲ್ಲಿ ಕೊಡಬೇಕು, ಯಾವ ತರಹದಲ್ಲಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಬೇಕು, ಯಾವತರಹದಲ್ಲಿ ತಮ್ಮ ಡಿಮ್ಯಾಂಡ್ಸ್‌ನ್ನು ಈಡೇರಿಸಿಕೊಳ್ಳಬೇಕೆಂಬ ವಿಚಾರದಲ್ಲಿ ಜ್ಞಾನವಂತರಾಗುತ್ತಾರೆ. ಆದ್ದರಿಂದ ಮಾನ್ಯ ಕಾರ್ಮಿಕ ಸಚಿವರು ಈ ಬಗ್ಗೆ ಒಂದು ಏರ್ಪಾಡನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಚೀಫ್ ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್, ಇವರ ಕೆಲವಾದರೂ ಏನು? ಅವರು ಎಲ್ಲಾ ಕಾರ್ಖಾನೆಗಳಿಗೆ ವಿಸಿಟ್ ಮಾಡುತ್ತಾರೆ. ಯಾವ ಯಾವ ಯಂತ್ರಗಳು ಹೇಗೆ ಇವೆ ಎಂದು ತಪಾಸಣೆ ಮಾಡುತ್ತಾರೆ. ಅದರ ಮೇಲೆ ಒಂದು ರಿಪೋರ್ಟ್ ಕೊಡುತ್ತಾರೆ. ಹಾಗೆಯೇ ಆಡಳಿತ ಮಂಡಳಿಯವರ ಜೊತೆಗೆ ಶಾಮೀಲಾಗಿ ಆರಾಮವಾಗಿ ಕುಳಿತುಬಿಡುತ್ತಾರೆ. ಏಕೆಂದರೆ ಫ್ಯಾಕ್ಟರಿಯವರು ಯಾವ ತರಹದಲ್ಲಿ ದುಡ್ಡು ಕೊಡುತ್ತಾರೆ ಅದಕ್ಕೆ ಸರಿಯಾಗಿ ಇವರು ರಿಪೋರ್ಟ್‌ನ್ನು ಕೊಡುತ್ತಾರೆ. ಅವರ ಮೇಲೆ ಸರಕಾರದವರ ಹಿಡಿತ ಇಲ್ಲ. ಹಾಗೆಂದಮೇಲೆ ಸರಕಾರವನ್ನು ನಡೆಸುವವರು ಇನ್ಸ್‌ಪೆಕ್ಟರ್‌ಗಳೇ ಎಂದು ಕೇಳ ಬೇಕಾಗುತ್ತದೆ ? ಇಲ್ಲವಾದರೆ ಅವರ ಮೇಲೆ ಸೂಕ್ತವಾದ ಹಿಡಿತವನ್ನು ಇಡಬೇಕು. ತಪ್ಪಿನಿಂದ ಎಲ್ಲಾದರೂ ಒಂದು ಮಿಷಿನ್ ಒಡೆದು ಹೋದರೆ ನಮ್ಮ ಕಾರ್ಮಿಕರು ಸಾಯುತ್ತಾರೆ. ಆಗ ಇನ್ಸ್‌ಪೆಕ್ಟರ್‌ಗಳು ಫಾಲ್ಸ್ ರಿಪೋರ್ಟ್ ಹಾಕುತ್ತಾರೆ. ಇಂಥ ಘಟನೆಗಳು ಎಷ್ಟೋ ಕಡೆಗಳಲ್ಲಿ ಆಗಿಹೋಗಿವೆ. ಆದ್ದರಿಂದ ಇಂಥ ಇನ್ಸ್‌ಪೆಕ್ಟರ್‌ಗಳ ಮೇಲೆ ಸರಕಾರದವರು ಕಟ್ಟುನಿಟ್ಟಾದ ನಿಗವನ್ನು ಇಟ್ಟು, ಅವರ ಮೇಲೆ ಕಂಟ್ರೋಲ್ ಇಟ್ಟುಕೊಳ್ಳ ಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಶಹಾಬಾದ್‌ನಲ್ಲಿ ಒಂದು ಕಾರ್ಮಿಕರ ಆಸ್ಪತ್ರೆಯ ಕನ್‌ಸ್ಟ್ರಕ್ಷನ್ ಆಗುತ್ತಾ ಇದೆ. ಮಾನ್ಯ ಸಚಿವರುಗಳಾದ ಖರ್ಗೆಯವರಿಗೆ ಮತ್ತು ಧರ್ಮಸಿಂಗ್‌ರವರಿಗೆ ಈ ವಿಚಾರವು ಗೊತ್ತು ಕಾರ್ಮಿಕರ ಆಸ್ಪತ್ರೆಯ ಕ್ಷೇತ್ರದವನಾದ ನಮಗೆ ಹೇಳದೆ, ಕೇಳದೆ ಮಾಡುತ್ತಾ ಇದ್ದಾರೆ. ಕನಿಷ್ಟಪಕ್ಷ ಕಾರ್ಮಿಕರನ್ನು ಕರೆದು ನಿಮ್ಮ ಅನುಕೂಲಕ್ಕೋಸ್ಕರವಾಗಿ ಇದನ್ನು ಮಾಡುತ್ತಾ ಇದ್ದೇವೆ, ಇದರ ಅನುಕೂಲವನ್ನು ಪಡೆದುಕೊಳ್ಳಿ ಎಂದು ಹೇಳುವುದು ಬೇಡವೆ ?

ಇದಕ್ಕಾಗಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಾ ಇದ್ದಾರೆ. ಇಷ್ಟು ಹಣವನ್ನು ಯಾರಿಗೆ ಕೇಳಿ ಖರ್ಚು ಮಾಡುತ್ತಿದ್ದಾರೆ ? ಕಾರ್ಮಿಕರಿಗೆ ಕರೆದು ಹೇಳುವ ಒಂದು ಕನಿಷ್ಟ ಸೌಜನ್ಯವಾದರೂ ಬೇಡವೆ ?

ಆದ್ದರಿಂದ ಈ ಬಗ್ಗೆ ನಾನು ನನ್ನ ದುಃಖವನ್ನು ಈ ಕುರಿತು ವ್ಯಕ್ತಪಡಿಸುತ್ತೇನೆ. ಹಾಗೆಯೇ ಈ ಆಸ್ಪತ್ರೆಯನ್ನು ಕಾರ್ಮಿಕರ ಕಲ್ಯಾಣಕ್ಕಾಗಿ ಕಟ್ಟಿದ್ದು ಅದರ ಉಪಯೋಗಗಳೇನು ಎಂಬ ಬಗ್ಗೆ ಒಂದು ಸಭೆ ಮಾಡಿ ಅವರಿಗೆ ತಿಳಿಸಬೇಕೆಂದು ಹೇಳುತ್ತೇನೆ.

ಮಾನ್ಯ ಕಾರ್ಮಿಕ ಸಚಿವರು ಕೂಡ ತರುಣರು. ನಮ್ಮ ಕಾರ್ಮಿಕರು ತಮ್ಮ ರಕ್ತವನ್ನು ಸುರಿಸಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾರೆ . ಆದರೆ ಕೆಲವೊಂದು ಸಂದರ್ಭಗಳಲ್ಲಿ ಆಡಳಿತ ಮಂಡಳಿಯವರು ಹೇಗೆ ಹೊಡೆಸುತ್ತಾರೆ ಎಂದು ತಮಗೆ ಗೊತ್ತಿರಲಾರದು. ಪೋಲೀಸರನ್ನು ಹಚ್ಚಿ ಹೊಡೆಸುತ್ತಾರೆ, ಗೂಂಡಾಗಳನ್ನು ಹಚ್ಚಿ ಹೊಡೆಸುತ್ತಾರೆ. ಇದರ ಬಗ್ಗೆ ಕಾರ್ಮಿಕರಿಗೆ ಯಾರೂ ರಕ್ಷಣೆ ಕೊಡುವುದಿಲ್ಲ. ಕಾರ್ಮಿಕರಿಗೆ ರಕ್ಷಣೆ ಕೊಡತಕ್ಕಂಥ ಜವಾಬ್ದಾರಿಯು ನಮ್ಮ ಸರಕಾರದವರದ್ದು. ಅದನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳ ಬಗ್ಗೆ ಹೇಳುವುದಾದರೆ. ನಮ್ಮ ರಾಜ್ಯದಲ್ಲಿ 180 ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳು ಇವೆ. ಅವರಿಗೆ ಯಾವುದೇ ಅನುದಾನವನ್ನು ಸರಕಾರವು ಕೊಡುತ್ತಾ ಇಲ್ಲ. ಯಾವ ಖಾಸಗಿ ಐಟಿಐನಲ್ಲಿ ಪಾಸ್ ಆಗಿ ಕಾರ್ಖಾನೆಗಳಿಗೆ ಸೇರುತ್ತಾರೋ ಅಂಥವರಿಗೆ ಅನುದಾನ ಇಲ್ಲ ಅಂದರೆ ಅದು ಅನ್ಯಾಯವಾಗುತ್ತದೆ, ಆದ್ದರಿಂದ ಈ ಸಂಸ್ಥೆಗಳಿಗೂ ಅನುದಾನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಮಾನ್ಯ ಆರೋಗ್ಯ ಸಚಿವರಿಗೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಒಮ್ಮೆ ನಾನು ಗುಲ್‌ಬರ್ಗ ಸರಕಾರಿ ಆಸ್ಪತ್ರೆಗೆ ಹೋಗಿದ್ದೆ. ಅಲ್ಲಿಗೆ ಒಬ್ಬ ಬಡ ಕಾರ್ಮಿಕ ಮಹಿಳೆಯು ಬಂದಿದ್ದರು. ಚಿಕಿತ್ಸೆಗಾಗಿ ಅವರನ್ನು ಆಪರೇಶನ್ ಥಿಯೇಟರ್‌ಗೆ ಕರೆದುಕೊಂಡು ಹೋಗಿದ್ದರು. ಎಕ್ಸ್‌ರೇ ಇತ್ಯಾದಿ ತೆಗೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ಆ ಹೆಣ್ಣುಮಗಳ ಕೈಯಲ್ಲಿ ನೀಡಲ್ ಸಮೇತ ಗ್ಲೂಕೋಸ್ ಬಾಟಲ್ ಇದ್ದುದನ್ನು ಇನ್ನೊಬ್ಬರು ಹಿಡಿದುಕೊಂಡು ಹೊರಗೆ ಅವರ ಪಾಡಿಗೆ ಅವರು ನಡೆದುಕೊಂಡು ಬರುತ್ತಾ ಇದ್ದರು. ನಾನು ಅವರನ್ನು ಕೇಳಿದೆ ಏತಕ್ಕಾಗಿ ಹೀಗೆ ನೀವು ಹೋಗುತ್ತಿದ್ದೀರಿ ಎಂದು ಕೇಳಿದೆ. ಅದಕ್ಕೆ ಅವರು ನಮ್ಮನ್ನು ಹೇಳುವವರು ಕೇಳುವವರು ಇಲ್ಲಿ ಯಾರೂ ಇಲ್ಲ, ಅದಕ್ಕಾಗಿ ನಾವು ಹೋಗುತ್ತಿದ್ದೇವೆ ಎಂದು ಉತ್ತರಿಸಿದರು. ನಾನು ಡೈರೆಕ್ಟರ್‌ರವರನ್ನು ಕೇಳಿದೆ, ಅದಕ್ಕೆ ಅವರು ಒಂದು ಪತ್ರ ಬರೆದು ನನಗೆ ಉತ್ತರಿಸಿದ್ದಾರೆ. ಅದನ್ನು ತಮಗೆ ಬೇಕಾದರೆ ತಂದು ಕೊಡುತ್ತೇವೆ. ಪೇಷಂಟ್‌ಗೆ ನಾವು ಹೋಗು ಎಂದು ಹೇಳಲಿಲ್ಲ ಆದರೆ ಅವರೇ ಎದ್ದು ಹೋಗಿದ್ದಾರೆ ಎಂದು ಪತ್ರದಲ್ಲಿ ಹೇಳಿದ್ದಾರೆ. ಅಂದರೆ ಇದು ಯಾವ ವ್ಯವಸ್ಥೆ ಸ್ವಾಮಿ ? ಇದೇನು ಆಸ್ಪತ್ರೆಯೋ ಅಥವಾ ಬೇರೆ ಏನೋ ?ಸರಕಾರದ ಆಸ್ಪತ್ರೆಗಳು ಈ ತರದಲ್ಲಿ ಇದ್ದರೆ ಸರಿಕಾಣುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡು ಸಾರ್ವಜನಿಕರಿಗೆ ಆಸ್ಪತ್ರೆಗಳಲ್ಲಿ ಒಳ್ಳೆಯ ಸೇವೆ ಸಿಗುವಂತಾಗ ಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಸಹಕಾರ ಮಂತ್ರಿಗಳ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಇನ್ನು ಮುಂದೆ ಸಹಕಾರ ಸಂಸ್ಥೆಗಳ ಚುನಾವಣೆಯನ್ನು ಪಾರ್ಟಿ ಚಿಹ್ನೆಯ ಮೇಲೆ ಇಟ್ಟು ಮಾಡಬೇಕು. ಯಾಕೆಂದರೆ ಈಗಿನ ಪದ್ಧತಿಯಲ್ಲಿ ಅನ್ಯಾಯವಾಗುತ್ತಾ ಇದೆ. ಈ ಪದ್ಧತಿಯಿಂದಾಗಿ ಒಂದು ವರ್ಗ, ಕೋಮಿನವರು ಒಂದೇ ಕಡೆ ಆಗುತ್ತಾ ಇದ್ದಾರೆ. ಇದರಿಂದ ನಿಜವಾದಂಥ ನ್ಯಾಯ ಸಿಗುತ್ತಾ ಇಲ್ಲ. ಡೆಮಾಕ್ರಟಿಕ್ ಸೆಟ್ ಅಪ್‌ನಲ್ಲಿ ಪಾರ್ಟಿ ಚಿಹ್ನೆ ಇರಬೇಕು, ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು, ನನಗೆ ಮಾತನಾಡಲು ಅವಕಾಶವನ್ನು ಒದಗಿಸಿಕೊಟ್ಟ ತಮ್ಮನ್ನು ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು ಮಾನ್ಯ ಕಾರ್ಮಿಕ ಸಚಿವರು ಮತ್ತು ಮಾನ್ಯ ಸಹಕಾರ ಸಚಿವರುಗಳು ಮಂಡಿಸಿದಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನನ್ನ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ. ಮೊಟ್ಟ ಮೊದಲನೇಯದಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಈ ಬಗ್ಗೆ ಅಭಿನಂದಿಸಬೇಕಾಗಿದೆ. ಯಾಕೆಂದರೆ ಬೃಹದಾಕಾರವಾಗಿರತಕ್ಕಂಥ ಆರೋಗ್ಯ ಇಲಾಖೆಗೆ, ಬೃಹದಾಕಾರವಾಗಿರತಕ್ಕಂಥ ಸಹಕಾರ ಇಲಾಖೆಗೆ, ಮತ್ತು ಪುಟ್ಟದಾಗಿರತಕ್ಕಂಥ ಕಾರ್ಮಿಕ

ಇಲಾಖೆಗೆ ಸೂಕ್ತರಾದಂಥ ಸಚಿವರುಗಳನ್ನು ನೇಮಿಸುವುದರ ಮೂಲಕ ಅಭಿನಂದನೀಯರಾಗಿದ್ದಾರೆ. ಮಾನ್ಯ ಆರೋಗ್ಯ ಇಲಾಖೆಯವರು ಒಂದು ಪುಸ್ತಕದಲ್ಲಿ ಕೆಲವು ವಿಚಾರಗಳನ್ನು ಹೇಳಿರುವುದನ್ನು ನಾನು ಗಮನಿಸಿದ್ದೇನೆ. 2000ದ ಇಸವೆಯೊಳಗಾಗಿ ರಾಷ್ಟ್ರದ ಎಲ್ಲಾ ಜನರಿಗೆ ಆರೋಗ್ಯಜೀವನವನ್ನು ಕೊಡುತ್ತೇವೆ ಎಂದು ಅದರಲ್ಲಿ ಹೇಳಿದ್ದಾರೆ. ಆದರೆ ಅದಕ್ಕಾಗಿ ಇಟ್ಟುಕೊಂಡಿರುವುದು ಕೇವಲ 400 ಕೋಟಿ ರೂಪಾಯಿಗಳು 2000ನೇ ಇಸವಿಯೊಳಗಾಗಿ ಎಲ್ಲರಿಗೂ ಪೂರ್ಣ ಆರೋಗ್ಯಭಾಗ್ಯವನ್ನು ಕೊಡಬೇಕಾದರೆ, ಆ ಬಗ್ಗೆ ಕೆಲಸ ಮಾಡಬೇಕಾದರೆ ಈ ಹಣ ಸಾಲದು. ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಜನರ ಆರೋಗ್ಯಮಟ್ಟವು ಯಾವರೀತಿಯಲ್ಲಿ ಇದೆ ಅಂದರೆ ಮತ್ತು ನಾವುಗಳು ಆರೋಗ್ಯದ ವಿಚಾರದಲ್ಲಿ ಹೇಗೆ ನಡೆದು ಕೊಳ್ಳುತ್ತಿದ್ದೇವೆ ಎಂದು ನಾನು ಪ್ರತ್ಯೇಕವಾಗಿ ಹೇಳ ಬೇಕಾಗಿಲ್ಲ, ಅಧ್ಯಕ್ಷಿಣಿಯವರೇ, ನಮ್ಮ ರಾಷ್ಟ್ರದವರೊಬ್ಬರು ಅಮೇರಿಕಾಕ್ಕೆ ಹೋಗುತ್ತಾರೆ, ಬಹಳ ಚೆನ್ನಾಗಿ ಎಲೆ ಅಡಿಕೆ ಹಾಕತಕ್ಕಂತಹ ಮನುಷ್ಯ ಅವನು. ಅವನು ನ್ಯೂಯರ್ಕ್‌ನಲ್ಲಿ ಎಲೆ ಅಡಿಕೆ ಹಾಕಿಕೊಂಡು ಕೊನೆಯಲ್ಲಿ ರೋಡ್‌ನಲ್ಲಿ ಉಗಿಯುತ್ತಾನೆ. ಇವನು ಉಗಿದಾಗ ಅಲ್ಲಿಯವನೊಬ್ಬ ನೋಡಿ ಏನು ಈ ಮನುಷ್ಯ ಇಷ್ಟೊಂದು ರಕ್ತ ವಾಂತಿ ಮಾಡಿದ್ದಾನೆಂದು ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಆಪರೇಷನ್‌ಗೆ ಶುರು ಮಾಡುತ್ತಾರೆ. ಏಕೆಂದರೆ, ಅವರಿಗೆ ಇಂಗ್ಲೀಷ್ ಭಾಷೆ ಬರುತ್ತದೋ, ಅವರಿಗೆ ಕನ್ನಡ ಭಾಷೆ ಬರುತ್ತದೋ ಒಟ್ಟಿನಲ್ಲಿ ಅವನಿಗೆ ಆಪರೇಷನ್ ಶುರು ಮಾಡಿ ಸರ್ಜರಿ ಮಾಡುತ್ತಾರೆ. ಇವತ್ತು ನಮ್ಮ ರಾಷ್ಟ್ರದಲ್ಲಿ ರಕ್ತವನ್ನೇ ವಾಂತಿ ಮಾಡಿಕೊಂಡು ಬಿದ್ದಿದ್ದರೂ ಸಹ ಯಾರೂ ನೋಡದೇ ಇರತಕ್ಕಂತಹ ಪರಿಸ್ಥಿತಿಯನ್ನು ಈ ಆರೋಗ್ಯ ಇಲಾಖೆಯಲ್ಲಿ ನೋಡುತ್ತಿದ್ದೇವೆ. ಇದಕ್ಕೆ ಆರೋಗ್ಯ ಮಂತ್ರಿಗಳಾದ ತಾವು ಏನು ಹೇಳುತ್ತೀರಿ. ಮಾನ್ಯ ಹಣಕಾಸು ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ. ಈ ಆರೋಗ್ಯ ಇಲಾಖೆಗೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಕೊಡುವಲ್ಲಿ ತಾರತಮ್ಯ ನಡೆಯುತ್ತಿದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂತಹ ಜನಗಳಿಗೆ ನೀವು ಏನು ಆರೋಗ್ಯ ಕೊಡುತ್ತಿದ್ದೀರಿ. ಸಿಟಿಯಲ್ಲಿ ಇರತಕ್ಕಂತಹ ಜನಗಳಿಗೆ ನೀವು ಏನು ಆರೋಗ್ಯ ಕೊಡುತ್ತಿದ್ದೀರಿ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗಿದೆ. ತಾವು ಸಹ ಗ್ರಾಮಾಂತರ ಪ್ರದೇಶದಿಂದ ರೈತಾಪಿ ವರ್ಗದಿಂದ ಬಂದವರಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳವರು ಸಹ ಗ್ರಾಮಾಂತರದಿಂದ ಬಂದವರಿದ್ದಾರೆ. ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಇವತ್ತು ಬಡ ಬೋರೇಗೌಡನಿಗೆ ಒಂದು ಕಡೆಯಿಂದ ಪೆಟ್ಟು ತಪ್ಪಿದ್ದಲ್ಲ, ನಾವು ಕಳೆದ 3-4 ಬೇಡಿಕೆಗಳನ್ನು ನೋಡುತ್ತಿದ್ದೇವೆ. ಇವತ್ತು ರೈತಾಪಿ ವರ್ಗಕ್ಕೆ ನಾವು ಸಹಾಯ ಮಾಡುತ್ತೇವೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂತಹ ರೈತರ ಮಕ್ಕಳಿಗೆ ಉದ್ಯೋಗ ಕೊಡುವುದರಲ್ಲಿ ಸರ್ಕಾರ ವಿಫಲವಾಗಿದೆಯೆಂದರೆ ತಪ್ಪಾಗಲಾರದು. ಇವತ್ತು ಆರೋಗ್ಯ ಇಲಾಖೆಗೆ ಬಂದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ರೈತರಿಗೆ, ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂತಹ ಸಾರ್ವಜನಿಕರಿಗೆ ನಾವು ಏನು ಆರೋಗ್ಯ ದೃಷ್ಟಿಯಲ್ಲಿ ಸಹಕಾರ ಕೊಡುತ್ತಿದ್ದೇವೆ ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಇದರ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಇವತ್ತು ಡಾಕ್ಟರ್‌ಗಳ ಕೊರತೆಯಿದೆ. ಕಳೆದ 10 ವರ್ಷಗಳಿಂದ ಆರೋಗ್ಯ ಇಲಾಖೆ ಸಂಪೂರ್ಣ ನಿರ್ನಾಮವಾಗಿದ್ದು, ಎಲ್ಲಿ ಆಸ್ಪತ್ರೆಗಳಿಲ್ಲ, ಯಾವ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳಿಲ್ಲ, ಯಾವ ಆಸ್ಪತ್ರೆಗಳಲ್ಲಿ ನರ್ಸ್‌ಗಳಿಲ್ಲ, ಯಾವ ಆಸ್ಪತ್ರೆಗಳಲ್ಲಿ ಕಾಂಪೌಂಡರುಗಳಿಲ್ಲ ಇದನ್ನೆಲ್ಲಾ ಯೋಚನೆ ಮಾಡಬೇಕಾಗಿದೆ. ಅಧ್ಯಕ್ಷಿಣಿಯವರೇ, ಇತ್ತೀಚೆಗೆ ಕೆಲವು ಡಾಕ್ಟರ್‌ಗಳನ್ನು ತೆಗೆದುಕೊಂಡಿದ್ದೀರಿ. ಇನ್ನು ಕೆಲವು ಡಾಕ್ಟರ್‌ಗಳನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಘೋಷಣೆ ಮಾಡಿದ್ದೀರಿ, ತಾವು ಹೇಳಬೇಕು ಈ ರಾಜ್ಯದಲ್ಲಿ ಇಂದು ಇಷ್ಟು ದಿನ ಡಾಕ್ಟರ್‌ಗಳನ್ನು ತೆಗೆದುಕೊಳ್ಳಬೇಕು. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆಜ್ಞೆ ಪ್ರಕಾರ ಒಬ್ಬ ನರ್ಸ್ ಎಷ್ಟು ಬೆಡ್ ನೋಡಿಕೊಳ್ಳಬೇಕು, ಎಷ್ಟು ಜನರಿಗೆ ಆರೋಗ್ಯ ಕೊಡುವುದಕ್ಕೆ ಆಗುತ್ತದೆ ಎನ್ನುವುದರ ಬಗ್ಗೆ ನಾನು ಕೇಳುತ್ತೇನೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಕಣ್ಣುಮುಚ್ಚಿಕೊಂಡು ಕುಳಿತಿದೆಯೇ ಎಂದು ನಾನು ಕೇಳುತ್ತಿದ್ದೇನೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಪ್ರಕಾರ ಒಬ್ಬ ನರ್ಸ್ ನಾಲ್ಕು

ಬೆಡ್‌ಗಳನ್ನು ನೋಡತಕ್ಕಂತಹ ಶಕ್ತಿ ಇರತಕ್ಕಂಥದ್ದನ್ನು ನಾವು ಕೇಳಿದ್ದೇವೆ. ನಾಲ್ಕು ಬೆಡ್ ಅಲ್ಲದಿದ್ದರೆ ಆರು ಬೆಡ್ ನೋಡಲಿ, ಆದರೆ 40 ಜನಕ್ಕೂ ಒಬ್ಬ ನರ್ಸ್ ಸಾಕಾಗುವುದಿಲ್ಲ. ಇವತ್ತು ರಾಜ್ಯದಲ್ಲಿ 15 ಸಾವಿರ ನರ್ಸ್‌ಗಳ ಕೊರತೆಯಿದೆ, ಸುಮಾರು 400-500 ಡಾಕ್ಟರ್‌ಗಳ ಕೊರತೆ ಇದೆ. ಹೆರಿಗೆ ಮಾಡತಕ್ಕಂತಹ ವಿಚಾರದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಎಷ್ಟು ಜನ ಕಷ್ಟ ಅನುಭವಿಸುತ್ತಿದ್ದಾರೆ ಎನ್ನುವ ಬಗ್ಗೆ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ. ಇವತ್ತು ಸಿಟಿಯಲ್ಲಿರತಕ್ಕಂತವರಿಗೆ ಪ್ರತಿ ಹೆಜ್ಜೆ ಹೆಜ್ಜೆಗೂ ಆರೋಗ್ಯದ ಬಗ್ಗೆ ಅಗತ್ಯವಾಗಿರತಕ್ಕಂತಹ ಫೆಸಿಲಿಟೀಸ್‌ಗಳನ್ನು ಕೊಡುತ್ತೀರಿ, ಗ್ರಾಮಾಂತರ ಪ್ರದೇಶದಲ್ಲಿ ನೀವು ತೀರ್ಮಾನ ಮಾಡಬೇಕು, ಎಲ್ಲೆಲ್ಲಿ ನೀವು ಆಸ್ಪತ್ರೆಗಳನ್ನು ತೆರೆದಿದ್ದೀರಿ ಅಲ್ಲೆಲ್ಲಾ ಲೇಡಿ ಡಾಕ್ಟರ್‌ಗಳು ಕಡ್ಡಾಯವಾಗಿ ಇರಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು, ಇಲ್ಲದೇ ಹೋದರೆ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂತಹ ಜನಕ್ಕೆ ಸರಿಯಾದ ಆರೋಗ್ಯವನ್ನು ಕೊಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಆರೋಗ್ಯ ಇಲಾಖೆ ಬಹಳ ಪ್ರಮುಖವಾಗಿರತಕ್ಕಂತಹ ಇಲಾಖೆ. ಈ ಇಲಾಖೆಯಲ್ಲಿ ಡಾಕ್ಟರ್‌ಗಳು ಏನು ಕಡಿಮೆ ಇದ್ದಾರೆ, ಲೇಡಿ ಡಾಕ್ಟರ್‌ಗಳ ಕೊರತೆ ಏನು ಇದೆ, ನರ್ಸಗಳು ಏನು ಕಡಿಮೆ ಇದ್ದಾರೆ, ಕಾಂಪೌಂಡರ್‌ಗಳು ಏನು ಕಡಿಮೆ ಇದ್ದಾರೆ, ಮತ್ತು ಸ್ಟ್ಯಾಫ್ ಏನು ಕಡಿಮೆ ಇದೆ ಎನ್ನುವುದರ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಬೇಕು. ಹೊಸ ಆಸ್ಪತ್ರೆಗಳನ್ನು ಕೊಟ್ಟರೂ ಸಹ ಸ್ಟ್ಯಾಫ್ ಕೊರತೆ ಇರುತ್ತದೆ. ನನ್ನ ತಾಲ್ಲೂಕಿನಲ್ಲಿ ಒಂದು ಆಸ್ಪತ್ರೆ ಇದೆ, ಸುಮಾರು ನಾಲ್ಕು ವರ್ಷಗಳ ಹಿಂದೆ ಜನರಲ್ ಆಸ್ಪತ್ರೆ ಮಾಡಿದ್ದಾರೆ, ಐದು ಜನ ಡಾಕ್ಟರ್‌ಗಳು ಇದ್ದಾರೆ, ಕೇವಲ ಒಬ್ಬ ನರ್ಸ್ ಇದ್ದಾರೆ, ಡಾಕ್ಟರ್‌ಗಳು ಇಂಜೆಕ್ಷನ್ ಕೊಟ್ಟು ಟ್ರೀಟ್‌ಮೆಂಟ್ ಹೇಳಿ ಹೊರಟು ಹೋಗುತ್ತಾರೆ, ನಂತರ ನರ್ಸ್‌ನ ಸೇವೆ ಅಗತ್ಯವಾಗಿರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವು ಒತ್ತಾಯ ಮಾಡುತ್ತಾ, ಹೆಚ್ಚು ನರ್ಸ್‌ಗಳು ಬೇಕೆಂದು ಅವರ ಬಗ್ಗೆ ಜಾಸ್ತಿ ಅನುಕಂಪ ತೋರಿಸುತ್ತಿದ್ದೀರಿ. ಅದಕ್ಕೆ ನಾನು ಮಂತ್ರಿಗಳಿಗೆ ಕೇಳುತ್ತಿದ್ದೇನೆ, ಅಲ್ಲಿ ಐದು ಜನ ಡಾಕ್ಟರ್‌ಗಳನ್ನು ಕೊಟ್ಟು ಒಂದೇ ಒಂದು ನರ್ಸ್ ಏಕೆ ಕೊಟ್ಟಿದ್ದೀರೆಂದು ಕೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಿಮ್ಮ ಇಲಾಖೆಗಳಲ್ಲಿ ಅಧಿಕಾರಿಗಳಿದ್ದಾರಲ್ಲಾ ಅವರಲ್ಲಿ ಶಿಸ್ತು ಬರುವಂತೆ ಮಾಡಿ, ನಿಮ್ಮ ಮಿತ್ರರುಗಳು ಅಧಿಕಾರಿಗಳಿದ್ದಾರಲ್ಲ, ಅವರು ಕೊಟ್ಟಿದ್ದನ್ನೇ ಕೇಳಬೇಡಿ. ನಿಮ್ಮ ಫ್ರೆಂಡನ್ನು ಸ್ವಲ್ಪ ಅಪ್ಸೆಟ್‌ಮಾಡಿ ಸುಮ್ಮನೆ ಮಾಡುತ್ತಿದ್ದೇನೆಂದು ಹೇಳುತ್ತಿದ್ದೀರಿ.

ಉಪಾಧ್ಯಕ್ಷಿಣಿಯವರು:- ಶಿವರಾಮೇಗೌಡರೇ ಎಷ್ಟು ಜನ ನರ್ಸ್‌ಗಳು ಬೇಕು ನಿಮಗೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆಜ್ಞೆ ಪ್ರಕಾರ ಯಾವ ರೀತಿ ಇದೆ ಅಷ್ಟನ್ನು ನಮ್ಮ ತಾಲ್ಲೂಕಿಗೆ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನರ್ಸ್‌ಸ್ ವರ್ಕ್ ಲೋಡ್ ಬಗ್ಗೆ ಜಾಸ್ತಿ ಮಾತನಾಡುತ್ತಿದ್ದೀರಿ. ಕಾಂಪೌಂಡರ್ ಆಗಲಿ, ಡಾಕ್ಟರ್‌ರಾಗಲಿ, ಬೇರೆಯವರ ಬಗ್ಗೆ ಜಾಸ್ತಿ ಮಾತನಾಡುತ್ತಿಲ್ಲವಲ್ಲ ಅದಕ್ಕೆ ನಾನು ಕೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ದಿವಸಗಳ ಹಿಂದೆಯೇ ಬೆಂಗಳೂರಿಗೆ ಬಂದು ಸೆಟಲ್ ಆದರು. ಗ್ರಾಮಾಂತರ ಪ್ರದೇಶಕ್ಕೆ ಚುನಾವಣಾ ಅಥವಾ ಜನರ ಕೆಲಸ ಇದ್ದಾಗ ಹೋಗುತ್ತಾರೆ. ಈ ಹೆಚ್ಚು ಕಷ್ಟ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಇವತ್ತು ಡಾಕ್ಟರುಗಳಿಗಿಂತ ನರ್ಸ್‌ಗಳದು ಬಹುಮುಖ್ಯ. ಇವತ್ತು ಡಾಕ್ಟರ್ ಟ್ರೀಟ್‌ಮೆಂಟ್ ಕೊಟ್ಟು ಹೊರಟುಹೋಗುತ್ತಾರೆ. ನರ್ಸ್ ಕೇರಿಂಗ್ ಮಾಡತಕ್ಕದ್ದು ಬಹಳ ಮುಖ್ಯ. ಇವತ್ತು 15 ಸಾವಿರ ನರ್ಸ್ ನಮ್ಮ ರಾಜ್ಯದಲ್ಲಿ ಕೊರತೆ ಇರತಕ್ಕ ಸಂದರ್ಭದಲ್ಲಿ ಏತಕ್ಕೆ ನೀವು ಇದಕ್ಕೆ ಹೆಚ್ಚಿಗೆ ಒತ್ತನ್ನು ಕೊಡಬಾರದು ? ನಮಗೆ ಏತಕ್ಕೆ 5 ಜನ ಡಾಕ್ಟರನ್ನು ಕೊಟ್ಟಿದ್ದೀರಿ ? ನಾಗಮಂಗಲದಲ್ಲಿ ಎಕ್ಸ್‌ರೆ ಪ್ಲಾಂಟ್ ಕೊಡಿ ಎಂದು ಕೇಳಿ ಮೂರು ವರ್ಷಗಳಿಂದ ಪ್ರಯತ್ನ ಮಾಡುತ್ತಿದ್ದೇವೆ.

ಸರ್ಕಾರ ಇನ್ನು ಕೊಡಲಿಕ್ಕೆ ಆಗಲಿಲ್ಲ.

ಶ್ರೀ ಬಾಬುರಾವ್ ಚವಾಣ್:- ಅವರ ಕ್ಷೇತ್ರದಲ್ಲಿ ಜಾಸ್ತಿ ನರ್ಸ್ ಕೊಡಿ, ನಮ್ಮ ಕ್ಷೇತ್ರಕ್ಕೆ ಜಾಸ್ತಿ ಡಾಕ್ಟರನ್ನು ಕೊಡಿ.

ಉಪಾಧ್ಯಕ್ಷಿಣಿಯವರು:-ಚವಾಣ್‌ರವರು ಯಾವಾಗಲೂ ಬದಲಾವಣೆ ಮಾಡಿಕೊಳ್ಳುತ್ತಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಗ್ರಾಮೀಣಾಭಿವೃದ್ಧಿಯ ಬಗ್ಗೆ ಮಾತನಾಡುವಾಗ ನಾನು ನಾಗಮಂಗಲದಲ್ಲಿ ಹುಟ್ಟುತ್ತೇನೆಂದು ಹೇಳಿದರು. ಏಕೆಂದರೆ ನರ್ಸ್ ಜಾಸ್ತಿ ಕೊಟ್ಟರೆ ಇಲ್ಲಿ ಹುಟ್ಟಬಹುದೆಂದು ತೀರ್ಮಾನ ಮಾಡಿರಬಹುದು.

ಶ್ರೀ ಬಾಬು ರಾವ್ ಚವಾಣ್:- ನಾನು ಹುಟ್ಟುವುದು ಬೇಕಾಗಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ : ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಬಹಳ ಗಂಭೀರವಾಗಿರತಕ್ಕಂಥ ಪ್ರಶ್ನೆ. ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಆಸ್ಪತ್ರೆಗಳ ಬಗ್ಗೆ ಎಷ್ಟು ತೊಂದರೆಗಳನ್ನು ಎದುರಿಸುತ್ತೇವೆ ಎನ್ನುವುದನ್ನು ನಾನು ಹೇಳುತ್ತಿರುವುದು. ನೀವು ಅಧಿಕಾರಿಗಳ ಮಾತಿಗೆ ಕಿವಿ ಕೊಡಬೇಡಿ. ನಿಮ್ಮ ಮೈಂಡನ್ ಅಪ್ಲೈ ಮಾಡಿ ಎಂದು ನಾನು ಆರೋಗ್ಯ ಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ನಿಮಗೆ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ತೊಂದರೆಗಳು ಗೊತ್ತಿಲ್ಲದೆ ಇಲ್ಲ. ಇವತ್ತು ತಾಲ್ಲೂಕ್ ಹೆಡ್‌ಕ್ವಾರ್ಟ್‌ಸ್‌ಗಳಲ್ಲಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದ್ದೀರಿ. ಏರಿಸಿ ಏನು ಪ್ರಯೋಜನವಾಯಿತು. ಇವತ್ತು ಎಕ್ಸ್‌ರೇ ಪ್ಲಾಂಟ್‌ಗಳಿಲ್ಲ. ಇವತ್ತು ನಾಗಮಂಗಲದಲ್ಲಿ ಕೈಮುರಿದುಕೊಂಡು ಕಾಲುಮುರಿದುಕೊಂಡು ಅಥವಾ ಒಂದು ಮೂಳೆಗೆ ಏಟು ಬಿದ್ದರೆ, ಅದರ ಬಗ್ಗೆ ಎಕ್ಸ್‌ರೆಯನ್ನು ತೆಗೆಸುವುದಕ್ಕೆ ಮಂಡ್ಯಕ್ಕೆ ಹೋಗಬೇಕು ಇಲ್ಲ, ಹಾಸನಕ್ಕೆ ಹೋಗಬೇಕು, ಇಲ್ಲ ಬೆಂಗಳೂರಿಗೆ ಬರಬೇಕು. ಆರೋಗ್ಯ ತಪಾಸಣೆಯಲ್ಲಿ ನಾವು ಇಂಥ ಒಂದು ಪರಿಸ್ಥಿಯನ್ನು ನೋಡುತ್ತಿದ್ದೇವೆ. ನಾವು 1992ನೇ ಇಸವಿಯಲ್ಲಿದ್ದೇವೆ. ನೀವು ಹೊಸ ಆಸ್ಪತ್ರೆಗಳನ್ನು ಕೊಡುವುದರಲ್ಲಿ ಏನು ಔಚಿತ್ಯ ಇದೆ. ಹೊಸ ಆಸ್ಪತ್ರೆಗಳನ್ನು ಬೆಳೆಸುವುದರಿಂದ ಪ್ರಯೋಜನ ಇಲ್ಲ. ಇರುವ ಆಸ್ಪತ್ರೆಗಳನ್ನು ಸರಿಪಡಿಸುವುದರಲ್ಲಿ ತಾವು ಹೆಚ್ಚು ಗಮನವನ್ನು ಹರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿಮ್ಮ ಕೈ ಏಕೋ ಬೆಲ್ ಕಡೆ ಹೋಗುತ್ತದೆ ನನಗೆ ಅರ್ಥವಾಗುವುದಿಲ್ಲ. ಇನ್ನು ಮೂರು ನಿಮಿಷ ಆಗಿಲ್ಲ ನಾನು ಶುರುಮಾಡಿ. ನೀವು ಬೇಡ ಅಂದರೆ ನಾನು ಕುಳಿತುಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು:- ನೀವು ಶುರುಮಾಡಿ ಎಷ್ಟೊತ್ತು ಆಯಿತು. ಇನ್ನೈದು ನಿಮಿಷದಲ್ಲಿ ಮುಗಿಸಿ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಇವತ್ತು ಸುಮಾರು 32 ಕೋಟಿ ರೂಪಾಯಿಗಳ ಔಷಧಿಯನ್ನು ನಮ್ಮ ಆರೋಗ್ಯ ಇಲಾಖೆಯಲ್ಲಿ ತರಿಸುತ್ತಾರೆ. ಇವತ್ತು ಈ ಔಷಧಿಗಳನ್ನು ಕೊಡತಕ್ಕವರು ಯಾರು ಅಂದರೆ, ಮಾರ್ವಾಡಿಗಳು ಸಿಂಧಿಗಳು ಬಿಟ್ಟರೆ ಇನ್ನು ಯಾರೂ ಕೊಡುವುದಿಲ್ಲ. ಇವರ ಹತ್ತಿರ ಹೈ ಪವರ್ ಕಮಿಟಿ ಇದೆ. ಇವರ ಹತ್ತಿರ ಎಕ್ಸ್‌ಪರ್ಟ್ ಕಮಿಟಿ ಇದೆ. ಈ ಎಲ್ಲಾ ಕಮಿಟಿಗಳು ಲಂಚದಿಂದ ಕೂಡಿರತಕ್ಕ ಕಮಿಟಿಗಳು. ನಾನು ನೇರವಾಗಿ ಆಪಾದನೆಯನ್ನು ಮಾಡುತ್ತೇನೆ. ನೀವು ಕಳೆದ ಮೂರು ವರ್ಷಗಳಿಂದ ಕಲಬೆರಕೆ ಔಷಧಿಗಳನ್ನು ತಂದು ನೀವು ಗ್ರಾಮಾಂತರ ಪ್ರದೇಶದಲ್ಲಿ ಕೊಡುತ್ತಿದ್ದೀರಿ. ಅದು ಗ್ರಾಮಾಂತರ ಪ್ರದೇಶದ ಜನರ ತಪ್ಪಲ್ಲ. ಅದು ಮೆಡಿಕಲ್ ಶಾಪಿಗೆ ಹೋಗಿ ತಿರುಗಿಕೊಂಡು ಪುನಃ ವಾಪಸ್ಸು ಅಂಗಡಿಗಳಿಗೇ ಬರುತ್ತವೆ. ನೂರಕ್ಕೆ ಎಪ್ಪತ್ತೈದು ಭಾಗ ನಿಮ್ಮ ಡಾಕ್ಟರುಗಳು ನೇರವಾಗಿ ತೆಗೆದುಕೊಂಡು ಹೋಗಿ ಅಂಗಡಿಗಳಿಗೆ ಮಾರಾಟ ಮಾಡುತ್ತಾರೆ. ಕಳಪೆ ಔಷಧಿಗಳನ್ನು ಎಷ್ಟು ಜನ ಕೊಟ್ಟಿದ್ದಾರೆ. ಎಷ್ಟು ಜನ ಇವತ್ತು ಔಷಧಿಗಳನ್ನು ತಯಾರು ಮಾಡತಕ್ಕ ಕಂಪನಿಗಳನ್ನು ಬ್ಲಾಕ್ ಲಿಸ್ಟ್ ಮಾಡಿದ್ದೀರಿ. ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಅಲ್ಲಿ ಔಷಧಿ ಕಲಬೆರಕೆ ಇದೆ ಇಲ್ಲಿ ಔಷಧಿ ಕಲಬೆರಕೆ ಇದೆ ಎಂದು ಕೇಳಿದ್ದೇವೆ. ಬರೀ ಸೀಮೆಸುಣ್ಣದ ಪೌಡರ್‌ನಲ್ಲಿ ಮಾತ್ರ ಮಾಡಿಕೊಡತಕ್ಕದ್ದನ್ನು ನಾವು ನೋಡಿದ್ದೇವೆ. ಅಂಥ ಕಂಪನಿಗಳು ಬೇಕಾದಷ್ಟು ಇದೆ. ಅವರು ಯಾವುದೋ ಬೇನಾಮಿ ಹೆಸರುಗಳಲ್ಲಿ

ಇವತ್ತು ಔಷಧಿಗಳನ್ನು ಕೊಡುತ್ತಿದ್ದಾರೆ. ಇಂತಹ ಕಾರ್ಖಾನೆಗಳ ಬಗ್ಗೆ ಎಷ್ಟು ಉತ್ಪಾದಕರುಗಳನ್ನು ಬ್ಲಾಕ್‌ಲಿಸ್ಟ್ ಮಾಡಿದ್ದೀರಿ. ಬ್ಲಾಕ್‌ಲಿಸ್ಟ್ ಮಾಡಿದ್ದರೂ ಸಹಿತ ಹಿಂದಿನ ಬಾಗಿಲಿನಿಂದ ಬೇರೆ ಹೆಸರನ್ನು ಚೇಂಜ್ ಮಾಡಿಕೊಂಡು ಬರತಕ್ಕ ಕಂಪನಿಗಳನ್ನು ತಾವು ಪರಿಶೀಲನೆ ಮಾಡಿದ್ದೀರಿ ಎನ್ನುವ ಬಗ್ಗೆ ಈ ಸದನಕ್ಕೆ ತಾವು ತಿಳಿಸಬೇಕು. ಇವತ್ತು 32 ಕೋಟಿ ರೂಪಾಯಿ ಔಷಧಿ ನೇರವಾಗಿ ಜನಗಳಿಗೆ ತಲುಪುವುದಿಲ್ಲ. ಅದರ ಬಗ್ಗೆ ತಾವು ತನಿಖೆ ಮಾಡಿಸಿ ಯಾವ ಯಾವ ಡಾಕ್ಟರುಗಳು ಈ ಮಟ್ಟಕ್ಕೆ ಮಾಡುತ್ತಿದ್ದಾರೆ. ಡಾಕ್ಟರುಗಳಿಗೆ ಕೇಂದ್ರ ಕಛೇರಿಯಿಂದಲೇ ಹೊರಟು ಹೋಗುತ್ತದೆ. ನೇರವಾಗಿ ಅಂಗಡಿಗಳಿಗೆ ಹೊರಟು ಹೋಗುತ್ತದೆ. ಇದನ್ನು ತಡೆಗಟ್ಟಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಶಿವರಾಮೇಗೌಡರು ಬಹಳ ಸಾರ್ವತ್ರಿಕವಾದಂತಹ ಆಪಾದನೆಯನ್ನು ಮಾಡುತ್ತಿದ್ದಾರೆ. ಎಲ್ಲಾ ಲಂಚತಿನ್ನುತ್ತಿದ್ದಾರೆ. ಎಲ್ಲಾ ಮಾರ್ವಾಡಿಗಳ ಕೈ ಆಗಿ ಬಿಟ್ಟಿದೆ. ಸರಿಯಾದ ರೀತಿಯಲ್ಲಿ ಹಂಚಿಕೆಯಾಗುತ್ತಿಲ್ಲ ಪುನಃ ಔಷಧಿ ರೀಸೈಕ್ಲಿಂಗ್ ಆಗುತ್ತಿದೆ ಎನ್ನುವಂತಹ ಗುರುತರವಾದಂತಹ ಆಪಾದನೆಯನ್ನು ಮಾಡಿದ್ದಾರೆ. ಔಷಧಿಗಳು ಪುನಃ ರೀಸೈಕ್ಲಿಂಗ್ ಆಗುತ್ತಿದೆಯೆಂದು ಕೆಲವು ಗುರುತರವಾದ ಆಪಾದನೆ ಮಾಡುತ್ತಿದ್ದಾರೆ. ತನಿಖೆ ಮಾಡುಸುವುದಕ್ಕೆ ಸರ್ಕಾರ ಎಂದಿಗೂ ಹಿಂದು-ಮುಂದು ನೋಡುವುದಿಲ್ಲ. ಯಾವನೇ ಮಾರವಾಡಿಯಾಗಿರಲಿ ಅಥವಾ ಯಾವ ಅಧಿಕಾರಿಯಾಗಲಿ ತಪ್ಪಿತಸ್ಥರಾಗಿದ್ದಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಬೀಳುವುದಿಲ್ಲ. ಆದರೆ, ತಾವು ಸಾರ್ವತ್ರಿಕವಾಗಿ ಆಪಾದನೆ ಮಾಡುವುದರ ಬದಲಾಗಿ ಗುರುತರವಾಗಿ ಇಂತಹ ಸಂದರ್ಭದಲ್ಲಿ ಇಂತಹ ಘಟನೆ ನಡೆದಿದೆ, ಅಕ್ರಮ ನಡೆದಿದೆಯೆಂದು ನೀವು ನಿರ್ದಿಷ್ಟವಾಗಿ ಹೇಳುವುದಾದರೆ ಈಗಲೇ ತನಿಖೆ ಮಾಡಿಸುವುದಕ್ಕೆ ನಾನು ಸಿದ್ಧನಿದ್ದೇನೆ. ಆದರೆ, ತಾವು ಸುಮ್ಮನೆ ಸಾಮಾನ್ಯವಾಗಿ ಯಾರೋ ಪತ್ರಿಕೆಯವರು ಬರೆದಿದ್ದಾರೆ, ಅದು ಸತ್ಯದಿಂದ ಕೂಡಿದೆಯೇ ಇಲ್ಲವೇ ಎಂಬುದರ ಬಗ್ಗೆ ವಿಮರ್ಶಿಸದೆ ಹೇಳತಕ್ಕಂಥಾದ್ದು ಅಷ್ಟೊಂದು ಸೂಕ್ತವಲ್ಲವೆಂಬುದು ನನ್ನ ವೈಯಕ್ತಿಕ ಭಾವನೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸೀತಾ ಮಾತೆಯನ್ನು ಯಾರೋ ಒಬ್ಬ ನಿಂದಿಸುತ್ತಾನೆ, ಆದರೂ ಸೀತಾ ಮಾತೆ ಅಗ್ನಿ ಪ್ರವೇಶ ಮಾಡುತ್ತಿಲ್ಲ. ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಇಷ್ಟು ಬೃಹದಾಕಾರವಾಗಿರತಕ್ಕಂಥ ಇಲಾಖೆಯಲ್ಲಿ ಇಷ್ಟೊಂದು ಜನ ಮಾರವಾಡಿಗಳು, ಸಿಂಧಿಗಳು ತುಂಬಿಕೊಂಡಿರತಕ್ಕಂಥ ಇಲಾಖೆ ಹೈಪವರ್ ಕಮಿಟಿ ಮತ್ತು ಎಕ್ಸ್‌ಪರ್ಟ್ ಕಮಿಟಿಯಲ್ಲಿ ಬರತಕ್ಕಂಥಾದು ನೇರವಾಗಿ ಕಾಣುತ್ತದೆ. ನಾನೇನೂ ಕೊಡಬೇಕಾಗಿಲ್ಲ. ನೀವು ಜನರಿಗೆ ತೋರಿಸುವುದಕ್ಕೆ ಒಂದು ಕಮಿಟಿ ಮಾಡಿ, ಅದನ್ನು ತನಿಖೆ ಮಾಡಿಸಿ ಎಂದು ಕೇಳುತ್ತಿದ್ದೇನೆ. ನಾನು ಹೇಳುವುದು ಬೇಡ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಇದಕ್ಕೆಲ್ಲಾ ತನಿಖೆ ಮಾಡಿದ್ದಾರೆ, ತನಿಖೆ ಕೂಡ ಆಗಿ ವರದಿ ಕೂಡ ಕೊಟ್ಟಿದ್ದಾರೆ. ಅದಕ್ಕೆ ಹೈ ಪವರ್ ಕಮಿಟಿ ಇದೆ, ಟೆಕ್ನಿಕಲ್ ಕಮಿಟಿಗಳಿವೆ. ಎಲ್ಲಾ ಹಂತಗಳಲ್ಲಿಯೂ ಕೂಡ ಬಿಗಿಯಾದಂಥ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯಿದೆ. ತಾವೇನಾದರೂ ನಿರ್ದಿಷ್ಟವಾಗಿ ಹೇಳುವುದಾದರೆ ತನಿಖೆ ಮಾಡಿಸುವುದಕ್ಕೆ ಸಿದ್ಧನಿದ್ದೇನೆ. ಹಲವಾರು ಬಾರಿ ತನಿಖೆಗಳಾಗಿವೆ. ಯಾವುದಾದರೊಂದು ಯುನಾನಿಮಸ್ ರಿಟ್ ಪಿಟಿಶನ್ ಬಂದರೂ ನಾವು ತನಿಖೆ ಮಾಡಿದ್ದೇವೆ. ತನಿಖೆಯಿಲ್ಲದೆ ಯಾವ ಕೆಲಸವನ್ನು ನಾವು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :- ನಾನು ಆರೋಗ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ತನಿಖೆ ಮಾಡಿದ್ದರ ಯಾವ ಕಂಪನಿಗಳ ಮೇಲೆ ನಿರ್ದಿಷ್ಟವಾಗಿ ಕ್ರಮ ತೆಗೆದುಕೊಂಡಿದ್ದೀರಿ ? ಎನ್ನುವುದರ ಬಗ್ಗೆ ಕನಿಷ್ಠ ಪಕ್ಷ ತಾವು ನಾಲ್ಕು ವರದಿಗಳನ್ನಾದರೂ ಸದನದ ಮುಂದಿಡಿ. ಆಗ ಸರಿಯಾಗಿಲ್ಲ ತನಿಖೆ ಮಾಡಿದ್ದಾರೆ. ಇದರಲ್ಲಿ ತಪ್ಪಿತಸ್ಥರು ಸಿಕ್ಕಿ ಹಾಕಿಕೊಂಡಿದ್ದಾರೆ ಎಂದು ನಿಟ್ಟುಸಿರು ಬಿಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ನಮ್ಮ ಕಮಿಟಿ ರಿಪೋರ್ಟ್ ಬೇಕಾದರೆ ಇಡುತ್ತೇನೆ. ನಾನೇನು ಕ್ರಮ

ತೆಗೆದುಕೊಂಡಿದ್ದೇವೆ ಎಂಬ ಬಗ್ಗೆ ಕೂಡ ಚರ್ಚೆಯಾಗಲಿ. ಆದರೆ, ನೀವು ಸುಮ್ಮನೆ ಹಿಂದಿನದೆಲ್ಲ ಕೇಳುವುದರ ಬದಲು ಈಗ ಏನು ನಡೆಯುತ್ತಿದೆ ? ಎಂಬುದನ್ನು ಹೇಳಿರಿ. ಇಂತಹ ಕಡೆ ಈ ರೀತಿ ನಡೆಯುತ್ತಿದೆ ಎಂದು ನಿರ್ದಿಷ್ಟವಾಗಿ ಹೇಳಿದರೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷಿಣಿಯವರು:- ಅವರು ಹೇಳುತ್ತಿರುವುದು ನಿಮ್ಮ ಹತ್ತಿರ ನಿರ್ದಿಷ್ಟವಾದ ಆಪಾದನೆ ಯಾವುದಾದರೂ ಇದ್ದರೆ ಅದನ್ನು ಕಳುಹಿಸಿಕೊಡಿ ಎಂದು.

ಶ್ರೀ ಎ.ಎಸ್. ನಾಡಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಹೇಳಿದಂತಹ ಮಾತು ಬಹುತೇಕ ನಮ್ಮ ಮಂತ್ರಿಗಳಿಗೆ ಅರ್ಥವಾಗುತ್ತಿಲ್ಲವೆಂದು ಕಾಣುತ್ತದೆ. ಕಮಿಟಿಗಳನ್ನು ಏನು ಮಾಡುತ್ತಿದ್ದೇವೆ, ಅದರಲ್ಲಿ ಶಿವರಾಮೇಗೌಡರು ಇರುವಂಥಾದ್ದು ಅವರ ಆಸೆಯಾಗಿದೆ. ಅದಕ್ಕೋಸ್ಕರ ಕಮಿಟಿ ಬೇಕಾಗಿದೆ.

ಶ್ರೀ ಎಲ್ ಆರ್. ಶಿವರಾಮೇಗೌಡ :- ದಯವಿಟ್ಟು ಮಾನ್ಯ ಕಾರ್ಮಿಕ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ನಾನು ಸಾರ್ವಜನಿಕ ಉದ್ದಿಮೆಗಳ ಸಮಿತಿಯಲ್ಲಿ ಸದಸ್ಯನಾಗಿದ್ದೆ. ಕಳೆದ ಸಾರಿ ನಾನು ಯಾವುದೇ ಕಮಿಟಿಯ ಸದಸ್ಯತ್ವ ಬೇಡವೆಂದು ಬರೆದುಕೊಟ್ಟಿರುವುದು ತಮಗೆ ಅರ್ಥವಾಗಿರಬಹುದು. ನನಗೆ ಕಮಿಟಿಯಲ್ಲಿರಬೇಕೆಂಬ ಆಸೆಯಿಲ್ಲ. ತಮ್ಮ ಅಧಿಕಾರಿಗಳಂಥ ಸಾರ್ವಜನಿಕ ಉದ್ದಿಮೆ ಸಂಸ್ಥೆಗಳು ಒಂದೂ ತಲೆ ಎತ್ತುತ್ತಿಲ್ಲ. ನಾನು ಪುಟ್ಟಸ್ವಾಮಿಗೌಡರ ಹತ್ತಿರ ಹೇಳುತ್ತಿದ್ದೇನೆ. ನೀವು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕವರು. ಇಷ್ಟೊತ್ತು ಗ್ರಾಮಾಂತರ ಪ್ರದೇಶಗಳಲ್ಲಿ ನೊಂದಂಥ, ಸಮಾಜದಲ್ಲಿ ಸೇವೆ ಮಾಡಿರತಕ್ಕಂಥವರು ಇದ್ದಾರೆ. ಅಂತಹವರನ್ನು ಶೇಕಡ 50 ಹಾಕಿ. ಶಿವರಾಮೇಗೌಡರನ್ನು ಹಾಕಿ ಎಂದು ಕೇಳುತ್ತಿಲ್ಲ. ಇದು ಬಹಳ ಗಂಭೀರವಾಗಿರತಕ್ಕಂಥ ಪ್ರಶ್ನೆ. ಯಾರು ಸಮಾಜದಲ್ಲಿ ನೊಂದಿರತಕ್ಕಂಥವರಿದ್ದಾರೆ, ಸಮಾಜ ಸೇವೆ ಮಾಡಿರತಕ್ಕಂಥವರಿದ್ದಾರೆ, ಅಂತಹವರಿಗೆ ಗುರುತರವಾದ ಜವಾಬ್ದಾರಿ ವಹಿಸಿರಿ. ಏತಕ್ಕೆ ಅಧಿಕಾರಿಗಳನ್ನು ತಲೆ ಮೇಲೆ ಹೊತ್ತುಕೊಳ್ಳುತ್ತಿದ್ದೀರಿ ? ಅಧಿಕಾರಿಗಳಲ್ಲಿ ಪ್ರಾಮಾಣಿಕರು ಇಲ್ಲವೆಂದು ಹೇಳುವುದಿಲ್ಲ. ಸತ್ಯವಂತರು ಇಲ್ಲವೆಂದು ಹೇಳುವುದಿಲ್ಲ, ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಹೇಳುವುದಿಲ್ಲ. ಪ್ರಾಮಾಣಿಕರಾಗಿ, ಸತ್ಯವಂತರಾಗಿ ಸರಿಯಾಗಿ ಕೆಲಸ ಮಾಡುವವರಿದ್ದಾರೆ. ಅಷ್ಟೇ ಖದೀಮರೂ ಸಹ ಇದ್ದಾರೆ. ಅವರುಗಳ ಬಗ್ಗೆ ಎಚ್ಚರವಹಿಸಿ ಎಂದು ಹೇಳುತ್ತಿದ್ದೇನೆ. ಮೊನ್ನೆ ದಿವಸ ಒಂದು ಪತ್ರಿಕೆಯಲ್ಲಿ ನೋಡಿದೆ. ಲಕ್ಷಾಂತರ ಜನರಿಗೆ ಏಡ್ಸ್ ಕಾಯಿಲೆ ತಗುಲುತ್ತಿದೆ ಎನ್ನತಕ್ಕಂಥ ವಿಚಾರವನ್ನು ಭಯದಿಂದ ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ.

ಡಾ. ಎನ್. ಬಿ. ನಂಜಪ್ಪ :- ಯಾವುದೇ ಆಧಾರದ ಮೇಲೆ ಕರ್ನಾಟಕ ರಾಜ್ಯದಲ್ಲಿ ಏಡ್ಸ್ ರೋಗಿಗಳು ಲಕ್ಷಾಂತರ ಸಂಖ್ಯೆಯಲ್ಲಿಲ್ಲ. ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. Medical profession is a noble profession. ಸಾಮಾನ್ಯವಾಗಿ ಕೆಲವು ಸದಸ್ಯರು ಮೆಡಿಕಲ್ ಪ್ರೊಫೆಶನ್ ಮೇಲೆ ಮಾತನಾಡುವಾಗ ಬಹಳ ಹಗುರವಾಗಿ ಮಾತನಾಡತಕ್ಕಂಥಾದ್ದನ್ನು ನಾನು ಅನೇಕ ಬಾರಿ ಕೇಳಿದ್ದೇನೆ. ಬೇರೆ ಎಲ್ಲಾ ಇಲಾಖೆಗಳಲ್ಲಿ ಆಗತಕ್ಕಂಥ ಅನ್ಯಾಯ, ಅಧರ್ಮಕ್ಕಿಂತ ಮೆಡಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಒಬ್ಬ ಕ್ರೂರಿಯಾದಂಥ ಡಾಕ್ಟರು ಇದ್ದರೂ ಕೂಡ ಅವನು ಕೆಲಸ ಮಾಡತಕ್ಕಂಥಾದ್ದಕ್ಕೆ ವಿಧಾನ, ನೀತಿ-ನಿಯಮಗಳುಂಟು. ಅವೆಲ್ಲವನ್ನೂ ಬದಿಗೊತ್ತಿ ಬಹಳ ಕೆಳದರ್ಜೆಯಲ್ಲಿ ಮಾತನಾಡತಕ್ಕದ್ದು ಎಂದರೆ, ಭಾರತದೇಶದಲ್ಲಿ ಬಹಳ ಚೀಪೆಸ್ಟ್ ಪ್ರೊಫೆಶನ್, ಮತ್ತು ಅಷ್ಟೇ ಧರ್ಮ ಮಾಡತಕ್ಕಂಥ ಪ್ರೊಫೆಶನ್ ಇದ್ದರೆ ಅದು ಮೆಡಿಕಲ್ ಪ್ರೊಫೆಶನ್ ಮಾತ್ರ.

7. 45 ಪಿ. ಎಂ.

He should not so lightly taken about the medical profession. Medical profession is a noble profession it lightly.. It may be a medical man or a para-medical man. I raise strong objection, if any body talks so lightly

on the floor of this House. I have heard number of times from the Hon. Members passing remarks about them without any basis.

ಶ್ರೀ ಎಲ್. ಆರ್. ಶಿವರಾಮೇಗೌಡ :- ಈ ಸದನದಲ್ಲಿ ನಾನು ಒಬ್ಬ ಸದಸ್ಯ ದಯಮಾಡಿ ನೀವು ಉಪಾಧ್ಯಕ್ಷಿಣಿಯವರು ನೀವು ನನಗೆ ಮಾತನಾಡಲು ಅವಕಾಶವನ್ನು ಕೊಡದಿದ್ದರೆ ಹೇಗೆ ? ಇದೇನು ಪಾರ್ಟಿ ಮೀಟಿಂಗ್ ಅಲ್ಲ. ಇದು ವಿಧಾನ ಸಭೆ, ನಾನು ಹೇಳತಕ್ಕ ಹಕ್ಕನ್ನು ಯಾರು ಕೂಡ ಕಿತ್ತುಕೊಳ್ಳಲು ಆಗುವುದಿಲ್ಲ. ಆ ಶಕ್ತಿ ಏನಾದರೂ ಇದ್ದರೆ ನಿಮಗೊಬ್ಬರಿಗೆ ಇರೋದು ನೀವು ಗಂಟೆಯನ್ನು ಹೊಡೆದು ನನ್ನನ್ನು ಕೂರಿಸಬಹುದು. ನಾನು ಮೆಡಿಕಲ್ ಪ್ರೊಫೆಶನ್ ಬಗ್ಗೆ ಹಗುರವಾಗಿ ಮಾತನಾಡಲಿಲ್ಲ. ನನಗೆ ಅದರ ಮೇಲೆ ಬಹಳಷ್ಟು ಗೌರವ ಇದೆ ನಾನು ಮೆಡಿಕಲ್ ಕಾಲೇಜಿಗೆ, ಮೆಡಿಕಲ್ ಪ್ರೊಫೆಶನ್‌ಗೆ ಬಹಳ ಹತ್ತಿರದಲ್ಲಿರುವವನು.

ಒಬ್ಬ ಮಾನ್ಯ ಸದಸ್ಯರು :- ಮೆಡಿಕಲ್ ಕಾಲೇಜಿನ ಪಕ್ಕದಲ್ಲಿಯೇ ನಿಮ್ಮ ಮನೆ ಇದೆಯೇ ?

ಉಪಾಧ್ಯಕ್ಷಿಣಿಯವರು:- ತಾವು ಬೇಗ ಮುಗಿಸಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ :- ತಾವು ಸಾಕು ಎಂದರೆ ನಾನು ಕುಳಿತುಕೊಳ್ಳುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ಇಡೀ ರಾಷ್ಟ್ರದಲ್ಲಿ ನಗರ ಪ್ರದೇಶದಲ್ಲಿ ಆಸ್ಪತ್ರೆಗಳು ನಡೆಯುತ್ತದೆ, ನದರ ಪ್ರದೇಶಗಳಲ್ಲಿ ಜನರಿಗೆ ಆಸ್ಪತ್ರೆಗಳಲ್ಲಿ ಸವಲತ್ತುಗಳನ್ನು ಕೊಡತಕ್ಕದ್ದನ್ನು ನೋಡುತ್ತೇವೆ. ನಾನು ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಪಕ್ಕದಲ್ಲಿ ಇದ್ದೇನೆ ಆದುದರಿಂದ ಈ ಮಾತನ್ನು ಹೇಳುತ್ತಿದ್ದೇನೆ. ಒಂದು ಸಾವಿರ ಹಾಸಿಗೆ ಸೌಲಭ್ಯವುಳ್ಳ ಆದಿಚುಂಚನಗಿರಿ ಆಸ್ಪತ್ರೆಯು ನಮ್ಮ ಊರಿನ ಪಕ್ಕದಲ್ಲಿ ಇದೆ. ಇದು ಇಡೀ ರಾಷ್ಟ್ರದಲ್ಲಿ, ಇಡೀ ಭಾರತ ದೇಶದಲ್ಲಿ ಹೊಸ ಆಯಾಮ ಎಂದರೆ ತಪ್ಪಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ, ಅಲ್ಲಿನ ಜನರಿಗೆ ಸಹಾಯ ಮಾಡತಕ್ಕ ಆಸ್ಪತ್ರೆಯ ವಿಚಾರವನ್ನು ಹೇಳಲು ಹೋದರೆ ಅದು ಆಗುವುದಿಲ್ಲವೆಂದು ಹೇಳಿದರೆ ಹೇಗೆ ? ಇವತ್ತು ಮೆಡಿಕಲ್ ಪ್ರೊಫೆಶನ್ ಬಗ್ಗೆ ಡಾ : ನಂಜಪ್ಪನವರು ಹೇಳಿರುವುದರಲ್ಲಿ ನನಗೂ ಕೂಡ ಗೌರವವಿದೆ ಅದರ ಬಗ್ಗೆ ನಾನು ಹಗುರವಾಗಿ ಹೇಳುತ್ತಿಲ್ಲ. ಇದರಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಸರಿಪಡಿಸಿಕೊಳ್ಳದಿದ್ದರೆ ಏನು ಪ್ರಯೋಜನ, ನಾವು ಏಕೆ ಇಲ್ಲಿ ಮಾತನಾಡಬೇಕು, ನಾವು ಒಪ್ಪಿಗೆಯನ್ನು ಕೊಡಲು ತಯಾರಾಗಿದ್ದೇವೆ, ನಿಮಗೆ180 ಜನರ ಬಹುಮತವಿದೆ, ನಾವು ಆಚೆಕಡೆ ಕುಳಿತಿದ್ದರೂ ಸಹ ಮುದ್ರೆಯನ್ನು ಒತ್ತಿಕೊಳ್ಳಲು ಸರಿಯಾಗಿದೆ, ಮುದ್ರೆಯನ್ನು ಒತ್ತಿಕೊಳ್ಳಿ ಯಾರು ಬೇಡವೆಂದು ಹೇಳುತ್ತಾರೆ. ಅದಕ್ಕೆ ನಮ್ಮನ್ನು ಕೇಳಬೇಕಾದ ಅಗತ್ಯವಿಲ್ಲ. ಇವತ್ತು ಮೈಸೂರಿನ ಕೆ ಆರ್ ಎಸ್ ಆಸ್ಪತ್ರೆಯಲ್ಲಿ ಒಂದು injection ರೂಮ್ ಇದೆ. ಈ ರೂಮಿನಲ್ಲಿ ಔಷಧಿಯನ್ನು ಹತ್ತಿಯಲ್ಲಿ ಒರೆಸುವವನೊಬ್ಬ, injection ನ್ನು ಚುಚ್ಚುವವನೊಬ್ಬ, ಆ ನೀಡಲ್‌ನ್ನು ಕುದಿಸುವುದಿಲ್ಲ. ನಾವು ಬೆಂಗಳೂರಿನಲ್ಲಿ use and throw ಎನ್ನತಕ್ಕದ್ದನ್ನು ಮಾಡುತ್ತೇವೆ. ಅದನ್ನು ಒಂದು ಸಾರಿ ಉಪಯೋಗ ಮಾಡಿದಂಥ ನೀಡಲ್‌ನ್ನು ಮತ್ತೊಂದು ಸಾರಿ ಉಪಯೋಗ ಮಾಡತಕ್ಕದ್ದನ್ನು ನಾವು ಅಲ್ಲಿ ಕಣ್ಣಾರೆ ಕಾಣುತ್ತಿದ್ದೇವೆ. ಇವತ್ತು ಮೈಸೂರಿನ ಕೆ. ಆರ್. ಎಸ್. ಆಸ್ಪತ್ರೆಯಲ್ಲಿ, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 25ಜನರಿಗೆ ಒಂದು ನೀಡಲ್‌ನಲ್ಲಿ injections ಚುಚ್ಚುತ್ತಾರೆ. ಅದಕ್ಕೆ ಎಷ್ಟು ಹಣ ಹೆಚ್ಚಾಗಿ ಖರ್ಚಾಗುತ್ತದೆ. ಇದರ ಬಗ್ಗೆ ತಾವು ಯೋಚಿಸಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ.

Dr. N. B. NANJAPPA :- Onceagain he violates . . . .ಬಟ್ಟೆಯನ್ನು ಎತ್ತುವವನೊಬ್ಬ ಚುಚ್ಚುವವನೊಬ್ಬ ಎಂದರೆ . . . .That is not correct. It is not proper language.

ಶ್ರೀ ಎಲ್. ಆರ್. ಶಿವರಾಮೇಗೌಡ :- ದಯಮಾಡಿ ಆ ಭಾಷೆಯಲ್ಲಿ ಮೆಡಿಕಲ್ ಓದಿರುವವರಿಗೆ ಬರಬೇಕು. ನನಗೆ ಬರತಕ್ಕ ಭಾಷೆಯಲ್ಲಿ ನನಗೇನು ಬರುತ್ತದೆಯೋ ಅದನ್ನು ಹೇಳುತ್ತಿದ್ದೇನೆ. ಇದನ್ನು ತಾವು ತಪ್ಪಿಸಬೇಕು. ಗ್ರಾಮಾಂತರ ಪ್ರದೇಶದಲ್ಲಿರುವ ಮನುಷ್ಯರು ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ

ಅನುಕೂಲಗಳನ್ನು ಕೊಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಉಪಾಧ್ಯಕ್ಷಿಣಿಯವರು:- ತಾವು ಬೇಗನೆ ಮುಗಿಸಬೇಕು. You should not yield.

ಶ್ರೀ ಎಲ್. ಆರ್. ಶಿವರಾಮೇಗೌಡ :- ನೀವು ಮಧ್ಯೆ ಮಧ್ಯೆ ತೊಂದರೆ ಕೊಡದಿದ್ದರೆ ಸರಿಯಾಗಿ ಮಾತನಾಡುತ್ತೇನೆ.

ಉಪಾಧ್ಯಕ್ಷಿಣಿಯವರು:- ನೀವು ತೊಂದರೆಯನ್ನು ಮಾಡುವಂತೆ ಮಾಡಿಕೊಳ್ಳುತ್ತೀರಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಇವತ್ತು ನಗರದಲ್ಲಿ ಒಳ್ಳೆ ಒಳ್ಳೆಯ ಹೆಸರನ್ನು ಮಾಡಿರತಕ್ಕ ವೈದ್ಯರಿದ್ದಾರೆ. ಅವರಾರಿಗೂ ಸರ್ಕಾರಿ ಆಸ್ಪತ್ರೆಯಲ್ಲಿ, ಸರ್ಕಾರದಲ್ಲಿ ಕೆಲಸ ಮಾಡತಕ್ಕ ಆಸೆ ಇಲ್ಲ. ಅವರಿಗೆ ಸರ್ಕಾರಿ ಆಸ್ಪತ್ರೆಗಳು ಇವತ್ತು ರೆಸ್ಟ್ ಹೋಮ್‌ಗಳಾಗಿವೆ. ಸರ್ಕಾರಿ ಆಸ್ಪತ್ರೆಗೆ ರೋಗಿಗಳು ಹೋದರೆ ಸರಿಯಾಗಿ ನೋಡುವುದಿಲ್ಲ. ಕೆಲಸವರು ಒಳ್ಳೆಯವರಿರಬಹುದು, ಇಲ್ಲವೆಂದು ಹೇಳುತ್ತಿಲ್ಲ ಆದರೆ ಕೆಲವು ವೈದ್ಯರುಗಳು ಬೇಜವಾಬ್ದಾರಿಯಿಂದ ಆಸ್ಪತ್ರೆಯಲ್ಲಿ ನಡೆಮಕೊಳ್ಳುವುದನ್ನು ನಾವು ಕಣ್ಣಾರೆ ಕಾಣುತ್ತಿದ್ದೇವೆ. ಏಕೆಂದರೆ ರೋಗಿಗಳು ಮನೆಗೆ ಬರಲಿ ಹೆಚ್ಚು ಹಣವನ್ನು ಕೊಡಲಿ ಅಲ್ಲಿ ನಾವು ಚನ್ನಾಗಿ ನೋಡಬಹುದು ಅನ್ನತಕ್ಕ ಉದಾಸೀನ ಕೆಲಸದಲ್ಲಿದೆ. ಇದನ್ನು ದಯಮಾಡಿ ತಪ್ಪಿಸಬೇಕು. ಹಿಂದೆ ನಾವು ಇದರ ಬಗ್ಗೆ ನೋಡಿದ್ದೇವೆ. ಹಿಂದೆ ಒಂದು ಸಾರಿ ಯಾರು ಪ್ರಾಕ್ಟೀಸ್ ಮಾಡಬಾರದು ಎನ್ನುವ ಆಜ್ಞೆ ಮಾಡಿದ್ದನ್ನು ನೋಡಿದ್ದೇವೆ, ಕೇಳಿದ್ದೇವೆ. ಇದರ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಬೇಕು.

ಡಾ:ಎನ್. ಬಿ. ನಂಜಪ್ಪ :- ಇವರು ಮೋಸ ಮಾಡುವವರು, ಮನೆಗೆ ಬಾ, ಅಲ್ಲಿಗೆ ಬಾ, ಇಲ್ಲಿಗೆ ಬಾ ಈ ರೀತಿಯಾಗಿ ಹಗುರವಾಗಿ ವೈದ್ಯರ ಬಗ್ಗೆ ಮಾತನಾಡತಕ್ಕದ್ದು ಸರಿಯಲ್ಲ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ:- ನೀವು ಮಾತನಾಡುವುದಾದರೆ ಇನ್ನೊಮ್ಮೆ ನಿಯಮವನ್ನು ತೆಗೆದುಕೊಂಡು ಭಾಷಣ ಮಾಡಿ ಅದನ್ನು ನಾನು ಬೇಡ ಎನ್ನುವುದಿಲ್ಲ. ಆದರೆ ನಾನು ಮಾತನಾಡುವಾಗ ಅಡ್ಡಿಯನ್ನು ಮಾಡಬೇಕು.

ಉಪಾಧ್ಯಕ್ಷಿಣಿಯವರು:- ನೀವು ಕುಳಿತುಕೊಂಡಿರಿ ಅದಕ್ಕೆ ಅವರು ಮಾತನಾಡಿದರು.

ಶ್ರೀ ಎಲ್. ಆರ್. ಶಿವರಾಮೇಗೌಡರು:- ಅವರು ಏನೋ ಒಳ್ಳೆಯದನ್ನು ಹೇಳುತ್ತಾರೆಂದು ಕುಳಿತುಕೊಂಡೆ. ಅವರು ಏನೇನೋ ಮಾತನಾಡಲು ಹೋದರೆ ಹೇಗೆ ? ಇವತ್ತು ಏನಾಗಿದೆ ಎಂದರೆ ಬಹಳ ಜನ ವೈದ್ಯರುಗಳ ಪ್ರೊಫೆಶನ್ ಬಹಳ ಚೆನ್ನಾಗಿದೆ ಇದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಬಹಳಷ್ಟು ಸಲ್ಲದ ವಿಚಾರಗಳು ನಗರದಲ್ಲಿ ನಡೆಯುತ್ತಿದೆ. ಅದರ ಬಗ್ಗೆ ತಾವು ತೀವ್ರವಾಗಿ ಸಮಾಲೋಚನೆ ಮಾಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತು ಮಹಾರಾಷ್ಟ್ರದಲ್ಲಿ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಆಸ್ಪತ್ರೆಗಳಿವೆ. ಆದರೆ ನಮ್ಮಲ್ಲಿ ಬಸ್‌ಗಳನ್ನು ಓಡಿಸುವುದೂ ನಿಮ್ಮದ, ಕೆ.ಇ.ಬಿ. ಯಲ್ಲಿ ವಿದ್ಯುತ್ ತಯಾರು ಮಾಡತಕ್ಕದ್ದೂ ನಿಮ್ಮದೆ, ಆಸ್ಪತ್ರೆಗಳನ್ನು ನಡೆಸತಕ್ಕದ್ದೂ ನಿಮ್ಮದೆ ಆಗಿದೆ. ಈ ಪದ್ಧತಿ ಬೇಡ, ಈ ಒಂದು ನಿಲುವು ಹೋಗಬೇಕು. ಇದನ್ನು ನೀವು ಬದಲಾವಣೆ ಮಾಡಿಕೊಳ್ಳಬೇಕು. ಪ್ರೈವೇಟೇಜೇಷನ್ ಮಾಡಿ ಎಂದು ನಾವು ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತೇವೆ. ಇವತ್ತು ಮಹಾರಾಷ್ಟ್ರದಲ್ಲಿ , ಗುಜರಾತ್‌ನಲ್ಲಿ ಕೆಲವು ಕೆ ಎಸ್ ಆರ್ ಟಿ ಸಿ ಬಸ್‌ಗಳನ್ನು ಓಡಿಸತಕ್ಕಂಥದಲ್ಲಿ ವಿದ್ಯುತ್ ತಯಾರು ಮಾಡತಕ್ಕಂಥದ್ದರಲ್ಲಿ ಪ್ರೈವೇಟೈಜ್ ಮಾಡಿರುವುದರಿಂದ ಅಷ್ಟು ಕಾಂಪಿಟೇಷನ್ ನಿಂದ ಇದು ಚೆನ್ನಾಗಿ ನಡೆಯುತ್ತಿದೆ. ಇವತ್ತು ಬಾಂಬೆಯಲ್ಲಿ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಇವತ್ತು ಆಸ್ಪತ್ರೆಗಳನ್ನು ಮಾಡುತ್ತಿದ್ದಾರೆ. ತಾಲ್ಲೂಕು ಲೆವೆಲ್‌ನಲ್ಲಿ ಮತ್ತು ಜಿಲ್ಲಾ ಲೆವೆಲ್‌ಗಳಲ್ಲಿ. ಅದಕ್ಕೆ ಕೇಂದ್ರ ಸರ್ಕಾರ ಸಾಕಷ್ಟು ದುಡ್ಡನ್ನು ಎನ್.ಸಿ.ಡಿ.ಸಿ. ಯಿಂದ ಕೊಡುತ್ತಿದೆ. ಅದನ್ನು ನೀವು ತಂದು ಈ ರಾಜ್ಯಕ್ಕೆ ಅಳವಡಿಸಬೇಕು. ಇದರಿಂದ ಹಳ್ಳಿಗಳಲ್ಲಿ ಇರತಕಂಥ ಆಸ್ಪತ್ರೆಗಳು ಬಹಳ ಚೆನ್ನಾಗಿ

ಕೆಲಸ ಮಾಡಲಿಕ್ಕೆ ಅವಕಾಶವಾಗುತ್ತದೆ. ಇನ್ನು ಕೊನೆಯದಾಗಿ ನಮ್ಮ ಸಹಕಾರದ ಬಗ್ಗೆ ಎರಡು ಮಾತುಗಳನ್ನು ಆಡಬೇಕಾಗುತ್ತದೆ. ಇವತ್ತು ಸಾಲ ಮನ್ನಾದ ವಿಚಾರದಲ್ಲಿ ಸನ್ಮಾನ್ಯ ಮೋರೆಯವರು ಇವತ್ತು ಸರ್ಕಾರ ಯಾವುದೋ ಬಂತೋ, ಪಕ್ಷ ಯಾವುದು ಹೇಳಿತೋ ಸಾಲ ಮನ್ನಾ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದರು. ನಾವು ಸಹಿತ ಈ ಸದನದಲ್ಲಿ ಹಲವಾರು ಬಾರಿ ಚರ್ಚೆಯನ್ನು ಮಾಡಿದ್ದೇವೆ. ಸಾಲ ಮನ್ನಾ ಆಗಲಿಲ್ಲ. ನನಗೆ ಗೊತ್ತಿದೆ, ಇವತ್ತು ಹಣಕಾಸಿನ ಮುಗ್ಗಟ್ಟು ಇದೆ. ಸಾಲ ಮನ್ನಾ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಆದರೂ ಸಹಿತ ಇವತ್ತು ರೈತ ಇಕ್ಕಟ್ಟಿಗೆ ಸಿಕ್ಕಿದ್ದಾನೆ. ನಾನು ವಿನಂತಿ ಮಾಡುತ್ತೇನೆ, ನೀವು ಸಾಲ ಮನ್ನಾ ಮಾಡದೆ ಇದ್ದರೆ ಕೋ - ಆಪರೇಟೀವ್ ಸೆಕ್ಟಾರ್ ಸಂಪೂರ್ಣ ನಿರ್ನಾಮವಾಗುತ್ತದೆ. ಎಲ್ಲಿದೆ ನಿಮ್ಮ ಕೋ-ಆಪರೇಟೀವ್ ಮೂವ್‌ಮೆಂಟ್ ಹೇಳಿ. ಯಾವ ವಿಎಸ್‌ಎಸ್ ನಡೆಯುತ್ತಿದೆ ? ಟಿ ಎ ಪಿಸಿ ಎಂ ಎಸ್ ಗಳೆಲ್ಲಾ ಇದೇ ರೀತಿ ನಡೆದುಕೊಂಡು ಹೋದರೆ ಇನ್ನು ಆರು ತಿಂಗಳಲ್ಲೇ ಎಲ್ಲರೂ ಬಾಗಿಲು ಹಾಕುತ್ತಾರೆ. ಪಿಎಲ್‌ಡಿ ಬ್ಯಾಂಕ್‌ಗಳದು ಹತ್ತಿರಕ್ಕೆ ಬಂದಿದೆ. ಇವತ್ತು ನೀವು ಸಾಲ ಮನ್ನಾ ಮಾಡುವುದಕ್ಕೆ ಸ್ವಾಗತ ಮಾಡುತ್ತೇನೆ. ಆದರೆ, ಇವತ್ತು ಸರ್ಕಾರ ತೀಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತು ಬಡ್ಡಿ ಮನ್ನಾ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನಾದರೂ ಹಾಕಿಕೊಳ್ಳದೇ ಹೋದರೆ ಕೋ -ಆಪರೇಟೀವ್ ಮೂವ್‌ಮೆಂಟ್ ಉಳಿಯುವುದಿಲ್ಲ. ಇದಕ್ಕೆ ಬಡ್ಡಿಯನ್ನಾದರೂ ಮನ್ನಾ ಮಡತಕ್ಕಂಥ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಪಿಎಲ್‌ಡಿ ಬ್ಯಾಂಕ್‌ಗಳು . . . .

ಉಪಾಧ್ಯಕ್ಷಿಣಿಯವರು:- ಮಾನ್ಯ ಶಿವರಾಮೇಗೌಡರೇ, ದಯವಿಟ್ಟು ಇನ್ನೊಬ್ಬರು ಮಾತನಾಡುವವರಿದ್ದಾರೆ. ಅವರಿಗೂ ಒಂದು ಛಾನ್ಸನ್ನು ಕೊಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಇನ್ನು ಮೂರು ನಾಲ್ಕು ನಿಮಿಷದಲ್ಲಿ ಮುಗಿಸುತ್ತೇನೆ. ಇನ್ನು ಪಿಎಲ್‌ಡಿ ಬ್ಯಾಂಕ್ ಬಗ್ಗೆ ಮತ್ತು ಟಿ.ಎ.ಪಿ.ಸಿ.ಎಂ.ಎಸ್.ಗಳ ಬಗ್ಗೆ ಹೇಳಿ ಮುಗಿಸುತ್ತೇನೆ. ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ಸಾಲವನ್ನು ಕೊಡುತ್ತಾರೆ. ಈಗ ಪಾಪ, ಅಲ್ಲಿ ಇರತಕ್ಕಂಥ ಅಧಿಕಾರಿಗಳೆಲ್ಲಾ ಒಳ್ಳೆಯವರಾಗಿದ್ದಾರೆ. ಈ ನಾರ್ಮ್ಸ್ ಏನಿದೆ ಪಿಎಲ್‌ಡಿ ಬ್ಯಾಂಕ್‌ನಲ್ಲಿ , ಅದು ಬದಲಾವಣೆಯಾಗಬೇಕು. ಈ ಸಾಲ ಕೊಡತಕ್ಕಂಥ ವ್ಯವಸ್ಥೆ ಇದೆಯಲ್ಲಾ , ಒಬ್ಬ ರೈತ ಕೋಳಿ ಫಾರಂ ತೆಗೆಯಬೇಕು ಎಂದು ಹೇಳಿದರೆ ಒಂದು ವರ್ಷ ಸುತ್ತಬೇಕು ಪಿಎಲ್‌ಡಿ ಬ್ಯಾಂಕ್‌ಗೆ. ಪಿಎಲ್‌ಡಿ ಬ್ಯಾಂಕ್‌ನಲ್ಲಿ ನೀವು ಅವನ ಒಪ್ಪಿಗೆಯನ್ನು ತೆಗೆದುಕೊಂಡು ಕೋಳಿ ಫಾರಂ ಮಾಡುವುದರಲ್ಲಿ ಅವನ ನೆತ್ತಿ ಕೂದಲೆಲ್ಲಾ ಉದುರಿಹೋಗುತ್ತದೆ. ನಿಮ್ಮಲ್ಲಿ ಇರತಕ್ಕಂಥ ನಾರ್ಮ್ಸ್ ದೇವರಿಗೇ ಪ್ರೀತಿ ಆ ನಾರ್ಮ್ಸ್. ಆ ನಾರ್ಮ್ಸ್‌ನನ್ನು ಬದಲಾಯಿಸಿ ದಯಮಾಡಿ ಹೊಸ ಪದ್ಧತಿಯನ್ನು ಅಳವಡಿಸಿಕೊಳ್ಳಿ. ನೀವು ಲಕ್ಷಾಂತರ ರೂಪಾಯಿ ಸಾಲವನ್ನು ಕೊಡತಕ್ಕಂಥ ಸಂದರ್ಭದಲ್ಲಿ ನಿಮ್ಮ ಹತ್ತಿರ ಒಂದು ಇಂಜಿನಿಯರಿಂಗ್ ವಿಂಗ್ ಇಲ್ಲ. ಇಂಜಿನಿಯರಿಂಗ್ ವಿಂಗನ್ನು ಮಾಡಿಕೊಳ್ಳದೇ ಹೋದರೆ ನೀವು ಯಾವ ರೀತಿ ಸಾಲವನ್ನು ಕೊಡುತ್ತೀರಿ ? ಈಗ ನಾಲ್ಕು ಲಕ್ಷ ರೂಪಾಯಿಗಳನ್ನು ಒಂದು ಕೋಳಿ ಫಾರಂಗೆ ಸಾಲ ಕೊಡಬೇಕಾದರೆ ಅವನು ಮನೆಯನ್ನು ಯಾವ ರೀತಿ ಕಟ್ಟುತ್ತಾನೆ ಎನ್ನುವುದನ್ನು ನೋಡಬೇಕಾದರೆ ನಿಮ್ಮ ಪಿಎಲ್‌ಡಿ ಬ್ಯಾಂಕ್ ಸೆಕ್ರೆಟರಿ ಹೋಗಿ ನೋಡಲಿಕ್ಕೆ ಆಗುವುದಿಲ್ಲ. ನಿಮ್ಮ ಪಿಎಲ್‌ಡಿ ಬ್ಯಾಂಕ್ ಸೂಪರ್‌ವೈಸರ್ ಹೋಗಿ ನೋಡಲಿಕ್ಕೆ ಆಗುವುದಿಲ್ಲ. ಅವರು ಏನಿದ್ದರೂ ಸಾಲವನ್ನು ವಸೂಲು ಮಾಡುವುದಕ್ಕೆ ಆಗುತ್ತೇ ಹೊರತು ಇಂಜಿನಿಯರಿಂಗ್ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಅದಕ್ಕೆ ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ನೀವು ಸಾಲ ಕೊಡುವುದಾದರೆ ಕೊಡಿ. ಇಲ್ಲ ಅದನ್ನು ನೀವು ಕಮರ್ಷಿಯಲ್ ಬ್ಯಾಂಕ್‌ಗೆ ಬಿಟ್ಟುಬಿಡಿ. ಕೊಡುವುದಾದರೆ ನೀವು ಇಂಜಿನಿಯರಿಂಗ್ ವಿಭಾಗವನ್ನು ತೆಗೆದುಕೊಳ್ಳಬೇಕು. ಅದೇ ಇಲ್ಲದೇ ಹೋದರೆ ರೈತರು ಕಂಗಾಲಾಗುತ್ತಾರೆ ಎನ್ನತಕ್ಕಂಥ ಮಾತನ್ನು

ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಮತ್ತೆ ಟಿ ಎ ಪಿ ಸಿ ಎಂ ಎಸ್ ಗಳು ಇವತ್ತು ಆಹಾರ ಸಾಮಗ್ರಿಗಳನ್ನು ವಿತರಣೆ ಮಾಡುತ್ತಿವೆ. ಇನ್ನಾವ ಕೆಲಸಗಳನ್ನು ಮಾಡುತ್ತಿಲ್ಲ. ಟಿ ಎ ಎ ಪಿ ಸಿ ಎಂ ಎಸ್ ಗಳು. ಇವತ್ತು ಟಿಎಪಿಸಿಎಂಎಸ್ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ನಾಗಮಂಗಲದಲ್ಲಿ ಒಂದು ಟಿ ಎ ಪಿ ಸಿ ಎಂ ಎಸ್ ಇದೆ ಸ್ವಾಮಿ. ಯಾರಾದರೂ ಬಿಲ್ಲನ್ನು ಹಾಕಿಸಬೇಕು ಎಂದು ಹೇಳಿದರೆ ಸೆಕ್ರೆಟರಿ ಒಂದು ಕಡೆ, ಸೂಪರ್‌ವೈಸರ್ ಒಂದು ಕಡೆ ನಾಲ್ಕು ಸ್ಕೂಟರ್‌ಗಳನ್ನು ತೆಗೆದುಕೊಂಡು ಯಾರ್‍ಯಾರ ಹತ್ತಿರ ದುಡ್ಡು ಇದೆಯೋ ಹತ್ತು ಸಾವಿರ ಇಪ್ಪತ್ತು ಸಾವಿರ ಎಲ್ಲಾ ತಂದು ಅಲ್ಲಿ ಕೂಡಿ ಹಾಕಬೇಕು. ಆಮೇಲೆ ಬಿಲ್ಲನ್ನು ಹಾಕಿಸಬೇಕು. ಹತ್ತು ಹದಿನೈದು ಲಕ್ಷ ರೂಪಾಯಿಗಳನ್ನು ಸಬ್‌ಸಿಡಿ ಹಣ ವಾಪಸ್ ಕೊಡಬೇಕಾಗಿದೆ. ಎಲ್ಲಾ ಸಬ್‌ಸೀಡಿಯನ್ನನು ಸರ್ಕಾರದವರು ಕ್ಯಾನ್ಸಲ್ ಮಾಡಿ. ಕೊಡಬೇಕಾಗಿರತಕ್ಕಂಥ ಸಬ್‌ಸಿಡಿ ಹಣವನ್ನು ಮೊದಲು ಟಿಎಪಿಸಿಎಂಎಸ್ ಗಳಿಗೆ ಸಂದಾಯ ಮಾಡಿ. ಇವತ್ತು ಟಿ ಎ ಪಿ ಸಿ ಎಂ ಎಸ್‌ಗಳನ್ನು ಹೀಗೆ ಬಿಟ್ಟರೆ, ಸನ್ಮಾನ್ಯ ಮೋರೆಯವರೇ, ಇನ್ನು ಆರು ತಿಂಗಳ ಒಳಗೆ ರಾಜ್ಯದಲ್ಲಿರತಕ್ಕಂಥ ಟಿಎಪಿಸಿಎಂಎಸ್ ಗಳೆಲ್ಲಾ ಬಾಗಿಲು ಹಾಕಿಕೊಳ್ಳುತ್ತವೆ. ಅದಕ್ಕೆ ನಾನು ಒತ್ತಾಯ ಮಾಡುತ್ತೇನೆ, ನೀವು ಏನು ಹಣವನ್ನು ಕೊಡಬೇಕೋ ಸರ್ಕಾರದಿಂದ ಟಿಎಪಿಸಿಎಂಎಸ್ ಗಳಿಗೆ, ಅಷ್ಟು ಹಣವನ್ನು ಶೀಘ್ರವಾಗಿ ಬಿಡುಗಡೆ ಮಾಡತಕ್ಕಂಥ ಕೆಲಸವನ್ನು ನಾವು ಮಾಡಬೇಕು ಎಂದು ಹೇಳುತ್ತೇನೆ. ಕಬ್ಬಿನಿಂದಾಗಿ ನಾವು ಬಹಳ ಗಲಾಟೆಯನ್ನು ಮಾಡಿದ್ದೇವೆ. ಇದು ಬಹಳ ಗಂಭೀರವಾದ ಪ್ರಶ್ನೆ. ಮಂಡ್ಯ ಜಿಲ್ಲೆಯಲ್ಲಿ ಇವತ್ತು ಈಗ ಸುಮಾರು 50 ಕೋಟಿ ರೂಪಾಯಿ ಕಬ್ಬಿಗೆ ಬೆಂಕಿ ಬೀಳುತ್ತಿದೆ.

ಉಪಾಧ್ಯಕ್ಷರು :- ಮಿನಿಸ್ಟರ್ ಬಂದಾಗ ಅದಕ್ಕೆ ಉತ್ತರ ಹೇಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೇಗೌಡ :- ದಯವಿಟ್ಟು ಹೇಳುತ್ತೇನೆ ಕೇಳಿ. ಹೀಗೆ ನೀವು ಹೇಳಿದರೆ ನಾನು ಮಾತನಾಡುವುದಿಲ್ಲ.

ಉಪಾಧ್ಯಕ್ಷರು:- ಐದು ನಿಮಿಷ, ಹತ್ತು ನಿಮಿಷ ಎಂದು ಹೇಳುತ್ತೀರಿ. ಈಗ ಅರ್ಧ ಗಂಟೆ ಆಯಿತು.

ಶ್ರೀ ಎಲ್. ಆರ್. ಶಿವರಾಮೇಗೌಡ:- ನಾನು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ.

ಉಪಾಧ್ಯಕ್ಷರು:- ಗೊತ್ತಿದೆ, ಎಲ್ಲರೂ ಜವಾಬ್ದಾರಿಯಿಂದಲೇ ಮಾತನಾಡುತ್ತಾರೆ.

ಶ್ರೀ ಎಲಂ. ಆರ್. ಶಿವರಾಮೇಗೌಡ :- ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಮಂಡ್ಯ ಜಿಲ್ಲೆಯಲ್ಲಿ ಕಬ್ಬುಬೆಳೆದು ನಿಂತಿದೆ. ನಾವು ಕಬ್ಬನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದಂಥ ಅಧಿಕಾರಿಗಳು ಯಾರೂ ಕೂಡ ಕೈಗೆ ಸಿಕ್ಕುತ್ತಿಲ್ಲ. ಕಬ್ಬನ್ನು 10 ತಿಂಗಳೊಳಗೆ ಕಟಾವ್ ಮಾಡಿ ಸಕ್ಕರೆ ಕಾರ್ಖಾನೆಗೆ ಹೋಡಯಬೇಕು. ಆದರೆ ಇವತ್ತಿಗೆ 18 ತಿಂಗಳಾಗಿದೆ, ಇನ್ನೂ ಕಟಾವು ಮಾಡಿಲ್ಲ. ವಿ.ಸಿ. ನಾಲೆಯಲ್ಲಿ ನೀರನ್ನು ನಿಲ್ಲಿಸಿದ್ದಾರೆ. ಅಲ್ಲಿ ರೈತರು ಕಂಗಾಲಾಗಿದ್ದಾರೆ. ಕೇಂದ್ರ ಸರ್ಕಾರವೂ ಕೂಡ ಒಳ್ಳೆಯ ಕೈಗಾರಿಕಾ ನೀತಿಯನ್ನನುಸರಿಸುತ್ತಿದೆ. ನಮ್ಮ ನಾಯಕರೂ ಕೂಡ ಕೈಗಾರಿಕಾ ನೀತಿಯಲ್ಲಿ ಬಹಳ ಆಸಕ್ತಿ ಹೊಂದಿ ನಮ್ಮ ಕಾಲದಲ್ಲಿ ಕೈಗಾರಿಕೆಯನ್ನು ಚೆನ್ನಾಗಿ ಮಾಡಬೇಕೆಂದಿದ್ದಾರೆ. ಆದುದರಿಂದ ನಾನು ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ ನೀವು ಹೇಳುತ್ತೀರಿ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಕೈಗಾರಿಕೆಯನ್ನು ಮಾಡಿ ಹಣವನ್ನು ವಸೂಲ್ಮಾಡಿ ತನ್ನಿ ಎಂದು ಸ್ವಾಮಿ, ಇವತ್ತು ಸುಮಾರು ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕೆಂದರೆ ಸುಮಾರು 60 ಕೋಟಿ ರೂ ಬೇಕಾಗುತ್ತದೆ. ಇದಕ್ಕೆ ಕೊನೇ ಪಕ್ಷ 4 ಕೋಟಿ ರೂ. ಷೇರು ಹಣ ಬೇಕು. ಗ್ರಾಮಾಂತರ ಪ್ರದೇಶದಲ್ಲಿ ಯಾರು 4 ಕೋಟಿ ರೂ.ಗಳನ್ನು ಕೊಡುತ್ತಾರೆ. ಆದ್ದರಿಂದ ಸರ್ಕಾರ ಮಧ್ಯೆ ಪ್ರವೇಶಮಾಡಬೇಕು. ನೀವು ಜಾಯಿಂಟ್ ಸೆಕ್ಟಾರ್‌ನಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಮಾಡತಕ್ಕ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಇವತ್ತು ನಮ್ಮ ರೈತರು ಕಂಗಾಲಾಗುತ್ತಿದ್ದಾರೆ. ರೈತರ ಶಾಪಕ್ಕೆ ಸರ್ಕಾರ ಗುರಿಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ):- ಮಾನ್ಯ ಉಪಾಧ್ಯಕ್ಷಿಣಿಯವರೇ, ಬೇರೆ ಮಾನ್ಯ ಸದಸ್ಯರು ಹೇಳಿದ್ದನ್ನೇ ನಾನು ರಿಪೀಟ್ ಮಾಡುವುದಿಲ್ಲ. ಸಭೆಯ ಮುಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೆಡಿಕಲ್ ಟರ್ಮಿನೇಷನ್ ಆಫ್ ಪ್ರಗ್ನೆನ್ಸಿ ಬಗ್ಗೆ ಯಾರೂ ಕೂಡ ಪ್ರಸ್ತಾಪ ಮಾಡಲಿಲ್ಲ. ಇದು ಅವ್ಯಾಹತವಾಗಿ ನಡೆಯುತ್ತಿದೆ. ಅಲ್ಲದೆ ಸರ್ಕಾರದವರೂ ಕೂಡ ಇದನ್ನು ಮಾಡಬಹುದೆಂದು ಕಾನೂನು ಮಾಡಿದ್ದರಿಂದ ಈ ರೀತಿ ಆಗುತ್ತಿದೆ. ಆದರೆ ಇದು ಒಂದು ಸುಸಜ್ಜಿತವಾದ ಕೊಠಡಿಯಲ್ಲಿ ಆಗಬೇಕು. ಗರ್ಭಧಾರಣೆಯಾದ 3 ತಿಂಗಳೊಳಗೆ ಮಾತ್ರ ಇದನ್ನು ಮಾಡಬಹುದೆಂದು ಅನೇಕರು ಮರೆತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ನಿರಂತರವಾಗಿ ಇದನ್ನು ಮಾಡಿ ಹೆಣ್ಣುಮಕ್ಕಳ ಆರೋಗ್ಯವನ್ನು ಹಾಳುಮಾಡಿ ಅವರ ಸಾವಿಗೂ ಕೂಡ ಕಾರಣವಾಗುತ್ತಿದ್ದಾರೆ. ಹೆಣ್ಣು ಮಗು ಎಂದು ತಿಳಿದರೆ ಸಾಕು ಹಾಳುಮಾಡುತ್ತಾರೆ. ರಿಸ್ಟ್ರಿಕ್ಷನ್ ಆಫ್ ಫೀಮೇಲ್ ಫೀಟರ್ಸ್. ಅನೇಕರಿಗೆ ಗಂಡುಮಕ್ಕಳು ಹುಟ್ಟಿದರೆ ಮಾತ್ರ ಸ್ವರ್ಗವನ್ನು ಕಾಣುತ್ತಾರೆ, ಹೆಣ್ಣುಮಕ್ಕಳು ಬೇಡ ಎಂದು ಆ ಮಗು ಹುಟ್ಟುವುದಕ್ಕಿಂತ ಮೊದಲೇ ಅದರ ಹತ್ಯೆಯನ್ನು ನಿರಂತರವಾಗಿ ಮಾಡುತ್ತಿದ್ದಾರೆ, ಇದನ್ನು ತಪ್ಪಿಸಬೇಕು. ಪ್ರಜ್ಞಾವಂತ ವಿದ್ಯಾವಂತ ಜನರೂ ಕೂಡ ಇದನ್ನು ಮರೆತಿದ್ದಾರೆ. ಅದು ಬಹಳ ಅನ್ಯಾಯ. ಸೂಪರ್ ಸ್ಪೆಷಲ್ ಇನ್‌ಸ್ಟಿಟ್ಯೂಷನ್ ಬಗ್ಗೆ ಹೇಳುವುದಾದರೆ 1991ನೇ ಇಸವಿಯಲ್ಲಿ ರೂಲ್ಸ್ ಫ್ರೇಂ ಮಾಡದೆ, ಆಯ್ಕೆ ಆಗದೆ ಅನೇಕ ಸೀಟುಗಳು ಲ್ಯಾಪ್ಸ್ ಆಯಿತು. ಇಂಥಾದ್ದು ಆಗದಂತೆ ತಾವು ದಯವಿಟ್ಟು ನೋಡಿಕೊಳ್ಳಬೇಕು. ಡೈರೆಕ್ಟೋರೇಟ್‌ಗಳೂ ಕೂಡ ಬಹಳ ಜಾಸ್ತಿಯಾಗುತ್ತಿವೆ. ನರ್ಸಿಂಗ್‌ಗೇ ಒಂದು ಡೈರೆಕ್ಟೋರೇಟ್, ಇನ್ನೊಂದಕ್ಕೇ ಒಂದು ಡೈರೆಕ್ಟೋರೇಟ್, ಮತ್ತೊಂದಕ್ಕೇ ಒಂದು ಡೈರೆಕ್ಟೋರೇಟ್ ಹೀಗೆ ಬಹಳಷ್ಟು ಡೈರೆಕ್ಟೋರೇಟ್‌ಗಳಾಗುತ್ತಿವೆ. ಇನ್ನು ಕ್ಲಾಸ್ ಫೋರ್‌ಗೆ ಒಂದು ಡೈರೆಕ್ಟೋರೇಟ್ ಆಗಬೇಕಾಗಿದೆ. ಅಂಥ ಒಂದು ಪರಿಸ್ಥಿತಿ ಬರುತ್ತಿದೆ. ಆಡಳಿತದಲ್ಲಿ ಕೂಡ ಬಿಗಿ ತಪ್ಪಿಹೋಗುವಂಥ ಸಮಯ ಬರುತ್ತಿದೆ. ಒಂದು ವಿಚಾರವನ್ನು ಹೇಳುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿ ಡಾಕ್ಟರ್‌ಗಳ ಕ್ವಾರ್ಟರ್ಸ್ ಸರಾಸರಿ 70 ರಷ್ಟು ಖಾಲಿ ಬಿದ್ದಿವೆ. ಅವುಗಳ ಕಿಟಕಿ ಬಾಗಿಲುಗಳನ್ನು ಗ್ರಾಮಾಂತರ ಪ್ರದೇಶದ ಜನರೇ ಕಿತ್ತುಕೊಂಡು ಹೋಗುತ್ತಿದ್ದಾರೆ. ನೀವು ಜಿಲ್ಲಾಪರಿಷತ್ತಿಗೆ ಒಂದು ಅಧಿಕಾರವನ್ನು ಕೊಡಿ. ವೈದ್ಯರು ಅಲ್ಲಿ ವಾಸಮಾಡದಿದ್ದರೆ ಅಲ್ಲಿಯೇ ಇರತಕ್ಕವರಿಗೆ ಇದನ್ನು ಕೊಡುವಂತೆ ಮಾಡಿ. 21ನೇ ಶತಮಾನಕ್ಕೆ ಎಲ್ಲರಿಗೂ ಆರೋಗ್ಯ ಎನ್ನತಕ್ಕ ಒಂದು ಸ್ಲೋಗನ್ ಇದೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ 30 ಕೋಟಿ ಇದ್ದಂಥ ಜನಸಂಖ್ಯೆ ಈಗ 90 ಕೋಟಿಗೆ ಹೋಗುತ್ತಿದೆ. 21ನೇ ಶತಮಾನಕ್ಕೆ 100 ಕೋಟಿ ಆಗುತ್ತದೆಂಬುದನ್ನು ಮರೆಯಬಾರದು. ಜನಸಂಖ್ಯಾ ಸ್ಫೋಟ ಎಂಬುದು ಒಂದು ಭಯಂಕರ ವಿಚಾರ. ಇಂಥ ಎಲ್ಲಾ ಸಮಸ್ಯೆಗಳಿಗೂ ಇದು ಒಂದು ಕಾರಣ ಎಂದರೆ ತಪ್ಪಾಗಲಾರದು. ವಿದ್ಯಾಭ್ಯಾಸ, ಉದ್ಯೋಗ, ವಸತಿ ಇನ್ನೂ ಮುಂತಾದ ಎಲ್ಲಕ್ಕೂ ಇದು ಬಹಳ ತೊಂದರೆದಾಯಕವಾಗಿದೆ. ನಮಗೆ ಸ್ವಾತಂತ್ರ್ಯ ಬಂದಮೇಲೆ ನಾವು ಮಾಡಿರತಕ್ಕಂಥ ಪ್ರೋಗ್ರೆಸ್ ಏನಿದೆ ಅದೆಲ್ಲಾ ಹೊಳೆಯಲ್ಲಿ ಹುಣಸೇ ಹಣ್ಣನ್ನು ತೊಳೆದಂತಾಗುತ್ತಿದೆ. One child per family irrespective of caste or creed. ಚೈನಾದಲ್ಲಿ ಒಂದು ಮಗುವಿನ ನೀತಿಯನ್ನು ಅಳವಡಿಸಿಕೊಂಡಿದ್ದಾರೆ. ಅದು ಸಣ್ಣ ಕುಟುಂಬ. It is more target oriented than health oriented. ನಾವು ಇದನ್ನು ಮಾಡಲೇಬೇಕು. ಅವರವರ ಜಾತಿ ಧರ್ಮಕ್ಕನುಗುಣವಾಗಿ ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಅವರೂ ಕೂಡ ಕುಟುಂಬ ಯೋಜನೆಯನ್ನು ಜಾರಿಗೆತರಬೇಕೆಂದು ಹೇಳಬಯಸುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ದಾದಿಯರು ಮನೆಮನೆಗೆ ತಿರುಗಿ ಕೇಸುಗಳನ್ನು ಹಿಡಿದುಕೊಂಡು ಬರುತ್ತಾರೆ. ಆ ಕೇಸುಗಳನ್ನು ನೋಡಿದರೆ ಒಂದೊಂದು ಸಾರಿ ಅಯ್ಯೋ ಅನಿಸುತ್ತದೆ. ಏಕೆಂದರೆ ಆ ಮಹಿಳೆಯರಲ್ಲಿ ರಕ್ತಹೀನತೆ ಇರುತ್ತದೆ. ಇದರ ಜೊತೆಗೆ ಇನ್ನೂ ಬೇರೆ ಬೇರೆ ತೊಂದರೆಗಳಿರುತ್ತವೆ. ಸಂಸಾರದಲ್ಲಿ ಸಾಕಷ್ಟು ನಜ್ಜುಗುಜ್ಜಾಗಿ ನಮಗೆ ಏನಾದರೂ ಆಗಲಿ ನನಗೆ ಮೊದಲು ಆಪರೇಷನ್ ಮಾಡಿ ಎಂದು ಕೇಳಿಕೊಳ್ಳುತ್ತಾರೆ. ಇವರನ್ನು ಕರೆದುಕೊಂಡು ಬಂದಂಥ ಎ. ಎನ್.

ಎಂ. ಗಳು ಕೂಡ ಡಾಕ್ಟ್ರೇ ನಮ್ಮ ಟಾರ್ಗೆಟ್ ರೀಚ್ ಆಗಬೇಕಾಗಿದೆ ಇದನ್ನು ಆಪರೇಷನ್ ಮಾಡಿ ಎಂದು ಕೇಳಿಕೊಳ್ಳುತ್ತಾರೆ. Sterilisation is an operation. ಇದು ಒಳ್ಳೆಯದಲ್ಲ. ತಾಲ್ಲೂಕು ಮಟ್ಟದಲ್ಲಿ ಒಂದೆರಡು ಸ್ಥಳಗಳಲ್ಲಿ ಸುಸಜ್ಜಿತವಾದ ಕಟ್ಟಡಗಳಲ್ಲಿ ಈ ಸ್ಟರ್‌ಲೈಸೇಷನ್ ಮಾಡಬೇಕು. ಏಕೆಂದರೆ ಅದೂ ಕೂಡ ಒಂದುರೀತಿಯ ಆಪರೇಷನ್. ಆದುದರಿಂದ ಅಲ್ಲಿ ಒಂದು ಒಳ್ಳೆಯ ಸುಸಜ್ಜಿತವಾದ ಆಸ್ಪತ್ರೆಯನ್ನು ಇಟ್ಟುಕೊಳ್ಳಬೇಕು. ಇದಕ್ಕೆ ಹಣ ಹೆಚ್ಚು ಖರ್ಚಾದರೂ ಚಿಂತೆಯಿಲ್ಲ. ಸಾಮಾನ್ಯವಾಗಿ ಹೆಣ್ಣುಮಕ್ಕಳೇ ಈ ಕುಟುಂಬ ಯೋಜನೆಯನ್ನು ಮಾಡಿಸಿಕೊಳ್ಳುವವರು. ಗಂಡಸರು ಒಂದಲ್ಲೊಂದು ಕಾರಣದಿಂದ ಮಾಡಿಸಿಕೊಳ್ಳದೆ ಹಾಗೇ ತಪ್ಪಿಸಿಕೊಳ್ಳುತ್ತಾರೆ. ಆದ್ದರಿಂದ ಇಂಥ ಒಂದು ಸುಸಜ್ಜಿತವಾದ ಆಸ್ಪತ್ರೆಗಳಲ್ಲಿ ಆಪರೇಷನ್ ಮಾಡಿ ಅವರಿಗೆ ಸಾಕಷ್ಟು ಫಾಲೋಅಪ್ ಪ್ರೊಗ್ರಾಂ ಕೂಡ ತಾವು ಮಾಡಬೇಕಾದ್ದು ನಮ್ಮ ಧರ್ಮ ಮತ್ತು ಕರ್ತವ್ಯ. ಇಂಥ ಒಂದು ಓರಿಯಂಟೇಷನ್ ಪ್ರೋಗ್ರಾಮ್ ಅವರಿಗೆ ಒಳ್ಳೆಯ ರೀತಿಯಲ್ಲಿ ನೋಡಿ ಮಾಡದೆ, ಪ್ಲಾನ್ಡ್ ಫ್ಯಾಮಿಲಿ ಪ್ಲಾನಿಂಗ್ ಮಾಡದೆ ಯಾವುದೋ ಮಾನ್ಯ ನರಸಿಂಹಮೂರ್ತಿಯವರು ಹಸಿರುಕಾರ್ಡು ಕೊಡುತ್ತೇವೆ ಮತ್ತೊಂದು ಕಾರ್ಡ್ ಕೊಡುತ್ತೇವೆಂದು ಹೇಳಿದರು. ಅವರಿಗೆ ಇಂಥ ಒಂದು ಕಾರ್ಡನ್ನು ಕೊಡಿ, ಜೊತೆಗೆ ಎಲ್ಲ ಸರ್ಕಾರಿ ಸೌಲಭ್ಯಗಳನ್ನು ಪ್ರೇಯಾರಿಟಿ ಸಿಗುವಂತ ರೀತಿ ಮಾಡಿದರೆ ಫ್ಯಾಮಿಲಿ ಪ್ಲಾನಿಂಗ್‌ಗೆ ಹೆಚ್ಚಿನ ಜನ ಮುಂದೆ ಬರುತ್ತಾರೆಂದು ನನಗನಿಸುತ್ತದೆ. ಇನ್ನು ಕೆಲವು ಸಜೆಷನ್ಸ್‌ಗಳನ್ನು ನಾನು ಕೊಟ್ಟಿದ್ದೇನೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಡಾಕ್ಟರ್ಸ್ ಎಷ್ಟು ಜನ ಬಂದರೂ ಕೂಡ ಇವತ್ತು ಮೆಡಿಕಲ್ ಕಾಲೇಜುಗಳಿಂದ. These medical colleges have become factories to produce doctors who are unwilling to work in rural areas. ಈ ಒಂದು ಪರಿಸ್ಥಿತಿ ಇದೆ. ಇದಕ್ಕೆ ನಾನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಸಿಕ್ಕಾಪಟ್ಟೆ ಮೆಡಿಕಲ್ ಕಾಲೇಜುಗಳು, ಡೆಂಟಲ್ ಕಾಲೇಜುಗಳು ಫಾರ್ಮಸಿಕಾಲೇಜುಗಳು ಎಲ್ಲ ಬರುತ್ತಿವೆ. ಇದು ಯಾರ ಒಂದು ಕಲ್ಯಾಣಕ್ಕೋಸ್ಕರ, ಯಾರ ಒಂದು ಸುಖಕ್ಕೋಸ್ಕರವೆಂದು ಯೋಚನೆ ಮಾಡಬೇಕಾಗಿದೆ. ಮೂರು ವರ್ಷಗಲಾದರೂ ರೂರಲ್‌ನಲ್ಲಿ ಸರ್ವೀಸ್ ಮಾಡದೆಹೋದರೆ ಅಂಥವರಿಗೆ ಡಿಗ್ರಿಕೊಡುವುದಾಗಲಿ, ಅಥವಾ ಪ್ರೊಭೆಷನರಿ ಪೀರಿಯಡ್ ಕನ್‌ಫರಮ್ ಮಾಡುವುದನ್ನು ತಾವು ಮುಂದೂಡ ಬೇಕು. ಆ ಒಂದು ಕಾರ್ಯಕ್ರಮವನ್ನು ತಾವು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಆಗ ನಮ್ಮ ಜನರಿಗೆ ಎಲ್ಲರಿಗೂ ಕೂಡ ಆರೋಗ್ಯಭಾಗ್ಯ ಸಿಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಶಿವರಾಮೇಗೌಡರು ಸ್ಪೀಪಿಂದಗ್ ರಿಮಾರ್ಕ್ಸ್ ಮಾಡುತ್ತಿದ್ದರು. ಆದರೆ ನಾನು ಈ ಸದನದಲ್ಲಿ ಒಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಇದುವರೆವಿಗೂ ನಾನು ಯಾವ ನರ್ಸಿಂಗ್ ಹೋಮ್‌ಗೂ ಹೋಗಿಲ್ಲ. ಏನೇ ಆದರೂ ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಟ್ರೀಟ್‌ಮೆಂಟ್ ತೆಗೆದುಕೊಂಡಿರುತ್ತೇನೆ. ಅಲ್ಲಿ ಚೆನ್ನಾಗಿ ಟ್ರೀಟ್‌ಮೆಂಟ್ ಕೊಡುತ್ತಾರೆ. ಈ ಒಂದು ಸಜೆಷನ್ ಕೊಟ್ಟು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎ . ಕೆ. ಅನಂತಕೃಷ್ಣ (ಶಿವಾಜಿನಗರ) :- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ನಾನು ಭಾಷಣ ಮಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರಿಗೆ ಗೊತ್ತಿದೆ. ನಮ್ಮ ಬೌರಿಂಗ್ ಆಸ್ಪತ್ರೆಯಲ್ಲಿ ಇ. ಅಂಡ್.ಟಿ ಡಿಪಾರ್ಟ್‌ಮೆಂಟ್ ಇದೆ. ಅದು ಕೇವಲ ಒಂದು 15-25 ವಿಸ್ತಾರವಿದ್ದು ಅಲ್ಲಿ ನಾಲ್ಕಾರು ಜನ ಡಾಕ್ಟರ್ಸ್ ಇದ್ದಾರೆ. ಪೇಶೆಂಟ್ಸ್‌ಗಳು ಒಳಗೆ ಹೋಗಿ ಹೊರಗಡೆ ಬರುವುದಕ್ಕೆ ಅನುಕೂಲವಿಲ್ಲ. ಇ ಅಂಡ್ ಟಿ ಡಿಪಾರ್ಟ್‌ಮೆಂಟ್ ಅಂದರೆ ಎಷ್ಟು ಕ್ರಿಟಿಕಲ್ ಆಗಿ ಇರುತ್ತದೆ, ಅದನ್ನು ಎಷ್ಟು ಡೀಪ್ ಆಗಿ ನೋಡಬೇಕೆನ್ನುವುನ್ನು ಯಾರು ಬೇಕಾದರೂ ಅರ್ಥ ಮಾಡಿಕೊಳ್ಳಬಹುದು. ಅಲ್ಲಿ ಡೆಂಟಲ್ ಡಿಪಾರ್ಟ್‌ಮೆಂಟ್ ಇದೆ, ಅಲ್ಲಿ 40-50 ಜನ ಒಬ್ಬರ ಮೇಲೆ ಒಬ್ಬರು ಬಿದ್ದಿರುತ್ತಾರೆ. ಒಬ್ಬ ಅಸಿಸ್ಟೆಂಟ್ ಪ್ರೊಫೇಸರ್ ಇದ್ದಾರೆ, ಇನ್ನೊಬ್ಬ ಅಸಿಸ್ಟೆಂಟ್ ಇದ್ದಾರೆ ಬೇರೆ ಸ್ಟೂಡೆಂಟ್ಸ್‌ಗಳು ಇದ್ದೇ ಇರುತ್ತಾರೆ.

ಅಲ್ಲಿ ಒಬ್ಬರು ಒಳಗಡೆ ಜಾಗಮಾಡಿಕೊಂಡು ಹೋದರೆ ಇನ್ನಷ್ಟು ಜನ ಹೊಗಡೆ ಇರಬೇಕು. ಹೀಗೆ ಅಲ್ಲಿ ವೈಟಿಂಗ್ ಲಿಸ್ಟ್‌ನಲ್ಲಿ ಇರುತ್ತಾರೆ. ಹೀಗೆ ವೈಟಿಂಗ್ ಲಿಸ್ಟ್‌ನಲ್ಲಿ ಇರುವುದು ಬೇಡವೆಂದು ಹೇಳುವುದಿಲ್ಲ. ಅಷ್ಟು ಕ್ಲಾಡ್ಮಿ ಅಟ್ಮಾಸ್‌ಫಿಯರ್ ನಲ್ಲಿ ಇಂಥ ಒಂದು ಸೆನ್‌ಸಿಟೀವ್ ಟ್ರೀಟ್‌ಮೆಂಟ್ ಕೊಡಬೇಕಾದರೆ ಸರ್ಜರಿ ಕೂಡ ಬೇಕಾಗಿದ್ದಾರೆ ಯಾವರೀತಿ ಸಾಧ್ಯವಾಗುತ್ತದೆನ್ನುವುದನ್ನು ತಾವು ಯೋಚನೆ ಮಾಡಬೇಕು. ಡೆಂಟಲ್ ಸರ್ಜರಿ performed is not proper unless there is proper atmosphere. ಇದು ಬಹಳ ಕ್ರೀಟಿಕಲ್ ಸಿಚ್ಯುಯೇಷನ್, ಇದನ್ನು ಮಾನ್ಯ ಮಂತ್ರಿಗಳೂ ಕೂಡ ನೋಡಿದ್ದಾರೆ. ಹಿಂದಿನ ಆರೋಗ್ಯ ಮಂತ್ರಿಗಳಾದ ಶ್ರೀಮತಿ ನಾಗರತ್ನಮ್ಮ ನವರೂ ಕೂಡ ನೋಡಿದ್ದಾರೆ. ಆದರೂ ಏತಕ್ಕಾಗಿ ಇದಕ್ಕೆ ಅತ್ಯಗತ್ಯವಾಗಿ ವಿಶಾಲವಾದ ವಿಭಾಗವನ್ನು ಮಾಡಿಕೊಟ್ಟಿಲ್ಲವೆನ್ನುವುದು ನನಗೆ ಅರ್ಥವಾಗುತ್ತಿಲ್ಲ. ಆಸ್ಪತ್ರೆಯ ಕಾರಿಡಾರ್‌ನಲ್ಲಿ ಜನ ಹೇಗೆ ನಿಂತಿರುತ್ತಾರೆಂದರೆ ಓಡಾಡುವುದಕ್ಕೂ ಸಾಧ್ಯವಿಲ್ಲ. ಒಬ್ಬರನ್ನೊಬ್ಬರು ತಳ್ಳಿಕೊಂಡು ಹೋಗಬೇಕಾಗಿದೆ. ಡಿಸಿಪ್ಲಿನ್ ನಾವು ಎನ್‌ಫೋರ್ಸ್ ಎಷ್ಟು ಮಾಡಿದರೂ ಜಾಗವಿಲ್ಲದಿದ್ದರೆ ಯಾರು ಡಿಸಿಪ್ಲಿನ್ ಒಳಪಟ್ಟು ನಡೆದುಕೊಳ್ಳುತ್ತಾರೆ. ಅದು ಬಹಳ ಹಳೇಕಾಲದ ಕಟ್ಟಡ. ಆವಾಗ ಅಷ್ಟು ಪಾಪ್ಯುಲೇಷನ್ ಕಡಿಮೆ ಇದ್ದು, ರೋಗಿಗಳು ಬರುವುದು ಕೂಡ ಕಡಿಮೆ ಇತ್ತು. ಆದರೆ ಜನಸಂಖ್ಯೆ ಬೆಳೆಯುತ್ತಾ ಟ್ರೀಟ್‌ಮೆಂಟ್ ಜಾಸ್ತಿಯಾಗುತ್ತಿರಬೇಕಾದರೆ, ಅದೇವೇಗದಲ್ಲಿ ನಾವು ನಮ್ಮ ಆರೋಗ್ಯ ಕೇಂದ್ರಗಳನ್ನು ಸರಿಯಾಗಿ ಬೆಳೆಸಿಕೊಂಡು ಹೋಗದೇ ಇದ್ದರೆ, ನಾವು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರು ಜನರ ಬಾಯಲ್ಲಿ ಕೆಟ್ಟ ಅಭಿಪ್ರಾಯ ಬರುತ್ತದೆಯೇ ಹೊರತು ಒಳ್ಳೆಯ ಅಭಿಪ್ರಾಯ ಬರುವುದಕ್ಕೆ ಸಾಧ್ಯವೇ ಇಲ್ಲ. ಸರ್ಕಾರಕ್ಕೆ ದುಡ್ಡು ಇದೆಯೇ ಇಲ್ಲವೇ, ಸಿಬ್ಬಂದಿ ಇದೆಯೇ ಇಲ್ಲವೇ, ಸಿಬ್ಬಂದಿಯನ್ನು ಇಟ್ಟುಕೊಳ್ಳುವುದಕ್ಕೋಸ್ಕರ ಅನುಕೂಲ ಇದೆಯೇ ಎಂದು ಜನ ನೋಡುವುದಿಲ್ಲ. ಈ ಕ್ಷಣದಲ್ಲಿ ಅವರಿಗೇನು ಕಷ್ಟ ಬಂದಿದೆ, ಅದಕ್ಕೆ ಮಾತ್ರ ಪರಿಹಾರ ಹುಡುಕಿಕೊಳ್ಳುತ್ತಾರೆ ಅವರು. ಅದಕ್ಕೆ ಟ್ರೀಟ್‌ಮೆಂಟ್ ಮಾತ್ರ ನೋಡುತ್ತಾರೆ. ಆದ್ದರಿಂದ ಈ ಹೆಲ್ತ್ ಕೇರ್ ಏನಿದೆ, ಈ ವಿಷಯದಲ್ಲಿ ಒಂದು ಉದಾರ ಮನಸ್ಸಿನಿಂದ ನಮ್ಮ ಸರ್ಕಾರದವರು ಸಾಕಷ್ಟು ಹಣ ಒದಗಿಸಿಕೊಡಬೇಕು. ಅಲ್ಲಿ ನಾನು ಕೇಳಿದ್ದೆ. ಸರಿಯಾದ ಇನ್‌ಸ್ಟ್ರುಮೆಂಟ್ಸ್ ಇಲ್ಲ, ಇದ್ದರೂ ಹಳೆಯದೇ ಇವೆ. ಇವತ್ತು ಇಷ್ಟು ಸೊಫೆಸ್ಕೇಟೆಡ್ ಇನ್ಸ್‌ಟ್ರುಮೆಂಟ್ಸ್ ಸಾಧಾರಣ ಸಣ್ಣ ಕ್ಲಿನಿಕ್‌ನಲ್ಲಿ ಇರುತ್ತವೆ. ಸಾಧಾಗಣ ಜನ ಇಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕು ಎನ್ನುವಾಗ, ಚೆನ್ನಾಗಿದೆ ಎಂದು ಅಲ್ಲಿಗೆ ಹೋದರೆ ಸಾಲಸೋಲ ಮಾಡಿ ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕು, ಆದರೆ ಅಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಬಹಳ ಕಷ್ಟದಾಯಕ ಪರಿಸ್ಥಿತಿ ಅಲ್ಲಿ ಇದೆ. ಬೌರಿಂಗ್ ಆಸ್ಪತ್ರೆ ಎಂದರೆ ಅದು ಈ ರಾಜ್ಯದ ಪ್ರೀಮಿಯರ್ ಆಸ್ಪತ್ರೆ. ಇಡೀ ರಾಷ್ಟ್ರದಲ್ಲೇ ಒಳ್ಳೆಯ ಹೆಸರು ತೆಗೆದುಕೊಂಡಂಥ ಆಸ್ಪತ್ರೆ. ಅಂದಮೇಲೆ ಅದಕ್ಕೆ ಯಾವ ಹೆಚ್ಚಿನ ಮಟ್ಟದಲ್ಲಿ ಸರ್ಕಾರ ಗಮನಿಸಬೇಕಿತ್ತೋ, ಅಷ್ಟು ಗಮನಿಸುತ್ತಿಲ್ಲ ಎಂದು ನಾನು ದುಃಖದಿಂದ ಹೇಳಬಯಸುತ್ತೇನೆ. ಆದ್ದರಿಂದ ನಾನಾದರೂ ಕೇಳುವುದು ಇಷ್ಟೇ. ಮಾನ್ಯ ಆರೋಗ್ಯ ಸಚಿವರು ಅದನ್ನು ನಿಧಾನವಾಗಿ ವೀಕ್ಷಣೆ ಮಾಡಬೇಕು. ಅವಕಾಶ ಕೊಟ್ಟರೆ ನಾನು ಕೂಡ ಅವರ ಜೊತೆಯಲ್ಲಿ ಹೋಗುತ್ತೇನೆ. ಒಂದೊಂದು ಡಿಪಾರ್ಟ್‌ಮೆಂಟ್ಸ್‌ನ್ನೂ ಸರಿಯಾಗಿ ನೋಡಬೇಕು. ನೋಡಿ ಯಾವ್ಯಾವ ಡಿಪಾರ್ಟ್‌ಮೆಂಟ್‌ಗೆ ಎಷ್ಟು ಜಾಗ ಬೇಕು, ಎಷ್ಟು ಉಪಕರಣಗಳು ಬೇಕಾಗುತ್ತವೆ, ಎಷ್ಟು ಸಲಕರಣೆಗಳು ಬೇಕಾಗುತ್ತವೆ ಎಂದು ಮತ್ತು ಅಲ್ಲಿ ಬರತಕ್ಕಂಥ ಜನರು ಎಷ್ಟು ಎಂದೆಲ್ಲಾ ನೋಡಬೇಕು. ನಾವೇನೂ ಅಲ್ಲಿ ಬರುವ ರೋಗಿಗಳ ಸಂಖ್ಯೆಮೇಲೆ ಕಡಿವಾಣ ಹಾಕುವುದಕ್ಕೆ ಸಾಧ್ಯವಿಲ್ಲ. ಇಷ್ಟೇ ಜನಕ್ಕೆ ಅನುಕೂಲ ಮಾಡಿಸಿಕೊಡುವುದಕ್ಕೆ ಸಾಧ್ಯವೆಂದು ಖಾಸಗಿ ನರ್ಸಿಂಗ್ ಹೋಮ್‌ಗಳಲ್ಲಿ ಖಾಸಗಿ ಔಷಧಾಲಯಗಳಲ್ಲಿ ಏನು ನಿಗದಿ ಮಾಡುತ್ತಾರೆ, ಆ ರೀತಿಯಲ್ಲಿ ನಾವು ಇಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಇವುಗಳನ್ನು ಬೆಳೆಸುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಲೇ ಬೇಕಾಗುತ್ತದೆ. ಬೇರೆ ವಿಷಯಗಳಿಗೆ ಹೋಗುವುದಕ್ಕೆ ನನಗೆ ಸಮಯ ಇಲ್ಲ. ಆದರೆ ನನ್ನ ಕ್ಷೇತ್ರದಿಂದ ನಾನು ಚುನಾಯಿತನಾಗಿ

ಬಂದಿರುವ ಕಾರಣ ಸ್ವಲ್ಪ ಹೇಳಬೇಕಾಗುತ್ತದೆ. ಬಹಳ ಜನ ಈ ಆಸ್ಪತ್ರೆ ಬಗ್ಗೆ ದೂರುಗಳನ್ನು ಕೊಡುತ್ತಲೇ ಇರುತ್ತಾರೆ. ಯಾವುದೇ ಅಧಿಕಾರಿಯ ವಿಷಯದಲ್ಲಾಗಲೀ, ಅಥವಾ ಯಾವುದೇ ಡಾಕ್ಟರ್‌ಗಳ ವಿಷದಲ್ಲಾಗಲೀ ಅಲ್ಲ. ಸಾಕಷ್ಟು ಸವಲತ್ತುಗಳು ಅಲ್ಲಿ ಇಲ್ಲ ಎಂದು ಇದೊಂದನ್ನೇ ಅವರು ಹೇಳುತ್ತಾ ಇದ್ದಾರೆ. ನೂರಾರು ವರ್ಷಗಳ ಹಿಂದೆ ಕಟ್ಟಿದಂಥ ಹಳೆಯ ಕಟ್ಟಡಗಳನ್ನು ಹಾಗೆಯೇ ಉಳಿಸಿಕೊಂಡು ಅಲ್ಲಿ ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಮುಂದುಗಡೆ ಇರುವ ಕಟ್ಟಡ, ಒಳಗೆ ಹೋದಹಾಗೆಲ್ಲ ಬೇರೆ ತರಹ ಕಾಣುತ್ತದೆ. ಇದನ್ನೆಲ್ಲ ಕೆಡವಿ ಹೊಸ ಕಟ್ಟಡ ಕಟ್ಟಬೇಕಾಗುತ್ತದೆ. ಕೆಲವು ಕಟ್ಟಡಗಳು ದುಡ್ಡು ಇಲ್ಲವೆಂದು ಹೇಳಿ ಅರ್ಧ, ಮುಕ್ಕಾಲುಭಾಗ ನಿಂತುಹೋಗಿವೆ. ಆದ್ದರಿಂದ ಯಾವ್ಯಾವ ಕಟ್ಟಡಗಳನ್ನು, ಯಾವ್ಯಾವ ಕಾರಣಕ್ಕೆ ಕಟ್ಟಬೇಕೆಂದು ತೀರ್ಮಾನವಾಗಿದೆ, ಸ್ಯಾಂಕ್ಷನ್ ಆಗಿದೆ, ಆ ಪ್ರಕಾರವಾಗಿ ಪರಿಪೂರ್ಣವಾಗಿ ಕಟ್ಟುವುದಕ್ಕೆ ಸಾಕಷ್ಟು ಹಣ ಒದಗಿಸಿಕೊಡಬೇಕೆಂಬ ಮಾತನ್ನು ನಾನು ಹೇಳುತ್ತೇನೆ. ಆಮೇಲೆ ಈ ಪೋಸ್ಟ್‌ಮಾರ್ಟಮ್ ಸೆಕ್ಷನ್ ಅಂತ ಇರುತ್ತದೆ. ಈ ವಿಚಾರದಲ್ಲಿ ನಾನು ಮಾನ್ಯ ಸಚಿವರೊಡನೆ ಹಿಂದೆ ಕೂಡ ಮಾತನಾಡಿದ್ದೇನೆ. ಈಗ ಕಟ್ಟಡ ಏನೋ ಕಟ್ಟುವುದಕ್ಕೆ ತೀರ್ಮಾನಮಾಡಿದ್ದಾರೆ ಎಂದು ಕೇಳಿದ್ದೇನೆ. ಅದು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಕಂಟೋನ್ಮೆಂಟ್ ವಿಭಾಗದಲ್ಲಿ ಅಂದರೆ ಬೆಂಗಳೂರು ಈಸ್ಟ್ ವಿಭಾಗದಲ್ಲಿ ಯಾರಾದರೂ ಅನ್‌ನ್ಯಾಚುರಲ್ ಡೆತ್ ಅಥವಾ ಆಕ್ಸಿಡೆಂಟ್‌ನಲ್ಲಿ ಇನ್ನ್ಯಾಲ್ಲ ಆಯಿತು ಎಂದರೆ ಅಲ್ಲಿ ಪೋಸ್ಟ್‌ಮಾರ್ಟಮ್ ಅನುಕೂಲ ಇಲ್ಲ. ಪೋಲೀಸರು ಇಂತಹ ಕೇಳಸುಗಳನ್ನು ತೆಗೆದುಕೊಂಡರೆ ವಿಕ್ಟೋರಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋಗುತ್ತಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶವಾಗಾರದಲ್ಲಿ ಹೆಣಗಳನ್ನು ಹೇಗೆ ಹಾಕಿದ್ದಾರೆ ಎಂದರೆ, ನಾನು ಕಣ್ಣಾರೆ ನೋಡಿದ್ದೇನೆ. ಹತ್ತು ಹದಿನೈದು ಹೆಣಗಳನ್ನು ಒಂದರ ಪಕ್ಕ ಒಂದು ಇಟ್ಟಿರುತ್ತಾರೆ. ಮನೆಯವರು ಯಾರಾದರೂ ಬಂದರೆ ಅದನ್ನು ನೋಡಿದಮೇಲೆ ಅವರ ಮನಸ್ಸಿನ ಮೇಲೆ ಏನು ಪರಿಣಾಮ ಆಗಬಹುದು ನೋಡಿ. ತಮಗೆ ಗೊತ್ತಿರುವಂತೆ ಎಲ್ಲಿಯಾದರೂ ಒಂದು ಕಡೆ ಏರೋಪ್ಲೇನ್ ಆಕ್ಸಿಡೆಂಟ್ ಆದರೆ ಒಂದು ಹೆಣ ಕಾಡಿನಲ್ಲೋ, ಗುಡ್ಡದಾಡಿನಲ್ಲೋ, ಬೆಟ್ಟದಮೇಲೋ ಅಥವಾ ಸಮುದ್ರದ ಮೇಲೋ ಬಿದ್ದರೆ ಆ ಹಣವನ್ನು ಎತ್ತಬೇಕಾದರೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಗೌರವದಿಂದ ತೆಗೆದುಕೊಂಡು ಬರುತ್ತಾರೆ. ಬೆಂಗಳೂರು ಜನ ದೂರದ ಅಮೆರಿಕಾ, ಐರ್‌ಲೆಂಡ್‌ನಲ್ಲೋ ಸತ್ತರೆ ನೂರಾರು ಕೋಟಿ ರೂಪಾಯಿ ಖರ್ಚುಮಾಡಿ ಆ ಹೆಣವನ್ನು ಪೆಟ್ಟಿಗೆಯಲ್ಲಿಟ್ಟು ಬಹಳ ಗೌರವದಿಂದ ತೆಗೆದುಕೊಂಡುಬರುತ್ತಾರೆ. ನಮ್ಮ ಸಂಸ್ಕೃತಿಯ ಹೆಸರು ಹೇಳಿ, ಅಂತಿಮ ನಮಸ್ಕಾರ ಸಲ್ಲಿಸುತ್ತೇವೆ. ಅಂದಮೇಲೆ ಅದಕ್ಕೆ ಗೌರವ ಸಲ್ಲಿಸುವುದು ಬೇಡವೆ? ಇದೆಲ್ಲ ಡಾಕ್ಟರುಗಳ ಸಮ್ಮುಖದಲ್ಲಿ ಆಗುವ ಕೆಲಸವೇ ? ಇದೆಲ್ಲ ನೋಡುವಾಗ ಈ ಜಾಗ ಎಷ್ಟು ದೊಡ್ಡದಾಗಿ ಇರಬೇಕು? ದಿವಸಕ್ಕೆ ಹತ್ತು ಇಪ್ಪತ್ತು ಹೆಣಗಳು ಬರುತ್ತವೆ. ಆ ಹೆಣಗಳನ್ನು ಹೇಗೆ ಇಡಬೇಕೋ ಹಾಗೆ ಇಡುವುದಕ್ಕೆ ಸರಿಯಾದ ಕಟ್ಟಡ ಬೇಕು. ಈ ಸಂದರ್ಭದಲ್ಲಿ ನಾನು ಆರೋಗ್ಯ ಮಂತ್ರಿಗಳಲ್ಲಿ ಒಂದು ವಿಷಯ ಕೇಳಬೇಕಾಗಿದೆ. ನಾನು ಒಬ್ಬನೆ ಮ್ಯಾನ್ ಆಗಿ ಹೇಳುತ್ತಿದ್ದೇನೆ. ಅನನ್ಯಾಚುರಲ್ ಡೆತ್ ಎಂದು ಏನು ಹೇಳುತ್ತಾರೆ ಅದರಲ್ಲಿ ಪ್ರತಿಯೊಂದೂ ಪೋಸ್ಟ್‌ಮಾರ್ಟಂ ಆಗಲೇಬೇಕೇ ? ಈ ಒಂದು ಬೆಳೆಯುತ್ತಿರುವ ಸಮಾಜದಲ್ಲಿ ತಿಳಿವಳಿಕೆ ಬೆಳೆಯುತ್ತಿದೆ ಪರಿಜ್ಞಾನ ಬೆಳೆಯುತ್ತಿದೆ, ಜ್ಞಾನೋದಯ ಆಗುತ್ತಿದೆ. ಸೈಂಟಿಫಿಕ್ ಆಗಿ ನಾವು ಯೋಚನೆ ಮಾಡುವಂಥ ಕಾಲದಲ್ಲಿ ಪ್ರತಿಯೊಂದಕ್ಕೂ ನಾವು ಪೋಸ್ಟ್‌ಮಾರ್ಟಂ ಮಾಡಲೇಬೇಕಾ ? ದಿನಗಟ್ಟಲೆ ಸಮಯ ಅಲ್ಲಿ ವೇಸ್ಟ್ ಮಾಡಲೇಬೇಕಾ ಎಂಬುದನ್ನು ತೀವ್ರವಾಗಿ ಆಲೋಚನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ನಾನು ಕೆಲವು ಡಾಕ್ಟರ್‌ಗಳ ಹತ್ತಿರ ಮಾತನಾಡಿದ್ದೇನೆ ಇದು ಬೇಕಾ ಎಂದು. ಕೆಲವು ಐಟಮ್ಸ್ ಬಿಡಬಹುದು ಎಂದು ಹೇಳುತ್ತಾರೆ. ಪೋಲೀಸ್ ಆಕ್ಟ್ ಪ್ರಕಾರ ಕೆಲವು ಐಟಮ್ಸ್ ಬಿಡಬೇಕಾಗಿ ಬರುತ್ತದೆ. ಡಾಕ್ಟರ್ಸ್ ಎಲ್ಲಾ ಹೆಲ್ಪಲೆಸ್ ಆಗಿದ್ದಾರೆ. ಪೋಲೀಸರು ಇದನ್ನು ಪೋಸ್ಟ್‌ಮಾರ್ಟಂ ಮಾಡಬೇಕು ಎಂದರೆ ಮಾಡಬೇಕಾಗಿ ಬರುತ್ತದೆ. ಅದಕ್ಕೋಸ್ಕರ ನಾನು ಏನು ಹೇಳುತ್ತೇನೆಂದರೆ ಆರೋಗ್ಯ ಇಲಾಖೆಯಿಂದ ಕಾನೂನು ಪ್ರಕಾರವಾಗಿ ಎಷ್ಟು

ಐಟಂಗಳನ್ನು ಪೋಸ್ಟ್‌ಮಾರ್ಟಂನಿಂದ ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ನೋಡಬೇಕು. ನಮ್ಮಲ್ಲಿ ಅಷ್ಟು ಅವಶ್ಯಕತೆ ಇಲ್ಲ, ಶಕ್ತಿ ಇಲ್ಲ ಎಂದಮೇಲೆ ಏತಕ್ಕೋಸ್ಕರ ಪೋಸ್ಟ್‌ಮಾರ್ಟಂ ಮಾಡಬೇಕು ? ಇದೇನೋ ರಾಮ ರಾಮ ರಾಮ ರಾಮ ಎಂದು ಹೇಳಿಕೊಂಡು ರಾಮ ಇದ್ದಾನೋ ಇಲ್ಲವೋ ಹಾಗೆ ಅನ್‌ನ್ಯಾಚುರಲ್ಲಾಗಿ ಯಾರೇ ಸತ್ತರೂ ತೆಗೆದುಕೊಂಡು ಹೋಗಿ ಅಲ್ಲಿ ಹಾಕುವುದು, ಪೋಸ್ಟ್‌ಮಾರ್ಟಂಮಾಡುವುದು ಅದಕ್ಕೆ 8 ಗಂಟೆ 4 ಗಂಟೆ, 10 ಗಂಟೆ, 24 ಗಂಟೆ ಕಾಯಿಸುವುದು ಎಂದರೆ ಏತಕ್ಕಾಗಿ ಇದನ್ನು ಮಾಡಬೇಕಾಗಿದೆ ? ಈ ಆಧುನಿಕ ಸಮಾಜದಲ್ಲಿ, ಬೆಳೆಯುತ್ತಿರುವ ಸಮಾಜದಲ್ಲಿ ಆಲೋಚನೆಗಳು ಬೆಳೆಯುತ್ತಿವೆ, ಚಿಂತನೆಗಳು ಬೆಳೆಯುತ್ತಿವೆ ಈ ಸಮಯದಲ್ಲಿ ನಾವು ಸವಿಸ್ತಾರವಾಗಿ ಯೋಚನೆ ಮಾಡಬೇಕಾದ ಅವಶ್ಯಕತೆ ಇಲ್ಲವೇ ಎಂಬ ಮಾತನ್ನು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ದಯವಿಟ್ಟು ಈ ವಿಷಯದಲ್ಲಿ ಹೆಚ್ಚು ಗಮನ ಕೊಡಬೇಕೆಂದು ನಾನು ಹೇಳುತ್ತಿದ್ದೇನೆ. ಹಾಗೆಯೇ ಬೌರಿಂಗ್ ಆಸ್ಪತ್ರೆ ಹತ್ತಿರ ಕಾರ್ ಪಾರ್ಕಿಂಗ್ ಇಲ್ಲ, ಸ್ಕೂಟರ್ ಪಾರ್ಕಿಂಗ್ ಇಲ್ಲ. ಕಾರುಗಳು ಮತ್ತು ಸ್ಕೂಟರುಗಳು ಒಳಗೆ ಬರದಹಾಗೆ ಮಾಡಬೇಕು. ಬಂದಮೇಲೆ ಅದಕ್ಕೆ ಸಾಕಷ್ಟು ಅವಕಾಶ ಮಾಡಿಕೊಡಬೇಕು. ಅಲ್ಲಂತೂ ಸರ್ಫೇಸ್ ಪಾರ್ಕಿಂಗ್ ಮಾಡುವುದಕ್ಕಾಗುವುದಿಲ್ಲ. ಅದಕ್ಕೋಸ್ಕರ ಮಂತ್ರಿಗಳು ಬಹಳ ತೀವ್ರವಾಗಿ ಯೋಚನೆ ಮಾಡಿ ಕಾರ್ ಪಾರ್ಕಿಂಗ್, ಸ್ಕೂಟರ್ ಪಾರ್ಕಿಂಗ್ ಮತ್ತಿತರ ಪಾರ್ಕಿಂಗ್ ಅಂಡರ್ ಗ್ರೌಂಡ್ ಪಾರ್ಕಿಂಗ್ ವ್ಯವಸ್ಥೆ ಏನಾದರೂ ಮಾಡಬೇಕು. ಮಾಡಿದಮೇಲೆ ಮೇಲುಗಡೆ ಭಾಗವನ್ನು ಯಾವುದಾದರೂ ರೀತಿಯಲ್ಲಿ ಉಪಯೋಗಿಸುವುದಕ್ಕೆ ಅನುಕೂಲ ಮಾಡಿಕೊಳ್ಳಬೇಕು ಎಂದು ತಮ್ಮಲ್ಲಿ ಹೇಳಬಯಸುತ್ತೇನೆ. ಸ್ಟಾಫ್ ವಿಷಯದಲ್ಲಿ ಹೇಳಬೇಕೆಂದರೆ ಡಾಕ್ಟರುಗಳು, ದಾದಿಗಳು, ಆಯಾಗಳು, ಅಟೆಂಡರ್ಸ್ ಎಲ್ಲದಕ್ಕೂ ಕಡಿವಾಣ ಇದೆ. ಕಾರಣ ದುಡ್ಡಿಲ್ಲ. ರೋಗಿಗಳನ್ನು ಅರ್ಧ ಟ್ರೀಟ್ ಮಾಡಿ ಅರ್ಧಕ್ಕೆ ಜನ ಇಲ್ಲ ಎಂದು ಕಳುಹಿಸುವುದಕ್ಕಾಗುತ್ತದೆಯೆ ? ಅರ್ಧ ಪರೀಕ್ಷೆ ಮಾಡಿ ಅರ್ಧ ಕಳುಹಿಸುವುದಕ್ಕಾಗುತ್ತಿದೆಯೆ? ಅಥವಾ ಹಾಫ್ ಬೇಸ್ಡ್ ಡಾಕ್ಟರ್ ಒಬ್ಬರನ್ನು ಇಟ್ಟುಕೊಂಡು ಆತನ ಕೈಯಲ್ಲಿ ಪರೀಕ್ಷೆ ಮಾಡಿಸಿ ಉಳಿದವರನ್ನು ಕಳುಹಿಸುವುದಕ್ಕಾಗುತ್ತದೆಯೆ? ಎಷ್ಟು ಸ್ಪೆಷಲಿಸ್ಟ್ ಬೇಕೋ ಅಷ್ಟು ಸ್ಪೆಷಲಿಸ್ಟ್‌ಗಳನ್ನು ಇಟ್ಟುಕೊಳ್ಳಲೇಬೇಕು ಅಲ್ಲಿ. ಇಲ್ಲದಿದ್ದರೆ ಡಿಪಾರ್ಟ್‌ಮೆಂಟನ್ನು ಕ್ಲೋಸ್ ಮಾಡಬೇಕು. ಪೇಷೆಂಟ್ ಇನ್ನೆಲ್ಲಾದರೂ ಹೋಗಲಿ. ನಮ್ಮಲ್ಲಿ ಅನುಕೂಲತೆ ಇದೆ ಎಂದು ಬಂದು ಅನುಕೂಲತೆ ಇಲ್ಲ ಎಂದಮೇಲೆ ಆತ ಎಲ್ಲಿ ಹೋಗುವುದು ? ನನಗೆ ಅನುಭವ ಆಗಿದೆ, ಅಲ್ಲಿ ಆ ತರಹ ಸ್ಪೆಷಲಿಸ್ಟ್‌ಗಳಿಲ್ಲ. ನಾನು ಬಹಳ ವಿಚಾರ ಮಾಡಿದ್ದೇನೆ. ನಮ್ಮ ಡಾಕ್ಟರುಗಳಲ್ಲಿ ರಾಜಕಾರಣ, ಗುಂಪುಗಳಿತನ, ಪರ್ಸನಾಲಿಟಿ ಕಾನ್‌ಫ್ಲಿಕ್ಟ್ ಏನು ಬೆಳೆದು ಬಂದಿದೆ ಯಾವ ಡಾಕ್ಟರ್ ಹತ್ತಿರ ಹೋಗಿ ಟ್ರೀಟ್‌ಮೆಂಟ್ ಮಾಡಿಕೊಂಡುಬಂದಮೇಲೆ ಆತ ಇಲ್ಲ ಎಂದು ಇನ್ನೊಬ್ಬ ಡಾಕ್ಟರ್ ಹತ್ತಿರ ಹೋದರೆ ಅವನು ಸರಿಯಾಗಿ ನೋಡುವುದಿಲ್ಲ. ನನಗೆ ಗೊತ್ತಿದೆ. ಒಂದು ಪರ್ಟಿಕ್ಯುಲರ್ ಕೇಸ್‌ನಲ್ಲಿ I lost my cousin because one particular Doctor did not want to see, because the other Doctor was not there. It was a emergent situation. If he would have been treated within 20 minutes, he would have survived. Because of this personality conflicts in that emergent sitation, the patient died. ಅದು ಮೆಡಿಕಲ್ ಎಥಿಕ್ಸ್ ಮೆಡಿಕಲ್ ಎಥಿಕೇಟ್ ಎಂದು ಹೇಳುತ್ತಾರೆ. ಪ್ರಾಣ ಕಳೆದುಕೊಳ್ಳುವ ಪೇಷೆಂಟ್ಸ್‌ಗೆ ಮೆಡಿಕಲ್ ಎಥಿಕ್ಸ್ ಎಂದರೆ ಏನು ಗತಿ ಆಗುತ್ತಿದೆ ? ಇದು ದೊಡ್ಡ ದೊಡ್ಡ ಮನೆತನದವರಿಗೆ ಆಗುತ್ತದೆ. ಬಡಪಾಯಿಗಳಿಗೆ ಏನಾಗುತ್ತದೆ ? ಇನ್ನೊಂದು ವಿಚಾರ ನನ್ನ ಕ್ಷೇತ್ರದಲ್ಲಿ ಜನ ಬಹಳ ನೊಂದು ಹೇಳುತ್ತಾರೆ. ಸಾಧಾರಣವಾಗಿ ಬಡಪಾಯಿ ಆದಂಥವನು ಆರ್ಥಿಕವಾಗಿ ಹಿಂದುಳಿದವನು ಪೇಷೆಂಟ್ ಹೋಗಬೇಕು ಎಂದರೆ ಅಲ್ಲಿರುವ ಸರ್ಜನ್ಸ್‌ಗೆ ಎಷ್ಟು ದುಡ್ಡು ಕೊಡಬೇಕೋ ಅಷ್ಟು ಕೊಡದೇಹೋದರೆ ಅವನನ್ನು ಸರ್ಜಿಕಲ್ ವಾರ್ಡ್‌ಗೇ ಹೋಗುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳುತ್ತಾರೆ. ಒಂದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಬಹಳ

ಖ್ಯಾತ ಡಾಕ್ಟರುಗಳ ಹೆಸರಿನಲ್ಲಿ ಈ ರೀತಿ ಕೇಳಿಬರುತ್ತಿತ್ತು. ಈಗ ಆ ತರಹ ಬೌರಿಂಗ್ ಆಸ್ಪತ್ರೆಯಲ್ಲೂ ಕೂಡ ಆಗುತ್ತಾ ಇದೆ ಎಂದು ನಿನ್ನೆ ಮೊನ್ನೆ ಕೂಡ ಕೇಳಿದೆ. ನಾಳೇ ಏನೋ ಈ ಸಬ್ಜೆಕ್ಟ್ ಬರುತ್ತದಲ್ಲ, ನೀವು ಮಾತನಾಡುತ್ತಿದ್ದೀರಂತಲ್ಲ ದಯವಿಟ್ಟು ಅದು ಬಂದಾಗ ಈ ವಿಚಾರ ಹೇಳಿ ಎಂದು ಜನ ಹೇಳಿದರು. ನಾನು ಕಣ್ಣಾರೆ ನೋಡಿಲ್ಲ, ಜನ ಬಂದು ಹೇಳಿದರು. ನಾನು ಮಲಗಬೇಕಾದರೆ ರಾತ್ರಿ ಒಂದೂವರೆ ಗಂಟೆಯಾಯಿತು. ಓಂದುಳಿದ ರೋಗಿಗಳು ಬರುವ ಆ ಜಾಗದಲ್ಲಿ ಈ ಒಂದು ಡಿಸಿಪ್ಲಿನ್ ಅನ್ನು ಎನ್‌ಫೋರ್ಸ್ ಮಾಡಲಿಲ್ಲ ಎಂದರೆ ಒಂದು ಪೇಟ್ರಿಯಾಟಿಕ್ ದೇಶವೇ ? ಡಾ: ನಂಜಪ್ಪನವರು ಹೇಳಿದರು ಇದು ನೋಬಲ್ ಪ್ರೋಫೆಷನ್ ಎಂದು, ನಾನು ಇಲ್ಲವೆಂದು ಹೇಳುವುದಿಲ್ಲ. We have to enforce discipline. I want to know which is the profession which is not noble in our society. The one who scavanges - Is it not a noble profession ? ಉರ್ದುಭಾಷೆಯಲ್ಲಿ ಹೇಳುತ್ತಾರೆ./ I am not conflicting. I am not entering into cotroversy with you. When you say about the nobility of the profession. . . .

Dr. N.B. NANJAPPA : Every profession is noble. But, you are not expected to unnecessarily criticise the medical profession.

Sri A.K. ANANTHAKRISHNA : When the needs are satisfied, the nobility is satisfied. If the needs are not satisfied, the nobility is placed into insignificance. The duties and responsibilities that are casted in our profession, the concerned people are expected to discharge them in the time, manner and the places where it has to be done and not just because somebody puts up a board by way of profession. An Engineer says that his profession is a noble profession which is not noble ? If you construct a bridge and if the Engineer does not do it correctly, the bridge is gone. If the person does not do justice to his profession, it is not called noble profession.

Dr. N. B. NANJAPPA : This is not my own word. During the time of Shushrusha it has been said, "Vaidyo Devo Narayana". That is the word I told.

Sri A.K. ANANTHANARAYANA : But how much God has come to our rescue is another factor. Nobility is understood there. Let us try to be very rationale; Let us be scientiffic in these matters. Let us not give nomenclatures unduly. This is a fact. Every profession is noble. The one who sweeps and keeps te environment clean, is a noble profession. A sweeper a man who treats with nobility is a noble. A proter on the Railway station who deals with you and your problem is also a noble citizen of the society. Every service that is given to

community, whatever community or whichever part of the community, it is a noble service. Every worker is a noble worker. Every worker is a noble citizen. By just discriminating the society with one profession with the other giving them the title is the cause for separating the society one from the other presenting a superiority complex with one and treating the other with inferiority position. Let us not forget that we have got to go a long way by discharging our duties and responsibilities in the right time, in the right manner & in the right spirit. One has to discharge his noble duty. If we discharge our duty that is cast on us and if we do that, that is our nobility. I apologise to the Chair because I diverted to some other matter. I should not have done it and I apologise. My concern is let us see where exactly we are wrong and what is wrong with the porofession in a particular place instead of finding fault with a particular person or anybody in the matter. I want correctives to be applied at the right time, in the right manner to the right situation so that we give a better way of life. ದಯವಿಟ್ಟು ಮಾನ್ಯ ಮಂತ್ರಿಗಳಿಗೆ ಒಂದೇ ಒಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಆ ಬೌರಿಂಗ್ ಹಾಸ್ಪಿಟಲ್ ಮತ್ತು ಆ ಗೌಸಿಯಾ ಹಾಸ್ಪಿಟಲ್ ಗೆ ದಯವಿಟ್ಟು ತಾವು ಇಂಟೆನ್ಸೀವ್ ಆಗಿ ಇನ್ಸ್‌ಪೆಕ್ಟ್ ಮಾಡಿ, ತಮಗೆ ಸಂಬಂಧಪಟ್ಟ ಸಿಬ್ಬಂದಿಯವರನ್ನು ಕರೆದು ಕೊಂಡು ಬನ್ನಿ. ಒಂದೊಂದನ್ನೂ ಸೇರಿಸಿ ವಿಷಯವನ್ನು ತಿಳಿದುಕೊಳ್ಳಿ. ಅದನ್ನು ಎಷ್ಟು ಇಂಪ್ರೂವ್ ಮಾಡುವುದಕ್ಕೆ ಸಾಧ್ಯವಾಗುತ್ತದೋ ಆದಷ್ಟನ್ನು ಆದಷ್ಟು ಶೀಘ್ರವಾಗಿ ಮಾಡಿ. ಅದರಿಂದ ನಾವು ರೋಗಿಗಳಿಗೆ ಅನುಕೂಲ ಮಾಡುವುದಕ್ಕಾಗುತ್ತದೆ ಎಂದು ಹೇಳುತ್ತೇನೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಆ ಆಸ್ಪತ್ರೆಯಿಂದ ಈ ವೇಸ್ಟ್ ಏನು ಡಿಸ್‌ಪೋಸ್ ಮಾಡುತ್ತಾರೆ, ಅದು ಆಸ್ಪತ್ರೆ ಸುತ್ತಮುತ್ತ ಇರುವ ಎಲ್ಲಾ ಡ್ರಯನೇಜ್‌ಗೂ ಹೋಗುತ್ತಾ ಇದೆ. ಅದರಿಂದ ಅವರು ಟಿಂಚರ್ಸ್ ಏನು ಹಾಕುತ್ತಾರೆ, ಮತ್ತೆ ಇನ್ನೇನೆಲ್ಲಾ ಹಾಕುತ್ತಾರೆ, ಅವುಗಳ ಹೆಸರು ನನಗೆ ಸರಿಯಾಗಿ ಗೊತ್ತಿಲ್ಲ. ಆದ್ದರಿಂದ ಅಲ್ಲಿ ಸುತ್ತಮುತ್ತ ಇರುವ ಅಂಗಡಿಯವರು ಆ ವಾಸನೆಯ ಬಗ್ಗೆ ನನಗೆ ಕಂಪ್ಲೇಂಟ್ ಮಾಡಿದ್ದಾರೆ. All the waste disposals pass through in all these lanes and all the shop-keepers surround everywhere, they all complained that they are smelling somehting very very nasty, and it is a great helath hazard. We tried to educate the people inside the Hospital but the discharge of the tilthy material from the Hospital will destroy the helath of the environment and this is a very very vital factor which we have take care of. The Corporation does not take care of it and the Health Dept. does not see where exactly, what is going wrong. Let there be a very serious earnest co-ordinated effort on the part of the Corporation, the Health Department, the Engineering Dept, the PWD Dept and all of them put together and see what is

happenning around and how best we can provide proper relief to the people within and outside the Hospital. This is what exactly I want to say..

Now a word about labour. With regard to labour, I am really sorry and I am sure all my friends would agree and also my Labour Minister friend would agree that it is not a very ordinary subject. We are dealing with the human problem and a problem which is coupled with problems and difficulties in insoluble situation. But, I am saying it to the Business Advisory Committes, I am saying it to the Government - this is not a subject matter to be mixed up with various other subjects and asked to be disposed off. We have to deal in a very sensitive area. What are the labour problems ? What is the problem between the management and the labour ? What is the relation between the management and the police, who are law enforcing authority ? What is the difficult and ununderstanding situation between labour, a very legitimate, just labour movement and that the police ? What is the position of the Government ? We have lot of labour Acts, lot of legislations, lots of objectives lots of functions which have been described here but which one of them has been very earnestly implemented is a matter that has got to be deliberated here. Atleast here after when a subject of this kind is being brought, I would only request that the Business Advisory Committee, that the Government and the Minister concerned would see to it that adequate time is allotted for discussion in depth ad particularly when we don't have labour representatives who have spent their life time working for the labour and labour organisations; so when we don't have right type of people who have spent all their life in organinsing labour, fought against the tyranny of the amanagement, fought against the intereference of police in support of the management and against the labour, fought with them outside the factory gates, in their respective residential areas, in their absence if we have to deliberate, either the Minister himself should take responsibility of giving this House all the details, perform all the responsiblities of the Management, Minister, Government, Labour and everybody and the citizen, or we should have enough time to deal with this matter. It is

very unfortunate, we don't have it and I am a very seriously emotional commited person as far as labour interests are concerned, and labour organisation is concerned. We are not spending any time on the unorganised sector of labour. Who has to organise them ? The unorganised sector of labour is not attracting the regular labour leadership. Rightly or wrongly neither of them have time or no time. So it is necessary that we should deliberate on this matter very seriously. I would request my young friend Labour Minister to put all his thought into this matter to see how the unorganised section of the labour throughout the State, they are far far more in number than all the organised labour and who are getting the maximum from the labour act and this unorganised sections of labour who are producing maximum outside the organised section of the industry or trade or commerce, wherever they are, they are the worst sufferers. Out thought should go very dutifully and very responsibly towards that section which is not organised, which is not enlightened, which is not coming out with agitational approach, which is not coming to us for a necessary relief. So our thought, as a responsible Government, should go in that direction. We have very nice statements made about the unorganised labour; women unorganised labour, children unorganised labour, uneducated illiterate, unorganised small shops, workshops here and there and what is their occupation, Sir ? Who is controlling ? Who is looking after them ? Which factory inspector goes there ? Which laobur inspector goes there to find what is their suffering ? So, I would like longer time is given for debating on therese points. This is what I exactly want to say because I cannot deliberate on the subject whithout properly doing justice to the entire requirements as published in this book. Thank you very much.

ಪ್ರಕಟಣೆ

ಉಪಾಧ್ಯಕ್ಷರು : ದಿನಾಂಕ 20ನೇ ಮಾರ್ಚಿ 1992ರ ಶುಕ್ರವಾರದಂದು ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆ ಸೇರಿ ಚರ್ಚಿಸಿ ಈ ಕೆಳಕಂಡಂತೆ ಕಾರ್ಯಕ್ಯಾಂಪ್‌ಗಳನ್ನು ನಡೆಸಲು ತೀರ್ಮಾನಿಸಲಾಯಿತು.

ಶನಿವಾರ :ಅನುದಾನಗಳ ಬೇಡಿಕೆ ಮೇಲಿನ ಚರ್ಚೆ
21-3-1992 ಶಾಸನ ರಚನಾ ಕಾರ್ಯ.

1. ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ 1992.
2. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇದ) (ತಿದ್ದುಪಡಿ ವಿಧೇಯಕ) 1992.
3. 1991-92ನೇ ಸಾಲಿನ ಪೂರಕ ಅಂದಾಜುಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಭಾನುವಾರ :ರಜಾ ದಿನ
22-3-1992

ಸೋಮವಾರ 23-3-1992 ರಿಂದ ಶುಕ್ರವಾರ 27-3-1992 ರವರೆಗೆ ಅನುದಾನಗಳಿಗೆ ಸಂಬಂಧಿಸಿದ ಬೇಡಿಕೆಗಳ ಮೇಲೆ ಚರ್ಚೆ ಮುಕ್ತಾಯ ಹಾಗೂ ಧನವಿನಿಯೋಗ ವಿಧೇಯಕವನ್ನು ಮಂಡಿಸುವುದು, ಹಾಗೂ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಶನಿವಾರ 28-3-1992 :ಶಾಸನ ರಚನೆ
ಭಾನುವಾರ 29-3-1992 :ರಜಾ ದಿನ
ಸೋಮವಾರ 30-3-1992 :ಶಾಸನ ರಚನೆ
ಹಾಗೂ ಮಂಗಳವಾರ 31-3-1992
ರವರೆಗೆ..

ಈಗ ಸಭೆ ಮುಕ್ತಾಯವಾಗಿದೆ. ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ 9.30 ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದು.

(ಸದನವು 8 ಗಂಟೆ 26 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 21ನೇ ಮಾರ್ಚ್ ಮಾಹೆ 1992ರ ಶನಿವಾರದಂದು 9.30 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

* * * * * * * *

ಕರ್ನಾಟಕ ವಿಧಾನಸಭೆ

ಶನಿವಾರ ೨೧ನೇ ಮಾರ್ಚ್ ೧೯೯೨

ಸದನವು, ವಿಧಾನಸೌಧದ ಮೊದಲನೆಯ ಮಹಡಿಯಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦-೧೫ ಘಂಟೆಗೆ ಸಮಾವೇಶಗೊಂಡಿತು.

(ಸನ್ಮಾನ್ಯ ಉಪಾಧ್ಯಕ್ಷರವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿ, ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

ವಿತ್ತೀಯ ಕಾರ್ಯಕಲಾಪಗಳು

೧೯೯೨-೯೩ನೇ ಸಾಲಿನ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಹಾಗೂ ಮತಕ್ಕೆ ಹಾಕುವುದು.

ಉಪಾಧ್ಯಕ್ಷಿಣಿಯವರು:- ಮಾನ್ಯ ಆರೋಗ್ಯ ಮಂತ್ರಿಗಳ ಉತ್ತರ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಸಹಕಾರ ಮಂತ್ರಿಗಳು ಮೊದಲು ಉತ್ತರ ಕೊಡುತ್ತಾರೆ. ಅಜೆಂಡಾದಲ್ಲಿ ಅವರ ಹೆಸರು ಮೊದಲು ಇದೆ.

ಸಹಕಾರ ಸಚಿವರಿಂದ ಉತ್ತರ:-

+ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ೧೯೯೨-೯೩ನೇ ಸಾಲಿನ ಆಯವ್ಯಯ ಬೇಡಿಕೆ ಕುರಿತು ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಅದೇ ಸಂದರ್ಭದಲ್ಲಿ ಮಾನ್ಯ ಸದಸ್ಯರು ಹಲವಾರು ಸಲಹೆ ಮತ್ತು ರಚನಾತ್ಮಕವಾದ ಟೀಕೆಗಳನ್ನು ಸಹ ಮಾಡಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಸದಸ್ಯರ ಸಲಹೆಗಳನ್ನು ನಾನು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನನ್ನ ಇಲಾಖೆಯಲ್ಲಿ ಮುಖ್ಯವಾಗಿ ಸಹಕಾರ, ಕೃಷಿ ಮಾರಾಟ, ರಾಜ್ಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಸಹಕಾರ ಅಪೆಕ್ಸ್ ಬ್ಯಾಂಕ್, ರಾಜ್ಯ ಉಗ್ರಾಣ ನಿಗಮ, ಗ್ರಾಹಕರ ಮಂಡಲಿ, ಸಹಕಾರ ಮಾರಾಟ ಮಂಡಲಿ ಮುಂತಾದವುಗಳು ಒಳಗೊಂಡಿವೆ. ಈಗಾಗಲೇ ನನ್ನ ಇಲಾಖೆಗೆ ಸಂಬಂಧಪಟ್ಟಂತಹ ವರದಿ ಕೂಡ ನಿಮ್ಮ ಕೈಯಲ್ಲಿ ಇದೆ. ಅದೇ ರೀತಿಯಾಗಿ ೧೯೯೨-೯೩ನೇ ಸಾಲಿನ ನಿರ್ವಹಣ ಮುಂಗಡ ಪತ್ರ ಕೂಡ ನಿಮ್ಮ ಕೈಯಲ್ಲಿ ಇದೆ. ಅವುಗಳಲ್ಲಿರುವ ಅಂಕಿಅಂಶಗಳನ್ನು ಪುನರುಚ್ಚರಿಸುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ. ಆದರೂ ಸಹ ಸಹಕಾರ ಇಲಾಖೆಯಲ್ಲಿ ಕಳೆದ ವರ್ಷ ಆದಂತಹ ಪ್ರಗತಿ ಮತ್ತು ಪ್ರಸಕ್ತ ಸಾಲಿನಲ್ಲಿ ಈ ಇಲಾಖೆಯಲ್ಲಿ ರೂಪಿಸಿರುವ ಯೋಜನೆಗಳ ಅನುಷ್ಠಾನ ಕುರಿತು ನಾನು ಸಂಕ್ಷಿಪ್ತವಾಗಿ ಹೇಳುವುದಕ್ಕೆ ಬಯಸುತ್ತೇನೆ. ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಒಟ್ಟು ೧೫ ಸಹಕಾರಿ ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು ಆ ಪೈಕಿ ಹಿರಿಯೂರು ವಾಣಿವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆ ಮಾತ್ರ ಕೆಲಸ ಮಾಡುತ್ತಿಲ್ಲ.

ಕಾರಣ ತಮಗೆಲ್ಲಾ ತಿಳಿದ ವಿಚಾರ. ವಾಣಿವಿಲಾಸ ಸಾಗರ ಬತ್ತಿ ಹೋಗಿದ್ದು ಅಲ್ಲಿ ಕಬ್ಬು ಬೆಳೆಯುತ್ತಿಲ್ಲ. ಆದ್ದರಿಂದ ವಾಣಿವಿಲಾಸ ಸಕ್ಕರೆ ಕಾರ್ಖಾನೆ ಮುಚ್ಚಿದೆ. ಇನ್ನು ಅದೇ ರೀತಿಯಾಗಿ ಕೇಂದ್ರ ಸರ್ಕಾರದಿಂದ ಈ ವರ್ಷ ೪ ಸಕ್ಕರೆ ಕಾರ್ಖಾನೆಗಳಿಗೆ ನಮಗೆ ಲೆಟರ್ ಆಫ್ ಇಂಟೆಂಟ್ ಅಂದರೆ ಸ್ಥಾಪನೆ ಮಾಡಲು ಅನುಮತಿ ಸಿಕ್ಕಿದೆ. ಅವು ಯಾವುವೆಂದರೆ, ನಂದಿ ಸಹಕಾರ ಸಕ್ಕರೆ ಕಾರ್ಖಾನೆ, ಚಿಕ್ಕಗಲಗಲಿ, ಬಿಜಾಪುರ ಜಿಲ್ಲೆ, ನಾರಂಜ ಸಹಕಾರ ಸಕ್ಕರೆ ಕಾರ್ಖಾನೆ, ಹಿಮಾಪುರ, ಬೀದರ್ ಜಿಲ್ಲೆ, ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ, ಖಾನಾಪುರ, ಬೆಳಗಾಂ ಜಿಲ್ಲೆ ಮತ್ತು ಕೃಷ್ಣಾ ಸಹಕಾರ ಸಕ್ಕರೆ ಕಾರ್ಖಾನೆ, ಬೆಳಗಾಂ ಜಿಲ್ಲೆಯ ಅಥಣಿ. ಇವುಗಳಲ್ಲದೆ, ಬಿಜಾಪುರದಲ್ಲಿ ೪ ಸ್ಥಳಗಳು ಯಾವುವೆಂದರೆ, ತೆರದಾಳ, ಬಿಜಾಪುರ ಮುದೋಳ, ಹಾಗೂ ಬೀದರ್, ಬೆಳಗಾಂ ಜಿಲ್ಲೆಗಳಲ್ಲಿ ತಲಾ ಒಂದೊಂದು ಹೊಸದಾಗಿ ೬ ಸಕ್ಕರೆ ಕಾರ್ಖಾನೆಗಳನ್ನು ತೆರೆಯಲು ಈಗಾಗಲೇ ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿದೆ. ಈಗಿರುವ ಕಾರ್ಖಾನೆಗಳ ಪೈಕಿ ಚೆನ್ನಾಗಿ ಕೆಲಸ ಮಾಡುತ್ತಿರುವುವು ಅಂದರೆ, ಪಾಂಡವಪುರ ಸಕ್ಕರೆ ಕಾರ್ಖಾನೆ, ಚಿಕ್ಕೋಡಿ, ಎಂ. ಕೆ. ಹುಬ್ಬಳ್ಳಿ ಕಾರ್ಖಾನೆ, ಗೋಕಾಕ್, ರಾಯಬಾಗ್ ಹಾಗೂ ಬೀದರ್ ಸಕ್ಕರೆ ಕಾರ್ಖಾನೆ ಒಟ್ಟು ೬ ಕಾರ್ಖಾನೆಗಳು ಹೆಚ್ಚು ಸಾಮರ್ಥ್ಯವನ್ನು ಹೊಂದಿ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಈ ವರ್ಷ ಹೇಳಬೇಕೆಂದರೆ, ಕಬ್ಬಿನ ಉತ್ಪಾದನೆಯಲ್ಲಿ ರೆಕಾರ್ಡ್ ಆಗಿದೆ, ಒಂದು ದಾಖಲೆಯನ್ನು ಸ್ಥಾಪಿಸಲಾಗಿದೆ. ಮತ್ತು ರೈತರು ಬೆಳೆದ ಕಬ್ಬು ಪೂರ್ತಿಯಾಗಿ ಬಳಸಿಕೊಂಡು ಕಬ್ಬು ಅರಿಸುವ ಕ್ರಶಿಂಗ್ ಸೀಜನ್ ಸಹ ವಿಸ್ತರಣೆ ಮಾಡಿದ್ದೇವೆ. ರಾಜ್ಯದ ಗಡಿಪ್ರದೇಶಗಳಲ್ಲಿ ಕಬ್ಬು ಹೆಚ್ಚು ಇರುವ ಪ್ರದೇಶಗಳಲ್ಲಿ ನಮ್ಮ ಕಾರ್ಖಾನೆಗಳಿಗೆ ಪೂರೈಸಿ ಉಳಿದಿದ್ದು ಸುಮಾರು ೨೦ ಲಕ್ಷ ಟನ್ ನೆರೆ ರಾಜ್ಯಗಳಿಗೆ ಇವತ್ತು ಕಳುಹಿಸಿಕೊಡುವ ಸಲುವಾಗಿ ಪರ್ಚೇಸ್ ಟ್ಯಾಕ್ಸ್ ಕಡಿಮೆ ಮಾಡಿದ್ದೇವೆ. ನನ್ನ ಖಾತೆಗೆ ಸಂಬಂಧಪಟ್ಟ ಹಾಗೆ ಎರಡನೆಯದು ಬಹಳ ಪ್ರಾಮುಖ್ಯವಾದುದೆಂದರೆ ಕೃಷಿ ಮಾರಾಟ ಇಲಾಖೆ. ನಮ್ಮ ರಾಜ್ಯದಲ್ಲಿ ೧೬೬ ಮುಖ್ಯ ಮಾರುಕಟ್ಟೆಗಳು ಇದ್ದು, ಅದರಲ್ಲಿ ೩೦೨ ಉಪ ಮಾರುಕಟ್ಟೆ ಸಮಿತಿಗಳು ಇವೆ. ರೈತರು ಬೆಳೆದ ಫಸಲಿಗೆ ಹೆಚ್ಚಿನ ಲಾಭ ದೊರಕಿಸಿಕೊಳ್ಳುವಂತಾಗಲು ಮಾರುಕಟ್ಟೆ ಸಮಿತಿಗಳ ಹಲವಾರು ಸುಧಾರಣೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ೧೯೯೧-೯೨ನೇ ಸಾಲಿನಲ್ಲಿ ಸುಮಾರು ಈ ಮಾರುಕಟ್ಟೆಯಲ್ಲಿ ೨೦೪೪ ಕೋಟಿ ರೂಪಾಯಿಗಳ ಟರ್ನ್‌ಓವರ್ ಆಗಿದೆ. ಇದುವರೆಗೆ ನಾವು ೮೭ ಮುಖ್ಯ ಮಾರುಕಟ್ಟೆಗಳನ್ನು ಮತ್ತು ೧೧೪ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸಲು ಸುಮಾರು ೧೭೦ ಲಕ್ಷ ರೂಪಾಯಿಗಳನ್ನು ಧನಸಹಾಯವನ್ನಾಗಿ ಕೊಟ್ಟಿದ್ದೇವೆ. ಅದೇ ಸಾಲಿನಲ್ಲಿ ಸಂಚಿತ ನಿಧಿ ಅಂದರೆ ಸ್ಟೇಟ್ ಕನ್‌ಸಾಲಿಡೇಟೆಡ್ ಫಂಡ್ ಎಂದು ಏನಿದೆ ಇದಕ್ಕೆ ಸುಮಾರು ೯.೨೬ ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಸರಕಾರಕ್ಕೆ ಸಂದಾಯ ಮಾಡಿದ್ದೇವೆ. ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ಕಾಯಿದೆ ೧೯೬೬ಕ್ಕೆ ಕಳೆದ ವರ್ಷ ತಿದ್ದುಪಡಿ ತರಲಾಗಿದ್ದು, ಮಾರುಕಟ್ಟೆ ಸಮಿತಿಗಳಲ್ಲಿ ಲಭ್ಯವಿರುವ ಹೆಚ್ಚುವರಿ ನಿಧಿಯನ್ನು, ಕೆಲವು ಮೂಲಭೂತ ಸೌಕರ್ಯಗಳನ್ನು ಒದಗಿಸಲು, ಗ್ರಾಮೀಣ ಮಾರುಕಟ್ಟೆಗಳನ್ನು ಹತ್ತಿರದ ರಸ್ತೆಗಳಿಗೆ ಸೇರಿಸುವ ಸಂಪರ್ಕ ರಸ್ತೆ ಅಂದರೆ ಲಿಂಕ್ ರೋಡ್ ಮಾಡುವುದಕ್ಕೆ, ಹರಾಜು ಕಟ್ಟೆಗಳು, ಒಣಗಿಸುವ ಕಟ್ಟೆಗಳು, ಜಾನುವಾರುಗಳಿಗೋಸ್ಕರ ಕಲ್ಲಿನ ಗೂಟಗಳನ್ನು ನೆಡಿಸುವುದು ಮುಂತಾದ ಕಾರ್ಯಕ್ರಮಗಳನ್ನು ಮಾಡಲು ಈಗಾಗಲೇ ಉದ್ದೇಶಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಕೆಲವು ನಿಯಮಗಳನ್ನು ತಿದ್ದುಪಡಿ ಮಾಡುತ್ತಿದ್ದೇವೆ. ಅದು ಆದ ಕೊಡಲೇ ತೀವ್ರವಾಗಿ ರೈತರಿಗೆಲ್ಲಾ ಉಪಯುಕ್ತವಾದ

ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಮೂರನೆಯದಾಗಿ, ರೈತರಿಗೆ ಈ ವರ್ಷ ಒಂದು ವಿಶೇಷ ಯೋಜನೆ ಎಂದರೆ, ಸಣ್ಣ ಮತ್ತು ಅತಿ ಸಣ್ಣ ರೈತರು ತಂದಿರತಕ್ಕಂಥ ಮಾಲಿಗೆ ತಕ್ಕಂತೆ ರೇಟ್ ಸಿಗಲಿಲ್ಲ ಎಂದರೆ, ಬೆಂಬಲ ಬೆಲೆ ಸಿಕ್ಕದಿದ್ದ ಪಕ್ಷದಲ್ಲಿ ಅವರು ತಂದಿರತಕ್ಕಂಥ ಮಾಲಿನಲ್ಲಿ ಶೇಕಡಾ ೬೦ರಷ್ಟನ್ನು ಸಾಲವಾಗಿ ಇಟ್ಟು ಅವರಿಗೆ ಹಣವನ್ನು ಅಡ್ವಾನ್ಸ ಆಗಿ ಕೊಡುತ್ತೇವೆ. ಈಗಾಗಲೇ ಈ ಯೋಜನೆಯನ್ನು ರೂಪಿಸಲಾಗಿದೆ. ಇನ್ನು ಕರ್ನಾಟಕ ರಾಜ್ಯ ಸಹಕಾರ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಅಂದರೆ ಲ್ಯಾಂಡ್ ಬ್ಯಾಂಕ್ ಮೂಲಕ ೧೯೯೦-೯೧ನೇ ಸಾಲಿನಲ್ಲಿ ೭೨.೧೬ ಕೋಟಿ ರೂಪಾಯಿಗಳನ್ನು, ಹಾಗೂ ಈ ವರ್ಷ ಅಂದರೆ ೧೯೯೧-೯೨ನೇ ಸಾಲಿನಲ್ಲಿ ೯೨ ಕೋಟಿ ರೂಪಾಯಿಗಳನ್ನು ಸಾಲವಾಗಿ ನೀಡಲಾಗಿದೆ. ಇದೇ ವರ್ಷದಲ್ಲಿ ಈ ಬ್ಯಾಂಕ್‌ನಲ್ಲಿ ಒಂದು ಹೊಸ ಸ್ಕೀಮ್ ಮಾಡಿದ್ದೇವೆ. ಅದು ಯಾವುದೆಂದರೆ, ರೂರಲ್ ಟ್ರಾನ್ಸ್‌ಪೋರ್ಟ್ ಆಪರೇಟೀವ್ ಸ್ಕೀಮ್. ಈ ಯೋಜನೆಯನ್ನು ಹೊಸದಾಗಿ ರೂಪಿಸಿ ಅದನ್ನು ಕಾರ್ಯರೂಪಕ್ಕೆ ತರಲು ಈಗಾಗಲೇ ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ಯೋಜನೆ ಅನ್ವಯ ಕೃಷಿ ಹಾಗೂ ಪಶು ಸಂಗೋಪನೆ ಉತ್ಪನ್ನಗಳನ್ನು ಸಾಗಾಣೆ ಮಾಡಲು ಅನುಕೂಲವಾಗುವಂತೆ ರೈತರಿಗೆ ಒಂದು ಟನ್ ಸಾಮರ್ಥ್ಯವುಳ್ಳ ಒಂದು ವಾಹನವನ್ನು ಖರೀದಿಸಲು ಈ ಬ್ಯಾಂಕ್ ಸಾಲ ಕೊಡುತ್ತದೆ. ಅದೂ ಅಲ್ಲದೆ ಕೃಷಿಯೇತರ ಉದ್ದೇಶಗಳಿಗಾಗಿ ಗ್ರಾಮೀಣ ಭಾಗದಲ್ಲಿ ಜನರಿಗೆ ಯಾವುದೇ ಒಂದು ಯೋಜನೆಯನ್ನು ಹಮ್ಮಿಸಿಕೊಳ್ಳಲು ಬಂದರೆ, ಪ್ರತಿಯೊಂದು ಯೂನಿಟ್‌ಗೆ ಏಳೂವರೆ ಲಕ್ಷ ರೂಪಾಯಿ ಸಾಲ ನೀಡಲು ಹೊಸ ಅವಕಾಶ ಮಾಡಿದ್ದೇವೆ. ಈ ಯೋಜನೆಯನ್ನು ಗ್ರಾಮೀಣ ಯುವಕರು ಉಪಯೋಗಿಸಿಕೊಳ್ಳುತ್ತಾರೆ ಎಂದು ನಾನು ಭಾವಿಸಿದ್ದೇನೆ. ಈ ರೀತಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ನಮ್ಮ ಕೋಆಪರೇಟೀವ್ ಮೂವ್‌ಮೆಂಟ್‌ನಲ್ಲಿ ಬಹಳ ದೊಡ್ಡ ಯೋಜನೆ ಎಂದರೆ ಎನ್. ಸಿ. ಡಿ. ಸಿ. ಮೂರನೇ ಯೋಜನೆ. ಎನ್. ಸಿ. ಡಿ. ಸಿ. ಎಂದರೆ ನ್ಯಾಷನ್ ಕೋಆಪರೇಟೀವ್ ಡೆವೆಲಪ್‌ಮೆಂಟ್ ಕಾರ್ಪೊರೇಷನ್. ೧೯೮೪-೮೫ರಿಂದ ವಿಶ್ವಬ್ಯಾಂಕ್ ವತಿಯಿಂದ ಮೂರು ಯೋಜನೆಗಳನ್ನು ತರಲಾಗಿದೆ. ಈ ಯೋಜನೆಯಲ್ಲಿ ಈ ಎನ್. ಸಿ. ಡಿ. ಸಿ. ಮೂರನೇ ಯೋಜನೆ ದಿನಾಂಕ ೩೦-೬-೯೨ಕ್ಕೆ ಕೊನೆಗೊಳ್ಳುತ್ತದೆ. ಈ ಎನ್. ಸಿ. ಡಿ. ಸಿ. ಯೋಜನೆ ಅಡಿಯಲ್ಲಿ ನಾವು ೭೫೧ ಹೊಸ ಗೋಡೌನ್‌ಗಳ ನಿರ್ಮಾಣ ಕಾರ್ಯ ಹಾಗೂ ಒಂದು ತರಪೇತಿ ಕೇಂದ್ರ ಹಾಗೂ ಸವದತ್ತಿಯಲ್ಲಿ ಒಂದು ಟೆಕ್ಸ್‌ಟೈಲ್ ಮಿಲ್, ಅಣ್ಣಿಗೇರಿ ಮತ್ತು ರಾಣಿಬೆನ್ನೂರುಗಳಲ್ಲಿ ಒಂದೊಂದು ನೂಲಿನ ಗಿರಣಿಗಳನ್ನು, ನರಗುಂದದಲ್ಲಿ ಒಂದು ಎಣ್ಣೆ ಸಂಸ್ಕರಣಾ ಗಿರಣಿಯ ನಿರ್ಮಾಣ ಕಾರ್ಯ ಈಗಾಗಲೇ ಪೂರ್ಣಗೊಂಡು, ಇನ್ನು ಕೆಲವೇ ದಿನಗಳಲ್ಲಿ, ಅವು ಕಾರ್ಯಾರಂಭ ಮಾಡುತ್ತವೆ. ಅದೂ ಅಲ್ಲದೆ ಇನ್ನೂ ಎರಡು ಗಿರಣಿಗಳು, ಒಂದು ಎಣ್ಣೆ ಗಿರಣಿ ಕೆಲಸ ತೀವ್ರಗತಿಯಲ್ಲಿ ನಡೆಯುತ್ತಿದೆ. ಒಟ್ಟು ಮೂರು ನೂಲಿನ ಗಿರಣಿಗಳು ಹಾಗೂ ಒಂದು ಎಣ್ಣೆ ಗಿರಣಿ ಈ ಎನ್. ಸಿ. ಡಿ. ಸಿ. ಮೂರನೇ ಯೋಜನೆಯಲ್ಲಿ ಸುಮಾರು ೮೨೪೯.೦೪ ಲಕ್ಷ ರೂಪಾಯಿಗಳ ಧನ ಸಹಾಯವನ್ನು ಈಗಾಗಲೇ ಸರಕಾರದಿಂದ ಒದಗಿಸಲಾಗಿದೆ. ಈ ಎನ್. ಸಿ. ಡಿ. ಸಿ. ಮೂರನೇ ಯೋಜನೆ ೩೦-೬-೨ಕ್ಕೆ ಕೊನೆಗೊಳ್ಳುತ್ತದೆ. ಇದಾದನಂತರ ಎನ್. ಸಿ. ಡಿ. ಸಿ. ನಾಲ್ಕನೇ ಯೋಜನೆ ಕೈಗೂಳ್ಳುತ್ತೇವೆ. ಈ ಮೂರನೇ ಯೋಜನೆ ಪೂರ್ಣಗೊಂಡ ತಕ್ಷಣ ನಾಲ್ಕನೇ ಯೋಜನೆಯ ಅಡಿಯಲ್ಲಿ ಹುಬ್ಬಳ್ಳಿಯಲ್ಲಿ ಒಂದು, ಚಿಕ್ಕೋಡಿಯಲ್ಲಿ ಒಂದು, ಬೆಳಕಿನಹಾಳ್‌ನಲ್ಲಿ ಒಂದು ಈ ರೀತಿ ಮೂರು ಸಹಕಾರಿ ನೂಲಿನ ಗಿರಣಿಗಳನ್ನು ಸ್ಥಾಪಿಸಲು ಕೇಂದ್ರ ಸರಕಾರಕ್ಕೆ ಈಗಾಗಲೇ ನಾವು

ಶಿಫಾರಸ್ಸು ಮಾಡಿರುತ್ತೇವೆ. ಇದು ಬಹಳ ಪ್ರಮುಖವಾದುದು. ಸಹಕಾರ ಸಂಘಗಳ ಮೂಲಕ ವಿತರಣೆ ಆಗುವ ಸಾಲದ ಬಗ್ಗೆ ಸಹಕಾರ ಸಂಸ್ಥೆಗಳ ಮೂಲಕ ರೈತರುಗಳಿಗೆ ಕೊಟ್ಟ ಸಾಲ ವಸೂಲಾತಿಯು ಗಣನೀಯವಾಗಿಲ್ಲದಿರುವುದು ಬಹಳ ದುಃಖದ ಸಂಗತಿಯೆಂದು ಹೇಳಬೇಕಾಗುತ್ತದೆ. ಇದನ್ನು ಮಾನ್ಯ ಸದಸ್ಯರುಗಳು ವಾರ್ಷಿಕ ವರದಿಯಲ್ಲಿ ಗಮನಿಸಿರಬಹುದು ಎಂದು ಅಂದುಕೊಂಡಿದ್ದೇನೆ. ಇದಕ್ಕೆ ಹಲವಾರು ಕಾರಣಗಳೂ ಇವೆ. ಅವುಗಳ ಪೈಕಿ, ಕೇಂದ್ರ ಸರಕಾರದವರು ಘೋಷಿಸಿದ ಸಾಲ ಮನ್ನಾ ಯೋಜನೆ ಮತ್ತು ಈ ಮೊದಲು ಇದ್ದ ಬಡ್ಡಿ ರಿಯಾಯಿತಿ ಯೋಜನೆಯನ್ನು ಸ್ಥಗಿತಗೊಳಿಸಿರುವುದೂ ಒಂದು ಕಾರಣವಾಗಿದೆ. ತಮಗೆ ತಿಳಿದಿರುವಂತೆ ಕೇವಲ ಮೂರು ಡಿ.ಸಿ.ಸಿ. ಬ್ಯಾಂಕ್‌ಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಬ್ಯಾಂಕ್‌ಗಳ ಆರ್ಥಿಕ ಪರಿಸ್ಥಿತಿ ಬಹಳ ದುರ್ಬಲವಾಗಿದೆ. ನಬಾರ್ಡ್ ಸಂಸ್ಥೆಯಿಂದ ಧನಸಹಾಯ ಪಡೆಯಬೇಕಾದರೆ, ಒಂದೊಂದು ಡಿ. ಸಿ. ಸಿ. ಬ್ಯಾಂಕ್ ಕನಿಷ್ಠ ೪೦ರಷ್ಟು ಸಾಲವನ್ನು ವಸೂಲು ಮಾಡಬೇಕಾಗುತ್ತದೆ. ಈಗಿನ ವಸೂಲಿಯನ್ನು ನೋಡಿದಲ್ಲಿ ರಾಜ್ಯದಲ್ಲಿ ಬಹುತೇಕ ಬ್ಯಾಂಕ್‌ಗಳು ನಬಾರ್ಡ್‌ನ ಧನಸಹಾಯವನ್ನು ಪಡೆಯಲು ಅರ್ಹತೆಯನ್ನು ಪಡೆಯುವ ಸಾಧ್ಯತೆಯು ಇಲ್ಲ. ಇದರ ಬಗ್ಗೆ ನಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಂಗಾರಪ್ಪನವರು ರಾಜ್ಯದಲ್ಲಿ ಪ್ರಥಮಭಾರಿಗೆ ಉತ್ಪಾದಕ ಉತ್ತೇಜನಾ ಯೋಜನೆಯನ್ನು ಜಾರಿಗೊಳಿಸಲು ನಮ್ಮ ಇಲಾಖೆಗೆ ಆದೇಶವನ್ನು ನೀಡಿದ್ದಾರೆ. ಈ ಯೋಜನೆಯ ಕೆಳಗೆ, ೧-೩-೯೨ರ ವರೆಗೆ ಬಾಕಿ ಇರುವ ಒಟ್ಟು ಸಾಲ ಹಾಗೂ ಪ್ರಸ್ತುತ ಬಡ್ಡಿಯನ್ನು ಪೂರ್ಣವಾಗಿ ಮರುಪಾವತಿ ಮಾಡಿದಲ್ಲಿ ಅಂಥ ರೈತರಿಗೆ ಬಡ್ಡಿಯಲ್ಲಿ ೫ ಪರ್‌ಸೆಂಟ್‌ನಷ್ಟು ರಿಯಾಯಿತಿಯನ್ನು ಕೊಡಲಾಗುವುದು. ಈಗಾಗಲೇ ಈ ಯೋಜನೆ ಕಾರ್ಯಗತವಾಗಿ ಸುಮಾರು ಮೂರು ತಿಂಗಳುಗಳು ಆದುವು. ಈ ಯೋಜನೆಯಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು ೩೮ ಕೋಟಿ ರೂಪಾಯಿಗಳಷ್ಟು ಖರ್ಚು ಬೀಳುತ್ತದೆ. ಅದೂ ಅಲ್ಲದೆ, ೧-೩-೯೨ರ ವರೆಗೆ ವಿಧಿಸಿದ ಎಲ್ಲಾ ತರಹದ ಸುಸ್ತಿಬಡ್ಡಿಯನ್ನು ಸಂಪೂರ್ಣವಾಗಿ ಮಾಫಿ ಮಾಡಲು ನಮ್ಮ ಸರಕಾರವು ಈಗಾಗಲೇ ನಿರ್ಧರಿಸಿದೆ. ಆದ್ದರಿಂದ ನಮ್ಮ ಸರಕಾರದ ಜನಪರ ಯೋಜನೆಯ ಪ್ರಯೋಜನವನ್ನು ರಾಜ್ಯದ ರೈತಭಾಂಧವರು ಸದುಪಯೋಗ ಮಾಡಿಕೊಂಡು, ಸಹಕಾರಿ ಸಂಸ್ಥೆಗಳು ಬರುವ ವರ್ಷದಲ್ಲಿ ರೈತಾಪಿ ವರ್ಗದವರಿಗೆ ಇನ್ನು ಹೆಚ್ಚಿನ ಧನಸಹಾಯವನ್ನು ಮಾಡಲು ಅನುವು ಮಾಡಿಕೊಡುತ್ತಾರೆ ಎಂಬ ಭರವಸೆಯು ನನಗಿದೆ. ರೈತರುಗಳ ಏಳಿಗೆಯೇ ನಮ್ಮ ಸರಕಾರದ ಧ್ಯೇಯವಾಗಿರುವುದರಿಂದ ಈ ಸಹಕಾರ ಸಂಸ್ಥೆಗಳ ಪ್ರಯೋಜನವನ್ನು ರೈತರು ಸಂಪೂರ್ಣವಾಗಿ ಪಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಖಾತೆಯಲ್ಲಿರುವ ಇನ್ನೊಂದು ಸಂಸ್ಥೆ ಮಾರ್ಕೆಟಿಂಗ್ ಫೆಡರೇಷನ್ ಅಂದರೆ ರಾಜ್ಯ ಸಹಕಾರಿ ಮಾರಾಟ ಮಂಡಲಿ, ಇದು ರೈತರಿಗೆ ಗೊಬ್ಬರ, ಕ್ರಿಮಿಕೀಟ ನಾಶಕಗಳು ಮುಂತಾದವುಗಳನ್ನು ಸರಬರಾಜು ಮಾಡುತ್ತದೆ. ಡಿ.ಸಿ.ಸಿ ಬ್ಯಾಂಕ್‌ಗಳು ಕೆಲವು ದುರ್ಬಲವಾಗಿದ್ದು ಕಾರ್ಯನಿರ್ವಹಣೆಯಲ್ಲಿ ವಿಫಲವಾಗಿವೆ. ಅವುಗಳನ್ನು ಲಿಕ್ವಿಡೇಟ್ ಮಾಡತಕ್ಕಂಥಾದ್ದು ಸರಕಾರದಲ್ಲಿ ಇದೆಯೇ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ, ಸರಕಾರಕ್ಕೆ ಅಂಥ ವಿಚಾರವೇನೂ ಇಲ್ಲ. ನಾವು ಆದಷ್ಟು ರೈತರ ಮನವೊಲಿಸಿ ೪೦ ಪರ್ಸೆಂಟ್‌ನಷ್ಟು ವಸೂಲಿ ಮಾಡುತ್ತೇವೆ. ಹಾಗೆ ಆಗಿಲ್ಲ ಅಂದರೆ ಅದನ್ನು ಕಳೆದುಕೊಂಡರೆ ನಮ್ಮ ರಾಜ್ಯಕ್ಕೆ ಒಂದು ರೀತಿಯಲ್ಲಿ ಅಪಮಾನಕರ. ಮಾರ್ಕೆಟಿಂಗ್ ಫೆಡರೇಶನ್ ಮೂಲಕ ರೈತರುಗಳು ಬೆಳೆದ ಬೆಳೆಗಳಿಗೆ ಯೋಗ್ಯ ಬೆಲೆ ಸಿಗುವಂತೆ ಮಾರಾಟದಲ್ಲಿ ಪಾಲ್ಗೊಳ್ಳುವ

ವ್ಯವಸ್ಥೆಯನ್ನೂ ಕೂಡ ನಾವು ಮಾಡುತ್ತಿದ್ದೇವೆ. ಈ ಮಂಡಳಿಯಲ್ಲಿ ೫೯೬ ಸಹಕಾರ ಸಂಘಗಳು ಇವೆ. ಡಿಸೆಂಬರ್ ೧೯೯೧ರ ಕೊನೆಯಲ್ಲಿ ಈ ಮಂಡಳಿಯು ೯೨ಲಕ್ಷ ರೂಪಾಯಿಗಳ ಕೃಷಿ ಉತ್ಪನ್ನ ಸಂಗ್ರಹಣೆ ಮಾಡಿರುತ್ತದೆ. ಇದು ಅಲ್ಲದೆ ಕಮಿಶನ್ ಆಧಾರದ ಮೇಲೆ ಹತ್ತಿಯನ್ನು ಕೊಂಡು ಸಹಕಾರಿ ನೂಲಿನ ಗಿರಣಿಗಳಿಗೆ ಸರಬರಾಜು ಮಾಡುವ ಒಂದು ವ್ಯವಸ್ಥೆಯನ್ನು ಹೊಂದಿರುತ್ತದೆ. ಈ ವರ್ಷದ ಅಂದರೆ ಇನ್ನು ಕೆಲವೇ ತಿಂಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ರಾಜ್ಯಸಹಕಾರ ಮಾರಾಟ ಮಂಡಳಿಯ ವತಿಯಿಂದ ಒಂದು ಶೀತಗೃಹವನ್ನು ಕೂಡ ಮಾಡುತ್ತೇವೆ. ಅದಕ್ಕೆ ೨ ಕೋಟಿ ರೂಪಾಯಿಗಳ ಖರ್ಚು ಆಗುತ್ತಿದೆ. ರಾಜ್ಯ ಉಗ್ರಾಣ ನಿಗಮವು ಒಟ್ಟು ೨.೧೯ ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯವುಳ್ಳ ಗೋದಾಮುಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಪ್ರಸ್ತುತ ವರ್ಷದಲ್ಲಿ ೧೪ ಲಕ್ಷ ರೂಪಾಯಿಗಳನ್ನು ಗೋದಾಮು ನಿರ್ಮಾಣ ಕಾರ್ಯಕ್ಕಾಗಿ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ೧೯೯೨-೯೩ರ ಸಾಲಿಗೆ ರಾಜ್ಯ ಉಗ್ರಾಣ ನಿಗಮವು ಹಾಸನದ ಟಿಎಪಿಸಿಎಂಸಿ ಗೆ ಸೇರಿದ ೮೦೦ ಟನ್ ಸಾಮರ್ಥ್ಯವುಳ್ಳ ಕೋಲ್ಡ್ ಸ್ಟೋರೇಜ್‌ನ್ನು ಅಂದಾಜು ೧೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣ ಮಾಡಲು ನಬಾರ್ಡ್‌ನವರ ನೆರವಿನೊಂದಿಗೆ ಅದನ್ನು ಪುನಶ್ಚೇತನಗೊಳಿಸುತ್ತಿದ್ದೇವೆ. ಈಗಾಗಲೆ ಅದಕ್ಕೆ ನಾವು ನಿವೇಶನವನ್ನು ಕೊಡ ದೊರಕಿಸಿಕೊಡುತ್ತೇವೆ. ಅದೂ ಅಲ್ಲದೆ, ಧಾರವಾಡದಲ್ಲಿ ೬ ಸಾವಿರ ಟನ್ ಸಾಮರ್ಥ್ಯವುಳ್ಳ ಡ್ರೈವಿನ್ ಉಗ್ರಾಣವನ್ನು ೩೫ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ನಿರ್ಮಿಸುವ ಉದ್ದೇಶವಿದೆ. ಜಿಲ್ಲಾ ಕೇಂದ್ರ ಸಹಕಾರ, ಬೆಂಗಳೂರು ಪುನಶ್ಚೇತನ, ಡಿ.ಸಿ.ಸಿ. ಬ್ಯಾಂಕ್‌ಗಳು ಇವುಗಳ ವಿಷಯವನ್ನು ಹೇಳಿದ್ದೇನೆ. ಈ ಅವಧಿ ಮೀರಿದ ಸಾಲದ ಹೊರೆಯಿಂದಾಗಿ ರಾಜ್ಯದ ಕೋಲಾರ, ಚಿತ್ರದುರ್ಗ, ಮೈಸೂರು, ಹಾಸನ, ಬಿಜಾಪುರ, ಧಾರವಾಡ, ರಾಯಚೂರು, ಗುಲ್ಬರ್ಗ ಒಟ್ಟು ೮ ಡಿ.ಸಿ.ಸಿ. ಬ್ಯಾಂಕ್‌ಗಳು ಅತ್ಯಂತ ದುರ್ಬಲಗೊಂಡಿವೆ. ಆದ್ದರಿಂದ ಈ ಬ್ಯಾಂಕ್‌ಗಳ ಸಾಲದ ವಸೂಲಾತಿಯನ್ನು ಸುಧಾರಿಸಿ ಇವುಗಳ ಸರ್ವೋನ್ನತ ಅಭಿವೃದ್ಧಿಗಾಗಿ ಪುನಶ್ಚೇತನ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಎಲ್ಲ ಶಾಸಕರು ಇದಕ್ಕೆ ಸಹಕರಿಸಬೇಕೆಂದು ಕಳಕಳಿಯಿಂದ ವಿನಂತಿಸುತ್ತೇನೆ. ಇನ್ನು ಅಪೆಕ್ಸ್ ಬ್ಯಾಂಕ್ ರಾಜ್ಯದ ಅಪೆಕ್ಸ್ ಬ್ಯಾಂಕ್ ತನ್ನ ವ್ಯವಹಾರವನ್ನು ಬೆಂಗಳೂರು ಮತ್ತು ರಾಜ್ಯದ ಇತರ ೩೫ ಶಾಖೆಗಳ ಮೂಲಕ ಮಾಡುತ್ತಿದೆ. ೩೦-೬-೯೧ರ ಕೊನೆಗೆ ಬ್ಯಾಂಕಿನಲ್ಲಿ ೩೬೨.೪೧ ಕೋಟಿ ರೂಪಾಯಿಗಳ ಠೇವಣಿಯಿದ್ದು ೨೯೬.೪೦ ಕೋಟಿ ರೂಪಾಯಿಗಳ ಸಾಲವನ್ನು ಕೊಡಲಾಗಿದೆ. ಈ ಬ್ಯಾಂಕ್ ಡಿ.ಸಿ.ಸಿ. ಬ್ಯಾಂಕ್‌ಗಳ ಮೂಲಕ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಕಡಿಮೆ ಬಡ್ಡಿ ದರದಲ್ಲಿ ವಿತರಿಸುತ್ತಿದೆ. ಸಹಕಾರ ಸಂಘಗಳಿಗೆ ದುಡಿಯುವ ಬಂಡವಾಳ, ಸಾಲ ಕೊಡುವುದು, ಗ್ರಾಮೀಣಾಭಿವೃದ್ಧಿ ರೇಷ್ಮೆ ಮುಂತಾದ ಚಟುವಟಿಕೆಗಳಲ್ಲಿ ನೆರವು ಒದಗಿಸುವುದು ಹಾಗೂ ಎಲ್ಲ ಸಹಕಾರ ಸಂಘಗಳ ಪರವಾಗಿ ಇದೊಂದು ಕ್ಲಿಯರೆನ್ಸ್ ಹೌಸ್ ಆಗಿ ಅದು ಕೆಲಸ ಮಾಡುತ್ತಿದೆ. ಚುನಾವಣೆಗಳು:- ಸಹಕಾರ ಸಂಘಗಳಿಗೆ ಈ ವರ್ಷ ೯೫ ಪರ್ಸೆಂಟ್ ಚುನಾವಣೆ ಈಗಾಗಲೇ ನಾವು ನಡಿಸಿದ್ದೇವೆ. ಸುಮರು ೮ ವರ್ಷಗಳಿಂದ ಈ ಚುನಾವಣೆಗಳು ಆಗಿರಲಿಲ್ಲ. ಈ ಸಂಬಂಧ ಕರ್ನಾಟಕ ರಾಜ್ಯ ಹೈಕೋರ್ಟ್‌ನಲ್ಲಿ ಕೆಲವು ಕೇಸುಗಳಿದ್ದು ಸಾಧ್ಯವಾದಷ್ಟೂ ಅವುಗಳನ್ನು ವಿಲೇವಾರಿ ಮಾಡಲು ನಾನು ಕ್ರಮ ಕೈಗೊಂಡಿದ್ದೇನೆ. ಇನ್ನು ಎ.ಪಿ.ಎಂ.ಸಿ. ಚುನಾವಣೆ ಬಗ್ಗೆ ಅನೇಕ ಸದಸ್ಯರು ಅನೇಕ ಸಲ ಪ್ರಸ್ತಾಪಿಸಿದ್ದಾರೆ. ೧೯೯೧ರಲ್ಲಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ ಕಾಯಿದೆ ೧೯೬೬ಕ್ಕೆ ತಂದ ತಿದ್ದುಪಡಿಯಿಂದಾಗಿ ರಾಜ್ಯದಲ್ಲಿರುವ ಎ. ಪಿ. ಎಂ. ಸಿ. ಗಳಿಗೆ ಚುನಾವಣೆ ಸಂಬಂಧಿಸಿದಂತೆ ನಿಯಮಾವಳಿಗೆ ತಿದ್ದುಪಡಿ ಮಾಡಲು ಈ

ಸರ್ಕಾರ ತೀವ್ರವಾಗಿ ಪರಿಶೀಲಿಸುತ್ತಿದೆ. ಅದೂ ಅಲ್ಲದೆ ಮಾರುಕಟ್ಟೆ ಚುನಾವಣೆಗಳಲ್ಲಿ ಮತ ಚಲಾಯಿಸುವವರ ವಯಸ್ಸನ್ನು ೨೧ ರಿಂದ ೧೮ ವರ್ಷಕ್ಕೆ ನಾವು ಇಳಿಸುತ್ತಿದ್ದೇವೆ. ಆದ್ದರಿಂದ ಈಗ ಹೊಸದಾಗಿ ಮತದಾರರ ಪಟ್ಟಿಯನ್ನು ಸ್ವಲ್ಪ ಪರಿಷ್ಕರಿಸಬೇಕಾಗುತ್ತದೆ. ಅಲ್ಲದೆ ಈ ತಿದ್ದುಪಡಿಯಿಂದ ಕೆಲವು ಮಾರುಕಟ್ಟೆ ಸಮಿತಿಗಳ ಕಾರ್ಯ ಕ್ಷೇತ್ರಗಳ ಬದಲಾವಣೆ ಸಹ ಸರ್ಕಾರದ ಪರಿಶೀಲನೆಯಲ್ಲಿದೆ. ಇನ್ನು ಕೆಲವೇ ದಿನಗಳಲ್ಲಿ ಅದು ಕೂಡ ಪೂರ್ಣಮಾಡುತ್ತೇವೆ. ಈ ಎಲ್ಲ ಕ್ರಮಗಳನ್ನು ಜರುಗಿಸಿದ ನಂತರವೇ ಎ. ಪಿ. ಎಂ. ಸಿ. ಚುನಾವಣೆ ನಡೆಸಲು ಸಾಧ್ಯವಾಗುತ್ತದೆ. ಈ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳಲು ಕನಿಷ್ಠ ೫ ತಿಂಗಳಾದರೂ ಬೇಕಾಗುತ್ತದೆ. ಅದೇ ರೀತಿ ನಿನ್ನೆ ನಡೆದ ಚರ್ಚೆಯಲ್ಲಿ ಅನೇಕ ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಮತ್ತು ಟೀಕೆಗಳನ್ನು ಮಾಡಿದ್ದಾರೆ. ಶ್ರೀ ಜಿ. ಎಸ್. ಆಚಾರ್‌ರವರು ಈಗ ಇಲ್ಲಿಲ್ಲ. ಅವರು ಒಳ್ಳೆಯ ಸಲಹೆ ಮಾಡಿದರು. ಕೃಷಿ ಉತ್ಪನ್ನ ಮಾರುಕಟ್ಟೆ ಬಗ್ಗೆ ಶ್ರೀ ಶಾಮಣ್ಣನವರು ಕೂಡ ಮಾತನಾಡಿದರು. ಅವರು ಈಗ ಬಂದಿಲ್ಲ. ಅವರು ಒಂದು ಸಲಹೆ ಮಾಡಿದರು ಏನು ಸೇವಾ ಸಹಕಾರ ಸಂಘಗಳಲ್ಲಿ ಕಾರ್ಯದರ್ಶಿಗಳ ಕಾರ್ಯ ತೃಪ್ತಿಕರವಾಗಿಲ್ಲ ಎಂದು, ಎರಡನೆಯದು ಸಂಘಗಳ ಲೆಕ್ಕ ಪರಿಶೋಧಿಸುವುದನ್ನು ೩ ತಿಂಗಳಿಗೊಮ್ಮೆ ಮತ್ತು ಆರು ತಿಂಗಳಿಗೊಮ್ಮೆ ಮಾಡಬೇಕೆಂದು ಸಲಹೆ ಕೊಟ್ಟಿದ್ದಾರೆ. ಅದರ ಬಗ್ಗೆ ಗ್ರಾಮೀಣ ಪ್ರದೇಶದಲ್ಲಿ ಸಾಲ ವಿತರಣೆ ಸಮಸ್ಯೆಗಳು ಅವುಗಳ ಪರಿಹಾರದ ಬಗ್ಗೆ ಅಭ್ಯಯಿಸಿ ವರದಿ ಸಲ್ಲಿಸಲು ಅಖಿಲ ಭಾರತ ಮಟ್ಟದಲ್ಲಿ ಶ್ರೀ ಖುಸ್ರೋ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಈಗಾಗಲೇ ರಚಿಸಲಾಗಿತ್ತು. ಪ್ರಾಥಮಿಕ ಕೃಷಿ ಉತ್ಪತ್ತಿ ಸಹಕಾರ ಸಂಘಗಳ ಕಾರ್ಯದರ್ಶಿಗಳು ಈ ವೇತನ ಪರಿಷ್ಕರಣೆ ಬಗ್ಗೆ ಮತ್ತು ಸಿಸಿಎ ಅನ್ನು ತೆಗೆದುಹಾಕುವ ಬಗ್ಗೆ ಅಧ್ಯಯಿಸಿಸಿ ವರದಿ ಸಲ್ಲಿಸಲು ರಾಜ್ಯಸರ್ಕಾರ ಅಧಿಕಾರಿಗಳ ಸಮಿತಿಯನ್ನು ಸಹಕಾರ ಸಂಘಗಳ ನಿಬಂಧಕರ ನೇತೃತ್ವದಲ್ಲಿ ನೇಮಿಸಿತ್ತು. ಇದರಲ್ಲಿ ನಾಮಿನೇಷನ್ ಮಾಡುವುದಕ್ಕೆ ಬರುವುದಿಲ್ಲ. ಯಾವುದಾದರೂ ಹೊಸ ಮಾರ್ಕೆಟ್ ಬೈಫರ್ಕೇಟ್ ಮಾಡಿದರೆ ಮಾತ್ರ ಅಲ್ಲಿ ಚುನಾವಣೆ ಆಗುವತನಕ ನಾಮಿನೇಶನ್ ಮಾಡಬಹುದು.

ಶ್ರೀ ಹನುಮನಗೌಡ ಪಾಟೀಲ್:- ಚುನಾವಣೆಗಳು ತಡ ಆಗತಕ್ಕಂಥ ನಿರೀಕ್ಷೆ ಇದ್ದರೆ ಅಧಿಕಾರಿಗಳಿಗೆ ಒಂದು ಸರ್ವಾಧಿಕಾರವನ್ನು ಕೊಡುವುದರ ಬದಲು ಕೆಲವು ಜನರನ್ನು ನಾಮಿನೇಟ್ ಮಾಡುವುದರಿಂದ ಜನತೆಯ ಅವರ ಹಿಡಿತ ಆಗುತ್ತದೆ ಎಂದು ನಮ್ಮ ಶಾಸಕರ ಅಭಿಪ್ರಾಯ. ಸಲಹಾ ಸಮಿತಿಯನ್ನು ಮಾಡಬೇಕು.

ಶ್ರೀ ಎಸ್. ಆರ್. ಮೋರೆ:- ಕಾಯ್ದೆಯಲ್ಲಿ ಅದಕ್ಕೆ ಅವಕಾಶ ಇಲ್ಲ. ಆದ್ದರಿಂದ ನಾಮಿನೇಷನ್ ಮಾಡುವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಹುಮಗೌಡ ಪಾಟೀಲ್:- ತಿದ್ದುಪಡಿಯನ್ನು ತನ್ನಿ ಎಂದು ಎಷ್ಟು ಸಲ ನಾವು ಹೇಳಿದ್ದೇವೆ. ಅದೂ ಆಗುವುದಿಲ್ಲ ಎಂದು ಹೇಳಿದರೆ ಹೇಗೆ?

ಶ್ರೀ ಕೆ. ಹೆಚ್. ಹನುಮನೇಗೌಡ:- ತಿದ್ದುಪಡಿ ತನ್ನಿ ಇಲ್ಲದೆ ಹೋದರೆ...

(ಗೊಂದಲ)

ಶ್ರೀ ಎಸ್. ಆರ್. ಮೋರೆ:- ಇಲ್ಲಿ ಸದಸ್ಯರು ಮಾಡಿರತಕ್ಕಂಥ ಸಲಹೆಗಳನ್ನು, ಟೀಕೆಗಳನ್ನು ನೋಡಿದರೆ ನೀವು ನಾಮಿನೇಷನ್ ಬಹಳ ಮಾಡಿದ್ದೀರಿ, ನಾಮಿನೇಷನ್ ಮಾಡಬಾರದು

ಎನ್ನುವವರೆಗೂ ಅವರು ಹೋಗಿದ್ದಾರೆ. ಅಷ್ಟು ಅಲ್ಲದೆ ನಾವು ಕೋಆಪರೇಟೀವ್ ಆ್ಯಕ್ಟ್ ಅಮೆಂಡ್‌ಮಂಟ್‌ನಲ್ಲಿ ಕೂಡ ಆದಷ್ಟು ನಾಮಿನೇಷನ್‌ನನ್ನು ತೆಗೆದುಹಾಕುವುದಕ್ಕೆ ಪ್ರಪೋಸಲ್ ಮಾಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಸದಸ್ಯರು ಬಹಳ ಒತ್ತಾಯ ಮಾಡಬಾರದು ಎಂದು ನಾನು ಹೇಳುತ್ತೇನೆ.

ಶ್ರೀ ಹನುಮನಗೌಡ ಪಾಟೀಲ್:- ವ್ಯವಸಾಯ ಸೇವಾ ಸಹಕಾರ ರಂಗದಲ್ಲಿ ಮೂವರನ್ನು ನಾಮಿನೇಟ್ ಮಾಡಿದಿರಿ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಒಂದು ತಾಲ್ಲೂಕು ಎರಡು ತಾಲ್ಲೂಕು ಕೂಡಿ ಮಾಡತಕ್ಕ ಒಕ್ಕಲುತನ ಹುಟ್ಟುವಳಿ ಪೇಟೆ ಮಾರಾಟ ಸಿಗುತ್ತದೆ. ನಾಮಿನೇಟ್ ಮಾಡತಕ್ಕಂಥದ್ದು ಅವಕಾಶ ಸರಿಯಲ್ಲ ಎಂದು ಅಭಿಪ್ರಾಯವನ್ನು ಕೊಟ್ಟರೆ ಎಷ್ಟೊಂದು ವಿಪರ್ಯಾಸ.

ಶ್ರೀ ಎಸ್. ಆರ್. ಮೋರೆ:- ನೋಡೋಣ. ಅಮೆಂಡ್‌ಮೆಂಟ್ ಬಂದಾಗ ತಾವು ಸಲಹೆ ಕೊಡಿರಿ. ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಮ್ಮ ಹಳೆಯ ಕೋಆಪರೇಟರ್ ಆದ ಮತ್ತು ಸದಸ್ಯರಾದ ಜಿ. ಎಸ್. ಆಚಾರ್‌ರವರು ನಿನ್ನೆ ನನಗೆ ಸುಮಾರು ೨೪ ಸಲಹೆಗಳನ್ನು ಕೊಟ್ಟಿದ್ದರು. ಅವರು ಈ ಸದನದಲ್ಲಿ ಇದ್ದರೆ ಸರಿಯಾಗಿರುತ್ತಿತ್ತು. ಆದರೂ ಕೂಡ ಅವರ ಸಲಹೆಗಳಿಗೆ ನಾನು ಉತ್ತರವನ್ನು ಕೊಡಲು ಪ್ರಯತ್ನ ಮಾಡುತ್ತೇನೆ. ಶ್ರೀ ಜಿ. ಎಸ್ ಆಚಾರ್‌ರವರು ಈ ರೀತಿ ಒಂದು ಪ್ರಶ್ನೆಯನ್ನು ಕೂಡ ಹಾಕಿದ್ದರು. ಸಂಪೂರ್ಣ ಸದಸ್ಯತ್ವ ಹೊಂದಲು ಸರ್ಕಾರ ಕಾರ್ಯಕ್ರಮ ಹಾಕಬೇಕು. ಎರಡನೆಯದು ಇಂದಿನ ಸಹಕಾರಿ ಶಿಕ್ಷಣ ಪ್ರಚಾರ ವ್ಯವಸ್ಥೆ ಸಮರ್ಪಕವಾಗಿಲ್ಲ ಮತ್ತು ಸುಧಾರಿಸಬೇಕು. ಮಹಿಳಾ ಶಿಕ್ಷಕರ ಕೊರತೆ ಇದೆ. ಅವರನ್ನು ಜಾಸ್ತಿ ನೇಮಿಸಬೇಕು. ಸಹಕಾರ ಮಹಾ ಮಂಡಳದಲ್ಲಿ ವ್ಯವಸ್ಥಾಪಕ ಮಂಡಳಿಯ ರದ್ದತಿಯಾಗಿದೆ. ಈ ರದ್ದತಿ ಕ್ಷುಲ್ಲಕ ಕಾರಣದ ಆಧಾರದ ಮೇಲೆ ಮಾಡಿದೆ, ಬೇಗ ಚುನಾವಣೆಯನ್ನು ನಡೆಸಬೇಕು ಎಂದು ಹೇಳಿದ್ದಾರೆ. ಈಗಾಗಲೇ ೭ ತರಬೇತಿ ಕೇಂದ್ರಗಳನ್ನು ಮತ್ತು ೧೯ ಜಿಲ್ಲಾ ಯೂನಿಯನ್‌ಗಳ ಮುಖಾಂತರ ಪೊಟೆನ್ಸಿಯಲ್ ಸದಸ್ಯರ, ಸಹಕಾರ ಸಂಘಗಳ ನೌಕರರ ಶಿಕ್ಷಣ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಹೆಚ್ಚಿನ ಆದ್ಯತೆ ಈಗಾಗಲೇ ನಾವು ಕೊಟ್ಟಿದ್ದೇವೆ ಮತ್ತು ಕೊಡಲಾಗುವುದು. ಸಹಕಾರ ಮಹಾಮಂಡಳದಲ್ಲಿ ಆರು ಶಿಕ್ಷಕರ ಹುದ್ದೆಗಳು ಖಾಲಿ ಇವೆ. ೩ ಮಹಿಳಾ ಶಿಕ್ಷಕರ ಹುದ್ದೆಗಳನ್ನು ಈಗಾಗಲೇ ತುಂಬಬೇಕಾಗಿದೆ ಸಧ್ಯದಲ್ಲೇ ಕ್ರಮ ತೆಗೆದುಕೊಳ್ಳಲಾಗುವುದು. ಸಹಕಾರ ಮಂಡಳಿಗೆ ಆದಷ್ಟು ಜಾಗ್ರತೆ ನಾವು ಚುನಾವಣೆಯನ್ನು ಮಾಡುತ್ತೇವೆ. ಅದೇ ರೀತಿ ಸನ್ಮಾನ್ಯ ಆಚಾರ್‌ರವರು ಇನ್ನೊಂದೆರಡು ವಿಷಯಗಳನ್ನು ಹೇಳಿದ್ದಾರೆ. ಅದರಲ್ಲಿ ಏನೆಂದರೆ ಸಹಕಾರಿ ಸಂಘಗಳ ಸಹಾಯಕ ನಿಬಂಧಕರಿಗೆ ಸಹಕಾರಿ ಅಭಿವೃದ್ಧಿ ಅಧಿಕಾರಿ ದರ್ಜೆಯ ಅಧಿಕಾರಿಯನ್ನು ಕೇಂದ್ರ ಕಛೇರಿಯ ಸಹಾಯಕರನ್ನು ನೇಮಿಸಬೇಕು ಎಂದರೆ ಅವರವರ ಜೂರಿಸ್‌ಡಿಕ್ಷನ್‌ನಲ್ಲಿ ಅವರನ್ನು ಹೆಡ್ ಕ್ವಾರ್ಟರ್ ಅಸಿಸ್ಟೆಂಟ್ ಮಾಡಬೇಕು ಎಂದು ಹೇಳಿದ್ದಾರೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ. ಅದೇ ರೀತಿ ಇನ್ನೂ ನಾಲ್ಕು ಸಲಹೆಗಳನ್ನು ಮಾಡಿದ್ದಾರೆ. ವಿವಿಧ ಸಹಕಾರ ಸಂಘಗಳಿಗೆ ಎರವಲು ಸೇವೆಯಲ್ಲಿರುವ ಸಹಕಾರಿ ಇಲಾಖೆಯ ಅಧಿಕಾರಿಗಳನ್ನು ಕಡಿಮೆ ಅವಧಿಯಲ್ಲಿ ವರ್ಗಾಯಿಸಬಾರದು ಮತ್ತು ನಿರ್ದಿಷ್ಟ ತರಬೇತಿ ಪಡೆದವರ ಸೇವೆ ಇಲಾಖೆಗೆ ಸಿಗುವ ವ್ಯವಸ್ಥೆಯಾಗಬೇಕು ಎಂದು ಹೇಳಿದ್ದಾರೆ. ಈಗ ಇದರ ಬಗ್ಗೆ ಹೇಳಬೇಕೆಂದರೆ, ಈಗಾಗಲೇ ಫೆಡರೇಷನ್ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಮತ್ತೆ ಹಣದ ದುರುಪಯೋಗ ಪ್ರಕರಣಗಳಲ್ಲಿ ತೀವ್ರವಾದ ಕ್ರಮವನ್ನು

ಜರುಗಿಸಬೇಕು. ಈ ಬಗ್ಗೆ ಹೊಸ ಸುತ್ತೋಲೆಯನ್ನು ಹೊರಡಿಸಿ ಸಿವಿಲ್ ಮತ್ತು ಕ್ರಿಮಿನಲ್ ಪ್ರೊಸೀಜರ್‌ಗಳಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗಿದೆ. ಅದೇ ರೀತಿ ಇನ್ನೊಂದು ವಿಷಯವನ್ನು ಅವರು ಹೇಳಿದ್ದಾರೆ. ನಿಷ್ಕ್ರಿಯ ಸಂಘಗಳ ಸಮಾಪನ ಮಾಡಬೇಕೆಂದು ಹೇಳಿದ್ದಾರೆ. ನಿಷ್ಕ್ರಿಯ ಸಂಘಗಳನ್ನು ಈಗಾಗಲೇ ಗುರುತಿಸಲಾಗಿದೆ. ಈ ಬಗ್ಗೆ ಸುತ್ತೋಲೆ ಹೊರಡಿಸಿ ಸದ್ಯದಲ್ಲಿ ಚುರುಕುಗೊಳಿಸಲಾಗುವುದು. ಸುಸ್ತಿ ಬಾಕಿದರರಿಗೆ ಮತದಾನದ ಹಕ್ಕನ್ನು ನೀಡಬಾರದೆಂದು ಹೇಳಿದ್ದಾರೆ. ಈಗ ಸುಸ್ತಿದಾರರಿಗೆ ಮತದಾನದ ಹಕ್ಕು ಇರುವುದಿಲ್ಲ. ಮೊನ್ನೆ ಒಂದು ಸಾರಿ ೩೧-೧೨-೯೧ರಲ್ಲಿ ಕೊಟ್ಟಿದ್ದು, ಅದನ್ನು ಕೂಡ ನಾವು ಈಗಾಗಲೇ ವಾಪಸ್ಸು ತೆಗೆದುಕೊಂಡಿದ್ದೇವೆ. ಕಾಲಕಾಲಕ್ಕೆ ಚುನಾವಣೆಯನ್ನು ಮಾಡುವಂತೆ ನೋಡಿಕೊಳ್ಳಬೇಕೆಂದು ಸಲಹೆ ಮಾಡಿದ್ದಾರೆ. ಇದನ್ನು ನಾವು ಈಗಾಗಲೇ ಗಮನದಲ್ಲಿಟ್ಟುಕೊಂಡಿದ್ದೇವೆಂದು ನಾನು ಉತ್ತರವನ್ನು ಕೊಡುತ್ತಿದ್ದೇನೆ. ಮಾನ್ಯ ಹಿರಿಯ ಸದಸ್ಯರಾದ ಆಚಾರ್‌ರವರು ಬಹಳ ಯೋಗ್ಯವಾದ ಸಲಹೆಯನ್ನು ಮಾಡಿದ್ದಾರೆ. ಅದೇನೆಂದರೆ, ಶಾಸನಬದ್ಧವಾಗಿ ಲೆಕ್ಕ ಪರಿಶೋಧನೆ ನಡೆಸಬೇಕೆಂದು ಹೇಳಿದ್ದಾರೆ. ಶಾಸನಬದ್ಧವಾಗಿ ಒಂದು ಸಲ ಲೆಕ್ಕ ಪರಿಶೋಧನೆ ಈಗಾಗಲೇ ನಾವು ನಡೆಸುತ್ತಿದ್ದೇವೆ. ಮತ್ತು ಆಡಿಟ್ ಶುಲ್ಕ ವಿಪರೀತ ಲಾಭದಲ್ಲಿರುವ ಸಂಸ್ಥೆಗಳಿಗೆ ಮಾತ್ರ ಹಾಕಬೇಕು. ಹಾನಿಯಲ್ಲಿರುವ ಸಂಸ್ಥೆಗಳಿಗೂ ಒಂದೇ ರೀತಿ ಶುಲ್ಕವನ್ನು ವಿಧಿಸಲಾಗುತ್ತದೆ, ಅದು ಸರಿಯಲ್ಲ. ಪುನಃ ಪರಿಶೀಲಿಸಬೇಕೆಂದು ಅವರು ಹೇಳಿದ್ದಾರೆ. ಇದರ ಬಗ್ಗೆ ಹೇಳಬೇಕಾದರೆ ಹಾಲಿ ಜಾರಿಯಲ್ಲಿರುವ ಸರ್ಕಾರದ ಆದೇಶದಂತೆ, ಲೆಕ್ಕ ಪರಿಶೋಧನಾ ಶುಲ್ಕ ಮತ್ತು ವೆಚ್ಚ ಸಹ ವಸೂಲಿ ಮಾಡುತ್ತದೆ. ಅಂದರೆ ನಾವು ಇದಕ್ಕೊಂದು ಸ್ವಲ್ಪ ತಿದ್ದುಪಡಿಯನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಟರ್ನ್‌ಓವರ್ ಮೇಲೆ ವರ್ಕಿಂಗ್ ಕ್ಯಾಪಿಟಲ್‌ಗೆ ಮಾತ್ರ ಇದೆ. ಅವರು ಎಷ್ಟು ಟರ್ನ್‌ಓವರ್ ಮಾಡುತ್ತಾರೆ, ಅವರ ವರ್ಕಿಂಗ್ ಕ್ಯಾಪಿಟಲ್ ಎಷ್ಟಿದೆ ಎಂಬುದನ್ನು ನೋಡಿಕೊಂಡು ನೂರು ರೂಪಾಯಿಗೆ ಹದಿನೈದು ಪೈಸೆಯಂತೆ ನಾವು ಆಡಿಟ್ ಫೀಜನ್ನು ಚಾರ್ಜ್ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಇನ್ನೊಂದು ಸಲಹೆಯನ್ನು ಕೊಟ್ಟಿದ್ದಾರೆ. ಈ ಹಿಂದೆ ಇದ್ದ ಸಹಕಾರಿ ಅಭಿವೃದ್ಧಿ ಬೋರ್ಡನ್ನು ಪುನಃ ಪ್ರಾರಂಭಿಸುವ ಸಾಧ್ಯತೆಯನ್ನು ಪರಿಶೀಲಿಸಬೇಕೆಂದು ಹೇಳಿದ್ದಾರೆ. ಇದು ಒಳ್ಳೆಯ ಸಲಹೆ. ಇದನ್ನು ನಾವು ಪರಿಶೀಲಿಸುತ್ತೇನೆ. ಕಾಲಕಾಲಕ್ಕೆ ಸರ್ಕಾರ ನೀಡಿದ ರಿಯಾಯಿತಿಯನ್ನು ಸಮಯಕ್ಕೆ ಸರಿಯಾಗಿ ಬಿಡುಗಡೆ ಮಾಡಬೇಕೆಂದು ಮತ್ತು ಉತ್ಪಾದನಾ ಉತ್ತೇಜನ ಯೋಜನೆಯ ಲಾಭವನ್ನು ಅಕ್ಟೋಬರ್ ತಿಂಗಳಿಗಿಂತ ಮೊದಲು ಸಾಲ ಮರುಪಾವತಿ ಮಾಡಿದವರಿಗೆ ಕೊಡುವ ವ್ಯವಸ್ಥೆ ಆಗಬೇಕೆಂದು ಹೇಳಿದ್ದಾರೆ. ಇದು ಬಹಳ ಪ್ರಮುಖ್ಯವಾದುದು. ಈಗಾಗಲೇ ಇದಕ್ಕೆ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಆಣೆವಾರಿ ಘೋಷಿತ ಪ್ರದೇಶದ ರೈತರಿಗೆ ಬೆಳೆ ವಿಮೆ ಯೋಜನೆಯಿಂದ ಪ್ರಯೋಜನವಿಲ್ಲ. ಅದನ್ನು ಪರಿಷ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ. ಇದು ಕೇಂದ್ರ ಸರ್ಕಾರದ ಸ್ಕೀಮ್ ಆಗಿರುವುದರಿಂದ ನಾವು ಕೇಂದ್ರ ಸರ್ಕಾರದವರೊಂದಿಗೆ ಸಮಾಲೋಚನೆ ಮಾಡಬೇಕಾಗುತ್ತದೆ. ಆಮೇಲೆ ವಿಫಲ ಬಾವಿಗಳ ಹಣ ಪಾವತಿ ಬೇಗ ಆಗುವ ವ್ಯವಸ್ಥೆಯಾಗಬೇಕೆಂದು ಕೇಳಿಕೊಂಡಿದ್ದಾರೆ. ಇದರ ಬಗ್ಗೆ ಅನೇಕ ಶಾಸಕರು ಈ ಹಣ ಬೇಗ ಪಾವತಿಯಾಗುವ ವ್ಯವಸ್ಥೆ ಮಾಡಬೇಕೆಂದು ನನಗೆ ಹೇಳಿದ್ದಾರೆ. ಇದರ ಬಗ್ಗೆ ಹೇಳಬೇಕೆಂದರೆ, ಸಾಲದ ಅರ್ಧಭಾಗವನ್ನು ಯೋಜನೆಯ ಪ್ರಕಾರ ಭಾರತ ಸರ್ಕಾರ ನೀಡಬೇಕಾಗಿತ್ತು. ಕಾಲಕಾಲಕ್ಕೆ ಆಯವ್ಯಯದಲ್ಲಿ ಅವಕಾಶವನ್ನು ನಾವು ಕಲ್ಪಿಸುತ್ತೇವೆ. ಇನ್ನೊಂದು ಸಲಹೆ ಎಂದರೆ ಸಹಕಾರಿ ಸಂಘಗಳ ವ್ಯವಹಾರಗಳ ಮೇಲೆ ವಿಧಿಸುತ್ತಿರುವ ಮಾರಾಟ ತೆರಿಗೆಯಲ್ಲಿ

ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ತಾರತಮ್ಯ ಇದೆ, ಇದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ನಾವು ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಜೊತೆಯಲ್ಲಿ ಚರ್ಚೆಯನ್ನು ನಡೆಸುತ್ತಿದ್ದೇವೆ. ಆದಾದಮೇಲೆ ಸದನಕ್ಕೆ ಏನಾಯಿತೆಂದು ನಾನು ತಿಳಿಸುತ್ತೇನೆ. ಇನ್ನೊಂದು ವಿಷಯವನ್ನು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಹೇಳಿದ್ದಾರೆ. ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಆದಷ್ಟು ಬೇಗ ಹಣವನ್ನು ಮಂಜೂರಾತಿ ಮಾಡಿಸಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ಕೂಡ ನಾನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಜೊತೆಯಲ್ಲಿ ಚರ್ಚೆ ಮಾಡುತ್ತಿದ್ದೇನೆ. ಎಲ್ಲಾ ಗೃಹ ಸಹಕಾರ ಸಂಘಗಳು ಅವ್ಯವಹಾರ ಮಾಡುತ್ತಿಲ್ಲ, ಅವಶ್ಯಕತೆ ಮತ್ತು ಬೇಡಿಕೆ ಇದ್ದಲ್ಲಿ ಅವುಗಳ ಸಂಘಟನೆಗೆ ಮತ್ತು ಸಾಲ ಪೂರೈಕೆಗೆ ಸರ್ಕಾರ ಒಪ್ಪಿಗೆ ನೀಡಬೇಕೆಂದು ಕೇಳಿದ್ದಾರೆ. ಇದನ್ನು ನಾನು ಪರಿಶೀಲಿಸುತ್ತೇನೆ. ಹರಿಜನ ಗಿರಿಜನ ಸಹಕಾರ ಸಂಘಗಳನ್ನು ಪುನಶ್ಚೇತನ ಗೊಳಿಸಬೇಕೆಂದು ಕೇಳಿದ್ದಾರೆ. ಇದು ಆಗಲೇ ಡೆವಲಪ್‌ಮೆಂಟ್ ಕಮೀಷನರ್‌ರವರ ಟೇಬಲ್ ಮೇಲೆ ಇದೆ. ನಾನು ಅವರನ್ನು ಕರೆಸಿ ಪರಿಶೀಲನೆ ಮಾಡುತ್ತೇನೆ. ಕೊನೆಯದಾಗಿ ಒಬ್ಬನೇ ರೈತ ಅನೇಕ ಬಾರಿ ಸ್ಟಾಂಪ್ ಡ್ಯೂಟಿಯನ್ನು ಕೊಡಬೇಕಾಗುತ್ತದೆ. ಇದರಿಂದ ರೈತರಿಗೆ ಬಹಳ ಭಾರವಾಗುತ್ತದೆಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಖರ್ಗೆಯವರ ಜೊತೆಯಲ್ಲಿ ಚರ್ಚೆಮಾಡಿ ಆದಷ್ಟು ಕೂಡ ಕಡಿಮೆ ಮಾಡಲು ನಾನು ಪ್ರಯತ್ನ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಶಿವರಾಮೇಗೌಡರು ಕೆಲವು ಸಲಹೆಗಳನ್ನು ಮಾಡಿದ್ದಾರೆ. ಸಹಕಾರಿ ರಂಗಗಳಲ್ಲಿ ಆಸ್ಪತ್ರೆಗಳನ್ನು ಸಂಘಟಿಸಬೇಕೆಂದು ಹೇಳಿದ್ದಾರೆ. ಈಗಾಗಲೇ ಕೆಲವು ಸಹಕಾರ ಸಂಘಗಳು ಆಸ್ಪತ್ರೆಯಿಂದಲೇ ಸ್ಥಾಪನೆಯಾಗಿದೆ. ಇನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಯಾರಾದರೂ ಇಂತಹ ಸಹಕಾರಿ ಸಂಘದಲ್ಲಿ ಆಸ್ಪತ್ರೆಗಳನ್ನು ಆರಂಭಮಾಡುತ್ತೇವೆಂದು ಪ್ರಪೋಸಲ್ ತೆಗೆದು ಕೊಂಡು ಬಂದರೆ ಅದಕ್ಕೂ ಕೂಡ ಸರ್ಕಾರ ಮನ್ನಣೆ ಕೊಡುತ್ತದೆಂದು ಈ ಸದನಕ್ಕೆ ನಾನು ಹೇಳುತ್ತೇನೆ. ಮಾನ್ಯ ಶಿವರಾಮೇಗೌಡರ ಎರಡನೆಯ ಸಲಹೆ ಏನೆಂದರೆ ಸಾಲವನ್ನು ಮನ್ನಾಕ್ಕೆ ಪರ್ಯಾಯವಾಗಿ ಬಡ್ಡಿದರ ರಿಯಾಯಿತಿ ಯೋಜನೆ ರೂಪಿಸಬೇಕೆಂದು ಹೇಳಿದ್ದಾರೆ. ಸಾಲ ಮನ್ನಾ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಅದರ ಅವಧಿ ಮುಗಿದಿದೆ. ಸಾಲ ಮನ್ನಾ ಯೋಜನೆಯ ಸೌಲಭ್ಯ ದೊರಕುವವರೆಗೆ ಸೌಲಭ್ಯ ದೊರಕಿಸುವುದಕ್ಕಾಗುವುದಿಲ್ಲ. ಅದೇ ರೀತಿ ಪರ್ಯಾಯ ಉತ್ಪಾದನಾ ಉತ್ತೇಜಕ ಯೋಜನೆಯನ್ನು ಕಾರ್ಯ ರೂಪಕ್ಕೆ ಸರ್ಕಾರ ಈಗಾಗಲೇ ಜಾರಿಗೆ ತಂದಿದೆ. ಮೂರನೆಯದಾಗಿ, ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಾಲ ಮಂಜೂರಾತಿ ತೀವ್ರವಾಗುವಂತೆ ನಿಯಮ ರೂಪಿಸಬೇಕೆಂದು ಮತ್ತು ತಾಂತ್ರಿಕ ಸಿಬ್ಬಂದಿಯನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಇವರ ಬಗ್ಗೆ ಹೇಳಬೇಕಾದರೆ, ನಿಯಮಗಳು ರಾಷ್ಟ್ರೀಯ ಬ್ಯಾಂಕ್‌ನಿಂದ ಮಾಡಿದ್ದು, ಸಾಲಗಳು ತೀರುವಂತೆ ಇದೆ. ಯಾವುದಾದರೊಂದು ವ್ಯೆಯುಕ್ತಿಕ ತೊಂದರೆಯಲ್ಲಿ ವಿಳಂಬವಾಗುತ್ತಿದೆ. ಈ ತಾಂತ್ರಿಕ ಸಿಬ್ಬಂದಿ ಬ್ಯಾಂಕುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅದರ ಬಗ್ಗೆ ನನ್ನ ಗಮನಕ್ಕೆ ತಂದರೆ, ತೀವ್ರವಾಗಿ ಪರಿಶೀಲಿಸುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ತಮ್ಮ ಒಳ್ಳೆಯ ಸಲಹೆಗಳನ್ನು ಹಾಗೂ ಟಿಪ್ಪಣಿಗಳನ್ನು ಕೊಟ್ಟಿದ್ದಾರೆ. ಇವನ್ನೆಲ್ಲ ನಾನು ಆದಷ್ಟು ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ನಿನ್ನೆ ಮತ್ತು ಇವೊತ್ತಿನ ದಿವಸ ಮಾನ್ಯ ಶಾಸಕರುಗಳು ಸಭೆಯಲ್ಲಿ ಭಾಗವಹಿಸಿ ಸಹಕಾರ ಕೊಟ್ಟಿರುವುದರಿಂದ ಅವರಿಗೆ ವಂದಿಸಿ, ನಾನು ಮಂಡಿಸಿರುವ ಬೇಡಿಕೆ ಮಂಜೂರಾತಿ ಮಾಡಿಕೊಡಬೇಕೆಂದು ವಿನಂತಿಸುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

F - 29

ಕಾರ್ಮಿಕ ರಾಜ್ಯ ಸಚಿವರಿಂದ ಉತ್ತರ:-

+ಶ್ರೀ ಎ. ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೆ, ನಮ್ಮ ಇಲಾಖೆಗೆ ಸಂಬಂಧಪಟ್ಟಿರುತಕ್ಕಂಥ ಬೇಡಿಕೆಗಳನ್ನು ಈಗಾಗಲೇ ಸಭೆಯ ಮುಂದಿಡಲಾಗಿದೆ. ಮಾನ್ಯ ಸದಸ್ಯರು ಮಾಡಿರುವ ಸಲಹೆ-ಟೀಕೆಗಳನ್ನು ನಾನು ಸ್ವಾಗತಿಸುತ್ತಾ, ಈ ಇಲಾಖೆ ತನ್ನದೇ ಆದಂಥ ಒಂದು ವೈಶಿಷ್ಟ್ಯತೆಯಿಂದ ಸರ್ಕಾರದ ಒಂದು ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಮುಖ್ಯವಾಗಿ, ಇವೊತ್ತಿನ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಹೊಸ ಕೈಗಾರಿಕಾ ನೀತಿ ಹಾಗೂ 'ವಿಶ್ವ' ಎನ್ನುವಂಥ ಹಲವಾರು ಯೋಜನೆಗಳಿಗೆ ಪ್ರೋತ್ಸಾಹ ಕೊಡಬೇಕು, ಕೈಗಾರಿಕಾ ಕ್ಷೇತ್ರದಲ್ಲಿ ಮುಂದುವರಿಯಬೇಕು ಎನ್ನುವಂಥ ಸರ್ಕಾರದ ನೀತಿ ಏನು ಇದೆ, ಆ ನೀತಿಗೆ ಸರಿಯಾದಂಥ ರೀತಿಯಲ್ಲಿ ಸ್ಪಂದಿಸತಕ್ಕಂಥ ಇಲಾಖೆ ಯಾವುದಾದರೂ ಇದ್ದರೆ, ಅದು ನನ್ನ ಇಲಾಖೆಯೆಂದು ನಾನು ಸ್ಪಷ್ಟಪಡಿಸುತ್ತೇನೆ. ಮುಖ್ಯವಾಗಿ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್, ಇನ್ಸ್‌ಪೆಕ್ಟರ್ ಆಫ್ ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್ ಮತ್ತು ಇ. ಎಸ್. ಐ. ಈ ಮೂರು ಇಲಾಖೆಗಳನ್ನು ನನ್ನ ಇಲಾಖೆ ಹೊಂದಿದೆ. ಮುಖ್ಯವಾಗಿ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ನಲ್ಲಿ ಎರಡು ರೀತಿಯಾದಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅದರಲ್ಲಿ ಎರಡು ವಿಂಗ್‌ಗಳಿವೆ. ಒಂದು, ಎಂಪ್ಲಾಯ್‌ಮೆಂಟ್ ವಿಂಗ್, ಮತ್ತೊಂದು ಟ್ರೈನಿಂಗ್ ವಿಂಗ್. ಎಂಪ್ಲಾಯಮೆಂಟ್ ವಿಂಗನಲ್ಲಿ ನಾವು ನಿರುದ್ಯೋಗಿ ವಿದ್ಯಾರ್ಥಿಗಳಿಗೆ, ನಿರುದ್ಯೋಗಿ ಜನರಿಗೆ ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್ ಮುಖಾಂತರ ಅವರಿಗೆ ಉದ್ಯೋಗ ಕಲ್ಪಿಸುವಂಥ ಒಂದು ಅವಕಾಶವನ್ನು ಸ್ಕ್ರೀಮ್‌ಲೈನ್ ಮಾಡುತ್ತೇವೆ. ಒಂದು ಶ್ರೇಷ್ಠ ಪಟ್ಟಿಯ ಮುಖಾಂತರ ಪ್ರತಿಯೊಂದು ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದ ನಂತರ ನಮ್ಮ ಇಲಾಖೆಯವರು ಸರ್ಕಾರದಿಂದಾಗಲಿ, ಕೆಲವು ಪ್ರೈವೇಟ್‌ನಿಂದಾಗಲಿ ನಮ್ಮಿಂದ ಬೇಕಾಗುವಂಥ ಹುದ್ದೆಗಳಿಗೆ ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್ ಸಹಕಾರದೊಡನೆ ನಾವು ಸ್ಪಾನ್ಸರ್ ಮಾಡಿ ಅವರಿಗೆ ಉದ್ಯೋಗ ಕಲ್ಪಿಸುವಂಥ ಜವಾಬ್ದಾರಿಯನ್ನು ನಮ್ಮ ಇಲಾಖೆ ಹೊತ್ತುಕೊಂಡಿದೆ. ಅದೇ ರೀತಿ ಎಂಪ್ಲಾಯ್‌ಮೆಂಟ್ ವಿಂಗ್‌ನಲ್ಲೂ ಕೂಡ ಕಾರ್ಯಕ್ರಮ ಹಾಗೂ ನಮ್ಮ ಇಲಾಖೆ ವತಿಯಿಂದ ವೊಕೇಶನಲ್ ಗೈಡೆನ್ಸ್ ಕೊಟ್ಟಿದ್ದೇವೆ. ವೊಕೇಶನಲ್ ಗೈಡೆನ್ಸ್ ಎಂದರೆ ಇವೊತ್ತಿನ ಪರಿಸ್ಥಿಯಲ್ಲಿ ನಿರುದ್ಯೋಗಿ ಯುವಕರು ಯಾವ ರೀತಿಯಾಗಿ ಅವರು ಉದ್ಯೋಗವನ್ನು ಕಲ್ಪಿಸಿಕೊಳ್ಳಬಹುದು, ಯಾವ ಇಲಾಖೆಯಲ್ಲಿ ಮತ್ತು ಅವರಿಗೆ ಯಾವುದರಲ್ಲಿ ಆಸಕ್ತಿ ಇರುತ್ತದೋ ಅದರಲ್ಲಿ ಯಾವ ರೀತಿಯಾದಂಥ ಒಂದು ಪರಿಣಿತಿ ಪಡೆದು ಒಳ್ಳೆಯ ಉದ್ಯೋಗ ಕಲ್ಪಿಸಿಕೊಳ್ಳುವಲ್ಲಿ ಯಶಸ್ವಿಯಾಗಬಹುದು, ತಮ್ಮ ಮುಂದಿನ ಭವಿಷ್ಯಕ್ಕೆ ನಾಂದಿಯಾಗಬಹುದು ಎನ್ನುವಂಥ ರೀತಿಯಲ್ಲಿ, ನಮ್ಮ ಇಲಾಖೆ ಮೇಲಿಂದ ಮೇಲೆ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿ ಅದರಲ್ಲೂ ಇಂತಹ ನಿರುದ್ಯೋಗಿ ಯುವಕರನ್ನು ಒಳಪಡಿಸಿ ಮಾಡುತ್ತಿದ್ದೇವೆ. ಅದರಲ್ಲೂ ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಹಳ ಮಹತ್ವವಾದಂಥ ಪಾತ್ರವನ್ನು ವಹಿಸುತ್ತಿರುವುದು ತಮಗೆಲ್ಲಾ ಗೊತ್ತಿದೆ. ಆದರೆ, ಇವೊತ್ತು ಇರುವಂಥ ಜಾತಿ ಜನಾಂಗದವರು ಏನು ತಮ್ಮ ಹೆಸರನ್ನು ನೋಂದಾಯಿಸುತ್ತಿದ್ದಾರೆ ಅಥವಾ ಲೋಪದೋಷಗಳು ಆಗಬಾರದು ಎನ್ನತಕ್ಕ ಒಂದು ವಿಚಾರದಿಂದ ನಾವು ಈಗ ಹೊಸದಾಗಿ ಕಂಪ್ಯೂಟರೈಸೇಷನ್ ಮಾಡಬೇಕು. ಈ ಯಂತ್ರಗಳನ್ನು ಹಲವಾರು ಕಡೆಗಳಲ್ಲಿ ಕೊಡಿಸಬೇಕು ಎಂದು ಈಗಾಗಲೇ ವಿಚಾರ ಮಾಡಿದ್ದೇವೆ. ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಈಗಾಗಲೇ

ಕಂಪ್ಯೂಟರೈಸೇಷನ್ ಮಾಡಿದ್ದೇವೆ. ನಮ್ಮ ಆನೇ ಪಂಚವಾರ್ಷಿಕ ಯೋಜನೆಯ ಕೊನೆಯ ಹಂತದಲ್ಲಿ ನಮ್ಮಲ್ಲಿರತಕ್ಕ ಎಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿಯೂ ಕೂಡ ಕಂಪ್ಯೂಟರೈಸೇಷನ್‌ನ್ನು ಮಾಡಬೇಕು ಎನ್ನತಕ್ಕ ಯೋಜನೆಯನ್ನು ಹಮ್ಮಿಕೊಂಡಿದ್ದೇವೆ. ಮತ್ತು ಹೊಸ ಉದ್ಯೋಗ ವಿನಿಮಯ ಕೇಂದ್ರಗಳನ್ನು ನಗರಗಳಲ್ಲಿ ಪ್ರಾರಂಭ ಮಾಡುವಂಥ ಯೋಜನೆ ಕೂಡ ನಮ್ಮ ಸರ್ಕಾರದಲ್ಲಿದೆ. ಅದರ ಪ್ರಸ್ತಾವನೆ ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ. ಕೊಪ್ಪಳ ಮತ್ತು ಧಾರವಾಡ ಜಿಲ್ಲೆಯ ಹಾವೇರಿಯಲ್ಲಿ ಮತ್ತೆ ಇನ್ನು ಕೆಲವು ಕಡೆ ಹೊಸ ಉದ್ಯೋಗ ವಿನಿಮಯ ಕೇಂದ್ರಗಳನ್ನು ತೆರೆಯಲು ಪರಿಶೀಲನೆ ನಡೆಯುತ್ತಿದೆ. ಇದರ ಮುಖ್ಯಾಂಶಗಳು ಅಪ್‌ಗ್ರೇಡೇಶನ್ ಆಫ್ ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್. ಯಾವ ಉದ್ಯೋಗ ವಿನಿಮಯ ಕೇಂದ್ರವನ್ನು ಅಪ್‌ಗ್ರೇಡ್ ಮಾಡಬೇಕಾಗಿದೆಯೋ ಆ ಕಾರ್ಯಕ್ರಮವನ್ನು ಕೂಡ ಈ ವರ್ಷದಲ್ಲಿ ಹಾಕಿಕೊಳ್ಳುತ್ತಿದ್ದೇವೆ. ಈಗ ಕಂಟಿನ್ಯೂಯೇಶನ್ ಆಪ್ ಎಂಪ್ಲಾಯ್‌ಮೆಂಟ್ ಅಂಡ್ ಪ್ರೋಮೋಶನ್ ಸೆಲ್ ಮತ್ತು ವೊಕೇಶನಲ್ ಗೈಡೆನ್ಸ್ ಎಂದು ಏನು ಮಾಡುತ್ತಿದ್ದೇವೆ ಆ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗಬೇಕು, ಅದರಿಂದ ಸತತವಾಗಿ ಹೆಚ್ಚು ಜನ ಲಾಭವನ್ನು ಪಡೆಯಬೇಕು ಎಂಬ ದೃಷ್ಟಿಯಿಂದ ಈ ವರ್ಷದಲ್ಲಿ ಕೂಡ ಈ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇನ್ನು ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಆಗಿರತಕ್ಕಂತಹವರಿಗೆ ಪ್ರತ್ಯೇಕವಾಗಿ ಬೆಂಗಳೂರಿನಲ್ಲಿ ಒಂದು ಉದ್ಯೋಗ ವಿನಿಮಯ ಕೇಂದ್ರವನ್ನು ಪ್ರಾರಂಭಿಸಿದ್ದೇವೆ. ಮತ್ತು ಅವರಿಗೆ ಸರ್ಕಾರದ ನೇಮಕಾತಿಯಲ್ಲಿ ಅವರಿಗೆ ಆದ್ಯತೆ ಇರುವುದರಿಂದ ನಾವು ಅವರನ್ನು ನಮ್ಮ ಉದ್ಯೋಗ ವಿನಿಮಯ ಕೇಂದ್ರಗಳ ಮುಖಾಂತರ ಸ್ಪಾನ್ಸರ್ ಮಾಡುವ ಪದ್ಧತಿಯನ್ನು ಕೂಡ ಸರ್ಕಾರ ಕೈಗೊಂಡಿದೆ. ಅದಕ್ಕೆ ಸಹಾಯ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಲ್ಲದೆ ಉದ್ಯೋಗ ವಿನಿಮಯ ಕೇಂದ್ರಗಳಿಗೆ ಕಟ್ಟಡಗಳನ್ನು ಒದಗಿಸುವ ಸಲುವಾಗಿ ಎಲ್ಲೆಲ್ಲಿ ಉದ್ಯೋಗ ವಿನಿಮಯ ಕೇಂದ್ರಕ್ಕೆ ಕಟ್ಟಡವನ್ನು ಕಟ್ಟಬೇಕಾಗಿದೆ ಅದರ ಸಂಬಂಧವಾಗಿ ಈ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡಿದ್ದೇವೆ. ಅದೇ ಪ್ರಕಾರವಾಗಿ ವಿಶ್ವ ಬ್ಯಾಂಕಿನ ಸಹಾಯಿತ ಸ್ಕೀಮ್‌ನಲ್ಲಿ ನಮ್ಮ ರಾಜ್ಯಸರ್ಕಾರದವರು ನಡೆಸತಕ್ಕ ಐ.ಟಿ.ಐ.ಗಳಿಗೆ ಕಟ್ಟಡಗಳಿಲ್ಲದಿರುವುದರಿಂದ ಅದಕ್ಕೆ ಕಟ್ಟಡಗಳ ಪ್ರಪೋಸಲ್‌ಗಳನ್ನು ಮಾಡಿದ್ದೇವೆ. ಬೆಂಗಳೂರು, ಗುಂಡ್ಲುಪೇಟೆ ಮುಂತಾದ ಕೆಲವು ಕಡೆಗಳಲ್ಲಿ ಐ.ಟಿ.ಐ. ಕಟ್ಟಡವನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿಕೊಂಡು ನಾವು ಆ ಕಾರ್ಯಕ್ರಮವನ್ನು ಶೀಘ್ರದಲ್ಲಿ ತೆಗೆದುಕೊಳ್ಳತಕ್ಕ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇವೆಲ್ಲವುಗಳು ಸಹ ಎಂಪ್ಲಾಯ್‌ಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ಮಾಡುತ್ತಿರತಕ್ಕ ಕೆಲಸ ಕಾರ್ಯಗಳ ಮುಖ್ಯಾಂಶಗಳಾಗಿವೆ. ಮತ್ತೆ ನಮ್ಮ ತರಬೇತಿಯ ವಿಭಾಗದಲ್ಲಿ ಕೆಲವು ವೊಕೇಷನಲ್ ಟ್ರೈನಿಂಗ್ ಮತ್ತು ಅಪರೆಂಟಿಸ್‌ಶಿಪ್ ಇವೆರಡನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ ಮತ್ತು ಸರ್ಕಾರದ ನೆರವಿನಿಂದ ಹಿಂದಿನ ವರ್ಷದಿಂದ ವಿಶೇಷ ತರಬೇತಿ ಕೋರ್ಸ್‌ನ್ನು ಕಂಡಕ್ಟ್ ಮಾಡತಕ್ಕ ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಅದರೊಳಗೆ ಡ್ರಾಫ್ಟ್ಸ್‌ಮ್ಯಾನ್‌ಶಿಪ್ ಟ್ರೈನಿಂಗ್ ಎನ್ನತಕ್ಕದ್ದು ಒಂದು. ತಮಗೆ ಗೊತ್ತಿರುವಂತೆ ಪ್ರತಿಯೊಂದು ಐ.ಟಿ.ಐ. ನಲ್ಲಿಯೂ ನಾವು ಕೊಡತಕ್ಕ ಡ್ರಾಫ್ಟ್ಸ್‌ಮ್ಯಾನ್‌ಶಿಪ್ ಟ್ರೈನಿಂಗ್ ಒಂದು ವರ್ಷದ ಕೋರ್ಸ್ ಅಥವಾ ಎರಡು ವರ್ಷದ ಕೋರ್ಸ್ ಆಗುತ್ತದೆ. ಆ ರೀತಿಯ ತರಬೇತಿಯನ್ನು ಈಗಾಗಲೆ ನಮ್ಮ ರಾಜ್ಯದಲ್ಲಿರತಕ್ಕ ೩೭ ಸರ್ಕಾರಿ ಐ.ಟಿ.ಐ.ನಲ್ಲಿ ಮತ್ತು ೧೩೬ ಖಾಸಗಿ ಐ.ಟಿ.ಐ.ಗಳಲ್ಲಿ ನಾವು ಜನರಿಗೆ ಕೊಡುತ್ತಿದ್ದೇವೆ. ಅದು

ಆದಮೇಲೆ ವಿಶೇಷ ತರಬೇತಿ ಕೋರ್ಸ್. ಅದರಲ್ಲಿ ಅಡ್ವಾನ್ಸ್‌ಡ್ ವೊಕೇಶನಲ್ ಟ್ರೈನಿಂಗ್ ಸ್ಕೀಮ್ ಮತ್ತು ಮೋಟಾರ್ ಡ್ರೈವಿಂಗ್, ಇಂಡಸ್ಟ್ರೀಯಲ್ ವರ್ಕ್‌ಮೆನ್ ಕಾರ್ಯಕ್ರಮವೆಂದು ಇದೆ. ಇವತ್ತು ನಮ್ಮ ಸ್ಕಿಲ್ಡ್ ಲೇಬರ್‌ಗಳಿಗೆ ಬೇಡಿಕೆ ಇದೆ, ಈ ಸ್ಕಿಲ್ಡ್ ಲೇಬರ್ಸ್ ಅವಶ್ಯಕತೆ ಏನು ಇದೆ ಅದರ ಕಡೆ ಹೆಚ್ಚಿನ ಗಮನವನ್ನು ಕೊಟ್ಟು ಈಗ ನಡೆಯತಕ್ಕಂಥ ಐ.ಟಿ.ಐ.ಗಳನ್ನು ಒಳ್ಳೆಯ ರೀತಿಯಿಂದ ಇಟ್ಟುಕೊಳ್ಳಲು ಪ್ರಯತ್ನ ಮಾಡುತ್ತೇವೆ. ಮತ್ತೆ ವಿಶ್ವ ಬ್ಯಾಂಕಿನಿಂದ ನಮಗೆ ಹೆಚ್ಚಿನ ಇಕ್ವಿಪ್‌ಮೆಂಟ್ ಪಡೆಯುವುದಕ್ಕೋಸ್ಕರ ನೆರವು ಸಿಗುತ್ತದೆ. ಇದರಿಂದ ನಮ್ಮ ಯುವ ಜನರಲ್ಲಿ ಸ್ಕಿಲ್ಡ್‌ನ್ನು ತರಲು ಸಾಧ್ಯವಾಗುತ್ತದೆ. ಆದುದರಿಂದ ಕಾಂಪಿಟೀಟೀವ್‌ನೆಸ್‌ನಿಂದ ಇಂಡಿಸ್ಟ್ರಿಯಲ್ ಸೆಕ್ಟಾರ್ ಅನ್ನು ಹೆಚ್ಚು ಮಾಡಲು ಸಾಧ್ಯವಿದೆ ಎನ್ನತಕ್ಕ ಮಾತನ್ನು ನಾನು ವ್ಯಕ್ತಪಡಿಸುತ್ತೇನೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಶಿಕ್ಷಣ ಇಲಾಖೆಯಿಂದ ಅಥವಾ ಬೇರೆ ಇಲಾಖೆಯಿಂದ ಕೊಡುವಂತಹ ಒಂದು ತರಬೇತಿ ಏನು ಇದೆ ಅದನ್ನು ನಾವು ಹೋಲಿಸಿ ನೋಡಿದಾಗ, ನಮ್ಮ ಇಲಾಖೆಯಿಂದ ತರಬೇತಿ ಹೊಂದಿದಂತಹ ಸುಮಾರು ೬೦ ಪರ್ಸೆಂಟ್ ಯುವಕರು ಏನು ಇದ್ದಾರೆ, ಈ ಯುವಕರಿಗೆ ನೇರವಾಗಿ ನೌಕರಿ ಸಿಗುವಂತಹ ಸೌಲಭ್ಯ ಇದೆಯೆಂದು ನಮ್ಮ ರೆಕಾರ್ಡ್ಸ್ ಮುಖಾಂತರ ತಿಳಿಯುತ್ತದೆ. ಆದರೆ ಬೇರೆ ಇಲಾಖೆಯಿಂದ ತರಬೇತಿ ಪಡೆದಂತಹವರಿಗೆ ಸುಮಾರು ೨೦ ಅಥವಾ ೨೫ ಪರ್ಸೆಂಟ್ ಮಾತ್ರ ನೌಕರಿ ಸೌಲಭ್ಯ ಸಿಗುತ್ತಿದೆ. ನಾವು ಇವತ್ತು ಒಂದು ಇಂಡಸ್ಟ್ರಿ ಪ್ರಾರಂಭ ಮಾಡಬೇಕಾದರೆ ಸೆಮಿ ಸ್ಕಿಲ್ಡ್ ಅಥವಾ ಸ್ಕಿಲ್ಡ್ ಲೇಬರರ್ಸ್‌ನ ಅವಶ್ಯಕತೆ ಇದೆ. ಹೆಚ್ಚಾಗಿ ಹ್ಯಾಂಡ್ಸ್ ಬೇಕಾಗಿರತಕ್ಕಂಥದ್ದು ಸೆಮಿ ಸ್ಕಿಲ್ಡ್ ಮತ್ತು ಸ್ಕಿಲ್ಡ್ ಲೇಬರ್ಸ್. ನಂತರ ಟಾಪ್ ಪೋಸ್ಟ್ ಅಫೀಷಿಯಲ್ಸ್, ಇಂಜಿನಿಯರ್ಸ್ ಇಬ್ಬರು ಅಥವಾ ನಾಲ್ಕು ಜನ ಬೇಕಾಗಬಹುದು. ತ್ವರಿತಗತಿಯಲ್ಲಿ ಅವರಿಗೆ ಉದ್ಯೋಗ ಕಲ್ಪಿಸುವುದಕ್ಕೆ ನಾವು ಯಾವುದಾದರೂ ಒಂದು ತರಬೇತಿಯನ್ನು ಕೊಡುವುದಾದರೆ ನಮ್ಮ ಇಲಾಖೆಯ ಮುಖಾಂತರ ಇದನ್ನು ಮಾಡುತ್ತಿದ್ದೇವೆ ಎಂದು ನಾನು ಸ್ಪಷ್ಟಪಡಿಸುತ್ತಿದ್ದೇನೆ. ಇವತ್ತಿನ ದಿವಸ ಬೇಡಿಕೆ ಕೂಡ ಹೆಚ್ಚಾಗುತ್ತಿದೆ. ನಮ್ಮ ಶಾಸಕ ಮಿತ್ರರು ಕೂಡ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಐ.ಟಿ.ಐ. ಪ್ರಾರಂಭ ಮಾಡಬೇಕೆಂಬ ವಿಚಾರವನ್ನು ನಮಗೆ ಮೇಲಿಂದ ಮೇಲೆ ವ್ಯಕ್ತಪಡಿಸುತ್ತಿದ್ದಾರೆ. ಈಗ ಅದನ್ನು ಕೂಡ ನಾವು ಸರ್ವೆ ಮಾಡಿಸುವುದಕ್ಕೆ ನಮ್ಮ ಇಲಾಖೆಗೆ, ಸಂಬಂಧಪಟ್ಟವರಿಗೆ ಅದನ್ನು ಡೈರೆಕ್ಷನ್ಸ್ ಮಾಡಿದ್ದೇವೆ. ಪ್ರತಿಯೊಂದು ತಾಲ್ಲೂಕಿನ ವಯಬಿಲಿಟಿ ರಿಪೋರ್ಟ್‌ನ್ನು ತರಿಸಿ ಈ ಒಂದು ಟ್ರೈನಿಂಗನ್ನು ನಾವು ಇಂಪಾರ್ಟ್ ಮಾಡುವುದು ಬಹಳ ಒಳ್ಳೆಯ ಕಾರ್ಯಕ್ರಮವೆಂದು ನಾನು ಈಗಾಗಲೇ ಅವರಿಗೆ ಹೇಳಿದ್ದೇನೆ. ಮತ್ತು ನಮ್ಮ ಕೇಂದ್ರಸರ್ಕಾರದಿಂದ ಇದಕ್ಕೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ಕೂಡ ನಮಗೆ ಮೇಲಿನಿಂದ ಮೇಲೆ ಆದೇಶವಿದೆ. ಆದರೆ ನಮ್ಮ ಇಲಾಖೆಯಲ್ಲಿ ಒಂದು ತಾರತಮ್ಯ ಏನಾಗಿದೆಯೆಂದರೆ, ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಕೇಂದ್ರ ಸರ್ಕಾರ ಅವರು ನಮ್ಮ ಶಿಕ್ಷಣ ಇಲಾಖೆಗೆ ವೊಕೇಶನಲ್ ಟ್ರೈನಿಂಗ್ ಮತ್ತು ಗೈಡೆನ್ಸ್‌ಗೋಸ್ಕರ ಸಪರೇಟ್ ಆದಂತಹ ಫಂಡ್ಸ್‌ನ್ನು ಅಲೋಕೇಟ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಯಾವ ಇಲಾಖೆ ಸುಮಾರು ೩೦-೪೦ ವರ್ಷದಿಂದ ಈ ಒಂದು ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿದೆ ಆ ಇಲಾಖೆಗೆ ಇದನ್ನು ಕೊಡದೇ ಮತ್ತೊಂದು ಇಲಾಖೆಗೆ ಕೊಟ್ಟಿದ್ದಾರೆ. ಅದರ ಬಗ್ಗೆ ಕೂಡ ನಾನು ಅವರ ಜೊತೆ ಕರ್ರೆಸ್ಪಾಂಡೆನ್ಸ್ ಮಾಡಿ ಅದನ್ನು ಏಕೆ ಶಿಕ್ಷಣ ಇಲಾಖೆಗೆ ಕೊಟ್ಟಿದ್ದಾರೋ ನನಗೆ ತಿಳಿಯುತ್ತಿಲ್ಲ. ಅದನ್ನು ಕೊಟ್ಟಿದ್ದರೂ ತಪ್ಪಿಲ್ಲ. ಮಾನ್ಯ ಅಧ್ಯಕ್ಷರೇ, ಇವತ್ತು ಪ್ರೈವೇಟ್ ಐ.ಟಿ.ಐ.ಗಳ ಪರಿಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ ಗ್ರ್ಯಾಂಟ್ಸ್ ಇನ್

ಏಯ್ಡ್ ಫೆಸಿಲಿಟಿ ಇರಲಾರದಂತಹ ಒಂದು ಪರಿಸ್ಥಿತಿಗೆ ಬಂದು, ಪ್ರತಿ ವರ್ಷ ಒಂದು ಅಥವಾ ಎರಡು ಐ.ಟಿ.ಐ.ಗಳನ್ನು ಮುಚ್ಚುವಂತಹ ಒಂದಹ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಒಂದು ಆಶ್ವಾಸನೆ ಕೊಟ್ಟಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಕೇಂದ್ರಸರ್ಕಾರ ತನ್ನದೇ ಆದಂತಹ ಈ ಒಂದು ಕಾರ್ಯಕ್ರಮ ಸುಗಮವಾಗಿ ನಡೆಯಬೇಕೆನ್ನುವ ರೀತಿಯಲ್ಲಿ ಗ್ರ್ಯಾಂಟ್-ಇನ್-ಏಯ್ಡ್ ಫೆಸಿಲಿಟಿ ಎಕ್ಸ್‌ಟೆಂಡ್ ಮಾಡುವುದು ಅಥವಾ ಇನ್ನು ಯಾವುದಾದರೂ ಮುಖಾಂತರ ಗ್ರ್ಯಾಂಟ್ಸ್‌ನ್ನು ಕೊಡುವಂತಹ ವಿಷಯ ಈ ಇಲಾಖೆಗೆ ಬಿಟ್ಟು ಶಿಕ್ಷಣ ಇಲಾಖೆಗೆ ಕೊಟ್ಟಿದ್ದಾರೆ. ಅದರ ಬಗ್ಗೆ ತೀವ್ರಗತಿಯಲ್ಲಿ ಅವರ ಜೊತೆ ಚರ್ಚೆ ಮಾಡಿ ಅದಕ್ಕೆ ಪರಿಹಾರವನ್ನು ಕಂಡು ಹಿಡಿಯುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ನಮ್ಮ ಐ.ಟಿ.ಐ.ಗೆ ಬರುವವರೆಲ್ಲರೂ ಬಡ ಮಕ್ಕಳು ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ನಮ್ಮಲ್ಲಿ ಯಾರೂ ೪-೫ ಸಾವಿರ ಡೊನೇಷನ್ ಕೊಡುವಂತಹವರು ಬರುವುದಿಲ್ಲ ಅಥವಾ ಮನೆತನದ ಪರಿಸ್ಥಿತಿಯಿಂದ ಯಾರಿಗೆ ತೀವ್ರಗತಿಯಲ್ಲಿ ಬೇಗನೆ ನೌಕರಿ ಸಿಗಬೇಕಾಗಿದೆಯೋ ಅಥವಾ ತನ್ನ ಕಾಲ ಮೇಲೆ ತಾನು ನಿಲ್ಲಬೇಕು ಎನ್ನುವ ಹವ್ಯಾಸ ಇದ್ದವರು ಮತ್ತು ಆಸಕ್ತಿ ಇದ್ದಂತಹವರು ನಮ್ಮ ಐ.ಟಿ.ಐ.ಗೆ ಬರುತ್ತಾರೆ ಅವರಿಗೆ ನಾವು ನಮ್ಮ ಇಲಾಖೆಯ ವತಿಯಿಂದ ೫೦ ರೂಪಾಯಿ ಸ್ಟೈಫಂಡ್ ಕೊಡುತ್ತಿದ್ದೇವೆ. ಅದೇ ರೀತಿಯಾಗಿ ಈ ಅಪ್ರೆಂಟ್‌ಶಿಪ್ ಆಕ್ಟ್ ಏನು ಇದೆ ನಾವು ಅದನ್ನು ಎನ್‌ಫೋರ್ಸ್ ಮಾಡುತ್ತಿದ್ದೇವೆ. ಅಪ್ರೆಂಟ್‌ಶಿಪ್ ಆಕ್ಟ್ ಕೂಡ ಸೆಂಟ್ರಲ್ ಆಕ್ಟ್ ಇದನ್ನು ನಾವು ಎನ್‌ಫೋರ್ಸ್ ಮಾಡುತ್ತಿದ್ದೇವೆ. ಸುಮಾರು ಎಸ್. ಎಸ್. ಎಲ್. ಸಿ. ಪಾಸಾದವರು ಅಥವಾ ಐ.ಟಿ.ಐ ತರಬೇತಿ ಪಡೆದ ಹುಡುಗರಿಗೆ ಫ್ಯಾಕ್ಟರಿಯಲ್ಲಾಗಲಿ ಅಥವಾ ಒಂದು ಇಂಡಸ್ಟ್ರಿಯಲ್ಲಾಗಲಿ ಇವರು ಕೆಲಸ ಮಾಡಿ ಅನುಭವ ಬೇಕಾಗುವಂತಹ ಒಂದು ಅವಶ್ಯಕತೆ ಇದೆ. ಅದಕ್ಕೋಸ್ಕರ ನಾವು ಈ ಅಪ್ರೆಂಟ್‌ಶಿಪ್ ಆಕ್ಟ್‌ನಿಂದ ಅವರಿಗೆ ಫ್ಯಾಕ್ಟರಿಯಲ್ಲಿ ಕೆಲಸ ಕೊಡಬೇಕು. ಅದು ಒಂದು ರೇಷಿಯೋ ಇದೆ, ನಂಬರ್ ಆಫ್ ವರ್ಕ್ ಮ್ಯಾನ್ಸ್ ಅವರು ಎಷ್ಟು ಎಂಪ್ಲಾಯ್ ಮಾಡುತ್ತಾರೋ ಅದರ ಈಕ್ವಲೆಂಟ್ ೩ ಪರ್ಸೆಂಟ್ ೭ ಪರ್ಸೆಂಟ್ ಹೀಗೆ ವೇರಿಯಾಗುತ್ತಿದೆ. ಆ ರೆಷಿಯೋ ಪ್ರಕಾರ, ಅಪ್ರೆಂಟ್‌ಷಿಪ್ ಆಕ್ಟ್ ಪ್ರಕಾರ ನಮ್ಮ ಈ ಟ್ರೈನೀಸ್‌ಅನ್ನು ಕೂಡ ಅವರು ತೆಗೆದುಕೊಂಡು ಅವರಿಗೆ ಟ್ರೈನಿಂಗ್ ಇಂಪಾರ್ಟ್ ಮಾಡಬೇಕೆಂದು ಆಕ್ಟ್‌ನಲ್ಲಿ ಇರುವುದರಿಂದ ನಾವು ಅದನ್ನು ಎನ್‌ಫೋರ್ಸ್ ಮಾಡುತ್ತಿದ್ದೇವೆ. ಇದರಿಂದ ನಮ್ಮ ಬಹಳಷ್ಟು ಯುವಕರಿಗೆ ಈ ಸ್ಕಿಲ್ಸ್‌ನಲ್ಲಿ ಮಾನಸಿಕವಾಗಿ ಒಂದು ಬಲವನ್ನು ಪಡೆಯುವುದಕ್ಕೆ ಇದು ಒಂದು ಮಾದರಿಯಾಗಿದೆ ಎಂಬ ವಿಷಯವನ್ನು ನಾನು ಬಹಳ ಸಂತೋಷದಿಂದ ವ್ಯಕ್ತಪಡಿಸುತ್ತಿದ್ದೇನೆ. ಇದರಲ್ಲಿ ಏನು ಮಾಡುತ್ತಿದ್ದೇವೆ ಅಂದರೆ, ಸುಮಾರು ೨೯೦ರಿಂದ ಹಿಡಿದು ೪೨೦ ರೂಪಾಯಿವರೆಗೂ ಅಪ್ರೆಂಟಿಷಿಪ್ ಸ್ಟೈಫಂಡ್ ಎಂದು ಫ್ಯಾಕ್ಟರಿಯವರು ಕೊಡುತ್ತಿದ್ದಾರೆ. ಬಹಳ ಮುಖ್ಯವಾಗಿ ನಾವು ಕೇವಲ ಟ್ರೈನಿಂಗ್ ಇಂಪಾರ್ಟ್ ಮಾಡುವಾಗ ನಮ್ಮ ಇಲಾಖೆಯಿಂದ ಇವತ್ತು ಕಲಿಯುವಂತ ಯುವಕರಿಗೂ ಕೂಡ ಸ್ಟೈಫಂಡ್ ಕೊಡುತ್ತೇವೆ ಮತ್ತು ಅಪ್ರೆಂಟಿಷಿಪ್ ಮಾಡತಕ್ಕಂಥ ಯುವಕರಿಗೂ ಕೂಡ ೨೯೦ ರಿಂದ ೪೨೦ ರೂಪಾಯಿವರೆಗೂ ಕೂಡ ಅಪ್ರೆಂಟ್‌ಷಿಪ್ ಕೊಡುವಂತಹ ಇಂಪಾರ್ಟ್ ಮಾಡುವಂತಹ ಕಂಪನಿಗಳಿಂದ ಕೂಡ ಅವರಿಗೆ ಸ್ಟೈಫಂಡ್ ಅನ್ನು ನಾವು ಈಗಾಗಲೇ ಕೊಡಿಸುತ್ತಿದ್ದೇವೆ. ಇದರಿಂದ ಹೆಚ್ಚಿನ ಸೌಕರ್ಯ, ಸೌಲಭ್ಯಗಳು

ನಮ್ಮ ಯುವ ಜನಾಂಗಕ್ಕೆ ಇವತ್ತು ದೊರಕುತ್ತಿದೆ. ತಾವು ಹೇಳಿದ ಹಾಗೆ ಈ ಇಲಾಖೆಗಳು ಬಹಳ ದಿವಸಗಳಿಂದ ಅಂದರೆ ೧೯೮೮ರಲ್ಲಿ ಯಾವ ಹುದ್ದೆಗಳನ್ನು ತುಂಬಿಸಿಕೊಂಡಿದ್ದಿಲ್ಲ. ಗೌರ್ನ್‌ಮೆಂಟ್ ಒಂದು ಡಿಸಿಷನ್ ಮಾಡಿತು, ದೇ ಷುಡ್ ಬಿ ಟ್ರೀಟೆಡ್ ಆಸ್ ಲಾರ್ಸ್ಟ್ ಪೋಸ್ಟ್ ಎಂದು ಒಂದು ಡಿಸಿಷನ್ ತೆಗೆದುಕೊಂಡಿತು. ನಮ್ಮ ಇಲಾಖೆ ಸಣ್ಣದಾಂತಹ ಇಲಾಖೆ. ಇವೊತ್ತು ಇ. ಎಸ್. ಐ. ಆಗಲಿ, ಅಥವಾ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಆಗಲಿ, ಅಥವಾ ಲೇಬರ್ ಡಿಪಾರ್ಟ್‌ಮೆಂಟ್ ಆಗಲಿ, ಫ್ಯಾಕ್ಟರೀಸ್ ಅಂಡ್ ಇನ್‌ಸ್ಪೆಕ್ಟರ್ಸ್ ಆಗಲಿ ಇದು ಬಹಳ ಒಂದು ಸಣ್ಣ ಇಲಾಖೆ. ಅಲ್ಲಿರುವಂತಹ ಶೇಕಡ ೩೦-೩೫ ಪರ್ಸೆಂಟ್ ಅಷ್ಟು ನಮಗೆ ಸಿಗಬೇಕಾದಂತಹ ಮೆಷಿನರಿ ಇದೆ. 'ಹ್ಯಾಂಡ್ಸ್' ಏನು ಇದೆ ಅದು ಕಡಿಮೆಯಾಯಿತು. ಆದ್ದರಿಂದ ನಾವು ಈಗ ಏನು ಯೋಚನೆ ಮಾಡಿದ್ದೇವೆ ಎಂದರೆ, ಪುನಃ ಈ ಸರ್ಕಾರದ ಮುಂದೆ ಈ ಸಲ ನಾವು ಅದನ್ನು ತಂದು, ಕೆಲವೊಂದು ಇದರಲ್ಲಿ ರಿಲಾಕ್ಸೇಷನ್ ತೆಗೆದುಕೊಂಡು ಅದನ್ನು ಈಗ ಭರ್ತಿ ಮಾಡುವ ಯೋಜನೆಯನ್ನು ಕೂಡ ನಾವು ಹಾಕಿಕೊಂಡಿದ್ದೇವೆ. ಇದರ ಜೊತೆಗೆ ಈ ಇಲಾಖೆಯನ್ನು ಭದ್ರಪಡಿಸುವುದಕ್ಕೋಸ್ಕರ ನಾವು ಡಿವಿಜನಲ್ ಆಫೀಸಸ್‌ನ್ನು ಕೂಡ ನಾವು ಈಗ ಪ್ರಾರಂಭ ಮಾಡುತ್ತಿದ್ದೇವೆ. ನಮ್ಮ ಸ್ನೇಹಿತರು ಆದಂತಹ ಆಚಾರ್ ಮತ್ತು ನಮ್ಮ ಕುಮಾರ್‌ರವರು ಈ ಬಗ್ಗೆ ಪ್ರಸ್ತಾಪ ಮಾಡಿದರು. ನಮ್ಮ ಮಂಗಳೂರಿನಲ್ಲಿರುವಂಥ ಅಪ್ರೆಂಟಿಸ್‌ಷಿಪ್ ಅಡ್‌ವೈಸ್ ಸೆಂಟರ್ ವೈಂಡ್ ಅಪ್ ಮಾಡಿ ಅದನ್ನು ಮೈಸೂರಿಗೆ ತರುತ್ತಿದ್ದೀರಿ ಎಂದು ಅವರು ನೇರವಾಗಿ ನನ್ನ ಮೇಲೆ ಆಪಾದನೆ ಮಾಡಿದರು. ಅದು ಹಾಗೆ ಅಲ್ಲ. ನಾವು ಇನ್‌ಫ್ಯಾಕ್ಟ್, ಡಿವಿಜನಲ್ ಆಫೀಸಸ್ ಕ್ರಿಯೇಟ್ ಮಾಡಿಲ್ಲ, ಈ ರವಿನ್ಯೂ ಡಿವಿಜನ್ಸ್ ಏನು ಇದೆ, ಅದನ್ನೇ ನಮ್ಮ ಡಿವಿಜನಲ್ ಹೆಡ್ ಕ್ವಾರ್ಟರ್ ಆಗಿ ನಾವು ಪರಿಗಣಿಸಿ, ನಾವು ಈಗ ಅಲ್ಲಿ ನಮ್ಮ ಡಿವಿಜನ್ಸ್ ಸೆಟ್ ಅಪ್ ಮಾಡುತ್ತಿದ್ದೇವೆ. ಮೊದಲು ಏನಿತ್ತು ಅಂದರೆ, ಎಲ್ಲ ಕೂಡ ಕೇಂದ್ರೀಕೃತವಾಗಿತ್ತು. ನಮ್ಮ ಡೈರೆಕ್ಟರೇಟ್ ಆಫೀಸ್‌ನಿಂದಲೇ, ಬೆಂಗಳೂರಿನಲ್ಲಿ ಲೊಕೇಟ್ ಆದ ಆಫೀಸ್‌ನಿಂದಲೇ ಎಲ್ಲ ಜವಾಬ್ದಾರಿಯನ್ನು ಕೂಡ ನಾವು ನಿರ್ವಹಣೆ ಮಾಡುತ್ತಿದ್ದೆವು. ಆದ್ದರಿಂದ ಐ.ಟಿ.ಐ. ಮೇಲಾಗಲೀ ಅಥವಾ ಅಪ್ರೆಂಟ್‌ಷಿಪ್ ಆ್ಯಕ್ಟ್ ಅನ್ನು ಎನ್‌ಫೋರ್ಸ್ ಮಾಡುವುದು ಆಗಲಿ, ಮತ್ತೊಂದಾಗಲಿ, ಇಲ್ಲಿ ಮಾಡಲಿಕ್ಕೆ ನಮಗೆ ಸಾಧ್ಯ ಆಗುತ್ತಿರಲಿಲ್ಲ. ಆದಕ್ಕೆ ಈ ಡಿವಿಜನ್ ಆಫೀಸ್ ಕ್ರಿಯೇಟ್ ಮಾಡಿ ಪ್ರತಿಯೊಂದರಲ್ಲೂ ಕೂಡ ನಾವು ಡೆಪ್ಯುಟಿ ಡೈರೆಕ್ಟರ್ ಆಫ್ ಅಪ್ರೆಂಟಿಸ್‌ಷಿಪ್ ಆಗಲಿ, ಅಥವಾ ಡೆಪ್ಯುಟಿ ಡೈರೆಕ್ಟರ್ ಫಾರ್ ಐ. ಟಿ. ಐ. ಆಗಲಿ, ಈ ತರಹ ನಾವು ಎಲ್ಲ ಪೋಸ್ಟಿಂಗ್ ಮಾಡುತ್ತಿದ್ದೇವೆ. ಮತ್ತು ಇದರಲ್ಲಿ we have notified the principals of all I.T.I.'s as Apprentiship advisery officers ಎಂದು ಮಾಡಿದ್ದೇವೆ. ಅವರನ್ನು ಎನ್‌ಫೋರ್ಸಿಂಗ್ ಆಫೀಸರ್ಸ್ ಎಂದು ಮಾಡಿದ್ದೇವೆ. ಅದರಿಂದ ತಮಗೆ ಏನೂ ತೊಂದರೆ ಆಗುವುದಿಲ್ಲ. ಮಂಗಳೂರಿನಲ್ಲಿ ಇರತಕ್ಕಂಥ ಐ. ಟಿ. ಐ. ಪ್ರಿನ್ಸಿಪಾಲ್ ಆಟೋಮ್ಯಾಟಿಕಲಿ ಹಿ ಬಿಕಮ್ಸ್ ಅನ್ ಆಫೀಸರ್. ಸೊ ಎನ್‌ಫೋರ್ಸ್‌ಮೆಂಟ್ ಮಾಡುವುದರಲ್ಲಿ ಯಾವುದೇ ತಾರತಮ್ಯ ಅಥವಾ ವಿಳಂಬ ಆಗುವುದಿಲ್ಲ ಎನ್ನುವಂಥ ಮಾತನ್ನು ಹೇಳುತ್ತೇನೆ. ಈ ಇಲಾಖೆಯನ್ನು ಭದ್ರ ಪಡಿಸಬೇಕು, ಇನ್ನೂ ಒಂದಿಷ್ಟು ಶಕ್ತಿಯುತವಾಗಿ ಮಾಡಬೇಕು ಎಂಬ ಉದ್ದೇಶದಿಂದ ಹೀಗೆ ಮಾಡಿದೆ ಎಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಮುಖ್ಯವಾಗಿ ಕಾರ್ಮಿಕರ ರಕ್ಷಣೆ ಹಾಗೂ ಕಾರ್ಮಿಕರ ಹಿತದೃಷ್ಟಿಯಿಂದ ನಮ್ಮ ಇಲಾಖೆ ಕೆಲಸ ಮಾಡುತ್ತಾ ಇದೆ ಅದರಲ್ಲಿ ಸುಮಾರಾದಂತಹ

ಆ್ಯಕ್ಟ್‌ಗಳನ್ನು ನಾವು ಎನ್‌ಫೋರ್ಸ್ ಮಾಡುತ್ತಿದ್ದೇವೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆ್ಯಕ್ಟ್, ಗ್ರಾಚ್ಯುಟಿ ಆ್ಯಕ್ಟ್, ವರ್ಕ್‌ಮೆನ್ಸ್ ಕಾಂಪನ್‌ಸೇಷನ್ ಆ್ಯಕ್ಟ್, ಚೈಲ್ಡ್ ವೆಲ್‌ಫೇರ್ ಆ್ಯಕ್ಟ್. ಈ ರೀತಿ ನಾನಾ ತರಹವಾದಂತಹ ಆ್ಯಕ್ಟ್‌ಗಳನ್ನು ನಾವು ಈಗಾಗಲೇ ಎನ್‌ಫೋರ್ಸ್‌ಮೆಂಟ್ ಮಾಡುತ್ತಿದ್ದೇವೆ. ಈ ಇಲಾಖೆ ಬಗ್ಗೆ ನಮ್ಮ ಬಗ್ಗೆ ಹಲವಾರು ಆಪಾದನೆಗಳು ಅಥವಾ ಟೀಕೆಗಳು ಬಂದಿದೆ. ನಿಮ್ಮ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಾ ಇಲ್ಲ, ಸರಿಯಾಗಿ ನಿರ್ವಹಣೆ ಮಾಡುತ್ತಾ ಇಲ್ಲ ಎನ್ನುವಂಥ ಟೀಕೆಗಳು ಬಂದಿವೆ. ಆದರೆ, ನಾನು ಇವತ್ತು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಏನಾಗಿದೆ ಎಂದರೆ, ನಮ್ಮ ಲೋಪದೋಷಗಳು ಏನಿವೆ ಎನ್ನುವುದರ ಕಡೆಗೆ ನಾವು ಸ್ವಲ್ಪ ಗಮನ ಕೊಡಬೇಕು. ನಮ್ಮ ಬೆಂಗಳೂರಿನಲ್ಲಿ ಇರುವಂಥ ಒಬ್ಬ ಇನ್‌ಸ್ಪೆಕ್ಟರ್‌ಗೆ ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಎಷ್ಟು ಬರುತ್ತದೆ ಎಂದರೆ ಸುಮಾರು ೪ ಸಾವಿರ. ಸುಮಾರು ೪ ಸಾವಿರ ಎಸ್ಟಾಬ್ಲಿಷ್‌ಮೆಂಟ್ ಅವರಿಗೆ ಬರುತ್ತಾ ಇದೆ. ೪ ಸಾವಿರ ಎಸ್ಟಾಬ್ಲಿಷ್‌ಮೆಂಟ್ ಒಬ್ಬ ಇನ್‌ಸ್ಪೆಕ್ಟರ್ ನೋಡಿಕೊಳ್ಳಬೇಕು. Whether it is practically poissible. ಎಂದು ನಾವು ವಿಚಾರ ಮಾಡಬೇಕು. ಒಂದು ಎಸ್ಟಾಬ್ಲಿಷ್‌ಮೆಂಟ್ ಮೇಲೆ ಇನ್‌ಸ್ಪೆಕ್ಟ್ ಮಾಡಿ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಬೇಕು ಅಂದರೆ ಒಬ್ಬ ಅಧಿಕಾರಿ ಸುಮಾರು ೪ ಅಥವಾ ೫ ತಾಸು ಒಂದು ಎಸ್ಟಾಬ್ಲಿಷ್‌ಮೆಂಟ್ ಮೇಲೆ ಕುಳಿತಿರಬೇಕಾಗುತ್ತದೆ. ಇಷ್ಟು ವಿವರವಾಗಿ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ನಮಗೆ ಆಗುತ್ತಿಲ್ಲ. ೧೯೮೮ರಲ್ಲಿ ಏನು ಪೋಸ್ಟ್ ಲ್ಯಾಪ್ಸ್ ಆಗಿದೆ ಆದರಿಂದ ಈ ಪರಿಸ್ಥಿತಿ ಉದ್ಭವವಾಗಿದೆ ಎನ್ನತಕ್ಕಂಥದ್ದನ್ನು ನಾನು ಹೇಳುತ್ತೇನೆ. ಇದನ್ನು ನಾವು ಗಮನದಲ್ಲಿಟ್ಟುಕೊಂಡು ಈ ವರ್ಷ ಸರ್ಕಾರಕ್ಕೆ ಕೂಡ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದೇವೆ. ಇದನ್ನು ಕೊಡುತ್ತೇವೆಂದು ಸರ್ಕಾರ ಕೂಡ ಅಶ್ವಾಸನೆ ಕೊಟ್ಟಿದೆ. ಆದ್ದರಿಂದ ಖಂಡಿತವಾಗಿ ಇನ್ನು ಮುಂದೆ ಈ ರೀತಿ ಆಪಾದನೆ ಬರುವುದಕ್ಕೆ ಆಸ್ಪದ ಮಾಡಕೊಡುವುದಿಲ್ಲವೆಂದು ಹೇಳ ಬಯಸುತ್ತೇನೆ.

ಈಗಿರತಕ್ಕ ಪೇಮೆಂಟ್ ಆಫ್ ವೇಜಸ್ ಆ್ಯಕ್ಟ್, ಮೆಟರ್ನಟಿ ಬೆನಿಫಿಟ್ ಆ್ಯಕ್ಟ್ ಮತ್ತು ಬಾಯ್ಲರ್ ಆ್ಯಕ್ಟ್ ಇಷ್ಟನ್ನೂ ಕೂಡ ನಾವು ಫ್ಯಾಕ್ಟ್‌ರೀಸ್ ಅಂಡ್ ಬಾಯ್ಲರ್ಸ್ ಖಾತೆಯಿಂದ ಎನ್‌ಫೋರ್ಸ್ ಮಾಡುತ್ತೇವೆ. ಇದರಲ್ಲಿ ಈಗಾಗಲೇ ೭೪೫೧ ರಿಜಿಸ್ಟರ್ಡ್ ಫ್ಯಾಕ್ಟರಿಗಳಿವೆ. ಸುಮಾರು ೮ ಸಾವಿರ ಚಿಲ್ಲರೆ ಫ್ಯಾಕ್ಟರಿಗಳು ಮೊದಲು ಇದ್ದುವು. ಅವುಗಳಲ್ಲಿ ಕೆಲವು ಹೊಸದಾಗಿ ರಿಜಿಸ್ಟರ್ ಆದುವು, ಇನ್ನು ಕೆಲವು ಲೈಸೆನ್ಸ್‌ನ್ನು ರಿನ್ಯೂ ಮಾಡಿಸಿಕೊಂಡಿಲ್ಲ, ಮತ್ತೆ ಕೆಲವು ಕ್ಲೋಸ್ ಆಗಿವೆ. ಅಂಥವುಗಳನ್ನೆಲ್ಲಾ ತೆಗೆದು ಇದರಲ್ಲಿ ಈಗ ೭೪೫೧ ಫ್ಯಾಕ್ಟರಿಗಳು ರಿಜಿಸ್ಟರ್ ಆಗಿರುವುವು ಸಿಕ್ಕುತ್ತವೆ. ಇದರಲ್ಲಿ ಮುಖ್ಯವಾಗಿ ನಮ್ಮ ಮೇಜರ್ ಡೆವಲಪ್‌ಮೆಂಟ್ ಎಂದರೆ ಕಳೆದ ವರ್ಷ ೬ ಸಾವಿರ ಚಿಲ್ಲರೆ ಫ್ಯಾಕ್ಟರಿಗಳು ಏನಿದ್ದವು ಅವುಗಳನ್ನೊಳಗೊಂಡಂತೆ ಈ ವರ್ಷ ೨೩೫ ಹೊಸ ಫ್ಯಾಕ್ಟರಿಗಳು ನಮ್ಮಲ್ಲಿ ರಿಜಿಸ್ಟರ್ ಆಗಿವೆ. ಇದರಿಂದ ನಮಗೆ ಏನು ಗೊತ್ತಾಗುತ್ತದೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಅಥವಾ ಈ ರಾಷ್ಟ್ರದಲ್ಲಿ ಲೇಬರ್ ಪೀಸ್ ಪಡೆಯುವುದರಲ್ಲಿ ಅಥವಾ ಸಾಧನೆಯನ್ನು ಮಾಡುವುದರಲ್ಲಿ ನಾವು ಯಶಸ್ವಿಯಾಗುತ್ತಿದ್ದೇವೆ ಎಂಬುದು ಕಂಡು ಬರುತ್ತಿದೆ. ಕಂಪೆರೇಟೀವ್ ಸ್ಟ್ಯಾಟಿಸ್ಟಿಕ್ಸ್‌ನ್ನು ನಮ್ಮ ರಿಪೋರ್ಟ್‌ನಲ್ಲಿ ಕೂಡ ಕೊಟ್ಟಿದ್ದೇವೆ. ತಾವು ಈ ಅಂಕಿ ಅಂಶಗಳನ್ನು ನೋಡಿದರೆ, ಪ್ರತಿ ವರ್ಷ ಲಾಕೌಟ್ಸ್, ಸ್ಟ್ರೈಕ್ಸ್ ಮತ್ತು ಲೇಬರ್ ಅನ್‌ರೆಸ್ಟ್ ಆಗಲಿ ಏನಾಗುತ್ತಿದ್ದವು ಅವೆಲ್ಲಾ ನೋಡಿದಾಗ ಈ ವರ್ಷ ಬಹಳಷ್ಟು ಕಡಿಮೆಯಾಗಿವೆ ಎಂಬುದನ್ನು ತಾವು ತಿಳಿದುಕೊಳ್ಳಬಹುದು. ಇದೇ ರೀತಿ ನಮ್ಮ ಫ್ಯಾಕ್ಟರೀಸ್ ಡಿಪಾರ್ಟ್‌ಮೆಂಟ್‌ನಿಂದ ನಾವು ರೆಕಾರ್ಡ್ಸ್‌ನ್ನು ತೆಗೆದುಕೊಂಡರೆ

೧೦೦೦ ಕಾರ್ಮಿಕರಲ್ಲಿ ಸುಮಾರು ೭.೪ ಜನರು ಅನಾಹುತಕ್ಕೆ ಈಡಾಗುತ್ತಿದ್ದಾರೆ. ಆದರೆ ಈ ವರ್ಷ ೬.೨ ಜನ ಅನಾಹುತಕ್ಕೆ ಈಡಾಗಿದ್ದಾರೆಂದು ನಮ್ಮ ಈ ಪಟ್ಟಿಯಿಂದ ತಮಗೆ ಕಂಡುಬರುತ್ತದೆ. ಇದರಿಂದಾಗಿ ನಮ್ಮ ಇಲಾಖೆಯಲ್ಲಿರತಕ್ಕ ಶಿಸ್ತು ಮತ್ತು ಬಿಗಿ ಹೆಚ್ಚಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಇದೇ ಸಂದರ್ಭದಲ್ಲಿ ನಮ್ಮ ಕಾರ್ಮಿಕ ನಾಯಕರಿಗೂ ಮತ್ತು ಕಾರ್ಮಿಕರಿಗೂ ಕೂಡ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರೂ ಕೂಡ ತಮ್ಮ ಕರ್ತವ್ಯವನ್ನು ನಿಭಾಯಿಸುವುದರಲ್ಲಿ ಮತ್ತು ಸರಿಯಾದ ಇಂಡಸ್ಟ್ರಿಯಲ್ ರಿಲೇಷನ್ ಬಗ್ಗೆ, ಮ್ಯಾನೇಜ್‌ಮೆಂಟ್ ಅಂಡ್ ವರ್ಕ್‌ಮೆನ್ಸ್ ರಿಲೇಷನ್ ಬಗ್ಗೆ ಹೆಚ್ಚಿನ ಅನುಭವವನ್ನು ಹೊಂದಿದ್ದಾರೆನ್ನತಕ್ಕ ವಿಚಾರವನ್ನು ಈ ಸಂದರ್ಭದಲ್ಲಿ ವ್ಯಕ್ತ ಪಡಿಸುತ್ತಿದ್ದೇನೆ. ನಮ್ಮ ಇಲಾಖೆಯ ವತಿಯಿಂದ ಇಷ್ಟೊಂದು ಜವಾಬ್ದಾರಿಯಿಂದ ಕೆಲಸವನ್ನು ನಿರ್ವಹಿಸುತ್ತಿದ್ದೇವೆ. ಮಾನ್ಯ ಸದಸ್ಯರಾದ ಚವಾಣ್‌ರವರು ಒಂದು ಮಾತನ್ನು ಏನು ಹೇಳಿದರೆಂದರೆ, ನಿಮ್ಮ ಫ್ಯಾಕ್ಟರಿ ಇನ್‌ಸ್ಪೆಕ್ಟರ್ ಮತ್ತು ಮ್ಯಾನೇಜ್‌ಮೆಂಟ್‌ನವರು ಹ್ಯಾಂಡ್ ಇನ್ ಗ್ಲೋವ್ ಎಂದು ಹೇಳಿದರು. ಇಬ್ಬರೂ ಕೂಡ ಪರಸ್ಪರ ಒಂದಾಗಿ ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ, ಆಕ್ಸಿಡೆಂಟ್ಸ್ ಆದಾಗ ಕೇವಲ ರುಜು ಮಾತ್ರ ತೆಗೆದುಕೊಳ್ಳುತ್ತಾರೆ, ಕೇಸನ್ನು ಫೈಲ್ ಮಾಡುವುದಿಲ್ಲ ಎಂದು ಹೇಳಿದರು. ಆದರೆ ಇದು ಖಂಡಿತ ಸತ್ಯಕ್ಕೆ ದೂರವಾದುದು. It is baseless allegation made by our friend.

ಶ್ರೀ ಬಾಬುರಾವ್ ಚವಾಣ್:- ತಾವು ಒಂದು ನಿಮಿಷ ಈಲ್ಡ್ ಆಗುವುದಾದರೆ...

ಶ್ರೀ ಎ. ಎಸ್. ನಾಡಗೌಡ:- ಆಮೇಲೆ ಕೇಳಿ. ಯಾವುದೇ ಪ್ರಕರಣ ನಮಗೆ ರಿಪೋರ್ಟ್ ಆದ ಕೂಡಲೆ ನಮ್ಮ ಇನ್‌ಸ್ಪೆಕ್ಟರ್ ಆಫ್ ಫ್ಯಾಕ್ಟರೀಸ್ ಯಾರಿರುತ್ತಾರೆ ಅವರು ತಕ್ಷಣವೇ ಅಲ್ಲಿಗೆ ಹೋಗಿ ಅದನ್ನು ಕೂಡಲೆ ರಿಪೋರ್ಟ್ ಮಾಡಿಕೊಂಡು ಅವನನ್ನು ಪ್ರಾಸಿಕ್ಯೂಟ್ ಮಾಡಿ, ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. He is not competent to withdraw any prosecution made. It has to be sent to the Government. Government alone is competent to withdraw the prosecution. ಬೇರೆ ಯಾರಿಗೂ ಈ ಅಧಿಕಾರವಿಲ್ಲ. ಅವನು ಮಾಡುವಂಥ ಕರ್ತವ್ಯದಲ್ಲಿ ಅಂದರೆ ಅವನು ತಾನು ಕೇಸ್ ಮಾಡುವುದಿಲ್ಲ, ಪ್ರಾಸಿಕ್ಯೂಟ್ ಮಾಡುವುದಿಲ್ಲ ಎಂದು ಹೇಳುವುದಾದರೆ if any single instance comes to our notice, ಆ ರೀತಿಯಾದಂಥ ಅಲಿಗೇಶನ್ ಯಾವುದಾದರೂ ಇದ್ದರೂ ಕೂಡ inspector will be immediately suspended. I am saying this on the floor of this house. ಆದರೆ ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ರುಜು ತೆಗೆದುಕೊಂಡರೆ ಪ್ರಾಸಿಕ್ಯೂಟ್ ಮಾಡಬಾರದೆಂದು ಕಾಯಿದೆಯಲ್ಲಿ ಎಲ್ಲೂ ಇಲ್ಲ. ಅವರು ರುಜುವನ್ನು ತೆಗೆದುಕೊಳ್ಳಲಿ ಅಥವಾ ಏನು ಬೇಕಾದರೂ ಮಾಡಿಕೊಳ್ಳಲಿ. ಆದರೆ ಲೀಗಲ್ ಪ್ರೊಸೀಡಿಂಗ್ಸ್ ಕಂಟಿನ್ಯೂ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ, ಅದನ್ನು ನಾವು ಕಂಟಿನ್ಯೂ ಮಾಡುತ್ತೇವೆ. ವಿತ್‌ಡ್ರಾ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ನಾವು ಯಾವಾಗ ವಿತ್‌ಡ್ರಾ ಮಾಡುತ್ತೇವೆಂದರೆ, ಅವನು ಏನು ತಪ್ಪು ಮಾಡಿದ್ದಾನೆ ಅದನ್ನು ತಿದ್ದುಕೊಂಡಿದ್ದರೆ ಅಥವಾ ಅಲ್ಲಿರತಕ್ಕ ಮಷಿನರಿ ಸರಿಯಿಲ್ಲದೆ ಅಥವಾ ಅವನಿಗೆ ಸರಿಯಾದ ಇನ್‌ಸ್ಟ್ರುಮೆಂಟ್ಸ್‌ನ್ನು ಕೊಡದೇ ಇರುವುದರಿಂದ ಈ ಆಕ್ಸಿಡೆಂಟ್ ಆಗಿದೆ ಅಥವಾ ಸರಿಯಾದ ಮುಂಜಾಗರೂಕತೆ ಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಈ ಅನಾಹುತವಾಗಿದೆ ಎಂದು ತಿಳಿದುಬಂದರೆ ಮೊದಲು

ಅದನ್ನು ಎನ್‌ಫೋರ್ಸ್ ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ. ಅನಂತರ ಅವನಿಗೆ ಸರಿಯಾಗಿ ಸಿಕ್ಕಬೇಕಾದ ಪರಿಹಾರ ಏನಿದೆ ಅದು ಸರಿಯಾಗಿ ಸಿಕ್ಕಿದೆಯೇ, ಇಲ್ಲವೇ; ಅಥವಾ ಅವನ ಮಕ್ಕಳಿಗೆ ಅಥವಾ ಡಿಪೆಂಡೆಂಟ್ಸ್ ಯಾರಾದರೂ ಅವರಿಗೆ ನೌಕರಿ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡುವವರೆಗೂ ನಾವು ಆ ಕೇಸನ್ನು ವಿತ್‌ಡ್ರಾ ಮಾಡುವುದಿಲ್ಲವೆಂದು ತಮ್ಮ ಮೂಲಕ ಹೇಳಬಯಸುತ್ತೇನೆ. ಸರ್ಕಾರ ಸುಮಾರು ೩೧ ಕೇಸ್‌ಗಳನ್ನು ವಿತ್‌ಡ್ರಾ ಮಾಡಿದೆ. ಆದರೆ ಯಾವಾಗ ಮಾಡಿದೆ ಎಂದರೆ, ನಮ್ಮ ಎಲ್ಲಾ ಕಂಡೀಷನ್‌ಗಳನ್ನೂ ಸ್ಯಾಟಿಸ್‌ಫೈ ಮಾಡಿ, ನಮ್ಮ ಚೀಫ್ ಇನ್‌ಸ್ಪೆಕ್ಟರ್ ಆಫ್ ಫ್ಯಾಕ್ಟರೀಸ್ ಯಾರಿದ್ದಾರೆ ಅವರು ಸ್ವತಃ ಇನ್‌ಸ್ಪೆಕ್ಟ್ ಮಾಡಿ ರಿಪೋರ್ಟ ಮಾಡುವವರೆಗೂ ನಾವು ಯಾವ ಕೇಸನ್ನೂ ವಿತ್‌ಡ್ರಾ ಮಾಡಿಲ್ಲ. ಆದುದರಿಂದ, ನಮ್ಮ ಇನ್‌ಸ್ಪೆಕ್ಟರ್‌ಗಳು ಹ್ಯಾಂಡ್ ಇನ್ ಗ್ಲೋವ್ ಎಂದರೆ ಫ್ಯಾಕ್ಟರಿಗಳವರ ಜೊತೆ ಇದ್ದಾರೆಂಬ ಆಪಾದನೆಯನ್ನು ತಳ್ಳಿಹಾಕಬೇಕೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನನ್ನದೇ ಒಂದು ಉದಾಹರಣೆ ಹೇಳುತ್ತೇನೆ. ಅವರು ಹೇಳಿದಂಥ ಎಲ್ಲ ಸಿಮೆಂಟ್ ಫ್ಯಾಕ್ಟರಿಗಳಿಗೂ ಕೂಡ ನಾನು ವಿಸಿಟ್ ಮಾಡಿದ್ದೇನೆ. ಸಿಮೆಂಟ್ ಫ್ಯಾಕ್ಟರಿಗೆ ಹೋದಂಥ ಪ್ರಸಂಗದಲ್ಲಿ ತಾವು ಹೇಳಿದಂತೆ ಗಮ್‌ಬೂಟ್ ಮತ್ತು ಡ್ರೆಸ್ ಕೊಡಲಾರದಂಥದ್ದನ್ನು ನಾವು ಕಂಡಿದ್ದೇವೆ. ಅದನ್ನು ಇಲ್ಲವೆಂದು ಹೇಳುವುದಿಲ್ಲ. ಅಂಥಹವರಿಗೆ ಸ್ಟ್ರಿಕ್ಟ್ ಆಗಿ ಕೂಡಲೇ ವಾರನ್‌ಮಾಡಿ ನೋಟೀಸ್ ಕೂಡ ಇಷ್ಯೂ ಮಾಡಿದ್ದೇವೆ. ಎಲ್ಲಿ ಕೊಟ್ಟಿದ್ದೇವೆ ಅಲ್ಲಿ ವರ್ಕರ್ಸ್ ಅನ್ನು ಸ್ವತಃ ಹಾಕಿಕೊಂಡು ಕೆಲಸ ಮಾಡುತ್ತಿಲ್ಲ. ಆದಕ್ಕೆ ನಾನು ಏನು ಹೇಳುತ್ತೇನೆಂದರೆ, ಕೇವಲ ಯಾವುದೇ ಒಂದು ಇಲಾಖೆಯಿಂದ ನಾವು ಈ ಶಿಸ್ತನ್ನು ತರುತ್ತೇವೆ ಅಥವಾ ಎನ್‌ಫೋರ್ಸ್‌ಮೆಂಟ್ ಮಾಡುತ್ತೇವೆಂದರೆ ಸಾಧ್ಯವಿಲ್ಲ. ಆದಕ್ಕೆ ಸಮಾಜದ ಒಂದು ಸಹಕಾರ ಅತಿ ಮುಖ್ಯವಾಗಿದೆ. ಜನ ಮತ್ತು ಸಮಾಜದ ಒಂದು ಸಹಕಾರ ಇಲ್ಲದಿದ್ದರೆ ಕೇವಲ ಕಾಯಿದೆ ಮಾಡಿ, ಕಾನೂನು ಮಾಡಿ ನಾವು ಅದನ್ನು ಅನುಷ್ಠಾನಕ್ಕೆ ತರಲಿಕ್ಕೆ ಸಾಧ್ಯವಿಲ್ಲವೆನ್ನುವಂಥ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಬಹಳಷ್ಟು ಜನ ನಮಗೆ ಹೇಳುತ್ತಾರೆ. ಬೇರೆ ರಾಜ್ಯದಲ್ಲಿ ಇರುವುದರ ಬಗ್ಗೆ ಹೇಳುತ್ತಾರೆ. ಅದನ್ನು ಟೀಕೆ ಮಾಡಲಿಕ್ಕೆ ಹೋಗುವುದಿಲ್ಲ. ನಮ್ಮ ನ್ಯೂ ಇಂಡಸ್ಟ್ರಿಯಲ್ ಪಾಲಿಸಿ ಮಾಡುವಾಗ ನಮ್ಮ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟನವರು ಕೂಡ ಕೆಲವೊಂದಿಷ್ಟು ರಿಲ್ಯಾಕ್ಸೇಷನ್ ಕೊಡಬೇಕು, ಲೇಬರ್ ಆಕ್ಟ್‌ನಂತೆ ರಿಲ್ಯಾಕ್ಸೇಷನ್ ಮಾಡಬೇಕು, ಫ್ಯಾಕ್ಟರಿಯನ್ನು ನಾವು ರಿಲ್ಯಾಕ್ಸ್ ಮಾಡಬೇಕೆಂದು ಹೇಳಿದಾಗ ನಾವು ನಮ್ಮ ಇಲಾಖೆ ವತಿಯಿಂದ, ನಮ್ಮ ಸರ್ಕಾರದವರು, ನಾವು ಯಾವ ರೀತಿಯಾದ ರಿಲ್ಯಾಕ್ಸೇಷನ್ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೇವೆ. ಆದರೆ ಏನಾದರೂ ತಾರತಮ್ಯವಾಗುವುದಾದರೆ ಅಥವಾ ಏನಾದರೂ ವಿಳಂಬವಾಗುತ್ತಿದ್ದರೆ, ಪ್ರೊಸೀಜರಲ್ ಎರರ್ಸ್ ಇದ್ದರೆ ನಾವು ಅದನ್ನು ರೆಕ್ಟಿಫೈ ಮಾಡುತ್ತೇವೆನ್ನುವಂಥ ಮಾತನ್ನು ಹೇಳಿ ನಾವು ಅದನ್ನು ತ್ವರಿತಗಳಿಯಲ್ಲಿ ಯಾವ ರೀತಿ ಒದಗಿಸಬೇಕು ಎಂದು ಅದನ್ನು ಮಾಡಿಕೊಳ್ಳುತ್ತೇವೆಯೇ ವಿನಃ ಕಾಯಿದೆ ಬದಲಾವಣೆ ಮಾಡುವುದಿಲ್ಲವೆಂದು ನಾವು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡಿದ್ದೇವೆ. ಈ ನಿಲುವನ್ನು ಏತಕ್ಕೆ ತೆಗೆದುಕೊಂಡಿದ್ದೇವೆಂದರೆ, ಕಾರ್ಮಿಕರಿಗೆ ರಕ್ಷಣೆ ಕೊಡುವಂಥ ಈ ಇಲಾಖೆ ಕೇವಲ ಮ್ಯಾನೇಜ್‌ಮೆಂಟ್‌ರವರ ರಕ್ಷಣೆಗೆ ಹೋದಂತೆ ಆಗಬಾರದು. ಆದಕ್ಕೋಸ್ಕರ ಕಾರ್ಮಿಕರ ರಕ್ಷಣೆಗೆ ಭದ್ರವಾಗಿ, ಯಾವುದೇ ರೀತಿಯಿಂದ ನಮ್ಮ ಸರ್ಕಾರ ಸತತವಾಗಿ ಹಿಂದೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಆಮೇಲೆ ನಮಗೆ ಬಹಳಷ್ಟು ಜನರು ಹೇಳುತ್ತಾರೆ, ಇಂಡಸ್ಟ್ರೀಯಲಿಸ್ಟ್ ಹೇಳುತ್ತಾರೆ,

ಹಲವಾರು ಕಡೆ ಭಾಷಣ ಮಾಡುವಾಗ ಹೇಳುತ್ತಾರೆ, ನಮ್ಮ ಲೇಬರ್ ಆಕ್ಟಿವಿಟೀಸ್‌ನಿಂದ ನಮ್ಮ ಫ್ಯಾಕ್ಟರಿಗಳು, ಕಾರ್ಖಾನೆಗಳು ಮುಂತಾದವುಗಳು ಲುಕ್ಸಾನಿನಲ್ಲಿ ಬರುತ್ತಿದೆ ಎಂದು ಹೇಳುತ್ತಾರೆ. ನಾನು ಇದನ್ನು ತಳ್ಳಿಹಾಕುತ್ತಿದ್ದೇನೆ. ಏಕೆಂದರೆ, It has been reported in the Financial Express that only 2% of the labour participation is the cause for the decline in the industries. 98% is due to managerial mistakes or something else. ಮಾರ್ಕೆಟಿಂಗ್ ಇರಬಹುದು, ಮ್ಯಾನೇಜರ್‌ಲ್ಲಿ ಇರಬಹುದು, ಮುಂತಾದುದರಲ್ಲಿ ಇರಬಹುದು. ಆದ್ದರಿಂದ ಈ ಲೇಬರ್ ಲಾಸ್ ಅನ್ನು ನಾವು ಮಾಡುವಂಥದ್ದು, ಅಥವಾ ಸಾಲ್ಟ್ ಮಾಡುವಂಥದ್ದು ನಮ್ಮ ವಿಚಾರದಲ್ಲಿಲ್ಲವೆಂದು ನಾವು ಕೇಂದ್ರ ಸರ್ಕಾರಕ್ಕೂ ಹೇಳಿದ್ದೇವೆ. ಮತ್ತು ಲೇಬರ್ ಕನ್‌ಫರೆನ್ಸ್‌ನಲ್ಲೂ ಕೂಡ ಹೇಳಿದ್ದೇವೆ. ನಾನು ಹೋಗಿರಲಿಲ್ಲ, ಈ ವರ್ಷ ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿದ್ದೆ. ಅಲ್ಲಿ ಕೂಡ ಅದನ್ನು ಪ್ರಸ್ತಾವನೆ ಮಾಡಿದ್ದೇವೆ. ಮತ್ತೆ ಕೇಂದ್ರದ ಮಂತ್ರಿಗಳ ಜೊತೆಯಲ್ಲಿ ಕೂಡ ನಾವು ಇದರ ಬಗ್ಗೆ ಹಲವಾರು ಬಾರಿ ಸಮಾಲೋಚನೆ ಮಾಡಿದ್ದೇವೆ. ಅವರೂ ಕೂಡ ಇದಕ್ಕೆ ಒಪ್ಪಿದ್ದಾರೆ. ಎಲ್ಲರಿಗೂ ಒಂದು ತಪ್ಪು ವಿಚಾರವಿದೆ. ಈ ಗೋಲ್ಡನ್ ಹ್ಯಾಂಡ್‌ಶೇಕ್ ಅಥವಾ ನ್ಯೂ ಎಕ್ಸಿಟ್ ಪಾಲಿಸಿ ಎನ್ನುವಂಥದ್ದನ್ನು ಕೇಂದ್ರ ಸರ್ಕಾರ ಅನೌನ್ಸ್ ಮಾಡಿದ ತಕ್ಷಣ ಬಹಳಷ್ಟು ಜನ ಅದರ ಬಗ್ಗೆ ತಪ್ಪು ಕಲ್ಪನೆ ಹೊಂದಿಬಿಟ್ಟಿದ್ದಾರೆ. ಏನಪ್ಪ ರಿಟ್ರೆಂಚ್‌ಮೆಂಟ್ ಆಗುತ್ತೆ, ನಮ್ಮನ್ನು ತೆಗೆದುಹಾಕಿಬಿಡುತ್ತಾರೆ, ನಮಗೆ ಸರಿಯಾದಂಥ ಒಂದು ನ್ಯಾಯ ಸಿಗುವುದಿಲ್ಲ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಈ ನೀತಿಯನ್ನು ಪರಿಪಾಲನೆ ಮಾಡಬಾರದು ಎನ್ನುವಂಥಾದ್ದು ಒಂದು ಮಿಸ್ ಕನ್‌ಸೀವ್ಡ್ ಥಾಟ್. ಆದರೆ ನಿಜಕ್ಕೂ ಹೇಳುತ್ತೇನೆ. ಇವತ್ತಿನ ಒಂದು ಯುಗದಲ್ಲಿ whether to become more competitive ನಾವು ಮೋರ್ ಕಾಂಪಿಟೇಟೀವ್ ಆಗಬೇಕಾದರೆ ಮಾಡ್ರನೈಸೇಷನ್ ಮೊದಲು ಮಾಡಬೇಕು. ಮಾಡ್ರನೈಸೇಷನ್ ತಂದ ಮೇಲೆ ನಾವು ಇದ್ದಂಥ ಕಾರ್ಮಿಕರಿಗೆ ಸರಿಯಾದಂಥ ಟ್ರೈನಿಂಗ್‌ನ್ನು ಇಂಪಾರ್ಟ್ ಮಾಡಬೇಕು. ನಾವು ಸರಿಯಾದಂಥ ಟ್ರೈನಿಂಗ್‌ನ್ನು ಇಂಪಾರ್ಟ ಮಾಡುವಂಥವರು ಮುಂದೆ ಎಷ್ಟು ಜನ ಬರುತ್ತಾರೆಂಬುದನ್ನು ವಿಚಾರ ಮಾಡೋಣ. ವಯಸ್ಸಿದ್ದವರು ಆಸಕ್ತಿ ಇದ್ದವರು ಟ್ರೈನಿಂಗ್ ಪಡೆದು ಕಾರ್ಖಾನೆಯಲ್ಲಿ ಕೆಲಸ ಮಾಡುವುದಕ್ಕೆ ಆಸಕ್ತಿ ಇರುವಂಥಹವರು ಹಾರಿರುತ್ತಾರೆ ಅವರು ಬರುತ್ತಾರೆ. ೩-೪ ವರ್ಷ ಸರ್ವೀಸ್ ಉಳಿದವರು ಒಂದು ವರ್ಷ ಟ್ರೈನಿಂಗ್ ತೆಗೆದುಕೊಂಡು ೩ ವರ್ಷ ಕೆಲಸ ಮಾಡುವುದರಲ್ಲಿ ಏನು ಅರ್ಥವಿದೆ ಎಂದು ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳುತ್ತಾರೆ. ಅದಕ್ಕೆ ಪ್ಯಾಕೇಜ್ ಪ್ರೋಗ್ರಾಂ ಕೊಟ್ಟಿದ್ದೇವೆ. ಅವರಿಗೆ ಕಾಂಪನ್‌ಸೇಷನ್ ಕೊಡುವುದನ್ನು ಸರ್ಕಾರ ಘೋಷಣೆ ಮಾಡಿದೆ. ಎಕ್ಸಿಸ್ಟಿಂಗ್ ಪಾಲಿಸಿಯಿಂದ ಕಾರ್ಮಿಕರಿಗೆ ದುಷ್ಪರಿಣಾಮ ಬೀರುತ್ತದೆ ಎಂದು ತಿಳಿದುಕೊಳ್ಳಬೇಡಿ. It will give scope for more industries into the country. ಮೊನ್ನೆ ಕಾರ್ಮಿಕ ಸಚಿವರು ಹೇಳುತ್ತಿದ್ದರು. ಕೇವಲ ಟೆಕ್ಸ್‌ಟೈಲ್ ಇಂಡಸ್ಟ್ರಿಯಲ್ಲಿ ೭೦ ಸಾವಿರ ಜನರಿಗೆ ಹೊಸ ಉದ್ಯೋಗಗಳನ್ನು ಕಲ್ಪಿಸತಕ್ಕ ಅವಕಾಶ ಕಂಡುಬರುತ್ತಿದೆ ಎಂದು ಹೇಳಿದರು. ರಿಟ್ರೆಂಚ್‌ಮೆಂಟ್ ಆಗುವವರು ಬೇರೆ, ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳುವವರು ಬೇರೆ. ನಮ್ಮ ಭಾರತ ದೇಶದಲ್ಲಿ ಈ ಒಂದು ಯೋಜನೆಯಿಂದ ಹೊಸದಾಗಿ ೭೦ ಸಾವಿರ ಜನರಿಗೆ ಉದ್ಯೋಗ ಕೊಡಿಸಬಹುದೆಂದು ಅವರು ಹೇಳಿದರು. ಈ ಬಗ್ಗೆ ಬಹಳಷ್ಟು ಜನರು ತಪ್ಪು ತಿಳಿದುಕೊಂಡಿದ್ದಾರೆ.

ನಾವು ಟ್ರೇಡ್ ಯೂನಿಯನ್ ಲೀಡರ್‍ಸ್ ಜೊತೆ ಮೀಟಿಂಗ್ ಮಾಡಿ ಪ್ರತ್ಯೇಕ ಹೇಳಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆಂದು ನಾನು ಹೇಳುತ್ತೇನೆ. ಈ ಇಲಾಖೆ ಆದ ನಂತರ, ಕಾರ್ಮಿಕರ ಆರೋಗ್ಯ ಸಂರಕ್ಷಣೆ ಹಾಗೂ ಯಾವ ರೀತಿ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಪ್ರೈಮರಿ ಹೆಲ್ತ್ ಕನ್‌ಸರ್ನ್ ಇರಬೇಕೆಂಬುದು ಇದೆ. ನಮ್ಮ ಇ. ಎಸ್. ಐ. ಮುಖಾಂತರ ಈ ಒಂದು ಸರ್ವೀಸ್ ಇಂಪಾರ್ಟ್ ಮಾಡುತ್ತಿದ್ದೇವೆ. ತಮಗೆ ಗೊತ್ತಿದ್ದ ಹಾಗೆ, ನಮ್ಮ ಹೆಲ್ತ್ ಡಿಪಾರ್ಟ್‌ಮೆಂಟ್ ಯಾವ ರೀತಿಯಾಗಿ ಕ್ರಿಟಿಸಿಸಂಗೆ ಒಳಗಾಗುತ್ತಿತ್ತು ಅದೇ ರೀತಿ ಈ ಇಲಾಖೆ ಕೂಡ ಒಳಗಾಗುತ್ತಿದೆ. ಇದನ್ನು ನಾನು ಬಹಳ ಬಿಚ್ಚು ಮನಸ್ಸಿನಿಂದ ಹೇಳುತ್ತಿದ್ದೇನೆ. ಆದರೆ ನಮ್ಮ ಸರ್ಕಾರ ಬಂದಮೇಲೆ ಎಲ್ಲಾ ಇಲಾಖೆಯಲ್ಲಿ ಕೂಡ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಆಗಿರಬಹುದು, ನಮ್ಮ ಇಲಾಖೆಯಲ್ಲಿ ಆಗಿರಬಹುದು, ನಾವು ಹೆಚ್ಚಿನ ಶಿಸ್ತನ್ನು ಹೆಚ್ಚು ಜವಾಬ್ದಾರಿಯಿಂದ ಈ ಇಲಾಖೆಯನ್ನು ನಿರ್ವಹಣೆ ಮಾಡುತ್ತಿದ್ದೇವೆ. Health is our primary concern. ಔಷಧಿಗಳನ್ನು ಏನು ಮಾಡುತ್ತಿದ್ದರು ಎಂದರೆ, ಬಂದದ್ದನ್ನೆಲ್ಲ ತೆಗೆದುಕೊಂಡು ಹೋಗಿ ಬೇರೆ ಕಡೆ ಮಾರಿಕೊಳ್ಳುತ್ತಿದ್ದರು. ಅದಕ್ಕೆ ಕಡ್ಡಾಯವಾಗಿ ಹೊಸ ಯೋಜನೆ ಹಾಕಿಕೊಂಡಿದ್ದೇವೆ. ಪ್ರತಿಯೊಂದು ಗುಳಿಗೆ ಮೇಲೆ ಇ. ಎಸ್. ಐ. ಎಂದು ಪ್ರಿಂಟ್ ಆಗಿರಬೇಕು ಮತ್ತು ಅದಕ್ಕೆ ಕಲರ್ ಬೇರೆ ಇರಬೇಕು. ಯಾವುದೇ ಅಂಗಡಿಯಲ್ಲಿ ಗುಳಿಗೆ ಸಿಕ್ಕಿದರೂ ಇ. ಎಸ್. ಐ. ಮಾರ್ಕ್ ಇದ್ದರೆ ಸುಲಭವಾಗಿ ಕಂಡು ಹಿಡಿಯುವುದಕ್ಕೆ ಅನುಕೂಲವಾಗುತ್ತದೆಂದು ಮಾಡಿದ್ದೇವೆ. ಅದರಿಂದ ಯಾರೂ ಅಂಗಡಿಗಳಲ್ಲಿ ಮಾರಾಟ ಮಾಡುವುದಕ್ಕೆ ಸಾಧ್ಯವಿಲ್ಲ. ಟಾನಿಕ್ಸ್, ಔಷಧಿ ಬಾಟಲ್‌ಗಳು ಏನಿವೆ ಅವನ್ನು ನಮ್ಮ ಕೌಂಟರ್‌ನಲ್ಲಿ ಓಪನ್ ಮಾಡಿ ಕೊಡಬೇಕೆಂದು ಇನ್‌ಸ್ಟ್ರಕ್ಷನ್ಸ್ ಇಷ್ಯೂ ಮಾಡಿದ್ದೇವೆ. ಹೀಗೆ ಓಪನ್ ಮಾಡಿ ಕೊಡುವುದರಿಂದ ಅಂಗಡಿಗಳಲ್ಲಿ ಮಾರಾಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. We have stopped these two things. ಸೆಂಟ್ರಲ್ ಹೈ ಪವರ್ ಕಮಿಟಿ ಮಾಡಿ ನಾವು ಕೇಂದ್ರೀಕೃತ ಮಾಡಿ ಎಲ್ಲಾ ಮೆಡಿಸಿನ್ಸ್ ಅನ್ನು ಟೆಂಡರ್ ಮುಖಾಂತರ ಮತ್ತು ರೇಟ್ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಪಡೆಯುತ್ತಿದ್ದೇವೆ. ಅದನ್ನು ಹೇಗೆ ಡಿಸ್‌ಪರ್ಸ್‌ಮೆಂಟ್ ಮಾಡುತ್ತಿದ್ದೇವೆಂದರೆ, ನಮ್ಮದೇ ಆದ ವಾಹನ ಕೊಟ್ಟು ಪ್ರತಿಯೊಂದು ಹಾಸ್ಪಿಟಲ್ ಸೂಪರಿಟೆಂಡೆಂಟ್ ಏನು ಇಂಡೆಂಟ್ ಕೊಡುತ್ತಾರೋ ಅವರಿಗೆ ಪ್ರತಿಯೊಂದು ತಿಂಗಳು ರೂಟ್ ಹಾಕಿಕೊಂಡು ಸರಬರಾಜು ಮಾಡುವ ವ್ಯವಸ್ಥೆ ಮಾಡಿದ್ದೇವೆ. ರಾಜ್ಯದ ತುಂಬಾ ಹೋಗಿ ಹಂಚಿಕೆ ಮಾಡಿ ಬರುತ್ತಾರೆ. ಮೊದಲು ಡಿಸೆಂಟ್ರಲೈಸ್ಡ್ ವೇ ಆಫ್ ಪರ್‌ಚೇಸ್ ಇತ್ತು. ಅದರಿಂದ ಅಲ್ಲಿರತಕ್ಕ ಹಲವಾರು ಜನರಿಗೆ ಸ್ಕೋಪ್ ಇತ್ತು. ತಮ್ಮಿಷ್ಟಕ್ಕೆ ತಾವು ಇಂಡೆಂಟ್ ಕೊಡುವುದು ತೆಗೆದುಕೊಳ್ಳುವುದು ಇತ್ತು. ಹಿಂದೆ ಘಟನೆ ಆಗಿದೆ. ನಮ್ಮ ಸರ್ಕಾರ ಬಂದಮೇಲೆ ಒಂದು ಕೇಸ್ ಫೈಲ್ ಮಾಡಿದ್ದೇವೆ. ೭೨ ಲಕ್ಷ ರೂಪಾಯಿಗಳ ಮಿಸ್‌ಅಪ್ರೋಪ್ರಿಯೇಷನ್ ಕೇಸ್ ಕೋರ್ಟ್‌ನಲ್ಲಿ ನಡೆಯುತ್ತಿದೆ. ನಮ್ಮ ಸರ್ಕಾರ ಬಂದಮೇಲೆ ಅದನ್ನು ಕಂಡು ಹಿಡಿದು ಕೇಸ್ ಹಾಕಿದ್ದೇವೆ. ಇದರಿಂದ ಇ. ಎಸ್. ಐ. ಹಾಸ್ಪಿಟಲ್ ಫಿಲ್‌ಫರೇಜ್ ಅನ್ನು ಸ್ಟಾಪ್ ಮಾಡುವುದರಲ್ಲಿ ಯಶಸ್ವಿಯಾಗಿದ್ದೇವೆ. ಹೊಸದಾಗಿ ಏನು ಮಾಡುತ್ತಿದ್ದೇವೆಂದರೆ ಕಾರ್ಡ್ ಹೋಲ್ಡರ್‍ಸ್ ಯಾರಿದ್ದಾರೆ ಅವರಿಗೆ ಮಾತ್ರ ಮಾಸ್ಟರ್ ಕಾರ್ಡ್ ಮಾಡುತ್ತಿದ್ದೇವೆ. ಅದರಲ್ಲಿ ಐಪಿ ನಂಬರ್, ಫ್ಯಾಮಿಲಿ ಮೆಂಬರ್ಸ್, ಡಿಪೆಂಡೆಂಟ್ಸ್, ಅಷ್ಟೂ ಜನರ ಹೆಸರು ಮತ್ತು ಫೋಟೋಗಳು ಇರಬೇಕು. ಮತ್ತು ಅದಕ್ಕೆ ಪ್ರತ್ಯೇಕ ಕೌಂಟರ್‌ಗಳನ್ನು ಪ್ರತಿಯೊಂದು ಆಸ್ಪತ್ರೆಯಲ್ಲಿ ಇನ್‌ಸ್ಟಾಲ್ ಮಾಡಬೇಕೆಂದು ಮಾಡಿದ್ದೇವೆ. ಆ ಕಾರ್ಡನ್ನು ಕೌಂಟರ್‌ನಲ್ಲಿ ಕೊಟ್ಟಾಗ ಅದರಲ್ಲಿ ಪ್ರೀವಿಯಸ್ ಹಿಸ್ಟರಿ, ಅವನಿಗೆ

ಯಾವ ಡಿಸೀಸ್ ಅಫೆಕ್ಟ್ ಆಗಿತ್ತು, ಟ್ರೀಟ್‌ಮೆಂಟ್ ಏನು ಕೊಟ್ಟಿದ್ದೇವೆ, ಹೀಗೆ ಡಿಸ್‌ಪ್ಲೇ ಮಾಡಿ ಎಂಟೈರ್ ಮಾಹಿತಿ ದೊರಕುವುದರಿಂದ ಟ್ರೀಟ್‌ಮೆಂಟ್ ಕೊಡಲು ಅನುಕೂಲವಾಗುತ್ತದೆಂದು We are trying to install it in Rajajinagar. Initially we want to start with it. ಇದನ್ನು ಮಾಡುವಂತಹ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಇದರಿಂದ ಏನಾಗುತ್ತಿದೆ ಎಂದರೆ ಯಾರೋ ಬರುವುದು, ನಾನು ಕಲ್ಲಪ್ಪ, ಮಲ್ಲಪ್ಪ ಎಂದು ಹೇಳುವುದು ಕಾರ್ಡ್‌ಹೋಲ್ಡರ್ ಡಿಪೆಂಡೆಂಟ್ ಎಂದು ಅಡ್ಮಿಟ್ ಆಗುವುದು ಎಲ್ಲವನ್ನು ತಪ್ಪಿಸಲು ಸಾಧ್ಯವಾಗಿದೆ. ನಾವು ಯಾವ ರೀತಿ ಎಕ್ವಿಪ್ ಮಾಡುತ್ತಿದ್ದೇವೆಂದರೆ, ಹೊಸ ಡೈಯಾಗ್ನೈಸ್ಟಿಕ್ ಸೆಂಟರ್ ಅನ್ನು ಓಪನ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ವಿಶೇಷವಾಗಿ ನಮ್ಮದೇ ಆದ ಇಲಾಖೆಯನ್ನು ಮಾಡಿ ನಾವು ಎಲ್ಲರೀತಿಯ ಟ್ರೀಟ್‌ಮೆಂಟ್ ಕೊಡುವುದರಲ್ಲಿ ಯಶಸ್ವಿಯಾಗಬೇಕು ಎಂದು ಹೆಚ್ಚಿಗೆ ಸ್ಕೋಪ್ ಕೊಡುತ್ತಿದ್ದೇವೆ. ನಮ್ಮ ಡಾಕ್ಟರ್ ಮಿತ್ರರಿಗೆ ಮತ್ತು ಇಲ್ಲಿರುವ ಎಲ್ಲಾ ಶಾಸಕ ಮಿತ್ರರಿಗೆ ಹೇಳುವುದೇನೆಂದರೆ, ನಮ್ಮ ಇ.ಎಸ್.ಐ. ಆಸ್ಪತ್ರೆಯಲ್ಲಿ very complicated operation, I have taken risk of admitting even some of my known people over there. ನನಗೆ ಗೊತ್ತಿದ್ದ ಕೆಲವು ಐ.ಪಿ.ಎಸ್. ಅಧಿಕಾರಿಗಳು ಈ ಆಸ್ಪತ್ರೆ ಬೇಡ, ಇಲ್ಲಿ ಟ್ರೀಟ್‌ಮೆಂಟ್ ಬೇಡ, ನಮ್ಮನ್ನು ಯಾವುದಾದರೂ specialised ಆಸ್ಪತ್ರೆಗೆ ಕಳುಹಿಸಿ ಎಂದರು. ಸುಮಾರು ಒಂದು-ಒಂದೂವರೆ ಲಕ್ಷ ರೂಪಾಯಿ ಖರ್ಚು ಬರುವ ಆಪರೇಷನ್‌ನ್ನು ನಮ್ಮ ಇ. ಎಸ್. ಐ. ಆಸ್ಪತ್ರೆಯಲ್ಲಿ ಕೇವಲ ೮-೯ ಸಾವಿರ ರೂಪಾಯಿ ಖರ್ಚು ಮಾಡಿ ಯಶಸ್ವಿಯಾಗಿದ್ದೇವೆ. ಡಾಕ್ಟರ್ ಮಲಕರೆಡ್ಡಿ ಅವರೂ ಕೂಡ ಎರಡು-ಮೂರು ಸಾರಿ ಭೇಟಿ ಕೊಟ್ಟು ನೋಡಿದ್ದಾರೆ. ಹಲವಾರು ಡಾಕ್ಟರ್ ಸ್ನೇಹಿತರು ಕೂಡ ಭೇಟಿ ಕೊಟ್ಟಿದ್ದಾರೆ. ಇರುವಂಥ ಪ್ರೈವೇಟ್ ನರ್ಸಿಂಗ್ ಹೋಮ್ಸ್‌ಗಿಂತ ಒಳ್ಳೆಯ ರೀತಿಯಲ್ಲಿ ನಮ್ಮ ಇ. ಎಸ್. ಐ. ಆಸ್ಪತ್ರೆಗಳು ಕೆಲಸ ಮಾಡುತ್ತಿವೆಯೇನೋ ಎಂಬ ನಂಬಿಕೆ ಜನರಲ್ಲಿ ಮೂಡಿ ಬರುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಅದಕ್ಕೋಸ್ಕರ ಇ. ಎಸ್. ಐ. ಮೇಲೆ ಮಾಡುತ್ತಾ ಇರುವ ಆಪಾದನೆಗಳನ್ನು ನಾನು ತಳ್ಳಿಹಾಕುತ್ತೇನೆ. ನಮ್ಮ ಇಲಾಖೆಯಿಂದ ಇ. ಎಸ್. ಐ.ನಲ್ಲಿ ಬಿಲ್ಡಿಂಗ್ ಏನು ಕಟ್ಟುತ್ತಾರೆ ಅದು ದುರ್ದೈವಕ್ಕೆ ಏನಾಗಿದೆ ಎಂದರೆ, ಅದಕ್ಕೆ ಕೇಂದ್ರ ಸರ್ಕಾರದ ನಿರ್ವಹಣೆಯ ಜವಾಬ್ದಾರಿ ಇದೆ. ಇ. ಎಸ್. ಐ. ಕಾರ್ಪೋರೇಷನ್‌ನಿಂದ ಬಿಲ್ಡಿಂಗ್ ಕಟ್ಟುವ ಪ್ರೋಗ್ರಾಂ ಅಥವಾ ಕಟ್ಟುವಂಥ ಜವಾಬ್ದಾರಿ ಅವರು ನಿರ್ವಹಣೆ ಮಾಡುತ್ತಾರೆ. ವಾಡಿಯಲ್ಲಾಗಲೀ, ಬೆಳಗಾಂನಲ್ಲಾಗಲೀ, ಅಥವಾ ಶಹಬಾದ್‌ನಲ್ಲಾಗಲೀ ಕಟ್ಟಡಗಳನ್ನು, ಫೌಂಡೇಷನ್ ಸ್ಟೋನ್ ಹೇಗೆ ಮಾಡಿದರು ಅಥವಾ ಕಟ್ಟಡ ಯಾವ ಮಟ್ಟಕ್ಕೆ ಬಂದಿದೆ ಎಂಬ ವಿಚಾರದಲ್ಲಿ ಶಾಸಕರು ಕೂಡ ನಮ್ಮ ಲಕ್ಷ್ಯಕ್ಕೆ ತರುವುದಿಲ್ಲ ಎಂದು ಏನು ಹೇಳಿದರು, ಅದನ್ನು ನಾನು ಖಂಡಿತ ಒಪ್ಪುತ್ತೇನೆ. ಇದರ ಬಗ್ಗೆ ನಾನು ಮಂತ್ರಿಗಳ ಜೊತೆ ಮಾತನಾಡಿದ್ದೇನೆ, ಮತ್ತು ಸಂಬಂಧಪಟ್ಟ ಸೆಕ್ರೆಟರಿಯವರಿಗೆ ಕೂಡ ಈಗಾಗಲೆ ಪತ್ರವನ್ನು ಬರೆದಿದ್ದೇನೆ. ಇದು ರಾಜ್ಯ ಸರ್ಕಾರದ ಜವಾಬ್ದಾರಿಯಲ್ಲಿರುವುದರಿಂದ ಹೆಚ್ಚಿನ ನಿಯಂತ್ರಣ ಮಾಡುವುದಕ್ಕೆ ಸಾಧ್ಯವೋ ಏನೋ ಎಂಬ ಮಾತನ್ನು ಈಗಾಗಲೇ ಹೇಳಿದ್ದೇನೆ. ಅದು ನಮ್ಮ ಪರ್ವ್ಯೂನಲ್ಲಿ, ನಮ್ಮ ಕೆಪಾಸಿಟಿಯಲ್ಲಿ ಬರುವುದಿಲ್ಲ. ಆದ್ದರಿಂದ ಅವರು ಏನು ಮಾಡುತ್ತಿದ್ದಾರೆ ಎಂಬುದು ನಮಗೂ ಕೂಡ ಅರ್ಥವಾಗುವುದಿಲ್ಲ. No doubt the Minister of the State for Labour is

the Chairman of the Regional Committee. At the most we can review but we cannot pass any strictures over them. ಈ ಲೋಪದೋಷ ಏನಿದೆ, ಲ್ಯಾಕುನಾ ಏನಿದೆ ಖಂಡಿತ ಇದರ ಮೇಲೆ ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ನಿಮ್ಮ ಸಲಹೆಗಳನ್ನು ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿಕೊಂಡು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತಿದ್ದೇನೆ. ಡಿಸ್ಪೆನ್ಸರಿಗಳಲ್ಲಿ ಪಾರ್ಟ್ ಟೈಂ ಡಿಸ್ಪೆನ್ಸ್‌ರಿಗಳನ್ನು ಫುಲ್ ಟೈಂ ಡಿಸ್ಪೆನ್ಸ್‌ರಿ ಎಂದು ಮಾಡಲಿಕ್ಕೆ ಯೋಜನೆಯನ್ನು ಕೂಡ ಹಾಕಿಕೊಂಡಿದ್ದೇವೆ. ಅದರಲ್ಲಿ ಜಿಗಜ್ಜಿಣಗಿ, ಮಲ್ಕೇಡಾ, ಯಾದ್ಗಿರಿ ಈ ರೀತಿಯಾಗಿ ಸುಮಾರು ೭ ಫುಲ್ ಟೈಂ ಡಿಸ್ಪೆನ್ಸ್‌ರಿಗಳನ್ನು ಮಾಡಿ, ಫುಲ್ ಟೈಂ ಡಾಕ್ಟರುಗಳನ್ನು ಕೂಡ ಇಡುವ ಯೋಜನೆಯನ್ನು ಕೂಡ ಹಾಕಿಕೊಂಡಿದ್ದೇವೆ. ಮೊನ್ನೆ ತಾನೆ ನಮ್ಮ ಸರ್ಕಾರ ನಮ್ಮ ಪೋಸ್ಟಿಂಗ್‌ಗಳನ್ನು ಕ್ಲಿಯರ್ ಮಾಡಿಕೊಟ್ಟಿದೆ. ಇದನ್ನು ಕೆ. ಪಿ. ಎಸ್. ಸಿ. ಮುಖಾಂತರ ನಾವು ಕರೆಯಬೇಕಾಗುತ್ತದೆ. ಬಹಳ ಜನ ನಮ್ಮ ಇಲಾಖೆಯಲ್ಲಿ ಕೆಲಸ ಮಾಡುವವರು ಹೆಲ್ತ್ ಡಿಪಾರ್ಟ್‌ಮೆಂಟಿನಿಂದ ಬಂದವರಾಗಿದ್ದರು. ಇದರಿಂದ ನಮಗೆ ನಿಯಂತ್ರಣ ಮಾಡುವುದಕ್ಕೆ ಬಹಳಷ್ಟು ತೊಂದರೆಯಾಗುತ್ತಿತ್ತು. ಅದಕ್ಕೆ ನಾವು ಅವರನ್ನು ರೀಪ್ಯಾಟ್ರಿಯೇಟ್ ಮಾಡಿದ್ದೇವೆ. ಹಿಂದೆ ಕೆ. ಪಿ. ಎಸ್. ಸಿ.ಯಿಂದ ಸೆಲೆಕ್ಟ್ ಆಗಿದ್ದ ಡಾಕ್ಟರುಗಳಿದ್ದರು. ಆದರೆ ಆ ಪಟ್ಟಿಯನ್ನು ಎಫೆಕ್ಟ್‌ಗೆ ಕೊಟ್ಟಿರಲಿಲ್ಲ. ಮತ್ತು ಇಲ್ಲಿಯವರೆಗೆ ಅವರಿಗೆ ಆರ್ಡರ್ಸ್ ಇಷ್ಯೂ ಮಾಡಿರಲಿಲ್ಲ. ನಾವು ಬಂದಮೇಲೆ ಆರ್ಡರ್ಸ್ ಇಷ್ಯೂ ಮಾಡಿ the Health Minister was very kind enough to take all those doctors back. ಅವರಿಗೆ ಸರಿಯಾದ ಪೋಸ್ಟಿಂಗ್ಸ್ ಕೊಟ್ಟಿದ್ದಾರೆ. ಆದರೆ ನಮ್ಮ ಇಲಾಖೆಯಿಂದ ಪ್ರತ್ಯೇಕವಾಗಿ ನಾವು ಪೋಸ್ಟಿಂಗ್ಸ್ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಕೆ. ಪಿ. ಎಸ್. ಸಿ.ಗೆ ಖಾಲಿ ಇರುವ ಸ್ಥಾನಗಳನ್ನು ಭರ್ತಿ ಮಾಡುವುದಕ್ಕೆ ಬರೆದಿದ್ದೇವೆ. ಅವರು ರೆಕ್ರೂಟ್ ಮಾಡಿಕೊಂಡ ತಕ್ಷಣ ನಾವು ಪೋಸ್ಟಿಂಗ್ ಆರ್ಡರ್ಸ್ ಕೊಡುತ್ತೇವೆ. ಇದರಿಂದ ಪ್ರತಿಯೊಂದು ಡಿಸ್ಪೆನ್ಸ್‌ರಿ, ಆಸ್ಪತ್ರೆಯಲ್ಲಿ ಕೂಡ ಯಾವುದೇ ಕೊರತೆ ಇಲ್ಲದಂತೆ ಮಾಡುತ್ತೇವೆ. ತಾವು ಹೇಳಿದ ಹಾಗೆ, ಐ. ಎಂ. ಸಿ. ನಾರ್ಮ್ಸ್ ಏನಿದೆ ಅದರ ಪ್ರಕಾರ ನಾವು ಇ. ಎಸ್. ಐ. ಡಿಪಾರ್ಟ್‌ಮೆಂಟ್‌ನಲ್ಲಿ ಮಾಡುತ್ತೇವೆ ಎಂದು ಆಶ್ವಾಸನೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸ್ನೇಹಿತರು ಒಂದು ಮಾತು ಹೇಳಿದರು. ಯಾರಿಗಾದರೂ ಏನಾದರೂ ಆಕ್ಸಿಡೆಂಟ್ ಆದರೆ, ಕಾಯಿಲೆ ಆದರೆ ನೇರವಾಗಿ ಗೌರ್ನಮೆಂಟ್ ಆಸ್ಪತ್ರೆಗೆ ಕಳುಹಿಸಿಕೊಡುತ್ತಾರೆ, ಇವರು ನಿರ್ವಹಣೆ ಮಾಡುತ್ತಿಲ್ಲ ಎಂದು ಹೇಳಿದರು. ಇದು ತಪ್ಪು ಕಲ್ಪನೆಯಾಗಿದೆ. ಎಲ್ಲಿ ನಮ್ಮ ಇ. ಎಸ್. ಐ. ಆಸ್ಪತ್ರೆ ಇಲ್ಲ ಎಲ್ಲಿ ನಮ್ಮ ಡಿಸ್ಪೆನ್ಸ್‌ರಿ ಇಲ್ಲ ಅಲ್ಲಿ ಕರ್ತವ್ಯ ನಿಭಾಯಿಸುವುದರಲ್ಲಿ ಸರ್ಕಾರಿ ಆಸ್ಪತ್ರೆಗಳವರ ಒಂದು ಸಹಕಾರವನ್ನು ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೆ ನಮ್ಮ ಇಲಾಖೆ ವತಿಯಿಂದಲೇ ಎಷ್ಟು ಜನರಿಗೆ ಎಷ್ಟು ಬೆಡ್‌ಗಳನ್ನು ಅವರು ನಮಗೆ ಪ್ರೊವೈಡ್ ಮಾಡಬೇಕು ಎಂದಿದೆ. ಒಂದು ಸಿವಿಲ್ ಆಸ್ಪತ್ರೆ ಇರುತ್ತದೆ. ಅದರಲ್ಲಿ ಇ. ಎಸ್. ಐ.ಗೆ ಸಂಬಂಧಪಟ್ಟಹಾಗೆ ಇಷ್ಟು ಬೆಡ್‌ಗಳನ್ನು ಪ್ರೊವೈಡ್ ಮಾಡಬೇಕೆಂದು ಇರುತ್ತದೆ. ಈ ಎಲ್ಲಾ ಅಂಶಗಳನ್ನು ಇಟ್ಟು ಅವರನ್ನು ಅಡ್ಮಿಟ್ ಮಾಡಿಸುತ್ತೇವೆಯೇ ವಿನಃ ಬೇರೊಂದು ಇಲ್ಲ. ಇವತ್ತು ಬೇರೆ ಬೇರೆ ಎಕ್ಸ್‌ಟ್ರೀಮ್ ಕೇಸ್‌ಗಳು ಬರುತ್ತವೆ. ಈಗ ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಮಾಡುವ ಕೇಸ್ ಬರುತ್ತದೆ. ಹೃದಯಕ್ಕೆ ಸಂಬಂಧಪಟ್ಟ ರೋಗಿಗಳು ಬರುತ್ತಾರೆ. ಇವತ್ತು ಈ ವಿಚಾರದ ಬಗ್ಗೆ

ನಮ್ಮಲ್ಲಿ ಸ್ಕಿಲ್ ಇಲ್ಲ. ಹೃದ್ರೋಗಿಗಳು ಬಂದರೆ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿಗೆ ಕಳುಹಿಸಬೇಕಾಗುತ್ತದೆ. ಮತ್ತೆ ಅಲ್ಲಿ ಏನು ಟ್ರೀಟ್‌ಮೆಂಟ್ ಕೊಡುತ್ತಾರೆ ಅದನ್ನು ಪೂರ್ತಿಯಾಗಿ ರೀಇಂಬರ್ಸ್ ನಮ್ಮ ಇ. ಎಸ್. ಐ. ಮಾಡುತ್ತದೆ. ಅಲ್ಲಿ ಅಡ್ಮಿಟ್ ಮಾಡಬಹುದ್ದು. ಆದರೆ ಖರ್ಚನ್ನು ಪೂರ್ತಿಯಾಗಿ ರೀಇಂಬರ್ಸ್ ಮಾಡುತ್ತೇವೆ. ಯಾವುದೋ ಹಾಸ್ಪಟಲ್‌ಗೆ ಹಾಕಿ ನಾವು ನಮ್ಮ ಡ್ಯೂಟಿ ಮಾಡುತಿ್ತದ್ದೇವೆಂದು ಅಲ್ಲ. ಹೆಚ್ಚಿನ ಒಂದು ಒಳ್ಳೆಯ ರೀತಿಯ ಉಪಚಾರ ನಮ್ಮ ಕಾರ್ಮಿಕರಿಗೆ ಸಿಗಬೇಕೆನ್ನುವ ದೃಷ್ಟಿಯಿಂದ ನಾವು ಮಾಡುತ್ತಿದ್ದೇವೆಯೇ ವಿನಃ ನಮ್ಮ ಕೈಯಲ್ಲಿ ನಿರ್ವಹಣೆ ಮಾಡುವುದಕ್ಕಾಗುವುದಿಲ್ಲವೆಂದಲ್ಲವೆಂದು ಈ ರೀತಿ ಮಾಡುತ್ತಿದ್ದೇವೆಂದು ಏನು ಹೇಳುತ್ತಿದ್ದೀರಿ ಅದನ್ನು ಈ ಸಂದರ್ಭದಲ್ಲಿ ನಾನು ತಳ್ಳಿಹಾಕುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಾನು ಎಲ್ಲವನ್ನೂ ಪುನಃ ಹೇಳುವುದಕ್ಕೆ ಹೋಗುವುದಿಲ್ಲ. ನಾವು ಡೈಯಾಗ್ನಸ್ಟಿಕ್ ಸೆಂಟರನ್ನು ಪ್ರಾರಂಭ ಮಾಡುವುದಕ್ಕೆ ಯೋಜನೆ ಹಾಕಿದ್ದೇವೆ. ಪ್ರತಿಯೊಂದು ರೆವಿನ್ಯೂ ಡಿವಿಜನ್‌ಗೆ ಮತ್ತು ಹೆಚ್ಚು ಈ ಕಾರ್ಮಿಕರು ಅಂದರೆ ಸುಮಾರು ೮ ಅಥವಾ ೯ ಸಾವಿರದಷ್ಟು ಜನರು ಎಲ್ಲಿ ಸಿಗುತ್ತಾರೆ ಅಲ್ಲಿ ಹೊಸದಾಗಿ ಒಂದೊಂದು ಹಾಸ್ಪಟಲ್ ಪ್ರಾರಂಭ ಮಾಡಬೇಕೆನ್ನುವುದಕ್ಕೋಸ್ಕರ ನಾವು ವಿಚಾರ ಮಾಡಿದ್ದೇವೆ. ಈ ಪ್ರಕಾರವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಾವು ಪತ್ರ ಬರೆದು ನಮಗೆ ಸರ್ಕಾರದ ಜಾಗ ಸಿಕ್ಕಿದರೆ ಅದನ್ನು ಪಡೆದುಕೊಳ್ಳುವುದಕ್ಕೆ ಯೋಜನೆ ಮಾಡಿದ್ದೇವೆ. ಹಾಗೆಯೇ ಮಂಗಳೂರಿನಲ್ಲಿ ನಮಗೆ ಜಾಗ ಕೊಟ್ಟಿದ್ದಾರೆ. ಬಿಜಾಪುರದಲ್ಲಿ ಸಹ ಜಿಲ್ಲಾಧಿಕಾರಿಗಳು ಜಾಗ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಬಳ್ಳಾರಿಯಲ್ಲೂ ಕೊಡಬೇಕೆಂದು ಯೋಜನೆ ಹಾಕಿದ್ದೇವೆ. ಈ ರೀತಿ ಹೆಚ್ಚಿನ ಹಾಸ್ಪಟಲ್‌ಗಳನ್ನು ತರುವ ವಿಚಾರ ಮಾಡಿದ್ದೇವೆಂದು ಹೇಳುತ್ತೇನೆ. ಇವು ನಮ್ಮ ಇಲಾಖೆಯಿಂದ ನಿರ್ವಹಿಸುವ ಜವಾಬ್ದಾರಿಗಳು ಆಗಿರುತ್ತದೆ. ಮೂರೂ ಇಲಾಖೆಗಳು ಕೂಡಿ ನಮ್ಮ ಲೇಬರ್ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ಒಳ್ಳೆಯ ರೀತಿಯಿಂದ ನಾವು ಕೆಲಸ ಮಾಡುತ್ತಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸ್ನೇಹಿತರು ಈ ಸಂದರ್ಭದಲ್ಲಿ ಕೆಲವೊಂದು ಸಂಶಯಗಳನ್ನು ವ್ಯಕ್ತ ಮಾಡಿದ್ದಾರೆ. ಅದನ್ನು ಈ ಸಂದರ್ಭದಲ್ಲಿ ನಿವಾರಣೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ ಶ್ರೀ ಆಚಾರ್ ಅವರು ವರ್ಕ್‌ಮೆನ್ ಕಾಂಪನ್‌ಸೇಷನ್ ಕೇಸಸ್ ಬಹಳ ಪೆಂಡಿಂಗ್ ಇವೆ, ಸ್ಪೀಡಿ ಡಿಸ್‌ಪೋಸಲ್ ಮಾಡುತ್ತಾ ಇಲ್ಲವಾದ್ದರಿಂದ ಇವನ್ನು ಲೋಕ ಆದಾಲತ್‌ಗೆ ಏಕೆ ರೆಫರ್ ಮಾಡಬಾರದು ಎಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯ ಸಲಹೆ ಇದೆ. ಈ ವಿಚಾರ ನಮಗೂ ತಿಳಿದುಬರುತ್ತಿದೆ. ಇಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳು ಹಲವಾರು ಇವೆ. ಅಲ್ಲಿ ಅಡ್ವೊಕೇಟ್ಸ್ ರೆಪ್ರಸೆಂಟೇಟೀವ್ಸ್ ಇರುತ್ತಾರೆ. ಕೇಸ್ ಅಡ್ಮಿಟ್ ಆದಮೇಲೆ ಅವರು ಅಡ್ಜರ್ನ್‌ಮೆಂಟ್ ತೆಗೆದುಕೊಳ್ಳುತ್ತಾ ಹೋಗುತ್ತಾರೆ. ಇವತ್ತು ಕೇವಲ ನಮ್ಮ ಇಲಾಖೆಯಿಂದಲೇ ಅಲ್ಲ, ಅಡ್ವಕೇಟ್ಸ್ ತಾರತಮ್ಯದಿಂದ ಕೂಡ ವಿಳಂಬವಾಗುತ್ತಿದೆ ಎಂಬುದನ್ನು ನಾನು ಕಡ್ಡಾಯವಾಗಿ ಹೇಳಬಯಸುತ್ತೇನೆ. ಇದನ್ನು ಲೋಕ ಆದಾಲತ್‌ಗೆ ರೆಫರ್ ಮಾಡಬೇಕಾದರೆ ನಾವು ಈ ಒಂದು ಕಾಯ್ದೆಗೆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಇವತ್ತು ವರ್ಕ್‌ಮೆನ್ ಕಾಂಪನ್‌ಸೇಷನ್ ಕೊಡುವ ಸಮಯದಲ್ಲಿ ವೇಜ್ ಫ್ಯಾಕ್ಟರ್, ಪರ್ಸೆಂಟೇಜ್ ಆಫ್ ಲಾಸ್ ಎಂದರೆ ಕೈ ಹೋದರೆ ಇಷ್ಟು, ಬೆಟ್ಟು ಹೋದರೆ ಇಷ್ಟು, ಕಾಲು ಹೋದರೆ ಇಷ್ಟು ಎಂದು ಸ್ಲ್ಯಾಬ್ ಹಾಕುತ್ತಿದ್ದೇವೆ. ಇದರ ಮೇಲೆ ನಾವು ಕಾಂಪ್ರಮೈಸ್ ಮಾಡುವುದಕ್ಕಾಗುವುದಿಲ್ಲ. ಇದು ಪ್ರತಿಯೊಬ್ಬರಿಗೂ ಗೊತ್ತಿರುವ ವಿಷಯ. ಅದಕ್ಕೋಸ್ಕರವಾಗಿ ಅಡ್ವೊಕೇಟ್ಸ್ ರೆಪ್ರಸೆಂಟಿಟೀವ್ಸ್ ಏನು ಮಾಡುತ್ತಾರೆಂದರೆ, ತಮ್ಮ ಪರವಾಗಿ

ಕೇಸ್ ಆಗುವುದಿಲ್ಲ ಎಂದು ಗೊತ್ತಾದ ಕೂಡಲೆ, ಈ ಮೇನೇಜ್‌ಮೆಂಟ್‌ನವರು ಏನು ಅಡ್ವೋಕೇಟ್ಸ್‌ನ್ನು ಎಂಗೇಜ್ ಮಾಡಿರುತ್ತಾರೆ ಅವರು ಮುದ್ದಾಮ್ ಆಗಿ ಅಥವಾ ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಾರೆ. Mr. Chairman, that is one of the reasons.

Sri A.S. Nadagowda:- That is what I am saying. ಆದಕ್ಕೋಸ್ಕರ ಲೋಕ ಅದಾಲತ್‌ಗೆ ರೆಫರ್ ಮಾಡಬೇಕೆಂಬ ಏನು ಸಲಹೆ ಇದೆ ಅದನ್ನು ಸ್ವಾಗತ ಮಾಡುತ್ತೇನೆ. ಅದಕ್ಕೆ ಕಾಯಿದೆಗೆ ತಿದ್ದುಪಡಿ ತರಬೇಕಾಗುತ್ತದೆ. ಮತ್ತೆ ಕಾನೂನು ಮಂತ್ರಿಗಳು ನೋಟಿಫೈ ಮಾಡಬೇಕಾಗುತ್ತದೆ. ಈ ವಿಚಾರವಾಗಿ ಕಾನೂನು ಇಲಾಖೆ ಜೊತೆ ಪರಸ್ಪರ ಸಮಾಲೋಚನೆ ಮಾಡುತ್ತೇನೆ ಎನ್ನುವ ಆಶ್ವಾಸನೆಯನ್ನು ಈ ಸಂದರ್ಭದಲ್ಲಿ ನಾನು ಕೊಡುತ್ತಿದ್ದೇನೆ. ಇನ್ನು ಚೈಲ್ಡ್ ಲೇಬರ್ ವಿಚಾರವಾಗಿ ಹೇಳಬೇಕೆಂದರೆ, ಮಾನ್ಯ ಅಧ್ಯಕ್ಷರೇ, ನಾವೆಲ್ಲರೂ ಇದನ್ನು ಒಪ್ಪತಕ್ಕದ್ದು. ನಮ್ಮ ದೇಶದಲ್ಲಿ ಈ ಬಗ್ಗೆ ಕಾಯ್ದೆ, ಕಾನೂನು ಮಾಡಿದ್ದೇವೆ. ನಾನು ಹಿಂದೆ ಕೂಡ ಈ ವಿಚಾರವಾಗಿ ವಿಧಾನಸಭೆ ಹಾಗೂ ವಿಧಾನಪರಿಷತ್ತಿನಲ್ಲಿ ಹೇಳಿಕೆ ಕೊಟ್ಟಿದ್ದೇವೆ. ಕೇವಲ ಈ ಒಂದು ಕಾಯ್ದೆ ಮಾಡಿದ್ದೇವೆ ಎನ್ನುವುದನ್ನು ನಾವು ಸ್ಟ್ರಿಕ್ಟ್ ಇನ್‌ಫೋರ್ಸ್‌ಮೆಂಟ್ ಮಾಡುವುದಕ್ಕೆ ಹೋದರೆ ಜನರು ನಮಗೆ ಶಾಪ ಕೊಡುವಂಥ ದುಷ್ಪರಿಣಾಮ ಆಗಬಹುದೆನ್ನುವ ವಿಚಾರ ಇದೆ. ಏಕೆಂದರೆ, ಇವತ್ತು ಕೆಲವೊಂದು ಮನೆತನದ ಪರಿಸ್ಥಿತಿ ಏನಿದೆ ಎಂದರೆ ಒಪ್ಪತ್ತು ಗಂಜಿ ಕೂಡ ಸಿಗಲಾರದಂಥ ಒಂದು ಪರಿಸ್ಥಿತಿ ಇದೆ. ಅವರು ಏನೋ ನನ್ನ ಮಗ, ನಮ್ಮ ಜೊತೆಯಲ್ಲಿ ಕೆಲಸ ಮಾಡಿದರೆ ಒಂದೆರಡು ರೂಪಾಯಿ ಬರುತ್ತದೆ. ಈ ರೀತಿಯಾಗಿ ನಮ್ಮ ಜೊತೆಯಲ್ಲಿ ಕೆಲಸ ಮಾಡಿದರೆ ನಮಗೆ ಆದಾಯ ಬರುತ್ತದೆ, ನಮಗೂ ಕೂಡ ಹೊಟ್ಟೆಯ ಉಪಜೀವನ ಮಾಡುವುದಕ್ಕೆ ಅನುಕೂಲವಾಗಬಹುದು, ಜೊತೆಗೆ ನಮ್ಮ ಮಗುವನ್ನು ಕೂಡ ನಾವು ಸರಿಯಾದ ರೀತಿಯಲ್ಲಿ ಬೆಳೆಸಬಹುದು ಎನ್ನುವಂತಹ ವಿಚಾರ ಹೊಂದಿರಬಹುದು. ನಾನು ಇಲ್ಲ ಎನ್ನುವುದಿಲ್ಲ. ಇದು ಖಂಡಿತವಾಗಿಯೂ ಸಮಾಜದಲ್ಲಿರತಕ್ಕ ಒಂದು ಪೀಡೆ. ಆದಕ್ಕೋಸ್ಕರ ನಮ್ಮ ಸರ್ಕಾರ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಮೂಲಕ ಹಲವಾರು ರೀತಿಯಿಂದ ವೆಲ್‌ಫೇರ್ ಮೆಶರ್ಸ್ ಹಾಕಿಕೊಳ್ಳುತ್ತಿದ್ದೇವೆ. ಅಕ್ಷಯ ಯೋಜನೆಯಾಗಲಿ ಮತ್ತೊಂದಾಗಲಿ, ಈ ರೀತಿ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಏನಾಗುತ್ತದೆ ಎಂದರೆ ನಾವು ಎನ್‌ಫೋರ್ಸ್ ಮಾಡುವುದರಲ್ಲಿ ನಮಗೆ ಒಂದು ಅರ್ಥ ಬರುತ್ತದೆ. ನಾವು ಅವಕಾಶ ಕಲ್ಪಿಸಿಕೊಟ್ಟಿದ್ದೇವೆ. ಅವರ ರಿಹ್ಯಾಬಿಲಿಟೇಶನ್‌ಗೆ ನಾವು ಪ್ರೋಗ್ರಾಂಗಳನ್ನು ಹಾಕಿಕೊಂಡಿದ್ದೇವೆ. ಸರ್ಕಾರ ಕಡ್ಡಾಯವಾಗಿ ಇಂಪ್ಲಿಮೆಂಟ್ ಮಾಡುತ್ತದೆ ಅಂದಾಗ ಅದಕ್ಕೊಂದು ಅರ್ಥ ಬರುತ್ತದೆ. ಇಲ್ಲದ್ದಿದ್ದರೆ ಏನಾಗುತ್ತದೆಂದರೆ, ನಮಗೆ ಜನರು ಶಾಪ ಕೊಡುವಂತಹ ಒಂದು ಪರಿಸ್ಥಿತಿ ಬರುತ್ತದೆ. They will call us barbarians ಮತ್ತೆ ಕೆಲವು ಹುದ್ದೆಗಳು ಹೇಗಿವೆಯೆಂದರೆ ಇವತ್ತು ನೇಕಾರರ ಮನೆಯಲ್ಲಿ ಚರಕ ತಿರುಗಿಸುತ್ತಿರುತ್ತಾರೆ ಅವನು ಅವನ ಮಗನನ್ನು ಕೂರಿಸಿಕೊಂಡು ಚರಕ ತಿರುಗಿಸುತ್ತಾನೆ. ಹಿಂದಕ್ಕೆ ಹಳ್ಳಿಗಳಲ್ಲಿ ವಿದ್ಯೆ ಎಂದು ಹೇಳುತ್ತಿದ್ದವು. ಹಳ್ಳಿಗಳಲ್ಲಿ ಮೇಟಿ ವಿದ್ಯೆ ಎಂದು ಹೇಳುತ್ತಿದ್ದವು. ರೈತ ಹೊಲದಲ್ಲಿ ಕೆಲಸ ಮಾಡುವುದು ವಿದ್ಯೆ ಎನ್ನುತ್ತಿದ್ದವು. ಕಮ್ಮಾರ ಅವನ ಕೆಲಸ ಮಾಡುವುದು, ಕುಡುಗೋಲು ಮಾಡುವುದು, ಇಂಪ್ಲಿಮೆಂಟ್ಸ್ ತಯಾರು ಮಾಡುವುದು ಏನಿದೆ ಅದನ್ನು ವಿದ್ಯೆ ಎನ್ನುತ್ತಿದ್ದವು. The concept has changed. ನಾವು ಲಿಟರಲಿ ವಿಚಾರದಲ್ಲಿ ಕೇವಲ ಪುಸ್ತಕ ಓದುವುದನ್ನು ವಿದ್ಯೆ ಎಂದು ಪರಿಗಣಿಸುತ್ತಿದ್ದೇವೆ. ಅದರಿಂದ ನಿಜವಾಗಿಯೂ ನಮಗ ತೊಂದರೆಯಾಗುತ್ತಾ ಇದೆ. ನಾನು ಒಪ್ಪುತ್ತಾ ಇದ್ದೇನೆ. ಆದರೆ ಎಲ್ಲಿ

ಹೆಸಾರ್ಡ್ಸ್ ಇಂಡಸ್ಟ್ರೀಸ್ ಅಥವಾ ಹೆವಿ ವರ್ಕ್ಸ್ ಇದೆ ಎಲ್ಲಿ ಆ ಹುಡುಗನನ್ನು ಮಾಡಬಾರದು ಎಂದು ಇದೆ ಅಲ್ಲಿ ನಾವು ಕಡ್ಡಾಯವಾಗಿ ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. ನಾವು ರೋಡ್, ಬಿಲ್ಡಿಂಗ್, ಇಂಡಸ್ಟ್ರೀಸ್, ಕೆಮಿಕಲ್ ಇಂಡಸ್ಟ್ರೀಸ್, ಬ್ಯಾಟರಿ ಫ್ಯಾಕ್ಟರೀಸ್ ಅಂತಹ ಕಡೆಗಳಲ್ಲಿ ನಾವು ಕಡ್ಡಾಯವಾಗಿ ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. We are enforcing it very strictly. ಕೆಲವೊಂದು ಕಡೆ ವಿಳಂಬವಾಗಿದೆ. ಎಲ್ಲಿ ನಾವು ಗೊತ್ತಿದ್ದು ಮಾಡುವುದಕ್ಕೆ ಆಗಿಲ್ಲ ಎಂದರೆ, ಈ ನೇಕಾರ ಇರುವ ಜಾಗದಲ್ಲಿ ಆಗಿರಬಹುದು. ಕೆಲವು ತಾವು ನೋಡಿದ್ದೀರಿ, ನಾನು ಉದಾಹರಣೆಗೆ ಹೇಳುತ್ತೇನೆ.

ಚೇರ್ಮನ್:- ಮಾನ್ಯ ಮಂತ್ರಿಗಳು ಇನ್ನು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ ?

ಶ್ರೀ ಎ. ಎಸ್. ನಾಡಗೌಡ:- ಇನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ಅದಕ್ಕೋಸ್ಕರ ಈವೊಂದು ಇಲಾಖೆಯ ವತಿಯಿಂದ ನಾವು ಕಾಯಿದೆಯನ್ನು ಅನುಷ್ಠಾನಕ್ಕೆ ತರಬೇಕಾದರೆ ಸರಿಯಾದ ರೀತಿಯಿಂದ ಎನ್‌ಫೋರ್ಸ್‌ಮೆಂಟ್ ಆಗಬೇಕಾದರೆ ಪ್ರತಿಯೊಂದು infrastructure to rehabilitate them. ಅದನ್ನು ನಾವು ಮಾಡಿದಾಗ ನಾವು ಯಶಸ್ವಿಯಾಗುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಇಲಾಖೆಯ ಗಮನದಲ್ಲಿದ್ದರೂ ನಾವು ಮಾಡಲಾರದಂಥ ಹಲವಾರು ಕಾರಣಗಳಿವೆ. ಆದಕ್ಕಾಗಿ ನಾನು ಬಿಚ್ಚು ಮನಸ್ಸಿನಿಂದ ಈ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಈಗ ಮಿನಿಮಮ್ ವೇಜಸ್‌ನ್ನು ಅಂಗನವಾಡಿಯ ಶಿಕ್ಷಕಿಯರು ಕೇಳಿದ್ದಾರೆ. ಅಂಗನವಾಡಿಯ ಸ್ಕೀಂಮ್ ಸೆಂಟ್ರಲ್ ಗೌರ್ನಮೆಂಟ್ ಸ್ಕೀಮ್. ಅವರು ಹಾನರರಿಯಂ ಎಂದು ಕೊಡುತ್ತಿದ್ದರು. ಅಂಗನವಾಡಿಯಲ್ಲಿ ಕೆಲಸ ಮಾಡುವವರಿಗೆ ಕೊಡುತ್ತಾ ಇರತಕ್ಕದ್ದು ಹಾನರರಿಯಂ. ಈಗ ಅವರು ಸೆಪರೇಟ್ ಯೂನಿಫಾರಂ ಮಾಡಿಕೊಂಡು, ಇದು ಸ್ಟೇಟ್ ಗೌರ್ನಮೆಂಟ್ ಜವಾಬ್ದಾರಿ, ಸ್ಟೇಟ್ ಗೌರ್ನಮೆಂಟ್ ನಮ್ಮ ರಕ್ಷಣೆಗೆ ಬರಬೇಕು, ನಮಗೂ ಮಿನಿಮಮ್ ವೇಜಸ್ ಅಪ್ಲೈ ಆಗಬೇಕೆಂದು ದೊಡ್ಡ ಹೋರಾಟ ಮಾಡುತ್ತಿದ್ದಾರೆ ಹೋರಾಟ ಮಾಡುವಂಥಾದ್ದು ಅವರ ಜನ್ಮಸಿದ್ಧ ಹಕ್ಕು. ಅವರ ಧರ್ಮವಿದೆ. ಅವರು ಹೋರಾಟ ಮಾಡುತ್ತಾರೆ. ಆದರೆ ಕಾಯಿದೆ ಬಿಟ್ಟು, ಕಾಯಿದೆಯನ್ನು ಉಲ್ಲಂಘನೆ ಮಾಡಿ ಯಾವುದೇ ಕಾರ್ಯಕ್ರಮವನ್ನಾಗಲಿ ಯಾವುದೇ ಸವಲತ್ತುಗಳನ್ನಾಗಲಿ ನಾವು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಇದು ಕೇಂದ್ರ ಸರ್ಕಾರದ ಸ್ಕೀಮ್, ಅವರು ನಿವಾರಣೆ ಮಾಡತಕ್ಕ ಪ್ರಶ್ನೆ. ನಾವು ಸುಮ್ಮನೆ ಕುಳಿತಿಲ್ಲ. ಮುಖ್ಯ ಮಂತ್ರಿಯವರಾಗಲೀ, ನಾವಾಗಲೀ ಸಂಬಂಧಪಟ್ಟವರಾಗಲಿ ಇದರ ಬಗ್ಗೆ ಆಸಕ್ತಿಯನ್ನು ತೋರಿಸಿದ್ದೇವೆ. ಈ ದಿಸೆಯಲ್ಲಿ ಕೇಂದ್ರಸರ್ಕಾರದ ಗಮನ ಸೆಳೆಯುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವುಮನ್ ವರ್ಕರ್ಸ್ ಕ್ಯಾಷ್ಯೂ ಇಂಡಸ್ಟ್ರೀಸ್ ಮುಂತಾದ ಕಡೆಗಳಲ್ಲಿ ಕೆಲಸ ಮಾಡುತ್ತಾರೆ. ವುಮನ್ ವರ್ಕರ್ಸ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಬೇಕಾದರೆ ಕೆಲವೊಂದು ನಾರ್ಮ್ಸ್ ಇರುತ್ತವೆ. ಅವರಿಗೆ ಅಲ್ಲೊಂದು ಕ್ರೆಚ್ಸ್ ಇರಬೇಕು. ಆ ನಾರ್ಮ್ಸ್ ಸ್ಯಾಟಿಸ್‌ಫೈ ಆಗಬೇಕು. ೨೦ಕ್ಕಿಂತ ಹೆಚ್ಚಿಗೆ ೪೦ಕ್ಕಿಂತ ಹೆಚ್ಚಿಗೆ ವುಮನ್ ವರ್ಕರ್ಸ್ ಕೆಲಸ ಮಾಡುತ್ತಿದ್ದರೆ ಅಲ್ಲಿ ಕ್ರೆಚಸ್ ಪ್ರೊವೈಡ್ ಮಾಡಬೇಕು. ವುಮನ್ ವರ್ಕರ್ಸ್ ಡೆ ಟೈಮಿನಲ್ಲಿ ಅಂದರೆ ೭ ಗಂಟೆಯ ಒಳಗೆ ಕೆಲಸ ಮುಗಿಸಿ ಅವರನ್ನು ಹೊರಗೆ ಕಳುಹಿಸುವಂಥಾದ್ದು ಆಗಬೇಕು. ಇವೆಲ್ಲ ಕೆಲವೊಂದು ನಿರ್ಬಂಧ ಹಾಕಿ ವುಮನ್ ವರ್ಕರ್ಸ್‌ನ್ನು ತೆಗೆದುಕೊಳ್ಳುವುದಕ್ಕೆ ಆಸ್ಪದ ಕೊಡುತ್ತೇವೆ. ಕೆಲವರು

ಇದರಿಂದ ಎಕ್ಸೆಮ್ಪ್‌ಷನ್ ಕೇಳುತ್ತಾರೆ. ನಮ್ಮ ಆ್ಯಕ್ಟಿನ ಸೆಕ್ಷನ್ ೬೫ ಪ್ರಕಾರ ಕೆಲವರು ಎಕ್ಸಮ್‌ಷನ್ ಕೇಳುತ್ತಾರೆ. ಕೆಲವು ಇಂಡಸ್ಟ್ರಿಗಳವರು ಅಂದರೆ ಎಲೆಕ್ಟ್ರಾನಿಕ್ ಇಂಡಸ್ಟ್ರಿಯವರು ಮತ್ತೊಂದು ಇಂಡಸ್ಟ್ರೀಸ್‌ನವರು ಎಕ್ಸೆಮ್ಪ್‌ಷನ್ ಕೇಳುತ್ತಾರೆ. ಆಗ ನಾವು ಕೆಲವು ಕಂಡೀಷನ್ಸ್ ಹಾಕುತ್ತೇವೆ. women should not be employed for more than 9 hours or 8 hours. ಮತ್ತೆ ಅವರಿಗೆ ಟೈಮ್ ಇಂಟರ್‌ವಲ್ ಇದೆ. ಅವರು ಎಂಟು ಗಂಟೆ ಕೆಲಸ ಮಾಡಿ ಮತ್ತೆ ಕೆಲಸ ಮಾಡಬೇಕಾದರೆ ಕನಿಷ್ಟ ೯ ಗಂಟೆಗಳು ಇರಬೇಕೆಂದು ಕಡ್ಡಾಯವಾಗಿ ನಾವು ಹೇಳುತ್ತೇವೆ. :Minimum gap of 9 hours must be there and all securities should be extended to to women workers. Canteen Facility, Separate Toilets, Creshes ಮುಂತಾದವುಗಳು ಇರಬೇಕು ಮತ್ತು ಅವರು ಯಾವ ಸ್ಥಳದಿಂದ ತಾವು ಕೆಲಸ ಮಾಡುವಂಥ ಇಂಡಸ್ಟ್ರಿಗಳಿಗೆ ಬರುತ್ತಾರೆ, ಆ ಸ್ಥಳದವರೆಗೆ ಅವರಿಗೆ ಟ್ರಾವಲಿಂಗ್ ಫೆಸಿಲಿಟಿ ಕೊಡಬೇಕು. ಈ ರೀತಿ ಎಲ್ಲ ನಿರ್ಬಂಧ ಕೂಡ ಹಾಕಿ ಕೊಡುತ್ತಿದ್ದೇವೆ. ಈಗ ತಾವು ಇಷ್ಟರವರೆಗೆ ನಾಲ್ಕೈದು ಮಾತ್ರ ಎಕ್ಸಂಪಶನ್ ಕೊಟ್ಟಿರುವುದು ಇದೆ. ಅದು ಬಿಟ್ಟರೆ ಬೇರೆ ಯಾರಿಗೂ ನಾವು ಕೊಡುತ್ತಿಲ್ಲ. ಆದರೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಎಲ್ಲಿಯಾದರೂ ಕಂಪನಿಗಳು ಓವರ್‌ಟೈಮ್ ಮಾಡಿಸಿಕೊಳ್ಳುತ್ತಿದ್ದರೆ, ಅದು ನಮ್ಮ ಜನರಿಗೆ ಬಂದರೆ, ಖಂಡಿತವಾಗಿಯೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಹಿಂಜರಿಯುವುದಿಲ್ಲ ಎಂಬ ಮಾತನ್ನು ಸ್ಪಷ್ಟಪಡಿಸಬಯಸುತ್ತೇನೆ. ಅವರು ಹೇಳಿದ ಇನ್ನೊಂದು ವಿಷಯ ಏನೆಂದರೆ women employees workers under Vishwa Scheme. ಅದು ಬಹಳ ಒಳ್ಳೆಯ ಸಲಹೆ. ಈ ವಿಶ್ವ ಸ್ಕೀಮ್‌ನಲ್ಲಿ ಲೋನ್ ಆಗಲಿ, ಮತ್ತೊಂದಾಗಲೀ, ಸೆಲ್ಫ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂನಲ್ಲಿ ಇದಕ್ಕೆಲ್ಲ ಲೋನ್ ಏನು ಸ್ಯಾಂಕ್ಷನ್ ಮಾಡುತ್ತೇವೆ, ಅದಕ್ಕೆ ಎಂಪ್ಲಾಯ್‌ಮೆಂಟ್ ವತಿಯಿಂದ ಜ್ಯೇಷ್ಠತಾ ಪಟ್ಟಿಯನ್ನು ಕರೆದು ಅವರಿಗೆ ಫೆಸಿಲಿಟಿ ಎಕ್ಸ್‌ಟೆಂಡ್ ಮಾಡುವ ವಿಚಾರ ಮಾಡಿರಿ. ಏಕೆಂದರೆ, ಅವರು ನಿಜವಾಗಿ ಯಾವುದಾದರೂ ಕೆಲಸ ಸಿಗಲಿ ಎನ್ನುವ ಉದ್ದೇಶದಿಂದ ತಮ್ಮ ಹೆಸರನ್ನು ಎನ್‌ರೋಲ್ ಮಾಡಿರುತ್ತಾರೆ. ಆದ್ದರಿಂದ ಅವರಿಗೆ ಉದ್ಯೋಗವನ್ನು ಕಲ್ಪಿಸುವಂಥ ಅವಕಾಶ ಇದರ ಮುಖಾಂತರ ಆಗಬೇಕೆಂದು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದನ್ನು ನಾನು ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಅವರ ಗಮನ ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೊನೆಯದಾಗಿ safety to workers in cement factories, ಹೇಳಿದರು. ಇದರ ಬಗ್ಗೆ ಶ್ರೀ ಬಾಬುರಾವ್ ಚವಾಣ್ ಅವರು ಕೇಳಿದ್ದಕ್ಕೆ ನಾನು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಈ ಕುರಿತು ನಾನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಮತ್ತೆ ಆ್ಯಕ್ಸಿಡೆಂಟ್ ಇನ್ ಫ್ಯಾಕ್ಟರೀಸ್, ಇದರ ಬಗ್ಗೆ ನಾನು ರಿಪೋರ್ಟನ್ನು ಕೂಡ ಕೊಟ್ಟಿದ್ದೇವೆ. ೭.೪ ರಿಂದ ೬.೨ ಕ್ಕೆ ಇಳುವರಿಯನ್ನು ನಮ್ಮ ಸರ್ಕಾರ ಬಂದಮೇಲೆ ಕಾಣುತ್ತಿದ್ದೇವೆ. ಆ್ಯಕ್ಸಿಡೆಂಟ್‌ಗಳ ಸಂಖ್ಯೆ ಕಡಿಮೆಯಾಗುತ್ತಿದೆ. This only shows that we are concentrating more on the safety of workers in the factory. ನಮ್ಮ ಅಧಿಕಾರಿಗಳು ರೆಗ್ಯುಲರ್ ಇನ್‌ಸ್ಪೆಕ್ಷನ್ಸ್‌ನ್ನು ಮಾಡುತ್ತಿದ್ದಾರೆ. ಈ ವಿಚಾರದಲ್ಲಿ ನಾವು ಯಾವುದೇ ರೀತಿಯಾದ ಹಿಂದೇಟನ್ನು ಹಾಕುವುದಿಲ್ಲ. ಸುಮಾರಾಗಿ ಹೋದ ವರ್ಷ ೮೧ ಇದ್ದರೆ ಈ ವರ್ಷ ೪೫ ಆಗಿದೆ. ಪ್ರತಿ ವರ್ಷ ಡಿಕ್ರೀಸ್ ಆಗುತ್ತಿದೆ. ಫೈರ್ ಆ್ಯಕ್ಸಿಡೆಂಟ್ಸ್

ಏಳು ಆಗಿವೆ. ಆದ್ದರಿಂದ ನಮ್ಮ ಇಲಾಖೆಯು ಬಹಳ ಒಳ್ಳೆಯ ರೀತಿಯಿಂದ ಚುರುಕಿನಿಂದ ಕೆಲಸ ನಿರ್ವಹಣೆ ಮಾಡುತ್ತಿದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಿನಿಮಮ್ ವೇಜ್‌ಸ್ ಟು ಮೈನ್ ವರ್ಕರ್ಸ್ ತಾವೇನು ಪ್ರಶ್ನೆ ಮಾಡಿದ್ದೀರಿ, ಈ ಮಿನಿಮಮ್ ವೇಜ್ ಇಂಪ್ಲಿಮೆಂಟ್ ಮಾಡುವ ಅಥಾರಿಟಿ ನಾವು ಅಲ್ಲ. ಮೈನ್ ಆಕ್ಟ್ ಸೆಂಟ್ರಲ್ ಗೌವರ್ನಮೆಂಟ್ ಆ್ಯಕ್ಟ್ ಆಗಿದ್ದು ಅದು ನಮ್ಮ ಪರ್ವ್ಯೂನಲ್ಲಿ ಇಲ್ಲ. They are not covered by us. ಸೆಂಟ್ರಲ್ ಅಸಿಸ್ಟೆಂಟ್ ಲೇಬರ್ ಕಮೀಷನರ್ ಅವರಿಗೆ ಇದನ್ನು ಎನ್‌ಫೋರ್ಸ್ ಮಾಡತಕ್ಕಂಥ ಜವಾಬ್ದಾರಿ ಇದೆ. ಅದನ್ನು ಅವರುಮಾಡಬೇಕು. ಅದರಲ್ಲಿ ನಾವೇನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಆದರೆ ಈ ಮಾತನ್ನು ಕೂಡ ನಾನು ಲೇಬರ್ ಕಾನ್‌ಫರೆನ್ಸ್‌ನಲ್ಲಿ ಎತ್ತಿದ್ದೇನೆ. ಏಕೆಂದರೆ ಕೆಲಸ ಮಾಡತಕ್ಕವರು ನಮ್ಮ ರಾಜ್ಯದವರು, ಲಾ ಅಂಡ್ ಆರ್ಡರ್ ಔಟ್ ಆಫ್ ಕಂಟ್ರೋಲ್ ಆದರೆ ನಮ್ಮ ರಾಜ್ಯದವರೇ ಅದನ್ನು ನಿರ್ವಹಣೆ ಮಾಡಬೇಕು. ಇದೆಲ್ಲ ಜವಾಬ್ದಾರಿ ರಾಜ್ಯಸರ್ಕಾರದ ಮೇಲೆ ಇದ್ದಾಗ, ಈ ಆ್ಯಕ್ಟ್‌ನ್ನು ಎನ್‌ಫೋರ್ಸ್‌ಮೆಂಟ್ ಮಾಡುವ ಜವಾಬ್ದಾರಿಯನ್ನು ಸೆಂಟ್ರಲ್ ಪರ್ವ್ಯೂನಲ್ಲಿ ಏಕೆ ಇಟ್ಟುಕೊಂಡಿದ್ದಾರೆ ಎಂದು ನಾನು ಈಗಾಗಲೆ ಪ್ರಶ್ನೆ ಮಾಡಿದ್ದೇನೆ. ಇದುವರೆಗೂ ನನಗೆ ಇದರ ಬಗ್ಗೆ ಯಾವ ಸ್ಪಷ್ಟೀಕರಣವಾಗಲೀ, ಉತ್ತರವಾಗಲೀ ದೊರೆತಿಲ್ಲ. ಇದರ ಬಗ್ಗೆ ನಾವು ಮತ್ತೊಮ್ಮೆ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಆಶ್ವಾಸನೆ ಕೊಡುತ್ತಿದ್ದೇನೆ.

ಡಾ|| ಎಸ್. ಬಿ. ನಂಜಪ್ಪ:- ನಾನು ಒಂದು ಪ್ರಶ್ನೆ ಮಾತ್ರ ಕೇಳುತ್ತೇನೆ. ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ.

ಚೇರ್ಮನ್:- ಆರೋಗ್ಯ ಮಂತ್ರಿಗಳ ಉತ್ತರ ಆದಮೇಲೆ ನೀವು ಕ್ಲಾರಿಫಿಕೇಶನ್ ಕೇಳಿ.

ಡಾ|| ಎಸ್. ಬಿ. ನಂಜಪ್ಪ:- ನಿನ್ನೆ ಇದೇ ರೀತಿ ಆಗಿಹೋಯಿತು. ಮಿನಿಸ್ಟರ್ ರಿಪ್ಲೈ ...

(ಗೊಂದಲ)

ಚೇರ್ಮನ್:- ಎಲ್ಲರೂ ಮಾತನಾಡಿದರೆ, ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಯಾರಾದರೂ ಒಬ್ಬರು ಮಾತನಾಡಿದರೆ ಮಾತ್ರ ರೆಕಾರ್ಡ್‌ಗೆ ಹೋಗುತ್ತದೆ.

(ಗೊಂದಲ)

ಡಾ|| ಎಸ್. ಬಿ. ನಂಜಪ್ಪ:- ನಿನ್ನೆ ಇದೇ ರೀತಿ ಹೇಳಿದರು ನಮಗೆ ಕ್ಲಾರಿಫಿಕೇಶನ್‌ಗೇ ಅವಕಾಶ ಕೊಡಲಿಲ್ಲ. ಮಾನ್ಯ ಮಂತ್ರಿಗಳ ಉತ್ತರವಾದ ತಕ್ಷಣ ಕ್ಲಾರಿಫಿಕೇಶನ್‌ಗ ಅವಕಾಶ ಮಾಡಿಕೊಡಿ.

Sri A.S. Nadagowda:- I have not concluded my speech. I will request for two or three minutes more. ಇದರ ಜೊತೆಗೆ, ಮಾನ್ಯ ಚವಾಣರು ಮುಖ್ಯವಾದ ಎರಡು ವಿಷಯಗಳನ್ನು ಎತ್ತಿದ್ದಾರೆ. ಟ್ರೇಡ್ ಯೂನಿಯನ್ ಇನ್ ಫ್ಯಾಕ್ಟರೀಸ್ ಏನಾಗಿದೆ ಎಂದರೆ ಆ್ಯಕ್ಟ್‌ನಲ್ಲಿ, Seven members and above can form a Union ಎಂದು ಇದೆ. ಇದರಂತೆ, ಬಹಳಷ್ಟು ಯೂನಿಯನ್ ಫಾರಂ ಮಾಡಿ, ಪಾಲಿಟಿಕ್ಸ್ ಮಾಡಿ, ಮ್ಯಾನೇಜ್‌ಮೆಂಟ್ ಇದರ ಬಗ್ಗೆ ಹತೋಟಿಯನ್ನು ತೆಗೆದುಕೊಳ್ಳುತ್ತಾರೆ,

ಯೂನಿಯನ್ ವರ್ಕರ್ಸ್ ಮೇಲೆ, ತಮ್ಮದೇ ಆದ ವ್ಯವಸ್ಥೆಯ ರೀತಿಯಿಂದ ಎಂಬುದಾಗಿ ಏನು ಹೇಳಿದ್ದಾರೆ, ಅದು ನಿಜವಾಗಿಯೂ ಒಪ್ಪಬೇಕಾಗಿದೆ. ಈಗಾಗಲೇ ರಾಮಾನುಜಂ ಕಮಿಟಿ ರಿಪೋರ್ಟ್ ಇದೆ, ಮತ್ತು ಹಲವಾರು ರಿಪೋರ್ಟ್‌ಗಳು ಇದರ ಮೇಲೆ ಇವೆ. ಆದರಲ್ಲಿ for two unions in every establishment ಎಂದು ಅವರು ಸಲಹೆ ಮಾಡಿದ್ದಾರೆ. We will have to see whether we can really bring in that. ಏಕೆಂದರೆ ಫಂಡಮೆಂಟಲ್ ರೈಟ್ಸ್ ಬಗ್ಗೆ ಕೂಡ ನಾವು ವಿಚಾರ ಮಾಡಬೇಕಾಗಿದೆ. We do agree that ಎಲ್ಲೆಲ್ಲಿ ಪಾಲಿಟೈಸ್ ಮಾಡುತ್ತಾರೆ, ಯೂನಿಯನ್ಸ್ ಬ್ರೇಕ್ ಮಾಡುತ್ತಾರೆ, ಅವುಗಳನ್ನು ನಾವು ಒಪ್ಪಬೇಕಾದಂಥಾದ್ದು. ಇವತ್ತು ಏನು ವರ್ಕರ್ಸ್ ಇದ್ದಾರೆ, they have to be more educated. ಅವರಿಗೆ ಅವೇರ್‌ನೆಸ್ ಜಾಸ್ತಿ ಇದ್ದು ತಾವಾಗಿಯೇ ತಿಳಿದುಕೊಳ್ಳಬೇಕು. ಉದಾಹರಣೆಗೆ ಹೇಳುತ್ತೇನೆ, ಸೊಂಡೂರಿನಲ್ಲಿರತಕ್ಕ ದೋಣಿಮಲೈಗೆ ಒಂದು ಸಂದರ್ಭದಲ್ಲಿ ನಾನು ಹೋಗಿದ್ದೆ. ಅಲ್ಲಿ ಒಂದು ಫೆಡರೇಷನ್ ಮಾಡಿಕೊಂಡಿದ್ದಾರೆ ಫೆಡರೇಷನ್ ಮಾಡಿಕೊಂಡು, ಅದು ಯಾವುದೇ ಯೂನಿಯನ್ ಇರಲಿ, ಅದು ಇಂಟೇಕ್ ಇರಲಿ, ಎ.ಐ.ಟಿ.ಐ.ಯು.ಸಿ. ಇರಲಿ..

Sri A.K. Ananthakrishna:- Politicians exploit ಮಾಡುತ್ತಾರೆ ಎನ್ನುವುದಲ್ಲ. ಮ್ಯಾನೇಜ್‌ಮೆಂಟ್ ಕೂಡ ಎಂಪ್ಲಾಯೀಸ್‌ನ್ನು ಒಡೆಯುವುದಕ್ಕೋಸ್ಕರ ಯೂನಿಯನ್ ಮಾಡುತ್ತಿರುವುದು.

Sri A.S. Nadagowda:- Politicians have nothing to do with the union there. ಅಷ್ಟು ಕೆಳಮಟ್ಟಕ್ಕೆ ಹೋಗಿ ರಾಜಕೀಯ ಮಾಡುವಂಥ ಪಾಲಿಟೀಷಿಯನ್ಸ್ ಯಾರೂ ಇಲ್ಲವೆಂದು ನನ್ನ ಅಭಿಪ್ರಾಯ. ಆ ಯೂನಿಯನ್ಸ್‌ನ್ನು ಬ್ರೇಕ್ ಮಾಡಿ, ಮಾಡುವಂಥಾದ್ದು ಇಲ್ಲ. ಅಲ್ಲಿ ಮ್ಯಾನೇಜ್‌ಮೆಂಟ್‌ನವರು ಇದರ ಲಾಭ ಪಡೆಯುತ್ತಾರೆ ಎನ್ನುವುದನ್ನು ಒಪ್ಪಬೇಕಾಗಿದೆ. ಆದರೆ, ದೋಣಿಮಲೈನಲ್ಲಿ ಒಂದು ಫೆಡರೇಷನ್ ಮಾಡಿಕೊಂಡಿದ್ದಾರೆ. ಆ ಕಾರ್ಮಿಕರು ಯಾವುದೇ ಯೂನಿಯನ್‌ನಲ್ಲಿ ಇರಬಹುದು, ಎ.ಐ.ಟಿ.ಯು.ಸಿ. ಆಗಿರಬಹುದು, ಬಿ. ಎಂ. ಎಸ್. ಆಗಿರಬಹುದು, ಯಾವುದೇ ಆಗಿರಬಹುದು. ಅಲ್ಲಿ ಏನಾಗುತ್ತದೆ ಎಂದರೆ, ಅವರಿಗೆ ಯಾವುದೇ ತೊಂದರೆಯಾದಾಗ, ಫೆಡರೇಷನ್ ಮುಖಾಂತರ ಹೋರಾಟ ಮಾಡುತ್ತಾರೆ. ಈ ವಿಚಾರ ನಮ್ಮ ಟ್ರೇಡ್ ಯೂನಿಯನ್ ಲೀಡರ್ಸ್‌ನಲ್ಲಿ ಬರಬೇಕಾಗಿದೆ. ತಮ್ಮ ಅಂತಸ್ತಿಗೋಸ್ಕರ, ತಮ್ಮ ರೆಕಗ್ನಿಷನ್‌ಗೋಸ್ಕರ, ಎಂಬುದನ್ನು ಮರೆತು, ಈ ಕಾರ್ಮಿಕರ ಹಿತರಕ್ಷಣೆ ಮುಖ್ಯ ಎನ್ನುವ ವಿಚಾರ ಅವರ ತಲೆಯಲ್ಲಿ ಮೂಡಿ ಬರಬೇಕಾದ ಆವಶ್ಯಕತೆ ಇದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. •

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಮಂತ್ರಿಗಳು ಫೆಡರೇಷನ್ ಇದೆ, ಆ ಫೆಡರೇಷನ್ ಮುಖಾಂತರ, ಕಾರ್ಮಿಕ ಸಂಘದ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದು ಹೇಳುತ್ತಿದ್ದಾರೆ. ನಾವು ಒಪ್ಪಿಕೊಳ್ಳುತ್ತೇನೆ. ಈ ಫೆಡರೇಷನ್ ಎಲ್ಲಿ ಇರುವುದು ಎಂದು ನೀವು ಹೇಳುತ್ತೀರಾ ? ಫ್ಯಾಕ್ಟರಿಯಲ್ಲಿ ಈ ಫೆಡರೇಷನ್ ಇರುತ್ತದೆಯೇ ? ಫೆಡರೇಷನ್ ಆಫೀಸ್ ಇರುವುದು ಬಾಂಬೆಯಲ್ಲಿ ಮತ್ತು ಡೆಲ್ಲಿಯಲ್ಲಿ ಇದೆ. ಕಾರ್ಮಿಕರು ಬಾಂಬೆ ಅಥವಾ ಡೆಲ್ಲಿಗೆ ಹೋಗಿ ತಮಗ ಅನುಕೂಲ ಮಾಡಿಕೊಳ್ಳುವುದಕ್ಕಾಗುತ್ತದೆಯೇ ? ಇದು ಆಗದ ಮಾತು. ಮಾನ್ಯಮಂತ್ರಿಗಳಿಗೆ ಇದು ಗೊತ್ತಾಗಬೇಕು.

ಟ್ರೇಡ್ ಯೂನಿಯನ್ ರಿಜಿಸ್ಟ್ರೇಷನ್ ಆದ ತಕ್ಷಣ, ಟ್ರೇಡ್ ಯೂನಿಯನ್ ಏನು ಹೇಳುತ್ತದೆ? ಆಡಳಿತ ಮಂಡಳಿಯವರೂ ಕೂಡ ನಮಗೆ ಕೊಡತಕ್ಕ ಸೌಲಭ್ಯ ಕೊಡಿ ಎಂದು ಆ್ಯಕ್ಟ್‌ನಲ್ಲಿ ಹೇಳುತ್ತದೆಯೇ ಹೊರತು, ಟ್ರೇಡ್ ಯೂನಿಯನ್ ಫೆಡರೇಷನ್‌ನಿಂದ ತೆಗೆದುಕೊಳ್ಳಬೇಕೆಂಬ ಮಾತನ್ನು ತಾವು ಹೇಳಬಾರದೆಂದು ನಾನು ಹೇಳುತ್ತೇನೆ.

ಶ್ರೀ ಎ. ಎಸ್. ನಾಡಗೌಡ:- ನಾವು ರೆಫ್ರಂಡಂ ಮಾಡಿ, ಯಾವ ಯೂನಿಯನ್‌ಗೆ ಬಾರ್ಗೈನ್ ಮಾಡಕೊಡಬೇಕೆಂಬುದನ್ನೂ ಕೂಡ ಮಾಡುತ್ತೇವೆ. ಕೊನೆಗೆ ಇದೂ ಆಗದಿದ್ದರೆ, ಬ್ಯಾಲೆಟ್ ಮುಖಾಂತರ, ವೋಟು ಮಾಡಿಸಿ, ಯಾವುದಕ್ಕೆ ರೆಕಗ್ನಿಷನ್ ಮಾಡಬೇಕೆನ್ನುವುದನ್ನು ನಾವು ಮಾಡುತ್ತೇವೆ. ಸಣ್ಣಪುಟ್ಟ ತೊಂದರೆಗಳಿಗೆ, ಪ್ರತಿದಿನ ಬರುವಂಥ ತೊಂದರೆಗಳಿಗೆ, ತಾವು ತಮ್ಮಲ್ಲಿರುವ ವೈಮನಸ್ಸಿಗೋಸ್ಕರ, ರಾಜಕೀಯವಾಗಿ ಪರಿವರ್ತನೆ ಮಾಡಿ ಪರಸ್ಪರ ವಿಚಾರ ವಿನಿಮಯ ಇಲ್ಲದೇ ಹೋರಾಟಕ್ಕೆ ಇಳಿದು ಅಥವಾ ಇದು ಪೊಲಿಟಿಕಿಂಗ್ ಆಗಬಾರದು ಎನ್ನುವ ವಿಚಾರ ಹೇಳುತ್ತೇನೆ ಬಹಳ ಮುಖ್ಯವಾಗಿ ಕಾರ್ಮಿಕರ ಹಿತರಕ್ಷಣೆ ಆಗಬೇಕು ಎನ್ನುವ ಅರ್ಥದಲ್ಲಿ ನಾನು ಹೇಳುತ್ತೇನೆ. ಫೆಡರೇಷನ್‌ಗೆ ಏಕೆ ಅಫಿಲಿಯೇಷನ್ ಆಗಬೇಕೆಂದರೆ, ಇರುವಂಥ ಬೇಧ ಹೋಗುವುದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಪ್ರತಿಯೊಂದೂ ಫೆಡರೇಷನ್ ಮುಖಾಂತರ ಆಗಬಾರದು ಎನ್ನುವುದನ್ನು ನಾನು ಒಪ್ಪುತ್ತೇನೆ. ಡೆಲ್ಲಿ, ಬೆಂಗಳೂರಿನಿಂದ ನೀವು ಫೆಡರೇಷನ್‌ನವರು ಬಂದು ಇಲ್ಲಿ ಪ್ರತಿಯೊಂದು ಕನ್ಸಿಯಿಲೇಶನ್‌ನಲ್ಲಿ ಮತ್ತೊಂದರಲ್ಲಿ ಅಪಿಯರ್ ಆಗಲಿಕ್ಕೆ ಆಗುವುದಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಆ ಫೆಡರೇಷನ್ ಕಾನ್ಸೆಪ್ಟ್ ಏನು ಇದೆ, ಅದನ್ನು ಮೊದಲು ತಿಳಿದುಕೊಳ್ಳಬೇಕಾದಂಥ ಅವಶ್ಯಕತೆ ನಮ್ಮ ಜನಗಳಲ್ಲಿ ಇದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ತಾವು ಕೊನೆಯದಾಗಿ ಕಾಂಟ್ರ್ಯಾಕ್ಟ್ ಲೇಬರ್ ಬಗ್ಗೆ ಕೇಳಿದಿರಿ.

ಚೇರ್ಮನ್:- ಸಾಕು ಬಿಡಿ. ಬಹಳ ಸಬ್ಜೆಕ್ಟ್ ಇದೆ.

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಮಂತ್ರಿಗಳು ಕಂಟ್ರ್ಯಾಕ್ಟ್ ಲೇಬರ್ಸ್ ಬಗ್ಗೆ ಹೇಳಬೇಕು ...

ಚೇರ್ಮನ್:- ಅವರು ರಿಪ್ಲೈ ಕೊಟ್ಟಿದ್ದಾರೆ ..

(ಗೊಂದಲ)

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಅಧ್ಯಕ್ಷರೇ, ಲೇಬರ್ ಆ್ಯಕ್ಟ್ ಬಗ್ಗೆ ನಾನೊಬ್ಬನೇ ಈ ಸದನದಲ್ಲಿ ಮಾತನಾಡಿದ್ದು. ಜಾಸ್ತಿ ಮಾನ್ಯ ಸದಸ್ಯರು ಮಾತನಾಡಿಲ್ಲ. ಇರತಕ್ಕಂಥ ಸಮಸ್ಯೆ ನಾನು ಕೇಳದಿದ್ದರೆ ಮತ್ಯಾರು ಕೇಳಬೇಕು. ಆದಕ್ಕೆ ನಾನು ಕೇಳುತ್ತೇನೆ. ನಮ್ಮ ನೆಚ್ಚಿನ ಮುಖ್ಯಮಂತ್ರಿಗಳಾದ ಮಾನ್ಯ ಬಂಗಾರಪ್ಪಜೀಯವರು ಬಂದ ಮೇಲೆ ಕಾರ್ಮಿಕರಿಗೆ, ಲೇಬರರ್ಸ್‌ಗೆ, ಬಡ ಕೂಲಿ ಕಾರ್ಮಿಕರಿಗೆ ನ್ಯಾಯ ಸಿಗುವಂಥ ಮಾತನ್ನು ನಾನು ಈ ಸದನಲ್ಲಿ ಹೇಳಿದ್ದೇನೆ. ಆದರೆ ಮಾನ್ಯ ಕಾರ್ಮಿಕ ಮಂತ್ರಿಗಳು ಅರ್ಥ ಮಾಡಿಕೊಳ್ಳಬೇಕು. ಕಾಂಟ್ರ್ಯಾಕ್ಟ್ ಲೇಬರ್ ಆ್ಯಕ್ಟ್‌ನ್ನು ಅಬಾಲಿಶ್ ಮಾಡಲಿಕ್ಕೆ ನಾನು ಹೇಳಿದ್ದೆ ನಾನು ಏತಕ್ಕೆ ಹೇಳುತ್ತೇನೆಂದರೆ, ಅವರು ಲೇಬರ್ ಖಾತೆಯನ್ನು ವಹಿಸಿಕೊಂಡಿದ್ದಾರೆ. ಎಲ್ಲಾ ಡಿಮ್ಯಾಂಡ್ಸ್‌ಗಿಂತಲೂ ಮೊದಲು ಮೊದಲೇ ಡಿಮ್ಯಾಂಡ್ ಕಾಂಟ್ರ್ಯಾಕ್ಟ್

ಲೇಬರ್ ಆ್ಯಕ್ಟ್‌ನ್ನು ಅಬಾಲಿಶ್ ಮಾಡಿ. ಇದರಲ್ಲಿ ಏನು ಮಾಡುತ್ತಿದ್ದಾರೆಂದರೆ, ಬಡ ಕಾರ್ಮಿಕರ ಬಡ ಲೇಬರರ್ಸ್ ರಕ್ತ ಹೀರುತ್ತಾರೆ ಕಾಂಟ್ರಾಕ್ಟ್‌ದಾರರು, ಆಡಳಿತ ಮಂಡಲಿಯವರು ರಕ್ತ ಹೀರುತ್ತಾರೆ. ಹೇಗೆ ಹೀರುತ್ತಾರೆಂದರೆ, ವರ್ಷಾನುಗಟ್ಟಲೆ ನಡೆಯತಕ್ಕಂಥ ಕೆಲಸವನ್ನು ಕಾಂಟ್ರ್ಯಾಕ್ಟ್ ಎಂದು ಅವರಿಗೆ ಕೆಲಸ ಕೊಡುತ್ತಾರೆ. ಆ ಕಾಂಟ್ರ್ಯಾಕ್ಟನಲ್ಲಿ ಈ ಲೇಬರ್ಸ್‌ಗೆ ೬೦೦ ರೂಪಾಯಿ, ೮೦೦ ರೂಪಾಯಿ ಸಂಬಳ ಕೊಟ್ಟು ಅಲ್ಲಿಂದ ಕಂಟ್ರಾಕ್ಟ್‌ದಾರರು ದುಡ್ಡು ಸಂಪಾದನೆ ಮಾಡುತ್ತಿದ್ದಾರೆ, ಆಡಳಿತ ಮಂಡಲಿಯವರು ದುಡ್ಡು ಸಂಪಾದನೆ ಮಾಡುತ್ತಿದ್ದಾರೆ. ಇದರಲ್ಲಿ ಏನಾಗುತ್ತದೆ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮಂತ್ರಿಗಳಲ್ಲಿ ಅಲ್ಲಿರುವ ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಅವರಿಗೆ ಯಾವ ಆರ್ಡರ್ ಇರುವುದಿಲ್ಲ. ಆಮೇಲೆ ಅವರಿಗೆ ಕ್ವಾರ್ಟರ್ಸ್ ಕೊಡುವುದಿಲ್ಲ. ಅವರಿಗೆ ಯಾವ ಫೆಸಿಲಿಟಿ ಕೊಡುವುದಿಲ್ಲ. ಕಂಟ್ರಾಕ್ಟರ್ ಮನಸ್ಸಿಗೆ ಬಂದಂತಹವರನ್ನು ತೆಗೆದುಕೊಳ್ಳಬಹುದು, ಮನಸ್ಸಿಗೆ ಬಂದಂತಹವರನ್ನು ಒದ್ದು ವಾಪಸ್ ಕಳುಹಿಸಬಹುದು ಎನ್ನತಕ್ಕಂಥ ಅಧಿಕಾರ ಕಂಟ್ರಾಕ್ಟರ್‌ಗೆ ಇದೆ. ಮನಸ್ಸಿಗೆ ಬಂದಂತೆ ಕಂಟ್ರಾಕ್ಟರ್ಸ್ ಬರುತ್ತಾರೆ, ಮನಸ್ಸಿಗೆ ಬಂದಂತೆ ಹೋಗುತ್ತಾರೆ. ಅವರು ಯಾರನ್ನು ಬೇಕಾದರೂ ತೆಗೆದುಕೊಳ್ಳಬಹುದು, ಯಾರನ್ನು ಬೇಕಾದರೂ ತೆಗೆಯಬಹುದು. ಅಲ್ಲಿ ಲೇಬರ್ ಆ್ಯಕ್ಟ್ ಅಪ್ಲೈ ಆಗುವುದಿಲ್ಲ. ಆದ್ದರಿಂದ ಲೇಬರ್ ಬಹಳ ಶೋಷಣೆಯಾಗುತ್ತಿದ್ದಾರೆ. ಲೇಬರ್ ಆ್ಯಕ್ಟ್‌ನ್ನು ತೆಗೆಯಿರಿ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ, ಮಾನ್ಯ ಮಂತ್ರಿಗಳೇ ಪ್ರೋಸಸ್‌ನಲ್ಲಿರತಕ್ಕಂಥ ವರ್ಷಾನುಗಟ್ಟಲೆ ಫ್ಯಾಕ್ಟರಿಯಲ್ಲಿ ನಡೆಯುತ್ತದೆ. ಯಾವ ವರ್ಕ್ ಆ ಫ್ಯಾಕ್ಟರಿ ಮುಚ್ಚುವವರೆಗೂ ನಡೆಯುತ್ತಿರುತ್ತದೆ. ಅಂತ ವರ್ಕ್‌ಗೆ ತಾವು ಪರ್ಮನೆಂಟ್ ಲೇಬರ್ಸ್ ಅನ್ನು ಇಟ್ಟುಕೊಳ್ಳಲಿ. ಅಲ್ಲಿ ಕಂಟ್ರ್ಯಾಕ್ಟ್ ಆಕ್ಟ್‌ನ್ನು ಅಬಾಲಿಶ್ ಮಾಡಬೇಕು. ಕಂಟ್ರ್ಯಾಕ್ಟ್ ಆ್ಯಕ್ಟ್ ತೆಗೆದು ಹಾಕಬೇಕು. ಕಾಂಟ್ರ್ಯಾಕ್ಟ್ ಆ್ಯಕ್ಟ್‌ನ್ನು ಸೆಂಟ್ರಲ್ ಗೌರ್ನಮೆಂಟ್ ಆ್ಯಕ್ಟ್ ಎಂದು ತಾವು ಹೇಳಬಹುದು. ಸೆಂಟ್ರಲ್ ಗೌರ್ನಮೆಂಟ್‌ಗೆ ತಾವು ಸರ್ಕಾರದ ವತಿಯಿಂದ ಸಲಹೆಗಳನ್ನು ಕಳುಹಿಸಿ ಕೊಡಿ. ಇಲ್ಲಿ ಲೇಬರ್ಸ್ ರಕ್ತ ಹೀರುತ್ತಿದ್ದಾರೆ. ಈ ಕಂಟ್ರ್ಯಾಕ್ಟ್ ಆಕ್ಟ್ ಅಬಾಲಿಶ್ ಮಾಡುವುದಕ್ಕೆ ಸಲಹೆ ಮಾಡಿ ಕೊಡಬೇಕು ...

ಚೇರ್ಮನ್:- ಸಾಕು ಬಿಡಿ. ನೀವು ಚರ್ಚೆಯಲ್ಲಿ ಪಾಲ್ಗೊಂಡಿದ್ದೀರಿ...

(ಗೊಂದಲ)

Mr. Chairman:- What is the clarification that you want?

(ಗೊಂದಲ)

ಶ್ರೀ ಎ. ಎಸ್. ನಾಡಗೌಡ:- ಈ ಪ್ರಶ್ನೆಗೆ ಉತ್ತರ ತಾವೇ ಕೊಟ್ಟಿದ್ದೀರಿ. He knows that it is a central act and that we cannot abolish it. ಎಂದು ಹೇಳಿದ್ದಾರೆ. ನಾನು ಏತಕ್ಕೆ ಮತ್ತೆ ಹೇಳಲಿ. ಅವರ ತಲೆಯಲ್ಲಿ ಇರತಕ್ಕಂಥಾದ್ದು ಒಂದೇ. ಸಿಮೆಂಟ್ ಫ್ಯಾಕ್ಟರಿ ಬಗ್ಗೆ ಮಾತ್ರ ಇದೆ. ಸಿಮೆಂಟ್ ಫ್ಯಾಕ್ಟರಿ ಏನಾಗಿದೆ ಎಂದರೆ, it has been notified by the Central Government as a controlled factory. ಎಂದು ನೋಟಿಫೈ ಮಾಡಿದ್ದಾರೆ. ನಾವು ಅದರ ಮೇಲೆ ಏನೋ ಪ್ರಾಸಿಕ್ಯೂಶನ್ ಮಾಡಿದರೂ ಕೂಡ, ನಮ್ಮ ಇಲಾಖೆಯಿಂದ ಏನೇ ಪ್ರಾಸಿಕ್ಯೂಶನ್ ಮಾಡಿದರೆ ಅವರು ಕೋರ್ಟ್‌ನಲ್ಲಿ ಹೋಗಿ ಚಾಲೆಂಜ್ ಮಾಡಿ ಸ್ಟೇ ಆರ್ಡರ್ ಒಬ್‌ಟೈನ್ ಮಾಡಿದ್ದಾರೆ. ಅಲ್ಲಿ ಕಾಂಟ್ರ್ಯಾಕ್ಟ್ ಲೇಬರ್

ಅಬಾಲಿಶ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಲೇಬರ್ ಆಕ್ಟ್‌ಅನ್ನು ನಾವು ಅಬಾಲಿಷ್ ಮಾಡುವುದಕ್ಕಾಗುವುದಿಲ್ಲ. ನಾವು ಏನಾದರೂ ಕಾಂಟ್ರ್ಯಾಕ್ಟ್ ಪದ್ಧತಿ ಅಬಾಲಿಶ್ ಮಾಡಲೇಬೇಕಾದರೆ ಅದು only if the work is perennial in nature. ಸತತವಾಗಿ ಮಾಡತಕ್ಕಂಥ ಕೆಲಸ ಇದ್ದರೆ ಮಾತ್ರ ಪರ್ಟಿಕ್ಯುಲರ್ ಕೆಟಗಿರಿಗೆ ಅದನ್ನು ನಾವು ಅಬಾಲಿಶ್ ಮಾಡಬಹುದು. ಅಲ್ಲಿ again it has to be referred to the Adivisory Committee, which is headed by the State Government. ಕಮಿಟಿ ಮುಖಾಂತರ ನಾವು ಮಾಡಬೇಕಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಬಾಬುರಾವ್ ಚವಾಣ್:- ಸತತವಾಗಿ ನಡೆಯುತ್ತಿರತಕ್ಕಂಥ ಕೆಲಸವೇ ನಾನು ಹೇಳಿದ್ದು.

ಶ್ರೀ ಎ. ಎಸ್. ನಾಡಗೌಡ:- ಕೊನೆಯದಾಗಿ, ನಮ್ಮ ಇಲಾಖೆಯಿಂದ ಇರುವಂತಹ ಬೇಡಿಕೆಗಳನ್ನು ನಾನು ಮಂಡಿಸಿದ್ದೇನೆ, ಆ ಎಲ್ಲಾ ಬೇಡಿಕೆಗಳನ್ನು ಸರ್ವಾನುಮತದಿಂದ ಇರುವಂತ ಶಾಸಕರು ನಮ್ಮ ಇಲಾಖೆ ಮೇಲೆ ವಿಶ್ವಾಸ ಇಟ್ಟು ಪಾಸ್ ಮಾಡಿಕೊಡುತ್ತೀರಿ ಎಂದು ನಂಬಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಡಾ|| ಎಸ್. ಬಿ. ಸಂಜಪ್ಪ:- ಮಾನ್ಯ ಅಧ್ಯಕ್ಷರೇ, ನನ್ನ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಒಂದು ಮೈನ್ಸ್ ಫ್ಯಾಕ್ಟರಿ ಇದೆ. ಏಕೆಂದರೆ ನಾನು ಅದಕ್ಕೆ ಕನ್ಸರ್ನ್ ಆಗಿರುವುದರಿಂದ ಮಾನ್ಯ ಮಂತ್ರಿಗಳ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಕ್ರೋಮೈಟ್ ಮೈನ್ಸ್‌ನಲ್ಲಿ ನೂರಾರು ವರ್ಷಗಳಿಂದ ಅಂಡರ್‌ಗ್ರೌಂಡ್ ವರ್ಕ್ ನಡೆಯುತ್ತಿದೆ. ಅಲ್ಲಿ ಮೇಲುಗಡೆ ಕೆಲಸ ಮಾಡತಕ್ಕಂಥವರಿಗೂ, ಅಂಡರ್ ಗ್ರೌಂಡ್‌ನಲ್ಲಿ ಸಾವಿರಾರು ಅಡಿಗಳ ತಳಗಡೆ ಹೋಗಿ ಕೆಲಸ ಮಾಡತಕ್ಕಂಥವರಿಗೂ ಯಾವುದೇ ಸೇಫ್ಟಿ ಮೆಜರ್ಸ್ ಆಗಲಿ ಅಥವಾ ಅವರಿಗೆ ವೇಜಸ್‌ನಲ್ಲಿ ವ್ಯತ್ಯಾಸ ಮಾಡತಕ್ಕಂಥಾದ್ದು ಆಗಲಿ ಎಷ್ಟೋ ಸಾರಿ ಡಿಮ್ಯಾಂಡ್ ಮಾಡಿದ್ದರೂ ಕೂಡ ಅದಕ್ಕೆ ಗಮನ ಕೊಟ್ಟಿಲ್ಲ. ಇನ್ನು ಎರಡನೆಯದಾಗಿ, ಅಲ್ಲಿ ಪರ್ಮನೆಂಟ್ ಆಗಿ ೨೦-೩೦ ವರ್ಷಗಳಿಂದ ಏನು ಕೆಲಸ ಮಾಡುತ್ತಿದ್ದಾರೆ ಅವರಿಗೆ ಜಿಂಕ್ ಶೀಟ್‌ನಲ್ಲಿ ಷೆಡ್ಸ್ ಹಾಕಿ ಕೊಟ್ಟಿದ್ದಾರಲ. Without even basic amenties... ಆ ವರ್ಕರ್ಸ್‌ಅನ್ನು ಪರ್ಮನೆಂಟ್ ವರ್ಕರ್ಸ್‌ನ್ನು ಮತ್ತು ಟೆಂಪರರಿ ವರ್ಕರ್ಸ್‌ನ್ನು ಆ ರೀತಿ ಚಿಂತಾಜನಕ ಪರಿಸ್ಥಿತಿಯಲ್ಲಿ ಆ ಮೈನ್ಸ್‌ನಲ್ಲಿ ಇಟ್ಟಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಕ್ರೋಮೈಟ್ ಮತ್ತು ಮ್ಯಾಂಗನೀಸ್ ಮೈನ್ಸ್ ನೂರಾರು ವರ್ಷಗಳಿಂದ ಕೆಲಸ ಮಾಡುತ್ತಿದೆ. It is a rare metal available from my Taluka ... ಅಲ್ಲಿ ಯಾವುದೇ ಲೇಬರ್ ಲಾಸ್ ಆಗಲಿ ಇಲ್ಲ. ಅದರ ಬಗ್ಗೆ ತಾವು ಆಕ್ಷನ್ ತೆಗೆದುಕೊಳ್ಳಬೇಕು.

ಚೇರ್ಮನ್:- ತೆಗೆದುಕೊಳ್ಳುತ್ತಾರೆ ಬಿಡಿ. ಸಾಕು ಮುಗಿಸಿ.

(ಗೊಂದಲ)

ಡಾ|| ಎಸ್. ಬಿ. ಸಂಜಪ್ಪ:- ಇನ್ನು ಟ್ರಾನ್ಸ್‌ಫರ್ ಮಾಡುವ ಬಗ್ಗೆ.

ಚೇರ್ಮನ್:- ಮುಗಿಸಿ.

ಡಾ|| ಎಸ್. ಬಿ. ಸಂಜಪ್ಪ:- ಸ್ವಲ್ಪ ಸಮಾಧಾನವಾಗಿರಿ...

ಡಾ|| ವೈ. ನಾಗಪ್ಪ:- ನೀವು ಅಸೆಂಬ್ಲಿಗೆ ಬರಬೇಡಿ ಎಂದರೆ ನಾವು ಬರುವುದಿಲ್ಲ. ನೀವು

ನಮಗೆ ಪ್ರೊಟೆಕ್ಷನ್ ಕೊಡದಿದ್ದರೆ ಹೇಗೆ ಸ್ವಾಮಿ.

(ಗೊಂದಲ)

ಡಾ|| ಎನ್. ಬಿ. ನಂಜಪ್ಪ:- ಅಲ್ಲಿ ಕೆಲಸ ಮಾಡುತ್ತಿರುವಂತಹವರು ಕಲ್ಲು ಮಣ್ಣು ಹೊರುತ್ತಾರೆ. ಅಲ್ಲಿ ಕೆಲಸ ಮಾಡುವಂತಹ ಹೆಂಗಸರನ್ನು ಬೇರೆ ಕಡೆ ವರ್ಗ ಮಾಡುತ್ತಾರೆ. ಅಲ್ಲಿ ಹೆಂಗಸರು ಯಾರು ಕೆಲಸ ಮಾಡುತ್ತಾರೆ ಅವರನ್ನು ನೂರು, ನೂರ ಐವತ್ತು, ಇನ್ನೂರು ಕಿಲೋಮೀಟರ್ ದೂರ ವರ್ಗ ಮಾಡಿ ಗಂಡ ಒಂದು ಕಡೆ, ಹೆಂಡತಿ ಒಂದು ಕಡೆ ಈ ರೀತಿ ಸೆಪರೇಟ್ ಮಾಡಿ ವರ್ಗ ಮಾಡುವಂತಹ ವ್ಯವಸ್ಥೆ ಮೈಸೂರು ಮಿನರಲ್ಸ್ ಲಿಮಿಟೆಡ್‌ನಲ್ಲಿ ಇದೆ. ನಾವು ಈ ಬಗ್ಗೆ ಎಷ್ಟೋಸಾರಿ ದೂರುಗಳನ್ನು ಕೊಟ್ಟರೂ ಕೂಡ ಅಟೆಂಡ್ ಮಾಡುವುದಿಲ್ಲ. ಅಂತಹ ಒಂದು ಡಿಸ್‌ಪ್ಯಾರಿಟಿ ಇರತಕ್ಕಂಥಾದ್ದಕ್ಕೆ ಲೇಬರ್ ಆ್ಯಕ್ಟ್ ಏನಿದೆ ಅದನ್ನು ಅಳವಡಿಸಿ ಮಾಡುವುದು ಮತ್ತು ಬೇಸಿಕ್ ಅಮಿನಿಟೀಸ್ ಕೊಡತಕ್ಕಂಥಾದ್ದು ಟ್ರಾನ್ಸ್‌ಫರ್ ಸಂದರ್ಭದಲ್ಲಿ ಡಿಸ್‌ಕ್ರಿಮಿನೇಟ್ ಮಾಡದೆ ಇರತಕ್ಕಂಥಾದ್ದು ಮತ್ತು ಅಂಡರ್ ಗ್ರೌಂಡ್‌ನಲ್ಲಿ ಯಾರು ಕೆಲಸ ಮಾಡುತ್ತಾರೋ ಅವರಿಗೆ ಪ್ರೊಟೆಕ್ಷನ್ ಕೊಡತಕ್ಕಾಂಥದ್ದು. ಇದರ ಬಗ್ಗೆ ಗಮನಹರಿಸಬೇಕು ಎಂದು ನಾನು ಕೇಳುತ್ತೇನೆ.

ಚೇರ್ಮನ್:- ಗಮನಹರಿಸುತ್ತಾರೆ ಬಿಡಿ. ಈಗ ಮಾನ್ಯ ಆರೋಗ್ಯ ಮಂತ್ರಿಗಳಿಂದ ಉತ್ತರ.

(ಗೊಂದಲ)

Mr. Chairman:- I request the Hon'ble Health Minister to reply. I am not allowing anybody to seek clarifications. I have called the Health Minister...

ಆರೋಗ್ಯ ಮಂತ್ರಿಗಳಿಂದ ಉತ್ತರ

+ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆಗೆ ಸಂಬಂಧಪಟ್ಟ ೨೯ನೇ ಬೇಡಿಕೆ ಬಗ್ಗೆ ಒಟ್ಟು ೧೭ ಜನರು ಸನ್ಮಾನ್ಯ ಸದಸ್ಯರುಗಳು ಇದರಲ್ಲಿ ಭಾಗವಹಿಸಿ ಮಾತನಾಡಿದ್ದಾರೆ. ಸುಮಾರು ನಾಲ್ಕುವರೆ ಗಂಟೆ ಕಾಲ ಸತತವಾಗಿ ಈ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ. ಪ್ರಮುಖವಾಗಿ ಡಾಕ್ಟರ್ ಮಲಕರೆಡ್ಡಿಯವರು, ಡಾ|| ಎನ್. ಬಿ. ನಂಜಪ್ಪನವರು, ಜಿ. ಎಸ್. ಆಚಾರ್‌ರವರು ಇತ್ಯಾದಿ ಬಹುತೇಕ ವೈದ್ಯಕೀಯ ಕ್ಷೇತ್ರದಲ್ಲಿ ಸಾಕಷ್ಟು ತಜ್ಞರಾಗಿರತಕ್ಕಂಥ ಗೌರವಾನ್ವಿತ ಶಾಸಕರು ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಚರ್ಚೆ ಕಾಲದಲ್ಲಿ ಬಹಳಷ್ಟು ಅತ್ಯುತ್ತಮವಾದಂಥ ಸಲಹೆಗಳನ್ನು ಕೊಟ್ಟಿದ್ದಾರೆ, ಮಾರ್ಗದರ್ಶನ ಸೂಚಿಸಿದ್ದಾರೆ. ಈ ಒಂದು ಚರ್ಚೆಯ ಫಲಶ್ರುತಿ ಬಹುಶಃ ಈ ಇಲಾಖೆಯನ್ನು ಸುಲಲಿತವಾಗಿ ನಡೆಸತಕ್ಕಂಥಾದಕ್ಕೆ ಅವಕಾಶವಾಗುತ್ತದೆ ಎನ್ನತಕ್ಕಂಥ ವಿಶ್ವಾಸವನ್ನು ನಾನು ನಂಬಿ ನನ್ನ ಭಾಷಣವನ್ನು ಆರಂಭ ಮಾಡುತ್ತಿದ್ದೇನೆ.ಸನ್ಮಾನ್ಯ ಅಧ್ಯಕ್ಷರೇ, ತಮಗೆ ತಿಳಿದಿರುವ ಹಾಗೆ, ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ವ್ಯವಸ್ಥೆಯಲ್ಲಿ ಇಡೀ ಭರತ ಖಂಡದಲ್ಲೇ ಉತ್ತಮವಾದಂಥ ಒಂದು ಕೆಲಸವನ್ನು ಮಾಡುತ್ತಾ ಇದೆ ಎನ್ನತಕ್ಕಂಥ ಸಾಮಾನ್ಯ ಅನಿಸಿಕೆಯನ್ನು ರಾಷ್ಟ್ರಮಟ್ಟದಲ್ಲಿ ನಾವು ಕೇಳುತ್ತಿದ್ದೇವೆ. ಬಹುಶಃ ಇಲ್ಲಿರತಕ್ಕಂಥ ಸಂಶೋಧನೆ,

ಇಲ್ಲಿರತಕ್ಕಂಥ ತರಬೇತಿ ಮತ್ತು ಅಧ್ಯಯನ ಇಂದಿನದಲ್ಲ, ಬಹಳ ದಿನಗಳಿಂದ ನಡೆದುಕೊಂಡು ಬಂದಿರತಕ್ಕಂಥ ಒಂದು ಪರಂಪರೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಈ ಹೆಸರು ಬಂದಿದೆ ಎನ್ನತಕ್ಕಂಥ ಸಮಾಧಾನಕರವಾದ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇಲಾಖೆಯ ಬಗ್ಗೆ ಸಾಕಷ್ಟು ಟೀಕೆಗಳನ್ನು ನಾವು ಕೇಳುತ್ತಿದ್ದೇವೆ. ಸಾಕಷ್ಟು ಅನಿಸಿಕೆಗಳನ್ನು ಪತ್ರಿಕೆಗಳ ಮೂಲಕ ಕೇಳುತ್ತಿದ್ದೇವೆ. ಈ ಎಲ್ಲಾ ಟೀಕೆಗಳು ಮತ್ತು ಅನಿಸಿಕೆಗಳನ್ನು ನಾವು ಕೇಳಿದರೂ ಕೂಡ ಈ ರಾಜ್ಯದ ವೈದ್ಯಕೀಯ ಹಾಗೂ ಆರೋಗ್ಯ ಸಂರಕ್ಷಣೆ ಬಗ್ಗೆ ಬೇರೆ ರಾಜ್ಯಗಳಿಗೆ ಅಥವಾ ನೆರೆ ರಾಜ್ಯಗಳಿಗೆ ಹೋಲಿಕೆ ಮಾಡಿದಾಗ ಬಹುಶಃ ಯಾವುದರಲ್ಲೂ ಕೂಡ ನಮ್ಮದು ಕಡಿಮೆ ಇಲ್ಲ ಎನ್ನತಕ್ಕಂಥಾದ್ದನ್ನು ಸದಾ ಜ್ಞಾಪಕದಲ್ಲಿ ಇಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಸಾಮಾನ್ಯವಾಗಿ ಒಂದು ಕೂಗು ನಾವು ಕೇಳುತ್ತಿದ್ದೇವೆ. ವೈದ್ಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಸಿಬ್ಬಂದಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಒಂದು ಕೂಗನ್ನು ನಾವು ಎಲ್ಲಡೆ ಕೇಳುತ್ತಿದ್ದೇವೆ. ಆದರೆ ಆ ರೀತಿ ಅಂದ ಮಾತ್ರಕ್ಕೆ ಅತ್ಯುತ್ತಮ ವೈದ್ಯರುಗಳಾಗಲೀ, ಸಿಬ್ಬಂದಿಯಾಗಲೀ ಇಲ್ಲವೆಂದಲ್ಲ. ನೂರಕ್ಕೆ ೮೫-೯೦ರಷ್ಟು ಅತ್ಯಂತ ಉತ್ತಮವಾದಂಥ ವೈದ್ಯರುಗಳಿದ್ದಾರೆ, ಸಿಬ್ಬಂದಿ ವರ್ಗದವರಿದ್ದಾರೆ. ಒಂದು ೫, ೧೦ ಪರ್‌ಸೆಂಟ್ ಕೆಟ್ಟವರು ಇರಬಹುದು. ಆ ಟೀಕೆಯಲ್ಲಿ ಆಧಾರ ಇಲ್ಲ ಎಂದು ಹೇಳುವಷ್ಟರಮಟ್ಟಿಗೆ ನಾನು ಪ್ರಯತ್ನ ಮಾಡುವುದಿಲ್ಲ. ಆದರೆ ಅದಕ್ಕೆ ಹೆಚ್ಚು ಪ್ರಚಾರ ಜಾಸ್ತಿ. ಕಾರಣವೇನೆಂದರೆ, ಇದು ಶ್ರೀ ಸಾಮಾನ್ಯನಿಗೆ ಅರಿವು ಆಗಬಹುದಾದಂಥ ಒಂದು ಸಮಸ್ಯೆ. ಇದು ಬಹುಶಃ ಸೂಕ್ಷ್ಮವಾದಂಥ ಸಮಸ್ಯೆ, ಹಾಗೂ ಕರ್ನಾಟಕದ ನಾಲ್ಕೂವರೆ ಕೋಟಿ ಜನತೆಗೆ ನೇರವಾಗಿ ಸಂಪರ್ಕ ಪಡೆಯತಕ್ಕಂಥ ಸಮಸ್ಯೆ. ಈ ಸಮಸ್ಯೆ ಬಹಳ ಪ್ರಮುಖವಾದುದರಿಂದ ಇದಕ್ಕೆ ಟೀಕೆ ಹೆಚ್ಚಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ಹೇಳಬಹುದು. ಅಂದ ಮೇಲೆ ಇರತಕ್ಕಂಥ ೫ ಪರ್‌ಸೆಂಟ್ ಟೀಕೆಗಳನ್ನು ಸರಿಪಡಿಸುವುದಕ್ಕೆ ಆಗುವುದಿಲ್ಲವೇ ಎಂಬ ಪ್ರಶ್ನೆ ಉದ್ಭವವಾಗಬಹುದು. ಈ ಸರ್ಕಾರ ಅದನ್ನು ಕೂಡ ಗಮನಿಸಿದೆ. ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಕೂಡ ನಿರಂತರವಾಗಿ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇವತು ಮುಂಬರುವ ವರ್ಷದ ಯೋಜನೆಗಳನ್ನು ಈ ಸದನದ ಗಮನಕ್ಕೆ ತರಕ್ಕಂಥಾದ್ದು ಬಹಳ ಮುಖ್ಯ ಎಂದು ನಾನು ಭಾವನೆ ಮಾಡಿದ್ದೇನೆ. ಎರಡು ಸಾವಿರ ವರ್ಷದೊಳಗೆ ಎಲ್ಲರಿಗೂ ಆರೋಗ್ಯ. ಇದು ನಮ್ಮ ಮುಂದಿನ ವರ್ಷದ ಯೋಜನೆ. ಜನಸಂಖ್ಯೆ ಬೆಳವಣಿಗೆಯನ್ನು ತಡೆಗಟ್ಟತಕ್ಕಂಥಾದ್ದು, ವೈದ್ಯಕೀಯ ಶಿಕ್ಷಣವನ್ನು ಉತ್ತಮಪಡಿಸತಕ್ಕಂಥಾದ್ದು, ಉತ್ತಮ ಗುಣಮಟ್ಟದ ಔಷಧವನ್ನು ಒದಗಿಸತಕ್ಕಂಥಾದ್ದು, ಆರೋಗ್ಯ ವಿಭಾಗದ ಮಾನವ ಸಂಪಲ್ಮೂಲ ಯೋಜನೆ ಈ ಪ್ರಮುಖ ಐದು ಕ್ಷೇತ್ರಗಳಲ್ಲಿ ಹೆಚ್ಚು ಒತ್ತನ್ನು ಕೊಡತಕ್ಕಂಥಾದ್ದರ ಮೂಲಕ ಈ ಒಂದು ಇಲಾಖೆಯಲ್ಲಿ ಯಶಸ್ವಿಯಾದಂಥ ಕೆಲಸ ಮಾಡತಕ್ಕಂಥ ಕಾರ್ಯಗಳನ್ನು ನಾವು ಹಾಕಿಕೊಂಡಿದ್ದೇವೆ. ಈ ಒಂದು ಯೋಜನೆಯೊಳಗೆ ಬರತಕ್ಕಂಥ ಕಾರ್ಯಗಳನ್ನು ನಾವು ಪಟ್ಟಿ ಮಾಡಿದ್ದೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಸವಲತ್ತುಗಳನ್ನು ಹೆಚ್ಚಿಸತಕ್ಕಂಥಾದ್ದು, ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ತಪಾಸಣೆ ಸೌಲಭ್ಯಗಳನ್ನು ಮೇಲ್ದರ್ಜೆಗೆ ಏರಿಸತಕ್ಕಂಥಾದ್ದು, ವೈದ್ಯಕೀಯ ತಪಾಸಣಾ ಸೌಲಭ್ಯಗಳ ಗುಣಮಟ್ಟವನ್ನು ಉತ್ತಮಪಡಿಸತಕ್ಕಂಥಾದ್ದು, ವಿಶಿಷ್ಟ ವೈದ್ಯಕೀಯ ತಪಾಸಣ ಸೇವೆಗಳನ್ನು ವಿಸ್ತರಿಸತಕ್ಕಂಥಾದ್ದು ಮತ್ತು ಉತ್ತಮಪಡಿಸತಕ್ಕಂಥಾದ್ದು, ಸ್ತ್ರೀಪ್ರಸೂತಿ ಹಾಗೂ ಶಿಶು ಆರೋಗ್ಯ ಸೌಲಭ್ಯಗಳನ್ನು ವಿಸ್ತರಿಸಗೊಳಿಸತಕ್ಕಂಥಾದ್ದು, ಆರೋಗ್ಯ ತಪಾಸಣೆ ಮತ್ತು ಆಹಾರ ಪೋಷಣೆ ಬಗ್ಗೆ ಶಿಕ್ಷಣ

ನೀಡುವುದು. ಸಾಂಕ್ರಾಮಿಕ ರೋಗ ನಿಯಂತ್ರಣ ಹಾಗೂ ಮುನ್ನೆಚ್ಚರಿಕೆ ಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದು, ಲಸಿಜಾ ಸವಲತ್ತುಗಳನ್ನು ವಿಸ್ತರಿಸುವುದು, ಸ್ವಯಂಪ್ರೇರಣ ಕುಟುಂಬ ಯೋಜನಾ ಕಾರ್ಯಕ್ರಮಗಳನ್ನು ಜನಪ್ರಿಯಗೊಳಿಸುವುದು, ಔಷಧಿ ಮತ್ತು ಪ್ರಯೋಗಾಲಯ ಸೇವೆಗಳನ್ನು ಉತ್ತಮಪಡಿಸುವುದು, ಔಷಧಿ ಮತ್ತು ರಾಸಾಯನಿಕ ಮಾರಾಟ ಮತ್ತು ಉತ್ಪಾದನಾ ಪರಿಣಾಮಕಾರಿ ನಿಯಂತ್ರಣ ಮಾಡುವುದು, ಭಾರತೀಯ ವೈದ್ಯಕೀಯ ಪದ್ಧತಿಗೆ ಸಂಬಂಧಿಸಿದ ಚಿಕಿತ್ಸಾಲಯ ಮತ್ತು ಆಸ್ಪತ್ರೆ ಸೌಲಭ್ಯಗಳನ್ನು ವಿಸ್ತರಿಸುವುದು. ಕೊನೆಯದಾಗಿ ಸಂಪನ್ಮೂಲವನ್ನು ರೂಢಿಸುವುದು - ಸ್ವಾಮಿ, ಇಷ್ಟು ನಾವು ರೂಪಿಸಿಕೊಂಡಿರುವ ಬರುವ ವರ್ಷದ ಕಾರ್ಯಕ್ರಮಗಳು. ತಮಗೆ ಗೊತ್ತಿದೆ, ಬಹಳ ಜನ ಮಿತ್ರರು ಹೇಳಿದರು. ಈ ಇಲಾಖೆಗೆ ಕೊಟ್ಟಿರುವ ಹಣ ಕಡಿಮೆ. ನಾಲ್ಕೂವರೆ ಕೋಟಿ ಜನರಿಗೆ ಇದನ್ನು ಹಂಚಿದರೆ ಏನೇನಕ್ಕೂ ಸಾಲುವುದಿಲ್ಲ ಎಂದು ಕೂಡ ಹೇಳಿದ್ದಾರೆ. ಆದರೆ ನಮ್ಮ ರಾಜ್ಯದ ಆರ್ಥಿಕ ಇತಿಮಿತಿಯನ್ನು ಅರಿತು ಕೊಟ್ಟಿರುವ ಹಣದಲ್ಲಿ ಯಶಸ್ವಿ ಕೆಲಸ ಮಾಡುವುದರ ಮೂಲಕ ಈ ಪ್ರಯತ್ನವನ್ನು ನಾವು ಮಾಡಬೇಕಾಗುತ್ತದೆ. ಜೊತೆಗೆ ಹೊರಗಡೆಯಿಂದ ಅಂದರೆ ಡಬ್ಲ್ಯು. ಹೆಚ್. ಓ. ಆಗಬಹುದು, ಅಥವಾ ವಿಶ್ವ ಬ್ಯಾಂಕ್ ನೆರವು ಆಗಬಹುದು ಅಥವಾ ಕೇಂದ್ರಸರ್ಕಾರದ ನೆರವು ಆಗಬಹುದು. ಅವುಗಳನ್ನೂ ಉಪಯೋಗಿಸಿಕೊಂಡು ಈ ಕ್ಷೇತ್ರದಲ್ಲಿ ಹೆಚ್ಚು ಹಣ ತೊಡಗಿಸಿ, ಸವಲತ್ತು ಒದಗಿಸುವ ಯಶಸ್ವಿ ಕಾರ್ಯಕ್ರಮವನ್ನು ನಾವು ಮಾಡಬೇಕಾಗುತ್ತದೆ. ಅದಕ್ಕಾಗಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಾವು ಸುಮಾರು ೫ ಅಥವಾ ೬ ಪ್ರಮುಖ ಯೋಜನೆಗಳನ್ನು ಗುರ್ತು ಮಾಡಿ ಕೇಂದ್ರ ಸರ್ಕಾರದ ಪ್ರಸ್ತಾವನೆಗೆ ಸಂಬಂಧಪಟ್ಟ ವಿದೇಶಿ ಸಂಸ್ಥೆಗಳಿಂದ ನೆರವು ಪಡೆಯಲು ಕಳುಹಿಸಿಕೊಟ್ಟಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ ಈ ಸಮಯದಲ್ಲಿ ಒಂದು ಮಾತು ಹೇಳುವುದು ಅಗತ್ಯವೆಂದು ನಾನು ಭಾವಿಸುತ್ತೇನೆ. ಪಾರ್ಲಿಮೆಂಟ್‌ನಲ್ಲಿ ಕರ್ನಾಟಕ ಆರೋಗ್ಯ ಯೋಜನೆಗಳ ಬಗ್ಗೆ ಪ್ರಸ್ತಾಪಿಸಿದ ದಿನಗಳಿಲ್ಲ. ಆದರೆ ಇತ್ತೀಚಿನ ಕಳೆದ ಎರಡು ಅಧಿವೇಶನದಲ್ಲಿ ಕರ್ನಾಟಕದ ಆರೋಗ್ಯ ಇಲಾಖೆ ಬಗ್ಗೆ ಅಥವಾ ಆರೋಗ್ಯಕ್ಕೆ ಸಂಬಂಧಪಟ್ಟ ಯೋಜನೆಗಳ ಬಗ್ಗೆ ಪ್ರಸ್ತಾಪಿಸಿದ ವಿಚಾರವನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಕೇವಲ ಈ ಪ್ರಯತ್ನ ನಮ್ಮ ರಾಜ್ಯಮಟ್ಟದಲ್ಲೇ ಅಲ್ಲ, ಕೇಂದ್ರ ಮಟ್ಟದಲ್ಲೂ ನಾವು ಪ್ರಯತ್ನ ಮಾಡುತ್ತಿದ್ದೇವೆಂಬುದಕ್ಕೆ ಇದು ಸ್ಪಷ್ಟ ಉದಾಹರಣೆ. ಈಗಾಗಲೇ ಆ ಯೋಜನೆಗಳು ಪರಿಶೀಲನೆ ಮಾಡುವ ಹಂತದಲ್ಲಿದ್ದು, ಶೀಘ್ರದಲ್ಲೇ ನಮಗೆ ಮಂಜೂರಾತಿ ದೊರಕುತ್ತದೆ ಎಂಬ ವಿಶ್ವಾಸ ಕೂಡ ಇಟ್ಟು ಕೊಂಡಿದ್ದೇವೆ. ನಮಗೆ ಒಂದು ಉತ್ತಮ ಸದವಕಾಶ ಏನೆಂದರೆ ನಮ್ಮ ರಾಜ್ಯದವರು ಕೇಂದ್ರದ ಮಂತ್ರಿಗಳಾಗಿ ಈ ಖಾತೆಯನ್ನು ನಿರ್ವಹಿಸುತ್ತಿದ್ದಾರೆ. ಅವರು ಈ ರಾಜ್ಯದ ಬಗ್ಗೆ ಹೆಚ್ಚು ಆಸಕ್ತಿವಹಿಸಿದ್ದಾರೆ. ಅವರ ಮುಖಂಡತ್ವದಲ್ಲಿ ಅಥವಾ ಅವರ ನೆರವಿನಿಂದ ಈ ಕಾರ್ಯ ಆಗುತ್ತದೆ ಎಂಬ ಪ್ರಬಲ ವಿಶ್ವಾಸ ನಮ್ಮ ಸರ್ಕಾರಕ್ಕಿದೆ. ಈ ಯೋಜನೆಗಳ ಪೈಕಿ ಪ್ರಮುಖವಾದುದು ಎಂದರೆ, ದ್ವಿತೀಯ ಮಟ್ಟದ ಆಸ್ಪತ್ರೆಗಳ ಸುಧಾರಣೆಗೆ ೧೮೨ ಕೋಟಿ ರೂಗಳ ಒಂದು ಯೋಜನೆ ತಯಾರಿಸಿ ನಾವು ಕಳಿಸಿಕೊಟ್ಟಿದ್ದೇವೆ. ಭಾರತ ಜನಸಂಖ್ಯಾ ಯೋಜನೆಯನ್ನು ವಿಸ್ತರಿಸುವುದು. ಅದು ೧೦೦ ಕೋಟಿ. ಬೆಂಗಳೂರು ನಗರಸಭೆ ವ್ಯಾಪ್ತಿಯನ್ನು ಕೊಳಚೆ ಪ್ರದೇಶಗಳಿಗೆ ಮತ್ತು ಕುಟುಂಬ ಕಲ್ಯಾಣ ಸವಲತ್ತುಗಳನ್ನು ೩೬ ಕೋಟಿ ವೆಚ್ಚದಲ್ಲಿ ಒದಗಿಸುವುದು. ಅದಕ್ಕೆ ೩೬ ಕೋಟಿ. ಏಯಡ್ಸ್ ಹರಡದಂತೆ ಮುಂಜಾಗ್ರತೆ ಮತ್ತು ನಿಯಂತ್ರಣ ಕಾರ್ಯಗಳನ್ನು ಮಾಡುವುದಕ್ಕೆ ೧೫ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರುಮಾಡಿ ಕಳುಹಿಸಿದ್ದೇವೆ. ಅಂಧತ್ವ ನಿವಾರಣೆ ಮುಂಜಾಗ್ರತೆ

ಮತ್ತು ನಿಯಂತ್ರಣದ ಬಗ್ಗೆ ೧ ಕೋಟಿ ರೂಪಾಯಿಗಳ ಯೋಜನೆ ಪ್ರಸ್ತಾವದಲ್ಲಿದೆ. ಈ ಸಂದರ್ಭದಲ್ಲಿ ಹೆಚ್ಚು ಹೇಳುವುದು ಅನಗತ್ಯ ಎಂದು ನಾನು ಭಾವಿಸುತ್ತೇನೆ. ಈ ಕ್ಷೇತ್ರದಲ್ಲಿ ಸರ್ಕಾರದ ಕಳಕಳಿ, ಆತಂಕ ಎಷ್ಟಿದೆ ಎನ್ನುವುದನ್ನು ನನ್ನ ಮಾನ್ಯ ಮಿತ್ರರು ಗಮನಿಸಬಹುದು ಎಂದು ಹೇಳುತ್ತೇನೆ. ಇವತ್ತು ನಮಗಿರುವ ಇತಿಮಿತಿಯ ಆರ್ಥಿಕ ಪರಿಸ್ಥಿತಿಯಲ್ಲಿ ಆದಷ್ಟು ಹೆಚ್ಚು ಕೆಲಸ ಮಾಡಿ ಮತ್ತು ಹೊರಗಿನ ಸಹಾಯ ಪಡೆದು ಸಮರ್ಪಣಾಭಾವದಿಂದ ಮತ್ತು ಶ್ರದ್ಧಾಭಕ್ತಿಯಿಂದ ಈ ಕೆಲಸ ಮಾಡುವ ಒಂದು ವಾತಾವರಣ ಈ ಸರ್ಕಾರ ರೂಪಿಸಿಕೊಂಡಿದೆ. ಆ ಹಿನ್ನಲೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂಬ ಸ್ಪಷ್ಟ ಭರವಸೆಯನ್ನು ಈ ಸದನಕ್ಕೆ ನೀಡಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಹಿನ್ನಲೆಯಲ್ಲಿ ಒಂದು ಮಾತು. ಕಳೆದ ೧೯೯೧-೯೨ರ ಸಾಲಿನಲ್ಲಿ ನಾವು ಮಾಡಿರುವ ಸಾಧನೆಯಾದರೂ ಏನು? ಈ ಪ್ರಶ್ನೆಗೆ ಉತ್ತರಿಸುವುದು ಅನಿವಾರ್ಯ ಎಂದು ಭಾವನೆ ಮಾಡಿದ್ದೇನೆ. ಆ ಹಿನ್ನಲೆಯಲ್ಲಿ ಈ ಪಟ್ಟಿ ಮಾಡಿ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಕೆಲಸ ಮಾಡಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ೨೬ ಲಕ್ಷ ರೂಪಾಯಿಗಳ ಒಂದು ಆರೋಗ್ಯ ಸಹಾಯಕರ ತರಬೇತಿ ಶಾಲೆ ತೆಗೆಯುವುದಕ್ಕೆ ಈಗಾಗಲೇ ನಾವು ಕಾರ್ಯೋನ್ಮುಖರಾಗಿದ್ದೇವೆ. ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯನ್ನು ೧೮ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೧೨೦೦ ಹಾಸಿಗೆಗಳಿಗೆ ವಿಸ್ತರಿಸಲು ಆಡಳಿತಾತ್ಮಕ ಅನುಮೋದನೆ ಕೊಟ್ಟಿದ್ದೇವೆ. ತಲಾ ಒಂದು ಹೆರಿಗೆ ವಾರ್ಡಿಗೆ ೨ ಲಕ್ಷ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ರಾಜ್ಯದ ೨೭ ಸ್ಥಳಗಳಲ್ಲಿ ೧೦ ಹಾಸಿಗೆಗಳ ಹೆರಿಗೆ ವಾರ್ಡ್‌ಗಳನ್ನು ನಿರ್ಮಿಸಲು ಮಂಜೂರಾತಿ ಕೊಟ್ಟಿದ್ದೇವೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ೫೦ ಹಾಸಿಗೆಗಳ ಸಮುದಾಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಿದ್ದೇವೆ. ಶಿವಮೊಗ್ಗ ಜಿಲ್ಲೆಯ ಸೊರಬ ಪ್ರಾಥಮಿಕ ಆರೋಗ್ಯಕೇಂದ್ರವನ್ನು ೫೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡಿದ್ದೇವೆ. ೧೯೯೧-೯೨ರ ಸಾಲಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒದಗಿಸಿರುವ ಹಣದಲ್ಲಿ ಎರಡೂವರೆ ಕೋಟಿ ರೂಪಾಯಿಗಳನ್ನು ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಯೋಜನೆಯ ವಿವಿಧ ಕಾಮಗಾರಿಗಳಿಗೆ ಹಂಚಲಾಗಿದೆ. ೬೩ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ರಾಯಚೂರು ಜಿಲ್ಲಾ ಆಸ್ಪತ್ರೆ ಹೆಚ್ಚುವರಿ ಕಾಮಗಾರಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಕೊಟ್ಟಿದ್ದೇವೆ. ಹಾಸನ ಜಯಚಾಮರಾಜೇಂದ್ರ ಆಸ್ಪತ್ರೆಯಲ್ಲಿ ೧೧.೫ ಲಕ್ಷ ರೂಪಾಯಿಗಳ ಮಕ್ಕಳ ವಾರ್ಡ್ ಕಟ್ಟಿಸಲು ಕಾರ್ಯೋನ್ಮುಖರಾಗಿದ್ದೇವೆ. ರಾಜ್ಯದ ೭೭ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದೂರವಾಣಿ ಸ್ಥಾಪಿಸಲು ಕೆಲಸ ಮಾಡಿದ್ದೇವೆ. ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಮೊದಲ ಹಂತವನ್ನು ೪೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸುವ ಕಾರ್ಯಕ್ರಮವನ್ನು ಈಗಾಗಲೇ ಹಾಕಿಕೊಂಡಿದ್ದೇವೆ. ಗುಲ್ಬರ್ಗ ಜಿಲ್ಲೆಯ ಶಹಪುರ್‌ನಲ್ಲಿ ೫೦ ದಾನಿಗಳ ಆಸ್ಪತ್ರೆಯನ್ನು ೧೧೭ ಲಕ್ಷ ರೂಪಾಯಿಗಳಲ್ಲಿ ನಿರ್ಮಿಸುವ ಕ್ರಮ ಕೈಗೊಂಡಿದ್ದೇವೆ. ಹಾಸನದ ಜಯಚಾಮರಾಜೇಂದ್ರ ಆಸ್ಪತ್ರೆಯನ್ನು ೨೨ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ವಿಸ್ತರಿಸುವ ಮಂಜೂರಾತಿಯನ್ನು ನಾವು ಕೊಟ್ಟಿದ್ದೇವೆ. ಬಳ್ಳಾರಿ ಜಿಲ್ಲೆ ಸಿರಗುಪ್ಪದಲ್ಲಿ ೩೦ ಹಾಸಿಗೆಗಳ ಆಸ್ಪತ್ರೆಯನ್ನು ೪ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸುತ್ತಿದ್ದೇವೆ. ಮಂಗಳೂರು ಮತ್ತು ಧಾರವಾಡಗಳಲ್ಲಿ ಎರಡು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕಗಳನ್ನು ಒಂಭತ್ತೂವರೆ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಸ್ಥಾಪಿಸಲು ಮಂಜೂರಾತಿ ನೀಡಿದ್ದೇವೆ. ಶಿವಮೊಗ್ಗ ಮತ್ತು ಹಾಸನದಲ್ಲಿ ಎರಡು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿ

ಕೊಟಿದ್ದೇವೆ. ಗುಲ್ಬರ್ಗ ಜಿಲ್ಲೆಯ ಭೀಮರಾಯನಗುಡಿಯಲ್ಲಿ ಮಲೇರಿಯಾ ನಿರೋಧಕ ಘಟಕವನ್ನು ಸ್ಥಾಪಿಸಲು ಮಂಜೂರಾತಿ ನೀಡಿದ್ದೇವೆ. ಬೀದರ್ ಜಿಲ್ಲೆಯ ಹುಮ್ನಾಬಾದ್ ಆಸ್ಪತ್ರೆಯನ್ನು ೫೦ ಹಾಸಿಗೆಗಳ ಮೇಲ್ದರ್ಜೆಗೆ ಏರಿಸಿ ಮಂಜೂರಾತಿ ನೀಡಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದಲ್ಲಿ ನಗರ ಕುಷ್ಠರೋಗ ನಿಯಂತ್ರಣ ಕೇಂದ್ರವನ್ನು ಸ್ಥಾಪಿಸುವ ಕಾರ್ಯ ಮಾಡಿದ್ದೇವೆ. ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಕುಷ್ಠರೋಗ ಘಟಕ ಸ್ಥಾಪಿಸಲು ಮಂಜೂರಾತಿ ನೀಡಿದ್ದೇವೆ. ಇಲಾಖೆಯ ಕಿರಿಯ ಮಹಿಳಾ ಆರೋಗ್ಯ ಸಹಾಯಕರ ತರಬೇತಿ ಶಾಲೆಗಳ ಶೇಕಡ ೫೦ ಸ್ಥಾನಗಳನ್ನು ಗ್ರಾಮೀಣ ಪ್ರದೇಶದಿಂದ ಬರುವ ಅಭ್ಯರ್ಥಿಗಳಿಗೆ ಕಾದಿರಿಸುವ ವ್ಯವಸ್ಥೆ ಮಾಡಿದ್ದೇವೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಮುದ್ಾಯ ಆರೋಗ್ಯ ಕೇಂದ್ರಗಳು ಅವಶ್ಯಕ ಸಿಬ್ಬಂದಿಯೊಡನೆ ಸಕಾಲದಲ್ಲಿ ಮಂಜೂರಾತಿ ನೀಡಿರುವುದು ೧೯೯೧-೯೨ನೇ ಸಾಲಿನಲ್ಲೇ ಮೊದಲ ಬಾರಿಯಾಗಿದೆ. ಹಿಂದಿನ ವರ್ಷಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸಿಬ್ಬಂದಿಯನ್ನು ಮಂಜೂರು ಮಾಡಿರಲಿಲ್ಲ. ಆದರೆ ನಮ್ಮ ಮುಖ್ಯ ಮಂತ್ರಿಗಳ ಔದಾರ್ಯದಿಂದ ಹಣ ಹೆಚ್ಚು ಕೊಡುವುದರ ಮೂಲಕ ಈ ವರ್ಷ ೩೭೬ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸಿಬ್ಬಂದಿ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಸಂಬಂಧಿಸಿದಂತಹ ಆರ್ಥಿಕ ನಿರ್ಬಂಧ ಕೂಡ ಸಡಿಲ ಮಾಡಿದ್ದೇವೆ. ಈ ವಿಷಯದಲ್ಲಿ ಹಣಕಾಸು ಇಲಾಖೆಗೆ ನಾವು ಅಭಾರಿಯಾಗಬೇಕಾಗಿದೆ. ಅಖಿಲ ಭಾರತ ಮಟ್ಟದಲ್ಲಿ ೨೦ ಅಂಶಗಳ ಕಾರ್ಯಕ್ರಮದ ಅಡಿಯಲ್ಲಿ ಕೆಳಕಂಡ ಅಂಶಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿಯು ಅತ್ಯಂತ ಸೂಕ್ತವಾಗಿದೆ. ಇವತ್ತು ಹೇಳುವುದಾದರೆ ಕಳೆದ ಮೂರ್ನಾಲ್ಕು ವರ್ಷಗಳಿಂದ ನಾವು ಬಹಳ ಹಿಂದೆ ಬಿದ್ದಿದ್ದೆವು. ಆದರೆ ಈ ವರ್ಷ ಈ ಸಾಧನೆಯಲ್ಲಿ ೧ನೇ ಸ್ಥಾನದಲ್ಲಿದ್ದೇವೆಂಬ ಸರ್ಟಿಫಿಕೇಟ್ ನಮಗೆ ಭಾರತ ಸರ್ಕಾರದಿಂದ ಸಿಕ್ಕಿದೆ ಎಂಬ ಸಮಾಧಾನದ ಮಾತನ್ನು ಈ ಸಮಯದಲ್ಲಿ ನಾನು ಹೇಳುತ್ತಿದ್ದೇನೆ. ಕುಟುಂಬ ಕಲ್ಯಾಣ ಕಾರ್ಯಗಳಡಿಯಲ್ಲಿ ಸಂತಾನ ನಿಯಂತ್ರಣ ಕಾರ್ಯದಲ್ಲಿ ಅಖಿಲ ಭಾರತ ಮಟ್ಟದಲ್ಲಿ ನಾವು ೧ನೇ ಸ್ಥಾನ ಪಡೆದಿದ್ದೇವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶಕರ ವ್ಯಾಪ್ತಿಗೊಳಪಡುವ ರಾಜ್ಯದ ಈ ಕೆಳಕಂಡ ಆಸ್ಪತ್ರೆಗಳಿಗೆ ಸಂದರ್ಶಕ ಮಂಡಲಿಗಳನ್ನು ನಾವು ನೇಮಕ ಮಾಡಿದ್ದೇವೆ. ಸ್ವಾಮಿ, ಇದು ನಾವು ಮಾಡಿರುವ ಅಭಿವೃದ್ಧಿ ಕೆಲಸಗಳಾದರೆ, ಆಡಳಿತದಲ್ಲಿ ಸುಧಾರಣೆ ಮಾಡಲು ಇರುವ ವ್ಯವಸ್ಥೆಗೆ ಹೊಸ ಚಾಲನೆ ಕೊಡುವ ಮೂಲಕ ದಕ್ಷತೆಯಿಂದ ಕೆಲಸ ನಿರ್ವಹಣೆ ಮಾಡಲಿಕ್ಕೆ ಅನುಕೂಲವಾಗಲಿ ಮತ್ತು ಸೇವಾ ವ್ಯವಸ್ಥೆ ಹೆಚ್ಚಾಗಲಿ ಎಂಬ ಹಿನ್ನೆಲೆಯಲ್ಲಿ ನಾವು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಮತ್ತು ಈಗಾಗಲೇ ಅದರಲ್ಲಿ ನಾವು ತೊಡಗಿಸಿಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ. ಸಾರ್ವಜನಿಕರಿಗೆ ಸರ್ಕಾರಿ ವೈದ್ಯರುಗಳ ಸೇವೆಯನ್ನು ಒದಗಿಸುವ ಉದ್ದೇಶದಿಂದ ಸರ್ಕಾರಿ ವೈದ್ಯಾಧಿಕಾರಿಗಳು ಖಾಸಗಿ ವೃತ್ತಿ ನಡೆಸುವುದನ್ನು ನಿಷೇಧಿಸುವ ಬಗ್ಗೆ ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ. ಈ ಬಗ್ಗೆ ಹತ್ತಿರದ ರಾಜ್ಯಗಳಿಂದ, ಅಧಿಕಾರಿಗಳ ತಂಡದಿಂದ ಅಧ್ಯಯನ ನಡೆಸಿದ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ. ಇಲಾಖೆಯ ಕಾರ್ಯ ದಕ್ಷತೆಯನ್ನು ಹೆಚ್ಚಿಸುವ ದಿಶೆಯಲ್ಲಿ ಸಹಾಯಕ ಶಸ್ತ್ರಚಿಕಿತ್ಸಕರು ಹಾಗೂ ಆರೋಗ್ಯಾಧಿಕಾರಿಗಳಿಗೆ ಸೂಕ್ತ ಪ್ರೋತ್ಸಾಹವನ್ನು ಒದಗಿಸುವ ಮೂಲಕ ಅವರವರೇ ತಮ್ಮ ಕೆಲಸದಲ್ಲಿ ಹೆಚ್ಚಿನ ಅಭಿವೃದ್ಧಿ ತಳೆಯುವಂತಾಗಲೆಂದು ಸರ್ಕಾರವು ಕಾಲಬದ್ಧ ಪದೋನ್ನತಿಯನ್ನು ನೀಡುವ ಯೋಜನೆಗೆ ಮಂಜೂರಾತಿಯನ್ನು ನೀಡಿದೆ. ಅದರಂತೆ ಆರು ಮತ್ತು ಹದಿಮೂರು

ವರ್ಷಗಳ ಸೇವೆಯನ್ನು ಪೂರೈಸಿದ ಸಹಾಯಕ ಚಿಕಿತ್ಸಕರು ಹಾಗೂ ಆರೋಗ್ಯಾಧಿಕಾರಿಗಳು ಅವರ ವಿದ್ಯಾರ್ಹತೆಗೆ ಅನುಗುಣವಾಗಿ, ಅನುಕ್ರಮವಾಗಿ ಹಿರಿಯ ವೈದ್ಯಾಧಿಕಾರಿ ತಜ್ಞ ಮತ್ತು ಉಪ ಮುಖ್ಯ ವೈದ್ಯಾಧಿಕಾರಿ, ಹಿರಿಯ ತಜ್ಞ ಔಷಧಿಗಳಿಗೆ ಬಡ್ತಿಗೊಳ್ಳುತ್ತಾರೆ. ಅರೆ ವೈದ್ಯಕೀಯ ಕಾರ್ಯಕರ್ತರಿಗೆ ಸೂಕ್ತ ಪದೋನ್ನತಿ ಅವಕಾಶಗಳನ್ನು ಒದಗಿಸುವ ದಿಶೆಯಲ್ಲಿ ಇತ್ತೀಚೆಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಗೆ ತಿದ್ದುಪಡಿಯನ್ನು ನಾವು ಮಾಡಿದ್ದೇವೆ. ಸರ್ಕಾರದ ಅಧಿಸೂಚನೆಗಳ ಮೂಲಕ ಸರ್ಕಾರವು ವಹಿಸಿಕೊಂಡಿರುವ ಹಿಂದಿನ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಮತ್ತು ಪುರಸಭಾ ಆಸ್ಪತ್ರೆಗಳ ಎಲ್ಲಾ ಸಿಬ್ಬಂದಿಗೂ ಕಾಲಬದ್ಧ ಮುಂಬಡ್ತಿಯನ್ನು ಕೊಡತಕ್ಕಂಥ ಯೋಜನೆಯನ್ನು ನಾವು ಮಾಡಿದ್ದೇವೆ. ಅಂತೆಯೇ ಶುಶ್ರೂಷಾ ಸಿಬ್ಬಂದಿಗಳು, ಕಿರಿಯ ಮಹಿಳಾ ಆರೋಗ್ಯ ಸಹಾಯಕರುಗಳಿಗೆ, ರೇಡಿಯೋಗ್ರಾಫರ್‌ಗಳಿಗೆ ಮತ್ತು ಕ್ಷ-ಕಿರಣ ತಂತ್ರಜ್ಞರಿಗೆ ಕೊಡುತ್ತಿದ್ದಂಥ ಅಪಾಯದ ಭತ್ಯೆ ೪ ರಿಂದ ೮ ಕ್ಕೆ ನಾವು ಪರಿಸಿದ್ದೇವೆ. ಜೂನಿಯರ್ ಡಾಕ್ಟರುಗಳಿಗೆ ಸ್ಟೈಫಂಡರಿ ಹಣವನ್ನು ನಾವು ಹೆಚ್ಚಿಸಿದ್ದೇವೆ. ಹೊಸದಾಗಿ ನೇಮಕವಾಗುವ ವೈದ್ಯರುಗಳಿಗೆ ಐದು ವರ್ಷ ಗ್ರಾಮೀಣ ಸೇವೆಯನ್ನು ಕಡ್ಡಾಯಪಡಿಸಲಾಗಿದೆ. ಇತ್ತೀಚೆಗೆ ಲೋಕಸೇವಾ ಆಯೋಗದಿಂದ ನೇಮಿಸಲ್ಪಟ್ಟಿರುವ ವೈದ್ಯರುಗಳು ಗ್ರಾಮೀಣ ಸೇವೆಗೆ ಹಾಜರಾಗಲಿಲ್ಲವಾದ್ದರಿಂದ ೧೨೪ ಜನ ವೈದ್ಯರುಗಳ ನೇಮಕಾತಿಯನ್ನು ರದ್ದುಮಾಡಲಾಗಿದೆ. ಅನಧಿಕೃತ ಗೈರುಹಾಜರಿಯನ್ನು ಮತ್ತು ಸೇವಾ ಸಂಹಿತೆ ಉಲ್ಲಂಘನೆಯನ್ನು ಅಶಿಸ್ತು ಎಂದು ಪರಿಗಣಿಸಿ ಈಗಾಗಲೇ ಸುಮಾರು ೮೦ ಜನ ವೈದ್ಯರುಗಳನ್ನು ಕೆಲಸದಿಂದ ಡಿಸ್‌ಮಿಸ್ ಮಾಡಲಾಗಿದೆ. ಉಳಿದವರ ಬಗ್ಗೆ ವಿವಿಧ ಹಂತಗಳ ವಿಚಾರಣೆ ಮುಗಿದ ನಂತರ ಕ್ರಮ ಕೈಗೊಳಲಾಗುವುದು. ವೈದ್ಯರುಗಳು ಮತ್ತು ವೈದ್ಯರೇತರುಗಳಿಗೆ ಅವರ ಸಂಘ ಸಂಸ್ಥೆಗಳಲ್ಲಿ ಕಾರ್ಯವಿಧಾನದಲ್ಲಿ ಸೇವಾ ಮತ್ತು ಶ್ರದ್ಧಾ ಮನೋಭಾವದಿಂದ ಕೆಲಸ ಮಾಡಲು ವಿನಂತಿಸಿ ಅಶಿಸ್ತಿನ ಜೊತೆ ರಾಜಿ ಇಲ್ಲವೆಂದು ಸ್ಪಷ್ಟಪಡಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಇರುವ ವೈದ್ಯರುಗಳ ಸ್ಥಾನವನ್ನು ಭರ್ತಿಮಾಡಲು ಹಳ್ಳಿಗಳಲ್ಲಿ ಕೆಲಸ ಮಾಡುವ ಷರತ್ತಿಗೆ ಒಳಪಟ್ಟಂತೆ ಮೂರು ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ. ಕಿರಿಯ ಪುರುಷ ಆರೋಗ್ಯ ಸಹಾಯಕರು, ಕಿರಿಯ ಮಹಿಳಾ ಆರೋಗ್ಯ ಸಹಾಯಕರುಗಳು, ಕ್ಷ-ಕಿರಣ ತಂತ್ರಜ್ಞರು, ಫಾರ್ಮಾಸಿಸ್ಟ್, ರಿಫ್ರಾಸಿಸ್ಟ್, ನೇತ್ರ ಸಹಾಯಕರು, ಅರೆ ವೈದ್ಯಕೀಯ ಕಾರ್ಯಕರ್ತರು ಮತ್ತು ಕಿರಿಯ ಪ್ರಯೋಗಶಾಲೆ ತಂತ್ರಜ್ಞರ ಹುದ್ದೆಗಳನ್ನು ತುಂಬಲು ಮಿತವ್ಯಯದ ಆದೇಶದ ಸಡಿಲಿಕೆ ಇದ್ದರೂ ಇಲಾಖೆಯ ನೇಮಕಾತಿಯ ಸಮಿತಿಯ ಸಲುವಾಗಿ ಈ ಹುದ್ದೆಗಳನ್ನು ತುಂಬಲಾಗಲಿಲ್ಲ. ಆದುದರಿಂದ ರಾಜ್ಯ ಮಟ್ಟದ ಇಲಾಖಾ ನೇಮಕಾತಿ ಸಮಿತಿಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ರಚಿಸಲಾಗಿದ್ದು, ಈ ಮೇಲೆ ಕಾಣಿಸಿದ ಎಲ್ಲಾ ಹುದ್ದೆಗಳನ್ನು ನೇಮಕಾತಿ ಮೂಲಕ ತುಂಬಲು ಕ್ರಮ ಕೈಗೊಂಡಿದ್ದೇವೆ. ಖಾಸಗಿ ಮೆಡಿಕಲ್ ಕಾಲೇಜ್‌ನವರು ಸರ್ಕಾರಿ ಸವಲತ್ತುಗಳನ್ನ ಬಳಸಿಕೊಂಡಿದ್ದಕ್ಕಾಗಿ ಸರ್ಕಾರಕ್ಕೆ ಬರಬೇಕಾದ ಬಾಕಿ ಹಣವನ್ನು ಕಟ್ಟುನಿಟ್ಟಾಗಿ ವಸೂಲಾತಿ ಮಾಡಲು ಕ್ರಮ ಕೈಗೊಂಡಿದೆ. ಈಗಾಗಲೇ ೧.೫೫ ಲಕ್ಷ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ. ಸುಸ್ತಿದಾರ ಕಾಲೇಜುಗಳಿಗೆ ಆಸ್ಪತ್ರೆ ಸವಲತ್ತುಗಳನ್ನು ರದ್ದು ಪಡಿಸಲಾಗಿದೆ. ಉಳಿಕೆ ಹಣವನ್ನು ವಸೂಲು ಮಾಡಲು ಜಿಲ್ಲಾಧಿಕಾರಿಗಳಿಗೆ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲ್ಮಾಡಲಾಗುವುದು. ಈ ರೀತಿ ವಸೂಲಾದ ಹಣವನ್ನು ಸದರಿ ಆಸ್ಪತ್ರೆಗಳ ಆಧುನೀಕರಣಕ್ಕೆ ವಿನಿಯೋಗಿಸಲು ತೀರ್ಮಾನಿಸಿದೆ.

ಸಾರ್ವಜನಿಕರಿಗೆ ಅದರಲ್ಲೂ ಗ್ರಾಮೀಣ ಜನರಿಗೆ ಎಲ್ಲಾ ಸಮಯದಲ್ಲೂ ಸರ್ಕಾರಿ ವೈದ್ಯರುಗಳ ಸೇವೆಯನ್ನು ಒದಗಿಸುವ ಉದ್ದೇಶದಿಂದ ಸರ್ಕಾರಿ ವೈದ್ಯರುಗಳು ಖಾಸಗಿ ವೃತ್ತಿ ನಡೆಸುವುದನ್ನು ನಿಷೇಧಿಸುವ ಬಗ್ಗೆ ಸರ್ಕಾರವು ತೀವ್ರ ಪರಿಶೀಲಿಸುತ್ತಿದೆ. ಕಲ್ಯಾಣ ಯೋಜನೆಗಳನ್ನು ಪುನರ್‌ಯೋಜಿಸುವ ಉದ್ದೇಶದಿಂದ ಭಾರತ ಸರ್ಕಾರವು ಒಂದು ಕಾರ್ಯನೀತಿಯನ್ನು ಪ್ರಸ್ತಾಪಿಸಿದೆ. ಅದರಂತೆ ಅಧಿಕಾರೇತರರು, ಸ್ವಯಂ ಸೇವಾ ಸಂಸ್ಥೆಗಳು ಎಲ್ಲಾ ಸರ್ಕಾರಿ ಇಲಾಖೆಗಳು ಸಂಪೂರ್ಣವಾಗಿ ತಮ್ಮನ್ನು ತಾವೇ ತೊಡಗಿಸಿಕೊಂಡು ಸಕ್ರಿಯವಾಗಿ ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಇನ್ನಷ್ಟು ಸಾರ್ವಜನಿಕ ಆಂದೋಲನವನ್ನಾಗಿ ಕೈಗೆತ್ತಿಕೊಳ್ಳುವಂತೆ ಮಾಡುವುದು. ಈ ಬಗ್ಗೆ ಉನ್ನತ ಮಟ್ಟದ ಅಂತರ ವಿಭಾಗೀಯ ಸಮನ್ವಯಕ್ಕಾಗಿ ಮತ್ತು ಕುಟುಂಬ ಕಲ್ಯಾಣ ಯೋಜನೆಗಳಿಗೆ ರಾಜಕೀಯ ಪ್ರೋತ್ಸಾಹವನ್ನು ನೀಡಲು ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ರಾಜ್ಯಮಟ್ಟದ ಸಮಿತಿಯನ್ನು ಕೂಡ ನಾವು ಮಾಡಿದ್ದೇವೆ. ಸದರಿ ಸಮಿತಿಯಲ್ಲಿ ಸಂಬಂಧಿಸಿದ ಸಚಿವರು, ಸರ್ಕಾರದ ಕಾರ್ಯದರ್ಶಿಗಳು, ಅಲ್ಲದೇ ಉಭಯ ಸದನಗಳ ವಿರೋಧ ಪಕ್ಷಗಳ ನಾಯಕರುಗಳು, ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳು, ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು, ಮಹಾನಗರಪಾಲಿಕೆಯ ಮಹಾಪೌರರು ಹಾಗೂ ರಾಜ್ಯದ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷರು ಇರುತ್ತಾರೆ. ಇದೊಂದು ಅತಿ ಪ್ರಮುಖವಾದಂತಹ ವಿಚಾರವನ್ನು ಕರ್ನಾಟಕದಲ್ಲಿ ನಾವು ತೆಗೆದುಕೊಂಡಿದ್ದೇವೆನ್ನತಕ್ಕ ಸಂತೋಷದ ಮಾತನ್ನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಇತ್ತೀಚೆಗೆ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ಪ್ರಧಾನ ಮಂತ್ರಿಗಳು ಸೂಚಿಸಿದಂತೆ ಚಿಕ್ಕ ಕುಟುಂಬಗಳನ್ನು ಹೊಂದುವ ಮೂಲಕ ವ್ಯಕ್ತಿಗತವಾದಂತಹ ಲಾಭಗಳು ದಕ್ಕುವಂತೆ ವಿವಿಧ ಅಭಿವೃದ್ಧಿ ಯೋಜನೆಗಳನ್ನು ನಾವು ರೂಪಿಸಬೇಕಾಗಿದೆ. ಇನ್ನು ಮುಂದೆ ಚಿಕ್ಕ ಕುಟುಂಬದ ನಿಯಮಗಳನ್ನು ಪಾಲಿಸದೆ ಇರುವ ಕುಟುಂಬದ ಮುಖ್ಯಸ್ಥರುಗಳು ಎಲ್ಲಾ ವಿಭಾಗದಲ್ಲಿನ ಯೋಜನೆಗಳಡಿಯಲ್ಲಿ ವ್ಯಕ್ತಿಗತ ಲಾಭವನ್ನು ಹೊಂದಲು ಅನರ್ಹರಾಗಿರುತ್ತಾರೆ. ಈ ಬಗ್ಗೆ ಸೂಕ್ತ ಕಾರ್ಯನೀತಿಯನ್ನು ರೂಪಿಸಲು ರಾಜ್ಯದ ಸಚಿವ ಸಂಪುಟದ ಮುಂದೆ ಒಂದು ವರದಿಯನ್ನು ಸಲ್ಲಿಸಲು ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ. ಕಳೆದ ವರ್ಷ ನಾವು ಮಾಡಿರತಕ್ಕ ಸಾಧನೆಗಳು ಮತ್ತು ಈ ಎಲ್ಲಾ ಕಾರ್ಯಗಳು ಪ್ರಗತಿ ಗತಿಯಲ್ಲಿವೆ ಎನ್ನತಕ್ಕ ಮಾತನ್ನು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ. ಇವತ್ತು ವೈದ್ಯರುಗಳ ಕೊರತೆ ಬಹಳ ಪ್ರಮುಖವಾಗಿ ಪ್ರಸ್ತಾಪವಾಗುತ್ತಿರತಕ್ಕ ವಿಚಾರ. ತಮಗೆ ತಿಳಿದ ಹಾಗೆ ಮೊನ್ನೆ ತಾನೆ ಲೋಕಸೇವಾ ಆಯೋಗದವರು ೫೨೫ ಡಾಕ್ಟರುಗಳನ್ನು ನೇಮಕಾತಿ ಮಾಡಿದ್ದಾರೆ. ಆದರೆ ಸುಮಾರು ೧೨೪ ಜನ ಕೆಲಸಕ್ಕೆ ಹಾಜರಾಗಲಿಲ್ಲ. ಇಂತಹವರನ್ನು ನಾವು ರದ್ದು ಮಾಡಿದ್ದರ ಜೊತೆಗೆ ಅನಧಿಕೃತವಾಗಿ ಗೈರು ಹಾಜರಿಯಾಗಿರುವ ಸಂಖ್ಯೆ ೧೧೬ಕ್ಕೂ ಜಾಸ್ತಿ ಇದೆ. ಇದು ಕರಾರುವಕ್ಕಾದ ಸಂಖ್ಯೆ ಎಂದು ನನಗಂತೂ ಅನ್ನಿಸುವುದಿಲ್ಲ. ಇನ್ನೂ ಕೂಡ ಇದರ ಬಗ್ಗೆ ತಪಾಸಣೆ ಮಾಡುತ್ತಿದ್ದೇವೆ. ೩೭೬ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಇದುವರೆಗೂ ಡಾಕ್ಟರನ್ನು ನೇಮಕಾತಿ ಮಾಡಿಲ್ಲ. ಅವುಗಳನ್ನು ಕೂಡ ನಾವು ಭರ್ತಿ ಮಾಡಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸ್ನಾತಕೋತ್ತರ ವಿದ್ಯಾಭ್ಯಾಸಕ್ಕೆ ಕಳುಹಿಸುವಂತಹವರು ಇದ್ದಾರೆ. ಇದರಿಂದ ನಮಗೆ ಸಿಕ್ಕಿರತಕ್ಕಂಥ ಅಂಕಿ ಸಂಖ್ಯೆಗಳ ಮೂಲಕ ೧೫೦೦ ಜನ ವೈದರುಗಳ ಹುದ್ದೆಗಳು ಖಾಲಿ ಇದೆ ಎಂದು ನಾವು ಮನಗಂಡಿದ್ದೇವೆ. ಅದಕ್ಕಾಗಿ ಗುತ್ತಿಗೆಯ ಆಧಾರದ ಹಿನ್ನಲೆಯಲ್ಲಿ ತೆಗೆದುಕೊಳ್ಳತಕ್ಕಂಥ

ವಿಶೇಷವಾದಂತಹ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈಗಾಗಲೇ ಅದು ಆರ್ಥಿಕ ಇಲಾಖೆಯಲ್ಲಿ ಮಂಜೂರಾಗಿದೆ ಎಂದು ನಾನು ಕೇಳಿದ್ದೇನೆ. ಪ್ಲಾನಿಂಗ್‌ನಿಂದ ಮಂಜೂರಾತಿ ಬಂದ ತಕ್ಷಣ ಆದಷ್ಟು ಬೇಗ ಈ ಕೊರತೆಯನ್ನು ತುಂಬುತ್ತೇವೆ. ಹಳ್ಳಿಗಳಲ್ಲಿ ಕೆಲಸಮಾಡತಕ್ಕವರಿಗೆ ಗುತ್ತಿಗೆಯ ಆಧಾರದಮೇಲೆ ೩ ವರ್ಷಗಳ ಕಾಲ ನೇಮಕಾತಿ ಮಾಡುವಂತಹ ವಿಶೇಷ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಬಹುಶಃ ಇದಕ್ಕಿಂತ ಈ ಕ್ಷೇತ್ರದಲ್ಲಿ ಅತ್ಯಂತ ಪ್ರಮುಖವಾದ ತೀರ್ಮಾನ ಮತ್ತೊಂದು ಇಲ್ಲ ಎನ್ನತಕ್ಕದ್ದು ನನ್ನ ವೈಯುಕ್ತಿಕ ಭಾವನೆಯಾಗಿದೆ.

ನಮ್ಮಲ್ಲಿ ಮೆಡಿಕಲ್ ಎಜುಕೇಷನ್ ಎಲ್ಲಾ ಸಂದರ್ಭದಲ್ಲಿಯೂ ಕೂಡ ಒಂದಲ್ಲ ಒಂದು ರೀತಿಯ ಚರ್ಚೆಯ ವಸ್ತುವಾಗಿರುವುದನ್ನು ನಾವೆಲ್ಲ ಕೇಳುತ್ತಿದ್ದೇವೆ. ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯೆಯ ಗುಣಮಟ್ಟ ಸರಿಯಾಗಿಲ್ಲ. ಆದರ ವ್ಯವಸ್ಥೆ ಸರಿಯಾಗಿಲ್ಲ. ಇದರ ಬಗ್ಗೆ ಸರ್ಕಾರ ತೀವ್ರ ಕ್ರಮಕೈಗೊಳ್ಳಬೇಕೆನ್ನುವ ಬಗ್ಗೆ ಸಲಹೆಗಳು ಬರುತ್ತಿವೆ. ನಮ್ಮಲ್ಲಿ ಸರ್ಕಾರಿ ವಲಯದಲ್ಲಿ ನಡೆಸುತ್ತಿರುವಂಥ ಮೆಡಿಕಲ್ ಕಾಲೇಜುಗಳು ನಾಲ್ಕು. ತಮಗೆ ಗೊತ್ತಿರುವ ಹಾಗೆ, ಬಹಳ ವರ್ಷಗಳಿಂದ ಈ ಆಸ್ಪತ್ರೆಗಳ ದುರಸ್ತಿಕಾರ್ಯ ನಡೆದಿಲ್ಲ. ಅಲ್ಲಿ ಅತ್ಯಾಧುನಿಕ ಉಪಕರಣಗಳನ್ನು ನಾವು ಕೊಡಲಿಕ್ಕೆ ಆಗಲಿಲ್ಲ. ಏಕೆ ಆಗಿಲ್ಲ, ಹೇಗೆ ಎನ್ನತಕ್ಕದ್ದನ್ನು ನಾನು ವಿವರಿಸುವುದಕ್ಕೆ ಬದಲಾಗಿ, ಇರತಕ್ಕ ಕೊರತೆಯನ್ನು ತುಂಬ ತಕ್ಕ ಜವಾಬ್ದಾರಿ ನಮ್ಮ ಸರ್ಕಾರದ್ದೆಂದು ಮನಗಂಡು ಈ ವರ್ಷ ಆಸ್ಪತ್ರೆಗಳ ದುರಸ್ತಿಕಾರ್ಯಕ್ಕಾಗಿ ನಾವು ೧.೨೫ ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಖರ್ಚು ಮಾಡಿದ್ದೇವೆ. ಇನ್ನು ಕೂಡ ನಾವು ಖರ್ಚುಮಾಡತಕ್ಕ ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಜೊತೆಗೆ ಆಧುನೀಕರಣ ವ್ಯವಸ್ಥೆಯಲ್ಲಿ ಯಂತ್ರಗಳನ್ನು ಜೋಡಿಸುವುದಕ್ಕೂ ಕೂಡ ನಾವು ಈಗಾಗಲೇ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದೇವೆ. ಬೆಂಗಳೂರಿನಂತಹ ಮಹಾನಗರದಲ್ಲಿರತಕ್ಕ ದೊಡ್ಡ ಆಸ್ಪತ್ರೆಗಳಿಗೆ ಶೀತಲ ಶವಾಗಾರದ ಕೊರತೆ ಇತ್ತು. ಹೆಣಗಳನ್ನು ಇಡತಕ್ಕದ್ದಕ್ಕೆ ವ್ಯವಸ್ಥೆ ಇರಲಿಲ್ಲ. ನಮ್ಮ ಸರ್ಕಾರ ಬಂದಮೇಲೆ ಇವತ್ತು ಬೋರಿಂಗ್ ಮತ್ತು ವಿಕ್ಟೋರಿಯಾದಂಥ ಪ್ರಮುಖ ಆಸ್ಪತ್ರೆಗಳಲ್ಲಿ ಸುಮಾರು ೩೦ ಡೆಡ್ ಬಾಡಿಗಳನ್ನು ಸ್ಟೋರ್ ಮಾಡತಕ್ಕಂಥ ಶವ ಶೀತಲಕೇಂದ್ರವನ್ನು ನಾವು ಮಾಡಿದ್ದೇವೆ. ಜೊತೆಗೆ ಕೋಲ್ಡ್ ಸ್ಟೋರೇಜ್. ಜೊತೆಗೆ ಧೋಭಿಘಾಟ್ ವ್ಯವಸ್ಥೆ. ಧೋಭಿಘಾಟ್‌ನ ವ್ಯವಸ್ಥೆಯಿಲ್ಲದೆ ಬಹಳ ಅನಾನುಕೂಲವಾಗಿ ಅದೇ ಬಟ್ಟೆಯನ್ನು ಮತ್ತೊಬ್ಬ ರೋಗಿ ಉಪಯೋಗಿಸತಕ್ಕಂಥ ಕೆಟ್ಟ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೆವು. ಆ ಕೊರತೆಯನ್ನು ನೀಗುವುದಕ್ಕೋಸ್ಕರ ನಗರದ ನಾಲ್ಕು ಪ್ರಮುಖ ಆಸ್ಪತ್ರೆಗಳಿಗೆ ಎಲೆಕ್ಟ್ರಿಕ್ ಲಾಂಡ್ರಿಯನ್ನು ಹಾಕುವುದಕ್ಕೆ ಈಗಾಗಲೇ ನಾವು ಕ್ರಮ ತೆಗೆದುಕೊಂಡಿದ್ದೇವೆ. ಇವೊತ್ತು ಈ ಕಾರ್ಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಜೊತೆಗೆ ವೇಸ್ಟೇಜ್ ಅನ್ನು ಇನ್‌ಸಿನೇಟರನ್ನು ತೆಗೆದುಕೊಳ್ಳುವುದರ ಬಗ್ಗೆ ನಿನ್ನೆ ಬೌರಿಂಗ್ ಆಸ್ಪತ್ರೆಯಲ್ಲಿ ವೇಸ್ಟೇಜ್ ಅನ್ನು ತೆಗೆದುಕೊಂಡು ಹೋಗುವುದಕ್ಕೆ ಬಹಳ ತೊಂದರೆಯಾಗಿದೆ, ಆದರಿಂದ ಖಾಯಿಲೆಗಳು ಜಾಸ್ತಿ ಬರುತ್ತವೆಂದು ಹೇಳಿರುವುದು ಸತ್ಯವಾಗಿದೆ. ಈ ಕೊರತೆಯನ್ನು ನೀಗುವುದಕ್ಕೆ ಇನ್ಸಿನೇಟರ್ ತೆಗೆದುಕೊಳ್ಳುವುದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡು ಟೆಂಡರ್ ಕೂಡ ಹಾಕಿಕೊಂಡಿದ್ದು, ಆದಷ್ಟು ಬೇಗ ಈ ಕೆಲಸವನ್ನು ಮಾಡುತ್ತೇವೆ. ಇವಲ್ಲದರ ಜೊತೆಗೆ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರೊಫೆಸರ್‌ಗಳ ಮತ್ತು ಉಪನ್ಯಾಸಕರ ಕೊರತೆ ಬಹಳ ಜಾಸ್ತಿ ಇದೆ. ಪ್ರಮುಖವಾಗಿ ಬಳ್ಳಾರಿ ಮತ್ತು ಹುಬ್ಬಳ್ಳಿ ಕಾಲೇಜುಗಳಲ್ಲಿ ಜಾಸ್ತಿ ಇದ್ದು, ಈ ಕೊರತೆಯನ್ನು

ನೀಗುವುದಕ್ಕೆ ನಿವೃತ್ತ ಉಪನ್ಯಾಸಕರುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳತಕ್ಕಂಥ ಕಾರ್ಯ ಕೂಡ ಮಾಡಿದ್ದೇವೆ. ಆದ್ದರಿಂದ, ಈ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಈ ಕ್ಷೇತ್ರದಲ್ಲಿ ತೀವ್ರವಾಗಿ ಗಮನಹರಿಸಿ ಕೆಲಸ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಂದು ಪ್ರಮುಖವಾಗಿರತಕ್ಕಂಥ ವಿಷಯವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ಖಾಸಗಿ ಮೆಡಿಕಲ್ ಕಾಲೇಜುಗಳು ೧೯೮೪ರಿಂದ ಇವೊತ್ತಿನವರೆಗೆ ಸರ್ಕಾರಕ್ಕೆ ಕೊಡಬೇಕಾದಂಥ ಆಸ್ಪತ್ರೆ ಸವಲತ್ತಿನ ಶುಲ್ಕ ಎರಡೂವರೆ ಸಾವಿರ ರೂಪಾಯಿ ಕೊಡಬೇಕೆಂಬ ಬಗ್ಗೆ ಒಂದು ಹೊಸ ಕರಾರು ಮಾಡಿಕೊಂಡಿದ್ದು, ಇವೊತ್ತಿನವರೆವಿಗೂ ಅವರು ಪಾವತಿ ಮಾಡಿರುವುದಿಲ್ಲ. ಹಣವನ್ನು ವಿದ್ಯಾರ್ಥಿಗಳಿಂದ ವಸೂಲು ಮಾಡಿದ್ದಾರೆ. ಆದರೆ ಸರ್ಕಾರಕ್ಕೆ ಕೊಟ್ಟಿಲ್ಲ. ೧೯೮೪ರಿಂದ ೧೯೮೯ರವರೆಗೆ ಸರ್ಕಾರಕ್ಕೆ ಶುಲ್ಕವನ್ನು ಪಾವತಿ ಮಾಡುವುದರ ಬಗ್ಗೆ ಸರ್ಕಾರಿ "ಹುಕುಂ" ಇದ್ದರೂ ಪಾವತಿಸಿರುವುದಿಲ್ಲ. ಏಕೆ ಹೀಗಾಯಿತು? ಎನ್ನುವುದರ ವಿವರಗಳನ್ನು ಸದನಕ್ಕೆ ತಿಳಿಸತಕ್ಕಂಥಾದ್ದು ನನ್ನ ಜವಾಬ್ದಾರಿ ಅಲ್ಲವೆಂದು ಭಾವಿಸಿಕೊಂಡಿದ್ದೇನೆ. ಏನೇ ಮಾಡಿರಲಿ, ಆಗಿರತಕ್ಕಂಥ ತಪ್ಪನ್ನು ಸರಿಪಡಿಸಬೇಕೆನ್ನುವಂಥ ಒಂದೇ ಪ್ರಬಲವಾದ ಉದ್ದೇಶ ನಮ್ಮದಾಗಿದೆ. ಇವೊತ್ತು ಲಕ್ಷಾಂತರ ರೂಪಾಯಿಗಳನ್ನು ವಸೂಲು ಮಾಡಿ, ಅದನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಅಥವಾ ಸಂಬಂಧಪಟ್ಟ ಆಸ್ಪತ್ರೆಗಳ ಸವಲತ್ತಿಗೆ ಒದಗಿಸತಕ್ಕಂಥ ಒಂದು ದಿಸೆಯಲ್ಲಿ ಅವರು ಕೆಲಸ ಮಾಡಲಿಲ್ಲ. ಇವೊತ್ತು ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಸಚಿವ ಸಂಪುಟ ಸಭೆ ಇದರ ಬಗ್ಗೆ ಕಡ್ಡಾಯವಾದಂಥ ಒಂದು ನಿರ್ಣಯ ತೆಗೆದುಕೊಂಡಿತು. ಫೆಬ್ರವರಿ ೨ನೇ ತಾರೀಖಿನೊಳಗೆ ಅವರು ಹಣವನ್ನು ಪಾವತಿ ಮಾಡದಿದ್ದರೆ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಸರ್ಕಾರಿ ಆಸ್ಪತ್ರೆ ಸವಲತ್ತನ್ನು ಕೊಡಕೂಡದೆಂದು ಮತ್ತು ಅವರಿಂದ ಬರಬೇಕಾದಂಥ ಬಾಕಿ ಹಣವನ್ನು ಕಂದಾಯ ವಸೂಲಾತಿಯಂತೆ ವಸೂಲ್ಮಾಡಬೇಕೆಂಬ ತೀರ್ಮಾನ ತೆಗೆದುಕೊಂಡೆವು. ಅದನ್ನು ನಾವು ಕಡ್ಡಾಯವಾಗಿ ಅನುಷ್ಠಾನಕ್ಕೆ ತಂದ ನಂತರ ಇವೊತ್ತು ಎಲ್ಲಾ ಮೆಡಿಕಲ್ ಕಾಲೇಜುಗಳಿಗೆ ಕೂಡ ಆಸ್ಪತ್ರೆ ಸವಲತ್ತುಗಳನ್ನ ರದ್ದು ಮಾಡಿದ್ದೇವೆ. ಇದರಿಂದಾಗಿ ನಮ್ಮ ಸರ್ಕಾರದ ಬೊಕ್ಕಸಕ್ಕೆ ಇದುವರೆಗೆ ೧೫೫ ಲಕ್ಷ ರೂಪಾಯಿಗಳನ್ನು ಜಮಾ ಮಾಡಿದ್ದಾರೆ. ಅವರಿಂದ ಇನ್ನೂ ಕೂಡ ಹಣ ಬರಬೇಕಾಗಿದೆಯೆಂದು ಹೇಳಿದ್ದೇವೆ. ಮೆಡಿಕಲ್ ಕಾಲೇಜ್‌ನವರು ಸರ್ಕಾರಕ್ಕೆ ಕಟ್ಟಬೇಕಾಂಥ ಹಣವನ್ನು ಕಟ್ಟಿದರೆ ಮಾತ್ರ ಆಸ್ಪತ್ರೆ ಸವಲತ್ತನ್ನು ಒದಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ನಾವು ಅವರಿಗೆ ಸ್ಪಷ್ಟಪಡಿಸಿದ್ದೇವೆ.

(ಸಭಾಧ್ಯಕ್ಷರಾದ ಶ್ರೀ ಎಸ್. ಎಂ. ಕೃಷ್ಣ ಪೀಠವನ್ನು ಅಲಂಕರಿಸಿದರು)

ಇದರಿಂದ ಕೆಲವು ಮೆಡಿಕಲ್ ಕಾಲೇಜ್‌ನವರು ಕೋರ್ಟಿಗೆ ಹೋಗಿದ್ದಾರೆ. ಹೈಕೋರ್ಟಿನವರು ವಿಚಾರಣೆ ಮಾಡಿ, ಸರ್ಕಾರ ತೆಗೆದುಕೊಂಡಿರತಕ್ಕ ನಿಲವು ಸರಿಯಾಗಿದೆ. ನೀವು ಕೊಡಬೇಕಾದಂಥ ಆಸ್ಪತ್ರೆ ಶುಲ್ಕವನ್ನು ಮೊದಲು ಸರ್ಕಾರಕ್ಕೆ ಜಮಾ ಮಾಡಿ ನಂತರ ನ್ಯಾಯಕ್ಕಾಗಿ ಬನ್ನಿ ಎಂಬುದಾಗಿ ಮೊನ್ನೆ ತಾನೆ ಆದೇಶ ಕೊಟ್ಟಿದ್ದಾರೆ. ಆದರಿಂದ ನಾವು ತೆಗೆದುಕೊಂಡಿರತಕ್ಕ ಕ್ರಮ ಸಮರ್ಪಕವಾಗಿದೆ ಎನ್ನತಕ್ಕಂಥ ಒಂದು ಸಮಾಧಾನ ನಮಗಿದೆ. ಆದರೆ, ಈ ವಿಷಯದಲ್ಲಿ ಯಾವುದೇ ವಿಧವಾದಂಥ ಊಹಾಪೋಹಕ್ಕೆ ಅವಕಾಶವಾಗದಂತೆ ಕೆಲಸ ಮಾಡುವುದಕ್ಕೆ ನಾವು ಬದ್ಧರಾಗಿದ್ದೇವೆ ಎನ್ನುವುದನ್ನು ಈ ಸದನದ ಮುಖಾಂತರ ಈ ರಾಜ್ಯದ ಎಲ್ಲಾ ಜನತೆಗೆ ಹೇಳಬಯಸುತ್ತೇನೆ. ಜನರಲ್ಲಿ ಒಂದು ಕೆಟ್ಟ ಭಾವನೆ ಇದೆ. ಏನೆಂದರೆ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಸರ್ಕಾರ ಏನೋ ಒಂದು

ರೀತಿಯಲ್ಲಿ ರಿಯಾಯಿತಿ ತೋರಿಸುತ್ತಿದೆ, ಆದರ ಜೊತೆ ಸಂಪರ್ಕ ಇಟ್ಟುಕೊಂಡು ಸಂಬಂಧ ಬೆಳೆಸುತ್ತಿದೆ ಎಂದು ಕೊಂಡಿದ್ದಾರೆ. ಈ ರೀತಿ ಹೇಳತಕ್ಕಂಥಾದ್ದನ್ನು ನಾವು ಕೇಳುತ್ತಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಯಾವುದೇ ಖಾಸಗಿ ಮೆಡಿಕಲ್ ಕಾಲೇಜಿನ ಜೊತೆ ಈ ಸರ್ಕಾರ ಯಾವುದೇ ರೀತಿಯಾದ ಸಂಬಂಧ ಇಟ್ಟುಕೊಂಡಿಲ್ಲ, ನಿಯಮಗಳನ್ನು ಮೀರಿ ಯಾರಿಗೂ ಯಾವುದೇ ರೀತಿಯ ಸಹಾಯ ಮಾಡತಕ್ಕಂಥ ಸಂದರ್ಭದಲ್ಲಿ ಇಲ್ಲ ಎನ್ನತಕ್ಕಂಥಾದ್ದನ್ನು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ. ಇವತ್ತು ನಾನು ಗುಲ್ಬರ್ಗದಲ್ಲಿ ಒಂದು ಪತ್ರಿಕಾ ಹೇಳಿಕೆ ನೋಡಿದೆ. ಅದರಲ್ಲಿ ಎಂ. ಆರ್. ಮೆಡಿಕಲ್ ಕಾಲೇಜಿನವರು ಒಂದು ಹೇಳಿಕೆ ಕೊಟ್ಟಿದ್ದು ಸರ್ಕಾರದ ಈ ನಿಲುವಿನಿಂದಾಗಿ ಖಾಸಗಿ ಕಾಲೇಜುಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೆ ಮಲತಾಯಿ ಧೋರಣೆ ತೋರಿದಂತಾಗಿದೆ, ಅವರು ವಿದ್ಯಾರ್ಥಿಗಳ ಶಿಕ್ಷಣವನ್ನು ಕಡೆಗಣಿಸಿದ್ದಾರೆ. ಸರ್ಕಾರದ ಆಜ್ಞೆಯಲ್ಲಿ ಸರಿಯಾದ ಮಾರ್ಗಸೂಚಿ ಇಲ್ಲವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಈ ಪತ್ರಿಕಾ ಹೇಳಿಕೆಗೆ ನನ್ನ ಪ್ರತಿಕ್ರಿಯೆಯನ್ನು ವ್ಯಕ್ತ ಮಾಡಲು ಬಯಸುತ್ತೇನೆ. ಅವರು ಸರ್ಕಾರಕ್ಕೆ ಕೊಡತಕ್ಕ ಹಣ ಧರ್ಮದ ದುಡ್ಡಲ್ಲ. ಹತ್ತಾರು ವರ್ಷಗಳಿಂದ ವಿದ್ಯಾರ್ಥಿಗಳನ್ನು ಶೋಷಣೆ ಮಾಡಿ ತೆಗೆದುಕೊಂಡಿರತಕ್ಕ ಹಣ. ಆಸ್ಪತ್ರೆಯ ಸವಲತ್ತುಗಳನ್ನು ಒದಗಿಸತಕ್ಕಂಥ ಶುಲ್ಕವೆಂದು ವಿದ್ಯಾರ್ಥಿಗಳಿಂದ ನಿಗದಿತವಾದ ಫಾರಂನಲ್ಲಿ ವಸೂಲಿ ಮಾಡಿಕೊಂಡಿರತಕ್ಕ ಹಣ. ಈ ಹಣವನ್ನು ಇಟ್ಟುಕೊಂಡು ಇವತ್ತು ಹುಡುಗರನ್ನು ನಮ್ಮ ಕಡೆ ತಿರುಗಿಸಿತಕ್ಕ ಕೃತ್ಯ ಸಲ್ಲದ್ದಲ್ಲವೆಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಯಾರೇ ಆಗಲಿ, ಎಷ್ಟೇ ಎತ್ತರದವರಾಗಲಿ, ಇವರು ಸರ್ಕಾರಕ್ಕೆ ಕೊಡಬೇಕಾದಂಥ ಹಣವನ್ನು ಕೊಟ್ಟರೆ ಮಾತ್ರ ಅವರ ಜೊತೆ ಮಾತುಕತೆಯೇ ವಿನಃ ಮತ್ತೆ ಯಾವುದೂ ಇಲ್ಲವೆನ್ನತಕ್ಕ ಮಾತನ್ನು ಮತ್ತೊಮ್ಮೆ ಈ ಸಮಯದಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ. ಅವರು ನಮಗೆ ಕೊಡಬೇಕಾದ ಹಣವನ್ನು ಕೊಟ್ಟರೆ, ಆ ಹಣವನ್ನು ಯಾವ ರೀತಿ ವಿನಿಯೋಗ ಮಾಡಬೇಕು ಎಂಬುದು ಸರ್ಕಾರಕ್ಕೆ ಬಿಟ್ಟ ವಿಷಯ. ಅವರು ಕೊಟ್ಟ ಹಣವನ್ನು ಅದೇ ಆಸ್ಪತ್ರೆಗೆ ಆಧುನೀಕರಣ ಮಾಡಲಿಕ್ಕೆ ಉಪಯೋಗ ಮಾಡಬೇಕೆಂದು ಸರ್ಕಾರದವರು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದರೆ ಅದನ್ನು ನಮಗೆ ಸ್ಪಷ್ಟವಾಗಿ ಹೇಳಿಲ್ಲ ಸರ್ಕಾರದವರು ನಮಗೆ ಸ್ಪಷ್ಟವಾಗಿ ಹೇಳಿದರೆ ಮಾತ್ರ ನಾವು ಹಣವನ್ನು ಕೊಡುತ್ತೇವೆ ಎನ್ನತಕ್ಕ ಅವರ ಮಾತೂ ಕೂಡ ಸರಿಯದ್ದಲ್ಲವೆನ್ನತಕ್ಕದ್ದನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು ಖಾಸಗಿ ಕಾಲೇಜಿನವರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲಾದರೂ ಕೂಡ ಅಥವಾ ಅವರ ಸಂಸ್ಥೆಯ ಹಿತ ದೃಷ್ಟಿಯಿಂದ ಸರ್ಕಾರಕ್ಕೆ ಕೊಡಬೇಕಾದಂಥ ಹಣವನ್ನು ಆದಷ್ಟು ಬೇಗ ಕೊಟ್ಟು ಸರ್ಕಾರದೊಂದಿಗೆ ಸಹಕರಿಸಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಶುಶ್ರೂಷ ಕಾರ್ಯಕ್ರಮದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಕಾರ್ಯಕ್ರಮವನ್ನು ಬಹಳ ಜನರು ಮೆಚ್ಚಿದ್ದಾರೆ ಮತ್ತು ಬಹುತೇಕ ಜನರು ಇದನ್ನು ಟೀಕೆ ಕೂಡ ಮಾಡಿದ್ದಾರೆ. ಇದರಲ್ಲಿ ಪರ ವಿರೋಧ ಎರಡೂ ಕೂಡ ಇದೆ. ಆದರೆ ಬಹುಶಃ ಈ ಕಾರ್ಯಕ್ರಮದ ಮೂಲ ಉದ್ದೇಶವೇನು ಎನ್ನುವುದನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಮಾತ್ರ ಇದನ್ನು ಟೀಕೆ ಮಾಡುವಂಥದ್ದು ಕಡಿಮೆಯಾಗುತ್ತದೆ ಅಥವಾ ಟೀಕೆ ಮಾಡುವವರು ಇರುವುದಿಲ್ಲವೆಂದು ನನ್ನ ವೈಯುಕ್ತಿಕವಾದ ಭಾವನೆ. ಶುಶ್ರೂಷ ಕಾರ್ಯಕ್ರಮದಿಂದ ಹಳ್ಳಿಗಳಲ್ಲೇ ಔಷಧಗಳನ್ನು ಕೊಡತಕ್ಕಂಥ, ಹಳ್ಳಿಗಳಲ್ಲೇ ಉಪಚಾರವನ್ನು ಮಾಡತಕ್ಕಂಥ, ಹಳ್ಳಿಗಳಲ್ಲಿಯೆ ಚಿಕಿತ್ಸೆಯನ್ನು ಕೊಡತಕ್ಕಂಥ

ವ್ಯವಸ್ಥೆಯಿಲ್ಲ. ಶುಶ್ರೂಷ ಕಾರ್ಯಕ್ರಮ ಗ್ರಾಮೀಣ ಪ್ರದೇಶದಲ್ಲಿ ವಾಸಮಾಡತಕ್ಕಂಥ ಅನಕ್ಷರಸ್ಥರು, ತಮ್ಮ ಆರೋಗ್ಯದ ಕಡೆ ಗಮನಕೊಡದೆ ಇರತಕ್ಕವರು ಇವರುಗಳಿಗೆ ಜ್ಞಾನವನ್ನು ಸೃಷ್ಟಿಸಿ ಸಂಬಂಧಪಟ್ಟ ರೀತಿಯಲ್ಲಿ ಔಷಧಿಯನ್ನು ಕೊಡತಕ್ಕ ಸಲಹಾ ಕಾರ್ಯಕ್ರಮ ಇದು. ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ಹಣವನ್ನು ಇಟ್ಟಿಲ್ಲವೆಂದು, ಮತ್ತೆ ಔಷಧಿಯನ್ನು ಕೊಡದೆ ಸುಮ್ಮನೆ ವೈದ್ಯಾಧಿಕಾರಿಗಳು ಹೋಗಿ ನೋಡಿಕೊಂಡು ಬರುತಾ್ತರೆ, ಖಾಯಿಲೆಯ ಹೆಸರನ್ನು ಕೇಳಿದ ತಕ್ಷಣ ಜನ ಸತ್ತೇಹೋಗುತ್ತಾರೆ ಎಂದು ಈ ಸಭೆಯಲ್ಲಿ ಪ್ರಸ್ತಾಪ ಮಾಡಿರತಕ್ಕದ್ದನ್ನು ನಾನು ಕೇಳಿದ್ದೇನೆ. ಖಾಯಿಲೆಯ ಹೆಸರನ್ನು ಕೇಳಿದ ಕೂಡಲೇ ಸತ್ತುಹೋಗುವವರು ಖಾಯಿಲೆಯ ಹೆಸರನ್ನು ಹೇಳದಿದ್ದರೂ ಕೂಡ ಸತ್ತು ಹೋಗುತ್ತಾರೆ. ಈಗ ಕ್ಯಾನ್ಸರ್, ಹೃದಯ ರೋಗಗಳು ಬಂದರೆ ಬಹುಶಃ ಯಾರೂ ಕೂಡ ಉಳಿಸಲು ಆಗುವುದಿಲ್ಲ. ಆದರೆ ಅವರಿಗೆ ಸ್ವಲ್ಪ ತರಬೇತಿಯನ್ನು ಕೊಟ್ಟು ಅಥವಾ ಅವರಿಗೆ ಜ್ಞಾನವನ್ನು ಮೂಡಿಸಿ ಸಂಬಂಧಪಟ್ಟಂಥ ಸಂಶೋಧನೆಯ ಆಸ್ಪತ್ರೆಗಳ ಮೂಲಕ ಔಷಧಿಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಕೂಡ ನಾವು ಮಾಡಬೇಕಾಗುತ್ತದೆ. ಈ ಕಾರ್ಯಕ್ರಮ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳ ಜನಪ್ರಿಯವಾಗಿದೆ. ಅದರಲ್ಲಿಯೂ ಕೂಡ ವಿಶೇಷವಾಗಿ ಕಾರ್ಮಿಕರು ಇರತಕ್ಕ ಜಾಗದಲ್ಲಿ, ಕೊಳಚೆ ಪ್ರದೇಶದಲ್ಲಿರತಕ್ಕ ಭಾಗದಲ್ಲಿ, ಅನಕ್ಷರಸ್ಥರಿಲ್ಲಥ ಜಾಗದಲ್ಲಿ, ಅದರಲ್ಲಿಯೂ ಸಹ ಈ ಕಾರ್ಯಕ್ರಮದಲ್ಲಿ ಹೆಂಗಸರು ಹಾಜರಾಗತಕ್ಕಡನ್ನು ನೋಡಿದಾಗ ಅವರಲ್ಲಿ ಜನಪ್ರಿಯವಾಗಿದೆ ಎಂದು ಕೇಳಿದ್ದೇನೆ. ಆದುದರಿಂದ ಈ ಒಂದು ಕಾರ್ಯದಲ್ಲಿರತಕ್ಕ ವ್ಯವಸ್ಥೆಯೊಳಗೆ ಮಂಡಲ ಪಂಚಾಯಿತಿಯ ಹೆಡ್‌ಕ್ವಾರ್ಟರ್‌ನಲ್ಲಿ ಆರು ತಿಂಗಳಿಗೊಮ್ಮೆ ಅಲ್ಲಿರತಕ್ಕ ಪ್ಯಾರಾಮೆಡಿಕಲ್ ವರ್ಕ್‌ರ್ಸ್ ಮತ್ತು ಅಲ್ಲಿರತಕ್ಕ ಡಾಕ್ಟರುಗಳು ತಾಲ್ಲೂಕು ಮಟ್ಟದಿಂದ ಹೋಗತಕ್ಕ ವೈದ್ಯರುಗಳ ಸಂಯೋಗದೊಂದಿಗೆ ಅವರಿಗೆ ತಿಳುವಳಿಕೆಯನ್ನು ಕೊಡತಕ್ಕಂಥ ಕಾರ್ಯವನ್ನು ಮಾಡಲು ಪ್ರಯತ್ನ ಮಾಡಿದ್ದೇವೆ. ಜೊತೆಗೆ ಅಲ್ಲಿ ಖಾಯಿಲೆಯು ಉಗ್ರವಾಗಿದ್ದರೆ, ಅದು ದೊಡ್ಡ ಖಾಯಿಲೆಯಾಗಿದ್ದರೆ ಆ ರೋಗಿಯ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಆತನನ್ನು ಮೇಜರ್ ಆಸ್ಪತ್ರೆಗೆ ತಂದು ಅಲ್ಲಿ ಚಿಕಿತ್ಸೆಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಮಾಡಿದ್ದೇವೆ. ಇವತ್ತು ನಿಮಗೆ ಹೇಳುವುದಾದರೆ, ಕ್ಯಾನ್ಸರ್ ಆಸ್ಪತ್ರೆಯಲ್ಲಿ ಈ ಒಂದು ಯೋಜನೆಯಲ್ಲಿ The number of cases referred to specialists is 12309. ೧೨೩೦೯ ಜನ ರೋಗಿಗಳನ್ನು ನಾವು ರೆಫ್ರಲ್ ಆಸ್ಪತ್ರೆಗಳಿಗೆ ಕಳುಹಿಸಿ ಅಲ್ಲಿಯೇ ಅವರಿಗೆ ಚಿಕಿತ್ಸೆಯನ್ನು ಕೊಡಿಸತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಮತ್ತು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣವನ್ನು ನೇರವಾಗಿ ಆಯಾಯ ಸಂಸ್ಥೆಗಳಿಗೆ ಕೊಡತಕ್ಕ ಕೆಲಸವನ್ನು ಮಾಡಿದ್ದೇವೆ. ಈ ಕಾರ್ಯಕ್ರಮ ಜನಗಳೊಂದಿಗೆ ಸಂಪರ್ಕವನ್ನು ಬೆಳೆಸಿ, ಜನರಿಗೆ ಆರೋಗ್ಯದ ಬಗ್ಗೆ ತಿಳುವಳಿಕೆಯನ್ನು ಕೊಡತಕ್ಕ ಕಾರ್ಯಕ್ರಮವಾಗಿದೆ. ಈ ಕಾರ್ಯಕ್ರಮಕ್ಕೆ ನಾವು ಶುಶ್ರೂಷ ಎಂದು ಹೆಸರನ್ನು ಇಟ್ಟಿದ್ದೇವೆ. ಈ ಕಾರ್ಯಕ್ರಮವನ್ನು ಈ ವರ್ಷವೂ ಕೂಡ ತೀವ್ರವಾಗಿ ಮಾಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಎಸ್. ಸಿ. / ಎಸ್. ಟಿ. ಇರತಕ್ಕಂತಹ ಕ್ಯಾಂಪ್‌ಗಳಲ್ಲಿ, ಅರ್ಬನ್ ಸ್ಲಮ್ಸ್‌ನಲ್ಲಿ, ಟ್ರೈಬಲ್ ಏರಿಯಾಗಳಲ್ಲಿ, ಎಕಾನಾಮಿಕಲಿ ಮತ್ತು ಸೋಷಿಯಲಿ ಬ್ಯಾಕ್‌ವರ್ಡ್ ಆಗಿರತಕ್ಕಂತಹ ಕಮ್ಯೂನಿಟೀಸ್‌ನಲ್ಲಿ ಈ ಒಂದು ಹೆಲ್ತ್ ಚೆಕಿಂಗ್ ಮಾಡತಕ್ಕಂತಹದಕ್ಕೆ ಪ್ರಿಯಾರಿಟಿ ಕೊಟ್ಟು ಮಾಡಬೇಕೆಂದು ಕೆಲಸ ಮಾಡಿದ್ದೇವೆ. ಇದರಲ್ಲಿ ಯಾವುದೇ ವಿಧವಾದಂತಹ ದುರುಪಯೋಗವಾಗಲಿ, ಜನಪ್ರಿಯತೆಗಳಿಸುವುದಕ್ಕೋಸ್ಕರವಾಗಿಯಾಗಲೀ ಅಥವಾ ಪ್ರಚಾರಕ್ಕಾಗಿ

ಇರತಕ್ಕಂತಹ ಕಾರ್ಯಕ್ರಮವಲ್ಲ ಎನ್ನುವುದನ್ನು ಈ ಮೂಲಕ ಸ್ಪಷ್ಟ ಪಡಿಸುತ್ತಿದ್ದೇನೆ. ಏಯಡ್ಸ್ ಕಾಯಿಲೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಿನ್ನೆ ನಮ್ಮ ಮಿತ್ರರು ಇದರ ಬಗ್ಗೆ ಬಹಳವಾಗಿ ಹೇಳಿದರು. ಲಕ್ಷಾಂತರ ಜನ ಈ ಏಡ್ಸ್ ಕಾಯಿಲೆಯಿಂದ ಸಾಯುತ್ತಿದ್ದಾರೆ, ಇದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆಯೆಂದು ಕೇಳಿದ್ದಾರೆ. ಈ ಏಡ್ಸ್ ಕಾಯಿಲೆ ಬಹಳ ಭಯನಾಕ ರೋಗ ಹೌದು. ಇದು ಬಂದರೆ ಉಳಿಯುವುದಿಲ್ಲ ಎನ್ನುವ ತೀರ್ಮಾನ ಕೂಡ ಇದೆ. ಇದು ಪಾಶ್ಚಿಮಾತ್ಯ ಸಂಸ್ಕೃತಿಗೆ ಸ್ವಲ್ಪ ಅಂಟು ಬಿದ್ದಿರತಕ್ಕಂತಹವರಿಗೆ ಹೆಚ್ಚು ಬರುತ್ತದೆಂದು ಹೇಳುತ್ತಾರೆ. ಜೊತೆಗೆ ಒಬ್ಬರ ಜೊತೆ ಮತ್ತೊಬ್ಬರು ಸಂಪರ್ಕ ಇಟ್ಟುಕೊಂಡಾಗ ಈ ರೋಗ ಹೆಚ್ಚು ಹರಡುತ್ತದೆಯೆಂದು ಕೂಡ ಹೇಳಿದ್ದಾರೆ. ಈ ಒಂದು ಯೋಜನೆಯ ಹಿನ್ನಲೆಯಲ್ಲಿ ನಮ್ಮ ರಾಜ್ಯದಲ್ಲಿ ತಪಾಸಣೆಯನ್ನು ಮಾಡತಕ್ಕಂತಹ ನಾಲ್ಕು ಪ್ರಮುಖ ಕೇಂದ್ರಗಳನ್ನು ನಾವು ಇಟ್ಟುಕೊಂಡಿದ್ದೇವೆ. ಈ ನಾಲ್ಕು ಪ್ರಮುಖ ಕೇಂದ್ರಗಳಲ್ಲಿ ಇದುವರೆಗೆ ಭರ್ತಿಯಾಗಿರತಕ್ಕಂಥದ್ದು ೪೬ ಜನ ಮಾತ್ರ. ಲಕ್ಷಾಂತರ ಜನರೂ ಇಲ್ಲ, ೧೦೦ ಜನರೂ ಇಲ್ಲ. ೪೬ ಜನ ಮಾತ್ರ ಆಗಿದ್ದಾರೆ. ಆದರೆ ಒಬ್ಬರೂ ಕೂಡ ಇದುವರೆಗೆ ಸತ್ತಿಲ್ಲ. ಆದರೆ ಇದು ಹೆಚ್ಚು ಹರಡಬಹುದು ಎನ್ನುವಂತಹ ಭಯ ಭಾರತ ಸರ್ಕಾರಕ್ಕೂ ಇದೆ, ನಮಗೂ ಇದೆ ಎನ್ನುವುದನ್ನು ಈ ಸಮಯದಲ್ಲಿ ನಾವು ಹೇಳಿದ್ದೇವೆ. ಇದಕ್ಕಾಗಿ ಇವತ್ತು ಎಲ್ಲಾ ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಇದಕ್ಕೆ ಸಂಬಂಧಪಟ್ಟಂತೆ ರಕ್ತ ಪರೀಕ್ಷೆ ಮಾಡತಕ್ಕಂತಹ ಮತ್ತು ಪ್ರಯೋಗ ಶಾಲೆಗಳನ್ನು ಮಾಡತಕ್ಕಂತಹ ಉಪಕರಣಗಳನ್ನು ಒದಗಿಸುವುದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದು ಭಾರತ ಸರ್ಕಾರದ ಆದೇಶವೂ ಕೂಡ ಹೌದು. ಈ ಹಿನ್ನಲೆಯಲ್ಲಿ ನಾವು ಈ ಸಾರಿ ಒಂದು ಕೋಟಿ ೭೫ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಹಾಕಿಕೊಂಡಿದ್ದೇವೆ. ಈ ಒಂದು ಹಿನ್ನಲೆಯಲ್ಲಿ ಒಬ್ಬ ಹೊಸ ಅಧಿಕಾರಿಯನ್ನು ಕೂಡ ನೇಮಕ ಮಾಡಿದ್ದೇವೆ. ಆ ಅಧಿಕಾರಿಯ ಮುಖಂಡತ್ವದಲ್ಲಿ ಈ ಕೆಲಸ ಬಹಳ ಯಶಸ್ವಿಯಾಗಿ ನಿಯಂತ್ರಣಗೊಳ್ಳುತ್ತದೆ. ಇದರ ಬಗ್ಗೆ ಮಾನ್ಯ ಸದಸ್ಯರುಗಳು ಯಾರೂ ಕೂಡ ಕಾಳಜಿ ಮಾಡತಕ್ಕಂಥದ್ದು ಅಗತ್ಯವಿಲ್ಲ ಎನ್ನುವುದನ್ನು ನಾನು ಅವರಿಗೆ ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ, ಕಿದ್ವಾಯಿ ಆಸ್ಪತ್ರೆ ಬಗ್ಗೆ ಪ್ರಶ್ನೆಗಳ ರೂಪದಲ್ಲಿ ಮತ್ತು ಗಮನ ಸೆಳೆಯುವ ಸೂಚನೆಯ ರೂಪದಲ್ಲಿ ಹಲವಾರು ರೀತಿಯಲ್ಲಿ ನಾವು ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಆದ್ದರಿಂದ ಇದರ ಪ್ರಸ್ತಾವನೆ ಅನಗತ್ಯವೆಂದು ತಿಳಿದುಕೊಂಡಿದ್ದೇನೆ. ಆದರೂ ಕೂಡ ಈ ಒಂದು ಆಸ್ಪತ್ರೆ ದಕ್ಷಿಣ ರಾಜ್ಯದಲ್ಲೇ ಅತ್ಯಂತ ಪ್ರತಿಷ್ಠವಾದಂತಹ ಆಸ್ಪತ್ರೆ. ಇತ್ತೀಚಿನ ನಮ್ಮ ಶುಶ್ರೂಷೆ ಕಾರ್ಯಕ್ರಮದಿಂದಾಗಿ ಪಕ್ಕದ ರಾಜ್ಯಗಳಾದ ಆಂಧ್ರ ಮತ್ತು ತಮಿಳುನಾಡಿನಿಂದ ಬರತಕ್ಕಂಥ ಈ ರೋಗಿಗಳ ಒತ್ತಡದಿಂದ ಈ ಆಸ್ಪತ್ರೆಯಲ್ಲಿ ಸ್ವಲ್ಪ ರೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ಇದು ಸಂಶೋಧನಾ ಆಸ್ಪತ್ರೆ ಮತ್ತು ಅಧ್ಯಯನ ಮಾಡತಕ್ಕಂತಹ ಆಸ್ಪತ್ರೆಯೂ ಕೂಡ ಹೌದು. ಆದರೆ ಒಂದು ರೀತಿಯ ಸಾರ್ವಜನಿಕ ಆಸ್ಪತ್ರೆಯಾದಂತಹ ರೀತಿಯಲ್ಲಾಗಿದೆ. ಅದಕ್ಕೆ ಸಾಕಷ್ಟು ಸವಲತ್ತುಗಳನ್ನು ನಾವು ಕೊಡಬೇಕಾಗುತ್ತಿದೆ. ಇನ್ನೂ ಹೆಚ್ಚು ಹೆಚ್ಚು ಉಪಕರಣಗಳನ್ನು ನಾವು ಒದಗಿಸಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಹಣವನ್ನು ಕೂಡ ನಾವು ವಿನಿಯೋಗಿಸಬೇಕಾಗುತ್ತದೆ. ಈ ದಿಶೆಯಲ್ಲಿ ನಮ್ಮ ಉಳಿತಾಯ ಆಯವ್ಯಯದಲ್ಲಿ ಹೆಚ್ಚು ಹಣವನ್ನು ಕೊಡತಕ್ಕಂತಹ ಕೆಲಸವನ್ನು ನಾವು ಮಾಡಿದ್ದೇವೆ. ಅದನ್ನು ಇನ್ನೂ ಕೂಡ ಅಭಿವೃದ್ಧಿ ಮಾಡತಕ್ಕಂತಹ ಕಾರ್ಯವನ್ನು ನಾವು ತೀವ್ರವಾಗಿ ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆ. ಮಾನ್ಯ

ಅಧ್ಯಕ್ಷರೇ, ಭಾರತೀಯ ವೈದ್ಯ ಪದ್ಧತಿ ಇದು ಇತ್ತೀಚಿನ ದಿನಗಳಲ್ಲಿ ಸ್ವಲ್ಪ ಜನಪ್ರಿಯವಾಗುತ್ತಿದೆ. ನಮ್ಮಲ್ಲಿ ಆಯುರ್ವೇದ, ಯುನಾನಿ, ಯೋಗ, ಸಿದ್ಧ ಇತ್ಯಾದಿ ಚಿಕಿತ್ಸೆಗಳಿವೆ. ನಮ್ಮ ಜನಗಳು ಇದಕ್ಕೆ ಹೆಚ್ಚು ಗಮನ ಕೊಡುತ್ತಿದ್ದಾರೆ. ಇದು ಹೆಚ್ಚು ಅನುಕೂಲಕರ ಎನ್ನುವ ಭಾವನೆ ಇತ್ತೀಚಿಗೆ ಜನಗಳಲ್ಲಿ ಬರುತ್ತಿದೆ. ಇದನ್ನು ನಾವು ಗಮನದಲ್ಲಿ ಇಟ್ಟುಕೊಂಡು ಈ ವರ್ಷದ ಆಯವ್ಯಯದಲ್ಲಿ ಹೋದ ವರ್ಷಕ್ಕಿಂತ ೧೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ನಾವು ಇದರಲ್ಲಿ ತೊಡಗಿಸಿದ್ದೇವೆ. ಈಗಾಗಲೇ ಕೆಲವು ನಗರಪ್ರದೇಶಗಳಲ್ಲಿ ಇರತಕ್ಕಂಥ ಆಸ್ಪತ್ರೆಗಳ ಹಾಸಿಗೆಗಳ ಸಂಖ್ಯೆಯನ್ನು ಕೂಡ ಹೆಚ್ಚು ಮಾಡತಕ್ಕಂಥ ಕೆಲಸ ಮಾಡುತ್ತಿದ್ದೇವೆ. ಜೊತೆಗೆ ಗ್ರಾಮೀಣ ಪ್ರದೇಶಗಳಲ್ಲಿ ಕೂಡ ಈ ಸಾರಿ ಹೆಚ್ಚು ಆಯುರ್ವೇದ ಆಸ್ಪತ್ರೆಗಳನ್ನು ಮಂಜೂರಾತಿ ಮಾಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈ ಹಿನ್ನೆಲೆಯಲ್ಲಿ ಈವರೆಗೆ ಸುಮಾರು ೧೨ ಆಸ್ಪತ್ರೆಗಳನ್ನು ತಾಲ್ಲೂಕು ಮಟ್ಟದಲ್ಲಿ ಮಂಜೂರು ಮಾಡಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದಕ್ಕೆ ಹೆಚ್ಚು ಒತ್ತು ಕೊಡತಕ್ಕಂಥ ಕಾರ್ಯವನ್ನು ನಾವು ಮಾಡಿದ್ದೇವೆ. ತನ್ನದೇ ಆದಂತಹ ಒಂದು ಮಂಡಳಿಯನ್ನು ರಚನೆ ಮಾಡಲು ಅವಕಾಶ ಮಾಡಿದ್ದೇವೆ. ಆಯುರ್ವೇದ ಆಸ್ಪತ್ರೆಗಳನ್ನು ಹೆಚ್ಚು ಸ್ಥಾಪನೆ ಮಾಡಬೇಕೆಂದು ಭಾರತ ಸರ್ಕಾರದ ಉದ್ದೇಶವೂ ಕೂಡ ಆಗಿದೆ. ಈ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕು ಎನ್ನುವ ಭಾವನೆ ಇರುವುದರಿಂದ ಈ ವಿಷಯಕ್ಕೆ ನಾವು ಹೆಚ್ಚು ಒತ್ತು ಕೊಟ್ಟಿದ್ದೇವೆ ಎಂದು ಹೇಳಬಯಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಕೊನೆಯದಾಗಿ ನಾನು ಒಂದು ವಿಷಯವನ್ನು ತಮ್ಮಲ್ಲಿ ಪ್ರಸ್ತಾಪಿಸಬಯಸುತ್ತೇನೆ. ಅದೇನೆಂದರೆ, ಔಷಧಿಗಳನ್ನು ಉಪಯೋಗಿಸುವ ಬಗ್ಗೆ ಮತ್ತು ಔಷಧಿಗಳನ್ನು ಸರಬರಾಜು ಮಾಡತಕ್ಕ ಬಗ್ಗೆ ಬಹುಶಃ ಈ ಸದನಕ್ಕೆ ಸರ್ಕಾರದ ನೀತಿ ನಿಯಮಗಳನ್ನು ಹೇಳಿದರೆ ಅನುಕೂಲ ಆಗುತ್ತದೆ ಎನ್ನುವ ಭಾವನೆಯನ್ನು ನಾನು ಇಟ್ಟುಕೊಂಡಿದ್ದೇನೆ. ಔಷಧಿಗಳನ್ನು ಕೊಳ್ಳತಕ್ಕ ವಿಚಾರದ ಬಗ್ಗೆ ಪ್ರಸ್ತಾಪಿಸುತ್ತೇನೆ. ಅಧ್ಯಕ್ಷರೇ, ತಮಗೆ ಗೊತ್ತಿದೆ, ಇವತ್ತು ಯಾರಾದರೂ ಒಬ್ಬ ಸಾಮಾನ್ಯ ರೋಗಿಯು ಸರ್ಕಾರಿ ಆಸ್ಪತ್ರೆಗೆ ಹೋದರೆ ಡಾಕ್ಟರ್‌ಗಳು ಆಸ್ಪತ್ರೆಯಲ್ಲಿ ಇರುವಂಥ ಔಷಧಿ ಕೊಟ್ಟರೆ ಗುಣವಾಗುವುದಿಲ್ಲ. ಆಕಸ್ಮಾತ್ ಯಾರಾದರೂ ವಿ. ಐ. ಪಿ. ಅಥವಾ ಒಬ್ಬ ಜ್ಞಾನವಂತ ಹೋದರೆ ಡಾಕ್ಟರ್ ಏನು ಹೇಳುತ್ತಾರೆಂದರೆ ಸ್ವಾಮಿ, ತಾವು ಬೇರೆ ಕಡೆಯಿಂದ ಈ ಮಾತ್ರೆ ತರಿಸಿ ಹುಷಾರು ಆಗುತ್ತದೆ ಎಂದು. ಇದು ಸಾಮಾನ್ಯವಾದಂಥ ಭಾವನೆ. ಈ ಮಾತಿಗೆ ಕಾರಣ ಇಲ್ಲದೇ ಇಲ್ಲ. ಏಕೆಂದರೆ, ಆಸ್ಪತ್ರೆಗಳಿಗೆ ಒದಗಿಸಿರತಕ್ಕಂಥ ಔಷಧಿ ಸಬ್ ಸ್ಟ್ಯಾಂಡರ್ಡ್ ಅಥವಾ ಪ್ರಮಾಣ ಕಡಿಮೆ ಇರುತ್ತದೆ. ಈ ಮಟ್ಟದ್ದು ಎನ್ನುವುದನ್ನು ಈ ಮಾತಿನ ಹಿನ್ನೆಲೆಯಲ್ಲಿ ತಾವು ತಿಳಿದುಕೊಳ್ಳಬಹುದು. ಇವತ್ತು ಕರ್ನಾಟಕದಲ್ಲಿ ಔಷಧಿ ಕಂಪನಿಗಳು ಕಡಿಮೆ ಇವೆ. ಈ ಔಷಧ ಕಂಪನಿಗಳೆಲ್ಲಾ ಹೊರಗಿನ ರಾಜ್ಯಗಳಲ್ಲಿ ಬಹಳಷ್ಟು ಇದೆ. ಬಹುಶಃ ನಾನು ಈ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಇದರಲ್ಲಿ ಔಷಧಿಗಳ ವ್ಯಾಪಾರ ಮಾಡತಕ್ಕಂಥವರು ಬಹುತೇಕ ಮಾರ್ವಾಡಿಗಳೆ ಜಾಸ್ತಿ. ಮಾರ್ವಾಡಿಗಳಿಗೆ ಈ ರಾಜ್ಯದಲ್ಲಿ ದುಡ್ಡು ಇದ್ದರೆ ಏನು ಬೇಕಾದರೂ ಮಾಡಬಹುದು ಎಂಬ ಭಾವನೆ ಬಂದಿದೆ. ಇದನ್ನು ನಾವು ಮೊಟಕು ಮಾಡದೇ ಇದ್ದರೆ ಅಥವಾ ಇದನ್ನು ಖಂಡನೆ ಮಾಡದೆ ಇದ್ದರೆ ಬಹುಶಃ ನಾವು ನಮ್ಮ ಆಸ್ಪತ್ರೆಗಳಿಗೆ ಅತ್ಯಂತ ಉತ್ತಮವಾದ ಔಷಧಿಗಳನ್ನು ಒದಗಿಸುವುದಕ್ಕೆ ಆಗುವುದಿಲ್ಲ. ೧೯೮೯-೯೦ರಲ್ಲಿ ಸರ್ಕಾರದವರು ಒಂದು ನಿರ್ಣಯ ತೆಗೆದುಕೊಂಡಿದ್ದಾರೆ. ಮಧ್ಯವರ್ತಿಯಿಂದ ಔಷಧಿಗಳನ್ನು ಕೊಳ್ಳಬಾರದು. ಇದು

ತಂತ್ರಜ್ಞರ ಸಲಹೆಯೂ ಹೌದು. ಹೈ ಪವರ್ ಕಮಿಟಿಯವರ ಸಲಹೆಯೂ ಹೌದು, ಸರ್ಕಾರದ ತೀರ್ಮಾನವೂ ಕೂಡ ಹೌದು. ಅವರು ಏನು ಮಾಡಿದ್ದಾರೆ ಎಂದರೆ, ಸರ್ಕಾರದ ಸ್ವಾಮಿತ್ವದಲ್ಲಿ ಇರತಕ್ಕಂಥ ಕಂಪನಿಗಳಲ್ಲಿ ಮಾತ್ರ ಔಷಧಿಗಳನ್ನು ಕೊಳ್ಳಬೇಕು. ಮಧ್ಯವರ್ತಿಗಳಿಂದ ಅಂದರೆ ವಿತರಣೆಗಾರರಿಂದ ಔಷಧಿಗಳನ್ನು ಕೊಳ್ಳಬಾರದು ಎಂಬ ಹಿನ್ನೆಲೆಯಲ್ಲಿ ತೀರ್ಮಾನ ಮಾಡಿದ್ದಾರೆ. ಅದರಂತೆ ಅವರು ದರಪಟ್ಟಿಯನ್ನು ಕೂಡ ನಿಷ್ಕರ್ಷಿಸಿದ್ದಾರೆ. ಆ ದರಪಟ್ಟಿ ಇನ್ನು ಕೂಡ ಚಾಲ್ತಿಯಲ್ಲಿದೆ. ಇದು ಫೆಬ್ರವರಿ ೨೦ಕ್ಕೆ ಮುಗಿಯಿತು ಎಂದು ಕಾಣುತ್ತದೆ. ಹೊಸ ದರ ಪಟ್ಟಿ ಇನ್ನೂ ಆಗಿಲ್ಲ. ಇದು ಆದನಂತರ ಕೆಲವರು ಸರ್ಕಾರಿ ಸ್ವಾಮಿತ್ವದ ಕಂಪನಿಗಳಲ್ಲಿ ಔಷಧಿ ಕೊಳ್ಳುವುದಾದರೆ ಕರ್ನಾಟಕದಲ್ಲಿ ಇರತಕ್ಕಂಥ ಸಣ್ಣ ಕೈಗಾರಿಕೆಗಳಿಗೆ ತೊಂದರೆ ಆಗುತ್ತದೆ, ಇದಕ್ಕೂ ಕೂಡ ನೀವು ಗಮನ ಕೊಡಬೇಕು ಎನ್ನುವ ಒಂದು ಮಾತನ್ನು ಕೈಗಾರಿಕೆ ಇಲಾಖೆಯವರೂ ಆರೋಗ್ಯ ಇಲಾಖೆಯವರಿಗೆ ಪತ್ರದ ಮೂಲಕ ಒತ್ತಾಯ ಮಾಡಿದ್ದಾರೆ. ತದನಂತರ ಈ ವಿಷಯ ಕೋರ್ಟಿಗೆ ಕೂಡ ಹೋಯಿತು. ಇದು ಆದ ಮೇಲೆ ಕೋರ್ಟಿನಲ್ಲಿ ಒಂದು ತೀರ್ಮಾನ ಆಯಿತು. ತಯಾರಿಕರಿಂದ ಔಷಧಿಯನ್ನು ಕೊಂಡುಕೊಳ್ಳಬಹುದು ಎಂದು ತೀರ್ಮಾನ ಕೂಡ ಆಯಿತು. ಈ ವರ್ಷ ೧೯೯೮-೯೦ರ ಪ್ರಕಾರವಾಗಿ ದರಪಟ್ಟಿ ಏನು ಇದೆ ಅದರಂತೆ ಔಷಧಿಯನ್ನು ಖರೀದಿಸಿದ್ದಾರೆ. ರೇಟ್ ಜಾಸ್ತಿ ಆಯಿತು. ಆ ಹಿನ್ನೆಲೆಯಲ್ಲಿ ಕಂಪನಿಯವರು ಕೂಡ ನಾವು ಕೇಳಿದಷ್ಟು ಔಷಧಿಯನ್ನು ಸರ್ಕಾರಕ್ಕೆ ಒದಗಿಸಲಿಲ್ಲ. ಆದುದರಿಂದಲೇ ಈ ವರ್ಷ ಔಷಧಿ ಖರೀದಿಯ ಪ್ರಮಾಣ, ಮೊತ್ತ ಕಡಿಮೆಯಾಗಿದೆ ಎನ್ನುವ ಮಾತನ್ನು ನಿನ್ನೆ ತಾನೇ ಈ ಸದನದಲ್ಲಿ ನಾನು ಹೇಳಿದ್ದೇನೆ. ಈ ಹಿನ್ನೆಲೆಯಲ್ಲಿ ಮಾರ್ವಾಡಿಗಳು, ಯಾರು ಮಧ್ಯವರ್ತಿಗಳು ಹಿಂದೆ ಕಳಪೆ ದರ್ಜೆಯ ಔಷಧಿಯನ್ನು ಕೊಟ್ಟು ಹಣ ಮಾಡುತ್ತಾ ಇದ್ದರು ಅವರಿಗೆಲ್ಲಾ ಕೈಕಟ್ಟಿದ ಹಾಗೆ ಆಗಿದೆ. ಈ ಕಾರಣದಿಂದ ನಮ್ಮಲ್ಲಿ ಇವತ್ತು ವಿಶೇಷ ತಜ್ಞರ ಸಮಿತಿ ಏನಿದೆ ಅದರಲ್ಲಿ ಅತ್ಯಂತ ಹಿರಿಯ ವೈದ್ಯರಿದ್ದಾರೆ, ವಿಜ್ಞಾನಿಗಳಿದ್ದಾರೆ ಮತ್ತು ಸರ್ಕಾರದ ಹಿರಿಯ ಅಧಿಕಾರಿಗಳಿದ್ದಾರೆ. ಇವರು ಇವತ್ತಿನ ಪರಿಸ್ಥಿತಿಗೆ ಯಾವ ಯಾವ ಭಾಗಕ್ಕೆ ಯಾವ ಯಾವ ಔಷಧಿಗಳು ಬೇಕು, ಯಾವ ಔಷಧಿಯಿಂದ ಯಾವ ಕಾಯಿಯಿಲೆ ಗುಣವಾಗುತ್ತದೆ, ಜೀವ ರಕ್ಷಕ ಔಷಧಿಗಳು ಎಷ್ಟು, ಎಷ್ಟು ಅನಿವಾರ್ಯವಾಗಿ ಔಷಧಿಗಳು ಬೇಕಾಗುತ್ತದೆಂಬುದನ್ನು ಗುರುತುಮಾಡಿ ಸಾಕಷ್ಟು ಪರಿಶೀಲನೆ ಮಾಡಿ, ವಿಮರ್ಶೆಮಾಡಿ ಆದನಂತರ ಹೈ ಪವರ್ ಕಮಿಟಿಗೆ ಶಿಫಾರಸ್ಸು ಮಾಡಿದ್ದಾರೆ. ಹೈ ಪವರ್ ಕಮಿಟಿಯಲ್ಲೂ ಕೂಡ ಸರ್ಕಾರದ ಅತ್ಯಂತ ಹಿರಿಯ ಅಧಿಕಾರಿಗಳಿದ್ದಾರೆ ವಿತ್ತೀಯ ಇಲಾಖೆಯ ಕಾರ್ಯದರ್ಶಿಯವರೂ ಇದ್ದಾರೆ. ಆರೋಗ್ಯ ಇಲಾಖೆಯವರೂ ಇದ್ದಾರೆ. ಕಾನೂನು ಇಲಾಖೆಯವರೂ ಇದ್ದಾರೆ ಇವತ್ತು ತಜ್ಞರ ಸಮಿತಿಯ ಶಿಫಾರಸಿನ ಆಧಾರದ ಮೇಲೆ ಅವರು ಕ್ರಮ ಕೈಗೊಳ್ಳಲಿದ್ದಾರೆ. ಆದರೆ ಈ ಸಾರಿ ನಮ್ಮ ತಜ್ಞರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಡ್ರಗ್ಸ್ ಕಂಟ್ರೋಲರ್ ಕೊಟ್ಟಿರತಕ್ಕ ಜಿ.ಎಂ.ಪಿ.ಸಿ. ಸರ್ಟಿಫಿಕೇಟ್ ಸರಿಯಾಗಿದೆಯೋ ಇಲ್ಲವೋ ಎಂಬುವುದನ್ನು ನೋಡುವುದಕ್ಕೆ ಒಂದು ಕಮಿಟಿಯನ್ನೂ ಕೂಡ ಮಾಡಿದ್ದಾರೆ. ಅದನ್ನು ಅಧಿಕಾರಿಗಳೇ ಹೋಗಿ ದಿಢೀರನೆ ತನಿಖೆ ಮಾಡಿದಾಗ ೨-೩ ಕಡೆ ಈ ಕಂಪನಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಔಷಧಿಗಳನ್ನು ತಯಾರು ಮಾಡತಕ್ಕ ವ್ಯವಸ್ಥೆ ಇಟ್ಟಿಲ್ಲ, ಜಿ. ಎಂ. ಪಿ. ಸಿ. ಸರ್ಟಿಫಿಕೇಟನ್ನು ತೆಗೆದುಕೊಂಡರೂ ಕೂಡ ಇವರು ಔಷಧಿ ಮಾಡತಕ್ಕ ವಿಧಿವಿಧಾನಗಳನ್ನು ಅನುಸರಿಸಿಲ್ಲ, ಆದುದರಿಂದ ಇವರ ಪರ್‌ಫಾರ್ಮೆನ್ಸ್ ಬಹಳ ಕೆಟ್ಟಿದ್ದಿದೆ ಎನ್ನತಕ್ಕ ವರದಿಯನ್ನು ಕೊಟ್ಟಿದ್ದಾರೆ ಆ ವರದಿಯ ಹಿನ್ನೆಲೆಯಲ್ಲಿ ೪-೫ ಜನರ ಜಿ. ಎಂ. ಪಿ. ಸಿ.

ಸರ್ಟಿಫಿಕೇಟ್‌ನ್ನು ರದ್ದು ಮಾಡಿದ್ದಾರೆ. ನಾನು ಮೊನ್ನೆ ಒಂದು ಪತ್ರಿಕೆಯಲ್ಲಿ ನೋಡಿದೆ. ಬಹಳ ಅಕ್ರಮವಾಗಿದೆ, ೪೨ ಲಕ್ಷ ರೂಪಾಯಿಗಳನ್ನು ಆರೋಗ್ಯ ಮಂತ್ರಿಗಳು ಗುಳುಂ ಮಾಡಿದ್ದಾರೆ, ಆರೋಗ್ಯ ಮಂತ್ರಿಗಳು ಔಷಧಿಗಳನ್ನೇ ತಿನ್ನುವುದಕ್ಕೆ ಹೊರಟಿದ್ದಾರೆ, ಹೀಗಾದರೆ ಹೇಗೆ ಎಂದು ಪ್ರಸ್ತಾಪ ಮಾಡಿದ್ದಾರೆ. ಈ ಸದನದ ಮೂಲಕ ಈ ರಾಜ್ಯದ ಎಲ್ಲ ಜನತೆಗೆ ಹೇಳಬಯಸುತ್ತೇನೆ. ನಾನು ಆರೋಗ್ಯ ಮಂತ್ರಿಯಾಗಿ ಬಂದ ಮೇಲೆ ಯಾವುದೇ ಹೊಸ ದರಪಟ್ಟಿಯನ್ನು ಪರಿಷ್ಕರಣೆ ಮಾಡಲಿಲ್ಲ, ಯಾವುದೇ ಒಪ್ಪಂದಕ್ಕೂ ಯಾರ ಜೊತೆಯಲ್ಲೂ ಹೋಗಿಲ್ಲ, ಲಕ್ಷಗಟ್ಟಲೆ ವ್ಯವಹಾರವಂತೂ ನಡದೇ ಇಲ್ಲ. ಆದುದರಿಂದ ನನಗೂ ಅದಕ್ಕೂ ಸಂಬಂಧವಿಲ್ಲ. ಹೆಚ್. ಪಿ. ಸಿ. ಕಮಿಟಿಯವರು ಇದ್ದಾರೆ, ಅದಕ್ಕೆ ಅವಕಾಶ ಕೊಡುತ್ತಾರೆ ಆ ಮಟ್ಟದಲ್ಲಿ ಆಗುತ್ತದೆ. ಅದು ಸತ್ಯಕ್ಕೆ ಎಷ್ಟು ದೂರ ಎಂದರೆ, ಡ್ರಗ್ ಕಂಟ್ರೋಲರ್‌ರವರು ೩೦೦ ಜನರಿಗೆ ಅಂದರೆ ಕಂಪನಿಯವರಿಗೆ ಜಿ. ಎಂ. ಪಿ. ಸಿ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಸ್ವಾಮಿ, ನನ್ನ ಹತ್ತಿರ ಅಂಕಿಅಂಶಗಳಿವೆ. ನಮ್ಮ ರಾಜ್ಯದಲ್ಲಿ ಡ್ರಗ್ ಕಂಟ್ರೋಲರ್‌ರವರು ಕೊಟ್ಟಿರತಕ್ಕದ್ದು ೩೮ ಜನರಿಗೆ ಮಾತ್ರ. ಇಷ್ಟಕ್ಕೂ ದಾಖಲೆ ಇವೆ. ಆದರೆ ಪತ್ರಿಕೆಯಲ್ಲಿ ೩೦೦ ಜನ ಎಂದು ಬರೆದಿದ್ದಾರೆ. ಜಿ. ಎಂ. ಪಿ. ಸಿ. ಕೊಡಲಿಕ್ಕೆ ಕಮಿಟಿ ಮಾಡಿದ್ದಾರೆಂದು ಹೇಳಿದ್ದಾರೆ ಕಮಿಟಿಯನ್ನೇ ಮಾಡಿಲ್ಲ. ಕೊಟ್ಟಿರತಕ್ಕದ್ದು ಸರಿಯೇ, ತಪ್ಪೇ ಎಂಬುದನ್ನು ತನಿಖೆ ಮಾಡುವುದಕ್ಕೆ ಕೊಟ್ಟಿದ್ದಾರೆ. ಹೀಗೆಯೇ ಇನ್ನೂ ಹಲವಾರು ರೀತಿಯ ಸತ್ಯಕ್ಕೆ ದೂರವಾದ ಮಾತುಗಳನ್ನು, ದುರುದ್ದೇಶದ ಹೇಳಿಕೆಗಳನ್ನು, ನನ್ನ ಚಾರಿತ್ಯ ವಧೆ ಮಾಡತಕ್ಕ ಹಿನ್ನಲೆಯಲ್ಲಿ ಈ ಕೃತ್ಯವನ್ನು ವಿಶೇಷವಾಗಿ ಮಾಡಿದ್ದಾರೆ. ಇದೆಲ್ಲವೂ ಕೂಡ ಸತ್ಯಕ್ಕೆ ದೂರವಾದುದೆಂದು ನಾನು ಖಡಾ ಖಂಡಿತವಾಗಿ ಇದನ್ನು ನಾನು ಖಂಡಿಸುತ್ತೇನೆ.

ಇನ್ನೊಂದು ವಿಚಾರವನ್ನು ಆ ಪತ್ರಿಕೆಯಲ್ಲಿ ಹೇಳಿದ್ದಾರೆ. ಶ್ರೀಮತಿ ನಾಗರತ್ನಮ್ಮನವರು ಆರೋಗ್ಯ ಮಂತ್ರಿಗಳಾಗಿದ್ದಾಗ ಯಾವುದೋ ಒಂದು ಕಂಪನಿಯಲ್ಲಿ ಅಯಿಂಟ್‌ಮೆಂಟ್‌ನ್ನು ತೆಗೆದುಕೊಂಡಿದ್ದಾರೆ, ಅದನ್ನು ತನಿಖೆ ಮಾಡಿಸುವುದಕ್ಕೆ ಆಜ್ಞೆ ಮಾಡಿದ್ದರು. ಅಷ್ಟರಲ್ಲಿ ಅವರ ಖಾತೆ ಬದಲಾವಣೆ ಆದಮೇಲೆ ಅದು ಏನಾಯಿತೋ ಗೊತ್ತಿಲ್ಲ ಏಕೆಂದು ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಈ ಮಾತನ್ನು ಹೇಳಬಯಸುತ್ತೇನೆ. ಶ್ರೀಮತಿ ನಾಗರತ್ನಮ್ಮನವರ ಕಾಲದಲ್ಲಿ ಇದು ಆದುದು ನಿಜ. ತನಿಖೆಗೆ ಆರ್ಡರ್ ಮಾಡಿದ್ದೂ ನಿಜ, ತನಿಖೆಯನ್ನು ಅವರೇ ಮಾಡಿಸಿದ್ದೂ ನಿಜ. ಅವರ ಕಾಲದಲ್ಲೇ ವರದಿ ಬಂದಿದ್ದೂ ನಿಜ. ಅವರ ಕಾಲದಲ್ಲೇ ಅದಕ್ಕೆ ಆರ್ಡರ್ ಕೂಡ ಮಾಡಿದ್ದಾರೆ. ಈ ಪತ್ರಿಕೆಯವರು ಹೇಗೆ ಮಾಡುತಾ ್ತರೆಂದರೆ, ಚಾರಿತ್ರ್ಯ ವಧೆಯನ್ನು ಮಾಡುವುದಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರ ಇಟ್ಟು ಕೊಳ್ಳುತ್ತಾರೆ, ಮುಂದಿನದನ್ನು ಮುಟ್ಟುವುದಿಲ್ಲ. ಆದರೆ ನನ್ನ ಕಾಲದಲ್ಲಿ ಅವರು ಹೇಳುವಂಥ ಯಾವುದೇ ಪ್ರಸಂಗವೂ ಆಗಿಲ್ಲ. ಆದುದರಿಂದ ಇದಕ್ಕೆ ಬಹಳ ಹೆಚ್ಚಿನ ಮಹತ್ವವನ್ನು ಕೊಡುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಆ ಪತ್ರಿಕೆಯನ್ನು ಎಷ್ಟು ಜನರು ಓದುತ್ತಾರೋ, ಹೇಗೆ ತಿಳಿದುಕೊಳ್ಳುತ್ತಾರೋ ನನಗೆ ಗೊತ್ತಿಲ್ಲ. ಇದಕ್ಕಿಂತ ಮುಖ್ಯವಾಗಿ ನಾನು ಇರತಕ್ಕಂಥ ಕಾಲದಲ್ಲಿ ಎಷ್ಟು ಸಮರ್ಪಕವಾಗಿ, ಪ್ರಾಮಾಣಿಕವಾಗಿ ಕೆಲಸವನ್ನು ನಿರ್ವಹಿಸಿದ್ದೇನೆಂಬುದು ಬಹಳ ಮುಖ್ಯವಾದುದು. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ಬಹುಶಃ ತಮ್ಮ ಹೆಸರನ್ನು ಹೆಸರಿಸಿದರ ತಪ್ಪಾಗುವುದಿಲ್ಲವೆಂದು ತಿಳಿದುಕೊಂಡು ವಿಶ್ವಾಸವನ್ನು ಇಟ್ಟುಕೊಂಡು ಹೇಳುತ್ತಿದ್ದೇನೆ. ಮದ್ದೂರು ಆಸ್ಪತ್ರೆಯಲ್ಲಿ ಒಂದು ಔಷಧಿಯ ಸ್ಯಾಂಪಲ್ ನನಗ ಬಂತು. ಬಹುಶಃ ಇದ್ದಂಥ ಮಾತ್ರೆಗಳ ಮೇಲೆ

ಫಂಗಸ್ಸು ಕೂತಿತ್ತು. ಬಣ್ಣ ಕಪ್ಪಾಗಿತ್ತು. ಅದು ನನಗೆ ಬಂದ ಕೂಡಲೇ ಸಂಬಂಧಪಟ್ಟ ಡ್ರಗ್ ಕಂಟ್ರೋಲರ್ ಅವರಿಗೆ ಕಳುಹಿಸಿ ಅದನ್ನು ತಪಾಸಣೆ ಮಾಡಿಸಿದೆ. ಅದರಲ್ಲಿ ಬೇಕಾದಷ್ಟು ಇಂಗ್ರೀಡಿಯಂಟ್ಸ್ ಇವೆ. ಆದರೆ ಸಬ್ ಸ್ಟ್ಯಾಂಡರ್ಡ್ ಇದೆ ಎನ್ನತಕ್ಕ ರಿಪೋರ್ಟ್ ಬಂದಿದೆ. ಅದನ್ನು ನಾನು ಈಗ ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತಿದ್ದೇನೆ. ಈ ವಿಷಯ ಗೊತ್ತಾದ ತಕ್ಷಣ ನಮ್ಮ ಡ್ರಗ್ ಕಂಟ್ರೋಲರ್‌ವರು ಈಗಾಗಲೇ ಅಲ್ಲಿ ಲೈಸೆನ್ಸ್ ರದ್ದು ಮಾಡಿದ್ದಾರೆ. ಮತ್ತು ಜನರಲ್ ಮೆಡಿಕಲ್ಸ್ ಸ್ಟೋರ್ಸ್‌ನಲ್ಲಿ ಎಷ್ಟು ಸ್ಟಾಕ್ ಇದೆ ಎನ್ನತಕ್ಕಂಥದ್ದಕ್ಕೆ ತಪಾಸಣೆ ಮಾಡಿದ್ದಾರೆ ಮತ್ತೊಂದು ಮಾತನ್ನು ಕೇಳಿದ್ದೇನೆ. ಈ ಔಷಧಿಯನ್ನು ಉಪಯೋಗಿಸುವ ಹಂತದಲ್ಲಿಯೂ ಕೂಡ ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಲ್ಲ. ಈ ಮಾತ್ರೆ ಹೈಡ್ರೋಸ್ಕೋಪಿಕ್, ಗಾಳಿಯಲ್ಲಿರತಕ್ಕಂಥ ನೀರನ್ನು ಆಕರ್ಷಣೆ ಮಾಡತಕ್ಕಂಥ ಮಾತ್ರೆ. ಈ ಬಾಟಲನ್ನು ಸೀಲ್ ಮಾಡಬೇಕಾದ್ದು ಡಾಕ್ಟರ್ ಜವಾಬ್ದಾರಿ. ಆ ಡಾಕ್ಟರು ಬಾಟಲನ್ನು ಸೀಲ್ ಮಾಡದೆ ಹಾಗೆ ಇಟ್ಟು ಬಿಟ್ಟರೆ ಅದು ಕೂಡ ಆಗುತ್ತದೆ ಎಂದು ಕೂಡ ಅವರು ಹೇಳಿದ್ದಾರೆ. ಹೀಗಾಗಿ ಯಾವುದೋ ಹಂತದಲ್ಲಿ ಎಲ್ಲೋ ತಪ್ಪಾಗಿದ್ದರೆ ಯಾರಿಗೋ ಬರೆಹಾಕತಕ್ಕಂಥ ಕೆಲಸ. ಸ್ವಾಮಿ, ಪತ್ರಿಕೆಯಲ್ಲಿ ಇನ್ನೊಂದು ಮಾತನ್ನು ಹೇಳಿದ್ದಾರೆ. ಈ ಮಂತ್ರಿಗಳಿಗೆ ಹಲವಾರು ಅರ್ಜಿಗಳನ್ನು ಕೊಟ್ಟಿದ್ದಾರೆ. ಆದರೆ ತನಿಖೆ ಮಾಡುವಂಥವರು ಇವರು ಸಮರ್ಥರೇ ಅಲ್ಲ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ. ಔಷಧಿ ಬಗ್ಗೆ ಅದರಲ್ಲೂ ವಿಶೇಷವಾಗಿ ತಯಾರಕರ ಬಗ್ಗೆ ಅಥವಾ ವಿತರಣೆಕಾರರ ಬಗ್ಗೆ ಅಥವಾ ಕೊಂಡಂಥವರ ಬಗ್ಗೆ ಅರ್ಜಿಗಳು ಬಂದರೆ ಯಾವ ಅರ್ಜಿಯನ್ನೂ ನಾವು ಬಿಟ್ಟಿಲ್ಲ. ಎಲ್ಲಕ್ಕೂ ತನಿಖೆ ಮಾಡಿಸಿದ್ದೇನೆ. ಎಲ್ಲಕ್ಕೂ ವರದಿ ತರಿಸಿದ್ದೇನೆ. ಎಲ್ಲಿಯಾದರು ತಪ್ಪು ಸಿಕ್ಕಿದರೆ ಅವರ ಮೇಲೆ ಶಿಕ್ಷೆ ಕೂಡ ತೆಗೆದುಕೊಂಡಿದ್ದೇನೆ. ನಾವು ಶಿಕ್ಷೆ ತೆಗೆದುಕೊಳ್ಳುವುದಕ್ಕೆ ಹಿಂದೆ ಬೀಳುವುದಿಲ್ಲ, ಬೀಳಬೇಕಾದ್ದೂ ಇಲ್ಲ. ಮೊನ್ನೆ ನಾನು ರಾಜ್ಯ ಮಟ್ಟದ ಔಷಧಿ ವಿತರಕಾರರ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಹೇಳಿದೆ, ಕಳಪೆ ಔಷಧಿಯನ್ನು ತಯಾರು ಮಾಡತಕ್ಕಂಥದ್ದು ಎಷ್ಟು ಅಪರಾಧವೋ ಮಾರಾಟ ಮಾಡತಕ್ಕಂಥದ್ದು ಅಷ್ಟೇ ಅಪರಾಧ. ಅದನ್ನು ಮಾಡಿದರೆ ಕ್ರಿಮಿನಲ್ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಈ ಬಗ್ಗೆ ಸರ್ಕಾರ ಚಿಂತಿಸುತ್ತಿದೆ ಎಂದು ಹೇಳಿದೆ ಸ್ವಾಮಿ, ಈ ಮಾತಿಗೆ ಈಗಲೂ ಕೂಡ ನಾನು ಬದ್ಧ. ಈಗಾಗಲೇ ನಾವು ಶಾಸನವನ್ನು ತಮ್ಮ ಮುಂದೆ ತರುತ್ತಿದ್ದೇವೆ. ನಾವು ಹಿಂದೆ ಬೀಳುವುದಿಲ್ಲ ಏತಕ್ಕೆಂದರೆ, ಈ ವಿಷಯದಲ್ಲಿ ಹಿಂದೆ ಬಿದ್ದರೆ ರಾಜ್ಯದ ಜನತೆಗೆ ಎಷ್ಟು ಅಪಾಯವೆನ್ನತಕ್ಕಂಥದ್ದನ್ನು ಅರ್ಥಮಾಡಿಕೊಂಡಿದ್ದೇವೆ. ಆದ್ದರಿಂದ ಅದಕ್ಕೆ ನಾನು ಹೆಚ್ಚು ಮಹತ್ವವನ್ನು ಕೊಡದೆ ಈ ಔಷಧಿಯನ್ನು ತಯಾರುಮಾಡತಕ್ಕಂಥಾದ್ದು ನಮ್ಮ ರಾಜ್ಯದಲ್ಲಿ ೨೧೨ ಕಂಪನಿಗಳಿವೆ. ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂದು ಡ್ರಗ್ ಕಂಟ್ರೋಲರ್‌ಗೆ ಕೊಟ್ಟಂಥ ಕಟ್ಟುನಿಟ್ಟಾದ ನಿಯಮದ ಒಳಗೆ ಈ ಔಷಧಿಗಳಿಗೆ ನಾವು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ನಾವು ಇವತ್ತು ಇನ್ನೊಂದು ತೀರ್ಮಾನ ಮಾಡಿದ್ದೇವೆ, ದುಡ್ಡು ಕಡಿಮೆ ಎಂದು ಹೇಳಿ ಕಳಪೆ ದರ್ಜೆ ಔಷಧಿಗಳಿಗೆ ಹೋಗಬಾರದು. ಉಪಯುಕ್ತವಾದ ಔಷಧಿ ಹಣ ಜಾಸ್ತಿಯಾದರೂ ಕೂಡ ಒಳ್ಳೆಯ ಔಷಧಿಯನ್ನು ಖರೀದಿ ಮಾಡಬೇಕು, ತನ್ಮೂಲಕ ಒಳ್ಳೆಯ ಔಷಧಿಗಳನ್ನು ನಾವು ರೋಗಿಗಳಿಗೆ ಕೊಡಬೇಕೆನ್ನತಕ್ಕಂಥ ಕಟ್ಟುನಿಟ್ಟಾದ ಒಂದು ತೀರ್ಮಾನ ಕೂಡ ತೆಗೆದುಕೊಂಡಿದ್ದೇವೆ. ಆದ್ದರಿಂದ ನಮ್ಮ ಸದಸ್ಯರುಗಳಲ್ಲಿ ಅಥವಾ ರಾಜ್ಯದ ಜನತೆಯಲ್ಲಿ ಯಾರೂ ಕೂಡ ಈ ವಿಷಯದ ಬಗ್ಗೆ ಸಂಶಯ ಇಟ್ಟುಕೊಳ್ಳಬೇಕಾಗಿಲ್ಲ; ಯಾವ ಹಂತದಲ್ಲೂ ಕೂಡ ಕಳಪೆಯಾದ ಔಷಧಿಗಳನ್ನು

ಮಾಡಲಿಕ್ಕೆ ಆಗಲಿ, ಕೊಳ್ಳಲಿಕ್ಕೆ ಆಗಲಿ, ವಿತರಣೆ ಮಾಡಲಿಕ್ಕೆ ಆಗಲಿ ಅವಕಾಶ ಕೊಡುವುದಿಲ್ಲವೆನ್ನತಕ್ಕಂಥ ಸ್ಪಷ್ಟ ಭರವಸೆಯನ್ನು ಈ ಸಮಯದಲ್ಲಿ ನಾನು ಇಲ್ಲಿ ಕೊಡಬಯಸುತ್ತಿದ್ದೇನೆ. ಈ ಗ್ರಾಮೀಣ ಪ್ರದೇಶದಲ್ಲಿ ವೈದ್ಯರುಗಳು ಹೋಗದೆ ಇರುವುದಕ್ಕೆ ನಿನ್ನೆ ನಮ್ಮ ಶ್ರೀಮತಿ ದಮಯಂತಿ ಬೋರೇಗೌಡರು ಒಂದು ಮಾತನ್ನು ಹೇಳಿದರು. ಅವರಿಗೆ ಕನಿಷ್ಠ ವಸತಿ ಸವಲತ್ತುಗಳಿಲ್ಲ, ಅದನ್ನು ಒದಗಿಸತಕ್ಕಂಥದ್ದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳಿದರು. ನಾನು ಮೊದಲೇ ಅದನ್ನು ಹೇಳಬೇಕೆಂಬುದನ್ನು ಸ್ವಲ್ಪ ಮರೆತೆ. ನಾವು ಈಗಾಗಲೇ ಭಾರತ ಸರ್ಕಾರಕ್ಕೆ ಯೋಜನೆಯನ್ನು ಕೊಟ್ಟಿದ್ದೇವೆ. ೨ನೇ ದರ್ಜೆ ಆಸ್ಪತ್ರೆಗಳನ್ನು ಮತ್ತು ಗ್ರಾಮೀಣ ಪ್ರದೇಶದ ವೈದ್ಯಕೀಯ ಸವಲತ್ತುಗಳನ್ನು ವಿಸ್ತರಿಸತಕ್ಕಂಥ ಆ ಯೋಜನೆಯಲ್ಲಿ ಇದನ್ನು ಕೂಡ ನಾವು ಹಾಕಿಕೊಂಡಿದ್ದೇವೆ. ಆ ಯೋಜನೆಗೆ ಮಂಜೂರಾತಿ ದೊರೆತರೆ ಅವರ ಸಮಸ್ಯೆಗೆ, ಅವರು ಕೊಟ್ಟಂಥ ಸಲಹೆಗೆ ಸೂಕ್ತ ಮಾರ್ಗ ಸಿಗುತ್ತದೆನ್ನತಕ್ಕಂಥದ್ದನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು ನಮ್ಮ ಎಲ್ಲ ಸದಸ್ಯರುಗಳು ಚರ್ಚೆಯಲ್ಲಿ ಸಕ್ರಿಯೆಯಾಗಿ ಭಾಗವಹಿಸುವುದರ ಮೂಲಕ ಅತ್ಯುತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ವಿಶೇಷವಾಗಿ ನಮ್ಮ ಡಾ|| ಮಲಕರೆಡ್ಡಿಯವರು ೩೬ ನಿಮಿಷ ಮಾತನಾಡಿದರು. ಒಳ್ಳೊಳ್ಳೆಯ ಮಾತುಗಳನ್ನು ಹೇಳಿದ್ದಾರೆ. ಬಹುಶಃ ಅವರ ಭಾಷಣದಲ್ಲಿ ಪ್ರಮುಖವಾಗಿ ಹೆಲ್ತ್ ಯೂನಿವರ್ಸಿಟಿಯನ್ನು ಸ್ಥಾಪಿಸುವುದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ.

(ಮಾನ್ಯ ಉಪಾಧ್ಯಕ್ಷಣಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಇದರಿಂದ ವೈದ್ಯಕೀಯ ಶಿಕ್ಷಣದ ಗುಣಮಟ್ಟ ಹೆಚ್ಚಾಗುವುದಷ್ಟೇ ಅಲ್ಲ, ಪ್ರಮುಖ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆಯ ಮಟ್ಟವೂ ಕೂಡ ಜಾಸ್ತಿಯಾಗುತ್ತದೆ, ಈ ರಾಜ್ಯಕ್ಕೆ ಇದು ಅಗತ್ಯವಿದೆ. ಈಗಾಗಲೇ ಸುಮಾರು ೧೬೦ರಿಂದ ೧೮೦ ಫಾರ್ಮಸಿ ಕಾಲೇಜುಗಳು ಇವತ್ತು ಇಲ್ಲಿದೆ. ಶ್ರೀ ಗಜೇಂದ್ರಘಡಕರ್ ವರದಿಯಲ್ಲಿ ೬೦ ಕಾಲೇಜುಗಳು ಇದ್ದರೆ ಒಂದು ಯೂನಿವರ್ಸಿಟಿ ಬೇಕೆಂದು ಇದೆ. ಇಷ್ಟೊಂದು ದೊಡ್ಡ ಪ್ರಮಾಣದ ಕಾಲೇಜುಗಳು ಈ ರಾಜ್ಯದಲ್ಲಿ ಇರುವಾಗ ವೈದ್ಯಕೀಯ ಶಿಕ್ಷಣದ ಗುಣಮಟ್ಟ ಏರಿಸತಕ್ಕಂಥದ್ದಕ್ಕೆ ಮತ್ತು ಏಕರೂಪ ಪಠ್ಯಪುಸ್ತಕಗಳನ್ನು ಜಾರಿಗೆ ತರತಕ್ಕಂಥದ್ದಕ್ಕೆ ಮತ್ತು ಒಂದೇ ಸಾರಿ ಪರೀಕ್ಷೆಯನ್ನು ಮಾಡುವುದಕ್ಕೆ ಮತ್ತು ಸಂಶೋಧನೆ ಹಾಗೂ ತರಬೇತಿಯನ್ನು ಮಾಡುವುದಕ್ಕೆ ಆರೋಗ್ಯ ವಿಶ್ವವಿದ್ಯಾನಿಲಯ ಈ ರಾಜ್ಯಕ್ಕೆ ಬಹಳ ಅಗತ್ಯವೆನ್ನುವ ಮಾತನ್ನು ಹೇಳಿದ್ದಾರೆ. ಜೊತೆಯಲ್ಲಿ ಇನ್ನೊಂದು ಮಾತನ್ನು ಹೇಳಿದ್ದಾರೆ, ಕೇವಲ ಕರ್ನಾಟಕದಲ್ಲಿ ಎಲ್ಲರಿಗಿಂತ ಮೊದಲು ಇದನ್ನು ಮಾಡಬೇಕೆಂದು ಹೇಳಿದ್ದ ಕಾಲ ಒಂದಿತ್ತು. ಶಾಸನ ಕೂಡ ರಚನೆಯಾಯಿತು. ಆದರೆ ಬೇರೆ ರಾಜ್ಯಗಳಲ್ಲಿ ಮಾಡಿದ್ದಾರೆ, ನಮ್ಮ ರಾಜ್ಯದಲ್ಲಿ ಮಾಡಿಲ್ಲವೆಂದೂ, ಇಲ್ಲಿ ಇದನ್ನು ಮಾಡಲೇಬೇಕೆಂದು ಒತ್ತಾಯ ಕೂಡ ಮಾಡಿದ್ದಾರೆ. ಡಾ|| ಮಲಕರೆಡ್ಡಿಯವರಿಗೆ ಅವರ ಅತ್ಯುತ್ತಮ ಸಲಹೆಗಳಿಗೆ ವಂದನೆಗಳನ್ನರ್ಪಿಸುತ್ತೇನೆ. ಇದರ ಬಗ್ಗೆ ೧೯೮೭ರಲ್ಲಿ ಸರ್ಕಾರ ಡಾ|| ನರಸಿಂಹಯ್ಯನವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿದೆ. ಆ ಸಮಿತಿ ಆಂಧ್ರ ಪ್ರದೇಶ ಮತ್ತು ತಮಿಳ್ನಾಡಿಗೆ ಭೇಟಿ ಕೊಟ್ಟು, ಅಲ್ಲಿ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾನಿಲಯಗಳ ಕಾರ್ಯವಿಧಾನಗಳನ್ನು ಅಧ್ಯಯನ ಮಾಡಿ ಸವಿಸ್ತಾರವಾದ ವರದಿಯನ್ನು ಸರ್ಕಾರಕ್ಕೆ ಈಗಾಗಲೇ ಸಲ್ಲಿಸಿದೆ. ಆರೋಗ್ಯ ವಿಶ್ವ ವಿದ್ಯಾನಿಲಯದ ಸ್ಥಾಪನೆಯಿಂದ ಎಲ್ಲ ವೈದ್ಯಕೀಯ ಪದ್ಧತಿ, ಶಿಕ್ಷಣ ಹಾಗೂ ಸಂಶೋಧನೆ ಅಭಿವೃದ್ಧಿ ಹೊಂದುವುದಲ್ಲದೆ ಚಿಕಿತ್ಸಾ ಗುಣಮಟ್ಟ ಹೆಚ್ಚುವುದು ಎಂದು ಇದೆ. ಈ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ ಎಂದು

ಅವರಿಗೆ ಈ ಸಮಯದಲ್ಲಿ ಹೇಳಬಯಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ:- ಮಾನ್ಯ ಸಿದ್ದವೀರಪ್ಪನವರು ಆರೋಗ್ಯ ಸಚಿವರಾಗಿದ್ದಾಗ ಹೆಲ್ತ್ ಯೂನಿವರ್ಸಿಟಿ ಆಗಬೇಕೆಂದು ಬಿಲ್ ಇಂಟ್ರಡ್ಯೂಸ್ ಮಾಡಿದ್ದರು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ:- ತಾವು ಹೇಳಿದ್ದು ನಿಜ. ಈ ಮನೆಯಲ್ಲಿ ಅದು ಪಾಸ್ ಆಗಿ ಮೇಲ್ಮನೆಯವರೆಗೂ ಹೋಯಿತು. ತದನಂತರ ಭಾರತ ಸರ್ಕಾರದ ಇಚ್ಛೆ ಏನಿತ್ತು ಎಂದರೆ ಹೆಲ್ತ್ ಯೂನಿವರ್ಸಿಟಿ ಅಗತ್ಯ ಇಲ್ಲವೆಂದು ವಾಪಸ್ಸು ತೆಗೆದುಕೊಂಡಿದ್ದಾರೆ ಈಗ ಭಾರತ ಸರ್ಕಾರದವರು ಹೆಲ್ತ್ ಯೂನಿವರ್ಸಿಟಿ ಮಾಡತಕ್ಕದ್ದು ಸೂಕ್ತವೆಂದು ಎಲ್ಲ ರಾಜ್ಯ ಸರ್ಕಾರಗಳಿಗೆ ಸೂಚನೆ ಕೊಟ್ಟಿದ್ದಾರೆ. ಈ ಸೂಚನೆಯ ಹಿನ್ನೆಲೆಯಲ್ಲಿ ಮತ್ತು ತಮ್ಮ ಸಲಹೆಯ ಹಿನ್ನೆಲೆಯಲ್ಲಿ ಸರ್ಕಾರ ಇದನು ಗಮನಿಸುತ್ತದೆಂದು ಹೇಳಬಯಸುತ್ತೇನೆ. ಅವರು ಮತ್ತೊಂದು ಮಾತು ಹೇಳಿದ್ದಾರೆ. ವೈದ್ಯಕೀಯ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಬಗ್ಗೆ ಮೊದಲೇ ಹೇಳಿದ್ದೇನೆ. ಎಲ್ಲೆಲ್ಲಿ ಉಪನ್ಯಾಸಕರ ಕೊರತೆ ಇದೆ ಅಲ್ಲಿ ನಿವೃತ್ತ ಉಪನ್ಯಾಸಕರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡು ಆ ಜಾಗಕ್ಕೆ ಹಾಕುತ್ತಿದ್ದೇವೆ. ಎಲ್ಲಾ ಮೆಡಿಕಲ್ ಕಾಲೇಜುಗಳಿಗೆ ಹೊಂದಿಕೊಂಡಂತಹ ಆಸ್ಪತ್ರೆಗಳನ್ನು ಆಧುನೀಕರಣ ಮಾಡಿ ಅತ್ಯಾಧುನಿಕ ಯಂತ್ರಗಳನ್ನು ಜೋಡಿಸತಕ್ಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಆಸ್ಪತ್ರೆಗಳ ಕಟ್ಟಡಗಳ ದುರಸ್ತಿ ಬಗ್ಗೆ ಡಾ|| ನಂಜಪ್ಪನವರು ಪ್ರಸ್ತಾಪಿಸಿದ್ದಾರೆ ಅದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಯಾವ ಊರಿಗೆ ಹೋಗಿ ನೋಡಿದರೂ ಆಸ್ಪತ್ರೆಗಳಿಗೆ ಸುಣ್ಣ ಬಣ್ಣ ಹೊಡೆದಿಲ್ಲ, ಯಾವುದೋ ಕಾಲದಲ್ಲಿ ಕಟ್ಟಿದ ಕಟ್ಟಡಗಳು, ರೋಗಿಗಳು ಇರುವುದಕ್ಕೆ ಸ್ಥಳಾವಕಾಶ ಇರುವುದಿಲ್ಲ. ಇಂಥ ಬರ್ಬರ ಸನ್ನಿವೇಶದಲ್ಲಿ ನಾವು ಆಸ್ಪತ್ರೆಗಳನ್ನು ನೋಡುತ್ತಿದ್ದೇವೆ. ಇದಕ್ಕೆ ಕಾಯಕಲ್ಪ ಆಗಬೇಕು. ಮಾನ್ಯ ಸದಸ್ಯರು ಕೊಟ್ಟ ಸಲಹೆ ಅಮೂಲ್ಯವಾದುದು ಮತ್ತು ಅತ್ಯುತ್ತಮವಾದುದೆಂದು ನಾನು ಹೇಳುತ್ತೇನೆ. ಆದರೆ ನಮ್ಮ ರಾಜ್ಯದ ಸ್ಥಿತಿಗತಿಗಳನ್ನೂ ಕೂಡ ಸ್ವಲ್ಪ ಅರ್ಥ ಮಾಡಿಕೊಳ್ಳಬೇಕಾಗಿದೆ. ಇತ್ತೀಚಿನ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಗ್ರಾಮೀಣ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳನ್ನು ನಿಯಂತ್ರಣ ಮಾಡುವುದಕ್ಕೆ ಜಿಲ್ಲಾ ಪರಿಷತ್ತಿನವರಿಗೆ ವರ್ಗಾಯಿಸಿದ್ದೇವೆ. ಅವರ ಇತಿಮಿತಿಯಲ್ಲಿ ಅವರು ಮಾಡಲಿಲ್ಲ. ಈ ಕಡೆ ಸರ್ಕಾರವು ಮಾಡಲಿಲ್ಲ, ಜಿಲ್ಲಾ ಪರಿಷತ್ತೂ ಮಾಡಲಿಲ್ಲ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಆಸ್ಪತ್ರೆಗಳ ಎಲ್ಲಾ ಕಟ್ಟಡಗಳು ಅಧ್ವಾನವಾಗಿವೆ. ಅವುಗಳಿಗೆ ದುರಸ್ತಿಯಂತೂ ಆಗಲೇಬೇಕು. ಅದನ್ನು ಕೂಡ ನಾವು ಗಮನಿಸಿದ್ದೇವೆ. ಇದಕ್ಕಾಗಿ ಜನಸಂಖ್ಯಾ ಆಸ್ಫೋಟನೆಯ ಹಿನ್ನೆಲೆಯಲ್ಲಿ ಐ.ಪಿ.ಪಿ. ೪ ಅನ್ನು ಕೇಳುತ್ತಿದ್ದೇವೆ, ೧೦೦ ಕೋಟಿ ರೂಪಾಯಿ ಸಾಲ ಪಡೆಯತಕ್ಕ ಭರದಲ್ಲಿದ್ದೇವೆ. ತಾಲ್ಲೂಕು ಮಟ್ಟದ ಮತ್ತು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ೧೮೨ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಎರಡು ಆದಷ್ಟು ಜಾಗ್ರತೆ ಬರುತ್ತವೆಂದು ತಿಳಿದುಕೊಂಡಿದ್ದೇವೆ. ಅದು ಬಂದರೆ ಅವರು ಕೊಟ್ಟ ಸಲಹೆ ಕಾರ್ಯೋನ್ಮುಖವಾಗುತ್ತದೆಂದು ಹೇಳಬಯಸುತ್ತೇನೆ. ಶ್ರೀಮತಿ ದಮಯಂತಿ ಬೋರೇಗೌಡರು, ಸ್ನಾತಕೋತ್ತರ ಪರೀಕ್ಷೆಯನ್ನು ಕಳೆದ ಸಾರಿ ಮಾಡಲಿಲ್ಲ, ಒಂದು ವರ್ಷ ತಡವಾಯಿತೆಂದು ಹೇಳಿದ್ದಾರೆ. ಅವರಿಗೆ ಹೇಳಬಯಸುತ್ತೇನೆ, ಅಂತರ ವಿಶ್ವವಿದ್ಯಾನಿಲಯ ಮಂಡಲಿಯವರು ಏಕರೂಪ ಪಠ್ಯಪುಸ್ತಕಗಳನ್ನು ಜಾರಿಗೆ ತರತಕ್ಕ ತೀರ್ಮಾನ ತೆಗೆದುಕೊಂಡ ಹಿನ್ನೆಲೆಯಲ್ಲಿ ನಾವು ಕಳೆದ ನವೆಂಬರ್‌ನಲ್ಲಿ ಪರೀಕ್ಷೆ ಮಾಡುವುದಕ್ಕಾಗಲಿಲ್ಲ. ಈಗ ಏಪ್ರಿಲ್‌ನಲ್ಲಿ ಮಾಡುವವರಿದ್ದೇವೆ. ಆ ಪರೀಕ್ಷೆ ಆದನಂತರ ಪ್ರವೇಶ ಪರೀಕ್ಷೆಗಳನ್ನು ಕಂಡಕ್ಟ್ ಮಾಡಿ

ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕ ಕೆಲಸ ನಡೆಯುತ್ತದೆ. ಪ್ರವೇಶ ಪರೀಕ್ಷೆಯನ್ನು ಏಪ್ರಿಲ್‌ನಲ್ಲಿ ಮಾಡಲಿದ್ದೇವೆ. ಶ್ರೀ ಅನಂತಕೃಷ್ಣ ಅವರು ಬೌರಿಂಗ್ ಆಸ್ಪತ್ರೆಯ ಕೊರತೆ ಬಗ್ಗೆ ಬಹಳಷ್ಟು ಮಾತನಾಡಿದರು. ಬಹುಶಃ ಪತ್ರಿಕೆಯಲ್ಲಿ ಕೂಡ ಅದಕ್ಕೆ ಸಾಕಷ್ಟು ಪಬ್ಲಿಸಿಟಿ ಸಿಕ್ಕಿದೆ. ಅವರು ಆ ಕ್ಷೇತ್ರದವರಿದ್ದಾರೆ. ಅವರು ಹೇಳುವುದರಲ್ಲಿ ಬಹಳ ಅರ್ಥ ಇದೆ. ಅಲ್ಲಿ ಸ್ಥಳಾವಕಾಶ ಇಲ್ಲ. ಅಲ್ಲಿ ಕಾರ್ ಪಾರ್ಕಿಂಗ್‌ಗೆ ಅವಕಾಶ ಇಲ್ಲ. ಮತ್ತು ಡ್ರೈನೇಜ್ ಫೆಸಿಲಿಟೀಸ್‌ಗೂ ಅಲ್ಲಿ ಅವಕಾಶ ಆಗಿಲ್ಲ. ಈಗಾಗಲೇ ನಾವು ಅದಕ್ಕೆ ವಿಸ್ತರಣಾ ಯೋಜನೆಯನ್ನು ಮಾಡತಕ್ಕ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಹೊಸ ಉಪಕರಣಗಳನ್ನು ತೊಡಗಿಸತಕ್ಕ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಆ ವಿಸ್ತರಣಾ ಯೋಜನೆ ಕಾರ್ಯಕ್ರಮ ಅನುಷ್ಠಾನಕ್ಕೆ ಬರುತ್ತದೆ ಎಂಬ ವಿಶ್ವಾಸ ಇಟ್ಟುಕೊಂಡಿದ್ದೇನೆ. ಆದರಲ್ಲಿ ಅವರು ಹೇಳಿರುವ ಎಲ್ಲಾ ಕೊರತೆಗಳನ್ನು ನೀಗುವುದಕ್ಕೆ ಅವಕಾಶವಾಗುತ್ತದೆ ಎಂಬ ಮಾತನ್ನು ಕೂಡ ನಾನು ಈ ಸಮಯದಲ್ಲಿ ಹೇಳಬಯಸುತ್ತೇನೆ. ಸ್ವಾಮಿ, ಇನ್ನೊಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಅಲ್ಲಿರತಕ್ಕ ಡ್ರೈನೇಜ್ ನೀರು ಮುಂದೆ ಹೋಗುತ್ತಿಲ್ಲ, ಮಳೆ ಬಂದರೆ ಆಸ್ಪತ್ರೆಯೊಳಗೆ ನುಗ್ಗಿ ಸ್ಥಳವು ಮಲಿನವಾಗುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ನಗರಸಭೆಯವರು, ಒಳಚರಂಡಿ ಮಂಡಲಿಯವರು ಮತ್ತು ಆರೋಗ್ಯ ಇಲಾಖೆ ಈ ಮೂವರ ಸಂಯೋಗದಿಂದ ಈ ಕೆಲಸ ಆಗಬೇಕು. ಈಗಾಗಲೇ ಎರಡು ಮೀಟಿಂಗ್‌ಗಳನ್ನು ನಾವು ಮಾಡಿದ್ದೇವೆ. ಇದರ ಬಗ್ಗೆ ಆದಷ್ಟು ಜಾಗ್ರತೆ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಡಾಕ್ಟರ್ ನಾಗಪ್ಪನವರು, ಶಿವರಾಮೇಗೌಡರು, ಗಂಗಪ್ಪನವರು ಎಲ್ಲರೂ ಕೂಡ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಅವರು ಕೊಟ್ಟಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಈ ಸರ್ಕಾರ ಕಾರ್ಯ ಮಾಡುತ್ತದೆಂದು ಹೇಳಿ, ಪ್ರಮುಖವಾಗಿ ತಮಗೆ, ಮುಖ್ಯ ಮಂತ್ರಿಗಳಿಗೆ, ನನ್ನ ಎಲ್ಲ ಸಹೋದ್ಯೋಗಿಗಳಿಗೆ, ಶಾಸಕರಿಗೆ ವಿಶೇಷವಾಗಿ ಸಹಕರಿಸಿದ ಪತ್ರಕರ್ತರಿಗೆ ಎಲ್ಲರಿಗೂ ವಂದನೆಗಳನ್ನು ಸಲ್ಲಿಸಿ ನನ್ನ ಬೇಡಿಕೆಗೆ ತಾವು ಅನುಮತಿ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಈಗ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವವೇನೆಂದರೆ: ''ದಿನಾಂಕ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ ೫೩, ೫೪, ೫೭ ಮತ್ತು ೨೯ ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕು''

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೫೩ - ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೪,೪೨,೮೮,೦೦೦ ರೂಪಾಯಿಗಳಿಗಿಂದ

ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೫,೧೫,೨೮,೦೦೦ ರೂಪಾಯಿಗಳಿಗಿಂದ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೪ - ಕ್ರಮಪಡಿಸಿದ ಮಾರುಕಟ್ಟೆಗಳು.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೦೮,೨೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೬ - ಕಾರ್ಮಿಕ ಮತ್ತು ಉದ್ಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೯,೨೫,೦೧,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೯ - ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ೩೫೪,೬೮,೩೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಶಾಸನ ರಚನೆ ಕಾರ್ಯಕಲಾಪಗಳು

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳನ್ನು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ ೧೯೯೨

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೇ...

ಡಾ|| ವೈ. ನಾಗಪ್ಪ:- ಸಭಾಧ್ಯಕ್ಷರೆ, ದಯವಿಟ್ಟು ನನಗೆ ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

ಉಪಾಧ್ಯಕ್ಷರು:- ಇಲ್ಲ, ಇಲ್ಲ.

ಡಾ|| ವೈ. ನಾಗಪ್ಪ:- ದಯವಿಟ್ಟು ಒಂದು ನಿಮಿಷ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು:- ಯಾವುದರ ಮೇಲೆ?

Dr. Y. Nagappa:- We are all responsible people coming to attend this Assembly.

ಉಪಾಧ್ಯಕ್ಷರು:- ಅದು ಸರಿ. ಯಾವುದರ ಮೇಲೆ?

ಡಾ|| ವೈ ನಾಗಪ್ಪ:- ನಿನ್ನೆ ಕೆಲವು ಬೇಡಿಕೆ ಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಇವತ್ತೂ ತಾವು ಅವಕಾಶ ಮಾಡಿಕೊಟ್ಟಿಲ್ಲ. ನಾವು ಏತಕ್ಕೆ ಅಸೆಂಬ್ಲಿಯಲ್ಲಿ ಬಂದು ಕುಳಿತುಕೊಳ್ಳಬೇಕು?

ಉಪಾಧ್ಯಕ್ಷರು:- ಈಗ ಕಂದಾಯ ಮಂತ್ರಿಗಳು.

+ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಜಿಲ್ಲಾಪರಿಷತ್ತು ತಾಲ್ಲೂಕು ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ ೧೯೯೨ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೆ, ಇದು ಸಣ್ಣ ತಿದ್ದುಪಡಿ ಇದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ವಿಧೇಯಕದ ಸೆಕ್ಷನ್ ೨೭೦ ಬಿ. ಇದಕ್ಕೆ ಒಂದು ಸಣ್ಣ ತಿದ್ದುಪಡಿ ತಂದಿದೆ. ಏನೆಂದರೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅವಧಿ ಮುಗಿದು ಹೋಗಿದೆ. ಅವಧಿ ಮುಗಿದ ಮೇಲೆ ಅಡ್ಮಿನಿಸ್ಟ್ರೇಟರ್ ಹಾಕತಕ್ಕದ್ದು. ಆಡಳಿತವನ್ನು ಸರಿಯಾದ ರೀತಿಯಿಂದ ನಡೆಸಿಕೊಂಡು ಹೋಗಬೇಕಾದರೆ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಬೇಕಾಗಿತ್ತು. ಅದಕ್ಕಾಗಿ ಈ ಒಂದು ಪ್ರಾವಿಷನ್ ಮಾಡಿದ್ದೇವೆ. ಬಹುಶಃ ಇದನ್ನು ಎಲ್ಲರೂ ಒಪ್ಪುತ್ತಾರೆಂದು ಭಾವಿಸಿ, ಅವರ ಒಪ್ಪಿಗೆಯನ್ನು ಕೇಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಉಪಾಧ್ಯಕ್ಷಣಿಯವರೆ, ಬಹುಶಃ ಜಿಲ್ಲಾ ಪರಿಷತ್ತು ಮತ್ತು ಮಂಡಲಗಳ ಮಟ್ಟದಲ್ಲಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡುತ್ತಿರುವುದನ್ನು ನೋಡಿದರೆ ಸರ್ಕಾರ ಒಳ್ಳೆಯ ಡೈರೆಕ್ಷನ್‌ನಲ್ಲಿ ಹೋಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಕಾರಣ ಇಷ್ಟೇ. ಈಗಾಗಲೇ ಸುಮಾರು ಜನವರಿ ೧೪ನೇ ತಾರೀಖು ಜಿಲ್ಲಾಪರಿಷತ್ತುಗಳ ಅವಧಿ ಮುಗಿದಿದ್ದು, ಜನವರಿ ೨೩ರಿಂದ ಏಪ್ರಿಲ್ ೧೪ರೊಳಗೆ ಸುಮಾರು ಎಲ್ಲಾ ಜಿಲ್ಲಾಪರಿಷತ್ತು ಹಾಗೂ ಮಂಡಲಗಳ ಪ್ರತಿನಿಧಿಗಳ ಅವಧಿ ಮುಗಿಯುತ್ತದೆ. ಅವಧಿ ಮುಗಿದ ನಂತರ ಇನ್ ಟೈಂನಲ್ಲಿ ಪುನಃ ಚುನಾವಣೆ ಮಾಡುವುದಕ್ಕೆ ಸಾಧ್ಯವಾಗದಿದ್ದರೆ, ಅಂತಹ ಸಮಯದೊಳಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬೇಕೆಂದು ಸೆಕ್ಷನ್ ೨೭೨ ಹಾಗೂ ಸೆಕ್ಷನ್ ೮ರಲ್ಲಿ ಇದೆ. ಆದರೆ ತಾವು ಪತ್ರಿಕೆಗಳಲ್ಲಿ ಬಹುಶಃ ಓದಿರಬಹುದು. ಸುಮಾರು ೨ ತಿಂಗಳಿಂದ ವಿರೋಧ ಪಕ್ಷದವರು ಓ ಅದೇನೋ ವಿಕೇಂದ್ರೀಕರಣ ಕೇಂದ್ರೀಕರಣವಾಗುತ್ತಿದೆ, ಇದು ಪ್ರಜಾಪ್ರಭುತ್ವದ ಕಗ್ಗೊಲೆ ಆಗುತ್ತಿದೆ ಎಂದು ಹೇಳುತ್ತಿರುವುದನ್ನು ಪತ್ರಿಕೆಗಳಲ್ಲಿ ತಾವು ಓದಿರಬಹುದು. ಅನೇಕ ಸದಸ್ಯರೂ ಸಹ ಓದಿದ್ದಾರೆ. ಆದರೆ ಇದು ನಿಜವೇ? ಸರ್ಕಾರ ಇವತ್ತು ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂಬುದನ್ನು ಅವಲೋಕಿಸಿದರೆ ಬಹುಶ ಸರ್ಕಾರದವರು ಒಳ್ಳೆಯ ದಾರಿಯಲ್ಲೇ ಹೋಗುತ್ತಿದ್ದಾರೆ. ಕೇಂದ್ರದಲ್ಲಿ ೭೨ನೇ ರಾಜ್ಯಾಂಗ ತಿದ್ದುಪಡಿ ಏನಿದೆ ಅದನ್ನು ನಾವು ನೋಡಬೇಕು. ೧೯೮೯ರಲ್ಲಿ ಕೇಂದ್ರದಲ್ಲಿ ರಾಜೀವ್‌ಗಾಂಧಿಯವರು ಮೊದಲು ೬೪ನೇ ತಿದ್ದುಪಡಿಯನ್ನು ಏನು ಪಂಚಾಯಿತ್ ರಾಜ್ ಸಿಸ್ಟಂಗೆ ತಂದು ಇಂಟ್ರಡ್ಯೂಸ್ ಮಾಡಿದರು ಅದು ಫೇಲ್ ಆಗಿ ಬಹುಶಃ ಲೋಕಸಭೆ ಚುನಾವಣೆ ಆಗಿದ್ದರೂ.

ಸಹ ಈ ಸಂದರ್ಭದಲ್ಲಿ ನಾವು ಜ್ಞಾಪಿಸಿಕೊಳ್ಳುವುದು ನಮ್ಮ ಕರ್ತವ್ಯ. ಕಳೆದ ೭೪ನೇ ರಾಜ್ಯಾಂಗ ತಿದ್ದುಪಡಿ ಹೋಗಿ ೭೨ನೇ ತಿದ್ದುಪಡಿ ಲೋಕಸಭೆಯಲ್ಲಿ ಈಗಾಗಲೇ ಮಂಡಿತವಾಗಿದೆ. ಈ ವಿಚಾರ ಜಾಯಿಂಟ್ ಸೆಲೆಕ್ಟ್ ಕಮಿಟಿ ಮುಂದೆ ಹೋಗಿದ್ದು ಬಹುಶಃ ಅವರೂ ಕೂಡ ಮೇ ೧೧ರೊಳಗೆ ಲೋಕಸಭೆಯಲ್ಲಿ ತಮ್ಮ ವರದಿಯನ್ನು ಸಬ್ಮಿಟ್ ಮಾಡುವವರಿದ್ದಾರೆ. ಇಂತಹ ಸಮಯದಲ್ಲಿ ನಾವು ಈ ೭೨ನೇ ರಾಜ್ಯಾಂಗ ತಿದ್ದುಪಡಿಗೂ ಇಲ್ಲಿ ನಾವು ಏನಾದರೂ ಚುನಾವಣೆ ಮಾಡಿದರೆ ಎಷ್ಟು ವ್ಯತ್ಯಾಸಗಳಾಗುತ್ತದೆ, ಎಲ್ಲಾ ಪಕ್ಷಗಳ ಅಭ್ಯರ್ಥಿಗಳಿಗೂ ಎಷ್ಟು ಅಧಿಕ ವೆಚ್ಚ ಬರುತ್ತದೆ ಎಂಬುದನ್ನು ನಾವು ಅವಲೋಕಿಸಬೇಕು. ಕಾರಣ ಇಷ್ಟೇ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಇವತ್ತು ೭೨ನೇ ರಾಜ್ಯಾಂಗ ತಿದ್ದುಪಡಿ ನನ್ನ ಹತ್ತಿರ ಇದೆ. ಅತಿ ಮುಖ್ಯವಾದ ಸುಮಾರು ೧೧ ವಿಷಯಗಳಲ್ಲಿ ನಾವು ಮಾರ್ಪಾಡು ಮಾಡಿಕೊಳ್ಳಬೇಕಾಗುತ್ತದೆ. ತಮಗೆಲ್ಲಾ ತಿಳಿದಿರುವಹಾಗೆ ಸಂವಿಧಾನ ತಿದ್ದುಪಡಿ ವಿಧೇಯಕ ಬಂದಮೇಲೆ ಅದನ್ನು ಎಲ್ಲಾ ರಾಜ್ಯಗಳು ಅಡಾಪ್ಟ್ ಮಾಡಿಕೊಳ್ಳಲೇಬೇಕು. ಈ ರಾಜ್ಯಾಂಗ ತಿದ್ದುಪಡಿ ಆದಮೇಲೆ ದೇರ್ ಈಸ್ ನೋ ಅದರ್ ಗೋ ಫಾರ್ ಅಸ್. ಈ ರಾಜ್ಯಂಗ ೭೨ನೇ ತಿದ್ದುಪಡಿ ಪ್ರಕಾರ ಸುಮಾರು ೧೧ ಮುಖ್ಯ ವಿಷಯಗಳನ್ನು ಅಲ್ಲಿ ರಾಜ್ಯಾಂಗ ತಿದ್ದುಪಡಿ ಆದಮೇಲೆ ಪಂಚಾಯಿತಿ ರಾಜ್ಯದಲ್ಲಿ ನಾವು ಅಳವಡಿಸಿಕೊಳ್ಳುವುದು ನಮ್ಮ ಕರ್ತವ್ಯ ಮತ್ತು It is mandate. We cannot go without that. ಅದಕ್ಕೋಸ್ಕರವಾಗಿ ಇದರಲ್ಲಿ ಅತಿ ಮುಖ್ಯವಾದುದು ಯಾವುದು ಎಂದರೆ, ನನಗೆ ತಿಳಿದ ಪ್ರಕಾರ, ೭೨ನೇ ತಿದ್ದುಪಡಿ ಪ್ರಕಾರ, ಜಿಲ್ಲಾ ಪರಿಷತ್ತು, ತಾಲ್ಲೂಕು ಸಮಿತಿ ಮತ್ತು ಮಂಡಲ ಈ ಮೂರರಲ್ಲಿ ಎರಡನ್ನು ನೀವು ಯಾವುದಾದರೂ ಮಾಡಿಕೊಳ್ಳಬಹುದು ಎಂದು ಅವರ ರಾಜ್ಯಗಳಿಗೇ ಬಿಟ್ಟಿದ್ದಾರೆ. ಬಹುಶಃ ತಮಗೆ ಗೊತ್ತಿರಬಹುದು. ಹಿಂದೆ ಈ ಜಿಲ್ಲಾಪರಿಷತ್ತುಗಳು ಆದಾಗ, ಎಸ್. ಕೆ. ಡೇ ಅವರಿಂದ ಹಿಡಿದು, ರಾಮಕೃಷ್ಣ ಹೆಗ್ಡೆಯವರು, ನಜೀರ್‌ಸಾಬ್ ಅವರವರೆಗೆ ಈ ಜಿಲಾಪರಿಷತ್‌ಗಳ ವಿಷಯವಾಗಿ ಪ್ರತಿಯೊಬ್ಬರೂ ಎಲ್ಲರೂ ಮೊದಲೇ ಎಲ್ಲಾ ನೋಡಿಕೊಂಡು ಬಂದಿದ್ದಾರೆ. ಆದರೆ ಜಿಲ್ಲಾ ಪರಿಷತ್ತು ಆಗುವಾಗ ವಿಕೇಂದ್ರೀಕರಣ ಆಗುವಾಗ ಮಹಾತ್ಮಾ ಗಾಂಧೀಜಿಯವರು ರಾಮರಾಜ್ಯ ಅಥವಾ ಗ್ರಾಮರಾಜ್ಯ ಎಂದು ಏನು ಹೇಳುತ್ತಿದ್ದರು ಅದನ್ನು ಎತ್ತಿ ಹಿಡಿಯಬೇಕು, ಹಳ್ಳಿಗಳಲ್ಲಿ ಅಥವಾ ಗ್ರೂಪ್ ಆಫ್ ವಿಲೇಜಸ್‌ನಲ್ಲಿ ಅವರೇ ತಮ್ಮ ರಾಜ್ಯಭಾರ ಮಾಡಿಕೊಳ್ಳಬೇಕೆನ್ನುವ ರೀತಿಯಲ್ಲಿ ವಿಕೇಂದ್ರೀಕರಣ ಮಾಡಬೇಕೆಂದು ಗಾಂಧೀಜಿ, ಎಸ್. ಕೆ. ಡೇ, ರಾಮಕೃಷ್ಣ ಹೆಗ್ಡೆ, ನಜೀರಸಾಬ್‌ರವರಿಗೆ ಬಂದು ಕೊನೆಗೆ ಆಕ್ಟ್ ಬಂತು. ಆದರೆ ಈ ೫ ವರ್ಷಗಳಲ್ಲಿ ಈ ಗ್ರಾಮರಾಜ್ಯದಲ್ಲಿ ಅಥವಾ ಜಿಲ್ಲಾಪರಿಷತ್ತಿನಲ್ಲಿ ನಿಜವಾಗಿ ಏನು ನಡೆದಿದೆ ಎಂದು ನೋಡಿದರೆ ಬಹುಶಃ ಇದು ರಾಮರಾಜ್ಯವೂ ಅಲ್ಲ, ಗ್ರಾಮ ರಾಜ್ಯವೂ ಅಲ್ಲ, ಬಹುಶಃ ರಾವಣರಾಜ್ಯ ಅಥವಾ ಚುನಾವಣೆ ರಾಜ್ಯ ಎಂದು ನಾವು ಹೇಳಬಹುದು. ಕಾರಣ ಇಷ್ಟೇ. ಈ ಒಂದು ಚುನಾವಣೆ ಬಂದು, ಅದೂ ರಿಸರ್ವ್ಡ್ ಸಿಂಬಲ್ಸ್ ಏನು ಬಂತು ಈ ಜಿಲ್ಲಾಪರಿಷತ್ತು ಮತ್ತು ಮಂಡಲಿಗಳಿಗೆ ಬಹುಶಃ ಇವತ್ತು ಹಳ್ಳಿಗಳು ಛಿದ್ರ ಛಿದ್ರವಾಗಿ ಹೋಗಿವೆ. ಹೆಂಡತಿ ಒಂದು ಕಡೆ ಓಟು ಮಾಡಿದರೆ ಗಂಡ ಒಂದು ಕಡೆ ಓಟು ಮಾಡುವುದು, ಮಗ ಒಂದು ಪಕ್ಷಕ್ಕೆ ಓಟು ಮಾಡಿದರೆ ತಂದೆ ಇನ್ನೊಂದು ಪಕ್ಷಕ್ಕೆ ಓಟು ಮಾಡುವುದು. ಹೀಗೆ ಹಳ್ಳಿಹಳ್ಳಿಯಲ್ಲಿಯೂ ಇವತ್ತು ಆಗಿದೆ. ಮೊದಲು ಸರ್ವಸಾಧಾರಣವಾಗಿ ಊರಿನವರೆಲ್ಲಾ ಕೂಡಿತು ಯಾರಾದರೂ ಒಬ್ಬರನ್ನು ಪಂಚಾಯಿತಿ ಮೆಂಬರ್ ಮಾಡುತ್ತಿದ್ದರು. ಆದರೆ ಈಗ ಏನಾಗಿದೆ ಅಂದರೆ, ಪ್ರತಿಯೊಂದು ಹಳ್ಳಿಯಲ್ಲೂ ರಾಜಕೀಯ ಯಾವರೀತಿ ಇದೆ ಎನ್ನುವುದು ತಮಗೂ

ಗೊತ್ತಿದೆ. ಏಕೆಂದರೆ, ತಾವು ಸಹ ದಾವಣಗೆರೆಯ ರೂರಲ್ ಪಾರ್ಟ್‌ನಿಂದ ಬಂದಿರುವವರು. ಮಂಡಲ ಪಂಚಾಯಿತಿಗಳು ತಮ್ಮ ಶಾಸನಸಭಾ ಕ್ಷೇತ್ರದಲ್ಲೂ ಬರುತ್ತವೆ. ಈಗ ಏನಾಗಿದೆ ಅಂದರೆ, ರಾವಣ ರಾಜ್ಯ ಅಥವಾ ಚುನಾವಣಾ ರಾಜ್ಯವೆಂದು ಹೇಳುತ್ತಾರೆ. ಜೊತೆಗೆ ಜಿಲ್ಲಾ ಪರಿಷತ್ ಮತ್ತು ಮಂಡಲಗಳ ಪ್ರಧಾನರು ಜವಹರ ರೋಜ್‌ಗಾರ್ ಯೋಜನೆಯಲ್ಲಿ, ೧೯೮೯-೯೦, ೧೯೯೦-೯೧ರಲ್ಲಿ ಸುಮಾರು ಒಂದು ಮಂಡಲಕ್ಕೆ ೪ ಲಕ್ಷ, ೫ ಲಕ್ಷ ಹಣ ಬಂತು. ಅದನ್ನು ಎಲ್ಲರೂ ದುರುಪಯೋಗ ಪಡಿಸಿಕೊಂಡಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಶೇಕಡ ೬೦ ಭಾಗ ಹಣವನ್ನು ದುರುಪಯೋಗ ಪಡಿಸಿಕೊಂಡು ಉಳಿದ ೪೦ ಭಾಗ ಕೆಲಸಗಳಿಗಿಂತ ಬಿಲ್ಲುಗಳನ್ನೇ ಜೋರಾಗಿ ಮಾಡುತ್ತಿದ್ದರು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ನನಗನ್ನಿಸುತ್ತಿದೆ. ಈ ರೀತಿ ಇರುವುದರಿಂದ ಅನೇಕ ಲೋಪದೋಷಗಳು ಕಂಡುಬರುತ್ತವೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮತ್ತು ನಜೀರ್ ಸಾಬ್‌ರವರು ಹೇಳಿದ್ದರು. ಇದನ್ನು ಪ್ರಾರಂಭಿಕವಾಗಿ ಇಟ್ಟುಕೊಳ್ಳೋಣ, ಅಕಸ್ಮಾತ್ ಲೋಪದೋಷಗಳು ಕಂಡುಬಂದರೆ ನಾವು ಇದನ್ನೆಲ್ಲ ಮುಂದೆ ಸರಿಪಡಿಸಿಕೊಳ್ಳೋಣವೆಂದು ಅವರು ಸಹ ಎಷ್ಟೋ ಸಲ ಹೇಳಿದ್ದಾರೆ. ಆಡಳಿತಾಧಿಕಾರಿಗಳನ್ನು ಏತಕ್ಕೆ ನೇಮಕ ಮಾಡುತ್ತಿದ್ದಾರೆ ಎನ್ನುವುದಕ್ಕೆ ನಾನು ಇದನ್ನು ಹೇಳಬೇಕಾಗಿದೆ. ಇಂತಹ ಒಂದು ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಒಂದು ಕಾಂಪ್ರಯೆನ್ಸೀವ್ ಬಿಲ್ಲನ್ನು ತರುವುದು ನಮ್ಮ ಕರ್ತವ್ಯವಿದೆ. ಎರಡನೆಯದು, ೭೩ನೆಯ ರಾಜ್ಯಾಂಗ ತಿದ್ದುಪಡಿಯ ಪ್ರಕಾರ ಅನೇಕ ವಿಷಯಗಳಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ. ಉದಾಹರಣೆಗೆ ಚುನಾವಣೆ ಇದೆ. ಈಗ ಇನ್‌ಡೈರೆಕ್ಟ್ ಎಲೆಕ್ಷನ್ ಇದೆ. ೭೩ನೇ ತಿದ್ದುಪಡಿಯಲ್ಲಿ ಡೈರೆಕ್ಟ್ ಎಲೆಕ್ಷನ್ ಮಾಡಿದ್ದಾರೆ. ಆ ಮಂಡಲದ ವ್ಯಾಪ್ತಿಗೆ ಬರುವವರೆಲ್ಲ ಓಟು ಕೊಡಬೇಕಾಗಿದೆ. ಈಗ ಹಾಗಿಲ್ಲ. ೧೫-೨೦-೨೫ಜನ ಯಾರು ಇರುತ್ತಾರೂ ಎಲೆಕ್ಟಾಗಿ ಬಂದವರು ಪ್ರಧಾನರು ಮತ್ತು ಉಪ ಪ್ರಧಾನರು ಆಗ ಬೇಕಾದರೆ ಎಷ್ಟು ರಾಜಕೀಯ ನಡೆಯುತ್ತದೆ ಎಂಬುದು ತಮಗ ಗೊತ್ತಿರಬಹುದು. ಆರಿಸಿ ಬಂದಂತಹ ಜನಗಳನ್ನು ಕಾರುಗಳಲ್ಲಿ ಎತ್ತಿಕೊಂಡು ಹೋಗಿ ನಂದಿಬೆಟ್ಟ ಇನ್ನೊಂದು ಕಡೆ ಶಿವಮೊಗ್ಗ ಅಲ್ಲೆಲ್ಲ ಕರೆದುಕೊಂಡು ಹೋಗುವುದು ಇವೆಲ್ಲ ನಡೆಯುತ್ತವೆ. ಇದು ಆಗಬಾರದೆಂದು ೭೩ನೇ ರಾಜ್ಯಾಂಗದ ತಿದ್ದುಪಡಿ ಪ್ರಕಾರ ನೇರವಾಗಿ ಚುನಾವಣೆ ಮಾಡುವುದು ಒಂದು ಇದೆ. ಆಮೇಲೆ ರಿಸರ್ವೇಶನ್, ರಿಸರ್ವೇಶನ್ ಬಗ್ಗೆ ನಾವು ಹೇಳಬೇಕಾದರೆ ಬಹುಶಃ ನಮ್ಮ ರಾಜ್ಯದಲ್ಲಿ ಪಂಚಾಯತ್ ರಾಜ್ ಚುನಾವಣೆಯಲ್ಲಿ ಆ ಆಕ್ಟ್‌ನಲ್ಲಿ ಏನಿದೆ ಅಂದರೆ ಅದರಲ್ಲಿ ೨೫ ಪರ್ಸೆಂಟ್ ಹೆಣ್ಣುಮಕ್ಕಳಿಗೆ ರಿಸರ್ವೇಶನ್ ಮಾಡಿದ್ದಾರೆ. ೭೩ನೇ ರಾಜ್ಯಾಂಗ ತಿದ್ದುಪಡಿಯಲ್ಲಿ ಶೇಕಡ ೩೩ ಭಾಗ ಹೆಣ್ಣುಮಕ್ಕಳಿಗೆ ರಿಸರ್ವೇಶನ್ ಇದೆ. ಬರೀ ಸದಸ್ಯರಾಗಿ ಎಲೆಕ್ಟ್ ಆಗುವುದಕ್ಕೆ ಅಷ್ಟೇ ಅಲ್ಲ, ಮಂಡಲ ಪಂಚಾಯಿತಿಯ ಪ್ರಧಾನರು ಮತ್ತು ಉಪ ಪ್ರಧಾನರು, ಹಾಗೆಯೇ ಜಿಲ್ಲಾ ಪರಿಷತ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಆಗುವುದಕ್ಕೆ ಕೂಡ ಶೇಕಡ ೩೩ ಭಾಗ ಹೆಣ್ಣು ಮಕ್ಕಳಿಗೆ ರಿಸರ್ವೇಶನ್ ಅನ್ನು ದಿವಂಗತ ರಾಜೀವ್ ಗಾಂಧಿಯವರು ರಾಜ್ಯಾಂಗದ ೭೩ನೆಯ ತಿದ್ದುಪಡಿಯ ಪ್ರಕಾರ ಇಟ್ಟಿದ್ದಾರೆ. ಅದರ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರಿಗೆ ರಿಸರ್ವೇಶನ್ ಇದೆ. ಜೊತೆಗೆ ಬ್ಯಾಕ್‌ವರ್ಡ್ ಕ್ಲಾಸ್‌ಸ್‌ನವರಿಗೂ ಕೂಡ ಆಯಾ ಸ್ಟೇಟ್‌ನವರು ರಿಸರ್ವೇಶನ್ ಮಾಡಿಕೊಳ್ಳಬಹುದು ಎಂದು ೭೩ನೆಯ ತಿದ್ದುಪಡಿಯಲ್ಲಿದೆ. ಎರಡನೆಯದು ಡಿಲಿಮಿಟೇಶನ್ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಅನೇಕ ಕಡೆ ಹೇಳಿದ್ದಾರೆ. ೧೯೯೧ನೇ ಜನಗಣತಿಯ ಪ್ರಕಾರ ಡಿಲಿಮಿಟೇಶನ್ ಮಾಡಬೇಕಾಗುತ್ತದೆ.

೧೯೭೧ರಲ್ಲಿ ಕ್ಷೇತ್ರಗಳ ವಿಂಗಡಣೆಯಾಗಿದೆ. ಎಕ್ಸಿಸ್ಟಿಂಗ್ ಆಕ್ಟ್ ಪ್ರಕಾರ ೮ರಿಂದ ೧೨ಸಾವಿರ ಎಂದು ಇದೆ. ನಮ್ಮ ತಾಲ್ಲೂಕಿನ ಒಂದು ಉದಾಹರಣೆಯನ್ನು ಹೇಳುತ್ತೇನೆ. ಮೊದಲು ನಮ್ಮಲ್ಲಿ ೪೮ ಪಂಚಾಯಿತಿಗಳು ಇದ್ದವು. ಈಗ ಅದನ್ನು ೧೨ ಪಂಚಾಯಿತಿ ಮಾಡಿದ್ದಾರೆ. ಅಂದರೆ ನಾಲ್ಕು ಪಂಚಾಯಿತಗಳನ್ನು ಸೇರಿಸಿ ಒಂದು ಮಂಡಲ ಪಂಚಾಯಿತಿ ಮಾಡಿದ್ದಾರೆ. ಇದು ಬಹಳ ವಿಶಾಲವಾಗಿದೆ. ಒಂದು ಮಂಡಲದಲ್ಲಿ ೩೪ ಹಳ್ಳಿಗಳಿವೆ. ಆ ಕೊನೆಯಿಂದ ಮಂಡಲದ ಹೆಡ್‌ಕ್ವಾರ್ಟರ್ಸ್‌ಗೆ ಬರಬೇಕಾದರೆ ೧೨ ಮೈಲಿ ೧೫ ಮೈಲಿ, ಎರಡು ಬಸ್‌ಗಳನ್ನು ಚೇಂಜ್ ಮಾಡಿಕೊಂಡು ಬರಬೇಕು. ಇದರಿಂದ ವಿಕೇಂದ್ರೀಕರಣದ ಬದಲಾಗಿ ಕೇಂದ್ರೀಕರಣವಾಯಿತು ಅಷ್ಟೆ. ನಾಲ್ಕು ಪಂಚಾಯಿತಿಗಳನ್ನು ಸೇರಿಸಿ ಒಂದು ಮಂಡಲ ಮಾಡಿದರೆ ವಿಕೇಂದ್ರೀಕರಣ ಎಲ್ಲಿಯಾಗುತ್ತದೆ? ಕೇಂದ್ರೀಕರಣವಾಯಿತು ಅಷ್ಟೆ. ರಾಮರಾಜ್ಯವಾಗಬೇಕಾದರೆ ವಿಕೇಂದ್ರೀಕರಣವಾಗಬೇಕು. ಆಯಾ ಹಳ್ಳಿಯವರು ಅವರೇ ರಾಜ್ಯಭಾರ ಮಾಡಿಕೊಳ್ಳಬೇಕು, ಅದನ್ನು ತರಬೇಕೆಂದು ಹೇಳಿ, ಡಿಲಿಮಿಟೇಶನ್ ಸಹ ಹೊಸದಾಗಿ ಮಾಡಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಅದು ಇನ್ನು ೫ ಸಾವಿರ, ೧೦ ಸಾವಿರ ಇರಬೇಕು. ಈಗ ೨೫೦೦ ಮಂಡಲ ಏನಿದೆ ಅದು ಸ್ವಲ್ಪ ಹೆಚ್ಚು ಕಡಿಮೆ ೫ ಸಾವಿರ ಮಂಡಲವಾಗಬಹುದು. ಅಂದರೆ ಸ್ವಲ್ಪ ಇರುವುದರಲ್ಲಿ ಒತ್ತಡ ಕಡಿಮೆಯಾಗಿ ಅದು ಅನುಕೂಲವಾಗುತ್ತದೆ ಎಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಕಾಂಪ್ರಹೆನ್ಸೀವ್ ಬಿಲ್ ಅಂದರೆ ರಾಜ್ಯಾಂಗದ ೭೩ನೇ ತಿದ್ದುಪಡಿಯಾದ ಮೇಲೆ ಸಮಗ್ರವಾದ ತಿದ್ದುಪಡಿಯಾದರೆ ಅದರಲ್ಲಿ ನಾವು ಅಳವಡಿಸಿಕೊಳ್ಳುತ್ತೇವೆ. ಅದು ಆದಮೇಲೆ ಇದನ್ನು ತರುತ್ತಾರೆಂದು ನನಗೆನ್ನಿಸುತ್ತದೆ. ಡಿಲಿಮಿಟೇಶನ್‌ದು ಒಂದು, ರಿಸರ್ವೇಶನ್‌ದು ಒಂದು. ಆಮೇಲೆ ನೇರವಾಗಿ ಚುನಾವಣೆ ನಡೆಸುವುದು ಅದರಲ್ಲಿದೆ ಇಲ್ಲಿ ಇನ್‌ಡೈರೆಕ್ಟ್ ಎಲೆಕ್ಷನ್ ಇದೆ. ಮಾನ್ಯ ವಿರೋಧಪಕ್ಷದ ಸದಸ್ಯರುಗಳು ಚುನಾವಣೆಯನ್ನು ಮಾಡಿ, ಚುನಾವಣೆಯನ್ನು ಈಗ ಮಾಡಲೇಬೇಕೆಂದು ಹೇಳುತ್ತಾರೆ. ಜಿಲ್ಲಾ ಪರಿಷತ್‌ನ ಆಕ್ಟ್ ಸೆಕ್ಷನ್ ೧೭೦ರಲ್ಲಿ ಚುನಾವಣೆಯನ್ನು ಮಾಡುವುದಕ್ಕೆ ಆಗದಿದ್ದರೆ ಆರು ತಿಂಗಳು ಮುಂದಕ್ಕೆ ಎಕ್ಸ್‌ಟೆನ್‌ಷನ್ ಕೊಡಬಹುದು ಎಂದು ಇದೆ. ಜಿಲ್ಲಾಪರಿಷತ್‌ಗಳು ದಿನಾಂಕ ೧೪-೧-೧೯೯೨ರಲ್ಲಿ ವಜಾ ಆದಮೇಲೆ ಆರು ತಿಂಗಳು ಮುಂದಕ್ಕೆ ಹಾಕಲಾಗಿದೆ. ಈಗ ಸದ್ಯದಲ್ಲಿ ಚುನಾವಣೆಯನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಲೋಕಸಭೆಯಲ್ಲಿ ಪಾಸ್ ಆಗಿಲ್ಲ, ರಾಜ್ಯಸಭೆಯಲ್ಲೂ ಆಗಬೇಕು. ಅವರು ನಮಗೆ ಕಳಿಸಬೇಕು ಮತ್ತು ನಾವು ಅಡಾಪ್ಟ್ ಮಾಡಿಕೊಳ್ಳಬೇಕು. ಅದಕ್ಕೋಸ್ಕರ ಸರ್ಕಾರದವರು ಆಡಳಿತಾಧಿಕಾರಿಗಳನ್ನು ನೇಮಿಸಿಕೊಳ್ಳುವುದಕ್ಕೆ ಏರ್ಪಾಡು ಮಾಡಿಕೊಂಡಿರುವುದು ಒಂದು ಒಳ್ಳೆಯ ಕಾರ್ಯ ಎಂದು ನಾನು ಈ ಸಮಯದಲ್ಲಿ ಹೇಳಬೇಕಾಗಿದೆ. ಜೊತೆಗೆ ಮೂರು ಹಂತಗಳನ್ನು ಇಟ್ಟುಕೊಳ್ಳಬೇಕೊ, ಎರಡು ಹಂತಗಳನ್ನು ಇಟ್ಟುಕೊಳ್ಳಬೇಕೊ ಎನ್ನುವುದು ತೀರ್ಮಾನವಾಗಿಲ್ಲ. ಅದನ್ನು ಸ್ಟೇಟ್‌ಗಳಿಗೆ ಬಿಟ್ಟಿದ್ದಾರೆ. ಆದುದರಿಂದ ಸರ್ಕಾರದವರು ಒಂದು ಒಳ್ಳೆಯ ಹೆಜ್ಜೆಯಲ್ಲಿ ಹೋಗಿದ್ದಾರೆ ಎಂದು ನನಗೆನ್ನಿಸುತ್ತದೆ. ಆಮೇಲೆ ಅಮೆಂಡ್‌ಮೆಂಟ್ ಸೆಕ್ಷನ್ ೮ರಲ್ಲಿ ಏನಿದೆ ಎಂದರೆ, "it has not been possible to complete general elections to the Mandal Panchayat before the expiry of the term." ಈ ಒಂದು ವರ್ಡಿಂಗ್ ಮೇಲೆ ಹೈಕೋರ್ಟಿನಲ್ಲಿ ಇದುವರೆಗೆ ಸುಮಾರು ೧೫೦-೨೦೦ ರಿಟ್ ಪೆಟಿಶನ್ಸ್‌ಗೆ ಸ್ಟೇ ಕೊಟ್ಟಿದ್ದಾರೆ. ಆದ್ದರಿಂದ ಈ ವರ್ಡಿಂಗ್‌ನ್ನು ಚೇಂಜ್ ಮಾಡಿರುವುದು ಬಹಳ ಅನುಕೂಲ. ಏಕೆಂದರೆ ಕಂಪ್ಲೀಟ್

ಎಂದು ಇದೆ, ಕಮಿಷ್ಣೇ ಮಾಡಿಲ್ಲ ಎನ್ನುವುದು ಅವರ ಇಂಟರ್‌ಪ್ರಿಟೇಶನ್. I need not go into the details of the Writ Petitions or any such things and it is not good on my part to go through those details also when the Writ A Petition is pending before the High Court. It may become subjudice also. That is why I don't want to discuss this section in detail. Amendment to Section 44 says: "In Section 44 of the Principal Act, sub-section (2) shall be omitted." ಅಂದರೆ ಸೆಕ್ಷನ್ ೪೪ ಏನು ಹೇಳುತ್ತದೆ ಎಂದರೆ, ಮುಂದಿನ ಚುನಾವಣೆಯಾಗಿ, ಮುಂದಿನ ಪ್ರಧಾನರು ಬರುವವರೆಗ ಹಿಂದಿನ ಪ್ರಧಾನರೇ ಆಕ್ಟ್ ಮಾಡುತ್ತಾ ಇರುತ್ತಾರೆ ಎಂದು ಇದೆ. ಅದು ಹೇಗೆ ಆಗುತ್ತದೆ? ಒಂದು ಕಡೆ ಅಡ್ಮಿನಿಸ್ಟ್ರೇಟರ್‌ನ್ನು ಮಾಡಿದ್ದಾರೆ. ಸೆಕ್ಷನ್ ೮೩ ಪ್ರಕಾರ ಅಡ್ಮಿನಿಸ್ಟ್ರೇಟರ್ಸ್ ಅಥವಾ ಅಡ್ಮಿನಿಸ್ಟ್ರೇಟಿವ್ ಕಮಿಟಿ ಮಾಡಬಹುದು ಎಂದಿದೆ. ಇಲ್ಲಿ ಸರ್ಕಾರ ತಾತ್ಕಾಲಿಕವಾಗಿ ಅಡ್ಮಿನಿಸ್ಟ್ರೇಟರ್ ಎಂದು ಮಾಡಿದ್ದಾರೆ. ಒಂದು ಕಡೆ ಅಡ್ಮಿನಿಸ್ಟ್ರೇಟರ್ ಎಂದು ಮಾಡಿದಮೇಲೆ ಹಿಂದಿನ ಪ್ರಧಾನರೇ ಹೇಗೆ ಬರುವುದಕ್ಕೆ ಆಗುತ್ತದೆ? ಆದ್ದರಿಂದ ಸೆಕ್ಷನ್‌ಗಳೇ ಒಂದಕ್ಕೊಂದು ವ್ಯತಿರಿಕ್ತವಾಗಿವೆ. ಸೆಕ್ಷನ್ ೪೪ರನ್ನು ಡಿಲೀಟ್ ಮಾಡಿದರೆ ಬಹಳ ಅನುಕೂಲ ಏಕೆಂದರೆ, ಹಿಂದಿನ ಪ್ರಧಾನರು ಈ ಸೆಕ್ಷನ್ ಮೇಲೇನೇ ಹೋಗಿ ಸ್ಟೇ ತೆಗೆದುಕೊಂಡು ತಮ್ಮ ಅಧಿಕಾರ ವಾಪಸ್ಸು ಕೊಡಿ ಎಂದು ಅಡ್ಮಿನಿಸ್ಟ್ರೇಟರ್ಸ್ ಹತ್ತಿರ ಹೋಗಿ ಕೇಳುತ್ತಿದ್ದಾರೆ. ಸುಮಾರು ೧೫೦ ರಿಪಿಟೀಶನ್ಸ್ ಆಗಿವೆ. ಆದ್ದರಿಂದ ಸೆಕ್ಷನ್ ೪೪ ಡಿಲೀಟ್ ಆಗಿರುವುದು ಬಹಳ ಅನುಕೂಲವಾಯಿತು. ಆಮೇಲೆ, Amendment of Section 160: In section 160 of Pincipal Act - i) the first proviso shall be omitted; ii) in the second proviso, for the words "Provided further" the word "Provided" shall be substituted. ಅಂದರೆ ಸೆಕ್ಷನ್ ೧೬೦ರಲ್ಲಿ ಬೇಕಾದರೆ ಜಿಲ್ಲಾಪರಿಷತ್ತುಗಳನ್ನು ಆರು ತಿಂಗಳು ಮುಂದುವರೆಸಬಹುದು ಎನ್ನುವುದನ್ನು ತೆಗೆದುಹಾಕಿದ್ದಾರೆ. ಇದು ಒಳ್ಳೆಯದು. ಕೊನೆಯಲ್ಲಿ ಸೆಕ್ಷನ್ ೨೭೨ (ಬಿ) ಏನಿದೆ ಅದರಲ್ಲಿ ಅಡ್ಮಿನಿಸ್ಟ್ರೇಟರ್ಸ್‌ಗಳನ್ನು ಮಾಡಿದ್ದಂತೂ ಬಹಳ ಅನುಕೂಲ. ಎಲ್ಲಕ್ಕಿಂತಲೂ ಇನ್ನೊಂದು ಮುಖ್ಯವಾದದ್ದು ಏನೆಂದರೆ, ಈ ೭೧ನೇ ಸೆಕ್ಷನ್ ಮತ್ತು ೯೧ನೇ ಸೆಕ್ಷನ್ ಮಧ್ಯೆ ಏನಾಗಿದೆ ಎನ್ನುವುದನ್ನು ತಾವು ಪತ್ರಿಕೆಗಳಲ್ಲಿ ಓದಿರಬಹುದು. ಇತ್ತೀಚೆಗೆ ಲೋಕಸಭೆಯಲ್ಲಿ ಏನಾಗಿದೆ ಎನ್ನುವುದನ್ನು ತಾವು ನೋಡಿರಬಹುದು. ಅನೇಕ ಎಸ್.ಸಿ. / ಎಸ್. ಟಿ. ಜಾತಿಗಳು ಏನಿವೆ, ಅವುಗಳನ್ನು ಎಸ್. ಸಿ. / ಎಸ್. ಟಿ.ಗೆ ಸೇರಿಸಿದ್ದಾರೆ. ಸುಮಾರು ೬೦-೭೦ ಜಾತಿಗಳನ್ನು ಕರ್ನಾಟಕದಲ್ಲೇ ಸೇರಿಸಿದ್ದಾರೆ. ಇವತ್ತು ಇವರಿಗೆಲ್ಲ ೭೧ನೇ ಇಸವಿಯ ಸೆನ್ಸಸ್ ಪ್ರಕಾರ ಮಾಡುವುದಕ್ಕೆ ಹೋದರೆ ೧೮ ಪರ್ಸೆಂಟ್ ಬದಲು ೨೫ ಪರ್ಸೆಂಟ್ ಅಂದರೆ ಇನ್ನೂ ೭ ಪರ್ಸೆಂಟ್ ಇನ್‌ಕ್ರೀಸ್ ಆಗುವ ಚಾನ್ಸ್‌ಸ್ ಅವರಿಗೆ ಇದೆ. ಹಾಗೆ ಮಾಡುವುದರಿಂದ ಅದನ್ನು ಅವರಿಂದ ನಾವು ಕಸಿದುಕೊಂಡ ಹಾಗೆ ಆಗುತ್ತದೆ. ಅದಕ್ಕೋಸ್ಕರ ನಾನು ಮಾನ್ಯ ಮಂತ್ರಿಗಳಿಗ ಹೇಳುತ್ತಿರುವುದು, ನಿನ್ನೆ ತಾನೆ ನಾನು ವಿಚಾರಿಸಿದೆ. ಬಹುಶಃ ಈಗ ೯೧ನೇ ಸೆಕ್ಷನ್ ಡಿಸ್ಟ್ರಿಕ್ಟ್ ಮಟ್ಟದಲ್ಲಿ ಸಿಟಿ ಸೆನ್ಸಸ್ ಮೊದಲನೇ ಸಂಪುಟವನ್ನು ಹೊರಡಿಸಿದ್ದಾರೆ. ಎರಡನೇ ಸಂಪುಟದಲ್ಲಿ ತಾಲ್ಲೂಕು ಹೆಡ್‌ಕ್ವಾರ್ಟರ್ಸ್, ತಾಲ್ಲೂಕಿನ ಲಿಟರೇಟ್ ಪೀಪಲ್, ಆಮೇಲೆ ವರ್ಕರ್ಸ್

ಎಷ್ಟು ಜನ ಇದ್ದಾರೆ ಎನ್ನುವುದನೆಲ್ಲಾ ಪ್ರಿಂಟಿಂಗ್‌ಗೆ ಹೋಗಿದೆ ಬಹುಶಃ ಇನ್ನು ಹದಿನೈದು ದಿವಸ ಅಥವಾ ಒಂದು ತಿಂಗಳಲ್ಲಿ ೯೧ನೇ ಸೆಕ್ಷನ್ ಕೂಡ ಬರುವ ಛಾನ್ಸಸ್ ಇದೆ. ಆಮೇಲೆ ವಿಲೇಜ್ ಲೆವೆಲ್‌ನದು ಇನ್ನು ೩-೪ ತಿಂಗಳು ತೆಗೆದುಕೊಳ್ಳಬಹುದು. ವಿಲೇಜ್ ಲೆವಲ್‌ದು ಬಂದ ಮೇಲೆ ಒಂದು ಸೆನ್ಸಸ್ ಮಾಡುವುದು ಉತ್ತಮ. ಇಲ್ಲದಿದ್ದರೆ ಮುಖ್ಯವಾಗಿ ಎಸ್.ಸಿ. ಎಸ್.ಟಿ ಜನರ ಹಕ್ಕನ್ನು ನಾವು ಕಸಿದುಕೊಂಡ ಹಾಗಾಗುತ್ತದೆ. ಏಕೆಂದರೆ ಕೆಲವೊಂದು ಹಿಂದುಳಿದ ವರ್ಗಗಳು ಬ್ಯಾಕ್‌ವರ್ಡ್‌ನಲ್ಲಿದ್ದವು, ಅವರನ್ನು ಈಗ ಎಸ್.ಸಿ. / ಎಸ್.ಟಿಗೆ ಸೇರಿಸಿದ್ದಾರೆ. ಇತ್ತೀಚೆಗೆ ಲೋಕಸಭೆಯಲ್ಲಿ ಸುಮಾರು ೪೦-೫೦ ಜಾತಿಗಳನ್ನು ಸೇರಿಸಿದ್ದಾರೆ ಅಂತಹ ಸಮಯದಲ್ಲಿ ಅವರ ಹಕ್ಕನ್ನು ನಾವು ಕಸಿದುಕೊಂಡಂತೆ ಆಗುವುದು. ಜೊತೆಗೆ ಜನಸಂಖ್ಯೆ ೭೧ರಿಂದ ೯೧ರವರೆಗೆ ೨೬ ಪರ್ಸೆಂಟ್‌ನಷ್ಟು ಜಾಸ್ತಿಯಾಗಿದೆ. ಈ ಬಗ್ಗೆ ಇರುವ ಪುಸ್ತಕ ನನ್ನ ಹತ್ತಿರ ಇದೆ. ಈಗ ಪ್ರತಿಯೊಂದು ಜಿಲ್ಲೆಯಲ್ಲಿ ಕೂಡ ಜನಸಂಖ್ಯೆ ೨೬ ಪರ್ಸೆಂಟ್ ಜಾಸ್ತಿಯಾಗಿದೆ. ಇದು ಜಿಲ್ಲಾ ಮಟ್ಟದಲ್ಲಿದ್ದು, ತಾಲ್ಲೂಕು ಮಟ್ಟದ್ದು ಇನ್ನೂ ಬಂದಿಲ್ಲ, ಇನ್ನೊಂದು ತಿಂಗಳಲ್ಲಿ ಬರಬಹುದು. ಇದು ೨೬ ಪರ್ಸೆಂಟ್ ಜಾಸ್ತಿಯಾಗಿರುವಾಗ, ಜೊತೆಗೆ ಮಂಡಲ್ ಲೆವಲ್‌ದು ಏನಾಗಿದೆ ಎಂದರೆ, ನಾಲ್ಕು ನೂರು ಜನಸಂಖ್ಯೆಗೆ ಒಂದು ಸೀಟ್ ಎಂದಿದೆ. ಪಾಪ್ಯುಲೇಶನ್ ಜಾಸ್ತಿಯಾದಾಗ ಸದಸ್ಯರೂ ಜಾಸ್ತಿಯಾಗುತ್ತಾರೆ. ಎಲ್ಲ ಜಾತಿಯವರೂ ಜಾಸ್ತಿಯಾಗುತ್ತಾರೆ. ಎಸ್.ಸಿ. ಎಸ್.ಟಿ, ಬ್ಯಾಕ್‌ವರ್ಡ್ ಕ್ಲಾಸ್‌ಗಳೂ ಎಲ್ಲ ಜಾತಿಗಳೂ ಜಾಸ್ತಿಯಾಗುತ್ತವೆ. ಜೊತೆಗೆ ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಸವಲತ್ತು ಕೊಡಬೇಕು ಎಂದು ೭೩ನೇ ಅಮೆಂಡ್‌ಮೆಂಟ್‌ನಲ್ಲಿದೆ. ಬ್ಯಾಕ್‌ವರ್ಡ್ ಕ್ಲಾಸ್‌ಗೆ ನಾವು ಉತ್ತೇಜನ ಕೊಡಬೇಕೆಂದು ಆರ್ಟಿಕಲ್ ೧೫ (೪)ನಲ್ಲಿದೆ. ಆದ್ದರಿಂದ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೂ ರಿಸರ್ವೇಷನ್ ಇರಬೇಕೆಂದು ಸರ್ಕಾರದವರ ಅಭಿಪ್ರಾಯದ ಮೇಲೆ, ಅಡ್ಮಿನಿಸ್ಟ್ರೇಟರ್ಸ್ ಮಾಡೋಣ, ಸ್ವಲ್ಪ ಕಾಂಪ್ರಹೆನ್ಸೀವ್ ಆಗಿ, ಸುದೀರ್ಘವಾಗಿ ತರೋಣ ಎಂದು ಮಾಡಿರುವುದರಲ್ಲಿ ಯಾವ ತಪ್ಪೂ ಇಲ್ಲ. ಸುಮ್ಮನೆ ನಮ್ಮ ವಿರೋಧಪಕ್ಷದವರು ರಾಜಕೀಯ ಮಾಡಬೇಕೇ ಮಾಡಬೇಕು. ಈ ಸಮಯದಲ್ಲಿ ತಮಗೆ ಒಂದು ವಿಚಾರವನ್ನು ಜ್ಞಾಪಿಸುತ್ತೇನೆ. ೧೯೯೧ನೇ ಇಸವಿ ಮಾರ್ಚ್ ೨೦, ೨೧ ಮತ್ತು ೨೨ ಮೂರುದಿವಸ, ವಿರೋಧಪಕ್ಷದ ನಾಯಕರುಗಳು ಹೇಳಿದ್ದಾರೆ. ಸರ್ಕಾರದವರು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯ್ತಿಗಳಿಗೆ ೫ ವರ್ಷ ಟರ್ಮ್ ಇತ್ತಲ್ಲ ಅದನ್ನು ೪ ವರ್ಷಕ್ಕೆ ಇಳಿಸಿ, ಒಂದು ಆರ್ಡಿನೆನ್ಸ್ ಹೊರಡಿಸಿದರು. ಅದು ಈ ಸಭೆಯ ಮುಂದೆ ಬಂದಿದ್ದಾಗ, ಇದೇ ವಿರೋಧಪಕ್ಷದ ನಾಯಕರುಗಳು ಅನೇಕರು ಹೇಳಿದ್ದಾರೆ. ಆಗ ಮಾನ್ಯ ಬಸವಲಿಂಗಪ್ಪನವರೋ ಅಥವಾ ಮಾನ್ಯ ಘೋರ್ಪಡೆಯವರೂ ಮಂತ್ರಿಗಳಾಗಿದ್ದರು. ಮೊದಲು ಘೋರ್ಪಡೆಯವರಿದ್ದರು, ಆಮೇಲೆ ಬಸವಲಿಂಗಪ್ಪನವರು ಬಂದರು, ಆನಂತರ ಕೆ. ಹೆಚ್. ಪಾಟೀಲರು ಬಂದರು. ಈಗ ಈ ರೂರಲ್ ಡೆವಲಪ್‌ಮೆಂಟ್ ಇಲಾಖೆ ಮಾನ್ಯ ಖರ್ಗೆಯವರ ಕೈಯಲ್ಲಿದೆ ಹೋದವರ್ಷ ೧೯೯೧ನೇ ಇಸವಿಯಲ್ಲಿ, ಮಾರ್ಚ್ ೨೦, ೨೧ ಮತ್ತು ೨೨, ಇವತ್ತು ಮಾರ್ಚ್ ೨೧, ಇದೇ ದಿವಸ ಅವರು ಆಹ್ವಾನಿಸಿದ್ದಾರೆ, ಏನು ನೀವು ೬೪ನೇ ತಿದ್ದುಪಡಿ ಪ್ರಕಾರ ತನ್ನಿ, ನಾವೆಲ್ಲಾ ಸ್ವಾಗತ ಮಾಡುತ್ತೇವೆ ಎಂದು ಹೇಳಿದ್ದಾರೆ. ೬೪ನೇ ರಾಜ್ಯಾಂಗ ತಿದ್ದುಪಡಿ ಹೋಗಿ, ಇವತ್ತು ೭೩ನೇ ತಿದ್ದುಪಡಿಯಾಗಿದೆ ಅಷ್ಟೆ. ವ್ಯತ್ಯಾಸ ಏನೂ ಆಗಿಲ್ಲ. ಇವತ್ತು ವಿಕೇಂದ್ರೀಕರಣ ಎಲ್ಲಾ ಕೇಂದ್ರೀಕರಣ ಆಗುತ್ತಿದೆ, ಅಡ್ಮಿನಿಸ್ಟ್ರೇಟರ್‌ರನ್ನು ಮಾಡುತ್ತಾರೆ ಎಂದು ಬೊಬ್ಬೆ ಹಾಕುತ್ತಿದ್ದಾರೆ. ವಿರೋಧಪಕ್ಷದವರು ನ್ಯಾಯವಾಗಿ ತಿಳಿದುಕೊಳ್ಳಬೇಕು. ಯಾವ ಒಂದು ಆಧಾರದ ಮೇಲೆ ಇವರು ಮುಂದಕ್ಕೆ

ಹಾಕಿದ್ದಾರೆ, ಯಾರದು ತಪ್ಪು ಅವರ ಮೋಟೀವ್ ಏನಿದೆ, ಮೊಡಸ್ ಅಪರೆಂಡಿ ಏನಿದೆ ಪೋಸ್ಟ್‌ಪೋನ್ ಮಾಡಬೇಕೆಂದೇನೂ ಇಲ್ಲ. ಏನು ಸೋತು ಹೋಗುತ್ತಾರೆಂದೇ. ನಾನು ತಮಗೆ ಹೇಳಬೇಕೆಂದರೆ, ೪ ವರ್ಷಗಳ ಕಾಲ ಅವರ ಸರ್ಕಾರ ಇತ್ತಲ್ಲ ಅಂದರೆ ಜನತಾ ದಳದ ಸರ್ಕಾರ ಇದ್ದಾಗ ೪ ವರ್ಷಗಳ ಕಾಲ ಜಿಲ್ಲಾಪರಿಷತ್ತುಗಳು ಮಂಡಲಗಳು ಇದ್ದವು. ೨೫೦೦ ಮಂಡಲಗಳಲ್ಲಿ, ಮೂರನೇ ಎರಡು ಭಾಗ ಅವರದಿತ್ತು, ಆಮೇಲೆ ಮಿಕ್ಕಿದ್ದೆಲ್ಲಾ ಕಾಂಗ್ರೆಸ್. ಆಮೇಲೆ ಜಿಲ್ಲಾಪರಿಷತ್ ಸದಸ್ಯರಲ್ಲಿ ೮೫೦ ಸದಸ್ಯರಲ್ಲಿ ಽ೫೦ ಕಾಂಗ್ರೆಸ್ ಸದಸ್ಯರು, ೪೫೦ ಸದಸ್ಯರು ಜನತಾ ದಳದವರಿದ್ದರು. ಆಮೇಲೆ ೨೫೦೦ ಮಂಡಲಗಳಲ್ಲಿ ೫೬ ಸಾವಿರ ಜನ ಮಂಡಲ್ ಸದಸ್ಯರು ಏನಿದ್ದರು, ಅವರಲ್ಲಿ ೨೮ ಸಾವಿರ ಜನ ಜನತಾ ದಳದವರಿದ್ದರು, ೨೧ ಸಾವಿರ ಜನ ಕಾಂಗ್ರೆಸ್‌ನವರಿದ್ದರು. ಆಮೇಲೆ ಮಿಕ್ಕಿದವರು ೧೦ ಸಾವಿರ ಜನ, ಮಿಸಲೇನಿಯಸ್, ಇಂಡಿಪೆಂಡೆಂಟ್ಸ್, ಬಿಜೆಪಿ, ಸಿಪಿಎಂ ಅವರೆಲ್ಲ ಇದ್ದರು. ಅಂತಹ ಸಮಯದಲ್ಲಿ ಅವರದೇ ರಾಜ್ಯಭಾರ ಇದ್ದಾಗ ಅವರು ನಾಲ್ಕು ವರ್ಷ ಆಳಿ, ೧೯೮೯ನೇ ಇಸವಿಯಲ್ಲಿ ನಮಗೆ ೧೭೬-೧೮೦ ಸೀಟು ಬರಬೇಕೆಂದರೆ, ಈ ಜಿಲ್ಲಾ ಪರಿಷತ್ತುಗಳು ಮಂಡಲಗಳಲ್ಲಿ ಅವರು ಮಾಡುತ್ತಿರತಕ್ಕ ಅನ್ಯಾಯಗಳಿಗೆ ಜನ ಎಷ್ಟು ರೊಚ್ಚಿಗೆದ್ದಿದ್ದಾರೆ ಎಂಬ ಒಂದೇ ಉದಾಹರಣೆಯನ್ನು ತೋರಿಸಬಹುದು. ಏಕೆಂದರೆ ಅವರು ಹೇಳುತ್ತಿದ್ದಾರೆ, ಎಲ್ಲಾ ಕೇಂದ್ರೀಕರಣ ಆಗಿಹೋಯಿತು, ಅನ್ಯಾಯ ಮಾಡಿಬಿಟ್ಟರು, ಇದು ಪ್ರಜಾಪ್ರಭುತ್ವದ ಕಗ್ಗೊಲೆ ಎಂದು ಇವೆಲ್ಲಾ ಸುಳ್ಳು. ಕಗ್ಗೊಲೆಯೂ ಇಲ್ಲ, ಏನೂ ಇಲ್ಲ. ಈಗ ಚುನಾವಣೆ ಮಾಡಿದರೆ ಪುನಃ ರಾಜ್ಯಾಂಗ ತಿದ್ದುಪಡಿ ಪ್ರಕಾರ ಚುನಾವಣೆ ಮಾಡಬೇಕಾಗುತ್ತದೆ. ಆಗ ಎರಡು ಎಲೆಕ್ಷನ್ ಆಗುತ್ತದೆ. ಅವರ ಪಾರ್ಟಿ ಮೆಂಬರುಗಳಿಗೂ ತೊಂದರೆಯಾಗುತ್ತದೆ, ನಮ್ಮ ಪಾರ್ಟಿ ಮೆಂಬರುಗಳಿಗೂ ವೆಚ್ಚವಾಗುತ್ತದೆ. ಅದಕ್ಕೆ ಡಬಲ್ ಎಕ್ಸ್‌ಪೆಂಡಿಚರ್ ಆಗುತ್ತದೆ. ಈ ರೀತಿ ಇರುವಾಗ ಸರ್ಕಾರದವರು ಒಳ್ಳೆಯ ದಾರಿಯಲ್ಲಿ ಹೋಗುತ್ತಿದ್ದಾರೆ. ಶ್ರೀಮಾನ್ ಖರ್ಗೆಯವರು ಬಂದಮೇಲಂತೂ ಆ ಡಿಪಾರ್ಟ್‌ಮೆಂಟ್‌ನಲ್ಲಿ ಪಾದರಸ ನಡೆದಹಾಗೆ ನಡೆಯುತ್ತಿದೆ. ನಾವು ಕೆಲವು ಸದಸ್ಯರೆಲ್ಲಾ ಹೋಗಿ ಅವರಿಗೆ ಹೇಳಿದೆವು. ಈ ಜಿಲ್ಲಾಮಟ್ಟದಲ್ಲಿ, ಜಿಲ್ಲಾ ಆಡಳಿತಾಧಿಕಾರಿಗಳೇನಿದ್ದಾರೆ, ಅವರ ಬಗ್ಗೆ ೨ ತಿಂಗಳ ಹಿಂದೆ ನಮಗೆಲ್ಲಾ ಗೊತ್ತಾಯಿತು, ಈಗ ಏನು ವಿಚಾರ ಗೊತ್ತಾಗುತ್ತಿಲ್ಲ. ತಕ್ಷಣ ಅವರು ಒಂದು ಸುತ್ತೋಲೆ ಕಳುಹಿಸಿದ್ದಾರೆ. ಯಾವಾಗ ಚುನಾಯಿತ ಪ್ರತಿನಿಧಿಗಳು ಜಿಲ್ಲಾಮಟ್ಟದಲ್ಲಿ ಇಲ್ಲವೋ, ಲೋಕಲ್ ಡಿಸ್ಟ್ರಿಕ್ಟ್‌ನಲ್ಲಿ, ಎಂ. ಎಲ್ ಎ.ಗಳು, ಎಂ. ಎಲ್. ಸಿ.ಗಳು, ಎಂ. ಪಿ.ಗಳು ಏನಿದ್ದಾರೆ ಅವರನ್ನು ಕರೆಸಿ, ತಿಂಗಳಿಗೊಂದು ಸಾರಿ ಮೀಟಿಂಗ್ ಮಾಡಿ. ಜಿಲ್ಲಾಮಟ್ಟದಲ್ಲಿ ಅವರಿಗೆ ಗೊತ್ತಿರುವಷ್ಟು ನಿಮಗೆ ಗೊತ್ತಿರುವುದಿಲ್ಲ. ಏಕೆಂದರೆ, ಆಫೀಸರುಗಳು ಇವತ್ತು ಈ ಜಿಲ್ಲೆಯಲ್ಲಿರುತ್ತಾರೆ, ನಾಳೆ ಇನ್ನೊಂದು ಜಿಲ್ಲೆಗೆ ಹೋಗುತ್ತಾರೆ. ಅವರ ಸಲಹೆಗಳನ್ನು ತೆಗೆದುಕೊಂಡು, ತಿಂಗಳಿಗೊಂದು ಸಲ ಮೀಟಿಂಗ್ ಮಾಡಿ ಎಂದು ಸುತ್ತೋಲೆ ಕೊಟ್ಟಿದ್ದಾರೆ. ತಕ್ಷಣ ಅವರು ಆಕ್ಟ್ ಮಾಡುತ್ತಾರೆ ನಾನು ನೋಡಿದ್ದೇನೆ, ಕೂಡಲೇ ಆಕ್ಟ್ ಮಾಡುತ್ತಾರೆ. ಈ ರೀತಿ ಪರಿಸ್ಥಿತಿ ಇರುವಾಗ, ವಿರೋಧ ಪಕ್ಷದವರು, ಈ ರೀತಿ ಹೇಳುವುದು ತೀರಾ ಅನ್ಯಾಯ, ಅಸಮಾಧಾನ ಜೊತೆಗೆ ಅವರೂ ಸಹ ಒಪ್ಪಿಕೊಂಡರೆ ಸ್ಟೇಟ್ ಎಕ್ಸ್‌ಚೆಕರ್‌ಗೂ ಹಣ ಉಳಿತಾಯವಾಗುತ್ತದೆ. ಅವರ ಪಾರ್ಟಿಗೂ ಹಣ ಉಳಿತಾಯವಾಗುತ್ತದೆ ಎಂದು ಹೇಳಿ ಶ್ರೀಮಾನ್ ಖರ್ಗೆಯವರು ರೂರಲ್ ಡೆವಲಪ್‌ಮೆಂಟ್ ಬಗ್ಗೆ ಏನು ತಿದ್ದುಪಡಿ ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಹದೇವ್ (ನಂಜನಗೂಡು):- ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯಸರ್ಕಾರವು ಈ ಜಿಲ್ಲಾಪರಿಷತ್ತುಗಳ ವಿಧೇಯಕಕ್ಕೆ ತಿದ್ದುಪಡಿ ತಂದಿರುವುದನ್ನು ನಾನು ಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಈ ತಿದ್ದುಪಡಿ ಏನಿದೆ ಇದು ಈಗಿನ ಪರಿಸ್ಥಿತಿಗೆ ಬಹಳ ಅತ್ಯಾವಶ್ಯಕ. ಏಕೆಂದರೆ, ಪ್ರಜಾ ಪ್ರಭುತ್ವದಲ್ಲಿ ನಾವಿದ್ದೇವೆ. ಪ್ರಜಾಪ್ರಭುತ್ವದ ಆಳ್ವಿಕೆಯಲ್ಲಿ ನಾವು ಸರ್ಕಾರ ಮತ್ತು ಸಂಸ್ಥೆಗಳನ್ನು ನಡೆಸುತ್ತಿದ್ದೇವೆ. ನಾವು ಪ್ರಜಾಪ್ರತಿನಿಧಿಗಳಾಗಿ, ಪ್ರಜಾಪ್ರಭುತ್ವದ ನಿಯಮದ ಚೌಕಟ್ಟಿನಲ್ಲಿ ನಾವು ಹೋಗಬೇಕೇ ಹೊರತು ನಮ್ಮ ರಾಜಕೀಯದ ಒಂದು ಲಾಭವನ್ನು ಈ ಹೆಸರಿನಲ್ಲಿ ಗಳಿಸುವುದಕ್ಕೆ ಹೋದರೆ ಇದು ಬಹಳ ತಪ್ಪಾಗುತ್ತದೆ. ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತುಗಳ ಚುನಾವಣೆಗಳು ನಡೆದು ೬ ವರ್ಷಗಳಾಗಿವೆ. ಈಗ ಅವಧಿ ಮುಗಿದಿದೆ. ನಿಯಮದ ಪ್ರಕಾರ ಹೊಸ ಚುನಾವಣೆಗಳು ಆಗಬೇಕು. ಹೊಸ ಚುನಾವಣೆಗಳು ಆದನಂತರ ಹೊಸ ಪ್ರತಿನಿಧಿಗಳು ಅಸ್ತಿತ್ವಕ್ಕೆ ಬರಬೇಕು ಈಗ ೬ ವರ್ಷ ಆಗಿದೆ. ಸರ್ಕಾರದವರು ಆಡಳಿತ ಅಧಿಕಾರಿಗಳನ್ನು ಈಗ ನೇಮಿಸಿದ್ದಾರೆ ಈ ರೀತಿ ನೇಮಿಸಿದ ಮೇಲೂ, ದುರ್ದೈವ, ಅದಕ್ಕೆ ಪುನಃ ಸ್ಟೇ ಆರ್ಡರ್‌ಗಳನ್ನು ತೆಗೆದುಕೊಂಡು ಬಂದು ೬ ವರ್ಷ ಆದ ನಂತರವೂ ಮುಂದುವರಿಯಬೇಕೆಂದು ಹೇಳಿ, ಕೆಲವು ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತಿನ ಮೆಂಬರ್ಸ್ ಮಾಡುತ್ತಿರತಕ್ಕಂಥಾದ್ದು ಈ ಪ್ರಜಾಪ್ರಭುತ್ವದ ನೀತಿ ನಿಯಮಗಳಿಗೆ ವಿರುದ್ಧವೆಂದು ನಾನು ಭಾವಿಸುತ್ತೇನೆ. ಜನಗಳಿಗೆ ಒಂದು ನಂಬಿಕೆ ಇದೆ. ನಾವು ೫ ವರ್ಷ ಅಥವಾ ೬ ವರ್ಷದ ತನಕ ನಮ್ಮ ಚುನಾಯಿತ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸಿರುತ್ತೇವೆ, ಅವರು ತಮ್ಮ ಅವಧಿ ತನಕ ಕೆಲಸ ಮಾಡಬೇಕು ಎಂಬ ನಂಬಿಕೆ ಇರುತ್ತದೆ. ಅವಧಿ ಮೀರಿದ ನಂತರ ಮತ್ತೆ ಜನತಾ ಪ್ರಭುಗಳ ಮುಂದೆ ಹೋಗಿ ಅವರ ಅಪ್ಪಣೆ ಪಡೆದು ಮತ್ತೆ ೫ ಅಥವಾ ೬ ವರ್ಷಗಳಿಗೆ ಪ್ರತಿನಿಧಿಗಳಾಗಿ ಬಂದು ಸರ್ಕಾರ ಅಥವಾ ಸಂಸ್ಥೆಗಳ ಅಧಿಕಾರವನ್ನು ನಾವು ವಹಿಸಿಕೊಳ್ಳಬೇಕು. ಇದು ನಿಯಮ. ಆದರೆ ದುರ್ದೈವ ಏನಾಗಿದೆ? ೬ ವರ್ಷಗಳ ನಂತರವೂ ಸಹ ಜನಗಳು ಅಧಿಕಾರವನ್ನು ಕೊಡಲಿ, ಕೊಡದೇ ಇರಲಿ ನ್ಯಾಯಾಲಯದ ಕಟ್ಟೆಯನ್ನು ಹತ್ತಿ ಅಲ್ಲಿಂದ ತಡೆ ಆಜ್ಞೆ ತಂದು ನಾವು ಮುಂದುವರಿಯುತ್ತೇವೆಂದು ಹೋಗುವುದು ಏನಿದೆ ಇದು ಪ್ರಜಾಪ್ರಭುತ್ವದ ನೀತಿಗೆ ವಿರುದ್ಧವೆಂದು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ. ಕಾರಣ, ನಾನು ನ್ಯಾಯಾಲಯದ ನಿಂದನೆಗೆ ಹೋಗುತ್ತಿಲ್ಲ. ಅಥವಾ ನ್ಯಾಯಾಲಯಗಳ ಆಜ್ಞೆಗಳ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಅದರ ಬಗ್ಗೆ ಕಂಟ್ರವರ್ಸಿಗೆ ಹೋಗುವುದಕ್ಕೆ ನನ್ನ ಅಭಿಪ್ರಾಯವನ್ನು ಸೂಚಿಸುವುದಿಲ್ಲ. ಆದರೆ ಇವತ್ತು ನಮ್ಮ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳವರು ಅಧಿಕಾರವನ್ನು ಕಳೆದುಕೊಂಡ ಮೇಲೂ ಅಧಿಕಾರದ ಆಸೆಗೋಸ್ಕರ ನಿಯಮಗಳ ಚೌಕಟ್ಟನ್ನು ಬಿಟ್ಟು ಮತ್ತು ಪ್ರಜಾಪ್ರಭುತ್ವದ ಒಂದು ಮಾರ್ಗವನ್ನು ಅನುಸರಿಸದೆ ನ್ಯಾಯಾಲಯಗಳ ಕಟ್ಟೆಗಳನ್ನು ಹತ್ತಿ ತಡೆ ಆಜ್ಞೆ ತಂದು ಮುಂದುವರೆಯುತ್ತೇವೆಂದು ಹೋಗುವಂಥ ಸನ್ನಿವೇಶ ನಿಜಕ್ಕೂ ದುರಾದೃಷ್ಟಕರವೆಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸರ್ಕಾರ ಚುನಾವಣೆಗಳನ್ನು ಮಾಡುವುದಕ್ಕೆ ತಯಾರಿದೆ. ಬಹುಶಃ ನಮ್ಮ ವಿರೋಧಪಕ್ಷದವರು ಇದ್ದಿದ್ದರೆ ಚೆನ್ನಾಗಿ ಇತ್ತು. ಈ ಒಂದು ವಿಷಯದಲ್ಲಿ ಅವರು ಚೆನ್ನಾಗಿ ಪಾತ್ರ ವಹಿಸಬಹುದಾಗಿತ್ತು. ಏಕೆಂದರೆ, ಅಂದಿನ ಸರ್ಕಾರದವರು ಜಿಲ್ಲಾಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳು ಅಸ್ತಿತ್ವಕ್ಕೆ ಬರಲಿಕ್ಕೆ ಬಹುತೇಕ ಕಾರಣರು. ಅವರು ಈ ವಿಚಾರದಲ್ಲಿ ಭಾಗವಹಿಸಬೇಕಾಗಿತ್ತು. ಅದನ್ನು ಬಿಟ್ಟು ಈಗ ಹೊರಗಡೆ ಹೋಗುವುದು ನಿಜವಾಗಿಯೂ ಪ್ರಜಾಪ್ರಭುತ್ವದ ಒಂದು ನೀತಿಗೆ

ಧಕ್ಕೆಯಾಗಿದೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಈ ಅಮೆಂಡ್‌ಮೆಂಟ್‌ನ್ನು ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರಾದ ಖರ್ಗೆಯವರು ಸೂಕ್ತ ಕಾಲದಲ್ಲಿ ತಂದಿದ್ದಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ನಡೆಯತಕ್ಕಂಥ ಅವ್ಯವಹಾರಗಳು ಏನಿವೆ ಆ ಅವ್ಯವಹಾರಗಳನ್ನು ಮುಚ್ಚಿಕೊಳ್ಳಲಿಕ್ಕೋಸ್ಕರವಾಗಿ ಅಲ್ಲಿನ ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತುಗಳು ಇವತ್ತು ನ್ಯಾಯಾಲಯದ ಕಟ್ಟೆಯನ್ನು ಹತ್ತಿವೆಯೆಂದು ನಾನು ನೇರವಾಗಿ ಆರೋಪ ಮಾಡುತ್ತೇನೆ. ಏಕೆಂದರೆ, ಅಂತಹ ಅವಶ್ಯಕತೆ ಏನಿತ್ತು? ಇವತ್ತು ಅವರು ನಮಗೆ ಅನ್ಯಾಯವಾಗಿದೆ ಎಂದು ಹೇಳಬಹುದು. ಏನು ಅನ್ಯಾಯವಾಗಿದೆ? ಸರ್ಕಾರ ಏನು ಮಾಡಿದೆ? ಯಾವ ರೀತಿಯಲ್ಲಿ ಅವರ ಆಡಳಿತಕ್ಕೆ ಧಕ್ಕೆ ಬಂದಿದೆ? ಬಹುಶಃ ಸರ್ಕಾರಕ್ಕೇ ಒಂದು ತೊಂದರೆಯಾಗಿದೆ. ಯಾವ ತರಹ ಎಂದರೆ ಅದು ಪ್ಯಾರ್‌ಲಲ್ ಗೌರ್ನಮೆಂಟ್ ಆದ ಹಾಗೆ ಆಗಿತ್ತು. ಜಿಲ್ಲಾ ಪರಿಷತ್ತಿಗೂ ಸರ್ಕಾರಕ್ಕೂ ಕನ್‌ಫ್ರಂಟೇಷನ್ ಉದ್ಭವವಾಗಿತ್ತೇ ಹೊರತು ಸರ್ಕಾರ ಯಾವ ರೀತಿಯಲ್ಲೂ ಅದರ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿಲ್ಲ; ಸಂಪೂರ್ಣ ಸಹಕಾರವನ್ನು ಕೊಟ್ಟಿದೆ. ಹಣಕಾಸಿನ ವ್ಯವಸ್ಥೆ ಸಹ ಮಾಡಿ ಸಾಕಷ್ಟು ಹಣ ಬಿಡುಗಡೆಮಾಡಿದ್ದೇವೆ. ಇವತ್ತು ಅಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಸೂಪರ್‌ಸೀಡ್ ಆದ ಮೇಲೆ ಆಡಳಿತಾಧಿಕಾರಿಗಳನ್ನು ನೇಮಿಸಿದ ಮೇಲೆ ಇಡೀ ಕರ್ನಾಟಕ ರಾಜ್ಯದ ಜನತೆ ಅದರಲ್ಲೂ ಗ್ರಾಮಾಂತರ ಪ್ರದೇಶದ ಜನತೆ ಬಹಳ ಸ್ವಾಗತ ಮಾಡಿದ್ದಾರೆ. ಕಾರಣ, ಅಲ್ಲಿ ಸರಿಯಾಗಿ ಕೆಲಸಗಳು ನಡೆಯುತ್ತಿರಲಿಲ್ಲ. ಜಾತಿ ವೈಷಮ್ಯ ಹೆಚ್ಚು ಇತ್ತು. ವಿಪರೀತ ರಾಜಕೀಯ ಇತ್ತು. ಈ ಬಂಧನದಿಂದ ಬಿಡುಗಡೆಯಾಗುವುದಕ್ಕೆ ಆಗುತ್ತಿರಲಿಲ್ಲ. ಅಭಿವೃದ್ಧಿ ಕೆಲಸಗಳೆಲ್ಲಾ ಸ್ಥಗಿತಗೊಂಡಿತ್ತು. ಬಹುಶಃ ಬಹುತೇಕ ಭ್ರಷ್ಟಾಚಾರ ನಡೆಯುತ್ತಿತ್ತು. ಅಲ್ಲಿ ಯಾರ್‍ಯಾರು ಮಂಡಲ ಪಂಚಾಯಿತಿ ಪ್ರಧಾನರು ಇದ್ದರು ಅವರ ಪ್ರಭಾವದಿಂದ ಎಲ್ಲೆಲ್ಲಿ ಅನುಕೂಲ ಆಗಬೇಕೋ ಅಲ್ಲಿ ಮಾತ್ರ ಕೆಲಸಗಳನ್ನು ಮಾಡುತಿದ್ದರೇ ಹೊರತು ಬಹುಶಃ ಎಲ್ಲಿ ವೀಕರ್ ಸೆಕ್ಷನ್ಸ್ ಅಥವಾ ಪ್ರಭಾವಶಾಲಿಗಳಲ್ಲದವರು ಇದ್ದರೋ ಅಲ್ಲಿ ಅಭಿವೃದ್ಧಿ ಕೆಲಸಗಳು ಆಗುತ್ತಿರಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಅದರ ಬಗ್ಗೆ ಹೆಚ್ಚು ಗಮನ ಕೊಟ್ಟಿದೆ. ಆದರೂ ಸಹ ಕೆಲವು ಲೋಪದೋಷಗಳನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಾ ಇರಲಿಲ್ಲ. ಸೂಪರ್‌ಸೀಡ್ ಆದ ಮೇಲೆ ನಾನು ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡಿದೆ. ಅದೇ ರೀತಿ ಬೇರೆ ಕಡೆ ಕೂಡ ಬೇರೆ ವಿಚಾರದಲ್ಲಿ ಹೋಗಿದ್ದೇನೆ. ಗ್ರಾಮಾಂತರ ಜನತೆ ಸದ್ಯ ಉಸಿರಾಡುವ ಪರಿಸ್ಥಿತಿ ಬಂತು. ಸೂಪರ್‌ಸೀಡ್ ಆಗಿ ಸೂಪರ್ ಸೀಡ್ ಆದ ಮೇಲೆ ಆಡಳಿತಾಧಿಕಾರಿಗಳು ಬಂದಿದ್ದಾರೆ, ಅವರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಮತ್ತು ಹಣ ಪೋಲಾಗುವುದಿಲ್ಲ. ಅಭಿವೃದ್ಧಿ ಕೆಲಸಕ್ಕೆ ಸಹಾಯವಾಗುತ್ತದೆ ಎಂದು ಬಹಳ ಸ್ವಾಗತ ಮಾಡಿದ್ದಾರೆ. ಮತ್ತು ಆ ಜನಗಳಿಗೆ ಸಂತೋಷ ತಂದಿದೆ. ಸದ್ಯ ಅವರು ಹೋದರಲ್ಲಪ್ಪ ಪೀಡೆಗಳು ಹೋದಂತೆ ಹೋಯಿತು. ನಮಗೆ ಸರ್ಕಾರ ಒಳ್ಳೆಯ ಕೆಲಸ ಮಾಡಿತು ಎನ್ನುವ ಅಭಿಪ್ರಾಯಗಳು ಬಂದಿವೆ. ಈ ಸಂದರ್ಭದಲ್ಲಿ ಅಮೆಂಡ್‌ಮೆಂಟ್‌ನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಕ್ಷಣ ತಂದಿದ್ದಾರೆ ಇದು ಸ್ವಾಗತಾರ್ಹವಾದ ಅಮೆಂಡ್‌ಮೆಂಟ್. ಈ ಹಿಂದೆ ಏನು ನಡೆಯಿತು ಆ ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಿಂದೆ ತಾಲ್ಲೂಕ್ ಬೋರ್ಡ್ ಇತ್ತು. ತಾಲ್ಲೂಕ್ ಬೋರ್ಡ್ ಬಹಳ ಚೆನ್ನಾಗಿ ನಡೆಯುತ್ತಿತ್ತು. ಬಹುಶಃ ವಿರೋಧ ಪಕ್ಷದವರು ಒಮ್ಮೊಮ್ಮೆ ಹೇಳುತ್ತಿದ್ದರು. ಹಿಂದಿನ ತಾಲ್ಲೂಕು ಬೋರ್ಡ್ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಎಂದು ಹೇಳುತ್ತಿದ್ದರು. ಇವತ್ತು ಜಿಲ್ಲಾ ಪರಿಷತ್ತು ಮತ್ತು

ಮಂಡಲ ಪಂಚಾಯಿತಿಗಳು ಬಂದ ಮೇಲೆ ಸರಿಯಾಗಿ ಕೆಲಸ ಮಾಡುತ್ತಿವೆ ಎಂದು ನೀವು ಹೇಳಬಹುದು. ಹಿಂದೆ ತಾಲ್ಲೂಕು ಬೋರ್ಡ್‌ಗಳಿಗೆ ಇವತ್ತು ಎಷ್ಟು ಪ್ರಮಾಣದಲ್ಲಿ ಹಣ ಕೊಡುತ್ತಿದ್ದೇವೆಯೋ ಅಷ್ಟೇ ಪ್ರಮಾಣದಲ್ಲಿ ಹಣ ನಾವು ಬಿಡುಗಡೆ ಮಾಡುತ್ತಿರಲಿಲ್ಲ. ಆದರೂ ಸಹ ಹಿಂದೆ ತಾಲ್ಲೂಕು ಬೋರ್ಡ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿದ್ದವರು. ಈಗ ಕೊಡುತ್ತಿರುವಷ್ಟೇ ಜಾಸ್ತಿ ಹಣವನ್ನು ಹಿಂದಿನ ತಾಲ್ಲೂಕು ಬೋರ್ಡ್‌ಗಳಿಗೆ ಕೊಟ್ಟಿದ್ದಿದ್ದರೆ ಇದಕ್ಕಿಂತ ಜಾಸ್ತಿ ಪ್ರಗತಿ ಮಾಡಲಿಕ್ಕೆ ಅವರಿಗೆ ಸಾಧ್ಯವಾಗುತ್ತಿತ್ತು. ಅದಕ್ಕೆ ಅವರು ಆಗ ಹೆಚ್ಚು ಪ್ರಗತಿಯನ್ನು ತೋರಿಸಿಲ್ಲ. ಇವತ್ತು ನಾವು ಏನು ಅಧಿಕಾರ ಇವರಿಗೆ ಕೊಟ್ಟಿದ್ದೇವೆ ಅದು ರಾಜಕೀಯವಾಗಿ ದುರುಪಯೋಗವಾಗುತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಅವರು ಅಮೆಂಡ್‌ಮೆಂಟ್ ಏನು ತಂದಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತಾ, ಇವತ್ತು ಅವರ ಅವಧಿ ಮುಗಿದು ಹೋಗಿದ್ದರೂ ಸಹ ನ್ಯಾಯಾಲಯಗಳ ಕಟ್ಟೆ ಹತ್ತಿದ್ದಾರೆ, ಸ್ಟೇ ಆರ್ಡರ್ ತರುವುದಕ್ಕೆ ಅವಕಾಶ ಕೊಡದೆ ಇರುವ ಹಾಗೆ ಮತ್ತೊಂದು ಅಮೆಂಡ್‌ಮೆಂಟ್ ತರಬೇಕೆಂದು ನಾನು ತಮ್ಮ ಮುಖಾಂತರ ಈ ಸರ್ಕಾರವನ್ನು ಕೋರುತ್ತಾ, ಈ ರೀತಿ ಹೋದರೆ ಕಷ್ಟವಾಗುತ್ತದೆ. ಬಹುಶಃ ನನ್ನ ತಾಲ್ಲೂಕಿನಲ್ಲಿ ಏನಾಗಿದೆ ಎಂದರೆ ಅವರು ಚಾರ್ಜ್ ಕೊಟ್ಟಿದ್ದಾರೆ. ಆಡಳಿತಾಧಿಕಾರಿ ಆಡಳಿತ ನಡೆಸುತ್ತಿದ್ದಾರೆ. ಅವರು ಕೆಲಸ ಶುರು ಮಾಡಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ಹೈಕೋರ್ಟ್‌ಗೆ ಹೋಗಿ ಸ್ಟೇ ಆರ್ಡರ್ ತರಲು ಪ್ರಯತ್ನ ನಡೆಯುತ್ತಿದೆ. ಚಾರ್ಜ್ ಕೊಡುವುದಕ್ಕಿಂತ ಮುಂಚಿತವಾಗಿ ಅಥವಾ ಕೇಸ್ ಏನಾದರೂ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇದ್ದು ಸ್ಟೇ ಕೊಟ್ಟರೆ ಅದಕ್ಕೆ ಅರ್ಥ ಉಂಟು. ಆದರೆ ಚಾರ್ಜ್ ಕೊಟ್ಟಿದ್ದಾರೆ, ಆಡಳಿತಾಧಿಕಾರಿ ಅವಧಿ ಒಂದು ತಿಂಗಳು ಆಗಿದೆ. ಬಹುಶಃ ಒಂದು ತಿಂಗಳೋ ಎರಡು ತಿಂಗಳೋ ಆಗಿರಬಹುದು. ನಿಖರವಾಗಿ ಹೇಳುವುದಕ್ಕೆ ಬರುವುದಿಲ್ಲ. ಈಗ ಅವರು ಚಾರ್ಜ್ ಕೊಟ್ಟು ಹೈಕೋರ್ಟ್‌ಗೆ ಹೋಗಿರುವುದು ಬೇರೆ ಕಡೆ ಯಾರಿಗೂ ಸ್ಟೇ ಸಿಕ್ಕಿದೆ ನಮಗೂ ಸಿಗಬಹುದು ಎಂದು. ಹೈಕೋರ್ಟ್‌ಗೆ ಹೋಗಿ ಸ್ಟೇ ಆರ್ಡರ್ ತರುವ ಉದ್ದೇಶವೇನೆಂದರೆ ಹಿಂದಿನ ಪೆಂಡಿಂಗ್ ಬಿಲ್ಸ್ ಏನಿದೆ ಅವುಗಳನ್ನು ಕ್ಲಿಯರ್ ಮಾಡಿಕೊಳ್ಳುವುದಕ್ಕೋಸ್ಕರ ಇಲ್ಲಿಗೆ ಬಂದಿದ್ದಾರೆಯೇ ಹೊರತು ನಿಜವಾಗಿಯೂ ಈ ಸಂಸ್ಥೆಯನ್ನು ಉದ್ಧಾರ ಮಾಡಬೇಕೆಂದು ಅಲ್ಲ. ಬಹುಶಃ ಈ ಸಂಸ್ಥೆಗಳನ್ನು ಉದ್ಧಾರ ಮಾಡಬೇಕೆಂದು ಇದ್ದರೆ ೫ ವರ್ಷ ೬ ವರ್ಷಗಳಿಂದ ಏನು ಮಾಡುತ್ತಿದ್ದರು? ಆಗ ಮಾಡಬಹುದಾದಂತಹ ಕೆಲಸ ಬೇಕಾದಷ್ಟು ಇತ್ತು. ಆಗ ಮಾಡಲಿಲ್ಲ. ಈಗ ಸ್ಟೇ ಆರ್ಡರ್ ತಂದು ೨ ತಿಂಗಳಲ್ಲಿ ಏನು ಮಾಡಲಿಕ್ಕೆ ಆಗುತ್ತದೆ? ಬಹುಶಃ ಅವರ ಉದ್ದೇಶ, ನನ್ನ ಅಭಿಪ್ರಾಯದಲ್ಲಿ, ವೈಯಕ್ತಿಕ ಅಭಿಪ್ರಾಯದಲ್ಲಿ ಹೇಳುವುದಾದರೆ ಅವರು ಏನೇನು ವ್ಯವಹಾರ ಮಾಡಿದರು, ಏನೇನು ಭ್ರಷ್ಟಾಚಾರ ಮಾಡಿದರು ಏನೇನು ಕಾಮಗಾರಿಗಳನ್ನು ಮಾಡಿದರು, ಬಹುಶಃ ಆಡಳಿತಾಧಿಕಾರಿ ಅದನ್ನು ಸರಿಯಾಗಿಲ್ಲದಿದ್ದರೆ ಒಪ್ಪುವುದಿಲ್ಲ. ಆದ್ದರಿಂದ ನಾವು ಸ್ಟೇ ಆರ್ಡರ್ ತೆಗೆದುಕೊಂಡು ಬಂದು, ಈಗ ಏನು ಮಂಡಲಗಳಿಗೆ ೩ ಲಕ್ಷ ಹಣವನ್ನು ಕೊಟ್ಟಿದ್ದಾರೆ ಆ ದುಡ್ಡನ್ನು ಸ್ಟೇ ಆರ್ಡರ್ ವೆಕೇಟ್ ಆಗುವ ಅವಧಿಯಲ್ಲಿ ಇದನೆಲ್ಲಾ ಕ್ಲಿಯರ್ ಮಾಡಿಕೊಳ್ಳೋಣ ಎಂದು ಈ ರೀತಿ ಮಾಡಿದ್ದಾರೆ. ಆದ್ದರಿಂದ ಮಂಡಲ ಪಂಚಾಯಿತಿಗಳು ಆಡಳಿತ ವಹಿಸಿಕೊಂಡ ಮೇಲೆ ಹೈಕೋರ್ಟ್‌ನವರು ಸ್ಟೇ ಕೊಡುವುದು ಅಷ್ಟು ಸೂಕ್ತವಾದಂಥದ್ದಲ್ಲ, ಇದಕ್ಕೆ ಒಂದು ಅಮೆಂಡ್‌ಮೆಂಟ್‌ನ್ನು ಗ್ರಾಮೀಣ ಅಭಿವೃದ್ಧಿ ಸಚಿವರು ತರಬೇಕು. ಇಲ್ಲದಿದ್ದರೆ ಇಡೀ ರಾಜ್ಯದಲ್ಲಿ ಎಲ್ಲರೂ ಸ್ಟೇ ತೆಗೆದುಕೊಂಡು ಬಂದು ಸ್ಟೇ

ಮಂಡಲಪಂಚಾಯಿತಿಗಳು ಮತ್ತು ಜಿಲ್ಲಾಪರಿಷತ್ತುಗಳಾಗುತ್ತವೆ. ಮತ್ತೆ ನಾವು ಹಣ ಬಿಡುಗಡೆ ಮಾಡುವುದಕ್ಕಾಗುವುದಿಲ್ಲ. ಅಲ್ಲಿ ಅವರು ಕೆಲಸವನ್ನು ನಿಷ್ಠೆಯಿಂದ ಮಾಡುವುದಕ್ಕಾಗುವುದಿಲ್ಲ. ಕೊನೆಗೆ ರಾಜ್ಯದ ಜನತೆ ನಮ್ಮ ಸರ್ಕಾರದ ಮೇಲೆ ಕೆಟ್ಟ ಹೆಸರು ತರಲಿಕ್ಕೆ ಅವಕಾಶವಾಗುತ್ತದೆ. ಅದು ಆಗಬಾರದು. ಈಗಾಗಲೆ ಮಂಡಲ ಪಂಚಾಯಿತಿಗಳು ಅಧಿಕಾರ ವಿಕೇಂದ್ರೀಕರಣ ರೂಪದಲ್ಲಿ ಎಷ್ಟು ಪ್ರಮಾಣದಲ್ಲಿ ಕೆಟ್ಟ ಹೆಸರು ತೆಗೆದುಕೊಳ್ಳಬೇಕೋ ಅಷ್ಟೆಲ್ಲ ತೆಗೆದುಕೊಂಡು ಆಗಿ ಹೋಗಿಬಿಟ್ಟಿದೆ. ಇನ್ನೇನೂ ಉಳಿದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅವರನ್ನು ಮುಂದುವರಿಯಲಿಕ್ಕೆ ಬಿಡಬಾರದು. ಮತ್ತೆ ಇನ್ನೊಂದು ಏನಾಗಿದೆ ಎಂದರೆ ಆತುರಾತುರವಾಗಿ ಮಂಡಲ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತುಗಳ ಕ್ಷೇತ್ರಗಳನ್ನು ರಚನೆ ಮಾಡಿದರು. ಏಕೆಂದರೆ ಇದನ್ನು ಇಂಟ್ರಡ್ಯೂಸ್ ಮಾಡಿ ಮತ್ತೆ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳನ್ನು ತಂದುಬಿಡಬೇಕು. ನಮ್ಮ ಅಧಿಕಾರದ ಅವಧಿಯಲ್ಲಿ ಇವು ಅಸ್ತಿತ್ವಕ್ಕೆ ಬರಲೇಬೇಕೆಂದು ಹಿಂದಿನ ಸರ್ಕಾರ ತಂದಿತ್ತು. ತಂದಂಥ ಕಾಲದಲ್ಲಿ ಎಷ್ಟೆಷ್ಟು ಲೋಪದೋಷಗಳು ಆಗಿವೆಯೆಂದರೆ, ಬಹುಶಃ ೧೫-೨೦ ಕಿಲೋಮೀಟರ್ ತನಕ ಇರುವ ವಿಲೇಜಸ್‌ನ್ನೆಲ್ಲಾ ಸೇರಿಸಿ ಅವರಿಗೆ ಅನುಕೂಲ ಆಗುವ ಹಾಗೆ ಮಾಡಿದ್ದಾರೆ. ಅವುಗಳನ್ನೆಲ್ಲ ವಿಂಗಡಣೆ ಮಾಡಬೇಕು. ಅದನ್ನು ಮಾಡಿ ಜನಗಳಿಗೆ, ಜನಸಾಮಾನ್ಯರಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಹರಿಜನರಿಗೆ ಏನು ಪ್ರಾತಿನಿಧ್ಯ ಕೇಳಿದ್ದಾರೆ, ಹರಿಜನರು ಮತ್ತು ವೀಕರ್ ಸೆಕ್ಷನ್‌ಗೆ ನಾಮಿನೇಷನ್ ಪ್ರಾತಿನಿಧ್ಯವನ್ನು ಸರ್ಕಾರದವರು ಏನು ಹೇಳಿದ್ದಾರೆ ಅದು ನ್ಯಾಯ ಸಮ್ಮತವಾಗಿದೆ. ಎಲ್ಲರೂ ಚುನಾವಣೆಗಳಲ್ಲಿ ಪ್ರಭಾವಶಾಲಿಗಳು, ಹಣವಂತರು ಚುನಾಯಿತರಾಗಿ ಬರುತ್ತಾರೆಯೇ ಹೊರತು ಬೇರೆಯವರು ಬರಲಿಕ್ಕೆ ಕಷ್ಟವಾಗುತ್ತದೆ. ಅಂಥಾ ಒಂದು ಸನ್ನಿವೇಶದಲ್ಲಿ ೫೦ ೬೦ ೭೦ ಮಂಡಲಗಳಲ್ಲಿ ಜಾತಿವಾರುಗಳು ಇವೆ, ವೀಕರ್ ಸೆಕ್ಷನ್ಸ್ ಇವೆ, ಎಕನಾಮಿಕಲಿ ವೀಕರ್ಸ್, ಸೋಷಿಯಲ್ ವೀಕರ್ಸ್ ಎಲ್ಲಾ ತರಹದ ವೀಕರ್ಸ್ ಇವೆ. ಅವರಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲಿಕ್ಕೆ ಶಕ್ತಿ ಇರುವುದಿಲ್ಲ. ಅಂಥಾ ಸಂದರ್ಭದಲ್ಲಿ ಸರ್ಕಾರ ನಾಮಿನೇಷನ್ ಮಾಡಿದೆ. ಇದನ್ನು ಮುಂದುವರಿಸಿಕೊಂಡು ಹೋಗಬೇಕು. ಏಕೆಂದರೆ ಅವರಿಗೆ ಪ್ರಾತಿನಿಧ್ಯ ಸಿಗುತ್ತದೆ. ನಾಮಿನೇಷನ್‌ನಿಂದ ಐಡಂಟಿಫೈ ಮಾಡಿ ಯಾರು ನಿಜವಾಗಿ ಅರ್ಹರಿದ್ದಾರೋ ಅವರಿಗೆ ನಾಮಿನೇಷನ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳಿ, ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ. ಮತ್ತು ಈ ಅಮೆಂಡ್‌ಮೆಂಟ್‌ಗೆ ಬೆಂಬಲವನ್ನು ಸೂಚಿಸುತ್ತಾ ಮಾನ್ಯ ಅಧ್ಯಕ್ಷಣಿಯವರು ಕರುಣೆ ಇಟ್ಟು ಇಷ್ಟು ಹೊತ್ತು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ, ಪಂಚಾಯತ್ ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷಣಿಯವರೆ, ಇದು ಸ್ಮಾಲ್ ಅಮೆಂಡ್‌ಮೆಂಟ್ ಇದೆ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಈ ಸದನದಲ್ಲಿ ಮಾತನಾಡಿದ್ದಾರೆ. ಈ ಹಿಂದೆ ಇದು ಪ್ರಾರಂಭವಾದಾಗ ಇದರ ಮೇಲೆ ವಿರೋಧಪಕ್ಷದವರು ಅಡ್ಜರ್ನ್‌ಮೆಂಟ್ ಮೋಷನ್ ತಂದಿದ್ದರು. ತಂದು ಆ ದಿವಸ ಸಾಕಷ್ಟು ಮಾತನಾಡಿ ಅವರು ಹೊರಗೆ ಹೋದರು. ಉಪಾಧ್ಯಕ್ಷರೇ, ಇದು ಒಂದು ಬಹಳ ಮಹತ್ವವಾದಂಥ ಕಾನೂನು ಇದೆ. ಮತ್ತು ಇದಕ್ಕೆ ತಿದ್ದುಪಡಿಯನ್ನು ಕೂಡ ಇವತ್ತಿನ ದಿವಸ ನಾವು ತಂದಿದ್ದೇವೆ. ಸುಮಾರು ೧೯೮೫ರಲ್ಲಿ ಈ ಕಾನೂನು ಜಾರಿಯಲ್ಲಿ ಬಂತು. ಮತ್ತು

ಜನವರಿ ೧೯೮೭ರಲ್ಲಿ ಇಡೀ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾಪರಿಷತ್ತುಗಳಿಗೆ ಮತ್ತು ಮಂಡಲ ಪಂಚಾಯಿತಿಗಳಿಗೆ ಚುನಾವಣೆ ಕೂಡ ಆಯಿತು. ತದನಂತರ ಸುಮಾರು ೧೯ ಜಿಲ್ಲಾಪರಿಷತ್ತುಗಳಲ್ಲಿ ೮೮೭ ಜನ ಚುನಾಯಿತ ಸದಸ್ಯರು ಇದ್ದರು. ಮತ್ತು ಅದೇ ರೀತಿಯಾಗಿ ಸುಮಾರು ೨೫೫೫ ಮಂಡಲ ಪಂಚಾಯಿತಿಗಳಲ್ಲಿ ಸುಮಾರು ೫೫೧೮೮ ಜನ ಚುನಾಯಿತ ಸದಸ್ಯರಾಗಿದ್ದರು. ಇಷ್ಟೆಲ್ಲಾ ಸದಸ್ಯರು ಈ ಒಂದು ಕಾನೂನು ಅಡಿಯಲ್ಲಿ ಚುನಾಯಿತರಾಗಿದ್ದರು. ಮತ್ತು ೫ ವರ್ಷ ಆಡಳಿತವನ್ನು ಜಿಲ್ಲೆಯಲ್ಲಿ, ಮಂಡಲ ಪಂಚಾಯಿತಿಗಳಲ್ಲಿ ಅವರು ಮಾಡಿದರು. ಆದರೆ, ಅನೇಕ ದೂರುಗಳು ಬಂದವು. ಮಾನ್ಯ ಉಪಾಧ್ಯಕ್ಷರೆ, ತಮಗೂ ಗೊತ್ತಿದೆ. ಹಿಂದೆ ಇದೇ ಸದನದಲ್ಲಿ ಕಾನೂನು ತರುವಾಗ ಇದಕ್ಕೆ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ನಾವು ಹಠಹಿಡಿದಾಗ ಕೂಡ ಅವರು ಹೇಳಿದರು ಇದು ಸಾಧ್ಯವಿಲ್ಲ, ೫ ವರ್ಷ ಪ್ರಯೋಗ ಮಾಡಿ ನೋಡೋಣ, ಒಂದು ವೇಳೆ ಇದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಅದನ್ನು ನಾವು ಸರಿಪಡಿಸಿಕೊಳ್ಳೋಣ ಎಂಬ ವಾಗ್ದಾನ ಅಂದಿನ ಸರ್ಕಾರ ಕೊಟ್ಟಿತ್ತು. ಆದರೆ ಆ ಐದು ವರ್ಷಗಳಲ್ಲಿ ಯಾವ ತಿದ್ದುಪಡಿಯನ್ನೂ ಕೂಡ ತರಲಿಲ್ಲ. ಉದಾಹರಣೆಗೆ ಹೇಳಬೇಕಾದರೆ; ಜಿಲ್ಲಾಪರಿಷತ್‌ನ ಅಧ್ಯಕ್ಷ ಸ್ಥಾನಕ್ಕಾಗಲಿ ಅಥವಾ ಮಂಡಲ ಪಂಚಾಯಿತಿಯ ಪ್ರಧಾನರ ಸ್ಥಾನಕ್ಕಾಗಲಿ ರಿಜರ್ವೇಶನ್ ಇರಲಿಲ್ಲ. ಆದರೆ ನಮ್ಮ ೭೩ನೇ ತಿದ್ದುಪಡಿಯಲ್ಲಿ ಇದನ್ನು ಸೇರಿಸಿದ್ದಾರೆ. ಮಾನ್ಯ ರಾಜೀವ್ ಗಾಂಧಿಯವರು ಇದು ಕಡ್ಡಾಯವಾಗಿರಬೇಕು, ದೀನದಲಿತರಿಗೆ ರಿಜರ್ವೇಷನ್ ಮಾಡಿಕೊಡಬೇಕು, ಇಲ್ಲದಿದ್ದರೆ ಅವರೆಂದೂ ಕೂಡ ಅಧ್ಯಕ್ಷರಾಗಲು ಸಾಧ್ಯವಾಗುವುದಿಲ್ಲ ಎಂಬ ಅಭಿಪ್ರಾಯದಿಂದ ೭೩ನೇ ತಿದ್ದುಪಡಿಯಲ್ಲಿ ಇದನ್ನು ಸೇರಿಸಿದ್ದಾರೆ. ಅದೇ ರೀತಿ ನಮ್ಮ ರಾಜ್ಯದಲ್ಲಿ ಈಗ ಸಮಗ್ರ ಜಿಲ್ಲಾಪರಿಷತ್ ತಿದ್ದುಪಡಿ ಏನು ತರುತ್ತಿದ್ದೇವೆ ಅದರಲ್ಲಿ ಇವೆಲ್ಲವನ್ನೂ ಕೂಡ ನಾವು ಚಿಂತನೆ ಮಾಡಬೇಕಾಗುತ್ತದೆ ಮತ್ತು ಹಿಂದಿನ ಇತಿಹಾಸ ನೋಡಿದಾಗ ಸುಮಾರು ೧೯ ಜಿಲ್ಲಾ ಪರಿಷತ್‌ಗಳಲ್ಲಿ ಒಂದು ಜಿಲ್ಲಾಪರಿಷತ್ ಇನ್ನೂ ಅಸ್ತಿತ್ವದಲ್ಲಿದೆ. ಅದು ಬೀದರ್‌ನದು. ಏನೆಂದರೆ, ಅವರು ಕೋರ್ಟ್‌ನಿಂದ ಸ್ಟೇ ತಂದಿದ್ದಾರೆ. ಉಳಿದ ೨೦ ಜಿಲ್ಲಾ ಪರಿಷತ್‌ಗಳಲ್ಲಿ ಎಲ್ಲಿ ಹೋದರೂ ಕೂಡ ಒಬ್ಬ ಎಸ್‌ಸಿ. ಅಥವಾ ಎಸ್‌ಟಿ ಅಭ್ಯರ್ಥಿ ಸಿಗುವುದಿಲ್ಲ. ಹಾಸನದಲ್ಲೇನೋ ಮಾಡಿದ್ದರು, ರಾಜಕೀಯ ಉದ್ದೇಶವೋ ಅಥವಾ ಯಾವ ಉದ್ದೇಶವೋ ಗೊತ್ತಿಲ್ಲ ಅದೂ ಕೂಡ ಎರಡು ವರ್ಷದಲ್ಲೇ ರಿಪ್ಲೇಸ್‌ಮೆಂಟ್ ಆಯಿತು. ಅಂದರೆ ಇದರರ್ಥ ಏನೆಂದರೆ ಕಾನೂನು ಇದ್ದಾಗ ಮಾತ್ರ ಜನ ಅಥವಾ ಪಕ್ಷಗಳು, ರಾಜಕಾರಣಿಗಳು ಒಪ್ಪುತ್ತಾರೆ ಇಲ್ಲದಿದ್ದರೆ ಒಪ್ಪುವುದಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಏಕೆಂದರೆ ಕಡ್ಡಾಯ ಕಾನೂನಿದ್ದರೆ ಅಧ್ಯಕ್ಷರು ಮಾಡುತ್ತಾರೆ ಅಂದ ಹಾಗೆ ಆಯಿತು. ಕಾನೂನಿಲ್ಲ ಎಂದರೆ ಆ ಜನಾಂಗದವರಿಗೆ ಪ್ರಾತಿನಿಧ್ಯವೇ ಇಲ್ಲ. ಇದು ನಮ್ಮ ಕಣ್ಣೆದುರಿಗೇ ಆಗಿದ್ದು. ಅದೇ ರೀತಿ ೨೫೫೫ ಮಂಡಲ ಪಂಚಾಯಿತಿಗಳಿದ್ದರೆ ಕೇವಲ ಒಂದು ಪರ್ಸೆಂಟ್ ಪ್ರಧಾನರು ಕೂಡ ಈ ಜನಾಂಗದವರು ಇಲ್ಲ. ಇದರಿಂದ ಅರ್ಥಮಾಡಿಕೊಳ್ಳಬಹುದು. ಈ ಅಧಿಕಾರ ವಿಕೇಂದ್ರೀಕರಣದಲ್ಲಿ ದುರ್ಬಲರಿಗೆ, ಹೆಣ್ಣು ಮಕ್ಕಳಿಗೆ ಹೆಚ್ಚಿನ ಸ್ಥಾನಮಾನ ಕೊಡದೇ ಹೋದರೆ, ವಿಕೇಂದ್ರೀಕರಣದ ಲಾಭವನ್ನು ಅವರಿಗೆ ಸಿಗದೇ ಹೋಗಬಹುದು. ಅಥವಾ ಆ ಒಂದು ಅಧಿಕಾರದಲ್ಲಿ ಇವರು ಭಾಗಿಗಳಾಗದೇ ಹೋದರೆ ಇವರಿಗೆ ಕಲ್ಯಾಣಕಾರಿ ಕಾರ್ಯಗಳಲ್ಲಿ ಸಹಾಯ ಮಾಡಲು ಅನುಕೂಲವಾಗುವುದೇ ? ಇದನ್ನೂ ಕೂಡ ನಾವು ವಿಚಾರ ಮಾಡಬೇಕಾಗುತ್ತದೆ. ಅದಕ್ಕಾಗಿ ಈ ತಿದ್ದುಪಡಿಗಳನ್ನು ತರಬೇಕು. ಈಗಾಗಲೇ ಮಾನ್ಯ ವೆಂಕಟಪ್ಪನವರು, ಮಹಾದೇವ್‌ರವರು ಹೇಳಿದ್ದಂತೆ ೧೯೮೧ರ ಸೆನ್ಸಸ್ ಪ್ರಕಾರ ಕೆಲವು

ಜಾತಿಗಳು ಇಂದು ಎಸ್.ಸಿ./ಎಸ್.ಟಿ. ಪಟ್ಟಿಯಲ್ಲಿ ಸೇರಿವೆ. ೧೯೭೮ರಲ್ಲಿ ಕೆಲವು ಜಾತಿಗಳು ಎಸ್‌ಟಿ ಪಟ್ಟಿಯಲ್ಲಿ ಸೇರಿರುವುದು ಏಕೆಂದರೆ, ನಾವು ೭೧ರ ಸೆನ್ಸಸ್ ಪ್ರಕಾರ ಚುನಾವಣೆ ಮಾಡಿದ್ದೇವೆ. ಅಥವಾ ಡಿಲಿಮಿಟೇಷನ್ ಆಫ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಿದ್ದು ೧೯೭೮ರಲ್ಲಿ. ಕೆಲವು ಜಾತಿಗಳವರು ಎಸ್‌ಸಿ. ಪಟ್ಟಿಗೆ ಸೇರಿದರು. ಇವತ್ತು ಇತ್ತೀಚೆಗೆ ಕೆಲವು ಜನ ಎಸ್‌ಟಿ ಗುಂಪಿಗೆ ಸೇರಿದ್ದಾರೆ. ಇವೆರಡೂ ನಾವು ಲೆಕ್ಕಕ್ಕೆ ತೆಗೆದುಕೊಂಡಾಗ ಎಸ್‌ಸಿ ಮತ್ತು ಎಸ್‌ಟಿ ಜನಸಂಖ್ಯೆ ಹೆಚ್ಚಾಗುತ್ತದೆ. ಆಗ ಅವರಿಗೆ ರಿಜರ್ವೇಶನ್ಸ್ ಆಫ್ ಕಾನ್‌ಸ್ಟಿಟ್ಯೂಯನ್ಸೀಸ್ ಜಾಸ್ತಿಯಾಗುತ್ತದೆ. ಅದೇ ರೀತಿಯಾಗಿ ಕೋ-ಛೇರ್ಮನ್ ಅಥವಾ ಚೇರ್‌ಪರ್ಸನ್ಸ್ ಎಂದು ನಾವು ಮಾಡುವಾಗಲೂ ರಿಜರ್ವೇಷನ್ ಜಾಸ್ತಿ ಮಾಡಬೇಕಾಗುತ್ತದೆ. ಹೀಗೆ ಇದರಲ್ಲಿ ಒಂದಲ್ಲ ಹಲವಾರು ವಿಷಯಗಳು ಅಡಗಿವೆ. ಆ ವಿಷಯಗಳೆಲ್ಲವನ್ನೂ ನಾವು ಗಮನಕ್ಕೆ ತೆಗೆದುಕೊಂಡು ಮುಂದೆ ಹೋಗಬೇಕಾಗುತ್ತದೆ. ಇನ್ನೊಂದು ವಿಶೇಷವೆಂದರೆ ಇದನ್ನು ಪ್ರಯೋಗದ ಬೇಸಿಸ್ ಮೇಲೆ ನಾವು ಮಾಡಿದ್ದಕ್ಕಾಗಿ ಇನ್ನು ಮುಂದೆ ಯಾವ ರೀತಿಯಾಗಿ, ಯಾವ್ಯಾವ ತಿದ್ದುಪಡಿಗಳನ್ನು ತರಬೇಕು, ಯಾವ್ಯಾವ ಇಲಾಖೆಗಳನ್ನು ಇದರಲ್ಲಿ ಇರಿಸಿಕೊಳ್ಳಬೇಕು, ಯಾವ ಯಾವ ಇಲಾಖೆಗಳನ್ನು ಜಿಲ್ಲಾ ಪರಿಷತ್ತಿನ ಪರಿಮಿತಿಯಿಂದ ತೆಗೆಯಬೇಕೆಂಬ ಬಗ್ಗೆ ಸಮಗ್ರವಾದ ತಿದ್ದುಪಡಿಯನ್ನು ಈ ಸದನದ ಮುಂದೆ ನಾವು ಬಹುಬೇಗ ತರುತ್ತೇವೆ. ಏಕೆಂದರೆ ಇದು ಎಲ್ಲ ಜನಾಂಗಕ್ಕೆ, ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಿದ್ದು, ವಿಶೇಷವಾಗಿ ಪಂಚಾಯಿತ್‌ರಾಜ್‌ಗೆ ಸಂಬಂಧಿಸಿದ್ದು. ಆದ ಕಾರಣ ಈ ಸರ್ಕಾರಕ್ಕೂ ಅಷ್ಟೇ ಆಸಕ್ತಿಯಿದೆ. ಈ ಸರ್ಕಾರಕ್ಕೆ ವಿಕೇಂದ್ರೀಕರಣದಲ್ಲಿ ಆಸಕ್ತಿ ಇದೆ. ಪಂಚಾಯತ್‌ರಾಜ್‌ನಲ್ಲಿ ಆಸಕ್ತಿ ಇದೆ. ಅದಕ್ಕಾಗಿ ಈ ಪಂಚಾಯತ್‌ರಾಜ್ ಅನ್ನು ಯಶಸ್ವಿ ಮಾಡಬೇಕಾದರೆ ಎಲ್ಲರನ್ನೂ ನಾವು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಬೇಕಾಗುತ್ತಿದೆ. ಆದಕ್ಕಾಗಿ ನಾವು ಸಮಗ್ರವಾದ ತಿದ್ದುಪಡಿಯನ್ನು ಈ ಸದನದ ಮುಂದೆ ತರುತ್ತಾ ಇದ್ದೇವೆ. ಅದಕ್ಕೆ ಎಲ್ಲರ ಬೆಂಬಲ, ಸಹಾಯ ಬೇಕು, ಎಲ್ಲರ ಸಲಹೆಗಳು ಬೇಕು. ಮತ್ತು ಹಿಂದೆ ಏನು ತಪ್ಪುಗಳಾಗಿವೆ ಅಥವಾ ಏನು ಲ್ಯಾಪ್ಸಸ್ ಆಗಿದೆ ಅವನ್ನೂ ಕೂಡ ನಾವು ಸರಿಪಡಿಸಿಕೊಂಡು ಮುಂದೆ ಹೊಸ ಕಾನೂನನ್ನು ತರುತ್ತೇವೆ. ಈಗ ತಂದಿರುವ ತಿದ್ದುಪಡಿಯನ್ನು ನೀವೆಲ್ಲರೂ ಸ್ವಾಗತಿಸಿದ್ದೀರಿ. ಮುಂದೆ ತರುವ ಸಮಗ್ರ ಕಾನೂನಿಗೂ ಇದೇ ರೀತಿ ಬೆಂಬಲ ಕೊಡುತ್ತೀರಿ ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಸೆಕ್ಷನ್ ೧೩೫ಗೆ ಒಂದು ಸಣ್ಣ ತಿದ್ದುಪಡಿಯನ್ನು ನಾನು ಸೂಚಿಸಿದ್ದೇನೆ. ಅದೇನೆಂದರೆ replacement ... "Subject to the pleasure of the Zilla Parishad, the term of the office of the Members co-opted under Clause F of Sub-Section 2 shall be for three years from the date of publication of their names in the Official Gazette." ಏಕೆಂದರೆ ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಟರ್ಮ್ ಇರಲಿಲ್ಲ, ಅವರು ಎಷ್ಟು ವರ್ಷಗಳಾದರೂ ಹಾಗೆಯೇ ಇರಬಹುದಿತ್ತು. ಅದಕ್ಕೆ ಒಂದು ಟರ್ಮ್ ಫಿಕ್ಸ್ ಮಾಡಿದ್ದೇವೆ. ಇವತ್ತು ಮೂರು ವರ್ಷ ಎಂದು ತಾಲ್ಲೂಕು ಪಂಚಾಯಿತಿ ಸಮಿತಿಯಲ್ಲಿ ಕೋ-ಆಪ್ಟ್ ಮೆಂಬರ್ಸ್ ಏನಿದ್ದಾರೆ, ಅವರ ಟರ್ಮ್ ನಾವು ಫಿಕ್ಸ್ ಮಾಡಿದ್ದೇವೆ. ಆದ್ದರಿಂದ ಜಿಲ್ಲಾಪರಿಷತ್‌ನಲ್ಲಿ ಕೋ-ಆಪ್ಟ್ ಮಾಡಿಕೊಂಡವರು ಯಾರೇ ಬಂದರೂ ಮೂರು ವರ್ಷ ಇರುತ್ತಾರೆ. ಒಂದು ವೇಳೆ ಅವರ ವರ್ತನೆ ಸರಿ ಇಲ್ಲದೇ ಹೋದರೆ ಅಥವಾ ಮಿಸ್‌ಟ್ರೀಟ್‌ಮೆಂಟ್ ಮಾಡಿ ಸೇರಿಸ್ದರೆ ಅವರನ್ನು ತೆಗೆಯುವ ಅಧಿಕಾರವನ್ನು ಜಿಲ್ಲಾಪರಿಷತ್ತಿಗೇ ನಾವು ಕೊಟ್ಟಿದ್ದೇವೆ.

ಸರ್ಕಾರಕ್ಕಿಲ್ಲ.

ಒಬ್ಬ ಸದಸ್ಯರು:- ಈ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಳ್ಳುವುದು ಒಳ್ಳೆಯದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ವಿರೋಧ ಪಕ್ಷದವರು ಈಗಾಗಲೇ ಹೇಳುತ್ತಿದ್ದಾರೆ ಜನರ ಮೇಲೆ ಇವರಿಗೆ ವಿಶ್ವಾಸ ಇಲ್ಲ. ನೀವು ಏನು ವಿಕೇಂದ್ರೀಕರಣ ಮಾಡಿದ್ದೀರಿ ಅವರೇ ಮಾಡಬೇಕು, ಸರ್ಕಾರ ಏಕೆ ಮಾಡಬೇಕು ಎಂಬ ಕೂಗು ಕೇಳಿ ಕೇಳಿ ಸಾಕಾಗಿದೆ. ಅದಕ್ಕೆ ನಾವು ಜಿಲ್ಲಾಪರಿಷತ್ತಿನವರೇ ಇಟ್ಟುಕೊಳ್ಳಲಿ ಎಂದು ಮಾಡಿದ್ದೇವೆ. ೩ ವರ್ಷವಾದ ಮೇಲೆ ಅವರನ್ನು ತೆಗೆದು ಹೊಸ ಸದಸ್ಯರಿಗೆ ಅನುಕೂಲ ಮಾಡಿಕೊಡಲಿ. ಕಂಟಿನ್ಯೂ ಇದ್ದರೆ ಸಾಯುವವರೆಗೆ ಅವರೇ ಇದ್ದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಎಂ. ಮಹದೇವ್:- ಜಿಲ್ಲಾ ಪರಿಷತ್ತಿಗೆ ನೀವು ಅಧಿಕಾರ ಕೊಟ್ಟಿದ್ದೀರಿ, ಹಣ ಕೊಟ್ಟಿದ್ದೀರಿ, ಎಲ್ಲವನ್ನೂ ಕೊಟ್ಟಿದ್ದೀರಿ. ಆದರೆ ನಾಮಿನೇಶನ್ ಏನಿದೆ ಅದನ್ನು ಸರ್ಕಾರದಲ್ಲೇ ಇಟ್ಟುಕೊಂಡರೆ ಒಳ್ಳೆಯದು. ಅದನ್ನೂ ಜಿಲ್ಲಾಪರಿಷತ್‌ಗೇ ಕೊಟ್ಟು ಬಿಟ್ಟರೆ ನ್ಯಾಯ ದೊರೆಯುವುದಿಲ್ಲ. ಅದನ್ನು ರಾಜಕೀಯವಾಗಿ ವಿಚಾರ ಮಾಡುತ್ತಾರೆ. ಈ ಅಧಿಕಾರ ಸರ್ಕಾರದಲ್ಲೇ ಇತ್ತು ಅಂದರೆ ಕಾನೂನಿನ ಚೌಕಟ್ಟಿನಲ್ಲಿ ಮಾಡುತ್ತೀರಿ. ಆಗ ನ್ಯಾಯ ದೊರೆಯುತ್ತದೆ ಎಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಉಳಿದಿರುವುದನ್ನು ನೀವು ಇಟ್ಟುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾಲ್ಲೂಕು ಪಂಚಾಯಿತಿಯಲ್ಲಿ ನಿರ್ಣಯ ಪಾಸ್ ಮಾಡಿ ಅವರ ಹೆಸರು ರೆಕಮೆಂಡ್ ಮಾಡುತ್ತಾರೆ. ಜಿಲ್ಲಾ ಪರಿಷತ್ ಅದನ್ನು ಅಪ್ರೂವ್ ಮಾಡಿ ಕಳುಹಿಸುತ್ತಾರೆ. ನಿಮ್ಮ ನಿಮ್ಮ ತಾಲ್ಲೂಕಿನಲ್ಲಿ ಛೇರ್ಮನ್ ಏನಿದ್ದೀರಿ, ನಿಮ್ಮ ಅಧ್ಯಕ್ಷತೆಯಲ್ಲೇ ನಿರ್ಣಯ ಮಾಡಿ ಕೋ-ಆಪ್ಟ್ ಮೆಂಬರಾಗಿ ಇವರನ್ನು ತೆಗೆದುಕೊಳ್ಳಬೇಕು ಎಂದು ಕಳಿಹಿಸಿದಾಗ ಮಾತ್ರ ಆ ಸದಸ್ಯರು ಬರುತ್ತಾರೆ ಇಲ್ಲದಿದ್ದರೆ ಬೇರೆಯವರು ಬರುವ ಪ್ರಶ್ನೆ ಇಲ್ಲ. ಅದಕ್ಕೇ ಇದು ಎಲ್ಲರ ಕನ್‌ಸೆಸನ್‌ನಿಂದ ಎಲ್ಲರ ಸಮ್ಮುಖದಲ್ಲಾಗಲಿ, ಯಾವ ಕಮ್ಯುನಿಟಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ ಅಂಥಹವರನ್ನೂ ಕೋ-ಆಪ್ಟ್ ಮಾಡಿಕೊಳ್ಳುವ ಅವಶ್ಯಕತೆ ಸಿಗಬೇಕೆಂದು ನಾವು ಸಣ್ಣ ತಿದ್ದುಪಡಿ ತಂದಿದ್ದೇವೆ. ಅದಕ್ಕೆ ತಾವೆಲ್ಲರೂ ಬೆಂಬಲ ಸೂಚಿಸಿದ್ದೀರಿ. ಇದನ್ನು ಸರ್ವಾನುಮತದಿಂದ ಪಾಸು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಭಾಧ್ಯಕ್ಷಿಣಿಯವರು:- ಪ್ರಸ್ತಾವ ಏನೆಂದರೆ:

೧೯೯೨ರ ಕರ್ನಾಟಕ ಜಿಲ್ಲಾಪರಿಷತ್‌ಗಳು, ತಾಲ್ಲೂಕು ಮಂಡಲಿಯ ಸಮಿತಿಗಳು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯವನ್ನು ಪರ್ಯಾಲೋಚಿಸುವುದು.

ಖಂಡ ೨ ಮತ್ತು ೩.

ಉಪಾಧ್ಯಕ್ಷಿಣಿಯವರು:- ಖಂಡ ೨ ಮತ್ತು ೩ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ಮತ್ತು ೩ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಖಂಡ ೪, ೫ ಮತ್ತು ೬ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

Clauses 4, 5, 6 and 7

The Clauses 4, 5 and 6 of the Bill shall be renumbered as Clauses 5, 6 and 7 thereof respectively and before these Clauses are so renumbered the following clause shall be inserted, namely:-

4. Amendment of Section 135: In Section 135 of the Principal Act, after sub-section (2), the following sub-section shall be deemed always to have been inserted, namely:-

(2A) Subject to the pleasure of Zilla Parishads, the term of office of the members co-opted under Clause (f) of sub-section (2), shall be for three years from the date of publication of their names in the official Gazette**. ಸೆಕ್ಷನ್ ೧೩೫ಕ್ಕೆ ತಂದಿರತಕ್ಕ ತಿದ್ದುಪಡಿಯನ್ನು ಈಗಾಗಲೇ ಎಕ್ಸ್‌ಪ್ಲೈನ್ ಮಾಡಿದ್ದೇನೆ. ಕೋ-ಆಪ್ಟ್ ಮೆಂಬರ್ಸ್‌ಗೆ ಮೂರು ವರ್ಷ ಎಂದು ಟರ್ಮ್ ಫಿಕ್ಸ್ ಮಾಡಿದ್ದೇವೆ. ಮೊದಲು ಅವರ ಟರ್ಮ್ ಫಿಕ್ಸ್ ಇರಲಿಲ್ಲ. ಎಲ್ಲಿಯವರೆಗೆ ತಾಲ್ಲೂಕು ಪಂಚಾಯಿತಿ ಸಮಿತಿ ಇರುತ್ತದೋ ಅಲ್ಲಿಯವರೆಗೂ ಅವರು ಸದಸ್ಯರಾಗಿರಬಹುದಾಗಿತ್ತು. ಆದಕ್ಕಾಗಿ ಇವತ್ತು ನಾವುಗಳು ಮೂರು ವರ್ಷ ಎಂದು ಒಂದು ಟರ್ಮ್‌ನ್ನು ಫಿಕ್ಸ್ ಮಾಡಿದ್ದೇನೆ. ಈಗಾಗಲೇ ನಾನು ತಿದ್ದುಪಡಿಯನ್ನು ಸಭೆಯ ಮುಂದೆ ಮಂಡಿಸಿದ್ದೇನೆ.

ಉಪಾಧ್ಯಕ್ಷಣೆಯವರು:- ಪ್ರಸ್ತಾವ ಏನೆಂದರೆ

CLAUSES 4, 5, 6 AND 7

The Clauses 4, 5, 6 and 7 of the Bill shall be renumbered as Clauses 5, 6 and 7 thereof respectively and before these clauses are so renumbered the following clause shall be inserted, namely:-

4. Amendment of Section 135: In Section 135 of the Principal Act, after sub-section (2), the following sub-section shall be and shall be deemed always to have ben instead namely:-

(2A) subject to the pleasure of Zilla Parishads, the term of

office of the members co-opted under Clause (f) of sub-section (2), shall be for three years from the date of publication of their names in the official Gazette."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಉಪಾಧ್ಯಕ್ಷರು:- ಖಂಡ ೪ ತಿದ್ದುಪಡಿಯಾದಂತೆ, ಹಾಗೂ ೫, ೬ ಖಂಡಗಳು, ೫, ೬, ೭ನೇ ಖಂಡಗಳಿಂದ ತಿದ್ದುಪಡಿಯೊಂದಿಗೆ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೪ ತಿದ್ದುಪಡಿಯಾದಂತೆ, ೫, ೬, ಖಂಡಗಳು, ೫, ೬, ೭ನೆಯ ಖಂಡಗಳಿಂದ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ ೧ ಇತ್ಯಾದಿ:-

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ ''ಮೊದಲನೆ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ ಸಮಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿಯ (ಅಮೆಂಡ್‌ಮೆಂಟ್) ಬಿಲ್ ೧೯೯೨ರ ತಿದ್ದುಪಡಿಯಾಗಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ: ''೧೯೯೨ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು.

ಉಪಾಧ್ಯಕ್ಷರು:- ಈಗ ಸಭೆಯನ್ನು ಮುಂದೂಡಿ ಸೋಮವಾರ ೧೧ ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ೧೧ಗಂಟೆ ೪೮ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೨೩ನೇ ಮಾರ್ಚಿ ೧೯೯೨ರ ಸೋಮವಾರದಂದು ಬೆಳಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನ ಸಭೆ

ಸೋಮವಾರ ೨೩ನೇ ಮಾರ್ಚ್ ೧೯೯೨

ಸದನವು, ವಿಧಾನಸೌಧದ ಮೊದಲನೆಯ ಮಹಡಿಯಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆ ೨೦ ನಿಮಿಷಕ್ಕೆ ಆರಂಭವಾಯಿತು.

(ಸನ್ಮಾನ್ಯ ಅಧ್ಯಕ್ಷರವರಾದ ಶ್ರೀ ಎಸ್. ಎಂ./ಕೃಷ್ಣ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ಪ್ರಶ್ನೋತ್ತರಗಳು.

(ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.)

ವೈ. ಕಗ್ಗಲ್ಲ, ಜೋಳದರಾಶಿ (ಬಳ್ಳಾರಿ ತಾಲ್ಲೂಕು) ಏತ ನೀರಾವರಿ ಯೋಜನೆಯ ಸ್ಥಿತಿ

೩೮೩ (೧೮೭೮) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ವೈ. ಕಗ್ಗಲ್ಲ, ಜೋಳದ ರಾಶಿ ಮುಂತಾದ ಹಳ್ಳಿಗಳ ಜಮೀನಿಗೆ ನೀರೊದಗಿಸಲು ಏತ ನೀರಾವರಿ ಯೋಜನೆ ಬಗ್ಗೆ ಮಾನ್ಯ ನೀರಾವರಿ ಮಂತ್ರಿಗಳು ತಿಳಿಸುವಿರೇ?

ಆ) ಈ ಯೋಜನೆಯನ್ನೇನಾದರೂ ೧೯೯೨-೯೩ರ ಅಯವ್ಯಯದಲ್ಲಿ ಸೇರಿಸಲಾಗಿದೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ಈ ಏತ ನೀರಾವರಿ ಯೋಜನೆ ಅನ್ವೇಷಣಾ ಹಂತದಲ್ಲಿದೆ.

ಆ) ಇಲ್ಲ.

ಶ್ರೀ ಅಲ್ಲಂ ವೀರಭದ್ರಪ್ಪ:- ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕಿನಲ್ಲಿ ವೈ. ಕಗ್ಗಲ್ ಮತ್ತು ಜೋಳದ ರಾಶಿ ಏತ ನೀರಾವರಿ ಯೋಜನೆಯಿಂದ ಆರೇಳು ಸಾವಿರ ಎಕರೆ ನೀರಾವರಿಯಾಗುತ್ತದೆ. ಆ ಭಾಗದಲ್ಲಿ ಬಡವರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರು ಇದ್ದಾರೆ. ಈ ಏತ ನೀರಾವರಿ ಯೋಜನೆಯನ್ನು ಮಾಡಿಕೊಡಬೇಕೆಂದು ಕೇಳಿ ಎರಡು ವರ್ಷಗಳು ಆಯಿತು. ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಮಾನ್ಯ ಸಭಾಧ್ಯಕ್ಷರೇ, ಅದರ ಬಗ್ಗೆ ಇನ್ನೂ ಸಮೀಕ್ಷೆ ನಡೆಯುತ್ತಿದೆ. ೬೫೦೦ ಎಕರೆ ನೀರಾವರಿಯಾಗುತ್ತದೆ. ಬರುವ ವರ್ಷದಲ್ಲಿ ಅದರ ಬಗ್ಗೆ ಸಾಧ್ಯವಾದಷ್ಟು ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಅದು ಏನೋ ಅನ್ವೇಷಣೆ ನಡೆಯುತ್ತಿದೆಯೆಂದು ಬರೆದಿದ್ದೀರಿ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಹೌದು.

ಕುಮುದ್ವತಿ ನದಿಯ ಸೇತುವೆಗೆ ತೆರಿಗೆ ಸಂಗ್ರಹ

೩೮೬ (೧೫೫೫) ಶ್ರೀ ಆಂಜನಮೂರ್ತಿ (ನೆಲಮಂಗಲ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ ಕುಮುದ್ವತಿ ನದಿಗೆ ಸೇತುವೆ/ನಿರ್ಮಾಣ ಮಾಡಿದ್ದು ಅಲ್ಲಿ ಓಡಾಡುತ್ತಿರುವ ವಾಹನಗಳಿಗೆ ಇನ್ನೂ ಸುಂಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ರೀತಿ ವಸೂಲು ಮಾಡಲು ಅನುಮತಿ ನೀಡಲಾಗಿದೆಯೇ?

ಇ) ಖಾಸಗಿ ವಾಹನ ಮಾಲೀಕರು ಹಾಗೂ ರಸ್ತೆ ಸಾರಿಗೆ ಸಂಸ್ಥೆಯವರ ಹತ್ತಿರ ೨೫ ಪೈಸೆಯಂತೆ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ರೀತಿಯಾದ ವಸೂಲಿಯಿಂದ ಸಾರ್ವಜನಿಕರಿಗಾಗುತ್ತಿರುವ ತೊಂದರೆಯನ್ನು/ತಪ್ಪಿಸಲು ಸರ್ಕಾರವು ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ನೀಡಲಾಗಿದೆ.

ಇ) ಇಲ್ಲ.

ಈ) ರಾಷ್ಟ್ರೀಯ ಹೆದ್ದಾರಿ ಕಾಯಿದೆ ಪ್ರಕಾರ ಭಾರತ ಸರ್ಕಾರದ ಪತ್ರ ಸಂಖ್ಯೆ ಪಿಎಲ್-೨೩(೧):೭೭ ದಿನಾಂಕ ೧೬-೧೨-೧೯೭೮ರಲ್ಲಿನ ಸೂಚನೆಗಳಂತೆ ಈ ಸೇತುವೆ ನಿರ್ಮಾಣ ವೆಚ್ಚ, ಬಡ್ಡಿ, ನಿರ್ವಹಣಾ ವೆಚ್ಚ ಇವೆಲ್ಲ ಮೊತ್ತವೂ ವಸೂಲಿಯಾದ ತಕ್ಷಣ ಕರವಸೂಲಿಯನ್ನು ನಿಲ್ಲಿಸಲಾಗುವುದು.

ಶ್ರೀ ಆಂಜನಮೂರ್ತಿ:- ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇರತಕ್ಕದ್ದು ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿ ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ ಕುಮುದ್ವತಿ ನದಿಗೆ ಸೇತುವೆ ನಿರ್ಮಾಣ ಮಾಡಿದ್ದು ಅಲ್ಲಿ ಓಡಾಡುತ್ತಿರುವ ವಾಹನಗಳಿಗೆ ಇನ್ನೂ ಸುಂಕವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರದ ಗಮನಕ್ಕೆ ಬಂದಿದೆಯೆಂದು ಉತ್ತರ ಕೊಟ್ಟಿದ್ದಾರೆ. "ಆ ರೀತಿ ವಸೂಲಿ ಮಾಡಲು ಅನುಮತಿ ನೀಡಲಾಗಿದೆಯೆ?" ಎಂದು ಕೇಳಿದ್ದಕ್ಕೆ ಅನುಮತಿಯನ್ನು ನೀಡಲಾಗಿದೆಯೆಂದು ಹೇಳಿದ್ದಾರೆ. ಮೂರನೆಯ ಪ್ರಶ್ನೆ "ಖಾಸಗಿ ವಾಹನದ ಮಾಲೀಕರು ಹಾಗೂ ರಸ್ತೆ ಸಾರಿಗೆ ಸಂಸ್ಥೆಯವರ ಹತ್ತಿರ ೨೫ ಪೈಸೆಯಂತೆ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?" ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ನನಗೆ ಆಶ್ಚರ್ಯವಾಗುತ್ತಿದೆ. ನನ್ನ ಕಡೆಯ ಪ್ರಶ್ನೆ ಸ್ವಲ್ಪ ತಿದ್ದುಪಡಿಯಾದಂತೆ ಕಾಣುತ್ತಿದೆ. ಕುಮುದ್ವತಿ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ತರಹ ಮೂರು ಕಡೆ ಸೇತುವೆಗಳನ್ನು ಕಟ್ಟಲಾಗಿತ್ತು. ಹಾಸನದ ಹತ್ತಿರ ಮತ್ತು ನಂಜನಗೂಡು ಹತ್ತಿರ ಕಟ್ಟಲಾಗಿತ್ತು. ಅಲ್ಲಿ ಸುಂಕವನ್ನು ವಸೂಲಿ ಮಾಡಿ ನಿಲ್ಲಿಸಿದ್ದಾರೆ. ಒಂದು ವಾಹನಕ್ಕೆ ೮ ರೂಪಾಯಿಗಳಂತೆ ತೆಗೆದು ಕೊಳ್ಳುತ್ತಾರೆ. ವಾಹನಗಳ ಮಾಲೀಕರು ಪ್ರಯಾಣಿಕರಿಂದ

ತಲಾ ೨೫ ಪೈಸೆ ವಸೂಲಿ ಮಾಡುತ್ತಿದ್ದಾರೆ. ಬಸ್ಸಿನೊಳಗೆ ೧೫೦ ಜನ ಪ್ಯಾಸೆಂಜರ್ಸ್ ಇದ್ದರೆ ಇವರು ಕೊಡುವುದು ೬ರಿಂದ ೮ ರೂಪಾಯಿಗಳು. ಒಬ್ಬ ಪ್ರಯಾಣಿಕರಿಂದ ೨೫ ಪೈಸೆಗಳಂತೆ ಇದುವರೆಗೂ ವಸೂಲಿ ಮಾಡುತ್ತಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಮತ್ತು ಪ್ರಯಾಣಿಕರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳಲ್ಲಿ ತಮ್ಮ ಮೂಲಕ ಕೇಳಿಕೊಳುತ್ತಿದ್ದೇನೆ. ಪ್ರಯಾಣಿಕರಿಂದ ವಸೂಲಿ ಮಾಡುವುದನ್ನು ನಿಲ್ಲಿಸಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುತ್ತೀರಾ?

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ:- ಮಾನ್ಯ ಅಧ್ಯಕ್ಷರೆ, ೧೯೯೦-೯೧ನೇ ಸಾಲಿನಲ್ಲಿ ಈ ರೀತಿ ೨೬ ಲಕ್ಷ ರೂ.ಗಳನ್ನು ವಸೂಲಿ ಮಾಡಿದ್ದಾರೆ. ಅದಕ್ಕೆ ೪೪ ಲಕ್ಷ ರೂಪಾಯಿಗಳ ಖರ್ಚು ಬಂದಿದೆ. ಈಗ ಟೆಂಡರ್ ಕಾಲ್‌ಫಾರ್ ಮಾಡಿದ್ದೇವೆ. ಹರಾಜಿನಲ್ಲಿ ಯಾರು ಜಾಸ್ತಿ ಬಿಡ್ ಮಾಡುತ್ತಾರೋ ಅಂತಹವರಿಗೆ ಬಿಡ್ ನಿಲ್ಲಿಸಿ ನಮ್ಮ ಹಣ ಬರುವವರೆಗೆ ವಸೂಲಿ ಮಾಡುತ್ತೇವೆ. ಮಾನ್ಯ ಸದಸ್ಯರು ಪ್ರಯಾಣಿಕರಿಂದ ಶುಲ್ಕವನ್ನು ವಸೂಲಿ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅದು ಸತ್ಯಕ್ಕೆ ದೂರವಾದುದು. ಆ ತರಹ ಏನಾದರೂ ಆಗಿದ್ದರೆ ಅದನ್ನು ನಿಲ್ಲಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಅಂಜನಮೂರ್ತಿ:- ಮಾನ್ಯ ಮಂತ್ರಿಗಳು ಪ್ರಯಾಣಿಕರಿಂದ ವಸೂಲಿ ಮಾಡುತ್ತಿರುವುದು ಸತ್ಯಕ್ಕೆ ದೂರವಾದುದು ಎಂದು ಹೇಳಿದ್ದಾರೆ. ನಾನು ಅವರಲ್ಲಿ ಕ್ಷಮೆ ಕೇಳುತ್ತೇನೆ. ಪ್ರಯಾಣಿಕರಿಂದ ನಿಜವಾಗಿಯೂ ವಸೂಲಿ ಮಾಡುತ್ತಿದ್ದಾರೆ. ಆದರೆ ಈ ೨೫ ಪೈಸೆ ಪ್ರಯಾಣಿಕರಿಂದ ವಸೂಲು ಮಾಡುವುದಕ್ಕೆ ರಸೀತಿ ಕೂಡ ಕೊಡುತ್ತಿದ್ದಾರೆ. ವಾಹನ ಮಾಲೀಕರಿಗೆ ಇವರೇ ಅನುಕೂಲ ಮಾಡಿಕೊಡುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ:- ಆ ತರಹ ಮಾಡುತ್ತಿದ್ದರೆ ಕಾನೂನು ಬಾಹಿರ. ಆದ್ದರಿಂದ ಅದನ್ನು ನಿಲ್ಲಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಹೂಳೆತ್ತುವ ಕಾರ್ಯಕ್ಕಾಗಿ ವಿಶ್ವ ಬ್ಯಾಂಕಿನ ನೆರವು

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ವಿಶ್ವ ಬ್ಯಾಂಕ್‌ನಿಂದ ರಾಜ್ಯದ ಕೆರೆಗಳಲ್ಲಿ ಹೂಳೆತ್ತಲು ಹಣ ಸಂದಾಯ ದೊರೆಯಲಿದೆಯೆ?

ಆ) ಹಾಗಿದ್ದಲ್ಲಿ ಎಷ್ಟು ಹಣ ದೊರೆಯುವುದು?

ಇ) ಹಾಗೆ ದೊರೆಯದಿದ್ದ ಪಕ್ಷದಲ್ಲಿ ರಾಜ್ಯ ಸರ್ಕಾರದವರೇ ಆ ಕೆರೆಗಳಲ್ಲಿ ಹೂಳೆತ್ತಲು ಹಾಕಿಕೊಂಡಿರುವ ಕಾರ್ಯ ಕ್ರಮಗಳೇನು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಸಚಿವರು):-

ಅ) ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಪ್ರಸ್ತಾವನೆಯ ಬಗ್ಗೆ ತೆಗೆದುಕೊಳ್ಳುವ ಅಂತಿಮ ನಿರ್ಣಯದ ನಂತರ ತಿಳಿಯಲಾಗುವುದು.

ಇ) ೧೯೯೨-೯೩ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಆಯವ್ಯಯ ಪಟ್ಟಿಯಲ್ಲಿ ೫೦ ಲಕ್ಷ ರೂ. ಗಳ ಅನುದಾನ ಒದಗಿಸಲಾಗಿದ್ದು, ಆ ಅನುದಾನಕ್ಕನುಗುಣವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು.

ಶ್ರೀ ಎಂ. ವಿ. ವೆಂಕಟಪ್ಪ:- ಉತ್ತರದಲ್ಲಿ ಈ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ರಾಜ್ಯ ಸರ್ಕಾರದವರು ವಿಶ್ವ ಬ್ಯಾಂಕ್‌ಗೆ ಈ ಹೂಳು ಎತ್ತುವುದಕ್ಕೆ ಏನೇನು ಪ್ರಪೋಸಲ್ಸ್ ಕೊಟ್ಟಿದ್ದೀರಿ? ನಿಮ್ಮ ಪ್ರಪೋಸಲ್ಸ್ ಏನಿದೆ, ಅವರನ್ನು ಏನಾದರೂ ಕೇಳಿದ್ದರೆ ದಯವಿಟ್ಟು ಇದರ ಬಗ್ಗೆ ತಿಳಿಸಬೇಕು.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಈಗಾಗಲೇ ನಾನು ಉತ್ತರದಲ್ಲಿ ಹೇಳಿದ್ದೇನೆ. ನಾವು ಕೆರೆಯ ಹೂಳು ಎತ್ತಲು ಹೆಚ್ಚಾಗಿ ಮೆಶಿನ್‌ಗಳನ್ನೇ ಉಪಯೋಗಿಸಬೇಕು ಎನ್ನತಕ್ಕ ಉದ್ದೇಶ ಇದೆ. ಎರಡು ಮಿಶಿನ್‌ಗಳಿಗೆ ನಾವು ಆರ್ಡರ್ ಕೊಟ್ಟಿದ್ದೇವೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಕ್ಲಿಯರೆನ್ಸ್ ನಿನ್ನೆಯೋ ಇವೊತ್ತೋ ಆಗಿದೆಯೆಂದು ಕಾಣುತ್ತದೆ. ಇದರ ಕಾರ್ಯ ವ್ಯಾಪ್ತಿಯನ್ನು ನಾವು ನೋಡಿಕೊಂಡು ಇನ್ನೂ ಹೆಚ್ಚಿಗೆ ಮಿಶನ್ಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈ ವರ್ಷ ೫೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದೇವೆ. ಜೊತೆಗೆ ಬಜೆಟ್ ಪ್ರತಿಯನ್ನು ತಾವು ನೋಡಿರಬಹುದು. "ಕೆರೆ ಕಲ್ಯಾಣ" ಎಂಬ ಯೋಜನೆಗೆ ೫ ಕೋಟಿ ರೂಪಾಯಿಗಳ ಒಂದು ಪ್ರಸ್ತಾವನೆಯನ್ನು ವರ್ಲ್ಡ್ ಬ್ಯಾಂಕ್‌ಗೆ ಕಳುಹಿಸುತ್ತಿದ್ದೇವೆ. ಶೀಘ್ರದಲ್ಲೇ ಇದನ್ನು ಕಾರ್ಯಗತ ಮಾಡುವ ಪ್ರಯತ್ನ ಮಾಡುತ್ತೇವೆ. ನಮಗೆ ಕಳಕಳಿ ಇದೆ. ಕೆರೆಗಳು ಹೂಳು ಬಿದ್ದು ನಿಜವಾಗಿ ಇವತ್ತು ದೇಶ ಹಾಳಾಗುತ್ತಾ ಇದೆ. ಆದಷ್ಟು ಬೇಗ ಎಲ್ಲಾ ಕೆರೆಗಳ ಹೂಳು ತೆಗೆದು ಈ ಕೆರೆಗಳನ್ನು ದುರಸ್ತಿ ಮಾಡಿಸುವುದು ಮತ್ತು ಅವುಗಳ ಬೌಂಡರಿ ಅಚ್ಚುಕಟ್ಟನ್ನು ಒತ್ತುವರಿಮಾಡಿಕೊಂಡು ಹಾಳು ಮಾಡತಕ್ಕಂಥ ಸ್ಥಿತಿ ಏನಿದೆ ಅದು ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ. ಇದಕ್ಕೆ ಒಂದು ವ್ಯವಸ್ಥೆಯನ್ನು ನಾವು ಮಾಡಿಕೊಡುತ್ತೇವೆ ಎಂದು ಸರ್ಕಾರದ ಪರವಾಗಿ ತಿಳಿಸಬಯಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ:- ನಮ್ಮ ಜಿಲ್ಲೆಯಲ್ಲಿ ಸುಮಾರು ನಾಲ್ಕು ಸಾವಿರ ಕೆರೆಗಳಿವೆ. ಇವೆಲ್ಲಾ ಚೋಳ ರಾಜರ ಕಾಲದಲ್ಲಿ ಮತ್ತು ವಿಜಯನಗರ ಸಾಮ್ರಾಜ್ಯದಲ್ಲಿ ಕಟ್ಟಿರುವುದು. ನನಗೆ ಗೊತ್ತಿರುವ ಹಾಗೆ, ವಿಜಯನಗರ ಸಾಮ್ರಾಜ್ಯದ ಶ್ರೀ ಕೃಷ್ಣದೇವರಾಯ ಅವರು ಮಲಗುವುದಕ್ಕೆ ಮುಂಚೆ ಒಳ್ಳೆಯ ವಾರ್ತೆಗಳನ್ನು ಕೇಳಬೇಕಿತ್ತು. ಒಂದು ಕೆರೆ ಕಟ್ಟಿದರೆ ಅದು ಪೂರ್ತಿಯಾಗಿ ಮುಗಿಸಿರಬೇಕು. ಎರಡನೆಯದು ಒಂದು ದೇವಸ್ಥಾನವನ್ನು ಕಟ್ಟಿದರೆ ಅದನ್ನು ಮುಗಿಸಿರಬೇಕು. ಈ ವಾರ್ತೆಗಳು ಬಂದ ಮೇಲೆಯೇ ಅವರು ನಿದ್ದೆ ಹೋಗುತ್ತಿದ್ದರು. ಇದು ನಾನು ಪುಸ್ತಕದಲ್ಲಿ ಓದಿ ತಿಳಿದ ಪ್ರಕಾರ ಇದೆ. ಆಗಿನ ಕಾಲದಲ್ಲಿ ಕಟ್ಟಿರುವ ಕೆರೆಗಳು ಏನಿವೆ, ಇವು ನಮ್ಮ ಜಿಲ್ಲೆಯಲ್ಲಿ ಬೇಕಾದಷ್ಟು ಇವೆ. ನಮಗಿರುವುದೇ ಬರೀ ಕೆರೆ, ಬೋರ್‌ವೆಲ್‌ಗಳು. ನಮಗೆ ಯಾವ ನದಿಯೂ ಇಲ್ಲ, ಕಾವೇರಿ ಇಲ್ಲ, ತುಂಗಭದ್ರಾ ಇಲ್ಲ, ಯಾವುದೂ ಇಲ್ಲ. ಆದಕ್ಕೋಸ್ಕರ ಇದನ್ನು ತಾವು ಗಮನದಲ್ಲಿಟ್ಟುಕೊಂಡು ಇದಕ್ಕೆ ಪ್ರಾತಿನಿಧ್ಯ ಕೊಡುವುದು ಒಂದು. ಎರಡನೆಯದು, ಹೂಳು ಎತ್ತುವುದರಿಂದ ಫುಲ್ ಕ್ರಾಪ್ ಬೆಳೆಯುವಂತೆ ಆಗಬೇಕು. ಸುಮ್ಮನೆ ಎಲ್ಲ ಕೆರೆಗಳನ್ನು ತೆಗೆದುಕೊಂಡು ಸಾರಾಸಗಟಾಗಿ ಮಾಡದೆ ಹೂಳು ಎತ್ತುವುದರಿಂದ ಯಾವ ಕೆರೆಯಲ್ಲಿ ನೀರಿನಿಂದ ಫುಲ್ ಕ್ರಾಪ್ ಬೆಳೆಯಲುಸಾಧ್ಯ ಅಂಥವುಗಳನ್ನು ಆರಿಸಬೇಕು. ಜೊತೆಗೆ ಫೀಡರ್ ಚಾನಲ್ಸ್‌ನ್ನು ಕೂಡ ಮಾಡಬೇಕು. ನಮ್ಮ ಜಿಲ್ಲೆಗೆ ಈ ವಿಷಯದಲ್ಲಿ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದು ತಮ್ಮಲ್ಲಿ ಸಲಹೆ ಮಾಡುತ್ತೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಮಾನ್ಯ ಸದಸ್ಯರು ಕೊಟ್ಟಿರುವ ಸಲಹೆ

ಖಂಡಿತವಾಗಿಯೂ ಬಹಳ ಯೋಗ್ಯವಾದದ್ದು. ಇದರ ಬಗ್ಗೆ ನಾವು ಕಳಕಳಿಯಿಂದ ಇದ್ದೇವೆ. ನಮ್ಮ ರಾಜ್ಯದಲ್ಲಿ ೪೦ ಸಾವಿರ ಕೆರೆಗಳಿವೆ. ಬಹುತೇಕ ಚೋಳರಾಜರ, ರಾಜಮಹಾರಾಜರ ಕಾಲದಲ್ಲಿ ಕಟ್ಟಿದಂಥ ಕೆರೆಗಳು. ಅವುಗಳನ್ನು ನಾವು ಉಳಿಸಿಕೊಳ್ಳದೇ ಹೋದರೆ ಅಂತರ್ಜಲ ಏನಿದೆ, ಅದು ಕಡಿಮೆಯಾಗುತ್ತಾ ಮುಂದೆ ಕುಡಿಯುವ ನೀರಿಗೂ ಬರ ಬರಬಹುದು ಎಂದು ನಮಗೆ ಚೆನ್ನಾಗಿ ಗೊತ್ತಿದೆ. ಆ ಕಾರಣದಿಂದ ಖಂಡಿತವಾಗಿಯೂ ಇದರ ಬಗ್ಗೆ ೫ ಕೋಟಿ ರೂಪಾಯಿಗಳನ್ನು ವರ್ಲ್ಡ್ ಬ್ಯಾಂಕ್‌ನಿಂಡ ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಹಾಗೆ ಮಾಡಿದಾಗ ಶ್ರೀ ವೆಂಕಟಪ್ಪನವರಿಗೆ ವಿಶೇಷ ಅಧ್ಯಕ್ಷತೆಯನ್ನು ಕೊಡುತ್ತೇವೆ. ಕೆರೆಗಳ ರಿಪೇರಿ ಮಾಡಿಕೊಡುವ ಒಂದು ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಈ ಕೆರೆಗಳಲ್ಲಿರುವ ಮಣ್ಣನ್ನು ರೈತರು ತೆಗೆದು ಕೊಂಡು ಹೋಗತಕ್ಕದ್ದು ದೊಡ್ಡ ಕೆಲಸ. ರೈತರು ಏನು ಮಾಡುತ್ತಾರೆ ಎಂದರೆ ಇದನ್ನು ತೆಗೆದುಕೊಂಡು ಹೋಗುವುದಿಲ್ಲ. ಅದಕ್ಕೋಸ್ಕರ ಈ ಕೆರೆಗಳ ಸರ್ವೆಮಾಡಿ, ಎಷ್ಟು ಹೂಳು ಬಂದಿದೆಯೆಂದು ನೋಡಿ, ಅಲ್ಲಿ ಬಂಡ್ ಮಾಡಿಕೊಂಡು ಗಿಡಮರಗಳನ್ನು ನೆಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಖಂಡಿತವಾಗಿಯೂ ಈ ಕಾರ್ಯ ಮಾಡಿಕೊಡುತ್ತೇವೆ. ನಾನು ರೈತ ಮಗನಾಗಿ ನನಗೆ ಈ ಕೆರೆಗಳ ಪರಿಸ್ಥಿತಿ ಚೆನ್ನಾಗಿ ಗೊತ್ತಿದೆ. ಹೂಳುನಿಂದಾಗಿ ಮೂರನೇ ಒಂದು ಭಾಗಕ್ಕಿಂತ ಹೆಚ್ಚಾಗಿ ನೀರು ನಿಲ್ಲುತ್ತಿಲ್ಲ. ೫೦ ಸಾವಿರ ಕೆರೆಗಳಲ್ಲಿ ೩೮ ಸಾವಿರ ಕೆರಗಳಲ್ಲಿ ಮೂರನೇ ಒಂದು ಭಾಗ ನೀರು ನಿಲ್ಲುತ್ತಿಲ್ಲ. ನನಗೆ ಇದು ಚೆನ್ನಾಗಿ ಗೊತ್ತಿದೆ. ಅದನ್ನು ಮಾಡಬೇಕೆಂಬ ಸಂಕಲ್ಪ ಸರ್ಕಾರಕ್ಕೆ ಇದೆ. ಖಂಡಿತವಾಗಿಯೂ ಮಾಡುತ್ತೇವೆ. ಅದರಲ್ಲಿಯೂ ಸಹಿತ ತಮಗೆ ಆದ್ಯತೆ ಕೊಡುತ್ತೇವೆ.

ಅಧ್ಯಕ್ಷರು:- ಸ್ಲೂಯಸ್ ರಿಪೇರ್ಸ್‌ನ್ನು ಮಾಡುತ್ತೀರಲ್ಲ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಸ್ಲೂಯಸ್ ಮತ್ತು ಫೀಡರ್ ಚಾನಲ್ ಎರಡನ್ನೂ ಮಾಡುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ:- ಬಜೆಟ್‌ನಲ್ಲಿ ೫೦ ಲಕ್ಷ ಇಟ್ಟಿದ್ದೇವೆಂದು ಸರ್ಕಾರದವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಮತ್ತೆ ೫ ಕೋಟಿ ರೂಪಾಯಿಗಳಿಗಾಗಿ ವರ್ಲ್ಡ್ ಬ್ಯಾಂಕ್ ಸಚಿವರಿಗೆ ಬರೆದಿದ್ದೇವೆಂದು ಹೇಳಿದ್ದಾರೆ. ಅವರು ಈ ಹಣವನ್ನು ಕೊಟ್ಟರೆ ಕೊಡಬಹುದು, ಬಿಟ್ಟರೆ ಬಿಡಬಹುದು. ಆದರೆ, ನೀವು ಇಟ್ಟಿರತಕ್ಕ ಈ ೫೦ ಲಕ್ಷ ರೂಪಾಯಿಗಳು ಯಾವ ಮೂಲೆಗೂ ಸಾಲುವುದಿಲ್ಲ. ದಯಮಾಡಿ, ನೀವೇ ಹೇಳಿದ ಹಾಗೆ, ೪೦ ಸಾವಿರ ಕೆರೆಗಳಲ್ಲಿ ಮೂರನೇ ಎರಡು ಭಾಗ ಕೆರೆಗಳು ಹೂತು ಹೋಗಿವೆ ಎಂದು ಹೇಳಿದ್ದೀರಿ. ಆದ್ದರಿಂದ್ಕ, ಹಾಲಿ ಇಟ್ಟಿರತಕ್ಕ ೫೦ ಲಕ್ಷಕ್ಕೆ ಬದಲಾಗಿ, ೫೦ ಕೋಟಿ ರೂಪಾಯಿಗಳನ್ನು ಮಾಡಿಸಿ, ನೀವು ಈ ರೀತಿ ೫೦ ಲಕ್ಷ ಇಟ್ಟರೆ ಯಾವ ಮೂಲೆಗೆ ಬರುತ್ತದೆ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಸನ್ಮಾನ್ಯ ಸಭಾಧ್ಯಕ್ಷರೇ, ನಮಗೆ ಕೆಲಸಗಳಿಗೆ ಸಂಪನ್ಮೂಲಗಳೂ ಸಹಿತ ಬೇಕಾಗುತ್ತವೆ. ಆದಿಲ್ಲದೆ ನಾವು ಏನೇನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ನಾನು ಅನೇಕ ಬಾರಿ ಮುಖ್ಯಮಂತ್ರಿಯವರ ಹತ್ತಿರ ಇದನ್ನು ಪ್ರಸ್ತಾಪಿಸಿದ್ದೇನೆ. ಈಗ ೫೦ ಲಕ್ಷ ತೆಗೆದುಕೊಳ್ಳಿ, ಮುಂದೆ ಬೇಕಾದರೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಜೊತೆಗೆ, ನೀರಾವರಿ ಬಗ್ಗೆ ನೀವೇನೂ ಯೋಚನೆ ಮಾಡಬೇಡಿ ಎಂಬ ಮಾತನ್ನೂ ಸಹಿತ ಹೇಳಿದ್ದಾರೆ. ಅವರ ನಂಬಿಕೆ ಮೇಲೆ ೫೦ ಲಕ್ಷ ಖರ್ಚು ಮಾಡಿ, ಮತ್ತೆ ೫೦ ಲಕ್ಷ ಉಪಯೋಗ ಮಾಡಿ ಕಾರ್ಯಗತ ಮಾಡುವಂಥ

ಮಾತನ್ನು ಹೇಳುತ್ತೇನೆ.

ಅಧ್ಯಕ್ಷರು:- ತಾವು ೪೦ ಸಾವಿರ ಕೆರೆಗಳಿವೆ ಎಂಬ ಮಾತನ್ನು ಹೇಳಿದಿರಿ, ಇವುಗಳ ಹೂಳು ತೆಗೆಸಿ, ಸ್ಲೂಯಿಸ್ ರಿಪೇರಿ ಮಾಡಿ, ಬಂಡೆ, ದಡ ಸೇರಿ ಮಾಡುವುದಕ್ಕೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ಅಂದಾಜು ಮಾಡಿದ್ದೀರಾ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಇದಕ್ಕಾಗಿ ಮಾಸ್ಟರ್ ಪ್ಲಾನ್ ಮಾಡಿಸುತ್ತಿದ್ದೇವೆ.

ಶ್ರೀ ಎನ್. ಜಿ. ನಾಯಕ್:- ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ತುಂಬಾ ಕೆರೆಗಳಿವೆ, ಎಲ್ಲಾ ಕೆರೆಗಳೂ ಹೂತು ಹೋಗಿವೆ. ಸುಮಾರು ೧೦-೧೫ ಕೆರೆಗಳಿವೆ. ಇವುಗಳು ಬಹಳ ಹಿಂದೆ ಕಟ್ಟಿದಂಥ ಕೆರೆಗಳು, ಸರ್ಕಾರದವರು ಇತ್ತಕಡೆ ಗಮನ ತೆಗೆದುಕೊಂಡಿಲ್ಲ. ನಮ್ಮಲ್ಲಿರತಕ್ಕ ಚಾನಲ್ ರಿಪೇರಿ ಆಗಿಲ್ಲ. ಬರೀ ಕೋಲಾರಕ್ಕೆ ಗಮನ ಕೊಟ್ಟು ತೆಗೆದುಕೊಳ್ಳುತ್ತಾರೋ ಅಥವಾ ನನ್ನ ಕ್ಷೇತ್ರಕ್ಕೂ ಗಮನ ಕೊಟ್ಟು ತೆಗೆದುಕೊಳ್ಳುತ್ತಾರೋ ಎಂಬುದನ್ನು ಮಾನ್ಯ ಸಚಿವರಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ದಯಮಾಡಿ, ತಾವು ಇನ್ನೊಂದುಸಾರಿ ಹೇಳಬೇಕು.

ಶ್ರೀ ಎನ್. ಜಿ. ನಾಯಕ್:- ಸನ್ಮಾನ್ಯ ಅಧ್ಯಕ್ಷರೇ, ನನಗೆ ಸರಿಯಾದ ಉತ್ತರವನ್ನು ಕೊಡಲಿಲ್ಲ. ನನ್ನ ಕ್ಷೇತ್ರಕ್ಕೆ ಎಷ್ಟು ದುಡ್ಡು ಪ್ರೋವೈಡ್ ಮಾಡುತ್ತಾರೆಂಬುದನ್ನು ದಯಮಾಡಿ ತಿಳಿಸಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಈಗಾಗಲೇ ಉತ್ತರ ಕೊಟ್ಟಿದ್ದೇವೆ.

ಶ್ರೀ ಎನ್. ಜಿ. ನಾಯಕ್:- ಮಾನ್ಯ ಸಚಿವರು ಹಣ ಪ್ರೋವೈಡ್ ಮಾಡಿದ್ದೇನೆಂದು ಹೇಳುತ್ತಾರೆ, ನಮಗೆ ಇದುವರೆಗೂ ಹಣ ಬಂದಿಲ್ಲ. ಈಗಲಾದರೂ ದುಡ್ಡು ಕೊಡುವುದಕ್ಕೆ ಮಾನ್ಯ ಸಚಿವರು ಗಮನ ಕೊಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಪರಿಶೀಲನೆ ಮಾಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ:- ಅಧ್ಯಕ್ಷರೇ, ನೀರಾವರಿ ಮಂತ್ರಿಗಳು ಬಹಳ ಕಳಕಳಿಯಿಂದ ಸಣ್ಣ ಕೆರೆಗಳ ವಿಚಾರದಲ್ಲಿ ಮಾತನಾಡಿದ್ದಾರೆ. ಅವರು ತಮ್ಮ ಕಳಕಳಿಗೆ ತಕ್ಕಂತೆ, ಮಿಷನ್ ತರಿಸುತ್ತೇವೆಂದು ಹೇಳಿದರು. ಅವರು ಯಾವ ಮಿಷನ್ ತರಿಸುತ್ತಾರೆ, ಕೇವಲ ಎರಡಕ್ಕೆ ಮಾತ್ರ ಆರ್ಡರ್ ಮಾಡಿದ್ದಾರೆ. ೪೦ ಸಾವಿರ ಕೆರೆಗಳಿಗೆ, ಕೇವಲ ಎರಡು ಮಿಷನ್ ತರಿಸುತ್ತಿದ್ದಾರೆ. ಆಮೇಲೆ, ಹಣಕಾಸಿನ ಮಂತ್ರಿಗಳ ಜೊತೆ ಮಾತನಾಡಿದ್ದೇನೆಂದು ಹೇಳಿದ್ದಾರೆ. ಅವರು ಇದರ ಬಗ್ಗೆ ಯೋಚನೆ ಮಾಡಬೇಡಿ ಎಂದೂ ಹೇಳಿದ್ದಾರೆ. ನಾವು ಯಾವುದರ ಬಗ್ಗೆ ಯೋಚನೆ ಮಾಡುವುದಿಲ್ಲ...

ಅಧ್ಯಕ್ಷರು:- ಯೋಚನೆ ಏಕೆ, ಎರಡು ಮಿಷನ್ ಬಂದರೆ, ಒಂದು ಮೊಳಕಾಲ್ಮುರುವಿಗೆ ಹೋಗುತ್ತದೆ, ಇನ್ನೊಂದು ಮಾನ್ಯ ವೆಂಕಟಪ್ಪನವರ ಕ್ಷೇತ್ರಕ್ಕೆ ಹೋಗುತ್ತದೆ.

ಶ್ರೀ ಜಿ. ಎಸ್. ಶಿವನಂಜಪ್ಪ:- ಮಧ್ಯದಲ್ಲಿ ನಮ್ಮ ಗತಿ ಏನು? ನಮ್ಮ ತುಮಕೂರು ಜಿಲ್ಲೆಯ ಗತಿ ಏನು? ಎಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಸನ್ಮಾನ್ಯ ಸಭಾಧ್ಯಕ್ಷರೇ, ನನ್ನ ಕೈಕೆಳಗೆ ಬರತಕ್ಕ

ಕೆರೆಗಳು ೫೦೦ ಮಾತ್ರ. ಮಿಕ್ಕಿದ್ದೆಲ್ಲವೂ ಜಿಲ್ಲಾಪರಿಷತ್ತಿಗೆ ಹೋಗುತ್ತವೆ. ನಾನು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದೇನೆ, ೧೦೦ ಎಕರೆ ಮೇಲ್ಪಟ್ಟು ಎಲ್ಲಾ ಕೆರೆಗಳೂ ಸಹಿತ ಮೈನರ್ ಇರಿಗೇಷನ್‌ಗೆ ಕೊಡತಕ್ಕದ್ದು ಎಂದು ಹೇಳಿದ್ದೇನೆ. ಇದಕ್ಕೆ ಬರತಕ್ಕ ಹೆಚ್ಚಿನ ಹಣದಲ್ಲಿ ಮಿಷನ್ ತೆಗೆದುಕೊಂಡು ಹೂಳೆತ್ತುವ ಕಾರ್ಯಕ್ರಮ ಕೈಗೊಳ್ಳುತ್ತೇವೆ. ನಾವು ಈ ಎರಡು ಮಿಷನ್ ತೆಗೆದುಕೊಂಡು, ಟ್ರಯಲ್ ಬೇಸಿಸ್ ಮೇಲೆ ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಸುಮಾರು ೧೫-೨೦ ಲಕ್ಷ ರೂಪಾಯಿ ಕೊಟ್ಟು ಮಿಷನ್ ತೆಗೆದುಕೊಂಡು, ಅವು ಸರಿಯಾಗಿ ಕೆಲಸ ಮಾಡದೇ ಹೋದರೆ, ಸರ್ಕಾರಕ್ಕೆ ಲುಕ್ಸಾನು ಆಗುತ್ತದೆ. ಆದಕ್ಕೋಸ್ಕರ ಸ್ಯಾಂಪಲ್‌ಗೋಸ್ಕರ ಸಧ್ಯದಲ್ಲಿ ಎರಡು ಮಿಷನ್ ತೆಗೆದುಕೊಳ್ಳುತ್ತಿದ್ದೇವೆ. ಮತ್ತೆ ೧೯೯೨-೯೩ನೇ ಸಾಲಿನಲ್ಲಿ ಸುಮಾರು ೫೦ ಕೋಟಿಗೂ ಹೆಚ್ಚು ಈ ಮಿಷನ್‌ಗೋಸ್ಕರ ಇಟ್ಟಿದ್ದೇವೆ. ಇದರ ಕೆಲಸ ಜಯಪ್ರದವಾದರೆ, ಖಂಡಿತವಾಗಿಯೂ ಇನ್ನೂ ಹೆಚ್ಚಿನ ಮಿಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್:- ಈ ಕೆರೆ ಕಲ್ಯಾಣ ಯೋಜನೆ ಕೆಳಗಡೆ, ೫ ಕೋಟಿ ರೂಪಾಯಿಗಳ ಪ್ರಾವಿಷನ್ ಮಾಡಿದ್ದೇವೆ. ಇದರ ಬಗ್ಗೆ ಸರ್ಕಾರ ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದೆ. ಮಾನ್ಯ ಹಿರಿಯ ಸದಸ್ಯರಾದ ವೆಂಕಟಪ್ಪನವರು ಏನು ಹೇಳಿದ್ದಾರೆ, ಅದರ ಪ್ರಕಾರ, ಕೋಲಾರದಲ್ಲಿಯೂ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:- ಈ ಮೆಷಿನ್‌ಸನ್ನು ಎಲ್ಲಿಂದ ತರಿಸಬೇಕು ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಯಾವ ಮೆಷಿನ್ ಅಳವಡಿಸಬೇಕು ಎನ್ನುವುದರ ಬಗ್ಗೆ ತೀರ್ಮಾನ ಮಾಡಿ ವಿಶೇಷ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಎಕ್ಸ್‌ಕವೇಟರ್ಸ್ ಎಂಬ ಮೆಷಿನ್ ಇದೆ. ಜೊತೆಗೆ ಹೂಳು ಎತ್ತತಕ್ಕಂಥ ವಿಶೇಷವಾದ ಮೆಷಿನರಿ ಇದ್ದರೆ ಅದರ ಬಗ್ಗೆಯೂ ಕೂಡ ಯೋಗ್ಯವಾದ ವರದಿ ತರಿಸಿಕೊಂಡು ಅತಿ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಸಭಾಧ್ಯಕ್ಷರೇ, ನಾವು ಈಗಾಗಲೇ ಟ್ರಯಲ್ ಬೇಸಿಸ್ ಮೇಲೆ ಈ ಕಾರ್ಯಕ್ರಮವನ್ನು ಕೈಗೊಂಡಿದ್ದೇವೆ. ಹುಣಸೇ ಮಾರನಹಳ್ಳಿ ಕೆರೆ ಎಂದು ಇದೆ, ಅಲ್ಲಿ ಟ್ರಯಲ್ ಬೇಸಿಸ್ ಮೇಲೆ ಜಿ. ಸಿ. ಬಿ. ಎಂಬ ಎಸ್ಕಾರ್ಟ್ ಕಂಪನಿ ಮೆಷಿನ್ ಬಂದಿದೆ, ಅದು ಏನು ಎಂದರೆ ಹೂಳೆತ್ತುವುದರ ಜೊತೆಗೆ ಎಲ್ಲಿ ಬೇಕಾದರೂ ಹೋಗತಕ್ಕಂಥ, ಎಂಥದ್ದೇ ಕೆಸರಿದ್ದರೂ ಹೋಗತಕ್ಕಂಥ ಅದ್ಭುತ ಶಕ್ತಿ ಉಳ್ಳ ಮೆಷಿನ್ ಆಗಿದೆ. ಇದರಲ್ಲಿ ಮೂರು ಬಕೆಟ್ ಎತ್ತಿ ಹಾಕಿದರೆ ಒಂದು ಲಾರಿ ಲೋಡ್ ಆಗುತ್ತದೆ. ಅದರ ಮೇಂಟೆನೆನ್ಸ್‌ಗೆ ಸಹ ಬಹಳ ಕಡಿಮೆ ಖರ್ಚು ಇದೆ. ಒಂದು ಸಾವಿರ ಗಂಟೆ ಕೆಲಸ ಮಾಡಿದರೆ ಒಂದು ಲೀಟರ್ ಮಾತ್ರ ಹಾಕತಕ್ಕಂಥದ್ದು ಇದೆ. ಈ ಮೆಷಿನ್ ತರಿಸಿ ನೋಡಬೇಕೆಂಬ ಯೋಚನೆ ಸರಕಾರಕ್ಕೆ ಇದೆ. ಖಂಡಿತವಾಗಿ ಇದು ಸಕ್ಸಸ್ ಆದರೆ ಇನ್ನೂ ಹೆಚ್ಚಿನ ಮೆಷಿನ್ಸ್ ತರಿಸಿ ಕೆಲಸ ಮಾಡಿಕೊಡುತ್ತೇವೆ ಎಂಬ ಭರವಸೆಯನ್ನು ಈ ಸದನದಲ್ಲಿ ಕೊಡುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ್:- ಕೆರೆಗಳಲ್ಲಿ ಹೂಳೆತ್ತತಕ್ಕಂಥ ಕಾರ್ಯಕ್ರಮ ಅನ್ ಎಕನಾಮಿಕಲ್ ಎಂದು ತಜ್ಞರ ಅಭಿಪ್ರಾಯ ಇದೆ. ಈ ಅಭಿಪ್ರಾಯವನ್ನು ಗಮನದಲ್ಲಿಟ್ಟುಕೊಂಡು ಮಾಸ್ಟರ್ ಪ್ಲಾನ್ ಮಾಡುತ್ತಿದ್ದೀರೋ, ಅಥವಾ ಮೊದಲು ಮಾಸ್ಟರ್ ಪ್ಲಾನ್ ಮಾಡಿದಕೂಡಲೆ ಆ ನಂತರ ತಜ್ಞರು ಹೀಗೆ ಹೇಳುತ್ತಾರೆ ಎಂದು ಇವನ್ನು ಕೈಬಿಡುವ ಯೋಜನೆ ಇದೆಯೋ ಎಂದು

ಕೇಳುತ್ತೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಒಂದಂತೂ ನಿಜ, ಮಾನ್ಯ ಕೋಳಿವಾಡ್‌ರವರು ಹೇಳತಕ್ಕಂಥಾದ್ದು ನಿಜ. ಹೂಳೆತ್ತಕ್ಕ ಕಾರ್ಯಕ್ರಮ ಅನ್ ಎಕನಾಮಿಕಲ್. ಜನರಿಂದ ಮಾಡಿಸಲೀ, ಮೆಷಿನ್‌ನಿಂದ ಮಾಡಿಸಲಿ ಯಾವ ರೂಪದಿಂದ ಮಾಡಿಸಿದರೂ ಸಹ ಇದು ಬಹಳ ಅನ್‌ಎಕನಾಮಿಕಲ್ ಆಗತಕ್ಕಂಥಾದ್ದು. ಇದು ನಮ್ಮ ಸರ್ಕಾರಕ್ಕೆ ಚೆನ್ನಾಗಿ ಗೊತ್ತಿದೆ. ಆದರೂ ಸಹ ಇದು ಒಂದು ಅನಿವಾರ್ಯವಾದ ಕಾರ್ಯಕ್ರಮ. ಏತಕ್ಕೆಂದರೆ ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಹಿಂದಿನವರು ಕಟ್ಟಿದಂಥ ಕೆರೆಗಳಿಗೇ ರಿಪೇರಿ ಮಾಡಿಕೊಂಡರೆ, ಚಾನಲ್‌ಗಳನ್ನು ರಿಪೇರಿ ಮಾಡಿಕೊಂಡರೆ, ಅದಕ್ಕೆ ಸಂಬಂಧಪಟ್ಟ ಸಾಗುವಳಿ ಏನು ಇದೆ ಅದನ್ನು ಮಾಡಬಹುದು. ಅವೆಲ್ಲಾ ಬಿಟ್ಟು ಬೇರೆ ಕೆರೆಗಳನ್ನು ಮಾಡುವುದಕ್ಕೆ ನಾವು ಹೆಚ್ಚಿನ ಆದ್ಯತೆ ಕೊಡದೇ, ಇರುವ ಕೆರೆಗಳನ್ನೇ ಎಷ್ಟೇ ಹಣ ಖರ್ಚಾದರೂ ಪರವಾಗಿಲ್ಲ ಚಿಂತೆ ಇಲ್ಲ ಮಾಡಬೇಕೆಂದು ಮಾಡಿದ್ದೇವೆ. ಆದರಿಂದ ನೂರು ಎಕರೆಗೆ ಸಾಗುವಳಿಯಾಗುತ್ತದೆ ಎಂದರೆ, ನೂರು ಎಕರೆಗೇ ಅದನ್ನು ತರತಕ್ಕಂಥ ಕಾರ್ಯಕ್ರಮ ಸರ್ಕಾರ ಮಾಡಬೇಕೆಂದು ಇದೆ. ಇದಕ್ಕಾಗಿ ಮಾಸ್ಟರ್ ಪ್ಲಾನ್ ಮಾಡಿಸುತ್ತಿದ್ದೇವೆ. ಅದನ್ನು ಶೀಘ್ರದಲ್ಲೇ ಕೈಗೊಳ್ಳುತ್ತೇವೆ ಎಂಬ ಮಾತನ್ನು ಹೇಳ ಬಯಸುತ್ತೇನೆ.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ:- ಮಾನ್ಯ ಅಧ್ಯಕ್ಷರೇ, ಇವರು ಇಟ್ಟಿರತಕ್ಕ ೫೦ ಲಕ್ಷ ರೂಪಾಯಿ ಒಂದೆರಡು ತಾಲ್ಲೂಕಿಗೂ ಸರಿ ಹೋಗುವ ಹಾಗೆ ಇಲ್ಲ. ಇದಕ್ಕಿಂತ ಮೊದಲು ನಾನು ಒಂದು ಪ್ರಶ್ನೆ ಕೇಳಿದ್ದೆ. ನನ್ನ ತಾಲ್ಲೋಕಿನಲ್ಲಿ ನಿಜಾಮ್ ಕಾಲುವೆಯಲ್ಲಿರುವ ೧೫-೨೦ ಕೆರೆಗಳು ಒಡೆದುಹೋಗಿ ಹೂಳು ತುಂಬಿವೆ, ಅದರ ಬಗ್ಗೆ ಮೊದಲು ಪ್ರಾತಿನಿಧ್ಯ ಕೊಡುತ್ತೀರಾ ಮತ್ತು ಆ ಕೆರೆಗಳನ್ನು ದುರಸ್ತಿ ಮಾಡಿಸುತ್ತೀರಾ, ಅದರಿಂದ ಸಾವಿರಾರು ಎಕರೆ ಭೂಮಿಗೆ ನೀರಾವರಿ ಆಗುತ್ತದೆ ಎಂದು ಕೇಳಿದ್ದಕ್ಕೆ, ಮೊದಲನೆಯ ಆದ್ಯತೆ ಕೊಡುತ್ತೇವೆ ಎಂದು ಹೇಳಿದ್ದರು. ಆದರೆ ಇಲ್ಲಿವರೆಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಅದಕ್ಕಾಗಿ ೫೦ ಲಕ್ಷ ರೂಪಾಯಿ ಒಂದೆರಡು ತಾಲ್ಲೋಕಿಗೆ ಸರಿ ಹೋಗುವ ಹಾಗೆ ಇಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಈಗಾಗಲೇ ನಮ್ಮ ಮಿತ್ರರಾದ ಮಲ್ಲಾರಿಗೌಡರು ಹೇಳಿದ್ದಾರೆ. ೫ ಕೋಟಿ ರೂಪಾಯಿಗಳನ್ನು ನಾವು ಏನಾದರೂ ಮಾಡಿ ತಂದು ವರ್ಕ್ಸ್ ಮಾಡಿಕೊಡುತ್ತೇವೆ ಎಂಬ ಮಾತನ್ನು ಮತ್ತೊಮ್ಮೆ ಸದನಕ್ಕೆ ಹೇಳುತ್ತಿದ್ದೇನೆ. ೫೦ ಲಕ್ಷ ರೂಪಾಯಿ ಯಾವುದಕ್ಕೂ ಸಾಲದು, ಎರಡು ಕೆರೆಗೆ ಕೊಟ್ಟರೆ ಒಂದು ಚಾನಲ್ ರಿಪೇರಿ ಮಾಡಿದರೆ ಮುಗಿದು ಹೋಗುತ್ತದೆ. ಇದು ಒಂದು ಕೆರೆಗೂ ಸಾಲುವುದಿಲ್ಲ. ರೈತರ ಮಗನಾಗಿ ಇದು ನನಗೆ ಚೆನ್ನಾಗಿ ಗೊತ್ತಿದೆ. ಆದರೆ ಐದು ಕೋಟಿ ರೂಪಾಯಿ ತರಲು ಏನಾದರೂ ಮಾಡಿ ಪ್ರಯತ್ನ ಮಾಡಬೇಕೆಂದು ಒಂದು ಭರವಸೆ ನಮಗೆ ಇದೆ. ವರ್ಲ್ಡ್ ಬ್ಯಾಂಕ್‌ನವರು ಇದರ ಬಗ್ಗೆ ಭರವಸೆ ಕೊಟ್ಟಿದ್ದಾರೆ. ಇದರ ಬಗ್ಗೆ ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿ ರೂಪುರೇಷೆಗಳನ್ನು ಕೊಡಿ ಎಂದು ಹೇಳಿದ್ದಾರೆ. ಆದುದರಿಂದ ಈಗ ಇದಕ್ಕೆ ೫೦ ಲಕ್ಷ ರೂಪಾಯಿ ಮಾತ್ರ ಇಟ್ಟಿದ್ದಾರೆ. ಇದರಿಂದ ಒಂದು ಕೆರೆ ಕೆಲಸ ಕೂಡ ಆಗುವುದಿಲ್ಲ ಎಂಬುದನ್ನು ನಿಮ್ಮ ಮನಸ್ಸಿನಿಂದ ತೆಗೆದು ಹಾಕಿ, ನಮ್ಮ ಮೇಲೆ ನಂಬಿಕೆ ಇಡಿರಿ ನಾವು ಖಂಡಿತಾ ಕೆಲಸ ಮಾಡುತ್ತೇವೆ ಎಂಬ ಭರವಸೆಯನ್ನು ಮತ್ತೊಮ್ಮೆ ಕೊಡಬಯಸುತ್ತೇನೆ

ಶ್ರೀ ಮುನಿನರಸಿಂಹಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹುಣಸೇಮಾರನಹಳ್ಳಿ ಕೆರೆ ಹತ್ತಿರ ಪ್ರಾತ್ಯಕ್ಷಿಕೆ ತೆಗೆದುಕೊಂಡು ಎಕ್ಸ್‌ಪೆರಿಮೆಂಟ್ ಬೇಸಿಸ್ ಮೇಲೆ ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಈ ಕೆರೆ ಕೆಳಗಡೆ ಇರತಕ್ಕಂಥ ಅಚ್ಚುಕಟ್ಟು ಕೇವಲ ೧೫-೨೫ ಎಕರೆ ಮಾತ್ರ. ಅಂತಹ ಕೆರೆಯ ಹೂಳು ತೆಗೆಸುವುದರಿಂದ ಸಾರ್ವಜನಿಕರಿಗೆ ಹೆಚ್ಚು ಪ್ರಯೋಜನವಾಗುವುದಿಲ್ಲ. ಆದರ ಬದಲು ಹೆಚ್ಚು ಅಂದರೆ ೧೦೦-೧೫೦ ಎಕರೆ ಅಚ್ಚುಕಟ್ಟು ಇರತಕ್ಕಂಥ ಕೆರೆಯ ಹೂಳು ತೆಗೆಸಿದರೆ ಎಕ್ಸ್‌ಪೆರಿಮೆಂಟ್ ಮಾಡಿದ ಹಾಗೂ ಆಗುತ್ತದೆ, ಜನಗಳಿಗೆ ಪ್ರಯೋಜನ ಕೂಡ ಆಗುತ್ತದೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಮಾನ್ಯ ಅಧ್ಯಕ್ಷರೇ, ಹುಣಸೇಮಾರನಹಳ್ಳಿ ಕೆರೆ ದೊಡ್ಡ ಕೆರೆ, ಆದರ ಅಚ್ಚುಕಟ್ಟು ೧೫-೨೦ ಎಕರೆ ಅಲ್ಲ. ತುಂಬಾ ಸಾಗುವಳಿ ಇರತಕ್ಕಂಥ ಕೆರೆ. ಈಗ ನೀರು ಕಡಿಮೆ ಇರುವುದರಿಂದ ಆ ರೀತಿ ಆಗಿದೆ. ಇಲ್ಲಿ ಸೆಂಟ್ರಲ್ ಯೋಜನೆಯಲ್ಲಿ ಒಂದು ತುಂತುರು ನೀರಾವರಿ ಯೋಜನೆಯನ್ನು ಅಲ್ಲಿ ಮಾಡಿ ಕೊಡುತ್ತಿದ್ದೇವೆ. ೧೫-೨೦ ಎಕರೆಗೆ ಸ್ಯಾಂಪಲ್ ಆಗಿ ಕೊಟ್ಟಿದ್ದೇವೆ. ಹೋದ ವರ್ಷವೂ ಕೊಟ್ಟಿದ್ದೇವೆ, ಅದು ಸಕ್ಸಸ್ ಆಗಿದೆ. ನೀರು ಕಡಿಮೆ ಇರುವುದರಿಂದ ಈ ಒಂದು ಯೋಜನೆ ಮಾಡಿ ಮಾಡುತ್ತಿದ್ದೇವೆ. ಈ ಒಂದು ಕಾರ್ಯಕ್ರಮ ಬಂದ ಮೇಲೆ ಅದು ಚೆನ್ನಾಗಿ ನಡೆಯುತ್ತಿದೆ ಎಂಬ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಆರ್. ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೆ ರಾಜ್ಯದಲ್ಲಿ ೪೦ ಸಾವಿರ ಕೆರೆಗಳಿವೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಆದರೆ ಇದರಲ್ಲಿ ಮೇಜರ್ ಇರಿಗೇಷನ್ ಮೀಡಿಯಂ ಇರಿಗೇಷನ್ ಮತ್ತು ಮೈನರ್ ಇರಿಗೇಷನ್ ಹೀಗೆ ಇಲಾಖಾವಾರು ಬೇಡಿಕೆಗಳು ಇವೆ. ಇದರಲ್ಲಿ ಮೇಜರ್ ಇರೀಗೇಷನ್‌ಗೆ ಬರುವ ಕೆರೆಗಳು ಎಷ್ಟು ಮೀಡಿಯಂ ಇರಿಗೇಷನ್‌ಗೆ ಬರುವ ಕೆರೆಗಳು ಎಷ್ಟು ಮತ್ತು ಮೈನರ್ ಇರಿಗೇಷನ್‌ಗೆ ಬರತಕ್ಕ ಕೆರೆಗಳು ಎಷ್ಟು? ಜೊತೆಗೆ ಇದರ ಬಗ್ಗೆ ಇಬ್ಬರು ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ನಾವೇನಾದರೂ ನಮ್ಮ ಕ್ಷೇತ್ರದಲ್ಲಿ ಬರತಕ್ಕ ಕೆರೆಗಳ ದುರಸ್ತಿಗಾಗಿ ಅಥವಾ ಹೂಳು ತೆಗೆಸಿ ಅಚ್ಚು ಕಟ್ಟಾಗಿ ಬರುವಂಥ ಕೆರೆಗಳ ಅರ್ಜಿಯನ್ನು ಇವರಿಗೆ ಸಲ್ಲಿಸಬೇಕೋ ಅಥವಾ ಮೀಡಿಯಂ ಮತ್ತು ಮೇಜರ್ ಇರಿಗೇಷನ್ ಮಂತ್ರಿಗಳಿಗೆ ಸಲ್ಲಿಸಬೇಕೋ ಇದರಲ್ಲಿ ಏನಾದರೂ ಕ್ಲೈಫಿಕೇಷನ್ ಆಗಿದೆಯೇ ಎಂದು ನನ್ನ ಪ್ರಶ್ನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಮಾನ್ಯ ಸಭಾಧ್ಯಕ್ಷರೇ ಮುಕ್ತವಾಗಿ ಕ್ಲೈಫಿಕೇಷನ್ ಆಗಿದೆ. ಸುಮಾರು ೫೦೦ ಎಕರೆಗೆ ಮೇಲ್ಪಟ್ಟು ಇರತಕ್ಕ ಕೆರೆಗಳು ನನಗೆ ಬರುತ್ತವೆ. ಮೀಡಿಯಂ ಇರೀಗೇಷನ್ ಸಂಬಂಧಪಟ್ಟ ಎರಡು ಮೂರು ಕೆರೆಗಳು ನಮ್ಮ ಮಾನ್ಯ ಮಲ್ಲಾರಿಹೌಡ ಪಾಟೀಲ್ ಅವರಿಗೆ ಬರುತ್ತವೆ. ಇನ್ನು ೧೩ ಮೀಡಿಯಂ ಇರಿಗೇಷನ್ ಕೆರೆಗಳು ನನಗೆ ಬರುತ್ತವೆ. ಬಹುತೇಕ ನಮ್ಮ ಆಫೀಸಿನಲ್ಲಿ ಇಂತಹ ಕೆರೆಗಳು ನಮಗೆ ಬರುತ್ತವೆ ಎಂದು ಬೋರ್ಡ್ ಹಾಕಿದ್ದೇವೆ. ಅವರು ನೋಡಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್:- ೪೦ ಸಾವಿರ ಕೆರೆಗಳಿವೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಮೀಡಿಯಂ ಎಷ್ಟು ? ಮೈನರ್ ಎಷ್ಟು? ಮತ್ತು ಮೇಜರ್ ಎಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಮೇಜರ್ ಇರಿಗೇಷನ್ ಕೆರೆಗಳ ಬಗ್ಗೆ ಇರಿಗೇಷನ್ ಮಂತ್ರಿಗಳು ಮಾತನಾಡುತ್ತಾರೆ. ಮೀಡಿಯಂ ಇರಿಗೇಷನ್ ಸಂಬಂಧಪಟ್ಟಂತೆ ೧೩

ಕೆರೆಗಳು ನನಗೆ ಬರುತ್ತವೆ. ಸುಮಾರು ನಾಲ್ಕುನೂರು ಚಿಲ್ಲರೆ ಕೆರೆಗಳು ಮೈನರ್ ಇರಿಗೇಷನ್‌ನಲ್ಲಿ ಬರುತ್ತವೆ. ಉಳಿಕೆ ಇರತಕ್ಕ ಕೆರೆಗಳು ಜಿಡ್.ಪಿ.ಗೆ ಹೋಗತಕ್ಕ ಕೆರೆಗಳು ಎಂದು ಹೇಳಬಯಸುತ್ತೇನೆ.

ಶ್ರೀ ಬಿ. ಶಿವರಾಮ್:- ೪೦ ಸಾವಿರ ಕೆರೆಗಳಿವೆ ಎಂಬ ಮಾತನ್ನು ಹೇಳಿದ್ದಾರೆ. ಬಹುಶಃ ಈ ವ್ಯವಸ್ಥೆಯಲ್ಲಿ ಕೆಲಸ ಮಾಡಿದರೆ ಇನ್ನೂ ೪೦-೫೦ ವರ್ಷವಾದರೂ ಇವುಗಳ ಕೆಲಸ ಮುಗಿಯುವುದಿಲ್ಲ. ಈ ಹೂಳು ತೆಗೆಯತಕ್ಕ ಕೆಲಸವನ್ನು ಹಿಂದೆ ಆ ಗ್ರಾಮದ ಜನತೆಯೇ ಮಾಡಿಕೊಂಡು ಹೋಗುತ್ತಿದ್ದರು. ಈ ಕೆರೆಗಳ ಮಣ್ಣನ್ನು ತೆಗೆದು ಅವರ ಭೂಮಿಗೆ ಹೊಡೆದುಕೊಳ್ಳುತ್ತಿದ್ದರು. ಆಯಾ ಗ್ರಾಮದ ರೈತರೇ ಕೆರಗಳ ಮಣ್ಣನ್ನು ತೆಗೆದು, ಅವರ ಭೂಮಿಗೆ ಹಾಕಿಕೊಳ್ಳತಕ್ಕ ಕೆಲಸ ಈಗ ಕಡಿಮೆಯಾಗಿದೆ. ಇದಕ್ಕೆ, ಅವರಿಗೆ ಏನಾದರೂ ಕಡಿಮೆ ದರದಲ್ಲಿ ಇನ್‌ಸೆಂಟೀವ್ ಕೊಟ್ಟು ಮಣ್ಣನ್ನು ತೆಗೆಯತಕ್ಕ ಕೆಲಸವನ್ನು ಮಾಡಿದರೆ, ಬಹಳ ಬೇಗ ಎಲ್ಲಾ ಕೆರೆಗಳ ಮಣ್ಣನ್ನು ತೆಗೆಯಬಹುದು. ಇದರ ಬಗ್ಗೆ ಸರ್ಕಾರದವರು ಏನಾದರೂ ಯೋಚನೆ ಮಾಡಿದ್ದಾರೆಯೇ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಸಭಾಧ್ಯಕ್ಷರೇ, ನಮ್ಮ ಶಿವರಾಮ್‌ರವರು ಬಹಳ ಒಳ್ಳೆಯ ಪ್ರಶ್ನೆ ಕೇಳಿದ್ದಾರೆ. ಆದರೆ, ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ನಾನು ರೈತನ ಮಗನಾದರೂ ಕೂಡ, ರೈತರ ಬಗ್ಗೆ ಒಂದು ಮಾತು ಹೇಳಿದರೆ ತಪ್ಪಾಗಲಾರದೆಂದು ಕಾಣುತ್ತದೆ. ಇವತ್ತು ಪಿ. ಡಬ್ಲ್ಯು.ಡಿ.ನವರು ತೂಬಿನಲ್ಲಿ ನೀರು ಬಿಟ್ಟರೆ, ಕೆರೆಯಲ್ಲಿ ನೀರು ಖಾಲಿಯಾಗುವವರೆಗೂ ಸುಮ್ಮನೇ ಇರುತ್ತಾರೆ. ಯಾರೂ ತೂಬನ್ನು ಮುಚ್ಚುವುದಕ್ಕೆ ಸಹಿತ ಹೋಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಇನ್‌ಸೆಂಟೀವ್ ಕೊಟ್ಟರೂ ಸಹಿತ ಈ ಕೆಲಸ ಸರಿಯಾಗಿ ಆಗುವುದಿಲ್ಲ. ರೈತರು, ತಮಗೆ ಬೇಕಾದರೆ ತೆಗೆದುಕೊಳ್ಳುತ್ತಾರೆ, ಬೇಡವಾದರೆ ಬಿಡುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ಇನ್‌ಸೆಂಟೀವ್ ಎಷ್ಟು ಎಂದು ಕೊಡುವುದು, ಯಾವ ಆಳತೆಯಲ್ಲಿ ಕೊಡುವುದು ಮತ್ತು ನಾವು ಇನ್‌ಸೆಂಟೀವ್ ಕೊಟ್ಟರೂ ಕೂಡ ಮಣ್ಣನ್ನು ತೆಗೆದುಕೊಂಡು ಹೋಗುವುದಿಲ್ಲ. ಒಂದು ನೂರು ಗಾಡಿ ತೆಗೆದುಕೊಂಡು ಹೋದರೆ, ಐದು ನೂರು ಗಾಡಿ ಎಂದು ಅಧಿಕಾರಿಗಳು ಬರೆಯುತ್ತಾರೆ. ಇದಕ್ಕೆ ಏನು ಮಾಡುತ್ತೀರಿ? ಆದುದರಿಂದ ಇದು ಆಗುವುದಿಲ್ಲ. ನಾವು ಬೌಂಡರಿ ಫಿಕ್ಸ್ ಮಾಡಿ, ಏನು ಹೆಚ್ಚಿಗೆ ಮಣ್ಣು ಬರುತ್ತದೆ, ಅದನ್ನು ಹಳ್ಳದಲ್ಲಿ ಬಿಟ್ಟು, ಗಿಡ ಮರಗಳನ್ನು ಬೆಳೆಸುವ ಕಾರ್ಯಕ್ರಮ ಹಾಕುತ್ತೇವೆ. ಅದು ಬಿಟ್ಟು, ಇನ್‌ಸೆಂಟೀವ್ ಕೊಡತಕ್ಕ ಕಾರ್ಯಕ್ರಮ ಸರಿಹೋಗುವುದಿಲ್ಲ, ಅದು ಬಹಳ ತಪ್ಪಾಗುತ್ತದೆ ಮತ್ತು ಅವ್ಯವಹಾರವಾಗುತ್ತದೆ ಎಂಬ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ:- ಸಭಾಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಸಂದರ್ಭದಲ್ಲಿ ಒಂದು ಅನುಮಾನವನ್ನು ವ್ಯಕ್ತ ಪಡಿಸಿದ್ದಾರೆ. ಹೂಳು ಎತ್ತತಕ್ಕ ಕಾರ್ಯಕ್ರಮ ಅನ್ ಎಕನಾಮಿಕಲ್ ಎಂಬ ಮಾತನ್ನು ಹೇಳಿದ್ದಾರೆ. ನಾವು ಹೂಳು ಎತ್ತಬೇಕು, ಮತ್ತು ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಸಾಕಷ್ಟು ಜಾಗ ಇಲ್ಲ ಎಂಬ ಅನುಮಾನ ವ್ಯಕ್ತಪಡಿಸಿದ್ದಾರೆ. ಆದರೆ ಅವರ ಉತ್ತರ ಸರಿಯಿಲ್ಲವೆಂದು ನನ್ನ ಅಭಿಪ್ರಾಯ. ಇದು ಅನ್ ಎಕನಾಮಿಕಲ್ ಎನ್ನುವ ಅಭಿಪ್ರಾಯ ಬಂದರೆ, ಯಾವ ರೀತಿ ಕೆಲಸ ಮಾಡುತ್ತೀರಿ, ತಾವು ಇಷ್ಟುಹೊತ್ತು ಹೇಳಿದ್ದು ಬರೀ ಯೋಚನೆ. ತಾವು ಇಟ್ಟಿರುವುದು ೫೦ ಲಕ್ಷ ದುಡ್ಡು, ನನ್ನ ಕ್ಷೇತ್ರ ಅಥವಾ ನನ್ನ ಜಿಲ್ಲೆ ಮಟ್ಟಿಗೆ ಹೇಳುವುದಾದರೆ,

ಆಗಬೇಕಾದ ಕೆಲಸಗಳಿಗೆ ಸುಮಾರು ೨ ಕೋಟಿ ಕೊಟ್ಟರೂ ಸಾಲದು. ನನಗೆ ಕೊಟ್ಟಿರುವುದು ಮೂರು ಲಕ್ಷ ರೂಪಾಯಿಗಳು. ನನ್ನ ಕ್ಷೇತ್ರಕ್ಕೆ ಆಗಬೇಕಾಗಿರುವ ಕೆರೆಗಳು ಸಾಕಷ್ಟು ಇವೆ. ಆದುದರಿಂದ ತಾವು ಈ ರೀತಿ ಹೇಳುವುದು ಕೈಬಿಟ್ಟು, ಮಾನ್ಯ ಶಿವರಾಮ್‌ರವರು ವ್ಯಕ್ತಪಡಿಸಿರುವ ಅಭಿಪ್ರಾಯದಲ್ಲೂ ದುರುಪಯೋಗವಾಗುತ್ತದೆ. ತಾವು ಏನು ಮಾಡುತ್ತಿದ್ದೀರಿ, ಅದಕ್ಕೆ ಹೆಚ್ಚು ಒತ್ತು ಕೊಟ್ಟು, ಆಗಬೇಕಾದ ಕೆಲಸಗಳಿಗೆ ಸಾಕಷ್ಟು ಹಣ ಬೇಕಾಗಿರುವುದರಿಂದ, ಈ ಹೂಳು ಎತ್ತುವ ಕೆಲಸಕ್ಕೆ ಹೆಚ್ಚು ಹಣ ಕೊಟ್ಟು ಕೆಲಸ ಮಾಡುವುದರ ಬಗ್ಗೆ ಏನಾದರೂ ಒಂದು ತೀರ್ಮಾನ ತೆಗೆದುಕೊಳ್ಳುತ್ತೀರಾ, ದಯಮಾಡಿ ತಿಳಿಸಬೇಕು.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಮಾನ್ಯ ಸದಸ್ಯರ ಅಭಿಪ್ರಾಯ ನೋಡಿದರೆ, ಈಗಿರತಕ್ಕ ಕೆರೆಗಳನ್ನು ಮುಚ್ಚುವುದಕ್ಕಿಂತ, ಹೊಸ ಕೆರೆಗಳನ್ನು ಮಾಡಿ ಎಂದು ಹೇಳುತ್ತಿದ್ದಾರೆ. ಬಹಳ ಜನ ಸದಸ್ಯರು ಇದನ್ನು ಒಪ್ಪುವುದಿಲ್ಲವೆಂದು ಕಾಣುತ್ತದೆ. ಇರತಕ್ಕ ಕೆರೆಗಳನ್ನು ಮುಚ್ಚಿ, ಹೊಸ ಕೆರೆಗಳನ್ನು ಮಾಡುವುದಕ್ಕೆ ಹೋದರೆ ಬಹಳ ಕಷ್ಟವಾಗುತ್ತದೆ. ಮತ್ತು ನಾವು ಹೂಳು ತೆಗೆಯದೇ ಹೋದರೆ ಮುಚ್ಚಿಹೋಗುತ್ತವೆ, ಅದು ಇದಕ್ಕೆ ಸಂಬಂಧವಿಲ್ಲ. ನಾವು ಇವುಗಳನ್ನು ಮುಚ್ಚುವುದು ಬೇಡ, ಅವೇ ಮುಚ್ಚಿಕೊಳ್ಳುತ್ತವೆ. ಇರತಕ್ಕ ಕೆರೆಗಳನ್ನು ಅನ್ ಎಕಾನಮಿಕಲ್ ಆದರೂ ಸಹಿತ ಈಗಿರತಕ್ಕಂಥ ಅಚ್ಚುಕಟ್ಟುದಾರರಿಗೆ ಅನುಕೂಲವಾಗುವ ರೀತಿಯಲ್ಲಿ ನಾವು ಆ ಕೆಲಸ ಮಾಡಬೇಕಾಗಿದೆ. ಮತ್ತು ಇವತ್ತು ಅಂತರ್ಜಲದ ಬಗ್ಗೆ, ನಿಮ್ಮ ಕಡೆ ಚೆನ್ನಾಗಿರಬಹುದು. ನಮ್ಮ ಕಡೆಯಂತೂ ಇನ್ನೂರು, ಇನ್ನೂರಐವತ್ತು ಅಡಿ ಆಳ ಹೋದರೂ ಸಹಿತಾ ನೀರು ಸಿಗುವುದಿಲ್ಲ. ಇನ್ನು ಸ್ವಲ್ಪ ದಿವಸ ಹೋದರೆ ಮುನ್ನೂರು, ಮುನ್ನೂರೈವತ್ತು ಅಡಿ ಹೋದರೂ ನೀರು ಸಿಗುವುದಿಲ್ಲ. ಇನ್ನು ಮುಂದೆ ನೀರಿನ ತಾಪತ್ರಯ ಅನುಭವಿಸಬೇಕಾಗುತ್ತದೆ. ಕೆರೆಗಳನ್ನು ಹೆಚ್ಚು ಹೆಚ್ಚು ಮಾಡಿ ನೀರನ್ನು ಇಟ್ಟುಕೊಳ್ಳದೇ ಹೋದರೆ ಖಂಡಿತವಾಗಿಯೂ ನಾವು ಕುಡಿಯುವ ನೀರಿಗೂ ಸಹಿತಾ ಕಷ್ಟಪಡಬೇಕಾದ ಪರಿಸ್ಥಿತಿ ಬರುತ್ತದೆ. ಹೊಸ ಕೆರೆಗಳನ್ನು ಸಹಿತಾ ನಾವು ಮಾಡುತ್ತಿದ್ದೇವೆ. ಈಗ ಸುಮಾರು ೨೦೪ ಕೆರೆಗಳನ್ನು ವರ್ಲ್ಡ್ ಬ್ಯಾಂಕ್ ಸಹಾಯದಿಂದ ತೆಗೆದುಕೊಂಡಿದ್ದೇವೆ. ೧೦೨ ಕೆರೆಗಳು ಈಗಾಗಲೇ ಮುಕ್ತಾಯ ಹಂತದಲ್ಲಿ ಇವೆ. ಇನ್ನು ೧೫೦ ಕೆರೆಗಳು ಪ್ರಾರಂಭಿಕ ಹಂತದಲ್ಲಿ ಇವೆ. ಆ ಕಾರಣಕ್ಕಾಗಿ ನಾವು ಹೊಸ ಕೆರೆಗಳನ್ನು ಬಿಟ್ಟಿದ್ದೇವೆ ಎಂದು ತಾವು ತಿಳಿದುಕೊಳ್ಳಬಾರದು. ಹೊಸ ಕೆರೆಗಳನ್ನೂ ಸಹಿತ ನಾವು ಮಾಡುತ್ತಿದ್ದೇವೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮಾಡುತ್ತಿದ್ದೇವೆ. ತಾವು ಹೇಳಿರತಕ್ಕಂಥ ಅಭಿಪ್ರಾಯ ಏನಿದೆ ಈ ಕೆರೆಗಳನ್ನು ಬಿಟ್ಟುಬಿಟ್ಟು ಬಹಳ ಅನ್‌ಎಕನಾಮಿಕಲ್ ಆಗುತ್ತದೆ ಎನ್ನತಕ್ಕಂಥ ವಿಚಾರ ಏನಿದೆ ಅಂದರೆ ಹೊಸ ಕೆರೆ ತೆಗೆದುಕೊಳ್ಳಬೇಕೆಂದು ಅನ್ನತಕ್ಕಂಥಾದ್ದು ಸಾಧುವಲ್ಲವೆನ್ನುವ ಮಾತನ್ನು ನಾನು ಹೇಳುತ್ತೇನೆ. ಆದರೂ ನೀವು ಎಲ್ಲಾ ಸದಸ್ಯರು ಈ ಹಳೆಯ ೪೬ ಸಾವಿರ ಕೆರೆಗಳ ಡಿಸಿಲ್ಟಿಂಗ್ ಮುಚ್ಚಿಬಿಡಿ ಬೇಡವೇ ಬೇಡ ಅಂದರೂ ಸಹಿತ, ಸರ್ಕಾರ ಆ ರೀತಿಯಾಗಿ ನಿರ್ಣಯ ತೆಗೆದುಕೊಂಡರೆ ನಾವು ಹಾಗೆ ಮಾಡುವುದಕ್ಕೆ ತಯಾರಿದ್ದೇವೆ.

ಶ್ರೀ ಆರ್. ನಾರಾಯಣ:- ಸಭಾಧ್ಯಕ್ಷರೇ, ಈ ಸಮಸ್ಯೆಯು ಬಹಳ ಗಹನವಾದುದೆಂದು ತಾವು ಅರಿತು ಬಹಳ ಉಪ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ಸ್ವಾಗತ ಮಾಡಿ, ಈಗ ನಾನು ಶಾಸಕನಾಗಿ ಎರಡು ವರ್ಷಗಳ ಅನುಭವದಲ್ಲಿ ಹೇಳುವುದಾದರೆ, ಈಗ ಕೆರೆಗಳಂತೂ ಹೆಚ್ಚು ಕಡಿಮೆ ಎಲ್ಲಾ ಹೂಳು ತುಂಬಿಹೋಗಿದೆ. ಹೂಳು ಎತ್ತತಕ್ಕಂಥ

ಕಾರ್ಯಕ್ರಮವಂತೂ ಐಡಿಯಲ್ ಆಗಿ ಅಥವಾ ಪ್ರಾಯೋಗಿಕವಾಗಿ ತೆಗೆದುಕೊಂಡರೆ ಏನೂ ಆಗುವುದಿಲ್ಲವೆಂದು ತಮಗೂ ಗೊತ್ತಿದೆ. ಈಗಿರತಕ್ಕಂಥ ನೂರಕ್ಕೆ ೯೦ ರಷ್ಟು ಕೆರೆಗಳು ಮೈನರ್ ಇರಿಗೇಷನ್ ವ್ಯಾಪ್ತಿಯಲ್ಲಿ ಬರಬಹುದು ಅಥವಾ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರತಕ್ಕಂಥಾದ್ದು ಇರಬಹುದು. ಒಟ್ಟಿನಲ್ಲಿ ನೀರಾವರಿಗೋಸ್ಕರ ಮೀಡಿಯಂ, ಮೇಜರ್ ಬಿಟ್ಟು ಸಣ್ಣ ನೀರಾವರಿ ಮತ್ತು ಐನೂರು ಎಕರೆ ಒಳಗೆ ಅಚ್ಚುಕಟ್ಟು ಇರತಕ್ಕಂಥ ಈ ಕೆರೆಗಳ ದುರಸ್ತಿ ರೆಸ್ಟೋರೇಷನ್ ಎಂದು ಏನು ಹೇಳುತ್ತಾರೆ ಮತ್ತು ಹೂಳು ಎತ್ತುವ ಕಾರ್ಯಕ್ರಮ ನಿಜವಾಗಿ ಏನೇನೂ ಮಾಡುವುದಕ್ಕಾಗಲಿಲ್ಲವೆಂದು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಮಾನ್ಯ ಮಂತ್ರಿಗಳು ಹೇಳುತ್ತಿದ್ದರು ನಾವು ಹೊಸ ಕೆರೆಗಳನ್ನು ಮಾಡುತ್ತಿದ್ದೇವೆಂದು ಹೇಳಿ, ತಮ್ಮ ಗಮನಕ್ಕೆ ತರುವುದಾದರೆ ತುಮಕೂರಿನ ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ೮೫ ಕೆರೆಗಳು ಅಂದರೆ ಐನೂರು ಎಕರೆ ಅಚ್ಚುಕಟ್ಟು ಒಳಗೆ ಇರತಕ್ಕಂಥ ಕೆರೆಗಳಲ್ಲಿ ಅವರು ಕೆಲಸವನ್ನು ಕೈಗೆತ್ತಿಕೊಂಡಿದ್ದಾರೆ. ಅದು ವಿವಿಧ ಹಂತದಲ್ಲಿ ಇದೆ. ಇವತ್ತಿನ ೧೯೯೧-೯೨ ಎಸ್ಟಿಮೇಟ್ ಪ್ರಕಾರ ೭ ಕೋಟಿ ರೂಪಾಯಿಯಾದರೆ ಅಲ್ಲಿ ಕೊಡುತ್ತಿರುವುದು ಕೇವಲ ೬೦ ಲಕ್ಷ ಮಾತ್ರ. ಅಂದರೆ ಬೇಡಿಕೆಯ ೧೦ ಪರ್‌ಸೆಂಟ್‌ನಷ್ಟು ಹೊಸ ಕೆರೆಗಳಿಗೆ, ೫ ನೂರು ಅಚ್ಚುಕಟ್ಟು ಇರತಕ್ಕಂಥಾದ್ದಕ್ಕೆ ಹಣವನ್ನು ಕೊಡುವುದಕ್ಕೆ ಆಗುವಂಥ ಪರಿಸ್ಥಿತಿಯಲ್ಲಿ ಇವತ್ತು ಜಿಲ್ಲಾ ಪರಿಷತ್ತಿನವರು ಇಲ್ಲ. ಸರ್ಕಾರವೂ ಇಲ್ಲ. ಬರೀ ಮಾತಿನಲ್ಲಿ ಕಾಲ ಕಳೆಯುತ್ತಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ. ನೀರಾವರಿ ಉತ್ತಮವಾಗಿ ಆಗಬೇಕಾದರೆ ಇರತಕ್ಕಂಥ ಕೆರೆಗಳನ್ನು ಮುಚ್ಚಬಾರದು. ಇದು ಎಕನಾಮಿಕಲ್ಲೋ ಅನ್ ಎಕನಾಮಿಕಲ್ಲೋ, ಹೂಳು ಎತ್ತಲೇಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಸಂಬಂಧಪಟ್ಟ ಮಿನಿಸ್ಟರ್ ಹೇಳಿದ್ದಾರೆ. Commitment on the part of the concerned is very essential and it is mostly required. ನೀವು ಹೂಳು ಎತ್ತಲೇಬೇಕಾಗುತ್ತದೆ. Viable or non-viable, ಪ್ರಶ್ನೆ ಇರತಕ್ಕಂಥಾದ್ದಲ್ಲ. ಒಟ್ಟಿನಲ್ಲಿ ನೀರಾವರಿಗೆ, ನಮ್ಮ ರಾಜ್ಯದಲ್ಲಿ ಕೊಡಬೇಕಾದ ಗಮನವನ್ನು ಸರ್ಕಾರ ಕೊಟ್ಟಿಲ್ಲ. ಇದು ಬಹಳ ದುಃಖದಿಂದ ಹೇಳತಕ್ಕಂಥ ಮಾತು. ಎಷ್ಟೋ ಕೆರೆಗಳಿಗೆ ಚಾನಲ್ ಮಾಡುವುದಕ್ಕೆ ದುಡ್ಡು ಇಲ್ಲ. ರೆಸ್ಟೋರೇಷನ್ ಅಂತೂ ಏನೇನೂ ಮಾಡಿಲ್ಲ ಇವರು. ಇನ್ನು ಹೂಳು ಎತ್ತತಕ್ಕಂತ ಮಾತು ಕನಸಿನ ಮಾತಾಗಿದೆ. ಸುಮ್ಮನೆ ಹೇಳಬೇಕು, ಅದಕ್ಕಾಗಿ ನಾವು ಹೇಳಬೇಕು. ನಮ್ಮಲ್ಲಿ ಏನಾಗಿದೆ? ಕೆಲವು ಯೋಜನೆಗಳನ್ನು ನೋಡುವುದಕ್ಕೆ ಕೇಳುವುದಕ್ಕೆ ಆ ವರ್ಡಿಂಗ್ಸ್ ನೋಡಿದರೆ ಏನೋ ಆಗಿಹೋಯಿತು ಅನ್ನ ತಕ್ಕಂಥಾದ್ದು. ನಾವೆಲ್ಲರೂ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕವರೇ. ಕೇವಲ ೨೦-೩೦ ಜನ ಎಂ. ಎಲ್. ಎ. ಗಳನ್ನು ಬಿಟ್ಟರೆ ಎಲ್ಲರೂ ಗ್ರಾಮಂತರ ಪ್ರದೇಶಗಳಿಂದಲೇ ಬಂದಿರತಕ್ಕವರು. ನಮಗಂತೂ ಬಹಳ ವ್ಯಸನವಾಗುತ್ತದೆ. ಯಾವ ಒಂದು ಪ್ರಮಾಣದಲ್ಲಿ ಸರ್ಕಾರ ಈ ವಿಷಯಕ್ಕೆ ಗಮನ ಕೊಡಬೇಕಾಗಿತ್ತೋ ನಿಜವಾಗಲೂ ಅಷ್ಟು ಗಮನವನ್ನು ಕೊಟ್ಟಿಲ್ಲ. ಇದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ನೀರಾವರಿಗೆ ಕೊಡತಕ್ಕಂಥಾದರಲ್ಲಿ ಸರ್ಕಾರ ಬಹಳಷ್ಟು ಹಿಂದೆ ಉಳಿದಿದೆ. ಬೇಡಿಕೆಯ ೫ ಪರ್‌ಸೆಂಟ್‌ನಷ್ಟು ಸಹ ವ್ಯವಸ್ಥೆ ಮಾಡಲಿಕ್ಕೆ ಆಗಲಿಲ್ಲವೆಂದು ನಾನು ನೊಂದ ಮನಸ್ಸಿನಿಂದ ಹೇಳುತ್ತೇನೆ. ಈ ಹೂಳು ಎತ್ತತಕ್ಕಂಥ ಕಾರ್ಯಕ್ರಮವನ್ನು ಬೃಹತ್ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇದು ಕೇವಲ ೫೦ ಲಕ್ಷ ಅನ್ನತಕ್ಕಂಥಾದ್ದು ನಮ್ಮ ಬೇಡಿಕೆಯ ೫ ಪರ್‌ಸೆಂಟ್‌ನಷ್ಟೂ ಆಗಲಿಲ್ಲ, ೨ ಪರ್ಸೆಂಟ್‌ನಷ್ಟೂ ಆಗುವುದಿಲ್ಲ. ಇದರ ಬಗ್ಗೆ ಕೂಲಂಕಷವಾಗಿ

ನೋಡಿ ರಾಜ್ಯದಲ್ಲಿರತಕ್ಕಂಥ ಎಲ್ಲಾ ಕೆರೆಗಳ ಹೂಳು ಎತ್ತುವುದಕ್ಕೆ ಎಷ್ಟು ಹಣ ಬೇಕೆಂದು ಅಂದಾಜು ಮಾಡಿ ಇದನ್ನು ಮಾಡಬೇಕು. ಬಹುಶಃ ಇದಕ್ಕೆ ನೂರಾರು ಕೋಟಿ ರೂಪಾಯಿ ಬೇಕೆಂದು ನನ್ನ ಒಂದು ಅನಿಸಿಕೆ. ಇದರ ಬಗ್ಗೆ ಒಂದು ಸಮಗ್ರವಾದ ಕಾರ್ಯಕ್ರಮವನ್ನು ರೂಪಿಸಿ ಇದನ್ನು ಎಲ್ಲರಿಗೂ ಸಮಾಧಾನವಾಗುವಂಥ ರೀತಿಯಲ್ಲಿ ಮತ್ತು ನೀರಾವರಿಗೆ ಅತಿ ಹೆಚ್ಚಿನ ಹಣವನ್ನು ತಾವು ವಿನಿಯೋಗ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಸನ್ಮಾನ್ಯ ಸಭಾಧ್ಯಕ್ಷರೇ, ಒಂದು ಮಾತು ಹೇಳಿದರೆ ತಪ್ಪಾಗಲಾರದೆಂದು ಅನಿಸುತ್ತದೆ. ನಮ್ಮ ಸಣ್ಣ ನೀರಾವರಿಗೆ ಕೊಟ್ಟ ಹಣ ೧೭ ಕೋಟಿ ರೂಪಾಯಿಗಳು ಮಾತ್ರ. ಅದರಲ್ಲಿ ಸುಮಾರು ೬-೭ ಕೋಟಿ ರೂಪಾಯಿಗಳು ಸಂಬಳಕ್ಕೇ ಹೋಗಿದೆ. ಈ ವರ್ಷ ಪ್ರಯತ್ನಮಾಡಿ ೪೦ ಕೋಟಿ ರೂಪಾಯಿಗಳಿಗೆ ತಂದಿದ್ದೇನೆ. ಹೂಳು ಎತ್ತತಕ್ಕಂಥ ಕಾರ್ಯದಲ್ಲಿ ನಿಮಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂಥ ಹೆಚ್ಚು ಕಳಕಳಿ ಇರತಕ್ಕಂಥ ವ್ಯಕ್ತಿ ನಾನು.

ಶ್ರೀ ಆರ್. ನಾರಾಯಣ:- ಕಳಕಳಿ ಇದೆ, ಸರ್ಕಾರ ಗಮನಹರಿಸುತ್ತದೆ, ಇದೆಲ್ಲಾ ಮಾಮೂಲಾಗಿ ಕೇಳಿ ಕೇಳಿ ಸಾಕಾಗಿಬಿಟ್ಟಿದೆ. ಒಳ್ಳೆಯ ಕಾರ್ಯಕ್ರಮ ರೂಪಿಸಿ ದುಡ್ಡು ತಂದು ಕೆಲಸ ಮಾಡಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು:- ಇದು ಸಾಕಷ್ಟು ಚರ್ಚೆಯಾಗಿದೆ. ಮತ್ತೆ ಹನುಮೇಗೌಡರನ್ನು ಈ ಕುರಿತು ಚರ್ಚೆಗೆ ಕರೆಯುವುದಿಲ್ಲ. ಯಾಕೆಂದರೆ ಮಾನ್ಯ ಸಚಿವರಿಗೆ ಹುಷಾರಿಲ್ಲ.

(ನಗು)

ಶ್ರೀ ಕೆ. ಹೆಚ್. ಹನುಮೇಗೌಡ:- ಕೆರೆಗಳಲ್ಲಿನ ಹೂಳು ಎತ್ತುವಂಥ ಕಾರ್ಯವನ್ನು ಮಾಡಿಕೊಂಡು ಬಂದಿದ್ದರೆ ಕುಡಿಯುವ ನೀರಿನ ಸಮಸ್ಯೆ ಇರುತ್ತಿರಲಿಲ್ಲ. ನೀವುಗಳು ಇರತಕ್ಕಂಥ ಕೆರೆಗಳನ್ನು ಕೂಡ ಮುಚ್ಚುವ ಕೆಲಸವನ್ನು ಮಾಡಿದ್ದೀರೇ ಹೊರತು ಹೂಳು ಎತ್ತುವ ಕೆಲಸವನ್ನು ಮಾಡಿಲ್ಲ. ಪ್ರತಿ ವರ್ಷವೂ ಇಷ್ಟು ಇಷ್ಟು ಕೆರೆಗಳು ಎಂದು ನಿಗದಿ ಮಾಡಿಕೊಂಡು ಹೂಳು ಎತ್ತಿಸುವ ಕೆಲಸವನ್ನು ಮಾಡಿಕೊಂಡು ಬಂದಿದ್ದರೆ ಈ ಸಮಸ್ಯೆಯು ಇರುತ್ತಿರಲಿಲ್ಲ. ಆ ಕೆರೆಗಳ ಹಿಂದುಗಡೆ ವ್ಯಾಲಿನಲ್ಲಿ ಎಂತೆಂಥ ತೋಟಗಳು ಇದ್ದುವು? ಬಾಳೆ, ಅಡಿಕೆ, ತೆಂಗಿನ ತೋಟಗಳು ಎಷ್ಟು ಸೊಗಸಾಗಿ ಬೆಳೆದು ಕೊಂಡು ಬಂದಿತ್ತು ಆದರೆ ಈಗ ಕೆರೆಗಳು ಒಣಗಿ ಹೋಗಿ ತೋಟಗಳೂ ಹೋದುವು. ಭೂಮಿಯ ಒಳಗಡೆ ಜಲ ಹೋಗುವುದಿಲ್ಲ, ಇದ್ದ ಮರಗಿಡಗಳು ಎಲ್ಲವೂ ಹೋದುವು, ಮೊದಲು ೨೦-೩೦ ಅಡಿಗಳಿಗೆ ಭಾವಿಗಳಲ್ಲಿ ನೀರು ಬರುತ್ತಿದ್ದುದು ಈಗ ೨೦೦-೩೦೦ ಅಡಿಗಳ ಆಳಕ್ಕೆ ಹೋಗಿದೆ. ಭೂಗರ್ಭದ ಜನ ಹಾಳಾಗಿ ಹೋಗಿರುವುದು ಅಲ್ಲದೇ ಹೂಳು ಎತ್ತದೇ ಇರುವ ಕಾರಣದಿಂದ ಜಲಮಟ್ಟವು ಕುಸಿದಿದೆ. ಈಗ ಹೂಳು ಎತ್ತುವ ಕಾರ್ಯಕ್ಕೆ ಹಣ ಇಲ್ಲ ಎಂದು ಹೇಳುತ್ತೀರಿ. ಹೀಗೆ ರೈತರ ಪ್ರಶ್ನೆ ಬಂದರೆ ಮಾತ್ರ ಇಕಾನಮಿ ಮೆಜರ್; ಹಣ ಇಲ್ಲ ಎಂದು ಹೇಳುತ್ತೀರಿ. ಹೀಗೆ ರೈತರ ಪ್ರಶ್ನೆ ಬಂದರೆ ಮಾತ್ರ ಎಕಾನಮಿ ಮೆಜರ್, ಹಣ ಇಲ್ಲ ಎಂದು ಹೇಳುತ್ತಾ

ಇರುತ್ತೀರಿ. ರೈತರು ಬೆಳೆದರೆ ಮಾತ್ರ ನಮಗೆಲ್ಲರಿಗೂ ಅನ್ನ. ಇದರಿಂದ ರಾಜ್ಯ ಮತ್ತು ದೇಶಗಳಿಗೆ ಒಳ್ಳೆಯದಾಗುತ್ತವೆ ಎಂಬುದನ್ನು ನಾವು ಮರೆಯುವಂತಿಲ್ಲ. ಹಾಗಾದರೆ ನೀವು ಬೇರೆ ಬೇರೆ ಕಾರ್ಯಗಳಿಗಾಗಿ ದುಡ್ಡು ಕೊಡುತ್ತಾ ಇಲ್ಲವೇ? ರೈತರ ವಿಚಾರ ಬಂದರೆ ಮಾತ್ರ ಈ ಸಬೂಬನ್ನು ಹೇಳುತ್ತೀರಿ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ:- ನಾವು ಈಗ ಈ ಕೆಲಸವನ್ನು ಯಾವ ಅಧಿಕಾರಿ ಅಪೋಸ್ ಮಾಡಿದರೂ ಕೂಡ ಮಾಡಿಯೇ ತೀರುತ್ತೇವೆ ಎಂಬುದನ್ನು ಹೇಳಿದ್ದೇನೆ.

ಅಧ್ಯಕ್ಷರು:- ಮಾನ್ಯ ಹನುಮೇಗೌಡರು ಸಚಿವರು ಉತ್ತರ ಕೊಟ್ಟ ಸಮಯದಲ್ಲಿ ಸದನದಲ್ಲಿ ಇರಲಿಲ್ಲ. ಸಚಿವರು ಇದು ಅನ್ ಇಕಾನಮಿಕಲ್ ಎಂದು ಹೇಳಿದ್ದರೂ ಕೂಡ ನಾವು ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಶಕ್ತಿ ಇಲ್ಲದ ಕಾರಣ ಆ ದೃಷ್ಟಿಯಿಂದ ಈ ಕೆರೆಗಳ ಜೀರ್ಣೋದ್ಧಾರ ಮಾಡತಕ್ಕಂಥಾದ್ದು ಸರಕಾರದ ನೀತಿಯಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಜೊತೆಗೆ ಇರಿಗೇಶನ್, ಪಿ. ಡಬ್ಲ್ಯು. ಡಿ. ಡಿಮಾಂಡ್ಸ್ ಬರುತ್ತಾ ಇದೆ, ಆಗ ಪುನಃ ತಾವು ಮಾತನಾಡಬಹುದು.

ತುಮಕೂರು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಂಜೂರಾದ ಅಂದಾಜು ವೆಚ್ಚ.

೩೬೯ (೨೦೫೬) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ೧೯೯೦-೯೧, ೧೯೯೧-೯೨ನೇ ಸಾಲಿನಲ್ಲಿ ಮಧುಗಿರಿ ಜಿಲ್ಲಾ ಪರಿಷತ್‌ನ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಿಗೆ ಮಂಜೂರಾದ ಅಂದಾಜು ವೆಚ್ಚ ಎಷ್ಟು?

ಆ) ಆ ಪೈಕಿ ತೆಗೆದುಕೊಂಡ ಕೆಲಸಗಳೆಷ್ಟು?

ಇ) ಈಗಾಗಲೇ ಕಾಮಗಾರಿಯು ಪೂರ್ಣಗೊಂಡ ಕೆಲಸಗಳ ಮೇಲೆ ಪುನಃ ಯೋಜನೇತರ ಯೋಜನೆಗಳಲ್ಲಿ ಹಣ ನೀಡಿ ದುರುಪಯೋಗ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಹಣ ದುರುಪಯೋಗಕ್ಕೆ ಕಾರಣರಾದ ಅಧಿಕಾರಿಗಳು ಹಾಗೂ ಅವರ ಮೇಲೆ ಕೈಗೊಂಡ ಕ್ರಮಗಳೇನು? ಪ್ರತ್ಯೇಕ ವಿವರಗಳನ್ನು ನೀಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ೧೯೯೦-೯೧ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಮಂಜೂರಾದ ಅಂದಾಜು ಮೊತ್ತ ೬೭೪.೩೪ ಲಕ್ಷಗಳು, ೧೯೯೧-೯೨ನೇ ಸಾಲಿಗೆ ವಿವಿಧ ಯೋಜನೆಗಳಿಗೆ ಮಂಜೂರಾದ ಅಂದಾಜು ಮೊತ್ತ ೭೩೧.೭೪ ಲಕ್ಷಗಳು.

ಆ) ೧೯೯೦-೯೧ನೇ ಸಾಲಿನಲ್ಲಿ ತೆಗೆದುಕೊಂಡ ಕೆಲಸಗಳ ಸಂಖ್ಯೆ ೨೫೧. ೧೯೯೧-೯೨ನೇ ಸಾಲಿನಲ್ಲಿ ತೆಗೆದುಕೊಂಡ ಕೆಲಸಗಳ ಸಂಖ್ಯೆ ೨೪೭.

ಇ) ಅಂತಹ ಪ್ರಕರಣಗಳಾವುವು ಗಮನಕ್ಕೆ ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ:- ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಏನೋ ಕೊಟ್ಟಿದ್ದಾರೆ. ಆದರೆ ನಾನು ಕೇಳ ಬಯಸುವುದೇನೆಂದರೆ, ೧೯೯೦-೯೧ರಲ್ಲಿ ೮೭೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ೧೯೯೧-೯೨ರಲ್ಲಿ ೭೩೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ, ಹೀಗೆ ಖರ್ಚುಮಾಡಿರತಕ್ಕಂಥದ್ದರಲ್ಲಿ, ಯೋಜನೆಯಡಿಯಲ್ಲಿ ಬರತಕ್ಕಂಥಾದ್ದು ಎಷ್ಟು ಹಾಗೂ ಯೋಜನೇತರಗಳಿಗೆ ಖರ್ಚು ಮಾಡಿರತಕ್ಕಂಥಾದ್ದು ಎಷ್ಟು? ತಾವುಗಳು ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ ಇದು ಮಧುಗಿರಿ ತಾಲ್ಲೂಕಿಗೆ ಅಥವಾ ಜಿಲ್ಲಾಪರಿಷತ್ ವ್ಯಾಪ್ತಿಗೆ ಬರತಕ್ಕಂಥ ಎಲ್ಲಾ ತಾಲ್ಲೂಕುಗಳಿಗೇ ಎಂಬುದನ್ನು ದಯಮಾಡಿ ತಿಳಿಸಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಧುಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ ಏನು ಜಿಲ್ಲಾಪರಿಷತ್ ಬರುತ್ತಾ ಇದೆ, ಅದೆಲ್ಲದಕ್ಕೂ ಇದು ಸಂಬಂಧಪಟ್ಟದ್ದು ಆಗಿದೆ. ಮಧುಗಿರಿ, ಶಿರಾ, ಪಾವಗಡ, ಚಿಕ್ಕನಾಯಕನ ಹಳ್ಳಿ, ಕೊರಟಗೆರೆಗಳಿಗೆ ಸಂಬಂಧಪಟ್ಟಿದ್ದುದು. ಮಾನ್ಯ ಸದಸ್ಯರು ಯೋಜನೆ ಮತ್ತು ಯೋಜನೇತರ ವಿಚಾರಗಳಿಗೆ ಖರ್ಚು ಮಾಡಿದ್ದನ್ನು ಹೇಳಿದ್ದಾರೆ. ಅದು ೧೯೯೦-೯೧ರಲ್ಲಿ ೨೩೧ ಲಕ್ಷ ೪೨ ಸಾವಿರ ರೂಪಾಯಿಗಳು, ಅನುದಾನ ನೀಡಿರುವುದು ಇದರೊಳಗೆ ಖರ್ಚು ಮಾಡಿರುವುದು ಸುಮಾರು ೨೫೪ ಲಕ್ಷಗಳು. ಅದೇ ರೀತಿಯಾಗಿ ೧೯೯೧-೯೨ರಲ್ಲಿ ೩೩೦ ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಆದರೆ ಅದರಲ್ಲಿ ಫೆಬ್ರವರಿ ತಿಂಗಳವರೆಗೆ ೧೭೭ ಲಕ್ಷಗಳು ಖರ್ಚಾಗಿದೆ ಮತ್ತು ಆ ತಾಲ್ಲೂಕಿಗೆ ಈಗಾಗಲೇ ಹೇಳಿದ ಹಾಗೆ ೮೭೪ ಮತು ೭೩೪ ಲಕ್ಷ ರೂಪಾಯಿಗಳನ್ನು ೧೯೯೧-೯೨ನೇ ಸಾಲಿಗೆ ಇಡಲಾಗಿದೆ.

ಶ್ರೀ ಟಿ. ಬಿ. ಜಯಚಂದ್ರ:- ನನ್ನ ಆತಂಕ ಇಷ್ಟೇ, ಈ ಯೋಜನೆ ಮತ್ತು ಯೋಜನೇತರ ಕೆಲಸಗಳ ಅಡಿಯಲ್ಲಿ ಏನು ಹಣವನ್ನು ಕೊಡುತ್ತಾ ಇದ್ದಾರೆ ಅದು ಸಂಪೂರ್ಣವಾಗಿ ದುರುಪಯೋಗ ಆಗುತ್ತಾ ಇದೆ ಎಂಬ ಅಭಿಪ್ರಾಯ ಇದೆ. ಆದರೆ ಅಂಥ ಪ್ರಕರಗಳು ನಿಮ್ಮ ಗಮನಕ್ಕೆ ಬಂದಿಲ್ಲ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ನಿನ್ನೆಯ ದಿವಸ ನನ್ನ ಕ್ಷೇತ್ರದಲ್ಲಿ ಪ್ರವಾಸ ಮಾಡತಕ್ಕಂಥ ಸಂದರ್ಭದಲ್ಲಿ ಜಿಲ್ಲಾಪರಿಷತ್‌ನ ಆಡಳಿತ ಅಧಿಕಾರಿಗಳು, ಎಕ್ಸಿಕ್ಯೂಟೀವ್ ಇಂಜನೀಯರ್‌ರವರುಗಳನ್ನು ಕರೆದುಕೊಂಡು ಬಂದು ಇನ್‌ಸ್ಪೆಕ್ಷನ್ ಮಾಡುವಂಥ ಸಂದರ್ಭದಲ್ಲಿ ಅವರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಇವೊತ್ತು ಇರತಕ್ಕಂಥ ಎಲ್ಲಾ ಇಂಜನೀಯರ್‌ಗಳನ್ನು ಸಸ್ಪೆಂಡ್ ಮಾಡಿ ಕಳುಹಿಸಿಕೊಡಬೇಕೆನ್ನುವಷ್ಟು ಸಿಟ್ಟು ಬರುತ್ತದೆ. ಆದರೆ ನನಗೆ ಆ ಒಂದು ಅಧಿಕಾರ ಇಲ್ಲ ಎಂದು ಹೇಳಿದರು. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಾ ಇದ್ದೇನೆ ಅಂದರೆ ಈ ಯೋಜನೆಗಳಲ್ಲಿ ಯಾವ ಯೋಜನೆಗೆ ಎಷ್ಟು ಹಣ ಬಂತು, ಇತ್ಯಾದಿ ವಿವರಗಳು ಯಾರಿಗೂ ಗೊತ್ತಾಗುವುದಿಲ್ಲ. ಆ ಒಂದು ಮಟ್ಟಕ್ಕೆ ಇವೊತ್ತು ಖರ್ಚಾಗುತ್ತಾ ಇದೆ. ಮೂರು ನಾಲ್ಕು ವರ್ಷಗಳ ಹಿಂದೆ ಪ್ರಾರಂಭ ಮಾಡಿರತಕ್ಕಂಥ ಕೆಲಸಗಳಿಗೆ ಹಣ ಖರ್ಚಾಗುತ್ತಾ ಇದೆ. ಆದರೆ ಕೆಲಸಗಳು ಹಾಗೆಯೇ ಉಳಿದುಕೊಂಡಿವೆ. ಮಧುಗಿರಿ ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಆಗಬಾರದಂಥ ಅವ್ಯವಹಾರ ಆಗುತ್ತಾ ಇದೆ. ಯಾವುದೇ ಕೆಲಸಗಳು ಆಗುತ್ತಾ ಇಲ್ಲ. ಕೆಟ್ಟು ಹೋದಂಥ ಒಂದು ಕೊಳವೆ ಬಾವಿಯನ್ನು ಕೂಡ ರಿಪೇರಿ ಮಾಡಿಸುವುದಕ್ಕೆ ಆಗುತ್ತಾ ಇಲ್ಲ.

ಸಂಬಂಧಪಟ್ಟ ಆಡಳಿತ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಲು ನನಗೆ ಅಧಿಕಾರ ಇಲ್ಲ ಎಂದು ಹೇಳುವಾಗ ಅಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ ಎಂಬುದು ಸ್ಪಷ್ಟ. ಆಗಿರುವ ಕೆಲಸಕ್ಕೇ ನಾಲ್ಕೈದು ಬಾರಿ ಹಣವನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ದಯಮಾಡಿ ಈ ಬಗ್ಗೆ ಸಮಗ್ರವಾಗಿ ವಿಚಾರಣೆ ಮಾಡಬೇಕು. ಆಡಳಿತಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವ ಕ್ರಮ ತೆಗೆದುಕೊಳ್ಳಬೇಕು. ಹೀಗೆ ಮಾಡದಿದ್ದರೆ ಸರಕಾರದವರು ಕೊಟ್ಟ ಹಣ ಸಂಪೂರ್ಣವಾಗಿ ದುರುಪಯೋಗವಾಗುತ್ತಿದೆ. ನಮ್ಮಲ್ಲಿ ಕುಡಿಯುವ ನೀರಿಗೆ ಭಾರಿ ಸಮಸ್ಯೆ ಇದೆ. ಬೋರ್‌ವೆಲ್‌ಗಳಲ್ಲಿಯೂ ನೀರು ಇಲ್ಲ. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮಗಳನ್ನು ಎಲ್ಲಾ ವಿಚಾರಗಳಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ತಾವುಗಳು ಹೇಳಿದ ಹಾಗೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸ್ಪೆಸಿಫಿಕ್ ಆಗಿ ಹೇಳಿದರೆ ಕ್ರಮ ತೆಗೆದುಕೊಂಡಿಲ್ಲವೆಂದರೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ತಾವುಗಳು ನಿರ್ದಿಷ್ಟವಾಗಿ ಹೀಗೇ ಎಂದು ಬರೆದುಕೊಟ್ಟರೆ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಡಿ. ಟಿ. ಜಯಚಂದ್ರ:- ನಿನ್ನೆಯ ದಿವಸ ನಾನು ಮತ್ತು ಆಡಳಿತಾಧಿಕಾರಿಗಳು ಇನ್ಸ್‌ಪೆಕ್ಷನ್‌ಗೆ ಹೋದಾಗ ಅಲ್ಲಿ ನಡೆದಂಥ ಅವ್ಯವಹಾರಗಳ ಬಗ್ಗೆ ಗೊತ್ತಾಯಿತು. ಈ ಪ್ರಶ್ನೆಗೆ ಪೂರಕವಾಗಿ ಅವರು ಇನ್‌ಸ್ಪೆಕ್ಷನ್ ಮಾಡಿದ್ದಾರೆ. ಅವರಿಗೆ ಮನದಟ್ಟಾಗಿದೆ. ಈಗ ತಾವುಗಳು ನೇರವಾಗಿ ಅವರನ್ನು ಕರೆಯಿಸಿ ಮಾತನಾಡಿ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಿರಿ. ಆದರೆ ಹಾಗೆಂದು ತಾವುಗಳು ಹೇಳುತ್ತಾ ಇಲ್ಲ. ಅದನ್ನು ಬಿಟ್ಟು ಅಧಿಕಾರಿಗಳು ಕಳುಹಿಸಿರತಕ್ಕಂಥ ಅಂಕಿಅಂಶಗಳ ಆಧಾರದ ಮೇಲೆ ಇಲ್ಲ ಎಂದು ಹೇಳಿದ್ದೀರಿ. ಆದರಿಂದ ನಮಗೆ ಸಮಾಧಾನವಾಗುವುದಿಲ್ಲ. ಆದ್ದರಿಂದ ಆಡಳಿತಾಧಿಕಾರಿಯನ್ನು ಕರೆಯಿಸಿ ಮಾತನಾಡಿ ಯಾರು ತಪ್ಪಿತಸ್ಥರು ಇದ್ದಾರೆ, ಅಂಥವರನ್ನು ಮನೆಗೆ ಕಳುಹಿಸುವ ವ್ಯವಸ್ಥೆ ಮಾಡಿ.

ಅಧ್ಯಕ್ಷರು:- ನೀವು ಸಚಿವರಿಗೆ ಬರೆದು ಕಳುಹಿಸಿಕೊಡಿ.

ಶ್ರೀ ಟಿ. ಬಿ. ಜಯಚಂದ್ರ:- ಆಯಿತು, ನಾನು ಬರೆದು ಕಳುಹಿಸಿಕೊಡುತ್ತೇನೆ. ಆದರೆ ಆಡಳಿತಾಧಿಕಾರಿಗಳಿಗೆ ನನಗಿಂತಲೂ ಹೆಚ್ಚಿಗೆ ಮಾಹಿತಿಯು ಗೊತ್ತಿದೆ.

ಅಧ್ಯಕ್ಷರು:- ಆದರೂ ಕೂಡ ರೆಕಾರ್ಡ್‌ಗೆ ಬೇಕು, ಆದ್ದರಿಂದ ತಾವು ಬರೆದು ಕಳುಹಿಸಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಸದಸ್ಯರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಜೊತೆಗೆ ಹೋಗಿ ಇನ್ಸ್‌ಪೆಕ್ಷನ್ ಮಾಡಿದ್ದಾರೆ. ಆದ್ದರಿಂದ ಏನಾದರೂ ಮಾಹಿತಿಗಳು ಇದ್ದರೆ ಕೊಡಲಿ, ಅದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಡಾ. ವೈ. ನಾಗಪ್ಪ:- ಸರ್ವೇ ಸಾಮಾನ್ಯವಾಗಿ ಜಿಲ್ಲಾ ಪರಿಷತ್‌ನ ಆಡಳಿತ ಬಂದಮೇಲೆ, ನಮ್ಮ ರಾಜ್ಯದ ಪರಿಸ್ಥಿತಿಯು ತುಂಬಾ ಕೆಟ್ಟು ಹೋಗಿದೆ. ಸರಕಾರ ಕೊಟ್ಟಿರತಕ್ಕಂಥ ಗ್ರ್ಯಾಂಟ್‌ನಲ್ಲಿ ೨೫ ಪರ್ಸೆಂಟ್‌ನಷ್ಟು ಕೂಡ ಖರ್ಚು ಮಾಡಿಲ್ಲ. ಇದನ್ನು ತಿಳಿಯಬೇಕಾದರೆ ಪ್ರತಿಯೊಂದು ಮಂಡಳ ಪಂಚಾಯಿತ್‌ನ ವ್ಯವಹಾರಗಳನ್ನು ಸಿ. ಓ. ಡಿ. ಗೆ ಹಾಕಬೇಕು ಆಗ ಗೊತ್ತಾಗುತ್ತದೆ. ಇದು ಒಂದು ತಾಲ್ಲೂಕಿನ ಪ್ರಶ್ನೆಯಲ್ಲ, ಇಡೀ ರಾಜ್ಯದ ಪ್ರಶ್ನೆಯಾಗಿದೆ. ಯಾವ ಮಂಡಳಗಳಲ್ಲಿಯೂ

ಕೆಲಸವಾಗಿಲ್ಲ. ಆದ್ದರಿಂದ ಈ ಬಗ್ಗೆ ಸರಕಾರದವರು ಗಮನಹರಿಸಿ ಇರುವ ತೊಂದರೆಗಳನ್ನು ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆಗಬಹುದು ಸ್ವಾಮಿ.

ಶ್ರೀ ಬಿ. ಶಿವರಾಮು:- ಮಾನ್ಯ ಅಧ್ಯಕ್ಷರೇ, ಕೆಲಸ ಆಗಿಲ್ಲ, ಅಧಿಕಾರಿಗಳು ತ್ವರಿತ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡುತ್ತಿಲ್ಲ ಎನ್ನತಕ್ಕಂಥ ಒಂದು ವಿಚಾರವನ್ನು ತಮ್ಮ ಮೂಲಕ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಹಾಸನದ ಸಬ್ ಡಿವಿಜನ್‌ಗಳು ಏನು ಇವೆ, ಅಲ್ಲಿಗೆ ಒಂದು ತಿಂಗಳಿಂದ ಸಿಮೆಂಟ್ ಬಂದಿಲ್ಲ. ಸರ್ಕಾರದವರು ಏನು ಹಣವನ್ನು ಒದಗಿಸಿದ್ದಾರೆ, ಬಹುಶಃ ಅದರಲ್ಲಿ ಈ ಒಂದು ತಿಂಗಳಿಂದ ಒಂದು ಸ್ವಲ್ಪ ಕೆಲಸವಾದರೂ ಆಗಿದೆಯೇ? ಬಿಲ್ಡಿಂಗ್, ವಾಟರ್ ಸಪ್ಲೈಸ್ ಕೆಲಸಗಳು ಪೂರ್ತಿ ಸ್ಥಗಿತಗೊಂಡಿವೆ. ಈ ವಿಚಾರದಲ್ಲಿ ನಾನು ಮುಖ್ಯ ಕಾರ್ಯದರ್ಶಿಯವರ ಹತ್ತಿರ ಕೂಡ ಮಾತನಾಡಿದ್ದೇನೆ. ಅವರು ನಾನು ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಡೈರೆಕ್ಷನ್ ಕೊಟ್ಟಿದ್ದೇನೆ ಎನ್ನತಕ್ಕಂಥ ಮಾತನ್ನು ಇಪ್ಪತ್ತು ದಿವಸಗಳಿಂದ ಹೇಳುತ್ತಿದ್ದರೂ ಬಹುಶಃ ಇಲ್ಲಿಯವರೆಗೂ ಒಂದು ಮೂಟೆ ಸಿಮೆಂಟನ್ನು ಕಳುಹಿಸಿಲ್ಲ. ಕೆಲಸವಾಗಿಲ್ಲ. ಇದಕ್ಕಿಂತ ನಿರ್ದಿಷ್ಟವಾದ ವಿಚಾರ ಬಹುಶಃ ಬೇಕಾಗಿಲ್ಲ ಎಂದು ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ವಿಚಾರಣೆಯನ್ನು ಮಾಡಿದರೆ ಆಗ ನಿಮಗೇ ಗೊತ್ತಾಗುತ್ತದೆ. ಇದರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಎಷ್ಟು ತೊಂದರೆಯಾಗುತ್ತಿದೆ. ಮಾರ್ಚ್ ಎಂಡ್‌ನಲ್ಲಿ ದುಡ್ಡು ಖರ್ಚಾಗಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಮುಂದಕ್ಕಾದರೂ ಈ ಅಮೌಂಟ್ ಈ ರೀತಿಯಾಗುವುದು ಬೇಡ ಅದಕ್ಕೆ ಟೈಮನ್ನು ಎಕ್ಸ್‌ಟೆಂಡ್ ಮಾಡಬೇಕು ಎಂದು ಹೇಳುತ್ತೇನೆ. ಸಿಮೆಂಟ್‌ನ ವ್ಯವಸ್ಥೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಮಾಡಲಿಕ್ಕೆ ಆಗದೇ ಹೋದರೆ, ಪೈಪನ್ನು ತರಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿದರೆ ಇನ್ನೇನು ಕೆಲಸವನ್ನು ಮಾಡುತ್ತಾರೆ? ಈಗ ಬೇಸಿಗೆ ಕಾಲ. ನೀರಿನ ವ್ಯವಸ್ಥೆ, ಮಿನಿ ವಾಟರ್ ಸಪ್ಲೈ, ಮೇಜರ್ ವಾಟರ್ ಸಪ್ಲೈ ಎಲ್ಲಾ ಕೆಲಸಗಳು ಕೂಡ ನಿಂತು ಹೋಗಿದೆ. ಬಿಲ್ಡಿಂಗ್ ವರ್ಕ್ಸ್ ಕೂಡ ನಿಂತು ಹೋಗಿದೆ. ಹಾಸ್ಪಿಟಲ್ ಕಟ್ಟಡಗಳು ಕೂಡ ಬಹಳಷ್ಟು ನಿಂತು ಹೋಗಿದೆ. ಒಂದು ತಿಂಗಳಿಂದ ಸಿಮೆಂಟ್‌ನ ವ್ಯವಸ್ಥೆಯನ್ನು ಮಾಡಿಲ್ಲ. ಇದಕ್ಕಿಂತ ನಿರ್ದಿಷ್ಟವಾದ ವಿಚಾರ ಬೇಕಾಗಿಲ್ಲ. ದಯಮಾಡಿ ಮಂತ್ರಿಗಳು ಇದರ ಬಗ್ಗೆ ವಿಚಾರಣೆಯನ್ನು ಮಾಡಿ ಹೇಳುತ್ತಾರೆಯೇ? ಅಧಿಕಾರಿಗಳಲ್ಲಿ ಎಷ್ಟು ನಿರ್ಲಕ್ಷ್ಯ ಇದೆ ಎಂದು ಅವರಿಗೆ ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಸದಸ್ಯರು ಹಾಸನದ ಬಗ್ಗೆ ಹೇಳಿದ್ದಾರೆ, ಅದನ್ನು ಎನ್‌ಕ್ವೈರಿ ಮಾಡಿಸುತ್ತೇನೆ. ಆದರೆ ಈ ಒಂದು ವಿಷಯದ ಬಗ್ಗೆ ತಮಗೆ ಗೊತ್ತಿದೆ. ಸೆಪ್ಟೆಂಬರ್, ಅಕ್ಟೋಬರ್‌ನಿಂದ ಕೆಲವೊಂದು ಇಲಾಖೆಗಳಿಗೆ ಹಣ ಬಿಡುಗಡೆ ಮಾಡಿಲ್ಲ. ಅದನ್ನು ಮೊನ್ನೆ ಫೆಬ್ರವರಿ ಮತ್ತು ಮಾರ್ಚ್‌ಯಲ್ಲಿ ಮೈನರ್ ಇರಿಗೇಷನ್ ಆಗಲಿ, ಸ್ಕೂಲ್ ಬಿಲ್ಡಿಂಗ್ ಆಗಲಿ, ರಸ್ತೆಗಾಗಲೀ ಸುಮಾರು ೩೦-೩೫ ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಮತ್ತು ಕುಡಿಯುವ ನೀರಿಗೂ ಹಣ ಬಿಡುಗಡೆಯಾಗಿರಲಿಲ್ಲ. ಅದಕ್ಕೂ ಕೂಡ ಸುಮಾರು ೧೦ ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಬಹುಶಃ ಸಿಮೆಂಟ್ ಕೊರತೆಯಿಂದ ಈ ಕೆಲಸ ನಡೆಯುತ್ತಿಲ್ಲ ಎಂದರೆ ಇದು ಆಗುವುದಿಲ್ಲ. ಇನ್ನು ಮೇಲೆ ಕೆಲಸ ನಡೆಯುತ್ತದೆ. ಆದರೆ ಈ ಮಾರ್ಚ್ ಒಳಗಾಗಿ ಎಲ್ಲಾ ಖರ್ಚುಮಾಡುವುದಕ್ಕೆ ಅವರಿಗೆ

ಆಗುವುದಿಲ್ಲ. ಅದಕ್ಕಾಗಿ ಈಗಾಗಲೇ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೂ ಕೂಡ ಕೇಳುತ್ತಿದ್ದೇನೆ, ಜೂನ್ ಎಂಡ್‌ವರೆಗೆ ಇರತಕ್ಕಂಥ ಹಣವನ್ನು ಖರ್ಚು ಮಾಡುವುದಕ್ಕೆ ಅವರಿಗೆ ಅವಕಾಶವನ್ನು ಮಾಡಿಕೊಡಬೇಕು ಎಂದು. ಬಹುಶಃ ಅವರು ಒಪ್ಪಬಹುದು. ಅವರು ಒಪ್ಪಿದರೆ ಹಣ ಲ್ಯಾಪ್ಸ್ ಆಗತಕ್ಕಂತ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಹೆಚ್. ಎಂ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ಕೇವಲ ೨೦ ಪರ್ಸೆಂಟ್ ಮಾತ್ರ ಬಿಡುಗಡೆಯಾಗಿದೆ. ಇನ್ನು ಹೆಚ್ಚಿನ ಕೆಲಸವಾಗ ಬೇಕಾಗಿರುವುದರಿಂದ ಇರತಕ್ಕಂಥ ಮೂರು ದಿನದಲ್ಲಿ ಜಿಲ್ಲಾ ಪರಿಷತ್ತಿಗೆ ಹಣ ಬಿಡುಗಡೆ ಮಾಡುತ್ತಾರೆಯೇ? ಎರಡನೆಯದು 'ಆಶ್ರಯ' ಯೋಜನೆಯಲ್ಲಿ ಇಷ್ಟು ದೊಡ್ಡ ಕಾರ್ಯಕ್ರಮವನ್ನು ಮಾಡುತ್ತಿದ್ದರೂ ಕೂಡ ಹುಡ್ಕೋ ಸ್ಕೀಮ್‌ನಿಂದ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯಿತಿಗಳು ಕಟ್ಟತಕ್ಕಂಥ ಮನೆಗಳು ಅರ್ಧಂಬರ್ಧವಾಗಿ ನಿಂತುಹೋಗಿವೆ. ಈ ಮನೆಗಳನ್ನು ಎರಡು ವರ್ಷಗಳಿಂದಲೂ ಕೂಡ ಕಟ್ಟಿಲ್ಲ. ಅದರ ಹೆಡ್‌ನಲ್ಲಿ ಹಣ ಬಿಡುಗಡೆಯಾಗಲೇಬೇಕು. ಇದರ ಬಗ್ಗೆ ನಾನು ಸಂಬಂಧಪಟ್ಟ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಹೌಸಿಂಗ್ ಮಿನಿಸ್ಟರ್‌ಗೆ ಬರುತ್ತದೆ. 'ಆಶ್ರಯ' ಯೋಜನೆ ಮತ್ತು ರೂರಲ್ ಹೌಸಿಂಗ್ ಸ್ಕೀಮ್ ಎಲ್ಲವೂ ಕೂಡ ಆರ್. ಡಿ. ಪಿ. ಆರ್.ನಿಂದ ಹೌಸಿಂಗ್ ಮಿನಿಸ್ಟರ್‌ಗೆ ಟ್ರಾನ್ಸ್‌ಫರ್ ಆಗಿದೆ. ಬಹುಶಃ ಇದನ್ನು ಅವರು ಮಾಡುತ್ತಾರೆ.

ಶ್ರೀ ಎನ್. ಜಿ. ನಾಯಕ್:- ನನ್ನ ಕ್ಷೇತ್ರದಲ್ಲಿ ಸುಮಾರು ಮೂರು ತಿಂಗಳಿಂದ ಜಿಲ್ಲಾ ಪರಿಷತ್ತಿನ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರನ್ನು ಕೇಳಿದರೆ ಅವರು ದುಡ್ಡು ಬಂದಿಲ್ಲ, ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಆದರಿಂದ ಎಲ್ಲಾ ಕೆಲಸ ಕೂಡ ಕುಂಠಿತವಾಗಿದೆ. ಏತಕ್ಕೋಸ್ಕರ ಹೀಗೆ ಆಗಿದೆ? ಈ ಸರ್ಕಾರ ಈ ವಿಷಯದಲ್ಲಿ ಏನಾದರೂ ಅತ್ತ ಕಡೆಗೆ ಗಮನವನ್ನು ಹರಿಸಿದೆಯೇ? ಅದೂ ಅಲ್ಲದೆ ನನ್ನ ಕ್ಷೇತ್ರ ಬಡ ಕ್ಷೇತ್ರ. ಹರಿಜನ ಗಿರಿಜನರು ಇರತಕ್ಕಂಥ ಕ್ಷೇತ್ರ. ಕ್ಷಾಮದ ದವಡೆಯಲ್ಲಿ ಇರತಕ್ಕಂಥ ಕ್ಷೇತ್ರ. ಅಂಥ ಕ್ಷೇತ್ರಕ್ಕೆ ಸರ್ಕಾರದವರು ಏನೂ ಗಮನವನ್ನು ಕೊಡುತ್ತಿಲ್ಲ. ಮಾನ್ಯ ಸಚಿವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಈಗಲಾದರೂ ಅವರು ಗಮನವನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಗಮನವನ್ನು ಕೊಡಬೇಕು ಎಂದು ಹೇಳಿದ್ದಾರೆ, ನಾನು ಗಮನವನ್ನು ಕೊಡುತ್ತೇನೆ.

ಶ್ರೀ ಮುನಿನರಸಿಂಹಯ್ಯ:- ಮಾನ್ಯ ಅಧ್ಯಕ್ಷರೇ, ಈಗ ಜಿಲ್ಲಾ ಪರಿಷತ್ ಇಂಜಿನಿಯರಿಂಗ್‌ನಿಂದ ೧೯೮೫ನೇ ಇಸವಿಯಲ್ಲಿ ತೆಗೆದುಕೊಂಡಂಥ ಕಾಮಗಾರಿಗಳು ಇನ್ನು ಅರ್ಧ ಭಾಗ ಕೂಡಾ ಪೂರ್ತಿಯಾಗದೆ ಹಾಗೆಯೇ ಇವೆ. ನನ್ನ ಕ್ಷೇತ್ರದಲ್ಲಿ ಮೂವತ್ತು ಬೆಡ್‌ಗಳ ಒಂದು ಆಸ್ಪತ್ರೆಯ ಕಾರ್ಯಕ್ಕೆ ೨೨ ಲಕ್ಷ ರೂಪಾಯಿಗಳು ಎಂದು ಒಂದು ಅಂದಾಜುವೆಚ್ಚವನ್ನು ತಯಾರು ಮಾಡಲಾಗಿತ್ತು. ಅದೇ ರೀತಿಯಾಗಿ ಅಲ್ಲಿ ಆ ಕೆಲಸವನ್ನು ಪ್ರಾರಂಭ ಮಾಡದೇ ಇದ್ದುದರಿಂದ ಎಸ್. ಆರ್. ರೇಟು ಜಾಸ್ತಿಯಾಗಿ ಮತ್ತೆ ನಲವತ್ತು ಲಕ್ಷ ರೂಪಾಯಿಗಳನ್ನು ಹೆಚ್ಚಿಗೆ ಕೊಡತಕ್ಕಂಥ ಒಂದು ಸಂಭವ ಇದೆ. ಯಾವುದೇ ಕೆಲಸ ಕಾರ್ಯಗಳನ್ನು ತೆಗೆದುಕೊಂಡರೂ ಕೂಡ ಆ ಅವಧಿಯಲ್ಲೇ ಮುಗಿಸುವುದಕ್ಕೆ ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಇಂಜಿನಿಯರುಗಳಿಗೆ ಮತ್ತು ಅಧಿಕಾರಿಗಳಿಗೆ ಆದೇಶವನ್ನು ಕೊಡಬೇಕು. ಅವುಗಳನ್ನು ಪೂರ್ತಿ ಮಾಡಿಸುವುದಕ್ಕೆ

ಪ್ರಯತ್ನವನ್ನು ಮಾಡಿಸಬೇಕು ಎಂದು ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಬರೆದುಕೊಟ್ಟರೆ ನಾನು ಸಂಬಂಧಪಟ್ಟವರಿಗೆ ಕಳುಹಿಸಿ ಅದನ್ನು ಮಾಡಿಕೊಡುತ್ತೇನೆ.

ಅಧ್ಯಕ್ಷರು:- ಮಾನ್ಯ ವಿಶ್ವನಾಥ್ ಅವರೇ, ನಿಮ್ಮ ಪ್ರಶ್ನೆಗೆ ಇನ್ನು ೧೫ ದಿವಸಗಳ ಕಾಲ ಮಂತ್ರಿಗಳು ಟೈಂ ಕೇಳಿದ್ದಾರೆ.

ಶ್ರೀ ಹೆಚ್. ವಿಶ್ವನಾಥ್:- ಇನ್ನೂ ೧೫ ದಿವಸದವರೆಗೆ ಅಸೆಂಬ್ಲಿ ಇರುತ್ತದೆಯೇ?

ಅಧ್ಯಕ್ಷರು:- ನಾನು ಸದನದ ಸಮಿತಿಯ ಸಭೆಯನ್ನು ಸೇರಿಸಿ ಇರತ್ತೋ ಅಥವಾ ಇಲ್ಲವೋ ಎಂಬುದನ್ನು ನಿಮಗೆ ತಿಳಿಸುತ್ತೇನೆ. ಏಕೆಂದರೆ ಎರಡನೇ ಸಾರಿ ಇದಕ್ಕೆ ಟೈಂ ತೆಗೆದುಕೊಳ್ಳುತ್ತಿರುವುದು. ಇದಕ್ಕೆ ಇಷ್ಟು ಟೈಂ ಏತಕ್ಕೆ ಬೇಕು?

ಶ್ರೀ ಎಸ್. ರಮೇಶ್:- ನಿನ್ನೆ ಉತ್ತರ ಬರಬೇಕಾಗಿತ್ತು. ಜಿಲ್ಲೆಯಿಂದ ವರದಿಗಳು ಬರಬೇಕಾಗಿದೆ. ಇವತ್ತು ಬರುತ್ತದೆ.

ಅಧ್ಯಕ್ಷರು:- ಇದನ್ನು ಮುಂದಿನ ವಾರಕ್ಕೆ ಹಾಕುತ್ತೇನೆ. ಉತ್ತರಗಳನ್ನು ಜಮಾಯಿಸಿ, ಇದು ಮಂಗಳವಾರ ಬರುತ್ತದೆ. ಪ್ರಶ್ನೋತ್ತರ ಸಮಯ ಇನ್ನೂ ಮುಗಿದಿಲ್ಲ. ಇನ್ನೂ ಟೈಂ ಇದೆ. ಆದ್ದರಿಂದ ಇನ್ನೊಂದು ಸಾರಿ ಬರದೇ ಇರುವ ಸದಸ್ಯರ ಹೆಸರುಗಳನ್ನು ಕರೆಯುತ್ತೇನೆ.

ಪ್ರತಿ ಜಿಲ್ಲೆಯಲ್ಲಿ ಕ್ರೀಡಾ ಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆ

೩೯೧ (೨೦೫೩) ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ):- ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕ್ರೀಡಾ ಶಾಲೆಗಳನ್ನು ಪ್ರಾರಂಭ ಮಾಡುವ ಆಲೋಚನೆ ಇದೆಯೇ?

ಆ) ಈ ಶಾಲೆಗಳನ್ನು ಪ್ರಾರಂಭಿಸುವುದರಿಂದ ಗ್ರಾಮಾಂತರ ಕ್ರೀಡಾ ಅಭ್ಯರ್ಥಿಗಳನ್ನು ತಯಾರಿಸಲು ಅನುಕೂಲವಾಗುವುದಿಲ್ಲವೇ?

ಇ) ಬೆಂಗಳೂರಿನಲ್ಲಿ ಕ್ರೀಡಾ ಹಾಸ್ಟೆಲ್ ಮಾದರಿಯಂತೆ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಪ್ರಾರಂಭ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಈ) ಹಾಗಿದ್ದಲ್ಲಿ, ಎಂದಿನಿಂದ ಈ ಕ್ರೀಡಾ ಹಾಸ್ಟೆಲ್‌ಗಳನ್ನು ಹಾಗೂ ಕ್ರೀಡಾ ಶಾಲೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಇಲ್ಲ.

ಆ) ರಾಜ್ಯದ ಕೊಡಗು ಜಿಲ್ಲೆಯಲ್ಲಿ ಒಂದು ಕ್ರೀಡಾ ಶಾಲೆ ನಡೆಸಲಾಗುತ್ತಿದೆ. ಅಲ್ಲಿ ಪ್ರವೇಶಕ್ಕಾಗಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತಿರುವುದರಿಂದ

ಗ್ರಾಮಾಂತರ ಕ್ರೀಡಾ ಅಭ್ಯರ್ಥಿಗಳೂ ಸಹ ಅನುಕೂಲವನ್ನು ಪಡೆಯುತ್ತಿದ್ದಾರೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಎಂ. ರೇವಣ್ಣ:- ರಾಜ್ಯದ ಪ್ರತಿಜಿಲ್ಲೆಯಲ್ಲಿ ಕ್ರೀಡಾ ಶಾಲೆಯನ್ನು ಪ್ರಾರಂಭ ಮಾಡಲು ಸಾಧ್ಯವೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳುತ್ತಾರೆ. ಕರ್ನಾಟಕ ರಾಜ್ಯದಲ್ಲಿ ಯುವಶಕ್ತಿಯನ್ನು ಸರಿಯಾಗಿ ಬೆಳೆಸಿಕೊಳ್ಳಬೇಕಾದರೆ ಎಲ್ಲಾ ಜಿಲ್ಲೆಯಲ್ಲಿಯೂ ಕ್ರೀಡಾ ಶಾಲೆಗಳನ್ನು ಪ್ರಾರಂಭಮಾಡುವುದು ಒಳ್ಳೆಯದು ಎಂದು ನನ್ನ ಅನಿಸಿಕೆ. ಕೊಡಗಿನಲ್ಲಿ ಮಾತ್ರ ಒಂದೇ ಒಂದು ಕ್ರೀಡಾ ಶಾಲೆ ಇದೆ. ಇದರ ಜೊತೆಗೆ ವಸತಿಯನ್ನು ಒಂದೇ ಕಡೆ ಮಾಡುವುದರಿಂದ ಕ್ರೀಡಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಕ್ರೀಡೆಯ ಅಭಿವೃದ್ಧಿಯೂ ಆಗುತ್ತದೆ. ಆದಕ್ಕೋಸ್ಕರ ಹಾಸ್ಟಲನ್ನು ಪ್ರತಿ ಜಿಲ್ಲೆಯಲ್ಲಿಯೂ ಮಾಡುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರಮೇಶ್:- ಮಾನ್ಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಈ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಈಗ ನಾವು ತಾಲ್ಲೂಕು ಮಟ್ಟದಲ್ಲಿ ಕೆಲವು ಕ್ರೀಡಾಂಗಣವನ್ನು ಕೈಗೆತ್ತಿಕೊಂಡಿರುವುದನ್ನು ಮುಗಿಸುವುದಕ್ಕೆ ಆಗುತ್ತಿಲ್ಲ. ಎಸ್ಟಿಮೇಟ್ ಚಾರ್ಜ್ ಒಂದಕ್ಕೊಂದು ಹೋಗಿ ಇವತ್ತಿನ ದಿವಸ ೨೦ ಲಕ್ಷ ಅಂದಾಜು ಇಟ್ಟುಕೊಂಡು ಪ್ರಾರಂಭ ಮಾಡಿದ ಕೆಲಸ ೮೦ ಲಕ್ಷಕ್ಕೆ ಬಂದು ನಿಂತಿದೆ. ತಾವು ಹೇಳಿದ ಸಲಹೆ ಏನೋ ಒಳ್ಳೆಯ ಸಲಹೆ, ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಮೊದಲು ಕ್ರೀಡಾಂಗಣಕ್ಕೆ ನಿಗಾ ಕೊಡೋಣ. ಆಮೇಲೆ ಹಾಸ್ಟಲ್‌ಗಳ ಬಗ್ಗೆ ನಿಗಾ ಕೊಡೋಣ.

ಶ್ರೀ ಹೆಚ್. ಎಂ. ರೇವಣ್ಣ:- ಕ್ರೀಡಾಂಗಣವನ್ನು ಕಟ್ಟುವುದು ಬೇಡ ಅನ್ನುತ್ತಿಲ್ಲ. ಈಗಿರುವ ಹಾಸ್ಟಲ್‌ಗಳಲ್ಲಿ ಪ್ರವೇಶ ಕೊಡುವುದಕ್ಕಿಂತ ಕ್ರೀಡೆಗಾಗಿಯೇ ಪ್ರತ್ಯೇಕವಾದ ಹಾಸ್ಟಲ್ ಮಾಡಿದರೆ, ಅದರಿಂದ ಒಳ್ಳೆಯ ಕ್ರೀಡಾಪಟುಗಳು ನಮ್ಮ ರಾಜ್ಯಕ್ಕೆ ಸಿಗುತ್ತಾರೆ. ಇಲ್ಲದಿದ್ದರೆ ಇವತ್ತಿನ ದಿವಸ ಇಷ್ಟೆಲ್ಲಾ ಕ್ರೀಡೆಗೆ ಹಣ ಖರ್ಚು ಮಾಡಿದರೂ ಕೂಡ ಯಶಸ್ವಿಯಾಗುವುದಿಲ್ಲ. ಫ್ಲೈಯಿಂಗ್ ಸ್ಕೂಲ್ ಮಾಡುವುದಕ್ಕಿಂತ ಕ್ರೀಡಾ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿ, ನಾವು ಕ್ರೀಡೆಗೆ ಪ್ರೋತ್ಸಾಹವನ್ನು ಕೊಡುವುದು ಒಳ್ಳೆಯದು. ಒಲಂಪಿಕ್‌ನಲ್ಲಿ ನಮಗೆ ಒಂದೂ ಪ್ರಶಸ್ತಿ ಬಂದಿಲ್ಲ. ಏಷ್ಯಾಡ್‌ನಲ್ಲಿ ಒಂದೇ ಒಂದು ಕ್ರೀಡೆಗೆ ಬಂದಿದೆ. ಅದು ಕಬಡ್ಡಿ ಆಟದಲ್ಲಿ ಬಂದಿದೆ. ಅದು ಏತಕ್ಕೆ ಅಂದರೆ ನಮ್ಮ ಭಾರತೀಯರಿಗೆ ಕಾಲನ್ನು ಎಳೆಯುವುದು ಚೆನ್ನಾಗಿ ಬರುತ್ತದೆ ಎಂಬುದನ್ನು ನಾವು ತೋರಿಸಿಕೊಟ್ಟಿದ್ದೇವೆ. ಅದಕ್ಕೆ ಬದಲಾಗಿ ಈ ಹಾಸ್ಟೆಲ್ ಅನ್ನು ತೆರೆಯುವುದರಿಂದ ಈ ಕ್ರೀಡೆ ಕೂಡ ಅಭಿವೃದ್ಧಿಯಾಗುತ್ತದೆ. ಅದಕ್ಕಾಗಿ ಸಚಿವರು ಖಂಡಿತವಾಗಿ ಇಲ್ಲಿ ಒಂದು ಆಶ್ವಾಸನೆಯನ್ನು ಕೊಡಬೇಕು. ಎಲ್ಲಾ ಜಿಲ್ಲೆಗಳಲ್ಲಿ ಮಾಡುವುದಕ್ಕೆ ಆಗದಿದ್ದರೂ ಒಂದೆರಡನ್ನಾದರೂ ಮಾಡುವುದಕ್ಕೆ ಆದೇಶ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ರಮೇಶ್:- ಈಗಾಗಲೇ ಕೆಲವು ಜಿಲ್ಲಾಪರಿಷತ್ತಿನವರು ಮುಂದೆ ಬಂದು ನಾವು ಸಹಾಯ ಮಾಡುತ್ತೇವೆ ನೀವು ಸ್ವಲ್ಪ ಹಣ ಕೊಡಿ, ನಾವು ಪ್ರಾರಂಭ ಮಾಡುತ್ತೇವೆ ಎನ್ನತಕ್ಕ

ಮಾತನ್ನು ಹೇಳಿದ್ದಾರೆ. ಅಂಥದ್ದು ಏನಾದರೂ ಇದ್ದರೆ ಹೇಳಿ ಮಾಡಿನೋಡೋಣ. ಆದರೆ ಕ್ರೀಡಾ ಹಾಸ್ಟಲ್ ಮಾಡಿಲ್ಲ ಅಂತ ಹೇಳಿ ಫ್ಲೈಯಿಂಗ್ ಸ್ಕೂಲ್ ಬಗ್ಗೆ ಹೇಳುವುದು ಬೇಡ. ಇದು ಬಹಳ ಸೀನಿಯರ್ ಸ್ಕೂಲ್ ಆಗಿದ್ದು ನಿಜವಾಗಿಯೂ ಇದನ್ನು ನೋಡಿ ನಾವು ತಲೆ ತಗ್ಗಿಸ ಬೇಕಾಗಿದೆ. ಫ್ಲೈಯಿಂಗ್ ಸ್ಕೂಲ್ ಹೇಗಿದೆಯೆಂದು ತಾವು ಹೋಗಿ ನೋಡಿಕೊಂಡು ಬನ್ನಿ. ಪಂಜಾಬ್, ಹರಿಯಾಣ ಫ್ಲೈಯಿಂಗ್ ಸ್ಕೂಲ್‌ನಲ್ಲಿ ಟ್ವಿನ್ ಇಂಜಿನ್ಸ್ ಇವೆ. ನಮ್ಮಲ್ಲಿ ಇನ್ನೂ ರನ್‌ವೇ ಕೂಡ ಆಗಿಲ್ಲ. ಆದುದರಿಂದ, ಈ ಸಾಲಿನ ಬಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ೧೬-೧೭ ಕೋಟಿ ರೂಪಾಯಿಗಳು ಬೇಕಾಗಿರುವುದಕ್ಕೆ ೩ ಕೋಟಿ ರೂಪಾಯಿ ಒದಗಿಸಿದ್ದಾರೆ. ಈ ಸಮಯದಲ್ಲಿ ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸಬೇಡಿ. ತಮ್ಮ ಸಲಹೆ ಒಳ್ಳೆಯದಾಗಿದೆ. ಇದನ್ನು ಜಿಲ್ಲಾ ಪರಿಷತ್ ಮುಖಾಂತರ ಮಾಡುವುದಕ್ಕೆ ಸಾಧ್ಯವಾದರೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವನಾಥ್:- ಮಾನ್ಯ ಸಭಾಧ್ಯಕ್ಷರೇ, ಸರ್ಕಾರದ ವತಿಯಿಂದ ತಾಲ್ಲೂಕು ಮಟ್ಟದಲ್ಲಿ ಕಟ್ಟುತ್ತಿರತಕ್ಕಂಥ ಕ್ರೀಡಾಂಗಣಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗದೆ ಮತ್ತು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಅನುದಾನವೂ ಕೂಡ ಬಾರದೆ, ಆ ಕಟ್ಟಡದ ಕೆಲಸ ಸ್ಥಗಿತವಾಗಿದೆ. ಆದುದರಿಂದ, ಮಂತ್ರಿಗಳು ತಕ್ಷಣ ಸರ್ಕಾರದಿಂದ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಮತ್ತು ಕೇಂದ್ರ ಸರ್ಕಾರದೊಡನೆ ಮಾತನಾಡಿ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ.ಎಸ್. ರಮೇಶ್:- ಈ ವಿಷಯ ಈಗಾಗಲೇ ನನ್ನ ಗಮನಕ್ಕೆ ಬಂದಿದ್ದು, ಸಂಬಂಧಪಟ್ಟ ಕೆಲವು ಅಧಿಕಾರಿಗಳನ್ನು ತಾಲ್ಲೂಕು ಮಟ್ಟಕ್ಕೆ ಕಳುಹಿಸಿದ್ದೇನೆ. ಕೇಂದ್ರ ಸರ್ಕಾರಕ್ಕೆ ಈಗಾಗಲೇ ವರದಿ ಕಳುಹಿಸಿದ್ದೇವೆ. ಯಾವ್ಯಾವ ತಾಲ್ಲೂಕಿಗೆ ಏಯ್ಡ್ ಬಂದಿಲ್ಲವೋ ಅಲ್ಲಿಗೆ ಕೂಡಲೇ ಬಿಡುಗಡೆ ಮಾಡುವುದಕ್ಕೆ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ.

ಶ್ರೀ ವಿನಯಕುಮಾರ್ ಸೊರಕೆ:- ಮಾನ್ಯ ಅಧ್ಯಕ್ಷರೇ, ನಮ್ಮ ತಿಳುವಳಿಕೆ ಪ್ರಕಾರ ಕೇಂದ್ರ ಸರ್ಕಾರದಿಂದ ಸ್ಟೇಟ್ ಸೆಕ್ಟರ್‌ನಲ್ಲಿ ಬರುವಂಥ ಹಣವನ್ನು ರಾಜ್ಯ ಸರ್ಕಾರ ಸರಿಯಾಗಿ ವಿನಿಯೋಗ ಮಾಡದ ಕಾರಣ ಸದ್ಯಕ್ಕೆ ಕೇಂದ್ರ ಸರ್ಕಾರ ತಡೆ ತಂದಿದೆ. ಡಿಸ್ಟ್ರಿಕ್ಟ್ ಸೆಕ್ಟಾರ್ ಮುಖಾಂತರ ಹಣವನ್ನು ಖರ್ಚು ಮಾಡುವಂಥ ವ್ಯವಸ್ಥೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮಾನ್ಯ ಮಂತ್ರಿಗಳು ಒತ್ತಾಯ ತರುತ್ತಾರೆಯೇ ಎಂಬುದರ ಬಗ್ಗೆ ಅಧ್ಯಕ್ಷರ ಮುಖಾಂತರ ಕೇಳಬಯಸುತ್ತೇನೆ.

ಶ್ರೀ ಎಸ್. ರಮೇಶ್:- ಇದಕ್ಕೆ ಸಂಬಂಧಿಸಿದಂತೆ, ನಿನ್ನೆಯ ದಿವಸ ನಾನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಚಿಕ್ಕಣ್ಣ ಅವರೊಡನೆ ಮಾತನಾಡಿದ್ದು, ನಾವು ದೆಹಲಿಗೆ ಭೇಟಿ ಕೊಟ್ಟು ಅಲ್ಲಿಯೇ ಕುಳಿತುಕೊಂಡು ಸರಿ ಮಾಡಿಕೊಂಡು ಬರಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದು ಇದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀಮತಿ ಮಲ್ಲಾಜಮ್ಮ:- ಸನ್ಮಾನ್ಯ ಅಧ್ಯಕ್ಷರೇ, ಈಗ ತಾನೆ ಮಾನ್ಯ ಮಂತ್ರಿಗಳು ಮಾತನಾಡಿದಂಥ ಸಂದರ್ಭದಲ್ಲಿ ಕೆಲವಾರು ಜಿಲ್ಲಾ ಪರಿಷತ್ತುಗಳಿಂದ ಇಂತಹ ಸಲಹೆಗಳು ಬಂದಿವೆಯೆಂದು ಹೇಳಿದರು. ಅಂತಹ ಜಿಲ್ಲಾ ಪರಿಷತ್ತುಗಳು ಯಾವುವು ? ಅಥವಾ ಯಾವುದಾದರೂ ಸಂಘ-ಸಂಸ್ಥೆಗಳು ಈ ಒಂದು ಕೆಲಸ ಮಾಡುವುದಕ್ಕೆ ಮುಂದೆ ಬಂದರೆ ತಾವು ಅವಕಾಶ ಮಾಡಿ ಕೊಡುತ್ತೀರಾ ? ಎಂಬುದರ ಬಗ್ಗೆ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರಮೇಶ್:- ತಮಗೆ ತಿಳಿದಿರುವಂತೆ ಮಂಡ್ಯ ಜಿಲ್ಲಾ ಪರಿಷತ್‌ನವರು ಮುಂದೆ ಬಂದಿದ್ದಾರೆ. ಅವರಿಗೂ ನಾವು ಅವಕಾಶ ಕೊಡುತ್ತೇವೆಂದು ಹೇಳಿದ್ದೇವೆ. ಸಂಘ-ಸಂಸ್ಥೆಗಳಿಂದ ಮಾಡುವುದಕ್ಕೆ ಇನ್ನು ನಾವು ಕ್ರಮ ತೆಗೆದುಕೊಂಡಿಲ್ಲ. ಅಂತಹ ಸಂದರ್ಭ ಬಂದಾಗ ಯೋಚನೆ ಮಾಡೋಣ.

ಅಧ್ಯಕ್ಷರು:- ಶ್ರೀ ಬಿ. ಆರ್. ಗುರುದೇವ್‌ರವರೇ, ತಮ್ಮ ಪ್ರಶ್ನೆ ಕೇಳಿ.

ಆಲೂರು ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ

ಶ್ರೀ ಬಿ. ಆರ್. ಗುರುದೇವ್ (ಸಕಲೇಶಪುರ):- ಮಾನ್ಯ ಯುವಜನ ಸೇವಾ, ಕ್ರಿಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಆಲೂರು ಪಟ್ಟಣದಲ್ಲಿ ಕ್ರೀಡಾಂಗಣದ ಅವಶ್ಯಕತೆ ಮತ್ತು ಬಾಳುಪೇಟೆಯಲ್ಲಿರುವ ಕ್ರೀಡಾಂಗಣವನ್ನು ಹೊನಲು ಬೆಳಕು ಕ್ರೀಡಾಂಗಣವನ್ನಾಗಿ ಪರಿವರ್ತಿಸುವ ಆವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಇ) ಈ ಯೋಜನೆಗಳನ್ನು ಯಾವಾಗ ಕಾರ್ಯಗತ ಗೊಳಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರಿಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು.

ಆ) ಆಲೂರು ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲು ಸೂಕ್ತವಾದ ನಿವೇಶನವನ್ನು ಹುಡುಕಲಾಗುತ್ತಿದೆ. ಸೂಕ್ತವಾದ ನಿವೇಶನ ದೊರೆತ ನಂತರವೇ ಕ್ರೀಡಾಂಗಣದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವುದನ್ನು ಪರಿಗಣಿಸಲಾಗುವುದು. ಬಾಳುಪೇಟೆಯ ಖಾಸಗೀ ಶಿಕ್ಷಣ ಸಂಸ್ಥೆಗೆ, ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಹೊನಲು ಬೆಳಕಿನ ವ್ಯವಸ್ಥೆಗೆ ಸಹಾಯಧನ ಮಂಜೂರು ಮಾಡಲು ಪ್ರಸ್ತಾವನೆಯನ್ನು ಕಳುಹಿಸಬೇಕೆಂದು ಕೋರಲಾಗಿದೆ. ಕೇಂದ್ರ ಸರ್ಕಾರದಿಂದ ಧನಸಹಾಯ ಮಂಜೂರು ಆದ ಕೂಡಲೇ ಸದರಿ ಸಂಸ್ಥೆಗೆ ಬಿಡುಗಡೆ ಮಾಡಲಾಗುವುದು.

ಶ್ರೀ ಬಿ. ಆರ್. ಗುರುದೇವ್:- ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ತಿಳಿಸಿರುವಂತೆ ಆಲೂರು ಪಟ್ಟಣದಲ್ಲಿ ಈಗಾಗಲೇ ಒಂದು ಕ್ರೀಡಾಂಗಣವನ್ನು ಕಟ್ಟುವುದಕ್ಕೆ ಈ ಒಂದು ಇಲಾಖೆ ಅವಕಾಶ ಮಾಡಿಕೊಡುತ್ತಿದೆ ಎಂದು ಹೇಳಿದ್ದಾರೆ. ಅವರು ಯಾವಾಗ ಮಾಡುತ್ತಾರೆ ಎಂದು ಹೇಳಿಲ್ಲ. ಮತ್ತು ಈ ಒಂದು ಕ್ರೀಡಾಂಗಣಕ್ಕೆ ೮ ಎಕರೆ ಜಮೀನನ್ನು ಸರ್ಕಾರದ ವತಿಯಿಂದ ಬಿಡಿಸಿಕೊಟ್ಟರೆ ಈ ವರ್ಷವೇ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆ ಕೊಟ್ಟಿದ್ದಾರೆ. ಈಗಾಗಲೇ ಅಲ್ಲಿ ನಡೆಯುತ್ತಿರುವ ಕಾಲೇಜು ಪಕ್ಕದಲ್ಲಿ ಒಂದು ಜಾಗವನ್ನು ನಾವು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ಸದರಿ ಜಾಗವನ್ನು ಇಲಾಖೆಗೆ ಬಿಟ್ಟು ಕೊಡಬೇಕೆಂದು ಕೇಳಿದ್ದೇವೆ. ಆ ದೃಷ್ಟಿಯಲ್ಲಿ ಇದೇ ವರ್ಷ ಆ ತಾಲ್ಲೂಕಿಗೆ ಕ್ರೀಡಾಂಗಣವನ್ನು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ರಮೇಶ್:- ನಾನು ಮಂತ್ರಿಯಾದ ತಕ್ಷಣ ಮೊಟ್ಟಮೊದಲು 'ಹೂಂ' ಎಂದಿದ್ದು ಶ್ರೀಮಾನ್ ಗುರುದೇವ್‌ರವರ ಪ್ರಶ್ನೆಗೆ. ನೀವು ಜಾಗ ಕೊಡಿ, ನಾವು ಕ್ರೀಡಾಂಗಣ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಈಗ ಜಾಗ ಕೊಡುತ್ತೇವೆಂದು ಹೇಳುತ್ತಿದ್ದೀರಿ. ನೀವು ಯಾವಾಗ ಜಾಗ ಕೊಡುತ್ತೀರೋ, ಆ ಕೂಡಲೇ ನಾವು ಕ್ರೀಡಾಂಗಣ ಕಟ್ಟಲು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಆರ್. ಗುರುದೇವ್:- ನನ್ನ ಕ್ಷೇತ್ರಕ್ಕೆ ಎರಡು ತಾಲ್ಲೂಕುಗಳು ಬರುತ್ತವೆ. ಸಕಲೇಶಪುರದಲ್ಲಿ ಈಗಾಗಲೇ ಮಾಡಿಕೊಟ್ಟಿದ್ದಾರೆ. ಆಲೂರು ತಾಲ್ಲೂಕಿಗೆ ಇನ್ನೊಂದು ಮಾಡಿಕೊಡುತ್ತೇವೆಂದು ಭರವಸೆ ಕೊಡುತ್ತಿದ್ದಾರೆ.

ಅಧ್ಯಕ್ಷರು:- ಪ್ರಶ್ನೋತ್ತರ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ಕೃಷ್ಣ ಜಲಾನಯನ ಏತ ನೀರಾವರಿ ನಿಗಮ.

೩೮೨ (೨೧೫೭) ಶ್ರೀ ಅಜಯ್ ಕುಮಾರ್ ಸರನಾಯಕ್ (ಬಾಗಲಕೋಟೆ):- ಮಾನ್ಯ ಸಣ್ಣ ನೀರಾವರಿ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ ಯಾವಾಗ ಸ್ಥಾಪನೆಯಾಯಿತು?

ಆ) ಇಲ್ಲಿಯವರೆಗೆ ನಿಗಮದಿಂದ ವಿಜಾಪುರ ಜಿಲ್ಲೆಯಲ್ಲಿ ಮೋಜಣಿ ಕೈಗೊಂಡಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು?

ಇ) ನಿಗಮದಿಂದ ಕಾರ್ಯಗತ ಗೊಳಿಸಲಾಗುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಈ) ಬಾಗಲಕೋಟೆ ತಾಲ್ಲೂಕಿನಲ್ಲಿ ಯಾವುದಾದರೂ ಹೊಸ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆ ಇದೆಯೇ?

ಈ) ಹಾಗಿದ್ದಲ್ಲಿ, ಅವುಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮ, ಬಿಜಾಪುರ, ಈ ನಿಗಮವು ೧೯೮೭ರ ಜೂನ್ ೯ ರಂದು ಸ್ಥಾಪನೆಯಾಯಿತು ಹಾಗೂ ೧೯೮೭ರ ಮಾರ್ಚ್ ೩೦ರಂದು ಕಂಪನಿ ಕಾಯ್ದೆ ೧೯೫೬ರನ್ವಯ ಸರ್ಕಾರದ ಕಂಪನಿ ಎಂದು ನೊಂದಾಯಿಸಲಾಯಿತು.

ಆ) ವಿಜಾಪುರ ಜಿಲ್ಲೆಯಲ್ಲಿ ವಿವರವಾದ ತನಿಖೆಗಾಗಿ ಮೋಜಣಿ ಕೈಗೊಂಡ ಏತ ನೀರಾವರಿ ಯೋಜನೆಗಳ ಸಂಖ್ಯೆ ೭ ಮತ್ತು ಪ್ರಾಥಮಿಕ ತನಿಖೆಯ ಮೋಜಣಿ ಕೈಗೊಂಡ ಏತ ನೀರಾವರಿ ಯೋಜನೆಗಳ ಸಂಖ್ಯೆ ೯.

ಇ) ಕಾರ್ಯಗತಗೊಳಿಸಲಾಗುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ ೨. ತಾಲ್ಲೂಕು ವಿವರ ಈ ರೀತಿ ಇದೆ.

ಯೋಜನೆಯ ಹೆಸರು	ಅಂದಾಜು ಲಕ್ಷ ರೂ. ಗಳಲ್ಲಿ	ಅಂದಾಜು ನೀರಾವರಿ ಕ್ಷೇತ್ರ ಹೆಕ್ಟೇರ್‌ಗಳಲ್ಲಿ
೧. ಬಾದಾಮಿ ತಾಲ್ಲೂಕು		
ಏತ ನೀರಾವರಿ ಯೋಜನೆ ಚಿಕ್ಕನಸಬಿ	೯೪.೭೮೯	೪೮೬
೨. ಜಮಖಂಡಿ ತಾಲ್ಲೂಕು		
ಏತ ನೀರಾವರಿ ಯೋಜನೆ ಅಡಿಹುಡಿ ತೊದಲಬಾಗಿ	೩೨೪.೮೫೪	೧೪೯೦

ಈ) ಹೌದು ಘಟ್ಟಿ ಬಳಿ ಏತ ನೀರಾವರಿ ಯೋಜನೆ.

ಉ) ೧೯೯೨-೯೩ರ ಸಾಲಿನಲ್ಲಿ ಕಾರ್ಯಗತ ಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಬಾಗೇಪಲ್ಲಿ ತಾಲ್ಲೂಕು ಚೇಳೂರು ಮಂಡಲ ದೊಡ್ಡ ಹಳ್ಳಿಯಲ್ಲಿ ನಿವೇಶನಗಳ ವಿತರಣೆ

೩೮೪ (೨೧೯೪) ಶ್ರೀ ಚೌಡರೆಡ್ಡಿ (ಚಿಂತಾಮಣಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬಾಗೇಪಲ್ಲಿ ತಾಲ್ಲೂಕು, ಚೇಳೂರು ಮಂಡಲ, ದೊಡ್ಡಿ ಹಳ್ಳಿ ಗ್ರಾಮದ ಸರ್ವೆ ನಂ. ೫-೧ರ ಜಮೀನನ್ನು ಗ್ರಾಮದ ನಿವೇಶನ ರಹಿತ ಫಲಾನುಭವಿಗಳಿಗೆ ಹಂಚಲು ಸರ್ಕಾರದಿಂದ ಭೂ ಸ್ವಾಧೀನಪಡಿಸಿಕೊಳ್ಳಲಾಗುತ್ತೆ. ಹಾಗಿದ್ದಲ್ಲಿ ಭೂ ಸ್ವಾಧೀನಪಡಿಸಿಕೊಂಡ ತಾರೀಖನ್ನು ತಿಳಿಸಿ?

ಆ) ಭೂ ಸ್ವಾಧೀನಪಡಿಸಿಕೊಂಡ ಪ್ರದೇಶವನ್ನು ನಿವೇಶನಗಳಾಗಿ ವಿಂಗಡಿಸಿ ಎಷ್ಟು ಜನಕ್ಕೆ ಹಂಚಲಾಗಿದೆ? ಹಾಗೇ ಹಂಚಿಕೆ ಮಾಡಿದ ಫಲಾನುಭವಿಗಳ ಹೆಸರು ಮತ್ತು ಅಳತೆ ವಿವರವಾಗಿ ತಿಳಿಸುವುದು.

ಇ) ಮೇಲ್ಕಂಡ ಜಮೀನಿನಲ್ಲಿ ಸರ್ಕಾರದ ನಿವೇಶನಗಳನ್ನು ಹಂಚಿದ್ದರೂ ಸಹ ನಿವೇಶನಗಳ ಕಲ್ಲುಗಳನ್ನು ಕಿತ್ತು ಹಾಕಿ ಫಲಾನುಭವಿಗಳಿಗೆ ಹಿಂದಿನ ಮಾಲೀಕರು ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಸದರಿ ಫಲಾನುಭವಿಗಳಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರವು ಯಾವ ರೀತಿಯ ರಕ್ಷಣೆಯನ್ನು ಕೊಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಹೌದು. ೨೬-೧೧-೮೨.

ಆ) ನಿವೇಶನ ವಿಂಗಡಿಸಿ ೨೯ ಜನರಿಗೆ ೪೫ - ೩೦ ಅಡಿ ನಿವೇಶನ ಹಂಚಿರುತ್ತೆ. ನಿವೇಶನ ಪಡೆದವರ ಪಟ್ಟಿಯು ಕೆಳಗಿನಂತಿದೆ. ೧) ನಾರಾಯಣಪ್ಪ ಬಿನ್ ಮೈಲಾರಪ್ಪ, ೨) ಬೈಯಪ್ಪ ಬಿನ್

ವೆಂಕಟಪ್ಪ, ೩) ಗಂಗಮ್ಮ ಕೋಂ ಚಿನ್ನರಸಪ್ಪ, ೪) ಗಂಗಮ್ಮ ಕೋಂ ಬ್ಯೆಯಪ್ಪ, ೫) ಚಿನ್ನಕದರಪ್ಪ ಬಿನ್ ಈರಪ್ಪ, ೬) ಲಕ್ಷ್ಮೀನರಸಮ್ಮ ಕೋಂ ನರಸಪ್ಪ, ೭) ಕದರಪ್ಪ ಬಿನ್ ಈರಪ್ಪ, ೮) ಚಿನ್ನಗಂಗಪ್ಪ ಬಿನ್ ವೆಂಕಟಪ್ಪ, ೯) ವೆಂಕಟರಾಯಪ್ಪ ಬಿನ್ ವೆಂಕಟರಾಯ, ೧೦) ವೆಂಕಟರಾಯಪ್ಪ ಬಿನ್ ವೆಂಕಟಪ್ಪ, ೧೧) ಅಂಜನಪ್ಪ ಬಿನ್ ಪೆದ್ದವೆಂಕಟಪ್ಪ, ೧೨) ರಾಮಕ್ಕ ಕೋಂ ಮುತ್ತಣ್ಣ, ೧೩) ಚಿನ್ನಪ್ಪ ಬಿನ್ ಸಿದ್ದಪ್ಪ, ೧೪) ಶಿವಮ್ಮ ಕೋಂ ಪೆದ್ದಣ್ಣ, ೧೫) ವೆಂಕಟಪ್ಪ ಬಿನ್ ಗಂಗಪ್ಪ, ೧೬) ವೆಂಕಟರಾಯಪ್ಪ ಬಿನ್ ಸಿದ್ದಪ್ಪ, ೧೭) ಮುದ್ದಣ್ಣ ಬಿನ್ ಸಂಜಪ್ಪ, ೧೮) ಪಾಪಮ್ಮ ಕೋಂ ರಾಜಣ್ಣ, ೧೯) ಚಿನ್ನಮ್ಮ ಕೋಂ ಪೆದ್ದನಲ್ಲ ನಾಗಪ್ಪ, ೨೦) ವೆಂಕಟರಾಯಪ್ಪ ಬಿನ್ ಡೋಜಿ ವೆಂಕಟಪ್ಪ, ೨೧) ಬ್ಯೆಯಪ್ಪ ಬಿನ್ ಮುದ್ದಣ್ಣ, ೨೨) ಬ್ಯೆಯಪ್ಪ ಬಿನ್ ವೆಂಕಟರಾಯಪ್ಪ, ೨೩) ಬ್ಯೆಯಪ್ಪ ಬಿನ್ ಬ್ಯೆಯಪ್ಪ, ೨೪) ಬ್ಯೆಯಪ್ಪ ಬಿನ್ ಮುದ್ದಣ್ಣ, ೨೫) ನರಸಿಂಹಪ್ಪ ಬಿನ್ ವೆಂಕಟಪ್ಪ, ೨೬) ಗಂಗಾಚಾರಿ ಬಿನ್ ವೆಂಕಟಪ್ಪ, ೨೭) ಪೆದ್ದಗಂಗಾಲಪ್ಪ ಬಿನ್ ನರಸಪ್ಪ, ೨೮) ಮುದ್ದಣ್ಣ ಬಿನ್ ನರಸಿಂಹಪ್ಪ, ೨೯) ಬ್ಯೆಯಪ್ಪ ಬಿನ್ ಸಿದ್ದಪ್ಪ.

ಇ) ಇಲ್ಲ.

ಈ) ಕಲಂ (ಇ) ಉತ್ತರದನ್ವಯ ಉದ್ಭವಿಸುವುದಿಲ್ಲ.

ಬೆಂಗಳೂರಿನಲ್ಲಿ ಒಳಾಂಗಣ ಕ್ರೀಡಾಂಗಣದ ನಿರ್ಮಾಣ

೩೮೫ (೧೮೭೦) ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೆಂಗಳೂರಿನಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ಯಾವ ಸ್ಥಳವನ್ನು ಆಯ್ಕೆ ಮಾಡಲಾಗಿದೆ?

ಇ) ಇದರ ಅಂದಾಜು ವೆಚ್ಚ ಎಷ್ಟು?

ಈ) ಕೇಂದ್ರ ಸರ್ಕಾರದಿಂದ ನಿರೀಕ್ಷಿಸಿರುವ ಅಂದಾಜು ಮೊತ್ತ.

ಉ) ಪ್ರಸ್ತಾಪಿಸಿರುವ ಕ್ರೀಡಾಂಗಣದ ಸ್ಥಳಾವಕಾಶ ಎಷ್ಟು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು.

ಆ) ಸೂಕ್ತ ನಿವೇಶನ ಆಯ್ಕೆ ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಈ) ಕೇಂದ್ರ ಸರ್ಕಾರಕ್ಕೆ ಯೋಜನೆಯ ಅಂದಾಜು ವೆಚ್ಚವನ್ನು ಅನುಸರಿಸಿ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ.

ಉ) ಸುಮಾರು ೫೦೦೦ ಜನರಿಗೆ ಸ್ಥಳಾವಕಾಶ ಮಾಡಲು ಉದ್ದೇಶಿಸಲಾಗಿದೆ.

ಜೇವರ್ಗಿ ನಾಲಾ ವಿಭಾಗವನ್ನು ಪೂರ್ಣಗೊಳಿಸುವುದು

೩೮೮ (೧೮೭೯) ಶ್ರೀ ಶಿವಶೇಖರಪ್ಪ ಗೌಡ ಶಿಂವಾಳ (ಶಹಾಪುರ):- ಮಾನ್ಯ ಭಾರಿ ಮತ್ತು ಮಾಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪ್ರಸಕ್ತ ಸಾಲಿನಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಜೇವರ್ಗಿ ಬ್ರ್ಯಾಂಚ್ ನಾಲಾ ಕೆಲಸ ಪ್ರಾರಂಭವಾಗಲಿದೆಯೇ?

ಆ) ಇದಕ್ಕೆ ವಿಶ್ವ ಬ್ಯಾಂಕ್‌ನ ನೆರವು ಸಿಕ್ಕಿದೆಯೇ?

ಇ) ಹಾಗಿದ್ದಲ್ಲಿ, ಸದರಿ ನಾಲಾ ಕೆಲಸವನ್ನು ಮುಗಿಸಿ ರೈತರಿಗೆ ನೀರು ಒದಗಿಸಲು ಎಷ್ಟು ಸಮಯ ಬೇಕಾಗುತ್ತದೆ?

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಜೇವರ್ಗಿ ಉಪ ಕಾಲುವೆಯ ಮೊದಲು ಹದಿಮೂರು ಕಿಲೋಮೀಟರುಗಳ ಕಾಮಗಾರಿಯನ್ನು ಪ್ರಾರಂಭಿಸಲು ಈಗಾಗಲೇ ದಿನಾಂಕ ೩೦-೧೨-೯೧ರ ಸರ್ಕಾರಿ ಆದೇಶದಲ್ಲಿ ಅನುಮೋದನೆ ನೀಡಲಾಗಿದ್ದು, ಸಧ್ಯದಲ್ಲೇ ಕೆಲಸವನ್ನು ಪ್ರಾರಂಭಿಸಲಾಗುವುದು.

ಆ) ವಿಶ್ವ ಬ್ಯಾಂಕ್ ನೆರವಿಗೆ ಪ್ರಸ್ತಾವನೆಯನ್ನು ಮುಂದೊಡಲಾಗುತ್ತಿದೆ.

ಇ) ಈ ಉಪ ನಾಲೆಯ ಕಾಮಗಾರಿಗಳನ್ನು ೧೯೯೬ರ ಒಳಗೆ ಸಂಪೂರ್ಣವಾಗಿ ಮುಗಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿಗಾಗಿ ಕಾಯ್ದಿರಿಸಿದ ಹಣ

೩೮೯ (೧೮೮೨) ಶ್ರೀ ಎಂ. ರುಕ್ಮಯ ಪೂಜಾರಿ (ವಿಟ್ಲ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದಲ್ಲಿ ೧೯೯೧-೯೨ನೇ ವರ್ಷದಲ್ಲಿ ಲೋಕೋಪಯೋಗಿ ರಸ್ತೆಗಳ ದುರಸ್ತಿಗೆ ಎಷ್ಟು ಹಣ ಕಾಯ್ದಿರಿಸಲಾಗಿದೆ; ಆದರಲ್ಲಿ ೧೯೯೨ನೇ ಫೆಬ್ರವರಿವರಗೆ ಎಷ್ಟು ಹಣ ಖರ್ಚಾಗಿದೆ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಧಿಕ ಮಳೆ ಈ ವರ್ಷ ಬಂದಿರುವುದರಿಂದ ಹೆಚ್ಚಿನ ಲೋಕೋಪಯೋಗಿ ರಸ್ತೆಗಳು ಹಾಳಾಗಿರುವುದರಿಂದ ರಸ್ತೆಗಳ ದುರಸ್ತಿಗಾಗಿ ಇನ್ನೂ ಹೆಚ್ಚಿನ ಹಣ ಬಿಡುಗಡೆ ಮಾಡಲಾಗುವುದೇ?

ಇ) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದಲ್ಲಿ ಲೋಕೋಪಯೋಗಿ ರಸ್ತೆಯ ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣ ಸರ್ಕಾರ ಖರ್ಚು ಮಾಡಿದೆ?

ಶ್ರೀ ಜಿ. ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಯವರು):-

ಅ) ೧೯೯೧-೯೨ನೇ ಸಾಲಿನಲ್ಲಿ ೪೦೧೦ ಲಕ್ಷ ರೂ. ಗಳನ್ನು ಲೋಕೋಪಯೋಗಿ ಇಲಾಖೆ ರಸ್ತೆ ಮತ್ತು ಸೇತುವೆಗಳ ವಾರ್ಷಿಕ ನಿರ್ವಹಣೆ ಮತ್ತು ದುರಸ್ತಿಗಾಗಿ ನಿಗದಿಪಡಿಸಿದೆ. ಆದರಲ್ಲಿ ಫೆಬ್ರವರಿ ೯೨ರವರೆಗೆ ೨೮೫೦ ಲಕ್ಷ ರೂ. ಗಳು ವೆಚ್ಚವಾಗಿವೆ.

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೯೧-೯೨ನೇ ಸಾಲಿನ ಅಧಿಕ ಮಳೆಯಿಂದ ಹಾನಿಯಾಗಿರುವ

ಲೋಕೋಪಯೋಗಿ ಇಲಾಖಾ ವ್ಯಾಪ್ತಿಯ ರಸ್ತೆಗಳನ್ನು ದುರಸ್ತಿಪಡಿಸುವುದಕ್ಕೆ ೬೦ ಲಕ್ಷ ರೂ.ಗಳ ಹೆಚ್ಚಿನ ವಿಶೇಷ ಅನುದಾನವನ್ನು ನೀಡಲಾಗಿದೆ.

ಇ) ೧೯೯೧-೯೨ನೇ ಸಾಲಿನಲ್ಲಿ ವಿಟ್ಲದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ ಮಾಡಿರುವ ವೆಚ್ಚದ ವಿವರ ಕೆಳಕಂಡಂತಿದೆ:-

ರಸ್ತೆ ಹೆಸರು	ವೆಚ್ಚ (ಲಕ್ಷ ರೂ.ಗಳಲ್ಲಿ)
೧) ಕಲ್ಲಡಕ-ಕಣಂಗಾಡು ರಸ್ತೆ	೪.೯೬
೨) ವಿಟ್ಲ-ತಾಲೆತ್ತೂರು ರಸ್ತೆ	೭.೦೬
೩) ಪಾಣೆಮಂಗಳೂರು-ಪಾತೂರು ರಸ್ತೆ	೪.೪೩
೪) ಕಡೂರು-ಬಂಟ್ವಾಳ ರಸ್ತೆ	೧.೪೨
೫) ಕೊಟ್ಟಕಾರು-ಪಾತೂರು ರಸ್ತೆ	೦.೩೧
೬) ಬಂಟ್ವಾಳ-ಕೂಲಲಿ-ಗುರುಪುರ ರಸ್ತೆ	೨.೨೪
೭) ವಿಟ್ಲ-ಕಬಕ ರಸ್ತೆ	೦.೩೧
೮) ಪಾಣೆ-ಮಂಗಳೂರು-ಟೌನ್ ರಸ್ತೆ	೦.೦೪
ಒಟ್ಟು	೨೦.೭೭

ಮಂಡಲ ಪಂಚಾಯತ್ ನೌಕರರಿಗೆ ಸೌಲಭ್ಯ

೩೯೦ (೧೯೯೬) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದ ಮಂಡಲ ಪಂಚಾಯಿತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ 'ಸಿ' ಮತ್ತು 'ಡಿ' ವರ್ಗದ ನೌಕರರಿಗೆ ಸರ್ಕಾರಿ ನೌಕರರಿಗಿರುವ ವೇತನ, ಭತ್ಯೆ ಹಾಗೂ ಇತರ ಸೇವಾ ಸೌಲಭ್ಯ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ)

ಮಂಡಲ ಪಂಚಾಯತ್ ನೌಕರರು ತಮ್ಮ ಸೇವಾ ಸೌಲಭ್ಯಗಳಿಗಾಗಿ ನ್ಯಾಯಯುತ ಹೋರಾಟ ನಡೆಸುತ್ತ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಹೌದು.

ಇ) ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉತ್ತರಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆ

೬೯೩ (೨೨೧೪) ಶ್ರೀ ಆರ್. ಎನ್. ನಾಯಕ್ (ಭಟ್ಕಳ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಉತ್ತರಕನ್ನಡ ಜಿಲ್ಲೆಯಲ್ಲಿ ಏತ ನೀರಾವರಿ ಯೋಜನೆಯು ಎಷ್ಟು ಕಡೆ ಕಾರ್ಯಗತವಾಗಿದೆ? ಎಲ್ಲೆಲ್ಲಿ ಮತ್ತು ಎಷ್ಟು ಎಕರೆ ಭೂಮಿಗೆ ನೀರು ಪೂರೈಸಲಾಗುತ್ತಿದೆ?

ಆ) ಎಲ್ಲೆಲ್ಲಿ ಕೆಲಸ ಕೈಗೆತ್ತಿಕೊಳ್ಳಲು ಸರ್ಕಾರ ಆಲೋಚಿಸಿದ? ಮತ್ತು ಎಷ್ಟು ಎಕರೆ ಪ್ರದೇಶಕ್ಕೆ ಆ ಮೂಲಕ ನೀರು ಪೂರೈಸ ಬಹುದು?

ಇ) ಉತ್ತರಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿ ಕೆರೆಗಳಿಂದ ನೀರು ಪೂರೈಸಲಾಗುತ್ತಿದೆ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು ೧೫ ಕಡೆ ಏತ ನೀರಾವಾರಿ ಯೋಜನೆಗಳು ಕಾರ್ಯಗತವಾಗಿವೆ. ಇವುಗಳಿಂದ ೬೯೭೪ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) ಮತ್ತು ಶಿರ್ಸಿ ತಾಲ್ಲೂಕಿನ ಮೊಗವಳ್ಳಿಯಲ್ಲಿ ಒಂದು ಏತ ನೀರಾವರಿ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದ್ದು, ಇದರಿಂದ ೬೯೫ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಲಿದೆ.

ಆ) ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದ ಮೂಲಕ ೩೫ ಕಡೆ ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳುವ ಉದ್ದೇಶವಿದೆ. ಇವುಗಳಿಂದ ಸುಮಾರು ೨೭೨೪೦ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಬಹುದೆಂದು ಅಂದಾಜು ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೬೫೭ ಕೆರೆಗಳಿಂದ ನೀರಾವರಿ ಸೌಲಭ್ಯ ಒದಗಿಸಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

(ಅನುಬಂಧ)

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾರ್ಯಗತವಾಗಿರುವ, ಕೈಗೊಳ್ಳಲು ಉದ್ದೇಶಿಸಿರುವ ಏತ ನನೀರಾವರಿ ಯೋಜನೆಗಳ ಮತ್ತು ಜಿಲ್ಲೆಯಲ್ಲಿರುವ ಕೆರೆಗಳ ತಾಲ್ಲೂಕುವಾರು ವಿವರಗಳು

ಅನು ಕ್ರಮ	ತಾಲ್ಲೂಕು	ಕಾರ್ಯನಿರ್ವಹಿಸುತ್ತಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ	ಕೈಗೊಳ್ಳಲು ಉದ್ದೇಶಿಸಿರುವ ಏತ ನೀರಾವರಿ ಯೋಜನೆಗಳ ಸಂಖ್ಯೆ	ನೀರಾವರಿ ಸೌಲಭ್ಯ ಒದಗಿಸುವತ್ತಿರುವ ಕೆರೆಗಳ ಸಂಖ್ಯೆ
೧.	ಕಾರವಾರ	೨	೭	೨೧
೨.	ಹೊನ್ನಾವರ	೧೦	೮	೨೧

೩.	ಅಂಕೋಲ	೧	೩	೧೦
೪.	ಸಿರ್ಸಿ	೧	೬	೨೨೧
೫.	ಕುಮಟಾ	೧	೧	೧೩
೬.	ಹಳಿಯಾಳ	-	೧	೧೭೬
೭.	ಮುಂಡಗೋಡ	-	೩	೧೮೮
೮.	ಸಿದ್ದಾಪುರ	-	-	೧೭೪
೯.	ಯಲ್ಲಾಪುರ	-	೨	೮೦
೧೦.	ಭಟ್ಕಳ	-	-	೧೦
೧೧.	ಜೋಯ್ಡಾ (ಸೂಪಾ)	-	೪	೩೮
	ಒಟ್ಟು	೧೫	೩೫	೯೫೨

ಕನ್ನಡ ಸಾಹಿತ್ಯ ಪರಿಷತ್ತಿನ ನೌಕರರಿಗೆ ಕೊಡತಕ್ಕ ಸೌಲಭ್ಯಗಳು

೩೯೪ (೨೧೯೨) ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡ್):- ಮಾನ್ಯ ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ;

ಅ) ಕನ್ನಡ ಸಾಹಿತ್ಯ ಪರಿಷತ್ತಿನ ನೌಕರರ ಸಂಬಳ ಮತ್ತು ಸೇವಾ ಸೌಲಭ್ಯಗಳು ತುಂಬಾ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ನೌಕರರ ಸಂಬಳ ಹಾಗೂ ಸೇವಾ ಸೌಲಭ್ಯ ಹೆಚ್ಚಿಸುವ ಸಲುವಾಗಿ ಹೆಚ್ಚುವರಿ ಅನುದಾನದ ಬಗ್ಗೆ ಬೇಡಿಕೆಯು ಸರ್ಕಾರಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಬಂದಿರುತ್ತದೆ?

ಈ) ಅದನ್ನು ಈಡೇರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರಿಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು.

ಆ) ಬಂದಿದೆ

ಇ) ಹೆಚ್ಚುವರಿ ಅನುದಾನದ ಅಂದಾಜಿನೊಂದಿಗೆ ಬೇಡಿಕೆ ಇತ್ತೀಚೆಗೆ ಬಂದಿದೆ.

ಈ) ಪರಿಶೀಲನೆಯಲ್ಲಿದೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ವಿದೇಶಿ ಸಂಸ್ಥೆಯಿಂದ ಪ್ರಸ್ತಾವನೆ

೩೯೫ (೨೧೫೬) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ ಯಾವುದಾದರೂ ವಿದೇಶಿ ಸಂಸ್ಥೆಯಿಂದ ಪ್ರಸ್ತಾವನೆಯನ್ನು ಸರಕಾರವು ಪಡೆದಿದೆಯೇ;

ಆ) ಹಾಗಿದ್ದಲ್ಲಿ ಯಾರಿಂದ ಹಣ ಪಡೆಯಲಾಗಿದೆ ಹಾಗೂ ಆ ವಿದೇಶಿ ಸಂಸ್ಥೆಯ ಹೆಸರೇನು?

ಇ) ಪಡೆದ ಒಟ್ಟು ಹಣ ಮತ್ತು ಅದನ್ನು ಎಲ್ಲಿ ಹೇಗೆ ಬಳಸಲಾಯಿತು? (ವಿವರಗಳನ್ನು ಒದಗಿಸುವುದು).

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಇಲ್ಲ. ಕೇಂದ್ರ ಸರ್ಕಾರಕ್ಕೆ ಕರ್ನಾಟಕದಲ್ಲಿ ಸಮಗ್ರ ಪ್ರವಾಸೋದ್ಯಮ ಅಭಿವೃದ್ಧಿಗೆ ಯೋಜನೆ ರೂಪಿಸಿ ಸಾಗರೋತ್ತರ ಆರ್ಥಿಕ ಸಹಕಾರ ನಿಧಿಯಿಂದ ೧೯೯೨-೯೩ನೇ ಸಾಲಿಗೆ ಧನ ಸಹಾಯ ಪಡೆಯುವ ಬಗ್ಗೆ ಪ್ರಸ್ತಾಪಿಸಲಾಗಿದೆ.

ಆ) ಇನ್ನೂ ಮಂಜೂರು ಆಗಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೂಡಿಗೆರೆ-ಚಿಕ್ಕಬಳ್ಳಾಪುರ ರಸ್ತೆ ರಾಜ್ಯ ಹೆದ್ದಾರಿಯಾಗಿ ಪರಿವರ್ತನೆ

೩೯೮ (೧೮೪೧) ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮೂಡಿಗೆರೆ-ಚಿಕ್ಕಬಳ್ಳಾಪುರ ರಸ್ತೆ ರಾಜ್ಯ ಹೆದ್ದಾರಿಗಳಾಗುವುದು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ರಸ್ತೆ ಸಾರ್ವಜನಿಕ ಓಡಾಟಕ್ಕೆ ಯೋಗ್ಯವಿಲ್ಲದ ಸ್ಥಿತಿಗೆ ಬಂದಿರುವುದು ತಿಳಿದಿದೆಯೇ? ರಾಜ್ಯ ಹೆದ್ದಾರಿಯಾದ ಈ ರಸ್ತೆಯಲ್ಲಿ ಕಡೆಯ ಪಕ್ಷ ಚಿಕ್ಕನಾಯಕನ ಹಳ್ಳಿ ಭಾಗದ ರಸ್ತೆಯನ್ನಾದರೂ ದುರಸ್ತಿ ಮಾಡಿಸಿ ಡಾಂಬರು ಹಾಕಿಸಲಾಗುವುದೇ?

ಶ್ರೀ ಜಿ. ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಮೂಡಿಗೆರೆ-ಚಿಕ್ಕಬಳ್ಳಾಪುರ ರಸ್ತೆಯು ೫೮ನೇ ಸಂಖ್ಯೆಯ ರಾಜ್ಯ ಹೆದ್ದಾರಿಯಾಗಿದೆ.

ಆ) ಈ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿದೆ. ಈ ರಸ್ತೆಯ ೪೦ ಕಿ. ಮಿ. ಉದ್ದದ ಭಾಗವು ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುತ್ತಿದ್ದು, ಆಯ್ದ ಭಾಗಗಳ ರಸ್ತೆಯ ಡಾಂಬರೀಕರಣ ಹಾಗೂ ನಿರ್ವಹಣೆಯನ್ನು ಒಟ್ಟು ೯.೬೮ ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಚುಳುಕಿ ನೀರಾವರಿ ಕಾಮಗಾರಿಗಳು

೪೦೦ (೧೮೪೪)ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೀದರ್ ಜಿಲ್ಲೆಯ ಚುಳುಕಿ ನೀರಾವರಿ ಕಾಮಗಾರಿಯನ್ನು ಪ್ರಸ್ತುತ ವರ್ಷ ಪ್ರಾರಂಭಿಸುವ

ಉದ್ದೇಶ ಸರ್ಕಾರಕ್ಕೆ ಇದೆಯೇ?

ಆ) ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ಬೀದರ್ ಜಿಲ್ಲೆಯ ಚುಳುಕಿ ನಾಲಾ ಕಾಮಗಾರಿಯನ್ನು ೧೯೭೬ನೇ ಇಸವಿಯಲ್ಲಿ ಪ್ರಾರಂಭಿಸಲಾಗಿದ್ದು ಪ್ರಸ್ತುತ ವರ್ಷದಲ್ಲಿ ಕೆಲಸ ಪ್ರಗತಿಯಲ್ಲಿದೆ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಾವೇರಿ ಜಲಾನಯನ ಪ್ರಾಧಿಕಾರ ರಚನೆ

೩೦೧ (೨೩೭) ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕಾವೇರಿ ಜಲಾನಯನ ಪ್ರಾಧಿಕಾರ ರಚಿಸುವ ವಿಚಾರ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಮಾಡಲಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ಕಾವೇರಿ ಜಲಾನಯನ ಪ್ರಾಧಿಕಾರ ರಚಿಸುವ ವಿಚಾರ ಸಧ್ಯಕ್ಕೆ ಸರ್ಕಾರಕ್ಕಿಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹಾಲಿ ಮುಖ್ಯ ಮಂತ್ರಿಯವರಿಂದ ಹೆಲಿಕ್ಯಾಪ್ಟರಿನ ಬಳಕೆ

೩೦೨ (೧೭೬೩) ಶ್ರೀ ಪ್ರಭಾಕರ್ ಎಸ್. ರಾಣೆ (ಕಾರವಾರ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹಾಲಿ ಮುಖ್ಯ ಮಂತ್ರಿಗಳು ಅವರ ಅಧಿಕಾರಾವಧಿಯಲ್ಲಿ ಎಷ್ಟು ಬಾರಿ ಹೆಲಿಕ್ಯಾಪ್ಟರ್ ಬಳಸಿದ್ದಾರೆ ಮತ್ತು ಯಾವ ಯಾವ ಕಾರಣಗಳಿಗಾಗಿ ಬಳಸಿದ್ದಾರೆ?

ಆ) ಈ ರೀತಿ ಬಳಸಿದ್ದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಎಷ್ಟು ಹಣ ವೆಚ್ಚವಾಗಿದೆ?

ಇ) ಅಧಿಕೃತವಲ್ಲದ ಸ್ವಂತ ಬಳಕೆಗಾಗಿ ಎಷ್ಟು ಬಾರಿ ಬಳಸಲಾಗಿದೆ ಮತ್ತು ಅದಕ್ಕಾಗಿರುವ ವೆಚ್ಚವೆಷ್ಟು?

ಈ) ಮುಖ್ಯ ಮಂತ್ರಿಗಳಲ್ಲದೆ ಇತರ ಯಾವ ಮಂತ್ರಿಗಳು ಅಥವಾ ವಿಧಾನ ಸಭಾ ಸದಸ್ಯರು ಹೆಲಿಕ್ಯಾಪ್ಟರ್ ಬಳಸಿದ್ದಾರೆಯೇ? ಹಾಗಿದ್ದಲ್ಲಿ ಆ ಮಂತ್ರಿಗಳಾರು ಮತ್ತು ವಿಧಾನ ಸಭಾ ಸದಸ್ಯರಾರು?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ) ೬೭ ಬಾರಿ ಹೆಲಿಕ್ಯಾಪ್ಟರ್ ಬಳಸಿರುತ್ತಾರೆ. (ಸ್ಥಳಗಳ ಪಟ್ಟಿಯನ್ನು ಲಗತ್ತಿಸಿದೆ) ತುರ್ತು ಕಾರ್ಯದ ನಿಮಿತ್ತ ಪ್ರವಾಸಕ್ಕೆ ಬಳಸಲಾಗಿದೆ.

ಆ) ೧೭,೭೪,೧೨೫-೦೦ ರೂಪಾಯಿಗಳು.

ಇ) ಸ್ವಂತ ಬಳಕೆಗಾಗಿ ಉಪಯೋಗಿಸಿರುವುದಿಲ್ಲ.

ಈ) ಇತರ ಮಂತ್ರಿಗಳು ೨೫ ಬಾರಿ ಬಳಸಿರುತ್ತಾರೆ. ವಿವರ ಈ ಕೆಳಕಂಡಂತಿದೆ.

೧) ವ್ಯವಸಾಯ ಮಂತ್ರಿಗಳು	೫ ಬಾರಿ
೨) ಯುವಜನ ಸೇವಾ ಮಂತ್ರಿಗಳು	೪ ಬಾರಿ
೩) ಕಾನೂನು ಮಂತ್ರಿಗಳು	೩ ಬಾರ
೪) ನೀರಾವರಿ ಮಂತ್ರಿಗಳು	೪ ಬಾರಿ
೫) ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು	೨ ಬಾರಿ
೬) ಗೃಹ ಮಂತ್ರಿಗಳು	೨ ಬಾರಿ
೭) ಶಿಕ್ಷಣ ಮಂತ್ರಿಗಳು	೨ ಬಾರಿ
೮) ಸಹಕಾರ ಮಂತ್ರಿಗಳು	೧ ಬಾರಿ
೯) ಸಾರಿಗೆ ಮಂತ್ರಿಗಳು	೧ ಬಾರಿ
೧೦) ಕಂದಾಯ ಮಂತ್ರಿಗಳು	೧ ಬಾರಿ
ಒಟ್ಟು	೨೫ ಬಾರಿ

ಮಾನ್ಯ ಮುಖ್ಯ ಮಂತ್ರಿಯವರು ರಾಜ್ಯದ ಹೆಲಿಕ್ಯಾಪ್ಟರ್‌ನಲ್ಲಿ ಪ್ರವಾಸ ಮಾಡಿದ ಸ್ಥಳಗಳ ವಿವರ ಪಟ್ಟಿ

ದಿನಾಂಕ	ಯಿಂದ	ಗೆ
೧೩-೪-೯೧	ಬೆಂಗಳೂರು	ಹರಿಹರ
೧೩-೪-೯೧	ಹರಿಹರ	ಚಿಕ್ಕೋಡಿ
೧೩-೪-೯೧	ಚಿಕ್ಕೋಡಿ	ಹರಿಹರ
೧೩-೪-೯೧	ಹರಿಹರ	ಬೆಂಗಳೂರು
೭-೫-೯೧	ಬೆಂಗಳೂರು	ಮೈಸೂರು
೮-೫-೯೧	ಮಂಗಳೂರು	ಶೃಂಗೇರಿ
೮-೫-೯೧	ಶೃಂಗೇರಿ	ಮೂಡಿಗೆರೆ
೧೦-೫-೯೧	ಚಿಕ್ಕಮಗಳೂರು	ಭಟ್ಕಳ
೧೦-೫-೯೧	ಕುಮಟಾ	ಮಂಗಳೂರು
೧೧-೫-೯೧	ಬೆಂಗಳೂರು	ಮೈಸೂರು
೧೧-೫-೯೧	ಮೈಸೂರು	ಹಾಸನ
೧೨-೫-೯೧	ಹಾಸನ	ಶಿವಮೊಗ್ಗ

೧೨-೫-೯೧	ಶಿವಮೊಗ್ಗ	ದಾವಣಗೆರೆ
೧೨-೫-೯೧	ದಾವಣಗೆರೆ	ಹುಬ್ಬಳ್ಳಿ
೧೨-೫-೯೧	ಹುಬ್ಬಳ್ಳಿ	ಧಾರವಾಡ
೧೨-೫-೯೧	ಗುಲ್ಬರ್ಗಾ	ಬದಾಮಿ
೧೨-೫-೯೧	ಹರಿಹರ	ಬೆಂಗಳೂರು
೧೫-೫-೯೧	ಕಾರವಾರ	ಅಂಕೋಲ ಮುಂಡಗೋಡ, ಅಳ್ನಾವರ
೧೬-೫-೯೧	ಅಳ್ನಾವರ	ಜಾವಗಲ್
೧೮-೫-೯೧	ಬೆಂಗಳೂರು	ಭಟ್ಕಳ
೧೯-೫-೯೧	ಮಂಗಳೂರು	ಹೊಳಲಕೆರೆ
೨೧-೫-೯೧	ಬೆಂಗಳೂರು	ತಾಳಗುಪ್ಪ, ಚಿತ್ರದುರ್ಗ, ಬಳ್ಳಾರಿ.
೨೨-೫-೯೧	ರಾಯಚೂರು	ಶಿರಾ, ಬೆಂಗಳೂರು
೫-೬-೯೧	ಬೆಂಗಳೂರು	ಶಿರಾ, ಹಿರಿಯೂರು, ಚಳ್ಳಕೆರೆ
೭-೬-೯೧	ಬೆಂಗಳೂರು	ಹರಿಹರ, ಧಾರವಾಡ
೮-೬-೯೧	ಹರಿಹರ	ಬೆಂಗಳೂರು
೯-೬-೯೧	ಹರಿಹರ	ರಾಯಚೂರು, ದೇವದುರ್ಗ, ಸೋರಾಪೂರ.
೧೦-೬-೯೧	ಸೋರಾಪೂರ	ಯಾದಗಿರಿ, ಚಿತ್ತಾಪುರ.
೧೧-೯-೯೧	ಗುಲ್ಬರ್ಗ	ಚಿಂಚೋಳ್ಳಿ, ಆಳಂದ, ಭಾಲ್ಕಿ, ಹುಮನಾಬಾದ, ಬಾಗಲಕೋಟ
೧೨-೬-೯೧	ಅನವಟ್ಟಿ	ಮುದ್ದೇಬಿಹಾಳ, ಕಮತಗಿ.
೧೩-೬-೯೧ ಮತ್ತು ೧೪-೬-೯೧	ಧಾರವಾಡ	ಸಾಗರ, ಬೆಂಗಳೂರು.
೧೭-೬-೯೧	ಹರಿಹರ	ಅನವಟ್ಟಿ, ಬೆಂಗಳೂರು.
೨೫-೧೦-೯೧	ಬೆಂಗಳೂರು	ಹೊರನಾಡು, ಐ. ಆರ್. ಪ್ರಾಜೆಕ್ಟ್

೧೦-೧೧-೯೧	ಧಾರವಾಡ	ಕಾರವಾರ
೧೦-೧೧-೯೧	ಮಂಗಳೂರು	ಹುಣಸೂರು, ಕುಮಾರಪಟ್ಟಣಂ, ಬೆಂಗಳೂರು, ಮೈಸೂರು, ಬೆಂಗಳೂರು.
೧೫-೧೨-೯೧	ಬೆಳಗಾಂ	ಸಿರಸಿ
೧೬-೧೨-೯೧	ಆನವಟ್ಟಿ	ಬೆಂಗಳೂರು
೨೫-೧೨-೯೧	ಬೆಂಗಳೂರು	ತುಮಕೂರು, ಬೆಂಗಳೂರು.
೨೮-೧೨-೯೧	ಬೆಂಗಳೂರು	ಮಂಗಳೂರು, ಬೆಂಗಳೂರು
೯-೧-೯೨	ಬೆಂಗಳೂರು	ದಾವಣಗೆರೆ
೧೧-೧-೯೨	ನಾಡುರ	ಚಿಕ್ಕಮಂಗಳೂರು, ಮೂಡಿಗೆರೆ, ಶಿವಮೊಗ್ಗ, ಬೆಂಗಳೂರು
೧೪-೧-೯೨	ಬೆಂಗಳೂರು	ಗುಂಡ್ಲುಪೇಟೆ, ಮೈಸೂರು, ಬೆಂಗಳೂರು.
೨೦-೧-೯೨	ಬೆಂಗಳೂರು	ಪಾವಗಡ, ಬೆಂಗಳೂರು
೩೧-೧-೯೨ರಿಂದ ೧-೨-೯೨	ಧಾರವಾಡ	ಕಿತ್ತೂರು, ಮುಗಳಖೇಡ, ಹರಿಹರ, ಸಾಗರ, ಕೋಡಚದರಿ, ಹೊಸನಗರ, ಸಾಗರ.
೬-೨-೯೨	ಬೆಂಗಳೂರು	ಭದ್ರಾವತಿ, ಆನವಟ್ಟಿ
೯-೨-೯೨	ಬೆಂಗಳೂರು	ಕಾಗಿನೆಲೆ, ಕುಮಾರಪಟ್ಟಣಂ, ಬೆಂಗಳೂರು
೧೦-೨-೯೨	ಬೆಂಗಳೂರು	ಕುಮಾರಪಟ್ಟಣಂ, ಹುಲಕೋಟಿ
೧೩-೨-೯೨	ಬೆಂಗಳೂರು	ಜಿಗಣಿ, ಬೆಂಗಳೂರು
೧೮-೨-೯೨	ಬೆಂಗಳೂರು	ಸಾಗರ, ಚೆನ್ನಪಟ್ಟಣ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಚುಕ್ಕೆ ಗುರುತಿಲ್ಲದ ೨೭ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರು-ಕೋಲಾರದ ರಾಷ್ಟ್ರೀಯ ಹೆದ್ದಾರಿ ಬಗ್ಗೆ

೧೪೬೩ (೧೨೪೫) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಂಗಳೂರು-ಕೋಲಾರದ ರಾಷ್ಟ್ರೀಯ ಹೆದ್ದಾರಿ ೪ರಲ್ಲಿ ಇತ್ತೀಚೆಗೆ ವಾಹನಗಳ ಓಡಾಟ ಜಾಸ್ತಿಯಾಗಿ ಅಪಘಾತಗಳಿಂದ ಹೆಚ್ಚು ಸಾವು ನೋವುಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರಿನಿಂದ ಮುಳಬಾಗಿಲಿನವರೆಗೂ ರಾಷ್ಟ್ರೀಯ ಹೆದ್ದಾರಿ ಸ. ೪ನ್ನು ೪ ದಾರಿಗಳ ರಸ್ತೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದೇ?

ಇ) ಮೇಲ್ಕಂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಓಡಾಟ ವೇಗವಾಗಿ ಚಲಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಈ) ಮುಳುಬಾಗಿಲಿನ ಪಟ್ಟಣದ ಬಳಿ ವಾಹನಗಳ ಅಪಘಾತಗಳನ್ನು ತಪ್ಪಿಸಲು ಪಟ್ಟಣದ ಪಕ್ಕದಲ್ಲಿ ಬೈಪಾಸ್ ರಸ್ತೆಯನ್ನು ಮಾಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳು ಯಾವ ಹಂತದಲ್ಲಿವೆ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ಬೆಂಗಳೂರಿನಿಂದ ಮದ್ರಾಸ್‌ವರೆಗೆ ಈ ರಸ್ತೆಯನ್ನು 'ಎಕ್ಸ್‌ಪ್ರೆಸ್ ಹೈವೇ' ಆಗಿ ೨೦೦೦ ಎ. ಡಿ. ಒಳಗೆ ಅಭಿವೃದ್ಧಿಪಡಿಸಲು, ಕೇಂದ್ರ ಸರ್ಕಾರದವರು ಯೋಜನೆ ಹಾಕಿಕೊಂಡಿದ್ದಾರೆ. ಸದ್ಯಕ್ಕೆ ಬೆಂಗಳೂರಿನಿಂದ ಹೊಸಕೋಟೆಯವರೆಗೆ ರಸ್ತೆಯನ್ನು ೪ ಪಥ ರಸ್ತೆಯನ್ನಾಗಿ ಮಾಡಲು ೮ನೇ ಪಂಚ ವಾರ್ಷಿಕ ಯೋಜನೆಯಲ್ಲಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ.

ಇ) ಬೆಂಗಳೂರಿನಿಂದ ರಾಜ್ಯದ ಗಡಿಯವರೆಗೆ ರಸ್ತೆಯನ್ನು ಹಂತಹಂತವಾಗಿ, ಸಂಪೂರ್ಣವಾಗಿ ಬಲ ಪಡಿಸಲಾಗಿದೆ. ಮತ್ತು ಕೋಲಾರಕ್ಕೆ ಒಂದು ಬೈಪಾಸ್ ನಿರ್ಮಿಸಲಾಗಿದೆ. ನರಸಾಪುರಕ್ಕೂ ಕೂಡ ಬೈಪಾಸ್ ರಸ್ತೆ ನಿರ್ಮಿಸಲಾಗಿದೆ.

ಈ) ಮುಳಬಾಗಿಲಿನ ಬೈಪಾಸ್ ರಸ್ತೆಗೆ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ ರೂ. ೧೮೩.೮೪ ಲಕ್ಷ ರೂ.ಗಳ ಅಂದಾಜು ಪಟ್ಟಿ ಮಂಜೂರಾಗಿದ್ದು ಈ ಕೆಲಸವನ್ನು ಟೆಂಡರ್ ಮೂಲಕ ಶೀಘ್ರವೇ ಕೈಗೆತ್ತಿಕೊಳ್ಳಲಾಗುವುದು.

ಮುಳಬಾಗಿಲು ಪಟ್ಟಣದ ಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ನಿರ್ಮಾಣ

೧೪೬೪ (೧೨೬೭) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮುಳಬಾಗಿಲು ಪಟ್ಟಣದ ಪಕ್ಕದಲ್ಲಿ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಬೈಪಾಸ್ ನಿರ್ಮಾಣ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು?

ಆ) ಬೈಪಾಸನ್ನು ನಿರ್ಮಾಣ ಮಾಡಲು ತಗಲುವ ಅಂದಾಜು ವೆಚ್ಚವೆಷ್ಟು?

ಇ) ಪಟ್ಟಣದಲ್ಲಿ ದಿನೇ ದಿನೇ ಅಪಘಾತಗಳು ಹೆಚ್ಚಾಗುತ್ತಿರುವ ಪ್ರಯುಕ್ತ ಸದರಿ ಬೈಪಾಸನ್ನು ಕೂಡಲೇ ನಿರ್ಮಾಣ ಮಾಡಲು ಕಾರ್ಯಕ್ರಮ ಕೈಗೊಳ್ಳುವರೆ?

ಈ) ಈಗ ಅದು ಯಾವ ಹಂತದಲ್ಲಿದೆ?

ಶ್ರೀ ಜಿ. ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬೈಪಾಸ್‌ಗೆ ಬೇಕಾಗುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಮುಳಬಾಗಿಲು ಬೈಪಾಸ್ ರಸ್ತೆ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ ೨೯-೧೦-೯೧ರಲ್ಲಿ ಅಂದಾಜುಪಟ್ಟಿ ಮಂಜೂರಾಗಿದೆ. ಕೆಲಸವನ್ನು ಕೈಗೊಳ್ಳಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಆ) ಬೈಪಾಸ್ ರಸ್ತೆ ಕೆಲಸಕ್ಕೆ ೧೮೫.೪೪ ಲಕ್ಷ ರೂ. ಗಳಲ್ಲಿ ಅಂದಾಜು ಪಟ್ಟಿ ಕೇಂದ್ರ ಸರ್ಕಾರದಿಂದ ಮಂಜೂರಾಗಿದೆ.

ಇ) ಈ ಕೆಲಸಕ್ಕೆ ಟೆಂಡರ್ ಕರೆದಿದ್ದು ಕೆಲಸವನ್ನು ಶೀಘ್ರದಲ್ಲೇ ಟೆಂಡರ್ ಮೂಲಕ ಕೈಗೆತ್ತಿಕೊಳ್ಳಲಾಗುವುದು.

ಈ) ಈ ಕೆಲಸಕ್ಕೆ ಟೆಂಡರ್‌ಗಳು ಬಂದಿದ್ದು ಪರಿಶೀಲನೆಯಲ್ಲಿದ್ದು ಶೀಘ್ರದಲ್ಲೇ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಜಿಲ್ಲಾ ಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ವರ್ಗವಾಗಿರುವ ರಸ್ತೆಗಳು

೧೩೬೪ (೧೨೬೯) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯದಲ್ಲಿ ಜಿಲ್ಲಾ ಪರಿಷತ್ತುಗಳಿಂದ ಲೋಕೋಪಯೋಗಿ ಇಲಾಖೆಗೆ ಎಷ್ಟು ಕಿ. ಮೀ. ರಸ್ತೆ ವರ್ಗಾಯಿಸಬೇಕೆಂದಿರುವರು?

ಆ) ಲೋಕೋಪಯೋಗಿ ಇಲಾಖೆಗೆ ಸೇರಿದ ನಂತರ ಸರ್ಕಾರದವರು ಸದರಿ ರಸ್ತೆಗಳಿಗೆ ಕಿ. ಮೀ. ಒಂದಕ್ಕೆ ಎಷ್ಟು ಹಣ ಖರ್ಚು ಮಾಡಿ ಉತ್ತಮಪಡಿಸಲು ನಿರ್ಧರಿಸಿರುವರು?

ಇ) ಕೆಲವು ಮುಖ್ಯವಾದ ರಸ್ತೆಗಳಿಗೆ ಡಾಂಬರು ಹಾಕಲು ಪ್ರಯತ್ನಿಸುವರೇ?

ಶ್ರೀ ಜಿ. ಹೆಚ್. ಅಶ್ವಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ ೫೦ ಕಿ. ಮೀ.ನ ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು

ಸರ್ಕಾರದ ಆದೇಶವನ್ನು ದಿನಾಂಕ ೮-೧೨-೧೯೯೨ರಂದು ಹೊರಡಿಸಲಾಗಿದ್ದು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಆ) ಹೀಗೆ ಮೇಲ್ದರ್ಜೆಗೇರಿಸಿದ ರಸ್ತೆಗಳಿಗೆ ಪ್ರತಿ ಕಿ. ಮೀ. ಉದ್ದಕ್ಕೆ ೧.೫ ಲಕ್ಷ ರೂಗಳ ಅಂದಾಜಿನಲ್ಲಿ ರಸ್ತೆಗಳನ್ನು ಉತ್ತಮಪಡಿಸಲು ಯೋಚಿಸಲಾಗಿದೆ.

ಇ) ಈ ರೀತಿ ಮೇಲ್ದರ್ಜೆಗೆ ಏರಿಸಿದ ಕೆಲವು ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಡಾಂಬರೀಕರಣವನ್ನು ಮಾಡಲಾಗುವುದು.

ಚಿಂತಾಮಣಿ ತಾಲ್ಲೂಕಿನಲ್ಲಿ ಹೊಸದಾಗಿ ನಿರ್ಮಿಸಲು ಜಿಲ್ಲಾ ಪರಿಷತ್‌ನಿಂದ ಅಂದಾಜು ತಯಾರ್ಮಾಡಿ ಕೆಲಸ

೧೯೫೫ (೧೫೫೩) ಶ್ರೀ ಚೌಡರೆಡ್ಡಿ (ಚಿಂತಾಮಣಿ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಂತಾಮಣಿ ತಾಲ್ಲೂಕು (ಕೋನಪ್ಪಲ್ಲಿ ಮಂಡಲ್) ಅಂಬಾಜಿದುರ್ಗ ಹೋಬಳಿ ಚೌಂತ್ರ ಹಳ್ಳಿ ಅತ್ತಿಕೆರೆ ಹೊಸದಾಗಿ ನಿರ್ಮಿಸಲು ಜಿಲ್ಲಾ ಪರಿಷತ್‌ನಿಂದ ಅಂದಾಜು ತಯಾರ್ಮಾಡಿ ಕೆಲಸ ಪ್ರಾರಂಭವಾಗಿದೆಯೇ?

ಆ) ಹಾಗೇನಾದರೂ ಅಂದಾಜು ತಯಾರಿಸಿದ್ದರೆ ಅಂದಾಜು ಮೊಬಲಗು ಎಷ್ಟು? ತಯಾರಿಸಿದ ದಿನಾಂಕ ಮತ್ತು ಈ ಬಗ್ಗೆ ಎಷ್ಟು ಕೆಲಸ ಆಗಿದೆ?

ಇ) ಸದರಿ ಕೆಲಸದ ಬಗ್ಗೆ ಕೆಲವರು ಲೋಕಾಯುಕ್ತಕ್ಕೆ ದೂರು ನೀಡಿದ್ದು ಇದರ ಬಗ್ಗೆ ವಿಚಾರಣೆ ನಡೆದಿದೆಯೇ? ಮತ್ತು ಸದರಿ ಅಧಿಕಾರಿಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ?

ಈ) ಬಹಳ ದಿನಗಳಿಂದ ಈ ಕಾಮಗಾರಿ ಕೆಲಸ ನಿಂತು ಹೋಗಿ, ಅಚ್ಚುಕಟ್ಟುದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):-

ಅ) ಹೌದು.

ಆ) ಅಂದಾಜು ಮೊತ್ತ ೯.೯೮ ಲಕ್ಷ ರೂ.ಗಳಾಗಿದ್ದು ದಿನಾಂಕ ೨-೧೨-೮೮ರಂದು ತಯಾರಿಸಲಾಗಿದೆ. ನೀರಿನ ಗರಿಷ್ಟ ಮಟ್ಟದವರೆಗೆ ಏರಿಯನ್ನು ನಿರ್ಮಿಸಲಾಗಿದೆ ಹಾಗೂ ಕೋಡಿಯನ್ನು ನಿರ್ಮಿಸಲಾಗಿದೆ.

ಇ) ಸದರಿ ಕೆಲಸದ ಬಗ್ಗೆ ಲೋಕಾಯುಕ್ತದ ಅಧಿಕಾರಿಗಳು ಸ್ಥಳ ತನಿಖೆ ಮಾಡಿ ಸಂಬಂಧಪಟ್ಟ ಕಡತಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ಲೋಕಾಯುಕ್ತದೊಂದಿಗೆ ವ್ಯವಹರಿಸಲಾಗುತ್ತಿದೆ.

ಈ) ಬಂದಿದೆ.

ತಮಿಳುನಾಡಿನ ಊಟಿಯಲ್ಲಿರುವ ಕರ್ನಾಟಕ ವಸತಿ ಗೃಹವು ಹೀನಾಯ ಸ್ಥಿತಿಯಲ್ಲಿರುವ ಬಗ್ಗೆ

೧೯೫೬ (೧೫೫೪) ಶ್ರೀ ಅಂಜನಾ ಮೂರ್ತಿ (ನೆಲಮಂಗಲ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ತಮಿಳುನಾಡಿನ ಊಟಿಯಲ್ಲಿರುವ ಕರ್ನಾಟಕ ರಾಜ್ಯದ ಲೋಕೋಪಯೋಗಿ ಇಲಾಖೆಗ

ಸೇರಿದ ವಸತಿ ಗೃಹವು ಯಾವ ಸೌಕರ್ಯಗಳೂ ಇಲ್ಲದೆ ಹೀನಾಯ ಸ್ಥಿತಿಯಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರವಾಸಿಗರ ಹಿತದೃಷ್ಟಿಯಿಂದ ಸೌಕರ್ಯ ಒದಗಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ) ಕರ್ನಾಟಕ ರಾಜ್ಯಕ್ಕೆ ಸೇರಿದಂತೆ ಒಂದು ವಸತಿಗೃಹವಿದ್ದು ಅದು ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿದೆ.

ಆ) ಸದರೀ ವಸತಿಗೃಹದ ಅಭಿವೃದ್ಧಿಗಾಗಿ ೪.೬೫ ಲಕ್ಷ ರೂ. ಗಳ ಅಂದಾಜನ್ನು ತಯಾರಿಸಲಾಗಿದ್ದು, ಅದನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ರಾಣಿಬೆನ್ನೂರು ತಾಲ್ಲೂಕಿನಲ್ಲಿ ಕುಮುದ್ವತಿ ನದಿಗೆ ಅಡ್ಡಗೋಡೆಗಳ ನಿರ್ಮಾಣ

೧೫೯೭ (೧೮೬೮) ಶ್ರೀ ಕೆ. ಬಿ. ಕೋಳಿವಾಡ (ರಾಣಿಬೆನ್ನೂರು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಣಿಬೆನ್ನೂರು ತಾಲ್ಲೂಕಿನಲ್ಲಿ ಕುಮುದ್ವತಿ ನದಿಗೆ ಅಡ್ಡಲಾಗಿ ಲಿಂಗದಹಳ್ಳಿ ಹತ್ತಿರ ನಿಟ್ಟುರು, ಚಿಕ್ಕಮಾನಗನೂರು, ಹಿರೆಮಾಗನೂರ ಈ ಗ್ರಾಮದ ಹತ್ತಿರ ನದಿಗೆ ಅಡ್ಡ ಗೋಡೆಗಳನ್ನು (ಬ್ಯಾರೇಜು) ಕಟ್ಟಲು ಮನವಿಗಳು ಬಂದಿವೆಯೇ?

ಆ) ಹಾಗಿದ್ದಲ್ಲಿ ಈ ಅಡ್ಡಗೋಡೆಗಳನ್ನು ೧೯೯೩-೯೪ರಲ್ಲಿ ನಿರ್ಮಿಸಿ ಮುಗಿಸಲಾಗುವುದೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಹೌದು.

ಆ) ಈ ಅಡ್ಡಗೋಡೆಗಳು ಹೊಸ ಕಾಮಗಾರಿಯಾಗಿರುವುದರಿಂದ ಈ ಕಾಮಗಾರಿಗಳನ್ನು ೧೯೯೩-೯೪ರ ಒಟ್ಟು ಮೊತ್ತದ ಅನುದಾನದಲ್ಲಿ, ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಶಕ್ಯವೆಂದು ಕಂಡು ಬಂದಲ್ಲಿ, ಕಾಮಗಾರಿಗಳನ್ನು ಶುರು ಮಾಡಿ ಮುಗಿಸಲು ಪ್ರಯತ್ನಿಸಲಾಗುವುದು.

ಏತ ನೀರಾವರಿ ಯೋಜನೆ

೧೫೯೮ (೧೮೬೯) ಶ್ರೀ ಕೆ. ಬಿ. ಕೋಳಿವಾಡ (ರಾಣಿಬೆನ್ನೂರು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಣಿ ಬೆನ್ನೂರು ತಾಲ್ಲೂಕಿನಲ್ಲಿ ತುಂಗಭದ್ರಾ ನದಿಗೆ ಮೇಡ್ಲೇರಿ ಹತ್ತಿರ ಕವಲೆತ್ತು ನಟವಳ್ಳಿ, ಈ ಗ್ರಾಮಗಳ ಹತ್ತಿರ ಏತ ನೀರಾವರಿ ಯೋಜನೆಗಳನ್ನು ಕೂಡಲೇ ಕೈಗೆತ್ತಿಕೊಳ್ಳಲು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರತಿಯೊಂದು ಏತ ನೀರಾವರಿಗೆ ತಗಲುವ ವೆಚ್ಚವೆಷ್ಟು ಮತ್ತು ಆ ಯೋಜನೆಗಳಿಂದ ಎಷ್ಟು ಕ್ಷೇತ್ರಕ್ಕೆ ನೀರಾವರಿ ಸೌಲಭ್ಯ ಒದಗುವುದು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಈ ಯೋಜನೆಗಳನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಬೇಕಿದ್ದು, ಮೋಷ್ಲೇರಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆಯ ಪ್ರಾಥಮಿಕ ತನಿಖಾ ವರದಿಯನ್ನು ತಯಾರಿಸಲಾಗಿದ್ದು, ವರದಿಯು ಪರಿಶೀಲನೆಯಲ್ಲಿದೆ. ಕವಲತ್ತು ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆಯ ಪ್ರಾಥಮಿಕ ತನಿಖೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ನಿಟವಳ್ಳಿ ಗ್ರಾಮದ ಹತ್ತಿರ ಏತ ನೀರಾವರಿ ಯೋಜನೆಯು ಹೊಸ ಪ್ರಸ್ತಾವನೆಯಾಗಿದ್ದು, ಸ್ಥಳ ವೀಕ್ಷಣೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಈ ಯೋಜನೆಗಳ ತಾಂತ್ರಿಕ ಮತ್ತು ಆರ್ಥಿಕ ಶಕ್ಯತೆ ಬಗ್ಗೆ ವಿವರವಾದ ಅನ್ವೇಷಣೆ ಕೈಗೊಂಡು ಈ ಯೋಜನೆಗಳು ಸಾಧುವೆಂದು ಕಂಡು ಬಂದಲ್ಲಿ ವಿವರವಾದ ಅಂದಾಜನ್ನು ತಯಾರಿಸಿ, ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯ ಪಡೆದ ನಂತರ, ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ.

ಆ) ವಿವರವಾದ ಅನ್ವೇಷಣೆ ನಡೆಸಿದ ನಂತರವೇ ಈ ವಿವರಗಳು ಗೊತ್ತಾಗುವುದು.

ಬೆಳಗಾವಿ ಜಿಲ್ಲೆಯ ಬೈಲ ಹೊಂಗಲ ತಾಲ್ಲೂಕು ಶ್ರೀ ಕಮಲನಾರಾಯಣ ದೇವಸ್ಥಾನದಲ್ಲಿ ಪ್ರವಾಸಿಗರಿಗಾಗಿ ಸೌಲಭ್ಯ

೧೪೦೦ (೩೨೪೮):- ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕು ಬೇಗಾಂವೆ ಗ್ರಾಮದ ೧೧ನೇ ಶತಮಾನದ ಶ್ರೀ ಕಮಲನಾರಾಯಣ ದೇವಸ್ಥಾನದ ಶಿಲ್ಪಕಲೆಯನ್ನು ನೋಡಲು ರಾಜ್ಯದ ನಾನಾ ಭಾಗಗಳಿಂದ ಪ್ರವಾಸಿಗರು ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸ್ಥಳದಲ್ಲಿ ಪ್ರವಾಸಿಗರಿಗಾಗಿ ಸೌಲಭ್ಯಗಳನ್ನು ಒದಗಿಸಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಐತಿಹಾಸಿಕ ಶಿಲ್ಪಕಲೆಯನ್ನು ನೋಡಲು ಬರುತ್ತಿರುವ ಪ್ರವಾಸಿಗರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಿದ್ದಾರೆ?

ಈ) ಒಂದು ವೇಳೆ ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಸರ್ಕಾರವು ಇನ್ನು ಮುಂದೆಯಾದರೂ ಪ್ರವಾಸಿಗರಿಗೆ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವರೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಬಂದಿರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಈ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಗುರುತಿಸುವ ಸಾಧ್ಯತೆ ಬಗ್ಗೆ ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ನಡೆಸಿ ಪ್ರವಾಸಿ ಸೌಲಭ್ಯ ಒದಗಿಸುವ ಬಗ್ಗೆ ಪರಿಶೀಲಿಸಲಾಗುವುದು.

೧೯೯೧-೯೨ರ ಪ್ರವಾಸಿ ವರ್ಷದ ಭಾರತ ಸಂದರ್ಶಿಸಿ ಆಚರಣೆಯಲ್ಲಿ ಬಸವಕಲ್ಯಾಣದಲ್ಲಿ ಕಾರ್ಯಕ್ರಮ

೧೪೦೧ (೧೮೮೫) ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೧-೯೨ರ ಪ್ರವಾಸಿ ವರ್ಷದ ಭಾರತ ಸಂದರ್ಶಿಸಿ ಆಚರಣೆಯಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕೈಗೊಂಡ ಕಾರ್ಯಕ್ರಮಗಳೇನು ?

ಆ) ಸರ್ಕಾರ ಬಸವಕಲ್ಯಾಣ ತಾಲ್ಲೂಕಿಗೆ ಪ್ರಸ್ತುತ ವರ್ಷ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಯಾವ ಕಾರ್ಯಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಆ) ಪ್ರಸ್ತುತ ವರ್ಷದಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿರುವುದಿಲ್ಲ.

ಧಾರವಾಡ ಜಿಲ್ಲಾಪರಿಷತ್ತಿನಿಂದ ನೆರವಾಡ-ಸವಣೂರು ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗ ಮಾಡುವುದು

೧೪೦೨ (೧೮೮೬) ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಧಾರವಾಡ ಜಿಲ್ಲೆಯಲ್ಲಿರುವ ನೆರವಾಡ-ಸವಣೂರು ರಸ್ತೆಯನ್ನು ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿ ಇಲಾಖೆಯು ಪಡೆದುಕೊಂಡಿದೆಯೇ?

ಆ) ಹಾಗಿದ್ದಲ್ಲಿ ಯಾವ ಯಾವ ರಸ್ತೆಗಳನ್ನು ಲೋಕೋಪಯೋಗಿ ಇಲಾಖ ಪಡೆದುಕೊಂಡಿತು?

ಇ) ಲೋಕೋಪಯೋಗಿ ಇಲಾಖೆಯು ಈ ರಸ್ತೆಯನ್ನು ಪಡೆದುಕೊಂಡು ಸುಧಾರಣೆ ಮಾಡದಿರುವುದನ್ನು ಪ್ರತಿಭಟಿಸಿ ಸಾರ್ವಜನಿಕರು ರಾಸ್ತಾ ರೊಕೋ ಮಾಡಿದ್ದನ್ನು ಸರ್ಕಾರ ಗಮನಿಸಿದೆಯೇ?

ಈ) ಹಾಗಿದ್ದಲ್ಲಿ ಮೇಲ್ಕಂಡ ರಸ್ತೆಯ ದುರಸ್ತಿ ಮಾಡಲು ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಉ) ಮೇಲ್ಕಂಡ ರಸ್ತೆಯನ್ನು ಸುಧಾರಣೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಇಲ್ಲ.

ಆ) ಯಾವುದೂ ಇಲ್ಲ. ಆದರೆ ಆದೇಶ ಸಂಖ್ಯೆ ಪಿ. ಡಬ್ಲ್ಯು. ಡಿ. ೬೮ ಸಿಆರ್‌ಎಂ ೮೯ ದಿನಾಂಕ ೧೮-೨-೧೯೯೨ರಂತೆ, ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ

ವಿಧಾನ ಸಭಾ ಕ್ಷೇತ್ರಕ್ಕೆ ೫೦ ಕಿ. ಮೀ. ಮೀರದಂತೆ, ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ ತೆಗೆದುಕೊಳ್ಳಲಾಗುವುದು. ರಸ್ತೆಗಳ ವಿವರಣೆಗಳನ್ನು ಶೀಘ್ರವಾಗಿ ತೀರ್ಮಾನಿಸಲಾಗುವುದು.

ಇ) ಗಮನಕ್ಕೆ ಬಂದಿದೆ.

ಈ) ಈ ರಸ್ತೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದ್ದು ಲಭ್ಯವಿರುವ ಅನುದಾನದಲ್ಲಿ ಈ ರಸ್ತೆಯನ್ನು ಸಾಧ್ಯವಿದ್ದ ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಉ) ಶೀಘ್ರದಲ್ಲಿ ಈ ರಸ್ತೆಯನ್ನು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳುವ ವಿಷಯವನ್ನು ತೀರ್ಮಾನಿಸಲಾಗುವುದು.

ವರದಾ ನದಿಯ ಮೇಲೆ ಹಾಯ್ದು ಹೋಗುವ ವಾಹನಗಳಿಂದ ಸುಂಕ ವಸೂಲಿ

೧೪೦೩ (೧೮೮೭) ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ವರದಾ ನದಿಯ ಮೇಲೆ ಹಾಯ್ದು ಹೋಗುವ ವಾಹನಗಳಿಂದ ಸುಂಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸರ್ಕಾರಕ್ಕೆ ಇದರಿಂದ ಪ್ರಾರಂಭದಿಂದ ಇಲ್ಲಿಯವರೆಗೆ ಬಂದಿರುವ ಹಣವೆಷ್ಟು?

ಇ) ಈ ನದಿಯ ಮೇಲೆ ಕಟ್ಟಿರುವ ಸೇತುವೆಗೆ ಸರ್ಕಾರ ಖರ್ಚು ಮಾಡಿರುವ ಹಣವೆಷ್ಟು?

ಈ) ಈ ಸುಂಕ ವಸೂಲಾತಿಯನ್ನು ನಿಲ್ಲಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ?

ಉ) ಈ ಸುಂಕ ವಸೂಲಾತಿಯಲ್ಲಿ ಅವ್ಯವಹಾರಗಳು ನಡೆದ ಬಗ್ಗೆ ಸರ್ಕಾರಕ್ಕೆ ಮಾಹಿತಿಗಳೇನಾದರೂ ಬಂದಿದೆಯೇ?

ಊ) ಎಷ್ಟು ಬಾರಿ ಅಧಿಕಾರಿಗಳು ಈ ಬಗ್ಗೆ ತನಿಖೆ ನಡೆಸಿದ್ದಾರೆ?

ಶ್ರೀ ಜಿ. ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ಈ ಸೇತುವೆಯ ಮೇಲೆ ಈವರೆವಿಗೆ ವಸೂಲಾತಿಯಾಗಿರುವ ಸುಂಕದ ಮೌಲ್ಯವು ೧.೨೪ ಕೋಟಿ ರೂ. ಗಳು.

ಇ) ಈ ನದಿಯ ಮೇಲೆ ಕಟ್ಟಿರುವ ಸೇತುವೆಗೆ ಹಾಗೂ ಕೂಡು ರಸ್ತೆಗಳಿಗೆ ಒಟ್ಟು ೨,೧೪,೫೮,೬೩೪-೦೦ ರೂ. ಗಳನ್ನು ಖರ್ಚು ಮಾಡಲಾಗಿದೆ.

ಈ) ರಾಷ್ಟ್ರೀಯ ಹೆದ್ದಾರಿ ಕಾಯಿದೆಯ ಪ್ರಕಾರ ಈ ರೀತಿ ಸುಂಕ ವಸೂಲಿ ಮಾಡಲಾಗುತ್ತಿದೆ. ಸೇತುವೆಗೆ ಹಾಗೂ ಕೂಡು ರಸ್ತೆಗಳಿಗೆ ವೆಚ್ಚಮಾಡಿರುವ ಹಣ ಅದರ ಮೇಲಿನ ಬಡ್ಡಿ ಹಾಗೂ ನಿರ್ವಹಣಾ ವೆಚ್ಚ ಇವೆಲ್ಲವೂ ವಸೂಲಾಗುವವರೆಗೂ ಸುಂಕ ವಸೂಲಾತಿ ಮಾಡಿ ನಂತರ ನಿಲ್ಲಿಸಲಾಗುವುದು.

ಉ) ಬಂದಿಲ್ಲ. ಸುಂಕ ವಸೂಲಾತಿಯನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ.

ಊ) ಅವ್ಯವಹಾರಗಳಾವುವೂ ಇಲ್ಲದಿರುವುದರಿಂದ ತನಿಖೆ ನಡೆಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ಪ್ರವಾಸಿ ಮಂದಿರ ಹಾಗೂ ಸರ್ಕ್ಯೂಟ್ ಹೌಸ್ ಬಗ್ಗೆ

೧೪೦೪ (೧೮೮೮) ಶ್ರೀ ಪಿ. ಸಿ. ಸಿದ್ದನಗೌಡರ (ಕಲಘಟಗಿ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹುಬ್ಬಳ್ಳಿ ಪ್ರವಾಸಿ ಮಂದಿರ ಹಾಗೂ ಸರ್ಕ್ಯೂಟ್ ಹೌಸ್‌ನಲ್ಲಿರುವ ಕೊಠಡಿಗಳ ಸಂಖ್ಯೆ ಎಷ್ಟು?

ಆ) ಮುಖ್ಯ ಮಂತ್ರಿಗಳು ಹಾಗೂ ಮಂತ್ರಿಗಳು ಹುಬ್ಬಳ್ಳಿಗೆ ಬಂದಾಗ ಕೊಠಡಿಗಳು ಸಿಗದೆ ಧಾರವಾಡಕ್ಕೆ ಹೋಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಹಾಗಿದ್ದಲ್ಲಿ ಹುಬ್ಬಳ್ಳಿಯ ಪ್ರವಾಸಿ ಮಂದಿರ ಹಾಗೂ ಸರ್ಕ್ಯೂಟ್ ಹೌಸ್‌ಗಳಲ್ಲಿ ಈಗಿರುವ ಕೊಠಡಿಗಳ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ) ಕೊಠಡಿಗಳ ಒಟ್ಟು ಸಂಖ್ಯೆ ೨೨.

೧) ಪ್ರವಾಸಿ ಮಂದಿರದಲ್ಲಿ ೮ ಕೋಣೆಗಳು

೨) ಸರ್ಕ್ಯೂಟ್‌ಹೌಸ್‌ನಲ್ಲಿ ೯ ಕೋಣೆಗಳು

೩) ನಿರೀಕ್ಷಣಾ ಮಂದಿರದಲ್ಲಿ ೫ ಕೋಣೆಗಳು

ಒಟ್ಟು ೨೨

ಆ) ಹೌದು. ಕೆಲವೇ ಸಂದರ್ಭದಲ್ಲಿ ಮಾತ್ರ ಕೊಠಡಿಗಳು ಲಭ್ಯವಿಲ್ಲದ ಕಾರಣ ಧಾರವಾಡಕ್ಕೆ ಹೋಗಿರುವುದು ಉಂಟು.

ಇ) ಹುಬ್ಬಳ್ಳಿ ಪ್ರವಾಸಿ ಮಂದಿರದಲ್ಲಿ ೨.೦೦ ಲಕ್ಷ ರೂ. ಗಳ ಅಂದಾಜಿನಲ್ಲಿ ಹೆಚ್ಚು ಕೊಠಡಿಗಳನ್ನು ನಿರ್ಮಿಸಲು ಹಾಗೂ ಹುಬ್ಬಳ್ಳಿ-ಧಾರವಾಡ ನಗರಗಳ ಮಧ್ಯೆ ರಾಯಾಪೂರದಲ್ಲಿ ೯ ಸಾಧಾರಣ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ರಸ್ತೆ ಕಾಮಗಾರಿ ಕೆಲಸ

೧೪೦೫ (೧೮೮೯) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮಲಖೇಡದಿಂದ ಆಡಕಿ ಹುದಾವರೆಗೆ ಕಾರ್ಯ ನಿರ್ವಹಿಸುತ್ತಿದ್ದ ಗುತ್ತಿಗೆದಾರರು ಕೆಲಸವನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕಾಮಗಾರಿ ಸ್ಥಗಿತಗೊಳಿಸಲು ಕಾರಣವೇನು?

ಇ) ಈ ರಸ್ತೆ ಮೇಲೆ ದೊಡ್ಡ ದೊಡ್ಡ ಕೊರಕಲು ಬಿದ್ದು ಬಸ್ಸುಗಳಿಗೆ, ವಾಹನಗಳ ಸಂಚಾರಕ್ಕೆ ತೊಂದರೆಯಾಗುವುದನ್ನು ತಪ್ಪಿಸಲು, ಕಾಮಗಾರಿಯನ್ನು ಪ್ರಾರಂಭ ಮಾಡುವ ವ್ಯವಸ್ಥೆ ಮಾಡಲಾಗುವುದೇ?

ಈ) ರಸ್ತೆ ಸಂಪೂರ್ಣಗೊಳ್ಳುವುದು ಯಾವಾಗ?

ಶ್ರೀ ಜಿ. ಹೆಚ್ ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಈ ರಸ್ತೆಯ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಗುತ್ತಿಗೆದಾರರು ಬಹಳ ನಿಧಾನವಾಗಿ ಕಾಮಗಾರಿಯನ್ನು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಕಾಮಗಾರಿಯು ಸ್ಥಗಿತಗೊಂಡಿಲ್ಲ.

ಇ) ಕಾಮಗಾರಿಯನ್ನು ಶೀಘ್ರವಾಗಿ ಮಾಡುವಂತೆ ಗುತ್ತಿಗೆದಾರರಿಗೆ ನೋಟೀಸ್‌ಗಳನ್ನೂ ನೀಡಿದ್ದು, ಕಾಮಗಾರಿಗಳು ಸುಸೂತ್ರವಾಗಿ ನಡೆಯುವಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಕಾರ್ಯಕ್ರಮದಂತೆ ಈ ರಸ್ತೆಯ ಅಭಿವೃದ್ಧಿ ಕಾಮಗಾರಿಗಳು ನವೆಂಬರ್ ೯೩ಕ್ಕೆ ಪೂರ್ಣಗೊಳ್ಳುವುದು.

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸಂಕನೂರು ಗ್ರಾಮದ ಕುಡಿಯುವ ನೀರಿನ ಸಮಸ್ಯೆ

೧೪೦೬ (೧೮೯೦) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಸಂಕನೂರು ಗ್ರಾಮವು ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಯೋಜನೆ ಅಡಿಯಲ್ಲಿ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು?

ಇ) ಹಣ ಖರ್ಚಾಗಿಯೂ ಕೆಲಸ ನಡೆಯದಿರುವುದು ನಿಜವೇ?

ಈ) ಈಗ ಯಾವ ಯೋಜನೆಯಲ್ಲಿ ಕೆಲಸ ತೆಗೆದುಕೊಳ್ಳಲಾಗಿದೆ?

ಉ) ಈ ಕೆಲಸ ಪ್ರಗತಿಯಲ್ಲಿ ಇದೆಯೇ?

ಊ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಬಂದಿದೆ.

ಆ) ಈಗ ಕೈಗೊಂಡಿರುವ ಕೊಳವೆ ನೀರು ಪೂರೈಕೆ ಪುನಶ್ಚೇತನ ಯೋಜನೆಯಡಿಯಲ್ಲಿ ಇನ್ನೂ

ಹಣ ಖರ್ಚಾಗಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಲೆಕ್ಕ ಶೀರ್ಷಿಕೆ ೨೭೦೫ ಕೊಳವೆ ನೀರು ಪೂರೈಕೆ ಯೋಜನೆ ಪುನರ್‌ಶ್ಚೇತನ (ರಾಜ್ಯ)

ಉ) ಹೌದು.

ಊ) ಹೌದು.

ಸೇಡಂ ಮತ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಆಲೂರು (ಬಿ) ಹೊಸ ಕೆರೆ ನಿರ್ಮಾಣ

೧೪೦೮ (೨೨೫೬) ಶ್ರೀ ಬಸವಂತರಡ್ಡಿ ಮೋತಕಪಲ್ಲಿ (ಸೇಡಂ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ಮತ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಲ್ಲೂರು (ಬಿ) ಹೊಸ ಕೆರೆ ನಿರ್ಮಾಣವಾಗುವ ವೇಳೆಯಲ್ಲಿ ಅದರ ಏರಿ (ಕಟ್ಟೆ) ಕುಸಿದುಹೋಗಿ, ಅಪಾಯ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಕೆರೆ ಕುಸಿದುಹೋಗಿ ಪೂರ್ತಿಯಾಗದೇ ಪ್ರತಿ ವರ್ಷ ಮಳೆಗಾಲದಲ್ಲಿ ನೀರಿನ ಪ್ರವಾಹದಿಂದ ರೈತರ ಭೂಮಿಗಳು ಹಾಗೂ ಬೆಳೆಗಳು ನಷ್ಟವಾಗುವುದು ನಿಜವಲ್ಲವೇ?

ಇ) ನಷ್ಟವಾದರೆ ಆ ರೈತರಿಗೆ ಪರಿಹಾರ ಧನವನ್ನು ನೀಡಲಾಗಿದೆಯೇ?

ಉ) ಈಗಲಾದರೂ ಈ ಕೆರೆಯನ್ನು ಮಳೆಗಾಲದ ಒಳಗಾಗಿ ಪೂರ್ತಿ ಮಾಡಿ, ರೈತರ ಬೆಳೆಗಳಿಗೆ ಅನುಕೂಲ ಮಾಡಬಹುದೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಗಮನಕ್ಕೆ ಬಂದಿದೆ.

ಆ) ಪ್ರವಾಹದಿಂದ ರೈತರ ಭೂಮಿಗಳು ಹಾಗೂ ಬೆಳೆಗಳು ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಪ್ರಶ್ನೆಗೆ ಉತ್ತರಿಸಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) ಮಳೆಗಾಲದ ಒಳಗಾಗಿ ಕುಸಿದುಹೋಗಿರುವ ಏರಿ (ಕಟ್ಟೆ)ಯ ಭಾಗದ ಕೆಲಸವನ್ನು ಪೂರ್ಣಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಹಿರೇ ಕೇರೂರು ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ ಬ್ಯಾರೇಜ್‌ಗಳನ್ನು ಕಟ್ಟುವುದು

೧೪೧೧ (೨೦೪೭) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಕುಮದ್ವತಿ ನದಿಗೆ ೧) ಯಲಿವಾಳ ೨) ರಟ್ಟಿ ಹಳ್ಳಿ ಮತ್ತು ೩) ಕುಡುಪಲಿ ಗ್ರಾಮಗಳ ಹತ್ತಿರ ಬ್ಯಾರೇಜಗಳನ್ನು ಕಟ್ಟಿಸಿ ಅಲ್ಲಿಯ ರೈತರಿಗೆ ನೀರಾವರಿ ಅನುಕೂಲತೆ ಮಾಡಿಕೊಡಲು ಒತ್ತಾಯ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ೧೯೯೨-೯೩ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಾಣಿಸಿದ ಬ್ಯಾರೇಜ್ ನಿರ್ಮಾಣಕ್ಕೆ ಹಣ ಒದಗಿಸಲಾಗಿದೆಯೇ?

ಇ) ಯಾವ ಯಾವ ಬ್ಯಾರೇಜಿನ ನಿರ್ಮಾಣ ಮಾಡಲು ಸರಕಾರ ತೀರ್ಮಾನಿಸಿದೆ. ಅದಕ್ಕಾಗಿ ೧೯೯೨-೯೩ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಹಣವೆಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ಬಂದಿದೆ.

ಆ) ಈ ಯೋಜನೆಗಳು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಶಕ್ಯವೆಂದು ಕಂಡುಬಂದಲ್ಲಿ ೧೯೯೨-೯೩ನೇ ಸಾಲಿನಲ್ಲಿ ಒದಗಿಸಲಾಗುವುದು.

ಇ) ಮೇಲ್ಕಾಣಿಸಿದ ಬ್ಯಾರೇಜುಗಳು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಶಕ್ಯವಿದ್ದಲ್ಲಿ ನಿರ್ಮಾಣ ಮಾಡಲು ತೀರ್ಮಾನಿಸಲಾಗುವುದು. ೧೯೯೨-೯೩ನೇ ಸಾಲಿನಲ್ಲಿ ಹೊಸ ಕಾಮಗಾರಿಗಳಿಗೆ ಒಟ್ಟು ಮೊತ್ತ ೩೯೧.೬೬ ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಹುಬ್ಬಳ್ಳಿಯಲ್ಲಿ ವಾಯುದೂತ್ ವಿಮಾನ ನಿಲ್ದಾಣ

೧೪೧೨ (೨೦೪೮) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹುಬ್ಬಳ್ಳಿಯಲ್ಲಿ ವಾಯುದೂತ್ ವಿಮಾನ ನಿಲ್ದಾಣ ಪ್ರಾರಂಭವಾಗಿದೆಯೇ?

ಆ) ಸದರಿ ನಿಲ್ದಾಣಕ್ಕಾಗಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ?

ಇ) ಸದರಿ ವಿಮಾನ ನಿಲ್ದಾಣದಲ್ಲಿ ವಾಯುದೂತ್ ಸಂಚಾರ ಈವರೆಗೆ ಪ್ರಾರಂಭವಾಗದಿರುವುದಕ್ಕೆ ಕಾರಣಗಳೇನು?

ಈ) ಎಂದಿನಿಂದ ಸಂಚಾರವನ್ನು ಪ್ರಾರಂಭಿಸಲಾಗುವುದು?

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ) ಪ್ರಾರಂಭವಾಗಿತ್ತು.

ಆ) ಈ ಕಾಮಗಾರಿಯನ್ನು ರಾಜ್ಯ ಸರ್ಕಾರದ ನಿಧಿಯಿಂದ ತೆಗೆದುಕೊಳ್ಳಲಾಗಿದೆ. ಈ ವಿಮಾನ ನಿಲ್ದಾಣದ ನಿರ್ಮಾಣಕ್ಕಾಗಿ ೧೯೯೨ರ ಜನವರಿ ಅಂತ್ಯದವರೆಗೆ ೧೫೪.೩೧ ಲಕ್ಷ ರೂಪಾಯಿ ಖರ್ಚಾಗಿರುತ್ತದೆ ಹಾಗೂ ಈ ನಿಲ್ದಾಣ ವಿಸ್ತರಣೆಗಾಗಿ ೧೯೯೨ರ ಜನವರಿ ಅಂತ್ಯದವರೆಗೆ ೧೧೫.೮೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿರುತ್ತದೆ.

ಇ) ಈ ನಿಲ್ದಾಣದಲ್ಲಿ ಮೇ ೧೯೮೯ರಿಂದ ಡಿಸೆಂಬರ್ ೧೯೮೯ರವರೆಗೆ ಡಾರ್ನಿಯರ್ ವಿಮಾನದ ಸಂಚಾರವು ವಾಯುದೂತ್ ನಿಗಮದವರಿಂದ ನಡೆಸಲಾಗುತ್ತಿತ್ತು. ಈ ವಿಮಾನ ನಿಲ್ದಾಣದ ಬಳಿ ಇರುವ ೧೧೦ ಕಿ. ಹ್ಯ. ವ್ಯಾಟ್ಸ್‌ನ ವಿದ್ಯುತ್ ತಂತಿಯಿಂದ ವಿಮಾನಯಾನಕ್ಕೆ ಅಡಚಣೆಯಾಗುವುದು ಹಾಗೂ ವಾಯುದೂತ್ ನಿಗಮದಲ್ಲಿ ವಿಮಾನಗಳ ಕೊರತೆಯಿದೆ, ಜನವರಿ ೧೯೯೦ರಲ್ಲಿ ಈ

ಸೇವೆಯನ್ನು ನಿಲ್ಲಿಸಲಾಗಿದೆ.

ಈ) ೧೧೦ ಕಿ. ವ್ಯಾಟ್ಸ್‌ನ ವಿದ್ಯುತ್ ತಂತಿಯನ್ನು ಸ್ಥಳಾಂತರಿಸಿದ ನಂತರ ಈ ಸಂಚಾರವನ್ನು ಪ್ರಾರಂಭಿಸುವ ಬಗ್ಗೆ ವಾಯುದೂತ್ ನಿಗಮದವರೊಂದಿಗೆ ವ್ಯವಹರಿಸಲಾಗುವುದು.

ಧಾರವಾಡ ಜಿಲ್ಲಾ ಪರಿಷತ್‌ನಿಂದ ಡಿ.ಪಿ.ಎ.ಡಿ. ಯೋಜನೆಯಡಿ ಪ್ರತಿ ತಾಲ್ಲೂಕಿಗೆ ಮಂಜೂರಾದ ಹಣ

೧೪೧೪ (೨೦೫೧) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಧಾರವಾಡ ಜಿಲ್ಲಾ ಪರಿಷತ್‌ನಿಂದ ಡಿಪಿಎಪಿ ಯೋಜನೆಯಡಿ ಜಿಲ್ಲಾ ಪರಿಷತ್ ಕಾರ್ಯ ನಿರ್ವಾಹಕ ಇಂಜಿನೀಯರಿಗೆ ಪ್ರತಿ ತಾಲ್ಲೂಕಿನಲ್ಲೂ ಎಷ್ಟು ಹಣ ಖರ್ಚು ಮಾಡಲಾಗಿದೆ ಹಾಗೂ ಎಷ್ಟು ಹಣ ಮಂಜೂರಾಗಿತ್ತು ?

ಆ) ಸದರಿ ಕಾಮಗಾರಿಗಳನ್ನು ಇಲಾಖೆ ಪತಿಯಿಂದ ಪ್ರಾರಂಭಿಸಲಾಗಿದೆಯೆ ಅಥವಾ ಕಂಟ್ರಾಕ್ಟರರ ಮುಖಾಂತರ ಮಾಡಿಸಲಾಗಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಧಾರವಾಡ ಜಿಲ್ಲಾ ಪರಿಷತ್ ಕಾರ್ಯ ನಿರ್ವಾಹಕ ಇಂಜಿನೀಯರ್ ವಿಭಾಗದ ತಾಲ್ಲೂಕುಗಳಲ್ಲಿ ಡಿಪಿಎಪಿಯಲ್ಲಿ ಬಿಡುಗಡೆ ಮಾಡಿರುವ ಮತ್ತು ಖರ್ಚಾಗಿರುವ ಹಣದ ವಿವರಗಳನ್ನು ತೋರಿಸುವ ತಃಖ್ತೆ ಲಗತ್ತಿಸಿದೆ.

ಆ) ಕಾಮಗಾರಿಗಳನ್ನು ಇಲಾಖಾ ಪತಿಯಿಂದ ತೆಗೆದುಕೊಳ್ಳಲಾಗಿದೆ.

ತಃಖ್ತೆ

ಜಿಲ್ಲೆ	ಕಾರ್ಯನಿರ್ವಾಹಕ ಇಂಜಿನಿಯರಿಂಗ್ ವಿಭಾಗ	ತಾಲ್ಲೂಕು	ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ಖರ್ಚಾದ ಹಣ (ರೂ. ಲಕ್ಷಗಳಲ್ಲಿ) (ಫೆಬ್ರವರಿ ೯೨ರ ಅಂತ್ಯದವರೆಗೆ)
ಧಾರವಾಡ	ಧಾರವಾಡ	ಧಾರವಾಡ	೩.೧೩೦	ಇಲ್ಲ
		ಹುಬ್ಬಳ್ಳಿ	೨.೦೩೬	೦.೧೩೨
		ಕಲಘಟಗಿ	೨.೮೮೪	೦.೯೫೮
		ಶಿಗ್ಗಾಂವ	೯.೮೧೩	೩.೮೯೭
		ಕುಂದಗೋಳ	೪.೪೦೦	ಇಲ್ಲ
			೨೨.೨೬೩	೪.೯೮೭

ಹಾವೇರಿ	ಹಾವೇರಿ	೫.೦೫೫	(-) ೦.೧೬೯
	ಹಾನಗಲ್‌ಡಿಪಿಎಪಿಸಲ್ಲಿ ಕೆಲಸ ತೆಗೆದುಕೊಂಡಿಲ್ಲ		
	ಹಿರೇಕೆರೂರು	೪.೮೪೦	೦.೬೫೨
	ರಾಣೆಬೆನ್ನೂರು	೭.೬೧೦	೬.೪೧೫
	ಬ್ಯಾಡಗಿ	೫.೯೫೦	೦.೭೩೫
	ಸವಣೂರು	೫.೨೦೦	೦.೯೫೧
		೨೮.೬೫೫	೮.೭೫೩
			(-) ೦.೧೬೯
			= ೮.೫೮೪
ಗದಗ	ಗದಗ	೨.೩೮೪	೨.೬೨೦
	ಶಿರಹಟ್ಟಿ	೮.೪೪೯	೨.೦೫೦
	ರೋಣ	೪.೭೩೯	೦.೮೮೦
	ಮುಂಡರಗಿ	೭.೬೬೬	೨.೫೫೦
		೨೩.೨೩೮	೮.೧೦೦
	ಒಟ್ಟು ಜುಮ್ಲಾ	೭೪.೧೫೬	೨೧.೬೭೧

ರಾಜ್ಯಾದ್ಯಾಂತ ಇರುವ ದಿನಪತ್ರಿಕೆಗಳು

೧೪೧೫ (೨೦೫೧) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ರಾಜ್ಯಾದ್ಯಾಂತ ಇರುವ ದಿನಪತ್ರಿಕೆಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ದೊಡ್ಡ ಹಾಗೂ ಸಣ್ಣ ದಿನಪತ್ರಿಕೆಗಳ ಸಂಖ್ಯೆ ಎಷ್ಟು?

ಇ) ಸಣ್ಣ ಪತ್ರಿಕೆಗಳನ್ನು ನಡೆಸಲು ಪರವಾನಿಗೆ ನೀಡಲು ಇರುವ ನಿಯಮಗಳೇನು?

ಈ) ಸಣ್ಣ ಪತ್ರಿಕೆಗಳ ಉಳಿವಿಗಾಗಿ ಸರಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ದೈನಿಕಗಳು - ೨೪೬

ಆ) ಸಣ್ಣ ಪತ್ರಿಕೆಗಳು - ೨೩೯, ದೊಡ್ಡ ಪತ್ರಿಕೆಗಳು - ೭.

ಇ) ನವದೆಹಲಿಯಲ್ಲಿರುವ ರಿಜಿಸ್ಟ್ರಾರ್ ಆಫ್ ನ್ಯೂಸ್ ಪೇಪರ್ಸ್ ಇವರಿಂದ ಪತ್ರಿಕೆ ನಡೆಸಲು ಹೆಸರು (ಟೈಟಲ್) ಪಡೆಯಬೇಕು.

ಈ) ಸಣ್ಣ ಪತ್ರಿಕೆಗಳಿಗಾಗಿ ರಾಜ್ಯ ಸರ್ಕಾರ ಜಾಹೀರಾತು ನೀಡುತ್ತಿದೆ.

ವರದಾ ನದಿಗೆ ಬಂದಾರ ಬ್ರಿಡ್ಜ್ ಕಟ್ಟುವ ಬಗ್ಗೆ

೧೪೧೬ (೨೦೫೨) ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಸವಣೂರು ತಾಲ್ಲೂಕು ಕಳಸೂರು ಗ್ರಾಮದ ರೈತರು ವರದಾ ನದಿಗೆ ಬಂದಾರ ಬ್ರಿಡ್ಜ್ ಕಟ್ಟಬೇಕೆಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದ್ದು ನಿಜವೇ?

ಆ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು? ಈ ಬಗ್ಗೆ ಯೋಜನಾ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದೆಯೇ?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ನಿಜ.

ಆ) ಈ ಕಾಮಗಾರಿಯ ಪೂರ್ವಭಾವಿ ತನಿಖಾ ವರದಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಯು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ಶಕ್ಯವೆಂದು ಕಂಡು ಬಂದಲ್ಲಿ ವಿವರವಾದ ನಕ್ಷೆ ಮತ್ತು ಅಂದಾಜನ್ನು ತಯಾರಿಸಿ ೧೯೯೨-೯೩ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳುವ ಬಗ್ಗೆ ಪರಿಶೀಲಿಸಲಾಗುವುದು.

ಗುಬ್ಬಿ ತಾಲ್ಲೂಕು ಗಳಗಿ ಕೆರೆಗ್ರಾಮದ ಹತ್ತಿರ ಸನ್ನಿಹಳ್ಳಿ ಕೆರೆ ನಿರ್ಮಾಣ

೧೪೮೯ (೨೦೫೪) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಗುಬ್ಬಿ ತಾಲ್ಲೂಕು ಹಾಗಲವಾಡಿ ಹೋಬಳಿ ಗಳಗಿ ಕೆರೆ ಗ್ರಾಮದ ಹತ್ತಿರ ಸನ್ನಿಹಳ್ಳಿ ಕೆರೆ ನಿರ್ಮಾಣವು ಡಿ.ಪಿ.ಎ.ಪಿ. ಯೋಜನೆಯಡಿಯಲ್ಲಿ ಮಂಜೂರಾಗಿದ್ದು ಇಲ್ಲಿಯವರೆಗೂ ಕಾಮಗಾರಿಯನ್ನು ತೆಗೆದುಕೊಂಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಿಂಗದಹಳ್ಳಿ ಕೆರೆಯಿಂದ ಬರುವ ಬಯಲಿನಲ್ಲಿ ಸಾಕಷ್ಟು ನೀರಿಲ್ಲದೆ ಅಚ್ಚುಕಟ್ಟಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸನ್ನಿಹಳ್ಳಿ ಕಾಮಗಾರಿಯನ್ನು ಪೂರ್ಣಗೊಳಿಸಿದಲ್ಲಿ ಸಿಂಗಟ ಹಳ್ಳಿ ಬಯಲಿಗೂ ನಿರುದ್ಯೋಗಿ ರೈತರಿಗೆ ಸಹಾಯ ಆಗುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?

ಈ) ಹಾಗಿದ್ದಲ್ಲಿ ಸದರಿ ಕೆರೆಯ (ಸನ್ನಿಹಳ್ಳಿ) ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ) ಹೌದು.

ಆ) ಹೌದು.

ಇ) ಹೌದು.

ಈ) ಸನ್ನಿಹಳ್ಳಿ ಕೆರೆಯ ಕಾಮಗಾರಿಯನ್ನು ತುಮಕೂರು ಜಿಲ್ಲಾ ಪರಿಷತ್ತಿನ ೧೯೯೨-೯೩ನೇ ಸಾಲಿನ ಸಣ್ಣ ನೀರಾವರಿ ಕರಡು ಆಯವ್ಯಯ ಪಟ್ಟಿಯ ಅನುಬಂಧ 'ಇ' ನಲ್ಲಿ ಸೇರಿಸಲಾಗಿದೆ. ಇದಕ್ಕೆ ಅನುಮೋದನೆ ದೊರೆತರೆ ಈ ಕೆರೆಯ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಹಾಗೂ ತದನಂತರ ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ಮೈಸೂರಿನಲ್ಲಿ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರದ ಹಣ

೧೪೨೩ (೨೧೫೨) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮೈಸೂರಿನಲ್ಲಿ ರಾಜ್ಯ ಗ್ರಾಮೀಣ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರವು ಹಣ ವೆಚ್ಚ ಮಾಡಿದೆಯೇ?

ಆ) ಹೌದಾದಲ್ಲಿ ಈವರೆಗೆ ವೆಚ್ಚಮಾಡಿರುವ ಮೊಬಲಗು ಎಷ್ಟು?

ಇ) ಸಿಬ್ಬಂದಿ ವ್ಯವಸ್ಥೆ ಏನು?

ಈ) ನಿರ್ದೇಶಕರು ಸೇರಿದಂತೆ ಪೂರ್ಣಾವಧಿ ಸಿಬ್ಬಂದಿಯವರು ಇದ್ದಾರೆಯೇ?

ಉ) ಹೌದಾದಲ್ಲಿ ಸಿಬ್ಬಂದಿ ಮೇಲಿನ ವಾರ್ಷಿಕ ವೆಚ್ಚ ಎಷ್ಟು?

ಊ) ಅನುಷ್ಠಾನಕ್ಕೆ ತರಲಾದ ಕಾರ್ಯಕ್ರಮಗಳ ಸಂಖ್ಯೆ ಎಷ್ಟು?

ಎ) ಕಾರ್ಯಕ್ರಮಗಳ ಮೇಲಿನ ವೆಚ್ಚ ಎಷ್ಟು?

ಐ) ಕ್ಷೇತ್ರ ತರಬೇತಿ ಹೊಂದಿದ ಸಿಬ್ಬಂದಿಯ ಸಂಖ್ಯೆ ಎಷ್ಟು?

ಒ) ಈ ಸಂಸ್ಥೆಯನ್ನು ಈ ಹಿಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಸಚಿವರಾಗಿದ್ದ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಹೆಸರನ್ನು ಇಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಹಾಗೂ ಕಂದಾಯ ಸಚಿವರು):-

ಅ ಮತ್ತು ಆ) ಯೂರೋಪಿಯನ್ ಆರ್ಥಿಕ ಸಮುದಾಯದ ನೆರವಿನಿಂದ ಭಾರತ ಸರ್ಕಾರವು ಕಟ್ಟಡಕ್ಕೆ ರೂ. ೫೫ ಲಕ್ಷ ಹಾಗೂ ಉಪಕರಣಗಳ ಖರೀದಿಗೆ ರೂ. ೨೦ ಲಕ್ಷ ಬಿಡುಗಡೆಮಾಡಿದೆ. ಬಿಡುಗಡೆಯಾದ ಈ ಎಲ್ಲಾ ಹಣವನ್ನು ವೆಚ್ಚಮಾಡಲಾಗಿದೆ.

ಇ) ಸಿಬ್ಬಂದಿ ವ್ಯವಸ್ಥೆ ಈ ಕೆಳಕಂಡಂತಿದೆ

೧)	ನಿರ್ದೇಶಕರು	೧
೨)	ಬೋಧಕರು	೩
೩)	ಅಪರನಿರ್ದೇಶಕರು	೧
೪)	ಅಧೀಕ್ಷಕರು	೧
೫)	ಕ್ಷೇಮ ಪಾಲಕರು	೧

೬)	ಶೀಘ್ರಲಿಪಿಗಾರರು	೨
೭)	ಪ್ರಥಮದರ್ಜೆ ಸಹಾಯಕರು	೧
೮)	ಸಿನಿಚಾಲಕರು	೧
೯)	ಟೆಲಿಫೋನ್ ಚಾಲಕರು	೧
೧೦)	ಬೆರಳಚ್ಚುಗಾರರು	೧
೧೧)	ದ್ವಿತೀಯ ದರ್ಜೆ ಸಹಾಯಕರು	೩
೧೨)	ವಾಹನಚಾಲಕರು	೧
೧೩)	ಅಡಿಗೆಯವರು	೨
೧೪)	ಅಡಿಗೆ ಸಹಾಯಕರು	೨
೧೫)	'ಡಿ' ವರ್ಗದ ನೌಕರರು	೧೨
	ಒಟ್ಟು	೩೮

ಈ) ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಮಹಾ ನಿರ್ದೇಶಕರನ್ನು ಈ ಸಂಸ್ಥೆಗೆ ನಿರ್ದೇಶಕರೆಂದು ಘೋಷಿಸಲಾಗಿದೆ. ಈಗ ೭ ಮಂದಿ ಪೂರ್ಣಾವಧಿ ಪೂರಕ ಸಿಬ್ಬಂದಿಯವರು ಇತರ ಇಲಾಖೆಗಳಿಂದ ಪ್ರತಿನಿಯೋಜನೆ ಮೇಲೆ ಬಂದಿರುತ್ತಾರೆ. ಸೂಕ್ತ ಬೋಧಕವರ್ಗದವರನ್ನು ಗುರುತಿಸಿ ನೇಮಕಾತಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.

ಉ) ೧೯೯೧-೯೨ನೇ ಸಾಲಿನಲ್ಲಿ ಸಿಬ್ಬಂದಿಯ ವೇತನ ಹಾಗೂ ಇತರ ಆವರ್ತಕ ವೆಚ್ಚಗಳಿಗಾಗಿ ಈವರೆಗೆ ರೂ. ೮,೩೧,೪೫೭-೦೦ನ್ನು ವೆಚ್ಚಮಾಡಲಾಗಿದೆ. ಹಾಗೂ ಇದರಲ್ಲಿ ಶತಾಂಶ ೫೦ರಷ್ಟನ್ನು ಭಾರತ ಸರ್ಕಾರವು ಮರುಪಾವತಿ ಮಾಡುವುದು.

ಊ) ೧-೨-೧೯೯೨ಕ್ಕೆ ಇದ್ದಂತೆ ೨೭ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಎ) ರೂ. ೨,೧೨,೫೧೦-೦೦

ಐ) ಸದರಿ ಸಂಸ್ಥೆಯಲ್ಲಿ ಎ ಮತ್ತು ಬಿ ವರ್ಗದ ಅಧಿಕಾರಿಗಳು, ಜಿಲ್ಲಾಪರಿಷತ್‌ನ ಚುನಾಯಿತ ಪ್ರತಿನಿಧಿಗಳು ಹಾಗೂ ಮಂಡಲ ಪಂಚಾಯಿತಿಗಳ ಪ್ರಧಾನರು ಮತ್ತು ಉಪ ಪ್ರಧಾನರುಗಳಿಗೆ ತರಬೇತಿಯನ್ನು ನೀಡಲಾಗುವುದು. ೧೯೯೧-೯೨ರಲ್ಲಿ ಈವರೆಗೆ ೪೭೯ ಮಂದಿ ಅಧಿಕಾರಿಗಳು ಹಾಗೂ ೩೨ ಮಂದಿ ಚುನಾಯಿತ ಪ್ರತಿನಿಧಿಗಳನ್ನು ೧-೨-೧೯೯೨ರವರೆಗೆ ತರಬೇತುಗೊಳಿಸಲಾಗಿದೆ.

ಒ) ಈ ಸಂಸ್ಥೆಯನ್ನು ಈ ಹಿಂದಿನ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವರಾಗಿದ್ದ ದಿವಂಗತ ಶ್ರೀ ಅಬ್ದುಲ್ ನಜೀರ್‌ಸಾಬ್‌ರವರ ಸ್ಮರಣಾರ್ಥ ಅಬ್ದುಲ್‌ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಎಂದು ನಾಮಕರಣ ಮಾಡಲಾಗಿದೆ.

೧೯೯೨ರ ಒಲಂಪಿಕ್ಸ್‌ನಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ತರಬೇತಿ

೧೪೨೪ (೨೧೫೩) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೯೨ರ ಒಲಂಪಿಕ್ಸ್‌ನಲ್ಲಿ ಭಾಗವಹಿಸುವ ಕರ್ನಾಟಕದ ಪುರುಷ/ಮಹಿಳಾ ಕ್ರೀಡಾ ಪಟುಗಳಿಗೆ ತರಬೇತಿ ನೀಡುವ ಯಾವುದಾದರೂ ಯೋಜನೆಗಳು ಸರ್ಕಾರದಲ್ಲಿಯೇ?

ಆ) ಹಾಗಿದ್ದಲ್ಲಿ, ಕ್ರೀಡಾಪಟುಗಳಿಗೆ ವಿಸ್ತರಿಸಲಾದ ಸವಲತ್ತುಗಳು.

ಇ) ಇಂತಹ ಸವಲತ್ತುಗಳನ್ನು ನೀಡಲು ಗುರುತಿಸಲಾದ ಕ್ರೀಡಾಪಟುಗಳು.

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯಿಂದ ರಾಯಚೂರ ಜಿಲ್ಲೆಯಲ್ಲಿ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ

೧೪೨೫ (೨೧೫೪) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಲೋಕೋಪಯೋಗಿ ಇಲಾಖೆಯಿಂದ ರಾಯಚೂರು ಜಿಲ್ಲೆಯಲ್ಲಿ ಎಷ್ಟು ರಸ್ತೆಗಳನ್ನು ಮೇಲ್ದರ್ಜೆಗೆ ಪರಿವರ್ತಿಸಲು ಆಯ್ಕೆ ಮಾಡಲಾಗಿದೆ? (ರಸ್ತೆಯ ಹೆಸರು, ಉದ್ದ ಇತ್ಯಾದಿ ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಈ ಬಗ್ಗೆ ಆದ ವೆಚ್ಚ.

ಶ್ರೀ ಜಿ. ಹೆಚ್. ಅಶ್ವಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಸರ್ಕಾರದ ಆದೇಶ ಸಂಖ್ಯೆ ಪಿ.ಡಬ್ಲ್ಯೂ. ಡಿ. ೬೮ ಸಿಆರ್‌ಎಂ ೮೦ ದಿನಾಂಕ ೧೮-೨-೧೯೯೨ರ ಪ್ರಕಾರ, ಜಿಲ್ಲಾ ಪರಿಷತ್‌ಗಳ ವ್ಯಾಪ್ತಿಯಲ್ಲಿರುವ ರಸ್ತೆಗಳಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ೫೦ ಕಿ. ಮೀ. ಮೀರದಂತೆ ಒಟ್ಟು ೧೦೦೦೦ ಕಿ. ಮೀ. ಉದ್ದದ ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ಅನುಮೋದನೆ ನೀಡಲಾಗಿದೆ. ಆದರಂತೆ ರಾಯಚೂರು ಜಿಲ್ಲೆಯ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ೫೦ ಕಿ. ಮೀ. ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ನಿರ್ಧರಿಸಲಾಗುವುದು.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆರೂರು ಸೇತುವೆ ನಿರ್ಮಿಸುವ ಕುರಿತು

೧೪೨೭ (೩೨೧೦) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊಳಲಗಿರಿ ಕುಂಜಾಲು ರಸ್ತೆಯ ಮಧ್ಯೆ ಮಡಿಸಹೊಳೆಗೆ ಬೆಳ್ಮಾರು ಸ್ಥಳದಲ್ಲಿ ಆರೂರು

ಸೇತುವೆ ನಿರ್ಮಿಸುವ ಕುರಿತಂತೆ ಪರಿಸರದ ನಾಗರೀಕರ ಬೇಡಿಕೆ ಇಲಾಖಾ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ ಈವರೆಗೆ ಕೈಗೊಂಡ ಕ್ರಮವೇನು ? ಇಕ್ಕೆಡೆಗಳ ಕೂಡು ರಸ್ತೆ ಪೂರ್ಣಗೊಂಡು ಸೇತುವೆ ಕಾಮಗಾರಿ ಅರ್ಧಕ್ಕೆ ನಿಲ್ಲಿಸಲು ಕಾರಣಗಳೇನು ?

ಇ). ಈ ಸೇತುವೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಇಲಾಖೆ ಸಚಿವರು):-

ಅ) ಬಂದಿರುತ್ತದೆ.

ಆ) ಇದು ಜಿಲ್ಲಾ ಪರಿಷತ್ ವ್ಯಾಪ್ತಿಗೆ ಬರುತ್ತದೆ. ಈ ಕಾಮಗಾರಿಗೆ ಈವರೆವಿಗೆ ರೂ. ೨,೬೧,೮೯೮-೦೦ ಖರ್ಚಾಗಿರುತ್ತದೆ. ಗುತ್ತಿಗೆದಾರರು ಕಾಮಗಾರಿಯನ್ನು ನಿಲ್ಲಿಸಿರುವುದರಿಂದ ಗುತ್ತಿಗೆದಾರರ ಗುತ್ತಿಗೆಯನ್ನು ರದ್ದುಗೊಳಿಸುವ ಬಗ್ಗೆ ಕ್ರಮ ಕೈಗೊಂಡಿದ್ದು, ಆದಾದ ನಂತರ ಉಳಿಕೆ ಕಾಮಗಾರಿಯನ್ನು ಪುನಃ ಗುತ್ತಿಗೆ ಕರೆದು ಅಥವಾ ಇಲಾಖಾವತಿಯಿಂದಲೇ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಈ ಕಾಮಗಾರಿಗೆ ೧೩.೮೪ ಲಕ್ಷ ರೂ.ಗಳ ಅನುದಾನ ಬೇಕಾಗಿದ್ದು ಇದನ್ನು ಜಿಲ್ಲಾಪರಿಷತ್ ಅನುದಾನದಲ್ಲಿ ನೀಡುವಂತೆ ಜಿಲ್ಲಾಪರಿಷತ್‌ಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಉಡುಪಿ ತಾಲ್ಲೂಕು ಕುಕ್ಕೇಹಳ್ಳಿ ಪೇತ್ರಿ ರಸ್ತೆಯ ಮಧ್ಯ ಹರಿಯುವ ಹೊಳೆಗೆ ಸೇತುವೆ ನಿರ್ಮಾಣ

೧೪೨೯ (೨೨೧೨) ಶ್ರೀ ಪಿ. ಬಸವರಾಜ್ .(ಬ್ರಹ್ಮಾವರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಪೆರ್ಡೂರು ಹರಿಕಂಡಿಗೆ ಕುಕ್ಕೇಹಳ್ಳಿ ಪರಿಸರದ ನಾಗರೀಕರು ಪೇತ್ರಿಗೆ ಹೋಗಬೇಕಾದಲ್ಲಿ ಕೆ. ಜಿ. ರೋಡ್ ಮುಖಾಂತರ ೧೫ ಕಿ. ಮಿ. ಸುತ್ತಿ ಬಳಸಿ ಹೋಗಬೇಕಾದುದು ನಿಜವಲ್ಲವೇ ?

ಆ) ಉಡುಪಿ ತಾಲ್ಲೂಕು ಕುಕ್ಕೇಹಳ್ಳಿ ಪೇತ್ರಿ ರಸ್ತೆಯ ಪೂರ್ಣಗೊಳ್ಳುವಿಕೆಗೆ ಮಧ್ಯ ಹರಿಯುವ ಮಡಿ ಹೊಳೆಗೆ ಸೇತುವೆ ನಿರ್ಮಿಸುವ ಕುರಿತಂತೆ ಜನರ ಬೇಡಿಕೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದರೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಈ) ಈ ಭಾಗದ ಬಹುಜನರ ಬೇಡಿಕೆಯಾದ ಮಡಿಹೊಳೆ ಸೇತುವೆಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ನಿಜ.

ಆ) ಬಂದಿರುತ್ತದೆ.

ಇ) ಜಿಲ್ಲಾಪರಿಷತ್‌ನಲ್ಲಿ ಅನುದಾನದ ಕೊರತೆಯಿಂದ ಈ ಕಾಮಗಾರಿಯನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಲು ಇಲ್ಲಿಯವರೆಗೆ ಅವಕಾಶ ಆಗಿರುವುದಿಲ್ಲ.

ಈ) ಈ ಕಾಮಗಾರಿಯನ್ನು ಆದ್ಯತೆಯ ಮೇಲೆ ಮುಂಬರುವ ಸಾಲಿನ ಆಯವ್ಯಯದಲ್ಲಿ ಸೇರಿಸಲು ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾ ಪರಿಷತ್‌ನವರಿಗೆ ಸೂಕ್ತ ನಿರ್ದೇಶನ ನೀಡಲಾಗುವುದು.

ಕರ್ನಾಟಕ ರಾಜ್ಯದ ಎನ್. ಸಿ. ಸಿ. ಕೆಡೆಟ್‌ಗಳು

೧೪೨೧ (೨೨೬೨) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕರ್ನಾಟಕ ರಾಜ್ಯದ ಎನ್. ಸಿ. ಸಿ. ಕೆಡೆಟ್‌ಗಳು ದೇಶದ ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡು ರಾಜ್ಯಕ್ಕೆ ಕೀರ್ತಿ ತರುವುದು ನಿಜವಲ್ಲವೆ; ಈವರೆಗೆ ರಾಜ್ಯದಿಂದ ಎಷ್ಟು ಕೆಡೆಟ್‌ಗಳು ದೆಹಲಿಯಲ್ಲಿ ಈ ಉತ್ಸವದಲ್ಲಿ ಪಾಲುಗೊಂಡಿದ್ದಾರೆ?

ಆ) ಈ ಕೆಡೆಟ್‌ಗಳು ರಾಜ್ಯಕ್ಕೆ ಕೀರ್ತಿ ತರುವ ದೃಷ್ಠಿಯಲ್ಲಿ ಶೈಕ್ಷಣಿಕ ವರ್ಷದಲ್ಲಿ ಹಿಂದುಳಿಯುವುದು ನಂತರ ಉದ್ಯೋಗ ದೊರಕುವಲ್ಲಿ ಹೊಡೆತ ಬೀಳುವುದು ನಿಜವಲ್ಲವೇ?

ಇ) ದೆಹಲಿ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ ರಾಜ್ಯದ ಕೆಡೆಟ್‌ಗಳಿಗೆ ಸರ್ಕಾರ ಸರ್ಕಾರಿ ಸೌಮ್ಯದ ಕಂಪನಿಗಳಲ್ಲಿ ಉದ್ಯೋಗದಲ್ಲಿ ಮೀಸಲಾತಿ ನೀಡುವಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಈ) ಈ ಕೆಡೆಟುಗಳಿಗೆ ನೀಡುವ ವಿಶೇಷ ಆದ್ಯತೆಗಳು ಯಾವುವು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಹೌದು. ೧೪೨೧ ಕೆಡೆಟ್‌ಗಳು ಗಣರಾಜ್ಯೋತ್ಸವದ ಅಂಗವಾಗಿ ದೆಹಲಿಯಲ್ಲಿ ನಡೆದ ಪೆರೇಡ್‌ನಲ್ಲಿ ಭಾಗವಹಿಸಿದ್ದರು.

ಆ) ಇಲ್ಲ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ವಿಶೇಷ ಆದ್ಯತೆಗಳು ಈ ಕೆಳಕಂಡಂತಿವೆ:- ೧) ಗಣರಾಜ್ಯೋತ್ಸವದಲ್ಲಿ ಪಾಲ್ಗೊಂಡು ಪ್ರಶಸ್ತಿ ಪಡೆದ ಈ ಕೆಡೆಟ್‌ಗಳಿಗೆ ತಲಾ ರೂ. ೧೦೦೦-೦೦ ಕೊಡಲಾಗುತ್ತಿದೆ (ಆದರೆ ೧೯೮೮ರಿಂದ ಈ ವಿಶೇಷ ಆದ್ಯತೆಯನ್ನು ನಿಲ್ಲಿಸಿದೆ). ೨) ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕೋರ್ಸ್‌ಗಳಲ್ಲಿ ಸ್ಥಾನ ಮೀಸಲು; ಮತ್ತು ೩) ಕೆಲವು ಭದ್ರತಾ ಪಡೆಗಳಲ್ಲಿ ಆದ್ಯತೆ ಕೊಡಲಾಗುತ್ತಿದೆ.

ಕಾಡಾ ಮೀಟಿಂಗ್‌ನಲ್ಲಿ ನಿರ್ಣಯ ತೆಗೆದುಕೊಂಡ ಪ್ರಕಾರ ಮಲಪ್ರಭ ನೀರಿನಿಂದ ಏತ ನೀರಾವರಿ ಯೋಜನೆ

೧೪೭೨ (೨೨೧೫) ಶ್ರೀ ಶಿವಾನಂದ ಹೆಚ್. ಕೌಜಲಗಿ, (ಬೈಲಹೊಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕಾಡಾ ಮೀಟಿಂಗ್‌ನಲ್ಲಿ ನಿರ್ಣಯ ತೆಗೆದುಕೊಂಡ ಪ್ರಕಾರ ಬೆಳಗಾವಿ ಜಿಲ್ಲೆ ಸವದತ್ತಿ

ತಾಲ್ಲೂಕು ಎಣಗಿ ಮತ್ತು ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದ ಹತ್ತಿರ (ಮಲಪ್ರಭಾ ನೀರನ್ನು ಉಪಯೋಗಿಸಿ) ಏತ ನೀರಾವರಿ ಯೋಜನೆ (ಲಿಫ್ಟ್ ಇರಿಗೇಷನ್ ಸ್ಕೀಮ್) ತೆಗೆದುಕೊಳ್ಳಲು ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಲು ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ ಇವರಿಗೆ ಆದೇಶ ನೀಡಿದ ಸಂಗತಿ ನಿಜವೇ?

ಆ) ಹಾಗಿದ್ದಲ್ಲಿ ಆದೇಶದ ಪ್ರಕಾರ ಅಂದಾಜು ವೆಚ್ಚ ಪತ್ರಿಕೆ ತಯಾರಿಸಲು ಮುಖ್ಯ ಇಂಜಿನಿಯರ್ ನೀರಾವರಿ ಇಲಾಖೆ, ಉತ್ತರ ವಲಯ, ಬೆಳಗಾವಿ ಇವರು ಯಾವ ಕ್ರಮ ಕೈಗೊಂಡಿರುವರು?

ಇ) ಈ ಅಂದಾಜು/ವೆಚ್ಚ ಪತ್ರಿಕೆಯನ್ನು ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ, ಉತ್ತರವಲಯ, ಬೆಳಗಾವಿ ಇವರು ಸರ್ಕಾರಕ್ಕೆ ಯಾವಾಗ ಕಳುಹಿಸಿ ಕೊಟ್ಟಿರುವರು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಕಾಡಾ ಸಭೆಯಲ್ಲಿ ಈ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಂಡ ಕುರಿತು ನಡವಳಿಯಲ್ಲಿ ಪ್ರಸ್ತಾಪವಿರುವುದಿಲ್ಲ. ಆದಾಗ್ಯೂ, ಎಣಗಿ ಗ್ರಾಮದ ಜಮೀನುಗಳಿಗಾಗಿ ಪ್ರತ್ಯೇಕ ಏತ ನೀರಾವರಿ ಯೋಜನೆಯನ್ನು ಕಲ್ಪಿಸುವ ಬಗ್ಗೆ ಪರಿಶೀಲನೆ ಮಾಡಬೇಕೆಂದು ಮುಖ್ಯ ಇಂಜಿನಿಯರ್, ನೀರಾವರಿ ಉತ್ತರ ವಲಯ, ಬೆಳಗಾವಿ ಇವರಿಗೆ ಸೂಚನೆ ನೀಡಲಾಗಿದೆ.

ಆ) ಮೇಲೆ ತಿಳಿಸಿದ ಏತ ನೀರಾವರಿ ಯೋಜನೆಯ ಪ್ರಸ್ತಾವನೆಯು ಮುಖ್ಯ ಇಂಜಿನಿಯರ್‌ರವರ ಮಟ್ಟದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಇ) ಉದ್ಭವಿಸುವುದಿಲ್ಲ.

ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಗ್ರಾಮಗಳ ಪುನರ್ವಸತಿ ಬಗ್ಗೆ

೧೪೩೭ (೨೨೧೮) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪುನರ್ ವಸತಿ ಗ್ರಾಮವಾದ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕ್ ಸುತಗಟ್ಟಿ ಗ್ರಾಮದಲ್ಲಿ ೭ ಕನ್ನಡ ಶಾಲಾ ಕೋಣೆಗಳನ್ನು ಪುನರ್ವಸತಿ ಕಾರ್ಯದಲ್ಲಿ ತೆಗೆದುಕೊಳ್ಳಲು ಸರ್ಕಾರ ಆಜ್ಞೆ ಮಾಡಿದ ಸಂಗತಿ ನಿಜವೇ?

ಆ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕ್ ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಪುನರ್‌ವಸತಿ ಕೇಂದ್ರವಾದ ವಕ್ಕುಂದ ಗ್ರಾಮದಲ್ಲಿ ೭ ಕನ್ನಡ ಶಾಲಾ ಕೋಣೆಗಳನ್ನು ಕಟ್ಟಲು ಆಜ್ಞೆ ಮಾಡಿದ ಸಂಗತಿ ನಿಜವೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಸುತಗಟ್ಟಿ ಪುನರ್ವಸತಿ ಗ್ರಾಮದಲ್ಲಿ ೭ ಶಾಲಾ ಕೋಣೆಗಳ ನಿರ್ಮಾಣವನ್ನು ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ತೆಗೆದುಕೊಳ್ಳಬಹುದೆಂದು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಆ) ವಕ್ಕುಂದ ಪುನರ್ವಸತಿ ಗ್ರಾಮದಲ್ಲಿ ೭ ಶಾಲಾ ಕೋಣೆಗಳ ನಿರ್ಮಾಣವನ್ನು ಪುನರ್ವಸತಿ ಕಾರ್ಯಕ್ರಮದ ಅಡಿಯಲ್ಲಿ ತೆಗೆದುಕೊಳ್ಳಬಹುದೆಂದು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ಕೂಡಲ ಸಂಗಮ ಅಭಿವೃದ್ಧಿಗಾಗಿ ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಆಯೋಗದ ಶಿಫಾರಸ್

೧೪೩೪ (೨೨೧೯) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಆಯೋಗವು ಸರ್ಕಾರಕ್ಕೆ ಯಾವ ಯಾವ ಶಿಫಾರಸ್ಸುಗಳನ್ನು ಮಾಡಲಾಗಿದೆ?

ಆ) ಕೂಡಲ ಸಂಗಮ ಅಭಿವೃದ್ಧಿ ಸಲುವಾಗಿ ಮಾಡಿರುವ ಯಾವ ಯಾವ ಸಲಹೆಗಳನ್ನು ಸರ್ಕಾರದವರು ಒಪ್ಪಿಕೊಂಡಿರುವರು?

ಇ) ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ ಇವರು ಮಾಡಿರುವ ಶಿಫಾರಸ್ಸನ್ನು ಅನುಷ್ಠಾನಕ್ಕೆ ತರಲು ಸರ್ಕಾರದವರು ಯಾವ ಯಾವ ಕ್ರಮ ಕೈಗೊಂಡಿರುವರು, ಮತ್ತು ಅವರ ಶಿಫಾರಸ್ಸನ್ನು ಅನುಷ್ಠಾನ ಮಾಡುವ ಸಲುವಾಗಿ ಸರ್ಕಾರದ ವಾಸ್ತುಶಿಲ್ಪಿಯವರು ನಕಾಶೆ ಮಾಡಿದ ಸಂಗತಿ ನಿಜವೇ?

ಈ) ಸರ್ಕಾರದ ವಾಸ್ತು ಶಿಲ್ಪಿಯವರು ತಯಾರಿಸಿದ ನಕಾಶೆ ಪ್ರಕಾರ ಕೆಲಸ ಕೈಕೊಂಡಲ್ಲಿ ಅಂದಾಜು ಎಷ್ಟು ಹಣ ಬೇಕಾಗುವುದು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):-

ಅ) ಕೂಡಲ ಸಂಗಮ ಕ್ಷೇತ್ರ ಮತ್ತು ಹೊಸ ಸಂಕೀರ್ಣದ ಅಭಿವೃದ್ಧಿ ಬಗ್ಗೆ ವಿಶ್ವನಾಥ ರೆಡ್ಡಿ ಮುದ್ನಾಳ್ ಸಮಿತಿಯ ಮುಖ್ಯ ಶಿಫಾರಸ್ಸುಗಳು ಈ ಕೆಳಕಂಡಂತಿವೆ:-

೧) ಸಂಗಮೇಶ್ವರ ದೇವಾಲಯದ ಗರ್ಭಗುಡಿಯನ್ನು, ಮೂಲ ಲಿಂಗಕ್ಕೆ ಧಕ್ಕೆಯಾಗದಂತೆ, ಆಧುನಿಕ ತಂತ್ರಜ್ಞಾನದಿಂದ ಭದ್ರ ಪಡಿಸಬೇಕು.

೨) ಈಗಾಗಲೇ ಬಿಚ್ಚಲಾಗಿರುವ ದೇವಾಲಯದ ಪ್ರಾಕಾರವನ್ನು ಅದೇ ಸ್ಥಳದಲ್ಲಿ ಮೊದಲಿನ ರೂಪದಲ್ಲೇ ತಾಂತ್ರಿಕ ಸುಧಾರಣೆಯೊಂದಿಗೆ ಪುನರ್ ನಿರ್ಮಾಣ ಮಾಡಬೇಕು.

೩) ಅಂತರಾಷ್ಟ್ರೀಯ ಬಸವ ಕೇಂದ್ರವನ್ನು ಸ್ಥಾಪಿಸಬೇಕು.

೪) ಉದ್ದೇಶಿತ ಸಂಕೀರ್ಣಕ್ಕಾಗಿ ಈಗಾಗಲೇ ವಶಪಡಿಸಿಕೊಂಡಿರುವ ೧೦೨ ಎಕರೆ ಭೂಮಿಯು ಜೊತೆಗೆ ಇನ್ನೂ ೩೦೦ ಎಕರೆ ಭೂಮಿ ವಶಪಡಿಸಿಕೊಳ್ಳಬೇಕು.

೫) ಕೂಡಲ ಸಂಗಮ ಕ್ಷೇತ್ರವನ್ನು ಅಂತರ ರಾಷ್ಟ್ರೀಯ ಪ್ರವಾಸೀ ಕೇಂದ್ರವನ್ನಾಗಿ ಅಭಿವೃದ್ಧಿಗೊಳಿಸಬೇಕು.

೬) ಸಂಕೀರ್ಣವಲ್ಲಿ, ಅಂತರ ರಾಷ್ಟ್ರೀಯ ಬಸವ ಸ್ಮಾರಕ ಗ್ರಂಥಾಲಯ, ವಾಚನಾಲಯ, ಶ್ರವಣ ದೃಶ್ಯ ವಿಭಾಗ, ವಚನ ಸಾಹಿತ್ಯ ಸಂಶೋಧನಾ ಕೆಂದ್ರ, ಆಡಳಿತ ಕಾರ್ಯಾಲಯ, ಬಯಲು ರಂಗಮಂದಿರ, ಅನುಭವ ಮಂಟಪ, ಪ್ರವಾಸಿ ಗೃಹ, ಯಾತ್ರಿಕ ನಿಲಯ, ಛತ್ರಗಳು, ಡಾರ್ಮಿಟರಿಗಳು. ವಾಣಿಜ್ಯ ಸಂಕೀರ್ಣ, ಪ್ರಾರ್ಥನಾ ಮಂದಿರ, ಕಾಯಕ ಕೇಂದ್ರ, ಕಿರು ವಿಮಾನ ನಿಲ್ದಾಣ, ಚಿಕಿತ್ಸಾಲಯ, ಶಾಲೆಗಳು, ಯೋಗಮಂದಿರ, ಪ್ರಕಟಣಾ ವಿಭಾಗ, ಸುರಕ್ಷಿತ ಕುಡಿಯುವ ನೀರು ಸರಬರಾಜು, ಶೌಚಾಲಯ, ಸ್ನಾನ ಗೃಹಗಳು, ಮತ್ತು ಸೂಕ್ತ ಒಳಚರಂಡಿ ವ್ಯವಸ್ಥೆ ಇವುಗಳನ್ನು

ಒದಗಿಸಬೇಕು.

ಆ) ವಿಶ್ವನಾಥ ರೆಡ್ಡಿ ಮುದ್ನಾಳ ಸಮಿತಿಯ ಶಿಫಾರಸ್ಸುಗಳನ್ನು ದಿನಾಂಕ ೨೨-೯-೧೯೮೮ರ ಸರ್ಕಾರಿ ಆದೇಶದಲ್ಲಿ ಈಗಾಗಲೇ ಒಪ್ಪಿಕೊಳ್ಳಲಾಗಿದೆ

೧) ಕೇಂದ್ರ ಕಟ್ಟಡದ ಸಂಶೋಧನೆ ಸಂಸ್ಥೆ, ರೂರ್ಕಿ, ಇವರಿಗೆ ಸಂಗಮೇಶ್ವರ ದೇವಾಲಯದ ಸಂರಕ್ಷಣಾ ಕ್ರಮವನ್ನು ಸೂಚಿಸುವಂತೆ ಕೋರಲಾಗಿತ್ತು. ಈ ಸಂಸ್ಥೆಯವರು ತಮ್ಮ ವರದಿಯನ್ನು ಸಲ್ಲಿಸಿದ್ದು, ಅದರ ಪ್ರಕಾರ ದೇವಾಲಯದ ಗರ್ಭ ಗುಡಿಯ ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಲಾಗಿದೆ, ಹಾಗೂ, ಐಕ್ಯ ಮಂಟಪಕ್ಕೆ ಹೋಗಲು ಶಾಶ್ವತ ಮೆಟ್ಟಿಲುಗಳಿಗೆ ಮುಖ್ಯ ವಾಸ್ತು ಶಿಲ್ಪಿಯವರಿಂದ ನೀಲಿ ನಕ್ಷೆ ತಯಾರಿಸಿ ಅಂದಾಜು ವೆಚ್ಚ ಪತ್ರಿಕೆಯನ್ನೂ ಸಹ ತಯಾರಿಸಲಾಗಿದೆ. ಈ ಅಂದಾಜು ವೆಚ್ಚ ಪತ್ರಿಕೆಗಳು ಪರಿಶೀಲನೆಯಲ್ಲಿ ಇರುತ್ತವೆ.

೨) ಸಂಕೀರ್ಣದ ಕಟ್ಟಡಗಳ ನಕ್ಷೆಗಳನ್ನು ಮುಖ್ಯ ವಾಸ್ತು ಶಿಲ್ಪಿಯವರು ತಯಾರಿಸಿದ್ದಾರೆ.

೩) ಸಂಕೀರ್ಣದ ಅಭಿವೃದ್ಧಿಗೆ ಬೇಕಾದ ಉಳಿದ ಜಮೀನುಗಳನ್ನು ಭೂಸ್ವಾಧೀನ ಕಾಯಿದೆಯ ಪ್ರಕಾರ ವಶಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ.

ಈ) ಸಂಗಮೇಶ್ವರ ದೇವಾಲಯದ ಸಂರಕ್ಷಣೆ ಹಾಗೂ ಹೊಸ ಸಂಗಮ ಸಂಕೀರ್ಣದ ಅಭಿವೃದ್ಧಿಗೆ ಸುಮಾರು ೧೩.೮೨ ಕೋಟಿ ರೂ. ಗಳು ಆಗಬಹುದೆಂದು (೧೯೮೮-೮೯ರ ದರಗಳ ಪ್ರಕಾರ) ಅಂದಾಜು ಮಾಡಲಾಗಿದೆ.

ತುಮಕೂರು ದೇವರಾಯನ ದುರ್ಗದಲ್ಲಿ ಪ್ರವಾಸಿ ಕೇಂದ್ರ ಸ್ಥಾಪಿಸುವುದು

೧೪೩೮ (೨೨೬೭) ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ತುಮಕೂರಿನ ದೇವರಾಯನ ದುರ್ಗದಲ್ಲಿ ಪ್ರವಾಸಿ ಕೇಂದ್ರವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಇಲ್ಲಿ ಅಭಿವೃದ್ಧಿ ಕಾರ್ಯಗಳಿಗೇನಾದರೂ ಅನುದಾನ ನೀಡುವ ಯೋಜನೆ ಇದೆಯೇ?

ಇ) ಈ ಮೇಲ್ಕಂಡ ಸ್ಥಳದಲ್ಲಿ 'ಸಫಾರಿ ಪಾರ್ಕ್' ಪ್ರಾರಂಭಿಸುವ ಬಗ್ಗೆ ಪ್ರಸ್ತಾಪವಿದೆಯೇ?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):-

ಅ) ಸರ್ಕಾರವು ದೇವರಾಯನ ದುರ್ಗವನ್ನು ಪ್ರವಾಸಿ ಕೇಂದ್ರವೆಂದು ಗುರುತಿಸಿದೆ. ಇಲ್ಲಿ ಎರಡು ಹಾಸಿಗೆಗಳಿಂದ ಕೂಡಿದ ಎರಡು ಕೊಠಡಿ, ಭೋಜನ ಕೊಠಡಿ ಹಾಗೂ ಅಡಿಗೆ ಕೋಣೆಗಳಿಂದ ಕೂಡಿದ ಪ್ರವಾಸಿ ಮಂದಿರವನ್ನು ನಿರ್ವಹಿಸಲಾಗುತ್ತಿದೆ.

ಆ) ಸರ್ಕಾರವು ಪ್ರವಾಸಿ ಗೃಹದ ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಲು ರೂ. ೫೫,೦೦೦-೦೦ (ಐವತ್ತೈದು ಸಾವಿರ) ರೂಪಾಯಿಗಳನ್ನು, ದೇವಸ್ಥಾನದಿಂದ ಪ್ರವಾಸಿ ಮಂದಿರದವರೆಗೆ ಇರುವ ೩೦೦ ಮೀ. ದೂರದ ರಸ್ತೆಯನ್ನು ಉತ್ತಮಗೊಳಿಸಲು ರೂ. ೮೫,೫೦೦-೦ (ಎಂಭತ್ತೈದು ಸಾವಿರದ ಐನೂರು) ರೂಪಾಯಿಗಳ ಅಂದಾಜು ವೆಚ್ಚಕ್ಕೆ ೧೯೯೧-೯೨ರ ಪ್ರಸ್ತುತ ಸಾಲಿನಲ್ಲಿ

ತುಮಕೂರಿನಲ್ಲಿ ಯುವಜನ ಸೇವಾ ನಿಲಯ

೧೪೩೯ (೨೨೬೮) ಶ್ರೀ ಶಫಿ ಅಹಮದ್ (ತುಮಕೂರು):- ಮಾನ್ಯ ಯುವಜನ ಸೇವಾ, ಕ್ರೀಡಾ, ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ತುಮಕೂರಿನಲ್ಲಿ ಯುವಜನ ಸೇವಾ ನಿಲಯ ಪ್ರಾರಂಭಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ, ಯಾವ ದಿನಾಂಕದಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್. ರಮೇಶ್ (ಯುವಜನ ಸೇವಾ, ಕ್ರೀಡಾ ಮತ್ತು ಕನ್ನಡ ಹಾಗೂ ಸಂಸ್ಕೃತಿ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ೧೯೯೧-೯೨ ಸಾಲಿನಲ್ಲಿ ಕಾಮಗಾರಿಗೆ ಮಂಜೂರಾದ ಹಣ

೧೪೪೧ (೧೦೧೩) ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕಮಗಳೂರು ಜಿಲ್ಲೆಗೆ ಸಣ್ಣ ನೀರಾವರಿ ಇಲಾಖೆಯಿಂದ ೧೯೯೧-೯೨ನೇ ಸಾಲಿಗೆ ಎಷ್ಟು ಕಾಮಗಾರಿಗಳು ಮಂಜೂರಾಗಿವೆ? (ತಾಲ್ಲೂಕುವಾರು ವಿವರಣೆ ಕೊಡುವುದು)

ಆ) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು?

ಶ್ರೀ ಕೆ. ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ) ೧೯೯೧-೯೨ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಂಜೂರಾದ ಕಾಮಗಾರಿಗಳು.

ಕ್ರಮ ಸಂಖ್ಯೆ	ತಾಲ್ಲೂಕು	ಸಣ್ಣ ನೀರಾವರಿ ವಿಭಾಗ ಕಾಮಗಾರಿಗಳು	ಕಾವೇರಿ ಜಲಾನಯನ ಪತ ನೀರಾವರಿ ನಿಗಮ ಕಾಮಗಾರಿಗಳು	ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳು
೧.	ಚಿಕ್ಕಮಗಳೂರು	೧೩	೧	೧೭
೨.	ಕಡೂರು	೨೨	೬	೧೨
೩.	ಮೂಡಿಗೆರೆ	—	—	೧೮
೪.	ಕೊಪ್ಪ	—	—	೨೫
೫.	ನರಸಿಂಹರಾಜಪುರ	—	—	೧೪

೬.	ಶೃಂಗೇರಿ	—	—	೩
೭.	ತರೀಕೆರೆ	೧	—	೧೩
	ಒಟ್ಟು	೩೬	೭	೧೦೨

ಆ) ಕಾಮಗಾರಿಗಳ ಒಟ್ಟು ಅಂದಾಜು ವೆಚ್ಚ

೧. ಸಣ್ಣ ನೀರಾವರಿ ವಿಭಾಗ - ರೂ. ೧೨೬೦೭ ಲಕ್ಷ

೨. ಕಾವೇರಿ ಜಲಾನಯನ ಪಿತ ನೀರಾವರಿ ನಿಗಮ - ರೂ. ೧೮೬.೨೫ ಲಕ್ಷ

೩. ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗ - ರೂ. ೨೫೮.೦೧ ಲಕ್ಷ.

ಕೊಡಗು ಜಿಲ್ಲೆಯಲ್ಲಿರುವ ಕೆರೆಗಳ ಸಂಖ್ಯೆ

೧೪೪೩ (೧೧೨೬) ಶ್ರೀಮತಿ ಸುಮಾ ವಸಂತ್ (ಸೋಮವಾರಪೇಟೆ):- ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಒಡ್ಡು, ನಾಲೆ ಮತ್ತು ಕೆರೆಗಳಿವೆ? (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು).

ಆ) ಇವು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಟ್ಟಿವೆಯೇ? ಅಥವಾ ನೀರಾವರಿ ವಿಭಾಗಕ್ಕೆ ಒಳಪಟ್ಟಿದೆಯೇ?

ಇ) ಇದಕ್ಕಾಗಿ ೧೮೯-೯೦, ೧೯೯೦-೯೧, ೧೯೯೧-೯೨ನೇ ಸಾಲುಗಳಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು? (ತಾಲ್ಲೂಕುವಾರು ಮಾಹಿತಿಯನ್ನೊದಗಿಸುವುದು)

ಶ್ರೀ ಕೆ. ಎಸ್ ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ)

ಕ್ರಮ ಸಂಖ್ಯೆ	ತಾಲ್ಲೂಕು	ಒಡ್ಡು	ನಾಲೆ	ಕೆರೆಗಳು
೧.	ಮಡಿಕೇರಿ	—	೭೪	೫೮
೨.	ಸೋಮವಾರಪೇಟೆ	—	೩೯	೩೬೦
೩.	ವಿರಾಜಪೇಟೆ	—	೬೯	೩೦೦

ಆ) ೫ ಕಾಮಗಾರಿಗಳು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ಮತ್ತು ೮೫ ಕಾಮಗಾರಿಗಳು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ.

ಇ) ೧೯೮೯-೯೦, ೧೯೯೦-೯೧ ಮತ್ತು ೧೯೯೧-೯೨ನೇ ಸಾಲುಗಳಲ್ಲಿ ಬಿಡುಗಡೆ ಮಾಡಿದ ಅನುದಾನ - ತಾಲ್ಲೂಕುವಾರು ವಿವರ

		(ಲಕ್ಷ ರೂ. ಗಳಲ್ಲಿ)		
ಕ್ರಮ ಸಂಖ್ಯೆ	ತಾಲ್ಲೂಕು	೧೯೮೯-೯೦	೧೯೯೦-೯೧	೧೯೯೧-೯೨
೧.	ಮಡಿಕೇರಿ	೨೪.೫೯	೧೭.೬೮	೧೭.೬೬
೨.	ಸೋಮವಾರ ಪೇಟೆ	೩೧.೦೭	೨೭.೨೦	೧೬.೮೮
೩.	ವಿರಾಜಪೇಟೆ	೨೮.೩೩	೨೫.೦೫	೨೧.೩೯
	ಒಟ್ಟು	೮೩.೯೯	೬೯.೯೩	೫೫.೯೭

ಮಂಡ್ಯ ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆ ವಹಿಸಿದ ರಸ್ತೆಗಳು

೧೪೪೫ (೧೭೭೫) ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿರುವ ರಸ್ತೆಯ ಉದ್ದವೆಷ್ಟು?

ಆ) ಈ ರಸ್ತೆಗಳಲ್ಲಿ ಎಷ್ಟು ಕಿ. ಮೀ. ಉದ್ದದ ರಸ್ತೆಗಳನ್ನು ಈವರೆಗೆ ರಿಪೇರಿ ಮಾಡಲಾಗಿದೆ ಮತ್ತು ವೆಚ್ಚ ಮಾಡಿರುವ ಹಣವೆಷ್ಟು?

ಇ) ಜಿಲ್ಲೆಯ ಎಲ್ಲಾ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು):-

ಅ) ಮಂಡ್ಯ ಜಿಲ್ಲೆಯ ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ ೫೦ ಕಿ. ಮೀ. ಮೀರದಂತೆ ಜಿಲ್ಲಾ ಪರಿಷತ್ ರಸ್ತೆಗಳನ್ನು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಲು ಸರ್ಕಾರದ ಆದೇಶವನ್ನು ಸಂಖ್ಯೆ ಪಿಡಬ್ಲ್ಯುಡಿ ೬೮ ಸಿಆರ್‌ಎಂ ೮೯ ದಿನಾಂಕ ೧೮-೨-೧೯೯೨ರಲ್ಲಿ ನೀಡಲಾಗಿದ್ದು, ರಸ್ತೆಗಳ ವಿವರವನ್ನು ಶೀಘ್ರದಲ್ಲಿ ತೀರ್ಮಾನಿಸಲಾಗುವುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಂತಹ ಪ್ರಸ್ತಾಪವು ಸರ್ಕಾರದ ಮುಂದೆ ಇರುವುದಿಲ್ಲ.

ಲೋಕೋಪಯೋಗಿ ಮೇಲ್ದರ್ಜೆಗೇರಿಸಿದ ರಸ್ತೆಗಳ ವಿವರ

೧೪೪೬ (೧೮೭೭) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ದಕ್ಷಿಣ ಕನ್ನಡ, ಉತ್ತರ ಕನ್ನಡ, ಮೈಸೂರು, ಕೊಡಗು, ಹಾಸನ ಈ ಜಿಲ್ಲೆಗಳಲ್ಲಿ ೧೯೮೦ರಿಂದ ಈ ತನಕ ಲೋಕೋಪಯೋಗಿ ಇಲಾಖೆಗೆ ಮೇಲ್ದರ್ಜೆಗೇರಿಸಿದ ರಸ್ತೆಗಳೆಷ್ಟು? (ಕಿ. ಮೀ. ವಾರು, ಜಿಲ್ಲಾವಾರು ವಿವರ ನೀಡುವುದು)

ಇ) ಈ ರಸ್ತೆಗಳ ಸುಧಾರಣೆಗೆ ತಗಲಿದ ವೆಚ್ಚವೆಷ್ಟು? (ಜಿಲ್ಲಾವಾರು ಕಿ. ಮೀ ವಾರು ವಿವರ ನೀಡುವುದು)

ಈ) ಈ ರಸ್ತೆಗಳ ಸುಧಾರಣೆಗೆ ೧೯೯೨-೯೩ನೇ ಸಾಲಿಗೆ ಕಾಯ್ದಿರಿಸಿದ ಹಣವೆಷ್ಟು? (ಜಿಲ್ಲಾವಾರು, ಕಿ. ಮೀ. ವಾರು ವಿವರ ನೀಡುವುದು)

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಯಾವುದೂ ಇಲ್ಲ. ಆದರೆ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿರುವ ೧೦೦೦೦ ಕಿ. ಮೀ. ರಸ್ತೆಗಳನ್ನು ಪ್ರತಿ ವಿಧಾನಸಭಾ ಮತಕ್ಷೇತ್ರದಲ್ಲಿ ೫೦ ಕಿ. ಮೀ. ಮಿತಿಗೊಳಪಟ್ಟು ಮುಖ್ಯ ಜಿಲ್ಲಾ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ನಿರ್ವಹಿಸಲು ಮತ್ತು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶವನ್ನು ದಿನಾಂಕ ೧೮-೨-೧೯೯೨ ರಂದು ಹೊರಡಿಸಲಾಗಿದ್ದು ಮೇಲ್ದರ್ಜೆಗೆ ಏರಿಸುವ ರಸ್ತೆಗಳ ವಿವರಗಳನ್ನು ಇಷ್ಟರಲ್ಲೇ ತೀರ್ಮಾನಿಸಲಾಗುವುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು:- **ಲಿಖಿತ ಮೂಲಕ ಉತ್ತರಿಸುವ ಪಟ್ಟಿಗಳನ್ನು ಮಂಡಿಸಲಾಯಿತು.**

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಕ್ಕಳಿಗೆ ವಿಷಮ ಜ್ವರ

ಶ್ರೀ ಹೆಚ್. ವಿಶ್ವನಾಥ್ (ಕೆ. ಆರ್. ನಗರ):- ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಮಕ್ಕಳಿಗೆ ಯಾವುದೋ ಒಂದು ವಿಧವಾದ ಜ್ವರ ಪ್ರಾರಂಭವಾಗಿ ಬಹಳ ಆತಂಕವಾದ ಪರಿಸ್ಥಿತಿ ಉಂಟಾಗಿದೆ. ನೂರಾರು ಮಕ್ಕಳು ಇವತ್ತು ಆಸ್ಪತ್ರೆಯಲ್ಲಿದ್ದಾರೆ. ಅವರಿಗೆ ಆಸ್ಪತ್ರೆಯಲ್ಲಿರಲು ಜಾಗವಿಲ್ಲ ಮತ್ತು ಸರಿಯಾದ ರೀತಿಯಲ್ಲಿ ಚಿಕಿತ್ಸೆಯ ವ್ಯವಸ್ಥೆ ಇಲ್ಲದೆ ಮಕ್ಕಳ ಪೋಷಕರು ಅವರ ಮಕ್ಕಳನ್ನು ಮೈಸೂರು ಜಿಲ್ಲೆಯ ಆಸ್ಪತ್ರೆಗಳಿಗೆ ತೆಗೆದುಕೊಂಡು ಬಂದು ಚಿಕಿತ್ಸೆಯನ್ನು ಕೊಡಿಸುತ್ತಿದ್ದಾರೆ. ಇದರ ಬಗ್ಗೆ ಅಲ್ಲಿರತಕ್ಕ ಜಿಲ್ಲಾ ಆರೋಗ್ಯಾಧಿಕಾರಿಗಳು ಬಹಳ ಉದಾಸೀನರಾಗಿದ್ದಾರೆ. ಅದು ಯಾವ ಘಟ್ಟಕ್ಕೆ ಹೋಗಿದೆ ಎಂದರೆ ಬೇರೆ ಬೇರೆ ಕಡೆಗೆ ತಂದೆ ತಾಯಿಗಳು ಮಕ್ಕಳನ್ನು ಹೊತ್ತುಕೊಂಡು ಮೈಸೂರು ನಗರದಲ್ಲಿ ತಿರುಗಾಡುತ್ತಿದ್ದಾರೆ. ಆದುದರಿಂದ ತಕ್ಷಣ ಮಾನ್ಯ ಆರೋಗ್ಯ ಸಚಿವರು ಗುಂಡ್ಲುಪೇಟೆಗೆ ಧಾವಿಸಿ ಅಲ್ಲಿ ಸರಿಯಾದ ಚಿಕಿತ್ಸೆಗೆ ವ್ಯವಸ್ಥೆಯನ್ನು ಮಾಡಿ ಸಾವು ನೋವಿನ ತೂಗುಯ್ಯಾಲೆಯಲ್ಲಿರುವ ಮಕ್ಕಳ ಜೀವವನ್ನು ಬದುಕಿಸಲು ಒಂದು ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಪ್ರಸ್ತಾಪ ಮಾಡುತ್ತಿದ್ದೇನೆ.

ನಿಯಮ ೬೯ರ ಕೆಳಗೆ ಚರ್ಚೆ

ದಾವಣಗೆರೆ ನಗರ ಸಭೆಗೆ ವಿಶ್ವ ಬ್ಯಾಂಕ್‌ನಿಂದ ಧನ ಸಹಾಯ

ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):- ಸನ್ಮಾನ್ಯ ಅಧ್ಯಕ್ಷರೇ, ದಾವಣಗೆರೆ ನಗರ ಸಭೆಯ ವಿಶ್ವ ಬ್ಯಾಂಕಿನಿಂದ ೨೮ ಕೋಟಿ ರೂಪಾಯಿಗಳನ್ನು ವಿವಿಧ ಅಭಿವೃದ್ಧಿ ಯೋಜನೆಗಳನ್ನು

ರೂಪಿಸಿ ಪೌರಾಡಳಿತ ನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಇದು ಯಾವ ಹಂತದಲ್ಲಿದೆ?

ಯೋಜನೆಗೆ ಸಾಲ ಮಂಜೂರಾತಿ ನೀಡುವ ಸಂಭವವಿದೆಯೇ?

ಇದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ವಸತಿ ಮತ್ತು ನಗರಾಭಿವೃದ್ಧಿ ಸಚಿವರ ಪರವಾಗಿ):- ಅಧ್ಯಕ್ಷರೇ, ನಗರ ಅಭಿವೃದ್ಧಿ ಯೋಜನೆಯಡಿ ವಿಶ್ವ ಬ್ಯಾಂಕ್‌ನಿಂದ ಧನಸಹಾಯ ಪಡೆಯುವ ಬಗ್ಗೆ ವಿಶ್ವ ಬ್ಯಾಂಕಿನ ಪ್ರತಿನಿಧಿಯಾಗಿ ಬಂದಿದ್ದ ಡಾ. ಶ್ರೀ ರಾಟನರ್ ಇವರೊಂದಿಗೆ ಚರ್ಚೆ ನಡೆಸಲಾಗಿತ್ತು. ಆದರೆ ಈ ವಿಷಯದಲ್ಲಿ ಯಾವುದೇ ಪ್ರಗತಿ ಇರುವುದಿಲ್ಲ. ದಾವಣಗೆರೆ ನಗರಸಭೆಯ ಅಭಿವೃದ್ಧಿ ಯೋಜನೆಗಳಿಗೆ ವಿಶ್ವಬ್ಯಾಂಕ್‌ನಿಂದ ನೆರವು ಪಡೆಯುವ ಬಗ್ಗೆ ಯಾವುದೇ ಪ್ರಸ್ತಾವನೆ ಈಗ ಸದ್ಯಕ್ಕೆ ಇರುವುದಿಲ್ಲ.

ಗುಲ್ಬರ್ಗ ಜಿಲ್ಲೆಯ ಸೇಡಂ ಮತ ಕ್ಷೇತ್ರದಲ್ಲಿರುವ ಪಶುವೈದ್ಯಶಾಲೆಗಳಿಗೆ ಔಷಧಿಗಳನ್ನು ಒದಗಿಸುವ ಬಗ್ಗೆ

ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ):- ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ಮತ ಕ್ಷೇತ್ರದಲ್ಲಿ ಸುಮಾರು ೧೦-೧೨ ಪಶುವೈದ್ಯ ಶಾಲೆಗಳು ಇದ್ದು ಈ ಪಶು ವೈದ್ಯಶಾಲೆಗಳಿಗೆ ಒಂದು ತಿಂಗಳಿಂದ ಸುಮಾರು ೭-೮ ದಿನಗಳಿಗೆ ಆಗುವಷ್ಟು ಮಾತ್ರ ಲಭ್ಯವಾಗುವಷ್ಟು ಔಷಧಿಗಳನ್ನು ಪೂರೈಸುವುದು ನಿಜವಲ್ಲವೇ? ಕನಿಷ್ಠ ಒಂದೊಂದು ಪಶು ವೈದ್ಯ ಶಾಲೆಗಳಿಗೆ ತಿಂಗಳಿಗೆ ಸರಾಸರಿ ೨೦೦-೩೦೦ ಜಾನುವಾರುಗಳು ಚಿಕಿತ್ಸೆಗೆ ಬರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಈ ಪ್ರಕಾರ ಒಂದು ತಿಂಗಳಿಗೆ ೭-೮ ದಿನಗಳಿಗೆ ಲಭ್ಯವಾಗುವಷ್ಟು ಔಷಧಿಗಳನ್ನು ನೀಡಿದರೆ ರೈತರಿಗೆ ಇಂತಹ ಪಶುವೈದ್ಯಶಾಲೆಗಳು ಇದ್ದೂ ಸಹ ಇಲ್ಲದಂತೆ ಆಗುವುದಿಲ್ಲವೇ? ಇದರ ಬಗ್ಗೆ ಆ ರೈತರು ಅರ್ಜಿಯನ್ನು ತಮಗೆ ನೀಡಿರುವುದನ್ನು ವೀಕ್ಷಿಸಿದರೆ ಈ ಪಶುವೈದ್ಯಶಾಲೆಗಳ ಪರಿಸ್ಥಿತಿ ಏನು ಎಂಬುದು ತಮ್ಮ ಗಮನಕ್ಕೆ ಬರುವುದು. ಇದನ್ನು ವೀಕ್ಷಿಸಿ ಸೇಡಂ ಮತಕ್ಷೇತ್ರದ ಪಶುವೈದ್ಯ ಶಾಲೆಗಳಿಗೆ ಅಥವಾ ಜಿಲ್ಲೆಯಲ್ಲಿ ಇದೇ ಪರಿಸ್ಥಿತಿ ಇದ್ದರೆ ಎಲ್ಲಾ ಪಶುವೈದ್ಯ ಶಾಲೆಗಳಿಗೆ ವ್ಯವಸಾಯದ ಮೂಲ ಆಧಾರವಾದ ಜಾನುವಾರುಗಳ ಸಂಖ್ಯೆಯ ಆಧಾರದ ಮೇಲೆ ಔಷಧವನ್ನು ಸರಬರಾಜು ಮಾಡುವ ವ್ಯವಸ್ಥೆ ಮಾಡಿ ರೈತರ ಜಾನುವಾರುಗಳನ್ನು ಕಾಪಾಡುವಿರೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಬಸವರಾಜ ಪಾಟೀಲ್ (ಪಶು ಸಂಗೋಪನ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಮಾತು ಸರ್ಕಾರದ ಗಮನಕ್ಕೆ ಬಂದಿದೆ. ಈ ವರ್ಷದಲ್ಲಿ ಔಷಧಗಳನ್ನು ಸರಬರಾಜು ಮಾಡುವಲ್ಲಿ ಸ್ವಲ್ಪ ತಡವಾಗಿದೆ. ಆದುದರಿಂದ ಈಗಾಗಲೇ ಇದರ ಬಗ್ಗೆ ಕ್ರಮತೆಗೆದುಕೊಂಡು ಆದಷ್ಟು ನಮ್ಮ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಔಷಧಗಳನ್ನು ಸರಬರಾಜು ಮಾಡಲಾಗಿದೆ. ಇನ್ನು ಮುಂದೆಯೂ ಕೂಡ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಎಲ್ಲಾ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸಲಾಗುವುದು.

ಅಧ್ಯಕ್ಷರು:- ಔಷಧಿಯನ್ನು ಪೂರೈಸುವುದರಲ್ಲಿ ತಡವಾಗಲು ಕಾರಣವೇನು?

ಶ್ರೀ ಬಸವರಾಜ ಪಾಟೀಲ್:- ಅಧ್ಯಕ್ಷರೇ, ಹಿಂದೆ ಇದ್ದಂಥ ಮಂತ್ರಿಗಳು ಒಂದು ಟೆಕ್ನಿಕಲ್

ಕಮಿಟಿ ಅಥವಾ ಹೈಪವರ್ ಕಮಿಟಿ ಎಂದು ಮಾಡಿದ್ದರು. ಇದೇ ಮೊದಲ ಬಾರಿಗೆ ಈ ವರ್ಷದಲ್ಲಿ ಅಂಥ ಹೈಪವರ್ ಕಮಿಟಿಯನ್ನು ಮಾಡಿದ್ದರಿಂದ ಅದು ಪೂರ್ಣವಾಗಲು ಸ್ವಲ್ಪ ತಡವಾಯಿತು. ಈಗಾಗಲೆ ಎಲ್ಲಾ ಆಸ್ಪತ್ರೆಗಳಿಗೆ ಔಷಧಿಯನ್ನು ಒದಗಿಸಿದ್ದೇವೆ.

ಅಧ್ಯಕ್ಷರು:- ಬಹಳ ಆಸ್ಪತ್ರೆಗಳಿಗೆ ಔಷಧಿಗಳು ಬಂದಿಲ್ಲವೆಂದು ನಾನು ಕೇಳಿದ್ದೇನೆ.

ಶ್ರೀ ಬಸವರಾಜ ಪಾಟೀಲ್:- ಅಧ್ಯಕ್ಷರೇ, ಅದನ್ನು ತಮ್ಮ ಗಮನಕ್ಕೆ ಈಗಾಗಲೇ ತಂದಿದ್ದೇನೆ. ತಡವಾಗಿತ್ತು ಆದರೆ ಈಗಾಗಲೇ ಎಲ್ಲಾ ಆಸ್ಪತ್ರೆಗಳಿಗೆ ಔಷಧಿಯನ್ನು ಒದಗಿಸಲಾಗಿದೆ.

ಗುಬ್ಬಿ ತಾಲ್ಲೂಕು ಸಿ. ಎಸ್. ಪುರ ರಸ್ತೆಯ ದುರಸ್ತಿ

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ):- ಗುಬ್ಬಿ ತಾಲ್ಲೂಕು ಗುಬ್ಬಿ ನಗರದಿಂದ ಅಂದರೆ ಬಿ. ಹೆಚ್. ರಸ್ತೆಯಿಂದ ಗುಬ್ಬಿ ಸಿ. ಎಸ್. ಪುರ ರಸ್ತೆ ಹಾದು ಹೋಗುತ್ತಿದ್ದು ಗುಬ್ಬಿ ನಗರದ ಪ್ರಸಿದ್ಧ ದೇವಸ್ಥಾನವಾದ ಶ್ರೀ ಚೆನ್ನಬಸವೇಶವೇಶ್ವರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಹೋಗುವ ಸಿ. ಎಸ್. ಪುರ ರಸ್ತೆಯ ಸುಮಾರು ೩ ಕಿ. ಮೀ. ಪೂರ್ಣ ಶಿಥಿಲವಾಗಿದ್ದು ನೂರಾರು ಬಸ್ಸುಗಳು, ಲಾರಿಗಳು, ಕಾರುಗಳು ಮತ್ತು ದ್ವಿಚಕ್ರ ವಾಹನಗಳು ಹಾಗೂ ಎತ್ತಿನ ಗಾಡಿಗಳು ಓಡಾಡಲು ತುಂಬಾ ತೊಂದರೆಯಾಗಿರುತ್ತದೆ. ಇದನ್ನು ರಿಪೇರಿ ಮಾಡಬೇಕೆಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಗುಬ್ಬಿಯಿಂದ ಬೆಂಗಳೂರಿನವರೆವಿಗೂ ದೂರು ಕೊಟ್ಟರೂ ಸರಿಪಡಿಸಿರುವುದಿಲ್ಲ. ಮೇಲೆ ಹೇಳಿದ ದೇವಸ್ಥಾನಕ್ಕೆ ಪ್ರತಿ ದಿವಸ ಸಾವಿರಾರು ಭಕ್ತಾದಿಗಳು ನೂರಾರು ವಾಹನಗಳಲ್ಲಿ ಬರುತ್ತಿದ್ದು ತುಂಬಾ ತೊಂದರೆಯಾಗಿರುತ್ತದೆ. ಈ ರಸ್ತೆಯನ್ನು ತ್ವರಿತವಾಗಿ ರಿಪೇರಿ ಮಾಡಿಸಿ ಸಾರ್ವಜನಿಕರು ಹಾಗೂ ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಲೋಕೋಪಯೋಗಿ ಇಲಾಖೆ ಮಂತ್ರಿಗಳನ್ನು ಒತ್ತಾಯ ಪೂರ್ವಕವಾಗಿ ವಿನಂತಿಸುತ್ತೇನೆ. ಈ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಯಾಗಿರುತ್ತದೆ.

ಶ್ರೀ ಜಿ. ಹೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಯವರು):- ಈ ಕೆಲಸ ಆಗಲೇ ಪೂರ್ಣಗೊಂಡಿದೆ. ಗುಬ್ಬಿ ತಾಲ್ಲೂಕು ಗುಬ್ಬಿ ನಗರದಿಂದ ಅಂದರೆ ಬಿ. ಹೆಚ್. ರಸ್ತೆಯಿಂದ ಗುಬ್ಬಿ ಸಿ. ಎಸ್. ಪುರ ರಸ್ತೆಯು ಗುಬ್ಬಿ ನಗರದ ಪ್ರಸಿದ್ಧ ದೇವಸ್ಥಾನವಾದ ಶ್ರೀ ಚೆನ್ನಬಸವೇಶ್ವರಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಹಾದು ಹೋಗುತ್ತಿದ್ದು ಇದು ೩ ಕಿ. ಮೀ. ಉದ್ದವಿದೆ. ಈ ಭಾಗದ ರಸ್ತೆಯ ಪೈಕಿ ೧ ಕಿ. ಮೀ. ರಸ್ತೆಯು ಸುಸ್ಥಿತಿಯಲ್ಲಿದ್ದು ಉಳಿದ ೨ ಕಿ. ಮೀ. ಉದ್ದವು ಶಿಥಿಲವಾಗಿದ್ದಿತು. ಈ ಶಿಥಿಲಗೊಂಡಿದ್ದ ೨ ಕಿ. ಮೀ. ರಸ್ತೆಯನ್ನು ೧.೬೫ ಲಕ್ಷ ರೂ. ಗಳ ವೆಚ್ಚದಲ್ಲಿ ಮರು ಡಾಂಬರೀಕರಣ ಕಾಮಗಾರಿಯನ್ನು ತೆಗೆದುಕೊಂಡು ೧೯-೩-೧೯೯೨ರಂದು ಸಂಪೂರ್ಣ ಮಾಡಲಾಗಿದೆ. ಈಗ ಈ ಭಾಗದ ರಸ್ತೆಯು ಸುಸ್ಥಿತಿಯಲ್ಲಿದ್ದು ಸಂಚಾರಕ್ಕೆ ಯಾವುದೇ ತೊಂದರೆ ಇರುವುದಿಲ್ಲ.

ಬೆಂಗಳೂರು ದಕ್ಷಿಣ ತಾಲ್ಲೂಕು ಕೋಲೂರು ಸರ್ಕಾರಿ ಶಾಲೆಯಲ್ಲಿ ಮಕ್ಕಳು ಪ್ರವೇಶ ಮಾಡಿದ ಕೂಡಲೇ ಪ್ರಜ್ಞೆ ತಪ್ಪಿ ಬೀಳುತ್ತಿರುವ ಬಗ್ಗೆ

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ):- ಬೆಂಗಳೂರು ದಕ್ಷಿಣ ತಾಲ್ಲೂಕು ಕೋಲೂರು ಸರ್ಕಾರಿ ಶಾಲೆಯಲ್ಲಿ ಕಳೆದ ಐದು ದಿನಗಳಿಂದ ಮಕ್ಕಳು ಪ್ರವೇಶ ಮಾಡಿದ ಕೂಡಲೇ ಪ್ರಜ್ಞೆ ತಪ್ಪಿ ಕೆಳಗೆ ಬೀಳುತ್ತಿರುವುದರಿಂದ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಈ ಸೂಚನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಸಂಸದೀಯ ಹಾಗೂ ಶಿಕ್ಷಣ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷರೇ, ಮಾಹಿತಿಯನ್ನು ಸಂಗ್ರಹ ಮಾಡಿ ಉತ್ತರಗಳನ್ನು ಪ್ರತ್ಯೇಕವಾಗಿ ಒದಗಿಸುತ್ತೇನೆ.

ಚೆನ್ನಪಟ್ಟಣ ತಾಲ್ಲೂಕಿನ ಟಿ. ಎ. ಪಿ. ಎಂ. ಎಸ್.ನಲ್ಲಿ ಅವ್ಯವಹಾರ.

Sri. Sadat Ali Khan (Channapattana):- The Hon'ble Minister for Co-operation will be pleased to note that the T.A.P.M.C.S. Limited, Channapattana is running under heavy loss due to the misuse of funds by the management which involved with the Officials. The following informations may be furnished in the interest of Public Service.

What is the actual financial position of the above Society, the total amount of loan taken by the society in B.D.C.C. Bank in the name of Cash Credit Account; the loan amount spent by the society; Whether it is a fact that the society is due to the following heads at present: 1) Rs. 20,78,000/- to B.D.C.C. Bank, (2) C.C.L. A/c Cloth and Text Books: Rs. 3,50,000/-. 3) Call deposit amount collected by the Public is also due by the society. Whether it is a fact that more funds has been misused by the society; while purchasing 2 boiler tanks; while purchasing any major items to the Society the usual formalities regarding calling tenders etc., are maintained or not; What action has been taken by the Government in this regard?

ಶ್ರೀ ಡಿ. ಕೆ. ಶಿವಕುಮಾರ್ (ಬಂದೀಖಾನೆ ಮತ್ತು ಗೃಹರಕ್ಷಕ ದಳಗಳ ಸಚಿವರು, ರಾಜ್ಯ ಸಚಿವರ ಪರವಾಗಿ):- ಚೆನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘವು ೩೧-೩-೧೯೯೧ರವರೆಗೆ ರೂ. ೫.೩೮ ಲಕ್ಷಗಳ ನಿವ್ವಳ ನಷ್ಟ ಅನುಭವಿಸಿರುತ್ತದೆ. ತಾತ್ಕಾಲಿಕ ಲೆಕ್ಕ ವರದಿಗಳ ಪ್ರಕಾರ ೧-೪-೧೯೯೧ ರಿಂದ ೩೧-೦೧-೧೯೯೨ರವರೆಗೆ ಸಂಘವು ಸುಮಾರು ೧.೪೪ ಲಕ್ಷಗಳಷ್ಟು ನಷ್ಟವನ್ನು ಅನುಭವಿಸಿರುತ್ತಾರೆ. ಇದರಿಂದಾಗಿ ಸಂಘದ ಒಟ್ಟು ನಿವ್ವಳ ನಷ್ಟ ದಿನಾಂಕ ೩೧-೧-೧೯೯೨ರವರೆಗೆ ರೂ. ೬.೮೨ ಲಕ್ಷಗಳಷ್ಟಾಗಿರುತ್ತದೆ. ಸಂಘದ ನೌಕರರು ಒಟ್ಟು ಎಂಟು ಪ್ರಕರಣಗಳಲ್ಲಿ ರೂ. ೪,೦೧,೯೭೦-೮೧ಗಳಷ್ಟು ಹಣವನ್ನು ದುರುಪಯೋಗಗೊಳಿಸಿದ್ದು ವಸೂಲಾತಿಗಾಗಿ ಎಲ್ಲಾ ಎಂಟು ಪ್ರಕರಣಗಳಲ್ಲಿ ಸಿವಿಲ್ ಕ್ರಮ ತೆಗೆದುಕೊಂಡಿದ್ದು, ವಿವಿಧ ನ್ಯಾಯಾಲಯಗಳಲ್ಲಿ ವ್ಯಾಜ್ಯ ಹೂಡಿದ್ದು, ಅವು ವಿವಿಧ ಹಂತಗಳಲ್ಲಿರುತ್ತವೆ.

ಫೆಬ್ರವರಿ ೧೯೯೦ರಿಂದ ಜುಲೈ ೧೯೯೧ರವರೆಗ ಸಕ್ಕರೆ ವ್ಯತ್ಯಾಸ ದರ ಮತ್ತು ಸಾಗಾಣಿಕೆ ವೆಚ್ಚಗಳ ಬಗ್ಗೆ ಸರಕಾರದಿಂದ ರೂ. ೮.೫೬ ಲಕ್ಷ ಹಣ ಬರಬೇಕಾಗಿರುವುದರಿಂದಲೂ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಶಿಷ್ಟ ವರ್ಗಗಳ ಹಾಸ್ಟೆಲ್‌ಗಳಿಗೆ ಆಹಾರ ಧಾನ್ಯಗಳನ್ನು ಪೂರೈಕೆ

ಮಾಡದಿದ್ದುದರಿಂದಲೂ ಈ ಹಣವು ಸಕಾಲಕ್ಕೆ ಬರದೇ ಇದ್ದುದರಿಂದ ಹೆಚ್ಚು ಬಡ್ಡಿ ಹಣವನ್ನು ನಗದು ಪತ್ತಿನ ಸಾಲದ ಮೇಲೆ ಬ್ಯಾಂಕಿಗೆ ಪಾವತಿ ಮಾಡಬೇಕಾಗಿರುವುದರಿಂದಲೂ ಸಂಘ ನಷ್ಟ ಅನುಭವಿಸಲು ಕಾರಣವಾಗಿರುವ ದಿನಾಂಕ ೩೧-೮-೧೯೯೧ಕ್ಕೆ ಸಂಘದ ಆರ್ಥಿಕ ಪರಿಸ್ಥಿತಿ ಈ ಕೆಳಕಂಡಂತಿರುತ್ತದೆ.

	ರೂ. ಲಕ್ಷಗಳಲ್ಲಿ
ಸರ್ಕಾರದ ಶೇರು ಹಣ	೭.೮೭
ಜಿಲ್ಲಾ ಪರಿಷತ್ತಿನಿಂದ ಶೇರು ಹಣ	೦.೨೫
ವ್ಯಾಪಾರ ಮಳಿಗೆ ಸಾಲ	೦.೧೭
ಪೀಠೋಪಕರಣಗಳ ಸಾಲ	೦.೦೩
ಗೋದಾಮು ಸಾಲ	೧.೦೦
ಲಾರಿ ಸಾಲ	೨.೦೦
ಐ. ಸಿ. ಡಿ. ಪಿ.	೧.೮೪
ನಗದು ಪತ್ತಿನ ಸಾಲ (ಡಿಸಿಸಿ ಬ್ಯಾಂಕ್)	೨೦.೭೮

ನಗದು ಪತ್ತಿನ ಸಾಲ ಬಾಬ್ತು

ಸಂಘವು ಬಿಡಿಸಿಸಿ ಬ್ಯಾಂಕಿನಿಂದ ೨೦ ಲಕ್ಷ ರೂಪಾಯಿಗಳನ್ನು ನಗದು ಪತ್ತಿನ ಸಾಲವಾಗಿ ತೆಗೆದುಕೊಂಡಿದ್ದು ಈ ಪೂರ್ತಿ ಹಣವನ್ನು ತನ್ನ ವ್ಯಾಪಾರದಲ್ಲಿ ತೊಡಗಿಸಿದೆ.

ನಗದು ಪತ್ತಿನ ಸಾಲ ಬಾಬ್ತು ಬಿಡಿಸಿಸಿ ಬ್ಯಾಕಿಗೆ ರೂ. ೨೦.೦೦ ಲಕ್ಷಗಳ ಸಾಲ ಹಾಗೂ ರೂ. ೭೮೦೦೦-೦೦ ಬಡ್ಡಿ ಹಣವನ್ನು ಸಂಘವು ಪಾವತಿ ಮಾಡಬೇಕಾಗಿರುತ್ತದೆ. ಪಠ್ಯ ಪುಸ್ತಕದ ಬಾಬ್ತು ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬಗ್ಗೆ ಬಾಬ್ತು ರೂ. ೩.೫೦ ಲಕ್ಷಗಳಷ್ಟು ಹಣವನ್ನು ಪಾವತಿ ಮಾಡಬೇಕಾಗಿರುತ್ತದೆ. ಸಾರ್ವಜನಿಕರಿಂದ ಕರ ಠೇವಣಿಯನ್ನು ಪಡೆದುಕೊಂಡಿದ್ದು, ಈ ಬಾಬ್ತು ರೂ. ೨.೦೦ ಲಕ್ಷಗಳಷ್ಟು ಹಣವನ್ನು ಪಾವತಿ ಮಾಡಬೇಕಾಗಿರುತ್ತದೆ.

೧೯೬೧-೬೨ರ ಅವಧಿಯಲ್ಲಿ ಬಾಯಿಲರ್ ಟ್ಯಾಂಕ್‌ಗಳನ್ನು ಖರೀದಿ ಮಾಡಲು ಟೆಂಡರುಗಳನ್ನು ಕರೆದಿರುವುದಿಲ್ಲ. ನಂತರ ೧೯೮೯-೯೦ನೇ ಸಾಲಿನಲ್ಲಿ ರಬ್ಬರ್ ಷೆಲ್ಲರ್ ಮತ್ತು ಯಂತ್ರೋಪಕರಣಗಳನ್ನು ರೂ. ೨೮,೫೦೦-೦೦ ಕ್ಕೆ ಖರೀದಿ ಮಾಡಿದ್ದು ನಿಯಮಗಳ ಪ್ರಕಾರ ಕೊಟೇಷನ್ ಕರೆದು ಈ ಉಪಕರಣಗಳನ್ನು ಖರೀದಿಸಿರುತ್ತಾರೆ. ಸಂಘದ ವ್ಯವಹಾರದಲ್ಲಿ ಅಂದಿನ ಆಡಳಿತಾಧಿಕಾರಿಗಳಿಂದ ರೂ. ೧೯,೧೭೭-೩೨ ರಷ್ಟು ಹಣ ದುರುಪಯೋಗವಾಗಿದ್ದು ವಸೂಲಾತಿಗಾಗಿ ಪ್ರಕರಣವು ರಾಜ್ಯದ ಉಚ್ಛ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಶಾಸನ ರಚನಾ ಕಾರ್ಯಕಲಾಪಗಳು

೧೯೭೨ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೇ,

"೧೯೯೨ರ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಇದು ಒಂದು ಸಣ್ಣ ತಿದ್ದುಪಡಿ, ಇದರಲ್ಲಿ ಅಮೆಂಡ್‌ಮೆಂಟ್ ಟು ಸೆಕ್ಷನ್ ೫ (ಎ) ಇದೆ. ಹಿಂದೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಜನಾಂಗಕ್ಕೆ ಏನು ಸರ್ಕಾರಿ ಜಮೀನುಗಳನ್ನು ಗ್ರ್ಯಾಂಟ್ ಮಾಡುತ್ತಿದ್ದರು, ಹಾಗೆ ಗ್ರ್ಯಾಂಟ್ ಆದಮೇಲೆ ಅದರಲ್ಲಿದ್ದ ಕಂಡೀಷನ್ ವಯಲೇಟ್ ಮಾಡಿ ಯಾರಾದರೂ ಪರ್ಚೇಸ್ ಮಾಡಿದ್ದರೆ, ಅದನ್ನು ರೆಸ್ಟೋರ್ ಮಾಡತಕ್ಕಂಥ ಕಾನೂನನ್ನು ನಾವು ೧೯೭೮ರಲ್ಲಿ ತಂದಿದ್ದೇವೆ. ಆದರೆ, ಗ್ರ್ಯಾಂಟ್‌ಗೆ ಅನ್ಯಾಯವಾದರೆ ಅದನ್ನು ಡೆಪ್ಯುಟಿ ಕಮೀಷನರ್‌ರವರಿಗೆ ಅಪೀಲು ಮಾಡತಕ್ಕ ಪ್ರಾವಿಷನ್ಸ್ ಇರಲಿಲ್ಲ. ಯಾರು ಪರ್ಚೇಸರ್ ಇದ್ದಾರೆ, ಅವರಿಗೆ ಮಾತ್ರ ಅಪೀಲು ಮಾಡತಕ್ಕ ಪ್ರಾವಿಷನ್ಸ್ ಇತ್ತು. ಇವರಿಗೂ ಕೂಡ ಒಂದು ಅಪೀಲು ಮಾಡತಕ್ಕಂಥ ಅವಕಾಶ ಮಾಡಿಕೊಡಬೇಕು. ಅಂದರೆ, ಅಸಿಸ್ಟೆಂಟ್ ಕಮೀಷನರ್ ಆರ್ಡರ್ ಮೇಲೆ ಇನ್ನು ಮುಂದೆ ಡೆಪ್ಯೂಟಿ ಕಮೀಷನರ್‌ರಿಗೆ ಅಪೀಲು ಹೋಗತಕ್ಕಂಥ ಒಂದು ಅಪೀಲು ಪ್ರಾವಿಷನ್ಸ್ ಮಾಡಿಕೊಡಬೇಕೆನ್ನತಕ್ಕಂಥ ದೃಷ್ಟಿಯಿಂದ ಸೆಕ್ಷನ್ ೫(ಎ)ಗೆ ಅಮೆಂಡ್‌ಮೆಂಟ್ ನಾವು ತಂದಿದ್ದೇವೆ. ಎಲ್ಲರೂ ಕೂಡ ಬಹುಶಃ ಇದನ್ನು ಒಪ್ಪುತ್ತೀರಿ. ಅವರಿಗೆ ಏನು ತೊಂದರೆ ಆಗುತಿತ್ತು ಅದು ಇದರಿಂದ ನಿವಾರಣೆ ಆಗುತ್ತದೆ. ಇದನ್ನು ಹಿಂದೆಯೂ ಕೂಡ ಒಪ್ಪಿದ್ದರು. ಅವರ ಸಲಹೆ ಮೇರೆಗೆ ನಾವು ತಂದಿದ್ದೇವೆ. ಇದನ್ನು ಬಹುಶಃ ಎಲ್ಲರೂ ಕೂಡ ಒಪ್ಪುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಸಭಾಧ್ಯಕ್ಷರೆ, ತಾವು ತಂದಿರತಕ್ಕ ಮಸೂದೆಗೆ ನಾವು ಬಹುಶಃ ಒಪ್ಪಿಗೆ ಕೊಡಬಹುದು. ತಾವು ಕೇಳಿರತಕ್ಕಂಥದ್ದು ಅಧಿಕಾರವನ್ನು ಅಪೀಲು ಮಾಡತಕ್ಕಂಥ ಅಧಿಕಾರ ಗ್ರ್ಯಾಂಟ್‌ಗೆ ಕೊಡತಕ್ಕಂಥದ್ದು, ಅದನ್ನು ಒಪ್ಪಬಹುದು. ಆದರೆ, ಒಂದು ವಿಷಯ ಯೋಚನೆ ಮಾಡಬೇಕು. ಅವರ ಜಮೀನನ್ನು ಕೊಂಡಂತಹ ಪರ್‌ಚೇಸರ್ ಏನು ಇದ್ದಾರೆ ಅವರು ಸಾಕಷ್ಟು ಇಂಪ್ರೂವ್‌ಮೆಂಟ್ ಮಾಡಿರುತ್ತಾರೆ. ಹಾಗೇ ಇಂಪ್ರೂವ್‌ಮೆಂಟ್ ಮಾಡಿದ್ದರೆ ಅದಕ್ಕೆ ಅವರಿಗೆ ಯಾವುದೇತರಹದ ಕಾಂಪನ್‌ಸೇಷನ್ ಇಲ್ಲದೇ ಇದ್ದರೆ ಕಷ್ಟವಾಗುತ್ತದೆ. ಅವರೂ ಕೂಡ ಬಡವರಾಗೇ ಇದ್ದು ನಿರ್ಗತಿಕರಾಗಿ, ಇವತ್ತು ಕಷ್ಟದಲ್ಲಿ ಇರತಕ್ಕಂಥ ಸಂಸಾರಗಳು ಸಾಕಷ್ಟು ಇರತಕ್ಕಂಥಾದ್ದು ತಮಗೂ ಕೂಡ ಗೊತ್ತಿದೆ. ಉಚ್ಚ ನ್ಯಾಯಾಲಯದಲ್ಲೂ ಕೂಡ ಅನೇಕ ಸಂದರ್ಭಗಳಲ್ಲಿ ಒಂದು ಜಡ್ಜ್‌ಮೆಂಟ್ ಕೂಡ ಆಗಿದೆ. ಏನೆಂದರೆ ಈ ಒಂದು ಸಪ್ಪೋರ್ಟ್ ಆದ ಲೆಜಿಸ್‌ಲೇಷನ್ ತರಬೇಕು ಅಂತ ಆದೇಶವನ್ನೂ ಕೂಡ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರು ಇಂಪ್ರೂವ್‌ಮೆಂಟ್ ಮಾಡಿದ್ದಕ್ಕೆ ಅವರಿಗೆ ಕಾಂಪನ್‌ಸೇಷನ್ ಕೊಡಬೇಕು ಎನ್ನತಕ್ಕಂಥಾದ್ದು ಕೂಡ, ಕಾಂಪನ್‌ಸೇಷನ್ ಕೊಡದ ಯಾವುದೇ ತರಹದ ಕಾನೂನನ್ನು ನೀವು ತರುವುದಕ್ಕೆ ಮಾರ್ಪಾಡು ಮಾಡಲಿಲ್ಲ. ಇಂಪ್ರೂವ್‌ಮೆಂಟ್ ಮಾಡಿರತಕ್ಕಂಥಹವರನ್ನು ಇವತ್ತು ಹೊರಹಾಕತಕ್ಕಂಥ

ಪ್ರಶ್ನೆ ಬಂದಾಗ ಅವರಿಗೆ ನೋವಾಗುವುದಿಲ್ಲವೇ? ಅವರಿಗೆ ಕಷ್ಟವಾಗುವುದಿಲ್ಲವೇ? ಅಂತಹವರ ಬಗ್ಗೆ ಯಾವತರಹದ ಕಾರ್ಯಕ್ರಮವನ್ನು ನೀವು ತಗೆದುಕೊಂಡಿದ್ದೀರಿ. ಎನ್ನುವ ಬಗ್ಗೆ ತಾವು ಈ ಸಭೆಗೆ ತಿಳಿಸಿ ಅನುಮೋದನೆ ಪಡೆದುಕೊಳ್ಳುವುದು ಸೂಕ್ತ ಎಂದು ನನ್ನ ಭಾವನೆ.

ಶ್ರೀ ಕೆ. ಸಿದ್ದಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜಯಚಂದ್ರರವರು ಹೇಳಿದ್ದನ್ನು ವಿಚಾರ ಮಾಡಬೇಕಾದುದು ಇದೆ. ಪರ್ಚೇಸ್ ಮಾಡುವವರು ಆ ಜಮೀನಿನ ಮೇಲಿರತಕ್ಕ ಕಂಡೀಷನ್ಸ್ ಏನು ಎಂಬುದನ್ನು ತಿಳಿದುಕೊಳ್ಳಬೇಕಾದುದು ಅವರ ಜವಾಬ್ದಾರಿಯಾಗಿರುತ್ತದೆ. ಅದನ್ನು ತಿಳಿದೂ ಅವರು ಮಾಡಿದರೆ ಅವರು ಮಾಡಿರತಕ್ಕ ಇಂಪ್ರೂವ್‌ಮೆಂಟ್ ಖರ್ಚನ್ನು ಯಾವ ರೀತಿ ಕೊಡುವುದಕ್ಕೆ ಸಾಧ್ಯ? ಇಂಪ್ರೂವ್‌ಮೆಂಟ್‌ಗೆ ಖರ್ಚು ಮಾಡಿರತಕ್ಕದ್ದನ್ನು ಕೊಡತಕ್ಕದ್ದು ನ್ಯಾಚುರಲ್ ಜಸ್ಟೀಸ್ ಇರಬಹುದು. ಆದರೆ ಕೊಂಡು ಕೊಳ್ಳುವವರಿಗೆ ಈ ವಿಚಾರ ಸಂಪೂರ್ಣವಾಗಿ ಗೊತ್ತಿರುತ್ತದೆ. ಹೀಗಿದ್ದರೂ ಅದನ್ನು ಕೊಂಡು ಕೊಂಡು ನಾನು ಇದರಲ್ಲಿ ಅಭಿವೃದ್ಧಿ ಮಾಡಿದ್ದೇನೆ, ಆದುದರಿಂದ ನಾನು ಇದನ್ನು ತಗೆದುಕೊಳ್ಳುತ್ತೇನೆಂದು ಹೇಳತಕ್ಕದ್ದು ನ್ಯಾಯವಲ್ಲಎಂದು ನಾನು ಹೇಳಬಯಸುತ್ತೇನೆ.

ಶ್ರೀ ಎಂ. ವಿ ವೆಂಕಟಪ್ಪ:- ಬೇರೆಯವರು ಕೊಂಡು ಕೊಂಡಿದ್ದಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರಲ್ಲ. ಆದರೆ ಕೆಲವು ಕಡೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಜಮೀನನ್ನು ಷೆಡ್ಯೂಲ್ ಕ್ಯಾಸ್ಟ್‌ನವರೇ ಕೊಂಡು ಕೊಂಡಿರುತ್ತಾರೆ. ಅಂಥ ಕೇಸುಗಳಲ್ಲಿ ಏನು ಮಾಡುತ್ತೀರಿ? ನಾನು ವಿಚಾರವನ್ನು ತಿಳಿದುಕೊಳ್ಳುವುದಕ್ಕಾಗಿ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ.

ಡಾ|| ವೈ ನಾಗಪ್ಪ:- ಷೆಡ್ಯೂಲ್ಡ್ ಕ್ಯಾಸ್ಟ್ ಜಮೀನು ಟ್ರಿಬ್ಯೂನಲ್‌ನಿಂದ ಏನು ರೀ ಗ್ರಾಂಟ್ ಆಗಿರುತ್ತದೆ ಅದನ್ನು ೧೫ ವರ್ಷಗಳವರೆಗೆ ಪರಭಾರೆ ಮಾಡಕೊಡದೆಂದು ಮತ್ತು ನಾನ್ ಅಗ್ರಿಕಲ್ಚರಲ್ ಪರ್ಪಸ್‌ಗೆ ಕನ್ವರ್ಷನ್ ಮಾಡಕೊಡದೆಂದು ಕಾನೂನು ಇದ್ದರೂ, ಆ ಕಾನೂನನ್ನು ಉಲ್ಲಂಘನೆ ಮಾಡಿ ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ರಿಜಿಸ್ಟರ್ ಮಾಡಿರುತ್ತಾರೆ ಅವರನ್ನು ಕೇಳಿದರೆ ಈ ಕಾನೂನು ನಮಗೆ ಅನ್ವಯವಾಗುವುದಿಲ್ಲ, ಸರ್ಕಾರಕ್ಕೆ ಬೇಕಾಗಿರತಕ್ಕದ್ದು ರೆವಿನ್ಯೂ. ಆದುದರಿಂದ ನಾವು ರಿಜಿಸ್ಟರ್ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳು ಇದಕ್ಕೆ ಸೂಕ್ತವಾದ ಒಂದು ತಿದ್ದುಪಡಿಯನ್ನು ತರಬೇಕು. ಇಲ್ಲದಿದ್ದರೆ ಸಬ್ ರಿಜಿಸ್ಟ್ರಾರ್‌ರವರಿಗೆ ಏನು ತಿಳುವಳಿಕೆ ಕೊಡುತ್ತೀರೆಂಬುದನ್ನು ಸಭೆಗೆ ತಿಳಿಸಬೇಕು.

ಶ್ರೀ ಬಿ. ಶಿವರಾಮು:- ಹರಿಜನರ ಜಮೀನನ್ನು ತೆಗೆದುಕೊಳ್ಳಕೂಡದೆಂದು ಕಂಡೀಷನ್ಸ್ ಇರತಕ್ಕದ್ದು ಸರಿ. ಆದರೆ ಕಂದಾಯ ಇಲಾಖೆಯಲ್ಲಿ ಮತ್ತು ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ತಿಳಿದೂ ತಿಳಿದೂ ರಿಜಿಸ್ಟರ್ ಮಾಡತಕ್ಕದ್ದು, ಮತ್ತು ಖಾತೆ ಬದಲಾವಣೆ ಮಾಡತಕ್ಕದ್ದು ಆಗುತ್ತಿದೆ. ಮೊದಲನೆಯದಾಗಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡತಕ್ಕದ್ದಾದರೆ, ಎರಡನೆಯದಾಗಿ ತಾಲ್ಲೂಕು ಆಫೀಸಿನಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಈ ಕಂಡೀಷನ್ಸ್ ಇದ್ದರೂ ಇದನ್ನು ಖಾತೆ ಮಾಡತಕ್ಕದ್ದು ನಡೆಯುತ್ತಿದೆ. ನಾನು ಬಹಳಷ್ಟು ಕೇಸುಗಳಲ್ಲಿ ನೋಡಿದ್ದೇನೆ. ಎಲ್ಲರಿಗೂ ಅವರು ಖಾತೆ ಮಾಡಿಕೊಟ್ಟಿದ್ದಾರೆ. ಅವರು ಖಾತೆಯನ್ನು ಮಾಡಿದ ಮೇಲೆ ಇವರು ಲೋನ್ ತೆಗೆದುಕೊಂಡಿದ್ದಾರೆ. ಕಂದಾಯ ಇಲಾಖೆಯವರೇ ಮಂಜೂರು ಮಾಡಿ, ಖಾತೆ, ಪಹಣಿ ಮುಂತಾದವುಗಳನ್ನೆಲ್ಲಾ ಬರೆದುಕೊಡುತ್ತಾರೆ. ಅಂದಮೇಲೆ ಬೇರೆಯವರ ತಪ್ಪು ಎಲ್ಲಿಬರುತ್ತದೆ? ಆದುದರಿಂದ ಕಂದಾಯ

ಇಲಾಖೆಯವರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಏಕೆಂದರೆ ಅವರು ಪಹಣಿ, ಖಾತೆ ಮಾಡಿಕೊಡದೇ ಇದ್ದಿದ್ದರೆ ಇವರು ಸಾಲ ವಗೈರೆ ತೆಗೆದುಕೊಂಡು ಆ ಜಮೀನನ್ನು ಅಭಿವೃದ್ಧಿ ಮಾಡುತ್ತಿರಲಿಲ್ಲ. ಕಂದಾಯ ಇಲಾಖೆ ಅಧಿಕಾರಿಗಳು ಆ ಮಟ್ಟದಲ್ಲೇ ಇದನ್ನು ತಡೆಹಿಡಿಯಬಹುದಿತ್ತು. ಇಂತಹ ಜಮೀನನ್ನು ಕೊಂಡು ಕೊಂಡಿರುವವರಿಗೆ ಮಿಸ್‌ಲೀಡ್ ಮಾಡಿರತಕ್ಕವರು ಎಂದರೆ ಈ ಕಂದಾಯ ಇಲಾಖೆಯ ಅಧಿಕಾರಿಗಳು. ಇವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಕೊಂಡು ಕೊಂಡಿರುವವರಿಗೆ ತೊಂದರೆಯಾಗಿರತಕ್ಕದ್ದು ಈ ಕಂದಾಯ ಇಲಾಖೆಯುವರಿಂದಲೇ..ಆದುದರಿಂದ ಇದನ್ನು ಮಾನ್ಯ ಮಂತ್ರಿಗಳು ಅರ್ಥಮಾಡಿಕೊಂಡು ಸೂಕ್ತ ಉತ್ತರವನ್ನು ಕೊಡುತ್ತಾರೆಂದು ನಾನು ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪಿ. ಟಿ. ಸಿ. ಆಕ್ಟ್‌ನಲ್ಲಿ ಸುಮಾರು ೪೦,೦೧೪ ಕೇಸುಗಳನ್ನು ಇದುವರೆಗೆ ಡಿಟೆಕ್ಟ್ ಮಾಡಿದ್ದಾಗಿದೆ. ಇದರಲ್ಲಿ ರೆಸ್ಟೋರ್ ಆಗಿರತಕ್ಕದ್ದು ಸುಮಾರು ೨೬,೨೯೮ ಕೇಸುಗಳು ಅಂದರೆ ಸುಮಾರು ೫೨,೮೦೦ ಎಕರೆಗಳು. ಇನ್ನುಳಿದಂತಹ ಕೆಲವು ಕೇಸುಗಳು ಈ ಕಾನೂನಿನ ಕೆಳಗೆ ಇವೆ. ಮಾನ್ಯ ಸದಸ್ಯರಾದ ಜಯಚಂದ್ರರವರು ಹೇಳಿದಂತೆ ಯಾರು ಈ ಎಸ್.ಸಿ. / ಎಸ್. ಟಿ.ಗಳ ಜಮೀನನ್ನು ಖರೀದಿ ಮಾಡಿ ಅದನ್ನು ಅಭಿವೃದ್ಧಿ ಮಾಡಿದ್ದಾರೆ ಅದನ್ನು ರೆಸ್ಟೋರ್ ಮಾಡಿದ ಮೇಲೆ ಅಭಿವೃದ್ಧಿ ಮಾಡಿದ್ದರೆ ಆ ಕಿಮತ್ತನ್ನು ಅವರಿಗೆ ಕೊಡಬೇಕು. ಏಕೆಂದರೆ ಅವರೂ ಕೂಡ ಬಡವರಾಗಿರುತ್ತಾರೆ ಎಂಬ ವಾದವನ್ನು ಹೇಳಿದ್ದಾರೆ. ಸ್ವಲ್ಪ ಹೆಚ್ಚೂಕಡಿಮೆ ಮಾನ್ಯ ಸದಸ್ಯರಾದ ಶಿವರಾಮುರವರದ್ದೂ ಕೂಡ ಇದೇ ವಾದ ಇದೆ. ಪರ್‌ಚೇಸ್ ಮಾಡುವವರದ್ದು ಏನೂ ತಪ್ಪಿಲ್ಲ. ನೀವು ರಿಜಿಸ್ಟರ್ ಮಾಡುತ್ತೀರಿ, ಅದರ ಮೇಲೆ ಅವರು ಖಾತೆ ಬದಲಾವಣೆ ಮಾಡುತ್ತಾರೆ, ಪಹಣಿ ಬರೆಯುತ್ತಾರೆ, ಆನಂತರ ಇವರು ಆ ಜಮೀನನ್ನು ಅಭಿವೃದ್ಧಿ ಮಾಡುತ್ತಾರೆಂದು ಹೇಳುತ್ತಿದ್ದಾರೆ. ಯಾರು ಈ ಜಮೀನನ್ನು ಪರ್‌ಚೇಸ್ ಮಾಡುತ್ತಾರೆ ಅವರ ಜವಾಬ್ದಾರಿ ಇದರಲ್ಲಿದೆ. ಯಾಕೆಂದರೆ ಅವರು ಖರೀದಿ ಮಾಡುವಾಗ ಇದನ್ನೆಲ್ಲಾ ನೋಡಬೇಕು ಇದರಲ್ಲಿ ಏನಾದರೂ ಪರ್‌ಫೆಕ್ಟ್ ಟೈಟಲ್ ಇದೆಯೇ, ಏನಾದರೂ ವಯಲೇಷನ್ ಇದೆಯೇ? ಯಾವುದಾದರೂ ಕಾನೂನಿನ ಅಡಿಯಲ್ಲಿ ತೊಂದರೆ ಬರುತ್ತದೆಯೇ? ಎಂಬುದನ್ನು ನೋಡಿಕೊಳ್ಳತಕ್ಕದ್ದು ಅವರ ಜವಾಬ್ದಾರಿ ಮತ್ತು ಈ ಕಾನೂನಿನಲ್ಲಿ ಕೂಡ ಅವರ ಮೇಲೆಯೇ ಜವಾಬ್ದಾರಿಯನ್ನು ಹಾಕಿ ಇದನ್ನು ನಾವು ಮಾಡಿದ್ದೇವೆ. ಈ ಕಾನೂನು ಬಗ್ಗೆ ಸುಪ್ರೀಂ ಕೋರ್ಟ್‌ಗೆ ಅಪೀಲ್ ಹೋದಾಗ ಅದು ಒಳ್ಳೆಯ ಕಾನೂನು ಇದೆ, ಪ್ರೊಗ್ರೆಸೀವ್ ಆಕ್ಟ್ ಇದೆ ಅಂತ ಹೇಳಿ ಸುಪ್ರೀಂ ಕೋರ್ಟ್‌ನವರು ಅಪ್‌ಹೋಲ್ಡ್ ಮಾಡಿದ್ದಾರೆ. ಅದನ್ನು ಇಂಪ್ಲಿಮೆಂಟೇಷನ್‌ಗೆ ಕೊಟ್ಟಿದ್ದಾರೆ. ಅಂದರೆ ಅಸಿಸ್ಟೆಂಟ್ ಕಮಿಷನರ್ ನೋಡಿ ಅದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಂಥಾದ್ದನ್ನು ಕೊಟ್ಟಿದ್ದಾರೆಯೇ ಹೊರತಾಗಿ ಕಾನೂನು ಸರಿ ಇಲ್ಲವೆಂದು ಎಲ್ಲಿಯೂ ಸುಪ್ರೀಂ ಕೋರ್ಟ್‌ನವರೂ ಕೂಡ ಹೇಳಲಿಲ್ಲ. ಅದಕ್ಕೆ ಈಗಿರತಕ್ಕಂತಹ ಕಾನೂನಿನಲ್ಲಿ ಅಪೀಲ್ ಪ್ರಾವಿಷನ್ ಗ್ರಾಂಟಿಗೆ ಒಂದು ಪ್ರವಿಷನ್ ತಂದಿದ್ದೇವೆಯೇ ಹೊರತಾಗಿ ಬೇರೆ ಯಾವ ಬದಲಾವಣೆಗೂ ಕೂಡ ಇದರಲ್ಲಿ ಇಲ್ಲ. ಮತ್ತೆ ಮಾನ್ಯ ಮಂತ್ರಿ ಸಿದ್ದಯ್ಯನವರೂ ಕೂಡ ಅದನ್ನೇ ಹೇಳಿದರು.

ಶ್ರೀ ಎಂ. ವಿ. ವೆಂಕಟಪ್ಪ:- ಒಪ್ಪಿಕೊಳ್ಳೋಣ.

(ಗೊಂದಲ)

ಅಧ್ಯಕ್ಷರು:- ಇದು ಎನ್‌ಕಂಬರೆನ್ಸ್ ಇದೆಯೇ, ಟೈಟಲ್ ಡೀಡ್ ಸರಿಯಾಗಿದೆಯೇ, ಎನ್ನತಕ್ಕಂಥಾದ್ದನ್ನು ಯಾರು ಪರ್‌ಚೇಸ್ ಮಾಡುತ್ತಾರೆ ಅವರ ಮೇಲೆ ಬಿದ್ದಿರತಕ್ಕ ಹೊಣೆಗಾರಿಕೆ ಮತ್ತು ಜವಾಬ್ದಾರಿ, ಅದನ್ನು ...

ಶ್ರೀ ಎಂ. ವಿ. ವೆಂಕಟಪ್ಪ:- ಪರ್‌ಚೇಸ್ ಮಾಡಲಿಕ್ಕೆ ಬರುವುದಿಲ್ಲವೆನ್ನುವುದು ಗೊತ್ತಿರುತ್ತದೆ, ಆದಾಗ್ಯೂ ಅವರು ಪರ್‌ಚೇಸ್ ಮಾಡಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಅದನ್ನು ರಿಜಿಸ್ಟರ್ ಮಾಡುತ್ತಾರೆ. ಅದಕ್ಕೋಸ್ಕರ ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಅಧ್ಯಕ್ಷರು:- ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ವಿಧಾನಸೌಧ ಬೇಕಾದರೂ ರಿಜಿಸ್ಟರ್ ಮಾಡಿಕೊಡುತ್ತಾರೆ ಹೋಗಿ ಕೇಳಿದರೆ.

ಶ್ರೀ ಬಿ. ಶಿವರಾಮು:- ಕಂದಾಯ ಕೊಡುತ್ತಿದ್ದಾರೆ. ಆದ್ದರಿಂದ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಖಾತೆ ಮತ್ತೊಂದು ಮಾಡಿ ಅವರಿಗೆ ಪಹಣಿ ಕೊಡತಕ್ಕಂಥದ್ದು ಕಂದಾಯ ಇಲಾಖೆಯಲ್ಲಿ ಟೈಟಲ್ ಡೀಡ್ ಸಹ ಕೊಟ್ಟಿರುತ್ತಾರೆ. ಅದರ ಬಗ್ಗೆ ಏನು ಹೇಳುತ್ತೀರಿ? ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡುವುದು ಬಿಡಿ, ಅವರಿಗೆ ರೆವಿನ್ಯೂ ಬರಬೇಕೆನ್ನುವ ವಿಚಾರ, ಅವರು ಮಾಡಲಿ. ಆದರೆ ಇಂತಿಷ್ಟು ಕಂಡೀಷನ್‌ಗಳು ಇದ್ದರೂ, ನೋಡಿದರೂ ಲ್ಯಾಂಡ್ ಯಾರಿಗೆ ಗ್ರ್ಯಾಂಟ್ ಆಗಿದೆ ಎಂದು ನೋಡಿ ಮತ್ತು ಅವರಿಗೆ ಪಹಣಿ, ಖಾತೆ ಎಲ್ಲಾ ಟೈಟಲ್ ಮಾಡಿಕೊಟ್ಟುಬಿಡುತ್ತಾರೆ. ಇನ್ನೊಂದು ವ್ಯತ್ಯಾಸವೆಂದರೆ ನಮ್ಮಲ್ಲಿ ಎರಡು ಎಕರೆ ಭೂಮಿ ತೆಗೆದುಕೊಳ್ಳುತ್ತಾರೆ. ಬಹುಶಃ ಅವರು ತೆಗೆದುಕೊಂಡಂಥಾದ್ದು ಎರಡು ಸಾವಿರ ರೂಪಾಯಿಗೆ ಆ ಜಮೀನನ್ನು. ಆದರೆ ಅದರ ಮೇಲೆ ಸಾಲ ಎಷ್ಟು ರೈಸ್ ಮಾಡಿದ್ದಾರೆಂದರೆ ೨೦-೨೫-೩೦ ಸಾವಿರ ರೂಪಾಯಿಗಳವರೆಗೆ ರೈಸ್ ಮಾಡಿದ್ದಾರೆ. ಅಂಥ ಭೂಮಿಯನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎಂದರೆ ಅವನು ಏನು ಮಾಡುತ್ತಾನೆ, ಸುಮ್ಮನೆ ಆಗುತ್ತಾನೆ. ೩೦ ಸಾವಿರ ದುಡ್ಡು ಸಾಲ ತೆಗೆದುಕೊಂಡಿರುವ ಪಿ. ಎಲ್. ಡಿ. ಬಿ. ಯಲ್ಲಿ ಆ ಸಾಲವನ್ನು ಹಿಂದಿರುಗಿಸಿ ಕೊಡತಕ್ಕಂಥ ಕೆಲಸವನ್ನು ಮಾಡಲಿಲ್ಲ, ಅಭಿವೃದ್ಧಿಯನ್ನು ಮಾಡಲಿಲ್ಲ. ಅಂಥ ನಿದರ್ಶನಗಳು ನನ್ನ ಊರಲ್ಲಿ, ನನ್ನ ಗ್ರಾಮದಲ್ಲಿ ಇವೆ. ೩೬ ಸಾವಿರ ರೂಪಾಯಿ ಸಾಲ ರೈಸ್ ಮಾಡಿದ್ದಾರೆ. ನೀವು ವಜಾ ಮಾಡುತ್ತೀರೆಂದು ಗೊತ್ತು. ಪಿ. ಎಲ್. ಡಿ. ಬ್ಯಾಂಕ್‌ನವರು ಸಹಿತ ಟೈಟಲ್ ಎಷ್ಟು ಪರ್‌ಫೆಕ್ಟ್ ಆಗಿದೆ, ಕಂದಾಯ ಇಲಾಖೆಯವರು ಪಹಣಿ ಕೊಟ್ಟಿದ್ದಾರೆ, ಪಟ್ಟಾ ಕೊಟ್ಟಿದ್ದಾರೆ, ಅದಕ್ಕಾಗಿ ನಾವು ಸಾಲ ಕೊಟ್ಟಿದ್ದೇವೆಂದು ಹೇಳುತ್ತಾರೆ. ಈಗ ಯಾರ ಹತ್ತಿರ ಸಾಲವನ್ನು ವಸೂಲು ಮಾಡುತ್ತೀರಿ? ಪಿ. ಎಲ್. ಡಿ. ಬ್ಯಾಂಕ್‌ಗೆ ರಿಕವರಿ ಆಗುವುದಿಲ್ಲ. ಲ್ಯಾಂಡ್‌ಮೇಲೆ ಲೋನ್ ಕೊಟ್ಟರೆ ಪರಿಸ್ಥಿತಿ ಏನು? ಇದು ಕಂದಾಯ ಇಲಾಖೆಯವರ ಪ್ರಮುಖವಾಗಿರತಕ್ಕಂಥ ತಪ್ಪು. ಇವತ್ತು ಮಾನ್ಯ ಮಂತ್ರಿಗಳು ಆ ವಿಚಾರದ ಬಗ್ಗೆ ಹೇಳಬೇಕು. ಪರ್ಚೇಸ್ ಮಾಡಿರುವುದು ತಪ್ಪು ಎನ್ನತಕ್ಕಂಥ ವಿಚಾರವನ್ನು ಒಪ್ಪಿಕೊಂಡು; ಕಂದಾಯ ಇಲಾಖೆಯವರು ಅಧಿಕಾರಿಗಳ ಮಟ್ಟದಲ್ಲಿ ತಪ್ಪನ್ನು ಮಾಡಿರುವುದರಿಂದ ಜಮೀನುಗಳನ್ನು ಸ್ಥಳೀಯರು ಮಾಡಿರುವುದರಿಂದ ಪಿ. ಎಲ್. ಡಿ. ಬಿ.ಗೆ ಸಾಲ ವಸೂಲು ಮಾಡುವುದಕ್ಕಾಗುತ್ತಿಲ್ಲ. ಈ ಸಮಸ್ಯೆಗೆ ಹೇಳುತ್ತಿದ್ದೇನೆ ಪರ್ಚೇಸರ್‌ಗೆ ಕೊಡುವುದು ಬೇಡವೆಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ಸಮಸ್ಯೆಯನ್ನು ಯಾವರೀತಿ ಇತ್ಯರ್ಥ ಮಾಡಬೇಕೆನ್ನುವುದನ್ನು ಪರಿಶೀಲನೆ ಮಾಡೋಣ. ಮತ್ತೆ ಈಗ ಸದ್ಯಕ್ಕೆ ತಂದಿರ ತಕ್ಕಂಥದ್ದು

ಅಪೀಲ್ ಪ್ರಾವಿಷನ್‌ಗೆ ಮಾತ್ರ ನಾನು ಸಂಬಂಧಪಟ್ಟಂತೆ ತಿದ್ದುಪಡಿಯನ್ನು ತಂದಿದ್ದೇನೆ. ಅದರಲ್ಲಿ ನ್ಯೂನತೆಗಳು ಇವೆ, ಅದನ್ನು ಯಾವ ರೀತಿ ಸರಿಪಡಿಸಬೇಕೆಂಬುದಕ್ಕೆ ನೋಡೋಣ.

ಶ್ರೀ ಎಂ. ವಿ. ವೆಂಕಟಪ್ಪ:- ಸಬ್‌ರಿಜಿಸ್ಟ್ರಾರ್ ಲೆವಲ್‌ನಲ್ಲಿಯೇ ರಿಜಿಸ್ಟರ್ ಮಾಡಿಕೊಳ್ಳುವುದು ಬೇಡ ಎಂದು ನಾನು ಹೇಳುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆ ಇನ್‌ಸ್ಟ್ರಕ್ಷನ್ ಇನ್ನು ಮೇಲೆ ಕೊಡೋಣ.

ಶ್ರೀ ಬಿ. ಶಿವರಾಮು:- ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಲಿಲ್ಲ.

ಶ್ರೀ ವಿಜಯಕುಮಾರ ಶೆಟ್ಟಿ:- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ಹಲವಾರು ಕೇಸಸ್ ಇವೆ. ಸಾಧಾರಣವಾಗಿ ಮೂರು ಸೆಂಟ್ಸ್‌ನಿಂದ ೨೦ ಸೆಂಟ್ಸ್ ವರೆಗೆ ಹಿಡುವಳಿ ಇದ್ದವರು ಇದ್ದಾರೆ. ಅದು ಇನ್ನೊಬ್ಬರ ಹೆಸರಿನಲ್ಲಿ ಪರಭಾರೆಯಾಗಿದೆ. ಅದನ್ನು ತೆಗೆದುಕೊಂಡಿರುವವರು ರಿಟೈರ್ಡ್ ಆಗಿರುವ ಗುಮಾಸ್ತರು ಮತ್ತು ಟೀಚರ್ಸ್ ಅಂಥವರು ತೆಗೆದುಕೊಂಡು ಸಣ್ಣ ಸಣ್ಣ ಮನೆಗಳನ್ನು ಕಟ್ಟಿಕೊಂಡು ಬಹಳ ನಿಕೃಷ್ಟ ಪರಿಸ್ಥಿತಿಯಲ್ಲಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಕನಿಷ್ಠ ಪಕ್ಷ ಅಂಥಹವರಿಗೆ ಅಂಥ ಹಿಡುವಳಿಗಳನ್ನು ನೋಡಿ ೫ ಸೆಂಟ್ಸ್, ೧೦ ಸೆಂಟ್ಸ್, ೨೦ ಸೆಂಟ್ಸ್ ಲಿಮಿಟೇಷನ್ ಹಾಕಿ ಅಂಥಹವರಿಗೆ ಮಾರುವಂಥ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ನಮ್ಮ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ಕಾನೂನಿನಲ್ಲಿ ಆ ರೀತಿಯಾದ ಅವಕಾಶವಿಲ್ಲ. ಅಂದರೆ ಕೆಲವು ಭಾಗ ಬಿಟ್ಟು ಕೆಲವು ಭಾಗ ರೆಸ್ಟೋರ್ ಮಾಡತಕ್ಕಂಥದ್ದಿಲ್ಲ. ಅವರ ಅಪ್ಲಿಕೇಷನ್ ಎಷ್ಟು ಇರುತ್ತದೋ, ಅಥವಾ ಅಸಿಸ್ಟೆಂಟ್ ಕಮೀಷನರ್ ಏನು ಆರ್ಡರ್ ಮಾಡುತ್ತಾರೋ ಅದರ ಪ್ರಕಾರ ರೆಸ್ಟೋರ್ ಮಾಡುತ್ತೇವೆ.

ಶ್ರೀ ಸಿ. ಆರ್. ಸಗೀರ ಅಹಮದ್:- ಈ ಜಮೀನು ಗ್ರಾಂಟ್ ಮಾಡುವ ವಿಚಾರದಲ್ಲಿ ಹರಿಜನರ ಸಲುವಾಗಿ ಸರ್ಕಾರ ಯಾವುದೇ ತರಹ ಮಸೂದೆ ತಂದರೂ ಸಹ ಗೌರವಾನಿತ್ವ ಸದಸ್ಯರು ಅದಕ್ಕೆ ಬಹಳ ಸಂತೋಷದಿಂದ ಒಪ್ಪಿಗೆ ಕೊಡುತ್ತಾರೆ. ಹರಿಜನ-ಗಿರಿಜನರಿಗೆ ಸರ್ಕಾರದಿಂದ ಅನ್ಯಾಯವಾಗದಿದ್ದರೂ ಅಧಿಕಾರಿಗಳಿಂದ ಅನ್ಯಾಯವಾಗುತ್ತಿದೆ ಎಂದರೆ ತಪ್ಪಾಗಲಾರದು. ಉದಾಹರಣೆಗೆ ಮಂತ್ರಿಗಳು ಹೇಳಿದ ಹಾಗೆ, ನಾವು ತಂದಂಥ ಮಸೂದೆಗಳಿಗೆ ನ್ಯಾಯಾಲಯದಲ್ಲಿ ಇದು ಸರಿಯಾಗಿದೆ, ಇದರಿಂದ ಅನುಕೂಲವಾಗಿದೆ ಎಂದು ಅನೇಕ ತೀರ್ಪುಗಳು ಬಂದಿರುವುದು ತಮಗೆ ನಮಗೆ ಎಲ್ಲಾ ಗೊತ್ತಿದೆ. ಅನೇಕ ಕಡೆ ಹರಿಜನರಿಗೆ ಗ್ರಾಂಟ್ ಆದ ಜಮೀನಿಗೆ ಸಾಗುವಳಿ ಚೀಟಿ ಏನು ಕೊಡುತ್ತಾರೆ ಅದು ಅವರಿಗೆ ಸಿಗುತ್ತಿಲ್ಲ. ಉದಾಹರಣೆಗೆ ನಮ್ಮ ಜಿಲ್ಲೆಯ ಬಗ್ಗೆ ಹೇಳುವುದಾದರೆ ಹಾವೇರಿ ಹತ್ತಿರ ಜಿ.ಪಿ.ಎ. ಎಂದು ಮಾಡಿಕೊಂಡು ಅವರ ಹೆಸರಿಗೆ ಇರತಕ್ಕ ಸಾಗುವಳಿ ಚೀಟಿಯನ್ನು ಇವರು ಪಡೆದು ಆ ಜಮೀನನ್ನು ಉದ್ಧಾರ ಮಾಡುವುದಕ್ಕೆ ಸಾವಿರಾರು, ಲಕ್ಷಾಂತರ ರೂಪಾಯಿ ಸಾಲವನ್ನು ಸಂಘಸಂಸ್ಥೆಗಳಿಂದ ಪಡೆದು ಆ ಜಮೀನು ತೆಗೆದುಕೊಂಡು ಅವರಿಗೆ ಅನ್ಯಾಯವಾಗುತ್ತಿದೆ. ಸರ್ಕಾರ ಈ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅವರಿಗೆ ಅನ್ಯಾಯವಾಗದಂತೆ, ಯಾವ ರೀತಿ ಈಗ ಅಪೀಲಿಂಗ್ ಮಸೂದೆ ತಂದಿದ್ದೀರೋ ಅದೇ ರೀತಿ ಹರಿಜನ-ಗಿರಿಜನರಿಗೆ ಅನ್ಯಾಯವಾಗದಂತೆ ಮಸೂದೆ ತರಬೇಕೆಂದು ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಆರ್. ನಾರಾಯಣ್:- ಇದು ಸದುದ್ದೇಶದಿಂದ ತಂದಿರತಕ್ಕ ಮಸೂದೆ. ಹರಿಜನ-ಗಿರಿಜನರಿಗೆ ಜಮೀನು ಸಾಗುವಳಿಯಲ್ಲಿ ಏನಾದರೂ ತೊಂದರೆಯಾದರೆ ಎ. ಸಿ. ಗೆ ಅಪೀಲು ಹಾಕಬಹುದು, ಅದರಿಂದಲೂ ಏನಾದರೂ ಪುನಃ ತೊಂದರೆಯಾದರೆ ಫರ್ದರ್ ಅಪೀಲ್ ಡಿ. ಸಿ.ಗೆ ಹಾಕಬಹುದೆಂದು ಭಾವಿಸಿದ್ದೇನೆ. ಇವತ್ತಿನ ದಿವಸ, ಹರಿಜನ-ಗಿರಿಜನರಿಗೆ ಕೊಟ್ಟಿರತಕ್ಕ ಜಮೀನು ಸಾಕಷ್ಟು ಪರಭಾರೆಯಾಗಿದೆ; ಕೆಲವು ಪ್ರಕರಣಗಳು ಬೆಳಕಿಗೆ ಬಂದಿವೆ, ಮತ್ತೆ ಕೆಲವು ಬಂದಿಲ್ಲ. ಈಗ ಕೆಲವು ಕಡೆ ಒಬ್ಬರು ಪರ್ಚೇಸ್ ಮಾಡಿದರೆ ಬೇರೆಯವರ ಹತ್ತಿರ ಸೆಕೆಂಡ್ ಸೇಲ್ ಆಗಿರುತ್ತದೆ. ಅನೇಕ ಪ್ರಕರಣಗಳು ಈ ಪೂರ್ವದಲ್ಲಿ ಬೆಳಕಿಗೆ ಬಾರದೆ ಇರುವುದರಿಂದ ಅದರಲ್ಲಿ ಹೆಚ್ಚಾಗಿ ಬಡವರು ಇರುತ್ತಾರೆ ಅಲ್ಲದೆ ಹರಿಜನರನ್ನು ದುರುಪಯೋಗ ಮಾಡುವ ಸಂದರ್ಭ ಜಾಸ್ತಿ. ಮೇಲಾಗಿ ಕುಮ್ಮಕ್ಕು ಕೊಟ್ಟು ಮಾಡಿಸಿರುವುದರಿಂದ ಅವರಿಗೆ ಕಾನೂನಿನ ತಿಳುವಳಿಕೆ ಇರುವುದಿಲ್ಲ. ಅಂಥ ಪ್ರಕರಣಗಳಲ್ಲಿ ಯಾವ ರೀತಿ ಅವರಿಗೆ ಮತ್ತೆ ರೆಸ್ಟೋರ್ ಮಾಡುವುದಕ್ಕೆ ವಾಲಂಟರಿಯಾಗಿ ಅರ್ಜಿ ಹಾಕದ ಸಂದರ್ಭದಲ್ಲಿ ಸರ್ಕಾರವೇ ಅವರ ಪರವಾಗಿ ಅರ್ಜಿ ಹಾಕಿ ರೆಸ್ಟೋರ್ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಯು. ಕೆ. ಶಾಮಣ್ಣ:- ಹರಿಜನರ ಒಂದು ಕ್ಷೇಮಾಭಿವೃದ್ಧಿಯನ್ನು ಇಲ್ಲಿ ನಾವು ನೋಡುತ್ತೇವೆ, ಅವರಿಗೆ ಸಹಾಯ ಮಾಡುತ್ತೇವೆ, ಅವರಿಗೆ ಭೂಸುಧಾರಣೆ ಮುಖಾಂತರ ನ್ಯಾಯ ದೊರಕಿಸಿಕೊಡುತ್ತೇವೆಂದು ಹೇಳುವಂಥ ಮಾತನ್ನು ಹಿಂದಿನಿಂದ ಹೇಳಿಕೊಂಡು ಬಂದಿದ್ದೇವೆ. ಆದರೆ ನನ್ನ ಕ್ಷೇತ್ರದ ಕೊಪ್ಪ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರತಕ್ಕ ಹರಿಜನರಿಗೆ ಭೂ ಸುಧಾರಣೆ ಮೂಲಕ ಭೂಮಿಯನ್ನು ಹಂಚಿದ್ದರೂ ಹಕ್ಕುಪತ್ರ ಪಡೆಯುವಂಥ ಅವಕಾಶ ಅವರಿಗೆ ಸಿಕ್ಕಿಲ್ಲ. ಆ ಬಗ್ಗೆ ಸರ್ಕಾರದ ಗಮನಕ್ಕೆ ತಂದರೂ ನ್ಯಾಯ ದೊರಕಿಸಿಕೊಟ್ಟಿಲ್ಲ. ಅಂದರೆ ಸಾಗುವಳಿ ಜಮೀನು ಬೇರೆಯವರು ಮಾಡಿದ್ದಾರೆ. ನಕಾಶೆ ಮೂಲಕ ತೋರಿಸತಕ್ಕ ಜಾಗ ಬೇರೆ. ಅವರಿಗೆ ಸರ್ವೆಯರ್ ಮೂಲಕ ಜಾಗ ತೋರಿಸಿಕೊಟ್ಟು ಹಕ್ಕು ಪತ್ರ ಕೊಡಬೇಕೆಂದು ಕೇಳುತ್ತೇನೆ. ಕೆಲವು ಕಡೆ ಸ್ಕೆಚ್ ಚೇಂಜ್ ಮಾಡಿರತಕ್ಕ ನಿದರ್ಶನಗಳು ಇವೆ. ಅದರ ಬಗ್ಗೆ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಜಿ. ಎಸ್. ಶಿವನಂಜಪ್ಪ:- ಈಗ ತಂದಿರತಕ್ಕ ಕಾನೂನಿನಲ್ಲಿ ಅಪೀಲ್ ಮಾಡತಕ್ಕ ಅವಕಾಶ ಇದೆ, ಇದುವರೆಗೆ ಇರತಕ್ಕ ಕಾನೂನಿನಲ್ಲಿ ಅವಕಾಶ ಇರಲಿಲ್ಲ. ಅದು ಸ್ವಾಗತಾರ್ಹವಾದುದು. ಆದರೆ ಅದು ರೆಟ್ರಾಸ್ಪೆಕ್ಟೀವೋ ಅಥವಾ ಪ್ರಾಸ್ಪೆಕ್ಟೀವೋ ಎಂದು ಅರ್ಥವಾಗಲಿಲ್ಲ. ಶ್ರೀ ಜಯಚಂದ್ರ ಅವರು ಹೇಳಿದಂತೆ ಜಮೀನು ಜಮೀನಾಗಿ ಇದ್ದು, ರೂಲ್ಸ್ ವೈಯಲೇಷನ್ ಮಾಡಿ ಅದನ್ನು ಪರ್ಚೇಸ್ ಮಾಡಿದವರಿಗೆ ವಾಪಸ್ಸು ಕೊಡಿಸಬೇಕಾದುದು ನ್ಯಾಯವಾಗಿತ್ತು. ಖುಷ್ಕಿ ಜಮೀನಿನಲ್ಲಿ ಸಿನೆಮಾ ಥಿಯೇಟರ್ ಕಟ್ಟಿದ್ದಾರೆ. ಅದಕ್ಕೆ ಏನು ಪರಿಹಾರ? ವಾಪಸ್ಸು ಕೊಡುವುದಾಗಲಿ, ಜಮೀನು ಅನುಭವಿಸುವುದಕ್ಕಾಗಲಿ ಅವಕಾಶ ಇಲ್ಲ. ಸಿನೆಮಾ ಥಿಯೇಟರನ್ನು ಏನು ಮಾಡುತ್ತೀರಿ?

(ಶ್ರೀ ಕೆ. ಬಿ. ಕೋಳೀವಾಡ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದೇ ರೀತಿ ನಾನ್ ಅಗ್ರಿಕಲ್ಚರ್ ಪರ್ಪಸ್‌ಗೆ ಕನ್‌ವರ್ಟ್ ಮಾಡಿಕೊಂಡು ಅದನ್ನು ಇಂಪ್ರೂವ್ ಮಾಡಿದ್ದರೆ ಅವಕ್ಕೇನು ಪರಿಹಾರ ಇದೆ ಎಂಬುದನ್ನು ನಾನು ಕಂದಾಯ ಮಂತ್ರಿಗಳಿಂದ ಕೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ,

ಈಗಾಗಲೇ ಅನೇಕ ಮಾನ್ಯ ಸದಸ್ಯರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಕೆಲವು ಸಂಬಂಧಪಟ್ಟಿದ್ದು ಇವೆ. ಕೆಲವು ಬೇರೆ ಲ್ಯಾಂಡ್ ಗ್ರಾಂಟ್‌ಸಲ್ಲಿ ಆದಂಥ ಜಮೀನುಗಳು ಮತ್ತು ಬೇರೆಯವರಿಗೆ ಮಾರಿದ್ದರ ಬಗ್ಗೆ ಕೆಲವು ಪ್ರಶ್ನೆಗಳನ್ನು ಇಲ್ಲಿ ಇಟ್ಟಿದ್ದಾರೆ. ಎಲ್ಲೆಲ್ಲಿ ವಯಲೇಷನ್ ಆಗಿದೆ ಅಂಥ ಕೇಸ್‌ಗಳನ್ನು ಫ್ರೆಷ್ ಆಗಿ ಡಿಟೆಕ್ಟ್ ಮಾಡುವುದಕ್ಕೆ ಒಂದು ಆದೇಶ ಕೊಡುತ್ತೇನೆ. ಕೆಲವು ಕಡೆ ಗೊತ್ತಾದಲ್ಲಿ ಇಂಥ ಕೇಸಸ್ ಹಾಕಿರಬಹುದು. ಅನೇಕ ಕಡೆ ಜನರಿಗೆ ಇನ್ನೂ ಇದರ ಬಗ್ಗೆ ಮಾಹಿತಿ ಇಲ್ಲ ಎಂದು ಕೆಲವು ಸದಸ್ಯರು ಹೇಳಿದ್ದಾರೆ. ಡೆಪ್ಯುಟಿ ಕಮಿಷನರ್‌ರವರಿಗೆ ಒಂದು ಆದೇಶ ನೀಡಿ ಎಲ್ಲೆಲ್ಲಿ ಇಂಥ ವಯಲೇಷನ್ ಆಗಿದೆ ಅಂಥ ಕೇಸ್‌ಗಳನ್ನು ರೆಸ್ಟೋರ್ ಮಾಡುವ ಪ್ರಯತ್ನ ಮಾಡಬೇಕೆಂದು ಒಂದು ಕಟ್ಟುನಿಟ್ಟಾದ ಆದೇಶವನ್ನು ನಾನು ನೀಡುತ್ತೇನೆ. ಎರಡನೆಯದಾಗಿ, ಈ ಕಾನೂನನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ನಾವು ಕೊಟ್ಟಿದ್ದೇವೆ. ಬಹುಶಃ ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಆದಕ್ಕಾಗಿ ಈ ಒಂದು ಪ್ರಾವಿಷನ್ ಇರಲಿಲ್ಲ. ಅವರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ತಂದಿದ್ದೇವೆಯೇ ಹೊರತು ವ್ಯತ್ಯಾಸ ಆಗತಕ್ಕ ಪ್ರಶ್ನೆ ಬರುವುದಿಲ್ಲ. ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ಅನ್ಯಾಯ ಆಗತಕ್ಕ ಪ್ರಶ್ನೆ ಇಲ್ಲ. ಏಕೆಂದರೆ ಇದು ಕಾನೂನಿನ ಅಡಿಯಲ್ಲಿ ಈಗಾಗಲೇ ಸುಪ್ರೀಂ ಕೋರ್ಟ್‌ನವರು ಹೇಳಿದ್ದಾರೆ, ಮಾಡಿದ್ದು ಸರಿ, ಇದರಿಂದ ಪ್ರಯೋಜನವಾಗಿದೆ ಎಂದು. ಆದರೆ ಮಾನವೀಯತೆ ದೃಷ್ಟಿಯಿಂದ ಈ ಪ್ರಶ್ನೆಯನ್ನು ನಾವು ನೋಡಿದಾಗ ಯಾರು ಪರ್ಚೇಸ್ ಮಾಡಿದ್ದಾರೆ ಪಾಪ ಅವರು ಸಾಕಷ್ಟು ಹಣ ಖರ್ಚು ಮಾಡಿದ್ದಾರೆ, ಅವರಿಗೆ ನ್ಯಾಯ ಕೊಡುತ್ತಿಲ್ಲ ಎಂಬ ಒಂದು ಮಾನವೀಯತೆ ದೃಷ್ಟಿಯಿಂದ ಮಾಡಿದ್ದೇವೆ. ಕಾನೂನು ದೃಷ್ಟಿಯಿಂದ ಅಲ್ಲ. ಕಾನೂನು ದೃಷ್ಟಿಯಿಂದ ಈಗ ಮಾಡಿದ್ದು ಸರಿ. ಆದರೆ ಮಾನವೀಯತೆ ದೃಷ್ಟಿಯಿಂದ, ನೀವು ಯಾವ ರೀತಿ ಕನ್‌ಸಿಡರೇಷನ್ ಮಾಡುತ್ತೀರಿ ಎಂಬ ಪ್ರಶ್ನೆ ಇದೆ. ಅದು ಪ್ರತ್ಯೇಕ ಪ್ರಶ್ನೆ, ನೋಡೋಣ. ಯಾವ ರೀತಿ ಪರಿಶೀಲನೆ ಮಾಡಬೇಕು ಎಂಬುದು ನಾನು ಹೇಳುತ್ತೇನೆ. ಒಂದು ವೇಳೆ ಹೀಗಾಗಿರಬಹುದು. ಏಕೆಂದರೆ ಹಿಂದಿನಿಂದ ಇದು ನಡೆದುಕೊಂಡು ಬಂದಿದೆ. ಯಾರೂ ಲಕ್ಷ್ಯ ಕೊಟ್ಟಿಲ್ಲ. ಈಗ ಅಸಿಸ್ಟೆಂಟ್ ಕಮಿಷನರ್ ರೆಸ್ಟೋರ್ ಮಾಡುವುದಕ್ಕೆ ಯಾವಾಗ ಪ್ರಯತ್ನಪಟ್ಟರೋ ಅಥವಾ ಕೋರ್ಟಿನಿಂದ ಬರುತ್ತಿದೆ ಎಂದು ಆಗ ಸ್ವಲ್ಪ ಎಲ್ಲರೂ ಕಣ್ಣು ತೆರೆದಿದ್ದಾರೆ. ಆದಕ್ಕಾಗಿ ಇದರ ಬಗ್ಗೆ ಪರಿಶೀಲನೆ ಮಾಡಿ ಒಂದು ಸುತ್ತೋಲೆಯನ್ನು ಬೇರೆ ಹೊರಡಿಸತಕ್ಕ ಪ್ರಯತ್ನ ಮಾಡುತ್ತೇನೆ. ಆದಕ್ಕಾಗಿ ಇದು ಒಳ್ಳೆಯ ತಿದ್ದುಪಡಿ ಇದೆ. ಎಲ್ಲರೂ ಸ್ವಾಗತವನ್ನು ನೀಡಿದ್ದಾರೆ. ಆದ್ದರಿಂದ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಎಲ್ಲರಿಗೂ ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, "೧೯೯೨ನೇ ಇಸವಿಯ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಕೆಲವು ಭೂಮಿಗಳ ವರ್ಗಾವಣೆ ನಿಷೇಧ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ ೨ರಿಂದ ೩ನೇ ಖಂಡಗಳು:-

ಛೇರ್ಮನ್:- ೨ ಮತ್ತು ೩ನೇ ಖಂಡಗಳು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ ಮತ್ತು ೩ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಛೇರ್ಮನ್:- ಪ್ರಸ್ತಾವ ಏನೆಂದರೆ ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲಾಯಿತು.

ಪ್ರಸ್ತಾವ ಅಂಗೀಕಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣಾಭಿವೃದ್ಧಿ ಮತ್ತು ಕಾನೂನು ಸಚಿವರು):- ೧೯೯೨ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಛೇರ್ಮನ್:- ಪ್ರಸ್ತಾವ ಏನೆಂದರೆ, "೧೯೯೨ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ (ಕೆಲವು ಭೂಮಿಗಳ ವರ್ಗಾವಣೆ ನಿಷೇಧ) (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ವಿತ್ತೀಯ ಕಾರ್ಯಕಲಾಪಗಳು

೧೯೯೧-೯೨ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳ ಬಗ್ಗೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ೧೯೯೧-೯೨ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆಗಳನ್ನು ಏನು ಮಂಡಿಸಿದ್ದಾರೆ ಆ ಬಗ್ಗೆ ಈಗ ಚರ್ಚೆ ಮಾಡಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಈ ಪೂರಕ ಅಂದಾಜಿನ ಪ್ರಕಾರ ಸುಮಾರು ೯೧೦.೨೨ ಕೋಟಿ ರೂಪಾಯಿಗಳ ಮಂಜೂರಾತಿಗಾಗಿ ಈಗ ರಾಜ್ಯ ವಿಧಾನಮಂಡಲದ ಮುಂದೆ ಮಂಡಿಸಲಾಗಿದೆ. ಇದರಲ್ಲಿ ಸುಮಾರು ಒಟ್ಟು ನಿವ್ವಳ, ನೆಟ್ ಔಟ್‌ಗೋ ಎಷ್ಟು ಎಂದರೆ ೪೧೦.೩೪ ಕೋಟಿ ರೂಪಾಯಿಗಳು. ಏಕೆಂದರೆ ೪೨.೦೭ ಕೋಟಿ ಮತ್ತು ೪೧೪.೪೬ ಕೋಟಿ ಏನು ಇದೆ ಅದು ಲೆಕ್ಕದ ಹೊಂದಾಣಿಕೆ ಎಂದರೆ ಅಡ್‌ಜಸ್ಟ್‌ಮೆಂಟ್‌ಗೆ ಸಂಬಂಧಪಟ್ಟ ಅಕೌಂಟ್ಸ್. ನಿವ್ವಳ ೪೧೦.೩೪ ಕೋಟಿ, ಇದರಲ್ಲಿ ಮುಖ್ಯವಾದ ಸಾದಿಲ್ವಾರು ನಿಧಿಯ ಮೂಲ ಧನವನ್ನು ಹೆಚ್ಚು ಮಾಡತಕ್ಕ ಅಧ್ಯಾದೇಶವನ್ನು ಹೊರಡಿಸಿದ್ದೇವೆ: ೮೦ ಕೋಟಿಯಿಂದ ೫೦೦ ಕೋಟಿ ರೂಪಾಯಿಗ ಏರಿಸಬೇಕೆಂದು ಹೇಳಿ. ಅದರಲ್ಲಿ ೫೦೦ ಕೋಟಿ ಹೆಚ್ಚು ಮಾಡಿದರೂ ಕೂಡ ಉಪಯೋಗ ಎಷ್ಟು ಎಂದರೆ ೨೭೨.೬೭ ಕೋಟಿ ರೂಪಾಯಿಗಳು. ಆದುದರಿಂದ ಇದನ್ನು ನಾವು ರಾಜ್ಯಪಾಲರ ಅಧ್ಯಾದೇಶ ನಿಯಮದ

ಪ್ರಕಾರ ಅದು ರದ್ದು ಆಗಲಿಕ್ಕಿದೆ. ಶಾಶ್ವತವಾಗಿ ೫೦೦ ಕೋಟಿಗೆ ಸಾದಿಲ್ವಾರು ಹೆಚ್ಚು ಮಾಡತಕ್ಕ ಒಂದು ಪ್ರಯತ್ನ ನಾವು ಮಾಡುತ್ತಿಲ್ಲ. ೮೦ ಕೋಟಿ ರೂಪಾಯಿಗಳಿಗೆ ಸಾದಿಲ್ವಾರು ಮೂಲಧನ ಇದ್ದರೆ ಸಾಕು ಎಂದು we are not moving because that is what is re-adjusted. ಆದುದರಿಂದ ಈ ಪೂರಕ ಅಂದಾಜನ್ನು ಮಂಜೂರು ಮಾಡಬೇಕೆಂದು ತಮ್ಮ ಮುಖಾಂತರ ಸದನವನ್ನು ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಪ್ರಸ್ತಾಪವೇನೆಂದರೆ ೧೯೯೧-೯೨ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಬೇಡಿಕೆ ಸಂಖ್ಯೆ ೧, ೬, ೮ ರಿಂದ ೧೭, ೧೮, ೨೦, ೨೨ ರಿಂದ ೨೪, ೨೭, ೨೯ ರಿಂದ ೩೮, ೪೦, ೪೧, ೪೨, ೪೩, ೪೫, ೪೬, ೪೮, ೪೯ರಿಂದ ೫೫, ೫೮, ೫೯ ಹಾಗೂ ೬೦ ಈ ಬೇಡಿಕೆಗಳಿಗೆ ಸರ್ಕಾರಕ್ಕೆ ಸದರಿ ವೆಚ್ಚವನ್ನು ಸಂದಾಯ ಮಾಡುವಂತೆ ಆಗಲು ಪೂರಕ ಅಂದಾಜು ಪಟ್ಟಿಯಲ್ಲಿ ಸೂಚಿಸಿದ ಮೊಬಲಗಿಗೆ ಮೀರದಂತೆ ಇರುವ ಮೊತ್ತವನ್ನು ಸರ್ಕಾರಕ್ಕೆ ಮಂಜೂರು ಮಾಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಪೂರಕ ಬೇಡಿಕೆಗೆ ಒಪ್ಪಿಗೆ ನೀಡಲಾಯಿತು.

ಛೇರ್ಮನ್:- ಈಗ ೧೯೯೨-೯೩ನೇ ಸಾಲಿನ ಬೇಡಿಕೆಗಳು.

೧೯೯೨-೯೩ನೇ ಸಾಲಿನ ಪೂರಕ ಬೇಡಿಕೆಗಳ ಮೇಲೆ ಸಾಮಾನ್ಯ ಚರ್ಚೆ

(ವಸತಿ ಹಾಗೂ ನಗರಾಭಿವೃದ್ಧಿ)

ಬೇಡಿಕೆ ಸಂಖ್ಯೆ ೩೦, ೩೧ ಮತ್ತು ೩೨.

ಶ್ರೀ ಕೆ. ಜೆ. ಜಾರ್ಜ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು):- ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ ೩೦, ೩೧ ಮತ್ತು ೩೨ನೇ ಬೇಡಿಕೆಗಳು, ಇವುಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಒದಗಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮತ್ತು ಬಂಡವಾಳ ಖಾತೆಯಲ್ಲಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊತ್ತಕ್ಕೆ ಮೀರದ ಹಣವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ವಸತಿ ಮತ್ತು ನಗರಾಭಿವೃದ್ಧಿ ಖಾತೆ

ಅಭಿಯಾಚನೆ ಕ್ರಮಾಂಕ ೩೦ - ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಬಿಟ್ಟು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೨,೫೩,೫೬,೦೦೦-೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೬,೫೭,೦೩,೦೦೦-೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು,

ಅಭಿಯಾಚನ ಕ್ರಮಾಂಕ ೩೧ - ನಗರಾಭಿವೃದ್ಧಿ ಇತ್ಯಾದಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು

ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೬,೭೦,೦೮,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೧,೭೯,೦೨,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು,

ಅಭಿಯಾಚನೆ ಕ್ರಮಾಂಕ ೩೨ - ನಗರಪಾಲಿಕೆಗಳು ಮತ್ತು ಪಟ್ಟಣ ಪಂಚಾಯಿತಿಗಳಿಗೆ ಅನುದಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರ ಪಾಲಿಕೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ, ರಾಜಸ್ವ ಖಾತೆಯಲ್ಲಿ ೮೫,೦೨,೭೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೨೧ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು.

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು):- ಮಾನ್ಯ ಅಧ್ಯಕ್ಷರ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜಿಗಾಗಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೨,೬೩,೮೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಅಭಿಯಾಚನೆ ಕ್ರಮಾಂಕ ೧೧ ಯುವಜನ ಸೇವೆ.

ಶ್ರೀ ಎಸ್. ರಮೇಶ್ (ಯುವಜನ ಸೇವೆ ರಾಜ್ಯ ಮಂತ್ರಿ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೦೮,೫೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು,

ಅಭಿಯಾಚನೆ ಕ್ರಮಾಂಕ ೧೨ - ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

ಶ್ರೀ ಎಸ್. ರಮೇಶ್ (ಯುವಜನ ಸೇವೆ ರಾಜ್ಯ ಮಂತ್ರಿ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೯೯,೭೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಛೇರ್ಮನ್:- ಬೇಡಿಕೆಗಳನ್ನು ಮಂಡಿಸಲಾಯಿತು. ಈಗ ೧೯೯೨-೯೩ನೇ ಸಾಲಿನ ಮೇಲ್ಕಂಡ ಬೇಡಿಕೆಗಳ ಮೇಲೆ ಚರ್ಚೆ.

SHRI A.K. ANANTHAKRISHNA (SHIVAJINAGAR):- I will speak on the demand Nos. 30, 31, 32 of the Housing & Urban Development Departments. In support of these de-

mands I would like to express my views on the vaious aspects, as they relate to the working of the various Departments.

ಶ್ರೀ ಎಂ. ಮಹದೇವ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಕನ್ನಡ ಬರುವುದಿಲ್ಲವೇ? ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಿದ್ದಾರೆ. ಇವರು ಯಾವ ದೇಶದಿಂದ ಬಂದವರು?

ಛೇರ್ಮನ್:- ಇಂತಹ ಭಾಷೆಯಲ್ಲಿಯೇ ಮಾತನಾಡಬೇಕೆಂದು ಒತ್ತಾಯ ಮಾಡಲಿಕ್ಕೆ ಬರುವುದಿಲ್ಲ. ಅವರು ಯಾವುದೇ ಭಾಷೆಯಲ್ಲಿ ಮಾತನಾಡಬಹುದು.

Shri A. K. Anantha Krishna:- The demands of the various Departments relates to the working of the various bodies in the service of the people of our State. I have mentioned earlier here that this is one Department which covers a direct service to the people of Karnataka to the extent of 35% and indirectly to a sizable number of the population. That is a fact and people look to these bodies for the day-to-day moment to moment service. If there is any Department from which any service is expected by the people in general, from the poorest of the poor, to the richest of the rich, the worst of the exploited to the worst of the exploiters, from whatever sectors they may belong, the people feel that the impact of either the existence of these departments in service or in dis-service or no service at all. In these circumstances, it is the responsibility of all those who are involved in rendering the necessary service from these respective Departments as officers concerned, the Government as a whole and the representatives of the people to act in a manner which is borne out through absolute truth and absolute service. Should there be any deviation at any point of time on these aspects, the wheel of progress will be very seriously affected and the consequences are that the reputation, the prestige and the credibility of these organisations are questioned in common by the common people. So it is with this objective, I am sure that 13 Departments have been brought together under this Department with the desire that there is a co-ordinated planning, a co-

ordinated plan of execution and effective service is brought about by a thorough understanding between these departments with a perfect supervisory control by the HUD Department led by the Secretary of the Department, with an overall supervision of the Minister concerned with these portfolios. It is with this objective, that various demands are placed before this august House for consideration and approval so that the people get the benefit of these civic services as a civic benefit to be given to them rather than presenting a picture of commercial approach that service is given on consideration. So, it is in this context, that I would like to draw the attention of the House to a very, very simple fact of the Bangalore City Corporation. The Bangalore City Corporation came into being by the merger of the C & M Station, Municipal Commission and the Bangalore City Municipality in the year around 1939. At that time the Cantonment Municipality Members were called the Commissioners and as far as the City Municipalities are concerned, they were called the Municipal Councillors. Both the bodies functioned independent of each other. Yet there was lot of co-ordination even between these two bodies, because the migration of the interest between the two sectors of people was considerable even at that time, though not statutorily, but a natural service. It was so. It was a very fine thing to remember at this stage that the Collector of the Cantonment Municipal Commission had a direct control over the Municipal body. In what effective manner that the Municipal Commission was controlled could be remembered here and stated that when the story had gone round during our younger days when the wife of the Collector of the C& M Station committed a minor mistake of using the filtered water for his garden, she was hauled up and warned. She could have been punished and the name of that Collector, I still remember, was Mr. Jairaju. He later on migrated to Ceylon. In the Municipal Council of Bangalore City, the interest of the

Municipal President and the Councillors was such that one are equally the Commissioner the measure of service rendered to the people in respect of keeping the city clean, was that after a morning walk the Municipal Commissioner, when he returned home, he looked at his shoes and he found he was able to judge what is the service rendered to the citizens by the Municipality by the extent of dust that was collected on their shoes or chappals or whatever that may be and that was the minute interest that the people exercised in providing the necessary civil service to the people in their respective municipalities. What has happened today is that we want more money, more and more money and less and less service. It is the very, very pathetic situation that has emerged in the passage of time. The sooner we reverse the situation, it would be better for the people to have the benefit of an urban civilised life. Otherwise, we returned to the un-civilised jungle life. It is with this background, I would like to proceed further. I would not like to repeat or state many other points which are very well known to the Members of this august House like the role of each one of the department under the HUD. But, at the same time whether the role has been accomplished is a factor. I just mentioned to you about the maintenance of the cities and towns by the respective Corporations and Municipalities. We have managed to see that these statutory bodies are treated as autonomous bodies as per the statute is concerned. But, in actual fact, neither the working is possible as an autonomous body in the changed circumstances of the character of the people either as heads of the organisations or representing the people in these organisations, since the relations of the Government depends on the political situation. Statutorily, yes, they are autonomous. But in function, there is no possibility to treat it as an autonomous body, because there is need for checks and balances at each stage to deal with the erring situation from whomsoever it may be.

So, functionally, it ceases to be autonomous as far as the service to the people are concerned or the continuing disservice to the people are concerned or abuse of power and authority of the respective bodies are concerned. Otherwise as a matter of policy and to serve the people are concerned, there is no alternative, but to allow them function autonomously and to draw up their own policies and programmes. We are caught up in this situation of an undeclared contradiction. How to cope up with this? What is happening in general is that the appointments are made, however much at the local levels, the influencing is done at the level of the State and the political structure. One may be of desire to deny it, but these are matters of fact, facts from history and fact as that they are now being practised. So, it is in this situation it is for us to see where do we draw the line of differences and how do we draw the pathway for proper understanding and integration of the minds on both the sides. I find that proper understanding of this, is failing at the level of the state administration, at the level of the Municipal bodies administration, at the level of the elected bodies on this basic issue, the basic philosophy or the basic ideology. If this matter is properly understood and set right, I don't think that there is any other department which can produce greater service to the people of the urban community than these departments are. Now, take for instance, the Bangalore Development Authority, the Bangalore Water Supply Board, the Slum Clearance Board and the Bangalore City Corporation. These are 4 different bodies - each one having its own statutorily autonomous position i.e. each one functioning on its own budgetary planning; each one functioning on its planned approach. Yet, each one is expected to co-ordinate with each other to give the citizens of Bangalore the desired civic service with all the civic benefits that are due to them. I am trying to discriminate between the civic service civic benefit

which I will come to a little later as to explain. Why I say the civic service and say civic benefit is that there is an approach - a misconstrued approach today to misunderstand what is mandatory service to the people as against a commercial approach in providing service to the people; whether you call it privatisation, whether you call it a state monopoly, whatever it is. These two factors are very vital. What I find is that where the civic services are absolutely mandatory and it is according to the noble objectives of these organisations which have been created, the management of these institutions are unable to reach or meet the expectations of the people because of various factors that come in the way of service. First and foremost is the personnel of these departments. The personnel of these departments are not properly trained, geared up in action in the spirit of selfless civic service. They are there by virtue of a favoured positions in their respective placements. In these favoured positions, they feel obligated to those who have put them in those placements. The communication between these two are maintained, whereas the communication of these and the people of the city is broken up. There is a distortion of the very objective for which the service is meant for. On the other hand, there is a greater emphasis on the relationship between the person who would have helped appointment or a posting of a person and the person to the one who is employed and who has a continuity of relationship between the two. Now this is what is causing the damage to the spirit of service. Now, we have another aspect as service to these bodies. The people who are lent by the State Government are just sent in a flavored position and for various other considerations - considerations other than the capacity of the person to serve in the position that he is placed, the capacity of the person or the noble ideas for which he is competent to serve. So, we find nowadays maximum corruption taking the toll of the basic approach for service of

the people. One may say it is too general a statement, when it is a generalised corruption, it is general practice and it has come to stay. If we cannot talk straight to the true facts as they are known to us, then we will be failing in our duty as such. I find that in all these departments, particularly the Bangalore Development Authority, The BWSSB, the Slum Clearance Board and the Bangalore City Corporation, these 4 bodies, you find hardly anybody committed to the noble objectives for which these statutory bodies have been created. We can give umpteen illustrations in various fields as to how the people are subjected to great suffering. Now, what I am concerned is that the State with the political arms that is controlling the State, draws up various programmes, policies and principles, provides adequate budgetary provisions for these bodies to execute the State Policy, the State Programme and if it is not followed to the letter and spirit and not implemented, effectively, as desired by this august House and the State Government, what on earth are we going to serve the people for? In what way we are going to do? Mechanically in the normal course. Of course there is some service. The worst of the person that we hand over any responsibility, paying some consideration, he does some job. Not that nothing is done. I would not say wholesale there is no service. But where the people expect the type of the service in the sector they expect, it is here that we are failing. To say one illustration to each one of these bodies, for example: Bangalore Water Supply. If proper supply of water is not maintained in the filtered form that is expected of, in a free manner for which the people pay, whether directly or through the Municipal Corporation, if that service is not rendered, what is that organisation meant for? It has to serve at the right place, at the right time, to the right people who need it most. But, if we fail there, you have failed as a statutory body with all the autonomous power that is vested into it. Similarly; the underground drainage

system. If there is a considerable overflow of the drainage in the streets, lanes and by lanes, it causes lot of health problems to the people. Have we served that aspect of the sanitary services? So, we failed. Why is it happening? It is happening because there is no proper planning in these departments. There is no proper co-ordination between one department and another department of the same statutory body or they are absolutely irresponsible, indifferent and spend all their time or most of the time planning to make money and nothing else. So, this is what is very vital. Similarly, if you come to the BDA, with no disrespect to anybody, I would say that I have served the BDA as an elected member of that body for two terms for a period of 6 years between 1961 and 1966. Whatever was the motivation at that time, however small that organisation at that time was and a small area it was, yet the service remained the same, the objectives remained the same, the noble approach and the objective remained the same as it was when it was started. Now, do you have the same approach of the early sixties in the present situation? At that time, we found that there was need for sites for the people, for providing houses, because we lacked it. The object of providing house sites to the people or to provide them in an orderly fashion, in a very planned manner, in a planned growth and to the most needy people and that started deteriorating even at the point of 1960-66. AT that time we felt that the job of the City Improvement Trust Board as it was then called and now presently called in a big name as the BDA with greater authority than possibly what the Improvement Board was. So, what we thought was the improvement of Bangalore City in every sector of the city as a whole, interior as well as the outskirts, as well as even ahead of it, was very, very vital and it was planned improvement that was required. The plan was very vital and the execution was actually equally vital, the right of Engineers to

put their heart and soul into the job and try to build a proper planned Bangalore. In addition to what it was earlier which was considered not done on a very planned urbanised way of development, barring a few extensions like Basavanagudi, Chamarajpet, Shankarapuram, Seshadripuram or Mall-eswaram or anything; all other places were there very disorderly apart from the Civil and Cantonment side, so many towns as they called - Richmond Town, Richards Town, Cox Town and so many towns. But, these areas were occupied, habilitated by only the upper crest of the society at that time. Whoever was responsible to it, is a different matter. But all other places were totally neglected and the people suffered lot of humiliating experience in their lives as urban people. So, to remove this and to strike a proper balance; these Improvement Boards came into existence. These municipal bodies were directed to develop the city, to improve the city in a planned manner, to provide by way of priorities to those who have been neglected, ignored and as against those who have already had the best of it. So, this was the situation for which these organisations were created. Has it served this purpose?

ಶ್ರೀ ಎಂ. ಮಹದೇವ್:- ಮಾನ್ಯ ಅಧ್ಯಕ್ಷರೇ ಇವರು ಉಪಾಧ್ಯಾಯರು ಪಾಠ ಮಾಡುವ ಹಾಗೆ ಮಾಡುತ್ತಿದ್ದಾರೆ. ಇದು ಯಾರಿಗೆ ಪಾಠ ಮಾಡುತ್ತಿದ್ದಾರೆ?

ಶ್ರೀ ಎ. ಕೆ. ಅನಂತಕೃಷ್ಣ:- ತಮಗೆ ಇಷ್ಟ ಇದ್ದರೆ ಕುಳಿತುಕೊಂಡು ಕೇಳಬಹುದು. ಇಲ್ಲದೇ ಹೋದರೆ ದಯಮಾಡಿ ಹೋಗಬಹುದು ನನ್ನದೇನೂ ಅಭ್ಯಂತರ ಇಲ್ಲ. ನನಗೆ ತಿಳಿದಹಾಗೆ ನಾನು ಮಾತನಾಡುತ್ತಿದ್ದೇನೆ. ತಾವು ಅನುಮತಿ ಕೊಟ್ಟರೆ ನಾನು ಮಾತನಾಡುತ್ತೇನೆ. ಇಲ್ಲದಿದ್ದರೆ ಮಾತನಾಡುವುದಿಲ್ಲ. I would not like this unwarranted and (absolutely useless) interruption.

Mr. Chairman: Unwarranted ಎಂದು ಮಾತ್ರ ಹೇಳಿದರು.

ಮಹದೇವ್:- ಅನ್ ವಾರೆಂಟೆಡ್ ಎಂದು ಹೇಳಿದರೆ ಪರವಾಗಿಲ್ಲ. ಆದರೆ ಯೂಸ್‌ಲೆಸ್ ಎಂದು ಹೇಳಿಬಿಟ್ಟರು.

Mr. Chairman "Useless"* ಎನ್ನುವ ಪದವನ್ನು ರೆಕಾರ್ಡ್‌ನಿಂದ ತೆಗೆದು

* ಈ ಪದವನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ಹಾಕಲಾಗಿದೆ.

Sri.A.K. Ananthakrishna:- Truth is bitter. If it bitters to him, I cannot help him but it is a fact. I am presenting it to you basically where we have defaulted and where we continue to default and if you don't want to look into the truth of it and understand it, and if you just want to manipulate things on superficial side, well, what we are today and what we are going to be, it will be the samething. I want something like a departure from what has happened all these years and that I am saying over 40 or 50 years of my experience in Bangalore, having served in Bangalore and elsewhere. I am putting this with a heavy heart and in the interest of the people who are denied the service in one way or the other. I wish my friends would bear with me for some time on this score. Otherwise there was no need for me to initiate this debate. You can have your say after I have completed it.

Sir, I am mentioning it to you, for anything, if you want to go to a temple, you can just walk into a temple in any manner you like? Can you walk into your own house or kitchen in any manner you like in the name of modernism, matter of convenience and experience? You have a culture. You have an ideology; you have an objective and you have a noble approach and we, here, are not doing for ourselves. We are representing the cause of the people and the people are looking forward to us. I said in the very beginning that in this Department, on over 35% of the population in Karnataka, we are spending thousands of crores. Is it such a thing that has got to be determined as a piece of paper has to be dealt with in a manner which requires to be dealt with as the people would expect it to be dealt with. Otherwise, we will also be defaulting. This is what exactly is my submission. What I was saying is this. If the planned growth of Bangalore was also partial. It was not in favor of the entire population of Bangalore. Even fifty years ago, right upto fifty years earlier, the

period covering one hundred years, who are the beneficiaries of this city? Who are the beneficiaries in Basavangudi? Who are the beneficiaries in Shankarapuram? Who are the beneficiaries in Chamarajpet? Who are the beneficiaries in Seshadripuram or Malleswaram? Or in any number of these so called "towns" in Cantonment area? In every session, I think, our people have deliberated from time to time on these matters. Every municipality has deliberated, but has there been an iota of truth to the rest of the people who have been neglected, who have been exploited to build these new extensions for the City of Bangalore. I am exactly striking my point on that. So, what I say, is the upper crest, the socially and economically upper crest of the society cornered the maximum benefit of the city's development over the past century. I am not going further it backwards into the history of the city. Only you can see what is happening. What I am concerned is, these municipalities were given a modern approach and a new direction. These local authorities, you call it CITB or BDA or whatever it is, they were given as new direction so that there is an equal treatment meted to the citizens of this city and what was denied at one point of time shall not continue to be denied. The slums, how did they come up? The slums were the creation of labourers who built Bangalore and where did they come from? They came from various parts of the State and other States. Where do they live today; what is the state of their life? Their slum culture and their slum life is perpetuated even today over forty or fifty years. What new direction have we given to ourselves to see that there is change in our approach to the subject, excepting a few number of sites in new layouts that have been created? Where are those villages? What is their fate? You can see Akki Thimmanahalli, Siddapura and Kanakanapalya everything even today in the same order. Has your BDA or CITB or anybody for that matter or the Municipal Corporation applied

their minds seriously to bring about a revolutionary change? If you don't go into these facts very seriously, you will be missing the bus. So, my submission to this august House is, the very basic approach of planning should change. I did my best when I was in the CITB. It was heard or not heard, what happened I would not like to go into it now. But the approach was not there. But the changing times brought about changing aspirations, changing desires and also the State political as well as the State policy to see that we attune overselves to the changing situations and we provide a better service. What I am concerned is inspite of the parties that have come to power, inspite of the various parties that have have presented their own manifestoes before the people, inspite of our coming forward with various programmes providing substantial budgetary provisions, what has happened is at the time of execution, administration in the various departments, the bare fact, those who have been denied are not considered seriously to see that they are placed in an equates position. So, in this situation I find that the BDA, including the erstwhile CITB, has failed to provide adequate sites for thousands and thousands of people who have lost their lives, tens of thousands of people who built the city and many others, middle and lower-middle and various citizens in various walks of life, having to wait for 10 to 15 years, yet not found a place! Why is this happening? It is happening because you have become a sort of mechanical tool, a machine. We are not using the God given bliss, the great heart that is given, the nobility of purpose for which we have come to this earth, I want to serve. That is given a go-by. I can give any number of illustrations. Take for instance, the BDA. For how long thousands and thousands of people who have got sites in the various revenue pockets, how many years we have been telling them that we will regularise them. Have you reconveyed them? Your own words I can take out from your pages. Where is it?

What have you done to them? Can you not take a decision? So many officers you have got in this particular department. How many Chairmen has come and gone; how many Ministers have come and gone and how many Governments have come and gone! We are finding the same kind of an order. I can show you from this book. I am not quoting anything from anywhere outside. In your own report you have got that. What have you done? Lakhs of sites have come in revenue pockets. We have not done anything to them. A number of private layouts by the exploiters of the worst order, you have obliged them. There are very good housing co-operatives covering large number of employees either in the Corporation of the Bangalore or in various other industrial organisations. They have been denied. Their layouts are not sanctioned. They are being pushed from pillar to post. Can you not take a decision? What is causing you obstruction? Every slum-dweller is being promised every time that he will be given a house or site. Houses are built both by the BDA and the Corporation, but they are not allotted to the people. Those houses are unauthorisedly occupied by many other trespassers. We are not able to remove them from there. Are you sure to secure our property? Why is it happening? Is it the fault of this august House for having given so much of money with their budget provisions so that these departments not only come to existence, sustain and also to serve? The officers and officials are dancing to the tune of their superiors, and just to favour a few people who are spending all our time. Instead of taking a massive outlook for a massive reconstruction of the Society we are picking a few people here and there to give them the benefits out of the position that you have occupied. This is the basic default on our side or basic crime that we are committing ignoring the vital interest of the general public. Shall we give up this very ideology? I am not talking like a school master. I am talking like a person who is agitated, who

is offended, who is hurt and who feel for the people emotionally. This is a matter which I have got to present to this House. Unless we make up our mind I would like to make it very clear, we have the political and administrative will to restructure not only the departments, not in terms of the personnel, for the administration and execution, but also in terms of taking proper disciplinary action to implement all the orders that were passed as such. The Government passes orders one after another. Are they following it up for enforcement? The department pass circulars again and again. Are they enforcing it? Whether at the time of formation of the layout, whether at the time of allotment of the site or whether at the time of collecting revenue from the property owners? Whether at the time of handing over the civic amenities sites to proper person or a proper organisation, or whether it is going to be misused for forming sites and to be disposed off, I would like to know in this area whether there is adequate supervision, whether there is adequate control? Where is the political will? Where is the administrative will? Where is, the will of the State? People are asking these questions. What is the answer we have got? Shall I say that our superiors don't work, it is only some favours are conferred by somebody and so you also come to me and I will also carry you to the door, so that I will also get a favour conferred at the cost of lakhs and lakhs of people of this city or for that matter any city or any town municipality or the citizen of the town. This is exactly what is happening. Unless there is a radical change in our mind to see that we disown the wrong attitudes in our minds, the wrong approaches in our way of handling things, we will not be able to do any further progress. Why are we? Sir, I would not like to go too much into that. The BDA says in its report that thousands and thousands of acres of land have been in their estimates for acquisition and about Rs. 50 or 60 crores have been kept for this. But we could not acquire. The Land

Acquisition Officer, whoever he may be, has not acquired the land. Are you folding up your hands looking to the skies or are we looking at the Land Acquisition Department to see that the land is acquired, or we may look at the legal department who are failing to take legal action in the right place, in the right cause and in the right manner in the right time as expeditiously and ably as one has go to deal with it. Or, will you continue to say that the Legal Department has failed me; the Land Acquisition Department has failed me, my officials are not going to work; there is no discipline in my department, and I am here for a day or two either at the will of the Minister or the Chief Minister or somebody else. Otherwise, I will go. Shall we go on giving explanations like this? I would say, whoever is there in the Government position either as Chairman or as Commissioner, or in the position of Chief Engineer or Land Acquisition Officer or as an Officer of the Legal Department, whosoever it is, he should be pinned down. He is accountable, responsible to see that what is expected of him by way of responsibility given to him, he discharges it and he delivers it. Failing this, he shall be punished, he shall be thrown out. The one who has the power to appoint, he has also got a right to fire. If this principle of hiring and firing is not adopted, I am afraid, we will be failing in our duty and every step of our action to provide services to the people of this country.

If all the money that we are giving to the various departments have got to be usefully spent, usefully served and the people do not have something to say against us, I think we have no alternative, but to deliberate it the whole day and the whole night. Otherwise, you guillotine, we will pass and go. I am just telling why is this happening. The BDA has issued letters of allotment to thousands of people who have applied for sites, after collecting the deposits and over the past 3, 4, 5 years. the site is not identified the layout is mentioned, but

the site is not identified and the site is not delivered to the person who has paid for it. Are we here to inflict an unbearable pain on the citizens and go on enjoying ourselves by collecting the money both over the table and under the table? How long this august House is going to tolerate this? Some day we have got to come down very heavily irrespective of who is manning the whole show, at what level it is. We will be answerable to the people as representatives of the people. Four crores of people have sent us here to ensure that their services are ensured and exactly play same tune to somebody's fiddle. It is not possible for me. So, what I am saying is we have to draw a line, how long are we going to tolerate the misconduct, the abuse of the people at various levels. How long are we going to keep quite tolerating the sufferings of the people. What the administration is doing? This is what matters us.

I want to ask one more thing. Number of sites are being distributed over the past few years at the discretionary rights of A, B, C, D or whatever they are. Let me warn here, once the people at the helm of affairs, if they use their extraordinary influence and power or abuse of authority or use an excessive authority by 10%, 90% of the crime is committed by the subordinates in their respective departments. It is an historical truth in any section of the society. For instance, if you ask your Accountant to give you Rs. 100/- outside the book, the next day he would have swallowed Rs. 200. This is the order of the day in the whole society. It is same thing different in your organisation or the number of organisations where there is no control, where there is no supervision, where there is no candid direction and the direction followed by disciplinary action. So, this is what is going to happen. What I suggest is, whatever may be anybody's influence, whatever may be the overbearing that come from any quarter on anybody, this out of turn allotment shall be stopped at any cost. Better you incur

the displeasure of a few people who come to us and put us into abuse of our authority and be a monumentally accused person in the minds of the people or in the eyes of the people. If there are corrupt politicians and corrupt administrators, it is all because you are obliging hardly 5% of the population who are asking for such a service. You are not able to serve 95%, but only 5%. Even there only a small percentage of 5% will get the benefit. For the sake of one or two percent of the criminal minded people, opportunistic characters, we are destroying the edifice of the whole society and in the whole society we are exposed as corrupt and immoral people. Why? How much time we have wasted in dealing? How much time we have wasted in abusing our authority? How much time we lost for proper planning and proper and efficient administration? Are we able to look into it seriously? This is the position as far as the BDA is concerned. It was in 60's that we decided that the BDA shall confine itself only to planning, development and allotment of sites, not to embark into building houses. At the time when house construction was taken up, we found that biggest blunder being committed. Now, all attention is on the house construction. The contractor, the engineer and the politician whoever it is and the officer nexus, that takes away all the time. The entire administration is geared up to see that swindling is maximised at that level because more money is available there, and because in allotment of sites, you cannot swindle much unless there is an under-hand dealing. But here it can be direct. Who does not know this nexus. That is why, the BDA, which has no adequate time to administer its noble approach for which it has been created, should give up the construction aspect of it, whatever may be of its nature, whether it is for the sake of slum-dwellers or for a low income group or socially and economically backward section or for the affluent section or even under the self-financing section. Whatever it is because your attention is diverted. You are not

able to serve not more than even 1% of the total population in this approach. On the other hand, if you spend all the time and energy is concentrated in acquiring land in time, in formation of proper layouts in time and in making allotments in time, you will be in a position to solve the housing problem to a considerable extent and that too to the satisfaction of a large number of people of the population. Otherwise, we are ruining lot of people.

Now, I come to Karnataka Housing Board. What is the position in the Housing Board again. Same thing. Great gratitudes are expressed, so many schemes have been launched, but they are not able to do their jobs correctly because they are spread over throughout the State. One Headquarters at Bangalore will not be able to supervise all the places all over the State. It should be decentralised. So, the activities of the Karnataka Housing Board must be in a very decentralised manner; with proper regional boards in various parts of the State and see that each regional board has got its own autonomous right to deal with the situation concentrating on the acquisition of sites from the BDA, CITB, Town Board of whatever it is and not entering into acquisition business of land by themselves. I know the Housing Board was given the right to acquire because of the delay in these organisations in giving them the necessary number of sites. That delay has been caused because of the diversion at this point. If you stop diverting your attention in these directions, I am sure that each of the Department will be able to function properly.

Vice Chairman:- Hon'ble Member may conclude your speech by 2 PM.

Sri A.K. Anantha Krishna:- I am coming to that sir. If you curtail me, I will not be able to do justice even to this august House. I have cut down. I will obey your direction. If you don't agree on this, I am sure the House will agree with me. If you

don't agree on the basic approach, I think there is no point in any number of people talking about any number of provisions made, any number of offices opened in the respective places. We are ruining the society.

Vice Chairman:- Other members are interested to speak.

Sri A.K. Anantha Krishna:- If you go on interrupting like this, I will lose 5-10 minutes. The very structure and the structural functioning is wrong. It requires a surgical treatment. What is the point in consulting a physician who gives a prescription which does not help you when it is a surgical case. Today we are here at a surgical stage. Each one of the Department needs a great fundamental surgery. I will give you, if you want to satisfy your interest. What kind of Engineer do you give at the top of each one of these bodies? Those at the verge of retirement, those who are not able to go out of Bangalore or to their respective places and those who are not able to enforce discipline; they cannot do any planning. They cannot exercise right to punish a wrong person. I don't want to name. I know it by personal knowledge and personal acquaintance. Why so many defaults are there? Very ordinary things, we are not able to do ordinary things. What I am suggesting is, take the case of ring road, this case of ring road is an historical development for undevelopment. For the past 20 years, even when I was in the CITB we had a plan for ring road. Why have we not able to construct a ring road so far? You again say land acquisition problem, legal problem. I can cite cases where people who are prepared to hand over their land. They had gone to the BDA number of times, all they wanted was this, an alternate site from BDA to go and rehabilitate themselves. Is the BDA or the State thinking in that direction and prepared to give a site to such persons? If the road is coming, people know that the land values will go up in those areas. Why is that we are not able to take over the land? Because those engineers and those land acquisition

officers and those legal officers want lot of money to be paid even to honour the noble objective of the BDA. People have come to me and I have referred to the BDA, but nothing has happend? Do you want to pursue in the same manner that we have been going on? This is a vital factor. You make sure that the engineer who have got to plan the ring road has done the job like Mr. M. Visweswaraiah, a great Engineer and Statesman and not a corrupt Engineer who has nexus with politicians and contractors. What is important is that. If you want to acquire the land you must acquire the land through a Land Acquisition Officer with a nobility of purpose before you. You are not prepared to do that. Why our so many roads running at cross purposes in turns and turns like a serpentine? Why it is like that? It is because you want to oblige somebody who have got property there. You do not want to acquire the property, you want to turn the road to some other direction. That causes delay; another man raises an objection. All this is because we don't have a straightforward and honest approach in dealing with any one of these issues. Now you enforce that discipline on every one of our employees, you will see that what can be done in 10 years will be done within 2 years, what has not done in the last 25 years will be done in the next 5 years and that too at a much lesser cost than what we are providing for year to year with a recurring wastage of money and then for the curse of the people. This should not be done. So this is the ring road and various other things. I don't want to go into the details, because my time is running short.

Now let me come to Slum Board. Why was this Slum Board created? In whose interest? Is it to find employment to some people there in the Board or is it there to function for slum clearance? Where the clearance is not possible, whether there is effective improvement? Has it been done? Go through your own reports. Go through the number of places

where you have executed this layout or acquired land from various other sources? Have you done it? You have built houses. What has happend to all the money that has been provided for? Have we used it effectively and promptly? How much loss of interest has been there. We borrow from HUDCO, World Bank, Banks, LIC and from somewhere. Are we getting it free? Each one of us or any officer prepared to part with money free of interest to any body even to the closest relatives? Whether LIC or Bank give interest free loans? Whether we invest in NSC or in some other investment without any interest? Why should our money or people's money in the statutory bodies be spent or wasted at the cost of the people? Why are we resorting to heavy taxation of the people? Even a man who does not own a House is taxed. The heaviest tax-payer is the man on the street, that man in the village. It is not you and I, who own a house or has bank balance, is affected. It is they who are affected. It is not a businessman or industrialist. Anyone with a knowledge of economics will agree with me on this point. Now what is the relief you are giving to the man overburdened with taxation and who is paying those taxes? What I am concerned is that, what we should emotionally integrate our mind and heart in the direction of serving the people for which these august bodies have been created. Now if you agree on that, I will move on. The Slum Board has not done anything at all. I would rather prefer that the Slum Board is scrapped because it has not served the purpose for which it is created. I want to ask one very very small question. I am sure some of my friends do not agree. It does not matter and I respect them. Now we have resorted to Hakkupatra to the Slum dwellers. We are all anxious to give Hakkupatra to slum dwellers. We just want to please. Have anyone of us realised that the sites existed in the slums where roads cannot be widened where the drainage cannot be provided, in a manner that an urbanised

area can be done, where lighting arrangements cannot be done, where the sewerage system or the water supply system cannot pass through, where an ambulance cannot pass through, where the dead body of a slum dweller cannot be placed in front of his house? There if you give the Hakkupatra for 8' x 10' or 6 'x 9' or 5' x 10', have you given it a right to live a life of an urbanised an improved life in an improved urban culture? Or are you perpetuating this slum culture to which he is condemned for the next generation to come? This is the matter which I am concerned about. That's why when people come to me for Hakkupatra in my small area, I tell them that I will not be a party to these Hakkupatras. Go to anybody who is prepared to compromise on this and get it, I will not come in your way. As far as I am concerned, I believe in restructuring the entire places. I believe in the Slum Board or the Housing Board or whatever is the Board taking up a massive housing programme in the same area for you with a temporary shifting you for rehabilitation camp. There, all of you can be provided with a bigger flat of 10 x 12 feet or 15 x 20 feet or 20 x 30 feet or whatever is possible, then you can live a better life. He feels one with the rest of the society. Otherwise, we continue to condemn them. They are the worst socially and economically backward people. They are from the Scheduled Caste, they are from the Muslim minorities, they are from the converted schedule caste Christian minority. It is they who are throbbing to come to the mainstream of life. Give them a better life. They send their children today to convents to the English medium schools. My maid servant sends her child to the convent. I am not opposing Kannada or anything of the country. Don't mistake me. What I am trying to tell you is how is the mind working? In which direction it is going? What are they aspiring for? Are we here to take at those aspirations? But they are dumb folk. They do not want anything. They are illiterate and ignorant people, that's why

we should not allow them to continue to be one. That's why I would even now say, irrespective of the Hakkupatras already given, please get back to them and tell them that you have a right for your place. The Hakkupatra is given to you as a matter of right for your habitation, continuing habitation in the same area but let building constructed, flats allotted to you in the best manner that the Housing Board is thinking or the Ashraya Scheme is thinking or whatever it is. This is my personal submission to this august House and to my colleagues here. As far as I am concerned, I am opposed to this Hakkupatra given to them because it is exploited and once again a large number of exploiters are already there. Lorry owners are there, motor workshop people are there, illicit distillery people are there. Quite a large number of unsocial characters who are exploiting these gullible people are also occupants of these slum areas, and they are the 'Daadas'. They have 4-6 huts and houses in the places. When you give Hakkupatra, you give it in the name of one individual, but ultimately the concentration or consolidation will be in the hands of those who have perpetuated the slum like in the city. So, my submission is that, we are not planning, we are not looking ahead with the rationale, with a progressive approach, with a revolutionary change that we have to bring about in the society. That restructuring is felt. These reformation approaches have not taken us anywhere in the society. So the Slum Board creates this. Some action is taken. Is there any recurring expenditure for the maintenance? Are they able to maintain those slum rehabilitated areas? Do they have enough money for this? Are they able to get adequate money provided for in the budgetary provisions? They do not have money, they do not have required manpower, they do not have the administrative or executive will, they do not have any influence over the slum dwellers. They have got to depend upon what the Corporation says or the MLA says or some-

body else says and act accordingly. So, why should we have an organisation which cannot act on its own initiative in the manner that the drive is required to restructure that particular part of the Society. My submission is that a determined will is absolutely necessary with a farsighted approach to review this matter and to deal with this matter and not provide these Boards and Corporations to provide employment to some people for their own luxurious lust for power or luxurious earnings and living. Now I will come to the Corporations or the Municipalities. What are they doing? Out of the 100 employees to take care of the maintenance of the city thirty of them are absent on permissive absence. Thirty of them are absent by bribing the immediate superior, the supervisory staff and the balance sixty of them they just wave their hands up and down, whether it is a gang worker, whether it is a 'poura karmika' or whatever it is. I am sure the administration knows it. Why they are not able to take a drastic stand on these matters? It is because from the level of the smallest worker, the gang worker or the poura karmika rise upto the highest level, considerable bribery takes place. Today you are getting Rs. 1500, you pay him is Rs. 500 and go home or elsewhere and work. Those days it was Rs. 400, then they were collecting Rs. 100. This is the attitude. Is it not known to us? Is it not known to the Commissioner, Deputy Commissioners? Then who is it that he does not know about it? It is revealed just not discipline, disciplined execution of work and disciplinary action where the disciplinary execution fails or want only misbehaves. So, when you go to Revenue Department, where is the collection? So many lakhs of properties are there in Bangalore. I have been repeatedly saying in this house that they are all either unassessed or under-assessed or there is a evasion of even payment of taxes. I can say without any fear of contradiction, because it has not been contradicted so far, only it has been ignored by the Ministry,

only it is ignored by the Officers concerned that this under-assessment is so huge, that, if you are able to get Rs. 30 crores today according to your provisions made, you will be in a position to get Rs. 120 crores to Rs. 130 crores without any difficulties. You entrust this job to me in one particular area, give me right type of people to work 24 hours, I will see to it, the largest number of IAS Officers and KAS Officers who own properties are all under-assessed. All the political big-wigs who own properties are all under-assessed and all the big industrialists and businessmen who have access to influence and power are all under-assessed. Can you deny, in the whole of Palace Orchards such a thing is happening? In Indiranagar such a thing is happening. In the City Improvement and BDA areas such thing is not happening, can you deny this? I am saying that this corruption has reached such a nadir, that it's all coming in the way of any progressive developmental activities, in one word. If you do not arrest it, all the money that we provide, all the moneys that this House sanctioned for, largest part of it is wasted and we are not here to collect money from people by way of taxes and then let them go down the drain, either by the drains of the Water Supply Board or the drains of the BDA or the drains of the BCC or wherever it is. This is a matter which one has got to seriously take note of. Now I will rush through a few other points. I have lot to say, but still I have got the basic approach. We are talking of co-ordination. It is the most important thing. These organisations, as I said right in the beginning, they are meant to have a proper co-ordination though each one is an autonomous body. They are meant to co-ordinate with each other, to provide a single-minded devoted service to the people. That co-ordination is non existence. You ask the BDA, they say there is no co-ordination from the Corporation, you ask the Corporation, they say there is no co-ordination from the BDA, you ask the Water Supply Board, they say

there is no co-ordination from Corporation, you ask the Corporation, they say there is no co-ordination from the KEB. This is a talk which is being perennially stated right through. Where are you going to put a stop to this? Where are you going to draw a line? Who has got to do this? I think it is necessary for this house to deliberate on this point, very seriously for two to three days if the Chairman permits on any other day. This lack of co-ordination even within the city limits by the various bodies that have been created for service motto is absolutely necessary to be discussed. Otherwise, they will have their own way of doing things and we keep on shouting . We get the allegations, accusations from the people. This co-ordination is a very very vital factor. Many wise programmes have been drawn up by the Housing and Urban Development Department. The Hon'ble Minister has been quite good enough to place all these things before this House for consideration and passing. I have no hesitation to say that the whole House should pass today unanimously as it is. However I would like to draw the attention of the House to this "Ashraya Scheme." I am one of those who believe this "Ashraya Scheme" will certainly provide adequate opportunities to provide a shelter to the needy backward classes people. But when it comes to the City, I have my apprehensions of its implementation. In the rural parts, it is possible that the land is available all over and the MLA's can identify places if they desire. The officers can identify and they will be able to get the land. They can mark the line. They can give them a place. I don't deny it about their capability. But when it comes to city, which has no land available in its periphery. In my constituency, Sir, unless you give me the roof-top, the terrace of the BDA or Cubbon Park, the surroundings of Vidhana Soudha and the Golf Ground, I am afraid, I cannot provide a single site under this Ashrya Scheme. If I have to get Ashraya Scheme implemented in my constituency, I have to go 5-10-

15 miles away from the city to identify the place and then acquire. How many people would like to be driven away, the poor people to that extent where the transport services are not there. The transport services are too expensive for him to travel all the way from there to here. How many of them are able to proximate to their places of employment. This is very important. When we started our civilization, we did it near about the river, near about Hillock, near about places where we have facility of water, transport facilities, where we are able to rise some food for ourselves and where we can graze the cattle. Now these people where they can go? How can they do that? I had my apprehensions, and also I had my apprehensions that I as a stupid man committed to this kind of ideology in my life, I would be a failure. So, I wanted some clarification. The Hon. Minister was good enough to convene a meeting on his own for review of the "Ashraya Scheme" some time back. I am sorry to say that I attended that meeting. I tried to ask, what is the structure of this "Ashrya Task Force Committee."

(Interruptions)

Sri A.K. Ananthakrishna:- Please forgive me. There is no need to interrupt me.

Sri Nazeer Ahmed:- I have got highest regards for you. I don't want that you should use the word "stupid man." I just wanted you to take back that word.

Sri A.K. Ananthakrishna:- I am stupid. I don't have to take back. You have the regard even for a stupid man. You have your own view for stupid man. Even a donkey is respected. I am stupid by way of my ideology. You cannot delink my expressions and take a meaning out of it.

Sri M. Mahadev:- With due apology, when we talk in this august House as a responsible representative, we have to use expressions responsibly. Every member is respected

here. He is also a member and we are also Members of this August House.

Sri A.K. Ananthakrishna:- It is nothing unparliamentary.

Sri M. Mahadev:- We have to use such expressions cautiously. ಪದಗಳನ್ನು ಸದನದಲ್ಲಿ ಜವಾಬ್ದಾರಿಯಿಂದ ಬಳಸಬೇಕು. ಅವರೂ ಸದಸ್ಯರೇ ನಾವೂ ಸದಸ್ಯರೇ, There is a limit for anybody. ಅದು ಅವರಿಗ ರೆಫರ್ ಆಗಲಿ, ಅಥವಾ ಬೇರೆ ಯಾರಿಗಾದರೂ ಆಗದಲಿ, ಪದಗಳನ್ನು ಸದನದಲ್ಲಿ ಬಳಸಬೇಕಾದರೆ ಜವಾಬ್ದಾರಿಯಿಂದ ಬಳಸಬೇಕು.

ಛೇರ್ಮನ್:- ಮಾನ್ಯ ಮಹದೇವ್‌ರವರೇ, ಅವರು ಬೇರೆ ಯಾರಿಗೂ ಬಳಸಿಲ್ಲ. ತಮ್ಮ ಐಡಿಯಾಲಜಿ ಅವರು ಉಪಯೋಗ ಮಾಡಿದ್ದಾರಿ. ಅದು ಅವರಿಗೆ ಬಿಟ್ಟಿದ್ದು. Please conclude.

Sri M. Mahadev :- I would like to know, whether it is Parliamentary or unparliamentary.

Sri A. K. Ananthakrishna :- You can wait for few minutes then you will come to know how was I determined and stupid.

Mr. Chairman :- Please conclude.

Sri A. K. Ananthakrishna :- I am coming to an end Sir. I have a stupid commitment with certain ideological approach. World over this is an expression used in any Parliament. There is nothing wrong in using it. If they don't want the word 'Stupid', I would say 'Madness'. I am madly committed to an ideology. I am committed to that thinking. Whatever may be happening anywhere, in the world, I have a right to be committed to it. So I said this Task Force Committee to which by an order of the Government, as a matter of State Policy, can you deny that it is not a matter of State Policy? Can you deny it is not an order of the Government? Can you deny? Can you deny that this Task Force has been constituted as a means for extending the services of the elected member. and other people? Can you deny that it is not meant for peoples participation in a people's programme of a very popular approach which our Hon. Chief Minister has thought

of. So, I am committed stupidly to that very ideology for which the Hon'ble Chief Minister has presented it. Kindly bear with me. I am at pain. I am now seeking relief from this House and you. Presently as you are in the chair, I am committed to the implementation of this programme a much as my Hon. Chief Minister is committed to it and made declaration in this August House. With that commitment, I attended that meeting. When I found certain lacuna was there, certain information was lacking, certain approach was lacking that the Task Force Committee if it has to be convened, as to how it can be convened, who has to convene it and who is the Officer to do it? In which place it is to be convened and what are the modalities to put it into practice or implement this programme? I wanted to know because I am not an officer. I am not a Minister. I am an ordinary Member of the Assembly. I am asked to take up such a role of serving the people to implement this programme. Therefore, when I tried to raise this point in a statutorily called meeting, I was belittled as though I am not interested in service. If I want to serve, I must go to the ARO, I must go to the people, and I must find out the beneficiary. I must go to the areas where the land is available, identify it, negotiate and purchase. Pay 30% more than the registered document in the Sub-Registrar's Office. These things are unheard of. I am very frank about it. I said, I would not like to be a party to acquiring any land. That is the job of the Land Acquisition Officer. It is not the job of a non-official. However much, the State has considered it necessary, in a state of expediency which they conceive but for my past it is not the job of a non-official. It is not the responsibility of the non-official. It will be exposing to all scandals. Therefore, I said, I would not like to serve on this Committee. I am sure with all the background of my culture, in a meeting, I tried to be courteous as cultured as I could be. I told the Chairman of the meeting who is the Hon. Minister for Housing & Urban

Development that I do not want to serve on this committee and I am going out. Am I wrong Sir? I would like this House to say whether I am wrong.

Sri A.M. Belliappa:- Sir...

(ಗೊಂದಲ)

Sri A.K. Ananthakrishna:- That is alright, Don't laugh at it. Ultimately somebody close will have the last laugh. I will consider that and you will find who will have the last laugh.

ಛೇರ್ಮನ್:- ಮಾನ್ಯ ಬೆಳ್ಳಿಯಪ್ಪಾಜಿಯವರೇ, ನೀವು ಅವರು ಬೇರೆ ಚೇಂಬರ್‌ನಲ್ಲಿ ಕುಳಿತುಕೊಂಡು ಡಿಸ್‌ಕಷನ್ ಮಾಡಿ, ಈಗ ಕನ್‌ಕ್ಲೂಷನ್‌ಗೆ ಬನ್ನಿ.

ಶ್ರೀ ಎ. ಕೆ. ಅನಂತಕೃಷ್ಣ:- ಇಲ್ಲ ಸಾರ್, ನಾನು ಕನ್‌ಫ್ಯೂಸ್ ಆಗುವುದಿಲ್ಲ. ಮೈ ಮೈಂಡ್ ಈಸ್ ವೆರಿ ಕ್ಲಿಯರ್.

ಶ್ರೀ ಎ. ಎಂ. ಬೆಳ್ಳಿಯಪ್ಪ:- ನಾನು ಒಂದು ಕೊಶ್ಚನ್ ಕೇಳುತ್ತಿದ್ದೇನೆ. ತಾವು ಬಂದಿರತಕ್ಕಂಥದ್ದು ೧೯೭೭ನೇ ಇಸವಿಯಲ್ಲಿ, ತಾವು ಆ ಸಂಸ್ಥೆಯಲ್ಲಿ ಮೆಂಬರ್ ಆಗಿರಲಿಲ್ಲವೇ? ಅಲ್ಲಿಂದ ಪುನಃ ಮೇಯರ್ ಆಗಿದ್ದರು. ಆ ಸಮಯದಲ್ಲಿ ತಾವು ಸರಿಮಾಡುವುದಕ್ಕಾಗುತ್ತಿರಲಿಲ್ಲವೇ? ಅಥವಾ ಎಂ. ಎಲ್. ಎ. ಇದ್ದು ಇದುವರೆವಿಗೆ ಏನಾದರೂ ಪಬ್ಲಿಕ್ ಆಗಿ ಸ್ಟೇಟ್‌ಮೆಂಟ್ ಕೊಟ್ಟಿರುತ್ತಾರೆಯೇ? ಅಥವಾ ಪಾರ್ಟಿ ಮೀಟಿಂಗ್‌ನಲ್ಲಿ ಕೇಳಿದ್ದಾರೆಯೇ? ಏನೂ ಇಲ್ಲ. ಇಲ್ಲಿ ಬಂದು ಬಿಟ್ಟು ಅಪೋಸಿಷನ್ ಲೀಡರ್ ತರಹ ಸ್ಪೀಚ್ ಮಾಡುವುದಕ್ಕೆ ಹೋಗಿಬಿಟ್ಟರೆ ಹೇಗೆ?

Sri A.K. Ananthakrishna:- Don't get excited. The records of the BDA at that time will disclose how effectively I have functioned. In the same direction, I am talking today. The records of the Corporation will also prove that I have taken the same consistent stand. I have not still give up my thinking it is because I still consider that it is the only way for restructuring the society and the people to whom we belong. I was saying whether I was wrong? May be my good friend Mr. Belliappa.

Sri A.M. Belliappa:- A good case is being lost on account of bad argument.

Sri A.K. Ananthakrishna:- I have lost all my right. You are a great friend. But my ideology is not lost, it remains. My conviction, my commitment is not lost. I have lost as a

beneficiary. I have lost those people who depended upon me. It is true I don't deny it. But can you say my commitment is lost? My convictions are lost? My ideologies are lost? Only norms are lost? My ethics are lost? The people of Bangalore have judged me correctly. I do not know why my friend is becoming so restless. When I said I don't want to serve because I do not want to be a party to negotiated price for the purchase of a property. I do want to be a party to be called by names at any time. It was my thinking, it is my right to have my own thinking. I did not say, you may agree; you may not agree. I did not say one word about others. When I said I don't want to serve I turned my back and I moved towards the door, the Hon'ble Minister said "If you want to be the Chairman I will appoint somebody else". Well, if you think I deserve that answer, well I accept it on the floor of this House. If you think that is the punishment I will have, the humiliation and insult that I will have for my committed thinking in life and this House agrees in that direction, Sir...

Sri Qamarul Islam:- Sir, I rise on a point of order. What was the insult, let him explain. He feels that some insult has been done to him. Who has insulted him? He is an Hon'be member of this House.

Sri A.K. Ananthakrishna:- I said I am seeking the relief from this August House.

Sri Qamarul Islam:- Yes, we want to give you the relief. We want to know the facts.

(Interruptions)

Sri A.K. Ananthakrishna: Yes Sir, I am saying I am prepared to walk out without any further talk. I am hurt. What right has the Hon'ble Minister who was chairing on that occasion to tell the hon'ble member in the presence of many of the officers, quite a few of them are still here. "If you don't want to be Chairman, I will appoint another person as a

Chairman". What is the relevance? You accept it? You can do whatever you like by your ownself? I don't have to be pushed down. Where is the need? What is the appointment? Am I an employee of the Minister?

Mr. Chairman:- Please conclude.

Sri A.K. Ananthakrishna:- I am concluding. My honour has been at stake.

Sri A.M. Belliyappa:- How is it Mr. Ananthakrishna has got a right to question it here?

(Interruptions)

Sri A.K. Ananthakrishna:- Don't interfere like this. I am putting it very clearly. The entire decision for the Ashrya programme was from this House. This House has given its approval. The Hon'ble Chief Minister came out with this programme.

Sri K. J. George:- I will clarify.

Sri A.K. Ananthakrishna:- You cannot clarify unless I complete it. If you want to humiliate, whatever may be your intentions or otherwise.

ಶ್ರೀ ಕೆ. ಜೆ. ಜಾರ್ಜ್:- ಸಾರ್, ನನ್ನದೊಂದು ಪಾಯಿಂಟ್ ಆಫ್ ಆರ್ಡರ್. ಅವರು ಹೇಳಿದ್ದೆಲ್ಲಾ ನಿಜ. ನಾನು ಯಾವುದೇ ಡಿಸಪ್ಯೂಟ್ ಮಾಡುತ್ತಿಲ್ಲ. ಬೆಂಗಳೂರು ನಗರದಲ್ಲಿ ಕೆಲವು ಕಡೆ ಸೈಟು ಸಿಗಬೇಕಾದರೆ ಮನೆ ಬಡವರಿಗೆ ಕಲ್ಪಿಸಬೇಕಾದರೆ ಕಷ್ಟದ ಕೆಲಸ. ರಾಜ್ಯದಲ್ಲಿ ಇದನ್ನು ಮಾಡುತ್ತಿರುವಾಗ ಬೆಂಗಳೂರು ನಗರದಲ್ಲಿ ಏನು ಈ ಸ್ಕೀಮ್ ಇಂಪ್ಲಿಮೆಂಟೇಷನ್ ಆಗುತ್ತಿದೆ ಎಂದು ನೋಡಿದರೆ ಸಾಕಷ್ಟು ಪ್ರಗತಿಯಲ್ಲಿಲ್ಲ ಕೆಲಸ ಆಗುತ್ತಿಲ್ಲವೆಂದು ಮೀಟಿಂಗ್ ಕರೆಯಿಸಿದೆ. ಹೌಸಿಂಗ್ ಬೋರ್ಡ್ ಛೇರ್ಮನ್, ಶಾಸಕರು, ಅಧಿಕಾರಿಗಳು ಎಲ್ಲಾ ಆ ಮೀಟಿಂಗ್‌ನಲ್ಲಿದ್ದರು. ಬೆಂಗಳೂರು ನಗರದ ಜನರಿಗೆ ಆಶ್ರಯ ಕಮಿಟಿ ಅಡಿಯಲ್ಲಿ ಏನು ಸಹಾಯ ಮಾಡಬಹುದೆಂದು ನಾನು ಅವರ ಅಧ್ಯಕ್ಷರನ್ನು ಕರೆಯಿಸಿದೆ. ಮೊಟ್ಟಮೊದಲನೆಯದಾಗಿ ಅವರು ಹೇಳುತ್ತಾರೆ ನನ್ನ ಕ್ಷೇತ್ರದಲ್ಲಿ ಜಾಗ ಇಲ್ಲ ಎಂದು. ಎರಡನೆಯದಾಗಿ ನನ್ನ ಕ್ಷೇತ್ರದ ಜನ ಅಷ್ಟು ದೂರ ಹೋಗಬೇಕಾಗುತ್ತದೆ. ಇಲ್ಲಿ ಕಳುಹಿಸುವುದಕ್ಕಾಗುವುದಿಲ್ಲ ಎಂದು. ಮೂರನೆಯದಾಗಿ, ನನ್ನನ್ನು ಯಾರೂ ಕೇಳಲಿಲ್ಲ, ನಾನು ಎಲ್ಲಿ ಮೀಟಿಂಗ್ ಮಾಡಲಿ, ಎಲ್ಲಿ ಲ್ಯಾಂಡ್ ಮಾಡಲಿ ಎಂದು. ಆಶ್ರಯ ಕಮಿಟಿಗೆ ಪವರ್ಸ್ ಕೊಟ್ಟಿದ್ದೇವೆ. ಎಲ್ಲಿ ಬಿ. ಡಿ. ಎ. ಅಥವಾ ಸರ್ಕಾರದ ಜಮೀನಿರುತ್ತದೆ ಒಂದು ವೇಳೆ ಅದೂ ಸಿಗದಿದ್ದರೆ ಖಾಸಗಿ ಜಮೀನಿರುತ್ತದೆ. ಅಲ್ಲಿ ಆ ಕಮಿಟಿಯವರು ಅವರೊಡನೆ

ನೆಗೋಷಿಯೇಟ್ ಮಾಡಿ, ನಲವತ್ತರಷ್ಟು ಜಾಸ್ತಿ ಕೊಟ್ಟು ಬಡವರಿಗೆ ನಿವೇಶನ ಕೊಡುವ ಒಳ್ಳೆಯ ದೃಷ್ಟಿಯಿಂದ ಮುಖ್ಯ ಮಂತ್ರಿಗಳು ಈ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಅವರು ಯಾವಾಗ ಈ ಕಮಿಟಿಯಲ್ಲಿ ನನಗೆ ಛೇರ್ಮನ್ ಆಗಿ ಬರಲಿಕ್ಕೆ ಇಷ್ಟವಿಲ್ಲ, ನಾನು ಹೊರಗೆ ಹೋಗುತ್ತೇನೆ ಎಂದು ಹೇಳಿದ ಮೇಲೆ ನಾನು ಮಂತ್ರಿಯಾಗಿ ಈವತ್ತು ನನ್ನ ಮೇಲೆ ದೊಡ್ಡ ಜವಾಬ್ದಾರಿ ಇದೆ. ಯಾರನ್ನೂ ಇನ್‌ಡಿವಿಷಿಯಲ್ ಇಷವಂತೆ ನಾನು ನಡೆಯುವುದಕ್ಕೆ ಆಗುವುದಿಲ್ಲ. ಇದು ಬಡವರ ಪ್ರಶ್ನೆ. ಅವರಿಗೆ ಅನುಕೂಲವಾಗಬೇಕಾಗಿದೆ. ಇಂಥ ಸಂದರ್ಭದಲ್ಲಿ ಅವರಿಗೆ ಛೇರ್ಮನ್‌ಷಿಪ್ ಬೇಡವಿದ್ದರೆ ಬೇರೆಯವರನ್ನು ಮಾಡಬಹುದೆಂದು ಕ್ಯಾಬಿನೆಟ್‌ನಲ್ಲಿ ನಿರ್ಧಾರ ತೆಗೆದುಕೊಂಡಿದ್ದೇವೆ. ಅವರು ಛೇರ್ಮನ್‌ಶಿಪ್ ಬೇಡ ಅಂದರೆ ಬೇರೆಯವರನ್ನು ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಇದೆ. ಆ ದೃಷ್ಟಿಯಿಂದ ಹೇಳಿದೆ. ಅವರಿಗೆ ಅಗೌರವ ತೋರಿಸುವ ವಿಚಾರ ಇಲ್ಲ. ಅವರು ಹಿರಿಯ ಸದಸ್ಯರು, ಅವರು ಬೇಡ ಅಂದರೆ ಇನ್ನೊಬ್ಬರನ್ನು ಮಾಡಬೇಕಾಗುತ್ತದೆ. ಅವರಿಗೆ ಅಗೌರವ ತೋರಿಸುವ ಪ್ರಶ್ನೆ ಇಲ್ಲಿ ಇಲ್ಲ.

Sri A.K. Ananthakrishna:- Sir, with all respects to the Honb'e Minister I would say that he is not giving the correct position. I am confining myself only to one point. I am not talking about the merits of the scheme. I said I welcomed it. I only said about one particular incident. I did not question the authority of the Minister to appoint somebody. I did not question the Chief Minister's intentions. There is no need to divert the attention of this House by mis-information or dis-information. All that I said is, I made a very clear statement. I do not want to be there. That is all. I did not say anything further about the success or the failure or needs for housing for the poor people. I did not say anything at all. I never said, I am so indispensable in life or to the organisation or to the Committee. I never said it. I am fully aware of it. No individual is indispensable. But one who exercises the authority in a meeting like this, as the Chairman, has to be restraint. I said everything needs certain amount of restraint. I said it as a matter of any ideological thinking. This may land me into some difficulty at a later stage. So, I do not want to be. That is all I submitted. I did not say one word. The best thing the Minister could have done is, just to accept the fact as it was stated, and take a decision in his chamber or after I left. But in the presence of so many people, the manner in which I was

retarded, that is important. I did not attack the Minister. I did not question the scheme as such. The way he reacted to it, it looked as though I care a damn for you. I will make up my own arrangement. But the point here is, it is not just somebody who just goes round with a begging bowl, seeking for employment or that I am given this appointment by the grace of somebody. Certainly I would not accept any grace from anybody. I have not sought it even from the highest of the highest. That is not the point. The point here is that, in a given situation, was that proper on the part of the Minister to react on a Member who makes an honest submission. I know he has a power and the Cabinet has given him power. What does the word "appointment" say. What does the appointment means? Anybody can go through it. (The Hon'ble Member showed a book)

Mr. Chairman:- You have made your point very clear. Please conclude.

Sri. A.K. Ananthakrishna:- I have not made it clear. The Minister has tried to misinform this house.

Sri K.J. George:- I am sorry. What he has told only I have informed the House.

(Interruptions)

Mr. Chairman:- He has not misinformed. He has simply cleared the facts.

Sri A.K. Ananthakrishna:- Diverting the attention of the poor people and all that I have not said. I did not say one word about it.

Sri K.J. George:- The person does not want to continue as a Chairman and he does not want to help his own constituency people.

(Interruptions)

Sri A.K. Ananthakrishna:- I did not say one word about it. There is no need to refer to that. As much as the expression as a retort against me was irrelevant at that time. Even this explanation is irrelevant.

Mr. Chairman:- Please conclude.

Sri A.K. Ananthakrishna:- If you want the people to co-operate with you, and if you want the participation of the people, as their representatives, people in the position of responsibility should act with certain restraint. Even as a Member, I will ask you...

Mr. Chairman:- I do not allow any other discussion on these things. Please conclude.

Sri A.K. Ananthakrishna:- It is alright. If the House could take it that I can be offended in that order, I accept the opinion of the Chair and I continue to feel hurt and I am hurt. I will conclude now, with a fervent plea that whatever I have stated, I have said with the best of intentions, as much as with a very trenchant desire that Members of the House as representatives should command some respect and nothing else. It is not that my good friends have said that my using of the word "stupid" now, it has come to light why I used the word stupid and nothing else. I had many things to say and lot of preliminary expressions that I have made have lost faith in wilderness. However, I am sure, my friends would go through that I would only say that the corrupt practices in those Departments is so rampant unless, a political well determines to deal with the situation it is impossible. I would only put one case. The Corporation is already having lot of officers. I have come across one case in the Corporation, wherein there is a demand to add more officers into it, where the existing officers themselves do not have enough work. If you add more officers, you provide more expenditure, adding more rivalry, more competition and more trouble for the people. I

would suggest that a rational approach is made to ensure that the department.

Mr. Chairman:- Please conclude.

Sri A.K. Anantha Krishna:- I conclude. Thank you.

Sri Qamarul Islam (Gulbarga):- Mr. Speaker, there are many Demands before this House and almost all the Demands are very important Demands. I will start my speech on the Demands of the Urban Development Department and Compensation or grants to the Corporations and Municipalities. You are aware that 1/3 of the population comprises of urban population. Corporations, City Municipalities and the Town Municipalities are the agencies which are giving these civic amenities to the people of the urban area. Corporation or the Municipality can give these facilities like the Civic amenities to the people if they are financially sound and if they are well equipped with all the machineries. The people of the Urban areas are facing lot of problems and the Government has taken up so many programmes in different fields. But I feel that from the last ten years, there is no such programme or Master planning to see that the Urban area people are given full-fledged civic amenities. There is no such Master plan. Due to this additional resource mobilisation, about 243 crores have been given to the Government. There are so many popular schemes like "Ashraya" and "Vishwa" and no doubt under those schemes, urban people are there. But so far as civic amenities are concerned, there is no such Master Plan or no such scheme due to which we cannot give facilities to the urban area people of the Corporations and Municipalities. Just to take an example, I take Gulbarga City Corporation. What is the source of income for this Corporation? So, also about the other Corporations. What is the essential expenditure and development expenditure? My idea will be clear if I explain this further. For Gulbarga City Corporation or

for any other Corporation, their income is mainly from Property Tax, Entertainment Tax plus surcharge from the Stamp duty and lastly from the compensation which you are giving to the Municipalities and Corporations after the abolition of the Octroi. Earlier, ten years back, in 1980, there was Octroi which the Corporations and the Municipalities directly used to get from the customers and this has been abolished and the Entry Tax has been introduced and out of that Entry Tax, compensation is given every year to the Corporations and Municipalities for their developmental activities. These are the only four sources of income for the Municipalities and the Corporations. The principle adopted so far as Entertainment Tax plus Surcharge is that it will be given directly to the Corporations and Municipalities by deducting 10% of the collection charges by the Department. The Department will deduct 10% of whatever is collected in the name of Entertainment plus surcharge, and the rest of the amount directly goes to the Corporation. In the same way, the Department is collecting 2% Stamp Duty, and deducting 10% out of that towards the collection charges, the rest of the money is given to the Corporation. And the taxes also it is coming directly to the Corporation. As far as the compensation is concerned, Sir, this compensation which you are giving after the abolition of octroi is not coming directly to the Corporation. For example, we have to get annual compensation. That means, the City Municipal Corporation of Gulbarga has to get 85 lakhs total annual compensation every year. Sir, for example, this year we have received only Rs. 14 lakhs. 45 lakhs has been deducted as water dues or the UGD dues or KUWS dues or KEB dues, some dues which the whole body does not know. The Corporation body does not know what are the dues and how it has been deducted. The Government has power to deduct but it does not mean that body and the representative does not know what is the deduction. They will make their

annual budget and in their annual budget they will have their source of income. This much is tax, this much is entertainment tax, this much is stamp duty and this much is compensation which they are going to get and then they will prepare their budget. Their budget is a small one. It is not a budget of 2100 and odd crores. The whole budget of the Corporation, for example our Gulbarga Corporation is about 2 crores and 75% of that will go to the payment of salaries and only about 25-30 lakhs remain. That means, on the development for giving facilities, civic amenities to the people of urban area, of the city of Gulbarga we have to spend only 25% of the total budget, of the Corporation. Now there will be high expectation, that in every 3-4 months, i.e. quarterly, they get this compensation and out of 85 lakhs anticipated, they will be given 30-40 lakhs but they will not get even that amount. They will only get an order. In that order 30 lakhs is sanctioned and 30 lakhs is deducted. So we are getting a paper. Whenever the Mayor and others will say ask the Commissioner to go and get the money from Bangalore i.e. about Rs. 85 lakhs towards compensation, he will come to Bangalore with high expectations. He will go to the Secretary and he will say, "Sir, you have to pay these dues of water; you have to pay dues of KEB, you have to pay the dues of UGD". Sir, in Gulbarga Corporation there are Boards. Boards are looking after the UGD. UGD Schemes are going on. Water scheme is also going on. But the body should know how much are the dues. For example, Gulbarga, in the earlier days when the Municipality was there, water system was in the Municipality only. Then it was handed over about 10-12 years back to the Karnataka Urban Water Supply Board. This scheme was handed over. The Corporation has handed over all the assets to them - the Bosga tank, the IB, filter bed, the machineries, the five acre land surrounded by the Filter bed, all this land with the distribution system, everything was handed over to them but

still today the Corporation of Gulbarga does not know, how much are the dues they have to pay. They have raised the loan by giving these assets before handing over from the LIC and from Government. I demand that these loans should be paid by the Board only. This loan should not be paid by the Corporation. The loans which have already been raised earlier to the handing over of that water scheme of Bosga to the Karnataka Water Board, Sir. Today the valuable land of 5 acres nearby the old filter-bed, were illegally occupied by the people. Nett on the assets which had been handed over by the Corporation to the KUWSB, people are having huts, the result being that the valuable land is in the illegal occupation and what the Karnataka Water Board is doing? Karnataka Urban Water Supply Board is collecting money. That is all. Whenever they are getting compensation, they will simply take the money and they will not even inform. Here they have mentioned, Sir, in Gulbarga UGD work is going on. About Rs. 23 lakhs is the over-run expenditure on UGD. O.K. If there is over-run expenditure, whether they have taken prior permission? Sir, this much is our budget, we wanted to do it, what are those extension areas? Whether this UGD is very essential? What are the priorities of the Corporation? Let the list be submitted. Under this drainage board, they have taken on their own. They have made over-run expenditure and they themselves are cutting and the Corporation and the elected representatives, they don't know anything what is happening in the KUWB. They are simply deducting this money. They are giving only half money and some times out of 85 lakhs we used to get Rs. 45 lakhs. This time I think the Gulbarga Corporators are lucky. Atleast they got Rs. 40 lakhs. Otherwise in the previous year they did not get even 25 lakhs. So what I wanted Sir, this should be an adhoc-grant. Some master-plan should be there. Gulbarga, Belgaum as well as Mangalore have become Corporations. We are very happy.

We are thankful because certain norms and criteria were fixed. The City municipalities are being converted into Corporations. They have been converted. Is it not a primary duty of the Government that once the City Municipalities which are converted into the Corporations, they would have given some adhoc grant to them so that the people also feel that after conversion of the two municipality into the corporation they are getting certain facilities. Only an order has been issued that these city municipalities were converted into Corporations. For the last ten years, not a single paise was given as additional adhoc grant to them. So what I wanted is for the betterment - you cannot neglect the people of the whole urban area. They are also 1/3rd of the population of the State and there is a commitment in the budget speech that the Government has decided to have overall development but there is no expenditure incurred and there is no master plan. I think certain adhoc amount has been earmarked for the Development. I cannot say that all the municipalities and all the corporations will develop at a time. We can chalk out a master plan by phase-wise. Still 3 years are there for this Government to complete its term. They can chalk out a plan. There are six corporations. There are two corporations Bangalore and Mysore, the old corporations and Dharwad-Hubli and other Corporations Belgaum, Mangalore and Gulbarga. You can take one old corporation and newly formed corporation for overall development. I want that there should be a master plan. In that master plan about Rs. 100 crores be atleast earmarked for this year, Rs. 100 crores for the next year and another Rs. 100 crores for the subsequent year. Out of this Rs. 100 crores you take two corporations this year, 2 Corporations next year and 2 corporations in the coming year along with some municipalities and see that these corporations should be given such ad-hoc amount or grant. With that grant the people will also feel that they are really getting some

sort of civic amenties. Sir, there are corporations functioning for the last 10 years. I am also an ex-officio Member of the Corporation to the Act. Sir, it is a shame on my part to say that only Rs. 20 lakhs - Rs. 15 lakhs or Rs. 25 lakhs had been spent towards the development of the city every year and the rest of the amount goes towards the salaries. Even our Corporators cannot recommend for the work worth Rs. 10,000 or RS. 5,000/-. We cannot think of roads at all. Fortunately, a High Power Committee was constituted since two years and under Hyderabad-Karantaka Development Board, we have taken up some major works and priority was given to roads and some ring road is coming up now. That is why people are expecting something. This Hyderabad-Karnataka Development Board has come as a blessing in disguise to the Gulbarga City Corporation, because it has provided some works to the Gulbarga Corporation. But as far as the budget is concerned, with that budget, they cannot develop anything. Now, the Entry Tax is collected by the Government. Earlier there was a statement from the Hon. Minister saying that the Government is going to re-introduce octroi and see that civic bodies should become self-sufficient. Afterwards, there is rethinking and it has been declared that there will not be any reintroduction of octroi. Now you are getting more revenue from the Entry Tax. We were expecting some amount out of that but it has not come to the Corporation. We demand that some more amount should be given to the Corporation.

ಛೇರ್ಮನ್:- ಇವತ್ತು ಸಾಯಂಕಾಲದೊಳಗೆ ಈ ಡಿಮ್ಯಾಂಡ್ ಮುಗಿಯಬೇಕು.

Sri Qamarul Islam:- We should not be in hurry. Otherwise, you can put it for guillotine. I have no objection. Don't think that the Opposition is outside. Here is the Opposition, Quamarul Islam.

Mr. Chairman:- You are not initiating.

Sri Qamarul Islam:- I am initiating on behalf of the

Opposition. Atleast I must do justice. This is very important debate. I want to bring some very important points to the notice of this House so that the Hon. Minister is able to think on those lines. I have stated that you are giving money directly to the Corporation, after deducting 10% from whatever entertainment tax you are collecting. You are not giving money directly to the Corporation out of Stamp Duty collections, after deducting 10% collection charges. When that is the case, I don't know the reasons for not giving collections directly to the corporation after deducting 10% towards collection charges. O.K., we will not vote for the re-introduction of the octroi. We do not want it if it is the policy of the Government and if there is a pressure from the business community. But at the same time, why there should be a discrimination in the principles of not giving Entry Tax amount directly to the corporation by deducting the collection charges of 10%? This is a very vital point. The Government has got powers to cut our compensation amount, as I have mentioned earlier, out of Rs. 85 lakhs and Rs. 45 lakhs i.e. more than half, has been cut, if it goes directly they will get the full amount without any cut.

ಶ್ರೀ ಕೆ ಜೆ ಜಾರ್ಜ್:- ನಾವು ಯಾವುದನ್ನು ಕಟ್ ಮಾಡುತ್ತೇವೆ ಹೇಳಿ? ಕಾರ್ಪೋರೇಷನ್ ಎಲೆಕ್ಟ್ರಿಸಿಟಿ ಡ್ಯೂಸ್ ಮತ್ತು ವಾಟರ್ ಸಪ್ಲೈ ಡ್ಯೂಸ್ ಕೊಟ್ಟರೆ ಕಟ್ ಮಾಡುವ ಪ್ರಶ್ನೆ ಬರುವುದಿಲ್ಲ ಅವರು ಯಾವಾಗ ಕೊಡುವುದಿಲ್ಲ ಆಗ ಕಟ್ ಮಾಡತಕ್ಕ ಪ್ರಸಂಗ ಬರುತ್ತದೆ. ಎಂಟ್ರಿ ಟ್ಯಾಕ್ಸ್ ಎಷ್ಟು ಬರುತ್ತದೆ ಎಂಬುದನ್ನು ನೋಡಿಕೊಂಡು ಆಕ್ಟ್ರಾಯ್ ಕಾಂಪನ್‌ಸೇಷನ್‌ನನ್ನು ಸಂಪೂರ್ಣವಾಗಿ ಕೊಡುತ್ತಿದ್ದೇವೆ.

Sri Qamarul Islam:- I am not against cutting of the amount. We fully agreed when the scheme was going on. The most unfortunate thing is that the body does not know how much is the dues. You can enquire from your officers or from our officers, or write a letter or make a trunk call, if he says that this much is due, it is OK. But they have not been told about the dues. They have not given any statement about the amount due to the Government. If it is given, we will make your own programme. If we have 5 acres of surplus land we

can as well dispose off and clear all the dues.

Sri K. J. George:- Gulbarga Corporation must know what is their due to the KEB or to the Water Supply Board. When the KEB says so much is the due and if there is any dispute, your commissioner has to come and sit with the department and sort it out.

Sri Qamarul Islam:- I will give one more example. We are collecting water tax of Rs. 17 lakhs. But we are paying Rs. 45 lakhs to the Karnataka Water Supply Board from our grant. This is the figure which I am having. Why should we pay more than that? We are paying more than that. We are collecting Rs. 17 lakhs. If you take that Rs. 17 lakhs we are happy to give the total water tax. But if this money goes, what our interest is there. Our interest is only for the standpoint, for the public post. We want to pay that amount or whatever amount we are collecting in the name of water tax. Suppose we collect Rs. 17 lakhs and pay Rs. 15 lakhs, then you can blame the Corporation that they are keeping Rs. 2 lakhs of water tax amount. These are the things which require certain modification and certain streamlining has to be done in the larger interests of the Urban people.

Now I come to the subject of decentralisation of financial powers. In the year 1976, the body of the Corporation was given the financial power. Rs. 8 lakh worth of work they can take up and Rs. 10,000 for the purchase of machinery. It was done in the year 1976 and you know the value of money now, the inflation and the devaluation of rupee and all these things. Now we cannot even purchase a xerox machine, a computer because they are all more than Rs. 1.5 lakhs or 1.7 lakhs. Electronic machines cannot be purchased now. Then, the Government has felt the decentralisation of powers. With that intention the financial powers given in 1976. I demand in this house that atleast this should be raised to Rs. 20 lakhs. The

body should be given financial powers upto Rs. 20 lakhs for the purchase of machines worth Rs. 2 lakhs, so that the body can purchase any machinery. For the purchase of vehicles and all, they have to take permission. But as far as machinery is concerned, as far as the other items are concerned, I pleased that financial power should be raised to Rs. 20 lakhs and Rs. 2 lakhs for machinery purchases.

I will come to the delimitation.

You know that all the Wards of the Corporation and Municipalities were formed taking into consideration the census of 1971 and now we are in 1992. The latest census figures have come and the report may come within a year or six months. I demand that there should be delimitation of almost all the Corporation and Municipalities, i.e., wards and divisions. At present in one division, there are 1,000 voters and in another division, there may be 10,000 voters. The reason is that almost all the divisions are not existing in the heart of the city. The city cannot develop all of a sudden and only there will be some population increase of 5 to 10%. Sir, the areas surrounding the city have got ample development scope because number of houses are coming up and you know lot of people from the rural areas are concentrating in these areas. Whenever there will be scarcity, the people would come from the rural areas. They have concentrated in Gulbarga. What problem the Bangalore city is facing, the same problem the Gulbarga city is also facing. There are number of unauthorisedly constructed houses in Gulbarga City and now they are demanding for regularisation. Naturally the population of the division is increasing and there is no stability in the division. Therefore, there should be delimitation on the basis of census figures of 1990-91. If there is any difficulty and if you want to do it on the basis of 1981 census , you can do it. Even we are prepared to wait for next year, if you agree to do it on the basis of 1991 census figures. I

therefore demand in this House that the delimitation has to be done in almost all the Corporation and the Municipalities. Then sir, in Bangalore and Mysore City Corporation, they are having the single window system. Why not the same system be introduced in the other Corporations? If anybody wants to apply for sanction of house Plan, first he has to go to the GDA and apply for CC. He has to wait for CC and after 15 days or one month or three months, after a lot of struggle, he gets the CC and then he has to apply to the Corporation, but this system is not there in Bangalore and Mysore City Corporations. But this system is prevailing in Gulbarga, Mangalore, Belgaum and Hubli Dharwar Corporations. There is also the town planning member in the Hubli Dharwar Corporation. If you appoint Town Planning Members in the Corporations and introduce the single window system in the larger interests of the people to get their houses construction plan sanctioned as early as possible in one office, it would be better I demand that this Single Window system be adopted in the other Corporations also. The Gulbarga Corporation is not having an Executive Engineer. The file has gone and it has been rejected. Again it has gone when the Hon. Narasimha Murthyji was the Urban Development Minister and he announced in the Press Conference that the file had been moved. But it has again been rejected in the Finance Department saying there is no finance for the Executive Engineer Post. We were having our own Executive Engineer. Unfortunately, when this body was under the control of the Administrator, to save some expenditure he has surrendered one post of Executive Engineer though there was a necessity and required work load. Now the Corporation is finding it difficult to take up new works and to complete the on going work for want of proper supervision by the Executive Engineer. For the last two years the whole body is trying and the Mayor has also made two or three trips to Bangalore to get back the post. I have also

written a letter to the Hon. Minister and also the district Minister who assured me but still it has not restored. I want to mention in this house so that the Hon. Minister for Urban Development could act in this regard.

ಛೇರ್ಮನ್:- ತಾವು ಬೇಗ ಮುಗಿಸಿ.

Sri Qamarul Islam:- I will not take much time. That Executive Engineer's post has to be immediately restored for the Corporation of Gulbarga and also the Single Window system should be introduced. One more point is the resources. GDA is collecting some fine; they are collecting fees on division of plots and also betterment fees. But they are not spending that money in the division in the City. For example, GDA is comprising of a portion of area, which is having the total Corporation area and some other area. The amount collected in the form of betterment fees, in the form of division of plots, is already accumulating in the GDA. What we wanted is, atleast 50% of the collection should go to the concerned division of the plots, concerned land where they have collected betterment fees etc., so that the Corporation will be benefited and that area will be benefited. That suggestion also I wanted to give it to you.

I have mentioned this last time also and I want to mention it now. i.e. regarding the term of the office of the Mayor. At present the term of the Office of Mayor and for the Deputy Mayor is only one year. It is so short a term and there is a consensus throughout India to increase their term of office to two years and I think in the Mayor's Conference held in Bangalore recently the consensus was for two year term. I request the Government to implement the unanimous demand of the Mayor's Conference to increase the term of office of the Mayor and Deputy Mayor to two years and also for the Chairmen of other bodies. When it is two year's term, the total term of members should be extended to six year's or it has to be four year's.

Sri T. N. Narasimha Murthy:- What about other States?

Sri Qamarul Islam:- Some States are having 5 years term. In Tamilnadu and West Bengal, different terms are there but the consensus of Mayors' Conference is for a two years term, because different Governments are there in different States and it is left to them. Why not our Government take the initiative and give some weightage to the unanimous resolution of the Mayors' Conference which was held in Bangalore. Then Sir, there is no unanimity of taxes. For determining the ratable value, there are no rules, guidelines and this Act needs amendment. There should be specific rules and guidelines in the Act for determining ratable value. In Sadashivnagar area in Bangalore, some building owners are paying only Rs. 1,000/- as property tax for their building but for a house in Bagalur Layout, the amount levied is Rs. 1,500. This is because there is no specific guidelines for assessment. That requires a lot of exercise. The Act has to be amended and the rules and guidelines should be framed to see that there should be unanimity in the levy of taxes, in almost all the Corporations. Otherwise, there will be agitations and the people will have to face difficulties. I am sure the Government should definitely consider my demand.

Mr. Chairman:- Please conclude.

Sri Qamarul Islam:- You have to determine some scientific method in this regard.

Sri K.J. George:- Are you happy with the present system in Gulbarga Corporation collecting taxes, because they have done some re-gradation.

Sri Qamarul Islam:- There is some development in Gulbarga. Some people were not happy - in Super Market area. As far as residential area is concerned, the new formula has come and one third of 19,000, that is 6,000 houses, whatever existing taxes are there, that has been reduced due to the

new formula. But in some areas, the tax increase is upto 400 percent, in the commercial areas there is no scientific formula. It all depends on some of the officers. Earlier those who approach the officers were getting some benefit and those who have not approached had to pay more taxes. Now this formula has helped them to a greater extent. Whether you approach or not, there is the formula. Some sort of exercise for the whole of the State has to be done. It should be on scientific grounds and there should be a perfect determination. Even if some rules were to amend, Government should come forward to amend the rules. Our Hon. Minister for Food and Civil Supplies is there. You are still discriminating between the Urban Poor and Rural Poor. Poor is poor, whether he is in the urban area or the rural area. Green Cards are not there for the poor people living in the Urban areas. This is injustice. The Hon. Minister has already assured that the poor people living in the urban areas will also get green cards. I demand that this injustice should also go and the poor people of the urban areas should also get the green cards.

Sir, now, Ugadi and Ramzan festivals are going to be celebrated on 4th and 5th April. These are two big festivals for the people of Karnataka. I want the Hon'ble Minister for Food and Civil Supplies should make a mention in this House that there will be a special quota of sugar for these two festivals, i.e., Ugadi and Ramzan because the House in Session and this Id festivals is famous for Kheer Kurma which we wanted to share with our Hindu brothers and we will get laddus from our Hindu brothers. Therefore we want special quota of sugar be released for these two festivals.

Then Sir, our Hon'ble Minister for Kannada and Culture is here. Sir, the academies are still not reconstituted. We don't have Chairman for so many Academies. Only three months back, the Chairman of the Urdu Academy was announced. The budget is already there. We could not spend the budget

because of the non-constitution of the body. If the budget is not spent or utilised for the development of Kannada and Urdu, how could these languages could improve, what development can be made in that? Even the Press Academy has not been reconstituted. I think somebody should be nominated. I don't know the reasons for the delay. It is not a big issue for the cabinet or the Government. The Government is too fast - that is what they are saying but why there is delay? This is not a big issue. I request the Government through this House that all these bodies should be reconstituted before the end of the financial year. I have mentioned about reconstitution of Academies. The Hon'ble Chief Minister in his press conference at Delhi said that it will be done within two months. I hope the Government will announce the reconstitution of these bodies before the end of this session.

As far as Housing is concerned - I don't want to go into the details. Number of Housing schemes are there. Houses are being allotted only for SC/ST's and there is a quota in the allotment. Similarly, in the allotment of Houses in various Housing Schemes, there is no quota for the backward communities. As far as minorities are concerned, we are committed for it. It is the duty of the Government to protect the interests of the minorities as enshrined in the Constitution. Now, other than Ashraya Scheme, the Housing Board is having number of schemes. A certain percentage is fixed for SC/ST's. Likewise, I demand that there should be some quota fixed for the backward communities as well as minorities in the allotment of houses.

ಎಸ್. ರಮೇಶ್:- ನಮ್ಮ ಕಡೆಯಿಂದ ಯಾವುದೇ ತಡೆಯು ಆಗಿಲ್ಲ. ಉರ್ದು ಅಕಾಡೆಮಿಯವರಿಗೆ ನೀವೇ ತೀರ್ಮಾನಕ್ಕೆ ಬನ್ನಿ ಎಂದು ಬಿಟ್ಟಿದ್ದೇವೆ. ಬಹುಶಃ ನನ್ನ ಅಭಿಪ್ರಾಯದಲ್ಲಿ ಇವತ್ತು ಅದು ಆಗಿರಬೇಕು. ನನ್ನ ಕಡೆಯಿಂದ ವಿಳಂಬವಾಗಿದೆ ಎಂಬ ತಪ್ಪು ತಿಳಿವಳಿಕೆ ತಮಗೆ ಆಗಬಾರದು ಎಂಬ ಅಭಿಪ್ರಾಯದಿಂದ ಈ ಮಾತನ್ನು ಹೇಳುತ್ತಿದ್ದೇನೆ.

Sri Qmarul Islam:- I am very happy that our Hon'ble

Minister is saying that all the lists have been given to the Chief Minister. So, Sir, it is for the Chief Minister now to clear. I therefor request the Hon'ble Chief Minister and the concerned Minister to see that the various academies are reconstituted before the end of this session. Also I request that the housing quota should be fixed for the minorities and backward class communities. You have to adopt whatever method necessary to provide houses to the minorities and backward class communities under various schemes and see that justice is done. Sir, I am very happy that the chair is very generous and kind for the lone Opposition Member who is attending the session by giving sufficient time. I have mentioned about lot of things also and I have done justice. With these words I conclude and thank the Chair once again for giving me an opportunity to speak.

ಶ್ರೀ ಎಸ್. ಎಂ. ಯಾಹ್ಯಾ (ಜಯಮಹಲ್):- ಸಭಾಧ್ಯಕ್ಷರೇ, ಮಾನ್ಯ ಸಚಿವರು ಮಂಡಿಸಿದ ಬೇಡಿಕೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ನಾನು ಎಲ್ಲಾ ಬೇಡಿಕೆಗಳ ಮೇಲೆ ಮಾತನಾಡಲು ಆಗುವುದಿಲ್ಲ. ಆದರೂ ಹೊಸದಾಗಿ ನಾನು ರೂರಲ್ ಏರಿಯಾದಿಂದ ಅರ್ಬನ್ ಏರಿಯಾಕ್ಕೆ ಪ್ರತಿನಿಧಿಯಾಗಿ ಆರಿಸಿ ಬಂದಿದ್ದೇನೆ. ಆದ್ದರಿಂದ ಬೆಂಗಳೂರಿನ ವಿಚಾರ ಮಾತ್ರ ಮಾತನಾಡಲಿಕ್ಕೆ ಬಯಸುತ್ತಿದ್ದೇನೆ. ನಾನು ಗ್ರಾಮಾಂತರ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ಬಡತನ ನೋಡಿಕೊಂಡು ಆ ಗ್ರಾಮದಲ್ಲಿ ಕೆಲವಾರು ಅಭಿವೃದ್ಧಿ ಕೆಲಸ ಮಾಡತಕ್ಕಂಥ ಒಳ್ಳೆಯ ಅವಕಾಶ ೧೯೭೨ರಿಂದ ನನಗೆ ದೊರಕಿತ್ತು. ಮೊದಲನೆಯದಾಗಿ ನಾನು ಆಗ ಅಸೆಂಬ್ಲಿಗೆ ಬಂದೆ. ಆಗ ನಾನು ಯೋಚನೆ ಮಾಡುತ್ತಿದ್ದೆ. ಗ್ರಾಮಾಂತರ ಪ್ರದೇಶದಲ್ಲೇ ಹೆಚ್ಚು ಬಡತನ ಇದೆ ಅವರ ಪರಿಸ್ಥಿತಿ ಆರ್ಥಿಕ ಸಾಮಾಜಿಕ ಪರಿಸ್ಥಿತಿ ಬಹಳ ಗಂಡಾಂತರವಾದ ಪರಿಸ್ಥಿತಿ. ಬಹಳ ತೊಂದರೆಯಲ್ಲಿರುವಂತಹವರು ಅನುಕೂಲತೆಗಳು ಏನೂ ಇಲ್ಲ ಅಂತ. ಆದರೆ ಈ ಎರಡೂವರೆ ವರ್ಷದಲ್ಲಿ ಬೆಂಗಳೂರಿನ ಜಯಮಹಲ್ ಕ್ಷೇತ್ರದಿಂದ ಆರಿಸಿಬಂದನಂತರ ಈಗೇನು ನನಗೆ ತೋರುತ್ತಿದೆ ಎಂದರೆ ಬೆಂಗಳೂರಿನಂತಹ ಮಹಾನಗರದಲ್ಲಿ ಯಾವ ರೀತಿ ಬಡತನ ಇದೆ ಅಂತಹ ಬಡತನ, ಅನಾನುಕೂಲತೆಗಳು ಗ್ರಾಮಾಂತರ ಪ್ರದೇಶದಲ್ಲೂ ಇಲ್ಲ ಎಂದು ತೋರುತ್ತದೆ. ಗ್ರಾಮಾಂತರದಲ್ಲಿ ಒಳ್ಳೆಯ ಗಾಳಿಯಾದರೂ ಸಿಗುತ್ತದೆ, ನೀರು ಸಿಗುತ್ತದೆ ಏನಿಲ್ಲದೇ ಹೋದರೂ ಮನಸ್ಸು ಬೇಸರವಾದರೆ ನಡೆಯಿಲಿಕ್ಕೆ ಜಾಗ ಆದರೂ ಸಿಗುತ್ತದೆ. ಇಲ್ಲಿ ಜಾಗ ಕೂಡ ಇಲ್ಲ, ಗಾಳಿ ಇಲ್ಲ ಆ ಗಾಳಿ ನಿಮಗೆ ಬೇಕಾದರೆ ಬಾಗಲೂರು ಬಡಾವಣೆ ಗಾಳಿ ಯಾವ ಗಾಳಿ ಅಂತ ನಮಗೆ ನಿಮಗೆ ಅದೂ ಸಹ ನನ್ನ ಕ್ಷೇತ್ರದ ಒಂದು ಭಾಗ ನ್ಯೂ ಬಾಗಲೂರು ಬಡಾವಣೆ ಓಲ್ಡ್ ಬಾಗಲೂರು ಬಡಾವಣೆ ಮತ್ತು ಇತರ ಸ್ಲಮ್ಸ್‌ಗಳು ಅಲ್ಲಿ ಗಾಳಿ ಇಲ್ಲ ನೀರಂತೂ ದೊರಕುವುದಿಲ್ಲ. ಎಲ್ಲಾದರೂ ಸಿಕ್ಕಿದರೆ ಇಲ್ಲಿಸಿಟ್ ಲಿಕ್ಕರ್ ಸಿಗುತ್ತದೆ. ಅದೇ ನನ್ನ ಕ್ಷೇತ್ರದಲ್ಲಿ ಮೊನ್ನೆ ೨೦ ಜನ ಸತ್ತು ಹೋಗಿದ್ದಾರೆ.

ಆಮೇಲೆ ಓಡಾಡಲಿಕ್ಕೆ ಜಾಗವಿಲ್ಲ. ಟ್ರಾಫಿಕ್ ಎಷ್ಟಾಗಿದೆ ಎಂದರೆ ಓಡಾಡಿಬಿಟ್ಟರೇ ಸಾವೇ ಸೇಫಿರುವುದಿಲ್ಲ. ಆದ್ದರಿಂದ ಗ್ರಾಮಾಂತರ ಬಡತನಕ್ಕಿಂತಲೂ ಅರ್ಬನ್ ಏರಿಯಾಗಳ ಆಧರಲ್ಲೂ ಬೆಂಗಳೂರಿನಲ್ಲಿ ನಾನು ಹೆಚ್ಚು ಬಡತನ ನೋಡ್ತಾ ಇದ್ದೇನೆ. ಏಕೆಂದರೆ ಬಹಳ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಬಡವರ ಉದ್ಧಾರ ಆಗಬೇಕೆಂದು ನಾನು ಬಯಸುವವನು. ಅದಕ್ಕಾಗಿಯೇ ನಾನು ರಾಜಕೀಯದಲ್ಲೂ ಇರುವುದು. ಬಡವರಿಗೆ ಯಾರಿಗೆ ಅನುಕೂಲತೆ ಇಲ್ಲ ಅವರಿಗೆ ಸಹಾಯ ಮಾಡಬೇಕೆಂದು ದಕ್ಷತೆಯಿಂದ ಕೆಲಸ ಮಾಡುತ್ತಿದ್ದೇನೆ. ಈ ಪ್ರದೇಶಗಳಿಗೆ ಪ್ರತಿಯೊಂದು ತಿಂಗಳು ಹೋಗುತ್ತಿದ್ದೇನೆ. ಈ ಸ್ಲಮ್ ಏರಿಯಾಗಳಿಗೆ ಮತ್ತು ಬಡವರು ಇರುವ ಜಾಗಗಳಿಗೆ ನಾನು ಹೆಚ್ಚಾಗಿ ಹೋಗುತ್ತಿದ್ದೇನೆ. ನನಗೆ ಏನು ತೋರುತ್ತಿದೆ ಎಂದರೆ ಇಲ್ಲಿಯ ಬಡತನವನ್ನು ಯಾವ ರೀತಿಯಲ್ಲಿ ನಾವು ನಿವಾರಣೆ ಮಾಡುವುದು? They are poorer than the poorest. This is another term I am using because there are so much so many poor people. They are absolutely in sub-human condition. That is the condition prevailing in other parts of Bangalore also, and I know in my constituency there are all VVIP's. All my voters are in one side and all ex-chief ministers Mr. Veerendra Patil is there; Mr. Hegde and Mr. Bommai are there and Mr. Gundu Rao is also constructing a house. I have got all the scientists I have got all the film stars, Dr. Raj Kumar is there. Then I have also a vast middle class, the tremendously vast; vociferous middleclass people are there in R. T. Nagar, Ganga Nagar and all those areas. But I have about 17 slums also and in Baglur Layout alone, about 80,000 people live in a small one mile area. Absolutely there is nothing. So, the poverty in urban area is also comparatively much higher than in rural area. ಇಂಥ ಒಂದು ಕಾಲದಲ್ಲಿ ನಾವು ಇದ್ದೇವೆ. ಹಾಗಿರುವಾಗ ನಾವು ಯಾವ ರೀತಿಯಲ್ಲಿ ಈ ಬಡ ಜನರಿಗೆ ಅನುಕೂಲ ಮಾಡುವುದಕ್ಕೆ ಸಾಧ್ಯವಿದೆ? ಈ ದೊಡ್ಡ ಪಟ್ಟಣದಲ್ಲಿ ಅನಾನುಕೂಲತೆಯ ಕಾರಣಗಳಿಂದ ಅತೃಪ್ತಿಗಳು ಹೆಚ್ಚಾಗುತ್ತಿದೆ. ಒಂದು ಕಡೆ ಹೋದರೆ ನೀರಿನ ಸಮಸ್ಯೆ, ಎಲ್ಲಿದ್ದರೂ ನೀರಿಲ್ಲಾ ಎಂದು ಹೇಳುವುದು. ಇನ್ನೊಂದು ಕಡೆ ಸಿವರೇಜ್ ಬಹಳಷ್ಟು ತೊಂದರೆ, ಕೆಲವೊಮ್ಮೆ ನೀರು ಮೇಲೆ ಬಂದು ಬಿಡುತ್ತದೆ. ಆ ರೀತಿಯ ಪರಿಸ್ಥಿತಿ ಅದೊಂದು ಸಮಸ್ಯೆ. ಇನ್ನೊಂದು ಕಡೆ ಈ ರೋಡುಗಳು ಚೆನ್ನಾಗಿಲ್ಲ ಎಂದು ಹೇಳಿ. ಆದರಿಂದ ಟ್ರಾಫಿಕ್ ಹೆಚ್ಚಾಗಿ ಆಕ್ಸಿಡೆಂಟ್‌ಗಳು ಆಗುವುದು. ಇನ್ನೊಂದು ಕಡೆ ಮಕ್ಕಳಿಗೆ ಪ್ರೈಮರಿ ಮತ್ತು ನರ್ಸರಿಗಳಿಗೆ ಸ್ಕೂಲುಗಳಿಗೆ ಅನಾನುಕೂಲ. ಪರಿಸ್ಥಿತಿ ಹೀಗೆ ಬಿಟ್ಟರೆ ನಮ್ಮ ಅಚೀವ್‌ಮೆಂಟ್ಸ್ ಏನು? ನಾವು ನಿಜವಾಗಿಯೂ ಬೆಂಗಳೂರು ನಾಗರೀಕರ ಜೀವನವನ್ನು ಚೆನ್ನಾಗಿ ಮಾಡಿದ್ದೇವೋ? ಬೆಂಗಳೂರು ನಾಗರೀಕರ ಜೀವನವನ್ನು ನಾವು ಏನಾದರೂ ಉತ್ತಮಗೊಳಿಸಿದ್ದೇವೆಯೋ ವರ್ಷೇ ವರ್ಷೇ ಇದು ಬೆಳೆಯುತ್ತಾ ಹೋಗುತ್ತಿದೆ. ನಾನು ಈಗಿನ ಮಾತನ್ನು ಹೇಳುತ್ತಿಲ್ಲ. ಹತ್ತಾರು ವರ್ಷಗಳಿಂದ ಇದು

ಪ್ರತಿ ವರ್ಷವ್ಯೂ ಹೆಚ್ಚು ಹೆಚ್ಚು ಆಗುತ್ತಾ ಸಮಸ್ಯೆಗ್ಗಳು ಹೆಚ್ಚಾಗುತ್ತಾ ಹೋಗುತ್ತಿದೆ. ಹೆಚ್ಚು ಹೆಚ್ಚು ಅವರಿಗೆ ಅನಾನುಕೂಲತೆಗಳಾಗುತ್ತಿವೆ. ಒಂದು ಕಾಲದಲ್ಲಿ ಬೆಂಗಳೂರನ್ನು ಗಾರ್ಡನ್ ಸಿಟಿ ಎಂದು ಹೇಳುವಂಥ ಕಾಲ ಇತ್ತು. ಆದರೆ ಈಗ ಜನರಿಗೆ ನೀರು ಸಿಕ್ಕುವುದಿಲ್ಲ, ಗಾರ್ಡನ್ ಮಾಡುವುದು ಬಿಡಿ. ಕುಡಿಯುವದಕ್ಕೆ ನೀರು ಸಿಗದೆ ಇರತಕ್ಕಂಥ ಕಾಲದಲ್ಲಿ ನಾವು ಬೆಂಗಳೂರಿನಲ್ಲಿದ್ದೇವೆ. ಬೆಂಗಳೂರಿನ ಸಮಸ್ಯೆ ಒಂದು ದಿನದ್ದು ಅಲ್ಲ. ಅಷ್ಟು ಸಮಸ್ಯೆಗಳು ಇವೆ. ಅದಕ್ಕಾಗಿ ಈ ಸಮಸ್ಯೆಗಳನ್ನು ಹೋಗಲಾಡಿಸಬೇಕಾದರೆ ಬೆಂಗಳೂರು ಹತ್ತು ಲಕ್ಷವೋ, ಐದು ಲಕ್ಷವೋ, ಹದಿನೈದು ಲಕ್ಷವೋ ಪಾಪುಲೇಶನ್ ಇದ್ದಿದ್ದರೆ ಸರಿ ಮಾಢಬಹುದಾಗಿತ್ತು. ಆದರೆ ಈಗ ಅದು ನಲವತ್ತಾಗಿದೆ. ಬೇಕಾದಷ್ಟು ಫ್ಲೋಟಿಂಗ್ ಪಾಪ್ಯುಲೇಷನ್ ಇದೆ. ಸರ್ಕಾರದವರು ಬೆಂಗಳೂರಿನ ಈ ಪಾಪ್ಯುಲೇಷನ್‌ನ್ನು ಕಂಟೈನ್ ಮಾಡುವುದಕ್ಕೆ ಏನಾದರೂ ಯೋಜನೆಯನ್ನು ಮಾಡಿದ್ದಾರೆಯೇ? A serious thinking is necessary. Unless we curtail the population or atleast we stabilise the population, the misery of Bangaloreans will increase day by day. So, whether there is any thinking in the Government? If there is any thinking, new ideas will emerge. If there are new ideas, new formulations of policies and schemes. Whether there is any thinking at all? Therefore, what I would say is first of all, we must start thinking in this direction, it is already late. ನಾವು ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಅನ್ನು ಕಟ್ಟುವುದಕ್ಕೆ ಪರ್ಮಿಶನ್ ಅನ್ನು ಕೊಡುತ್ತಿದ್ದೇವೆ. ಆದರಿಂದ ಬಹಳ ತೊಂದರೆಗಳಾಗುತ್ತಿದೆ. ಈ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಕೆಳಗಡೆ ದೊಡ್ಡದೊಡ್ಡ ಕ್ವಾರ್ಟ್ರಸ್ ಆಗಿವೆ. ಆದರ ಅಕ್ಕ ಪಕ್ಕ ನೀರು ಎಲ್ಲಾ ಕಡೆ ಅಲ್ಲೇ ಹೋಗಿಬಿಡುತ್ತದೆ. ಆದಕ್ಕಾಗಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ ಬರುತ್ತಿರುವುದರಿಂದ ಕರ್ನಾಟಕದಲ್ಲಿ, ಕನ್ನಡಿಗರಿಗೆ ಲೋಕಲ್ ಜನರಿಗೆ ಯಾವುದೇ ಮನೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಬೆಲೆಯೂ ಕೂಡ ಅಷ್ಟೆ ಹೆಚ್ಚಾಗಿದೆ. The prices have gone up. So, seriously the Government should ban multi-storied buildings in Bangalore and it is possible because it has no financial implications and those Builders are very very rich people. They are from Bombay and Delhi, and big places and they have tons of money. They can build up after the green belt of Bangalore any colonies but not inside Bangalore. Let us ban the Multistoried buildings. If there is a political will and if there is a commitment to improve the lot of the poor people of Bangalore, we must take very stringent step regarding multistoried construction, i.e., ground floor plus two floors - not more than anything else. If that is done, the population increase will stop on one side and the local people will atleast

get some opportunity to buy small lands, small houses. This is very much essential and that is how it should work. I don't know the Government is thinking on this point. It requires to be very seriously thought about. Thereafter I would like to say about Green Belt. We must not go on changing to suit the needs of some people. The vested interest is strong. They can change the green belt to red belt ultimately to be all red. One will be against another; the people with poverty start eating each other. We don't want that situation to arise. We have number of Corporations, number of institutions to look after. The Bangalore City Corporation is a very old representative body. It has the backing of the people. It is a democratically elected body and the spirit of people, spirit of democracy is there; the urge to develop. The finest part of democracy is that there is urge. That should be development, that there should be more and more facilities to be provided to the Bangaloreans and the people and if the democractic spirit is there, Bangalore City Corporation luckily we have a good Commissioner in Bangalore City Corporation and also his team. I am told he has even financially also put the Corporation in a proper form. On one side elected body is there and on another side if there is efficient bureaucractic administration, the administration will be smooth but what is happening in Bangalore? There are so many authorities and we must remember late Sri D. Devaraj Urs. In his time, of course, before him this was established in 1964 and during his time I think in 1974, the BWSSB was established by late Devaraj Urs. This was established with the main purpose of providing atleast the basic needs to the people of Bangalore city, with a view to see that atleast they get good water. That is how Cauvery, I, IInd and now the IIIrd stage is also coming to an end and the III and IVth stage we have to start so, with this. Sri Devaraj Urs, late Chief Minister of Karnataka, he thought of providing more and more amenities and he created some

of the institutions and gave a legal frame to it. ಕಾನೂನಿನ ಆಧಾರದ ಮೇಲೆ ೧೯೭೪ರಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ಮತ್ತು ಕರ್ನಾಟಕ ಒಳಚರಂಡಿ ಮಂಡಳಿ ಪ್ರಾರಂಭವಾಯಿತು. ಇವು ಶ್ರೀಮಾನ್ ದೇವರಾಜ ಅರಸುರವರ ಕಾಲದಲ್ಲಿ ಪ್ರಾರಂಭವಾಯಿತು. ಏತಕ್ಕೆ ಇವೆಲ್ಲಾ ಮಾಡಿದರು? ಜನರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಮಾಡಿದರು. ಈ ಇನ್‌ಸ್ಟಿಟ್ಯೂಶನ್‌ಗಳೆಲ್ಲಾ ಕಳೆದ ೧೦-೧೫ ವರ್ಷಗಳಿಂದ ಕೆಲಸ ಮಾಡುತ್ತಿವೆ. ಕೆಲಸ ಮಾಡಿ ಈಗ ಒಂದು ಅನುಭವದ ಆಧಾರದ ಮೇಲೆ ಇದರಲ್ಲಿ ಪರಿವರ್ತನೆ ಮಾಡಬೇಕು. Completely structural and organisational changes, ಮಾಡಬೇಕಾಗಿದೆ. ಅನುಭವದ ಆಧಾರದ ಮೇಲೆ ಇದರಲ್ಲಿ ಬೇಕಾದಷ್ಟು ಪರಿವರ್ತನೆ ಮಾಡಬೇಕಾಗಿದೆ. ಏಕೆಂದರೆ, ಪ್ರತಿ ವರ್ಷ ಬೆಂಗಳೂರು ನಗರದ ಜನರ ಯಾವೊಂದು ಲಿವಿಂಗ್ ಕಂಡಿಷನ್ ಇದೆ, ಅದು ಪ್ರತಿ ವರ್ಷ ಕೆಟ್ಟದಾಗುತ್ತಾ ಹೋಗುತ್ತಿದೆ. ನಾವು ಹೇಳಬಹುದು. ಈಗ ಸ್ವಲ್ಪ ಹೆಚ್ಚಿಗೆ ಬಜೆಟ್ ಕೊಟ್ಟಿದ್ದೇವೆ, ಹೆಚ್ಚು ಹಣ ಇಟ್ಟು ಇಷ್ಟೊಂದು ಸ್ಕೀಮ್ಸ್‌ಗಳನ್ನು ಮಾಡಿದ್ದೇವೆಂದು ಹೇಳಬಹುದು. ಅನಂತರ ಫಲಿತಾಂಶ ಏನಾಗುತ್ತದೆ. ಅದು ದೊಡ್ಡ ಸಮಸ್ಯೆಯಾಗಿ ಎಷ್ಟೇ ಹಣ ಹಾಕಿದರೂ ಸಾಲದಾಗುತ್ತದೆ. ಸಮಸ್ಯೆ ಹಾಗೆಯೇ ಉಳಿಯುತ್ತದೆ. ಹೊಸ ಸಮಸ್ಯೆಗಳು ಬೆಳೆಯುವುದಕ್ಕೆ ಕಾರಣವಾಗುತ್ತದೆ. ಈಗ ಕಾರ್ಪೊರೇಷನ್ ಬಿ.ಡಬ್ಲ್ಯೂ.ಎಸ್.ಎಸ್.ಬಿ, VS. ಬಿ.ಡಬ್ಲ್ಯೂ.ಎಸ್.ಎಸ್.ಸ್.ಬಿ VS. ಕೆ.ಇ.ಬಿ. ಈ ಎಲ್ಲಾ other organisations. There is no co-ordination here. A strong political leadership is necessary to see that there is proper co-ordination among all these bodies. ಈ ಕಾರ್ಪೊರೇಷನ್‌ನವರು ೨೫೦೦೦ ನೀರಿಗೆ ಫ್ರೀ ಅಲೋಯೆನ್ಸ್ ಇದೆಯೆಂದು ಹೇಳುತ್ತಿದ್ದರು, ಅನಂತರ ಅದನ್ನು ೧೬೦೦೦ ಗ್ಯಾಲನ್ ನೀರಿಗೆ ಫ್ರೀ ಅಲೋಯೆನ್ಸ್ ಎಂದು ಮಾಡಿದರು, ಆ ನಂತರ ೬ ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡುತ್ತಿಲ್ಲವೆಂದು ಹೇಳಿದರು. ಇವೆಲ್ಲಾ ಏನು? ಇದು ಜನರ ಸಮಸ್ಯೆಯೇ? ಸರ್ಕಾರದವರು ತಮ್ಮ ರೆಸ್ಪಾನ್ಸಿಬಿಲಿಟಿಯನ್ನು ಸರಿಯಾಗಿ ವಹಿಸಿಕೊಂಡು ಹೋಗಬೇಕಾಗಿತ್ತು. ಆ ರೀತಿ ವಹಿಸಿಲ್ಲದ ಕಾರಣ ಇವೆಲ್ಲಾ ಆಗುತ್ತಿದೆಯೆಂದು ಜನರು ಬಹಳ ಅಪಹಾಸ್ಯ ಮಾಡುತ್ತಿದ್ದಾರೆ. ಒಂದು ಇನ್‌ಸ್ಟಿಟ್ಯೂಷನ್‌ನವರು ಇನ್ನೊಂದು ಇನ್‌ಸ್ಟಿಟ್ಯೂಷನ್‌ನವರ ಮೇಲೆ, ಒಬ್ಬರು ಇನ್ನೊಬ್ಬರ ಮೇಲೆ ಹೇಳಿದರೆ, ಇದನ್ನು ಆಡಳಿತವೆಂದು ಹೇಳಿದರೆ, ಹೇಗೆ ಇದು ಆಗಕೂಡದು. ಇದರಿಂದ ಜನರಿಗೆ ಏನು? ಕಾರ್ಪೊರೇಷನಿನ್ನವರೋ, ಬಿಡಬ್ಲ್ಯೂಎಸ್ಎಸ್‌ಬಿಯವನೋ, ಕೆಇಬಿಯವರೋ ಅಥವಾ ಸ್ಲಮ್ ಬೋರ್ಡ್‌ನವನೋ ಯಾರಾದರೆ ಅವನಿಗೆ ಏನು. ಅವನಿಗೆ ಅನುಕೂಲತೆ ಆಗಬೇಕು ಅಷ್ಟೆ. ಅವನಿಗೆ ಯಾವುದು ಒಂದು ಹಕ್ಕು ಇದೆ "ರೈಟ್ ಟು ಲಿವ್" ಅದಕ್ಕೆ ನಾವು ಅನುಕೂಲತೆ ಮಾಡಿಕೊಡದೇ ಅದು ವರ್ಷೇ ವರ್ಷೇ ಕಡಿಮೆಯಾಗುತ್ತಾ ಹೋಗುತ್ತಿದೆ ಇದರಿಂದ ಅಸಮತೋಲನ ಹೆಚ್ಚಾಗುತ್ತಾ ಹೋಗುತ್ತದೆ. ಡಿಸ್-ಕಂಟೆಂಟ್‌ಮೆಂಟ್ ಹೆಚ್ಚಾಗುತ್ತಿದೆ. ಆ ಕಾರಣದಿಂದ there is absolutely no co-ordination. ನಾನು ಎರಡು ವರ್ಷಗಳಿಂದ ನೋಡಿದ್ದೇನೆ. ಹಲವಾರು ಬಾರಿ ಈ ವಿಚಾರದ ಬಗ್ಗೆ ಹೇಳಿದ್ದೇನೆ. ಅದಕ್ಕೆ ಏನು ಮಾಡಬೇಕು? ಕಾರ್ಪೊರೇಷನ್‌ಇದೆ, ಎಲೆಕ್ಟೆಡ್ ಬಾಡಿ ಇದೆ, ಬ್ಯೂರಾಕ್ರಸಿ ಇದೆ. ಇವೆಲ್ಲವನ್ನೂ ಒಟ್ಟುಗೂಡಿ ಮಾಡಿದರೆ ಬಿಡಬ್ಲ್ಯೂಎಸ್ಎಸ್‌ಬಿ ಯಾವುದು ಇದೆ, ಅದನ್ನು ಪರಿವರ್ತನೆ ಮಾಡಬಹುದು. ಒಳ್ಳೆಯ ಇಂಜಿನಿಯರ್ಸ್ ಇದ್ದಾರೆ. ಬರೀ

ಇಂಜಿನಿಯರ್ಸ್ ಇದ್ದರೆ ಸಾಲದು. ಅವರು ಕೆಲಸ ಮಾಡಿಕೊಂಡು ಹೋಗುತ್ತಾರೆ. ಸುಮಾರು ೧೦-೧೫ ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿದೆ, ಒಳ್ಳೆಯ ಕೆಲಸ ಮಾಡಿದೆ. ಆದರಲ್ಲಿ ಪರಿವರ್ತನೆಯಾಗಲೇಬೇಕಾಗುತ್ತದೆ. ಕಾನೂನಿನ ಪ್ರಕಾರ ಪರಿವರ್ತನೆಯಾಗಬೇಕು. ಆದರ ಸ್ಟ್ರಕ್ಚರ್ ಅನ್ನು ನಾವು ಬದಲಾವಣೆ ಮಾಡಬೇಕು. ಅದು ಆನ್ಸರಬಲ್ ಆಗಬೇಕಾಗುತ್ತದೆ. ಈಗ ನಾವು ಹೊಸದಾಗಿ ಬೆಟರ್‌ಮೆಂಟ್ ಲೆವಿಯನ್ನು ನಮ್ಮ ಕ್ಷೇತ್ರದಲ್ಲಿ ಕೊಟ್ಟಿದ್ದೇವೆ. ಬೆಟರ್‌ಮೆಂಟ್ ಲೆವಿಯನ್ನು ಕಾರ್ಪೋರೇಷನ್ ಕಲೆಕ್ಟ್ ಮಾಡಬೇಕು. ಕಾರ್ಪೋರೇಷನ್ ಅವರನ್ನು ಕೇಳಿದರೆ, ಅವರು ಪೈಪ್ ಹಾಕುವುದಕ್ಕೆ ಬಿಡಬ್ಲ್ಯೂಎಸ್‌ಎಸ್‌ಬಿಗೆ ಕಳುಹಿಸಿಬಿಟ್ಟಿದ್ದೇವೆ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ಇವರಿಗೆ ಹೇಳುತ್ತಾರೆ, ಇವರನ್ನು ಕೇಳಿದರೆ ಅವರಿಗೆ ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ಈ ರೀತಿಯ ನೂರಾರು ಕೇಸ್‌ಗಳಿವೆ. ಬರೀ ಒಂದೆರಡಲ್ಲ. ಇದಕ್ಕೆಲ್ಲಾ ಯಾರು ಜವಾಬ್ದಾರರು? ಇವರನ್ನು ನಾವು ಸರಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದರೆ ಆ ಆರ್ಗನೈಜೇಶನ್ ಅನ್ನು ಪರಿವರ್ತನೆ ಮಾಡಬೇಕಾಗುತ್ತದೆ. ಆರ್ಗನೈಜೇಶನ್‌ಗಳಲ್ಲಿ ಹೆಚ್ಚು ಬದಲಾವಣೆಯನ್ನು ಮಾಡಬೇಕಾಗುತ್ತದೆ. ಆದುದರಿಂದ ಬಿಡಬ್ಲ್ಯೂಎಸ್‌ಎಸ್‌ಬಿನಲ್ಲಿ ಸ್ವಲ್ಪ ಕಾನೂನಿನ ಪರಿವರ್ತನೆಯನ್ನು ಮಾಡಿಕೊಂಡು ಅದರಲ್ಲಿ ಜನತಾ ಪ್ರತಿನಿಧಿಗಳಾಗಲೀ, ಕಾರ್ಪೋರೇಟರ್‌ಗಳಾಗಲಿ, ಎಂ. ಎಲ್. ಎ. ಗಳಾಗಲಿ, ಅವರನ್ನು ಕೇಳುವವರು ಇರಬೇಕಾಗುತ್ತದೆ. ಸರಿಯಾದ ಉತ್ತರವನ್ನು ಕೊಡುವವರು ಇರಬೇಕಾಗುತ್ತದೆ, ಆಗತಾನೆ ಜನರಿಗೆ ತಿಳಿಯೋದು? ನಾವು ಬರೇ ಇಂಜಿನಿಯರ್‌ಗಳನ್ನು ಇಟ್ಟುಕೊಂಡು, ಅವರು ಎಷ್ಟೇ ಒಳ್ಳೆಯವರಾಗಿದ್ದರೂ ಸಹ ಅವರ ಧಾಟಿ ಒಂದು ರೀತಿಯಲ್ಲಿರುತ್ತದೆ, ಅವರ ನೀತಿ ಒಂದು ರೀತಿಯಾಗಿರುತ್ತದೆ. ಅವರ ನೀತಿಯ ಪ್ರಕಾರ ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಇತರೆ ವಿಚಾರಗಳು ಚೆನ್ನಾಗಿ ಗೊತ್ತಿರಬೇಕಾದರೆ, ಅವರಿಗೆ ವಿವಿಧ ಅಂಶಗಳಲ್ಲಿ, ವಿವಿಧ ಕ್ಷೇತ್ರಗಳಲ್ಲಿ ತಿಳಿಯಬೇಕಾಗಿದ್ದರೆ ಅವರು ಇತರರೊಟ್ಟಿಗೆ ಸೇರಿ ಕೆಲಸ ಮಾಡಿದರೆ ಮಾತ್ರ ಇದು ಸಾಧ್ಯವಿದೆ. ಅದಕ್ಕಾಗಿ ಆ ಸಲಹೆಯನ್ನು ಸೂಚನೆ ಕೊಡುತ್ತಿದ್ದೇನೆ. ಈ ರೀತಿ ಅದರಲ್ಲಿ ತೀರ ಬದಲಾವಣೆಯನ್ನು ಮಾಡಬೇಕಾಗಿದೆ. ನಾನು ಇಲ್ಲಿ ಹೆಚ್ಚು ಮಾತನಾಡಬೇಕೆಂದಿಲ್ಲ ಒಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೇನೆ. ನಾನು ಹೇಳುವಂಥ ಅರ್ಥ ಇಷ್ಟೆ, ಜನರ ಫೀಲಿಂಗ್ಸ್ ಅವರಿಗೆ ಚೆನ್ನಾಗಿ ಅರ್ಥವಾದರೆ ಸಾಕಾಗಿದೆ. ಏಕೆಂದರೆ ಈ ಸಮಸ್ಯೆ ಬಹಳ ದೊಡ್ಡದು. ಬೋರ್‌ವೆಲ್ ಬಗ್ಗೆ ಹೇಳುವುದಾದರೆ, ಈ ಬೋರ್‌ವೆಲ್‌ಗಳನ್ನು ಕಾರ್ಪೋರೇಷನ್‌ನವರು, ಬಿ.ಡಿ.ಎ.ನವರು, ನೀರು ಸರಬರಾಜು ಮಂಡಳಿಯವರು ಹಾಕುತ್ತಾರೆ. ಆದರೆ ಅದನ್ನು ಅನ್‌ಟಚಬಲ್ ತರಹ ನೋಡಿಕೊಳ್ಳುತ್ತಾರೆ. ಹಾಳಾಗಿ ಹೋದರೆ ಯಾರು ಆ ಬೋರ್‌ವೆಲ್ಲನ್ನು ನೋಡಬೇಕು ಎನ್ನುವುದು ನಮಗಂತೂ ಅರ್ಥವಾಗಲಿಲ್ಲ. ಒಬ್ಬರು ಹೇಳುತ್ತಾರೆ ನಮ್ಮ ಬೋರ್‌ವೆಲ್ ಅಲ್ಲವೆಂದು. ಮತ್ತೊಬ್ಬರನ್ನು ಕೇಳಿದ್ದಕ್ಕೆ ಅವರು ನಮ್ಮದಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ನಮ್ಮ ಮಾನ್ಯ ಮಂತ್ರಿಗಳು ಏನೆಲ್ಲ ಮಾಡಲು ಹೋಗಿದ್ದರು, ಆದರೆ ಇದುವರೆಗೂ ಕೂಡ ಅದು ಏನೂ ಆಗಲಿಲ್ಲ. ಆದುದರಿಂದ ಇದನ್ನು ಸರಿಪಡಿಸಬೇಕಾಗುತ್ತದೆ. ನಿಮಗೆ ಎಷ್ಟು ಸಲ ನಾವು ಹೇಳಬೇಕು? ಎಷ್ಟು ಸಲ ನಿಮಗೆ ಅದರ ಬಗ್ಗೆ ತಿಳಿಸಬೇಕು. ಅಲ್ಲಿ ಜನರಿಗೆ ತೊಂದರೆ ಆಗಿರುವಾಗ ನಾವು ಇದೇ ಧಾಟಿಯಲ್ಲಿ ಹೋದರೆ ಅದು ಸಾಧ್ಯವಾಗುವುದಿಲ್ಲ. ಅದರ ಬಗ್ಗೆ ಯಾವುದಾದರೂ ರಾಡಿಕಲ್ ಆಗಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಒಂದು ಧೈರ್ಯ ಪೊಲಿಟಿಕಲ್ ವಿಲ್ ನಮ್ಮ ಹತ್ತಿರ ಇರಲೇ ಬೇಕಾಗುತ್ತದೆ. ಈ ಕಾಂಗ್ರೆಸ್ ಪಕ್ಷದಲ್ಲಿ ಕಾಂಗ್ರೆಸ್

ಪಕ್ಷದ ಸರ್ಕಾರದಲ್ಲಿ ಆ ರೀತಿಯ ಧಾಟಿ ಇಲ್ಲದ್ದಿರೆ ಇನ್ನೆಲ್ಲಿ ಆ ರೀತಿ ಧೈರ್ಯವಿರಲು ಇನ್ನ್ಯಾರಿಗೆ ಸಾಧ್ಯವಿದೆ? ಇದೆಲ್ಲವನ್ನು ನಾನು ಎರಡು ಮೂರು ವರ್ಷಗಳಿಂದ ಹೇಳುತ್ತಿದ್ದೇನೆ. ಆದರೆ ಅದು ಇದೇ ರೀತಿಯಲ್ಲಿ ನಡೆಯುತ್ತಿದೆ.

ಇನ್ನು ಕಾವೇರಿ ನೀರಿನ ವಿಚಾರದಲ್ಲಿ, ಈ ಕಾವೇರಿ ನೀರಿನ ಮೂರನೆಯ ಹಂತದ ಕಾಮಗಾರಿಗೆ ೨೪೦ ಕೋಟಿಗಳನ್ನು ಇಟ್ಟದ್ದೀರಿ. ಈಗಾಗಲೆ ಮೊದಲ ಮತ್ತು ಎರಡನೆಯ ಹಂತದ ಕೆಲಸ ಆಗಿದೆ. ಆದರೆ ಮೂರನೆಯ ಹಂತ ಏಕೆ ಇಷ್ಟು ತಡವಾಯಿತು? ಕಾವೇರಿ ೩ನೇ ಹಂತದ ನೀರು ಬರುತ್ತದೆ, ಬರುತ್ತದೆ ಎಂದು ಹೇಳಿ ೩-೪ ವರ್ಷಗಳಾಯಿತು. ಆದರ ಬಗ್ಗೆ ಎಲ್ಲಿ ಏನಾಯಿತು ಎನ್ನುವ ವಿವರಣೆಗೆ ನಾನು ಹೋಗುವುದಿಲ್ಲ. ಇಂಥ ಸಮಸ್ಯೆಗಳು ಇನ್ನು ಮುಂದೆ ಮುಂದೆ ಹೋಗುತ್ತಿದ್ದರೆ ಏನು ಅರ್ಥ?

ಶ್ರೀ ಕೆ. ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು):- ಉಪಾಧ್ಯಕ್ಷರೆ, ತಾವು ಕಳೆದ ಸಾರಿಯು ಭಾಷಣ ಮಾಡುವಾಗ ಕಾವೇರಿ ನೀರಿನ ಬಗ್ಗೆ ಹೇಳಿದ್ದೀರಿ. ಅದು ನಿಜವಾಗಿಯೂ ನಿಜವಲ್ಲ. ಕಾವೇರಿ ಮೂರನೇ ಹಂತವನ್ನು ಷೆಡ್ಯೂಲ್ ಪ್ರಕಾರ ೧೯೯೨ನೇ ಜೂನ್ ತಿಂಗಳಲ್ಲಿ ಮುಗಿಸಬೇಕಾಗಿದೆ. ತಾವು ಹೇಳಿದಂತೆ ಅದು ಯಾವುದೇ ವಿಚಾರದಲ್ಲಿಯೂ ತಡವಾಗಿಲ್ಲ.

ಶ್ರೀ ಎಸ್. ಎಂ. ಯಾಹ್ಯ:- ತಾವು ಜೂನ್‌ನಲ್ಲಾದರೂ ಮಾಡುತ್ತೇನೆಂದು ಹೇಳಿಬಿಡಿ. ಇದಕ್ಕೆ ಈಗಾಗಲೇ ೧೫೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು ಸುಮಾರು ೧೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. We will be happy if you keep up your schedule. After all, I and you what are we for? We are here for poorer sections of the people they have a right to ask for water and it is our duty to provide it. Why have we come here? It is not that you have to keep up your schedules in the interest of public, you may even prepone it also.

Sri K.J. George:- By June 1992 the Cauvery 4th stage will come to Bangalore.

Sri S.M. Yahya:- You have to give water to industries also. But, don't give more because people require more water. After all I

industries can have borewells and other schemes. But people require water for drinking. Number two is, the Third Stage, which is already coming up. What steps you have taken for the Fourth Stage within 1000 crores of rupees and all preparations should be done here itself. After all, we are thinking of a very big City and our planning should be perfect. We should

go ahead with proper planning. With that intention, I am telling that water is the prime need. If water is not there, the greatest sin we will be committing because the people will also curse us. And I do not want to come under the curse of the people as far as water is concerned. ಆ ಕಾರಣದಿಂದ ಕಾವೇರಿ ೩ನೇ ಸ್ಟೇಜ್, ಕಾವೇರಿ ೪ನೇ ಸ್ಟೇಜ್ ಸಹ ಬೇಗ ಪ್ರಾರಂಭವಾಗಬೇಕೆಂದು ನಾನು ಹೇಳಲು ಇಷ್ಟ ಪಡುತ್ತೇನೆ. ಸ್ಲಮ್ ವಿಚಾರದಲ್ಲಿ ಹೇಳುವುದಾದರೆ, ಇಡೀ ಕರ್ನಾಟಕದಲ್ಲಿ ಇವರ ಪ್ರಕಾರ ೧೦೩೬ ಸ್ಲಮ್‌ಗಳಿವೆ, ೧೧.೫ ಲಕ್ಷ ಜನ ಸ್ಲಮ್‌ನಲ್ಲಿದ್ದಾರೆ. ಬೆಂಗಳೂರಿನಲ್ಲಿ ಎಷ್ಟು ಸ್ಲಮ್‌ಗಳಿವೆ, ಅಧ್ಯಕ್ಷರೇ ಈ ಸ್ಲಮ್‌ಗಳು ತಮಗೆ ಗೊತ್ತಿರಬಹುದು. ನಿವೂ ಸಹ ನನ್ನ ಹಾಗೆ ವಕೀಲರು. ಇದರಲ್ಲಿ Recognised slums, Unrecognised slums, BDA slums, Corporation Slums, Slum Board Slums, I do not know what all the kind of slums and nobody know what it is what is the misery of people. Whether it is Corporation Slum, whether it is under Slum Board which is recognised, unrecognised, whether it is private slum. What is the misery of the people? Inhuman condition is there. ದಿವಂಗತ ದೇವರಾಜ್ ಅರಸುರವರ ಕಾಲದಲ್ಲಿ ಒಂದು ಸ್ಲಂ ಬೋರ್ಡನ್ನು ಒಳ್ಳೆಯ ಉದ್ದೇಶದಿಂದ ಮಾಡಿದ್ದರು. ಆದರಲ್ಲಿ ಒಂದು ಉದ್ದೇಶ ಮಾತ್ರ ಸರಿಯೆಂದು ನನಗನಿಸುವುದಿಲ್ಲ. ನಾನು ಎಲ್ಲವನ್ನು ಓದುವುದಿಲ್ಲ, ಮೊದಲನೆಯ ಉದ್ದೇಶ to take up environmental improvement and redevelop the slums to enable the slum dwellers. ಅದು ಎಷ್ಟಾಗಿದೆಯೆಂದು ಗೊತ್ತಿಲ್ಲ, ಹೆಚ್ಚು ಹೆಚ್ಚು ಆಗುತ್ತಾ ಹೋಗಿದೆ. ಆ ಸ್ಲಮ್‌ನಲ್ಲಿ ಇರತಕ್ಕಂತಹ ಅನಾನುಕೂಲತೆಗಳು ಹೆಚ್ಚಾಗುತ್ತಾ ಬಂದಿವೆ. ಇನ್ನು ಮಧ್ಯದ್ದನ್ನು ಬಿಟ್ಟು ಕೊನೆಯಲ್ಲಿರುವುದನ್ನು ಓದುತ್ತೇನೆ. To conduct socio-economic survey of the slum, to study the socio-economic condition of the slum dweller. ಇದನ್ನು ಮಾಡಿದ್ದಾರೋ, ಇದರ ಅಂಕಿ ಸಂಖ್ಯೆಗಳು ಇದೆಯೋ ಏನೋ? ಈ ಸ್ಲಮ್‌ಗೆ ವರ್ಷ ವರ್ಷ ಏನು ಕೊಡುತ್ತಿದ್ದಿರಿ ಆದರ ಬಗ್ಗೆ ಬಜೆಟ್ ಪ್ರಾವಿಷನ್ ನೋಡಿದರೆ ೩೦-೪೦ ಲಕ್ಷ ಜನ ಸ್ಲಮ್‌ನಲ್ಲಿ ಇದ್ದವರಿಗೆ ಪರ್‌ಹೆಡ್ ೫-೬ ರೂಪಾಯಿ ಅಥವಾ ೭-೮ ರೂಪಾಯಿ ಮಾತ್ರ ಸಿಗುತ್ತದೆ. such a miserable condition is there ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳು ಕಳುಹಿಸಿದ ಈ ಪುಸ್ತಕದ ಲಾಸ್ಟ್ ಲೈನ್ ನೋಡಿದೆ. ಮೊದಲೇ ಅಲ್ಲಿ ಹಣವಿರುವುದಿಲ್ಲ ಅಲ್ಲಿ ಕೆಲಸಗಳು ಏನೂ ನಡೆಯುವುದಿಲ್ಲ ಯಾವುದೋ ಒಂದು ಸೋಡಿಯಂ ಲ್ಯಾಂಪನ್ನು ಚಿಕ್ಕ ಟಾಯ್‌ಲೆಟ್ ಮಾಡಿಕೊಂಡು ನಾವು ಮಾಡಬಿಟ್ಟಿದ್ದೇವೆ, ಉದ್ಧಾರ ಮಾಡಿಕೊಂಡು ಹೋಗುತ್ತಿದ್ದೇವೆಂದು ಹೇಳುವುದು. ಈ ಬೋರ್ಡ್ ೧೭ ವರ್ಷದ ಹಿಂದೆ ಆಗಿದ್ದುದು, ಅದೂ ಸಹ ರಿಕನ್‌ಸ್ಟ್ರಕ್ಷನ್ ಆಗಬೇಕಾಗಿದೆ. ಅದರಲ್ಲಿ ಒಬ್ಬ ಸೆಕ್ರೆಟರಿ ಇರುತ್ತಾರೆ. ಇಡೀ ಕರ್ನಾಟಕ ಜ್ಯೂರಿಸ್‌ಡಿಕ್ಷನ್‌ನಲ್ಲಿ ಅವರು ಒಳ್ಳೆಯ ಕೆಲಸ ಮಾಡಬೇಕು. ಅವರು ಟ್ರಾವಲ್‌ಗೆ ಹೋದರೆ, ಅವರ ಆಫೀಸ್‌ನಲ್ಲಿ ಯಾರಿಗೂ ಜವಾಬ್ದಾರಿಕೆಯನ್ನು

ಒಪ್ಪಿಕೊಳ್ಳುವ ಮನಸ್ಸು ಇರುವುದಿಲ್ಲ. ಅವರು ಟ್ರಾವಲ್‌ಗೆ ಹೋದರೆ ಇನ್ನು ಆಫೀಸ್ ಕೆಲಸ ಆದ ಹಾಗೆಯೇ; ಆದಕ್ಕಾಗಿ ಸ್ಲಮ್ ಬೋರ್ಡ್‌ನ್ನು ಕಂಪ್ಲೀಟಾಗಿ ಆರ್ಗನೈಸೇಷನ್‌ನ್ನು ನೀವು ಹೊಸದಾದ ರೀತಿಯಲ್ಲಿ ಮಾಡಬೇಕಾಗಿದೆ. ಹೊಸದಾಗಿ ಕೆಲಸಗಳು ಆಗಬೇಕಾಗಿದೆ. ಏಕೆಂದರೆ ಒಬ್ಬನೇ ಸೆಕ್ರೆಟರಿ ಈ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ, ಆದಕ್ಕಾಗಿ ಒಬ್ಬ ಮ್ಯಾನೇಜಿಂಗ್ ಡೈರೆಕ್ಟರ್‌ನ್ನು ನೇಮಕ ಮಾಡಿಕೊಳ್ಳಿ, ಕೆಲವು ಡೈರೆಕ್ಟರ್‌ಗಳನ್ನು, ನಾನ್ ಅಫಿಷಿಯಲ್‌ಗಳನ್ನು ಹಾಕಿ, ಪೀಪಲ್ಸ್ ರೆಪ್ರೆಸೆಂಟೆಟಿವಸ್ ಹಾಕಿ, ಆಗ ಆನ್ಸರಬಲ್ ಆಗುತ್ತಾರೆ. ಇಲ್ಲದಿದ್ದರೆ ಏನೂ ಆಗುತ್ತಿಲ್ಲ. ಆ ಕಾರಣದಿಂದ ನಾನು ಲಾಸ್ಟ್ ಲೈನ್ ಹೇಳುತ್ತಿದ್ದೇನೆ. ಆದರಲ್ಲಿ ಹೇಳುತ್ತಾರೆ. "The Board also undertakes miscellaneous works like digging of borewells, repairs of existing borewells etc. The amount spent on such works is Rs. 6.19 lakhs". ಆರು ಲಕ್ಷ ೧೯ ಸಾವಿರ ರೂ.ಗಳನ್ನು ಖರ್ಚುಮಾಡಿದ್ದೇವೆ. Further is very important. "As against an allocation of Rs. 15 lakhs," ೪೦ ಲಕ್ಷ ಸ್ಲಮ್ ಡ್ವೆಲರ್ಸ್ ಇದ್ದರೂ, ಕೊಟ್ಟಿದ್ದಂಥ ೧೫ ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಿಕ್ಕೆ ಆಗಲಿಲ್ಲವೇ? This is a sorry affair of the Administration. Absolutely bad. We have not improved the living condition of the slum dwellers. We have not improved the living condition of the people of Bangalore. They should rightly deserve. What is it that we have done. Absolutely we have done nothing and the problems go on increasing every year. I am not talking to Mr. George only. Every year it is increasing. You may give your little more allocation which matters little. Our organisation itself is bad. Slum Board requires thorough changes, BWSSB also requires thorough changes. That's how we have to work unless we work on that basis, we would not have any change or we can improve the life and conditions of the people of Bangaloreans or the Urban areas, for which I am sure Mr. George has that will power and commitment. When I spoke on Education, I gave 5-6 suggestions and I am thankful to Mr. Veerappa Moily because on the spot, on liberalisation, he said, yes, I am agreeing with you, you don't require permission to start Schools upto Fourth Standard, it is free without any Government permission. He agreed on the floor of the House after my speech. Similarly when I said there must be some plan for Urdu institutions, he just agreed. And when I said there must be Urdu Hall, he not

only agreed with me but also he allotted Rs. 50 lakhs and I hope Mr. George, Hon'ble Minister for HUD also will come forward saying yes, we will ban, we will not have Multi-storied buildings in Bangalore. Of course, vested interests are very strong, but I do not know just like Mr. Moily, Mr. George also will come forward with good news, yes, ground floor plus two, no more than that from this day. Let him say this. He has all the powers. He should do that. Let him also say, we are going to see that the Slum Board works in this way. There will be thorough changes in the organisation, let him do afterwards, let him comit here. Similarly BWSSB. There is lot of things. There is no co-ordination between this Organisation and that Organisation. He should say that I will see it is set right. If that is done, probably all of us will be happy and that sort of commitment and political will I am sure the Honb'e Minister Mr. George is also having. With that only we can really improve. Otherwise, budget will come, budget will go, little more money, little more schemes, it will go on like that but the condition of the people will not be improved. Lastly, of course it may not be directlyconcerned to him, as far as Bangalore Palace is concerned, this is a very important issue for Bangaloreans. Today I will talk only on Bangalore and I will confine myself only to Bangalore. This palace, we do not know, previously we use to hear so many writ petitions how it has been divided. Anyhow this place is to be kept as it is. It is the lung place. The Corporation should not allow even to put a wall also. Whatever be the ownership, whatever be the writ petition, a civil case is going on. The Corporation should never allow any building, not even to put a wall. We should keep this and that is the right of the Corporation. Absolutely they can say, we will not allow, we require this. We would be happy if the entire Palace matter is brought to our notice, to the notice of the people of Karntaka so that they can also think over the matter. I am further happy that this Octroi which the

Hon'ble Minister wanted to introduce in his wisdom he has not done it. I congratulate him for this. This is a tax. Even the best of Tax Experts have condemned it and I was the one who in 1979 abolished Octori and in its place we gave Entry Tax. Entry Tax without much problem. Of course, the Entry Tax, the procedure, the money directly to be given to Municipality, it has not been properly worked out all these ten years. I have no doubt about it. But anyhow, our Hon'ble Chief Minister has increased Entry Tax, by new taxes also some 103 items to the tune of Rs. 224 crores. I am sure this money will be sufficient, if not sufficient, it will be giving a financial backing to Municipalities and Corporations. I thank you for having given me an opportunity to speak.

ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ):- ಮಾನ್ಯ ಅಧ್ಯಕ್ಷರೆ, ಈ ದಿನ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತಾ ಯುವಜನ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಇವತ್ತಿನ ದಿವಸ ಯುವಜನ ಸೇವಾ ಇಲಾಖೆಯ ಬಗ್ಗೆ ಹೆಚ್ಚಿನ ಮಹತ್ವವನ್ನು ನಮ್ಮ ಸರ್ಕಾರ ಕೊಟ್ಟಿಲ್ಲವೆಂದು ನಾನು ಹೇಳಬಯಸುತ್ತೇನೆ. ಈ ಯುವ ಶಕ್ತಿ ರಾಷ್ಟ್ರ ಶಕ್ತಿಯಾಗಿ ಪರಿವರ್ತನೆಯಾಗಬೇಕಾಗಿದೆ. ಯುವ ಜನ ಮತ್ತು ಕ್ರೀಡಾ ಇಲಾಖೆಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಈ ದಿಸೆಯಲ್ಲಿ ಯುವಜನತೆ ರಾಷ್ಟ್ರಮಟ್ಟದಲ್ಲಿ ಯಾವರೀತಿ ಹೋಗುತ್ತಿದೆ ಎಂದರೆ ರಾಷ್ಟ್ರದ ಸಮಗ್ರತೆಗೆ, ಐಕ್ಯತೆಗೆ ಪೂರಕವಾಗಿ ಯುವ ಜನತೆಯನ್ನು ನಾವು ಒಳ್ಳೆಯ ದಾರಿಯಲ್ಲಿ ತರಬೇಕಾದರೆ ಇವರಿಗೆ ಒಳ್ಳೆಯ ಕಾರ್ಯಕ್ರಮಗಳನ್ನು ನೀಡುವ ಮೂಲಕ, ಕ್ರೀಡೆಗಳಿಗೆ ಪ್ರೋತ್ಸಾಹ ಕೊಡುವ ಮೂಲಕ ಇವರನ್ನು ನಾವು ಆಕರ್ಷಿಸಬೇಕಾಗಿದೆ. ಈ ದಿಸೆಯಲ್ಲಿ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ಇವತ್ತಿನ ದಿವಸ ಯುವಜನ ಇಲಾಖೆ ಅಸ್ತಿತ್ವದಲ್ಲಿದ್ದರೂ ಕೂಡ ಈ ಇಲಾಖೆಯಲ್ಲಿ ಹೆಚ್ಚಿನ ಗುಣಮಟ್ಟವುಳ್ಳ ಅಧಿಕಾರಿಗಳು ಇಲ್ಲದಿರತಕ್ಕದ್ದಾಗಿದೆ. ಉದಾಹರಣೆಗೆ ಹೇಳುವುದಾದರೆ, ವಿದ್ಯಾ ಇಲಾಖೆಯಲ್ಲಿ ಪರಿಣತರಿಲ್ಲದ ಅಧಿಕಾರಿಗಳನ್ನು ಹೊಂದಿರತಕ್ಕದ್ದು ಪರಿಣತರಲ್ಲದವರು ಉಪನ್ಯಾಸಕರಾಗಿ ಈ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಬಿಪಿಇ, ಎಂಪಿಎಡ್ ಮಾಡಿದಂಥ ಅಭ್ಯರ್ಥಿಗಳು ಯಾರಿದ್ದಾರೆ ಅವರನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಆಯ್ಕೆ ಮಾಡಿ ಈ ಇಲಾಖೆಯನ್ನು ಹೆಚ್ಚಿನ ಶಕ್ತಿಯುತ ಇಲಾಖೆಯಾಗಿ ಮಾಡಬೇಕು. ಕಾರಣ ಇವತ್ತು ನಡೆಯತಕ್ಕ ಯಾವುದೇ ಕ್ರೀಡೆಗಳನ್ನು ನೋಡಿದರೂ ಪರಿಣತರಲ್ಲದ ಮೇಲ್ವಿಚಾರಕರಿಂದ ಕೂಡಿರುವುದರಿಂದ ಕ್ರೀಡಾ ಮಟ್ಟ ಕಡಿಮೆಯಾಗುತ್ತಿದೆ ಎಂದು ನಾನು ಭಾವಿಸಿದ್ದೇನೆ. ಈ ಇಲಾಖೆಯಲ್ಲಿ ಬಹಳಷ್ಟು ಕ್ರೀಡಾ ಸಂಸ್ಥೆಗಳು ಒಳಪಡುತ್ತವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಕ್ರೀಡಾ ಪರಿಷತ್ತಿಗೆ ೫೨ ಕ್ರೀಡಾ ಸಂಸ್ಥೆಗಳು ನೋಂದಾಯಿಸಲ್ಪಟ್ಟಿದ್ದರೂ ಬಹಳ ಸಂಸ್ಥೆಗಳಿಗೆ ಸರ್ಕಾರದಿಂದ

ಸರಿಯಾದ ರೀತಿಯಲ್ಲಿ ಹಣ ಒದಗದೇ ಇರುವುದರಿಂದ ಇವುಗಳು ಕುಂಠಿತಗೊಂಡಿವೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಕರ್ನಾಟಕ ರಾಜ್ಯದಿಂದ ರಾಷ್ಟ್ರಮಟ್ಟಕ್ಕೆ ಮತ್ತು ಅಂತರ್ರಾಷ್ಟ್ರೀಯ ಮಟ್ಟಕ್ಕೆ ಕ್ರೀಡಾಪಟುಗಳನ್ನು ಆಯ್ಕೆ ಮಾಡಿದಾಗ ಅವರು ಅಲ್ಲಿಗೆ ಹೋಗಿಬರತಕ್ಕ ಸೌಲಭ್ಯಗಳನ್ನು ಕೊಡದೇ ಇರತಕ್ಕದ್ದು ಬಹಳಷ್ಟು ಉದಾಹರಣೆಗಳಿವೆ. ಕ್ರೀಡಾ ಪಟುಗಳನ್ನು ರಾಷ್ಟ್ರ ಮಟ್ಟದ ಉನ್ನತ ಮೆಡಲ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಬೇರೆ ರಾಷ್ಟ್ರಗಳಿಗೆ, ಬೇರೆ ರಾಜ್ಯಗಳಿಗೆ ಕಳುಹಿಸುವಾಗ ಅವರನ್ನು ಪ್ರೋತ್ಸಾಹಿಸಿ ಇನ್ನೂ ಹೆಚ್ಚಿನ ಹಣವನ್ನು ಸರ್ಕಾರದಿಂದ ಬಿಡುಗಡೆ ಮಾಡಿ ಅವರು ಹೋಗುವ ಸಂದರ್ಭದಲ್ಲಿ ಒಂದು ತಿಂಗಳ ತರಬೇತಿಯನ್ನು ಕೊಟ್ಟು ಅವರನ್ನು ಪರಿಪೂರ್ಣ ಕ್ರೀಡಾಪಟುಗಳನ್ನಾಗಿ ಮಾಡಿದರೆ ನಿಜವಾಗಿಯೂ ಕರ್ನಾಟಕದ ಹಿರಿಮೆ ಹೆಚ್ಚಾಗುವುದಕ್ಕೆ ಅವಕಾಶವಾಗುತ್ತದೆ. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು. ತಮಗೆ ಗೊತ್ತಿರುವಂತೆ ಅನೇಕ ರೀತಿಯ ಆಟೋಟಗಳು ನಡೆಯುತ್ತಿವೆ, ಆದರೆ ರಾಜ್ಯಮಟ್ಟದ, ರಾಷ್ಟ್ರಮಟ್ಟದ ಕ್ರೀಡೆಗಳು ನಡೆಯುವಾಗ ನಮ್ಮ ಅಧಿಕಾರಿಗಳು ಅಲ್ಲಿ ಸರಿಯಾದ ರೀತಿಯಲ್ಲಿ ಆಯ್ಕೆ ಮಾಡದೇ ಇರತಕ್ಕದ್ದನ್ನು ನಾನು ಈಗಾಗಲೇ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಕೆಲವು ಸಂಸ್ಥೆಗಳು ಸರಿಯಾಗಿ ಕೆಲಸಮಾಡುತ್ತಿಲ್ಲ ಎನ್ನತಕ್ಕ ಅಂಶವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ.

ನನ್ನ ಇನ್ನೊಂದು ಅನಿಸಿಕೆ ಎಂದರೆ, ೮ ವರ್ಷದಿಂದ ೧೮ ವರ್ಷದ ವಯೋಮಿತಿಯಲ್ಲಿರತಕ್ಕ ಯುವ ಜನರನ್ನು ಆಯ್ಕೆಮಾಡಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ತರಬೇತಿ ಸಂಸ್ಥೆಗಳನ್ನು ಹಾಸ್ಟೆಲ್‌ಗಳನ್ನು, ಕ್ರೀಡಾ ಶಾಲೆಗಳನ್ನು ತೆರೆಯಬೇಕು. ಇವತ್ತಿನ ದಿವಸ ಬೇರೆ ರಾಷ್ಟ್ರಗಳನ್ನು ನೋಡಿದಾಗ ರಷ್ಯಾ, ಅಮೇರಿಕಾ, ಚೈನಾ ದೇಶಗಳನ್ನು ನೋಡಿದರೆ ಚೈನ ದೇಶವು ಪದಕಗಳನ್ನು ಕೊಳ್ಳೆ ಹೊಡೆಯುತ್ತಿದೆ. ಅವರ ಪಟ್ಟಿಯನ್ನು ನೋಡಿದಾಗ ನಮ್ಮ ಭಾರತದೇಶವು ಆ ಒಂದು ಮಟ್ಟಕ್ಕೆ ಬಾರದಿರತಕ್ಕಂಥ ಸ್ಥಿತಿಗೆ ನಾವು ಹೋಗಿದ್ದೇವೆಂದು ವಿಷಾದವಾಗುತ್ತದೆ. ಆ ಕ್ರೀಡೆಗಳಿಗೆ ಸರಿಯಾವ ಪ್ರೋತ್ಸಾಹ ಕೊಟ್ಟಿಲ್ಲವೆನ್ನುವುದು ಇದರಿಂದ ಗೊತ್ತಾಗುತ್ತದೆ. ಈ ದಿಸೆಯಲ್ಲಿ ನಾನು ಸಂಬಂಧಪಟ್ಟ ಸಚಿವರಲ್ಲಿ ಕೇಳಿಕೊಳ್ಳುವುದಿಷ್ಟೇ, ಈ ಒಂದು ಇಲಾಖೆಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು. ತಾವು ಖಂಡಿತವಾಗಿಯೂ ತಾಲ್ಲೂಕಿಗೆ ಒಂದು ಕ್ರೀಡಾಶಾಲೆ ಮತ್ತು ಜಿಲ್ಲಾಮಟ್ಟದಲ್ಲಿ ಕ್ರೀಡಾ ಹಾಸ್ಟೆಲ್ಲನ್ನು ತೆರೆಯಬೇಕು. ಜಿಲ್ಲಾಮಟ್ಟದಲ್ಲಿ ಕ್ರೀಡಾ ಹಾಸ್ಟೆಲ್‌ನ್ನು ತೆರೆಯುವ ಉದ್ದೇಶವನ್ನು ನಾನು ತಿಳಿಸಿದ್ದೆ, ಅಷ್ಟೇ ಅಲ್ಲ ವಿವಿಧ ಕಾಲೇಜುಗಳಲ್ಲಿ ಆಯ್ಕೆಯಾದಂಥ ವಿದ್ಯಾರ್ಥಿಗಳನ್ನು ತಾವು ಕ್ರೀಡಾ ಹಾಸ್ಟೆಲ್‌ಗಳಲ್ಲಿ ಇಟ್ಟು ಅವರಿಗೆ ಸರ್ಕಾರದ ವತಿಯಿಂದ ಪೌಷ್ಟಿಕ ಆಹಾರ ಮತ್ತು ತರಬೇತಿಯನ್ನು ನೀಡಿದ್ದೇ ಆದರೆ ನಿಜಕ್ಕೂ ನಮ್ಮ ರಾಜ್ಯದ ಕ್ರೀಡಾಪಟುಗಳು ಮುಂದೆ ಬರಲು ಸಾಧ್ಯವಾಗುತ್ತದೆಂದು ನಾನು ಭಾವಿಸುತ್ತೇನೆ.

ಇನ್ನು ಕ್ರೀಡಾಂಗಣದ ಬಗ್ಗೆ ಹೇಳುವುದಾದರೆ, ತಾಲ್ಲೂಕು ಮಟ್ಟದಲ್ಲಿ ರಾಜ್ಯದ ವತಿಯಿಂದ ಕೆಲವು ಕ್ರೀಡಾಂಗಣದ ಕೆಲಸಗಳು ನಡೆಯುತ್ತಿದೆ. ಭಾರತ ಸರ್ಕಾರದ ಅಸಿಸ್ಟೆನ್ಸ್ ತೆಗದುಕೊಂಡು ಅದರಿಂದ ಕೂಡ ಕೆಲವು ಕ್ರೀಡಾಂಗಣಗಳ ಕೆಲಸ ನಡೆಯುತ್ತಿದೆ. ಇದಕ್ಕೋಸ್ಕರ ಬಜೆಟ್ ಅಲೋಕೇಷನ್ ನೋಡಿದಾಗ ಅದರಲ್ಲಿ ೧೬ ಲಕ್ಷ ರೂಪಾಯಿಗಳ ಕ್ರೀಡಾಂಗಣ ಒಂದು ನನ್ನ ತಾಲ್ಲೂಕಿನಲ್ಲಿ ಪ್ರಾರಂಭವಾಗುತ್ತಿದೆ. ಆದರೆ ಅದಕ್ಕೆ ಇವರು ಕೊಡುತ್ತಿರತಕ್ಕಂಥ ಹಣ ಕೇವಲ ೫ ಲಕ್ಷ ರೂಪಾಯಿಗಳು. ಈ ರೀತಿ ಪ್ರಾರಂಭ ಮಾಡಿದರೆ ಇದು ಮುಗಿಯಬೇಕಾದರೆ ಇನ್ನು ಕೆಲವಾರು

ವರ್ಷಗಳೇ ಆಗುತ್ತದೆ. ಹೆಚ್ಚಿನ ಹಣವನ್ನು ಕ್ರೀಡಾಂಗಣಕ್ಕೆ ಕೊಟ್ಟು ಬಿಡುಗಡೆ ಮಾಡಬೇಕು. ಇದನ್ನು ಒಂದು ನಿಶ್ಚಿತವೇಳೆಯಲ್ಲಿ ಮುಗಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎನ್. ಸಿ. ಸಿ. ಬಗ್ಗೆ :- ನಮ್ಮ ರಾಜ್ಯದಲ್ಲಿ ಕೆಡೆಟ್‌ಕಾರ್ಪ್‌ನಿಂದ ಇಂಜಿನಿಯಿರಿಂಗ್‌ನಲ್ಲಿ ಬಹಳಷ್ಟು ವಿದ್ಯಾರ್ಥಿಗಳು ಮುಂದೆ ಬಂದಿದ್ದಾರೆ. ಕಳೆದ ೧೯೭೭ರಿಂದ ಈಚೆಗೆ ೯ ಜನ ಕರ್ನಾಟಕ ಮತ್ತು ಗೋವ ಬೆಟಾಲಿಯನ್ನನ್ನು ಪ್ರತಿನಿಧಿಸಿದಂಥ ಕರ್ನಾಟಕದ ಯುವಕ ಯುವತಿಯರು ಪ್ರಧಾನಮಂತ್ರಿಗಳ ಪದಕವನ್ನು ಪಡೆದಿದ್ದಾರೆ. ಇವತ್ತಿನ ದಿವಸ ಹೆಚ್ಚಿನ ಹಣದುಬ್ಬರ ಮತ್ತಿತರ ಹಣದ ಕೊರತೆಯಿಂದಾಗಿ ಇವತ್ತು ಎನ್. ಸಿ. ಸಿ. ಉನ್ನತ ತರಬೇತಿ ಕಡಿಮೆಯಾಗುತ್ತಿದೆ. ಉದಾಹರಣೆಗೆ ಮಾಗಡಿ ಪಟ್ಟಣದಲ್ಲಿ ನಾನು ನೋಡಿದಾಗ ಯುವಕರಿಗೆ ಬಟ್ಟೆಯನ್ನೇ ಕೊಟ್ಟಿಲ್ಲ. ವಾಷಿಂಗ್ ಅಲೋಯೆನ್ಸ್ ಎಂದು ಏನು ಕೊಡುತ್ತಿದ್ದರು ಅದೂಕೂಡ ಸಾಲದೇ ಇರುವುದರಿಂದ ಇನ್ನೂ ಹೆಚ್ಚಿಗೆ ಹಣ ನೀಡಬೇಕೆಂದು ಯುವಕರು ಕೇಳುತ್ತಿದ್ದಾರೆ. ಎನ್. ಸಿ. ಸಿ.ಯಲ್ಲಿ ಯುವಕರನ್ನು ಸಚ್ಚರನ್ನಾಗಿ ತಯಾರು ಮಾಡಿದರೆ ಅವರು ನಿಜಜೀವನದಲ್ಲಿ ಒಳ್ಳೆಯ ಯುವಕ ಯುವತಿಯರಾಗಿ ನಮ್ಮ ರಾಷ್ಟ್ರಕ್ಕೆ, ನಮ್ಮ ರಾಷ್ಟ್ರದ ಏಳಿಗೆಗೆ ಸಹಾಯಕರಾಗುತ್ತಾರೆಂದು ನನ್ನ ಅನಿಸಿಕೆ. ಇನ್ನು ಎನ್. ಸಿ. ಸಿ.ಯಲ್ಲಿ ಒಳ್ಳೆಯ ತರಬೇತಿಯನ್ನು ಪಡೆದಂಥ ಉನ್ನತ ಕ್ರೀಡಾಭ್ಯಾಸ ಮಾಡಿದಂಥ ಅಭ್ಯರ್ಥಿಗಳಿಗೆ ಈಗಾಗಲೇ ವಿದ್ಯಾ ಇಲಾಖೆಯಲ್ಲಿ ಅವರ ಶಾಲಾ ಪ್ರವೇಶಕ್ಕೆ ಕೆಲವು ಸೀಟುಗಳನ್ನು ಮೀಸಲಾಗಿಟ್ಟಿದ್ದೀರಿ. ತಾವು ಈಗ ಇಟ್ಟಿರುವ ರೀತ್ಯ ಮೆಡಿಕಲ್‌ಗೆ ೧೧ ಸೀಟುಗಳನ್ನು ಇಟ್ಟಿದ್ದರೆ, ಇಂಜಿನೀಯರಿಂಗ್‌ಗೆ ೩೫ ಸೀಟುಗಳನ್ನು ಇಟ್ಟಿದ್ದೀರಿ. ಪಾಲಿಟೆಕ್ನಿಕ್‌ಗೆ ೪೫ ಸೀಟುಗಳನ್ನು ಇಟ್ಟಿದ್ದೀರಿ. ಅದನ್ನು ಹೆಚ್ಚಿಸಬೇಕು. ಇವತ್ತಿನ ದಿವಸ ಈ ಯುವಜನತೆಗೆ ಪ್ರೋತ್ಸಾಹ ಮಾಡಬೇಕೆಂದು ಹೇಳುವುದಾದರೆ ಇನ್ನು ಹೆಚ್ಚಿನ ಸೀಟುಗಳನ್ನು ನಿಗದಿಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ನನ್ನ ಅನಿಸಿಕೆ ಪ್ರಕಾರ ಮೆಡಿಕಲ್‌ಗೆ ೫೦, ಇಂಜಿನಿಯರಿಂಗ್‌ಗೆ ೧೦೦, ಪಾಲಿಟೆಕ್ನಿಕ್‌ಗೆ ೨೦೦ ಸೀಟುಗಳನ್ನು ಕಾದಿರಿಸಬೇಕು. ಇತ್ತೀಚೆಗೆ ಬಹಳಷ್ಟು ಡೆಂಟಲ್ ಕಾಲೇಜುಗಳು ಬಂದಿವೆ. ಈ ಮೂರು ಕಾಲೇಜುಗಳಿಗೆ ಸೀಮಿತಗೊಳಿಸದೆ ಎಲ್ಲಾ ಕಡೆಗೂ ಕೂಡ ಎನ್. ಸಿ. ಸಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಅವರ ವಿದ್ಯಾಭ್ಯಾಸಕ್ಕೆ ಸಹಾಯಕರಾಗಬೇಕೆಂದು ಅವರಿಗೆ ತರಬೇತಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೂ ತಾಲ್ಲೂಕು ಮಟ್ಟಗಳಲ್ಲಿ ಈಜುಕೊಳಗಳನ್ನು ಇದೇ ಕ್ರೀಡಾ ಇಲಾಖೆ ವತಿಯಿಂದ ಕಟ್ಟಿಸಬೇಕೆಂದು ಬೇಡಿಕೆ ಇದೆ. ಕಾರಣ, ಇವತ್ತಿನ ದಿವಸ ಒಳ್ಳೆಯ ದೇಹದಾರ್ಢ್ಯ ಬೆಳೆಸಿಕೊಳ್ಳಲು ಈಜುಕೊಳದ ಅವಶ್ಯಕತೆ ಅಷ್ಟೇ ಇದೆ. ಬೆಂಗಳೂರು ಈಜುಕೊಳ ನಷ್ಟದಿಂದ ಕೂಡಿದೆ ಎಂದು ತಿಳಿದುಕೊಂಡಿದ್ದೇನೆ. ಬೆಂಗಳೂರಿನಲ್ಲಿರತಕ್ಕ ಮಹಾ ಪೌರರಾದ ಶ್ರೀ ನರಸಿಂಹಯ್ಯನವರು ಹೇಳುತ್ತಿದ್ದಾರೆ, ಈಜುಕೊಳ ಲಾಭದಾಯಕವಾಗಿಲ್ಲ ಅದನ್ನು ಖಾಸಗಿಯವರಿಗೆ ವಹಿಸಿಕೊಡುತ್ತೇವೆ ಎಂದು. ನಾನು ಅದನ್ನು ಅನುಮೋದಿಸುವುದಿಲ್ಲ. ಕಾರಣವಿಷ್ಟೆ, ನಮ್ಮ ವಸತಿ ಸಚಿವರು ಕ್ರೀಡೆಗೆ ಪ್ರೋತ್ಸಾಹ ಕೊಡುವವರಿದ್ದಾರೆ. ಅವರನ್ನು ಕೇಳಿಕೊಳ್ಳುವುದಿಷ್ಟೆ. ಬೆಂಗಳೂರಿನಲ್ಲಿರತಕ್ಕ ಈಜುಕೊಳಗಳನ್ನು ಹಣ ಪಡೆಯುವುದಕ್ಕೋಸ್ಕರ ಅಥವಾ ಹಣ ಸಂಪಾದನೆ ಮಾಡುತ್ತೇವೆಂದು ಮಾಡಿದ್ದಲ್ಲ. ಕ್ರೀಡೆಗೆ ಉಪಯೋಗವಾಗಬೇಕು, ಯುವಕ ಯುವತಿಯರು ಮುಂದೆ ಬರಬೇಕೆಂದು ಮಾಡಿರುವುದರಿಂದ ಈ ಈಜು ಕೊಳವನ್ನು ಬೇರೆಯವರಿಗೆ ವಹಿಸಬೇಡಿ ಎಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಬೆಂಗಳೂರು ನಗರವನ್ನು ಬಹಳ ಸುಂದರವಾದ ನಗರ,

ಗಾರ್ಡನ್ ಸಿಟಿ ಎಂದು ಹೇಳುತ್ತೇವೆ. ಇಂಥ ದೊಡ್ಡ ನಗರದಲ್ಲಿ ಅಂತರ್‌ರಾಷ್ಟ್ರೀಯ ಮಟ್ಟದ ಇಂಡೋರ್ ಸ್ಟೇಡಿಯಂ ನಿಜವಾಗಿ ಬೇಕಾಗಿದೆ. ಇದಕ್ಕೆ ನಮ್ಮ ಯುವ ನೇತಾರರೂ ಹಾಗೂ ನಾಯಕರು ಆಗಿದ್ದ ಶ್ರೀ ರಾಜೀವ್ ಗಾಂಧಿಯವರ ಹೆಸರಿಟ್ಟು ಯುವ ಜನತೆಗೆ ಅವರ ಹೆಸರು ನೆನಪಿರಲಿಕ್ಕೆ ನಮ್ಮ ಬೆಂಗಳೂರು ನಗರದಲ್ಲಿ ಇಂಡೋರ್ ಸ್ಟೇಡಿಯಂ ಕಟ್ಟಿ ಈ ವರ್ಷ ಪ್ರಾರಂಭ ಮಾಡಲು ಮಾನ್ಯ ಸಚಿವರು ಶಕ್ತರಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಆರೋಗ್ಯ ಕಾಪಾಡಿಕೊಂಡಿರುವುದು ನೋಡಿದರೆ ಬೆಳಗ್ಗೆ-ಸಂಜೆ ಷಟಲ್ ಕಾಕ್, ಬ್ಯಾಡಮಿಂಟನ್ ಆಡುವುದರಿಂದ ಅವರ ಆರೋಗ್ಯ ಚೆನ್ನಾಗಿದೆ ಎಂದು ಭಾವಿಸಿದ್ದೇನೆ. ಸಂತೋಷದ ಸುದ್ದಿ ಎಂದರೆ ಈ ಸಭೆಯ ಅಧ್ಯಕ್ಷರಾದ ಶ್ರೀ ಎಸ್. ಎಂ. ಕೃಷ್ಣರವರು ಕೂಡ ದೇಹದಾರ್ಢ್ಯತೆಯನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದಾರೆ. ಇಷ್ಟಾದರೂ ಕ್ರೀಡೆ ಬಗ್ಗೆ ಮಾತನಾಡತಕ್ಕ ಜನ ಕಡಿಮೆ. ಬೆಂಗಳೂರು ನಗರದಲ್ಲಿ ಏನಾಗಿದೆ ಎಂದರೆ, ಬೊಜ್ಜು ಬೆಳೆಸಿಕೊಂಡು ನಂತರ ಬೊಜ್ಜು ಕರಗಿಸುವುದಕ್ಕೆ ಪಾರ್ಕ್‌ಗಳಲ್ಲಿ ವಾಕಿಂಗ್ ಮಾಡುತ್ತೇವೆಂದು ಹೇಳುತ್ತಾರೆ. ಅದು ತಪ್ಪು. ಮೊದಲಿನಿಂದ ಬೆಳವಣಿಗೆಯನ್ನು ಸರಿಯಾಗಿ ಇಟ್ಟುಕೊಂಡರೆ ಪಾರ್ಕ್‌ಗಳಲ್ಲಿ ಅಲೆಯುವುದು ತಪ್ಪುತ್ತದೆಂದು ಭಾವಿಸಿದ್ದೇನೆ. ಈಗಿನ ಪರಿಸ್ಥಿತಿಯಲ್ಲಿ ಇಲಾಖೆಯ ವತಿಯಿಂದ ಕ್ರೀಡಾ ಸಂಸ್ಥೆಗಳಿಗೆ ಹಣ ಕೊಡುವುದೆಂದರೆ ಬಹಳ ಕಡಿಮೆ. ಕೊಡುವುದು ಮೂರು ಕಾಸು, ಕೋಣ ತುಂಬ ಹಾಸು ಅಂದ ಹಾಗೆ ಸ್ವಲ್ಪ ಹಣ ಕೊಟ್ಟು ಹೆಚ್ಚಿನ ಕೆಲಸ ಮಾಡುತ್ತೇವೆಂದರೆ ಸಾಧ್ಯವಾಗುವುದಿಲ್ಲ. ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದೇ ಇಲಾಖೆಯಲ್ಲಿ ಇವರ ಕೈಕೆಳಗೆ ಪ್ಲೈನ್ ಟ್ರೈನಿಂಗ್ ಸ್ಕೂಲ್ ಎಂದು ಇದೆ. ಇಡೀ ರಾಷ್ಟ್ರದಲ್ಲಿ ಸುತ್ತಾಡಿ ನೋಡಿದಾಗ ಇಲ್ಲಿ ತಯಾರಾದ ಪೈಲೆಟ್ ಯಾರೂ ಕಂಡುಬಂದಿಲ್ಲ. ಅವರು ಕೊಟ್ಟಿರತಕ್ಕ ಮಾಹಿತಿ ನೋಡಿದರೆ, ಪ್ರೈವೇಟ್ ಲೈಸೆನ್ಸ್ ಕೋರ್ಸ್‌ಗೆ ಅಪಿಯರ್ ಆದವರು ೯೩ ಮಂದಿ, ಕಮರ್ಷಿಯಲ್ ಪೈಲೆಟ್ ತರಬೇತಿ ಹೊಂದಿದ ಜನರು ೯, ಅದರಲ್ಲಿ ಪರೀಕ್ಷೆಗೆ ಕುಳಿತು ಪಾಸಾದವರು ೩ ಜನ. ಈ ರೀತಿ ಕರ್ನಾಟಕದ ಜನತೆ ಬೇರೆ ಬೇರೆ ಕೆಲಸಗಳಲ್ಲಿ ತೊಡಗುವುದಲ್ಲದೆ ಅಂತರ್‌ರಾಷ್ಟ್ರೀಯ ವಿಮಾನಯಾನಕ್ಕೆ ನಮ್ಮ ಯುವಕರು ಬರಬೇಕು. ಈ ದಿಸೆಯಲ್ಲಿ ಸಚಿವರಲ್ಲಿ ಕೇಳಿಕೊಳ್ಳುವುದು, ಪ್ಲೈನ್ ಶಾಲೆಗೆ ಹೆಚ್ಚಿನ ಮಹತ್ವ ಕೊಟ್ಟು ಹಣಕಾಸಿನ ಇನ್ನಿತರ ಸೌಲಭ್ಯ ಒದಗಿಸಿಕೊಡಬೇಕು ಮತ್ತು ನಮ್ಮ ಜನತೆ ಪೈಲಟ್‌ಗಳಾಗಿ ಬರಬೇಕು. ಜೊತೆಗೆ ಈಗಿರತಕ್ಕ ಒಂದು ಏರ್‌ಕ್ರಾಫ್ಟ್ ಸಾಲದು. ಮತ್ತೊಂದು ಏರ್‌ಕ್ರಾಫ್ಟನ್ನು ಈ ಇಲಾಖೆಗೆ ಪಡೆಯಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನು ಕ್ರೀಡೆಯಲ್ಲಿ ಕೂಡ ಬಹಳಷ್ಟು ಸಮಾನತೆ ಇಲ್ಲ. ಎಲ್ಲರೂ ಕೂಡ ಕ್ರಿಕೆಟ್ ಮತ್ತು ಫುಟ್‌ಬಾಲ್ ಈ ರೀತಿಯ ಆಟಗಳ ಬಗ್ಗೆ ಹೆಚ್ಚಿನ ವ್ಯಾಮೋಹ ತೋರಿಸುತ್ತಾರೆ. ಕ್ರಿಕೆಟ್‌ಗೆ ಹೆಚ್ಚು ವ್ಯಾಮೋಹ ತೋರಿಸಿದ್ದು ನೋಡಿದಾಗ ಕೊನೆಗೆ ಒಂದು ಪದಕವನ್ನೂ ಪಡೆಯದೆ ವಾಪಸ್ ಬಂದಿರುವುದನ್ನು ನೋಡುತ್ತಿದ್ದೇವೆ. ಈ ಒಂದು ತಾರತಮ್ಯ ತಪ್ಪಬೇಕು. ದೇಶೀಯ ಆಟವಾದ ಕಬ್ಬಡ್ಡಿ, ಕೊಕ್ಕೋ, ಮುಂತಾದ ಆಟಗಳಿಗೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಈ ವಿಷಯದಲ್ಲಿ ಮಾಧ್ಯಮಗಳು ಕೂಡ ತಾರತಮ್ಯವನ್ನು ತೋರಿಸುತ್ತಿವೆ ಎಂದು ನಾನು ಅಂದು ಕೊಂಡಿದ್ದೇನೆ.

ಛೇರ್ಮನ್:- ಟೈಮ್ ಆಯಿತು.

ಶ್ರೀ ಡಿ. ಕೆ. ಶಿವಕುಮಾರ್:- ಕ್ರೀಡೆ ಬಗ್ಗೆ ಮಾತನಾಡುವವರೇ ಕಡಿಮೆ. ತಾವು ದಯವಿಟ್ಟು

ಅವಕಾಶ ಮಾಡಿಕೊಡಿ.

ಛೇರ್ಮನ್:- ೫ ಗಂಟೆಗೆ ಕ್ಲೋಸ್ ಮಾಡಬೇಕು. ಸರ್ಕಾರದವರು ನಾಳೆಯೂ ಮುಂದುವರೆಯಲಿ ಎಂದರೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಹೆಚ್. ಎಂ. ರೇವಣ್ಣ:- ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಕ್ರೀಡೆ ಬಗ್ಗೆ ಬಹಳಷ್ಟು ಆಸಕ್ತಿ ಹೊಂದಿರತಕ್ಕ ಜನ ಇಲ್ಲಿ ಇದ್ದಾರೆ. ನನಗೆ ತಿಳಿಯದ ಮಟ್ಟಿಗೆ ಶ್ರೀಮತಿ ಮೋಟಮ್ಮನವರು ನನ್ನ ಜೊತೆಯಲ್ಲಿ ವಾಲಿಬಾಲ್‌ನಲ್ಲಿ ಒಳ್ಳೆಯ ಕ್ರೀಡಾಗಾರ್ತಿ. ಬೆಂಗಳೂರು ವಿಶ್ವವಿದ್ಯಾನಿಲಯ ಮತ್ತು ರಾಜ್ಯವನ್ನು ಪ್ರತಿನಿಧಿಸಿದಂಥವರು ಅವರು ಇದ್ದಾರೆ. ವಾಲಿಬಾಲ್‌ನಲ್ಲಿ ಉಮಾಪತಿ ಇದ್ದಾರೆ. ಆದರೆ ಇವತ್ತು ಏಕೋ ಅವರು ಇದರ ಬಗ್ಗೆ ಮಾತನಾಡಲಿಲ್ಲ. ನಾನಾದರೂ ಇಷ್ಟನ್ನು ಹೇಳಿ ಜೊತೆಗೆ ನಮ್ಮ ರಾಷ್ಟ್ರದ ಸಂಪತ್ತಾದ ಯುವಶಕ್ತಿ ಬಗ್ಗೆ ಹೆಚ್ಚಿನ ಚಿಂತನೆ ಮಾಡಬೇಕೆಂದು ಹೇಳಿ ಇನ್ನು ಒಂದೆರಡು ಮಾತುಗಳನ್ನು ವಸತಿ ಮತ್ತು ನಗರಾಭಿವೃದ್ಧಿ ಸಚಿವರಿಗೆ ತಿಳಿಸುತ್ತೇನೆ. ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಿದೆ. ಮಾನ್ಯ ಯಾಹ್ಯಾರವರು ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗೆ ಅವಕಾಶ ಕೊಡಬೇಡಿ ಎಂದು ಹೇಳುತ್ತಾರೆ. ಆದರೆ ಬೆಂಗಳೂರು ಬೆಳೆಯುವ ರೀತಿ ನೋಡಿದಾಗ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಹೆಚ್ಚಾಗಿ ಇವತ್ತಿನ ದಿವಸ ಅವರಿಗೆ ಕನಿಷ್ಠ ಸೌಲಭ್ಯ ಏನು ಕೊಡಬೇಕೋ ಅದನ್ನು ಕೂಡ ಕೊಡುವುದಕ್ಕಾಗದ ರೀತಿಯಲ್ಲಿ ಬೆಂಗಳೂರು ನಗರ ಬೆಳೆಯುತ್ತಿದೆ. ಎಲ್ಲರೂ ಹೇಳುವ ರೀತಿಯಲ್ಲಿ ಅತಿ ವೇಗದಿಂದ ಬೆಳೆಯುತ್ತಿರುವ ನಗರ. ಇದಕ್ಕೆ ಕನಿಷ್ಠ ಸೌಲಭ್ಯ ಕೊಡದೇ ಹೋದಾಗ ಕಷ್ಟವಾಗುತ್ತದೆ. ಬೆಂಗಳೂರು ನಗರ ಜಿಲ್ಲೆಯವರು ನಾವು ಏನಿದ್ದೇವೆ ಒಂದು ಚಿಂತನೆಯನ್ನು ಮಾಡಬೇಕು. ಬೆಂಗಳೂರು ಅಕ್ಕಪಕ್ಕದ ತಾಲ್ಲೂಕುಗಳಲ್ಲಿರುವವರಿಗೆ ಒಳ್ಳೆಯ ಕುಡಿಯುವ ನೀರು ಸಂಪರ್ಕವನ್ನು ಕೊಟ್ಟು ಪೂನಾ ಬಾಂಬೆ ರೀತಿ ಅಕ್ಕಪಕ್ಕದ ತಾಲ್ಲೂಕಿನ ಮುಖ್ಯ ಕೇಂದ್ರಗಳಲ್ಲಿ ಹೆಚ್ಚಿನ ರೀತಿಯ ಸೌಕರ್ಯವನ್ನು ಕೊಟ್ಟು ಜನ ಅಲ್ಲೇ ಉಳಿಯುವ ರೀತಿಯಲ್ಲಿ ಮಾಡಿದರೆ ಬೆಂಗಳೂರಿಗೆ ಬರತಕ್ಕ ಜನತೆಯ ಸಂಖ್ಯೆ ಕಡಿಮೆಯಾಗುತ್ತದೆ ಎಂದು ನಾನಾದರೂ ಭಾವಿಸಿದ್ದೇನೆ. ಬೆಂಗಳೂರಿನ ಸುತ್ತ ಮುತ್ತ ಇರತಕ್ಕ ಉತ್ತರಹಳ್ಳಿ ಮತ್ತು ನನ್ನ ಕ್ಷೇತ್ರದ ಭಾಗ ನೋಡಿದಾಗ ಅದು ಈ ಕಡೆ ಬೆಂಗಳೂರಿಗೂ ಸೇರಿಲ್ಲ, ಆ ಕಡೆ ಜಿಲ್ಲಾ ಪರಿಷತ್ತಿಗೂ ಸೇರಿಲ್ಲ. ಅಲ್ಲಿಯ ಜನತೆ ಬಹಳ ಬವಣೆಪಡುತ್ತಿದ್ದಾರೆ. ಕುಡಿಯುವ ನೀರು ಸಿಗದೆ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆ ಜನತೆಗೆ ನಾವು ಹೆಚ್ಚಿನ ಸೌಲಭ್ಯವನ್ನು ಕೊಡಬೇಕು. ಕೆಲವು ಭಾಗವನ್ನು ಬೆಂಗಳೂರು ಸಿಟಿಗೆ ಸೇರಿಸಿಕೊಳ್ಳುತ್ತೇವೆ ಎಂದು ನೋಟಿಫೈ ಮಾಡುವುದಕ್ಕೆ ಹೋಗಿ ಕೋರ್ಟಿನಿಂದ ನಿಂತುಹೋಗಿದೆ. ಅಂಥಹವರಿಗೆ ಕುಡಿಯುವ ನೀರು ಮತ್ತು ಕನಿಷ್ಠ ಸೌಲಭ್ಯಕ್ಕೆ ನಾವು ಬೇರೆ ಹಣ ನೀಡಬೇಕೆಂದು ಮಾನ್ಯ ವಸತಿ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇಷ್ಟನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್:- ಈಗ ರಾಮಲಿಂಗರೆಡ್ಡಿಯವರು ಹತ್ತು ನಿಮಿಷಗಳಲ್ಲಿ ಮುಗಿಸಿ.

ಶ್ರೀ ರಾಮಲಿಂಗಾರೆಡ್ಡಿ:- ಬಹಳ ಮಾತನಾಡುವುದಿದೆ.

ಛೇರ್ಮನ್:- ಪಾಯಿಂಟ್ಸ್ ಹೇಳಿ ಸಾಕು.

ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಸಭಾಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ

ಸಚಿವರಾದ ಕೆ.ಜೆ. ಜಾರ್ಜ್ ಅವರು ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸಿ ಅವರು ಮಂಡಿಸಿರುವುದರಲ್ಲಿ ಹಲವಾರು ಒಳ್ಳೆಯ ಕಾರ್ಯಕ್ರಮಗಳಿವೆ ಎಂದು ಹೇಳುತ್ತೇನೆ. ಆದರೆ ಅದರಲ್ಲಿ ಹಲವಾರು ಲೋಪದೋಷಗಳಿವೆ. ಅವರು ಯುವಕರು, ಉತ್ಸಾಹಿಗಳು. ಹಿಂದೆ ಅವರು ಆಹಾರ ಮತ್ತು ನಾಗರೀಕಸರಬರಾಜು ಮಂತ್ರಿಗಳಾಗಿದ್ದಾಗ ಅವರು ನಮ್ಮ ಶಾಸಕರುಗಳನ್ನು ಕರೆದು ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡು ಬೆಂಗಳೂರು ನಗರದಲ್ಲಿ ಬಹಳವರ್ಷಗಳಿಂದ ಯಾರಿಗೆ ರೇಷನ್ ಕಾರ್ಡ್ ಇರಲಿಲ್ಲ ಅವರಿಗೆ ಎಲ್ಲಾ ರೇಷನ್ ಕಾರ್ಡ್ ಮಾಡಿಸಿಕೊಟ್ಟಿದ್ದಾರೆ. ಅದೇ ರೀತಿ ಸಾರಿಗೆ ಮಂತ್ರಿಗಳಾಗಿದ್ದ ನಮ್ಮ ಸಲಹೆಗಳನ್ನು ತೆಗೆದುಕೊಂಡು ಕೆಲಸ ಮಾಡಿಕೊಟ್ಟಿದ್ದರು. ಈಗ ಅವರು ನಗರಾಭಿವೃದ್ಧಿ ಸಚಿವರಾದ ಮೇಲೆ ಒಂದೆರಡು ಬಾರಿ ಕರೆದಿದ್ದರಷ್ಟೇ. ಬಹಳ ದೊಡ್ಡ ಮತ್ತು ಅತ್ಯುತ್ತಮವಾದ ಕೆಲಸ ಮಾಡುವುದಕ್ಕೆ ಈ ನಗರದ ಎಲ್ಲಾ ಶಾಸಕರ ಸಲಹೆಗಳನ್ನು ಅವರು ತೆಗೆದುಕೊಂಡು ಇನ್ನೂ ಒಂದು ಹೆಚ್ಚಿನ ಒಳ್ಳೆಯ ಕಾರ್ಯಕ್ರಮಗಳನ್ನು ಅವರು ಹಾಕಬಹುದಾಗಿತ್ತು. ನಾನು ಪಪ್ರಥಮವಾಗಿ ಮಾತನಾಡುತ್ತಾ ವಸತಿ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ವಸತಿ ಎನ್ನುವುದು ಪ್ರತಿಯೊಬ್ಬರ ಜೀವನದಲ್ಲಿ ಬರುವಂತಹದ್ದು. ಅವರು ಗುಡಿಸಲಿನಲ್ಲಿ ಇರಲಿ ಅಥವಾ ಅರಮನೆಯಲ್ಲಿ ಇರಲಿ. ಅರಮನೆಯಲ್ಲಿ ಇರುವಂತಹವರಿಗೂ ಇದ್ದೇ ಇರುತ್ತದೆ, ಪ್ರತಿಯೊಬ್ಬರಿಗೂ ಜೀವನದಲ್ಲಿ ಆಸೆ ಏನೆಂದರೆ, ಒಂದು ಸೈಟ್ ಇರಬೇಕು, ಆ ಸೈಟನಲ್ಲಿ ಮನೆ ಕಟ್ಟಬೇಕು ಎಂಬುದು. ವಸತಿ ಸೌಕರ್ಯ ಕಲ್ಪಿಸುವುದು ನಮ್ಮ ಸರ್ಕಾರದ ಕರ್ತವ್ಯ. ಆ ದೃಷ್ಟಿಯಲ್ಲಿ ಬೆಂಗಳೂರಿನಲ್ಲಿ ಬಿ. ಡಿ. ಎ. ಇದೆ. ಜಿಲ್ಲಾ ಮಟ್ಟದಲ್ಲಿ ಡೆವಲಪ್‌ಮೆಂಟ್ ಅಥಾರಿಟೀಸ್ ಇವೆ. ಇವು ೨೦ ಜಿಲ್ಲೆಗಳಲ್ಲಿ ಇರಬಹುದು. ಮತ್ತೆ ತಾಲ್ಲೂಕು ಮಟ್ಟದಲ್ಲಿ ಅಸಿಸ್ಟೆಂಟ್ ಕಮೀಷನರ್, ತಹಶೀಲ್ದಾರರು ಏನಿದ್ದಾರೆ ಅವರ ಜೊತೆಗೆ ಈಗ ಹೊಸದಾಗಿ ಟಾಸ್ಕ್ ಫೋರ್ಸ್ ಕಮಿಟಿ ಅಂತ ಏನಿದೆ ಇದು ಅವರ ಕರ್ತವ್ಯ ಆಗಿದೆ. ನಾನು ಬೆಂಗಳೂರು ನಗರದಿಂದ ಗೆದ್ದಿರುವಾತ. ನಾನು ನಗರಸಭೆಯ ಸದಸ್ಯನಾಗಿದ್ದೆ. ಬೆಂಗಳೂರನ್ನು ಪ್ರತಿನಿಧಿಸತಕ್ಕವನಾದ್ದರಿಂದ ಬಿ. ಡಿ. ಎ. ಬಗ್ಗೆ ಒಂದೆರಡು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಇವತ್ತು ಬೆಂಗಳೂರು ನಗರ ಪ್ರಪಂಚದಲ್ಲಿಯೇ ಅತಿ ವೇಗದಲ್ಲಿ ಬೆಳವಣಿಗೆ ಹೊಂದುತ್ತಿರುವಂತಹ ಎರಡನೆಯ ನಗರವಾಗಿದೆ. ಇವತ್ತು ಬೆಂಗಳೂರು ನಗರದಲ್ಲಿ ಜನಸಂಖ್ಯೆ ವಿಪರೀತ ದಟ್ಟವಾಗುತ್ತ ಇದೆ. ಈ ಒಂದು ದಿಕ್ಕಿನಲ್ಲಿ ಹೋಗುತ್ತಿರುವಾಗ ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ಯೋಚನೆ ಮಾಡಬೇಕು. ಬೆಂಗಳೂರಿನಲ್ಲಿ ೯೮೦೦೦ರವರೆಗೂ ಸೈಟುಗಳನ್ನು ಹಂಚಿದ್ದಾರೆ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಸುಮಾರು ೧೦ ಸಾವಿರ ಸೈಟ್‌ಗಳನ್ನು ಲಾಲಬಾಗ್ ಗ್ಲಾಸ್ ಹೌಸ್‌ನಲ್ಲಿ, ಪೂಜಾರಿಯವರು ಲೋನ್ ಮೇಳಾವನ್ನು ಮಾಡಿದ್ದಕ್ಕೋಸ್ಕರ ನಾವು ಇದನ್ನು ಸೈಟ್ ಮೇಳ ಮಾಡುತ್ತೇವೆಂದು ೧೦ ಸಾವಿರ ಸೈಟ್‌ಗಳನ್ನು ಹಂಚಿದರು. ಅದರಲ್ಲಿ ಇನ್ನೂ ೩ ಸಾವಿರ ಸೈಟ್‌ಗಳನ್ನು ಅವರಿಗೆ ಕೊಟ್ಟಿರುವುದಿಲ್ಲ. ಅವರಿಗೆ ಈ ಬಗ್ಗೆ ಆರ್ಡರ್ ಹೋಗಿದೆ ಆ ಜನರು ಹಣವನ್ನು ಕೊಟ್ಟಿದ್ದಾರೆ. ಆದರೆ ಅವರಿಗೆ ಸೈಟನ್ನು ತೋರಿಸಿಲ್ಲ. ಈಗ ಸುಮಾರು ೮೯ ಸಾವಿರ ಅಪ್ಲಿಕೇಷನ್ಸ್ ಎರಡು ವರ್ಷಗಳಿಂದ ಪೆಂಡಿಂಗ್‌ನಲ್ಲಿದೆ. ಯಾರೂ ಹಣವನ್ನು ವಾಪಸ್ಸು ತೆಗೆದುಕೊಂಡಿಲ್ಲ. ತೆಗೆದುಕೊಂಡಿದ್ದರೂ ಬಹಳ ಕಡಿಮೆ ಜನ ತೆಗೆದುಕೊಂಡಿದ್ದಾರೆ. ಈ ೮೯ ಸಾವಿರ ಜನರಿಗೆ ಬಿ. ಡಿ. ಎ. ಯಾವಾಗ ಸೈಟ್ ಕೊಡುತ್ತದೆ? ಮತ್ತು ಇದೇ ರೇಷಿಯೋದಲ್ಲಿ ಇದೇ ರೀತಿ ಕೆಲಸ ಮಾಡಿದರೆ ಇನ್ನೂ ೨೦ ವರ್ಷಗಳಾದರೂ ಈ ೮೯ ಜನರಿಗೆ ಕೊಡುವುದಕ್ಕಾಗುವುದಿಲ್ಲ. ಇನ್ನು ಹೊಸದು ಬಿಡಿ. ಈ ೮೯

ಸಾವಿರ ಜನರಿಗೆ ಸೈಟ್ ಕೊಡುವುದಕ್ಕಾಗುವುದಿಲ್ಲ. ಇದೇ ರೀತಿ ಅವರು ಸುಮಾರು ೫-೬ ವರ್ಷಗಳಿಂದ ಒಬ್ಬೊಬ್ಬರ ಹತ್ತಿರ ೫ ಸಾವಿರ, ೬ ಸಾವಿರ, ೮ ಸಾವಿರ, ೧೦ ಸಾವಿರ ರೂಪಾಯಿಗಳನ್ನು ಸೈಟ್‌ಗಳ ಮೆಷರ್‌ಮೆಂಟ್‌ಗೆ ಅನುಗುಣವಾಗಿ ಹಣವನ್ನು ತೆಗೆದುಕೊಂಡು ಡೆಪಾಸಿಟ್ ಇಟ್ಟುಕೊಂಡಿದ್ದಾರೆ. ಅದನ್ನು ವಾಪಸ್ಸು ಕೊಡುವ ವ್ಯವಸ್ಥೆ ಆಗಬೇಕು. ಬಡ್ಡಿ ಸಮೇತ ಕೊಡಬೇಕೆಂದು ಹೇಳುತ್ತೇನೆ. ಇನ್ನು ಈ ಒಂದು ಸಮಸ್ಯೆ ನೀಗಿಸುವುದಕ್ಕೆ ಕೋ-ಆಪರೇಟೀವ್ ಸೊಸೈಟಿಗಳ ಪಾತ್ರವೂ ಇತ್ತು. ಆದರೆ ಈ ಸಹಕಾರಿ ಸಂಘಗಳಲ್ಲಿ ೧೯೮೨ರಿಂದ ಬೆಂಗಳೂರಿನಲ್ಲಿ ಲಕ್ಷಾಂತರ ಜನರು ಸದಸ್ಯರಾಗಿದ್ದು ಸರ್ಕಾರ ಇವತ್ತು ಕೊಡುತ್ತದೆ, ನಾಳೆ ಕೊಡುತ್ತದೆ ಎಂದು ತಿಳಿದಿದ್ದಾರೆ. ಇವರಿಗೆ ಸೈಟ್ ಕೊಡುವ ಬಗ್ಗೆ ಯಾವುದೇ ಡಿಸಿಷನ್ ತೆಗೆದುಕೊಂಡಿಲ್ಲ, ಕೊಡುವುದಕ್ಕಾಗುವುದಿಲ್ಲ ಎಂದರೆ ಈ ಸೊಸೈಟಿಗಳಿಗೆ ಜಾಗ ಕೊಡುವುದಿಲ್ಲವೆಂದರೆ ಆ ಜನರು ತಮ್ಮ ಹಣವನ್ನಾದರೂ ವಾಪಸ್ಸು ತೆಗೆದುಕೊಳ್ಳುವುದಕ್ಕಾಗುತ್ತದೆ. ಈ ಸಹಕಾರಿ ಸಂಘಗಳ ಬಗ್ಗೆ ಹೇಳಬೇಕು ಎಂದರೆ ಮಧ್ಯವರ್ತಿಗಳು ಇವತ್ತು ಹಣವನ್ನು ತಿಂದು ಮಜಾ ಮಾಡುತ್ತಿದ್ದಾರೆ. ರೈತ ಮೊದಮೊದಲು ತನ್ನ ಜಾಗವನ್ನು ಸೊಸೈಟಿಗಳಿಗೆ ಮಾರಿದ. ಮೊದಲು ಏಜೆಂಟ್ಸ್ ರೈತರಿಂದ ೬೦-೭೦ ಸಾವಿರ ರೂಪಾಯಿಗೆ ತೆಗೆದುಕೊಂಡಿದ್ದು ಈಗ ಅವು ೬ ರಿಂದ ೭ ಲಕ್ಷರೂಪಾಯಿಗಳವರೆಗೆ ಬೆಲೆ ಬಾಳುತ್ತಿದೆ. ಆಗ ರೈತ ಮಧ್ಯವರ್ತಿಗೆ ಮಾರಿದ್ದ. ಈಗ ಅವರು ಮಾರಿ ಹಣ ಮಾಡುತ್ತಿದ್ದಾರೆ. ಇವತ್ತು ಈ ಸೊಸೈಟಿಗಳ ಬಗ್ಗೆ ಏನಾದರೂ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇವತ್ತು ಬಿ. ಡಿ. ಎ. ನವರು ಏನು ನೋಟಿಫೈ ಮಾಡಿದ್ದಾರೆ ಅಲ್ಲಿ ಸಾಕಷ್ಟು ರೆವಿನ್ಯೂ ಪಾಕೆಟ್ ಆಗಿಬಿಟ್ಟಿವೆ. ಇದಾಗುವುದಕ್ಕೆ ಕಾರಣ ಏನು? ಬಿ. ಡಿ. ಎ. ಅಧಿಕಾರಿಗಳು ಇದಕ್ಕೆ ಕಾರಣರೇ? ಅಥವಾ ಇಲ್ಲವೇ? ಇದಕ್ಕೆ ಕಾರಣರು ಯಾರು ಎಂದು ಕೇಳುತ್ತೇನೆ. ರೆವಿನ್ಯೂ ಪಾಕೆಟ್ಸ್ ಆಗುವುದಕ್ಕೆ ಮೂಲಭೂತ ಪ್ರಶ್ನೆ ಏನೆಂದರೆ ಬಿ. ಡಿ. ಎ. ನವರು ಸೈಟ್‌ಗಳನ್ನು ಕೊಟ್ಟುಬಿಟ್ಟಿದ್ದಿದ್ದರೆ ರೆವಿನ್ಯೂ ಪಾಕೆಟ್ಸ್ ಆಗುತ್ತಾ ಇತ್ತೇ? ಇವತ್ತು ಬಿ. ಡಿ. ಎ. ಫೈಲ್ಯೂರ್ ಆಗಿರುವುದರಿಂದ ಮಧ್ಯವರ್ತಿಗಳು ರೈತರಿಂದ ಜಮೀನು ತೆಗೆದುಕೊಂಡು ಮಾರಿದ್ದಾರೆ. ಸರಿಯಾದ ವಾಟರ್ ಸಪ್ಲೈ ಇಲ್ಲ, ಸ್ಯಾನಿಟರಿ, ಬೀದಿ ದೀಪದ ವ್ಯವಸ್ಥೆ ಇಲ್ಲ. ಬೆಂಗಳೂರಿನ ಹೊರವಲಯದಲ್ಲಿ ಇಂತಹ ಎಷ್ಟೋ ಪ್ರದೇಶಗಳು ಇವೆ. ಇನ್ನು ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಅಕ್ರಮ ಮನೆಗಳನ್ನು ಏನು ಕಟ್ಟಿದ್ದಾರೆ ಅದನ್ನು ಸಕ್ರಮ ಮಾಡುತ್ತೇವೆ ಎಂದು ಹೇಳಿದ್ದೆವು. ಅದನ್ನು ಇನ್ನೂ ಮಾಡಿಲ್ಲ. ನಾವು ಗೆದ್ದುಬಂದು ಈಗಾಗಲೆ ಎರಡೂವರೆ ವರ್ಷಗಳಾಗಿದ್ದು, ಇನ್ನು ಎರಡೂವರೆ ವರ್ಷಗಳು ಮಾತ್ರ ಉಳಿದಿವೆಯಷ್ಟೇ. ಇದನ್ನು ಯಾವಾಗ ಮಾಡುತ್ತೀರಿ ಎಂದು ತಾವು ತಿಳಿಸಬೇಕು. ಮಾನ್ಯ ಮಂತ್ರಿಗಳನ್ನು ಎರಡು-ಮೂರು ಸಾರಿ ಕೇಳಿದ್ದೆ, ಅಕ್ರಮ ಮನೆಗಳನ್ನು ಸಕ್ರಮಗೊಳಿಸುವುದಕ್ಕೆ ಹೊರಟಿದ್ದೀರಿ ನಮ್ಮ ಸಲಹೆಗಳನ್ನು ತೆಗೆದುಕೊಳ್ಳಿ ನಾವು ಬೆಂಗಳೂರಿನಲ್ಲಿ ಇರತಕ್ಕ ಶಾಸಕರು, ನಾವು ನಿಮಗೆ ಸಲಹೆ ಕೊಡುತ್ತೇವೆಂದು ಹೇಳಿದ್ದೆ. ಅವರು ನಮ್ಮನ್ನು ಕರಿಯಲಿಲ್ಲ. ಅಧಿಕಾರಿಗಳು ಹಿಂದಿನ ಮಾನ್ಯ ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಏನು ಮಾಡಿದ್ದರು ಅದನ್ನು ಇವರು ಮಾಡಿದ್ದಾರೆ. ಹಾಗೆಯೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಜನಗಳಿಗೆ ಅನುಕೂಲವಾಗುವ ಹಾಗೆ ವಸತಿ ಕಲ್ಪಿಸಿಕೊಡಬೇಕು ಅವರು ಆ ಕೆಲಸವನ್ನು ಬಿಟ್ಟು ಬೇರೇ ಏನೋ ಕೆಲಸವನ್ನು ಮಾಡುತ್ತಾರೆ. ಏನಾದರೂ ಒಂದು ಕೆಲಸ ಮಾಡುತ್ತಿರಬೇಕು. ಏಕೆಂದರೆ ಅಲ್ಲಿ ಸಾವಿರಾರು ಕೆಲಸಗಾರರು ಇದ್ದಾರೆ. ಅವರಿಗೆ ಸಂಬಳವನ್ನು ಕೊಡಬೇಕು. ಅವರು ಸಂಬಳ ಕೊಡುವುದಕ್ಕೆ ಯಾವರೀತಿ ಮಾಡುತ್ತಾರೆ ಎನ್ನುವುದಕ್ಕೆ ಕೆಲವು

ಉದಾಹರಣೆಗಳನ್ನು ಕೊಡುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಕಾರ್ನರ್ ಸೈಟುಗಳಿವೆ. ತಾವು ಸಹ ಪ್ರತಿನಿತ್ಯ ಪತ್ರಿಕೆಗಳಲ್ಲಿ ನೋಡುತ್ತಾ ಇರುತ್ತೀರಿ. ಅಲ್ಲಿ ಇಲ್ಲಿ ಕಾರ್ನರ್ ಸೈಟುಗಳನ್ನು ಹರಾಜು ಮಾಡುತ್ತಿರುತ್ತಾರೆ. ಇಂತಹ ಲೇಔಟ್‌ನಲ್ಲಿ ಆಕ್ಷನ್ ಹಾಕಲಾಗುತ್ತಿದೆ. ಇಂತಹ ಕಾರ್ನರ್ ಸೈಟುಗಳನ್ನು ಹರಾಜು ಹಾಕಲಾಗುತ್ತದೆ ಎಂದು ವಾರ ಪತ್ರಿಕೆಗಳಲ್ಲಿ ಬರುತ್ತಿರುತ್ತದೆ. ಆದರೆ ಅಂತಹ ಸಿ. ಎ. ಸೈಟ್ಸ್ ಯಾವುದು ಇದೆ, ಸ್ಕೂಲ್ ಮಕ್ಕಳಿಗೆ ಆಟ ಆಡುವುದಕ್ಕೆ ಎಂದು ಮೀಸಲಾಗಿಟ್ಟ ಜಾಗಗಳನ್ನು ಸಹ ಅಲಾಟ್ ಮಾಡುತ್ತಿದ್ದಾರೆ. ಅದನ್ನು ಬಿಟ್ಟು ಬೇರೇನು ಕೆಲಸವನ್ನು ಅವರು ಮಾಡುತ್ತಿಲ್ಲ. ಅದನ್ನು ನಾವು ಪ್ರತಿನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. ಯಾವ್ಯಾವುದೋ ಪರ್ಪಸ್‌ಗೆ ಇಟ್ಟಿರತಕ್ಕ ಸೈಟುಗಳನ್ನು ಇವರು ಅಲಾಟ್ ಮಾಡುತ್ತಿದ್ದಾರೆ. ಮತ್ತು ಡೀ ನೋಟಿಫಿಕೇಷನ್ ಆಗುತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಹೆಚ್. ಜಿ. ವಿ. ರೆಡ್ಡಿಯವರು ಬಿ. ಡಿ. ಎ. ಛೇರ್ಮನ್ ಆಗಿದ್ದರು. ಸುಪ್ರೀಂಕೋರ್ಟ್‌ನಲ್ಲಿ ಬಿ. ಡಿ. ಎ. ಪರವಾಗಿ ಆಗಿರತಕ್ಕ ಜಮೀನುಗಳನ್ನು ಸಹ ಡೀ ನೋಟಿಫೈ ಮಾಡಿಕೊಂಡರು. ಮೊದಲಿನಿಂದಲೂ ಬಿ. ಡಿ. ಎ. ನಲ್ಲಿ ಅದೇ ಕೆಲಸ ಆಗುತ್ತಿದೆ. ಪ್ರಭಾವಿಶಾಲಿಗಳ ಜಮೀನುಗಳನ್ನು ಡೀ ನೋಟಿಫಿಕೇಶನ್ ಮಾಡುತ್ತಿದ್ದಾರೆ. ಶ್ರೀಮತಿ ಹೇಮಮಾಲಿನಿಯವರ ಎಸ್ಟೇಟ್ ಸುಮಾರು ೩೫ ಎಕರೆ ಇದ್ದು ಅದನ್ನು ಏತಕ್ಕೆ ಡೀ ನೋಟಿಫೈ ಮಾಡಿದ್ದುದು? ಅವರು ಬಡ ಜನರಲ್ಲ. ಯಾರು ಹಣ ಕಟ್ಟುತ್ತಾರೆ ನೀವು ಅವರಿಗೆ ಸೈಟುಗಳನ್ನು ಕೊಡಬೇಕೆಂದು ಲೇಔಟ್ ಮಾಡುವುದಕ್ಕೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಬೇಕು. ಬಡ ಜನರಿಗೆ ಸೈಟುಗಳನ್ನು ಕೊಡುವುದಕ್ಕೆ ಭೂಮಿಯನ್ನು ಅಕ್ವೈರ್ ಎಲ್ಲಿ ಮಾಡಿದ್ದೀರಿ? ಮೋಹನ್ ಮೆಕ್ಕಾನ್ ಅವರದು ಏತಕ್ಕೆ ಡೀ ನೋಟಿಫಿಕೇಶನ್ ಮಾಡಿದಿರಿ? ಈ ರೀತಿಯಾಗಿ ಪ್ರತಿಯೊಬ್ಬರಿಗೂ ಪ್ರಭಾವಶಾಲಿಗಳಿಗೆ ಮಾಡಿಕೊಂಡು ಹೋಗುತ್ತಿದ್ದರೆ ಬಡವರಿಗೆ ನೀವು ಯಾವಾಗ ಸೈಟುಗಳನ್ನು ಕೊಡುವುದಕ್ಕೆ ಆಗುತ್ತದೆ? ಗ್ರೂಪ್ ಹೌಸಿಂಗ್ ಸ್ಕೀಮ್ ಮಾಡಲಿಕ್ಕೆ ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಬಿ. ಡಿ. ಎ. ಚೇರ್ಮನ್ ಹೆಚ್. ಜಿ. ವಿ. ರೆಡ್ಡಿಯವರ ಕಾಲದಲ್ಲಿ ಯಾರಿದ್ದರು ಅವರೇ ಇವತ್ತು ವಿಧಾನಸೌಧದಲ್ಲಿ ಸೆಕ್ರೆಟರಿಯೇಟ್‌ನಲ್ಲಿ ಓಡಾಡುತ್ತಿದ್ದಾರೆ. ಗ್ರೂಪ್ ಹೌಸಿಂಗ್ ಸ್ಕೀಮ್ ಮಾಡಲಿಕ್ಕೆ ಬಾಂಬೆಯಿಂದ ಬಂದಿದ್ದಾರೆಯೇ? ಎಲ್ಲಿ ನೋಡಿದರೂ ಅವರೇ ಕಾಣಿಸುತ್ತಾರೆ. ವಿಧಾನಸೌಧದಲ್ಲಿ ಕಾಣಿಸುತ್ತಾರೆ, ಮಲ್ಟಿಸ್ಟೋರಿಡ್ ಬಿಲ್ಡಿಂಗ್ ಹತ್ತಿರ ಕಾಣಿಸುತ್ತಾರೆ. ಏತಕ್ಕೆ ನಾವು ಭೂಮಿಯನ್ನು ಬಾಂಬೆಯವರಿಗೆ ಗ್ರೂಪ್ ಹೌಸಿಂಗ್ ಸ್ಕೀಮ್ ಮನೆಗಳನ್ನು ಕಟ್ಟುವುದಕ್ಕೆ ಕೊಡುವುದು? ಅವರ ಬದಲಾಗಿ ಲ್ಯಾಂಡ್ ಓನರ್ಸ್‌ಗೆ ಕೊಡಿ. ಅವರೇ ಗ್ರೂಪ್ ಹೌಸಿಂಗ್ ಮಾಡಲಿ. ಆಮೇಲೆ ಗ್ರೀನ್ ಬೆಲ್ಟ್ ಏರಿಯಾದಲ್ಲಿ ಕನ್ಸಟ್ರಕ್ಷನ್ ಮಾಡುವುದು ಸರಿಯೆ? ಎಷ್ಟು ಎಕರೆ ಭೂಮಿಯನ್ನು ಗ್ರೀನ್ ಬೆಲ್ಟ್ ಏರಿಯಾದಲ್ಲಿ ಕನ್ಸಟ್ರಕ್ಷನ್‌ಗೆ ಕೊಡಬಹುದೆಂದು ಅದನ್ನು ರೆಸಿಡೆನ್ಷಿಯಲ್ ಪರ್ಪಸ್‌ಗೆ ಕೊಡಬಹುದೆನ್ನುವುದನ್ನು ತಾವು ಮಾಡುತ್ತಿದ್ದೀರಿ? ಇದಕ್ಕೆ ಯಾರದು ಕುಮ್ಮಕ್ಕು? ಅಧಿಕಾರಿಗಳು ಇದನ್ನು ಮಾಡುವುದಕ್ಕೆ ಆಗುತ್ತದೆಯೇ? ಮಂತ್ರಿಗಳು ಯಾರು ಮಾಡುತ್ತಿದ್ದಾರೆ? ಇಲ್ಲ ಯಾರಾದರೂ ಪ್ರಭಾವಶಾಲಿಗಳು ಮಾಡುತ್ತಿದ್ದಾರೆಯೇ? ನಮ್ಮ ಭಾಗದವರು ಮಾಡುತ್ತಿದ್ದಾರೆಯೆ? ಬಿ. ಡಿ. ಎ. ನಲ್ಲಿ ಒಂದು ದೊಡ್ಡ ರಾಕೆಟ್ ಇದೆ. ನಾನು ಉದಾಹರಣೆಗೆ ಹೇಳುತ್ತೇನೆ. ಜಯನಗರದಲ್ಲಿ ಒಂದು ಲೇಔಟ್ ಇದೆ. ಅಲ್ಲಿ ಅಧಿಕಾರಿಗಳ ಕಣ್ಣು ತಪ್ಪಿಸಿ ಒಂದೆರಡು ಸೈಟುಗಳು ಉಳಿದುಕೊಂಡಿರುತ್ತವೆ. ಅಲಾಟ್‌ಮೆಂಟ್ ಮಾಡುವಾಗ ಏನೋ ಮಿಸ್ ಆಗಿರುತ್ತದೆ. ಅದನ್ನು ಡೂಪ್ಲಿಕೇಟ್ ಮಾಡುವ ಒಂದು ರಾಕೆಟ್ ಇದೆ.

ಆದು ಅಧಿಕಾರಿಗಳಿಗೆ ಗೊತ್ತಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಅಲ್ಲಿ ಆಗುತ್ತಿದ್ದ ಅನಾಹುತವನ್ನು ನಾನು ತಪ್ಪಿಸಿದ್ದೇನೆ. ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. ಜಯನಗರ ಬಡಾವಣೆಯಲ್ಲಿ ಸೈಟ್ ನಂ. ೫೯, ಭಾಷ್ಯಂ ಸರ್ಕಲ್, ೪೩-ಎ, ಜಯನಗರ ನಾಲ್ಕನೆಯ ಬ್ಲಾಕ್ ಅಲ್ಲಿ ಎರಡು ಸೈಟುಗಳಿವೆ. ಅವು ನಮ್ಮ ಅಧಿಕಾರಿಗಳ ಕಣ್ಣು ತಪ್ಪಿ ಹೋಗಿದೆ. ಅದಕ್ಕೆ ಡೂಪ್ಲಿಕೇಟ್ ಪೊಸೆಷನ್ ಸರ್ಟಿಫಿಕೇಟ್ ಬಿ. ಡಿ. ಎ.ನಲ್ಲಿ ಕೊಡುತ್ತಾರೆ, ಅದು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಆಗುತ್ತದೆ. ಪಿ. ಸಿ. ತೆಗೆದುಕೊಂಡು ಹೋಗಿ ಕಾರ್ಪೊರೇಷನ್‌ನಲ್ಲಿ ಖಾತಾ ಮಾಡಿಸಿಕೊಳ್ಳುತ್ತಾರೆ. ನನಗೆ ತಿಳಿದಹಾಗೆ ಎರಡು-ಮೂರು ಸೈಟುಗಳು. ಇನ್ನು ಸಾವಿರಾರು ಸೈಟುಗಳು ಈ ತರಹ ಆಗಿದೆ. ಬೆಂಗಳೂರು ನಗರಸಭೆಯ ಬಸವನಗುಡಿಯ ಬಿ. ಡಿ. ಎ. ಸೈಟನ್ನು ಕಾರ್ಪೊರೇಷನ್‌ನವರು ಖಾತೆ ಮಾಡಿದ್ದಾರೆ. ಒಂದೆರಡು ಸೈಟು ಅಲ್ಲ ಇಂತಹದ್ದು ಬಹಳಷ್ಟು ಆಗಿದೆ. ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ್ದಾರೆ. ಇದನ್ನು ಸಚಿವರ ಗಮನಕ್ಕೆ ತಂದಾಗ ಕ್ರಮ ತೆಗೆದುಕೊಳ್ಳಬೇಕು. ಆದರೆ ಏನೂ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಏನಾದರೂ ಕೆಟ್ಟ ಕೆಲಸ ಮಾಡಿದವರನ್ನು ಶಿಕ್ಷೆಗೆ ಗುರಿಪಡಿಸಲಿಕ್ಕೆ ಹೊರಟಾಗ ಅದನ್ನು ತಪ್ಪಿಸಲಿಕ್ಕೆ ಇನ್‌ಫ್ಲುಯೆನ್ಸ್ ಮಾಡುವ ಜನರು ಇರುತ್ತಾರೆ. ಶಿಕ್ಷೆ ಆಗಲಿಲ್ಲವೆಂದರೆ ಇಂತಹದ್ದು ಕಂಟಿನ್ಯೂಯಸ್ ಆಗಿ ಪ್ರೋಸೆಸ್ ಆಗುತ್ತಾ ಇರುತ್ತದೆ.

ಇನ್ನು ಕರ್ನಾಟಕ ಹೌಸಿಂಗ್ ಬೋರ್ಡ್ ಬಗ್ಗೆ ಮಾತನಾಡುವುದಾದರೆ, ಇವರು ೩೦ ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಕಾರ್ಯಕ್ರಮವನ್ನು ಹಾಕಿಕೊಂಡರು. ಅದು ಬಹಳ ಒಳ್ಳೆಯ ಕಾರ್ಯಕ್ರಮ. ಮಾನ್ಯ ನಗರಾಭಿವೃದ್ಧಿ ಸಚಿವರಾದ ಜಾರ್ಜ್‌ರವರು ಒಂದು ಮೀಟಿಂಗ್ ಕರೆದಾಗ ಒಂದು ಆರು ಸಾವಿರ ಮನೆಗಳನ್ನು ಕಟ್ಟಬೇಕೆಂದು ಆದರಲ್ಲೂ ನಮ್ಮ ಕ್ಷೇತ್ರದಲ್ಲಿ ಗುಡಿಸಲು ಇರುವ ಕಡೆಗೆ ಕೊಡಬೇಕೆಂದು ಹೋದಾಗ, ಆರು ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಒಪ್ಪಿಕೊಂಡರು, ಸ್ಯಾಂಕ್ಷನ್ ಆಯಿತು. ಇದು ಆದ ಮೇಲೆ ಏನಾಯಿತು ಅಂದರೆ ಕೆಲವು ಕಡೆ ಕೆಲಸ ಶುರುವಾಯಿತು. ನಮ್ಮಲ್ಲಿ ಅರಸು ಕಾಲೋನಿ ಎಂದು ಇದೆ, ಅಲ್ಲಿಯೂ ಅಷ್ಟೆ. ಸುಮಾರು ೩೫೦ ಮನೆಗಳನ್ನು ಕಟ್ಟುವುದಕ್ಕೆ ಶುರು ಮಾಡಿದ್ದಾರೆ. ಬೇರೆ ಕಡೆ ಶಿಫ್ಟ್ ಮಾಡುವುದಕ್ಕೆ ಜಾಗ ಇಲ್ಲ. ನಾನು ಕಮೀಷನರ್ ಶ್ರೀ ಶಂಕರಪ್ಪ ಅವರ ಜೊತೆ ಮಾತನಾಡಿ ಈ ತರಹ ಇದೆಯೆಂದು ಹೇಳಿದ್ದಕ್ಕೆ ಅವರು ಪಕ್ಕದಲ್ಲೇ ನಮ್ಮ ಲೇಔಟ್ ಇದೆ. ಅಲ್ಲಿ ಹಾಕಿಕೊಳ್ಳಿ ಅಂತ ಹೇಳಿದರು. ಆಮೇಲೆ ಅಲ್ಲಿಗೆ ಹೋಗಿ ಈ ತರಹ ಕಮೀಷನರ್‌ಗೆ ಹೇಳಿದ್ದೇವೆ, ನೀವು ಈ ತರಹ ಪಕ್ಕಕ್ಕೆ ಶಿಫ್ಟ್ ಮಾಡಿಕೊಳ್ಳಿ ಎಂದು ಹೇಳಿದರೆ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಎಂಜಿನಿಯರ್ ಅವರಿಗೆ ಅದೇನು ದುರಹಂಕಾರ. ಅವರು ಬಂದು ಆ ಗುಡಿಸಲು ನಿವಾಸಿಗಳಿಗೆ ಕೆಟ್ಟ ಕೆಟ್ಟ ಮಾತುಗಳನ್ನೆಲ್ಲ ಆಡಿದ್ದಾರೆ. ಈ ತರಹ ಕಮೀಷನರರು ಹೇಳಿದ್ದಾರೆ ಅಂದರೂ ಕೇಳಲಿಲ್ಲ, ಎಂ. ಎಲ್. ಎ. ಹೇಳಿದ್ದಾರೆ ಅಂತ ಹೇಳಿದರೂ ಕೇಳಲಿಲ್ಲ. ಈ ತರಹ ಕಮೀಷನರ್ ಅವರನ್ನು ಕೇಳಿ, ನೀವು ಈ ರೀತಿ ಹೇಳಿದ್ದೀರಾ ಎಂದು ಹೇಳುವ ಸೌಜನ್ಯ ಕೂಡ ಅವರಿಗೆ ಇಲ್ಲ. ಆಮೇಲೆ ಆಶ್ರಯ ಕಮಿಟಿ ಅಂತ ಇದೆ. ಈ ಕಮಿಟಿ ಮೀಟಿಂಗ್‌ಗೆ ಕರೆದರೆ ಬಿ. ಡಿ. ಎ. ಕನ್ಸರ್ನ್ಡ್ ಆಫೀಸರ್ಸ್ ಬರುವುದೇ ಇಲ್ಲ. ಅದರ ಮೇಲೆ ಹೆಚ್. ಯು. ಡಿ. ಸಕ್ರೆಟರಿ ಅವರಿಗೆ ಲೆಟರ್ ಕೊಟ್ಟಿದ್ದೇವೆ, ಶಂಕರಪ್ಪನವರಿಗೂ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಲೆಟರ್ ಕೊಟ್ಟಿದ್ದೇವೆ. ಈ ತರಹ ಆದರೆ ನಾವು ಬಡವರ ಕೇಸುಗಳನ್ನು ಮಾಡಿಕೊಂಡು ಹೋಗುವುದಾದರೂ ಹೇಗೆ? ಆಮೇಲೆ ಈ 'ಆಶ್ರಯ' ಒಂದು ಹಂತಕ್ಕೆ

ಬಂದಮೇಲೆ ಜಕ್ಕರಾಯನಕೆರೆಯಲ್ಲಿ ಮನೆಗಳು ಬಿದ್ದುಹೋದವು. ಯಲಹಂಕದ್ದು ೭೦೦ ಮನೆಗಳನ್ನು ಒಡೆದುಹಾಕುವುದಕ್ಕೆ ನಾವೇ ತೀರ್ಮಾನ ತೆಗೆದುಕೊಂಡಿದ್ದೇವೆ. ಆಮೇಲೆ ಕೆಲವು ಸ್ಲಂಗಳಿಗೆ ಹೋಗಿ ಈ ತರಹ ಶಿಫ್ಟ್ ಮಾಡ್ರಪ್ಪ ಅಂತ ಹೇಳಿದರೆ ಅವರು ಸ್ವಾಮಿ ನಿಮಗೆ ದೊಡ್ಡ ನಮಸ್ಕಾರ ಹಾಕುತ್ತೇವೆ. ನಮಗೆ ಮನೆ ಬೇಡ ಸ್ವಾಮಿ. ಯಲಹಂಕದಲ್ಲಿ ೭೦೦ ಮನೆಗಳನ್ನು ಒಡೆಸಿ ಹಾಕುವುದಕ್ಕೆ ನೀವು ತೀರ್ಮಾನ ಮಾಡಿದ್ದೀರಿ. ಜಕ್ಕರಾಯನ ಕೆರೆಯಲ್ಲಿ ಕಾರ್ಪೊರೇಷನ್ ಬಿಲ್ಡಿಂಗ್ ಬಿದ್ದುಹೋಯಿತು. ನಮ್ಮನ್ನೇನು ನೀವು ಸಾಯಿಸುವುದಕ್ಕೆ ಮಾಡುತ್ತಿದ್ದೀರಾ ಎಂದು ಅವರು ನಮ್ಮನ್ನೇ ಪ್ರಶ್ನೆ ಕೇಳುತ್ತಾರೆ.

ಶ್ರೀ ಕೆ. ಜೆ. ಜಾರ್ಜ್:- ತಮಗೆ ಗೊತ್ತಿದೆ ಹೌಸಿಂಗ್ ಬೋರ್ಡ್‌ನವರು ಅಲ್ಲಿ ಯಾವಾಗ ಕಟ್ಟಿದ್ದಾರೆ, ಮತ್ತು ಜಿಕ್ಕರಾಯನಕೆರೆಯಲ್ಲಿ ಯಾರ ಕಾಲದಲ್ಲಿ ಕಟ್ಟಿದ್ದಾರೆ ಎಂಬುದು. ತಾವು ಹೋಗಿ ನೋಡಬಹುದು ನಮ್ಮ ಕಾಲದಲ್ಲಿ ಯಾವ ರೀತಿ ಕಟ್ಟಿದ್ದೇವೆ ಎಂದು. ಕೆಂಗೇರಿಗೆ ಹೋಗಿ ನೋಡಬಹುದು. ಆಶ್ರಯದಲ್ಲಿ ಒಳ್ಳೆಯ ಮನೆಗಳನ್ನು ಕಟ್ಟಲಿಕ್ಕೆ ಪ್ರಿಫ್ಯಾಬ್ರಿಕೇಟೆಡ್ ಮೆಟೀರಿಯಲ್ಸ್ ಹಾಕಿ ಮಾಡಲ್ ಹೌಸ್ ಕಟ್ಟಿದ್ದೇವೆ. ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ತಾವು ಆಶ್ರಯ ಕಮಿಟಿಯ ಚೆರ್ಮನ್‌ರಾಗಿದ್ದೀರಿ. ಇಲ್ಲದೇ ಹೋದರೆ ಈಗಲೂ ಹಾಗೆ ನಡೆಯುತ್ತಿದೆ ಎನ್ನುವ ಅಭಿಪ್ರಾಯ ಬರುತ್ತದೆ. ಯಾರೂ ಮನೆಗಳನ್ನು ತೆಗೆದುಕೊಳ್ಳುವುದಿಲ್ಲ. ದಯಮಾಡಿ ಅವರಿಗೆ ತಾವು ಒಳ್ಳೆಯ ತಿಳುವಳಿಕೆಯನ್ನು ಕೊಡಬೇಕು.

ಶ್ರೀ ಎ. ನಾಗರಾಜು:- ಮನೆಗಳು ಬಹಳ ಚೆನ್ನಾಗಿ ಬರುತ್ತಿವೆ. ಒಳ್ಳೆಯ ರೂಫಿಂಗ್, ಮೌಲ್ಡೆಡ್ ಬ್ರಿಕ್ಸ್, ಸಿಮೆಂಟ್; ಒಳ್ಳೆಯ ಫೌಂಡೇಶನ್ ಎಲ್ಲಾ ಹಾಕಿ ಕೊಡುತ್ತಿದ್ದಾರೆ.

ಶ್ರೀ ರಾಮ ಲಿಂಗಾರೆಡ್ಡಿ:- ಇದನ್ನು ನಾನೇ ಮಾತನಾಡಬೇಕಿಂದಿದ್ದೆ. ಈ ಸ್ಲಮ್ ಡ್ವೆಲ್ಲರ್ಸ್ ಈಗ ಕಾನ್‌ಶಿಯಸ್ ಆಗಿದ್ದಾರೆ. ನಾನು ಹೇಳಿಬಿಟ್ಟಿದ್ದೇನೆ. ಕಡಿಮೆ ಗುಣಮಟ್ಟದ ಕೆಲಸ ಮಾಡಬೇಡಿ ಎಂದು ಹೇಳಿದ್ದೇನೆ. ಈಗ ಕೆಲಸ ಮಾಡುತ್ತಿದ್ದಾರೆ.

ಶ್ರೀ ಕೆ. ಜೆ. ಜಾರ್ಜ್:- ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ, ಕೌನ್ಸಿಲ್‌ನಲ್ಲೂ ಇದೇ ವಿಚಾರ ಹೇಳಿದೆ. ಈಗ ಏನಾಗಿದೆ ಎಂದರೆ, ಮೊನ್ನೆ ನಮ್ಮ ಹನುಮೇಗೌಡರು ಮಾತನಾಡಿ ಬಿಟ್ಟರು. ಮರುದಿನ ಅದು ಪೇಪರ್‌ನಲ್ಲಿ ಬಂತು. ಹೌಸಿಂಗ್ ಬೋರ್ಡ್ ಕಟ್ಟಿದ ಮನೆಗಳು ಬಿದ್ದು ಹೋಗಿವೆ ಎಂದು. ಈಗ ಪಬ್ಲಿಕ್‌ನಲ್ಲಿ ಏನು ಇಮೇಜ್ ಬಂದುಬಿಟ್ಟಿದೆ ಎಂದರೆ ಏನೋ ನಿನ್ನೆ ಮೊನ್ನೆ ಕಟ್ಟಿದ ಮನೆಗಳು ಬೀಳುತ್ತಾ ಇವೆಯೋ ಏನೋ ಎಂದು. ಆದ್ದರಿಂದ ಅದು ಯಾವುದೋ ಕಾಲದಲ್ಲಿ ನಡೆದಿದೆ. ಅದನ್ನು ವಿಚಾರಣೆ ನಡೆಸಿ ಹಿಂದಿನ ಸರ್ಕಾರ ಮಾಡಿದ್ದು ತಪ್ಪು ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಅವರೂ ಅದನ್ನು ವಿಚಾರ ಮಾಡಿ ಯಾರು ತಪ್ಪಿತಸ್ಥರು ಇದ್ದಾರೆ ಎಂದು ತಿಳಿದು ಕ್ರಮ ತೆಗೆದುಕೊಳ್ಳೋಣ. ಈಗಂತೂ ನೀವು ಪಬ್ಲಿಕ್‌ಗೆ ತಿಳಿಸಿ ಹೇಳಬೇಕು. ಈಗ ಯಾವ ರೀತಿ ಕಟ್ಟುತ್ತಿದ್ದೇವೆ ಎಂದು ನೀವು ನೋಡಬಹುದು.

ಶ್ರೀ ರಾಮಲಿಂಗ ರೆಡ್ಡಿ:- ಈಗ ಚೆನ್ನಾಗಿ ಕಟ್ಟುತ್ತಿದ್ದಾರೆ. ಆ ತರಹ ಕಟ್ಟಲಿ ಎಂದೇ ನಾನು ಹೇಳುತ್ತಿದ್ದೇನೆ. ನಾನು ಹೇಳುವುದು, ನಮ್ಮ ಸರ್ಕಾರ ಇರಲಿ, ಇನ್ನೊಂದು ಸರ್ಕಾರ ಇರಲಿ. ಅಧಿಕಾರಿಗಳು ಯಾರು, ಇಂಜಿನಿಯರುಗಳು ಯಾರು? ಎಲ್ಲಾ ಅವರೇ ಅಲ್ಲವೇ? ಮಾನ್ಯ ನಮಸ್ಕಾರದವರು ಹೇಳಿದ ಹಾಗೆ ಇಲ್ಲಿ ಕೋಆರ್ಡಿನೇಷನ್ ಇಲ್ಲ. ಬಿ. ಡಿ. ಎ. ನವರ ಮಾತನ್ನು

ಹೌಸಿಂಗ್‌ಬೋರ್ಡ್‌ನವರು ಕೇಳುವುದಿಲ್ಲ. ಹೌಸಿಂಗ್ ಬೋರ್ಡ್‌ನವರ ಮಾತನ್ನು ಸ್ಲಮ್‌ಬೋರ್ಡ್‌ನವರು ಕೇಳುವುದಿಲ್ಲ. ಈ ರೀತಿ ಕೋಆರ್ಡಿನೇಶನ್ ಇಲ್ಲ. ಕಮೀಷನರ್ ಹೇಳಿದರೂ ಎಕ್ಸಿಕ್ಯೂಟೀವ್ ಇಂಜಿನಿಯರ್ ಕೇಳುವುದಿಲ್ಲ ಎಂದರೆ ಇದು ಏನು ಅರ್ಥ? ೩೫೦ ಮನೆಗಳನ್ನು ಕಟ್ಟಬೇಕು. ಈಗ ಐದು ಬ್ಲಾಕ್ಸ್ ಕಟ್ಟುತ್ತಿದ್ದೇವೆ. ಮಿಕ್ಕಿದ್ದು ೩೦ ಬ್ಲಾಕ್ಸ್ ಬರಬೇಕು. ಇದು ಏನಾಗುತ್ತದೆ ಎಂದರೆ ಮೊದಲು ಮಾಡಿದ್ದನ್ನು ಮತ್ತೊಂದು ಕಡೆ ಹಾಕುವುದು ಆದರೆ ಇನ್ನು ಐದು ವರ್ಷಗಳಾದರೂ ಏನೂ ಮಾಡುವುದಕ್ಕೆ ಆಗುವುದಿಲ್ಲ. ರೇಟುಗಳು ಪ್ರತಿವರ್ಷ ಜಾಸ್ತಿಯಾಗುತ್ತಿರುತ್ತದೆ. ಆ ಜಾಗ ಕೊಡಿ ಎಂದು ಹತ್ತು ಸಲ ಕೇಳಿದ್ದೇನೆ. ಕಮೀಷನರ್ ಅವರು ಪಾಪ ಒಳ್ಳೆಯವರು. ಅವರು ಹೇಳಿದರೂ ಕೂಡ ಅಧಿಕಾರಿಗಳು ಅಲ್ಲಿ ಕೇಳುವುದಿಲ್ಲ. ಆಮೇಲೆ ಈ ಸ್ಲಮ್‌ಬೋರ್ಡ್ ಬಗ್ಗೆ ಹೇಳಬೇಕೆಂದರೆ, ಹಿಂದಿನವರ್ಷಗಳಲ್ಲಿ ಒಳ್ಳೆಯ ಕೆಲಸ ಆಗುತ್ತಿರಲಿಲ್ಲ. ಈಗ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಸೆಕ್ರಟರಿ ಶ್ರೀ ಬಲದೇವ ಕೃಷ್ಣ ಅವರು ರಾತ್ರಿ ಹಗಲು ದುಡಿದು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅದು ನಮ್ಮ ಕ್ಷೇತ್ರದಲ್ಲೂ ಅಷ್ಟೆ, ಬೇರೆ ಕ್ಷೇತ್ರದಲ್ಲೂ ಅಷ್ಟೆ. ಅವರನ್ನು ಇನ್ನೂ ಎನ್‌ಕರೇಜ್ ಮಾಡಿ. ಕಾರ್ಪೊರೇಷನ್‌ನಲ್ಲಿ ಏನು ಹಕ್ಕುಪತ್ರ ಕೊಡುತ್ತಿದ್ದಾರೆ, ಅದೇ ರೀತಿ ಸ್ವಲ್ಪ ಮಟ್ಟಿಗೆ ಇವರಿಗೂ ಸಹ ಕೊಡಿ. ಅದನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನೆ ಕೇಳಿಕೊಳ್ಳುತ್ತೇನೆ. ಅದೇ ರೀತಿ ದಯಾನಂದ ಸ್ಲಮ್ ತೆಗೆದುಕೊಳ್ಳಿ, ಇಲ್ಲ ಸೋಮೇಶ್ವರ ಸ್ಲಮ್ ತೆಗೆದುಕೊಳ್ಳಿ. ಹೊಂಬೇಗೌಡ ಸ್ಲಮ್ ತೆಗೆದುಕೊಳ್ಳಿ. ಅಲ್ಲಿ ಸಿವಿಕ್ ಎಮಿನಿಟೀಸ್ ಬಹಳಷ್ಟು ಕೆಲಸ ಆಗಬೇಕಾಗಿದೆ.

ಅವೆಲ್ಲವನ್ನೂ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಬಿ. ಡಬ್ಲ್ಯು. ಎಸ್. ಎಸ್. ಬಿ.ಬಗ್ಗೆ ಮಾತನಾಡುವಾಗ, ಪ್ರತಿಯೊಬ್ಬರಿಗೂ ನೀರಿನ ಅವಶ್ಯಕತೆ ಎಷ್ಟು ಎಂದು ತಮಗೆಲ್ಲರಿಗೂ ಗೊತ್ತಿದೆ. ಬೆಂಗಳೂರಿನಲ್ಲಿ ಕಾಲು ಭಾಗ ಜನಕ್ಕೆ ಕಾವೇರಿ ನೀರು ಸಿಕ್ಕುತ್ತಾ ಇಲ್ಲ. ಭಾವಿಯಲ್ಲೋ ಅಥವಾ ಎಲ್ಲೋ ದಾರಿಯಲ್ಲೋ ತೆಗೆದುಕೊಂಡು ಹೋಗಿ ಕುಡಿಯುತ್ತಿದ್ದಾರೆ. ಕಾವೇರಿ ಮೂರನೆಯ ಹಂತ ಮುಗಿದರೆ, ಬೆಂಗಳೂರಿನಲ್ಲಿ ಕಾರ್ಪೊರೇಷನ್ ಲಿಮಿಟ್‌ನಲ್ಲಿರತಕ್ಕ ಜನರಿಗೆ ಮಾತ್ರ ನೀರು ಕೊಡಬಹುದು. ಮತ್ತೆ ಇವರು ನಾಲ್ಕನೇ ಹಂತ ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಈ ಮೂರನೇ ಹಂತವೇ ಲೇಟಾಗುತ್ತಿದೆ. ಮುಕ್ಕಾಲು ಭಾಗ ಈಗಾಗಲೇ ಒಂದು ವರ್ಷ ಲೇಟಾಗುತ್ತಿದೆ. ಇನ್ನು ನಾಲ್ಕನೇ ಹಂತ ಯಾವಾಗ ತೆಗೆದುಕೊಳ್ಳುತ್ತಾರೋ ಗೊತ್ತಿಲ್ಲ. ಈ ನಾಲ್ಕನೇ ಹಂತ ಅಲ್ಲ, ಬೆಂಗಳೂರನ್ನು ಇದೇ ರೀತಿಯಲ್ಲಿ ಬೆಳೆಯುವುದಕ್ಕೆ ಬಿಟ್ಟರೆ, ಇನ್ನು ೧೦ ವರ್ಷಗಳಾದರೂ ಆಗುವುದಿಲ್ಲ. ಕಾವೇರಿ ನದಿಯನ್ನೇ ಈ ಕಡೆ ತಿರುಗಿಸಿಕೊಳ್ಳಬೇಕಾಗುತ್ತದೆ. ಅಷ್ಟೆ! ಆದುದರಿಂದ ಬೆಂಗಳೂರು ಬೆಳೆಯುವುದಕ್ಕೆ ತಡೆ ಹಾಕಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ, ಬಿ. ಡಬ್ಲ್ಯು. ಎಸ್. ಎಸ್. ಬಿ. ನವರು ಇಷ್ಟೆಲ್ಲಾ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಸರ್ಕಾರ ಅವರಿಗೆ ಹೆಚ್ಚು ಅನುದಾನ ಕೊಡಬೇಕು ಮತ್ತು ಕೇಂದ್ರಸರ್ಕಾರದಿಂದಲೂ ಕೊಡಿಸಬೇಕು. ಬಾಂಬೆಯವರು, ಡೆಲ್ಲಿಯವರು, ಮದರಾಸಿನವರು, ಕ್ಯಾಪಿಟಲ್ ಸಿಟಿಗಳಿಗೆ ಸಾಕಷ್ಟು ದುಡ್ಡು ತೆಗೆದುಕೊಂಡು ಹೋಗುತ್ತಾರೆ. ಅದೇ ರೀತಿ, ನಮ್ಮ ರಾಜ್ಯದ ಮಂತ್ರಿಗಳೂ ಕೂಡ, ಕೇಂದ್ರದ ಮಂತ್ರಿಗಳ ಹತ್ತಿರ ಒತ್ತಾಯ ಹಾಕಿ, ದುಡ್ಡನ್ನು ತೆಗೆದುಕೊಂಡು ಬರಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಇನ್ನು ತಿಪ್ಪಗೊಂಡನ ಹಳ್ಳಿ ಕೆರೆಗೆ ಹೇಮಾವತಿ ನೀರನ್ನು ತರತಕ್ಕಂಥ ಯೋಜನೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ

ಹೇಳುತ್ತೇನೆ. ಈ ತಿಪ್ಪಗೊಂಡನ ಹಳ್ಳಿ ಕೆರೆ ವಿಚಾರ ಮಾತನಾಡುತ್ತಾ, ಅಲ್ಲಿ ಡೆಲ್ಲಿಯವರಿಗೆ ನಾಲ್ಕು ನೂರು ಎಕರೆ ಭೂಮಿಯನ್ನು ಕೊಡಿಸಿದ್ದರು. ಇದು ಬಹಳ ತಪ್ಪು. ಈ ನಾನ್ನೂರು ಎಕರೆ ಭೂಮಿಯನ್ನು ಹೌಸಿಂಗ್‌ಗಾಗಿ ಕೊಟ್ಟಿದ್ದರೆ, ಆ ಗಲೀಜು ನೀರು ತಿಪ್ಪಗೊಂಡನಹಳ್ಳಿ ಕೆರೆಗೆ ಬಂದು ಬಿಡುತ್ತಿತ್ತು. ನಾವು ತಿಪ್ಪಗೊಂಡನಹಳ್ಳಿ ಕೆರೆಯ ಗಲೀಜು ನೀರು ಕುಡಿಯಬೇಕಾಗಿತ್ತು. ಮುಂದಿನ ಜನಾಂಗ ನಮ್ಮನ್ನು ಶಪಿಸುತ್ತಿದ್ದರು. ಆದರೆ, ನೀವು ಏನಾದರೂ ಅಲ್ಲಿ ಅವರಿಗೆ ಹೌಸಿಂಗ್ ಸ್ಕೀಮ್‌ಗೆ ಕೊಟ್ಟಿದ್ದರೆ ತುಂಬಾ ತೊಂದರೆಯಾಗುತ್ತಿತ್ತು. ಆದರೆ, ಸರ್ಕಾರದವರು, ಅವರಿಗೆ ಕೊಡಬಾರದೆಂಬ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಮತ್ತೆ ನೀರು ಮತ್ತು ಸ್ಯಾನಿಟರಿ ವಿಷಯದಲ್ಲಿ ಮಾತನಾಡುತ್ತಾ, ಈ ಬೋರ್‌ವೆಲ್ಸ್ ವಿಚಾರದಲ್ಲಿ, ಜಲಮಂಡಳಿ ಅಧ್ಯಕ್ಷರನ್ನು ಕೇಳಿದರೆ, ವಾಟರ್ ಲೈನ್ ಎಲ್ಲಿದೆಯೋ ಅಲ್ಲಿ ಮಾತ್ರ ಬೋರ್‌ವೆಲ್ ಹಾಕುತ್ತೇವೆ, ಬೇರೆ ಕಡೆ ಹಾಕುವುದಿಲ್ಲವೆಂದು ಹೇಳುತ್ತಾರೆ. ನಮ್ಮ ಕ್ಷೇತ್ರವನ್ನೇ ತೆಗೆದುಕೊಳ್ಳಿ, ಮಡಿವಾಳ, ಸುದ್ದಗುಂಟೆಪಾಳ್ಯ, ತಾವರೆಕೆರೆ ಈ ಭಾಗಗಳು ೧೯೬೪ರಲ್ಲಿಯೇ ಕಾರ್ಪೊರೇಷನ್‌ಗೆ ಸೇರಿದೆ. ಈಗಲೂ ಈ ಹಳ್ಳಿಗಳು ಹಳ್ಳಿಗಳಾಗಿಯೇ ಇವೆ. ನೂರಕ್ಕೆ ತೊಂಭತ್ತುಭಾಗ ಹಳ್ಳಿಗಳಾಗಿವೆ. ಕುಡಿಯುವ ನೀರು ಇಲ್ಲ, ರಸ್ತೆಗಳಿಲ್ಲ, ಸ್ಯಾನಿಟರಿ ಇಲ್ಲ, ಬೋರ್‌ವೆಲ್ ಹಾಕಿ ಎಂದು ಹೇಳಿದರೆ, ವಾಟರ್ ಲೈನ್ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ಹೇಳಿದರೆ ಅರ್ಥ ಏನು? ಅಲ್ಲಿ ಕುಡಿಯುವ ನೀರಿಗೆ ಭಾವಿಗಳನ್ನು ಇಟ್ಟುಕೊಂಡಿರುತ್ತಾರೆ, ಇವು ಮಳೆಗಾಲದಲ್ಲಿ ನೀರು ತುಂಬಿಕೊಳ್ಳುತ್ತದೆ, ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಬೇಸಿಗೆಯಲ್ಲಿ ನೀರು ಬರುತ್ತವೆ, ಯಾವುದೆಂದರೆ, ಸ್ಯಾನಿಟರಿ ಪಿಟ್ಸ್ ಹೊಡೆದುಕೊಂಡಿರುತ್ತಾರೆ, ಏಕೆಂದರೆ ಸ್ಯಾನಿಟರಿ ಲೈನ್ ಇಲ್ಲವಲ್ಲ. ಈ ಸ್ಯಾನಿಟರಿ ಪಿಟ್ಸ್ ನೀರನ್ನೇ ತೆಗೆದುಕೊಂಡು ಉಪಯೋಗಿಸುತ್ತಾರೆ. ಆ ಪಿಟ್ಸ್‌ನಲ್ಲಿ ನೀರು ಹೋಗುತ್ತದೆ, ಅದು ಏನಾಗುತ್ತದೆಂದರೆ, ಪಕ್ಕದಲ್ಲಿಯೇ ೩-೪-೫ ಅಡಿಯಲ್ಲಿ ಬಾವಿ ಇರುತ್ತದೆ, ಈ ಸ್ಯಾನಿಟರಿ ಪಿಟ್ಸ್‌ನ ನೀರು ಬಾವಿಗೆ ಬರುತ್ತದೆ. ಈ ನೀರಿನಲ್ಲಿಯೇ ಮತ್ತೆ ಸ್ನಾನ ಮಾಡುವುದು. ಇದು ನಮ್ಮ ಬೆಂಗಳೂರು ನಗರದಲ್ಲಿ ಅದರಲ್ಲೂ ಹಾರ್ಟ್ ಆಫ್ ಜಯನಗರ, ಇಲ್ಲಿರತಕ್ಕ ಕೆಲವು ಹಳ್ಳಿಗಳು, ಅವು ಹಳ್ಳಿಗಳಲ್ಲ, ರವಿನ್ಯೂ ಜಾಗವಾದರೂ ಡೆವಲಪ್‌ಮೆಂಟ್ ಆಗಿದೆ. ಇದು ಕಾರ್ಪೊರೇಷನ್ ಆಯಿತು, ೧೯೮೬ರಲ್ಲಿಯೇ ರೆಗ್ಯುಲರೈಸ್ ಆಯಿತು. ಇಲ್ಲಿ ಏನಾದರೊಂದು ವ್ಯವಸ್ಥೆ ಮಾಡಬೇಕು. ಆ ಮೇಲೆ ನಮ್ಮ ಬನ್ನೇರುಘಟ್ಟ ರಸ್ತೆ, ಅಲ್ಲಿ ೩೦ ಅಡಿ ವ್ಯಾಸದ ಲೈನ್ ಹೋಗುತ್ತದೆ. ಇದು ಪೇಪರಿನಲ್ಲಿ ಸಾಮಾನ್ಯವಾಗಿ ಬರುತ್ತಿದೆ. ಮೈಕೋಫ್ಯಾಕ್ಟರಿ ವೆಸ್ಟ್ ಗೇಟ್ ಕಡೆ. ಇದನ್ನು ಚೇಂಜ್ ಮಾಡಿ ಎಂದು ೭-೮ ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ, ನಗರ ಸಭೆಯ ಸದಸ್ಯನಾಗಿದ್ದ ಕಾಲದಿಂದಲೂ, ಇದನ್ನು ತೆಗೆದು ಪಕ್ಕಕ್ಕೆ ಹಾಕಿ ಇಲ್ಲದಿದ್ದರೆ, ಇನ್ನೂ ಆಳಕ್ಕೆ ಇಳಿಸಿ ಎಂದು ಹೇಳಿದ್ದೇನೆ. ಬಿ. ಡಬ್ಲ್ಯು. ಎಸ್. ಎಸ್. ಬಿ. ಚೇರ್ಮನ್ ೭೦ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಮಾಡಿದ್ದಾರೆ, ೫೦ ಲಕ್ಷದ ಮೆಟೀರಿಯಲ್ಸ್ (ಪೈಪುಗಳು) ಬಿಟ್ಟರೆ, ಇನ್ನು ೨೦ ಲಕ್ಷದಲ್ಲಿ, ೧೦ ಲಕ್ಷ ಕಾರ್ಪೊರೇಷನ್‌ನವರು ಕೊಡಲಿ, ಇನ್ನು ೧೦ ಲಕ್ಷ ನಾವು ಹಾಕಿಕೊಂಡು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಾನು ಕೇಳಿ, ಕೇಳಿ ಸಾಕಾಗಿ ಹೋಯಿತು. ಹೋದ ಮೀಟಿಂಗ್‌ನಲ್ಲೂ ಮಾತನಾಡಿದೆ, ಈಗ್ಗೆ ಎರಡು ವರ್ಷಗಳ ಹಿಂದೆ ನಮ್ಮ ನರಸಿಂಹಮೂರ್ತಿಯವರು ಇದ್ದಾಗಲೂ ಹೇಳಿದೆ. ನೀವು ಈ ಪೈಪ್ ಲೈನ್ ಚೇಂಜ್ ಮಾಡದೇ ಹೋದರೆ, ನಾನು ಧರಣಿ ಕುಳಿತುಕೊಳ್ಳುತ್ತೇನೆ ಎಂದು ಹೇಳಿದೆ. ಇದು ಪ್ರಿಂಟ್ ಆಗಿದೆ, ಆದರೆ ಇನ್ನೂ ಕೆಲಸ ಆಗಿಲ್ಲ. ಈ ರೀತಿ ಆದರೆ ಹೇಗೆ, ನಾವು ಇಲ್ಲಿ ಮಾತನಾಡಿದ್ದಕ್ಕೆ ಏನು

ಅರ್ಥವಿದೆ, ನಾನು ಮಾನ್ಯ ಜಾರ್ಜ್‌ರವರ ಬಗ್ಗೆ ಹೇಳುತ್ತಾ ಇಲ್ಲ. ಅವರು ಬಂದು ಒಂದು ವರ್ಷವಾಯಿತು. ಇದು ಕಂಟಿನ್ಯೂಟಿ ತಾನೆ.

ಛೇರ್ಮನ್:- ಸಮಯ ಜಾಸ್ತಿ ಇಲ್ಲ, ತಾವು ಸಮಯವನ್ನು ಗಮನದಲ್ಲಿಟ್ಟುಕೊಂಡು ಪಾಯಿಂಟ್ ಬೈ ಪಾಯಿಂಟ್ ಹೋದರೆ ಒಳ್ಳೆಯದು. ಈ ರೀತಿ ಹೇಳಿಕೊಂಡು ಹೋದರೆ ಇನ್ನೂ ಎರಡು ಗಂಟೆಯಾಗುತ್ತದೆ. ನೀವು ಪಾಯಿಂಟ್ ಬೈ ಪಾಯಿಂಟ್ ಸಲಹೆ ಕೊಡಿ.

ಶ್ರೀ ರಾಮಲಿಂಗ ರೆಡ್ಡಿ:- ಬೆಂಗಳೂರು ನಗರದ ಕಾರ್ಪೋರೇಷನ್ ಬಗ್ಗೆ ಮಾತನಾಡುತ್ತಾ, ಸುಮಾರು ನಮ್ಮ ರಾಜ್ಯದಲ್ಲಿರತಕ್ಕ ವೆಹಿಕಲ್‌ಗಳಲ್ಲಿ ೫೦ ಪರ್ಸೆಂಟ್ ವೆಹಿಕಲ್ಸ್ ನಮ್ಮ ಬೆಂಗಳೂರಿನಲ್ಲಿ ಇವೆ. ನಮ್ಮ ರಾಷ್ಟ್ರದಲ್ಲಿರುವ, ದ್ವಿಚಕ್ರವಾಹನಗಳಲ್ಲಿ, ೨೮ ಪರ್ಸೆಂಟ್ ವಾಹನಗಳು ನಮ್ಮ ನಗರದಲ್ಲಿವೆ. ಈ ಒಂದು ದೃಷ್ಟಿ ಇಟ್ಟುಕೊಂಡು ನಮ್ಮ ಹಳೆಯ ಬೆಂಗಳೂರು ನಗರ ಏನಿದೆ, ಮೆಜೆಸ್ಟಿಕ್ ಇಂತಹ ಕಡೆ ರೋಡ್ಸ್ ಅಗಲ ಮಾಡುವುದಕ್ಕೆ ಆಗುವುದಿಲ್ಲ. ಬಿಲ್ಡಿಂಗ್ಸ್ ನಡುವೆ ರೋಡ್ ಅಗಲ ಮಾಡುವುದು ಸಾಧ್ಯ ಇಲ್ಲ. ಇಲ್ಲಿ ಫ್ಲೈಓವರ್ ಅಥವಾ ಸಬ್‌ವೇಸ್ ಬರಬೇಕು. ನಮಗೆ ಗೊತ್ತಿದೆ ಈ ಫ್ಲೈಓವರ್ಸ್ ಮತ್ತು ಸಬ್‌ವೇಸ್ ಬಗ್ಗೆ ಕಾರ್ಪೋರೇಷನ್ ಮೇಯರ್ ಆಗಿ ಬಂದವರೆಲ್ಲ ಪ್ರತಿಸಾರಿ ಹೇಳುತ್ತಾ ಬಂದಿದ್ದಾರೆ. ಆದರೆ ಎಂಟು ವರ್ಷದಿಂದ ಏನೂ ಆಗಿಲ್ಲ. ರೈಲ್ವೆ ಸ್ಟೇಷನ್ ಹತ್ತಿರ ಒಂದೇ ಒಂದು ಶುರುವಾಗಿದೆ. ಅದೂ ಮುಗಿದಿಲ್ಲ, ಅಲ್ಲಿ ಸಾಕಷ್ಟು ಆಕ್ಸಿಡೆಂಟ್ಸ್ ಆಗುತ್ತಿದೆ. ಶುರುವಾಗಿ ಒಂದು ವರ್ಷ ಆಯಿತು, ಇನ್ನೂ ಒಂದು ವರ್ಷ ಬೇಕು, ಅದಕ್ಕೆ ಒಂದೂವರೆಕೋಟಿ ಎಕ್ಸೆಸ್ ಮಾಡಿರುತ್ತಾರೆ. ಮುಂದೆ ಎಸ್ಟಿಮೇಟ್ ಏನು ಮಾಡಿದ್ದರೋ ಅದಕ್ಕಿಂತ ಜಾಸ್ತಿಯಾಗಿದೆ. ಟೆಂಡರ್ಸ್ ಕರೆಯುವುದಿಲ್ಲ. ಕೆ. ಎಂ. ಸಿ. ಆಕ್ಟ್ ಪ್ರಕಾರ ಹತ್ತು ಸಾವಿರಕ್ಕಿಂತ ಮೇಲ್ಪಟ್ಟ ಕೆಲಸಗಳಿಗೆ ಟೆಂಡರ್ ಕರೆಯಬೇಕು, ಆದರೆ ಕರೆಯುವುದಿಲ್ಲ. ಕೋಟ್ಯಾಂತರ ರೂಪಾಯಿ ಕೊಟ್ಟು ಕೊಂಡು ಬರುತ್ತಿದ್ದಾರೆ. ಇದು ಈಗಿನಿಂದ ನಡೆಯುತ್ತಿಲ್ಲ. ಕಳೆದ ೫-೬ ವರ್ಷಗಳಿಂದ ಇದೇ ಕೆಲಸ ನಡೆಯುತ್ತಿದೆ. ಯಾರನ್ನೂ ಉದ್ದೇಶಿಸಿ ನಾನು ಮಾತನಾಡುತ್ತಿಲ್ಲ. ಕಾರ್ಪೋರೇಷನ್‌ನಲ್ಲಿ ನಡೆಯುವುದನ್ನು ನಾನು ಹೇಳುತ್ತಿದ್ದೇನೆ. ಇನ್ನೂ ಮೂರು ಸಬ್‌ವೇಸ್ ಇದೆ, ಒಂದು ಅಲಂಕಾರ್ ಪ್ಲಾಜಾದವರಿಗೆ ಕಾಂಟ್ರಾಕ್ಟ್ ಕೊಟ್ಟಿದ್ದಾರೆ. ಯಾವ ಆಳತೆಗೋಲಿನ ಮೇಲೆ ಕೊಟ್ಟಿರು. ಟೆಂಡರ್ ಕರೆಯಬೇಕಾಗಿತ್ತು. ನ್ಯಾಷನಲ್ ಲೆವೆಲ್‌ನಲ್ಲಿ ಟೆಂಡರ್ ಕರೆಯಬೇಕಾಗಿತ್ತು, ಇಲ್ಲ ಎಂದರೆ ಗ್ಲೋಬಲ್ ಲೆವೆಲ್‌ನಲ್ಲಿ ಟೆಂಡರ್ ಕರೆಯಬೇಕಾಗಿತ್ತು. ಇವೆಲ್ಲಾ ರೊಟೈನ್ ಕೆಲಸಗಳು. ಆಮೇಲೆ ನಮ್ಮ ಫ್ಲೈಓವರ್ಸ್ ಪ್ಲಾನ್ ಎಲ್ಲಾ ೧೯೬೮ರಷ್ಟು ಹಳೆಯದು. ಕಾರ್ಪೋರೇಷನ್‌ನಲ್ಲಿ ೯ ಜನ ಆರ್ಕಿಟೆಕ್ಟ್ಸ್ ಇದ್ದಾರೆ, ಆ ೯ ಜನರ ಮೇಲೆ ಇನ್ನೂ ಯಾರ ಅಭಿಪ್ರಾಯವನ್ನೂ ಕೇಳುವುದಿಲ್ಲ. ಕಾರ್ಪೋರೇಷನ್ ಎಂಜಿನಿಯರ್ಸ್, ಆರ್ಕಿಟೆಕ್ಟ್ಸ್ ಎಲ್ಲಾ ಒಂದೇ. ಆದನ್ನೇ ತೆಗೆದುಕೊಂಡು ಬಿಟ್ಟು ಮಾಡಬೇಕೆಂದು ಹೋಗುತ್ತಾ ಇರುತ್ತಾರೆ. ಕಾರ್ಪೋರೇಷನ್ ಎಂಜಿನಿಯರ್ಸ್ ಕೈಯಲ್ಲಿ ಕಟ್ಟಿಸಿದರೆ ಚೆನ್ನಾಗಿರುತ್ತದೆಂಬ ನಂಬಿಕೆ ಇಲ್ಲ. ಏತಕ್ಕೆಂದರೆ ಉದಾಹರಣೆಗೆ ಮಾಗಡಿ ರೋಡ್ ಬ್ರಿಡ್ಜ್ ತೆಗೆದುಕೊಳ್ಳಿ, ಕಾನ್‌ಕ್ರೀಟ್ ಹಾಕಿದ ತಕ್ಷಣ ಬಿದ್ದು ಹೋಯಿತು, ಮಿಲ್ಲರ್ ಟ್ಯಾಂಕ್ ಮನೆಗಳನ್ನು ತೆಗೆದುಕೊಳ್ಳಿ ಬಿದ್ದು ಹೋಯಿತು, ಚಕ್ಕರಾಯನ ಕೆರೆ ಕಾರ್ಪೋರೇಷನ್ ಬಿಲ್ಡಿಂಗ್ಸ್ ತೆಗೆದುಕೊಳ್ಳಿ ಬಿದ್ದು ಹೋಯಿತು, ಈ ತರಹ ಕಟ್ಟಿದ ಎಂಜಿನಿಯರ್ಸ್ ಇನ್ನು ಫ್ಲೈಓವರ್ ಕಟ್ಟಿದರೆ ಇನ್ನು ಎಷ್ಟು ಚೆನ್ನಾಗಿ ಕಟ್ಟಬಹುದು ನೀವೇ ಯೋಚನೆ ಮಾಡಿ. ಆದುದರಿಂದ ಇದನ್ನು ಪಿ. ಡಬ್ಲ್ಯೂ.ಡಿ. ಎಂಜಿನಿಯರ್ಸ್ ಕೈಯಲ್ಲಿ ಮಾಡಿಸಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಛೇರ್ಮನ್:- ಬೇಗ ಮುಗಿಸಿ.

ಶ್ರೀ ರಾಮಲಿಂಗಾರೆಡ್ಡಿ:- ಆಮೇಲೆ ಫ್ಲೈಓವರ್ ಏನಾಗಿದೆ ಎಂದರೆ ಬರೀ ಒಂದೇ ಒಂದು ವೇ ಮಾಡಿರುತ್ತಾರೆ. ಇದನ್ನು ಡಬ್ಬಲ್, ಟ್ರಿಬ್ಬಲ್ ಮಾಡಬೇಕು. ಏತಕ್ಕೆಂದರೆ ಟ್ರಾಫಿಕ್ ಬರುತ್ತಾ ಬರುತ್ತಾ ಜಾಸ್ತಿಯಾಗುತ್ತಿದೆ. ಬೇರೆ ಬೇರೆ ಆರ್ಕಿಟೆಕ್ಟ್‌ಗಳ ಸಲಹೆಗಳನ್ನು ತೆಗೆದುಕೊಳ್ಳಿ. ನ್ಯಾಷನಲ್, ಇಂಟರ್ ನ್ಯಾಷನಲ್ ಲೆವೆಲ್ ಆರ್ಕಿಟೆಕ್ಟ್‌ಗಳನ್ನು ಕರೆಸಿ ಅವರ ಸಲಹೆಗಳನ್ನು ತೆಗೆದುಕೊಂಡು ಇದನ್ನು ಎರಡು ಅಥವಾ ಮೂರು ಹಂತಗಳಲ್ಲಿ ಮಾಡಿರಿ. ಮೂರು ನಾಲ್ಕು ಹಂತ ಮಾಡಿದರೆ ಇನ್ನೂ ಒಳ್ಳೆಯದೆಂಬುದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದಕ್ಕೆ ಕಾರ್ಪೊರೇಷನ್ ಹತ್ತಿರ ದುಡ್ಡಿಲ್ಲ, ಸರಕಾರ ಹಣ ಕೊಡಬೇಕು, ಇಲ್ಲ ಕೇಂದ್ರ ಸರಕಾರದಿಂದ ತೆಗೆದುಕೊಳ್ಳಬೇಕು. ಇಲ್ಲ ವರಲ್ಡ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಳ್ಳಬೇಕು. ಆ ರೀತಿ ತೆಗೆದುಕೊಂಡು ಇದನ್ನು ಅತೀ ಶೀಘ್ರವಾಗಿ ಮಾಡಿಸಬೇಕೆಂದು ಹೇಳುತ್ತೇನೆ. ಫ್ಲೈಓವರ್ಸ್ ಆಗಲೀ, ಸಬ್‌ವೇಸ್ ಆಗಲೀ, ಬಿಲ್ಡಿಂಗ್ಸ್ ಆಗಲೀ, ಕಾರ್ಪೊರೇಷನ್‌ರವರು ಕಟ್ಟಬೇಕೆಂದರೆ ಅದು ಒಂದು ಎರಡು ವರ್ಷದಲ್ಲಿ ಮುಗಿಯುವುದಿಲ್ಲ, ಹತ್ತು ಹನ್ನೆರಡು ವರ್ಷವಾದರೂ ಮುಗಿಯುವುದಿಲ್ಲ. ಈಗ ಉದಾಹರಣೆಗೆ ಮಟನ್ ಮಾರ್ಕೆಟ್ ಶುರುವಾಗಿ ೧೧ ವರ್ಷ ಆಯಿತು, ಇನ್ನೂ ಮುಗಿದಿಲ್ಲ. ಗುಬ್ಬಿ ವೀರಣ್ಣ ಚಿತ್ರ ಮಂದಿರ, ಐದು ವರ್ಷ ಆಯಿತು, ಇನ್ನೂ ಮುಗಿದಿಲ್ಲ, ಮಡಿವಾಳ ಕಾಂಪ್ಲೆಕ್ಸ್ ಐದು ವರ್ಷವಾಯಿತು ಇನ್ನೂ ಮುಗಿದಿಲ್ಲ, ಕೌನ್ಸಿಲ್ ಹಾಲ್ ತೆಗೆದುಕೊಳ್ಳಿ, ಇನ್ನೂ ಆಗಿಲ್ಲ. ಕೃಷ್ಣರಾಜೇಂದ್ರ ಮಾರುಕಟ್ಟೆ ತೆಗೆದುಕೊಳ್ಳಿ ನಾಲ್ಕೈದು ವರ್ಷವಾಯಿತು ಇನ್ನೂ ಮುಗಿಸಿಲ್ಲ. ಇದರ ಜೊತೆಗೆ ಇನ್ನೊಂದು ವಿಚಾರ ಏನಿದೆ ಎಂದರೆ ಒಂದು ಎಸ್ಟಿಮೇಟ್ ಇವರು ಮಾಡುತ್ತಾರೆ, ಆಮೇಲೆ ಅದು ಜಾಸ್ತಿಯಾಗುತ್ತಾ ಹೋಗುತ್ತದೆ. ಕೌನ್ಸಿಲ್‌ಹಾಲ್ ೩ ಕೋಟಿ ಎಸ್ಟಿಮೇಟ್. ಅದು ಮುಗಿಯುವಷ್ಟರಲ್ಲಿ ೫-೬ ಕೋಟಿ ಆಗಿರುತ್ತದೆ. ನಾನು ಇರತಕ್ಕಂಥ ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಕೊಡುತ್ತಿದ್ದೇನೆ. ಕೃಷ್ಣರಾಜೇಂದ್ರ ಮಾರುಕಟ್ಟೆ ೨ ಕೋಟಿ ೭೫ ಲಕ್ಷಕ್ಕೆ ಸ್ಯಾಂಕ್ಷನ್ ಆಗಿದ್ದು. ಇವತ್ತು ಡಬ್ಬಲ್ ಟ್ರಿಬ್ಬಲ್ ಆಯಿತು. ಎಕ್ಸಸ್ ಅಮೌಂಟ್ ಕೊಟ್ಟೂ ಆಗಿದೆ, ಪೇಮೆಂಟ್ ಆಗಿ ಹೋಯಿತು. ಆಮೇಲೆ ಗುಬ್ಬಿ ವೀರಣ್ಣ ಚಿತ್ರಮಂದಿರ ೧.೭೫ ಕೋಟಿ, ಮೂರುವರೆ ಕೋಟಿ ಬಿಲ್ ಕೊಟ್ಟಿದ್ದಾರೆ. ಕೌನ್ಸಿಲ್ ಹಾಲ್ ೨.೬ ಕೋಟಿ ಆದರೆ ನಾಲ್ಕೂವರೆ ಕೋಟಿ ಬಿಲ್ ಕೊಟ್ಟಿದ್ದಾರೆ. ಇದೇ ರೀತಿ ಕೊಟ್ಟುಕೊಂಡು ಹೋದರೆ ಎಲ್ಲಿಗೆ ಹೋಗುತ್ತದೆ ಈ ಕಾರ್ಪೊರೇಷನ್ ದುಡ್ಡು? ಎಲ್ಲ ಎಂಜಿನಿಯರ್ಸ್‌ಗೆ ಎಸ್ಟಿಮೇಟ್ ಮಾಡುವುದಕ್ಕೆ ಬರುವುದಿಲ್ಲ ಎಂದಾಗಬೇಕು, ಇಲ್ಲ ಕರೆಕ್ಟಾಗಿ ಎಸ್ಟಿಮೇಟ್ ಮಾಡಿದ್ದಾರೆ ಎಂದರೆ, ಆಮೇಲಾಗಿರುವ ಕೆಲಸಗಳವೆಲ್ಲಾ ಇವರು, ಅವರು ಹೊಡೆದುಕೊಂಡಿರಬೇಕು. ಅಧಿಕಾರಿಗಳು ಕಂಟ್ರಾಕ್ಟರುಗಳು ಹೊಡೆದುಕೊಂಡಿರಬೇಕು. ಕೋಟ್ಯಾಂತರ ರೂಪಾಯಿ, ಇದೇನು ಒಂದು ಎರಡು ರೂಪಾಯಿಯೇ? ನಮ್ಮ ಕಾರ್ಪೊರೇಷನ್‌ನಲ್ಲಿ ಹಣಕಾಸಿನ ಪರಿಸ್ಥಿತಿ ಅಧೋಗತಿಗೆ ಇಳಿದುಬಿಟ್ಟಿದೆ.

ಛೇರ್ಮನ್:- ರಾಮಲಿಂಗರೆಡ್ಡಿಯವರೇ ಜಾಸ್ತಿ ನೀರು ಕುಡಿಯುತ್ತಾ ಕುಡಿಯುತ್ತಾ ತುಂಬಾ ಹೊತ್ತು ತೆಗೆದುಕೊಳ್ಳುತ್ತಿದ್ದೀರಿ. ದಯವಿಟ್ಟು ನಿಮ್ಮ ಭಾಷಣವನ್ನು ಮುಗಿಸಿ.

ಶ್ರೀ ರಾಮಲಿಂಗರೆಡ್ಡಿ:- ಮುಗಿಸುತ್ತೇನೆ. ೨೦ ಕೋಟಿ ರೂಪಾಯಿಗಳ ಬಾಕಿ ಇದೆ.

ಶ್ರೀ ದಯಾನಂದರಾವ್:- ನೀರು ಕುಡಿದರೆ ಹೆಚ್ಚು ವಿಷಯಗಳು ಜ್ಞಾಪಕಕ್ಕೆ ಬರುತ್ತವೆ.

ಛೇರ್ಮನ್:- ನೀರು ಕುಡಿಯುತ್ತಾ ಹೋದರೆ ಇನ್ನೂ ಹೆಚ್ಚು ಹೊತ್ತು ಮಾತನಾಡುತ್ತೀರಿ.

ಆದ್ದರಿಂದ ಬೇಗನೆ ಮುಗಿಸಿ.

ಶ್ರೀ ರಾಮಲಿಂಗರೆಡ್ಡಿ:- ೨೦ ಕೋಟಿ ರೂಪಾಯಿಗಳು ಬಾಕಿ ಕೊಡಬೇಕು. ಹೋದವಾರದಲ್ಲಿ ಇನ್‌ಕಮ್ ಟ್ಯಾಕ್ಸ್‌ನವರು ಕಂಟ್ರಾಕ್ಟರ್ಸ್ ಕೆಲಸ ಮಾಡಿದ ಮೇಲೆ ಕಂಟ್ರಾಕ್ಟರ್ಸ್ ಬಿಲ್‌ನಲ್ಲಿ ಇನ್‌ಕಮ್ ಟ್ಯಾಕ್ಸ್ ಹಿಡಿದುಕೊಂಡು ಇನ್‌ಕಮ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗೆ ಕಾರ್ಪೊರೇಷನ್‌ನವರು ಕಟ್ಟುತ್ತಿದ್ದರು. ಕಾರ್ಪೊರೇಷನ್‌ನವರು ಕಟ್ಟಿರಲಿಲ್ಲ ಒಂದು ವರ್ಷದಿಂದ ಸತಾಯಿಸಿಕೊಂಡು ಬಂದಿದ್ದರು. ಆದರೆ ಮೊನ್ನೆ ಇನ್‌ಕಮ್ ಟ್ಯಾಕ್ಸ್‌ನವರು ಬಂದು ಅಲ್ಲಿ ಎಲ್ಲಾ ಸೀಜ್ ಮಾಡಿದರು. ಎಲ್ಲಾ ಬ್ಯಾಂಕ್ ಅಕೌಂಟ್ಸ್‌ನ್ನು ಸೀಜ್ ಮಾಡಿದರು. ಯಾವುದೂ ದುಡ್ಡು ಕೊಡಬೇಕೆಂದರೂ ಹೋದವಾರ ಕೊಡಲಿಕ್ಕೆ ಆಗಲಿಲ್ಲ. ಸಣ್ಣಪುಟ್ಟ ಕಂಟ್ರಾಕ್ಟರ್ಸ್ ಅಂತು ಬದುಕುವಂತೆ ಇಲ್ಲ ಈ ಕಾರ್ಪೊರೇಷನ್‌ನಲ್ಲಿ. ಅವನು ಮನೆಯಲ್ಲಿ ಹೆಂಡತಿ ತಾಳಿ ಗೀಳಿ ಎಲ್ಲಾ ಮಾರಿ ಬಿಟ್ಟಿದ್ದಾನೆ. ಅವನಿಗೆ ದುಡ್ಡು ಕೊಟ್ಟಿಲ್ಲ. ನೋಡಿ ನಮ್ಮ ಹೊಸೂರು ರೋಡ್‌ನಲ್ಲಿ ಪ್ರತಿದಿನ ಸಾವಿರಾರು ವೆಹಿಕಲ್ಸ್ ಓಡಾಡುತ್ತಿರುತ್ತವೆ. ಆ ಹೊಸೂರು ರೋಡು ಕಂಟ್ರಾಕ್ಟ್‌ದಾರನಿಗೆ ಬರೀ ೫೦ ಸಾವಿರ ರೂಪಾಯಿ ಬಿಲ್ ಕೊಟ್ಟಿದ್ದೀರಿ. ಇದುವರೆಗೂ ಅವನು ೯೦ ಪರ್‌ಸೆಂಟ್ ಕೆಲಸ ಮಾಡಿ ಮುಗಿಸಿದ್ದಾನೆ. ಈ ರೀತಿ ಕಂಟ್ರಾಕ್ಟರ್ಸ್‌ನ್ನು ಡಿಸ್‌ಕರೇಜ್ ಮಾಡುತ್ತಾ ಹೋದರೆ ನಾವೇನು ಮಾಡುವುದು ಹೇಳಿ. ಆ ಹೊಸೂರು ರೋಡ್‌ನಲ್ಲಿ ಪ್ರತಿದಿನ ಸಾವಿರಾರು ವೆಹಿಕಲ್ಸ್ ಹೋಗುತ್ತವೆ. ಆಮೇಲೆ ಸಿದ್ದಾಪುರ ಸ್ಕೂಲ್ ೪ ವರ್ಷಗಳಿಂದ ಕಟ್ಟುತ್ತಲೇಇದ್ದೀರಿ. ಅವರಿಗೆ ದುಡ್ಡು ಕೊಟ್ಟರೆ ತಾನೆ. ಆಮೇಲೆ ಯಡಿಯೂರಿನಲ್ಲಿ ಜ್ಯೂನಿಯರ್ ಕಾಲೇಜು ತೆಗೆದುಕೊಳ್ಳಿ ೪-೫ ವರ್ಷಗಳಿಂದ ಫೌಂಡೇಷನ್ ಸ್ಟೋನ್‌ನಲ್ಲಿಯೇ ಇದೆ. ಆಮೇಲೆ ಲಕ್ಕಸಂದ್ರ ಕಮ್ಯುನಿಟಿ ಹಾಲ್ ೭-೮ ವರ್ಷಗಳಿಂದ ಆಗಿಲ್ಲ. ಜಯನಗರ ಕಮ್ಯುನಿಟಿ ಹಾಲ್ ೮ ವರ್ಷಗಳಿಂದ ಇನ್ನೂ ಮುಗಿದಿಲ್ಲ. ಈ ರೀತಿ ಆದರೆ ಹೇಗೆ? ಆಮೇಲೆ ಬಿ. ಡಬ್ಲ್ಯೂ. ಎಸ್. ಎಸ್. ಬಿ. ಡಿಪಾಜಿಟ್ಸ್ ನಮ್ಮ ಕಾರ್ಪೊರೇಷನ್ ವಾಟರ್ ಸಪ್ಲೈಗೆ ಆಗಲಿ ಸ್ಯಾನಿಟರಿಗೆ ಆಗಲಿ ನಾವು ಏನಾದರೂ ಕೆಲಸ ಮಾಡಿಸಬೇಕೆಂದರೆ ಅವರು ಒಂದು ಎಸ್ಟಿಮೇಟ್ ಕಳುಹಿಸಿಕೊಡುತ್ತಾರೆ. ನಾವು ಅವರಿಗೆ ಹಣ ಡಿಪಾಜಿಟ್ ಮಾಡಬೇಕು. ಈಗ ಒಂದು ವರ್ಷದಿಂದ ನನ್ನ ಕ್ಷೇತ್ರದಲ್ಲಿ ೨೫ ಲಕ್ಷ ಕಟ್ಟಬೇಕು, ಒಂದು ವರ್ಷದಿಂದ ಪ್ರಯತ್ನ ಮಾಡುತ್ತಿದ್ದೇನೆ ಆಗಿಲ್ಲ. ನಾನು ಕಮೀಷನರ್ ಸುರೇಶ್ ಅವರನ್ನು ಮೀಟ್ ಮಾಡಿದ್ದೆ. ಪಾಪ ಅವರು ಮಾಡಿಕೊಡುತ್ತೇನೆಂದು ಹೇಳಿದರು. ಅವರು ಒಳ್ಳೆಯ ಆಫೀಸರ್. ಅವರನ್ನೇ ಕಂಟಿನ್ಯೂ ಮಾಡಿ ಅವರು ಬಂದ ಮೇಲೆ ಹಣಕಾಸಿನ ಪರಿಸ್ಥಿತಿ ಸರಿ ಹೋಗಿದೆ. ನಮ್ಮ ಕಾರ್ಪೊರೇಷನ್‌ನಲ್ಲಿ ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ. ಅವರನ್ನೇ ಕಂಟಿನ್ಯೂ ಮಾಡಿ ಅವರು ದಕ್ಷ ಅಧಿಕಾರಿಗಳು. ಈ ತರಹದವರನ್ನು ಹಾಕಿ ಕಾರ್ಪೊರೇಷನ್ ಅಂತಹ ಜಾಗಗಳಲ್ಲಿ. ನಮ್ಮ ಕಾರ್ಪೊರೇಷನ್‌ನಲ್ಲಿ ಟಾರ್ ಹಾಕಿದ ಕಂಟ್ರಾಕ್ಟರ್‌ಗೆ ಮಾತ್ರ ಬಿಲ್ ಪೆಂಡಿಂಗ್‌ನಲ್ಲಿ ಉಳಿಯುವುದಿಲ್ಲ. ಆ ಟಾರ್ ಕಂಟ್ರಾಕ್ಟರ್ ಕೊನೆಗೆ ಸಂಬಳಕ್ಕೆ ದುಡ್ಡು ಇಲ್ಲದಿದ್ದರೂ ಪರವಾಗಿಲ್ಲ ಟಾರ್ ಕಂಟ್ರಾಕ್ಟರ್‌ಗೆ ಮಾತ್ರ ಯಾವ ಬಿಲ್ ಪೆಂಡಿಂಗ್‌ನಲ್ಲಿ ನಿಲ್ಲುವುದಿಲ್ಲ. ಏತಕ್ಕೆಂದರೆ ಅವರು ೩೦ ಪರ್ಸೆಂಟ್ ಲಂಚ ಕೊಡುತ್ತಾರೆ ಆ ಟಾರ್ ಕಂಟ್ರಾಕ್ಟರ್ಸ್. ಅವರು ಎಸ್ಟಿಮೇಟ್‌ನಿಂದ ಹಿಡಿದು ಕೊನೆಗೆ ಬಿಲ್ ಬರೆದು ಮುಗಿಸುವಷ್ಟರಲ್ಲಿ ೩೦ ಪರ್ಸೆಂಟ್ ಲಂಚ ಕೊಡಬೇಕಾಗುತ್ತದೆ. ನಮ್ಮ ಕಾರ್ಪೊರೇಷನ್‌ನಲ್ಲಿ ಲಂಚದ ತಾಂಡವ ನೃತ್ಯ ಆಗುತ್ತಿದೆ. ಅವರು ೩೦ ಪರ್ಸೆಂಟ್ ಲಂಚ ಕೊಟ್ಟರೆ ಕ್ವಾಲಿಟಿ ಇನ್ನು ಎಷ್ಟು ಚೆನ್ನಾಗಿರುತ್ತದೆ? ಇದರಿಂದಾಗಿ ಪ್ರತಿ ವರ್ಷ ಟಾರ್ ಹಾಕುವ ಕೆಲಸ ನಡೆಯುತ್ತಾ ಇರುತ್ತದೆ.

ಶ್ರೀ ಕೆ. ಜೆ. ಜಾರ್ಜ್:- ಅವರು ಕಾರ್ಪೋರೇಟರ್ ಆಗಿ ಕೆಲಸ ಮಾಡಿದವರು. ಅವರು ಈಗ ಎಂ. ಎಲ್. ಎ. ಆಗಿದ್ದಾರೆ. ಯಾವ ಕಂಟ್ರಾಕ್ಟರ್ ದುಡ್ಡು ಕೊಡಬೇಕೆಂದು ಕಾನೂನಿನಲ್ಲಿ ಇದೆ? ಯಾರಾದರೂ ಆಫೀಸರ್ಸ್ ಕೇಳಿದ್ದರೆ ಹೇಳಿ I will see that action is taken straight away. ೩೦ ಪರ್ಸೆಂಟ್ ಲಂಚ ಕೊಡುತ್ತಿದ್ದಾರೆಂದು ಹೇಳುತ್ತಿದ್ದೀರಿ. ಆದರೆ ಭ್ರಷ್ಟಾಚಾರ ಇದೆ ಎಂದು ಹೇಳುವುದು ಒಂದು ತರಹ ಫ್ಯಾಶನ್ ಆಗಿದೆ. ಲಂಚ ಕೊಡಬೇಕು, ಕೊಡಬೇಕು ಅಂತ ಹೇಳಿ. ಯಾರು ಹೇಳಿದರು ಕೊಡಲಿಕ್ಕೆ? ನಾನಂತೂ ಇದೇ ಸದನದಲ್ಲಿ ಸ್ಪಷ್ಟ ಪಡಿಸಿದ್ದೇನೆ ಯಾರೂ ದುಡ್ಡು ಕೊಡಬೇಕಾಗಿಲ್ಲ, ಲಂಚ ಕೊಡಬೇಕಾಗಿಲ್ಲ; ಅಂತಹವರು ಯಾರಾದರೂ ಇದ್ದರೆ ನೇರವಾಗಿ ಬನ್ನಿ ಕೂಡಲೇ ನಾನು ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ರಾಮಲಿಂಗರೆಡ್ಡಿ:- ಆಯಿತು ನಾನು ಹೇಳಿದ್ದನ್ನು ಈ ಸಭೆಯಲ್ಲಿ ನೀವು ಒಪ್ಪಿಕೊಳ್ಳದೆ ಇರಬಹುದು.

ಶ್ರೀ ಕೆ. ಜೆ. ಜಾರ್ಜ್:- ಇದು ಎಲ್ಲರಿಗೂ ಗೊತ್ತಿದೆ ಅಂತ ಹೇಳಿದರೆ ಅದು ನಡೆಯುವುದಿಲ್ಲ. ಅದನ್ನು ಹಾಗೇ ಬಿಟ್ಟರೆ ಹಾಗೇ ನಡೆದುಕೊಂಡು ಹೋಗುತ್ತಿರುತ್ತದೆ. ತಾವು ಜವಾಬ್ದಾರಿಯುತ ಸದಸ್ಯರಾಗಿದ್ದೀರಿ, ಯಾವುದಾದರೊಂದು ಇನ್‌ಸ್ಟೆನ್ಸ್ ಇದ್ದರೆ ಕೊಡಿ ಇಂತಹವರು ಇಂಥಾದ್ದು ಮಾಡಿದರು ಎಂದು ಹೇಳಿ.

ಛೇರ್ಮನ್:- ಲಂಚ ಇದೆ ಎಂದು ಹೇಳುವುದಕ್ಕಾಗುವುದಿಲ್ಲ, ಸಮಾಜದಲ್ಲಿ ಇಲ್ಲವೆಂದು ಸಹ ಹೇಳುವುದಕ್ಕಾಗುವುದಿಲ್ಲ.

(ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು)

ಶ್ರೀ ರಾಮಲಿಂಗಾರೆಡ್ಡಿ:- ಈ ತರಹ ಆದರೆ ಕ್ವಾಲಿಟಿ ಆಫ್ ವರ್ಕ್ ಎಲ್ಲಿರುತ್ತದೆ ಹೇಳಿ? ಮದ್ರಾಸ್‌ನಲ್ಲಿ ಟಾರ್ ಹಾಕಬೇಕಾಗಿದ್ದರೆ ಬೆಂಗಳೂರಿನಲ್ಲಿ ಅಡ್ವರ್‌ಟೈಸ್‌ಮೆಂಟ್ ಕೊಡುತ್ತಾರೆ. ಅಂದ್ರೆ ಇಲ್ಲಿಂದ ಬರಲಿ ಎಂದು. ಇಲ್ಲಿ ಏನಾಗಿದೆ ಕೋಟ್ಯಾಂತರ ರೂಪಾಯಿಗಳ ದುಡ್ಡು ಕಂಪ್ಲೀಟ್ ಆಗಿ ಅವರಿಗೆ ಪೀಸ್ ವರ್ಕ್‌ನಲ್ಲಿ ಕೊಡುತ್ತಾರೆ. ಇಲ್ಲಿ ಟಾರ್, ಟಾರ್ ಅಂತ ಹೇಳಿ ಕೋಟ್ಯಾಂತರ ರೂಪಾಯಿಗಳ ಕೆಲಸ ಮಾಡುತ್ತಾರೆ. ಆದೇ ನನ್ನ ಕ್ಷೇತ್ರದಲ್ಲಿರುವ ಜನರಿಗೆ ಕುಡಿಯುವ ನೀರು ಇಲ್ಲ. ಮಡಿವಾಳ, ಸುದ್ದುಗುಂಟೆಪಾಳ್ಯ, ತಾವರೆಕೆರೆ ಆ ಕಡೆ ಬಂದು ನೋಡಿ ಕುಡಿಯುವ ನೀರು ಇಲ್ಲ, ಓಡಾಡಲು ರಸ್ತೆ ಇಲ್ಲ ಸ್ಯಾನಿಟೇಶನ್ ವ್ಯವಸ್ಥೆ ಇಲ್ಲ. ಎಲ್ಲಾ ಗುಂಡಿಗಳಲ್ಲಿ ಆಗಿದುಕೊಂಡಿರುತ್ತಾರೆ. ಆ ಗುಂಡಿಗಳು ಎರಡು ಮೂರು ತಿಂಗಳಲ್ಲಿ ಭರ್ತಿಯಾಗುತ್ತಿರುತ್ತದೆ. ಮಳೆಗಾಲದಲ್ಲಿ ಅಂತು ೧೫ ದಿವಸಕ್ಕೆ ತುಂಬಿಕೊಳ್ಳುತ್ತವೆ. ಅದನ್ನು ೧೦ ಕಿಲೋಮೀಟರ್ ಆಚೆ ತೆಗೆದುಕೊಂಡು ಹೋಗಬೇಕು. ಈಗ ಯಾರೂ ತಲೆ ಮೇಲೆ ಮಲ ಹೊರಬಾರದು. ಅದಕ್ಕೆ ೨೦೦-೩೦೦-೪೦೦ ರೂಪಾಯಿ ಒಂದು ಗುಂಡಿ ಖಾಲಿ ಮಾಡಲು ಕೊಡಬೇಕಾಗುತ್ತದೆ. ಯಾವಾಗ ಸ್ಯಾನಿಟೇಶನ್ ಹಾಕುತ್ತೀರಿ ಹೇಳಿ. ಯಾವಾಗ ವಾಟರ್ ಸಪ್ಲೈ ಕೊಡುತ್ತೀರಿ ಹೇಳಿ. ಇಲ್ಲಿ ನಮಗೆ ನೀರಿನ ಬವಣೆ ಗೊತ್ತಾಗುವುದಿಲ್ಲ. ನಾನು ನೋಡಿದ್ದೇನೆ. ಕಳವು ಮಂತ್ರಿಗಳು ಮನೆಗೆ ನೀರು ಇಲ್ಲ ಅಂತ ಹೇಳಿದ ಕೂಡಲೇ ಬಿ. ಡಬ್ಲ್ಯೂ. ಎಸ್. ಎಸ್. ಬಿ. ವ್ಯಾನ್‌ನಲ್ಲಿ ನೀರು ತಂದು ತುಂಬಿಸಿ ಹೋಗುತ್ತಾರೆ ಅವರ ಸಮಸ್ಯೆಯನ್ನು ಕೇಳುವವರು ಯಾರಿಲ್ಲ. ಈಗ ಸ್ಯಾನಿಟೇಶನ್ ತೆಗೆದುಕೊಳ್ಳಿ. ಮಡಿವಾಳದಲ್ಲಿ ಸ್ಲಮ್

ಬರುತ್ತಿದೆ. ಅಲ್ಲಿ ೨-೩ ಸಾವಿರ ವೋಟರ್ಸ್ ಇದ್ದಾರೆ. ಬೋವಿ ಕಾಲೋನಿ ಅಲ್ಲಿ ೫ ಸಾವಿರ ಜನರು ಇದ್ದಾರೆ. ತಿಲಕ್ ಸ್ಲಮ್ ಅಂಥಾ, ಸ್ವಾಗತ್ ಸ್ಲಮ್, ತಿಲಕ್ ನಗರ ಇಷ್ಟೂ ಸೇರಿ ಸುಮಾರು ೨೦ ಸಾವಿರ ಜನಸಂಖ್ಯೆ ಇದೆ. ಅವರಿಗೆ ಒಂದೇ ಒಂದು ಬಾತ್ ರೂಮ್ ಇಲ್ಲ. ಸ್ಯಾನಿಟರಿ ಲೈನ್ ಇಲ್ಲವೇ ಇಲ್ಲ. ಹೆಣ್ಣುಮಕ್ಕಳು ಎಲ್ಲಿ ಹೋಗಬೇಕು? ಯಾವಾಗ ಅವರಿಗೆ ಲೈನ್ ಹಾಕಿಸಿಕೊಡುತ್ತೀರಿ? ಜಯನಗರದ ಹತ್ತಿರ ಬರುವಂಥ ಬಿ. ಟಿ. ಎಂ. ಸ್ಲಮ್‌ನಲ್ಲಿ ೨೦೦ ಮನೆಗಳು ಇವೆ. ಈ ೨೦೦ ಮನೆಗಳಿಗೆ ಒಂದೆ ಒಂದು ಬಾತ್ ರೂಮ್ ಇಲ್ಲ. ನಿಮ್ಹಾನ್ಸ್ ಹತ್ತಿರ ಇರುವ ಸ್ಲಮ್ ಅನ್ನು ಒಳ್ಳೆ ಜಾಗಕ್ಕೆ ಶಿಫ್ಟ್ ಮಾಡುವುದಕ್ಕಾಗುವುದಿಲ್ಲ. ಡೆಪ್ಯೂಟಿ ಕಮಿಷನರ್‌ರವರು ಶಿಫ್ಟ್ ಮಾಡುತ್ತೇವೆಂದು ಫೋನ್ ಮಾಡಿ ಬೆಳಿಗ್ಗೆ ಹೇಳುತ್ತಾರೆ. ಅವರಿಗೆ ವಾಟರ್ ಫೆಸಿಲಿಟಿ ಮತ್ತೆ ಏನು ಕೊಟ್ಟಿದ್ದೀರಿ ಎಂದು ಕೇಳಿದರೆ ಏನೂ ಕೊಟ್ಟಿಲ್ಲವೆಂದು ಹೇಳುತ್ತಾರೆ. ಅವರು ಎಲ್ಲಿ ಹೋಗಬೇಕು? ಅವರಿಗೆ ಕುಡಿಯುವುದಕ್ಕೆ ನೀರು ಬೇಡವೇ? ಸ್ಯಾನಿಟರಿ ಬೇಡವೇ? ೨೫ನೇ ತಾರೀಖಿನೊಳಗೆ ಖಾಲಿ ಮಾಡಬೇಕೆಂದು ಹೇಳುತ್ತಾರೆ.;

ಉಪಾಧ್ಯಕ್ಷಣೆಯವರು:- ಅರ್ಧ ಗಂಟೆ ಹೊತ್ತು ಮಾತನಾಡಿದ್ದೀರಿ. ನನ್ನ ಮುಂದಿರುವ ಪಟ್ಟಿಯಲ್ಲಿ ಇನ್ನೂ ೮ ಜನ ಮಾತನಾಡುವವರಿದ್ದಾರೆ. ಅವರೆಲ್ಲರಿಗೂ ಸ್ವಲ್ಪ ಸ್ವಲ್ಪ ಸಮಯವಾದರೂ ಕೊಡಬೇಕಾಗುತ್ತದೆ. ಬೇಗ ಮುಗಿಸಿ. ತಾವು ದಯವಿಟ್ಟು ಸಹಕಾರ ಕೊಡಬೇಕು.

ಶ್ರೀ ರಾಮಲಿಂಗರೆಡ್ಡಿ:- ಆಮೇಲೆ ಹಕ್ಕುಪತ್ರ ವಿತರಣೆ ಮಾಡುವುದು. ಇದು ಬಹಳ ಒಳ್ಳೆಯ ಕಾರ್ಯಕ್ರಮ. ಯಾರು ಏನೇ ಹೇಳಲಿ ಇದು ಒಳ್ಳೆಯ ಕೆಲಸ. ೫೦ ವರ್ಷಗಳಿಂದ ಅವರು ಹಕ್ಕು ಪತ್ರ ಕೇಳುತ್ತಿದ್ದಾರೆ. ಹಕ್ಕು ಪತ್ರಗಳನ್ನು ಕೊಡಿಸುತ್ತೇವೆಂದು ಅವರೆಲ್ಲರನ್ನೂ ಯಾರೋ ಇಲ್ಲಿಗೆ ಕರೆದುಕೊಂಡು ಬಂದು ಬಿಟ್ಟಿದ್ದರು. ಈಗ ಹಕ್ಕುಪತ್ರ ಕೊಡುವ ಬಗ್ಗೆ ಮಾನ್ಯ ಕೆ. ಜೆ. ಜಾರ್ಜ್‌ರವರಿಗೆ ನಾನು ಅಪ್ರಿಷಿಯೇಟ್ ಮಾಡುತ್ತೇನೆ. ಆದರೆ ಕೆಲವು ಕಡೆ ಹಕ್ಕುಪತ್ರ ಕೊಟ್ಟಿರುವುದು ಏನಾಗಿದೆ ಎಂದರೆ ಒಂದು ಅಡಿ ೧೨ ಅಡಿ ಅಳತೆ ಮೇಲೆ ಕೊಟ್ಟಿದ್ದಾರೆ. ಅದನ್ನು ಬೇಕಾದರೆ ತಂದು ತೋರಿಸುತ್ತೇನೆ. ಸ್ಲಮ್‌ನವರಿಗೆ ಕೊಡುತ್ತಿರುವ ೧೮ ಪರ್ಸೆಂಟ್ ಹಣ ಸರಿಯಾಗಿ ಅವರಿಗೆ ತಲುಪುತ್ತಿಲ್ಲ. ಹರಿಜನರಿಗೆ ಹೋಗುತ್ತಿಲ್ಲ. ಕೆಲವು ಜನರಿಗೆ ಮಾತ್ರ ಹೋಗುತ್ತಿದೆ. ಇದರ ಬಗ್ಗೆ ಗಮನ ಹರಿಸಬೇಕು.

ಉಪಾಧ್ಯಕ್ಷಣೆಯವರು:- ರಾಮಲಿಂಗಾರೆಡ್ಡಿಯವರೇ ನಿಮ್ಮ ಹೆಸರನ್ನು ಕರೆಯಬೇಕಾಗುತ್ತದೆ.

ಶ್ರೀ ರಾಮಲಿಂಗ ರೆಡ್ಡಿ:- ಇಷ್ಟು ಹೇಳಿ, ನಾನು ಆಗಲೇ ಹೇಳಿದ್ದು ಯಾರ ಮೇಲೆ ದ್ವೇಷ ಇಟ್ಟುಕೊಂಡು ಹೇಳಲಿಲ್ಲ. ಇರುವ ವಿಚಾರ ಹೇಳಿದ್ದೇನೆಯೇ ಹೊರತು ಬೇರೆ ಇಲ್ಲ. ನಾನು ನಗರ ಸಭೆಯ ಸದಸ್ಯನಾಗಿ ಆಫೀಸ್‌ನಲ್ಲಿ ಸುತ್ತಾಡಿ, ಹೌಸಿಂಗ್ ಬೋರ್ಡ್, ಬಿ. ಡಿ. ಎ. ಎಲ್ಲಾ ಸುತ್ತಾಡಿ ಬೇಜಾರಾಗಿ ಇವತ್ತು ಮಾತನಾಡಿದ್ದೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):- ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಮಾನ್ಯ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸಚಿವರು ಇಟ್ಟಿರತಕ್ಕಂಥ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈ ಸ್ಲಮ್ ಬೋರ್ಡ್ ಬಗ್ಗೆ ಕೆಲವು ಮಾನ್ಯ ಮಿತ್ರರು ಮಾತನಾಡಿದರು. ಅದು ನಿಜವಾದ ವಿಚಾರ. ಈ ಸ್ಲಮ್‌ನಲ್ಲಿರತಕ್ಕಂಥ ಜನ, ರಾಜ್ಯದ ಬಹು ಭಾಗದಲ್ಲಿ ವ್ಯವಸಾಯ ಮಾಡಿಕೊಂಡು, ಕೂಲಿ ದೊರೆಯದ ಪಟ್ಟಣ ಪ್ರದೇಶಗಳಲ್ಲಿ ಬಂದು

ಸ್ಲಮ್‌ನಲ್ಲಿ ವಾಸ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇಲ್ಲಿ ಟೌನ್‌ಗಳಲ್ಲಿ ಇದ್ದರೂ ಕೂಡ ಈ ಟೌನ್‌ನಲ್ಲಿ ಕಟ್ಟಿರತಕ್ಕಂಥ ಮನೆ ಕೆಲಸ ಮುಂತಾದ ಶ್ರಮ ವಹಿಸಿ ದುಡಿಯತಕ್ಕಂಥ ಜೀವನವನ್ನು ಅವರು ನಡೆಸುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೆ, ಪ್ರತಿ ಸಾರಿ ಎಲೆಕ್ಷನ್ ಟೈಮ್‌ನಲ್ಲಿ ಅವರಿಗೆ ಸ್ವರ್ಗವನ್ನು ತೋರಿಸಿಬಿಟ್ಟು ನಮಗೆ ವೋಟು ಕೊಟ್ಟು ಬಿಡ್ರಿ ನಿಮಗೆ ಬೇಕಾದಷ್ಟು ಅದನ್ನು ಮಾಡಿಕೊಡುತ್ತೇನೆ, ಇದನ್ನು ಮಾಡಿಕೊಡುತ್ತೇನೆಂದು ಹೇಳಿ ನಂಬಿಸಿ ಮುಗ್ಧ ಜನಗಳಿಂದ ನಾವು ವೋಟು ತೆಗೆದುಕೊಳ್ಳುತ್ತೇವೆ. ಆ ವೋಟು ತೆಗೆದುಕೊಂಡಾದ ಮೇಲೆ ಆ ಜನಗಳಿಗೆ ಏನು ಭರವಸೆ ಕೊಟ್ಟಿರುತ್ತೇವೆಯೋ ಆ ಭರವಸೆಯಂತೆ ನಡೆದು ಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯವೆಂದು ತಿಳಿಸುತ್ತಾ, ಸ್ಲಮ್‌ಗಳಲ್ಲಿ ಪುನಃ ಹೋಗಿ ನೋಡಿದರೆ ಅದೇ ಪರಿಸ್ಥಿತಿ ಇರುತ್ತದೆ. ಯಾವ ವಿಧವಾದ ಒಂದು ಇಂಪ್ರೂವ್‌ಮೆಂಟ್ ಕೂಡ ಆಗಿಲ್ಲ. ತಿಳುವಳಿಕೆ ಇಲ್ಲದೇ ಇರತಕ್ಕಂಥ ಜನ. ಅಸಹಾಯಕ ಜನ. ತೊಂದರೆಯಲ್ಲಿರತಕ್ಕಂಥ ಜನ. ನಮ್ಮ ಗೆಲುವಿಗೆ ಕಂಡ ಕಂಡ ದೇವರಿಗೆ ಕೈ ಮುಗಿದು ನಮ್ಮನ್ನು ಆರಿಸಿ ಕಳುಹಿಸಿರತಕ್ಕಂಥ ಮುಗ್ಧ ಜನ. ಬಹುಶಃ ಅವರಿಗೆ ವಂಚನೆ ಮಾಡಿದರೆ, ದ್ರೋಹ ಮಾಡಿದರೆ, ಅವರಿಗೆ ಏನು ಪ್ರಾಮಿಸ್ ಮಾಡಿದ್ದೇವೆಯೋ ಅದನ್ನು ನಾವು ಮಾಡಿಕೊಂಡೇ ಹೋದರೆ ಬಹುಶಃ ನಮ್ಮನ್ನು ದೇವರು ಕ್ಷಮಿಸುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಐದಾರು ದಿವಸದಲ್ಲಿ ನಾನು ನನ್ನ ಸ್ನೇಹಿತರು ಇಬ್ಬರೂ ಬೆಳಗಿನ ಜಾವ ೬ ಗಂಟೆಯಲ್ಲಿ ವಾಕ್ ಹೋಗಿ ಬರುತ್ತಿದ್ದೆವು. ಮಾನ್ಯ ಉಪಾಧ್ಯಕ್ಷರೆ, ಒಬ್ಬರು ಹೆಂಗಸು, ಬ್ರೆಡ್ ಚೂರುಗಳನ್ನು ಎಸೆದುಕೊಂಡು ಹೋಗುತ್ತಿದ್ದರು. ಯಾರೋ ಶ್ರೀಮಂತರು ಪುಣ್ಯ ಕಟ್ಟಿಕೊಳ್ಳುವುದಕ್ಕೆ. ಹಿಂದುಗಡೆ ೫ ವರ್ಷದ್ದು ಒಂದು ಮಗು, ಇನ್ನೊಂದು ೭ ವಷದ್ದು ಒಂದು ಮಗು, ಅದರ ಸೊಂಟದಲ್ಲಿ ೩ ವರ್ಷದ ಮಗು. ಮುಂದೆ ಹೋಗುತ್ತಿದ್ದ ಮಗು ಕಾಗೆಗಳು, ನಾಯಿ ಬರದ ಹಾಗೆ ಓಡಿಸುವುದು, ಹಿಂದುಗಡೆ ಇದ್ದ ಮಗು ಧೂಳಿನಲ್ಲಿ ಬಿಸಾಕಿದಂಥ ಬ್ರೆಡ್ ಚೂರುಗಳನ್ನು ಎತ್ತಿಕೊಂಡು ಹೋಗುತ್ತಿತ್ತು. ಇದು ನಾಲ್ಕೈದು ದಿವಸದಲ್ಲಿ ನಾನು ಕಣ್ಣಾರೆ ಕಂಡಂಥ ದೃಶ್ಯ. ಒಂದು ಕಡೆ ಒಂದು ದಿವಸ ಹೋಟಲಿನಲ್ಲಿ ಇರಬೇಕಾದರೆ ೨ ಸಾವಿರ ೩ ಸಾವಿರ ಬಾಡಿಗೆ ಕೊಟ್ಟು ಒಂದು ಹೊತ್ತಿನ ಊಟಕ್ಕೆ ೫ ನೂರು, ೬ ನೂರು, ೮ ನೂರು ಖರ್ಚು ಮಾಡತಕ್ಕಂಥ ಜನ ಒಂದು ಕಡೆ ಇದ್ದರೆ ಇನ್ನೊಂದು ಕಡೆ ಒಂದು ನಿಕೃಷ್ಟ ಅವಸ್ಥೆಯಲ್ಲಿ ಜೀವನ ಮಾಡುತ್ತಿರತಕ್ಕಂಥ ಬಡಪಾಯಿ ಜನ ಮತ್ತೊಂದು ಕಡೆ. ಹೋಗಲಿ ನಾವು ಅಧಿಕಾರಕ್ಕೆ ಬಂದೆವಲ್ಲ ಯಾರಿಂದ? ಈ ಬಡಪಾಯಿಗಳ ವೋಟಿನಿಂದಲೇ ವಿನಃ ಶ್ರೀಮಂತ ವರ್ಗವೇನೂ ನಮಗೆ ವೋಟು ಕೊಟ್ಟು ಇಲ್ಲಿ ಇರಲಿಕ್ಕೆ ಕಳಿಸಲಿಲ್ಲ. ಈ ಜನಗಳದು ಇಷ್ಟೊಂದು ಹೀನಾಯ ಸ್ಥಿತಿ ಇದ್ದರೂ ಅವರ ಕ್ಷೇಮಾಭಿವೃದ್ಧಿಗೆ ಅಭ್ಯುದಯಕ್ಕೆ ಮಾಡಿರುವ ಉಪಕಾರ ಬಹಳ ಕಡಿಮೆ ಎಂದು ಹೇಳಿದರೆ ತಪ್ಪಾಗಲಾರದು, ಕೆಲವು ಹೋಟೆಲ್‌ಗಳ ಮುಂದೆ ಉಪಾಧ್ಯಕ್ಷಣೆಯವರೇ ನೀವು ನೋಡಿರಬಹುದು ಊಟ ಮಾಡಿ ಬಿಸಾಕಿರುವ ಎಲೆಗಳಲ್ಲಿ ಇದ್ದಂಥ ಚೂರು ಬ್ರೆಡ್ ಅನ್ನವನ್ನು ತಗೊಂಡು ಜೀವನ ಮಾಡುವ ಜನರಿದ್ದಾರೆ. ಈಗ್ಗೆರಡು ತಿಂಗಳ ಹಿಂದೆ ಕಂಚಾಂಬ ಹೋಟೆಲ್ ಮುಂದೆ ನಾನು ಹೋಗ್ತಾ ಇದ್ದೆ. ಆ ಕಾರ್ಪೊರೇಷನ್‌ನವರು ಬಂದು ಕಸವನ್ನು ಲಾರಿಗೆ ತುಂಬುತ್ತಿದ್ದರು. ಮೂರ್ನಾಲ್ಕು ಹುಡುಗರು ಚಿಕ್ಕ ಮಕ್ಕಳು ಆರೇಳು ವರ್ಷದವರು ಆ ಕಸದಲ್ಲಿರುವ ಬ್ರೆಡ್ಡಿನ ಚೂರನ್ನು ಆರಿಸಿ ಬಾಯಿಗೆ ಹಾಕಿಕೊಳ್ಳುತ್ತಿದ್ದವು. ಬಹುಶಃ ಅದನ್ನು ನೋಡಿದರೆ ದೇವರು ಇನ್ನಂತೂ ನಮ್ಮನ್ನು ಕ್ಷಮಿಸೋಲ್ಲ ಸೀದಾ ನಮ್ಮನ್ನು ನರಕಕ್ಕೆ ಕಳಿಸ್ತಾನೆ. ಇದು ಎಂಥಾ ಹೀನಾಯಸ್ಥಿತಿ, ನಮ್ಮದು

ಸಿವಿಲೈಸ್ಡ್ ಸೊಸೈಟಿ, ಸಿವಿಲೈಸ್ಡ್ ಸರ್ಕಾರ ಅಂತ ಹೇಳಿಕೊಳ್ಳೋಕೆ ನಮಗಂತೂ ನಾಚಿಕೆಯಾಗುತ್ತದೆ. ದಿನನಿತ್ಯ ಇಂತಹ ದೃಶ್ಯಗಳನ್ನು ನೋಡಿದಾಗ ನನಗೆ ಕರುಳು ಕಿತ್ತುಬರುತ್ತದೆ. ಉಳಿದದ್ದು ಏನಿದ್ದರೂ ಚಿಂತಿಲ್ಲ ಇವರು ಮಹಡಿಮೇಲೆ ಮಹಡಿ ಕಟ್ಟದಿದ್ದರೂ ಚಿಂತಿಲ್ಲ ಅಥವಾ ಸಿವಿಕ್ ಅಮೆನಿಟೀಸ್ ಅನ್ನು ಕಡಿಮೆ ಕೊಟ್ಟರೂ ಚಿಂತಿಲ್ಲ. ಈ ನಿರ್ಭಾಗ್ಯ ಜನ ನ್ಯಾಯವಾಗಿ ಮಾನ ಮರ್ಯಾದೆಯಿಂದ ಬದುಕೋಕೆ- ಅವಕಾಶ ಮಾಡಿಕೊಡಬೇಕಾದ್ದು ನಮ್ಮ ಆದ್ಯಕರ್ತವ್ಯ ಎಂದು ತಿಳಿಸಲು ನಾನು ಇಚ್ಛೆಪಡುತ್ತೇನೆ. ಕೆಲವು ಸ್ಥಳಗಳಲ್ಲಿ ೭೦೦-೮೦೦ ಮನೆಗಳಿವೆ. ಅವು ೬ ಅಡಿ ೪ ಅಡಿ ಅಳತೆಯ ಮನೆಗಳು. ಆ ಮನೆಗಳಲ್ಲಿ ಸರ್ಕಸ್ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಹೋದಸಲ ಪ್ರಶ್ನೆ ಬಂದಾಗ ಮಾನ್ಯ ಸಚಿವರಿಗೆ ಹೇಳಿ ಒಂದು ಅರ್ಜಿ ಕೂಡ ಕೊಟ್ಟೆ. ಇವರು ಲಕ್ಷಗಟ್ಟಲೆ ಖರ್ಚು ಮಾಡ್ತಾರೆ. ಒಂದೊಂದು ಸ್ಲಮ್‌ಗೆ ಆ ಇಂಪ್ರೂವ್‌ಮೆಂಟ್ ಈ ಇಂಪ್ರೂವ್‌ಮೆಂಟ್ ಏನೇನೋ ಲೆಕ್ಕ ಹೇಳಿ ಖರ್ಚು ಮಾಡುತ್ತಾರೆ. ಆದ್ರೆ ಬೇಸಿಕ್‌ಆಗಿ ಬೇಕಾಗಿರುವ ಶೌಚಾಲಯಗಳನ್ನು ಕಟ್ಟಿಸೋವಷ್ಟು ಕೂಡ ನಮ್ಮ ಅಧಿಕಾರಿಗಳಿಗೆ ವಿವೇಕ ಇಲ್ಲ ಅಂದರೆ ವಿವೇಕಶೂನ್ಯರು ಅಂದರೆ ನಾನು ಇನ್ನೂ ಯಾವ ಭಾಷೆಯಲ್ಲಿ ಹೇಳಬೇಕೋ ನನಗಂತೂ ಅರ್ಥವಾಗ್ತಾ ಇಲ್ಲ. ಒಂದು ಸಾರಿ ನಾನು ಹೇಳಿದ್ದೆ. ಒಂದು ಸ್ಲಮ್‌ಗೆ ನಾನು ಹಾಸನದಲ್ಲಿ ಹೋಗಿದ್ದಾಗ ಒಬ್ಬ ಹೆಣ್ಣುಮಕ್ಕಳು ಇದೇ ಪ್ರಶ್ನೆ ನನ್ನ ಕೇಳಿದಳು. ಇಂತಹ ಸ್ಥಿತೀಲಿ ನಿಮ್ಮ ಹೆಂಡ್ತಿ ಇದ್ದರೆ ಹನುಮೇಗೌಡರೇ ನೀವೇನು ಮಾಡ್ತಾ ಇದ್ರಿ ದಯವಿಟ್ಟು ಹೇಳಿ ಅಂತ. ಅದೂ ಬೆಳಿಗ್ಗೆ ೫ ಗಂಟೆಯಿಂದ ರಾತ್ರಿ ೨ ಗಂಟೆವರೆಗೂ ನಾವು ಎಲ್ಲೂ ಹೊರಗಡೆ ಹೋಗೋಹಾಗಿಲ್ಲ. ಹೊರಗಡೆ ಹ್ಯಾಗೆ ಹೋಗಬೇಕು ಹೊರಗಡೆ ನೂರಾರು ಸಾವಿರಾರು ಜನ ತಿರುಗಾಡ್ತಾರೆ, ಇಲ್ಲೇನು ಕಾಡಿದೆಯಾ, ಹಳ್ಳ ಕೊಳ್ಳ ಇದೆಯಾ ಅಂತ ಸಂಕಟಪಟ್ಟುಕೊಂಡು ಹೇಳಿದರು. ಬಹುಶಃ ನನಗನ್ನಿಸುತ್ತದೆ ಆ ಬಡಜನಗಳು ಯಾರಿಗೆ ಅಯ್ಯೋ ದೇವರೆ ಅಂತ ಒಂದೊಂದು ಮಾತು ಅಡ್ತಾರೋ ಅದು ಒಂದೊಂದು ಆಟಂ ಬಾಂಬಾಗಿ ನಮಗೆ ತಗಲುತ್ತದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಚಿವರಿಗ ಕೈ ಮುಗಿದು ಕೇಳಿಕೊಳ್ತೇನೆ. ಈ ಸ್ಲಂಗಳ ಬಗ್ಗೆ ಖಂಡಿತ ಅನಾದರಣೆ ಮಾಡಬೇಡಿ. ಆಮೇಲೆ ಅವರನ್ನು ಕೇಳ್ತೀನಿ ರಾಜ್ಯದ ಎಷ್ಟು ಸ್ಲಂಗಳಿಗೆ ಅವರು ಹೋಗಿದ್ದಾರೆ? ಅಧಿಕಾರಿಗಳನ್ನು ಕರೆದುಕೊಂಡು ಅಂತ ಪ್ರಶ್ನೆ ನಾನು ಕೇಳ್ತೀನಿ. ಹೋಗಿ ಚೆಕ್ ಮಾಡಬೇಕು. ನೋಡಬೇಕು. ಅವರ ಸ್ಥಿತಿಗತಿಗಳನ್ನು ಕೇಳಿ ತಿಳ್ಕೊಂಡು ಅವರಿಗೆ ಏನು ಅನುಕೂಲ ಮಾಡಿಕೊಡಬೇಕೋ ಅದನ್ನು ಮಾಡುವುದು ಅವರ ಆದ್ಯ ಕರ್ತವ್ಯ, ಸ್ಲಂನಲ್ಲಾಗಿರುವ ಕೆಲವು ಕಾಮಗಾರಿ ಕೆಲಸ ಕೂಡ ಉತ್ತಮವಾಗಿಲ್ಲ. ಏಕೆಂದರೆ ಅಲ್ಲಿ ಹೇಳೋರಿಲ್ಲ ಕೇಳೋರಿಲ್ಲ. ಯಾರು ಹೇಳ್ತಾರೆ? ಯಾವನೋ ಕಂಟ್ರಾಕ್ಟರ್ ಬರ್ತಾನೆ, ಏನೋ ಕೆಲಸ ಮಾಡ್ತಾನೆ ಬಿಲ್ ತಗೊಳ್ತಾನೆ ಹೊರಟು ಹೋಗುತ್ತಾನೆ. ಇನ್ನೊಂದಾರು ತಿಂಗಳು ಬಿಟ್ಟು ಅಲ್ಲಿ ಹೋಗಿ ನೋಡಿದರೆ ಆ ವರ್ಕ್ ಆಗಿರೋ ಹಾಗೆ ಕಾಣೋದಿಲ್ಲ, ಏನೂ ಕಾಣುವುದಿಲ್ಲ. ಎಲ್ಲ ಫಜೀತಿಯೆದ್ದು ಹೋಗಿರುತ್ತದೆ. ಇಂತಹ ಜನಗಳ ವಿಚಾರದಲ್ಲಿ ತೀರಾ ಅಸಡ್ಡೆ ಅನಾದರಣೆಯನ್ನು ಮಾಡಿದರೆ ದೇವರು ಕ್ಷಮಿಸೋದಿಲ್ಲ. ಎಂಬ ದೃಷ್ಟಿಯಿಂದ ನಾನು ಈ ಮಾತು ಹೇಳ್ತಾಯಿದ್ದೇನೆ. ಕೆಲವು ಮುನಿಸಿಪಾಲಿಟಿಗಳಿವೆ. ಅಲ್ಲಿ ೫-೬-೮ ಜನ ಹೆಲ್ತ್ ಇನ್‌ಸ್ಪೆಕ್ಟರ್ ಇರ್ತಾರೆ, ಅವರು ಸ್ಪರ್ಧೆ ಮೇಲೆ ನಮ್ಮ ಹತ್ತಿರ ಬಂದು ನೀವು ಏನಾದರೂ ಒಂದು ಲೆಟರ್ ಕೊಡಿ ಅಲ್ಲಿ ಹಾಕಿಸಿಕೊಡಿ ಇಲ್ಲಿ ಹಾಕಿಸಿಕೊಡಿ ಅಂತ ಹೇಳ್ತಾರೆ. ನನಗೆ ಮೊದಮೊದಲು ಏಕೆ ಹೀಗೆಲ್ಲಾ ಬರ್ತಾರಲ್ಲ ಅಂತ ಅನುಮಾನವಾಯಿತು. ಕೆಲವರು ಪ್ರಾಮಾಣಿಕರಿದ್ದಾರೆ. ನಿಷ್ಠೆಯಿಂದ ಕೆಲಸ ಮಾಡಿದರೆ ನಾನು ಬಹಳ ಸಂತೋಷಪಡುತ್ತೇನೆ. ನೀವು

ಯಾವ ಮುನಿಸಿಪಾಲಿಟಿಗಾದರೂ ಹೋಗಿ ಕೆಟ್ಟು ನಾರ್‍ತಾ ಇರುತ್ತೆ. ಅಲ್ಲಿ ಕಸ ತೆಗೆದು ಹಾಕಿರೋಲ್ಲ, ತೆಗೆದುಹಾಕಿದ್ದರೆ ಹೊರಗೆ ಸಾಗಿಸಿರೋಲ್ಲ, ದುರ್ವಾಸನೆ, ಅಲ್ಲಿ ಮನುಷ್ಯನಾದೋನು ಇರಲಿಕ್ಕಾಗೋಲ್ಲ. ಸಚಿವರನ್ನು ನಾನು ಕೇಳುತ್ತೇನೆ. ಎಷ್ಟು ಮುನಿಸಿಪಾಲಿಟಿಗಳನ್ನು ಸಚಿವರು ಅಥವಾ ಅವರ ಡೈರೆಕ್ಟರು ಅಥವಾ ಜಂಟಿ ಡೈರೆಕ್ಟರು ಸರ್ಪ್ರೈಸ್ ವಿಸಿಟ್ ಮಾಡಿ ಸಂಬಂಧಪಟ್ಟ ಆಫೀಸರ್ಸ್ ಮೇಲೆ ಕ್ರಮ ತೆಗೆದುಕೊಂಡು ಅನ್ಯಾಯ ಅಥವಾ ಕೊಳೆತುನಾರುವ ಪರಿಸ್ಥಿತಿ ಸರಿಪಡಿಸೋಕ್ಕೆ ಏನು ಆಕ್ಷನ್ ತಗೊಂಡಿದ್ದಾರೆ ಎಂಬುದನ್ನು ಕೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಉಪಾಧ್ಯಕ್ಷಣೆಯವರೇ, ಹನುಮೇಗೌಡರಿಗೆ ಒಂದು ವಿಚಾರ ಹೇಳ್ತಾ ಇದ್ದೀನಿ, ನಮ್ಮಲ್ಲಿರುವ ಹೆಚ್ಚಿನ ಮುನಿಸಿಪಾಲಿಟಿಗಳಲ್ಲಿ ಚುನಾಯಿತ ಪ್ರತಿನಿಧಿಗಳಿದ್ದಾರೆ. ಅವು ಸ್ವಾಯತ್ತಸಂಸ್ಥೆಗಳು. ಇಂಥ ವಿಚಾರದಲ್ಲಿ ನಾವು ಅದಕ್ಕೆ ಏನು ಮಾಡುವುದಕ್ಕಾಗುವುದಿಲ್ಲ. ಏನಾದರೂ ಪಾಲಿಸಿ ಮಾಡಬಹುದೇ ಹೊರತು ನಾವು ಅಲ್ಲಿಯ ದಿನನಿತ್ಯದ ಅಡ್ಮಿನಿಸ್ಟ್ರೇಷನ್‌ನಲ್ಲಿ ಕೈ ಹಾಕಲು ಆಗುವುದಿಲ್ಲ. ಅವರು ಅದನ್ನು ಮಾಡಬೇಕೇ ಹೊರತು ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ನೀವೇನಾದರೂ ಸೀರಿಯಸ್ ಆಗಿ ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಭಾಷಣ ಮಾಡುವುದು ಸುಲಭ. ಕೊಳ್ಳೆ ಹೊಡೀತಿದ್ದಾರೆ ಅಂತ ಹೇಳ್ತಾರೆ. ಯಾವುದಾದರೂ ಈ ಮುನಿಸಿಪಾಲಿಟಿಲಿ ಇಂಥಾದ್ದು ಅಂತ ಒಂದಾದರೂ ಹೇಳುವುದಿಲ್ಲ. ಸುಮ್ಮನೆ ಇವರು ಜನರಲೈಸ್ ಮಾಡಿಬಿಟ್ಟರೆ ಕಷ್ಟವಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಸ್ವಾಮಿ ಯಾರನ್ನು ಬೇಕಾದರೂ ಕೇಳಿ ಹೋಗಿ. ಎಲ್ಲೋ ಅಲ್ಪಸ್ವಲ್ಪ ಒಳ್ಳೆಯವರು ಇರಬಹುದು. ನಾನು ಸಾರಾಸಗಟಾಗಿ ಹೇಳ್ತಾ ಇಲ್ಲ. ಆದರೆ ಮುಕ್ಕಾಲುಪಾಲು ಜನ ಅದರಲ್ಲೂ, ಮುನಿಸಿಪಾಲಿಟಿಗಳಲ್ಲಿ ಖಾತೆ ಬದಲಾಯಿಸಬೇಕಾದರೆ ದುಡ್ಡು. ಇನ್ನೂ ಒಂದು ಉದಾಹರಣೆ ಹೇಳ್ತೀನಿ. ಸಚಿವರು ಚೆಕ್ ಮಾಡೋದಾದರೆ ಕೆಲವರು ಲೈಸೆನ್ಸ್ ಫೀ ಕೊಡ್ತಾರೆ ಟ್ಯಾಪ ಅದೂ ಇದೂ ಹಾಕೋಕೆ ಅಂತ. ಅಲ್ಲಿ ಹೋಗಿ ನೂರಾರು ರೂ. ಕೊಟ್ಟು ಆಮೇಲೆ ಹಾಕಿಸಿಕೊಂಡಿರೋ ಉದಾಹರಣೆಗಳಿಲ್ಲವೇ? ಇದನ್ನು ಯಾರು ಕೇಳೋದು? ಎಲೆಕ್ಟಾಗಿರುವ ಮೆಂಬರ್ಸ್ ತೀರಾ ಹಾನೆಸ್ಟಾಗಿದ್ದರೆ ನನ್ನ ಅಭ್ಯಂತರವಿಲ್ಲ. ಒಬ್ಬಿಬ್ಬರು ಇರ್‍ತಾರೆ ಉಳಿದವರು ಏನು ಮಾಡುತ್ತಾರೋ ಏನು ಕಥೆಯೋ? ಹೋಲ್‌ಸೇಲ್ ಆಗಿ ನಾನು ಹೇಳ್ತಾ ಇಲ್ಲ. ಜನಗಳಿಗೆ ಆಗುತ್ತಿರುವ ತೊಂದರೆ ಇದನ್ನು ಯಾರು ಕೇಳಬೇಕು? ಆ ಸಂಬಂಧಪಟ್ಟ ಸಚಿವರಿಗೆ ಹೇಳಬೇಕು ಜನ ನಮಗೆ ಹೇಳ್ತಾರೆ ನಾವು ಅವರಿಗೆ ಹೇಳ್ತೀವಿ. ನಾವು ಡೈರೆಕ್ಟ್ ಅವನ್ನೆಲ್ಲ ಮಾಡೋಕಾಗುತ್ತದೆಯೇ? ಇನ್ನು ಕೆಲವು ಸಾರಿ ಮುನಿಸಿಪಲ್ ಪ್ರೆಸಿಡೆಂಟ್, ಕೌನ್ಸಿಲರ್ಸ್‌ಗೆ ಹೇಳ್ತೀವಿ. ಹೇಳಿಯೂ ಮಾಡದೇಹೋದರೆ ಇನ್ನೇನು ಮಾಡೋದು? ನಮಗಿರೋದು ಇದೊಂದೇ ಸ್ಥಾನ. ಇಲ್ಲಿಂದ ಕೇಳಗಿಳಿಯಲೇಬೇಕಾಗುತ್ತದೆ.

ಶ್ರೀ ಕೆ. ಜೆ. ಜಾರ್ಜ್:- ಅದಕ್ಕೇ ಹೇಳ್ತಾ ಇದ್ದೇನೆ. ನೀವು ಏನಾದರೂ ನನ್ನ ಗಮನಕ್ಕೆ ಇಂಥಾದ್ದು ನಡೀತಿದೆ ಎಂದು ಹೇಳಿಯೂ ನಾನು ಕ್ರಮ ತೆಗೆದುಕೊಳ್ಳದಿದ್ದರೆ ಹೇಳಬಹುದು. ನೀವು ಇಲ್ಲಿಯತನಕ ಒಂದು ವಿಚಾರವನ್ನು ನನಗೆ ಹೇಳಿಲ್ಲ. ಮೊನ್ನೆ ಅವರು ಒಂದು ವಿಷಯ ರೈಸ್ ಮಾಡಿದ್ದಾರೆ, ಅದರ ಬಗ್ಗೆ ಈಗಾಗಲೇ ನಾನು ಆದೇಶ ಕೊಟ್ಟಿದ್ದೇನೆ. ಈಗ ಮತ್ತೆ ಅವನ್ನೇ ಹೇಳೋದು ಡ್ರೈನೇಜ್ ಇಲ್ಲ ಅಂತ. ಏನು ಮಾಡೋಕಾಗುತ್ತದೆ. ತಮಗೆ ಗೊತ್ತಿರುವ ಹಾಗೆ

ಅಧ್ಯಕ್ಷಣಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ಕೊಳಚೆ ಪ್ರದೇಶದಲ್ಲಿ ಸಾಮಾಜಿಕವಾಗಿ ಅವರು ಪಾಪ ತೊಂದರೇಲಿದ್ದಾರೆ. ಯಾವುದೇ ಸರ್ಕಾರ ಒಂದು ವರ್ಷ ಎರಡು ವರ್ಷದಲ್ಲಿ ಅವರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಆಗೋದಿಲ್ಲ. ಆದರೆ ನಾನು ಹೇಳ್ತೇನೆ. ಇಲ್ಲಿಯ ತನಕ ವರ್ಷಕ್ಕೆ ಬರೀ ಮೂರು ಕೋಟಿ ಕೊಡ್ತಾ ಇದ್ದರು. ನಮ್ಮ ಸರ್ಕಾರ ಬಂದಮೇಲೆ ೯ ಕೋಟಿ ಕೊಡುತ್ತಾ ಇದ್ದೇವೆ. ೬೦ ಸಾವಿರ ಮನೆಗಳನ್ನು ಪಟ್ಟಣದ ಪ್ರದೇಶದಲ್ಲಿ ಕಟ್ಟಲು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇವರನ್ನೇ ಆ ಆಶ್ರಯ ಕಮಿಟಿ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಕಾರ್ಯಕ್ರಮ ನಾವು ತೆಗೆದುಕೊಳ್ಳಬೇಕೇ ಹೊರತು ಮೊಸರಲ್ಲಿ ಕಲ್ಲು ಹುಡುಕೋಕೆ ಹೋಗಿಬಿಟ್ಟರೆ ನನಗೆ ಕಷ್ಟವಾಗ್ತದೆ. ದಯವಿಟ್ಟು ಯಾವುದು ನಿಜವಾಗಿದೆ ಹೇಳಿ. ಲೈಸೆನ್ಸ್ ಕೊಡೋ ವಿಚಾರದಲ್ಲಿ ಮಂತ್ರಿ ಅಥವಾ ಸರ್ಕಾರ ಸಾಲ್ವ್ ಮಾಡೋದಿಕ್ಕಾಗತ್ತಾ? ಯಾವುದಾದರೂ ಗಂಭೀರ ವಿಚಾರಗಳಿದ್ದರೆ ಎಲ್ಲಿ ಅದಕ್ಷತೆ ಭ್ರಷ್ಟಾಚಾರ ನಡೀತಿದೆ ಅಂತ ಹೇಳಿದರೆ ಈ ಸರ್ಕಾರ ಕ್ರಮ ತೆಗೆದುಕೊಳ್ಳಲು ಹಿಂದೆ ಮುಂದೆ ನೋಡೋದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ:- ಸುಮ್ಮಸುಮ್ಮನೆ ವೇಗಾಗಿ ಅಲಿಗೇಶನ್ ಮಾಡುತ್ತಿಲ್ಲ. ರಾಜ್ಯದಲ್ಲಿ ಮುನಿಸಿಪಾಲಿಟಿಗಳಲ್ಲಿ ನಡೀತಿರುವ ವ್ಯವಹಾರ ಇದು. ನಾನಾ ತರಹದ ಅವ್ಯವಹಾರಗಳು ಅಲ್ಲಿ ನಡೆಯುತ್ತಿವೆ. ಅವುಗಳನ್ನು ಹೇಳೋದಕ್ಕೆ ನಮಗೆ ನಾಚಿಕೆಯಾಗುತ್ತೆ. ವೈರಕ್ಕಾಗಿ ಕಾಗದ ಬರೆದಿದ್ದೇನೆ. ಹಾಸನ ಮುನಿಸಿಪಾಲಿಟಿಯವರು ನಾಲ್ಕು ವರ್ಷದ ಹಿಂದೆ ಸೈಟ್ ಹಂಚಿದರು. ಒಂದು ಮನೆಗೆ ೬ ಸೈಟು ೮ ಸೈಟು ಅದೂ ಎಂಥೋರಿಗೆ ಶ್ರೀಮಂತರಿಗೆ. ಯಾರ ಹೆಸರು ಬಡವರ ಹೆಸರು ನಾನು ಇದರ ಬಗ್ಗೆ ಬರೆದು ಕೊಟ್ಟಿದ್ದೇನೆ, ಏನು ಆಕ್ಷನ್ ತಗೆದುಕೊಂಡರು? ಒಂದಾಯ್ತಾ ಆಮೇಲೆ ಮುನಿಸಿಪಾಲಿಟಿಯವರು ಯಾರ್ಯಾರದೋ ಜಾಗಕ್ಕೆ ಹೋಗೋದು ಮಳಿಗೆ ಕಟ್ಟೋದು ಬಾಡಿಗೆ ತಗೆದು ಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಪತ್ರ ಬರೆದಿದ್ದೇನೆ. ಕ್ರಮ ತೆಗೆದುಕೊಂಡಿದ್ದೀರಾ? ಇದು ಎರಡನೆಯದು. ಆಮೇಲೆ ಹಾಸನ ಮುನಿಸಿಪಾಲಿಟಿ ಕೆಲವು ಏರಿಯಾದಲ್ಲಿ ಸೊಗಸಾಗಿ ಬೆಳೆದಂಥ ಮರಗಳು ಯಾವ ಪುಣ್ಯಾತ್ಮ ನೆಟ್ಟಿದ್ದನೋ ಯಾವ ಪುಣ್ಯಾತ್ಮ ನೀರೆರೆದಿದ್ದನೋ ಅಂತಹ ಒಳ್ಳೆಯ ಮರಗಳನ್ನೆಲ್ಲ ಕೇವಲ ೧೫-೨೦ ಮರಗಳನ್ನು ಕೇವಲ ೪ ಸಾವಿರ ೨ ಸಾವಿರಕ್ಕೋ ಹರಾಜು ಮಾಡಿ ಕಡಿದುಹಾಕಿಬಿಟ್ಟರು. ಕಂಡಕಂಡವರೆಲ್ಲ ಹೇಳಿದರು: ಹನುಮೇಗೌಡರೇ ನಿಮಗೆಲ್ಲ ವೋಟ್ ಕೊಟ್ಟೆವು, ದಾರೀಲಿ ತಿರುಗೋವಾಗ ಯಾರೋ ಪುಣ್ಯಾತ್ಮರು ನೆಟ್ಟಂಥ ಮರ ಕಡಿದುಹಾಕಿಬಿಟ್ಟರಲ್ರೀ? ಇದು ಉಂಟೇನ್ರಿ ಅಂದರು. ಅರ್ಜಿ ಬರೆದೆ, ಕಾಗದ ಬರೆದೆ, ಹೇಳಿದೆ ಏನಾಯಿತು? ಏನೂ ಆಗಲಿಲ್ಲ. ಇದು ನಾಲ್ಕನೇದು.

ಶ್ರೀ ಕೆ. ಜೆ. ಜಾರ್ಜ್:- ಕಾಗದವನ್ನು ಬರೆದಿದ್ದು ನಿಜ. ಅವರು ಕಾಗದವನ್ನು ಸೈಟ್ ವಿಚಾರದಲ್ಲಿ ಬರೆದಿದ್ದಾರೆ. ಮರದ ವಿಚಾರದಲ್ಲಿ ಅವರು ಕಾಗದವನ್ನು ಬರೆಯಲಿಲ್ಲ. ಸೈಟ್ ವಿಚಾರದಲ್ಲಿ ಈಗಾಗಲೇ ಎನ್‌ಕ್ವೈರಿಯನ್ನು ಮಾಡಿ ರಿಪೋರ್ಟನ್ನು ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಆ ರಿಪೋರ್ಟ್ ಬಂದಮೇಲೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಮರದ ವಿಚಾರವನ್ನು ಅವರು ಹೇಳಲಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ:- ಮರದ ವಿಚಾರದಲ್ಲಿ ಕಾಲಿಂಗ್ ಅಟೆನ್‌ಷನನ್ನು ಕೊಟ್ಟಿದ್ದೆ. ಹೋದಸಾರಿ ಶಾಸನ ಸಭೆಯಲ್ಲಿ ಅವರೇ ರಿಪ್ಲೈಯನ್ನು ಹೇಳಿದ್ದರು. ಕಾಗದವನ್ನು ಬರೆದ,

ಜಗ್ಗಲಿಲ್ಲ. ಆ ಮೇಲೆ ಕಾಲಿಂಗ್ ಅಟೆನಷನ್ನನ್ನು ಕೊಟ್ಟೆ. ಏನೂ ಆಗಲಿಲ್ಲ. ಅದನ್ನು ಅವರು ಮರೆತು ಬಿಟ್ಟಿದ್ದಾರೆ. ಇವೆಲ್ಲಾ ಹಳೆಯದು. ಮಾಡಿದ್ದೇವೆ. ಏತಕ್ಕೆಂದರೆ ಮೊದಲು ಪರ್ಟಿಕುಲರ್ ಆಗಿ ನಾನು ಹೇಳಬಾರದು ಎಂದು ಇದ್ದೆ. ಅವರು ಹೇಳಿ ಎಂದು ಹೇಳಿದ್ದಕ್ಕೆ ನಾನು ಹೇಳುತ್ತಿದ್ದೇನೆ. ಇನ್ನೊಂದು ವಿಚಾರ. ಹಾಸನದಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂದಿದೆ. ಬೇರೆಯವರ ಸೈಟುಗಳಲ್ಲಿ ಮುನಿಸಿಪಾಲಿಟಿಯವರು ಕಟ್ಟಬೇಕಾದರೆ ಅವರ ಪರ್ಮಿಷನ್ನು ತೆಗೆದುಕೊಳ್ಳಬಾರದೇ? ಮತ್ತೆ ಅಥಾರಿಟಿ ಅಂತ ಇರುವುದು ಏತಕ್ಕೆ? ಪರ್ಮಿಷನ್ ತೆಗೆದುಕೊಳ್ಳುವುದಿಲ್ಲ. ಎಲ್ಲೆಲ್ಲಿಗೋ ಹೋಗುತ್ತಾರೆ, ಅಂಗಡಿ ಮಳಿಗೆಗಳನ್ನು ಕಟ್ಟುತ್ತಾರೆ, ಬಾಡಿಗೆಗೆ ಕೊಡುತ್ತಾರೆ. ಹಾಗಾದರೆ ಜನಗಳು ತಿರುಗಾಡುವುದಕ್ಕೆ ಗತಿಯೇನು? ಇದನ್ನೆಲ್ಲಾ ಹೇಳಿ ನಾನು ಕಾಗದವನ್ನು ಬರೆದಿದ್ದಾಯಿತು, ಏನೂ ಆಗಲಿಲ್ಲ. ಕೊನೆಗೆ ಆಮೇಲೆ ಅವರುಗಳು ಕೋರ್ಟಿಗೆ ಹೋಗಿ ಸ್ಟೇಯನ್ನು ತೆಗೆದುಕೊಂಡರು. ಇದು ತಪ್ಪಲ್ಲವೇ? ಇದು ಸರ್ಕಾರ ಇರುವ ಲಕ್ಷಣವೇ? ಇವೆಲ್ಲಾ ಅಕ್ರಮಗಳು ನಡೆಯುತ್ತಿವೆಯಲ್ಲಾ? ಅಟಾನಮಸ್ ಬಾಡಿ ಎಂದು ನೀವು ಹೇಳಿ ಏನು ಬೇಕಾದರೂ ಮಾಡಿಕೊಳ್ಳಿ ಎಂದು ಅಧಿಕಾರವನ್ನು ಅವರಿಗೆ ಕೊಟ್ಟಿದ್ದೀರಿ? ಇವರನ್ನು ಚೆಕ್ ಮಾಡುವುದಕ್ಕೆ, ಸೂಪರ್‌ವಿಷನ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲವೇ? ಅದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳಿಲ್ಲವೇ? ಇದಕ್ಕೆ ಸಂಬಂಧಪಟ್ಟಂಥ ಇಲಾಖಾ ಮಂತ್ರಿಗಳಿಲ್ಲವೇ? ಯಾರ ಹತ್ತಿರ ಹೇಳಬೇಕು? ಇವೆಲ್ಲಾ ಮಾಡತಕ್ಕಂತ ಘನಕಾರ್ಯಗಳೇ? ಇನ್ನೊಂದು ಹೇಳುತ್ತೇನೆ, ಹಾಸನದಲ್ಲಿ ಕೊಳೆ, ಕಸ, ಕಡ್ಡಿ, ಬೀಳುತ್ತದಲ್ಲಾ, ಆ ಊರಿನ ಭಾಗದಲ್ಲಿ, ಅಲ್ಲಿ ಹುಣಸೆಗೆರೆ ಎಂದು ಹೇಳಿ ಒಂದು ಟ್ಯಾಂಕ್ ಇದೆ. ಆ ಟ್ಯಾಂಕ್‌ಗೆ ತೆಗೆದುಕೊಂಡು ಹೋಗಿ ಸುರಿದರು. ನಾನು ಇದರ ಬಗ್ಗೆ ಮೂರು ಕಾಗದಗಳನ್ನು ಬರೆದೆ, ಆಮೇಲೆ ಕೊನೆಗೆ ಬಸವಲಿಂಗಪ್ಪನವರು ಬಂದಮೇಲೆ ಇವರನ್ನು ಹಿಡಿಸಿಹಾಕುತ್ತಾರೆ ಎಂದು ಹೇಳಿ ಅವರಿಗೂ ಕೂಡ ಕಾಗದವನ್ನು ಬರೆದೆ. ಏನೂ ಇಲ್ಲಾ. ತೆಗೆದುಕೊಂಡು ಹೋಗುತ್ತಿದ್ದಾರೆ. ನೀರು ಖಾಲಿಯಾಗುತ್ತಲೇ ಇದೆ, ಹೋಗುತ್ತಿದೆ. ಆದದ್ದು ಏನು? ಏನೂ ಆಗಲಿಲ್ಲ. ತೆಗೆದುಕೊಂಡು ಹೋದರು, ಅಲ್ಲಿ ಸುರಿದರು. ಕೆರೆಯೊಳಗೆ ಅದನ್ನು ಸುರಿದರು. ಅಲ್ಲಿ ಕೊಳೆತು ನಾರುತ್ತಿದೆ. ಯಾರ ಕೈಯಲ್ಲಿ ಹೇಳಬೇಕು? ನಾನು ಹೋಗಿ ಹೊತ್ತು ಹಾಕುವುದಕ್ಕಾಗುತ್ತದೆಯೇ? ಇದನ್ನು ಈ ಮಂತ್ರಿಗಳ ಗಮನಕ್ಕೆ ತಂದೆ. ಕಮೀಷನರ್, ಡೈರೆಕ್ಟರ್ ಗಮನಕ್ಕೆ ತಂದೆ, ಏನಾದರೂ ಮಾಡಿದ್ದೀರಾ? ಇವೆಲ್ಲಾ ನಿಜವಾದ ವಿಚಾರಗಳು ಹೇಳಬೇಕಾದ್ದು. ನಾವು ಹೀಗೆ ಮಾತನಾಡಿದರೆ ರೂಲಿಂಗ್ ಪಾರ್ಟಿಯವರು ಈ ರೀತಿ ಮಾಡುತ್ತೀರಿ ಎನ್ನುತ್ತಾರೆ. ಇನ್ನೇನು ಮಾಡಲಿ. ಹೇಳಿದೆ, ಕಾಗದವನ್ನು ಬರೆದೆ, ಆಗಲಿಲ್ಲ. ಇಲ್ಲಿ ಹೇಳಿಕೊಳ್ಳುವುದು ಏತಕ್ಕೆಂದರೆ ಸಮಾಧಾನಕ್ಕಾಗಿ. ಏಕೆಂದರೆ ನಾನು ನನ್ನ ಡ್ಯೂಟಿಯನ್ನು ಮಾಡಿದ್ದೇನೆ. ಜನಗಳ ಕೈಯಲ್ಲಿ ಬೈಯಿಸಿಕೊಳ್ಳುವುದಾದರೂ ತಪ್ಪಲಿ ಎಂದು ಹೇಳುತ್ತೇನೆ. ಅದಕ್ಕಾಗಿ ನಾನು ಈ ಕೆಲಸವನ್ನು ಮಾಡುತ್ತಿದ್ದೇನೆ. ಇನ್ನೇನು ಮಾಡಲಿ? ಮಾನ್ಯ ಉಪಾಧ್ಯಕ್ಷರೇ, ನಾನು ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ಹಾಸನ ಟೌನ್‌ನಲ್ಲಿ ಚರಂಡಿ ನೀರು, ಗಲೀಜು, ಕಕ್ಕಸ್ ನೀರೆಲ್ಲ ಹಾಸನದ ದಕ್ಷಿಣದ ದಿಕ್ಕಿನಲ್ಲಿ ಹರಿದು ಅದು ಸಣ್ಣ ಹಳ್ಳಕ್ಕೆ ಹೋಗುತ್ತಿದೆ. ಆ ಹಳ್ಳದ ಪಕ್ಕದಲ್ಲಿಯೇ ಒಂದು ವೆಲ್ ಅನ್ನು ತೋಡಿದ್ದಾರೆ. ಆ ವೆಲ್‌ನಲ್ಲಿ ನೀರು ತುಂಬಿಕೊಂಡು ಅದನ್ನು ತೆಗೆದುಕೊಂಡು ಹೋಗಿ ಮತ್ತೆ ಒಂದು ಕಿಲೋ ಮೀಟರ್ ದೂರಕ್ಕೆ ಪಂಪ್ ಮಾಡಬೇಕು. ಆ ವ್ಯಾಲಿಯಲ್ಲಿ ನೀರು ಹೋಗಕೂಡದು ಎಂದು ಹೇಳಿ ಮಾಡಿರತಕ್ಕಂಥ ವ್ಯವಸ್ಥೆ. ಅದನ್ನು ಪಂಪ್ ಮಾಡುವುದಿಲ್ಲ, ಏನೂ ಇಲ್ಲ. ಆ ನೀರು ಹರಿದುಹೋಗುತ್ತಿರುತ್ತದೆ.

ಆ ವ್ಯಾಲಿ ಉದ್ದಕ್ಕೂ ನಾಲ್ಕಾರು ಕೆರೆಗಳ ಮುಖಾಂತರ ಹರಿದುಹೋಗುತ್ತದೆ. ಆ ನೀರನ್ನು ದನಕರುಗಳು ಕುಡಿಯುತ್ತಿವೆ. ಹೆಂಗಸರು ಮಕ್ಕಳು ಬಟ್ಟೆಗಳನ್ನು ಒಗೆಯುತ್ತಾರೆ. ಕೆಲವು ಜನ ಬಾಯಾರಿದರೆ ಅದೇ ನೀರನ್ನು ಕುಡಿಯುತ್ತಾರೆ. ಇದನ್ನು ಯಾರ ಕೈಯಲ್ಲಿ ಹೇಳಬೇಕು? ಇದನ್ನು ಯಾರು ಮಾಡಬೇಕು? ನಾನೇನು ಎಂಥದೋ ಎಂಜಿನಿಯರಿಂಗ್ ಓದಿಕೊಂಡು ಬಂದಿದ್ದೇನೆಯೇ? ಹೋಗಲಿ, ನಮಗೆ ಅಧಿಕಾರವಾದರೂ ಇದೆಯೇ? ಅದನ್ನು ನಿಲ್ಲಿಸುವುದಕ್ಕೆ. ಹೋದ ಸಾರಿ ಹೇಳಿದೆ, ಆಚೆ ವರ್ಷ ಹೇಳಿದೆ, ಏನೂ ಆಗಿಲ್ಲ. ಏನು ಮಾಡಬೇಕು? ದಯವಿಟ್ಟು ನೀವೇ ಹೇಳಿ. ಏನು ಮಾಡಬೇಕು? ಇವುಗಳನ್ನೆಲ್ಲಾ ಇನ್ನೊಬ್ಬರನ್ನು ಹೇಳಿ ಕೇಳಿ ಮಾಡುವಂಥ ಕೆಲಸವೇ? ಇವರ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ನನ್ನ ಪ್ರಶ್ನೆ ಇದು. ಇಷ್ಟೆಲ್ಲಾ ಅನ್ಯಾಯವಾಗುತ್ತಿದ್ದರೂ ಕೂಡ ಇವರ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಯಾವ ಪಾರ್ಟಿಯವರು ಇವರಿಗೆ ಹೇಳಬೇಕು? ದಯವಿಟ್ಟು ನೀವೇ ಯೋಚನೆ ಮಾಡಿ. ಕೆಲವು ಮಾತ್ರ ನಾನು ಉದಾಹರಣೆಗಳನ್ನು ಕೊಟ್ಟಿದ್ದೇನೆ. ಮಾನ್ಯ ಸಚಿವರು...

ಶ್ರೀ ಕೆ. ಜೆ. ಜಾರ್ಜ್:- ಸಿಟಿ ಮುನಿಸಿಪಾಲಿಟಿಯಲ್ಲಿ ಎಂ. ಎಲ್. ಎ. ಗಳು ಎಕ್ಸ್-ಅಫಿಷಿಯೋ ಮೆಂಬರ್ಸ್ ತಾನೆ. ಇವೆಲ್ಲಾ ವಿಚಾರಗಳನ್ನು ಸ್ಟ್ರಾಂಗ್ ಆಗಿ ಅಲ್ಲಿಯೇ ತಾವು ಹೇಳಬಹುದು. ನೀವು ಪವರ್‌ಫುಲ್ ಎಂ. ಎಲ್. ಎ. ಆಗಿದ್ದೀರಿ, ಈ ನದಿಗೆ ಈ ರೀತಿ ಮಾಡಬೇಕು, ಈ ಬಾವಿಗೆ ಈ ರೀತಿ ಮಾಡಬೇಕು ಎಂದು ಇಂಥ ಸಣ್ಣ ಸಣ್ಣ ವಿಚಾರಗಳನ್ನು ಬಹುಶಃ ಅಲ್ಲಿಯೇ ಹೇಳಿದರೆ ಅವರು ಬಹುಶಃ ಅಲ್ಲಿಯೇ ಮಾಡಿಬಿಡುತ್ತಾರೆ.

ಉಪಾಧ್ಯಕ್ಷರು:- ಆಯಾ ಲೆವೆಲ್‌ನಲ್ಲಿಯೇ ಇದನ್ನು ಸಾಲ್ವ್ ಮಾಡಿಕೊಳ್ಳಬಹುದು ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಮುನಿಸಿಪಾಲಿಟಿ ಮೀಟಿಂಗ್‌ಗೆ ಇವರು ಹೋಗಿಲ್ಲ. ನಾನು ಎಕ್ಸ್ ಆಫಿಷಿಯೋ ಮೆಂಬರ್ ನಿಜ. ಆದರೆ ಪ್ರತಿ ಮೀಟಿಂಗ್‌ಗೆ ನಾನು ಎಲ್ಲಿ ಹೋಗುವುದಕ್ಕಾಗುತ್ತದೆ? ಇವರ ಕಮೀಷನರ್‌ಗೂ ಕೂಡ ಹೇಳಿದ್ದೇನೆ, ಅದನ್ನು ಮಾಡದೇ ಹೋದರೆ ನಾನು ಅದಕ್ಕೆ ಜವಾಬ್ದಾರನೇ?

ಶ್ರೀ ಕೆ. ಜೆ. ಜಾರ್ಜ್:- ಇವರು ಗೌರವಾನ್ವಿತ ಸದಸ್ಯರು. ಅವರು ಇಷ್ಟು ಲಘುವಾಗಿ ಜನರಿಂದ ಆರಿಸಿ ಬಂದಂಥ ಕಾರ್ಪೋರೇಟರ್ ವಿಚಾರದಲ್ಲಿ ಇಷ್ಟೊಂದು ಲಘುವಾಗಿ ಮಾತನಾಡಿದರೆ ಹೇಗೆ? ಅವರು ಕೂಡ ಪೀಪಲ್ಸ್ ರೆಪ್ರೆಸೆಂಟೆಟಿವ್ ಎಂದು ತಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಅದರ ಬಗ್ಗೆ ಲಘುವಾಗಿ ನಾನು ಮಾತನಾಡುತ್ತಿಲ್ಲ. ಲಘುವಾಗಿ ಮಾತನಾಡುತ್ತಿರುವುದು ಮಂತ್ರಿಗಳು. ಏನುಮಾಡಿದ್ದೀರಾ, ಅವರ ಅಧಿಕಾರಿಗಳು ಏನು ಮಾಡಿದ್ದಾರೆ ಎಂದು ನಾನು ಇವರಿಗೆ ಪ್ರಶ್ನೆ ಮಾಡುತ್ತಿದ್ದೇನೇ ವಿನಃ ಮೆಂಬರ್ಸ್‌ಗಳ ವಿಚಾರದಲ್ಲಿ ನಾನು ಲಘುವಾಗಿ ಮಾತನಾಡುವುದಕ್ಕೆ ಹೋಗುತ್ತಿಲ್ಲ. ಏಕೆಂದರೆ ಮೂರುಹೊತ್ತು ಅವರು ನಾನು ಜೊತೆಯಲ್ಲಿ ತಿರುಗಬೇಕು. ಇವರಂತೂ ಖಾಯಂ ಆಗಿ ದೂರ ದೂರ ತಿರುಗುತ್ತಾರೆ. ಅವರ ಮೇಲೆ ನನ್ನನ್ನು ಎತಕ್ಕೆ ಎತ್ತಿಕಟ್ಟುವುದಕ್ಕೆ ಹೋಗುತ್ತೀರಾ? ನಾನು ಆ ಕೆಲಸಕ್ಕೆ ಹೋಗುವುದೇ ಇಲ್ಲ. ಅವರುಗಳು ಬಂದು ನಿಮ್ಮನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಅದಕ್ಕೆ ಈ ಕೆಲಸವನ್ನು ನಾನು ಮಾಡುತ್ತಿರುವುದು. ಏಕೆಂದರೆ ಅವು ಯಾವುದು ಎತಕ್ಕೂ ಏನೋ ಅದು ಏನು ಕತೆಯೋ ಅವೆಲ್ಲ

ನಾನು ಇಲ್ಲಿ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲೂ ಹೇಳಿದ್ದೇನೆ. ಕೇಳದೆ ಹೋದರೆ ಏನು ಮಾಡುವುದಕ್ಕಾಗುತ್ತದೆ. ಎಕ್ಸ್ ಅಫಿಷಿಯೋ ಮೆಂಬರ್ ಆಗಿ ಅಲ್ಲಿ ಹೇಳುವುದಕ್ಕೆ ಹೋದರೆ ಅವರು ಕೇಳುತ್ತಾರೆಯೇ? ಅವರದು ಏನೋ ಲೆಕ್ಕ ಇರುತ್ತದೆ, ಅದನ್ನು ಹೆಂಗೋ ಮಾಡಿಕೊಳ್ಳುತ್ತಾರೆ. ಅವರ ಮೀಟಿಂಗ್‌ಗಳಿಗೂ ನಮ್ಮ ಮೀಟಿಂಗ್‌ಗಳಿಗೂ ಹೊಂದಾಣಿಕೆ ಯಾಗುವುದಿಲ್ಲ. ನಾವು ಯಾವುದೋ ಮೀಟಿಂಗ್‌ಗೆ ಹೋಗಿರುತ್ತೇವೆ. ಅಲ್ಲಿ ಏನಾದರೂ ಅನಿವಾರ್ಯವಾಗಿದ್ದರೆ ಹೋಗುವುದೇ ವಿನಃ ಇಲ್ಲದಿದ್ದರೆ ಹೋಗುವುದಿಲ್ಲ. ತಾವು ಎಂ. ಎಲ್. ಎ. ಆಗಿದ್ದರೆ ಹೋಗುತ್ತಿರಲಿಲ್ಲ. ಉಳಿದವರು ಎಷ್ಟು ಜನ ಎಕ್ಸ್ ಅಫಿಷಿಯೋ ಮೆಂಬರ್ಸ್ ಯಾರ್ಯಾರು ಹೋಗಿದ್ದೀರಾ ಹೇಳಿ ನೋಡೋಣ.

ಶ್ರೀ ಕೆ. ಜೆ. ಜಾರ್ಜ್:- ನಾವೆಲ್ಲ ಬೆಂಗಳೂರು ಸಿಟಿ ಕಾರ್ಪೊರೇಷನ್ನಿಗೆ ಹೋಗಿದ್ದೇವೆ.

ಉಪಾಧ್ಯಕ್ಷಣಿಯವರು:- ಹನುಮೇಗೌಡರೆ ಇವತ್ತು ಮೂರು ವಿಷಯಗಳಿವೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಇವರು ಹೋಗಿದ್ದರೆ ಸಂತೋಷ.

ಶ್ರೀ ಎಸ್. ರಮೇಶ್:- ನಾವೆಲ್ಲಾ ಒಂದುಗೂಡಿ ಕೆಲಸಮಾಡಿದ್ದೇವೆ. ನಾನೂ ಕೂಡ ಕಾರ್ಪೊರೇಷನ್ ಸದಸ್ಯನಾಗಿದ್ದೇನೆ.

(ಗೊಂದಲ)

ಶ್ರೀ ಎಸ್. ರಮೇಶ್:- ನಾವೆಲ್ಲ ಅನ್ಯೋನ್ಯವಾಗಿ ಹೋಗುತ್ತೇವೆ. ನಮ್ಮಲ್ಲಿರುವ ತಪ್ಪುಗಳನ್ನು ಹೇಳುತ್ತೇವೆ. ಕೆಲಸಗಳಾಗುವಂತ ಮಾಡುತ್ತೇವೆ. ನಾವು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಅಂಥವು ಅಲ್ಲಿ ನಡೆಯುತ್ತದೆ. ನಿಮಗೆ ಏನೂ ಅನ್ಯೋನ್ಯವಾಗಿಲ್ಲವೆಂದು ತಾವೇ ಸ್ಪಷ್ಟವಾಗಿ ಹೇಳುತ್ತಿದ್ದೀರಿ.

ಶ್ರೀ ಕೆ. ಹೆಚ್. ಹನುಮೇಗೌಡ:- ಮುನಿಸಿಪಲ್ ಕಾರ್ಪೊರೇಷನ್ ಬಗ್ಗೆ ಹೇಳಿದರೆ ಇಷ್ಟೆಲ್ಲಾ ಮಾತನಾಡಿದ್ದೀರಿ. ಆದರೆ ತಾವು ಹೇಳಿದ ಹಾಗೆ ಅಲ್ಲಿ ಅನ್ಯೋನತೆ ಇದ್ದರೆ ಎಲ್ಲಾ ಸರಿಯಾಗಿಯೇ ಇರಬೇಕಲ್ಲಾ! ಎಲ್ಲ ಪರ್‌ಫೆಕ್ಟ್‌ಆಗಿ ಇರಬೇಕಲ್ಲಾ! ಯಾವ ವಿಧವಾದಂತಹ ದೂರುಗಳು ಇರಲೇಬಾರದಲ್ಲ.

ಶ್ರೀ ಎಸ್. ರಮೇಶ್:- ಸ್ಪೆಸಿಫಿಕ್ ಆಗಿ ಚಾರ್ಜ್ ಮಾಡದಿದ್ದರೆ ಅವರಿಗೆ ರಕ್ಷಣೆ ಕೊಡುವುದಕ್ಕೆ ಜಾರ್ಜ್‌ರವರೇ ಆಗಲಿ, ನಾನೇ ಆಗಲಿ ಆಗುವುದಿಲ್ಲ. ಅಂತೆ ಕಂತೆ ಅಂದರೆ ಏನು ಅರ್ಥ?

ಶ್ರೀ ಕೆ. ಹೆಚ್. ಹನುಮೇಗೌಡ:- ಅಂತೂ ಇಲ್ಲ ಕಂತೆಯೂ ಇಲ್ಲ.

ಶ್ರೀ ಎಸ್. ರಮೇಶ್:- ಈಗ ರಮೇಶ್‌ರವರು ಮಾಡಿದ್ದಾರೆ ಎಂದರೆ ಏನು ಮಾಡಿದ್ದಾರೆ ಅಂತ ಹೇಳಬೇಕು. ಬರೀ ಸರ್ಕಾರದ ಮೇಲೆ ದೂಷಣೆ ಮಾಡಿದರೆ ಹೇಗೆ?

ಶ್ರೀ ಕೆ. ಹೆಚ್. ಹನುಮೇಗೌಡ:- ಸರ್ಕಾರದ ಮೇಲೆ ನಾನು ದೂಷಣೆ ಮಾಡುತ್ತಿಲ್ಲ. ನೀವು ಹೇಳುವ ಹಾಗೆ ನಿಮ್ಮ ಕಾರ್ಪೊರೇಷನ್ ಮೆಂಬರ್ಸ್ ಎಂ. ಎಲ್. ಎ. ಗಳೆಲ್ಲಾ ಕರೆಕ್ಟ್‌ಆಗಿ ಇದ್ದರೆ ಕಾರ್ಪೊರೇಷನ್‌ನಲ್ಲಿ ಇಷ್ಟು ಅವ್ಯವಹಾರಗಳು ಹೇಗೆ ಆಗುತ್ತವೆ? ಮಾನ್ಯ ರೆಡ್ಡಿಯವರು

ಹೇಳಲಿಲ್ಲವೇ? ಮದ್ರಾಸಿನವರು ಬಂದು ತಾಳ ಹೊಡೆದು ದುಡ್ಡನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು.

ಉಪಾಧ್ಯಕ್ಷಣಿಯವರು:- ಈಗ ೨೫ ನಿಮಿಷ ಆಯಿತು.

ಶ್ರೀ ಕೆ. ಹೆಚ್. ಹನುಮೇಗೌಡ:- ಇದಲ್ಲವನ್ನೂ ಸಾಬೀತು ಮಾಡುವುದಕ್ಕಾಗುತ್ತದೆಯೇ? ಮೇಲೆ ಇರವವನು ಅವನು ಒಬ್ಬನೇ ಸಾಬೀತು ಮಾಡಬೇಕು.

ಶ್ರೀ ಎಸ್. ರಮೇಶ್:- ಕೊನೆಯಾವಾಗ ಅಂತ ಹೇಳಿ.

ಶ್ರೀ ಕೆ. ಜೆ. ಜಾರ್ಜ್:- ಮೊಸರಿನಲ್ಲಿ ಕಲ್ಲು ಹುಡುಕಲಿಕ್ಕೆ ಶುರುಮಾಡಿದರೆ ನಾವೇನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ:- ಮೊಸರು ಇಲ್ಲ, ಕಲ್ಲು ಇಲ್ಲ. ಹುಡುಕುತ್ತಾ ಇಲ್ಲ. ಇರತಕ್ಕ ವಿಚಾರಗಳನ್ನು ಇರುವುದನ್ನು ನ್ಯಾಯವಾಗಿ ಹೇಳುತ್ತಿದ್ದೇನೆ. ಇದರಲ್ಲಿ ಯಾವ ರೀತಿಯಾಗಿಯೂ ನಾನು ಅತಿಶಯೋಕ್ತಿ ಮಾಡಿ ಹೇಳುತ್ತಿಲ್ಲ.

ಉಪಾಧ್ಯಕ್ಷಣಿಯವರು:- ಈಗ ತಾವು ಶುರು ಮಾಡಿ ೨೫ ನಿಮಿಷ ಆಯಿತು.

ಶ್ರೀ ಕೆ. ಹೆಚ್. ಹನುಮೇಗೌಡ:- ಮಧ್ಯದಲ್ಲಿ ಅವರಿಬ್ಬರು ಮಾತನಾಡಿದ್ದನ್ನು ಕಳೆದುಬಿಡಿ.

ಉಪಾಧ್ಯಕ್ಷಣಿಯವರು:- ಇನ್ನು ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ. ಹೆಚ್. ಹನುಮೇಗೌಡ:- ಅದನ್ನು ಕಳೆದು ನನಗೆ ಟೈಂ ಕೊಡಿ. ಇವರನ್ನು ಎದ್ದು ನಿಂತು ಮಾತನಾಡಿ ಅಂತ ಹೇಳುತ್ತಿದ್ದೇನೇ?

ಶ್ರೀ ಎಸ್. ರಮೇಶ್:- ಇವರು ಆ ಮಾತನ್ನು ಆಡಲಿಲ್ಲ.

ಉಪಾಧ್ಯಕ್ಷಣಿಯವರು:- ನೀವು ಈಲ್ಡ್ ಆಗಬೇಡಿ. ಐದು ನಿಮಿಷದಲ್ಲಿ ಮುಗಿಸಿ.

ಶ್ರೀ ಕೆ. ಹೆಚ್. ಹನುಮೇಗೌಡ:- ಇನ್ನೂ ಫುಡ್ ಅಂಡ್ ಸಿವಿಲ್ ಸಪ್ಲೈ ಬಗ್ಗೆ ಹೇಳುತ್ತೇನೆ. ಮಾನ್ಯ ನರಸಿಂಹಮೂರ್ತಿಯವರ ಮನೆಯಲ್ಲಿ ಅವರ ಹೆಂಗಸರೇ ಆಹಾರ ಪದಾರ್ಥಗಳಲ್ಲಿ ಕಲಬೆರಕ ಇದೆ ಎಂದು ಹೇಳಿದ್ದಾರೆ. ಅದನ್ನು ನರಸಿಂಹಮೂರ್ತಿಯವರೇ ನಮಗೆ ಹೇಳಿದರು. ನೀವು ಕಲಬೆರಕೆ ಮಂತ್ರಿಯಾಗಿದ್ದೀರಾ, ಈ ಮನೆಯಲ್ಲಿ ತಿಂದು ತಿಂದು ನಮಗೆ ಸಾಕಾಗಿದೆ ಎಂದು ಅವರ ಬಾಯಿಯಲ್ಲಿಯೇ ಬಂದಿದೆ. ಪೇಪರ್‌ನಲ್ಲಿ ನಾನು ಓದಿದ್ದೇನೆ. ಹಾಗಾದರೆ ಸರ್ಕಾರ ಅಷ್ಟೊಂದು ಅಸಹಾಯಕವಾಗಿದೆಯೇ? ಕಲಬೆರಕೆಯವರನ್ನು ಹಿಡಿದು ಬಲಿಹೊಡೆಯುವುದಕ್ಕೆ ಆಗದೇ ಇರತಕ್ಕಂಥದ್ದು, ದಯವಿಟ್ಟು ಅವರು ಅದನ್ನು ಹೇಳಬೇಕು. ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ವಿತರಣೆಮಾಡುವುದಕ್ಕೆ ಫೇರ್ ಪ್ರೈಜ್ ಶಾಪ್‌ಗಳಿವೆ. ಬಹುಶಃ ಎರಡು ತಿಂಗಳಿಗೋ ಮೂರು ತಿಂಗಳಿಗೋ ಸ್ವಲ್ಪ ಸ್ಯಾಂಪಲ್ ತೋರಿಸಿಬಿಟ್ಟು ಉಳಿದಿದ್ದನ್ನೆಲ್ಲಾ ಟೌನ್‌ನಲ್ಲೇ ಮಾರಿಬಿಡುತ್ತಾರೆ. ಕಾತಿಶ ಎನ್ನುವ ಊರಿಗೆ ೩೦೦ ಲೀಟರ್ ಪಾಮ್ ಆಯಿಲ್ ಅನ್ನು ಕೊಟ್ಟಿದ್ದರು. ಮೂರು-ನಾಲ್ಕು ತಿಂಗಳಿಂದ ಕೊಟ್ಟಿರಲೇ ಇಲ್ಲ. ಆಮೇಲೆ ಕೊನೆಗೆ ಊರಿನವರು ಬಂದು ನನಗೆ ದೂರನ್ನು ನೀಡಿದರು. ಆಮೇಲೆ ನಾನು ಡಿ.ರಕ್ಟರಿಗೆ ಇಲ್ಲಿಂದಲೇ ಫೋನ್ ಮಾಡಿದೆ. ಪಾಪ ಅವರು ಒಳ್ಳೆಯ ಡೈರಕ್ಟರು ಅವರು ಈಗ ಇಲ್ಲಿ ಇಲ್ಲ. ಅವರು ಇಮಿಡಿಯೇಟ್ ಆಗಿ ಫೋನ್ ಮಾಡಿ

ಹಿಡಿದು ರಿಪೋರ್ಟ್ ಮಾಡಿ ಅಂದರು. ಹಿಡಿದು ರಿಪೋರ್ಟ್ ಮಾಡಿದರು. ಆದರೆ ಈ ಅಧಿಕಾರಿಗಳು ಏನು ಕ್ರಮ ತೆಗೆದುಕೊಂಡರು ಎಂಬುದನ್ನು ಮಾನ್ಯ ಉಪಾಧ್ಯಕ್ಷಿಣಿಯವರ ಮೂಲಕ ನಿಮ್ಮನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ಏನೂ ಮಾಡುವುದಕ್ಕಾಗಲಿಲ್ಲ, ಅಥವಾ ಕೇಸ್ ಸಹ ಹಾಕಲಿಲ್ಲ. ಆದನ್ನು ಮತ್ತೆ ತೆಗೆದುಕೊಂಡರೂ, ಕೊಡಲೂ ಇಲ್ಲ. ಇದು ನಿರಂತರವಾಗಿ ನಡೆಯುತ್ತಿದೆ. ಪಾಪ, ಸುಮ್ಮನೆ ಜನರಿಗೆ ಹೇಳುವುದು. ಅವರಿಗೆ ಆಗತಕ್ಕಂಥ ಅನುಕೂಲಗಳು ಬಹಳ ಕಡಿಮೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛಿಸುತ್ತೇನೆ. ಅನಂತರ ಸೊಸೈಟಿಗಳಿಗೆ ಕೊಡುತ್ತಾರೆ. ಸೊಸೈಟಿಗಳಲ್ಲೂ ಕೂಡ ಬಹುಶಃ ಎರಡು ತಿಂಗಳಿಗೆ, ಮೂರು ತಿಂಗಳಿಗೆ ತೆಗೆದುಕೊಂಡು ಹೋಗುತ್ತಾರೆ. ರೆಗ್ಯುಲರ್ ಆಗಿ ತೆಗೆದುಕೊಂಡು ಹೋಗುತ್ತಾರೆ. ಕೆಲವರಿಗೆ ಮಾತ್ರ ಕೊಟ್ಟು, ಕೆಲವರಿಗೆ ಕೊಡುವುದಿಲ್ಲ. ಬಹಳ ಅಕ್ರಮ ನಡೆಯುತ್ತಿದೆ. ಹೋದ ಸಲ ಶಾಸನ ಸಭೆಯಲ್ಲಿ ನಾವು ಹೇಳಿದ್ದವು. ಹಿಂದೆ ಕೊಟ್ಟಿರತಕ್ಕಂಥ ಫೇರ್ ಪ್ರೈಸ್ ಶಾಪ್‌ನವರು ಭಾರಿ ಖದೀಮರಿದ್ದಾರೆ, ಬಹಳ ದುಡ್ಡನ್ನು ಮಾಡಿಕೊಂಡು ಬಿಟ್ಟಿದ್ದಾರೆ. ಹೋಗಿ ಏನಾದರೂ ಕಂಪ್ಲೆಂಟ್ ಕೊಟ್ಟರೆ ೧೦ ನಿಮಿಷದೊಳಗೆ ಅವರನ್ನು ಸರಿ ಮಾಡಿಕೊಳ್ಳುತ್ತಾರೆ. ಆದ್ದರಿಂದ, ಅವರನ್ನು ಬದಲಾವಣೆ ಮಾಡಿ, ಬೇರೆ ಉತ್ತಮವಾದಂಥ ಫೇರ್ ಪ್ರೈಸ್ ಶಾಪ್‌ನವರಿಗೆ ಕೊಡಿ ಎಂದು ಹೇಳಿದೆವು. ಆಗ ಮಾನ್ಯ ಸಚಿವರು ಅವರನ್ನು ಹೊಡೆದು ಬಲಿ ಹಾಕಿಬಿಡುತ್ತೇನೆ ಎಂದರು. ಒಂದು ವರ್ಷವಾದರೂ ಇನ್ನು ಅವರೇ ಇದ್ದಾರೆ. ಅವರನ್ನು ಏನೂ ಮಾಡುವುದಕ್ಕಾಗುವುದಿಲ್ಲ. ತೆಗೆದುಕೊಂಡು ಹೋಗುತ್ತಾರೆ, ಮಾರಾಟ ಮಾಡುತ್ತಾರೆ. ಕಂಪ್ಲೆಂಟ್ ಏನಾದರೂ ಕೊಟ್ಟರೆ, ವೆರಿಫೈ ಮಾಡುವುದಕ್ಕೆ ಬಂದವರಿಗೆ ದುಡ್ಡು ಕೊಟ್ಟು ಅವರನ್ನು ಸರಿ ಮಾಡಿಕೊಳ್ಳುತ್ತಾರೆ. ಹಳ್ಳಿಗಳಿಗೆ ರೇಷನ್ ಸರಿಯಾಗಿ ಹೋಗದೆ, ಬಹಳ ಕಡಿಮೆಯಾಗಿದೆ, ಇದು ೭೦-೮೦ ಭಾಗದ ಗ್ರಾಮಾಂತರ ಪ್ರದೇಶಗಳ ಸೊಸೈಟಿಗಳಲ್ಲಿ ಪ್ರತಿನಿತ್ಯ ನಡೆಯುತ್ತಿರತಕ್ಕಂಥ ಸ್ಪಷ್ಟ ಚಿತ್ರಣ. ಇದನ್ನು ವ್ಯಾಪಕವಾಗಿ ತಡೆಗಟ್ಟಬೇಕೆಂದು ಕಾರ್ಯಕ್ರಮ ಹಾಕಿಕೊಂಡರು. ಆದರೆ ಮಿನಿಸ್ಟರ್‌ರವರು ನಮಗೆ ಅದನ್ನು ಹೇಳಲಿಲ್ಲ. ಅವರವರೇ ಮಿನಿಸ್ಟರ್‌ರವರುಗಳು ಕುಳಿತುಕೊಂಡು ಒಂದು ಕಾರ್ಯಕ್ರಮ ಹಾಕಿಕೊಂಡರು. ಶ್ರೀ ಲಕ್ಷ್ಮಣಯ್ಯನವರು ಹೋಗಿ ಆದು ಹೇಗೆ ಹಾಕಿದ್ದೀರಿ ಎಂದು ಗಲಾಟೆ ಮಾಡಿದ ನಂತರ ಯಾರೋ ಒಬ್ಬರನ್ನು ತೆಗೆದು, ಇನ್ನೊಬ್ಬರನ್ನು ಹಾಕಿದ್ದಾರೆ. ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಅವರಿಗೆ ಸಂಬಳ ಮತ್ತು ಇನ್ನಿತರ ವ್ಯವಸ್ಥೆ ಇದೆಯಂತೆ. ಅವರು ಮಾಡುವ ಕೆಲಸವೇನು? ಅದು ಎಂಥದ್ದೋ ಕನ್‌ಸ್ಯೂಮರ್ ಪ್ರೊಟೆಕ್ಷನ್ ಫೆಡರೇಶನ್ ಅಂತ ಮಾಡಿಕೊಂಡಿದ್ದಾರೆ. ಅದು ಎಲ್ಲಿದೆ? ಅವರೂ ಕೂಡ ನಾಪತ್ತೆ. ಅವರು ಸಂಬಳ ಪಡೆದು ಆಹಾರ ಧಾನ್ಯಗಳನ್ನು ಸರಿಯಾಗಿ ವಿತರಿಸುತ್ತಿದ್ದಾರೆಯೇ? ಎಂದರೆ, ಅದೂ ಕೂಡ ಸರಿಯಾಗಿ ಆಗುತ್ತಿಲ್ಲ.

ಉಪಾಧ್ಯಕ್ಷಣಿಯವರು:- ಆ ಸಮಿತಿಯವರಿಗೆ ಯಾರಾದರೂ ಇವರ ಬಗ್ಗೆ ಕಂಪ್ಲೆಂಟ್ ಮಾಡಬೇಕು. ಆಗ ಅವರು ಈ ವಿಷಯವನ್ನು ತೆಗೆದುಕೊಂಡು ಪರಿಶೀಲಿಸುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ:- ಅಲ್ಲಿಯವರೆಗೆ ಅವರು ಸಂಬಳ ತೆಗೆದುಕೊಂಡು ಸುಮ್ಮನೆ ಮನೆಯಲ್ಲಿಯೇ ಇರುತ್ತಾರೆಯೇ? ಕಂಪ್ಲೆಂಟ್ ಕೊಟ್ಟು, ಹಾಗೆ ಹೇಳಬೇಕೇ? ಬಹಳ ಚೆನ್ನಾಗಿದೆ, ಇದು ಒಳ್ಳೆಯ ಪ್ರೊಟೆಕ್ಷನ್ ಆಗಿದೆ. ಸಂಬಳ ಕೊಟ್ಟು, ಅವರನ್ನು ಮನೆಯಲ್ಲಿಟ್ಟುಕೊಂಡು ಅವರಿಗೆ ಹೋಗಿ ಹೇಳಬೇಕೇ? 'ಏನಪ್ಪಾ, ನೀವೇ ಎಲ್ಲಾ ಮಾಡಿಕೊಂಡು, ಇದು ಸರಿ ಬರುತ್ತದೆಯೇ, ಇದು ನ್ಯಾಯವೇ, ಧರ್ಮವೇ' ಎನ್ನುವ ಹಾಗೆ ಒಳ್ಳೆಯ ವ್ಯವಸ್ಥೆಯಾಗಿದೆ!

ಉಪಾಧ್ಯಕ್ಷಣಿಯವರು:- ವಾರಕ್ಕೆ ೨-೩ ಸಿಟ್ಟಿಂಗ್ಸ್ ಇರುತ್ತದೆ. ಆ ಸಮಯದಲ್ಲಿ ಯಾರಾದರೂ ಕಂಪ್ಲೇಂಟ್ ಕೊಟ್ಟರೆ ತೆಗೆದುಕೊಂಡು ಸಮಸ್ಯೆ ಬಗೆ ಹರಿಸುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ:- ಅವರು ಚೆಕ್ ಮಾಡುವುದಿಲ್ಲವೆ?

ಉಪಾಧ್ಯಕ್ಷಣಿಯವರು:- ಅವರು ಚೆಕ್ ಮಾಡುವುದಕ್ಕೆ ಬರುವುದಿಲ್ಲ. ಯಾರಾದರೂ ಅವರಿಗೆ ಈ ವಿಷಯದಲ್ಲಿ ತೊಂದರೆಯಿದೆಯೆಂದು ಕಂಪ್ಲೇಂಟ್ ಮಾಡಬೇಕು.

ಶ್ರೀ ಕೆ. ಎಚ್. ಹನುಮೇಗೌಡ:- ಅವರಿಗೆ ಸಂಬಳ ೨೦೦೦-೩೦೦೦ ರೂಪಾಯಿಗಳಂತೆ. ಒಳ್ಳೆಯ ಛಾನ್ಸ್ ಅಲ್ಲವೇ ಅವರಿಗೆ ಕೆಲಸವೂ ಇಲ್ಲ, ಏನೂ ಇಲ್ಲ, ಯಾರೋ ಅರ್ಜಿ ಕೊಟ್ಟರೆ ಅದನ್ನು ಹರಿದು ಹಾಕಿಬಿಟ್ಟು ಆ ಅರ್ಜಿ ಬರಲೇ ಇಲ್ಲವೆಂದರೆ ಮುಗಿದುಹೋಯಿತು. ಅವರಿಗೆ ಸಂಬಳವೂ ಉಳಿದುಕೊಂಡಿತು. ಅನಂತರ ಯಾರೋ ದುರಾದೃಷ್ಟಕ್ಕೆ ಅರ್ಜಿಕೊಟ್ಟರೆ ಮೇಲಕ್ಕೆ ಕಳುಹಿಸಿಬಿಟ್ಟು ಏನಪ್ಪಾ ಬಂದಿದ್ದೆಲ್ಲಾ ನೀನೇ ಇಟ್ಟುಕೊಂಡರೆ ಇದು ನ್ಯಾಯವೇ? ಅಂತ ಕೇಳಿದರೆ ಇದು ಸೋಶಿಯಲಿಸಂ ಆಗುತ್ತದೆಯೇ? ಅಂತೂ ಅವರಿಗೆ ಒಂದು ಕಡೆ ಪ್ರಾಫಿಟ್ ಬಂತು. ಅಂತೂ ಅವರಿಗೆ ಶುಕ್ರದೆಸೆ. ಇವೆಲ್ಲಾ ಎಂತಹ ನಗೆಪಾಟಲಿನ ವ್ಯವಹಾರಗಳು? ಯಾರಿಗೋಸ್ಕರ ಈ ಕಾನೂನು ಮಾಡಿದ್ದಾರೆ? ಯಾರಿಗೋ ನಾಲ್ಕು ಜನರಿಗೆ ಅಕಾಮಡೇಟ್ ಮಾಡುವುದಕ್ಕೆ ಮಾಡಿರತಕ್ಕಂಥ ಕೆಲಸವೇ ವಿನಃ ಇದರ ಬಗ್ಗೆ ಯಾವುದೇ ವಿಧವಾದ ಪರಿಶ್ರಮವಾದ ಕೆಲಸ ಆಗಿಲ್ಲ. ಆ ರೀತಿಯಾಗಿ ಏನಾದರೂ ಕೆಲಸ ಆಗಿದ್ದರೆ ಈ ದೇಶದಲ್ಲಿ ಏನಾದರೊಂದು ಪರಿಣಾಮ ಆಗಿರಬಹುದಾಗಿತ್ತು. ಅನಂತರ, ಸಾವಿರ ಕೇಸ್‌ಗಳನ್ನು ಹಿಡಿದಿದ್ದಾರೆ, ಆದರೆ ಒಬ್ಬರಿಗೂ ಶಿಕ್ಷೆ ಆಗಿಲ್ಲ. ಹಾಗಾದರೆ, ಅಧಿಕಾರಿಗಳು ಸುಳ್ಳು ಕೇಸ್ ಹಾಕಿದ್ದಾರೆಯೇ? ನಾನು ಹೆಸರನ್ನು ಕೊಟ್ಟಿರಲಿಲ್ಲ. ನಾನು ಇಲ್ಲಿ ಮಾತನಾಡಲು ಪ್ರಿಪೇರ್ ಆಗಿ ಬಂದಿರಲಿಲ್ಲ.

ಉಪಾಧ್ಯಕ್ಷಣಿಯವರು:- ನಿಮ್ಮ ಹೆಸರು ಇದೆ ಆದುದರಿಂದ ನಾನು ಮಾತನಾಡಲು ಕರೆದೆ.

ಶ್ರೀ ಕೆ. ಹೆಚ್. ಹನುಮೇಗೌಡ:- ನನ್ನ ಹೆಸರನ್ನು ಕಳುಹಿಸಿರುವುದು ನನಗೇ ಗೊತ್ತಿಲ್ಲ. ಆಮೇಲೆ ಇಲ್ಲಿ ನಡೆಸಿರತಕ್ಕಂಥ ದರೋಡೆಗಳ ಸಂಖ್ಯೆ ೧೬೩೮, ದಾಖಲಾದ ಪ್ರಕರಣಗಳ ಸಂಖ್ಯೆ ೩೭೦, ದಸ್ತಗಿರಿಯಾದ ವ್ಯಕ್ತಿಗಳ ಸಂಖ್ಯೆ ೪೦೩. ಇಷ್ಟೆಲ್ಲಾ ಮಾಹಿತಿಯನ್ನು ಕೊಟ್ಟು ಶಿಕ್ಷೆಗೆ ಗುರಿಯಾದ ಪ್ರಕರಣಗಳ ಸಂಖ್ಯೆಯಲ್ಲಿ 'ಸೊನ್ನೆ' ಎಂದು ಕೊಟ್ಟಿದ್ದಾರೆ. ಇದರ ಅರ್ಥವೇನು? ನನಗಂತೂ ಇದು ಅರ್ಥವಾಗುತ್ತಿಲ್ಲ. ದಸ್ತಗಿರಿ ಮಾಡಿದ್ದಾರೆ, ಹಿಡಿದಿದ್ದಾರೆ. ಆಮೇಲೆ ಇಲ್ಲಿ ವಶಪಡಿಸಿಕೊಂಡಿರತಕ್ಕ ಅಗತ್ಯ ವಸ್ತುಗಳ ಬೆಲೆ ೨ ಕೋಟಿ ೨೫ ಲಕ್ಷ ಎಂದು ಹೇಳಿದ್ದಾರೆ. ಆದರೆ ಯಾರಿಗೂ ಶಿಕ್ಷೆಯಾಗಿಲ್ಲವೆಂದ ಮೇಲೆ ಅವೆಲ್ಲವುಗಳು ಸುಳ್ಳು. ಅದನ್ನು ವಾಪಸ್ ಅವರುಗಳಿಗೆ ಕೊಡಬೇಕಲ್ಲವೇ? ಮಾಲನ್ನು ಹಿಡಿದು, ದಸ್ತಗಿರಿ ಮಾಡಿ ಕೇಸನ್ನು ಹಾಕಿ ಒಂದಕ್ಕೂ ಕೂಡ ಶಿಕ್ಷೆಯಾಗಿಲ್ಲವೆಂದರೆ ಏನು? ಎಂಥಾ ವ್ಯವಸ್ಥೆ ಅದು.

ಉಪಾಧ್ಯಕ್ಷಣಿಯವರು:- ಇನ್ನೂ ಕೇಸ್ ನಡೆಯುತ್ತಿದೆ.

ಶ್ರೀ ಕೆ. ಹೆಚ್. ಹುಮೇಗೌಡ:- ಆದರೆ ಶಿಕ್ಷೆ ಯಾರಿಗೂ ಆಗಿಲ್ಲ. ಶಿಕ್ಷೆಗೆ ಗುರಿಯಾದ ಪ್ರಕರಣಗಳ ಸಂಖ್ಯೆ ಇಲ್ಲ, ವಜಾ ಮಾಡಿದ ಪ್ರಕರಣಗಳ ಸಂಖ್ಯೆ ಇಲ್ಲ, ತಪ್ಪು ತಿಳುವಳಿಕೆಯ ಪ್ರಕರಣಗಳ ಸಂಖ್ಯೆ ೧೬, ವಿಶ್ವಾಸ ರಹಿತ ಪ್ರಕರಣಗಳ ಬಗ್ಗೆ ಏನನ್ನೂ ಹಾಕಿಕೊಂಡಿದ್ದಾರೆ. ಏಕೆ

ಈ ಮಾತನ್ನು ಹೇಳುತ್ತಿದ್ದೇನೆಂದರೆ ಇಷ್ಟೆಲ್ಲಾ ಅನ್ಯಾಯ, ದರೋಡೆಗಳು ದೇಶದಲ್ಲಿ ಆಗುತ್ತಿದ್ದರೂ ಕೂಡ ಇಂಥ ಬ್ಲಾಕ್ ಮಾರ್ಕೆಟಿಯರ್ಸ್‌ಗಳಲ್ಲಿ ಒಬ್ಬರನ್ನೂ ಸಹ ಹಿಡಿದು ಇವರಿಗೆ ಶಿಕ್ಷೆ ಮಾಡಲು ಆಗಿಲ್ಲವೆಂದರೆ ಇವರು ಇನ್ನು ಎಂಥ ಕಾನೂನನ್ನು ಮಾಡಿದ್ದಾರೆ? ಇನ್ನು ಎಷ್ಟರಮಟ್ಟಿಗೆ ಜನರಿಗೆ ರಕ್ಷಣೆಯನ್ನು ಕೊಟ್ಟಿದ್ದಾರೆ? ಎಂಬುದನ್ನು ದಯವಿಟ್ಟು ಹೇಳಬೇಕು. ಹಿಂದೆ ನಾನೂ ಕೂಡ ಲಾಯರ್ ಆಗಿದ್ದವನು.

ಒಬ್ಬ ಮಾನ್ಯ ಸದಸ್ಯರು:- ಶ್ರೀಮಾನ್ ಹನುಮೇಗೌಡರೆ, ಇಷ್ಟೆಲ್ಲಾ ತಾವು ಏನು ಹೇಳಿದ್ದೀರಲ್ಲ ಈ ರೀತಿ ಶಿಕ್ಷೆ ಏಕೆ ಆಗುವುದಿಲ್ಲವೆಂದು ತಾವು ಏನು ಪ್ರಸ್ತಾಪ ಮಾಡಿದ್ದೀರಿ ಅವೆಲ್ಲವೂ ಸಹ 'ಸೊನ್ನೆ' ಯ ರೂಪದಲ್ಲಿ ಹೋಗಿಬಿಟ್ಟಿದೆ. ಆದುದರಿಂದ ನಿಮಗೆ ರಿಸಲ್ಟ್ ಸೊನ್ನೆ ಎಂದು ಕಾಣುತ್ತಿದೆ. ಬೇಲಿಯೇ ಎದ್ದು ಹೊಲವನ್ನು ಮೇಯ್ದಂತೆ ಆಗಿದೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಇದರ ಬಗ್ಗೆ ಮಾನ್ಯ ಸಚಿವರು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಯಾವುದಾದರೊಂದು ಕಾನೂನನ್ನು ಮಾಡಿದ್ದರೆ ಆ ಕಾನೂನನ್ನು ಯಾರು ಬಿಗಿಯಾಗಿ ಮಾಡುವುದಿಲ್ಲವೋ ಅಂಥ ಅಧಿಕಾರಿಗಳಿಗೆ ಸರಿಯಾಗಿ ಬುದ್ಧಿಕಲಿಸಿ. ಒಂದು ವ್ಯವಸ್ಥೆಯನ್ನು ಮಾಡಬೇಕು. ಆ ರೀತಿಯಾದ ಒಂದು ವ್ಯವಸ್ಥೆ ಇಲ್ಲದಿದ್ದರೆ ಒಂದು ಕಡೆಯಲ್ಲಿ ಅಧಿಕಾರಿಗಳ ಸಂಬಳವೂ ಹೋಗುತ್ತದೆ ಇನ್ನೊಂದು ಕಡೆ ಅನುಕೂಲವನ್ನು ಮಾಡಿಕೊಂಡವರು ಬದುಕಿಕೊಂಡರು. ಮತ್ತೊಂದು ಕಡೆ ಆ ಪಾಪದ ಜನರು ಸಾಯುತ್ತಾರೆ. ಈ ಮೂರು ಆಗಬಾರದು. ಆದುದರಿಂದ ಇದರ ಬಗ್ಗೆ ಏನಾದರೂ ಒಂದು ಕ್ರಮವಿದ್ದರೆ, ಕಾನೂನು ಇದ್ದರೆ ಅದು ಸರಿಯಾಗಿ ಕಟ್ಟುನಿಟ್ಟಾಗಿ ಪಾಲನೆ ಮಾಡತಕ್ಕ ಒಂದು ವ್ಯವಸ್ಥೆ ಇರಬೇಕು, ಅದರ ಬಗ್ಗೆ ಆಗಾಗ್ಗೆ ಪರಿಶೀಲನೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಆಮೇಲೆ ಅವರು ಕಡಿಮೆ ಬೆಲೆಗೆ ಪಾಮ್‌ಆಯಿಲ್ ಅನ್ನುವ ಎಣ್ಣೆಯನ್ನು ತರುತ್ತಾರೆ. ಇವರು ಪಟ್ಟಣಗಳಲ್ಲಿ ಒಂದು ಕಾರ್ಡಿಗೆ ೩-೪ ಲೀಟರ್‌ನಂತೆಯೋ ಏನೋ ಕೊಡುತ್ತಾರೆ. ಆದರೆ ಹಳ್ಳಿಯವರಿಗೆ ಅಪರೂಪಕ್ಕೆ ಒಂದು ಸಾರಿ ಅಂದರೆ ಉಗಾದಿ ಇಲ್ಲವೇ ಗೌರಿ ಹಬ್ಬದಕ್ಕೋ ಒಂದು ಲೀಟರ್ ಎಣ್ಣೆಯನ್ನು ಕೊಡುತ್ತಾರೆ. ಇದು ನ್ಯಾಯವೇ ಸ್ವಾಮಿ? ಹಾಗಾದರೆ ಹಳ್ಳಿಯ ಜನ ಎಣ್ಣೆಯಿಂದ ಯಾವ ಪದಾರ್ಥಗಳನ್ನು ಮಾಡಿಕೊಂಡು ತಿನ್ನುವುದಿಲ್ಲವೇ? ಹಳ್ಳಿಯವರಿಗೇನು ಇಂಥ ವ್ಯವಸ್ಥೆ ಬೇಡವೇ? ಏಕೆ ಈ ರೀತಿಯ ತಾರತಮ್ಯ? ಹಳ್ಳಿಯವರು ಬೆಳೆದು ಕೊಡದಿದ್ದರೆ ಇವರುಗಳು ಎಲ್ಲಿಂದ ತಂದು ಹಂಚುತ್ತಾರೆ? ಅದು ನನ್ನ ಪ್ರಶ್ನೆ.

ಶ್ರೀ ಕೆ. ಲಕ್ಕಣ್ಣ:- ಈಗ ಒಂದು ಲೀಟರ್ ಎಣ್ಣೆಯನ್ನು ಕೊಟ್ಟಿದ್ದಾರೆ.

ಶ್ರೀ ಕೆ. ಹೆಚ್. ಹುಮೇಗೌಡ:- ಹಾಗಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟೆಷ್ಟು ಲೀಟರ್ ಪಾಮಾಯಿಲ್ ಎಣ್ಣೆಯನ್ನು ಕೊಟ್ಟಿದ್ದಾರೆ ಹೇಳಿಸಿಬಿಡಿ? ನಿಮಗೆ ಒಂದು ಲೀಟರ್ ಕೊಟ್ಟರೆ ನಮಗೆ ಸೊನ್ನೆ ಲೀಟರ್, ನಮಗೆ ಕೊಟ್ಟೇ ಇಲ್ಲ. ಈ ರೀತಿಯ ತಾರತಮ್ಯವನ್ನು ಮಾಡಬಾರದು. ತೀರಾ ಬಡವರಿರತಕ್ಕ ಕಡೆ ಜಾಸ್ತಿ ಕೊಡತಕ್ಕ ವ್ಯವಸ್ಥೆಯನ್ನು ಮಾಡಿ ಉಳಿದ ಕಡೆ ಸ್ವಲ್ಪ ಕಡಿಮೆ ಕೊಟ್ಟರೆ ಸರಿಯಾಗುತ್ತದೆ.

ಉಪಾಧ್ಯಕ್ಷಣಿಯವರು:- ಮಾನ್ಯ ಹನುಮೇಗೌಡರೆ ದಯಮಾಡಿ ಮುಗಿಸಬೇಕು.

ಶ್ರೀ ಕೆ. ಹೆಚ್. ಹನುಮೇಗೌಡರು:- ನೀವು ನಿಲ್ಲಿಸಿ ಎನ್ನುವ ಮೊದಲೇ ನಾನು ನಿಲ್ಲಿಸುತ್ತೇನೆ. ನಾನು ಇದರ ಬಗ್ಗೆ ಹೆಚ್ಚು ಓದಿಕೊಂಡು ಬರಲಿಲ್ಲ.

ಒಬ್ಬ ಮಾನ್ಯ ಸದಸ್ಯರು:- ಓದಿಕೊಂಡು ಬರದೆಯೇ ಇಷ್ಟು, ಇನ್ನು ಓದಿಕೊಂಡು ಬಂದಿದ್ದರೆ ಎಷ್ಟು ಮಾತನಾಡುತ್ತಿದ್ದರೋ!

(ಗೊಂದಲ)

ಶ್ರೀ ಕೆ. ಹೆಚ್. ಹನುಮೇಗೌಡ:- ಇನ್ನು ಸ್ಪೋರ್ಟ್ಸ್ ಬಗ್ಗೆ ಹೇಳುವುದಾದರೆ ಎಲ್ಲವನ್ನು ಪಟ್ಟಣಗಳಲ್ಲಿಯೇ ಇಟ್ಟುಕೊಳ್ಳುತ್ತಾರೆ., ಗ್ರಾಮಾಂತರ ಪ್ರದೇಶಗಳಿಗೆ ಆಟಗಳಿಗಾಗಿ ಸಾಕಷ್ಟು ಹಣವನ್ನು ಕೊಡುತ್ತಿಲ್ಲ. ಅಲ್ಲಿ ಇದರ ಬಗ್ಗೆ ಸಾಕಷ್ಟು ಗಮನವನ್ನು ಕೊಡುತ್ತಿಲ್ಲ. ಇಲ್ಲಿ ಒಂದು ಕಡೆ ಈ ಕ್ರಿಕೆಟ್ ಎನ್ನುವುದಿದೆ. ಬಹುಶಃ ಇಲ್ಲಿಗೆ ೪-೫ ವರ್ಷಕ್ಕೊಂದು ಸಾರಿ ನಾಲ್ಕು ಜನ ಬಂದು ನೆಗೆದಾಡುತ್ತಾರೆ, ಅದಕ್ಕೆ ಎಷ್ಟು ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದಾರೆಂದು ಲೆಕ್ಕಾ ಹಾಕಿದ್ದಾರೆಯೇ? ಅದಕ್ಕೆ ಏನಾದರೂ ಲೆಕ್ಕಪತ್ರ ಉಂಟೆ?

ಶ್ರೀ ಎಸ್. ರಮೇಶ್ (ಕ್ರೀಡಾ ಸಚಿವರು):- ಅದು ನಮ್ಮ ಸರ್ಕಾರದ ಹಣವಲ್ಲ. ಅದು ಕೇಂದ್ರದ ಅಸೋಸಿಯೇಷನ್‌ನಿಂದ ನಡೆಯೋದು.

ಶ್ರೀ ಕೆ. ಹೆಚ್. ಹನುಮೇಗೌಡ:- ಮಾನ್ಯ ಉಪಾಧ್ಯಕ್ಷಣಿಯವರೇ, ಯಾವ ಯಾವ ಸ್ಕೀಮ್, ಯಾವ ಯಾವ ಕಾನೂನು, ಯಾವ ಯಾವ ಆರ್ಡರ್ ಎಲ್ಲಾ ಹೇಳಿಸಿ, ಇದು ಬೆಂಗಳೂರು, ಮೈಸೂರು, ಧಾರವಾಡದಲ್ಲಿದೆ ಇಲ್ಲವೆಂದರೆ ಅಪ್ಪಿತಪ್ಪಿ ಹೋದರೆ ತುಮಕೂರು. ಉಳಿದ ಕಡೆ ಹೋಗುವುದಿಲ್ಲ. ಇದನ್ನು ಏಕೆ ಹೇಳುತ್ತೇನೆಂದರೆ ಈ ದೇಶದ ಸಂಪತ್ತು ಸರಿಯಾಗಿ ವಿತರಣೆ ಆಗಬೇಕು. ಯಾರು ಅಸಹಾಯಕರು ಬಡವರಿದ್ದಾರೆ ಅವರಿಗೆ ಮೊಟ್ಟ ಮೊದಲನೆಯದಾಗಿ ಆದ್ಯತೆಯನ್ನು ಕೊಟ್ಟು ಉಳಿದ ಕಡೆ ವ್ಯವಸ್ಥೆ ಮಾಡಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಮಾನ್ಯ ಸಚಿವರಾದ ಜಾರ್ಜ್‌ರವರು ಬಂದಿದ್ದಾರೆ, ನಾನು ಕೆಲವು ಛಾರ್ಜಸ್ ಬಗ್ಗೆ ಹೇಳಿದ್ದೇನೆ, ಆ ಛಾರ್ಜಸ್ ಎಲ್ಲರಿಗೂ ಅಪ್ಲೈ ಆಗುತ್ತವೆ. ಹಿಂದೆ ಚೆನ್ನಬಸಪ್ಪನವರು ಕೆಲವು ಹೋಟೆಲ್‌ಗಳಿಗೆ ಹೋಗಿ ಚೆಕ್ ಮಾಡುತ್ತಿದ್ದರು. ಮಾನ್ಯ ಉಪಾಧ್ಯಕ್ಷಣಿಯವರೇ, ಆ ಹೋಟೆಲ್‌ಗಳು ಏನಿವೆ ಇವು ಮುಂದೆ ಮಾತ್ರ ಚೆನ್ನಾಗಿರುತ್ತದೆ, ಹಿಂದುಗಡೆ ನೋಡಿದರೆ ಬಹಳ ಗಲೀಜಿರುತ್ತದೆ. ಮುನಿಸಿಪಾಲಿಟಿ ಕಮೀಷನರ್ ಏನು ಮಾಡುತ್ತಿದ್ದಾರೆ? ಮತ್ತು ಹೆಲ್ತ್ ಇನ್‌ಸ್ಪೆಕ್ಟರ್‌ಗಳು ಏನು ಮಾಡುತ್ತಿರುತ್ತಾರೆ? ಏನಾದರೂ ಒಂದು ಕಡೆ ಹೋದಾಗ ಅಥವಾ ಆ ಮುನಿಸಿಪಾಲಿಟಿಗಳ ಮುಖಾಂತರ ಹೋಗುವಾಗ ತಾವು ಸರ್‌ಪ್ರೈಸಾಗಿ ಹೋಟೆಲುಗಳಿಗೆ ಭೇಟಿ ಕೊಟ್ಟು ಇದನ್ನೆಲ್ಲಾ ನೋಡಿ ಚೆಕ್ ಮಾಡಿ ಜನಗಳಿಗೆ ಆಗತಕ್ಕಂತಹ ಅನಾರೋಗ್ಯವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಕೊನೆಯದಾಗಿ ನೀರು ಸರಬರಾಜು ಮಂಡಳಿಯವರು ನೀರಿಗೆ ಸರಿಯಾಗಿ ಪೌಡರ್ ಹಾಕಿ ಕ್ಲೀನ್ ಮಾಡಿ ನೀರನ್ನು ಸರಿಯಾಗಿ ಸರಬರಾಜು ಮಾಡುತ್ತಿದ್ದರು. ಆ ವ್ಯವಸ್ಥೆ ಚೆನ್ನಾಗಿತ್ತು. ಈಗ ಇವರು ಮುನಿಸಿಪಾಲಿಟಿಯವರಿಗೆಲ್ಲಾ ನೀವೇ ಡಿಸ್ಟ್ರಿಬ್ಯೂಟ್ ಮಾಡಿಕೊಳ್ಳಿ ಎಂದು ಬಿಟ್ಟರು. ಹಾಸನ ಟೌನ್‌ನಲ್ಲಿ ನೀರನ್ನು ಸರಬರಾಜು ಮಾಡುವುದಕ್ಕೆ ಮುನಿಸಿಪಾಲಿಟಿಗೆ ಕೊಟ್ಟಿದ್ದಾರೆ. ಅಧ್ಯಕ್ಷಣಿಯವರೇ, ೧೦-೧೨ ದಿವಸದಿಂದ ಹಾಸನ ಟೌನ್‌ನಲ್ಲಿ ಸರಿಯಾಗಿ ನೀರು ಸರಬರಾಜು ಆಗಿಲ್ಲ. ವಿಪರೀತ ತೊಂದರೆ ಕೊಡುತ್ತಿದ್ದಾರೆ. ಎಲ್ಲಿ ಹೋಗಿ ನೋಡಿದರೂ ಹಾಹಾಕಾರ, ಮೈಲಿಗಟ್ಟಲೆ ಹೋಗಿ

ಹಳ್ಳದಲ್ಲಿ ಎಲ್ಲೆಲ್ಲೋ ನೀರನ್ನು ತರುತ್ತಿದ್ದಾರೆ. ಆದಕ್ಕಾಗಿ ಕಾಗದ ಬರೆದಿದ್ದೇನೆ. ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ನಾನು ಕಾಲಿಂಗ್ ಅಟೆನ್‌ಷನ್ ಕೊಟ್ಟಿದ್ದೇನೆ. ಇದನ್ನು ಮಾನ್ಯ ಸಚಿವರು ಅವರ ಉತ್ತರ ಹೇಳುವಾಗ ಹೇಳಬೇಕು. ಹಾಸನ ಟೌನ್ ಜನರಿಗೆ ವ್ಯವಸ್ಥಿತವಾಗಿ ಸರಬರಾಜು ಮಾಡಬೇಕೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಂತಹ ಉಪಾಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈ ದಿವಸ ಮಂಡಿಸಿರತಕ್ಕಂತಹ ಬೇಡಿಕೆಗೆ ಸ್ವಾಗತ ಬಯಸುತ್ತಾ ಈಗ ಮಹಾನಗರ ಪಾಲಿಕೆಯ ಕೆಲವು ಸಮಸ್ಯೆಗಳ ಬಗ್ಗೆ ಮಾತನಾಡಬಯಸುತ್ತೇನೆ. ಮಹಾನಗರ ಪಾಲಿಕೆಯ ವರ್ಷದ ಆದಾಯ ೨೦೦ ಕೋಟಿ ರೂಪಾಯಿಗಳಾದರೂ ಕೂಡ ಆಗಬೇಕಾದಂಥ ಕೆಲಸಗಳು ಇನ್ನೂ ಆಗಿಲ್ಲ. ಶಾಶ್ವತವಾಗಿ ಬೆಂಗಳೂರು ನಗರದ ಜನತೆಗೆ ಆಗಬೇಕಾದಂತಹ ಸಬ್‌ವೇಗಳು, ಅಂತರ ರಸ್ತೆಗಳು ಮತ್ತು ಫ್ಲೈ ಓವರ್ ರಸ್ತೆ ಇವೆಲ್ಲಾ ಕೆಲವಾರು ವರ್ಷಗಳಿಂದ ಮಾಡುತ್ತೇವೆಂದು ಹೇಳಿದ್ದರೂ ಸಹ ಇದುವರೆಗೆ ಆ ಕಾರ್ಯಕ್ರಮ ಇನ್ನೂ ಪ್ರಾರಂಭ ಆಗಿಲ್ಲ. ಇದನ್ನು ಮಾಡದೇ ಹೋದರೆ ಬೆಂಗಳೂರು ನಗರದಲ್ಲಿ ವೇಗವಾಗಿ ಬೆಳೆದಂತಹ ಜನ ಸಂದಣಿ ವಾಹನಗಳ ಇಕ್ಕಟ್ಟಿನಿಂದ ಅನೇಕ ಸಾವು ನೋವುಗಳು ಆಗುತ್ತಿವೆ. ಹೋದ ವರ್ಷವೂ ಈ ಸದನದಲ್ಲಿ ಪ್ರಸ್ತಾಪಮಾಡಿದ್ದೇವೆ. ಆದರೂ ಕೂಡ ಒಂದೇ ಒಂದು ಕೆಲಸ ಈ ರೈಲ್ವೆ ಸ್ಟೇಷನ್ ಬಳಿ ಪ್ರಾರಂಭವಾಗಿದೆ. ಅದೇ ರೀತಿಯಾಗಿ ಇನ್ನು ಅನೇಕ ಸಬ್ ವೇಗಳನ್ನು ಮಾಡದೇ ಹೋದರೆ ಬಹಳ ತೊಂದರೆ ಇದೆ. ಅದರ ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಅಭಿವೃದ್ಧಿಗೋಸ್ಕರವಾಗಿ ಅಭಿವೃದ್ಧಿ ದತ್ತಿಯಿಂದ ೨೦೦ ಕೋಟಿ ರೂಪಾಯಿ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಏನಾದರೂ ಕ್ರೋಢೀಕರಿಸಿದ್ದಾರಾ? ಎಂಬುದನ್ನು ಮಾನ್ಯ ಮಂತ್ರಿಗಳು ಅವರ ಉತ್ತರದಲ್ಲಿ ಹೇಳಬೇಕಾಗಿದೆ. ಏಕೆಂದರೆ ೨೦೦ ಕೋಟಿ ರೂಪಾಯಿ ಹಣವು ಸಾಕಾಗುವುದಿಲ್ಲ. ಆ ದೃಷ್ಟಿಯಲ್ಲಿ ಇನ್ನು ಅವರಿಗೆ ಸರ್ಕಾರದಿಂದ ಏನು ಆಕ್ಟ್ರಾಯಿ ಪರಿಹಾರ ಧನ, ಎಜುಕೇಷನ್ ಪರಿಹಾರ ಧನವೂ ಕೊಡಬೇಕಾಗಿದೆ. ಈ ಹಣವನ್ನು ಬಿಡುಗಡೆ ಮಾಡದೇ ಇದ್ದರೆ ಅಲ್ಲಿನ ಕೆಲಸಗಳು ಬಹಳ ಕುಂಠಿತಗೊಳ್ಳುತ್ತವೆ. ಮತ್ತು ಏನು ಕಾಮಗಾರಿಗಳನ್ನು ಮಾಡುತ್ತಿದ್ದಾರೆ ತುಂಬಾ ಕಳಪೆಯ ಕೆಲಸಗಳಾಗುತ್ತಿವೆ. ಆ ಕಳಪೆಯ ಕೆಲಸಗಳಿಂದ ಬಹಳ ಹಣ ಖರ್ಚಾಗುತ್ತದೆ. ಈ ದಿಸೆಯಲ್ಲಿ ಎಷ್ಟು ಹಣ ಬಂದರೂ ಸಾಕಾಗುವುದಿಲ್ಲ. ಈ ದೆಸೆಯಲ್ಲಿ ಹೇಳುವುದಾದರೆ ಈಗ ಒಂದು ಕಮರ್ಷಿಯಲ್ ರೆವಿನ್ಯೂ ಇದೆ. ಇದರಲ್ಲಿ ಹಣ ತುಂಬಾ ಸೋರಿ ಹೋಗುತ್ತಿದೆ. ಭೂ ಮಾಲೀಕರಿಗೂ, ಮೊದಲನೇ ಹಂತದ ಲೀಸ್‌ಗಾರರಿಗೂ ಅಗ್ರಿಮೆಂಟ್ ಆಗಿರುತ್ತದೆ. ಅನಂತರ ನಾಲ್ಕು ಕೈ ಬದಲಾವಣೆ ಆಗಿರುತ್ತದೆ. ಆಗ ಅಷ್ಟೊಂದು ಅಸೆಸ್ ಮಾಡುವುದಕ್ಕಾಗುವುದಿಲ್ಲ. ಭೂಮಾಲೀಕರಿಗೆ ಮೊದಲು ಏನು ಮಾಡಿರುತ್ತಾರೆ ಅಷ್ಟೇ ಮಾಡಬೇಕಾಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಒಂದು ಸೂಕ್ತವಾದ ತಿದ್ದುಪಡಿಯನ್ನು ತಂದರೆ ಸುಮಾರು ४೦-೫೦ ಕೋಟಿ ರೂ. ರೆವಿನ್ಯೂ ಆದಾಯ ಬರುತ್ತದೆ. ಇವತ್ತು ಕಮರ್ಷಿಯಲ್ ಮಲ್ಟಿಸ್ಟೋರೀಡ್ ಮನೆಗಳು ಏನಾಗಿವೆ ಇವುಗಳಿಂದ ಕಂದಾಯವನ್ನು ಕೂಡ ವಸೂಲ್ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಂದರೆ ಅಸೆಸ್‌ಮೆಂಟ್ ಆಗಿರತಕ್ಕ ಬಹಳಷ್ಟು ಕೇಸುಗಳಲ್ಲಿ ಬರಬೇಕಾದ ಆದಾಯ ಏನು ಸೋರಿ ಹೋಗಿದೆ ಅದನ್ನೂ ಸರಿಪಡಿಸಬಹುದು. ಈಗ ಒಳ್ಳೆಯ ಕಮೀಷನರ್‌ರವರೂ ಬಂದಿದ್ದಾರೆ, ಮತ್ತು ಉಪ ಕಮೀಷನರ್‌ರವರೂ ಕೂಡ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಇವರಿಗೆ ಕೆಲವು

ಅಡೆತಡೆಗಳಿವೆ. ಇದಕ್ಕೆ ಮಾನ್ಯ ಮಂತ್ರಿಗಳು ತಿದ್ದುಪಡಿಯನ್ನು ತಂದು ಕಾನೂನು ಬದಲಾವಣೆ ಮಾಡಿದರೆ ಇನ್ನೂ ೪೦-೫೦ ಕೋಟಿ ರೂ. ಆದಾಯ ಬರುತ್ತದೆ. ಈ ಆದಾಯವನ್ನು ನಗರ ಅಭಿವೃದ್ಧಿ ಕೆಲಸಕ್ಕೆ ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆ. ಅಭಿವೃದ್ಧಿ ದತ್ತಿ ಹಣವನ್ನು ಎಷ್ಟು ಕ್ರೋಢೀಕರಿಸಲಾಗಿದೆ ಎಂಬುದನ್ನು ಕೂಡ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕು.

ಇನ್ನು ಭಾಷ್ಯಂ ನಗರದಲ್ಲಿ ಒಂದು ಸಿ. ಎ. ಸೈಟ್ ಇದೆ. ಅದನ್ನು ಬೆಂಗಳೂರು ಪ್ರಾಧಿಕಾರದವರು ಯಾರಿಗೂ ಕೊಟ್ಟಿಲ್ಲ. ಆದರೆ ಅದರ ಖಾತೆಯನ್ನು ಬೇರೆಯವರು ಯಾರೋ ಮಾಡಿಸಿಕೊಳ್ಳುವುದಕ್ಕೆ ಹೊರಟಿದ್ದಾರೆಂದು ತಿಳಿದುಬಂದಿದೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಲ್ಲದೆ ಇದರ ಖಾತೆಯನ್ನು ಮಾಡದಂತೆ ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಕಳೆದ ೬-೭ ವರ್ಷಗಳಿಂದ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚಿಲ್ಲ. ಇದರಿಂದಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಯಾವ ಆದಾಯವೂ ಇಲ್ಲದೆ ಸುಮಾರು ೮೦ ಸಾವಿರ ಜನರು ನಿವೇಶನಕ್ಕಾಗಿ ಏನು ಹಣವನ್ನು ಕಟ್ಟಿದ್ದರು ಆ ಹಣದಿಂದಲೇ ಪ್ರಾಧಿಕಾರದ ಅಧಿಕಾರಿಗಳ ಮತ್ತು ಸಿಬ್ಬಂದಿಯ ಸಂಬಳಕ್ಕೆ ಖರ್ಚು ಮಾಡುತ್ತಿದ್ದಾರೆ. ಬೆಂಗಳೂರು ಸುತ್ತಮುತ್ತ ರೆವಿನ್ಯೂ ನಿವೇಶನಗಳಲ್ಲಿ ಮನೆಗಳನ್ನು ಕಟ್ಟಿದ್ದರಿಂದ ಪ್ರಾಧಿಕಾರದ ಕೆಲಸ ಕುಂಠಿತವಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ತಿದ್ದುಪಡಿಯನ್ನು ತಂದರು. ಆದರೆ ಆ ತಿದ್ದುಪಡಿಯಿಂದ ಏನು ಹಣವನ್ನು ನಿರೀಕ್ಷಣೆ ಮಾಡಿದ್ದರೋ ಆ ಹಣ ಬರುವುದಕ್ಕೆ ಸಾಧ್ಯವಿಲ್ಲ. ಇದನ್ನು ಸಕ್ರಮ ಮಾಡುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಬೆಂಗಳೂರು ಪ್ರಾಧಿಕಾರಕ್ಕೆ ಸೇರಿದಂಥ ಸ್ಥಳಗಳಲ್ಲಿ ಅಕ್ರಮವಾಗಿ ಕಟ್ಟಿದ್ದರೆ ಕೊಡುವುದಕ್ಕಾಗುವುದಿಲ್ಲವೆಂದು ತಮ್ಮ ತಿದ್ದುಪಡಿಯಲ್ಲಿದೆ. ಆರೀತಿ ಆದರೆ ಬುಲ್ಡೋಜರ್ ಹೊಡೆಯಬೇಕಾಗುತ್ತದೆ. ಆದರೆ ಬುಲ್ಡೋಜರ್ ಕಾರ್ಯಕ್ರಮ ಸರ್ಕಾರದ ವಿರುದ್ಧದ ಕಾರ್ಯಕ್ರಮ. ತಿದ್ದುಪಡಿಯಲ್ಲಿ ಬಿ. ಡಿ. ಎ. ಜಾಗ ಎಂದು ಏನಿದೆ ಅದನ್ನು ತೆಗೆಯಬೇಕೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಮಾಡದಿದ್ದರೆ, ಇವತ್ತು ಕೋಟ್ಯಾಂತರ ರೂಪಾಯಿ ಆದಾಯ ಬರುತ್ತದೆಂದು ಏನು ಲೆಕ್ಕಾಚಾರ ಹಾಕಿಕೊಂಡಿದ್ದೀರಿ, ಅದೆಲ್ಲಾ ತಲೆಕೆಳಗಾಗುತ್ತದೆ. ಆದುದರಿಂದ ಬಿ. ಡಿ. ಎ. ಏನಿದೆ ಅದಕ್ಕೆ ಒಂದೂವರೆ ಪಟ್ಟು ಎಂದು ತಾವು ಏನು ಹೇಳಿದ್ದೀರಿ ಅದನ್ನು ಕೊಡುವುದಕ್ಕೂ ಅನುಕೂಲವಾಗುತ್ತದೆ. ಪ್ರಾಧಿಕಾರಕ್ಕೆ ಸೇರದೇ ಇರುವವರನ್ನು ಸಕ್ರಮಗೊಳಿಸುವುದಕ್ಕೆ ಬರುವುದಿಲ್ಲ. ಪ್ರಾಧಿಕಾರಕ್ಕೆ ಸೇರಿದವರನ್ನು ಮಾತ್ರ ಸಕ್ರಮಗೊಳಿಸುವುದಕ್ಕೆ ಬರುತ್ತದೆ. ಅಕ್ರಮವಾಗಿ ಕಟ್ಟಿದ್ದಾರೆಂದು ಏನು ಇದೆ ಅದನ್ನು ಈ ತಿದ್ದುಪಡಿಯಲ್ಲಿ ತೆಗೆದುಹಾಕಬೇಕು. ಸುಮಾರು ೧೯೬೭ನೇ ಇಸವಿಯಿಂದ ೧೯೭೭ನೇ ಇಸವಿಯ ಮಧ್ಯಭಾಗದಲ್ಲಿ ರೆವಿನ್ಯೂ ಸೈಟುಗಳು ಏನಿದೆ ಅವುಗಳನ್ನು ಅವರವರಿಗೇ ಕೊಡಬೇಕೆಂದು ಹಿಂದಿನ ಸರ್ಕಾರದವರು ಕ್ರಮ ಕೈಗೊಂಡರು. ಈಗ ಅದೂ ಕೂಡ ನಿಂತಿದೆ. ೧೯೮೫ನೇ ಇಸವಿಯಿಂದ ಇದುವರೆಗೂ ಏನೂ ಆಗಿಲ್ಲ. ಆ ಕೆಲಸವನ್ನು ಮೊದಲು ಮಾಡಬೇಕು. ಇದರಿಂದ ಸುಮಾರು ೫೬ ಕೋಟಿ ರೂ.ಗಳು ಬೆಂಗಳೂರು ಪ್ರಾಧಿಕಾರಕ್ಕೆ ಬರುತ್ತದೆ. ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕೇವಲ ಒಂದೆರಡು ಬಡಾವಣೆಗಳನ್ನು ಬಿಟ್ಟರೆ ಉಳಿದಲ್ಲ ಬಡಾವಣೆಗಳನ್ನೂ ಬೆಂಗಳೂರು ಮಹಾ ನಗರಪಾಲಿಕೆಯವರೇ ಮೇಂಟೇನ್ ಮಾಡುತ್ತಿದ್ದಾರೆ. ನೀವು ಇದನ್ನು ಸಕ್ರಮಮಾಡಿ ಅವುಗಳನ್ನು ಅವರವರಿಗೇ ಕೊಟ್ಟರೆ ಇದರಿಂದ ಸುಮಾರು ೬-೭

ಕೋಟಿ ರೂ. ಬರುತ್ತದೆ. ನಾನು ಕಳೆದಸಾರಿ ಇದರ ಬಗ್ಗೆ ಪ್ರಸ್ತಾಪ ಮಾಡಿದರೂ ಯಾರೂ ಕೂಡ ಇದುವರೆಗೂ ಇದರ ಬಗ್ಗೆ ಗಮನಹರಿಸಿಲ್ಲ. ಇದನ್ನು ಮಾಡಬೇಕು. ಇದನ್ನು ಹಾಗೆಯೇ ಬಿಟ್ಟುಕೊಂಡು ಹೋದರೆ ಬರಬೇಕಾದ ಹಣ ಹೋಗುತ್ತದೆ. ಅನಧಿಕೃತ ಮನೆಗಳನ್ನು ಅವರು ಕಟ್ಟಿಕೊಂಡು ಅನಧಿಕೃತವಾಗಿಯೇ ಖಾತೆಗಳನ್ನೂ ಮಾಡಿಸಿಕೊಳ್ಳುತ್ತಾರೆ. ನೀವು ಕಾನೂನನ್ನು ಬಿಗಿ ಮಾಡಿದರೆ ಅದು ದುರುಪಯೋಗವಾಗಿ ಅಧಿಕಾರಿಗಳಿಗೆ ಲಾಭವಾಗುತ್ತದೆಯೇ ಹೊರತು ಸರ್ಕಾರಕ್ಕೆ ಯಾವುದೇ ಲಾಭವೂ ಆಗುವುದಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು. ಈಗ ಬಿ. ಡಿ. ಎ. ನವರು ಸಿ. ಎ. ಸೈಟುಗಳನ್ನು ಅಲಾಟ್‌ಮೆಂಟ್ ಮಾಡುತ್ತಿದ್ದಾರೆ. ಇದನ್ನು ನಿಲ್ಲಿಸುವಂತೆ ಆದೇಶ ನೀಡಿ ಮುಂದಿನ ಆಡಳಿತಮಂಡಳಿ ಬರುವವರೆಗೂ ತಡೆಹಿಡಿಯುವಂತೆ ತಿಳಿಸಬೇಕು. ಸಿ. ಎ. ಸೈಟುಗಳು ಸಾರ್ವಜನಿಕರಿಗೆ ಕಾದಿರಿಸಲ್ಪಟ್ಟಿದ್ದು. ಆದರೆ ಪ್ರಾಧಿಕಾರದವರು ಈ ನಿವೇಶನಗಳನ್ನು ಒಬ್ಬೊಬ್ಬರಿಗೇ ಅಲಾಟ್ ಮಾಡುತ್ತಿದ್ದಾರೆ. ಆದುದರಿಂದ ಮುಂದಿನ ಆಡಳಿತ ಮಂಡಲಿ ಬರುವವರೆಗೂ ಈ ಅಲಾಟ್‌ಮೆಂಟ್ ಕಾರ್ಯಕ್ರಮವನ್ನು ಕೈಗೊಳ್ಳಕೂಡದೆಂದು ಈಗಲೇ ಆದೇಶ ನೀಡಬೇಕು. ಹಾಗೆಯೇ ಕೆ. ಇ. ಬಿ.ಯವರಿಗೆ ಟ್ರಾನ್ಸ್‌ಫಾರಮ್‌ಗಳನ್ನು ಇಡಲು ಚಿಕ್ಕ ಚಿಕ್ಕ ಸೈಟುಗಳನ್ನು ಇಡಬೇಕು, ಅದನ್ನು ಈಗ ಇಡುತ್ತಿಲ್ಲ. ಈಗ ಏನು ಮಾಡುತ್ತಿದ್ದಾರೆಂದರೆ ಟ್ರಾನ್ಸ್‌ಫಾರ್ಮರ್ಸ್‌ಗಳನ್ನು ರಸ್ತೆಗಳಲ್ಲಿ ಹಾಕುವುದಕ್ಕೆ ಹೋದರೆ ಮನೆಗಳವರು ತುಂಬ ಅಡಚಣೆ ಮಾಡುತ್ತಾರೆ. ಇದರಿಂದಾಗಿ ನಮಗೆ ತೊಂದರೆಯಾಗುತ್ತದೆ ಎಂದು ಅದಕ್ಕೆ ಎಲ್ಲಾ ಬಡಾವಣೆಗಳಲ್ಲಿ ಒಂದೊಂದು ಸಾವಿರ ಸೈಟುಗಳ ಮಧ್ಯೆ ಒಂದೊಂದು ಸೈಟನ್ನು ಕೆ. ಇ. ಬಿ. ಯವರಿಗೆ ಮೀಸಲಿಡಬೇಕು. ಹಾಗೆಯೇ ಒಂದು ದೊಡ್ಡ ಏರಿಯಾಕ್ಕೆ ಒಂದು ಪೋಲೀಸ್ ಸ್ಟೇಷನ್‌ಗೂ ಸ್ಥಳವನ್ನು ಮೀಸಲಿಡಬೇಕು. ಅದನ್ನು ಬಿಟ್ಟುಬಿಟ್ಟು ಖಾಸಗಿಯವರಿಗೆ, ಸ್ಕೂಲಿನವರಿಗೆ, ದೇವಸ್ಥಾನಕ್ಕೆ ಕೊಡಲಿಕ್ಕೆ ಹೋಗಿ ಅಭಿವೃದ್ಧಿ ಸಮಯದಲ್ಲಿ ಇದನ್ನು ಸ್ವಾಧೀನ ಪಡಿಸಿಕೊಳ್ಳಬೇಕಾದರೆ ಲಕ್ಷಾಂತರ ರೂಪಾಯಿಗಳ ಬೆಲೆಯನ್ನು ಕೊಟ್ಟು ಪೋಲು ಮಾಡಬೇಕಾಗುತ್ತದೆ. ಹಾಗೆಯೇ ಕಾರ್ಮಿಕರ ಹೌಸಿಂಗ್ ಸೊಸೈಟಿಗಳು ಏನಿವೆ ಅವುಗಳಿಗೆ ಸೈಟುಗಳನ್ನು ಕೊಡತಕ್ಕಂಥದ್ದಕ್ಕೆ ತಾವು ಅನುಮತಿಯನ್ನು ಕೊಡಬೇಕು. ಅವರು ಸುಮಾರು ೧೦-೧೫ ವರ್ಷಗಳಿಂದ ಹಣವನ್ನು ಕಟ್ಟಿ ಅವರು ವಸತಿ ಇಲ್ಲದೆ ಬಾಡಿಗೆ ಮನೆಗಳಲ್ಲಿ ಬವಣೆಯನ್ನು ಪಡುತ್ತಿದ್ದಾರೆ. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ಬಹುಬೇಗ ಕೊಡುವಂತೆ ಹೇಳಬೇಕು. ಒಳ್ಳೆಯ ಕೆಲಸವನ್ನು ಮಾಡುತ್ತಿರತಕ್ಕಂಥ ಸೊಸೈಟಿಗಳು ಕೂಡ ಇವೆ, ಅವರಿಗೆ ಅನುಮತಿ ಕೊಡುವುದಕ್ಕೆ ಸರ್ಕಾರದವರು ಮುಂದಾಗಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಹಾಗೆಯೇ ಅರ್ಬನ್ ಸೀಲಿಂಗ್‌ನಲ್ಲಿರತಕ್ಕಂಥ ಅನಧಿಕೃತ ಮನೆಗಳಿಗೂ ಕೂಡ ಕೊಡಲಿಕ್ಕೆ ಆಗುವುದಿಲ್ಲವೆಂದು ತಾವು ಹೇಳಿದ್ದೀರಿ. ಅದನ್ನು ಕೂಡ ತಾವು ತೆಗೆಯಬೇಕು. ಅರ್ಬನ್ ಸೀಲಿಂಗ್‌ನಲ್ಲಿರತಕ್ಕಂಥ ಕಡೆಗಳಲ್ಲಿ ಬಹುತೇಕ ಮನೆಗಳನ್ನು ಕಟ್ಟಿದ್ದಾರೆ. ಅದನ್ನು ತೆಗೆಯಬೇಕು, ರಿಲ್ಯಾಕ್ಸೇಷನ್ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈಗ ಜಲಮಂಡಲಿಯಲ್ಲಿ ಬಹಳ ನೀರು ಇದ್ದರೂ ಕೂಡ ಜನರಿಗೆ ನೀರಿನ ಸರಬರಾಜು ಮಾಡುತ್ತಿರುವುದು ಸರಿಯಾಗಿ ಆಗುತ್ತಿಲ್ಲ. ಅಧಿಕಾರಿಗಳನ್ನು ಕೇಳಿದರೆ ನಮಗೆ ಕರೆಂಟ್ ಇಲ್ಲವೆಂದು ಹೇಳುತ್ತಾರೆ. ಒಂದೊಂದು ದಿವಸ ಪೈಪ್ ಹೊಡೆದು ಹೋಯಿತೆಂದು ಹೇಳುತ್ತಾರೆ. ಇದರ ಬಗ್ಗೆ ತಾವು ಅಧ್ಯಕ್ಷರಿದ್ದೀರಿ, ಅವರು ಅಲ್ಲಿ ಕೆಲಸ ಮಾಡತಕ್ಕಂಥವರು ಕೆ. ಇ. ಬಿ. ಅಧ್ಯಕ್ಷರು ಮತ್ತು ಜಲಮಂಡಲಿಯ ಅಧ್ಯಕ್ಷರನ್ನು ಕರೆಯಿಸಿ ಯಾವುದೇ ಸಂದರ್ಭದಲ್ಲಿ ಯಾವ

ದಿವಸವೇ ಆದರೂ ಕೂಡ ಕರೆಂಟನ್ನು ನಿಲ್ಲಿಸದಂತೆ ಸರಬರಾಜು ಮಾಡುವ ಬಗ್ಗೆ ತಾವು ಆದೇಶವನ್ನು ಕೊಡಬೇಕು. ಇಲ್ಲದಿದ್ದರೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಹಾಗೆಯೇ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ಹೇಮಾವತಿ ಜಲಾಶಯದಿಂದ ನೀರನ್ನು ಕೊಡಿಸಬೇಕು. ಏತಕ್ಕೆಂದರೆ ಮಳೆ ದಿನೇ ದಿನೇ ಕಡಿಮೆಯಾಗುತ್ತಾ ಇರುವುದರಿಂದ ನೀರಿನ ಸಮಸ್ಯೆ ಬಹಳ ಜಾಸ್ತಿಯಾಗುತ್ತಿದೆ. ಈ ದಿಸೆಯಲ್ಲಿ ಇನ್ನೊಂದನ್ನು ಕೊಡಿಸಬೇಕೆಂದು ಹೇಳುತ್ತೇನೆ. ಹಾಗೆಯೇ ಜಲಮಂಡಲಿಯಲ್ಲಿ ಮೀಟರ್ ರೀಡರ್ಸ್‌ಗಳನ್ನು, ಇನ್‌ಸ್ಪೆಕ್ಟರ್‌ಗಳನ್ನು, ಟೆಲಿಫೋನ್ ಅಟೆಂಡರುಗಳನ್ನು ಸಿ ಮತ್ತು ಆರ್ ನಿಂದ ತೆಗೆದು ಹಾಕಲು ಪ್ರಸ್ತಾಪವನ್ನು ಕಳುಹಿಸಿದ್ದಾರೆಂದು ಇದೆ. ಅದು ಸರಿಯಾದುದಲ್ಲ. ೧೫-೧೭ ವರ್ಷ ಸೇವೆಯನ್ನು ಮಾಡಿರತಕ್ಕಂಥವರು ಅವರಿಗೆ ಪ್ರಮೋಷನ್ ಕೊಡತಕ್ಕಂಥದ್ದು ಬಿಟ್ಟು ಕೆಳಗೆ ಇಳಿಸತಕ್ಕಂಥದ್ದು ಸರಿಯಾದುದಲ್ಲ. ಬೇರೆ ಬೇರೆ ಕಡೆಯಲ್ಲಿ ಇಂಜಿನಿಯರ್ಸ್, ಜೆ. ಇ. ಗಳು, ಚೀಫ್ ಇಂಜಿನಿಯರ್ ಮತ್ತು ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳಾಗಿದ್ದಾರೆ. ಈ ದಿಸೆಯಲ್ಲಿ ಮಾನ್ಯ ಮಂತ್ರಿಗಳು ಅವರ ಒಳ್ಳೆಯ ಸೇವೆಯ ಅನುಭವದ ಮೇಲೆ ಪ್ರಮೋಷನ್ ಕೊಡಬೇಕು. ಅವರಿಗೆ ತೊಂದರೆಯಾಗುವುದನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹಾಗೆಯೇ ಕೊಳಚೆ ನಿರ್ಮೂಲನ ಮಂಡಲಿಯವರು ನಮ್ಮ ಕ್ಷೇತ್ರದಲ್ಲಿ, ಪಕ್ಕದ ಕ್ಷೇತ್ರದಲ್ಲಿ ಉತ್ತರಹಳ್ಳಿಯಲ್ಲಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮಂಡಲಿಯ ಕಾರ್ಯದರ್ಶಿಯವರು ದಕ್ಷತೆಯಿಂದ ಕೆಲಸ ಮಾಡಿದ್ದಾರೆ. ಎಲ್ಲಾ ಕೊಳಚೆ ಪ್ರದೇಶಗಳಲ್ಲಿಯೂ ಕೂಡ ನೀರಾವರಿ ವ್ಯವಸ್ಥೆ, ಸ್ಯಾನಿಟರಿ ವ್ಯವಸ್ಥೆ ಎಲ್ಲಾ ರೀತಿಯ ಕೆಲಸಗಳನ್ನು ಮಾಡಿ, ಹೊಸ ಬಡಾವಣೆಗಳನ್ನು ಒಂದು ಹೌಸಿಂಗ್ ಬೋರ್ಡ್ ಸ್ಕೀಮ್ ತರವಾಗಿ ಕೆಲಸ ಮಾಡಿದ್ದಾರೆ. ನಾನು ಎರಡು ದಿವಸ ಅಲ್ಲಿ ಹೋಗಿ ಅವರ ಜೊತೆಯಲ್ಲಿ ನೋಡಿದಾಗ ಬಹಳ ಚೆನ್ನಾಗಿ ಇತ್ತು. ಅದು ಒಂದು ಕೊಳಚೆ ಪ್ರದೇಶವೆಂದು ಹೇಳಲಾಗದಂಥ ರೀತಿಯಲ್ಲಿ ಮಾಡಿದ್ದಾರೆ. ಈಗ ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನು ಹಣವನ್ನು ಅವಕ್ಕೆ ಹೆಚ್ಚು ಮಾಡಿ ಅವರು ಕೆಲಸಗಳನ್ನು ತೆಗೆದುಕೊಂಡು ಕೊಳಚೆ ನಿರ್ಮೂಲನೆ ಮಾಡಬೇಕೆಂದು ನಮ್ಮ ಸರ್ಕಾರದ ಒಂದು ನೀತಿ ಏನಿದೆ ಆ ನೀತಿಯನ್ನು ನಿರೂಪಣೆ ಮಾಡಬೇಕು. ಹೆಚ್ಚು ಹಣವನ್ನು ಕೊಳಚೆ ನಿರ್ಮೂಲನಾ ಮಂಡಲಿಯವರಿಗೆ ಕೊಟ್ಟು, ಹೆಚ್ಚಿನ ಕೆಲಸವನ್ನು ತೆಗೆದುಕೊಂಡರೆ ಅವರನ್ನು ಸ್ಥಳಾಂತರ ಮಾಡಲು ಕೆಲಸವನ್ನು ತೆಗೆದುಕೊಂಡು ಅಷ್ಟೇ ಚೆನ್ನಾಗಿ ತಳಪಾಯ, ಗೋಡೆಗಳನ್ನು, ಅಡಿಪಾಯವನ್ನು ಹಾಕಿಸಿ, ಸಿಮೆಂಟ್ ಕ್ಯೂರಿಂಗ್ ಮಾಡಿಸುವಂಥ ಒಳ್ಳೆಯ ಕೆಲಸವನ್ನು ಮಾಡಿಸಿದ್ದಾರೆ. ಅವರು ಒಬ್ಬ ಒಳ್ಳೆಯ ಅಧಿಕಾರಿ ಇದ್ದಾರೆ. ಈ ದಿಸೆಯಲ್ಲಿ ಇವತ್ತಿನ ದಿವಸ ಹೌಸಿಂಗ್ ಬೋರ್ಡ್‌ನವರು ಈಗ ನಮ್ಮ ಕಾಗೋಡು ತಿಮ್ಮಪ್ಪನವರು ಅಲ್ಲಿ ಬಹಳ ದಕ್ಷತೆಯಿಂದ ಕೆಲಸ ಮಾಡಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಹಾಗೆಯೇ ಯುವ ಜನ ಇಲಾಖೆಯಲ್ಲಿ ಕಲಾವಿದರು ಮತ್ತು ಕ್ರೀಡಾಪಟುಗಳಿಗೆ ಮನ್ನಣೆ ಕೊಡಬೇಕು. ಅವರಿಗೆ ಮಾಶಾಸನ ಕೊಡಬೇಕು. ೨-೩ ವರ್ಷಗಳಿಂದ ಅದು ನಿಂತು ಹೋಗಿದೆ. ಈ ದಿಸೆಯಲ್ಲಿ ನಮ್ಮ ಯುವಕ ಮಂತ್ರಿಗಳಾದ ರಮೇಶ್‌ರವರು ಇದರ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ನಮ್ಮ ಬಡಾವಣೆಯಲ್ಲಿ ಕೆರೆ ಅಂಗಳ ಇದೆ. ಅದನ್ನು ಸ್ಟೇಡಿಯಂ ಮಾಡಬೇಕೆಂದು ಕೇಳಿಕೊಂಡಿದ್ದೆವು. ಆ ಕಡೆ ಇದುವರೆಗೆ ಸರ್ಕಾರ ಗಮನ ಹರಿಸಿಲ್ಲ. ಇನ್ನು ಕಲಾವಿದರಿಗೆ ಮಾಶಾಸನ ಕೊಡಬೇಕೆಂದು ಹೇಳುತ್ತಾ, ಈ ಸಂದರ್ಭದಲ್ಲಿ ಹೆಚ್. ಯು. ಡಿ. ಮಂತ್ರಿಗಳು ಯುವಕರು, ಆಸಕ್ತಿಯಿಂದ ಕೆಲಸ ಮಾಡುತ್ತಾರೆಂದು

ಭಾವಿಸಿದ್ದೇನೆ. ನಮ್ಮ ಆಹಾರ ಇಲಾಖೆಯಲ್ಲಿ ಏನಾಗಿದೆ ಎಂದರೆ ಅಧಿಕಾರಿಗಳಿಂದ ನಾಗರೀಕರಿಗೆ ಒಳ್ಳೆಯ ರೀತಿಯ ವಸ್ತುಗಳು ಸಿಗುತ್ತಿಲ್ಲ. ಯಾರೇ ಉರಿಯಲಿ, ಸಾಯಲಿ ಅಧಿಕಾರಿಗಳು ತಮ್ಮ ಧ್ಯೇಯ ಧೋರಣೆ ನೀತಿಯನ್ನು ಬದಲಾಯಿಸುವುದಿಲ್ಲ. ಆಹಾರ ಪದಾರ್ಥ ಸರಿಯಾಗಿ ವಿತರಣೆ ಆಗಬೇಕಾದ ಕಡೆ ವಿತರಣೆ ಮಾಡುತ್ತಿಲ್ಲ. ನಮ್ಮ ಸಮಿತಿಯ ವತಿಯಿಂದ ಹೋಗಿ ತನಿಖೆ ಮಾಡಿದರೂ ಸೊಸೈಟಿಗಳಲ್ಲಿ ಸರಿಯಾಗಿ ವ್ಯವಸ್ಥಿತವಾಗಿ ತೂಕ ಕೊಡುತ್ತಿಲ್ಲ. ಅವರ ಬಗ್ಗೆ ನಿಖರವಾಗಿ ಇಂಥ ಕಡೆ ಈ ಸಮಸ್ಯೆ ಇದೆ ಎಂದು ಹೇಳಿದ್ದೇವೆ. ಕೆಲವಾರು ಎಫ್. ಸಿ. ಐ. ಗೋಡೌನ್‌ಗಳ ಹೆಸರನ್ನು ಹೇಳಿದ್ದೇವೆ. ಆ ಬಗ್ಗೆ ಇದುವರೆಗೆ ತನಿಖೆ ಮಾಡಿಲ್ಲ. ಆ ಬಗ್ಗೆ ತನಿಖೆ ಮಾಡಿ ನಾಗರೀಕರಿಗೆ ಒಳ್ಳೆಯ ತೂಕದ್ದು ಆಹಾರ ಕೊಡಬೇಕೆಂದು ಮತ್ತು ಒಳ್ಳೆಯ ಆಹಾರ ವಸ್ತುಗಳನ್ನು ಕೊಡಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಆರ್. ದಯಾನಂದ ರಾವ್ (ಗಾಂಧಿ ನಗರ):- ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ದಿವಸ ಸದನದಲ್ಲಿ ತಂದಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ನಮ್ಮ ಸರ್ಕಾರ ಇವತ್ತಿನ ದಿವಸ ಒಳ್ಳೆಯ ಕಾರ್ಯಕ್ರಮಗಳನ್ನು ಜನಗಳಿಗೆ ಕೊಟ್ಟಿದೆ. ಅದನ್ನು ನಾವು ಆದಷ್ಟು ಬೇಗ ಇಂಪ್ಲಿಮೆಂಟ್ ಮಾಡಿಕೊಂಡು ಹೋಗಬೇಕಾಗಿದೆ. ಬೆಂಗಳೂರು ನಗರದಲ್ಲಿ ಸುಮಾರು ೪೦-೫೦ ವರ್ಷಗಳಿಂದ ಏನು ಬಡಜನರು ಅವರ ಒಂದು ಹಕ್ಕುಗಳಿಗೋಸ್ಕರ ಕಾಯುತ್ತಿದ್ದರು ಅದು ಈಗ ಆಶ್ರಯ ಯೋಜನೆ ಅಡಿಯಲ್ಲಿ ಕೈಗೂಡಿದೆ. ಕಾರ್ಪೊರೇಷನ್ ಲಿಮಿಟ್‌ನಲ್ಲಿರತಕ್ಕ ೧೦-೧೫ ಅಡಿ ಅಳತೆಯ ನಿವೇಶನದಲ್ಲಿರತಕ್ಕ ಮನೆಯಾಗಿದ್ದರೂ, ಅವರು ಕಾರ್ಪೊರೇಷನ್‌ಗೆ ಟ್ಯಾಕ್ಸ್ ಕೊಟ್ಟರೂ ಅದು ಅವರ ಒಂದು ನಿವೇಶನ ಎಂಬ ಹಕ್ಕು ಪತ್ರವನ್ನು ನಾವು ಇದುವರೆಗೆ ವಿತರಣೆ ಮಾಡಿರಲಿಲ್ಲ. ಇವತ್ತು ನಮ್ಮ ಸರ್ಕಾರ ದೊಡ್ಡ ಜವಾಬ್ದಾರಿ ತೆಗೆದುಕೊಂಡು ಮಾನ್ಯ ಬಂಗಾರಪ್ಪನವರ ನೇತೃತ್ವದಲ್ಲಿ ಒಳ್ಳೆಯ ಕಾರ್ಯಕ್ರಮವನ್ನು ಕೊಟ್ಟಿದೆ. ಅದೇ ರೀತಿ ನಮ್ಮ ಯುವಕ ಮಂತ್ರಿಗಳಾದ ಶ್ರೀ ಕೆ. ಜೆ. ಜಾರ್ಜ್ ಅವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಬೆಂಗಳೂರು ನಗರದಲ್ಲಿ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಆಶ್ರಯ ಯೋಜನೆ ಅಡಿಯಲ್ಲಿ ಇವತ್ತು ಒಂದೊಂದು ಕ್ಷೇತ್ರದಲ್ಲಿ ಒಂದೊಂದು ಸಾವಿರ ಮನೆಗಳನ್ನು ಬಡವರಿಗೆ ನಾವು ಕೊಡುತ್ತಿದ್ದೇವೆ. ಈಗಾಗಲೇ ಕೆಲಸ ಶುರುವಾಗಿದೆ. ನಮ್ಮ ಕ್ಷೇತ್ರದಲ್ಲಿ ಸುಮಾರು ೩೦೦ ಮನೆಗಳನ್ನು ಕಟ್ಟತಕ್ಕ ಕೆಲಸ ಪ್ರಾರಂಭವಾಗಿದೆ. ಅಧಿಕಾರಿಗಳು ಸಹ ಒಳ್ಳೆಯ ರೀತಿಯಲ್ಲಿ ಸಹಕಾರ ನೀಡುತ್ತಿದ್ದಾರೆ. ಈ ಕಾರ್ಯಕ್ರಮವನ್ನು ನಾವು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಹೋದಲ್ಲಿ ನಿಜವಾಗಿಯೂ ನಮ್ಮ ಒಂದು ಕಾಂಗ್ರೆಸ್ ಸರ್ಕಾರ ಬಡವರಿಗೋಸ್ಕರ ಒಳ್ಳೆಯ ಕಾರ್ಯಕ್ರಮ ನೀಡುತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಾದನಂತರ ಹೋದ ವರ್ಷ ನಮ್ಮ ಬೆಂಗಳೂರು ನಗರದಲ್ಲಿ ಸುಮಾರು ೭೦೦ ಕೊಳವೆ ಬಾವಿಗಳನ್ನು ಜನಗಳಿಗೆ ಕೊಟ್ಟಿದ್ದೇವೆ. ಹೋದ ವರ್ಷ ಜನರು ಬಹಳಷ್ಟು ನೀರಿನ ಸಂಕಷ್ಟದಲ್ಲಿದ್ದರು. ಆ ಸಂದರ್ಭದಲ್ಲಿ ಕಾರ್ಪೊರೇಷನ್ ಮತ್ತು ಬಿ. ಡಬ್ಲ್ಯು. ಎಸ್. ಎಸ್. ಬಿ. ವತಿಯಿಂದ ತುರ್ತಾಗಿ ಕಾರ್ಯಕ್ರಮ ತೆಗೆದುಕೊಂಡು ಕೊಳವೆ ಬಾವಿಗಳನ್ನು ತೋಡಿಸಿ ಜನರಿಗೆ ನೀರಿನ ಸೌಕರ್ಯವನ್ನು ಒದಗಿಸಿಕೊಡಲಾಯಿತು. ಒಂದು ಸಾವಿರ ಗ್ಯಾಲನ್ ಕೆಪಾಸಿಟಿಯ ಕೊಳವೆ ಬಾವಿಗಳು ಏನು ಕೊಟ್ಟಿದೆ ಅದರಲ್ಲಿ ಬಿ. ಡಬ್ಲ್ಯು. ಎಸ್. ಎಸ್. ಬಿಯವರು ಈಗಾಗಲೇ ಅದನ್ನು ಎನರ್ಜೈಸ್ ಮಾಡಿದ್ದಾರೆ. ಅವರ ಸುಮಾರು ೩೦೦

ಕೊಳವೆಬಾವಿಗಳು ಏನು ಕಾರ್ಪೋರೇಷನ್ ವತಿಯಿಂದ ಸಾವಿರ ಗ್ಯಾಲನ್ ಕೆಪಾಸಿಟಿಯ ಕೊಳವೆ ಬಾವಿಗಳನ್ನು ಏನು ಪ್ರಾರಂಭಿಸಿದ್ದರು ಅವು ಇದುವರೆಗೂ ಎನರ್ಜೈಸ್ ಆಗಿಲ್ಲ. ಇದನ್ನು ಮಂತ್ರಿಗಳು ಉತ್ತರದಲ್ಲಿ ಏತಕ್ಕೆ ಆಗಿಲ್ಲ ಎಂಬುದನ್ನು ಹೇಳಬೇಕು. ಆದಷ್ಟು ಜಾಗ್ರತೆ ಈ ಕಾರ್ಪೋರೇಷನ್ ವತಿಯಿಂದ ಕೊಟ್ಟಿರತಕ್ಕ ಕೊಳವೆಬಾವಿಗಳನ್ನು ಎನರ್ಜೈಸ್ ಮಾಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಮತ್ತು ಮಿನಿ ವಾಟರ್ ಸ್ಕೀಂ. ಈ ಮಿನಿ ವಾಟರ್ ಸ್ಕೀಂ ನಿಜವಾಗಿಯೂ ಒಂದು ಒಳ್ಳೆಯ ಕಾರ್ಯಕ್ರಮವನ್ನು ಸರ್ಕಾರ ಕೊಟ್ಟಿದೆ. ಇವತ್ತು ಬೆಂಗಳೂರು ನಗರದಲ್ಲಿ ಎಲ್ಲಾ ಕಡೆ ನಾವು ನೋಡಬಹುದು, ಒಂದು ಟ್ಯಾಂಕನ್ನು ಕಟ್ಟಿ ಎಲೆಕ್ಟ್ರಿಸಿಟಿಯಿಂದ ಎನರ್ಜೈಸ್ ಮಾಡಿ ಜನ ಯಾವಾಗ ಬೇಕಾದರೂ ಹೋಗಿ ನೀರಿನ ಅಭಾವ ಇದ್ದಾಗ ಆ ನೀರನ್ನು ಪಡೆದುಕೊಳ್ಳಬಹುದು. ಇಂಥ ಸೌಕರ್ಯ ಬೇರೆ ರಾಜ್ಯಗಳಲ್ಲಿ ನೋಡಿದಾಗ ಎಲ್ಲೂ ಇಲ್ಲದ ಸೌಕರ್ಯ ಕರ್ನಾಟಕ ರಾಜ್ಯ ಅದರಲ್ಲೂ ಬೆಂಗಳೂರು ನಗರದಲ್ಲಿ ನಮ್ಮ ಸರ್ಕಾರ ಒದಗಿಸಿಕೊಟ್ಟಿದೆ. ಅದಕ್ಕೆ ಮಂತ್ರಿಗಳಿಗೆ ನಾನು ಅಭಿನಂದನೆ ಸಲ್ಲಿಸುತ್ತಿದ್ದೇನೆ. ಮತ್ತು ಸ್ಯಾನಿಟರಿ ಬಗ್ಗೆ ಮಾತಾಡುವುದೆಂದರೆ ಕಾರ್ಪೋರೇಷನ್‌ನಿಂದ ತಾವು ಟ್ಯಾಕ್ಸನ್ನು ವಸೂಲು ಮಾಡುತ್ತಿರುವುದರಿಂದ ಕಾರ್ಪೋರೇಷನ್‌ನಿಂದಲೇ ಸ್ಯಾನಿಟರಿ ಬೋರ್ಡಿಗೆ ದುಡ್ಡು ಹೋಗಬೇಕಾಗಿದೆ. ಈ ಟ್ರಾನ್ಸ್‌ಯಾಕ್ಷನ್‌ನಲ್ಲಿ ಟೈಂ ಹಿಡಿಯುತ್ತದೆ. ಆದ್ದರಿಂದ ಕಾರ್ಪೋರೇಷನ್ ಏನು ಟ್ಯಾಕ್ಸ್ ತೆಗೆದುಕೊಳ್ಳುತ್ತದೆ ಅದರಲ್ಲಿ ಎಷ್ಟು ಸೇರಬೇಕೋ ಅಷ್ಟನ್ನು ಸ್ಯಾನಿಟರಿ ಬೋರ್ಡಿಗೆ ಡೈರೆಕ್ಟಾಗಿ ಕಳುಹಿಸಿ ಕೊಟ್ಟರೆ ಆಗ ಸಿವರೇಜ್ ಬೋರ್ಡಿನವರು ಜಾಗ್ರತೆ ಬೆಂಗಳೂರು ನಗರದಲ್ಲಿ ಸ್ಯಾನಿಟರಿ ಫೆಸಿಲಿಟೀಸ್ ಏನು ಕೊಡಬೇಕಾಗುತ್ತದೆ ಜನಗಳಿಗೆ. ಅದನ್ನು ಒದಗಿಸಿಕೊಡುವುದಕ್ಕಾಗುತ್ತದೆ. ಈ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟಿನಿಂದ ಟ್ರಾನ್ಸ್‌ಫರ್ ಆಗಿ ದುಡ್ಡು ಅವರಿಗೆ ಕಳುಹಿಸಿ ಅದನ್ನು ಅವರು ಕಾರ್ಯಗತ ಮಾಡುವುದಕ್ಕೆ ಟೈಂ ಆಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ ಇವತ್ತು ಏನು ಟ್ಯಾಕ್ಸ್ ಕಲೆಕ್ಟ್ ಮಾಡುತ್ತಿದ್ದಾರೆ, ಸ್ಯಾನಿಟರಿಗೆ ಏನು ದುಡ್ಡು ಇಟ್ಟಿದೆ ಅದು ಡೈರೆಕ್ಟಾಗಿ ಸ್ಯಾನಿಟರಿ ಡಿವಿಷನ್‌ಗೆ ಹೋಗುವಂತೆ ಮಾಡಿದರೆ ಆದಷ್ಟು ಜಾಗ್ರತೆ ಕೆಲಸ ಮಾಡಿಕೊಂಡು ಹೋಗುವುದಕ್ಕಾಗುತ್ತದೆ. ನನ್ನ ಕ್ಷೇತ್ರದಲ್ಲಿ ಇವತ್ತು ೧೨ ಲಕ್ಷ ರೂಪಾಯಿಯ ಸ್ಯಾನಿಟರಿ ಕೆಲಸವನ್ನು ಸ್ಟಾರ್ಟ್ ಮಾಡಿ ಸುಮಾರು ಒಂದು ವರ್ಷ ಆಯಿತು. ಮೊದಲ ಹಂತದಲ್ಲಿ ನಾಲ್ಕು ಲಕ್ಷ ರೂಪಾಯಿ ಕೊಟ್ಟು ನಿಲ್ಲಿಸಿದ್ದಾರೆ. ರೋಡುಗಳನ್ನು ಕೆತ್ತಿ ಅದೇ ರೀತಿಯಾಗಿ ಬಿಟ್ಟಿದ್ದಾರೆ. ಜನಗಳು ಓಡಾಡುವುದಕ್ಕೆ ಆಗುತ್ತಿಲ್ಲ. ಸ್ವತಂತ್ರ ನಗರದಲ್ಲಿ ಇದು ಒಂದು ಇಕ್ಕಟ್ಟಾಗಿ ಆಗಿದೆ. ಆದಷ್ಟು ಇದರ ಬಗ್ಗೆ ನಮ್ಮ ಮಂತ್ರಿಗಳು ಹಣವನ್ನು ಬಿಡುಗಡೆ ಮಾಡಿದಲ್ಲಿ ಆ ಕೆಲಸವನ್ನು ಸುಗಮವಾಗಿ ಮಾಡುವುದಕ್ಕಾಗುತ್ತದೆ ಎಂದು ಹೇಳಿ ಮಾನ್ಯ ಮಂತ್ರಿಗಳು ದುಡ್ಡಿನ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕೆಂದು ವಿನಂತಿಸುತ್ತಿದ್ದೇನೆ. ಮತ್ತು ಆಸ್ಫಾಲ್ಟಿಂಗ್ ಕೆಲಸದಲ್ಲಿ ಲಂಚತನ ಜಾಸ್ತಿಯಾಗುತ್ತಿದೆ. ಸರಿಯಾದ ಆಸ್ಫಾಲ್ಟಿಂಗ್ ಕೆಲಸ ನಡೆಯುತ್ತಿಲ್ಲ. ಹೋದಸಾರಿ ಈ ಇಲಾಖೆ ಬಗ್ಗೆ ಮಾತನಾಡುವಾಗ ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಹೇಳಿದ್ದ. ರಾತ್ರೋ ರಾತ್ರಿ ಹಾಕಿಬಿಡುತ್ತಾರೆ. ಗೊತ್ತಾಗುವುದಿಲ್ಲ. ಕಂಟ್ರಾಕ್ಟರುಗಳು ಇಂಜಿನಿಯರುಗಳು ಇಲ್ಲದಿರುವ ಟೈಮಿನಲ್ಲಿ ಟಾರ್ ಹಾಕಿ ಹೋಗುತ್ತಾರೆ. ಆದ್ದರಿಂದ ಆಸ್ಫಾಲ್ಟಿಂಗ್ ಮಾಡುವ ವಿಚಾರದಲ್ಲಿ ಕಾರ್ಪೋರೇಷನ್‌ನಲ್ಲಿ ಒಂದು ಕಮಿಟಿ ಮಾಡಿ ಅಧಿಕಾರಿಗಳನ್ನು ಅಲ್ಲೇ ಇಟ್ಟು ಸರಿಯಾದ ರೀತಿಯಲ್ಲಿ ಚೆಕ್ ಮಾಡುವುದು. ಮಾಡಿದರೆ ನಿಜವಾಗಿಯೂ ಒಳ್ಳೆಯ ಕ್ವಾಲಿಟಿ ರೋಡ್ಸ್ ಕೊಡುವುದಕ್ಕಾಗುತ್ತದೆ. ಇಲ್ಲದಿದ್ದರೆ ವರ್ಷೇ ವರ್ಷೇ ಇದೇ ರೀತಿ ಕೋಟ್ಯಾಂತರ

ರೂಪಾಯಿಗಳನ್ನು ರೋಡ್ಸ್‌ಗೋಸ್ಕರ ನಾವು ಖರ್ಚು ಮಾಡುತ್ತಿದ್ದೇವೆ. ಈ ಒಂದು ದುಂದು ವೆಚ್ಚ ಆಗಬಾರದು. ಟಾರ್ ರಸ್ತೆಗಳನ್ನು ಏನು ಮಾಡುತ್ತಿದ್ದಾರೆ ಅದು ಸರಿಯಾದ ರೀತಿಯಲ್ಲಿ ಕಾರ್ಯಗತವಾಗಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಉಪಾಧ್ಯಕ್ಷಿಣಿಯವರೇ, ಕಾರ್ಪೊರೇಷನ್‌ನಲ್ಲಿ ಕೆಲವು ಫೈಲ್‌ಗಳು ಸರಿಯಾಗಿ ಮೂವ್ ಆಗುತ್ತಾ ಇಲ್ಲ. ಅಲ್ಲಿ ಇಬ್ಬರು ಅಧಿಕಾರಿಗಳು, ಒಬ್ಬರು ಸೂಪರಿಂಟೆಂಡೆಂಟ್ ಎಂಜಿನಿಯರ್ ಮತ್ತು ಅಡಿಷನಲ್ ಚೀಫ್ ಎಂಜಿನಿಯರ್ ಇವರುಗಳ ಜಗಳಕ್ಕೋಸ್ಕರ ಅವರ ಸೀನಿಯಾರಿಟಿ, ಅವರ ಸೀನಿಯಾರಿಟಿಯ ಜಗಳ, ಇವರು ಸೀನಿಯರ್ ಅವರು ಸೀನಿಯರ್ ಎಂದು ತೀರ್ಮಾನ ಆಗದ್ದರಿಂದ ನಮ್ಮ ಫೈಲ್‌ಗಳು ಮೂವ್ ಆಗುತ್ತಾ ಇಲ್ಲ. ಅಧಿಕಾರಿಗಳನ್ನು ತಾವು ಬದಲಾವಣೆ ಮಾಡಿ ನಮ್ಮ ಕೆಲಸ ಸುಗಮವಾಗಿ ನಡೆಯುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ. ಮತ್ತು ಮೊನ್ನೆ ತಾನೇ ನಮ್ಮ ಕಾರ್ಪೊರೇಷನ್‌ನಲ್ಲಿ ಒಂದು ರೆಸಲ್ಯೂಷನ್ ಮಾಡಿ ನಾವು ಏನು ೧೬ ಸಾವಿರ ಲೀಟರ್ ನೀರನ್ನು ನಮ್ಮ ಜನತೆಗೆ ಫ್ರೀಯಾಗಿ ಕೊಡುತ್ತಿದ್ದೆವೋ ಅದನ್ನು ಕೊಡಬಾರದು ಎಂದು ನಿರ್ಣಯ ತೆಗೆದುಕೊಂಡಿದ್ದಾರೆ. ದಯಮಾಡಿ ಇದನ್ನು ತಾವು ನಿಲ್ಲಿಸಬೇಕು. ಏಕೆಂದರೆ they are collecting the water cess, ಇಷ್ಟು ಕಲೆಕ್ಟ್ ಮಾಡಿದರೂ ಕೂಡ ನಾವು ಜನರಿಗೆ ೧೬ ಸಾವಿರ ಲೀಟರ್ ಕೊಟ್ಟಿಲ್ಲ ಎಂದರೆ ನಾಳೆ ದಂಗೆ ಏಳುತ್ತಾರೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಅವರು ಈ ದಿಸೆಯಲ್ಲಿ ಯಾವುದೇ ರೆಸಲ್ಯೂಷನ್ ಪಾಸ್ ಮಾಡಿದ್ದರೂ ಅದನ್ನು ತಾವು ತಡೆ ಹಿಡಿಯಬೇಕು. ಏನು ೧೬ ಸಾವಿರ ಲೀಟರ್ ನೀರನ್ನು ಫ್ರೀಯಾಗಿ ಕೊಡುತ್ತಿದ್ದಾರೆ ಅದನ್ನು ತಾವು ಕಂಟಿನ್ಯೂ ಮಾಡಬೇಕೆಂದು ಹೇಳಬಯಸುತ್ತೇನೆ. ಇನ್ನು ಬಿ. ಡಿ. ಎ. ಬಗ್ಗೆ ಹೇಳುತ್ತೇನೆ. ಇದರಲ್ಲಿ ಜನತಾ ಸರ್ಕಾರ ಆಪತ್ತಿನ ದಿವಸ ದುಡ್ಡಿನ ಆಸೆಗೆ ಎಲ್ಲರಿಗೂ ಸೈಟ್ ಕೊಡುತ್ತೇವೆಂದು ಹೇಳಿ, ಅವರು ಸರ್ಕಾರವನ್ನು ಬಿಟ್ಟು ಹೋದಾಗ ನಮ್ಮ ಸರ್ಕಾರದ ಮೇಲೆ ಒಂದು ಹೊರೆಯನ್ನು ಹೊರಿಸಿ ಹೋಗಿದ್ದಾರೆ. ಸುಮಾರು ೮೦ ಸಾವಿರ ಅಪ್ಲಿಕೇಷನ್‌ಗಳು ಇವತ್ತು ಬಿ. ಡಿ. ಎ.ನಲ್ಲಿ ಸೈಟ್‌ಗಾಗಿ ಹಾಗೆಯೇ ಉಳಿದಿವೆ. ಮತ್ತೆ ಪರಿಶಿಷ್ಟ ಜಾತಿ ಹಾಗೂ ವರ್ಗದವರದ್ದೂ ೧೫ ಸಾವಿರ ಅಪ್ಲಿಕೇಷನ್ಸ್ ಅಲ್ಲಿ ಉಳಿದಿವೆ. ನಮ್ಮ ಸರ್ಕಾರ ಬೆಂಗಳೂರು ನಗರದ ಜನರಿಗೆ ಈಗ ಸೈಟುಗಳನ್ನು ಕೊಡಬೇಕಾಗಿದೆ. ಹಿಂದಿನವರು ಏನೋ ತಪ್ಪು ಮಾಡಿ ಹೋಗಿದ್ದಾರೆ. ಆದರೆ ನಮ್ಮ ಸರ್ಕಾರ ಅದನ್ನು ಸರಿಪಡಿಸಬೇಕಾಗಿದೆ. ಬೆಂಗಳೂರಿನ ಜನರಿಗೆ ಸೈಟ್‌ಗಳನ್ನು ಹಂಚುವ ದೃಷ್ಟಿಯಲ್ಲಿ ತಾವು ಏನು ಈಗಾಗಲೇ ತಮ್ಮ ಇಲಾಖೆಯ ಪುಸ್ತಕದಲ್ಲಿ ಹೇಳಿದ್ದೀರಿ, ಅದನ್ನು ನಾನು ಓದಿದಾಗ, ಕೆಲವು ಜಾಗಗಳನ್ನು ತಾವು ಏನು ಅಕ್ವೈರ್ ಮಾಡಿದ್ದೀರೋ ಅದರ ಕೆಲಸವನ್ನು ಮತ್ತು ಲೇಔಟ್‌ನ್ನು ಆದಷ್ಟು ಜಾಗ್ರತೆ ಮಾಡಿ ಬೆಂಗಳೂರು ನಗರದಲ್ಲಿ ಸೈಟ್ ಸಿಗುತ್ತದೆ ಎಂಬ ಆಶೋತ್ತರವನ್ನು ಜನರು ಇಟ್ಟುಕೊಂಡಿದ್ದಾರೋ ಅದನ್ನು ನಮ್ಮ ಸರ್ಕಾರ ಪೂರ್ತಿ ಮಾಡುತ್ತದೆಂದು ನಾನು ನಂಬಿದ್ದೇನೆ. ನಾನು ಆಕ್ಟ್ರಾಯ್ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಆಕ್ಟ್ರಾಯನ್ನು ತಾವು ಅಳವಡಿಸಿದ್ದರೆ ಬಹಳ ದೊಡ್ಡ ದುರಂತವಾಗುತಿತ್ತು. ಆದಕ್ಕೇ ನಮ್ಮ ಸರ್ಕಾರ ಅದನ್ನು ಮುಂದಕ್ಕೆ ತೆಗೆದುಕೊಂಡಿದೆ. ಏಕೆಂದರೆ ಇದರಲ್ಲಿ ಕರಪ್ಷನ್ ಜಾಸ್ತಿ ಆಗುತ್ತಾ ಇತ್ತು. ಮತ್ತು ನಾವು ಏನು ೧೫೭ ಕೋಟಿ ರೂಪಾಯಿಗಳನ್ನು ನಿರೀಕ್ಷೆ ಮಾಡುತ್ತಿದ್ದೆವು ಅದರಲ್ಲಿ ಸಿಬ್ಬಂದಿವರ್ಗಕ್ಕೆ ಸುಮಾರು ೪೭ ಕೋಟಿ ರೂಪಾಯಿಗಳನ್ನು ನಾವು ಅದಕ್ಕೋಸ್ಕರವಾಗಿ ಖರ್ಚುಮಾಡಬೇಕಾಗಿತ್ತು. ಈಗ ಏನು ಡೈರೆಕ್ಟ್ ಟ್ಯಾಕ್ಸ್, ಎಂಟ್ರಿ ಟ್ಯಾಕ್ಸನ್ನು ಸರ್ಕಾರ ಇಟ್ಟಿದೆ ಅದು ನಿಜವಾಗಿಯೂ ಸರ್ಕಾರದ ಒಂದು ಒಳ್ಳೆಯ

ಕೆಲಸ. ಆದರೆ ಇದರಲ್ಲಿ ೫ ಪರ್ಸೆಂಟ್ ಏನು ಹಾಕುತ್ತೀರಿ ಅದು ಬಡವರ ಮೇಲೆ ಬೀಳಬಾರದು. ಯಾರು ಬೇರೆ ರಾಜ್ಯಗಳಿಂದ ನಮ್ಮ ರಾಜ್ಯದ ಒಳಕ್ಕೆ ಬರುತ್ತಾರೋ ಅಂತಹವರ ಹತ್ತಿರ ಟ್ಯಾಕ್ಸ್ ಪಡೆದು ಕೊಳ್ಳಬೇಕೆಂದೂ ಹೇಳುತ್ತಾ ನಮ್ಮ ರೈತರು ಏನಿದ್ದಾರೆ ಅಂತಹವರ ಮೇಲೆ ಆದಷ್ಟು ಕಡಿಮೆ ಎಂಟ್ರಿ ಟ್ಯಾಕ್ಸ್ ಇಟ್ಟಲ್ಲಿ ನಮ್ಮ ಜನರ ಮೇಲೆ ಟ್ಯಾಕ್ಸ್ ಕಡಿಮೆ ಬೀಳುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಮತ್ತು ಈಗಾಗಲೇ ಕಾವೇರಿ ಒನೇ ಹಂತದ ಬಗ್ಗೆ ಮಾನ್ಯ ಮಂತ್ರಿಗಳು ಯಾರೋ ಮಧ್ಯದಲ್ಲಿ ಪ್ರಶ್ನೆ ಕೇಳಿದಾಗ ಮಧ್ಯೆ ಪ್ರವೇಶ ಮಾಡಿ ಉತ್ತರವನ್ನು ಕೊಟ್ಟಿದ್ದಾರೆ. ಅದು ಜೂನ್ ತಿಂಗಳೊಳಗೆ ಪೂರ್ತಿಯಾಗುತ್ತದೆಂದು ಹೇಳಿದ್ದಾರೆ. ಈಗಾಗಲೇ ೧೭೧ಕೋಟಿ ೫೫ ಲಕ್ಷ ರೂಪಾಯಿಗಳನ್ನು ನಾವು ಅದಕ್ಕಾಗಿ ಖರ್ಚು ಮಾಡಿದ್ದೇವೆ. ಇನ್ನು ಸುಮಾರು ೭೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಆ ಹಣ ತಮ್ಮಲ್ಲಿ ಇವೆಯೇ? ಅಥವಾ ವಿಶ್ವ ಬ್ಯಾಂಕಿನ ನೆರವು ಪಡೆದಿದ್ದೀರಾ? ಹೋದ ಸಲದ ಬಜೆಟ್ ಪುಸ್ತಕವನ್ನು ನೋಡಿದಾಗ ೧೪೦ ಕೋಟಿ ರೂಪಾಯಿಗಳನ್ನು ವಿಶ್ವಬ್ಯಾಂಕಿನಿಂದ ಪಡೆದು ಬೆಂಗಳೂರು ಮಹಾನಗರಕ್ಕೆ ಉಪಯೋಗಿಸುತ್ತೇವೆಂದು ಹೇಳಿದ್ದೀರಿ. ತಾವು ವಿಶ್ವ ಬ್ಯಾಂಕಿನ ನೆರವು ಪಡೆದು ೭೦ ಕೋಟಿ ರೂಪಾಯಿಗಳನ್ನು ಬೆಂಗಳೂರಿನ ಜನರಿಗೆ ಕುಡಿಯುವ ನೀರನ್ನು ಒದಗಿಸಲು ಖರ್ಚು ಮಾಡುತ್ತೀರಾ? ಬೆಂಗಳೂರು ನಗರದ ನಿವಾಸಿಗಳಿಗೆ ಕಾವೇರಿ ಮೂರನೆಯ ಹಂತದ ನೀರನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಇನ್ನು ಆಹಾರ ಇಲಾಖೆಯ ಬಗ್ಗೆ ಮಾತುವುದಾದರೆ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಸೀಮೆ ಎಣ್ಣೆ ಹಂಚಿಕೆಯಲ್ಲಿ ಏನಾಗುತ್ತಿದೆ ಅಂದರೆ ಒಂದೇ ಅಂಗಡಿಗೆ ೧೫೦೦ ಕಾರ್ಡುಗಳನ್ನು ಕೊಟ್ಟಿರುವುದರಿಂದ ಬೆಂಗಳೂರು ನಗರದ ಹೆಣ್ಣು ಮಕ್ಕಳು ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಅವರ ಕೆಲಸ ಕಾರ್ಯಗಳನ್ನು ಬಿಟ್ಟು ಬಂದು ಕ್ಯೂ ನಿಂತುಕೊಳ್ಳುತ್ತಾರೆ. ಕಾರ್ಡುಗಳನ್ನು ಆದಷ್ಟು ಡಿವೈಡ್ ಮಾಡಿದರೆ ಅವರ ಕೆಲಸವನ್ನು ಅವರು ಮಾಡಿಕೊಳ್ಳಬಹುದು. ಇದನ್ನು ತಾವು ಗಮನದಲ್ಲಿಟ್ಟು ಆದಷ್ಟು ಬೇಗ ಅದನ್ನು ಸಾಲ್ವ್ ಮಾಡಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಗ್ರೀನ್ ಕಾರ್ಡ್‌ಗಳನ್ನು ತಾವೇನು ಕೊಟ್ಟಿದ್ದೀರಿ ಅದನ್ನು ಕೊಡುವಾಗ ಲಂಚ ತೆಗೆದುಕೊಂಡು ಕೊಟ್ಟಿದ್ದಾರೆ. ಒಂದು ಕಾರ್ಡಿಗೆ ೭೦೦-೪೦೦ ರೂಪಾಯಿಗಳನ್ನು ತೆಗೆದುಕೊಂಡು ಕೊಟ್ಟಿದ್ದಾರೆ. ಲಂಚದ ಹಾವಳಿಯನ್ನು ತಪ್ಪಿಸಬೇಕಾದರೆ ಎಂ. ಎಲ್. ಎ.ಗಳ ಛೇರ್ಮನ್‌ಶಿಪ್‌ನಲ್ಲಿ ನಗರ ಸಭಾ ಸದಸ್ಯರು ಇತರ ಗಣ್ಯರ ಒಂದು ಸಮಿತಿಯನ್ನು ಮಾಡಿ ಒಂದೇ ಕ್ಯಾಂಪಿನಲ್ಲಿ ಕಾರ್ಡುಗಳನ್ನು ಕೊಡುವ ವ್ಯವಸ್ಥೆ ಮಾಡಿದರೆ ಲಂಚ ನಿಲ್ಲುತ್ತದೆ. ಈಗ ಏಜೆಂಟ್‌ಗಳು ಸೇರಿಕೊಂಡು ಬಡವರ ರಕ್ತವನ್ನು ಹೀರುತ್ತಿದ್ದಾರೆ. ಇದನ್ನು ಯಾವ ರೀತಿ ತಡೆಗಟ್ಟುತ್ತೀರಿ ಎಂಬುದನ್ನು ತಿಳಿಸಬೇಕು. ನಾನು ಎರಡು ಮಾತುಗಳನ್ನು ಆಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್, ಜೈ ಕರ್ನಾಟಕ.

ಶ್ರೀ ಎಸ್. ಷಫಿ ಅಹ್ಮದ್ (ತುಮಕೂರು):- ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತು ಕರ್ನಾಟಕ ರಾಜ್ಯದ ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್, ಫುಡ್ ಅಂಡ್ ಸಿವಿಲ್ ಸಪ್ಲೈ ಮತ್ತು ಯುವಜನ ಸೇವೆ ಸಚಿವರುಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಒಪ್ಪುತ್ತಾ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ನಮ್ಮ ನಾಯಕರಾದ ಶ್ರೀಮಾನ್ ಎಸ್. ಬಂಗಾರಪ್ಪನವರ ನೇತೃತ್ವದಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ

ಮನೆ ನಿವೇಶನಗಳ ಹಕ್ಕುಪತ್ರಗಳನ್ನು ವಿತರಣೆ ಮಾಡುವುದು ಮತ್ತು ಮನೆಗಳನ್ನು ಕಟ್ಟುವುದಕ್ಕಾಗಿ ೩೨.೫೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆಶ್ರಯ ಯೋಜನೆಯ ಬಗ್ಗೆ ನನ್ನ ಎರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ತಾವು ಒಂದು ಎಂ. ಎಲ್. ಎ. ಕ್ಷೇತ್ರಕ್ಕೆ ಒಂದು ಸಾವಿರ ಮನೆ ಮತ್ತು ಒಂದು ಸಾವಿರ ಸೈಟುಗಳನ್ನು ಕೊಡಬೇಕೆಂದು ಆದೇಶ ಕೊಟ್ಟಿದ್ದೀರಿ. ಅರ್ಬನ್ ಏರಿಯಾಗಳಲ್ಲಿ ಬಹಳ ಮಟ್ಟಿಗೆ ಬಡವರು ಇದ್ದಾರೆ. ಅಲ್ಲಿ ಸಾವಿರ ಮನೆಗಳು ಸಾಕಾಗುವುದಿಲ್ಲ. ತಾವು ಬೆಂಗಳೂರು ನಗರಕ್ಕೆ ೧೭೦೦ ಮನೆಗಳನ್ನು ಕೊಟ್ಟಿದ್ದೀರಿ. ಅದೇ ರೀತಿ ೧೭೦೦ ಮನೆಗಳನ್ನು ಅರ್ಬನ್ ಏರಿಯಾಗಳಲ್ಲಿ, ವಿಧಾನಸಭಾ ಕ್ಷೇತ್ರಗಳಿಗೆ ಕೊಟ್ಟರೆ ಬಹಳ ಸೂಕ್ತ. ಜಮೀನು ಪರ್ಚೇಸ್ ಮಾಡುವ ಬಗ್ಗೆ ತಾವು ಒಂದು ಆದೇಶವನ್ನು ಹೊರಡಿಸಿದ್ದೀರಿ. ನಾವು ಡೆಪ್ಯುಟಿ ಕಮೀಷನರ್ ಅವರಿಗೆ ಬರೆದು, ಅವರಿಂದ ೧೫ ದಿವಸ ಕಾದು, ಜಮೀನನ್ನು ಏನು ರೇಟ್ ಫಿಕ್ಸ್ ಮಾಡಿರುತ್ತೇವೋ, ಆ ಹಣ ಪಡೆದುಕೊಳ್ಳಬೇಕು ಅಂತ ಇದೆ. ಆದರೆ ಇವತ್ತು ದಿನಗಟ್ಟಲೆ ಕಾದರೂ ಅವರ ಕಡೆಯಿಂದ ಉತ್ತರ ಸಿಗುತ್ತಿಲ್ಲ. ಆದ್ದರಿಂದ ಶಾಸಕರಿಗೇ ಈ ಲ್ಯಾಂಡ್ ಪರ್ಚೇಸ್ ಮಾಡುವ ಅಧಿಕಾರ ಕೊಟ್ಟರೆ ಒಳ್ಳೆಯದು. ಇದಕ್ಕೆ ಒಂದು ಕಮಿಟಿ ಇರುತ್ತದೆ. ಅವರು ಸಹ ಮೆಂಬರ್ಸ್ ಇರುತ್ತಾರೆ. ಅಲ್ಲೇ ಡಿಸೈಡ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ತುಮಕೂರು ಅರ್ಬನ್ ಏರಿಯಾದಲ್ಲಿ ನಾವು ಸಹ ಜಮೀನು ಪರ್ಚೇಸ್ ಮಾಡಿದ್ದೇವೆ. ಆದರೆ ಸರ್ಕಾರದಿಂದ ಇವತ್ತಿನವರೆಗೂ ಹಣ ಒದಗಿಸಿಲ್ಲ. ಆದ್ದರಿಂದ ತಾವು ಇವತ್ತೇ ಆದೇಶವನ್ನು ಹೊರಡಿಸಿ ಇದರಲ್ಲಿ ಹಣ ಒದಗಿಸಿಕೊಡಬೇಕು. ಅದೇ ರೀತಿ ಈ ವರ್ಷ ಅಂಬೇಡ್ಕರ್ ಬರ್ತ್ ಸೆಂಟಿನರಿ ಈಯರ್. ಇದರಲ್ಲಿ ಎಲ್ಲಾ ಕಡೆ ನೂರು ನೂರು ಮನೆಗಳನ್ನು ಮಾತ್ರ ಕೊಟ್ಟಿದ್ದೀರಿ. ಇದು ಸಾಲುವುದಿಲ್ಲ. ಎಲ್ಲಾ ಕಾಲೋನಿಗಳು ಹೆಚ್ಚಾಗಿ ಬಡವರು ವಾಸ ಮಾಡುವ ಜಾಗ. ಆದ್ದರಿಂದ ಕನಿಷ್ಟ ಪಕ್ಷ ಐದುನೂರಾದರೂ ಕೊಟ್ಟರೆ ಬಹಳ ಸೂಕ್ತವಾಗುತ್ತದೆ. ಮತ್ತೆ ಅಂಬೇಡ್ಕರ್ ಸೆಂಟಿನರಿ ಈಯರನ್ನು ಎಲ್ಲಾ ಕಡೆ ಆಚರಿಸುತ್ತಿದ್ದಾರೆ. ಕಳೆದ ವರ್ಷ ಬಜೆಟ್‌ನಲ್ಲಿ ಈ ಅಂಬೇಡ್ಕರ್ ಭವನ ಕಟ್ಟುವುದಕ್ಕೆ ಒಂದು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಇವತ್ತಿನ ತನಕ ಅಂಬೇಡ್ಕರ್ ಭವನ ಎಲ್ಲಿಯೂ ಬರಲಿಲ್ಲ. ಆದ್ದರಿಂದ ಬಾಬಾಸಾಹೇಬ್ ಅಂಬೇಡ್ಕರ್ ಭವನಗಳನ್ನು ಅತಿ ಮುಖ್ಯವಾಗಿ ಮಾಡುವುದಕ್ಕೆ ಆದೇಶ ಕೊಡಬೇಕು. ಇದಕ್ಕೆ ಪ್ರತ್ಯೇಕವಾದ ಫಂಡ್ಸನ್ನು ಕ್ರಿಯೇಟ್ ಮಾಡಿ ಕೊಡಬೇಕೆಂದು ಹೇಳುತ್ತೇನೆ. ತುಮಕೂರು ನಗರಕ್ಕೆ ಕುಡಿಯುವ ನೀರಿಗೆ ತಾವು ಹನ್ನೆರಡೂವರೆ ಕೋಟಿ ಮಂಜೂರು ಮಾಡಿಕೊಟ್ಟಿರುವುದರಿಂದ ಅಲ್ಲಿ ಕೆಲಸ ನಡೆಯುತ್ತಿದೆ. ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದೇ ರೀತಿ ಕುಡಿಯುವ ನೀರು ಯೋಜನೆಯಡಿಯಲ್ಲಿ ಏನು ಕಾರ್ಯಕ್ರಮ ನಡೆಯುತ್ತಿದೆ ಅದರಡಿಯಲ್ಲಿ ಏಕಕಾಲಕ್ಕೆ ಪೈಪ್‌ವಾಟರ್ ಸ್ಟೋರೇಜ್ ಟ್ಯಾಂಕ್ಸನ್ನು ಕೂಡ ತೆಗೆದುಕೊಂಡರೆ ಒಳ್ಳೆಯದು. ಹಾಗೆಯೇ ಅಂಡರ್‌ಗ್ರೌಂಡ್ ಡ್ರೈನೇಜ್ ಅಷ್ಟೇ ಮುಖ್ಯವಾದದ್ದು. ಕನಿಷ್ಟ ಪಕ್ಷ ಬರುವ ವರ್ಷವಾದರೂ ತಾವು, ಈಗ ತುಮಕೂರು ನಗರಕ್ಕೆ ಇದ್ದ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿದ್ದೀರಿ. ಹಾಗೆಯೇ ಈ ಅಂಡರ್‌ಗ್ರೌಂಡ್ ಡ್ರೈನೇಜ್ ಸಮಸ್ಯೆಯನ್ನು ಸಹ ತಾವು ತೆಗೆದುಕೊಳ್ಳಬೇಕು. ಈ ಬೀಡಿ ವರ್ಕರ್ಸ್ ಕಾಲೋನಿ ಬಗ್ಗೆ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಹತ್ತು ಸಾವಿರಕ್ಕಿಂತ ಜಾಸ್ತಿ ಇದ್ದಾರೆ. ಎಕ್ಸಿಕ್ಯೂಟೀವ್ ಆಗಿ ಆಶ್ರಯ ಯೋಜನೆಯಡಿಯಲ್ಲಿ ಇದನ್ನು ತೆಗೆದುಕೊಂಡರೆ ಸೂಕ್ತವಾಗುತ್ತದೆ. ಈ ಬೀಡಿ ಕಾರ್ಮಿಕರು ಏನಿದ್ದಾರೆ, ಅವರು ಕಡು ಬಡವರು. ಅವರಿಗೆ ಒಂದು ಅವಕಾಶವನ್ನು ಒದಗಿಸಿಕೊಡಬೇಕು. ಇವತ್ತು ತುಮಕೂರು ನಗರದಲ್ಲಿ ಎರಡು

ಲಕ್ಷಕ್ಕಿಂತ ಜಾಸ್ತಿ ಅವರ ಜನಸಂಖ್ಯೆ ಇದೆ. ಈಗ ಶಿವಮೊಗ್ಗ ಮತ್ತು ಭದ್ರಾವತಿ ಸೇರಿಸಿ ಒಂದು ಕಾರ್ಪೋರೇಷನ್ ಮಾಡಿದ್ದೀರಿ. ಕಳೆದ ಸದನದಲ್ಲಿ ತಾವು ಒಂದು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಇವತ್ತು ತುಮಕೂರು ಕಾರ್ಪೋರೇಷನ್ ಎಂದು ತಾವು ಮಾಡಿಕೊಟ್ಟರೆ ಅಲ್ಲಿನ ಜನರಿಗೆ ಒಳ್ಳೆಯದಾಗುತ್ತದೆ. ಅದೇ ರೀತಿ ಇವತ್ತು ಅನ್ ಆಥರೈಸ್ಡ್ ಕನ್ಸ್ಟ್ರಕ್ಷನ್ಸ್ ಬಗ್ಗೆ ಹಲವಾರು ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಕಳೆದ ಬಜೆಟ್‌ನಲ್ಲಿ ತಾವು ಅಶ್ವಾಸನೆಯನ್ನು ಕೊಟ್ಟಿದ್ದೀರಿ. ಆದರೆ ಒಂದು ವರ್ಷವಾದರೂ ಸಹ ಅನ್ ಆಥರೈಸ್ಡ್ ಕನ್ಸ್ಟ್ರಕ್ಷನ್ ರೆಗ್ಯೂಲರೈಸೇಶನ್ ಆಗಿಲ್ಲ. ಕಳೆದ ಸಲ ಪ್ರಶ್ನೆ ಕೇಳಿದಾಗ ಇದಕ್ಕೆ ಒಂದು ಕಮಿಟಿ ರಚಿಸಿದ್ದೇವೆ, ಅತಿ ಶೀಘ್ರವಾಗಿ ಮಾಡಿಕೊಡುತ್ತೇವೆ ಎಂದು ಹೇಳಿದ್ದೀರಿ; ಆದರೆ ಇದುವರೆಗೂ ಅದು ಆಗಿಲ್ಲ. ಎಲ್ಲಾ ನಗರಸಭೆಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ಆದರೆ ಅಲ್ಲಿ ಅವರ ಕಡೆಯಿಂದ ಯಾವುದೇ ವಿಧವಾದ ಟ್ಯಾಕ್ಸ್ ಆಗಲಿ, ತೆಗೆದುಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ದಯವಿಟ್ಟು ಒಂದು ತಿಂಗಳೊಳಗೆ ಇವುಗಳಿಗೆ ಅನುಕೂಲ ಮಾಡಿಕೊಟ್ಟರೆ ಈ ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿ ಸುಧಾರಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಎಂಟ್ರಿ ಟ್ಯಾಕ್ಸ್ ಹಾಕಿ ಮುನಿಸಿಪಾಲಿಟಿ ಲಿಮಿಟ್ ಬರುವ ವ್ಯಾಪ್ತಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದನ್ನು ನಗರದ ಸುತ್ತ ಮುತ್ತ ಕನಿಷ್ಟ ಪಕ್ಷ ಹತ್ತು ಕಿಲೋಮೀಟರ್ ವ್ಯಾಪ್ತಿವರೆಗೆ ಎಕ್ಸಟೆಂಡ್ ಮಾಡಿದರೆ ಬಹಳ ಒಳ್ಳೆಯದು. ಏಕೆಂದರೆ ಈ ವ್ಯಾಪ್ತಿಯೊಳಗೆ ಬರುವವರು ಮಾತ್ರ ಟ್ಯಾಕ್ಸ್ ಕೊಡಬೇಕಾಗುತ್ತದೆ. ಔಟ್‌ಸೈಡ್ ಲಿಮಿಟ್ಸ್ ಇರುವವರನ್ನು, ಏಕೆಂದರೆ ಹೆಚ್ಚಿಗೆ ಇಂಡಸ್ಟ್ರಿಯಲ್ ಏರಿಯಾ ಸಾಮಾನ್ಯವಾಗಿ ಔಟ್‌ಸೈಡ್ ಸಿಟಿ ಲಿಮಿಟ್ಸ್‌ನಲ್ಲಿ ಇರುತ್ತದೆ. ಅವರಿಗೂ ಸಹ ಅನ್ವಯಿಸುವಂತೆ ನಾವು ಕನಿಷ್ಟ ಪಕ್ಷ ೧೫ ಕಿಲೋಮೀಟರ್ ರೇಂಜ್ ಫಿಕ್ಸ್ ಮಾಡಿದರೆ ಹೆಚ್ಚಿನ ವರಮಾನ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳುತ್ತೀರಿ ಎಂದು ನಾನು ನಂಬಿದ್ದೇನೆ. ಇನ್ನು ಎಲ್ಲಾ ಮುನಿಸಿಪಾಲಿಟಿಗಳು ಎಕ್ಸಟೆಂಡ್ ಆಗುತ್ತಿದ್ದಹಾಗೆ ಸ್ವೀಪರ್ಸ್ ಕೊರತೆ ಇದೆ. ಏಕನಾಮಿ ಮೆಶರ್‌ನಿಂದ ಈ ಸೌಲಭ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ. ನಮ್ಮ ತುಮಕೂರು ಮುನಿಸಿಪಾಲಿಟಿಯನ್ನೇ ಉದಾಹರಣೆಗಾಗಿ ಹೇಳುವುದಾದರೆ, ಸುಮಾರು ೨೦೦ ಜನಕ್ಕಿಂತ ಹೆಚ್ಚಿನ ಸ್ವೀಪರ್ಸ್ ಬೇಕು. ಮೊನ್ನೆತಾನೆ ಮುನಿಸಿಪಾಲಿಟಿಯಲ್ಲಿ ನಿರ್ಣಯ ಮಾಡಿ ಕಳುಹಿಸಿದ್ದರೂ ಸಹ ಇವತ್ತಿನವರೆಗೂ ಏಕಾನಮಿ ಮೆಶರ್ಸ್‌ನಿಂದ ಪರ್ಮಿಷನ್ ಸಿಕ್ಕಿಲ್ಲ. ಇದನ್ನೂ ಸಹ ತಾವು ಒದಗಿಸಿಕೊಡಬೇಕು. ಇನ್ನೊಂದು ಮುಖ್ಯವಾದ ವಿಚಾರ. ಈ ಮುನಿಸಿಪಾಲಿಟಿ ಬಗ್ಗೆ ಒದಗಿಸುವ ೧೮ ಪರ್ಸೆಂಟ್ ಹಣವನ್ನು ಸರಿಯಾದ ರೀತಿಯಲ್ಲಿ ಯಾವ ಮುನಿಸಿಪಾಲಿಟಿಯೂ ಉಪಯೋಗಿಸಿಲ್ಲ. ತಮ್ಮ ಈ ಒಂದು ರಿಪೋರ್ಟ್‌ನಲ್ಲಿ ನೋಡಿದಾಗ, ೧೮ ಪರ್ಸೆಂಟ್ ಹಣ ಯಾವ ಮುನಿಸಿಪಾಲಿಟಿಯಲ್ಲೂ ಇವತ್ತಿನವರೆಗೆ ಉಪಯೋಗಿಸಿಲ್ಲ. ಆದುದರಿಂದ ತಾವು ಆದೇಶವನ್ನು ಕೊಟ್ಟು ಈ ೧೮ ಪರ್ಸೆಂಟ್ ಹಣ ಏನಿದೆ, ಬಡವರಿಗೆ ಸಿಗಬೇಕಾದ ಹಣ, ಇದನ್ನು ಒದಗಿಸಿಕೊಡುವುದಕ್ಕೆ ಆದೇಶವನ್ನು ಕೊಡಬೇಕು. ಇವತ್ತು ಅಲ್ಲಿನ ಮಕ್ಕಳು, ಬಡ ಮಕ್ಕಳಿಗೆ ಸ್ಕಾಲರ್‌ಷಿಪ್ಸ್ ಮತ್ತು ಇತರೆ ಸೌಲಭ್ಯವನ್ನು ಕೊಡುವುದಕ್ಕೆ ಬಹಳ ಅನುಕೂಲವಾಗುತ್ತದೆ. ಇನ್ನು ಜಿ. ಆರ್. ವಿ. ಹಣದ ಬಗ್ಗೆ ಹೇಳುವುದಾದರೆ, ಈ ಜಿ. ಆರ್. ವಿ. ಹಣ ನೇರವಾಗಿ ಕಮೀಷನರ್ ಅವರಿಗೆ ಚಾಯಿಸ್ ಕೊಡಬೇಕು. ಅಲ್ಲಿ ಏನು ತೊಂದರೆಯಾಗುತ್ತಿದೆ ಎಂದರೆ, ಸಬ್ಸಿಡಿ ಕೊಟ್ಟರೂ ಸಹ ಬ್ಯಾಂಕ್‌ನವರು ಇವರ ಜೊತೆ ಸಹಕಾರ ಮಾಡುತ್ತಾ ಇಲ್ಲ. ತಾವು ಒಂದು ಆದೇಶವನ್ನು ಕೊಡಬೇಕು, ಈ ಜಿ.

ಆರ್. ವಿ. ಹಣ ಸರಿಯಾದ ರೀತಿಯಾದ ರೀತಿಯಲ್ಲಿ ವಿತರಣೆ ಆಗುವ ಬಗ್ಗೆ ತಾವು ಆದೇಶವನ್ನು ಕೊಡಬೇಕು. ಇವತ್ತು ಸ್ಲಮ್ ಬೋರ್ಡಿಗೆ ೧೫೦ ಲಕ್ಷ ಮಾತ್ರ ಪ್ರೊವೈಡ್ ಮಾಡಿದ್ದೀರಿ. ಇದರ ವ್ಯಾಪ್ತಿ ಇಡೀ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿ ಬರುತ್ತದೆ. ಆದುದರಿಂದ, ನಡೆಸಿದರೆ ಸರಿಯಾಗಿ ನಡೆಸಬೇಕು; ಇಲ್ಲದೇ ಹೋದರೆ ಮುನಿಸಿಪಾಲಿಟಿಯವರಿಗೆ ಹ್ಯಾಂಡ್ ಓವರ್ ಮಾಡಿದರೆ ಒಳ್ಳೆಯದು. ಇವತ್ತು ೧೫೦ ಲಕ್ಷ ಯಾವುದಕ್ಕೂ ಸಾಕಾಗುವುದಿಲ್ಲ. ಇವತ್ತು ಸ್ಲಮ್ ಬೋರ್ಡಿನವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕನಿಷ್ಟ ಪಕ್ಷ ಇನ್ನೂ ೧೦೦ ಲಕ್ಷ ಹೆಚ್ಚಿನ ಹಣವನ್ನು ಕೊಡುವುದು ಬಹಳ ಮಟ್ಟಿಗೆ ಸೂಕ್ತ ಎಂದು ನನ್ನ ಸಲಹೆ. ಇವತ್ತು ಸ್ಲಮ್ ಬೋರ್ಡಿನವರು ತುಮಕೂರು ನಗರದಲ್ಲಿ ಇಂದಿರಾ ಕಾಲೋನಿಯಲ್ಲಿ ಹೌಸಿಂಗ್ ಸ್ಕೀಮ್ ಶುರು ಮಾಡಿದ್ದಾರೆ. ಇದನ್ನು ಆದಷ್ಟು ಶೀಘ್ರದಲ್ಲಿ ತೆಗೆದುಕೊಂಡು ಮುಗಿಸಬೇಕು. ಮತ್ತು ಕಳೆದ ಒಂದು ವರ್ಷದಿಂದ ಡೆವಲಪ್‌ಮೆಂಟ್ ಗ್ರಾಂಟ್ಸ್‌ನ್ನು ತುಮಕೂರು ಮುನಿಸಿಪಾಲಿಟಿಗೆ ಕೊಟ್ಟಿಲ್ಲ. ಮಾರ್ಚ್ ತಿಂಗಳಲ್ಲಿ ತಮ್ಮಲ್ಲಿ ಏನು ಹಣ ಉಳಿದಿದೆ, ಅದನ್ನು ಎಲ್ಲಾ ಮುನಿಸಿಪಾಲಿಟಿಗಳಿಗೂ ಡೆವಲಪ್‌ಮೆಂಟ್ ಗ್ರಾಂಟ್ಸ್ ಮೂಲಕ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬಗ್ಗೆ ಹೇಳುವುದಾದರೆ, ತುಮಕೂರು ನಗರದಲ್ಲಿ ರಂಗ ಮಂದಿರವನ್ನು ಸುಮಾರು ೫ ವರ್ಷದಿಂದ, ೫೦ ಲಕ್ಷ ರೂಪಾಯಿಗಳಿಗೂ ಹೆಚ್ಚು ಹಣವನ್ನು ವೆಚ್ಚ ಮಾಡಿ, ಅರ್ಧಕ್ಕೇ ನಿಲ್ಲಿಸಿದ್ದಾರೆ. ಮೊನ್ನೆ ತಾನೆ ನಮ್ಮ ಯುವಜನ ಸೇವಾ ಮಂತ್ರಿಗಳನ್ನು ಕೇಳಿಕೊಂಡಿದ್ದೇನೆ. ಕನಿಷ್ಟ ಪಕ್ಷ ತಾವು ಇನ್ನು ೧೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದರೆ, ಈ ಕೆಲಸವನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಇದೇ ರೀತಿ ತುಮಕೂರಿಗೆ ಯೂತ್ ಸರ್ವೀಸ್ ಹಾಸ್ಟಲ್ ಒಂದನ್ನು, ಕೇಂದ್ರ ಸರ್ಕಾರದಿಂದ ಮಂಜೂರ್ಮಾಡಿದೆ. ಇದಕ್ಕೂ ಸಹ ತಾವು ಹಣವನ್ನು ಕೊಟ್ಟು ಯೂತ್ ಸರ್ವೀಸ್ ಹಾಸ್ಟಲ್ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಇವತ್ತು ಪ್ರತಿಯೊಂದು ಗ್ರಾಮದಲ್ಲೂ, ನಾವು ಎಲ್ಲಿಗೇ ಹೋದರೂ, ನಾಟಕಗಳಿಗೆ ಎಲ್ಲರೂ ನಮ್ಮನ್ನು ಕರೆಯುತ್ತಾರೆ. ಆದರೆ, ಅಲ್ಲಿ ಸೌಲಭ್ಯ ಮಾತ್ರ ಬರೀ ೫೦ ರೂಪಾಯಿ, ನೂರು ರೂಪಾಯಿ ಕೊಡುತ್ತಾರೆ. ಈ ಸೌಲಭ್ಯಧನ ಏನಿದೆ, ಇದನ್ನು ಹೆಚ್ಚುವರಿ ಮಾಡಿ, ಕನಿಷ್ಟ ಪಕ್ಷ ೨೫೦-೫೦೦ ರೂಪಾಯಿಗಳನ್ನು ಮಾಡಿದರೆ ಒಳ್ಳೆಯದು. ಮತ್ತು ತುಮಕೂರು ಸ್ಟೇಡಿಯಂ ಬಗ್ಗೆ ತಾವು ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಯಾಗಿದ್ದಾಗ ಆಶ್ವಾಸನೆ ಕೊಟ್ಟಿದ್ದೀರಿ. ಅದೇ ರೀತಿ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕು. ಇನ್ನು ಇವತ್ತು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಹೆಚ್ಚಿನ ತೊಂದರೆಯಾಗುತ್ತಿರುವುದು ಏಕೆಂದರೆ, ಈ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು ಮತ್ತು ಆಹಾರ ಇಲಾಖೆಯವರಲ್ಲಿ ಸರಿಯಾದ ಸಹಕಾರ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಬೀಳುತ್ತಾರೆ, ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರು, ಫುಡ್ ಕೆಲಸ ಮಾಡುವುದಕ್ಕಾಗುವುದಿಲ್ಲ, ನೇರವಾಗಿ ಅವರ ಕಡೆಯಿಂದಲೇ ಮಾಡಿಸಿಕೊಳ್ಳಿ ಎಂದು ಹೇಳುತ್ತಾರೆ. ಯಾವುದೇ ಒಂದು ಅಸಿಸ್ಟೆಂಟ್ ವಿಚಾರದಲ್ಲಾಗಲೀ, ಕಾರ್ಡ್‌ಗಳನ್ನು ಕೊಡುವ ವಿಚಾರದಲ್ಲಾಗಲೀ, ಇವರು ಸಹಕರಿಸುತ್ತಾ ಇಲ್ಲ. ಇವತ್ತು ರೆವಿನ್ಯೂ ಮತ್ತು ಫುಡ್ ಡಿಪಾರ್ಟ್‌ಮೆಂಟ್ ಸಂಪರ್ಕ ಬಹಳ ಒಳ್ಳೆಯದು, ಇದನ್ನು ಕೋ-ಆರ್ಡಿನೇಟ್ ಮಾಡಿ, ಕಾರ್ಡ್ಸನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಹೊಸ ಕಾರ್ಡ್ಸ್ ಕೊಡುವ ಬಗ್ಗೆ ಏಪ್ರಿಲ್ ತಿಂಗಳಲ್ಲಿ ಕೊಡಿಸುತ್ತೇನೆಂದು ಹೇಳಿದ್ದೀರಿ. ಇವತ್ತು ಪಟ್ಟಣ ಪ್ರದೇಶಗಳಲ್ಲಿ ೫೦ ಪರ್ಸೆಂಟ್‌ಗಿಂತ ಹೆಚ್ಚಿನ ಜನಕ್ಕೆ ಕಾರ್ಡ್ಸ್ ಸಿಕ್ಕಿಲ್ಲ. ಇದನ್ನೂ ತಾವು ಮನಸ್ಸಿನಲ್ಲಿಟ್ಟುಕೊಂಡು,

ಹೆಚ್ಚಿನಮಟ್ಟದಲ್ಲಿ ಕೊಡಿಸಿ ಕೊಡಬೇಕು. ಸ್ಲಮ್ಸ್‌ನಲ್ಲಿರುವವರೂ ವೋಟರ್ಸ್ ಲಿಸ್ಟ್‌ಗೆ ಬರುತ್ತಾರೆ, ಅವರಿಗೆ ಕಾರ್ಡ್ಸ್ ಕೊಡದೇ ಹೋದರೆ, ಅನಾನುಕೂಲವಾಗುತ್ತದೆ. ಇದನ್ನೂ ಸಹ ಮಾಡಿಕೊಡಬೇಕು. ಇನ್ನು ಸೀಮೆಎಣ್ಣೆ ವಿಚಾರದಲ್ಲಿ, ನಮ್ಮ ತುಮಕೂರು ಜಿಲ್ಲೆಗೆ ೧೮೦೦ ಕೆ. ಎಲ್. ಕೊಡುತ್ತಿದ್ದೀರಿ, ಇದು ಸಾಕಾಗುತ್ತಾ ಇಲ್ಲ. ೨೫೦೦ ಕೆ. ಎಲ್. ಡಿಮ್ಯಾಂಡ್ ಇದೆ, ಇಷ್ಟನ್ನು ಒದಗಿಸಿಕೊಡಬೇಕೆಂದು ಕೇಳಿಕೊಂಡು, ತಾವು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

೫.೫೦ ಪಿ. ಎಂ.

ಶ್ರೀ ಎ. ನಾಗರಾಜು (ಮಾಲೂರು):- ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಸಚಿವರು, ಆಹಾರ ಇಲಾಖೆಯ ಸಚಿವರು, ಹಾಗೂ ಯುವಜನ ಸೇವೆ, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರುಗಳು ತಮ್ಮ ಖಾತೆಗೆ ಸಂಬಂಧಿಸಿದ ಬೇಡಿಕೆಗಳನ್ನು, ಈ ಮನೆಯ ಮುಂದೆ ಅನುಮೋದನೆಗಾಗಿ ಏನು ಇಟ್ಟಿದ್ದಾರೆ ಅದನ್ನು ನಾನು ತಾತ್ವಿಕವಾಗಿ ಸ್ವಾಗತಿಸುತ್ತಾ ನನ್ನ ಕೆಲವಾರು ಅನಿಸಿಕೆಗಳನ್ನು ಸರಕಾರಕ್ಕೆ ಮತ್ತು ಸರಕಾರದ ಮುಖಾಂತರ ಈ ರಾಜ್ಯದ ಜನತೆಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಮೊದಲನೆಯದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಏನಿದೆ ಇದು ನಮ್ಮ ರಾಜ್ಯದ ಭವ್ಯ ಸಂಸ್ಕೃತಿಯನ್ನು, ಪರಂಪರೆಯನ್ನು ನಮ್ಮ ಚರಿತ್ರೆಯನ್ನು ಬೇರೆ ರಾಷ್ಟ್ರಗಳಿಗೆ ಮತ್ತು ರಾಜ್ಯಗಳಿಗೆ ಮಾಧ್ಯಮವಾಗಿ ತಿಳಿಸುವಂತಹ ಒಂದು ಇಲಾಖೆ. ಇದರ ಒಂದು ಗಹನತೆಯನ್ನು ವಿಚಾರಧಾರೆಯನ್ನು ತಾವು ಆಲೋಚನೆ ಮಾಡಿದಾಗ ಏನು ಸರಕಾರ ಇದುವರೆಗೆ ಸಾಧಿಸಿದೆ ಅದು ಗಣನೀಯವಾಗಿದ್ದರೂ ಸಹ ಇದಕ್ಕೂ ಹೆಚ್ಚು ಒತ್ತು ಕೊಡುವಂತಹ ಪ್ರಸಂಗ, ನಮ್ಮ ಸಂಸ್ಕೃತಿ ಮತ್ತು ಆಡಳಿತಗಳ ಮೇಲೆ ಬೆಳಕನ್ನು ಚೆಲ್ಲುವಂತಹ ಪ್ರಸಂಗ ನಮ್ಮ ಮುಂದೆ ಇದೆ. ನಮ್ಮ ರಾಷ್ಟ್ರದವರು ಇದುವರೆಗೆ ೨೭ ಜ್ಞಾನಪೀಠ ಪ್ರಶಸ್ತಿಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ನಮ್ಮ ರಾಜ್ಯದ ಐದು ಜನರು ಈ ಪ್ರಶಸ್ತಿಯನ್ನು ಗಳಿಸಿದ್ದಾರೆ. ಈ ಒಂದು ವಿಚಾರಧಾರೆಯನ್ನು ಮೂಲಭೂತವಾಗಿ ಆಲೋಚಿಸಿದಾಗ ಈ ಭಾಷೆಯ ಘನತೆ ಮತ್ತು ಆಳವಾದ ಅಭ್ಯಾಸ ಮಾಡುವಂತಹ ಕವಿಗಳು ಮತ್ತು ಅನೇಕ ಮಹಾಪುರುಷರು ಇಲ್ಲಿದ್ದಾರೆ ಎಂದು ಗೊತ್ತಾಗುತ್ತದೆ. ಕನ್ನಡದ ಬಗ್ಗೆ ಅನೇಕ ಹೋರಾಟಗಾರರು ಇಲ್ಲಿ ಬೆಳೆದು ಬಂದಿದ್ದಾರೆ. ಶಕ್ತಿ ಕೇಂದ್ರವಾಗಲೀ, ಕನ್ನಡ ಹೋರಾಟ ಕೇಂದ್ರವಾಗಲೀ, ಯಾವುದೇ ಆಗಲಿ ಕನ್ನಡದ ಪರಂಪರೆ ಒಂದೆ. ಈ ಒಂದು ಪರಂಪರೆಯನ್ನು ಬೆಳೆಸುವುದಕ್ಕೆ ಅದಕ್ಕೆ ಬೇರೆ ಭಾಷೆಯ ಸ್ಪಂದನ ಬೇಡವೇ ಎಂದು ಇಲ್ಲಿ ಯೋಚನೆ ಮಾಡಬೇಕು. ತಮಗೆಲ್ಲರಿಗೂ ಗೊತ್ತಿದೆ, ಮಾಸ್ತಿ ವೆಂಕಟೇಶ ಅಯ್ಯಂಗಾರರ ಮನೆಯಲ್ಲಿ ಮಾತನಾಡುವುದು ತಮಿಳು ಭಾಷೆ. ಅವರು ಜ್ಞಾನಪೀಠ ಪ್ರಶಸ್ತಿ ಪಡೆದಿದ್ದಾರೆ. ದ. ರಾ. ಬೇಂದ್ರೆಯವರ ಮನೆಯಲ್ಲಿ ಮಾತನಾಡುವುದು ಮರಾಠಿ. ಈ ಎಲ್ಲಾ ವಾಸ್ತವಾಂಶಗಳನ್ನು ನಾವು ಆಲೋಚನೆ ಮಾಡಿದಾಗ ನಮಗೆ ಗೊತ್ತಾಗುತ್ತದೆ, ಇವತ್ತು ಕನ್ನಡಕ್ಕೆ ಬೇರೆ ಭಾಷೆಗಳ ಸ್ಪಂದನ ಬಹಳ ಮುಖ್ಯವಾಗಿದೆ ಎಂದು. ಆದುದರಿಂದ ನಾವು ಕನ್ನಡವನ್ನು ಎಷ್ಟು ಬೆಳೆಸುತ್ತೇವೆ ಅದರ ಜೊತೆಗೆ ಬೇರೆ ಭಾಷೆಗಳಿಗೂ ಇಂಗ್ಲೀಷ್‌ಗೂ ಒತ್ತನ್ನು ಕೊಟ್ಟರೆ ನಮ್ಮ ಸಂಸ್ಕೃತಿ ಬೆಳೆಯುವುದಕ್ಕೆ ಅವಕಾಶವಾಗುತ್ತದೆ ಎಂದು ನನ್ನ ಭಾವನೆ.

ಶ್ರೀ ಬಿ. ಎಂ. ಇದಿನಬ್ಬ:- ಕನ್ನಡ ಈಗ ಸಂಪೂರ್ಣವಾಗಿ ಬಿದ್ದು ಹೋಗಿದೆ. ಕನ್ನಡ ಸಂಪೂರ್ಣ ಶಕ್ತಿ ಇಲ್ಲದ ಹಾಗೆ ಆಗಿದೆ. ಅದನ್ನು ಬೆಳೆಸುವಾಗ ಇನ್ನು ಬೇರೆ ಭಾಷೆಗಳು ಬಂದರ

ಕನ್ನಡ ಉಳಿಯುವುದಿಲ್ಲ.

ಶ್ರೀ ಎ. ನಾಗರಾಜ:- ಬೇರೆ ಭಾಷೆಗಳಿಗೆ ಒತ್ತು ಕೊಟ್ಟರೆ ಕನ್ನಡವೂ ಜೊತೆಯಲ್ಲೇ ಬೆಳೆಯುವುದು ಎಂದು ನನ್ನ ವೈಯಕ್ತಿಕವಾದ ಅನಿಸಿಕೆ.

ಶ್ರೀ ಎಸ್. ರಮೇಶ್ (ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು):- ಮಾನ್ಯ ಇದಿನಬ್ಬನವರು ಏನು ಹೇಳಿದರು ಅದು ಅಕ್ಷರಶಃ ಒಪ್ಪಬೇಕಾದದ್ದೆ. ಇದುವರೆಗೆ ಯಾವ ಮುಖ್ಯ ಮಂತ್ರಿಗಳೂ ಒಂದು ಸಾರಿಯೂ ಕನ್ನಡ ಸಾಹಿತ್ಯ ಪರಿಷತ್ತಿಗೆ ಹೋಗಿರಲಿಲ್ಲ. ನಮ್ಮ ಮುಖ್ಯ ಮಂತ್ರಿ ಶ್ರೀ ಬಂಗಾರಪ್ಪನವರು ಮೊಟ್ಟ ಮೊದಲನೆಯದಾಗಿ ಅಲ್ಲಿಗೆ ಹೋಗಿ ಬಂದರು. ಶ್ರೀಮತಿ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತಂದರು. ಹಿರಿಯ ಸಾಹಿತಿಗಳನ್ನು ಸಾಹಿತ್ಯ ಪರಿಷತ್ತಿನಲ್ಲಿ ಭೇಟಿಯಾಗುವ ಪ್ರಯತ್ನ ನಾವು ಮಾಡಿದ್ದೇವೆ ಎಂಬುದನ್ನು ತಾವು ದಯವಿಟ್ಟು ಮರೆಯಬಾರದು.

ಶ್ರೀ ಎ. ನಾಗರಾಜ್:- ತಾವು ಹೇಳಿದ ಹಾಗೆ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರುವುದು ಸರ್ಕಾರದ ಮುಂದಿದೆ. ಅದನ್ನು ನಿರ್ದಿಷ್ಟವಾದ ವೇಳೆಯಲ್ಲಿ ಜಾರಿಗೆ ತರುತ್ತೀರಾ ಎಂಬುದರ ಬಗ್ಗೆ ತಮ್ಮ ಭಾಷಣದಲ್ಲಿ ಉತ್ತರ ಕೊಡಬೇಕು.

ಶ್ರೀ ಎಸ್. ರಮೇಶ್:- ಈಗಾಗಲೇ ನಾವು ಜಾರಿಗೆ ತಂದಿದ್ದೇವೆ.

ಶ್ರೀ ಎ. ನಾಗರಾಜ:- ಆಮೇಲೆ ಈಗ ಸರ್ಕಾರ ಸುಮಾರು ದಿವಸಗಳಿಂದ ವೃದ್ಧರಿಗೆ ಮಾಶಾಸನ ಕೊಟ್ಟಿಲ್ಲ. ಆ ಮಾಸಾಶನಕ್ಕಾಗಿ ವೃದ್ಧರು ವಿಧಾನ ಸೌಧದಲ್ಲಿ ತಿರುಗಾಡುತ್ತಿದ್ದಾರೆ. ದಯಮಾಡಿ ಇದರ ಬಗ್ಗೆ ತಾವು ಒಂದು ನಿರ್ಣಯ ತೆಗೆದುಕೊಳ್ಳಬೇಕು ಮತ್ತು ಇನ್ನೊಂದು ಇಲ್ಲಿ ನಮ್ಮ ...

ಶ್ರೀ ಎಸ್. ರಮೇಶ್:- ಒಂದು ನಿಮಿಷ. ತಾವು ಏನು ಹೇಳುತ್ತಿದ್ದೀರಿ. ಹೊಸದಾಗಿ ಮಾಸಾಶನಕ್ಕೆ ಹಾಕಿರತಕ್ಕಂಥವರಿಗೆ ಕೊಟ್ಟಿಲ್ಲವೆಂದು ಹೇಳುವುದು ಸರಿ ಎಂದು ಕಾಣುತ್ತದೆ. ಏಕೆಂದರೆ ಈಗಾಗಲೇ ಮಾಸಾಶನ ೩ಲಕ್ಷ೦ ಮಂದಿಗೆ ಕೊಡುತ್ತಿದ್ದೇವೆ. ಕೊಟ್ಟಿಲ್ಲ ಅಂದರೆ ನಿಲ್ಲಿಸಿದ್ದೇವೆಂದು ಬರುತ್ತದೆ. ಹೊಸದಾಗಿ ಕೊಟ್ಟಿಲ್ಲವೆಂದು ಎನ್ನುವ ಬಗ್ಗೆ ಬೇಕಾದರೆ ಹೇಳಿ.

ಶ್ರೀ ಎ. ನಾಗರಾಜ:- ಆಯಿತು, ಇನ್ನೂ ಪುಸ್ತಕ ಏನು ಸಗಟು ಖರೀದಿ ಮಾಡುತ್ತೀರಿ ಅದರ ಬಗ್ಗೆ ಸಹ ಒಂದು ರೂಪರೇಖೆಯನ್ನು ತಾವು ಹಾಕಿಕೊಳ್ಳಬೇಕು. ಮತ್ತೆ ಬಯಲುರಂಗಮಂದಿರಕ್ಕೆ ೫೦ ಸಾವಿರ ರೂಪಾಯಿಗಳನ್ನು ಏನುಕೊಡುತಿದ್ದೀರಿ ಅದನ್ನು ಇನ್ನೂ ಹೆಚ್ಚು ಮಾಡಿ. ಈಗ ಎಸ್. ಆರ್. ರೇಟ್ಸ್ ಎಲ್ಲಾ ಜಾಸ್ತಿಯಾಗಿದೆ. ರಂಗಮಂದಿರಗಳು ಅರ್ಧ ಕಟ್ಟಿ ಉಳಿದಿವೆ ಅದನ್ನು ಹೆಚ್ಚು ಮಾಡಬೇಕು. ಮತ್ತೆ ಇನ್ನು ನಗರಾಭಿವೃದ್ಧಿ ಇಲಾಖೆ ಏನಿದೆ ಅದು ಬಹುಶಃ ಅತಿ ದೊಡ್ಡ ಇಲಾಖೆಗಳಲ್ಲಿ ಒಂದು ಇಲಾಖೆ. ಮುನಿಸಿಪಾಲಿಟಿಗಳಿಗೆ ೧೯೬೪ರಲ್ಲಿ ಒಂದು ಕಾನೂನು ರಾಜ್ಯ ಸರ್ಕಾರ ತಂದು ಆ ಕಾನೂನಿನ ಮೂಲಕ ಆಡಳಿತ ನಡೆಸುತ್ತಿದ್ದಾರೆ. ಆಡಳಿತ ಆಮೂಲಾಗ್ರವಾಗಿ ೧೯೬೪ನೇ ಮುನಿಸಿಪಾಲಿಟಿ ಆಕ್ಟ್‌ಗೆ ತಿದ್ದುಪಡಿ ಮಾಡಬೇಕು. ಹಾಗೆ ತಿದ್ದು ಪಡಿ ಮಾಡುವಾಗ ಅಡ್ಮಿನಿಸ್ಟ್ರೇಷನನ್ನು ನುರಿತ ಶಾಸಕರು ಏನಿದ್ದಾರ ಅವರೆಲ್ಲರನ್ನು ಕರೆಯಿಸಿ ತಾವು ಒಂದು ವಿಚಾರ ಸಂಕೀರ್ಣವನ್ನು ಏರ್ಪಡಿಸಿ ಒಂದು ಎರಡು ಮೂರು ದಿವಸ ನಡೆಸಿ. ಆಗ ಯಾವ ಯಾವ ಲ್ಯಕೂನಾ ಇದೆ ಅದೆಲ್ಲಾ ತಮಗೆ ಗೊತ್ತಾಗುತ್ತದೆ. ಆಮೇಲೆ ಆಶ್ರಯ ಯೋಜನೆ ಬಹಳ ಒಳ್ಳೆಯ ಯೋಜನೆ

ತಂದಿದ್ದೀರಿ. ಇಂತಹ ಯೋಜನೆಗೆ ಬೇರೆ ರಾಜ್ಯದಲ್ಲಿಯೂ ಅಲ್ಲ ಬೇರೆ ರಾಷ್ಟ್ರದಲ್ಲಿಯೂ ಇಲ್ಲ. ಬಡವರಿಗೆ ಇದರ ಮುಖಾಂತರ ಬಹಳಷ್ಟು ಉಪಯೋಗ ಮಾಡಬಹುದು. ತಾವು ಲ್ಯಾಂಡ್ ಅಕ್ವಿಜೇಷನ್ ಒಳ್ಳೆಯ ರೂಲ್ಸ್ ತಂದು ಆದಷ್ಟು ಶೀಘ್ರವಾಗಿ ಸೈಟ್‌ಗಳನ್ನು ಕೊಡುವುದಕ್ಕೆ ಮಾಡಿದ್ದೀರಿ, ಆದರೆ ಮುನಿಸಿಪಾಲಿಟಿಗಳಲ್ಲಿ ಅಬ್ಲಿಗೇಟರಿ ಫಂಕ್ಷನ್ಸ್‌ನಲ್ಲಿ ಇದನ್ನು ಸೇರಿಸಬೇಕು. ದಯಮಾಡಿ ಇದನ್ನು ಸೇರಿಸಿ ಏತಕ್ಕೆಂದರೆ ದುಡ್ಡು ಕೊಡುತ್ತಿದ್ದೀರಿ, ಸರ್ಕಾರದಿಂದ ಕಾನೂನು ವ್ಯವಸ್ಥೆ ಇದೆ. ಕೆಲಸ ಮಾಡದಿದ್ದರೆ ಬಡವರಿಗೆ ಸೈಟು ಹೇಗೆ ಕೊಡುತ್ತೀರಿ ಇದನ್ನು ಅರಿತುಕೊಂಡು ಮುನಿಸಿಪಾಲಿಟಿಗಳಲ್ಲಿ ಡಿಸ್‌ಕ್ರಿಷನರಿ ಪವರ್ಸ್ ಇರುತ್ತದೆ ಮತ್ತು ಅಬ್ಲಿಗೇಟರಿ ಫಂಕ್ಷನ್ಸ್ ಅಂತ ಇರುತ್ತದೆ. ಆದುದರಿಂದ ಇದನ್ನು ಅಬ್ಲಿಗೇಟರಿ ಫಂಕ್ಷನ್ಸ್‌ನಲ್ಲಿ ಸೇರಿಸಿದರೆ ಬಹಳ ಉತ್ತಮ ಎಂದು ಹೇಳಬಯಸುತ್ತೇನೆ. ಇನ್ನೊಂದು ಸಲಹೆ ಇದೆ ನೋಡಿ. ವಾಟರ್ ಸಪ್ಲೈ ಸ್ಯಾಂಕ್ಷನ್ ಮಾಡುವಾಗ ಫಂಡಿಂಗ್ ಪ್ಯಾಟ್ರನ್ ಏನಿದೆ ಆ ಫಂಡಿಗೆ ಪ್ಯಾಟ್ರನ್ ಪ್ರಕಾರ ತಾವು ೨೦ ಸಾವಿರಕ್ಕೂ ಕಡಿಮೆ ಜನಸಂಖ್ಯೆ ಇರುವ ಮುನಿಸಿಪಾಲಿಟಿಗಳಿಗೆ ನೂರು ಪರ್ಸೆಂಟ್ ಅನುದಾನ ಕೊಡುತ್ತೀರಿ. ಪೂರ್ತಿ ಗ್ರ್ಯಾಂಟ್ಸ್ ಕೊಟ್ಟು ವಾಟರ್ ಸಪ್ಲೈ ಮಾಡುತ್ತೀರಿ. ಆದರೆ ಈಗಿನ ಪರಿಸ್ಥಿತಿ ನಮ್ಮ ದೇಶದಲ್ಲಿ ತಮಗೇ ಗೊತ್ತಿದೆ. ಜನಸಂಖ್ಯೆ ಸುಮಾರು ೩೧ ಪರ್ಸೆಂಟ್ ಹೆಚ್ಚಾಗುತ್ತಿದೆ. ಚೈನಾ ದೇಶದಲ್ಲಿ ಅದನ್ನು ೨೧ ಪರ್ಸೆಂಟ್‌ಗೆ ಅವರು ಮಿನಿಮೈಜ್ ಮಾಡಿಕೊಂಡಿದ್ದಾರೆ. ಅವರು ಮಿನಿಮೈಜ್ ಮಾಡಿಕೊಂಡಿರುವುದರಿಂದ ಅಮೇರಿಕಾ ದೇಶದ ಜನಸಂಖ್ಯೆಯನ್ನು ಅವರು ಕಡಿಮೆ ಮಾಡಿಕೊಂಡಿದ್ದಾರೆ. ಇದನ್ನು ನಾವು ಹೀಗೆ ಬಿಡುತ್ತಾ ಹೋದರೆ ೨೦೧೦ -೨೫ನೇ ಇಸವಿಯೊಳಗೆ ಚೈನಾ ದೇಶಕ್ಕಿಂತ ದೊಡ್ಡ ರಾಷ್ಟ್ರ ನಮ್ಮದು ಆಗುತ್ತದೆ, ಜನಸಂಖ್ಯೆಯಲ್ಲಿ. ಈ ಹಿನ್ನೆಲೆಯಲ್ಲಿ ತಾವು ಏನು ೨೦ ಸಾವಿರ ಮತ್ತು ಅದಕ್ಕಿಂತ ಕಡಿಮೆ ಇರುವ ಮುನಿಸಿಪಾಲಿಟಿಗಳಿಗೆ ಅನುದಾನ ನೂರು ಪರ್ಸೆಂಟ್ ಫಂಡಿಂಗ್ ಪ್ಯಾಟ್ರನ್ ಮಾಡಿದ್ದೀರಿ ಇದು ಫೈನಾನ್ಸ್ ಡಿಪಾರ್ಟಮೆಂಟಿಗೆ ಹೋಗುತ್ತದೆ ಅದಕ್ಕೆ ನಾನು ನಿಮ್ಮ ಮುಖಾಂತರ ಆ ಡಿಪಾರ್ಟ್‌ಮೆಂಟ್‌ಗೆ ಹೇಳುತ್ತೇನೆ. ಇದನ್ನು ದಯಮಾಡಿ ೨೦ ಸಾವಿರ ಅಂತ ಏನು ಮಾಡಿದ್ದೀರಿ ಅದನ್ನು ೩೦ ಸಾವಿರಕ್ಕೆ ಮಾಡಿದರೆ ಒಳ್ಳೆಯದು. ೧೯೭೦-೭೧ರಲ್ಲಿ ಮುನಿಸಿಪಾಲಿಟಿಗಳ ಜನಸಂಖ್ಯೆ ೧೦-೧೨ ಸಾವಿರ ಇದ್ದದ್ದು ಈಗ ಅದೇ ೨೫ ಸಾವಿರಕ್ಕೆ ಹೋಗಿವೆ. ಆದ್ದರಿಂದ ಇದನ್ನು ೩೦ ಸಾವಿರ ಮಾಡಿ. ಆಮೇಲೆ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಟ್ರೈ ಕಲರ್ ಕಾರ್ಡ್ ಕೊಡುತ್ತೇವೆಂದು ಹೇಳಿದ್ದಾರೆ. ಬಡವರಿಗೆ ನಿರ್ದಿಷ್ಟವಾಗಿ ಆಹಾರ ಹಂಚಿಕೆ ಪದ್ಧತಿ ತಂದಿದ್ದಾರೆ ಬಹಳ ಸಂತೋಷ. ಈ ಹಿನ್ನೆಲೆಯಲ್ಲಿ ನಾನು ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಈ ಕಾರ್ಡ್‌ಗಳನ್ನು ಹಂಚುವ ಟೈಮ್‌ನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಹಂಚಿದರೆ ಈ ಆಶ್ರಯ ಹೇಗೆ ಸಕ್ಸಸ್ ಆಯಿತೋ ಅದೇ ತರಹ ಇದೂ ಸಕ್ಸಸ್ ಆಗುತ್ತದೆ. ಎಲೆಕ್ಟೆಡ್ ರೆಪ್ರಸೆಂಟೇಟೀವ್ಸ್ ಇಲ್ಲದಿದ್ದರೆ, ಹಿಂದೆ ಯಾವ ರೀತಿ ಹಸಿರು ಕಾರ್ಡ್ ಕೊಡುವಾಗ ಟ್ರಾಕ್ಟರ್ ಓನರ್‌ಗೆ ಹಸಿರು ಕಾರ್ಡ್ ಕೊಟ್ಟಿದ್ದೀರಿ. ಡ್ರೈವರ್‌ಗೆ ಕೆಂಪು ಕಾರ್ಡ್ ಕೊಟ್ಟಿದ್ದೀರಿ. ಆದ್ದರಿಂದ ತಾರತಮ್ಯವನ್ನು ತಪ್ಪಿಸುವುದಕ್ಕಾಗಿ ಶಾಸಕರ ಅಧ್ಯಕ್ಷತೆಯಲ್ಲಿ ಒಂದು ಕಾನ್ಸಟಿಟ್ಯೂಯೆನ್ಸಿಗೆ ಒಂದು ಕಮಿಟಿ ಮಾಡಿ ಎಂದು ನನ್ನ ಒಂದು ಮನವಿ. ಮತ್ತೆ ಈ ಫೇರ್ ಪ್ರೈಸ್ ಡಿಪೋ ಅಲಾಟ್ ಮಾಡುವಾಗ ಒಂದು ತಾರತಮ್ಯ ನಡೆದಿದೆ. ಸನ್ಮಾನ್ಯ ಅಧ್ಯಕ್ಷಣಿಯವರೇ, ಅದೇನೆಂದರೆ, ಈ ಒಂದು ಡಿಪೋಗೆ ಒಂದು ಸಾವಿರ ಕಾರ್ಡ್ ಕೊಡುತ್ತಾರೆ. ಇನ್ನೊಂದು ಡಿಪೋಗೆ ೨೦ ಕಾರ್ಡ್ ಇದೆ. ಮತ್ತೊಂದು ಡಿಪೋನಲ್ಲಿ ೬ ನೂರು ಕಾರ್ಡ್ ಇದೆ. ಇದು ಬಹಳ ತಾರತಮ್ಯವಾಗಿ ಜನಗಳಿಗೆ

ಸರಿಯಾಗಿ ಆಹಾರಧಾನ್ಯ ಸುಗುಮವಾಗಿ ಸಿಗುತ್ತಿಲ್ಲ. ಗರಿಷ್ಠ ಮಿತಿಯಾಗಿ ೪ ನೂರು ಅಥವಾ ೩ ನೂರು ಕಾರ್ಡ್‌ಗಳಿಗೆ ಒಂದು ಡಿಪೋ ಎಂದು ಹೇಳಿ ತಾವು ಆದೇಶ ಕೊಟ್ಟರೆ ಒಳ್ಳೆಯದೆಂದು ಹೇಳಿ ಈ ಬೇಡಿಕೆಗಳ ಮೇಲೆ ನನ್ನದೇ ಆದಂಥ ಅನಿಸಿಕೆಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ಮತ್ತು ಜನತೆಗೆ ಆ ಬೆಳಕು ಚೆಲ್ಲುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ):- ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು ಮತ್ತು ಯುವ ಜನಸೇವಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಸ್ವಾಗತ ಮಾಡುತ್ತಾ ಹಾಗೂ ಬೆಂಬಲಿಸುತ್ತಾ ಕೆಲವು ಸಲಹೆಗಳನ್ನು ನಾನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸದಸ್ಯರುಗಳು ಮಾತನಾಡತಕ್ಕಂಥ ಈ ಸಭೆಯಲ್ಲಿ ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಸಚಿವರಾದಂಥ ಶ್ರೀಮಾನ್ ಜಾರ್ಜ್‌ರವರು ಹಾಗೂ ನಮ್ಮ ನೆಚ್ಚಿನ ಮುಖ್ಯ ಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಸರ್ಕಾರವನ್ನು ವಹಿಸಿಕೊಂಡ ಮೇಲೆ ಕೆಲವು ಒಳ್ಳೆಯ ಯೋಜನೆಗಳನ್ನು ತಂದು ಅದರಲ್ಲೂ ಮುಖ್ಯವಾಗಿ 'ಆಶ್ರಯ' ಯೋಜನೆ ಏನಿದೆ ಇವತ್ತು ಗ್ರಾಮಾಂತರ ಪ್ರದೇಶದಲ್ಲೇ ಅಲ್ಲ ನಗರ ಭಾಗದಲ್ಲೂ ಕೂಡ ಬಡವರು, ದೀನದಲಿತರು, ಹರಿಜನರಿಗೆ ಮನೆಗಳನ್ನು ಕಟ್ಟಿ ಕೊಡಬೇಕು ಹಾಗೂ ಖಾಲಿ ನಿವೇಶನವನ್ನು ಕೊಡಬೇಕು. ಅದಕ್ಕೆ ಸ್ಥಳೀಯ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ, ಜೊತೆಗೆ ಒಂದು ಕಮಿಟಿಯನ್ನು ಮಾಡಿ, ಒಂದು ಇತಿಹಾಸ ಪಡೆದಿರತಕ್ಕಂಥ ಕಾರ್ಯವನ್ನು ಸನ್ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ಸಚಿವರಾದಂತಹ ಶ್ರೀಮಾನ್ ಜಾರ್ಜ್‌ರವರು ಮಾಡಿರತಕ್ಕಂಥಾದ್ದು ಒಂದು ಉತ್ತಮವಾದ ಸೇವೆ ಎಂದು ಹೇಳಿದರೆ ತಪ್ಪಾಗಲಾರದು. ಕರ್ನಾಟಕ ರಾಜ್ಯದ ಜನಕ್ಕೆ ಅದರಲ್ಲೂ ರಾಜಧಾನಿಯಾದ ಬೆಂಗಳೂರಿನಲ್ಲಿ ಸುಮಾರು ೩೦ ಸಾವಿರ ಮನೆಗಳನ್ನು ಕಟ್ಟಿಕೊಡಬೇಕಾಗಿದ್ದರೆ ಅದು ಒಂದು ಸಾಧಾರಣ ಕೆಲಸವಲ್ಲ. ಇಂಥ ಒಂದು ಒಳ್ಳೆಯ ಯೋಜನೆಯನ್ನು ನಮ್ಮ ನೆಚ್ಚಿನ ಮುಖ್ಯ ಮಂತ್ರಿ ಹಾಗೂ ನಗರಾಭಿವೃದ್ಧಿ ಮಂತ್ರಿಯವರು ತಂದಿರುವುದು ಮೆಚ್ಚತಕ್ಕಂಥ ಕೆಲಸ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದು ಒಂದೇ ಅಲ್ಲ. ಮತ್ತು ಈ 'ಆಶ್ರಯ' ಯೋಜನೆ ಏನಿದೆ ಯಾರೂ ಕನಸು ಕಾಣುತ್ತಿರಲಿಲ್ಲ. ಇವತ್ತು ದಿವಂಗತ ದೇವರಾಜ ಅರಸರನ್ನು ನಾವು ನೆನೆಸಿಕೊಳ್ಳಬೇಕಾಗಿರತಕ್ಕಂಥ ಒಂದು ಸಂದರ್ಭ. ದಿವಂಗತ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಯಾಗಿದ್ದಂಥ ಕಾಲದಲ್ಲಿ ಶ್ರೀಮಾನ್ ಬಸವಲಿಂಗಪ್ಪಾಜಿಯವರು ಆವಾಗ ಹೆಚ್. ಯು. ಡಿ. ಮಿನಿಸ್ಟರ್ ಆಗಿದ್ದರು. ಅವರು ಕೂಡ ಈ ಬೆಂಗಳೂರು ನಗರಾಭಿವೃದ್ಧಿ ಮಂಡಳಿ ಇದ್ದಹಾಗೆ ಇಂಥಾ ಯೋಜನೆಯನ್ನು ತಂದು ಬಡವರಿಗೆ, ಹರಿಜನರಿಗೆ ಒಂದು ಒಳ್ಳೆಯ ಅವಕಾಶ ಮಾಡಿಕೊಟ್ಟರು. ದೇವರಾಜ ಅರಸು ಅವರು ಹೋದ ಮೇಲೆ ಈಗಿನ ನಮ್ಮ ಮುಖ್ಯ ಮಂತ್ರಿಗಳೆಂದು ಸಮಾಜವಾದಿ ಮುಖ್ಯ ಮಂತ್ರಿಗಳೆಂದು ಹೇಳಿದರೆ ತಪ್ಪಾಗಲಾರದು. ಶ್ರೀಮಾನ್ ಬಂಗಾರಪ್ಪನವರು ಒಂದು ಒಳ್ಳೆಯ ಯೋಜನೆಯನ್ನು ತಂದರು. ಅದಕ್ಕೆ ನಾವು ಚಿರಋಣಿಯಾಗಿರುತ್ತೇವೆಂದು ಹೇಳಿದರೆ ತಪ್ಪಾಗಲಾರದು. ಮತ್ತೆ ಬೆಂಗಳೂರಿನಲ್ಲಿರತಕ್ಕಂಥ ಈ ನೀರಿನ ಅಥವಾ ಕಾವೇರಿ ೩ನೇ ಹಂತದ ಕೆಲಸ ಇದನ್ನು ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿಯೇ ಪ್ರಾರಂಭ ಬಹುದಾಗಿತ್ತು. ಕಾರಣಾಂತರಗಳಿಂದ ಈ ನಮ್ಮ ನಗರಾಭಿವೃದ್ಧಿ ಸಚಿವರಾದಂಥ ಮಾನ್ಯ ಜಾರ್ಜ್‌ರವರು ನಮಗೆ ಆಶ್ವಾಸನೆಯನ್ನು

ಕೊಟ್ಟಿದ್ದಾರೆ. ಬೆಂಗಳೂರಿನ ಜನತೆಗೆ ನೀರಿನ ತೊಂದರೆ ಇದೆ ಎನ್ನುವುದನ್ನು ಅರಿತು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡು ಜೂನ್ ತಿಂಗಳಲ್ಲಿ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದಾರೆ. ಇದು ಸಂತೋಷಕರವಾದಂಥ ವಿಚಾರವಾಗಿದೆ. ಮತ್ತೊಂದು ವಿಚಾರವನ್ನು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಹೇಳ ಬಯಸುವುದೇನೆಂದರೆ, ಕೊಳವೆಬಾವಿಗಳನ್ನು ನಗರಸಭೆಯವರ ವತಿಯಿಂದ ಜಲಮಂಡಳಿಯವರು ಹಾಕಿದ್ದಾರೆ. ಅದನ್ನು ಬಿಟ್ಟರೆ ನಲ್ಲಿ ನೀರಿನ ಆಶ್ರಯವೇ ಜನರಿಗೆ ಮುಖ್ಯವಾದುದು. ಇದರಲ್ಲಿಯೂ ಬಹಳಷ್ಟು ತೊಂದರೆ ಇದ್ದು ಅದಕ್ಕೆ ಕಾರಣ ಏನೆಂದರೆ, ನಗರ ಪ್ರದೇಶಗಳಲ್ಲಿ ಮಲ್ಟಿಸ್ಟೋರೀಡ್ ಬಿಲ್ಡಿಂಗ್ಸ್ ಕಟ್ಟುವವರು ಕಾವೇರಿ ನೀರಿಗೆ ದೊಡ್ಡ ಸಂಪುಗಳನ್ನು ಕಟ್ಟಿಕೊಂಡು ಎಲ್ಲಾ ನೀರನ್ನು ಉಪಯೋಗ ಮಾಡುತ್ತಾ ಇದ್ದಾರೆ. ದಯಮಾಡಿ ಇದನ್ನು ತಡೆಗಟ್ಟಲುಕ್ರಮ ತೆಗೆದುಕೊಳ್ಳಬೇಕೆಂದು ಕೇಳಿ ಕೊಳ್ಳುತ್ತೇನೆ. ಇದಲ್ಲದೇ ಕೆಲವು ಖಾಸಗಿ ಜನರು ಕೊಳವೆ ಬಾವಿಗಳನ್ನು ಹಾಕಿಕೊಂಡು ಒಂದು ಲಾರಿ ನೀರಿಗೆ ೧೫೦-೨೦೦ ರೂಪಾಯಿಗಳವರೆಗೆ ಮಾರಾಟ ಮಾಡಿ ದಿನಕ್ಕೆ ೨೦-೨೫ ಲಾರಿಗಳಷ್ಟು ನೀರನ್ನು ಮಾರುತ್ತಿರುತ್ತಾರೆ. ಇದಕ್ಕೂ ಕೂಡ ಮಾನ್ಯ ಸಚಿವರು ಕಾನೂನು ರೀತ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಗರ ಸಭೆಯ ವತಿಯಿಂದ ನನ್ನ ಕ್ಷೇತ್ರವಾದ ಶಾಂತಿನಗರದಲ್ಲಿ ಹುಡ್ಕೊ ಫಂಡ್‌ನಿಂದ ೧೫೦೦ ಮನೆಗಳನ್ನು ಕಟ್ಟಿದ್ದಾರೆ. ಅದನ್ನು ಸೂಕ್ತ ರೀತಿಯಲ್ಲಿ ಅಲಾಟ್‌ಮೆಂಟ್ ಮಾಡಬೇಕಾಗಿತ್ತು. ಆದರೆ ಹಾಗೆ ಮಾಡಿಲ್ಲ. ಯಾವ ರೀತಿಯಲ್ಲಿ ಅಲಾಟ್‌ಮೆಂಟ್ ಮಾಡಿದ್ದಾರೆ ಎಂಬುದು ಗೊತ್ತಿಲ್ಲ. ಇದರಿಂದ ಜನರಿಗೆ ತುಂಬಾ ಅಸಮಾಧಾನವಾಗಿದೆ. ಆದ್ದರಿಂದ ಮಾನ್ಯ ಸಚಿವರು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಅದರಲ್ಲಿ ಏನು ಅವ್ಯವಹಾರ ನಡೆದಿದೆ ಎಂಬುದನ್ನು ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಾ ಇರುವುದು ತಮಗೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಎಲ್ಲರ ಮಾತುಗಳಲ್ಲಿಯೂ ಹೇಳುವಂತೆ ಜಗತ್ತಿನಲ್ಲಿಯೇ ಅತ್ಯಂತ ವೇಗದಿಂದ ಬೆಳೆಯುತ್ತಿರುವ ನಗರವಾಗಿದೆ. ಇಂಥ ವಿಶಾಲ ನಗರದಲ್ಲಿ ಕುಡಿಯುವ ನೀರಿನ ಕೊರತೆ ಮತ್ತು ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಇಲ್ಲಿ ಹಾಕಿರತಕ್ಕಂಥ ಒಳಚರಂಡಿ ವ್ಯವಸ್ಥೆಯು ಅದರಲ್ಲಿಯೂ ಕೆಲವು ಕಡೆಗಳಲ್ಲಿ ४०-५० ವರ್ಷಗಳ ಹಿಂದೆ ಹಾಕಿರತಕ್ಕಂಥಾದ್ದು. ಶಾಂತಿನಗರ ಪ್ರದೇಶದಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು, ಕಾಂಪ್ಲೆಕ್ಸ್‌ಗಳು, ಮತ್ತಿತರ ವಾಣಿಜ್ಯ ವ್ಯವಹಾರಗಳು ಬೆಳೆಯುತ್ತಿದೆ. ಅಲ್ಲಿ ಯಾವುದೋ ಕಾಲದಲ್ಲಿ ಹಾಕಿದ್ದ ಡ್ರೈನೇಜ್ ವ್ಯವಸ್ಥೆಯು ತುಂಬಾ ಅವ್ಯವಸ್ಥೆಯಿಂದ ಕೂಡಿದ್ದು ಆಗಿರುತ್ತದೆ. ಆದ್ದರಿಂದ ಹಳೆಯ ವ್ಯವಸ್ಥೆಯನ್ನು ತೆಗೆದು ಹೊಸದಾಗಿ ಡ್ರೈನೇಜ್ ವ್ಯವಸ್ಥೆಯನ್ನು ಮಾಡಲು ಸಚಿವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಗರ ಪ್ರದೇಶಗಳಲ್ಲಿ ಹೊಸದಾಗಿ ಕಟ್ಟುತ್ತಿರುವ ಬಹುಮಹಡಿ ಕಟ್ಟಡಗಳು ಇತರ ಕಾಂಪ್ಲೆಕ್ಸ್‌ಗಳು ತಮ್ಮ ಮನಸ್ಸಿಗೆ ಬಂದ ಹಾಗೆ ಕಟ್ಟಿಕೊಳ್ಳುತ್ತಿದ್ದಾರೆ. ಪ್ಲಾನ್‌ನಲ್ಲಿ ಒಂದು ರೀತಿಯಾಗಿ ತೋರಿಸಿದರೆ ಅವರು ಕಟ್ಟಿಕೊಳ್ಳುವುದೇ ಬೇರೆ ರೀತಿಯಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ನಿಗಾ ವಹಿಸಿ ಕ್ರಮವನ್ನು ತೆಗೆದುಕೊಂಡು ಹಾಗೆ ಆಗದಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೆಂಗಳೂರು ಮಹಾನಗರ ಪಾಲಿಕೆಯ ಬಗ್ಗೆ ಹೇಳುವುದಾದರೆ ಅಲ್ಲಿಗೆ ಬಹಳ ಒಳ್ಳೆಯ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ಆದರೆ ಅವರ ಆಫೀಸಿನಲ್ಲಿರುವ ಅಧಿಕಾರಿಗಳು ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ. ದಕ್ಷ ಆಡಳಿತಾಧಿಕಾರಿಗಳ ಬಗ್ಗೆ ಅಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿರುವ ಬಗ್ಗೆ ಜನರಿಗೆ ತುಂಬಾ

ಸಂತೋಷವಾಗಿದೆ. ಯಾರೇ ಯಾವುದೇ ಕೆಲಸಕ್ಕೆ ಹೋದರೂ ತುಂಬಾ ಸಲೀಸಾಗಿ ಕೆಲಸ ಆಗುವಂತೆ ಈಗ ವ್ಯವಸ್ಥೆ ಇದೆ. ಆದರೆ ಒಳ್ಳೆಯ ಕಮಿಷನರ್ ಇದ್ದರೂ ಕೂಡ ಅಧಿಕಾರಿಗಳು ಅಷ್ಟು ಚೆನ್ನಾಗಿ ಕೆಲಸ ಮಾಡುತ್ತಿಲ್ಲವಾದ ಕಾರಣ ಜನಗಳಿಗೆ ಸ್ವಲ್ಪ ತೊಂದರೆಯಾಗುತ್ತಾ ಇದೆ. ಈ ಬಗ್ಗೆ ಮಾನ್ಯ ಸದಸ್ಯರು ಗಮನಕೊಟ್ಟು ಜನಗಳಿಗೆ ಸಲೀಸಾಗಿ ಯಾವುದೇ ತೊಂದರೆ ಇಲ್ಲದ ಹಾಗೆ ಕೆಲಸ ಕಾರ್ಯಗಳನ್ನು ನೆರವೇರುವ ಹಾಗೆ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಸುಮಾರು ೨೨ ಕೊಳಚೆ ಪ್ರದೇಶಗಳಿವೆ. ಕೊಳಚೆ ಮಂಡಳಿಯ ಕಾರ್ಯದರ್ಶಿಯವರು ತುಂಬಾ ಚೆನ್ನಾಗಿ ಕೆಲಸ ಮಾಡುತಾ ಇದ್ದಾರೆ. ಆದರೆ ಯಾವುದೇ ಕೆಲಸವನ್ನು ತೆಗೆದುಕೊಳ್ಳಲು ಸೂಕ್ತ ಫಂಡ್‌ಸ ವ್ಯವಸ್ಥೆ ಇಲ್ಲಾ ಎಂದು ತಿಳಿದು ಬರುತ್ತದೆ. ಇದರ ಬಗ್ಗೆ ಗಮನಕೊಟ್ಟು ಹಣಕಾಸಿನ ವ್ಯವಸ್ಥೆಯನ್ನು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮಲ್ಲಿ ಮಹಾತ್ಮಾ ಗಾಂಧೀ ರಸ್ತೆ, ಲಾಲ್‌ಬಾಗ್ ರಸ್ತೆ, ರಿಚ್‌ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಮುಂತಾದ ದೊಡ್ಡ ದೊಡ್ಡ ರಸ್ತೆಗಳು ಇವೆ. ಇವುಗಳು ಬಹಳ ಮುಖ್ಯವಾದಂಥ ರಸ್ತೆಗಳು. ಒಂದು ವರ್ಷದ ಹಿಂದೆ ಬಂದ ಕಮೀಶನರ್‌ರವರು ಇಂಥ ರಸ್ತೆಗಳಲ್ಲಿ ಇದ್ದ ಜಾಹಿರಾತು ಬೋರ್ಡ್‌ಗಳನ್ನು ಎಲ್ಲಾ ಕಿತ್ತು ಹಾಕಿಸಿದರು. ಅವರು ಹೋದ ಮೇಲೆ ಇನ್ನೊಬ್ಬರು ಬಂದರು. ಅವರು ಎಲ್ಲಾ ರಸ್ತೆಗಳಿಗೂ ಜಾಹಿರಾತು ಬೋರ್ಡ್‌ಗಳನ್ನು ಹಾಕಿಸಲು ಪರ್ಮಿಷನ್ ಕೊಟ್ಟು ಪುನಃ ಹಾಕಿಸಿದರು. ಇದಕ್ಕೆ ಒಂದು ನಿಯಮ ಇದೆಯೋ ಇಲ್ಲವೋ ಗೊತ್ತಿಲ್ಲ. ಅಧಿಕಾರಿಗಳು ಮನಸ್ಸಿಗೆ ಬಂದ ಹಾಗೆ ಈ ವಿಚಾರದಲ್ಲಿ ತಮ್ಮ ವರ್ತನೆಯನ್ನು ಮಾಡುತ್ತಾರೆ. ಎಂ. ಜಿ. ರಸ್ತೆಗೆ ಹೆಚ್. ಎ. ಎಲ್. ರಸ್ತೆಯಿಂದ ಬರತಕ್ಕಂಥವರು, ವಿಮಾನನಿಲ್ದಾಣದಿಂದ ಬರತಕ್ಕಂಥವರು ಬಹಳಷ್ಟು ವಿದೇಶಿಯರು ಇದ್ದಾರೆ. ಹೀಗೆ ರಸ್ತೆಗಳ ಉದ್ದಗಲಕ್ಕೂ ಬೋರ್ಡ್‌ಗಳನ್ನು ಹಾಕಿಸಿರುವುದು ಸರಿಯಲ್ಲ. ಇದಕ್ಕೂ ಒಂದು ಮಿತಿ ಇರಬೇಕು, ನಿಯಮಗಳು ಇರಬೇಕಾದುದು ಅವಶ್ಯಕವಾಗಿದೆ. ಇನ್ನು ಸಿ. ಡಿ. ಪಿ. ಮತ್ತು ಓ. ಪಿ. ಡಿ. ಪ್ಲಾನ್ ಎಂದು ಸರಕಾರದವರು ಆ ಬಗ್ಗೆ ಬೈಲಾ ಫ್ರೇಮ್ ಮಾಡಿದ್ದಾರೆ. ಒಂದೇ ರಸ್ತೆಯಲ್ಲಿ ಮೂರು ತರದ ರಸ್ತೆಗಳನ್ನು ಮಾಡಿದ್ದಾರೆ. ಒಂದು ರಸ್ತೆಯ ಪ್ರದೇಶಕ್ಕೆ ಒಂದು ಕಾನೂನು ಇದ್ದರೆ ಮತ್ತೊಂದು ಕಡೆಯ ರಸ್ತೆಗೆ ಇನ್ನೊಂದು ಕಾನೂನನ್ನು ಅನ್ವಯ ಆಗುತ್ತಿದೆ. ಅಲಸೂರು ಕೆರೆ ಹತ್ತಿರ ಒಂದು ರಸ್ತೆ ಇದೆ. ಅಲ್ಲಿಂದ ನೂರು ಅಡಿ ಬಿಟ್ಟು ಇನ್ನೊಂದು ರಸ್ತೆ ಇದೆ. ಅಲ್ಲಿಗೆ ಒಂದು ಕಾನೂನು ಇದ್ದರೆ ಇಲ್ಲಿಗೇ ಒಂದು ಕಾನೂನು ಮಾಡಿದ್ದಾರೆ. ಹೀಗೆ ಇಂಥ ವಿಚಾರಗಳಲ್ಲಿ ತಾರತಮ್ಯ ಬೇಡ. ಜನಗಳಿಗೆ ತೊಂದರೆಯಾಗುವ ರೀತಿಯಲ್ಲಿ ಇಂಥ ಕಾನೂನುಗಳು ಇರಬಾರದು. ಆದ್ದರಿಂದ ಸಿ. ಡಿ. ಪಿ. ಮತ್ತು ಓ. ಪಿ. ಡಿ. ಬೈಲಾಗಳನ್ನು ಬದಲಾವಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹರಿಜನ-ಗಿರಿಜನರಿಗೆ ೧೮ ಪರ್‌ಸೆಂಟ್ ಗ್ರಾಂಟನ್ನು ಕೊಡುವಂಥ ವಿಚಾರ. ಬೆಂಗಳೂರು ನಗರಪಾಲಿಕೆಯವರು ಎಸ್. ಸಿ. / ಎಸ್. ಟಿ. ಜನಾಂಗದವರು ಇಲ್ಲದಿರುವಂಥ ವಿಭಾಗಗಳಲ್ಲಿ ಈ ೧೮ ಪರ್‌ಸೆಂಟ್ ಹಣವನ್ನು ಉಪಯೋಗಿಸುತ್ತಾ ಇದ್ದಾರೆ. ಯಾವ ಹಣವನ್ನು ಎಸ್. ಸಿ. / ಎಸ್. ಟಿ. ಯವರಿಗೆ ಎಂದು ಇಟ್ಟಿರುತ್ತೇವೆಯೋ ಆ ಹಣವನ್ನು ಅವರಿಗಾಗಿಯೇ ಉಪಯೋಗವಾಗುವಂತೆ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಬಿ. ಡಿ. ಎ. ವಿಚಾರದಲ್ಲಿ ಹೇಳುವುದಾದರೆ, ೧೯೮೮ನೇ ಇಸವಿಯಿಂದ ಇಲ್ಲಿ ಸಾವಿರಾರು

ಜನರು ಹಣ ಕಟ್ಟಿ ಸೈಟ್‌ಗಾಗಿ ಕಾಯುತ್ತಾ ಇದ್ದಾರೆ. ಒಮ್ಮೆ ಅಲಾಟ್‌ಮೆಂಟ್ ಮಾಡಿದ್ದರೂ ಕೂಡ ಅದು ಕೇವಲ ಬಿ. ಡಿ. ಎ. ಪ್ಲಾನ್‌ನಲ್ಲಿ ಇದೆಯೇ ವಿನಹ ಅದು ಅಲಾಟ್‌ಮೆಂಟ್ ಆದವರಿಗೆ ದೊರಕಲೇ ಇಲ್ಲ. ಒಂದು ವೇಳೆ ಇಂಥ ಒಂದು ಸೈಟ್ ಎಂದು ಕೊಟ್ಟಿದ್ದರೂ ಕೂಡ ಅದು ೩-೪ ಜನರಿಗೆ ಒಂದೇ ಸೈಟನ್ನು ಕೊಟ್ಟಿದ್ದಾರೆ. ಹೀಗೆ ಅವ್ಯವಸ್ಥೆಯು ಅಲ್ಲಿ ಎದ್ದು ಕಾಣುತ್ತಿದೆ. ಉದಾಹರಣೆಗೆ ಒಬ್ಬ ಎಸ್. ಸಿ. ಇಂಜಿನೀಯರ್ ೧೯೭೫ ನೇ ಇಸವಿಯಲ್ಲಿ ಜಾಹೀರಾತು ಮಾಡಿದಾಗ, ಅರ್ಜಿ ಸಲ್ಲಿಸಿ ಅವರಿಗೆ ಒಂದು ಸೈಟನ್ನು ಅಲಾಟ್ ಮಾಡಿದ್ದರು. ಆದರೆ ಅವರಿಗೆ ಇದುವರೆಗೂ ಕೂಡ ಪೋಸೆಷನ್ ಕೊಟ್ಟಿಲ್ಲ. ಈ ವಿಚಾರದಲ್ಲಿ ನಾನು ಸಂಬಂಧಪಟ್ಟವರನ್ನು ಹಲವಾರು ಬಾರಿ ಹೋಗಿ ವಿಚಾರ ಮಾಡಿದ್ದೇನೆ. ಒಬ್ಬರನ್ನು ಕೇಳಿದರೆ ಇನ್ನೊಬ್ಬರನ್ನು ಸೂಚಿಸುವುದು, ಆ ಶಾಖೆ ಈ ಶಾಖೆ ಎಂದು ಇಷ್ಟು ವರ್ಷಗಳು ಕಳೆದು ಹೋದರೂ ಅಲಾಟ್ ಆದ ವ್ಯಕ್ತಿಗೆ ಈ ತನಕವೂ ಸೈಟ್ ಮಾತ್ರ ಲಭ್ಯವಾಗಿಲ್ಲ. ಇಂತಹ ಕೆಲವು ಸಮಸ್ಯೆಗಳನ್ನು ಇತ್ಯರ್ಥ ಮಾಡದಿದ್ದರೆ ಕಚೇರಿಗಳು ಇದ್ದೂ ಉಪಯೋಗವಿಲ್ಲದ ಹಾಗೆ ಆಗುತ್ತದೆಂದು ಹೇಳಬಯಸುತ್ತೇನೆ. ೧೯೭೫ರಲ್ಲಿ ಸೈಟ್ ಅಲಾಟ್ ಆದ ಮನುಷ್ಯನು ಮನೆ ಕಟ್ಟಿ ಕೊಂಡಿದ್ದರೆ ಅವನಿಗೆ ಎಷ್ಟು ಲಾಭವಾಗುತ್ತಿತ್ತು? ಅದು ಬಿ. ಡಿ. ಎ. ದವರು ಮಾಡಿದ ಅನ್ಯಾಯ ಅಲ್ಲವೇ? ಹೀಗೆ ಸಹಸ್ರಾರು ಜನರು ಸೈಟ್‌ಗಾಗಿ ೧೯೮೪ರಿಂದ ಕಾಯುತ್ತಾ ಇದ್ದಾರೆ. ಅದರಲ್ಲಿಯೂ ಅಲ್ಪ ಸಂಖ್ಯಾತರು, ಹಿಂದುಳಿದವರು, ಹರಿಜನ-ಗಿರಿಜನರೂ ಇದ್ದಾರೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಇಂಥ ಎಲ್ಲಾ ಸಮಸ್ಯೆಗಳನ್ನು ಕೂಡಲೇ ಇತ್ಯರ್ಥಪಡಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಆಹಾರ ಮಂತ್ರಿಯವರು ಮಂಡಿಸಿರತಕ್ಕಂಥ ಬೇಡಿಕೆಯನ್ನು ಸ್ವಾಗತಿಸುತ್ತೇನೆ. ನನಗೆ ರಾಜ್ಯದ ಎಲ್ಲಾ ಕ್ಷೇತ್ರಗಳ ಕುರಿತು ಈ ವಿಚಾರವಾಗಿ ಹೇಳಲು ಅಸಾಧ್ಯವಾದರೂ ಕೂಡ ನನ್ನ ಕ್ಷೇತ್ರದ ಮಟ್ಟಿಗೆ ಹೇಳುವುದಾದರೆ, ತುಂಬಾ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಬಡ ಜನರಿಗೆ ಚುನಾವಣೆಯ ಸಂದರ್ಭದಲ್ಲಿ ಕೊಟ್ಟ ಭರವಸೆಗಳನ್ನು ಈಡೇರಿಸಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು, ಹರಿಜನ-ಗಿರಿಜನರು ಮುಂತಾದ ಬಡವರಿಗೆ ಕಾರ್ಡ್‌ಗಳನ್ನು ಕೊಡಬೇಕೆಂದು ಕೇಳಿಕೊಂಡಾಗ ಸೂಕ್ತ ರೀತಿಯಲ್ಲಿ ಅದನ್ನು ಒದಗಿಸಿಕೊಟ್ಟಿದ್ದಾರೆ. ನಾವು ಮನವಿ ಕೊಟ್ಟ ಕೂಡಲೇ ಅಧಿಕಾರಿಗಳನ್ನು ಕರೆಸಿ ಮಾತನಾಡಿ ಅಂಥ ಸಹಸ್ರಾರು ಜನರಿಗೆ ರೇಶನ್ ಕಾರ್ಡ್‌ಗಳನ್ನು ಕೊಟ್ಟಿದ್ದಾರೆ.

(ಶ್ರೀಮತಿ ಸುಮ ವಸಂತರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದೇ ಸಂದರ್ಭದಲ್ಲಿ ಸನ್ಮಾನ್ಯ ಮಂತ್ರಿಗಳಲ್ಲಿ ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ. ಈ ಲೈಸೆನ್ಸ್‌ಗಳನ್ನು ಫೇರ್ ಪ್ರೈಸ್ ಷಾಪ್‌ನವರಿಗೆ ಕೊಡುತ್ತಿದ್ದೀರಿ. ಹಾಗೆ ಕೊಡುವಾಗ ಹರಿಜನರಿಗೆ ಮೀಸಲಾತಿ ಇಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮಾನ್ಯ ನಮ್ಮ ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಂತ್ರಿಯವರಲ್ಲಿ ಒಂದು ವಿನಂತಿಯನ್ನು ಮಾಡಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ನನ್ನ ಶಾಂತಿನಗರ ಕ್ಷೇತ್ರ ಏನು ಇದೆ, ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಮಾತ್ರವಲ್ಲ, ನಮ್ಮ ಭಾರತದೇಶಕ್ಕೆ ಮಾತ್ರವಲ್ಲ ಇಡೀ ವಿಶ್ವಕ್ಕೆ ನಮ್ಮ ಕ್ಷೇತ್ರದಿಂದ ಒಳ್ಳೆ ಒಳ್ಳೆಯ ಆಟಗಾರರನ್ನು ಹೊಂದಿರತಕ್ಕ ಪ್ರದೇಶ ನಮ್ಮದಾಗಿದೆ. ಅದರಲ್ಲಿಯೂ ಹಾಕಿಯಲ್ಲಿ ನನ್ನ ಬಡಾವಣೆಯಲ್ಲಿ ಇದ್ದಂಥ ದೇಶಮೂರ್ತಿ ಎಂದು

ಹೇಳಿ, ಅವರು ಹಾಕಿ ಗೋಲ್‌ಕೀಪರ್ ಆಗಿದ್ದರು. ಅವರು ಭಾರತ ದೇಶಕ್ಕೆ ನಾಲ್ಕು ಸಾರಿ ಗೋಲ್‌ಕೀಪರ್ ಆಗಿ ಅವರು ಇರುವವರೆಗೂ ನಮ್ಮ ದೇಶ ಗೆದ್ದುಕೊಂಡು ಬಂತು. ಅವರು ತೀರಿಹೋದಮೇಲೆ ಇವತ್ತಿನವರೆಗೂ ಹಾಕಿಯಲ್ಲಿ ನಾವು ೭-ಎನೇ ಸ್ಥಾನಕ್ಕೆ ಬಂದುಬಿಟ್ಟಿದ್ದೇವೆ. ಅವರ ಕುಟುಂಬ ಇವತ್ತು ಬಹಳ ಕಷ್ಟದಲ್ಲಿದೆ. ಅದರ ಬಗ್ಗೆ ಸನ್ಮಾನ್ಯ ಮಂತ್ರಿಯವರಿಗೆ ನಾನು ಒಂದು ಕಾಗದವನ್ನು ಬರೆದಿದ್ದೆ. ಅವರ ಫ್ಯಾಮಿಲಿಗೆ ಪೆನ್‌ಷನನ್ನು ಕೊಡಿ ಎಂದು ಹೇಳಿ. ಅದೇ ರೀತಿ ಫುಟ್‌ಬಾಲ್ ಆಟದಲ್ಲಿ ಆಡುತ್ತಿರುವಂಥಹವರು ನಮ್ಮ ಕ್ಷೇತ್ರದಲ್ಲಿ ಇವತ್ತಿಗೂ ಇದ್ದಾರೆ. ಅದರಲ್ಲಿ ಕರ್ನಾಟಕ ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಂಥ ಷಣ್ಮುಗಂ ಎಂದು ಹೇಳಿ ಒಬ್ಬರು ಇದ್ದಾರೆ. ರಾಮನ್ ಎಂದು ಹೇಳಿ ಒಬ್ಬರು. ಮಾರ್ಕ್ ಆಂತೋಣಿ ಎಂದು ಒಬ್ಬರು. ಉಲಗನಾಥನ್ ಎಂದು ಒಬ್ಬರು. ಆರ್ಮುಗಂ ಎಂದು ಹೇಳಿ ಒಬ್ಬರು. ಇವರೆಲ್ಲರೂ ನಮ್ಮ ಕರ್ನಾಟಕದಿಂದ ಹೋಗಿ ಭಾರತ ದೇಶಕ್ಕೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ಫುಟ್‌ಬಾಲ್ ಆಟಗಾರರಾಗಿ ನಮ್ಮ ದೇಶಕ್ಕೆ ಹೆಸರನ್ನು ತಂದಿದ್ದಾರೆ. ಇವತ್ತು ಅವರೂ ಕೂಡ ಬಹಳ ಕಷ್ಟದಲ್ಲಿದ್ದಾರೆ. ಅವರ ಕುಟುಂಬದವರಿಗೆ ಮತ್ತು ಅವರಿಗೂ ಕೂಡ ತಿಂಗಳಿಗೆ ಪೆನ್‌ಷನ್ ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಹೇಳುವುದಾದರೆ, ಶಾಂತಿನಗರ ವಿಭಾಗದಲ್ಲಿ ಏಳು ವರ್ಷ, ಎಂಟು ವರ್ಷ, ಹತ್ತು ವರ್ಷ ಹನ್ನೆರಡು ವರ್ಷದ ಸಣ್ಣ ಮಕ್ಕಳು ಏನಿದ್ದಾರೆ, ಅಂಥ ಹುಡುಗರಿಗೆ ಒಬ್ಬರು ಫುಟ್‌ಬಾಲ್‌ನಲ್ಲಿ ತರಬೇತಿಯನ್ನು ಕೊಡುತ್ತಿದ್ದಾರೆ. ಅವರಿಗೆ ಊಟ ಇಲ್ಲ. ಒಳ್ಳೆಯ ವ್ಯವಸ್ಥೆ ಇಲ್ಲ. ಅವರು ತ್ಯಾಗರಾಜನ್ ಎಂದು ಹೇಳಿ. ಅವರು ಮುಂದಾಳತ್ವವನ್ನು ವಹಿಸಿಕೊಂಡು ಇಂಥ ಹುಡುಗರನ್ನು ಬೆಳೆಸಿ ಒಳ್ಳೆಯ ಕ್ರೀಡಾ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಅದರಲ್ಲಿಯೂ ಫುಟ್‌ಬಾಲ್‌ನಲ್ಲಿ ತರಬೇತಿಯನ್ನು ಕೊಡುತ್ತಿದ್ದಾರೆ. ಅವರ ಸಂಘದವರು ಕೂಡ ತಮಗೆ ಒಂದು ಮನವಿಯನ್ನು ಕೊಟ್ಟಿದ್ದಾರೆ. ಏನಾದರೂ ಸಹಾಯವನ್ನು ಮಾಡಬೇಕು ಎಂದು ಕೇಳಿಕೊಂಡಿದ್ದಾರೆ. ಅದನ್ನೂ ಕೂಡ ಮಾನ್ಯ ಮಂತ್ರಿಗಳು ದಯಮಾಡಿ ಗಣನೆಗೆ ತೆಗೆದುಕೊಂಡು ಈ ಸಂಘದವರಿಗೆ ಸಹಾಯವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ಇವತ್ತು ಏನು ನಮ್ಮ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಹಾಗೂ ನಮ್ಮ ಯುವಜನ ಸೇವೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಈ ಮೂರು ಸಚಿವರುಗಳು ಮಂಡಿಸಿರತಕ್ಕಂಥ ಈ ಬೇಡಿಕೆಯನ್ನು ನಾನು ಸ್ವಾಗತ ಮಾಡಿ ಅದಕ್ಕೆ ಬೆಂಬಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ್.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಅಧ್ಯಕ್ಷಣಿಯವರೇ, ಸರ್ಕಾರದವರು ಇವತ್ತು ಈ ಸಭೆಯ ಮುಂದೆ ತಂದಿರತಕ್ಕಂಥ ಎಲ್ಲಾ ಬೇಡಿಕೆಗಳಿಗೆ...

ಛೇರ್ಮನ್:- ಹತ್ತು ನಿಮಿಷದಲ್ಲಿ ಮುಗಿಸಿ. ದಯವಿಟ್ಟು.

ಶ್ರೀ ಟಿ. ಬಿ. ಜಯಚಂದ್ರ:- ನಾನು ಯಾವಾಗ ಮಾತನಾಡಬೇಕಾದರೂ ಕೊನೆಗೆ ಅವಕಾಶವನ್ನು ಕೊಡುತ್ತೀರಿ.

ಛೇರ್ಮನ್:- ನಾಳೆ ಬೇಕಾದರೆ ಮೊದಲು ಕೊಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ:- ಈಗ ಮಾತನಾಡಿ ಆಯಿತಲ್ಲ! ಈಗ ನಮ್ಮ ಪಾಯಿಂಟನ್ನು ಹೇಳುತ್ತೇನೆ. ಈ ಬೇಡಿಕೆಗಳಿಗೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಕೆಲವು ಸಲಹೆಗಳನ್ನು

ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ. ಕಾಲದ ಅಭಾವವನ್ನು ನಾನು ಗಮನದಲ್ಲಿಟ್ಟುಕೊಂಡು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ನಗರಾಭಿವೃದ್ಧಿ ಸಚಿವರ ಬೇಡಿಕೆಯ ಮೇಲೆ ಒಂದೆರಡು ಅನಿಸಿಕೆಗಳನ್ನು ಹೇಳಬೇಕಾಗುತ್ತದೆ. ಇವತ್ತು ಈ ಇಲಾಖೆಯ ಬಗ್ಗೆ ಅನೇಕ ತರಹದ ಟೀಕೆ ಟಿಪ್ಪಣಿಗಳು ಆಗಿಂದಾಗ್ಗೆ ಬರುತ್ತಿರುವುದನ್ನು ನೋಡಿದ್ದೇವೆ, ಕೇಳಿದ್ದೇವೆ. ಎಲ್ಲದಕ್ಕೂ ಕೂಡ ಒಂದು ಹೊಗಳತಕ್ಕಂಥ ಒಂದು ಕೆಲಸವನ್ನು ಕೂಡ ಆ ಇಲಾಖೆಯ ಮುಖಾಂತರ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ನಾವು ನಮ್ಮ ದೇವರಾಜ ಅರಸ್‌ರವರನ್ನು ನೆನಸಬೇಕಾಗುತ್ತದೆ. ೧೯೭೮-೭೯ರ ಸಾಲಿನಲ್ಲಿ ಅವರು ಏನು ಬಡವರಿಗೆ ಸೈಟನ್ನು ಕೊಡತಕ್ಕಂಥ ಒಂದು ಕಾರ್ಯಾಚರಣೆಯನ್ನು ಮಾಡಿ ಯಶಸ್ವಿಯಾಗಿ ಗ್ರಾಮಾಂತರ ಪ್ರದೇಶದಲ್ಲಿ ಬರತಕ್ಕಂಥ ಎಲ್ಲಾ ಜನರುಗಳಿಗೂ ಸೈಟುಗಳನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿದರು. ಆ ಕಾಲ ಅದು ೧೯೮೦ರ ಹಿಂದೆ ಆಗಿದ್ದು ಸುಮಾರು ೧೨ ವರ್ಷಗಳ ಕಾಲ ಸ್ಥಗಿತವಾಗಿದ್ದನ್ನು ಇವತ್ತು ಅದಕ್ಕೆ ಹೊಸ ಚಾಲನೆಯನ್ನು ಕೊಟ್ಟು, ಒಂದು ಹೊಸ ಸ್ವರೂಪವನ್ನು ಕೊಟ್ಟು ಇವತ್ತು ಸೈಟುಗಳನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದೀರಿ. ತಾವು ವಯಸ್ಸಿನಲ್ಲಿ ಚಿಕ್ಕವರಾದರೂ ಕೂಡ ಇವತ್ತು ನಾನು ನಿಜವಾಗಿಯೂ ಕೂಡ ಇದೊಂದು ವಿಷಯದಲ್ಲಿ ನಾನು ಅಭಿನಂದನೆಯನ್ನು ಮಾಡಬೇಕಾಗುತ್ತದೆ. ಈಗಾಗಲೇ ನಿಮ್ಮ ಅಂಕಿ ಅಂಶಗಳ ಪ್ರಕಾರ ೧೮ ಲಕ್ಷ ಸೈಟುಗಳನ್ನು ನೀವು ಕೊಟ್ಟಿದ್ದೀರಿ. ಆದರೆ ನೀವು ಇನ್ನು ಹೆಚ್ಚು ಸೈಟುಗಳನ್ನು ಕೊಡಿಸತಕ್ಕ ಗುರಿಯನ್ನು ಕೂಡ ಇಟ್ಟುಕೊಂಡಿದ್ದೀರಿ. ಆದರೆ ನಾನು ಸಲಹ ಕೊಡತಕ್ಕಂಥದ್ದು ಏನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ನೀವು ಸೈಟನ್ನು ಕೊಡಬೇಕಾದರೆ ಮೂಲಭೂತವಾಗಿ ಪ್ರಾಕ್ಟಿಕಲ್ ಆಗಿ ಬರತಕ್ಕ ಸಮಸ್ಯೆಗಳು ಏನೆಂದರೆ ಯಾವುದೇ ಊರಿನಲ್ಲಿ ಸೈಟನ್ನು ಕೊಡಬೇಕಾದರೂ ಅದು ಎಕ್ಸೈಜ್ ಇಲಾಖೆಗೆ ಸೇರತಕ್ಕಂಥ ಜಮೀನಾಗಿರುತ್ತದೆ. ಅಥವಾ ಫಾರೆಸ್ಟ್ ಇಲಾಖೆಗೆ ಸೇರಿರತಕ್ಕ ಜಮೀನಾಗಿರುತ್ತದೆ. ಆ ಫಾರೆಸ್ಟ್ ಡಿಪಾರ್ಟ್‌ಮೆಂಟಾಗಲೀ ಅಥವಾ ಎಕ್ಸೈಜ್ ಇಲಾಖೆಗೆ ಸೇರಿರತಕ್ಕ ಜಮೀನನ್ನು ಆಶ್ರಯ ಯೋಜನೆಯಡಿಯಲ್ಲಿ ನೀವು ಸೈಟನ್ನು ಕೊಡುವಂತಹ ಸಂದರ್ಭದಲ್ಲಿ ಅದು ರಿಲೀಸ್ ಆಗಬೇಕು ಅಂತ ಹೇಳಿ ನೀವು ರಾಜ್ಯ ಸರ್ಕಾರಕ್ಕೆ ಅಥವಾ ಕೇಂದ್ರ ಸರ್ಕಾರಕ್ಕೂ ನೀವು ಬರೆದು ಕುಳಿತುಕೊಂಡರೆ ನೀವು ಸೈಟುಗಳನ್ನು ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ನೇರವಾಗಿ ನೀವೊಂದು ಸರ್ಕಾರದ ಆದೇಶ ಮಾಡಿ ಅವರಿಗೆ ಕೊಟ್ಟೇ ಕೊಡಬೇಕು. ಒಂದು ಎಕರೆ ಬೇಕಾಗಿರತಕ್ಕಂಥದ್ದು ಮೂರು ಎಕರೆ ಬೇಕಾಗಿರತಕ್ಕವರೆಗೆ ನೇರವಾಗಿ ಕೊಡಬಹುದು ಎನ್ನತಕ್ಕ ಸುತ್ತೋಲೆಯನ್ನು ಕೊಡುವಂತಹ ತೀರ್ಮಾನ ಮಾಡಿದರೆ ೧೮ ಲಕ್ಷಕ್ಕೆ ಇನ್ನು ೧೮ ಲಕ್ಷದ ಸೈಟುಗಳನ್ನು ಕೊಡಿಸುವುದಕ್ಕೆ ಸಾಧ್ಯವಾಗುತ್ತದೆ. ಬೆಂಗಳೂರಿನ ಪಟ್ಟಣ ದಿನೇ ದಿನೇ ಬೆಳೆಯುತ್ತಿದೆ. ಹಳ್ಳಿಗಳಲ್ಲಿಯೂ ಕೂಡ ನಾಲ್ಕರಷ್ಟು ಐದರಷ್ಟು ಜನಸಂಖ್ಯೆ ಜಾಸ್ತಿಯಾದರೂ ಕೂಡ ಹಳ್ಳಿಗಳು ಮಾತ್ರ ಅದೇ ರೀತಿ ಉಳಿದಿವೆ. ಅದಕ್ಕೆ ಏನಾಗಿದೆ ಅಂದರೆ ಸೈಟುಗಳು ಇಲ್ಲದೇ ಇರತಕ್ಕಂಥದ್ದು ಸೈಟು ಸಿಗದೇ ಇರತಕ್ಕಂಥದ್ದು ಇವೆಲ್ಲಾ ಪ್ರಶ್ನೆ ಇರತಕ್ಕದ್ದು. ಸರ್ಕಾರೀ ಜಮೀನು ಇರತಕ್ಕ ಕಡೆ ನಾವು ಸೈಟನ್ನು ಕೊಡಬೇಕಾದರೆ, ಈ ಕೆಲಸವನ್ನು ಮೊದಲು ಮಾಡಬೇಕು. ನಾನು ಮಾನ್ಯ ಕಂದಾಯ ಸಚಿವರಲ್ಲೂ ಮತ್ತು ಎಕ್ಸೈಜ್ ಮಂತ್ರಿಯವರಲ್ಲಿಯೂ ಕೂಡ ನಿವೇದನೆ ಮಾಡಿಕೊಂಡಿದ್ದೇನೆ. ಇದರ ಬಗ್ಗೆ ನೀವು ಸಂಬಂಧಪಟ್ಟವರ ಹತ್ತಿರ ವಿಚಾರಮಾಡಿ ಅದನ್ನು ಮಾಡಿಸುವ ಕೆಲಸವನ್ನು ಮಾಡಿಸಬೇಕು ಎನ್ನತಕ್ಕಂಥ ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಮತ್ತೊಂದು ಸಲಹೆ ಏನೆಂದರೆ ನೀವು ಏನು ಹಕ್ಕು ಪತ್ರವನ್ನು ಏನು ಕೊಡುತ್ತೀರಿ.

ಕೊಟ್ಟಂತಹ ಸಂದರ್ಭದಲ್ಲಿ ನೀವು ನೇರವಾಗಿ ನಿರ್ದೇಶನವನ್ನು ಕಂದಾಯ ಇಲಾಖೆಯವರಿಗೆ ಮತ್ತು ನಿಮ್ಮ ಮಂಡಲ್ ವ್ಯಾಪ್ತಿಯಲ್ಲಿ ಬರತಕ್ಕಂತಹ ಕಾರ್ಯದರ್ಶಿಗಳಿಗೆ ಕೊಡಬೇಕು. ಒಂದು ಹಕ್ಕು ಪತ್ರ ಕೊಟ್ಟ ತಕ್ಷಣ ಆಟೋಮಿಟಿಕ್ ಆಗಿ ಅವರ ಖಾತೆಯಲ್ಲಿ ಎಂಟ್ರಿ ಆಗಬೇಕು. ಆಟೋಮಿಟಿಕ್ ಆಗಿ ಖಾತಿಯಲ್ಲಿ ಎಂಟ್ರಿ ಮಾಡಿ ಅಸೆಸ್‌ಮೆಂಟನ್ನು ತೆಗೆದುಕೊಳ್ಳುವಂತಹ ಮಟ್ಟಕ್ಕೆ ಏನಾದರೂ ಈಗ ಭ್ರಷ್ಟಾಚಾರ ಏನು ಗ್ರಾಮಾಂತರ ಪ್ರದೇಶದಲ್ಲಿ ಆಗುತ್ತಿದೆ ಎನ್ನುವುದು ಇದೆ, ಇದು ಹೋಗಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಹೊಸದಾಗಿ ಸರ್ಕಾರದ ಆರ್ಡರನ್ನು ನೀವು ಮಾಡಬೇಕಾಗುತ್ತದೆ. ಅದನ್ನು ದಯವಿಟ್ಟು ಬೇಗ ಮಾಡಬೇಕೆಂದು ನಾನು ಸಲಹೆಯನ್ನು ಕೊಡುತ್ತೇನೆ. ಸರ್ಕಾರೀ ಜಮೀನು ಇಲ್ಲದಂತಹ ಸಂದರ್ಭದಲ್ಲಿ ಇವತ್ತು ಖಾಸಗಿಯವರ ಜಮೀನನ್ನು ಕೊಳ್ಳಬೇಕಾದರೆ ಅದರಲ್ಲಿಯೂ ವಿಶೇಷವಾಗಿ ಹರಿಜನ ಬಾಂಧವರಿಗೆ ನಾವು ಸೈಟನ್ನು ಕೊಡಬೇಕಾದರೆ ಬಹಳಷ್ಟು ಕಷ್ಟವಿದೆ. ಅದನ್ನು ಕೊಡಬೇಕಾದರೆ ಏನಾಗುತ್ತಿದೆ ಅಂದರೆ ನೀವು ನೆಗೋಶಿಯೇಷನ್ ಮುಖೇನ ಇವತ್ತು ಸೈಟನ್ನು ಕೊಡಿ ಎಂದು ಹೇಳುತ್ತೀರಿ. ಇವತ್ತು ನೆಗೋಶಿಯೇಷನ್ ಮುಖೇನ ಮಾಡಬೇಕಾದರೆ ಮಾರ್ಕೆಟ್ ವ್ಯಾಲ್ಯೂ ಮೇಲೆ ನಾವು ಶೇಕಡ ೨೦ ರಷ್ಟನ್ನು ಜಾಸ್ತಿ ಮಾಡಬಹುದು. ಆದರೆ ಶೇಕಡ ೬೦-೭೦ಜಾಸ್ತಿ ಇರುವಂಥ ಸಂದರ್ಭಗಳು ಇದ್ದಾಗ ಹಣ ಇಲ್ಲದೆ ನಾವು ಸೈಟನ್ನು ಅಕ್ವೈರ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ ನಾವೇನು ಶೇಕಡ ೧೮ರಷ್ಟು ಹಣವನ್ನು ಹರಿಜನರ ಯೋಗಕ್ಷೇಮಕ್ಕೋಸ್ಕರ ಇಟ್ಟಿರತಕ್ಕ ಹಣ ಏನಿದೆ ಅದನ್ನು ಖರ್ಚು ಮಾಡತಕ್ಕಂಥ ಒಂದು ತೀರ್ಮಾನವನ್ನು ಕೊಟ್ಟು ಇದಕ್ಕೋಸ್ಕರ ಖರ್ಚು ಮಾಡುವುದಕ್ಕೆ ಒಂದು ಅವಕಾಶವನ್ನು ಕೊಟ್ಟರೆ ಬಹುಶಃ ಹೆಚ್ಚು ಹರಿಜನರಿಗೆ ಸೈಟನ್ನು ಕೊಡುವುದಕ್ಕೆ ಆಗುತ್ತದೆ ಎನ್ನತಕ್ಕ ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಈಗ ನಾನು ಸರ್ಕಾರವನ್ನು ಒಂದು ವಿಷಯದಲ್ಲಿ ಬಹಳವಾಗಿ ಹೊಗಳಬೇಕಾಗುತ್ತದೆ. ನೀವು ಆಶ್ರಯ ಯೋಜನೆಯಡಿಯಲ್ಲಿ ಒಂದು ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳನ್ನು ಕಟ್ಟುವಂತಹ ಕೆಲಸವನ್ನು ನೀವು ಮಾಡಿದ್ದೀರಿ. ನನ್ನ ಕ್ಷೇತ್ರದಲ್ಲಿ ಈ ಕೆಲಸ ಪ್ರಾರಂಭವಾಗದಿದ್ದರೂ ಬೇರೆ ಕಡೆ ಪ್ರಾರಂಭವಾಗಿರುವಲ್ಲಿಗೆ ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ಬಹಳ ಚೆನ್ನಾಗಿ ಕಟ್ಟಡಗಳು ಬರುತ್ತಿವೆ. ಒಳ್ಳೆಯ ಸೈಂಟಿಫಿಕ್ ಟೆಕ್ನಾಲಜಿಯನ್ನು ಇಟ್ಟುಕೊಂಡು ಕಟ್ಟುತ್ತಿದ್ದೀರಿ. ಅದು ಬಹಳ ಒಳ್ಳೆಯದು. ಗ್ರಾಮಾಂತರ ಪ್ರದೇಶದಲ್ಲಿ ಅಲ್ಲ ಕೆಲವರಿಗೆ ಸೈಟು ಕೊಡಬೇಕಾಗಿತ್ತು ಎನ್ನತಕ್ಕ ವಾದವನ್ನು ನಾವು ಇವತ್ತು ಕೇಳಿದ್ದೇವೆ. ನಾವು ಈಗಾಗಲೇ ಸಾಕಷ್ಟು ಮನೆಗಳನ್ನು ಅವರುಗಳ ಮುಖೇನ ಕಟ್ಟಿಸಿ ಅವು ೨-೩ ವರ್ಷಗಳಲ್ಲಿಯೇ ಬಿದ್ದು ಹೋಗಿರತಕ್ಕದ್ದು, ಮತ್ತು ರಿಪೇರಿಗಾಗಿ ಪುನಃ ಹಣವನ್ನು ಕೇಳುತ್ತಿರತಕ್ಕದ್ದನ್ನು ನಾವು ನೋಡಿದ್ದೇವೆ. ಈಗ ನೀವು ಕಟ್ಟುತ್ತಿರತಕ್ಕ ಮಾದರಿಯ ಮನೆಗಳ ಗುಣಮಟ್ಟವನ್ನು ನೀವು ಕಾಪಾಡಿದ್ದೇ ಆದರೆ ಅವು ಕನಿಷ್ಠ ೨೦-೩೦ ವರ್ಷ ಇರುವುದಕ್ಕೆ ಸಾಧ್ಯವಾಗುತ್ತದೆ. ಗುಣಮಟ್ಟದ ಕಡೆಗೆ ಬಹಳಷ್ಟು ಗಮನವನ್ನು ಕೊಡಬೇಕೆನ್ನತಕ್ಕ ಮಾತನ್ನು ಹೇಳುತ್ತೇನೆ. ಮೊನ್ನೆ ಮಳೆ ಬಂದಂತಹ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಸಾಕಷ್ಟು ಮನೆಗಳು ಬಿದ್ದುಹೋಗಿವೆ. ಸುಮಾರು ೬ ಸಾವಿರ ಮನೆಗಳು ನನ್ನ ಕ್ಷೇತ್ರದಲ್ಲಿ ಬಿದ್ದುಹೋಗಿದೆ. ತಹಶೀಲ್ದಾರರು ೬೦೦ ಮನೆಗಳನ್ನೂ ೮೦೦ ಮನೆಗಳನ್ನೂ ಪಟ್ಟಿಮಾಡಿರುತ್ತಾರೆ. ಮಳೆ ಬಂದು ನಿಂತು ಹೋದಮೇಲೆ ಸಾಕಷ್ಟು ಮನೆಗಳು ಬಿದ್ದುಹೋಗಿವೆ. ಅವರು ಅಲ್ಲಿ ವಾಸಮಾಡುವುದಕ್ಕಾಗುವುದಿಲ್ಲ. ಅಂತಹವರಿಗೆ ನೀವು ವಿಶೇಷವಾಗಿ ಹೆಚ್ಚಿನ ಮನೆಗಳನ್ನು ಆಶ್ರಯ ಯೋಜನೆಯ ಅಡಿಯಲ್ಲಿ ಕೊಡಿಸಿಕೊಡಬೇಕು.

ಆವತ್ತಿನ ಪಟ್ಟಿಯನ್ನೇ ಆಧಾರವನ್ನಾಗಿ ಇಟ್ಟುಕೊಂಡರೆ ಆಗುವುದಿಲ್ಲ. ವಾಸ್ತವಿಕವಾಗಿ ಎಷ್ಟು ಬಿದ್ದು ಹೋಗಿದೆ ಎನ್ನತಕ್ಕದ್ದರ ಅಂಕಿ ಅಂಶವನ್ನು ನೀವು ತರಿಸಿ ಮನೆಗಳನ್ನು ಕೊಡಿಸಿಕೊಡಬೇಕು. ಆ ರೀತಿ ಯಾದರೂ ನನ್ನ ಕ್ಷೇತ್ರಕ್ಕೆ ಇನ್ನು ಸುಮಾರು ಒಂದು ಸಾವಿರ ಮನೆಗಳನ್ನು ಕೊಡಬೇಕಾಗುತ್ತದೆ. ಅದರ ಬಗ್ಗೆ ಆಸಕ್ತಿವಹಿಸಿ ನೀವು ಮನೆಗಳನ್ನು ಕೊಡಸಿಕೊಡಬೇಕೆಂದು ಹೇಳಿ ನಾನು ಕೂಡ ಇವತ್ತು ಒತ್ತಾಯ ಪೂರ್ವಕವಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ಇವತ್ತು ಬೆಂಗಳೂರಿನ ಮಹಾನಗರದಲ್ಲಿ ಬೆಳೆಯುತ್ತಿರತಕ್ಕ ಜನಸಂಖ್ಯೆ ಬಗ್ಗೆ ಪಟ್ಟಣ ಎಷ್ಟು ವಿಸ್ತಾರವಾಗುತ್ತಿದೆ ಎನ್ನುವುದರ ಬಗ್ಗೆ ನಾನು ಹೆಚ್ಚಿಗೆ ಹೇಳತಕ್ಕಂತಹ ಆವಶ್ಯಕತೆ ಇಲ್ಲ. ಈಗಾಗಲೇ ವಿಷ್ವಾದಲ್ಲೇ ಒಂದು ದೊಡ್ಡ ಪಟ್ಟಣವಾಗಿ ಬೆಳೆಯುತ್ತಿರುವಂತಹ ಸಂದರ್ಭದಲ್ಲಿ ಇದಕ್ಕೆ ನೀವು to avoid stress in Bangalore ... ನನ್ನ ಸಲಹೆ ಏನೆಂದರೆ ನೀವು ಬೆಂಗಳೂರಿನ ಸುತ್ತಮುತ್ತಲು ಬರತಕ್ಕ ಪ್ರದೇಶಗಳನ್ನು ನೀವು ಡೆವಲಪ್ ಮಾಡುವುದರಿಂದ ಇನ್‌ಫ್ರಾಸ್ಟ್ರಕ್ಚರ್ ಕೊಡುವುದರಿಂದ ನೀವು ಸಾಕಷ್ಟು ಸವಲತ್ತು ಕೊಡುವುದರಿಂದ ಈ ಬೆಂಗಳೂರು ಬೆಳೆಯತಕ್ಕಂಥ ಪಟ್ಟಣ ಮತ್ತು ನಾವು ಬೆಳಗ್ಗೆ ಎದ್ದರೆ ನಾವು ಎದುರಿಸುವುದಕ್ಕೆ ಆಗದೇ ಇರತಕ್ಕ ಸಮಸ್ಯೆಗಳನ್ನು ದೂರಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೋಸ್ಕರ ನನ್ನ ಸಲಹೆಯೇನೆಂದರೆ, ಈಗ ತಮ್ಮ ಭಾಗದಲ್ಲಿರತಕ್ಕಂಥ ತುಮಕೂರು ಏನಿದೆ ಅದಕ್ಕೆ ಹೆಚ್ಚು ಒತ್ತು ಕೊಟ್ಟು, ತುಮಕೂರು-ಬೆಂಗಳೂರು ಲೋಕಲ್ ಟ್ರೈನ್ ಹಾಕಬೇಕು. ಏಕೆಂದರ ಒಂದು ದಿನಕ್ಕೆ ೮೦೦೦-೧೦೦೦೦ ಜನ ನೌಕರರು ತುಮಕೂರಿನಿಂದ ಬೆಂಗಳೂರಿಗೆ ಬಂದು ಮತ್ತೆ ವಾಪಸ್ಸು ಹೋಗುತ್ತಿರುವುದನ್ನು ನೋಡಿದ್ದೇವೆ. ನಾವು ಲೋಕಲ್ ಟ್ರೈನ್‌ನಲ್ಲಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ೫-೬ ಟ್ರೈನ್‌ಗಳಿದ್ದರೂ ಎಲ್ಲರೂ ನಿಂತುಕೊಂಡು ಪ್ರಯಾಣ ಮಾಡತಕ್ಕಂಥ ಪರಿಸ್ಥಿತಿ ಇದೆ. ಇವೊತ್ತು ನೀವು ಲೊಕಲ್ ಟ್ರೈನ್ ಅನ್ನು ಹಾಕತಕ್ಕಂಥ ವ್ಯವಸ್ಥೆ ಮಾಡಿದರ ನಿಜವಾಗಿಯೂ ಬೆಂಗಳೂರಿನ ಮೇಲೆ ಆಗತಕ್ಕಂಥ ಒತ್ತಡ ಬಹಳಷ್ಟು ಮಟ್ಟಿಗೆ ಕಡಿಮೆಯಾಗುವುದಕ್ಕೆ ಸಾಧ್ಯವಾಗುತ್ತದೆ, ಮತ್ತು ತುಮಕೂರು ಕೂಡ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ತುಮಕೂರಿಗೆ ಹೋಗಬೇಕಾದರೆ ನೀವು ನೋಡಿರಬಹುದು ಕನಿಷ್ಟ ಪಕ್ಷ ೫-೧೦ ಆಕ್ಸಿಡೆಂಟ್ ಆಗಿರತಕ್ಕಂಥಾದ್ದು. ಈಗ ಏನು ಫೋರ್‌ಲೈನ್ಸ್ ರೋಡು ಇದೆ. ಅದೇನೂ ಸಾಕಾಗುವುದಿಲ್ಲ ಆದರಿಂದ ಪ್ರಯೋಜನವಾಗುವುದಿಲ್ಲ. ನೀವು ಕೇಂದ್ರ ಸರ್ಕಾರದವರ ಜೊತೆ ವ್ಯವಹರಿಸಿ ಇನ್ನು ೮ ಲೈನ್ ಲೇನ್ ರೋಡ್ಸ್ ಮಾಡಿದರೆ ಬಹಳಷ್ಟು ಸೂಕ್ತವಾಗುತ್ತದೆ. ಅದರ ಬಗ್ಗೆ ತಾವು ಯೋಚಿಸಬೇಕೆನ್ನುವಂಥ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಬೆಂಗಳೂರಿನಲ್ಲಿ ಒಂದು ಸೈಟಿನ ಬೆಲೆ ಎಷ್ಟಾಗಿದೆಯೆಂದರೆ, ನಮ್ಮ ಊರಿನಲ್ಲಿ ನೂರು ಎಕರೆ ಜಮೀನು ಇಟ್ಟಿರುವುದೂ ಒಂದೇ, ಇಲ್ಲಿ ಒಂದು ಸೈಟ್ ಇಟ್ಟಿರುವುದು ಒಂದೇ. ಅಷ್ಟು ವ್ಯತ್ಯಾಸವಾಗಿದೆ. ಅದರಲ್ಲೂ ವಿಶೇಷವಾಗಿ ಬ್ಲಾಕ್ ಮನಿ ಎನ್ನತಕ್ಕಂಥಾದ್ದು ಏನಿದೆ ಆ ಬ್ಲಾಕ್ ಮನಿ ಎಲ್ಲಾ ಬೆಂಗಳೂರಿನಲ್ಲಿಯೇ ಇದ್ದು, ಅದನ್ನು ಸೈಟ್ ಮೇಲೆ ಹಾಕುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಒಂದು ಸಾಧ್ಯತೆ ಇದೆ. ಆದಷ್ಟು ಲೇ ಔಟ್‌ಗಳನ್ನು ಮಾಡಿಸುವುದರ ಮುಖಾಂತರ ತಪ್ಪಿಸಬಹುದು. ಅದನ್ನು ಆನಂತರ ಹೇಳುತ್ತೇನೆ. ಈಗ ಒಂದು ಉದಾಹರಣೆ ಕೊಡುತ್ತೇನೆ. ಏಕೆಂದರೆ, ಭ್ರಷ್ಟಾಚಾರ ಪ್ರಶ್ನೆ ಬಂದಾಗ ನಿರ್ದಿಷ್ಟವಾದಂಥ ಸಂಗತಿಗಳನ್ನು ಹೇಳಿ ತಾವು ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುವಾಗ ನಾನು ನೇರವಾಗಿ ಹೇಳುತ್ತಿದ್ದೇನೆ. ತಮ್ಮ ಕ್ಷೇತ್ರಕ್ಕೆ ಬರತಕ್ಕಂಥ ಜಯಮಹಲ್ ಎಕ್ಸ್‌ಟೆನ್‌ಷನ್ ಪ್ರದೇಶದಲ್ಲಿ ಇವೊತ್ತಿಗೂ ಬಿಟ್ಟಿ ಸರ್ಕಾರಕ್ಕೆ ಸೇರತಕ್ಕಂಥ,

ಸರ್ಕಾರದ ನಿಯಂತ್ರಣದಲ್ಲಿರುವ ಸುಮಾರು ೭೦-೮೦ ಎಕರೆ ಜಮೀನನ್ನು ಯಾವುದೇ ಒಂದು ಟೈಟಲ್ ಇಲ್ಲದೆ ಇರತಕ್ಕಂಥವನ್ನು ಇಟ್ಟುಕೊಂಡಿದ್ದು, ಅದನ್ನು ಬೆಂಗಳೂರು ಸಿಟಿ ಕಾರ್ಪೋರೇಷನ್ ಕನ್ವೇಯನ್ಸ್ ಮುಖಾಂತರ ಎಲ್ಲವನ್ನೂ ಮಾರಿ ಕೋಟಿಗಟ್ಟಲೆ ಹಣ ಮಾಡತಕ್ಕಂಥ ನಿದರ್ಶನ ಕೂಡ ಇದೆ. ಬೇಕಾದರೆ ಅವರ ಹೆಸರು ಹೇಳಿ ಎಂದರೆ ಎಂ. ಬಿ. ರಾಮಚಂದ್ರ ಎನ್ನುವವರು. ಇವರಿಗೆ ಯಾವುದೇ ಹಕ್ಕಿಲ್ಲ. ಅವರಿಗೆ ಅರ್ಬನ್ ಸೀಲಿಂಗ್ ಆ್ಯಕ್ಟ್ ಇದೆ. ಅವನು ಯಾವ ರೀತಿ ಮಾಡುತ್ತಿದ್ದಾನೆ, ಏನು ಮಾಡುತ್ತಿದ್ದಾನೆ ಎನ್ನುವುದರ ಬಗ್ಗೆ ಸ್ಥಳೀಯ ಜನರು ಸರ್ಕಾರಕ್ಕೆ ಸಾಕಷ್ಟು ಮನವಿಗಳನ್ನು ಕೊಟ್ಟರೂ ಅದರ ಬಗ್ಗೆ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಯಾವುದೇ ಕಾಗದ ಬರೆದರೂ ಕೂಡ ಕೋರ್ಟಿನಲ್ಲಿದೆ, ಅಲ್ಲಿದೆ, ಇಲ್ಲಿದೆ ಎನ್ನತಕ್ಕಂಥ ಉತ್ತರವನ್ನು ಕೊಡುವುದರಲ್ಲಿ ಅರ್ಥವಿಲ್ಲ. ನಾನು ಒಂದು ಸಲಹೆ ಕೊಡತಕ್ಕಂಥಾದ್ದು ಏನೆಂದರೆ, ಇಂತಹ ಪಟ್ಟಣ ಪ್ರದೇಶಗಳಲ್ಲಿ ಸರ್ಕಾರದ ಕಂಟ್ರೋಲ್‌ನಲ್ಲಿ ಇರತಕ್ಕಂಥ ಆಸ್ತಿಗಳೇನಿವೆ? ಎಷ್ಟು ಇವೆ? ಅವನ್ನು ಯಾವ ರೀತಿ ಕಂಟ್ರೋಲ್‌ಮಾಡಬೇಕು? ಇವೊತ್ತು ಲಿಟಿಗೇಶನ್ ಯಾವ ರೀತಿ ಇದೆ? ಎನ್ನುವುದರ ಬಗ್ಗೆ ಒಂದು ಸಮೀಕ್ಷೆ ನಡೆಸಿ, ಕಂಟ್ರೋಲ್ ಮಾಡಿದರೆ, ಸರ್ಕಾರದಲ್ಲಿ ಕೋಟ್ಯಾಂತರ ರೂಪಾಯಿಗಳ ಆಸ್ತಿಗಳನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಬೆಂಗಳೂರು ಸಿಟಿ ಕಾರ್ಪೋರೇಷನ್‌ನಲ್ಲಿ ಬಹಳ ಜನ ಶಾಮೀಲಾಗಿದ್ದಾರೆ. ಅವರ ಬಗ್ಗೆ ನೀವು ಹೆಚ್ಚು ಆಸಕ್ತಿ ವಹಿಸಬೇಕೆಂಬ ಮಾತನ್ನು ಹೇಳುತ್ತಾ, ಎಂಟರ್‌ಟೇನ್‌ಮೆಂಟ್ ಪ್ಲೇಸ್ ಬಗ್ಗೆ ಹೇಳಬೇಕೆಂದರೆ, ಇವೊತ್ತು ಬೆಂಗಳೂರಿನಲ್ಲಿ ೪೦ರಿಂದ ೪೫ ಲಕ್ಷ ಜನ ಸಂಖ್ಯೆ ಇದೆ. ಬೆಂಗಳೂರಿನಲ್ಲಿ ಎಂಟರ್‌ಟೇನ್‌ಮೆಂಟ್ ಪ್ಲೇಸ್ ಎಂದರೆ ವಿಧಾನಸೌಧ ಒಂದೇ. ಇವೊತ್ತು ಲಾಲಬಾಗ್ ಮತ್ತು ವಿಧಾನಸೌಧ ಬಿಟ್ಟರೆ ಬಹುಶಃ ಎಂಟರ್‌ಟೇನ್‌ಮೆಂಟ್ ಪ್ಲೇಸ್ ಬೇರೆಲ್ಲೂ ಇಲ್ಲದೆ ಇರತಕ್ಕಂಥಾದ್ದು ತಮಗೆ ಗೊತ್ತಿದೆ. ಮದ್ರಾಸ್‌ನಲ್ಲಿ ಖಾಸಗಿ (ವಿ. ಜಿ. ಪಿ.)ಯವರಿಗೆ ಕೆಲಸ ವಹಿಸಿ ಎಂಟರ್‌ಟೇನ್‌ಮೆಂಟ್ ಪ್ಲೇಸ್ ಆಗಿ ಪಾರ್ಕುಗಳನ್ನು ಡೆವಲಪ್‌ಮೆಂಟ್ ಮಾಡಿಸಿದ್ದಾರೆ. ಆ ತರಹ ಬೆಂಗಳೂರಿನಲ್ಲೂ ಮಾಡಿದರೆ ನಿಜವಾಗಲೂ ಅನುಕೂಲವಾಗುತ್ತದೆ. ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ತಾವು ಶನಿವಾರ ಮತ್ತು ಭಾನುವಾರ ದಿವಸಗಳಂದು ಸಾಯಂಕಾಲದ ಹೊತ್ತು ವಿಧಾನ ಸೌಧದ ಕಡೆಗೆ ಬಂದರೆ, ತಮಗ ತಿರುಗಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಷ್ಟು ಜನರು ಇರುತ್ತಾರೆ. ಆಗ ಜನರು ಎಲ್ಲಿಗೆ ಹೋಗಬೇಕಾಗುತ್ತದೆ? ಅದಕ್ಕೋಸ್ಕರ, ಈ ದಿಸೆಯಲ್ಲಿ 'ಯೋಚನೆ ಮಾಡಬೇಕೆಂಬ ಮಾತನ್ನು ಹೇಳುತ್ತಾ, ಬಿ. ಡಿ. ಎ. ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಬಿ. ಡಿ. ಎ. ಕಾರ್ಯವ್ಯಾಪ್ತಿ ಏನು? ಯಾವ ಉದ್ದೇಶಕ್ಕಾಗಿ ಬಿ. ಡಿ. ಎ. ಸ್ಥಾಪನೆಯಾಗಿದೆ? ಅದರ ಉದ್ದೇಶವೇನಾದರೂ ಸಾಧನೆಯಾಗುತ್ತಿದೆಯೇ? ನೀವು ಈಗಾಗಲೇ ಅಧಿಕಾರಕ್ಕೆ ಬಂದು ಮೂರು ವರ್ಷವಾಗುತ್ತಿದೆ. ನೀವು ಮಾಡಿರತಕ್ಕಂಥ ಸುಧಾರಣೆಯಾದರೂ ಏನು? ಸಾಧನೆಯಾದರೂ ಏನು? ಎನ್ನತಕ್ಕಂಥಾದ್ದರ ಬಗ್ಗೆ ಯೋಚಿಸಬೇಕು. ಈ ಹಿಂದೆ ನೀವು ಸೈಟುಗಳನ್ನು ಕೊಡುತ್ತೇವೆಂದು ೮-೧೦ ವರ್ಷಗಳ ಹಿಂದೆ ಅರ್ಜಿಗಳನ್ನು ಕರೆದು, ಸುಮಾರು ೩೦ ರಿಂದ ೩೫ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿದ್ದರೂ ಸೈಟುಗಳನ್ನು ಕೊಡುತ್ತಿಲ್ಲ. ಅಲ್ಲದೆ, ಅವರಿಗೆ ದುಡ್ಡನ್ನು ಸಹ ವಾಪಸ್ಸು ಕೊಡುತ್ತಿಲ್ಲ. ದುಡ್ಡನ್ನು ವಾಪಸ್ ಕೊಡುತ್ತಿದ್ದಾರೆ. ಆದರೆ, ೮ ವರ್ಷದ ದುಡ್ಡನ್ನು ಮುಫತ್ತಾಗಿ ಇಟ್ಟುಕೊಂಡು ಯಾವುದೇ ಬಡ್ಡಿ ಇಲ್ಲದ ರೀತಿಯಲ್ಲಿ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದರೆ ಇದು ಯಾವ ನ್ಯಾಯ? ಇಲ್ಲಿ ನಿರ್ದಿಷ್ಟವಾದ ತೀರ್ಮಾನ ಮಾಡಬೇಕಾಗಿದೆ. ಈಗ ಬಿ.

ಡಿ. ಎ. ಇರಬೇಕೆ? ಅಥವಾ ಬೇಡವೇ? ಎಂಬುದರ ಕುರಿತು ತೀರ್ಮಾನ ಮಾಡಿ. ಬಿ. ಡಿ. ಎ. ಕಾರ್ಯವ್ಯಾಪ್ತಿ ಏನು? ಎನ್ನುವುದರ ಬಗ್ಗೆ ಸ್ಪಷ್ಟಪಡಿಸಿದರೆ ಮಾತ್ರ ಇದು ಸಾಧ್ಯವಾಗುತ್ತದೆ. ಇದರ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಏಕೆಂದರೆ, ಜಯನಗರ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಯನ್ನು ನಾನು ಚೆನ್ನಾಗಿ ಬಲ್ಲವನಾಗಿದ್ದೇನೆ. ಅವರು ಸಾಕಷ್ಟು ಒಳ್ಳೆಯ ಲೇಔಟ್‌ಗಳನ್ನು ಮಾಡಿರುವುದನ್ನು ನಾವು ನೋಡಿದ್ದೇವೆ. ಈಗ ಅವರಿಗೆ ಸೈಟು ಕೊಡುವುದಕ್ಕೆ ಸುಮಾರು ೨೦೦ ಎಕರೆ ಜಮೀನನ್ನು ನೀವು ಕೊಡುತ್ತೀರಿ. ಈಗ ಸುಮಾರು ಒಂದೂವರೆ ಕೋಟಿ ರೂಪಾಯಿಗಳನ್ನು ಕಟ್ಟಿ ೮-೧೦ ವರ್ಷಗಳಾಗಿವೆ. ಇವತ್ತಿನವರೆಗೂ ಕೂಡ ಅವರಿಗೆ ಸೈಟುಗಳನ್ನು ಕೊಡಲು ಆಗುತ್ತಿಲ್ಲ. ಅದರ ಬಗ್ಗೆ ಏನನ್ನೂ ಕೂಡ ಮಾಡುವುದಕ್ಕೆ ಆಗುತ್ತಿಲ್ಲ ಅಂಥ ಪರಿಸ್ಥಿತಿ ಅಲ್ಲಿ ಇದೆ. ಆದುದರಿಂದ ಬಿ. ಡಿ. ಎ. ಮುಖಾಂತರವಾಗಲಿ ಇಲ್ಲದಿದ್ದರೆ ಖಾಸಗಿಯವರಿಗಾದರೂ ಕೊಟ್ಟು ಈ ಕೆಲಸವನ್ನಾದರೂ ಮಾಡತಕ್ಕದ್ದನ್ನು ಮಾಡಿ. ಏಕೆಂದರೆ ಸೈಟುಗಳನ್ನು ಕೊಡದಿದ್ದರೆ ಸೈಟ್ ವ್ಯಾಲುಯೇಷನ್ ತಡೆಯಲು ಆಗುವುದಿಲ್ಲ. ಅದು ವಿಪರೀತವಾಗಿ ಏರುತ್ತಿದೆ. ಮಧ್ಯಮವರ್ಗದವರಿಗೆ ಸೈಟುಗಳನ್ನು ಪಡೆಯುವುದಕ್ಕೆ ಕಷ್ಟವಾಗುತ್ತಿದೆ ಎನ್ನತಕ್ಕದ್ದನ್ನು ನಾವು ಅರಿಯಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ಈ ಸಿವಿಕ್ ಅಮೆನಿಟಿ ಸೈಟ್ಸ್ ಎಂದು ಇರತಕ್ಕದ್ದನ್ನು ಲೀಸ್ ಮೇಲೆ ಮಾರುವುದನ್ನು ತಪ್ಪಿಸಬೇಕು ಅದನ್ನು ಇವತ್ತು ಸಾರ್ವಜನಿಕರ ಉದ್ದೇಶಕ್ಕಾಗಿ ಮೀಸಲಾಗಿಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಪಟ್ಟಣ ಪ್ರದೇಶಗಳಲ್ಲಿ ಎಲ್ಲಾದರೂ ಕೂಡ ಮಕ್ಕಳು ಆಟವಾಡಲು ಯಾವುದೇ ಒಂದು ಜಾಗವಿಲ್ಲ. ಇರತಕ್ಕ ಪಾರ್ಕುಗಳೆಲ್ಲವೂ ಸಹ ಆಟದ ಮೈದಾನವಾಗಿ ಪರಿವರ್ತನೆಯಾಗಿದೆ. ಯಾರಾದರೂ ಮನೆಯ ಪಕ್ಕದಲ್ಲಿ ಸೈಟ್ ಖಾಲಿ ಇದ್ದರೆ ಅಲ್ಲಿ ಮಕ್ಕಳು ಕ್ರಿಕೆಟ್ ಆಟವಾಡುತ್ತಾರೆ. ಇದರಿಂದ ಯಾರ ಮನೆಯ ಕಿಟಕಿಗಳೂ ಉಳಿಯದಿರತಕ್ಕ ಪರಿಸ್ಥಿತಿ ಬಂದಿದೆ. ಆದುದರಿಂದ ಸ್ಥಳೀಯವಾಗಿರತಕ್ಕ ಜನಸಂಖ್ಯೆಗೆ ಅನುಗುಣವಾಗಿ ಸಿವಿಕ್ ಅಮೆನಿಟೀಸ್ ಸೈಟನ್ನು ಹೆಚ್ಚು ಮಾಡಬೇಕು ಮತ್ತು ಇದನ್ನು ಉಳಿಸಬೇಕು ಎನ್ನತಕ್ಕ ಒಂದು ಮಾತನ್ನು ಹೇಳುತ್ತೇನೆ. ಈಗ ಡಿ ನೋಟಿಫಿಕೇಷನನ್ನು ಮಾಡತಕ್ಕದ್ದನ್ನು ನಾವು ನೋಡಿದ್ದೇವೆ. ಈ ಡಿ ನೋಟಿಫಿಕೇಷನ್‌ನ್ನು ಯಾವ ಆಧಾರದ ಮೇಲೆ ಮಾಡುತ್ತೀರಿ ಎನ್ನುವುದನ್ನು ಕೂಡ ತಾವು ಸ್ಪಷ್ಟಪಡಿಸಬೇಕಾಗುತ್ತದೆ. ಅನೇಕ ಜನರು ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ, ಅನೇಕ ಸಂಘ ಸಂಸ್ಥೆಗಳು ಬಿ. ಡಿ ಎ. ನಿಂದ ಸೈಟನ್ನು ಪಡೆಯುವದಕ್ಕೆ ಪ್ರಯತ್ನ ಪಟ್ಟು ವಿಫಲರಾಗಿ, ಯಾವುದೋ ಸೊಸೈಟಿಯ ಮುಖಾಂತರವಾಗಿ ಅಲ್ಲೆಲ್ಲೋ ಹೋಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ರೀತಿ ಹತ್ತಾರು ವರ್ಷಗಳಿಂದ ಕಟ್ಟಿಕೊಂಡಿರತಕ್ಕ ಮನೆಗಳನ್ನು ಇವತ್ತು ವಶಪಡಿಸಿಕೊಂಡು ನೋಟಿಫಿಕೇಷನ್ ಮಾಡಲು ಹೊರಟ್ಟಿದ್ದೀರಿ. ಕೆಲವನ್ನು ಡಿ ನೋಟಿಫಿಕೇಷನ್ ಮಾಡುತ್ತಿದ್ದೀರಿ. ಈ ರೀತಿಯ ಡಿ ನೋಟಿಫಿಕೇಷನ್ ಮಾಡಬೇಕಾದರೆ ನಿಮ್ಮ ಕಾನೂನು ಏನು? ನಿಮ್ಮ ನಿಯಮ ಏನು? ಯಾವ ಪ್ರಕಾರವಾಗಿ ಅದನ್ನು ಮಾಡುತ್ತೀರಿ ಎನ್ನತಕ್ಕದ್ದನ್ನು ಕೂಡ ಸ್ಪಷ್ಟಪಡಿಸಿದರೆ ಒಳ್ಳೆಯದಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಇನ್ನು ಹೌಸಿಂಗ್ ಬೋರ್ಡ್‌ನ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಆಶ್ರಯ ಯೋಜನೆಯ ಅಡಿಯಲ್ಲಿ ಬರತಕ್ಕ ಮನೆಗಳನ್ನು ಹೌಸಿಂಗ್ ಬೋರ್ಡ್‌ನ ಮುಖಾಂತರ ಕಟ್ಟಿಸಲು ಪ್ರಯತ್ನ ಪಡುತ್ತಿದ್ದೀರಿ. ಇದರ ಜೊತೆಗೆ ಈಗಾಗಲೆ ಕಟ್ಟಿರತಕ್ಕ ಅನೇಕ ಮನೆಗಳ ಗುಣಮಟ್ಟವನ್ನು ಕಾಪಾಡುವುದರ ಬಗ್ಗೆ ಕೂಡ ಇದರಲ್ಲಿ ತೆಗೆದುಕೊಳ್ಳಬೇಕು. ಇದಕ್ಕೆ ಈ ಸಭೆಯ

ಎಲ್ಲಾ ಸದಸ್ಯರುಗಳ ಸಹಮತವಿದೆ. ಆದರೆ ಈ ಬಗ್ಗೆ ಈ ಸಭೆಯಲ್ಲಿ ಪ್ರಸ್ತಾಪವೂ ಕೂಡ ಆಗಿದೆ. ಆದ್ದರಿಂದ ಕಟ್ಟಿರತಕ್ಕ ಮನೆಗಳ ಗುಣಮಟ್ಟದ ಬಗ್ಗೆಯೂ ಕೂಡ ಗಮನ ಕೊಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಮತ್ತು ನನ್ನ ಕ್ಷೇತ್ರವಾದ ಹುಳಿಯಾರದಲ್ಲಿಯೂ ಕೂಡ ಹೌಸಿಂಗ್ ಬೋರ್ಡ್ಸ್ ಮುಖಾಂತರ ಮನೆಯನ್ನು ಕಟ್ಟಬೇಕೆಂದು ಹೇಳಿ ಬಹಳಷ್ಟು ವಿಚಾರವಿನಿಮಯ ಮಾಡಿದ್ದೇನೆ. ಇದಕ್ಕೆ ಬಹಳ ಬೇಡಿಕೆ ಇದ್ದರೂ ಕೂಡ ನಾವು ಈ ರೀತಿ ಕಟ್ಟುವುದಕ್ಕೆ ಪ್ರಯತ್ನ ಪಡುತ್ತಿಲ್ಲ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಎಲ್ಲಿ ಬೇಡಿಕೆ ಇಲ್ಲವೋ ಅಲ್ಲಿ ಕಟ್ಟಲು ಪ್ರಯತ್ನ ಪಡುತ್ತಿದ್ದಾರೆ. ಆದ್ದರಿಂದ ಇದಕ್ಕೆ ಬೇಡಿಕೆ ಎಲ್ಲಿ ಇದೆಯೋ ಅಂಥ ಕಡೆ ಕಟ್ಟುವುದಕ್ಕೆ ನಾವು ಪ್ರಯತ್ನ ಪಡಬೇಕೆಂದು ಒಂದು ಮಾತನ್ನು ಹೇಳುತ್ತೇನೆ.

ಒಟ್ಟಿನಲ್ಲಿ ನಮ್ಮ ಮುನಿಸಿಪಾಲಿಟಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಧನಮೇಗೌಡರು ಈಗಲೇ ಅಲ್ಲಿರತಕ್ಕ ಭ್ರಷ್ಟಾಚಾರದ ಬಗ್ಗೆ ಹೇಳಿದರು. ನಾನು ಅದರ ಬಗ್ಗೆ ಒಂದೇ ಒಂದು ನಿದರ್ಶನವನ್ನು ಕೊಡುತ್ತೇನೆ. ಇವತ್ತು ಭ್ರಷ್ಟಾಚಾರ ಕೆಳಗಿನ ಹಂತದಲ್ಲಿದೆ. ಅದನ್ನು ನಾವು ಆಕ್ಷೇಪ ಮಾಡತಕ್ಕದ್ದು ಸರಿಯಲ್ಲ. ಯಾವ ಜನರು ನನಗೆ ಓಟನ್ನು ಕೊಟ್ಟಿದ್ದಾರೆ ಅದೇ ಜನ ಇವತ್ತು ಮುನಿಸಿಪಾಲಿಟಿಯಲ್ಲಿಯೂ ಬೇರೆ ಜನರಿಗೆ ಓಟನ್ನು ಕೊಟ್ಟು ಅಧಿಕಾರಕ್ಕೆ ತಂದಿದ್ದಾರೆ. ನಾವು ಅವರುಗಳ ಬಗ್ಗೆ ಹಗುರವಾಗಿ ಮಾತನಾಡತಕ್ಕದ್ದು ಸರಿಯಲ್ಲ. ಆದರೆ ಈ ಭ್ರಷ್ಟಾಚಾರ ಎಂಬುದು ಎಲ್ಲಿಗೆ ಬಂದು ಮುಟ್ಟಿದೆ ಎಂದರೆ ಅದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಪೂರ್ತಾ ತುಮಕೂರಿನ ಸಿ.ಎಸ್. ಲೇಔಟ್‌ನಲ್ಲಿ ಕೆಲವು ಜನರು ಜ್ಯೋತಿ ಕಾಂಪ್ಲೆಕ್ಸ್ ಎನ್ನತಕ್ಕ ಕಾಂಪ್ಲೆಕ್ಸನ್ನು ಕಟ್ಟಿದ್ದಾರೆ. ಆ ಕಟ್ಟಡವನ್ನು ಕಟ್ಟಿ ೫-೬ ವರ್ಷಗಳಾಗಿದೆ. ಅದರ ಇನ್ವೆಸ್ಟ್‌ಮೆಂಟ್ ಆಗಿದೆ. ಅವರು ಟ್ಯಾಕ್ಸನ್ನು ಕಟ್ಟುತ್ತಿದ್ದಾರೆ. ಆದರೆ ಅವರಿಗೆ ಇಲ್ಲಿಯವರೆಗೂ ಒಂದು ಟ್ರೇಡ್ ಲೈಸೆನ್ಸನ್ನು ಕೊಡಲು ಆಗುತ್ತಿಲ್ಲ. ಏಕೆಂದರೆ ಒಂದು ಲೈಸೆನ್ಸ್‌ಗೆ ಇಷ್ಟು ಹಣವನ್ನು ಕೊಡಲೇಬೇಕೆಂದು. ದಯಮಾಡಿ ತಾವು ಕಡತವನ್ನು ತೆಗೆದುಕೊಂಡು ನೋಡಿ. ಒಂದು ಟ್ರೇಡ್ ಲೈಸೆನ್ಸನ್ನು ಕೊಡಲು ೫೦ ಸಾವಿರ ಒಂದು ಲಕ್ಷ ರೂಪಾಯಿ ಲಂಚವನ್ನು ಕೇಳುವಂಥ ಮಟ್ಟಕ್ಕೆ ಹೋದರೆ ಇದನ್ನು ಹೇಗೆ ತಪ್ಪಿಸುತ್ತೀರಿ? ಆ ಕಾಂಪ್ಲೆಕ್ಸ್ ಕಟ್ಟಿರತಕ್ಕವರ ಪರಿಸ್ಥಿತಿ ಏನು? ಅವರು ತಂದಿರತಕ್ಕ ಹಣದ ಬಗ್ಗೆ ಏನು? ದಯಮಾಡಿ ಅದರ ಬಗ್ಗೆ ವಿಚಾರಣೆ ಮಾಡಿ. ಇದರಿಂದ ಬಹಳಷ್ಟು ಜನ ಅಧಿಕಾರಿಗಳು ಮನೆಗೆ ಹೋಗುತ್ತಾರೆ. ಇವತ್ತು ಮುನಿಸಿಪಾಲಿಟಿಯಲ್ಲಿ ಪ್ರೆಸಿಡೆಂಟ್ ಆಗಿರಬಹುದು ಇನ್ಸ್‌ಪೆಕ್ಟರು ಖಾಸಗಿಯವರಾಗಿರಬಹುದು ಅವರಿಗೆ ಅವಮಾನವಾಗತಕ್ಕ ಪರಿಸ್ಥಿತಿಯೂ ಕೂಡ ಇದೆ. ಅದಕ್ಕೋಸ್ಕರ ಅದರ ಬಗ್ಗೆ ಕಡತವನ್ನು ತರಿಸಿಕೊಂಡು ನೋಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಅದರ ಜೊತೆಗೆ ರೆಕಾರ್ಡ್ಸನ್ನು ಕಳುಹಿಸಿ ಕೊಟ್ಟರೆ ನಾಳೆಯೇ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ:- ಪ್ರಭಾವವಿದ್ದರೆ ಮುನಿಸಿಪಾಲಿಟಿಯಲ್ಲಿ ಯಾವ ರೀತಿಯಲ್ಲಿ ನಡೆಯುತ್ತದೆಂದರೆ ಹುಳಿಯಾರ್‌ನಿಂದ ಕುಣಿಗಲ್ ರಸ್ತೆಯಲ್ಲಿ ಒಂದು ಜ್ಯೋತಿ ಕಾಂಪ್ಲೆಕ್ಸ್ ಎಂದು ಮಾಡಿದ್ದಾರೆ. ಅದರ ಪಕ್ಕದಲ್ಲಿ ಈಗ ಸುಮಾರು ೭೦-೮೦ ಲಕ್ಷದ ವೆಚ್ಚದಲ್ಲಿ ಒಂದು ದೊಡ್ಡ ಹೋಟೆಲನ್ನು ಕಟ್ಟುತ್ತಿದ್ದಾರೆ. ಆ ಹೋಟೆಲ್ ಕಟ್ಟುತ್ತಿರುವವರು ಯಾವುದೋ ದೊಡ್ಡ ಪ್ರಭಾವಶಾಲಿಯಾಗಿದ್ದಾರೆ. ಅವರ ಬಗ್ಗೆ ನಾವು ಯಾವುದೇ ಮಾತನಾಡಲಾಗುವುದಿಲ್ಲ. ಅವರ ಬಗ್ಗೆ

ನಾವು ಕ್ರಮವನ್ನು ತೆಗೆದುಕೊಳ್ಳಲು ಆಗುವುದಿಲ್ಲ. ನಾನು ಈ ಎರಡು ಕೇಸ್‌ಗಳನ್ನು ಬರೆದು ನಿಮಗೆ ಕಳಿಸುತ್ತೇನೆ. ಮತ್ತೆ ಇದರ ಬಗ್ಗೆ ತಾವು ಎಷ್ಟರಮಟ್ಟಿಗೆ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಎನ್ನತಕ್ಕ ಬಗ್ಗೆ ನಾನು ಮುಂದಿನ ಸಲ ಪ್ರಸ್ತಾಪ ಮಾಡುತ್ತೇನೆ.

ಇನ್ನು ನಿಮ್ಮಲ್ಲಿ ಯು. ಬಿ. ಎಸ್ ಎನ್ನತಕ್ಕ ಸ್ಕೀಮ್ ಇದೆ. ಅದಕ್ಕೆ ತಾವು ಸಾಕಷ್ಟು ಹೆಚ್ಚಿನ ಒತ್ತನ್ನು ಕೊಡುತ್ತಿಲ್ಲ. ಈ ಯು. ಬಿ. ಎಸ್. ಸ್ಕೀಮ್ ಎಂದರೆ ಮುನಿಸಿಪಾಲಿಟಿ ಮತ್ತು ಮಂಡಲ್ ಪಂಚಾಯಿತಿಯ ಮಧ್ಯದಲ್ಲಿರತಕ್ಕ ಕೆಲವು ಪಟ್ಟಣ ಪ್ರದೇಶಗಳೇನು ಇವೆ ಅಂಥ ಕಡೆ ಈ ಸ್ಕೀಮನ್ನು ಮಾಡುತ್ತಾರೆ. ಈಗ ನನ್ನ ಕ್ಷೇತ್ರವಾದ ಹುಳಿಯಾರ ಎನ್ನತಕ್ಕ ಊರಿನಲ್ಲಿ ಸಾಕಷ್ಟು ಯು. ಬಿ. ಎಸ್. ಸ್ಕೀಮ್‌ನಲ್ಲಿ ಕೆಲಸವಾಗುತ್ತಿದೆ. ಆದರೆ ಈಗ ಆ ಸ್ಕೀಮ್‌ನಲ್ಲಿ ಬರತಕ್ಕ ಹಳ್ಳಿಪ್ರದೇಶಗಳನ್ನು ತೆಗೆದುಹಾಕಿ ಅದನ್ನು ಲಿಮಿಟ್ ಮಾಡಲು ಹೋಗುತ್ತಿದ್ದೀರಿ. ದಯಮಾಡಿ ಆ ಕೆಲಸವನ್ನು ಮಾಡಬೇಡಿ. ಈ ಯು. ಬಿ. ಎಸ್. ಸ್ಕೀಮ್‌ನಲ್ಲಿ ಎಷ್ಟು ಹಳ್ಳಿಗಳಿವೆ ಅದಕ್ಕೆ ಇನ್ನೂ ಹೆಚ್ಚು ಹೆಚ್ಚು ಹಳ್ಳಿಗಳನ್ನು ಸೇರಿಸಿಕೊಂಡು ಈ ಸ್ಕೀಮ್‌ಗೆ ಒತ್ತು ಕೊಡುವುದರ ಮುಖಾಂತರ ಇವತ್ತು ಸಣ್ಣಯ ಜನರಿಗೆ ಸಹಾಯವನ್ನು ಮಾಡಿದಂತಾಗುತ್ತದೆಂದು ಹೇಳುತ್ತೇನೆ.

ಕೊನೆಯದಾಗಿ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಬಗ್ಗೆ ಒಂದು ಮಾತು ಹೇಳಲೇ ಬೇಕಾಗುತ್ತದೆ. ಇದು ಬಹಳ ಪ್ರಾಮುಖ್ಯವಾಗಿರತಕ್ಕಂತಹ ಇಲಾಖೆ. ಈ ಇಲಾಖೆಯ ಬಗ್ಗೆ ಯಾವುದೇ ಸಂದರ್ಭದಲ್ಲಿಯೂ ಕೂಡ, ಮಂತ್ರಿಗಳ ಪ್ರಶ್ನೋತ್ತರ ಕಾಲದಲ್ಲಿ ದೊಡ್ಡ ಗಲಾಟೆ ವಿವಾದಗಳು ಆಗತಕ್ಕಂಥದ್ದು ಉಂಟು. ಆದರೆ ಹಿನ್ನಲೆ ಏನು ಎಂದು ಮಾನ್ಯ ಮಂತ್ರಿಗಳಿಗೆ ಗೊತ್ತಿರುತ್ತದೆ. ನಾನು ಒಂದೇ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅಡಲ್‌ಟ್ರೇಷನ್ ಆಫ್ ಫುಡ್ ಎಷ್ಟಾಗಿದೆಯೆಂದರೆ ಇವತ್ತು ಮಾನ್ಯ ಅಧ್ಯಕ್ಷಣೆಯವರೆ, ತಮಗೆ ಇಲ್ಲಿ ಮನೆ ಇದೆ ತಾವು ಹೋಟೆಲ್‌ನಲ್ಲಿ ಊಟ ಮಾಡುವುದಿಲ್ಲ. ನೀವು ಏನಾದರೂ ಹೋಟೆಲ್‌ನಲ್ಲಿ ಊಟ ಮಾಡಿದ್ದರೆ ಗೊತ್ತಾಗುತ್ತದೆ. ಊಟ ಮಾಡಿದ ಒಂದು ಗಂಟೆ ಅಥವಾ ಸಾಯಂಕಾಲ ೫-೬ ಗಂಟೆ ಒಳಗಾಗಿ ಅವನು ಲೆಟ್ರೀನ್‌ಗೆ ಹೋಗಲೇಬೇಕು. ಈ ಅಡಲ್‌ಟ್ರೇಷನಿಂದ ಏನಾಗಿದೆಯಂದರೆ ಇವತ್ತು ನಾನು ಕಣ್ಣಾರೆ ನೋಡಿರತಕ್ಕಂಥದ್ದನ್ನು ಹೇಳುವುದಾದರೆ, ನಮ್ಮ ತುಮಕೂರು ಜಿಲ್ಲೆಯಲ್ಲಿ ಜಾಸ್ತಿ ಮಿಲ್ಸ್‌ಗಳಿವೆ. ಕಡಲೆಕಾಯಿ ಎಣ್ಣೆಗೆ ಹರಳೆಣ್ಣೆ ಮಿಕ್ಸ್ ಮಾಡುತ್ತಾರೆ. ಒಬ್ಬನೂ ಕೂಡ ಒಂದೇ ಒಂದು ಬಿಲ್ ಕೊಡುವುದಿಲ್ಲ. ಎಲ್ಲಾ ಸೆಕೆಂಡ್ಸ್‌ನಲ್ಲಿ ಓಡುತ್ತಾ ಇವೆ. ಇವತ್ತು ಎಷ್ಟು ಅವ್ಯವಹಾರ ನಡೆಯುತ್ತಿದೆಯೆಂದರೆ ಕೋಟ್ಯಾಂತರ ರೂಪಾಯಿ ಅವ್ಯವಹಾರ ಆಗುತ್ತಿದೆ. ಸರ್ಕಾರಕ್ಕೆ ಮೋಸವಾಗುತ್ತಿದೆ, ಜನಗಳ ಆರೋಗ್ಯಕ್ಕೆ ಧಕ್ಕೆ ಬರುತ್ತಿದೆ. ಆದರೆ ಅದರ ಬಗ್ಗೆ ಯಾರು ಕೂಡ ಕಾರ್ಯಕ್ರಮ ತೆಗೆದುಕೊಳ್ಳುತ್ತಿಲ್ಲ. ದಯವಿಟ್ಟು ನಿಮ್ಮನ್ನು ಕೇಳಿಕೊಳ್ಳುತ್ತೇನೆ, ನಿಮಗೆ ಕಳಕಳಿ ಇದೆ, ನಿಮಗೆ ಶಕ್ತಿ ಇದೆ, ಆದರ ಬಗ್ಗೆ ನೀವು ಕಂಟ್ರೋಲ್ ಮಾಡತಕ್ಕಂತಹ ಮಟ್ಟಕ್ಕೆ ಹೋಗಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇವತ್ತು ವಿಜಿಲೆನ್ಸ್ ಕಮಿಟಿಯನ್ನು ಮಾಡಬೇಕು, ತಾಲ್ಲೂಕು ಲೆವೆಲ್‌ನಲ್ಲಿ, ಕ್ಷೇತ್ರಮಟ್ಟದಲ್ಲಿ ಮಾಡಬೇಕೆಂದು ನಾನು ಕೂಡ ಅಪೀಲ್ ಮಾಡಿದ್ದೇನೆ. ಆ ರೀತಿಯಾಗಿ ವಿಜಿಲೆನ್ಸ್ ಕಮಿಟಿ ಮಾಡಿ. ಇವತ್ತು ಗ್ರೀನ್ ಕಾರ್ಡ್ಸ್ ಕೊಡಬೇಕಾದರೆ ಯಾರಿಗೆ ಕೊಡಬೇಕು ಎನ್ನುವ ಬಗ್ಗೆ ಒಂದು ಸ್ಪಷ್ಟೀಕರಣೆ ಮಾಡಿ ವಿಚಾರ ಮಾಡಿ ಕೊಡಬೇಕಾಗುತ್ತದೆ. ನಿಜವಾಗಿಯೂ ಕೂಡ ನಾನು ಹೇಳುವ ರೀತಿಯಲ್ಲಿ ತಾವು ಮಾಡಿದ್ದೀ ಆದರೆ ಇವತ್ತು ಏನು ಆಶ್ರಯ ಯೋಜನೆಗೆ ಒಳ್ಳೆಯ ಹೆಸರು ಬಂದಿದೆ, ಅದಕ್ಕಿಂತ

ಒಳ್ಳೆಯ ಹೆಸರು ಬರಲಿಕ್ಕೆ ಸಾಧ್ಯವಾಗುತ್ತದೆ. ಅದು ನಿಮ್ಮ ಕಾಲದಲ್ಲಿಯೇ ಆಗಬೇಕೆಂದು ಹೇಳುತ್ತಿದ್ದೇನೆ. ಮತ್ತು ಅಡಲ್‌ಟ್ರೇಷನ್ ಈ ಪೆಟ್ರೋಲ್ ಬಂಕ್‌ಗಳಲ್ಲಿ ಎಷ್ಟು ಆಗುತ್ತಿದೆಯೆಂದರೆ ಬೇಕಾದಷ್ಟು ಆಗುತ್ತಿದೆ. ಇವತ್ತು ನಾವು ಕಾರ್‌ಗಳಿಗೆ ಪೆಟ್ರೋಲ್ ಹಾಕಿಸಿದಾಗ ಡೀಸಲ್ ಹಾಕಿಸಿದಾಗ ನಮಗೆ ಗೊತ್ತಾಗುತ್ತದೆ ಅದರಲ್ಲಿ ಸೀಮೆ ಎಣ್ಣೆ ಮಿಕ್ಸ್ ಆಗಿರುತ್ತದೆ. ಆದರೆ ಇದನ್ನು ಎಷ್ಟೇ ನಿಮ್ಮ ಗಮನಕ್ಕೆ ತಂದರೂ ಕೂಡ ಎಷ್ಟೇ ಕೇಸ್‌ಗಳನ್ನು ಹಿಡಿದರೂ ಕೂಡ ಇಲ್ಲಿಯವರೆಗೆ ಒಂದು ಪೆಟ್ರೋಲ್ ಬಂಕನ್ನು ಕೂಡ ಮುಚ್ಚುವುದಕ್ಕೆ ಆಗಿಲ್ಲ. ಇದರಲ್ಲಿ ಏನು ಮೋಸವಾಗುತ್ತಿದೆಯೆಂದರೆ ಕೆಮಿಕಲ್ ಅನಾಲಿಸಿಸ್‌ಗೆ ಏನಾದರೂ ಕಳುಹಿಸಿದರೆ ಆರು ತಿಂಗಳಾದರೂ ರಿಪೋರ್ಟ್ ಬರುವುದಿಲ್ಲ. ಅಷ್ಟರೊಳಗೆ ಈತನು ಹೋಗಿ ಸರಿಮಾಡಿಕೊಂಡಿರುತ್ತಾನೆ. ಎಷ್ಟು ದಿವಸವಾದರೂ ರಿಪೋರ್ಟ್ ಬರುವುದಿಲ್ಲ. ದಯವಿಟ್ಟು ಅದರ ಬಗ್ಗೆ ಗಮನ ಕೊಡಬೇಕು. ಇನ್ನು ಇವತ್ತು ಆಹಾರ ವಿತರಣೆ ಮಾಡುವ ಸಂದರ್ಭದಲ್ಲಿ ಬಹಳಷ್ಟು ತಾರತಮ್ಯ ನಡೆಯುತ್ತಿದೆ. ಯಾವುದೋ ಒಂದು ಹಬ್ಬದ ಸಂದರ್ಭದಲ್ಲಿ ಅಕ್ಕಿಯನ್ನೋ ಅಥವಾ ಎಣ್ಣೆಯನ್ನೋ ಕೊಟ್ಟು ಕೈ ಬಿಡುತ್ತೀರಿ. ಈಗ ಹನುಮೇಗೌಡರು ಚೆನ್ನಾಗಿ ಹೇಳಿದರು "ಸಂಪತ್ತನ್ನು ನಾವೆಲ್ಲರೂ ಹರಿದು ತಿನ್ನಬೇಕು" ಎನ್ನುವ ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಇವತ್ತು ಪಟ್ಟಣ ಪ್ರದೇಶದಲ್ಲಿರತಕ್ಕವರಿಗೆ ಹೆಚ್ಚು ಸಕ್ಕರೆ ಕೊಡುವುದು, ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ಕಡಿಮೆ ಸಕ್ಕರೆ ಕೊಡುವುದು, ಇದನ್ನು ಮಾಡಬೇಡಿ, ನೀವು ಇದನ್ನು ಮಾಡುವುದರಿಂದ ನಿಮ್ಮ ಸರ್ಕಾರದ ದೃಷ್ಟಿಕೋನ ಏನು ಇದೆ ಎನ್ನುವುದರ ಬಗ್ಗೆ ಜನರಿಗೆ ಬೇಸರ ಬರುತ್ತದೆ. ಇದು ಗ್ರಾಮಾಂತರ ಪ್ರದೇಶದ ಜನರೇ ಬೇರೆ, ಪಟ್ಟಣ ಪ್ರದೇಶದ ಜನರೇ ಬೇರೆ ಎನ್ನುವ ವ್ಯತ್ಯಾಸ ಮಾಡಬಾರದೆಂದು ಹೇಳುತ್ತೇನೆ. ಇನ್ನು ಯುವಜನ ಸೇವಾ ಇಲಾಖೆಯ ಬಗ್ಗೆ ಮಾತನಾಡುವುದಕ್ಕೆ ಟೈಮ್ ಕೊಡುವುದಿಲ್ಲ ಅದು ನನಗೆ ಗೊತ್ತು. ಅದರಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ಸನ್ಮಾನ್ಯ ಸಚಿವರು ಯುವಕರಿದ್ದಾರೆ, ಅನುಭವ ಇರತಕ್ಕಂತಹವರು, ಕಾಳಜಿ ಇರತಕ್ಕಂತಹವರು, ಅವರ ಇಲಾಖೆಯ ನಿರ್ದೇಶಕರು ಅಷ್ಟೇ ಯುವಕರಾಗಿರತಕ್ಕಂತವರು. ಅವರು ಕ್ರೀಡಾ ಪಟುಗಳೇ, ಅದಕ್ಕಾಗಿ ಇಲಾಖೆ ಸ್ವಲ್ಪ ಮಟ್ಟಿಗೆ ಸುಧಾರಿಸುತ್ತಿದೆ. ಈಗ ರೇವಣ್ಣನವರು ಒಂದು ಸಲಹೆಯನ್ನು ಕೊಟ್ಟರು. ಇವತ್ತು ಎಲ್ಲಾ ಜಿಲ್ಲೆಯಲ್ಲೂ ಕೂಡ ಒಂದು ಕ್ರೀಡಾ ಪಟುಗಳಿಗೆ ಹಾಸ್ಟೆಲ್ ಮಾಡಿ ಎಂದು ಸಲಹೆ ಕೊಟ್ಟರು, ಇದು ಅತ್ಯುತ್ತಮವಾದಂತಹ ಸಲಹೆ ಆ ಕೆಲಸವನ್ನು ಮಾಡಬೇಕು. ಇವತ್ತು ಏನೇ ಆಗಲಿ ಎಲ್ಲರ ಮನಸ್ಸಿನಲ್ಲೂ ಕೂಡ ಕ್ರೀಡೆ ಬಗ್ಗೆ ಹೇಳಿದ ತಕ್ಷಣ ವರ್ಲ್ಡ್ ಕಪ್‌ನಲ್ಲಿ ಸೋತು ಬಂದಿದ್ದಕ್ಕಾಗಿ ನಮಗೆ ಏನೋ ಒಂದು ತರಹ ನೋವು ಆಗಿದೆ, ಅದನ್ನು ನಾವು ಹೇಳುವುದಕ್ಕಾಗುವುದಿಲ್ಲ. ಇದನ್ನು ನೀವು ಅರ್ಥಮಾಡಿಕೊಂಡು ನಮ್ಮಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಏನು ಕ್ರೀಡಾಪಟುಗಳಿದ್ದಾರ ಅವರನ್ನು ಕ್ರೀಡೆಗೆ ತಯಾರು ಮಾಡತಕ್ಕಂತಹ, ತರಬೇತಿ ಕೊಡತಕ್ಕಂತಹ, ಪ್ರೋತ್ಸಾಹ ಕೊಡತಕ್ಕಂತಹ ಮಟ್ಟಕ್ಕೆ ಸರ್ಕಾರ ಹೋಗಿ ಅವರನ್ನು ಗುರ್ತಿಸಿದರೆ ಮಾತ್ರ ಇವತ್ತು ಸ್ಪೋರ್ಟ್ಸ್‌ನಲ್ಲಿ ಒಳ್ಳೆಯ ಹೆಸರು ತರುವುದಕ್ಕೆ ಸಾಧ್ಯ ಎನ್ನುವ ಒಂದು ಮಾತನ್ನು ಹೇಳುತ್ತೇನೆ. ಈಗ ನಿಮ್ಮ ಸಂಸ್ಕೃತಿ ಇಲಾಖೆ ಅಂತ ಆ ಇಲಾಖೆಯ ಜಿಲ್ಲಾಮಟ್ಟದಲ್ಲಿ ಅಧಿಕಾರಿಗಳಿದ್ದಾರೆ. ಅವರಿಗೆ ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ನಾಡಿನ ಕಲೆ, ಸಂಸ್ಕೃತಿ ಉಳಿಯಬೇಕಾದರ ನಾಟಕಗಳನ್ನು ಆಡತಕ್ಕಂಥದರ ಬಗ್ಗೆ ಹೇಳುತ್ತೇನೆ. ಈಗ ನಾನು ಮೂರು ದಿವಸದಿಂದ ಮೂರು ನಾಟಕಗಳನ್ನು ನೋಡಿಕೊಂಡು ಬಂದಿದ್ದೇನೆ. ನಿಜವಾಗಲೂ ಅವರು ಕೊಡತಕ್ಕಂತಹ ಅಭಿನಯ ಅವರು

ಆಡತಕ್ಕಂತಹ ಸಂಭಾಷಣೆಯನ್ನು ನೋಡಿದಾಗ ಯಾವ ಸಿನಿಮಾಗಳು, ಯಾವ ಟಿ. ವಿ.ಯೋ ಎಂಬ ಭಾವನೆ ಬರುತ್ತದೆ. ಆದರೆ ಅವರಿಗೆ ಪ್ರೋತ್ಸಾಹ ಇಲ್ಲ, ಇವತ್ತು ಒಂದು ನಾಟಕವನ್ನು ಆಡಬೇಕೆಂದರೆ ಸುಮಾರು ೮ ರಿಂದ ೯ ಸಾವಿರ ಹಣ ಖರ್ಚಾಗುತ್ತದೆ. ಆದರಲ್ಲೂ ವಿಶೇಷವಾಗಿ ಹರಿಜನ ಬಾಂಧವರು ಆಡುತ್ತಾರೆಂದರೆ ಆಶ್ಚರ್ಯವಾಗುತ್ತದೆ. ಅಂತಹವರಿಗೆ ಧನ ಸಹಾಯ ಕೊಡುವುದಕ್ಕೆ ನೀವು ಮುಂದೆ ಬರಬೇಕು. ಇವತ್ತು ಎಷ್ಟು ಸಹಾಯ ಮಾಡುತ್ತೀರಿ ಎನ್ನುವುದು ಮುಖ್ಯವಲ್ಲ. ಅವರಿಗೆ ಪ್ರೋತ್ಸಾಹವನ್ನು ಕೊಡುವ ದೃಷ್ಟಿಯಿಂದ ನೀವು ಮಾಡಬೇಕು ಎನ್ನುವ ಒಂದು ಮಾತನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಒಂದು ಬೇಡಿಕೆ ಇದೆ, ಯಾವ ಸದಸ್ಯರು ಹೇಳಿದರೂ ಕೂಡ ಎಲ್ಲರಿಗೂ ಏನಾದರೂ ಒಂದು ಕೆಲಸವನ್ನು ಮಾಡಿಕೊಟ್ಟಿದ್ದೀರಿ. ನನಗಂತೂ ಏನು ಕೆಲಸವನ್ನು ಮಾಡಿಕೊಡಲಿಲ್ಲ. ನಮ್ಮಲ್ಲಿ ಒಂದು ರಂಗಮಂದಿರ ಕೇಳಿದ್ದೇವೆ. ಇವತ್ತು ಹುಳಿಯಾರಿನಲ್ಲಿ ಒಂದು ಸ್ಟೇಡಿಯಂ ಅಂತ ಇದೆ. ಅದು ತಾಲ್ಲೂಕು ಇಲ್ಲ ಹೋಬಳಿ ಹೆಡ್ ಕ್ವಾರ್ಟರ್ಸ್ ಮೋರ್ ದೆನ್ ತಾಲ್ಲೂಕ ಇಂಪಾರಟೆನ್ಸ ಇರತಕ್ಕದ್ದು. ಅಂತಹ ಕಡೆ ಒಂದು ರಂಗಮಂದಿರವನ್ನು ಅಥವಾ ಒಂದು ಸ್ಟೇಡಿಯಂನ್ನು ಕೊಡಬೇಕು. ಆ ಬೇಡಿಕೆ ನಿಮ್ಮ ಮುಂದೆ ಇದೆ, ನಾನು ಕೂಡ ಕಾಗದ ಬರೆದು ಒತ್ತಾಯ ಮಾಡಿದ್ದೇನೆ, ಅದನ್ನಾದರೂ ಮಾಡಿಕೊಡುತ್ತೀರಾ? ಎನ್ನುವ ಮಾತನ್ನು ಹೇಳುತ್ತಾ ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನಮಾತುಗಳನ್ನು ಮುಗಿಸುತ್ತೇನೆ.

CHAIRMAN:-The Hon'ble Minister for Housing and urban Development will reply now.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):- ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಸುಮಾರು ಒಂದು ಗಂಟೆಯಿಂದ ಪ್ರಾರಂಭವಾದ ಚರ್ಚೆ ಸುಮಾರು ಐದು ಐದೂವರೆ ಗಂಟೆಗಳ ಕಾಲ ನನ್ನ ಇಲಾಖೆಯ ಬೇಡಿಕೆಯ ಮೇಲೆ ಸಾಕಷ್ಟು ಸದಸ್ಯರುಗಳು ಹಲವಾರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ಟೀಕೆಗಳನ್ನು ಸಹ ಮಾಡಿದ್ದಾರೆ. ಈ ಎರಡಕ್ಕೂ ನಾನು ಸ್ವಾಗತ ಬಯಸುತ್ತಾ ಈ ಒಂದು ಚರ್ಚೆಯಿಂದ ಸಾಕಷ್ಟು ಬೆಳಕನ್ನು ಇಲಾಖೆಯ ಮೇಲೆ ಚೆಲ್ಲುವುದಕ್ಕೆ ಸಾಧ್ಯವಾಯಿತು. ಈ ಎಲ್ಲಾ ಸಲಹೆಗಳನ್ನು ಗಮನದಲ್ಲಿ ಇಟ್ಟುಕೊಂಡು ಮುಂದೆ ಮತ್ತಷ್ಟು ಒಳ್ಳೆಯ ರೀತಿಯಲ್ಲಿ ಈ ಇಲಾಖೆಯಲ್ಲಿ ಕೆಲಸಮಾಡುವಂಥ ಒಂದು ಕಾರ್ಯಕ್ರಮವನ್ನು ಹಾಕುತ್ತೇವೆ ಎಂಬ ಭರವಸೆಯನ್ನು ಹೇಳುತ್ತಾ ಬಹುಶಃ ಕೆಲವು ಸದಸ್ಯರುಗಳು ಹೇಳಿರುವುದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವಾಗದೇ ಇದ್ದರೂ ಜನರಲ್ಲಾಗಿ ನಾನು ನನ್ನ ಇಲಾಖೆಯ ಮೇಲೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

(ಉಪಾಧ್ಯಕ್ಷಿಣಿಯವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ತಮಗೆ ಗೊತ್ತಿರುವ ಹಾಗೆ ೧೭೭ ಪುರಸಭೆಗಳು, ನಗರಸಭೆಗಳು ಮತ್ತು ಸುಮಾರು ಆರು ಮಹಾನಗರ ಪಾಲಿಕೆಗಳು ನಮ್ಮ ಕರ್ನಾಟಕ ರಾಜ್ಯದಲ್ಲಿವೆ. ನಮ್ಮ ಜನಸಂಖ್ಯೆಯ ಒನ್ ಥರ್ಡ್‌ರಷ್ಟು ಇವತ್ತು ಇಲಾಖೆಯ ಕೆಳಗಡೆ ಬರುತ್ತದೆ. ಇವತ್ತು ಜನಸಾಮಾನ್ಯರ ದೈನಂದಿನ ಸಮಸ್ಯೆಗಳಿಗೆ ಈ ಇಲಾಖೆಗಳಿಂದ ಪುರಸಭೆಗಳಾಗಲಿ, ಮಹಾನಗರ ಪಾಲಿಕೆಗಳಾಗಲಿ ಅವುಗಳಿಂದ ಸಮಸ್ಯೆಗೆ ಪರಿಹಾರ ಕಾಣಬೇಕಾಗಿದೆ. ಆದರೆ ಅಧ್ಯಕ್ಷಣೆಯವರೇ ತಮಗೆ ಗೊತ್ತಿರುವ ಹಾಗೆ ನನ್ನ ಇಲಾಖೆಯ

ಬೇಡಿಕೆಗಳ ಸಂದರ್ಭದಲ್ಲಿ ನಾನು ಹೇಳಿದೆ ಅದು ಸುಮಾರು ಆರು ತಿಂಗಳಾಗಿದೆ. ಈ ಪುರಸಭೆಗಳು, ಮಹಾ ನಗರ ಪಾಲಿಕೆಗಳು ಮತ್ತು ನಗರಸಭೆಗಳು ಆರ್ಥಿಕವಾಗಿ ಸಾಕಷ್ಟು ಮುಗ್ಗಟ್ಟನ್ನು ಎದುರಿಸುತ್ತಿವೆ. ಬಹುಶಃ ಸಮಸ್ಯೆಗಳು ಜನಗಳಿಗೆ ಹೇಗೆ ಹೆಚ್ಚಿಗೆ ಬರುತ್ತವೆ. ಅದೇ ರೀತಿಯಲ್ಲಿ ಸಮಸ್ಯೆಗಳು ಸಹ ಹೆಚ್ಚಿಗೆ ಆಗುತ್ತಿರುವಾಗ ಆರ್ಥಿಕವಾಗಿ ಸಂಬಳ ಕೊಡುವುದಕ್ಕೆ ಹಣವಿಲ್ಲದೇ ಈ ಪುರಸಭೆಗಳು, ನಗರಸಭೆಗಳು ಮತ್ತು ಮಹಾ ನಗರ ಪಾಲಿಕೆಗಳು ಒಂದು ಪರಿಸ್ಥಿತಿಯಲ್ಲಿದ್ದು ನಾವು ಈಗಾಗಲೇ ಇದನ್ನು ಸ್ಪಡಿ ಮಾಡುತ್ತಿದ್ದೇವೆ. ಬಹುಶಃ ಎಷ್ಟೇ ಭಾಷಣ ಮಾಡಿದರೂ ಕೂಡ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಉದ್ದೇಶದಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಂತ್ರಿಮಂಡಲದವರು ಬಹುಶಃ ಅಕ್ಟ್ರಾಯ್ ಪದ್ಧತಿಯನ್ನು ಮತ್ತೆ ಜಾರಿಗೆ ತರಬೇಕೆಂದು ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಆದರೆ ಅದರ ವಿಚಾರದಲ್ಲಿ ಸಾಕಷ್ಟು ಪರ ಮತ್ತು ವಿರೋಧ ಟೀಕೆಗಳು ಬಂದಿವೆ. ಮತ್ತು ಪರವಾಗಿ ಅದರ ವಿಚಾರದಲ್ಲಿ ಸಾಕಷ್ಟು ಸಲಹೆಗಳು ಬಂದಿವೆ. ಅಧ್ಯಕ್ಷಿಣಿಯವರೇ ತಮಗೆ ಗೊತ್ತಿರುವ ಹಾಗೆ ಇದು ಇವತ್ತಿನ ಸಮಸ್ಯೆಯಲ್ಲ. ಈ ಅಕ್ಟ್ರಾಯ್ ಪದ್ಧತಿಯನ್ನು ಯಾವಾಗ ತೆಗೆದು ಹಾಕಿದ್ದೇವೆ, ಬಹುಶಃ ಅಕ್ಟ್ರಾಯ್ ಪದ್ಧತಿ ತೆಗೆದು ಹಾಕಿದಾಗ ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದ್ದರೆ ಈ ಸಮಸ್ಯೆಯೇ ಉದ್ಭವಿಸುತ್ತಿರಲಿಲ್ಲ. ನಮ್ಮ ಯಾಹ್ಯಾರವರು ನನ್ನ ಕಾಲದಲ್ಲಿಯೇ ಆಗಿದೆ ಎಂದು ಬಹುಶಃ ಅವರ ಮುಂದಾಲೋಚನೆ ಇಟ್ಟುಕೊಂಡು ಇವತ್ತು ಆಕ್ಟ್ರಾಯಿ ಪದ್ಧತಿಯನ್ನು ತೆಗೆದು ಹಾಕಿದ್ದರೆ ಯಾವ ರೀತಿಯಲ್ಲಿ ಪುರಸಭೆಗಳು, ನಗರಸಭೆಗಳು, ಮಹಾ ನಗರ ಪಾಲಿಕೆಗಳು ಜನರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯ ಎಂಬ ಒಂದು ಮುಂದಾಲೋಚನೆಯನ್ನು ಮಾಡಬಹುದಾಗಿತ್ತು. ಇವತ್ತು ಕೇವಲ ೫ ಪರ್ಸೆಂಟ್ ೭ ಪರ್ಸೆಂಟ್ ಆಕ್ಟ್ರಾಯಿ ಪದ್ಧತಿಯಲ್ಲಿ ಹೈಯರ್ ಕಾಂಪನ್‌ಸೇಷನ್ ಕೊಡುತ್ತಿದ್ದೇವೆಂದರೆ ೫ ಪರ್ಸೆಂಟ್ ಮಾತ್ರ ಕೊಡುತ್ತೇವೆ. ನಂತರ ಅದನ್ನು ೧೦ ಪರ್ಸೆಂಟ್ ಮಾಡಿದರು ಹನ್ನೆರಡೂವರೆ ಮಾಡಿದರು, ಯಾವುದೇ ಮಾಡಿದರೂ ಜನಸಂಖ್ಯೆಯ ಒಂದು ಬೆಳವಣಿಗೆ ಅದೇ ರೀತಿಯಲ್ಲಿ ಇನ್‌ಫ್ಲೇಷನ್ ಯಾವ ರೀತಿ ಹೋಗುತ್ತಿತ್ತು ಆ ಒಂದು ರೇಟ್‌ನಲ್ಲಿ ಆಕ್ಟ್ರಾಯ್ ಕಾಂಪನ್‌ಸೇಷನ್ ನಮ್ಮ ಕೈಯಲ್ಲಿ ಕೊಡುವುದಕ್ಕೆ ಆಗದೇ ಬಹುಶಃ ಅದು ಅಲ್ಲದೆ ಒಂದು ರೀತಿಯಲ್ಲಿ ಸಂಬಳಕ್ಕೆ ಹೆಚ್ಚುಖರ್ಚು ಬಂದು ಇವತ್ತು ಆರ್ಥಿಕವಾಗಿ ಸಾಕಷ್ಟು ತೊಂದರೆಗಳನ್ನು ಇಷ್ಟು ಕಾಲ ಅನುಭವಿಸಬೇಕಾಯಿತು. ಬಹುಶಃ ಅದರಿಂದ ಯೋಜನಾ ರೀತಿಯಲ್ಲಿ, ಲ್ಯಾಂಡ್ ಡೆವಲಪ್‌ಮೆಂಟ್ ಯಾವುದೇ ಬೆಂಗಳೂರಿನಂಥ ದೊಡ್ಡ ನಗರದಲ್ಲಾಗಲಿ ಅಥವಾ ಸಣ್ಣ ಮುನಿಸಿಪಾಲಿಟಿಗಳಲ್ಲಿ ಆಗುವುದಕ್ಕೆ ಸಾಧ್ಯವಾಗಲಿಲ್ಲ. ೧೯೮೬ನೇ ಇಸವಿಯಲ್ಲಿ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಒಂದು ನಿರ್ಣಯ ಪಾಸ್ ಮಾಡಿ ಒಂದು ಬಿಲ್ ಪಾಸ್ ಮಾಡಿ ನಾವು ಕಳುಹಿಸಿದ್ದೆವು. ಈ ಆಕ್ಟ್ರಾಯಿ ಬದಲಿಗೆ ಎಂಟ್ರಿ ಟ್ಯಾಕ್ಸ್ ಏನಿತ್ತು ಸುಮಾರು ಎಂಟು ಐಟಮ್‌ಗಳಿಗೆ ಎಂಟ್ರಿ ಟ್ಯಾಕ್ಸ್ ಆಗುತ್ತಿತ್ತು. ಸುಮಾರು ಎರಡರಷ್ಟು ಮಾಡುತ್ತಿದ್ದರು. ಅದನ್ನು ಹೆಚ್ಚಿಗೆ ಮಾಡಬೇಕೆಂಬ ಅಂದಿನ ವಿಧಾನಸಭೆಯಲ್ಲಿ ಚರ್ಚೆ ಮಾಡಿ ಅದರಲ್ಲಿ ಕೆಲವು ಐಟಮ್‌ಗಳನ್ನು ಬಿಟ್ಟು ಬಾಕಿ ಎಲ್ಲದಕ್ಕೂ ಶೇಕಡ ೫ರಷ್ಟು ಹಾಕಬೇಕು ಎಂಬುದಾಗಿ ಅವತ್ತಿನ ಪ್ರೆಸಿಡೆಂಟರಿಗೆ ಕಳುಹಿಸಿಕೊಟ್ಟೆವು. ಸುಮಾರು ೧೯೮೭ನೇ ಇಸವಿಯಲ್ಲಿ ಕಳುಹಿಸಿಕೊಟ್ಟಿದ್ದರೂ ಕೂಡ ಅದಕ್ಕೆ ಪ್ರೆಸಿಡೆಂಟ್‌ರವರಿಂದ ಅಸೆಂಟ್ ಬರಲಿಲ್ಲ. ಏತಕ್ಕೆಂದರೆ ಕೆಲವೊಂದು ಕ್ವೆಯರಿಗಳನ್ನು ಹಾಕಿದರು. ಅದು ಏನೆಂದರೆ ನೆಗಟೀವ್ ಲಿಸ್ಟ್ ಕೊಟ್ಟರೆ ಹಾಕುವುದಿಲ್ಲ, ಪಾಸಿಟೀವ್ ಎಷ್ಟು ಹಾಕುತ್ತೀರೆಂದು

ಅವರು ಕೇಳಿದರು. ಅದರ ಪ್ರಕಾರ ೧೦೩ ಐಟಂಗಳಿಗೆ ಹಾಕಬೇಕೆಂದು ಒಂದು ಐಟಮ್ ಲಿಸ್ಟ್ ಮಾಡಿಕೊಟ್ಟರು. ಮೊನ್ನೆ ತಾನೆ ಅದಕ್ಕೆ ಪ್ರೆಸಿಡೆಂಟ್‌ರವರ ಅಸೆಂಟ್ ದೊರೆತು ಇವತ್ತು ಬಂದಿದೆ. ಎಂಟ್ರಿಟ್ಯಾಕ್ಸ್ ಅಲ್ಲದಿದ್ದರೂ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ ೧೩೩ ಐಟಮ್‌ಗಳಿಗೆ ಸರ್ಕಾರದವರು ಸಹಿತ ಶೇಕಡ ೫ರಷ್ಟು ಲೆವಿ ಹಾಕಬಹುದೆಂಬ ಒಂದು ಪರ್ಮಿಷನ್ ಬಂದರೂ ಸಹಿತ ನಾವು ಅದನ್ನು ಹಾಕಲಿಕ್ಕೆ ಹೋಗುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಈ ಸದನದಲ್ಲಿ ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಯಾರು ಬಡವರು, ಯಾರು ಉಪಯೋಗಿಸುವಂಥ ವಸ್ತುಗಳಿಗೆ ನಾವು ಈ ಎಂಟ್ರಿ ಟ್ಯಾಕ್ಸನ್ನು ಹಾಕುವುದಿಲ್ಲ, ಮತ್ತೆ ಶೇಕಡ ೫ ರಷ್ಟು ಎಲ್ಲಾ ವಸ್ತುಗಳ ಮೇಲೆ ಹಾಕುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಬಹುಶಃ ನಾನಾದರೂ ನಗರಾಭಿವೃದ್ಧಿ ಸಚಿವನಾಗಿ ಹೇಳುತ್ತಿದ್ದೇನೆ, ಎಂಟ್ರಿಟ್ಯಾಕ್ಸ್‌ನ್ನು ಮಾತ್ರ ಇವತ್ತು ನಗರಸಭೆ, ಪುರಸಭೆ ಮತ್ತು ಮಹಾನಗರ ಪಾಲಿಕೆಗಳಿಂದ ಬರಬೇಕೇ ಹೊರತು, ಇಷ್ಟರವರೆಗೆ ಅದು ನಶಿಸಿ ಹೋದಂಥ ಶಕ್ತಿಯನ್ನು ಪುನಃ ಶಕ್ತಿ ಪಡೆಯಬೇಕಾದರೆ ಬಹುಶಃ ಆರ್ಥಿಕವಾಗಿ ಈ ವರ್ಷದಿಂದ ಇನ್ನು ಬರುವುದರಿಂದ ಅದು ಸಾಧ್ಯವಾಗಬಹುದು. ಮತ್ತೆ ಇನ್ನೊಂದು ವಿಷಯ ತಮ್ಮ ಮೂಲಕ ನಾನು ಸದನದ ಗಮನಕ್ಕೆ ತರುವುದು, ಇವತ್ತು ಸಾಕಷ್ಟು ಚುನಾಯಿತರಾದ ಪ್ರತಿನಿಧಿಗಳು ಪುರಸಭೆಗಳಲ್ಲಿ ಮತ್ತು ಮಹಾನಗರ ಪಾಲಿಕೆಗಳಲ್ಲಿ ಇದ್ದಾರೆ. ಅಲ್ಲಿಯ ದೈನಂದಿನ ವಿಚಾರಗಳಲ್ಲಿ ಸರ್ಕಾರ ಕೈ ಹಾಕಲಿಕ್ಕೆ ಸಾಧ್ಯವಿಲ್ಲ. ಆದರೆ ಅಲ್ಲಿ ಯಾವ ರೀತಿಯಾದರೂ ಕಾನೂನು ಬಿಟ್ಟು ಹೋಗುತ್ತಿದ್ದರೆ ಆ ವಿಚಾರದಲ್ಲಿ ನಾವು ಕೈ ಹಾಕಬೇಕಾಗುತ್ತದೆ. ಅವರು ಯಾವುದಾದರೂ ರೆಸಲ್ಯೂಷನ್ ಮಾಡಿದರೆ ಅದಕ್ಕೆ ನಮಗೆ ಅಧಿಕಾರವಿದೆ. ಆದರೆ ಆ ಅಧಿಕಾರವನ್ನು ದುರುಪಯೋಗ ಮಾಡಲಿಕ್ಕೆ ನಮ್ಮ ಸರ್ಕಾರ ಹೋಗುವುದಿಲ್ಲ. ಎಲ್ಲಿಯಾದರೂ ತಪ್ಪು ಆಗುತ್ತಿದ್ದರೆ ಅಲ್ಲಿ ತಿದ್ದಲಿಕ್ಕೆ ಆದಷ್ಟು ಪ್ರಯತ್ನ ಮಾಡುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಅಧಿಕಾರಿಗಳಲ್ಲಿ ಎಲ್ಲರೂ ಕೆಟ್ಟವರು ಎಂದು ಹೇಳಬಯಸುವುದಿಲ್ಲ. ಹಲವಾರು ಒಳ್ಳೆಯ ಅಧಿಕಾರಿಗಳೂ ಈ ಒಂದು ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಇವತ್ತು ತಾವು ಒಂದು ಅಂಶವನ್ನು ಗಮನಿಸಬೇಕು. ಮುನಿಸಿಪಾಲಿಟಿಗಳಲ್ಲಿ ಚೀಫ್ ಆಫೀಸರ್ ಎಂದು ಇರುತ್ತಾರೆ ನಮ್ಮ ಕೆ. ಎಂ. ಎಸ್.ನಲ್ಲಿ ಬರೇ ೮೦-೮೫ ಜನರು ಮಾತ್ರ ಇದ್ದಾರೆ. ೧೦೦ಕ್ಕಿಂತ ಹೆಚ್ಚು ಮುನಿಸಿಪಾಲಿಟಿಗಳಲ್ಲಿ ಮತ್ತು ಪುರಸಭೆಗಳಲ್ಲಿ ಸೆಕೆಂಡ್ ಡಿವಿಜನ್ ಕ್ಲಾರ್ಕ್ ಚೀಫ್ ಆಫೀಸರಾಗಿ ಕೆಲಸ ಮಾಡುವಂಥ ಸಂದರ್ಭ ಬಂದಿದೆ. ಬಹುಶಃ ಇದನ್ನು ಬದಲಾವಣೆ ಮಾಡಿಬಿಟ್ಟು ಹೆಚ್ಚು ರೆಸ್ಪಾನ್ಸಿಬಲ್ ಆಗಿರುವವರನ್ನು ಚೀಫ್ ಆಫೀಸರನ್ನಾಗಿ ಮಾಡುವಂಥ ಒಂದು ಕಾರ್ಯಕ್ರಮವನ್ನು ನಾವು ಈಗಾಗಲೇ ಹಾಕಿಕೊಂಡಿದ್ದೇವೆ. ಬಹುಶಃ ನಮಗೆ ಹೊಸ ಸರ್ಕಾರದಲ್ಲಿ ಅಪ್‌ಗ್ರೆಡೇಷನ್ ಆಫ್ ತಹಸಿಲ್ದಾರ್ ಪೋಸ್ಟ್ ಮತ್ತೆ ಡಿ. ಸಿ.ಗಳನ್ನು ಅಪ್‌ಗ್ರೇಡ್ ಮಾಡುವಾಗ ನಮಗೆ ಹಲವಾರು ಒಳ್ಳೆಯ ಆಫೀಸರುಗಳು ಸಿಕ್ಕಬಹುದು. ಅಂಥ ಒಳ್ಳೆಯ ಆಫೀಸರುಗಳನ್ನು ನಾವು ಚೀಫ್ ಆಫೀಸರುಗಳನ್ನಾಗಿ ಮಾಡಿದರೆ ಬಹುಶಃ ಇನ್ನಷ್ಟು ಒಳ್ಳೆಯ ಆಡಳಿತವನ್ನು ಕೊಡಲಿಕ್ಕೆ ನಮಗೆ ಸಾಧ್ಯವಾಗಬಹುದು ಎನ್ನುವ ವಿಶ್ವಾಸ ನನಗಿದೆ. ಈ ವರ್ಷ ನಾವು ಇಡೀ ರಾಜ್ಯದ ಮಟ್ಟದಲ್ಲಿ ನೋಡಿದಾಗ ನಮ್ಮ ಏನು ಈ ಪ್ರಾಪರ್ಟಿ ಟ್ಯಾಕ್ಸ್ ಬೇರೆ ಬೇರೆ ಟ್ಯಾಕ್ಸ್‌ನಿಂದ ಬರಬೇಕಾದ್ದು ೧೯೮೯-೯೦ರಲ್ಲಿ ೨೦ ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಬಂದದ್ದು ಕೇವಲ ೧೬ ಕೋಟಿ ರೂಪಾಯಿಗಳು ಮಾತ್ರ. ೧೯೯೦-೯೧ರಲ್ಲಿ ೩೧ ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಆದರೆ ಬಂದದ್ದು ೧೭ ಕೋಟಿ ರೂಪಾಯಿಗಳು. ಈ ವರ್ಷ ೩೨

ಕೋಟಿ ಬರಬೇಕಾಗಿತ್ತು. ಡಿಸೆಂಬರ್ ಒಳಗೆ ಸುಮಾರು ೨೨ ಕೋಟಿ ರೂಪಾಯಿಗಳು ಬಂದಿದೆ. ಈ ವರ್ಷ ಸುಮಾರು ೬೮ ಪರ್ಸೆಂಟ್ ಡಿಸೆಂಬರ್, ಜನವರಿ ಒಳಗೆ ಈಗಾಗಲೇ ಒಳ್ಳೆಯ ಕೆಲಸವನ್ನು ನಮ್ಮ ಅಧಿಕಾರಿಗಳು ಮಾಡಿದ್ದಾರೆ. ನಮ್ಮ ಅಧಿಕಾರಿಗಳು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಬಹುಶಃ ನಾನು ಅದಕ್ಕೆ ಅಭಿನಂದಿಸುತ್ತೇನೆ. ಇವತ್ತು ಏನಾಗಿದೆ ಎಂದರೆ ಕೆಲವು ಮಾನ್ಯ ಸದಸ್ಯರು ಭ್ರಷ್ಟಾಚಾರದ ವಿಚಾರದಲ್ಲಿ ಮಾತನಾಡಿದ್ದಾರೆ. ಬಹುಶಃ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಭ್ರಷ್ಟಾಚಾರ ಇಲ್ಲವೆಂದು ಹೇಳುವುದಕ್ಕೆ ಇವತ್ತು ಯಾರಿಗೂ ಸಾಧ್ಯವಿಲ್ಲ. ಆದರೆ ಎಲ್ಲಿ ನಡೆಯುತ್ತಿದೆ, ಯಾವ ರೀತಿ ನಡೆಯುತ್ತಿದೆ ಎಂಬುದು ಗೊತ್ತಾಗಬೇಕು. ಇವತ್ತು ಕೊಡುವವರು ತೆಗೆದುಕೊಳ್ಳುವವರು ಇಬ್ಬರು ಮಾತನಾಡಿಕೊಂಡಲ್ಲಿ ಏನೂ ಆಗುವುದಿಲ್ಲ. ಮತ್ತೆ ನಾವಾಗಿಯೇ ಭ್ರಷ್ಟಾಚಾರವಿದೆ ಎಂದು ಹೇಳಿಬಿಟ್ಟರೆ ಆಗುವುದಿಲ್ಲ. ನಮ್ಮ ಸದಸ್ಯರುಗಳಿಗೆ ನಾನು ಏನು ಹೇಳುತ್ತಿದ್ದೇನೆಂದರೆ, ತಮ್ಮ ಗಮನಕ್ಕೆ ಇಂಥ ವಿಚಾರಗಳು ಬಂದರೆ ಅಂಥವುಗಳನ್ನು ನನಗೆ ತಿಳಿಸಿದರೆ ನೇರವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ ಕಷ್ಟವಾಗುತ್ತದೆ. ಏತಕ್ಕೆಂದರೆ ಇವತ್ತು ಯಾವುದಾದರೂ ವಿಚಾರ ತೆಗೆಯಬೇಕಾದರೆ ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಆ ಒಂದು ದಿಸೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಕಾನೂನು ಪ್ರಕಾರ ಯಾವ ರೀತಿ ಇದನ್ನು ಕಡಿಮೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆನ್ನುವ ವಿಚಾರವನ್ನು ಇವತ್ತು ಮಾತನಾಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ:- ನಾನು ಹೇಳಿದ್ದುದು, ಹಾಸನದಲ್ಲಿ ಟೌನ್ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂದಿದೆ. ಮುನಿಸಿಪಾಲಿಟಿಯವರು, ಷಾಪ್ಸ್ ಬೇರೆ ಬೇರೆ ಬಿಲ್ಡಿಂಗ್ ಕಟ್ಟಬೇಕಾದರೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡನವರ ಅನುಮತಿ ತೆಗೆದುಕೊಳ್ಳದೆ ಮನಸಾ ಇಚ್ಛೆ ಕಟ್ಟುತ್ತಿದ್ದಾರೆಂದು ಹೇಳಿದೆ. ಈ ಮಾತು ಸುಳ್ಳಾದರೆ ಅಥವಾ ನಡೆಯದೆ ಇರುವ ವಿಚಾರ ಹೇಳಿದ್ದರೆ ತಾವು ಏನು ಹೇಳಿದರೂ ನಾನು ಒಪ್ಪಿಕೊಳ್ಳುತ್ತೇನೆ, ರಾಜಿನಾಮೆ ಕೊಡುವುದಕ್ಕೂ ತಯಾರಿದ್ದೇನೆ. ನಾನು ಹೇಳುವಾಗ ಯಾವುದೇ ವಿಚಾರ ತಿಳಿಯದೆ ಹೇಳುವುದಿಲ್ಲ. ನಿಮಗೆ ಮತ್ತು ನಿಮ್ಮ ಡೈರೆಕ್ಟರಿಗೆ ಕಾಗದ ಬರೆದಿದ್ದೇನೆ. ಮುನಿಸಿಪಾಲಿಟಿಯವರು ಎಲ್ಲಿ ಅಂದರೆ ಅಲ್ಲಿ ಬಿಲ್ಡಿಂಗ್ ಕಟ್ಟಬೇಕಾದರೆ, ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟಬೇಕಾದರೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರ ಅನುಮತಿ ತೆಗೆದುಕೊಳ್ಳುವುದು ಬೇಡವೆ? ಏತಕ್ಕೋಸ್ಕರ ಬೋರ್ಡ್ ಇಟ್ಟಿದ್ದೀರೆಂದು ಕೇಳುವುದು ಬೇಡವೆ? ಟೌನ್ ಒಳಗೆ ಬರತಕ್ಕ ಮತ್ತು ಹೋಗತಕ್ಕ ವಾಹನಗಳನ್ನು ನಿಲ್ಲಿಸುವುದಕ್ಕೆ ಜಾಗ ಬಿಟ್ಟಿದ್ದರೆ ಅಲ್ಲಿ ಅವರು ಕಾಂಪ್ಲೆಕ್ಸ್ ಕಟ್ಟುತ್ತಿದ್ದಾರೆ. ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ವಿಧಿ ಇಲ್ಲದೆ ಜನರು ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿದ್ದಾರೆ.

ಶ್ರೀ ಕೆ. ಜೆ. ಜಾರ್ಜ್:- ಆ ಬಗ್ಗೆ ಅವರು ಪ್ರಶ್ನೆಯನ್ನು ಕೂಡ ಹಾಕಿದ್ದರು. ಅದಕ್ಕೆ ಲಿಖಿತ ಮೂಲಕ ಉತ್ತರವನ್ನು ಕಳುಹಿಸಿಕೊಟ್ಟಿದ್ದೇವೆ. ಮುನಿಸಿಪಾಲಿಟಿಯವರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರ ಅನುಮತಿ ತೆಗೆದುಕೊಂಡೇ ಕಟ್ಟಡ ಕಟ್ಟಿದ್ದಾರೆ. ನಾವು ದಾಖಲೆ ಮೂಲಕ ಉತ್ತರ ಕಳುಹಿಸಿ ಕೊಟ್ಟಿದ್ದೇವೆ. ಅದರ ಬಗ್ಗೆ ಏನೂ ಸಂಶಯ ಇಲ್ಲ. ಇನ್ನು ಮರ ಕಡಿಯುವ ವಿಚಾರ ಹೇಳಿದರು. ರಸ್ತೆಯ ಪಕ್ಕದಲ್ಲಿ ಯಾರು ಜನವಾಸವಾಗಿದ್ದಾರೆ ಅವರಿಂದ ಆ ಮರ ಹಳೆಯದಾಗಿದೆ, ಮಳೆ-ಗಾಳಿಗೆ ಬೀಳಬಹುದು, ಅದು ಬೇಡ, ಅವುಗಳನ್ನು ಕಡಿಯದಿದ್ದರೆ ಜನರ ಮೇಲೆ ಮನೆ ಮೇಲೆ ಬಿದ್ದು ತೊಂದರೆಯಾಗಬಹುದೆಂದು ಅರ್ಜಿ ಬಂದಮೇಲೆ ಅರಣ್ಯ ಇಲಾಖೆಯವರ ಅನುಮತಿ ತೆಗೆದುಕೊಂಡು ಕಡಿದಿದ್ದೇವೆ. ಆ ಮರವನ್ನು ಹರಾಜು ಕೂಡ

ಮಾಡಿದ್ದೇವೆ. ಇದೆಲ್ಲ ಮುನಿಸಿಪಾಲಿಟಿಯವರು ಮಾಡಿದ್ದುದು. ಯಾವ ಒಂದು ಕಾನೂನು ಪ್ರಕಾರ ಮಾಡಿದ್ದರೆ ಅದರಲ್ಲಿ ಭ್ರಷ್ಟಾಚಾರ ನಡೆದಿದೆ ಎಂದರೆ ಸರ್ಕಾರಕ್ಕೆ ನೇರವಾಗಿ ಏನೂ ಮಾಡುವದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಸುಮಾರು ೧೮-೨೦ ಮರ ನೂರಾರು ಘನ ಅಡಿ ಆಗುತ್ತದೆ, ಅದು ಕೇವಲ ಒಂದೂವರೆ ಸಾವಿರ ರೂಪಾಯಿಗೆ ಹರಾಜಾಗಿದೆ. ಮರ ಬೀಳುವುದಕ್ಕಾಗಿತ್ತು, ಅದನ್ನು ಕಡಿದೆವು ಎಂದು ಬರೆಸಿಕೊಳ್ಳುವುದಕ್ಕಾಗುವುದಿಲ್ಲವೆ? ಈಗಲೂ ಹೋಗಿ ನೋಡಿ, ಮರ ಎಷ್ಟು ಗಾತ್ರ ಇದೆ. ಹರಾಜು ಮಾಡಿದ್ದರೆ ಎಷ್ಟಕ್ಕೆ ಹೋಗುತ್ತಿತ್ತು ಎಂಬುದನ್ನು ವೆರಿಫೈ ಮಾಡುವುದು ಬೇಡವೆ? ಮುನಿಸಿಪಾಲಿಟಿಯವರು ಮಾಡುವುದೆಲ್ಲ ಸರಿಯಾಗಿದ್ದರೆ ಇವರು ಇರುವುದು ಏತಕ್ಕೆ? ಸಂಬಂಧಪಟ್ಟವರು ಕಂಪ್ಲೈಂಟ್ ಮಾಡಿದರೂ ನಿಜವೇ ಸುಳ್ಳೇ, ಮರ ಎಷ್ಟು ಘನ ಅಡಿ ಬರುತ್ತದೆಂದು ನೋಡುವುದು ಬೇಡವೇ?

ಶ್ರೀ ಕೆ. ಜೆ. ಜಾರ್ಜ್:- ಆ ಮರವನ್ನು ಆ್ಯಕ್ಷನ್ ಮಾಡಬೇಕಾದರೆ ಲೋಕಲ್ ಪ್ರೆಸ್‌ನಲ್ಲಿ ಅಡ್ವರ್ಟೈಸ್‌ಮೆಂಟ್ ಮಾಡಿದ್ದರು. ೧೧ ಮರಗಳನ್ನು ಆ್ಯಕ್ಷನ್ ಮಾಡಿದ್ದಾರೆ. ಆ್ಯಕ್ಷನ್‌ನಲ್ಲಿ ೫ ಸಾವಿರ ರೂಪಾಯಿ ಬಂದಿದೆ. ಹಲವಾರು ಒಳ್ಳೆಯ ಕಾರ್ಯಕ್ರಮಗಳನ್ನು ನಾವು ಜಾರಿಗೆ ತರಲಿಕ್ಕೆ ಸರ್ವ ಪ್ರಯತ್ನ ಮಾಡುತ್ತಿದ್ದೇವೆ. ಅದರಲ್ಲಿ ಸಾಕಷ್ಟು ಕೂಗು ಕೇಳಿಬರುತ್ತಿದೆ. ಪ್ರಾಪರ್ಟಿ ಟ್ಯಾಕ್ಸ್ ವಿಚಾರ. ಇದರಲ್ಲಿ ಏನಾಗಿದೆ ಎಂದರೆ ಬಿಲ್ ಕಲೆಕ್ಷನ್‌ಗೆ ಯಾರು ಹೋಗುತ್ತಾರೆ ಅದು ರೆಂಟ್ ಮೇಲೆ ಡಿಪೆಂಡ್ ಆಗುತ್ತದೆ. ಮನಸ್ಸಿಗೆ ಬಂದ ಹಾಗೆ ರೇಟ್ ಹಾಕುತ್ತಾರೆಂದು ಬೆಂಗಳೂರು ಮತ್ತೊಂದು ಕಡೆ ಕೇಳಿಬರುತ್ತಿದೆ. ರ್‍ಯಾಷನಲೈಸೇಷನ್ ಆಫ್ ಪ್ರಾಪರ್ಟಿ ಟ್ಯಾಕ್ಸ್ ಮಾಡಿ ಸೈಂಟಿಫಿಕ್ ಆಗಿ ಕಂಪ್ಯೂಟರೈಸ್ ಮಾಡತಕ್ಕದ್ದಕ್ಕೆ ಕೈ ಹಾಕುತ್ತಿದ್ದೇವೆ. ಗುಲ್ಬರ್ಗಾದಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೆ ತಂದಿದ್ದೇವೆ. ಅಲ್ಲಿ ೭೧ ಲಕ್ಷ ರೂಪಾಯಿ ಬರುತ್ತಿದ್ದುದು ಈಗ ಇನ್ನೂ ಹೆಚ್ಚಿಗೆ ಹಣ ಬರುವ ಹಾಗೆ ಜನರಿಗೆ ತೊಂದರೆ ಆಗದ ಹಾಗೆ ಮಾಡಿದ್ದೇವೆ. ಸೈಂಟಿಫಿಕ್ ಆಗಿ ಮಾಡಿದರೆ ಯಾರು ಎಷ್ಟು ಕೊಡುತ್ತಾರೆ ಎಂಬುದನ್ನು ಅಸೆಸ್ ಮಾಡಿದವರು ರೆಕಾರ್ಡ್ ಮಾಡಿ ಇಡಬೇಕಾಗುತ್ತದೆ. ಇಂಥ ವಿಚಾರವನ್ನು ಹಾಕಿಕೊಂಡು ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ಇವತ್ತು ರಸ್ತೆಗಳ ನಿರ್ವಹಣೆ, ಬೀದಿ ದೀಪ ಕೊಡುವುದು, ನೈರ್ಮಲ್ಯ ಶುದ್ಧೀಕರಣ, ನೀರು ಪೂರೈಕೆ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಪುರಸಭೆಗಳು ಕೈಗೆತ್ತಿಕೊಂಡು ಹೋಗುವಾಗ ಎಂಟ್ರಿ ಟ್ಯಾಕ್ಸ್‌ನಿಂದ ಹಣ ಬಂದರೆ ಇನ್ನಷ್ಟು ಒಳ್ಳೆಯ ಕಾರ್ಯಕ್ರಮಗಳನ್ನು ಅವು ಹಾಕಿಕೊಂಡು ಹೋಗಬಹುದೆಂಬ ವಿಶ್ವಾಸ ಸರ್ಕಾರಕ್ಕೆ ಬಂದಿದೆ. ಇವತ್ತು ಇನ್ನೊಂದು ವಿಚಾರ ಹಾಕಿಕೊಂಡಿದ್ದೇವೆ. ಒಂದು ಮುನಿಸಿಪಲ್ ಫೈನಾನ್ಸ್ ಕಾರ್ಪೊರೇಷನ್ ಮಾಡಬೇಕೆಂದು ಸರ್ಕಾರ ಇವತ್ತು ನಿರ್ಧಾರ ತೆಗೆದುಕೊಂಡಿದೆ. ಯಾವ ಮುನಿಸಿಪಾಲಿಟಿಗಳಿವೆ ಅವರು ಕಮರ್ಷಿಯಲ್ ವೆಂಚರ್ ಮತ್ತು ಅವರ ಒಂದು ಅಸೆಟ್ಸ್ ಡೆವಲಪ್ ಮಾಡುವುದಕ್ಕೆ ಸಾಕಷ್ಟು ಹಣ ಇರುವುದಿಲ್ಲ ಅವರಿಗೆ. ಅಂಥ ಮುನಿಸಿಪಾಲಿಟಿಗಳಿಗೆ ಷಾಪಿಂಗ್ ಕಾಂಪ್ಲೆಕ್ಸ್ ಮಾಡುವುದಕ್ಕೆ ಅಥವಾ ಬೇರೆ ಬೇರೆ ಅಸೆಟ್ಸ್ ಕ್ರಿಯೇಟ್ ಮಾಡುವುದಕ್ಕೆ ಮುನಿಸಿಪಲ್ ಫೈನಾನ್ಸ್ ಕಾರ್ಪೊರೇಷನ್ ಮಾಡಿ ಅವರೆಲ್ಲಾ ಕಾಂಟ್ರಿಬ್ಯೂಟ್ ಮಾಡುವ ಹಾಗೆ ಮಾಡಿ ಹುಡ್ಕೊ ಮತ್ತು ವರ್ಲ್ಡ್ ಬ್ಯಾಂಕ್‌ನಿಂದ ಲೋನ್ ತೆಗೆದುಕೊಂಡು ಒಳ್ಳೆಯ ಫೈನಾನ್ಸ್ ಕಾರ್ಪೊರೇಷನ್ ಮಾಡಬೇಕೆಂದು ಇವತ್ತು ಅದರ ವಿಚಾರದಲ್ಲಿ ಕ್ರಮವನ್ನು ಹಾಕಿಕೊಂಡಿದ್ದೇವೆ. ಪ್ಲಾನ್ ಸ್ಯಾಂಕ್ಷನ್ ವಿಚಾರದಲ್ಲಿ ಸಾಮಾನ್ಯ ಜನರಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದರು.

ಬಹುಶಃ ಬೆಂಗಳೂರು ಮತ್ತು ಕೆಲವೊಂದು ಮಹಾನಗರ ಪಾಲಿಕೆಯಲ್ಲಿ ಮಾತ್ರ ಸಿಂಗಲ್ ವಿಂಡೋ ಏಜೆನ್ಸಿ ಇತ್ತು. ಈಗಾಗಲೇ ಆಕ್ಟ್ ಅಮೆಂಡ್‌ಮೆಂಟ್ ಮಾಡಿದ್ದೇವೆ. ಇದರ ಪ್ರಕಾರ ಪ್ರತಿಯೊಂದು ಮಹಾನಗರ ಪಾಲಿಕೆ ಮತ್ತು ಸಿಟಿ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಅಲ್ಲಿಯೇ ಟೌನ್ ಪ್ಲಾನಿಂಗ್ ಆಫೀಸರ್‌ಗಳನ್ನು ಮಾಡಿ ಅಲ್ಲೇ ಅವರ ಪ್ಲಾನ್ ಸ್ಯಾಂಕ್ಷನ್ ಮಾಡುವಂಥ ಕೆಲಸ ಮಾಡಿ ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ ಕೆಲಸ ಮಾಡುವಂತೆ ಮಾಡುತ್ತೇವೆ. ಮತ್ತೆ ಹೊಸ ಆಶ್ರಯ ಸ್ಕೀಂ ಪ್ರಾರಂಭ ಮಾಡಿದಮೇಲೆ ಭಾಗ್ಯ ಮಂದಿರ ಹಳೇ ಸ್ಕೀಂನಲ್ಲಿ ಸುಮಾರು ೩೦೦೦ ಬ್ಯಾಕ್‌ಲಾಗ್ ಇದೆ. ಅದರಲ್ಲಿ ಸುಮಾರು ೨೦೦೦ ಮನೆಗಳನ್ನು ಈಗಾಗಲೇ ನಾವು ಪೂರ್ಣಗೊಳಿಸಿದ್ದೇವೆ. ಇನ್ನೂ ಸಾವಿರ ಮನೆಗಳನ್ನು ಸಹ ಈ ವರ್ಷದಲ್ಲಿ ಪೂರ್ಣಗೊಳಿಸುವಂಥ ಕಾರ್ಯಕ್ರಮವನ್ನು ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ನವರು ತೆಗೆದುಕೊಳುತ್ತಿದ್ದೇವೆ. ಶಿವಮೊಗ್ಗ ಮತ್ತು ಭದ್ರಾವತಿ ಕಾರ್ಪೋರೇಷನ್ ಮಾಡುವಂಥ ಒಂದು ತೀರ್ಮಾನವನ್ನು ಈಗಾಗಲೇ ಬಜೆಟ್‌ನಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಾಡಿದ್ದಾರೆ. ಈ ವರ್ಷ ಈ ಶಿವಮೊಗ್ಗ ಮತ್ತು ಭದ್ರಾವತಿ ಕಾರ್ಪೋರೇಷನ್ ಮಾಡುತ್ತೇವೆ. ಹೌಸಿಂಗ್ ವಿಚಾರದಲ್ಲಿ ಬಹುಶಃ ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಅಭಿನಂದಿಸಲೇಬೇಕಾಗುತ್ತದೆ. ಇಂಥ ಒಂದು ಒಳ್ಳೆಯ ಕಾರ್ಯಕ್ರಮ ಇಡೀ ನಮ್ಮ ರಾಷ್ಟ್ರದಲ್ಲಿ ಎಲ್ಲೂ ಇಲ್ಲ. ಬಡವರಿಗೆ ಸೈಟು ಕೊಡುವ ಒಂದು ಕೆಲಸ ಅದರಲ್ಲೂ ಇಷ್ಟೊಂದು ಅಲ್ಪಾವಧಿಯಲ್ಲಿ ಸುಮಾರು ನಾಲ್ಕು ಲಕ್ಷ ಸೈಟುಗಳನ್ನು ನಾವು ಈಗಾಗಲೇ ಹಂಚಿದ್ದೇವೆ. ಇನ್ನೂ ಈ ಕೆಲಸ ಮುಂದುವರಿದುಕೊಂಡು ಹೋಗುತ್ತದೆ. ನಮ್ಮ ದಾಖಲೆ ಪ್ರಕಾರ ೯ ಲಕ್ಷ ಜನರಿಗೆ ಸೈಟು ಇಲ್ಲ. ಆದ್ದರಿಂದ ಅವರೆಲ್ಲರಿಗೂ ಸೈಟು ಕೊಡುವತನಕ ಈ ಒಂದು ಕಾರ್ಯಕ್ರಮವನ್ನು ಮುಂದೆ ಜಾರಿಗೊಳಿಸುವಂಥ ವಿಚಾರ ಮಾಡಿದ್ದೇವೆ. ಈ ವಿಚಾರದಲ್ಲಿ ಮುಖ್ಯ ಮಂತ್ರಿಗಳನ್ನು ಅಭಿನಂದನೆ ಮಾಡಿದ ಹಾಗೆ ನಾನು ನಮ್ಮ ಶಾಸಕ ಮಿತ್ರರನ್ನೂ ಅಭಿನಂದನೆ ಮಾಡಬೇಕಾಗುತ್ತದೆ. ಬಹುಶಃ ಅವರ ನೆರವು ಅವರ ಸಹಕಾರ ಇಲ್ಲದೇ ಇದ್ದರೆ ಇಷ್ಟೊಂದು ಅಲ್ಪಾವಧಿಯಲ್ಲಿ ಇಷ್ಟೊಂದು ಸೈಟುಗಳನ್ನು ಕೊಡುವುದಕ್ಕೆ ಆಗುತ್ತಾ ಇರಲಿಲ್ಲ. ಹಾಗೂ ಅಧಿಕಾರಿವರ್ಗದವರೂ ಸಹ ಒಳ್ಳೆಯ ಕೆಲಸಕ್ಕೆ ಸಾಕಷ್ಟು ಬೆಂಬಲವನ್ನು ಕೊಟ್ಟಿದ್ದಾರೆ. ಮತ್ತು ಮನೆಗಳನ್ನು ಕೊಡುವ ವಿಚಾರದಲ್ಲಿ ಸ್ವಲ್ಪ ತಡವಾಗಿದೆ. ಅದಕ್ಕೆ ಎರಡು ಕಾರಣ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಕಟ್ಟುವ ವಿಚಾರ ಆರ್. ಪಿ. ಆರ್. ಕೆಳಗೆ ಇದೆ. ಮತ್ತೆ ಅರ್ಬನ್ ಹೌಸಿಂಗ್ ಮೊದಲು ಎಚ್. ಯು. ಡಿ.ಯಲ್ಲಿತ್ತು. ಈಗ ಎರಡೂ ಸ್ಕೀಂಗಳನ್ನು ಸಹ ಹೌಸಿಂಗ್ ಬೋರ್ಡಿಗೆ ಒಪ್ಪಿಸಿದ್ದೇವೆ. ಮನೆ ಕಟ್ಟುವಾಗ ಯಾವ ರೀತಿಯ ಮನೆ ಕಟ್ಟಬೇಕೆಂಬ ವಿಚಾರದಲ್ಲಿ ನಾವು ಸ್ವಲ್ಪ ಸಮಯ ತೆಗೆದುಕೊಂಡೆವು. ಏಕೆಂದರೆ ಮೊದಲು ಜನತಾ ಮನೆಗಳನ್ನು ಕಟ್ಟಿದಾಗ ಆದಷ್ಟು ಜಾಗ್ರತೆ ಅವು ಬಿದ್ದು ಹೋಗುತ್ತಿದ್ದವು. ಅದರಿಂದ ಕೆಟ್ಟ ಹೆಸರು ಬರುತ್ತಿತ್ತು. ಈ ಉದ್ದೇಶದಿಂದ ಪ್ರೀ ಫಾಬ್ರಿಕೇಟೆಡ್ ಆಗಿ ಒಳ್ಳೆಯ ಮನೆಗಳನ್ನು ೧೫ ಸಾವಿರ ರೂಪಾಯಿಗಳಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ೧೬ ಸಾವಿರ ರೂಪಾಯಿಗಳಿಗೆ ಪಟ್ಟಣ ಪ್ರದೇಶದಲ್ಲಿ ಕಟ್ಟುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇದಕ್ಕೆ ಈಗಾಗಲೇ ಕಂಟ್ರಾಕ್ಟರುಗಳನ್ನು ನೇಮಕ ಮಾಡಿದ್ದೇವೆ. ಏತಕ್ಕೆ ಕಂಟ್ರಾಕ್ಟರುಗಳನ್ನು ನೇಮಕ ಮಾಡಿದ್ದೇವೆ ಎಂದರೆ ಇವತ್ತು ಪ್ರತಿಯೊಂದು ಜಾಗದಲ್ಲಿ ಬೇರೆಬೇರೆ ರೀತಿಯ ಮನೆಗಳನ್ನು ಕಟ್ಟಿದರೆ ಬಹುಶಃ ಅದಕ್ಕೆ ಉಪಯೋಗಿಸುವ ಮರಮುಟ್ಟುಗಳು ಅಥವಾ ಬೇರೆ ಸಾಮಗ್ರಿಗಳನ್ನು ಉಪಯೋಗಿಸಬೇಕಾಗುತ್ತದೆ. ಇದರಿಂದ ಕ್ವಾಲಿಟಿ ಅಷ್ಟು ಚೆನ್ನಾಗಿ ಬರುವುದಿಲ್ಲ. ಆದ್ದರಿಂದ ಪ್ರಿ

ಫ್ಯಾಬ್ರಿಕೇಟೆಡ್ ಆಗಿ ಒಂದೆರಡು ವರ್ಷಗಳಲ್ಲಿ ಸಾಕಷ್ಟು ಹೆಚ್ಚಿನ ಮನೆಗಳು ಬರಲಿ ಎಂಬ ಉದ್ದೇಶದಿಂದ ಇವತ್ತು ಕಟ್ಟಿದ್ದೇವೆ. ಆಶ್ರಯ ಕಮಿಟಿಗೆ ಛೇರ್ಮನ್ ಆಗಿ ಎಂ. ಎಲ್. ಎ. ಗಳಿದ್ದಾರೆ. ತಹಸೀಲ್ದಾರ್ ಮೆಂಬರ್ ಆಗಿದ್ದಾರೆ. ಬಿ. ಡಿ. ಓ. ಸೆಕ್ರೆಟರಿಯಾಗಿದ್ದಾರೆ. ಅವರು ಮನೆಗಳನ್ನು ಹಂಚುವುದು ಮಾತ್ರವಲ್ಲದೆ ಅವರು ನಿವೇಶನ ಹಂಚುವುದು ಮಾತ್ರವಲ್ಲದೆ ಮನೆಗಳ ಕ್ವಾಲಿಟಿಯನ್ನು ಕೂಡ ಸೂಪರ್‌ವೈಸ್ ಮಾಡಬಹುದು. ಅವರು ಹೋಗಿ ನೋಡಬಹುದು. ಏಕೆಂದರೆ ಅವರಿಗೆ ಸಾವಿರ ಮನೆಗಳು ಬರುತ್ತವೆ. ಬಹುಶಃ ಸುಲಭವಾಗಿ ಮೇಲ್ವಿಚಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯಮಟ್ಟದಲ್ಲಿ ನಾವು ಮೇಲ್ವಿಚಾರಣೆ ಮಾಡಬೇಕಾದರೆ ಕ್ವಾಲಿಟಿ ಬಗ್ಗೆ ಅಷ್ಟೊಂದು ಸೂಪರ್‌ವೈಸ್ ಮಾಡುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಈ ಟಾಸ್ಕ್ ಫೋರ್ಸ್ ಕಮಿಟಿಗೆ ಒಂದು ದೊಡ್ಡ ಜವಾಬ್ದಾರಿಯನ್ನು ನಾವು ಈಗಾಗಲೇ ಕೊಟ್ಟಿದ್ದೇವೆ. ಈ ಮನೆಗಳನ್ನು ಕಟ್ಟುವ ಕೆಲಸ ಸಮೇತ ಈ ವರ್ಷದಿಂದ ಅದು ನಿಲ್ಲುವುದಿಲ್ಲ. ಈ ವರ್ಷ ೨ ಲಕ್ಷ ೨೪ ಸಾವಿರ ಮನೆಗಳನ್ನು ಕಟ್ಟುವ ಕಾರ್ಯಕ್ರಮವನ್ನು ಈಗಾಗಲೇ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್‌ನಲ್ಲಿ ಪ್ರಕಟ ಮಾಡಿದ್ದಾರೆ. ಹೌಸಿಂಗ್ ಬೋರ್ಡ್‌ನಿಂದ ಸಾಕಷ್ಟು ಮನೆಗಳನ್ನು ಹೈ ಇನ್‌ಕಮ್ ಗ್ರೂಪ್, ಸೆಲ್ಫ್ ಫೈನಾನ್ಸ್ ಸ್ಕೀಮ್‌ನಲ್ಲಿ ಲೋ ಇನಕಮ್ ಗ್ರೂಪ್ ಮತ್ತು ಎಕನಾಮಿಕಲಿ ವೀಕರ್ ಸೆಕ್ಷನ್‌ಗೆ ಕಟ್ಟುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈಗಾಗಲೇ ಕೆಂಗೇರಿಯಲ್ಲಿ ೩ ಸಾವಿರ-ಪ್ರಿ ಫ್ಯಾಬ್ರಿಕೇಟಡ್‌ನಲ್ಲಿ ಕಟ್ಟುತ್ತಿದ್ದೇವೆ. ಮತ್ತು ಯಲಹಂಕದಲ್ಲೂ ಕೂಡ ಕಟ್ಟುತ್ತಿದ್ದೇವೆ. ಗುಣಮಟ್ಟದ ಬಗ್ಗೆ ಹೇಳಬೇಕೆಂದರೆ ಅದು ಚೆನ್ನಾಗಿ ಇದೆ. ಮತ್ತು ಷೆಡ್ಯೂಲ್ ಪ್ರಕಾರ ಆದಷ್ಟು ಬೇಗನೆ ಮನೆ ಕಟ್ಟುವ ಕೆಲಸವನ್ನು ಹೌಸಿಂಗ್ ಬೋರ್ಡ್ ಮಾಡುತ್ತಿದೆ. ನಮ್ಮ ಹೌಸಿಂಗ್ ಬೋರ್ಡ್ ಛೇರ್ಮನ್‌ರವರು ಬಹಳ ಒಳ್ಳೆಯವರು, ಅವರು ಹಗಲು ರಾತ್ರಿ ಕೆಲಸ ಮಾಡಿ ಇಂತಹ ಆಶ್ರಯ ಸ್ಕೀಮ್‌ನಲ್ಲಾಗಲೀ ಅಥವಾ ಹೌಸಿಂಗ್ ಸ್ಕೀಮ್‌ನಲ್ಲಾಗಲಿ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಅವರ ನಾಯಕತ್ವದಲ್ಲಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಹೌಸಿಂಗ್ ಬೋರ್ಡ್ ಕೆಲಸ ಮಾಡುವುದರಲ್ಲಿ ಸಂಶಯ ಇಲ್ಲ. ಇನ್ನು ಅರ್ಬನ್ ವಾಟರ್ ಸಪ್ಲೈ ಬಗ್ಗೆ ಹೇಳಬೇಕೆಂದರೆ, ನೀರಿನ ವಿಚಾರದಲ್ಲಿ ನಮ್ಮ ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಂಡಿದೆ. ಬಹುಶಃ ಹಿಂದೆಂದೂ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ವಾಟರ್ ಸ್ಕೀಮ್‌ಗಳನ್ನು ತೆಗೆದುಕೊಂಡಿರಲಿಲ್ಲ. ಅದೂ ಅಲ್ಲದೇ ೧೯೮೩ ರಿಂದ ೮೯ರ ವರೆಗೆ ಸುಮಾರು ೬ ವರ್ಷಗಳಲ್ಲಿ ಕೇವಲ ೪೨ ಸ್ಕೀಮ್‌ಗಳನ್ನು ಹಿಂದಿನ ಸರ್ಕಾರದವರು ತೆಗೆದುಕೊಂಡಿದ್ದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಬಹುಶಃ ಹಿಂದಿನ ಸರ್ಕಾರ ಎಲ್ಲಾ ವಾಟರ್ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದರೆ ಜನ ಇಷ್ಟೊಂದು ಪರದಾಡಬೇಕಾಗಿರಲಿಲ್ಲ. ಅವರು ೬ ವರ್ಷಗಳಲ್ಲಿ ೪೨ ಸ್ಕೀಮ್ ತೆಗೆದುಕೊಂಡು ಕೇವಲ ೨೬ ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದರು. ಕುಡಿಯುವ ನೀರಿನ ಯೋಜನೆಗಳಿಗೆ ನಗರಪ್ರದೇಶದಲ್ಲಿ ಪಟ್ಟಣ ಪ್ರದೇಶಗಳಲ್ಲಿ ಮತ್ತು ರಾಜ್ಯದಲ್ಲಿ ೬ ವರ್ಷಗಳಲ್ಲಿ ಕೇವಲ ೨೬ ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ನಮ್ಮ ಸರ್ಕಾರ ಬಂದ ಮೇಲೆ ೩ ವರ್ಷಗಳಲ್ಲಿ ಸುಮಾರು ೧೧೩ ಕೋಟಿ ರೂಪಾಯಿ, ಈ ವರ್ಷದ್ದೂ ೫೦ ಕೋಟಿ ರೂಪಾಯಿ ಸೇರಿಸಿ ಇಟ್ಟಿದ್ದೇವೆ. ನಮ್ಮ ಸರ್ಕಾರ ಕುಡಿಯುವ ನೀರಿಗಾಗಿ ಇಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ಇದರಲ್ಲಿ ಈ ವರ್ಷ ೫೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಮೊದಲೆಲ್ಲಾ ೧೧ ಕೋಟಿಗಳನ್ನು ಇಡುತ್ತಿದ್ದರು. ಕಳೆದ ಸಾಲಿನಲ್ಲಿ ನಾವು ೨೨ ಕೋಟಿ ಇಟ್ಟಿದ್ದು ಮತ್ತೆ ಮುಖ್ಯಮಂತ್ರಿಗಳು ೧೦ ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದಾರೆ ಒಟ್ಟು ೩೩

ಕೋಟಿಗಳು ಆಯಿತು. ಈ ವರ್ಷ ಬಜೆಟ್‌ನಲ್ಲಿ ೫೦ ಕೋಟಿ ರೂಪಾಯಿ ಪ್ರಾವಿಷನ್ ಮಾಡಿದ್ದೇವೆ. ಮತ್ತೆ ಕಳೆದ ವರ್ಷ ಡ್ರಾಟ್ ಬಂದಾಗ, ನೀರಿನ ಅಭಾವ ಬಂದಾಗ ಇಡೀ ರಾಜ್ಯದಲ್ಲಿ ಹಿಂದೆಂದೂ ಮಾಡದ ಕೆಲಸವನ್ನು ಮಾಡಿದ್ದೇವೆ. ಸುಮಾರು ೬ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೊಳವೆ ಭಾವಿ ಕೆಲಸ ಮಾಡಿದ್ದೇವೆ. ಆದರಲ್ಲೂ ಬೆಂಗಳೂರು ನಗರದಲ್ಲಿ ತಮಗೆ ಗೊತ್ತಿರುವಹಾಗೆ ನೀರಿನ ಅಭಾವ ಬಂದಿತ್ತು. ತಿಪ್ಪಗೊಂಡನ ಹಳ್ಳಿಯಲ್ಲಿ ನೀರು ಇರಲಿಲ್ಲ. ಆ ಸಂದರ್ಭದಲ್ಲಿ ಕಾರ್ಪೋರೇಷನ್ ಮತ್ತು ಬಿ. ಡಿ. ಎ. ಹಾಗೂ ಬಿ. ಡಬ್ಲ್ಯು. ಎಸ್. ಎಸ್. ಬಿ.ಯವರು ಎಲ್ಲಾ ಸೇರಿ ೬೫೦ರಿಂದ ೭೦೦ ಕೊಳವೆ ಭಾವಿಗಳನ್ನು ತೋಡಿಸುವ ಕೆಲಸ ಮಾಡಿದ್ದಾರೆ. ಮತ್ತೆ ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ತೆಗೆದುಕೊಂಡು ೩೫೦ ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳಿಗೆ ಈಗಾಗಲೇ ಪಂಪುಗಳನ್ನು ಅಳವಡಿಸುವ ಕೆಲಸ ಮಾಡಿದ್ದೇವೆ. ಮತ್ತೆ ಕಾರ್ಪೋರೇಷನ್‌ನಲ್ಲಿ ಬಾಕಿ ಇರುವ ಸುಮಾರು ೨೦೦ ಕೊಳವೆ ಬಾವಿಗಳಿದೆ. ಈಗಾಗಲೇ ಅವುಗಳ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆ. ಅವಕ್ಕೂ ಕೂಡ ಪಂಪ್ ಫಿಕ್ಸ್ ಮಾಡಿ ಮಿನಿ ಟ್ಯಾಂಕ್ ಕಟ್ಟುವ ಕೆಲಸ ಕೈಗೊಳ್ಳಲಿದ್ದಾರೆ. ಅವಕ್ಕೂ ಕೂಡ ಪಂಪ್ ಫಿಕ್ಸ್ ಮಾಡಿ ಮಿನಿ ಟ್ಯಾಂಕ್ ಕಟ್ಟುವ ಕೆಲಸ ಕೈಗೊಳ್ಳಲಿದ್ದಾರೆ. ಮತ್ತೆ ಅಧ್ಯಕ್ಷಣೆಯವರೇ ಈಗಾಗಲೇ ೬ ಸ್ಕೀಮ್‌ಗಳನ್ನು ಈ ವರ್ಷ ಪ್ರಾರಂಭ ಮಾಡಿದ್ದೇವೆ. ಅಣ್ಣಿಗೇರಿ, ಭಾಲ್ಕಿ, ಹೊಸನಗರ, ಮುದ್ದೇಬಿಹಾಳ್, ತಿಪಟೂರು, ಸಾಗರ್ ಮುಂತಾದ ಕಡೆ. ಇನ್ನು ಸುಮಾರು ೮ ಸ್ಕೀಮ್‌ಗಳನ್ನು ಏಪ್ರಿಲ್‌ನಲ್ಲಿ ಪ್ರಾರಂಭ ಮಾಡಲಾಗುತ್ತದೆ. ತೀರ್ಥಹಳ್ಳಿ, ಹಾನಗಲ್, ಯಾದಗಿರಿ, ಗದಗ-ಬೆಟ್ಟಗೇರಿ, ಗುರ್ಮಿಟ್‌ಕಲ್, ಮುಧೋಳ್, ರಾಮಪುರ, ಸುಳ್ಯದಲ್ಲಿ ಈ ವರ್ಷದ ಏಪ್ರಿಲ್‌ನಲ್ಲಿ ಪ್ರಾರಂಭ ಮಾಡುವುದು. ಬಾಕಿ ಇರುವ ಸ್ಕೀಮ್‌ಗಳಿಗೆ ಸುಮಾರು ೧೮೯ ಕೋಟಿ ರೂಪಾಯಿಗಳು ನಮಗೆ ಬೇಕಾಗುತ್ತದೆ. ಆದರಲ್ಲೂ ಕೂಡ ಸಾಕಷ್ಟು ಹಣವನ್ನು ಕೊಟ್ಟಿದ್ದೇವೆ. ಆದಷ್ಟು ಬೇಗ ಎಲ್ಲಾ ಸ್ಕೀಮ್‌ಗಳ ಬಗ್ಗೆ ನಾವು ಪ್ರಯತ್ನ ಮಾಡುತ್ತೇವೆ. ಮತ್ತೆ ನಮ್ಮಲ್ಲಿ ಸುಮಾರು ೭೫ ಕೋಟಿ ರೂಪಾಯಿಗಳಷ್ಟು ಸ್ಕೀಮ್ ಪೆಂಡಿಂಗ್‌ನಲ್ಲಿ ಇವೆ. ಆ ಸ್ಕೀಮ್‌ಗಳು ನಮ್ಮ ಇಲಾಖೆಯಲ್ಲಿ ಪ್ರೋಸೆಸಿಂಗ್ ಹಂತದಲ್ಲಿ ಇದೆ. ಈ ೭೫ ಕೋಟಿ ರೂಪಾಯಿಗಳ ಸ್ಕೀಮ್‌ಗಳನ್ನೂ ನಾವು ಸ್ಯಾಂಕ್ಷನ್ ಮಾಡಿ ಆದಷ್ಟು ಜಾಗ್ರತೆ ಕರ್ನಾಟಕ ರಾಜ್ಯದಲ್ಲಿ ಬರುವ ವರ್ಷದಲ್ಲಿ ಕುಡಿಯುವ ನೀರಿನ ಅಭಾವವನ್ನು ಹೋಗಲಾಡಿಸುವುದಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಬಗ್ಗೆ ನಿಜವಾಗಿಯೂ ಹೇಳುವುದಾದರೆ ನಾನು ಒಪ್ಪಿಕೊಳ್ಳುತ್ತಾ ಇದ್ದೇನೆ. ಹಲವಾರು ವರ್ಷಗಳಿಂದ ಸರಿಯಾಗಿ ಕೆಲಸ ಮಾಡಿಲ್ಲ. ಮೈಸೂರು, ಬೆಳಗಾವಿ, ಚಿಕ್ಕಮಗಳೂರು, ಮತ್ತು ಬೆಂಗಳೂರು ಇಂತಹ ಕೆಲವು ಜಾಗಗಳಲ್ಲಿ ಮಾತ್ರ ಕೆಲಸಗಳು ಆಗಿದೆ. ಆದರೆ ಇನ್ನು ಕೆಲವು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟೀಸ್ ಕೆಲಸ ಮಾಡುತ್ತಿಲ್ಲ. ಆದರೂ ಸಹಿತ ೧೯೮೯-೯೦ರಲ್ಲಿ ೧೧ ಸಾವಿರ ಸೈಟುಗಳನ್ನು ಮಾತ್ರ ಕೊಟ್ಟಿದ್ದಾರೆ ೧೯೯೦-೯೧ರಲ್ಲಿ ೪ ಸಾವಿರ ಸೈಟುಗಳನ್ನು ಕೊಟ್ಟಿದ್ದಾರೆ. ೧೯೯೧-೯೨ರಲ್ಲಿ ೫೯ ಸಾವಿರ ಸೈಟುಗಳನ್ನು ಕೊಡುವಂತಹ ಕೆಲಸ ಮಾಡಿದ್ದಾರೆ. ಈಗಾಗಲೇ ಸಾಕಷ್ಟು ಸ್ಕೀಮ್‌ಗಳನ್ನು ಕೊಡುವಂತಹ ಕೆಲಸ ಮಾಡಿದ್ದಾರೆ. ಈಗಾಗಲೇ ಸಾಕಷ್ಟು ಸ್ಕೀಮ್‌ಗಳನ್ನು ನಾವು ಸ್ಯಾಂಕ್ಷನ್ ಮಾಡಿದ್ದೇವೆ. ಬರುವ ವರ್ಷ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸೈಟುಗಳನ್ನು ಕೊಡುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಅನ್ ಆಥರೈಸ್ಡ್ ಕನ್ಸ್ಟ್ರಕ್ಷನ್ ವಿಚಾರದಲ್ಲಿ ಈಗಾಗಲೇ ನಾವು ಬಿಲ್ ಪಾಸ್ ಮಾಡಿದ್ದೇವೆ. ಆದರೆ ಮೇಲ್ಮನೆಯಲ್ಲಿ ಆ ಬಿಲ್ ಹೋದಾಗ ವಿರೋಧಪಕ್ಷದ

ನಾಯಕರುಗಳು ಹಾಗೂ ಸದಸ್ಯರುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದರು. ಅದೇನೆಂದರೆ ಅದರಲ್ಲಿ ನಾನ್ ಅಫಿಷಿಯಲ್ಸ್ ಸೇರಿಸಬೇಕೆಂದು. ಈವೊಂದು ವಿಚಾರದಲ್ಲಿ ತಿದ್ದುಪಡಿ ತರುವಂತಹ ಕೆಲಸವನ್ನು ಈ ಅಧಿವೇಶನದಲ್ಲಿಯೇ ಅದನ್ನು ಅಮೆಂಡ್ ಮಾಡತಕ್ಕ ಕೆಲಸವನ್ನು ನಾವು ಮಾಡುತ್ತೇವೆ.

ಇನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಾಕಷ್ಟು ಸೈಟುಗಳನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಅವಕ್ಕೆ ಹಲವಾರು ಕಾರಣಗಳಿವೆ. ಅದರಲ್ಲಿ ಒಂದು ಕಾರಣ ಸಾಕಷ್ಟು ಕೋರ್ಟ್‌ಗಳಲ್ಲಿ ಲಿಟಿಗೇಷನ್ ನಡೆಯುತ್ತಿವೆ. ಜನತಾ ಸರ್ಕಾರ ಇದ್ದಾಗ ಏನು ಮಾಡಿದ್ದರು ಅಂದರೆ ಸುಮಾರು ೫ ಸಾವಿರ ಸೈಟುಗಳನ್ನು ಜಾಗವಿಲ್ಲದೆ ಕೇವಲ ಪೇಪರ್‌ನಲ್ಲಿ ಅಲಾಟ್‌ಮಾಡಿ ಹೋಗಿದ್ದರು. ನಮ್ಮ ಸರ್ಕಾರ ಬಂದಮೇಲೆ ಆ ೫ ಸಾವಿರ ಸೈಟುಗಳನ್ನು ಕೊಡುವಂತಹ ಕೆಲಸವನ್ನು ಕೈಗೆತ್ತಿಕೊಂಡಿದ್ದೇವೆ. ಅದೂ ಅಲ್ಲದೆ ೨-೩ ಸಾವಿರ ಸೈಟುಗಳು ಈಗಾಗಲೇ ಅಲಾಟ್‌ಮೆಂಟ್ ಮಾಡಲಿಕ್ಕೆ ರೆಡಿಯಿದೆ. ಆದಷ್ಟು ಬೇಗ ನಾವು ಅಲಾಟ್‌ಮೆಂಟ್ ಮಾಡುವ ಕೆಲಸವನ್ನು ನಾವು ಮಾಡುತ್ತೇವೆ. ಇನ್ನು ೬೨ ಕಿಲೋಮೀಟರ್ ಉದ್ದದ ರಿಂಗ್ ರೋಡ್ ಆಗಬೇಕಾಗಿದೆ. ಅದರಲ್ಲಿ ೧೫ ಕಿಲೋಮೀಟರ್ ರೋಡ್ ಪೂರ್ತಿಯಾಗಿದೆ. ೧೧ ಕಿಲೋಮೀಟರ್ ರೋಡ್ ಪ್ರೋಗ್ರೆಸ್‌ನಲ್ಲಿದೆ. ಬಾಕಿಯಿರುವ ರೋಡಗೆ ಅಕ್ವಿಜಿಶನ್ ಪ್ರೊಸಿಡಿಂಗ್ಸ್ ಮಾಡಲಿಕ್ಕೆ ನಾವು ತೆಗೆದುಕೊಂಡಿದ್ದೇವೆ. ಆದಷ್ಟು ಬೇಗ ಅದನ್ನು ಸಹ ಪೂರ್ಣ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈಗ ೮೦ ಸಾವಿರ ಪೆಂಡಿಂಗ್ ಅಪ್ಲಿಕೇಶನ್ಸ್ ಇದೆ. ೮೦ ಸಾವಿರ ಸೈಟುಗಳನ್ನು ಕೊಡಬೇಕಾದರೆ ಅದು ಬರೀ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಡಿಮಾಂಡ್ಸ್‌ಗೆ ಸರಿಯಾಗಿ ಸಪ್ಲೈ ಇಲ್ಲದಿದ್ದರೆ ಬಹುಶಃ ಅನ್ ಆಥರೈಸ್ಡ್ ಕನ್‌ಸ್ಟ್ರಕ್ಷನ್ ಈ ತರಹ ಬರುತ್ತದೆ. ಬರೀ ಸರ್ಕಾರದಿಂದ ಇವತ್ತು ಸೈಟುಗಳನ್ನು ಕೊಡುವುದಕ್ಕೆ ವಸತಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ವಿಚಾರದಲ್ಲಿ ಖಾಸಗಿಯವರನ್ನು ಸಹ ಇನ್‌ವಾಲ್ವ್ ಮಾಡ ಬೇಕಾಗುತ್ತದೆ. ಆ ರೀತಿ ಮಾಡಿದರೆ ನಮ್ಮ ರಾಜ್ಯದಲ್ಲಿರುವ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯ.

ಇನ್ನು ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಬಹುಶಃ ಸೆಕ್ರೆಟರಿಯವರು ಮತ್ತು ಅಧ್ಯಕ್ಷರು ಒಳ್ಳೆಯ ಕೆಲಸ ಮಾಡುವಾಗ ನಾವು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಮೊದಲು ಗುಲ್ಬರ್ಗದಲ್ಲಿ ಹಳೆಯ ಕಾಲದಲ್ಲಿ ಕಟ್ಟಿದಂತಹ ಮನೆಗಳನ್ನು ನಾನು ಹೋಗಿ ನೋಡಿ ಬಂದಿದ್ದೇನೆ. ಸಾಕಷ್ಟು ಗುಣಮಟ್ಟವಿರಲಿಲ್ಲ. ಅದನ್ನು ನೋಡಿದರೆ ಸ್ಲಮ್ ಕ್ಲಿಯರೆನ್ಸ್ ಬೋರ್ಡನ್ನು ವೈಂಡಪ್ ಮಾಡಬೇಕೆನ್ನುವ ತೀರ್ಮಾನ ಮಾಡಿಕೊಂಡಿದ್ದೆ. ಅಷ್ಟೊಂದು ಕೆಟ್ಟ ರೀತಿಯಲ್ಲಿ ಆ ಮನೆಗಳು ಇದ್ದವು. ಆದರೆ ಈಗ ಹೊಸದಾಗಿ ಮನೆಗಳನ್ನು ಕಟ್ಟುತ್ತಿದ್ದಾರೆ. ನಮ್ಮ ಅಧ್ಯಕ್ಷರು ಸಮೇತ ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರು ಸಹ ಅಪ್ರಿಶಿಯೇಟ್ ಮಾಡಿದ್ದಾರೆ. ಹಳೆಯ ಕಾಲದಲ್ಲಿ ಯಾರೊ ಮಾಡಿದ ತಪ್ಪಿಗಾಗಿ ಎಲ್ಲ ಸರಿಯಿಲ್ಲವೆಂದು ಹೇಳಿದರೆ ಈಗ ಒಳ್ಳೆಯ ಕೆಲಸ ಮಾಡುವವರಿಗೆ ಬೇಸರ ಬರಬಹುದು. ಯಾರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ ಅವರಿಗೆ ಶಹಭಾಷ್‌ಗಿರಿ ಮಾಡೇಕಾದ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಮೊನ್ನೆ ಗಲಾಟೆಯಾದಾಗ ೪೦೦ ಜನ ಮನೆ ಕಳೆದುಕೊಂಡರು ಎಲ್ಲಿಂದಲೋ ಬಂದವರು ಎಂದು ಕೆಲವರು ಹೇಳುತ್ತಾರೆ. ಆ ಜಾಗದಲ್ಲಿ ನಮ್ಮ ಗುಲ್ಬರ್ಗದವರು ಇದ್ದಾರೆ. ಆ ರೀತಿಯಾಗಿ ಮನೆ ಕಳೆದುಕೊಂಡ ೪೦೦ ಜನರಿಗೆ ಮನೆ ಕಟ್ಟಿಸುವ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ.

ನಿಜವಾಗಿಯೂ ಇದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಹೆಚ್ಚಾಗಿ ಸ್ಲಮ್ ಕ್ಲಿಯರೆನ್ಸ್ ಬೋರ್ಡ್‌ನಿಂದ ಮನೆಗಳನ್ನು ಕಟ್ಟುವ ಕೆಲಸವನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಮೊದಲು ಸ್ಲಮ್ ವಿಚಾರದಲ್ಲಿ ಇಷ್ಟು ಚಿಂತನೆ ಮಾಡಿರಲಿಲ್ಲ. ಮೊದಲಿನಿಂದ ಚಿಂತನೆ ಮಾಡಿದ್ದರೆ ಮಾನ್ಯ ಯಾಹ್ಯರವರು ಹೇಳಿದಹಾಗೆ ಈ ಸಮಸ್ಯೆಗಳು ಬರುತ್ತಿರಲಿಲ್ಲ. ಹಲವಾರು ವರ್ಷಗಳಿಂದ ಸ್ಲಮ್‌ನವರಿಗೆ ೩ ಕೋಟಿ ಹೀಗೆ ಕೊಡುತ್ತಾ ಇದ್ದರು. ಆ ಹಣದಿಂದ ಸಾಕಷ್ಟು ರೀತಿಯಲ್ಲಿ ಎಲ್ಲರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕಳೆದ ವರ್ಷ ೯ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಈ ವರ್ಷ ೮ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಮತ್ತೆ ಈ ವರ್ಷ ೩೦ ಸಾವಿರ ರೂಪಾಯಿಗಳನ್ನು ಬೆಂಗಳೂರು ನಗರದಲ್ಲಿ ಸ್ಲಮ್‌ನವರಿಗೆ ಕಟ್ಟಲಿಕ್ಕೆ ಸುಮಾರು ೫ ಕೋಟಿ ರೂಪಾಯಿ ಸಬ್ಸಿಡಿ ಕೊಡುತ್ತಿದ್ದೇವೆ. ಮತ್ತೆ ಬೇರೆ ಬೇರೆ ನಗರ ಪ್ರದೇಶಗಳಲ್ಲಿ ಸಹಿತ ಇವತ್ತು ಸ್ಲಮ್‌ನವರಿಗೆ ಆದ್ಯತೆಯನ್ನು ಕೊಟ್ಟು ಆಶ್ರಯ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಬೇಕೆಂದು ತೀರ್ಮಾನ ತೆಗೆದುಕೊಂಡು ಇವತ್ತು ನಾವು ಕೆಲಸ ಮಾಡುತ್ತಿದ್ದೇವೆ. ಇಷ್ಟೊಂದು ಒಳ್ಳೆಯ ಕೆಲಸವನ್ನು ಮಾಡುವಾಗ, ಇಷ್ಟೊಂದು ಸಮಸ್ಯೆಗಳು ಇರುವುದರಿಂದ ಅದರಲ್ಲಿ ಸಾಕಷ್ಟು ಟೀಕೆ ಟಿಪ್ಪಣಿಗಳು ಬರುವುದು ಸಹಜ. ಟೀಕೆ ಟಿಪ್ಪಣಿಗಳನ್ನು ಸ್ವಾಗತ ಮಾಡುತ್ತಾ ಆದಷ್ಟು ನಮ್ಮ ಅಧಿಕಾರಿಗಳು ಮತ್ತು ಚುನಾಯಿತ ಸದಸ್ಯರುಗಳು ನಾವೆಲ್ಲ ಸೇರಿ ಸಾಕಷ್ಟು ಜನರ ಸಮಸ್ಯೆಗಳನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಈಗಾಗಲೇ ಸಾಕಷ್ಟು ಸಮಯ ಆಗಿದೆ. ಶ್ರೀ ಅನಂತಕೃಷ್ಣ ಅವರು ಹಲವಾರು ಸಲಹೆಗಳನ್ನು ಮಾಡಿದರು. ಅವರು ಫಿಲಾಸಫಿಕಲ್ ಸಜೆಶನ್ಸ್ ಕೊಟ್ಟಿದ್ದಾರೆ. ಅವರ ಫಿಲಾಸಫಿಯಂತೆ ನಡೆದಿದ್ದೇ ಆದರೆ ಬಹುಶಃ ರಾಮರಾಜ್ಯ ಬರುವುದಕ್ಕೆ ಸಾಧ್ಯವಿದೆ. ಆದರೆ ಪ್ರಾಕ್ಟಿಕಲ್ ಆಗಿ ನಾವು ಸಮಸ್ಯೆಗಳನ್ನು ನೋಡಬೇಕಾಗುತ್ತದೆ. ಪ್ರಾಕ್ಟಿಕಲ್ ಆಗಿ ಪ್ರಾಬ್ಲಮ್ಸನ್ನು ಸಾಲ್ವ್ ಮಾಡಬೇಕು. ಇದು ಅವರಿಗೆ ಗೊತ್ತಿದೆ. ಅವರು ಮೇಯರ್ ಆಗಿದ್ದರು, ಬಿ. ಡಿ. ಎ. ಮೆಂಬರ್ ಆಗಿದ್ದವರು. ಆ ಸಂದರ್ಭದಲ್ಲಿ ಈ ಎಲ್ಲಾ ಸಮಸ್ಯೆಗಳನ್ನು ಪರಿಹಾರ ಮಾಡಿದ್ದರೆ ಬಹುಶಃ ಇಷ್ಟೊಂದು ಸಮಸ್ಯೆಗಳು ಬರುತ್ತಿರಲಿಲ್ಲ. ಆದ್ದರಿಂದ ಎಲ್ಲಾ ಅಧಿಕಾರಿಗಳ ಜೊತೆ ಈ ಕೋಆರ್ಡಿನೇಶನ್ ಏನಿದೆ, ಬಿ. ಡಿ. ಎ., ಕೆ. ಇ. ಬಿ. ಇದಕ್ಕೆಲ್ಲಾ ಕೋಆರ್ಡಿನೇಶನ್ ಆಗಬೇಕೆಂದು ಇದೆ. ಏಕೆಂದರೆ ಈ ಉದ್ದೇಶದಿಂದಲೇ ಇವರನೆಲ್ಲಾ ಮೆಂಬರ್ಸನ್ನಾಗಿ ಮಾಡಿದ್ದೇವೆ. ಅಲ್ಲಿ ಕುಳಿತು ಚರ್ಚೆ ಮಾಡಿದರೆ ನಿಜವಾಗಿಯೂ ಸಮಸ್ಯೆಗಳನ್ನು ಪರಿಹಾರ ಮಾಡಬಹುದು. ಮತ್ತೆ ಹಕ್ಕುಪತ್ರಗಳ ವಿಚಾರದಲ್ಲಿ ಅವರು ಒಂದು ಸಲಹೆ ಮಾಡಿದರು. ಸಣ್ಣಸಣ್ಣ ಆರು-ನಾಲ್ಕು, ಮೂರು-ನಾಲ್ಕಕ್ಕೆಲ್ಲ ಹಕ್ಕುಪತ್ರ ಕೊಡಬಾರದು ಎನ್ನತಕ್ಕಂಥ ವಿಚಾರ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಈಗಾಗಲೇ ನಮ್ಮ ಅಧಿಕಾರಿಗಳಿಗೆ ಈ ಬಗ್ಗೆ ಆದೇಶವನ್ನು ಕೊಟ್ಟಿದ್ದೇವೆ. ಹಕ್ಕುಪತ್ರಗಳನ್ನು ಸ್ಲಮ್‌ನವರಿಗೆ ಕೊಡಬಾರದು, ಬರೀ ಗುರುತು ಚೀಟಿಗಳನ್ನು ಮಾತ್ರ ಕೊಡಬೇಕು ಎಂದು. ಮತ್ತೆ ಅವರಿಗೆ ಮನೆ ಕಟ್ಟಿಸಿಕೊಡತಕ್ಕಂಥ ಕೆಲಸ ಮಾಡಬೇಕು. ಬಹುಶಃ ನಾವು ಹಕ್ಕುಪತ್ರ ಕೊಟ್ಟರೆ ಅದು ಸ್ಲಮ್ ಆಗಿಯೇ ಉಳಿಯುತ್ತದೆ. ಆದ್ದರಿಂದ ಹಕ್ಕುಪತ್ರ ಕೊಡಬಾರದು ಎಂದು ಆದೇಶವನ್ನು ಕೊಟ್ಟಿದ್ದೇನೆ. ನಾವು ಹಕ್ಕುಪತ್ರ ಯಾವುದಕ್ಕೂ ಕೊಡುತ್ತಿದ್ದೇವೆ ಎಂದರೆ ಯಾರಿಗೆ ಹಿಂದಿನ ಕಾಲದಲ್ಲಿ ಕಾರ್ಪೊರೇಷನ್ ಸೈಟ್ ಇತ್ತು, ಅದು ದೊಡ್ಡದಾಗಿತ್ತು ಮತ್ತು ಅಲ್ಲಿ ಅವರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅಂತಹ ನಿವೇಶನಗಳಿಗೆ ಮಾತ್ರ ನಾವು ಹಕ್ಕುಪತ್ರವನ್ನು ಕೊಟ್ಟಿದ್ದೇವೆ. ಮತ್ತೆ

ಅವರು ಆಬ್‌ಸೆಂಟಿಸಮ್ ಬಗ್ಗೆ ಮಾತನಾಡಿದರು. ಈ ಪೌರಕಾರ್ಮಿಕರು ಒಂದು ದಿವಸ ಬಂದರೆ ಕೆಲವು ದಿವಸ ಬರುವುದಿಲ್ಲ. ಅವರ ವಿಚಾರದಲ್ಲಿ ಸೀರಿಯಸ್ ಆಗಿ ತೆಗೆದುಕೊಂಡು ಈ ಆಬ್ಸೆಂಟಿಸಮ್ ಅನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ರೆವಿನ್ಯೂ ಕಲೆಕ್ಷನ್ ವಿಚಾರ ಹೇಳಿದರು. ಬೆಂಗಳೂರು ನಗರ ಕಾರ್ಪೋರೇಷನ್‌ನಲ್ಲಿ ಕೆಲಸ ಚೆನ್ನಾಗಿ ಆಗುತ್ತಿದೆ. ಬಹುಶಃ ನಾವು ಕಂಪ್ಯೂಟರೈಸೇಶನ್ ಮಾಡಿದ ಮೇಲೆ ಈಗ ಬರುವುದಕ್ಕಿಂತ ಹೆಚ್ಚಿಗೆ ಪ್ರಾಪರ್ಟಿ ಟ್ಯಾಕ್ಸ್ ಮತ್ತೆ ಬೇರೆ ಟ್ಯಾಕ್ಸ್ ಬರುವುದಕ್ಕೆ ಸಾಧ್ಯ ಇದೆ. ಒಂದು ಮಾತನ್ನು ಹೇಳುವುದಾದರೆ ನಮ್ಮ ಬೆಂಗಳೂರು ನಗರದಲ್ಲಿ ಈ ಕಲ್ಯಾಣ ಮಂಟಪಗಳು ಇರುತ್ತವೆ. ಅವರು ಒಂದೊಂದು ದಿವಸಕ್ಕೆ ಹತ್ತು-ಹದಿನೈದು ಸಾವಿರ ರೂಪಾಯಿ ಚಾರ್ಜ್ ಮಾಡುತ್ತಾರೆ. ಅವರು ನಮಗೆ ಕೊಡುವುದು ವರ್ಷಕ್ಕೆ ಹತ್ತು ಸಾವಿರ ರೂಪಾಯಿ. ಇವತ್ತು ಕಡಿಮೆದರಲ್ಲಿ ಅವರಿಗೆ ಟ್ಯಾಕ್ಸ್ ಹಾಕುತ್ತಿದ್ದೇವೆ. ಇದನ್ನು ಪರೀಕ್ಷೆ ಮಾಡಿದಾಗ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಟ್ಯಾಕ್ಸನ್ನು ಇವರು ತಪ್ಪಿಸುತ್ತಿದ್ದಾರೆ ಎಂದು ಈ ವಿಚಾರ ಈಗಾಗಲೇ ನಮ್ಮ ಗಮನಕ್ಕೆ ಬಂದಿದೆ. ಈ ವಿಚಾರದಲ್ಲಿ ನಾವು ಇಡೀ ರಿಜಿಸ್ಟ್ರೇಷನ್ ಆದಮೇಲೆ, ಬೆಂಗಳೂರು ನಗರದಲ್ಲಿ ಕಂಪ್ಯೂಟರೈಸೇಶನ್ ಮಾಡಿ ಈ ರೀತಿಯಲ್ಲಿ ಎಲ್ಲಿ ಅಂಡರ್‌ವಾಲ್ಯೂ ಮಾಡಿದ್ದಾರೆ, ಆ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ಬಹುಶಃ ಇದಾದ ಮೇಲೆ ಸಾಕಷ್ಟು ರೆವಿನ್ಯೂ ಸಮೇತ ಹೆಚ್ಚಿಗೆ ಆಗುವುದಕ್ಕೆ ಸಾಧ್ಯವಿದೆ. ಮತ್ತೆ ಶ್ರೀ ಆರ್. ದಯಾನಂದರಾವ್ ಅವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಬೆಂಗಳೂರು ನಗರದಲ್ಲಿ ೧೭ ಸಾವಿರ ಲೀಟರ್ ನೀರನ್ನು ಕೊಡುತ್ತಿರುವುದನ್ನು ಕಾರ್ಪೋರೇಷನ್‌ನವರು ನಿಲ್ಲಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಸ್ಟೇ ಕೊಡುತ್ತೇವೆ. ಶ್ರೀ ಮುನಿಸ್ವಾಮಿಯವರು ಕ್ವಾರ್ಟರ್ಸ್ ಅಲಾಟ್‌ಮೆಂಟ್ ವಿಚಾರದಲ್ಲಿ ಸಾಕಷ್ಟು ಅವ್ಯವಹಾರ ನಡೆದಿದೆ ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ತನಿಖೆ ಮಾಡಿಸುತ್ತೇನೆ. ಗ್ರೀನ್ ಬೆಲ್ಟ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ, ಇದರ ಬಗ್ಗೆ ಸಾಕಷ್ಟು ತಪ್ಪು ಕಲ್ಪನೆ ಬಂದಿದೆ. ಇದು ಏನಾಗಿದೆ ಎಂದರೆ ನಮ್ಮ ಹೊಸ ಕೈಗಾರಿಕಾ ನೀತಿ ಪ್ರಕಾರ ಮುಖ್ಯ ಮಂತ್ರಿಗಳು ಒಂದು ಸಭೆ ಕರೆದರು. ಅದರಲ್ಲಿ ಕೈಗಾರಿಕಾ ಕಾರ್ಯದರ್ಶಿ, ಅಧಿಕಾರಿಗಳು ಇದ್ದರು. ಅವರು ಏನು ಹೇಳಿದರು ಎಂದರೆ ವೈಟ್‌ಫೀಲ್ಡನ್ನು ಗ್ರೀನ್ ಬೆಲ್ಟ್‌ನಲ್ಲಿ ಹಾಕಿದ್ದಾರೆ. ಅದನ್ನು ತೆಗೆಯಬೇಕೆಂದು ಹೇಳಿದರು. ಈ ವಿಚಾರದಲ್ಲಿ ಮಾತ್ರ ನಿರ್ಣಯ ತೆಗೆದುಕೊಂಡಿದ್ದೇವೆಯೇ ಹೊರತು ಬೇರೆ ಯಾವ ವಿಚಾರದಲ್ಲೂ ಇಲ್ಲ. ಅದು ಸಿ. ಡಿ. ಪಿ. ಮತ್ತು ಓ. ಡಿ. ಪಿ. ರಿವೈಸ್ ಆಗುತ್ತದೆ. ಅದನ್ನು ವೈಟ್‌ಫೀಲ್ಡ್ ವಿಚಾರದಲ್ಲಿ ಮಾತ್ರ ಗ್ರೀನ್‌ಬೆಲ್ಟ್ ಲಿಫ್ಟ್ ಮಾಡುವಂಥ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಇದು ಹೊಸ ಇಂಡಸ್ಟ್ರಿಯಲ್ ಪಾಲಿಸಿ ವಿಚಾರದಲ್ಲಿ ತೆಗೆದುಕೊಂಡಿರತಕ್ಕ ವಿಷಯ. ಇನ್ನು ಕಾವೇರಿ ಮೂರನೇ ಹಂತ ಮತ್ತು ನಾಲ್ಕನೆಯ ಹಂತದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಜೂನ್ ತಿಂಗಳಲ್ಲಿ ಕಾವೇರಿ ನೀರು ಬೆಂಗಳೂರಿಗೆ ಬರುವಂತೆ ಕೆಲಸ ಮಾಡುತ್ತೇವೆ. ಇನ್ನು ೫ನೇ ಹಂತಕ್ಕೆ ಈಗಾಗಲೇ ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಲಾಗಿದೆ. ಇವತ್ತು ೪ನೇ ಹಂತದ ಯಾವುದೇ ಕೆಲಸವನ್ನೂ ಸಹ ಆದಷ್ಟು ಬೇಗನೆ ಪ್ರಾರಂಭ ಮಾಡುತ್ತೇವೆ. ಮಾನ್ಯ ಮುನಿಸ್ವಾಮಿಯವರು ಅನ್ ಆಥರೈಸ್ಡ್ ಪ್ರೈವೇಸ್ ಬಿಲ್ಡಿಂಗ್‌ಗಳ ಕನ್‌ಸ್ಟ್ರಕ್ಷನ್ ವಿಚಾರ ಹೇಳಿದರು. ಇದರ ವಿಚಾರದಲ್ಲೂ ಸಹಿತ ಈಗಾಗಲೇ ನಾವು ಚರ್ಚೆ ಮಾಡುತ್ತಿದ್ದೇವೆ. ಅನ್ ಆಥರೈಸ್ಡ್ ಪ್ರೈವೇಸ್ ಬಿಲ್ಡಿಂಗ್‌ಗಳು ಸಾಕಷ್ಟು ಬೆಂಗಳೂರಿನಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲೂ ಬಂದಿದೆ. ಈ ಅನ್ ಆಥರೈಸ್ಡ್ ಪ್ರೈವೇಸ್

ಬಿಲ್ಡಿಂಗ್ ಯಾವುವು ಎಂದು ಹೇಳಿದರೆ, ಯಾರು ೫ ಪರ್ಸೆಂಟಿಗಿಂತ ಹೆಚ್ಚು ಡೀವಿಯೇಷನ್ ಮಾಡಿದ್ದಾರೆ ಅದನ್ನು ರೆಗ್ಯುಲರೈಸ್ ಮಾಡುವಂಥ ಪವರ್ಸ್ ಇವತ್ತು ಸರ್ಕಾರಕ್ಕೆ ಸಮೇತ ಇಲ್ಲ. ಇಂತಹ ಬಿಲ್ಡಿಂಗ್‌ಗಳನ್ನು ಕಾನೂನು ಪ್ರಕಾರ ಒಡೆದು ಹಾಕಬೇಕಾಗುತ್ತದೆ. ಈ ವಿಚಾರದಲ್ಲಿ ಮಸೂದೆಯನ್ನು ಸದನದ ಮುಂದೆ ತರುತ್ತೇನೆ. ಅದರ ಬಗ್ಗೆ ತಾವೆಲ್ಲಾ ಚರ್ಚೆ ಮಾಡಿ, ಸದನ ಯಾವ ರೀತಿಯ ಅಭಿಪ್ರಾಯ ಕೊಡುತ್ತದೋ ಆ ಪ್ರಕಾರ ಮಾಡುವುದಕ್ಕೆ ಸಿದ್ಧನಿದ್ದೇನೆ. ಇನ್ನು ಮಾನ್ಯ ಜಯಚಂದ್ರರವರು ಫಾರೆಸ್ಟ್ ಲ್ಯಾಂಡ್ ವಿಚಾರ ಹೇಳಿದರು. ಫಾರೆಸ್ಟ್ ಲ್ಯಾಂಡಿಗೆ, ಈಗಾಗಲೇ ಪೊಸಿಷನ್ ಸರ್ಟಿಫಿಕೇಟ್ ಕೊಡಬೇಕೆಂದು, ಆಶ್ರಯ ಸ್ಕೀಮ್‌ನಲ್ಲಿ ತೆಗೆದುಕೊಂಡಿದ್ದೇವೆ. ಮತ್ತೆ ಬೇರೆ ಬೇರೆ ಸದಸ್ಯರೂ ಕೂಡ ಸಾಕಷ್ಟು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಎಲ್ಲಾ ಸಲಹೆಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಾಗದಿದ್ದರೂ ಸಹಿತ ಆ ಎಲ್ಲಾ ಸಲಹೆಗಳನ್ನೂ ನಾನು ಗಮನದಲ್ಲಿಟ್ಟುಕೊಂಡು, ಆದಷ್ಟು ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂಬ ಮಾತನ್ನು ಹೇಳಿ, ನನ್ನ ಇಲಾಖೆ ಮೇಲೆ ಬೇಡಿಕೆಯನ್ನು ಪಾಸ್ ಮಾಡಬೇಕೆಂದು ತಮ್ಮಲ್ಲಿ ಮತ್ತು ಮಾನ್ಯಸದಸ್ಯರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೇ, ಸದನದಲ್ಲಿ ಇಂದು ನಾಲ್ಕು ಪ್ರಮುಖ ಖಾತೆಗಳ ಬಗ್ಗೆ ಅಥವಾ ಬೇಡಿಕೆಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ನಡೆದಿದೆ, ಬೇಡಿಕೆ ಸಂಖ್ಯೆ ೩೦ ಗೃಹನಿರ್ಮಾಣ, ೩೧ ನಗರಾಭಿವೃದ್ಧಿ, ೩೨ ನಗರಪಾಲಿಕೆಗಳು, ೨೧ ಆಹಾರ ಮತ್ತು ನಾಗರೀಕ ಸರಬರಾಜುಗಳು, ೧೧ ಯುವಜನ ಸೇವೆಗಳು ಹಾಗೂ ೧೨ ಕಲೆ ಮತ್ತು ಸಂಸ್ಕೃತಿ - ಈ ಆರು ಇಲಾಖೆಗಳ ಬಗ್ಗೆ ಮಾತನಾಡುತ್ತಿರತಕ್ಕ ಕಾಲದಲ್ಲಿ, ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ಬೇಡಿಕೆ ಸಂಖ್ಯೆ ೨೧. ಸುಮಾರು ೩೭೫ ನಿಮಿಷಗಳ ಕಾಲ ಚರ್ಚೆಯಲ್ಲಿ ಕಾಲಾವಕಾಶವನ್ನು ಪಡೆದಿದ್ದಾರೆ. ಬಹುಶಃ ನನ್ನ ಉತ್ತರ ಸೂಕ್ಷ್ಮವಾಗಿರಬೇಕಾಗುತ್ತದೆ ಮತ್ತು ಆದಷ್ಟು ಬೇಗನೆ ಆಗಬೇಕೆಂಬ ಕಳಕಳಿಯಿಂದ, ಸೂಚನೆ ಮುಖಾಂತರ ಈಗಾಗಲೇ ತಾವು ತಿಳಿಸಿದ್ದೀರಿ. ಸುಮಾರು ೧೨ ಮಂದಿ ಮಾತನಾಡುತ್ತಿರತಕ್ಕ ಸಂದರ್ಭದಲ್ಲಿ ಸುಮಾರು ೮ ಮಂದಿ ನನ್ನ ಇಲಾಖೆಗೆ ಸಂಬಂಧಪಟ್ಟಹಾಗೆ ನೇರವಾಗಿ ಮಾತನಾಡಿದ್ದಾರೆ. ಪ್ರತಿಪಕ್ಷದ ಪತಿಯಿಂದ ಖಮ್ರುಲ್ ಇಸ್ಲಾಂ, ಆಳುವ ಪಕ್ಷದ ಪತಿಯಿಂದ ಶ್ರೀಮಾನ್ ಹನುಮೇಗೌಡ, ಶ್ರೀ ಕೆ. ಲಕ್ಕಣ್ಣ, ಶ್ರೀ ದಯಾನಂದರಾವ್, ಶ್ರೀ ಷಫಿ ಅಹಮದ್, ಶ್ರೀ ನಾಗರಾಜ್, ಶ್ರೀ ಮುನಿಸ್ವಾಮಿ ಮತ್ತು ಶ್ರೀ ಟಿ. ಬಿ. ಜಯಚಂದ್ರರವರು ಇಲ್ಲಿ ಮಾತನಾಡತಕ್ಕ ಕಾಲದಲ್ಲಿ ಕೆಲವು ಒಳ್ಳೆಯ ಮಾತುಗಳನ್ನು ನನ್ನ ಇಲಾಖೆ ಬಗ್ಗೆ ಹೇಳಿದ್ದಾರೆ. ಹಾಗೂ ನನ್ನ ಇಲಾಖೆಯ ಬಗ್ಗೆ ರಚನಾತ್ಮಕ ಸಲಹೆಗಳನ್ನೂ ಕೊಟ್ಟಿದ್ದಾರೆ. ಶ್ರೀಮಾನ್ ಹನುಮೇಗೌಡರು ಕೆಲವು ಸಂದರ್ಭದಲ್ಲಿ ಎಚ್ಚರಿಕೆ ರೂಪದಲ್ಲೂ ಹೇಳಿದ್ದಾರೆ. ಅವರಿಗೆ, ಅವರ ಅಭಿನಂದನೆಯ ಮಾತುಗಳಿಗೆ ಋಣಿಯಾಗಿದ್ದೇನೆ ಮತ್ತು ರಚನಾತ್ಮಕ ಸಲಹೆಗಳನ್ನು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ತರುತ್ತೇನೆ ಎನ್ನುವುದನ್ನು ಅವರು ಕಾದು ನೋಡಲಿ. ಅವರು ಎಲ್ಲೆಲ್ಲಿ ಎಚ್ಚರಿಕೆಯ ಮಾತುಗಳನ್ನು ಕೊಟ್ಟಿದ್ದಾರೆ, ಅವುಗಳನ್ನು ಗ್ಯಾಲರಿಯಲ್ಲಿರತಕ್ಕ ನಮ್ಮ ಅಧಿಕಾರಿಗಳೆಲ್ಲರೂ ಕೂಡ ಬಹಳ ಎಚ್ಚರಿಕೆಯಿಂದ ಆ ಸಲಹೆಗಳನ್ನು ಗಮನಿಸಿದ್ದಾರೆ. ಈ ಉದಾರ ವಸ್ತುಗಳು ಕೇಂದ್ರದವರಿಂದ ನಮಗೆ ಬರುತ್ತದೆ. ನಮ್ಮ ರಾಜ್ಯದಲ್ಲಿ ಸುಮಾರು ೮೦ ಲಕ್ಷ ರೇಷನ್ ಕಾರ್ಡ್ ಇವೆ. ಹಸಿರು ಕಾರ್ಡು ಎಲ್ಲೆಲ್ಲಿ ಇದೆ ಅದನ್ನು ತ್ರಿವರ್ಣ ಬಣ್ಣಕ್ಕೆ ನಾವು ಬದಲಾಯಿಸುತ್ತಿದ್ದೇವೆ. ಕೇಸರಿ ಬಣ್ಣದ ಕಾರ್ಡ್

ಎಲ್ಲಾ ಸೇರಿ ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ ೮೦ ಲಕ್ಷ ಕಾರ್ಡ್ ಇದೆ. ೧೭ ಸಾವಿರ ನ್ಯಾಯ ಬೆಲೆ ಅಂಗಡಿಗಳು ಇವೆ. ಬೆಂಗಳೂರು ನಗರ ಒಂದರಲ್ಲೇ ೫ ಸಾವಿರ ಚಿಲ್ಲರೆ ನ್ಯಾಯಬೆಲೆ ಅಂಗಡಿಗಳು ಇವೆ. ಇನ್ನು ೧೨ ಸಾವಿರ ಗ್ರಾಮಾಂತರ ಪ್ರದೇಶಗಳಲ್ಲಿವೆ ೧೭ ಸಾವಿರ ನ್ಯಾಯಬೆಲೆ ಅಂಗಡಿಗಳು, ೮೦ ಲಕ್ಷ ಕಾರ್ಡ್ ಇದೆ. ನಮ್ಮ ಆಹಾರಧಾನ್ಯಗಳ ಬೇಡಿಕೆ ಎಷ್ಟಿದೆ ಎಂಬುದನ್ನು ನಾನು ಸೂಕ್ಷ್ಮವಾಗಿ ಅಂಕಿ ಅಂಶಗಳನ್ನು ಕೊಡುತ್ತೇನೆ. ಇದನ್ನು ಒಂದಲ್ಲ ಅನೇಕ ಸಲ ಈ ವಿಚಾರ ಪ್ರಸ್ತಾಪ ಮಾಡಿದ್ದೇನೆ. ಮತ್ತೆ ತಮ್ಮ ಗಮನಕ್ಕೆ ತರುವುದಾದರೆ ೮೦ ಲಕ್ಷ ಕಾರ್ಡುದಾರರಿಗೆ ಅಕ್ಕಿ ಬೇಕಾಗಿರತಕ್ಕಂಥಾದ್ದು ೭೫ ಸಾವಿರ ಮೆಟ್ರಿಕ್‌ಟನ್ ಗೋಧಿ, ೫೦ ಸಾವಿರ ಮೆಟ್ರಿಕ್‌ಟನ್, ಸಕ್ಕರೆ ೫೦ ಸಾವಿರ ಮೆಟ್ರಿಕ್‌ಟನ್, ಸೀಮೆ ಎಣ್ಣೆ ೬೭ ಸಾವಿರ ಕಿಲೋ ಲೀಟರ್ಸ್, ಪಾಮ್ ಆಯಿಲ್ ೮೧೦೦ ಮೆಟ್ರಿಕ್ ಟನ್ ಬೇಕಾಗುತ್ತದೆ. ಮಾನ್ಯ ಸದಸ್ಯರ ಗಮನಕ್ಕೆ ತರುವುದಾದರೆ, ಇವತ್ತು ಮಾರ್ಚಿ ತಿಂಗಳು ಏನಿದೆ ಇವತ್ತಿಗೆ ನಮ್ಮ ಇಲಾಖೆಗೆ ಕೇಂದ್ರದಿಂದ ಬರುವಂತಹ ಆಹಾರಧಾನ್ಯಗಳ ಪ್ರಮಾಣವನ್ನು ಸೂಕ್ಷ್ಮವಾಗಿ ಹೇಳುವುದಾದರೆ, ಅಕ್ಕಿ ೭೫ ಸಾವಿರ ಮೆಟ್ರಿಕ್‌ಟನ್ ಬೇಡಿಕೆ ಇದ್ದರೆ ೬೩ ಸಾವಿರ ಮೆಟ್ರಿಕ್‌ಟನ್ ತಿಂಗಳಿಗೆ ಬರುತ್ತಿದೆ. ಕಳೆದ ತಿಂಗಳವರೆಗೂ ಕೂಡ ೪೫ - ೪೮ - ೫೦ ಸಾವಿರ ಮೆಟ್ರಿಕ್‌ಟನ್ ಅಕ್ಕಿ ನಮಗೆ ಬರುತ್ತಿತ್ತು. ಇವತ್ತು ಕೇಂದ್ರ ಸರಕಾರದವರು ೬೩ ಸಾವಿರ ಮೆಟ್ರಿಕ್‌ಟನ್ ಅಕ್ಕಿಯನ್ನು ಕೊಡುತ್ತಿದ್ದಾರೆ. ನಮ್ಮ ಬೇಡಿಕೆ ಇರುವುದು ೭೫ ಸಾವಿರ ಮೆಟ್ರಿಕ್ ಟನ್ ತಿಂಗಳಿಗೆ. ಗೋಧಿ ನಮ್ಮ ಬೇಡಿಕೆ ತಿಂಗಳಿಗೆ ೫೦ ಸಾವಿರ ಮೆಟ್ರಿಕ್‌ಟನ್, ಆದರೆ ೨೫ ಸಾವಿರ ಮೆಟ್ರಿಕ್‌ಟನ್ ನಮಗೆ ಕೊಟ್ಟಿದ್ದಾರೆ. ಅದರಲ್ಲಿ ೧೦-೧೫ ಸಾವಿರ ಮೆಟ್ರಿಕ್‌ಟನ್ ಕಡಿಮೆ ಮಾಡಿ, ಅದರ ಬದಲು ಅಕ್ಕಿಯನ್ನು ಜಾಸ್ತಿ ಕೊಟ್ಟಿದ್ದಾರೆ ಎಂಬ ವಿಚಾರವನ್ನು ತಿಳಿಸುತ್ತಿದ್ದೇನೆ. ಗೋಧಿ ೧೮೬೮೫ ಟನ್ ನಮಗೆ ಬರುತ್ತಿದೆ. ಕೆರೋಸಿನ್ ಆಯಿಲ್ ನಮ್ಮ ಬೇಡಿಕೆ ೬೭ ಸಾವಿರ ಕಿಲೋ ಲೀಟರ್. ನಾನು ಇವತ್ತು ಕೇಂದ್ರ ಸರಕಾರದ ಪೆಟ್ರೋಲಿಯಂ ಖಾತೆ ಸಚಿವರನ್ನು ಅಭಿನಂದಿಸಬೇಕಾಗಿದೆ. ನಮ್ಮ ಮುಖ್ಯ ಮಂತ್ರಿಗಳು ಪತ್ರ ಬರೆದು ಅನೇಕ ಸಲ ಅವರ ಹತ್ತಿರ ಮಾತನಾಡಿದ ಮೇಲೆ ಪ್ರಥಮಭಾರಿಗೆ ನಮ್ಮ ರಾಜ್ಯಕ್ಕೆ ಸುಮಾರು ೬೭ ಸಾವಿರ ಕಿಲೋಲೀಟರ್ ನಮ್ಮ ಬೇಡಿಕೆ ಏನಿದೆ ಅದಕ್ಕೆ ೫೫೮೬೬ ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ನಮ್ಮ ರಾಜ್ಯಕ್ಕೆ ತಿಂಗಳಿಗೆ ಕೊಟ್ಟಿದ್ದಾರೆ ಎಂದು ಹೇಳಿದ ಮೇಲೆ, ಪೆಟ್ರೋಲಿಯಂ ಸಚಿವರನ್ನು ಕೃತಜ್ಞತೆಯಿಂದ ಈ ರಾಜ್ಯದ ಜನತೆಯ ಪರವಾಗಿ ಅಭಿನಂದಿಸುತ್ತಿದ್ದೇನೆ. ನಮ್ಮ ಬೇಡಿಕೆ ೬೭ ಸಾವಿರ ಕಿಲೋಲೀಟರ್ ಏನಿದೆ ಅದನ್ನು ಅವರು ನಮಗೆ ಕೊಡಬೇಕೆಂಬ ಬೇಡಿಕೆಯನ್ನು ಈ ಸದನದ ಮುಖಾಂತರ ಕೇಂದ್ರ ಸರಕಾರಕ್ಕೆ ಒತ್ತಾಯ ಮಾಡುತ್ತೇನೆ. ಪಾಮೊಲೀನ್ ಎಣ್ಣೆ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಪ್ರತಿಯೊಬ್ಬ ಕಾರ್ಡುದಾರರಿಗೆ ಒಂದು ಕೆ. ಜಿ. ಕೊಡಬೇಕಾದರೆ ನಮಗೆ ೮-೯ ಸಾವಿರ ಮೆಟ್ರಿಕ್ ಟನ್ ಪಾಮ್ ಆಯಿಲ್ ಬೇಕಾಗುತ್ತದೆ. ನಮಗೆ ಇತ್ತೀಚಿನವರೆಗೆ ಕೇಂದ್ರದಿಂಧ ಬರುತ್ತಿರತಕ್ಕಂಥಾದ್ದು ೧೨೦೦ ಮೆಟ್ರಿಕ್‌ಟನ್. ನಾವು ಇದನ್ನು ಎಷ್ಟು ಜನಕ್ಕೆ ಕೊಡುವುದಕ್ಕೆ ಆಗುತ್ತದೆ ಯೋಚನೆ ಮಾಡಿ. ನಮ್ಮ ಬೇಡಿಕೆ ೯ ಸಾವಿರ ಅವರು ಕೊಟ್ಟಿರತಕ್ಕಂಥಾದ್ದು ೧೨೦೦. ಇದನ್ನು ಎಷ್ಟು ಕಾರ್ಡುದಾರರಿಗೆ ಕೊಡುವುದಕ್ಕೆ ಸಾಧ್ಯ ಎಂಬುದು ನಮ್ಮನ್ನು ಕಾಡಿಸುತ್ತಿರತಕ್ಕಂಥ ಪ್ರಶ್ನೆ. ಈ ಒಂದು ಎಣ್ಣೆ ಬಂದಂಥ ಕಾಲದಲ್ಲಿ ಅಧಿಕಾರಿಗಳ ಜೊತೆ ಕುಳಿತು ಚರ್ಚೆ ಮಾಡಿ, ಹಸಿರು ಕಾರ್ಡ್ ಹೊಂದಿರುವ ಬಡತನದ ರೇಖೆಯ ಕೆಳಗಡೆ ಇರತಕ್ಕಂಥ ಜನ ಯಾರಿದ್ದಾರೆ ಅವರಿಗೆ ಕೊಡಿ ಎಂದು ಸೂಚನೆ ಕೊಟ್ಟಿದ್ದೇನೆ. ಬರುವಂತಹ ಎಣ್ಣೆಯನ್ನು ಬಡವರಿಗೆ ಕೊಡುವುದು ಆದ್ಯತೆಯ ಮೇರೆಗೆ ಕ್ರಮೇಣವಾಗಿ ನಗರ

ಪ್ರದೇಶಗಳಿಗೆ ಕೊಡುವಂತಹ ಕೆಲಸವನ್ನು ಮಾಡಿ ಬರತಕ್ಕಂಥ ತಾಳೆ ಎಣ್ಣೆಯನ್ನು ಬಹಳ ಪ್ರಾಮಾಣಿಕತೆಯಿಂದ ಎಚ್ಚರಿಕೆಯಿಂದ ವಿತರಣೆ ಮಾಡುತ್ತಿದ್ದೇವೆ. ಮತ್ತೊಂದು ಹೇಳತಕ್ಕದ್ದು ಎಂದರೆ ನನ್ನ ಇಲಾಖೆಗೆ ಸುಮಾರು ೯೨ ಕೋಟಿ ೬೩ ಲಕ್ಷ ೮೮ ಸಾವಿರ ರೂಪಾಯಿಗಳನ್ನು ಯೋಜನೆ ಮತ್ತು ಯೋಜನೇತರ ಬಾಬುಗಳಿಗೆ ಕೇಳುತ್ತಿದ್ದೇನೆ. ನಮ್ಮಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಜಾರಿ ಇಲಾಖೆ ಫುಡ್‌ಸೆಲ್ ಡಿ. ಐ. ಜಿ.ಅವರ ಅಧ್ಯಕ್ಷತೆಯಲ್ಲಿ ಇದ್ದು ಅಕ್ರಮ ದಾಸ್ತಾನು ಮಾಡತಕ್ಕವರನ್ನು, ಕಾಳಸಂತೆಕೋರರನ್ನು ಇಂತಹವರನ್ನು ಹತ್ತಿಕ್ಕುವ ಸಲುವಾಗಿ ಈ ಇಲಾಖೆ ಇಟ್ಟು ಕೊಂಡು ಇದನ್ನು ಸೇರಿಸಿ ಕಾನೂನು ಮಾಪನ ಅಂದರೆ ಅಳತೆ ಮತ್ತು ತೂಕದ ಇಲಾಖೆ, ಆಹಾರ ಮತ್ತು ನಾಗರೀಕ ಪೂರೈಕೆ ನಿಗಮ ಈ ಮೂರು ಪ್ರಮುಖವಾದ ಶಾಖೆಗಳು ನನ್ನ ಕೈ ಕೆಳಗೆ ಬರುತ್ತವೆ. ತಾವು ಏನೆಲ್ಲಾ ಅಭಿಪ್ರಾಯಗಳನ್ನು ಕೊಟ್ಟಿದ್ದೀರಿ, ಬಹುಶಃ ನನಗೆ ಆ ಎಲ್ಲಾ ವಿಚಾರಗಳನ್ನೂ ಪ್ರಸ್ತಾಪ ಮಾಡುವುದಕ್ಕೆ ಟೈಮ್ ಇಲ್ಲ, ಮಾನ್ಯ ಸದಸ್ಯರು ಹೆಚ್ಚು ಸಲಹೆಗಳನ್ನು ಕೊಟ್ಟಿದ್ದಾರೆ, ಇದರಲ್ಲಿ ಬಹಳ ಮುಖ್ಯವಾದ ಹನುಮೇಗೌಡರು ಅವರು ನನ್ನ ಇಲಾಖೆ ಬಗ್ಗೆ ಕೆಲವು ಸ್ಪಷ್ಟೀಕರಣ ಕೇಳಿದ್ದಾರೆ. ಇಷ್ಟೆಲ್ಲಾ ಆಹಾರ ಇಲಾಖೆಯ ಸಿಬ್ಬಂದಿ, ಫುಡ್ ಸೆಲ್‌ನವರು ಇಷ್ಟೊಂದು ಪ್ರಕರಣಗಳನ್ನು ಹಿಡಿದಿದ್ದಾರೆ, ಒಬ್ಬರಿಗೂ ಶಿಕ್ಷೆ ಮಾಡಿಲ್ಲ ಎಂಬ ಮಾತನ್ನು ಹೇಳಿದ್ದಾರೆ, ಅವರು ಸ್ವತಃ ವಕೀಲರಿದ್ದಾರೆ. ನಾನು ವಕೀಲನಾಗಿದ್ದರೂ, ಬಹಳಷ್ಟು ವರ್ಷ ವಕೀಲನಾಗದ್ದೆನೋ ಅಥವಾ ಇಲ್ಲವೋ ಗೊತ್ತಿಲ್ಲ, ಆದರೆ ನನಗಿಂತ ಹೆಚ್ಚು ಅನುಭವ ಇರತಕ್ಕಂಥವರು ಹನುಮೇಗೌಡರು. ನನ್ನ ಇಲಾಖೆಯ ವರದಿಯಲ್ಲಿ ೧೯೯೧-೯೨ ರಲ್ಲಿ ನಾವು ೧೬೩೮ ಧಾಳಿಗಳನ್ನು ಮಾಡಿದ್ದು ಅದರಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ೩೭೪. ಈ ೩೭೪ ಪ್ರಕರಣಗಳಲ್ಲಿ ಇವತ್ತು ತನಿಖಾ ಹಂತದಲ್ಲಿ ೨೯೭ ಇದೆ, ವಿಚಾರಣೆಗೆ ಉಳಿದ ಪ್ರಕರಣಗಳು ೬೪. ತಪ್ಪು ತಿಳುವಳಿಕೆಯಿಂದ ಮಾಡಿದ್ದ ಪ್ರಕರಣಗಳಲ್ಲಿ ಬಿ. ರಿಪೋರ್ಟ್ ಕೊಟ್ಟು ಇನ್ನೂ ಕೂಡ ನಾವು ತನಿಖಾ ಹಂತದಲ್ಲಿದ್ದ ಕಾಲದಲ್ಲಿ ಇದ್ದೇವೆ. ಇವತ್ತು ಕೆಲವು ಕೋರ್ಟುಗಳಲ್ಲಿ ಟ್ರಯಲ್‌ಗಾಗಿ ಇವೆ. ಈ ಹಂತದಲ್ಲಿ ಶಿಕ್ಷೆ ಮಾಡುವುದು ಹೇಗೆ, ವಕೀಲರಾದಂಥವರು ತಾವೇ ಸ್ಪಷ್ಟೀಕರಣ ಕೊಡಬೇಕು. ನಾವು ಇನ್‌ವೆಸ್ಟಿಗೇಟ್ ಮಾಡುತ್ತೇವೆ, ಅಧಿಕಾರಿಗಳು ಫೈಲ್ ಮಾಡುತ್ತಾರೆ, ಆಯಾ ಕೋರ್ಟ್‌ಗಳಿಗೆ ಹೋದಾಗ, ಟ್ರಯಲ್ ಏನಾಗುತ್ತದೆ ಎಷ್ಟು ಜನಕ್ಕೆ ಶಿಕ್ಷೆಯಾಗುತ್ತದೆ, ಎಷ್ಟು 'ಬಿ' ರಿಪೋರ್ಟ್ ಹೋಗುತ್ತದೆ ಎನ್ನುವುದು ಆಗುತ್ತದೆ. ಆದ್ದರಿಂದ ಈ ಶಿಕ್ಷೆಯನ್ನು ಕೋರ್ಟಿನವರು ಕೊಡಬಹುದೇ ಹೊರತು, ಸರ್ಕಾರದವರು ಕೊಡುವುದಕ್ಕೆ ಸಾಧ್ಯವಿಲ್ಲ...

ಶ್ರೀ ಕೆ. ಹೆಚ್. ಹನುಮೇಗೌಡಃ- ನೀವು ಪ್ರಕರಣಗಳನ್ನು ಕೋರ್ಟಿಗೆ ತೆಗೆದುಕೊಂಡು ಹೋಗುತ್ತೀರಿ. ಯಾರಾದರೂ ತಿಳುವಳಿಕೆ ಇಲ್ಲದಿರುವವರು, ದನ ಕಾಯುವವರು, ಕುರಿ ಕಾಯುವವರು, ಕೂಲಿ ಮಾಡುವವರು ಇಂಥವರು ತಪ್ಪು ಮಾಡಿದರೆ ಎಸ್ಕೇಪ್ ಆಗಲಿ, ಆದರೆ ನಾವು ದೇಶದ ಜನರ ದುಡ್ಡಿನ ಖರ್ಚಿನಲ್ಲಿ ವಿದ್ಯಾವಂತರಾಗಿ ಬಂದಿರುವವರು. ಇವರೆಲ್ಲರೂ ಕೇಸ್ ನಡೆಸುವುದು ಹೇಗೆ ಎಂಬುದು ಅವರಿಗೂ ಗೊತ್ತು ನನಗೂ ಗೊತ್ತು. ಎಲ್ಲರೂ ಅದಕ್ಷರು ಎಂದು ಹೇಳುತ್ತಾರೆ. ಒಬ್ಬರಿಗೂ ಪನಿಷ್‌ಮೆಂಟ್ ಕೊಡದೇ ಹೋದರೆ, ಏನೂ ಆಗುವುದಿಲ್ಲ ಬಿಡಿ ಎಂದು ಹೇಳುತ್ತಾರೆ. ಈಗ ೨೨ ಕೋಟಿ ಮೇಯ್ದಿದ್ದಾರೆ, ಮುಂದಿನ ವರ್ಷ ೧೦ ಕೋಟಿ ಮೇಯುತ್ತಾರೆ. ನಾನು ಹೇಳುವುದು ತಪ್ಪು ಮಾಡಿದವನು ನೋವು ತಿನ್ನಬೇಕು. ಆದರೆ, ಎಸ್ಕೇಪ್ ಆಗುವಂತೆ ಮಾಡಿದ್ದಾರೆ. ತಿಳುವಳಿಕೆ ಇಲ್ಲದಿರತಕ್ಕಂಥವರು ಮಾಡಿದ ಅಪರಾಧವನ್ನು ದೇವರಾದರೂ

ಕ್ಷಮಿಸುತ್ತಾನೆ, ಸಮಾಜ ಕ್ಷಮಿಸಬಹುದು. ಆದರೆ, ನಾವು ತಿಳಿದು ತಿಳಿದೂ ಕಾನೂನು ಚೌಕಟ್ಟಿನಲ್ಲಿ ಎಲ್ಲಾ ತಿಳಿದುಕೊಂಡು, ೪ ಕೋಟಿ ಅಕ್ರಮ ವ್ಯವಹಾರ ಆಗಿದೆ, ಕೋರ್ಟ್ ಶಿಕ್ಷೆ ಕೊಡಲಿಲ್ಲವೆಂದು ಹೇಳಿದರೆ, ಇವರು ಅಡ್ಜಸ್ಟ್ ಆಗಿದ್ದಾರೆ ಎಂದು ಹೇಳಬೇಕಾಗುತ್ತದೆ. ಇವರು ಎಂದರೆ ಮಿನಿಸ್ಟರು ಅಲ್ಲ. ಯಾರೋ ಅಡ್ಜಸ್ಟ್ ಆದರು, ಕೊಟ್ಟರು. ಇದು ತಪ್ಪಲ್ಲವೇ? ಏನೂ ಆಗಿಲ್ಲವೇ? ಅನ್ಯಾಯ ನಡೆದಿಲ್ಲವೇ? ಇದನ್ನು ಸರ್ಕಾರಕ್ಕೆ ಹೇಳುತ್ತಿದ್ದೇನೆ.

ಶ್ರೀ ಟಿ. ಎಸ್. ನರಸಿಂಹಮೂರ್ತಿ:- ೩೦೨ನೇ ಸೆಕ್ಷನ್ ಪ್ರಕಾರ ಕೊಲೆಯಾಗಿರುತ್ತದೆ, ಆ ಕೊಲೆ ಕೇಸನ್ನು ರಿಜಿಸ್ಟರ್ ಮಾಡುತ್ತಾರೆ, ೩೦೨ನೇ ಸೆಕ್ಷನ್ ಪ್ರಕಾರ ಅಪರಾಧ ಮಾಡಿದ್ದಾನೆಂದು ಪ್ರಾಸಿಕ್ಯೂಷನ್‌ನವರು ಹೇಳಬಹುದೇ ಹೊರತು, ಆಯಾ ಲಾಯರ್‌ಗಳು ಪರ, ವಿರೋಧ ಮಾಡುತ್ತಾರೆ. ಅಂತಿಮವಾಗಿ ಸೆಷನ್ ಜಡ್ಜ್ ಶಿಕ್ಷೆ ಕೊಡುತ್ತಾನೆ. ೩೦೨ನೇ ಸೆಕ್ಷನ್ ಪ್ರಕಾರ, ಇವರೇ ಕೊಲೆ ಮಾಡಿದ್ದಾರೆಂದು ಹೇಳುವುದಕ್ಕಾಗುತ್ತದೆಯೇ? ಅವನಿಗೆ ಜೀವಾವಧಿ ಶಿಕ್ಷೆ ಕೊಡಿ ಎಂದು ಹೇಳುವುದಕ್ಕಾಗುತ್ತದೆಯೇ? ನೀವು ಕೂಡ ಲಾಯರ್ ಇದ್ದೀರಿ.

(ಗೊಂದಲ)

ಶ್ರೀ ಟಿ. ಎಸ್. ನರಸಿಂಹಮೂರ್ತಿ:- ನಾನು ಮಾನ್ಯ ಹನುಮೇಗೌಡರ ವಾದವನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಅವರು ಏನು ಹೇಳುತ್ತಿದ್ದಾರೆ, ಇಷ್ಟೆಲ್ಲಾ ಕಷ್ಟಪಟ್ಟು ಮಾಡಿ, ಕೊನೆಗೆ ''ಆಪರೇಷನ್ ಸಕ್ಸಸ್, ಪೇಷಂಟ್ ಡೈಡ್'' ಅಂದಹಾಗೆ, ಇವತ್ತು ಯಾರಿಗೂ ಶಿಕ್ಷೆಯಾಗಿಲ್ಲ ಎನ್ನತಕ್ಕ ಮಾತನ್ನು, ನಮ್ಮ ಅಧಿಕಾರಿಗಳಿಗೂ ಹೇಳುತ್ತೇನೆ. ಕೇಸಿನ ಬಗ್ಗೆ ಬಿಗಿಯಾಗಿ ವಾದ ಮಾಡಬೇಕಾಗುತ್ತದೆ, ಅವರ ವಾದವನ್ನು ನಾನು ಒಪ್ಪುತ್ತೇನೆ. ಆದರೆ ಶಿಕ್ಷೆ ಕೊಡುವವರು ನಾವಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಒಟ್ಟಾರೆ ಹೇಳುತ್ತಿದ್ದೇನೆ, ಉಗ್ರವಾದ ಶಿಕ್ಷೆಯನ್ನು ಮಾಡಬೇಕಾಗುತ್ತದೆ, ಸರಿಯಾಗಿ ಇನ್‌ವೆಸ್ಟಿಗೇಷನ್ ಮಾಡಬೇಕಾಗುತ್ತದೆ, ಟ್ರಯಲ್ ಕೋರ್ಟಿನಲ್ಲಿ ಸರಿಯಾದ ದಾಖಲಾತಿಗಳನ್ನು ಕೊಟ್ಟು ಶಿಕ್ಷೆ ಮಾಡುವುದನ್ನು ಮಾಡಿ ಎಂದು ಹೇಳಬಹುದೇ ಹೊರತು, ನಾವು ಶಿಕ್ಷೆ ಕೊಡುವುದಕ್ಕಾಗುವುದಿಲ್ಲ. ಇದನ್ನು ನಾನು ಮಾಡುತ್ತೇನೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ:- ವ್ಯಕ್ತಿಗಳು ಸರಿಯಾಗಿ ಎವಿಡೆನ್ಸ್ ಕೊಟ್ಟರೆ ಶಿಕ್ಷೆ ಆಗಿಯೇ ಆಗುತ್ತದೆ.

ಶ್ರೀ ಟಿ. ಎಸ್. ನರಸಿಂಹಮೂರ್ತಿ:- ಮತ್ತೊಂದು ಅವರು ಬಹಳ ಮುಖ್ಯವಾಗಿರತಕ್ಕ ವಿಚಾರವನ್ನು ಕೇಳಿದ್ದಾರೆ. ಅವರ ಕ್ಷೇತ್ರದಲ್ಲಿ ಕೌಶಿಕ ಎಂಬುವರು, ತಾಳೆಎಣ್ಣೆ ವಿಚಾರದಲ್ಲಿ ಅಕ್ರಮ ಮಾಡಿದ್ದರೂ ಕೂಡ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ನಮ್ಮ ೨೦ ಜಿಲ್ಲೆಗಳು ಏನಿವೆ, ಈ ಜಿಲ್ಲೆಗಳಲ್ಲಿ ಪಡಿತರ ವ್ಯವಸ್ಥೆಯನ್ನು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಜಿಲ್ಲಾಮಟ್ಟದಲ್ಲಿ, ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಲೈಸೆನ್ಸ್ ಕೊಡುವುದು ಇರಬಹುದು, ಲೈಸೆನ್ಸ್ ಕ್ಯಾನ್ಸಲ್ ಮಾಡುವುದು ಇರಬಹುದು, ಅಕ್ರಮಗಳನ್ನು ಡಿಟೆಕ್ಟ್ ಮಾಡುವುದು ಇರಬಹುದು, ಅವರಿಗೆ ಎಲ್ಲಾ ರೀತಿಯ ಅಧಿಕಾರ ಕೊಟ್ಟು ಜಿಲ್ಲಾಧಿಕಾರಿಗಳು ತಮ್ಮ ಚೌಕಟ್ಟಿನಲ್ಲಿ, ತಮ್ಮ ವ್ಯಾಪ್ತಿಯಲ್ಲಿ ಯಾರು ಯಾರು ಅಕ್ರಮ ಮಾಡುತ್ತಾರೆ, ಅವರಿಗೆ ಏನು ಶಿಕ್ಷೆ ಮಾಡಬೇಕೆಂಬುದು ಅವರ ಮಿತಿಯಲ್ಲಿ ಬರುತ್ತದೆ. ಹಾಸನ ಜಿಲ್ಲೆಯ ಅಧಿಕಾರಿಗಳು, ೫,೩-೨

ರೂಪಾಯಿ ಬೆಲೆಬಾಳುವ ಎಣ್ಣೆಯನ್ನು ಅಕ್ರಮ ಮಾಡಿರುವುದರ ಬಗ್ಗೆ ಹೇಳುವುದಾದರೆ ಅವರಿಂದ ಅಷ್ಟು ಹಣವನ್ನು ವಸೂಲ್ಮಾಡಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಹಾಗಾದರೆ, ಯಾರು ಎಷ್ಟು ಬೇಕಾದರೂ ಹೊಡೆದುಕೊಂಡು, ಯಾವತ್ತು ಬೇಕಾದರೂ ಕೊಡಬಹುದೇ?

ಶ್ರೀ ಕರಿಯಣ್ಣ:- ನಾವೂ ಕೂಡ ನಡುಮಧ್ಯೆ ಕೇಳಬಹುದೇ, ಏಕೆಂದರೆ, ಅವರು ಈ ರೀತಿ ಮಧ್ಯೆ ಕೇಳುತ್ತಾ, ಕೇಳುತ್ತಾ ಹೋದರೆ, ನಾವೂ ಕೂಡ ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಟಿ. ಎಸ್ ನರಸಿಂಹಮೂರ್ತಿ:- ಸಂಜೆ ಏಳೂವರೆ ಗಂಟೆ ಆದರೂ ಉತ್ತರ ಕೊಡುತ್ತೇನೆ. ತಾವು ಏಕೆ ಇಷ್ಟೊಂದು ಉದ್ರೇಕ ಆಗುತ್ತೀರಿ? ಸಂಜೆ ಆದಹಾಗೆ ಉದ್ರೇಕ ಕಡಿಮೆ ಮಾಡಿಕೊಳ್ಳಬೇಕು. ಮಧ್ಯಾಹ್ನ ಟೈಮ್ ಉದ್ರೇಕವೆಂದರೆ, ಸಂಜೆ ಆದರೂ ಉದ್ರೇಕವಾದರೆ ಹೇಗೆ?

ಶ್ರೀ ಕೆ. ಹೆಚ್. ಹನುಮೇಗೌಡ:- ಇದು ನಮಗೆ ಆಗಿರುವ ತೊಂದರೆ ಬಗ್ಗೆ ಹೇಳುತ್ತಿದ್ದೇನೆ. ಪಾಲೀಷ್‌ನಿಂದ ಮಾತನಾಡುವುದಕ್ಕೆ ನನಗೆ ಬರುವುದಿಲ್ಲ.

ಶ್ರೀ ಟಿ. ಎಸ್. ನರಸಿಂಹಮೂರ್ತಿ:- ಮಾನ್ಯ ಸಭಾಧ್ಯಕ್ಷಣೆಯವರೇ, ಇದು ಅಷ್ಟಕ್ಕೇ ಮುಗಿಯಲಿಲ್ಲ. ನಮ್ಮ ನಿರ್ದೇಶಕರು ಏನಿದ್ದಾರೆ ಅವರು ಈ ವಿಚಾರದಲ್ಲಿ ಕೂಡಲೇ ಫೈಲ್ ತರಿಸಿ ಆ ವಿಚಾರದ ಬಗ್ಗೆ ಸ್ಪಷ್ಟೀಕರಣವನ್ನು ಜಿಲ್ಲಾಧಿಕಾರಿಗಳಿಂದ ತರಿಸಿ ಅವರನ್ನೂ ಸಸ್ಪೆಂಡ್ ಮಾಡಿದ್ದಾರೆ. ನಾನು ಸ್ವತಃ ಮತ್ತೆ ಫೈಲ್ ತರಿಸಿ ಅದರ ಬಗ್ಗೆ ನೋಡಿದ್ದೇನೆ. ಅಂತಿಮವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ. ಈಗ ಸಸ್ಪೆಂಡ್ ಮಾಡಿದ್ದೇವೆ. ಬಹುಶಃ ಸಂಪೂರ್ಣವಾಗಿ ಈ ಪ್ರಕರಣವನ್ನು ಅಲ್ಲಿಗೇ ಬಿಟ್ಟಿಲ್ಲ ಎನ್ನುವ ಮಾತನ್ನು ಈ ಸಮಯದಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮತ್ತೊಂದು ನಾನು ಹನುಮೇಗೌಡರ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಏನೆಂದರೆ, ಮಾತನಾಡಿದಂಥ ಸದಸ್ಯರುಗಳು ಸ್ವಲ್ಪ ಆಕ್ರೋಶವಾಗಿ ಸರ್ಕಾರವನ್ನು ಬಹಳ ತರಾಟೆಗೆ ತೆಗೆದುಕೊಂಡು ಸಲಹೆಗಳನ್ನು ಕೊಟ್ಟಂಥ ಸದಸ್ಯರಲ್ಲಿ ಅವರೂ ಒಬ್ಬರು ಅನ್ನತಕ್ಕಂಥ ಮಾತನ್ನು ಹೇಳಿ, ಆಮೇಲೆ ಇನ್ನೂ ಒಂದು ಹೇಳಿದ್ದಾರೆ. ಕಲಬೆರಿಕೆ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ. ನಾನು ಆಹಾರ ವಸ್ತುಗಳನ್ನು ಬೆಳೆಯುವನಲ್ಲ. ನನ್ನ ಕೆಲಸವೇನೆಂದರೆ ಸರಿಯಾಗಿ ವಿತರಣೆ ಮಾಡತಕ್ಕಂಥಾದ್ದು. ತೂಕ ಸರಿಯಾಗಿ ಕೊಡತಕ್ಕಂಥ ಜವಾಬ್ದಾರಿಯನ್ನು ನನಗೆ ಕೊಟ್ಟಿದ್ದಾರೆ. ಕಲಬೆರಿಕೆ ಮಾಡುವವರಿಗೆ, ನಿಜವಾಗಿಯೂ ಕೂಡ ಈ ಕೊಲೆ ಮಾಡತಕ್ಕವರಿಗೆ ಏನು ಶಿಕ್ಷೆ ಕೊಡುತ್ತಾರೋ ಅದಕ್ಕಿಂಥ ಎರಡರಷ್ಟು ಶಿಕ್ಷೆ ಕೊಡಬೇಕೆಂದು ವಾದ ಮಾಡುವವರಲ್ಲಿ ನಾನೂ ಕೂಡ ಒಬ್ಬ. ಆದರೆ, ದುರ್ದೈವ ಈ ಕಲಬೆರಿಕೆ ಮಾಡತಕ್ಕಂಥ ವ್ಯಕ್ತಿಗಳಿಗೆ ಶಿಕ್ಷೆ ಮಾಡತಕ್ಕಂಥ ಅಧಿಕಾರ ನನ್ನ ಇಲಾಖೆಗೆ ಇಲ್ಲ. ಅದರ ಬಗ್ಗೆ ಚಿಂತನೆ ಮಾಡಿದ್ದೇನೆ. ಕಲಬೆರಿಕೆ ಮಾಡುವವರಿಗೆ ಶಿಕ್ಷೆ ಕೊಡುವ ಬಗ್ಗೆ ಕಾನೂನನ್ನು ತಿದ್ದುಪಡಿ ಮಾಡಿ ಅವರ ಅಧಿಕಾರವನ್ನು ಲೀಗಲ್ ಮೆಟ್ರಾಲಜಿ ಡಿಪಾರ್ಟ್‌ಮೆಂಟ್‌ಗೆ ತೆಗೆದುಕೊಳ್ಳಬೇಕೆಂದು ಚಿಂತನೆ ಮಾಡಿದ್ದೇನೆ. ಕಲಬೆರಿಕೆ ಮಾಡತಕ್ಕಂಥ ಕೆಲಸ ಏನಿದೆ ಅದರ ವಿರುದ್ಧವಾಗಿ ನಾವೂ ನೀವೂ ಒಟ್ಟಿಗೆ ಸೇರಿ ಕೆಲಸ ಮಾಡಬೇಕಾಗುತ್ತದೆ. ಮತ್ತು ಸಮಾಜದ ಬಳಕೆದಾರು ಏನಿದ್ದಾರೆ ಅವರು

ತೀವ್ರತರವಾಗಿ ಪ್ರತಿಭಟನೆ ಮಾಡಿ ಬಹುಶಃ ಇಂಥ ಅಮಾನುಷವಾದಂಥ, ಕರಾಳವಾದಂಥ ಕೃತ್ಯಗಳನ್ನು ಮಾಡತಕ್ಕಂಥ ಶಕ್ತಿಗಳಿಗೆ ನಾವು ಎಲ್ಲಾ ರೀತಿಯಿಂದ ಪ್ರತಿಭಟನೆ ಮಾಡಿ ಅವರಿಗೆ ಎಲ್ಲಾ ರೀತಿಯಿಂದಲೂ ಶಿಕ್ಷೆ ಮಾಡತಕ್ಕಂಥ ವಾತಾವರಣ ನಿರ್ಮಾಣ ಮಾಡಬೇಕಾಗುತ್ತದೆ. ಅದಕ್ಕೆ ವಿಶೇಷವಾದಂಥ ಒಂದು ಕಾನೂನುಗಳನ್ನು ಮಾಡಬೇಕಾಗಿದೆ. ಇವತ್ತು ಹೆಲ್ತ್ ಡಿಪಾರ್ಟ್‌ಮೆಂಟ್ ಇದೆ. ಹೆಲ್ತ್ ಮಿನಿಸ್ಟರ್ ಇದ್ದಾರೆ. ನಮ್ಮ ಜಾರ್ಜ್ ಸಾಹೇಬರು ಏನಿದ್ದಾರೆ, ನಗರಾಭಿವೃದ್ಧಿ ಇಲಾಖೆಯಲ್ಲಿ ಹೆಲ್ತ್ ಡಿಪಾರ್ಟ್‌ಮೆಂಟಿನವರಿಗೆ ಕಲಬೆರಿಕೆ ಮಾಡತಕ್ಕಂಥವರ ಮೇಲೆ ಮೇಲ್ವಿಚಾರಣೆ ಮಾಡಿ ಶಿಕ್ಷೆ ಮಾಡತಕ್ಕಂಥ ಅಧಿಕಾರ ಇದೆ. ನನ್ನ ಇಲಾಖೆಗೆ ಆ ಅಧಿಕಾರ ಇಲ್ಲ. ಆದರೂ ಕೂಡ ಅವರ ಬಗ್ಗೆ ತೀವ್ರವಾಗಿ ಚಿಂತನೆ ಮಾಡುತ್ತಿದ್ದೇವೆ ಎನ್ನುವ ಮಾತನ್ನು ತಮಗೆ ಈ ಸಮಯದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ನ್ಯಾಯ ಬೆಲೆ ಅಂಗಡಿಗಳು, ಬಳಕೆದಾರರ ವೇದಿಕೆ ಎಂದು ಹೇಳಿದ್ದೀರಿ. Consumer's Redressal Forum Act of 1986 ಕೇಂದ್ರದ ಕಾಯಿದೆಗೆ ಅನುಗುಣವಾಗಿ, ಬಳಕೆದಾರರಿಗೆ ರಕ್ಷಣೆ ಸಿಗಬೇಕು, ಅಲ್ಲಿ ಎಲ್ಲಾದರೂ ಮಾರಾಟದಲ್ಲಿ ಯಾರಾದರೂ ಆಹಾರ ವಸ್ತುಗಳ ವಿಷಯದಲ್ಲಿ ಯಾವುದೇ ರೀತಿಯ ಅನ್ಯಾಯಗಳು ಆದಾಗ ಈ ವೇದಿಕೆಗಳಿಗೆ ಅವರು ದೂರು ತೆಗೆದುಕೊಂಡು ಹೋಗತಕ್ಕಂಥ ಕಾನೂನು ಇದೆ. ಅದು ಸೆಂಟ್ರಲ್ ಆ್ಯಕ್ಟ್. ನ್ಯಾಷನಲ್ ಕಮಿಷನ್ ಶ್ರೀಮಾನ್ ವಿಠಲರಾಯ್, ಇವರು ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು. ಅವರು ಅಧ್ಯಕ್ಷರಾಗಿದ್ದಾರೆ. ಮತ್ತು ಜಿಲ್ಲಾ ಮಟ್ಟದಲ್ಲೂ ಕೂಡ ಜಿಲ್ಲಾ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ೩ ಜನರ ಒಂದು ವೇದಿಕೆ Consumer Redressal Forum ಎಂದು ಇದೆ. ಅದರಲ್ಲಿ ಒಬ್ಬ ಮಹಿಳಾ ಸದಸ್ಯರೂ ಇರುತ್ತಾರೆ. ಅದರಲ್ಲಿ ಒಬ್ಬರು ಪುರುಷರೂ ಇರುತ್ತಾರೆ. ಅದು ೩ ಜನರ ಒಂದು ಸಮಿತಿ. ಈ ೩ ಜನ ಸದಸ್ಯರಿಗೆ ಗೌರವಯುತವಾಗಿ ೨ ಸಾವಿರ ರೂಪಾಯಿ ಕೊಡುವಂತಾದ್ದನ್ನು ಈಗಾಗಲೇ ಕೊಟ್ಟಿದ್ದೇವೆ. ಬಹುಶಃ ಅದನ್ನು ನಾವು ಇಲ್ಲಿಯೂ ಮಾಡುತ್ತಿದ್ದೇವೆ. ಬಳಕೆದಾರರ ಕುಂದುಕೊರತೆಗಳನ್ನು ಅವರು ನಿವಾರಣೆ ಮಾಡುತ್ತಿದ್ದಾರೆ. ಅವರಿಗೆ ಸಿಬ್ಬಂದಿ ವರ್ಗ ಜಾಸ್ತಿ ಬೇಕೆಂದು ಕೇಳುತ್ತಿದ್ದಾರೆ. ಆದಷ್ಟು ಬೇಗ ಅಂದರೆ ಇನ್ನೊಂದು ತಿಂಗಳೊಳಗೆ ಬಜೆಟ್ ಪಾಸ್ ಆದ ತಕ್ಷಣ Consumer REdressal Forum ಅಂತ ಏನಿದೆ ಇವುಗಳನ್ನು ಈಗ ಉಳಿದ ೨೦ ಜಿಲ್ಲೆಗಳಲ್ಲೂ ಕೂಡ ಈ ವೇದಿಕೆಗಳನ್ನು ಮಾಡುತ್ತೇವೆ. ಇದು ಪರಿಣಾಮಕಾರಿಯಾಗಿ, ಯುದ್ಧಶೀಲರಾಗಿ ಬಳಕೆದಾರರಿಗೆ ರಕ್ಷಣೆ ಕೊಡುವ ರೀತಿಯಲ್ಲಿ ಇದನ್ನು ಚೈತನ್ಯಗೊಳಿಸುತ್ತಿದ್ದೇವೆ. ಸಿಬ್ಬಂದಿವರ್ಗವನ್ನು ಅವರಿಗೆ ಕೊಡಲಾಗುತ್ತಿದೆ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ. ಮಾನ್ಯ ಸಭಾಪತಿಗಳೆ, ಯಾವುದೋ ಸಮಾರಂಭಕ್ಕೆ ಹೋಗಬೇಕಾಗಿರುವುದರಿಂದ ಟೈಮ್ ಆಯಿತೆಂದು ಮಾನ್ಯ ಸದಸ್ಯರುಗಳು ಚೀಟಿ ಬರೆದು ಕಳುಹಿಸುತ್ತಿದ್ದಾರೆ. ನಾನು ಬೇಗ ಮುಗಿಸುತ್ತೇನೆ. ಆದರೂ ಕೂಡ ಈ ಸಂದರ್ಭದಲ್ಲಿ ಒಂದು ಮಾತನ್ನು ಬಹಳ ವಿಶ್ವಾಸದಿಂದ ಈ ಪ್ರಕಟಣೆ ಮಾಡಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ಈ ಸದನದಲ್ಲಿ ಚರ್ಚೆ ಮಾಡಿದಂಥ ಕಾಲದಲ್ಲಿ ಕೆಲವು ಆಶ್ವಾಸನೆಗಳನ್ನು ನೀಡಿದ್ದೆ. ಅನ್ಯೂಯಲ್ ಇನ್‌ಕಂ ೩ ಸಾವಿರಕ್ಕಿಂತ ಜಾಸ್ತಿ ಮಾಡಬೇಕು, ೬ ಸಾವಿರಕ್ಕೆ ಮಾಡಿ ಎಂದು ಹೇಳಿದ್ದರು. ಅದನ್ನು ನಾವು ಒಪ್ಪಿಕೊಂಡಿದ್ದೇವೆ. ಆಮೇಲೆ ಹಸಿರು ಕಾರ್ಡ್ ಏನಿದೆ ಇದು ತ್ರಿ ವರ್ಣ ಬಣ್ಣಗಳಿಂದ ಕೂಡಿದೆ ಅದರಲ್ಲೂ ನಮ್ಮ ರಾಷ್ಟ್ರದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮೆಲ್ಲರ, ಜಗತ್ತಿನ ಒಂದು ಶ್ರೇಷ್ಠತೆಯ ರಾಜಕಾರಣವನ್ನು ಮಾಡಿ ಒಂದು ಹೆಸರನ್ನು ಪಡೆದಂಥ

ಶ್ರೀಮತಿ ಇಂದಿರಾಗಾಂಧಿಯವರ ಚಿತ್ರವನ್ನು ಕೂಡ ಕಾರ್ಡ್‌ನಲ್ಲಿ ಇಟ್ಟು, ಬಡವರಿಗೆ ಅವರ ಹೆಸರು ಬಹಳ ಪ್ರಿಯವಾದುದು, ಆ ಕೆಲಸವನ್ನು ಮಾಡಿ ಅಂಥ ಕಾರ್ಡ್‌ಗಳನ್ನು ೧೯೯೨ನೇ ಇಸವಿಯಿಂದ ಹೊಸವರ್ಷದಿಂದ ವಿತರಣೆ ಮಾಡಬೇಕೆಂದಿದ್ದೇವೆ. ಮಾನ್ಯ ಸಭಾಧ್ಯಕ್ಷಣೆಯವರೇ ತಮ್ಮ ಅಪ್ಪಣೆಯನ್ನು ಪಡೆದು ಎರಡು ಮೂರು ವಿಷಯಗಳನ್ನು ಪ್ರಕಟಣೆ ಮಾಡುವುದಕ್ಕೆ ಬಯಸುತ್ತೇನೆ.

1) Government decided to raise the income limit for green card holders from Rs. 3,500/- per annum to Rs. 6,400 per annum. Government also decided to issue new tri-colour cards to replace the old cards.

2) Government set up District Consumer Forums in all the districts of the State.

3) As per guidelines of Government of India, the revitalisation of Public Distribution System was taken up in areas identified as backward, namely 71 blocks under D. P. A. P. and 23 blocks under I. T. D. P. in 14 districts. The population in the identified areas is 208 lakhs. Additional fair price shops are being opened in these areas and the population will be covered 100% by ration cards. Government of India have been asked to allot additional 11,500 M.T. of Rice and 2,200 KL of Kerosene per month for the identified areas.

ಇನ್ನು ಮಾನ್ಯ ಸದಸ್ಯರಾದ ಎಂ. ಮುನಿಸ್ವಾಮಿಯವರು ರೇಷನ್ ಅಂಗಡಿಗಳನ್ನು ಕೊಡುವಾಗ ಮೀಸಲಾತಿ ನಿಯಮಾನುಸಾರವಾಗಿ ಕೊಡಬೇಕೆಂದು ಹೇಳಿದರು. ಈ ಬಗ್ಗೆ ಕಳೆದ ಅಧಿವೇಶನದಲ್ಲಿಯೂ ಕೂಡ ಈ ಬಗ್ಗೆ ಒತ್ತಾಯ ಬಂದಿತ್ತು. ಇದರ ಬಗ್ಗೆ ಈಗಾಗಲೇ ಸರಕಾರದ ಆದೇಶವನ್ನು ಇಷ್ಯೂ ಮಾಡಿದ್ದೇವೆ. ೧೯-೩-೧೯೯೨ರಲ್ಲಿ ನಾವೇನು ನ್ಯಾಯಬೆಲೆ ಅಂಗಡಿಗಳನ್ನು ಕೊಡುತ್ತೇವೆ ಅದರಲ್ಲಿ ೧೫ ಪರ್ಸೆಂಟ್‌ನಷ್ಟು ಪರಿಶಿಷ್ಟ ಜಾತಿಯವರಿಗೆ, ೧೫ ಪರ್ಸೆಂಟ್‌ನಷ್ಟು ಪರಿಶಿಷ್ಟ ಪಂಗಡದವರಿಗೆ ಕೊಡಬೇಕೆಂದು ಒಂದು ಘೋಷಣೆಯನ್ನು ನಾವು ಮಾಡಿದ್ದೇವೆ. ಮತ್ತೊಂದು ವಿಚಾರ ಅಂದರೆ, ನಮ್ಮಲ್ಲಿ ಅನೌಪಚಾರಿಕ ಪಡಿತರ ಪ್ರದೇಶಗಳು ಎಂದು ಸುಮಾರು ೪೩ ಪ್ರದೇಶಗಳನ್ನು ನಾವು ಗುರುತು ಮಾಡಿದ್ದೇವೆ. ಇಂಥ ಗುರುತು ಮಾಡಿದ ಪ್ರದೇಶಗಳಿಗೆ ಆಹಾರವಸ್ತುಗಳನ್ನು ವಿತರಣೆ ಮಾಡಲು ಈಗಾಗಲೇ ನಾವು ತೀರ್ಮಾನ ಮಾಡಿದ್ದೇವೆ. ಇದರಲ್ಲಿ ೪೦ ಸಾವಿರ ಪ್ರಜಾಸಂಖ್ಯೆ ಇರತಕ್ಕಂಥ ಪ್ರದೇಶಗಳು ಬರುತ್ತವೆ. ಇವುಗಳಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ಮತ್ತು ಕೊಳ್ಳೇಗಾಲ ತಾಲ್ಲೂಕು, ಶಿವಮೊಗ್ಗ ಜಿಲ್ಲೆಯ ಸಾಗರ, ಧಾರವಾಡ ಜಿಲ್ಲೆಯ ಹಾವೇರಿ, ರಾಯಚೂರು ಜಿಲ್ಲೆಯ ಕೊಪ್ಪಳ ಮತ್ತು ಸಿಂಧನೂರು, ಬೀದರ್ ಜಿಲ್ಲೆಯ ಬಸವಕಲ್ಯಾಣಗಳನ್ನು ಪಡಿತರ ಪ್ರದೇಶಗಳು ಎಂದು ಮಾಡಿದ್ದೇವೆ. ಹೀಗೆ ಮಾಡುವಾಗ ನಾವು

ಸ್ವೇಚ್ಛಾನುಸಾರವಾಗಿ ಮಾಡಲು ಬರುವುದಿಲ್ಲ ಹಾಗೂ ನಿಖರವಾಗಿ ಪ್ರಜಾಸಂಖ್ಯೆಗೆ ಅನುಗುಣವಾಗಿ ಮಾಡಲಾಗಿದೆ. ೧೯೮೧ರ ಸೆನ್ಸಸ್‌ಗೆ ಅನುಸರಿಸಿ, ನಲವತ್ತು ಸಾವಿರ ಜನಸಂಖ್ಯೆಗೆ ಹೆಚ್ಚಿಗೆ ಇರುವ ಪ್ರದೇಶಗಳನ್ನು ಪಡಿತರ ಪ್ರದೇಶಗಳು ಎಂದು ಘೋಷಣೆ ಮಾಡಿದ್ದೇವೆ. ಇದರಲ್ಲಿ ಚಕಮಕಿ ಮಾಡುವುದಕ್ಕೆ ಆಗುವುದಿಲ್ಲ, ಕೈಚಳಕ ತೋರಿಸಲು ಆಗುವುದಿಲ್ಲ, ಪರ ಮತ್ತು ವಿರೋಧ ಮಾಡುವುದಕ್ಕೆ ಆಗುವುದಿಲ್ಲ, ಏನಿದ್ದರೂ ನಿಯಮಗಳ ಚೌಕಟ್ಟಿನಲ್ಲಿ ಇದನ್ನು ಘೋಷಣೆ ಮಾಡಿದ್ದೇವೆ. ಹಾಗೆಯೇ ಈ ಬಗ್ಗೆ ಜಾಗೃತ ಸಮಿತಿಯನ್ನು ಮಾಡಬೇಕೆಂಬ ಬಗ್ಗೆ ಒತ್ತಾಯವಿದೆ. ಈ ವಿಚಾರವನ್ನು ಮಂತ್ರಿ ಮಂಡಳದ ಮುಂದೆ ತೆಗೆದುಕೊಂಡು ಹೋಗುತ್ತೇನೆ. ಇಂಥ ಜಾಗೃತ ದಳಗಳನ್ನು ಯಾವ ಮಟ್ಟದಲ್ಲಿ ಮಾಡಬೇಕು ಹೇಗೆ ಮಾಡಬೇಕೆಂಬ ಬಗ್ಗೆ ತೀರ್ಮಾನಕ್ಕೆ ಬರುತ್ತೇನೆ. ಮಂಡಳ, ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಇಂಥ ಸಮಿತಿಗಳನ್ನು ಮಾಡಬೇಕೆಂದು ಇದೆ. ರಾಜ್ಯಮಟ್ಟದಲ್ಲಿ ಒಂದು ಪೂರ್ಣ ಪ್ರಮಾಣದ ಸಲಹಾ ಸಮಿತಿಯನ್ನು ಮಾಡಬೇಕು, ಅದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಅಧ್ಯಕ್ಷರಾಗಿರಬೇಕು, ಪ್ರತಿಪಕ್ಷದವರು ಮತ್ತಿತರ ಪಕ್ಷದವರುಗಳನ್ನು ಒಳಗೊಂಡ ರಾಜ್ಯಮಟ್ಟದ ಸಮಿತಿಯಾಗಬೇಕು. ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿಯೂ ಕೂಡ ಇಂಥ ಸಮಿತಿಗಳು ಆಗಬೇಕು. ಮಂಡಳ ಮಟ್ಟದಲ್ಲಿಯೂ ಇಂಥ ಸಮಿತಿಯೊಂದು ಆಗಬೇಕೆಂಬ ಒಂದು ತೀರ್ಮಾನ ಮತ್ತು ಚಿಂತನೆಯನ್ನು ಮಾಡಿದ್ದೇವೆ. ಇದು ಕಾರ್ಯರೂಪಕ್ಕೆ ಬರಬೇಕಾಗುತ್ತದೆ. ಮಂತ್ರಿ ಮಂಡಳವು ಒಪ್ಪಿಗೆಯನ್ನು ಕೊಟ್ಟರೆ ಆದಷ್ಟು ಬೇಗನೆ ಇದನ್ನು ಜಾರಿಗೆ ತರುತ್ತೇವೆ. ಒಟ್ಟಿನಲ್ಲಿ ರಾಜ್ಯದಲ್ಲಿ ಈ ಆಹಾರ ವಸ್ತುಗಳ ವಿತರಣೆಯು ಸಮರ್ಪಕವಾಗಿ ಆಗಬೇಕಾಗಿದ್ದರೆ ತಮ್ಮೆಲ್ಲರ ಸಹಕಾರ ಇರಲೇಬೇಕು. ಅದು ಇಲ್ಲವಾದಲ್ಲಿ ಮಾಡಲು ಆಗುವುದಿಲ್ಲ. ತಾವುಗಳು ಶಾಸಕರು ತಮ್ಮ ತಮ್ಮ ಕ್ಷೇತ್ರಗಳ ಸಂಪರ್ಕವನ್ನು ಒಳ್ಳೆಯ ರೀತಿಯಲ್ಲಿ ಪಡೆದಿರತಕ್ಕಂಥಹವರು. ಹೀಗೆ ಇರುವಾಗ ತಮ್ಮ ಕ್ಷೇತ್ರದಲ್ಲಿ ಯಾವುದೇ ನ್ಯಾಯ ಬೆಲೆ ಅಂಗಡಿಗಳಲ್ಲಿ ಅವ್ಯವಹಾರ ಅಕ್ರಮ ನಡೆಯುತ್ತಿದೆ ಎಂಬ ವಿಚಾರವನ್ನು ನನ್ನ ಗಮನಕ್ಕೆ ತಂದರೆ ಅಂಥವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಕಳೆದ ನವೆಂಬರ್ ತಿಂಗಳಲ್ಲಿ ನಾನು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರವಾಸ ಕಾರ್ಯವನ್ನು ಕೈಗೊಂಡಿದ್ದೆನು. ಅಲ್ಲಿಂದ ಸಾಗರಕ್ಕೆ ಬರುವಾಗ ಸುಮಾರು ೧೨ ಗಂಟೆ ಆಗಿರಬಹುದು. ಪ್ರವಾಸಿ ಮಂದಿರದಲ್ಲಿ ತಹಶೀಲ್ದಾರರು ಮುಂತಾಗಿ ಪೋಲೀಸ್ ಅಧಿಕಾರಿಗಳು ಕೂಡ ಇದ್ದರು. ಇಲ್ಲಿ ನ್ಯಾಯ ಬೆಲೆ ಅಂಗಡಿಗಳು ತೆರೆದಿವೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದರು. ಅವರನ್ನು ಕೂಡ ನಮ್ಮ ಜೊತೆಯಲ್ಲಿ ಅಂಥ ಅಂಗಡಿಗಳಿಗೆ ಸರ್‌ಪ್ರೈಸ್ ವಿಸಿಟ್ ಕೊಡಲು ಕರೆದುಕೊಂಡು ಹೋದೆ. ಅಲ್ಲಿನ ಕಾಮಧೇನು ನ್ಯಾಯ ಬೆಲೆ ಅಂಗಡಿಗೆ ಹೋದೆವು. ಆತನು ಅಲ್ಲಿಯೇ ನ್ಯಾಯಬೆಲೆ ಅಂಗಡಿ ಇಟ್ಟುಕೊಂಡಿದ್ದಾನೆ, ಪಕ್ಕದಲ್ಲಿಯೇ ಚಿಲ್ಲರೆ ಅಂಗಡಿಯನ್ನು ಕೂಡ ಇಟ್ಟುಕೊಂಡಿದ್ದಾನೆ. ಅಂದು ತಪಾಸಣೆ ಮಾಡತಕ್ಕಂಥ ಕಾಲದಲ್ಲಿ ೮ನೇ ತಾರೀಖು. ಅಕ್ಕಿ, ಗೋಧಿ, ಸಕ್ಕರೆ ಮುಂತಾದವುಗಳಿಗೆ ಸ್ಟಾಕ್ ಬರೆದಿಲ್ಲ, ಆಗಲೇ ೩ನೇ ತಾರೀಖು ಮುಗಿದು ಹೋಗಿ ೮ನೇ ತಾರೀಖು ಬಂದರೂ ಕೂಡ ಸ್ಟಾಕ್ ತೆಗೆದುಕೊಂಡಿಲ್ಲ, ಹಿಂದಿನ ಲೆಕ್ಕಪತ್ರ ಇಟ್ಟಿರಲಿಲ್ಲ, ಅದನ್ನು ನೋಡಿ ಸ್ಥಳದಲ್ಲಿಯೇ ಆ ಅಂಗಡಿಯನ್ನು ಸಸ್ಪೆಂಡ್ ಮಾಡಿ ಬೇರೆಯವರಿಗೆ ವಹಿಸಿ ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೇ, ಪಡಿತರ ವ್ಯವಸ್ಥೆಯ ಹಂಚಿಕೆಯು ರಾಜ್ಯದಲ್ಲಿ ಗಮನಾರ್ಹ ಮಟ್ಟದಲ್ಲಿ ನಡೆಯುತ್ತಾ ಇದೆ. ತಿಂಗಳಿಗೆ ೫೦ ಕೋಟಿ ರೂಪಾಯಿಗಳಷ್ಟು ಆಹಾರ ವಸ್ತುಗಳು ಸಮಗೆ ಬರುತ್ತಿವೆ. ಒಂದು ವರ್ಷಕ್ಕೆ ಸುಮಾರು ೬೦೦ ಕೋಟಿ ರೂಪಾಯಿಗಳಷ್ಟು

ಪಡಿತರ ವಸ್ತುಗಳು ಬರುತ್ತಿವೆ. ನಾವು ಅದನ್ನು ಕಾರ್ಡ್‌ದಾರರಿಗೆ ಸಕಾಲದಲ್ಲಿ ಹಂಚಲಿಲ್ಲ ಅಂದರೆ ನಾವುಗಳು ಜನತೆಗೆ ಲೋಪ ಮಾಡಿದ ಹಾಗೆ ಆಗುತ್ತದೆ. ಇದನ್ನು ನಾವುಗಳು ಸರಿಪಡಿಸಬೇಕಾಗುತ್ತದೆ. ಹಾಗೆ ಈ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಲು ನಾವು ಪ್ರತಿಜ್ಞೆ ಮಾಡಿದ್ದೇವೆ. ತಾವುಗಳು ಎಲ್ಲರೂ ಕೊಡುವ ಸಹಾಯ, ಸಹಕಾರ ಮತ್ತು ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಣೆ ಮಾಡುತ್ತೇವೆ. ಎಲ್ಲಾ ಮಾನ್ಯ ಸದಸ್ಯರುಗಳು ಕೇಳಿದ ಪ್ರಶ್ನೆಗಳಿಗೆ ಈ ಸಮಯಾಭಾವದಿಂದ ಉತ್ತರಿಸಲು ಅಸಾಧ್ಯವಾಗಿದೆ. ಆದರೆ ತಮ್ಮ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಏಕೆಂದರೆ ನಾನು ಮಧ್ಯಾಹ್ನ ಒಂದು ಗಂಟೆಗೆ ಇಲ್ಲಿ ಬಂದವನು ನೀರು ಕುಡಿಯುವುದಕ್ಕಾಗಿಯೂ ಕೂಡ ಹೊರಗೆ ಹೋಗಿಲ್ಲ. ಸತತವಾಗಿ ೭ ಗಂಟೆಗಳ ಕಾಲ ಇಲ್ಲಿ ಕುಳಿತುಕೊಂಡು ತಮ್ಮೆಲ್ಲರ ಸಲಹೆಗಳನ್ನು ಕೇಳಿಕೊಂಡಿದ್ದೇನೆ. ತಮ್ಮ ಸಲಹೆಗಳನ್ನು ಜಾಗ್ರತೆಯಿಂದ ಲಾಲಿಸಿದ್ದೇನೆ, ಅರ್ಥ ಮಾಡಿಕೊಂಡಿದ್ದೇನೆ. ಅವುಗಳನ್ನು ಸರಿಪಡಿಸುವತ್ತ ತಮ್ಮೆಲ್ಲರ ಸಹಕಾರವನ್ನು ಕೋರುತ್ತೇನೆ.

ಇನ್ನು ನಮ್ಮ ಕೆಲವು ಮಾನ್ಯ ಸದಸ್ಯರುಗಳು ಮಾತನಾಡುತ್ತಾ ಮಂತ್ರಿಗಳು ಹೋಟೆಲ್‌ಗೆ ಹೋಗಿಲ್ಲ, ಒಂದು ದೋಸೆಗೆ ೨೫ ರೂಪಾಯಿಗಳು ಇದೆ, ಬೆಲೆ ಜಾಸ್ತಿ ಎಂದು ಹೇಳಿದ್ದಾರೆ. ೨೧ನೇ ತಾರೀಖಿನ ದಿವಸ ನಾನು ನಮ್ಮ ಡ್ರೈವರ್ ಮತ್ತು ಪಿ. ಎ. ಸೇರಿ ಬೆಂಗಳೂರಿನಲ್ಲಿ ಅವೆನ್ಯೂ ರೋಡ್‌ನ ಒಂದು ಅಡ್ಡರಸ್ತೆಯಲ್ಲಿರುವ ಒಂದು ಹೋಟೆಲ್‌ಗೆ ಹೋದೆ. ಅದು ಹೋಟೆಲ್ ಅಲ್ಲ ಒಂದು ಮನೆ. ಆ ರಸ್ತೆಯಲ್ಲಿ ಹೋಗುವುದು ಕಷ್ಟ ಅಂಥ ಕಡೆಗಳಲ್ಲಿ ಮಸಾಲಾದೋಸೆ ವ್ಯಾಪಾರ ಮಾಡುತ್ತಾರೆ. ಅದರ ವಿಳಾಸ ೧೭೪, ಕೋಟಾ ಸುಬ್ಬಯ್ಯ ಶೆಟ್ಟಿ ರಸ್ತೆ, ಅವೆನ್ಯೂ ರೋಡ್ ಕ್ರಾಸ್, ಬೆಂಗಳೂರು. ಹೋಗಲು ಕಷ್ಟವಾದ ಒಂದು ಓಣಿ ಅದು. ನಾನೇನು ಅಲ್ಲಿಗೆ ಮಂತ್ರಿಯಾಗಿ ಹೋಗಿರಲಿಲ್ಲ ಅವರಿಗೂ ಗೊತ್ತಿಲ್ಲ. ಸಾಮಾನ್ಯ ಮನುಷ್ಯನಾಗಿಯೇ ಅಲ್ಲಿಗೆ ದೋಸೆ ತಿನ್ನಲು ಹೋಗಿದ್ದು. ಅಲ್ಲಿ ನೋಡಿದಾಗ ಪರಿಸ್ಥಿತಿಯು ನಿಜವಾಗಿತ್ತು. ಅಲ್ಲಿ ೧೯೫೮ರಿಂದ ಶ್ರೀ ನರಸಿಂಹಯ್ಯ ಮತ್ತು ಕಾಂತಲಕ್ಷ್ಮಿ ಎಂಬ ದಂಪತಿಗಳು ದೋಸೆ ವ್ಯಾಪಾರ ಮಾಡಿಕೊಂಡು ಬಂದಿದ್ದಾರೆ. ಚಿಕ್ಕಬಳ್ಳಾಪುರದಿಂದ ೧೯೫೮ರಲ್ಲಿ ಬೆಂಗಳೂರಿಗೆ ಬಂದು ವ್ಯಾಪಾರ ಮಾಡಿಕೊಂಡು ಬಂದಿದ್ದಾರೆ. ಆಗ ೧೯೬೪ರಲ್ಲಿ ಒಂದು ದೋಸೆಗೆ ೧.೨೫ ಪೈಸೆಗಳು ಇಟ್ಟಿದ್ದರಂತೆ. ನನಗೆ ಅವರುಗಳನ್ನು ನೋಡಿ ನಿಜಕ್ಕೂ ತುಂಬಾ ಗೌರವ ಬಂತು. ನಾನು ದೋಸೆಗೆ ಎಷ್ಟು ಎಂದು ಕೇಳಿದಾಗ ೨೫ ರೂಪಾಯಿಗಳು ಎಂದು ಹೇಳಿದರು. ೨೫ರೂಪಾಯಿಗಳಷ್ಟು ಏಕೆ ಎಂದು ಕೇಳಿದ್ದಕ್ಕೆ ಮೊದಲು ತಿಂದು ನೋಡಿ, ಚೆನ್ನಾಗಿದ್ದರೆ ಹಣ ಕೊಡಿ, ಇಲ್ಲವಾದರೆ ಬೇಡ ಎಂದು ಹೇಳಿದರು. ನಾನು ಒಂದು ದೋಸೆ ತಿಂದು ನನ್ನ ಮನೆಯವರಿಗೂ ಒಂದು ಕಟ್ಟಿಸಿಕೊಂಡು ೨೫ ರೂಪಾಯಿಗಳ ಲೆಕ್ಕದಲ್ಲಿ ಹಣ ಕೊಟ್ಟು ಬಂದೆ. ದೋಸೆ ನಿಜಕ್ಕೂ ತುಂಬಾ ರುಚಿಕರವಾಗಿತ್ತು. ಒಳ್ಳೆಯ ತುಪ್ಪವನ್ನು ಸಾಕಷ್ಟು ಪ್ರಮಾಣದಲ್ಲಿ ಬಳಸಿ ದೋಸೆ ಮಾಡಿದ್ದರು ಎಂದು ಕಾಣುತ್ತದೆ, ತುಂಬಾ ಚೆನ್ನಾಗಿತ್ತು. ನೀವುಗಳು ಕೂಡ ತಿಂದು ನೋಡಿದರೆ ಅದರ ರುಚಿ ಗೊತ್ತಾಗುತ್ತದೆ.

ಉಪಾಧ್ಯಕ್ಷಣೆಯವರು:- ತಾವುಗಳು ದೋಸೆ ವಿಚಾರ ಹೇಳಿ ಸದಸ್ಯರುಗಳ ಬಾಯಲ್ಲಿ ನೀರು ಬರುವ ಹಾಗೆ ಮಾಡಿದ್ದೀರಿ...

(ನಗು)

ಶ್ರೀ ಸಿ. ಎಂ. ಲಿಂಗಪ್ಪ:- ನಮಗೆಲ್ಲರಿಗೂ ಒಂದೊಂದು ದೋಸೆ ಕೊಡಿಸಿ ಬಿಡಿ.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ನಾನು ಅವರ ೨೫ ರೂಪಾಯಿಗಳ ದೋಸೆಯ ಬೆಲೆಯನ್ನು ಸಮರ್ಥನೆ ಮಾಡುತ್ತಾ ಇಲ್ಲ. ದೋಸೆ ತುಂಬಾ ರುಚಿಕರವಾಗಿತ್ತು ಎಂದು ಹೇಳಿದೆ.

ಶ್ರೀಮತಿ ಸುಮಾ ವಸಂತ್:- ೨೫ ರೂಪಾಯಿಗಳನ್ನು ಕೊಟ್ಟು ಅಲ್ಲಿಗೆ ಬಡವರು ಹೋಗಿ ತಿಂದು ಬರುವುದಕ್ಕೆ ಸಾಧ್ಯವೇ? ಅದು ಶ್ರೀಮಂತ ವರ್ಗದವರಿಗೆ ಸಾಧ್ಯ.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ಯಾರೂ ನೀವು ಅಲ್ಲಿಗೆ ಹೋಗಬೇಡಿ. ಯಾರು ಹೋಗಬೇಕೋ ಅವರು ಹೋಗುತ್ತಾರೆ. ಆದುದರಿಂದ ಅದನ್ನು ನಾನು ಹೋಟೆಲ್ ಅಲ್ಲ ಎಂದು ಹೇಳಿದ್ದೇನೆ. ಆ ಮನೆಗೆ ನಾನು ಹೋಗಿದ್ದೇನೆ. ಅದು ಮನೆ. ಅದು ಹೋಟೆಲ್ ಅಲ್ಲ. ಅಶೋಕ ಹೋಟೆಲ್‌ನಲ್ಲಿ ಎಷ್ಟಿದೆ? ಹೋಟೆಲ್ ಅಶೋಕಾದಲ್ಲಿ ಇಡ್ಲಿ ಎಷ್ಟಿದೆ ಎಂದರೆ ೨೦ ರೂಪಾಯಿ, ಮಸಾಲೆ ದೋಸೆ ೨೦ ರೂಪಾಯಿ, ಅಲ್ಲಿದೆ ಹಾಗೆ ಮಾವಳ್ಳಿ ಟಿಫನ್ ರೂಮ್ಸ್‌ನಲ್ಲಿ ಇಡ್ಲಿ ೨ ರೂಪಾಯಿ ಇದ್ದರೆ ಮಸಾಲೆ ದೋಸೆ ೯ ರೂಪಾಯಿ ಮತ್ತು ಹೋಟೆಲ್ ಪುಷ್ಪವನ, ಲಾಲ್‌ಬಾಗ್ ರೋಡ್, ಇಲ್ಲಿ ಮಸಾಲೆ ದೋಸೆ ೫.೫೦ ಪೈಸೆ ಮತ್ತು ಹೋಟೆಲ್ ಚಾಲುಕ್ಯದಲ್ಲಿ ಇಡ್ಲಿ ೨ ರೂಪಾಯಿ, ಮಸಾಲೆ ೮.೫೦ ಪೈಸೆ. ಎಲ್ಲಾ ಕಡೆಯೂ ಇದೇ ರೀತಿಯಾಗಿದೆ. ಎಕ್ಸೆಪ್ಟ್ ಆ ಮನೆ ಒಂದನ್ನು ಬಿಟ್ಟು, ಅಶೋಕಾ ಹೋಟೆಲ್ ಒಂದನ್ನು ಬಿಟ್ಟರೆ ಬಹುಶಃ ಮಸಾಲೆ ದೋಸೆ ಎಂಟು ರೂಪಾಯಿಗಿಂತ ಜಾಸ್ತಿ ಹೋಗಿಲ್ಲ. ಅದಕ್ಕಾಗಿ ನಾನು ಹೇಳಿದ್ದೇನೆ, ಇಡ್ಲಿ ದೋಸೆಯೆಲ್ಲಾ ಜಾಸ್ತಿಯಾಗಿದೆ.

ಶ್ರೀ ಬಿ. ಎಂ. ಇದಿನಬ್ಬ:- ಒಂದು ಕಡೆಯಲ್ಲಿ ಇಟ್ಟಿದ್ದಾರೆ ಎಂದು ಹೇಳಿ ಎಲ್ಲಾ ಕಡೆಯಲ್ಲೂ ೨೫ ರೂಪಾಯಿಗಳನ್ನು ಇಟ್ಟು ಬಿಟ್ಟರೆ ಹೇಗೆ?

(ಗೊಂದಲ)

ಶ್ರೀ ಕೆ. ಲಕ್ಕಣ್ಣ:- ನಮ್ಮ ರಾಜಾಜಿನಗರದಲ್ಲಿ ಒಂದು ದೋಸೆಗೆ ನಾಲ್ಕು ರೂಪಾಯಿ ಇದೆ.

ಶ್ರೀ ಕೆ. ಹೆಚ್. ಹನುಮೇಗೌಡ:- ದೊಸೆಯದು ಹೇಳಿದಿರಿ. ಆಮ್ಲೆಟ್‌ನ ರೇಟನ್ನು ಹೇಳಲಿಲ್ಲವಲ್ಲ.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ಮಾನ್ಯ ಉಪಾಧ್ಯಕ್ಷರೇ, ಇವತ್ತು ನಾನಾದರೂ ಕೂಡ ಹೇಳುತ್ತಿದ್ದೇನೆ, ಹೋಟೆಲ್ ತಿಂಡಿಗಳ ಬೆಲೆಗಳು ಜಾಸ್ತಿಯಾಗುತ್ತಿರುವ ಬಗ್ಗೆ ನನಗೇನೂ ಸಂತೋಷ ಇಲ್ಲ. ಈಗಾಗಲೇ ಇದರ ಬಗ್ಗೆ ಒಂದು ಘೋಷಣೆಯನ್ನು ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಆ ಹೋಟೆಲ್ ಮಾಲೀಕರುಗಳ ಒಂದು ಸಭೆಯನ್ನು ಕರೆಯಬೇಕು ಎಂದು ಇದ್ದೇನೆ. ಬಹುಶಃ ಯಾವುದೇ ಕಾರಣದಿಂದ ಈ ತಿಂಡಿಗಳ ಬೆಲೆಗಳು ಜಾಸ್ತಿಯಾಗಬಾರದು ಎನ್ನತಕ್ಕಂಥದ್ದು ಆ ಕಳಕಳಿ ಕೂಡ ಸರ್ಕಾರಕ್ಕೆ ಇದೆ. ಏನಾದರೂ ಮಾಡಿ ನಿಯಂತ್ರಣ ಮಾಡುತ್ತೇವೆ. ಇರುವ ವಿಚಾರವನ್ನು ನಿಮ್ಮಗಳ ಗಮನಕ್ಕೆ ತಂದಿದ್ದೇನೆ. ನಾನು ಯಾವುದನ್ನೂ ಕೂಡ ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಿಲ್ಲ. ಆದುದರಿಂದ ನೇರವಾಗಿ ...

ಶ್ರೀ ಟಿ. ಬಿ. ಜಯಚಂದ್ರ:- ನಿಮ್ಮ ಅನುಭವವನ್ನು ದಯವಿಟ್ಟು ಹೇಳಬೇಡಿ. ೨೫ ರೂಪಾಯಿಗಳನ್ನು ಕೊಟ್ಟಿದ್ದು.

ಶ್ರೀ ಟಿ. ಎನ್. ನರಸಿಂಹಮೂರ್ತಿ:- ಮಾನ್ಯ ಉಪಾಧ್ಯಕ್ಷರೇ, ರಾಷ್ಟ್ರಮಟ್ಟದಲ್ಲಿಯೂ ಕೂಡ ಕಾರಣಗಳಿಲ್ಲದೆ ಏನೂ ಇಲ್ಲ. ರಾಷ್ಟ್ರಮಟ್ಟದಲ್ಲಿಯೂ ಕೂಡ ಅವರು ಹೇಳಿದ್ದಾರೆ. ರಾಜ್ಯದಲ್ಲಿ ಕಾನೂನನ್ನು ತಂದು ಹೋಟೆಲ್ ಬೆಲೆಗಳನ್ನು ಕಡಿಮೆ ಮಾಡುವುದಕ್ಕೆ, ತಡೆಹಿಡಿಯುವುದಕ್ಕೆ ಏನಾದರೂ ಕಾನೂನನ್ನು ಮಾಡಿ ಎಂದು, ಆ ರೀತಿ ಪ್ರಯತ್ನವನ್ನು ಮಾಡಿ ಎಂದು ಹೇಳಿದ್ದಾರೆ. ಅದೆಲ್ಲವನ್ನೂ ನಾವು ಮಾಡುತ್ತೇವೆ. ಒಟ್ಟಾರೆ ಮಾನ್ಯ ಸದಸ್ಯರುಗಳು ಕೊಟ್ಟಿರತಕ್ಕಂಥ ಸಲಹೆಗಳನ್ನು ಮತ್ತು ನಮ್ಮ ಇಲಾಖೆಯ ಅನೇಕ ನೀತಿ ಪ್ರಶ್ನೆಯನ್ನೂ ಕೂಡ ಪ್ರಸ್ತಾಪಮಾಡಿದ್ದಾರೆ. ಕಾಲಾವಕಾಶ ಇಲ್ಲದೆ ಇರುವುದರಿಂದ ಒಟ್ಟಾರೆ ನನ್ನ ಇಲಾಖೆಯ ಬೇಡಿಕೆ ಏನು ಇದೆ, ಆ ಬೇಡಿಕೆಗೆ ತಾವು ಮಂಜೂರಾತಿಯನ್ನು ಕೊಡಿಸಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್. ಬಿ. ನಾಯಕ:- ಮಾನ್ಯ ಸಚಿವರು ಚಾಲುಕ್ಯ ಹೋಟೆಲ್‌ಗೆ ಹೋಗಿಲ್ಲ.

(ಗೊಂದಲ)

ಶ್ರೀ ಎಸ್. ರಮೇಶ್ (ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ):- ಮಾನ್ಯ ಉಪಾಧ್ಯಕ್ಷರೇ, ಬೆಳಿಗ್ಗೆ ಒಂದು ಗಂಟೆಯಿಂದ ಸುಮಾರು ಜನ ನನ್ನ ಶಾಸಕ ಮಿತ್ರರು ನನ್ನ ಬೇಡಿಕೆಗೆ ಸಂಬಂಧಪಟ್ಟಂತೆ ಸಲಹೆಗಳನ್ನು ಕೊಟ್ಟಿದ್ದಾರೆ. ಅದರ ಜೊತೆ ನನ್ನ ಮಿತ್ರರಾದ ಶ್ರೀಮಾನ್ ಜಯಚಂದ್ರರವರು ಅಭಿನಂದನೆಗಳನ್ನು ಕೂಡಾ ಸಲ್ಲಿಸಿದ್ದಾರೆ. ಕೆಲಸಗಳು ಸುಮಾರಾಗಿ ನಡೆಯುತ್ತಿವೆ ಎನ್ನತಕ್ಕಂಥ ಹೊಗಳಿಕೆಯ ಮಾತನ್ನೂ ಕೂಡ ಹೇಳಿದ್ದಾರೆ. ಶ್ರೀಮಾನ್ ರೇವಣ್ಣನವರು ಸಲಹೆಗಳನ್ನು ಏನು ಕೊಟ್ಟಿದ್ದಾರೆ, ಇಲಾಖೆಯಲ್ಲಿ ನುರಿತಂಥ ಅಧಿಕಾರಿಗಳು ಇಲ್ಲ, ಲೆಕ್ಚರರ್ಸ್‌ಗಳನ್ನು ಹಾಕಿಕೊಂಡಿದ್ದೀರಿ ಎಂದು ಹೇಳಿದ್ದಾರೆ. ಲೆಕ್ಚರರ್‌ಗಳನ್ನು ಹಾಕಿ ಕ್ರೀಡಾಭಿಮಾನಿಗಳಿಗೆ ತೊಂದರೆ ಆಗತಕ್ಕಂಥ ರೀತಿಯಲ್ಲಿ ಇಲಾಖೆಯಲ್ಲಿ ನೀವು ಕೆಲವು ಲೆಕ್ಚರರ್ಸ್‌ಗಳನ್ನು ತಂದಿದ್ದೀರಿ ಎನ್ನತಕ್ಕಂಥ ಮಾತನ್ನು ಶ್ರೀಮಾನ್ ರೇವಣ್ಣನವರು ಹೇಳಿದಾಗ ನಾನು ಈಗಾಗಲೇ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಈ ಲೆಕ್ಚರರ್ಸ್‌ಗಳು ಯಾರ‍್ಯಾರು ನಮ್ಮ ಇಲಾಖೆಗೆ ಬಂದಿದ್ದಾರೆ, ಅವರನ್ನು ಈ ಸಲ ವಾಪಸ್ ಕಳುಹಿಸಬೇಕು ಎಂದು ಹೇಳಿದ್ದಕ್ಕೆ ಈಗಾಗಲೇ ಶಿಕ್ಷಣ ಸಚಿವರು ಇವತ್ತು ಕಾಗದಕ್ಕೆ ಸೈನ್ ಹಾಕಿ ಕಳುಹಿಸಿಕೊಟ್ಟಿದ್ದಾರೆ. ಅವರುಗಳನ್ನು ನಾವು ಇನ್ನು ಮುಂದೆ ನಮ್ಮ ಇಲಾಖೆಯಲ್ಲಿ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಅವರಿಗೆ ಏನೂ ಗೊತ್ತಿಲ್ಲ. ಅವರುಗಳ ಮೇಲೆ ಅಪಾದನೆ ಮಾಡಿದರೂ ಪ್ರಯೋಜನವಿಲ್ಲ. ಆದುದರಿಂದ ಅವರು ಬಂದಂಥ ಇಲಾಖೆಗಳಿಗೆ ವಾಪಸ್ ಕಳುಹಿಸಬೇಕು ಎನ್ನತಕ್ಕಂಥ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಎರಡನೆಯದಾಗಿ ಕ್ರೀಡಾಂಗಣಕ್ಕೆ ಪಂದ್ಯಾವಳಿಗಳಲ್ಲಿ ಭಾಗವಹಿಸುವವರಿಗೆ ಸಾಕಷ್ಟು ಟಿ. ಎ. / ಡಿ. ಎ. ಒದಗಿಸಬೇಕು ಎಂದು ಕೇಳಿದ್ದಾರೆ. ಶ್ರೀಮಾನ್ ರೇವಣ್ಣನವರು ಆಗಲೇ ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಹೇಳಿದೆ. ಮೊಟ್ಟ ಮೊದಲನೆಯ ಬಾರಿ ಒಳ್ಳೆಯ ಒಬ್ಬ ಕ್ರೀಡಾಪಟುವನ್ನು ಕ್ರೀಡಾ ಪರಿಷತ್ತಿಗೆ ಅಧ್ಯಕ್ಷರನ್ನಾಗಿ, ಪ್ರಕಾಶ್ ಪಡುಕೋಣೆ ಅವರನ್ನು ಮಾಡಿದ್ದೇವೆ. ಆ ರೀತಿ ಮಾಡಿರುವುದರ ಜೊತೆ ಯಾವತ್ತೂ ಇಲ್ಲದೇ ಇರುವಷ್ಟು ಹಣವನ್ನು ಅಂದರೆ ಒಂದು ಕೋಟಿ ರೂಪಾಯಿಗಳನ್ನು ಕ್ರೀಡೆಗಾಗಿಯೇ ಕೊಟ್ಟಿದ್ದೇವೆ. ಆದುದರಿಂದ ಈ ಪ್ರಶ್ನೆ ಉದ್ಭವವಾಗುವುದಿಲ್ಲ. ಆದಷ್ಟೂ ಇದು ನನ್ನ ಯುವ ಮಿತ್ರರಿಗೆ ಟಿ. ಎ. / ಡಿ. ಎ. ವಿಷಯದಲ್ಲಿ ಸಹಾಯವಾಗುತ್ತದೆ ಎಂದು ಹೇಳುತ್ತೇನೆ. ರಾಷ್ಟ್ರೀಯ, ಅಂತರ್ ರಾಷ್ಟ್ರೀಯ ಕ್ರೀಡೆಯಲ್ಲಿ ಪಾಲುಗೊಳ್ಳತಕ್ಕಂಥ ಕ್ರೀಡಾಪಟುಗಳಿಗೆ ಕೊನೆಯ

ಮೂವತ್ತು ದಿವಸ ಟ್ರೈನಿಂಗನ್ನು ಕೊಡಬೇಕು ಎನ್ನತಕ್ಕಂಥ ಸಲಹೆಯನ್ನು ಏನು ಕೊಟ್ಟಿದ್ದಾರೆ, ಅದನ್ನು ಒಪ್ಪಿ ೧೫-೨೦ ದಿವಸಗಳು ಅವರಿಗೆ ಟ್ರೈನಿಂಗನ್ನು ಕೊಡಬೇಕು ಎಂದು ಈಗಾಗಲೇ ಹೇಳಿದ್ದೇನೆ. ಅದನ್ನು ನಾವು ಪ್ರಾರಂಭಿಸುತ್ತೇವೆ. ಕ್ರೀಡಾ ಶಾಲೆಗಳನ್ನು ಎಲ್ಲಾ ತಾಲ್ಲೂಕುಗಳಲ್ಲೂ ತೆಗೆಯಬೇಕು ಎಂಬು ಹೇಳಿದ್ದಾರೆ. ಅದು ಸಾಧ್ಯವಿಲ್ಲದ ಮಾತು. ಜಿಲ್ಲೆಯಲ್ಲೆ ಇನ್ನೂ ನಾವು ಸರಿಯಾಗಿ ಪ್ರಾರಂಭ ಮಾಡಿಲ್ಲ. ಇನ್ನು ತಾಲ್ಲೂಕು ಮಟ್ಟದಲ್ಲಿ ಹಾಕುವುದಕ್ಕಾಗುವುದಿಲ್ಲ. ಏಕೆಂದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ನಾವು ಮಾಡಬೇಕಾಗುತ್ತದೆ. ಆದರೆ ಇದು ಒಳ್ಳೆಯ ಸಲಹೆ ಇದೆ. ಇದನ್ನು ಹಂತ ಹಂತವಾಗಿ ಜಿಲ್ಲಾವಾರು ಪೂರೈಸಿ ಆಮೇಲೆ ತಾಲ್ಲೂಕು ಮಟ್ಟಕ್ಕೆ ಬರತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತೇವೆ. ತಾಲ್ಲೂಕ್ ಕ್ರೀಡಾಂಗಣಕ್ಕೆ ಹೆಚ್ಚಿಗೆ ಹಣವನ್ನು ಒದಗಿಸಬೇಕೆಂದು ಹೇಳಿದ್ದಾರೆ. ಇದಕ್ಕೆ ಏನಾಗಿದೆ ಅಂದರೆ ಸರ್ಕಾರದಿಂದ ಕೊಡತಕ್ಕ ಹಣವನ್ನು ಇಟ್ಟುಕೊಂಡು ಕೆಲಸ ಶುರು ಮಾಡುತ್ತಾರೆ. ಕೆಲಸ ಶುರುಮಾಡಿ ಸಾರ್ವಜನಿಕರ ವಂತಿಗೆ ಏನಿದೆ ಆದರಿಂದ ಈಗಾಗಲೇ ಕ್ರೀಡಾಂಗಣದ ಕೆಲಸ ಪ್ರಾರಂಭ ಮಾಡಿ ಅರ್ಧಂಬರ್ಧವಾಗಿ ನಿಂತಿದೆ. ೨೦ ಲಕ್ಷಕ್ಕೆ ಮುಗಿಯತಕ್ಕಂಥ ಕ್ರೀಡಾಂಗಣಗಳು ಇವತ್ತಿನ ದಿವಸ ೮೦ ಲಕ್ಷ ರೂಪಾಯಿಗಳಾದರೂ ನಾವು ಪೂರೈಸುವುದಕ್ಕಾಗುವುದಿಲ್ಲ. ಆದಕ್ಕಾಗಿಯೇ ಮುಖ್ಯಮಂತ್ರಿಗಳು ಈಗಾಗಲೇ ಆದೇಶವನ್ನು ಕೊಟ್ಟಿದ್ದಾರೆ. ಮುಂಚೆ ಜಿಲ್ಲಾಧಿಕಾರಿವರಿಗೆ ಪವರ್ಸ್ಸ್ ಇರಲಿಲ್ಲ. ಈಗ ನಾವು ಆ ಪವರ್ಸ್‌ನ್ನು ಕೊಟ್ಟಿದ್ದೇವೆ. ಸಾರ್ವಜನಿಕರಿಂದ ಬಂದ ವಂತಿಗೆಯನ್ನು ಅವರು ಕಲೆಕ್ಟ್ ಮಾಡಿ ಸಂಪೂರ್ಣ ಮಾಡಿಕೊಳ್ಳಬೇಕಾಗಿದೆ. ಉದಾಹರಣೆಗೆ ಈಗ ಕೋಲಾರ ಜಿಲ್ಲೆಯಲ್ಲಿ ಕ್ರೀಡಾಂಗಣ ಮತ್ತು ರಂಗಮಂದಿರ ಈ ಎರಡಕ್ಕೂ ಸೇರಿಸಿ ೪೬ ಲಕ್ಷ ರೂಪಾಯಿಗಳನ್ನು ರಸಮಂಜರಿ ಕಾರ್ಯಕ್ರಮದ ಮೂಲಕ ಕಲೆಕ್ಟ್ ಮಾಡಿದ್ದಾರೆ. ಬಿಜಾಪುರದಲ್ಲಿಯೂ ಹಾಗೆ ಮಾಡಿದ್ದಾರೆ. ಆ ರೀತಿ ಜಿಲ್ಲಾಧಿಕಾರಿಗಳು ಮುಂದೆ ಬಂದು ಅದನ್ನು ಪೂರೈಸಿಕೊಳ್ಳಬೇಕು. ಸರ್ಕಾರದವರು ಕೊಡತಕ್ಕ ಹಣವನ್ನು ನಾವು ವಾಪಸ್ಸು ಆಗಲೇ ಕೊಟ್ಟಿದ್ದೇವೆ. ಒಳಾಂಗಣ ಕ್ರೀಡಾಂಗಣವನ್ನು ಮಾನ್ಯ ರಾಜೀವ್ ಗಾಂಧಿಯವರ ಹೆಸರಿನಲ್ಲಿ ಮಾಡಬೇಕೆನ್ನತಕ್ಕ ಸಲಹೆಯನ್ನು ಏನು ಮಾನ್ಯ ರೇವಣ್ಣನವರು ಕೊಟ್ಟಿದ್ದಾರೆ, ಅದಕ್ಕಾಗಿ ನಾವು ಈಗಾಗಲೇ ಮಾನ್ಯ ದಿ: ರಾಜೀವ್ ಗಾಂಧಿಯವರ ಹೆಸರಿನಲ್ಲಿ ಕ್ರೀಡಾಂಗಣವನ್ನು ಮಾಡಬೇಕೆಂದು ಮುಖ್ಯ ಮಂತ್ರಿಗಳ ಮುಂದೆ ಸಲಹೆ ಇಟ್ಟಾಗ ಮಾನ್ಯ ಮುಖ್ಯ ಮಂತ್ರಿಗಳು ಒಂದು ಕೋಟಿ ರೂಪಾಯಿಗಳನ್ನು ಅಯವ್ಯಯದಲ್ಲಿ ಇಟ್ಟಿದ್ದಾರೆ. ಜಾಗ ಇನ್ನು ಫೈನಲೈಸ್ ಆಗಿಲ್ಲ. ೪-೫ ಜಾಗ ನಮ್ಮ ಮುಂದೆ ಇದೆ. ಯಾವುದೆಂದು ತೀರ್ಮಾನ ಮಾಡಿದ ಮೇಲೆ ತಕ್ಷಣ ಕಟ್ಟುತ್ತೇವೆ. ತಾವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ ಫ್ಲೈಯಿಂಗ್ ಸ್ಕೂಲ್ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ರೇವಣ್ಣನವರು ಇದರ ಬಗ್ಗೆ ಹೇಳಿದ್ದಾರೆ. ಹಾಗೂ ಮೇಲ್ಮನೆಯಲ್ಲಿಯೂ ಇದರ ಬಗ್ಗೆ ಚರ್ಚೆಯಾಯಿತು. ಸಿಂಗಲ್ ಇಂಜನ್ ಇದೆ, ಡಬ್ಬಲ್ ಇಂಜಿನ್ ತೆಗೆದುಕೊಳ್ಳಬೇಕು ಎಂದು ಹೇಳತಕ್ಕ ಸಲಹೆಯನ್ನು ನಿಜವಾಗಿಯೂ ಒಪ್ಪತಕ್ಕದ್ದೇ. ಅಲ್ಲಿ ರನ್‌ವೇ ಇಲ್ಲ, ಇದು ಸೀನಿಯರ್ ಫ್ಲೈಯಿಂಗ್ ಸ್ಕೂಲ್, ಪಂಡಿತ್ ಜವಾಹರಲಾಲ್ ನೆಹರುರವರು ಉದ್ಘಾಟಿಸಿದಂಥದ್ದು. ಅಲ್ಲಿ ರನ್‌ವೇ ಇಲ್ಲ, ಹಾಸ್ಟಲ್ ಇಲ್ಲ, ಇದುವರೆಗೂ ಯಾರೂ ಅದರ ಕಡೆಗೆ ಗಮನ ಕೊಟ್ಟಿರಲಿಲ್ಲ. ಇದಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ೩ ಕೋಟಿ ರೂಪಾಯಿಗಳನ್ನು ಆಯವ್ಯಯದಲ್ಲಿ ಎತ್ತಿಟ್ಟಿದ್ದಾರೆ. ರನ್‌ವೇ, ಹಾಸ್ಟೆಲ್ ಎರಡನ್ನು ಮಾಡುವುದರ ಮೂಲಕ ಗ್ರಾಮಾಂತರ ಪ್ರದೇಶಗಳ ಯುವಕರಿಗೆ ಪ್ರಾತಿನಿಧ್ಯತೆ ಕೊಡುವುದಕ್ಕೆ ಸಹಕಾರವಾಗುತ್ತದೆ ಎನ್ನತಕ್ಕ ಮಾತನ್ನ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ

ಇಚ್ಛೆಪಡುತ್ತೇನೆ. ಮಾನ್ಯ ಶಫಿ ಅಹಮದ್‌ರವರು ಅಂಬೇಡ್ಕರ್‌ರವರ ಭವನದ ಬಗ್ಗೆ ಮಾತನಾಡುವಾಗ ಇದು ಯುವಜನ ಸೇವಾ ಇಲಾಖೆಗೆ ಬರುತ್ತದೆಂದು ಹೇಳಿದ್ದಾರೆ. ಇದು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಲಾಗಿದೆ. ಇದನ್ನು ಸಮಾಜ ಕಲ್ಯಾಣ ಇಲಾಖೆಯವರಿಂದ ಪ್ರಾರಂಭ ಮಾಡಿಸಿಕೊಳ್ಳಬೇಕಾಗುತ್ತದೆ. ಮಾನ್ಯ ಜಯಚಂದ್ರರವರು, ಎಲ್ಲಾ ಕ್ಷೇತ್ರಗಳಲ್ಲಿಯೂ ಮಾಡಿದ್ದಾರೆ, ನನ್ನ ಕ್ಷೇತ್ರದಲ್ಲಿ ಮಾಡಿಲ್ಲವೆಂದು ಹೇಳಿದ್ದಾರೆ. ನನಗೆ ತಿಳಿದ ಮಟ್ಟಿಗೆ ನನ್ನ ಶಾಸಕ ಮಿತ್ರರು ಹಿರಿಯರೇ ಇರಬಹುದು ಕಿರಿಯರೇ ಇರಬಹುದು, ಯಾರು ನನ್ನ ಗಮನಕ್ಕೆ ತಂದಿದ್ದಾರೆ ಅದನ್ನು ಮಾಡಿದ್ದೇವೆ. ಕೆಲವು ಕಾರಣಗಳಿಂದ ಆಗಿಲ್ಲದೇ ಇರಬಹುದು. ಯಾರ್ಯಾರು ನನ್ನ ಗಮನಕ್ಕೆ ತಂದಿದ್ದಾರೆ ಅವನ್ನು ಆದಷ್ಟು ಮಾಡಿದ್ದೇವೆ. ಉದಾಹರಣೆಗೆ ನೀವು ಜಾಗವನ್ನು ಕೊಟ್ಟಿದ್ದರೆ ಇಮ್ಮಿಡಿಯೆಟ್ ಆಗಿ ಕಂಪ್ಲೀಟ್ ಮಾಡಿ ಕೊಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ:- ನಾವು ಜಾಗವನ್ನು ಕೊಟ್ಟುಬಿಟ್ಟಿದ್ದೇವೆ.

ಶ್ರೀ ಎಸ್. ರಮೇಶ್:- ಕೊಟ್ಟಿದ್ದರೆ ಏಕೆ ಆಗಿಲ್ಲ, ನಾವು ನಿಮಗೂ ಮಾಡಿಕೊಡುತ್ತೇವೆಂದು ಹೇಳಿದ್ದೇನೆ. ನಾವು ಕೊನೆಯ ಪಕ್ಷ ೧೫ ರಿಂದ ೨೦ ಕ್ರೀಡಾಂಗಣಕ್ಕೆ ಗುದ್ದಲಿ ಪೂಜೆಯನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಈ ಅಧಿವೇಶನ ಮುಗಿದ ನಂತರ ಗುದ್ದಲಿ ಪೂಜೆಯನ್ನು ಮಾಡುವುದಕ್ಕೆ ಹೊರಟಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ:- ನಮ್ಮದನ್ನು ಸೇರಿಸಿಬಿಟ್ಟರೆ ಮುಗಿದುಹೋಯಿತು.

ಶ್ರೀ ಎಸ್. ರಮೇಶ್:- ಧಾರಾಳವಾಗಿ ತಾವು ಜಮೀನು ಕೊಟ್ಟಿದ್ದಾದರೆ ನಾವು ಪ್ರಾರಂಭ ಮಾಡುತ್ತೇವೆ. ನಿಮ್ಮ ಹಾಸನ ಜಿಲ್ಲೆಗೆ ಸಾಕಷ್ಟು ಕೊಟ್ಟಿದ್ದೇವೆ. ನಿಮ್ಮದು ಇದ್ದರೆ ಮಾಡುತ್ತೇವೆ. ಈಗ ಶ್ರೀಮಾನ್ ಪ್ರಕಾಶ್ ಪಡುಕೋಣೆ ಅವರು ಇಲ್ಲಿ ಇರುವುದರಿಂದ ನನ್ನ ಮಿತ್ರ ಶಾಸಕರುಗಳು ಏನು ಸಲಹೆಗಳನ್ನು ಕೊಟ್ಟಿದ್ದಿರಾ ನನಗೆ ನಂಬಿಕೆ ಇದೆ. ಅವುಗಳನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಆಗದಿದ್ದರೂ ಸಾಧ್ಯವಾದಷ್ಟನ್ನು ಜಾರಿಗೆ ತರುತ್ತೇವೆ. ತಮಗೆ ಸ್ಪಂದಿಸತಕ್ಕ ಪ್ರಯತ್ನ ಮಾಡುತ್ತೇವೆನ್ನತಕ್ಕ ಮಾತನ್ನು ಹೇಳುತ್ತೇನೆ. ಕನ್ನಡ ಕಲ್ಚರ್ ಬಗ್ಗೆ ಮಾಸಾಶನದ ಬಗ್ಗೆ ನಾಗರಾಜ್‌ರವರು ಮಾತನಾಡುವಾಗ ಹೇಳಿದ್ದಾರೆ. ೧೯೮೬-೮೭ರ ನಂತರ ಮಾಸಾಶನವನ್ನು ಕೊಟ್ಟಿಲ್ಲವೆಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ. ೭೦ ರಿಂದ ೮೦ ವರ್ಷ ವಯಸ್ಸಾದವರು ಬಂದು ವಿಧಾನಸೌಧವನ್ನು ಸುತ್ತುವ ಸಂದರ್ಭದಲ್ಲಿ ನೋಡಬೇಕಾದರೆ ನಮಗೆ ಅಯ್ಯೊ ಎನ್ನಿಸುತ್ತದೆ. ಅದಕ್ಕೆ ಅವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ೭೦ ವರ್ಷ ಮೇಲ್ಪಟ್ಟ ವಯಸ್ಸಾದವರಿಗೆ ಕೊನೆಯ ಪಕ್ಷ ಈಗಲಾದರೂ ತೀರ್ಮಾನ ತೆಗೆದುಕೊಳ್ಳುತ್ತೇವೆನ್ನತಕ್ಕ ಮಾತನ್ನು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. ಅದನ್ನು ಮಾಡುತ್ತೇವೆನ್ನತಕ್ಕ ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ಬಂಗಾರಪ್ಪನವರು ಅಧಿಕಾರ ವಹಿಸಿಕೊಂಡ ನಂತರ ನಮ್ಮ ರಾಜ್ಯದ ನಡೆ, ನುಡಿ, ಸಂಸ್ಕೃತಿ, ಭಾಷೆ ಬಗ್ಗೆ ಇಷ್ಟು ದಿವಸ ಏನು ನಡೆದುಕೊಂಡು ಬಂದಿದೆ ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಹಣವನ್ನು ಒದಗಿಸಿದ್ದಾರೆ. ನಿಜವಾಗಿಯೂ ಅವರಿಗೆ ನಾವು ಅಭಿನಂದಿಸಬೇಕಾಗಿದೆ. ಯುವಜನ ಸೇವಾ ಇಲಾಖೆಯೇ ಇರಬಹುದು, ಪ್ಲೇಯಿಂಗ್ ಸ್ಕೂಲ್ ಇರಬಹುದು, ಕನ್ನಡ ಸಂಸ್ಕೃತಿ ಇಲಾಖೆ ಇರಬಹುದು, ಅದರಲ್ಲಿ ಒಂದನ್ನು ನಮಗೆ ಸ್ಪಷ್ಟವಾಗಿ ಹೇಳಿದ್ದಾರೆ. ಒಳ್ಳೆಯ ಸಲಹೆಗಳು ಏನು ಬರುತ್ತಿದೆ ಅದನ್ನು ತೆಗೆದುಕೊಂಡು ಮುಂದೆ ಹೋಗಿ ಯಾವುದಕ್ಕೂ ಕಡಿಮೆ ಇಲ್ಲ. ಆದರೆ ನಾವು ಹಣವನ್ನು ಯಾವ

ಕೆಲಸಕ್ಕೆ ಕೊಡುತ್ತೇವೆ, ಅದು ಸರಿಯಾದ ರೀತಿಯಲ್ಲಿ ವಿನಿಯೋಗವಾಗಬೇಕೆನ್ನತಕ್ಕ ಮಾತನ್ನು ಹೇಳಿದ್ದಾರೆ. ಮತ್ತು ಪುಸ್ತಕದ ಬಗ್ಗೆ ನಮ್ಮ ನಾಗರಾಜ್‌ರವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಪುಸ್ತಕದ ಸಗಟು ಖರೀದಿಯನ್ನು ನೀವು ಹೇಗೆ ಮಾಡುತ್ತೀರಾ? ಎನ್ನತಕ್ಕ ಮಾತನ್ನು ಕೇಳಿದರು. ನಾವು ಸಗಟು ಖರೀದಿ ಮಾಡುವುದಕ್ಕೆ ಹಿರಿಯ ಸಾಹಿತಿಗಳ ಒಂದು ಸಮಿತಿಯನ್ನು ನಾನು ಈ ಇಲಾಖೆಗೆ ಬಂದ ತಕ್ಷಣ ಮಾಡಿದೆ. ಕಾರಣ ಅನೇಕ ರೀತಿಯ ಪತ್ರಗಳು ನನಗೆ ಬರುವುದಕ್ಕೆ ಶುರುವಾಯಿತು. ಯಾವುದೋ ಪುಸ್ತಕ, ಯಾರೋ ಬರೆದಿದ್ದು ಯಾರೋ ಬೆಲೆ ಹಾಕಿಕೊಂಡು ಮಾಡುತ್ತಿದ್ದಾರೆ. ಇದನ್ನು ಯಾರು ಕೇಳುತ್ತಿಲ್ಲ, ಹೇಳುತ್ತಿಲ್ಲ ಎಂದು ಹೇಳಿದ್ದಾರೆ ಆ ರೀತಿ ನಮ್ಮ ಇಲಾಖೆಯಲ್ಲಿ ಆಗಿರಲಿಲ್ಲ. ಆದರೂ ಯಾವಾಗ ಈ ಕೂಗು ಬಂತೋ ಇದು ಏತಕ್ಕೂ ಸರಿಯಲ್ಲ, ಇದನ್ನು ಅವರ ಕೈಗೆ ಕೊಡೋಣ ಅಂತ ತೀರ್ಮಾನಕ್ಕೆ ಬಂದು ಹಿರಿಯ ಸಾಹಿತಿಗಳ ಸಮಿತಿಯ ಮೂಲಕ ನಾವು ಮಾಡಿದ್ದೇವೆ. ಇದೂ ಅಲ್ಲದೆ ತಮಗೆ ಗೊತ್ತಿದೆ ಅಧ್ಯಕ್ಷರೆ, ಮೊಟ್ಟಮೊದಲನೆಯ ಬಾರಿಗೆ ಕನ್ನಡ ಭವನ, ಪುಸ್ತಕ ಪ್ರಾಧಿಕಾರ ಎಲ್ಲಕ್ಕಿಂತ ಜಾಸ್ತಿಯಾಗಿ ಹಿರಿಯ ಸಾಹಿತಿಗಳು ನಮಗೆ ಏನು ಕನ್ನಡದ ಬಗ್ಗೆ ಸಲಹೆಗಳನ್ನು ನೀಡಿದ್ದರು ಅವತ್ತು ನಮಗೆ ಸಮಯ ಕಡಿಮೆ ಇದ್ದುದರಿಂದ ಮಾನ್ಯ ಮುಖ್ಯಮಂತ್ರಿಗಳು ಒಂದೇ ಮಾತನ್ನು ಹೇಳಿದರು. ನಾನು ಮಾನ್ಯ ರಮೇಶ್‌ರವರು ಅಲ್ಲೇ ಬರುತ್ತೇವೆ, ಅಲ್ಲೇ ಕುಳಿತು ಮಾತಾಡೋಣ ಎನ್ನತಕ್ಕ ಮಾತನ್ನು ಹೇಳಿದರು. ಮೊಟ್ಟಮೊದಲನೆಯದಾಗಿ, ಅವರು ಸರೋಜಿನಿ ಮಹಿಷಿ ವರದಿ ಬಗ್ಗೆ ಕೊಟ್ಟಂಥ ಸಲಹೆ ನನಗೆ ಅದು ಸೇರದಿದ್ದರೂ ಮುಖ್ಯಮಂತ್ರಿಗಳಿಗೆ ಮತ್ತು ಡಿ. ಪಿ. ಎ. ಆರ್‌.ಗೆ ಸೇರುತ್ತದೆ. ಆದರೆ, ಸರೋಜಿನಿ ಮಹಿಷಿ ವರದಿಯನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದಂತಹವರು ಮುಖ್ಯ ಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು. ಕನ್ನಡವನ್ನು ಅನುಷ್ಠಾನ ಗೊಳಿಸುವುದಕ್ಕೋಸ್ಕರ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಈಗಾಗಲೇ ರಚಿಸಿದ್ದಾರೆ. ನಮ್ಮ ರಾಜ್ಯದ ಭಾಷೆ ಕನ್ನಡ, ನಡೆ ನುಡಿ, ಸಂಸ್ಕೃತಿಗೆ ಸಂಬಂಧಪಟ್ಟಂತೆ ಮಾನ್ಯ ಶಾಸಕ ಮಿತ್ರರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ತಿಳಿದುಕೊಂಡು ನಾವು ಈಗಾಗಲೇ ಅದಕ್ಕೆ ಸಾಕಷ್ಟು ಸ್ಪಂದಿಸಿದ್ದೇವೆ. ಅಪ್ಪಿ ತಪ್ಪಿ ಎಲ್ಲಾದರೂ ಬಿಟ್ಟು ಹೋಗಿದ್ದರೆ ಅದನ್ನು ಸರಿಪಡಿಸಿಕೊಳ್ಳುತ್ತೇವೆ. ತಮ್ಮ ಸಲಹೆಗಳೆಲ್ಲಾ ಒಳ್ಳೆಯ ರೀತಿಯದಾಗಿದೆ. ಮೊನ್ನೆ ದಿವಸ ನಾನು ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಚಿಕ್ಕಣ್ಣನವರು ಮಾತನಾಡುತ್ತಾ ಒಂದು ತೀರ್ಮಾನಕ್ಕೆ ಬಂದೆವು. ಏನೆಂದರೆ, ಆಯಾ ಜಿಲ್ಲೆಗಳಿಗೆ ಸಂಬಂಧಪಟ್ಟಂಥ ತೊಂದರೆಗಳೇನಿವೆ, ಅಲ್ಲಿಯೇ ಕುಳಿತು ಪರಿಹಾರ ಮಾಡಬೇಕೆನ್ನುವಂಥ ತೀರ್ಮಾನಕ್ಕೆ ಬಂದಿದ್ದೇವೆ. ಆದಷ್ಟು ಜಾಗ್ರತೆ ತಮ್ಮ ಜಿಲ್ಲೆಗಳಿಗೂ ಬರುತ್ತಿದ್ದೇವೆ. ಇದಲ್ಲದೆ, ಕ್ರೀಡೆಯ ಬಗ್ಗೆ ಈಗಾಗಲೇ ಹೇಳಿದ ಹಾಗೆ ಶ್ರೀ ಪ್ರಕಾಶ್ ಪಡುಕೋಣೆಯವರಿಂಗ ನಾವು ಇದುವರೆಗೆ ನಿರೀಕ್ಷೆ ಮಾಡಿದ ಪ್ರತಿಫಲಕ್ಕಿಂತ ಹೆಚ್ಚು ನಿರೀಕ್ಷಿಸಬಹುದು. ಈಗಾಗಲೇ ಅದನ್ನು ಪ್ರಾರಂಭಿಸಲಾಗಿದೆ. ಕೆಲವು ಅಸೋಸಿಯೇಶನ್‌ನವರಿಗೆ ಕೊಡುವ ಹಣ ಬಹಳ ಕಡಿಮೆ ಎನ್ನತಕ್ಕಂಥ ಮಾತನ್ನು ಹೇಳಿದಾಗ, ಕ್ರೀಡಾ ಪರಿಷತ್ತಿಗೆ ಕೊಡುತ್ತಿದ್ದ ಹಣ ಕಡಿಮೆಯಿತ್ತು. ಅದಕ್ಕನುಗುಣವಾಗಿ ಅವರು ಕೊಡುತ್ತಿದ್ದರು. ನಾವು ಇವೊತ್ತಿನ ದಿವಸ ಹಣವನ್ನು ಜಾಸ್ತಿ ಕೊಟ್ಟಿದ್ದೇವೆ. ನನಗೆ ನಂಬಿಕೆಯಿದೆ. ಎಲ್ಲಾ ಸಂಘ ಸಂಸ್ಥೆಗಳ ಅವಶ್ಯಕತೆಯನ್ನು ಪೂರೈಸುವಷ್ಟು ಹಣ ಕೊಡದೆ ಇದ್ದರೂ, ಅದರ ಬಗ್ಗೆ ಸ್ಪಂದಿಸಿ, ಕೊಡತಕ್ಕಂಥ ಅಷ್ಟು ಹಣವನ್ನು ಇವೊತ್ತು ಕ್ರೀಡಾ ಪರಿಷತ್ತಿಗೆ ಒದಗಿಸಿ ಕೊಟ್ಟಿದ್ದೇವೆ. ಎಲ್ಲಕ್ಕಿಂತ ಹೆಚ್ಚಾಗಿ ಬಯಲು ರಂಗಮಂದಿರಕ್ಕೆ ಕೊಡುವ

೫೦೦೦೦ ರೂಪಾಯಿಗಳು ಸಾಲದು ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಾದ ಶ್ರೀ ಟಿ. ಜಯಚಂದ್ರರವರು ಹೇಳಿದರು. ಇದುವರೆವಿಗೂ ಅಷ್ಟನ್ನು ಕೊಟ್ಟರೆ ಸಾಕೆಂದು ಸಲಹೆ ಬರುತ್ತಿ ವಿನಃ ಜಾಸ್ತಿ ಬೇಕೆಂದು ಯಾರೂ ಹೇಳಿರಲಿಲ್ಲ. ಈಗ ಮೊಟ್ಟಮೊದಲನೆಯದಾಗಿ ತಾವು ಹೇಳಿದ್ದೀ ಇದರ ಬಗ್ಗೆ ನಾನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುತ್ತೇನೆ. ನಿಜವಾಗಿಯ ಅವಶ್ಯಕತೆಗಿಂತ ಜಾಸ್ತಿ ಕೊಡಬೇಕೆಂಬುದಿದ್ದರೆ ಜಾಸ್ತಿ ಮಾಡೋಣ. ಅದರಲ್ಲೇನೂ ತಪ್ಪಿಲ್ಲ ಸಿಮೆಂಟ್‌ನಿಂದ ಹಿಡಿದು ಎಲ್ಲಾ ವಸ್ತುಗಳ ಬೆಲೆ ಏರಿದೆ. ನಾವು ಹಳೆಯ ರೇಟ್‌ನಲ್ಲಿ ೫೦೦೦ ರೂ. ಗಳನ್ನ ಕೊಡುತ್ತಿದ್ದೆವು. ನಿಜವಾಗಿಯೂ ಜಾಸ್ತಿ ಮಾಡಲೇಬೇಕೆಂದರೆ ಮಾಡಬೇಕಾಗುತ್ತದ ಇಲ್ಲದಿದ್ದರೆ, ಅರ್ಧಂಬರ್ಧ ಕೆಲಸಕ್ಕೆ ನಿಂತುಹೋಗಬೇಕಾಗುತ್ತದೆ. ಮತ್ತು ರಂಗಮಂದಿರಗಳ ಬ ಸ್ಪಷ್ಟವಾಗಿ ತಮ್ಮ ಮುಖಾಂತರ ಸಭೆಯ ಗಮನವನ್ನು ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ. ಅದ ತಾಲ್ಲೂಕು ಕ್ರೀಡಾಂಗಣವಿರಬಹುದು, ರಂಗಮಂದಿರವಿರಬಹುದು. ನಾವು ಪ್ರಾರಂಭಿಸುವುದಕ್ಕಿಂ ಮುಂಚಿತವಾಗಿ ಸರ್ಕಾರದಿಂದ ಬರತಕ್ಕಂಥ ಹಣಕ್ಕೆ ಸರಿಸಮಾನವಾಗಿ ಸಾರ್ವಜನಿಕ ವಂತಿಗೆಯನ್ನ ತಾವು ಸಿದ್ಧಮಾಡಿಟ್ಟುಕೊಂಡು ಕೆಲಸ ಪ್ರಾರಂಭಿಸಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ. ಬರಿ ಸರ್ಕಾರ ಕೊಡತಕ್ಕ ಹಣದಲ್ಲಿ ನಾವು ಕೆಲಸ ಪ್ರಾರಂಭಿಸಿದರೆ ಅದು ಅರ್ಧಂಬರ್ಧಕ್ಕೆ ನಿಂತಾಗ ೨೦ ಲಕ್ಷ ರೂಪಾಯಿಗಳಿಗೆ ಮುಗಿಯತಕ್ಕಂಥ ಕೆಲಸ ೭೦-೮೦ ಲಕ್ಷ ರೂಪಾಯಿಗಳಿಗೆ ಬಂದು ನಿಲ್ಲಬಹುದು. ಆದುದರಿಂದ, ನಾನು ಇವೊತ್ತು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆದು ಮನವಿ ಮಾಡಿಕೊಂಡಿದ್ದೇನೆ. ಇದನ್ನು ಪೂರೈಸದೆ ಹೋದರೆ ಎಸ್ಕಲೇಶನ್ ಕಾಸ್ಟ್ ಜಾಸ್ತಿಯಾಗುತ್ತದೆಂದು, ಆದುದರಿಂದ, ರಸಮಂಜರಿ ಕಾರ್ಯಕ್ರಮಗಳ ಮುಖಾಂತರವೋ ಅಥವಾ ಸಾರ್ವಜನಿಕ ವಂತಿಕೆಗಳ ಮೂಲಕವೋ ಅಥವಾ ಗ್ರಾಮದ ಹಿರಿಯರ ಹೆಸರನ್ನು ಇಟ್ಟಾದರೂ ರಂಗಮಂದಿರ, ಕ್ರೀಡಾಂಗಣಗಳನ್ನು ಮುಗಿಸಬೇಕೆಂಬ ಆದೇಶವನ್ನು ಈಗಾಗಲೇ ಕೊಟ್ಟಿದ್ದೇನೆ. ನಾವು ವೈಯುಕ್ತಿಕವಾಗಿ ಅವರಿಗೆ ಸಹಕಾರ ಮಾಡುತ್ತಿದ್ದೇವೆ. ಕೆಲವು ಚಲನಚಿತ್ರ ನಟರನ್ನು ಕೆಲವು ಜಿಲ್ಲೆಗಳಿಗೆ ಹೋಗಿ ಕಾರ್ಯಕ್ರಮ ಕೊಡೋಣವೆಂದು ಕೇಳಿಕೊಳ್ಳುತ್ತಿದ್ದೇವೆ. ಅವರನ್ನು ಕೋಲಾರಕ್ಕೆ ಮತ್ತು ಬಿಜಾಪುರಕ್ಕೆ ಕರೆದುಕೊಂಡು ಹೋಗಿ ಕಾರ್ಯಕ್ರಮ ಮಾಡಿದ್ದೇವೆ. ಇನ್ನು ಕೆಲವು ಜಿಲ್ಲೆಗಳಲ್ಲಿ ಮಾಡಬೇಕಾಗಿದೆ. ನಾವೆಲ್ಲರೂ ಸೇರಿ ಮಾಡೋಣ ಎನ್ನತಕ್ಕಂಥ ಮಾತನ್ನು ಹೇಳುತ್ತಾ ಇದುವರೆವಿಗೂ ನಾವೇನು ಮಾಡಿದ್ದೇವೆ ಎಂಬುದರ ಬಗ್ಗೆ ಶ್ರೀಮಾನ್ ಜಯಚಂದ್ರರವರು ಮಾತನಾಡಿದಾಗ ಅಪ್ರತ್ಯಕ್ಷವಾಗಿ ಅವರು ಅಭಿನಂದನೆ ಸಲ್ಲಿಸಿದ್ದರು. ಅದೇ ರೀತಿ ನಾನೂ ಕೂಡ ಅವರಿಗೂ ಹಾಗೂ ನನ್ನ ಎಲ್ಲಾ ಶಾಸಕ ಮಿತ್ರರಿಗೆ ತಮ್ಮ ಮೂಲಕ ವಂದಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಲಿಂಗಪ್ಪ:- ಕ್ರೀಡಾ ಪ್ರಶಸ್ತಿಯ ಬಗ್ಗೆ ಒಂದೆರಡು ಕ್ಲಾರಿಫಿಕೇಶನ್ ಕೇಳಬೇಕಾಗಿದೆ. ಏನೆಂದರೆ, ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಡುವ ಹಾಗೆ ದಸರಾ ಉತ್ಸವ ಸಮಯದಲ್ಲಿ ಕ್ರೀಡಾ ಪ್ರಶಸ್ತಿಗಳನ್ನು ಹಣದ ರೂಪದಲ್ಲಿ ಕೊಡಬೇಕೆಂದು ಶ್ರೀ ರೇವಣ್ಣನವರು ಸಲಹೆ ಸೂಚಿಸಿದ್ದಾರೆ. ಅದರ ಜೊತೆಗೆ ಇನ್ನೊಂದು ತೀರ್ಮಾನ ತೆಗೆದುಕೊಳ್ಳಬೇಕು. ಮಾಸಾಶನದ ಬಗ್ಗೆ ತಾವು ಹೇಳಿದಿರಿ. ಉತ್ತಮ ಕ್ರೀಡಾಪಟುಗಳಿಗೆ ಶಿಷ್ಯವೇತನ ಕೊಡುತ್ತಿದ್ದೀರಿ. ಅದರಂತೆ ಉತ್ತಮ ಕಲಾವಿದರಿಗೆ ಬಿ. ಡಿ. ಎ. ನಿವೇಶನ ಕೊಡುವುದಕ್ಕೆ ಒಂದು ವ್ಯವಸ್ಥೆ ಮಾಡಬೇಕು. ಹಾಗೆಯೇ ಈ ಸಲ ಮಿನಿ ಕ್ರೀಡಾಂಗಣಗಳಿಗೆ ಹಣವನ್ನು ಕೂಡಲೇ ಬಿಡುಗಡೆ ಮಾಡಿಸಿಕೊಡಬೇಕು.

ಶ್ರೀ ಎಸ್. ರಮೇಶ್:- ತಾವು ಉತ್ತಮ ಕಲಾವಿದರಿಗೆ ಬಿ. ಡಿ.ಎ. ನಿವೇಶನ ಕೊಡಬೇಕೆಂದು ಹೇಳಿದ್ದೀರಿ. ಬಿ. ಡಿ. ಎ. ನಿವೇಶನವನ್ನು ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಕೊಡಬೇಕಾಗಿದೆ. ನಾವು ಬರೀ ಪ್ರಶಸ್ತಿ ಪತ್ರ ಕೊಡುತ್ತೇವೆ. ಆದರೂ, ಇದರ ಬಗ್ಗೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರನ್ನು ಕೇಳಿಕೊಳ್ಳುತ್ತೇನೆ. ಆದಷ್ಟು ಬೇಗ ಅವರಿಗೆ ಕೊಡೋಣ. ಮತ್ತು ಇನ್ನೂ ಕೆಲವು ಸಲಹೆಗಳನ್ನು ತಾವು ಹೇಳಿದ್ದೀರಿ, ಅವುಗಳನ್ನು ಆದಷ್ಟು ಬೇಗ ಪೂರೈಸುತ್ತೇನೆ.

ಉಪಾಧ್ಯಕ್ಷಣಿಯವರು:- ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ:

"ದಿನಾಂಕ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ ೩೦, ೩೧, ೩೨, ೨೧, ೧೧ ಮತ್ತು ೧೨ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರಾದ ಮೊತ್ತವೂ ಮೊಬಲಗನ್ನು ಮಂಜೂರು ಮಾಡುವುದು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷಣಿಯವರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೩೦-ಗೃಹ ನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆ ಗೊಳ್ಳುವ ಆರ್ಥಿಕ ವರ್ಷದಲ್ಲಿ ಗೃಹ ನಿರ್ಮಾಣಕ್ಕೆ (ಸರ್ಕಾರಿ ನಿವಾಸದ ಕಟ್ಟಡಗಳನ್ನು ಬಿಟ್ಟು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೨,೫೩,೫೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೬,೫೭,೦೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ ೩೧-ನಗರಾಭಿವೃದ್ಧಿ ಇತ್ಯಾದಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರಾಭಿವೃದ್ಧಿ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೬,೭೦,೦೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩೧,೭೯,೦೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ ೩೨-ನಗರ ಪಾಲಿಕೆಗಳುಮತ್ತು ಪಟ್ಟಣ ಪಂಚಾಯಿತಿಗಳಿಗ ಅನುದಾನ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನಗರ ಪಾಲಿಕೆ ಮತ್ತು ಪಟ್ಟಣ ಪಂಚಾಯಿತಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೫,೦೨,೭೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

F-46

LA-Vol-5

ಅಭಿಯಾಚನೆ ಕ್ರಮಾಂಕ ೨೧-ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ನಿತ್ಯೋಪಯೋಗಿ ಸಾಮಾನುಗಳ ಸರಬರಾಜಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೨,೬೩,೮೮,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ ೧೧-ಯುವಜನ ಸೇವೆ.

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೭,೦೮,೫೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಅಭಿಯಾಚನೆ ಕ್ರಮಾಂಕ ೧೨-ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೮೯,೭೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"

ಉಪಾಧ್ಯಕ್ಷಣೆಯವರು:- ಈಗ ಸಭೆಯನ್ನು ಮುಂದೂಡಿ ನಾಳೆ ಬೆಳಿಗ್ಗೆ ೯.೩೦ ಗಂಟೆಗೆ ಸೇರುವುದು.

(ಸದನವು ೮.೦೦ ಗಂಟೆಗೆ ಮುಕ್ತಾಯಗೊಂಡು ೨೪ನೇ ಮಾರ್ಚಿ ೧೯೯೨ರ ಬೆಳಿಗ್ಗೆ ೯.೩೦ ಗಂಟೆಗೆ ಸೇರಲು ನಿಶ್ಚಯಿಸಿತು).

(* ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

(ಕರ್ನಾಟಕ ವಿಧಾನ ಸಭೆ)

KARNATAKA LEGISLATIVE ASSEMBLY

ಮಂಗಳವಾರ ೨೪ನೇ ಮಾರ್ಚಿ ೧೯೯೨, ಚೈತ್ರ ೪, ೧೯೧೪ ಶಕ
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯.೫೫ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷಿಣಿಯವರು (ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು) ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಉಪಾಧ್ಯಕ್ಷರೇ ...

ಉಪಾಧ್ಯಕ್ಷಿಣಿಯವರು:- ಮಾನ್ಯ ಈಶ್ವರಪ್ಪನವರೇ, ತಾವು ಏನು ಮಾತನಾಡುವುದಿದ್ದರೂ, ಪ್ರಶ್ನೋತ್ತರವಾದ ಮೇಲೆ ಮಾತನಾಡಿ, ತಮಗೆ ಅವಕಾಶ ಕೊಡುತ್ತೇನೆ. ಆಗ ತಾವು ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ:- ನಿಮ್ಮ ಮಾತಿಗೆ ಗೌರವ ಕೊಡುತ್ತೇನೆ, ಆದರೆ ಈ ರಾಜ್ಯದ ...

ಉಪಾಧ್ಯಕ್ಷಿಣಿಯವರು:- ಪ್ರಶ್ನೋತ್ತರ ಮುಗಿಯಲಿ ಅನಂತರ ಕೇಳಿ. I will give you time to say what you want. ಈಗ ಪ್ರಶ್ನೆ: ೪೦೨ (೨೧೬೫) ಪ್ರಶ್ನೆಯನ್ನು ಮಾನ್ಯ ಕರಿಯಣ್ಣನವರ ಪರವಾಗಿ ಶ್ರೀಮತಿ ಮೋಟಮ್ಮನವರು ಕೇಳಬಹುದು.

ಶ್ರೀಮತಿ ಮೋಟಮ್ಮ:- ನನಗೆ ಉತ್ತರದ ಪ್ರತಿ ಬರದೇ ಇರುವುದರಿಂದ, ನಾನು ಉಪ ಪ್ರಶ್ನೆಯನ್ನು ಕೇಳಲಾಗುತ್ತಿಲ್ಲ. ಉತ್ತರದ ಪ್ರತಿ ಕಳುಹಿಸಿಕೊಡಿ.

ಶ್ರೀ ಎಸ್. ಬಂಗಾರಪ್ಪ:- ಈಗ ಬೇರೆ ಪ್ರಶ್ನೆ ತೆಗೆದುಕೊಳ್ಳಬಹುದು, ಅನಂತರ ಬೇಕಾದರೆ, ಈ ಪ್ರಶ್ನೆಯ ವಿಚಾರದಲ್ಲಿ ಉಪ ಪ್ರಶ್ನೆಯನ್ನು ಅವರು ಕೇಳಲಿ.

ಉಪಾಧ್ಯಕ್ಷಿಣಿಯವರು:- ಪ್ರಶ್ನೆ: ೪೦೩ (೨೦೯೩) ನೇ ಪ್ರಶ್ನೆ ಕೇಳಲು ಶ್ರೀ ಜೆ.ಸಿ. ಮಾಧುಸ್ವಾಮಿಯವರು ಹಾಜರಿಲ್ಲವಾದ್ದರಿಂದ ಶ್ರೀ ಎಂ.ವಿ. ವೆಂಕಟಪ್ಪನವರು ೪೦೪ (೧೩೪೭) ನೇ ಪ್ರಶ್ನೆ ಕೇಳಬಹುದು.

ಸರ್ಕಾರಿ ನೌಕರರುಗಳ ನಿವೃತ್ತಿ ವಯಸ್ಸಿನ ಬಗ್ಗೆ

೧೩೪೭. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈಗಿನ ಸರ್ಕಾರಿ ನೌಕರರ ನಿವೃತ್ತಿ ವಯಸ್ಸೆಷ್ಟು?

ಆ) ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ೫೫ ವರ್ಷ ಹೊಂದಿರುವ ರಾಜ್ಯಗಳ ಸಂಖ್ಯೆ ಎಷ್ಟು?

ಇ) ಕರ್ನಾಟಕ ರಾಜ್ಯದಲ್ಲಿ ನಿವೃತ್ತಿ ವಯಸ್ಸನ್ನು ಇಳಿಸುವ ಬಗ್ಗೆ ಏನಾದರೂ ಪ್ರಸ್ತಾವನೆ ಇದೆಯೇ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣ?

ಉ) ಸರ್ಕಾರಿ ನೌಕರರು ತಮ್ಮ ಕೆಲಸದಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ ಈ ದಿಸೆಯಲ್ಲಿ ನಿರ್ಧಿಷ್ಟ ನಿರ್ಣಯ ತೆಗೆದುಕೊಳ್ಳಲು ಸರ್ಕಾರ ನಿರ್ಧರಿಸಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):-

ಅ) ೫೮ ವರ್ಷಗಳು.

ಆ) ಲಭ್ಯವಿರುವ ೧೪ ರಾಜ್ಯಗಳ ಮಾಹಿತಿಯಲ್ಲಿ, ಕೇರಳ ರಾಜ್ಯದಲ್ಲಿ ಸರ್ಕಾರಿ ನಾಕರರ ನಿವೃತ್ತಿ ವಯಸ್ಸು ೫೫ ಆಗಿರುತ್ತದೆ. ಇನ್ನುಳಿದ ೧೩ ರಾಜ್ಯಗಳಲ್ಲಿ ಸರ್ಕಾರಿ ನೌಕರರ ನಿವೃತ್ತಿ ವಯಸ್ಸು ೫೮ ವರ್ಷಗಳಾಗಿರುತ್ತದೆ.

ಇ) ಇಲ್ಲ.

ಈ) ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಉ) ಇಲ್ಲ.

ಊ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:- ಮಾನ್ಯ ಉಪಾಧ್ಯಕ್ಷರೇ, ಸರ್ಕಾರದವರು ಈ ಅಧಿಕಾರಿಗಳ ನಿವೃತ್ತಿ ವಯಸ್ಸನ್ನು ಏನಾದರೂ ಕಡಿಮೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾರೆಯೇ?

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಉಪಾಧ್ಯಕ್ಷರೇ, ಈಗಿರುವ ೫೮ ವರ್ಷಗಳ ನಿವೃತ್ತಿ ವಯಸ್ಸನ್ನು ಕಡಿಮೆ ಮಾಡತಕ್ಕ ವಿಚಾರ ಸದ್ಯಕ್ಕೆ ಸರ್ಕಾರದ ಮುಂದೆ ಯಾವುದೂ ಕೂಡ ಇಲ್ಲ. ಸದ್ಯಕ್ಕೆ ಈಗಿರತಕ್ಕ ನಿವೃತ್ತಿ ವಯಸ್ಸನ್ನೇ ಮುಂದುವರಿಸಿಕೊಂಡು ಹೋಗಬೇಕೆಂಬ ವಿಚಾರವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎಂ.ವಿ. ವೆಂಕಟಪ್ಪ:- ಇವತ್ತು ಲಕ್ಷಾಂತರ ಜನ ನಿರುದ್ಯೋಗಿಗಳಿದ್ದಾರೆ, ಅವರಿಗೆ ಕೆಲಸ ಕೊಡುವುದಕ್ಕೆ ಬೇರೆ ಏನಾದರೂ ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ:- ಕೆಲವು ಕೇಂದ್ರ ಸರ್ಕಾರದ ಯೋಜನೆಗಳು, ಮತ್ತೆ ಕೆಲವು ರಾಜ್ಯ ಸರ್ಕಾರದ ಯೋಜನೆಗಳು ಇವೆ. ನಾನು ಅವುಗಳ ಪಟ್ಟಿ ಮಾಡಲಾರೆ, ಆದರೆ ಕೆಲವು ಕಾರ್ಯಕ್ರಮಗಳನ್ನು ನಾವು ಹಾಕಿದ್ದೇವೆ, ಎಂಪ್ಲಾಯ್‌ಮೆಂಟ್ ಜನರೇಟ್ ಮಾಡುವ ಬಗ್ಗೆ ಬೇರೆ ಸಮಯದಲ್ಲಿ ವಿಚಾರ ಮಾಡೋಣ. ಈ ವಿಷಯದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯವನ್ನು

ಕೇಳುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಎಂಪ್ಲಾಯ್‌ಮೆಂಟ್ ಎಂದರೆ, ಪರ್ಮನೆಂಟ್ ಎಂಪ್ಲಾಯ್‌ಮೆಂಟೇ ಅಥವಾ ತಾತ್ಕಾಲಿಕ ಎಂಪ್ಲಾಯ್‌ಮೆಂಟ್ ಅಥವಾ ದಿನಗೂಲಿ ಮೇಲೆ ತೆಗೆದುಕೊಳ್ಳಬೇಕೇ ಎಂಬುದನ್ನು ವಿಚಾರ ಮಾಡೋಣ. ಈಗ ಉದಾಹರಣೆಗೆ 'ವಿಶ್ವ' ಕಾರ್ಯಕ್ರಮವಿದೆ. I have already said on the floor of the House that even the local girls and boys who are educated like SSLC passed or BA passed, or something like that, ಲೋಕಲ್ ಆಗಿ ರೆಕ್ರೂಟ್‌ಮೆಂಟ್ ಮಾಡಿಕೊಳ್ಳಬೇಕೆನ್ನುವ ವಿಚಾರ ಹೇಳಿದ್ದೇವೆ. But, they will never be government employees. ಅದು ಬರುವುದಿಲ್ಲ. ಹಾಗೆ ಮಾಡಬೇಕೆಂಬ ವಿಚಾರವನ್ನು ಇಟ್ಟು ಕೊಂಡಿದ್ದೇವೆ. ಆದಷ್ಟು ಮಟ್ಟಿಗೆ ಮುಂದೆ ಕೆಲವು ಯೋಜನೆಗಳಿಗೆ, ಯಾರು ಓದಿದ್ದಾರೆ ಅವರಿಗೆ ಈ ಸ್ಕೀಮಿನಲ್ಲಿ ಕೆಲಸ ಕೊಡಬೇಕೆಂಬ ವಿಚಾರ ಇಟ್ಟುಕೊಂಡಿದ್ದೇವೆ. ಇದರ ಬಗ್ಗೆ ನಾನು ತಮ್ಮ ಸಲಹೆಯನ್ನು ನಿರೀಕ್ಷೆ ಮಾಡುತ್ತೇನೆ.

ಉಪಾಧ್ಯಕ್ಷಿಣಿಯವರು:- ಮಾನ್ಯ ಸಿದ್ದಯ್ಯನವರೇ, ತಮ್ಮ ಚುಕ್ಕೆ ಗುರುತಿನ ಪ್ರಶ್ನೆ ೪೦೬ (೧೫೦೮) ನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಿರುತ್ತೇವೆ. ಅವರು ಸ್ವಲ್ಪ ಟೈಮ್ ಕೇಳಿದ್ದಾರೆ

ಶೀಘ್ರಲಿಪಿಗಾರರ ಬಡ್ತಿ ಬಗ್ಗೆ

೨೦೬೮. ಶ್ರೀ ಸೋಮಪ್ಪ ಸುವರ್ಣ (ಮೂಡಬಿದಿರೆ): ಮಾನ್ಯ ಗೃಹ ಹಾಗೂ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೋಲೀಸ್ ಇಲಾಖೆಯಲ್ಲಿನ ಎಷ್ಟು ಶೀಘ್ರಲಿಪಿಗಾರರು ಬಡ್ತಿಯನ್ನು ಪಡೆದಿರುತ್ತಾರೆ?

ಆ) ಯಾವಾಗ ಕೇಡರ್ ಮತ್ತು ನೇಮಕಾತಿ ಸೇವಾ ನಿಯಮಗಳನ್ನು ತಿದ್ದುಪಡಿ ಮಾಡಲಾಗುವುದು?

ಇ) ಈ ಬಗ್ಗೆ ಪೋಲೀಸ್ ಇಲಾಖೆ ಮತ್ತು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಈ) ಈಗಲಾದರೂ ತಕ್ಷಣ ಬಡ್ತಿಯ ಸೌಲಭ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಇಲ್ಲ.

ಆ) ಕೇಡರ್ ಮತ್ತು ನೇಮಕಾತಿ ತಿದ್ದುಪಡಿ ಪ್ರಸ್ತಾವನೆ ಡಿ.ಪಿ.ಎ.ಆರ್. ಮತ್ತು ಆರ್ಥಿಕ ಇಲಾಖೆಗಳೊಂದಿಗೆ ಪರಿಶೀಲನೆಯಲ್ಲಿದೆ. ಈ ಬಗ್ಗೆ ತಿದ್ದುಪಡಿಯನ್ನು ಆದಷ್ಟು ಬೇಗನೆ ಮಾಡಲಾಗುವುದು.

ಇ) ಪ್ರಥಮ ದರ್ಜೆ ಸಹಾಯಕರು ಮತ್ತು ಶೀಘ್ರಲಿಪಿಗಾರರಿಗೆ ಬಡ್ತಿ ನೀಡಲು ಅನುಪಾತ ಪದ್ಧತಿಯನ್ನು ನಿಗದಿ ಪಡಿಸುವ ಬಗ್ಗೆ ಪೋಲೀಸ್ ಇಲಾಖೆಯ ಸಿಬ್ಬಂದಿಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಿದ ನಂತರ ಬಡ್ತಿ ನೀಡಲಾಗುವುದು.

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸಚಿವರು ಪೋಲೀಸ್ ಇಲಾಖೆಯಲ್ಲಿ ಎಷ್ಟು ಶೀಘ್ರಲಿಪಿಗಾರರು ಬಡ್ತಿಯನ್ನು ಪಡೆದಿರುತ್ತಾರೆ ಎಂದು ಕೇಳಿದಾಗ ಇಲ್ಲ ಎಂದು ಹೇಳಿರುತ್ತಾರೆ. ಕೇಡರ್ ಮತ್ತು ನೇಮಕಾತಿ ಸೇವಾ ನಿಯಮಗಳ ತಿದ್ದುಪಡಿ ಪ್ರಸ್ತಾವನೆ ಇನ್ನೂ ಸಹ ಪರಿಶೀಲನೆಯಲ್ಲಿದೆ ಎಂದು ತಿಳಿಸಲಾಗಿದೆ. ಈ ವಿಭಾಗದಲ್ಲಿ ಕೆಲಸ ಮಾಡುತ್ತಾ ಇರುವಂತಹ ಶೀಘ್ರಲಿಪಿಗಾರರು ಯಾವ ಸೌಲಭ್ಯವನ್ನೂ, ಬಡ್ತಿಯನ್ನೂ ಹೊಂದದೇ ಬಹಳಷ್ಟು ತೊಂದರೆಯಲ್ಲಿದ್ದಾರೆ. ಇದರ ಬಗ್ಗೆ ಶೀಘ್ರವಾಗಿ ಪರಿಶೀಲನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ಬಡ್ತಿ ಸೌಲಭ್ಯ ಈ ತನಕ ಸಹ ಗೃಹ ಇಲಾಖೆಯ ಪೋಲೀಸ್ ವಿಭಾಗದಲ್ಲಿ ಸಿಗಲಿಲ್ಲ. ಆದುದರಿಂದ ಈ ವಿಷಯದಲ್ಲಿ ತಾವು ಯಾವಾಗ ಎಷ್ಟು ಸಮಯದೊಳಗೆ ಈ ಬಡ್ತಿಯನ್ನು ಕೊಡುತ್ತೀರಿ ಎಂದು ಹೇಳಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಪೋಲೀಸ್ ಇಲಾಖೆಯಲ್ಲಿ ಸ್ಟೆನೋಗ್ರಾಫರ್ಸ್ ಪ್ರಮೋಷನ್ ಬಹಳ ವರ್ಷದಿಂದ ನಿಂತಿದೆ ಎಂದು ಹೇಳಿದ್ದಾರೆ. ಇದು ನಿಜ ಎಂಬುದನ್ನು ಒಪ್ಪಿದ್ದೇನೆ. ಅದಕ್ಕೆ ಸಿ ಅಂಡ್ ಆರ್ ರೂಲ್ಸ್ ಅಮೆಂಡ್‌ಮೆಂಟ್ ಆಗಬೇಕಾಗಿದೆ. ಅದು ಡಿ. ಪಿ. ಎ. ಆರ್ ನಿಂದ ಫೈನಾನ್ಸ್‌ಗೆ ಹೋಗಿ ಅಲ್ಲಿಂದ ಕೂಡ ಬರುತ್ತಿದೆ. ಬಹಳ ಶೀಘ್ರದಲ್ಲಿ ಆಗುತ್ತದೆ. ನಾನು ಒಂದು ಮೀಟಿಂಗ್ ಮಾಡಿದ್ದೇನೆ. ಅತಿ ಶೀಘ್ರದಲ್ಲಿ ಅವರಿಗೆ ಪ್ರಮೋಷನ್ ಕೊಡತಕ್ಕಂಥ ಕೆಲಸ ಮಾಡುತ್ತೇವೆ. ತಮ್ಮ ಮನಸ್ಸಿನಲ್ಲಿ ಏನಿದೆ, ಅದಕ್ಕೆ ಅನುಗುಣವಾಗಿ ಕೆಲಸ ಮಾಡುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ:- ಪೋಲೀಸ್ ಇಲಾಖೆ ಬಹಳ ಮುಖ್ಯವಾದುದು. ಅಲ್ಲಿರತಕ್ಕಂಥ ನೌಕರರಿಗೆ ಈ ವಿಭಾಗದಲ್ಲಿ ಆದಷ್ಟು ಬೇಗನೆ ಬಡ್ತಿ ಸೌಲಭ್ಯ ಸಿಗುವಂತಹ ಒಂದು ಸಂದರ್ಭ ಕಲ್ಪಿಸಬೇಕೆಂದು ಹೇಳುತ್ತೇನೆ.

ಶ್ರೀ ಧರ್ಮಸಿಂಗ್:- ಈಗ ಪೋಲೀಸ್ ಇಲಾಖೆಯಲ್ಲಿ ಕೆಳಗಿನ ಹುದ್ದೆಗಳಿಗೆ ಪಿ ಸಿ ಯಿಂದ ಹೆಚ್‌ಸಿ ಗೆ ಹಾಗೂ ಹೆಚ್‌ಸಿಯಿಂದ ಎ ಎಸ್‌ಐ ಹುದ್ದೆಗೆ ಬಡ್ತಿ ನೀಡಿದೆ, ಬೇರೆ ಬೇರೆ ವರ್ಗಕ್ಕೂ ಕೂಡಾ ಬಡ್ತಿ ಕೊಟ್ಟಿದೆ. ಸ್ಟೆನೋಗ್ರಾಫರ್ಸ್‌ಗೂ ಕೂಡಾ ಬಡ್ತಿ ಕೊಡತಕ್ಕಂಥಾದ್ದು ಏನಿದೆ ಅದನ್ನು ಮಾಡುತ್ತೇವೆ.

ಧಾರವಾಡದಲ್ಲಿ ಉಚ್ಚನ್ಯಾಯಾಲಯದ ಪೀಠ ಸ್ಥಾಪನೆಯ ಬಗ್ಗೆ

೨೨೨೧ ಶ್ರೀ ಆರ್. ಎನ್. ನಾಯ್ಕ (ಭಟ್ಕಳ್):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ ಹೈಕೋರ್ಟ್ ಪೀಠ ತೆರೆಯಲು ಸರ್ಕಾರ ತೀರ್ಮಾನ ಕೈಕೊಂಡಿದೆಯೇ?

ಆ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಎಲ್ಲೆಲ್ಲಿ ಸಿವಿಲ್ ಕೋರ್ಟ್‌ಗಳು ಮತ್ತು ಮುನ್ಸಿಫ್ ಕೋರ್ಟ್‌ಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಸಿವಿಲ್ ಕೋರ್ಟ್ ತೆರೆಯಲು ಸ್ಥಳೀಯ

ಶಾಸಕರಿಂದ ಹಾಗೂ ಇತರರಿಂದ ಬೇಡಿಕೆ ಬಂದಿದ್ದನ್ನು ಸರ್ಕಾರ ಗಮನಿಸಿದೆಯೇ, ಹಾಗಿದ್ದಲ್ಲಿ ಸರ್ಕಾರದ ನಿರ್ಣಯಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಉಚ್ಚ ನ್ಯಾಯಾಲಯದ ಪೀಠವನ್ನು ಆದರ ಕೇಂದ್ರ ಸ್ಥಾನದಿಂದ ಹೊರಗೆ ಸ್ಥಾಪಿಸುವ ಬಗೆಗಿನ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಒಪ್ಪಿಗೆ ಪಡೆಯಬೇಕಾಗಿದ್ದು, ಆದರಂತೆ ಉಚ್ಚ ನ್ಯಾಯಾಲಯದ ಒಪ್ಪಿಗೆಯನ್ನು ಕೋರಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯವು ಇನ್ನೂ ಒಪ್ಪಿಗೆ ನೀಡಿಲ್ಲ. ಈ ಬಗ್ಗೆ ಪತ್ರ ವ್ಯವಹಾರ ಮುಂದುವರೆದಿದೆ.

ಆ) ೧೯೯೧-೨ನೇ ಸಾಲಿನಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಸಿವಿಲ್ ಕೋರ್ಟ್ ಮತ್ತು ಮುನ್ಸಿಫ್ ಕೋರ್ಟ್‌ಗಳನ್ನು ಸ್ಥಾಪಿಸಲಾಗಿದೆ:

೧) ವಿರಾಜಪೇಟೆ	- ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ
೨) ಕಲಘಟಗಿ)	- ಮುನ್ಸಿಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ
೩) ಗುಂಡ್ಲುಪೇಟೆ)	ಮ್ಯಾಜಿಸ್ಟ್ರೇಟರ್ ನ್ಯಾಯಾಲಯ
೪) ಹೊಸಕೋಟೆ)	
೫) ಬೇಲೂರು)	
೬) ದಾವಣಗೆರೆ	- ಆಡಿಷನಲ್ ಮುನ್ಸೀಫ್‌ರ ನ್ಯಾಯಾಲಯ
೭) ಬೀದರ್)	- ಆಡಿಷನಲ್ ಮುನ್ಸೀಫ್ ಮತ್ತು ಪ್ರಥಮ ದರ್ಜೆ ನ್ಯಾಯಿಕ
೮) ಕಾರ್ಕಳ)	ಮ್ಯಾಜಿಸ್ಟ್ರೇಟರ ನ್ಯಾಯಾಲಯ
೯) ಬೆಂಗಳೂರು	- ವಿಶೇಷ ಮ್ಯಾಜಿಸ್ಟ್ರೇಟರ್ ನ್ಯಾಯಾಲಯ (ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ

ಇ) ಹೌದು, ಪರಿಶೀಲಿಸಲಾಗುತ್ತಿದೆ

ಶ್ರೀ ಆರ್. ಎನ್. ನಾಯಕ್:- ಧಾರವಾಡದಲ್ಲಿ ಉಚ್ಚನ್ಯಾಯಾಲಯದ ಪೀಠ ಸ್ಥಾಪಿಸುವ ಬಗ್ಗೆ ಹೈಕೋರ್ಟ್ ಒಪ್ಪಿಗೆ ನೀಡಿಲ್ಲ, ಪತ್ರ ವ್ಯವಹಾರ ನಡೆಯುತ್ತಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಕೇವಲ ಪತ್ರ ವ್ಯವಹಾರ ನಡೆಸುವುದರಿಂದ ವಿಳಂಬವಾಗಬಹುದು. ಈ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಹೈಕೋರ್ಟ್‌ನ ಸಂಬಂಧಪಟ್ಟ ನ್ಯಾಯಾಧೀಶರ ಜೊತೆಗೆ ಏನಾದರೂ ಮಾತುಕತೆ ನಡೆಸುವುದಕ್ಕೆ ಮನಸ್ಸು ಮಾಡುತ್ತಾರೆಯೇ ಹೇಗೆ ಎಂಬುದು ಒಂದು. ಇನ್ನೊಂದು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೋಕಿನಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಬಗ್ಗೆ ಸ್ಥಳೀಯ ಶಾಸಕರಿಂದ ಒತ್ತಡ ಬಂದಿರುವುದು ನಿಜ ಎಂದು ಹೇಳಿದ್ದಾರೆ ಮತ್ತು ಇದು ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದಾರೆ. ಹೊನ್ನಾವರದಲ್ಲಿ ಮೊದಲು ಡಿಸಿಟ್ರಿಕ್ಟ್ ಕೋರ್ಟ್ ಇತ್ತು, ಈಗ ಆ ಕೋರ್ಟ್ ಬಿಲ್ಡಿಂಗ್ ಖಾಲಿಯಾಗಿದೆ; ಬಹಳ ದೊಡ್ಡ ಕೋರ್ಟ್ ಬಿಲ್ಡಿಂಗ್ ಇದೆ; ಅಲ್ಲಿ ಸಿವಿಲ್ ಕೋರ್ಟ್ ಸ್ಥಾಪನೆ ಮಾಡಿದರೆ ಕೋರ್ಟ್ ಬಿಲ್ಡಿಂಗ್‌ಗೆ ತೊಂದರೆ ಇರುವುದಿಲ್ಲ. ಈ ಕಾರಣಕ್ಕಾಗಿ ಈ

ವಿಷಯವನ್ನು ಮನಗಂಡು ಅಲ್ಲಿ ಸಿವಿಲ್ ಕೋರ್ಟ್‌ನ್ನು ಸ್ಥಾಪನೆ ಮಾಡುವುದಕ್ಕೆ ಸರಕಾರ ಸಿದ್ಧವಾಗಿದೆಯೇ ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಿಣಿಯವರೇ, ಎರಡು ಪ್ರಶ್ನೆಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಮೊದಲನೆಯದು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದ ಒಂದು ಪೀಠ ಅಂದರೆ ಬೆಂಚ್ ಆಫ್ ಕರ್ನಾಟಕ ಹೈಕೋರ್ಟ್‌ನ್ನು ಉತ್ತರ ಕರ್ನಾಟಕ ಭಾಗದ ಧಾರವಾಡದಲ್ಲಿ ಸ್ಥಾಪನೆ ಮಾಡತಕ್ಕ ಉದ್ದೇಶ ಸರಕಾರಕ್ಕಿದೆಯೇ ಎಂಬ ವಿಚಾರದಲ್ಲಿ ತಮಗೆ ಈಗಾಗಲೇ ಹೇಳಿದ್ದೇನೆ. ಇಲ್ಲಿ ಧಾರವಾಡ, ಬೆಳಗಾಂ, ವಿಜಾಪುರ ಎಂಬ ಪ್ರಶ್ನೆ ಇಲ್ಲ. ಅದು ಪ್ರತ್ಯೇಕ. ಆ ಪ್ರಶ್ನೆಗೆ ನಾನು ಹೋಗುವುದಿಲ್ಲ. ಈಗ ಮಾನ್ಯ ಸದಸ್ಯರ ಗಮನಕ್ಕೆ ತರುವ ಹಾಗೆ ನಮ್ಮ ಧೋರಣೆ ಏನು ಎಂದರೆ, ಮೊದಲು ಹೈಕೋರ್ಟ್ ಬೆಂಚ್ ಒಂದನ್ನು ಉತ್ತರ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ಥಾಪನೆ ಮಾಡುವುದು, ಯಾವ ಭಾಗ ಎಂಬುದಕ್ಕೆ ಅನಂತರ ಬರೋಣ; ಈಗ ಆ ಭಾಗಕ್ಕೆ ಹೋದರೆ ಮೈನ್ ಕೊಶ್ಚನ್ನೇ ಕಿತ್ತುಕೊಂಡು ಹೋಗಬಹುದು. ಆದ್ದರಿಂದ ಅದಕ್ಕೆ ಅವಕಾಶ ಬೇಡ. ಮೊದಲು ಉತ್ತರ ಕರ್ನಾಟಕ ಭಾಗದಲ್ಲಿ ಮಾಡಬೇಕೇ ಬೇಡವೇ ಎನ್ನತಕ್ಕಂಥ ವಿಚಾರದಲ್ಲಿ ಸರ್ಕಾರದ ಸ್ಪಷ್ಟವಾಗಿರತಕ್ಕಂಥ ಅಭಿಪ್ರಾಯವನ್ನು ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ನಾವು ಸ್ಪಷ್ಟ ಪಡಿಸಿದ್ದೇವೆ. ಸರ್ಕಾರದ ಉದ್ದೇಶ, ಇವತ್ತು ನ್ಯಾಯಾಲಯಗಳು ಯಾವುದೇ ಇರಬಹುದು, ಜನರ ಹಿತಕೋಸ್ಕರ ನಾವು ಮಾಡಬೇಕೆಂಬುದಾಗಿದೆ. ನಾವು ತೆಗೆದುಕೊಂಡು ಹೋಗಿ ಬಿಜಾಪುರ, ಬೆಳಗಾಂ, ಬೀದರ್ ಗುಲ್ಬರ್ಗ ಕಡೆಗಳಿಂದ ಬೆಂಗಳೂರಿಗೆ ಬರಬೇಕಾದರೆ ತೊಂದರೆಯಾಗುತ್ತದೆ. ಇವತ್ತು ಮಹಾರಾಷ್ಟ್ರದಲ್ಲಿ ಔರಂಗಬಾದ್ ಮತ್ತು ನಾಗಪುರದಲ್ಲಿ ಮಾಡಿದ್ದಾರೆ, ಒಂದೇ ರಾಜ್ಯದಲ್ಲಿ, apart from the Bench of the Bombay High Court established in Goa. ಅದು ಗೋವಾ ಪ್ರತ್ಯೇಕ ರಾಜ್ಯ ಅಂತ ಇಟ್ಟುಕೊಳ್ಳೋಣ. ಅದೇ ರೀತಿಯಾಗಿ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಕೂಡ ಬೇರೆ ಬೇರೆ ಕಡೆ ಬೆಂಚ್ ಮಾಡಿದ್ದಾರೆ. ಮೊನ್ನೆ ಮೊನ್ನೆ ಅಸ್ಸಾಂನಲ್ಲಿ ಬೇರೆ ಬೆಂಚ್‌ಗೆ ಕೇಂದ್ರ ಸರ್ಕಾರದವರು ಒಪ್ಪಿಗೆ ಕೊಟ್ಟಿದ್ದಾರೆ. ಅಂದ ಮೇಲೆ why not here in Karnataka? ಇವತ್ತು ಜನರು ಒಂದು ಸಾರಿ ಇಲ್ಲಿಗೆ ಬರಬೇಕಾದರೆ ಬಸ್ಸ್ ಚಾರ್ಜ್, ಟ್ರೈನ್ ಚಾರ್ಜ್, ಹೋಟೆಲ್ ಚಾರ್ಜ್‌ಗಳಿಗೆ ಎಷ್ಟೊಂದು ಹಣ ಖರ್ಚು ಮಾಡಬೇಕಾಗಿದೆ. ಈಗ ಜನರ ಗತಿ ಏನಾಗುತ್ತಿದೆ ಎನ್ನತಕ್ಕಂಥ ವಿಚಾರವನ್ನು ಗಮನಿಸಿ ನಾವು ಒತ್ತಡವನ್ನು ಈಗಾಗಲೇ ಕೇಂದ್ರ ಸರ್ಕಾರದ ಮೇಲೆ ತಂದಿದ್ದೇವೆ. ಆ ಮೇಲೆ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಜೊತೆಗೂ ಮಾತುಕತೆ ಏನಾದರೂ ಮಾಡಿದ್ದೀರಾ ಎನ್ನತಕ್ಕಂಥ ಪ್ರಶ್ನೆಯನ್ನು ತಾವು ಕೇಳಿದಿರಿ. ಮೊನ್ನೆ ತಾನೆ ನಮ್ಮ ರಾಜ್ಯದ ಕಾನೂನು ಸಚಿವರಾದ ಶ್ರೀ ಬ್ಲೇಸಿಯಸ್‌ಡಿಸೌಜ ಅವರೂ ಕೂಡ ಇದ್ದರು. ರಾಜ್ಯ ಹೈಕೋರ್ಟ್ ಮುಖ್ಯನ್ಯಾಯಾಧೀಶರಾದ ಬರೋಚಾಜೀ ಅವರು, ಹಾಗೂ ನಾವು ಮೂರು ಜನರು ಕುಳಿತುಕೊಂಡು ಎಲ್ಲಾ ಮಾತನಾಡಿದ್ದೇವೆ. ಮಾತನಾಡಿದ ಸಂದರ್ಭದಲ್ಲಿ ನಾವು ಸ್ಪಷ್ಟವಾಗಿರತಕ್ಕಂಥ ಸರ್ಕಾರದ ಅಭಿಪ್ರಾಯವನ್ನು ಅವರಿಗೆ ಹೇಳಿದ್ದೇವೆ. Government wants to establish a High Court Bench in one of the places of the North-Karnataka area ಅಷ್ಟೆ. ನಾವು ಜಾಗ ಯಾವುದು ಏನು ಎನ್ನತಕ್ಕಂಥಾದ್ದನ್ನು ನಿಗದಿ ಮಾಡುವುದಕ್ಕೆ ಹೋಗಿಲ್ಲ. ಇದರಲ್ಲಿ ಏನಾಗಿದೆ ಎಂದರೆ ಕರ್ನಾಟಕ ಹೈಕೋರ್ಟ್‌ನವರು

ರೆಕಮೆಂಡೇಷನ್ ಮಾಡಬೇಕು ಹಾಗೂ ಅವರ ಅಭಿಪ್ರಾಯವನ್ನು ಕೂಡ ಕೊಡಬೇಕು. ಅದನ್ನೆ ಕೇಂದ್ರ ಸರ್ಕಾರದವರು ಕೇಳುತ್ತಾರೆ. ಮಾನ್ಯ ಡಿ. ಎಂ. ಚಂದ್ರಶೇಖರ್‌ರವರು ಮುಖ್ಯ ನ್ಯಾಯಾಧೀಶರಾಗಿದ್ದಂತಹ ಕಾಲದಲ್ಲಿ ಈ ವಿಷಯದಲ್ಲಿ ತೀರ್ಮಾನ ಮಾಡಿದ್ದಾರೆ. ಒಂದು ಹೈಕೋರ್ಟ್ ಪೀಠ ಕೂಡ ಉತ್ತರ ಕರ್ನಾಟಕ ಭಾಗದಲ್ಲಿ ಮಾಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಅವರು ಮಾಡಿದ್ದಾರೆ. ನಾನು ಇದನ್ನು ರಾಜ್ಯದ ಜನತೆಗೆ ಗೊತ್ತಾಗಲಿ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅನಂತರ ಬಂದವರು ಬೇಡ ಎಂದು ತೀರ್ಮಾನ ಮಾಡಿ ಇಟ್ಟಿದ್ದಾರೆ. ನನಗೆ ಇದು ಅರ್ಥವಾಗುತ್ತಿಲ್ಲ. ಇವತ್ತು ಇದನ್ನು ಜನರ ಹಿತದೃಷ್ಟಿಯಿಂದ ಮಾಡತಕ್ಕಂಥದ್ದು ಬಹಳ ಒಳ್ಳೆಯದು. ನಾನು ಸದನದ ಮುಖಾಂತರ ಹೈಕೋರ್ಟ್‌ನ್ನು ವಿನಂತಿ ಮಾಡುತ್ತೇನೆ. ಅವರು ಬೇಡ ಎನ್ನತಕ್ಕಂಥ ಅಭಿಪ್ರಾಯವನ್ನು ಇತ್ತೀಚೆಗೆ ತೆಗೆದುಕೊಂಡಿದ್ದಾರೆ. ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಮ್ಮ ಮುಖ್ಯ ನ್ಯಾಯಾಧೀಶರಿಗೆ ನಾವು ತಿಳಿಸಿದ್ದೇವೆ. ವಿನಂತಿ ಮುಖಾಂತರ ಕೂಡ ನಾವು ಅವರಿಗೆ ಹೇಳಿದ್ದೇವೆ. ನೀವು ರೆಕಮೆಂಡ್ ಮಾಡಿ ಕಳುಹಿಸಿಕೊಡಿ ಎನ್ನತಕ್ಕಂಥ ಅಭಿಪ್ರಾಯವನ್ನು ಕೂಡ ನಾವು ಅವರಿಗೆ ತಿಳಿಸಿದ್ದೇವೆ. Now the High Court is seized of that matter. ಅವರ ಮುಂದೆ ಈ ವಿಚಾರ ಇಟ್ಟಿದ್ದೇವೆ. ಮೊನ್ನೆ ಮೊನ್ನೆ ತಾನೆ ದಿಲ್ಲಿಯಲ್ಲಿ ಕೇಂದ್ರ ಸರ್ಕಾರದ ಕಾನೂನು ಸಚಿವರಾದ ಶ್ರೀ ಕೆ ವಿಜಯಭಾಸ್ಕರ ರೆಡ್ಡಿಯವರ ಹತ್ತಿರ ಮಾತನಾಡಿದ್ದೇನೆ. ಅವರು ರೆಕಮೆಂಡೇಷನ್ ಬಂದ ತಕ್ಷಣ ನಾವು ಮಾಡಿಕೊಡುವುದಕ್ಕೆ ಸಿದ್ಧವಾಗಿದ್ದೇವೆ ಎನ್ನುವ ಅಭಿಪ್ರಾಯವನ್ನು ಕೂಡ ಕೊಟ್ಟಿದ್ದಾರೆ. In the meanwhile, ಅಸ್ಸಾಂನವರು ಮೊನ್ನೆ ಇಂತಹ ಪೀಠ ಮಾಡಿಕೊಂಡಿದ್ದಾರೆ. ಮೊನ್ನೆ ಅವರು ಒಂದು ರೆಸಲ್ಯೂಷನ್ ಪಾಸ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಮಾಡಿಕೊಂಡಿದ್ದಾರೆ. ನಾನು ಈಗಾಗಲೇ ಮೇಲ್ಮನೆಯಲ್ಲಿ ೪-೫ ದಿವಸಗಳಿಗೆ ಮುಂಚೆ ಈ ಬಗ್ಗೆ ತಿಳಿಸಿದ್ದೇನೆ. ಇಲ್ಲಿ ನಾವು ಒಂದು ರೆಸಲ್ಯೂಷನ್‌ನನ್ನು ಇನ್ನು ಒಂದೆರಡು ಮೂರು ದಿವಸಗಳಲ್ಲಿ ತರುತ್ತೇವೆ. ಮಾನ್ಯ ವಿರೋಧಪಕ್ಷದ ಮಿತ್ರರು ಸಭೆಗೆ ಬರಲಿ ಎನ್ನುವ ದೃಷ್ಟಿಯಿಂದ ತಡ ಮಾಡಿದ್ದೇವೆ. ಏಕೆಂದರೆ ಎಲ್ಲರೂ ಸೇರಿ ಈ ಒಂದು ತೀರ್ಮಾನ ಮಾಡಿದ್ದೇವೆ ಎನ್ನತಕ್ಕಂಥ ಒಂದು ಅಭಿಪ್ರಾಯ ಮೂಡಬೇಕು, ಅದಕ್ಕೆ ನಾವು ಎರಡೂ ಸದನಗಳಲ್ಲಿ ಒಂದು ರೆಸಲ್ಯೂಷನ್ ತರುತ್ತೇವೆ. ಉತ್ತರ ಕರ್ನಾಟಕ ಭಾಗದಲ್ಲಿ ಯಾವ ಜಾಗ ಎನ್ನುವ ಪ್ರಶ್ನೆ ಅಲ್ಲ. ನಮ್ಮ ರಾಜ್ಯದ ಹೈಕೋರ್ಟ್‌ನ ಒಂದು ಬೆಂಚ್ ಮಾಡುವುದಕ್ಕೆ ಒಪ್ಪಿಗೆ ನೀಡಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದಕ್ಕೋಸ್ಕರ ಒಂದು ನಿರ್ಣಯ ಕೂಡ ನಾವು ತರುತ್ತಿದ್ದೇವೆ. ಈಗ ಇನ್ನೊಂದು ಮೂರು ದಿವಸಗಳಲ್ಲಿ ನಿರ್ಣಯ ಕೂಡ ತರುತ್ತಿದ್ದೇವೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಾ ಇನ್ನು ಎರಡನೆಯದು ತಮ್ಮ ಕ್ಷೇತ್ರ ಆಗಿರತಕ್ಕಂಥ ಹೊನ್ನಾವರದಲ್ಲಿ ಸಿವಿಲ್ ಕೋರ್ಟ್ ಪ್ರಾರಂಭ ಮಾಡುವುದಕ್ಕೆ ಎಲ್ಲಾ ತರಹದ ಇನ್‌ಫ್ರಾಸ್ಟ್ರಕ್ಚರ್ ಇದೆ ಎನ್ನತಕ್ಕಂತಹ ಮಾತನ್ನು ಹೇಳಿದ್ದೀರಿ. ನನಗೂ ಕೂಡ ವಿಚಾರ ಗೊತ್ತಿದೆ. ಎಲ್ಲಾ ಅಂಕಿಅಂಶಗಳನ್ನು ಕೂಡ ಕಲೆಕ್ಟ್ ಮಾಡುತ್ತಿದ್ದೇವೆ. ಅಲ್ಲಿ ಮಾಡತಕ್ಕಂಥ ಒಂದು ಸಂದರ್ಭ ಕಾಣುತ್ತಿದೆ. ಮಾಡಿದರೆ ಒಳ್ಳೆಯದು ಎನ್ನತಕ್ಕಂಥ ಅಭಿಪ್ರಾಯದ ಬಗ್ಗೆ ಸರ್ಕಾರ ಕೂಡ ವಿಚಾರ ಮಾಡುತ್ತಿದೆ. ಇದನ್ನು ವಿಚಾರ ಮಾಡಿ ಇದನ್ನು ಮಾಡತಕ್ಕಂಥ ಕಾರಣಗಳನ್ನು ಕೂಡ ಹುಡುಕಬೇಕಾಗಿದೆ. ವಿವರಗಳು ಬಂದ ತಕ್ಷಣ ಮಾಡಿ ಕೊಡತಕ್ಕಂಥ ಪ್ರಯತ್ನ ನಾವು ಮಾಡುತ್ತೇವೆ.

ಮಂಗಳೂರಿಗೆ ಕುಡಿಯುವ ನೀರು ಪೂರೈಕೆ ಮಾಡುವ ಸಲುವಾಗಿ ಅಣೆಕಟ್ಟಿನ ಕೆಲಸ ಪೂರ್ಣಗೊಳಿಸುವ ಬಗ್ಗೆ

೧೨೭೨ ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿಗೆ ಕುಡಿಯುವ ನೀರಿನ ಪೂರೈಕೆಗಾಗಿ ತುಂಬೆಯಲ್ಲಿ ವೆಂಟೆಡ್ ಡ್ಯಾಮ್ ಕಟ್ಟಲು ಪ್ರಾರಂಭಿಸಲಾಗಿದೆಯೇ?

ಆ) ಆ ಅಣೆಕಟ್ಟು ಕಟ್ಟಲು ಪ್ರಾರಂಭ ಮಾಡಿದ್ದಲ್ಲಿ ಅದರ ಕೆಲಸ ಎಷ್ಟರಮಟ್ಟಿಗೆ ಆಗಿದೆ?

ಇ) ಅದಕ್ಕಾಗಿ ಎಷ್ಟು ಹಣ ನಿಗಧಿಗೊಳಿಸಲಾಗಿದೆ ಹಾಗೂ ಈಗ ಎಷ್ಟು ಖರ್ಚು ಮಾಡಲಾಗಿದೆ?

ಈ) ಈ ಅಣೆಕಟ್ಟಿನ ಕೆಲಸ ಯಾವಾಗ ಪೂರ್ಣಗೊಳ್ಳುವುದು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಇದುವರೆಗೆ ಶೇಕಡ ೯೫ ಭಾಗ ಕೆಲಸ ಪೂರ್ಣಗೊಳಿಸಲಾಗಿದೆ.

ಇ) ಈ ಕೆಲಸವು ಠೇವಣಿ ಕೊಡುಗೆ ಕೆಲಸವಾಗಿದೆ. ಅಂದಾಜು ಮೊತ್ತವಾದ ೧೫೦ ಲಕ್ಷ ರೂ. ಗಳ ಪೈಕಿ ೯೫.೩೩ ಲಕ್ಷ ರೂ. ಗಳನ್ನು ಠೇವಣಿಯಾಗಿ ಸ್ವೀಕರಿಸಲಾಗಿದ್ದು ಈಗಾಗಲೇ ೧೭೯.೪೩ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ಅಂದಾಜಿಗಿಂತ ವೆಚ್ಚವು ಹೆಚ್ಚಾಗಿರುವುದು ಎಸ್. ಆರ್. ನಲ್ಲಿ ಹೆಚ್ಚಳ ಮತ್ತು ಸಾಮಗ್ರಿ ಬೆಲೆಗಳ ಹೆಚ್ಚಳದಿಂದ.

ಈ) ಈ ಕೆಲಸವನ್ನು ೧೯೯೨ರ ಮೇ ತಿಂಗಳ ಹೊತ್ತಿಗೆ ಪೂರ್ಣಗೊಳಿಸಬಹುದು.

ಶ್ರೀ ಬಿ. ಎಂ. ಇದಿನಬ್ಬ:- ಮಾನ್ಯ ಆಧ್ಯಕ್ಷರೇ, ಮಂಗಳೂರಿಗೆ ಕುಡಿಯುವ ನೀರು ಬಹಳ ಕಷ್ಟಕರವಾದ ವಿಚಾರ ಎಂದು ಕಳೆದ ವರ್ಷ ಕೂಡ ನಾವು ಹೇಳಿದ್ದೆವು. ಮತ್ತು ಈ ವೆಂಟೆಡ್ ಡ್ಯಾಮ್‌ನ್ನು ಕಳೆದ ವರ್ಷ ಮುಗಿಸುವ ಅಂದಾಜು ಉಂಟು ಎಂದು ಹೇಳಲಾಗಿತ್ತು. ಆದರೆ ಕಳೆದ ವರ್ಷ ಕೂಡ ಮಂಗಳೂರು ಪಟ್ಟಣಕ್ಕೆ ಕುಡಿಯುವ ನೀರನ್ನು ಲಾರಿಗಳಲ್ಲಿ ಸಾಗಿಸಿ ಕೊಟ್ಟಿರತಕ್ಕಂಥಾದ್ದು ನಮಗೆ ಗೊತ್ತಿದೆ; ಆದರೆ ಈಗ ೧೯೯೨ನೇ ಮೇ ತಿಂಗಳಲ್ಲಿ ಪೂರ್ತಿ ಮಾಡುವ ಅಂದಾಜು ಉಂಟೆಂದು ಹೇಳಿದ್ದಾರೆ. ಇಷ್ಟು ನಿಧಾನವಾಗಲು ಕಾರಣವೇನು?

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮಂಗಳೂರಿನ ವೆಂಟೆಡ್ ಡ್ಯಾಮ್ ಕೆಲಸ ೮೯ ರಲ್ಲಿ ಪ್ರಾರಂಭವಾಯಿತು. ಇದನ್ನು ಬೇರೆ ಬೇರೆ ಕಡೆ ಇದ್ದಂತ ಡೆಪಾಸಿಟ್ ಸ್ಕೀಂನಲ್ಲಿ ತೆಗೆದುಕೊಳ್ಳಲಾಗಿದೆ. ಈಗಾಗಲೇ ಶೇಕಡ ೯೫ ರಷ್ಟು ಕೆಲಸ ಮುಗಿದುಹೋಗಿದೆ. ಅಲ್ಲಿ ಏನಾಗುತ್ತಿದೆ ಎಂದರೆ, ಎರಡು ವರ್ಷದಿಂದ ಸಾಕಷ್ಟು ಮಳೆ ಇರುವುದರಿಂದ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಈಗ ನದಿಯಲ್ಲಿ ನೀರು ಇದೆ. ಮತ್ತು ಈಗ ಟೆಂಪೂರೆರಿ ಮೆಶರ್ ಆಗಿ ಸ್ಯಾಂಡ್ ಬ್ಯಾಗ್‌ನ್ನು ಇಟ್ಟುಬಿಟ್ಟು ನೀರು ಡ್ರಾ ಮಾಡುತ್ತಿದ್ದೇವೆ. ಇನ್ನು ಐದು ಪರ್‌ಸೆಂಟ್ ಕೆಲಸ

ಮಾತ್ರ ಬಾಕಿ ಇದೆ. ಇನ್ನೊಂದೆರಡು ತಿಂಗಳಲ್ಲಿ ಆ ಕೆಲಸವನ್ನು ಮುಗಿಸುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ:- ಸನ್ಮಾನ್ಯ ಸಭಾಧ್ಯಕ್ಷಣೆಯವರೇ, ಕಳೆದ ವರ್ಷ ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ನೀರಿಲ್ಲದೆ ಸುತ್ತಮುತ್ತಲ ಗ್ರಾಮಗಳಿಗೂ ಕೂಡ ಕಷ್ಟ ಬಂದಿತು. ಲಾರಿಯಲ್ಲೆಲ್ಲಾ ನೀರನ್ನು ಕೊಂಡೊಯ್ಯಲಾಗಿತ್ತು. ಈ ವರ್ಷ ಲಾರಿಯಲ್ಲಿ ನೀರನ್ನು ಕೊಂಡೊಯ್ಯುವುದು ತಪ್ಪಬಹುದೇ? ಮೇ ತಿಂಗಳ ಮೊದಲೇ ಈ ಕೆಲಸ ಆಗಬಹುದೇ? ಸ್ವಲ್ಪ ಅವಸರವಾಗಿ ಕೆಲಸ ಆಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಆದಷ್ಟು ಬೇಗನೆ ಅದನ್ನು ಪೂರ್ಣಗೊಳಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಮಂಗಳೂರಿಗೆ ಕುಡಿಯುವ ನೀರಿನ ಕೊರತೆ ೧೯೮೪ ರಿಂದ ಪ್ರಾರಂಭವಾಗಿದೆ. ಜನತಾ ಸರ್ಕಾರ ಇದ್ದಾಗಲೇ ಅದರ ಬಗ್ಗೆ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ಆದಷ್ಟು ಬೇಗ ವೆಂಟೆಡ್ ಡ್ಯಾಮ್ ಕಟ್ಟತಕ್ಕಂಥ ತೀರ್ಮಾನ ಮಾಡಿತ್ತು. ಆದರೆ ಆಗ ಕೆಲಸ ಪ್ರಾರಂಭ ಮಾಡಲಿಲ್ಲ. ೮೯ರ ನಂತರ ಕೆಲಸ ಪ್ರಾರಂಭ ಮಾಡಿದರೂ ಕೂಡಾ ಕಳೆದ ವರ್ಷ ಆ ಕೆಲಸ ಮುಗಿಸಬೇಕಾಗಿತ್ತು. ಕಳೆದ ವರ್ಷ ನೀರಿನ ಕೊರತೆ ಇರಲಿಲ್ಲ. ಅದರ ಮೊದಲು ಕೊರತೆ ಇತ್ತು. ಈಗ ನೇತ್ರಾವತಿ ಹೊಳೆಯ ಬದಿ ಇರುವ ನಮಗೆಲ್ಲಾ ಗೊತ್ತಿದೆ. ಬಹುಶಃ ಈ ವರ್ಷ ಈ ಕೆಲಸ ಪೂರ್ತಿಯಾಗದಿದ್ದರೆ ಖಂಡಿತವಾಗಿ ಮಂಗಳೂರಿಗೆ ಕುಡಿಯುವ ನೀರಿನ ಸಮಸ್ಯೆ ತುಂಬಾ ದೊಡ್ಡದಾಗಬಹುದು. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಿ ಆ ಕೆಲಸವನ್ನು ಆದಷ್ಟು ಬೇಗ ಮಾಡದಿದ್ದರೆ ಖಂಡಿತವಾಗಿ ತೊಂದರೆಯಾಗುತ್ತದೆ. ಅದರ ಬಗ್ಗೆ ಸಂಪೂರ್ಣ ಗಮನ ಕೊಟ್ಟು ಈ ವರ್ಷ ಕೆಲಸವಾಗುವ ರೀತಿಯಲ್ಲಿ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ, ಭರವಸೆ ಕೊಡುವುದು ಮುಖ್ಯವಲ್ಲ. ಕಳೆದ ವರ್ಷ ಕೇಳಿದ್ದಾಗ ಇದನ್ನು ಮಾಡುತ್ತೇವೆ ಎಂದು ಹೇಳಿದ್ದಿರಿ. ಈ ವರ್ಷವೂ ಅದನ್ನೇ ಹೇಳುತ್ತೀರಿ. ಮೇ ತಿಂಗಳೊಳಗೆ ಇದನ್ನು ಸಂಪೂರ್ಣವಾಗಿ ಮಾಡಿ ಮುಗಿಸುತ್ತೀರಾ ಎಂಬುದರ ಬಗ್ಗೆ ನಮಗೆ ಉತ್ತರ ಬೇಕಾಗಿದೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಈ ವರ್ಷ ನೀರಿಗೆ ತೊಂದರೆ ಭರುವುದಿಲ್ಲ. ಏಕೆಂದರೆ, ಈ ವರ್ಷ ಸಾಕಷ್ಟು ನೀರಿದೆ. ನಾವು ಸ್ಯಾಂಡ್ ಬ್ಯಾಗ್ಸ್ ಇಟ್ಟು ಕೆಲಸ ಮಾಡುತ್ತಿದ್ದೇವೆ. ಈ ಮೇ ತಿಂಗಳಿನಲ್ಲಿ ಮುಗಿಸುತ್ತೇವೆ ಎಂದು ಹೇಳಿದ್ದೇನೆ. ಎಲ್ಲಾ ಮುಗಿದು ಹೋಗಿದೆ. ಶೇಕಡಾ ೫ ರಷ್ಟು ಮಾತ್ರ ಬಾಕಿ ಇದೆ. ಒಂದು ವಿಷಯ, ಸುಮಾರು ಜನರು ದುಡ್ಡು ಕೊಡಲಿಕ್ಕೆ ಬಾಕಿ ಇದ್ದಾರೆ. ಏನೆಂದರೆ, ಕಾರ್ಪೊರೇಷನ್‌ನಿಂದ ೨೦ ಲಕ್ಷ ರೂಪಾಯಿ ಬರಬೇಕಾಗಿದೆ. ಮೊದಲು ಎಸ್ಟಿಮೇಟ್ ಆಗಿದ್ದು ೧೫೦ ಲಕ್ಷಕ್ಕೆ, ಈಗ ಎಸ್ಟಿಮೇಟ್ ಜಾಸ್ತಿಯಾಗಿ ೧೭೪ ಲಕ್ಷವಾಗಿದೆ. ಆದರೂ ಕೂಡ ನಾವು ನಮ್ಮ ಬೋರ್ಡ್‌ನಿಂದ ದುಡ್ಡು ಹಾಕಿಬಿಟ್ಟು ಈ ಕೆಲಸ ಮಾಡಿಸುತ್ತಿದ್ದೇನೆ. ಶೇಕಡಾ ೫ ರಷ್ಟು ಬಾಕಿ ಇರುವುದನ್ನು ಮೇ ತಿಂಗಳ ಒಳಗೆ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಕುಡಿಯುವ ನೀರಿನ ಬಗ್ಗೆ ತುಂಬಾ ಗಂಭೀರ ಸಮಸ್ಯೆ ಇದೆ. ಸರ್ಕಾರ ತನ್ನ ಕೈಯಿಂದ ಖರ್ಚು ಮಾಡಿ ಆದಷ್ಟು ಬೇಗ ಪ್ರಾರಂಭ ಮಾಡಲಿ.

ಶ್ರೀ ಕೆ. ಜೆ. ಜಾರ್ಜ್:- ಆದಷ್ಟು ಬೇಗ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಚಿಕ್ಕಮಗಳೂರು ನಗರ ಸಭೆಗೆ ಸರ್ಕಾರದಿಂದ ಆಕ್ಟ್ರಾಯ್ ಅನುದಾನ ಬಿಡುಗಡೆ ಮಾಡುವ ಬಗ್ಗೆ.

೧೩೩೯. ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೯೧-೯೨ನೇ ಆರ್ಥಿಕ ವರ್ಷದಲ್ಲಿ ಚಿಕ್ಕಮಗಳೂರು ನಗರಸಭೆಗೆ ಸರ್ಕಾರದಿಂದ ಆಕ್ಟ್ರಾಯ್ ಅನುದಾನ (ಆಕ್ಟ್ರಾಯ್ ಗ್ರಾಂಟ್) ಬಿಡುಗಡೆ ಮಾಡಲಾಗಿದೆಯೇ?

ಆ) ಬಿಡುಗಡೆ ಮಾಡಿದ್ದಲ್ಲಿ ಯಾವ ಯಾವ ತ್ರೈಮಾಸದಲ್ಲಿ ಬಿಡುಗಡೆ ಮಾಡಲಾಗಿದೆ ಹಾಗೂ ಬಿಡುಗಡೆ ಮಾಡಿರುವ ಮೊತ್ತವೆಷ್ಟು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ)

ತ್ರೈಮಾಸಿಕ	ಬಿಡುಗಡೆ ಮಾಡಿದ ಮೊತ್ತ (ರೂ.)
ಏಪ್ರಿಲ್-ಜೂನ್ ೯೧	೬,೬೯,೦೧೭-೦೦
ಜುಲೈ-ಸೆಪ್ಟೆಂಬರ್ ೯೧	೬,೬೯,೦೧೭-೦೦
ಅಕ್ಟೋಬರ್-ಡಿಸೆಂಬರ್ ೯೧	೬,೬೯,೦೧೭-೦೦
ಜನವರಿ-ಮಾರ್ಚ್ ೯೨	ಶೀಘ್ರದಲ್ಲಿ ಬಿಡುಗಡೆ ಮಾಡಲಾಗುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ನಗರ ಸಭೆಗೆ ೧೯೯೧-೯೨ರಲ್ಲಿ ಆಕ್ಟ್ರಾಯ್ ಅನುದಾನ ಎಷ್ಟು ಬಿಡುಗಡೆ ಮಾಡಿದ್ದೀರಿ ಎಂದು ಕೇಳಿದ್ದಕ್ಕೆ, ಉತ್ತರ ಕೊಟ್ಟಿದ್ದಾರೆ. ಇದು ಬಹುಶಃ ೧೯೮೧ನೇ ಸೆನ್ಸಸ್ ಪ್ರಕಾರವಾಗಿ ಈ ಹಣವನ್ನು ನಿಗದಿಪಡಿಸಿದ್ದೀರೋ ಅಥವಾ ಆಕ್ಟ್ರಾಯ್‌ಯನ್ನು ಮುನಿಸಿಪಾಲಿಟಿಯವರು ಸಂಗ್ರಹಿಸಿದ್ದಾರಲ್ಲಾ ಈ ಆಧಾರದ ಮೇಲೆ ನಿಗದಿಪಡಿಸಿದ್ದೀರೋ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಮತ್ತೆ ಇತರೇ ಮುನಿಸಿಪಾಲಿಟಿಗಳಿಗೂ ಮತ್ತು ಚಿಕ್ಕಮಗಳೂರು ಮುನಿಸಿಪಾಲಿಟಿಯವರಿಗೂ ಹೋಲಿಸಿದರೆ ಬಹುಶಃ ಈ ಅನುದಾನ ಚಿಕ್ಕಮಗಳೂರು ನಗರಸಭೆಗೆ ಕಡಿಮೆಯಾಗಿದೆ ಎಂದು ನನ್ನ ಭಾವನೆ. ಆದ್ದರಿಂದ, ಮಾನ್ಯ ಮಂತ್ರಿಗಳು ಇನ್ನು ಮುಂದಿನ ವರ್ಷಗಳಲ್ಲಾದರೂ ಇದಕ್ಕೆ ಜಾಸ್ತಿ ಅನುದಾನ ಬಿಡುಗಡೆ ಮಾಡುತ್ತೀರಾ ಎಂದು ಉಪ ಪ್ರಶ್ನೆಯನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪ ಸಭಾಧ್ಯಕ್ಷಣಿಯವರೇ, ಈ ಆಕ್ಟ್ರಾಯ್ ಕಾಂಪನ್‌ಸೇಷನ್ ಅನ್ನು ಆಕ್ಟ್ರಾಯ್ ಅಬಾಲಿಷ್ ಮಾಡಿದಂಥ ಟೈಮ್‌ನಲ್ಲಿ ಅವರಿಗೆ ಏನು ಆಕ್ಟ್ರಾಯಿ ಇನ್‌ಕಂ ಬರುತ್ತಿತ್ತೋ, ಅದರ ಆಧಾರದ ಮೇಲೆ ನಾವು ಕೊಡುತ್ತಿದ್ದೇವೆ. ಆ ಆಧಾರದ ಮೇಲೆ ಚಿಕ್ಕಮಗಳೂರು ಮುನಿಸಿಪಾಲಿಟಿಗೆ ಒಂದು ಕ್ವಾರ್ಟರ್‌ಗೆ ೬ ಲಕ್ಷ ೬೯ ಸಾವಿರ ಬರುತ್ತಿದೆ. ಮತ್ತು ನಾನು ಉತ್ತರದಲ್ಲಿ ಹೇಳಿದ ಹಾಗೆ ಒಂದೇ ಕ್ವಾರ್ಟರ್‌ಗೆ ಸಂಭಂಧಪಟ್ಟಂತೆ ಹಣ ಮಾತ್ರ ಇನ್ನೂ ಹಣ ರಿಲೀಸ್ ಮಾಡಲಿಕ್ಕೆ ಇದೆ. ಅದು ಏಪ್ರಿಲ್ ತಿಂಗಳಲ್ಲಿ ರಿಲೀಸ್ ಆಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇದೇ ರೀತಿಯಾಗಿ ಸನ್ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗಕ್ಕೆ ಬಂದಾಗಲೂ ಕೂಡಾ ಡೆವಲಪ್‌ಮೆಂಟ್ ಚಾರ್ಜಸ್ ಬಗ್ಗೆ ಕೇಳಿದ್ದೆವು. ರಸ್ತೆಗಳೆಲ್ಲಾ ಹಾಳಾಗಿ ಹೋಗಿಬಿಟ್ಟಿದೆ. ಒಂದು ಕೋಟಿ ರೂಪಾಯಿಗಳನ್ನು ಈ ಬಗ್ಗೆ ಕೊಡುವ ವಿಚಾರದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು ಪರಿಶೀಲನೆ ಮಾಡುತ್ತೇನೆ ಎಂದು ಹೇಳಿದ್ದರು. ಆದರೆ ಇವೊತ್ತಿನವರೆಗೆ ಡೆವಲಪ್‌ಮೆಂಟ್ ಚಾರ್ಜ್ ಬಗ್ಗೆ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ರಸ್ತೆಗಳು ತುಂಬಾ ಕೆಟ್ಟಿವೆ. ದಯವಿಟ್ಟು ಇದಕ್ಕೆ ಆಶ್ವಾಸನೆಯಂತೆ ಮಾಡಲು ಪ್ರಯತ್ನ ಮಾಡುವರೇ ಎಂದು ಕೇಳಬಯಸುತ್ತೇನೆ

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಸದಸ್ಯರು ಚಿಕ್ಕಮಗಳೂರಿಗೆ ಸಂಬಂಧಪಟ್ಟಂಥ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಮಾನ್ಯ ಈಶ್ವರಪ್ಪನವರು ಶಿವಮೊಗ್ಗಕ್ಕೆ ಸಂಬಂಧಪಟ್ಟಿದ್ದನ್ನು ಕೇಳುತ್ತಿದ್ದಾರೆ. ದಯಮಾಡಿ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರಿಸಬಹುದು ಎಂದು ಹೇಳ ಬಯಸುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ:- ಮುಖ್ಯ ಮಂತ್ರಿಗಳೂ ಇಲ್ಲಿಯೇ ಇದ್ದಾರೆ. ಅವರು ಬಸ್‌ಸ್ಟ್ಯಾಂಡ್ ಉದ್ಘಾಟನೆಗೆ ಬಂದಾಗ ನಮಗೆಲ್ಲಾ ಸಂತೋಷವಾಗುವ ರೀತಿಯಲ್ಲಿ ಭರವಸೆಯನ್ನು ಕೊಟ್ಟಿದ್ದರು. ಆ ಬಗ್ಗೆ ಸ್ವಲ್ಪ ಹಣವನ್ನಾದರೂ ಬಿಡುಗಡೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು:- ಈ ಪ್ರಶ್ನೆಗೆ ಸಂಬಂಧಪಟ್ಟಿದ್ದು ಅಲ್ಲ. ದಯಮಾಡಿ ಕುಳಿತುಕೊಳ್ಳಿ.

ಉನ್ನತಾಧಿಕಾರಿ ಸಮಿತಿಯ ರಚನೆ ಬಗ್ಗೆ

೨೨೪೧. ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉನ್ನತಾಧಿಕಾರ ಸಮಿತಿಯನ್ನು ರಚಿಸಿದ ಉದ್ದೇಶವೇನು? ಇದರಿಂದ ಹರಿಜನ ನೌಕರ ವರ್ಗದವರಿಗೆ ನ್ಯಾಯ ದೊರಕಿದೆಯೇ?

ಆ) ಉನ್ನತಾಧಿಕಾರ ಸಮಿತಿಯು ಎಷ್ಟು ಬಾರಿ ಈ ಎರಡು ವರ್ಷದಲ್ಲಿ ಸೇರಿದೆ? ಈ ಸಮಿತಿಗಳಲ್ಲಿ ತೆಗೆದುಕೊಂಡ ತೀರ್ಮಾನವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಸರ್ಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಮೀಸಲಾತಿ ಆದೇಶಗಳನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡುವುದನ್ನು ವೀಕ್ಷಿಸಲು ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಯಿತು. ಇದರಿಂದ ಹರಿಜನ-ಗಿರಿಜನ ನೌಕರರಿಗೆ ಖಂಡಿತವಾಗಿಯೂ ನ್ಯಾಯ ದೊರಕಿದೆ.

ಆ) ಉನ್ನತ ಮಟ್ಟದ ಸಮಿತಿಯು ಕಳೆದೆರಡು ವರ್ಷಗಳಲ್ಲಿ ಸಭೆ ಸೇರಿಲ್ಲ. ಈ ಸಮಿತಿಗಳಲ್ಲಿ ತೆಗೆದುಕೊಂಡ ತೀರ್ಮಾನದನುಸಾರ ಸರ್ಕಾರ ಈ ಕೆಳಕಂಡಂತೆ ಕ್ರಮ ಕೈಗೊಂಡಿದೆ:-

೧) ಮೀಸಲಾತಿ ರೋಸ್ಟರ್ ಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳನ್ನು ಪರಿಶಿಷ್ಟ ಜಾತಿ/

ಪಂಗಡದವರಿಗೆ ಮೀಸಲಿಡುವುದು;

೨) ನೇರ ನೇಮಕಾತಿಯಲ್ಲಿ ಗರಿಷ್ಠ ವಯೋಮಿತಿಯನ್ನು ೫ ವರ್ಷಗಳಷ್ಟು ಸಡಿಲಿಸುವುದು;

೩) ಪರಿಶಿಷ್ಟ ಜಾತಿ/ಪಂಗಡದವರ ಪ್ರಾತಿನಿಧ್ಯತೆಯ ತೀವ್ರ ಕೊರತೆ ಇರುವ ಇಲಾಖೆಗಳಲ್ಲಿ ಮೀಸಲಾತಿ ಪ್ರಮಾಣವನ್ನು ಸಾಧಿಸಲು ಮೀಸಲಾತಿ ಪ್ರಮಾಣ ಶೇಕಡ ೧೫ ಮತ್ತು ೩ ತಲುಪುವವರೆಗೆ ಮೀಸಲಾತಿಯ ಪ್ರಮಾಣವನ್ನು ಶೇಕಡ ೨೦ ಮತ್ತು ೫ಕ್ಕೆ ಹೆಚ್ಚಿಸುವುದು;

೪) ಹಿಂದಿನ ನೇಮಕಾತಿಗಳಲ್ಲಿ ಈ ವರ್ಗದ ಅಭ್ಯರ್ಥಿಗಳ ಕೊರತೆಯಿಂದಾಗಿ ಭರ್ತಿಯಾಗದೇ ಉಳಿದ ರಿಕ್ತ ಸ್ಥಾನಗಳನ್ನು 'ಬ್ಯಾಕ್ ಲಾಗ್' ಎಂದು ಪರಿಗಣಿಸಿ ಬಾಕಿ ಉಳಿದ ರಿಕ್ತ ಸ್ಥಾನಗಳನ್ನು ವಿಶೇಷ ನೇಮಕಾತಿ ಕಾರ್ಯಕ್ರಮದ ಮೂಲಕ ಭರ್ತಿ ಮಾಡುವುದು;

೫) ಪ್ರತಿಭಾವಂತ ಪರಿಶಿಷ್ಟ ಜಾತಿ, ವರ್ಗದ ಅಭ್ಯರ್ಥಿಗಳಿಗೆ ಸರ್ಕಾರಿ ಸೇವೆಯಲ್ಲಿ ನೇರ ನೇಮಕಾತಿ ಮಾಡಿಕೊಳ್ಳಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ;

೬) ಬಡ್ತಿ ಮೀಸಲಾತಿ ಹುದ್ದೆಗಳಲ್ಲಿ ಬಡ್ತಿಯ ಮೂಲ ಹುದ್ದೆಯಲ್ಲಿ ೫ ವರ್ಷ ಕನಿಷ್ಠ ಸೇವೆ ಸಲ್ಲಿಸಿರಬೇಕೆಂಬ ನಿಯಮವನ್ನು ಸಡಿಲಿಸಿ ೩ ವರ್ಷಕ್ಕೆ ಇಳಿಸಲಾಗಿದೆ;

೭) ಈ ವರ್ಗದವರಿಗಾಗಿ ಒಂದು ಉದ್ಯೋಗ ಕೋಶ ರಚಿಸಲಾಗಿದೆ;

೮) ಸರ್ಕಾರಿ ಆದೇಶಗಳನ್ನು ಅಧೀನ ಕಚೇರಿಗಳಲ್ಲಿ ಪರಿಣಾಮಕಾರಿಯಾಗಿ ಜಾರಿಯಾಗುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ಈ ಬಗ್ಗೆ ಸಮಾಜ ಕಲ್ಯಾಣ ನಿರ್ದೇಶನಾಲಯಕ್ಕೆ ತನಿಖೆ ಮಾಡಲು ಅಧಿಕಾರ ವಹಿಸಲಾಗಿದೆ.

೯) ಸರ್ಕಾರಿ ಸೇವೆಯಲ್ಲಿನ ಮೀಸಲಾತಿ ಆದೇಶಗಳನ್ನು ಜಾರಿಗೊಳಿಸದಿರುವುದನ್ನು ಅಪರಾಧವೆಂದು ಪರಿಗಣಿಸಿ ತಪ್ಪಿತಸ್ಥರಿಗೆ ದಂಡ ವಿಧಿಸಲು ವಿಧೇಯಕವನ್ನು ಜಾರಿ ಗೊಳಿಸಲಾಗಿದೆ.

೧೦) ನೇರ ನೇಮಕಾತಿಯಲ್ಲಿ ಇನ್ನೂ ಇರಬಹುದಾದ ಬ್ಯಾಕ್‌ಲಾಗ್‌ನ್ನು ತೊಡೆದು ಹಾಕಲು ಮತ್ತೊಂದು ವಿಶೇಷ ನೇಮಕಾತಿ ಕಾರ್ಯಾಚರಣೆ ಮಾಡಲು ನಿರ್ದೇಶಿಸಲಾಗಿದೆ.

ಶ್ರೀಮತಿ ಮೋಟಮ್ಮ:- ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಹೈಪವರ್ ಕಮಿಟಿಯನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿರುವ ಉದ್ದೇಶ ಏನು ಎಂದು ಕೇಳಿದ್ದೇನೆ. ಹಾಗೂ ಇದರಿಂದ ನಿಜವಾಗಿಯೂ ಹರಿಜನರಿಗೆ ನ್ಯಾಯ ದೊರೆಕಿದೆಯೇ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಅವರು ಉತ್ತರದಲ್ಲಿ ಸರಕಾರಿ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳವರಿಗೆ ಮೀಸಲಾತಿಯನ್ನು ಪ್ರಾಮಾಣಿಕವಾಗಿ ಜಾರಿಗೆ ಕೊಡುವುದನ್ನು ವೀಕ್ಷಿಸಲು ಈ ಸಮಿತಿಯನ್ನು ರಚಿಸಲಾಗಿದೆ ಎಂದು ಹೇಳಿದ್ದಾರೆ. ಎರಡು ವರ್ಷಗಳಲ್ಲಿ ಎಷ್ಟು ಬಾರಿ ಸಭೆ ಸೇರಿದೆ ಎಂದು ಕೇಳಿದ್ದಕ್ಕೆ ಸಭೆ ಸೇರಿಲ್ಲ ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ವಿಷಾದನೀಯವಾದ ಸಂಗತಿ. ನಮ್ಮ ಮುಖ್ಯ ಮಂತ್ರಿಯವರಿಗೆ ನಿಜವಾಗಿಯೂ ಬಡವರ ಮತ್ತು ಪರಿಶಿಷ್ಟರ ಬೆಳವಣಿಗೆ ಮತ್ತು ಏಳಿಗೆಯ ಬಗ್ಗೆ ಕಾಳಜಿ ಇದೆ. ಆದರೆ ಅವರೇ ಅದರ ಅಧ್ಯಕ್ಷರಾಗಿ ಸಭೆ ಸೇರಿಲ್ಲ ಅಂದರೆ ನಿಜವಾಗಿಯೂ ನಮಗೆಲ್ಲರಿಗೂ ಒಂದು ರೀತಿಯಲ್ಲಿ ಆತಂಕ ಮತ್ತು ವಿಷಾದ ಉಂಟಾಗಿದೆ. ಸಭೆ

ಏತಕ್ಕೆ ಸೇರಿಲ್ಲ ಎಂಬುದು ಒಂದು ಪ್ರಶ್ನೆ. ಮತ್ತು ಸಭೆ ಸೇರಿರದಿದ್ದರೂ ಕೂಡ ಕೆಲವೊಂದು ತೀರ್ಮಾನಗಳನ್ನು ಈ ಸಭೆಯ ಮೂಲಕ ತೆಗೆದುಕೊಂಡಿದ್ದೇವೆ ಎಂದು ಉತ್ತರಿಸಿದ್ದಾರೆ. ಈ ಮೀಸಲಾತಿ ನಿಯಮಗಳನ್ನು ಅನುಸರಿಸಿಕೊಂಡು ಹೋಗುವುದಕ್ಕೆ ಮತ್ತು ಉದ್ಯೋಗಗಳನ್ನು ಕೊಡುವುದಕ್ಕೆ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಮೀಸಲಾತಿ ರೋಸ್ಟರ್ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನಗಳನ್ನು ಪರಿಶಿಷ್ಟ ಪಂಗಡದವರಿಗೆ, ಮೀಸಲಿಡುವುದು, ನೇರನೇಮಕಾತಿಯಲ್ಲಿ ಗರಿಷ್ಟ ವಯೋಮಿತಿಯನ್ನು ಐದು ವರ್ಷಗಳಷ್ಟು ಸಡಿಲಿಸುವುದು ಹಾಗೂ ಪರಿಶಿಷ್ಟ ಜಾತಿ ಪಂಗಡಗಳ ತೀವ್ರ ಕೊರತೆ ಇರುವ ಇಲಾಖೆಗಳಲ್ಲಿ ಮೀಸಲಾತಿ ಪ್ರಮಾಣವನ್ನು ಸಾಧಿಸಲು ಮೀಸಲಾತಿ ಪ್ರಮಾಣದ ಶೇಕಡ ೧೫ ಮತ್ತು ೩ ಹಾಗೂ ೨೦ ಮತ್ತು ೫ ಕ್ಕೆ ಹೆಚ್ಚಿಸುವುದು ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಹೀಗೆ ಇದೆ, ಈ ರೀತಿ ತೀರ್ಮಾನಗಳು ಇದ್ದು ಸರಕಾರದಿಂದ ಈ ರೀತಿಯ ಆದೇಶಗಳನ್ನು ಕೊಟ್ಟಿದ್ದರೆ, ಯಾವುದೇ ಇಲಾಖೆಯಲ್ಲಿ ೧೫:೩ ಪರ್‌ಸೆಂಟ್ ದಾಮಾಂಶವನ್ನು ದೊರಕಿಸಿಕೊಟ್ಟಿಲ್ಲ. ಆದ ಕಾರಣ ನಿಜವಾಗಿಯೂ ಈ ಸ್ಥಾನಗಳನ್ನು ತುಂಬಲು ಆದೇಶವನ್ನು ಕೊಟ್ಟಿದ್ದಾರೆಯೇ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸದಸ್ಯೆಯವರ ಕಳಕಳಿಯು ನನಗೆ ಅರ್ಥವಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳವರಿಗೆ ಕೊಡುವ ಮೀಸಲಾತಿ ಆದೇಶದ ವಿಚಾರದಲ್ಲಿ ನಾವುಗಳು ಹಲವಾರು ಬಾರಿ ಇಲ್ಲಿ ಚರ್ಚೆ ಮಾಡಿದ್ದೇವೆ. ನಮ್ಮ ಸರಕಾರ ಬಂದ ಮೇಲೆ ಎಂದು ಅಲ್ಲ, ಮೊದಲಿನಿಂದಲೂ ಇದ್ದ ಸರಕಾರಗಳು ಒಂದು ನೀತಿಯನ್ನು ಈ ಬಗ್ಗೆ ಅನುಸರಿಸಿಕೊಂಡು ಬಂದಿವೆ. ನಮ್ಮ ಸರಕಾರ ಕೂಡ ಅದಕ್ಕೆ ಬದ್ಧವಾಗಿದೆ. ೧೯೮೦ ರಲ್ಲಿ ರಚನೆಯಾಗಿರತಕ್ಕಂಥ ಸಮಿತಿ ಇದು. ಅಲ್ಲಿಂದ ಅನೇಕ ಬಾರಿ ಸಭೆ ಸೇರಿದೆ. ನಾವು ಈ ಎರಡು ವರ್ಷಗಳಲ್ಲಿ ಸಭೆ ಏತಕ್ಕೆ ಸೇರಿಲ್ಲ ಅಂದರೆ ನಾವು ಕ್ಯಾಬಿನೆಟ್‌ನಲ್ಲಿ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಬ್ಯಾಕ್‌ಲಾಗ್ ಫಿಲಪ್ ಮಾಡುವ ವಿಚಾರದಲ್ಲಿ ನಾವು ಸಭೆ ಸೇರಿದರೂ ಉಪಯೋಗವಾಗುವುದಿಲ್ಲ, ಕಾರಣ ಪಾಲಿಸಿ ಮ್ಯಾಟರ್ ಬಗ್ಗೆ ತೀರ್ಮಾನವಾಗಬೇಕು. ಪ್ರಮೋಶನ್ ಕೊಡತಕ್ಕಂಥ ವಿಚಾರದಲ್ಲಿ ಎಸ್‌ಸಿ/ಎಸ್‌ಟಿಯವರ ಬ್ಯಾಕ್‌ಲಾಗ್ ತುಂಬದೇ ನಾವೇನೂ ಮಾಡಬಾರದು ಎಂಬ ತೀರ್ಮಾನಕ್ಕೆ ಬಂದಿದ್ದೇವೆ. ಆ ಬಗ್ಗೆ ಸರಕಾರಿ ಆಜ್ಞೆಗಳನ್ನು ಹೊರಡಿಸಬೇಕೆಂಬ ತೀರ್ಮಾನ ಮಾಡಿರುವುದರಿಂದ ಮುಂದೆ ನಾವು ಸಭೆ ಸೇರಿದರೆ ಅದರಲ್ಲಿ ಎಷ್ಟು ಜನರು ಸೌಲಭ್ಯ ಪಡೆದಿದ್ದಾರೆ, ಇನ್ನೂ ಎಷ್ಟು ಜನರು ಇದ್ದಾರೆ ಎಂಬುದನ್ನು ನೋಡಲು ಅನುಕೂಲವಾಗುತ್ತದೆ. ಆದ್ದರಿಂದ ಹಳೆಯದನ್ನು ಇಟ್ಟುಕೊಂಡು ಚರ್ವಿತ ಚರ್ವಣ ಮಾಡುವುದರಿಂದ ಈ ವರದಿಗಳು ಉಪಯೋಗವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇವೆ. ಇದನ್ನು ತಾವು ಒಪ್ಪುತ್ತೀರೆಂದು ನಾನು ಭಾವಿಸಿದ್ದೇನೆ. ಈಗ ನಾವು ತೀರ್ಮಾನ ಮಾಡಿರುವುದರಿಂದ ಆ ಸಭೆಯನ್ನು ಕರೆಯಲು ನಾನು ತಿಳಿಸಿದ್ದೇನೆ, ಅದನ್ನು ನಾವು ಮಾಡುತ್ತೇವೆ. ಎರಡನೆಯ ವಿಚಾರ ನೇರ ನೇಮಕಾತಿ ಅಂದರೆ merit under each group, ಅದರಲ್ಲಿ ಏನಾಯ್ತು ಅಂದರೆ ಹೈಯೆಸ್ಟ್ ಮಾರ್ಕ್ಸ್ ಯಾರು ತೆಗೆದುಕೊಳ್ಳುತ್ತಾರೆ ಅವರನ್ನು ನೇರ ನೇಮಕಾತಿ ಮಾಡಬೇಕು. Without sending them to the public service commission. ಪ್ರತಿಭಾವಂತ ವಿದ್ಯಾರ್ಥಿಗಳು ಅಂತ ಬಂತು, ಆಮೇಲೆ ಏನಾಯಿತೆಂದರೆ ಹೈಕೋರ್ಟಿನಲ್ಲಿ ಕೇಸ್ ಹಾಕಿ ಬೇರೆಯವರು ಹೋಗಿ ಸ್ಟೇ ತೆಗೆದುಕೊಂಡು ಬಿಟ್ಟರು. ಇದು ಬಹಳ ಹಿಂದೆ ಅಂದರೆ ೫-೬ ವರ್ಷಗಳ ಹಿಂದಿನ ಮಾತು. ಜನತಾದಳ ಸರ್ಕಾರವಿದ್ದ

ಕಾಲದಲ್ಲಿ ಕೃಷಿ ಸಚಿವನಾಗಿ ಸೇರಿದ ಮೇಲೆ ಆ ಸ್ಟೇ ತೆರವಾಯಿತು. ಆ ಕೂಡಲೇ, I was the first Minister to execute it for your information, ಮೂರು ಜನಕ್ಕೆ ಅಂತ ಕಾಣುತ್ತೆ, ಅವರಿಗೆ ನೇಮಕಾತಿ ಮಾಡಿದ್ದೇವೆ, ಮತ್ತೆ ಬೇರೆಯವರು ಸುಪ್ರಿಂ ಕೋರ್ಟಿಗೆ ಅಪೀಲು ಹೋಗಿ ಏನಾದರೂ ಸ್ಟೇ ತಂದುಬಿಟ್ಟಾರು ಅಂತ ತಕ್ಷಣ ಫೈಲ್ ತರಿಸಿ ಮಾರನೇ ದಿವಸವೇ ಆರ್ಡರ್ಸ್ ಇಷ್ಯೂ ಮಾಡಿ ಕೆಲಸಕ್ಕೆ ಸೇರಿಸಿಕೊಂಡುಬಿಟ್ಟಿದ್ದೀವಿ. ಆದ್ದರಿಂದ ನಮ್ಮ ಸರ್ಕಾರದಲ್ಲಿ ಮೊದಲನೇ ಬಾರಿಗೆ ಮೂರು ಜನ ಕೆಲಸಕ್ಕೆ ಸೇರಿದವರು ಕೃಷಿ ಇಲಾಖೆಗೆ ಸಂಬಂಧಪಟ್ಟವರು. ಇನ್ನು ಬೇರೆ ಇಲಾಖೆಯದ್ದು ಸ್ವಲ್ಪ ತಡವಾಗಿದೆಯೆಂದು ಕಾಣುತ್ತದೆ, ಅಷ್ಟರೊಳಗೆ ಕೆಲವರು ಕೆ ಎ ಟಿ ಗೆ ಅಪೀಲು ಹೋಗಿ ಸ್ಟೇ ತಗೊಂಡು ಬಂದಿದ್ದಾರೆ ಎಂದು ನಮ್ಮ ಗಮನಕ್ಕೆ ಬಂದಿದೆ. ಈಗ ಸರಿ ಮಾಡಿಸಿದ್ದೇವೆ. ಅದನ್ನು ಸರಿಪಡಿಸಿ ನೇರ ನೇಮಕಾತಿಯನ್ನೂ ಸಹ ನಾವು ಕೊಡ್ತೇವೆ. ಈ ವರ್ಗಗಳಿಗೆ ಇಂತಹ ಸೌಲಭ್ಯ ಕೊಡುವುದಕ್ಕೆ ನಾವು ಬದ್ಧರಾಗಿದ್ದೇವೆ; ಎಂದೂ ಕೂಡ ನಾವು ಕಾಂಪ್ರಮೈಸ್ ಮಾಡಿಕೊಳ್ಳುವುದಿಲ್ಲ. ಈ ನೀತಿಯನ್ನು ಅನುಸರಿಸಿಕೋಂಡೇ ಹೋಗ್ತೇವೆ. ತಾವು ನಮ್ಮ ನೀತಿಯ ಬಗ್ಗೆ ನಂಬಿಕೆ ಇಟ್ಟು ಎರಡು ಮಾತಡಿದ್ದೀರಿ, ಆದ್ದರಿಂದ ತಮಗೆ ಕೂಡ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀಮತಿ ಮಲ್ಲಾಜಮ್ಮ:- ಉಪಾಧ್ಯಕ್ಷಣೆಯವರೇ, ಈ ಉನ್ನತ ಸಮಿತಿ ಯಾವಾಗ ರಚನೆಯಾಯಿತು? ಈ ಸಮಿತಿಯಲ್ಲಿ ಯಾರ‍್ಯಾರು ಸದಸ್ಯರಿದ್ದಾರೆ ಎಂದು ಮುಖ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ:- ಇದು ದಿನಾಂಕ ೧೬-೬-೮೦ರಲ್ಲಿ ಅಂದರೆ ಗುಂಡೂರಾವ್ ಸರ್ಕಾರ ಇದ್ದಾಗ ರಚನೆಯಾಗಿದೆ, ಮುಖ್ಯ ಮಂತ್ರಿಗಳು ಯಾರೇ ಇರಬಹುದು ಆ ಸಮಿತಿಗೆ ಅಧ್ಯಕ್ಷರಾಗಿರುತ್ತಾರೆ. ಸದಸ್ಯರು ಯಾರ‍್ಯಾರೆಂದರೆ ಪರಿಸರ ಖಾತೆಯ ಸಚಿವರು, ಸಮಾಜ ಕಲ್ಯಾಣ ಸಚಿವರು, ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು, ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮತ್ತು ಕಂದಾಯ ಸಚಿವರು. ಇಷ್ಟು ಜನ ಸದಸ್ಯರು ಇದ್ದಾರೆ.

ಶ್ರೀ ಹೆಚ್. ವಿಶ್ವನಾಥ್:- ಈ ಎಸ್‌ಸಿ ಎಸ್‌ಟಿ ಗಳಿಗೆ-ರಿಸರ್ವೇಷನ್ ನೀತಿಯನ್ನು ಪಾಲನೆ ಮಾಡದೇ ಇರುವ ಅಧಿಕಾರಿಗಳಿಗೆ ಮತ್ತು ಈ ಸಮಾಜಕ್ಕೆ ಸರ್ಕಾರದ ವತಿಯಿಂದ ಕೊಡಲ್ಪಟ್ಟ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ಕೊಡುವುದರಲ್ಲಿ ವಿಳಂಬ ಮಾಡುವ ಮತ್ತು ಇದನ್ನು ವಿರೋಧ ಮಾಡತಕ್ಕ ಅಧಿಕಾರಿಗಳನ್ನು ಒಂದು ಕಾಯಿದೆ ತಂದು ಅವರನ್ನು ಅಸ್ಪೃಶ್ಯತಾ ನಿವಾರಣಾ ಕಾನೂನಿನಡಿ ಒಳಗೆ ಹಾಕುವ ಪ್ರಯತ್ನವನ್ನು ಸರ್ಕಾರ ಮಾಡುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ:- ಇಷ್ಟು ಮಾಡಬಹುದು. ತಮ್ಮ ಕಳಕಳಿಯನ್ನು ನಾನು ಪತೆಹಚ್ಚಿದ್ದೇನೆ, ಇವತ್ತು ಅಸ್ಪೃಶ್ಯತಾ ಕಾನೂನು ಎಂದರೆ ಏನು? ಯಾವ ವರ್ಗಗಳವರು ಇಂತಹ ಸೌಲಭ್ಯಗಳಿಂದ ಅನೇಕ ದಶಕಗಳಿಂದ ವಂಚಿತವಾಗಿದ್ದಾರೆ ಅಂತಹವರಿಗೆ ಸಂವಿಧಾನ ಬದ್ಧವಾದ ಹಕ್ಕುಗಳ ಆಧಾರದ ಮೇಲೆ ಸೌಲಭ್ಯಗಳನ್ನು ಕೊಡುವುದು, ಯಾವುದೇ ಪಕ್ಷದ ಸರ್ಕಾರವಿದ್ದರೂ ಕೂಡ ಅದನ್ನು ಕೊಡುವುದು ಅವರ ಆದ್ಯ ಕರ್ತವ್ಯದ ಪ್ರಶ್ನೆಯಾಗಿದೆ. ಜೊತೆಗೆ ಒಂದು ಸರ್ಕಾರ ಇದ್ದಾಗ ಇದು ಅದರ ಬದ್ಧತೆಯ ಪ್ರಶ್ನೆ. It is a matter of commitment also. ಅದೂ ಕೂಡ ಇರಬೇಕು. ಇಲ್ಲ ತಪ್ಪು ಮಾಡಿರುವ ಅಧಿಕಾರಿಗಳು ಯಾರೇ ಇರಬಹುದು,

ಅಂತಹವರನ್ನು ನಾವು ಬಹಳ ಗಂಭೀರವಾಗಿ ಗಮನಿಸಿದ್ದೇವೆ ಹಾಗೂ ತಮ್ಮ ಅಭಿಪ್ರಾಯವನ್ನು ನಾವು ಒಪ್ಪಿದ್ದೇವೆ. ಯಾವುದಾದರೂ ಅಧಿಕಾರಿಗಳು ಇದನ್ನು ಜಾರಿಗೆ ಕೊಡುವುದರಲ್ಲಿ ಉದ್ದೇಶ ಪೂರ್ವಕವಾಗಿ ಅಡ್ಡ ಬಂದಿರುವುದು ಗೊತ್ತಾದರೆ ನಾವಂತೂ ಆ ಅಧಿಕಾರಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹಿಂದೇಟು ಹಾಕುವುದಿಲ್ಲ. ಇಂತಹವರ ಮೇಲೆ ಅಸ್ಪೃಶ್ಯತಾ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು ಅಂದರೆ ಅದಕ್ಕೆ ಬೇರೆ ಕಲಮುಗಳಿವೆ, ಅದರ ಪ್ರಕಾರ ತಕ್ಸೀರಾದರೆ ಮಾತ್ರ ಬರುತ್ತದೆ ಇಲ್ಲದಿದ್ದರೆ ಬರಲಾರದು, ಆದರೆ ಸರ್ಕಾರೀ ನೀತಿ ವಿರುದ್ಧ ಹೋಗುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಅಧಿಕಾರವಿದೆ, ನಾವು ಅದನ್ನು ಚಲಾವಣೆ ಮಾಡುತ್ತೇವೆ.

೧೦.೨೫ ಎ. ಎಂ.

ಶ್ರೀ ಎ. ರುಕ್ಮಯ್ಯ ಪೂಜಾರಿ:- ಈ ಉನ್ನತಾಧಿಕಾರ ಸಮಿತಿ ಕಳೆದ ಎರಡು ವರ್ಷದಿಂದ ಸಭೆ ಸೇರಿಲ್ಲ ಎಂದು ಹೇಳಿದ್ದೀರಿ, ನನ್ನ ಲೆಕ್ಕದ ಪ್ರಕಾರ ಈ ಸಮಿತಿ ಅವರ ಸಮಸ್ಯೆಯನ್ನು ಅಧ್ಯಯನ ಮಾಡಿ ಅದನ್ನು ಪರಿಹಾರ ಮಾಡಲು ಸರ್ಕಾರಕ್ಕೆ ಸಲಹೆ ಸೂಚನೆಗಳನ್ನು ಕೊಡಬೇಕಾಗುತ್ತದೆ. ಆದರೆ ಇವತ್ತು ಕ್ಯಾಬಿನೆಟ್‌ನಲ್ಲಿ ತೀರ್ಮಾನವನ್ನು ಮಾಡುತ್ತಾರೆ. ಇನ್ನು ಅವರ ಸಮಸ್ಯೆಯನ್ನು ಪರಿಹಾರ ಮಾಡುವುದು ಯಾವ ರೀತಿ? ಕ್ಯಾಬಿನೆಟ್‌ನಲ್ಲಿ ತೀರ್ಮಾನ ಮಾಡುತ್ತೇನೆ ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಹಾಗಾದರೆ ಈ ಉನ್ನತ ಅಧಿಕಾರ ಸಮಿತಿಯನ್ನು ಮಾಡುವಂಥ ಅವಶ್ಯಕತೆ ಏನಿತ್ತು? ಎರಡನೆಯದು ಕಳೆದ ವರ್ಷ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮಶತಾಬ್ದಿ ವರ್ಷದ ವತಿಯಿಂದ ನಮ್ಮ ರಾಜ್ಯದಲ್ಲಿದ್ದಂಥ ಎಲ್ಲಾ ಹರಿಜನ ಗಿರಿಜನರಿಗೆ ಮೀಸಲಿಟ್ಟಂಥ ಹುದ್ದೆಯನ್ನು ಭರ್ತಿ ಮಾಡತಕ್ಕಂಥ ಭರವಸೆಯನ್ನು ಕೊಟಿದ್ದಾರೆ. ಆದರೆ ಅದು ಇವತ್ತಿನವರೆಗೂ ಪೂರ್ತಿಯಾಗಿಲ್ಲ. ಇದನ್ನು ಆದಷ್ಟು ಬೇಗ ಪೂರ್ತಿ ಮಾಡುವಂತಹ ಇರಾದೆ ಸರ್ಕಾರಕ್ಕೆ ಇದೆಯೇ?

ಶ್ರೀ ಎಸ್. ಬಂಗಾರಪ್ಪ:- ಉನ್ನತ ಅಧಿಕಾರ ಸಮಿತಿಯನ್ನು ಮಾಡಿರತಕ್ಕಂಥ ವಿಚಾರ, ಅದು ಸಭೆ ಏತಕ್ಕೆ ಸೇರಿಲ್ಲ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳತಕ್ಕಂಥ ಸಂದರ್ಭ ತಮಗೆ ಬಂದಿರುವುದನ್ನು ನಾನು ಒಪ್ಪುತ್ತೇನೆ. ಇಲ್ಲಿ ಏನಾಗಿದೆ, ಮೊದಲು ಏನು ರೆಕಮೆಂಡೇಷನ್ಸ್‌ಗಳನ್ನು ಆ ಸಮಿತಿಯವರು ಕಳುಹಿಸಿ ಕೊಟ್ಟಿದ್ದಾರೆ ಅದೇ ಜಾರಿಗೆ ಕೊಟ್ಟಿಲ್ಲ ಎನ್ನತಕ್ಕಂಥ ಅಭಿಪ್ರಾಯ ಸರ್ಕಾರದ ಮುಂದೆ ಬಂತು. ನಮ್ಮ ಕ್ಯಾಬಿನೆಟ್ ಮುಂದೆ ಕೂಡ ಬಂತು. ಅದು ಬಂದ ಮೇಲೆ ನಾವು ಬ್ಯಾಕ್‌ಲಾಗ್ ತುಂಬತಕ್ಕಂಥದ್ದು ಹಾಗೂ ನೇರ ನೇಮಕಾತಿ ವಿಚಾರದ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಂಡು ಅದರ ಪ್ರಕಾರ ನಾವು ಮಾಡಿದ್ದೇವೆ. ಮತ್ತು ಮುಂದೆ ಸಮಸ್ಯೆಗಳು ಏನು ಬರುತ್ತವೆ, ಅದಕ್ಕೆ ಪ್ರತ್ಯೇಕವಾಗಿ ಸಮಿತಿಗಳು ಸೇರಬೇಕು ಎಂದು ನಾನು ಹೇಳಿದ್ದೇನೆ. With this matter as a background ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ನಾವು ಸಧ್ಯದಲ್ಲಿಯೇ ಸಭೆ ಸೇರುತ್ತೇವೆ. ನಾವು ಪ್ರತಿಯೊಂದನ್ನೂ ಅಲ್ಲಿಯೇ ತೀರ್ಮಾನ ಮಾಡುವುದಾದರೆ ಅಂದರೆ ಅದಕ್ಕೆ ಬೇರೆ ಕಮಿಟಿ ಏತಕ್ಕೆ ಬೇಕು ಎಂದು ಕೇಳುವುದರಲ್ಲಿ ನಿಮ್ಮ ಪ್ರಶ್ನೆ ನನಗೆ ಅರ್ಥವಾಗುತ್ತದೆ. ಸಮಿತಿ ಮತ್ತೆ ಸೇರುತ್ತದೆ. ಅಲ್ಲಿ ಡೀಟ್ಯೆಲ್ಸ್‌ಗಳಿಗೆ ಹೋಗಬೇಕು. ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಡೀಟ್ಯೆಲ್ಸ್‌ಗೆ ಹೋಗುವುದಕ್ಕಾಗುವುದಿಲ್ಲ. ಮತ್ತೆ ಸಭೆ ಸೇರಿ ಮಾಡುತ್ತೇವೆ ಎಂದು ಹೇಳಿದ್ದೇವೆ. ಅದು ನಂಬರ್

ಒಂದು. ನಂಬರ್ ಎರಡು, ಎಂದರೆ ಅಂಬೇಡ್ಕರ್‌ರವರ ಜನ್ಮಶತಾಬ್ದಿಗೆ ಸಂಬಂಧಪಟ್ಟಂಥ ಈ ವರ್ಗಗಳಿಗೆ ಆಗಿರತಕ್ಕಂಥ ಅನ್ಯಾಯವನ್ನು ತೊಡೆದುಹಾಕಿ ಸರಿಪಡಿಸತಕ್ಕಂಥ ವಿಚಾರದಲ್ಲಿ ಸರ್ಕಾರ ಬದ್ಧವಾಗಿದೆ. ಅದನ್ನು ನಾವು ಜಾರಿಗೆ ಕೊಡುತ್ತೇವೆ. ನಾನು ಮಾನ್ಯ ಸದಸ್ಯರುಗಳಿಗೆ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಸಲಹೆಗಳನ್ನು ಕೊಡಿ. ಸರ್ಕಾರ ಇದಕ್ಕೆ ಬದ್ಧವಾಗಿದೆ. ನಾವು ಅದನ್ನು ತತ್ಕ್ಷಣ ಕಾರ್ಯಕ್ಷೇತ್ರದಲ್ಲಿ ಜಾರಿಗೆ ಕೊಡುತ್ತೇವೆ. ನಾವು ಅದರ ಬಗ್ಗೆ ನೀತಿಯನ್ನು ಪರಿಪಾಲನೆ ಮಾಡಿಕೊಂಡು ಹೋಗುತ್ತೇವೆ.

ಶ್ರೀ ಕೆ. ಕುಶಾಲ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ಉನ್ನತ ಸಮಿತಿಯಲ್ಲಿ ಸಮಿತಿಯ ಅಧ್ಯಕ್ಷರಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಇರುತ್ತಾರೆ. ಅದೇ ರೀತಿ ಕರ್ನಾಟಕ ಸರ್ಕಾರದ ಮುಖ್ಯಕಾರ್ಯದರ್ಶಿಗಳು ಇದರ ಕಾರ್ಯದರ್ಶಿಗಳಾಗಿರುವುದರಿಂದ ನಮಗೆ ಬಹುಶಃ ಈ ಸಮಿತಿಯಲ್ಲಿ ಹೆಚ್ಚಿನ ವ್ಯವಹಾರ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸಮಿತಿಯಲ್ಲಿ ಕಾರ್ಯದರ್ಶಿಯವರನ್ನು ಬೇರೆ ನೇಮಕ ಮಾಡಬೇಕು. ಇವರಲ್ಲದೆ ಹೊರಗಿನವರನ್ನೇನಾದರೂ ನೇಮಕ ಮಾಡುತ್ತೀರಾ ಎನ್ನತಕ್ಕಂಥ ಒಂದು ಪ್ರಶ್ನೆ. ೧೯೮೯-೯೦ರಲ್ಲಿ ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಬಿದ್ದಂಥ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ ಪ್ರಸ್ತಾವನೆ ಇಲಾಖೆಯಿಂದ ೮೯-೯೦ರಲ್ಲಿ ಬಂದಿದೆ. ೩-೪ ವರ್ಷ ಕಳೆದರೂ ಈ ಸಮಿತಿಯಿಂದ ಈ ಪ್ರಸ್ತಾವನೆಗೆ ಅಪ್ರೂವಲ್ ಇನ್ನೂ ಹೋಗಿಲ್ಲ. ಇವತ್ತು ಹರಿಜನ ಗಿರಿಜನ ಹಾಸ್ಟೆಲ್‌ಗಳಲ್ಲಿ ಹಾಗೂ ಇತರ ವಿದ್ಯಾರ್ಥಿನಿಲಯಗಳಲ್ಲಿ ಆ ಮಕ್ಕಳುಗಳೇ ಅಡಿಗೆಯನ್ನು ಮಾಡಿ ಉಪ್ಪು ಮತ್ತು ಮೆಣಸನ್ನು ಹಾಕಿ ಗಂಜಿ ಬೇಯಿಸಿ ತಿನ್ನುವಂಥ ಪರಿಸ್ಥಿತಿ ಇದ್ದರೂ ಕೂಡ ಇನ್ನೂ ಈ ಇಲಾಖೆಯಿಂದ ಅಪ್ರೂವಲ್ ಬಂದಿಲ್ಲ. ನಿಜವಾಗಿಯೂ ಇದು ಒಂದು ಸಮಸ್ಯೆಯಾಗಿದೆ. ಇದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:- ಅದು ಪ್ರಶ್ನೆ ಪ್ರತ್ಯೇಕವಾಗುತ್ತದೆ, ಮಾನ್ಯ ಕುಶಾಲರವರೇ ಏಕೆಂದರೆ ಹಾಸ್ಟೆಲ್‌ಗಳಲ್ಲಿ ಅಡಿಗೆ ಮಾಡುವ ವಿಚಾರ, ಅಲ್ಲಿ ಒಳ್ಳೆಯ ರೀತಿಯಲ್ಲಿ ಆಹಾರವನ್ನು ಕೊಡಬೇಕು ಎನ್ನುವ ವಿಚಾರ ಬೇರೆ. ಅದನ್ನು ಪ್ರತ್ಯೇಕವಾಗಿ ಮಾತನಾಡೋಣ. ನ್ಯೂನತೆ ಇದ್ದರೆ ಸರಿಪಡಿಸೋಣ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಹಾಗೆ ಅದನ್ನು ಮಾತನಾಡೋಣ. ಆದರೆ ಇಲ್ಲಿ ಸಮಿತಿಯ ವಿಚಾರದಲ್ಲಿ ಏನು ಹೇಳಿದ್ದೀರಿ, ಇದರಲ್ಲಿ ಮುಖ್ಯಕಾರ್ಯದರ್ಶಿಗಳು ಮತ್ತೊಬ್ಬರು ಯಾರೂ ಇಲ್ಲ. ನಾನು ಆಗಲೇ ಸಮಿತಿ ಸದಸ್ಯರ ಬಗ್ಗೆ ಓದಿ ಹೇಳಿದ್ದೇನೆ. ಅದೇನಿದ್ದರೂ ಮಂತ್ರಿಮಂಡಲದಲ್ಲಿರತಕ್ಕಂಥ ಸದಸ್ಯರೇ ಆ ಸಮಿತಿಯಲ್ಲಿದ್ದಾರೆ. ಅದರ ಬಗ್ಗೆ ತಾವು ಕಳವಳವನ್ನು ಇಟ್ಟುಕೊಳ್ಳಬೇಕಾದಂಥ ಅಗತ್ಯವಿಲ್ಲ.

ಶ್ರೀಮತಿ ಮೋಟಮ್ಮ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಇದರಲ್ಲಿ ಕೈಗೊಂಡ ತೀರ್ಮಾನಗಳನ್ನು ಒನ್ ಬೈ ಒನ್ ಸೀರಿಯಲ್ ಆಗಿ ಇಲ್ಲಿ ಕೊಟ್ಟಿದ್ದಾರೆ. ನಾಲ್ಕರಲ್ಲಿ ಏನು ಹೇಳುತ್ತಾರೆ ಎಂದರೆ ಹಿಂದಿನ ನೇಮಕಾತಿಗಳಲ್ಲಿ ಈ ವರ್ಗದ ಅಭ್ಯರ್ಥಿಗಳ ಕೊರತೆಯಿಂದಾಗಿ ಭರ್ತಿಯಾಗದೆ ಉಳಿದ ಸ್ಥಾನಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಬಾಕಿ ಉಳಿದ ಸ್ಥಾನಗಳಲ್ಲಿ ವಿಶೇಷ ನೇಮಕಾತಿ ಕಾರ್ಯಕ್ರಮದ ಮೂಲಕ ಭರ್ತಿ ಮಾಡಲಾಗುವುದು ಎಂದು ಹೇಳಿದ್ದಾರೆ. ಇದರಲ್ಲಿ ನಾನು ಏನು ಕೇಳುವುದಕ್ಕೆ ಇಷ್ಟಪಡುವುದೇನೆಂದರೆ ಈ ವರ್ಗದ ಅಭ್ಯರ್ಥಿಗಳ ಕೊರತೆ ಎನ್ನುವುದನ್ನು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲೂ ಹಾಕಿದ್ದಾರೆ. ರಿಸರ್ವೇಷನ್ ಫಿಲಪ್ ಮಾಡಬೇಕಾದರೆ ಕ್ಯಾಂಡಿಡೇಟ್

ಅವ್ಯೆಲಬಲ್ ಇಲ್ಲ ಅಥವಾ ಅವರಿಗೆ ನಾವು ನಿರೀಕ್ಷೆ ಮಾಡಿದಂಥ ಕ್ವಾಲಿಫಿಕೇಷನ್ ಇರುವಂಥ ಕ್ಯಾಂಡಿಡೇಟ್ ಸಿಗುತ್ತಿಲ್ಲ ಎಂದು ನೆಪ ಹಾಕಿ ಈ ರಿಸರ್ವೇಷನನ್ನು ವಯೊಲೇಟ್ ಮಾಡುತ್ತಿದ್ದಾರೆ. ಅಂಥವುಗಳು ಯಾವ ಯಾವ ಇಲಾಖೆಯೆಂದು ತಾವು ಗುರುತಿಸಬೇಕು. ಅಂಥವರ ಬಗ್ಗೆ ಯಾರು ಅದಕ್ಕೆ ಕಾರಣಕರ್ತರಾಗಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕು. ನೀವು ನಂ. ೯ರಲ್ಲಿ ಏನು ಹೇಳುತ್ತೀರಿ? ಸೀರಿಯಲ್ ನಂ. ೯ರಲ್ಲಿ ಸರ್ಕಾರಿ ನೇಮಕಾತಿಯಲ್ಲಿ ಮೀಸಲಾತಿ ಆದೇಶಗಳನ್ನು ಜಾರಿಗೊಳಿಸದಿರುವವರನ್ನು ಅಪರಾಧವೆಂದು ಪರಿಗಣಿಸಿ ತಪ್ಪಿತಸ್ಥರಿಗೆ ದಂಡ ವಿಧಿಸುವ ವಿಧೇಯಕವನ್ನು ಜಾರಿಗೊಳಿಸಲಾಗಿದೆ ಎಂದು ಹೇಳುತ್ತೀರಿ. ಆದರೆ ಯಾವ ಇಲಾಖೆಯಲ್ಲಿ ಈ ರೀತಿ ರಿಸರ್‌ವೇಷನ್ ಅನ್ನು ವಯೊಲೇಟ್ ಮಾಡಿದ್ದಾರೆ ಅನ್ನುವುದು ನಿಮ್ಮ ಗಮನಕ್ಕೆ ಬಂದಿಲ್ಲವೆಂದು ನನಗೆ ಅನ್ನಿಸುತ್ತದೆ. ಹಾಗೆ ಬಂದಿದ್ದಲ್ಲಿ, ಅಂತಹ ಇಲಾಖೆಗಳ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ? ಕ್ರಮ ತೆಗೆದುಕೊಳ್ಳದಿದ್ದರೆ, ಇನ್ನು ಮುಂದಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಬಂಗಾರಪ್ಪ:- ೯ನೇ ಕಲಂ ಏನಿದೆ ಅದರ ಪ್ರಕಾರ ತಪ್ಪು ಮಾಡಿದವರಿಗೆ ತಪ್ಪಿತಸ್ಥರೆಂದು ನಾವು ಪರಿಗಣಿಸಿ ತನಿಖೆ ಮಾಡಿ ಅವರ ಮೇಲೆ ದಂಡ ವಿಧಿಸಲು ವಿಧೇಯಕವನ್ನು ಜಾರಿಗೆ ಕೊಟ್ಟಿದ್ದೇವೆ. ಆ ರೀತಿ ತಪ್ಪು ಮಾಡಿರುವುದು ಇನ್ನು ನಮ್ಮ ಗಮನಕ್ಕೆ ಬಂದಿಲ್ಲ. ಬಂದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಿಕ್ಕೆ ನಾವು ಹಿಂದೇಟು ಹಾಕುವುದಿಲ್ಲ. ತಮಗೆ ಅದರ ಬಗ್ಗೆ ಅನುಮಾನ ಬೇಕಾಗಿಲ್ಲ. ಅನಂತರ ಕಲಂ ೪ ಅನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಬ್ಯಾಕ್‌ಲಾಗ್ ತುಂಬದೇ ಪ್ರಮೋಷನ್ ಕೊಡಬಾರದು ಎನ್ನತಕ್ಕ ತೀರ್ಮಾನವನ್ನು ಕ್ಯಾಬಿನೆಟ್‌ನಲ್ಲಿ ಮಾಡಿದ್ದೇವೆ. ತಾವು ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಬೇಕು. ನಿಮ್ಮ ಕಳಕಳಿಯನ್ನು ನಾವು ಮೊದಲೇ ಪರಿಗಣಿಸಿ ತೀರ್ಮಾನವನ್ನು ಮಾಡಿಕೊಂಡಿದ್ದೇವೆ. ಉದಾಹರಣೆಗೆ ಎರಡು ಪೋಸ್ಟ್‌ಗಳು ಇದೆ ಎಂದು ಇಟ್ಟುಕೊಳ್ಳೋಣ.

ಶ್ರೀಮತಿ ಮೋಟಮ್ಮ:- ಇಲ್ಲಿ ಏನು ಹೇಳುತ್ತಾರೆಂದರೆ ಕ್ಯಾಂಡಿಡೇಟ್ಸ್ ಅವ್ಯೆಲಬಿಲಿಟಿ ಇಲ್ಲ ಅಂದರೆ... ಎಜುಕೇಷನ್ ಡಿಪಾರ್ಟ್‌ಮೆಂಟ್ ಅನ್ನು ಉದಾಹರಣೆಗೆ ತೆಗೆದುಕೊಳ್ಳಿ, ಕೆಲವು ಸಬ್ಜೆಕ್ಟ್‌ಗಳಿಗೆ ರಿಸರ್ವೇಷನ್ ಇಡುತ್ತಾರೆ. ಸಂಸ್ಕೃತ, ಉರ್ದು ಇಂತಹ ವಿಷಯಗಳಲ್ಲಿ ಷೆಡ್ಯೂಲ್ ಕ್ಯಾಸ್ಟ್ ಕ್ಯಾಂಡಿಡೇಟ್ಸ್ ಸಿಗುವುದಿಲ್ಲ. ಹಾಗಾಗಿ ಶೇಕಡ ೧೮ ರಷ್ಟನ್ನು ಅಲ್ಲಿ ತುಂಬಲಿಕ್ಕೆ ಸಾಧ್ಯವೇ ಇಲ್ಲ. ಅಂತಹ ಸಂದರ್ಭದಲ್ಲಿ ಅದನ್ನು ಏನಾದರೂ ಸಡಿಲಗೊಳಿಸಿ ಬೇರೆ ಸಬ್ಜೆಕ್ಟ್ ಅನ್ನು ಮೀಸಲಾತಿ ಇಡಲಿಕ್ಕೆ ಆದೇಶ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ:- ನಮ್ಮ ತೀರ್ಮಾನದ ಪ್ರಕಾರ ಪ್ರತಿಯೊಂದು ಇಲಾಖೆಯಲ್ಲಿಯೂ ಕೂಡ ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್ ವರ್ಗಗಳಿಗೆ ಸೇರಿರತಕ್ಕ ಅಧಿಕಾರಿಗಳು ಈಗಾಗಲೇ ಇದ್ದಾರೆ. ಈ ಹಿಂದೆ ಯಾರೂ ಸಿಕ್ಕಿಲ್ಲ ಅಂತ ಹೇಳಿ ಪ್ರಮೋಷನ್ ಸಿಕ್ಕಾಪಟ್ಟೆ ಕೊಡುತ್ತಿದ್ದಂಥ ಪದ್ಧತಿ ಇತ್ತು. ಅದನ್ನು we have stopped it. ಈ ಬ್ಯಾಕ್‌ಲ್ಯಾಗ್ ತುಂಬುವವರೆಗೂ ಬೇರೆಯವರಿಗೆ ಪ್ರಮೋಷನ್ ಸಿಕ್ಕುವುದಿಲ್ಲ. That is the tenor and meaning of our Cabinet decision. ನಾವು ಅಲ್ಲಿಗೆ ಸ್ಟಾಪ್ ಮಾಡಿಸಿಬಿಟ್ಟಿದ್ದೇವೆ.

ಶ್ರೀಮತಿ ಮೋಟಮ್ಮ:- ಏಕೆಂದರೆ ಈಗಾಗಲೇ ಕೆಲವರಿಗೆ ೪೫ ವರ್ಷ ವಯಸ್ಸು ಆಗಿದೆ.

ಆದ್ದರಿಂದ ರಿಸರ್ವೇಷನ್ ೧೮ ಪರ್ಸೆಂಟ್ ತುಂಬುವುದನ್ನು ಹೀಗೆಯೇ ನೀವು ಎಲ್ಲಿಯವರೆಗೆ ಕಾಯ್ದಿರಿಸಿಕೊಂಡು ಹೋಗುತ್ತೀರಿ? ಈ ವರ್ಷವಾದರೂ ನೀವು ೧೮ ಪರ್ಸೆಂಟ್ ತುಂಬಲಿಕ್ಕೆ ಸಾಧ್ಯವೇ ಹೇಗೆ?

ಉಪಾಧ್ಯಕ್ಷಣಿಯವರು:- ಇವತ್ತು ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಇದೆ. ಆಗ ತಾವು ಹೆಚ್ಚಾಗಿ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ:- ನೀವು ಎಲ್ಲಿಯವರೆಗೆ ಇದನ್ನು ತೆಗೆದುಕೊಂಡು ಹೋಗುತ್ತೀರಾ ಅಂದರೆ, ನಾವು ಏನೂ ಮಾಡದೆ ಮುಂದಕ್ಕೆ ದಬ್ಬಿಕೊಳ್ಳುತ್ತಾ ಹೋಗುತ್ತಿದ್ದೇವೆಂದು ಅರ್ಥ ಬರುವಂತೆ ಹೇಳುತ್ತಿದ್ದೀರಿ. That is not at all the intention of the Government. Let us make very very clear through you Madam Speaker to the Hon'ble Member that the Government is committed in giving either the promotional quota on the basis of the reservation policy adopted in respect of SC/ST or in respect of giving an equal opportunity or employment opportunity to these classes to whose cause we have basically committed. ಆದರ ಬಗ್ಗೆ ನಿಮಗೆ ಅನುಮಾನ ಬೇಕಾಗಿಲ್ಲ. ಪ್ರಮೋಷನ್ ಕೋಟಾವನ್ನು ನಾವು ಸ್ಕ್ರ್ಯಾಪ್ ಮಾಡಿ ಮೊದಲು ಇವರಿಗೆ ಬರಲಿ; ಇವರಿಗೆ ಬಂದಮೇಲೆ ಅನಂತರ ಉಳಿದವರಿಗೆ ಕೊಡೋಣ ಅನ್ನತಕ್ಕ ದೃಷ್ಟಿಯಿಂದ ಕಾಯುತ್ತಿದ್ದೇವೆ. That, you should appreciate.

ಚಿಕ್ಕಪೇಟೆ ಕ್ಷೇತ್ರದಲ್ಲಿ ಕೊಳಚೆ ಪ್ರದೇಶಗಳ ಸುಧಾರಣೆ ಬಗ್ಗೆ

೨೦೮೦. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶದ ಹೆಸರುಗಳಾವುವು?

ಆ) ೧೯೯೧-೯೨ ರಲ್ಲಿ ಈ ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ಖರ್ಚು ಮಾಡಿದ ಹಣ (ಏಪ್ರಿಲ್ ೧೯೯೧ ರಿಂದ ಜನವರಿ ೧೯೯೨)

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ೭ ಕೊಳಚೆ ಪ್ರದೇಶಗಳನ್ನು ಗುರುತಿಸಿದೆ. ಅವುಗಳೆಂದರೆ:

೧) ಅಶ್ವಥ ನಗರ ಕೊಳಚೆ ಪ್ರದೇಶ, ೨) ನಾಗಮ್ಮ ನಗರ ಕೊಳಚೆ ಪ್ರದೇಶ (ಬಿನ್ನಿ ಮಿಲ್ ಕ್ಯಾಂಟೀನ್ ಹತ್ತಿರ), ೩) ಅಂಜನಪ್ಪ ಗಾರ್ಡನ್, ೨ನೇ ಹಂತ, ಬಿನ್ನಿ ಮಿಲ್ ಹತ್ತಿರ, ೪) ಫ್ಲವರ್ ಗಾರ್ಡನ್ನಿನ ಉತ್ತರದ ಕಡೆಗೆ ಅಂಜನಪ್ಪ ಗಾರ್ಡನ್ ಹತ್ತಿರದ ಪ್ರದೇಶ, ಮೈಸೂರು ರಸ್ತೆ, ೫)

ಗಿರಿಪುರಂ ಕೊಳಚೆ ಪ್ರದೇಶ, ಮೈಸೂರು ರಸ್ತೆ ಮತ್ತು ೭) ಟಿಂಬರ್ ಯಾರ್ಡ್ ಪಕ್ಕದ ಕೊಳಚೆ ಪ್ರದೇಶ.

ಆ) ರೂ ೨.೨೩ ಲಕ್ಷಗಳು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ನಾನು ಚಿಕ್ಕಪೇಟೆಯಲ್ಲಿ ಎಷ್ಟು ಕೊಳಚೆ ಪ್ರದೇಶಗಳಿವೆ ಎಂದು ಕೇಳಿದ್ದಕ್ಕೆ, ಕೊಳಚೆ ನಿರ್ಮೂಲನ ಮಂಡಲಿಗೆ ಈ ಜಾಗದಲ್ಲಿ ೭ ಕೊಳಚೆ ಪ್ರದೇಶಗಳು ಬರುತ್ತವೆಂದು ಹೇಳಿದ್ದಾರೆ. ೧೯೯೧-೯೨ರಲ್ಲಿ ಈ ಕೊಳಚೆ ಪ್ರದೇಶಗಳಿಗೆ ಎಷ್ಟು ವೆಚ್ಚ ಮಾಡಿದ್ದೀರಾ ಎಂದು ಕೇಳಿದ್ದಕ್ಕೆ ೨ ಲಕ್ಷ ೨೩ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆಂದು ಹೇಳಿದ್ದಾರೆ. ಈ ಏಳು ಕೊಳಚೆ ಪ್ರದೇಶಗಳಿಗೆ ೨.೨೩ ಲಕ್ಷ ಆಂದರೆ, ಒಂದು ಕೊಳಚೆ ಪ್ರದೇಶಕ್ಕೆ ೩೨ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಲ್ಲಿ ೨೫ ಸಾವಿರ ಜನ ಇದ್ದಾರೆ. ನಾನು ಸಚಿವರನ್ನು ಕೇಳುವುದೇನೆಂದರೆ, ಈ ೨೫ ಸಾವಿರದ ಕೊಳಚೆ ಪ್ರದೇಶದ ನಿವಾಸಿಗಳ ಹತ್ತಿರ ಒಂದೊಂದು ಮನೆಗೆ ೧೦ ರೂಪಾಯಿಯಂತೆ ವಸೂಲಿ ಮಾಡುತ್ತಿದ್ದಾರೆ. ಆದರೆ ಇವರು ಖರ್ಚು ಮಾಡಿರುವ ಹಣ ೨.೨೫ ಲಕ್ಷ ಇದನ್ನು ೨೫ ಸಾವಿರ ಜನರಿಗೆ ಡಿವೈಡ್ ಮಾಡಿದರೆ ೮-೫೦ ರೂಪಾಯಿಗಳಂತೆ ಒಬ್ಬೊಬ್ಬರಿಗೆ ವಾಪಸ್ಸು ಕೊಡುತ್ತಿದ್ದೀರಿ. ಅವರ ಹತ್ತಿರ ೧೦ ರೂಪಾಯಿಯನ್ನು ವಸೂಲು ಮಾಡಿ ೮-೫೦ ರೂಪಾಯಿಯನ್ನು ಅವರಿಗೆ ಖರ್ಚು ಮಾಡುತ್ತಿದ್ದಾರೆ. ಆದರೂ ಇವರು ಬಹಳ ದೊಡ್ಡದೊಡ್ಡದಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷಿಣಿಯವರು:- ಮಾನ್ಯ ಮಲ್ಲಪ್ಪನವರೇ, ಪ್ರಶ್ನೆಯನ್ನು ಕೇಳಿ, ಅವರು ಉತ್ತರ ಹೇಳಿದ ಮೇಲೆ ಮತ್ತೆ ಮರು ಪ್ರಶ್ನೆ ಹಾಕಿ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ರಸ್ತೆಗಳನ್ನು ಮಾಡುತ್ತೇವೆ, ಬೀದಿ ದೀಪಗಳನ್ನು ಕೊಡುತ್ತೇವೆ, ಒಳಚರಂಡಿ ಮಾಡಿಸಿಕೊಡುತ್ತೇವೆ, ಟಾಯ್‌ಲೆಟ್ ಮಾಡಿಸಿಕೊಡುತ್ತೇವೆ, ಶೌಚಗೃಹಗಳನ್ನು ಮಾಡಿಸಿಕೊಡುತ್ತೇವೆಂದು ಹೇಳಿ ಇಷ್ಟೊಂದು ಸ್ಕೀಮ್‌ಗಳನ್ನು ಹಾಕಿಕೊಂಡಿದ್ದಾರೆ. ಇಷ್ಟು ಸ್ಕೀಮ್‌ಗಳನ್ನು ಹಾಕಿಕೊಂಡು ತಲಾ ೮-೫೦ ರೂಪಾಯಿಯನ್ನು ಕೊಟ್ಟು ಅವರ ಹತ್ತಿರ ಒಂದು ಮನೆಗೆ ೧೦ ರೂಪಾಯಿಯನ್ನು ವಸೂಲು ಮಾಡಿಕೊಳ್ಳುತ್ತಿದ್ದಾರೆ. ಈ ಕೊಳಚೆ ಪ್ರದೇಶಗಳನ್ನು ನಮ್ಮ ಸಿಟಿ ಕಾರ್ಪೊರೇಷನ್‌ರವರು ಕೂಡ ಬಂದು ನೋಡುವುದಿಲ್ಲ. ಏಕೆಂದರೆ ಅದು ನಮಗೆ ಸೇರಿಲ್ಲ, ಸ್ಲಮ್ ಕ್ಲಿಯರೆನ್ಸ್ ಬೋರ್ಡಿಗೆ ಸೇರಿದೆ ಎಂದು ಹೇಳುತ್ತಾರೆ. ಆದರೆ ಸ್ಲಮ್ ಕ್ಲಿಯರೆನ್ಸ್ ಬೋರ್ಡಿನವರ ಹತ್ತಿರ ದುಡ್ಡಿಲ್ಲ.

ಉಪಾಧ್ಯಕ್ಷಣಿಯವರು:- ಈಗ ತಾವು ಉಪ ಪ್ರಶ್ನೆಯನ್ನು ಹಾಕಿ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಅಲ್ಲಿ ಮೈಂಟನೆನ್ಸ್‌ಗೆ ೧೫೦ ಕೋಟಿ ಖರ್ಚು ಮಾಡುತ್ತಾರೆ. ಈ ರೀತಿ ಇರುವಾಗ ಇವರು ಸ್ಲಮ್ ಕ್ಲಿಯರೆನ್ಸ್ ಬೋರ್ಡಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಬೆಂಗಳೂರು ಸಿಟಿ ಕಾರ್ಪೊರೇಷನ್ನಿಗೆ ಹ್ಯಾಂಡ ಓವರ್ ಮಾಡಿಬಿಡಬೇಕು. ಏಕೆಂದರೆ ೧೮ ಪರ್ಸೆಂಟ್ ಸ್ಕೀಮ್‌ನಲ್ಲೂ ಕೆಲಸ ಆಗುತ್ತಿಲ್ಲ. ಅಲ್ಲಿ ಒಳಗೆ ಹೋಗಬೇಕಾದರೆ ಮೂಗನ್ನು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ಅಲ್ಲಿ ಹಂದಿಗಳೂ ಕೂಡ ವಾಸ ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ನಾನು ನಮ್ಮ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ,

ಒಂದು ಮನೆಗೆ ೧೦ ರೂಪಾಯಿಗಳನ್ನು ವಸೂಲ್ಮಾಡುವಾಗ ಕನಿಷ್ಠ ಪಕ್ಷ ಅವರು ಒಂದು ಮನೆಗೆ ೫೦ ರೂಪಾಯಿಗಳನ್ನು ವಾಪಸ್ಸು ಕೊಡಬೇಕಾಗುತ್ತದೆ. ಇಲ್ಲವೆಂದರೆ, ಕೊಳಚೆ ನಿರ್ಮೂಲನಾ ಮಂಡಳಿ ಇದ್ದರೂ ಏನೂ ಪ್ರಯೋಜನವಾಗುವುದಿಲ್ಲ. ಸಚಿವರು ಇದಕ್ಕೆ ಉತ್ತರ ಕೊಡಬೇಕು.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ೭ ಕೊಳಚೆ ಪ್ರದೇಶಗಳಲ್ಲಿ ೩ ಕೊಳಚೆ ಪ್ರದೇಶಗಳಿಗೆ ಸುಮಾರು ೨ ಲಕ್ಷದ ೨೩ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೊದಲು ಸರ್ಕಾರದಿಂದ ಕೊಳಚೆ ನಿರ್ಮೂಲನಾ ಮಂಡಳಿಗೆ ಕೇವಲ ೨ ಕೋಟಿ ಅಥವಾ ೩ ಕೋಟಿ ರೂಪಾಯಿಗಳು ಗರಿಷ್ಠ ಬರುತಿತ್ತು. ನಮ್ಮ ಸರ್ಕಾರ ಬಂದ ನಂತರ ಕಳೆದ ವರ್ಷ ೯ ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದ್ದೇವೆ. ಪ್ರಸಕ್ತ ವರ್ಷ ಎಂಟೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮತ್ತು ಈ ವರ್ಷ ಬೆಂಗಳೂರಿನಲ್ಲಿರುವ ಕೊಳಚೆ ಪ್ರದೇಶಗಳಿಗೆ ೩೦ ಸಾವಿರ ಮನೆಗಳನ್ನು ಕಟ್ಟಿ ಕೊಡುವುದಕ್ಕಾಗಿ ಸರ್ಕಾರದಿಂದ ಸುಮಾರು ೫ ಕೋಟಿ ರೂಪಾಯಿಗಳನ್ನು ಸಬ್ಸಿಡಿಯಾಗಿ ಬಿಡುಗಡೆ ಮಾಡುತ್ತಿದ್ದೇವೆ. ಇವೊತ್ತು ಸಾಲದ ರೂಪದಲ್ಲಿ ಮನೆಗಳನ್ನು ಕಟ್ಟಿಕೊಡುವಂಥ ಕೆಲಸ ಮಾಡಿದ್ದೇವೆ. ತಮಗೆ ಗೊತ್ತಿರುವಂತೆ ಹಲವಾರು ವರ್ಷಗಳಿಂದ ಈ ಸಮಸ್ಯೆ ಇದೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೋಸ್ಕರವಾಗಿ ಸಾಕಷ್ಟು ಉತ್ತಮ ರೀತಿಯಲ್ಲಿ ಇವೊತ್ತು ಕೊಳಚೆ ನಿರ್ಮೂಲನ ಮಂಡಳಿ ಕೆಲಸ ಮಾಡುತ್ತಿದೆ. ಇವೊತ್ತು ನಾವು ಎಷ್ಟೇ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟರೂ ಸಹ ಅವರಿಗೆ ಮನೆಗಳನ್ನು ಕಟ್ಟಿ ಕೊಟ್ಟರೆ ಮಾತ್ರ ಅವರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೋಸ್ಕರ 'ಆಶ್ರಯ' ಯೋಜನೆಯಡಿಯಲ್ಲಿ ಒಂದು 'ಟಾಸ್ಕ್ ಫೋರ್ಸ್ ಕಮಿಟಿ' ಮಾಡಿದ್ದೇವೆ. ಮಾನ್ಯ ಸದಸ್ಯರು ಸಹ ಅಧ್ಯಕ್ಷರಾಗಿದ್ದಾರೆ. ಬಹುಶಃ ಕೊಳಚೆ ಪ್ರದೇಶಗಳಲ್ಲಿರುವ ಜನರನ್ನು ಬೇರೆಡೆಗೆ ಸ್ಥಳಾಂತರಿಸಿದರೆ ಅವರ ಜಾಗಗಳಲ್ಲಿ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸಾಧ್ಯವಾಗುತ್ತದೆ. ತಾವೂ ಕೂಡ ಈ ದಿಸೆಯಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ನಾವು ಒಂದು ಮನೆಗೆ ೧೦ ರೂಪಾಯಿಯಂತೆ ವಸೂಲಿ ಮಾಡುತ್ತಿದ್ದೇವೆ. ಒಂದು ಮನೆಗೆ ೧೦ ರೂಪಾಯಿಗಳೆಂದರೆ ಈಗ ಅಲ್ಲಿ ಸುಮಾರು ೨೭೦೦ ಮನೆಗಳಿದ್ದು, ಅವುಗಳಿಂದ ಸುಮಾರು ೨೭೦೦೦ ರೂಪಾಯಿಗಳು ಬರುತ್ತದೆ. ನಾವು ಅವರ ಕ್ಷೇತ್ರದಲ್ಲಿ ಈಗಾಗಲೇ ಸುಮಾರು ೧೦೦೦ ಮನೆಗಳನ್ನು ಕಟ್ಟಿಕೊಡುವುದಕ್ಕೆ 'ಆಶ್ರಯ' ಕಾರ್ಯಕ್ರಮದಲ್ಲಿ ತೆಗೆದುಕೊಂಡಿದ್ದೇವೆ. ಅವರನ್ನು ಅಲ್ಲಿಂದ ಸ್ಥಳಾಂತರಿಸಲು ಸ್ವಲ್ಪ ಕಷ್ಟವಾಗಬಹುದು. ಆದರೂ ಸಹ ತಾವು ಎಂ. ಎಲ್. ಎ. ಆಗಿ ಸ್ವಲ್ಪ ಪರ್‌ಸ್ಯೂ ಮಾಡಿದರೆ ಅವರನ್ನು ಅಲ್ಲಿಂದ ಬೇರೆಡೆಗೆ ಸ್ಥಳಾಂತರಿಸಿದರೆ ಅವರ ಜಾಗದಲ್ಲಿ ಒಂದು ಅಥವಾ ಎರಡು ಫ್ಲೋರ್‌ನ ಫ್ಲಾಟ್‌ಗಳನ್ನು ಕಟ್ಟಿ ಕೊಡುವಂತಹ ಕೆಲಸ ಮಾಡುತ್ತೇವೆ. ಈ ರೀತಿಯಾಗಿ ಸರ್ಕಾರದಲ್ಲಿ ಒಳ್ಳೆಯ ಕಾರ್ಯಕ್ರಮ ಹಾಕಿದಾಗ ಅದಕ್ಕೆ ತಾವೂ ಸಹ ಬೆಂಬಲ ಕೊಟ್ಟರೆ ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ನನ್ನ ಮೂಲ ಪ್ರಶ್ನೆ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚು ಮಾಡಿದ ಹಣವೆಷ್ಟು ಎಂಬುದು. ಆಶ್ರಯ ಯೋಜನೆಗೂ ಇದಕ್ಕೂ ಸಂಬಂಧವಿಲ್ಲ. ಆದರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ವಾರ್ಷಿಕ ವರದಿಯಲ್ಲಿ ೨,೭೨,೦೦,೦೦೦ ರೂಪಾಯಿಗಳನ್ನು ಇಡೀ ಕರ್ನಾಟಕಕ್ಕೆ ಇಟ್ಟಿದ್ದಾರೆ. ಕರ್ನಾಟಕದಲ್ಲಿರುವ ಕೊಳಚೆ ಪ್ರದೇಶಗಳಿಗೆ ೨ ಕೋಟಿ ೭೨ ಲಕ್ಷ

ರೂಪಾಯಿಗಳನ್ನು ಇಟ್ಟ ನಂತರ ಇವರು ಹನ್ನೊಂದುವರೆ ಲಕ್ಷ ಜನರಿಗೆ ಯಾವ ರೀತಿಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆ? ಮನೆ ಕಟ್ಟಿಕೊಡುವುದು ಬೇರೆ ಸಂಗತಿ. ಅದು ಆಶ್ರಯ ಯೋಜನೆಯಡಿಯಲ್ಲಿ ಬರುತ್ತದೆ. ಇದು ಒಳ್ಳೆಯ ಕಾರ್ಯಕ್ರಮ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಕೊಳಚೆ ನಿರ್ಮೂಲನಾ ಮಂಡಳಿಯ ಅಭಿವೃದ್ಧಿ ಕಾರ್ಯಗಳಿಗೆ ಇವರು ಕೋಟ್ಯಾಂತರ ರೂಪಾಯಿಗಳನ್ನು ಕೊಡದೇ ಹೋದರೆ ಲಕ್ಷಾಂತರ ಜನರು ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವುದಕ್ಕಾಗುವುದಿಲ್ಲ. ಆ ಪ್ರದೇಶಗಳಲ್ಲಿ ಹಂದಿಗಳೂ ಕೂಡ ವಾಸ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಅವು ಅಂತಹ ಜಾಗಗಳಾಗಿವೆ. ಅಲ್ಲಿ ಬಹಳಷ್ಟು ದುರ್ವಾಸನೆ ಇದೆ, ಅಲ್ಲದೆ, ಇಂತಹ ಕಡೆ ಕಾರ್ಪೋರೇಷನ್‌ನವರೂ ಕೆಲಸ ಮಾಡುವುದಿಲ್ಲ. ಇವರು ದುಡ್ಡನ್ನು ಬಿಡುಗಡೆ ಮಾಡಲು ದುಡ್ಡು ಇಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು: ಈ ಅಭಿವೃದ್ಧಿ ಕಾರ್ಯಗಳಿಗೆ ತಾವು ಹಣವನ್ನು ಖರ್ಚು ಮಾಡಬೇಕು. ಆಶ್ರಯ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಿಕೊಡುತ್ತಿದ್ದೀರಿ. ಬಹಳ ಸಂತೋಷ. ಈಗ ಹನ್ನೊಂದುವರೆ ಲಕ್ಷ ಕೊಳಚೆ ನಿವಾಸಿಗಳಿದ್ದಾರೆ. ಅವರಿಗೆ ಹಣವನ್ನು ಜಾಸ್ತಿ ಬಿಡುಗಡೆ ಮಾಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ನಾನು ಉತ್ತರ ಕೊಟ್ಟಿದ್ದೇನೆ. ನಾವು ಮೂಲಭೂತ ಸೌಕರ್ಯಗಳನ್ನು ಎಷ್ಟೇ ಕೊಟ್ಟರೂ ಸಹ ಕೊಳಚೆ ನಿವಾಸಿಗಳ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಈ ವಿಚಾರದಲ್ಲಿ ಯಾವುದೇ ಒಂದು ಪ್ಲಾನ್ ಇರುವುದಿಲ್ಲ. ಎಷ್ಟೇ ಕಷ್ಟಪಟ್ಟರೂ ಸಹ ನಾವು ಒಳಚರಂಡಿ ವ್ಯವಸ್ಥೆ ಮಾಡಬಹುದು ಅಥವಾ ಬೋರ್‌ವೆಲ್‌ಗಳನ್ನು ಕೊಡಿಸಬಹುದು. ಆದರೆ ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಈಗ ಸುಮಾರು ೧೦೦೦೦ ಮನೆಗಳನ್ನು ಕಟ್ಟಿಕೊಟ್ಟರೆ ಬಹಳಷ್ಟು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಈ ಒಂದು ಪರ್ಮನೆಂಟ್ ಸಲ್ಯೂಷನ್ ಅನ್ನು ಅವರು ಉಪಯೋಗಿಸಿಕೊಂಡರೆ ತುಂಬಾ ಅನುಕೂಲವಾಗುತ್ತದೆ.

ಕಿರು ನೀರು ಸರಬರಾಜು ಯೋಜನೆಗಳ ಜಾರಿ ಬಗ್ಗೆ.

೨೦೮೭ ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಯನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು?

ಆ) ಈ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು?

ಇ) ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿಯು ಕಿರು ನೀರು ಸರಬರಾಜು ಯೋಜನೆಯಡಿಯಲ್ಲಿ ಈ ಕೊಳಚೆ ಪ್ರದೇಶಗಳಿಗಾಗಿ ಕಿರು ನೀರಿನ ಟ್ಯಾಂಕ್‌ಗಳನ್ನು ಕಟ್ಟಿದೆಯೇ?

ಈ) ಹಾಗಿದ್ದಲ್ಲಿ ೧೯೯೧-೯೨ರ ಸಾಲಿನಲ್ಲಿ ಕಟ್ಟಿರುವ ನೀರಿನ ಟ್ಯಾಂಕ್‌ಗಳ ಸಂಖ್ಯೆ ಎಷ್ಟು?

ಉ) ಈ ತನಕ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ೨೯ ಕೊಳಚೆ ಪ್ರದೇಶಗಳನ್ನು ಗುರುತಿಸಿದೆ. ಇವುಗಳ ಪೈಕಿ ೨೬ ಕೊಳಚೆ ಪ್ರದೇಶಗಳು ಕರ್ನಾಟಕ ಕೊಳಚೆ ನಿರ್ಮೂಲನಾ ಕಾಯ್ದೆ ೧೯೭೩ರ ಪ್ರಕಾರ ಘೋಷಿತವಾಗಿದೆ.

ಆ) ೧೯೮೫-೮೬ರಲ್ಲಿ ನಡೆಸಿದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಪ್ರಕಾರ ೪೭೮೧ ಕುಟುಂಬಗಳು ವಾಸಿಸುತ್ತಿವೆ.

ಇ) ಹೌದು.

ಈ) ಎರಡು. ೧) ಸರ್ವೆ ನಂ. ೭ ತಾವರೆಕೆರೆಯಲ್ಲಿ ಒಂದು ಟ್ಯಾಂಕನ್ನು ಕಟ್ಟಲಾಗಿದೆ. ೨) ಸರ್ವೆ ನಂ. ೫ ತಾವರೆಕೆರೆಯಲ್ಲಿ ಇನ್ನೂ ಕೆಲಸ ಪ್ರಾರಂಭಿಸಬೇಕಾಗಿರುತ್ತದೆ.

ಉ) ರೂ. ೫೬,೦೦೦-೦೦ ಗಳು.

ಶ್ರೀ ರಾಮಲಿಂಗರೆಡ್ಡಿ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಜಯನಗರ ಕ್ಷೇತ್ರದಲ್ಲಿ ೨೯ ಕೊಳಚೆ ಪ್ರದೇಶಗಳನ್ನು ಕೊಳಚೆ ನಿರ್ಮೂಲನಾ ಮಂಡಳಿಯವರು ಗುರುತಿಸಿದ್ದು, ಅವುಗಳಲ್ಲಿ ೨೬ ಕೊಳಚೆ ಪ್ರದೇಶಗಳನ್ನು ನೋಟಿಫೈ ಮಾಡಿದ್ದಾರೆ. ೧೯೮೫-೮೬ರಲ್ಲಿ ನಡೆಸಿದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಪ್ರಕಾರ ಅಲ್ಲಿ ಸುಮಾರು ೪೭೮೧ ಕುಟುಂಬಗಳಿವೆ. ಈಗ ಆರು ವರ್ಷಗಳ ಅಂತರದಲ್ಲಿ ೨೦೦೦-೩೦೦೦ ಕುಟುಂಬಗಳು ಜಾಸ್ತಿಯಾಗಿದ್ದು, ಅಲ್ಲಿ ಒಟ್ಟು ಸುಮಾರು ೭೦೦೦-೮೦೦೦ ಕುಟುಂಬಗಳಿವೆ. ಇವರಿಗೆ ಕಿರು ನೀರಿನ ಟ್ಯಾಂಕುಗಳನ್ನು ಕಟ್ಟಿದ್ದಾರೆಯೇ ಎಂಬ ಪ್ರಶ್ನೆಗೆ ಉತ್ತರವಾಗಿ ಎರಡು ಕಿರು ನೀರಿನ ಟ್ಯಾಂಕುಗಳನ್ನು ಕಟ್ಟಲಾಗಿದೆಯೆಂದೂ, ಒಂದನ್ನು ಈಗಾಗಲೇ ಕಟ್ಟಿದೆಯೆಂದೂ, ಇನ್ನೊಂದು ಪ್ರಾರಂಭಿಸಬೇಕಾಗಿದೆ ಎಂದು ಹೇಳಿದ್ದಾರೆ. ಈ ೭೦೦೦ ಕುಟುಂಬಗಳಿಗೆ ಬರೀ ಎರಡು ಕಿರು ನೀರಿನ ಟ್ಯಾಂಕುಗಳು ಸಾಕೇ? ಇವರಿಗೆ ಇನ್ನೂ ಸಾಕಷ್ಟು ಬೋರ್‌ವೆಲ್‌ಗಳು ಬೇಕಾಗಿವೆ. ಈಗ ಕೆಲವು ಬೋರ್‌ವೆಲ್‌ಗಳಿವೆ. ಅವನ್ನು ಕಾರ್ಪೊರೇಷನ್ ವತಿಯಿಂದ, ಕೊಳಚೆ ನಿರ್ಮೂಲನ ಮಂಡಳಿಯ ವತಿಯಿಂದ ಹಾಕಿದ್ದಾರೆ. ಏಕೆಂದರೆ ಹಿಂದಿನ ವರ್ಷಗಳಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಹಣವಿರಲಿಲ್ಲ. ಆ ಕಾರಣ ಕಾರ್ಪೋರೇಶನ್‌ನವರ ಮೇಲೆ ಇದರ ಬಗ್ಗೆ ಒತ್ತಡವನ್ನು ಹಾಕಿ ಅಲ್ಲಿಂದ ಸಾಕಷ್ಟು ಬೋರ್‌ವೆಲ್‌ಗಳನ್ನು ಹಾಕಿಸಿದ್ದೇವೆ. ಅದರಲ್ಲಿಯೂ ಒಂದು ಸಾವಿರ ಗ್ಯಾಲನ್‌ಗಳಿಗಿಂತ ಹೆಚ್ಚು ನೀರು ಬರತಕ್ಕವುಗಳಲ್ಲಿ ಅದು ಕಾರ್ಪೋರೇಷನ್‌ನ ಬೋರ್‌ವೆಲ್ ಆಗಿರಲಿ ಅಥವಾ ಕೊಳಚೆ ನಿರ್ಮೂಲನಾ ಮಂಡಳಿಯ ಬೋರ್‌ವೆಲ್‌ಗಳಾಗಿರಲ್ಲಿ, ಅಲ್ಲಿ ಮಿನಿ ವಾಟರ್ ಸ್ಕೀಮ್‌ನ್ನು ಜಾರಿಗೆ ತರಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈಗಾಗಲೇ ಬೆಂಗಳೂರು ನೀರು ಸರಬರಾಜು ಮಂಡಳಿಯವರಿಂದ, ಕಾರ್ಪೋರೇಷನ್‌ನವರಿಂದ, ಬೆಂಗಳೂರಿನಲ್ಲಿ ಸುಮಾರು ೬೫೦ ರಿಂದ ೭೦೦ ಕೊಳವೆ ಭಾವಿಗಳನ್ನು ಹಾಕಿಸಿದ್ದೇವೆ. ಎಲ್ಲೆಲ್ಲಿ ಒಂದು ಸಾವಿರ ಗ್ಯಾಲನ್‌ಗಳಿಗಿಂತ ಹೆಚ್ಚು ನೀರು ಬರುತ್ತದೋ ಅಂಥ ಕಡೆ ಕಿರು ನೀರಿನ ಯೋಜನೆಯನ್ನು ಕೈಗೊಳ್ಳಲು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದು ಬಹುಶಃ ಬೆಂಗಳೂರು ನೀರು ಸರಬರಾಜು ಮಂಡಳಿಯ ವತಿಯಿಂದ ಹಾಕಿರತಕ್ಕ ಬೋರ್‌ವೆಲ್‌ಗಳಲ್ಲಿ ಎಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ನೀರು ಬಂದಿದೆಯೋ ಅದೆಲ್ಲವನ್ನೂ ಸಂಪೂರ್ಣವಾಗಿ ಪೂರ್ತಿಗೊಳಿಸಿದ್ದಾರೆ. ಮತ್ತೆ ಕಾರ್ಪೋರೇಷನ್‌ನವರೂ ಸಹಿತ ಸುಮಾರು ೨೦೦ ಕೊಳವೆ ಬಾವಿಗಳಲ್ಲಿ ಒಂದು ಸಾವಿರ ಗ್ಯಾಲನ್‌ಗಳಿಗಿಂತ ಹೆಚ್ಚು ನೀರು ಬರುವುದರಲ್ಲಿ ಕಿರು ನೀರಿನ

ಯೋಜನೆಯನ್ನು ತೆಗೆದುಕೊಳ್ಳಲು ಈಗಾಗಲೇ ಕಾರ್ಯಕ್ರಮವನ್ನು ಹಾಕಿದ್ದಾರೆ. ಕೊಳಚೆ ಪ್ರದೇಶಗಳಲ್ಲೂ ಸಹಿತ ಎಲ್ಲೆಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಗ್ಯಾಲನ್‌ಗಳಷ್ಟು ನೀರು ಕೊಳವೆ ಬಾವಿಗಳಲ್ಲಿ ಬಂದಿರುತ್ತದೋ ಅಲ್ಲೂ ಸಹ ಕಾರ್ಪೊರೇಷನ್‌ನ ನೆರವಿನಿಂದ ಕೊಳಚೆ ನಿರ್ಮೂಲನಾ ಮಂಡಳಿಯವರು ಕಿರು ನೀರಿನ ಯೋಜನೆಯನ್ನು ತೆಗೆದುಕೊಳ್ಳಲು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ.

ಶ್ರೀ ಕೆ. ಲಕ್ಕಣ್ಣ:- ಉಪಾಧ್ಯಕ್ಷಣೆಯವರೇ, ನಮ್ಮ ಕೊಳಚೆ ಪ್ರದೇಶಗಳಲ್ಲಿ ಈಗಾಗಲೇ ಕಿರು ನೀರಿನ ಯೋಜನೆಯನ್ನು ಜಾರಿ ಮಾಡಿದ್ದಾರೆ. ಆದರೆ ಆ ನೀರಿನ ಟ್ಯಾಂಕ್ ಈಗ ಒಡೆದು ಹೋಗಿದೆ. ಇದರ ಬಗ್ಗೆ ಅಂದಾಜು ಮಾಡಿ ಸರಿಪಡಿಸಿಕೊಡಬೇಕೆಂದು ಹೇಳಿದ್ದೆ, ಆದರೆ ಅದನ್ನು ಮಾಡಿಲ್ಲ, ದಯವಿಟ್ಟು ಅದನ್ನು ಸರಿಮಾಡಿಸಬೇಕು.

ಶ್ರೀ ರಾಮಲಿಂಗರೆಡ್ಡಿ:- ಉಪಾಧ್ಯಕ್ಷಣೆಯವರೇ, ಏನು ೨೬ ಘೋಷಿತ ಕೊಳಚೆ ಪ್ರದೇಶಗಳಿವೆ ಆದರಲ್ಲಿ ಎರಡರಲ್ಲಿ ಮಾತ್ರ ಈ ಕಿರು ನೀರಿನ ಯೊಜನೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆ ಎರಡರಲ್ಲಿ ಮಾತ್ರ ಅವರಿಗೆ ಸಾವಿರ ಗ್ಯಾಲನ್ ನೀರು ಸಿಕ್ಕಿದೆಯಾ? ಇನ್ನೂ ಸಾಕಷ್ಟು ಅಂದರೆ ಸುಮಾರು ೧೦-೧೫ ಬೋರ್‌ವೆಲ್‌ಗಳಲ್ಲಿ ಒಂದು ಸಾವಿರ ಗ್ಯಾಲನ್‌ಗಿಂತ ಹೆಚ್ಚು ನೀರು ಇದೆ. ಆ ಬೋರ್‌ವೆಲ್‌ಗಳನ್ನು ಬಿ. ಡಿ. ಎ. ನವರು, ಬಿ. ಡಬ್ಲ್ಯೂ. ಎಸ್. ಎಸ್. ಬಿ. ಯವರು, ಕಾರ್ಪೋರೇಷನ್‌ನವರು, ಕೊಳಚೆ ನಿರ್ಮೂಲನಾ ಮಂಡಳಿಯವರು ಹೀಗೆ ಯಾರೇ ಅದನ್ನು ಹಾಕಿರಲಿ, ನೀವು ಈ ಕಿರು ನೀರಿನ ಯೋಜನಯನ್ನು ಮಾಡಲು ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಅಧಿಕಾರವನ್ನು ಕೊಡಬೇಕು. ಕೊಳಚೆ ಪ್ರದೇಶದಲ್ಲಿ ಯಾರದೇ ಬೋರ್‌ವೆಲ್ ಆಗಿರಲಿ ಅಲ್ಲಿ ಕಿರು ನೀರಿನ ಯೋಜನೆಯನ್ನು ಮಾಡಲು ಕೊಳಚೆ ನಿರ್ಮೂಲನಾ ಮಂಡಳಿಯವರಿಗೆ ಅವಕಾಶವನ್ನು ಮಾಡಿಕೊಡಿ.

ಶ್ರೀ ಕೆ. ಜೆ. ಜಾರ್ಜ್:- ಸನ್ಮಾನ್ಯ ಉಪಾಧ್ಯಕ್ಷಣೆಯವರೇ, ಇದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ ಈ ಕೆಲಸವನ್ನು ಕಾರ್ಪೋರೇಷನ್ ವತಿಯಿಂದ ಮಾಡಬೇಕಾಗಿತ್ತು. ಆದರೆ ಅವರು ಆದನ್ನು ಮಾಡಲಿಲ್ಲ. ಈ ಕಿರು ನೀರಿನ ಯೋಜನೆಯನ್ನು ಅವರು ತೆಗೆದುಕೊಳ್ಳುತ್ತಾರೆ. ಆದಷ್ಟು ಬೇಗ ಆದನ್ನು ಅವರು ತೆಗೆದುಕೊಳ್ಳುವಂತೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಶ್ರೀಮಾನ್ ಲಕ್ಕಣ್ಣನವರು ಕೊಳಚೆ ಪ್ರದೇಶದಲ್ಲಿ ಕಟ್ಟಿರತಕ್ಕ ಒಂದು ನೀರಿನ ಟ್ಯಾಂಕ್ ಒಡೆದು ಹೋಗಿದೆ ಎಂದು ಹೇಳಿದ್ದಾರೆ. ಅದನ್ನು ಆದಷ್ಟು ಬೇಗ ದುರಸ್ಥಿಗೊಳಿಸಲು ಆದೇಶವನ್ನು ಕೊಡುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ:- ಇನ್ನೊಂದು ವಿಷಯವಿದೆ.

ಉಪಾಧ್ಯಕ್ಷಣೆಯವರು:- ತಮ್ಮದು ಮೂರು ಪ್ರಶ್ನೆಯಾಯಿತು. ಇನ್ನೂ ೮ ಪ್ರಶ್ನೆಗಳಿವೆ. ಆದರೆ ಸಮಯವಿರುವುದು ೧೫ ನಿಮಿಷ ಮಾತ್ರ. ಹೀಗಾದರೆ ಕೊನೆಯಲ್ಲಿ ಪ್ರಶ್ನೆಯನ್ನು ಕೇಳುವವರಿಗೆ ಸಮಯವೇ ಸಿಗುವುದಿಲ್ಲ.

ಖಾಸಗಿ ಬಡಾವಣೆಗಳಿಗೆ ಅನುಮತಿ ನೀಡುವ ಬಗ್ಗೆ

೨೦೮೫. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈವರೆಗೆ ಅನುಮತಿ ನೀಡಿರುವ ಖಾಸಗಿ ಲೇ ಔಟ್‌ಗಳ ಸಂಖ್ಯೆ ಎಷ್ಟು?

ಆ) ಈ ಲೇ ಔಟ್‌ಗಳಿಂದ ಬಿ. ಡಿ. ಎ. ವಸೂಲಿ ಮಾಡಿರುವ ಅಭಿವೃದ್ಧಿ ಶುಲ್ಕದ ಮೊತ್ತವೆಷ್ಟು?

ಇ) ಈ ಲೇ ಔಟ್‌ಗಳಲ್ಲಿ ಹಂಚಲಾಗಿರುವ ನಿವೇಶನಗಳ ಸಂಖ್ಯೆ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಸಂಖ್ಯೆ ೧೬೨.

ಆ) ರೂ. ೩೮,೪೨,೨೬,೫೭೨-೦೦ (೩೮.೪೨ ಕೋಟಿ).

ಇ) ೩೭,೦೮೮ ನಿವೇಶನಗಳನ್ನು ಹಂಚಲಾಗಿದೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಉಪಾಧ್ಯಕ್ಷಿಣಿಯವರೇ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಇದುವರೆಗೆ ನೀಡಿರತಕ್ಕ ಖಾಸಗಿ ಲೇಔಟುಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ೧೬೨ ಎಂದು ಹೇಳಿದ್ದಾರೆ. ಇನ್ನೂ ಎಷ್ಟು ಮನವಿಗಳು ಹೊಸದಾಗಿ ಲೇಔಟ್ ಮಾಡಲು ಬಂದಿವೆ? ಅದನ್ನು ಯಾವಾಗ ಮಾಡುತ್ತೀರಾ ಎಂದು ಮೊದಲನೆಯ ಪ್ರಶ್ನೆಯನ್ನು ಕೇಳುತ್ತೇನೆ. ಎರಡನೆಯದಾಗಿ ಇವತ್ತು ಲೇಔಟುಗಳನ್ನು ಮಾಡಿದ ಮೇಲೆ ೩೮ ಕೋಟಿ ರೂಪಾಯಿಗಳನ್ನು ಅವರಿಂದ ವಸೂಲಿ ಮಾಡಿದ್ದೇವೆ ಎನ್ನತಕ್ಕದ್ದನ್ನು ಉತ್ತರದಲ್ಲಿ ಹೇಳಿದ್ದಾರೆ. ಇವತ್ತು ಲೇಔಟ್‌ಗಳಿಗೆ ಹಣವನ್ನು ವಸೂಲಿ ಮಾಡಿಕೊಂಡು ಅವರಿಗೆ ವರ್ಕ್ ಆರ್ಡರ್‌ನ್ನು ಕೊಡದೇ ಇರತಕ್ಕದ್ದು ಎಷ್ಟು ಬಾಕಿ ಉಳಿದಿದೆ? ಮತ್ತೆ ಲೇಔಟ್‌ಗಳಿಗಾಗಿ, ನಿವೇಶನಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಮನವಿಗಳು ಬಂದಿದೆ? ಇವತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಸೈಟನ್ನು ಬೇಕೆಂದು ಕೇಳಿರತಕ್ಕ ಮನವಿಗಳು ಎಷ್ಟು?

ಶ್ರೀ ಎಸ್. ಬಂಗಾರಪ್ಪ:- ಉಪಾಧ್ಯಕ್ಷಣಿಯವರೇ, ತಾವು ಕೇಳಿರತಕ್ಕ ಪ್ರಶ್ನೆ ವಸೂಲಿ ಮಾಡಿರುವ ಹಣದ ಬಗ್ಗೆ, ಪ್ರಶ್ನೆಯ ಸಂಖ್ಯೆ ಎರಡರಲ್ಲಿ ಉತ್ತರವನ್ನು ಕೊಟ್ಟಿದ್ದೇವೆ. ಆ ಮೇಲೆ ನಿವೇಶನಗಳ ಸಂಖ್ಯೆಯನ್ನು ಕೂಡ ಕೊಟ್ಟಿದ್ದೇವೆ. ನೀವು ಕೇಳಿರತಕ್ಕ ಬೇರೆ ಪ್ರಶ್ನೆ ನನಗೆ ಸ್ವಲ್ಪ ಗೊತ್ತಾಗಲಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಲೇಔಟನ್ನು ಮಾಡಲು ೩೮ ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದೀರಿ. ನೀವು ಎಷ್ಟು ಹಣ ಕಟ್ಟಬೇಕೆಂದು ಹೇಳಿದ್ದೀರಿ ಅಷ್ಟು ಹಣವನ್ನು ಅವರು ಕೊಟ್ಟಿದ್ದಾರೆ. ಅವರಿಂದ ಹಣವನ್ನು ಕಟ್ಟಿಸಿಕೊಂಡು ಲೇಔಟನ್ನು ಮಾಡಿದ ಮೇಲೆ ವರ್ಕ್ ಆರ್ಡರನ್ನು ಕೊಡಲಿಲ್ಲ. ಲೇಔಟ್ ಮಾಡಿ ವರ್ಕ್ ಆರ್ಡರನ್ನು ಕೊಡದಿದ್ದರೆ ಲೇಔಟ್ ಮಾಡಿಯೂ ಪ್ರಯೋಜನವಾಗುವುದಿಲ್ಲ. ಅವರು ಮುಂದಿನ ಕಾರ್ಯಕ್ರಮವನ್ನು ಹಾಕಿಕೊಳ್ಳಲು ಆಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ಆ ವಿವರಗಳನ್ನು ನಾವು ಪ್ರತ್ಯೇಕವಾಗಿ ತರಿಸಿಕೊಡಬೇಕು. ಏಕೆಂದರೆ ನೀವು ಇದರಲ್ಲೇ ಉಪ ಪ್ರಶ್ನೆ ಕೇಳಿದ್ದರೆ ಅನುಕೂಲವಿತ್ತು, ಆದರೆ ಈ ವಿವರಗಳು ನನ್ನ ಹತ್ತಿರ

ಈಗ ಇಲ್ಲ. ಹಣ ಕಟ್ಟಿಸಿಕೊಂಡರೂ ಕೂಡ ವರ್ಕ್ ಆರ್ಡರ್ಸ್ ಕೊಡದೇ ಇರತಕ್ಕಂತವುಗಳು ಎಷ್ಟು ಎಂದು ತಾವು ಕೇಳಿದ್ದೀರಿ, ಅದರ ವಿವರಗಳನ್ನು ನಿಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಜಯನಗರ ಕೋ-ಆಪರೇಟೀವ್ ಸೊಸೈಟಿಯು ಇವತ್ತು ೧೯ ಲಕ್ಷದಷ್ಟು ಹಣವನ್ನು ತುಂಬಿದೆ. ಆದರೆ ಅದಕ್ಕೆ ಸುಮಾರು ಮೂರು ವರ್ಷಗಳಿಂದ ವರ್ಕ್ ಆರ್ಡರ್‌ನ್ನು ಬಿ. ಡಿ. ಎ. ಅವರು ಇಷ್ಯೂ ಮಾಡಿಲ್ಲ. ಒಂದಲ್ಲಾ ಒಂದು ಕಾರಣ ಕೊಟ್ಟು ಅಲ್ಲೇ ಇಡತಕ್ಕಂತಹ ಒಂದು ವ್ಯವಸ್ಥೆ ಮಾಡಿದ್ದಾರೆ. ೧೯ ಲಕ್ಷ ರೂಪಾಯಿ ಕಟ್ಟಿದ್ದರೂ ಸಹ ಆ ಸಂಘ ಇವತ್ತು ಬಹಳ ಕಷ್ಟದಲ್ಲಿ ಇರತಕ್ಕಂತಹ ಪರಿಸ್ಥಿತಿಗೆ ಬಂದಿದೆ. ಅದಕ್ಕೆ ಮೊದಲು ತಾವು ವರ್ಕ್ ಆರ್ಡರ್ ಕೊಡಿಸಬೇಕು.

ಶ್ರೀ ಎಸ್. ಬಂಗಾರಪ್ಪ:- ನಿಮ್ಮ ಕೊಶ್ಚನ್ ಸ್ವಲ್ಪ ಜನರಲ್ಲಾಗಿತ್ತು, ಆದ್ದರಿಂದ ಜನರಲ್ಲಾಗಿ ಉತ್ತರ ಕೊಟ್ಟಿದ್ದೇನೆ. I was also waiting for the moment, you made the reference to Housing Co-operative Societies. ನಾವು ಇದರ ಬಗ್ಗೆ ತಮಗೆ ಗೊತ್ತಿರುವ ಹಾಗೆ ಒಂದು ನೀತಿಯನ್ನು ಅನುಸರಿಸಬೇಕು. ಅಲ್ಲಿ ನ್ಯಾಯವಾಗಿರತಕ್ಕಂತಹ ಸದಸ್ಯರ ಹಣವೂ ಸೇರಿಕೊಂಡಿದೆ ಎನ್ನುವ ಮಾತನ್ನು ಕೆಲವರು ಹೇಳುತ್ತಾರೆ, ಇನ್ನು ಕೆಲವರು ಬೋಗಸ್ ಮೆಂಬರ್‌ಶಿಪ್ ಹೊಂದಿದ್ದಾರೆ ಎನ್ನುವ ಕಂಪ್ಲೇಂಟ್‌ಗಳು ಈ ಸದನದಲ್ಲಿ ಬೇಕಾದಷ್ಟು ಸಲ ಕೇಳಿ ಬಂದಿದೆ. ಇದರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ ಒಂದು ವಿಚಾರವನ್ನು ಹೇಳಿದ್ದಾರೆ. ಏನೆಂದರೆ ನ್ಯಾಯವಾಗಿರತಕ್ಕಂತಹ ಸದಸ್ಯರಿಗೂ ಕೂಡ ಅನ್ಯಾಯವಾಗುತ್ತಿದೆ. ನೀವು ಏನಾದರೂ ಮಾಡಿ ಇಂತಹವರಿಗೆ ಬೆಂಬಲ ಕೊಟ್ಟು ಕೆಲಸ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಅವರ ಹಣವೆಲ್ಲಾ ಹೊರಟು ಹೋಗುತ್ತದೆ ಎನ್ನುವ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಇನ್ನು ಜಿ. ವಿ. ಕೆ. ರಾವ್ ಕಮಿಟಿ ರಿಪೋರ್ಟ್ ಬಂದಿರುವಂತಾದ್ದು ಏನಿದೆ ಅದು ಎಲ್ಲಾ ಸಂಘಗಳಿಗೂ ಸಂಬಂಧಪಟ್ಟಂತೆ ಬಂದಿಲ್ಲ. ಕೆಲವು ಸೊಸೈಟಿಗಳದ್ದು ಮಾತ್ರ ಬಂದಿದೆ. ಅದಕ್ಕೆ ನಾವು ಏನು ವಿಚಾರ ಮಾಡುತ್ತಿದ್ದೇವೆಂದರೆ whether a society is a subject matter of enquiry by G.V.K. Rao Enquiry Committee or not. ಹೀಗೆ ನಾವು ಒಂದು ನೀತಿಯನ್ನು ಇಟ್ಟುಕೊಂಡು ಹೋಗಬೇಕು ಎನ್ನುವ ಬಗ್ಗೆ we are seriously considering it. ಅದಕೋಸ್ಕರ ನಾವು ಯಾವುದೇ ಸಂಘದ ವಿಚಾರವನ್ನೂ ಕೂಡ ಈಗ ತೀರ್ಮಾನ ಮಾಡಬಾರದು ಎಂದು ನಿರ್ಧರಿಸಿದ್ದೇವೆ. Unless we evolve an acceptable policy on the matter and a workable solution to the question on hand ಈ ಬಗ್ಗೆ ಏನು ಮಾಡಬೇಕೆಂದು ನೋಡಿ ತಮಗೆ ಹೇಳುತ್ತೇನೆ. ಜಯನಗರ ಕೋ-ಆಪರೇಟೀವ್ ಸೊಸೈಟಿ ಅಂತ ತಾವು ಏನು ಹೇಳುತ್ತೀರಿ, ಅದರ ವಿವರಗಳನ್ನು ತರಿಸಿ ಇಟ್ಟುಕೊಳ್ಳೋಣ, ಆದರೆ ತೀರ್ಮಾನ ಕೊಡುವುದಕ್ಕೆ ಬರುವುದಿಲ್ಲ. ಪಾಲಿಸಿ ಮ್ಯಾಟರ್‌ನ್ನು ನಾವು ಎವಾಲ್ವ್ ಮಾಡುತ್ತೇವೆ.

ಶ್ರೀ ಕೆ. ಹರ್ಷಕುಮಾರಗೌಡ:- ಮಾನ್ಯ ಅಧ್ಯಕ್ಷರೇ, ಈಗ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳವರಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ, ಈಗ ಕರ್ನಾಟಕ ಸರ್ಕಾರ ೧೯೮೬ರಲ್ಲಿ ಹೌಸಿಂಗ್ ಅಂಡ್ ಅರ್ಬನ್ ಡೆವಲೆಪ್‌ಮೆಂಟ್ ಡಿಪಾರ್ಟ್‌ಮೆಂಟ್ ಒಂದು

ಸುತ್ತೋಲೆ ಕಳುಹಿಸಿದೆ. ಇದರಲ್ಲಿ ಸೈಟ್‌ಗಳನ್ನು ಬಿ. ಡಿ. ಎ. ಯಾವ ರೀತಿ ವಿತರಣೆ ಮಾಡಬೇಕೆಂದು ಹೇಳಿದೆ. ಒಂದು ೪೦ ಪರ್ಸೆಂಟ್ ಸೈಟ್‌ಗಳನ್ನು ಹರಾಜು ಮೂಲಕ ಮಾರಾಟ ಮಾಡಬೇಕು; ಇನ್ನು ೨೦ ಪರ್ಸೆಂಟ್ ಸೈಟ್‌ಗಳನ್ನು ಕಲಾವಿದರು, ವಿಜ್ಞಾನಿಗಳು, ಸಾಹಿತಿಗಳು, ಪ್ರತಿಭಾನ್ವಿತ ಆಟಗಾರರು, ಶಿಕ್ಷಣ ತಜ್ಞರು, ಸಮಾಜ ಸೇವಕರು ಇವರುಗಳಿಗೆ ವಿತರಣೆ ಮಾಡಬೇಕು; ಮೂರನೆಯದಾಗಿ ಈ ಒಂದು ಸಿವಿಕ್ ಅಮಿನಿಟೀಸ್ ಸೈಟ್ಸ್‌ಗಳನ್ನು ವಿವಿಧ ಸಂಘಗಳಿಗೆ ೧೦ ಪರ್ಸೆಂಟ್ ಕೊಡಬೇಕೆಂದೂ, ಸ್ವಾತಂತ್ರ್ಯ ಹೋರಾಟಗಾರರಿಗೆ ೫ ಪರ್ಸೆಂಟ್ ಕೊಡಬೇಕೆಂದು ಮತ್ತು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ಮತ್ತು ನ್ಯಾಯಾಧೀಶರುಗಳಿಗೆ ೫ ಪರ್ಸೆಂಟ್ ಸೈಟ್ ಕೊಡಬೇಕೆಂದು ಆ ಸುತ್ತೋಲೆಯಲ್ಲಿದೆ. ಇದರಲ್ಲಿ ಶಾಸಕರನ್ನೂ ಈ ಒಂದು ಸರ್ಕ್ಯುಲರ್‌ನಲ್ಲಿ ಏಕೆ ಸೇರಿಸಲಿಲ್ಲವೆಂದು ನಾನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ಸಮಾಜ ಸೇವಕರು ಅಲ್ಲವೇ? ಯಾರು ಈ ಒಂದು ಜನರ ಪರವಾಗಿ ಆಶೀರ್ವಾದ ತೆಗೆದುಕೊಂಡು ಈ ಒಂದು ರಾಜ್ಯದಲ್ಲಿ ಇಂತಹ ಕೆಲಸವನ್ನು ಕಾರ್ಯಗತ ಮಾಡಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ಮಾಡುತ್ತೇವೆ, ಅಂತಹವರನ್ನು ಈ ಒಂದು ಪರಿಮಿತಿಯೊಳಗೆ ಏಕೆ ಸೇರಿಸಲಿಲ್ಲ? ಇವರನ್ನು ಸೇರಿಸುವುದಕ್ಕೆ ಸಾಧ್ಯವಿಲ್ಲವೇ? ೧೯೮೬ರಲ್ಲಿ ಇಂತಹ ಸುತ್ತೋಲೆ ಕಳುಹಿಸಿದ್ದಾರೆ, ಇದು ಬಹಳ ಪ್ರಮುಖವಾದ ವಿಷಯ, ನಮ್ಮೆಲ್ಲರ ಸಮೂಹಕ್ಕೆ ಸೇರಿದ ಪ್ರಶ್ನೆ. ಈಗಲಾದರೂ ಶಾಸಕರನ್ನು ಸೇರಿಸುವುದಕ್ಕೆ ಸಾಧ್ಯವಿಲ್ಲವೇ? ಸೇರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಜೊತೆಗೆ ಬಿ. ಡಿ. ಎ. ಗೆ ಮೊನ್ನೆ ನಾವು ಮೂವರು ಶಾಸಕರಾದ ಗೋವಿಂದಪ್ಪ ಜುಟ್ಟಲ್, ಶಿವರಾಮೇಗೌಡರು ಮತ್ತು ನಾನು ಹೋಗಿದ್ದೆವು. ಅಲ್ಲಿ ಹೊಸದಾಗಿ ಒಬ್ಬ ಕಾರ್ಯದರ್ಶಿಗಳನ್ನು ಹಾಕಿದ್ದಾರೆ. ಆ ಕಾರ್ಯದರ್ಶಿಯವರ ಹೆಸರು ರಮೇಶ ಎಂದು; ಅವರು ಮೊಗಲರ ಮಗನ ತರಹ, ರಮೇಶ್ ಅಂತ ಮೊಗಲರ ಮಗ ಹೇಗೆ ಬಿಹೇವ್ ಮಾಡುತ್ತಿದ್ದನು ಆ ರೀತಿ ಬಿಹೇವ್ ಮಾಡುತ್ತಾರೆ. ಮಾತನಾಡಿಸುವಂತಹ ಸೌಜನ್ಯವೂ ಇಲ್ಲದೇ ಇರುವಂತಹ ಅಧಿಕಾರಿಗಳನ್ನು ಹಾಕಿದ್ದೀರಲ್ಲಾ ಇದು ಸರಿಯೇ? ಅವರಿಗೆ ಶಾಸಕರ ಹತ್ತಿರ ಹೇಗೆ ನಡೆದುಕೊಳ್ಳಬೇಕು, ಹೇಗೆ ಅವರ ಹತ್ತಿರ ಮಾತನಾಡಬೇಕು ಎನ್ನುವ ಒಂದು ಸೌಜನ್ಯತೆಯೂ ಇಲ್ಲ. ಸರ್ಕಾರ ಇಂಥಾದ್ದಕ್ಕೆಲ್ಲಾ ಕಡಿವಾಣ ಹಾಕುವುದಕ್ಕೆ ಸಾಧ್ಯವಿಲ್ಲವೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ:- ಸನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸದಸ್ಯರ ಪ್ರಶ್ನೆಗಳು ಒಳ್ಳೆಯ ಪ್ರಶ್ನೆಗಳು ಅಲ್ಲ ಅನ್ನುವ ಮಾತನ್ನು ನಾನು ಆಡುವುದಿಲ್ಲ. ಆದರೆ ಈ ಪ್ರಶ್ನೆಗಳಿಗೆ ಅದು ಸಂಬಂಧಪಡುವುದಿಲ್ಲ. ನೀವು ಓದಿಕೊಂಡು ನೋಡಿ ಹೇಳಿ. ಮಾನ್ಯ ಶಿವರಾಮೇಗೌಡರ ಪ್ರಶ್ನೆ ಇರುವುದು ಲೇಔಟಿಗೆ ಸಂಬಂಧಪಟ್ಟದ್ದು. ನೀವು ಕೇಳಿದ ಎರಡು ಪ್ರಶ್ನೆ. ಒಂದು ಈ ಸಿ. ಎ. ಸೈಟ್ಸ್, freedom fighters, award winners ಗಳಿಗೆ ಕೊಡತಕ್ಕಂಥದ್ದು ಏನಿದೆ, ಇದಕ್ಕೆ ಸಂಬಂಧಪಡುವ ಹಾಗೆ ತಾವು ಅದಕ್ಕೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇವೆಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಜನತೆಯಿಂದ ಚುನಾಯಿತರಾದ ಶಾಸಕರಾದ ತಾವು ಅಧಿಕಾರಿಗಳ ಹತ್ತಿರ ಹೋದ ಸಮಯದಲ್ಲಿ ಅವರ ನಡವಳಿಕೆ ಬಗ್ಗೆ ಹೇಳಿದ್ದೀರಿ. ಇದರ ಬಗ್ಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿ. ಮೇಲ್ಮನೆಯಲ್ಲಿ ಮೊನ್ನೆ ಕೂಡ ಈ ವಿಷಯ ಬಂದಿತ್ತು. ಅಧಿಕಾರಿಗಳ ನಡವಳಿಕೆಗಳ ಬಗ್ಗೆ ಗೌರ್ನ್‌ಮೆಂಟ್ ಆಫ್ ಇಂಡಿಯಾದ ಸುತ್ತೋಲೆ ಕೂಡ ಇದೆ. ನಾವು

ಮತ್ತೊಂದು ಸುತ್ತೋಲೆಯನ್ನು ಈಗಾಗಲೇ ಇಷ್ಯೂ ಮಾಡಲಿಕ್ಕೆ ತಿಳಿಸಿದ್ದೇವೆ. ಇವತ್ತು ಜನರ ಪ್ರತಿನಿಧಿಗಳು ಯಾವುದೇ ಪಕ್ಷದವರೇ ಇರಬಹುದು, ಅಧಿಕಾರಿಗಳ ಹತ್ತಿರ ಹೋದಾಗ ಅಧಿಕಾರಿಗಳು ಗೌರವದಿಂದ ಅವರನ್ನು ಕಾಣಬೇಕು, ಹೇಗೆ ಕಾಣಬೇಕು ಎನ್ನತಕ್ಕ ವಿವರಗಳನ್ನು ಕೂಡ ತಯಾರು ಮಾಡುತ್ತಿದ್ದೇವೆ. ಅದಕ್ಕೆ ವಿರುದ್ಧವಾಗಿ ನಡೆಯತಕ್ಕ ಅಧಿಕಾರಿಗಳ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ. ಪ್ರಜಾಪ್ರಭುತ್ವದಲ್ಲಿ ಇವತ್ತು ಅಧಿಕಾರಿಗಳು ಮೇಲುಗೈ ಸಾಧಿಸುವುದಕ್ಕೆ ಆಗುವುದಿಲ್ಲ. ಜನರೇ ಮೇಲುಗೈ ಸಾಧಿಸಬೇಕು. ಬರೀ ಜನರ ಪ್ರತಿನಿಧಿಗಳು ಅಷ್ಟೇ ಅಲ್ಲ, ಜನಸಾಮಾನ್ಯರು ಹೋದರೂ ಕೂಡ ಗೌರವ ಕೊಡತಕ್ಕಂಥ ಮೂಲಭೂತ ಸೌಜನ್ಯ ಇಲ್ಲದೆ ಇದ್ದರೆ ಹೇಗೆ? ಆದ್ದರಿಂದ ನಾನು ತಮ್ಮ ಸಲಹೆ ಒಪ್ಪುತ್ತೇನೆ. ಆದರೆ, ಇದು ಈ ಪ್ರಶ್ನೆಗೆ ನೇರವಾಗಿ ಬರುವುದಿಲ್ಲ. ತಾವು ಒಂದು ಕೆಲಸ ಮಾಡಿ. ಇದು ನಮ್ಮ ಜಿ. ಎ. ಡಿ. ಗೆ ಬರುತ್ತದೆ, ಜನರಲ್ ಆಡ್‌ಮಿನಿಸ್ಟ್ರೇಟೀವ್ ಇತ್ಯಾದಿ ಬೇಡಿಕೆಗಳು ಬಂದಾಗ ತಾವು ಭಾಷಣ ಮಾಡಿ ಹೇಳಿ. ನಾನು ಅಷ್ಟು ಹೊತ್ತಿಗೆ ವಿವರಗಳನ್ನು ಕೂಡ ಸಿದ್ಧಗೊಳಿಸುತ್ತೇನೆ. ಆಗ ಉತ್ತರ ಕೊಡಲಿಕ್ಕೆ ನನಗೆ ಅನುಕೂಲ ಆಗುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಅಧ್ಯಕ್ಷಿಣಿಯವರೇ, ಇವತ್ತು ಒಬ್ಬ ಅಧಿಕಾರಿ ಆ ಮಟ್ಟಿಗೆ ನಡೆದ ಅಂದರೆ, ಅವನಿಗೆ ನೀವು ಸೌಜನ್ಯತೆ ಕಲಿಸದಿದ್ದರೆ ಹೇಗೆ? ಅವನಿಗೆ ಅಟ್‌ಲೀಸ್ಟ್ ಕಣ್ಣು ಕಾಣುವುದಿಲ್ಲ. ಅವನಿಗೆ ಜನರೇ ಕಾಣುವುದಿಲ್ಲ. ಶಾಸಕರೂ ಕಾಣುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ:- ನಿಮ್ಮ ಪ್ರಶ್ನೆ ಕೈ ಬಿಟ್ಟುಬಿಟ್ಟರಿ, ತಾವು ಜಿ. ಎ. ಡಿ. ಬಂದಾಗ ಮಾತನಾಡಿ. ಈಗ ಅದನ್ನೇ ಇಟ್ಟುಕೊಂಡು ಕುಟ್ಟುತ್ತಿದ್ದೀರಲ್ಲಾ?

ಉಪಾಧ್ಯಕ್ಷಿಣಿಯವರು:- ಈಗ ನಿಮ್ಮ ಪ್ರಶ್ನೆ ಮುಗಿಯಿತು. ಈಗ ಶ್ರೀಮತಿ ಮೋಟಮ್ಮನವರು ಮಾನ್ಯ ಕರಿಯಣ್ಣನವರ ಪರವಾಗಿ ಪ್ರಶ್ನೆ ಕೇಳಬಹುದು.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಕೊನೇ ಉಪ ಪ್ರಶ್ನೆಯನ್ನು ಕೇಳಿಬಿಡಿ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಈಗ ಲೇಔಟುಗಳಲ್ಲಿ ಇದುವರೆಗೂ ೩೭,೦೮೦ ಸೈಟುಗಳನ್ನು ಹಂಚಿಕೆ ಮಾಡಿದ್ದೀರಿ, ಇದುವರೆಗೂ ಬಿ. ಡಿ. ಎ. ಗೆ ಎಷ್ಟು ಮನವಿಗಳು ಬಂದಿವೆ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ:- ನೀವು ಈ ಪ್ರಶ್ನೆ ಕೇಳುವಾಗ ವಿವರವಾದ ಪ್ರಶ್ನೆ ಕೇಳಲಿಲ್ಲವಾದ್ದರಿಂದ ನಾವು ಉತ್ತರ ಕೊಡಲು ಬರುವ ಹಾಗೆ ಇಲ್ಲ. ಈಗ ಈ ಮನವಿಗಳನ್ನು ನಾನು ಹೇಗೆ ಕೊಡಲಿ, ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಯಾಕೆಂದರೆ ನೀವು ಇಲ್ಲಿ ಪ್ರಶ್ನೇನೇ ಕೇಳಲಿಲ್ಲ. ನಾನು ಉತ್ತರ ಕೊಡುವುದಕ್ಕೆ ಬರುವ ಹಾಗಿಲ್ಲ. ಕೊಡಬಾರದೆಂದು ಅಲ್ಲ; ನಾನು ತರಿಸಿ ತಮಗೆ ಕಳುಹಿಸಿ ಕೊಡುತ್ತೇನೆ.

ಸರ್ಕಾರಿ ಇಲಾಖೆಗಳಲ್ಲಿ ಪ. ಜಾ/ಪ. ಪಂ. ನೌಕರರು.

೨೧೬೫. ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಎ, ಬಿ, ಸಿ, ಡಿ ವರ್ಗದ ಆಧಾರದ ಮೇಲೆ ಇಲಾಖಾವಾರು ಕಾರ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು?

ಆ) ಇದರಲ್ಲಿ ಇಲಾಖಾವಾರು ಎ, ಬಿ, ಸಿ, ಡಿ ದರ್ಜೆವಾರು ಹರಿಜನ / ಗಿರಿಜನರು ನೌಕರಿಯಲ್ಲಿರುವ ಸಂಖ್ಯೆ ಎಷ್ಟು?

ಇ) ಹರಿಜನ-ಗಿರಿಜನರಿಗೆ ಸಂವಿಧಾನಬದ್ಧವಾದ ಶೇಕಡ ೧೮ರಂತೆ ನೌಕರಿ ಸಿಕ್ಕಿರುವುದೆ?

ಈ) ಹಾಗಿಲ್ಲದಿದ್ದಲ್ಲಿ ಮೀಸಲಾತಿಯ ಕೊರತೆ ತುಂಬಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):-

ಅ) ದಿನಾಂಕ ೩೧-೩-೧೯೯೧ರ ವೇಳೆಗೆ ಇದ್ದ ರಾಜ್ಯ ಸರ್ಕಾರಿ ನೌಕರರ ಸಂಖ್ಯೆ ೪,೦೭,೪೯೪. ಅದರಲ್ಲಿ ಎ, ಬಿ, ಸಿ, ಡಿ ವರ್ಗಕ್ಕೆ ಸೇರಿದವರ ಮಾಹಿತಿಯು ಈ ಕೆಳಕಂಡಂತಿದೆ:-

ಗುಂಪು-ಎ ೧೧೬೯೨

ಗುಂಪು-ಬಿ ೧೯೮೦೨

ಗುಂಪು-ಸಿ ೨೮೧೦೦೩

ಗುಂಪು-ಡಿ ೯೪೯೯೭

ಈವರೆಗಿನ ಇಲಾಖಾವಾರು ಮಾಹಿತಿ ಲಭ್ಯವಿರುವುದಿಲ್ಲ.

ಆ) ೧೯೯೧ನೇ ಮಾರ್ಚಿ ತಿಂಗಳ ಅಂತ್ಯದವರೆಗಿನ ಮಾಹಿತಿಯು ಈ ಕೆಳಕಂಡಂತಿದೆ:-

	ಪರಿಶಿಷ್ಟ ಜಾತಿ		ಪರಿಶಿಷ್ಟ ವರ್ಗ	
	ಒಟ್ಟು ನೌಕರರ ಸಂಖ್ಯೆ	ಶೇಕಡಾವರು	ಒಟ್ಟು ನೌಕರರ ಸಂಖ್ಯೆ	ಶೇಕಡಾವಾರು
	೧	೨	೩	೪
ಗುಂಪು - ಎ	೧೫೪೫	೧೩.೨೧	೨೭೧	೨.೩೨
ಗುಂಪು - ಬಿ	೧೭೨೨	೮.೭೦	೩೬೩	೧.೮೩
ಗುಂಪು - ಸಿ	೩೪೪೯೨	೧೨.೨೭	೫೭೧೫	೨.೦೩
ಗುಂಪು - ಡಿ	೧೯೦೨೮	೨೦.೦೩	೨೯೯೧	೩.೧೫

ಇ) — ಇಲ್ಲ —

ಈ) ಶೇಕಡಾವಾರಿನಲ್ಲಿ ಈ ಜಾತಿಗಳ/ವರ್ಗಗಳ ಜನರ ಸಂಖ್ಯೆಯನ್ನು ಕಾಯ್ದುಕೊಳ್ಳಲು ಸರ್ಕಾರವು ಸತತ ಪ್ರಯತ್ನ ಮಾಡುತ್ತಲೇ ಇದೆ. ಅವುಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿರಿಸಲಾದ ಹುದ್ದೆಗಳಲ್ಲಿ 'ಬ್ಯಾಕ್‌ಲಾಗ್' ಸ್ಥಾನಗಳನ್ನು ವಿಶೇಷ ಪ್ರಯತ್ನದ ಮೂಲಕ

ಭರ್ತಿ ಮಾಡುವಂತೆ ಆದೇಶ ಹೊರಡಿಸಲಾಗಿದೆ. ಇದಕ್ಕಾಗಿ ಆರ್ಥಿಕ ಮಿತವ್ಯಯದ ಆದೇಶಗಳನ್ನು ಸಡಿಲಗೊಳಿಸಲಾಗಿದೆ ಹಾಗೂ ನೇರ ನೇಮಕಾತಿಯ ಪ್ರತಿಬಂಧಕಾಜ್ಞೆಯನ್ನು ಕೂಡ ಸಡಿಲಿಸಿ ಆದೇಶ ಹೊರಡಿಸಲಾಗಿದೆ. ಯಾವ ಯಾವ ವರ್ಗಗಳಲ್ಲಿ ಶೇಕಡ ೧೫ ಮತ್ತು ೩ ಮಟ್ಟ ತಲುಪಿಲ್ಲವೋ ಆ ವರ್ಗಗಳಿಗೆ ನೇರ ನೇಮಕಾತಿ ಮಾಡುವಾಗ ಮೀಸಲಾತಿಯನ್ನು ಶೇಕಡ ೨೦ ಮತ್ತು ೫ ಕ್ಕೆ ಅನುಕ್ರಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕಾಯ್ದಿರಿಸಿ ಆದೇಶ ಹೊರಡಿಸಲಾಗಿದೆ. ಇದಲ್ಲದೆ ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ವಿಶೇಷ ನಿಯಮಾವಳಿಯನ್ನು ರಚಿಸಲಾಗಿದೆ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈಗ ತಾನೇ ನನ್ನ ಹಿಂದಿನ ಪ್ರಶ್ನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಿಸರ್‌ವೇಷನ್ ಬಗ್ಗೆ ಭರವಸೆ ಮತ್ತು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಇಲ್ಲಿ ಮಾನ್ಯ ಕರಿಯಣ್ಣನವರು ಬಹಳ ಸ್ಪಷ್ಟವಾಗಿ ಕೇಳಿದ್ದಾರೆ. ಇಡೀ ರಾಜ್ಯದ ಎಲ್ಲಾ ಇಲಾಖೆಗಳಲ್ಲಿರುವ ಟೋಟಲ್ ಎಂಪ್ಲಾಯೀಸ್ ಎಷ್ಟು ಹಾಗೂ ಅದರಲ್ಲಿ ಹರಿಜನ ಗಿರಿಜನ ನೌಕರರುಗಳು ಎಷ್ಟು ಇದ್ದಾರೆ ಅಂಥ. ಕ್ಲಾಸ್ ೧ರಲ್ಲಿ, ಕ್ಲಾಸ್ ೨ರಲ್ಲಿ ಮತ್ತು ಕ್ಲಾಸ್ ೩ರಲ್ಲಿ ನೋಡಿದರೆ, ಕ್ಲಾಸ್ 'ಎ' ನಲ್ಲಿ ೧೧,೯೭೨ ಟೋಟಲ್ ಎಂಪ್ಲಾಯೀಸ್ ಇದ್ದರೆ ಅದರಲ್ಲಿ ಹರಿಜನರು ಇರುವುದು ೧,೫೪೫. ಅಲ್ಲಿಗೆ ಶೇಕಡ ೧೩ ಆಗುತ್ತದೆ. ಹಾಗೇನೇ ಕ್ಲಾಸ್ ೨ ಅಂದರೆ 'ಬಿ' ಗ್ರೂಪ್‌ನಲ್ಲಿ ೧೯,೮೦೨ ನಲ್ಲಿ ಹರಿಜನರಿರುವುದು ೧,೭೨೨ ಅಂದರೆ ಶೇಕಡ ೮.೭೦ ರಷ್ಟು ಆಗುತ್ತದೆ. ಹಾಗೇನೇ 'ಸಿ' ಗ್ರೂಪ್‌ನಲ್ಲಿ ೨,೮೧,೦೦೩ ಇದ್ದರೆ ಅದರಲ್ಲಿ ಸುಮಾರು ೩೪,೯೯೨ ಅಂದರೆ ಶೇಕಡ ೧೨ ಆಗುತ್ತದೆ. ಹೀಗೆ ಪ್ರತಿಯೊಂದರಲ್ಲೂ ಶೇಕಡ ೧೮ರಷ್ಟು ತುಂಬಲಿಕ್ಕೆ ಆಗಲಿಲ್ಲ. ಬಹಳ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕೊನೆಯಲ್ಲಿ ಹೀಗೆ ಹೇಳುತ್ತಿದ್ದಾರೆ, ಏನೆಂದರೆ, ವಿಶೇಷ ಪ್ರಯತ್ನದ ಮೂಲಕ ಈ ಬ್ಯಾಕ್‌ಲಾಗ್ ಅನ್ನು ಭರ್ತಿಮಾಡುವಂತೆ ಆದೇಶ ಹೊರಡಿಸಲಾಗಿದೆ. ಮತ್ತು ಆರ್ಥಿಕ ಮಿತಿ ಮೇಲಿನ ಆದೇಶಗಳನ್ನು ಸಡಿಲಗೊಳಿಸಲಾಗಿದೆ ಎಂದು. ಈ ಆದೇಶವನ್ನು ಯಾವಾಗ ಹೊರಡಿಸಲಾಗಿದೆ ಮತ್ತು ಇದು ಅಂಬೇಡ್ಕರ್‌ರವರ ಜನ್ಮ ಶತಾಬ್ಧಿ ವರ್ಷವಾದ್ದರಿಂದ, ಈ ಶೇಕಡ ೧೮ರಷ್ಟು ಏನಿದೆ ಅದು ಎಸ್. ಸಿ. ಮತ್ತು ಎಸ್. ಟಿ.ಯವರಿಗೆ ಆ ಕೋಟಾವನ್ನು ತುಂಬಲಿಕ್ಕೆ ಈ ವರ್ಷನೇ ಪ್ರಯತ್ನ ಮಾಡುತ್ತಾರೆಯೇ?

೧೦.೫೫ ಎ. ಎಂ.

ಶ್ರೀ ಎಸ್. ಬಂಗಾರಪ್ಪ:- ತಮ್ಮ ಮೊದಲನೇ ಪ್ರಶ್ನೆಗೆ ಸಾಕಷ್ಟು ಉತ್ತರವನ್ನು ಕೊಟ್ಟಿದ್ದೇನೆ. ಅಲ್ಲದೆ ಇದನ್ನು ಕವರ್ ಮಾಡಿದ್ದೇನೆ. ನಾವೇ ಒಂದು ವಿಚಾರದಲ್ಲಿ ಒಪ್ಪಿಕೊಂಡಿದ್ದೇವೆ. ಎಲ್ಲವನ್ನೂ ಅಷ್ಟು ವಿವರವಾಗಿ ಮಾತನಾಡುವುದಕ್ಕಿಂತ ಈ ಹರಿಜನ ಗಿರಿಜನರಿಗೆ ಸಂವಿಧಾನ ಬದ್ಧವಾಗಿ ಶೇಕಡ ೧೮ರಂತೆ ನೌಕರಿ ಸಿಕ್ಕಿದೆಯೇ ಎಂದು ಮಾನ್ಯ ಕರಿಯಣ್ಣನವರು ಕೇಳಿದ್ದಾರೆ. ಇದಕ್ಕೆ ನಮ್ಮ ಉತ್ತರ 'ಇಲ್ಲ' ಎಂದು ನಾವೇ ಒಪ್ಪಿಕೊಂಡಿದ್ದೇವೆ. ಅಂದಮೇಲೆ ಶೇಕಡಾವಾರು ಎಷ್ಟು ಎಂಬುದು ಗೊತ್ತಾಗುತ್ತದೆ. ಆದರೆ ಇದರ ಅರ್ಥ ಏನೆಂದರೆ ಅದು ಬಡ್ತಿ ಪ್ರಶ್ನೆ ಇರಬಹುದು, ಅಥವಾ ನೇಮಕಾತಿ ಪ್ರಶ್ನೆ ಇರಬಹುದು, ರಿಸರ್ವೇಷನ್‌ಕೋಟಾ ಇರಬಹುದು. ಇದರಲ್ಲಿ ಸಂಪೂರ್ಣವಾಗಿ ಇಲ್ಲ ಎಂದು ಸರ್ಕಾರ ಒಪ್ಪಿಕೊಂಡಮೇಲೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂಬುದು

ನಮ್ಮ ಮುಂದೆ ಉಳಿಯುತ್ತದೆ. ಈಗಾಗಲೇ ನಾನು ತಮ್ಮ ಮುಖಾಂತರ ಈ ಸದನಕ್ಕೆ ತಿಳಿಸಿದ್ದೇನೆ; ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಪ್ರೊಮೋಶನಲ್ ಆಪರ್ಚುನಿಟೀಸ್‌ನಿಂದ ತುಂಬುವುದಕ್ಕೆ ಮೊದಲು ಬ್ಯಾಕ್‌ಲಾಗ್ ತುಂಬದೆ ಬೇರೆ ಯಾವುದನ್ನೂ ಮಾಡಬಾರದೆಂದು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೇವೆ. ಈ ರೀತಿ ತುಂಬುವುದಕ್ಕೆ ನಾವು ಆದೇಶವನ್ನು ಕೊಟ್ಟಿದ್ದೇವೆ. ಅದನ್ನು ಜಾರಿಗೆ ಕೊಡತಕ್ಕ ಸಂಪೂರ್ಣ ಮನಸ್ಸನ್ನು ನಾವು ಇಟ್ಟುಕೊಂಡೇ ಕೆಲಸ ಮಾಡಿದ್ದೇವೆ. ಈಗಾಗಲೇ ತಮ್ಮ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರವನ್ನು ಕೊಟ್ಟಿದ್ದೇನೆ. ಆದ್ದರಿಂದ ಈ ಪ್ರಶ್ನೆ ಮತ್ತೆ ಉದ್ಭವಿಸುವುದಿಲ್ಲ.

ಶ್ರೀಮತಿ ಮೋಟಮ್ಮ:- ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕೂಡ ೧೮ ಪರ್ಸೆಂಟ್ ಫಿಲಪ್ ಆಗಿಲ್ಲ. ಅಲ್ಲಿಯೂ ಕೂಡ ೧೮ ಪರ್ಸೆಂಟ್ ತುಂಬುವುದಕ್ಕೆ ಆದೇಶ ಕೊಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ:- ಈ ಪ್ರಶ್ನೆ ಇಲ್ಲಿ ಬಂದಿಲ್ಲ. ಇದು ಸರ್ಕಾರೀ ನೌಕರರಿಗೆ ಮಾತ್ರ ಎಂದು ತಾವು ಹೇಳಿದ್ದೀರಿ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಎಂದರೆ ನಮ್ಮ ಸರ್ಕಾರೀ ಸ್ವಾಮ್ಯತ್ವದಲ್ಲಿ ಅನೇಕ ಫ್ಯಾಕ್ಟರಿಗಳಿವೆ. ಈ ನೀತಿಯನ್ನು ಅಲ್ಲೂ ಕೂಡ ಅನುಸರಿಸಬೇಕೆಂದು ಈಗಾಗಲೇ ನಾವು ತಿಳಿಸಿದ್ದೇವೆ. ಕಾರ್ಪೋರೇಷನ್‌ಗಳು, ಬೋರ್ಡ್‌ಗಳೂ ಕೂಡ ಈ ರಿಸರ್ವೇಷನ್ ಪಾಲಿಸಿಯನ್ನು ಅನುಸರಿಸಬೇಕೆಂದು ಹೇಳಿದ್ದೇವೆ. ಇದೇ ರೀತಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲೂ ಕೂಡ ಮಾಡಬೇಕೆಂದು ಆಸೆಯನ್ನಿಟ್ಟುಕೊಂಡಿದ್ದೇವೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಕುಡಿಯುವ ನೀರಿನ ಅಭಾವದ ಬಗ್ಗೆ

೧೨೦೪. ಶ್ರೀ ಎಸ್. ಎಸ್. ಪಾಟೀಲ್ (ಶಿರಹಟ್ಟಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಹಟ್ಟಿ ತಾಲ್ಲೂಕಿನ ಲಕ್ಷ್ಮೇಶ್ವರ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಸಮಸ್ಯೆಯನ್ನು ನಿವಾರಿಸಲು ಕೈಗೊಂಡ ಕ್ರಮವೇನು?

ಶ್ರೀ ಕೆ. ಜೆ. ಜಾರ್ಜ್:- (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಕುಡಿಯುವ ನೀರಿನ ತೀವ್ರ ಅಭಾವವನ್ನು ನೀಗಿಸಲು ಬರಗಾಲ ಕಾಮಗಾರಿಯಡಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ. ಇದಲ್ಲದೇ ಈ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಯೋಜನೆಯನ್ನು ತಯಾರಿಸಲು ತನಿಖೆಯನ್ನು ಮಾಡಲಾಗುತ್ತಿದೆ.

ಶ್ರೀ ಎಸ್. ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷಣಿಯವರೇ, ಈ ಸಮಸ್ಯೆಯನ್ನು ನಿವಾರಿಸಲು ಕೈಗೊಂಡ ಕ್ರಮವೇನು? ಕುಡಿಯುವ ನೀರಿನ ಅಭಾವವನ್ನು ಆಗಿಂದಾಗ್ಗೆ ನೀಗಿಸಲು ಏನು ಪರಿಹಾರ ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೀರಿ ಎಂದರೆ ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ಎಂದು ಹೇಳಿದ್ದೀರಿ ಹಾಗೂ ಈ ಪಟ್ಟಣಕ್ಕೆ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಲು ಯೋಜನೆಯನ್ನು

ತಯಾರಿಸಲು ತನಿಖೆಯನ್ನು ಮುಂದುವರಿಸುತ್ತಿದ್ದೇವೆ ಎಂದು ಹೇಳಿದ್ದೀರಿ. ಇದು ಯಾವ ತನಿಖೆ? ಇದನ್ನು ಯಾವ ರೀತಿ ಮಾಡುತ್ತಿದ್ದೀರಿ? ಲಕ್ಷ್ಮೇಶ್ವರಕ್ಕೆ ಯಾವಾಗ ಕುಡಿಯುವ ನೀರನ್ನು ಕೊಡುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣೆಯವರೇ, ಈಗಾಗಲೇ ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರ ನಗರದಲ್ಲಿ ಕುಡಿಯುವ ನೀರಿನ ಅಭಾವ ಇರುವುದರಿಂದ ಅಲ್ಲಿ ಕೊಳವೆ ಬಾವಿಗಳನ್ನು ತೆಗೆಸುತ್ತಿದ್ದೇವೆ ಇದೂ ಅಲ್ಲದೆ ಖಾಯಂ ಆಗಿ ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯುವುದಕ್ಕೆ ವಾಟರ್ ಸ್ಕೀಂನ್ನು ೧೯೯೨-೯೩ರ ಸಾಲಿನಲ್ಲಿ ಸೇರಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಆದೇಶವನ್ನು ಕೊಟ್ಟಿದ್ದಾರೆ. ಇದರ ಪ್ರಕಾರ ಈಗಾಗಲೇ ಕೆ. ಯು. ಡಬ್ಲ್ಯು. ಎಸ್. ನವರಿಗೆ ಒಂದು ಎಸ್ಟಿಮೇಟ್ ಮಾಡಿ ಇದರಲ್ಲಿ ಸೇರಿಸುವುದಕ್ಕೆ ಆದೇಶ ಕೊಟ್ಟಿದ್ದೇವೆ.

ಶ್ರೀ ಎಸ್. ಎಸ್. ಪಾಟೀಲ:- ಜಾತಕ ಪಕ್ಷಿ ಮಳೆಗಾಗಿ ಕಾಯುವಂತೆ ಲಕ್ಷ್ಮೇಶ್ವರದ ಜನರು ಸರ್ಕಾರದಿಂದ ಕೊಡುವ ನೀರಿಗಾಗಿ ಕಾಯುತ್ತಿದ್ದಾರೆ. ಆದಷ್ಟು ಬೇಗ ಇದನ್ನು ಮುಗಿಸಿಕೊಡುತ್ತೀರಾ. ಈ ವರ್ಷವೇ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರಾ?

ಶ್ರೀ ಕೆ. ಜೆ. ಜಾರ್ಜ್:- ಮಾಡುತ್ತೇವೆ. ಈಗಾಗಲೇ ನಾವು ಎಸ್ಟಿಮೇಟನ್ನು ಮಾಡುತ್ತಿದ್ದೇವೆ. ಎಸ್ಟಿಮೇಟ್ ಮಾಡಿದ ಮೇಲೆ ಅದಕ್ಕೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಿ ಆದಷ್ಟು ಬೇಗ ಮುಗಿಸಬೇಕಾಗುತ್ತದೆ. ಬಹುಶಃ ಈ ವರ್ಷ ಇದು ಆಗುವುದಿಲ್ಲ. ಇದನ್ನು ಸಂಪೂರ್ಣವಾಗಿ ಮಾಡಬೇಕಾದರೆ ೨-೩ ವರ್ಷ ಆಗಬಹುದು.

ಮಳೆಯ ನೀರನ್ನು ಒಳಚರಂಡಿಗೆ ಸೇರಿಸುವ ಬಗ್ಗೆ

೧೪೮೦. ಡಾ|| ಎ. ಬಿ. ಮಲಕರೆಡ್ಡಿ (ಯಾದಗಿರಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಮಳೆಯ ನೀರು ಮತ್ತು ಕೊಳಚೆ ನೀರು ಸೇರುವುದನ್ನು ತಡೆಗಟ್ಟಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಜಲಮಂಡಳಿ ವಿಫಲವಾಗಿದೆ ಎಂಬುದು ನಿಜವೆ?

೨) ಇದು ನಿಜವಾದಲ್ಲಿ, ಯಾವುದಾದರೂ ನಿದರ್ಶನಗಳು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಬೆಂಗಳೂರು ಜಲಮಂಡಳಿಯ ಗಮನಕ್ಕೆ ತಂದಿರುತ್ತಾರೆಯೇ?

೩) ಇಂತಹ ಸಂದರ್ಭಗಳಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

೧) ಇಲ್ಲ. ಬೆಂಗಳೂರು ಜಲಮಂಡಳಿಯು ಒಳಚರಂಡಿ ವ್ಯವಸ್ಥೆಯು ಕೊಳಚೆ ನೀರನ್ನು ಪ್ರತ್ಯೇಕವಾಗಿ ಸಾಗಿಸುವ ಕ್ರಮವನ್ನು ಒಳಗೊಂಡಿದೆ. ಮಳೆಯ ನೀರು ಹರಿಯುವ ಚರಂಡಿಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ನಿರ್ವಹಿಸುತ್ತದೆ.

ಎಸ್. ಟಿ. ಬೆಡ್. ಬಡಾವಣೆಯಲ್ಲಿ ಮಳೆ ನೀರಿನ ಚರಂಡಿಯಿದ್ದು, ಇದಕ್ಕೆ ಅಕ್ಕಪಕ್ಕದಲ್ಲಿರುವಂತೆ ರೆವಿನ್ಯೂ ಬಡಾವಣೆಯವರು ಮತ್ತು ಖಾಸಗಿ ಬಡಾವಣೆಯವರು ತಮ್ಮ ಮನೆಗಳ ಕೊಳಚೆ ನೀರನ್ನು

ಈ ಮಳೆ ನೀರಿನ ಚರಂಡಿಗೆ ಬಿಟ್ಟಿರುತ್ತಾರೆ.

೨) ಹೌದು.

೩) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈಗಾಗಲೇ ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಮತ್ತು ಆಯುಕ್ತರು, ಬೆಂಗಳೂರು ಮಹಾನಗರಪಾಲಿಕೆಯವರನ್ನು ಮಳೆಯ ನೀರನ್ನು ಒಳಚರಂಡಿಯ ಕೊಳಚೆ ನೀರಿಗೆ ಸೇರದಂತೆ ಪ್ರತಿಬಂಧಕ ಕ್ರಮವನ್ನು ತೆಗೆದುಕೊಳ್ಳುವಂತೆ ಸೂಚನೆ ನೀಡಲಾಗಿದೆ.

ಡಾ: ಎ. ಬಿ. ಮಲಕರೆಡ್ಡಿ:- ಮಾನ್ಯ ಅಧ್ಯಕ್ಷರೇ, ಈ ಬೆಂಗಳೂರು ಒಳಚರಂಡಿ ಮಂಡಳಿಯವರು ಅನೇಕ ಕಾಲೋನಿಗಳಲ್ಲಿ ಸ್ಯೂವರೇಜ್ ಸಿಸ್ಟಮ್ ಕನೆಕ್ಷನ್ ಸರಿಯಾಗಿ ಮಾಡಿಕೊಟ್ಟಿಲ್ಲ. ಮತ್ತು ಕೆಲವು ಕಡೆ ಒಳಚರಂಡಿ ನೀರು ಸರಾಗವಾಗಿ ಹೋಗಲು ಯಾವ ವ್ಯವಸ್ಥೆಯನ್ನೂ ಮಾಡಿಲ್ಲ. ನಿರ್ದಿಷ್ಟವಾದ ಒಂದು ಉದಾಹರಣೆಯನ್ನು ಹೇಳುವುದಾದರೆ ರಾಮಯ್ಯ ಮೆಡಿಕಲ್ ಕಾಲೇಜ್ ಏನಿದೆ, ಅದರ ಸುತ್ತಮುತ್ತಲ ಪ್ರದೇಶದಲ್ಲಿ ಮಳೆ ಬಿದ್ದ ನೀರು ಒಳಚರಂಡಿಯ ಮೂಲಕ ಹೋಗದಂತೆ ಮಾಡದೇ ಇರುವುದರಿಂದ ಅಲ್ಲಿಯ ವಾತಾವರಣ ಕಲುಷಿತವಾಗಿದೆ. ಇದು ಒಂದನೆಯದು; ಎರಡನೆಯದಾಗಿ, ಮಳೆಗಾಲದಲ್ಲಿ ರೈನ್ ವಾಟರ್ ಜೊತೆ ಒಳಚರಂಡಿಯ ನೀರು ಹೋಗಿ ವಾಟರ್ ಸಪ್ಲೈ ಕೂಡ ಕಂಟಾಮಿನೇಟ್ ಆಗುತ್ತಿದೆ. ಹೀಗಾಗಿ ಈ ಎರಡು ದೃಷ್ಟಿಯಿಂದ ಅಲ್ಲಿಯ ಜನರಿಗೆ ತೊಂದರೆಯಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೋ ಇಲ್ಲವೋ ಎಂದು ಇಲ್ಲಿ ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೀರಿ. ಇದು ಸತ್ಯಕ್ಕೆ ದೂರವಾದುದು.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣಿಯವರೇ, ಅಲ್ಲಿ ಏನಾಗಿದೆಯೆಂದರೆ ಕೆಲವು ಅನ್‌ಆಥರೈಸ್ಡ್ ಲೇಔಟ್ ಆಗಿದ್ದು, ಅಲ್ಲಿ ಸಾಕಷ್ಟು ಮನೆಗಳು ಬಂದಿವೆ. ನಮ್ಮ ಲೇಔಟ್‌ಗಳಲ್ಲಿ ಅಥವಾ ಕಾರ್ಪೋರೇಷನ್ ಏರಿಯಾಗಳಲ್ಲಿ ನಾವು ಸ್ಯೂವರೇಜ್ ವಾಟರ್ ಮತ್ತು ರೈನ್ ವಾಟರ್‌ನ್ನು, ಅದು ಎಲ್ಲಿಂದಲೇ ಬರಲಿ ಅದನ್ನು ಸೆಪರೇಟ್ ಆಗಿ ತೆಗೆದುಕೊಂಡು ಹೋಗುತ್ತಿದ್ದೇವೆ. ಅನ್‌ಆಥರೈಸ್ಡ್ ಲೇಔಟ್‌ಗಳಲ್ಲಿ ಸುಮಾರು ಒಂದು ಲಕ್ಷ, ಒಂದೂವರೆ ಲಕ್ಷ ಮನೆಗಳು ಈಗ ಬಂದಿರಬಹುದು. ಅಂಥ ಲೇಔಟ್‌ಗಳು ಬಂದಿರುವುದರಿಂದ ಈಗಾಗಲೇ ನಾವು ಅವುಗಳ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇವುಗಳನ್ನು ರೆಗ್ಯುಲರೈಸ್ ಮಾಡಿದ ಮೇಲೆ ಬಹುಶಃ ಅಲ್ಲಿ ಡ್ರೈನೇಜ್ ವ್ಯವಸ್ಥೆ ಮಾಡಿಕೊಡಬಹುದು. ತಾವು ಹೇಳಿದ ರಾಮಯ್ಯ ಮೆಡಿಕಲ್ ಕಾಲೇಜ್ ಪಕ್ಕದಲ್ಲಿ ಬಿ. ಇ. ಎಲ್. ಸೊಸೈಟಿಗೆ ಸೇರಿದಂಥ ಮನೆಗಳಿವೆ. ನಾನು ಅದನ್ನು ವೆರಿಫೈ ಮಾಡಿ ಅಲ್ಲಿಗೆ ಏನು ಕೆಲಸ ಆಗಬೇಕಾಗಿದೆಯೋ ಅದನ್ನು ತೆಗೆದುಕೊಳ್ಳಲಿಕ್ಕೆ ಆದೇಶ ಕೊಡುತ್ತೇನೆ.

ರಾಜ್ಯದಲ್ಲಿ ಪ್ರಶಸ್ತಿ ಪಡೆದ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನದ ಬಗ್ಗೆ

೧೧೨೪. ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಸಾಹಿತ್ಯ, ಕ್ರೀಡೆ ಮತ್ತು ವಿವಿಧ ರಂಗದಲ್ಲಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದಂತಹ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನ ಕೊಡಬೇಕೆಂದು ಸರ್ಕಾರ ಯಾವಾಗ ತೀರ್ಮಾನಿಸಿತು?

ಆ) ಮೇಲಿನ ತೀರ್ಮಾನದಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಜನ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದವರಿಗೆ ಸರ್ಕಾರದಿಂದ ಉಚಿತ ನಿವೇಶನ ಹಂಚಲಾಗಿದೆ (ಪೂರ್ಣ ಮಾಹಿತಿಯೊಂದಿಗೆ ಪಟ್ಟಿ ಕೊಡುವುದು)?

ಇ) ಈ ಸೌಲಭ್ಯ ಪಡೆಯಲು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪಡೆದವರಿಂದ ಬಂದ ಅರ್ಜಿಗಳೆಷ್ಟು; ಹಾಗೂ ಇನ್ನು ಎಷ್ಟು ಅರ್ಜಿಗಳು ಬಾಕಿ ಇವೆ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಯಾವುದನ್ನು ತೀರ್ಮಾನಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಕೇಳಿರುವ ಪ್ರಶ್ನೆಗೆ ಯಾವುದೇ ತೀರ್ಮಾನವನ್ನು ತೆಗೆದುಕೊಂಡಿಲ್ಲವಾದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ನನಗೆ ಗೊತ್ತಿರುವ ಹಾಗೆ ಜನತಾ ಸರ್ಕಾರ ಇದ್ದಾಗ ಕನ್ನಡ ಸಾಹಿತ್ಯ, ಕ್ರೀಡೆಗಳಲ್ಲಿ, ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಗಳನ್ನು ಪಡೆದ ವ್ಯಕ್ತಿಗಳಿಗೆ ಅವರು ಕೇಳದೆಯೇ ಸೈಟುಗಳನ್ನು ಕೊಡಬೇಕು ಎಂದು ತೀರ್ಮಾನವಾಗಿದೆ. ಇಂಟರ್‌ನ್ಯಾಷನಲ್ ಅವಾರ್ಡ್, ಸ್ಟೇಟ್ ಅವಾರ್ಡ್ ತೆಗೆದುಕೊಂಡವರಿಗೆ, ಕಲೆಗಳಲ್ಲಿ ಮತ್ತು ಸಾಹಿತ್ಯದಲ್ಲಿ ಮುಂದೆ ಬಂದವರಿಗೆ ಮತ್ತು ಸ್ಪೋರ್ಟ್ಸ್‌ನಲ್ಲಿ ಅವಾರ್ಡ್ ತೆಗೆದು ಕೊಂಡವರಿಗೆ ಸೈಟನ್ನು ಕೊಟ್ಟಿದ್ದಾರೆ. ಉದಾಹರಣೆಗೆ ಹೇಳಬೇಕಾದರೆ ನಮ್ಮ ಇದಿನಬ್ಬನವರು ಹೇಳುತ್ತಿದ್ದರು ಮಾನ್ಯ ಕೈಯಾರ ಕಿಯಣ್ಣರೈ ರವರಿಗೆ ಸೈಟ್ ಸಿಕ್ಕಿದೆ ಎಂದು ಹೇಳಿ. ಆದರೆ ಇಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಹೇಳಿದರೆ ನನಗೆ ಆಶ್ಚರ್ಯವಾಗುತ್ತದೆ. ಒಂದು ವೇಳೆ ಹಾಗಿಲ್ಲದಿದ್ದರೆ ಯುವಜನ ಮತ್ತು ಕ್ರೀಡಾ ಇಲಾಖೆಯ ಬಗ್ಗೆ ಮಾತನಾಡಬೇಕಾದರೆ ಕೆಲವರು ಆಬ್‌ಜೆಕ್ಟ್ ಮಾಡಿದರು.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣಿಯವರೇ, ಶ್ರೀಮತಿ ಮೋಟಮ್ಮನವರು ಕೇಳಿರುವ ಪ್ರಶ್ನೆ ಏನೆಂದರೆ ಕರ್ನಾಟಕ ರಾಜ್ಯದಲ್ಲಿ ಸಾಹಿತ್ಯ, ಕ್ರೀಡೆ ಮತ್ತು ವಿವಿಧ ರಂಗಗಳಲ್ಲಿ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಯನ್ನು ಪಡೆದಂಥ ವ್ಯಕ್ತಿಗಳಿಗೆ ಸರ್ಕಾರದಿಂದ ಉಚಿತ ನಿವೇಶನಗಳನ್ನು ಕೊಡಬೇಕೆಂದು ಸರ್ಕಾರ ಯಾವಾಗ ತೀರ್ಮಾನಿಸಿದ್ದು ಎಂದು? ಉಚಿತ ನಿವೇಶನ ಕೊಡಬೇಕೆಂದು ನಾವು ಯಾವಾಗಲೂ ತೀರ್ಮಾನ ಮಾಡಿಲ್ಲ. ಏನು ಮಾಡಿದ್ದೇವೆಂದರೆ ಔಟ್ ಆಫ್ ಟರ್ನ್‌ನಲ್ಲಿ ಇವರಿಗೆ ಕೊಡಬೇಕು ಮತ್ತು ಅವರೂ ಸಹ ಹಣವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಅವರು ಉಚಿತವಾಗಿ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದೇವೆ.

ಶ್ರೀಮತಿ ಮೋಟಮ್ಮ:- ಮಾನ್ಯ ಅಧ್ಯಕ್ಷಣಿಯವರೇ, ಬೆಂಗಳೂರಿನಲ್ಲಿ ಕೇಳಿದ್ದರೆ ಉಚಿತವಾಗಿ ಕೊಡಲು ಬರುವುದಿಲ್ಲ. ಒಂದು ವೇಳೆ ಅವರು ಇರುವ ಕಡೆ ಕೇಳಿದರೆ ಅಲ್ಲಿ ಉಚಿತವಾಗಿ ಕೊಡಲಿಕ್ಕೆ ಏನೂ ತೊಂದರೆ ಇಲ್ಲ; ಅವರು ಈ ರಾಜ್ಯದ ಹೆಮ್ಮೆಗೆ ಪಾತ್ರರಾಗಿರುತ್ತಾರೆ. ಅವರು ಎಲೆಯ ಮರೆಯ ಕಾಯಿಯಂತೆ ರಾಜ್ಯಕ್ಕೆ ಸೇವೆ ಸಲ್ಲಿಸಿ ರಾಷ್ಟ್ರ ಮತ್ತು ರಾಜ್ಯ ಪ್ರಶಸ್ತಿಯನ್ನು

ಪಡೆದಿರತಕ್ಕಂಥ ವ್ಯಕ್ತಿಗಳು. ಅವರಿಗೆ ನಾವು ಸೈಟನ್ನು ಕೊಟ್ಟರೆ ನಾವು ಏನೂ ಕಳೆದುಕೊಳ್ಳುವುದಿಲ್ಲ. ದಯವಿಟ್ಟು ಎಷ್ಟು ಅಪ್ಲಿಕೇಷನ್ಸ್ ಪೆಂಡಿಂಗ್ ಇವೆ; ಎಷ್ಟು ಜನ ಅವಾರ್ಡ್ ವಿನ್ನರ್ಸ್ ಇದ್ದಾರೆ, ಅವರಿಗೆ ಕೂಡಲೇ ಸೈಟ್‌ಗಳನ್ನು ವಿತರಣೆ ಮಾಡಲಿಕ್ಕೆ ತಾವು ಆದೇಶ ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್:- ಮಾನ್ಯ ಅಧ್ಯಕ್ಷಣೆಯವರೇ, ನಾನು ಈಗಾಗಲೇ ಹೇಳಿದ್ದೇನೆ; ಸೈಟನ್ನು ಉಚಿತವಾಗಿ ಕೊಡಲು ಸರ್ಕಾರದ ಮುಂದೆ ಯಾವುದೇ ವಿಷಯವಿಲ್ಲ. ಅವರು ಸಲಹೆಯನ್ನು ಕೊಟ್ಟಿದ್ದಾರೆ. ಬಹುಶಃ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕ್ಯಾಬಿನೆಟ್ ಮುಂದೆ ಈ ವಿಚಾರವನ್ನು ತಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಾವು ಅವರ ಸಲಹೆಯನ್ನು ಪರಿಶೀಲನೆ ಮಾಡಿ ಅದರ ಬಗ್ಗೆ ಏನು ಮಾಡಲಿಕ್ಕೆ ಆಗುತ್ತದೆನ್ನುವುದನ್ನು ನೋಡುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಿಕ್ಕನಾಯಕನಹಳ್ಳಿ ತಾಲ್ಲೋಕು ಹಂದನಕೆರೆಗೆ ಪೋಲೀಸ್ ಠಾಣೆ ತೆರೆಯುವುದು

(೨೮೯೩) ೪೦೩. ಶ್ರೀ ಜೆ. ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆಗೆ ಒಂದು ಪೋಲೀಸ್ ಸ್ಟೇಷನ್ ಅಗತ್ಯವಿರುವುದು ನಿಜವಲ್ಲವೆ, ಹಾಗೂ ಅಲ್ಲಿನ ಅಪರಾಧಗಳ ಸಂಖ್ಯೆ ಹೇರಳವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಸದರಿ ವರ್ಷದಲ್ಲಿ ಮಂಜೂರು ಮಾಡುವ ಆಲೋಚನೆ ಏನಾದರೂ ಇದೆಯೇ ?

ಇ) ಹಾಗಿದ್ದಲ್ಲಿ ಅಲ್ಲಿನ ಪೋಲೀಸ್ ಸ್ಟೇಷನ್ ಕಾರ್ಯವನ್ನು ಎಂದಿನಿಂದ ಆರಂಭಿಸಲಾಗುವುದು ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಮಾನ್ಯ ಸದಸ್ಯರ ಪ್ರಶ್ನೆಯಿಂದ ಅಗತ್ಯವಿದೆಯೆಂದು ಈಗ ಗಮನಕ್ಕೆ ಬಂದಿದೆ.

ಆ) ಮತ್ತು (ಇ) ಮುಂದಿನ ವರ್ಷಗಳಲ್ಲಿ ಹಂತಹಂತವಾಗಿ ಪೋಲೀಸ್ ಠಾಣೆಗಳನ್ನು ತೆರೆಯವಾಗ ಈ ಸ್ಥಳದ ಅಗತ್ಯತೆಯನ್ನು ಗಮನದಲ್ಲಿಟ್ಟು ಕೊಳ್ಳಲಾಗುವುದು.

ಡಿ. ವೈ. ಎಸ್. ಪಿ. ಯವರ ಕಛೇರಿಯನ್ನು ರಾಮನಗರದಲ್ಲಿ ತೆರೆಯುವುದು

೪೦೮ (೨೧೬೭) ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆಗಾಗ್ಗೆ ಕೋಮುಗಲಭೆ ಮರುಕಳಿಸುವ ರಾಮನಗರಕ್ಕೆ ಒಂದು ಡಿ. ವೈ. ಎಸ್. ಪಿ. ಕಛೇರಿ ಮತ್ತು ರಾಮನಗರದ ಐಜೂರು ಬಡಾವಣೆಗೆ ಒಂದು ಪೋಲೀಸ್ ಠಾಣೆಯನ್ನು ತೆರೆಯಲು ಸರ್ಕಾರ ತೀರ್ಮಾನಿಸಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಇವೆರಡನ್ನೂ ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಅ) ಸದ್ಯದಲ್ಲಿ ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ಲಾಸ್ಟಿಕ್ ಚೀಲಗಳಲ್ಲಿ ಸಾರಾಯಿ ವಿತರಣೆ ಬಗ್ಗೆ

(೨೨೮೦) ೪೧೭. ಶ್ರೀ ಎಸ್. ಶಫಿ ಅಹಮದ್ (ತುಮಕೂರು):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಅನಾರೋಗ್ಯದ ದೃಷ್ಟಿಯಿಂದ ಸಾರಾಯಿಯನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ವಿತರಿಸುವ ಕ್ರಮವನ್ನು ತಡೆಯಲು ತೆಗೆದುಕೊಂಡ ಸರ್ಕಾರದ ಕ್ರಮವೇನು?

೨) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾರಾಯಿ ಬಾಟ್ಲಿಂಗ್ ಘಟಕಗಳು ಎಷ್ಟು?

೩) ಮೊಹರಾದ ಸೀಸೆಗಳಲ್ಲಿ ಮತ್ತು ಪ್ಲಾಸ್ಟಿಕ್ ಚೀಲಗಳಲ್ಲಿ ಮಾರಾಟವಾದ ಸಾರಾಯಿಯ ಪ್ರಮಾಣ (ಜಿಲ್ಲಾವಾರು ಮಾಹಿತಿ ಒದಗಿಸುವುದು).

೪) ಈ ಸನ್ನದುಗಳ ನವೀಕರಣದ ಹಂತವನ್ನು ತಿಳಿಸುವುದು.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

೧) ಸಾರಾಯಿಯನ್ನು ಮೊಹರಾದ ಸೀಸೆಗಳಲ್ಲಿ ವಿತರಿಸುತ್ತಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಕಾರ್ಯಕ್ರಮ ಮಾನ್ಯ ನ್ಯಾಯ ಮೂರ್ತಿ ಜಸ್ಟೀಸ್ ದೇಸಾಯಿ ಕಮೀಷನ್‌ನವರು ಮಾಡಿರುವ ಶಿಫಾರಸ್ಸುಗಳಲ್ಲಿ ಒಂದು.

೨) ೧೬ ಘಟಕಗಳು ಮತ್ತು ೫ ಡಿಪೋಗಳು.

೩) ಮೊಹರಾದ ಸೀಸೆಗಳಲ್ಲಿ ಮಾರಾಟವಾದ ಸಾರಾಯಿಯ ಮೊತ್ತ:-

	ಲೀಟರ್‌ಗಳಲ್ಲಿ
(ಜುಲೈ ನಿಂದ ಜೂನ್) ೧೯೯೦-೯೧	೭,೪೦,೩೧,೫೧೩
(ಜುಲೈ ರಿಂದ ಜನವರಿ) ೧೯೯೧-೯೨	೩,೯೭,೨೧,೧೬೦

ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

೪) ಹಾಲಿ ನಡೆಯುತ್ತಿರುವ ಸಾರಾಯಿ ಘಟಕಗಳ ಪರವಾನಗಿ ಅವಧಿಯು ೩೦-೬-೯೨ಕ್ಕೆ ಮುಕ್ತಾಯಗೊಳ್ಳುತ್ತದೆ. ನವೀಕರಣದ ಸಲುವಾಗಿ ಈ ಸಂಬಂಧ ನಿಯಮಗಳ ಅನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

ANNEXURE

QUANTITY OF ARRACK IS SOLD IN SEALED BOTTLES FOR THE YEARS 1990-91 AND 1991-92

Sl. No.	DISTRICT	1990-91 (July to June)	1991-92 (July 91 to Jan. 92)
1.	Bangalore (U)	1,47,23,754	64,42,425
2.	Bangalore (R)	32,48,566	15,11,395
3.	Belgaum	43,47,193	25,53,056
4.	Bellary	43,63,047	24,12,396
5.	Bidar	15,04,134	10,25,816
6.	Bijapur	24,06,320	14,81,520
7.	Chickmagalur	21,52,512	12,40,221
8.	Chitradurga	24,61,423	15,27,107
9.	D. Kannada	77,44,667	43,73,746
10.	Dharwad	29,30,109	17,51,347
11.	Gulbarga	30,32,647	15,62,603
12.	Hassan	24,50,328	16,49,895
13.	Kodagu	9,39,610	5,41,685
14.	Kolar	28,05,414	17,65,299
15.	Mandya	29,68,963	14,24,251
16.	Mysore	40,45,839	20,40,278
17.	Raichur	31,64,151	18,46,496
18.	Shimoga	42,48,333	20,01,076
19.	Tumkur	28,01,462	15,33,986
20.	U. Kannada	16,93,041	10,37,163
	TOTAL	7,40,31,513	3,97,21,160

ಉಪಾಧ್ಯಕ್ಷರು:- ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

<u>ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.</u>

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೇ, ದಿನಾಂಕ ೨೪-೩-೯೨ರ ಲಿಖಿತ ಮೂಲಕ ಉತ್ತರಿಸುವ ೨೧ನೇ ಪಟ್ಟಿಯಲ್ಲಿರುವ ೫೦ ಪ್ರಶ್ನೆಗಳ ಪೈಕಿ ೨೭ ಪ್ರಶ್ನೆಗಳನ್ನು ಹೊರತುಪಡಿಸಿ ಇನ್ನುಳಿದ ೨೩ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಚಿಕ್ಕಮಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಕಾಮಗಾರಿ ಕೆಲಸದ ವೆಚ್ಚದ ಬಗ್ಗೆ

೧೪೫೧ (೧೩೩೮) ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ನಗರದ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗೆ ಇಲ್ಲಿಯವರೆಗೆ ಸರ್ಕಾರಕ್ಕೆ ತಗಲಿರುವ ವೆಚ್ಚ ಎಷ್ಟು?

ಆ) ಈ ಕಾಮಗಾರಿಯು ಪೂರ್ಣಗೊಂಡಿದೆಯೇ ಹಾಗೂ ಪೂರ್ಣಗೊಂಡಿದ್ದಲ್ಲಿ ಇದನ್ನು ಚಿಕ್ಕಮಗಳೂರು ನಗರ ಸಭೆಯ ಅಧೀನಕ್ಕೆ ವಹಿಸಿಕೊಡಲಾಗಿದೆಯೇ?

ಇ) ಒಳಚರಂಡಿ ಕಾಮಗಾರಿಯನ್ನು ಸರ್ಕಾರದಿಂದ ಅಧಿಕೃತವಾಗಿ ಮಂಜೂರಾದ ರೂಪುರೇಷೆಗಳ ಮೇರೆಗೆ ಸೂಚಿಸುವಂತೆ ಕೈಗೊಳ್ಳಲಾಗಿದೆಯೇ?

ಈ) ಈ ಕಾಮಗಾರಿಗೆ ಕೆಳಕಂಡ ಸಂಸ್ಥೆಗಳಿಂದ ಪಡೆದಿರುವ ಸಾಲದ ಮೊತ್ತವೆಷ್ಟು? (ಸಂಸ್ಥೆವಾರು ವಿವರ ನೀಡುವುದು) (೧) ಜೀವ ವಿಮಾ ನಿಗಮ (ಎಲ್‌ಐಸಿ), (೨) ಕರ್ನಾಟಕ ಸರ್ಕಾರ ಮತ್ತು (೩) ಇತರೆ ಹಣಕಾಸು ಸಂಸ್ಥೆಗಳು.

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತು ನಗರಾಭಿವೃದ್ಧಿ ಸಚಿವರು):-

ಅ) ಫೆಬ್ರವರಿ ೧೯೯೨ರ ವರೆಗೆ ವೆಚ್ಚ ರೂ. ೫೧.೨೧ ಲಕ್ಷಗಳು.

ಆ) ಸದರಿ ಕಾಮಗಾರಿಯಲ್ಲಿ ಕೊಳಚೆ ನೀರನ್ನು ಶುದ್ಧೀಕರಿಸಲು ನಾಲ್ಕು ಮೆಕ್ಯಾನಿಕಲ್ ಏರೇಟರ್ ಅಳವಡಿಸುವ ಕೆಲಸವನ್ನು ಬಿಟ್ಟು ಮಿಕ್ಕ ಎಲ್ಲಾ ಕೆಲಸಗಳು ೧೯೮೩-೮೪ರಲ್ಲಿಯೇ ಪೂರ್ಣಗೊಳಿಸಲಾಯಿತು. ನಗರ ಸಭೆಯವರು ಸದರಿ ಕಾಮಗಾರಿಯನ್ನು ವಹಿಸಿಕೊಂಡಿರುವುದಿಲ್ಲ.

ಇ) ಹೌದು.

ಈ) ೧)	ಜೀವ ವಿಮಾ ನಿಗಮದಿಂದ	ರೂ. ೨೬.೬೨ ಲಕ್ಷ
೨)	ಕರ್ನಾಟಕ ಸರ್ಕಾರದಿಂದ	ರೂ. ೨೩.೮೬ ಲಕ್ಷ
೩)	ಡಿಬೆಂಚರ್ ಮೂಲಕ	ರೂ. ೩.೦೦ ಲಕ್ಷ
೪)	ನಗರಸಭಾ ವತಿಯಿಂದ	ರೂ. ೩.೦೧ ಲಕ್ಷ
	ಒಟ್ಟು	ರೂ. ೫೬.೪೯ ಲಕ್ಷ

ರಾಜಾಜಿನಗರದ ವ್ಯಾಪ್ತಿಯಲ್ಲಿ ಬರುವ ರೆವಿನ್ಯೂ ನಿವೇಶನದಾರರಿಗೆ ಮರು ಹಂಚಿಕೆಯ ಅರ್ಜಿ ಬಗ್ಗೆ

೧೪೫೭ (೨೧೯೯) ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ರಾಜಾಜಿನಗರದ ೨ನೇ ಹಂತ ೩ನೇ ಹಂತ ಮಂಜುನಾಥನಗರ ವ್ಯಾಪ್ತಿಯಲ್ಲಿರುವ ರೆವಿನ್ಯೂ ನಿವೇಶನದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಮರು

ಹಸ್ತಾಂತರಣ, ಮರು ಹಂಚಿಕೆ ಮಾಡಲು ಕೋರಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು

ಆ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮರು ಹಸ್ತಾಂತರ/ಮರು ಹಂಚಿಕೆ ಮಾಡಿ ಹಕ್ಕು ಪ್ರಮಾಣ ಪತ್ರವನ್ನು ಎಷ್ಟು ರೆವಿನ್ಯೂ ನಿವೇಶನದಾರರಿಗೆ ಕೊಡಲಾಗಿದೆ?

ಇ) ಇನ್ನು ಉಳಿದ ನಿವೇಶನದಾರರು ಎಷ್ಟು? ಹಾಗೂ ಅವರಿಗೆ ಯಾವಾಗ ಹಕ್ಕು ಪ್ರಮಾಣ ಪತ್ರವನ್ನು ಕೊಡಲಾಗುವುದು? ಹಾಗೂ ಕೊಡದೇ ಇರಲು ಕಾರಣವೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):-

ಅ) ಈ ತನಕ ೧೦,೫೬೭ ಅರ್ಜಿಗಳು.

ಆ) ದಿನಾಂಕ ೮-೫-೧೯೮೬ ರಂದು ತಡೆಯಾಜ್ಞೆ ನೀಡುವುದಕ್ಕೆ ಮುಂಚೆ ೩೯೫೨ ನಿವೇಶನದಾರರಿಗೆ ಹಕ್ಕು ಪತ್ರ ಕೊಡಲಾಗಿದೆ.

ಇ) ಇನ್ನೂ ೬೬೧೫ ನಿವೇಶನದಾರರಿದ್ದು ಅವರಿಗೆ ಹಕ್ಕು ಪ್ರಮಾಣ ಪತ್ರವನ್ನು ಕೊಟ್ಟಿರುವುದಿಲ್ಲ. ಮರು ಹಂಚಿಕೆ ಮಾಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆಯಲ್ಲಿ ಅವಕಾಶವಿಲ್ಲವೆಂಬ ಬಗ್ಗೆ ಹಲವಾರು ಪ್ರಕರಣಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ನೀಡಿದ ತೀರ್ಪುಗಳ ಹಿನ್ನೆಲೆಯಲ್ಲಿ ಮರು ಹಂಚಿಕೆ ಮಾಡದಂತೆ ತಡೆಯಾಜ್ಞೆ ಜಾರಿಯಲ್ಲಿರುತ್ತದೆ.

ಜನತಾ ಮನೆ ಮತ್ತು ಇಂದಿರಾ ಆವಾಜ್ ಮನೆಗಳ ಬಗ್ಗೆ

೧೪೫೯ (೨೦೬೬) ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೮-೮೯, ೧೯೮೯-೯೦, ೧೯೯೦-೯೧ ಹಾಗೂ ೧೯೯೧-೯೨ನೇ ಸಾಲಿನಲ್ಲಿ ಅಪೂರ್ಣವಾಗಿರುವ ಹಾಗೂ ಪ್ರಾರಂಭ ಮಾಡದೇ ಇರುವ ಜನತಾ ಮನೆ, ಇಂದಿರಾ ಆವಾಜ್ ಮನೆಗಳ ಸಂಖ್ಯೆ ಎಷ್ಟು?

ಆ) ಸದರಿ ಅಪೂರ್ಣವಾಗಿರುವ ಹಾಗೂ ಪ್ರಾರಂಭಿಸದೇ ಇರುವ ಮನೆಗಳನ್ನು ಪೂರ್ಣಗೊಳಿಸಲು ಬೇಕಾಗಿರುವ ಹಣವೆಷ್ಟು?

ಇ) ಈ ಮನೆಗಳನ್ನು ಪೂರ್ಣಗೊಳಿಸಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

	ಅಪೂರ್ಣಗೊಂಡ ಮನೆಗಳು		ಪ್ರಾರಂಭ ಮಾಡದೇ ಇರುವ ಮನೆಗಳು	
ವರ್ಷ	ಜನತಾ	ಇಂದಿರಾ ಆವಾಜ್ ಯೋಜನೆ	ಜನತಾ	ಇಂದಿರಾ ಆವಾಜ್ ಯೋಜನೆ
೧೯೮೮-೮೯	೪೨೫೬೭	೧೪	ಯಾವುದೂ ಇಲ್ಲ	

೧೯೮೯-೯೦	೪೭೯೬೧	೨೧೭
೧೯೯೦-೯೧	—	೭೪೭
೧೯೯೧-೯೨	—	೩೧೮೪
ಜುಮ್ಲಾ	೯೦೩೨೮	೬೧೬೪

(೧೯೯೦-೯೧ ಹಾಗೂ ೧೯೯೧-೯೨ ಸಾಲಿನ ಜನತಾ ಮನೆಗಳನ್ನು 'ಆಶ್ರಯ' ಯೋಜನೆಯಡಿಯಲ್ಲಿ ವಿಲೀನಗೊಳಿಸಲಾಗಿದೆ)

ಆ) ಅಪೂರ್ಣವಾಗಿರುವ ಜನತಾ ಮನೆಗಳನ್ನು ಪೂರ್ಣಗೊಳಿಸಲು ರೂ. ೪೦೧೪.೨೩ ಲಕ್ಷಗಳು ಬೇಕಾಗಿದೆ. ಅಪೂರ್ಣವಾಗಿರುವ ಇಂದಿರಾ ಆವಾಜ್ ಯೋಜನೆ ಮನೆಗಳನ್ನು ಪೂರ್ಣಗೊಳಿಸಲು ರೂ. ೧೨.೭೦೭ ಲಕ್ಷಗಳು ಬೇಕಾಗಿದೆ.

ಇ) ಮನೆಗಳ ನಿರ್ಮಾಣದ ಪ್ರಗತಿಯ ಮೇರೆಗೆ ಹಣ ಬಿಡುಗಡೆ ಮಾಡಲಾಗುವುದು.

ಆಶ್ರಯ ಯೋಜನೆ ಬಗ್ಗೆ

೧೪೭೨. (೨೯೯೦) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು 'ಆಶ್ರಯ' ಯೋಜನೆಯಡಿಯಲ್ಲಿ ಎಷ್ಟು ಮನೆಗಳನ್ನು ನಿರ್ಮಿಸುತ್ತಿದೆ? (ಜಿಲ್ಲಾವಾರು ಅಂಕಿ ಅಂಶ ನೀಡುವುದು).

ಆ) ಇದಕ್ಕಾಗಿ ಎಷ್ಟು ಹಣ ಖರ್ಚಾಗುತ್ತದೆ. ಇದುವರೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ಜಿಲ್ಲಾವಾರು ಅಂಕಿ ಅಂಶ ನೀಡುವುದು)

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಒಟ್ಟು ೨,೩೫,೦೦೦ ಮನೆಗಳನ್ನು ಕಟ್ಟಲು ಯೋಜಿಸಲಾಗಿದೆ. ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ೧೦೦೦ ಮನೆಗಳನ್ನು ನಿರ್ಮಿಸಲು ಯೋಜಿಸಿದೆ.

ಆ) ಇದಕ್ಕಾಗಿ ಒಟ್ಟು ೪೮೯.೩೦ ಕೋಟಿ ರೂ. ಗಳು ಖರ್ಚಾಗುತ್ತದೆ.

ಇದುವರೆಗೆ ೧೭.೩೦ ಕೋಟಿ ರೂ. ಗಳನ್ನು ಕರ್ನಾಟಕ ಗೃಹ ನಿರ್ಮಾಣ ಮಂಡಳಿಗೆ ಸರ್ಕಾರವು ಬಿಡುಗಡೆ ಮಾಡಲಾಗಿದ್ದು, ಈ ಹಣದಲ್ಲಿ ಕರ್ನಾಟಕ ಗೃಹ ಮಂಡಳಿಯು ೩.೭೦ ಕೋಟಿ ರೂ. ಗಳನ್ನು ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು ಮತ್ತು ಬೆಂಗಳೂರು ನಗರಗಳಿಗೆ ಮರು ಹಂಚಿಕೆ ಮಾಡಿದೆ.

ಕಾವೇರಿ ೩ನೇ ಹಂತದ ಯೋಜನೆ ಜಾರಿಯ ಬಗ್ಗೆ

೨೧೮೯. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ೩ನೇ ಹಂತದ ಯೋಜನೆಯು ಸಂಪೂರ್ಣವಾಗಿ ಮುಗಿದಿದೆಯೇ? ಇದು ನಿಜವೇ?

ಆ) ಹಾಗಿದ್ದಲ್ಲಿ ಈಗಿನ ಪರಿಸ್ಥಿತಿ?

ಇ) ಇದುವರೆಗೆ ಈ ಯೋಜನೆಗೆ ಒಟ್ಟು ಎಷ್ಟು ಹಣ ವೆಚ್ಚವಾಗಿದೆ?

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ಇನ್ನು ಎಷ್ಟು ಹಣ ಬೇಕಾಗುವುದು?

ಉ) ಸರ್ಕಾರವು ಕಾವೇರಿ ನಾಲ್ಕನೇ ಘಟ್ಟದ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುವುದು?

ಊ) ಇದರ ಅಂದಾಜು ವೆಚ್ಚವೆಷ್ಟು?

ಋ) ಈ ಯೋಜನೆಗೆ ಹಣ ಒದಗಿಸುವ ಮೂಲಗಳಾವುವು?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಕಾವೇರಿ ನೀರು ಸರಬರಾಜು ೩ನೇ ಹಂತದ ಯೋಜನೆಯು ಇನ್ನೂ ಪೂರ್ಣಗೊಂಡಿಲ್ಲ.

ಆ) ಕಾವೇರಿ ೩ನೇ ಹಂತದ ಯೋಜನೆಯನ್ನು ಜೂನ್ ೧೯೯೨ರ ವೇಳೆಗೆ ಪೂರ್ಣಗೊಳಿಸಲು ಯೋಚಿಸಲಾಗಿದೆ. ಶೇಕಡಾ ೮೦ ಭಾಗ ಮುಗಿದಿರುತ್ತದೆ ಉಳಿದ ಭಾಗ ಪ್ರಗತಿಯಲ್ಲಿದೆ.

ಇ) ಇದುವರೆಗೆ ಕಾವೇರಿ ೩ನೇ ಹಂತದ ಯೋಜನೆಗೆ ಒಟ್ಟು ೧೭೭.೩೪ ಕೋಟಿ ರೂಪಾಯಿಗಳು ಫೆಬ್ರವರಿ ೧೯೯೨ರ ಅಂತ್ಯದವರೆಗೆ ವೆಚ್ಚವಾಗಿದೆ.

ಈ) ಈ ಯೋಜನೆಯನ್ನು ಪೂರ್ಣಗೊಳಿಸಲು ೫೧.೮೦ ಕೋಟಿ ರೂ. ಗಳು ಬೇಕಾಗುವುದು.

ಉ) ಕಾವೇರಿ ನಾಲ್ಕನೇ ಘಟ್ಟದ ಯೋಜನೆಯನ್ನು ಎರಡು ಹಂತಗಳಲ್ಲಿ ತೆಗೆದುಕೊಳ್ಳಲು ಯೋಚಿಸಲಾಗಿದ್ದು, ಮೊದಲ ಹಂತವನ್ನು ೧೯೯೨-೯೩ನೇ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಊ) ಕಾವೇರಿ ನಾಲ್ಕನೇ ಹಂತದ ಒಟ್ಟು ಅಂದಾಜು ವೆಚ್ಚ ೧೦೦೦ ಕೋಟಿ ರೂ. ಗಳು.

ಋ) ಕಾವೇರಿ ನಾಲ್ಕನೇ ಹಂತದ ಯೋಜನೆಗಾಗಿ ಹಣ ಒದಗಿಸಲು ಈ ಕೆಳಕಂಡ ಮೂಲಗಳನ್ನು ಕೇಳಲಾಗುವುದು.

೧) ಜೀವವಿಮಾ ಇಲಾಖೆ, ೨) ರಾಜ್ಯ ಸರ್ಕಾರ, ೩) ಹುಡ್ಕೋ, ೪) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ೫) ಬೆಂಗಳೂರು ಮಹಾನಗರ ಪಾಲಿಕೆ, ೬) ಕೇಂದ್ರ ಸರ್ಕಾರದ ಆಧೀನ ಇಲಾಖೆಗಳು, ೭) ರಕ್ಷಣಾ ಇಲಾಖೆ, ೮) ರೈಲ್ವೆ ಇಲಾಖೆ ಮತ್ತು ಭಾರೀ ಕಾರ್ಖಾನೆಗಳು.

ರಾಜ್ಯ ನೀರಾವರಿ ಯೋಜನೆಗಳಿಗೆ ವೆಚ್ಚವನ್ನು ಭರಿಸಲು ಸರ್ಕಾರಿ ನೌಕರರ ವೇತನದಲ್ಲಿ ಶೇ. ೧೦ ರಷ್ಟು ಕಡಿತ ಮಾಡಿರುವ ಬಗ್ಗೆ

೧೪೭೯ (೨೧೬೩) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ನೀರಾವರಿ ಯೊಜನೆಗಳಿಗೆ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರಿ ನೌಕರರಿಗೆ,

ಸಹಾಯಾನುದಾನ ಪಡೆಯುತ್ತಿರುವ ಸಂಸ್ಥೆಗಳ ನೌಕರರಿಗೆ, ರಾಜ್ಯ ಮಟ್ಟ ಹಾಗೂ ಸರ್ಕಾರದ ಬೊಕ್ಕಸದಿಂದ ಪಡೆಯುತ್ತಿರುವ ನೌಕರರಿಗೆ ವೇತನದಲ್ಲಿ ಶೇ. ೧೦ ರಷ್ಟು ಕಡಿತ ಮಾಡಿರುವುದು ವಾಸ್ತವವೇ?

ಆ) ಹಾಗಿದ್ದಲ್ಲಿ ಈ ಹಣವನ್ನು ಐದು ವರ್ಷಗಳ ನಂತರ ಸಮಾನ ಪಾಲಿನಲ್ಲಿ ಸರ್ಕಾರವು ವಾಪಸ್ಸು ಮಾಡಬಹುದು (ಅಂದರೆ ರೂ. ೧೦೦೦ ಗಳನ್ನು ನೌಕರ ನೀಡಿದ್ದಲ್ಲಿ ಸರ್ಕಾರವು ರೂ. ೨೦೦೦ ರೂಗಳನ್ನು ನೀಡುವುದು)?

ಇ) ಆದಾಯ ತೆರಿಗೆ ಸೌಲಭ್ಯವನ್ನು ತನ್ನ ನೌಕರರಿಗೆ ಒದಗಿಸಲು ರಾಜ್ಯ ಸರ್ಕಾರವು ಭಾರತ ಸರ್ಕಾರದ ಸಹಮತಿ ಪಡೆಯುತ್ತಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) — ಇಲ್ಲ —

ಆ) ಮೇಲಿನ ಉಪ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಮೇಲಿನ ಉಪ ಪ್ರಶ್ನೆ (ಅ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೀಸಲಾತಿ ಹುದ್ದೆಗಳನ್ನು ಪರಿಶೀಲಿಸುವ ಬಗ್ಗೆ

೧೪೮೦ (೨೧೬೪). ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಇಲಾಖೆ, ಸಹಕಾರ ಸಂಘಗಳು ಹಾಗೂ ಇತರ ಎಲ್ಲಾ ಸ್ವಾಮ್ಯ ಸರ್ಕಾರಿ ರಂಗದ ಉದ್ಯಮೆಗಳು ಪೌರಾಡಳಿತ ಮಂಡಳಿ ಮತ್ತು ಹರಿಜನ-ಗಿರಿಜನರ ಹುದ್ದೆಗಳ ಮೀಸಲಾತಿಯನ್ನು ಪರಿಶೀಲಿಸುವವರಾರು?

ಆ) ಪರಿಶೀಲಿಸುವುದಕ್ಕೆ ಪ್ರತ್ಯೇಕ ಇಲಾಖೆಯಿಲ್ಲದಿದ್ದಲ್ಲಿ ಮೀಸಲಾತಿಯನ್ನು ಕಂಡು ಹಿಡಿಯಲು ಅನುಸರಿಸುತ್ತಿರುವ ವಿಧಾನಗಳಾವುವು?

ಇ) ಮೀಸಲಾತಿಯನ್ನು ಪಾಲಿಸದಿದ್ದವರ ಮೇಲೆ ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಸಂಬಂಧಪಟ್ಟ ಆಡಳಿತ ಇಲಾಖೆ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರದ ಮೀಸಲಾತಿ ನೀತಿಯನ್ನು ಉಲ್ಲಂಘಿಸುವ ಅಧಿಕಾರಿಗಳ ಮೇಲೆ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ ೧೯೯೦ರ ಮೇರಗೆ ದಂಡ ವಿಧಾನವನ್ನು ವಿಧಿಸಬಹುದಾಗಿದೆ.

ವಿಶ್ವ ವಿದ್ಯಾಲಯ ಮಟ್ಟದಲ್ಲಿ ಹರಿಜನ-ಗಿರಿಜನರನ್ನು ನೇರ ನೇಮಕಾತಿ ಮಾಡುವುದರ ಬಗ್ಗೆ

೧೪೮೧ (೨೧೬೬) ಶ್ರೀ ಕರಿಯಣ್ಣ (ಹೊಳೆ ಹೊನ್ನೂರು):- ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವವಿದ್ಯಾಲಯ ಮಟ್ಟದಲ್ಲಿ ಹರಿಜನ-ಗಿರಿಜನರ ಪೈಕಿ ಅರ್ಹತೆಯಲ್ಲಿ ಮೊದಲನೆಯ, ಎರಡನೆಯ, ಮೂರನೆಯ ಸ್ಥಾನದಲ್ಲಿ ಪಾಸು ಮಾಡಿದವರಿಗೆ ನೇರ ನೇಮಕಾತಿ ನಿಯಮದ ಪ್ರಕಾರ ಸಂದರ್ಶನ ಪಡೆದಿದ್ದು ಯಾರಿಗೂ ನೌಕರಿ ನೀಡದಿರಲು ಕಾರಣಗಳೇನು?

ಆ) ಯಾವಾಗ ಇವರಿಗೆ ನೌಕರಿ ಕೊಡಲಾಗುವುದು?

ಇ) ಈ ನಿಯಮದ ಪ್ರಕಾರ ನೌಕರಿಗೆ ಅರ್ಹರಾದವರ ಸಂಖ್ಯೆ ಎಷ್ಟು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

ಅ) ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದ ಕಾರಣ ಆಯ್ಕೆಯಾದ ಅಭ್ಯರ್ಥಿಗಳ ನೇಮಕ ಮಾಡಲಾಗಲಿಲ್ಲ.

ಆ) ಕರ್ನಾಟಕ ಆಡಳಿತ ನ್ಯಾಯ ಮಂಡಲಿಯು ಪುನಃ ಆಯ್ಕೆ ನಡೆಸಲು ಆದೇಶಿಸಿದ್ದು ಈ ವಿಷಯ ಪರಿಶೀಲಿಸಲಾಗುತ್ತಿದೆ.

ಇ) ಒಟ್ಟು ೩೯ ಅಭ್ಯರ್ಥಿಗಳು.

ವಿಧಾನ ಸೌಧದ ನೌಕರರು ಕೆಲಸದ ವೇಳೆ ಸ್ಥಳದಲ್ಲಿ ಇಲ್ಲದಿರುವ ಬಗ್ಗೆ

೧೪೯೨ (೨೨೨೨). ಶ್ರೀ ಆರ್. ಎನ್. ನಾಯ್ಕ (ಭಟ್ಕಳ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧದಲ್ಲಿ ಕೆಲಸ ಮಾಡುತ್ತಿರುವ ಅನುಕ್ರಮವಾಗಿ ಎ, ಬಿ, ಸಿ, ಡಿ ವರ್ಗದ ನೌಕರರ ಸಂಖ್ಯೆ ಎಷ್ಟು?

ಆ) ವಿಧಾನ ಸೌಧದಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾಗದ ಮತ್ತು ಹಾಜರಿ ಹಾಕಿಟ್ಟು ಕೆಲಸ ಮಾಡುವ ಸ್ಥಳದಲ್ಲಿರದೇ ಬೇರೆ ಕೆಲಸಕ್ಕೆ ಹೋಗುವ ನೌಕರರ ಬಗ್ಗೆ ದೂರುಗಳು ಬಂದಿದ್ದನ್ನು ಸರ್ಕಾರ ಗಮನಿಸಿದೆಯೇ?

ಇ) ಮತ್ತು ಅಂಥ ನೌಕರರ ಮೇಲೆ ಕ್ರಮ ಜರುಗಿಸಲಾಗಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):-

೧) ಗ್ರೂಪ್ - ಎ ೩೧೧

೨) ಗ್ರೂಪ್ - ಬಿ ೨೯೦

೩) ಗ್ರೂಪ್ - ಸಿ ೨,೦೬೫

೪) ಗ್ರೂಪ್ - ಡಿ ೬೦೭

ಒಟ್ಟು	೩,೨೭೩

ಆ) ನೌಕರರ ನಿಯಮಿತ ಹಾಜರಾತಿ ಬಗ್ಗೆ ಕಟ್ಟು ನಿಟ್ಟಾಗಿ ಪಾಲಿಸುವಂತೆ ಆಗಿಂದಾಗ್ಗೆ ಸುತ್ತೋಲೆಗಳ ಮೂಲಕ ಸೂಚನೆಗಳನ್ನು ನೀಡಲಾಗುತ್ತಿದೆ. ಸೂಚನೆಗಳನ್ನು ಉಲ್ಲಂಘಿಸಿದ ನೌಕರರ ಮೇಲೆ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳು ಕ್ರಮ ಜರುಗಿಸುತ್ತಾರೆ. ಇಂತಹ ಪ್ರಕರಣಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಒದಗಿಸಲಾಗುವುದು.

ಇ) ತೆಗೆದುಕೊಂಡಿರುವ ಕ್ರಮವನ್ನು ಎಲ್ಲಾ ಇಲಾಖೆಗಳಿಂದ ಸಂಗ್ರಹಿಸಿ ಒದಗಿಸಲಾಗುವುದು.

ಅಂಬೇಡ್ಕರ್ ಶತಮಾನೋತ್ಸವ ಅಂಗವಾಗಿ ಖೈದಿಗಳನ್ನು ಬಿಡುಗಡೆ ಮಾಡುವುದರ ಬಗ್ಗೆ

೧೪೮೩ (೨೨೨೪) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ಖೈದಿಗಳನ್ನು ಅವರ ಶಿಕ್ಷೆಯ ಅವಧಿ ಮುಗಿಯುವುದಕ್ಕಿಂತ ಮೊದಲೇ ವಿಶೇಷ ಸಂದರ್ಭ ಇದ್ದುದರಿಂದ ಅವರನ್ನು ಬಿಡುಗಡೆ ಮಾಡಲು ಸರ್ಕಾರದವರು ಯೋಚಿಸಿರುವರೇ ?

ಆ) ರಾಜ್ಯದಲ್ಲಿ ಎಷ್ಟು ಜನ ಖೈದಿಗಳು ಜೀವಾವಧಿ ಶಿಕ್ಷೆ ಹೊಂದಿದ ಮತ್ತು ಫಾಸಿಗೆ ಆರ್ಡರ್ ಮಾಡಿದ ಖೈದಿಗಳು ಇರುವರು ? (ಇವರು ಯಾವ ಯಾವ ಜೈಲಿನಲ್ಲಿ ಎಷ್ಟು ಎಷ್ಟು ಜನರು ಇರುವರು. ವಿವರವಾಗಿ ಜೈಲಿನ ಹೆಸರು ಸಹಿತ ಕೊಡುವುದು).

ಇ) ವಿವಿಧ ರಾಜ್ಯಗಳಲ್ಲಿ ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ಶಿಕ್ಷೆಗೊಳಗಾದ ಖೈದಿಗಳಿಗೆ ವಿಶೇಷ ರಿಯಾಯಿತಿ ಕೊಟ್ಟು ಅವರನ್ನು ಅವಧಿ ಪೂರ್ವಕ್ಕಿಂತ ಮೊದಲೇ ಬಿಡುಗಡೆ ಮಾಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರದವರು ಇವರನ್ನು ಸಹ ಅವಧಿಪೂರ್ವ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವರೆ ?

ಶ್ರೀ ಡಿ. ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು):-

ಅ) ಹೌದು. ಈ ಬಗ್ಗೆ ಈಗಾಗಲೇ ಕ್ರಮ ಕೈಗೊಂಡಿದ್ದು ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ೧೧ ಜನ ಖೈದಿಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ರಾಜ್ಯದಲ್ಲಿ ಫಾಸಿಗೆ ಆರ್ಡರ್ ಮಾಡಿದ (ಮರಣ ದಂಡನೆಗೆ ಗುರಿಯಾದ) ಖೈದಿಗಳು ಯಾರೂ ಇರುವುದಿಲ್ಲ.

ದಿನಾಂಕ ೨೯-೨-೧೯೯೨ ರಂದು ರಾಜ್ಯದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾದವರ ಒಟ್ಟು ಸಂಖ್ಯೆ ೮೪೨ ಇರುತ್ತದೆ. ಸದರಿ ಬಂಧಿಗಳು ಈ ಕೆಳಗೆ ನಮೂದಿಸಿರುವ ಕಾರಾಗೃಹಗಳಲ್ಲಿದ್ದಾರೆ:-

ಕ್ರಮ ಸಂಖ್ಯೆ	ಜೈಲಿನ ಹೆಸರು ಮತ್ತು ಊರಿನ ಹೆಸರುಗಳು	ಗಂ	ಹೆಂ	ಒಟ್ಟು
೧.	ಕೇಂದ್ರ ಕಾರಾಗೃಹ, ಬೆಂಗಳೂರು	೨೨೦	೧೨	೨೩೨
೨.	ಕೇಂದ್ರ ಕಾರಾಗೃಹ, ಬೆಳಗಾಂ	೨೪೨	೫	೨೪೭
೩.	ಕೇಂದ್ರ ಕಾರಾಗೃಹ, ಬಳ್ಳಾರಿ	೫೧	೧	೫೨
೪.	ಕೇಂದ್ರ ಕಾರಾಗೃಹ, ಬಿಜಾಪುರ	೫೫	—	೫೫
೫.	ಕೇಂದ್ರ ಕಾರಾಗೃಹ, ಗುಲ್ಬರ್ಗಾ	೧೩೨	೨	೧೩೪
೬.	ಕೇಂದ್ರ ಕಾರಾಗೃಹ, ಮೈಸೂರು	೬೪	೨	೬೬
೭.	ಜಿಲ್ಲಾ ಕಾರಾಗೃಹ, ಶಿವಮೊಗ್ಗ	೧	—	೧
೮.	ಜಿಲ್ಲಾ ಕಾರಾಗೃಹ, ರಾಯಚೂರು	೨	—	೨
೯.	ಜುವೆನೈಲ್ ಜೈಲು, ಧಾರವಾಡ	೧೬	—	೧೬
೧೦.	ಬಯಲು ಬಂಧೀಖಾನೆ, ಕೋರಮಂಗಲ	೩೭	—	೩೭
	ಒಟ್ಟು	೮೨೦	೨೨	೮೪೨

ಇ) ಇಲ್ಲ.

ಈ) ಪರಿಶೀಲನೆ ಮಾಡಲಾಗುತ್ತಿದೆ

ಬೈಲಹೊಂಗಲ ನಗರದ ಬಡಾವಣೆಯಲ್ಲಿ ಕುಡಿಯುವ ನೀರಿನ ತೊಂದರೆಯಿರುವುದರ ಬಗ್ಗೆ

೧೪೮೪ (೨೨೪೯) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದ ಬಡಾವಣೆಯಲ್ಲಿ ಕುಡಿಯುವ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ೨೦ ಬೋರ್‌ವೆಲ್‌ಗಳನ್ನು ಅಭಾವ ನಿಧಿ ಹಣದಿಂದ ತೋಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):-

ಅ) ಹೌದು.

ಆ) ಮೇ ೧೯೯೧ರಲ್ಲಿ ೪ ಕೊಳವೆ ಬಾವಿಗಳನ್ನು ತೋಡಲಾಗಿದೆ. ೩ ಹೆಚ್ಚು ಇಳುವರಿ ಇರುತ್ತವೆ. ಈ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪು ಹಾಗೂ ಪೈಪ್ ಲೈನ್ ಹಾಕಲು ಜಿಲ್ಲಾಧಿಕಾರಿ, ಬೆಳಗಾವಿಯವರು ೩.೮೩ ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದಾರೆ. ಅವಶ್ಯಕತೆ ಬಂದರೆ ಇನ್ನೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಲಾಗುವುದು.

ಡಕಾಯಿತರ ಹಾವಳಿ ತಪ್ಪಿಸುವ ಬಗ್ಗೆ

೧೪೮೬ (೨೨೫೯) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ):- ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ-ಗುಡಗಲ್ ರಸ್ತೆಯ ಮೇಲೆ ಮಲಖೇಡ ಸೇಡಂ ಮಧ್ಯದಲ್ಲಿ ೮ನೇ ನಂಬರ್ ಗೇಟ್ ಸಮೀಪ ದರೋಡೆಕೋರರು ದರೋಡೆ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ದರೋಡೆಕೋರರು ತೆಲುಗು ಭಾಷೆ ಆಡುವವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಗಮನಿಸಿದರೆ ಆಂಧ್ರ ಪ್ರದೇಶದಲ್ಲಿರುವ ನಕ್ಸಲೈಟ್‌ಗಳೆಂಬ ಭಾವನೆ ಉಂಟಾಗುವುದಿಲ್ಲವೆ?

ಇ) ಇದನ್ನು ತಡೆಗಟ್ಟಲು ಸುತ್ತಮುತ್ತಲೂ ಸಿಮೆಂಟ್ ಕಾರ್ಖಾನೆಗಳು ಇರುವ ಮಲಖೇಡ ಹಾಗೂ ಗಡಿ ಪ್ರಾಂತ್ಯದಲ್ಲಿ ಬರುವ ಹೈದ್ರಾಬಾದ್-ಬಿಜಾಪುರ ರಸ್ತೆ ಮಧ್ಯದಲ್ಲಿರುವ ಮೇದಕೆ ಸರಹದ್ದಿನಲ್ಲಿ ಪೋಲೀಸ್ ಠಾಣೆಗಳ ವ್ಯವಸ್ಥೆ ಮಾಡಿ, ಈ ಹಾವಳಿಯನ್ನು ತಪ್ಪಿಸಬಹುದಲ್ಲವೆ?.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು):-

ಅ) ಹೌದು, ಬಂದಿದೆ. ಈ ದರೋಡೆಯು ದಿನಾಂಕ ೩ ಮತ್ತು ೪ನೇ ಮಾರ್ಚ್ ೧೯೯೨ರಂದು ರಾತ್ರಿ ನಡೆದಿದೆ.

ಆ) ಸಾಕ್ಷಿಗಳ ಹೇಳಿಕೆಗನುಸಾರ, ದರೋಡೆಕೋರರು ತೆಲುಗು, ಹಿಂದಿ ಮತ್ತು ಲಂಬಾಣಿ ಭಾಷೆಗಳನ್ನು ಮಾತನಾಡುತ್ತಿದ್ದರೆಂದು ತಿಳಿದು ಬಂದಿದೆ. ಹಾಗೂ ಇವರು ವೃತ್ತಿಪರ ದರೋಡೆಕೋರರು ಎಂದು ತನಿಖೆಯಿಂದ ತಿಳಿದು ಬಂದಿದೆ ಆದರೆ ಇವರು ಆಂಧ್ರ ಪ್ರದೇಶದ ನಕ್ಸಲೈಟ್‌ಗಳಲ್ಲ.

ಇ) ಪರಿಸ್ಥಿತಿ ಹಾಗೂ ಅವಶ್ಯಕತೆಯನ್ನು ನೋಡಿಕೊಂಡು ಈ ಬಗ್ಗೆ ಪರಿಶೀಲಿಸಲಾಗುವುದು. ಗುಲ್ಬರ್ಗಾ ಕೇಂದ್ರ ಸ್ಥಾನವಾಗಿದ್ದು, ಒಬ್ಬ ಅಡಿಷನಲ್ ಎಸ್. ಪಿ. ಯವರ ಚಾರ್ಜ್‌ನಲ್ಲಿ ಒಂದು ದರೋಡೆ ನಿರೋಧಕ ದಳವನ್ನು ಸೃಷ್ಟಿಸಿ ಈಗಾಗಲೇ ಆದೇಶ ಹೊರಡಿಸಲಾಗಿದೆ.

ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ಹೆಚ್ಚಾಗುತ್ತಿರುವ ಬಗ್ಗೆ

೧೪೯೩ (೨೨೭೬) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ದಿನೇ ದಿನೇ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಹಾವಳಿಯಿಂದ ಕೂಲಿಕಾರರು ಶ್ರಮಿತ ವರ್ಗಗಳು ತೊಂದರೆ ಅನುಭವಿಸುತ್ತಿರುವುದು ನಿಜವಲ್ಲವೇ?

ಇ) ಈ ಮಟ್ಕಾ ಹಾವಳಿಯನ್ನು ಕೂಡಲೇ ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಗೃಹ ಸಚಿವರು):-

ಅ) ಉಡುಪಿ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ ಮಟ್ಕಾ ಹಾವಳಿ ಹೆಚ್ಚಾಗಿರುವುದು ಕಂಡು ಬಂದಿರುವುದಿಲ್ಲ.

ಆ) ಈ ಬಗ್ಗೆ ಪೋಲೀಸ್ ಇಲಾಖೆಗೆ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಇ) ಈ ಮಟ್ಕಾ ಹಾವಳಿಯು ಹೆಚ್ಚಾಗಿಲ್ಲದಿದ್ದರೂ ಸಹ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದು, ಈ ಬಗ್ಗೆ ವಿಷಯಗಳನ್ನು ಸಂಗ್ರಹಿಸಿ ಸಮಯಕ್ಕೆ ಸರಿಯಾಗಿ ದಾಳಿ ಮಾಡಿ ಅಂಥವರ ಮೇಲೆ ಕ್ರಮ ತೆಗೆದುಕೊಂಡಿದೆ.

ಉಪಾಧ್ಯಕ್ಷಿಣಿಯವರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ರೈತರ ಸಾಲ ಮನ್ನಾ ಮಾಡುವುದು

ಶ್ರೀ ಕೆ. ಎಸ್. ಈಶ್ವರಪ್ಪ:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ಜನತೆಯ ಪರವಾಗಿ ನಮ್ಮ ಕರ್ನಾಟಕದ ಮುಖ್ಯ ಮಂತ್ರಿಗಳನ್ನು ಆತ್ಮೀಯತೆಯಿಂದ ಆಹ್ವಾನ ಮಾಡುವುದಕ್ಕೋಸ್ಕರ ಭಾರತೀಯ ಜನತಾ ಪಕ್ಷದವರು ಈವತ್ತು ಇಲ್ಲಿಗೆ ಬಂದ್ದಿದ್ದಾರೆ. ಏತಕ್ಕೆಂದರೆ ವಿಧಾನ ಸಭೆಯಲ್ಲಿ ಈ ರಾಜ್ಯದ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಸಾಕಷ್ಟು ಚರ್ಚೆ ಮಾಡಿದೆವು. ಹಿಂದೆ ಬಜೆಟ್‌ನಲ್ಲಿ ಕೂಡ ಈ ಬಗ್ಗೆ ಒಪ್ಪಿಕೊಂಡಿದ್ದರು. ಈ ಸಾರಿ ಬಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪವೇ ಬಂದಿಲ್ಲ. ಶ್ರೀ ಮೋರೆಯವರು ಹೇಳುತ್ತಿದ್ದಾರೆ, ಇದು ಮುಗಿದುಹೋದ ವಿಷಯ ಎಂದು. ಕೃಷ್ಣ ಕಾವೇರಿ ಬಗ್ಗೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿವರ್ಷ ತೆಗೆದಿಡಿ ಎಂದು ಹೇಳುತ್ತಿದ್ದೇವೆ. ಅದರ ಬಗ್ಗೆ ಕೂಡ ಸರ್ಕಾರ ಗಮನ ಕೊಡಲಿಲ್ಲ. ಈ ರಾಜ್ಯದ ನಿರುದ್ಯೋಗಿ ಯುವಕರ ಬಗ್ಗೆ ಒಂದು ಉದ್ಯೋಗದ ನಿರ್ಬಂಧವನ್ನು ತೆಗೆಯಬೇಕೆಂದು ಕೇಳುತ್ತಿದ್ದೇವೆ, ಅದರ ಬಗ್ಗೆಯೂ ಗಮನ ಕೊಡುತ್ತಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು:- ನೀವು ಯಾವುದರ ಬಗ್ಗೆ ಮಾತನಾಡುತ್ತಿದ್ದೀರಿ ಎಂದು ಗೊತ್ತಾಗುತ್ತಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ:- ಬಜೆಟ್‌ನಲ್ಲಿ ಎಂಟ್ರಿ ಟ್ಯಾಕ್ಸ್ ಜಾಸ್ತಿ ಹಾಕಿರುವುದರಿಂದ ದಿನಬಳಕೆ ವಸ್ತುಗಳ ಬೆಲೆ ಜಾಸ್ತಿ ಆಗಿದೆ. ಇಲ್ಲಿ ನಮಗೆ ಕೂಗಿಕೂಗಿ ಸಾಕಾಗಿದೆ. ನಮ್ಮ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ನಾಳೆ ನಮ್ಮ ರಾಜ್ಯದ ೫ ಲಕ್ಷ ಜನರ ರೈತರ ಜಾಥಾ ತರುತ್ತಿದ್ದಾರೆ, ಅವರಿಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಆಹ್ವಾನ ಕೊಡುವುದಕ್ಕೆ ನಾವು ಸಭೆಗೆ ಬಂದಿದ್ದೇವೆ. ನಾವು ಎಷ್ಟು ಕೂಗಿದರೂ ಸರ್ಕಾರಕ್ಕೆ ಅರ್ಥವಾಗಿಲ್ಲ. ನಾಳೆ ೫ ಲಕ್ಷ ಜನರು ಬರುತ್ತಿದ್ದಾರೆ, ವಿಧಾನ ಸೌಧಕ್ಕೆ ಮುತ್ತಿಗೆ ಹಾಕುತ್ತಿದ್ದಾರೆ. ಮುಖ್ಯ ಮಂತ್ರಿಗಳು ನಾವು ಕೇಳಿದ ಪ್ರಶ್ನೆಗಳಿಗೆ ವಿಧಾನ ಸಭೆಯಲ್ಲಿ ಉತ್ತರ ಕೊಡಲಿಲ್ಲ.

ಉಪಾಧ್ಯಕ್ಷಣಿಯವರು:- ಆಯಿತು, ನಾನು ಮುಂದಿನ ವಿಷಯಕ್ಕೆ ಹೋಗುತ್ತೇನೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಎಲ್ಲಾ ವ್ಯಾಪಾರಸ್ಥರು, ರೈತರು ಕೂಗುತ್ತಿದ್ದಾರೆ, ಸರ್ಕಾರ ಕಣ್ಮುಚ್ಚಿಕೊಂಡು ಕುಳಿತಿದೆ.

ಉಪಾಧ್ಯಕ್ಷಣಿಯವರು:- ನೀವು ಯಾವ ಸಬ್ಜೆಕ್ಟ್ ಮೇಲೂ ಮಾತನಾಡುತ್ತಿಲ್ಲ. ಇರಿಗೇಷನ್‌ನಿಂದ ಇನ್ನೆಲ್ಲಿಗೊ ಹೋದಿರಿ. ಬೇಡಿಕೆಗಳು ಬಂದಾಗ ತಾವು ಏನು ಬೇಕಾದರೂ ಪ್ರಸ್ತಾಪ ಮಾಡಿ. ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಇವತ್ತು, ನಾಳೆ, ನಾಡಿದ್ದು ಎಲ್ಲಾ ಇದೆ. ಆಗ ತಾವು ಏನು ಬೇಕಾದರೂ ಮಾತನಾಡಬಹುದು. ಈ ರೀತಿ ನೀವು ಮಾತನಾಡಿದರೆ ಯಾವುದೂ ರೆಕಾರ್ಡಿಗೆ ಹೋಗುವುದಿಲ್ಲ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಜಿ. ಎಸ್. ಆಚಾರ್:- ಮಾನ್ಯ ಉಪಾಧ್ಯಕ್ಷಣಿಯವರೆ:-

ಅ) ಕುಂದಾಪುರ ತಾಲ್ಲೂಕಿನ ಕೊಲ್ಲೂರು ನೇರಳೇಕಟ್ಟೆ ರಸ್ತೆಗೆ ಡಾಂಬರೀಕರಣಗೊಳಿಸುವ ಬಗ್ಗೆ,

ಆ) ಉಪ್ಪಿನ ಕುದುರು ಗ್ರಾಮಕ್ಕೆ ಪ್ರೌಢ ಶಾಲೆಯನ್ನು ಮಂಜೂರ್ಮಾಡುವ ಬಗ್ಗೆ,

ಇ) ಶಿರೂರಿನಲ್ಲಿ ಚಿಕ್ಕ ಬಂದರು ಮತ್ತು ಮಂಜುಗಡ್ಡೆ ಕಾರ್ಖಾನೆ ಸ್ಥಾಪಿಸೆ ಬಗ್ಗೆ,

ಈ) ಗ್ರಾಮ ಲೆಕ್ಕಿಗರ ಸ್ವಾಧೀನದಲ್ಲಿರುವ ಆರ್. ಟಿ. ಸಿ. ಪುಸ್ತಕಗಳನ್ನು ತಹಶೀಲ್ದಾರರ ವಶಕ್ಕೆ ಕೊಡುವ ಬಗ್ಗೆ,

ಉ) ಹೇರೂರು ರಸ್ತೆಯು ಅಪೂರ್ಣವಾಗಿದ್ದು ಅದನ್ನು ಪೂರ್ಣಗೊಳಿಸುವ ಬಗ್ಗೆ.

ಉಪಾಧ್ಯಕ್ಷಣಿಯವರು:- ಅರ್ಜಿಗಳನ್ನು ಒಪ್ಪಿಸಲಾಯಿತು.

(ಮಾನ್ಯ ಸದಸ್ಯರಾದ ಈಶ್ವರಪ್ಪನವರು ಮಾತನಾಡುತ್ತಿದ್ದರು.)

ಉಪಾಧ್ಯಕ್ಷಣಿಯವರು:- ತಾವು ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. I have called him and he has presented the petitions. ಈಗ ೩೩೪ನೇ ನಿಯಮದ ಮೇರೆಗೆ ಬರುವ ವಿಷಯಗಳು. ಶ್ರೀಯುತ ಇಸಾಮಿಯ ಅವರು.

ಶ್ರೀ ಡಿ. ಬಿ. ಗಂಗಪ್ಪ:- ಪ್ರತಿಯೊಬ್ಬ ರೈತರೂ ೩೦೦ರಿಂದ ೫೦೦ ಎಕರೆವರೆಗೆ ಶೇಂಗಾ ಬೆಳೆದುಕೊಂಡು ಬಹಳ ಸಂತೋಷದಿಂದ ಇದ್ದಾರೆ. ರೈತರಿಗೆ ಕಷ್ಟ ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷಣಿಯವರು:- ಮಾನ್ಯ ಈಶ್ವರಪ್ಪನವರೇ, ಏನಾದರೂ ನೀವು ಮಾತನಾಡಬೇಕಾದರೆ ಯಾವ ವಿಷಯದಲ್ಲಿ ತಾವು ಮಾತನಾಡುತ್ತೀರಿ ಎಂಬುದನ್ನು ನನಗೆ ತಿಳಿಸಿ ಮಾತನಾಡಬೇಕು. ಎಲ್ಲಾ ವಿಷಯ ತೆಗೆದುಕೊಂಡು ಮಾತನಾಡುವುದಾದರೆ ಇಲ್ಲಿ ಸಭೆ ನಡೆಸುವುದಕ್ಕಾಗುವುದಿಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಬೇಕು. ಡಿಮ್ಯಾಂಡ್ಸ್ ಮೇಲೆ ಮಾತನಾಡುತ್ತೇನೆ ಎಂದರೆ ಖಂಡಿತ

ತಮಗೆ ಅವಕಾಶ ಕೊಡುತ್ತೇನೆ.

(ಮತ್ತೆ ಶ್ರೀ ಈಶ್ವರಪ್ಪನವರು ಮಾತನಾಡುತ್ತಿದ್ದರು)

ಉಪಾಧ್ಯಕ್ಷಣೆಯವರು:- ತಾವು ಕುಳಿತುಕೊಳ್ಳಬೇಕು.

೩೩೪ ನಿಯಮದ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಭದ್ರಾವತಿ ಹಳೇ ನಗರಕ್ಕೆ ನೀರು ಪೂರೈಕೆ ಯೋಜನೆ ಕಾರ್ಯಗತಗೊಳಿಸುವ ಬಗ್ಗೆ

ಶ್ರೀ ಎಸ್. ಇಸಾಮಿಯಾ (ಭದ್ರಾವತಿ):- ಮಾನ್ಯ ಅಧ್ಯಕ್ಷರೇ, ಭದ್ರಾವತಿ ಹಳೇ ನಗರ ಪುರಸಭಾ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ದಿನೇ ದಿನೇ ಹೆಚ್ಚಾಗುತಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತದೆ. ಆದ್ದರಿಂದ ಈಗಾಗಲೇ ೨ನೇ ಹಂತದ ನೀರು ಸರಬರಾಜು ಯೋಜನೆಗೆ ಅಂದಾಜು ಪಟ್ಟಿ ೧೯೫ ಲಕ್ಷ ರೂಪಾಯಿಗಳಿಗೆ ತಯಾರಾಗಿದ್ದು ಸರ್ಕಾರದಿಂದ ಇದುವರೆಗೂ ಕಾರ್ಯಗತವಾಗಿರುವುದಿಲ್ಲ. ಆದ್ದರಿಂದ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸುತ್ತಾರೆ? ಯಾವಾಗ ಕಾರ್ಯಗತವಾಗಿ ಜನರಿಗೆ ನೀರು ಪೂರೈಕೆಯಾಗುತ್ತದೆ ಎಂಬುದರ ಬಗ್ಗೆ ಸಂಬಂಧಪಟ್ಟ ವಸತಿ ಮತ್ತು ನಗರಾಭಿವೃದ್ಧಿ ಸಚಿವರಿಂದ ಉತ್ತರವನ್ನು ಕೊಡಿಸಬೇಕಾಗಿ ವಿನಂತಿಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ನಗರಾಭಿವೃದ್ಧಿ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೇ, ಡೀಟೈಲ್ಸ್ ತರಿಸಲಿಕ್ಕೆ ಹೇಳಿದ್ದೇನೆ. ಆದಷ್ಟು ಬೇಗನೆ ಭದ್ರಾವತಿ ಕುಡಿಯುವ ನೀರಿನ ವಿಚಾರದಲ್ಲಿರುವ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಉಪಾಧ್ಯಕ್ಷಣೆಯವರು:- ಶ್ರೀಯುತ ಗಂಗಾಧರ ಗೌಡರು ...

ಶ್ರೀ ಕೆ. ಎಸ್. ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೇ, ನನಗೆ ಉತ್ತರ ಸಿಕ್ಕಿಲ್ಲ

Madam Deputy Speaker:- I have already gone further.

ಶ್ರೀ ಕೆ. ಎಸ್. ಈಶ್ವರಪ್ಪ:- ರೈತರ ಸಮಸ್ಯೆ ಬಗ್ಗೆ ಸರ್ಕಾರಕ್ಕೆ ಚರ್ಚೆ ಮಾಡುವುದಕ್ಕೆ ಆಸಕ್ತಿ ಇಲ್ಲವಾ ಹಾಗಾದರೆ? ಹೆಂಡದ ದೊರೆಗಳ ...

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಏನು ಹೇಳಿದ್ರಿ? There must be some limit. This is too much on the part of the Hon'ble member here. ಮಾತನಾಡುವುದಕ್ಕೆ ಒಂದು ಮಿತಿ ಇರಬೇಕು. ವ್ಯಾಪಾರಸ್ಥರ ಹಡಬೆ ದುಡ್ಡು ತಿನ್ನುವುದು, ಇಲ್ಲಿ ಬಂದು ರಾಜಕೀಯ ಮಾಡುವುದು. ನಾಚಿಕೆಯಾಗಬೇಕು. ಹೆಂಡದ ದೊರೆಗಳು ಎಂದು ಮಾತನಾಡುತ್ತಾರೆ. ಮನಸ್ಸಿಗೆ ಬಂದಹಾಗೆ ಮಾತನಾಡುತ್ತಾರೆ. I know you people. You BJP fellows. I know everybody. ನನ್ನ ಹತ್ತಿರ ಬಾಲ ಬಿಚ್ಚುವುದು ಬೇಡ. ರೈತರು ನಿಮ್ಮ ಅಪ್ಪನ ಮನೆ ಆಸ್ತಿ ಅಲ್ಲ. ಯಾವ ರೈತರು? ಯಾವ ಜಮೀನಿನಲ್ಲಿ ಕೆಲಸ ಮಾಡಿದ್ದೀರಿ? ಎಲ್ಲಿ ಹೋಗಿ ಕೆಲಸ ಮಾಡಿದ್ದೀರಿ? ಎಲ್ಲಿ ನೇಗಿಲು ಹೊತ್ತಿದ್ದೀರ? ಬೇರೆಯವರನ್ನು ಕಟ್ಟಿಕೊಂಡು ರಾಜಕೀಯ

ಮಾಡುವುದಕ್ಕೆ ಹೋದವರು, ಅಲ್ಲಿ ಆಗಲಿಲ್ಲ ಎಂದು ಬಿ. ಜೆ. ಪಿ. ಅಂತ ತೂಗೊಂಡು ಬಂದು ಇಲ್ಲಿ ಭಾರಿ ರೈತರ ಸಾಲ ಮನ್ನಾ ಮಾಡಿಸುತ್ತಿದ್ದೀರಾ ? ನಾನು ಕೇಳುತ್ತಿದ್ದೀನಿ ನಿಮ್ಮ ಮಧ್ಯಪ್ರದೇಶದ ಸರ್ಕಾರದ ಆರ್ಡರ್ ಇದೇ ನಿಮ್ಮ ಪಕ್ಷದ ನೀತಿ ಆಗಿದ್ದರೆ - ಎಲ್ಲಿ ಹಿಮಾಚಲ ಪ್ರದೇಶ? ಎಲ್ಲಿ ಯು. ಪಿ. ದು ? ಎಲ್ಲಿ ರಾಜಾಸ್ಥಾನದ್ದು ? ಆರ್ಡರ್ ತಂದು ನಿಮ್ಮ ಹಣೆಬರಹಕ್ಕೆ ಇಡುವುದಕ್ಕಾಗಲಿಲ್ಲ. ತಂದಿಡಿ ಎಂದು ಹತ್ತು ಸಾರಿ ಹೇಳಿದ್ದೇನೆ. ಇಲ್ಲಿ ಸಾಲ ಮನ್ನಾ ಮಾಡಿಸುವುದಕ್ಕೆ ಬರುತ್ತೀರಾ? ಯಾವ ಕಳಕಳಿ ಇದೆ ನಿಮಗೆ? ಯಾವ ರೈತರು? ನನಗೆ ಆಟ ಆಡಿಸುತ್ತಿದ್ದೀರಾ ಇಲ್ಲಿ ಬಂದು? There must be some limit. ಹೆಂಡದ ದೊರೆಗಳಂತೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಮುಖ್ಯಮಂತ್ರಿಗಳ ಸ್ಥಾನಕ್ಕೆ ರಾಜಿನಾಮೆ ಕೊಡುತ್ತೀರಾ ಸಾಲ ಮನ್ನಾ ಆಗಿದ್ದರೆ?

ಉಪಾಧ್ಯಕ್ಷರು:- ದಯವಿಟ್ಟು ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ:- ಹೆಂಡದ ದೊರೆಗಳು ...

(ಗೊಂದಲ)

MADAM DEPUTY SPEAKER:- Nothing will go on record.***

(ಗೊಂದಲ)

ಉಪಾಧ್ಯಕ್ಷಣಿಯವರು:- ಮಾನ್ಯ ಈಶ್ವರಪ್ಪನವರೇ, ತಾವು ಈ ರೀತಿ ಮಾತನಾಡುವುದಕ್ಕೆ ನಾನು ಬಿಡುವುದಿಲ್ಲ.

***(Not recorded as ordered by the Chair.)

ಒಬ್ಬ ಮಾನ್ಯ ಸದಸ್ಯರು:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಅವರನ್ನು ಹೊರಗಡೆ ಹಾಕಿ.

(ಗೊಂದಲ)

ಉಪಾಧ್ಯಕ್ಷಣಿಯವರು:- ಮಾನ್ಯ ಪುಟ್ಟಸ್ವಾಮಿಗೌಡರು ಏನೋ ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಮಾತನಾಡಲಿ; ಈಶ್ವರಪ್ಪನವರೇ, ದಯಮಾಡಿ ತಾವು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್ ಬಂಗಾರಪ್ಪ:- ಮುನಿಸಿಪಾಲಿಟಿಗೆ ನೀವು ಹಣ ಕೊಡುತ್ತೀರಾ ಎಂದು ಕೇಳಿದಿರಿ. ಅಲ್ಲಿ ಗುಂಡಿ ಬಿದ್ದಿದೆ, ರೋಡ್ ಆಗಬೇಕು ಎಂದು ಹೇಳಿ. ಈಗ ಅವರು ಪತ್ರಕ್ಕೆ ಎಂಟ್ರಿಟ್ಯಾಕ್ಸ್

ಹಾಕುತ್ತೀರಿ ಎಂದು ಕೇಳುತ್ತಾರೆ. ಇದನ್ನು ಹಾಕದಿದ್ದರೆ ಇವತ್ತು ಹಣವನ್ನು ನಾವು ಎಲ್ಲಿಂದ ತರಬೇಕು?

ಶ್ರೀ ಕೆ. ಎಸ್. ಈಶ್ವರಪ್ಪ- ಹೆಂಡದ ದೊರೆಗಳ ಮೇಲೆ ಟ್ಯಾಕ್ಸ್ ಹಾಕಿ.

(ಗೊಂದಲ)

ಉಪಾಧ್ಯಕ್ಷಣಿಯವರು:- ಮಾನ್ಯ ಈಶ್ವರಪ್ಪನವರೇ, ತಾವು ದಯವಿಟ್ಟು ಕುಳಿತುಕೊಳ್ಳಬೇಕು. ನಾನು ನಿಂತಿದ್ದೇನೆ. ಮಾನ್ಯ ಪುಟ್ಟಸ್ವಾಮಿಗೌಡರ ಏನೋ ಪಾಯಿಂಟ್ ಆಫ್ ಆರ್ಡರ್ ಇದೆ.

(ಈ ಸಮಯದಲ್ಲಿ ಬಿಜೆಪಿ ಸದಸ್ಯರು ತಮ್ಮ ಸ್ಥಾನಗಳಿಂದ ಪಕ್ಕಕ್ಕೆ ಬಂದರು)

ಉಪಾಧ್ಯಕ್ಷಣಿಯವರು:- ಈಗ ಮಾನ್ಯ ಗಂಗಾಧರಗೌಡರ ನಿಯಮ ೩೩೪ರ ಕೆಳಗೆ ಪ್ರಸ್ತಾಪ.

(ಗೊಂದಲ)

(ಬಿಜೆಪಿಯ ಸದಸ್ಯರು ಬೇರೆ ಜಾಗದಲ್ಲಿ ನಿಂತು ಮಾತನಾಡುತ್ತಿದ್ದರು)

ಉಪಾಧ್ಯಕ್ಷಣಿಯವರು:- ಹೋಗ್ರಿ ... (ಗೊಂದಲ) ಈ ರೀತಿ ನೀವು ಜಾಗ ಬಿಟ್ಟು ಬಂದು ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ಇತರ ಸದಸ್ಯರೆಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಯಾರು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಮಾನ್ಯ ಪುಟ್ಟಸ್ವಾಮಿಗೌಡರ ಕ್ರಿಯಾಲೋಪ ಇದೆ.

(ಗೊಂದಲ)

ಈಶ್ವರಪ್ಪನವರೇ, ತಾವು ಈ ರೀತಿ ಅಲ್ಲಿ ನಿಂತು ಮಾತನಾಡುವುದು ಸರಿಯಲ್ಲ.

(ಗೊಂದಲ)

ಈಗ ಶ್ರೀ ಗಂಗಾಧರಗೌಡರ ಸೂಚನೆ.

(ಗೊಂದಲ)

(ಈ ಸಮಯದಲ್ಲಿ ಬಿಜೆಪಿಯ ಸದಸ್ಯರು ಸದನದಿಂದ ಹೊರನಡೆದರು)

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸದಸ್ಯರ ಈ ವರ್ತನೆಯನ್ನು ನೋಡಿದರೆ ಅವರ ಪರ್ಪಸ್ ಏನು ಎಂದು ಗೊತ್ತಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಯಾವ ರೈತರು ತಮ್ಮ ಜಮೀನಿಗೆ ಹೋಗಿ, ಯಾವ ನೇಗಿಲು ಹಿಡಿದು ಅವರು ಕೆಲಸ ಮಾಡಿದ್ದಾರೆಂದು ನನಗೆ ಗೊತ್ತಾಗುತ್ತದೆ. ಇಷ್ಟೇ

ಅಲ್ಲ ಇವತ್ತು ತಾವು ನಮ್ಮ ಬಡ್ಜೆಟ್‌ನ್ನು ಓದಿದರೆ ಗೊತ್ತಾಗುತ್ತದೆ. ಇವತ್ತು ನಾವು ೧೦ ಹಾರ್ಸ್ ಪವರ್‌ವರೆಗೆ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಶುಲ್ಕ ಮನ್ನಾವನ್ನು ಮುಂದಿನ ತಿಂಗಳಿನಿಂದ ಮಾಡುತ್ತಿದ್ದೇವೆ. ಅದು ಇನ್ನೂ ಒಂದು ವಾರ ಕೂಡ ಉಳಿದಿಲ್ಲ. ನಮ್ಮಲ್ಲಿ ಕರೆಂಟ್ ಅವೈಲಬಿಲಿಟಿ ಕೂಡ ಹೆಚ್ಚು ಇಲ್ಲ. ಈ ಬಾಬಿನಲ್ಲಿ ೨೧ ಕೋಟಿ ರೂಪಾಯಿ ಸಹಾಯವನ್ನು ರೈತರಿಗೆ ಸಂಪೂರ್ಣವಾಗಿ ಮಾಡಿ ಅವರ ಕೈ ಬಲಪಡಿಸಬೇಕೆನ್ನುವ ಉದ್ದೇಶ ನಮಗೆ ಇದೆ. ಇದರಿಂದ ಏನು ಲಾಸ್ ಕೆಇಬಿಗೆ ಆಗುತ್ತದೆ ಅದನ್ನು ಸರ್ಕಾರದಿಂದ ಕಟ್ಟುವುದಕ್ಕೆ ಆರ್ಡರ್ ಮಾಡಿ ಅದನ್ನು ಆಯವ್ಯಯದಲ್ಲಿ ತಿಳಿಸಿದ್ದೇವೆ. ರೈತರ ಬಗ್ಗೆ ಇವರು ಇಷ್ಟೆಲ್ಲಾ ಮಾತನಾಡುತ್ತಾರೆ, ಇವತ್ತು ರೈತರ ಸಾಲ ಎಂದರೆ ಏನು? ಇವರು ಪೂರ್ತಿ ಎಲ್ಲಾ ರೈತರನ್ನು ಗುತ್ತಿಗೆ ತೆಗೆದುಕೊಂಡವರ ಹಾಗೆ ಮಾತನಾಡುತ್ತಿದ್ದಾರೆ. ನಮಗೆ ಗೊತ್ತಿದೆ. ಭೂಮಿ ಹಂಚಿಕೆ ವಿಚಾರದಲ್ಲಿ ಸಂಪೂರ್ಣವಾಗಿ ಬಡವರಿಗೆ ಹಂಚಿಕೆ ಮಾಡತಕ್ಕದು, ಯಾವ ರೀತಿಯಾಗಿ ಪರಿಶಿಷ್ಟ ಜಾತಿಯವರಿಗೆ ಹಂಚಬೇಕನ್ನತಕ್ಕದ್ದನ್ನು ನಾವು ವಿಚಾರ ಮಾಡಿದ್ದೇವೆ. ಕೃಷಿ ಕಾರ್ಮಿಕರಿಗೆ ಇವತ್ತು ಇಡೀ ಭಾರತದೇಶದಲ್ಲಿಯೇ ಯಾರೂ ಮಾಡದೇ ಇರತಕ್ಕಂಥ ಬಗ್ಗೆ ನಾವು ೫ ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟಿದ್ದೇವೆ. ಇವತ್ತು ಭೂಮಾಲಿಕನಿಗೆ ಒಬ್ಬನಿಗೇ ಸಹಾಯ ಮಾಡುವುದಕ್ಕೆ ಬರುವುದಿಲ್ಲ. ಇವತ್ತು ಕೂಲಿ ಮಾಡುವವರು ಯಾರಿದ್ದಾರೆ ಅವರನ್ನೂ ಇನ್‌ವಾಲ್ವ್ ಮಾಡಬೇಕಾಗುತ್ತದೆ. ಗ್ರೂಪ್ ಇನ್‌ಷೂರೆನ್ಸ್ ಸ್ಕೀಮ್, ಮತ್ತೊಂದು ತರಬೇಕೆಂದು ೫ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ೫ ಕೋಟಿ ರೂಪಾಯಿ ಸಾಲುವುದಿಲ್ಲ ಇನ್ನೂ ಜಾಸ್ತಿ ಮಾಡಬೇಕೆಂದು ಅನೇಕ ಮಿತ್ರರು ನನಗೆ ಸಲಹೆ ಕೊಟ್ಟಿದ್ದಾರೆ. ನಾನು ಅದನ್ನು ಅಪ್ರೊಪ್ರಿಯೇಷನ್ ಏನು ಬಿಲ್ ಬರುತ್ತದೆ ಆಗ I am going to raise it. ನಾನು ಜಾಸ್ತಿ ಮಾಡುತ್ತೇನೆ ಮತ್ತೆ ಯಾವ ಭೂಮಿ ಇಲ್ಲದ ವರ್ಗ ಇದೆ, ಅವರ ಬಗ್ಗೆ ಕೇಳುತ್ತಾರೆಯೇ ಇವರು? ಸಾಲ ಮನ್ನಾ ಮಾಡುವುದಕ್ಕೆ ಕೇಳುತ್ತಾರೆ? ಕೃಷಿ ಕಾರ್ಮಿಕರ ಬಗ್ಗೆ ಒಂದು ಮಾತೂ ಒಂದು ಸೊಲ್ಲು ಆಡಿದ್ದಾರೆಯೇ? ಕೂಲಿ ಮಾಡತಕ್ಕ ವರ್ಗದ ಬಗ್ಗೆ ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕ ವರ್ಗದ ಬಗ್ಗೆ ಒಂದು ಮಾತನಾಡುವುದಿಲ್ಲ. ನಾನು ವಿನಾ ಕಾರಣ ಮಾತಾಡುತ್ತಿಲ್ಲ. ಕಬ್ಬನ್ ಪಾರ್ಕಿಗೆ ೫ ಲಕ್ಷ ಜನರನ್ನು ಇವರು ತಂದರೆ, ೫೦ ಲಕ್ಷ ಜನರನ್ನು ತರತಕ್ಕ ಶಕ್ತಿಯನ್ನು ಆ ದೇವರು ಕರ್ನಾಟಕ ರಾಜ್ಯದಲ್ಲಿ ನಮಗೆ ಕೊಟ್ಟಿದ್ದಾನೆ. ಏನೋ ದೇವರ ಆಶೀರ್ವಾದ, ಕರ್ನಾಟಕ ಜನತೆಯ ಆಶೀರ್ವಾದ, ಅದೇ ರೈತರ ಆಶೀರ್ವಾದ. ಇವತ್ತು ಯಾರ್‍ಯಾರು ಎಲ್ಲೆಲ್ಲಿದ್ದಾರೆ ಅವರು ಯಾವುದೇ ಪಕ್ಷವಿರಬಹುದು, ವಿರೋಧಪಕ್ಷದವರು ಇರಬಹುದು ಅವರು ರೈತರ ಮಕ್ಕಳಾದರೆ ನಾನು ಗೌರವದಿಂದ ಕಾಣುತ್ತೇನೆ. ನಾನು ಅವರಿಗೆ ನಮಸ್ಕಾರ ಮಾಡುತ್ತೇನೆ. ಏಕೆಂದರೆ ನಾವು ಅಧಿಕಾರದಲ್ಲಿರುತ್ತೇವೆ, ಅಧಿಕಾರಬಿಟ್ಟು ಹೊರಟುಹೋಗುತ್ತೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ಇರು ಅನ್ನುವವರೆಗೂ ಇರಬೇಕು, ಬೇಡ ಅಂದಾಗ ಬಿಟ್ಟು ಹೋಗುತ್ತೇವೆ. ಆದರೆ ಇವರ ರಾಜಕೀಯದ ಬೇಳೆಯನ್ನು ಬೇಯಿಸಿಕೊಳ್ಳುವುದಕ್ಕೆ ಮನಸ್ಸಿಗೆ ಬಂದಹಾಗೆ ಹೇಳುತ್ತಾ, ಯಾವ್ಯಾವುದೋ ವಿಚಾರ ಹೇಳುತ್ತಾ, ಸಂಭಂಧವಿಲ್ಲದೆ ಇರತಕ್ಕ ವಿಚಾರ ಹೇಳುತ್ತಾ, ಪ್ರಚಾರ ತೆಗೆದುಕೊಳ್ಳುತ್ತಾ ಇದ್ದರೆ, ನನಗೆ ಗೊತ್ತಿದೆ ಇವರು ಪ್ರಚಾರ ಮರಿಗಳು ಎಂದು. ಇವರು ಪಾರ್ಟಿ ಕಟ್ಟುವುದಕ್ಕೆ ಎಲ್ಲೆಲ್ಲಿ ಹೋಗಿದ್ದರು ಎನ್ನುವುದು ನನಗೆಲ್ಲಾ ಗೊತ್ತು. ಇವತ್ತು ರೈತರು ವ್ಯವಸಾಯ ಮಾಡತಕ್ಕ ಭೂಗುಣಗಳನ್ನು ತಿಳಿದುಕೊಂಡು ಆ ಭೂಮಿಗೆ ಕ್ಯಾಲ್ಸಿಯಂ ಬೇಕೇ, ಪೋಟಾಸಿಯಂ ಬೇಕೆ ಅದನ್ನು ತಿಳಿದುಕೊಂಡು ವ್ಯವಸಾಯ ಮಾಡತಕ್ಕ ಜನ ಅವಿದ್ಯಾವಂತರು ಇದ್ದಾರೆಂದು ತಿಳಿದು ಅವರ

ಇನ್‌ಫ್ರಾಸ್ಟ್ರಕ್ಚರ್ ಸರಿ ಮಾಡಬೇಕೆಂದು ನಾವು ಮಾಡಿದ್ದೇವೆ. ಅಗ್ರಿಕಲ್ಚರ್ ಕಾಲೇಜುಗಳನ್ನು ಜಾಸ್ತಿ ಮಾಡಿದ್ದೇವೆ. ಸಿರಿಕಲ್ಚರ್ ಕಾಲೇಜ್ ಮಂಜೂರು ಮಾಡಿದ್ದೇವೆ. ಆ ಮೇಲೆ ಫಾರೆಸ್ಟ್ ಕಾಲೇಜನ್ನು ಈ ವರ್ಷ ಕೊಟ್ಟಿದ್ದೇವೆ. ಮೂಡಿಗೆರೆಯಲ್ಲಿ ಹಾರ್ಟಿಕಲ್ಚರ್ ಕಾಲೇಜನ್ನು ಕೊಟ್ಟಿದ್ದೇವೆ. ರೈತರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ವಿಚಾರವಿದೆ. ಎಜುಕೇಷನ್ ಮತ್ತು ರಿಸರ್ಚ್ ಕಡೆಗೆ ಗಮನ ಕೊಡುವ ವಿಚಾರವನ್ನು ನಾವು ಇಟ್ಟು ಕೊಂಡಿದ್ದೇವೆ. ಅದೂ ಅಲ್ಲದೆ ಹಳ್ಳಿಯಲ್ಲಿರತಕ್ಕ ರೈತರ ಮಕ್ಕಳಿಗೆ ಕೂಡ, ಈ ಬಿಜೆಪಿಯವರು ಜನತಾದಳಕ್ಕೆ ಬೆಂಬಲ ಕೊಟ್ಟವರು ರೈತರ ಮಕ್ಕಳ ಬಗ್ಗೆ ಒಂದು ಮಾತೂ ಕೂಡ ಆಡಲಿಲ್ಲ. ನಾವು ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಮಕ್ಕಳಿಗೆ ೧೫ ಕೃಪಾಂಕಗಳನ್ನು ಹೆಚ್ಚುವರಿಯಾಗಿ ಕೊಟ್ಟು ಹುದ್ದೆಗಳಿಗೆ ತುಂಬತಕ್ಕ ಕೆಲಸವನ್ನು ಮಾಡಿ ಸರ್ಕಾರಿ ಆಜ್ಞೆಯನ್ನು ನಾವು ಹೊರಡಿಸಿದ್ದೇವೆ. ಅದನ್ನು ಇವತ್ತು ಜಾರಿಗೆ ಕೊಡತಕ್ಕ ಕೆಲಸವನ್ನು ನಾವು ಮಾಡಿದ್ದೇವೆ. ಅದೂ ಅಲ್ಲದೆ ಇವತ್ತು ಇಡೀ ಇಂಡಿಯಾದೇಶದಲ್ಲಿ ಮೊಟ್ಟ ಮೊದಲನೆಯದಾಗಿ ಒಂದೊಂದು ಬಹುಮಾನವನ್ನು ಇಟ್ಟು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ೨೫ ಸಾವಿರ, ೧೦ ಸಾವಿರ, ೫ ಸಾವಿರ ಬಹುಮಾನಗಳನ್ನು ಇಟ್ಟಿದ್ದೇವೆ. ಕಾಂಪಿಟೇಷನ್ ಬರಲಿ ಎನ್ನುವ ಉದ್ದೇಶದಿಂದ ನಾವು ಇಟ್ಟಿದ್ದೇವೆ. ರಾಜ್ಯಮಟ್ಟದಲ್ಲಿ ೧ ಲಕ್ಷ, ಜಿಲ್ಲಾ ಮಟ್ಟದಲ್ಲಿ ೫೦ ಸಾವಿರ ಮತ್ತು ತಾಲ್ಲೂಕು ಮಟ್ಟದಲ್ಲಿ ೨೫ ಸಾವಿರ ನಾವು ಅದು ಬೇರೆ ಬಹುಮಾನಗಳನ್ನು ಇಟ್ಟಿದ್ದೇವೆ. ಆಮೇಲೆ ಕೆರೆಗಳಲ್ಲಿರುವ ಹೂಳನ್ನು ತೆಗೆಯುವುದಕ್ಕೆ ಕೆರೆ ಕಲ್ಯಾಣ ಕಾರ್ಯಕ್ರಮಕ್ಕೆ ೫ ಕೋಟಿ ರೂಪಾಯಿ ಇಟ್ಟಿದ್ದೇವೆ. ಅದನ್ನು ಜಾಸ್ತಿ ಮಾಡಬೇಕೆಂದು ಇದ್ದೇವೆ. ಇದನ್ನು ಸುಮಾರು ೧೦೦ ಕೋಟಿ ರೂಪಾಯಿಯವರೆಗೆ ತೆಗೆದುಕೊಂಡು ಹೋಗುತ್ತೇವೆ. ಕೆರೆ ಕಲ್ಯಾಣ ಯೋಜನೆಗೆ ವರ್ಲ್ಡ್ ಬ್ಯಾಂಕ್ ಸಹಾಯ ತೆಗೆದು ಕೊಳ್ಳಬೇಕೆನ್ನುವ ವಿಚಾರವನ್ನು ಇಟ್ಟುಕೊಂಡಿದ್ದೇವೆ. ಕಬ್ಬನ್ನು ಬೆಳೆದ ರೈತರು ಬಹಳಷ್ಟು ತೆಗೆದುಕೊಂಡು ಬಂದರು. ಇಷ್ಟು ಕಬ್ಬನ್ನು ಯಾವ ವರ್ಷವೂ ಬೆಳೆದಿರಲಿಲ್ಲ. ಕಬ್ಬನ್ನು ಬೆಳಗಾಂ, ಮಂಡ್ಯ, ಮೈಸೂರು ಈ ತರಹ ಅನೇಕ ಕಡೆಗಳಲ್ಲಿರತಕ್ಕ ಕಬ್ಬನ್ನು ಅರೆಯುವುದಕ್ಕೆ ಆಗಿಲ್ಲ. ಕಬ್ಬಿನ ಮೇಲಿರತಕ್ಕ ಪರ್ಚೇಸ್ ಟ್ಯಾಕ್ಸ್ ರೈತರ ಮೇಲೆ ಜಾಸ್ತಿಯಾಗಿ ಅದು ಬೇರೆ ರಾಜ್ಯಗಳಿಗೆ ಹೋಗುತ್ತಿರಲಿಲ್ಲ. ಅದಕ್ಕಾಗಿ ನಾವು ಏನು ಮಾಡಿದ್ದೇವೆಂದರೆ ನಾನು ಹಣಕಾಸು ಸಚಿವನಾಗಿ ಪರ್ಚೇಸ್ ಟ್ಯಾಕ್ಸನ್ನು ಕರ್ನಾಟಕದಲ್ಲಿ ಸಂಪೂರ್ಣವಾಗಿ ವಜಾ ಮಾಡಿದ್ದೇನೆ. ಕಬ್ಬು ಬೆಳೆದವನು ಅದನ್ನು ಸುಟ್ಟು ಹಾಕಿಬಿಡಬೇಕು ಅಷ್ಟು ಕಷ್ಟವಿದೆ. ನಾವು ಗೇಣಿದಾರರಾಗಿ ಕಂಡಿದ್ದೇನೆ, ನೋಡಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣವಾಗಿ ಪರ್ಚೇಸ್ ಟ್ಯಾಕ್ಸನ್ನು ವಜಾ ಮಾಡಿದ್ದೇನೆ. ಕಬ್ಬು ಬೆಳೆದಂತಹ ರೈತರಿಗೆ ಬಹಳಷ್ಟು ಅನುಕೂಲಗಳಾಗಿವೆ. ನಮ್ಮ ರಾಜ್ಯದ ಕಬ್ಬು ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ತಮಿಳುನಾಡಿಗೆ ಹೋಗುತ್ತಿದೆ. ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿನ ಕಬ್ಬು ತಮಿಳುನಾಡಿಗೆ ಹೋಗುತ್ತಿದೆ. ರೈತರ ಬೆಳೆಗೆ ಅವರು ಬೆಳೆದ ಮಾಲಿಗೆ ಹಣ ಕೈಗೆ ಸಿಗುತ್ತದೆ. ಸಿಗಲಿ, ಕಲ್ಟಿವೇಷನ್ ಕಾಸ್ಟ್ ಜಾಸ್ತಿಯಿದೆ ಎನ್ನುವ ದೃಷ್ಟಿಯಿಂದ ನಾವು ಅದರಲ್ಲಿ ವಿಚಾರ ಮಾಡಿದ್ದೇವೆ. ಅದೂ ಅಲ್ಲದೆ ಬೀದಿ ಭಾಗ್ಯ ಎಂದು ಕೂಲಿ ಮಾಡತಕ್ಕ ವರ್ಗ ಅದು ಬೇರೆ ಇದೆ. ಅದಕ್ಕಾಗಿ ೧ ಕೋಟಿ ರೂಪಾಯಿ ರಿವಾಲ್ವಿಂಗ್ ಫಂಡ್ ಎಂದು ಇಟ್ಟಿದ್ದೇವೆ. ಇಷ್ಟು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅವರ ರಾಜಕೀಯ ಬೇಳೆಕಾಳನ್ನು ಬೇಯಿಸಿಕೊಳ್ಳುವುದಕ್ಕೋಸ್ಕರ ಇವರು ಕಬ್ಬನ್ ಪಾರ್ಕಿಗೆ ೫ ಲಕ್ಷ ಜನರನ್ನು ತಂದರೆ ನಮಗೂ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ನಾಲ್ಕು ನಾಲ್ಕೂವರೆ ಕೋಟಿ ಜನರು ಇದ್ದಾರೆ. ೧೯೯೧ರ

ಜನಗಣತಿಯ ಪ್ರಕಾರ ಈಗ ಇನ್ನೂ ಜಾಸ್ತಿ ಇದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರೈತರು ಅವರ ಸ್ವತ್ತು ಎಂದು ಮಾತನಾಡುತ್ತಿದ್ದಾರೆ. ಇವತ್ತು ಕರ್ನಾಟಕ ರಾಜ್ಯದ ರೈತ ಭಾಂಧವರಲ್ಲಿ ವಿನಂತಿ ಮಾಡುತ್ತೇನೆ ಸರ್ಕಾರ ಈ ಬಜೆಟ್ ಇಟ್ಟಮೇಲೆ ತಾವು ಬಂದು ಚರ್ಚೆ ಮಾಡಿ ಪಾಸ್ ಮಾಡಿರೆಂದು ನಾನು ಎಷ್ಟು ಸಾರಿ ಹೊಡೆದುಕೊಂಡೆ. ಬನ್ನಿ ಚಂದ್ರೇಗೌಡರೇ, ನಿಮ್ಮ ಸಲಹೆಗಳನ್ನು ಕೊಡಿ, ನಿಮ್ಮ ಸಲಹೆಗಳು ನಮಗೆ ಬೇಕಾಗಿದೆ. ನೀವು ಬನ್ನಿ ಎನ್ನತಕ್ಕ ಮಾತನ್ನು ಬಿಜೆಪಿಯ ಮಿತ್ರರ ಆದಿಯಾಗಿ ಪಕ್ಷಾತೀತವಾಗಿ ಹೇಳಿದ್ದೇನೆ. ಬರ್ರಿ ತಮ್ಮ ವಿಚಾರಗಳನ್ನು ಹೇಳಿ, ನಾವೇನು ಮಾಡಬೇಕೆಂದು ತಮ್ಮ ಸಲಹೆಗಳನ್ನು ಕೊಡಿ ಸರ್ಕಾರದವರು ರೈತವರ್ಗದ ಪರವಾಗಿ, ಬಡ ವರ್ಗದ ಪರವಾಗಿ, ಸಮಾಜದ ತುಳಿತಕ್ಕೆ ಸಿಕ್ಕಿರುವ ವರ್ಗದ ಬಗ್ಗೆ ನಾವು ಮಾಡುವುದಕ್ಕೆ ತಯಾರಾಗಿದ್ದೇವೆಂದು ಹೇಳಿದ್ದೇವೆ. ಇವರು ರೈತರ ಹೆಸರು ತೆಗೆದುಕೊಂಡು ರಾಜಕೀಯ ಮಾಡುವುದಕ್ಕೆ ಹೋದರೆ ರೈತರ ಆಕ್ರೋಶಕ್ಕೆ ತುತ್ತಾದರೆ ಅವರು ಉಳಿಯುವುದಿಲ್ಲ. ರಾಜಕೀಯ ಮಾಡುವುದಕ್ಕೆ ಹೋದರೆ ನಾವೂ ಉಳಿಯುವುದಿಲ್ಲ. ಅವರಿಗೆ ಎಷ್ಟು ನಷ್ಟವಾಗುತ್ತದೆ ಅಷ್ಟೇ ನಷ್ಟ ನಮಗೂ ಕೂಡ ಆಗುತ್ತದೆ. ಇವತ್ತು ರೈತರ ಕೈ ಬಲಪಡಿಸಬೇಕೆನ್ನುವ ದೃಷ್ಟಿಯಿಂದ ನಾವು ಅನೇಕ ಕಾರ್ಯಕ್ರಮಗಳನ್ನು ಹಾಕಿದ್ದೇವೆ. ಇನ್ನೂ ಕೂಡ ಹಾಕತಕ್ಕದ್ದು ನನ್ನ ಮನಸ್ಸಿನಲ್ಲಿದೆ. ತಮ್ಮ ಪಕ್ಷದ ಮನಸ್ಸಿನಲ್ಲಿದೆ, ಸರ್ಕಾರದ ಮನಸ್ಸಿನಲ್ಲಿದೆ. ತಮ್ಮ ಮನಸ್ಸಿನಲ್ಲಿದೆ ತಮ್ಮ ಮುಖಾಂತರ ಕರ್ನಾಟಕ ರಾಜ್ಯದ ಮನಸ್ಸಿನಲ್ಲಿದೆ.

೧೧.೨೫ ಎ. ಎಂ.

ನಾವು ನೀವು ಸೇರಿ ಹೋಗೋಣ. ತಮ್ಮ ತಮ್ಮ ಕ್ಷೇತ್ರಗಳಿಗೆ ಹೋಗೋಣ. ಹೋಗಿ ಕರ್ನಾಟಕ ರಾಜ್ಯದ ಜನತೆಗೆ ವಿನಂತಿ ಮಾಡುತ್ತೇವೆ, ನೋಡಿ ನಮ್ಮ ಶಕ್ತಿ ಇಷ್ಟು ಇದೆ, ನಾವು ಇಷ್ಟು ಮಾಡಿದ್ದೇವೆ ಎಂದು. ನೀರಾವರಿಗೆ ಹಣ ಕೊಡಬೇಕೆಂದು ಕೇಳುತ್ತಾರೆ. ಇವತ್ತು ಪ್ಲಾನಿಂಗ್ ಕಮಿಷನ್ ಎಷ್ಟೆಷ್ಟು ಹೆಚ್ಚು ಮಾಡಿದ್ದಾರೆ ಎಂದು ವಿವರಿಸಿ ವಾರ್ಷಿಕ ಯೋಜನೆಯ ಗಾತ್ರ ದೊಡ್ಡದು ಮಾಡಿದ್ದರ ಬಗ್ಗೆ ಹೇಳಿದ್ದೇವೆ. ಇವತ್ತು ರೈತರಿಗೆ ೩೫೦-೩೬೦ ಕೋಟಿ ರೂಪಾಯಿಗಳ ಹತ್ತಿರ ಹತ್ತಿರ ಬರೇ ಕೃಷ್ಣಾ ಯೋಜನೆಗೆ ಕೊಟ್ಟಿದ್ದೇವೆ. ೨೦೦ ಕೋಟಿ ರೂಪಾಯಿಗಳನ್ನು ಕಾವೇರಿ ಬೇಸಿನ್‌ಗೆ ಕೊಟ್ಟಿದ್ದೇವೆ. ಇವತ್ತು ತಾವೂ ಕೂಡ ಸ್ವಾಗತ ಮಾಡಿದ್ದೀರಿ; ಜನ ಸಹ ಸಂತೋಷ ಪಟ್ಟಿದ್ದಾರೆ. ಇವರು ಇರಿಗೇಷನ್‌ಗೆ ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಎಲ್ಲಿ ಹಿಮಾಚಲಪ್ರದೇಶ, ರಾಜಾಸ್ತಾನ, ಯು. ಪಿ, ಮಧ್ಯಪ್ರದೇಶಗಳಲ್ಲಿ ಬಿ. ಜೆ. ಪಿ. ಸರ್ಕಾರ ಇದೆ, ಅವರು ಎಷ್ಟು ಜಾಸ್ತಿ ಮಾಡಿದ್ದಾರೆ? ಎಲ್ಲಾ ರಾಜ್ಯಗಳ ಚರಿತ್ರೆ ನನ್ನ ಹತ್ತಿರ ಇದೆ. ಅಂಕಿ ಅಂಶಗಳು ಇವೆ. ಸಂಪೂರ್ಣವಾಗಿ ಎಲ್ಲವನ್ನೂ ಕೂಡ, ಒಟ್ಟು ಅಂಕಿ ಅಂಶಗಳನ್ನು ಕೊಂಡಿ ಕೊಂಡಿಯಾಗಿ ಬಿಚ್ಚಿ ಇಡುತ್ತೇನೆ. ನಮಗೆ ಏನೂ ಬರುವುದಿಲ್ಲ ಎಂಬ ವಿಚಾರವನ್ನು ಯಾರೂ ಕೂಡ ಹೇಳುವುದು ಬೇಡ. ರೈತರ ಸಾಲದ ಬಗ್ಗೆ ಇವರು ಮಾತನಾಡುತ್ತಾರೆ. ನಾನು ಮುಖ್ಯ ಮಂತ್ರಿಯಾದಮೇಲೆ ನಾನು ಇಲ್ಲಿ ಹೇಳಿದ್ದೇನೆ. ಮೊದಲನೇ ಕಂತಾಗಿ ಹನ್ನೆರಡೂವರೆ ಕೋಟಿ ರೂಪಾಯಿಗಳನ್ನು ಏನು ರೈತರೇ ಕೊಡಬೇಕಾಗಿತ್ತು, ಆ ಮೊದಲನೇ ಕಂತಿನ ಹಣವನ್ನು ನಾವು ರೈತರ ಪರವಾಗಿ ಕೊಟ್ಟಿದ್ದೇವೆ. ಶೇಕಡ ೫೦ರಷ್ಟು ನಾವು ಕೊಡಬೇಕು, ೫೦ರಷ್ಟು ಅವರು ಕೊಡಬೇಕು. ಇದನ್ನು ಎಷ್ಟು ಸಾರಿ ಹೇಳಬೇಕು? ಇನ್ನು ಉಳಿದಿರತಕ್ಕಂಥಾದ್ದು ಕೇಂದ್ರ ಸರ್ಕಾರ ಕೊಟ್ಟಿಲ್ಲ. ಎಲ್ಲಾ ಪಕ್ಷಗಳ ನಿಯೋಗ ಹೋಗಿ ಬಂದಿದ್ದೇವೆ.

ಬಿ. ಜೆ. ಪಿ. ಮಿತ್ರರೂ ಕೂಡ ಇದ್ದರು. ಡೆಲ್ಲಿಗೆ ನಿಯೋಗ ಹೋಗಬೇಕಾದರೆ ಎಲ್ಲರೂ ಬನ್ರಪ್ಪ ಎಂದೆ. ಎಲ್ಲರೂ ಬಂದರು. ಎಲ್ಲರೂ ಪ್ರಧಾನ ಮಂತ್ರಿಗಳನ್ನು ಕಂಡಿದ್ದಾರೆ, ಹಣಕಾಸಿನ ಮಂತ್ರಿಗಳನ್ನು ಕಂಡಿದ್ದಾರೆ, ಕೃಷಿ ಸಚಿವರನ್ನು ಕಂಡಿದ್ದಾರೆ. ಎಲ್ಲರಿಗೂ ಮೆಮರಂಡಮ್ ಕೊಟ್ಟಾಗಿದೆ. ಇವತ್ತು ೫೦ ಪರ್ಸೆಂಟ್ ಅವರು ಕೊಡಬೇಕು ಮತ್ತು ೫೦ ಪರ್ಸೆಂಟ್ ನಾವು ವಹಿಸಿಕೊಂಡಿದ್ದೇವೆ. ಅದು ಸುಮಾರು ೬೮-೭೦ ಕೋಟಿ ರೂಪಾಯಿ ಆಗುತ್ತದೆ. ಇವತ್ತು ಕಂತಿನ ಮೇಲೆ ಹಣ ಕೊಡುವುದಕ್ಕೆ ನಾವು ತಯಾರಿದ್ದೇವೆ. ನಬಾರ್ಡ್‌ಗೆ ಮೊದಲನೇ ಕಂತನ್ನು ಕೊಟ್ಟಿದ್ದೇವೆ. ಇದನ್ನು ಬಡ್ಜೆಟ್‌ನಲ್ಲಿ ಕೂಡ ತಿಳಿಸಿದ್ದೇವೆ. ಈಗಲೂ ಕೂಡ ಈ ಸದನದಲ್ಲಿ ತಮ್ಮ ಮೂಲಕ ಕರ್ನಾಟಕ ರಾಜ್ಯದ ಜನತೆಗೆ ಮಾತು ಕೊಡುತ್ತೇನೆ. ನಮ್ಮ ಪಾಲಿನ ಕರ್ತವ್ಯ ನಿರ್ವಹಣೆ ಮಾಡಿರುವುದಕ್ಕೆ ನಾವು ಸಿದ್ಧವಾಗಿದ್ದೇನೆ. ಎರಡನೇ ಕಂತಿನ ಹಣವನ್ನು ನಬಾರ್ಡ್‌ಗೆ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. The moment that instalment is paid by the Government of India to NABARD ಅವರು ಕೊಟ್ಟಾದ ತಕ್ಷಣ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಇದನ್ನು ಎಷ್ಟುಸಲ ಹೇಳಬೇಕೋ ನನಗಂತೂ ಅರ್ಥವಾಗುವುದಿಲ್ಲ. ಇನ್ನೊಂದು, ಸಾಲ ಮನ್ನಾಮಾಡಿ ಅಂತ ಹೇಳುತ್ತಾರೆ. ಸಾಲ, ಪಾಪ ಅನೇಕ ಜನ ಬಡವರು ಕೊಟ್ಟಿದ್ದಾರೆ. ಕೆಲವು ಜನ ಇರಬಹುದು. ನಾನು ಹೇಳಿದ್ದೇನೆ ಅಣೆವಾರಿ ಮತ್ತೊಂದು, ಕಟ್‌ಆಫ್ ರೇಟ್ ಏನಿದೆ, ಅದು ಸರಿ ಇಲ್ಲದಿದ್ದರೆ ಬದಲಾವಣೆ ಮಾಡಿ ಅಂತ ಕರ್ನಾಟಕ ರಾಜ್ಯದ ರೈತರ ಪರವಾಗಿ ಕೇಂದ್ರಸರ್ಕಾರಕ್ಕೆ ಅನೇಕ ಸಾರಿ ಮನವಿ ಮಾಡಿದ್ದೇವೆ. ನಾವು ನೀವು ಸೇರಿ, ಎಲ್ಲಾ ಪಕ್ಷಗಳೂ ಸೇರಿ ಮನವಿ ಮಾಡಿದ್ದೇವೆ. ಅಲ್ಲಿ ಮನವಿ ಮಾಡುವುದು, ಇಲ್ಲಿ ಬಂದು ರಾಜಕೀಯ ಮಾಡುವುದು. ಅಲ್ಲಿ ಮನವಿ ಮಾಡುವುದು, ಇಲ್ಲಿಗೆ ಬಂದು ಈ ರೀತಿ ರಾಜಕಾರಣಕ್ಕೆ ಗಮನಕೊಟ್ಟು ಈ ಕೆಲಸ ಮಾಡುವುದು. ಇದು ಮೊದಲನೆಯದ್ದು ಅಲ್ಲ. ಈ ದೇಶದಲ್ಲಿ ಮೊದಲು ಬಿಸಿನೆಸ್ ಜನರನ್ನು ಕಟ್ಟಿಕೊಂಡು ರಾಜಕೀಯ ಮಾಡುವುದಕ್ಕೆ ಹೋದವರು. ಬಿ. ಜೆ. ಪಿ. ಯವರು ಡೆಪಾಸಿಟ್ ಕಳೆದುಕೊಂಡು, ತಿಪ್ಪರಲಾಗ ಹಾಕಿದರು. ಈಗ ಅದಾದಮೇಲೆ ರೈತರ ಬಗ್ಗೆ ಹೇಳುವುದಕ್ಕೆ ಹೋಗಿದ್ದಾರೆ. ಮುಂದೆ ರೈತರ ಕೈ ಬಿಡುತ್ತಾರೆ. ಮತ್ತೆ ಬೇರೆ ಯಾರನ್ನೋ ಹಿಡಿದುಕೊಳ್ಳುತ್ತಾರೆ. ಇದು ನಮಗೂ, ನಿಮಗೂ ಗೊತ್ತಿರತಕ್ಕಂಥಾದ್ದು. ರಾಮನನ್ನು ಹಿಡಿದು ರಾಮನ ಕತೆ ಮುಗಿಸಿದ್ದಾರೆ. ಈಗ ಲಕ್ಷ್ಮಣನನ್ನು ಹಿಡಿಯುತ್ತಾರೆ. ಇವರು ಯಾರೂ ಕೂಡ ಕಾಳಮ್ಮ, ಮಾರಮ್ಮ, ಈಶ್ವರ ಅಂತ ಮತ್ತೊಂದು ದೇವರನ್ನು ಮುಟ್ಟುವುದಿಲ್ಲ. ಇನ್ನುಮೇಲೆ ರಾವಣನನ್ನು ಹಿಡಿಯಬಹುದು ಎಂದು ನನಗೆ ಅನ್ನಿಸುತ್ತದೆ. ನಾನು ತಮ್ಮ ಅಮೂಲ್ಯವಾದ ಕಾಲವನ್ನು ದುರುಪಯೋಗ ಮಾಡಲಾರೆ. ಕ್ಷಮಿಸಬೇಕು. ನಾನು ಈ ಸದನದ ಕಲಾಪವನ್ನು ನಿಲ್ಲಿಸಬೇಕೆಂದಾಗಲೀ, ಸದನದ ಕಾಲವನ್ನು ನಾನು ತೆಗೆದುಕೊಳ್ಳಬೇಕೆಂದಾಗಲೀ ನನಗೆ ಆಸೆ ಇಲ್ಲ. ನಿನ್ನೆ ರೈತ ಸಮಿತಿಯವರು ಬಂದಿದ್ದರು. ಅವರು ಪಾಪ ಬಂದು, ಏನು ವಿಚಾರ ಹೇಳಬೇಕೋ ಅವರ ಕಾರ್ಯ ಮಾಡಿದ್ದಾರೆ. ನಾನು ತುಂಬಾ ಗೌರವ ಇಟ್ಟುಕೊಂಡಿದ್ದೇನೆ. ನನಗೆ ಗೊತ್ತು ಪ್ರೊ. ನಂಜುಂಡಸ್ವಾಮಿ, ಸುಂದರೇಶ್ ಅವರು ಯಾರ್ಯಾರು ಮುಖಂಡರು ಇದ್ದಾರೆ ಅವರು ನಮ್ಮ ಮಿತ್ರರು. ಅದರ ಬಗ್ಗೆ ನನಗೆ ಪ್ರಶ್ನೆ ಇಲ್ಲ. ಅವರ ವಿಚಾರ ಏನೆಂದು ತಿಳಿದುಕೊಂಡು ದೊಡ್ಡ ಹೈಪವರ್ ಕಮಿಟಿ ಮಾಡಿದ್ದೇನೆ. ಆ ಕಮಿಟಿಯಲ್ಲಿ ನಾನು ಪ್ರೊ. ನಂಜುಂಡಸ್ವಾಮಿಯವರನ್ನೇ ಇಟ್ಟಿದ್ದೇನೆ. ಅವರು ಎಷ್ಟೇ ವಿರೋಧದ ಮಾತನಾಡಿದರೂ ಅವರ ಬಗ್ಗೆ ಗೌರವ ಇಟ್ಟುಕೊಂಡು ಈ ಕೆಲಸವನ್ನು ನಾನು

ಮಾಡಿಸಿದ್ದೇನೆ. ಇವತ್ತು ಅವರು ಹೇಳುವುದೇನು, ಇವರು ಹೇಳುವುದೇನು ಅದು ನನಗೆ ಸಂಬಂಧವಿಲ್ಲದೇ ಇರತಕ್ಕಂಥ ವಿಚಾರ. ದಯವಿಟ್ಟು ಬಿ. ಜೆ. ಪಿ. ಮಿತ್ರರು ಇದನ್ನು ನಿಲ್ಲಿಸಿ ಅವರು ರೈತರ ಬಗ್ಗೆ ಮಾತನಾಡುವುದು ಬೇಡ. ಏನು ಹಳೇ ವಾಗ್ದಾನವನ್ನು ಹಿಡಿದುಕೊಂಡು ಮುಂದಕ್ಕೆ ಹೋಗಲಿ. ನಡೆಯುವುದನ್ನು ಬೇಕಾದರೆ ನೋಡೋಣ. ಇಷ್ಟು ವಿಚಾರ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

(ಪ್ರಸ್ತಾಪಿಸಲಾದ ವಿಷಯಗಳು) (ಮುಂದುವರಿದುದು)

ಬೆಳ್ತಂಗಡಿದ ಉಜಿರೆ ಮತ್ತು ಧರ್ಮಸ್ಥಳಗಳಲ್ಲಿ ಬಸ್ ನಿಲ್ದಾಣವನ್ನು ರಚಿಸುವ ಬಗ್ಗೆ

ಶ್ರೀ ಕೆ. ಗಂಗಾಧರಗೌಡ (ಬೆಳ್ತಂಗಡಿ):- ಮಾನ್ಯ ಉಪಾಧ್ಯಕ್ಷರೇ, ಬೆಳ್ತಂಗಡಿ ತಾಲ್ಲೂಕಿನಲ್ಲಿ ರಾಷ್ಟ್ರೀಕರಣಗೊಂಡ ಬಸ್ಸು ಮಾರ್ಗಗಳಿವೆ. ಅಲ್ಲದೆ ಧರ್ಮಸ್ಥಳದಲ್ಲಿ ಸರ್ಕಾರಿ ಬಸ್ ಡಿಪೋ ಇದೆ. ದಿನ ಒಂದಕ್ಕೆ ೨೦೦ ಕ್ಕೂ ಹೆಚ್ಚು ಬಸ್ಸುಗಳು ಬೆಳ್ತಂಗಡಿ ತಾಲೂಕಿನಲ್ಲಿ ಹಾದುಹೋಗುತ್ತವೆ. ಆದರೆ ಇಷ್ಟರತನಕ ಬೆಳ್ತಂಗಡಿ ತಾಲೂಕು ಕೇಂದ್ರದಲ್ಲಿ ಬಸ್ಸು ನಿಲ್ದಾಣ ನಿರ್ಮಾಣವಾಗಿಲ್ಲ. ಈಗ ಕೆಲವು ದಿನಗಳ ಹಿಂದೆ ಈ ಬಗ್ಗೆ ಪ್ರಶ್ನೆ ಕೇಳಿದಾಗ ಬೆಳ್ತಂಗಡಿ ತಾಲೂಕು ಸರ್ಕಾರಿ ಸ್ವಾಮ್ಯದ ವಲಯದಲ್ಲಿ ಇಲ್ಲ ಎಂದು ಉತ್ತರ ಕೊಟ್ಟಿರುವುದು ಇಲಾಖೆಯ ಅಧಿಕಾರಿಗಳ ಅಜ್ಞಾನವನ್ನು ತೋರಿಸುತ್ತದೆ. ಸಾವಿರಾರು ಜನರು ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ಧರ್ಮಸ್ಥಳ ಇತ್ಯಾದಿ ಭಾಗಗಳಿಗೆ ಬರುತ್ತಿದ್ದು ಬಸ್ಸುತಂಗುದಾಣವಿಲ್ಲದೆ ನರಕಯಾತನೆ ಪಡುತ್ತಿರುತ್ತಾರೆ. ಆದ್ದರಿಂದ ಬೆಳ್ತಂಗಡಿ, ಉಜಿರೆ, ಧರ್ಮಸ್ಥಳದಲ್ಲಿ ಸರ್ಕಾರ ಬಸ್ಸು ನಿಲ್ದಾಣ ರಚಿಸಬೇಕಾಗಿ ಮಾನ್ಯ ಸಾರಿಗೆ ಮಂತ್ರಿಗಳ ಮುಖಾಂತರ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಾಂತ್ರಿಕ ಹಾಗೂ ಪರಿಸರ ಇಲಾಖಾ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಮಂತ್ರಿಗಳು ವಿಧಾನ ಪರಿಷತ್ತಿಗೆ ಹೋಗಿರುವುದರಿಂದ, ಅವರ ಪರವಾಗಿ ಈ ಲಿಖಿತ ಉತ್ತರವನ್ನು ಕೊಡುತ್ತಿದ್ದೇನೆ. ಬೆಳ್ತಂಗಡಿಯು ದಕ್ಷಿಣ ಕನ್ನಡದ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಈ ಪಟ್ಟಣವು ಸಾರಿಗೆ ರಾಷ್ಟ್ರೀಕರಣವಾಗದ ವಲಯದಲ್ಲಿದೆ. ಬರೇ ಕೆಲವು ಮಾರ್ಗಗಳನ್ನು ಮಾತ್ರ ರಾಷ್ಟ್ರೀಕರಣ ಮಾಡಲಾಗಿದೆ. ಸಧ್ಯ ೧೪೫ ವಾಹನಗಳು ಈ ಬಸ್ ನಿಲ್ದಾಣಕ್ಕೆ ತಲುಪಿ ಪ್ರಯಾಣಿಕರನ್ನು ಪ್ರತಿನಿತ್ಯ ಮಂಗಳೂರು-ಚಾರ್‌ಮುಡಿ ಮೂಲಕ ಕೊಂಡೊಯ್ಯುತ್ತವೆ. ಹಾಲಿ ಇರುವ ಬಸ್ ನಿಲ್ದಾಣವು ಮಂಡಲ ಪಂಚಾಯಿತಿಯ ಒಡೆತನದಲ್ಲಿರುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ಖಾಸಗೀ ಮಾಲೀಕರು ಬಸ್ ಓಡಾಟಕ್ಕೆ ಈ ಬಸ್ ನಿಲ್ದಾಣವನ್ನೇ ಉಪಯೋಗಿಸುತ್ತಿವೆ. ಇಬ್ಬರು ಸಂಚಾರ ನಿಯಂತ್ರಕರು ಈ ಸಂಚಾರ ನಿಯಂತ್ರಣ ಕೇಂದ್ರದ ಕಾರ್ಯವನ್ನು ನೋಡಿಕೊಳ್ಳುತ್ತಿದ್ದಾರೆ. ಆಧುನಿಕ ಸೌಲಭ್ಯ ಉಳ್ಳ ಬಸ್ ನಿಲ್ದಾಣ ನಿರ್ಮಿಸಲು ಮಂಡಲ ಪಂಚಾಯಿತಿಯ ಒಡೆತನದಲ್ಲಿರುವ ೦.೪೭ ಸೆಂಟ್ಸ್ ನಿವೇಶನ ಮತ್ತು ಕಟ್ಟಡಗಳನ್ನು ಖರೀದಿಸಲು ಪ್ರಯತ್ನಿಸಲಾಯಿತು. ಈ ಬಸ್ ನಿಲ್ದಾಣ ಮತ್ತು ಕಟ್ಟಡಕ್ಕೆ ಮಂಡಲ ಪಂಚಾಯಿತ್ತಿಯವರು ೨,೦೧,೪೪೭ ರೂ. ಗಳನ್ನು ಬೇಡುತ್ತಿದ್ದಾರೆ. ಇದು ಅತಿ ದುಬಾರಿ ಎಂದು ಪರಿಗಣಿಸಲಾಗಿದೆ. ಇದೂ ಅಲ್ಲದೆ ೦.೪೭ ಸೆಂಟ್ಸ್ ನಿವೇಶನ ಈ ಸ್ಥಳದಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸಾಲುವುದಿಲ್ಲ. ಆದ್ದರಿಂದ ಬಸ್ ನಿಲ್ದಾಣಕ್ಕೆ ಬೇರೊಂದು ಸೂಕ್ತವಾದ ನಿವೇಶನವನ್ನು ಪಡೆಯಲು ಪ್ರಯತ್ನಿಸಲಾಗಿದೆ. ವಿಧಾನ ಸಭಾ ಪ್ರಶ್ನೆ ಸಂಖ್ಯೆ ೧೩೩೩ಕ್ಕೆ ನೀಡಿದ ಉತ್ತರವು ಸಮರ್ಪಕವಾಗಿರುತ್ತದೆ. ಈ ವಲಯವು

ರಾಷ್ಟ್ರೀಕರಣವಾಗಿಲ್ಲ. ಆದರೆ ಮಂಗಳೂರು-ಚಾರ್‌ಮುಡಿ, ಮಂಗಳೂರು-ಹಾಸನ ವಯಾ ಸಕಲೇಶಪುರ, ಮಂಗಳೂರು-ಮಡಿಕೇರಿ ವಯಾ ಪುತ್ತೂರು ಮತ್ತೆ ಪುತ್ತೂರು-ಸುಬ್ರಮಣ್ಯ ಮಾರ್ಗ ರಾಷ್ಟ್ರೀಕೃತವಾಗಿದೆ. ಸೂಕ್ತ ನಿವೇಶನವನ್ನು ಸ್ವಾಧೀನಕ್ಕೆ ಪಡೆದ ನಂತರ ಬಸ್‌ನಿಲ್ದಾಣ ನಿರ್ಮಿಸಲಾಗುವುದು.

<u>ಉಜಿರೆ</u>:- ಉಜಿರೆ ಕೂಡ ಬೆಳ್ತಂಗಡಿ ತಾಲ್ಲೂಕಿನ ಒಂದು ಗ್ರಾಮ. ಧರ್ಮಸ್ಥಳದ ಕಡೆಗೆ ಸಂಚರಿಸುವ ವಾಹನಗಳು ಈ ಸ್ಥಳದಲ್ಲಿ ನಿಂತು ಪ್ರಯಾಣಿಕರನ್ನು ಕೊಂಡೊಯ್ಯುತ್ತವೆ. ಸಧ್ಯ ೧೩೫ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಾಹನಗಳು ಈ ಗ್ರಾಮವನ್ನು ತಲುಪುತ್ತವೆ. ಈ ಗ್ರಾಮವು ಧರ್ಮಸ್ಥಳದಿಂದ ಬರೇ ೧೦ ಕಿ. ಮಿ. ಗಳ ಅಂತರದಲ್ಲಿರುವುದರಿಂದ ಆಧುನಿಕ ಮಾದರಿಯ ಬಸ್ ನಿಲ್ದಾಣದ ಅವಶ್ಯಕತೆ ಇರುವುದಿಲ್ಲ. ಧರ್ಮಸ್ಥಳದಲ್ಲಿ ಆಧುನಿಕ ಮಾದರಿಯ ಬಸ್ ನಿಲ್ದಾಣದ ಅವಶ್ಯಕತೆ ಇರುತ್ತದೆ. ಒಂದು ದೊಡ್ಡ ಮಾದರಿಯ ತಂಗುದಾಣದ ಸೌಲಭ್ಯ ಒದಗಿಸಿದರೆ ಸಾಕಾಗುತ್ತದೆ. 'ಸಹೃದಯ ವೇದಿಕೆ' ಎಂಬ ಸಂಸ್ಥೆಯು ಉಚಿತವಾಗಿ ಈ ಉದ್ದೇಶಕ್ಕೆ ನಿವೇಶನ ನೀಡಲು ಮುಂದೆ ಬಂದಿದೆ. ಮಂಗಳೂರಿನ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಈ ದಿಸೆಯಲ್ಲಿ ಸೂಕ್ತ ಸಲಹೆ ನೀಡಲಾಗಿದೆ. ನಿವೇಶನದ ಹಸ್ತಾಂತರವಾದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

<u>ಧರ್ಮಸ್ಥಳ</u>:- ಧರ್ಮಸ್ಥಳ ಕೂಡಾ ಒಂದು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಪ್ರಮುಖ ಯಾತ್ರಾ ಸ್ಥಳ. ಇಲ್ಲಿ ಒಂದು ಬಸ್ ಡಿಪೋ ಇದೆ. ಆದರೆ ಬಸ್ ನಿಲ್ದಾಣ ಇರುವುದಿಲ್ಲ. ಸಧ್ಯ ಇಲ್ಲಿ ಕೂಡ ೧೩೫ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಆಗಮನ ನಿರ್ಗಮನಗಳಿವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಧರ್ಮಸ್ಥಳ ದೇವಸ್ಥಾನ ಧರ್ಮಾಧಿಕಾರಿಯನ್ನು ಸಾಕಷ್ಟು ನಿವೇಶನವನ್ನು ಒದಗಿಸುವಂತೆ ಒತ್ತಾಯಿಸುತ್ತಿದೆ. ದೇವಸ್ಥಾನದ ಅಧಿಕಾರಿಗಳು ಸೂಚಿಸಿದ ನಿವೇಶನವು ಸಮಂಜಸವಾಗಿಲ್ಲ ಕಾರಣ ಈ ಸಂಸ್ಥೆಯು ಬೇರೆ ತೆಂಗಿನ ತೋಟದ ಜಮೀನನ್ನು ಆಯ್ಕೆ ಮಾಡಿದೆ. ಈ ವಿಷಯದ ಬಗ್ಗೆ ದೇವಸ್ಥಾನದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರಿನ ಲಕ್ಕಸಂದ್ರದ ಬಂಡೆಯ ಬಳಿ ಕೂಡಲೇ ಕಲ್ಲು ಚಪ್ಪಡಿಗಳನ್ನು ಹಾಕುವ ಬಗ್ಗೆ

ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ಉಪಾಧ್ಯಕ್ಷರೇ, ಬೆಂಗಳೂರಿನ ಲಕ್ಕಸಂದ್ರದ ಬಳಿ ಒಂದು ದೊಡ್ಡ ಬಂಡೆ ಕ್ವಾರಿ ಇದ್ದು, ಅದರ ಸುತ್ತಲೂ ಹಾಕಿದ್ದ ಕಲ್ಲು ಚಪ್ಪಡಿಗಳು ಬಿದ್ದುಹೋಗಿದ್ದು, ೮-೩-೨೦೦ರಂದು ಇಬ್ಬರು ಮಕ್ಕಳು ಹಳ್ಳಕ್ಕೆ ಬಿದ್ದು ತೊಂದರೆಗೀಡಾಗಿದ್ದಾರೆ. ಇದೇ ರೀತಿ ಹಲವಾರು ಜನ ಅಪಾಯಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಕೂಡಲೇ ಬಿದ್ದು ಹೋಗಿರತಕ್ಕ ಎಲ್ಲಾ ಕಲ್ಲು ಚಪ್ಪಡಿಗಳನ್ನು ಹಾಕಿಸಲು ಬೆಂಗಳೂರು ಮಹಾನಗರ ಪಾಲಿಕೆಯವರು ಕ್ರಮ ಕೈಗೊಳ್ಳ ಬೇಕಾಗಿದೆ. ಆದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಕೋರುತ್ತೇನೆ.

ಶ್ರೀ ಕೆ. ಜೆ. ಜಾರ್ಜ್(ವಸತಿ ಮತ್ತು ನಗರಾಭಿವೃದ್ಧಿ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷರೇ, ವಿಭಾಗ ೫೫. ಲಕ್ಕಸಂದ್ರದ, ಬನ್ನೇರುಘಟ್ಟ ರಸ್ತೆಗೆ ಹೊಂದಿಕೊಂಡಿರುವ ಹಲವು ಪ್ರದೇಶಗಳ

ಮಕ್ಕಳು ಆಟವಾಡುವ ಸಂದರ್ಭದಲ್ಲಿ ದಿನಾಂಕ ೮-೩-೯೨ರಂದು ಆಕಸ್ಮಿಕವಾಗಿ ಇಬ್ಬರು ಮಕ್ಕಳು ಬಂಡೆಯ ಹಳ್ಳಕ್ಕೆ ಬಿದ್ದಿರುತ್ತಾರೆ. ಇದನ್ನು ನೋಡಿದ ಸುತ್ತಮುತ್ತಲ ಜನರು ರಕ್ಷಿಸಿರುತ್ತಾರೆ. ಈ ಹಳ್ಳದ ದಕ್ಷಿಣ ಭಾಗದ ಕಡೆಗೆ ಬಹಳ ಕಿರಿದಾದ ರಸ್ತೆ ಇದ್ದು (೧೨ ಅಡಿ - ೧೪ ಅಡಿ) ಈ ರಸ್ತೆಯನ್ನು ದ್ವಿಚಕ್ರ ವಾಹನಗಳ ಸವಾರರು, ಸೈಕಲ್ ಸವಾರರು ಹಾಗೂ ಬಡವರ ಸಂಘದಲ್ಲಿ ಕಟ್ಟುತ್ತಿರುವ ಮನೆಗಳಿಗೆ ಮರಳು ಮತ್ತು ಇಟ್ಟಿಗೆಗಳನ್ನು ಸಾಗಿಸಲು ಎತ್ತಿನ ಗಾಡಿಗಳವರು ಉಪಯೋಗಿಸುತಿದ್ದಾರೆ. ಈ ರಸ್ತೆಯ ಅಂಚಿಗೆ ಹೊಂದಿಕೊಂಡಿರುವ ಈ ಹಳ್ಳವು ಸುಮಾರು ೧೦೦ ಅಡಿಯಷ್ಟು ಆಳವಿದ್ದು ಬಹಳ ಕಡಿದಾಗಿರುತ್ತದೆ. ವಾಹನ ಚಾಲನೆ ಮತ್ತು ಜನರ ಓಡಾಟವನ್ನು ಈ ಭಾಗದಲ್ಲಿ ತಡೆಯಲು ಬಹಳ ಪ್ರಯತ್ನ ಪಟ್ಟರೂ ಈ ಭಾಗದ ಜನರು ಈ ರಸ್ತೆಗೆ ಹಾಕಿದ್ದ ಗಾರ್ಡ್ ಸ್ಟೋನ್‌ಗಳನ್ನು ಒಡೆದು ಹಾಕಿ ಪುನಃ ಉಪಯೋಗಿಸುತ್ತಾರೆ. ಈ ಎಲ್ಲಾ ಅನಾನುಕೂಲತೆಗಳನ್ನು ಪರಿಶೀಲಿಸಿ ಮಾನ್ಯ ಶಾಸಕರಾದ ಶ್ರೀ ರಾಮಲಿಂಗಾರೆಡ್ಡಿಯವರ ಕೋರಿಕೆಯಂತೆ ಮತ್ತು ವಿಭಾಗದ ನಗರ ಸಭಾ ಸದಸ್ಯರ ಕೋರಿಕೆಯಂತೆ ರಸ್ತೆಯ ಮಧ್ಯೆ ಭಾಗದಲ್ಲಿ ಸೈಜು ಕಲ್ಲುಗಳ ತಡೆಗೋಡೆಯನ್ನು ನಿರ್ಮಿಸಲು ಈಗಾಗಲೇ ೧೭೫೦೦೦ ರೂಪಾಯಿಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಿರಿದಾದ ರಸ್ತೆಗೆ ಹೊಂದುಕೊಂಡಂತೆ ೩ ಮನೆಗಳಿದ್ದು ಅವರಿಗೆ ಈಗಾಗಲೇ ಎಚ್ಚರಿಕೆಯನ್ನು ನೀಡಲಾಗಿದೆ. ಮುರಿದು ಬಿದ್ದಿರುವ ಕಲ್ಲುಗಳ ಜಾಗದಲ್ಲಿ ತಾತ್ಕಾಲಿಕವಾಗಿ ಕಲ್ಲುಗಳನ್ನು ನಿಲ್ಲಿಸಲಾಗಿದೆ ಮತ್ತು ಈ ರಸ್ತೆಯನ್ನು ಸದಾ ಓಡಾಟಕ್ಕೆ ಉಪಯೋಗಿಸದಂತೆ ಗಾರ್ಡ್-ಸ್ಟೋನ್‌ಗಳನ್ನು ಸಹ ನಿಲ್ಲಿಸಿ ರಸ್ತೆಯನ್ನು ಬಂದ್ ಮಾಡಲಾಗಿದ್ದು ಜನರು ಮಾತ್ರ ಓಡಾಡಲು ಜಾಗವನ್ನು ಬಿಡಲಾಗಿದೆ. ಈ ತಡೆಗೋಡೆಯನ್ನು ನಿರ್ಮಿಸಲು ತುರ್ತಾಗಿ ಕ್ರಮ ಕೈಗೊಳ್ಳಲಾಗುವುದು.

ನಾಗರ ಹೊಳೆ ಬೆಂಕಿ ದುರಂತಕ್ಕೆ ಕಾರಣರಾದರ ಮೇಲೆ ಕ್ರಮ ತೆಗೆದುಕೊಳ್ಳುವ ವಿಚಾರದ ಬಗ್ಗೆ

ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):- ಮಾನ್ಯ ಅಧ್ಯಕ್ಷಣಿಯವರೇ, ನಾಗರಹೊಳೆಯ ಬೆಂಕಿ ದುರಂತದಿಂದ ನಾಡಿನ ನಾಗರೀಕರೆಲ್ಲಾ ನಾಚುವಂತಾಗಿದೆ. ಇದರ ಹಿನ್ನೆಲೆಯಲ್ಲಿ ಕಾಳಸಂತೆಕೋರರು, ಮರಗಳ್ಳರು, ಅಕ್ರಮ ಸಾಗಾಣೆದಾರರು, ಜೂಜುಕೋರರು ಇದ್ದು ಅವರ ಚಟುವಟಿಕೆಗಳನ್ನು ನಿಯಂತ್ರಿಸದಿದ್ದಲ್ಲಿ, ಗಂಧ ತೇಗದ ಮರಗಳ ತೋಪುಗಳ ಹಾಗೂ ಆಹಾರಧಾನ್ಯಗಳ ಅಕ್ರಮ ಸಾಗಾಣೆ ಹಾಗೂ ಮರಗಳ್ಳತನ ಜಾಸ್ತಿ ಆಗಿ ಈ ಸಮಾಜ ಘಾತಕರು ತಮ್ಮ ಶಕ್ತಿ ವರ್ಧಿಸಿಕೊಂಡು ನಾಗರಹೊಳೆ ಮಾತ್ರವಲ್ಲ ನಾಡಿಗೇ ಕಿಚ್ಚು ಹಚ್ಚುವ ದಿನ ದೂರವಿಲ್ಲ. ಇದಕ್ಕಾಗಿ ವಿಶೇಷ ಪೋಲೀಸ್ ಮತ್ತು ಅರಣ್ಯ ಇಲಾಖಾ ಪಡೆಯನ್ನು ನೇಮಿಸಬೇಕು. ಕೆಟ್ಟ ಪರಿಸರದಲ್ಲಿ ದಟ್ಟವಾಗಿ ನಡೆಯುವ ಈ ಚಟುವಟಿಕೆಗಳನ್ನು ಮಟ್ಟ ಹಾಕಲು ದಿಟ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯೆಯರು ಎತ್ತಿರತಕ್ಕಂಥ ವಿಚಾರವನ್ನು ಮಾನ್ಯ ಅರಣ್ಯ ಮಂತ್ರಿಗಳ ಗಮನಕ್ಕೆ ತಂದು ಅವರಿಗೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಮಳವಳ್ಳಿ ತಾಲ್ಲೂಕಿನ ಬೊಪ್ಪೇಗೌಡನಪುರ ಹೋಬಳಿಯ ಸಮೀಪದ ಬಿ. ಜಿ. ಪುರ

ಕಾಲುವೆಯ ಬಗ್ಗೆ

ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):- ಮಾನ್ಯ ಅಧ್ಯಕ್ಷರೇ, ಮಳವಳ್ಳಿ ತಾಲೋಕು ಬೊಪ್ಪೇಗೌಡನಪುರ ಹೋಬಳಿಯು ಸಂಪೂರ್ಣವಾಗಿ ಖುಷ್ಕಿ ಭೂಮಿಯನ್ನು ಹೊಂದಿದೆ. ಮಳೆಯ ಆಧಾರದ ಮೇಲೆ ಜನರ ಜೀವನ ಸಾಗಬೇಕಾಗಿದೆ. ಆದ್ದರಿಂದ ತುರಗನೂರು ಬ್ರಾಂಚಿನಿಂದ ಈಗಾಗಲೇ ಕಲ್ಯಾಣಿ ಕೊಪ್ಪಲುವರೆಗೆ ಕಾಲುವೆಯಾಗಿರುತ್ತದೆ. ಬಿ. ಜಿ. ಪುರದ ಈ ಕಾಲುವೆಯನ್ನು ೧೬ ಕಿಲೋಮೀಟರ್‌ವರೆಗೆ ಮುಂದುವರಿಸುವುದರಿಂದ ೧೫೦೦೦ ಎಕರೆ ಭೂಮಿಗೆ ನೀರುಣಿಸಿದಂತೆ ಆಗುತ್ತದೆ. ಸಾವಿರಾರು ರೈತರಿಗೆ, ರೈತಕಾರ್ಮಿಕರಿಗೆ ಜೀವನಕ್ಕೆ ಮಾರ್ಗವಾಗುತ್ತದೆ. ಹಾಗೂ ಜನ ಜಾನುವಾರುಗಳಿಗೆ ಕೆರೆಗಳಿಗೆ ನೀರು ಒದಗಿಸಿದಂತೆ ಆಗುತ್ತದೆ. ಇದೊಂದು ಶಾಶ್ವತವಾದ ಪರಿಹಾರ ಕೂಡ. ಉನ್ನತಾಧಿಕಾರಿಗಳ ತಜ್ಞರ ಸಮಿತಿ ಕೂಡ ಈ ಬಿ. ಜಿ. ಪುರದ ಕಾಲುವೆಯನ್ನು ಮುಂದುವರಿಸಲು ಶಿಫಾರಸ್ಸು ಮಾಡಿರುತ್ತದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸದರಿ ವಿಚಾರವಾಗಿ ಸರಕಾರ ಏನು ಕ್ರಮ ಕೈಗೊಂಡಿದೆ? ಬೊಪ್ಪೇಗೌಡನ ಪುರದವರೆಗೆ ಬಿ. ಜಿ. ಪುರ ಕಾಲುವೆಯನ್ನು ಅತೀ ಜರೂರಾಗಿ ಮುಂದುವರಿಸುವಂತೆ ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಜರೂರು ಹಾಗೂ ನಿರ್ದಿಷ್ಟವಾದ ಆದೇಶವನ್ನು ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು ನೀಡಬೇಕೆಂದು ಈ ಸದನದ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣೆಯವರೇ, ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

೧) ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನಲ್ಲಿರುವ ಬೊಪ್ಪೇಗೌಡನಪುರ (ಬಿ. ಜಿ. ಪುರ) ನಾಲೆಯು ೧೬ ಮೈಲಿ ಉದ್ದವಿದ್ದು, ವಿಶ್ವೇಶ್ವರಯ್ಯ ನಾಲೆಯ ತುರಗನೂರು ಶಾಖೆಯ ತುದಿ ಹಂತದ ಉಪಕಾಲುವೆಯಾಗಿರುತ್ತದೆ. ಈ ನಾಲೆಯಿಂದ ಬಿ. ಜಿ. ಪುರ ಹೋಬಳಿಯ ಕೆಲವು ಭಾಗದ ಜಮೀನುಗಳಿಗೆ ಖುಷ್ಕಿ ವ್ಯವಸಾಯಕ್ಕಾಗಿ ನೀರು ಸರಬರಾಜು ಮಾಡಲಾಗುತ್ತಿದೆ. ಇದಲ್ಲದೆ, ಈ ನಾಲೆಯಿಂದ ಬಿ. ಜಿ. ಪುರ ಹೋಬಳಿಯಲ್ಲಿರುವ ಕೆರೆಗಳಿಗೂ ಸಹ ನೀರು ಸರಬರಾಜು ಮಾಡಲಾಗುತ್ತಿದೆ.

೨) ಬಿ. ಜಿ. ಪುರ ಹೋಬಳಿಯು ಸಂಪೂರ್ಣವಾಗಿ ಖುಷ್ಕಿ ಭೂಮಿಯನ್ನು ಹೊಂದಿದ್ದು, ಮಳೆಯ ಆಧಾರದ ಮೇಲೆ ರೈತರು ಸಾಗುವಳಿ ಮಾಡುತ್ತಿದ್ದಾರೆ. ಹಾಲಿ ಇರುವ ಬಿ. ಜಿ. ಪುರ ನಾಲೆಯನ್ನು ಮುಂದುವರಿಸಿ ಇನ್ನೂ ಕೆಲವು ಭಾಗಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲು ಮನವಿಗಳು ಬಂದಿರುತ್ತವೆ.

೩) ಈ ಕಾಲುವೆಯನ್ನು ಇನ್ನೂ ಸುಮಾರು ೧೫ ಕಿ. ಮೀ. ವರೆಗೆ ಮುಂದುವರಿಸುವುದರಿಂದ ಸುಮಾರು ೧೦೦೦ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಬಹುದಾಗಿದೆ. ಈ ಕಾಮಗಾರಿಯನ್ನು ಕೃಷ್ಣರಾಜಸಾಗರ ಆಧುನೀಕರಣ ಯೋಜನೆಯಡಿಯಲ್ಲಿ ತೆಗೆದುಕೊಳ್ಳುವ ಪ್ರಸ್ತಾವ ಇದ್ದು ಸರ್ವೆ ಕಾರ್ಯಗಳು ಪೂರ್ಣಗೊಳ್ಳುತ್ತಿವೆ ಮತ್ತು ಅಂದಾಜನ್ನು ತಯಾರು ಮಾಡಲಾಗುತ್ತಿದೆ.

೪) ಆಧುನೀಕರಣ ಅಡಿಯಲ್ಲಿ ವಿಶ್ವೇಶ್ವರಯ್ಯ ನಾಲೆಯ ಸಾಮರ್ಥ್ಯವನ್ನು ಈಗ ಇರುವ ೨೩೮೩ ಕ್ಯೂಸೆಕ್ಸ್‌ನಿಂದ ೩೦೫೦ ಕ್ಯೂಸೆಕ್ಸ್‌ಗೆ ಹೆಚ್ಚಿಸಲಾಗುವ ಕಾರ್ಯಗಳು ಮುಗಿದು ಹೆಚ್ಚಿನ ಪ್ರಮಾಣದ ನೀರನ್ನು ವಿಶ್ವೇಶ್ವರಯ್ಯ ನಾಲೆಯಲ್ಲಿ ಬಿಟ್ಟ ನಂತರ ಮುಂದುವರಿಸಿದ ಬಿ. ಜಿ. ಪುರದ ನಾಲೆಯಲ್ಲಿ ನೀರನ್ನು ಬಿಡಬಹುದಾಗಿದೆ.

೫) ಈ ಕಾಮಗಾರಿಯನ್ನು ಶೀಘ್ರವಾಗಿ ಪ್ರಾರಂಭಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಸದರಿ ಕೆಲಸವು ೧೯೯೪-೯೫ರಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಬೆಂಗಳೂರಿನ ಸಂಜಯಗಾಂಧಿ ಆಸ್ಪತ್ರೆಯಲ್ಲಿ ೧೯೮೭ರಿಂದಲೂ ಪರಿಶಿಷ್ಟರಿಗೆ ಮೀಸಲಿಟ್ಟ ಅಸಿಸ್ಟೆಂಟ್ ಪ್ರೊಫೆಸರ್ (ಆರ್ಥೋಪೆಡಿಕ್) ಬ್ಯಾಕ್‌ಲಾಗ್ ಹುದ್ದೆಯ ಬಗ್ಗೆ.

ಶ್ರೀ ಬಾಬೂರಾವ್ ಚವಾಣ್ (ಶಹಬಾದ್):- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಸಂಜಯಗಾಂಧಿ ಅಪಘಾತ ಆಸ್ಪತ್ರೆಯಲ್ಲಿ ಪರಿಶಿಷ್ಟರಿಗೆ ಮೀಸಲಿಟ್ಟ ಅಸಿಸ್ಟೆಂಟ್ ಪ್ರೊಫೇಸರ್ ಆರ್ಥೋಪಿಡಿಕ್ ಬ್ಯಾಕ್‌ಲಾಗ್ ಹುದ್ದೆಯನ್ನು ೧೯೮೭ ರಿಂದಲೂ ಖಾಲಿ ಇಟ್ಟಿರುವುದಕ್ಕೆ ಕಾರಣವೇನು? ಈ ಹುದ್ದೆಯನ್ನು ಭರ್ತಿ ಮಾಡುವುದಾಗಿ ೧೯೮೭ ರಲ್ಲಿ ವಿಧಾನ ಪರಿಷತ್ತಿನ ೭೦ನೇ ಅಧಿವೇಶನದಲ್ಲಿ ಆರೋಗ್ಯ ಸಚಿವರು ಭರವಸೆ ನೀಡಿದ್ದರು. ಮತ್ತು ಜಿ. ಓ. ನಂಬರ್ ೧೯ ಎಸ್‌ಬಿಸಿ ೮೯ ದಿನಾಂಕ ೧೨-೭-೮೯ ರ ಪ್ರಕಾರ ಬ್ಯಾಕ್‌ಲಾಗ್ ವೇಕೆನ್ಸಿ ಭರ್ತಿ ಮಾಡಲು ಆರ್ಡರ್ ಇರುವಾಗಲೂ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಜಾರಿ ಮಾಡುತ್ತಿಲ್ಲ. ಇದಕ್ಕೆ ಕಾರಣವೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಬಾಬುರಾವ್ ಚವಾಣ್ ಅವರು ಕೇಳಿರತಕ್ಕ ಪ್ರಶ್ನೆಗಳಿಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ:-

ಸಂಜಯಗಾಂಧಿ ಅಪಘಾತ ಪುನರ್ವಸತಿ ಮತ್ತು ಶಾರೀರಕ ಔಷಧಿ ಸಂಸ್ಥೆ ಬೆಂಗಳೂರು, ಇಲ್ಲಿ ಈ ಕೆಳಕಂಡ ಪ್ರಾಧ್ಯಾಪಕರ ಹುದ್ದೆಗಳಿವೆ.

೧) ಸಹಾಯಕ ಪ್ರಾಧ್ಯಾಪಕರು - ಆರ್ಥೋಪೆಡಿಕ್ಸ್ ೨

೨) ಸಹಾಯಕ ಪ್ರಾಧ್ಯಾಪಕರು - ಪ್ಲಾಸ್ಟಿಕ್ ಸರ್ಜರಿ ೧

೩) ಸಹಾಯಕ ಪ್ರಾಧ್ಯಾಪಕರು - ಜನರಲ್ ಸರ್ಜರಿ ೧

೪) ಸಹಾಯಕ ಪ್ರಾಧ್ಯಾಪಕರು - ನ್ಯೂರೋ ಸರ್ಜರಿ ೧

೫) ಸಹಾಯಕ ಪ್ರಾಧ್ಯಾಪಕರು - ಅನೆಸ್ತೇಸಿಯಾ ೧

ಒಟ್ಟು: ೬

ಮೇಲ್ಕಂಡ ಹುದ್ದೆಗಳ ಪೈಕಿ, ನ್ಯೂರೋ ಸರ್ಜರಿ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿರುವವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಮತ್ತು ಆರ್ಥೋಪೆಡಿಕ್ಸ್ ಸಹಾಯಕ ಪ್ರಾಧ್ಯಾಪಕರ ಹುದ್ದೆಯಲ್ಲಿರುವ ಇಬ್ಬರ ಪೈಕಿ ಒಬ್ಬರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರುತ್ತಾರೆ. ಈ ಎರಡು

ಹುದ್ದೆಗಳನ್ನು ೧೯೮೭ರಲ್ಲಿಯೇ ನಿಯಮಾವಳಿ ಪ್ರಕಾರ, ರೋಸ್ಟರ್ ಪದ್ಧತಿಯನ್ನು ಅನುಸರಿಸಿ, ಭರ್ತಿ ಮಾಡಲಾಗಿದೆ ಹಾಗೂ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಈ ವೃಂದದಲ್ಲಿ ಖಾಲಿಯಿರುವುದಿಲ್ಲ. ಈ ಸಂಬಂಧ ಯಾವುದೇ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ ಹುದ್ದೆಗಳನ್ನು ಭರ್ತಿ ಮಾಡಲು ವಿಳಂಬ ಮಾಡಿರುವುದಿಲ್ಲ.

GRANT OF LAND IN SURVEY NO. 148 OF KANNAMANGALA, CHANNAPATNA TALUK.

Sri Sadat Ali Khan (Channapatna):- Madam, The Hon'ble Minister for Revenue and RDPR will be pleased to note that in survey No. 148 of Kannamangala, Channapatna Taluk, Mr. V. Ramu, Ex-serviceman having 4 acres and adjoining 4 acres of land and the other one Sri D. Komar Gowda now working in BDA as A.E. having a land of 4 acres in S. No. 149, subsequently, the extent of land and survey No. has been changed to No. 255 and extent of land changed to 4 acres i.e. 9 acres 36 guntas. What is the norms to change the Survey Numbers and the conversion of lands from Acres to Hectares in rural areas details may be furnished, what is the extent of land in Survey Number 148 and 149, and who are the beneficaries. Whether it is a fact that injustice has been done by the Revenue Department While grant of land in the above survey number. If so, what action has been taken by the Government in this behalf.

ಶ್ರೀ ಜಿ ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡಬಯಸುತ್ತೇನೆ:-

ಚನ್ನಪಟ್ಟಣ ತಾಲೂಕು ಕನ್ನಮಂಗಲ ಗ್ರಾಮದ ಸ. ನ. ೧೪೮ ಮತ್ತು ೧೪೯ರಲ್ಲಿ ೪.೦೦ ಎಕರೆ ಮತ್ತು ೯.೩೬ (ಎ. ಗುಂ) ಜಮೀನನ್ನು ಕ್ರಮವಾಗಿ ಶ್ರೀ ವಿ. ರಾಮು ಮತ್ತು ಕೂಮಾರಿ ಗೌಡರಿಗೆ ಮಂಜೂರು ಮಾಡಲಾಗಿದೆ. ಸದರಿ ಜಮೀನಿನ ಅಳತೆ ಕಾಲದಲ್ಲಿ ಕೊಮಾರಿ ಗೌಡರವರಿಗೆ ಮಂಜೂರಿಯಾಗಿರುವ ಜಮೀನಿನ ಸ್ಥಳ ಬದಲಾವಣೆಯಾಗಿರುವುದನ್ನು ಭೂ ಮಾಪನ ಇಲಾಖಾ ಸಹಾಯಕ ನಿರ್ದೇಶಕರು ಗಮನಿಸಿದರು. ಅದರಂತೆ ಕೊಮಾರಿಗೌಡರಿಗೆ ಮಂಜೂರಿಯಾಗಿರುವ ಜಮೀನಿನ ಸ್ಥಳ ಬದಲಾವಣೆ ಸ. ಸಂ. ಅನ್ನು ೧೪೮ ಎಂದು ಬದಲಾಯಿಸಿ ತಹಸೀಲ್ದಾರ್‌ರವರು ಆದೇಶ ಹೊರಡಿಸಿರುತ್ತಾರೆ. ಕೊಮಾರಿ ಗೌಡರಿಗೆ ಮಂಜೂರ್ ಆಗಿರುವ ಜಮೀನಿನ ಅಳತೆ ಕೆಲಸ ಪೂರ್ಣಸಿ ಹೊಸ ನಂಬರ್ ೨೫೫ ಎಂದು ಕೊಡಲಾಗಿದೆ. ತಹಸೀಲ್ದಾರ್‌ರವರು ಮಾಡಿರುವ ಸ್ಥಳ ಬದಲಾವಣೆ ಸರ್ವೆ ನಂಬರಿನ ತಿದ್ದುಪಡಿ ಆದೇಶದ ವಿರುದ್ಧ ಶ್ರೀ ವಿ. ರಾಮುರವರು ರಾಮನಗರಂ

ಉಪ ವಿಭಾಗಾಧಿಕಾರಿಗಳ ಸಮ್ಮುಖದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಉಪವಿಭಾಗಾಧಿಕಾರಿಗಳು ತಹಸೀಲ್ದಾರರ ಆದೇಶವನ್ನು ರದ್ದುಗೊಳಿಸಿ ಆದೇಶ ನೀಡಿರುತ್ತಾರೆ. ತದನಂತರ, ಶ್ರೀ ಕೊಮಾರಿಗೌಡರು ಉಪವಿಭಾಗಾಧಿಕಾರಿಗಳ ಆದೇಶದ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಜಿಲ್ಲಾಧಿಕಾರಿಗಳು ಉಪವಿಭಾಗಾಧಿಕಾರಿಗಳ ಆದೇಶವನ್ನು ರದ್ದುಗೊಳಿಸಿ ತಹಸೀಲ್ದಾರ್‌ರವರು ಸ್ಥಳ ಬದಲಾವಣೆ ಬಗ್ಗೆ ಸರ್ವೆ ನಂಬರನ್ನು ತಿದ್ದುಪಡಿ ಮಾಡಿ ನೀಡಿರುವ ಆದೇಶವನ್ನು ಎತ್ತಿ ಹಿಡಿದು ಆದೇಶ ಮಾಡಿರುತ್ತಾರೆ. ಹೀಗಾಗಿ ಕೊಮಾರಿ ಗೌಡರಿಗೆ ಮಂಜೂರಾಗಿರುವ ಜಮೀನು ೯ ಎಕರೆ ೩೭ ಗುಂಟೆ ಇದಕ್ಕೆ ಸಮನಾಗಿ ೪ ಹೆಕ್ಟೇರ್ ಆಗಿರುತ್ತದೆ. ಜಮೀನು ಮಂಜೂರಿ ನಂತರ ಪಕ್ಕ ಪೋಡಿ ಕಾಲದಲ್ಲಿ ಸರ್ವೆ ಇಲಾಖೆಯವರು ಮಂಜೂರಿ ಜಮೀನಿಗೆ ಹೊಸ ಸರ್ವೆ ನಂಬರನ್ನು ಕೊಟ್ಟು ದುರಸ್ತಿ ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ. ಅದರಂತೆ, ಹೊಸ ಸರ್ವೆ ನಂಬರನ್ನು ಆಕಾರಬಂದು ಮತ್ತು ಗ್ರಾಮ ಲೆಕ್ಕಗಳಲ್ಲಿ ದಾಖಲೆ ಮಾಡಲಾಗುವುದು. ಜಮೀನಿನ ಎಕರೆಯನ್ನು ಹೆಕ್ಟೇರ್‌ಗಳಿಗೆ ನಿಗಧಿತವಾದ ಕೋಷ್ಟಕದಂತೆ ಪರಿವರ್ತಿಸಲಾಗುವುದು. ಕನ್ನಮಂಗಲ ಗ್ರಾಮದ ಸ. ನಂ. ೧೪೮ ಮತ್ತು ೧೯೪ರಲ್ಲಿ ಕ್ರಮವಾಗಿ ೪೭೦-೦೮ (ಎ. ಗುಂ) ಮತ್ತು ೫೯೮-೩೭ (ಎ. ಗುಂ) ವಿಸ್ತೀರ್ಣವಿರುತ್ತದೆ. ಈ ಪೈಕಿ ಸ. ನಂ. ೧೪೮ರಲ್ಲಿ ೪.೦೦ ಎಕರೆ ಜಮೀನನ್ನು ಶ್ರೀ ವಿ. ರಾಮುರವರಿಗೆ ಸಕ್ರಮಗೊಳಿಸಲಾಗಿದೆ. ಕಂದಾಯ ಇಲಾಖೆಯಿಂದ ಮಂಜೂರಿದಾರರಿಗೆ ಅನ್ಯಾಯವಾಗಿರುವುದಿಲ್ಲ. ಶ್ರೀ ರಾಮುರವರು ಅವರಿಗೆ ಮಂಜೂರಿಯಾಗಿರುವ ಜಮೀನಿನ ಸ್ವಾಧೀನಾನುಭವದಲ್ಲಿರುತ್ತಾರೆ. ಹಾಗೂ ಇತರೆಯವರಿಗೆ ಮಂಜೂರಿಯಾಗಿರುವ ಜಮೀನನ್ನು ಅತಿಕ್ರಮಿಸಿರುತ್ತಾರೆ. ಶ್ರೀ ರಾಮುರವರ ರಿವಿಷನ್ ಅರ್ಜಿ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಸಮ್ಮುಖದಲ್ಲಿ ತೀರ್ಪಿಗೆ ಬಾಕಿ ಇರುವುದರಿಂದ ಈ ಹಂತದಲ್ಲಿ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳಲು ಸಾಧ್ಯವಿರುವುದಿಲ್ಲ.

ಶಾಸನ ರಚನಾ ಕಾರ್ಯಕಲಾಪಗಳು

೧೯೯೨ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿಗಾಗಿ ಕೋರಿಕೆ

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೇ, ೧೯೯೨ನೇ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಕಂದಾಯ ಸಚಿವರ ಪರವಾಗಿ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷಣಿಯವರು:- ಪ್ರಸ್ತಾವ ವಿನೆಂದರೆ "೧೯೯೨ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು".

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.</u>

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೇ, ೧೯೯೨ನೇ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಕಂದಾಯ ಸಚಿವರ ಪರವಾಗಿ ಸಭೆಯ ಮುಂದ ಮಂಡಿಸುತ್ತೇನೆ.

ಉಪಾಧ್ಯಕ್ಷಣಿಯವರು:- *ಅನುಬಂಧ ವಿಧೇಯಕವನ್ನು ಮಂಡಿಸಲಾಗಿದೆ.

ವಿತ್ತೀಯ ಕಾರ್ಯಕಲಾಪಗಳು.

೧೯೯೨-೯೩ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಉಪಾಧ್ಯಕ್ಷಿಣಿಯವರು:- ಈಗ ಮಾನ್ಯ ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು ತಮ್ಮ ಇಲಾಖೆಯ ಬೇಡಿಕೆಗಳನ್ನು ಮಂಡಿಸಬೇಕು.

ಅಭಿಯಾಚನೆ ಕ್ರಮಾಂಕ ೫.

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು):- ಮಾನ್ಯ ಅಧ್ಯಕ್ಷಣಿಯವರೇ:- ''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದಿಂದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೯,೬೩,೭೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೦೭,೬೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ.''

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕಃ ೬.

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ಖಾತೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೦೮,೦೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕಃ ೭

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ''ರಾಜಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦೬,೩೬,೧೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೯,೭೯,೮೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ''.

ಉಪಾಧ್ಯಕ್ಷಿಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ: ೮.

ಶ್ರೀ ಮುನಿಯಪ್ಪ (ರೇಷ್ಮೆ ಖಾತೆ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, 'ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೭,೬೯,೭೧,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೩೦,೫೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ: ೬೦.

ಶ್ರೀ ಬಿ ಬಸವಲಿಂಗಪ್ಪ (ಪರಿಸರ, ವಿಜ್ಞಾನ ಮತ್ತು ಯಂತ್ರ ಕಲೆ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಜ್ಞಾನ ಮತ್ತು ಯಂತ್ರ ಕಲೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೬೬,೨೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ: ೨೪, ೨೮ ಮತ್ತು ೫೨.

ಶ್ರೀ ಬಿ. ಬಸವಲಿಂಗಪ್ಪ (ಪರಿಸರ, ವಿಜ್ಞಾನ ಮತ್ತು ಯಂತ್ರ ಕಲೆ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾಹನ ತೆರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೩೭,೦೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ. ಹಾಗೂ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆ ಸಾರಿಗೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫೦,೦೦,೦೦೦ ರೂ.ಗಳಿಗಿಂದ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ ಹಾಗೂ ರಾಜ್ಯ ಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರ್ಕ್ಸ್‌ಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೫೦,೦೦,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಮಾನ್ಯ ಸಾರಿಗೆ ಸಚಿವರ ಪರವಾಗಿ ಕೋರುತ್ತೇನೆ.

ಉಪಾಧ್ಯಕ್ಷಣಿಯವರು:- ಬೇಡಿಕೆಯನ್ನು ಮಂಡಿಸಲಾಯಿತು.

ಅಭಿಯಾಚನೆ ಕ್ರಮಾಂಕ: ೫೮, ೫೯.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಇಲಾಖೆಯ ಸಚಿವರು):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗದವರ ಕಲ್ಯಾಣಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೪೩,೬೬,೯೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಬಂಡವಾಳ ಖಾತೆಯಲ್ಲಿ ೫,೦೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಕೋರುತ್ತೇನೆ ಹಾಗೂ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫೩,೫೦,೨೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೨,೦೦,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:- ಬೇಡಿಕೆಗಳನ್ನು ಮಂಡಿಸಲಾಯಿತು.

+ ಶ್ರೀ ಜಿ. ರಾಜುಗೌಡ (ಹನೂರು):- ಮಾನ್ಯ ಉಪಾಧ್ಯಕ್ಷಿಣಿಯವರೇ, ಸದನದ ಮುಂದೆ ಮಂಡಿಸಿರುವಂತಹ ಎಲ್ಲಾ ಬೇಡಿಕೆಗಳನ್ನು ಕೂಡ ಸ್ವಾಗತಿಸುತ್ತಾ ಎಲ್ಲಾ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಕಾಲಾವಕಾಶವಿಲ್ಲವಾಗಿದೆ. ನನಗೆ ಹೆಚ್ಚಿನ ಪ್ರಿಯವಾಗಿರತಕ್ಕಂಥ ರೇಷ್ಮೆ ಇಲಾಖೆ ಬಗ್ಗೆ ಮಾತನಾಡುವುದಕ್ಕಿಂಥ ಮೊದಲು ಗಣಿ ಮತ್ತು ಭೂ ವಿಜ್ಞಾನ ಬೇಡಿಕೆ ಬಗ್ಗೆ ಮತ್ತು ಪರಿಸರ ಇಲಾಖೆ ಬಗ್ಗೆ ಒಂದೆರಡು ವಾಕ್ಯಗಳನ್ನು ಹೇಳಿ ಅನಂತರ ರೇಷ್ಮೆ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಗಣಿ ಮತ್ತು ಭೂ ವಿಜ್ಞಾನ, ಇಲಾಖೆಗೆ ಸಂಬಂಧಪಟ್ಟಂತೆ ನಮ್ಮ ಸರ್ಕಾರ ಕಲ್ಲು ಗಣಿ ಪರವಾನಿಗೆ ಕೊಡತಕ್ಕಂಥ ವಿಷಯದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಬಹುಶಃ ನಮ್ಮ ರಾಜ್ಯದಲ್ಲಿ ಕಲ್ಲು ಗಣಿ ಇದೆ. ಆ ಕಲ್ಲು ಗಣಿ ಪರವಾನಿಗೆ ತಾವು ಕೊಡುತ್ತಿದ್ದೀರಿ ಅದು ಕೊಡತಕ್ಕಂಥ ಕಾಲದಲ್ಲಿ ನನ್ನ ಸಲಹೆಯಾದರೂ ಇಷ್ಟೇ. ದಯಮಾಡಿ ತಾವು ಎಲ್ಲಿ ಕಲ್ಲು ಗಣಿ ಪ್ರದೇಶ ಇದೆಯೋ ಆ ಕಲ್ಲು ಗಣಿ ಪ್ರದೇಶದಲ್ಲಿ ೫ ಹೆಕ್ಟೇರ್ ಅಥವಾ ೧೦ ಹೆಕ್ಟೇರ್‌ನ್ನು ಗುರುತು ಮಾಡಬೇಕು. ಅದನ್ನು ಬಹಿರಂಗವಾಗಿ ಹರಾಜು ಮಾಡಬೇಕು. ಹರಾಜಿನಲ್ಲಿ ಯಾರು ಬಂದು ಹಣವನ್ನು ಕೊಡಲಿಕ್ಕೆ ಇಚ್ಛೆಪಡುತ್ತಾರೋ ಅವರಿಗೆ ಪರವಾನಿಗೆಯನ್ನು ಕೊಡತಕ್ಕಂಥದ್ದು ಮತ್ತು ಮುಂದಿನ ಪ್ರತಿ ವರ್ಷದಲ್ಲೂ ಕೂಡ ಶೇಕಡಾ ೧೦ ರಷ್ಟು ಜಾಸ್ತಿ ತಾವು ಮಾಡಿಕೊಂಡು ಹೋದಾಗ, ಸಾವಿರಾರು ಕೋಟಿ ರೂಪಾಯಿಗಳನ್ನು ಸರ್ಕಾರ ಪಡೆಯಬಹುದು ಅನ್ನತಕ್ಕಂಥ ಒಂದು ಸಲಹೆಯನ್ನು ಕೊಟ್ಟು ತಾವು ಆ ರೀತಿ ಅನುಸರಿಸತಕ್ಕಂಥ ಒಂದು ಕೆಲಸ ಮಾಡಬೇಕೆಂದು ಹೇಳುತ್ತೇನೆ. ಇನ್ನು ಭೂ ವಿಜ್ಞಾನದಲ್ಲಿ ತಾವು ಏನು ವೈಜ್ಞಾನಿಕವಾಗಿ ಭೂಮಿಯಲ್ಲಿರುವ ನೀರಿನ ಸಂಶೋಧನೆ ಮಾಡ್ತೀರಿ ಪ್ರತಿಯೊಂದು ತಾಲ್ಲೂಕಿನಲ್ಲೂ ಅದರಲ್ಲಿ ಎಷ್ಟು ನೀರು ಸಿಗುತ್ತದೆ ಎಷ್ಟು ತರಹ ಬಾವಿಗಳನ್ನು ಮಾಡಲು ಸಾಧ್ಯ ಎಂಬುದನ್ನು ಗುರ್ತು ಮಾಡುವ ಕೆಲಸ ತಾವು ಮಾಡಬೇಕೆಂದು ಹೇಳಿ, ಈ ಪರಿಸರ ಮತ್ತು ವಿಜ್ಞಾನದಲ್ಲಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶ್ರೀಮಾನ್ ಬಸವಲಿಂಗಪ್ಪನವರಿಗೆ ಯಾವುದೇ ಖಾತೆ ಕೊಟ್ಟರೂ ಅದನ್ನು ಬಹಳ ಜವಾಬ್ದಾರಿಯಿಂದ ನಿರ್ವಹಿಸುತ್ತಾರೆ ಎಂಬುದಕ್ಕೆ ಇದೊಂದು ಸಾಕ್ಷಿ ಎಂದು ನಾನು ತಿಳಿದುಕೊಂಡಿದ್ದೇನೆ.

ಬಹುಶಃ ಈ ಖಾತೆಯನ್ನು ಮೊದಲು ಯಾರು ನೋಡಿಕೊಂಡಿದ್ದರೋ, ಅವರೇನು ಸರಿಮಾಡಿರಲಿಲ್ಲ. ಇವರ ಕೈಗೆ ಸಿಕ್ಕಿದ ನಂತರ ಹೊಸ ಶಕ್ತಿ ತುಂಬಿದ್ದಾರೆ. ಹೊಸ ಚಾಲನೆ ಕೊಟ್ಟಿದ್ದಾರೆ. ಯಾರಾದರೂ ಊಟ ಮಾಡಿ ಊಟದ ಎಲೆ ಬೀದಿಗೆ ಎಸೆದರೂ ಕೂಡ ಅಂತಹವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುತ್ತೇನೆಂಬ ಎಚ್ಚರಿಕೆಯ ಮಾತನ್ನಾಡಿ ಇವತ್ತು ಪರಿಸರ ಒಳ್ಳೆಯ ರೀತಿಯಲ್ಲಾಗುವಂಥಹ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ಈ ಸದನದ ಮೂಲಕ ಅವರಿಗೆ ಅಭಿನಂದನೆ ಸಲ್ಲಿಸುತ್ತಾ, ಇನ್ನು ನನಗೆ ಪ್ರಿಯವಾದ ರೇಷ್ಮೆ ಇಲಾಖೆ ಬಗ್ಗೆ ಮಾತನಾಡಲಿಕ್ಕೆ ನಾನು ಇಷ್ಟಪಡುತ್ತೇನೆ. ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ರೇಷ್ಮೆ ಇಲಾಖೆಯೆಂಬುದು ರಾಜ್ಯದಲ್ಲಿ ಎಂತಹ ಪ್ರಮುಖ ಸ್ಥಾನ ಪಡೆದಿದೆ, ಅದನ್ನು ಸರ್ಕಾರ ಬಹಳ ಕೀಳು ದರ್ಜೆಯಲ್ಲಿ ತೆಗೆದುಕೊಂಡು ಕೈಗಾರಿಕೆ ಅನ್ನೋ ಪಟ್ಟಿಯಲ್ಲಿ ಸೇರಿಸಿರತಕ್ಕಂಥದು ನನಗೆ ಬಹಳ ದುಃಖವಾಗಿದೆ. ಬಹುಶಃ ಇದುವರೆಗೂ ಕೂಡ ರೇಷ್ಮೆ ಖಾತೆ ಸಚಿವರು ಸಂಪುಟ ದರ್ಜೆ ಸಚಿವರಾಗಿದ್ದರು. ಇವತ್ತು ರಾಜ್ಯಖಾತೆ ಕೊಟ್ಟಿದ್ದಾರೆ, ದಯಮಾಡಿ ಅವರನ್ನು ಸಂಪುಟ ದರ್ಜೆಗೆ ಏರಿಸಬೇಕೆಂತ ನಾನು ಕೇಳಲಿಕ್ಕೆ ಇಷ್ಟಪಡುತ್ತೇನೆ. ರೇಷ್ಮೆ ಎಂಥಾದ್ದು ಎಂಬ ಬಗ್ಗೆ ನಾವು ಯೋಚಿಸಬೇಕು. ರೇಷ್ಮೆ ಜಗತ್‌ಪ್ರಸಿದ್ಧವಾದುದು. ಇದರ ಸೊಬಗು, ಇದರ ನವೀನತೆ ಇದರ ಸೌಂದರ್ಯ, ಇದರ ಶ್ರೀಮಂತಿಕೆಯನ್ನು ಬೇರೆ ಯಾವುದೇ ವಸ್ತುವಿನಿಂದಲೂ ತುಂಬಲು ಸಾಧ್ಯವಿಲ್ಲ. ಇದಕ್ಕೆ ೨೦೦ ವರ್ಷಗಳ ಒಂದು ಚರಿತ್ರೆ ಇದೆ. ಈ ರಾಜ್ಯದ ಕಲ್ಪವೃಕ್ಷ ಕಾಮಧೇನು ಆಗಿರತಕ್ಕದ್ದು. ಕರ್ನಾಟಕ ಅಂದರೆ ರೇಷ್ಮೆ, ರೇಷ್ಮೆ ಅಂದರೆ ಕರ್ನಾಟಕ. ಯಾವುದರಲ್ಲಿ ಎಲ್ಲಾ ಕಲ್ಚರ್ ಇದೆಯೋ ಅದು ಸಿರಿಕಲ್ಚರ್ ಅಂತ ಹೇಳುತ್ತೇವೆ. ಇದು ದುಡಿಮೆಗೆ ಪ್ರಧಾನವಾದ ಕೈಗಾರಿಕೆ. ಬಂಡವಾಳ ಪ್ರಧಾನ ಕೈಗಾರಿಕೆಗಿಂತ ದುಡಿಮೆಗೆ ಪ್ರಧಾನವಾದ ಕೈಗಾರಿಕೆಗೆ ಒತ್ತು ಕೊಟ್ಟರೆ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಜನರಿಗೆ ವಿಫುಲವಾದ ಉದ್ಯೋಗವಕಾಶ ಸಿಗುತ್ತದೆಂದು ಹೇಳಬಯಸುತ್ತೇನೆ. ರೇಷ್ಮೆ ಕೃಷಿ ಅಥವಾ ಕೈಗಾರಿಕೆ ಮೈಸೂರು, ತುಮಕೂರು, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಇಲ್ಲದಿದ್ದರೆ ಬಹುಶಃ ಅವು ಸತತವಾಗಿ ಕ್ಷಾಮಪೀಡಿತ ಪ್ರದೇಶಗಳಾಗುತ್ತಿದ್ದವು. The severity of drought is not felt in the area where there is Sericulture. ಎಲ್ಲಿ ರೇಷ್ಮೆ ಕೃಷಿ ಮತ್ತು ರೇಷ್ಮೆ ಕೈಗಾರಿಕೆ ಇದೆಯೋ ಅಲ್ಲಿ ಕ್ಷಾಮದ ಬಿಸಿ ತಟ್ಟುವುದಿಲ್ಲ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ಈ ಬಂಡವಾಳ ಪ್ರಧಾನ ಕೈಗಾರಿಕೆಗಳಿಗಿಂತ ದುಡಿಮೆ ಪ್ರಧಾನ ಕೈಗಾರಿಕೆಗಳಿಗೆ ನಾವು ಹೆಚ್ಚು ಒತ್ತು ಕೊಟ್ಟಾಗ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುತ್ತದೆ. ರೇಷ್ಮೆ ಕೃಷಿಯನ್ನು ವ್ಯವಸ್ಥಿತವಾಗಿ ಕೈಗೊಂಡಿದ್ದಲ್ಲಿ ರಾಷ್ಟ್ರವನ್ನು ಕಾಡುತ್ತಿರುವ ನಿರುದ್ಯೋಗ, ಬಡತನ ಇವೆಲ್ಲವನ್ನೂ ಕೂಡ ಹೋಗಲಾಡಿಸಲು ಸಾಧ್ಯ ಎಂದು ಹೇಳಲು ಇಷ್ಟಪಡುತ್ತೇನೆ. ಬಹುಶಃ ರೇಷ್ಮೆ ಕೃಷಿ ಅವಲಂಬಿಸಿರುವವರ ಮುಖದಲ್ಲಿ ಒಂದು ಶ್ರೀಮಂತಿಕೆ ಲಕ್ಷಣ ಕಾಣುತ್ತದೆ. ಸೊಗೂಮೊರೆ ಅಂದರೆ ಸಂಪತ್ತನ್ನುಳ್ಳ ಮುಖವುಳ್ಳವನು. ಸೊ ಅಂದರೆ ಸೊಪ್ಪು, ಗೂ ಅಂದರೆ ಗೂಡು, ಮೊ ಅಂದರೆ ಮೊಟ್ಟೆ ರೇ ಅಂದರೆ ರೇಷ್ಮೆ - ಸೊಗುಮೊರೇ, ಯಾರು ರೇಷ್ಮೆ ಕೃಷಿ ಕೈಗಾರಿಕೆಯನ್ನು ಅವಲಂಬಿಸಿರುತ್ತಾರೋ ಅವರ ಮುಖದಲ್ಲಿ ಸಂಪತ್ತಿನಲ್ಲಿದ್ದು ತಾಂಡವವಾಡುತ್ತದೆಂದರೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ನಾವು ವಿಶ್ವ ಬ್ಯಾಂಕಿನ ಒಂದು ಯೋಜನೆ ತಯಾರು ಮಾಡಿದೆವು. ಅದು ೮೦ರಲ್ಲಿ ರಾಜ್ಯದಲ್ಲಿ ಜಾರಿಗೆ ಬಂತು. ಆ ಹಿನ್ನೆಲೆಯಲ್ಲಿ ನಾವು ಏನು ಸಾಧಿಸಿದ್ದೇವೆ [illegible] ಪ್ರಗತಿ ಹೊಂದಿದ್ದೇವೆ ಎಂಬುದನ್ನು ನಾವು ಯೋಚಿಸಬೇಕು.

ನಾನಾದರೂ ಪ್ರಗತಿ ಹೊಂದಿರುವುದರ ಬಗ್ಗೆ ಒಂದು ಕಡೆ ಇದ್ದರೆ ಅದರಲ್ಲಿರುವ ಲೋಪ ದೋಷಗಳೇನು ಎಂಬುದನ್ನು ಎತ್ತಿ ತೋರಿಸಬೇಕಾದ್ದು ನನ್ನ ಕರ್ತವ್ಯ. ೮೦ರಲ್ಲಿ ಪ್ರಾರಂಭಿಸಿದ ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆಯ ಜಾರಿಯಲ್ಲಾಗಿರುವ ಹಲವಾರು ಲೋಪದೋಷಗಳನ್ನು ತೋರಿಸುತ್ತೇನೆ. ಆ ಯೋಜನೆ ಜಾರಿಗೆ ತರುವುದು ರೇಷ್ಮೆ ಉತ್ಪಾದನೆಯ ಮುಖ್ಯ ಉದ್ದೇಶ. ರೇಷ್ಮೆ ಉತ್ಪಾದನೆಯಲ್ಲಿ ಪ್ರಮುಖ ರಾಷ್ಟ್ರಗಳಾಗಿರುವ ಆಧುನಿಕ ತಂತ್ರಜ್ಞಾನ ಪಡೆದು ರೇಷ್ಮೆ ಬೆಳೆ ವಿಸ್ತರಿಸಿ ಅದರ ಗುಣಮಟ್ಟ ಸುಧಾರಿಸಲು ೧೯೮೦ರಲ್ಲಿ ಅಬ್ಬರದ ಪ್ರಚಾರದೊಂದಿಗೆ ಪ್ರಾರಂಭವಾದಂಥಾದ್ದು. ೫ ವರ್ಷಗಳಾದರೂ ಆ ಯೋಜನೆ ಮುಗಿಯಲಿಲ್ಲ. ೮೫ರಲ್ಲಿ ಅದನ್ನು ನಾವು ವಿಸ್ತರಣೆ ಮಾಡಿದೆವು. ನಮ್ಮ ಗುರಿ ಏನು ಒಂದು ವರ್ಷದಲ್ಲಿ ೧೬೦೦ ಟನ್ ರೇಷ್ಮೆಯನ್ನು ಉತ್ಪಾದಿಸಬೇಕೆಂಬುದು. ಅಂದರೆ ೫ ವರ್ಷದಲ್ಲಿ ಸುಮಾರು ೮ ಸಾವಿರ ಟನ್ ಉತ್ಪನ್ನ ಮಾಡುವುದು. ೮೦-೮೧ರಲ್ಲಿ ನಮ್ಮ ರಾಜ್ಯದಲ್ಲಿ ಉತ್ಪನ್ನವಾದ ೨೭೭೦ ಮೆಟ್ರಿಕ್ ಟನ್ ಏನಿದೆ ಅದು ಪ್ಲಸ್ ಈ ೮ ಸಾವಿರ ಟನ್ ಅಂದರೆ ೧೦ ಸಾವಿರ ಟನ್ ರೇಷ್ಮೆ ಉತ್ಪನ್ನ ಮಾಡುವ ಗುರಿ ನಾವಿಟ್ಟುಕೊಂಡಿದ್ದವು. ಅದನ್ನು ಸಾಧಿಸಲಿಕ್ಕೆ ನಾವು ವಿಫಲರಾಗಿದ್ದೇವೆ, ಮತ್ತು ೯ ಜಿಲ್ಲೆಗಳಲ್ಲಿ ಸುಮಾರು ೧೮,೫೦೦ ಎಕರೆ ಪ್ರದೇಶದಲ್ಲಿ ಎಂಷ್ಟ ಒಜಾಕ್ ಕಟ್ಟಿಯನ್ನು ಹಾಕುವ ಗುರಿ ಇತ್ತು.

೧೧.೫೫ ಎ. ಎಂ.

ಆದರೆ ಈ ಗುರಿಯಲ್ಲಿ ಕೇವಲ ೫ ಪರ್ಸೆಂಟ್ ಮಾತ್ರ ನಮಗೆ ಸಿಕ್ಕಿದೆ. ಬಾಕಿಯನ್ನು ಮಾಡಲು ಸಾಧ್ಯವಾಗಲಿಲ್ಲ, ಆದರೆ ಒಟ್ಟು ೧೦೭೫೭ ಟನ್ ಉತ್ಪನ್ನವಾಗಬೇಕಾಗಿದ್ದುದು ಅಷ್ಟು ಆಗಲಿಲ್ಲ, ೯೦-೯೧ರಲ್ಲಿ ನಮ್ಮ ಗುರಿ ೬,೯೮೮ ಟನ್ ಇದ್ದುದು ಡಿಸೆಂಬರ್‌ವರೆಗೆ ಕೇವಲ ೪೧೭೮ ಟನ್ ಕಚ್ಚಾ ರೇಷ್ಮೆ ಉತ್ಪನ್ನ ಮಾಡಿದ್ದೀವಿ, ಅಂದರೆ ನಾವು ವಿಶ್ವ ಬ್ಯಾಂಕ್‌ನಿಂದ ಪಡೆದಿರುವ ೧೧೦ ಕೋಟಿ ಸರಿಯಾದ ರೀತಿಯಲ್ಲಿ ಪ್ರಯೋಜನವಾಗಿಲ್ಲ ಎಂದು ಹೇಳುತ್ತೇನೆ. ಸರ್ಕಾರದ ರೇಷ್ಮೆ ಫಿಲೇಚರ್‌ಗಳಲ್ಲಿ ಯಾವ ರೇಷ್ಮೆ ಉತ್ಪನ್ನ ಮಾಡಬೇಕೆಂದು ಗುರಿ ಇಟ್ಟುಕೊಂಡಿದ್ದೆವೋ ಆ ಗುರಿ ನಾವು ತಲುಪಿಲ್ಲ ಶೇಕಡ ೨೫ರಷ್ಟು ಮಾತ್ರ ಗುರಿ ಸಾಧಿಸಿದ್ದೇವೆ ಅದರ ಒಟ್ಟಾರೆ ನಷ್ಟ ಎಷ್ಟಾಗಿದೆ ಎಂದರೆ ೫೯.೮೬ ಲಕ್ಷ ರೂ. ಬೈವೋಲ್ಟಿನ್ ರೇಷ್ಮೆ ವರ್ಷಕ್ಕೆ ೧ ಸಾವಿರ ಟನ್ ಉತ್ಪಾದಿಸುವ ಗುರಿ ಇತ್ತು. ನಾವು ಮಾಡಲಾಗಲಿಲ್ಲ. ಕೇವಲ ೮೪-೮೫ರಿಂದ ೮೮-೮೯ರ ನಡುವಿನ ಯಾವುದೇ ವರ್ಷದಲ್ಲಿ ಇದರ ಉತ್ಪಾದನೆ ೧೨೦ ಟನ್ ದಾಟಲಿಲ್ಲ. ರೇಷ್ಮೆ ಬಿತ್ತನೆ ಕೋಠಿ ನಿರ್ಮಾಣದಲ್ಲಿ ಸುಮಾರು ಒಂದು ಕೋಟಿ ನಷ್ಟವಾಗಿದೆ ಜೊತೆಗೆ ೫ ವರ್ಷ ವಿಳಂಬವಾಗಿದೆ. ಆದ್ದರಿಂದ ೫೯.೬೯ ಲಕ್ಷ ರೂ. ಹೆಚ್ಚಿಗೆ ನಷ್ಟವಾಗಿದೆ. ನಾವು ಎಷ್ಟು ಖರ್ಚು ಮಾಡಬೇಕಾಗಿತ್ತೋ ಅದಕ್ಕಿಂತ ೬೫೧.೮೯ ಲಕ್ಷ ಹೆಚ್ಚಿಗೆ ಖರ್ಚು ಮಾಡಿದ್ದೇವೆ. ೧೯.೫೨ ಲಕ್ಷ ರೂ. ವೆಚ್ಚದಲ್ಲಿ ಕಟ್ಟಬೇಕಾದ ೪೦ ಯಂತ್ರಗಳನ್ನು ರೇಷ್ಮೆ ಬಿತ್ತನೆ ಕೋಠಿಗಳಲ್ಲಿ ನೀರಿನ ಸೌಲಭ್ಯವಿಲ್ಲದೆ ವಿದ್ಯುತ್‌ನ ಅಸಮರ್ಪಕ ಸರಬರಾಜು ಕಾರಣ ಅವುಗಳನ್ನು ಬಳಸಿಕೊಂಡಿಲ್ಲ. ಅವು ಮೂಲೆ ಗುಂಪಾಗಿವೆ. ೮೭ ಇನ್‌ಕ್ಯುಬೇಟರ್‌ಗಳನ್ನು ಅಳವಡಿಸೇ ಇಲ್ಲ. ೨೨೫ ಇನ್‌ಕ್ಯುಬೇಟರ್‌ಗಳು ಸರಿಯಾಗಿ ಕೆಲಸ ಮಾಡ್ತಾ ಇಲ್ಲ. ಸೆಪ್ಟೆಂಬರ್ ೧೯೮೭ರಲ್ಲಿ ೯.೯೦ ಲಕ್ಷ ರೂ. ವೆಚ್ಚದಲ್ಲಿ ರಿಪೇರಿ ಮಾಡಿದ ೨ ಇನ್‌ಕ್ಯುಬೇಟರ್‌ಗಳನ್ನು ಬಳಸದೆ ಮೂಲೆಗೆ ಹಾಕಲಾಗಿದೆ. ಜಪಾನ್‌ನಿಂದ ಖರೀದಿ ಮಾಡಿದ ೫೫.೭೮ ಲಕ್ಷ ಬೆಲೆಯ ಸ್ವಯಂಚಾಲಿತ ನೂಲು ಸುತ್ತುವ ಯಂತ್ರವನ್ನು ಉಪಯೋಗಿಸಿಕೊಂಡಿಲ್ಲ. ದಕ್ಷಿಣ ಕೊರಿಯಾದಿಂದ ತರಿಸಿರುವ ೧೮೨.೯೬ ಲಕ್ಷ ಬೆಲೆಯ ಅರೆಸ್ವಯಂಚಾಲಿತ ೬ ನೂಲು ಸುತ್ತುವ ಯಂತ್ರವನ್ನು ಉಪಯೋಗಿಸಲಿಲ್ಲ. ಬಿಕೆ

ಉಪಯೋಗಿಸಲಿಲ್ಲ? ಪೈಪ್ರೋಲ್ಪಿನ್ ಗೂಡುಗಳು ಸಾಕಷ್ಟಿಲ್ಲದಿದ್ದರಿಂದ ಉಪಯೋಗಿಸಲಿಲ್ಲ. ೪ ಜೊತೆ ಯಂತ್ರಗಳಿಗೆ ಸುಮಾರು ೭೬.೧೮೯ ಲಕ್ಷ ಖರ್ಚಾಗಿದೆ. ಅಂದರೆ ಅಗತ್ಯಕ್ಕಿಂತ ಹೆಚ್ಚಾಗಿ ಖರ್ಚಾಗಿದೆ. ಕಚ್ಚಾ ರೇಷ್ಮೆ ಉಪಕರಣದ ಬೆಲೆ ೧೨.೧ ಲಕ್ಷ ಮತ್ತು ಇತರೇ ಸುಮಾರು ೬೦ ಸಾವಿರ ಬೆಲೆ ಬಾಳುವ ಯಂತ್ರಗಳು ೧೯೭೧ರಿಂದ ಮೂಲೆಗೆ ಬಿದ್ದಿವೆ. ಅದೇ ರೀತಿ ಸಂಶೋಧನಾ ಕಾರ್ಯಗಳಿಗೆ ಆಮದು ಮಾಡಿಕೊಂಡಿರುವ ೧.೪೨ ಲಕ್ಷ ಬೆಲೆಯ ಉಪಕರಣಗಳನ್ನು ಕೂಡ ಉಪಯೋಗಿಸುತ್ತಿಲ್ಲ. ರೇಷ್ಮೆ ನೂಲು ಸುತ್ತುವ ೧೫ ಸಮುಚ್ಚಯಗಳ ೧೫೦ ಪ್ರಕರಣಗಳ ಪೈಕಿ ೮೨ ರಲ್ಲಿ ಮಾತ್ರ ನೂಲು ಸುತ್ತುವ ಯಂತ್ರಗಳನ್ನು ಅಳವಡಿಸಲಾಗಿದೆ. ಇದರಲ್ಲಿ ೪೫ ಯಂತ್ರಗಳು ಜನವರಿ ೮೯ ರಿಂದ ಕೆಲಸ ಮಾಡುತ್ತಿಲ್ಲ. ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ೧೦೦ ಮಾರುಕಟ್ಟೆಗಳು ತುಂಬಾ ದೂರದಲ್ಲಿವೆ. ಯಾವುದೇ ವಹಿವಾಟು ನಡೆಸುತ್ತಿಲ್ಲ. ೧೧ ಮಾರುಕಟ್ಟೆಗಳು ಸರಾಸರಿಗಿಂತ ಕಡಿಮೆ ವಹಿವಾಟು ನಡೆಸಿವೆ. ಟಿ. ನರಸೀಪುರ ಫಿಲೇಚರ್‌ಗೆ ವರ್ಷವೊಂದಕ್ಕೆ ೧೧೨೦ ಟನ್ ಗೂಡು ಬೇಕು. ಆದರೆ ೧೯೮೪ ರಿಂದ ೮೮ರ ವರೆಗೆ ಕೂಡ ಸಂಗ್ರಹಿಸಿಟ್ಟ ವಾರ್ಷಿಕ ೫೪ರಿಂದ ೬೯ ಟನ್ ಮಾತ್ರ. ರೈತರಿಗೆ ತರಬೇತಿ ಕ್ರಮಗಳು ಕೂಡ ಶೇಕಡ ೧೦ರಿಂದ ೫೫ರಷ್ಟು ಗುರಿ ಸಾಧನೆಯಾಗಿಲ್ಲ. ಯಾವ ಉದ್ದೇಶಕ್ಕಾಗಿ ತಾವು ಮೆಷಿನರಿ ಕೊಂಡುಕೊಂಡಿರೋ ಆ ಉದ್ದೇಶಕ್ಕಾಗಿ ಅವನ್ನು ಬಳಸಿಲ್ಲ. ತಾವು ಯಂತ್ರಗಳನ್ನು ಖರೀದಿ ಮಾಡಿದಿರೇ ಹೊರತು ಅದನ್ನು ಉಪಯೋಗಿಸಲಿಲ್ಲ. ಬಂಡವಾಳ ಇಲ್ಲದೇನೇ ಯಂತ್ರಗಳನ್ನು ಏತಕ್ಕೆ ಖರೀದಿ ಮಾಡಿದಿರಿ? ತಾವು ವಿಶ್ವ ಬ್ಯಾಂಕಿನ ೧೧೦ ಕೋಟಿ ಯೋಜನೆಯಲ್ಲಿ ತಾವು ಯಂತ್ರಗಳಿಗಾಗಿ ಸಾಕಷ್ಟು ಖರ್ಚು ಮಾಡಿದ್ದೀರಿ. ಆದರೆ ಆ ಹಣದಲ್ಲಿ ಒಂದು ಪಾಲನ್ನು ನೇರವಾಗಿ ರೈತನಿಗೆ ಮುಟ್ಟಿಸುವ ಕಾರ್ಯಕ್ರಮ ಯಾವುದಾದರೂ ಹಾಕಿಕೊಂಡಿದ್ದೀರಾ? ೧೧೦ ಕೋಟಿಯಲ್ಲಿ ರೈತರಿಗಾಗಿ ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ದಯಮಾಡಿ ಉತ್ತರದಲ್ಲಿ ತಿಳಿಸಬೇಕು. ತಾವು ಒಂದು ನೀಲಿನಕ್ಷೆ ತಯಾರು ಮಾಡಿದರಿ. ಅದನ್ನು ತಯಾರಿಸುವ ಕಾಲದಲ್ಲಿ ರೇಷ್ಮೆ ಬೆಳೆಗಾರರ ಪ್ರದೇಶದಿಂದ ಬರುವ ಸದಸ್ಯರ ಗಮನಕ್ಕೆ ತಂದು ಏನು ಲೋಪದೋಷಗಳಿವೆ ಎಂದು ನಮ್ಮ ಗಮನಕ್ಕೆ ತಂದಿದ್ದರೆ ಅದನ್ನು ನಾವು ಸರಿಪಡಿಸಬಹುದಿತ್ತು. ನಿಮ್ಮ ಅಧಿಕಾರಿಗಳು ಇಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ಆದರೆ ಅವರ ಕೆಲಸದಲ್ಲಿ ನಿರ್ಲಕ್ಷ್ಯ ಮಾಡುತ್ತಾರೆ. ಅವರು ಇಷ್ಟಬಂದಂತೆ ಕೆಲಸವನ್ನು ಮಾಡುತ್ತಾರೆ. ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳ ಯಂತ್ರಗಳನ್ನು ಪರ್ಚೇಸ್ ಮಾಡಿದರು. ಅದನ್ನು ಉಪಯೋಗಿಸುತ್ತಿಲ್ಲ. ಈ ಹೊರೆ ಯಾರ ಮೇಲೆ ಬೀಳುತ್ತದೆ? ದಯಮಾಡಿ ಅದನ್ನು ತಿಳಿಸಬೇಕು. ಕೇವಲ ಎರಡು ಇನ್‌ಕ್ಯುಬೇಟರ್ ರಿಪೇರಿ ಮಾಡುವುದಕ್ಕೆ ದುರಸ್ತಿ ಮಾಡಿಸುವುದಕ್ಕೆ ೯.೬ ಲಕ್ಷ ರೂಪಾಯಿಗಳನ್ನು ಅವರು ಖರ್ಚು ಮಾಡಿದ್ದಾರೆಲ್ಲಾ, ೨೨೦ ಇನ್‌ಕ್ಯುಬೇಟರ್‌ಗಳನ್ನು ತರಿಸುವುದಕ್ಕೆ ಎಷ್ಟು ಖರ್ಚಾಗಿದೆ? ಅದನೆಲ್ಲಾ ತಾವು ಉಪಯೋಗಿಸುತ್ತಿದ್ದೀರಾ? ದಯಮಾಡಿ ಯಾವುದೇ ಒಂದು ಯೋಜನೆ ಬಂದಾಗ ಆ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ, ಆ ಯೋಜನೆಯ ರೂಪರೇಷೆಗಳನ್ನು ತಯಾರು ಮಾಡುವಾಗ, ನೀಲಿನಕ್ಷೆಯನ್ನು ತಯಾರು ಮಾಡತಕ್ಕಂಥ ಕಾಲದಲ್ಲಿ ದಯಮಾಡಿ ನಮ್ಮ ರೇಷ್ಮೆ ಬೆಳೆಯತಕ್ಕಂಥ ಪ್ರದೇಶದಿಂದ ಬಂದಿರತಕ್ಕಂಥ ಮಾನ್ಯ ಸದಸ್ಯರುಗಳ ಗಮನಕ್ಕೆ ತರುವಂತಹ ಒಂದು ಕೆಲಸವನ್ನು ತಾವು ಮಾಡಬೇಕು. ಎರಡನೆಯ ವಿಶ್ವ ಬ್ಯಾಂಕ್ ಯೋಜನೆಯಲ್ಲಿ ಸಿವಿಲ್ ವರ್ಕ್ಸ್‌ನ್ನು ತಾವು ಪ್ರಾರಂಭ ಮಾಡಿದ್ದೀರಿ, ಆದರಲ್ಲಿ ಕೂಡ ಯಂತ್ರೋಪಕರಣದ ಬಗ್ಗೆಯೇ ತಾವು ಹೆಚ್ಚಿಗೆ ಗಮನ ಕೊಡುತ್ತಿದ್ದೀರಿ. ದಯಮಾಡಿ ನಾನು ಹೇಳತಕ್ಕಂಥದ್ದು ಇಷ್ಟೆ. ತಾವು ಉಳಿಯಬೇಕಾದರೆ,

ಇಲಾಖೆ ಉಳಿಯಬೇಕಾದರೆ, ರೇಷ್ಮೆ ಕೃಷಿಯನ್ನು, ರೇಷ್ಮೆ ಕೈಗಾರಿಕೆಯನ್ನು ಅವಲಂಬಿಸಿರತಕ್ಕಂಥ ಜನರು ಉಳಿಯಬೇಕಾದರೆ ದಯಮಾಡಿ ಹೆಚ್ಚಿನ ಆದ್ಯತೆಯನ್ನು ಆ ಕಡೆಗೆ ಕೊಡತಕ್ಕಂಥ ಕೆಲಸವನ್ನು ತಾವು ಮಾಡಬೇಕು. ಮುಂದೆ ಆ ರೀತಿ ಮಾಡುತ್ತೀರಿ ಎನ್ನತಕ್ಕಂಥ ಒಂದು ನಂಬಿಕೆಯಿಂದ ತಮಗೆ ಈ ಸಲಹೆಯನ್ನು ನಾನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ ರೇಷ್ಮೆ ಕೃಷಿಯ ಬಗ್ಗೆ ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಸ್ವಾಮಿ, ಕಡ್ಡಿ ಹಾಕತಕ್ಕಂಥದ್ದು ಒಂದು ಟ್ಯಾಕ್ಟಿಕ್ಸ್. ಜಪಾನ್‌ನಲ್ಲಿ ಯಾವ ರೀತಿ ಕಡ್ಡಿಯನ್ನು ಹಾಕುತ್ತಿದ್ದಾರೆ, ಒಂದು ಕಡ್ಡಿಗೂ ಮತ್ತೊಂದು ಕಡ್ಡಿಗೂ ಎಷ್ಟೊಂದು ಅಂತರವಿರಬೇಕು, ಯಾವಾಗ ಅವರು ಬೆಳೆಯನ್ನು ಕೊಯ್ಯುತಕ್ಕಂಥದ್ದು ಎನ್ನತಕ್ಕಂಥದ್ದರ ಬಗ್ಗೆ ಯೋಚನೆ ಮಾಡಬೇಕು. ತಾವು ಇವತ್ತಿನ ದಿವಸ ಒಂಭತ್ತೂವರೆ-ಹತ್ತು ಕೆಜಿ ಗೂಡಿಗೆ ಒಂದು ಕೆ.ಜಿ. ರೇಷ್ಮೆ ಆಗುತ್ತದೆ ಎಂದು ಹೇಳುತ್ತಿದ್ದೀರಿ. ನಾನು ಅದನ್ನು ಒಪ್ಪುವುದಿಲ್ಲ. ರೇಷ್ಮೆ ಬಿಟ್ಟಿದ್ದು ಕಕ್ಕೂನ್ ಸಿಲ್ಕ್ ನನಗೆ ಬೇಕಾಗಿಲ್ಲ. ನನಗೆ ಬೇಕಾಗಿರತಕ್ಕಂಥದ್ದು ರೇಷಿಯೊ. ಎಷ್ಟು ಕೆ. ಜಿ. ಸೊಪ್ಪಿಗೆ ಎಷ್ಟು ರೇಷ್ಮೆ ಆಗುತ್ತದೆ ಎಂಬುದು. ಒಂದು ಎಕರೆಯಲ್ಲಿ ಎಷ್ಟು ಸೊಪ್ಪನ್ನು ಬೆಳೆಯುವುದಕ್ಕೆ ಸಾಧ್ಯ? ಆ ಸೊಪ್ಪಿನಿಂದ ಎಷ್ಟು ಗೂಡುಗಳನ್ನು ತಯಾರು ಮಾಡಬಹುದು? ಇದರಿಂದ ಎಷ್ಟು ರೇಷ್ಮೆ ಆಗುತ್ತದೆ? ಆ ಥೀಮ್ ರೇಷಿಯೋವನ್ನು ಕೊಡಬೇಕೇ ವಿನಹಾ ಕೇವಲ ಒಂಭತ್ತೂವರೆ-ಹತ್ತು ಕೆಜಿಗೆ ಒಂದು ಕೆಜಿ ರೇಷ್ಮೆಯಾಗುತ್ತದೆ ಎಂದು ಹೇಳುವುದು ಬೇಡ. ಏಕೆಂದರೆ ಹಾಂಕಾಂಗ್‌ನಲ್ಲಿ ಒಂದು ಹೆಕ್ಟೇರಿನಲ್ಲಿ ಸುಮಾರು ೪೦ ಕೆ. ಜಿ. ರೇಷ್ಮೆಯನ್ನು ಪಡೆಯತಕ್ಕಂಥ ರೈತರು ಇದ್ದಾರೆ ಇವತ್ತು. ಆ ಒಂದು ಮಟ್ಟಕ್ಕೆ ನಮ್ಮ ದೇಶದಲ್ಲಿಯೂ ಬರಬೇಕು ಎಂದು ಹೇಳುತ್ತೇನೆ. ಆ ಟೆಕ್ನಿಕ್‌ನ್ನು ತಾವು ಬೆಳೆಸಿಕೊಳ್ಳಬೇಕು ಎಂದು ಹೇಳುತ್ತೇನೆ. ಆಧುನಿಕ ಬೇಸಾಯ ಪದ್ಧತಿಯನ್ನು ನಮ್ಮಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ತಾವು ಈ ಕಡೆಗೆ ಗಮನವನ್ನು ಕೊಡುತ್ತಿಲ್ಲ. ಮೂವತ್ತು ವರ್ಷದ ಯಾವನೋ ಒಬ್ಬ ಕಡ್ಡಿ ಹಾಕಿದರೆ, ಆ ಪ್ರದೇಶದಲ್ಲಿ ಅವನು ಬಿತ್ತಿದ್ದರೆ ಆ ಸೊಪ್ಪನ್ನು ತಿಂದು ಬೆಳೆಯತಕ್ಕಂಥ ಹುಳು ಸರಿಯಾದ ರೀತಿಯಲ್ಲಿ ಗೂಡು ಕಟ್ಟುವುದಕ್ಕೆ ಆಗುತ್ತದೆಯೇ? ಕಟ್ಟಲಿಕ್ಕೆ ಆಗುವುದಿಲ್ಲ. ದಯಮಾಡಿ ಆ ಒಂದು ಟೆಕ್ನಿಕ್ ಏನು ಇದೆ, ಆ ತಾಂತ್ರಿಕತೆ ಏನು ಇದೆ, ಅದನ್ನು ಅಳವಡಿಸಿಕೊಳ್ಳುವುದಕ್ಕೆ ರೈತರನ್ನು ಜಾಗ್ರತೆ ಮಾಡತಕ್ಕಂಥ ಒಂದು ಕರ್ತವ್ಯ ಈ ಇಲಾಖೆಯದು. ಈ ಬಗ್ಗೆ ತಾವು ಏನು ಮಾಡಿದ್ದೀರಿ? ಏನೂ ಮಾಡಿಲ್ಲ. ರೈತರು ತನ್ನ ಪಾಡಿಗೆ ತಾನು ಬೆಳೆಯುತ್ತಾನೆ, ಬೆಳೆದಷ್ಟು ಗೂಡನ್ನು ಅವರು ಕೊಡುತ್ತಿದ್ದಾರೆ. ಇದು ಸರಿಯಲ್ಲ; ನೀವು ವಿಶ್ವ ಬ್ಯಾಂಕ್ ನೆರವನ್ನು ಪಡೆದ ಮೇಲೆ ಈ ಒಂದು ರೂಪಾಯಿಯಲ್ಲಿ ಹೆಚ್ಚಿನ ಆದ್ಯತೆಯನ್ನು ರೈತರಿಗೆ ಕೊಟ್ಟು ಬೆಳೆಯನ್ನು ಬೆಳೆಯತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿದರೆ ಬಹಳ ಚೆನ್ನಾಗಿತ್ತು ಎಂದು ನನಗೆ ಅನ್ನಿಸುತ್ತದೆ. ದಯಮಾಡಿ ಮುಂದಾದರೂ ಕೂಡಾ ಈ ಒಂದು ಸಲಹೆಯನ್ನು ತಾವು ಸ್ವೀಕರಿಸಬೇಕು. ರೈತರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕು ಎನ್ನತಕ್ಕಂಥ ಮಾತನ್ನು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಎರಡನೆಯದು ಜಪಾನ್‌ನಲ್ಲಿ ಸುಮಾರು ಐದು ಕೆ. ಜಿ. ಗೂಡಿಗೆ ಒಂದು ಕೆ. ಜಿ. ರೇಷ್ಮೆ ಬರುತ್ತದೆ. ಒಂದು ಗೂಡಿನಲ್ಲಿ ಸುಮಾರು ಎರಡು-ಮೂರು ಸಾವಿರ ಮೀಟರ್ ದಾರ ಕೊಡುತ್ತದೆ. ನಮ್ಮಲ್ಲಿ ಇರತಕ್ಕಂಥ ಗೂಡಿನಿಂದ ಎಷ್ಟು ಬರುತ್ತಿದೆ? ನಮ್ಮದು ಒಂಭತ್ತೂವರೆಯಿಂದ-ಹತ್ತು ಕೆ. ಜಿ. ಗೂಡಿನಿಂದ ಒಂದು ಕೆ. ಜಿ. ರೇಷ್ಮೆ ಬರಬಹುದು. ಜಪಾನ್‌ನವರ ಮಟ್ಟಕ್ಕೆ ನಾವು ತಯಾರು ಮಾಡಬೇಕು. ಏಕೆಂದರೆ ಜಪಾನ್ ಸಮಶೀತೋಷ್ಣ

ವಲಯ. ಅಲ್ಲಿ ವರ್ಷ ಪೂರ್ತಿ ಈ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯ. ನಮ್ಮಲ್ಲಿ ಬಹಳ ಉಷ್ಣವಲಯವಾದ್ದರಿಂದ ವರ್ಷ ಪೂರ್ತಿ ಈ ಬೆಳೆಯನ್ನು ಬೆಳೆಯುವುದಕ್ಕೆ ಸಾಧ್ಯ ಇದೆ. ಒಳ್ಳೆಯ ಹವಾಗುಣ ಇದೆ. ಜಪಾನ್‌ನಲ್ಲಿ ನೆಲದ ಅಭಾವ, ಜಲದ ಅಭಾವ ಇದೆ. ನಮ್ಮಲ್ಲಿ ನೆಲದ ಅಭಾವವೂ ಇಲ್ಲ, ಜಲದ ಅಭಾವವೂ ಇಲ್ಲ. ಎರಡೂ ಚೆನ್ನಾಗಿದೆ. ಈ ರೇಷ್ಮೆ ಕೃಷಿ ಎನ್ನತಕ್ಕಂಥದ್ದು ನಮ್ಮ ರಾಜ್ಯಕ್ಕೆ ಹೇಳಿ ಮಾಡಿಸಿದಂತಿದೆ. ದಯಮಾಡಿ ಅಂಥದ್ದರಲ್ಲಿ ತಾವು ಇದನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೆ ಬೇರೆ ಏನು ಮಾಡುವುದಕ್ಕಾಗುತ್ತದೆ? ಜಪಾನ್‌ನಲ್ಲಿರತಕ್ಕಂಥ ಗೂಡು, ಅದರಲ್ಲಿರತಕ್ಕಂಥ ಹುಳು ಚಿಟ್ಟೆ ರೂಪದಲ್ಲಿ ಹೊರಬರಬೇಕಾದರೆ ನಾವು ಎರಡನೇ ಮಗುವನ್ನು ಯಾವ ರೀತಿ ಕೊಡುತ್ತೇವೋ, ಆ ರೀತಿ ಪ್ಲೇಟಿನಿಂದ ಮುಂಭಾಗವನ್ನು ಕೊರೆದು ಸುಲಭವಾದ ನಂತರ ಹುಳು ಚಿಟ್ಟೆಯಾಗಿ ಹೊರಬರುತ್ತದೆ. ನಮ್ಮಲ್ಲಿ ಇರತಕ್ಕಂಥ ಗೂಡು ಈ ರೀತಿ ಇದೆಯೇ? ಖಂಡಿತವಾಗಿಯೂ ಇಲ್ಲ. ಅಂಥ ಶ್ರೇಷ್ಠಮಟ್ಟದ ಗೂಡನ್ನು ತಯಾರಿಸತಕ್ಕಂಥ ಹೊಸ ತಳಿಯನ್ನು ತರಬೇಕು. ತಾವು ಏನು ಮಾಡುತ್ತೀರಿ, ಮೈಸೂರು ಇನ್‌ಟು ಬೈವೋಲ್ಟಿನ್ ಎಂದು ಹೇಳಿ ಹೆಚ್ಚಿನ ಒಂದು ಸಂಶೋಧನೆಯನ್ನು ಮಾಡಿ ಇನ್ನೂ ಒಳ್ಳೆಯ ತಳಿಯನ್ನು ಕಂಡುಹಿಡಿದು ಉತ್ತಮ ಗೂಡನ್ನು ಬೆಳೆಯತಕ್ಕಂಥ ಕೆಲಸವನ್ನು ಮಾಡಬೇಕು. ಇನ್ನು ಇರತಕ್ಕಂಥ ನೂರು ಮೊಟ್ಟೆಯಲ್ಲಿ ಸುಮಾರು ೬೦ ಕೆ. ಜಿ. - ೭೦ ಕೆ. ಜಿ.ಯನ್ನು ಬೆಳೆಯಬಹುದು. ನನಗೆ ತೃಪ್ತಿಯಿಲ್ಲ. ನೂರು ಮೊಟ್ಟೆಗೆ ನೂರು ಕೆ. ಜಿ. ಗೂಡು ಆಗಬೇಕು. ಅದನ್ನು ಮಾಡಬೇಕಾದರೆ ಅಂಥ ತಳಿಯನ್ನು ತೆಗೆದುಕೊಳ್ಳತಕ್ಕಂಥ ಕೆಲಸವನ್ನು ಮಾಡಬೇಕು. ಸೊಪ್ಪನ್ನೂ ಸಹ ಸರಿಯಾದ ರೀತಿಯಲ್ಲಿ ಬೆಳೆಸಬೇಕು. ಅಂಥ ಹಿಪ್ಪುನೇರಳೆ ಬೆಳೆಯುತಕ್ಕಂಥ ಹೊಸ ತಳಿ ಮಳೆ ಆಧಾರಿತಕ್ಕೆ ಹೊಂದಿಕೊಂಡಿರತಕ್ಕಂಥ ಹಿಪ್ಪುನೇರಳೆ ಏನು ಇದೆ, ಆ ಹಿಪ್ಪುನೇರಳೆ ತಳಿಯನ್ನು ತಾವು ಕಂಡುಹಿಡಿದು ಅದನ್ನು ತಾವು ಜಾರಿಗೆ ತರಬೇಕು.

ಈಗ ರೇಷ್ಮೆ ಕೃಷಿಕ ಸೊಪ್ಪನ್ನು ಬೆಳೆದು ಹುಳು ಸಾಕುತ್ತಾನೆ. ಹುಳು ತನ್ನ ಸುತ್ತ ಗೂಡನ್ನು ಕಟ್ಟಿಕೊಂಡು ಕೋಶಾವಸ್ಥೆಯಲ್ಲಿರುವಾಗ ಅದನ್ನು ಮಾರಾಟ ಮಾಡುತ್ತಾನೆ. ರೀಲರ್ ಅದನ್ನು ಕೊಂಡುಕೊಂಡು ರೇಷ್ಮೆ ಬಿಚ್ಚುತ್ತಾನೆ. ರೇಷ್ಮೆ ಬಿಚ್ಚಿದ್ದನ್ನು ಟ್ವಿಸ್ಟರ್ ಟ್ವಿಸ್ಟ್ ಮಾಡುತ್ತಾನೆ. ನೇಯ್ಗೆಗೆ ಬೇಕಾಗಿರುವುದನ್ನು ಟ್ವಿಸ್ಟ್ ಮಾಡಿಕೊಡುತ್ತಾನೆ. ನೇಯ್ಗೆಯವನು ಬಟ್ಟೆ ತಯಾರು ಮಾಡುತ್ತಾನೆ. ಹುಳು ಸಾಕುವುದರಿಂದ ಹಿಡಿದು ಬಟ್ಟೆ ಆಗುವ ತನಕ ಈ ಕೃಷಿ ವರ್ಷ ಪೂರ್ತಿಯಲ್ಲಿ ಒಂದು ಎಕರೆ ಹಿಪ್ಪುನೇರಳೆ ಜಮೀನು ಇದ್ದರೆ ಒಂದು ವರ್ಷದಲ್ಲಿ ಮೊಟ್ಟೆಯಿಂದ ಹಿಡಿದು ಬಟ್ಟೆಯಾಗುವ ತನಕ ವರ್ಷ ಪೂರ್ತಿ ಲಾಭದಾಯಕವಾಗಿ ರೈತನಿಗೆ ಉದ್ಯೋಗವನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಇಂತಹ ಅಂಕಿಅಂಶಗಳು ಇರುವಾಗ ಪ್ರತಿಯೊಂದು ವರ್ಷದಲ್ಲಿಯೂ ಕೂಡ ಇಷ್ಟೇ ಹೆಕ್ಟೇರ್‌ನಲ್ಲಿ ನಾವು ಕಡ್ಡಿಯನ್ನು ಹಾಕಬೇಕು ಅಂತ ಹೇಳಿದಾಗ ನಾವು ಎಷ್ಟು ಜನರಿಗೆ ಕೆಲಸವನ್ನು ಕೊಟ್ಟಹಾಗೆ ಆಗುತ್ತದೆ? ಎಷ್ಟು ರೇಷ್ಮೆ ಉತ್ಪಾದನೆ ಜಾಸ್ತಿಯಾಗುತ್ತದೆ? ದಯಮಾಡಿ ತಾವು ಒಂದು ಕಾರ್ಯಕ್ರಮವನ್ನು ಇಟ್ಟುಕೊಳ್ಳಿ, ತಾವು ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಏನಿದೆ ಖುಷ್ಕಿ ಭೂಮಿ ಇರುವ ಜಾಗದ ಕೆಳಗೆ ತಾವು ಯಾವುದಾದರೂ ಒಂದು ಜಿಲ್ಲೆಯಲ್ಲಿ ೫-೧೦ ಎಕರೆ ಗುರ್ತು ಮಾಡಿ ಅಲ್ಲಿರತಕ್ಕ ರೈತರ ಮನಸ್ಸನ್ನು ಒಪ್ಪಿಸಿ ಹಿಪ್ಪುನೇರಳೆ ಕಡ್ಡಿಯನ್ನು ಹಾಕಿಸಿ ನೀರಾವರಿ ಭಾವಿಗೆ ಸಹಾಯ ಧನ ಕೊಟ್ಟು ಆ ರೈತನಿಗೆ ಪ್ರೋತ್ಸಾಹ ಕೊಡಿ. ೫-೧೦ ಎಕರೆಯಲ್ಲಿ ನಾವು ಏನು ಬೆಳೆಯುತ್ತೇವೆ ಅದು ಎಷ್ಟು ರೇಷ್ಮೆ ಉತ್ಪತ್ತಿಯಾಗುತ್ತಿದೆ ಅಂದರೆ ಸುಮಾರು ೨.೫ ಲಕ್ಷ ಟನ್ ಅನ್ನು ಜಾಸ್ತಿ

ಮಾಡಲಿಕ್ಕೆ ಸಾಧ್ಯವಿದೆ. ಅಂತ ಕಾರ್ಯಕ್ರಮವನ್ನು ತಾವು ರೂಪಿಸಿಕೊಳ್ಳಬೇಕು. ರೈತರಿಗೆ ಪ್ರತ್ಯೇಕವಾಗಿ ಪರೋಕ್ಷವಾಗಿ ತಾವು ಸಹಾಯ ಮಾಡಬೇಕು. ರೇಷ್ಮೆ ಬೆಳೆ ಎಂತಹದೆಂಬುದನ್ನು ತೋರಿಸಬೇಕು. ಬೇರೆ ಯಾವುದೇ ವಾಣಿಜ್ಯ ಬೆಳೆಗಿಂತ ಇವತ್ತಿನ ದಿವಸ ರೇಷ್ಮೆ ಬೆಳೆಯತಕ್ಕದ್ದು ಬಹಳ ಅತ್ಯುತ್ತಮವಾಗಿರತಕ್ಕದ್ದು. ಒಂದು ವರ್ಷದಲ್ಲಿ ಒಂದು ಹೆಕ್ಟೇರ್‌ನಲ್ಲಿ ಖರ್ಚನ್ನು ಕಳೆದು ಒಂದು ಲಕ್ಷ ರೂಪಾಯಿಯನ್ನು ಸಂಪಾದನೆ ಮಾಡುವ ಸಾಧ್ಯತೆ ಇದೆ. ತಾವು ಕೂಡ ರೈತ ಕುಟುಂಬದಿಂದ ಬಂದಿರತಕ್ಕವರು. ತಾವು ತಲತಲಾಂತರಗಳಿಂದ ರೇಷ್ಮೆ ಹುಳುಗಳನ್ನು ಸಾಕುತ್ತಿರತಕ್ಕ ವಂಶದಿಂದ ಬಂದಿದ್ದೀರಿ. ತಮಗೆ ಇದರ ಆಗುಹೋಗುಗಳೆಲ್ಲಾ ಚೆನ್ನಾಗಿ ಗೊತ್ತಿದೆ. ಆದ್ದರಿಂದ ನನ್ನ ಕೊರಗು ಏನೆಂದರೆ ನಾವು ೭ನೇ ಪಂಚವಾರ್ಷಿಕ ಯೋಜನೆಯ ಅವಧಿಯ ಯೋಜನೆ ಕಳೆಯುವುದರೊಳಗೆ ೧೩ ಲಕ್ಷ ಮೆಟ್ರಿಕ್ ಟನ್ ರೇಷ್ಮೆಯನ್ನು ಉತ್ಪತ್ತಿ ಮಾಡಬೇಕೆನ್ನುವ ಗುರಿಯನ್ನು ಇಟ್ಟುಕೊಂಡಿದ್ದೆವು. ಆ ಗುರಿಯನ್ನು ಮುಟ್ಟಲಿಕ್ಕೆ ಆಗಲಿಲ್ಲ. ೭ ಸಾವಿರ ಟನ್ ಸಹ ಉತ್ಪತ್ತಿಯಾಗಲಿಲ್ಲ. ನಮ್ಮ ದೇಶದ ಬೇಡಿಕೆಯನ್ನು ಪೂರೈಸತಕ್ಕ ಕೆಲಸವನ್ನೂ ಕೂಡ ನಾವು ಇನ್ನೂ ಮಾಡಿಲ್ಲ. ತಾವು ಆ ದೃಷ್ಟಿಯನ್ನು ಇಟ್ಟುಕೊಂಡು ನಮ್ಮ ಗುರಿ ಏನಿದೆ, ಈ ವರ್ಷದಲ್ಲಿ ನಾವು ಎಷ್ಟು ಹೆಕ್ಟೇರ್‌ನಲ್ಲಿ ರೇಷ್ಮೆ ಕಡ್ಡಿಗಳನ್ನು ಹಾಕಬೇಕು, ಈ ವರ್ಷದಲ್ಲಿ ನಾವು ಎಷ್ಟು ರೇಷ್ಮೆಯನ್ನು ಉತ್ಪಾದನೆಯನ್ನು ಮಾಡಬೇಕು ಅನ್ನತಕ್ಕಂಥದ್ದನ್ನು ಸಮಗ್ರವಾಗಿ ತಾವು ಪರಿಶೀಲನೆ ಮಾಡಬೇಕು. ಈ ರೀತಿ ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಗುರಿಯನ್ನು ಮುಟ್ಟತಕ್ಕ ಕಾರ್ಯದ ಕಡೆ ನಾವು ವ್ಯವಸ್ಥಿತವಾಗಿ ಹೋಗಬೇಕು ಎನ್ನತಕ್ಕ ವಿಷಯದ ಬಗ್ಗೆ ತಮಗೆ ಒತ್ತಾಯವಾಗಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಅತ್ಯುತ್ತಮ ರೇಷ್ಮೆ ಎನ್ನತಕ್ಕದ್ದು ಪರದೇಶದಲ್ಲಿ ಬಹಳ ಕಳಪೆಯಾಗಿದೆ. ಚೀನಾದಲ್ಲಿ '೨ಎ೨' ರೇಷ್ಮೆಯನ್ನು ಉತ್ಪಾದನೆ ಮಾಡುತ್ತಾರೆ. ನಮ್ಮದು 'ಹೆಚ್' ದರ್ಜೆಯದು. ಅಂತರರಾಷ್ಟ್ರೀಯ ಮಾರುಕಟ್ಟೆಯ ಪೈಪೋಟಿಯಲ್ಲಿ ನಮ್ಮ ರೇಷ್ಮೆಯನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲ. ನಾನು ಅಂತ ಉತ್ಕೃಷ್ಟವಾದ ರೇಷ್ಮೆಯನ್ನು ತಯಾರು ಮಾಡಬೇಕೆಂದು ಹೇಳುತ್ತೇನೆ. ಈ ಗೃಹ ಕೈಗಾರಿಕೆಯಿಂದ ಒಂದೇ ರೀತಿಯಾಗಿ ದಾರವನ್ನು ತೆಗೆಯತಕ್ಕದ್ದು ಆಗಲಿ, ಒಂದೇ ಸಮನಾಗಿ ಜೋಡಿಸತಕ್ಕಂಥ ಎಳೆಯನ್ನು ನಾವು ಇನ್ನೂ ಕಂಡು ಹಿಡಿದಿಲ್ಲ. ನಮಗೆ ಅಂತಹ ಸುವರ್ಣ ಅವಕಾಶ ಇನ್ನೂ ಸಿಕ್ಕಿಲ್ಲ. ನಾವು ಹೊಸ ಯಂತ್ರ ಉಪಯೋಗ ಮಾಡಬೇಕು. ಅದು ಸುಲಭವಾಗಿ ಸಿಗತಕ್ಕದ್ದು ಆಗಬೇಕು. ಇದರ ಬಗ್ಗೆ ರಾಜ್ಯ ಸರ್ಕಾರವಾಗಲೀ, ಕೇಂದ್ರ ಸರ್ಕಾರವಾಗಲೀ ಗಮನಕೊಟ್ಟಿಲ್ಲವೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಈ ದಿಸೆಯಲ್ಲಿಯೂ ತಾವು ಹೆಚ್ಚಿನ ಗಮನವನ್ನು ಹರಿಸಬೇಕೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ರೇಷ್ಮೆ ಗೂಡಿನಲ್ಲಿ ಮೂರು ಪದರಗಳಿವೆ. ಮೇಲ್ಪದರ ಸೂಟ್ ಅನ್ನತಕ್ಕದ್ದು. ಎರಡನೆಯ ಪದರ ಏನಿದೆ ಅದೇ ಪ್ಯೂರ್ ಸಿಲ್ಕ್ ಅಂತ ಹೇಳಿ, ಉತ್ತಮವಾಗಿರತಕ್ಕ ರೇಷ್ಮೆ. ನಾನು ಹೇಳತಕ್ಕದ್ದು ಏನು ಮೂರು ಪೊರೆಗಳ ಇದೆ ಈ ಗೂಡಿನ ಮಧ್ಯದಲ್ಲಿ ಹೊರಕೆಯಾಗಿರತಕ್ಕ ಪ್ಯೂರ್ ಸಿಲ್ಕ್ ಅನ್ನು ಜಾಸ್ತಿಮಾಡತಕ್ಕ ವಿಧಾನದ ಬಗ್ಗೆ ತಾವು ಸಂಶೋಧನೆ ಮಾಡಬೇಕು. ಒಳಗಡೆ ಇರತಕ್ಕ ಸಿಲ್ಕ್‌ಗಾಗಲಿ ಮೇಲಿರತಕ್ಕ ಜೂಟ್ ಸಿಲ್ಕ್ ಅಂಶವನ್ನು ಕಡಿಮೆ ಮಾಡಿ ಈ ಅಂಶವನ್ನು ಜಾಸ್ತಿ ಮಾಡತಕ್ಕ ವ್ಯವಸ್ಥೆಯನ್ನು ತಾವು ಕಂಡುಹಿಡಿಯಬೇಕು. ತಮ್ಮ ಅಧಿಕಾರಿಗಳು ಬೇಕಾದಷ್ಟು ಸಲ ಜಪಾನ್‌ಗೆ ಹೋಗಿದ್ದಾರೆ. ಹೊರದೇಶಗಳಿಗೂ ಹೋಗಿದ್ದಾರೆ. ಆದರೆ ಈ ಬಗ್ಗೆ ಏನೂ ಕಂಡುಹಿಡಿದಿಲ್ಲ. ನಾನು ಇದರ ಬಗ್ಗೆ ಅನೇಕ ಸಲಹೆಗಳನ್ನು ಕೊಡುತ್ತಿದ್ದೇನೆ. ಮಳೆಗಾಲದಲ್ಲಿ ನಮ್ಮ ರೈತ ಗೂಡು

ಬೆಳೆಯುತ್ತಾನೆ. ಆ ಗೂಡು ಒಂದಕ್ಕೊಂದು ಅಂಟಿಕೊಂಡು ಗಂಟು ಗೂಡಾಗುತ್ತದೆ. ಆದರಿಂದ ಎಳೆಯನ್ನು ಬಿಚ್ಚುವುದಕ್ಕಾಗುವುದಿಲ್ಲ, ಎಳೆ ಬರುವುದಿಲ್ಲ. ರೇಷ್ಮೆ ಹುಳುಗಳು ಮಾಡುವ ಮಲಮೂರ್ತ ವಿಸರ್ಜನೆ ಆ ಗೂಡುಗಳಿಗೆ ಅಂಟದ ಹಾಗೆ ಏನು ಸಂಶೋಧನೆ ಮಾಡಿದೀರಾ? ಇದರಿಂದ ರೈತರಿಗೆ ಅಪಾರ ನಷ್ಟವಾಗುತ್ತಿದೆ. ಈ ಬಗ್ಗೆ ಏನಾದರೂ ಸಂಶೋಧನೆ ಮಾಡಿದ್ದೀರಾ. ನಮ್ಮ ಸೆಂಟ್ರಲ್ ಸಿಲ್ಕ್ ಬೋರ್ಡ್ ಇದೆ. ರೇಷ್ಮೆ ಸಂಶೋಧನೆ ಕೇಂದ್ರದವರು ಈ ಬಗ್ಗೆ ಏನು ಮಾಡಿದ್ದಾರೆ ಅನ್ನತಕ್ಕದ್ದು ನಮಗೆ ಗೊತ್ತಿಲ್ಲ. ಅವರು ಏತಕ್ಕಾಗಿ ಲಕ್ಷಾಂತರ ರೂಪಾಯಿಯನ್ನು ಸಂಶೋಧನೆಗೆ ಖರ್ಚು ಮಾಡುತ್ತಾರೆ ಎನ್ನತಕ್ಕದ್ದು ಗೊತ್ತಿಲ್ಲ. ಅವರು ಏನು ಸಾಧನೆಯನ್ನು ಸಾಧಿಸಿದ್ದಾರೆ ಅನ್ನತಕ್ಕದ್ದು ಗೊತ್ತಿಲ್ಲ. ಅವರು ಹೊಸ ವಿಜ್ಞಾನವನ್ನು ಏನು ಕಂಡುಹಿಡಿದಿದ್ದಾರೆ. ಹೊಸ ತಂತ್ರಜ್ಞಾನವನ್ನು ಏನಾದರೂ ಅವರು ಮಾಡಿದ್ದಾರಾ? ದಯಮಾಡಿ ತಾವು ಅವರನ್ನು ಎಚ್ಚರಿಸಬೇಕು. ಆದಷ್ಟು ಒಳ್ಳೆಯ ರೀತಿಯಲ್ಲಿ ಅವರಿಗೆ ಕೆಲಸ ಮಾಡಲು ತಾವು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಇವೊತ್ತಿನ ದಿವಸ ಇಂಪೋರ್ಟ್ ಪಾಲಿಸಿಯಿಂದ ಬಹಳ ಅನ್ಯಾಯವಾಗಿದೆ. ರೇಷ್ಮೆಯನ್ನು ಇಲ್ಲಿಗೆ ಬೇರೆ ದೇಶದವರು ಎಷ್ಟು ಬೇಕಾದರೂ ಕಳುಹಿಸಬಹುದು. ಈ ರೀತಿ ಆದರೆ ನಮ್ಮ ರೇಷ್ಮೆ ಗತಿ ಏನು? ನಮ್ಮ ಕೈಗಾರಿಕೆಗಳ ಗತಿ ಏನು? ಸಿಂಗಾಪುರ ದೇಶದವರು ಇಂಪೋರ್ಟ್ ಪಾಲಿಸಿಯಲ್ಲಿ ಶೇಕಡ ೫೫ ರಿಂದ ಶೇಕಡ ೩೦ಕ್ಕೆ ಇಳಿಸಿದ್ದಾರೆ. ಚೀನಾ ದೇಶ ರೇಷ್ಮೆಯನ್ನು ಎಷ್ಟು ಬೇಕಾದರೂ ಕೊಡುವುದಕ್ಕೆ ತಯಾರಾಗಿದೆ. ರೇಷ್ಮೆ ಹೊರ ರಾಜ್ಯಗಳಿಂದ ಬೇರೆ ಕ್ಷೇತ್ರಗಳ ಮುಖಾಂತರ ಬರುತ್ತದೆ. ಆ ರೇಷ್ಮೆ ಬಂದಾಗ, ನಮ್ಮ ರೇಷ್ಮೆಗೂ ಅಲ್ಲಿಂದ ಬಂದಂಥ ರೇಷ್ಮೆಗೂ ಹೋಲಿಕೆ ಮಾಡಿದಾಗ, ಆ ರೇಷ್ಮೆ ಬಹಳ ಅತ್ಯುತ್ತಮ ದರ್ಜೆಯಾಗಿರುವುದರಿಂದ ಜನರು ಅದನ್ನು ಕೊಂಡುಕೊಳ್ಳುತ್ತಾರೆ. ಆಗ ನಮ್ಮ ರೇಷ್ಮೆಯನ್ನು ಯಾರು ಕೊಂಡುಕೊಳ್ಳುತ್ತಾರೆ? ನಮ್ಮ ರೇಷ್ಮೆ ಎಲ್ಲಿ ಬಿಕರಿಯಾಗುತ್ತದೆ? ನಮ್ಮ ರೇಷ್ಮೆಗೆ ಮಾರ್ಕೆಟ್ ಎಲ್ಲಿದೆ? ಯಾವಾಗ ರೇಷ್ಮೆಗೆ ಮಾರ್ಕೆಟ್ ಇಲ್ಲವೋ, ಆಗ ರೇಷ್ಮೆ ಬೆಲೆ ಬಹಳ ಕಡಿಮೆಯಾಗುತ್ತದೆ. ರೇಷ್ಮೆ ಕೃಷಿಕನಿಗೆ ಇದರಿಂದಾಗಿ ಬಹಳ ನಷ್ಟವಾಗುತ್ತದೆ. ಆದುದರಿಂದ, ಈ ದಿಸೆಯಲ್ಲಿ ಕೇಂದ್ರ ರೇಷ್ಮೆ ಮಂಡಳಿಯ ಮುಖಾಂತರ ಕೇಂದ್ರ ಜವಳಿ ಮಂತ್ರಿಗಳ ಗಮನಕ್ಕೆ ತಂದು ಈ ವಿಷಯದಲ್ಲಿ ಆದಷ್ಟು ಬಿಗಿಯಾದ ಕ್ರಮ ಕೈಗೊಂಡು ಕೆಲಸ ಮಾಡದೆ ಹೋದರೆ ಈ ರಾಜ್ಯದಲ್ಲಿ ಈ ಕೈಗಾರಿಕೆ ಇನ್ನು ಮುಂದೆ ನಶಿಸಿ ಹೋಗುವುದರಲ್ಲಿ ಯಾವುದೇ ಸಂಶಯವಿಲ್ಲ. ಅದಕ್ಕೋಸ್ಕರ ನಾನು ಹೇಳಿದೆ: ಈ ಕೇಂದ್ರ ರೇಷ್ಮೆ ಮಂಡಳಿ ಯಾವುದಿದೆ, ಅಲ್ಲಿಗೆ ನಮ್ಮ ರಾಜ್ಯದಿಂದ ಯಾರಾದರೊಬ್ಬರು ರೇಷ್ಮೆ ಕೃಷಿ ವಿಚಾರದಲ್ಲಿ ಬಹಳವಾಗಿ ತಿಳಿದಿರತಕ್ಕಂಥವರನ್ನು ಒಬ್ಬ ಸದಸ್ಯರನ್ನಾಗಿ ಮಾಡಲು ಅವರ ಗಮನಕ್ಕೆ ತರಬೇಕು. ತಾವು ಇನ್ನೂ ಈ ಕೆಲಸವನ್ನು ಮಾಡಿಲ್ಲ. ಏಕೆ ಮಾಡಿಲ್ಲವೋ ನನಗೆ ಗೊತ್ತಿಲ್ಲ. ಇನ್ನು ಮುಂದಾದರೂ ಇದನ್ನು ಗಮನದಲ್ಲಿಟ್ಟುಕೊಂಡು ಈ ನೀತಿಗೆ ಕಡಿವಾಣ ಹಾಕತಕ್ಕಂಥ ಒಂದು ವ್ಯವಸ್ಥೆಯನ್ನು ತಾವು ಮಾಡಿದರೆ, ಕೈಗಾರಿಕೆಯನ್ನು ಪುನರುತ್ಥಾನ ಮಾಡಿದಂತಾಗುತ್ತದೆ. ಈ ಕೆಲಸವನ್ನು ತಮ್ಮ ಕಾಲದಲ್ಲಿ ಮಾಡದೇ ಇದ್ದರೆ ಇನ್ಯಾರು ಮಾಡುವುದಕ್ಕೆ ಸಾಧ್ಯವಾಗುತ್ತದೆ? ಏಕೆಂದರೆ, ಈ ಇಲಾಖೆಯಲ್ಲಿ ತಾವು ಅರಿತು ನುರಿತಂಥವರು, ಬಹಳ ಅನುಭವವಿದ್ದು ತಮಗೆ ಈ ಇಲಾಖೆ ಸಿಕ್ಕಿರುವುದು ನಮ್ಮ ಸುದೈವ. ತಾವು ಇಂತಹ ಕೆಲಸ ಮಾಡುವುದಿಲ್ಲವೆಂದರೆ ನಾವು ಇನ್ಯಾರಿಗೆ ಹೇಳಬೇಕಾಗುತ್ತದೆ? ಆದುದರಿಂದ, ದಯವಿಟ್ಟು ಈ ದಿಸೆಯಲ್ಲಿ ತಾವು ಕೇಂದ್ರ ಸರ್ಕಾರದ ಗಮನ ಸೆಳೆಯಬೇಕೆಂದು

ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತಿನ ದಿವಸ ಕೃಷಿಕ, ರೀಲರ್, ಟ್ವಿಸ್ಟರ್, ನೇಯ್ಗೆಯವರು ಮತ್ತು ಜವಳಿ ವ್ಯಾಪಾರಸ್ಥರಲ್ಲಿ ಯಾರಿಗೆ ಎಷ್ಟು ಆದಾಯ ಬರುತ್ತದೆ ಎನ್ನತಕ್ಕಂಥಾದ್ದನ್ನು ನಾವು ಸ್ವಲ್ಪ ವಿಶ್ಲೇಷಣೆ ಮಾಡಬೇಕು. ಇವೊತ್ತಿನ ದಿವಸ ನೂರು ರೂಪಾಯಿ ಮೌಲ್ಯದ ಬಟ್ಟೆ ಮಾರಾಟವಾದಾಗ ಶೇಕಡ ೫೬.೮ರಷ್ಟು ಕೃಷಿಕನಿಗೆ ಸಿಗುತ್ತದೆ, ರೀಲರ್‌ಗೆ ಶೇಕಡ ೬.೮ರಷ್ಟು, ಹುರಿಕಾರನಿಗೆ ಶೇಕಡ ೯.೧ರಷ್ಟು, ನೇಕಾರನಿಗೆ ೧೦.೭ರಷ್ಟು ಮತ್ತು ವರ್ತಕನಿಗೆ ಶೇಕಡ ೧೬.೧ರಷ್ಟು ಸಿಗುತ್ತದೆ. ಈ ರೀತಿಯಲ್ಲಿ ಭಾಗವಾಗುತ್ತದೆ. ರೇಷ್ಮೆ ಕೃಷಿಕ ಇತರ ವರ್ಗದವರಿಗಿಂತ ಉತ್ತಮನಾಗಿದ್ದಾನೆ. ಇಂತಹ ಉತ್ತಮ ಸ್ಥಿತಿಯಲ್ಲಿ ಕೃಷಿಕ ಸದಾ ಇರಬೇಕೆಂಬುದೇ ನನ್ನ ಆಸೆ. ಯಾವಾಗ ರೇಷ್ಮೆ ಕೃಷಿಕ ಚೆನ್ನಾಗಿರುತ್ತಾನೋ ಆಗ ರೇಷ್ಮೆ ಕೈಗಾರಿಕೆಯನ್ನು ಬಡವರೂ ಸಹ ಮಾಡುವುದಕ್ಕೆ ಸಾಧ್ಯವೆಂದಾಯಿತು. ಆದುದರಿಂದ, ರೇಷ್ಮೆ ಕೃಷಿಕನನ್ನು ತಾವು ಸರಿಯಾಗಿ ನೋಡಿಕೊಳ್ಳಬೇಕು. ಮತ್ತು ಅತಿ ಮುಖ್ಯವಾಗಿರತಕ್ಕಂಥಾದ್ದು ಈ ರೇಷ್ಮೆ ಹುಳು ಸಾಕಾಣಿಕೆ. ಇದನ್ನು ಬಹಳ ವೈಜ್ಞಾನಿಕವಾಗಿ ಮಾಡತಕ್ಕಂಥಾದ್ದು. ಇಲಾಖೆಯವರು ಅಲ್ಲಲ್ಲಿ ಕೆಲವು ಹುಳು ಸಾಕಾಣಿಕೆ ಸಂಕೀರ್ಣಗಳನ್ನು ತೆರೆದಿದ್ದಾರೆ. ಏತಕ್ಕೆಂದರೆ, ಹುಳು ಚಾಕಿ ಆಗುವಾಗ ಕಣ್ಣಿಗೆ ಕಾಣದಷ್ಟು ಬಹಳ ಸಣ್ಣದಾಗಿರುತ್ತದೆ. ಅದನ್ನು ಸರಿಯಾದಂಥ ರೀತಿಯಲ್ಲಿ ವೈಜ್ಞಾನಿಕವಾಗಿ ಸಾಕಣೆ ಮಾಡಬೇಕು. ತರಬೇತಿ ಹೊಂದಿರತಕ್ಕಂಥವರನ್ನು ಮಾತ್ರ ಆ ಚಾಕಿ ಕೇಂದ್ರದಲ್ಲಿಟ್ಟು ಚಾಕಿ ಸಾಕಣೆ ಮಾಡುತ್ತಾರೆ. ಸಾಕಣೆ ಮಾಡತಕ್ಕಂಥ ಕಾಲದಲ್ಲಿ ಏನು ಚಾಕಿ ಮರಿ ಇದೆ, ಆ ಮರಿಯಿಂದ ಒಂದು ಅಡಿ ಮೇಲಕ್ಕೆ ಎತ್ತಿ ಸೊಪ್ಪನ್ನು ಹಾಕಿದರೂ ಕೂಡ, ಆ ಸೊಪ್ಪು ಕೆಳಗಡೆ ಬಿದ್ದಾಗ ಚಾಕಿ ಸಾಯತಕ್ಕಂಥ ಸ್ಥಿತಿಯಲ್ಲಿರುತ್ತದೆ. ಚಾಕಿ ಅಷ್ಟು ಅತಿ ಸೂಕ್ಷ್ಮವಾಗಿರುವುದರಿಂದ, ಅದನ್ನು ಬಹಳ ಸೂಕ್ಷ್ಮತೆಯಿಂದ ಸಾಕಬೇಕು. ಆದರೆ, ೨-೩ ವಾರಗಳ ತನಕ ತಾವೇ ಸಾಕಿ ಕೊಡತಕ್ಕಂಥ ಉತ್ಪತ್ತಿ ಬಗ್ಗೆ ಹೇಳಿದಿರಿ. ಬಹಳ ಒಳ್ಳೆಯದು. ಇದನ್ನು ಸಾಮೂಹಿಕವಾಗಿ ಇನ್ನೂ ಹೆಚ್ಚು ಮಾಡಿದರೆ ಒಳ್ಳೆಯದು. ಈ ರಾಜ್ಯದಲ್ಲಿರತಕ್ಕಂಥ ಸುಮಾರು ೬.೫ ಲಕ್ಷ ಕುಟುಂಬಗಳು ಈ ರೇಷ್ಮೆ ಹುಳು ಸಾಕಣೆ ವೃತ್ತಿಯನ್ನು ಅವಲಂಬಿಸಿವೆ. ಈ ರಾಜ್ಯದಲ್ಲಿರತಕ್ಕಂಥ ೪ ಕೋಟಿ ಜನಸಂಖ್ಯೆಯಲ್ಲಿ ಸುಮಾರು ಶೇಕಡ ೧೮ ರಿಂದ ೨೦ ಜನರಿಗೆ ಈ ಕೃಷಿ ಕೈಗಾರಿಕೆಯಲ್ಲಿ ಉದ್ಯೋಗವನ್ನು ನಾವು ಒದಗಿಸಿಕೊಟ್ಟಿದ್ದೇವೆ. ಇದನ್ನು ಇನ್ನೂ ಹೆಚ್ಚು ಮಾಡಬೇಕಾಗಿದೆ. ಆದರೆ, ಇವೊತ್ತು ಹುಳು ಸಾಕಣೆ ಮಾಡುವವನು ಎಂತಹವನೆಂದರೆ, ಬಹಳ ಸಣ್ಣ ರೈತ, ಅತಿ ಸಣ್ಣ ರೈತ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿರತಕ್ಕಂಥವರು ಹುಳು ಸಾಕಾಣೆಯನ್ನು ಸಾಹುಕಾರರು ಮಾಡುತ್ತಿಲ್ಲ. ಸಾಹುಕಾರರುಗಳು ಸಾಕುವುದು ಬೇರೆ. ಆದರೆ, ಹೆಚ್ಚು ಭಾಗ ೬.೫ ಲಕ್ಷ ಕುಟುಂಬಗಳೇನಿವೆ, ಅವರಲ್ಲಿ ಶೇಕಡ ೭೦ ರಿಂದ ೮೦ರಷ್ಟು ಈ ಒಂದು ದರ್ಜೆಯಲ್ಲಿರತಕ್ಕಂಥ ಕುಟುಂಬಗಳಾಗಿವೆ. ಅಲ್ಲದೆ, ಅವರು ವಾಸಿಸುವ ಮನೆ ಬಹಳ ಚಿಕ್ಕದಾಗಿದ್ದು, ಆ ಮನೆಯಲ್ಲೇ ಅಡುಗೆ ಮಾಡುತ್ತಾರೆ, ಆ ಮನೆಯಲ್ಲೇ ಎತ್ತು, ದನ-ಕರುಗಳನ್ನು ಕಟ್ಟುತ್ತಾರೆ, ಆ ಮನೆಯಲ್ಲಿಯೇ ಎಲ್ಲಾ ರೀತಿಯ ವ್ಯವಹಾರ ಮಾಡುತ್ತಾರೆ. ಆ ಒಂದು ವಾತಾವರಣದಲ್ಲಿ ಹುಳು ಸಾಕಾಣೆ ಮಾಡಿದರೆ ಸರಿಯಾಗಿ ಆಗುತ್ತದೆಯೇ? ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ. ಈ ಒಂದು ಕೃಷಿಯನ್ನು ಉಳಿಸಬೇಕು; ಈ ಒಂದು ಬೆಳೆಯನ್ನು ಬೆಳೆಸಬೇಕು, ಇವತ್ತು ರೇಷ್ಮೆ ಕೈಗಾರಿಕೆಯನ್ನು ಅತ್ಯುತ್ತಮ ಸ್ಥಾನಕ್ಕೆ ತರಬೇಕೆಂಬ ಇಚ್ಛೆ ತಮಗೆ ಇದ್ದರೆ, ನನ್ನ ಸಲಹೆಯನ್ನು ಖಂಡಿತವಾಗಿ ತಾವು ಕಾರ್ಯಗತ ಮಾಡಬೇಕು. ತಾವು ಉತ್ತರವನ್ನು ಕೊಡತಕ್ಕ ಕಾಲದಲ್ಲಿ ಇದಕ್ಕೆ ಜವಾಬನ್ನು ಹೇಳಬೇಕೆಂದು ನಾನು ಅಪೇಕ್ಷೆ ಪಡುತ್ತೇನೆ.

ತಾವು ಸರಿಯಾದ ರೇಷ್ಮೆ ಹುಳುವಿನ ಮನೆಯನ್ನು ಕಟ್ಟಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಎಷ್ಟು ಜನರು ಈ ರೇಷ್ಮೆ ಹುಳುಗಳನ್ನು ಸಾಕುತ್ತಾರೆನ್ನುವ ರೇಷ್ಮೆ ಕೃಷಿಕರ ಪಟ್ಟಿ ಇದೆ. ಅವರೆಲ್ಲರಿಗೂ ಕೂಡ ತಾವು ಕೃಷಿ ಪಾಸ್ ಪುಸ್ತಕವನ್ನು ಕೊಟ್ಟಿದ್ದೀರಿ. ಯಾವ ರೀತಿ ವ್ಯವಸಾಯ ಇಲಾಖೆಯಲ್ಲಿ ನಾಲ್ಕು ಕುಟುಂಬಗಳಿಗೆ ಒಬ್ಬರಂತೆ ಕೃಷಿ ವಿಸ್ತರಣಾಧಿಕಾರಿಗಳನ್ನು ಮಾಡಿದ್ದೀರೊ, ಅದೇ ರೀತಿ ನಿಮ್ಮ ಇಲಾಖೆಯಲ್ಲಿ ಕೂಡ ಕೇವಲ ೨೫೦ ಕುಟುಂಬಗಳಿಗೆ ಒಬ್ಬರು ವಿಸ್ತರಣಾಧಿಕಾರಿಯನ್ನು ಮೇಲ್ವಿಚಾರಕರನ್ನಾಗಿ ನೇಮಕ ಮಾಡಬೇಕು. ಒಂದು ದಿನದ ರೇಷ್ಮೆ ಹುಳುವಿನಿಂದ ಹಿಡಿದು ಅದು ಹಣ್ಣಾಗುವವರೆಗೂ ಅವರು ಅದನ್ನು ಮೇಲ್ವಿಚಾರಕರಾಗಿ ನೋಡಿಕೊಳ್ಳಬೇಕು. ಒಂದು ವೇಳೆ ಗಂಟುರೋಗ ಬಂತು ಎಂದು ಇಟ್ಟುಕೊಂಡರೆ ಅದು ಮೊದಲ ದಿನ ಕಾಣುವುದಿಲ್ಲ; ಅದು ಎರಡು ಮೂರು ದಿನದ ಮೇಲೆ ಕಾಣುತ್ತದೆ. ಆಗ ರೈತರಿಗೆ ಎಚ್ಚರಿಕೆಯನ್ನು ಕೊಟ್ಟರೆ ಅವರ ಕಷ್ಟವನ್ನು ತಪ್ಪಿಸಲು ಯಾರಿಗೂ ಸಹ ಸಾಧ್ಯವಾಗುವುದಿಲ್ಲ. ಆಗ ಅಂಥ ಹುಳುವನ್ನು ಸುರಿದು ಬೇರೆ ಮೊಟ್ಟೆಯನ್ನು ಕೊಡತಕ್ಕ ಕೆಲಸವನ್ನು ಮಾಡಬೇಕು. ಹಾಗೆ ಮಾಡದಿದ್ದರೆ ರೈತನಿಗೆ ಅನ್ಯಾಯವಾಗುತ್ತದೆ. ಹಣ್ಣಾಗತಕ್ಕ ಕಾಲದಲ್ಲಿ ಹುಳು ಸತ್ತರೆ ತುಂಬಾ ಕಷ್ಟವಾಗುತ್ತದೆ. ಒಂದು ಸಾರಿ ಬೆಳೆಯಲ್ಲಿ ನಷ್ಟವಾದರೆ ಅವನು ಸುಧಾರಿಸಿಕೊಳ್ಳಲು ನಾಲ್ಕು ಬೆಳೆಯನ್ನು ಮಾಡಬೇಕಾಗುತ್ತದೆ. ದಯಮಾಡಿ ನಿಮ್ಮ ಕೃಷಿ ವಿಸ್ತರಣಾಧಿಕಾರಿಗಳು ಇದ್ದಾರೆ. ಅವರು ಜಾಗ್ರತೆಯಾಗಿ ೨೫೦ ಕುಟುಂಬಗಳ ಜನರನ್ನು ನೋಡಿಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅವರು ಹುಳುಗಳ ಸಾಕಾಣಿಕೆ ಕೆಲಸವನ್ನು ಮಾತ್ರ ಮಾಡಬೇಕು. ಅದಿಗೆ ಮಾಡತಕ್ಕದ್ದು, ಎತ್ತು ಕಟ್ಟತಕ್ಕದ್ದು ಏನಿದೆ, ಅದನ್ನು ಬೇರೆ ಬೇರೆ ಮನೆಗಳಲ್ಲಿ ಮಾಡಬೇಕು. ಆದುದರಿಂದ, ಸಾಮೂಹಿಕವಾಗಿ ಗೂಡಿನ ಮನೆಯನ್ನು ಕಟ್ಟತಕ್ಕಂಥ ಒಂದು ಚಿತ್ರವನ್ನಿಟ್ಟುಕೊಂಡು ವ್ಯವಸ್ಥೆಯನ್ನು ಮಾಡಬೇಕು. ತಮ್ಮ ಹತ್ತಿರ ಇದಕ್ಕೆ ಸಂಬಂಧಪಟ್ಟಂತೆ ೭೯ ಕೋಟಿ ರೂಪಾಯಿಗಳಿವೆ. ಅದು ನಮ್ಮ ಕೃಷಿಯಿಂದ ಬಂದಿರತಕ್ಕದ್ದು, ಅದು ನಮ್ಮ ರೀಲರ್ಸ್‌ಗಳಿಂದ ಬಂದಿರತಕ್ಕ ದುಡ್ಡು, ಅದು ನಮ್ಮ ಮಾರುಕಟ್ಟೆಗಳಿಂದ ಬಂದಿರತಕ್ಕ ದುಡ್ಡು, ಅದು ನಿಮ್ಮ ದುಡ್ಡಲ್ಲ ಅದು ನಿಮ್ಮ ಸರ್ಕಾರದ ದುಡ್ಡಲ್ಲ, ಆ ದುಡ್ಡನ್ನು ನಮ್ಮ ರೈತರಿಗೆ ಖರ್ಚು ಮಾಡಲು ಏಕೆ ಹಿಂಜರಿಯುತ್ತಿದ್ದೀರಿ ? ಈ ಹಣದಲ್ಲಿ ಸಣ್ಣ ರೈತರಿಗೆ ಶೇಕಡ ೧೫ರಂತೆ, ಅತಿಸಣ್ಣ ರೈತರಿಗೆ ೨೫ ಪರ್‌ಸೆಂಟ್‌ನಂತೆ, ಪರಿಶಿಷ್ಟ ಜಾತಿಯವರಿಗೆ ೩೦ ಪರ್‌ಸೆಂಟ್‌ನಂತೆ ಸಹಾಯಧನವನ್ನು ಕೊಡಿ. ಒಂದು ನ್ಯಾಷನಲ್ ಡೆವಲಪ್‌ಮೆಂಟ್ ಪ್ಲಾನನ್ನು ತಯಾರು ಮಾಡಿ ೨೦-೨೫ ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡಿ ಮತ್ತು ಮನೆಗಳನ್ನು ಕಟ್ಟಿಸಿಕೊಡಲು ವ್ಯವಸ್ಥೆ ಮಾಡಿ. ಅವನು ಪ್ರತಿ ತಿಂಗಳು ಬೆಳೆಯನ್ನು ಬೆಳೆಯುತ್ತಾನೆ. ನಂತರ ಸಾಲವನ್ನು ಸುಲಭವಾಗಿ ವಸೂಲಿ ಮಾಡಲು ಸಾಧ್ಯವಿದೆ. ಈ ಒಂದು ದಿಸೆಯಲ್ಲಿ ತಾವು ಅತ್ಯುತ್ತಮವಾದ ಹುಳುಸಾಕಾಣಿಕೆಯ ಮನೆಗಳನ್ನು ಈ ರಾಜ್ಯದಲ್ಲಿ ಕಟ್ಟಿದರೆ ರೈತರಿಗೆ ಬಹಳ ಅನುಕೂಲವಾಗಿ ಅವರು ಶುಚಿಯಾಗಿ ಬಹಳ ಒಳ್ಳೆಯ ರೀತಿಯಲ್ಲಿ ಹುಳುಗಳನ್ನು ಸಾಕಲು ಸಾಧ್ಯವಾಗುತ್ತದೆ ಮತ್ತು ಒಳ್ಳೆಯ ರೀತಿಯ ಉತ್ತಮವಾದ ರೇಷ್ಮೆ ಬೆಳೆಯುತ್ತಾನೆ. ಇದರಿಂದ ಪ್ರತಿಯೊಬ್ಬ ರೈತರಿಗೂ ಅನುಕೂಲವಾಗುತ್ತದೆ. ಏನು ಮಲಬರಿ ಗಾರ್ಡನ್ ಇದೆ ಅಲ್ಲಿ ರಾಸಾಯನಿಕ ಗೊಬ್ಬರ ಕೊಡುವ ಬಗ್ಗೆ ಒಂದೆರಡು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ. ತಾವು ಅವರಿಗೆ ರಾಸಾಯನಿಕ ಗೊಬ್ಬರವನ್ನು ಕೊಡಲು ಏಕೆ ವ್ಯವಸ್ಥೆ ಮಾಡಬಾರದು ಎನ್ನುವ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಾನೇನಾದರೂ ಬಹುಶಃ ರೇಷ್ಮೆ ಇಲಾಖೆಯ ಮಂತ್ರಿಯಾಗಿದ್ದರೆ

ಖಂಡಿತವಾಗಿಯೂ ಆ ಕೆಲಸವನ್ನು ಮಾಡುತ್ತಿದ್ದೆ. ಈವತ್ತು ರೇಷ್ಮೆ ಬೇಸಾಯ ಯಾರು ಮಾಡುತ್ತಿದ್ದಾರೆ, ಹಿಪ್ಪುನೇರಳೆಯ ತೋಟ ಯಾರಿಗಿದೆ, ಆ ತೋಟದಲ್ಲಿ ಬಾವಿಯನ್ನು ತೆಗೆಯುತಕ್ಕ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಈ ಹಿಪ್ಪುನೇರಳೆ ನೀರಿನಿಂದ ಬೆಳೆಯತಕ್ಕದ್ದು. ಒಂದು ಹೆಕ್ಟೇರ್‌ನಲ್ಲಿ ಒಂದು ವರ್ಷಕ್ಕೆ ೨೫ ಸಾವಿರ ಕೆ. ಜಿ. ಹಿಪ್ಪುನೇರಳೆ ಸೊಪ್ಪು ಬೆಳೆಯಬಹುದು. ೮೦೦ ಕೆ. ಜಿ. ಸೊಪ್ಪಿನಲ್ಲಿ ನೂರು ಕೋಟಿ ಮೊಟ್ಟೆಗಳನ್ನು ಹಣ್ಣು ಮಾಡಬಹುದು. ಹಾಗಾದರೆ ೨೫ ಸಾವಿರ ಕೆ. ಜಿ. ಸೊಪ್ಪಿಗೆ ಎಷ್ಟು ಲಾಭವಾಗುತ್ತದೆ? ಸುಮಾರು ೯೦-೯೫ ಸಾವಿರ ಲಾಭ ಬರುತ್ತದೆ. ಅದರಲ್ಲಿ ೨೫ ಸಾವಿರ ವೆಚ್ಚವನ್ನು ಕಳೆದರೆ ೭೫ ಸಾವಿರವಾದರೂ ಆತನ ಕೈಗೆ ಸಿಕ್ಕುತ್ತದೆ. ಎಲ್ಲಿದೆ ಇವತ್ತು ಇಂಥ ಬೆಳೆ? ಇದು ಬಂಗಾರದಂಥ ಬೆಳೆ. ಆದ್ದರಿಂದ ದಯಮಾಡಿ ಈ ದೃಷ್ಟಿಯಲ್ಲಿ ರಾಸಾಯನಿಕ ಗೊಬ್ಬರವನ್ನು ಕೊಟ್ಟು ಕೆಲಸವನ್ನು ಮಾಡತಕ್ಕದ್ದನ್ನು ಮಾಡಬೇಕು. ತಾವು ಇಲ್ಲಿ ಒಂದು ಅತ್ಯುತ್ತಮವಾದ ಸಾಧನೆಯನ್ನು ಮಾಡಿದ್ದೀರಿ. ಅದನ್ನು ನಾನು ಪ್ರಶಂಸೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಏನು ರೇಷ್ಮೆ ಬೆಳೆ ಇದೆ, ಏನು ಬಂಪರ್ ಕ್ರಾಪ್ ಎಂದು ಹೇಳುತ್ತೇವೆ ಅಂತಹ ಬೆಳೆ ಆಗಿಲ್ಲ. ಈವತ್ತು ಅದಕ್ಕೆ ಗಂಟುರೋಗ ಬಂದು ನಮ್ಮ ರೈತರು ಬಹಳ ಕಷ್ಟಪಟ್ಟರು. ತಾವು ಅದನ್ನು ಹತೋಟಿಯಲ್ಲಿಡಲು ಬಹಳ ಕಷ್ಟಪಟ್ಟಿದ್ದೀರಿ, ಸಾಮೂಹಿಕವಾಗಿ ಏನೇನು ಕೆಲಸ ಮಾಡಬೇಕಾಗಿತ್ತೋ ಅವೆಲ್ಲಾ ಕೆಲಸವನ್ನು ಮಾಡಿದ್ದೀರಿ. ರಾಮನಗರಂ ರೇಷ್ಮೆ ಮಾರುಕಟ್ಟೆಯಲ್ಲಿ ಮಾರ್ಚ್ ತಿಂಗಳ ೧೫ ರಲ್ಲಿ ೬೧,೦೬೨ ಕೆ. ಜಿ. ರೇಷ್ಮೆ ಗೂಡು ಬಂದಿತ್ತು ಮತ್ತೆ ೨೧ನೇ ಮಾರ್ಚ್‌ನಲ್ಲಿ ಅಂದರೆ ಕೇವಲ ಎರಡು ದಿನದಲ್ಲಿ ೬೩ ಸಾವಿರ ಕೆ. ಜಿ. ರೇಷ್ಮೆ ಗೂಡು ಬಂದಿತ್ತು. ಇದು ರಾಜ್ಯದ ಚರಿತ್ರೆಯಲ್ಲಿ ದಾಖಲೆಯಾಗಿರತಕ್ಕದ್ದು. ಒಂದೇ ಒಂದು ಮಾರುಕಟ್ಟೆಯಲ್ಲಿ ಇಷ್ಟೊಂದು ಗೂಡುಗಳು ಬಂದಿರತಕ್ಕದೆಂದರೆ ಆಶ್ಚರ್ಯವಾಗತಕ್ಕದ್ದು. ಒಂದಕ್ಕೆ, ಎರಡು, ಎರಡೂವರೆ ಪಟ್ಟು ಜಾಸ್ತಿಯಾಗಿದೆ. ಹೇಗೆ ಇದು ಜಾಸ್ತಿಯಾಯಿತು? ಮೊದಲು ಈ ರೀತಿ ರೈತರು ಬೆಳೆಯುತ್ತಿರಲಿಲ್ಲವೇ? ಈಗ ಹೇಗೆ ಬಂತು ಎನ್ನತಕ್ಕ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಂಡರೆ, ಒಳ್ಳೆಯ ಬಿತ್ತನೆಯನ್ನು ಸರಬರಾಜು ಮಾಡಿದಿರಿ, ಅದನ್ನು ಯಶಸ್ವಿಯಾಗಿ ಮಾಡಿದಿರಿ. ಅಲ್ಲಿ ಬಿತ್ತನೆಗೆ ಹಾಕಿರತಕ್ಕ ಕ್ರಮ ಯಶಸ್ವಿಯಾಗಿದೆ. ಅನೇಕ ಮಾರುಕಟ್ಟೆಗಳಲ್ಲಿ ಒಂದೂಂದು ದಿನದಲ್ಲಿ ಇದು ಬಹಳ ಜಾಸ್ತಿಯಾಗಿದೆ. ಆದೇ ರೀತಿ ಶಿಡ್ಲಘಟ್ಟದಲ್ಲಿ ಮತ್ತು ಕೊಳ್ಳೆಗಾಲದಲ್ಲಿ ಹೆಚ್ಚು ಬಂದಿದೆ, ಒಂದಕ್ಕೆ ಎರಡರಷ್ಟು ಬೆಳೆಯನ್ನು ನಾವು ಬೆಳೆದಿದ್ದೇವೆ. ಇದು ಬಹಳ ಪ್ರಶಂಸಿಸಬೇಕಾದ ಕೆಲಸ. ಇದಕ್ಕೆ ಒಂದು ಕಡೆ ಪ್ರಶಂಸೆಯನ್ನು ಮಾಡಿದರೂ ಕೂಡ ಇನ್ನೊಂದು ಕಡೆ ತೆಗಳಬೇಕಾಗುತ್ತದೆ. ಮತ್ತೆ ರೇಷ್ಮೆ ಗೂಡಿನ ಬೆಲೆ ೧೬೦-೧೭೦ ರೂಗಳು ಇದ್ದದ್ದು ಈಗ ೮೦ ರೂಪಾಯಿಗೆ ಬಂದಿದೆ. ಬೆಳೆ ಜಾಸ್ತಿಯಾಯಿತು ಅದಕ್ಕೋಸ್ಕರ ಬೆಲೆ ಕಡಿಮೆ ಆಯಿತು ಎನ್ನುವ ಪ್ರಶ್ನೆಯಲ್ಲ. ಬೆಲೆಯನ್ನು ನಿಯಂತ್ರಣ ಮಾಡತಕ್ಕಂಥದರಲ್ಲಿ ನಿಮ್ಮ ಇಲಾಖೆ ವಿಫಲವಾಗಿದೆ. ನಾನು ಇದನ್ನು ಸಾರಿಸಾರಿ ಹೇಳುತ್ತಿದ್ದೇನೆ. ಈ ಬೆಲೆ ನಿಯಂತ್ರಣ ಮಾಡಬೇಕೆಂದು ನಾವು ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್ ಅನ್ನು ಅಸ್ತಿತ್ವಕ್ಕೆ ತಂದೆವು. ಅದು ಕೆಲಸವನ್ನು ಸರಿಯಾಗಿ ಮಾಡುತ್ತಿಲ್ಲ. ಅದಕ್ಕೆ ಚೈತನ್ಯ ತುಂಬಿಲ್ಲ. ಅದಕ್ಕೆ ನೀವು ಹಣದ ಶಕ್ತಿಯನ್ನು ಕೊಟ್ಟಿಲ್ಲ. ನಮ್ಮ ದುಡ್ಡು ೬೯ ಕೋಟಿ ರೂಪಾಯಿ ಇರುವಾಗ ಏಕೆ ಸ್ವಾಮಿ ಅದಕ್ಕೆ ಕೊಡಲಿಲ್ಲ. ಅದಕ್ಕೆ ೨೦ ಕೋಟಿ ರೂಪಾಯಿ ಕೊಡಿಯೆಂದು ನಾವು ಹೇಳಿರಲಿಲ್ಲವೇ? ರೇಷ್ಮೆ ವಿನಿಮಯ ಕೇಂದ್ರಕ್ಕೆ ಎಷ್ಟು ರೇಷ್ಮೆ ಬರುತ್ತದೆ ಅದರಲ್ಲಿ ಶೇಕಡ ೩೦ ರಷ್ಟು ರೇಷ್ಮೆಯನ್ನು ಕೊಂಡುಕೊಳ್ಳಬೇಕೆಂದು ನಿಯಮವಿರುವುದರಿಂದ ಆ ಶೇಕಡ ೩೦ ರಷ್ಟು

ರೇಷ್ಮೆಯನ್ನು ಕೊಂಡುಕೊಳ್ಳುವುದಕ್ಕೆ ತಾವು ಒಪ್ಪಿಕೊಳ್ಳಬೇಕು. ಕೇವಲ ಒಂದು ಕೋಟಿ ರೂಪಾಯಿ ಕೊಡತಕ್ಕಂಥದ್ದು ೨೦ ಲಕ್ಷ ಕೊಡತಕ್ಕಂಥದ್ದು ಸರಿಯಲ್ಲ. ಅದಕ್ಕೆ ಶೇರು ಬಂಡವಾಳ ಎಷ್ಟು ಕೋಟಿಯೆಂದು ತಾವು ನಿಗದಿ ಮಾಡಿದ್ದೀರಿ. ಎಲ್ಲಿಗೆ ಕೊಟ್ಟಿದ್ದೀರಿ. ೩೦ ಲಕ್ಷ ಕೆ. ಜಿ. ರೇಷ್ಮೆ ಸ್ಟಾಕ್ ಇದೆಯೆಂದರೆ ಬೆಲೆ ಮೇಲಕ್ಕೆ ಹೋದಾಗ ಕೆಲವು ಸಾರಿ ನಾವೇ ಮಾರ್ಕೆಟ್ಟಿಗೆ ಕೊಡಬಹುದು. ಬೆಲೆ ಕಡಿಮೆಯಾದಾಗ ತೆಗೆದು ಇಟ್ಟುಕೊಳ್ಳಬಹುದು. ಜಪಾನ್‌ನಲ್ಲಾಗಲಿ ಅಥವಾ ಯಾವುದೇ ದೇಶದಲ್ಲಾಗಲಿ ರೇಷ್ಮೆ ಕೈಗಾರಿಕೆ ಇರತಕ್ಕಂಥ ದೇಶಗಳ ಕನಿಷ್ಠ ದರ ಮತ್ತು ಗರಿಷ್ಠ ದರ ಶೇಕಡ ೧೦ ರಷ್ಟು ಸಹ ಹೆಚ್ಚು ಕಡಿಮೆಯಾಗುವುದಿಲ್ಲ. ಆದರೆ ನಮ್ಮಲ್ಲಿ ೧೦೦ಕ್ಕೆ ೧೦೦ ರಷ್ಟು ಹೆಚ್ಚುಕಡಿಮೆ ಆಗುತ್ತದೆ ಸ್ವಾಮಿ. ದರವನ್ನು ಏರಿಸುವುದಕ್ಕೆ ಶಕ್ತಿ ಇಲ್ಲ, ನಿಯಂತ್ರಣ ಮಾಡುವ ಶಕ್ತಿಯನ್ನು ಇನ್ನೂ ಕೆ. ಎಸ್. ಎಂ. ಬಿ. ಗೆ ತುಂಬಿಲ್ಲ. ಒಂದು ಕೆ. ಜಿ. ರೇಷ್ಮೆಗೆ ೨ ಸಾವಿರ ರೂಪಾಯಿ ಇದ್ದದ್ದು ೧ ಸಾವಿರ ರೂಪಾಯಿ ಆಗಿದೆ. ವ್ಯಾಪಾರಿಗಳು ನಿಮ್ಮನ್ನು ನಂಬಿ ಮುಳುಗಿ ಹೋದರು. ನಾನು ಆಗಲೇ ಹೇಳಿದಹಾಗೆ ನೀವು ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ಗೆ ದರವನ್ನು ನಿಯಂತ್ರಣ ಮಾಡತಕ್ಕಂಥ ಶಕ್ತಿಯನ್ನು ಇನ್ನೂ ತುಂಬಿಲ್ಲ. ದಯವಿಟ್ಟು ನಾನು ಹೇಳುತ್ತೇನೆ ಕೇಳಿ, ನಮ್ಮದು ೭೯ ಕೋಟಿ ರೂಪಾಯಿ ಏನು ಇದೆ ಆ ಹಣವನ್ನು ತೆಗೆದುಕೊಂಡು ಹೋಗಿ ಟ್ರೆಜರಿಗೆ ತುಂಬುವುದಲ್ಲ. ಅದು ರೇಷ್ಮೆ ತಯಾರು ಮಾಡತಕ್ಕಂತಹವರಿಗೆಂದು ಕೊಟ್ಟಿರತಕ್ಕಂತಹ ಹಣ. ಅದು ಸರ್ಕಾರದ ಹಣವಲ್ಲ. ಈ ದೇಶದಲ್ಲಿ ರೈತರ ದುಡ್ಡನ್ನು ಬೇರೆಯವರು ತಿನ್ನುತ್ತಿದ್ದಾರೆ. ಆದ್ದರಿಂದ ನಾನು ಮೊದಲಿನಿಂದ ಹೇಳುತ್ತಿದ್ದ ಸಲಹೆಯೇನೆಂದರೆ ಬೇರೆ ಹೆಸರಿನಲ್ಲಿ ಈ ದುಡ್ಡನ್ನು ಇಡಬೇಕು. ನಮ್ಮ ಪ್ರಾಧಿಕಾರದಲ್ಲಿ ಈ ಹಣವನ್ನು ರೇಷ್ಮೆ ಕೃಷಿಕನಿಗೆ ರೇಷ್ಮೆ ಬೆಳೆಯುವುದಕ್ಕೆ ಗೂಡು ಬೆಳೆಸುವವನಿಗೆ ಖರ್ಚು ಮಾಡಬೇಕೆಂದು ಇದೆ. ಆ ದುಡ್ಡನ್ನು ತೆಗೆದುಕೊಂಡು ಹೋಗಿ ಟ್ರೆಜರಿಗೆ ಹಾಕಿ ನಮಗೆ ಈ ರೀತಿ ಮಾಡತಕ್ಕಂಥದ್ದು ಸರಿಯಲ್ಲ. ಯಾರು ದುಡ್ಡು ಕೊಟ್ಟು ಪರ್ಚೇಸ್ ಮಾಡುವುದನ್ನು ನಿಲ್ಲಿಸಿದರೋ, ಆದರಿಂದ ಬೆಲೆ ಡೌನ್ ಆಗಿದೆ, ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ತಾವು ಏಕೆ ಪರ್ಚೇಸ್ ಮಾಡಲಿಲ್ಲ ? ಬೆಲೆಯಲ್ಲಿ ಬಹಳ ವ್ಯತ್ಯಾಸವಾಯಿತು. ಒಂದು ಕೆ. ಜಿ. ರೇಷ್ಮೆಗೆ ೨ ಸಾವಿರ ಇದ್ದಂತದ್ದು ೧ ಸಾವಿರಕ್ಕೆ ಇಳಿದಿದೆ. ಅನೇಕ ಜನ ಇದರಿಂದ ಮುಳುಗಿ ಹೋದರು, ಆದ್ದರಿಂದ ಈ ಸಾವಿರ ವ್ಯತ್ಯಾಸ ಬೇಡವೆಂದು ರೀಲರ್ಸ್‌ಗಳೆಲ್ಲಾ ಹಿಂದೆ ಹೋಗಿದ್ದಾರೆ. ಅವರು ಗೂಡನ್ನು ತೆಗೆಯುತ್ತಿಲ್ಲ. ಅವರ ಗೂಡುಗಳೆಲ್ಲಾ ಹಾಳಾಗಿವೆ, ಬೆಲೆ ಕಡಿಮೆಯಾಗಿದೆ, ಬೆಲೆ ಕಡಿಮೆಯಾದ ತಕ್ಷಣ ಏನು ಮಾಡುತ್ತಾರೆಂದರೆ ಬೆಟ್ಟಿಂಗ್ಸ್ ಕಟ್ಟುತ್ತಾರೆ. ನಿಮ್ಮ ಇಲಾಖೆಯವರೂ ಏನೂ ಮಾಡುವುದಿಲ್ಲ, ನೀವೂ ಏನೂ ಮಾಡುವ ಹಾಗೆ ಇಲ್ಲ, ನಾನೂ ಏನೂ ಮಾಡುವ ಹಾಗೆ ಇಲ್ಲ. ಎಲ್ಲಾ ಒಳಗಿದ್ದ ಮೀನನ್ನು ನೀರಿನಿಂದ ಹೊರಕ್ಕೆ ಎಸೆದ ಹಾಗೆ ಆಗುತ್ತದೆ ನಮ್ಮ ಸ್ಥಿತಿ. ದಯವಿಟ್ಟು ತಾವು ಈ ಒಂದು ಕನಿಷ್ಠ ಮತ್ತು ಗರಿಷ್ಠ ದರವನ್ನು ಗೊತ್ತು ಮಾಡಬೇಕು. ೧೦ ಪರ್ಸೆಂಟ್ ಒಳಗೆ ವ್ಯತ್ಯಾಸ ಇರತಕ್ಕಂತಹ ಒಂದು ಕೆಲಸವನ್ನು ತಾವು ಮಾಡಿದಾಗ ಮಾತ್ರ ನೀವು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ದಯವಿಟ್ಟು ಈ ಒಂದು ಕೆಲಸವನ್ನು ತಾವು ಸಮರ್ಥ ರೀತಿಯಲ್ಲಿ ಮಾಡಬೇಕೆಂದು ಹೇಳುತ್ತೇನೆ. ನಾವು ಯಾರಲ್ಲಿಯೂ ಭಿಕ್ಷೆ ಬೇಡಬೇಕಾಗಿಲ್ಲ, ಇದು ರೈತರ ದುಡ್ಡು. ಈ ೭೯ ಕೋಟಿ ರೂಪಾಯಿಯನ್ನು ತೆಗೆದುಕೊಳ್ಳುವುದಕ್ಕೆ ಯಾರಿಗೆ ಹಕ್ಕು ಇದೆ, ಇದೇ ರೀತಿ ನೀವು ಬೇರೆಯವರ ದುಡ್ಡನ್ನು ಏಕೆ ತೆಗೆದುಕೊಳ್ಳಲಿಲ್ಲ ? ನೀವು ವಸೂಲು ಮಾಡಿರತಕ್ಕದ್ದು ಕೊಳ್ಳೇಗಾಲ, ಶಿಡ್ಲಘಟ್ಟ.

ರಾಮನಗರ, ವಿಜಾಪುರ ಗೂಡು ಮಾರ್ಕೆಟ್‌ಗಳಿಂದ. ಅದೇ ರೀತಿಯಲ್ಲಿ ರೇಷ್ಮೆಯನ್ನು ಬೆಳೆಯುವುದಕ್ಕೆ ಕೇಂದ್ರದಿಂದ ಬರತಕ್ಕಂತಹ ಲಕ್ಷೋಪಲಕ್ಷ ರೂಪಾಯಿ ಹಣವನ್ನು ತೆಗೆದುಕೊಂಡು ಹೋದರೂ, ೭೯ ಕೋಟಿ ರೂಪಾಯಿಯಲ್ಲಿ ಇದುವರೆಗೂ ಖರ್ಚು ಮಾಡಿಲ್ಲ. ಎಲ್ಲೋ ಕೇವಲ ೨೦ ಕೋಟಿ ರೂಪಾಯಿ ಮಾತ್ರ ನೀವು ಖರ್ಚು ಮಾಡಿರುವುದು ಅದು ನಮ್ಮ ರೈತರಿಗೆ ಖರ್ಚಾಗಿಲ್ಲ. ಗೂಡು ಮಾರ್ಕೆಟ್ ಕಟ್ಟಲು ಖರ್ಚು ಮಾಡಿದ್ದಾರೆ, ನಮಗಂತೂ ಏನು ಮಾಡಲಿಲ್ಲ, ತಾವು ರೇಷ್ಮೆಗೆ ಸಂಬಂಧಪಟ್ಟಂತೆ ಯಾವುದೇ ಯೋಜನೆಯನ್ನು ತಯಾರು ಮಾಡತಕ್ಕಂತಹ ಕಾಲದಲ್ಲಿ ಅದನ್ನು ಸರಿಯಾಗಿ ಮಾಡಬೇಕು, ಇಲ್ಲದಿದ್ದರೆ ಅದು ತಪ್ಪಾಗುತ್ತದೆಂಬ ಮಾತನ್ನು ಮತ್ತೊಂದು ಸಾರಿ ಹೇಳುತ್ತೇನೆ. ದಯವಿಟ್ಟು ನೀವು ನನ್ನ ಗಮನಕ್ಕೆ ತಂದು ಆ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕು, ಮತ್ತು ನಮ್ಮ ಸಲಹೆಯನ್ನು ಕೇಳಬೇಕೆಂದು ನಾನು ಬಹಳ ಆದೇಶಪೂರ್ವಕವಾಗಿ ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ತಾವು ಉತ್ತರ ಕೊಡುವಾಗ ಇದನ್ನು ಹೇಳಬೇಕು, ನಮ್ಮದು ೭೯ ಕೋಟಿ ರೂಪಾಯಿ ಏನು ಇದೆ, ಅದರಲ್ಲಿ ಇಷ್ಟು ಖರ್ಚಾಗಿದೆ, ಇಷ್ಟು ಹಣವನ್ನು ಬೇರೆ ಇಡುತ್ತಿದ್ದೇವೆ ಎಂಬುದನ್ನು ತಿಳಿಸಬೇಕು. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡಿಗೆ ಬರತಕ್ಕಂತಹ ರೇಷ್ಮೆ ವಿನಿಮಯ ಕೇಂದ್ರದಲ್ಲಿ ಶೇಕಡ ಒಂದರಷ್ಟು ನೂಲನ್ನು ತೆಗೆಯತಕ್ಕಂತಹ ಒಂದು ಶಿಸ್ತನ್ನು ತುಂಬುತ್ತೇವೆ, ಬೆಲೆಯನ್ನು ನಿಯಂತ್ರಣ ಮಾಡುತ್ತೇವೆ, ಕನಿಷ್ಠ ಬೆಲೆ ಗರಿಷ್ಠ ಬೆಲೆ ಗೊತ್ತು ಮಾಡುತ್ತೇವೆ, ೧೦ ಪರ್ಸೆಂಟ್ ಹೆಚ್ಚು ಕಡಿಮೆ ಮಾಡುವುದಿಲ್ಲ ಎನ್ನುವಂತಹ ಭರವಸೆಯನ್ನು ಕೊಡಬೇಕು, ಆ ಭರವಸೆ ಕೊಟ್ಟಾಗ ಇದು ರಾಜ್ಯದ ರೈತನಿಗೆ ಗೊತ್ತಾಗಿ ಕೈಗಾರಿಕೋದ್ಯಮಿಗಳಿಗೆ ಈ ಕೈಗಾರಿಕೆಯನ್ನು ನಡೆಸುವುದಕ್ಕೆ ಒಂದು ಅನುಕೂಲವಾಗುತ್ತದೆ. ಆದ್ದರಿಂದ ದಯವಿಟ್ಟು ಆ ಕೆಲಸವನ್ನು ತಾವು ಮಾಡಬೇಕೆಂದು ತಮ್ಮನ್ನು ಒತ್ತಾಯಪೂರ್ವಕವಾಗಿ ಬೇಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

೧೨.೨೫ ಪಿ. ಎಂ.

ಇನ್ನು ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಹೇಳಬೇಕೆಂದರೆ, ಇದು ಸ್ವಾಮಿ, ಈ ರೇಷ್ಮೆ ಪ್ರಪಂಚದಲ್ಲಿ ಈ ರೇಷ್ಮೆ ಗೂಡು ಮಾರ್ಕೆಟ್ ಒಂದು ಧ್ರುವತಾರೆ ಅಂಥ ಇದ್ದರೆ ಇದು ಒಂದು ದೊಡ್ಡ ಬೇತಾಳ ಅಂಥ ನಾವು ಹೇಳಲಿಕ್ಕೆ ಇಷ್ಟಪಡುತ್ತೇನೆ. ನಾವು ಏನು ೨೭ ಕೋಟಿ ರೂಪಾಯಿ ಬಂಡವಾಳ ಕೊಟ್ಟಿದ್ದವು ಆ ಬಂಡವಾಳ ಪೂರ್ತ ಹೋಗಿದೆ. ಅದು ತುಂಬಾ ನಷ್ಟ ಅನುಭವಿಸುತ್ತಿದೆ. ಆ ಯಂತ್ರಕ್ಕೆ ತಕ್ಕಂಥ ಗೂಡನ್ನು ಒದಗಿಸುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಆ ಯಂತ್ರ ಏತಕ್ಕಾಗಿ ತಂದರು ಅಂಥ ನಮಗೆ ಗೊತ್ತಿಲ್ಲ. ಸ್ವಾಮಿ ಒಂದು ಭತ್ತ ಅಕ್ಕಿ ಮಾಡುವ ಗಿರಣಿಗೆ ಪರವಾನಿಗೆ ಕೊಡಬೇಕಾದರೆ ಆ ಗಿರಣಿಗೆ ಸುತ್ತ ಇರತಕ್ಕಂಥ ಪ್ರದೇಶದಲ್ಲಿ ಎಷ್ಟು ಭತ್ತ ಬೆಳೆಯುತ್ತಾರೆ ಅಂತ ಲೆಕ್ಕ ಹಾಕಿಕೊಂಡು ಕೊಡುತ್ತಾರೆ. ಸ್ವಾಮಿ, ನೀವು ಸುಮಾರು ೧೦ ಕೋಟಿ ರೂಪಾಯಿ ಯಂತ್ರವನ್ನು ತೆಗೆದುಕೊಂಡಿದ್ದೀರಲ್ಲಾ ಅದರಿಂದ ಎಷ್ಟು ಪ್ರಯೋಜನ ಇದೆ ಅಂಥ ತೆಗೆದುಕೊಂಡಿರಿ ? ಏತಕ್ಕಾಗಿ ನಿಮ್ಮ ಐ. ಎ. ಎಸ್. ಅಧಿಕಾರಿಗಳು ಆ ಕೆಲಸ ಮಾಡಿದರು ಎಂಬುದು ನನಗೆ ಅರ್ಥ ಆಗುತ್ತಿಲ್ಲ. ಅಧಿಕಾರಿಗಳು ಪರದೇಶಕ್ಕೆ ಹೋಗಿ ನೋಡಿಕೊಂಡು ಶೋಕಿ ಮಾಡಲಿ, ಇಂತಹ ಯಂತ್ರ ಏಕೆ ಕೊಂಡುಕೊಳ್ಳಬೇಕಾಗಿತ್ತು ? ಈ ಯಂತ್ರದಿಂದ ಎಷ್ಟು ನಷ್ಟವಾಗಿದೆ, ದುಡಿಮೆ ಬಂಡವಾಳ ಇಲ್ಲದೇನೇ ಹೇಗೆ ಯಂತ್ರವನ್ನು ಕೊಂಡುಕೊಂಡಿರಿ ? ಆ ಯಂತ್ರ ಕೊಂಡುಕೊಳ್ಳಲು

ಖರ್ಚು ಮಾಡಿದಷ್ಟು ದುಡ್ಡನ್ನು ದುಡಿಮೆ ಬಂಡವಾಳವಾಗಿ ಇಟ್ಟುಕೊಂಡಿದ್ದರೆ ಎಷ್ಟೋ ಚೆನ್ನಾಗಿ ಇರುತ್ತಿತ್ತು. ಇದರಲ್ಲಿ ಬಹಳ ಅವ್ಯವಹಾರ ಆಗಿದೆ ಸ್ವಾಮಿ. ತಾವು ಇದನ್ನೆಲ್ಲಾ ನೋಡಿ ಪರಿಶೀಲನೆ ಮಾಡಿ. ೭ ರೇಷ್ಮೆ ಕಾರ್ಖಾನೆಗಳಲ್ಲಿ ೨ ಕಾರ್ಖಾನೆಗಳು ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೋರೇಷನ್‌ಗೆ ಬರುತ್ತದೆ. ಕನಕಪುರ ಮತ್ತು ಟಿ. ನರಸೀಪುರದ್ದು; ದಯಮಾಡಿ ಇವೆರಡು ಕೇಂದ್ರಗಳನ್ನು ನಿಲ್ಲಿಸಿಬಿಡಿ. ಆದರಿಂದ ನಮಗೆ ತುಂಬಾ ನಷ್ಟವಾಗುತ್ತದೆ. ಇನ್ನು ಐದು ಜಾಗಗಳಲ್ಲಿ ನಷ್ಟ ಅನುಭವಿಸಿದರೂ ಕೂಡ ಕಾರ್ಮಿಕರ ಹಿತದೃಷ್ಟಿಯಿಂದ ನಾವಾದರೂ ಕೆಲಸ ಮಾಡಲೇ ಬೇಕಾಗುತ್ತದೆ. ನಾವು ನಷ್ಟವನ್ನು ಅನುಭವಿಸಿದ್ದೇವೆಂದು ಒಂದೇ ಮಾತಿನಲ್ಲಿ ಹೇಳಬೇಕಾದರೆ ಅಲ್ಲಿರತಕ್ಕಂಥ ಕಾರ್ಮಿಕರಿಗೆಲ್ಲಾ ವರ್ಷ ಪೂರ್ತಾ ಸಂಬಳ ಕೊಟ್ಟರೆ, ಕಾರ್ಖಾನೆ ಮುಚ್ಚಿ ವರ್ಷ ಪೂರ್ತಾ ಸಂಬಳ ಕೊಟ್ಟರೆ ಎಷ್ಟು ನಷ್ಟವಾಗುತ್ತದೋ ಅದಕ್ಕೆ ಎರಡರಷ್ಟು ನಷ್ಟ ಆಗುತ್ತದೆ. ಆದರೂ ಚಿಂತೆಯಿಲ್ಲ ಏಕೆಂದರೆ ಗೌರ್ನಮೆಂಟ್ ಸಿಲ್ಕ್ ಫಿಲೇಚರ್ಸ್. ಅಂದರೆ, ಗೂಡಿನ ಮಾರುಕಟ್ಟೆಯಲ್ಲಿ ಬಂದು ಭಾಗವಹಿಸದಿದ್ದಾಗ ರೀಲರ್ಸ್ ಒಗ್ಗಟ್ಟಾಗಿ ರೇಷ್ಮೆ ಗೂಡು ಬೆಲೆ ಕಡಿಮೆಯಾಗುತ್ತದೆ. ದಯಮಾಡಿ ಇರಬೇಕಾದ್ದು ಅವಶ್ಯಕತೆ ಇದೆ. ಆದರೆ ಇತ್ತೀಚೆಗೆ ಸ್ವಲ್ಪ ಅತ್ಯುತ್ತಮ ಕೆಲಸ ಮಾಡುತ್ತಿದ್ದೀರಿ ಎಂದು ಕೇಳಿದ್ದೇನೆ, ಇನ್ನೂ ಚೆನ್ನಾದ ರೀತಿಯಲ್ಲಿ ಕೆಲಸ ಮಾಡತಕ್ಕ ಕೆಲಸವನ್ನು ತಾವು ಮಾಡಬೇಕು. ಇವೆರಡು ಕಾರ್ಖಾನೆ ಏನಿದೆ ನರಸೀಪುರ ಮತ್ತು ಕನಕಪುರ ಅವೆರಡನ್ನೂ ಮುಚ್ಚತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಏನು ರೇಷ್ಮೆ ಇಲಾಖೆ ಇದೆ ಅದು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿಲ್ಲ. ರೇಷ್ಮೆ ದರ್ಜೆವಾರು ವಿಂಗಡಿಸಬೇಕು. ೧೪-೧೬, ೧೬-೧೮, ೧೮-೨೦ ಡೀನಿಯರ್ ವಿಂಗಡಿಸಬೇಕು. ಬೆಲೆಯನ್ನು ಅವರೇ ಗೊತ್ತು ಮಾಡಬೇಕು. ಆ ನಂತರ ಬಹಿರಂಗವಾದ ಹರಾಜಿನಲ್ಲಿ ಕೊಂಡು ಕೊಳ್ಳಬೇಕು. ಆದರೆ ಅಲ್ಲಿ ಡೀಟೈಲ್ ಟೆಸ್ಟ್ ಮಾಡತಕ್ಕ ಉಪಕರಣ ಇದ್ದರೂ ಕೂಡ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿಲ್ಲ. ದರ್ಜೆವಾರು ವಿಂಗಡಿಸಿಲ್ಲ. ನಾನು ಅಲ್ಲಿಗೆ ಅನೇಕ ಸಾರಿ ಭೇಟಿ ಕೊಟ್ಟಿದ್ದೇನೆ. ನಾನು ಅವರಿಗೆ ಪ್ರಶ್ನೆ ಮಾಡಿದ್ದೇನೆ, ಯಾವುದಕ್ಕೂ ಉತ್ತರ ಸರಿಯಾಗಿ ಕೊಡುತ್ತಾ ಇಲ್ಲ. ದಯಮಾಡಿ ಇನ್ನು ಮುಂದೆಯಾದರೂ ಕೂಡ ಯಾವ ಯಾವ ಡೀನಿಯರ್‌ಗೆ ಯಾವ ಯಾವ ಬೆಲೆ ಗೊತ್ತು ಮಾಡಬೇಕು, ಅವೆಲ್ಲವನ್ನೂ ಕೂಡ ವಿಂಗಡಿಸತಕ್ಕಂಥ ಕೆಲಸವನ್ನು ಮಾಡತಕ್ಕಂಥದ್ದು, ಆಯಾಯ ಡೀನೆಯರ್‌ಗೆ ಬೆಲೆ ಕೊಡತಕ್ಕಂಥ ರೀತಿಯಲ್ಲಿ ಮಾಡಿದಾಗ, ರೇಷ್ಮೆ ದಾರ ತೆಗೆಯುತಕ್ಕವನಿಗೆ ಒಂದು ಪ್ರೋತ್ಸಾಹ ಕೊಟ್ಟಂತೆ ಆಗುತ್ತದೆ. ಇನ್ನೂ ಅತ್ಯುತ್ತಮವಾದ ಅಂತರಾಷ್ಟ್ರೀಯ ಗುಣಮಟ್ಟದ ರೇಷ್ಮೆಯನ್ನು ತಯಾರು ಮಾಡುವುದಕ್ಕೆ ಅವರು ತಯಾರಾಗಿದ್ದಾರೆ. ದಯಮಾಡಿ ಆ ಒಂದು ಕೆಲಸವನ್ನು ಮಾಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನೊಂದು ಬಹಳ ಪ್ರಾಮುಖ್ಯವಾದ ವಿಷಯ. ನೀವು ಡಿಸೆಂಬರ್ ಅಂತ್ಯದೊಳಗೆ ೪೭೦೦ ಟನ್ ರೇಷ್ಮೆ ಉತ್ಪಾದನೆ ಆಗಿದೆ ಎಂದು ಹೇಳಿದ್ದೀರಿ. ಅಂದರೆ ೧೧೯೩ ಟನ್ ರೇಷ್ಮೆ ನಿಮ್ಮ ರೇಷ್ಮೆ ವಿನಿಮಯ ಕೇಂದ್ರದಲ್ಲಿ ರಿಜಿಸ್ಟರ್ ಆಗಿದೆ. ನಿಮ್ಮ ಎನ್‌ಫೋರ್ಸ್‌ಮೆಂಟ್ ಏನು ಮಾಡುತ್ತಿತ್ತು ಅಂಥ ನಾನು ಕೇಳುತ್ತಿದ್ದೇನೆ. ಯಾಕೆ ಆ ಇಲಾಖೆಯನ್ನು ಇಟ್ಟುಕೊಂಡಿರಬೇಕು? ಏನಿದೆ ಕಾನೂನು - ಯಾರು ಈ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ ಮಾಡುತ್ತಾರೋ, ಅವರೆಲ್ಲರೂ ಕೂಡ ಈ ಒಂದು ಸಿಲ್ಕ್ ಎಕ್ಸ್‌ಛೇಂಜ್‌ಗೆ ತರಬೇಕೆಂದು ಕಾನೂನು ಮಾಡಿದ್ದೇವೆ. ಆದರೆ ಕೇವಲ ಶೇಕಡ ೨೫ರಷ್ಟು ಮಾತ್ರ ಬಂದಿರುವುದು! ಶೇಕಡ ೭೫ರಷ್ಟು ಹೊರಗಡೆ ಬಿಕರಿಯಾಗಿದೆ. ಏನು ಮಾಡುತ್ತಿದೆ ನಿಮ್ಮ

ಎನ್‌ಫೋರ್ಸ್‌ಮೆಂಟ್? ಏಕೆ ಇಟ್ಟುಕೊಳ್ಳಬೇಕು ಆ ಇಲಾಖೆಯನ್ನು? ಏನಾದರೂ ಪ್ರಯೋಜನ ಇದೆಯೇ? ಬರೀ ಸಂಬಳವನ್ನು ಕೊಡಬೇಕು ಜೊತೆಗೆ ಇಲ್ಲಿ ನಾವು ನಷ್ಟವನ್ನು ಅನುಭವಿಸಿದ್ದೇವೆ. ದಯಮಾಡಿ ಇದನ್ನು ಸಮರ್ಥ ರೀತಿಯಲ್ಲಿ ಕೆಲಸ ಮಾಡತಕ್ಕಂಥ ಒಂದು ಆದೇಶವನ್ನು ಕೊಡಬೇಕು. ತಾವು ಕಟ್ಟುನಿಟ್ಟಾಗಿ ಈ ಕೆಲಸವನ್ನು ಜಾರಿಮಾಡತಕ್ಕಂಥದ್ದು. ಎಷ್ಟು ರೇಷ್ಮೆ ಉತ್ಪಾದನೆ ಆಗುತ್ತದೆ ಈ ರಾಜ್ಯದಲ್ಲಿ, ಪ್ರತಿಯೊಂದು ಕೆ. ಜಿ. ರೇಷ್ಮೆಯನ್ನು ಕೂಡ ರೇಷ್ಮೆ ಇಲಾಖೆಗೆ ಬರಲೇಬೇಕು. ಅದರ ಮುಖಾಂತರ ಬಿಕರಿ ಆಗಬೇಕು. ಯಾವ ರೀತಿ ಗೂಡು ಬೆಳೆದಂತಹ ರೈತ ಮಾರುಕಟ್ಟೆಗೆ ಬರುತ್ತಾನೋ ಅದೇ ರೀತಿಯಲ್ಲಿ ರೇಷ್ಮೆ ಬೆಳೆದಂಥ ರೈತ, ರೇಷ್ಮೆಯನ್ನು ಹುರಿ ಮಾಡತಕ್ಕಂಥಹವನು ಎಲ್ಲರೂ ಕೂಡ ಸಿಲ್ಕ್ ಎಕ್ಸ್‌ಚೇಂಜ್‌ಗೆ ಬರತಕ್ಕಂಥ ಒಂದು ಕಟ್ಟುನಿಟ್ಟಾದ ಆದೇಶವನ್ನು ನೀವು ಪರಿಪಾಲಿಸಿದಾಗ ಪ್ರತಿಯೊಂದು ಕೆ. ಜಿ. ನೂ ಇಲ್ಲಿ ಬಿಕರಿಯಾಗುತ್ತದೆ. ಆಗ ನಮಗೆ ಒಂದೂವರೆ ಎರಡು ಕೋಟಿ ರೂಪಾಯಿ ಶುಲ್ಕ ಸಿಗುತ್ತದೆ. ದಯಮಾಡಿ ತಾವು ಎಚ್ಚರಿಕೆಯಿಂದ ಇರಿ. ದಯವಿಟ್ಟು ಈ ಕೆಲಸವನ್ನು ತಾವು ಮಾಡುತ್ತೀರಿ ಅಂಥ ನಂಬಿದ್ದೇನೆ. ಕಳೆದ ೪ ವರ್ಷಗಳಿಂದ ನೋಡಿದಾಗ ಕಳೆದ ವರ್ಷ ಬಹಳ ಕನಿಷ್ಟವಾಗಿದೆ, ತುಂಬಾ ಕನಿಷ್ಟವಾಗಿದೆ. ದಯಮಾಡಿ ಈ ಒಂದು ಕೆಲಸವನ್ನು ನೀವು ಸಮರ್ಪಕವಾಗಿ ಮಾಡುತ್ತೀರಿ ಎಂದು ನಂಬಿದ್ದೇನೆ. ಈಗ ನನಗೆ ನೀವು ಉತ್ತರ ಕೊಡಬೇಕಾದುದು ಇಷ್ಟು, ರೈತರಿಗೆ ಮನೆ ಕಟ್ಟಿಸುವಂಥ ವಿಷಯ, ಇದು ಒಂದನೆಯದು. ಎರಡನೆಯದು, ಈ ರಫ್ತು ಏನಿದೆ ಇವತ್ತು ಮಾಡತಕ್ಕಂಥ ರಫ್ತು ನೀತಿ ಇದರ ಬಗ್ಗೆ ತಾವು ಕೇಂದ್ರಸರ್ಕಾರದ ಗಮನಕ್ಕೆ ತಂದು ನಮ್ಮ ಕೈಗಾರಿಕೆಯನ್ನು ಒಳ್ಳೆಯ ಸುವ್ಯವಸ್ಥಿತವಾಗಿ ಇಡತಕ್ಕಂಥದು. ಮೂರನೆಯದು, ಈ ಫ್ಲಕ್ಚುಯೇಷನ್ ಫಂಡ್ ಏನು ಇದೆ, ೨೯ ಕೋಟಿ ಅದು ಅಲಾಯಿದ ಇಡತಕ್ಕಂಥ ವ್ಯವಸ್ಥೆ ಮಾಡತಕ್ಕಂಥ ಕೆಲಸ ಮಾಡಬೇಕು. ಹಾಗೆ ಇಲ್ಲದಿದ್ದರೆ ನಮ್ಮ ರೈತರ ಪರವಾಗಿ ನೀವು ಇರುವುದು ಬೇಡ ರಾಜೀನಾಮೆ ಕೊಟ್ಟುಬಿಡಿ. ನಿಮಗೆ ಒಳ್ಳೆಯ ಗೌರವ ಬರುತ್ತದೆ. ದಯಮಾಡಿ ಈ ಕೆಲಸವನ್ನು ತಾವು ಮಾಡಲೇಬೇಕು. ನಾನು ಮಾನ್ಯ ಆತ್ಮಾನಂದ ಈ ಇಲಾಖೆ ಮಂತ್ರಿಗಳು ಆದಾಗ ಕೂಡ ಹೇಳಿದ್ದೇನೆ. ಆದರೆ ಅವರೂ ಮಾಡಿದ ಹಾಗೆ ಕಾಣಲಿಲ್ಲ. ಈಗ ತಮ್ಮ ಕೈಗೆ ಈ ಇಲಾಖೆ ಸಿಕ್ಕಿರುವುದು ಬಹಳ ಒಳ್ಳೆಯದಾಗಿದೆ. ದಯಮಾಡಿ ತಾವು ಅರಿತವರು, ನುರಿತವರು. ಇದಕ್ಕೆ ತಾವು ಉತ್ತರ ಹೇಳಬೇಕು ಮತ್ತು ಟಿ. ನರಸೀಪುರ ಮತ್ತು ಕನಕಪುರ ಕೇಂದ್ರಗಳನ್ನು ಮುಚ್ಚತಕ್ಕಂಥ ವಿಷಯಕ್ಕೆ ತಾವು ಗಮನ ಹರಿಸಬೇಕು. ಇನ್ನು ಇವತ್ತು ಏನು ಬಿತ್ತನೆ ಪ್ರದೇಶ ಇದೆ, ಅದು ಬಹಳ ಕೆಟ್ಟುಹೋಗಿದೆ. ಅಲ್ಲಿಯ ವಾತಾವರಣ ಬಹಳವಾಗಿ ಕೆಟ್ಟುಹೋಗಿದೆ. ಸಾಮೂಹಿಕವಾಗಿ ಬೆಳೆ ಬೆಳೆಯುವುದರಿಂದ ನೀವು ಏನೇ ಮಾಡಿದರೂ ಈ ಗಂಟು ರೋಗವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯವಿಟ್ಟು ನನ್ನ ಸಲಹೆಯನ್ನು ತೆಗೆದುಕೊಳ್ಳಿ. ನೀವು ಇದರಲ್ಲಿ ಯಾವುದೇ ರಾಜಕೀಯವನ್ನು ಬೆರೆಸುವುದು ಬೇಡ. ಯಾರಿಗೂ ನೀವು ಸ್ಲೇವ್ ಆಗುವುದು ಬೇಡ. ನಿಮ್ಮ ಮೇಲೆ ಯಾರೂ ಪ್ರಭಾವ ಬೀರುವುದಕ್ಕಾಗುವುದಿಲ್ಲ. ಮಾಗಡಿ ಮತ್ತು ಕುಣಿಗಲ್‌ನಲ್ಲಿ ಬಿತ್ತನೆಯನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಿ. ರೇಷ್ಮೆ ಬೆಳೆಯನ್ನು ಬೆಳೆಯುತಕ್ಕ ಕೃಷಿಕರ ಬಗ್ಗೆ ನಾವು ಚಿಂತನೆ ಮಾಡಬೇಕೇ ಹೊರತು ಕೇವಲ ಒಂದು ಗ್ರಾಮದ ಬಗ್ಗೆ ಚಿಂತನೆ ಮಾಡತಕ್ಕದ್ದಲ್ಲ; ಅಥವಾ ಇಬ್ಬರು ಎಂ. ಎಲ್. ಎ. ಗಳ ಬಗ್ಗೆ ಚಿಂತನೆ ಮಾಡತಕ್ಕದ್ದಲ್ಲ. ಈ ದೃಷ್ಟಿಯನ್ನು ನಾವು ಇಟ್ಟುಕೊಂಡು ಹೋಗಬೇಕು. ಅವರ ಹಿತದೃಷ್ಟಿಯಿಂದ ತಾವು ಯೋಚನೆ ಮಾಡಿ. ವಾತಾವರಣ ಬಹಳವಾಗಿ ಕೆಟ್ಟುಹೋಗಿದೆ. ಗಂಟು ರೋಗದ ಅಣು ಏಸ್ಟತಕ್ಕದ್ದು

ವಾತಾವರಣದಲ್ಲಿ ಯಾವುದೇ ರೀತಿಯಿಂದ ತಿಂಡಿ, ಆಹಾರ ಇಲ್ಲದೆ ೬ ತಿಂಗಳವರೆಗೂ ಜೀವಿಸಲು ಸಾಧ್ಯವಿದೆ. ನೀವು ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ದಯವಿಟ್ಟು ಬಿತ್ತನೆ ಪ್ರದೇಶವನ್ನು ಬದಲಾವಣೆ ಮಾಡಿ. ಹೋಗಲಿ ಅನುಕೂಲ ಆಗುವಂತೆಯಾದರೂ ಮಾಡಿ. ಬಿ೨, ಬಿ೩ ಬೆಳೆಯುವುದಕ್ಕೆ ಬೇರೆ ಪ್ರದೇಶವನ್ನು ಗೊತ್ತುಮಾಡಿ. ಇದರ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕು. ಪ್ರತಿಯೊಂದು ಬೆಳೆಯನ್ನು ಬೆಳೆದನಂತರ ಔಷಧಿಗಳನ್ನು, ದ್ರಾವಣಗಳನ್ನು ಸಿಂಪಡಿಸತಕ್ಕ ಕೆಲಸಮಾಡಬೇಕು; ಬ್ಲೀಚಿಂಗ್ ಪೌಡರನ್ನು, ಡಯೊಟಿನ್ ೪೫, ಇನ್ನೂ ಮುಂತಾದುವನ್ನು ತಂದು ರೇಷ್ಮೆ ಕೃಷಿಕರು ಉಪಯೋಗ ಮಾಡತಕ್ಕಂಥ ತಟ್ಟೆ, ಬುಟ್ಟಿ, ಮುಂತಾದ ಎಲ್ಲಾ ಉಪಕರಣಗಳನ್ನೂ ನಿಮ್ಮ ಡೆಮಾನ್‌ಸ್ಟ್ರೇಟರ್‌ರವರೇ ನೋಡಿಕೊಳ್ಳಬೇಕು. ಅವನೇ ನಿಂತು ಈ ಕೆಲಸವನ್ನು ಮಾಡಿಸಬೇಕು. ಈ ಜವಾಬ್ದಾರಿಯನ್ನು ಅವನಿಗೆ ವಹಿಸಬೇಕು. ಯಾವುದಾದರೂ ಬೆಳೆ ಕೆಟ್ಟರೆ ಅವನನ್ನೇ ಗುರಿಮಾಡಿ ಅವನ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಿ. ಅವನಿಗೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ೨೫೦ ಕುಟುಂಬಗಳ ಬಗ್ಗೆ ಅವರ ಉಪಕರಣಗಳನ್ನು ಎಂದರೆ ಸೊಪ್ಪು ಕೊಯ್ಯುವ ಚೂರಿಯಿಂದ ಹಿಡಿದು ತಟ್ಟೆ, ಬುಟ್ಟಿ ಮುಂತಾದ ಎಲ್ಲವನ್ನೂ ಕೂಡ ಬೆಳೆ ಬೆಳೆದ ತಕ್ಷಣ ತೆಗೆದುಕೊಂಡು ಹೋಗಿ ಅಲ್ಲಿಡುವಂತೆ ಹೇಳಬೇಕು. ಮಾರುಕಟ್ಟೆಯಲ್ಲಿ ಔಷಧಿಗಳು ಅವನಿಗೆ ಸುಲಭವಾಗಿ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಆಗ ಮಾತ್ರ ಒಳ್ಳೆಯ ಬೆಳೆ ಬೆಳೆಯುವುದಕ್ಕಾಗುತ್ತದೆಂದು ಹೇಳಬಯಸುತ್ತೇನೆ. ದಯವಿಟ್ಟು ಈ ೫ ವಿಷಯಗಳಿಗೆ ಸಂಬಂಧಪಟ್ಟಂತೆ ತಾವು ಉತ್ತರವನ್ನು ಕೊಡಬೇಕು. ತಾವು ಹೆಚ್ಚಿನ ಸಂಶೋಧನೆಯನ್ನು ಮಾಡಿ ಈ ಮಳೆಗಾಲಕ್ಕೆ ಒಗ್ಗತಕ್ಕ ಎಸ್೩೬ ವಿನಿದೆ ಆ ಕಡ್ಡಿಯನ್ನು ಬೆಳೆಸುವಂಥ ಕೆಲಸಮಾಡಬೇಕು. ಯಾವತ್ತೂ ಕೂಡ ೧೦೦ ಕೆ. ಜಿ.ಗಿಂತ ಕಡಿಮೆ ಬರದಂತೆ ನೋಡಿಕೊಳ್ಳಬೇಕು. ನಿಮ್ಮ ಕೆ. ಎಸ್. ಎಂ. ಬಿ. ಸಂಸ್ಥೆ ೨ ಸಾವಿರ ರೂ. ಸಂತೆ ರೇಷ್ಮೆಯನ್ನು ತೆಗೆದುಕೊಂಡು ಅದನ್ನೂ, ಇದನ್ನೂ ಸರಿದೂಗಿಸಿದರೆ ಕೊನೇ ಪಕ್ಷ ನೀವು ೧೦ ಕೋಟಿ ರೂ. ಬಂಡವಾಳ ಕೊಡಬೇಕಾಗುತ್ತದೆ. ನೀವು ಯಾರೂ ಭಿಕ್ಷೆಯನ್ನು ಬೇಡತಕ್ಕದ್ದು ಬೇಡ. ನಮ್ಮ ದುಡ್ಡು ವಿನಿದೆ ಅದರಲ್ಲಿ ೧೦ ಕೋಟಿ ರೂ. ಕೊಡಿ. ಕಡಿಮೆ ಬೆಲೆಯ ರೇಷ್ಮೆಯನ್ನು ತೆಗೆದುಕೊಂಡು ಅದನ್ನೂ ಇದನ್ನೂ ಸರಾಸರಿ ಮಾಡಿ ಕೆ. ಎಸ್. ಎಂ. ಬಿ.ಯ ನಷ್ಟವನ್ನು ಸರಿದೂಗಿಸುವ ಸಮಗ್ರ ಚಿಂತನೆಯನ್ನು ತಾವು ಮಾಡತಕ್ಕದ್ದು ಒಳ್ಳೆಯದು. ನೀವು ಯಾವುದೇ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾದರೆ ಅದರ ರೂಪುರೇಷೆಗಳನ್ನು ಮಾಡತಕ್ಕ ಸಂದರ್ಭದಲ್ಲಿ ಈ ಸದನದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯತಕ್ಕ ಮಾನ್ಯ ಸದಸ್ಯರ ಜೊತೆ ಸಮಾಲೋಚನೆ ಮಾಡಿ ಅವರ ಸಲಹೆಗಳನ್ನು ತೆಗೆದುಕೊಂಡು ಅನಂತರ ತೀರ್ಮಾನ ತೆಗೆದುಕೊಳ್ಳತಕ್ಕದ್ದು ಒಳ್ಳೆಯದು. ಮತ್ತು ೮೦ ಪರ್ಸೆಂಟ್ ರೇಷ್ಮೆ ಕೃಷಿಗೆ ಹೋಗತಕ್ಕ ಕೆಲಸ ಮಾಡಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ, ಮಳವಳ್ಳಿಯಲ್ಲಿ ಒಂದು ಮಾರ್ಕೆಟ್‌ನ್ನು ಕಟ್ಟಿದ್ದೀರಿ. ಅಲ್ಲಿಗೆ ಯಾರೂ ಕೂಡ ೧ ಕೆ. ಜಿ. ಗೂಡನ್ನೂ ಮಾರಾಟಕ್ಕೆ ತೆಗೆದುಕೊಂಡು ಹೋಗಿಲ್ಲ. ಈ ಕಟ್ಟಡಕ್ಕೆ ೭-೮ ಲಕ್ಷ ರೂ ಖರ್ಚು ಮಾಡಿದ್ದೀರಿ. ಇದು ವಿತಕ್ಕೆ? ಅಂಥ ಕಡೆ ನೀವು ಈ ಮಾರ್ಕೆಟ್‌ನ್ನು ಕಟ್ಟಿದ್ದೀರಿ. ಅಲ್ಲಿ ಇವತ್ತು ಕತ್ತೆಗಳು ನಿಂತಿರುತ್ತವೆ. ಇದನ್ನು ಅಲ್ಲಿ ವತಕ್ಕೆ ಕಟ್ಟಬೇಕಾಗಿತ್ತು? ಅಲ್ಲಿ ಯಾರಿಗೂ ಕಾಂಟ್ರ್ಯಾಕ್ಟ್ ಕೊಡಬೇಕಾಗಿತ್ತು, ಕಮಿಷನ್ ತೆಗೆದುಕೊಳ್ಳಬೇಕಾಗಿತ್ತು, ಅದಕ್ಕಾಗಿ ಅಲ್ಲಿ ಮಾರ್ಕೆಟ್‌ನ್ನು ಕಟ್ಟಿಸಿದಿರಿ. ಇದನ್ನೆಲ್ಲಾ ನೀವು ಯೋಚನೆ ಮಾಡುವುದು ಬೇಡವೇ? ನಿಮ್ಮ ಇಲಾಖೆಯಲ್ಲಿ ಇಂಥಾದ್ದು ಬಹಳಷ್ಟು ಕೆಲಸವಾಗಿದೆ. ದಯವಿಟ್ಟು ಇನ್ನು ಮುಂದಾದರೂ ತಿದ್ದಿಕೊಳ್ಳಿ. ಒಳ್ಳೆಯ

ರೀತಿಯಲ್ಲಿ ನಡೆದರೆ ಕೆಲಸ ಮಾಡಿದರೆ ದೇವರು ಒಳ್ಳೆಯದನ್ನು ಮಾಡುತ್ತಾನೆ.

ಶ್ರೀ ಸಿ. ಎಂ. ಲಿಂಗಪ್ಪ:- ತಾವು ಮಳವಳ್ಳಿಯ ಮಾರ್ಕೆಟ್ ಬಗ್ಗೆ ಪ್ರಸ್ತಾಪ ಮಾಡಿದಿರಿ. ಆದರೆ ರಾಮನಗರದಲ್ಲಿ ಅತಿ ಹೆಚ್ಚಿನ ಗೂಡು ಬರುತ್ತಿರುವುದರಿಂದ ಅಲ್ಲಿಗೆ ಇನ್ನೊಂದು ಯೂನಿಟ್ ಹಾಕಿ ಎಂದು ನಾವು ಬೇಡಿಕೊಳ್ಳುತ್ತಿದ್ದೇವೆ. ಇದರ ಬಗ್ಗೆ ಸರ್ಕಾರಕ್ಕೆ ಗಮನವೇ ಇಲ್ಲ. ಎಲ್ಲಿ ಗೂಡು ಬರುವುದಿಲ್ಲ, ಅಲ್ಲಿ ಮಾರ್ಕೆಟ್ ಕಟ್ಟಡವನ್ನು ಕಟ್ಟಿದ್ದಾರೆ.

ಶ್ರೀ ಜಿ. ರಾಜೂಗೌಡ:- ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಶಿವಮೊಗ್ಗದಲ್ಲೂ ಕೂಡ ಐವತ್ತೆಂಟು ಗೂಡು ಮಾರ್ಕೆಟ್‌ಗಳಿವೆ. ೧೩ ಮಾರ್ಕೆಟ್‌ಗಳು ಸರಾಸರಿ ವ್ಯಟೇಜ್ ಕಡಿಮೆ ಇದೆ. ನೀವು ರೈತರಿಗೆ ಉಪಕಾರವಾಗುವಂಥ ಕೆಲಸವನ್ನು ಮೊದಲು ಮಾಡಿ ಅನಂತರ ಕಟ್ಟಡ ಮತ್ತೊಂದು ಮಾಡಿ. ನೀವು ಕೊಠಡಿಗಳನ್ನು ಶೃಂಗಾರ ಮಾಡಿಕೊಳ್ಳತಕ್ಕದ್ದು, ದೊಡ್ಡ ದೊಡ್ಡ ಜಮಖಾನೆಗಳನ್ನು ಹಾಕಿಸಿಕೊಳ್ಳತಕ್ಕದ್ದು ಅನಂತರ, ಮೊದಲು ರೈತನನ್ನು ನೋಡಿ. ಅವನನ್ನು ಚೆನ್ನಾಗಿ ಮಾಡಿ. ಆ ಮೇಲೆ ಅದರ ಪಾಡಿಗೆ ಅದು ಸರಿಹೋಗುತ್ತದೆ. ಇನ್ನು ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಏನು ಮಾಡಬೇಕೆಂಬುದು ತಮಗೆ ಬಿಟ್ಟಿದ್ದು. ಇತ್ತೀಚೆಗೆ ಸ್ಪನ್ ಸಿಲ್ಕ್ ಯೂನಿಟ್ ಚೆನ್ನಪಟ್ಟಣ ಮತ್ತು ಮೈಸೂರು ಸಿಲ್ಕ್ ಟ್ವಿಸ್ಟಿಂಗ್ ಫ್ಯಾಕ್ಟರಿಗಳು ಲಾಭದಾಯಕವಾಗಿ ಕೆಲಸ ಮಾಡುತ್ತಿವೆ ಎಂದು ಕೇಳಿದ್ದೇನೆ, ಆದರೆ ನಾನು ಅವನ್ನು ಕಣ್ಣಾರೆ ನೋಡಿಲ್ಲ. ದಯವಿಟ್ಟು ಇದಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಕು. ಮುಧೋಳ್‌ನಲ್ಲಿರತಕ್ಕಂಥ ಸಿಲ್ಕ್ ವೀವಿಂಗ್ ಫ್ಯಾಕ್ಟರಿಯಲ್ಲಿರತಕ್ಕ ಕಾರ್ಮಿಕರು ಬಹಳ ತೊಂದರೆಪಡುತ್ತಿದ್ದಾರೆ. ರೇಷ್ಮೆಯಲ್ಲಿ ಎಷ್ಟೇ ನಷ್ಟವಾದರೂ ಚಿಂತೆಯಿಲ್ಲ; ಕಾರ್ಮಿಕರ ಹಿತಚಿಂತನೆಯಿಂದ ತಾವು ಅವರಿಗೆ ಸದಾಕಾಲ ಕೆಲಸವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ಮತ್ತೆ ಲೇ ಆಫ್ ಮಾಡುತ್ತೇವೆಂದು ಹೇಳತಕ್ಕಂಥದ್ದು ಹಾಗೂ ತಿಳುವಳಿಕೆ ಪತ್ರವನ್ನು ಕೊಡತಕ್ಕಂಥದ್ದು ಸರಿಯಲ್ಲ. ದಯವಿಟ್ಟು ಹೊಸ ಯಂತ್ರಗಳನ್ನು ಜೋಡಿಸಿ. ಕೊಳ್ಳೆಗಾಲದಲ್ಲಿರತಕ್ಕಂಥ ರೇಷ್ಮೆ ಕಾರ್ಖಾನೆಯಲ್ಲಿ ಅನೇಕ ವರ್ಷಗಳಿಂದ ಅಲ್ಲಿಯ ಮಿಷನ್‌ಗಳು ಕೆಟ್ಟು ನಿಂತಿವೆ. ಅದೆಲ್ಲಾ ಹಳೆಯಕಾಲದ ಮಿಷನರಿಗಳು. ದಯವಿಟ್ಟು ಅಲ್ಲಿ ಹೊಸ ಯಂತ್ರಗಳನ್ನು ಅಳವಡಿಸಿ. ಒಳ್ಳೆಯ ಯುವಕರನ್ನು ತೆಗೆದುಕೊಂಡು ಕೆಲಸ ಮಾಡಿಸಿದರೆ ಉತ್ಕೃಷ್ಟವಾಗಿರತಕ್ಕಂಥ ರೇಷ್ಮೆಯನ್ನು ತಯಾರು ಮಾಡುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಿದಾಗ ಎಷ್ಟೋ ಮಂದಿ ಗ್ರಾಮಾಂತರ ಪ್ರದೇಶದ ಯುವಕರಿಗೆ ಅದರಿಂದ ಅನುಕೂಲವಾಗುತ್ತದೆ. ಒಂದು ಕಾಮನ್ ರೀಲಿಂಗ್ ಸೆಂಟರ್ ಮಾಡಿರಿ ಎಂದು ನಾನು ಅನೇಕ ಸಲ ಹೇಳಿದ್ದೇನೆ. ಈ ರೇಷ್ಮೆಯಲ್ಲಿ ಮಾಸ್ಟರ್ ರೀಲರ್ ಎಂದು ಯಾರು ಇದ್ದಾರೆ, ಆ ಮಾಸ್ಟರ್ ಕೈಕೆಳಗೆ ಇರತಕ್ಕಂಥ ರೀಲರು ಯಾರು ಇದ್ದಾನೆ ಅವನು ತನ್ನ ಸ್ವಂತ ಬಂಡವಾಳದಲ್ಲಿ ನಡೆಸುತ್ತಾನೆ. ತಾನೇ ರೇಷ್ಮೆಯನ್ನು ಕೊಂಡು ಕೊಳ್ಳುವುದಕ್ಕೆ ಮತ್ತು ಅಲ್ಲಿರತಕ್ಕಂಥಹವರಿಗೆ ೨-೩ ಕೆ. ಜಿ. ರೇಷ್ಮೆಯನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿದರೆ ಗ್ರಾಮಾಂತರ ಪ್ರದೇಶದ ಜನರಿಗೆ ಬಹಳ ಒಳ್ಳೆಯದಾಗುತ್ತದೆ. ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ರೇಷ್ಮೆ ಮಂತ್ರಿಗಳಾಗಿದ್ದಾಗ ಏನಾಯಿತೆಂದರೆ ರೀಲರ್ಸ್ ಎಲ್ಲಾ ಸ್ಟ್ರೈಕ್ ಮಾಡಿಬಿಟ್ಟರು. ಆಗ ನೀವು ನೂರು ರೂಪಾಯಿಗೆ ಹೋಗಿ ನೂರ ಹತ್ತು ರೂಪಾಯಿಗೆ ತೆಗೆದುಕೊಂಡು ಸ್ಟಾಕ್ ಮಾಡಿದಿರಿ. ಒಂದು ರೂಪಾಯಿ ಲಾಭ ಕೂಡ ಇದರಿಂದ ನಿಮಗೆ ಸಿಗಲಿಲ್ಲ. ಕೋಟ್ಯಾಂತರ ರೂಪಾಯಿ ನಷ್ಟವಾಯಿತು. ಅದಕ್ಕೆ ನಾನು ಹೇಳುವುದು ಏನೆಂದರೆ, ಮಾಸ್ಟರ್ ರೀಲರನ್ನು ನೀವು ಪ್ರಬಲ

ಮಾಡುವ ಬದಲು ಸಣ್ಣಸಣ್ಣ ರೀಲರುಗಳೇನಿದ್ದಾರೆ, ಅವರಿಗೆ ಉತ್ತೇಜನ ಕೊಡಿ. ಅವರು ಸ್ಟ್ರೈಕ್ ಮಾಡುವುದಿಲ್ಲ ಏನೂ ಮಾಡುವುದಿಲ್ಲ. ಒಳ್ಳೆಯ ರೀತಿಯಲ್ಲಿ ರೇಷ್ಮೆ ತೆಗೆದುಕೊಳ್ಳುತ್ತಾರೆ. ನಾನು ತಮ್ಮ ಮುಖಾಂತರವಾಗಿ ಕರ್ನಾಟಕ ಸಿಲ್ಕ್ ವರ್ಮ್ ಫೈನಾನ್ಸ್ ಕಾರ್ಪೊರೇಷನ್‌ನವರ ಮುಖಾಂತರ ಒಂದು ಯೋಜನೆ ತಯಾರು ಮಾಡಿ ೫೦೦ ಪರಿಶಿಷ್ಟ ಜಾತಿಯವರಿಗೆ ಎರಡೆರಡು ಚರಕಗಳನ್ನು ಇಟ್ಟುಕೊಳ್ಳಲು ಮತ್ತು ಅದಕ್ಕೆ ದುಡಿಮೆ ಬಂಡವಾಳವೆಂದು ಕೊಡತಕ್ಕಂಥದ್ದು ಅಂತ ಎಲ್ಲವನ್ನೂ ನಾವು ಮಾಡಿದಾಗ ಹೆಚ್ಚಿನ ಅನುಕೂಲವಾಗುತ್ತದೆ. ಈ ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್‌ನವರು ಯಾರಿಗೆ ಸಹಾಯ ಕೊಡುತ್ತಾರೆಂದರೆ ಕಲ್ಲು ಕೊಯ್ಯುವವರಿಗೆ ಕೊಡುತ್ತಾರೆ. ಏತಕ್ಕೆಂದರೆ ಕಮಿಷನ್ ಸಿಗುತ್ತದೆ. ನನ್ನಂಥ ಬಡವರಿಗೆ ಕೊಟ್ಟರೆ ಏನು ಕಮಿಷನ್ ಸಿಗುತ್ತದೆ? ಸುಮಾರು ೫೦೦ ಜನರಿಗೆ ಕೊಟ್ಟಿದ್ದಾರೆ. ಎರಡೂವರೆ ಸಾವಿರ ಗ್ರಾಮಾಂತರ ಪ್ರದೇಶದ ಜನರಿಗೆ ಸಿಗುವಂಥ ಕೆಲಸ ಇವರು ಮಾಡಲಿಲ್ಲ. ಒಂದು ದೊಡ್ಡ ಕಲ್ಲು ಕೊರೆಯುವ ಮಿಷನ್‌ನ್ನು ಕೊಟ್ಟರೆ ಅಲ್ಲಿ ೮ ಜನ ಕೆಲಸ ಮಾಡುತ್ತಾರೆ. ಆದರೆ ಇದು ಅತ್ಯಂತ ಕಡಿಮೆ ಬಂಡವಾಳದ್ದು, ಅದೇ ಹಣವನ್ನು ಇವರಿಗೆ ಕೊಟ್ಟರೆ ಅದರಿಂದ ಬಹಳ ಹೆಚ್ಚಿನ ಗ್ರಾಮಾಂತರ ಜನರಿಗೆ ಪ್ರಯೋಜನವಾಗುತ್ತದೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಪರಿಶಿಷ್ಟ ಜಾತಿಯವರಿಗೆ ರೇಷ್ಮೆ ವ್ಯವಸಾಯದಲ್ಲಿ ತೊಡಗಿಸಲು ವ್ಯವಸ್ಥೆಯನ್ನು ಮಾಡಿ ತನ್ಮೂಲಕ ಹೆಚ್ಚಿನ ರೇಷ್ಮೆಯನ್ನು ಉತ್ಪಾದನೆ ಮಾಡಿದರೆ ಅದರಿಂದ ಅವನ ಹೆಂಡತಿ ಮಕ್ಕಳಿಗೆ ಕೂಡ ಅಲ್ಲಿ ಕೆಲಸ ಸಿಗುತ್ತದೆ. ಅವನು ಸ್ವಂತ ತನ್ನ ಕಾಲಮೇಲೆ ನಿಂತು ಬದುಕಲು ಸಾಧ್ಯವಾಗುತ್ತದೆ. ದಯಮಾಡಿ ಇಂಥ ಒಂದು ವ್ಯವಸ್ಥೆಯನ್ನು ಮಾಡಿ ಎಂದು ಹೇಳಿ ನಾನು ಬಹಳ ದಿವಸದಿಂದ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಆ ಕಡೆಗೆ ಇನ್ನೂ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ಸಾಲವನ್ನು ಕೊಟ್ಟಲ್ಲಿ ವಸೂಲಾಗುವುದಿಲ್ಲವೆಂದು ಹೇಳುತ್ತೀರಿ. ಏನು ಸ್ವಾಮಿ, ಎರಡು ಸಾವಿರ ಕೊಟ್ಟರೆ ಏನಾಗಿಬಿಡುತ್ತದೆ? ಜನ ಒಂದೊಂದು ಕೈಗಾರಿಕೆಯಲ್ಲಿ ೨೦ ಲಕ್ಷ ೩೦ ಲಕ್ಷ ರೂಪಾಯಿಗಳನ್ನು ಕೊಟ್ಟು ನಷ್ಟ ಮಾಡಿದ್ದಾರೆ. ೫ ಸಾವಿರ ರೂಪಾಯಿಯನ್ನು ಒಬ್ಬ ಸಣ್ಣ ರೈತನಿಗೆ ಕೊಟ್ಟರೆ ಆಗುವುದಿಲ್ಲವೇ? ತಿಂದು ಕೊಳ್ಳಲಿ ಬಿಡಿ. ಅವನು ದುಡಿದು ವಾಪಸ್ ಕೊಡುತ್ತಾನೆ. ಅಷ್ಟು ಸಂಶಯ ಬೇಡ. ಆದರೆ ಯೋಜನೆಯನ್ನು ತಾವು ಮಾಡತಕ್ಕಂಥ ಕೆಲಸ ಮಾಡಿದರೆ ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ಹೆಚ್ಚಿನ ಉದ್ಯೋಗ ಕೊಟ್ಟಂತಾಗುತ್ತದೆ. ಹೆಚ್ಚಿನ ರೇಷ್ಮೆಯನ್ನು ಉತ್ಪಾದನೆ ಮಾಡಿದಂತಾಗುತ್ತದೆ. ಆ ಬಡವರಿಗೆ ಸ್ವಂತ ಕಾಲಮೇಲೆ ನಿಂತುಕೊಳ್ಳತಕ್ಕಂಥ ಒಂದು ಶಕ್ತಿಯನ್ನು ತುಂಬಿದಂತಾಗುತ್ತದೆ. ದಯವಿಟ್ಟು ಈ ವಿಷಯದಲ್ಲಿ ಹೆಚ್ಚಿನ ಮುತುವರ್ಜಿವಹಿಸಿ ಕೆಲಸ ಮಾಡಬೇಕೆಂದು ನಾನು ಕೇಳಿಕೊಂಡು ಈಗ ರೋಗರಹಿತವಾಗಿರತಕ್ಕಂಥ ಬಿತ್ತನೆ ಮೊಟ್ಟೆಗಳ ಬಗ್ಗೆ ಸಾಕಷ್ಟು ಗಮನ ವಹಿಸಿ ತಾವು ಸರಬರಾಜು ಮಾಡುತ್ತಿದ್ದೀರಿ, ಇನ್ನೂ ಹೆಚ್ಚಿನ ಗುಣಮಟ್ಟದ್ದು ತಾವು ಕೊಡಬೇಕು. ಪ್ರತಿಯೊಂದು ಸಂದರ್ಭದಲ್ಲೂ ಪರೀಕ್ಷೆ ಮಾಡಿ ಕೊಡಬೇಕು. ತಮ್ಮ ವಿಸ್ತರಣಾಧಿಕಾರಿಗಳು ಮುದ್ರೆ ಒತ್ತುತ್ತಾರೆ. ಇದು ರೋಗರಹಿತವಾಗಿದೆ ಎಂದು ಹೇಳಿ ಅಲ್ಲಿ ಹೋದರೆ ರೋಗತಗಲಿರುತ್ತದೆ. ದಯವಿಟ್ಟು ಆ ಒಂದು ಕೆಲಸ ಮಾಡತಕ್ಕಂಥದ್ದು ಬೇಡ. ನೀವು ಈ ಒಂದು ಒಳ್ಳೆಯ ಬೆಳೆಗೆ ಹೆಚ್ಚಿನ ಒಂದು ಆದ್ಯತೆಯನ್ನು ಕೊಡಬೇಕು. ಈ ಬೆಳೆಯನ್ನು ಹೆಚ್ಚಿನ ಜನ ಅವಲಂಬಿಸಬೇಕಾದರೆ ವಿಮೆಯನ್ನು ಜಾರಿಗೆ ತರತಕ್ಕಂಥ ಯೋಜನೆಯನ್ನು ಮಾಡಬೇಕು. ಯಾವ ರೈತ ಗೂಡನ್ನು ಬೆಳೆಯುತ್ತಾನೆ ಅದು ನಮ್ಮ ಬಿತ್ತನೆ ಮೊಟ್ಟೆಯ ದೋಷದಿಂದ ಆ ಬೆಳೆ ಹಾಳಾದಾಗ ಆತನಿಗೆ ನಷ್ಟವನ್ನು ತುಂಬಿಕೊಡತಕ್ಕಂಥ ಒಂದು ಯೋಜನೆಯನ್ನು ತಯಾರು ಮಾಡತಕ್ಕಂಥ ಕೆಲಸ ಮಾಡಬೇಕು.

ಅವನ ಕೈಯಾರೆ ಹೋದರೆ ಹೋಗಲಿ. ಆದರೆ ತಮ್ಮ ಬಿತ್ತನೆ ಮೊಟ್ಟೆಯೇ ದೋಷದಿಂದ ಹೋದಾಗ ದಯವಿಟ್ಟು ಆತನಿಗೆ ಏನು ನಷ್ಟವಾಗಿದೆ ಆ ನಷ್ಟವನ್ನು ತುಂಬತಕ್ಕಂಥ ಒಂದು ಬೆಳೆ ವಿಮಾ ಯೋಜನೆಯನ್ನು ತಮ್ಮ ಕಾಲದಲ್ಲಿ ತಂದರೆ ಇನ್ನೂ ಹೆಚ್ಚಿನ ರೈತರಿಗೆ ಉತ್ತೇಜನವನ್ನು ಕೊಟ್ಟಂತಾಗುತ್ತದೆ. ದಯವಿಟ್ಟು ಈ ಒಂದು ಕೆಲಸವನ್ನು ಮಾಡಬೇಕೆಂದು ಹೇಳಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅತಿ ಮುಖ್ಯವಾಗಿರತಕ್ಕಂಥದ್ದು ನಿಮ್ಮ ಇಲಾಖೆ. ಅದು ವರ್ಟಿಕಲ್ ಆಗಿ ಬೆಳೆದಿದೆಯೇ ಹೊರತು ಅಗಲವಾಗಿ ಬೆಳೆದಿಲ್ಲ. ಹೊಸ ವರ್ಷದಲ್ಲಿ ಹೆಚ್ಚಿನ ಮಟ್ಟದಲ್ಲಿ ಕಡ್ಡಿ ಹಾಕಿಲ್ಲ. ನಾನು ಹೇಳುತ್ತಿದ್ದೇನೆ ಒಬ್ಬ ಡೈರೆಕ್ಟರು ಇದ್ದಾರೆ. ೧ಂಜನ ಜಾಯಿಂಟ್ ಡೈರೆಕ್ಟರ್ ಇದ್ದಾರೆ. ಯಾರು ಹೆಚ್ಚಿನ ಅನುಭವ ಇರತಕ್ಕಂಥಹವರು ಇರುತ್ತಾರೋ ಅಂಥಹವರಲ್ಲಿ ಒಬ್ಬರನ್ನು ಅಡಿಷನಲ್ ಡೈರೆಕ್ಟರ್ ಮಾಡಿ. ಅಭಿವೃದ್ಧಿ ಕಡೆಗೆ ಒಬ್ಬರನ್ನು ಇಡಿ. ಬೇರೆ ಕಡೆಗ ಇನ್ನೊಬ್ಬರನ್ನು ಇಡಿ. ಅವರು ಅದನ್ನು ನೋಡಿಕೊಳ್ಳಲಿ ಎಂದು ಹೇಳುತ್ತೇನೆ. ನಿಮ್ಮ ಇಲಾಖೆಗೇ ಒಂದು ಡೈರೆಕ್ಟರೇಟ್‌ಅನ್ನು ಎಲ್ಲಿಯವರೆಗೆ ಮಾಡುವುದಿಲ್ಲವೋ ಅಲ್ಲಿಯವರೆಗೆ ನಿಮಗೆ ಆದ್ಯತೆ ಇಲ್ಲ. ಸಾವಿರಾರು ಕೋಟಿ ವಿದೇಶಿ ವಿನಿಮಯ ಗಳಿಸತಕ್ಕಂಥ ನಿಮ್ಮ ಇಲಾಖೆಯನ್ನು ಕೈಗಾರಿಕೆ ಇಲಾಖೆಯ ಪುಸ್ತಕದಲ್ಲಿ ೨-೩ ಪುಟ ಬರೆದಿದ್ದೀರಲ್ಲಾ, ನನಗೆ ನಾಚಿಕೆಯಾಗುತ್ತದೆ. ಇಂಥ ಕೈಗಾರಿಕೆಯನ್ನು ಕೈಗಾರಿಕಾ ವರದಿಯ ಮಧ್ಯೆ ೧೫ರಿಂದ ೧೮ನೇ ಪೇಜಿನಲ್ಲಿ ರೇಷ್ಮೆ ಕೈಗಾರಿಕೆ ಎಂದು ಕೊಟ್ಟಿದ್ದಾರಲ್ಲಾ ಇದರಿಂದ ನಾನು ಅಳಬೇಕೋ ಏನು ಮಾಡಬೇಕೋ ಗೊತ್ತಿಲ್ಲ. ಬೇರೆ ಒಂದು ವಾರ್ಷಿಕ ವರದಿಯನ್ನು ಕೊಡಬೇಕಾಗಿತ್ತು. ಈ ಬಾರಿ ಏತಕ್ಕೆ ಮಾಡಲಿಲ್ಲ? ನೀವು ಸೆಪರೇಟ್ ಡೈರೆಕ್ಟರೇಟ್ ಮಾಡಿ. ಈಗಿರತಕ್ಕಂಥ ಡೈರೆಕ್ಟರ್ ಅವರು ಬಹಳ ಉತ್ತಮವಾಗಿರತಕ್ಕಂಥಹವರು. ಬಹಳ ಹೆಚ್ಚಿನ ಅನುಭವಿಗಳು; ಒಳ್ಳೆಯವರು ಎಲ್ಲಾ ವಿಧದಲ್ಲೂ ರೈತರನ್ನು ಕಾಪಾಡಬೇಕೆಂದು ದೃಷ್ಟಿಯುಳ್ಳವರಾಗಿದ್ದಾರೆ. ನಾನು ಅವರನ್ನು ಬಹಳ ಮೆಚ್ಚುತ್ತೇನೆ. ನಿಮ್ಮ ಇಲಾಖೆಗೆ ಪ್ರತ್ಯೇಕ ಸೆಕ್ರೆಟರಿ ಮಾಡಿ. ಸೆಪರೇಟ್ ಇಲಾಖೆ ಮಾಡಿ. ಕೈಗಾರಿಕಾ ಇಲಾಖೆಯ ಸೆಕ್ರೆಟರಿಯವರು ಏಕೆ ನಿಮ್ಮ ಇಲಾಖೆಯ ಸೆಕ್ರೆಟರಿ ಆಗಿರಬೇಕು? ಪ್ರತ್ಯೇಕ ಸೆಕ್ರೆಟರಿ ಮಾಡಿದರೆ ಹೆಚ್ಚಿನ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಈಗ ಇರತಕ್ಕ ಕಮಿಷನರ್ ಅಂಡ್ ಸೆಕ್ರೆಟರಿ ಇರಲಿ. ಅವರ ಜೊತೆಗೆ ಇನ್ನೊಬ್ಬರು ಸೆಕ್ರೆಟರಿಯವರನ್ನು ನಿಮ್ಮ ಇಲಾಖೆಗೆ ನೇಮಕ ಮಾಡಿ ಯಾವ ಯಾವ ಹಂತದಲ್ಲಿ ರೇಷ್ಮೆ ಅಭಿವೃದ್ಧಿಪಡಿಸಬೇಕೆಂಬುದನ್ನು ಸಮಗ್ರವಾಗಿ ಚಿಂತನೆ ಮಾಡಿ, ದೇಶದಲ್ಲಿರತಕ್ಕ ಈ ಒಂದು ಕೈಗಾರಿಕೆ ಏನಿದೆ ಇದರಲ್ಲಿ ೧೩ ಸಾವಿರ ಟನ್ ಗುರಿ ಮುಟ್ಟಬೇಕು. ೮ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೬ ಸಾವಿರ ಟನ್ ರೇಷ್ಮೆ ಉತ್ಪಾದನೆ ನಮ್ಮ ರಾಜ್ಯದಲ್ಲಿ ಆಗಬೇಕು. ಈ ದಿಸೆಯಲ್ಲಿ ಏನೇನು ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದರ ಬಗ್ಗೆ ನೀವು ಚಿಂತನೆ ಮಾಡಬೇಕು. ದಯಮಾಡಿ ಆ ಕೆಲಸವನ್ನು ನೀವು ಮಾಡಬೇಕು. ಈ ರಾಜ್ಯದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಒಂದು ಕೋಟಿ ೩ ಲಕ್ಷದ ೬೯ ಸಾವಿರ ಹೆಕ್ಟೇರ್ ಇದೆ. ಆದರಲ್ಲಿ ಶೇಕಡ ಒಂದರಷ್ಟು ಭೂಮಿಯಲ್ಲಿ ಹಿಪ್ಪನೇರಳೆ ಕಡ್ಡಿ ಹಾಕಿದಾಗ ೧೫ ಸಾವಿರ ಟನ್ ರೇಷ್ಮೆಯನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕನಿಷ್ಠ ಶೇಕಡ ಒಂದರಷ್ಟಾದರೂ ಭೂಮಿಯನ್ನು ಈ ವ್ಯವಸಾಯಕ್ಕೆ ತೆಗೆದುಕೊಳ್ಳಿ. ಒಳ್ಳೆಯ ಫಲಪ್ರದ ಕೃಷಿ ಮಾಡಿ. ಬೆಳೆದ ಮಾಲನ್ನು ಮಾರುಕಟ್ಟೆಗೆ ಬಿಡಿ. ಈಗ ತೋಟಗಾರಿಕೆಯಲ್ಲಿ ಎಲ್ಲವೂ ಕೂಡ ನಷ್ಟವಾಗಿದೆ. ಆದುದರಿಂದ ಅದನ್ನು ಇಂಪ್ರೂವ್ ಮಾಡತಕ್ಕ ವ್ಯವಸ್ಥೆ ಮಾಡಬೇಕು. ಆಮೂಲಾಗ್ರವಾಗಿ ಅಡಿಯಿಂದ ಮುಡಿಯವರೆಗೆ ಎಲೆಲ್ಲಿ ಲೋಪ ದೋಷ ಇದೆ ಅದನ್ನು ನಿವಾರಣೆ

ಮಾಡಿ ಪ್ರತಿಯೊಬ್ಬ ರೈತನಿಗೆ ಕಡ್ಡಿ ಹಾಕುವಂತೆ ಮಾಡಬೇಕು. ರಾಜ್ಯದ ಕೈಗಾರಿಕಾ ಹಿತದೃಷ್ಟಿಯಿಂದ ಏನು ಬಿತ್ತನೆ ಪ್ರದೇಶ ಇದೆ ಅದನ್ನು ಬೇರೆ ಮಾಡಲೇ ಬೇಕೆಂದು ಆಗ್ರಹಪಡಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಈಗ ಶಿವರಾಮೇಗೌಡರು ಹತ್ತು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಎಲ್. ಆರ್. ಶಿವರಾಮೇಗೌಡ:- ಹತ್ತು ನಿಮಿಷಗಳಲ್ಲಿ ಮಾತನಾಡಿ ಎಂದರೆ ಹೇಗೆ ಮಾತನಾಡಬೇಕು? ನಾನು ಮಾತನಾಡುವುದಿಲ್ಲ, ಬೇರೆಯವರ ಕೈಯಲ್ಲಿ ಮಾತನಾಡಿಸಿ.

ಛೇರ್ಮನ್:- ಲಿಸ್ಟ್‌ನಲ್ಲಿ ಇನ್ನೂ ೨೮ ಜನರಿದ್ದಾರೆ. ನೀವೇನು ಎಲ್ಲದರ ಮೇಲೂ ಮಾತನಾಡಬೇಕೇ?

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಮಾನ್ಯ ಅಧ್ಯಕ್ಷಿಣಿಯವರೇ, ಅದಕ್ಕೋಸ್ಕರ ಬೇರೆಯವರಿಗೆ ತೊಂದರೆಯಾಗಬಾರದೆಂದು ಈ ಹಿಂದಿನ ೩ ಬೇಡಿಕೆಗಳ ಮೇಲೆ ನಾನು ಮಾತನಾಡಲಿಲ್ಲ. ಇದೊಂದಕ್ಕೆ ಅವಕಾಶ ಕೊಡಿ, ಬೇರೆ ಯಾವುದಕ್ಕೂ ಬೇಡ. ಮಾನ್ಯ ಕೈಗಾರಿಕಾ ಸಚಿವರು, ಸಣ್ಣ ಕೈಗಾರಿಕಾ ಸಚಿವರು, ರೇಷ್ಮೆ ಸಚಿವರು ಮತ್ತು ಮೈನ್ಸ್ ಅಂಡ್ ಜಿಯಾಲಜಿ ಸಚಿವರು, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ಬೆಂಬಲಿಸಿ, ಕೈಗಾರಿಕೆ ಮೇಲೆ ಮಾತ್ರ ನಾನು ಮಾತನಾಡಲಿಕ್ಕೆ ಬಯಸುತ್ತೇನೆ. ಇವತ್ತು ಕೈಗಾರಿಕೆಗಳ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಚಿಂತಾಜನಕವಾಗಿದೆ ಎಂದರೆ ತಪ್ಪಾಗುವುದಿಲ್ಲ. ಈ ರಾಜ್ಯದಲ್ಲಿ ಕೈಗಾರಿಕೆಗಳ ಬಗ್ಗೆ ಮುಂದೆಯಾದರೂ ಜಾಗೃತರಾಗಿರಬೇಕೆಂಬ ಅಭಿಲಾಷೆ ನಮ್ಮವರಿಗೆ ಇದ್ದರೆ ಶ್ರೀಮತಿ ಮನೋರಮ ಮಧ್ವರಾಜ್ ಅವರು, ಶ್ರೀ ರಾಮಪ್ಪನವರು ಮತ್ತು ಶ್ರೀ ನಜೀರ್ ಅಹಮದ್‌ರವರು ಈ ಮೂರೂ ಜನ ಒಂದೇ ದಿಕ್ಕಿನಲ್ಲಿ ಹೋಗಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮೂರು ಜನ ಒಂದೇ ದಿಕ್ಕಿನಲ್ಲಿ ಹೋಗದಿದ್ದರೆ ರಾಜ್ಯದ ಕೈಗಾರಿಕೆಗಳು ಬೆಳೆಯುವುದಿಲ್ಲವೆಂದು ನನ್ನ ಅನಿಸಿಕೆ. ಏಕೆಂದರೆ ಇದೊಂದು ಚೈನ್ ಸಿಸ್ಟಂ ಇದ್ದ ಹಾಗೆ. ರಾಜ್ಯದಲ್ಲಿರತಕ್ಕ ಕೈಗಾರಿಕೆಗಳು ನಡೆಯಬೇಕಾದರೆ ಎಷ್ಟು ಕಷ್ಟ ಪಡುತ್ತಿವೆ ಎಂದರೆ ವಿದ್ಯುಚ್ಛಕ್ತಿ ಇಲ್ಲದೆ ಪಡಬಾರದ ಕಷ್ಟ ಪಡುತ್ತಿವೆ. ಗ್ರಾಮಾಂತರ ಪ್ರದೇಶದ ಕೈಗಾರಿಕೆಗಳು ಬೆಳೆಯುವುದಕ್ಕಾಗುವುದಿಲ್ಲ. ಈ ನಿಟ್ಟಿನಲ್ಲಿ ಮೂರು ಜನ ಮಂತ್ರಿಗಳು ಒಂದು ಕಡೆ ಸೇರಿ ಕೈಗಾರಿಕೆಗಳು ಬೆಳೆಯುವುದಕ್ಕೆ ಏನು ಸಹಕಾರ ನೀಡಬೇಕೆಂದು ಚಿಂತನೆ ಮಾಡದಿದ್ದರೆ ಕೈಗಾರಿಕೆಗಳು ಮುಂದೆ ಬರುವುದಕ್ಕಾಗುವುದಿಲ್ಲವೆಂದು ಚಿಂತನೆ ಮಾಡದಿದ್ದರೆ ಕೈಗಾರಿಕೆಗಳು ಮುಂದೆ ಬರುವುದಕ್ಕಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಒಂದು ಕೈಗಾರಿಕೆ ನಡೆಯಬೇಕಾಗಿದ್ದರೆ ಕಚ್ಚಾಮಾಲು, ದುಡಿಮೆ ಬಂಡವಾಳ, ವಿದ್ಯುಚ್ಛಕ್ತಿ, ಟೆಕ್ನಾಲಜಿ ಇವು ಬಹಳ ಪ್ರಾಮುಖ್ಯವಾಗಿರತಕ್ಕ ವಿಚಾರಗಳು. ಇವತ್ತು ಇವುಗಳಲ್ಲಿ ಯಾವುದು ಎಡವಿದರೂ ಆ ಕೈಗಾರಿಕೆ ಮುಂದುವರಿಯುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಕೆ. ಎಸ್. ಎಫ್. ಸಿ. ರಾಜ್ಯದಲ್ಲಿ ಇದೆ, ಐ. ಡಿ. ಬಿ. ಐ. ಇದೆ. ಸಾಲ ಕೊಡುತ್ತಾರೆ ಚೆನ್ನಾಗಿ. ಕೆ. ಎಸ್. ಎಫ್. ಸಿ.ಯಲ್ಲಿ ಸಾಲ ಕೊಡುವುದರಲ್ಲಿ ತಮ್ಮ ಕಾಲದಲ್ಲಿ ಏನೂ ಅಡ್ಡಿ ಇಲ್ಲ. ಎಷ್ಟು ಕೇಳಿದರೂ ಸಾಲ ಬರುತ್ತದೆ. ಕಾಸಿನ ಬಡ್ಡಿಗೆ ಹಣ ಕೊಡುತ್ತಾನಲ್ಲಾ ಹಳ್ಳಿ ಕಡೆ ಚೆನ್ನಾಗಿ ಬಡ್ಡಿ ಕೊಡುತ್ತಾರೆ ಅಂದರೆ ಹಾಗೆ ಕ್ಲೀನಾಗಿ ಕೊಡುತ್ತಾರೆ. ಬಡ್ಡಿ ಹಾಕಿ ವಸೂಲು ಮಾಡುತ್ತಾರೆ. ಕೆ. ಎಸ್. ಎಫ್. ಸಿ. ಚೆನ್ನಾಗಿ ಸಾಲ ಕೊಡುತ್ತಿದೆ. ಅದರಲ್ಲಿ ಅನುಮಾನ ಇಲ್ಲ. ಅವರು ಹಣ ಕೊಟ್ಟ ಮೇಲೆ

ಯಾರಾದರೂ ಸಾಲ ಸರಿಯಾಗಿ ಕೊಡದೇಹೋದರೆ ಬೀಗ ಹಾಕತಕ್ಕ ವ್ಯವಸ್ಥೆ ಇದೆ. ಇದನ್ನು ದಯಮಾಡಿ ನಿಮ್ಮ ಕಾಲದಲ್ಲಿ ತಪ್ಪಿಸಬೇಕು. ಇವತ್ತು ಉದಾಹರಣೆ ಕೊಡುತ್ತೇನೆ ನಿಮಗೆ. ಸದ್ದಾಂ ಹುಸೇನರು ಇರಾನ್ ಅಧ್ಯಕ್ಷರಾಗಿದ್ದಾಗ ಯುದ್ಧ ನಡೆಯಿತು. ಒಂದು ಕೈಗಾರಿಕೆಗೆ ೧೪ ಲಕ್ಷ ರೂಪಾಯಿ ಕೆ. ಎಸ್. ಎಫ್. ಸಿ. ಯಿಂದ ಸಾಲ ಕೊಟ್ಟಿದ್ದಾರೆ. ೧೪ ಲಕ್ಷ ರೂಪಾಯಿ ತೆಗೆದುಕೊಂಡಿರತಕ್ಕ ಮಾಲೀಕ ದುಡ್ಡು ತಿಂದಿಲ್ಲ. ಕಚ್ಚಾಮಾಲು ಇರಾನ್‌ನಿಂದ ಬರಬೇಕಾಗಿತ್ತು. ಯುದ್ಧ ನಡೆಯಿತು. ಕಚ್ಚಾಮಾಲು ಬರಲಿಲ್ಲ. ಇವತ್ತು ಆ ಫ್ಯಾಕ್ಟರಿ ಸಿಕ್ ಆಗಿದೆ ಎಂದು ಬಾಗಿಲು ಹಾಕಿದ್ದೀರಿ. ಅದನ್ನು ಹರಾಜು ಹಾಕುತ್ತಿದ್ದಾರೆ. ಇಂಥ ವಿಚಾರಗಳನ್ನು ವಿಮರ್ಶೆ ಮಾಡದೇ ಹೋದರೆ ಬಹುಶಃ ಇವತ್ತು ಎಷ್ಟು ಜನ ಕೈಗಾರಿಕೆ ಹಾಕಿ ಕೈ ಸುಟ್ಟುಕೊಳ್ಳತಕ್ಕ ಪರಿಸ್ಥಿತಿ ದೂರ ಇಲ್ಲ. ಇದಕ್ಕೆ ಅವಕಾಶ ಆಗಬಾರದು. ಯಾವ ಪ್ರಮಾಣದಲ್ಲಿ ಪ್ರಾಮಾಣಿಕವಾಗಿ ಕೈಗಾರಿಕೆ ನಡೆದಿದೆಯೇ ಇಲ್ಲವೇ ಎಂಬ ತೀರ್ಮಾನಕ್ಕೆ ಅಧಿಕಾರಿಗಳು ಬರದೇ ಹೋದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ ಬೀಗ ಹಾಕುವುದಕ್ಕೆ ತಾವು ಸ್ವಲ್ಪ ತಡೆ ಹಾಕಬೇಕು. ಉದಾಹರಣೆಗೆ ಎಷ್ಟೋ ಕೈಗಾರಿಕೆಗಳು ಕರೆಕ್ಟ್ ವೋಲ್ಟೇಜ್ ಇಲ್ಲದೆ ನಿಂತಿದೆ. ಮಾರುಕಟ್ಟೆ ಇಲ್ಲದೆ ನಿಂತಿದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ ಕೆ. ಎಸ್. ಎಫ್. ಸಿ.ಯಿಂದ ಬರೀ ಹಣ ಕೊಡಿಸಿದರೆ ಕೈಗಾರಿಕೆ ಮುಂದುವರೆಯುವುದಿಲ್ಲ. ನೀವು ಕೈಗಾರಿಕೆಗೆ ಹಣ ಕೊಡಿಸತಕ್ಕ ನಿಟ್ಟಿನಲ್ಲಿ ಹೊಸ ನೀತಿಯಲ್ಲಿ ಕೈಗಾರಿಕೆಗೆ ಏನೇನು ಅನೌನ್ಸ್ ಮಾಡಿದ್ದೀರಿ ಅವುಗಳನ್ನು ಜಾರಿಗೆ ತರಲು ಪ್ರಯತ್ನ ಪಡಬೇಕು. ಕೈಗಾರಿಕೆಗೆ ಸಬ್ಸಿಡಿ ಕೊಡುತ್ತೇವೆ ಎಂದು ಹೇಳುತ್ತಾರೆ, ಯಾವಾಗ ಕೊಡುತ್ತಾರೆ ಸಬ್ಸಿಡಿ? ಸುಮಾರು ೨೦ ಕೋಟಿ ರೂಪಾಯಿ ಸಬ್ಸಿಡಿ ಬಾಕಿ ಇದೆ ಎಂದು ನನಗೆ ತಿಳಿದುಬಂದಿದೆ. ೧೯೮೧ನೇ ಇಸವಿಯಲ್ಲಿ ಪ್ರಾರಂಭವಾಗಿರತಕ್ಕ ಕೈಗಾರಿಕೆ ಇದೆ. ಅದನ್ನು ತೀರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಇವತ್ತೂ ಸಹ ಬಾಕಿ ಇರುವುದು ಇದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ಒಂದು ಕೈಗಾರಿಕೆ ಸರಿಯಾಗಿ ನಡೆಯಬೇಕು ಎಂದರೆ ಎಲ್ಲವೂ ಸಹ ಸರಿಯಾಗಿ ನಡೆಯಬೇಕು. ಇಲ್ಲದೇ ಹೋದರೆ ಆ ಕೈಗಾರಿಕೆಗಳು ಮುಂದೆ ಬರುವುದಕ್ಕೆ ಆಗುವುದೇ ಇಲ್ಲ. ಇವು ಚೈನ್ ಸಿಸ್ಟಂ ಇದ್ದಹಾಗೆ. ಆದ್ದರಿಂದ ನೀವು ಈ ಕಡೆ ಹೆಚ್ಚಿನ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇವತ್ತು ಕೆ. ಎಸ್. ಎಫ್. ಸಿ. ಹಣ ಕೊಡುವುದರ ಜೊತೆಗೆ ಮಾರುಕಟ್ಟೆ ವ್ಯವಸ್ಥೆ ಮಾಡುವುದನ್ನೂ ಅವರೇ ವಹಿಸಿಕೊಳ್ಳಬೇಕು. ಕೆ. ಎಸ್. ಎಫ್. ಸಿ. ಸಾಲ ಕೊಡತಕ್ಕದ್ದು, ಸಾಲ ಕೊಟ್ಟ ಮೇಲೆ ಅವರಿಗೆ ದುಡಿಮೆ ಬಂಡವಾಳ ಕೊಡತಕ್ಕದ್ದು ಆಗಬೇಕು. ಉದಾಹರಣೆಗೆ ಅವಧಿ ಸಾಲ ಕೆ. ಎಸ್. ಎಫ್. ಸಿ. ಯಿಂದ ಕೊಡುತ್ತೀರಿ. ಅವಧಿ ಸಾಲ ಕೊಟ್ಟಮೇಲೆ ವರ್ಕಿಂಗ್ ಕ್ಯಾಪಿಟಲ್ ಕೇಳುವುದಕ್ಕೆ ಹೋದರೆ ಬ್ಯಾಂಕಿನವರು ಕಮಿಷನ್ ಕೊಡಿ ಎಂದು ಕೇಳುತ್ತಾರೆ. ಈ ದಿಶೆಯಲ್ಲಿ ಕಮರ್ಷಿಯಲ್ ಬ್ಯಾಂಕಿಗೂ ನಿಮಗೂ ಯಾವುದೇ ತರಹದ ವ್ಯತ್ಯಾಸ ಇಲ್ಲ. ಇವತ್ತು ಅವರು ಕೊಟ್ಟರೆ ಉಂಟು ಕೊಡದೇ ಹೋದರೆ ಫ್ಯಾಕ್ಟರಿ ನಡೆಯುವುದಿಲ್ಲ. ಈ ರಾಜ್ಯದಲ್ಲಿ ಸುಮಾರು ೭೦ ಸಾವಿರ ಕೈಗಾರಿಕೆಗಳಿವೆ. ೫೫ ಸಾವಿರ ಕೈಗಾರಿಕೆಗಳು ಇವತ್ತು ರೋಗಗ್ರಸ್ತವಾಗಿದೆ. ಒಂದು ದುಡಿಮೆ ಬಂಡವಾಳ ಇಲ್ಲದೇ ಆಗಿರಬಹುದು, ಸಬ್ಸಿಡಿ ಕೊಡದೇ ಆಗಿರಬಹುದು, ರಾಮಪ್ಪನವರ ವಿದ್ಯುಚ್ಛಕ್ತಿ ಇಲ್ಲದೇ ಆಗಿರಬಹುದು, ಲೇಬರ್ ಕಾರಣದಿಂದ ಆಗಿರಬಹುದು ಮತ್ತೊಂದು ಟೆಕ್ನಾಲಜಿಯಿಂದ ಆಗಿರಬಹುದು ಈ ಎಲ್ಲಾ ಕಾರಣಗಳಿಂದ ಇವತ್ತು ಕೈಗಾರಿಕೆಗಳು ನಿಂತಿರುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇವತ್ತು ಕೆ. ಎಸ್. ಎಫ್. ಸಿ. ೫೨ ಕೋಟಿ ರೂಪಾಯಿ ಖರ್ಚು ಮಾಡುತ್ತಿದೆ. ೫೨ ಕೋಟಿ

ರೂಪಾಯಿಗಳನ್ನು ಬರೀ ವೇತನ ಮತ್ತಿತರ ವೆಚ್ಚಕ್ಕೆ ಖರ್ಚು ಮಾಡುತ್ತಿದ್ದಾರೆ. ಅಷ್ಟು ಬೇಕಾಗುವುದಿಲ್ಲ. ಇದನ್ನು ತಡೆ ಮಾಡತಕ್ಕ ವ್ಯವಸ್ಥೆಗೆ ತಾವು ಕ್ರಮ ತೆಗೆದು ಕೊಳ್ಳಬೇಕು. ಕೆ. ಎಸ್. ಎಫ್. ಸಿ.ಯಲ್ಲಂತೂ ಇತ್ತೀಚೆಗೆ ಚೆನ್ನಾಗಿ ಲಾಭ ಬರುತ್ತಿದೆ. ಮತ್ತು ಹೊಸ ಒಂದು ಸಾಧನೆ ಮಾಡಿದ್ದೀರಿ. ೧೦ ಲಕ್ಷ ರೂಪಾಯಿವರೆಗೆ ಸಾಲ ತೆಗೆದುಕೊಂಡವರಿಗ ದುಡಿಮೆ ಬಂಡವಾಳವನ್ನು ಕೊಡುವ ಒಂದು ಕಾರ್ಯಕ್ರಮ ಇದೆ. ಅದನ್ನು ಹೆಚ್ಚು ದುಡ್ಡು ತೆಗೆದುಕೊಂಡವರಿಗೂ ಕೊಡಬೇಕು. ಕೆ. ಎಸ್. ಎಫ್. ಸಿ.ಯಲ್ಲಿ ಯಾರು ಹಣ ತೆಗೆದುಕೊಳ್ಳುತ್ತಾರೆ ಅವರೆಲ್ಲರಿಗೂ ಕೊಡಬೇಕೆಂಬ ಕಾನೂನನ್ನು ತಂದರೆ ಅಥವಾ ಒಂದು ತೀರ್ಮಾನಕ್ಕೆ ಬಂದರೆ ಪ್ರಯೋಜನವಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಈ ಸಂಸ್ಥೆಯಿಂದ ನಮ್ಮ ಸ್ಥಳೀಯರಿಗೆ ಹೆಚ್ಚಿನ ಅವಕಾಶ ಸಿಕ್ಕಿಲ್ಲ. ಸ್ಥಳೀಯರಿಗಿಂತ ಹೊರಗಡೆಯವರೇ ಹೆಚ್ಚು ಇಲ್ಲಿ ತುಂಬುತ್ತಿದ್ದಾರೆ. ಇದರ ಬಗ್ಗೆ ತಾವು ಗಮನ ಕೊಡಬೇಕು. ಇವತ್ತು ನಮ್ಮ ರಾಜ್ಯದ ಕೈಗಾರಿಕಾ ನೀತಿ ಏನಾಗಿದೆ ಎಂಬುದು ತಮಗೆ ಗೊತ್ತಿದೆ; ತಮಿಳುನಾಡಿನ ಜೊತೆ ಸಂಬಂಧ ಇದೆ ತಮಗೆ ನನಗೆ ಗೊತ್ತಿರುವ ಹಾಗೆ. ತಮಿಳುನಾಡಿನಲ್ಲಿ ಯಾವುದೇ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಹೋಗಿ. ನೀವು ಪೊಳಾಚಿಗೆ ಹೋಗಿ, ತಿರುಪುರ್‌ಗೆ ಹೋಗಿ, ಶಿವಕಾಶಿಗೆ ಹೋಗಿ, ಕೊಯಮುತ್ತೂರಿಗೆ ಹೋಗಿ. ಪ್ರತಿಯೊಂದು ತಾಲ್ಲೂಕು ಕೇಂದ್ರಗಳು ತಮಿಳುನಾಡಿನಲ್ಲಿ ಜಿಲ್ಲಾ ಕೇಂದ್ರಗಳಿಗಿಂತ ಚೆನ್ನಾಗಿವೆ ಕೈಗಾರಿಕೆಗಳಲ್ಲಿ. ಅಷ್ಟು ಬೃಹದಾಕಾರವಾಗಿ ಬೆಳೆದಿದೆ. ನಮ್ಮ ರಾಜ್ಯಕ್ಕೆ ಬೇಕಾಗಿರತಕ್ಕ ಮೆಷಿನರಿಗಳಲ್ಲಿ ಅರ್ಧ ಭಾಗಕ್ಕಿಂತ ಹೆಚ್ಚು ತಮಿಳುನಾಡಿನಿಂದ ಬರುತ್ತಿದೆ. ತಿರುಪುರ್ ಎಂದು ತಮಿಳುನಾಡಿನಲ್ಲಿರತಕ್ಕ ಒಂದು ಊರಿನಲ್ಲಿ ತಯಾರಾಗತಕ್ಕ ಬನಿಯನ್ ಇಡೀ ರಾಷ್ಟ್ರದ ಜನ ಇವತ್ತು ತೆಗೆದುಕೊಂಡು ಹೋಗುತ್ತಾರೆ. ಶಿವಕಾಶಿಯಲ್ಲಿ ಆಗತಕ್ಕ ಬೆಂಕಿ ಪೊಟ್ಟಣ ರಾಷ್ಟ್ರದಲ್ಲೆಲ್ಲಾ ಪ್ರಯೋಜನಕ್ಕೆ ಬರುತ್ತಿದೆ. ಆದರೆ ನಮ್ಮ ರಾಜ್ಯದಲ್ಲಿ ಏನಾಗಿದೆ? ಕೆಲವರು ಒಳ್ಳೆಯ ಅಧಿಕಾರಿಗಳಿದ್ದಾರೆ. ಪಾಟೀಲರೇ ಆಗಲಿ ಜಯರಾಜ್ ಅವರಾಗಲೀ ಕೆಲವರಿದ್ದಾರೆ, ಒಳ್ಳೆಯ ಅಧಿಕಾರಿಗಳಿದ್ದಾರೆ. ಅವರ ಹೆಸರು ಹೇಳಿದರೆ ತಪ್ಪಾಗುವುದಿಲ್ಲ. ಏಕೆಂದರೆ ಒಳ್ಳೆಯ ಕೆಲಸ ಮಾಡುತ್ತಾರೆ. ಅವರ ಜೊತೆಯಲ್ಲಿ ಸಮಾಜದಲ್ಲಿ ಕೈಗಾರಿಕೆಯಲ್ಲಿ ನೊಂದಿರತಕ್ಕ ಕೆಲವರನ್ನು ಜೊತೆಗೆ ಹಾಕಿ ಒಂದು ಕಮಿಟಿ ಮಾಡಿ. ಏತಕ್ಕೆ ಹೀಗಾಗುತ್ತಿದೆ? ತಮಿಳುನಾಡಿನಲ್ಲಿರತಕ್ಕ ಎಲ್ಲಾ ಕೇಂದ್ರಗಳನ್ನು ನೋಡಿ. ಇವತ್ತು ಜಿಲ್ಲಾ ಕೇಂದ್ರಗಳು ರಾಜ್ಯ ಕೇಂದ್ರಗಳ ಹಾಗೆ ಕಾಣುತ್ತವೆ. ಕೊಯಮುತ್ತೂರಿನಲ್ಲಿ ಎಂಥೆಂಥ ಕೈಗಾರಿಕೆಗಳು ಬಂದಿವೆ? ಅಲ್ಲಿ ಪಂಪ್‌ಸೆಟ್ಟುಗಳ ತಯಾರಾಗುತ್ತವೆ. ಇವತ್ತು ನಮ್ಮ ರೈತರು ಏನು ಪಂಪ್‌ಸೆಟ್‌ಗಳನ್ನು ಉಪಯೋಗಿಸುತ್ತಿದ್ದಾರೆ, ಅದರಲ್ಲಿ ಅರ್ಧಭಾಗಕ್ಕಿಂತ ಹೆಚ್ಚಾಗಿ ಕೊಯಮುತ್ತೂರಿನಿಂದ ಬರುತ್ತವೆ. ಅಂದರೆ ಅಲ್ಲಿ ಇನ್‌ಫ್ರಾಸ್ಟ್ರಕ್ಚರ್ ಆ ರೀತಿ ಇದೆ. ನಮ್ಮ ಸರ್ಕಾರ ಅಂತಹ ಇನ್‌ಫ್ರಾಸ್ಟ್ರಕ್ಚರ್‌ನ್ನು ನಮ್ಮ ಕೈಗಾರಿಕೆಗಳಿಗೆ ಕೊಡದೇ ಇದ್ದರೆ ಇವತ್ತು ನಾವು ಕೈಗಾರಿಕೆಗಳಲ್ಲಿ ಮುಂದೆ ಬರುವುದಕ್ಕೆ ಆಗುವುದಿಲ್ಲ. ಇವತ್ತು ಸೇಲಂನಲ್ಲಿ ಹೆಚ್ಚು ಇಂಡಸ್ಟ್ರೀಗಳು ಬಂದಿರುತ್ತವೆ. ಇವತ್ತು ಇಡೀ ರಾಷ್ಟ್ರದಲ್ಲಿ ಸೇಲಂನಿಂದ ಸ್ಟೀಲ್ ವಿದೇಶಕ್ಕೆ ಹೋಗುತ್ತದೆ. ಕೈಗಾರಿಕೆ ಅಭಿವೃದ್ಧಿ ಬಗ್ಗೆ ನಾವು ಈ ಸಂದರ್ಭದಲ್ಲಿ ತಮಿಳುನಾಡನ್ನು ಕಾಪಿ ಮಾಡಿದರೆ ಸರಿಯಾಗಬಹುದೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಇವತ್ತು ನೀವು ಸಬ್ಸಿಡಿ ಕೊಡತಕ್ಕದ್ದನ್ನು ಅಬಾಲಿಷ್ ಮಾಡಬೇಕು. ನೀವು ಸಬ್ಸಿಡಿ ಕೊಡುವುದಾದರೆ ಒಂದು ವಿನಂತಿ ನಾನು ಮಾಡುತ್ತೇನೆ. ಇವತ್ತು ಬುಕ್ ಅಡ್ಜಸ್ಟ್‌ಮೆಂಟ್ ಎನ್ನುವುದು ನಿಮ್ಮ ಸರ್ಕಾರದಲ್ಲಿ ಇದ್ದೇ ಇದೆ. ಇವತ್ತು ಡಿ. ಐ. ಸಿ. ಮುಖಾಂತರ ೨೦ ಪರ್ಸೆಂಟ್,

೨೫ ಪರ್ಸೆಂಟ್ ಎಂದು ಏಕೆ ಕೊಡುತ್ತೀರಿ ಎಂದು ಹೇಳುತ್ತೇನೆ. ಸರಿಯಾದ ಕಾಲದಲ್ಲಿ ಸಬ್ಸಿಡಿಯನ್ನು ಕೊಡುವ ವ್ಯವಸ್ಥೆ ಈ ಸರ್ಕಾರದಲ್ಲಿ ನಡೆದಿಲ್ಲ. ಎಷ್ಟೋ ಕೈಗಾರಿಕೆಗಳು ಇವತ್ತು ಸಬ್ಸಿಡಿ ಇಲ್ಲದೆ ನಿಂತಿವೆ. ಅದರ ಬದಲು ನೀವು ಇವತ್ತು ಒಂದು ತೀರ್ಮಾನಕ್ಕೆ ಬನ್ನಿ. ಇವತ್ತು ತಾವು ಸಬ್ಸಿಡಿ ಬದಲು ಅವರಿಗೆ ಬೇಕಾದ ನೀರನ್ನು ಕಡಿಮೆ ದರದಲ್ಲಿ ಕೊಡಿ, ವಿದ್ಯುಚ್ಛಕ್ತಿಯನ್ನು ಕಡಿಮೆ ದರದಲ್ಲಿ ಕೊಡಿ. ಆ ಹಣವನ್ನು ಬುಕ್ ಅಡ್ಜಸ್ಟ್‌ಮೆಂಟ್ ಮಾಡಿಕೊಂಡು ಅಲ್ಲಿಗೆ ಕೊಡಬೇಕಾಗುತ್ತದೆ. ಇದನ್ನು ತಾವು ಇವತ್ತು ಸ್ಪೆಲ್‌ಔಟ್ ಮಾಡಬೇಕು. ತಮ್ಮ ಭಾಷಣದಲ್ಲಿ ತಾವು ಇವತ್ತು ಇದನ್ನೆಲ್ಲಾ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಕೈಗಾರಿಕೆಗಳಿಗೆ ಗತ್ಯಂತರ ಇಲ್ಲ. ತಾವು ಹೊಸ ಯೋಜನೆಗಳನ್ನು ಹಾಕಿದ್ದೀರಿ. ಸಣ್ಣ ಕೈಗಾರಿಕಾ ಸಚಿವರು ಯುವಕರಿದ್ದಾರೆ, ಉತ್ಸಾಹಿಗಳಾಗಿದ್ದಾರೆ. ನಜೀರ್ ಅಹಮದ್ ಅವರು ಹೊಸ ಯೋಜನೆಗಳನ್ನು ಮಾಡದೇ ಹೋದರೆ ಈ ಕೈಗಾರಿಕೆಗಳಿಗೆ ಉಳಿವು ಇಲ್ಲ ಎಂದು ಹೇಳುತ್ತೇನೆ. ಇವತ್ತು ನಮ್ಮ ರಾಜ್ಯದ ಸುಮಾರು ೭೦ ಸಾವಿರ ಕೈಗಾರಿಕೆಗಳಿಗೆ ಸುಮಾರು ಮೂರುವರೆಸಾವಿರ ಕೋಟಿ ರೂಪಾಯಿಗಳ ಮಾರುಕಟ್ಟೆ ಬೇಕಾಗಿದೆ. ನೀವು ಹೊಸದಾಗಿ ಮಾರುಕಟ್ಟೆ ನಿಗಮವನ್ನು ಮಾಡಿದ್ದೀರಿ. ಇವತ್ತು ಕೇವಲ ೪೦ ಕೋಟಿ ಟರ್ನ್‌ಓವರ್ ಇದರ ಮೂಲಕ ಆಗಿದೆ. ಮೂರೂವರೆ ಸಾವಿರ ಕೋಟಿ ಟರ್ನ್‌ಓವರ್ ಮಾಡುವ ಮಟ್ಟಕ್ಕೆ ಕೇವಲ ೪೦ ಕೋಟಿ ರೂಪಾಯಿ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಇವತ್ತು ಸಣ್ಣ ಕೈಗಾರಿಕೆಗಳಿಂದ ಸರ್ಕಾರಕ್ಕೆ ಸುಮಾರು ೪೦ ರಿಂದ ೫೦ ಕೋಟಿ ರೂಪಾಯಿಗಳು ಟ್ಯಾಕ್ಸ್ ಬರುತ್ತದೆ. ಈ ಕೈಗಾರಿಕೆಗಳು ಇವತ್ತು ನಿಂತರೆ ಈ ರಾಜ್ಯದ ಕೈಗಾರಿಕೆಗಳು ಹಾಳಾಗುವುದಿಲ್ಲವೇ, ರಾಜ್ಯದ ಬೊಕ್ಕಸಕ್ಕೆ ಬರುವ ಹಣ ಕೂಡ ಕಡಿಮೆಯಾಗುತ್ತದೆ. ಇದರ ಬಗ್ಗೆ ಚಿಂತನೆ ಮಾಡದೇ ಇದ್ದರೆ ಇವತ್ತು ಕೈಗಾರಿಕೆಗಳು ಮುಂದೆ ಬರುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ನೀವು ಸಬ್ಸಿಡಿ ಅಬಾಲಿಷ್ ಮಾಡದೇ ಹೋದರೂ ನಿಮ್ಮ ಕೆ. ಎಸ್. ಎಫ್. ಸಿ.ಗೆ ಸಬ್ಸಿಡಿ ಕೊಡುವ ವ್ಯವಸ್ಥೆ ಮಾಡಿ. ಅವರಿಗೆ ಸಾಲ ಯಾರು ಕೊಡುತ್ತಾರೋ ಅವರೇ ದುಡಿಮೆ ಬಂಡವಾಳವನ್ನು ಕೊಡಬೇಕು. ಯಾರು ದುಡಿಮೆ ಬಂಡವಾಳವನ್ನು ಸಹಾ ಕೊಡುತ್ತಾರೋ ಅವರೇ ಸಬ್ಸಿಡಿಯನ್ನು ಕೊಡಬೇಕು. ಇದು ಆಗದೇ ಇದ್ದರೆ ಕೈಗಾರಿಕೆಗಳು ಮುಂದೆ ಬರುವುದಕ್ಕೆ ಆಗುವುದಿಲ್ಲವೆಂದು ನಾವು ಅರ್ಥ ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕೆ. ಐ. ಡಿ. ಬಿ. ಏನಿದೆ ಅದು ಕೂಡ ಏನು ಏರಿಯಾ ಡೆವಲಪ್ ಇತ್ತೀಚೆಗೆ ಮಾಡುತ್ತಿದೆ ಅದು ಬಹಳ ಚೆನ್ನಾಗಿ ಬಹಳ ತೀವ್ರಗತಿಯಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಇವತ್ತು ಅಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆ. ಬಹಳ ಚೆನ್ನಾಗಿ ಇನ್‌ಫ್ರಾಸ್ಟ್ರಕ್ಚರ್ ಮಾಡುತ್ತಿದ್ದಾರೆ. ಆದರೆ ಒಂದನ್ನು ನಾನು ವಿನಂತಿ ಮಾಡುತ್ತೇನೆ. ಏರಿಯಾ ಡೆವಲೆಪ್‌ಮೆಂಟ್‌ನಲ್ಲಿ ಇತ್ತೀಚಿನ ದಿನಗಳಲ್ಲಿ ಜಾಗವನ್ನು ತೆಗೆದುಕೊಂಡು ಐಡೆಂಟಿಫೈ ಮಾಡಿ ಅಲಿನೇಷನ್ ಮಾಡುವುದನ್ನು ಬಿಟ್ಟರೆ ಹೆಚ್ಚಿಗೆ ಕೆಲವು ಕಡೆ ಮಾಡಿರತಕ್ಕದ್ದರಲ್ಲಿ ಇನ್ನೇನೂ ಕಾಣುತ್ತಾ ಇಲ್ಲ. ಸಾಮಾನ್ಯವಾಗಿ ಕೈಗಾರಿಕೆಗಳಿಗೆ ಬೇಕಾಗಿರತಕ್ಕ ವಿದ್ಯುಚ್ಛಕ್ತಿಯಿಂದ ಹಿಡಿದು, ಬೇಕಾಗಿರತಕ್ಕ ಗ್ಯಾಸ್‌ನಿಂದ ಹಿಡಿದು, ಬೇಕಾಗಿರತಕ್ಕ ಪ್ರತಿಯೊಂದು ಸಲಕರಣೆಗಳೂ ಕೂಡಾ ಪ್ರತಿಯೊಬ್ಬರಿಗೆ ಸಿಗುವ ಸಿಸ್ಟಮ್ ಮಾಡಬೇಕು. ಅದನ್ನು ಕೆ. ಐ. ಡಿ. ಬಿ.ಯಿಂದ ಮಾಡದೇ ಹೋದರೆ ಏನೂ ಪ್ರಯೋಜನವಾಗುವುದಿಲ್ಲ. ಅದನ್ನು ತಾವು ಚಿಂತನೆ ಮಾಡಬೇಕು. ಅಲ್ಲದೇ ಇವತ್ತು ಬೆಂಗಳೂರಿನ ಸುತ್ತಮುತ್ತ ಕೈಗಾರಿಕೆಗಳನ್ನು ಮಾಡುವ ಬದಲು ಹೆದ್ದಾರಿಗಳ ಅಕ್ಕಪಕ್ಕದಲ್ಲಿ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ, ಬೆಂಗಳೂರು-ಮಂಗಳೂರು,

ಬೆಂಗಳೂರು-ತುಮಕೂರು, ಬೆಂಗಳೂರು-ಮೈಸೂರು ರಸ್ತೆಗಳ ಎರಡೂ ಪಕ್ಕದಲ್ಲೂ ೧ ಕಿ ಮೀ. ದೂರದವರೆಗೆ ಪ್ರದೇಶ ಕೈಗಾರಿಕೆಗಳಿಗೆ ಅಭಿವೃದ್ಧಿ ಮಾಡುತ್ತೇವೆಂದು ತಾವು ಡಿಕ್ಲೇರ್ ಮಾಡಿ. ಮತ್ತು ಬೆಂಗಳೂರಿನಿಂದ ಮಾಗಡಿಗೆ ಹೋಗುವ ರಸ್ತೆಯಲ್ಲೂ ಇದೇ ರೀತಿ ಡೆವಲಪ್ ಮಾಡುತ್ತೇವೆ ಎಂದು ತಾವು ಪ್ರಕಟಣೆ ಮಾಡಿ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಕೈಗಾರಿಕೆಗಳಿಗೆ ಸಾಗಾಣಿಕೆ ವ್ಯವಸ್ಥೆ ಚೆನ್ನಾಗಿ ಇರಬೇಕಾಗುತ್ತದೆ. ಇದು ಪ್ರಾಮುಖ್ಯವಾದುದು. ಇದು ಇಲ್ಲದಿದ್ದರೆ ಕೈಗಾರಿಕಾ ಮಾಲೀಕರು ಇದಕ್ಕೇ ಹೆಚ್ಚು ಬಂಡವಾಳ ಹಾಕಬೇಕಾಗುತ್ತದೆ. ಉದಾಹರಣೆಗೆ ಇವತ್ತು ಕುಣಿಗಲ್‌ನಲ್ಲಿ ಜಾನ್‌ಸನ್‌ನವರು ಕೈಗಾರಿಕೆ ಸ್ಥಾಪನೆ ಮಾಡಿದ್ದಾರೆ. ಇದನ್ನು ಕುಣಿಗಲ್‌ನಲ್ಲಿ ಅಲ್ಲದೇ ಬೇರೆ ಕಡೆ ಮಾಡಿದ್ದರೆ ಟ್ರಾನ್ಸ್‌ಪೋರ್ಟ್‌ಗೇ ಹೆಚ್ಚು ಬಂಡವಾಳವನ್ನು ಅವರು ಹಾಕಬೇಕಾಗಿತ್ತು. ಇವತ್ತಿನ ದಿವಸ ರಾಜ್ಯದ ಹೆದ್ದಾರಿಗಳಲ್ಲಿ ಬರತಕ್ಕ ರಸ್ತೆ ಇಕ್ಕೆಲಗಳಲ್ಲಿ ೧ ಕಿ. ಮೀ. ವರೆಗೆ ಕೈಗಾರಿಕೆಗಳನ್ನು ಮಾಡಿದರೆ ಅಲ್ಲಿ ಬರುವ ಗ್ರಾಮಾಂತರ ಪ್ರದೇಶಗಳು ಕೂಡ ಅಭಿವೃದ್ಧಿಯಾಗುತ್ತವೆ. ಅಲ್ಲಿನ ಜನರಿಗೂ ಉದ್ಯೋಗ ಸಿಗುತ್ತದೆ. ಆದ್ದರಿಂದ ಕೈಗಾರಿಕೆಗಳನ್ನು ಬೆಂಗಳೂರಿನ ಸುತ್ತಮುತ್ತ ಕೇಂದ್ರೀಕರಿಸುವುದು ತಪ್ಪು ಎಂದು ಹೇಳುತ್ತೇನೆ. ಈ ಬಗ್ಗೆ ತಾವು ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ವಿದ್ಯುತ್ ಬಗ್ಗೆ ಹೇಳಬೇಕೆಂದರೆ, ನಮ್ಮಲ್ಲಿ ಎಷ್ಟೋ ಕೈಗಾರಿಕೆಗಳಿಗೆ ಬೇಕಾಗಿರತಕ್ಕ ೧೧ ಕೆವಿಎ ವಿದ್ಯುತ್ ವೋಲ್ಟೇಜ್ ಬೇಕಾಗಿರತಕ್ಕ ಭಾಗಕ್ಕೆ ಮಾನ್ಯ ರಾಮಪ್ಪನವರು ಕೊಡುತ್ತಿರುವುದು ಕೇವಲ ೩ ಕೆವಿಎ. ೪೪೦ ವೋಲ್ಟೇಜ್ ಕೊಡಬೇಕಾಗಿರತಕ್ಕ ಕಡೆ ಎಷ್ಟು ವಿದ್ಯುತ್ ಬರುತ್ತಿದೆ ಎಂದು ನಮ್ಮ ಸನ್ಮಾನ್ಯ ರಾಮಪ್ಪನವರಿಗೆ ಗೊತ್ತಿದೆಯೇ? ಮಾನ್ಯ ಎಂ. ರಾಮಪ್ಪನವರನ್ನು ೧೧ ಕೆವಿ ವಿದ್ಯುತ್ ವೋಲ್ಟೇಜ್ ಕೇಳಿದರೆ ಅವರು ನಮಗೆ ಕೊಡುತ್ತಿರುವುದು ೩ ಕೆವಿ. ಹೀಗೆ ವೋಲ್ಟೇಜ್ ಕೊಡುತ್ತಿದ್ದರೆ ನಾಳೆಯೂ ಕೊಡುವುದಕ್ಕಾಗುವುದಿಲ್ಲ, ನಾಡಿದ್ದೂ ಕೊಡುವುದಕ್ಕಾಗುವುದಿಲ್ಲ. ಇನ್ನು ಐದು ವರ್ಷ ಬೇಕು ಸರಿಯಾಗಿ ವೋಲ್ಟೇಜ್ ಕೊಡಬೇಕಾದರೆ. ಒಂದು ಮೋಟಾರ್ ಸುಗಮವಾಗಿ ನಡೆಯಬೇಕೆಂದರೆ ೪೪೦ ವೋಲ್ಟೇಜ್ ಇರಬೇಕು. ಕೊನೆಯ ಪಕ್ಷ ಒಂದು ಮೋಟಾರು ನಡೆಯಬೇಕಾದರೆ ೪೦೦ಕ್ಕೆ ಬಂದು ನಿಂತುಕೊಂಡರೂ ಆ ಕೈಗಾರಿಕೆ ನಡೆಯುತ್ತದೆ. ಆದರೆ ಇವತ್ತು ೧೪೦ ವೋಲ್ಟೇಜ್‌ಗೆ ಬಂದಿದೆ. ಮಾನ್ಯ ರಾಮಪ್ಪನವರು ಇಲ್ಲದಿದ್ದರೆ ಕೈಗಾರಿಕೆಗಳು ನಡೆಯುವುದಿಲ್ಲ. ಕೈಗಾರಿಕೆಗಳಿಗೆ ವಿದ್ಯುತ್ ಇಲ್ಲದಿದ್ದರೆ ಆಗುವುದಿಲ್ಲ, ಆದುದರಿಂದ ರಾಮಪ್ಪನವರ ಸಹಕಾರ ನಮಗೆ ಬೇಕು.

೧೨.೫೫ ಪಿ. ಎಂ.

ಶ್ರೀ ಎಂ. ಮಹದೇವ್:- ಮಾನ್ಯ ರಾಮಪ್ಪನವರು ವೋಲ್ಟೇಜನ್ನು ಗ್ರ್ಯಾಜ್ಯುಯಲ್ ಆಗಿ ಇಂಪ್ರೂವ್ ಮಾಡುತ್ತಾರೆ. ಒಂದೇ ಸಾರಿ ವೋಲ್ಟೇಜ್ ಇಂಪ್ರೂವ್ ಆದರೆ ಮೆಷಿನರಿ ಬರ್ಸ್ಟ್ ಆಗುತ್ತದೆ.

ಛೇರ್ಮನ್:- ಮಾನ್ಯ ಸದಸ್ಯರುಗಳು ನಿಮ್ಮ ನಿಮ್ಮ ಪೀಠಗಳಲ್ಲಿ ಕುಳಿತುಕೊಳ್ಳಿ.

ಶ್ರೀ [redacted] ಆರ್. ಶಿವರಾಮೇಗೌಡ:- ಇವರ ಸ್ಪೀಡ್ ನೋಡಿದರೆ ಮಾನ್ಯ ಮಹದೇವ್‌ರವರು ಹೇಳಿದಹಾಗೆ ಮೆಷಿನರಿ ಒಂದೇ ಸಾರಿ ಬರ್ಸ್ಟ್ ಆಗುತ್ತದೆ. ಅದಕ್ಕೋಸ್ಕರ ನಿಧಾನ ಮಾಡುತ್ತಿರಬಹುದೆಂದು ಅನಿಸುತ್ತದೆ. ಒಂದು ಮೋಟಾರು ಶುದ್ಧವಾಗಿ ನಡೆಯಬೇಕಾದರೆ ೪೪೦ ವೋಲ್ಟೇಜ್ ಇರಬೇಕು. ಇವರು ೧೫೦ ವೋಲ್ಟೇಜ್ ಸಹ ಕೊಡದಿದ್ದರೆ ಸಾಲ ಕೊಟ್ಟಿರುವ ಕಂಪನಿಗಳಿಗೆ ಸಾಲ

ತೆಗೆದುಕೊಂಡಿರುವವರು ಹೇಗೆ ಕೊಡುತ್ತಾರೆ? ಫ್ಯಾಕ್ಟರಿಗಳು ನಡೆಯುವುದು ಹೇಗೆ? ಅದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿರೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಇವತ್ತು ರಾಜ್ಯದ ಬೆಳವಣಿಗೆಗೆ ಕೈಗಾರಿಕೆಗಳು ಬಹಳ ಎಸೆನ್ಷಿಯಲ್. ಕೈಗಾರಿಕೆಗಳವರು ಜನರೇಟರ್ ಹಾಕಿಕೊಳ್ಳುವುದಕ್ಕೆ ನೀವು ಸಬ್ಸಿಡಿಯನ್ನು ಕೊಡುತ್ತಾ ಇದ್ದೀರಿ, ಸಬ್ಸಿಡಿಯನ್ನು ಜಾಸ್ತಿ ಮಾಡಬೇಕು. ಜನರೇಟರ್ ಹಾಕಿಕೊಂಡು ನಾವು ಇಂಡಸ್ಟ್ರಿ ನಡೆಸುವುದಕ್ಕಾಗುವುದಿಲ್ಲ. ಏಕೆಂದರೆ ಒಂದು ಯೂನಿಟ್ ಕರೆಂಟ್‌ಗೆ ಡೀಸಲ್‌ನಿಂದ ಉತ್ಪಾದನೆ ಮಾಡತಕ್ಕ ದರ ಮೂರೂವರೆ ರೂಪಾಯಿಗಳಾಗುತ್ತದೆ. ಕರೆಂಟ್‌ನಿಂದ ನಡೆಸಿದರೆ ೨ ರೂಪಾಯಿ ಬಿಲ್ ಬರುತ್ತದೆ. ಡೀಸಲ್‌ನಿಂದ ಉತ್ಪಾದನೆ ಮಾಡತಕ್ಕ ಪವರ್‌ಗೆ ಎಲ್ಲಿಂದ ದುಡ್ಡನ್ನು ತಂದು ಕಟ್ಟುವುದಕ್ಕಾಗುತ್ತದೆ? ಬರತಕ್ಕ ಲಾಭವೆಲ್ಲಾ ಅಲ್ಲಿಗೆ ಹೋಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಇಂಡಸ್ಟ್ರಿಗಳಿಗೆ ತಾವೇನು ಸಾಲವನ್ನು ಕೊಡುತ್ತಾ ಇದ್ದೀರಿ ಅವುಗಳಿಗೆ ಕೊಡತಕ್ಕ ಸಾಲಕ್ಕೆ ಇಂಟರೆಸ್ಟ್ ಫ್ರೀ ಲೋನ್ ಕೊಡಬೇಕು. ಜೊತೆಗೆ ಹೆಚ್ಚು ಸಬ್ಸಿಡಿಯನ್ನೂ ಸಹ ಕೊಡಬೇಕು. ಇಲ್ಲದಿದ್ದರೆ ಅವರು ಕೈಗಾರಿಕೆಗಳನ್ನು ಮಾಡುವುದಕ್ಕೆ ಮುಂದೆ ಬರುವುದಿಲ್ಲ. ಆದ್ದರಿಂದ ಈ ರೀತಿ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇವತ್ತು ಕೈಗಾರಿಕೆ ಜಿಲ್ಲಾಮಟ್ಟ ಮತ್ತು ತಾಲ್ಲೂಕು ಮಟ್ಟದ್ದು ಆಯಿತು. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ದು ತಮಗೆ ಗೊತ್ತಿದೆ. ರಾಜ್ಯದಲ್ಲಿರತಕ್ಕ ಸಾರ್ವಜನಿಕ ಉದ್ಯಮಗಳೆಲ್ಲವೂ ರೋಗಗ್ರಸ್ಥವಾಗಿ ಅವುಗಳೆಲ್ಲವೂ ಬಾಗಿಲು ಹಾಕತಕ್ಕ ಮಟ್ಟಕ್ಕೆ ತಲುಪಿದ್ದೇವೆ. ಎಲ್ಲಾ ಕಂಪನಿಗಳ ಪುಸ್ತಕಗಳೂ ನನ್ನ ಹತ್ತಿರ ಇವೆ. ಎಲ್ಲಾ ಪುಸ್ತಕಗಳನ್ನೂ ತಿರುವಿ ಹಾಕಿ ನೋಡಿದ್ದೇನೆ. ಸುಮಾರು ೨೫ ಜನ ಡೈರೆಕ್ಟರುಗಳು ಎಲ್ಲಾ ಕಂಪನಿಗಳಿಗೂ ಓಡಾಡುತ್ತಾರೆ. ಒಂದು ಕಂಪನಿಯಲ್ಲಿ ಏಳೆಂಟು ಜನ ಡೈರೆಕ್ಟರುಗಳು ಇದ್ದಾರೆ. ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಕರ್ನಾಟಕ ಫೈನಾನ್ಸ್ ಕಾರ್ಪೋರೇಷನ್‌ಗೆ ಡೈರೆಕ್ಟರ್ ಇದ್ದರೆ, ಮೈಸೂರ್ ಮಿನಿರಲ್ಸ್‌ಗೂ ಅವರೇ. ಮೈಸೂರು ಮಿನಿರಲ್ಸ್‌ನಿಂದ ಯಶವಂತಪುರಕ್ಕೆ ಹೋದರೆ ಮೈಸೂರು ಲ್ಯಾಂಪ್ಸ್‌ಗೂ ಅವರೇ. ಮೈಸೂರು ಲ್ಯಾಂಪ್ಸ್‌ನಿಂದ ಹಾಗೆಯೇ ಯಶವಂತಪುರದ ಪಕ್ಕಕ್ಕೆ ಹೋದರೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಕಂಪನಿಗೂ ಅವರೇ. ಅಲ್ಲಿಂದ ಮೈಸೂರು ವಿಕ್ರಾಂತ್‌ಗೆ ಹೋದರೆ ಅಲ್ಲಿಗೂ ಅವರೇ. ಅಲ್ಲಿಂದ ಭದ್ರಾವತಿಗೆ ಹೋದರೆ ಅಲ್ಲಿಗೂ ಅವರೇ. ಈ ಪರಿಸ್ಥಿತಿಯಿಂದ ಏನಾಗಿದೆ? ನಾನೊಂದು ವಿನಂತಿ ಮಾಡುತ್ತೇನೆ, ಸಾರ್ವಜನಿಕ ಕ್ಷೇತ್ರದಲ್ಲಿ ಇವತ್ತು ನೊಂದಿರತಕ್ಕವರು ಬಹಳ ಜನರು ಇದ್ದಾರೆ. ಅವರಿಗೂ ನೀವು ಜವಾಬ್ದಾರಿಯನ್ನು ಕೊಡಿ. ಐ. ಎ. ಎಸ್.ನವರಿಗೆ ಅವರು ಇಂಗ್ಲೆಂಡ್‌ನಿಂದ ಬಂದವರೆಂದು ತಿಳಿದುಕೊಂಡು ಅವರನ್ನು ಸರ್ಕಾರದ ತಲೆಯ ಮೇಲೆ ಕೂರಿಸಿಕೊಂಡು ಹೋದರೆ ಕೈಗಾರಿಕೆಗಳು ಉದ್ಧಾರವಾಗುವುದಿಲ್ಲ. ಐ. ಎ. ಎಸ್. ಮಿತ್ರರಲ್ಲಿ ಬಹಳ ಉತ್ತಮರು ಇದ್ದಾರೆ. ಪಾಪ, ಅವರನ್ನು ಐಡೆಂಟಿಫೈ ಮಾಡಿ ಅವರಿಗೆ ಜವಾಬ್ದಾರಿಯನ್ನು ಕೊಡಿ. ಅಂತಹವರು ಬಹಳ ಚೆನ್ನಾಗಿ ಕೆಲಸ ಮಾಡಿದರೆ ಅವರನ್ನು ಅಲ್ಲಿಂದ ಒಂದು ವರ್ಷಕ್ಕೆ ಎತ್ತಂಗಡಿ ಮಾಡುತ್ತೀರಿ. ಚೆನ್ನಾಗಿ ಕೆಲಸ ಮಾಡುವವರಿಗೆ ಇದು ಆಗಬಾರದು. ಸಾರ್ವಜನಿಕ ಉದ್ಯಮಗಳಲ್ಲಿ ಬಹಳಷ್ಟು ಉದ್ಯಮಗಳಿಗೆ ಸಧ್ಯದಲ್ಲಿಯೇ ಬಾಗಿಲು ಹಾಕತಕ್ಕ ಮಟ್ಟಕ್ಕೆ ಬಂದಿವೆ. ಇವತ್ತು ಕರ್ನಾಟಕ ವಿಧಾನ ಮಂಡಲದಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯೊಂದು ಇದೆ. ನಾನು ಕೇಳುತ್ತೇನೆ, ಏತಕ್ಕೆ ಸ್ವಾಮಿ ಈ ಕಮಿಟಿಯನ್ನು ಮಾಡಿದ್ದೀರಿ? ಪಾಪ ಅಧಿಕಾರಿಗಳನ್ನು

ಸಮಿತಿಯ ಸಭೆಗೆ ಕರೆಸಿ ಅವರನ್ನು ಎಂಬರಾಸಿಂಗ್ ಪೊಸಿಷನ್‌ಗೆ ಸಿಕ್ಕಿಸುತ್ತೀರಿ. ನಮ್ಮನ್ನು ಆ ಕಮಿಟಿಯ ಸದಸ್ಯರನ್ನಾಗಿ ಮಾಡಿ, ನಾವು ಅಧಿಕಾರಿಗಳಿಗೆ ಪ್ರಶ್ನೆಯನ್ನು ಕೇಳಿದಾಗ ತಬ್ಬಿಬ್ಬಾಗುತ್ತಾರೆ. ಆ ಮೇಲೆ ಏನು ಸ್ವಾಮಿ ನಮ್ಮನ್ನು ಜೋರಾಗಿ ಕೇಳುತ್ತೀರಿ ಎಂದು ಕೇಳುತ್ತಾರೆ. ಸಮಿತಿ ಇಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದರೆ ಯಾರ ಮೇಲೂ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಹೀಗಾದರೆ ಸಮಿತಿಗಳು ಏನು ವರದಿಯನ್ನು ಕೊಟ್ಟಿರುತ್ತವೆ ಅದಕ್ಕೆ ಮಹತ್ವ ಏನಿದೆ? ಅದು ನನ್ನ ವಾದ. ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿ ಕೊಟ್ಟಂತಹ ರಿಪೋರ್ಟ್ ಯಾವುದನ್ನೂ ಇದುವರೆಗೆ ಇಂಪ್ಲಿಮೆಂಟ್ ಮಾಡಿಲ್ಲ. ಬಹಳಷ್ಟು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದರೂ ಇದುವರೆಗೆ ಯಾರ ಮೇಲೂ ಕೂಡ ಕ್ರಮವನ್ನು ತೆಗೆದುಕೊಂಡಿಲ್ಲ. ಕಮಿಟಿ ಏನು ವರದಿಯನ್ನು ಕೊಟ್ಟಿದೆ ಅದರ ಮೇಲೆ ಯಾರ ಮೇಲೂ ಕೂಡ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ಇವತ್ತು ಅವರೇ ಉನ್ನತ ಅಧಿಕಾರಕ್ಕೆ ಬಂದು ವಾಪಸ್ಸು ಹೊರಟುಹೋದರು. ಅದಕ್ಕೆ ನಾನು ಹೇಳುತ್ತೇನೆ, ಸಾರ್ವಜನಿಕ ಉದ್ದಿಮೆಗಳ ಸಮಿತಿಯನ್ನು ರಚನೆ ಮಾಡಿ ಅದಕ್ಕೆ ಸಾರ್ವಜನಿಕರ ಹಣವನ್ನು ಖರ್ಚು ಮಾಡುವುದಕ್ಕೆ ಬದಲಾಗಿ ಇವತ್ತು ನೀವು ಇದಕ್ಕೆ ಖರ್ಚು ಮಾಡತಕ್ಕ ಹಣವನ್ನು ಬೇರೆಯದಕ್ಕೆ ಖರ್ಚು ಮಾಡಿ. ಇವತು ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಮೀಟಿಂಗ್ ನಡೆದರೆ ಒಂದು ದಿವಸಕ್ಕೆ ೨ ಲಕ್ಷ ರೂಪಾಯಿ ಖರ್ಚಾಗುತ್ತದೆ. ಇಷ್ಟು ರೂಪಾಯಿ ಖರ್ಚು ಮಾಡಿದರೂ ಸಹಿತ ಸಮಿತಿಯು ಕೊಟ್ಟಂಥ ವರದಿಯನ್ನು ಸರ್ಕಾರ ಅನುಷ್ಠಾನಕ್ಕೆ ತರದೇ ಹೋದರೆ ಆ ವರದಿ ಏಕೆ ಬೇಕೆಂದು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. ಸಾರ್ವಜನಿಕ ಉದ್ದಿಮೆಗಳ ಸಮಿತಿ ಏನು ವರದಿಯನ್ನು ಕೊಟ್ಟಿದೆ, ಅವರ ಆಧಾರದ ಮೇಲೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಕಂಪನಿಗಳ ಪರಿಸ್ಥಿತಿ ಈ ಮಟ್ಟಕ್ಕೆ ಬರುತ್ತಿರಲಿಲ್ಲ ಎನ್ನುವುದರ ಬಗ್ಗೆ ತಾವು ಗಮನಹರಿಸಬೇಕು. ಇದಕ್ಕೆ ತಾವು ಕಾರ್ಯಕ್ರಮ ಹಾಕಬೇಕು. ಯಾವಾಗ ಸಾರ್ವಜನಿಕ ಉದ್ದಿಮೆಗಳ ಸಮಿತಿ ತೀವ್ರವಾಗಿ ಆಕ್ಷೇಪ ಮಾಡಿ ಇಂತಹ ಅಧಿಕಾರಿಗಳಿಂದ ಈ ಕಂಪನಿ ಹಾಳಾಗಿದೆ ಎಂದು ವರದಿಯನ್ನು ಕೊಟ್ಟರೆ, ಅದರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳ ಬೇಕು. ಇಲ್ಲದೇ ಹೋದರೆ ಆ ಸಮಿತಿಗೆ ಮೂರು ಕಾಸಿನ ಬೆಲೆಯೂ ಇಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಉದಾಹರಣೆಗೆ ಕೆ. ಎಸ್. ಟಿ. ಡಿ. ಸಿ. ಬಗ್ಗೆ ಹೇಳಬೇಕಾಗುತ್ತದೆ. ನಮ್ಮ ರಾಜ್ಯದ ಹೆಮ್ಮೆಯ ಕಾರ್ಖಾನೆ ಇದು. ಏನಾಗಿದೆ ಇವತ್ತು? ಇವತ್ತು ಕೆ. ಎಸ್. ಟಿ. ಡಿ. ಸಿ ೧೯೮೫ನೇ ಇಸವಿಯವರೆಗೆ ಲಾಭ ಮಾಡಿಕೊಂಡು ಬಂದಿದೆ. ಅದರ ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಮ್ ಮಾಡಿದಾಗಿನಿಂದ ಈಚೆಗೆ ಇದು ಹೆಚ್ಚು ಕಡಿಮೆ ೧೦೦ ಕೋಟಿ ಲಾಸ್‌ಗೆ ಬಂದಿದೆ. ಇವತ್ತು ಇದರ ಎಲ್ಲಾ ಲೆಕ್ಕ ಸೇರಿಸಿಕೊಂಡರೆ ಇವತ್ತು ಈ ಕಂಪನಿಯ ಬ್ಯಾಂಕ್ ಬ್ಯಾಲೆನ್ಸ್ ಏನಿದೆ? ಇದನ್ನು ಲೆಕ್ಕ ಹಾಕಿದರೆ ಹತ್ತಿರ ಹತ್ತಿರ ಮೂರು ಕೋಟಿ ಲಾಸ್‌ಗೆ ಹೋಗಿದೆ. ಇದರಿಂದ ಪ್ರಯೋಜನ ಆಗುವುದಿಲ್ಲ. ಈ ಕೆ. ಎಸ್. ಟಿ. ಡಿ. ಸಿ.ಯ ರಿಹ್ಯಾಬಿಲಿಟೇಷನ್‌ಗೆ ನನಗೆ ತಿಳಿದಮಟ್ಟಿಗೆ ಯಾವುದಾದರೂ ಒಂದು ಸಂಸ್ಥೆಯನ್ನು ...

ಶ್ರೀ ನಜೀರ್ ಅಹಮದ್ (ಸಣ್ಣ ಕೈಗಾರಿಕೆಗಳ ರಾಜ್ಯಮಂತ್ರಿ):- ಅದು ಕೆ. ಎಸ್. ಡಿ. ಎಲ್.

ಶ್ರೀ ಎಲ್. ಆರ್. ಶಿವರಾಮೇಗೌಡ:- ಹೌದು. ದಯಮಾಡಿ ಕ್ಷಮಿಸಿ. ಕರ್ನಾಟಕ ಸೋಪ್ಸ್

ಅಂಡ್ ಡಿಟರ್ಜೆಂಟ್ಸ್ ಎಂದು ನಾನು ಕನ್ನಡದಲ್ಲಿ ಒಂದು ಸಲ ಹೇಳಿದ್ದೆ. ಈ ಕಂಪನಿಗೆ ರಿಹ್ಯಾಬಿಲಿಟೇಷನ್ ಸ್ಕೀಮ್ ಮಾಡಿದ್ದೀರಿ. ಈ ರಿವೈವ್ ಸ್ಕೀಮ್‌ನ್ನು ಯಾವುದಾದರೂ ಒಂದು ಕಂಪನಿಗೆ ಮಾಡಿದರೆ ಒಳ್ಳೆಯದು, ಇದರ ಅರ್ಥ ಏನೆಂದರೆ ನಾನು ಒಂದು ಕಂಪನಿಗೆ ರಿಹ್ಯಾಬಿಲಿಟೇಷನ್ ಮಾಡಿಸಿಕೊಂಡಿದ್ದೇನೆ. ಅಂದರೆ ಒಂದು ಕಂಪನಿಗೆ ಒಂದು ಸಾರಿ ಪುನರ್‌ಜೀವನ ಕೊಟ್ಟ ಮೇಲೆ ನಿಮ್ಮ ಕಾನೂನಿನ ಪ್ರಕಾರ ಮತ್ತೊಂದು ಸಾರಿ ಮಾಡುವುದಕ್ಕೆ ಬರುವುದಿಲ್ಲ. ಒಂಭತ್ತು ಕೋಟಿ ರೂಪಾಯಿಗಳ ಪುನಶ್ಚೇತನ ಕಾರ್ಯಕ್ರಮ ಹಾಕಿಕೊಂಡಿದ್ದೀರಿ; ಈ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ ಕಂಪನಿಗೆ. ನಾನು ಕೇಳುತ್ತಿದ್ದೇನೆ, ಕೇವಲ ಎರಡು ಕೋಟಿ ರೂಪಾಯಿ ಮಾತ್ರ ಬಿಡುಗಡೆಯಾಗಿದೆ. ಇನ್ನೂ ಏಳು ಕೋಟಿ ಬಿಡುಗಡೆಯಾಗಿಲ್ಲ. ಏತಕ್ಕೋಸ್ಕರ ಬಿಡುಗಡೆಯಾಗಿಲ್ಲ? ಈ ಪುನಶ್ಚೇತನ ಕಾರ್ಯಕ್ರಮದಲ್ಲಿ ಸರಿಯಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೇ ಹೋದರೆ ಈ ಕಂಪನಿಯು ಉಳಿಯುವುದಿಲ್ಲ, ಇದಕ್ಕೆ ಸರ್ಕಾರವೇ ಕಾರಣವೆಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಇವತ್ತು ಮ್ಯಾನೇಜ್‌ಮೆಂಟ್ ಕಾರಣದಿಂದ ಈ ಕಂಪನಿ ಹಾಳಾಗುತ್ತಿರಬೇಕಾದರೆ, ಕಮಿಟ್‌ಮೆಂಟ್ ಇರತಕ್ಕವರನ್ನು ಈ ಕಂಪನಿಗೆ ಹಾಕಿದರೆ ಮಾತ್ರ ಇದು ಮುಂದೆ ಬರುತ್ತದೆ. ರೋಗಗ್ರಸ್ತ ಅಧಿಕಾರಿಗಳನ್ನು ಹಾಕಿದರೆ ಕಂಪನಿಯೂ ರೋಗಗ್ರಸ್ತವಾಗುತ್ತದೆ. ನಾವು ಅಧಿಕಾರಿಗಳನ್ನು ಹಾಕುವಾಗಲೇ ಯೋಚನೆ ಮಾಡಿ ಒಳ್ಳೆಯ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು. ಆಗ ಮಾತ್ರ ಕಂಪನಿ ಮೇಲೆ ಬರುವುದಕ್ಕೆ ಅವಕಾಶವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಈ ಕಾರ್ಖಾನೆಯ ಮಾರುಕಟ್ಟೆ ಜವಾಬ್ದಾರಿಯನ್ನು ಎಂ. ಎಸ್. ಐ. ಎಲ್.ಗೆ ವಹಿಸಿದ್ದೀರಿ. ಅದು ಮೊದಲನೇ ತಪ್ಪು. ಮಾರ್ಕೆಟಿಂಗ್ ಡಿವಿಜನ್ನನ್ನು ನೀವೇ ಇಟ್ಟುಕೊಂಡಿದ್ದರೆ ಈ ಸ್ಥಿತಿ ಬರುತ್ತಿರಲಿಲ್ಲ. ಏಕೆಂದರೆ ವೇಪ್ ಅಂತ ಹೇಳಿ ೨೦ ಕೋಟಿ ರೂಪಾಯಿಗಳ ಆರ್ಡರ್ ಎಂ. ಎಸ್. ಐ. ಎಲ್.ನಿಂದ ಬರುತ್ತದೆ. ಇವತ್ತು ಮಾರ್ಕೆಟಿಂಗ್ ಮಾಡತಕ್ಕವರು ನೀವು ಮಾಡಬೇಕಿತ್ತು. ಅದನ್ನು ಬಿಟ್ಟು ಬೇರೆ ಒಂದು ಕಂಪನಿಯ ಯಾರೋ ಸರ್ದಾರ್‌ಜಿಗೆ ಕೊಟ್ಟರೆ, ಅಲ್ಲಿ ಬರತಕ್ಕಂಥ ಲಾಭ ಸರ್ದಾರ್‌ಜಿಗೆ ಹೋಯಿತು. ಈ ಒಂದು ಹಿನ್ನಲೆಯಲ್ಲಿ ಈ ಕಂಪನಿ ಮುಳುಗಿ ಹೋಗತಕ್ಕಂಥ ಪರಿಸ್ಥಿತಿ ಬಂದಿದೆ. ಈ ಎಲ್ಲ ಹಿನ್ನಲೆಯಲ್ಲಿ ಸದನದಲ್ಲಿ ಚರ್ಚೆಯಾಗಿ ಜಸ್ಟೀಸ್ ಮಹೇಂದ್ರ ಅವರಿಂದ ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡಿಸುತ್ತೇವೆ ಎಂದು ಹೇಳಿದ್ದರು. ನಾನು ಕೇಳುತ್ತೇನೆ, ಜಸ್ಟೀಸ್ ಮಹೇಂದ್ರ ಜ್ಯುಡಿಷಿಯಲ್ ಎನ್‌ಕ್ವೈರಿ ಏನಾಗಿದೆ? ಇದನ್ನು ತಾವು ಹೇಳಬೇಕು. ಇವತ್ತು ಈ ಫ್ಯಾಕ್ಟರಿಯಲ್ಲಿ ೩೦ ಪರ್ಸೆಂಟ್ ಕೂಡ ಪ್ರೊಡಕ್ಷನ್ ಇಲ್ಲ. ಲೇಬರರ್ಸ್ ಎಲ್ಲಾ ಸುಮ್ಮನೆ ಕುಳಿತಿದ್ದಾರೆ. ಆದ್ದರಿಂದ ಇದರ ಬಗ್ಗೆ ಏನಾದರೂ ಒಂದು ಹೊಸ ಪ್ರೋಗ್ರಾಮ್ ಹಾಕಬೇಕು. ಇದಕ್ಕೆ ಪುನಶ್ಚೇತನ ಕೊಡತಕ್ಕಂಥ ರೀತಿಯಲ್ಲಿ ತಾವು ಪ್ರಯತ್ನಪಡಬೇಕು. ಇಲ್ಲಿ ಪಕ್ಕದಲ್ಲೇ ಇರತಕ್ಕಂಥ ಲ್ಯಾಂಡ್ ಏನಿದೆ ಅದು ಬಹಳ ಬೆಲೆಬಾಳತಕ್ಕಂಥ ಜಾಗ. ಅದನ್ನು ಉಳಿಸಿಕೊಳ್ಳತಕ್ಕಂಥ ಕೆಲಸ ಆಗಬೇಕು. ಏಕೆಂದರೆ ಇವತ್ತು ಇದರ ಮೇಲೆ ಕೆಲವರಿಗೆ ಕಣ್ಣುಬಿದ್ದಿದೆ. ಅದನ್ನು ಹೊಡೆಯಬೇಕು ಅಂತ ಹೇಳಿ ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಅವಕಾಶ ಕೊಡಬಾರದು. ಇದು ನಮ್ಮ ರಾಜ್ಯದ ಹೆಮ್ಮೆಯ ಕಾರ್ಖಾನೆ. ಈ ಕಾರ್ಖಾನೆಯನ್ನು ಉಳಿಸತಕ್ಕ ನಿಟ್ಟಿನಲ್ಲಿ ಸರ್ಕಾರ ತೀವ್ರವಾಗಿ ಗಮನಹರಿಸಬೇಕು. ಇದನ್ನು ಹೀಗೆಯೇ ಬಿಟ್ಟರೆ ಇನ್ನು ಎರಡು-ಮೂರು ವರ್ಷಗಳಲ್ಲಿ ಅದರ ಬಾಗಿಲು ಹಾಕದೆ ಗತ್ಯಂತರವಿಲ್ಲ. ಅವಕ್ಕೋಸ್ಕರ ಇದರ ಬಗ್ಗೆ ತೀವ್ರವಾಗಿ ಆಲೋಚನೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ

ಮಾಡುತ್ತೇನೆ. ಇವತ್ತು, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್, ಕರ್ನಾಟಕ ವಿದ್ಯುಚ್ಛಕ್ತಿ ಕಾರ್ಖಾನೆ, ಎನ್. ಜಿ. ಇ. ಎಫ್ ಈ ಮೂರು ಉದ್ದಿಮೆಗಳನ್ನು ಸಾರ್ವಜನಿಕ ಉದ್ಯಮ ಸಮಿತಿಯೂ ಸಹ ಸ್ಪೆಲೌಟ್ ಮಾಡಿದೆ; ಈ ಡೂಪ್ಲಿಕೇಟ್ ಮ್ಯಾನೇಜ್‌ಮೆಂಟ್ ಏಕೆ ಮಾಡುತ್ತೀರಿ, ಇವತ್ತು ಎನ್. ಜಿ. ಇ. ಎಫ್.ಗೆ ಒಬ್ಬರು ಐ. ಎ. ಎಸ್. ಆಫೀಸರ್, ಕವಿಕಾ ಕಾರ್ಖಾನೆಗೆ ಒಬ್ಬರು ಐ. ಎ. ಎಸ್. ಆಫೀಸರ್, ಮೈಸೂರು ಇಂಡಸ್ಟ್ರೀಸ್ ಕಂಪನಿಗೆ ಒಬ್ಬರು ಐ. ಎ. ಎಸ್. ಆಫೀಸರ್. ಈ ಮೂರರ ಪ್ರೊಡಕ್ಷನ್ ಸಹಿತ ಒಂದೇ, ಈ ಮೂರರ ವ್ಯವಸ್ಥೆಯೂ ಸಹಿತ ಒಂದೇ. ಇವತ್ತು ಈ ಮೂರು ಕಾರ್ಖಾನೆಗಳಲ್ಲೂ ಸಹಿತ, ಎಲೆಕ್ಟ್ರಿಕಲ್‌ಗೆ ಸಂಬಂಧಪಟ್ಟ ವಸ್ತುಗಳನ್ನು ತಯಾರು ಮಾಡುವಂತಾದ್ದು ಇದೆ. ಇವತ್ತು ಎನ್. ಜಿ. ಎಫ್.ನಲ್ಲಿ ಮಾರ್ಕೆಟಿಂಗ್ ವ್ಯವಸ್ಥೆ ಬಹಳ ಚೆನ್ನಾಗಿದೆ. ಅದನ್ನು ಉಪಯೋಗ ಮಾಡಿಕೊಂಡು, ಡೂಪ್ಲಿಕೇಟ್ ಮ್ಯಾನೇಜ್‌ಮೆಂಟನ್ನು ಕಡಿಮೆ ಮಾಡಿ, ಈ ಮೂರನ್ನೂ ಕ್ಲಬ್ ಮಾಡಿ, ದಕ್ಷರಾಗಿರತಕ್ಕಂಥ ಅಧಿಕಾರಿಗಳೊಬ್ಬರನ್ನು ಹಾಕಿ. ನಿಮಗೆ ಮ್ಯಾನೇಜ್‌ಮೆಂಟ್ ಕಾಸ್ಟ್ ಸಾಕಷ್ಟು ಬರುತ್ತದೆ. ಇದನ್ನು ಕಡಿಮೆ ಮಾಡಿದರೆ, ನಿಮಗೆ ಲಾಸ್ ಆಗುವುದು ಕಡಿಮೆಯಾಗುತ್ತದೆ. ಇದನ್ನು ಬಹಳ ಸಾರಿ ಈ ಸದನದಲ್ಲಿ ಹೇಳಿದ್ದೇವೆ, ಬಹಳ ಜನ ಶಾಸಕರು ಸಹಿತ ಇದರ ಬಗ್ಗೆ ಅವರ ಗಮನಹರಿಸಿದ್ದಾರೆ. ಆದರೂ ಸಹಿತ, ಸರ್ಕಾರದವರಿಗೆ, ಅಧಿಕಾರಿ ಮಿತ್ರರು ನಿಮ್ಮ ಚೇಂಬರುಗಳಲ್ಲಿ ಏನು ಹೇಳುತ್ತಾರೆ ಅದು ಅವರ ತಲೆಗೆ ಹಿಡಿಯುತ್ತದೆಯೇ ಹೊರತು, ನಾವು ಇಲ್ಲಿ ಏನು ಹೇಳಿದರೂ ನಿಮ್ಮ ತಲೆಗೆ ಹಿಡಿಯುವುದಿಲ್ಲ. ನಾವು ಹೇಳಿದ್ದನ್ನೂ ಸ್ವಲ್ಪ ಗಮನಕ್ಕೆ ತಾವು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಮತ್ತು ಮಾನ್ಯ ಮಂತ್ರಿಯವರಲ್ಲಿ ಒತ್ತಾಯ ಮಾಡುತ್ತೇನೆ. ಇವತ್ತು ಎನ್. ಜಿ. ಇ. ಎಫ್. ಕಂಪನಿ ಸಹಿತ ಒಂದು ಪ್ರೆಸ್ಟೀಜಿಯಸ್ ಆಗಿರತಕ್ಕ ಕಂಪನಿ. ಈ ಕಂಪನಿ ಬಹಳಷ್ಟು ಲಾಸ್‌ಗೆ ಬರುತ್ತಿದೆ. ಇವತ್ತು ನನಗೆ ತಿಳಿದಮಟ್ಟಿಗೆ, ಮೋಟಾರು ಡಿವಿಜನ್ ಮಾತ್ರ ಕೆಲಸ ಮಾಡುತ್ತಿದೆ. ಈಗಾಗಲೇ ಎನ್. ಜಿ. ಇ. ಎಫ್. ಒಂದು ರೀತಿಯಲ್ಲಿ ಡಬ್ಬ ಕಾರ್ಖಾನೆ ಆದ ಹಾಗೆ ಆಗಿದೆ. ಇವತ್ತು ಮೋಟಾರು ಡಿವಿಜನ್ ಹೆಚ್ಚು ಕಡಿಮೆ ಪೂರ್ತಿಯಾಗಿ ಅರ್ಧಕ್ಕೆ ಬಂದಿದೆ. ಸ್ವಿಚ್‌ಗೇರ್ ಡಿವಿಜನ್ ಪೂರ್ತಿಯಾಗಿ ನಿಂತುಹೋಗಿದೆ. ಹೈ ವೋಲ್ಟೇಜ್ ಟ್ರಾನ್ಸ್‌ಫಾರ್ಮರ್ಸ್ ತಯಾರು ಮಾಡುತ್ತಾ ಇದ್ದರು, ಅದು ಸ್ವಲ್ಪ ಸ್ಥಗಿತವಾಗುವ ಮಟ್ಟಕ್ಕೆ ಬಂದಿದೆ. ಈ ರೀತಿಯಾಗಿ ಇರತಕ್ಕಂಥ ಸಂದರ್ಭದಲ್ಲಿ, ನೀವು ಇದರ ಬಗ್ಗೆ ಗಮನಹರಿಸಿ ಶೀಘ್ರವಾಗಿ ಎನ್. ಜಿ. ಇ. ಎಫ್. ಕಾರ್ಖಾನೆಯನ್ನು ತನಿಖೆ ಮಾಡಿಸಬೇಕು. ಇವತ್ತು ಎ. ಇ. ಜಿ. ಷೇರ್ ಕೊಡತಕ್ಕ ವಿಚಾರದಲ್ಲಿ, ಈ ಸದನದಲ್ಲಿ ಬಹಳಷ್ಟು ಚರ್ಚೆಯಾಗಿದೆ. ಮತ್ತು ಮೇಲ್ಮನೆಯಲ್ಲೂ ಚರ್ಚೆಯಾಗಿದೆ. ಅಲ್ಲಿ ಅಧಿಕಾರಿಗಳು ಸಿಕ್ಕಿಹಾಕಿಕೊಂಡಿರುವವರನ್ನು ಸ್ಪೆಲ್‌ಔಟ್ ಮಾಡಿದ್ದಾರೆ. ಆ ಅಧಿಕಾರಿಗಳು ನಿಮ್ಮ ಕೈಗೆ ಸಿಕ್ಕಿಲ್ಲ. ಸಿಕ್ಕಿಹಾಕಿಕೊಂಡಿರುವ ಅಧಿಕಾರಿಗಳು ಸಾರ್ವಜನಿಕ ಉದ್ದಿಮೆಗಳ ಸಮಿತಿಯ ಮುಂದೆ ಬರಲಿಲ್ಲ, ಇವತ್ತು ಜಸ್ಟೀಸ್ ಜಯರಾಮನ್ ಕಮಿಟಿಯವರೂ ವರದಿ ಕೊಟ್ಟರು, ಈ ಕಮಿಟಿಯ ಮುಂದೆಯೂ ನಿಮ್ಮ ಅಧಿಕಾರಿಗಳು ಬರಲಿಲ್ಲ. ಸರ್ಕಾರದವರು ಏನು ಕಾರ್ಯಕ್ರಮ ಹಾಕಿದ್ದೀರಿ? ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಅಧಿಕಾರಿಗಳು ಇವತ್ತು ಮನೆಗೆ ಹೋಗಿದ್ದಾರೆ. ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡದೇಹೋದರೆ, ಅವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳದೇ ಹೋದರೆ, ಏನೂ ಪ್ರಯೋಜನ ಆಗುವುದಿಲ್ಲ. ಇವತ್ತು ಏನು ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಕಾರ್ಖಾನೆ ಯಾವ ರೀತಿ ಆಗಿದೆಯೋ ಅದೇ ಗತಿ ಈ ಎನ್. ಜಿ. ಇ. ಎಫ್

ಫ್ಯಾಕ್ಟರಿಗೂ ಬರುವುದರಲ್ಲಿ ಸಂಶಯವಿಲ್ಲ. ಇದರ ಬಗ್ಗೆ ಸಮಗ್ರ ತನಿಖೆ ಮಾಡಿ, ಪರಿಶೀಲನೆ ಮಾಡಿ, ಇದನ್ನು ಉಳಿಸುವ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ಇವತ್ತು ಕ್ರಿಮಿನಲ್ ಮತ್ತು ಸಿವಿಲ್ ಪ್ರೊಸೀಡಿಂಗ್ಸ್ ಪ್ರಕಾರ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಸ್. ಜಿ. ಇ. ಎಫ್. ಕಂಪನಿಯಲ್ಲಿ ೯ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿರುವ ಬಗ್ಗೆ ಈ ಸದನದಲ್ಲಿ ಬಹಳಷ್ಟು ಚರ್ಚೆಯಾಯಿತು, ಆದರೂ ನೀವು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ? ಒಂದು ನೂರು ರೂಪಾಯಿಗಳನ್ನು ತಿಂದಂಥ ಒಬ್ಬ ಸಣ್ಣ ಅಧಿಕಾರಿ, ಕೆಳದರ್ಜೆ ಅಧಿಕಾರಿ ಇದ್ದರೆ, ಅವರನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸುತ್ತೀರಿ. ಅದೇ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದಲ್ಲಿ ಅಧಿಕಾರಿಗಳು ಶಾಮೀಲಾಗಿದ್ದರೂ ಸಹಿತ, ಅವರನ್ನು ಮಾತನಾಡಿಸತಕ್ಕ ವ್ಯವಸ್ಥೆಗೆ ಹೋಗಿಲ್ಲ. ಇದರ ಬಗ್ಗೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಸಾರ್ವಜನಿಕ ಉದ್ದಿಮೆಗಳ ಸಮಿತಿಯವರೂ ಸಹಿತ ಸಾಕಷ್ಟು ಚರ್ಚೆ ಮಾಡಿ ರಿಪ್ರೋರ್ಟ್ ಕಳುಹಿಸಿ ಕೊಟ್ಟಿದ್ದಾರೆ. ನಾನೂ ಸಹಿತ ಆ ಸಂದರ್ಭದಲ್ಲಿ ಇದ್ದೆ. ಈ ಪಿ. ಯು. ಸಿ. ಏನಿವೆ ಇದು ತೀವ್ರವಾಗಿ ಆಕ್ಷೇಪಣೆ ಮಾಡಿದೆ, ಎಸ್. ಜಿ. ಇ. ಎಫ್.ನಲ್ಲಿ ಬಹಳಷ್ಟು ಅನ್ಯಾಯ ನಡೆದಿದೆ, ಈ ಅನ್ಯಾಯವನ್ನು ಸರಿಪಡಿಸಬೇಕಾದರೆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದೆ. ನಾನು ಹೇಳುತ್ತೇನೆ, ಈ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯು ಕೊಟ್ಟಿರತಕ್ಕ ಶಿಫಾರಸ್ಸಿನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅವರ ಮೇಲೆ ಕ್ರಿಮಿನಲ್ ಪ್ರೊಸೀಜರ್ ಪ್ರಕಾರ ಕೇಸ್ ದಾಖಲು ಮಾಡಿ. ಈ ರೀತಿ ಮಾಡದೇ ಹಾಗೆಯೇ ಬಿಟ್ಟರೆ, ಈ ೯-೧೦ ಕೋಟಿ ರೂಪಾಯಿಗಳನ್ನು ಹೊಡೆದಿರುವವರನ್ನು ಬಿಟ್ಟು ಬಿಟ್ಟರೆ, ಜನ ನಿಮ್ಮನ್ನು ವಿಚಿತ್ರವಾಗಿ ಕಾಣುತ್ತಾರೆ. ಆದುದರಿಂದ, ಸರ್ಕಾರ ಈ ದಿಶೆಯಲ್ಲಿ ನ್ಯಾಯಾಂಗ ತನಿಖೆ ಮಾಡಿಸಿ ಅಲ್ಲಿ ಏನಾಗಿದೆ ಎನ್ನುವುದರ ಕಡೆ ಗಮನ ಹರಿಸಬೇಕೆಂದು ಹೇಳಿ, ಇನ್ನೊಂದು ವಿಚಾರದ ಬಗ್ಗೆ ತಮ್ಮ ಗಮನಸೆಳೆಯುತ್ತೇನೆ.

ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆಯನ್ನು ಇವತ್ತು ವೀರೇಂದ್ರ ಪಾಟೀಲರ ಸರಕಾರದಲ್ಲಿ ಮಲ್ಯವರಿಗೆ ಕೊಟ್ಟರು. ಅಧಿಕಾರಿಗಳಿಗೆ ಹೇಳಿ ಕಂಪನಿಗಳನ್ನು ಸಿಕ್ ಮಾಡಿಸಿಕೊಳ್ಳುವುದು, ಅದನ್ನು ಖೋಡೆಗಳು, ಮಲ್ಯಗಳು ತೆಗೆದುಕೊಳ್ಳುವುದು ನಡೆದಿದೆ. ಹೀಗಾಗಿ ರಾಜ್ಯದ ಪ್ರತಿಷ್ಠಿತವಾಗಿರುವ ಕಾರ್ಖಾನೆಗಳು ಕೇವಲ ಕೆಲವೇ ಮಂದಿಯ ಕೈಗೆ ಹೋಗುವುದರಲ್ಲಿ ಸಂಶಯವಿಲ್ಲ. ನಾನು ಇವತ್ತು ವಿನಂತಿ ಮಾಡುತ್ತೇನೆ, ಇನ್ನೂ ಮೆಮೋರಾಂಡಂ ಆಫ್ ಆರ್ಟಿಕಲ್ಸ್‌ಗೆ ಸರಕಾರ ಸಹಿ ಮಾಡಲಿಲ್ಲ. ದಿವಂಗತ ದೇವರಾಜ ಅರಸುರವರ ಹೆಮ್ಮೆಯ ಕಾರ್ಖಾನೆ ಇದು, ಈ ರಾಜ್ಯದ ಈ ರಾಷ್ಟ್ರದ ರೈತರಿಗೆ ಗೊಬ್ಬರ ಬೇಕಾದರೆ ಅದು ರಾಷ್ಟ್ರೀಯ ಕೆಮಿಕಲ್ಸ್‌ನಿಂದ ಬರಲಿ ಎಂದು ಹೆಮ್ಮೆಯಿಂದ ಮಾಡಿರತಕ್ಕಂಥ ಕಾರ್ಖಾನೆ. ಕೇವಲ ಅಗ್ಗದ ಕಾಸಿಗೆ ಇದನ್ನು ಮಲ್ಯರಿಗೆ ಇವತ್ತು ಕೊಟ್ಟಿದ್ದೀರಿ. ಇನ್ನೂ ಮೆಮೋರಾಂಡಂ ಆಫ್ ಆರ್ಟಿಕಲ್ಸ್‌ಗೆ ಸರಕಾರ ಸಹಿ ಹಾಕಿಲ್ಲ. ಈಗಲೂ ಸಹಿತ ಇದನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳುತ್ತೇನೆ. ಇದರ ಶೇರು ೧೦ಂಕ್ಕೆ ೧೭೦ ರೂಪಾಯಿ ಇದೆ, ಸರಕಾರ ಕೊಟ್ಟಿರತಕ್ಕದ್ದು ೧೦ಂಕ್ಕೆ ೧೦೦ ರೂಪಾಯಿ. ತಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳಿ, ಈ ಕಂಪನಿಯನ್ನು ಮಾರಾಟ ಮಾಡತಕ್ಕಂಥ ಸಂದರ್ಭದಲ್ಲಿ ಕೋಟ್ಯಾಂತರ ರೂಪಾಯಿಗಳ ಲಂಚ ಏನು ನಡೆಯಿತು, ಇದು ಏತಕ್ಕೆ ಆಯಿತು ಎಂಬುದರ ಬಗ್ಗೆ ತನಿಖೆ ಮಾಡಿಸಬೇಕು. ಇವತ್ತು ನಮ್ಮ ರಾಜ್ಯದ ಹೆಮ್ಮೆಯ ಕಾರ್ಖಾನೆಗಳು ಈ ರೀತಿ ಹೋಗುವುದಕ್ಕೆ ಬಿಟ್ಟರೆ ಎಲ್ಲಾ ಕಾರ್ಖಾನೆಗಳ ಗತಿ ಹೀಗೆಯೇ ಆಗುತ್ತದೆ. ಯಾವುದನ್ನೂ

ನೀವು ನಡೆಸುವುದಕ್ಕಾಗುವುದಿಲ್ಲ, ಪರಿಸ್ಥಿತಿ ಕೈಮೀರಿ ಹೋಗಿರುವ ಕಾರ್ಖಾನೆಗಳನ್ನು ಬೇರೆಯವರಿಗೆ ಕೊಟ್ಟರೆ ಅದಕ್ಕೆ ಜೀತ ಇದೆ, ಲೆಕ್ಕಾಚಾರ ಇದೆ. ಅದನ್ನು ಬಿಟ್ಟು ಚೆನ್ನಾಗಿ ನಡೆಯುತ್ತಿರತಕ್ಕಂಥ ಕಾರ್ಖಾನೆಗಳನ್ನು ಬೇಕೆಂದೇ ಕುಂಠಿತ ಮಾಡಿ ಮಾರಾಟ ಮಾಡಿದರೆ ಹೇಗೆ? ಒಂದು ಕೈಗಾರಿಕೆಯನ್ನು ನಮ್ಮ ಸರಕಾರ ಹೊಸದಾಗಿ ಪ್ರಾರಂಭ ಮಾಡಲಿಲ್ಲ. ದಿವಂಗತ ದೇವರಾಜ್ ಅರಸ್ ಅವರ ನಂತರ ಈ ರಾಜ್ಯದಲ್ಲಿ ಪ್ರತಿಷ್ಠಿತವಾಗಿರುವ ಒಂದು ಕೈಗಾರಿಕೆಯನ್ನು ನಮ್ಮ ಸರ್ಕಾರ ಪ್ರಾರಂಭ ಮಾಡಲು ಆಗಲಿಲ್ಲ. ತಾವು ಇದರ ಬಗ್ಗೆ ಸಹ ಒಂದು ತೀರ್ಮಾನಕ್ಕೆ ಬರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ನೀವು ಡೀ-ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆ, ೫೦ ಕೋಟಿ ರೂಪಾಯಿ ತರುತ್ತೇವೆಂದು ಹೇಳಿದಿರಿ. ನಾನು ಹೇಳುತ್ತೇನೆ, ಸರಕಾರ ಸ್ಟೇಟ್‌ಮೆಂಟ್ ಮಾಡಬೇಕು, ಯಾವ್ಯಾವ ಕೈಗಾರಿಕೆಗಳನ್ನು ಮಾರಾಟ ಮಾಡುತ್ತೀರಿ, ಯಾವ ಯಾವ ಕೈಗಾರಿಕೆಗಳ ಶೇರುಗಳನ್ನು ಮಾರಾಟ ಮಾಡುತ್ತೀರಿ? ಯಾವ ಯಾವ ಕಾರ್ಖಾನೆಗಳನ್ನು ಇಟ್ಟುಕೊಳ್ಳುತ್ತೀರಿ ಎಂಬ ಬಗ್ಗೆ ಸಂಕ್ಷಿಪ್ತವಾದ ವರದಿಯನ್ನು ಸರಕಾರ ಜನತೆಯ ಮುಂದಿಡಬೇಕು. ಏಕೆಂದರೆ ಡಿ. ದೇವರಾಜ ಅರಸುರವರ ಹೆಮ್ಮೆಯ ಕಾರ್ಖಾನೆ ಇದು. ಅಧ್ವರಿಂದ ವಿವರಗಳನ್ನು ಹೇನಾಗಿದೆ, ಏನಾಗಿಲ್ಲ ಎಂದು ಜನಕ್ಕೆ ಗೊತ್ತಾಗುತ್ತದೆ ಹಾಗೂ ನೀವು ಯಾವ ಯಾವ ಕಂಪನಿಗಳ ಮೇಲೆ ಹೆಚ್ಚು ಬಂಡವಾಳ ಹಾಕುತ್ತೀರಿ, ಯಾವ ಯಾವ ಕಂಪನಿಗಳನ್ನು ಮಾರಾಟ ಮಾಡುತ್ತೀರಿ ಎಂಬುದು ಜನಕ್ಕೆ ಗೊತ್ತಾಗುತ್ತದೆ. ಕೆಲವು ಕಂಪನಿಗಳನ್ನು ಉದಾಹರಣೆಗೆ ಕಿಂಕೋ, ಲಿಡ್ಕರ್, ಮೈಸೂರ್ ಸಿಲ್ಕ್ ಫಿಲೇಚರ್ಸ್, ಕೊಳ್ಳೇಗಾಲ ಸಿಲ್ಕ್ ಫಿಲೇಚರ್ಸ್, ಕ್ರೋಮ್ ಟ್ಯಾನಿಂಗ್ ಇವುಗಳನ್ನು ನೀವು ಕೊಡದೇ ಹೋದರೆ ವಿಧಿ ಇಲ್ಲ. ಅಂತಹವುಗಳನ್ನು ಕೊಡತಕ್ಕದ್ದು ಸರಿ, ನೀವು ಯಾವ ಯಾವುದನ್ನು ಮಾರಾಟ ಮಾಡುತ್ತೀರಿ ಎಂಬುದನ್ನು ಸರಕಾರ ಹೇಳಬೇಕು. ಇವುಗಳ ಬಗ್ಗೆ ಸರಕಾರ ಸಮಗ್ರವಾಗಿ ತನಿಖೆ ನಡೆಸಿ ಹೇಳಿಕೆ ಕೊಡಬೇಕು, ಯಾವ ಕಂಪನಿಗಳನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ ಎಂಬುದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಿದರೆ ಇದು ಸುಲಭವಾಗಿ ಜನಗಳಿಗೆ ಅರ್ಥವಾಗುತ್ತದೆ. ಇಂತಿಂತಹ ಕಾರ್ಖಾನೆಗಳಿಂದ ರಾಜ್ಯಕ್ಕೆ ಲಾಸ್ ಆಗುತ್ತಿದೆ, ಅವುಗಳನ್ನು ಮಾರಾಟ ಮಾಡದೇ ಹೋದರೆ ಗತ್ಯಂತರವಿಲ್ಲ, ಮಾರಾಟ ಮಾಡಬೇಕೆಂಬ ತೀರ್ಮಾನಕ್ಕೆ ಜನ ಬರುತ್ತಾರೆ. ಆದುದರಿಂದ ಇದನ್ನು ಮಾಡಬೇಕೆಂದು ನಾನು ಸರಕಾರಕ್ಕೆ ಹೇಳುತ್ತೇನೆ. ಇನ್ನು ವಿಕ್ರಾಂತ್ ಟೈರ್ ಫ್ಯಾಕ್ಟರಿ, ಇದು ದೇವರಾಜ ಅರಸರ ಕಾಲದಲ್ಲಿ ಪ್ರಾರಂಭ ಆದಂಥ ಕಂಪನಿ. ಇವತ್ತು ಈ ಕಂಪನಿ ಸಿಯಟ್ ಕಂಪನಿಯ ಹಿಡಿತಕ್ಕೆ ಸೇರಿ ಹೋಗಿದೆ. ಸಿಯೆಟ್ ಟೈರ್ ಎಂದು ಹೇಳಿದರೆ ಇವತ್ತು ಅದಕ್ಕೆ ಮಾರುಕಟ್ಟೆಯಲ್ಲಿ ಎಲ್ಲಿಲ್ಲದ ಬೇಡಿಕೆ. ಇವತ್ತು ವಿಕ್ರಾಂತ್ ಟೈರ್‌ಗೂ ಅಷ್ಟೇ ಬೇಡಿಕೆ ಬಂದಿದೆ. ಆದರೆ ಸಿಯಟ್ ಮಾಲೀಕರು ಈ ಅಧಿಕಾರಿಗಳನ್ನು ಒಳಗೆ ಹಾಕಿಕೊಂಡಿದ್ದಾರೆ. ವಿಕ್ರಾಂತ್ ರೇಡಿಯಲ್ ಟೈರ್ ೧೯೯೨ನೇ ಇಸವಿಗೆ ಮಾರುಕಟ್ಟೆಗೆ ಬರಬೇಕಾಗಿತ್ತು. ವಿಕ್ರಾಂತ್ ಟೈರ್ ಕಂಪನಿಯ ಬಿಲ್ಡಿಂಗ್ಸ್, ಸಿವಿಲ್ ವರ್ಕ್ಸ್ ಕನ್‌ಸ್ಟ್ರಕ್ಷನ್ ಇದನ್ನು ನೀವು ಸಿಯಟ್ ಕಂಪನಿಯ ಷೇರುದಾರರಿಗೆ ಕೊಡುತ್ತೀರಿ. ಏತಕ್ಕೆಂದರೆ ಸಿಯಟ್ ಕಂಪನಿಯವರಿಗೆ ಕೊಟ್ಟರೆ ಅವರು ನಿಧಾನ ಮಾಡುತ್ತಾರೆ, ತಡ ಮಾಡುತ್ತಾರೆ. ಇವತ್ತು ನಿಮ್ಮ ರೇಡಿಯಲ್ ಟೈರ್ ೧೯೯೨ನೇ ಇಸವಿಗೆ ಮಾರುಕಟ್ಟೆಗ ಬಂದಿದ್ದರೆ ಅವರ ವಹಿವಾಟು ಜಾಸ್ತಿಯಾಗುತಿತ್ತು. ಆದರೆ ನನ್ನ ಲೆಕ್ಕಾಚಾರದ ಪ್ರಕಾರ ೧೯೯೫ನೇ ಇಸವಿಗೂ ಇದು ಮಾರುಕಟ್ಟೆಗೆ ಬರುವುದಿಲ್ಲ. ೧೯೯೫ನೇ ಇಸವಿಗೆ ರೇಡಿಯಲ್ ಟೈರ್ ಮಾರುಕಟ್ಟೆಗೆ ಬಂದರೆ ನಿಮ್ಮ ಸ್ಪೆಸಿಫಿಕೇಷನ್ ಬದಲಾವಣೆಯಾಗಿರುತ್ತದೆ. ಸಿಸ್ಟಮ್ ಬದಲಾವಣೆಯಾಗಿರುತ್ತದೆ, ೧೯೯೫ನೇ ಇಸವಿಯಲ್ಲಿ ಈ ರೇಡಿಯಲ್ ಟೈರ್ ಹಳೇ

ಮಾದರಿಯದಾಗಿರುತ್ತದೆ. ಹಳೇ ಗಾಡಿಗಳ ತರಹ ಆಗಿರುತ್ತದೆ, ನೂಕ್ ಮಾಡೆಲ್ ಗಾಡಿಗಳ ತರಹ ಆಗಿರುತ್ತದೆ. ಆಗ ನಿಮ್ಮ ಟೈರ್ಸ್ ಹೊರಕ್ಕೆ ಬಂದರೂ ಪ್ರಯೋಜನವಾಗುವುದಿಲ್ಲ. ಸಿಯಟ್‌ನವರು ಇನ್ನೊಂದು ಹೊಸ ಮಾದರಿ ತಂದಿರುತ್ತಾರೆ. ಸಿಯಟ್ ಟೈರ್ ಕಂಪನಿ ನಡೆಸುವುದಕ್ಕೆ ವಿಕ್ರಾಂತ್ ಟೈರ್ ಕಂಪನಿ ಸಪೋರ್ಟ್ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ ರೇಡಿಯಲ್ ಟೈರ್ ಹೊರ ಬರಲಿಕ್ಕೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ರೇಡಿಯಲ್ ಟೈರ್ ಶೀಘ್ರವಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡತಕ್ಕಂಥ ನಿಟ್ಟಿನಲ್ಲಿ ತಾವು ಪ್ರಯತ್ನ ಪಡಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೊನೆಯದಾಗಿ ಶುಗರ್ ಫ್ಯಾಕ್ಟರಿಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ತಮಗೆ ಬಹಳ ಹತ್ತಿರದಲ್ಲಿ ಇರತಕ್ಕಂಥಾದ್ದು, ಮಾನ್ಯ ಅಧ್ಯಕ್ಷರೇ, ನಿಮಗೇನೂ ಹೆಚ್ಚಿಗೆ ಹೇಳಬೇಕಾಗಿಲ್ಲ. ಇವತ್ತು ಮಂಡ್ಯ ಜಿಲ್ಲೆಯ ಜನರ ಪರವಾಗಿ ನಾನು ಮೊನ್ನೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಮಂಡ್ಯ ಜಿಲ್ಲೆಯಲ್ಲಿ ಸುಮಾರು ೫೦ ಸಾವಿರ ಟನ್ ಕಬ್ಬಿಗೆ ಇವತ್ತು ಬೆಂಕಿ ಹಾಕಿದ್ದಾರೆ. ಆ ಸಮಯದಲ್ಲಿ ಮಾನ್ಯ ಮನೋರಮ ಮಧ್ವರಾಜ್‌ರವರು ಇಲ್ಲ, ಭಾರಿ ಕೈಗಾರಿಕಾ ಸಚಿವರು ಅವರು ಬಂದ ಮೇಲೆ ಹೇಳಿಕೆ ಕೊಡಿಸುತ್ತೇನೆ ಅಂತ ಹೇಳಿ ಸರ್ಕಾರ ಹೇಳಿತ್ತು. ಅದರ ಬಗ್ಗೆ ಇವತ್ತು ಸರ್ಕಾರ ಸ್ಟೇಟ್‌ಮೆಂಟ್ ಮಾಡಬೇಕು. ಮೊದಲು ಮಂಡ್ಯ ಶುಗರ್ ಫ್ಯಾಕ್ಟರಿಯಲ್ಲಿ ೧೫೦೦೦ ಟನ್ ಕಬ್ಬು ಅರೆಯತಕ್ಕಂಥ ಸಾಮರ್ಥ್ಯ ಇದ್ದರೆ ಈಗ ಅದರ ಒಟ್ಟು ಸಾಮರ್ಥ್ಯ ೫ ಸಾವಿರ ಟನ್ ಆಗಿದೆ. ನಾನು ಕೇಳುತ್ತೇನೆ, ಇವತ್ತು ಒಪ್ಪಿಗೆ ಕೊಟ್ಟು ನಾವು ಕಬ್ಬನ್ನು ತೆಗೆದುಕೊಳ್ಳುತ್ತೇವೆ ಅಂತ ಹೇಳುವಂತಹ ಸರ್ಕಾರದವರು ಈಗ ಹಿಂದೇಟು ಹಾಕುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ನಿಮಗೆ ಇದು ಚೆನ್ನಾಗಿ ಗೊತ್ತು. ೧೦ ತಿಂಗಳಿಗೆ ಕಬ್ಬು ಕಟಾವಿಗೆ ಬರುತ್ತದೆ. ೧೦ ತಿಂಗಳಿಗೆ ಕಟಾವಿಗೆ ಬಂದಂತಹ ಕಬ್ಬು ಅರೆದರೆ ಒಳ್ಳೆಯ ಸಕ್ಕರೆಯಾಗುತ್ತದೆ. ಆದರೆ ಕಬ್ಬನ್ನು ನಾವು ಕಟಾವು ಮಾಡಿ ಕೊಟ್ಟರೆ ೧೮ ತಿಂಗಳಾಗಿದೆ ಎಂದು ಹೇಳಿ ನೀವು ಒಪ್ಪಿಗೆ ಕೊಟ್ಟಿರತಕ್ಕಂಥ ಕಬ್ಬು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತೀರಿ; ಮತ್ತೊಂದು ಕಡೆ ಮಾನ್ಯ ನೀರಾವರಿ ಸಚಿವರಾದ ಮಲ್ಲಾರಿಗೌಡರ ಇಲಾಖೆಯವರು ನಿಮಗೆ ಬೆಳೆದು ನಿಂತಿರತಕ್ಕಂಥ ಕಬ್ಬಿಗೆ ನಾವು ನೀರು ಬಿಡುವುದಿಲ್ಲ ಅಂತ ಹೇಳಿ ನೀರು ನಿಲ್ಲಿಸುತ್ತಾರೆ. ನಾನು ಕೇಳುತ್ತೇನೆ ನೀವು ಕೈ ಅಲ್ಲಾಡಿಸಿದರೆ ಆಗುವುದಿಲ್ಲ. ನನಗೆ ಉತ್ತರ ಕೊಡಿ ನೀವು...

ಶ್ರೀ ಮಲ್ಲಾರಿ ಗೌಡ ಎಸ್ ಪಾಟೀಲ್:- ಉದಾಹರಣೆ ಇದ್ದರೆ ತಾವು ಹೇಳಿ. ಸುಮ್ಮನೆ ಹೇಳುವುದು ಬೇಡ.

ಶ್ರೀ ಎಲ್. ಆರ್. ಶಿವರಾಮೇಗೌಡ:- ನಾನು ಒಂದು ಮಾತು ಹೇಳುತ್ತೇನೆ. ಇಂದು ನಿಮ್ಮ ಗೌರವಾನಿತ್ವ ಸ್ಪೀಕರ್‌ರವರು ಇಲ್ಲ. ಅವರ ಕಾಲಿಗೆ ಪೆಟ್ಟು ಬಿದ್ದು ಮನೆಯಲ್ಲಿ ಮಲಗಿದ್ದಾರೆ. ಮದ್ದೂರಿನಿಂದ ಮತ್ತು ನಾಗಮಂಗಲದಿಂದ ಸುಮಾರು ಒಂದು ಸಾವಿರ ಜನರು ಬಂದಿದ್ದರು. ನಾನು ಭಾರಿ ಕೈಗಾರಿಕಾ ಮಂತ್ರಿಗಳ ಮನೆಗೆ ಅವರನ್ನು ಕರೆದುಕೊಂಡು ಹೋಗಿದ್ದೆ. ಇವತ್ತು ಅವರು ಹೇಳಲಿ ಇಲ್ಲ ಅಂತ. ಆ ರೈತರು ಏನು ಕೇಳಿದರು ಅಂದರೆ ಒಂದು ಕಡೆ ನೀರು ನಿಲ್ಲಿಸಿದ್ದೀರಿ. ಮತ್ತೊಂದು ಕಡೆ ನಾವು ಬೆಳೆದಿರತಕ್ಕಂಥ ಕಬ್ಬನ್ನು ತೆಗೆದುಕೊಳ್ಳುವುದಿಲ್ಲ: ನೀವೇ ಒಪ್ಪಿಗೆ ಕೊಟ್ಟಿರತಕ್ಕಂಥಾದ್ದು: ಸರ್ಕಾರ ಏನು ಮಾಡುತ್ತಿದೆ ಎಂದು ಆಗಲೇ ಮಾನ್ಯ ಮಧ್ವರಾಜ್‌ರವರು ಆ ಗಂಟೆಯಲ್ಲೇ ಆ ನಿಮಿಷದಲ್ಲೇ ಫೋನ್ ಮಾಡಿ ಸಂಬಂಧಪಟ್ಟವರಿಗೆ ಕ್ರಮ ತೆಗೆದುಕೊಳ್ಳಿ ಅಂತ

ಹೇಳಿದರು. ನಾನು ಅವರ ಗಮನ ಸೆಳೆದಿದ್ದೆ. ಅವರು ಹೇಳಬೇಕು ಈ ಸಂದರ್ಭದಲ್ಲಿ ನೀವು ನೀರು ನಿಲ್ಲಿಸಿರಲಿಲ್ಲ ಎನ್ನತಕ್ಕಂಥಾದ್ದನ್ನು ಹೇಳುವುದಾದರೆ ನಾನು ನಿಮಗೆ ಸಾಕ್ಷ್ಯಾಧಾರವಾಗಿ ಯಾವ ಯಾವ ಭಾಗದಲ್ಲಿ ನೀರು ನಿಲ್ಲಿಸಿದ್ದರು ಎಂಬುದರ ವಿವರಗಳನ್ನು ಕೊಡುತ್ತೇನೆ. ಅದು ನಿಮ್ಮ ಗಮನಕ್ಕೆ ಬಾರದೇ ಇರಬಹುದು. ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ರೈತರಿಗೆ ನೀರು ಇಲ್ಲ. ನೀರು ಬಿಡಿಸಬೇಕು. ಅಲ್ಲಿ ರೈತರು ಬೆಳೆಯುತಕ್ಕಂಥ ಕಬ್ಬು ತೆಗೆದುಕೊಳ್ಳಬೇಕು. ಎರಡೂ ಆಗಲಿಲ್ಲವೆಂದರೆ ನೀವು ಕಬ್ಬನ್ನು ಬೆಂಕಿಗೆ ಹಾಕಿಸಿ ನೀವೇ ದುಡ್ಡು ಕೊಡಿಸತಕ್ಕಂಥ ಕೆಲಸ ಮಾಡಬೇಕು. ಇಲ್ಲದಿದ್ದರೆ ಎಲ್ಲಿಗೆ ಹೋಗಬೇಕು ರೈತರು ಇವತ್ತು? ಸುಮಾರು ೫೦ ಸಾವಿರ ಟನ್ ಕಬ್ಬು ಬೆಂಕಿಗೆ ಹಾಕಿದ್ದಾರೆ. ನಾನು ನಿನ್ನೆ ನನ್ನ ಕ್ಷೇತ್ರ ಪ್ರವಾಸ ಮಾಡಿಕೊಂಡು ಬಂದಿದ್ದೇನೆ. ದೇವಲಾಪುರ ಎನ್ನತಕ್ಕಂಥ ಹೋಬಳಿಯಲ್ಲಿ ತಮಗೆ ಗೊತ್ತಿದೆ ಅಧ್ಯಕ್ಷರೇ, ರೈತರು ಸುಮಾರು ೩೦೦ ಟನ್ ಕಬ್ಬನ್ನು ತುಂಡು ಮಾಡಿ ಗೊಬ್ಬರಕ್ಕೆ ಎಸೆದಿದ್ದಾರೆ. ಆ ರೈತರು ಇವತ್ತು ಕಣ್ಣೀರು ಹಾಕುತ್ತಿದ್ದಾರೆ. ಇದರ ಬಗ್ಗೆ ನೀವು ಚಿಂತನೆ ಮಾಡದೇ ಹೋದರೆ ಹೇಗೆ? ನೀವು ಇಲ್ಲಿ ನೀರು ಬಿಡುವುದಿಲ್ಲ ಅಂತ ಹೇಳಿದರೆ ಅಲ್ಲಿ ಬಹಳ ಕಷ್ಟವಾಗುತ್ತದೆ. ನಾವ್ಯಾರೂ ನಮ್ಮಗಳ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಮದ್ದೂರು ಭಾಗದಲ್ಲಿ ನಾಗಮಂಗಲ ದೇವಲಾಪುರ ಭಾಗಗಳಲ್ಲಿ ಕಬ್ಬು ಕೊಳ್ಳಲು ಒಪ್ಪಿಗೆ ಕೊಟ್ಟು ಇಂದು ಸರ್ಕಾರದಿಂದ ಕಬ್ಬು ತೆಗೆದುಕೊಳ್ಳುತ್ತಿಲ್ಲ. ಇವತ್ತು ಮೈ ಷುಗರ್ ಕಂಪನಿಯ ಮ್ಯಾನೇಜ್‌ಮೆಂಟ್‌ನಲ್ಲಿ ಕಿತ್ತಾಟವಿರುವುದರಿಂದ ಇವತ್ತು ಸರಿಯಾಗಿ ಕಬ್ಬು ಅರಿಯುತ್ತಿಲ್ಲ. ನಾನು ವಿನಂತಿ ಮಾಡುತ್ತೇನೆ ನಮ್ಮ ರಾಜ್ಯದಲ್ಲಿ ಇವತ್ತು ೩೪-೩೫ ಷುಗರ್ ಇಂಡಸ್ಟ್ರಿಗಳು ಇದ್ದಾವೆ. ಉತ್ತರ ಪ್ರದೇಶದಲ್ಲಿ ಸುಮಾರು ೨೦೦ ಷುಗರ್ ಕಂಪನಿಗಳು ಇವೆ. ಮಹಾರಾಷ್ಟ್ರದಲ್ಲಿ ೧೫೦ ಷುಗರ್ ಕಂಪನಿಗಳಿವೆ. ನಮ್ಮಲ್ಲಿ ಇನ್ನೂ ೫೦ ಷುಗರ್ ಫ್ಯಾಕ್ಟರಿಗಳನ್ನು ಮಾಡತಕ್ಕಂಥ ಅವಕಾಶ ಇದೆ. ಆ ೫೦ ಷುಗರ್ ಫ್ಯಾಕ್ಟರಿಗಳನ್ನು ಕರ್ನಾಟಕ ರಾಜ್ಯದಲ್ಲಿ ಪ್ರಾರಂಭ ಮಾಡಬಹುದು. ನಾನು ವಿನಂತಿ ಮಾಡುತ್ತೇನೆ. ಕಳೆದ ೮-೧೦ ವರ್ಷಗಳ ಅಧಿವೇಶನದಲ್ಲಿ ಈ ಬಗ್ಗೆ ನೂರಾರು ಉದಾಹರಣೆ ಕೊಟ್ಟಿರಿ. ತಾವು ಕೋ-ಆಪರೇಟಿವ್‌ನಲ್ಲಿ ಬನ್ನಿ ನಾವು ಕೈಗಾರಿಕೆಗೆ ಒಪ್ಪಿಗೆ ಕೊಡಿಸುತ್ತೇವೆ ಎನ್ನತಕ್ಕಂಥ ಬಹಳ ದೊಡ್ಡ ಮಾತನ್ನು ತಾವು ಆಡಿದಿರಿ. ನಾನು ವಿನಂತಿ ಮಾಡುತ್ತೇನೆ ಇವತ್ತು ಎಷ್ಟು ಷುಗರ್ ಫ್ಯಾಕ್ಟರಿಗಳು ಕೋ-ಆಪರೇಟಿವ್‌ನಲ್ಲಿ ಮಾಡಿರತಕ್ಕಂಥಾವು ಎಷ್ಟು ಕಷ್ಟದಲ್ಲಿ ನರಳುತ್ತಿವೆ ಎನ್ನತಕ್ಕಂಥ ಬಗ್ಗೆ ತಾವು ಗಮನ ಹರಿಸಬೇಕು. ಒಂದು ಷುಗರ್ ಫ್ಯಾಕ್ಟರಿ ಮಾಡಬೇಕಾದರೆ ಸುಮಾರು ೪೦ ಕೋಟಿ ರೂಪಾಯಿಗಳು ಬೇಕು. ೪೦ ಕೋಟಿ ರೂಪಾಯಿಗಳನ್ನು ಕೋ-ಆಪರೇಟಿವ್‌ನಲ್ಲಿ ಮಾಡಬೇಕು ಅಂತ ಹೇಳಿದರೆ ೨-೪ ಕೋಟಿ ರೂಪಾಯಿಗಳ ಬಂಡವಾಳ ಬೇಕು. ೪ ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯದಲ್ಲಿ ಕೊಡಲಿಕ್ಕೆ ಆಗುತ್ತದೆಯೇ? ನಮ್ಮ ತಾಲ್ಲೋಕಿನಲ್ಲಿ ವಸೂಲಿ ಮಾಡುವುದಕ್ಕೆ ಆಗುತ್ತದೆಯೇ? ಆಗುವುದಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಮ್ಮಲ್ಲಿ ಕೈಗಾರಿಕೆಗಳು ಹಾಕುವುದಕ್ಕೆ ಬಹಳಷ್ಟು ಜನ ಮುಂದೆ ಬರುತ್ತಾರೆ. ಆ ಜಾಗಗಳನ್ನು ಸೆಲೆಕ್ಟ್ ಮಾಡಿ. ಉದಾಹರಣೆಗೆ ಮಂಡ್ಯದಲ್ಲಿ ಮೂರು ಮಾಡಬಹುದು: ಬೆಳಗಾಂನಲ್ಲಿ ಮೂರು ಮಾಡಬಹುದು; ಬೀದರ್‌ನಲ್ಲಿ ಎರಡು ಮಾಡಬಹುದು; ಮೈಸೂರಿನಲ್ಲಿ ಎರಡು ಮಾಡಬಹುದು; ಬೆಂಗಳೂರು ಸುತ್ತ ಮುತ್ತ ಎರಡು ಮಾಡಬಹುದು; ಹೀಗೆ ಸುಮಾರು ೨೦ ಸಕ್ಕರೆ ಕೈಗಾರಿಕೆಗಳನ್ನು ಹೊಸದಾಗಿ ನಿರ್ಮಾಣ ಮಾಡಬಹುದು. ಇವತ್ತು ಲಕ್ಷೋಪಲಕ್ಷ ವಿದ್ಯಾರ್ಥಿಗಳು ಬಿ. ಎ., ಬಿ. ಕಾಂ. ಮಾಡಿ ಕೆಲಸ ಇಲ್ಲ

ಅಂತ ಹೇಳಿ ಸುತ್ತಾಡುತ್ತಿದ್ದಾರೆ. ನಿರುದ್ಯೋಗಿಗಳಾಗಿ ಬೀದಿಯಲ್ಲಿ ನಿಂತಿದ್ದಾರೆ. ಸಾವಿರಾರು ಜನರಿಗೆ ಕೆಲಸ ಕೊಡಿಸುವುದಕ್ಕಾಗುತ್ತದೆ. ಆದಕ್ಕೆ ನಾನು ಒತ್ತಾಯ ಮಾಡುತ್ತೇನೆ, ಸರಿಯಾಗಿರತಕ್ಕಂಥ ಜಾಗಗಳಲ್ಲಿ ೨೦ ಕೈಗಾರಿಕೆಗಳನ್ನು ಸರ್ಕಾರದ ವತಿಯಿಂದ ಪ್ರಾರಂಭ ಮಾಡಬೇಕು. ಈಗ ಏನು ತಾವು ಡೀ-ಇನ್‌ವೆಸ್ಟ್‌ಮೆಂಟ್ ಮಾಡಿ ಬೇರೆ ಕಡೆಯಲ್ಲಿ ಮಾಡುತ್ತೀವೆಂದು ಹೇಳುತ್ತೀರಿ ಅಂತಹ ಕಡೆಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಮಾಡದೇ ಹೋದರೆ ಸಾಧ್ಯವಾಗುವುದಿಲ್ಲ. ಇವತ್ತು ದಯಮಾಡಿ ತಾವು ತಮ್ಮ ಉತ್ತರದಲ್ಲಿ ಮಂಡ್ಯಾ ಜಿಲ್ಲೆ ಕಬ್ಬಿನ ಬಗ್ಗೆ, ರೈತರ ಗೋಳಿನ ಬಗ್ಗೆ ತಾವು ಸರಿಯಾದಂಥ ಒಂದು ಮಾಹಿತಿ ಕೊಡಬೇಕು. ತಾವು ಮಧ್ಯ ಬರುತ್ತೀರೋ ಇಲ್ಲವೋ ಅನ್ನತಕ್ಕಂಥಾದ್ದು ಈ ಸದನಕ್ಕೆ ತಿಳಿಸಬೇಕು ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇವತ್ತು ಕಂಪ್ಲಿ, ಬ್ರಹ್ಮಾವರ, ಗೌರಿಬಿದನೂರು, ಶುಗರ್ ಫ್ಯಾಕ್ಟರಿಗಳು ನಿಂತುಹೋಗುತ್ತಿವೆ. ಇವತ್ತು ಈ ಒಂದು ಹಿನ್ನಲೆಯಲ್ಲಿ ದೊಡ್ಡ ಶುಗರ್ ಫ್ಯಾಕ್ಟರಿಗಳವರ ಮಾತಿಗೆ ಸರ್ಕಾರ ಮನಸೋತು ಅವರ ಮಾತನ್ನು ಕೇಳುತ್ತಿದೆ. ಖಂಡಸಾರಿ ಶುಗರ್ ಫ್ಯಾಕ್ಟರಿಗಳು ನಮ್ಮ ಮಂಡ್ಯ ಜಿಲ್ಲೆಯಲ್ಲಿ ೬ ಇವೆ. ಅವೆಲ್ಲವನ್ನೂ ಈಗ ನಿಲ್ಲಿಸಿದ್ದೀರಿ. ಇವತ್ತು ಅವು ನಡೆಯುತ್ತಿದ್ದರೆ ರೈತ ಸಂಕಷ್ಟಕ್ಕೆ ಸಿಕ್ಕಿಕೊಳ್ಳುತ್ತಿರಲಿಲ್ಲ. ಆದಕ್ಕೆ ನೀವು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಬೇಕು. ಖಂಡಸಾರಿ ಶುಗರ್ ಫ್ಯಾಕ್ಟರಿಗಳನ್ನು ನಡೆಸತಕ್ಕಂಥ ವ್ಯವಸ್ಥೆಯಾಗಬೇಕು. ಇವತ್ತು ಶುಗರ್ ಫ್ಯಾಕ್ಟರಿಗಳಿಗೆ ಎಷ್ಟು ಸಾಮರ್ಥ್ಯ ಇದೆಯೋ ಆ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಮತ್ತೊಂದು ವಿಚಾರವನ್ನು ತಮಗೆ ಜ್ಞಾಪಕ ಮಾಡಬೇಕಾಗುತ್ತದೆ. ಶೂನ್ಯ ವೇಳೆಯಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಭದ್ರಾವತಿ ಶುಗರ್ ಫ್ಯಾಕ್ಟರಿಯಲ್ಲಿ ಸ್ಟ್ರೈಕ್ ಮಾಡಿದರೆಂದು ಹೇಳಿ ೨೬೦ ಜನರನ್ನು ಕೆಲಸದಿಂದ ತೆಗೆದುಹಾಕಿದಿರಿ. ಅದೇ ಜನ ಗಲಾಟೆ ಮಾಡಿದರೆಂದು ಹೇಳಿ ಅದರಲ್ಲಿ ಯಾರು ಮುಖಂಡರು ಇದ್ದರೋ ಆ ಮುಖಂಡರುಗಳನ್ನು ಮಾತ್ರ ಬಿಟ್ಟು ಆ ೬೫ ಜನರನ್ನು ಬಿಟ್ಟು ಉಳಿಕೆಯವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದೀರಿ. ಅವರು ೮ ವರ್ಷಗಳಿಂದ ಕೆಲಸ ಮಾಡಿದ್ದಾರೆ. ಅವರಿಗೆ ಕೆಲಸ ಕೊಡಲಿಲ್ಲವೆಂದರೆ ಆ ಕಾರ್ಮಿಕರ ಬಾಯಿಗೆ ಮಣ್ಣು ಹಾಕಿದ ಹಾಗೆ ಆಗುತ್ತದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಇವತ್ತು ಕಾರ್ಮಿಕರಿಗೆ ಅವರ ಬೇಡಿಕೆಗಳ ಬಗ್ಗೆ ಕೇಳುವುದಕ್ಕೆ ಹಕ್ಕು ಇದೆ. ನಮಗೆ ಹೇಗೆ ಹಕ್ಕು ಇದೆಯೋ, ಹಾಗೇ ಅವರಿಗೂ ಸಹಿತ ಅವರವರ ಹಂತದಲ್ಲಿ ಹಕ್ಕು ಇದೆ. ಅವರದು ತಪ್ಪಿದ್ದರೆ, ಅವರ ಮೇಲೆ ಬೇರೆ ಕ್ರಮ ತೆಗೆದುಕೊಳ್ಳಿ. ಕೆಲಸದಿಂದ ತೆಗೆದುಹಾಕತಕ್ಕಂಥದ್ದರ ಬಗ್ಗೆ ನಾನು ಮ್ಯಾನೇಜಿಂಗ್ ಡೈರೆಕ್ಟರ್ ಅವರ ಗಮನ ಸೆಳೆದಿದ್ದೇನೆ. ಮಾನ್ಯ ಗೋಪಾಲ ರೆಡ್ಡಿಯವರ ಹತ್ತಿರ ಮಾತನಾಡಿದ್ದೇನೆ. ಅವರು, ಯಾವುದೋ ಪೋಲೀಸ್ ರಿಪೋರ್ಟ್ ಬರಬೇಕೆಂದು ಹೇಳುತ್ತಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಮೈಸೂರು ಕಬ್ಬಿನ ಕಾರ್ಖಾನೆಯಲ್ಲಿ, ಭದ್ರಾವತಿಯಲ್ಲಿರತಕ್ಕಂಥ ಕಾರ್ಖಾನೆಯಲ್ಲಿ ಏನು ೬೫ ಜನರನ್ನು ಹೊರಕ್ಕೆ ಹಾಕಿದ್ದೀರಿ ಅವರನ್ನು ಮತ್ತೆ ಕೆಲಸಕ್ಕೆ ನೇಮಿಸಿಕೊಳ್ಳಬೇಕು. ಅದರ ಬಗ್ಗೆ ಸದನದಲ್ಲಿ ಉತ್ತರ ಕೊಡುವಾಗ ಹೇಳಬೇಕು. ಎರಡಕ್ಕೆ ಪ್ರಮುಖವಾಗಿ ಉತ್ತರ ಕೊಡಬೇಕು. ಒಂದು, ಮಂಡ್ಯಾ ಜಿಲ್ಲೆ ಕಬ್ಬಿನ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಮಾನ್ಯ ಮಲ್ಲಾರಿಗೌಡ ಪಾಟೀಲರು ಸರಿಯಾಗಿ ನೀರು ಬಿಡುತ್ತಾರೋ ಇಲ್ಲವೋ ಎಂಬುದರ ಬಗ್ಗೆ ಹಾಗೂ ನೀವು ಕಬ್ಬು ತೆಗೆದುಕೊಳ್ಳುತ್ತೀರೋ ಇಲ್ಲವೋ ಎಂಬ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕು. ಈ ಎರಡರಲ್ಲಿ ನಮಗೆ ಬೇಕಾಗಿರುವುದು ಒಂದು ಭದ್ರಾವತಿ ಶುಗರ್ ಫ್ಯಾಕ್ಟರಿಯಲ್ಲಿ ೬೫ ಜನರನ್ನು ಕೆಲಸದಿಂದ ತೆಗೆದುಹಾಕಿರತಕ್ಕಂಥಾದ್ದು, ಅವರನ್ನು

ಯಾವುದೇ ತರಹ ಇಲ್ಲದೆ ವಾಪಸ್ ಕೆಲಸಕ್ಕೆ ತೆಗೆದುಕೊಳ್ಳತಕ್ಕಂಥ ಕೆಲಸವನ್ನು ಮಾಡಬೇಕೆಂದು ಹೇಳಿ ಇನ್ನು ತಮ್ಮ 'ವಿಶ್ವ' ಯೋಜನೆಯಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಅದರ ಬಗ್ಗೆ ಮಾನ್ಯ ನಜೀರ್ ಅಹಮದ್‌ರವರು ಮತ್ತು ಮನೋರಮ ಮಧ್ವರಾಜ್‌ರವರು ಜೊತೆಗೂಡಿ ಒಳ್ಳೆಯ ಇನ್‌ಫ್ರಾಸ್ಟ್ರಕ್ಚರ್ ಕ್ರಿಯೇಟ್ ಮಾಡಲು ನಮ್ಮಂಥವರನ್ನು, ಅಂದರೆ ಫ್ಯಾಕ್ಟರಿಗಳಲ್ಲಿ ಕಷ್ಟ ಸುಖವನ್ನು ಅನುಭವಿಸಿರತಕ್ಕಂಥವರನ್ನು ಜೊತೆಗೂಡಿಸಿಕೊಂಡು ಹೋಗಬೇಕು. ನಿಮ್ಮ ಬೇಡಿಕೆಗೆ ನಾವು ಸಹಮತ ಕೊಡುತ್ತೇವೆ ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಸಮಯ ಕಷ್ಟದಲ್ಲೂ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೧.೩೫ ಪಿ. ಎಂ.

+ಶ್ರೀಮತಿ ಮೋಟಮ್ಮ (ಮೂಡಿಗೆರೆ):- ಸನ್ಮಾನ್ಯ ಉಪ ಸಭಾಧ್ಯಕ್ಷರೇ, ಈ ದಿವಸ ಏನು ಬೇಡಿಕೆಗಳನ್ನು ಮೇಜರ್ ಇಂಡಸ್ಟ್ರೀ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಮತ್ತು ಪರಿಸರ ಮಾಲಿನ್ಯ, ರೇಷ್ಮೆ, ಸಮಾಜ ಕಲ್ಯಾಣ, ಟ್ರಾನ್ಸ್‌ಪೋರ್ಟ್ ಮೇಲಿನ ಬೇಡಿಕೆಗಳನ್ನು ಸದನದ ಮುಂದೆ ಇಟ್ಟಿದ್ದಾರೆ, ಅವುಗಳನ್ನು ಬೆಂಬಲಿಸುತ್ತಾ ನಾನು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಸಮಾಜ ಕಲ್ಯಾಣ ಅಂದ ತಕ್ಷಣ ಈ ಸಮಾಜದಲ್ಲಿ ಮೂಗು ಮುರಿದುಕೊಳ್ಳುವ ಜನರೇ ಹೆಚ್ಚಾಗಿ ಕಾಣುತ್ತಿದ್ದೇವೆ. ಇತ್ತೀಚೆಗಂತೂ ಸಮಾಜ ಕಲ್ಯಾಣ ಎನ್ನುವುದನ್ನು ಅರ್ಥ ಮಾಡಿಕೊಂಡಿರುವ ಜನರೇ ಬಹಳ ಕಡಿಮೆ. ಸಮಾಜ ಕಲ್ಯಾಣ ಅಂದ ತಕ್ಷಣ ಅದರಲ್ಲೂ ಹರಿಜನ ಗಿರಿಜನರ ವಿಷಯ ಬಂತು ಅಂದ ತಕ್ಷಣ, ಮಾತೆತ್ತಿದರೆ ೧೮ ಪರ್‌ಸೆಂಟ್ ಹರಿಜನರಿಗೆ ಎನ್ನುವ ಬಗ್ಗೆ ಮಾತನಾಡುತ್ತಾರೆ. ಸಮಾಜದಲ್ಲಿ ಬೇರೆ ವರ್ಗದವರಲ್ಲಿ ಹಿಂದುಳಿದಿರುವವರು ಇಲ್ಲವೇ? ಅವರಿಗಿಂತ ಬಹಳ ಕೆಳಮಟ್ಟದಲ್ಲಿ ಇರುವವರು ಇಲ್ಲವೇನು? ಅವರಿಗೇಕೆ ರಿಸರ್ವೇಷನ್, ಕೆಲವು ಸವಲತ್ತುಗಳನ್ನು ಕೊಡಬಾರದು ಎನ್ನುವ ಪ್ರಶ್ನೆ ಮಾಡುವ ಜನ ಈಗ ಹೆಚ್ಚಾಗುತ್ತಿದ್ದಾರೆ. ಆದರೆ, ಇವರೆಲ್ಲಾ ಏಕೆ ಸರಿಯಾಗಿ ಸಮಾಜಕಲ್ಯಾಣವನ್ನು ಅರ್ಥಮಾಡಿಕೊಂಡಿಲ್ಲವೆನ್ನುವುದು ನನ್ನ ಪ್ರಶ್ನೆಯಾಗಿದೆ. ಇವತ್ತು, ಸಮಾಜದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಹರಿಜನ ಗಿರಿಜನರು ಏನು ಶೋಷಣೆಗೆ ಒಳಗಾಗಿದ್ದಾರೆ, ಅವರಿಗೆ ಸಮಾಜದಲ್ಲಿ, ಅವರನ್ನು ಸಮಾಜದ ಇತರ ವರ್ಗದವರ ಹಾಗೆ ಹೇಗೆ ಮುಂದೆ ತರಬೇಕು? ಇನ್ನೂ ಆ ಜನ ನಮ್ಮ ಸರಿಸಮಾನವಾಗಿ ಈ ಸಮಾಜದಲ್ಲಿ ಬರಬೇಕು ಎಂದು ಉದಾರ ಮನೋಭಾವದಿಂದ ಯೋಚನೆ ಮಾಡುವ ಜನ ಬೇಕಾಗಿದ್ದಾರೆ. ಈ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳುವುದಾದರೆ, Article 46 of the Constitution - "The State shall promote with special care the educational and economic interests of the weaker sections of the people, and, in particular, of the scheduled castes and scheduled tribes, and shall protect them from social injustice and all forms of exploitation" ಎಂದು ಹೇಳುತ್ತಾರೆ. ಇದನ್ನು ಸರಿಯಾಗಿ ನಾವೆಲ್ಲರೂ ಅರ್ಥಮಾಡಿಕೊಂಡಿದ್ದೇ ಆದರೆ, ಈ ದೇಶದಲ್ಲಿ ಅದರಲ್ಲಿಯೂ ಈ ರಾಜ್ಯದಲ್ಲಿ ಹರಿಜನ ಗಿರಿಜನರ ಪರಿಸ್ಥಿತಿಯು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಎಷ್ಟರಮಟ್ಟಿಗೆ ಇಂಪ್ರೂವ್ ಆಗಬೇಕಾಗಿತ್ತೋ ಅಷ್ಟು ಆಗಿಲ್ಲ. ಇದನ್ನು ಇಂಪ್ರೂವ್ ಮಾಡಲು ನಾವೆಲ್ಲರೂ

ಸಮಾಜದಲ್ಲಿ ಎಷ್ಟರ ಮಟ್ಟಿಗೆ ಪ್ರಯತ್ನ ಮಾಡಬೇಕು; ಯಾವ ರೀತಿಯಲ್ಲಿ ನಾವು ಪ್ರೋತ್ಸಾಹ ಕೊಡಬೇಕೆಂಬುದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಆದರೆ ಈ ಒಂದು ದೃಷ್ಟಿಯಲ್ಲಿ ಹಲವಾರು ವರ್ಷಗಳಿಂದ ಸರಕಾರಗಳು ಬಂದುವು, ಹೋದವು, ಹರಿಜನ ಗಿರಿಜನ ಉದ್ಧಾರ ಮಾಡುತ್ತೇವೆ ಅವರನ್ನು ಶೋಷಣೆಯಿಂದ ಮುಕ್ತರನ್ನಾಗಿ ಮಾಡುತ್ತೇವೆ, ಅವರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುತ್ತೇವೆ ಎಂದು ಹೇಳಿ ಹಲವಾರು ಕಾನೂನು ಕಾಯಿದೆಗಳ ಘೋಷಣೆ ಕೂಡ ಆಯಿತು ಆದರೆ ಘೋಷಣೆಗಳಿಂದ ಶೋಷಿತರಾಗುತ್ತಿರುವವರನ್ನು ಮುಕ್ತರನ್ನಾಗಿ ಮಾಡಲು ಸಾಧ್ಯವಾಗಲಿಲ್ಲ. ಇದು ಯಾವಾಗ ಸಾಧ್ಯವಾಗುತ್ತದೆ ನಮಗೆ ರಕ್ಷಣೆ ಯಾವಾಗ ಸಿಗುತ್ತದೆ ಎಂಬುದನ್ನು ನಾವು ಕಾದುನೋಡಬೇಕಾಗಿದೆ. ಶೈಕ್ಷಣಿಕವಾಗಿ ಈ ಸರಕಾರ ಹಲವಾರು ಸವಲತ್ತುಗಳನ್ನು ನೀಡಿದೆ. ವ್ಯಾಸಂಗಗಳ ಮೂಲಕ ಮತ್ತು ಇವರಿಗಾಗಿ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡುವುದರ ಮೂಲಕ ಅವರ ವ್ಯಾಸಂಗಕ್ಕಾಗಿ ಸ್ಕಾಲರ್‌ಶಿಪ್ಪುಗಳನ್ನು ಕೊಡುವುದು, ಈ ರೀತಿ ಅವರ ಶೈಕ್ಷಣಿಕ ಪ್ರಗತಿಗಾಗಿ ಸರಕಾರಗಳು ಸಹಾಯಕವಾಗಿವೆ. ಆದರೆ ಈಗ ಏನು ಸಹಾಯವನ್ನು ಮಾಡಿದೆ ಮತ್ತು ಸ್ಕಾಲರ್‌ಷಿಪ್‌ಗಳನ್ನು ಕೊಡುತ್ತಾ ಇದೆ ಇದು ಏನೇನೂ ಸಾಲದು. ನಮ್ಮ ಹಾಸ್ಟೆಲ್‌ಗಳ ಸ್ಥಿತಿಗತಿಗಳನ್ನು ನಾವು ನೆನೆಸಿಕೊಂಡಿದ್ದೇ ಆದರೆ ಅನೇಕ ಶ್ರೀಮಂತರುಗಳ ಮನೆಯಲ್ಲಿ ನಾಯಿ, ಕುರಿ ಕೋಳಿಗಳನ್ನಾದರೂ ಸ್ವಲ್ಪ ಚೆನ್ನಾಗಿ ಸಾಕುತ್ತಾರೆ, ಸಮಯಕ್ಕೆ ಸರಿಯಾಗಿ ಮಾಂಸ ಬ್ರೆಡ್‌ನ ತುಂಡುಗಳನ್ನು ಹಾಕುತ್ತಾರೆ. ಅವರು ತಮ್ಮ ನಾಯಿಗಳನ್ನು ದಷ್ಟಪುಷ್ಟವಾಗಿ ಸಾಕುತ್ತಾರೆ. ಆದರೆ ನಮ್ಮ ಸಮಾಜ ಕಲ್ಯಾಣ ಇಲಾಖೆಯು ನಡೆಸುವ ಹಾಸ್ಟೆಲ್‌ಗಳಲ್ಲಿರುವವರು ಆ ನಾಯಿಗಿಂತ ಕಡಿಮೆ ವ್ಯವಸ್ಥೆಯಲ್ಲಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ನಾವು ಕೂಡ ಹಾಸ್ಟೆಲ್‌ಗಳಲ್ಲಿ ವ್ಯಾಸಂಗ ಮಾಡಿ ಮುಂದೆ ಬಂದಿದ್ದೇವೆ. ಆದರೆ ಬರಬರುತ್ತಾ ಹಾಸ್ಟೆಲ್‌ಗಳು ಉತ್ತಮವಾಗಬೇಕೆ ಹೊರತು ಕೆಳಮಟ್ಟಕ್ಕೆ ಹೋಗಬಾರದು ಎಂಬುದು ನನ್ನ ಅನಿಸಿಕೆ. ಈಗ ಏನು ಅವರಿಗೆ ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಚಾರ್ಜ್ ಎಂದು ಪ್ರಿಮೆಟ್ರಿಕ್ ಹಾಸ್ಟೆಲ್‌ಗಳಿಗೆ ೧೫೦ ರೂಪಾಯಿಗಳು, ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಿಗೆ ೨೦೦ ರೂಪಾಯಿ ಕೊಡುತ್ತಾ ಇದ್ದಾರೆ. ಇದು ಈಗಿನ ಪರಿಸ್ಥಿತಿಯಲ್ಲಿ ಏನೇನೂ ಸಾಲದು. ನಾವು ಇವೊತ್ತು ಬೆಲೆ ಏರಿಕೆಯ ಬಗ್ಗೆ ವಿಚಾರ ಮಾಡಿದ್ದೇ ಆದರೆ ಬೇಳೆ, ಎಣ್ಣೆ ಇತ್ಯಾದಿಗಳ ಬೆಲೆಯನ್ನು ನೋಡಿದ್ದೇ ಆದರೆ, ಇವರು ಕೊಡುವ ೧೫೦ ರೂಪಾಯಿಗಳು ಎಲ್ಲಿ ಸಾಕಾಗುತ್ತದೆ ಎಂಬುದನ್ನು ನಾವೆಲ್ಲರೂ ವಿಚಾರ ಮಾಡಬೇಕು. ಈ ರೀತಿಯಲ್ಲಿ ಹಾಸ್ಟೆಲ್‌ಗಳನ್ನು ನಡೆಸುವ ಬದಲಾಗಿ ನಿಜವಾಗಿಯೂ ಈ ಮಕ್ಕಳಿಗೆ ಈ ಸಮಾಜದಲ್ಲಿ ಎಲ್ಲಾ ಮಕ್ಕಳಿಗೂ ದೊರೆಯುವ ಹಾಗೆ ಸವಲತ್ತು ಸೌಲಭ್ಯಗಳು ಸಿಗಬೇಕು, ಉತ್ತಮ ಪರಿಸರದಲ್ಲಿ ಈ ಮಕ್ಕಳು ವ್ಯಾಸಂಗ ಮಾಡಬೇಕು, ಎಂಬ ಮನಸ್ಸು ಸರಕಾರ ನಡೆಸುವ ಪ್ರತಿಯೊಬ್ಬರಿಗೂ ಇದ್ದಿದ್ದೇ. ಆದರೆ ಈಗ ಕೊಡುವ ಹಣವನ್ನು ೧೫೦ ಇರುವುದನ್ನು ಕಡಿಮೆ ಎಂದರೆ ೩೦೦ ರೂಪಾಯಿಗಳು ಎಂದು ಮಾಡಬೇಕು. ಹಾಗಾದರೆ ಮಾತ್ರ ಹಾಸ್ಟೆಲ್‌ಗಳನ್ನು ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಎಂದೆನಿಸುತ್ತದೆ. ಯಾಕೆಂದರೆ ಈ ಇಲಾಖೆಯ ಬಗ್ಗೆ ಚರ್ಚೆ ಮಾಡುವಾಗ, ಪ್ರಶ್ನೆಗಳು ಬಂದಾಗ ನಾನು ಮಾತನಾಡಿದ್ದೇನೆ. ಒಂದು ಮಗುವಿಗೆ ಹೇರ್‌ಕಟಿಂಗ್‌ಗೆ ೫ - ೬ ರೂಪಾಯಿಗಳು ವರ್ಷಕ್ಕೆ ಇದೆ. ಹಾಗಾದರೆ ಮಗುವಿಗೆ ಎಷ್ಟು ಸಾರಿ ಹೇರ್‌ಕಟ್ ಮಾಡಿಸಬಹುದು ಎಂಬುದನ್ನು ವಿಚಾರ ಮಾಡಿ. ಹಾಗೆಯೇ ಮಕ್ಕಳಿಗೆ ಬಟ್ಟೆ ವಾಷ್ ಮಾಡಿಸಿಕೊಳ್ಳಲು ಸೋಪ್ ಕೊಡುತ್ತಾರೆ, ಇದರಲ್ಲಿ ಲೈಫ್‌ಬಾಯ್‌ನ ಅರ್ಧ ತುಂಡು ಕೊಡುತ್ತಾರೆ. ಯಾಕೆಂದರೆ ಈಗ ಕೊಡುವ ಹಣದಲ್ಲಿ ಅವರು

ಅಷ್ಟನ್ನು ಮಾತ್ರ ಒದಗಿಸಿಕೊಡಲು ಸಾಧ್ಯವಾಗುತ್ತದೆ.

(Sri G.S. Shivananjappa in the Chair)

ಇಂತಹ ಪರಿಸ್ಥಿತಿಯಲ್ಲಿ ಹಾಸ್ಟೆಲ್‌ಗಳನ್ನು ನಡೆಸುವುದು ಸರಿಯಲ್ಲ. ನನ್ನ ಸಲಹೆ ಏನೆಂದರೆ ಬೇರೆ ಬೇರೆ ಇಲಾಖೆಯಲ್ಲಿ ೧೮ ಪರ್ಸೆಂಟ್ ಹಣ ಖರ್ಚು ಮಾಡಬೇಕಾದರೆ ಅದನ್ನೆಲ್ಲಾ ಈಗ ಅಂಬೇಡ್ಕರ್ ಯೋಜನೆಗೆ ಪುಲ್ ಫಂಡ್ ಅಂತ ಮಾಡಿ ಹೇಗೆ ಖರ್ಚು ಮಾಡಿದರೋ ಹಾಗೇ ೧೮ ಪರ್ಸೆಂಟ್ ಹಣವನ್ನು ಎಲ್ಲಾ ಇಲಾಖೆಗಳಿಂದ ಕ್ರೋಢೀಕರಿಸಿ ಸಮಾಜಕಲ್ಯಾಣ ಇಲಾಖೆಗೆ ಕೊಟ್ಟು ವ್ಯವಸ್ಥಿತವಾಗಿ ವ್ಯಾಸಂಗ ಕೊಟ್ಟು ಹಾಸ್ಟೆಲ್‌ಅನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿದರೆ ಉತ್ತಮವಾಗಿ ನಡೆಸಿಕೊಂಡು ಹೋಗಲು ಸಾಧ್ಯವಾಗುತ್ತದೆ ಮತ್ತು ಸಾಕಷ್ಟು ಸೌಲಭ್ಯಗಳನ್ನು ಈ ಹುಡುಗರಿಗೆ ಕೊಟ್ಟಂತಾಗುತ್ತದೆ. ಅದಕ್ಕೆ ಯಾಕೆ ಸರ್ಕಾರ ಪ್ರಯತ್ನ ಪಡಬಾರದು? ಆ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡಬೇಕು ಅಂತ ನಾನು ಒತ್ತಾಯಮಾಡುತ್ತೇನೆ, ಇನ್ನು ಸಾಮಾಜಿಕವಾಗಿ ನಾವು ಈವತ್ತು ವಿಚಾರ ಮಾಡಿದ್ದೇ ಆದರೆ ಹರಿಜನ ಗಿರಿಜನರ ಪರಿಸ್ಥಿತಿಯಂತೂ ಬಹಳ ಶೋಚನೀಯವಾಗಿದೆ. ಮೊನ್ನೆ ಗವರ್ನರ್ ಭಾಷಣದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಬಹಳ ಹಿಂದಿನಿಂದ ಏನು ವೈಯಕ್ತಿಕವಾಗಿ ದೌರ್ಜನ್ಯಗಳು ನಡೆಯುತ್ತಿದ್ದವು ಈ ಸಮಾಜದಲ್ಲಿ; ಇವತ್ತು ಸಾಮೂಹಿಕ ದೌರ್ಜನ್ಯಗಳು ಹೆಚ್ಚುತ್ತಿದೆ ಅಂತ; ಇದು ಒಪ್ಪಿಕೊಳ್ಳಬೇಕಾದ ವಿಷಯವಾನೇ. ಏಕೆಂದರೆ ಪ್ರತಿ ವರ್ಷ ನಾವು ಹಲವಾರು ಕಡೆ ವಿಚಾರ ಮಾಡಿದ್ದೇವೆ. ಮಂಡ್ಯ ತಾಲ್ಲೂಕಿನ ಕಾಡುಕೊಪ್ಪಲ ಹಳ್ಳಿಯಲ್ಲಿ ಹರಿಜನರ ಕೇರಿಗಳಿಗೆ ನುಗ್ಗಿ ಗುಡಿಸಲುಗಳಿಗೆ ಬೆಂಕಿ ಹಾಕಿದರು, ಅದೇ ನಮ್ಮ ಚಿಕ್ಕಮಗಳೂರು ಬಸಗೂಡಿನಲ್ಲಿ ಹರಿಜನರ ಕೇರಿಯ ೮ - ೧೦ ಮನೆಗಳಿಗೆ ಬೆಂಕಿ ಹಾಕಿದರು. ಈ ವರ್ಷ ಮೊನ್ನೆ ಮೊನ್ನೆ ಬಿಜಾಪುರ ಜಿಲ್ಲೆಯಲ್ಲಿ ಸಾಮೂಹಿಕವಾಗಿ ಹರಿಜನ ಕೇರಿ ಗುಡಿಸಲುಗಳಿಗೆ ಬೆಂಕಿ ಹಾಕಿ ದೌರ್ಜನ್ಯ ನಡೆಸಿದರು. ಈ ದೌರ್ಜನ್ಯಗಳು ದಿನೇದಿನೇ ಹೆಚ್ಚಾಗ್ತಿದೆ. ಸಾಕಷ್ಟು ಕಾನೂನು ಕಾಯಿದೆಗಳನ್ನು ಮಾಡಿದ್ದಾರೆ ಕೇಂದ್ರ ಸರ್ಕಾರದವರು. ಹೋದ ಸಾರಿಯಷ್ಟೆ 1991 Prevention of Atrocities Act ಅನ್ನು ತಂದಿದ್ದಾರೆ. ಅದರಲ್ಲಿ ಕಠಿಣವಾದ ಶಿಕ್ಷೆ ಕೊಡಬೇಕು; ಯಾರು ಹರಿಜನರಿಗೆ ದೌರ್ಜನ್ಯ ಎಸಗುತ್ತಾರೆ ಅವರಿಗೆ ಅಂತ ತಿಳಿಸಿದೆ; ಆದರೆ ಇದುವರೆಗೆ ಅಂತಹ ಘಟನೆಗಳಿಗೊಳಗಾದವರಿಗೆ ಕಠಿಣ ಶಿಕ್ಷೆ ಕೊಟ್ಟಿದ್ದನ್ನು ನಾವಂತೂ ಇತಿಹಾಸದಲ್ಲಿ ಕಾಣಲಿಲ್ಲ. ಏಕೆ ಈ ರೀತಿ ಆಗ್ತಾಯಿದೆ, ಯಾರು ಹರಿಜನರ ಬಗ್ಗೆ ಹಗಲು ದರೋಡೆ, ದೌರ್ಜನ್ಯ ಮಾಡುತ್ತಿದ್ದಾರೆ ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಏನು ಹೆದರಿಕೆ ಇದೆ? ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ನಾನು ಇಂದು ಪ್ರಶ್ನೆ ಮಾಡುತ್ತೇನೆ. ಇದಾಗದಿದ್ದರೆ ಸಾಮೂಹಿಕವಾಗಿ ಈ ದೌರ್ಜನ್ಯಗಳು ದಿನೇ ದಿನೇ ನಡೆಯೋಕೆ ಸಾಧ್ಯವಾಗುತ್ತೇನೋ ಎಂಬ ಭಯ ನಮಗಿದೆ. ಇದಾಗದ ಹಾಗೆ ಸಾಕಷ್ಟು ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು. ಅದಕ್ಕಾಗಿ ಸಾಕಷ್ಟು ಕಠಿಣವಾದ ಕಾನೂನನ್ನು ಜಾರಿಗೊಳಿಸಬೇಕು. ಯಾರು ಈ ಕಾನೂನು ಕ್ರಮ ತೆಗೆದುಕೊಳ್ಳಲು ಹಿಂದೇಟು ಹಾಕ್ತಾರೆ ಅಂಥವರನ್ನು ಮೊದಲು ಶಿಕ್ಷೆಗೊಳಪಡಿಸಬೇಕು. ಯಾವ ಇಲಾಖೆಯನ್ನು ಈ ದೌರ್ಜನ್ಯ ನಡೆಯದ ಹಾಗೆ ನೋಡಿಕೊಳ್ಳಲು ಇಟ್ಟಿದ್ದಾರೆ, ಅಂತಹವರೇ ಕೈಕಟ್ಟಿಕೊಂಡು ಕಣ್ಮುಚ್ಚಿ ಕುಳಿತಾಗ ಅವರನ್ನು ಮೊದಲು ಶಿಕ್ಷೆಗೆ ಒಳಪಡಿಸಬೇಕೇನೋ ಅಂತ ನಾನಂತೂ ಹೇಳುತ್ತೇನೆ. ಹಾಗಾದಾಗ ಮಾತ್ರ ಈ ಜನರನ್ನು ಸಾಮೂಹಿಕ ಸಾಮಾಜಿಕ ದೌರ್ಜನ್ಯದಿಂದ ಮುಕ್ತರನ್ನಾಗಿ

ಮಾಡಲು ಸಾಧ್ಯವಾಗುತ್ತದೆ. ಇನ್ನೂ ಒಂದು ನಾಚಿಕೆ ಪಡಬೇಕಾದ ವಿಚಾರವೆಂದರೆ, ಇಂದು ನಾವೆಲ್ಲರೂ ಅಕ್ಕತಂಗಿಯರಂತೆ ಆತ್ಮೀಯವಾಗಿ ಇರುತ್ತೇವೆ. ಆದರೆ ಎಷ್ಟೋ ಹರಿಜನ ಸರ್ಕಾರಿ ನೌಕರರಿಗೆ ಮನೆಗಳನ್ನು ಬಾಡಿಗೆಗೆ ಕೊಡುವುದಿಲ್ಲ, ಇಂತಹ ಪರಿಸ್ಥಿತಿ ಈ ಸಮಾಜದಲ್ಲಿದೆ ಎಂದರೆ ನಾವೆಲ್ಲರೂ ನಾಚಿಕೆ ಹಾಗೂ ಹೇಸಿಗೆ ಪಡಬೇಕಾಗುತ್ತದೆ. ಇಂಥಾದ್ದನ್ನು ತಡೆಗಟ್ಟಲಿಕ್ಕೆ ನಾವೇನು ಮಾಡಿದ್ದೇವೆಂಬುದು ಬಹಳ ಮುಖ್ಯ. ನಾವು ಈವತ್ತು ಕಾನೂನಿನ ಬಗ್ಗೆ ಸಾಕಷ್ಟು ಹೇಳಬಹುದು, ಹಾಗೂ ಸಾಕಷ್ಟು ಘೋಷಣೆ ಮಾಡಬಹುದು. ಆದರೆ ಇದು ಒಂದು ರೀತಿಯಲ್ಲಿ ಘೋಷಣೆ ಮೂಲಕವೇ ಶೋಷಣೆ ಆಗಬಾರದು. ಇದನ್ನು ಕಾರ್ಯಗತಗೊಳಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ. ಇನ್ನು ಆರ್ಥಿಕವಾಗಿ ಇವರನ್ನು ಇನ್ನೂ ಸುಧಾರಿಸಬೇಕೆಂದು ಸರ್ಕಾರ ಸಾಕಷ್ಟು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಆದಕ್ಕಾಗಿ ವಿಶೇಷ ಘಟಕ ಯೋಜನೆಯಲ್ಲಿ ಪ್ರತಿ ಇಲಾಖೆಯಲ್ಲೂ ತೋಟಗಾರಿಕೆ ಇಲಾಖೆಯಿಂದ, ಸಸಿಗಳನ್ನು ಕೊಡಿಸುವುದು, ಕೃಷಿ ಇಲಾಖೆಯಿಂದ ಬೀಜ ಗೊಬ್ಬರ ಕೊಡುವುದು, ಒಂದು ನೇಗಿಲು ಕೊಡುವುದು, ಸ್ಪ್ರೇಯರ್ ಕೊಡುವುದು ನಡೆದಿದೆ, ಇದರಿಂದ ನಿಜವಾಗಿಯೂ ಹರಿಜನರನ್ನು ಆರ್ಥಿಕವಾಗಿ ಅಭಿವೃದ್ಧಿ ಪಡಿಸೋಕೆ ಸಾಧ್ಯವೆ? ಅಥವಾ ಸ್ವತಂತ್ರವಾಗಿ ಅವರು ಮುಂದೆ ಬರುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ, ನಿಜವಾಗಿಯೂ ಇಂತಹ ಸ್ಕೀಮ್‌ನ್ನು ಹಾಕದೇ ಇರೋದೆ ಒಳ್ಳೆಯದು ಅಂತ ನಾನು ಹೇಳುತ್ತೇನೆ. ಇದರ ಬದಲಾಗಿ ಹರಿಜನ ಗಿರಿಜನರ ಮಕ್ಕಳ ಓದಿಗೆ ಹೆಚ್ಚು ಹಣ ಒದಗಿಸಿದ್ದೇ ಆದರೆ ಅವರು ಆ ಮೂಲಕ ವ್ಯಾಸಂಗ ಪಡೆದು ಆರ್ಥಿಕವಾಗಿ ತಾವು ಹೇಗೆ ಈ ಸಮಾಜದಲ್ಲಿ ಮುಂದೆ ಬರಬೇಕೆಂಬ ದಾರಿಯನ್ನು ಅವರೇ ರೂಪಿಸಿಕೊಳ್ಳುವ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಆದಕ್ಕೆ ನಾವು ಹೆಚ್ಚು ಒತ್ತಾಯವನ್ನು ಹಾಕಬೇಕು. ಆ ದೃಷ್ಟಿಯಲ್ಲಿ ಸಮಾಜಕಲ್ಯಾಣ ಇಲಾಖೆಯು ಕೆಲಸವನ್ನು ಮಾಡಬೇಕು ಎನ್ನುವುದು ನನ್ನ ಉದ್ದೇಶ. ಈಗ ಎಸ್. ಸಿ. ಮತ್ತು ಎಸ್. ಟಿ. ಡೆವಲಪ್‌ಮೆಂಟ್ ಕಾರ್ಪೋರೇಷನ್ ಆರ್ಥಿಕವಾಗಿ ಇವರನ್ನು ಇಂಪ್ರೂವ್ ಮಾಡುವುದಕ್ಕೆ ಎಂದು ಹೇಳಿ ಇದೆ; ನನಗನ್ನಿಸುತ್ತಿದೆ, ಈ ಡೆವಲಪ್‌ಮೆಂಟ್ ಕಾರ್ಪೋರೇಷನ್ ಆದಮೇಲೆ ಏನು ಒಂದು ಪರ್‌ಸೆಂಟೋ ಎರಡು ಪರ್‌ಸೆಂಟೋ ಏನಾದರೂ ಇಂಪ್ರೂವ್‌ಮೆಂಟ್ ಆಗಿರಬಹುದು. ಈ ಸಾಲ ಸೌಲಭ್ಯ ಕೊಡುವುದರಲ್ಲಿ ಆಗಿರಬಹುದು. ಆದರೆ ಇಂಡಸ್ಟ್ರೀಗಳಲ್ಲಿ ಹರಿಜನ ಮತ್ತು ಗಿರಿಜನರು ಮುಂದೆ ಬಂದಿದ್ದನ್ನು ನಾವು ಕಾಣಲಿಲ್ಲ. ಅಥವಾ ಬೇರೆ ಯಾವುದೇ ಒಂದು ಬಿಸಿನೆಸ್ ಮೂಲಕವಾಗಲಿ ಅವರಿಗೆ ಹಣವನ್ನು ಕೊಟ್ಟು ಅವರು ಮುಂದೆ ಬಂದಿದ್ದಾರೆ ಎನ್ನುವುದನ್ನು ನಾವು ಕಾಣುವುದಿಲ್ಲ. ಸುಮ್ಮನೆ ಇವರು ನಾಮಕಾವಸ್ಥೆಗೆ ನಾವು ಎಷ್ಟು ಸಾಲವನ್ನು ಇವರಿಗೆ ಕೊಟ್ಟಿದ್ದೇವೆ, ಈ ಜಿಲ್ಲೆಯಲ್ಲಿ ಎಷ್ಟು ಸಾಲವನ್ನು ಕೊಟ್ಟಿದ್ದೇವೆ ಎಂದು ಹೇಳಿ ತೋರಿಸಿದರೆ ಸಾಲದು. ಆದರೆ ಈ ಸಾಲವನ್ನು ಪಡೆದಂತಹ ವ್ಯಕ್ತಿಗಳು ಆರ್ಥಿಕವಾಗಿ ಏನು ಇಂಪ್ರೂವ್ ಆಗಿದ್ದಾರೆ ಎನ್ನುವುದನ್ನು ಸಹಾ ಜನರ ಗಮನಕ್ಕೆ ತಾವು ತರಬೇಕಾಗುತ್ತದೆ. ಆಗ ಮಾತ್ರ ನಿಜವಾಗಿಯೂ ಕೆಲಸವನ್ನು ಮಾಡಿದ್ದಾರೆಯೇ ಇಲ್ಲವೇ ಎನ್ನುವುದು ಗೊತ್ತಾಗುತ್ತದೆ. ಇದರ ಜೊತೆಗೆ ಹೇಳಬೇಕು ಎಂದರೆ ಈ ಇಲಾಖೆಯಲ್ಲಿ ಕೆಲಸವನ್ನು ಮಾಡತಕ್ಕಂಥ ಅಧಿಕಾರಿಗಳಿಗೆ ಫಸ್ಟ್ ಆಫ್ ಆಲ್ ಅವರಿಗೆ ಡೆಡಿಕೇಷನ್ ಇರಬೇಕು. ಇದರಲ್ಲಿ ಇನ್‌ವಾಲ್ವ್‌ಮೆಂಟ್ ಇಲ್ಲ. ಇಲ್ಲಿ ಈ ಇಲಾಖೆಯಲ್ಲಿ ಕೆಲಸವನ್ನು ಮಾಡತಕ್ಕಂಥ ಅಧಿಕಾರಿಗಳಿಗೆ ಒಂದು ರೀತಿ ಇನ್‌ಫೀರಿಯಾರಿಟಿ. ಏಕೆಂದರೆ ...

ಶ್ರೀ ಆರ್. ಎನ್. ನಾಯಕ್:- ತಾವು ಹೇಳಿದ್ದರಲ್ಲಿ ನೂರಕ್ಕೆ ನೂರು ಸತ್ಯ ಇದೆ. ಅನುಭವದ

ಮಾತು ಇದು. ಆದರೆ ಈ ವಿಚಾರದ ಬಗ್ಗೆ ತಾವು ಈ ಮೊದಲೇ ಮಂತ್ರಿಗಳಲ್ಲಿ ಏನಾದರೂ ಮಾತನಾಡಿದ್ದಿರೋ ಅಥವಾ ಬರವಣಿಗೆಯಲ್ಲಿ ತಿಳಿಸಿದ್ದೀರೋ? ಹೇಗೆ? ಮತ್ತೆ ಹಾಗೆಯೇ ತಾವು ಅಧಿಕಾರಿಗಳಿಗೆ ಡೆಡಿಕೇಷನ್ ಇರಬೇಕು ಎಂದು ಹೇಳಿದ್ದೀರಿ; ಅದು ನಿಜ. ಏಕೆಂದರೆ ಎಲ್ಲಾ ಸವಲತ್ತುಗಳನ್ನು ಚಲಾವಣೆಗೆ ತರುವಂಥ ಅಧಿಕಾರಿಗಳಿಗೆ ನಿಜವಾಗಿಯೂ ಹೇಳಬೇಕಾದರೆ ಈ ನಿಮ್ಮ ವರ್ಗದವರ ಬಗ್ಗೆ ಕಾಳಜಿ ಇರುವಂಥ ಅಧಿಕಾರಿಗಳು ಇರಬೇಕು. ಅಂಥ ಅಧಿಕಾರಿಗಳನ್ನು ನಮ್ಮ ಮಂತ್ರಿಗಳು ಹುಡುಕಿ ಅವರ ಇಲಾಖೆಗೆ ಹಾಕಿಸಿಕೊಂಡು, ಕೆಲಸವನ್ನು ಮಾಡಿಸಬೇಕು. ಅವರು ಆ ರೀತಿಯಾಗಿ ಮಾಡಿದ್ದಾರೋ ಹೇಗೆ? ಅಥವಾ ಅವರ ಹತ್ತಿರ ಮಾತನಾಡುವುದಕ್ಕೆ ಹೋದಾಗ ...

ಛೇರ್ಮನ್:- ಅವರನ್ನೇ ಪ್ರಶ್ನೆ ಮಾಡುತ್ತೀರಲ್ಲಾ. ಪಾಪ, ಮೋಟಮ್ಮನವರು ಮಂತ್ರಿಗಳನ್ನು ಪ್ರಶ್ನೆ ಮಾಡಿದರೆ ...

ಶ್ರೀಮತಿ ಮಲ್ಲಾಜಮ್ಮ:- ಮಂತ್ರಿಗಳಿಗೆ ಅದನ್ನು ಕೇಳಿ. ಮೋಟಮ್ಮನವರನ್ನು ಕೇಳಿದರೆ ಉತ್ತರವನ್ನು ಕೊಡುತ್ತಾರೆಯೇ?

ಛೇರ್ಮನ್:- ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುವಾಗ ಹೇಳುತ್ತಾರೆ.

ಶ್ರೀ ಆರ್. ಎನ್. ನಾಯಕ್:- ಹೋಗಲಿ. ಈಗ ನಾನು ಪ್ರಶ್ನೆಯನ್ನು ಏತಕ್ಕೆ ಕೇಳಿದೆ ಎಂದರೆ ..

ಶ್ರೀಮತಿ ಮೋಟಮ್ಮ:- ನಾಯಕರೇ, ಮೋಟಮ್ಮನವರು ಪ್ರಶ್ನೆಯನ್ನು ಕೇಳುತ್ತಿದ್ದಾರಲ್ಲಾ, ಮಂತ್ರಿಗಳು ಇದರ ಬಗ್ಗೆ ವಿಚಾರ ಮಾಡಿದ್ದೀರಾ ಎಂದು ಅವರನ್ನೇ ಕೇಳಿ.

ಶ್ರೀ ಆರ್. ಎನ್. ನಾಯಕ್:- ಅವರು ಇಲ್ಲಿಯೆ ಇದ್ದಾರೆ ಮತ್ತು ನಮಗೆಲ್ಲಾ ಕಾಣುತ್ತಿದ್ದಾರೆ. ಆ ಕಾರಣಕ್ಕಾಗಿ ನಾನು ಹೇಳುತ್ತಿದ್ದೇನೆ. ಈಗ ತಾವು ಇಷ್ಟು ಕಳಕಳಿಯಿಂದ ನೀವು ಮಾತನಾಡುತ್ತಿದ್ದೀರಿ. ಈ ಹಿಂದೆಯೂ ಸಹಾ ನೀವು ಈ ಬಗ್ಗೆ ಏನಾದರೂ ಮಾತುಕತೆಯನ್ನು ಆಡಿದ್ದೀರೋ, ಪತ್ರವನ್ನಾದರೂ ಬರೆದಿದ್ದೀರೋ? ನಿಮಗೆ ಏನಾದರೂ ಉತ್ತರವನ್ನ ಅವರು ಬರೆದರೋ? ಹೇಗೆ? ಮತ್ತು ಅವರು ನಿಮಗೆ ಯಾವಾಗಲಾದರೋ ಟೈಮನ್ನು ಕೊಟ್ಟಿದ್ದಾರೋ? ಏನಾದರೂ ಇದ್ದರೆ ಹೇಳಿಬಿಡಿ. ಏಕೆಂದರೆ ನಾವೆಲ್ಲಾ ಸೇರಿ ಮಂತ್ರಿಮಂಡಲಕ್ಕೆ ಸಪೋರ್ಟನ್ನು, ನಮ್ಮ ಜವಾಬ್ದಾರಿಯನ್ನೆಲ್ಲಾ ಅವರು ನಿರ್ವಹಣೆ ಮಾಡಬೇಕು ಎಂದು ಕೊಟ್ಟಿದ್ದೇವೆ.

ಛೇರ್ಮನ್:- ಮೋಟ್ಟಮ್ಮನವರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರಿಗೆ ಅವಕಾಶವನ್ನು ಕೊಡಿ.

ಶ್ರೀ ಆರ್. ಎನ್. ನಾಯಕ್:- ಅವರಿಗೆ ಸಪೋರ್ಟ್ ಆಗಿ ಹೇಳುತ್ತಿದ್ದೇನೆ. ನಮ್ಮ ಜವಾಬ್ದಾರಿ ನಮ್ಮ ಮನಸ್ಸಿನಲ್ಲಿ ಏನು ಇದೆ ಎನ್ನುವುದನ್ನು ಮಂತ್ರಿಗಳಾದವರು ನಿರ್ವಹಿಸಬೇಕಾಗುತ್ತದೆ. ಹಾಗಾಗಿ ಅವರಿಗೆ ಟೈಂ ಇದೆಯೋ ಹೇಗೆ? ಅವರು ಏನಾದರೂ ಮಾಡಿದ್ದಾರೋ? ಮತ್ತೆ ಇನ್ನು ಮುಂದೆ ಮಾಡುತ್ತೇವೆ ಎಂದು ಹೇಳಿಬಿಟ್ಟರೆ ನೀವು ಮಾತನಾಡುವುದೇ ಬೇಕಾಗಿಲ್ಲ.

ಛೇರ್ಮನ್:- ಮುಂದೆ ನಿಮಗೂ ಅವಕಾಶ ಇದೆ, ಆಗ ಮಾತನಾಡಿ.

ಶ್ರೀ ಆರ್. ಎನ್. ನಾಯಕ್:- ನನಗೆ ಅವಕಾಶ ಬೇಕಾಗಿಲ್ಲ. ನೆನಪಾಯಿತು. ಇದರ ಬಗ್ಗೆ ದಯಮಾಡಿ ಕೇಳಿಬಿಡಿ. ಪತ್ರ ಬರೆದರೆ ಅದಕ್ಕೇನಾದರೂ ಉತ್ತರ ಬಂತೋ. ಇದನ್ನೆಲ್ಲಾ ಸ್ವಲ್ಪ ನೋಡಿ. ಅವರು ಮನಸ್ಸು ಮಾಡಿದರೆ ಏನು ಮಾಡುವುದಕ್ಕೂ ಸಾಧ್ಯ ಇದೆ.

ಶ್ರೀಮತಿ ಮೋಟಮ್ಮ:- ಈ ಭಾಷಣವನ್ನು ಮಾಡಿ ಈ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕಿಂತ ಹೆಚ್ಚಿನ ಕಾಳಜಿ ನನಗೆ ಇದೆ. ಏಕೆಂದರೆ ಸಾಕಷ್ಟು ಸಾರಿ ಈ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಚರ್ಚೆಯನ್ನು ಮಾಡಿದ್ದೇನೆ. ಮಾನ್ಯ ಮಂತ್ರಿಗಳು ಕೂಡ ಚರ್ಚೆ ಮಾಡಿದ್ದಾರೆ. ಸಂಬಂಧಪಟ್ಟ ಇಲಾಖೆಯವರೊಡನೆ ಚರ್ಚೆ ಮಾಡಿದ್ದೇವೆ. ಗಲಾಟೆ ಮಾಡಿದ್ದೇವೆ.

ಶ್ರೀ ಆರ್. ಎನ್. ನಾಯಕ್:- ಈ ಒಂದು ಇಲಾಖೆಗೆ ಒಬ್ಬ ಮಂತ್ರಿಗಳು ಇದ್ದಾರೆ, ಅದರ ಪರಿಣಾಮ ಏನಾಯಿತು? ಎಷ್ಟು ಮಾತನಾಡಿದರೂ ಅದರ ಮೇಲೆ ಏನೂ ಪರಿಣಾಮ ಆಗುವುದಿಲ್ಲ. ಇದು ಆಯಿತು ಎಂದು ನಾನು ತಿಳಿದುಕೊಳ್ಳುತ್ತೇನೆ.

ಛೇರ್ಮನ್:- ನೀವ್ಯಾರೂ ಇಂಟರ್‌ಫಿಯರ್ ಆಗುವುದು ಬೇಡ. ಅವರು ಚೆನ್ನಾಗಿ ಮಾತನಾಡುತ್ತಿದ್ದಾರೆ.

ಶ್ರೀ ಕರಿಯಣ್ಣ:- ಹರಿಜನ ಗಿರಿಜನರ ಶಾಸಕರುಗಳ ಸಹಿ ಕೇಳುವುದು, ಅದಕ್ಕಾಗಿ ಅವರು ಸುಮ್ಮನೆ ಭಾಷಣವನ್ನು ಮಾಡುತ್ತಿದ್ದಾರೆ, ಭಾಷಣದ ಚಟಕ್ಕಾಗಿ ಎಂದು ನಮ್ಮ ನಾಯಕರು ಹೇಳುವಂಥ ರೀತಿಯಲ್ಲಿ ಇದು ಅರ್ಥವಾಗುತ್ತದೆ.

ಶ್ರೀ ಆರ್. ಎನ್. ನಾಯಕ್:- ಖಂಡಿತವಾಗಿಯೂ ಅಲ್ಲ.

ಶ್ರೀ ಕರಿಯಣ್ಣ:- ನಾವು ಅಧಿಕಾರಿಗಳನ್ನು ಪ್ರಶ್ನೆ ಮಾಡಿದ್ದೇವೆ. ಯಾವುದೇ ಅಧಿಕಾರ ಇಲ್ಲ ಎಂದು ಹೇಳಿದಾಗ ಎಸ್. ಸಿ. ಮತ್ತು ಎಸ್. ಟಿ. ಕಮಿಟಿಯ ಮುಂದೆ ಕರೆದು ಹೇಳಿದ್ದೇವೆ. ಇದನ್ನು ಕೇಳುವ ಅಧಿಕಾರ ಇಲ್ಲ, ಮಾಡುವ ಅಧಿಕಾರವೂ ಇಲ್ಲ, ಏನು ಮಾಡಬೇಕು ಸ್ವಾಮಿ, ಗೊತ್ತಾಗುವುದಿಲ್ಲ. ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಅದನ್ನು ಮಂತ್ರಿಗಳ ಗಮನಕ್ಕೂ ತಂದಿದ್ದೇನೆ. ಮತ್ತೆ ಮುಂದೆ ಅದನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಆದ್ದರಿಂದ ತಾವು ಚಾರ್ಜ ಮಾಡತಕ್ಕಂಥದ್ದು ಸಮರ್ಪಕವಾಗಿದೆ.

(ಗೊಂದಲ)

ಛೇರ್ಮನ್:- ನಾಯಕ್‌ರವರೇ ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀಮತಿ ಮೋಟಮ್ಮ:- ಅವರು ಹೇಳಿದ ಕಳಕಳಿ ನನಗೆ ಅರ್ಥವಾಗುತ್ತದೆ.

ಛೇರ್ಮನ್:- ಅವರಿಗೆ ನೀವು ಉತ್ತರ ಕೊಡುವುದಕ್ಕೆ ಹೋಗಬೇಡಿ.

ಶ್ರೀಮತಿ ಮೋಟಮ್ಮ:- ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಒಬ್ಬರೇ ಪಾಪ ಏನು

ಮಾಡುವುದಕ್ಕೆ ಆಗುತ್ತದೆ ? ಅವರಿಗೆ ಸಾಕಷ್ಟು ಫಂಡ್ಸ್ ಕೊಡಬೇಕಾಗುತ್ತದೆ. ಅವರಿಗೆ ಎನ್‌ಕರೇಜ್ ಮಾಡಬೇಕಾಗುತ್ತದೆ. ಜೊತೆಗೆ ಅವರ ಇಂಟ್ರೆಸ್ಟಿಗೆ ತಕ್ಕನಾಗಿ ಅವರ ಇಲಾಖೆಯ ಅಧಿಕಾರಿಗಳು ಕೆಲಸ ಮಾಡಬೇಕಾಗುತ್ತದೆ. ಅಧಿಕಾರಿಗಳಿಂದ ಕೆಲಸ ಮಾಡಿಸುವಷ್ಟು ಇಂಟರೆಸ್ಟ್ ಅನ್ನು ಇವರು ತೆಗೆದುಕೊಳ್ಳಬೇಕಾಗುತ್ತದೆ.

(ಗೊಂದಲ)

ಶ್ರೀಮತಿ ಮೋಟಮ್ಮ:- ಅವರಿಗೆ ಸಹಾಯ ಮಾಡೋಣ, ಸಹಕಾರ ಕೊಡೋಣ. ಇವತ್ತು ಈ ಇಲಾಖೆಯ ಬಗ್ಗೆಯಾಗಿ ಕಾರ್ಯಕ್ರಮಗಳು ಸರಿಯಾಗಿ ನಿರೂಪಣೆಯಾಗದಿದ್ದರೆ ನಾವೆಲ್ಲರೂ ಸಹ ಅವರ ಸಹಾಯಕ್ಕೆ ಹೋಗೋಣ. ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡೋಣ. ನ್ಯಾಯವಾಗಿ ಯಾರಾದರೂ ಅಡೆತಡೆ ಹಾಕುತ್ತಿದ್ದರೆ ಅಂತಹ ಅಧಿಕಾರಿಗಳ ಬಗ್ಗೆ ನಾವು ವಿಚಾರ ಮಾಡೋಣ ಅಂತ ನಾನು ತಮ್ಮ ಮೂಲಕ ನಾಯಕರಿಗೆ ಹೇಳುತ್ತೇನೆ.

ಶ್ರೀ ಎಂ. ಮಹದೇವ್:- ಅದು ಆಗದೇ ಇದ್ದರೆ ನಿಮಗೆ ಸಮಾಜ ಕಲ್ಯಾಣ ಮಂತ್ರಿ ಪದವಿ ಕೊಟ್ಟುಬಿಟ್ಟರೆ ಸರಿಹೋಗುತ್ತದೆ.

ಶ್ರೀ ಸಿ. ಎಂ. ಲಿಂಗಪ್ಪ:- ನೀವು ಹೇಳಿದ್ದು ಕೇಳಿ ನಮಗೆ ಬಹಳ ಸಂತೋಷವಾಯಿತು.

ಶ್ರೀಮತಿ ಮೋಟಮ್ಮ:- ನಾನು ಏನು ಹೇಳುತ್ತಿದ್ದೆ ಅಂದರೆ ಯಾವುದೇ ಕೆಲಸವನ್ನು ಮಾಡಬೇಕಾದರೆ ನಮಗೆ ಕಾಳಜಿ ಇರಬೇಕು. ಕಳಕಳಿ ಇರಬೇಕು, ಇನ್‌ವಾಲ್ವ್‌ಮೆಂಟ್ ಇಲ್ಲದೇಹೋದರೆ ನಾವು ಯಾವ ಕೆಲಸವನ್ನೂ ಸಮರ್ಥವಾಗಿ ಮಾಡಲಿಕ್ಕೆ ಸಾಧ್ಯವಿಲ್ಲ ಅನ್ನುವುದನ್ನು ನಾನು ತಮ್ಮ ಮೂಲಕ ಹೇಳಲಿಕ್ಕೆ ಇಷ್ಟಪಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಿಂದ ಆಗಬೇಕಾದ ಕೆಲಸಗಳು ಸರಿಯಾಗಿ ಆಗುತ್ತಿಲ್ಲವೆಂಬ ಕಾರಣದಿಂದ ನಾನು ಈ ಮಾತನ್ನು ಹೇಳಿದೆ. ನಮ್ಮ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಒಬ್ಬರು ಡೈರೆಕ್ಟರ್ ಇದ್ದಾರೆ. ಐದು ಜನ ಜಾಯಿಂಟ್ ಡೈರೆಕ್ಟರ್ಸ್ ಇದ್ದಾರೆ. ಇವರೆಲ್ಲಾ ಸಾಕಷ್ಟು ಇನ್‌ವಾಲ್ವ್ ಆಗಿ ಈ ಇಲಾಖೆಯಲ್ಲಿ ಕೆಲಸ ಮಾಡಿದ್ದೇ ಆದರೆ ಸಮರ್ಪಕವಾಗಿ ಕೆಲಸ ಮಾಡಲಿಕ್ಕೆ ಸಾಧ್ಯತೆ ಇದೆ. ಈಗ ೫ ಜನ ಜಾಯಿಂಟ್ ಡೈರೆಕ್ಟರ್ಸ್ ಇದ್ದಾರೆ. ಅವರಲ್ಲಿ ಎಷ್ಟು ಜನರು ಎಷ್ಟು ಹಾಸ್ಟಲ್‌ಗಳಿಗೆ ವಿಸಿಟ್ ಮಾಡಿ ಅಲ್ಲಿರುವ ಕುಂದು ಕೊರತೆಗಳ ಬಗ್ಗೆ ವಿಚಾರ ಮಾಡಿದ್ದಾರೆ. ಎಲ್ಲಿ ಹಾಸ್ಟಲ್ ಸರಿಯಾಗಿ ವ್ಯವಸ್ಥಿತವಾಗಿ ನಡೆದಿಲ್ಲ ಅಂತಹ ಕಡೆ ಎಷ್ಟು ವಾರ್ಡನ್ನುಗಳನ್ನು ಸಸ್ಪೆಂಡ್ ಮಾಡಿದ್ದಾರೆ?

ಶ್ರೀ ಆರ್. ಎನ್. ನಾಯಕ್:- ಅಯ್ಯೋ ದೇವರೇ !

ಛೇರ್ಮನ್:- ನೀವು ಅವರಿಗೆ ಉತ್ತರವನ್ನು ಕೊಡಬೇಡಿ, ಮಾನ್ಯ ನಾಯಕ್‌ರವರೇ, ಅವರಿಗೆ ಅಡೆತಡೆ ಮಾಡಬೇಡಿ.

ಶ್ರೀ ಆರ್. ಎನ್. ನಾಯಕ್:- ಈ ವಿಚಾರದಲ್ಲಿ ಅಧಿಕಾರಿಗಳು ಯಾವಾಗಲಾದರೂ ಹೋಗುತ್ತಾರೆ. ಮಂತ್ರಿಗಳು ಹೋಗಿ ಬಂದು ಮಾಡಿದರೆ ಅಧಿಕಾರಿಗಳು ತಾನೆತಾನಾಗಿ ಹೋಗುತ್ತಾರೆ. ನಿಮ್ಮ ಜಿಲ್ಲೆಗೆ ಬರುವುದಕ್ಕೆ ಹೇಳಿ. ನಮ್ಮ ಜಿಲ್ಲೆಗೆ ಇನ್ನೂ ಬಂದಿಲ್ಲ.

ಛೇರ್ಮನ್:- ನಿಮಗೆ ಮಾತನಾಡಲು ಅವಕಾಶ ಇದೆ. ಆಗ ಮಾತನಾಡಿ.

ಶ್ರೀಮತಿ ಮೋಟಮ್ಮ:- ತಾವು ಆ ಮೇಲೆ ಮಾತನಾಡಿ. ನಿಮಗೆ ಕಾಳಜಿ ಇರುವುದು ನನಗೆ ಅರ್ಥವಾಗುತ್ತದೆ. ಮಾನ್ಯ ಶಿವಣ್ಣನವರು ಇದನ್ನು ಇಲ್ಲಿ ಹೇಳಬೇಕಾಗುತ್ತದೆ. ಅವರ ಇಲಾಖೆಯ ಅಧಿಕಾರಿಗಳು ಎಷ್ಟು ಎಫೆಕ್ಟೀವ್ ಆಗಿ ಕೆಲಸಮಾಡಿದ್ದಾರೆ. ಎಷ್ಟು ಸಾರಿ ಯಾವ್ಯಾವ ಹಾಸ್ಟೆಲ್‌ಗಳಿಗೆ ಭೇಟಿ ಮಾಡಿದ್ದಾರೆ. ಹಾಸ್ಟೆಲ್‌ಗಳ ಕಂಡೀಷನ್ ಹೇಗಿದೆ, ಸರಿ ಇಲ್ಲದ್ದನ್ನು ಸರಿಯಿಲ್ಲವೆಂದು ಮಂತ್ರಿಗಳ ಗಮನಕ್ಕೆ ತಂದು ಸರಿಪಡಿಸಿದ್ದಾರಾ ಎಂಬುದನ್ನು ಅವರು ಇವತ್ತು ಸ್ಪಷ್ಟಪಡಿಸಬೇಕಾಗುತ್ತದೆ. ಈ ಇಲಾಖೆಯನ್ನು ಮಾನ್ಯ ನಾಯಕ್ ಅವರು ಹೇಳಿದಾಗ ಏತಕ್ಕೆ ಎಸ್. ಟಿ. / ಎಸ್. ಸಿ ಶಾಸಕರಿಗೇ ಕೊಡಬೇಕು ? ನಿಜವಾಗಿಯೂ ಈ ಇಲಾಖೆಯನ್ನು ಮುಖ್ಯ ಮಂತ್ರಿಗಳೇ ಇಟ್ಟುಕೊಳ್ಳಬೇಕು. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಸರಿಯಾದ ವ್ಯವಸ್ಥೆಯನ್ನು ಹಾಗೂ ರಕ್ಷಣೆಯನ್ನು ಹರಿಜನ ಗಿರಿಜನರಿಗೆ ಕೊಡಬೇಕಾದರೆ ಈ ಖಾತೆಯನ್ನು ಅವರೇ ಇಟ್ಟುಕೊಳ್ಳಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಯಾವ ಜಾತಿಯಾದರೂ ಆಗಲಿ, ಕಳಕಳಿ ಇದ್ದವರಿಗೆ ಈ ಇಲಾಖೆಯನ್ನು ಕೊಡಿ.

(ಗೊಂದಲ)

ಛೇರ್ಮನ್:- ನೀವುಗಳು ಈ ರೀತಿ ಇಂಟರ್‌ಫಿಯರ್ ಆದರೆ ಅವರಿಗೆ ಮಾತನಾಡುವುದಕ್ಕೆ ತೊಂದರೆಯಾಗುತ್ತದೆ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ:- ಈಗ ನಾವು ಮಾನ್ಯ ಶಿವಣ್ಣನವರ ಬೆಂಬಲಕ್ಕೆ ನಿಲ್ಲಬೇಕಾಗುತ್ತದೆ.

(ಗೊಂದಲ)

ಛೇರ್ಮನ್:- ಅವರು ಈಲ್ಡ್ ಆಗಿಲ್ಲ.

ಶ್ರೀಮತಿ ಮೋಟಮ್ಮ:- ನೀವು ಬೇಕಾದರೆ ಪ್ರತ್ಯೇಕವಾಗಿ ಮಾತನಾಡಿ. ಮಧ್ಯೆಮಧ್ಯೆ ನೀವು ಎದ್ದರೆ ನನಗೆ ಮಾತನಾಡುವುದಕ್ಕೆ ಸಾಧ್ಯವಾಗುವುದಿಲ್ಲ.

(ಗೊಂದಲ)

ಶ್ರೀ ಸಿ. ಎಂ. ಲಿಂಗಪ್ಪ:- ಒಂದೇ ಮಾತು ....

ಛೇರ್ಮನ್:- ಅವರು ಈಲ್ಡ್ ಆಗಿಲ್ಲ.

ಶ್ರೀ ಸಿ. ಎಂ. ಲಿಂಗಪ್ಪ:- ಈ ಇಲಾಖೆಯನ್ನು ಮುಖ್ಯಮಂತ್ರಿಗಳೇ ಇಟ್ಟುಕೊಳ್ಳಬೇಕೆಂದು ಶ್ರೀಮತಿ ಮೋಟಮ್ಮ ಹೇಳುತ್ತಿದ್ದಾರೆ. ಅಂದರೆ, ಈಗ ಖಾತೆಯನ್ನು ಹೊಂದಿರತಕ್ಕವರು ಸರಿಯಿಲ್ಲ ಎನ್ನುವುದು ತಮ್ಮ ಅರ್ಥವೇ?

ಶ್ರೀಮತಿ ಮೋಟಮ್ಮ:- ಈಗ ಈ ಖಾತೆಯನ್ನು ಯಾರೇ ವಹಿಸಿದರೂ ಸರಿಯಾಗಿ

ನಡೆಸಿಕೊಂಡು ಹೋಗುವಂಥ ಶಕ್ತಿಯಿಲ್ಲ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಇದಕ್ಕೆ ಹೆಚ್ಚಿನ ಶಕ್ತಿ ಬರಬೇಕೆಂದು ಹೇಳಿದೆ. ನಿಜವಾಗಿಯೂ ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಜನರಿಗೆ ರಕ್ಷಣೆ ಸಿಗಬೇಕಾದರೆ ಮುಖ್ಯಮಂತ್ರಿಗಳೇ ಈ ಖಾತೆಯನ್ನು ಇಟ್ಟುಕೊಳ್ಳಬೇಕು ಅಥವಾ ಗೃಹ ಮಂತ್ರಿಗಳು ಈ ಖಾತೆಯನ್ನು ವಹಿಸಿಕೊಳ್ಳಬೇಕು. ಆಗ ಮಾತ್ರ ಈ ಇಲಾಖೆಯವರು ಹೆಚ್ಚು ಜವಾಬ್ದಾರಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿರುವುದು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ:- ಈಗ ಶ್ರೀಮತಿ ಮೋಟಮ್ಮನವರು ಅಪರೂಪವಾಗಿ ಮತ್ತು ಅಷ್ಟೇ ಸ್ವಾರಸ್ಯವಾಗಿ ಮಾತನಾಡುತ್ತಿದ್ದಾರೆ, ಏನೋ ಸ್ವಲ್ಪ ಅಲ್ಲಿ ಇಲ್ಲಿ ಮಾತನಾಡುವಾಗ ಫೈಲ್ ಅತ್ತ ಕಡೆ, ಇತ್ತ ಕಡೆ ಹೋಗಬಹುದು. ಗಂಡಸರಿಗೆ ಏಕೆ ಇಷ್ಟೊಂದು ಸಿಟ್ಟು? ಅವರು ಚೆನ್ನಾಗಿ ಮಾತನಾಡುತ್ತಿರುವುದರಿಂದ, ಅವರಿಗೆ ಮೊದಲು ಅವಕಾಶ ಕೊಡಿ. ನಂತರ ಪಾಯಿಂಟ್ಸ್ ಏನಾದರೂ ಇದ್ದರೆ ಕೇಳೋಣ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀಮತಿ ಮೋಟಮ್ಮ:- ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಎಸ್. ಸಿ / ಎಸ್. ಟಿ. ಶಾಸಕರಿಗೆ ಈ ಖಾತೆಯನ್ನು ನಿರ್ವಹಿಸುವುದಕ್ಕೆ ಶಕ್ತಿ ಮತ್ತು ಯೋಗ್ಯತೆಯಿಲ್ಲ ಎನ್ನುವ ದೃಷ್ಟಿಯಿಂದ ಮಾತನಾಡಲಿಲ್ಲ. ಏಕೆಂದರೆ, ಈ ಜನಾಂಗದವರೇ ಈ ಇಲಾಖೆಯನ್ನು ನಿರ್ವಹಿಸಿಕೊಂಡು ಬರಬೇಕೆಂಬುದಕ್ಕೆ ಯಾವುದೇ ಕಾನೂನು ಅಥವಾ ನಿಯಮವಿಲ್ಲ. ನಮ್ಮ ಜನಾಂಗದವರೇ ಈ ಖಾತೆಯನ್ನು ನಿರ್ವಹಿಸಿಕೊಂಡು ಬಂದರೂ ಇಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಈ ಜನರ ಅಭಿವೃದ್ಧಿ ಸಾಧಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಇದು ನಮಗೂ ಅರ್ಥವಾಗದ ಪ್ರಶ್ನೆಯಾಗಿದೆ. ಈ ಖಾತೆಯನ್ನು ಮುಖ್ಯವಾಗಿ ಈ ರಾಜ್ಯದ ಜವಾಬ್ದಾರಿ ಹೊತ್ತಿರತಕ್ಕಂಥ ಸನ್ಮಾನ್ಯ ಮುಖ್ಯ ಮಂತ್ರಿಗಳು ವಹಿಸಿಕೊಂಡರೆ ಹೆಚ್ಚು ಪರಿಣಾಮಕಾರಿಯಾಗಿ ಈ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಜನರಿಗೆ ನ್ಯಾಯ ಸಿಗುತ್ತದೆನ್ನುವ ಒಂದು ಆಸೆಯಿಂದ ನಾನು ಈ ಮಾತನ್ನು ಆಡಿದನೇ ವಿನಃ ಸನ್ಮಾನ್ಯ ಸದಸ್ಯರಾದ ಶ್ರೀ ಕರಿಯಣ್ಣನವರು ಅನ್ಯಥಾ ಭಾವಿಸಬಾರದೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ / ವರ್ಗಗಳ ಅಭಿವೃದ್ಧಿ ನಿಗಮದವರು ಒಂದು ಉತ್ತಮವಾದಂಥ ಕೆಲಸವನ್ನು ಈ ಸಲ ಮಾಡಿದ್ದಾರೆ. ಏನೆಂದರೆ, ಜಮೀನುಗಳನ್ನು ಕೊಂಡುಕೊಂಡು, ಅವನ್ನು ಹರಿಜನ-ಗಿರಿಜನರಿಗೆ ವಿತರಣೆ ಮಾಡುವ ಒಂದು ಕೆಲಸ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲೂ ಈ ಕೆಲಸ ಸಾಕಷ್ಟು ಉತ್ತಮವಾಗಿ ಆಗಿದೆ. ಆದರೆ, ಬೇರೆ ಜಿಲ್ಲೆಗಳಲ್ಲೂ ಈ ರೀತಿ ಮಾಡಬೇಕೆಂದು ಕೇಳಿದಾಗ ಅವರು ಜಮೀನುಗಳನ್ನು ಕೊಡಲು ಯಾರೂ ಸಹ ಮುಂದೆ ಬರುತ್ತಿಲ್ಲ, ಹಾಗಾಗಿ ಜಮೀನುಗಳನ್ನು ಕೊಂಡುಕೊಂಡು ಹರಿಜನ-ಗಿರಿಜನರಿಗೆ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದರು. ಇದಕ್ಕೆ ಸಾಕಷ್ಟು ಹಣವಿದ್ದು, ಇಂತಹ ಕೆಲಸ ಮಾಡಿದರೆ ನಿಜವಾಗಿಯೂ ಆರ್ಥಿಕವಾಗಿ ಸಾಕಷ್ಟು ಜನರಿಗೆ ಸಹಾಯ ಮಾಡಿದಂತಾಗುತ್ತದೆ. ಈ ದಿಸೆಯಲ್ಲಿ ಜನರು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಅಂಜನಮೂರ್ತಿ:- ಶ್ರೀಮತಿ ಮೋಟಮ್ಮನವರು, ಹರಿಜನ-ಗಿರಿಜನರಿಗೆ ಜಮೀನುಗಳನ್ನು ಕೊಡುವುದಕ್ಕೆ ಪರಿಶಿಷ್ಟ ಜಾತಿ/ವರ್ಗಗಳ ಅಭಿವೃದ್ಧಿ ನಿಗಮದವರು ಸಹಾಯ ಮಾಡುತ್ತಿದ್ದಾರೆಂದು ಹೇಳಿದರು. ಆದರೆ, ಒಂದು ಎಕರೆಗೆ ೨೦ ಸಾವಿರ ರೂಪಾಯಿಗಳಂತೆ ಕೊಡುವವರು ಒಪ್ಪಿಕೊಳ್ಳಬೇಕು ಮತ್ತು ತೆಗೆದುಕೊಳ್ಳುವವರು ಮುಂದೆ ಬರಬೇಕು. ಕಡಿಮೆ ಬೆಲೆಗೆ ಜಮೀನನ್ನು ಕೊಡುವವರು ಯಾರೂ ಮುಂದೆ ಬರುವುದಿಲ್ಲ. ಆದುದರಿಂದ, ಎಕರೆಗೆ ೨೦ ಸಾವಿರ ರೂಪಾಯಿಗಳಿಂದ ೩೦-೪೦ ಸಾವಿರ ರೂಪಾಯಿಗಳವರೆಗೆ ಕೊಡುವುದಾದರೆ ಮುಂದೆ ಬರುತ್ತಾರೆ.

ಶ್ರೀಮತಿ ಮೋಟಮ್ಮ:- ಮಾನ್ಯ ಉಪಾಧ್ಯಕ್ಷರೇ, ಈ ವಿಶೇಷ ಘಟಕ ಯೋಜನೆ ಬಗ್ಗೆ ನಾನು ಹೇಳುತ್ತಿದ್ದೇನೆ. ಈ ವಿಶೇಷ ಘಟಕ ಯೋಜನೆಯಡಿ ೧೦೦ ಭಾವಿ ಯೋಜನೆ ಎಂಬ ಒಂದು ಯೋಜನೆಯಿದ್ದು, ಅವರಲ್ಲಿ ಭಾವಿಗಳನ್ನು ತೆಗೆಸಿ ಕೊಟ್ಟಿದ್ದಾರೆ. ಆದರೆ ಭಾವಿಗಳನ್ನು ತೆಗೆಸಿದರೇ ವಿನಃ ಭಾವಿಗೆ ಪಂಪು ಸೆಟ್ಟುಗಳಾಗಲಿ, ಪೈಪುಗಳಾಗಲಿ ಅಳವಡಿಸುವುದಕ್ಕೆ ಸಾಕಷ್ಟು ದುಡ್ಡಿಲ್ಲದ ಅದನ್ನು ಹಾಗೆಯೇ ಕೈಬಿಟ್ಟಿದ್ದಾರೆ. ಫಲಾನುಭವಿಗಳು ಹೋಗಿ ಬ್ಯಾಂಕ್‌ನ ಅಧಿಕಾರಿಗಳನ್ನು ಕೇಳಿದಾಗ, ಅವರು ದುಡ್ಡನ್ನು ಕೊಡದೆ ಬರೀ ಭಾವಿಗಳನ್ನು ತೆಗೆಸಿಬಿಟ್ಟಿದ್ದಾರೆ. ಇದರಿಂದ ಫಲಾನುಭವಿಗಳಿಗೆ ನಿಜವಾಗಿಯೂ ನೀರಾವರಿ ವ್ಯವಸ್ಥೆಯಲ್ಲಿ ಸಹಾಯವಾಗಿಲ್ಲ. ಇಂದು ಒಂದು ರೀತಿಯ ಅನುಪಯುಕ್ತ ಕಾರ್ಯಕ್ರಮವಾಗಿದೆ ಎಂದರೆ ತಪ್ಪಾಗಲಾರದು. ಇದಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಹರಿಜನ-ಗಿರಿಜನರಿಗೆ ಇದರ ಲಾಭ ತಲುಪುವಂಥ ವ್ಯವಸ್ಥೆಯನ್ನು ಈ ಇಲಾಖೆಯಲ್ಲಿ ಮಾಡಬೇಕಾಗುತ್ತದೆ. ಇದರ ಜೊತೆಗೆ ನಾನು ಬಹಳ ಮುಖ್ಯವಾಗಿ ಹೇಳಬೇಕಾದ ವಿಷಯವೆಂದರೆ ಇದರಲ್ಲಿ ಕೆಲವು ತರಬೇತಿ ಕೇಂದ್ರಗಳಿವೆ. ಐ. ಎ. ಎಸ್, ಐ. ಪಿ. ಎಸ್ ಮತ್ತು ಕೆಲವು ಬ್ಯಾಂಕಿಂಗ್ ಪರೀಕ್ಷೆಗಳ ತಯಾರು ಮಾಡುವುದಕ್ಕೆ ಈ ತರಬೇತಿ ಕೇಂದ್ರಗಳಿವೆ. ಅಂಥ ತರಬೇತಿ ಕೇಂದ್ರಗಳಿಂದ ಇಲ್ಲಿಯವರೆಗೆ ಎಷ್ಟು ಜನ ತರಬೇತಿಯನ್ನು ಪಡೆದು ಐ. ಎ. ಎಸ್ ಮತ್ತು ಐ. ಪಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿದ್ದಾರೆ ಹಾಗೂ ಎಷ್ಟು ಜನ ಬ್ಯಾಂಕಿಂಗ್ ನೇಮಕಾತಿಯ ಪರೀಕ್ಷೆಗೆ ಕುಳಿತುಕೊಂಡವರು ಪಾಸಾಗಿ ಕೆಲಸವನ್ನು ಪಡೆದಿದ್ದಾರೆ ಎನ್ನತಕ್ಕದ್ದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ಅವರಿಗೆ ಇನ್ನೂ ಉತ್ತಮವಾದ ರೀತಿಯಲ್ಲಿ ತರಬೇತಿಯನ್ನು ಕೊಟ್ಟರೆ ಸಾಕಷ್ಟು ಜನ ಐ. ಎ. ಎಸ್ ಮತ್ತು ಐ. ಪಿ. ಎಸ್. ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಲು ಸಾಧ್ಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇದರ ಜೊತೆಗೆ ಇವತ್ತು ವಿದ್ಯಾರ್ಥಿಗಳಿಗೆ ಟ್ಯೂಟರ್‌ಗಳ ಏರ್ಪಾಡನ್ನು ಮಾಡಿದ್ದಾರೆ. ಅವರಿಗೆ ಕೇವಲ ತಿಂಗಳಿಗೆ ನೂರು ರೂಪಾಯಿಗಳನ್ನು ಕೊಡುತ್ತಾರಲ್ಲ. ಯಾರೋ ವಿಜ್ಞಾನ ಹಾಗೂ ಲೆಕ್ಕದ ಮಾಸ್ಟರ್ ಒಬ್ಬರು ವಾರಕ್ಕೆ ಒಂದು ದಿನ ಬಂದು ನಾಲ್ಕು ಮಕ್ಕಳನ್ನು ಕೂರಿಸಿಕೊಂಡು ಅವರಿಗೆ ಪಾಠವನ್ನು ಮಾಡಿ ಹೋಗುತ್ತಾರೆ. ಆದರಿಂದ ಮಕ್ಕಳು ಎಷ್ಟು ಬುದ್ಧಿವಂತರಾಗಲು ಸಾಧ್ಯ? ಇದರಿಂದ ಆ ಮಕ್ಕಳು ಪರೀಕ್ಷೆಗಳಲ್ಲಿ ಹೆಚ್ಚು ಉತ್ತಮವಾಗಿ ಬರೆದು ಅಂಕಿಗಳನ್ನು ತೆಗೆದುಕೊಳ್ಳಲು ಸಾಧ್ಯವೇ ಎನ್ನುವ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಇಂಥ ಒಂದು ಸ್ಕೀಮ್‌ಗೆ ಹೆಚ್ಚು ಹಣವನ್ನು ಇಟ್ಟು ಈ ಮಕ್ಕಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನಮ್ಮಲ್ಲಿ ಆಶ್ರಮ ಶಾಲೆಗಳೆಂದು ಇವೆ. ಈ ಆಶ್ರಮ ಶಾಲೆಗಳ ವ್ಯವಸ್ಥೆಯನ್ನು ನೋಡಿದರೆ ನಿಜವಾಗಿಯೂ ಯಾರಿಗೇ ಆದರೂ ಭಾರಿ ದುಃಖವಾಗುತ್ತದೆ. ಕಣ್ಣೀರು ಬರುತ್ತದೆ. ನಿಮ್ಮಲ್ಲಿ ಇವು ಇವೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಆದರೆ ಎಲ್ಲೆಲ್ಲಿ ಟ್ರೈಬಲ್

ಪರಿಯಾಗಳೆಂದು ಇದೆಯೋ ಅಂಥ ಕಡೆಯೆಲ್ಲಾ ಈ ರೀತಿಯ ಆಶ್ರಮಶಾಲೆಗಳಿವೆ. ಶ್ರೀಮತಿ ಸುಮಾ ವಸಂತ್‌ರವರ ಪರಿಯಾದಲ್ಲೂ ಹಾಗೂ ನಮ್ಮ ಪರಿಯಾದಲ್ಲೂ ಇಂತಹ ಶಾಲೆಗಳಿವೆ.

ಉಪಾಧ್ಯಕ್ಷಣಿಯವರು:- ಬೆಂಗಳೂರಿನಲ್ಲೂ ಇಂತಹ ಶಾಲೆಗಳಿವೆ ಎಂದು ತಿಳಿದು ಬಂದಿದೆ.

ಶ್ರೀಮತಿ ಮೋಟಮ್ಮ:- ಈ ಆಶ್ರಮ ಶಾಲೆಗಳ ವ್ಯವಸ್ಥೆ ಎಷ್ಟು ಕೆಟ್ಟು ಹೋಗಿದೆ ಎಂದರೆ, ನಮ್ಮ ಮೂಡಿಗೆರೆ ತಾಲ್ಲೂಕಿನಲ್ಲಿ ಹೊಸಪುರವೆಂದು ಇದೆ, ಅಲ್ಲಿ ೧೯೮೬ ಅಥವಾ ೧೯೮೭ರಲ್ಲಿಯೋ ಈ ಆಶ್ರಮ ಶಾಲೆ ಪ್ರಾರಂಭವಾಗಿದೆ. ನಾನು ಎರಡು ತಿಂಗಳ ಹಿಂದೆ ಆ ಶಾಲೆಗೆ ಹೋಗಿದ್ದೆ. ಅಲ್ಲಿರುವ ಮಕ್ಕಳಿಗೆ ಆ ಶಾಲೆಯು ಪ್ರಾರಂಭವಾದಾಗ ಹಾಸಿಕೊಳ್ಳಲು, ಹೊದ್ದುಕೊಳ್ಳಲು ಬೆಡ್‌ಶೀಟನ್ನು ಮತ್ತು ಪೆಟ್ಟಿಗೆಯನ್ನು ಕೊಟ್ಟಿದ್ದರು. ನಾನು ಮೊನ್ನೆ ಹೋಗಿದ್ದಾಗ ಅದನ್ನು ನೋಡಿದೆ, ಅವರು ಕೊಟ್ಟಿದ್ದೆಲ್ಲಾ ಚಿಂದಿ ಚಿಂದಿಯಾಗಿದೆ, ಪೆಟ್ಟಿಗೆ ಒಡೆದು ಹೋಗಿದೆ, ಬಟ್ಟೆ ಪುಸ್ತಕವನ್ನು ಇಟ್ಟುಕೊಳ್ಳಲು ಅವರಿಗೆ ಸರಿಯಾದ ಪೆಟ್ಟಿಗೆ ಇಲ್ಲ. ಇಂಥ ಒಂದು ಅನಾಗರೀಕ ದೃಷ್ಟಿಯಲ್ಲಿ ಆಶ್ರಮ ಶಾಲೆಗಳಲ್ಲಿ ಮಕ್ಕಳನ್ನು ಏಕೆ ಇಡಬೇಕು? ಏಕೆ ಈ ರೀತಿಯಲ್ಲಿ ಆಶ್ರಮ ಶಾಲೆಗಳನ್ನು ನಡೆಸಬೇಕು? ಅದರ ಬಗ್ಗೆ ನಾನು ಒಂದು ಕೇಳಿದಾಗ, ನಾವು ಅದರ ಬಗ್ಗೆ ಜಿಲ್ಲಾ ಪರಿಷತ್ತಿನವರಿಗೆ ಬರೆದಿದ್ದೇವೆ ಎಂದು ಹೇಳಿದರು. ಇನ್ನೂ ಕೂಡ ಮಕ್ಕಳಿಗೆ ಹೊಸ ಬೆಡ್‌ಶೀಟ್‌ಗಳನ್ನಾಗಲಿ, ಹಾಸಿಗೆಯನ್ನಾಗಲಿ ತೆಗೆದು ಕೊಟ್ಟಿಲ್ಲ. ಹಾಗೆಯೇ ಪೆಟ್ಟಿಗೆಯನ್ನು ಕೊಟ್ಟು ೫-೬ ವರ್ಷಗಳಾಗಿವೆ ಎನ್ನುವ ಮಾತನ್ನು ಹೇಳುತ್ತೇನೆ. ಅಲ್ಲಿನ ಮಕ್ಕಳಿಗೆ ಜ್ವರ ಬಂದರೆ ಅವರನ್ನು ನೋಡಿಕೊಳ್ಳಲು ಯಾರೂ ಇಲ್ಲ. ಸುಮಾರು ೪-೫ ಮೈಲಿ ದೂರದಲ್ಲಿರುವ ಗೋಣಿಬೀಡಿಗೆ ೮-೧೦ ವರ್ಷದ ಮಗುವನ್ನು ಕೆಲಸದವರು ಹೊತ್ತುಕೊಂಡು ಬರಲು ಸಾಧ್ಯವಾಗುತ್ತದೆಯೆ? ಹೋಗಿ ಬರಲು ವ್ಯವಸ್ಥೆ ಇಲ್ಲ. ಇನ್ನೊಂದು ವಿಷಯ ಏನೆಂದರೆ ಆಶ್ರಮ ಶಾಲೆಗಳಲ್ಲಿ ಸುಮಾರು ೫೦ ಮಕ್ಕಳು ಇದ್ದಾರೆ. ಅವರಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅಲ್ಲಿಗೆ ನೀರು ಸರಬರಾಜಿನ ಯೋಜನೆಯನ್ನು ಮಾಡಬೇಕೆಂದು ಸರ್ಕಾರದಿಂದ, ಜಿಲ್ಲಾಪರಿಷತ್ತಿನಿಂದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಆ ಕೆಲಸವನ್ನು ಗುತ್ತಿಗೆದಾರರಿಗೆ ಯಾವಾಗಲೋ ವಹಿಸಿದ್ದಾರೆ. ಈಗ ಆ ಗುತ್ತಿಗೆದಾರರು ಹಣವನ್ನು ತಿಂದು ನಾಪತ್ತೆಯಾಗಿ ಹೋಗಿದ್ದಾರೆ. ಇದರ ಬಗ್ಗೆ ಇದುವರೆಗೂ ಕ್ರಮವನ್ನು ತೆಗೆದುಕೊಂಡಿಲ್ಲ. ಈ ರೀತಿಯಲ್ಲಿ ಆಶ್ರಮ ಶಾಲೆಗಳನ್ನು ಅವ್ಯವಸ್ಥೆಯಾಗಿ ನಡೆಸುವುದಾದರೆ ಅಲ್ಲಿನ ಮಕ್ಕಳು ಪುಷ್ಟ ಪುಷ್ಟವಾಗಿ ಬೆಳೆಯಲು ನಿಜವಾಗಿಯೂ ಸಾಧ್ಯವೇ? ಮತ್ತೆ ಅವರು ಆಶ್ರಮ ಶಾಲೆಗಳಲ್ಲಿ ಪ್ರಬುದ್ಧವಾಗಿ ಬೆಳೆದು ಪಾಠ ಕಲಿಯಲು ಸಾಧ್ಯವೇ? ಇದರ ಬಗ್ಗೆ ತಾವು ವಿಚಾರ ಮಾಡಬೇಕು.

ಮತ್ತೆ ಇಂಥ ಆಶ್ರಮಶಾಲೆಗಳಲ್ಲಿ ಉಪಾಧ್ಯಾಯರ ಕೊರತೆ ಇದೆ. ಅಲ್ಲಿ ಸಾಕಷ್ಟು ಸರಿಯಾದ ರೀತಿಯಲ್ಲಿ ಸೌಲಭ್ಯವನ್ನು ಹಾಗೂ ಸೌಕರ್ಯವನ್ನು ಕೊಟ್ಟು ಆಶ್ರಮ ಶಾಲೆಗಳನ್ನು ನಡೆಸುವುದಾದರೆ ಮಕ್ಕಳು ಮುಂದೆ ಬರಲು ಸಾಧ್ಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇದರ ಜೊತೆ ಈ ಇಲಾಖೆಯಲ್ಲಿ ಕ್ಲೈಮ್ ಮಾಡತಕ್ಕ ಅಧಿಕಾರಿಗಳಿಗೆ ಡೆಲಿಗೇಷನ್ ಇಲ್ಲವೆಂದು ನಾನು ಏನು ಹೇಳಿದ್ದೇನೆ, ಅದನ್ನು ಹೇಗೆ ಸರಿಪಡಿಸಬೇಕು ಎನ್ನುವುದು ಬಹಳ ಮುಖ್ಯವಾದುದು. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ಏಕೆಂದರೆ ಇದರ ಬಗ್ಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ನಮ್ಮಲ್ಲಿ ಸುಮಾರು ಎರಡು ಹಾಸ್ಟೆಲ್‌ಗಳಿಗೆ ಕಟ್ಟಡ ಬೇಕಾಗಿದೆ. ೧೯೮೮ರಲ್ಲಿ Schedule Caste College Boys' Hostel ಪ್ರಾರಂಭವಾಯಿತು. ಅದಕ್ಕೆ

ಹಾಸ್ಟೆಲ್ ಕಟ್ಟಡವಿಲ್ಲ; ಅದನ್ನು ಎರಡು ಮನೆಗಳಲ್ಲಿ ನಡೆಸುತ್ತಿದ್ದಾರೆ. ಅಲ್ಲಿನ ಹಾಸ್ಟೆಲ್ ಕಟ್ಟಡಕ್ಕೆ ಜಿಲ್ಲಾಪರಿಷತ್ತಿನಲ್ಲಿ ದುಡ್ಡು ಇದೆ, ಡಾ. ಅಂಬೇಡ್ಕರ್ ಯೋಜನೆಯಲ್ಲಿ ಹಣವನ್ನು ಕೊಟ್ಟಿದ್ದಾರೆ. ಡಿಸೆಂಬರ್ ಕೊನೆಯಲ್ಲಿ ಅದರ ಬಗ್ಗೆ ಭೂಸೇನಾ ನಿಗಮದವರು ಅಂದಾಜನ್ನು ತಯಾರು ಮಾಡಿ Administrative Approval ಗಾಗಿ ತಂದು ಕೊಟ್ಟರು. ಆದರೆ ಇನ್ನೂ administrative approval ಅದಕ್ಕೆ ಕೊಟ್ಟಿಲ್ಲ. ನಾನೂ ಸಹ ಇದರ ಬಗ್ಗೆ ಹತ್ತು ಸಾರಿ ಸಮಾಜ ಕಲ್ಯಾಣ ಇಲಾಖೆಯ ಉಪ ಕಾರ್ಯದರ್ಶಿಗಳನ್ನು ಹಾಗೂ ಡೈರೆಕ್ಟರ್‌ರವರನ್ನು ನೋಡಿ ಬಂದಿದ್ದೇನೆ. ಭೂಸೇನಾ ನಿಗಮದ ಅಧಿಕಾರಿಗಳು ಹೋಗಿ ಬಂದಿದ್ದಾರೆ. ಆದರೆ ಇದುವರೆಗೂ Administrative approval ಅದಕ್ಕೆ ಸಿಕ್ಕಿಲ್ಲ. ಈ ರೀತಿ ಆದರೆ ಈ ಕೆಲಸ ಎಷ್ಟರ ಮಟ್ಟಿಗೆ ಸಮರ್ಪಕವಾಗಿ ಆಗುತ್ತದೆ ಎನ್ನುವ ಬಗ್ಗೆ ನಾವು ವಿಚಾರ ಮಾಡಬೇಕು. ನಿಜವಾಗಿಯೂ ಇಂಥಹವರನ್ನು ಈ ಇಲಾಖೆಯಲ್ಲಿ ಇಟ್ಟುಕೊಂಡರೆ ಈ ಇಲಾಖೆಯಲ್ಲಿ ಒಳ್ಳೆಯ ಕೆಲಸವನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗುವುದಿಲ್ಲ. ನಾನು ಪರ್ಸನಲ್ ಆಗಿ ಆ ಹಾಸ್ಟೆಲ್‌ನ ಹತ್ತಿರ ಹೋಗಿ ನೋಡಿಕೊಂಡು ಬಂದಿದ್ದೇನೆ, ಅಲ್ಲಿ ಬಹಳ ತೊಂದರೆ ಇದೆ. ಆ ಎರಡು ಕಟ್ಟಡಗಳಲ್ಲಿ ಹಾಸ್ಟೆಲ್ ನಡೆಸುತ್ತಿದ್ದಾರೆ. ಮಳೆಗಾಲದಲ್ಲಿ ತುಂಬಾ ಕಷ್ಟವಾಗುತ್ತದೆ. ಏಕೆಂದರೆ ಒಂದು ಹಾಸ್ಟೆಲ್‌ಗೂ ಇನ್ನೊಂದು ಹಾಸ್ಟೆಲ್‌ಗೂ ಸುಮಾರು ಅರ್ಧ ಕಿ. ಮೀ. ದೂರವಿದೆ. ಅಲ್ಲಿರುವ ಮಕ್ಕಳು ಇಲ್ಲಿಗೆ ಬಂದು ಊಟ ಮಾಡಿಕೊಂಡು ಮತ್ತೆ ಹಾಸ್ಟೆಲ್‌ಗೆ ವಾಪಸ್ಸು ಹೋಗಿ ಮಲಗಬೇಕು. ಈ ರೀತಿ ವ್ಯವಸ್ಥೆ ಇರುವ ಹಾಸ್ಟೆಲ್‌ಗೆ ಕಟ್ಟಡದ ಅಗತ್ಯ ಬಹಳ ಇದೆ. ಈ ಬಗ್ಗೆ ನಾನು ಹತ್ತಾರು ಸಾರಿ ಹೇಳಿದರೂ ಸಹ ಇಲಾಖೆಯವರು ಗಮನ ಹರಿಸದೇ ಇದ್ದಾರೆ. ಈ ಇಲಾಖೆಯಲ್ಲಿ ಇಂತಹವರು ಕೆಲಸಮಾಡುವುದಕ್ಕೆ ಯೋಗ್ಯರೇ ಎನ್ನುವುದನ್ನು ತಾವು ವಿಚಾರ ಮಾಡಬೇಕು. ಈ ಇಲಾಖೆಯ ಕೆಲಸಗಳನ್ನು ಅಧಿಕಾರಿಗಳು ಸಮರ್ಪಕವಾಗಿ ನಿರ್ವಹಿಸದಿದ್ದರೆ ಜನರಿಗೆ ನ್ಯಾಯ ಸಿಗುವುದಿಲ್ಲ. ಸಾಕಷ್ಟು ದಕ್ಷತೆಯಿಂದ ಕೆಲಸಮಾಡುವಂತಹ ಅಧಿಕಾರಿಗಳನ್ನು ಸೆಲೆಕ್ಟ್ ಮಾಡಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಹಾಕಬೇಕು. ಸೆಕ್ರೆಟರಿಯಾಗಿರಲಿ, ಡೈರೆಕ್ಟರ್ ಆಗಿರಲಿ, ಡೆಪ್ಯುಟಿ ಸೆಕ್ರೆಟರಿಯಾಗಿರಲಿ ಯಾರೇ ಆಗಿರಲಿ. ಇಡೀ ರಾಜ್ಯದ ನೌಕರರಲ್ಲಿ ಯಾರು ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ ಅಂತಹವರನ್ನು ಈ ಇಲಾಖೆಗೆ ಪೋಸ್ಟ್ ಮಾಡಿಕೊಳ್ಳಬೇಕು. ನಾನು ಮೊದಲೇ ಹೇಳಿದ ಹಾಗೆ ಈ ಇಲಾಖೆಯಲ್ಲಿ ಕೆಲಸಮಾಡುವವರಿಗೆ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಇದೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಸೆಕ್ರೆಟರಿಯಾಗಿದ್ದೇನೆ, ಡೈರೆಕ್ಟರ್ ಆಗಿದ್ದೇನೆ, ಡೆಪ್ಯುಟಿ ಸೆಕ್ರೆಟರಿಯಾಗಿದ್ದೇನೆ ಎಂದು ಹೇಳಿಕೊಳ್ಳುವುದಕ್ಕೆ ಇವರಿಗೆ ನಾಚಿಕೆಯಾಗುತ್ತದೆ. ಅಂತಹವರು ಈ ಇಲಾಖೆಯಲ್ಲಿದ್ದು ಕೆಲಸಮಾಡುವುದಕ್ಕೆ ಎಲ್ಲಿ ಸಾಧ್ಯ? ಅದರ ಬಗ್ಗೆ ನೀವು ವಿಚಾರ ಮಾಡಿ ಉತ್ತಮ ಆಡಳಿತಾಧಿಕಾರಿಗಳನ್ನು ಹಾಕಿಕೊಂಡು ಈ ಇಲಾಖೆಯಲ್ಲಿ ದಕ್ಷತೆಯಿಂದ ಹಾಗೂ ಸಮರ್ಪಕವಾಗಿ ಕೆಲಸಮಾಡಬೇಕಾಗುತ್ತದೆ. ಆ ಕೆಲಸವನ್ನು ನೀವು ಮಾಡುತ್ತೀರೆಂದು ನಾನು ನಂಬಿರುತ್ತೇನೆ. ಇನ್ನು ಸ್ತ್ರೀಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಇಲಾಖೆಗಳಲ್ಲಿ ಸಾಕಷ್ಟು ಉತ್ತಮ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ. ಇಲ್ಲಿ ಬಹಳ ಮುಖ್ಯವಾಗಿ ಐ. ಸಿ. ಡಿ. ಎಸ್. ಪ್ರೋಗ್ರಾಮ್ ಎಲ್ಲಾ ತಾಲ್ಲೂಕುಗಳಿಗೂ ದೊರಕಿಲ್ಲ. ಈ ಅಂಗನವಾಡಿ ಸ್ಕೀಮ್ ಏನು ಇದೆ ಇದು ಎಲ್ಲಾ ಭಾಗಗಳಿಗೂ ಸಹ ಅಗತ್ಯವಿದೆ. ಏಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳು ಶಾಲೆಗೆ

ಹೋಗುವುದಿಲ್ಲ. ಮತ್ತು ಅವರಿಗೆ ಸಮರ್ಪಕವಾದ ಪೌಷ್ಠಿಕ ಆಹಾರವನ್ನು ಕೂಲಿಕಾರರಾದ ಅವರ ತಂದೆತಾಯಿಗಳು ಒದಗಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಮಕ್ಕಳನ್ನು ನಾವು ಸರಿಯಾದ ರೀತಿಯಲ್ಲಿ ಸಮಾಜದಲ್ಲಿ ಬೆಳೆಸಬೇಕಾಗುತ್ತದೆ. ಈ ವರ್ಷ ಸೇಫ್ ಮದರ್ ಅಂಡ್ ಚೈಲ್ಡ್ ಸರ್‌ವೈವಲ್ ವರ್ಷವೆಂದು ಘೋಷಣೆ ಮಾಡಿದ್ದಾರೆ. ಹಾಗಿರಬೇಕಾದರೆ ಐ. ಸಿ. ಡಿ. ಎಸ್ ಪ್ರೊಗ್ರಾಮ್‌ನ್ನು ತಾಲ್ಲೂಕಿನ ಎಲ್ಲ ಗ್ರಾಮಾಂತರ ಪ್ರದೇಶದ ಜನರಿಗೆ ನೀವು ಜಾರಿ ಮಾಡಬೇಕಾಗುತ್ತದೆ. ಹಾಗಾದರೆ ಮಾತ್ರ ನಮ್ಮ ಸಮಾಜದಲ್ಲಿ ದುರ್ಬಲವರ್ಗದ ಮಕ್ಕಳು ಪೌಷ್ಠಿಕವಾಗಿ ಹಾಗೂ ಆರೋಗ್ಯಕರವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಈ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ಎಷ್ಟರಮಟ್ಟಿಗೆ ಜಾರಿ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ತಾವು ವಿಚಾರ ಮಾಡಿ ಎಲ್ಲಾ ತಾಲ್ಲೂಕುಗಳಲ್ಲಿ ಜಾರಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಹೆಣ್ಣು ಮಕ್ಕಳ ಬಗ್ಗೆ ಹೇಳಬೇಕೆಂದರೆ ಈ ರಾಜ್ಯದಲ್ಲಿ ಹಾಗೂ ದೇಶದಲ್ಲಿ ಇಂಟರ್‌ನ್ಯಾಷನಲ್ ವುಮನ್ ಇಯರ್, ಗರ್ಲ್ ಚೈಲ್ಡ್ ಇಯರ್ ಆಚರಣೆ ಮಾಡಿದರು. ಅದಾದನಂತರ ಹೋದ ವರ್ಷದಿಂದ ಸೇಫ್ ಮದರ್ ಅಂಡ್ ಚೈಲ್ಡ್ ಸರ್‌ವೈವಲ್ ಇಯರ್ ಆಚರಣೆ ಮಾಡುತ್ತಿದ್ದಾರೆ. ಆದರೆ ಹೆಣ್ಣು ಮಕ್ಕಳ ಪರಿಸ್ಥಿತಿಯಂತೂ ಸುಧಾರಣೆ ಆಗಿಲ್ಲ. ಈ ಹೆಣ್ಣು ಮಕ್ಕಳ ಪರಿಸ್ಥಿತಿ ಸಮಾಜದಲ್ಲಿ ಬಹಳ ಹೀನಾಯವಾದ ಸ್ಥಿತಿಯಲ್ಲಿಯೇ ಇದೆ. ಅದರ ಸುಧಾರಣೆಗೆ ಸಮಾಜಕಲ್ಯಾಣ ಮಂತ್ರಿಗಳಿಗೆ ನಾವು ಸಾಕಷ್ಟು ಸಲಹೆ ಮಾಡಿದ್ದೇವೆ. ಹೆಣ್ಣು ಮಕ್ಕಳ ಓದಿಗೆ ಹೆಚ್ಚಿಗೆ ಅವಕಾಶ ಮಾಡಿಕೊಡಿ. ತಂದೆತಾಯಿಗಳಿಗೆ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಎಂಬ ಭಾವನೆ ಬರಬಾರದು. ಹೆಣ್ಣು ಮಗುವು ಸಮಾಜದಲ್ಲಿ ಗಂಡು ಮಗುವಿನಷ್ಟೇ ಸಮಾನ ಎಂಬಂತೆ ಎಲ್ಲಾ ರೀತಿಯ ಪ್ರೋತ್ಸಾಹ, ಕೊಡಬೇಕು. ತೊಟ್ಟಿಲು ತೂಗುವ ಕೈ ಈ ದೇಶವನ್ನೇ ಆಳಿತು ಎನ್ನುವುದನ್ನು ನಾವು ಪ್ರೂವ್ ಮಾಡಿ ತೋರಿಸಿದ್ದೇವೆ. ಆದ್ದರಿಂದ ತಂದೆ ತಾಯಿಗಳು ಹೆಣ್ಣು ಮಗುವಾಯಿತು ಎಂದು ಆತಂಕ ಪಡಬೇಕಾಗಿಲ್ಲ. ಹೆದರಬೇಕಾಗಿಲ್ಲ. ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳಿಗೆ ನಾವು ಅವೇರ್‌ನೆಸ್ ಕ್ರಿಯೇಟ್ ಮಾಡಬೇಕಾಗಿದೆ. ಹೆಣ್ಣು ಮಕ್ಕಳಿಗೆ ಏನು ಭಯವಿದೆಯೆಂದರೆ ಎಲ್ಲಿ ತಾವು ಒಂದು ಹೆಣ್ಣು ಮಗುವನ್ನು ಹೆತ್ತರೆ ಗಂಡನ ಕಡೆಯಿಂದ ಅತ್ತೆಮಾವಂದಿರಿಂದ ಕಿರುಕುಳವಾಗುತ್ತದೋ ? ಎನ್ನುವ ಭಾವನೆ ಇದೆ. ಈ ಭಾವನೆ ಹೋಗಬೇಕು. ಇನ್ನು ಎರಡನೆಯ ಮಗು ಇದ್ದರೆ ಪರವಾಗಿಲ್ಲ. ಆದರೆ ಮೂರನೆಯ ಮಗು ಇದ್ದರೆ ...

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಇಷ್ಟೆಲ್ಲಾ ಹೇಳುತ್ತಾರಲ್ಲಾ, ಮತ್ತೊಂದು ಗಂಡು ಆಗಬೇಕೆಂದು ಇವರೇ ಹೇಳುವುದು.

ಶ್ರೀ ಎ. ಕೆ. ಅನಂತ ಕೃಷ್ಣ:- ಮಾನ್ಯ ಅಧ್ಯಕ್ಷಣಿಯವರೇ, ಹೆಣ್ಣುಮಕ್ಕಳ ವಿಷಯ ಗೊತ್ತಿಲ್ಲದವರ ಹತ್ತಿರ ಇದನ್ನೆಲ್ಲಾ ಹೇಳಿದರೆ ಏನು ಪ್ರಯೋಜನ; ಅವರನ್ನು ಕೇಳಿ, ಅರ್ಥವಾಗುತ್ತಿದೆಯೇ ಎಂದು.

ಶ್ರೀಮತಿ ಮೋಟಮ್ಮ:- ಅವರು ಗೊತ್ತುಮಾಡಿಕೊಳ್ಳುತ್ತಾರೆ ಅಂಥ ನಾನು ಹೇಳುತ್ತಾ ಇರುವುದು. ಹಾಗಾಗಿ ಇಂದು ಹೆಣ್ಣುಮಕ್ಕಳಲ್ಲಿ ನಾವು ಇವೊತ್ತು ಅವೇರ್‌ನೆಸ್ ಕ್ರಿಯೇಟ್ ಮಾಡಬೇಕಾಗುತ್ತದೆ. ಹೆಣ್ಣು ಒಂದೇ, ಗಂಡೂ ಒಂದೇ, ಆ ದೃಷ್ಟಿಯಲ್ಲಿ ಹೆಣ್ಣು ಮಗುವನ್ನೇ ಹೆತ್ತರೂ ಸಮಾನವಾಗಿ ಅದನ್ನು ಬೆಳೆಸಬೇಕು, ಸಮಾನವಾಗಿ ಅದಕ್ಕೆ ವ್ಯಾಸಂಗವನ್ನು ಕೊಡಬೇಕು ಎನ್ನುವ

ದೃಷ್ಟಿಯಿಂದ ಅದನ್ನು ಬೆಳೆಸಬೇಕು ಎನ್ನುವ ದೃಷ್ಟಿಯಿಂದ ಹೆಣ್ಣುಮಕ್ಕಳಲ್ಲಿ ಅವೇರ್‌ನೆಸ್ ಕ್ರಿಯೇಟ್ ಮಾಡಬೇಕು. ಈ ತರಹ ಕಾರ್ಯಕ್ರಮವನ್ನು ಗ್ರಾಮಾಂತರ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಜಾರಿ ಮಾಡಿ ಅಂಥ ಹೇಳಿದ್ದೆವು. ಅದು ಆಗಲಿಲ್ಲ, ಅದನ್ನು ಮುಂದೆಯಾದರೂ ಮಾಡುತ್ತಾರೋ ಇಲ್ಲವೋ ಅನ್ನುವುದನ್ನು ತಮ್ಮ ಮೂಲಕ ಪ್ರಶ್ನೆ ಮಾಡುತ್ತಾ, ಇಷ್ಟೆಲ್ಲಾ ಹೇಳಿ ಈ ಇಲಾಖೆಯ ಬೇಡಿಕೆ ಬಗ್ಗೆ ನಾಲ್ಕು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ):- ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಒಪ್ಪಿಗೆಗೆ ಇಟ್ಟಿರತಕ್ಕಂಥ ಬೇಡಿಕೆಗಳಾದ ಸಮಾಜ ಕಲ್ಯಾಣ, ಕೈಗಾರಿಕೆ, ರೇಷ್ಮೆ ಮತ್ತು ಕೆ. ಎಸ್. ಆರ್. ಟಿ. ಸಿ. ಮುಂತಾದ ಡಿಮ್ಯಾಂಡ್‌ಗಳನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಸರ್ಕಾರಕ್ಕೆ ತಮ್ಮ ಮೂಲಕ ತಿಳಿಸಲಿಕ್ಕೆ ನಾನು ಇಚ್ಛೆಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳು ಮಾನವೀಯ ದೃಷ್ಟಿಯಿಂದ ಕೆಲಸ ಕಾರ್ಯಗಳನ್ನು ಮಾಡಿದ್ದರೆ, ಈ ಸರ್ಕಾರ ತಂದಿರತಕ್ಕಂಥ ಅನೇಕ ಉಪಯುಕ್ತವಾದ ಯೋಜನೆಗಳಿಂದ ಪ್ರಯೋಜನ ಆಗುತ್ತಿತ್ತು, ಅವರಲ್ಲಿ ನಿಷ್ಠೆ ಕಡಿಮೆ ಅನ್ನುವ ಮಾತು ಕೇಳಿ ಬಂತು. ಆದರೆ ಎಲ್ಲರೂ ಹಾಗೆ ಇಲ್ಲ; ಕೆಲವರು ಯೋಗ್ಯರು ಇದ್ದಾರೆ, ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂಥ ಅಧಿಕಾರ ವರ್ಗದವರೂ ಕೂಡ ಇದ್ದಾರೆ. ಬಹುಶಃ ಅವರ ಸಂಖ್ಯೆ ಕಡಿಮೆ ಇರಬಹುದು. ನನಗೆ ಒಂದು ಘಟನೆ ನೆನಪಿಗೆ ಬಂತು, ನನ್ನೆ ಹಾಸನದಿಂದ ಬರುವಾಗ, ಹಾಸನದ ಟಿ.ಬಿ. ಗೆ ಹೋದಾಗ ಮಾನ್ಯ ಲಕ್ಷ್ಮಣಯ್ಯನವರು ಇನ್ನೂ ಕೆಲವರು ಇದ್ದರು, ಮೊನ್ನೆ ದಿವಸ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಕ್ಲರ್ಕ್ಸ್, ಪ್ಯೂನ್ಸ್ ಇವರ ಬಗ್ಗೆ ಇಂಟರ್‌ವ್ಯೂ ಆಗಿತ್ತು ಅಂಥ ಕೇಳಿದೆ. ೧೫-೨೦ ಸಾವಿರ ರೂಪಾಯಿ ದುಡ್ಡು ತೆಗೆದುಕೊಂಡು ಆಯ್ಕೆ ಮಾಡಿಬಿಟ್ಟರು, ತೀರ ಬಡವರಿಗೆ ಸಿಕ್ಕಲೇಇಲ್ಲ ಎಂದು ಇದರ ಬಗ್ಗೆ ಅಲ್ಲಿಗೆ ಬಂದು ಕೆಲವರು ಕಂಪ್ಲೇಂಟ್ ಹೇಳಿದರು. ಇಂತಹ ಸರ್ಕಾರದಲ್ಲಿ ಕೆಳವರ್ಗದ ಅಧಿಕಾರವರ್ಗಕ್ಕೂ ಕೂಡ ದುಡ್ಡು ಯಾರು ಕೊಡುತ್ತಾರೆ ಅವರಿಗೆ ಸಿಕ್ಕುವ ಹಾಗೆ ಆದರೆ, ನಮ್ಮಂಥ ಬಡವರ ಗತಿ ಏನು ಅನ್ನುವ ಪ್ರಶ್ನೆಯನ್ನು ಕೆಲವರು ಬಂದು ನಮಗೆ ಹೇಳಿದರು. ನಾವು ಬಂದು ಅಪ್ಲಿಕೇಷನ್ ಬರೆದು ಮಿನಿಸ್ಟರಿಗೆ ಕೊಟ್ಟೆವು. ಮಿನಿಸ್ಟರು ಅದನ್ನು ಸ್ಟೇ ಮಾಡಿ ವಿಚಾರ ಮಾಡುತ್ತೇವೆ ಅಂಥ ಹೇಳಿದರು. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆ ಅಂದರೆ, ಅಧಿಕಾರಿಗಳಾಗಲಿ, ರಾಜಕಾರಣಿಗಳಾಗಲಿ, ಯಾರೇ ಆಗಲಿ ನ್ಯಾಯ ನಿಷ್ಠೆಯಿಂದ ನಾವು ಕೆಲಸ ಮಾಡಬೇಕು ಅನ್ನುವ ಭಾವನೆ ಅವರ ಹೃದಯದಲ್ಲಿ ಬರದೇ ಹೋದರೆ ಹೊರಗಡೆ ಯಾವ ಶಕ್ತಿ ಕೂಡ ಬಲವಂತದಿಂದ ಅವರಿಂದ ಒಳ್ಳೆಯ ಕೆಲಸವನ್ನು ಮಾಡಿಸುವುದಕ್ಕೆ ಸಾಧ್ಯವಿಲ್ಲ ಅನ್ನುವ ಅಭಿಪ್ರಾಯದಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ಸಮಾಜ ಕಲ್ಯಾಣ ಇಲಾಖೆ ಇರತಕ್ಕಂಥದ್ದು ದೀನ ದಲಿತರ ಉದ್ಧಾರಕ್ಕೋಸ್ಕರ ಸರ್ಕಾರ ತೆರೆದಿರತಕ್ಕಂಥ ಒಂದು ಇಲಾಖೆ. ಬಹುಶಃ ಈ ಇಲಾಖೆಯಲ್ಲಿ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ, ಬಹುಶಃ ಸರ್ವವಿಧದಲ್ಲೂ ಕೂಡ ಆ ಅಧಿಕಾರ ವರ್ಗದವರಿಗೆ ದೇವರು ಒಳ್ಳೆಯದನ್ನು ಮಾಡುತ್ತಾನೆ. ಅಸಹಾಯಕ ಜನ ತಲೆ ತಲಾಂತರದಿಂದ ಸಮಾಜದಲ್ಲಿ ತುಳಿಯಲ್ಪಟ್ಟ ಜನ, ಅವಿದ್ಯಾವಂತರು ಈ ಸಮಾಜದಲ್ಲಿ ಏನಿದ್ದಾರ ಅವರನ್ನು ಅಷ್ಟೊಂದು ಹೀನಾಯವಾಗಿ ನಮ್ಮ ಸಮಾಜ ನಡೆದುಕೊಳ್ಳುತ್ತಿದೆ. ಅಂತಹ ಜನರ ಉದ್ಧಾರಕ್ಕಾಗಿ ಸರ್ಕಾರ ಏನು ಹಣ ಖರ್ಚು ಮಾಡುತ್ತಿದೆ, ಈ ಹಣವನ್ನು

ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಅಧಿಕಾರ ವರ್ಗದವರು ನೋಡಿಕೊಂಡರೆ, ಬಹುಶಃ ಅದಕ್ಕಿಂಥ ಉತ್ತಮವಾದ ಕೆಲಸ, ದೇವರು ಮೆಚ್ಚಿಕೊಳ್ಳುವ ಕೆಲಸ ಇನ್ನೊಂದಿಲ್ಲ. ನಾನು ಒಂದು ದಿವಸ ನಮ್ಮ ಮನೆಯಲ್ಲಿ ಕುಳಿತಿದ್ದೆ; ಕೆಲವು ಹುಡುಗರು ಬಂದು ಏನೇನೋ ಮಾತನಾಡಿ ಗಲಾಟೆ ಮಾಡುತ್ತಿದ್ದರು. ಈಗ ರಾಜಕೀಯ ಮಾಡಬೇಕಾದರೆ ಹಣ ಬೇಕು, ಹಣ ಮಾಡದಿದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ, ಹಾಗೆ ಹೀಗೆ ಅಂತ ಏನೇನೋ ಹೇಳುತ್ತಿದ್ದರು. ಅವರು ಮಾತನಾಡುವುದಕ್ಕಿಂತ ಮುಂಚೆ ಒಬ್ಬ ಹಳ್ಳಿ ಮುದುಕ ಬಂದು ಕೂತಿದ್ದ, ಇವರ ಮಾತನ್ನೆಲ್ಲಾ ಕೇಳಿದ, ಕೇಳಿದ ಮೇಲೆ ಆತ ಆ ಹುಡುಗರಿಗೆ ಒಂದು ಪ್ರಶ್ನೆ ಕೇಳಿದ, ಎನ್ರೋ, ೧೦೦ ಕೋಟಿ ರೂಪಾಯಿ ದುಡ್ಡು ಮಾಡಿರತಕ್ಕಂಥ ಮನುಷ್ಯ ದಿವಸ ೧೦೦ ಕ್ವಿಂಟಾಲ್ ಊಟ ಮಾಡುತ್ತಾನಾ ಅಂಥ ಕೇಳಿದ, ಹೋಗಲಿ ೧೦ ಕೋಟಿ ರೂಪಾಯಿ ದುಡ್ಡು ಮಾಡಿರತಕ್ಕಂಥ ಒಬ್ಬ ಅಧಿಕಾರಿಯಾಗಲಿ, ರಾಜಕಾರಣಿಯಾಗಲಿ, ಹಾಗಾದರೆ ದಿನ ೧೦ ಕ್ವಿಂಟಾಲ್ ಊಟ ಮಾಡುತ್ತಾನೇನ್ರೋ ಅಂಥ ಕೇಳಿದ. ಆಗ ಆ ಹುಡುಗರು ಹೋಗಯ್ಯ, ನಿನಗೆ ಏನು ಗೊತ್ತಾಗುತ್ತದೆ ಅಂಥ ಹೇಳಿದರು. ಆ ಮಾತು ಹೇಳಿದ ಮುದುಕನ ಬಗ್ಗೆ ತಾವು ಆಮೇಲೇನಾದರೂ ತಪ್ಪು ತಿಳಿದುಕೊಂಡುಬಿಟ್ಟಿರಾ; ಇವನು ಎಲ್ಲೋ ಅಮೇರಿಕಕ್ಕೆ ಹೋಗಿ ಪಿ. ಹೆಚ್. ಡಿ. ಓದಿಕೊಂಡು ಬಂದಿದ್ದಾನೆ ಅಂಥ, ಇಲ್ಲ ಬರೀ ಹೆಬ್ಬೆಟ್ಟು. ನಂತರ ಆ ಮುದುಕ ಹೇಳಿದ, ಏನಪ್ಪ ಒಬ್ಬರಿಗೆ ಇಷ್ಟು ಅನ್ನ ಒಂದು ಸ್ವಲ್ಪ ಸಾರು, ಸ್ವಲ್ಪ ಮಜ್ಜಿಗೆ ಸಾಕು; ಆದರೂ ಇಷ್ಟೊಂದು ಘಾತಕತನ ಮಾಡುವುದರ ಮೂಲಕ ಉಪವಾಸ ಇರತಕ್ಕಂಥ ಬಡವರು, ದೀನದಲಿತರು ಇರತಕ್ಕಂಥ ಈ ದೇಶದಲ್ಲಿ ಇಷ್ಟೊಂದು ಲೂಟಿ ಮಾಡಬೇಕಾ, ಇದು ಎಲ್ಲಾದರೂ ಉಂಟಾ? ಇದನ್ನು ಯಾವ ದೇವರು ಕ್ಷಮಿಸುತ್ತಾನೆ. ಯಾಕ್ರೋ ಓದುವುದಕ್ಕೆ ಅಂಥ ಸ್ಕೂಲಿಗೆ ಕಳುಹಿಸಿದರೆ ಓದದೇ ಎಲ್ಲೆಲ್ಲೊ ಪೋಲಿ ಹೊಡೆದುಕೊಂಡು ಬಂದು ಇಲ್ಲಿ ಇರುವವರ ತಲೆ ಕೆಡಿಸುವುದಕ್ಕೆ ಬಂದಿದ್ದೀರಾ? ಹನುಮೇಗೌಡರೇ, ಇವರ ಮಾತನ್ನು ಕೇಳಬೇಡಿ ಅಂಥ ಹಾಗೆ ಹೀಗೆ ಎಂದು ಬೈದು ಕಳುಹಿಸಿದ. ನಾನು ಆಗ ಆ ಹುಡುಗರಿಗೆ ಹೇಳಿದೆ, ನೀವು ಕಾಲೇಜಿನಲ್ಲಿ ಓದಿದ್ದೀರಲ್ಲಾ, ಈ ವಿವೇಕ ಎಂತಹ ಒಂದು ತ್ಯಾಗ ಬುದ್ಧಿ ಆ ಹಳ್ಳಿ ಮುಗ್ಧ ಜನರಿಗೆ ಇದೆ. ನೋಡಿ ಕಲಿತುಕೊಳ್ಳಬೇಕು ಇವರ ಹತ್ತಿರ. ಈಗ ನಾವು ಕಾಲೇಜು, ಫಿಲಾಸಫಿ ಡಿಗ್ರಿ, ಪಿ. ಹೆಚ್. ಡಿ. ಇವನ್ನು ಕಲಿಯುವುದಕ್ಕಿಂಥ ಹೆಚ್ಚಿಗೆ ಯಾರು ಹಳ್ಳಿಯ ಮುಗ್ಧ ಜನ ಏನೂ ಕಾಣದೇ ಇರತಕ್ಕಂಥ ಜನ ಇದ್ದಾರೆ, ಅವರ ನಡೆ ನುಡಿ ಮತ್ತು ಅವರ ವ್ಯವಹಾರಗಳನ್ನು ನೋಡಿ ಕಲಿತುಕೊಳ್ಳಬೇಕಾಗಿದೆ. ಇದು ರಿವರ್ಸ್ ಆಗುತ್ತಿದೆಯಪ್ಪ ಕಾಲಚಕ್ರ ಉರುಳುತ್ತಿದೆ ಅಂಥ ನಾನು ಹೇಳಿ ಕಳುಹಿಸಿದೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾವು ಅರಿತುಕೊಂಡು ನ್ಯಾಯವಾಗಿರಬೇಕು, ಪ್ರಾಮಾಣಿಕವಾಗಿರಬೇಕು, ದೇವರು ನಮಗೆ ಕೊಟ್ಟಿರತಕ್ಕ ಒಂದು ಅವಕಾಶವನ್ನು ಒಳ್ಳೆಯ ಧರ್ಮದೃಷ್ಟಿಯಿಂದ, ತ್ಯಾಗ ಮನೋಭಾವನೆಯಿಂದ, ಸೇವಾ ಮನೋಭಾವನೆಯಿಂದ ಮಾಡಬೇಕೆಂಬ ಭಾವನೆ ನಮಗೆ ಇಲ್ಲದಿದ್ದರೆ ಬೇರೆ ಯಾವುದೇ ಕಾನೂನು ಕಟ್ಟಳೆಯನ್ನು ಜಾರಿಗೆ ತಂದರೂ ಏನೂ ಮಾಡುವುದಕ್ಕಾಗುವುದಿಲ್ಲ. ನಿನ್ನೆ ಮಾನ್ಯ ಆಹಾರ ಮಂತ್ರಿಗಳು ಓದಿದ್ದು ನೀವು ಕೇಳಿದ್ದೀರಿ ಎಂದು ಕಾಣಿಸುತ್ತದೆ. ೪ ಕೋಟಿ ರೂ.ಗಳ ಅಕ್ರಮ ದಾಸ್ತಾನನ್ನು ಹಿಡಿದಿದ್ದೇವೆಂದು ಹೇಳಿದರು, ಕೇಸು ಹಾಕಿದ್ದೇವೆಂದು ಹೇಳಿದರು. ಆದರೆ ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂದು ಕೇಳಿದರೆ ಒಬ್ಬರಿಗೂ ಇಲ್ಲ ಎಂದು ಹೇಳಿದರು. ಇದು ಯಾರ ತಪ್ಪು ಸ್ವಾಮಿ? ಇವರೆಲ್ಲರೂ ವಿದ್ಯಾವಂತರಲ್ಲವೇ? ಕಾನೂನು ತಿಳಿದವರಲ್ಲವೇ?. ಇವರು ಪ್ರತಿಯೊಂದಕ್ಕೂ ಇನ್‌ಸ್ಟಾಲ್ ಆಗಿ ಆತ್ಮದ್ರೋಹ

ಮಾಡಿಕೊಂಡಾಗ ಯಾವ ಸಮಾಜವಾಗಲಿ, ಯಾವ ಸರ್ಕಾರದವರಾಗಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಅವರು ಇದನ್ನು ತಿಳಿದುಕೊಳ್ಳಬೇಕು. ಕಳೆದ ೫-೬ ತಿಂಗಳ ಹಿಂದೆ ನಾನು ಒಬ್ಬ ಮಹಾತ್ಮರ ಆಶ್ರಮಕ್ಕೆ ಹೋಗಿದ್ದೆ. ಅಲ್ಲಿ ಥಾಟ್ ಫಾರ್ ದಿ ಡೇ ಎಂದು ಹಾಕಿದ್ದರು. ಆದರಲ್ಲಿ ಈ ದಿವಸ ಈ ದೇಶದಲ್ಲಿ ಏನಾದರೂ ಘಾತುಕತನ ನಡೆದು ದ್ರೋಹವಾಗಿದ್ದರೆ ಇದು ವಿದ್ಯಾವಂತರಿಂದ ಮಾತ್ರ. ಹಳ್ಳಿಯ ಮುಗ್ಧಜನರಿಂದ ಈ ದೇಶಕ್ಕೆ ದ್ರೋಹ ಇನ್ನೂ ಅಷ್ಟಾಗಿ ಆಗಿಲ್ಲ. ವಿದ್ಯಾವಂತರು ಎಚ್ಚೆತ್ತುಕೊಳ್ಳದಿದ್ದರೆ ಈ ದೇಶದ ಅವನತಿಗೆ ಅವರೇ ಕಾರಣವಾಗುತ್ತಾರೆಂದು ಬರೆದಿದ್ದರು. ನಾನು ಬಹಳ ಹೊತ್ತು ಯೋಚನೆ ಮಾಡಿ ನೋಡಿದೆ. ಅವರು ಹೇಳಿರುವುದರಲ್ಲಿ ನಿಜವಿದೆ. ಇವತ್ತು ನಾವು ನಮ್ಮ ತಲೆಯಮೇಲೆ ಧರ್ಮದ ತಕ್ಕಡಿಯನ್ನು ಇಟ್ಟುಕೊಂಡು ಇಲ್ಲಿ ವ್ಯವಹಾರ ಮಾಡುತ್ತಿದ್ದೇವೆ. ನಾವು ಇಲ್ಲಿಗೆ ಬಂದ ದಿವಸವೇ ಪ್ರಮಾಣ ವಚನವನ್ನು ಸ್ವೀಕಾರಮಾಡುವಾಗ ನಾವು ನ್ಯಾಯ, ನಿಷ್ಠೆ, ನೀತಿಯಿಂದ ನಡೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ನಾವು ಇದರ ಪ್ರಕಾರ ನಡೆದುಕೊಳ್ಳದಿದ್ದರೆ ಬಹುಶಃ ಜನರು ನಮ್ಮನ್ನು ಮರೆಯಬಹುದು, ಆದರೆ ಮೇಲಿರತಕ್ಕ ಸರ್ವ ಶಕ್ತನಾದ ದೇವರು ಯಾವತ್ತೂ ಕೂಡ ನಮ್ಮನ್ನು ಕ್ಷಮಿಸುವುದಿಲ್ಲವೆಂದು ಹೇಳುತ್ತೇನೆ. ಅಧಿಕಾರಿಗಳಾಗಲೀ, ರಾಜಕಾರಣಿಗಳಾಗಲಿ ಇದನ್ನು ತಿಳಿದುಕೊಂಡು ನಡೆದುಕೊಳ್ಳದಿದ್ದರೆ ಹೊರಗಡೆ ಎಷ್ಟು ಕಟ್ಟುನಿಟ್ಟಿನ ಕಾನೂನುಗಳನ್ನು ತಂದರೂ ಏನೂ ಮಾಡುವುದಕ್ಕಾಗುವುದಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಮಾನ್ಯ ಕೈಗಾರಿಕಾ ಮಂತ್ರಿಗಳು ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. ಹಾಸನದಲ್ಲಿ ಒಂದು ಇಂಡಸ್ಟ್ರಿಯಲ್ ಗ್ರೋತ್ ಸೆಂಟರ್ ಮಂಜೂರಾಗಿದೆ. ಇದು ಮಂಜೂರಾಗಿ ೧ ವರ್ಷದ ಮೇಲಾಯಿತು. ಸುಮಾರು ೨ ಸಾವಿರ ಎಕರೆ ಜಮೀನು ಇದಕ್ಕೆ ಬೇಕೆಂದು ಹೇಳುತ್ತಿದ್ದಾರೆ. ಅಕ್ವಿಸಿಷನ್ ಆಗಬೇಕೆಂದು ಪ್ರಯತ್ನ ನಡೆಯುತ್ತಿದೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ರೈತರನ್ನು ಕರೆಸಿ; ನಿಮ್ಮ ಅಧಿಕಾರಿಗಳು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಸುಮಾರು ೧೫-೨೦ ದಿನಗಳ ಹಿಂದೆ ಅಧಿಕಾರಿಗಳೇ ಬಂದು ರೈತರ ಜೊತೆ ನೆಗೋಷಿಯೇಟ್ ಮಾಡಿ ನಾವು ನಿಮ್ಮ ಜಮೀನನ್ನು ತೆಗೆದುಕೊಳ್ಳುತ್ತೇವೆ. ಈ ಹಣ ಕಡಿಮೆಯಾಯಿತೆಂದು ಕೋರ್ಟಿಗೆ ಹೋಗತಕ್ಕದ್ದು, ಲಾಯರ್ ಫೀಸ್ ಕೊಟ್ಟು ನಾಲ್ಕಾರು ವರ್ಷ ಕೋರ್ಟಿಗೆ ತಿರುಗಿ ಹಣವನ್ನೆಲ್ಲಾ ಕಳೆದುಕೊಳ್ಳಬೇಡಿ ಎಂದು ಹೇಳಿದ್ದಾರೆ. ಆ ಪ್ರಯತ್ನವನ್ನು ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ನೆಗೋಷಿಯೇಟ್ ಮಾಡಿ ಆ ಜಮೀನನ್ನು ಅಕ್ವೈರ್ ಮಾಡಿಕೊಂಡರೆ ಅವರಿಗೆ ಒಂದೇ ಸಾರಿ ಹಣ ಬರುತ್ತದೆ. ಒಟ್ಟಿಗೇ ಹಣ ಬರುವುದರಿಂದ ಅವರು ಆ ಹಣವನ್ನು ಯಾವುದಾದರೂ ಒಂದು ಬಾಬಿಗೆ ಉಪಯೋಗ ಮಾಡಿಕೊಳ್ಳುತ್ತಾರೆ. ಸಾಲಸೋಲ ಇದ್ದರೆ ಸಾಧ್ಯವಾದಷ್ಟೂ ತೀರಿಸಿಕೊಳ್ಳುತ್ತಾರೆ. ಅಥವಾ ಇನ್ನೊಂದು ಕಡೆ ಜಮೀನನ್ನು ತೆಗೆದುಕೊಳ್ಳುತ್ತಾರೆ, ಅಥವಾ ಅಂಗಡಿ ಇಟ್ಟುಕೊಳ್ಳುತ್ತಾರೆ. ಇದರಿಂದ ಅವರಿಗೆ ಒಳ್ಳೆಯದಾಗುತ್ತದೆ. ಮಾನ್ಯ ಸಚಿವರು ಇದರ ಬಗ್ಗೆ ಗಮನಹರಿಸಿ ಇನಿಷಿಯೇಟ್ ಮಾಡಿ ಆ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಜಮೀನನ್ನು ಕಳೆದುಕೊಂಡಂಥ ರೈತರ ಮಕ್ಕಳಲ್ಲಿ ಅನೇಕರು ವಿದ್ಯಾವಂತರಾಗಿ ಕೆಲಸವಿಲ್ಲದೆ ನಿರುದ್ಯೋಗಿಗಳಾಗಿ ಅಲೆಯುತ್ತಿದ್ದಾರೆ. ಆದುದರಿಂದ ಯಾರ ಜಮೀನಿನಲ್ಲಿ ಫ್ಯಾಕ್ಟರಿ ಬರುತ್ತದೋ ಆ ಫ್ಯಾಕ್ಟರಿಯ ಮಾಲೀಕರಿಗೆ ತಾವು ಅಥವಾ ಸರ್ಕಾರದವರು ಒಂದು ಆದೇಶವನ್ನು ನೀಡಿ ಆ ಮಕ್ಕಳ ವಿದ್ಯಾರ್ಹತೆಯ ಆಧಾರದ ಮೇಲೆ ಕೆಲಸವನ್ನು ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು

ಕೇಳಿಕೊಳ್ಳುತ್ತೇನೆ. ಅಕ್ವಿಸಿಷನ್ ಕೆಲಸ ತಡವಾದರೆ ಕಷ್ಟವಾಗುತ್ತದೆ. ಈಗಾಗಲೇ ಅನೇಕ ಜನರು ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಬಂದು ಕೇಳಿಕೊಂಡು ಹೋಗುತ್ತಿದ್ದಾರೆ. ತಕ್ಷಣವೇ ಜಮೀನನ್ನು ಅಕ್ವೈರ್ ಮಾಡಿಕೊಂಡು ಇಂಡಸ್ಟ್ರಿಯಲ್ ಎಸ್ಟೇಟನ್ನು ಡೆವಲಪ್ ಮಾಡಿ ಅಲ್ಲಿ ಕೈಗಾರಿಕೆ ಬರುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ನಮ್ಮ ಹಾಸನದಲ್ಲಿ ಕಿಂಕೋ ಫ್ಯಾಕ್ಟರಿ ಇದೆ. ಈ ಫ್ಯಾಕ್ಟರಿ ಹಿಂದೆ ಬಹಳ ಚೆನ್ನಾಗಿ ನಡೆಯುತಿತ್ತು. ಇದು ಬಹಳ ಪ್ರಸಿದ್ಧವಾದ ಫ್ಯಾಕ್ಟರಿಯಾಗಿತ್ತು. ಇದನ್ನು ಬೆಂಗಳೂರಿನಲ್ಲಿದ್ದಂಥ ಇನ್ನೊಂದು ಫ್ಯಾಕ್ಟರಿಯ ಜೊತೆಗೆ ಸೇರಿಸಿ ಕಿಂಕೋ ಕಂಪನಿಯೆಂದು ಮಾಡಿದ ಮೇಲೆ ಈ ಫ್ಯಾಕ್ಟರಿಯು ಅವನತಿ ಪ್ರಾರಂಭವಾಯಿತು. ಇದು ಹಿಂದೆ ನಡೆದುಹೋದಂಥ ಘಟನೆ. ಈ ಫ್ಯಾಕ್ಟರಿಯಲ್ಲಿ ಲಾಸ್ ಆಗುತ್ತಿರುವುದರಿಂದ ಇದನ್ನು ಮುಚ್ಚಬೇಕೆಂದು ಸರ್ಕಾರದಲ್ಲಿ ಮಾತಾಡಿಕೊಳ್ಳುತ್ತಿದ್ದಾರೆಂದು ಕೇಳುತ್ತಿದ್ದೇನೆ. ಮಾನ್ಯ ಸಚಿವೆಯರಲ್ಲಿ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಮೊದಲು ಹಾಸನದ ಕಿಂಕೋಫ್ಯಾಕ್ಟರಿ ಮತ್ತು ಬೆಂಗಳೂರಿನಲ್ಲಿರತಕ್ಕ ಕಿಂಕೋ ಫ್ಯಾಕ್ಟರಿಯನ್ನು ಡಿವೈಡ್ ಮಾಡಿ ಮೊದಲು ಇದ್ದಂತೆ ಮಾಡಬೇಕು. ಬೆಂಗಳೂರು ಫ್ಯಾಕ್ಟರಿಯನ್ನು ಅಲ್ಲೇ ಪಕ್ಕದಲ್ಲಿರುವ ಕೇಂದ್ರ ಸರ್ಕಾರದ ಫ್ಯಾಕ್ಟರಿಯವರು ನಿಮ್ಮ ಫ್ಯಾಕ್ಟರಿಯ ಆಸ್ತಿಯನ್ನು ನಮಗೆ ವಹಿಸಿಕೊಡಿ ಎಂದು ಕೇಳುತ್ತಿದ್ದಾರೆ. ಇದನ್ನು ಅವರಿಗೆ ವಹಿಸಿಕೊಟ್ಟು ಹಾಸನದಲ್ಲಿರತಕ್ಕ ಕಿಂಕೋ ಫ್ಯಾಕ್ಟರಿಯನ್ನು ಕೆ. ಎಸ್. ಆರ್. ಟಿ. ಸಿ.ಯವರಿಗೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಬಹುಶಃ ಈ ಕಾರ್ಮಿಕರಿಗೆ ಜೀವನ ಮಾಡಲು ಅನುಕೂಲವಾಗುತ್ತದೆ, ಮತ್ತು ಚೆನ್ನಾಗಿ ಎಸ್ಟಾಬ್ಲಿಷ್ ಆದಂಥ ಈ ಫ್ಯಾಕ್ಟರಿ ಉಳಿಯುವುದಕ್ಕೆ ಅನುಕೂಲ ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಯಾವ ಕಾರಣಕ್ಕೂ ಕೂಡ ಬಹಳ ಅಭಿವೃದ್ಧಿಗೆ ಬಂದಿರುವಂಥ ಈ ಫ್ಯಾಕ್ಟರಿಯನ್ನು ಮುಚ್ಚುವಂಥದ್ದು ಅಷ್ಟು ಸೂಕ್ತವಲ್ಲ. ಒಂದು ಫ್ಯಾಕ್ಟರಿಯನ್ನು ಪ್ರಾರಂಭ ಮಾಡಬೇಕಾದರೆ ಕಷ್ಟ ಎಷ್ಟಿದೆ ಎಂಬುದು ಸರ್ಕಾರಕ್ಕೂ ಕೂಡ ಗೊತ್ತು, ಮಾನ್ಯ ಸಚಿವರಿಗೂ ಗೊತ್ತು; ನಮಗೆಲ್ಲರಿಗೂ ಗೊತ್ತು. ಇಂಥ ಸಂದರ್ಭದಲ್ಲಿ ಆ ಫ್ಯಾಕ್ಟರಿಯನ್ನು ಉಳಿಸಲು ಸರ್ವ ಪ್ರಯತ್ನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೆ. ಎಸ್. ಆರ್. ಟಿ. ಸಿಯವರು ಪ್ರತಿ ತಿಂಗಳು ೧೫-೨೦ ಬಸ್‌ಗಳನ್ನು ಬಾಡಿ ಬಿಲ್ಡ್‌ಅಪ್ ಮಾಡಲಿಕ್ಕೆ ಹಾಸನದಲ್ಲಿರುವ ಈ ಫ್ಯಾಕ್ಟರಿಗೆ ಕೊಡುತ್ತಿದ್ದಾರೆ. ಮತ್ತೆ ಡ್ಯಾಮೇಜ್ ಆದಂಥ; ಆಕ್ಸಿಡೆಂಟ್ ಆದಂಥ ಬಸ್ಸುಗಳನ್ನೂ ಕೂಡ ರಿಪೇರಿ ಮಾಡಲಿಕ್ಕೆ ಕೊಡುತ್ತಿದ್ದಾರೆ. ಈಗ ನೋ ಲಾಸ್, ನೋ ಪ್ರಾಫಿಟ್ ಬೇಸಿಸ್‌ನಲ್ಲಿ ಈ ಫ್ಯಾಕ್ಟರಿ ನಡೆಯುತ್ತಿರುವಾಗ ದಯವಿಟ್ಟು ಇದನ್ನು ಡಿವೈಡ್ ಮಾಡಿ ಅವರಿಗೆ ಜವಾಬ್ದಾರಿಯನ್ನು ಕೊಡುವುದರಿಂದ ಪರಿಸ್ಥಿತಿ ಉತ್ತಮವಾಗುತ್ತದೆಂದು ಈ ಸಂದರ್ಭದಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಕೆ. ಎಸ್. ಆರ್. ಟಿ. ಸಿ.ಯ ಎಂ. ಡಿ.ಯವರು ತುಂಬಾ ನಿಗಾ ತೆಗೆದುಕೊಂಡು ಈ ಫ್ಯಾಕ್ಟರಿಯನ್ನು ಉಳಿಸಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆಂದು ಕೇಳಿದೆ. ಅವರು ಒಬ್ಬರೇ ದಕ್ಷರಾದ ಮತ್ತು ಪ್ರಾಮಾಣಿಕವಾದ ಅಧಿಕಾರಿಗಳು. ಬಹುಶಃ ಅಂಥವರ ಕೈಯಲ್ಲಿ ಇಂಥ ಫ್ಯಾಕ್ಟರಿ ಮುಚ್ಚುವುದಕ್ಕೆ ಅವಕಾಶವಾಗಬಾರದೆಂದು ಇಲ್ಲಿ ನಾನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ.

ಇನ್ನು ಕೆ. ಎಸ್. ಆರ್. ಟಿ. ಸಿ.ಯ ಬಸ್‌ಗಳ ಬಗ್ಗೆ ಕೆಲವು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ. ನೀವು ಯಾವ ಪಟ್ಟಣಕ್ಕೆ, ರಾಜ್ಯದಲ್ಲಿ ಎಲ್ಲಿ ಬೇಕಾದರೂ ನೋಡಿ, ಬಸ್‌ಗಳ ಟಾಪ್

ಮೇಲೆ ಜನರನ್ನು ಕೂರಿಸಿಕೊಂಡು ಹೋಗುತ್ತಿದ್ದಾರೆ. ನಮ್ಮಲ್ಲಿ ೪-೫ ತಿಂಗಳಲ್ಲಿ ರೂಟ್‌ಗಳನ್ನು ಕೂಡ ಜಾಸ್ತಿ ಮಾಡಿದರು, ಜನರಿಗೆ ಸಾಕಷ್ಟು ಬಸ್‌ಗಳಿಲ್ಲದೆ ಬಸ್ಸಿನ ಟಾಪ್ ಮೇಲೆ ಕುಳಿತುಕೊಂಡು ಹೋಗುತ್ತಿದ್ದಾರೆ. ಆದರೂ ಕೂಡ ೮೦ ಕೋಟಿ ರೂಪಾಯಿಗಳಷ್ಟು ಲಾಸ್ ಎಂದು ತೋರಿಸುತ್ತಿರುತ್ತಾರೆ. ಇದಕ್ಕೆ ಕಾರಣವೇನೆಂದು ಕೇಳುತ್ತೇನೆ. ಇದು ಏನು ಕಾರಣವೋ ದೇವರಿಗೆ ಗೊತ್ತು. ಎಲ್ಲರೂ ಇದೇ ಮಾತನ್ನು ಹೇಳುತ್ತಾರೆ. ಪ್ರಾಮಾಣಿಕವಾಗಿ ಮೇಲಿರತಕ್ಕಂಥ ಅಧಿಕಾರಿಗಳ ದರ್ಜೆಯಲ್ಲಿರುವ ಎಲ್ಲರೂ ಕೂಡ ಪ್ರಾಮಾಣಿಕವಾಗಿ ಕೆಲಸಮಾಡಿದರೆ ಲಾಸ್‌ನ್ನು ಕಡಿಮೆ ಮಾಡಬಹುದು. ನೋ ಲಾಸ್ ನೋ ಪ್ರಾಫಿಟ್ ಸ್ಟೇಜಿಗೆ ತರಬಹುದೆಂದು ಮಾತನಾಡುತ್ತಾರೆ. ಅದಕ್ಕೆ ಸಂಬಂಧಪಟ್ಟ ಚೇರ್‌ಮನ್‌ರವರು ಇರುತ್ತಾರೆ, ಮಿನಿಸ್ಟರ್ ಇರುತ್ತಾರೆ, ಅದರ ಲೂಪ್‌ಹೋಲ್ ನೋಡಿ ಅದು ಲಾಸ್ ಆಗದ ರೀತಿಯಲ್ಲಿ ಪ್ಲಗ್ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಹಾಸನದ ಪಕ್ಕದಲ್ಲಿ ಮೊನ್ನೆ ೬೦ ಎಕರೆ ಜಮೀನನ್ನು ಡಿವಿಜನಲ್ ವರ್ಕ್‌ಷಾಪ್ ಮಾಡಬೇಕೆಂದು ಹೇಳಿ ಕೊಂಡುಕೊಂಡರು. ಆದರೆ ಡಿವಿಜನಲ್ ವರ್ಕ್‌ಷಾಪ್ ಬರಲಿಲ್ಲ. ಪ್ರಾಜೆಕ್ಟ್ ಮಾಡಿದರು, ಫೌಂಡೇಷನ್ ಕಲ್ಲೂ ಸಹ ಹಾಕಿದರು, ಏನೇನೋ ಮಾಡಿದರು. ನಾನು ಎರಡು ಮೂರು ಬಾರಿ ಶಾಸನ ಸಭೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದೆ. ಮಾನ್ಯ ಸಚಿವರು ಅಲ್ಲಿ ಡ್ರೈವರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮಾಡುತ್ತೇವೆಂದು ಉತ್ತರ ಕೊಟ್ಟರು. ಈಗ ಅದರ ಆವಶ್ಯಕತೆ ಇಲ್ಲ, ಅದನ್ನು ಮಾಡಲು ತೊಂದರೆ ಇದೆ ಎಂದು ಹೇಳುತ್ತಿದ್ದಾರೆ. ಈಗ ನೀವು ಏನಾದರೂ ಒಂದು ಮಾಡಿ. ಯಾವುದೋ ಒಂದು ಮಾಡುವುದಕ್ಕೋಸ್ಕರವಾಗಿ ಜಮೀನನ್ನು ಜನರಿಂದ ಅಕ್ವೈರ್ ಮಾಡಿಕೊಂಡು ಈಗ ಆ ಉದ್ದೇಶವನ್ನು ಜಾರಿಗೊಳಿಸದೆ ಇರುವುದು ಸರಿಯಲ್ಲ. ಜಮೀನನ್ನು ತೆಗೆದುಕೊಂಡು ಹತ್ತಾರು ವರ್ಷಗಳೇ ಆಯಿತು, ಎಷ್ಟೊಂದು ಲಕ್ಷ ಉತ್ಪಾದನೆಯಾಗುತ್ತಿತ್ತೆಂಬುದನ್ನು ಅಧಿಕಾರಿಗಳು ಅರ್ಥಮಾಡಿಕೊಳ್ಳಬೇಕು. ಇಲ್ಲಿ ಡಿವಿಜನ್ ವರ್ಕ್‌ಶಾಪ್ ಅಥವಾ ಡ್ರೈವರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮಾಡಬೇಕು, ಇಲ್ಲದಿದ್ದರೆ ರೈತರ ಜಮೀನನ್ನು ರೈತರಿಗೇ ವಾಪಸ್ ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಹಾಸನದ ಬಸ್ ಸ್ಟ್ಯಾಂಡ್ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದಾರೆ. ೧೫ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಅನ್ನು ರಿಪೇರಿ ಮಾಡಲು ತಯಾರಿಸಲಾಗಿತ್ತು. ದಯವಿಟ್ಟು ಮಳೆಗಾಲಕ್ಕೆ ಮುಂಚೆ ಇದನ್ನು ರಿಪೇರಿ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸೆರಿಕಲ್ಚರ್ ಬಗ್ಗೆ ಹೇಳುವುದಾದರೆ ನಮ್ಮ ಹಾಸನದಲ್ಲಿ ಒಂದು ಗ್ರೇನೇಜ್ ಇದೆ. ಇದಕ್ಕೆ ಸುಮಾರು ಎರಡು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಎರಡು ಕೋಟಿ ಖರ್ಚು ಮಾಡಿ ಎರಡು ವರ್ಷವೇ ಆಯಿತು. ಆದರೆ ಇದು ಏನೂ ಕಾರ್ಯ ಮಾಡುತ್ತಿಲ್ಲ. ಕಾರಣವೇನೆಂದರೆ ಒಂದು ಸ್ಟೆಬಿಲೈಸರ್ ಬೇಕೆಂದು ಹೇಳಿ. ಅದರ ಬೆಲೆ ಎಷ್ಟು ಅಂದರೆ ೫೦ ಸಾವಿರ ರೂಪಾಯಿಗಳು. ೫೦ ಸಾವಿರ ರೂಪಾಯಿಗಳ ಸ್ಟೆಬಿಲೈಸರನ್ನು ತಂದು ಹಾಕಲಿಕ್ಕೆ ಇಲಾಖೆಯವರ ಕೈಯಲ್ಲಿ ಆಗದೇ, ಎರಡು ವರ್ಷದಿಂದ ಎರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಂಥ ಫ್ಯಾಕ್ಟರಿ ಕೆಲಸ ಮಾಡದೆ ಹಾಗೆಯೇ ಬಿದ್ದಿದೆ. ಬೇರೆ ಯಾರದೋ ಪ್ರೈವೇಟ್ ಫ್ಯಾಕ್ಟರಿಯಾಗಿದ್ದರೆ ಸ್ವಂತ ಬಂಡವಾಳ ತಂದು ಹಾಕಿ ವ್ಯವಹಾರ ಮಾಡುತ್ತಿದ್ದರೆ ಈ ರೀತಿ ಬಿಡುತ್ತಿದ್ದನೇ? ಅವರ ಮನೆಯವರು

ಬಿಡುತ್ತಿದ್ದರೇ? ಹೋಗಲಿ ಅವನ ಸ್ನೇಹಿತರು ಬಿಡುತ್ತಿದ್ದರೇ? ಏನೋ ನಿನಗೆ ಬಂದಿರುವುದು ದಾಡಿ, ನಿನ್ನ ಕೈಯಲ್ಲಿ ಆಗದಿದ್ದರೆ ಬೇರೆ ಯಾರಿಗಾದರೂ ಹಾರು ಎಂದು ಹೇಳುತ್ತಿದ್ದರು. ಅವನಿಗೆ ಎಚ್ಚರಿಕೆ ಇರುತ್ತಿತ್ತು. ಭಯ ಅಷ್ಟೇ ಇರುತ್ತಿತ್ತು. ಇಷ್ಟೊಂದು ದುಡ್ಡು ಹಾಕಿದ್ದೇವೆಂದು ಇಲಾಖೆಯವರಿಗೆ ಜ್ಞಾಪಕ ಬೇಡವೇ? ಕೇವಲ ಒಂದು ಸ್ಟೆಬಿಲೈಸರ್ ಇಲ್ಲದೆ ಎರಡು ವರ್ಷದಿಂದ ಇದು ಹಾಗೆಯೇ ಬಿದ್ದಿದೆ. ನಾನು ಎರಡು ಮೂರು ವರ್ಷದ ಹಿಂದೆ ಚೆನ್ನಪಟ್ಟಣದಲ್ಲಿ ಒಂದು ಸಿಲ್ಕ್ ಫಿಲೇಚರ್‌ಗೆ ಹೋಗಿದ್ದು ಜ್ಞಾಪಕ. ಆ ಫ್ಯಾಕ್ಟರಿಯನ್ನು ನಡೆಸಲು ಓಲ್ಟೇಜ್ ಇಲ್ಲ ಎಂತಲೋ ಏನೋ ಹೇಳಿದರು; ಸಾಕಷ್ಟು ಪವರ್ ಸಪ್ಲೈ ಇಲ್ಲವೆಂದು ಹೇಳಿ ಒಂದು ಜನರೇಟರ್ ಹಾಕಬೇಕೆಂದು ಸುಮಾರು ಒಂದು ಲಕ್ಷ ಒಂದೊವರೆ ಲಕ್ಷ ರೂಪಾಯಿಯ ಜನರೇಟರನ್ನು ಹಾಕದೇ ೪-೫ ವರ್ಷಗಳಿಂದ ಫ್ಯಾಕ್ಟರಿಯನ್ನು ನಿಲ್ಲಿಸಿ ಬರತಕ್ಕಂಥ ಆದಾಯ ಎಲ್ಲಾ ಹೋಗಿ ಅದು ಇವತ್ತು ಲಾಸ್ ಆಗಲಿಕ್ಕೆ ಕಾರಣವಾಗಿದೆ ಎಂದು ಕೇಳಿದೆ. ಇದು ಮೂರು ವರ್ಷದ ಹಿಂದಿನ ಮಾತು. ಈಗ ಅದನ್ನೇನಾದರೂ ಸರಿಪಡಿಸಿದ್ದಾರೋ ಏನೋ ಗೊತ್ತಿಲ್ಲ. ಇಂಥ ಸಣ್ಣಪುಟ್ಟ ವಿಚಾರಗಳನ್ನು ಇಲಾಖೆಯ ಅಧಿಕಾರಿಗಳು ಮಂತ್ರಿಗಳು ನೋಡಿ ಏನು ತಕ್ಷಣ ಆಗಬೇಕು ಆ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೋಗರಹಿತವಾದ ಮೊಟ್ಟೆಯನ್ನು ಉತ್ಪತ್ತಿ ಮಾಡಬೇಕು. ಸಾಮಾನ್ಯವಾಗಿ, ಗಂಟು ರೋಗ ಮತ್ತು ಬೇರೆ ರೋಗಗಳು ಬರುತ್ತಿರುವುದು ಮುಕ್ಕಾಲು ಭಾಗ ಮೊಟ್ಟೆಯಲ್ಲಿರತಕ್ಕ ರೋಗ ಡೆವಲಪ್ ಆಗಿ ಬರುತ್ತದೆಂದು ಹೇಳುತ್ತೇನೆ. ಸಾಕಷ್ಟು ಮಂದಿ ಸೂಪರ್‌ವೈಸರನ್ನು ಇಲಾಖೆಯಿಂದ ಮತ್ತು ಸರ್ಕಾರದ ವತಿಯಿಂದ ಮೊಟ್ಟೆ ಕೇಂದ್ರಗಳಿಗೆ ಕಳುಹಿಸಿ ಸೂಕ್ತ ಕ್ರಮ ತೆಗೆದುಕೊಂಡು ರೋಗರಹಿತ ಮೊಟ್ಟೆಯನ್ನು ಹಂಚುವುದಕ್ಕೆ ಇಲಾಖೆಯವರು ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ಇನ್ನು ಸೋಷಿಯಲ್ ವೆಲ್‌ಫೇರ್ ಬಗ್ಗೆ ಅನೇಕ ಯೋಜನೆಗಳನ್ನು ಸರ್ಕಾರದವರು ಕಾರ್ಯಗತ ಮಾಡಿದ್ದಾರೆ. ಇನ್ನೂ ನೂರಾರು ಯೋಜನೆಗಳು ಇವೆ. ಆ ಯೋಜನೆಗಳು ಪ್ರಾಮಾಣಿಕವಾಗಿ ಕಾರ್ಯಗತವಾದರೆ ಅಧಿಕಾರ ವರ್ಗದವರು ನಿಷ್ಠೆಯಿಂದ ಕೆಲಸ ಕಾರ್ಯ ಮಾಡಿದರೆ ಆ ಜನಾಂಗಕ್ಕೆ ಹೆಚ್ಚಿನ ಉಪಯೋಗವಾಗುತ್ತದೆಂದು ಅನ್ನಿಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಆ ಜನಾಂಗ ಅಷ್ಟೊಂದು ಹೀನಾಯ ಸ್ಥಿತಿಯಲ್ಲಿರಬೇಕಾದರೆ ಜನರಲ್ಲಿರತಕ್ಕ ಕುಡಿತದ ಚಟ. ಹಿಂದೆ ಮಹಾತ್ಮ ಗಾಂಧಿಯವರು ಹೇಳಿದರು, ಮುಂದೆ ಸ್ವತಂತ್ರ ಭಾರತದಲ್ಲಿ ಯಾವುದಾದರೂ ಕಾರಣದಿಂದ ತೊಂದರೆಯಾಗಿ ಹೆಂಡ-ಸಾರಾಯಿ ಮಾರಾಟ ಮಾಡಿ ಆ ಹಣದಿಂದ ಸರ್ಕಾರ ನಡೆಸಬೇಕೆಂಬ ಅವಕಾಶ ಬಂದರೆ, ಸ್ವಾತಂತ್ರ್ಯ ಬರುವುದು ೪ ದಿನವಾದರೂ ಚಿಂತೆ ಇಲ್ಲ. ಯಾರು ದೇಶಕ್ಕೋಸ್ಕರ ಬೆವರು ಸುರಿಸಿ ದುಡಿಯುತ್ತಾರೆ ಅವರನ್ನು ಸರ್ವನಾಶ ಮಾಡಿ ಬರತಕ್ಕ ಹಣದಿಂದ ಸರ್ಕಾರ ನಡೆಸತಕ್ಕದ್ದು ದ್ರೋಹವೆಂದು ಹೇಳಿದ್ದನ್ನು ಕೇಳಿದ್ದೆ. ಅಷ್ಟೊಂದು ಬಡವರ ಬಗ್ಗೆ ಅನುಕಂಪ ಇಟ್ಟುಕೊಂಡು ಮಾತನಾಡುತ್ತಾರೆ, ಕಣ್ಣೀರು ಸುರಿಸುತ್ತಾರೆ, ಓಟಿಗೆ ಹೋದಾಗ ಸ್ವಾರ್ಥ ಬರುತ್ತದೆ; ಅವರನ್ನು ಕನ್‌ವಿನ್ಸ್ ಮಾಡಿ ಅಧಿಕಾರಕ್ಕೆ ಬರುತ್ತಾರೆ. ಬಂದಮೇಲೆ ಯಾವ ರೀತಿ ಅನುಕೂಲವಾಗುತ್ತದೆ, ಹೇಗೆ ಸಮಸ್ಯೆಯನ್ನು ಸರಿಪಡಿಸುವುದು ಎಂಬುದರ ಬಗ್ಗೆ ಯೋಚನೆ ಮಾಡುತ್ತಿಲ್ಲ. ಶ್ರೀಮಾನ್ ವೀರೇಂದ್ರ ಪಾಟೀಲರು, ಜನರು ಹೆಂಡ ಕುಡಿದು ಸರ್ವನಾಶವಾಗುತ್ತಾರೆಂದು ಅದನ್ನು ನಿಷೇಧಿಸಿದ್ದರು. ಈಚಲು ಮರಗಳು ಬೇಕಾದಷ್ಟು ಇದ್ದರೂ ತೆಂಗಿನ ಮರಗಳ ಹೆಂಡ ಆರೋಗ್ಯಕ್ಕೆ ಒಳ್ಳೆಯದು. ಇವತ್ತಿನ ದಿವಸ ಬರೀ ಕ್ಲೋರೋ ಹೈಡ್ರೇಟ್ ಕುಡಿಸುತ್ತಿದ್ದಾರೆ. ಯಾವ ಹಳ್ಳಿಗೆ ಹೋಗಿ.

ನೋಡಿದರೂ ಸತ್ತ ಹೆಣದಂತೆ ಕಾಣುತ್ತಿದ್ದಾರೆ ಜನ. ಅವರಿಗೆ ಶಕ್ತಿ ಇದ್ದಾಗ, ಯೌವನ ಇದ್ದಾಗ ದೇಶದ ಕಲ್ಯಾಣಕ್ಕೋಸ್ಕರ ಸರ್ವಸ್ವವನ್ನೂ ತ್ಯಾಗ ಮಾಡಿದ ಜನ. ಕೂಲಿಗೆ ಹೋಗುತ್ತಾರೆ, ಕೆಲಸ ಮಾಡುತ್ತಾರೆ, ಜೀವನ ಮಾಡುತ್ತಾರೆ. ಅವರ ಯೋಗಕ್ಷೇಮದ ವಿಚಾರ ಬಂದಾಗ ಹಣ ಒಂದನ್ನೇ ಕನ್ಸಿಡರೇಷನ್‌ಗೆ ಇಟ್ಟುಕೊಂಡು ಮತ್ತೆ ಹೆಂಡವನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಯಾವ ದೇವರು ನಮ್ಮನ್ನು ಕ್ಷಮಿಸುತ್ತಾನೆ? ಏತಕ್ಕೋಸ್ಕರ ಈ ರೀತಿ ಮಾಡಬೇಕು? ಹಳ್ಳಿಗಳ ಕಡೆ ಹೋದಾಗ ಜನರು ನಗುತ್ತಾ ಇದ್ದರು. ವಾತಾವರಣ ಬದಲಾಗಿತ್ತು, ಹೆಂಗಸರು ಮಕ್ಕಳು ನೆಮ್ಮದಿಯಾಗಿದ್ದರು. ಹೆಂಡ ಹೋಯಿತು, ಕುಡಿಯುವುದು ತಪ್ಪಿತು ಎಂದು ನೆಮ್ಮದಿಯಿಂದ ೭ ಕಾಸು ದುಡಿದು ನೆಮ್ಮದಿಯಾಗಿದ್ದರು. ಈಗ ಒಂದಲ್ಲ ಒಂದು ರೂಪದಲ್ಲಿ ಹೆಂಡದ ಮಾರಾಟ ನಡೆಯುತ್ತಿದೆ. ಇವತ್ತು ಎಲ್ಲಿದೆ ಈಚಲು ಮರ? ಯಾರು ಈಚಲು ಮರದಿಂದ ಹೆಂಡವನ್ನು ಇಳಿಸಿಕೊಡುತ್ತಾರೆ? ಆದುದರಿಂದ ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಏನೋ ಮಾಡಿಕೊಂಡು ಆಯಿತು ಎಂದು ಹೇಳುತ್ತಾರೆ. ಬೇರೆ ಜಿಲ್ಲೆಗಳಲ್ಲಿ ಈಚಲು ಮರಗಳು ಇಲ್ಲ.

ಶ್ರೀಮತಿ ಪೋಟಮ್ಮ:- ನೀವು ಸಕಲೇಶಪುರದ ನಿಮ್ಮ ನೆಂಟರ ಮನೆಗೆ ಹೋಗಿಲ್ಲವೇ? ಹೋಗಿದ್ದರೆ ಹೆಂಡದ ರುಚಿ ಗೊತ್ತಿರುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಅದಕ್ಕಿಂತ ರುಚಿಯಾದ ಪದಾರ್ಥವನ್ನು ಮನೆಯಲ್ಲಿ ಹೆಂಗಸರು ಮಾಡಿಕೊಟ್ಟರೆ ಅದೇ ಸಾಕು. ಹೆಂಡದ ರುಚಿ ಬೇಡ. ಈಗ ಮರ ಎಲ್ಲೂ ಇಲ್ಲ. ಈಗ ಏನು ಮಾಡುತ್ತಾರೆ? ಪುನಃ ಮೊನ್ನೆ ಯಾರೋ ಒಬ್ಬರು ಪ್ರಶ್ನೆ ಕೇಳಿದ್ದರು. ರಾಯಚೂರಿನಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಎಲ್ಲಾಕಡೆ ಇಂಟ್ರೊಡ್ಯೂಸ್ ಮಾಡಿದರು ಎಂದು. ನನಗೆ ಮನಸ್ಸಿಗೆ ಬಹಳ ನೋವಾಯಿತು. ಇಡೀ ಕರ್ನಾಟಕದಲ್ಲಿ ಎಲ್ಲರೂ ಕುಡಿಯುತ್ತಾರೆ ಎಂದು ಅಲ್ಲ. ಯಾರು ಕೂಲಿ ಮಾಡುವ ಜನ ಇದ್ದಾರೆ ಅವರೆಲ್ಲರೂ ಕುಡಿಯುತ್ತಾರೆ. ಆ ವರ್ಗದ ಜನ ಸರ್ವನಾಶ ಆದರೆ ನಾವು ಯಾರದರೂ ಹೋಗುತ್ತೇವಾ ಕೂಲಿ ಮಾಡುವುದಕ್ಕೆ? ನಾವು ಅಗ್ರಿಕಲ್ಚರ್ ಕೂಲಿ ಮಾಡುತ್ತೇವಾ? ಇಂಥ ಕಟ್ಟಡಗಳನ್ನು ಕಟ್ಟುತ್ತೇವಾ? ಬೆಳಗ್ಗೆಯಿಂದ ಸಾಯಂಕಾಲದವರೆಗೆ ಮಣ್ಣು ಹೊರುತ್ತೇವಾ? ಕಲ್ಲು ಹೊರುತ್ತೇವಾ? ಇಷ್ಟೆಲ್ಲ ಮಾಡತಕ್ಕ ಬಡಪಾಯಿಗಳಿದ್ದಾರಲ್ಲಾ, ಅವರ ಸರ್ವನಾಶಕ್ಕೆ ನಾವು ಕಾರಣರಾದರೆ ಯಾರು ಸ್ವಾಮಿ ನಮ್ಮನ್ನು ಕ್ಷಮಿಸುತ್ತಾರೆ? ಯಾವ ದೇವರು ನಮ್ಮನ್ನು ಕ್ಷಮಿಸುತ್ತಾನೆ?

ಶ್ರೀ ಬಿ. ಎಂ. ಇದಿನಬ್ಬ:- ಹನುಮೇಗೌಡರೆ, ಸರ್ವನಾಶಕ್ಕೆ ಚಿಕ್ಕ ಮದ್ದು ಯಾವುದು? ಇದೆಲ್ಲಾ ತಪ್ಪಬೇಕಾದರೆ ಮದ್ಯಪಾನ ನಿಷೇಧ ಮಾಡಿದರೆ ಒಳ್ಳೆಯದಲ್ಲವೇ? ರಗಳೆಯೇ ಮುಗಿಯುತ್ತದಲ್ಲಾ.

ಛೇರ್ಮನ್:- ಅದನ್ನೇ ಹೇಳುತ್ತಿದ್ದಾರೆ ಅವರು.

ಶ್ರೀ ಕೆ. ಹೆಚ್. ಹನುಮೇಗೌಡ:- ಸರ್ಕಾರಕ್ಕೆ ಇದರಿಂದ ಉತ್ಪತ್ತಿ ಎಷ್ಟು? ೬೫೦ ಕೋಟಿಯೋ ೯೦೦ ಕೋಟಿಯೋ ಎಂದು ಹೇಳುತ್ತಾರೆ. ಆದ್ದರಿಂದ ಈಗಿರತಕ್ಕ ತೆರಿಗೆ ವ್ಯವಸ್ಥೆಯಲ್ಲಿ ಸರಿಯಾದ ರೀತಿಯಲ್ಲಿ ತೆರಿಗೆ ವಸೂಲಿ ಮಾಡಿದರೆ ಇದರಲ್ಲಿ ಏನು ಕಳೆದುಕೊಳ್ಳುತ್ತೇವೋ ಅದರ ಎರಡರಷ್ಟು ಬರುತ್ತದೆ. ಪ್ರೊಹಿಬಿಷನ್ ಇಂಟ್ರಡ್ಯೂಸ್ ಮಾಡಿದಾಗ ಸೇಲ್ಸ್ ಟ್ಯಾಕ್ಸ್ ಬರಿಗೆ

ತಂದರು. ಈಗ ಎಲ್ಲರೂ ಟ್ಯಾಕ್ಸ್ ಕಟ್ಟುತ್ತಿದ್ದಾರೆ. ಆದರೆ ಈಗ ಅದನ್ನೂ ಇಟ್ಟುಕೊಂಡರು. ಇದನ್ನೂ ಜಾರಿಗೆ ತರುತ್ತಿದ್ದಾರೆ. ಏನು ಸ್ವಾಮಿ ಇದರ ಅರ್ಥ? ಯಾರೋ ಕೆಲವರು ಎಕ್ಸೈಜ್ ಲಾಬಿಯವರನ್ನು ಬದುಕಿಸುವುದಕ್ಕೋಸ್ಕರ ಸಮಾಜದಲ್ಲಿ ಯಾರು ದುಡಿಮೆ ಮಾಡುತ್ತಿದ್ದಾರೋ, ದೇಶದ ಅಭಿವೃದ್ಧಿಗೋಸ್ಕರ ಹಗಲು ರಾತ್ರಿ ಬೆವರು ಸುರಿಸಿ ದುಡಿಯುತ್ತಿದ್ದಾರೋ ಆ ಜನಾಂಗದವರನ್ನು ಬಲಿ ಕೊಡುವುದಕ್ಕೆ ಹೊರಟರೆ ಇದರ ಅರ್ಥ ಏನು ಎಂದು ನನಗೆ ಅರ್ಥವಾಗುವುದಿಲ್ಲ. ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಟೋಟಲ್ ಪ್ರೋಹಿಬಿಷನ್ ನಮ್ಮ ದೇಶದಲ್ಲಿ ತಂದ ಹೊರತು ಕೆಳವರ್ಗದ ಜನರ ಅದರಲ್ಲೂ ಮುಖ್ಯವಾಗಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್‌ನವರ, ಕೂಲಿಕಾರರ ಉದ್ಧಾರ ಎಂದಿಗೂ ಕೂಡ ಸಾಧ್ಯವಾಗುವುದಿಲ್ಲ. ಬೆಳಗ್ಗೆಯಿಂದ ಸಾಯಂಕಾಲದವರೆಗೆ ದುಡಿಯುತ್ತಾರೆ. ೧೦ ರೂಪಾಯಿಯೋ ೨೦ ರೂಪಾಯೋ ೩೦ ರೂಪಾಯೋ ದುಡಿಯುತ್ತಾರೆ. ತೆಗೆದುಕೊಂಡು ಹೋಗಿ ಕುಡಿಯುತ್ತಾರೆ, ಮನೆಗೆ ಬರುತ್ತಾರೆ. ಕುಡಿದು ಸುಮ್ಮನೆ ಆಗುತ್ತಾರಾ? ಹೆಂಗಸರು ಮಕ್ಕಳನ್ನು ಹಿಡಿದುಕೊಂಡು ಚಚ್ಚುತ್ತಾರೆ. ಆ ಗೋಳನ್ನು ನೋಡಲು ಆಗುವುದಿಲ್ಲ. ನಾನು ಎರಡು ವರ್ಷದ ಹಿಂದೆ ಚನ್ನರಾಯಪಟ್ಟಣದಲ್ಲಿ ಮಧ್ಯಾಹ್ನ ೨ ಗಂಟೆಯಲ್ಲಿ ಬಸ್ ಇಳಿದು ಒಂದಾ ಮಾಡೋಣ ಅಂತ ಅಲ್ಲಿ ಹೋದೆ. ಅಲ್ಲೊಬ್ಬ ಮುದುಕ ಕುಡಿದು ಚರಂಡಿಯಲ್ಲಿ ಬಿದ್ದುಬಿಟ್ಟಿದ್ದಾನೆ. ಏಳೆಂಟು ವರ್ಷದ ಹುಡುಗ ಅಪ್ಪಾ ಏಳು ಮನೆಗೆ ಹೋಗೋಣ, ಅಪ್ಪಾ ಏಳು ಮನೆಗೆ ಹೋಗೋಣ ಎಂದು ಹೇಳುತ್ತಿದ್ದ. ಅವನಿಗೆ ಜ್ಞಾನವೂ ಇಲ್ಲ ಮಾನವೂ ಇಲ್ಲ. ಇಂಥ ಸೀನ್‌ಗಳು ಎಷ್ಟೋ ಇವೆ. ಸಮಾಜದಲ್ಲಿ ಇಷ್ಟೆಲ್ಲಾ ತೆರಿಗೆ ದುಡ್ಡು ತೆಗೆದುಕೊಂಡು ಆಡಳಿತ ಮಾಡುತ್ತಿರುವುದು ಬಡಪಾಯಿಗಳನ್ನು ಉಳಿಸುವುದಕ್ಕೋಸ್ಕರ, ಅವರು ನೆಮ್ಮದಿಯಿಂದ ಬಾಳುವುದಕ್ಕೋಸ್ಕರ ಒಂದು ವ್ಯವಸ್ಥೆ ಮಾಡುವುದಕ್ಕೆ ಶಕ್ತಿ ಇಲ್ಲದೇ ಹೋದರೆ ನಮ್ಮನ್ನು ಸುಸಂಸ್ಕೃತ ಸರ್ಕಾರ ಎಂದು ಕರೆಯುತ್ತಾರಾ? ದಯವಿಟ್ಟು ಯೋಚನೆ ಮಾಡಬೇಕು. ಅಕ್ಷಮ್ಯ ಅಪರಾಧವನ್ನು ನಾವು ಮಾಡುತ್ತಿದ್ದೇವೆ. ಕುಮಾರಿ ಜಯಲಲಿತ ಒಬ್ಬ ಹೆಂಗಸು. ದಯವಿಟ್ಟು ನೀವು ಯಾರೂ ಎದ್ದುಬಿಟ್ಟೀರಾ ಏಗರಿ (ಮಹಿಳಾ ಸದಸ್ಯರಿಗೆ). ಏತಕ್ಕೆ ನಾನು ಹೇಳುತ್ತೇನೆ ಅಂದರೆ ಆ ಹೆಂಗಸು ಕುಡಿಯುವ ವರ್ಗಕ್ಕೆ ಸೇರಿದವಳಲ್ಲ. ಕುಡಿತ ಏನು ಅಂತ ಗೊತ್ತಿಲ್ಲ. ಕುಡಿದು ಸರ್ವನಾಶವಾಗತಕ್ಕ ವಂಶಕ್ಕೆ ಸೇರಿದವಳಲ್ಲ. ಕಷ್ಟ ನಷ್ಟ ಆಕೆಗೆ ಗೊತ್ತಿಲ್ಲ. ಆದರೂ ಕೂಡ ಜನ ಓಟು ಕೊಟ್ಟಿದ್ದಾರೆ, ಸಮಾಜದಲ್ಲಿ ಬಡವರ ಕಲ್ಯಾಣಕ್ಕೋಸ್ಕರ ಮಾಡಲೇಬೇಕು ಎಂದು ಪ್ರೊಹಿಬಿಷನ್ ಇಂಟ್ರೊಡ್ಯೂಸ್ ಮಾಡಿದರು. ಆ ಯಮ್ಮನಿಗಿಂತ ಕಡೇ ಆಗಿಬಿಟ್ಟೆವಲ್ಲಾ ನಾವು. ನಾವು ಗಂಡಸರು ಅವರು ಇವರು ಎಂದು ಹೇಳಿಕೊಂಡು ಎಂಥೆಂಥದ್ದೋ ಹಾಕಿಸಿಕೊಂಡು ಬರುತ್ತೇವೆಲ್ಲಾ ನಮಗೆ ಇಷ್ಟು ಹೊಳೆಯಬಾರದಾ ಹಾಗಾದರೆ? ನೀವು ದಯವಿಟ್ಟು ಇದನ್ನು ತಿಳಿದುಕೊಳ್ಳಬೇಕು.

ಒಬ್ಬ ಮಾನ್ಯ ಸದಸ್ಯರು:- ಇದು ಯಾವ ಡಿಮ್ಯಾಂಡ್?

ಶ್ರೀ ಕೆ. ಹೆಚ್. ಹನುಮೇಗೌಡ:- ಸೋಷಿಯಲ್ ವೆಲ್‌ಫೇರ್ ಡಿಮ್ಯಾಂಡ್. ಸ್ಕೀಮ್‌ಗಳು ಸೋಷಿಯಲ್ ವೆಲ್‌ಫೇರ್‌ದು. ಸ್ಕೀಮ್‌ಗಳನ್ನು ಕೊಡುವುದು, ದುಡ್ಡು ಕೊಡುವುದು, ಗೇಯಿಸಿಕೊಳ್ಳುವುದು, ರಾತ್ರಿ ಕಿತ್ತುಕೊಳ್ಳುವುದು. ಬೆಳಗ್ಗೆಯಿಂದ ಸಾಯಂಕಾಲದವರೆಗೆ ಗೇಯಿಸಿಕೊಳ್ಳುವುದು ಸಾಯಂಕಾಲ ಕಿತ್ತುಕೊಳ್ಳುವುದು. ಇದು ಸಮಾಜದ ಉದ್ಧಾರವಾ?

ಶ್ರೀ ಬಿ. ಶಿವಣ್ಣ:- ಕುಡಿಯುವುದು ತಿನ್ನುವುದು ಸೋಷಿಯಲ್ ವೆಲ್‌ಫೇರ್‌ನಲ್ಲಿ ಬರುತ್ತದಾ?

ಶ್ರೀ ಕೆ. ಹೆಚ್. ಹನುಮೇಗೌಡ:- ಸಮಾಜದಲ್ಲಿ ಇದು ಇರುತ್ತದೆ. ಮಾನ್ಯ ಸಚಿವರ ಬಗ್ಗೆ ನನಗೆ ಗೌರವ ಇದೆ. ಅವರೇನು ಮಾಡುತ್ತಾರೆ ಹೇಳಿ? ಅಭ್ಯಾಸ ಇಲ್ಲ. ಮದುವೆ ಆಗದೆ ಎಡವಟ್ಟು ಮಾಡಿಕೊಂಡರು. ಮಹಿಳೆಯರ ಡಿಮ್ಯಾಂಡ್ ಬಂದಾಗ ಅದರ ಬಗ್ಗೆ ಮಾತನಾಡುತ್ತೇನೆ.

ಶ್ರೀ ಎಂ. ಮಹದೇವ್:- ಮದುವೆಯಾಗಿ ಅನುಭವ ಇಲ್ಲದೇ ಹೋದಮೇಲೆ ಇವರಿಗೆ ಸಮಾಜ ಕಲ್ಯಾಣ ಇಲಾಖೆ ಕೊಟ್ಟಿದ್ದೇ ಎಡವಟ್ಟಾಗಿದೆ ಎಂದು ಕಾಣುತ್ತದೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಸ್ವಲ್ಪ ಅನುಭವ ಇದ್ದಿದ್ದರೆ ಚೆನ್ನಾಗಿ ಕೆಲಸ ಮಾಡುತ್ತಿದ್ದರೋ ಏನೋ; ಇದ್ದುದರಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ನಾಲ್ಕು ಜನ ಮೆಚ್ಚಿದ್ದಾರೆ. ಏನಾದರೂ ಹೇಳಿದರೆ ತಾಳ್ಮೆಯಿಂದ ಕೇಳುತ್ತಾರೆ. ಪಾರ್ಟಿ ಮೀಟಿಂಗ್‌ಗೆ ಬರುವುದು ಸ್ವಲ್ಪ ಕಡಿಮೆ ಅನ್ನುವುದೇ ವಿನಃ ಹೇಳಿದ ಕೆಲಸಕಾರ್ಯಗಳನ್ನು ಚೆನ್ನಾಗಿ ಮಾಡುತ್ತಾರೆ. ಹೆಚ್ಚು ಕಂಪ್ಲೇಂಟ್ಸ್ ಇಲ್ಲ. ಬಡವರ ಬಗ್ಗೆ ಅನುಕಂಪ ಇದೆ. ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗೆ ಹೋಗಿ ಅಲ್ಲಿಗೆ ಅಧಿಕಾರಿಗಳನ್ನು ಕರೆಸಿ ಏನು ಮಾಡಿದಿರಿ, ಆ ಸ್ಕೀಂ ಏನು ಮಾಡಿದ್ದೀರಿ ಎಂದು ಅಧಿಕಾರಿ ವರ್ಗದವರನ್ನು ಸ್ವಲ್ಪ ತರಾಟೆಗೆ ತೆಗೆದುಕೊಂಡು ಉತ್ತಮವಾಗಿ ಕೆಲಸ ಮಾಡುತ್ತಾರೆ. ಅವರ ಬಗ್ಗೆ ಗೌರವ ಇದೆ.

(ಅಧ್ಯಕ್ಷ ಪೀಠದಿಂದ ಗಂಟೆ ಶಬ್ದ ಬಂತು.)

ಶ್ರೀ ಕೆ. ಹೆಚ್. ಹನುಮೇಗೌಡ:- ಏಕೆ ಸ್ವಾಮಿ ಬೆಲ್ ಹೊಡೆದಿರಿ?

೨.೨೫ ಪಿ. ಎಂ.

ಛೇರ್ಮನ್:- ಇನ್ನೂ ೨೯ ಜನ ಮಾತನಾಡುವವರಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಮಾನ್ಯ ಅಧ್ಯಕ್ಷರೇ, ಅನೇಕ ಯೋಜನೆಗಳನ್ನು ಇವರು ಏನು ಜಾರಿಗೆ ತಂದಿದ್ದಾರೆ ಅವು ಬಹಳ ಉಪಯುಕ್ತವಾದ ಯೋಜನೆಗಳಾಗಿವೆ. ಇವತ್ತು ಈ ಯೋಜನೆಗಳಿಗೆ ಸರ್ಕಾರದ ವತಿಯಿಂದ ಕೊಡುವ ಹಣವನ್ನು ಯಾವಾಗ ಕೊಡುತ್ತಾರೆ? ೨೫ನೇ ಮಾರ್ಚ್‌ಗೆ, ಇಲ್ಲವೇ ಮಾರ್ಚ್ ೨೮ರಂದು ಅಥವಾ ೩೧ರಂದು, ಹೀಗೆ ಮಾರ್ಚಿ ತಿಂಗಳಲ್ಲಿ ಕೊಡುತ್ತಾರೆ. ಸರ್ಕಾರ ಈ ಹಣವನ್ನು ವರ್ಷದ ಮೊದಲೇ ಕೊಡಬೇಕಾಗುತ್ತದೆ. ನಿಜವಾಗಿಯೂ ಆ ಬಡಪಾಯಿಗೆ ಅನುಕೂಲವಾಗಬೇಕೆಂದರೆ ಸರ್ಕಾರ ಈ ಹಣವನ್ನು ವರ್ಷದ ಮೊದಲು ಕೊಡಬೇಕು. ಮಾರ್ಚಿ ತಿಂಗಳ ಕೊನೆಯಲ್ಲಿ ಕೊಟ್ಟು, ಖರ್ಚು ಮಾಡಿ ಎಂದರೆ ಅನೇಕ ವಿಧವಾದ ತಪ್ಪುಗಳು ಆಗುತ್ತವೆ. ಈ ದೋಷಕ್ಕೆ ಕಾರಣರಾಗುವವರು ಅಧಿಕಾರಿಗಳು ಅಲ್ಲ, ಸರ್ಕಾರ ಮತ್ತು ಮಂತ್ರಿಗಳು ಎಂದರೆ ತಪ್ಪಾಗಲಾರದು ಇವತ್ತು ಹಣವನ್ನು ಕಾಲಕ್ಕೆ ಸರಿಯಾಗಿ ಕೊಡಬೇಕು ಎಂದು ಹೇಳುತ್ತೇನೆ. ಇನ್ನು ಕೆಲವು ಕಡೆ ಹಣ ಲ್ಯಾಪ್ಸ್ ಆಗುತ್ತಿದೆ. ಪಿಎಸಿ ಕಮಿಟಿಯ ಸದಸ್ಯನಾಗಿರುವುದರಿಂದ ಅಲ್ಲಿ ನಾನು ಕೆಲವು ಅಧಿಕಾರಿಗಳನ್ನು ಕೇಳಿದೆ. ಗೃಹ ಕಲ್ಯಾಣ ಯೋಜನೆ ಎಂದು ಇದೆ. ಹೆಂಗಸರಿಗೆ, ಬಡವರಿಗೆ, ವಿಧವೆಯರಿಗೆ, ಅಸಹಾಯಕರಿಗೆ, ತಂದೆತಾಯಿಗಳು ಸತ್ತು ಹೋಗಿದ್ದು ವಯಸ್ಸಾಗಿದ್ದು ಮದುವೆ ಮಾಡುವವರು ಯಾರೂ ಇಲ್ಲದೇ ಇರುವವರಿಗೆ, ಇಂತಹ ನಿರ್ಗತಿಕರಿಗೆ ಸಹಾಯ

ಪೂರಕವಾಗಿ ಗೃಹ ಕಲ್ಯಾಣ ಯೋಜನೆ ಎಂದು ತಂದಿದ್ದೀರೆಂದು ಕಾಣುತ್ತದೆ.

ಛೇರ್ಮನ್:- ಹನುಮೇಗೌಡರೇ ಮುಗಿಸಿ. ಇನ್ನೂ ೨೫ ಜನ ಮಾತನಾಡುವವರಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಇನ್ನು ಅಸೆಂಬ್ಲಿ ಮುಗಿಯುವವರೆಗೂ ನಾನು ಮಾತನಾಡುವುದಿಲ್ಲ. ಈಗ ನಾನು ಮುಗಿಸಿಬಿಡುತ್ತೇನೆ. ಈ ಯೋಜನೆಯಲ್ಲಿ ಹಣವನ್ನು ಕೊಟ್ಟಿದ್ದೀರಿ. ೨೦ ಲಕ್ಷ ರೂಪಾಯಿ ಏನೋ ಕೊಟ್ಟಿದ್ದರು ಎಂದು ಕಾಣುತ್ತದೆ. ಅಲ್ಲಿ ಅರ್ಧ ಹಣ ಲ್ಯಾಪ್ಸ್ ಆಗಿದೆ. ಇದು ಏನು ಸ್ವಾಮಿ? ಈ ತಪ್ಪು ಏನು ಆಗಿದೆ ಅದನ್ನು ಯಾರು ಕ್ಷಮಿಸುತ್ತಾರೆ? ಯಾರನ್ನು ಕ್ಷಮಿಸಬೇಕು ಹೇಳಿ ಸ್ವಾಮಿ?

ಶ್ರೀ ಬಿ. ಶಿವಣ್ಣ:- ಯಾವ ವಿಚಾರದ ಬಗ್ಗೆ ಹೇಳುತ್ತಿದ್ದೀರಿ?

ಶ್ರೀ ಕೆ. ಹೆಚ್. ಹನುಮೇಗೌಡ:- ಅದೇನೋ ಮೂರನೇ ವರ್ಷದ್ದು ಎಂದು ಕಾಣುತ್ತದೆ. ಅದನ್ನು ಮರೆತುಬಿಟ್ಟಿದ್ದೇನೆ. ಪಿಎಸಿಯಲ್ಲಿ ಈ ವಿಚಾರ ಬಂದಾಗ ನಾನು ಕೇಳಿದೆ. ಅಸಹಾಯಕ ಹೆಣ್ಣುಮಕ್ಕಳಿಗೆ ಡೈರಿ ಬಾಬತ್ತು ಅದೇನೋ ೫ ಸಾವಿರ ರೂಪಾಯಿ ಸಾಲ ಕೊಡುತ್ತಾರೆ. ಅದರಲ್ಲಿ ೨೫ ಪರ್ಸೆಂಟ್ ಸಬ್ಸಿಡಿ ಕೂಡಾ ಇರುತ್ತದೆ. ಇವತ್ತು ಈ ಬಾಬತ್ತಿನಲ್ಲಿ ಕೊಡುವ ಹಣದಲ್ಲೂ ಅರ್ಧ ಹಣ ಲ್ಯಾಪ್ಸ್ ಮಾಡಿದ್ದಾರೆ. ಯಾರೋ ಬಡವರಿಗೆ ಕೊಡುವ ಹಣದಲ್ಲೂ ಕೂಡಾ ಇವರಿಗೆ ಹೊಟ್ಟೆನೋವು ಏಕೆ ಸ್ವಾಮಿ? ಇವತ್ತು ಅದರಲ್ಲಿ ಒಂದು ಎಮ್ಮೆಗೆ ಎರಡೂವರೆ ಸಾವಿರ ರೂಪಾಯಿ. ಏಕೆ ಹೀಗೆ ಲ್ಯಾಪ್ಸ್ ಮಾಡಿದ್ದೀರಿ ಎಂದು ಅಧಿಕಾರಿಗಳಿಗೆ ನಾನು ಕೇಳಿದೆ. ನಾನು ಅಷ್ಟು ಮಾತನಾಡಿದ್ದಕ್ಕೆ ಅವರು ಟೈ ಸರಿಮಾಡಿಕೊಂಡು ಸುಮ್ಮನಾದರು. ಇಂತಹ ಬಾಬಿನಲ್ಲಿ ಇವತ್ತು ನಿಮ್ಮದು ಹೊಣೆ, ಜವಾಬ್ದಾರಿ ಇರುತ್ತದೆ. ಬಡಪಾಯಿಗಳಿಗೆ ಕೊಡುವ ಹಣ ಲ್ಯಾಪ್ಸ್ ಮಾಡುವುದಕ್ಕೆ ಬಿಡಬಾರದು ಎಂದು ಹೇಳುತ್ತೇನೆ. ಮತ್ತು ಇದರಲ್ಲಿ ೨೫ ಪರ್ಸೆಂಟ್ ಸಬ್ಸಿಡಿ ಏನು ಕೊಡುತ್ತಿದ್ದೀರಿ ಅದನ್ನು ೪೦ ಪರ್ಸೆಂಟ್‌ಗೆ ಹೆಚ್ಚು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಅಧ್ಯಕ್ಷರೇ, ಇನ್ನು ದಿನಬೆಳಗಾದರೆ ಪೇಪರ್‌ನಲ್ಲಿ ನಾವು ಓದುತ್ತಿದ್ದೇವೆ ಏನೆಂದರೆ, ಸೀಮೆಎಣ್ಣೆ ಹಾಕಿಕೊಂಡು ಸತ್ತರು, ವರದಕ್ಷಿಣೆ ಗಲಾಟೆಯಿಂದ ಗಂಡ ಹೊಡೆದು ಆಕೆಯನ್ನು ಬಾವಿಗೆ ಹಾಕಿದ ಎಂಬುದನ್ನು ನೋಡುತ್ತಿರುತ್ತೇವೆ. ಇದಕ್ಕೆ ಕಾರಣ ಏನು? ಇವತ್ತು ತಂದೆ ಆಸ್ತಿಯಲ್ಲಿ ಸ್ವಲ್ಪ ಭಾಗ ಹೆಣ್ಣುಮಗಳಿಗೆ ಹೋಗುತ್ತಿದ್ದರೆ ಆ ರೀತಿ ಮಾಡುತ್ತಿದ್ದರೇನು? ಆಯಮ್ಮನ ಹೆಸರಿನಲ್ಲಿ ಆಸ್ತಿ ಇದ್ದಿದ್ದರೆ ಹಣ ಹೋಗುತ್ತದೆ ಎಂದು ಹೆದರಿ ಸುಮ್ಮನೆ ಇರುತ್ತಿದ್ದರು. ಈಗ ಪರಿಸ್ಥಿತಿ ಹೀಗೆ ಇರುವುದರಿಂದ ಅನೇಕ ಸದಸ್ಯರು ಇಲ್ಲಿ ಅದನ್ನು ಹೇಳಿದರು. ತಂದೆಯ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಹಕ್ಕು ಕೊಡುವುದರಿಂದ ವರದಕ್ಷಿಣೆ ಪಿಡುಗು ಹೋಗುತ್ತದೆಂದು ಹೇಳಿದರು. ಅನೇಕ ಸಾರಿ ಮಂತ್ರಿಗಳೂ ಹೆಣ್ಣುಮಕ್ಕಳಿಗೆ ಆಸ್ತಿಯಲ್ಲಿ ಪಾಲು ಕೊಡುವ ಬಗ್ಗೆ ಇಲ್ಲಿ ಹೇಳಿದರು. ಆದರೆ ಆ ಬಗ್ಗೆ ಇನ್ನೂ ಏನೂ ಮಾಡಿಲ್ಲ. ಮತ್ತೆ ಹೆಣ್ಣುಮಕ್ಕಳ ಆಸ್ತಿ ಬಗ್ಗೆ ಏನು ಬಿಲ್ ತಂದಿಟ್ಟೀರೋ ಅದನ್ನು ತಕ್ಷಣ ಪಾಸ್ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಇನ್ನು ಬಹಳ ಜನರು ಮಾತನಾಡುವವರಿದ್ದಾರೆ. ಮುಗಿಸಿಬಿಡಿ.

ಶ್ರೀ ಕೆ. ಹೆಚ್. ಹನುಮೇಗೌಡ:- ಇಂತಹ ಕಲ್ಯಾಣಕರವಾದ ಯೋಜನೆಗಳ ಬಗ್ಗೆ ಸರ್ಕಾರ ಮೊದಲೇ ಹಣವನ್ನು ಕೊಡಬೇಕು. ಮಾನ್ಯ ಸಚಿವರೂ ಈ ಬಗ್ಗೆ ನಿಗಾ ಇಟ್ಟು ಇಲಾಖೆಯ ಉನ್ನತ

ಹುದ್ದೆಯಲ್ಲಿರುವ ಅಧಿಕಾರ ವರ್ಗದವರಿಗೆ ಅದರಲ್ಲಿ ಒಂದು ನಯಾಪೈಸೆ ಕೂಡ ಲ್ಯಾಪ್ಸ್ ಆಗದಹಾಗೆ ನೋಡಿಕೊಳ್ಳಬೇಕೆಂದು ನಿರ್ದೇಶನ ನೀಡಬೇಕು. ಏಕೆಂದರೆ ಈ ಬಾಬಿಗೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೆಯೇ ಹೆಣ್ಣುಮಕ್ಕಳಿಗೆ ಆಸ್ತಿಯ ಹಕ್ಕನ್ನು ಕೊಡುವ ವ್ಯವಸ್ಥೆಯನ್ನೂ ಸಹ ಮಾಡಬೇಕು. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಸೈಟುಗಳನ್ನು ಕೊಡುತ್ತಿದ್ದೇವೆ. ಅವರೆಲ್ಲರೂ ಬಡವರು ಕೂಲಿಕಾರರು. ಆದ್ದರಿಂದ ಆ ಸೈಟುಗಳನ್ನು ಗಂಡಸರಿಗೆ ಕೊಡುವ ಬದಲಾಗಿ ಹೆಣ್ಣುಮಕ್ಕಳಿಗೆ ಕೊಟ್ಟರೆ ಬಹುಶಃ ಅವಳ ಹೆಸರಿನಲ್ಲಿ ಒಳ್ಳೆಯ ಆಸ್ತಿ ಇರುತ್ತದೆ. ಯಾವ ಹೆಣ್ಣು ಮಕ್ಕಳು ಸಹ ಎಲ್ಲಿಯಾದರೂ ಹೋಗಿ ಕುಡಿದು ತಿಂದು ಇಸ್ಪೀಟು ಆಡಿ ದುಡ್ಡು ಕಳೆಯುವುದಿಲ್ಲ. ಏನಾದರೂ ಆರು ಕಾಸು ಮೂರು ಕಾಸು ಇದ್ದರೆ ಅದನ್ನು ಉಳಿಸಿಕೊಂಡು ತನ್ನ ಕರುಳಿನ ಕುಡಿಗೋಸ್ಕರ ಹಗಲು ರಾತ್ರಿ ದೇವರನ್ನು ಪ್ರಾರ್ಥನೆ ಮಾಡಿಕೊಂಡು ಹೋರಾಟ ಮಾಡುತ್ತಾಳೆ. ಆದಕ್ಕಾಗಿ ನಾವು ಕೊನೆಯ ಪಕ್ಷ ಆ ಸೈಟನ್ನು ಏತಕ್ಕೆ ಹೆಣ್ಣು ಮಕ್ಕಳಿಗೆ ಕೊಡಬಾರದು? ಅವರ ಹೆಸರಿಗೆ ಏತಕ್ಕೆ ಕೊಡಬಾರದು? ಯಾವಾಗ ಹೆಣ್ಣು ಮಕ್ಕಳ ಹೆಸರಿನಲ್ಲಿ ಒಂದು ಚೂರು ಆಸ್ತಿ ಇದ್ದರೆ ಗಂಡ ತಾನು ಮಾಡುವ ಉಡಾಫೆಯನ್ನು ಸ್ವಲ್ಪ ಕಡಿಮೆ ಮಾಡುತ್ತಾನೆ. ಅಯ್ಯೋ ಅವಳ ಹೆಸರಿನಲ್ಲಿ ಆಸ್ತಿ ಇದೆ, ದುಡ್ಡು ಕಾಸು ಮಾಡಿಕೊಳ್ಳುತ್ತಾಳೆ ಅವಳು ಏನೋ ಆಸ್ತಿ ಮಾಡಿಕೊಳ್ಳುತ್ತಾಳೆಂದು ಭೀತಿ ಪಡುತ್ತಾನೆ. ಏತಕ್ಕೆ ಈ ಸೈಟನ್ನು ಹೆಣ್ಣು ಮಕ್ಕಳಿಗೆ ಕೊಡಬಾರದು? ಮನೆಗಳನ್ನು ಅಲಾಟ್ ಮಾಡುತ್ತೇವೆ, ಮನೆಗಳನ್ನು ಅಲಾಟ್ ಮಾಡುವಾಗ ಸರ್ಕಾರದ ವತಿಯಿಂದ ಏತಕ್ಕೆ ಹೆಂಗಸರ ಹೆಸರಿಗೆ ಕೊಡಬಾರದು? ಮಾನ್ಯ ಸಚಿವರು ಈ ಬಗ್ಗೆ ಸೀರಿಯಸ್ಸಾಗಿ ಯೋಚನೆ ಮಾಡಬೇಕು. ಹೆಣ್ಣು ಮಕ್ಕಳಿಗೆ ಏನಾದರೂ ಒಂದು ಚೂರು ಪಾರು ಆಸ್ತಿ ಇದ್ದರೆ ಅನುಕೂಲ. ಹೆಂಡತಿ ಸತ್ತರೆ ಗಂಡ ಮಕ್ಕಳು ಮರಿ ಇದ್ದರೆ ಅವನ ಪಾಡಿಗೆ ಅವನು ಯಾವಳನ್ನೋ ಒಬ್ಬಳನ್ನು ಕಟ್ಟಿಕೊಂಡು ಹೊರಟುಹೋಗಿ ಮಕ್ಕಳು ಮರಿಯನ್ನು ಬೀದಿಪಾಲು ಮಾಡುತ್ತಾನೆ. ಗಂಡ ಸತ್ತು ಹೆಂಡತಿ ಉಳಿದುಕೊಂಡರೆ ತಾಯಿಯಾದವಳು ಆ ಮಕ್ಕಳನ್ನು ಕೂಲಿನಾಲಿ ಮಾಡಿ ಏನಾದರೂ ಮಾಡಿ ತಾನು ಉಪವಾಸ ಇದ್ದರೂ ಮಕ್ಕಳು ಬಾಳಿ ಬದುಕಲಿಯೆಂದು ತನ್ನ ಸರ್ವಸ್ವವನ್ನೂ ತ್ಯಾಗ ಮಾಡಿ ಹೋರಾಟ ಮಾಡುತ್ತಾಳೆ. ಏಕೆಂದರೆ ೯ ತಿಂಗಳು ಹೊತ್ತು ಹೆತ್ತು ಊಟ ತಿಂಡಿಯಲ್ಲಿ ಪಥ್ಯ ಇದ್ದು, ಪಥ್ಯೆ ಏನೇನು ಹೇಳುತ್ತಾರ ಅದನೆಲ್ಲಾ ಮಾಡಿ ಹಗಲು ರಾತ್ರಿ ಆ ಮಕ್ಕಳ ಶ್ರೇಯಸ್ಸಿಗೋಸ್ಕರ ತ್ಯಾಗ ಮಾಡತಕ್ಕ ಆ ಪುಣ್ಯಜೀವಿಯ ಹೆಸರಿನಲ್ಲಿ ಆಸ್ತಿ ಇದ್ದರೆ ಏನು ತೊಂದರೆಯಾಗುತ್ತದೆ? ಹಾಗೆ ಮಾಡಿದರೆ ಈ ಸಮಾಜದಲ್ಲಿ ಅವಳಿಗೆ ಗೌರವ ಬರುತ್ತದೆ. ಅವಳಿಗೆ ಏರಡು ಚೂರು ಆಸ್ತಿಯಿದೆ ಮನೆಯಿದೆ, ಸೈಟು ಇದೆಯೆಂದು ಜನರು ಹೇಳಿಕೊಳ್ಳುತ್ತಾರೆ. ಅವಳು ಏನಾದರೂ ಸಣ್ಣ ಕೈಗಾರಿಕೆಯನ್ನು ಪ್ರಾರಂಭ ಮಾಡಿದರೆ ಬ್ಯಾಂಕಿನಲ್ಲಿ ಸಾಲ ತೆಗೆದುಕೊಳ್ಳುತ್ತಾಳೆ. ಹಣ ತೆಗೆದುಕೊಂಡು ಏನಾದರೂ ಮಾಡುತ್ತಾರೆ. ಈ ಎಲ್ಲಾ ಕಾರಣಗಳಿಂದ ದಯಮಾಡಿ ಸರ್ಕಾರದಿಂದ ಕೊಡತಕ್ಕ ಏನೇನು ಸೌಲಭ್ಯಗಳಿವೆ ಅದನ್ನು ದುರ್ಬಲ ವರ್ಗದ ಹೆಣ್ಣುಮಕ್ಕಳಿಗೆ ಸರ್ಕಾರ ಮಂಜೂರು ಮಾಡಬೇಕೆಂದು ಹೇಳುತ್ತೇನೆ. ಆಸ್ತಿಯನ್ನು ರಿಜಿಸ್ಟ್ರೇಷನ್ ಮಾಡುತ್ತಾರೆ. ಮಾನ್ಯ ಅಧ್ಯಕ್ಷರೇ, ನೀವು ನಿಮ್ಮ ಹೆಂಗಸರ ಆಸ್ತಿಯನ್ನು ಏನಾದರೂ ತೆಗೆದುಕೊಂಡರೆ ೧೦೦ ರೂಪಾಯಿ ಟ್ಯಾಕ್ಸ್ ಹಾಕುವುದಾದರೆ ಅಷ್ಟು ರಿಜಿಸ್ಟ್ರೇಷನ್ ಚಾರ್ಜ್ ಅವರ ಅವರಲ್ಲಿ ೨೫ ರೂಪಾಯಿ ಕಡಿಮೆ ಮಾಡಿದ್ದೇ ಆದರೆ ಹಾಗೂ ನಿಮ್ಮ ಹೆಂಗಸರ ಹೆಸರಿಗೆ ರಿಜಿಸ್ಟರ್ ಮಾಡುತ್ತಾರೆಂದು ನೀವು ಹೋಗಲಿ ಬಿಡಿ ಉಳಿದಷ್ಟು ದುಡ್ಡು ಉಳಿಯಿತು ಹೆಂಡತಿಯ ಹೆಸರಿಗೆ ಆಸ್ತಿ ಬರುತ್ತದೆಂದು ಸುಮ್ಮನಾಗುತ್ತೀರಿ. ಕೊನೆಯ ಪಕ್ಷ ಹೆಣ್ಣು ಮಕ್ಕಳಿಗೆ ಆಸ್ತಿ ಬರಬೇಕಾದರೆ

ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಹೆಣ್ಣು ಮಕ್ಕಳು ಬದುಕಿ ಬಾಳಬೇಕಾದರೆ ಏನಾದರೂ ಇಂಡಿವಿಜಿಯಲ್ ಯೋಜನೆಯನ್ನು ಹಾಕಬೇಕು.

ಛೇರ್ಮನ್:- ಮಾನ್ಯ ಹನುಮೇಗೌಡರೇ, ಆಶ್ರಯ ಯೋಜನೆಯಲ್ಲಿ ತಾವು ಛೇರ್ಮನ್ ಆಗಿದ್ದೀರಿ.

ಶ್ರೀ ಕೆ. ಹೆಚ್. ಹನುಮೇಗೌಡ:- ಸರ್ಕಾರದಿಂದ ಡೈರೆಕ್ಷನ್ ಕೊಟ್ಟರೆ ಯಾರೂ ಸಹ ತಪ್ಪಿಸಿಕೊಳ್ಳುವ ಹಾಗೆ ಇಲ್ಲ. ಸರ್ಕಾರದಿಂದ ಹಾಗೆ ಡೈರೆಕ್ಷನ್ ಕೊಡಿ. ಸರ್ಕಾರದಿಂದ ಸಾಧ್ಯವಾದ ಮಟ್ಟಿಗೆ ಹೆಣ್ಣು ಮಕ್ಕಳಿಗೆ ಆಸ್ತಿ ಮಾಡಬೇಕೆಂದು ನಾನು ಹೇಳುತ್ತೇನೆ. ನಾವು ಕೊಟ್ಟಿದ್ದೇವೆ. ಕಂಪಲ್ಸರಿಯಾಗಿ ಮಾಡಿ ಅವರಿಗೆ ಕೊಡಬೇಕೆಂದು ನೀವು ಹೇಳಿ. ಶೇಕಡ ೩೦ರಷ್ಟು ಉದ್ಯೋಗವನ್ನು ಹೆಣ್ಣುಮಕ್ಕಳಿಗೆ ರಿಸರ್ವ್ ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಯಾವಾಗ ಮಾಡುತ್ತಾರೋ ಗೊತ್ತಿಲ್ಲ. ನನ್ನದು ಒಂದು ಪ್ರಾರ್ಥನೆ. ಏಜ್ ಲಿಮಿಟ್‌ನ್ನು ಅವರಿಗೆ ಇನ್ನು ಸ್ವಲ್ಪ ಜಾಸ್ತಿ ಮಾಡಿ. ಗಂಡು ಮಕ್ಕಳಿಗೆ ೩೦ ವರ್ಷ ಮಾಡಿದರೆ ಹೆಣ್ಣು ಮಕ್ಕಳಿಗೆ ಎರಡು ಮೂರು ವರ್ಷ ಜಾಸ್ತಿ ಮಾಡಿ. ಹೆಣ್ಣುಮಕ್ಕಳು ಚಿಕ್ಕವಯಸ್ಸಿನಲ್ಲಿ ಮದುವೆ ಮಾಡಿಕೊಳ್ಳುತ್ತಾರೆ; ಒಂದೆರಡು ಮಕ್ಕಳಾದಮೇಲೆ ಆ ಮಕ್ಕಳನ್ನು ನೆಟ್ಟಿಗೆ ನೇರಮಾಡಿದ ಮೇಲೆ ಸರ್ಕಾರಿ ನೌಕರಿಗೆ ದುಡಿಯುವುದಕ್ಕೆ ಹೋಗುತ್ತಾರೆ. ಆ ಮಕ್ಕಳು ತಮ್ಮ ಪಾಡಿಗೆ ತಾವು ಬದುಕಿಕೊಳ್ಳುತ್ತವೆ. ಹೆಣ್ಣುಮಕ್ಕಳ ಮತ್ತು ಗಂಡು ಮಕ್ಕಳ ಏಜ್ ಅನ್ನು ಒಂದೇ ಲಿಮಿಟ್‌ನಲ್ಲಿ ಇಡುವುದು ಅಷ್ಟು ಸೂಕ್ತವಲ್ಲ. ಕೊನೆಯ ಪಕ್ಷ ಏಜ್ ಜಾಸ್ತಿಮಾಡಿ. ಇದು ಯಾರೂ ಏನನ್ನೂ ಕಳೆದುಕೊಳ್ಳುವ ಪ್ರಶ್ನೆಯಲ್ಲ. ದುಡ್ಡು ಕೊಡುವುದಲ್ಲ, ಕಾಸು ಕೊಡುವುದಲ್ಲ. ಈ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಆ ಮೇಲೆ ಹೆಣ್ಣುಮಕ್ಕಳು ನಡೆಸತಕ್ಕ "ವಿಶ್ವ" ಕೈಗಾರಿಕೆಗಳು ಏನಿವೆ ಅದನ್ನು ಬಹಳ ಪ್ರಚಾರ ಮಾಡುತ್ತಿದ್ದೇವಲ್ಲವೇ ಸ್ವಾಮಿ? ಆ ವಿಶ್ವ ಕಾರ್ಯಕ್ರಮದ ಪ್ರಕಾರ ನಡೆಸತಕ್ಕ ಕೈಗಾರಿಕೆಗಳು ಏನಿವೆ, ಹೆಣ್ಣುಮಕ್ಕಳಲ್ಲಿ ಯಾರು ವಿಧವೆಯರಿದ್ದಾರೆ ಮದುವೆಯಾಗದಿರುವವರು, ಮದುವೆಯಾಗಿ ಗಂಡ ಬಿಟ್ಟವರು ...

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಹನುಮೇಗೌಡರಿಗೆ ಹೆಣ್ಣು ಮಕ್ಕಳು ಜಾಸ್ತಿ ಇದ್ದಾರೆಂದು ಕಾಣಿಸುತ್ತಿದೆಯಲ್ಲಾ.

ಶ್ರೀ ಕೆ. ಹೆಚ್. ಹನುಮೇಗೌಡ:- ನನಗೆ ಹೆಣ್ಣುಮಕ್ಕಳು ಇದ್ದರೇನು; ಇಲ್ಲದಿದ್ದರೇನು? ಇರುವ ವಿಚಾರವನ್ನು ಜನರಲ್ ಆಗಿ ಹೇಳುತ್ತಿದ್ದೇನೆ. ನನಗೆ ಇಬ್ಬರು ಹೆಣ್ಣುಮಕ್ಕಳು ಇದ್ದಾರೆ. ಇಬ್ಬರೂ ಮದುವೆಯಾಗಿದ್ದಾರೆ. ಅವರು ತಮ್ಮ ಗಂಡಂದಿರ ಮನೆಯಲ್ಲಿ ನೆಮ್ಮದಿಯಾಗಿದ್ದಾರೆ, ಏಕೆ?

ಛೇರ್ಮನ್:- ನೀವು ಅವರಿಗೆ ಉತ್ತರ ಕೊಡಬೇಡಿ.

ಶ್ರೀ ಬಿ. ಎಂ. ಇದಿನಬ್ಬ:- ಹೆಣ್ಣುಮಕ್ಕಳ ನೋವು ಅವರ ಹೃದಯದಲ್ಲಿ ಹರಿದಾಡುತ್ತಿದೆ. ಅದಕ್ಕೆ ಅವರು ಬಹಳ ತೀಕ್ಷ್ಣವಾಗಿ ಹೇಳುತ್ತಿದ್ದಾರೆ. ಅದಕ್ಕೊಂದು ಹೃದಯ ಬೇಕು.

ಶ್ರೀ ಸಿ. ಎಂ. ಲಿಂಗಪ್ಪ:- ಮಾನ್ಯ ಹನುಮೇಗೌಡರದ್ದು ತುಂಬಾ ಹೆಣ್ಣುಗರಳು.

ಶ್ರೀ ಕೆ. ಹೆಚ್. ಹನುಮೇಗೌಡ:- ನಾನು ಸ್ವಲ್ಪ ಮಾತನಾಡುವಾಗ ಸ್ವಲ್ಪ ಸುಮ್ಮನೆ ಇರಿ.

ಛೇರ್ಮನ್:- ಬೇಗ ಮುಗಿಸಿಬಿಡಿ.

ಶ್ರೀ ಕೆ. ಹೆಚ್. ಹನುಮೇಗೌಡ:- ಮುಗಿಸುತ್ತೇನೆ ಸ್ವಾಮಿ. ಇನ್ನು ಎಲ್ಲೋ ಒಂದು ಚೂರು ಇದೆ. ಹೆಣ್ಣುಮಕ್ಕಳು ಏನಾದರೂ ಕೈಗಾರಿಕೆಯನ್ನು ಮಾಡುವುದಾದರೆ ಅವರಿಗೆ ಹೆಚ್ಚಿನ ಧನಸಹಾಯವನ್ನು ಕೊಡಬೇಕು ಮತ್ತು ಕೈಗಾರಿಕೆಗೆ ರಾ ಮೆಟೀರಿಯಲ್ಸ್‌ನ್ನು ಸರ್ಕಾರದವರೇ ಕೊಡಬೇಕು. ಅವರು ಫಿನಿಷ್ ಮಾಡಿದಂತಹ ಪ್ರಾಡಕ್ಟ್ಸ್ ಏನಿದೆ ಅವುಗಳನ್ನು ಸರ್ಕಾರ ಕೊಂಡು ಕೊಳ್ಳಬೇಕು. ವಿಶ್ವ ಕಾರ್ಯಕ್ರಮದಡಿಯಲ್ಲಿ ಸಿಂಗಾಪುರದಲ್ಲಿ ಅದೇನೋ ಮಾಡುತ್ತೇವೆಂದು ಹೇಳುತ್ತಾರೆ. ಎಲ್ಲಿಯೇ ಆಗಲಿ ಮಾರ್ಕೆಟ್‌ಗೆ ಕಳುಹಿಸಿಕೊಡಿ ಎಂದು ಈ ಸಂದರ್ಭದಲ್ಲಿ ನಾನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಛೇರ್ಮನ್:- ದಯಮಾಡಿ ಮುಗಿಸಿ. ಇನ್ನೂ ೨೫ ಜನ ಇದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಇನ್ನೊಂದು ವಿಚಾರ ಇದೆ. ಹೆಣ್ಣುಮಕ್ಕಳ ಕಾಲೇಜು ಹಾಸ್ಟೆಲ್‌ಗಳು ಇವೆಯಲ್ಲಾ...

ಛೇರ್ಮನ್:- ಶ್ರೀಮತಿ ಮಲ್ಲಾಜಮ್ಮ ಅವರು ಅದನ್ನೆಲ್ಲಾ ಹೇಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಹೆಣ್ಣುಮಕ್ಕಳು ಜಾಸ್ತಿ ವಿದ್ಯಾವಂತರಾಗಿ, ಧರ್ಮ, ನೀತಿ, ನಿಯಮಗಳ ಪ್ರಕಾರ ನಡೆದುಕೊಳ್ಳದಿದ್ದರೆ ಆ ಸಂಸಾರ ಉಳಿಯುವುದಿಲ್ಲ. ಈ ದೃಷ್ಟಿಯಿಂದ ನಾನು ಮಾತನಾಡುತ್ತಿದ್ದೇನೆ. ಕೊನೆಯಪಕ್ಷ ಎಸ್. ಎಸ್. ಎಲ್. ಸಿ. ವರೆಗಾದರೂ ಹೆಣ್ಣುಮಕ್ಕಳು ಓದಿದರೆ ಆ ಸಂಸಾರವನ್ನು ಹೇಗಾದರೂ ಮಾಡಿಕೊಂಡು ಸಾಧಿಸಿಕೊಂಡು ಹೋಗುತ್ತಾರೆ. ಈ ದೃಷ್ಟಿಯಿಂದ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಜಾಸ್ತಿಯಾಗಬೇಕು. ಎಷ್ಟು ಗಂಡುಮಕ್ಕಳ ಕಾಲೇಜುಗಳು ಇವೆಯೋ, ಅಷ್ಟೇ ಸಂಖ್ಯೆಯಲ್ಲಿ ಹೆಣ್ಣುಮಕ್ಕಳ ಕಾಲೇಜುಗಳನ್ನು ಕ್ರಮೇಣ ಜಾಸ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಛೇರ್ಮನ್:- ಕ್ಲೋಸ್ ಮಾಡಿಬಿಡಿ.

ಶ್ರೀ ಕೆ ಹೆಚ್. ಹನುಮೇಗೌಡ:- ಇರಿ ಸ್ವಾಮಿ, ಮುಗಿಸಿಬಿಡ್ತೀನಿ. ಇನ್ನು ನಮ್ಮ ಮಹಿಳಾ ಮಂಡಳಿಗಳು ಇವೆ. ಈ ಮಹಿಳಾ ಸಮಾಜದಲ್ಲಿ ಏನು ಗ್ರಹಚಾರ ಎಂದರೆ, ಯಾರಿಗೆ ಅಡಿಗೆ ಮಾಡುವುದಕ್ಕೆ ಬರುವುದಿಲ್ಲ, ಒಳ್ಳೆ ತಿಂಡಿ ಮಾಡುವುದಕ್ಕೆ ಬರುವುದಿಲ್ಲ ಅಂತಹವರನ್ನು ಅಲ್ಲಿ ಹಾಕುತ್ತಾರೆ.

ಶ್ರೀ ಅಜೀಜ್ ಸೇಠ್:- ಈ ಅನುಭವ ನಿಮಗೆ ಯಾವಾಗ ಸಿಕ್ಕಿತು?

ಶ್ರೀ ಕೆ. ಹೆಚ್. ಹನುಮೇಗೌಡ:- ಬಡವರ್ಗದವರು ಇದ್ದಾರೆಲ್ಲಾ, ಅವರು ಒಂದು ಕಡೆ ಕುಳಿತು, ಒಂದು ಕಡೆ ಸೇರಿ, ತಮ್ಮ ಕಷ್ಟಸುಖಗಳನ್ನು ಆಲೋಚನೆ ಮಾಡಿ, ಇಂತಿಂಥ ಸ್ಕೀಮ್‌ಗಳು ಇವೆ, ಇಂತಿಂಥ ಅನುಕೂಲತೆ ಇದೆ, ಸರ್ಕಾರದವರು ಹೀಗೆ ಹೀಗೆ ಮಾಡುತ್ತಿದ್ದಾರೆ, ನಾವು ಏಕೆ ಅವುಗಳನ್ನು ಉಪಯೋಗಿಸಿಕೊಳ್ಳಬಾರದು ಎನ್ನುವ ಭಾವನೆ ಅವರಲ್ಲಿ ಬರಬೇಕಾದರೆ ಸರ್ಕಾರದವರು

ಈ ಮಹಿಳಾ ಸಮಾಜಗಳಿಗೆ ಒಂದೊಂದು ಬಿಲ್ಡಿಂಗ್ ಕಟ್ಟಿಸಿಕೊಡಿ. ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಈ ಮಹಿಳಾ ಸಮಾಜದವರಿಗೆ ಸೈಟುಗಳನ್ನು ಕೊಟ್ಟು ಬಿಲ್ಡಿಂಗ್ ಕಟ್ಟಿಕೊಟ್ಟರೆ ಒಳ್ಳೆಯದು. ಯಾರೋ ಶ್ರೀಮಂತರ ಮನೆಯಲ್ಲಿ ಮಹಿಳಾ ಸಮಾಜ ಇದ್ದರೆ ಬಹಳ ಹೆಣ್ಣು ಮಕ್ಕಳು ಹೋಗುವುದಕ್ಕೆ ಹೆದರುತ್ತಾರೆ. ಕನಿಷ್ಠಪಕ್ಷ ಅವರಿಗೆ ಸ್ವಂತ ಒಂದು ಕಟ್ಟಡ ಇತ್ತು ಎಂದರೆ ಎಲ್ಲರೂ ಹೋಗುತ್ತಾರೆ. ಆದ್ದರಿಂದ ಇದಕ್ಕೆ ದುಡ್ಡು ಕೊಟ್ಟು ಕಟ್ಟಿಸಿಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಛೇರ್ಮನ್:- ಬೇಗ ಮುಗಿಸಿ. ಬೇರೆಯವರೂ ಮಾತನಾಡಬೇಕಲ್ಲಾ ?

ಶ್ರೀ ಕೆ. ಹೆಚ್. ಹನುಮೇಗೌಡ:- ಆಯ್ತು, ಯಾವುದು ಉಳಿದಿದೆಯೋ ನೋಡುತ್ತೇನೆ. ಜಾತಿ ಪದ್ಧತಿ ಹೋಗಬೇಕೆಂದು ನಾವು ಭಾರೀ ಪ್ರಚಾರ ಮಾಡುತ್ತೇವೆ. ಅಂತರ್ಜಾತಿ ವಿವಾಹ ಆದರೆ ಅವರಿಗೆ ನಾವು ೫ ಸಾವಿರ ರೂಪಾಯಿ ದುಡ್ಡು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈ ಐದು ಸಾವಿರ ರೂಪಾಯಿಯಲ್ಲಿ ಮೂರು ಸಾವಿರ ರೂಪಾಯಿಗಳಿಗೆ ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟ್ ಕೊಡುತ್ತಾರಂತೆ. ದಯವಿಟ್ಟು ಬೇಡಿ. ತಂದೆ ತಾಯಿಗಳಿಬ್ಬರನ್ನೂ ಬಿಟ್ಟುಬಂದು ಅವರು ಮದುವೆ ಮಾಡಿಕೊಂಡಿರುತ್ತಾರೆ. ಅವರಿಗೆ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ಸ್ ಕೊಡುವುದಕ್ಕೆ ಇನ್ಸಿಸ್ಟ್ ಮಾಡಬೇಡಿ. ಅವರಿಗೆ ಪೂರ್ತಿ ದುಡ್ಡು ಕೊಡಬೇಕು. ಆ ಮೇಲೆ ಅಂತಹವರಿಗೆ ಸರ್ಕಾರದಲ್ಲಿ ಅಪಾಯಿಂಟ್‌ಮೆಂಟ್‌ನ್ನು ಆದ್ಯತೆಯ ಮೇಲೆ ಕೊಡುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಛೇರ್ಮನ್:- ಮುಕ್ತಾಯ ಮಾಡಿ ಸಾಕು. ೩೫ ನಿಮಿಷ ಆಯಿತು.

ಶ್ರೀ ಕೆ. ಹೆಚ್. ಹನುಮೇಗೌಡ:- ಮುಗಿಸಿಬಿಡುತ್ತೇನೆ, ನನ್ನದೊಂದು ಪ್ರಾರ್ಥನೆ ಎಂದರೆ, ಈ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರತಕ್ಕಂಥ ಜನರನ್ನು ಮಾನವೀಯ ದೃಷ್ಟಿಯಿಂದ ನೋಡಬೇಕು. ನಾವು ಇಂತಹ ಜನರ ಸೇವೆ ಮಾಡುವುದರಿಂದ ನಮಗೆ ಕಲ್ಯಾಣವಾಗುತ್ತದೆ, ನಮಗೆ ದೇವರು ಒಳ್ಳೆಯದು ಮಾಡುತ್ತಾನೆ, ನಮ್ಮ ಮಕ್ಕಳುಮರಿಗೆ ಕೂಡ ಒಳ್ಳೆಯದಾಗುತ್ತದೆ ಎನ್ನುವ ಭಾವನೆಯಿಂದ ಕೆಲಸ ಮಾಡತಕ್ಕಂಥ ಡೆಡಿಕೇಟೆಡ್ ಆಫೀಸರ್ಸ್ ಬೇಕು. ಕೆಲವರು ಅಂತಹವರು ಇದ್ದಾರೆ. ಆದರೆ ಅವರನ್ನು ಹೇಳುವವರಿಲ್ಲ, ಕೇಳುವವರಿಲ್ಲ. ಈಗ ಏನಾಗಿದೆ ಎಂದರೆ ...

ಛೇರ್ಮನ್:- ಅದೆಲ್ಲಾ ನೀವು ಪ್ರಾರಂಭದಲ್ಲೇ ಹೇಳಿದ್ದೀರೋ.

ಶ್ರೀ ಕೆ. ಹೆಚ್. ಹನುಮೇಗೌಡ:- ಅಂತಹವರನ್ನು ಸ್ವಲ್ಪ ರೆಕಗ್ನೈಸ್ ಮಾಡಿ. ಅವರನ್ನು ಸ್ವಲ್ಪ ಗಮನದಲ್ಲಿಟ್ಟುಕೊಂಡು ಅವರಿಗೆ ಸ್ಪೆಷಲ್ ಇಂಕ್ರಿಮೆಂಟ್ ಕೊಟ್ಟರೆ ಒಳ್ಳೆಯದು. ನಾನು ಒಂದು ವಿಷಯ ಹೇಳುವುದಕ್ಕೆ ಮರೆತುಬಿಟ್ಟಿದ್ದೆ. ಏನೆಂದರೆ ಹರಿಜನರ ಹಾಸ್ಟೆಲ್‌ಗಳಿಗೆ ಸಂಬಂಧಪಟ್ಟಂತೆ ಅಸಿಸ್ಟೆಂಟ್ ಡೈರೆಕ್ಟರ್ ಇದ್ದಾರೆ. ಅವರ ಹೆಸರನ್ನು ನಾನು ಮರೆತು ಬಿಟ್ಟಿದ್ದೇನೆ. ದುಡ್ಡು ಹೊಡೆದುಕೊಂಡು ಹೋಗಿಬಿಟ್ಟರು. ಎಲ್ಲಿಯಾದರೂ ಉಂಟೆ ಸ್ವಾಮಿ ? ಯಾರು ಅನಾಥರು, ಬಡ ವಿದ್ಯಾರ್ಥಿಗಳು, ಮಕ್ಕಳಿಗೆ ಕೊಟ್ಟಂಥ ದುಡ್ಡನ್ನ ಬಿ. ಎ, ಎಲ್. ಎಲ್. ಬಿ. ಮಾಡಿದ ಒಬ್ಬ ಅಧಿಕಾರಿ ಹೊಡೆದುಕೊಂಡು ಹೋಗಿಬಿಟ್ಟರೆ ಇದಕ್ಕಿಂಥ ಹೇಯವಾದ ಕೆಲಸ ಈ ದೇಶದಲ್ಲಿ ಬೇರೆ ಇದೆಯೇ ? ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ದುಡ್ಡು ಹೊಡೆಯುವುದು ಎಂದರೆ ಲೆಕ್ಕಾಚಾರ

ಬೇಡವೇ? ಯಾರದು ಅಂದರೆ, ಅವರದೇ ಹೊಡೆಯುವುದೇ. ದುಡ್ಡು ಬೇಕು ಎನ್ನುವುದೊಂದೇ ಪ್ರಧಾನವಾದರೆ, ದಯಮಾಡಿ ಹೇಳಿ. ನಾನು ಒಂದು ಓ. ಬಿ. ಸಿ. ಹಾಸ್ಟೆಲ್‌ಗೆ ಹೋಗಿದ್ದೆ. ಇದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ರಾತ್ರಿ ಒಂದು ಗಂಟೆಗೆ ಆ ಹಳ್ಳಿಗೆ ಹೋಗಿದ್ದೆ, ತುಂಬಾ ಲೇಟಾಯಿತು, ನೋಡೋಣ ಎಂದು ಆ ಹಾಸ್ಟೆಲ್‌ಗೆ ಹೋದೆ. ಅಲ್ಲಿ ಹುಡುಗರಿಗೆ ಊಟ ಹಾಕಿರಲಿಲ್ಲ, ಅವರು ಹಾಗೆಯೇ ಅತ್ತುಕೊಂಡು ಕುಳಿತಿದ್ದರು. ಆಗ, ಅಡಿಗೆಯವರನ್ನು ಕರೆದು, ಇವರಿಗೆ ಅನ್ನಮಾಡಿಕೊಡಿ ಎಂದು ಹೇಳಿದೆ.

ಛೇರ್ಮನ್:- ನೀವು ಇದನ್ನೆಲ್ಲಾ ಮಂತ್ರಿಗಳಿಗೆ ಬರೆದು ಕಳುಹಿಸಿ...

ಶ್ರೀ ಕೆ. ಹೆಚ್. ಹನುಮೇಗೌಡ:- ಅದಕ್ಕೆ ಅವರು ಸೌದೆ ಇಲ್ಲವೆಂದು ಹೇಳಿದರು, ಬಡವರ ಹೆಸರು ಹೇಳಿಕೊಂಡು ಇಂತಾದ್ದೆಲ್ಲಾ ನಡೆಯುತ್ತದೆ. ಸರ್ಕಾರದಿಂದ ಏನು ಹಣ ಕೊಡುತ್ತಿದ್ದಾರೆ, ಅದು ಸದ್ವಿನಿಯೋಗವಾಗುತ್ತಿಲ್ಲ. ಈ ರೀತಿ ಸಿಕ್ಕಿಹಾಕಿಕೊಂಡಾಗ, ಯಾವ ಕಾರಣಕ್ಕೂ ಬಿಟ್ಟುಕೊಡದೇ, ಅವರಿಗೆ ಸರಿಯಾದ ಬುದ್ಧಿ ಕಲಿಸಿ, ಮುಂದೆ ಇಂತಹ ಸಮಾಜಘಾತುಕ ಕೆಲಸ ಆಗದಹಾಗೆ ಪ್ರಯತ್ನ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ಮತ್ತೊಮ್ಮೆ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ; ಈ ಬಗ್ಗೆ ಸ್ವಲ್ಪ ಜಾಸ್ತಿ ಆಸಕ್ತಿ ವಹಿಸಿ, ಕಾರ್ಯಕ್ರಮದಲ್ಲಿ ಬಿಗಿಯಾಗಬೇಕು. ಕೆಲವು ಜಿಲ್ಲೆಗಳಲ್ಲಿ ಉತ್ತಮವಾದ ಕೆಲಸ ಮಾಡಿದ್ದೀರಿ ಎಂದು ಕೆಲವು ಜನ ಹೇಳುತ್ತಾರೆ. ನೀವು ಹಿಂದಿನಿಂದ ಪರ್ಸ್ಯೂ ಮಾಡುತ್ತಾ ಇಲ್ಲ. ಇನ್ನು ನಿಮಗೆ ಮಹಿಳಾ ಕಲ್ಯಾಣ ವಿಚಾರದಲ್ಲಿ ಹೆಚ್ಚು ಅನುಭವ ಇಲ್ಲ. ಅವರಿಗೆ ಅವಕಾಶ ಸಿಕ್ಕಿದ್ದರೆ ಒಳ್ಳೆಯ ಕೆಲಸ ಮಾಡಿಕೊಂಡು ಇರುತ್ತಿದ್ದರು. ಆದರೆ, ಅವರು ಮದುವೆಯನ್ನೇ ಆಗಲಿಲ್ಲ. ಇನ್ನೂ ಅವಕಾಶವಿದ್ದರೆ ಆಗಲಿ, ಹೆಚ್ಚು ಉತ್ತಮ ಕೆಲಸ ಮಾಡಿ, ಬಡಪಾಯಿಗಳಿಗೆ ಕೊಟ್ಟಿರತಕ್ಕ ಇಲಾಖೆ ಏನಿದೆ, ಇದನ್ನು ಸರಿಪಡಿಸಿ, ಕೊಟ್ಟಂಥ ಹಣ ಅವರಿಗೆ ತಲುಪುವಹಾಗೆ ಕೀರ್ತಿಶಾಲಿಗಳಾಗಬೇಕೆಂದು ಮತ್ತು ದೇವರು ಅವರಿಗೆ ಸ್ವರ್ಗ ಕೊಡಬೇಕೆಂದು ಕೇಳಿಕೊಂಡು, ನಾನು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀಮತಿ ಮಲ್ಲಾಜಮ್ಮ (ಮಳವಳ್ಳಿ):- ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿನ ಸದನದಲ್ಲಿ ಮಂಡಿಸಿರತಕ್ಕ ಸಮಾಜ ಕಲ್ಯಾಣ ಇಲಾಖೆ ಬೇಡಿಕೆ, ಕೈಗಾರಿಕೆ, ಸಣ್ಣ ಕೈಗಾರಿಕೆ, ಸಾರಿಗೆ ಹಾಗೂ ರೇಷ್ಮೆ ಇಲಾಖೆ, ಪರಿಸರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ...

ವೈಸ್ ಛೇರ್ಮನ್:- ತಾವು ಯಾವ ಇಲಾಖೆ ಮೇಲೆ ಮಾತನಾಡುತ್ತೀರಿ ...

ಶ್ರೀಮತಿ ಮಲ್ಲಾಜಮ್ಮ:- ನಾನು ಸಮಾಜ ಕಲ್ಯಾಣ ಇಲಾಖೆ ಮೇಲೆ ಮಾತನಾಡುತ್ತೇನೆ. ಈ ಎಲ್ಲ ಬೇಡಿಕೆಗಳನ್ನು ಬೆಂಬಲಿಸುತ್ತಾ, ಸಮಾಜ ಕಲ್ಯಾಣ ಇಲಾಖೆ ಬಗ್ಗೆ ನಾನು ಕೆಲವಾರು ಮಾತುಗಳನ್ನಾಡಲು ಇಚ್ಛೆಪಡುತ್ತೇನೆ. ಈಗಾಗಲೇ, ಸಮಾಜ ಕಲ್ಯಾಣ ಇಲಾಖೆ ಎಂದರೆ ಏನು, ಅದರ ಕರ್ತವ್ಯ ಏನು, ಅದು ಯಾವ ರೀತಿ ಕಾರ್ಯ ನಿರ್ವಹಿಸಬೇಕೆಂಬುದರ ಬಗ್ಗೆ, ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸಮಾಜದ ತುಳಿತಕ್ಕೆ ಒಳಗಾದ ಜನರು, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಮುಂದುವರಿಯುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ರೂಪಿಸಬೇಕು ಎಂಬ ಮೂಲ ಉದ್ದೇಶದಿಂದ ಈ ಇಲಾಖೆ ರೂಪ ತಾಳಿದೆ ಎಂದು ನಾನಾದರೂ ಕೂಡ ಭಾವಿಸಿದ್ದೇನೆ.

(ಶ್ರೀಮತಿ ಮೋಟಮ್ಮನವರು ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು.)

ಈ ಇಲಾಖೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದಾರೆ. ಕೇಂದ್ರ ಸರ್ಕಾರದ ಸಹಾಯದಿಂದಲೂ ಹಾಗೂ ರಾಜ್ಯ ಸರ್ಕಾರದ ವತಿಯಿಂದಲೂ, ಈ ಇಲಾಖೆ ಏನು ಹರಿಜನ-ಗಿರಿಜನರಿಗೆ ಶೈಕ್ಷಣಿಕವಾಗಿ ಹಾಕಿಕೊಂಡಿರತಕ್ಕ ಕಾರ್ಯಕ್ರಮದಲ್ಲಿ ಸಾಕಷ್ಟು ನ್ಯೂನತೆಗಳು ಕಂಡುಬಂದಿವೆ. ಇದರಲ್ಲಿ, ಈ ಇಲಾಖೆಯಿಂದ ಸಾಕಷ್ಟು ಪ್ರಯೋಜನವನ್ನು ಪಡೆದಿದ್ದರೂ ಸಹ, ನಿರೀಕ್ಷಣೆ ಮಾಡಿದಂಥ ಮಟ್ಟಕ್ಕೆ ಆ ಒಂದು ಪ್ರಯೋಜನವನ್ನು ಪಡೆಯುವುದಕ್ಕಾಗಿಲ್ಲ. ಏಕೆಂದರೆ, ಈ ಇಲಾಖೆಯಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿನಿಲಯಗಳು ಗ್ರಾಮಾಂತರ ಮಟ್ಟಕ್ಕೂ ಹೆಚ್ಚು ಹೆಚ್ಚು ಬೇಕಾಗಿದೆ. ಈ ನಿಲಯಗಳಲ್ಲಿ ಪ್ರವೇಶ ಪಡೆಯತಕ್ಕ ವಿದ್ಯಾರ್ಥಿಗಳಿಗೆ ಮೆರಿಟ್ ಆಧಾರವಾಗಿಟ್ಟುಕೊಂಡು ಪ್ರವೇಶವನ್ನು ಕೊಡಬಾರದು. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಮಕ್ಕಳಿಗೆ ಬಹಳಷ್ಟು ಬಸ್ಸಿನ ಸೌಕರ್ಯವಿರುವುದಿಲ್ಲ. ಮತ್ತು ಇನ್ನಿತರ ಮಕ್ಕಳಿಗೆ ಹೋಲಿಸಿದಂಥ ಸೌಲಭ್ಯಗಳಿಂದ ಈ ವಿದ್ಯಾರ್ಥಿಗಳು ವಂಚಿತರಾಗಿದ್ದಾರೆ. ಈ ಗುರಿಯನ್ನು ಗಮನದಲ್ಲಿಟ್ಟುಕೊಂಡು, ಇವರಿಗೆ ಮೆರಿಟ್ ಆಧಾರವಾಗಿಟ್ಟುಕೊಳ್ಳದೆ, ಯಾವ ಯಾವ ಕಡೆಗೆ ಹಳ್ಳಿಗಳಿಗೆ ಬಸ್ಸುಗಳಿಲ್ಲ, ಮತ್ತಿತರ ಸೌಲಭ್ಯಗಳು ದೊರೆಯುವುದಿಲ್ಲ ಅಂತಹ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಹೆಚ್ಚಾಗಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ನೀವು ಆಯ್ಕೆಸಮಿತಿಗಳನ್ನು ಏನು ರಚಿಸಿದ್ದೀರಿ, ಅದರಲ್ಲಿ ಖಾಸಗಿಯವರು ಕೂಡ ಹೆಚ್ಚು ಸಂಖ್ಯೆಯಲ್ಲಿ ಇರಬೇಕು, ಶಾಸಕರು, ಜನ ಪ್ರತಿನಿಧಿಗಳು ಯಾರಾದರೂ ಇದ್ದರೆ ಈ ಸೌಲಭ್ಯಗಳನ್ನು ಯಾವರೀತಿ ಕೊಡಬೇಕು ಎಂಬುದಕ್ಕೆ ಸೂಕ್ತವಾದ ಮಾರ್ಗದರ್ಶನವನ್ನು ಅಧಿಕಾರಿಗಳಿಗೆ ಕೊಡಲು ಅನುಕೂಲವಾಗುತ್ತದೆಂದು ನಾನಾದರೂ ಕೂಡಾ ಈ ಸಂದರ್ಭದಲ್ಲಿ ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಹರಿಜನ ಗಿರಿಜನ ಹಾಗೂ ಬಿ. ಸಿ. ಎಂ. ಹಾಸ್ಟೆಲ್‌ಗಳು ಬಹಳ ಕಡಿಮೆ ಇವೆ. ಹೋಬಳಿ ಮಟ್ಟದಲ್ಲಿ, ಗ್ರಾಮಾಂತರ ಪ್ರದೇಶದ ಮಟ್ಟದಲ್ಲಿ ಬಹಳ ಕಡಿಮೆ ಇರುತ್ತವೆ. ಆದುದರಿಂದ ಹೆಚ್ಚುಹೆಚ್ಚಾಗಿ ಬಿ. ಸಿ. ಎಂ. ಹಾಸ್ಟೆಲ್‌ಗಳು ಆಗಬೇಕು. ವಿದ್ಯಾರ್ಥಿನಿ ನಿಲಯಗಳು ಅಂದರೆ ಹೆಣ್ಣುಮಕ್ಕಳ ಹಾಸ್ಟೆಲ್ಸ್ ಹೆಚ್ಚು ಆಗಬೇಕೆಂದು ನಾನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ವಿದ್ಯಾರ್ಥಿನಿಲಯಗಳಿಗೆ ತಾವು ಏನು ಶೈಕ್ಷಣಿಕವಾಗಿ ಸೌಲಭ್ಯಗಳನ್ನು ಕೊಡುತ್ತೀರಿ ಅದನ್ನು ವರ್ಷದ ಪ್ರಾರಂಭದಲ್ಲೇ ತಾವು ವಿತರಣೆ ಮಾಡಬೇಕು. ಈಗ ಯೂನಿಫಾರಂ ಕೊಡುತ್ತೀರಿ. ಈ ಯೂನಿಫಾರಂ ಆ ಹುಡುಗರ ಪರೀಕ್ಷೆಗಳೆಲ್ಲಾ ಮುಗಿದು ಮತ್ತೆ ಅವರು ಲಗೇಜ್ ಕಟ್ಟಿಕೊಂಡು ಊರಿಗೆ ಹೊರಡುವಂತಹ ಸಂದರ್ಭದಲ್ಲಿ ಕೊಡುತ್ತಾರೆ. ಇದರಿಂದ ಅವರಿಗೆ ಉಪಯೋಗವಾಗುವುದಿಲ್ಲ. ನೀವು ಪ್ರಾರಂಭದಲ್ಲೇ ಕೊಟ್ಟರೆ ಅವರಿಗೆ ಅನುಕೂಲವಾಗುತ್ತದೆ. ಬಡತನದಲ್ಲಿರುವ ಪೋಷಕರಿಗೆ ಹೆಚ್ಚಿನ ಹೊರೆ ಆಗುವುದು ಕಡಿಮೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನೀವು ಏನು ಎರಡು ಜೊತೆ ಯೂನಿಫಾರಂ ಎಂದು ಒಂದು ಕಾಟನ್ ಮತ್ತೊಂದು ಟೆರಿಕಾಟ್ ಕೊಡುತ್ತೇವೆಂದು ಹೇಳುತ್ತೀರಿ, ಈ ಎರಡು ಡ್ರೆಸ್‌ನಲ್ಲಿ ಒಂದು ಯೂನಿಫಾರಂ ಕೊಡಿ ಇನ್ನೊಂದು ಕಲರ್ ಡ್ರೆಸ್ ಕೊಡಿ, ಅದರಿಂದ ಬಡ ಮಕ್ಕಳಿಗೆ ಅನುಕೂಲವಾಗುತ್ತದೆ. ಇದೇ ಸಲಹೆ ಕಳೆದ ವರ್ಷ ತಮಗೆ ಮಾಡಿದ್ದೆವು, ಆದರೆ ತಮ್ಮ ಇಲಾಖೆಯ ಅಧಿಕಾರಿಗಳು ಇದನ್ನು ಕೈಬಿಟ್ಟಿದ್ದಾರೆ. ದಯವಿಟ್ಟು ತಾವು ಈ ಒಂದು ಸಲಹೆಯನ್ನು ಅನುಸರಿಸಬೇಕೆಂದು ಹೇಳಿ ಈ ಸದನದ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಅದೇ ರೀತಿ, ಪಠ್ಯಪುಸ್ತಕಗಳನ್ನು ವರ್ಷದ ಕೊನೆಯಲ್ಲಿ

ಕೊಡುತ್ತೀರಿ, ಈ ಪಠ್ಯಪುಸ್ತಕಗಳನ್ನು ನೋಟ್ಸ್‌ಗಳನ್ನು ಶಾಲೆ ಪ್ರಾರಂಭವಾದ ತಕ್ಷಣ ಕೊಟ್ಟರೆ ಹೆಚ್ಚು ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ವಿದ್ಯಾರ್ಥಿನಿಲಯಗಳ ಬಗ್ಗೆ ಹೇಳುವುದಾದರೆ, ಶ್ರೀಮತಿ ಮೋಟಮ್ಮನವರು ಹೇಳಿದಹಾಗೆ ಇವು ದನಗಳ ಕೊಠಡಿಗಳ ತರಹ ಇವೆ. ಸರಕಾರದವರು ಏನು ಕಟ್ಟಡ ಕಟ್ಟಿದ್ದಾರೆ, ಅದರಲ್ಲಿ ಕನಿಷ್ಠ ಸೌಲಭ್ಯಗಳು ಸಿಗುತ್ತವೆ. ಆದರೆ ಖಾಸಗಿ ಕಟ್ಟಡಗಳಲ್ಲಿ, ಬಾಡಿಗೆ ಮನೆಗಳಲ್ಲಿ ಏನು ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದ್ದಾರೆ ಅವು ನಿಜಕ್ಕೂ ದನದ ಕೊಠಡಿಗಳ ತರಹ ಇವೆ. ಅವು ಮನುಷ್ಯರು ವಾಸ ಮಾಡುವ ಪರಿಸ್ಥಿತಿಯಲ್ಲಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ನಾವು ಕಣ್ಣಾರೆ ಕಂಡದ್ದನ್ನು ನೋಡಿದರೆ, ಅನೇಕ ಗಲ್ಲಿಗಳಲ್ಲಿರುವ ಕಟ್ಟಡಗಳಲ್ಲಿ ಇವು ನಡೆಯುತ್ತಿದೆ, ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ, ಸ್ನಾನದ ವ್ಯವಸ್ಥೆ ಇರುವುದಿಲ್ಲ, ಕೆರೆ ಭಾವಿಗಳ ಕಡೆ ಹೋಗಿ ಸಣ್ಣಸಣ್ಣ ಮಕ್ಕಳು ಸ್ನಾನವನ್ನು ಮಾಡಬೇಕಾಗುತ್ತದೆ. ಆದುವರಿಂದ ದಯವಿಟ್ಟು ಖಾಸಗಿ ಹಾಗೂ ಬಾಡಿಗೆ ಕಟ್ಟಡಗಳಿಗೆ ಬದಲಾಗಿ ಸರಕಾರಿ ಕಟ್ಟಡಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಡಬೇಕು, ಮತ್ತೆ ಅಲ್ಲಿ ನೀರಿನ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ.

(ಸನ್ಮಾನ್ಯ ಉಪಾಧ್ಯಕ್ಷಿಣಿಯವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಇನ್ನು ಫುಡ್ ವಿಚಾರ ಹೇಳಬೇಕೆಂದರೆ, ಹಾಸ್ಟೆಲ್‌ಗಳಲ್ಲಿ ಒಂದು ವಿದ್ಯಾಥಿಗೆ ೧೫೦ ರೂಪಾಯಿ ಕೊಡುತ್ತಿದ್ದೀರಿ. ಅದರಲ್ಲಿ ಸರಿಯಾದಂಥ ಪೌಷ್ಠಿಕ ಆಹಾರವನ್ನು ಕೊಡುವುದಕ್ಕೆ ಸಾಧ್ಯ ಇರುವುದಿಲ್ಲ. ಆದುದ್ದರಿಂದ ಈಗಿನ ೧೫೦ ರೂಪಾಯಿಗಳನ್ನು ೩೦೦ ರೂಪಾಯಿಗಳಿಗೆ ಹೆಚ್ಚಿಸಬೇಕು. ಇದರಿಂದ ಒಳ್ಳೆಯ ಊಟ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮಕ್ಕಳಿಗೆ ಬೆಳಗ್ಗೆ ಮತ್ತು ಸಾಯಂಕಾಲ ಊಟ ಕೊಡುವುದರ ಜೊತೆಗೆ ಮಧ್ಯಾಹ್ನ ಯಾವುದಾದರೂ ಲಘು ಉಪಹಾರ ಕೊಡಬೇಕೆಂದು ಈ ಸಂದರ್ಭದಲ್ಲಿ ತಮ್ಮನ್ನು ವಿನಂತಿಸಿಕೊಳ್ಳುತ್ತಿದ್ದೇನೆ. ಮತ್ತೆ ಅಲ್ಲಿ ಸ್ನಾನಕ್ಕೆ ಬೇಕಾದಂಥ ನೀರಿಗಾಗಿ ಬೋರ್‌ವೆಲ್‌ಗಳನ್ನು ತೋಡುವುದು ಕೆಲವು ವಿದ್ಯಾರ್ಥಿನಿಲಯಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿದೆ. ನಾನೇ ನಮ್ಮ ಕ್ಷೇತ್ರದಲ್ಲಿ ಹಾಸ್ಟೆಲ್‌ಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ಅಲ್ಲಿ ನೀರಿನ ವ್ಯವಸ್ಥೆ ಇರಲಿಲ್ಲ. ಸಂಬಂಧಪಟ್ಟ ಜೆಡ್. ಪಿ. ಯವರಿಗೆ ಹೇಳಿ ನಾನು ಅಲ್ಲಿ ಬೋರ್‌ವೆಲ್ ಹಾಕಿಸಿದೆ. ನೀವು ಕಟ್ಟಡ ಕಟ್ಟುವಂತಹ ಸಂದರ್ಭದಲ್ಲೇ ಬೋರ್‌ವೆಲ್ ವ್ಯವಸ್ಥೆ ಅಥವಾ ಬಾವಿ ವ್ಯವಸ್ಥೆ ಮಾಡಿಸಬೇಕೆಂದು ಮತ್ತೊಂದು ಸಾರಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮತ್ತೆ ಸ್ನಾನದ ವ್ಯವಸ್ಥೆ ಕಂಪಲ್ಸರಿ ಆಗಬೇಕು. ಇನ್ನು ಸ್ಪೆಷಲ್ ಕೋಚಿಂಗ್ ಬಗ್ಗೆ ಹೇಳುವುದಾದರ, ಈ ಸ್ಪೆಷಲ್ ಕೋಚಿಂಗ್ ತಾವು ೮ನೇ ತರಗತಿಯಿಂದ ಪ್ರಾರಂಭಿಸಿದ್ದೀರಿ. ದಯಮಾಡಿ ೫ನೇ ತರಗತಿಯಿಂದ ಸ್ಪೆಷಲ್ ಕೋಚಿಂಗ್ ಕೊಡುವಂತಹ ಕೆಲಸ ಆಗಬೇಕು. ಮತ್ತೆ ಈ ಸ್ಪೆಷಲ್ ಕೋಚಿಂಗ್ ಕೊಡುವವರಿಗೆ ನಿಗಧಿಯಾದ ಸಮಯದಲ್ಲಿ ೩ ತಿಂಗಳು ೬ ತಿಂಗಳು ಅಂತ ಹೇಳಿ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದೀರಿ. ಅದು ಶಾಲೆ ಪ್ರಾರಂಭವಾದಾಗಿನಿಂದಲೇ ಈ ಒಂದು ಸ್ಪೆಷಲ್ ಕೋಚಿಂಗ್ ಕೊಡಬೇಕು ಮತ್ತು ಅದಕ್ಕೆ ನುರಿತ ಶಿಕ್ಷಕರನ್ನು ನೀವು ಅಪಾಯಿಂಟ್ ಮಾಡಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನೀವು ಹಲವಾರು ಉಪಯೋಗ ಇಲ್ಲದೇ ಇರತಕ್ಕಂಥ ಕಾರ್ಯಕ್ರಮಗಳನ್ನು ದಯಮಾಡಿ ರದ್ದುಪಡಿಸಿ. ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್ ಜನ್ಮಶತಾಬ್ದಿ ವರ್ಷವಾದಂತಹ ಈ ಸಾಲಿನಲ್ಲಿ ಪ್ರತಿ ತಾಲ್ಲೂಕು ಮಟ್ಟದಲ್ಲಿ

ಒಂದೊಂದು ರೆಸಿಡೆನ್ಶಿಯಲ್ ಸ್ಕೂಲ್ ಅನ್ನು ತಾವು ಪ್ರಾರಂಭ ಮಾಡಬೇಕು. ಏಕೆಂದರೆ ನವೋದಯ ಶಾಲೆಗಳು ಈಗ ಜಿಲ್ಲಾ ಮಟ್ಟದಲ್ಲಿ ಒಂದೊಂದು ಇವೆ. ಅದೇ ರೀತಿ ಮಾದರಿ ಶಾಲೆಗಳನ್ನು ತಾವು ಪ್ರಾರಂಭ ಮಾಡುವುದರಿಂದ ನಾವು ಹೆಚ್ಚು ಶೈಕ್ಷಣಿಕವಾಗಿ ಇವರಿಗೆ ಬೆಂಬಲ ಕೊಟ್ಟಂತಾಗುತ್ತದೆ. ಈ ಒಂದು ಶೈಕ್ಷಣಿಕ ಕ್ಷೇತ್ರಕ್ಕೆ ತಾವು ಹೆಚ್ಚಿನ ಹಣವನ್ನು ವಿನಿಯೋಗಿಸಿಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೆ ಈ ಹಾಸ್ಟೆಲ್‌ಗಳಲ್ಲಿ ಲೈಬ್ರರಿ ಆಟದ ಸಾಮಾನುಗಳಿಗೆ ಹೆಚ್ಚು ಹಣವನ್ನು ಆಯವ್ಯಯದಲ್ಲಿ ಒದಗಿಸಿಕೊಳ್ಳಬೇಕು ಅಂತ ನಾನು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ಇನ್ನು ವೈದ್ಯಕೀಯ ಸೌಲಭ್ಯಗಳ ಬಗ್ಗೆ ಕೂಡ ತಾವು ಹೇಳಿದ್ದೀರಿ. ಆದರೆ ಅಲ್ಲಿ ನೂರು ರೂಪಾಯಿಗಳನ್ನು ವೈದ್ಯಕೀಯ ಸೌಲಭ್ಯಕ್ಕೆ ಕೊಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಮಂತ್ರಿಗಳೇ ಈ ಸಂದರ್ಭದಲ್ಲಿ ನಾನು ತಮಗೆ ಹೇಳುತ್ತೇನೆ ಏನೆಂದರೆ ಕೆಲವು ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರು ಯಾರು ಇರುತ್ತಾರೆ ಅವರು ಇದರ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಯಾರಿಗಾದರೂ ಹುಷಾರಿಲ್ಲದಿದ್ದರೆ ವಿದ್ಯಾರ್ಥಿ ನಿಲಯದಲ್ಲಿರತಕ್ಕಂಥಹವರಿಗೆ ಅವರ ತಂದೆ ತಾಯಿಗಳನ್ನು ಕರೆಸಿ ಕಳುಹಿಸಿಕೊಟ್ಟುಬಿಡುವುದು, ಇದು ಒಂದೇ ಒಂದನ್ನು ಅವರು ಚೆನ್ನಾಗಿ ಕಲಿತಿದ್ದಾರೆ. ದಯಮಾಡಿ ಅವರಿಗೆ ಸೂಕ್ತವಾದಂತಹ ವೈದ್ಯಕೀಯ ಸೌಲಭ್ಯ ಒದಗಿಸುವುದಕ್ಕೆ ಕಟ್ಟುನಿಟ್ಟಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತಮ್ಮ ಅಧಿಕಾರಿಗಳಿಗೆ ತಾವು ಸೂಚಿಸಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ. ಮತ್ತೆ ಸ್ವಂತ ಕಟ್ಟಡಗಳು ಇಲ್ಲದೆ ಇರತಕ್ಕಂಥ ಹಾಸ್ಟೆಲ್ಸ್ ಏನಿದ್ದಾವೆ, ಈಗ ತಮ್ಮ ಒಂದು ವರದಿ ಪ್ರಕಾರ ಖಾಸಗಿ ಕಟ್ಟಡಗಳು ಅಂದರೆ ಬಾಡಿಗೆ ಕಟ್ಟಡಗ್ಗಳು ಬಹಳಷ್ಟು ಇವೆ. ಆದರೆ ಸ್ವಂತ ಕಟ್ಟಡಗಳನ್ನು ತಾವು ಹೆಚ್ಚು ಮಾಡಿಕೊಳ್ಳಲು ಈ ಹಣ ವಿನಿಯೋಗಿಸಿಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿಸುತ್ತೇನೆ. ಮತ್ತೆ ಜೀತ ವಿಮುಕ್ತಿ ಬಗ್ಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ೩೬೬ ಜನ ಜೀತವಿಮುಕ್ತರಿದ್ದಾರೆಂದು ತಹಶೀಲ್ದಾರರ ಕಛೇರಿಯಿಂದ ಮತ್ತು ಬಿ. ಡಿ. ಓ. ಅವರು ಸೇರಿ ಗುರುತಿಸಿದ್ದಾರೆ. ಇದರಲ್ಲಿ ೫೦ ಪರ್ಸೆಂಟ್ ಮೋಸವಾಗಿದೆ. ಏನು ೬೨೦ ರೂಪಾಯಿಗಳನ್ನು ಫಲಾನುಭವಿಗಳಿಗೆ ಕೊಡುತ್ತಿದ್ದಾರೆ, ಆದರಲ್ಲಿ ಎಲ್ಲಾ ದಳ್ಳಾಳಿಗಳು, ನಿಮ್ಮ ಅಧಿಕಾರಿಗಳು ಎಲ್ಲರೂ ಸೇರಿ ಮಾಡಿದ್ದಾರೆ. ತಾವು ದಯಮಾಡಿ ಈ ವಿಚಾರವನ್ನು ಸಂಬಂಧಪಟ್ಟಂತಹ ಹಿರಿಯ ಅಧಿಕಾರಿಗಳಿಗೆ ವಹಿಸಿ ವಿಚಾರಣೆ ಮಾಡಬೇಕು. ಇದರಲ್ಲಿ ಯಾರ್ಯಾರು ಭಾಗಿಗಳಾಗಿದ್ದಾರೆ ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಿ ಎಂದು ನಾನು ಹೇಳುತ್ತೇನೆ. ಯಾವ ಉದ್ದೇಶಕ್ಕೆ ಈ ಹಣವನ್ನು ತಾವು ಸರ್ಕಾರದಿಂದ ಬಿಡುಗಡೆ ಮಾಡಿದ್ದೀರಿ ಆ ಉದ್ದೇಶಕ್ಕೆ ಅದು ಖರ್ಚು ಆಗಿಲ್ಲ. ದಳ್ಳಾಳಿಗಳಿಂದಾಗಿ ಇದರಲ್ಲಿ ಕುರಿ ಕೋಳಿ ಏನೇನು ಕೊಡಬೇಕು ಅವೆಲ್ಲಾ ತಲುಪಿಲ್ಲ. ಇವತ್ತೋ ನಾಳೆಯೋ ಸಾಯುವಂತಹ ಒಂದೊಂದು ಎಮ್ಮೆಯನ್ನು ತಲುಪಿಸಿದ್ದಾರೆ. ಅದು ಕೆಲವೇ ಜನರಿಗೆ, ಯಾರು ಜೀತದಲ್ಲಿ ಇದ್ದಾರೋ ಅಂತಹವ[illegible] ಬಿಟ್ಟು ಇಲ್ಲದೆ ಇದ್ದವರಿಗೆಲ್ಲಾ ಈ ಒಂದು ಸೌಲಭ್ಯವನ್ನು ಒದಗಿಸಿ ಕೊಟ್ಟಿದ್ದಾರೆ. ಇದೆಲ್ಲಾ ಬೋಗಸ್ ಆಗಿದ್ದಾವೆ ಈ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಪತ್ರ ಬರೆದಿದ್ದೇನೆ. ದಯಮಾಡಿ ಇವನ್ನು ತನಿಖೆ ಮಾಡಿಸಬೇಕೆಂದು ನಾನು ತಮ್ಮನ್ನು ಒತ್ತಾಯಿಸುತ್ತೇನೆ. ಇನ್ನು ಸಾಮೂಹಿಕ ನೀರಾವರಿ ಯೋಜನೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಾಮೂಹಿಕ ನೀರಾವರಿ ಯೋಜನೆಯನ್ನು ತಾವು ಯಶಸ್ವಿಯಾಗಿ ಎಸ್. ಸಿ. ಎಸ್. ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್ ಮುಖಾಂತರ ಏನು ಮಾಡಿಸುತ್ತಿದ್ದೀರಿ ಅದು ಅಷ್ಟು ತೃಪ್ತಿಕರವಾಗಿಲ್ಲ. ತೃಪ್ತಿಕರವಾಗಿ ಮಾಡಬೇಕಾದರೆ

ಅದಕ್ಕೆ ಸಾಕಷ್ಟು ಹಣ ಒದಗಿಸಿ ಕೊಡಬೇಕು. ಮತ್ತೆ ನೀವು ಏನು ಹಣ ಒದಗಿಸಿಕೊಂಡಿದ್ದೀರಿ ನೇರವಾಗಿ ನಿಮ್ಮ ಇಲಾಖೆಯವರೇ ಈ ಕಾರ್ಯಕ್ರಮ ಪ್ರಾರಂಭ ಮಾಡಬೇಕು. ನೀವು ಆಗ್ರೋ ಇಂಡಸ್ಟ್ರೀಸ್‌ಗೆ ಕೆಲವು ಸಂದರ್ಭದಲ್ಲಿ ವಹಿಸಿ ಕೊಡುತ್ತೀರಿ. ಆಗ್ರೋ ಇಂಡಸ್ಟ್ರೀಸ್‌ನವರು ಜಿಯಾಲಜಿಸ್ಟ್‌ನ್ನು ಕರೆದುಕೊಂಡು ಬರುವುದಕ್ಕೆ ಹೇಳುತ್ತಾರೆ. ಅವರನ್ನು ಕರೆದುಕೊಂಡು

೨.೫೫ ಪಿ. ಎಂ.

ಬರುವಷ್ಟರಲ್ಲಿ ಸಂಬಂಧಪಟ್ಟಂತಹ ರೈತರು ಆ ಒಂದು ಜಿಯಾಲಜಿಸ್ಟ್ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾದರೆ ೫೦೦ ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೆ ಖರ್ಚು ಮಾಡಬೇಕಾಗುತ್ತದೆ. ಈ ೫೦೦ ರೂಪಾಯಿ ಒಂದು ಸಾವಿರ ರೂಪಾಯಿ ಕೊಡಲಿಲ್ಲವೆಂದರೆ ಅಲ್ಲಿ ನೀರು ಬರುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಇಲಾಖೆಯವರು ಒಟ್ಟಿಗೆ ಹೋಗಿ ಈ ಒಂದು ಜವಾಬ್ದಾರಿಯನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ. ಅದಕ್ಕೆ ಬಿ. ಡಿ. ಓ. ಇದ್ದಾರೆ ಸಮಾಜ ಕಲ್ಯಾಣ ಇಲಾಖೆ ಇನ್ಸ್‌ಪೆಕ್ಟರ್ ಇದ್ದಾರೆ. ಇಂತಹವರು ಯಾರ್‍ಯಾರು ಇದ್ದಾರೆ ಅವರೆಲ್ಲಾ ಜೊತೆಯಲ್ಲಿ ಒಟ್ಟೊಟ್ಟಿಗೆ ಒಂದೊಂದು ತಾಲ್ಲೂಕಿಗೆ ವಿಸಿಟ್ ಮಾಡಿ ಈ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ತಮಗೆ ಹೇಳುತ್ತೇನೆ. ಮತ್ತೆ ಬೋರ್‌ವೆಲ್‌ಗಳನ್ನು ಇಂಡಿವಿಜಿಯಲ್ ಆಗಿ ಕೊರೆಯುವಂತಹ ಸಂದರ್ಭದಲ್ಲಿ ೨೫೦ ಅಡಿಗಳು ೧೫೦ ಅಡಿಗಳು ಅಂತರದಲ್ಲಿ ಇರಬೇಕೆಂದು ಹೇಳುತ್ತಾರೆ. ಈ ಅಂತರದಲ್ಲಿ ಬಾವಿಗಳನ್ನು ತೆಗೆಸುವ ಬಗ್ಗೆ ತಮ್ಮ ಅಧಿಕಾರಿಗಳು ರೈತರಿಗೆ ಬಹಳ ಅನ್ಯಾಯ ಮಾಡಿದ್ದಾರೆ. ಈ ಬಗ್ಗೆ ಕಟ್ಟುನಿಟ್ಟಾದಂಥ ಕಾರ್ಯಕ್ರಮವನ್ನು ತಾವು ಹಾಕಿಕೊಂಡು, ತಮ್ಮ ಅಧಿಕಾರಿಗಳು ಕೇವಲ ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮಾತ್ರ ಪ್ರವಾಸ ಮಾಡುತ್ತಿದ್ದಾರೆ. ದಯಮಾಡಿ ಅವರು ಎಲ್ಲಾ ಕಡೆಗೂ ಟೂರ್ ಮಾಡಲಿಕ್ಕೆ ಸೂಚನೆ ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತಾ ಮತ್ತೆ ಜಿಲ್ಲಾಪರಿಷತ್ತಿನಿಂದ ದಯಮಾಡಿ ಸಮಾಜ ಕಲ್ಯಾಣ ಇಲಾಖೆಯನ್ನು ನೀವು ವಾಪಸ್ ಪಡೆಯಬೇಕು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಸಮಾಜದಲ್ಲಿ ತುಳಿತಕ್ಕೆ ಒಳಪಟ್ಟಂಥ ಜನರ ನೋವನ್ನು ನಿವಾರಣೆ ಮಾಡತಕ್ಕಂಥ ಸಂಪೂರ್ಣ ಜವಾಬ್ದಾರಿ ಈ ಇಲಾಖೆ ಮೇಲೆ ಇದೆ. ಜಿಲ್ಲಾಪರಿಷತ್ತಿಗೆ ಸರ್ಕಾರದಿಂದ ಹಲವಾರು ಆದೇಶಗಳು ಹೋದರೂ ಅವುಗಳನ್ನು ಜಿಲ್ಲಾಪರಿಷತ್ತಿನವರು ಪಾಲಿಸಲಿಲ್ಲ. ಜಿಲ್ಲಾಪರಿಷತ್ತಿನವರಿಗೆ ಅವರದೇ ಆದಂಥ ಕಾರ್ಯಕ್ರಮಗಳು ಇವೆ. ಅವರಿಗೆ ಯಾವ ಕಮಿಟ್‌ಮೆಂಟೂ ಇರುವುದಿಲ್ಲ. ಮತ್ತೆ ಇರುವುದರಲ್ಲಿ ಏನಾದರೂ ಕೇಳಿದರೆ, ವಿಶೇಷ ಘಟಕ ಯೋಜನೆ ಕಾರ್ಯಕ್ರಮಗಳು ನೂರಕ್ಕೆ ನೂರು ಭಾಗ ಎಲ್ಲೂ ಆಗಿಲ್ಲ. ಕೆಲವುಕಡೆ ಸಕ್ಸಸ್ ಆಗಿರಬಹುದು. ಕೆಲವು ಕಡೆ ಆಗಿಲ್ಲ. ದಯಮಾಡಿ ನಾನು ಹೇಳುವುದೇನೆಂದರೆ, ತಾವು ಒಂದು ತಿದ್ದುಪಡಿಯನ್ನು ತೆಗೆದುಕೊಂಡು ಬಂದು ಜಿಲ್ಲಾಪರಿಷತ್ತಿನಿಂದ ಈ ಇಲಾಖೆಯನ್ನು ವಾಪಸ್ ಪಡೆಯಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತೆ ಭೂ ಒಡೆತನದ ಯೋಜನೆಯ ಕಾರ್ಯಕ್ರಮವನ್ನು ಹರಿಜನ ಗಿರಿಜನ ಕಾರ್ಪೋರೇಷನ್ ಹಾಕಿಕೊಂಡಿದೆ. ಒಂದು ಯೋಜನೆಗೆ ೨೦ ಸಾವಿರ ರೂ ಎಂದು ನಿಗದಿಪಡಿಸಿದ್ದೀರಿ. ಆದರೆ ನಮ್ಮ ಜಿಲ್ಲೆಯಲ್ಲಿ ಯಾರೂ ೨೦ ಸಾವಿರಕ್ಕೆ ೧೦ ಗುಂಟೆ ಜಮೀನು ಕೊಡುವುದಿಲ್ಲ. ಇದನ್ನು ೨೦ ಸಾವಿರಕ್ಕೆ ಬದಲು ೫೦ ಸಾವಿರಕ್ಕೆ ಹೆಚ್ಚಿಸಿ ಸರ್ಕಾರದ ವತಿಯಿಂದ ಈ ಕಾರ್ಯಕ್ರಮ ಆಗುವ ಹಾಗೆ ಮಾಡಬೇಕು ಮತ್ತು

ಸ್ಟ್ಯಾಂಪ್ ಡ್ಯೂಟಿ ಏನಿದೆ ಅದನ್ನು ರದ್ದು ಪಡಿಸುವುದಕ್ಕೆ ಈಗಾಗಲೇ ಸಂಬಂಧಪಟ್ಟ ಅಧಿಕಾರಿಗೆ, ನಮ್ಮ ಕೋದಂಡರಾಮಯ್ಯನವರು ಇದ್ದಾಗ ರೆವಿನ್ಯೂ ಮಂತ್ರಿಗಳಿಗೆ ಪತ್ರ ಬರೆದಿದ್ದರು. ಈ ಕೆಲಸವನ್ನು ಮಾಡಿಸಬೇಕೆಂದು ತಮ್ಮ ಮೂಲಕ ಈ ಸಂದರ್ಭದಲ್ಲಿ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ಸಣ್ಣ ಕೈಗಾರಿಕಾ ಯೋಜನೆಯಲ್ಲಿ ಎಸ್. ಸಿ, ಎಸ್. ಟಿ. ಡೆವಲಪ್‌ಮೆಂಟ್ ಕಾರ್ಪೋರೇಷನ್‌ನವರು ತರಬೇತಿ ಕೊಡುತ್ತಿದ್ದರು.

ಉಪಾಧ್ಯಕ್ಷಣಿಯವರು:- ಮಲ್ಲಾಜಮ್ಮನವರೇ, ಬಹಳ ದೊಡ್ಡ ಲಿಸ್ಟ್ ಇದೆ. ದಯಮಾಡಿ ತಾವು ಕೋ-ಆಪರೇಟ್ ಮಾಡಬೇಕು.

ಶ್ರೀಮತಿ ಮಲ್ಲಾಜಮ್ಮ:- ತರಬೇತಿ ಕೊಟ್ಟ ನಂತರ ಅವರು ಸ್ವಂತ ಕಾಲ ಮೇಲೆ ನಿಲ್ಲಲಿಕ್ಕೆ ತಾವು ಏನಾದರೂ ಒಂದು ಯೋಜನೆ ಹಾಕಿಕೊಳ್ಳಬೇಕು. ತಮ್ಮ ಇಲಾಖೆಯಿಂದಲೇ ಗ್ಯಾರಂಟಿ ಕೊಟ್ಟು ಅದರ ಮೂಲಕ ಅವರಿಗೆ ಸಾಲ ಕೊಡಿಸಿ ಅವರ ಕಾಲ ಮೇಲೆ ಅವರು ನಿಂತು ಜೀವನ ಮಾಡಲಿಕ್ಕೆ ಒಂದು ವ್ಯವಸ್ಥಿತವಾದ ಯೋಜನೆ ರೂಪಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತೆ ಯಾವುದೇ ಇಲಾಖೆಯಲ್ಲೂ ಎಸ್. ಸಿ. ಪಿ. ಗ್ರ್ಯಾಂಟ್‌ನಲ್ಲಿ ೧೫ ಪರ್‌ಸೆಂಟ್ ರಿಸರ್ವೇಷನ್ ಮಾಡುತ್ತಿಲ್ಲ. ಯಾವ ಇಲಾಖೆಯಲ್ಲೂ ಮಾಡುತ್ತಿಲ್ಲ. ಇದರಿಂದ ಏನಾಗುತ್ತದೆಂದರೆ, ಸೆಂಟ್ರಲ್ ಗೌರ್ನಮೆಂಟ್‌ನಿಂದ ಬರುವಂಥ ಗ್ರ್ಯಾಂಟ್ಸ್ ನಮಗೆ ಕಮ್ಮಿಯಾಗುತ್ತದೆ. ಈ ವರ್ಷದಲ್ಲಿ ಪ್ರತಿಯೊಂದು ಇಲಾಖೆಯಲ್ಲಿ ೮ ಪರ್‌ಸೆಂಟ್ ಮಾತ್ರ ರಿಸರ್ವೇಷನ್‌ಗೆ ಹಣವನ್ನು ಇಡಲಾಗಿದೆ. ಬೇರೆ ಸ್ಟೇಟ್‌ಗೆ ಹೋಲಿಸಿದರೆ ನಮ್ಮ ಸ್ಟೇಟ್‌ದು ಬಹಳ ಕಡಿಮೆ ಇದೆ. ಆಂಧ್ರದಲ್ಲಿ ೧೩ ಪರ್‌ಸೆಂಟ್ ಇದೆ. ತಮಿಳುನಾಡಿನಲ್ಲಿ ೧೫ ಪರ್‌ಸೆಂಟ್ ಇದೆ. ಬೇರೆ ಬೇರೆ ಸ್ಟೇಟ್‌ಗಳಲ್ಲಿ ಕೂಡ ಜಾಸ್ತಿ ಇದೆ. ಹೀಗಿರುವಾಗ ತಮ್ಮ ಅವಧಿಯಲ್ಲಿ ೧೮ ಪರ್‌ಸೆಂಟ್ ರೀಚ್ ಆಗಬೇಕು. ಈ ದಿಸೆಯಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತೆ ಒಂದು, ಆಡಳಿತ ವ್ಯವಸ್ಥೆಯಲ್ಲಿ ಮಾತನಾಡಬೇಕಾದರೆ ಸಮಾಜ ಕಲ್ಯಾಣ ಇಲಾಖೆಗೆ ಯಾವ ಅಧಿಕಾರಿಗಳೂ ತಾವಾಗಿಯೇ ಕೇಳಿಕೊಂಡು ಬರುವುದಿಲ್ಲ. ಎಸ್. ಸಿ., ಎಸ್. ಟಿ. ಡೆವಲಪ್‌ಮೆಂಟ್ ಆಫೀಸಿನಲ್ಲಿ ಕೆಲವಾರು ಯೋಜನೆಗಳನ್ನು ರೂಪಿಸಿಕೊಂಡಿದ್ದರು. ಮಾನ್ಯ ಕೋದಂಡರಾಮಯ್ಯನವರು ಇದ್ದಾಗ ಹಲವಾರು ಉತ್ತಮವಾದ ಕೆಲಸಗಳು ಆಗಿವೆ. ನಾನು ಅವರಿಗೆ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಏಕೆಂದರೆ, ಭೂ ಒಡೆತನ, ಇದರ ಜೊತೆಗೆ ಅವರು ಎಸ್. ಸಿ, ಎಸ್. ಟಿ ಸ್ಟೂಡೆಂಟ್ಸ್‌ಗೆ ತರಬೇತಿ ನಂತರ ಎಂಪ್ಲಾಯ್‌ಮೆಂಟ್‌ನಲ್ಲಿ ಲೋನ್ ಕೊಡಿಸಲಿಕ್ಕೆ ಇಲಾಖೆಯಿಂದ ಜವಾಬ್ದಾರಿ ತೆಗೆದುಕೊಳ್ಳತಕ್ಕಂಥ ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿಕೊಂಡಿದ್ದರು. ಆದರೆ ನೀವು ಅವರನ್ನು ಬದಲಾವಣೆ ಮಾಡಿದಿರಿ. ಯಾವುದೇ ಅಧಿಕಾರಿಗಳು ಬಂದರೂ ಕೂಡ ಅವರು ಒಂದು ೩ ವರ್ಷ ೪ ವರ್ಷ ಅದೇ ಇಲಾಖೆಯಲ್ಲಿ ಕೆಲಸ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಿ. ಹಾಗೆ ಅವಕಾಶ ಮಾಡಿಕೊಡುವುದರಿಂದ ಅವರು ಇಲಾಖೆಯಲ್ಲಿರತಕ್ಕಂಥ ಕುಂದು ಕೊರತೆಗಳ ಜೊತೆಗೆ ಯಾವ ಯೋಜನೆ ರೂಪಿಸಿದರೆ ಯಾವ ರೀತಿ ಎಂಪ್ಲಾಯ್‌ಮೆಂಟ್ ಒದಗಿಸಬಹುದೆಂದು ಅಧ್ಯಯನ ಮಾಡಿ ಯೋಜನೆಯನ್ನು ರೂಪಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರಿಂದ ಹೆಚ್ಚಿನ ಪ್ರಯೋಜನ ಪಡೆದುಕೊಳ್ಳಬಹುದು. ಒಂದು ವರ್ಷಕ್ಕೆ ಒಂದು ಸಾರಿ ಬದಲಾವಣೆ ಮಾಡುವುದರಿಂದ ಯಾವ ಕಾರ್ಯಕ್ರಮವೂ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ತಾವು ದಯಮಾಡಿ ಅವರಿಗೆ ಎರಡು ಮೂರು ವರ್ಷಗಳಷ್ಟು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು:- ಈಗ, ಮಲ್ಲಾಜಮ್ಮನವರೇ, ದಯವಿಟ್ಟು ತಾವು ಮುಗಿಸಬೇಕು. ಈಗ ತಾವು ಪ್ರಾರಂಭ ಮಾಡಿ ೨೫ ನಿಮಿಷ ಆಯಿತು.

ಶ್ರೀಮತಿ ಮಲ್ಲಾಜಮ್ಮ:- ಡಾ. ಅಂಬೇಡ್ಕರ್ ಕಾರ್ಯಕ್ರಮಕ್ಕೆ ಕಳೆದ ಎರಡು ವರ್ಷಗಳಲ್ಲಿ ಯಾವ ಯಾವ ಸ್ಕೀಮ್‌ಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ ಎಂಬ ಬಗ್ಗೆ ತಾವು ಹೇಳಿಲ್ಲ. ತಾವು ಉತ್ತರ ಕೊಡುವ ಸಂದರ್ಭದಲ್ಲಿ ಇದನ್ನು ತಿಳಿಸಬೇಕು. ಹಾಗೆಯೇ ಜಿಲ್ಲಾವಾರು ಮಾಹಿತಿಗಳನ್ನು ಕೂಡ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಆಯವ್ಯಯದಲ್ಲಿ ವಿನು ೧೮ ಪರ್‌ಸೆಂಟ್ ಹಣವನ್ನು ಒದಗಿಸಿಕೊಟ್ಟಿದ್ದೀರಿ, ಅದು ಸಂಪೂರ್ಣವಾಗಿ ಖರ್ಚಾಗುವುದಕ್ಕೆ ನೀವು ನಿಮ್ಮ ಅಧಿಕಾರಿಗಳಿಗೆ ನಿರ್ದಿಷ್ಟವಾದ ಆದೇಶವನ್ನು ಕೊಡಬೇಕು. ಸುಮ್ಮನೆ ನೀವು ಬಜೆಟ್‌ನಲ್ಲಿ ಹಣವನ್ನು ಇಳವಡಿಸಿಕೊಳ್ಳುವುದು, ಅದು ಖರ್ಚಾಗದೆ ಉಳಿದುಕೊಳ್ಳುವುದು ಎಂದಾಗುವುದು ಬೇಡ. ನಾನು ಕೆಲವಾರು ಯೋಜನೆಗಳನ್ನು ನೋಡಿದ್ದೇನೆ. ಇದರಲ್ಲಿ ಬಹಳಷ್ಟು ಹಣವು ಖರ್ಚಾಗುತ್ತಿಲ್ಲ. ಇದಕ್ಕೆ ಕಟ್ಟುನಿಟ್ಟಿನ ಒಂದು ಆದೇಶವನ್ನು ತಾವು ಅಧಿಕಾರಿಗಳಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹಾಸ್ಟೆಲ್‌ಗಳಲ್ಲಿ ಎರಡು ಮತ್ತು ಮೂರನೇ ತರಗತಿಗಳಲ್ಲಿ ಹೆಣ್ಣುಮಕ್ಕಳು ಓದಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ, ಅದೇ ರೀತಿಯಲ್ಲಿ ಗಂಡು ಮಕ್ಕಳಿಗೂ ಕೂಡ ಅದೇ ಅವಕಾಶವನ್ನು ಕಲ್ಪಿಸಿಕೊಡಬೇಕು. ಹಾಗೆಯೇ ಮಹಿಳಾ ಮಂಡಳಿ ಮತ್ತು ಮಹಿಳಾ ಒಕ್ಕೂಟಗಳಿಗೆ ತಾವುಗಳು ಅನುದಾನವನ್ನು ನೀಡಿಲ್ಲ ಅವರಿಗೆ ಅನುದಾನವನ್ನು ಹೆಚ್ಚಿಗೆ ಕೊಡಬೇಕು ಮತ್ತು ಅವರು ಹೆಚ್ಚು ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಲು ಅನುಕೂಲ ಮಾಡಿಕೊಡಬೇಕು. ಇಷ್ಟನ್ನು ಹೇಳಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ವಿ. ಉಮಾಪತಿ (ಹೊಳಲ್ಕೆರೆ):- ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸಭೆಯ ಮುಂದಿಟ್ಟಿರತಕ್ಕಂಥ ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಮಾತನಾಡಲು ಇಚ್ಛಿಸುತ್ತೇನೆ. ಈಗಾಗಲೇ ಮಾತನಾಡಿರತಕ್ಕಂಥ ಅನೇಕ ಸದಸ್ಯರು ಈ ಇಲಾಖೆಯ ಬಗ್ಗೆ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಕೂಡ ಈ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸುತ್ತೇನೆ. ಈ ಇಲಾಖೆಯಲ್ಲಿನ ಎಸ್. ಸಿ., ಎಸ್. ಟಿ. ಕಾರ್ಪೋರೇಷನ್ ಬಗ್ಗೆ ಶ್ರೀಮತಿ ಪೋಟಮ್ಮನವರು ಮತ್ತು ಶ್ರೀಮತಿ ಮಲ್ಲಾಜಮ್ಮನವರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಈ ಇಲಾಖೆಯ ಕಚೇರಿಗಳು ಎಲ್ಲಾ ಜಿಲ್ಲೆಗಳಲ್ಲಿಯೂ ಇವೆ. ಆದರೆ ಅದು ಹೇಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ಬಹುಶಃ ಮಾನ್ಯ ಸಚಿವರಾಗಲೀ, ಮೇಲಧಿಕಾರಿಗಳಾಗಲಿ ಯಾರೂ ಕೂಡ ವಿಚಾರ ಮಾಡಿಲ್ಲ ಎಂದು ಭಾವಿಸುತ್ತೇನೆ. ಈ ಇಲಾಖೆಯವರಲ್ಲಿನ ಹಾಸ್ಟೆಲ್‌ಗಳ ಬಗ್ಗೆ ಮತ್ತು ಇತರ ವಿಚಾರಗಳ ಬಗ್ಗೆ ಸಾಕಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ಅಂಥ ವಿಚಾರಗಳನ್ನು ನಾನು ಮತ್ತೆ ಪ್ರಸ್ತಾಪ ಮಾಡಲು ಹೋಗದೆ, ನೇರವಾಗಿ ಎಸ್. ಸಿ. ಎಸ್. ಟಿ. ಕಾರ್ಪೋರೇಷನ್ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಈ ಕಾರ್ಪೋರೇಷನ್ ಮುಖಾಂತರ ಕೋಟ್ಯಾಂತರ ರೂಪಾಯಿಗಳು ಹರಿಜನ ಗಿರಿಜನರಿಗೆಂದು ಹೋಗುತ್ತದೆ, ಅದರ ಫಲ ಈ ಜನರಿಗೆ ಸಿಗುತ್ತಿದೆಯೇ ಇಲ್ಲವೇ ಎಂಬ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ನಾನು ನನ್ನ ಜಿಲ್ಲೆಯ ವಿಚಾರವನ್ನು ಹೇಳ ಬೇಕೆಂದರೆ, ಕಳೆದ ವರ್ಷವೂ ಕೂಡ ಈ ವಿಚಾರಗಳನ್ನು ಸರಕಾರದ ಗಮನಕ್ಕೆ ತಂದಿದ್ದೇವೆ. ಮೇಲಧಿಕಾರಿಗಳ

ಗಮನಕ್ಕೂ ತಂದಿದ್ದೇವೆ. ಇಲಾಖೆಯ ಗಮನಕ್ಕೂ ತಂದಿದ್ದೇವೆ. ಹಾಗಾಗಿ ಕಳೆದ ವರ್ಷ ಸ್ವಲ್ಪ ಚುರುಕಾಗಿ ಕೆಲಸ ಮಾಡಿತ್ತು. ಆದರೆ ಅದೇ ಕೆಲಸಗಳು ಈ ವರ್ಷದಿಂದ ಸ್ಥಗಿತವಾಗಿದೆ. ಜಿಲ್ಲಾಪರಿಷತ್ ವ್ಯವಸ್ಥೆ ಬಂದಮೇಲೆ ಕೆಲಸದಲ್ಲಿ ನಿಧಾನವಾಗಿದೆ. ಜಿಲ್ಲಾಪರಿಷತ್ತಿನಲ್ಲಿ ಏನಾದರೂ ಕೇಳಿದರೆ ರಾಜ್ಯಮಟ್ಟದ ಅಧಿಕಾರಿಗಳನ್ನು ತೋರಿಸುತ್ತಾರೆ. ರಾಜ್ಯಮಟ್ಟದಲ್ಲಿ ಕೇಳಿದರೆ ಜಿಲ್ಲಾಪರಿಷತ್‌ನವರ ಹೆಸರು ಹೇಳುತ್ತಾರೆ. ಹೀಗಿರುವಾಗ 'ಇಂಥ ಒಂದು ಅಭಿವೃದ್ಧಿ ಮಂಡಳಿಯು' ಇಲಾಖೆಯಲ್ಲಿದ್ದು ಕೂಡ ಸಂಬಂಧಪ 'ನರಿಗೆ ಏನಾದರೂ ಲಾಭ ಸಿಗುತ್ತದೆಯೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ನಾನು ಹೇಳ ಈ ಜಿಲ್ಲಾಮಟ್ಟದಲ್ಲಿರುವ ಎಸ್. ಸಿ. ಎಸ್. ಟಿ ಕಾರ್ಪೊರೇಷನ್ನಿನ ಅಧಿಕಾರಿಗಳನ್ನು ಏನ್ರೀ ನಿಮ್ಮಲ್ಲಿ ದುಡ್ಡಿದೆಯೋ ಇಲ್ಲವೋ ಏಕ್ರೀ ಕೆಲಸ ಮಾಡುತ್ತಿಲ್ಲ ಅಂದರೆ, ಸ್ವಾಮಿ, ಕೋಟ್ಯಾಂತರ ರೂಪಾಯಿ ಇದೆ. ಆದರೆ ನಮಗೆ ಉಪಯೋಗಿಸಲಿಕ್ಕೆ ಶಕ್ತಿ ಇಲ್ಲ ಹಾಗೂ ಕಾನೂನು ನಮ್ಮನ್ನು ಬಿಡ್ತಾ ಇಲ್ಲವೆಂದು ಹೇಳುತ್ತಾರೆ. ನಾನು ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನನ್ನ ತಾಲ್ಲೂಕಿನದ್ದೇ ಒಂದು ಉದಾಹರಣೆ ಹೇಳಬೇಕಾದರೆ ಸುಮಾರು ೧೫೫ ಫಲಾನುಭವಿಗಳು ಅರ್ಜಿಗಳನ್ನು ಕೊಟ್ಟು ಹಾಗೆಯೇ ಕಾಯ್ತಾಯಿದ್ದಾರೆ. ನಾವು ಬೆಂಗಳೂರಿನಿಂದ ಮನೆಗೆ ಹೋದರ ಬೆಳಿಗ್ಗೆ ೬ ಗಂಟೆಗೆ ೧೫-೨೦ ಜನ ಬರ್ತಾನೇ ಇರ್ತಾರೆ. ಅವರೆಲ್ಲರೂ ಎಸ್. ಸಿ. ಎಸ್. ಟಿ. ಕಾರ್ಪೊರೇಷನ್ ಬಗ್ಗೆ ಹೇಳುತ್ತಾರೆ. ಅಲ್ಲಿ ಹೋಗಿ ನೋಡಿದರೆ ಯಾವ ಒಂದು ಸೌಲಭ್ಯವೂ ಸಿಗ್ತಾ ಇಲ್ಲ. ಬೋರ್‌ವೆಲ್ ಅನ್ನು ತೋಡಿಸುವ ವಿಚಾರದಲ್ಲಿ ಇವತ್ತಿನವರೆಗೂ ಒಬ್ಬ ಏಜೆನ್ಸಿಯನ್ನು ಫಿಕ್ಸ್ ಮಾಡಿಲ್ಲ. ಈ ಎಸ್. ಸಿ. ಎಸ್. ಟಿ. ಕಾರ್ಪೊರೇಷನ್‌ನಿಂದ ನಿಜವಾಗಿಯೂ ಆ ಜನಕ್ಕೆ ಅನುಕೂಲವಾಗುತ್ತಿಲ್ಲ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ದುಡ್ಡಿದೆ ಅಂತಾರೆ, ಆದರೆ ಕೆಲಸ ಆಗ್ತಾ ಇಲ್ಲ. ಕಾರಣ ಅಲ್ಲಿ ಒಂದು ಕಾನೂನಿನ ತೊಡಕು ಇದೆ. ಅಲ್ಲಿ ನಡೆಯುವ ಕೆಲಸಕ್ಕಾಗಿ ಬೋರ್‌ವೆಲ್ ತೋಡಿಸಬೇಕೆಂದರೆ ೧೫೫ ಫಲಾನುಭವಿಗಳನ್ನು ಗುರ್ತಿಸಿ ಅವರು ಲಿಸ್ಟ ಅನ್ನು ಮಾಡಿಟ್ಟಿದ್ದಾರೆ. ಆದರೆ ಒಂದು ಬೋರ್‌ವೆಲ್ ಅನ್ನೂ ಕೂಡ ನನ್ನ ತಾಲ್ಲೂಕಿನಲ್ಲಿ ಇದುವರೆಗೂ ಕೊರೆದಿಲ್ಲ. ಅವರು ದುಡ್ಡು ಕೇಳಿದರೆ, ಬೋರ್‌ವೆಲ್ ಏಜೆನ್ಸಿ ಫಿಕ್ಸಾಗಿಲ್ಲ ಅಂತಾರೆ. ಸುಮಾರು ಒಂದು ವರ್ಷದಿಂದ ಏಜೆನ್ಸಿ ಫಿಕ್ಸ್ ಮಾಡೋದಕ್ಕೆ ಅವರಿಂದ ಆಗ್ತಾ ಇಲ್ಲ. ಅದಕ್ಕೊಂದು ತೊಂದರೆ ಇದೆ. ಏನೆಂದರೆ ಕಾನೂನಿನಲ್ಲಿ ಏನು ಮಾಡಿದ್ದಾರೆಂದರೆ ನೋ ವಾಟರ್ ನೋ ಮನಿ ಸ್ಕೀಮ್‌ನಲ್ಲಿ ಬೋರ್‌ವೆಲ್ ಅನ್ನು ಕೊರೆಸಬೇಕೆಂದು ಹೇಳುತ್ತಿದ್ದಾರೆ. ಬೋರ್‌ವೆಲ್ ಕೊರೆದಾಗ ನೀರು ಬಿದ್ದರೆ ಮಾತ್ರ ಹಣ ಕೊಡ್ತಾರೆ, ಇಲ್ಲದಿದ್ದರೆ ಹಣ ಕೊಡೋದಿಲ್ಲ. ಆದರಿಂದಾಗಿ ಏಜೆನ್ಸಿಗಳು ಧೈರ್ಯವಾಗಿ ಬೋರ್‌ವೆಲ್ ಕೊರೆಯುವುದಕ್ಕೆ ಮುಂದೆ ಬರುತ್ತಾ ಇಲ್ಲ. ಈ ಕಾನೂನನ್ನು ಸಡಿಲಗೊಳಿಸಬೇಕು. ನಾನು ಕೊಡುವ ಸಲಹೆ ಅಂದರೆ ೭೦-೮೦ ರೂಪಾಯಿ ಒಂದು ಅಡಿಗೆ ಕೊಡುವುದು ನೋ ವಾಟರ್ ನೋ ಮನಿ ಸ್ಕೀಮ್‌ನಲ್ಲಿ, ಅದನ್ನೇ ಎಲ್ಲಾ ಏಜೆನ್ಸಿಗೆ ಕೊಟ್ಟು ೩೫-೪೦ ರೂ. ಗೆ ಪ್ರೈವೇಟ್‌ನವರು ಏನು ಈವತ್ತು ಕೊರೆಯುತ್ತಿದ್ದಾರೆ ಅವರಿಗೇ ಕೊಟ್ಟರೆ ಸ್ವಲ್ಪ ಮಾರ್ಜಿನ್‌ನಲ್ಲಿ ಎಲ್ಲ ಫಲಾನುಭವಿಗಳಿಗೂ ಇದನ್ನು ತಲುಪಿಸಬಹುದು ಅನ್ನತಕ್ಕ ತಲಹೆಯನ್ನು ತಮ್ಮ ಮೂಲಕ ಕೊಡುತ್ತಿದ್ದೇನೆ. ಇದರಿಂದ ಎಷ್ಟೇ ದುಡ್ಡಿದ್ದರೂ ಕೂಡ ಈ ಇಲಾಖೆಯಿಂದ ಎಸ್. ಸಿ. ಎಸ್. ಟಿ. ಜನಕ್ಕೆ ಅನುಕೂಲ ಆಗ್ತಾ ಇಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರ; ಈ ಸಮಾಜಕಲ್ಯಾಣ ಇಲಾಖೆ ಸಚಿವರು ಈ ಸದನದಲ್ಲಿಲ್ಲ. ಈಗ ತಮ್ಮ ಮೂಲಕ ಅವರ ಗಮನಕ್ಕೆ ತರುವುದೇನೆಂದರೆ ಈಗ ಭಾಷಣ

ಮಾಡಿದ ಅನೇಕ ಸದಸ್ಯರು ಉತ್ತಮವಾದ ಸಲಹೆಗಳನ್ನು ನೀಡಿದ್ದಾರೆ. ಈ ಸಮಾಜದಲ್ಲಿ ಶೋಷಣೆಗೊಳಗಾಗಿರುವ ಅನೇಕ ಸಮಾಜಗಳಿವೆ. ಅನೇಕ ತೊಂದರೆಗೊಳಗಾಗಿ ಹಿಂದುಳಿದಿರುವ ಸಮಾಜಗಳಿವೆ, ಅದರಲ್ಲಿ ಗೊಲ್ಲ ಜನಾಂಗವೂ ಒಂದು, ಈ ಗೊಲ್ಲ ಜನಾಂಗದ ಪರಿಸ್ಥಿತಿ ತಮಗೂ ಗೊತ್ತಿದೆ. ತಮ್ಮ ಕ್ಷೇತ್ರದಲ್ಲೂ ಹೆಚ್ಚು ಜನಸಂಖ್ಯೆ ಇರತಕ್ಕಂಥ ಒಂದು ಜನಾಂಗ ಇದು. ಕರ್ನಾಟಕ ರಾಜ್ಯದಲ್ಲಿ ಇದು ೬ನೇ ಸ್ಥಾನದಲ್ಲಿರುವ ದೊಡ್ಡ ಜನ ಸಂಖ್ಯೆ ಇರತಕ್ಕ ಸಮಾಜ. ಇದರ ಪರಿಸ್ಥಿತಿ ಬೇರೆ ಸಮಾಜಕ್ಕೆ ಹೋಲಿಸಿದಾಗ ಹರಿಜನ ಗಿರಿಜನರಿಗಿಂತ ಬಹಳ ಕೀಳು ಮಟ್ಟದಲ್ಲಿ ವಾಸಮಾಡುವ ಸಮಾಜ ಈ ಕರ್ನಾಟಕದಲ್ಲಿದೆ; ಇದನ್ನು ಸರ್ಕಾರವಾಗಲೀ ಯಾವುದೇ ಸಚಿವರಾಗಲೀ ಗೊಲ್ಲ ಜನಾಂಗ ಮತ್ತು ಗೊಲ್ಲರ ಹಟ್ಟಿಗಳನ್ನು ಗುರುತಿಸಿಲ್ಲ ಅಂತ ನನ್ನ ಭಾವನೆ, ಕಾರಣ ಇಷ್ಟೆ ಅವರು ಹಿಂದುಳಿದವರು ಮತ್ತು ಅವರು ಆರ್ಥಿಕವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಹಿಂದುಳಿದಿರುವುದೇ ಇದಕ್ಕೆ ಕಾರಣವಾಗಿದೆ ಎಂಬುದು ನನ್ನ ಅಭಿಪ್ರಾಯ, ಈ ಗೊಲ್ಲ ಸಮಾಜ ಸರ್ಕಾರದಿಂದ ಯಾವುದೇ ಒಂದು ಸವಲತ್ತು ಸಿಗದೇ ವಂಚಿತವಾಗಿದೆ. ಈ ಗೊಲ್ಲ ಸಮಾಜ ಬಹುಶಃ ಕರ್ನಾಟಕ ರಾಜ್ಯದಲ್ಲಿ ನಾನು ಆಗಲೇ ಹೇಳಿದಂತೆ ಆರನೇ ಸ್ಥಾನದಲ್ಲಿರತಕ್ಕಂಥ ಒಂದು ದೊಡ್ಡ ಹಿಂದುಳಿದಿರತಕ್ಕಂಥ ಸಮಾಜವಾಗಿದೆ. ಏನು ಲಂಬಾಣಿ ತಾಂಡಾಗಳು ಮತ್ತೆ ಬೇರೆ ವಡ್ಡರಹಳ್ಳಿ, ಹರಿಜನ ಕಾಲೋನಿಗಳು ಹೇಗೆ ಇದೆಯೋ, ಅದೇ ರೀತಿ ಇದೂ ಕೂಡಾ ಬೇರೆ ಐಸೋಲೇಟ್ ಆಗಿರತಕ್ಕಂಥ ಗೊಲ್ಲರು ಹಟ್ಟಿಗಳನ್ನು ಕಟ್ಟಿಕೊಂಡು ಕರ್ನಾಟಕ ರಾಜ್ಯದಲ್ಲಿ ವಾಸವಾಗಿದ್ದಾರೆ. ಈ ಒಂದು ಸಮಾಜ ೧೯೭೭-೭೮ರಲ್ಲಿ ಯಾವುದೇ ಒಂದು ಸವಲತ್ತನ್ನು ಯಾರೂ ಕೇಳದೇ ಇರತಕ್ಕಂಥ ಒಂದು ಪರಿಸ್ಥಿತಿಯಲ್ಲಿತ್ತು. ಅವತ್ತು ಯಾರೂ ಕೇಳಿರಲಿಲ್ಲ. ಈವತ್ತು ಅನೇಕ ಜನ ಪ್ರಜ್ಞಾವಂತರಾಗಿದ್ದಾರೆ. ಕೇಳತಕ್ಕಂತ ಶಕ್ತಿ ಬಂದಿದೆ. ಆದರೆ ಇವತ್ತು ಯಾರೂ ಕೇಳದೇ ಇರತಕ್ಕಂಥ ಒಂದು ಪರಿಸ್ಥಿತಿಯಲ್ಲಿ ದಿವಂಗತ ದೇವರಾಜ ಅರಸುರವರ ಕಾಲದಲ್ಲಿ ಈ ಗೊಲ್ಲ ಜನಾಂಗವನ್ನು ಅಧಕ್ಕೂ ಸ್ವಲ್ಪ ಮುಂಚೆ ಕೂಡಾ ೧೯೭೭-೭೮ ರಲ್ಲಿ ನೊಮ್ಯಾಡಿಕ್ ಮತ್ತು ಸೆಮಿ ನೊಮ್ಯಾಡಿಕ್ ಟ್ರೈಬ್ಸ್ ಎಂದು ಹೇಳಿ ಅವತ್ತು ಗುರುತಿಸಿ ಇಡೀ ಗೊಲ್ಲ ಜನಾಂಗವನ್ನು ಒಂದೇ ಒಂದು ಜಾತಿಯನ್ನು ನೊಮ್ಯಾಡಿಕ್ ಅಂಡ್ ಸೆಮಿ ನೊಮ್ಯಾಡಿಕ್, ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗ ಎಂದು ಹೇಳಿ ಗುರುತಿಸಿ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿತ್ತು. ಅದಾದನಂತರ ಈ ಒಂದು ಸಮಾಜಕ್ಕೆ ಮತ್ತೆ ನೊಮ್ಯಾಡಿಕ್ ಅಂಡ್ ಸೆಮಿ ನೊಮ್ಯಾಡಿಕ್ ಟ್ರೈಬ್ಸ್ ಆದ ನಂತರ ದಿವಂಗತ ದೇವರಾಜ ಅರಸು ಸರ್ಕಾರದಲ್ಲಿ ಹಾವನೂರು ರಿಪೋರ್ಟ್‌ನಲ್ಲಿ ಬ್ಯಾಕ್‌ವರ್ಡ್ ಟ್ರೈಬ್ಸ್ ಎಂದು ಹೇಳಿ ಮಾಡಿದರು. ಇವತ್ತು ಮೂರು ಪರ್‌ಸೆಂಟ್ ರಿಸರ್ವೇಷನ್ ಮತ್ತು ಎಲ್ಲಾ ಸವಲತ್ತುಗಳನ್ನು ಕೊಡತಕ್ಕಂಥ ಒಂದು ವ್ಯವಸ್ಥೆ ಆಯಿತು. ಇವತ್ತು ಈ ಒಂದು ಬ್ಯಾಕ್‌ವರ್ಡ್ ಟ್ರೈಬ್ಸ್‌ಗೆ ಏನು ಇತರೆ ಸಮಾಜವನ್ನು ಕೂಡ ಸೇರಿಸಿ ಇಂಥ ಒಂದು ಸವಲತ್ತನ್ನು ಕೊಟ್ಟರು, ತದನಂತರ 'ಎ' ಗ್ರೂಪ್ ಎಂದು ಹೇಳಿ ಮಾಡಿ ಅದಕ್ಕೆ ಅನೇಕ ಜಾತಿಗಳನ್ನು ಸೇರಿಸಿದ್ದಾರೆ. ಮತ್ತೆ ಚಿನ್ನಪ್ಪ ರೆಡ್ಡಿ ಆಯೋಗದಲ್ಲಿ ಬಹಳ ಅನ್ಯಾಯವಾಗಿದೆ. ಅದರ ರಿಪೋರ್ಟ್ ಇನ್ನೂ ಬಂದಿಲ್ಲ ಆ ರಿಪೋರ್ಟ್‌ನ್ನು ನಾವು ಓದಿದಾಗ 'ಬಿ' ಗ್ರೂಪ್‌ಗೆ ಸೇರಿಸತಕ್ಕಂಥ ಒಂದು ವ್ಯವಸ್ಥೆಯಾಗಿದೆ. ಈ ಒಂದು ಸಮಾಜ ಹಾಗೂ ಇನ್ನೂ ಅನೇಕ ವರ್ಗಗಳನ್ನು ಸೇರಿಸಿ ಮಾಡಿದ್ದರಿಂದ ನಿಜವಾಗಿಯೂ ವಂಚಿತರಾಗಿರತಕ್ಕಂಥ ಈ ಸಮಾಜಕ್ಕೆ ಬಹಳ ಅನ್ಯಾಯವಾಗುತ್ತದೆ ಎಂದು ಸನ್ಮಾನ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮುಖಾಂತರ ತರುತ್ತಿದ್ದೇನೆ. ಈ ಒಂದು ಸಮಾಜದಲ್ಲಿ ಬಹಳ ಹಿಂದುಳಿದಿರತಕ್ಕ

ಈ ಜನರ ಜೀವನ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ನಾನು ತಮ್ಮ ಎದುರಿಗೆ ಅವರ ಒಂದು ಜೀವನ ಪರಿಸ್ಥಿತಿ ಯಾವ ರೀತಿ ಇದೆ ಎಂದು ಹೇಳುತ್ತೇನೆ. ನಾನು ಮೊನ್ನೆ ಗುಬ್ಬಿ ತಾಲ್ಲೂಕಿನಲ್ಲಿ ಮಾನ್ಯ ಶಿವನಂಜಪ್ಪನವರ ಕ್ಷೇತ್ರಕ್ಕೆ ಹೋದಂಥ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ನಾನು ಕುಳಿತಿದ್ದೆ. ಆಗ ಹಳ್ಳಿಯ ಒಬ್ಬ ಗೊಲ್ಲ ಜನಾಂಗದ ಮನುಷ್ಯ ಬಂದು ಹೇಳುತ್ತಿದ್ದ. ನಮ್ಮ ಕಡೆ ಹೆಂಗಸರು ಮುಟ್ಟಾದರೆ ಅವರನ್ನು ಹೊರಗಡೆ ಮೂರು ನಾಲ್ಕು ದಿವಸವಿಟ್ಟು ನಂತರ ವಾಪಸ್ ಕರೆಸಿಕೊಳ್ಳುತ್ತೇವೆ. ಆದರೆ ಅವರ ಪರಿಸ್ಥಿತಿ ಏನಾಗಿದೆ ಎಂದರೆ ಆ ಮನುಷ್ಯ ಹೇಳತಕ್ಕಂಥ ಧಾಟಿ ನೋಡಿದರೆ ಸುಮಾರು ಒಂದೂವರೆ ತಿಂಗಳಿಂದ ಒಬ್ಬ ಹೆಂಗಸನ್ನು ಹೊರಗಡೆಯೇ ಇಟ್ಟಿದ್ದಾರೆ. ಕಾರಣವೇನು ಎಂದು ಕೇಳಿದರೆ ಬ್ಲೀಡಿಂಗ್ ಆಗುತ್ತಲೇ ಇದೆ, ಅದು ನಿಂತಿಲ್ಲ. ಅದಕ್ಕೋಸ್ಕರ ಅವರನ್ನು ಹೊರಗಡೆ ಇಟ್ಟಿದ್ದೇವೆ ಸ್ವಾಮಿ ಎಂದು ಹೇಳಿ ಡಾಕ್ಟರ್ ಹತ್ತಿರ ಹೇಳತಕ್ಕಂಥ ಮಾತನ್ನು ನಾನು ಕೇಳಿದ್ದೇನೆ. ಈ ರೀತಿಯಲ್ಲಿ ಒಂದು ಸಾಮಾಜಿಕವಾಗಿ ಹಿಂದುಳಿದಿರತಕ್ಕಂಥ ಜನ, ಮತ್ತೆ ಇನ್ನೂ ಹಿಂದಕ್ಕೆ ಹೋದರೆ ಬಹುಶಃ ಹೆರಿಗೆಯಾದರೆ ಅವರ ಮಗು ದೊಡ್ಡದಾಗಿ ಒಬ್ಬರು ಹನ್ನೊಂದು ದಿವಸ ಮತ್ತೆ ೧೫ ದಿವಸದಲ್ಲಿ ಅವರನ್ನು ವಾಪಸ್ ಮನೆ ಒಳಗೆ ಕರೆದುಕೊಂಡು ಬರತಕ್ಕಂಥ ಪರಿಸ್ಥಿತಿ. ಅವರ ಜೊತೆ ಅದೇ ಊರಿನಲ್ಲಿ ಇನ್ಯಾರಿಗಾದರೂ ಹೆರಿಗೆಯಾದರೆ ಮತ್ತೆ ಅವರ ಜೊತೆಯಲ್ಲಿಯೇ ಅವರೂ ಕೂಡ ಇರಬೇಕು. ಇಂಥ ಒಂದು ಕೆಟ್ಟ ಪರಿಸ್ಥಿತಿಯಲ್ಲಿದ್ದಾರೆ. ಆದರೆ ಇದಕ್ಕೆ ಕಾರಣ ಸರ್ಕಾರವಾಗಲೀ ಅಥವಾ ಬೇರೆಯವರನ್ನಾಗಲೀ ದ್ವೇಷ ಮಾಡತಕ್ಕಂಥದ್ದಲ್ಲ. ಅಥವಾ ಇದನ್ನು ಬೇರೆಯವರು ಮಾಡಿರತಕ್ಕಂಥದ್ದು ಅಲ್ಲ. ಒಂದು ಸಣ್ಣ ನಂಬಿಕೆಯನ್ನು ಇಟ್ಟುಕೊಂಡು ಅವರವೇ ಆದಂಥ ಒಂದು ಕಟ್ಟುಪಾಡಿನಲ್ಲಿ ಒಂದು ನಂಬಿಕೆಯಲ್ಲಿ ಬಂದಿರತಕ್ಕಂಥ ಒಂದು ಸಮಾಜ ಇದು. ಆದರೆ ಇಂಥ ಹಿಂದುಳಿದಿರತಕ್ಕಂಥ ಸಮಾಜವನ್ನು ಇವತ್ತಿನವರೆಗೂ ಯಾರೂ ಗುರುತಿಸದೇ ಇರುವುದರಿಂದ ಇವರಿಗೆ ಸಿಗತಕ್ಕಂಥ ಸವಲತ್ತು ಇವತ್ತಿನವರೆಗೂ ಸರ್ಕಾರದಿಂದ ಸಿಕ್ಕಿಲ್ಲ. ಸ್ವಲ್ಪಮಟ್ಟಿಗೆ ಸಿಕ್ಕಂತಹ ಅವಕಾಶಗಳನ್ನು ಈಗ ಮೊಟಕುಗೊಳಿಸಿ ಅನೇಕ ಬೇರೆ ಪಂಗಡಗಳನ್ನು ಇವರ ಜೊತೆಗೆ ಸೇರಿಸಿ ಗ್ರೂಪ್‌ವೈಸ್ ಮಾಡಿರುವುದರಿಂದ ಮತ್ತೆ ಅವರು ವಂಚಿತರಾಗಿದ್ದಾರೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಹಿಂದೆ ನೊಮ್ಯಾಡಿಕ್ ಮತ್ತು ಸೆಮಿನೊಮ್ಯಾಡಿಕ್ ಟ್ರೈಬ್ಸ್ ಇದ್ದಾಗ ಇದ್ದಂತಹ ಅನುಕೂಲತೆಗಳನ್ನು ಇವರಿಗೆ ಒದಗಿಸಿಕೊಡಬೇಕು. ಬೇರೆ ಜಾತಿಗಳಿಗೆ ಈ ಅವಕಾಶಗಳನ್ನು ಕೊಡಬಾರದು. ಅಂದರೆ ಬೇರೆ ಜಾತಿಯವರನ್ನು ದ್ವೇಷ ಮಾಡತಕ್ಕದ್ದು ಅಲ್ಲ. ನಮ್ಮ ಕಾನೂನಿನ ಚೌಕಟ್ಟಿನಲ್ಲಿ ಸಂವಿಧಾನದಡಿಯಲ್ಲಿ ಇರತಕ್ಕಂಥ ಹಕ್ಕನ್ನು ಎಲ್ಲರಿಗೂ ಕೊಡಬೇಕು. ಆದರೆ ನಿಜವಾಗಿ ವಂಚಿತರಾಗಿರತಕ್ಕ ಈ ಸಮಾಜವನ್ನು ತಾವು ಗುರ್ತಿಸಿ ಸರ್ಕಾರದಿಂದ ಸಿಗತಕ್ಕ ಸವಲತ್ತುಗಳನ್ನು ಅವರಿಗೆ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಈಗಾಗಲೇ ಗೊಲ್ಲ ಜನಾಂಗದ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದಾರೆ. ಅದನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಆಗಸ್ಟ್ ೨೪ ೧೯೮೬ನೇ ಇಸವಿಯಲ್ಲಿ "ಸುಧಾ" ಪತ್ರಿಕೆಯಲ್ಲಿಯೂ ಕೂಡ ಇವರ ಬಗ್ಗೆ ಬರೆದಿರತಕ್ಕ ಲೇಖನ ಪ್ರಕಟವಾಗಿದೆ. ಅದರಲ್ಲಿ ಅವರ ಜೀವನ ಮಟ್ಟ ಹೇಗಿದೆ, ಅವರು ಯಾವ ರೀತಿ ಜೀವನ ಮಾಡುತ್ತಿದ್ದಾರೆ, ಅವರ ಸೋಷಿಯಲ್ ಸ್ಟೇಟಸ್ ಏನಿದೆ, ಅವರಲ್ಲಿ ವಿದ್ಯಾವಂತರ ಸಂಖ್ಯೆ ಎಷ್ಟಿದೆ, ಅಧಿಕಾರಿಗಳ ಸಂಖ್ಯೆ ಎಷ್ಟಿದೆ ಎನ್ನತಕ್ಕ ಎಲ್ಲಾ ವಿಚಾರಗಳನ್ನು ಕ್ರೋಢೀಕರಿಸಿ ಬರೆದಂತಹ ಲೇಖನ ಅದಾಗಿದೆ. ಅವನ್ನು ನಾನು ಈಗಾಗಲೇ ಮಂತ್ರಿಗಳಿಗೆ ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇನೆ. ಏತಕ್ಕ ನಾನು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ

ಮಾಡುತ್ತಿದ್ದೇನೆಂದರೆ ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಶಿಫಾರಸ್ಸು ಮಾಡತಕ್ಕಂಥ ಸಂದರ್ಭದಲ್ಲಿ ಗೊಲ್ಲ ಜನಾಂಗದವರನ್ನು ಎಸ್. ಟಿ. ಅಥವಾ ಎಸ್. ಸಿ. ಹೀಗೆ ಯಾವುದಕ್ಕಾದರೂ ಸೇರಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳು ರೆಕಮೆಂಡ್ ಮಾಡಲಿಕ್ಕೆ ಮುಂದಾಗಬೇಕು. ಈ ಸಮಾಜಕ್ಕೆ ಅವರು ಸಹಾಯಕರಾಗಬೇಕು ಎನ್ನತಕ್ಕದ್ದನ್ನು ಕಳಕಳಿಯಿಂದ ವಿನಂತಿಯನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮಾಡಿಕೊಳ್ಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಬೆರಳು ಎಣಿಸತಕ್ಕ ಸಂಖ್ಯೆಯಲ್ಲಿ ಈ ಸಮಾಜದ ಅಧಿಕಾರಿಗಳು ಇದ್ದಾರೆ. ಐ. ಎ. ಎಸ್. ಇರಬಹುದು, ಐ. ಪಿ. ಎಸ್. ಇರಬಹುದು; ಇವರಲ್ಲಿ ಕೇವಲ ೧೧ ಕೂಡ ಈ ಜನರು ಸಿಗುವುದಿಲ್ಲ. ಇದು ಮಾನ್ಯ ಮಂತ್ರಿಗಳಿಗೆ ಗೊತ್ತಿದೆ. ಕೇವಲ ಇಂತಹ ದೊಡ್ಡ ಜನಸಂಖ್ಯೆ ಇರತಕ್ಕ ಈ ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಎಷ್ಟು ಅಂದರೆ ಕೇವಲ ಶೇಕಡ ೨ ರಷ್ಟು ಇದೆ. ಮುಂದುವರಿದಂತಹ ಈ ಕಾಲದಲ್ಲಿ ಸರ್ಕಾರದಿಂದ ಇಷ್ಟೊಂದು ಅನುಕೂಲತೆ ಸಿಕ್ಕಿದರೂ ಕೂಡ ಅವರ ವಿದ್ಯಾವಂತರ ಸಂಖ್ಯೆ ಕೇವಲ ೨ ರಿಂದ ೩% ಇದೆ. ಅಧಿಕಾರಿ ವರ್ಗದವರನ್ನು ಲೆಕ್ಕ ಹಾಕಿಕೊಂಡರೆ ಯಾವ ಒಂದು ಇಲಾಖೆಯಲ್ಲಿಯೂ ಕೂಡ ಇವರಲ್ಲಿ ಮೇಲ್ಪಟ್ಟದ ಅಧಿಕಾರಿಗಳು ಇಲ್ಲ. ಐ. ಎ. ಎಸ್. ಹಾಗೂ ಐ. ಪಿ. ಎಸ್. ಅಧಿಕಾರಿಗಳ ಸಂಖ್ಯೆಯನ್ನು ಲೆಕ್ಕ ಹಾಕಿಕೊಂಡರೆ ಒಬ್ಬರೋ ಇಬ್ಬರೋ ಸಿಗಬಹುದು. ಇದಕ್ಕೆ ಕಾರಣವೇನೆಂದರೆ ಅವರಿಗೆ ಸರಿಯಾದ ಸವಲತ್ತು ಸರ್ಕಾರದಿಂದ ಸಿಗುತ್ತಿಲ್ಲ. ಗೊಲ್ಲ ಜಾತಿಯವರನ್ನು ಶಿಫಾರಸ್ಸು ಮಾಡಬೇಕು ಮತ್ತು ಬೇರೆ ಹರಿಜನ ಗಿರಿಜನರಿಗೆ ಏನು ಸವಲತ್ತು ಸಿಗುತ್ತದೆ ಆ ಸವಲತ್ತುಗಳನ್ನು ಈ ಗೊಲ್ಲ ಜನಾಂಗಕ್ಕೆ ಕಲ್ಪಿಸಿ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ವಿನಂತಿಸಿ ಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು:- ತಾವು ಬೇಗ ಮುಗಿಸಬೇಕು.

ಶ್ರೀ ಎ. ವಿ. ಉಮಾಪತಿ:- ಅವರು ವಾಸ ಮಾಡತಕ್ಕ ಗುಡಿಸಲುಗಳು ಅವರ ಜೀವನ ಮಟ್ಟ ಇವುಗಳ ಬಗ್ಗೆ ಈಗಾಗಲೇ ಸುಧಾದಲ್ಲಿ ಒಂದು ಲೇಖನ ಕೂಡ ಬಂದಿದೆ. ಇದೂ ಕೂಡ ಸನ್ಮಾನ್ಯ ಮಂತ್ರಿಗಳ ಕೈಗೆ ಈಗಾಗಲೇ ಸೇರಿರಬಹುದು. ಇಲಾಖೆಯ ಅಧಿಕಾರಿಗಳು ಕೂಡ ಇಲ್ಲಿ ಇದ್ದಾರೆ. ಈ ಅಂಕಿ ಅಂಶಗಳು ಕೂಡ ಈಗಾಗಲೇ ನಮ್ಮ ಮಂತ್ರಿಗಳ ಕೈಯಲ್ಲಿದೆ. ಆದರೂ ಕೂಡ ಈ ಅಂಶವನ್ನು ಪರಿಗಣಿಸಿ ಇದನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸಬೇಕು. ಬಹಳ ಹಿಂದುಳಿದಿರತಕ್ಕಂಥ ಈ ಸಮಾಜಕ್ಕೆ ಮಾನ್ಯ ಮಂತ್ರಿಗಳು, ಮುಖ್ಯ ಮಂತ್ರಿಗಳು ಸಹಾಯಕರಾಗುತ್ತಾರೆಂದು ನಾನು ನಂಬಿದ್ದೇನೆ. ನಾನು ಈ ಸಂದರ್ಭದಲ್ಲಿ ಮಂತ್ರಿಗಳನ್ನು ಮತ್ತು ನಮ್ಮ ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ಸುಮಾರು ಒಂದು ಸಾವಿರ ವಿದ್ಯಾರ್ಥಿಗಳಿರತಕ್ಕ ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು ಎರಡು ವರ್ಷಗಳಿಂದ ವಿದ್ಯಾರ್ಥಿಗಳು ಅವರಿಗೆ ಬೇಕಾದಂತಹ ಬೇಡಿಕೆಗಳನ್ನು ಕೇಳುವುದಕ್ಕೆ ಹೋದಾಗ ಅವರು ಸ್ಟ್ರೈಕ್ ಮಾಡಬೇಕಾಯಿತು. ಜಿಲ್ಲಾ ಪರಿಷತ್ತಿನಲ್ಲಿ ಮತ್ತು ಸರ್ಕಾರದ ಮೊರೆ ಹೊಕ್ಕಾಗಲೂ ಕೂಡ ಜಾಗ್ರತೆ ಸೌಲಭ್ಯ ಸಿಗದೆ ಇದ್ದುದಕ್ಕೆ ಸ್ಟ್ರೈಕ್ ಮಾಡಿ ಪೋಲೀಸರಿಂದ ಹೊಡೆತ ತಿಂದು ಆಸ್ಪತ್ರೆ ಸೇರಿ ಜೈಲಿಗೆ ಸಹ ಹೋಗಿರತಕ್ಕಂಥ ಘಟನೆಗಳು ಕೂಡ ತಮ್ಮ ಗಮನದಲ್ಲೂ ಇದೆ. ಇದು ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಇದನ್ನು ಕಂಡಂತಹ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರಿಗೆ ನಾನು ಅಭಿನಂದಿಸುತ್ತೇನೆ. ಈ ಸಲ ನಮ್ಮ ಜಿಲ್ಲೆಗೆ 'ಎ' ಗ್ರೂಪ್ ವಿದ್ಯಾರ್ಥಿಗಳಿಗೆ ಸುಮಾರು ೪೩ ಲಕ್ಷ

ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಾಗೆಯೇ ೧೯೯೨-೯೩ನೇ ಸಾಲಿನಲ್ಲಿ ಈ ಒಂದು ಸಮಾಜಕ್ಕೆ ೭೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳನ್ನು ಅಭಿನಂದಿಸುತ್ತಾ ಈ ವಿಚಾರವನ್ನು ಬಹಳ ಸಹಾನುಭೂತಿಯಿಂದ ಪರಿಶೀಲಿಸಬೇಕು. ಅಲ್ಲದೆ, ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕಂಥ ಒಂದು ಪಟ್ಟಿಯಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರತಕ್ಕಂಥ 'ಗೊಲ್ಲ' ಜನಾಂಗವನ್ನು ಅದರಲ್ಲಿ ಸೇರಿಸಿ, ಶಿಫಾರಸ್ಸು ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತಾ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri Quamarul Islam (Gulbarga):- Madam Deputy Speaker, there are many demands, but I know the time which is allotted to me is little and I have to do justice to all the demands. I would like to start with the demands of the Hon'ble Minister Sri Azeez Sait. He is the Minister for Transport as well as Wakf. I am only having the Annual report of the Transport. I am not having before me the Annual Report of Wakf. But, I have gone through the Report of the Revenue Department. Madam, in that, there is some mention regarding the Wakf Institutions. Madam, I demand through you, that the Wakf is also an important portfolio and from next time onwards, this mistake of not giving the report should not be repeated. So, I hope that from next time onwards the report on the Wakf will be supplied to the Members.

SRI AZEEZ SAIT:- Accepted.

SRI QUAMARUL ISLAM:- Thank you sir, I have got highest regard for you sir. But, at the same time, I would like to say that the Wakf Board has lost the confidence of the people of Karnataka. Right from the Chairman, and some of the members of the Wakf Board, they are involved in corrupt practices. All legal and illegal things are going on there. There are 19,000 and odd Wakf institutions all over the State and some of the Institutions are under Muzrai. To give a lease of any muzrai institution, prior permission of the Government is needed. I would like to know from the Hon'ble Minister

whether the prior permission of the Government has been taken while giving the leases to the institutions which are under Mujrai. If they have not taken any permission, that means they have given leases illegally. If it is true, will the Government come forward to cancel such leases or whether the Government will keep quiet and allow the Wakf Board to continue illegal things? Once upon a time i.e., about 2 years back there was highest regard for the Wakf Board; but that charm has gone. You are the Minister still and this Board is doing whatever they like. There are some members of Wakf Board who are involved in the corrupt practices. I came to know of it.Whether it has come to the notice of the Government? The Government has to take action against them. I am sorry, why the Government has not taken any action till today. Whether the Government is going to take action at least from now onwards? I can narrate so many examples. Like Aradhana Scheme and other Schemes, under Wakf Board also grants are coming for the last so many years for constructions of mosques, well around graveyard or for things like that. This grant is coming to the Wakf Board from theGovernment. But, the Wakf Board is not releasing it to the various institutions, instead they keep it in the Fixed Deposit. They are not releasing it immediately. The grant is released from the Government in the month of April or May. They keep this money in Fixed Deposit. They do not release it immediately. They will take interest. Whether this has come to the notice of the Government? The F.D. Interest is also not being properly utilised by them. I would like to know in what manner they are spending it? There is also diversification of such funds. That amount has been utilised for some other purpose. I want to know whether the Government is aware of it. Sir, some of the Chairmen of DWC and many of the inspectors they want money. They release money ranging from Rs. 5,000 to 2 lakhs for the purpose of construction of mosques or construc-

tion of wall around the graveyard or for things like that. The DWC Chairman and Inspector expects money from these institutions. Whether it has come to the notice of the Government? Many a times the members have been approached. I think a number of letters have been written in this regard. Whether you are aware of it or not? Many a times lot of "galata" was made in front of the Central Wakf Committee. Many a times news items have been appearing in the Press in this regard, that they are demanding money for releasing cheques. The corruption is so high in the Wakf Board that for each and everything they need money. I earnestly request the Minister, to amend the rules and see that corruption is stopped in the Wakf Board, without any further delay. Please do not release the amount to the Wakf Board kindly see that amount is released directly to the Wakf Institutions. Take the people's representatives into confidence and release the money. Let the Hon'ble Minister represent the Government and even if the rules are to be amended, please amend the same. Now, regarding the contribution, 6% contribution has to come under Wakf Act to the Wakf Board. I came to know that this contribution amount runs into lakhs of rupees and beautiful wakf complexes are here. Even the Milia complex is a beautiful one, but, the rent in this Milia Complex was fixed 10 years back when it was constructed.

3.25 p.m.

That rent was not enhanced and whatever rent fixed 10 years back still continues. Even they have not increased the rent of the shops situated on Tannery Road. Why they have not increased? If the Chairman has got 2-3 shops of his own, he would not have kept quiet and he would have made hue and cry and see that the rents of these shops are increased. As far as Wakf Board is concerned, these shop-keepers bring influence and give money to the Chairman and other people

and they will see that the rent is not increased. Once the rent is not increased the contribution to the Wakf Board is not increased and if the Contribution is not increased then the question of development of Wakf properties does not arise. Here, the Government is giving maintenance grants to the Wakf Board. I am happy that they are giving. But, the Government continues to give the maintenance grant and if the efforts are not being made by the Chairman and members of the Wakf Board to make the Wakf Board self-sufficient, then the Government cannot keep quiet. If they become corrupt and if they do not increase the rent and if they do not take steps to increase the income of theWakf Board, then what is the use of giving such maintenance grants? Otherwise, if you go on giving maintenance grants, then they will not try to recover the amount which is pending. Under the Act, there should one Muthavalli. But, there are more Muthavallis in the Wakf Board. One of the Muthavallis is from the great institution situated in my Gulbarga Constituency. You know, that such a great institution such a big Dargha is having more than one lakh of rupees arrears at 6%. Because the same Muthavalli of the Dargah is the member of the Wakf Board. One Hon'ble Member has also become the Muthavalli. He has been declared as Walliya in his life time. His Son is the Muthavalli of the Durgah and is also a member of the Wakf Board. Earlier days, his father was a maha Muthavalli. They are having more than one lakh rupees of arrears at six per cent. Whether the Hon'ble Member will be afraid of such a Muthavalli, because he is the Muthavalli of such a Durgah? I want to know from the Hon'ble Minister for Wakf, from the Government and from the other Members why they will not be questioned for this? Why they are not giving the arrears which is abundant and that Institution is having crores of rupees with them now a days. The money is coming to them like anything, like the water is flowing in the river. But they are not paying the

arrears of the Wakf Board which is there at six per cent. The Members may be of any rank, but as far as Wakf is concerned, it is the property in the name of Allah and we have to protect the property of Allah and with so much dedication we must do that work. But such Members are there who are not clearing the dues. Will the Government take some steps in this regard to see that the Board is to be streamlined? If the Board is not immediately streamlined, if some action is not being taken immediately, then these things will be continued. Sir, regarding the nuber of cases that are pending in the Law Committee of theWakf Board, I think if you go through, you will find that these cases are pending since long. One of the reason is the opponent, i.e. the other party will come and approach to the members or they will try to bribe the opposition lawyer and the Wakf Board will not pursue the matter and once the matter is not pursued, the cases will be like that and the properties will be like that and there will not be any improvement. Now you have thought of one or two very good things. One suggestion which I have given in my speech in 1990 is that on the line of Central Wakf Council, there should be the State Wakf Council. I am very happy that this Government, on the lines of the Central Wakf Council, has created the State Wakf Council with an initial Revolving Fund of about Rs. 60 lakhs and this Wakf Council will definitely improve some of the properties, will take up some of the properties which belongs to these institutions and these institutions are having very commercial properties and those properties can be developed so that the income of the Wakf Board can be improved. At the same time another unique thing which has come to the notice. This time the Government has declared in forming Wakf Foundation for the Women, with anintention to uplift the economically, socially and educationally backward women. This is really a unique scheme and I really appreciate it. But, Sir, you are having unique schemes, but if

the people of the Wakf Board are corrupt, will you give such schemes in the hands of these people? will they definitely do something good under the Wakf Board? Sir, it is high time that the Karnataka Wakf Board be streamlined. If it is not done, then Karnataka which is having a good name as far as Wakf Board is concerned, will be ruined. Till few years the Karnataka Wakf Board was supposed to be a good Wakf Board. But for the last few years this Wakf Board is becoming the worst Wakf Board in the whole of the country. So I request you to please do something to streamline the Wakf Board. Sir, the employees of Khadi Board and other Boards of the State Government are having many benefits from the Government including pension. There is a long pending demand of the Wakf Board employees for pension benefits. When I was a Board Member six or seven years back, in fact, we have moved a resolution to give pension benefits to the employees of the Wakf Board after their retirement on the lines of the employees of KEB and Khadi Board and other Boards of the State who are getting the pensionary benefits. I demand in this House that the employees of the Wakf Board should also get the benefit of the pension. Sir, in this budget, there is no amount sanctioned for the Haj Committee. I have gone through the budget in detail and there is sanction for almost all other items but as far as Haj Committee is concerned, there is no money sanctioned. I hope that immediately some amount is to be sanctioned for the Haj Committee. This is a very important Committee and this Committee has to do a lot of work, a lot of exercise to send the Hajees to the pilgrimage. After two months, the Hajees will start going to pilgrimage and there is no sanction of any amount to the Haj Comittee. I hope that sufficient amount will be given to the Haj Committee. As far as Sadat Haj House in Bangalore is concerned, the foundation stone for the construction of the building was laid about six years back. I want to know what is the progress?

When the Government is going to complete this house? If it is completed this year, the Hajees of Karnataka State can get the benefit of this Haj House so that they can utilise this Haj House for their piligrimage. Sir, lot of news appeared in newspapers about Hakku Patra in the Tippu Nagar grave yard of Mysore Road. The Hon'ble Minister has made a statement in this House that a COD enquiryhas already been made in this regard. But, after the COD enquiry nothing has come out. How much time it will take Sir? That's a very important matter. The Hakku Patras were given in the Tippu Nagar grave yard which has been convered into the residential and the Board Chairman with some of the members are involved in this. It has appeared in almost all the newspapers. The people who have given money have approached the Members of the assembly, they have approached the Hon'ble members saying that such things are going on and you were kind enough to say that a COD enquiry would be conducted. I wanted that the enquiry has to be completed as early as possible so that the guilties can be punished and others should learn a lesson of that.

Sir, now I will come to the other portfolio, Transport. It is also an important prtfolio and now some talks are going on that the Government is going to privatise some of the routes of the buses. Sir in Bidar, Gulbarga and Raichur, in 1985 and 1986, some of the routes have been nationalised. While nationalising the routes, the Government has assured that all the services of the routes which have been nationalised and the employees who were there on those services will be given jobs and in the year 1988 an interview was called for and some of them have been given jobs and in 1990 another interview was called for and the Government issued an order saying that they have adopted a formla of 4:5. When the Contract Carriages were nationalised, persons were given job in the 4:5 formula and according to the 4:5 formula, there

are another 400 to 500 people to be given the services. For the last five to six years, these employees from the Hyderabad-Karnataka area i.e. Gulbarga, Raichur and Bidar where the routes have been nationalised, are starving for their bread and butter. They are jobless. Even 250 of them have come down to Bangalore to earn their bread. You have convened a meeting of the MLAs of the three districts of Gulbarga, Bidar and Raichur about few days back and you have assured that within a day or two, orders will be issued in this regard. But till today, orders have not been issued. The Government has assured that after the nationalisation of these routes, two conductors, two drivers and one cleaner will be given job per bus.

MR. AZEEZ SAIT (Minister for Transport and Wakf):- Don't waste your time. We have got precious things to talk. About this Hyderabad-Karnataka Division, the Districts of Gulbarga, Bidar and Raichur, I have convened a meeting of the Hon'ble Members and I have sorted out most of their problems and I have promised to look into that aspect, about what the Hon'ble Member is saying now. I am just coming to your help. Don't waste your time, because the time is running short. About this we have already taken a meeting two days back.

SRI QUMARUL ISLAM:- I have just mentioned regarding the meeting. Justice is denied for the last 4 to 5 years and I hope justice will be given to them before the end of this Session as assured by the Hon'ble Minister. Justice delayed is justice denied. I am hopeful that a decision will be taken soon and all those who have become jobless after the nationalisation of routes will be absorbed. Sir, the number of buses are not sufficient. The schedule which are there are not sufficient. The population is increasing and therefore, more transport facilities should be given. The present transport

facilities are not at all sufficient. We require more number of buses in almost all the Constituencies. We require bus depots; we require bus shelters. In places where the bus depots are there, their conditions are worst. There is no proper drinking water facility, even there is no facility of latrines and particularly, women, they cannot go for the toilet. There are no seperate toilets for women. At present night buses are there and it is very necessary to provide toilet facilities to both men and women in bus stations. Even in our North Karnataka area and Old Hyderabad Karnataka area and even in the City like Gulbarga except on the main road, if you go to other roads, there are no bus shelters. In the Nehru Rozgar Yojana, it has been said that some of the shelters will be constructed in Gulbarga City. Even under the Nehru Rozgar Yojana, no bus shelters have been constructed. Sir, atleast our demand is that when people are made to wait for the buses, they should have bus shelters, because the temperature of Gulbarga is 41 degree and it will go up to 43 degrees and 44 degrees and it will be very difficult for the people to wait for the buses, sir. In such a hot district and hot area, I hope that Hon'ble Minister will give first priority to provide bus shelters to these districts. Sir, we talk of E.P.K.M. i.e. earning per Kilo meter. There are so manyfuel savers and even in the Andhra Pradesh which is the nearby State of Karnataka, so many companies have come forward and if you use those fuel savers, there will be less fuel consumption in the diesel and petrol. Reports from the Commissioner of Transport, report from the Indian Oil Corporation and report from so many other agencies are there in this regard. The Andhra Pradesh Government has been using those fuel savers and here, the Karnataka Road Transport Corporation which is having maximum number of buses and if they use the fuel savers, then the consumption of the diesel and petrol will be minimized and they should also

enquire whether other States are using or not so that you can increase EPKM. I will give this suggestion to the KSRTC to use the fuel savers. Sir, our Small Scale Industry Minister Mr. Nazir Ahamed is not here and I just wanted to speak regarding District Industries Centres. Sir, this is the forum to bring all these things to the notice of the Government. Sir, in the DIC, certain schemes are there, giving self-financing loans and those schemes are having subsidy also and that subsidy is up to the tune of 25% and Rs. 15,000/-, 25,000/- and Rs. 35,000/- scheme is there. From the last two years, I am bringing this point even to the Deputy Commissioner and also the Minister who come for review to the district of Gulbarga. About 350 or 400 beneficiaries will be given loan and the loan will be sanctioned in the district office. The Hon'ble Minister Shri Shivannaji is here. When he was reviewing some of the social welfare schemes I have brought this to his notice at Gulbarga. Madam, the officers who are at the helm of affairs of sanctioning the loan under the DIC self-financing scheme, they are getting minimum of ten lakhs rupees for distribution every year. I will tell with full confidence that let any M.L.A. from my district say that he has recommended such and such a case and that genuine case is accepted for the loan in the district industry centre of Gulbarga, I am ready to resign from the M.L.A. seat, Sir, let any member in this House belonging to Gulbarga District say that 350 beneficiaries have been the sanctioned the loan by the district centre office and there is a bank representative and if they say that loan has been sanctioned to these beneficiaries, then Quamarul Islam is ready to resign, Sir. Such a high level coruption is there, Sir. For each case Rs. 3000 to 3500 will be given as subsidy. There is a talk. They will say in front of Gulbarga District Centre there are pan shops and you have to go to the pan shops and book your name. Sir, many of my constitutency people met me and asked:- Qamarul Sab; we wanted your

letter. I have given the letters last year, but one of those who got the letter, not only my letter, but letters of other M.L.As, not a single man was given the loan. Now they say, Sir, people who have not approached the MLAs. They bargained for two thousand rupees in the district industry centre and Rs. 1,000/- to the Manager. Sir, the beneficiaries are fixed. Suppose if there are 350 beneficieries, they will divided into those banks, 5, 20, 10, 12 like that and applications will be forwarded after selection in the District Industry Centre. They will not send ten. The selection will be done for 500 to 600 and the District Industry Centre people say you give 2000 rupees because you are getting 3500 rupees as subsidy and it is not your amount, this amount is given by the Government and it is a subsidy. You take your amount out of Rs. 3500, Rs. 2000 will be given to the District Industry Centre office to see that the names of the beneficiaries to be included in the list of 500. Once the name is included their job is over. Now the second step is, he has to go to the Bank Manager and the Bank Manager will say, I have got quote of 12, but 20 applications have come and I have to conduct interview again. Interview will be conducted; eventhough there is an interview at the District Industry Centre in the presence of the Manager of the Lead bank again there will be another interview and the manager will say "No, no, you cannot come under this. Your application cannot be considered". Therefore, all the 12 whose loans were sanctioned must have been given money. They might have paid Rs. 1,500 and sometimes Sir, the Bank Managers will ask the District Industry Centre people to see that 4 names are deleted from the list so that in its place, another 4 names will be included. Selection will not be done by the District Industry Centre, but in the some house or in some I.B. or in some bunglow. Even the MLA like Qamarul Islam who is bringing certain facts in this house, has to go and search. I wanted to contact Lok Ayukta people but I am not

able to trace the things at the level of District Industry Centre. This requires, the District Industry Centre is set up to help our educated people who wanted to become entreprenuers. But in Gulbarga, entreprenuers are benefitted from the District Industry Centre. Sir, the Government is giving subsidy because Government knows that without subsidy the scheme cannot be successful. Why that sybsidy is given? Every year 10 to 15 lakhs goes to the pocketsof the managers of the District Industry Centres. So, I wanted to bring this to the notice of the Hon'ble Minister for Industries who has taken a challenge to implement the Vishwa scheme. Sir, Vishwa should create a Vishwas in the people and the Vishwas can be created if the officers and the people who are at the helm of affairs are non-corrupt. If surprise checks are made and if you issue a direction that the letters given by the elected representatives must get weightage, then only things can improve and you are answerable to the people. Therefore, I am confident that you will take action in this regard. Sir, with these words, I thank the chair for giving me an opportunity to speak on these demands and conclude.

೩.೫೫ ಪಿ. ಎಂ.

+ಶ್ರೀ ಕರಿಯಣ್ಣ (ಹೊಳೇಹೊನ್ನೂರು):- ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾನು ಇವತ್ತಿನ ದಿವಸ ಸಭೆಯ ಮುಂದೆ ಇರತಕ್ಕ ೧೦ ಬೇಡಿಕೆಗಳನ್ನು ಅನುಮೋದಿಸುತ್ತಾ ನಾನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡುತ್ತೇನೆ. ಮುಖ್ಯವಾಗಿ ಏನು ಒಂದು ತುಳಿದಿಟ್ಟ ಜನಾಂಗವಿದೆ ಅದರಲ್ಲೂ ಈ ಸಮಾಜದಲ್ಲಿ ಶೋಷಣೆಗೆ ಒಳಗಾಗಿರತಕ್ಕ ಜನಾಂಗಗಳನ್ನು ಉದ್ಧಾರ ಮಾಡುವುದಕ್ಕಾಗಿ ರಾಜ್ಯಾಂಗದ ಹಕ್ಕನ್ನು ಕೊಡುವುದರ ಜೊತೆಗೆ ರಾಜ್ಯದಲ್ಲೂ ಅನೇಕ ಯೋಜನೆಗಳನ್ನು ಹಾಕಿಕೊಂಡು ಅವರಿಗೆ ಸಹಾಯ ಮಾಡುವುದಕ್ಕೆ ಈ ಸದನದ ಎಲ್ಲಾ ವರ್ಗದ ಸದಸ್ಯರು ಯಾವ ಪಕ್ಷ ಪಂಗಡ ಇಲ್ಲದೆ ಸಹಕರಿಸಿದ್ದಾರೆ. ಆದರೆ ಈ ಇಲಾಖೆಯಲ್ಲಿ ಬರುತ್ತಾ ಬರುತ್ತಾ ಶೋಷಣೆಗೆ ಒಳಗಾಗಿರತಕ್ಕ ಈ ಜನಗಳನ್ನು ಸಮರ್ಪಕವಾಗಿ ನೋಡಿಕೊಳ್ಳದೆ ಯೋಜನೆಗೆ ಕೊಟ್ಟಂಥ ಎಲ್ಲಾ ಹಣವನ್ನು ಅರ್ಧಕ್ಕಿಂತ ಹೆಚ್ಚಾಗಿ ಲ್ಯಾಪ್ಸ್ ಮಾಡಿ ಅದನ್ನು ಸರಿಯಾಗಿ ಉಪಯೋಗಿಸದೆ ಈ ಜನಗಳ ಅಭಿವೃದ್ಧಿಯನ್ನು ಮಾಡದೆ ಸುಮ್ಮನೆ ಒಂದು ರೀತಿಯ ಪ್ರಚಾರವನ್ನು ಕೊಟ್ಟು ಇವರನ್ನು ಊರ ಹೊರಗಡೆ ಇಡತಕ್ಕ ಅನೇಕ ಸವರ್ಣೀಯರು ಎಲ್ಲವನ್ನೂ ಹರಿಜನ-ಗಿರಿಜನರಿಗೇ ಮಾಡುತ್ತಿದ್ದಾರೋ ಏನೋ, ಇವರಿಗೇ ಈ ರಾಜ್ಯದ ಹಣಕಾಸನ್ನು ಕೊಟ್ಟು ನೌಕರಿ ಕಿತ್ತುಕೊಂಡು ಹೋಗುತ್ತಿದ್ದಾರೋ

ಏನೋ ಎಂಬ ರೀತಿಯಲ್ಲಿ ರೇಡಿಯೋದಲ್ಲಿ ಟಿ. ವಿ. ಯಲ್ಲಿ ಅಥವಾ ಭಾಷಣ ಮಾಡಿ ನಮ್ಮ ಮೇಲೆ ಬೇರೆಯವರನ್ನು ಎತ್ತಿ ಕಟ್ಟತಕ್ಕ ಪರಿಸ್ಥಿತಿ ಉಂಟಾಗಿದೆ. ಈಗ ಮಾನ್ಯ ಸಚಿವರು ಕೊಟ್ಟಿರತಕ್ಕ ಅಂಕಿಅಂಶಗಳನ್ನು ಗಮನಿಸಿದರೆ ಈ ಸಮಾಜ ಕಲ್ಯಾಣ ಇಲಾಖೆ ಏನಿದೆ, ಇದಕ್ಕೆ ತಾಯಿ ಇಲ್ಲ ತಂದೆ ಇಲ್ಲ, ಹೇಳುವವರು ಕೇಳುವವರು ಯಾರೂ ಇಲ್ಲ ಎನ್ನುವ ಪರಿಸ್ಥಿತಿ ಆಗಿದೆ. ಏಕೆಂದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ಏನು ಅಧಿಕಾರಿಗಳ ಹುದ್ದೆಗಳು ಇವೆ ಅವನ್ನು ನೋಡಿದರೆ ಕೇವಲ ಸಂಬಳವನ್ನು ಕೊಡುವುದಕ್ಕೋಸ್ಕರ ಬಹಳ ದೊಡ್ಡ ದೊಡ್ಡ ಹುದ್ದೆಗಳನ್ನು ಸೃಷ್ಟಿ ಮಾಡಿ, ಐ. ಎ. ಎಸ್. ಅಧಿಕಾರಿಗಳ ಮಟ್ಟದ ಹುದ್ದೆಗಳನ್ನು ಸೃಷ್ಟಿ ಮಾಡಿ, ಡೆಪ್ಯುಟಿ ಸೆಕ್ರೆಟರಿ, ಸೆಕ್ರೆಟರಿ ಮಟ್ಟದಲ್ಲಿ ಸುಮಾರು ೭-೮ ಜನರು ಕೆಲಸ ಮಾಡತಕ್ಕ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುತ್ತೇನೆ. ಮತ್ತು ಜಿಲ್ಲಾ ಮಟ್ಟದಲ್ಲಿ ಕೂಡಾ ಕ್ಲಾಸ್ ೨ ಮಟ್ಟದ ಪೋಸ್ಟ್ ಇದ್ದರೂ ೧ನೇ ದರ್ಜೆಯನ್ನು ಕೊಟ್ಟು ಸಂಬಳ ಕೊಡುವುದಕ್ಕೆ ಈ ಇಲಾಖೆಯನ್ನು ಸೃಷ್ಟಿ ಮಾಡಿದ್ದಾರೋ ಏನೋ ಎಂದೆನಿಸುತ್ತದೆ. ಕೇವಲ ಸ್ಕಾಲರ್‌ಶಿಪ್, ಹಾಸ್ಟೆಲುಗಳನ್ನು ನೋಡಿಕೊಳ್ಳುವುದು ಮಾತ್ರ ಈ ಇಲಾಖೆಯ ಜವಾಬ್ದಾರಿ. ಇವತ್ತು ಸ್ಕಾಲರ್‌ಶಿಪ್ ಕೊಡಬೇಕಾದರೆ ಚೀಫ್ ಸೆಕ್ರೆಟರಿ ಯಾರು ಇರುತ್ತಾರೋ ಅವರು ಸಿಗ್ನೇಚರ್ ಮಾಡಿದರೆ ಸಾಕು. ಮತ್ತೆ ಬಿ. ಡಿ. ಓ. ಆಫೀಸಿನಲ್ಲಿ ಯಾರು ಬ್ಲಾಕ್ ಡೆವಲಪ್‌ಮೆಂಟ್ ಅಧಿಕಾರಿ ಇರುತ್ತಾರೆ ಅವರು ತಾಲ್ಲೂಕು ಲೆವೆಲ್ ಹಾಸ್ಟೆಲ್‌ಗಳನ್ನು ನೋಡಿಕೊಳ್ಳುತ್ತಾರೆ. ಇನ್ನು ಜಿಲ್ಲಾ ಮಟ್ಟದಲ್ಲಿ ಸಮಾಜ ಕಲ್ಯಾಣ ಅಧಿಕಾರಿಗಳು ನೋಡಿಕೊಳ್ಳುತ್ತಾರೆ. ಇಷ್ಟು ಬಿಟ್ಟರೆ ಹರಿಜನ-ಗಿರಿಜನರ ಅಭಿವೃದ್ಧಿಗೆ ಇಟ್ಟಿರತಕ್ಕ ಕೆಲಸ ಬೇರೆ ಇಲಾಖೆಗೆ ಹೋಗಿದ್ದು ಈ ಸಮಾಜ ಕಲ್ಯಾಣ ಇಲಾಖೆಯವರಿಗೆ ಅವರ ಮೇಲೆ ತಮ್ಮದೇ ಆದ ಯಾವುದೇ ವಿಧವಾದ ಇನ್ಸ್‌ಪೆಕ್ಷನ್ ಆಗಲೀ, ಸೂಪರ್‌ವಿಷನ್ ಆಗಲೀ ಅಥವಾ ಆಕ್ಷನ್ ತೆಗೆದುಕೊಳ್ಳತಕ್ಕ ಒತ್ತಡ ಇಲ್ಲದೇ ಇರುವುದರಿಂದ ಈ ಯೋಜನೆಗಳು ಅವರ ಕೈ ಮುಟ್ಟದ ಪರಿಸ್ಥಿತಿ ಉಂಟಾಗಿದೆ. ಜಿಲ್ಲಾ ಪರಿಷತ್ತು ವ್ಯವಸ್ಥೆ ಬಂದಮೇಲೆ ನಮ್ಮ ಸಮಾಜ ಕಲ್ಯಾಣ ಮಂತ್ರಿಗಳೂ ಕೂಡಾ ಏನು ನಿಮ್ಮ ಇಲಾಖೆಯಲ್ಲಿ ಹಣ ಖರ್ಚು ಮಾಡಲಾಗುತ್ತಿದೆ ಅದು ಸಮರ್ಪಕವಾಗಿ ಹರಿಜನ-ಗಿರಿಜನರಿಗಾಗಿ ಖರ್ಚು ಆಗುತ್ತಿದೆಯೋ ಅಥವಾ ಆಗುತ್ತಿಲ್ಲವೇ ಎಂದು ಕೇಳತಕ್ಕ ಅಧಿಕಾರ ಕೂಡ ಇಲ್ಲದ ಹಾಗೆ ಕಾಣುತ್ತಿದೆ. ಏಕೆಂದರೆ ಜಿಲ್ಲಾಪರಿಷತ್ತು ಆಕ್ಟ್ ಪ್ರಕಾರ ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಮಂತ್ರಿಗಳ ಸ್ಟೇಟಸ್ ಕೊಟ್ಟಿರುವುದರಿಂದ ಇನ್ನೊಬ್ಬ ಮಂತ್ರಿ ಅದನ್ನು ರಿವ್ಯೂ ಮಾಡುವುದಕ್ಕಾಗುವುದಿಲ್ಲ. ಬರೀ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳು ರಿವ್ಯೂ ಮಾಡಿಕೊಂಡು ಹೋಗುತ್ತಾರೆ. ಹೀಗಾಗಿ ಈ ಯೋಜನೆಯಲ್ಲಿ ಕೊಟ್ಟಿರತಕ್ಕ ಹಣಕಾಸು ಸಂಪೂರ್ಣವಾಗಿ ಖರ್ಚು ಆಗದೇ ನಮ್ಮ ಶೋಷಣೆ ಆಗಿರತಕ್ಕದ್ದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈಗ ಅವರೇ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನಾವು ಗಮನಿಸಿದರೆ ನಮ್ಮ ಐ. ಎ. ಎಸ್, ಐ. ಪಿ. ಎಸ್ ಅಥವಾ ಕಾಲೇಜು ಮಟ್ಟದಲ್ಲಿ ಓದತಕ್ಕ, ತರಬೇತಿ ಕೊಟ್ಟಿರತಕ್ಕ ೧೯೯೧-೯೨ನೇ ಸಾಲಿಗೆ ಕೊಟ್ಟಿರತಕ್ಕ ಹಣ ಎಷ್ಟು ಎಂದರೆ, ೪೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಖರ್ಚುಮಾಡಿರತಕ್ಕದ್ದು ಕೇವಲ ೧೩.೩೭ ಲಕ್ಷ ರೂಪಾಯಿಗಳು. ಇದನ್ನೇ ನೋಡಿದರೆ ಎಷ್ಟು ಚೆನ್ನಾಗಿ ತರಬೇತಿ ಕೊಟ್ಟಿದ್ದಾರೆ ಎಂಬುದು ತಮಗೆ ಗೊತ್ತಾಗುತ್ತದೆ. ಮತ್ತೆ ೧೯೯೧-೯೨ಕ್ಕೆ ಇದರಲ್ಲಿ ೪೦ ಲಕ್ಷರೂಪಾಯಿಗಳನ್ನು ಮಂಜೂರು ಆಗಿದ್ದು ಖರ್ಚು ಆಗಿರತಕ್ಕದ್ದು ಕೇವಲ ೧೫ ಲಕ್ಷ ರೂಪಾಯಿಗಳು ಮಾತ್ರ. ಅದೇ ರೀತಿ ನಮಗೆ ಒಂದು ಪುಸ್ತಕ ಭಂಡಾರ ಕೊಡುತ್ತೇವೆ ಎಂದು ಹೇಳಿ, ಹರಿಜನ ಗಿರಿಜನ ಮಕ್ಕಳಿಗೆ ಪುಸ್ತಕ ತೆಗೆದುಕೊಳ್ಳುವುದಕ್ಕೆ ಶಕ್ತಿ ಇರುವುದಿಲ್ಲವಾದ್ದರಿಂದ,

ವಿಜ್ಞಾನದ ಬಗ್ಗೆ ಓದುವ ವಿಷಯಗಳನ್ನು ಓದುವ ಮಕ್ಕಳು, ಮೆಡಿಕಲ್ ಓದುವ, ಇಂಜಿನಿಯರಿಂಗ್ ಓದುವ ವಿದ್ಯಾರ್ಥಿಗಳು ಬೆಲೆ ಬಾಳುವ ಪುಸ್ತಕಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿ ೧೯೯೧-೯೨ನೇ ಸಾಲಿನಲ್ಲಿ ೮.೯೨ ಲಕ್ಷ ರೂಪಾಯಿಗಳನ್ನು ಪುಸ್ತಕಗಳನ್ನು ತೆಗೆದುಕೊಳ್ಳುವುದಕ್ಕೆ ಇಟ್ಟಿದ್ದರೆ ಅದರಲ್ಲಿ ಖರ್ಚು ಆಗಿರುವುದು ಕೇವಲ ೩.೯೩ ಲಕ್ಷ ರೂಪಾಯಿಗಳು ಮಾತ್ರ. ಈ ಇಲಾಖೆಯ ಸ್ಥಿತಿಯನ್ನು ತಾವು ಗಮನಿಸಬೇಕೆಂದು ಹೇಳುತ್ತೇನೆ. ಇನ್ನು ಶೈಕ್ಷಣಿಕ ಪ್ರವಾಸಕ್ಕೆ ಹರಿಜನ ಗಿರಿಜನ ಮಕ್ಕಳು ಹೋಗಲಿ ಎಂದು ಹೇಳಿ, ಕಾಲೇಜು ವಿದ್ಯಾರ್ಥಿಗಳಾಗಲ್ಲಿ ಅಥವಾ ಪ್ರೌಢ ಶಾಲಾ ವಿದ್ಯಾರ್ಥಿಗಳಾಗಲೀ ಅಥವಾ ಮೆಡಿಕಲ್ ಸ್ಟೂಡೆಂಟ್ಸ್‌ಗಳಿಗಾಗಲೀ, ಎಂಜಿನಿಯಿರಿಂಗ್ ಸ್ಟೂಡೆಂಟ್ಸ್ ಆಗಲೀ ಹೊರರಾಜ್ಯಗಳಿಗೆ ಹೊಗಿ ನೋಡಿ ತಮ್ಮ ಪ್ರತಿಭೆಯನ್ನು ಇನ್ನೂ ಹೆಚ್ಚು ಮಾಡಿಕೊಳ್ಳಲಿ, ಆಯಾಯ ರಾಜ್ಯಗಳಲ್ಲಿ ಇರತಕ್ಕ ವಿಚಾರವನ್ನು ತಿಳಿದುಕೊಳ್ಳಲಿ ಎನ್ನುವುದಕ್ಕೆ ಏನು ೩ ಲಕ್ಷ ೫೨ ಸಾವಿರ ರೂಪಾಯಿ ಕೊಟ್ಟಿದ್ದರು, ಅದರಲ್ಲಿ ಇವರು ಖರ್ಚು ಮಾಡಿರುವುದು ಕೇವಲ ೯೩ ಸಾವಿರ ರೂಪಾಯಿಗಳು ಮಾತ್ರ. ಎಂದರೆ ನಮ್ಮ ಮಕ್ಕಳನ್ನು ಎಷ್ಟು ಶೈಕ್ಷಣಿಕ ಪ್ರವಾಸಕ್ಕೆ ಕಳುಹಿಸಿದ್ದೀರಿ ಎಂಬುದು ಇದರಿಂದಲೇ ತಿಳಿಯುತ್ತದೆ. ಇದನ್ನೆಲ್ಲಾ ಕೇಳುವವರು ಯಾರು? ತಾವೇ ಇದನ್ನೆಲ್ಲಾ ಗಮನಿಸಬೇಕು. ಇದೂ ಅಲ್ಲದೇ ನಮ್ಮ ಮಕ್ಕಳು ಟೈಪಿಂಗ್ ಕಲಿಯಬೇಕು, ಆ ಮೂಲಕ ಹುದ್ದೆಗಳನ್ನು ಸಂಪಾದಿಸಬೇಕು ಹಾಗೂ ಅವರಲ್ಲಿ ಜಾಬ್ ಟೈಪಿಂಗ್‌ಗೆ ಉತ್ತೇಜನ ಕೊಡಬೇಕೆಂದು ಹೇಳಿ ಒಂದು ನೀತಿ ಮಾಡಿ. ಶ್ರೀಮಾನ್ ಬಂಗಾರಪ್ಪನವರ ನೇತ್ರತ್ವದಲ್ಲಿ ಇರುವ ಸರ್ಕಾರ ಈ ಬಾಬಿಗೆ ೧೯೯೧-೯೨ನೇ ಸಾಲಿನಲ್ಲಿ ಸುಮಾರು ೭ ಲಕ್ಷದ ೧೧ ಸಾವಿರ ರೂಪಾಯಿಗಳನ್ನು ಇಟ್ಟಿತ್ತು ಆದರೆ ಇವರು ಖರ್ಚು ಮಾಡಿರುವುದು ಕೇವಲ ೩ ಲಕ್ಷದ ೯೦ ಸಾವಿರ ರೂಪಾಯಿಗಳು. ಇವೆಲ್ಲಾ ವಿವರಗಳು ಇವರೇ ಕೊಟ್ಟಿರತಕ್ಕ ವಾರ್ಷಿಕ ವರದಿಯಲ್ಲಿದೆ. ಇದನ್ನು ನಾನೇನು ಅತಿಶಯೋಕ್ತಿಯಾಗಿ ಬರೆದುಕೊಂಡು ಬಂದಿರುವುದಾಗಲೀ ಅಲ್ಲ. ಇವರು ಕೊಟ್ಟಿರತಕ್ಕ ವಾರ್ಷಿಕ ವರದಿಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಅದೇ ರೀತಿಯಲ್ಲಿ ಫೋರ್‌ಮ್ಯಾನ್ ಟ್ರೈನಿಂಗ್ ಕೊಡಬೇಕೆಂದು ಇದೆ. ಫೋರ್‌ಮ್ಯಾನ್ ಕಡೆಯ ಪಕ್ಷ ೨೫ ಜನರಿಗೆ ಟ್ರೈನಿಂಗ್ ಕೊಡಬೇಕೆಂದು ಇದೆ. ಡಿಪ್ಲಮೋ ಆದವರಿಗೆ ಇಂಜಿನಿಯರಿಂಗ್ ಆದವರಿಗೆ ಯಾರಿಗಾದರೂ ಟ್ರೈನಿಂಗ್ ಕೊಟ್ಟು ಉದ್ಯೋಗಕ್ಕೆ ಫ್ಯಾಕ್ಟರಿಗಳಿಗೆ ಕಳುಹಿಸುವುದಕ್ಕೆ ಅವಕಾಶವಿದೆ. ಅನೇಕ ಫೋರ್‌ಮ್ಯಾನ್ ಹುದ್ದೆಗಳು ಫ್ಯಾಕ್ಟರಿಗಳಲ್ಲಿ ಖಾಲಿಯಿವೆ. ಇವತ್ತು ಇವರು ವರ್ಷದಲ್ಲಿ ಎಷ್ಟು ಜನರಿಗೆ ಫೋರ್‌ಮ್ಯಾನ್ ಟ್ರೈನಿಂಗ್ ಕೊಟ್ಟು ಕಳುಹಿಸಿದ್ದಾರೆ? ೨೫ ಜನರಿಗೆ ಟ್ರೈನಿಂಗ್ ಕೊಡಬೇಕೆಂದಿದ್ದರೂ ಕೊಟ್ಟಿಲ್ಲ. ಇವರೇ ಕೊಟ್ಟಿರತಕ್ಕ ಫಿಗರ್ಸ್‌ನಿಂದ ನಾನು ಇದನ್ನು ಹೇಳತಕ್ಕದ್ದು. ಅದೇ ರೀತಿಯಲ್ಲಿ ಮಹಿಳೆಯರಿಗೆ ಟೈಲರಿಂಗ್‌ನಲ್ಲಿ ತರಬೇತಿ ಕೊಟ್ಟು ಅವರಿಗೆ ಮೆಷಿನ್‌ಗಳನ್ನು ಕೊಡಬೇಕೆಂದು ಇದೆ. ಇದು ರಾಜ್ಯದ ೩೫ ತಾಲ್ಲೂಕುಗಳಲ್ಲಿ ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಸುಮಾರು ೧೭೫ ತಾಲ್ಲೂಕುಗಳಿವೆ. ಕನಿಷ್ಠ ಪಕ್ಷ ಒಂದೊಂದು ತಾಲ್ಲೂಕಿಗೆ ಒಂದೊಂದು ಟೈಲರಿಂಗ್ ಸೆಂಟರ್ಸ್‌ಗಳನ್ನು ಕೊಟ್ಟು, ಮಹಿಳೆಯರಿಗೆ ತರಬೇತಿಯನ್ನು ಕೊಟ್ಟು ಅವರ ಆರ್ಥಿಕಾಭಿವೃದ್ಧಿ ಹೆಚ್ಚಾಗುವಂತೆ ಮಾಡಬೇಕೆಂದು ೮೦ಲಕ್ಷ ರೂಪಾಯಿಗಳನ್ನು ಇಟ್ಟಿರೆ ಇವರು ಖರ್ಚು ಮಾಡುವುದು ೫೮ ಲಕ್ಷ ರೂಪಾಯಿ ಮಾತ್ರ. ಹಾಗೆಯೇ ಮುಂದಕ್ಕೆ ಹೋದರೆ ವಕೀಲಿ ವೃತ್ತಿ ಮಾಡಲಿಕ್ಕೆ ಅವರು ಪ್ರಾಕ್ಟೀಸ್ ಮಾಡುವುದಕ್ಕೋಸ್ಕರ, ಅವರು ಪ್ರಾಕ್ಟೀಸ್ ಮಾಡುವ ರೂಪದಲ್ಲಿ ಅವರ ಅಭಿವೃದ್ಧಿಯಾಗಲಿ ಮತ್ತು ಸಮಾಜದ ಎಲ್ಲರ ಜೊತೆಯಲ್ಲಿ ಬೆರೆತು ವಕೀಲರಾದರೆ ಅನುಕೂಲವಾಗುತ್ತದೆ, ಮತ್ತು ಅವರು ಜಾಣರಾಗಲಿಯೆಂದು ಕೇಸಸ್‌ಗಳು

ಬರುವವರೆಗೆ ಅವರಿಗೆ ಟ್ರೈನಿಂಗ್ ಆಗಲಿಯೆಂದು ಅಲ್ಲಿಯವರೆಗೆ ಅವರಿಗೆ ಉತ್ತೇಜನ ಕೊಡಲಿಕ್ಕೆ ೧೦ ಲಕ್ಷ ರೂಪಾಯಿಗಳನ್ನು ಇಟ್ಟರೆ ಇವರು ಖರ್ಚು ಮಾಡಿರುವುದು ಕೇವಲ ೪೮ ಸಾವಿರ ರೂಪಾಯಿಗಳು. ಇದು ವಿಪರ್ಯಾಸ ಪರಿಸ್ಥಿತಿಯಾಗುತ್ತದೆ ಇದನ್ನು ತಾವು ಗಮನಿಸಿ. ಸ್ವಯಂ ಉದ್ಯೋಗ ಮಾಡಲಿಕ್ಕೆ ಆಟೋರಿಕ್ಷಾ ಟ್ರೈನಿಂಗ್ ಕೊಡುವ ಸಲುವಾಗಿ ೫ ಲಕ್ಷದ ೮೯ ಸಾವಿರ ರೂಪಾಯಿಗಳನ್ನು ಇಡಲಾಗಿತ್ತು. ಆಟೋರಿಕ್ಷಾ, ಕಾರು, ಲಾರಿ, ಜೀಪು ಇವುಗಳನ್ನು ಓಡಿಸುವ ತರಬೇತಿಯನ್ನು ಕೊಟ್ಟರೆ ಅವರಿಗೆ ಸ್ವಂತ ಉದ್ಯೋಗ ಮಾಡಿಕೊಳ್ಳಲು ಅನುಕೂಲವಾಗುವಂತೆ ಟ್ರೈನಿಂಗ್ ಕೊಡಲು ಇವರು ಖರ್ಚು ಮಾಡಿರುವುದು ಕೇವಲ ೨ ಲಕ್ಷದ ೨೧ ಸಾವಿರ ರೂಪಾಯಿಗಳು ಮಾತ್ರ. ಈ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ, ಈ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳವರ ಕೆಲಸ ಮಾಡಲಿಕ್ಕೆ ಈ ಇಲಾಖೆ ಇದೆಯೇ ಎನ್ನತಕ್ಕದ್ದು ಈ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಅಸ್ಪೃಶ್ಯತಾ ನಿವಾರಣೆಗಾಗಿ ಅಂತರಜಾತಿ ವಿವಾಹವಾದರೆ ಅವರಿಗೆ ಧನಸಹಾಯ ಮಾಡುತ್ತಾರೆ. ಮನೆ ಸುಟ್ಟು ಹೋದರೆ ಕೊಡಲು ೯೦೦ ರೂಪಾಯಿ ಇಟ್ಟಿದ್ದಾರೆ. ೯೦೦ ಕೊಟ್ಟರೆ ಅವನು ಪುನಃ ಮನೆ ಕಟ್ಟಿಕೊಳ್ಳಲಿಕ್ಕೆ ಆಗುತ್ತದೆಯೆ? ಇದನ್ನು ತಾವೇ ಗಮನಿಸಿ. ೯೦೦ ರೂಪಾಯಿಗಳನ್ನು ಕೊಟ್ಟರೆ ಏನು ಮಾಡುವುದಕ್ಕೆ ಆಗುತ್ತದೆ? ಇದನ್ನು ತಾವು ಏತಕ್ಕೆ ಜಾಸ್ತಿ ಮಾಡಬಾರದು? ಅದಕ್ಕಾಗಿ ನೀವು ೧೯೯೧-೯೨ನೇ ಸಾಲಿನಲ್ಲಿ ೭೪ ಲಕ್ಷದ ೬೪ ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಅದರಲ್ಲಿ ನೀವು ಖರ್ಚು ಮಾಡಿರುವುದು ಕೇವಲ ೧೦ ಲಕ್ಷದ ೧ ಸಾವಿರ ರೂಪಾಯಿಗಳನ್ನು ಮಾತ್ರ. ಅದೇ ರೀತಿಯಲ್ಲಿ ಹರಿಜನ-ಗಿರಿಜನರ ಮನೆಗಳಿಗೆ ವಿದ್ಯುದ್ದೀಕರಣ ಮಾಡಬೇಕೆಂದು ಇದೆ. ದೀಪವಿಲ್ಲದ ಮನೆಗಳಿಗೆ ದೀಪದ ಸೌಕರ್ಯ ಒದಗಿಸಿಕೊಡಬೇಕೆಂದು ಇದೆ. ಮೊನ್ನೆ ನಮ್ಮ ನಾಯಕರು ಇದರ ಬಗ್ಗೆ ಒಂದು ಅನೌನ್ಸ್ ಮಾಡಿದ್ದಾರೆ. ಮೊದಲು ೧೫ ಮನೆಗಳಿಗೆ ಕೊಡುತ್ತಿದ್ದರು ಇದನ್ನು ೩೦ ರವರೆಗೆ ಏರಿಸಿದ್ದಾರೆ. ಇವರ ಖಾತೆಯಿಂದ ಕೊಡುವಂತಹ ದುಡ್ಡು. ಒಂದು ಮನೆಗೆ ೫೦೦ ರೂಪಾಯಿಗಳಂತೆ ಕೊಡುವುದಕ್ಕೆ ೧೯೯೧-೯೨ರಲ್ಲಿ ಇಟ್ಟಿರುವ ಹಣ ೭ ಲಕ್ಷದ ೮೨ ಸಾವಿರ ರೂಪಾಯಿ. ಆದರೆ ಇವರು ಖರ್ಚು ಮಾಡಿರುವುದು ೨ ಲಕ್ಷ ೫೭ ಸಾವಿರ ರೂಪಾಯಿಗಳು ಮಾತ್ರ. ಈ ಇಲಾಖೆ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದೆ ಎನ್ನುವುದನ್ನು ತಾವೇ ಗಮನಿಸಬೇಕಾಗಿದೆ. ಈ ರೀತಿಯಾಗಿ ಹೇಳುತ್ತಾ ಹೋದರೆ ಈ ಇಲಾಖೆಯಲ್ಲಿ ಯಾರಾದರೂ ಹೇಳುವವರು ಕೇಳುವವರು ಇದ್ದಾರೆಯೇ? ಈ ಇಲಾಖೆಗೆ ತಂದೆ ತಾಯಿ ಆಗಲೀ, ಹೇಳುವವರು ಕೇಳುವವರು ಆಗಲೀ ಯಾರೂ ಇಲ್ಲ. ಈ ಇಲಾಖೆಯಲ್ಲಿ ಹಣವನ್ನು ಸಮರ್ಪಕವಾಗಿ ಖರ್ಚು ಮಾಡುವುದಕ್ಕೆ ಏತಕ್ಕೆ ಸಾಧ್ಯವಾಗಲಿಲ್ಲವೆಂಬುದನ್ನು ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ತಿಳಿಸಬೇಕು. ಈ ಸದನದಲ್ಲಿ ಹಿಂದೆ ಮಾತನಾಡಿದ ಸದಸ್ಯರು ಈ ಇಲಾಖೆಯನ್ನು ಹರಿಜನ-ಗಿರಿಜನರಿಗೆ ಏತಕ್ಕೆ ವಹಿಸಬೇಕು ಬೇರೆ ಜನರನ್ನು ಈ ಇಲಾಖೆಯ ಮಂತ್ರಿಗಳನ್ನು ಏತಕ್ಕೆ ಮಾಡಬಾರದೆಂದು ಕೇಳಿದರು. ಅದರ ಜೊತೆಗೆ ಈ ಖಾತೆಯನ್ನು ಮುಖ್ಯ ಮಂತ್ರಿಗಳೇ ವಹಿಸಿಕೊಂಡಿದ್ದರೆ ಚೆನ್ನಾಗಿತ್ತು ಎನ್ನುವ ಪ್ರಶ್ನೆಯನ್ನು ನೊಂದು ಹೇಳಿದರು. ನೊಂದ ಮನಸ್ಸಿನಿಂದ ಏತಕ್ಕೆ ಹೇಳಿದರು ಅಂದರೆ, ಹರಿಜನ-ಗಿರಿಜನರಿಗೆ ಈ ಖಾತೆಯನ್ನು ಕೊಟ್ಟರೆ ಅವರು ಬಹಳ ಕಷ್ಟಗಳನ್ನು ಅನುಭವಿಸಿರುತ್ತಾರೆ ಅವರು ಸಮರ್ಪಕವಾಗಿ ಈ ಕೆಲಸಗಳನ್ನು ಮಾಡುತ್ತಾರೆನ್ನುವ ಅರ್ಥದಲ್ಲಿ ಹೇಳಿದರು. ಹರಿಜನ-ಗಿರಿಜನರಿಗೆ ಈ ಖಾತೆಯನ್ನು ಕೊಟ್ಟರೆ ಅದನ್ನು ಸದುಪಯೋಗ ಪಡಿಸಿಕೊಳ್ಳದೆ ಹಾಳು ಮಾಡುತ್ತಾ ಹೋದರೆ ಈ ಜನ ನಿಮ್ಮನ್ನು ಕ್ಷಮಿಸುವುದಿಲ್ಲ. ಇವತ್ತು ಮಂತ್ರಿ

ಆಗಿರಬಹುದು ನಾಳೆ ಹೋಗಬಹುದು. ನಾವು ನಮ್ಮ ಸಮಾಜಕ್ಕಾಗಿ ಇಟ್ಟಿರತಕ್ಕಂಥ ಹಣವನ್ನು ಸಮರ್ಪಕವಾಗಿ ಖರ್ಚು ಮಾಡದೆ, ಆ ಜನರನ್ನು ಅಭಿವೃದ್ಧಿಗೊಳಿಸದೆ ಹೋದರೆ ನಮ್ಮನ್ನು ನಮ್ಮ ಮುಂದಿನ ಪೀಳಿಗೆ ಶಪಿಸದೇ ಬಿಡುವುದಿಲ್ಲ, ಹಾಗೂ ಈ ಪೀಳಿಗೆ ಸಹಿತ ಶಪಿಸತಕ್ಕಂಥ ಕಾಲ ಬಹಳ ದೂರ ಇಲ್ಲ. ಏಕೆಂದರೆ ನಮ್ಮ ಹಿರಿಯರು ಈಗಾಗಲೇ ಈ ಕೆಲಸ ಮಾಡಿ, ಈ ಸದನದಲ್ಲಿ ಅನೇಕ ವಿಚಾರಗಳನ್ನು ಬಿಟ್ಟು ಹೋಗಿದ್ದಾರೆ. ನನಗೆ ನೆನಪಿರುವ ಹಾಗೆ ಹಿಂದೆ ಶ್ರೀ ಎನ್. ರಾಚಯ್ಯನವರು ಅಂತ ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಆಗಿದ್ದರು. ಒಂದು ಸ್ಮಶಾನದಲ್ಲಿ ಹರಿಜನರ ಒಂದು ಹೆಣವನ್ನು ತಡೆದಾಗ ಅವರು ಡಿ. ಸಿ.ಯವರನ್ನು ಕರೆದು ನೀವು ಈ ಜಾಗವನ್ನು ಹರಿಹನರಿಗೆ ಬಿಡಬೇಕು ಎಂದು ಹೇಳಿದಾಗ ಅವರು 'ಇಲ್ಲಾ ಸ್ವಾಮಿ ಇದು ನಿಮ್ಮ ಖಾತೆಗೆ ಬರುವುದಿಲ್ಲ ರೆವಿನ್ಯೂ ಖಾತೆಗೆ ಬರುತ್ತದೆ ಎಂದು ಹೇಳಿದರು. ಆಗ ಅವರು 'ನಾನು ಸೋಷಿಯಲ್‌ವೆಲ್‌ಫೇರ್ ಮಿನಿಸ್ಟರ್ ಇದ್ದೇನೆ. ಹರಿಜನರ ಶೋಷಣೆಯಾದಾಗ ಎಲ್ಲಾ ಇಲಾಖೆಗಳ ಮೇಲೂ ನನಗೆ ಅಧಿಕಾರ ಇದೆ. ಯಾವಾಗ ಹರಿಜನರನ್ನು ಉಳಿಸಬೇಕು ಅಂತ ಆದಾಗ ನನಗೆ ಎಲ್ಲಾ ಇಲಾಖೆಗಳ ಮೇಲೆ ಆರ್ಡರ್ ಮಾಡುವುದಕ್ಕೆ ಅಧಿಕಾರ ಇದೆ. ಅದಕ್ಕಾಗಿ ನಾನು ಆರ್ಡರ್ ಮಾಡುತ್ತಿದ್ದೇನೆ. ಇದನ್ನು ಅವರಿಗೆ ಸ್ಮಶಾನಕ್ಕಾಗಿ ಕೊಟ್ಟುಬಿಡಬೇಕು' ಎಂದು ಅಲ್ಲೇ ಸ್ಪಾಟ್‌ನಲ್ಲೇ ಆರ್ಡರ್ ಮಾಡಿ ಸ್ಮಶಾನಕ್ಕಾಗಿ ಬಿಟ್ಟಿಕೊಟ್ಟ ನಿದರ್ಶನ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಹರಿಜನರ ಪರಿಸ್ಥಿತಿ ನೋಡಿ, ಅವರ ದೇವರುಗಳು ರಸ್ತೆ ಮೇಲಿವೆ. ಆ ಕಡೆ ಒಂದು ಚಪ್ಪಡಿ ಕಲ್ಲು ಈ ಕಡೆ ಒಂದು ಚಪ್ಪಡಿಕಲ್ಲು ಮತ್ತು ಮೇಲೆ ಒಂದು ಚಪ್ಪಡಿ ಕಲ್ಲು ಇಟ್ಟು ಪೂಜೆ ಮಾಡುತ್ತಾರೆ. ಅವರಿಗೆ ಏನಾದರೂ ಮಾರ್ಗದರ್ಶನ ಮಾಡಬೇಕೆಂದು ಆರಾಧನಾ ಎನ್ನುವ ಹೆಸರಿನಲ್ಲಿ ಒಂದು ಯೋಜನೆಯನ್ನು ಈ ದೇವಸ್ಥಾನಗಳ ಸಲುವಾಗಿ ಮಾಡಿಲ್ಲವೇ? ಅದಕ್ಕಾಗಿ ಈಗ ಎರಡು-ಎರಡು ಲಕ್ಷ ರೂಪಾಯಿಗಳನ್ನು ಒಂದೊಂದು ತಾಲ್ಲೂಕಿಗೆ ಬಿಡುಗಡೆ ಮಾಡಿಲ್ಲವೇ? ನಿಮಗೆ ಏನಾದರೂ ಅಧಿಕಾರದ ಕೊರತೆ ಇದ್ದರೆ, ನೀವು ಮುಖ್ಯ ಮಂತ್ರಿಗಳಿಗೆ ಹೇಳಿ, ನನಗೆ ಈ ಅಧಿಕಾರದ ಕೊರತೆ ಇದೆ, ಇದನ್ನು ಕೊಡಿ ಎಂದು ಕೇಳಿದರೆ ಅವರು ಏತಕ್ಕೆ ಕೊಡುವುದಿಲ್ಲ? ಮಾನ್ಯ ಗ್ರಹಮಂತ್ರಿಗಳು ಅವರಿಗೆ ಅಧಿಕಾರ ಕಡಿಮೆ ಆಗಿದ್ದರಿಂದ, ಪೋಲಿಸ್ ಸ್ಟೇಷನ್, ಅಧಿಕಾರಿಗಳನ್ನು ಹೆಚ್ಚು ಮಾಡುವುದಕ್ಕೆ, ಪೋಲೀಸರನ್ನು ಅಪಾಯಿಂಟ್ ಮಾಡುವುದಕ್ಕೆ ಅಧಿಕಾರವನ್ನು ತೆಗೆದುಕೊಂಡರು. ಮಾನ್ಯ ಬಸವಲಿಂಗಪ್ಪನವರದ್ದು ಯಾವ ಲೆಕ್ಕಾಚಾರವೂ ಇಲ್ಲದೇ ಇದ್ದ ಖಾತೆ. ಒಂದು ಪರಿಸರ ಖಾತೆ ಇದೆ ಎನ್ನುವುದನ್ನು ಇಡೀ ದೇಶಕ್ಕೇ ಅವರು ತೋರಿಸಿಕೊಟ್ಟರು. ಇದೇ ರೀತಿ ನಮ್ಮ ಮಲ್ಲಾರಿಗೌಡ ಪಾಟೀಲರು ಮಂತ್ರಿಯಾಗಿ ಬರುತ್ತಿದ್ದ ಹಾಗೆ ಈ ಖಾತೆಯನ್ನು ಎರಡು ಮಾಡಿಬಿಟ್ಟರು. ಪಿ. ಡಬ್ಲ್ಯೂಡಿ. ಬೇರೆಯಾಯಿತು, ನೀರಾವರಿ ಬೇರೆಯಾಯಿತು. ನಾನು ಶಾಶ್ವತವಾದ ಕೆಲಸ ಮಾಡಬೇಕು ಅಂತ ಅವರು ಮಾಡಿದರು. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಇವತ್ತು ನಾನು ಒಂದು ಪ್ರಶ್ನೆ ಹಾಕಿದ್ದೆ, ಏನೆಂದರೆ, ವಿವಿಧ ಇಲಾಖೆಗಳಲ್ಲಿ ಹರಿಜನ ಗಿರಿಜನರ ನೇಮಕಾತಿಯಲ್ಲಿ ರೋಸ್ಟರ್ ಸಿಸ್ಟಮ್ ಅಂದರೆ ಮೀಸಲಾತಿ ನೀತಿಯಲ್ಲಿ ಏನಾದರೂ ಅನ್ಯಾಯ ಆಗಿದ್ದರೆ ಇದನ್ನು ಯಾರು ಪರಿಶೀಲಿಸುತ್ತೀರಿ ಎಂದರೆ ಆಯಾಯ ಇಲಾಖೆಯವರು ಪರಿಶೀಲಿಸುತ್ತಾರೆ ಎಂದು ಹೇಳಿದರು. ನೀವೇ ಹೇಳಿ. ಆಯಾಯ ಇಲಾಖೆಯವರು ಪರಿಶೀಲಿಸುವುದಾದರೆ ಅಪ್ಪ ಮಗನನ್ನು ಕೇಳುವ ಅವಶ್ಯಕತೆ ಇಲ್ಲದಮೇಲೆ, ಮಗ ಎಲ್ಲೆಲ್ಲಿಗೆ ಹೋಗಿ ಏನು ಮಾಡಿಕೊಂಡು ಬಂದರೂ ಸಹಿತ ಏನನ್ನೂ ಕೇಳತಕ್ಕಂಥ ಅಧಿಕಾರ ಅಪನಿಗೆ ಇಲ್ಲದೇ ಹೋದರೆ ಏನು ಮಾಡಬೇಕು? ಬೇರೆ ಇಲಾಖೆಯವರು

ಸರಿಯಾಗಿ ಕೊಟ್ಟಿರೋ, ಇಲ್ಲವೋ ಎಂದು ಕೇಳುವುದಕ್ಕೆ ಅವಕಾಶ ಇಲ್ಲದ್ದಿದ್ದರೆ ನೀವೇ ಸಮಾಜ ಕಲ್ಯಾಣ ಇಲಾಖೆ ಎಂದು ಹೆಸರು ಏಕೆ ಇಟ್ಟುಕೊಳ್ಳುತ್ತೀರಿ? ಹರಿಜನ-ಗಿರಿಜನರ ರಕ್ಷಣೆ ಮಾಡುತ್ತೇವೆ, ಅವರಿಗಾಗಿ ದುಡ್ಡನ್ನು ಖರ್ಚು ಮಾಡುವುದಕ್ಕೆ ಒಂದು ಇಲಾಖೆಯನ್ನು ಕೊಟ್ಟಿದ್ದೇವೆ, ಮಂತ್ರಿಗಳನ್ನು ಕೊಟ್ಟಿದ್ದೇವೆ ಎಂದರೆ ಏಕೆ ಎಂದು ನಾನು ಕೇಳುತ್ತೇನೆ. ಈ ಮಂತ್ರಿಗಳೇ ಬೇಡ. ಹರಿಜನ-ಗಿರಿಜನರಿಗೆ ಕೊಡುತ್ತಿಲ್ಲ ಎನ್ನುವ ಪ್ರಕಾರವಾದರೂ ಆದರೆ ನಾಳೆ ಹೊರಗಡೆ ಆಗುತ್ತಿರುವ ಶೋಷಣೆಯನ್ನು ತಪ್ಪಿಸಿಕೊಳ್ಳುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ. ನಮಗೆ ಬಹಳ ಸಂತೋಷ. ಏಕೆಂದರೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಇರತಕ್ಕಂಥ ಕೈಗಾರಿಕೆಗಳು, ಸರ್ಕಾರದ ಅಧೀನದಲ್ಲಿರತಕ್ಕಂಥ ವಿದ್ಯಾ ಸಂಸ್ಥೆಗಳು, ಮತ್ತು ಖಾಸಗಿಯಾಗಿ ಅಧೀನದಲ್ಲಿರತಕ್ಕಂಥ ವಿದ್ಯಾಸಂಸ್ಥೆಗಳು, ಲೋಕಲ್ ಬಾಡೀಸ್, ಹಾಗೂ ಸಹಕಾರ ಸಂಘಗಳ ವತಿಯಿಂದ ಇರತಕ್ಕಂಥ ಸಂಸ್ಥೆಗಳಲ್ಲಿ ಇಲ್ಲಲ್ಲಾ ಹರಿಜನ-ಗಿರಿಜನರಿಗೆ ರೋಸ್ಟರ್ ಸಿಸ್ಟಮ್ ಪ್ರಕಾರ ನೌಕರಿಗಳನ್ನು ಇಡಬೇಕೆಂದು ಹೇಳಿದ್ದಾರೆ ಆದರೆ ಈ ನೌಕರಿಗಳನ್ನು ಸಮರ್ಪಕವಾಗಿ ಕೊಟ್ಟಿದ್ದಾರೆಯೇ, ಇಲ್ಲವೇ ಎಂದು ತಿಳಿದುಕೊಳ್ಳುವುದಕ್ಕಾಗಿ ಎಲ್ಲಿ ಹೋಗಿ ನೋಡಬೇಕೆಂದರೆ, ಡಿ. ಪಿ ಎ. ಆರ್. ಸೆಕ್ಷನ್‌ನವರಿಂದ ತಿಳಿದುಕೊಳ್ಳಬೇಕು ಎಂದು ಹೇಳುತ್ತಾರೆ. ಡಿ. ಪಿ ಎ. ಆರ್‌ನವರು ಇದನ್ನು ನೋಡಿಕೊಳ್ಳುತ್ತಾರೆ ಎಂದರೆ ಸಮಾಜ ಕಲ್ಯಾಣ ಇಲಾಖೆ ಏಕೆ ಬೇಕು? ಇಷ್ಟು ಪರ್ಸೆಂಟ್ ನಮಗೆ ಸಿಕ್ಕಿದೆಯೇ ಎಂದು ನೋಡುವವರು ಯಾರು? ನಾವು ಎಸ್. ಸಿ - ಎಸ್. ಟಿ. ಕಮಿಟಿಯವರು ಕೇಳಿದರೆ ಇಲಾಖೆಯವರು ಹೇಳುತ್ತಾರೆ ನಮ್ಮ ಹತ್ತಿರ ಅಂಕಿಅಂಶಗಳು ಸಿಗುವುದಿಲ್ಲ, ಡಿ. ಪಿ. ಎ. ಆರ್ ಸೆಕ್ಷನ್‌ನವರು ಇದನ್ನೆಲ್ಲಾ ಮಾಡುತ್ತಾರೆ ಎನ್ನುವುದಾದರೆ, ನಾವು ಡಿ. ಪಿ. ಎ. ಆರ್. ಸೆಕ್ಷನ್‌ನವರನ್ನು ಯಾವಾಗ ಕಾಣುವುದು? ಹಾಗಿದ್ದ ಮೇಲೆ ಸಮಾಜ ಕಲ್ಯಾಣ ಇಲಾಖೆಯನ್ನು ಬಿಟ್ಟುಬಿಟ್ಟು ಹರಿಜನ-ಗಿರಿಜನರ ಯೋಗಕ್ಷೇಮ ಎಲ್ಲಾ ಡಿ. ಪಿ. ಎ. ಆರ್. ಡಿಪಾರ್ಟ್‌ಮೆಂಟ್‌ನವರಿಗೆ ಕೊಟ್ಟುಬಿಟ್ಟರೆ ಅನುಕೂಲವಾಗುತ್ತದೆಯೋ ಏನೋ ಗೊತ್ತಿಲ್ಲ. ಇರತಕ್ಕಂಥ ನೌಕರಿ ವರ್ಗದವರು ಹರಿಜನ-ಗಿರಿಜನರ ಹೆಸರು ಹೇಳಿಕೊಂಡು ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಆದಾದರೂ ನಿಲ್ಲಿಸಿ. ಇದರಿಂದ ನಮಗೆ ಅಪಕೀರ್ತಿ ಕಡಿಮೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಈಗಲಾದರೂ ಸಹಿತ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಶಿವಣ್ಣನವರನ್ನು ಕರೆಸಿಕೊಂಡು ಅವರಿಗೆ ಅಧಿಕಾರ ಏನಾದರೂ ಕಡಿಮೆಯಾಗಿದೆಯೋ ಅದನ್ನೆಲ್ಲಾ ಕೇಳಿ, ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಒಂದು ಪಕ್ಷ ಅವರಿಗೇ ಅಧಿಕಾರ ಇದ್ದರೆ, ಎಲ್ಲಾ ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ, ಆದಷ್ಟೂ ಯಾವುದೂ ಲ್ಯಾಪ್ಸ್ ಆಗದಹಾಗೆ ನೋಡಿಕೊಳ್ಳಬೇಕೆಂದು ಒತ್ತಾಯಿಸುತ್ತೇನೆ, ಏಕೆಂದರೆ, ಈಗಾಗಲೇ ನಿಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ, ಈಗ ೧೦೭ ಕೋಟಿ ರೂಪಾಯಿಗಳನ್ನು ಕಳೆದ ವರ್ಷಕ್ಕಿಂತ ಡಬಲ್ ಆಗಿ ಈ ಹರಿಜನ-ಗಿರಿಜನರ ಅಭಿವೃದ್ಧಿಗೆ ಕೊಟ್ಟಿದ್ದೀರಿ. ನೀವು ಕೊಡುತ್ತಾ ಹೋಗುವುದು, ಅದು ಪ್ರತಿ ವರ್ಷ ಲ್ಯಾಪ್ಸ್ ಆಗುತ್ತಾ ಹೋಗುವುದು, ಹರಿಜನ-ಗಿರಿಜನರಿಗೆ ಏನೂ ಸಿಗದೇ ಕನ್ನಡಿಯ ಗಂಟಾಗಿ ಉಳಿದುಕೊಳ್ಳದೆ ಅದು ಅವರ ಕೈಗೆ ಸಿಗತಕ್ಕ ಯೋಜನೆ ಆಗಬೇಕು ಹಾಗೂ ನೌಕರಿಯೂ ಅಷ್ಟೆ; ಅವರಿಗೆ ಮೀಸಲಾದ ನೌಕರಿ ಅವರಿಗೇ ಸಿಗಬೇಕು ಮತ್ತು ಏನೇನು ಬ್ಯಾಕ್‌ಲಾಗ್ ಇದೆ, ಅದನ್ನು ೧೯೮೮ರಿಂದೀಚೆಗಾದರೂ ಕೊಡಬೇಕೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ, ಅದನ್ನು ಪಟ್ಟಿಮಾಡಿ, ರಿವ್ಯೂ ಮಾಡುವುದಕ್ಕೆ ತಾವು ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇದಲ್ಲದೆ ಜಿಲ್ಲಾ ಪರಿಷತ್ತಿನಲ್ಲಿ ಸಹ ಅನೇಕ ಯೋಜನೆಗಳಿವೆ. ವಿಶೇಷ ಘಟಕ ಯೋಜನೆ ಇರಬಹುದು, ಹರಿಜನರ ಅಭಿವೃದ್ಧಿ ಇರಬಹುದು, ಗಿರಿಜನರ ಅಭಿವೃದ್ಧಿ ಇರಬಹುದು. ಇವೆಲ್ಲಾ ಯೋಜನೆಗಳಿಗೆ ಸಾಕಷ್ಟು ಹಣ ಈಗಾಗಲೇ ೫ ವರ್ಷಗಳ ಕಾಲ ಖರ್ಚಾಗಿ ಹೋಗಿದೆ. ಇದನ್ನೇ ನಿಮ್ಮ ಇಲಾಖೆಯವರು ಯಾವುದಾದರೂ ಒಂದು ಜಿಲ್ಲೆಯು ಸಮರ್ಪಕವಾಗಿ ಹರಿಜನ-ಗಿರಿಜನರಿಗಾಗಿ ಖರ್ಚು ಆಗಿದೆಯೇ ಎಂದು ಪರಿಶೀಲನೆ ಮಾಡಿದ್ದಾರಾ? ಪರಿಶೀಲನೆ ಮಾಡಿದ್ದರೆ, ಯಾವ ಯಾವ ಜಿಲ್ಲೆಗಳಿಗೆ ಹರಿಜನ-ಗಿರಿಜನರ ಹಣವನ್ನು ಸಮರ್ಪಕವಾಗಿ ಖರ್ಚುಮಾಡಿಲ್ಲ ಎನ್ನತಕ್ಕಂಥಾದ್ದರ ಬಗ್ಗೆ ನೋಟೀಸನ್ನು ಯಾವುದಾದರೂ ಜಿಲ್ಲಾ ಅಧಿಕಾರಿಗಳಿಗೆ ಕೊಟ್ಟಿದ್ದಾರಾ, ಅಲ್ಲಿನ ಚೀಫ್ ಸೆಕ್ರೆಟರಿಗಳಿಗೆ ಕೊಟ್ಟಿದ್ದಾರಾ, ಅಥವಾ ಯಾವುದಾದರೂ ಅಧಿಕಾರಿಗಳು ಇದನ್ನು ಮಿಸ್‌ಯೂಸ್ ಮಾಡಿ, ಹರಿಜನ-ಗಿರಿಜನರ ಕಾಲೋನಿಗೆ ಖರ್ಚು ಮಾಡಬೇಕಾದ ದುಡ್ಡನ್ನು ಸವರ್ಣೀಯರ ಕಾಲೋನಿಗೆ ಖರ್ಚು ಮಾಡಿರತಕ್ಕಂತಾದ್ದು ಮತ್ತು ಟಾರ್ ರೋಡ್, ಹರಿಜನವಾಡಗಳಲ್ಲಿ ಮಾಡಬೇಕಾದರೆ, ಹರಿಜನ ಕೇರಿಯಿಂದ ಟಾರ್ ರೋಡ್ ಕಮೆನ್ಸ್ ಆಗಬೇಕೆಂದಿದ್ದರೆ, ಸವರ್ಣೀಯರ ಕೇರಿಯಿಂದ ಕಮೆನ್ಸ್ ಆಗಿ ಹರಿಜನ ಕೇರಿಗೆ ಎಂಡ್ ಆಗುತ್ತದೆ. ಇದನ್ನು ಏನಾದರೂ ಪರಿಶೀಲನೆ ಮಾಡಿದ್ದೀರಾ? ಇದನ್ನು ಪರಿಶೀಲನೆ ಮಾಡಿದ್ದಕ್ಕೆ ನಿಮ್ಮ ಹತ್ತಿರ ಏನಾದರೂ ದಾಖಲೆಗಳಿವೆಯೇ ಅನ್ನತಕ್ಕಂತಾದ್ದನ್ನು ತಾವು ಈ ಸಮಯದಲ್ಲಿ ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಾಗೂ ತಾವು ಮಂತ್ರಿಗಳಿದ್ದೀರಿ, ಹರಿಜನರಿಗಾಗಿ ಮೀಸಲಿಟ್ಟ ಯಾವ ಯಾವ ಇಲಾಖೆಯಲ್ಲಿ, ಎಷ್ಟೆಷ್ಟು ಹಣವನ್ನು ಮೀಸಲಿಟ್ಟಿತ್ತು ಎನ್ನುವುದನ್ನು, ತಾವು ಎಷ್ಟು ಕಡೆ ಪರಿಶೀಲಿಸಿದ್ದೀರಿ. ಎಷ್ಟು ಕಡೆಗಳಲ್ಲಿ ಮೀಟಿಂಗ್ ಮಾಡಿದ್ದೀರಿ? ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಕಾಲದಲ್ಲಿ ರಿವ್ಯೂ ಮಾಡಿದ್ದೀರಿ, ನಿಮ್ಮ ಅಧಿಕಾರಿಗಳು ಯಾವ ಯಾವ ಇಲಾಖೆಯನ್ನು ರಿವ್ಯೂ ಮಾಡಿದ್ದಾರೆ, ಎಂಬುದನ್ನು ತಾವು ತಿಳಿಸಬೇಕು. ಏಕೆಂದರೆ ನಾವು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ ಕಾರ್ಯದರ್ಶಿಯವರನ್ನು ಕೇಳಿದಾಗ, ನಮಗೆ ಯಾವ ಇಲಾಖೆಗಳನ್ನು ಪರಿಶೀಲನೆ ಮಾಡುವ ಅಧಿಕಾರ ಇಲ್ಲ ಎಂದು ಹೇಳಿದರು. ಅಧಿಕಾರ ಇಲ್ಲ ಎಂದರೆ, ಅಧಿಕಾರ ಬೇಕು ಎಂದು ಕೇಳುವುದಕ್ಕೆ ಏನಾದರೂ ಮಾಹಿತಿ ಇಟ್ಟಿದ್ದೀರಾ ಎಂದು ಕೇಳಿದ್ದಕ್ಕೆ ಅದೂ ಸಹಿತ ಇಟ್ಟಿಲ್ಲವೆಂದು ಹೇಳಿದರು. ಹಾಗಿದ್ದ ಮೇಲೆ ನೀವು ರಿವ್ಯೂ ಮಾಡುವುದೂ ಇಲ್ಲ, ಅಧಿಕಾರಿಗಳನ್ನೂ ಕೇಳುವುದಿಲ್ಲ, ಹಾಗಿದ್ದ ಮೇಲೆ ನಮ್ಮ ಗತಿ ಏನಾಗಬೇಕು. ಅದನ್ನು ತಾವು ಪರಿಶೀಲನೆ ಮಾಡಬೇಕು. ಈ ರೀತಿಯಾಗಿ ಅಭಿವೃದ್ಧಿ ಮಾಡುವುದಕ್ಕೆ ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಂಡು, ಈ ಇಲಾಖೆಗೆ ಇಟ್ಟಿರತಕ್ಕ ದುಡ್ಡನ್ನು ಪರಿಪೂರ್ಣವಾಗಿ ಖರ್ಚು ಮಾಡುವುದಕ್ಕೆ ತಾವು ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಹಾಸ್ಟೆಲುಗಳ ಕಟ್ಟಡ, ಹರಿಜನ-ಗಿರಿಜನರ ಹಾಸ್ಟೆಲ್‌ಗಳ ಕಟ್ಟಡಕ್ಕಾಗಿ ೧೯೯೧-೯೨ನೇ ಸಾಲಿನಲ್ಲಿ ಬಾಲಕರ ವಿದ್ಯಾರ್ಥಿನಿಲಯಗಳಿಗೆ, ನೀವು ಹೇಳಿದ ಪ್ರಕಾರ, ೩೦೦ ಲಕ್ಷಗಳು, ಬಾಲಕಿಯರ ಹಾಸ್ಟಲುಗಳಿಗೆ ೧೩೮ ಲಕ್ಷಗಳು, ಹಾಗೂ ಜವಾಹರ್ ರೋಜಗಾರ್ ಯೋಜನೆಗೆ ೬ ಲಕ್ಷದ ೫೦ ಸಾವಿರ ರೂಪಾಯಿಗಳು ಮತ್ತು ದುರಸ್ತಿಗೆ ೫ ಲಕ್ಷದ ೭ ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ಅದರಲ್ಲಿ ಎಷ್ಟು ಖರ್ಚು ಮಾಡಿದ್ದೀರೆಂದು ನೋಡಿದರೆ, ೫೧ ಲಕ್ಷದ ೩೭ ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ, ಏತಕ್ಕೆ ನೀವು ಹೊಸ ಕಟ್ಟಡಗಳನ್ನು ಕಟ್ಟಲಿಲ್ಲ, ಈಗ ಕಟ್ಟಿರುವ ಅನೇಕ ಕಟ್ಟಡಗಳ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಮಾತನಾಡುತ್ತಾ ಅಲ್ಲಿ

ಕುಡಿಯುವುದಕ್ಕೆ ನೀರಿಲ್ಲ, ವಾಸ ಇರುವುದಕ್ಕೆ ಕೆಲವು ಕಟ್ಟಡಗಳಿಗೆ ಹೋದರೆ, ಅಲ್ಲಿ ಮನುಷ್ಯರು ಇರುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದನ್ನು ರಿಪೇರಿ ಮಾಡುವುದಕ್ಕೆ ಏಕೆ ಆಗಲಿಲ್ಲ, ಸಫಿಷಿಯೆಂಟ್ ಹಣ ಕೊಟ್ಟರೂ ಕೂಡ ನಿಮಗೆ ಖರ್ಚು ಮಾಡಲು ಏಕೆ ಸಾಧ್ಯವಾಗಲಿಲ್ಲ? ಏಕೆ ಆ ಸವಲತ್ತನ್ನು ಆ ಬಡ ಮಕ್ಕಳಿಗೆ ಕೊಡಲಿಲ್ಲ ಎನ್ನುವುದನ್ನು ನಾವು ಪರಿಶೀಲನೆ ಮಾಡಬೇಕು.

ಉಪಾಧ್ಯಕ್ಷಣಿಯವರು:- ಸಾಕಷ್ಟು ಜನ ಮಾತನಾಡಿದ್ದಾರೆ, ಇನ್ನೂ ೧೫ ಜನ ಮಾತನಾಡುವವರು ಇದ್ದಾರೆ...

ಶ್ರೀ ಕರಿಯಣ್ಣ:- ಸಮಾಜ ಕಲ್ಯಾಣ ಇಲಾಖೆ ವಿಚಾರದಲ್ಲಿ ಮಾತನಾಡಲು ನಮಗೆ ಬಿಟ್ಟು ಇನ್ಯಾರಿಗೆ ಅವಕಾಶ ಕೊಡುತ್ತೀರಿ? ನಾವು ಹೇಳುವುದು ಬೇಡವೇ? ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡಿರುವುದು ಮೂರೇ ಜನ. ಮೋಟಮ್ಮನವರು, ಇನ್ನೊಬ್ಬರು ಮತ್ತು ನಾನು ಮೂರೇ ಜನ. ಒಬ್ಬರು ಮಾತನಾಡಿದರೆ ಸಾಕೇ? ಹಾಗಾದರೆ ನಾವು ಸುಮ್ಮನಾಗಿಬಿಡುತ್ತೇವೆ. ಈಗ ಏನಾಗುತ್ತೆ ಎಂದರೆ, ನಾವು ನೊಂದುಕೊಂಡು ಹೇಳುತ್ತಿದ್ದೇವೆ. ಪ್ರತಿ ವರ್ಷವೂ ಕೊಡುತ್ತೇವೆ, ಕೊಡುತ್ತೇವೆ ಎಂದು ನೀವು ಹೇಳುತ್ತೀರಿ. ಎಂ. ಎಲ್. ಎ. ಆಗಬೇಕಾದರೆ, ಹೋದಕಡೆ ಭಾಷಣ ಮಾಡುತ್ತೇವೆ. ಈಗ ಮತ್ತೆ ನಾವು ಏಕೆ ಹೇಳಿಕೊಳ್ಳಬೇಕು. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳೂ ಕುಳಿತಿದ್ದಾರೆ, ಅವರಿಗೂ ಸ್ವಲ್ಪ ಈ ಇಲಾಖೆಯಲ್ಲಿ ಏನೇನು ಲೋಪದೋಷಗಳಾಗಿದೆ ಎನ್ನುವುದು ಗೊತ್ತಾಗಲಿ. ನಾವು ಯಾರಿಗೆ ಹೇಳಬೇಕು ಹೇಳಿ. ಪ್ರತಿಸಾರಿ ಹರಿಜನ-ಗಿರಿಜನರು ನಮಗೆ ಕಣ್ಣುಮುಚ್ಚಿಕೊಂಡು ವೋಟನ್ನು ಗುದ್ದುತ್ತಾ ಇಲ್ಲವೇ? ನಾವು ಗೆದ್ದು ಬರುತ್ತಾ ಇಲ್ಲವೇ? ನೀವು ಹೇಳುತ್ತಾ ಇದ್ದಿರಿ ಏನೆಂದರೆ ಜಿಲ್ಲಾಪರಿಷತ್ತಿನಲ್ಲಿ, ಹರಿಜನ-ಗಿರಿಜನ ಕೇರಿಯೊಳಗೆ ಆಸ್ಪತ್ರೆ ಕಟ್ಟಬೇಕು, ಅವರಿಗೆ ಆ ಆಸ್ಪತ್ರೆ ಔಷಧಿ ಕೊಡಬೇಕು, ಈ ಆಸ್ಪತ್ರೆಗಳಿಗೆಂದು ದಾದಿಯರನ್ನು ಅಪಾಯಿಂಟ್ ಮಾಡಿಕೊಂಡು ಬೇರೆ ಆಸ್ಪತ್ರೆಗಳಿಗೆ ಹಾಕಿ, ಸಂಬಳ ಕೊಟ್ಟುಕೊಂಡು ಹರಿಜನರ ದುಡ್ಡನ್ನು ಮಿಸ್‌ಯೂಸ್ ಮಾಡುತ್ತಿದ್ದೇವೆ. ಇದನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೆ ಒಂದು ಹೈಪವರ್ ಕಮಿಟಿ ಎಂದು ಮಾಡಿದ್ದಾರೆ. ಈ ಹೈಪವರ್ ಕಮಿಟಿಯವರು ಹರಿಜನ-ಗಿರಿಜನರಿಗೆ ಎಷ್ಟು ವ್ಯತ್ಯಾಸ ಆಯಿತು, ಎಷ್ಟು ನೌಕರಿ ಕೊಟ್ಟಿರುತ್ತಾರೆ, ಎಷ್ಟು ಕೊಡಲಿಲ್ಲ, ಇನ್ನು ಎಷ್ಟು ಕೊಡಬೇಕು ಇದನ್ನು ನೋಡಬೇಕು. ಈ ಸಮಿತಿಯವರು ಎರಡು ವರ್ಷಗಳಲ್ಲಿ ಒಂದು ಸಾರಿನೋ, ಎರಡು ಸಾರಿನೋ ಸಭೆ ಸೇರಿರಬಹುದು. ಎಷ್ಟು ಸಾರಿ ಎಂದು ಗೊತ್ತಾಗಲಿಲ್ಲ. ಹೀಗಾದರೆ ನಾವು ಏನು ಮಾಡೋಣ. ಅದಕ್ಕೆ ನಮ್ಮ ಮುಖ್ಯ ಮಂತ್ರಿಗಳು ಇಲ್ಲಿ ಭರವಸೆ ಕೊಟ್ಟಿದ್ದಾರೆ. ನಾವು ಇವರನ್ನೂ ಕೇಳಿಕೊಳ್ಳುತ್ತೇವೆ, ಎಜುಕೇಷನ್ ಮಿನಿಸ್ಟರ್‌ರವರು ೧೩ ಸಾವಿರ ಜನರನ್ನು ಹೊಸದಾಗಿ ಉಪಾಧ್ಯಾಯರ ಹುದ್ದೆಗೆ ತೆಗೆದುಕೊಳ್ಳುವುದಾಗಿ ಹೇಳುತ್ತಿದ್ದಾರೆ. ಹಿಂದೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಎಜುಕೇಷನ್ ಮಿನಿಸ್ಟರ್ ಆಗಿದ್ದಾಗ ಈ ತರಹ ಬ್ಯಾಕ್‌ಲಾಗ್ ಇದ್ದುದನ್ನು ಶೇಕಡ ೫೦ ಮತ್ತು ಶೇಕಡ ೧೮, ಹೀಗೆ ಒಟ್ಟು ೬೮ ಪರ್‌ಸೆಂಟ್ ಕೊಟ್ಟು ತುಂಬತಕ್ಕಂಥ ವ್ಯವಸ್ಥೆ ಮಾಡಿದ್ದರು. ಅದನ್ನೂ ಸಹಿತ ಮಾನ್ಯ ವೀರಪ್ಪ ಮೊಯಿಲಿಯವರು ಗಮನದಲ್ಲಿಟ್ಟುಕೊಂಡು ಹರಿಜನ-ಗಿರಿಜನರನ್ನು ತುಂಬಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಮಾನ್ಯ ಶಿವಣ್ಣನವರೂ ಅವರ ಜೊತೆ ಕುಳಿತು ಮಾತನಾಡಿ ನಮಗೆ ಆಗಿರತಕ್ಕಂಥ ಅನ್ಯಾಯವನ್ನು ಹೋಗಲಾಡಿಸಲು ಕ್ರಮಕ್ಕೆಗೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈಗ ಇನ್ನೂ ಬಹಳ ಬ್ಯಾಕ್‌ಲಾಗ್ ಇದೆ.

ಪ್ರಾಥಮಿಕ ಶಾಲೆ ಫಿಗರ್ ಕೇಳಿದ್ದೇನೆ, ಪ್ರೌಢಶಾಲೆ ಫಿಗರ್ ಕೇಳಿದ್ದೇನೆ. ಕೊಶ್ಚನ್ ಕೇಳಿದ್ದೇನೆ, ಇನ್ನೂ ವಿವರ ಕೊಟ್ಟಿಲ್ಲ. ಎಸ್. ಸಿ, ಎಸ್. ಟಿ, ಕಮಿಟಿಯಲ್ಲಿ ಕೇಳಿದ್ದೇನೆ. ಇನ್ನೂ ವಿವರ ಕೊಟ್ಟಿಲ್ಲ. ಪ್ರಾಥಮಿಕ ಶಾಲೆ, ಪ್ರೌಢಶಾಲೆಯಲ್ಲಿ ನಂಬರ್ ಆಫ್ ಅಪಾಯಿಂಟ್‌ಮೆಂಟ್ಸ್, ರೋಸ್ಟರ್ ಪದ್ಧತಿ ಈ ವಿವರಗಳನ್ನೂ ಸಹ ಕೊಟ್ಟಿಲ್ಲ. ನೀವು ಕೊಟ್ಟಿರತಕ್ಕಂಥ ಫಿಗರ್ ಪ್ರಕಾರವೇ ಕಾಲೇಜಿನಲ್ಲಿ ಕೇವಲ ೫ ಪರ್‌ಸೆಂಟ್ ಅಥವಾ ೬ ಪರ್‌ಸೆಂಟ್ ಅಪಾಯಿಂಟ್‌ಮೆಂಟ್ ಎಸ್. ಸಿ. ಎಸ್. ಟಿ. ಗೆ ಮಾಡಿಕೊಂಡಿರುತ್ತೀರಿ. ಅದನ್ನೂ ತಾವು ನಮ್ಮ ಸಮಾಜ ಕಲ್ಯಾಣ ಮಂತ್ರಿಗಳ ಜೊತೆ ಸೇರಿಕೊಂಡು ನಮಗೆ ರೋಸ್ಟರ್ ಸಿಸ್ಟಮ್‌ನಲ್ಲಿ ಲ್ಯಾಪ್ಸ್ ಆಗಿದ್ದನ್ನು ತುಂಬಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ವಿಶ್ವ ಕಾರ್ಯಕ್ರಮದಲ್ಲಿ ಟೌನ್‌ನಲ್ಲಿ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ತಯಾರು ಮಾಡತಕ್ಕಂಥ ಕುಶಲಕರ್ಮಿಗಳು ಹಾಗೂ ಕಸೂತಿ ಕೆಲಸ ಮಾಡುವವರಿಗೆ ಮಾತ್ರ ತಾವು ಆದ್ಯತೆ ಕೊಟ್ಟು ಮಾಡುವುದಕ್ಕಿಂತ ಗ್ರಾಮಾಂತರ ಪ್ರದೇಶದಲ್ಲಿ ಏನು ಬಡವರು, ಹರಿಜನ ಗಿರಿಜನರು, ಕೊರಮರು ಇದ್ದಾರೆ, ಇವರ ಪೈಕಿ ಚಾಪೆ ಹೆಣೆಯತಕ್ಕವರು, ಈಚಲು ಚಾಪೆ, ಕಡ್ಡಿ ಚಾಪೆ ಹೆಣೆಯತಕ್ಕಂಥವರು ಇದ್ದಾರೆ, ಮರದ ಕೆಲಸದಲ್ಲಿ ಅನೇಕ ವಿಗ್ರಹಗಳನ್ನು ಮಾಡತಕ್ಕಂಥ ಜನರು ಗ್ರಾಮಾಂತರ ಪ್ರದೇಶದಲ್ಲಿ ಏನು ಇದ್ದಾರೆ, ಅಂತಹವರಿಗೂ ಹೆಚ್ಚು ಆದ್ಯತೆ ಕೊಟ್ಟು ಷೆಡ್‌ಗಳನ್ನು ಹಾಕಿಸಿ, ಉದ್ಯೋಗಗಳನ್ನು ಸೃಷ್ಟಿ ಮಾಡಿ, ಟ್ರೈನಿಂಗ್ ಕೊಟ್ಟು ಅಲ್ಲಿ ವಿಶ್ವ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತನ್ನು ಕೊಡುವ ಮೂಲಕ, ಯಾರಿಗೆ ನೌಕರಿ ಇಲ್ಲವೊ ಅವರಿಗೆ ನೌಕರಿ ಸೃಷ್ಟಿ ಮಾಡಿಕೊಡುವುದಕ್ಕೆ ಹಾಗೂ ಹೆಚ್ಚಾಗಿ ಗ್ರಾಮಾಂತರ ಪ್ರದೇಶಕ್ಕೆ ಒತ್ತನ್ನು ಕೊಡಬೇಕು. ಹರಿಜನ ಗಿರಿಜನರಿಗೆ ಟ್ರೈನಿಂಗ್ ಕೊಟ್ಟು ಅವರನ್ನೂ ಸಹಿತ ವಿಶ್ವ ಕಾರ್ಯಕ್ರಮಕ್ಕೆ ಅಳವಡಿಸಬೇಕೆಂದು ಸಣ್ಣ ಕೈಗಾರಿಕಾ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಾ, ಅವರ ವ್ಯಾಪ್ತಿಗೆ ಬರತಕ್ಕಂಥ ಸಣ್ಣ ಕೈಗಾರಿಕೆಗಳಲ್ಲಿ ಹರಿಜನ ಗಿರಿಜನರಿಗೆ ರೋಸ್ಟರ್ ಸಿಸ್ಟಂನಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಅದನ್ನು ತುಂಬಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ಮಾನ್ಯ ಬಸವಲಿಂಗಪ್ಪನವರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಬಗ್ಗೆ ಹೇಳುವುದಾದರೆ ಇವರಿಗೆ ಯಾವ ಖಾತೆಯನ್ನು ಕೊಟ್ಟರೂ ಅದರಲ್ಲಿ ಸ್ವಲ್ಪ ಸೃಷ್ಟಿ ಮಾಡಿಬಿಡುತ್ತಾರೆ. ಹಿಂದೆ ರೂರಲ್ ಡೆವಲಪ್‌ಮೆಂಟ್ ಖಾತೆ ಕೊಟ್ಟಾಗ ಅಲ್ಲಿ ಹರಿಜನ ಗಿರಿಜನರಿಗೆ ಸರಿಯಾಗಿ ಪ್ರಾತಿನಿಧ್ಯ ಸಿಗಲಿಲ್ಲ ಎಂದು ದೊಡ್ಡ ಗಲಾಟೆ ಎಲ್ಲಾ ಆಯಿತು. ಅದು ಪತ್ರಿಕೆಯಲ್ಲಿ ಬಂತು. ಆಗ ಅದು ದೊಡ್ಡ ಸುದ್ದಿ ಆಗಿ ಹೋಯಿತು. ಇದು ಬಹಳ ಗಹನವಾದ ವಿಚಾರ. ನಮ್ಮ ಭದ್ರಾ ನದಿ ಕೊಳಚೆ ನೀರು ತುಂಬಿ ನಾರುತ್ತಿದೆ. ಭದ್ರಾ ನದಿಯ ಆ ಕಡೆ ಈ ಕಡೆ ಹೋಗತಕ್ಕಂಥವರು ಮೂಗು ಮುಚ್ಚಿಕೊಂಡು ಹೋಗಬೇಕಾಗಿದೆ. ದನಕರುಗಳು ನೀರು ಕುಡಿಯುವುದಿಲ್ಲ. ಇರುವ ಪ್ರಾಣಿಗಳು ಸತ್ತು ಹೋಗುತ್ತಿವೆ. ಹೊನ್ನಾಳಿ ಹತ್ತಿರ ನಮ್ಮ ಮೀನುಗಾರಿಕಾ ಮಂತ್ರಿಗಳು ಹೋಗಿ ನೋಡಿಕೊಂಡು ಬಂದಿದ್ದಾರೆ. ಅಲ್ಲಿ ಮೀನುಗಳು ಸತ್ತು ಹೋಗಿವೆ. ಎಂ. ಪಿ. ಎಂ ಮತ್ತು ವಿ. ಎಸ್. ಐ. ಎಲ್. ನವರು ನೇರವಾಗಿ ನದಿಗೆ ಕೊಳಕು ನೀರನ್ನು ಸೇರಿಸಿಬಿಟ್ಟು ಈ ರೀತಿ ಮಾಡಿರುತ್ತಾರೆ. ಈಗ ಅವರಿಗೆ ನೋಟೀಸ್ ಕೊಟ್ಟಿರುತ್ತೇವೆಂದು ಹೇಳಿದ್ದಾರೆ. ಅದೂ ಅಲ್ಲದೆ ವೆಹಿಕಲ್ಸ್ ಬಗ್ಗೆ ಹೇಳುವುದಾದರೆ, ಸರಕಾರಿ ಬಸ್‌ಗಳೇ ಜಾಸ್ತಿ ಕಚಡಾ ಹೊಗೆ ಉಗುಳುತ್ತವೆಯೋ ಏನೋ; ಅನೇಕ ಲಾರಿಗಳು ಹೊಗೆ ಉಗುಳುವಂತಹದನ್ನು ನೋಡಿದರೆ ಮನುಷ್ಯರು ಮೂಗು ಮುಚ್ಚಿಕೊಂಡು ಹೋದರೂ ಸಹ ಅದು ಬಟ್ಟೆಯ ಒಳಗೆ ಬರುತ್ತವೆ. ಈ ಲಾರಿ ಮಾಲೀಕರಿಗೆ ನೋಟೀಸ್ ಕೊಟ್ಟು ಸರಿಪಡಿಸಬೇಕೆಂದು

ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ನಗರಸಭೆ ಮತ್ತು ಪುರಸಭೆಗಳು ಅನೇಕ ಕಡೆ ಚರಂಡಿ ನೀರನ್ನು, ಕಕ್ಕಸ್ಸು, ಉಚ್ಚೆ, ಉಗಳು ಕೊಚ್ಚಿಕೊಂಡು ಹೋಗತಕ್ಕಂಥ ನೀರನ್ನು ತೆಗೆದುಕೊಂಡು ಹೋಗಿ ನದಿಗೆ ಸೇರಿಸುತ್ತಿದ್ದಾರೆ. ಈ ರೀತಿ ಹೋಗದ ಹಾಗೆ ಏನಾದರೂ ವ್ಯವಸ್ಥೆ ಮಾಡಬೇಕು. ನೀವು ಪರಿಸರ ಖಾತೆಗೆ ಬಂದಮೇಲೆ ಇದನ್ನೂ ಒಂದು ಹೊಸ ಜೀವಂತ ಖಾತೆ ಮಾಡಿ ಯಾರಾದರೂ ಈ ಖಾತೆ ವಹಿಸಿಕೊಳ್ಳಬಹುದೆಂಬ ಪರಿಸ್ಥಿತಿಗೆ ತಾವು ತಂದಿದ್ದೀರಿ. ಇಷ್ಟು ಹೇಳಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ಕಮಲಾಪುರ):- ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಸಭೆಯ ಮುಂದೆ ಇಟ್ಟಂತಹ ಎಲ್ಲಾ ಬೇಡಿಕೆಗಳನ್ನು ನಾನು ಸಮರ್ಥಿಸುತ್ತಾ ಸಮಾಜ ಕಲ್ಯಾಣ ಇಲಾಖೆ ಮೇಲೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ೧೯೭೫ರಲ್ಲಿ ಸುಮಾರು ೭೧.೭೦ ಲಕ್ಷ ರೂಪಾಯಿಗಳನ್ನು ಈ ಒಂದು ಪರಿಶಿಷ್ಟ ಜನಾಂಗಕ್ಕೆ ಮೀಸಲಾಗಿಟ್ಟಂತಹ ಸನ್ನಿವೇಶಗಳು ಇವೆ. ಏಕೆಂದರೆ ಈ ರಾಜ್ಯದಲ್ಲಿ ಜಾತಿ ಜನಾಂಗಕ್ಕೆ ಅನುಕೂಲ ಆಗಲಿ ಅವರು ಬೇರೆ ಜನಾಂಗದವರ ಜೊತೆಯಲ್ಲಿ ಒಂದೇ ರೀತಿ ಬಾಳಲಿ ಎನ್ನತಕ್ಕಂಥ ಭಾವನೆ ಇಟ್ಟುಕೊಂಡು ಸಮಾಜ ಕಲ್ಯಾಣ ಇಲಾಖೆಯನ್ನು ಸೃಷ್ಟಿ ಮಾಡಿದರೆಂದು ನಾನು ಹೇಳಬೇಕಾಗುತ್ತದೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಬರತಕ್ಕಂಥ ಅನೇಕ ಜನಾಂಗಗಳ ಏಳಿಗೆಗಾಗಿ ಈ ಡಿಪಾರ್ಟ್‌ಮೆಂಟ್ ಕೆಲಸ ಮಾಡುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನಾಂಗ ಹಿಂದುಳಿದ ವರ್ಗದವರು, ಮಹಿಳೆಯರು, ಅಂಗವಿಕಲರು ಇತ್ಯಾದಿ ಜನಗಳ ಪರಿಸ್ಥಿತಿ ಏನು, ಸಮಾಜದಲ್ಲಿ ನೊಂದಂತಹ ಜನಗಳ ರಕ್ಷಣೆ ಮಾಡಬೇಕು ಅಥವಾ ಅವರಿಗೆ ಸೇವೆ ಸಲ್ಲಿಸಬೇಕೆಂಬ ದೃಷ್ಟಿಯನ್ನು ಇಟ್ಟುಕೊಂಡು ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ರಾಜ್ಯದಲ್ಲಿರತಕ್ಕಂಥ ಈ ಜನತೆಗೆ ಖರ್ಚು ಮಾಡುತಿದ್ದಾರೆ. ಇವತ್ತು ಈ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಂಡನೆ ಮಾಡಿರುವಂತಹ ಬೇಡಿಕೆಗಳು ನಿಜವಾಗಿಯೂ ಅತ್ಯುತ್ತಮವಾದ ಬೇಡಿಕೆಗಳು. ಇದನ್ನು ನೋಡಿದಾಗ ಈ ಯೋಜನೆಯ ಆಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವಂಗಡ ಜನಾಂಗದ ಕಲ್ಯಾಣಕ್ಕಾಗಿ ನಿಗದಿಪಡಿಸಿದಂತಹ ಮೊತ್ತವನ್ನು ಈ ಕೆಳಗಿನ ಪಟ್ಟಿಯಲ್ಲಿ ಮುದ್ರಿಸಿದ್ದಾರೆ. ೧೯೫೧ರಿಂದ ೧೯೯೦-೯೧ರವರೆಗೆ ಇದರಲ್ಲಿ ಎಷ್ಟು ಖರ್ಚು ಮಾಡಿದ್ದಾರೆ ೮೪೯೯.೧೦ ಲಕ್ಷ ರೂಪಾಯಿಗಳು; ಆ ಮೇಲೆ ಈ ವರ್ಷ ಸುಮಾರು ೫೬೨೦.೬ ಲಕ್ಷ ರೂಪಾಯಿಗಳನ್ನು ಇಟ್ಟು, ಆದರಲ್ಲಿ ೨೬೮೪.೧ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನೂ ಖರ್ಚು ಮಾಡಬೇಕಾದಂತಹ ಹಣ ಎಷ್ಟು ಅಂದರೆ ೨೯೩೫.೮೪ ಲಕ್ಷ ರೂಪಾಯಿಗಳು. ಇದು ಮಾರ್ಚಿ ತಿಂಗಳು. ಈ ಬುಕ್‌ನಲ್ಲಿ ಬರೆದಿರುವುದನ್ನೆಲ್ಲಾ ಓದಿದರೆ, ಏನಪ್ಪ ಎಲ್ಲಾ ದುಡ್ಡು ಇವರಿಗೆ ಮೀಸಲಿಟ್ಟಂತೆ ಕಾಣುತ್ತದೆ ಅಂತ ಅನಿಸುತ್ತದೆ. ಇದನ್ನು ಓದಿದ ಮೇಲೆ ಏನು ಕರ್ನಾಟಕ ಸರ್ಕಾರ ಸಂಪೂರ್ಣವಾಗಿ ದುಡ್ಡನ್ನೆಲ್ಲಾ ಇದೇ ಜನಾಂಗಕ್ಕೆ ಕೊಡಲಿಕ್ಕೆ ಹತ್ತಿದ್ದಾರೆ ಎನ್ನತಕ್ಕಂಥ ಭಾವನೆ ಬರುತ್ತದೆ. ಇವತ್ತು ಇದನ್ನು ನಾವು ನೋಡಬೇಕಾಗುತ್ತದೆ. ಈ ಜಾತಿಯವರಿಗೆ ನಿಜವಾಗಿಯೂ ಅನುಕೂಲವಾಗುತ್ತಿದೆಯೇ? ಎಷ್ಟರ ಮಟ್ಟಿಗೆ ಅನುಕೂಲ ಆಗಿದೆ? ಅನುಕೂಲ ಆಗದೇ ಇರಲಿಕ್ಕೆ ಕಾರಣಗಳೇನು? ಇವುಗಳನ್ನು ಹುಡುಕಾಟಿ ಬಂದು ವೇಳೆ ಸರ್ಕಾರ ನಿರ್ಣಯ ತೆಗೆದುಕೊಂಡಾಗ ಮಾತ್ರ ಅನುಕೂಲ ಆಗಲಿಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಅನುಕೂಲ ಆಗಲಿಕ್ಕೆ ಸಾಧ್ಯ ಇಲ್ಲ. ಈ ಪುಸ್ತಕ ಪ್ರಿಂಟ್ ಆಗಿರುವ ಸಂಖ್ಯೆಯನ್ನು ನೋಡಿದರೆ ಮಾತ್ರ ಸಮಾಧಾನವಾಗಬಹುದೇ ವಿನಹ ನಿಜವಾಗಿಯೂ ಯಾರಿಗೆ ಈ ಸೌಲಭ್ಯಗಳು ಸಿಗಬೇಕು ಅವರಿಗೆ

ಸಿಗುತ್ತಿಲ್ಲ ಎನ್ನತಕ್ಕಂಥ ಮಾತನ್ನು ನಾನು ಒತ್ತಿ ಹೇಳಬೇಕಾಗುತ್ತದೆ. ಈಗ ನಮ್ಮ ಸ್ನೇಹಿತರು ಹೇಳಿದ ಪ್ರಕಾರ ಏನೊಂದು ವ್ಯವಸ್ಥಿತವಾದ ಒಂದು ವ್ಯವಸ್ಥೆ ಇದೆ, ಅದರ ಮೇಲ್ವಿಚಾರಣೆ ಮಾಡುವುದಕ್ಕೆ ಡೈರೆಕ್ಟರ್, ಡೆಪ್ಯುಟಿ ಡೈರೆಕ್ಟರ್, ಸೆಕ್ರೆಟರಿಗಳು ಜಿಲ್ಲಾ ಹಂತದಲ್ಲಿ ತಾಲ್ಲೂಕು ಹಂತದಲ್ಲಿ ಕೆಲಸ ಮಾಡತಕ್ಕಂಥ ಸಿಬ್ಬಂದಿ ಸಾವಿರಾರು ಸಂಖ್ಯೆಯಲ್ಲಿ ಇದ್ದಾರೆ. ಅವರ ಮೇಲೆ ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ. ಆದರೂ ಸಹಿತ ಇವತ್ತು ಹಳ್ಳಿಗಳಲ್ಲಿರತಕ್ಕಂಥ ಬಡವ ನಾವು ಅಲ್ಲಿಗೆ ಹೋದಾಗ ನಮ್ಮನ್ನು ಕೇಳುತ್ತಾನೆ, ಏನು ಸಾಹೇಬ್ರೆ, ಇಂತಹ ಎಲ್ಲಾ ಸ್ಕೀಮ್ಸ್ ಇವೆ ಅವು ನಮಗೆ ಸಿಗುತ್ತವೆಯೇ ಅಂತ ಕೇಳುತ್ತಾರೆ. ಇವತ್ತು ಪರಿಸ್ಥಿತಿ ಏನಾಗಿದೆ ಅಂದರೆ ನಾವು ಘೋಷಣೆಗಳನ್ನು ಬಜೆಟ್‌ನಲ್ಲಿ ಪ್ರಿಂಟ್ ಮಾಡಿ ಓದಿಕೊಂಡು ಸಮಾಧಾನ ಪಡತಕ್ಕಂಥಾದ್ದೇ ವಿನಹಃ ಅದು ಈ ಜನರಿಗೆ ಮುಟ್ಟಿಲ್ಲ ಎನ್ನತಕ್ಕಂಥ ಮಾತನ್ನು ಪದೇ ಪದೇ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೇ, ಇವತ್ತು ಈ ಡಿಪಾರ್ಟ್‌ಮೆಂಟ್ ಜನರು ಕಾಲಕಾಲಕ್ಕೆ ಸರಿಯಾಗಿ ಕೆಲಸ ಮಾಡಿದ್ದಾರೆಯೇ? ಇದನ್ನು ನಿಜವಾಗಿಯೂ ನಾವು ಪರಿಶೀಲನೆ ಮಾಡಿದರೆ ನಮಗೆ ಆಗ ಅದರ ಅರ್ಥ ಗೊತ್ತಾಗುತ್ತಿತ್ತು. ನಿಜವಾಗಿಯೂ ಅವರೇನಾದರೂ ಕೆಲಸ ಮಾಡಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥಾದ್ದನ್ನು ನೋಡಬೇಕು. ನಾವು ಇಲ್ಲಿ ಒಂದು ಮೀಟಿಂಗ್ ಕಂಡಕ್ಟ್‌ಮಾಡಿ ಜನರ ಯೋಜನೆಗಳ ಬಗ್ಗೆ ಕೇಳಿದಾಗ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನವರು ತಮ್ಮ ತಮ್ಮ ಡಿಪಾರ್ಟ್‌ಮೆಂಟ್‌ಗಳಿಗೆ ಸಂಬಂಧಪಟ್ಟಂತೆ ಈ ಕಾರ್ಯಕ್ರಮಗಳ ಪಟ್ಟಿ ತೆಗೆದುಕೊಂಡು ನಮಗೆ ಇಂತಿಷ್ಟು ಅಲಾಟ್ ಆಗಿದೆ ಸಾಹೇಬ್ರೆ, ಅದರಲ್ಲಿ ಇಷ್ಟು ಖರ್ಚು ಮಾಡಿದ್ದೇವೆ ಅಂತ ಹೇಳುತ್ತಾರೆ. ಒಂದು ವೇಳೆ ಈ ಸರ್ಕಾರ ಇನ್ನೂ ಹೆಚ್ಚು ಹಣ ಕೊಡಿಸಿದ್ದೇ ಆದರೆ ನಾವು ಖರ್ಚು ಮಾಡುವುದಕ್ಕಂತೂ ಹಿಂದೆ ಬೀಳುವುದಿಲ್ಲ ಅನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಅಧ್ಯಕ್ಷಣೆಯವರೇ, ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆ ಹೇಳಬೇಕಾಗುತ್ತದೆ. ನಾನು ತಾಲ್ಲೂಕು ಪಂಚಾಯಿತಿ ಛೇರ್ಮನ್ ಆಗಿ ರಿವ್ಯೂ ಮಾಡತಕ್ಕಂಥ ಸಂದರ್ಭದಲ್ಲಿ, ಆವಾಗ ಎತ್ತು, ಬಂಡಿ ಇವುಗಳನ್ನು ಐ. ಆರ್. ಡಿ. ಪಿ.ನಲ್ಲಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ನಾನು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಆಫೀಸರ್‌ರನ್ನು ಕೇಳಿದೆ, 'ಏನ್ರಿ? ಷೆಡ್ಯೂಲ್ ಕ್ಯಾಸ್ಟ್ ಜನರ ಬಗ್ಗೆ ಏನೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂದು'; ಅದಕ್ಕೆ ಅವರು, ಸಾಹೇಬ್ರೆ, ಎತ್ತು ಕೊಟ್ಟೆವು, ಆಕಳು ಕೊಟ್ಟೆವು, ಬಂಡಿ ಕೊಟ್ಟೆವು, ಎಮ್ಮೆ ಕೊಟ್ಟೆವು, ಕುರಿ ಕೊಟ್ಟೆವು, ಇಷ್ಟೆಲ್ಲಾ ಕೊಡುತ್ತಿದ್ದೇವೆಂದು ಹೇಳಿದರು. ಇನ್ನೂ ದುಡ್ಡು ಬೇಕಾ ಎಂದು ಕೇಳಿದಕ್ಕೆ, ಇನ್ನೂ ಕೊಡಿಸಿ, ನಾವು ಕೊಡುತ್ತೇವೆಂದು ಹೇಳಿದರು. ಬಹಳ ಸಂತೋಷ ಅಪ್ಪ, ನೀವು ದಯಮಾಡಿ ಪಟ್ಟಿ ಕೊಟ್ರೆ ಅನುಕೂಲವಾಗುತ್ತದ್ಕೆ, ಯಾರು ಯಾರಿಗೆ ಎಷ್ಟು ಜನಕ್ಕೆ ಕೊಟ್ರಿ ಎಂದು ನೋಡಿದರೆ ಅನುಕೂಲವಾಗುತ್ತದೆಂದು ಹೇಳಿದೆ. ನೆಕ್ಸ್ಟ್ ಮೀಟಿಂಗ್‌ನಲ್ಲಿ ಬಹುತೇಕ ಪಟ್ಟಿ ನೋಡಿ ಸಮಾಧಾನ ಪಡುತ್ತೇನೆಂದು ತಿಳಿದುಕೊಂಡು ಪಟ್ಟಿ ತಂದುಕೊಟ್ಟರು. ಎಲ್ಲೆಲ್ಲಿ ಕೊಟ್ರು ಎಂದು ಹೋಗಿ ನೋಡಿದರೆ, ಯಾರಿಗೆ ಎಮ್ಮೆ ಕೊಟ್ಟೆವು ಎಂದು ಹೇಳುತ್ತಾರೋ ಅವರ ಹತ್ತಿರ ಎಮ್ಮೆ ಇಲ್ಲ. ಯಾರಿಗೆ ಆಕಳು ಕೊಟ್ಟೆವು ಎಂದು ಹೇಳಿದರೂ, ಅವರಲ್ಲಿ ಆಕಳು ಇಲ್ಲ. ಯಾರಿಗೆ ಬಂಡಿ ಕೊಟ್ಟೆವು ಎಂದು ಹೇಳಿದರೂ ಅಲ್ಲಿ ಬಂಡಿ ಇಲ್ಲ. ಯಾರಿಗೆ ಬೀಜ ಕೊಟ್ಟೆವು ಎಂದು ಹೇಳಿದರೂ ಅಲ್ಲಿ ಬೀಜ ಇಲ್ಲ. ನಾನು ಕೇಳಿದೆ, ಏನಪ್ಪಾ ನಿಮ್ಮ ಹೆಸರು ಎಲ್ಲಾ ಇದೆ; ಕೊಟ್ಟೆವು ಎಂದು ಹೇಳುತ್ತಾರೆ. ಕಾಗದ ಪತ್ರಗಳು ಇವೆಯಲ್ಲಾ? ಖರೀದಿ ಮಾಡಿದ್ದು ದುಡ್ಡು ಕೊಟ್ಟಿದ್ದು ಇಲ್ಲಾ ಎಂದು ಹೇಳುತ್ತೀರಲ್ಲಾ? ಹೇಗೆ ಎಂದು ಕೇಳಿದರೆ; ಸಾಹೇಬ್ರೆ, ಅದರ

ವಿಷಯ ಹೇಳಬೇಕಾದರೆ ತೊಂದರೆಯಾಗುತ್ತದೆ. ಏನೂ ಇಲ್ಲ, ಇದು ಸರಳ ಇದೆ ಹೇಳುವುದಕ್ಕೆ ಎಂದರು. ಏನು ಸರಳ? ಸಬ್ಸಿಡಿ ಅನ್ನುವಂಥ ಪುಕ್ಕಟ್ಟೆ ಎರಡೆರಡು ಸಾವಿರ, ಮೂರು ಮೂರು ಸಾವಿರ ಕೊಡುತ್ತೇವೆ ನಿಮಗೆ; ನಮಗೆ ಬೇಕಾಗಿರುವುದು ಒಂದು ದಸ್‌ಕತ್. ಒಂದು ಸಿಗ್ನೇಚರ್ ಮಾಡಿದರೆ ಎರಡೆರಡು ಸಾವಿರ ಮೂರು ಮೂರು ಸಾವಿರ ದುಡ್ಡು ಕೊಡುತ್ತೇವೆ ನಿಮಗೆ, ದುಡ್ಡು ಬೇಕೊ ಮತ್ತೆ ಬೇಡವೋ ಎಂದು ಕೇಳಿದಾಗ ನಾವು ಏನು ಮಾಡೋಣ ಸಾಹೇಬ್ರೆ? ಪುಕ್ಕಟ್ಟೆ ಎರಡೆರಡು ಸಾವಿರ ಮೂರು ಮೂರು ಸಾವಿರ ನಾಲ್ಕು ನಾಲ್ಕು ಸಾವಿರ ಕೊಡುತ್ತೇವೆಂದರೆ ನಾವು ಸಿಗ್ನೇಚರ್ ಮಾಡಿಕೊಡುತ್ತೇವೆ. ಇದೆಲ್ಲಾ ಕೆಳಗಿನ ಅಧಿಕಾರಿಗಳು ಮಾಡುತ್ತಿರತಕ್ಕಂಥ ವ್ಯವಸ್ಥೆ. ಇಂಥಾ ವ್ಯವಸ್ಥೆಯಲ್ಲಿ ನಾವು ಇಂಥಹ ನೂರಾರು ಕಾರ್ಯಕ್ರಮ ಹಾಕಿಕೊಂಡು ಹೋದರೂ ನಿಜವಾಗಿ ಈ ಜನರಿಗೆ ಏನಾದರೂ ಸಹಾಯ ಮಾಡಲಿಕ್ಕೆ ಸಾಧ್ಯವಿದೆಯೇ? ಆ ಜನ ಏನಾದರೂ ಉದ್ಧಾರವಾಗಲಿಕ್ಕೆ ಸಾಧ್ಯವಿದೆಯೇ? ಇವತ್ತು ನಾವು ಇಷ್ಟು ಕೋಟಿಗಟ್ಟಲೆ ಖರ್ಚು ಮಾಡುತ್ತೇವೆ ಈ ಸಮಾಜದ ಹೆಸರಿನ ಮೇಲೆ; ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ಈ ರಾಷ್ಟ್ರದಲ್ಲಿ ಹಾಗೂ ಈ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ; ಈವತ್ತು ಇವರಿಗೆ ಏಕೆ ಬೇಕು ರಿಸರ್ವೇಷನ್ ಅನ್ನತಕ್ಕಂಥ ಮಾತು ಕೇಳಿಬರುತ್ತಿದೆ. ಒಂದು ವೇಳೆ ಇದೇ ವ್ಯವಸ್ಥೆ ಇದ್ದರೆ, ಇದು ಎಲ್ಲಿಯತನಕ ಮುಂದುವರಿಯಬಹುದು? ಯಾವಾಗ ಅವರಿಗೆ ಸಹಾಯ ಸಿಗಬೇಕು? ಯಾವಾಗ ಅವರ ಜೀವನ ಮಟ್ಟ ಹೆಚ್ಚುತ್ತದೆ? ನಿಜವಾಗಿ ಇವತ್ತಿನ ಸಂದರ್ಭದಲ್ಲಿ ಇಂಥಾ ಉತ್ತಮವಾದಂಥ ಡಿಪಾರ್ಟ್‌ಮೆಂಟ್ ಇದೆ. ಆದ್ದರಿಂದ ಈ ಪ್ರಾಜೆಕ್ಟ್‌ಗಳು ಸರಿಯಾಗಿ ಜಾರಿ ಆಗುವ ಹಾಗೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ. ನಾವು ಬರೀ ಕೊಡುತ್ತೇವೆ ಎನ್ನುವ ಭಾವನೆ ಇಟ್ಟುಕೊಂಡು ಹೋದರೆ ಅಲ್ಲಿ ಈ ಜನರ ಸುಧಾರಣೆ ಏನೇನೂ ಆಗಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಇವತ್ತಿನ ಸಂದರ್ಭದಲ್ಲಿ ಏನೆಲ್ಲಾ ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಇವತ್ತು ಪರಿಶಿಷ್ಟ ಜಾತಿ, ಜನಾಂಗಕ್ಕೆ ಸಂಬಂಧಪಟ್ಟಂಥ ಕಾರ್ಯಕ್ರಮಗಳನ್ನು ಈ ರಾಜ್ಯದಲ್ಲಿ ಏನು ಹಾಕಿಕೊಂಡಿದ್ದೇವೆ, ಅವೆಲ್ಲದರ ಪರಿಶೀಲನೆಗೆ ಕಮಿಟಿ ಆಗಬೇಕು. ಗುಲ್ಬರ್ಗಾ ಜಿಲ್ಲೆಗೆ ಸಂಬಂಧಪಟ್ಟದ್ದೂ ಇದೆ. ಈಗಾಗಲೇ ನಾನು ಕೇಳಿಕೊಂಡೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು ೮೨೫ ಎಕರೆ ಡ್ರೈಲ್ಯಾಂಡ್ ತೆಗೆದುಕೊಂಡಿದ್ದಾರೆ. ಬೆನಿಫಿಷಿಯರೀಸ್ ೩೭೦ ಜನ ಇದ್ದಾರೆ. ಇದಕ್ಕೆ ಖರ್ಚು ೫೬.೭೬ ಲಕ್ಷವಾಗಿದೆ. ಬೆನಿಫಿಷಿಯರೀಸ್ ಅನ್ನು ಸೆಲೆಕ್ಷನ್ ಮಾಡಿದವರು ಯಾರು? ಅಧಿಕಾರಿಗಳು. ಅಲ್ಲಿ ಲೋಕಲ್ ಲೀಡರ್ಸ್ ಇಲ್ಲ. ಇದಕ್ಕೆ ಸಂಬಂಧಪಟ್ಟ ನಾಯಕರಿಲ್ಲ. ಯಾರೂ ಇಲ್ಲ. ಅವರೇ ಹೋಗಬೇಕು, ಸೆಲೆಕ್ಷನ್ ಮಾಡಬೇಕು. ಸೋಷಿಯಲ್ ವೆಲ್‌ಫೇರ್ ಮಿನಿಸ್ಟರ್ ಗುಲ್ಬರ್ಗಾಕ್ಕೆ ಬಂದಾಗ ನಾನು ಕೇಳಿಕೊಂಡೆ. ಅನ್ಯಾಯ ಆಗಲಿಕ್ಕೆ ಹತ್ತಿದೆ. ಕೋಟ್ಯಾಂತರ ರೂಪಾಯಿಗಳು ಬಿಡುಗಡೆಯಾಗುತ್ತದೆ ಆದರೆ ಅವರಿಗೆ ಮುಟ್ಟುತ್ತಿಲ್ಲ. ಇದಕ್ಕೆ ಕಮಿಟಿ ಮಾಡಿದಾಗ ಮಾತ್ರ ಅವರಿಗೆ ಅನುಕೂಲವಾಗುತ್ತದೆಂದು ಕೇಳಿಕೊಂಡಾಗ ಅವರು ಒಪ್ಪಿಕೊಂಡರು. ನಾನು ಇಷ್ಟೇ ಹೇಳತಕ್ಕಂಥಾದ್ದು; ಇದರ ಮೇಲ್ವಿಚಾರಣೆಗಾಗಿ, ಇದನ್ನು ಸರಿಯಾಗಿ ಮಾಡಿಸುವುದಕ್ಕಾಗಿ, ಅಧಿಕಾರಿಗಳ ಮೇಲೆ ನಿಯಂತ್ರಣ ಇಡುವುದಕ್ಕಾಗಿ, ಸೆಲೆಕ್ಷನ್ ಸರಿಯಾಗಿ ಮಾಡುವುದಕ್ಕಾಗಿ, ಯಾರಿಗೆ ಸಹಾಯ ಸಲ್ಲಬೇಕೋ ಅವರಿಗೆ ಸಲ್ಲಿಸತಕ್ಕಂಥ ವ್ಯವಸ್ಥೆ ಮಾಡಬೇಕಾದರೆ ಪ್ರತಿಯೊಂದಕ್ಕೂ ಕಮಿಟಿ ಮಾಡಬೇಕಾಗುತ್ತದೆ. ಕಮಿಟಿಯನ್ನು ಮಾಡಿ ಎಲ್ಲಾ ಹಂತದಲ್ಲೂ ಆ ಕಮಿಟಿಗೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಿದ್ರೆ ಅವರ ಅಲ್ಲಿರತಕ್ಕಂಥ ಜನಗಳಿಗೆ ಅನುಕೂಲವಾಗುತ್ತದೆ. ಅಲ್ಲಿರತಕ್ಕಂಥ ಮುಖಂಡರುಗಳು,

ಆ ಭಾಗದಲ್ಲಿರತಕ್ಕಂಥ ಬಡವರಿಗೆ, ಬಹಳವಾಗಿ ಹಿಂದುಳಿದಿರುವವರಿಗೆ, ಯಾರಿಗೆ ಸಹಾಯ ಸಿಗಬೇಕೋ ಅವರಿಗೆ ಸಹಾಯ ಕೊಡಿಸಬೇಕು ಎನ್ನುವ ಭಾವನೆ ಬರುತ್ತದೆ. ಅಧಿಕಾರಿಗಳು ಇವತ್ತು ಇರುತ್ತಾರೆ ನಾಳೆ ಹೋಗುತ್ತಾರೆ. ಇವತ್ತು ಪ್ರತಿ ಅಧಿಕಾರಿಯೂ ಒಂದು ವರ್ಷ, ಎರಡು ವರ್ಷ ಇರುತ್ತಾರೆ. ಅಲ್ಲಿರತಕ್ಕಂಥ ಜನರ ವ್ಯವಸ್ಥೆ ಏನು ? ಯಾರು ? ಏನು ? ಎಂಬ ಬಗ್ಗೆ ಬಹಳ ಜನರಿಗೂ ಅವರಿಗೆ ಸಂಬಂಧ ಇರುವುದಿಲ್ಲ. ಅದಕ್ಕಾಗಿ ಎಲ್ಲಾ ಜವಾಬ್ದಾರಿ ಅವರ ಮೇಲೆ ಇದ್ದಾಗ ಅಲ್ಲಿನ ಜನರಿಗೆ ಸಹಾಯ ಸಿಗಲಿಕ್ಕೆ ಸಾಧ್ಯ ಎನ್ನುವ ಮಾತನ್ನು ಹೇಳುತ್ತೇನೆ. ಈವತ್ತು ಸರ್ಕಾರದ ಕಾರ್ಯಕ್ರಮಗಳು ಬೇಕಾದಷ್ಟು ಇವೆ. ಈ ಕಾರ್ಯಕ್ರಮದ ಪಟ್ಟಿಯನ್ನು ನೋಡಿದ ಮೇಲೆ ನಮ್ಮ ರಾಜ್ಯದಲ್ಲಿರತಕ್ಕಂಥ ಪರಿಶಿಷ್ಟ ಜಾತಿ ಜನರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಇರುವಂಥ ಯೋಜನೆಗಳು ಬೇರೆ ಎಲ್ಲಿಯೂ ಇಲ್ಲ ಎನ್ನುವ ಭಾವನೆಯು ಬರುತ್ತದೆ. ಆದರೆ ಪರಿಸ್ಥಿತಿ ನೋಡಿದರೆ ಮಾತ್ರ ಗಂಭೀರವಾಗಿ ಕಾಣುತ್ತದೆ. ತಾವುಗಳು ಯಾವುದೇ ಹಳ್ಳಿಗೆ, ತಾಲ್ಲೂಕಿಗೆ, ಜಿಲ್ಲೆಗೆ ಹೋದಾಗ, ಹಾಗೆಯೇ ಹೋಗಿ ಬರಬಾರದು. ಒಂದು ಪಟ್ಟಿಯನ್ನು ತೆಗೆದುಕೊಂಡು ಎಲ್ಲೆಲ್ಲಿ ನಿಮ್ಮ ಅಧಿಕಾರಿಗಳು ಏನೇನು ಮಾಡಿದ್ದಾರೆ, ಮಾಡಿರತಕ್ಕಂಥಾದ್ದರಲ್ಲಿ ಯಾರ್ಯಾರಿಗೆ ಏನೇನು ಲಾಭ ಮಾಡಿಕೊಡಲಾಗಿದೆ ಎಂಬುದನ್ನು ಕೂಡ ನೋಡಬೇಕು. ಯಾರಿಗೂ ಗೊತ್ತಿಲ್ಲದ ಹಾಗೆ ತಾವುಗಳು ಹೋಗಿ ನೋಡಿಕೊಂಡು ಬರಬೇಕು. ನಮ್ಮ ಯೋಜನೆಯ ಹಣವನ್ನು ಪ್ರತಿಯೊಬ್ಬರೂ ಸರಿಯಾಗಿ ಉಪಯೋಗಿಸುತ್ತಿಲ್ಲ. ಜನರಿಗೆ ಸರಕಾರದವರು ಕೊಟ್ಟ ಸವಲತ್ತುಗಳು ಸರಿಯಾಗಿ ಸಿಗುತ್ತಿಲ್ಲ ಎಂಬ ಮಾತನ್ನು ಹೇಳಬೇಕಾಗುತ್ತದೆ. ಆದ್ದರಿಂದ ಎಷ್ಟು ಸ್ಕೀಮ್ಸ್ ಇವೆ, ಎಷ್ಟು ಯೋಜನೆಗಳು ಇವೆ ಅವುಗಳಿಗೆಲ್ಲಾ ಕಮಿಟಿಗಳನ್ನು ಮಾಡುವುದರಲ್ಲಿ ತಾವುಗಳು ಹಿಂದೆ ಬೀಳಬೇಡಿ. ತಮಗೆ ಮತ್ತು ಇಲಾಖೆಗೆ ಒಳ್ಳೆಯ ಹೆಸರು ಬರಬೇಕಾದರೆ, ಈ ವ್ಯವಸ್ಥೆಯಲ್ಲಿ ಬದಲಾವಣೆ ತರತಕ್ಕಂಥಾದ್ದು ಬಹಳ ಸೂಕ್ತ ಎಂದು ನನಗನ್ನಿಸುತ್ತದೆ. ಇಲ್ಲವಾದರೆ ಸರಕಾರದವರು ಯಾವ ಗುರಿಯನ್ನು ಮುಟ್ಟಬೇಕೆಂದಿದ್ದಾರೆ ಆ ಗುರಿಯನ್ನು ಮುಟ್ಟಲು ಆಗುವುದಿಲ್ಲ ಎಂದು ಹೇಳಬೇಕಾಗುತ್ತದೆ. ಇಲ್ಲಿ ಬಹಳ ಸ್ಕೀಮ್‌ಗಳು ಇವೆ. ಇವನ್ನು ನೋಡಿದರೆ ಇವಕ್ಕೆ ಇಟ್ಟ ಹಣವನ್ನು ನೋಡಿದರೆ ಅದು ತಿಳಿಯುತ್ತದೆ. ವಿಶೇಷ ಘಟಕ ಯೋಜನೆಯನ್ನು ಪ್ರಾರಂಭಿಸಲು ಆರ್ಥಿಕ ಮತ್ತು ಭೌತಿಕ ಗುರಿಗಳನ್ನು ಹಾಗೂ ಅದರ ವಿವರಗಳನ್ನು ಕೊಟ್ಟಿದ್ದಾರೆ. ೮೭೧೭೨.೮೦ ಲಕ್ಷ ರೂಪಾಯಿಗಳನ್ನು ವಿಶೇಷ ಘಟಕ ಯೋಜನೆಯಡಿಯಲ್ಲಿ ಇಟ್ಟಿದ್ದಾರೆ ಈ ರಾಜ್ಯದಲ್ಲಿರತಕ್ಕಂಥ ಜನರಿಗೆ ಪರಿಶಿಷ್ಟ ಜಾತಿ ಜನಾಂಗದವರಿಗೆ, ವಿಶೇಷವಾದಂಥ ಒಂದು ವ್ಯವಸ್ಥೆಯು ಆಗಬೇಕು. ಉಳಿದೆಲ್ಲಾ ಸ್ಕೀಮ್‌ಗಳಲ್ಲಿ ಅವರಿಗೆ ಅಷ್ಟಾಗಿ ಉಪಯೋಗವಾಗದಿದ್ದರೂ ಕೂಡ ಇದರಲ್ಲಿ ಅನುಕೂಲವಾಗಲಿ ಎಂದು ಸರಕಾರದವರು ಸುಮಾರು ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಈ ಯೋಜನೆಯಡಿಯಲ್ಲಿ ಪರಿಸ್ಥಿತಿಯು ಏನಾಗಿದೆ? ಈ ಜಾತಿಗಳಿಗೆ ಸಂಬಂಧಪಟ್ಟ ಹಣವನ್ನು ಎಲ್ಲಾ ಇಲಾಖೆಗಳಿಗೂ ಹಂಚಿಬಿಡುತ್ತೀರಿ. ಎಲ್ಲಾ ಇಲಾಖೆಗಳಿಗೂ ಇದರ ಹಣವನ್ನು ಕೊಟ್ಟಿದ್ದೀರಿ. ಈ ರೀತಿಯ ವ್ಯವಸ್ಥೆಯಿಂದ ಇದು ಬಹುಶಃ ಸರಿಯಾಗಲಾರದು ಎಂದು ನನಗೆ ಅನ್ನಿಸುತ್ತದೆ. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ನಿಜವಾಗಿಯೂ ಪರಿಹಾರ ಮಾಡಬೇಕಾದರೆ ಪೂರ್ತಿಯಾಗಿ ಈ ಇಲಾಖೆಯೇ ಮಾಡಬೇಕು. ನೀವು ಲೋಕೋಪಯೋಗಿ ಇಲಾಖೆಗೆ ಹಣ ಕೊಡುತ್ತೀರಿ, ಅವರು ವಿಶೇಷ ಘಟಕ ಯೋಜನೆಯಡಿಯಲ್ಲಿ ರಸ್ತೆ ಮಾಡಬೇಕಾದರೆ ಆ ಊರಿನ ಮುಖ್ಯ ರಸ್ತೆಯನ್ನು ಮಾಡುತ್ತಾರೆ. ಹರಿಜನರ ಕೇರಿಗೆ ರಸ್ತೆ ಮಾಡುವುದಿಲ್ಲ, ಆದರೆ ಹಣ ಮಾತ್ರ

ಹರಿಜನರ ತಲೆಯ ಮೇಲೆ ಹಾಕುತ್ತಾರೆ. ಹಣ ಏನಾಯಿತು ಎಂದು ಕೇಳಿದರೆ ವಿಶೇಷ ಘಟಕ ಯೋಜನೆಯಡಿಯಲ್ಲಿದ್ದ ಹಣವನ್ನು ಈ ರಸ್ತೆಗೆ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಹೀಗೆ ಹರಿಜನರಿಗೆ ಇಟ್ಟ ಹಣವನ್ನು ನೀವು ಹೀಗೆ ಖರ್ಚು ಮಾಡಿದರೆ ಏನು ಉಪಯೋಗವಾದ ಹಾಗೆ ಆಯಿತು? ಕೋಟ್ಯಾಂತರ ರೂಪಾಯಿಗಳನ್ನು ಇವರ ಹೆಸರಲ್ಲಿ ಖರ್ಚು ಮಾಡುತ್ತೀರಿ. ಇನ್ನೂ ನಿಮಗೆ ಸಮಾಧಾನವಾಗಲಿಲ್ಲವೇ? ಹೀಗೆ ಈ ಹಣವನ್ನು ಎಲ್ಲಿ ಹೇಗೆ ಬೇಕಾದರೂ ಖರ್ಚು ಮಾಡಬಹುದು, ಅದನ್ನು ಯಾರೂ ಕೇಳುವವರೇ ಇಲ್ಲ. ಆದ್ದರಿಂದ ಈ ಬಗ್ಗೆ ಸರಿಯಾದ ಒಂದು ವ್ಯವಸ್ಥೆಯಾಗಬೇಕಾದರೆ ಪ್ರತಿಯೊಂದು ಹಂತದಲ್ಲಿಯೂ ಕೂಡ ಪ್ರತಿಯೊಂದು ಸ್ಕೀಮ್‌ಗೆ ಸಂಬಂಧಪಟ್ಟ ಹಾಗೆ ತಾವುಗಳು ಅಲ್ಲಿಯ ಪ್ರಮುಖರಿಗೆ, ಶಾಸಕರಿಗೆ, ಕೆಲಸ ಮಾಡತಕ್ಕಂಥ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಿತಿಯನ್ನು ಮಾಡಬೇಕು. ಅವರಿಗೆ ಒಂದು ಜವಾಬ್ದಾರಿಯನ್ನು ಒಪ್ಪಿಸಬೇಕು. ಆಗ ಮಾತ್ರ ಅಲ್ಲಿರತಕ್ಕಂಥ ಪರಿಶಿಷ್ಟ ಜನಾಂಗದವರಿಗೆ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಸರಕಾರದ ಬಹಳಷ್ಟು ಸ್ಕೀಮ್ಸ್ ಏನಿದೆ ಅವುಗಳು ಈ ಪುಸ್ತಕದಲ್ಲಿ ಮಾತ್ರ ಉಳಿಯಬಾರದು, ಸಂಬಂಧಪಟ್ಟವರಿಗೆ ಮುಟ್ಟಬೇಕು ಎಂಬ ದೃಷ್ಟಿಯಿಂದ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):- ಸನ್ಮಾನ್ಯ ಅಧ್ಯಕ್ಷಣಿಯವರೇ, ಈ ದಿವಸ ಸಭೆಯ ಮುಂದೆ ಮಂಡಿಸಿರುವ ಕೈಗಾರಿಕೆ, ಸಮಾಜಕಲ್ಯಾಣ ವಾಣಿಜ್ಯ ಮತ್ತು ರೇಷ್ಮೆ ಇತ್ಯಾದಿ ಬೇಡಿಕೆಗಳಿಗೆ ನನ್ನ ಬೆಂಬಲ ಹಾಗೂ ಒಪ್ಪಿಗೆ ಸೂಚಿಸುತ್ತಾ ರೇಷ್ಮೆ ವ್ಯವಸಾಯದಲ್ಲಿ ಪ್ರಧಾನ ಪಾತ್ರ ವಹಿಸಿರುವ ನನ್ನ ರಾಮನಗರ ಹಾಗೂ ಸುತ್ತಮುತ್ತಲಿನ ಕೆಲವು ಸಮಸ್ಯೆಗಳ ಬಗ್ಗೆ ಸಚಿವರ ಗಮನ ಸೆಳೆಯಲು ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಕಳೆದ ಒಂದು ವರ್ಷದಿಂದ ಈ ಒಂದು ಕ್ಷೇತ್ರದಲ್ಲಿ ಆತಂಕಕಾರಿಯಾದ ವಾತಾವರಣ ಮೂಡಿತ್ತು. ಇದನ್ನು ನಿವಾರಣೆ ಮಾಡಲಿಕ್ಕೆ ಸಾಧ್ಯವಿಲ್ಲವೇನೋ ಎಂಬಷ್ಟು ಗರಿಷ್ಟಮಟ್ಟದಲ್ಲಿ ಗಂಟುರೋಗ ಈ ಬೆಳೆಗೆ ತಗುಲಿ ಈ ರಾಜ್ಯದ ಆದಾಯದ ಮೇಲೆ ಅನೇಕ ಕೋಟಿಗಳ ನಷ್ಟವುಂಟಾಯಿತೆಂದರೆ ಅತಿಶಯೋಕ್ತಿಯಲ್ಲ. ಆದರೂ ಸನ್ಮಾನ್ಯ ರೇಷ್ಮೆ ಸಚಿವರ ಕಾರ್ಯದಕ್ಷತೆ, ಇಲಾಖಾಧಿಕಾರಿಗಳ ಸತತ ಶ್ರಮದಿಂದಾಗಿ ಹವಾಮಾನದ ಅನುಕೂಲತೆ ದೃಷ್ಟಿಯಿಂದ ಈಗ ಫೆಬ್ರಿನ್ ರೋಗ ನಿಯಂತ್ರಣಕ್ಕೆ ಬಂದಿದೆ. ಆದಾಗ್ಯೂ ನಮ್ಮ ರಾಮನಗರ ಮತ್ತು ಸುತ್ತಮುತ್ತಲ ತಾಲ್ಲೂಕುಗಳಲ್ಲಿ ಈ ರೋಗ ಸಂಪೂರ್ಣವಾಗಿ ನಾಶವಾಯಿತು ಎಂದು ಹೇಳೋದಿಕ್ಕೆ ಸಾಧ್ಯವಿಲ್ಲ. ಈಗಲೂ ಸಹ ಅಲ್ಲಲ್ಲಿ ಈ ರೋಗ ಕಂಡುಬರುತ್ತಿದೆ. ಆದಾಗ್ಯೂ ಶೇಕಡ ೯೦ರಷ್ಟು ಇದು ನಿಯಂತ್ರಣಕ್ಕೆ ಬಂದಿದ್ದು ರೇಷ್ಮೆ ಗೂಡಿನ ಉತ್ಪಾದನೆಯಲ್ಲಿ ಹಿಂದೆಂದೂ ಕಾಣದಷ್ಟು ಉತ್ಪಾದನೆಯನ್ನು ಇವತ್ತು ನಾವು ಕಂಡಿದ್ದೇವೆ. ಉದಾಹರಣೆಗೆ ಮೊನ್ನೆ ತಾನೇ ಇಡೀ ದೇಶದಲ್ಲೇ ಅತಿ ಹೆಚ್ಚಿನ ವಹಿವಾಟು ನಡೆಸಿದ ನಮ್ಮ ರಾಮನಗರ ಮಾರುಕಟ್ಟೆಗೆ ೬೪ ಟನ್ ರೇಷ್ಮೆಗೂಡು ಮಾರಾಟಕ್ಕಾಗಿ ಬಂದಿತ್ತು ಎಂಬುದು ಬಹಳ ಅನಿರೀಕ್ಷಿತ ಮತ್ತೆ ನಾನು ಆ ತಾಲ್ಲೂಕಿನ ಶಾಸಕನಾಗಿ ಬಹಳ ಹೆಮ್ಮೆ ಪಡುತ್ತೇನೆ. ೧೫ ದಿವಸಗಳ ಹಿಂದೆ ಇದ್ದ ದರವೇನಾದರೂ ಇದ್ದಿದ್ದರೆ ಒಂದು ಕೋಟಿ ರೂ. ವಹಿವಾಟು ಒಂದೇ ದಿವಸದಲ್ಲಿ ಆಗುತ್ತಿತ್ತು. ಬೆಳೆ ಚೆನ್ನಾಗಿ ಆಗ್ತಾ ಇದೆ ಆದರೆ ರೇಷ್ಮೆ ನೂಲಿನ ಬೆಲೆ ಕುಸಿದುಬಿದ್ದಿದೆ. ಆ ಕಾರಣದಿಂದ ಅದರ ಪರಿಣಾಮ ಗೂಡಿನ ವಹಿವಾಟಿನ ಮೇಲೆ ಬಿದ್ದು ಶೇಕಡ ೩೦ರಷ್ಟು ದರ ಕಡಿಮೆಯಾಗಿತ್ತು. ಏನೇ ಆದರೂ ಈ ರೋಗವನ್ನು ಕಟ್ಟುನಿಟ್ಟಾಗಿ ನಿಯಂತ್ರಣ ಮಾಡಲು ಶ್ರಮಿಸಿದ ಸಚಿವರಿಗೂ ಹಾಗೂ ರೇಷ್ಮೆ ಇಲಾಖೆಯ ನಿರ್ದೇಶಕರು ಹಾಗೂ

ಅವರೊಟ್ಟಿಗೆ ಕೆಲಸ ಮಾಡಿದ ತಾಂತ್ರಿಕ ಪರಿಣತಿ ಹೊಂದಿದ ತಂಡಕ್ಕೆ ನಾನು ಈ ಮೂಲಕ ವಂದನೆಯನ್ನು ಸಲ್ಲಿಸುತ್ತಾ ಇದ್ದೇನೆ.

(ಶ್ರೀಮತಿ ಪೋಟಮ್ಮನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಆದಾಗ್ಯೂ ಇಷ್ಟನ್ನು ಮಾಡಿ ನಾವು ಕೈ ಕಟ್ಟಿಕೊಂಡು ಕೂರುವ ಪರಿಸ್ಥಿತಿಯಲ್ಲಿಲ್ಲ. ಮತ್ತೆ ವಾತಾವರಣ ಬದಲಾವಣೆ ಆದರೆ ಈ ರೋಗ ಮತ್ತೆ ಕಾಣಿಸಿಕೊಳ್ಳುವ ಅವಕಾಶ ಇರುವುದರಿಂದ ಸಚಿವರು ಹಾಗೂ ಇಲಾಖೆಯ ಉನ್ನತ ಅಧಿಕಾರಿಗಳು ಈವರೆಗೂ ಏನು ಕಟ್ಟುನಿಟ್ಟಿನ ಕ್ರಮ ಅನುಸರಿಸಿದರೋ ಅದನ್ನೇ ಮುಂದುವರಿಸಿಕೊಂಡು ಹೋಗಬೇಕು. ಬೆಳೆ ಚೆನ್ನಾಗಿ ಆಗ್ತಾ ಇದೆಯಲ್ಲಾ, ರೋಗ ನಿಯಂತ್ರಣಕ್ಕೆ ಬಂತಲ್ಲಾ ಅಂತ ಆಲಸ್ಯ ಮನೋಭಾವನೆ ತಾಳದೆ ಎಂದಿನ ನಿಯಂತ್ರಣ ಎಂದಿನ ಪ್ರತಿರೋಧ ಕಾರ್ಯಕ್ರಮವನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಇಲ್ಲಿ ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಮತ್ತೆ ಈ ರೇಷ್ಮೆ ಖಾತೆಯ ಬಗ್ಗೆ ಅಥವಾ ರೇಷ್ಮೆ ವ್ಯವಸಾಯ ಕ್ಷೇತ್ರದ ವಿಸ್ತಾರದ ಬಗ್ಗೆ ಅದರ ಬೃಹತ್ ಗಾತ್ರದ ಬಗ್ಗೆ ಈ ಮುಂಚೆ ಮಾತನಾಡಿದಂಥ ಮಾನ್ಯ ಶ್ರೀ ರಾಜುಗೌಡರು ಸವಿಸ್ತಾರವಾಗಿ ಹೇಳಿದ್ದಾರೆ. ಇಷ್ಟೆಲ್ಲಾ ವಿಚಾರಗಳನ್ನು ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗದೆ ಇವತ್ತು ಇದರ ವಹಿವಾಟು ಬಹಳಷ್ಟು ಹೆಚ್ಚಿರುವುದರಿಂದ ಲಕ್ಷಾಂತರ ಜನ ರೈತರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವಂಥ ಒಂದು ಉತ್ತಮವಾದ ಇಲಾಖೆ ಇದಾದ್ದರಿಂದ ತದ ನಂತರದ ರೇಷ್ಮೆ ನೂಲನ್ನು ಮಾಡತಕ್ಕಂಥವರು ಈ ನೂಲನ್ನು ವಸ್ತುವಾಗಿ ಉಡುಪಾಗಿ ಪರಿವರ್ತನೆ ಮಾಡತಕ್ಕಂಥವರು ಲಕ್ಷಾಂತರ ಮಂದಿ ಇದರ ಮೇಲೆ ಅವಲಂಬಿತರಾಗಿ ವಾರ್ಷಿಕವಾಗಿ ಸಾವಿರಾರು ಕೋಟಿಗಳವರೆಗೆ ಇದರ ವ್ಯವಹಾರ ವಿಸ್ತಾರವಾಗಿರುವುದರಿಂದ ಈ ಒಂದು ಖಾತೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಕ್ಯಾಬಿನೆಟ್ ದರ್ಜೆಗೆ ಹೆಚ್ಚಿಸಿ ಇದಕ್ಕೆ ಒಂದು ಹೆಚ್ಚಿನ ಸ್ಥಾನಮಾನವನ್ನು, ಗೌರವಗಳನ್ನು ತಂದುಕೊಡಬೇಕು ಎಂದು ಈ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಈ ಇಲಾಖೆಯಲ್ಲಿ ಇರತಕ್ಕಂಥ ಬಹಳ ಮುಖ್ಯವಾದ ನಿಧಿಯಬಗ್ಗೆ ನಾನು ಪ್ರಸ್ತಾಪಮಾಡುವುದಕ್ಕೆ ಇಷ್ಟ ಪಡುತ್ತೇನೆ. ಪ್ರೈಸ್ ಸ್ಟೆಬಿಲೈಜೇಷನ್ ಫಂಡ್, (ಪಿ. ಎಸ್. ಎಫ್.) ಈ ಪಿ. ಎಸ್. ಎಫ್.ನ ಈಗಿನ ಕಾನೂನು ರೀತ್ಯಾ, ಹಣಕಾಸಿನ ಕಾರ್ಯದರ್ಶಿಗಳ ಅಧೀನದಲ್ಲಿ ಈ ಹಣವನ್ನು ಇಟ್ಟಿರುತ್ತಾರೆ. ಇದು ಬಹು ಮುಖ್ಯವಾಗಿ ರೇಷ್ಮೆ ನೂಲು ಬಿಚ್ಚತಕ್ಕಂಥವರ ಹಾಗೂ ರೇಷ್ಮೆ ಬೆಳೆಗಾರರ ಅನುಕೂಲಕ್ಕಾಗಿ ಖರ್ಚು ಮಾಡಬೇಕಾಗಿರತಕ್ಕಂಥದ್ದು. ಯಾವುದಾದರೂ ತುರ್ತು ಪರಿಸ್ಥಿತಿ ಬಂದಾಗ, ಹಣಕಾಸಿನ ಇಲಾಖೆಯಿಂದ ಈ ಹಣವನ್ನು ಮಂಜೂರು ಮಾಡಿಸಿಕೊಳ್ಳಬೇಕಾಗಿದ್ದರೆ ಮೂರು ನಾಲ್ಕು ವಾರಗಳೇ ಆಗಿ ಹೋಗುತ್ತದೆ. ರೇಷ್ಮೆ ಇಲಾಖೆಯಿಂದ ವಸೂಲಾಗತಕ್ಕಂಥ, ರೇಷ್ಮೆ ಗೂಡಿನ ವಹಿವಾಟಿನಿಂದ ವಸೂಲು ಆಗತಕ್ಕಂಥ ಈ ಒಂದು ನಿಧಿಯನ್ನು ಇವತ್ತು ಹಣಕಾಸಿನ ಇಲಾಖೆಯ ಕಾರ್ಯದರ್ಶಿಗಳು ಅಷ್ಟೇ ಸ್ಥಾನಮಾನವನ್ನು ಹೊಂದಿರತಕ್ಕಂಥ ರೇಷ್ಮೆ ಇಲಾಖೆಯ ಆಯುಕ್ತರು ಹಾಗೂ ನಿರ್ದೇಶಕರ ಅಧೀನದಲ್ಲಿ ಅವರ ಒಂದು ನಿಯಂತ್ರಣದಲ್ಲಿ ಇದನ್ನು ಇಟ್ಟು, ಇದನ್ನು ಪರಿಣಾಮಕಾರಿಯಾಗಿ ನೂಲು ಬಿಚ್ಚುವವರು ಮತ್ತು ರೇಷ್ಮೆ ಬೆಳೆಗಾರರ ಅನುಕೂಲಕ್ಕಾಗಿ ಬಳಸುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಸನ್ಮಾನ್ಯ ಸಚಿವರು ಸಭೆಯಲ್ಲಿ ಇಲ್ಲ. ಮಾನ್ಯ ಅಧ್ಯಕ್ಷಣಿಯವರೇ, ತಮ್ಮ ಗಮನವನ್ನು ನಾನು ಈ ಬಗ್ಗೆ ಸೆಳೆಯುತ್ತಿದ್ದೇನೆ. ನಮ್ಮ ರೇಷ್ಮೆ ಖಾತೆ

ರಾಜ್ಯ ಸಚಿವರು ಇಲ್ಲಿ ಇಲ್ಲ.

ಛೇರ್ಮನ್:- ಪರವಾಗಿಲ್ಲ ಮಾತನಾಡಿ, ನೋಟ್ ಮಾಡಿಕೊಳ್ಳುತ್ತಾರೆ.

ಶ್ರೀ ಸಿ. ಎಂ. ಲಿಂಗಪ್ಪ:- ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇಲ್ಲಿ ನೋಟ್ ಮಾಡಿಕೊಂಡರೆ ಸಾಕು ಎನ್ನತಕ್ಕಂಥ ಸಮಾಧಾನವನ್ನು ನಾನು ಪಟ್ಟುಕೊಳ್ಳುತ್ತೇನೆ ಬಿಡಿ.

ಛೇರ್ಮನ್:- ಆ ನೋಟನ್ನು ಓದುತ್ತಾರಲ್ಲಾ.

ಶ್ರೀ ಸಿ. ಎಂ. ಲಿಂಗಪ್ಪ:- ಈ ಪಿ. ಎಸ್. ಎಫ್. ಫಂಡ್‌ನಲ್ಲಿ ಈಗ ಸಾಕಷ್ಟು ಹಣವನ್ನು ವಸೂಲು ಮಾಡಿ ಅದನ್ನು ಸರಿಯಾಗಿ ಬಳಕೆ ಮಾಡುತ್ತಿಲ್ಲ. ಸರಿಯಾಗಿ ಅಂದರೆ ಬಹಳ ದುರುಪಯೋಗವಾಗುತ್ತಿದೆ ಎಂದು ನಾನು ಹೇಳುವುದಿಲ್ಲ. ಅದನ್ನು ಸುಮ್ಮನೆ ಸುಮ್ಮನೆ ವಸೂಲು ಮಾಡಿ ಫಿಕ್ಸಡ್ ಡಿಪಾಸಿಟ್‌ನಲ್ಲಿ ಇಟ್ಟಹಾಗೆ ಅದು ಆಗುತ್ತದೆ. ಅದಿರುವುದು ಫಿಕ್ಸಡ್ ಡಿಪಾಸಿಟ್‌ನಲ್ಲಿ ಇಡುವುದಕ್ಕಲ್ಲ. ರೇಷ್ಮೆ ದರಗಳು ಕುಸಿದುಬಿದ್ದಾಗ, ರೇಷ್ಮೆ ಬೆಳೆಗೆ ಮಾರಕ ರೋಗಗಳು ಬಂದಾಗ, ರೇಷ್ಮೆ ಬೆಳೆಗಾರರಿಗೆ ತೊಂದರೆಯಾದಾಗ, ಇದನ್ನು ಕೂಡಲೇ ಬಳಸಿ, ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಕ್ಕೋಸ್ಕರ ಇರತಕ್ಕಂಥ ನಿಧಿ ಇದು. ಆದ್ದರಿಂದ ಅಧ್ಯಕ್ಷರೇ, ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈಗ ಹಣಕಾಸಿನ ಆಯುಕ್ತರ ಅಧೀನದಲ್ಲಿ ಏನು ಇದೆ ಈ ನಿಧಿ ಇದನ್ನು ರೇಷ್ಮೆ ಖಾತೆಯ ಆಯುಕ್ತರು ಹಾಗೂ ನಿರ್ದೇಶಕರ ಅಧೀನಕ್ಕೆ ಕೊಡಬೇಕು ಎನ್ನತಕ್ಕಂಥ ಮಾತನ್ನು ಈ ಮೂಲಕ ಹೇಳುತ್ತೇನೆ ಪಿ. ಎಸ್. ಎಫ್. ಫಂಡ್ ಬಗ್ಗೆ ಇನ್ನೊಂದು ಮಾತು. ನಾನು ಹಿಂದೆ ಒಂದು ಸಲಹೆಯನ್ನು ನೀಡಿದ್ದೆ. ಎಲ್ಲೆಲ್ಲಿ ಈ ರೇಷ್ಮೆ ಗೂಡಿನ ಮಳಿಗೆಗಳು ಇದ್ದಾವೆ, ಎಲ್ಲಿ ಎಷ್ಟೆಷ್ಟು ಈ ಪಿ. ಎಸ್. ಎಫ್. ನಿಧಿ ವಸೂಲಿಯಾಗುತ್ತಿದೆ, ಇದರಲ್ಲಿ ಶೇಕಡ ೧೦ ಭಾಗವನ್ನು ಅವರು ಆ ಸಂಬಂಧಪಟ್ಟಂಥ ಪುರಸಭೆಗಳಿಗೆ ಕೊಡಿ ಎನ್ನತಕ್ಕಂಥ ಮಾತನ್ನು ನಾನು ಕೇಳಿಕೊಂಡಿದ್ದೆ. ಇದಕ್ಕೆ ಕಾರಣವಾದರೂ ಇಷ್ಟೆ; ಪುರಸಭೆಗಳಿಗೆ ವಂತಿಕೆ ಕೊಡಿ ಅನ್ನುವುದು ಇಲ್ಲಿ ಮುಖ್ಯ ಅಲ್ಲ. ಯಾವುದೇ ಒಂದು ಪುರಸಭೆಯ ವ್ಯಾಪ್ತಿಯಲ್ಲಿ ಒಂದು ಮಾರುಕಟ್ಟೆ ಬಂದಾಗ ಆ ಪುರಸಭೆಯ ವ್ಯಾಪ್ತಿಯಲ್ಲಿ ನೂಲು ಬಿಚ್ಚುವವರು ಇದ್ದು ಅವರು ಅವರ ಆರೋಗ್ಯ ಹಾಗೂ ಅಲ್ಲಿನ ಪರಿಸರದ ನೈರ್ಮಲ್ಯವನ್ನು ಕಾಪಾಡಿದಾಗ ಮಾತ್ರ ನೂಲು ಬಿಚ್ಚುವವರು ಹೆಚ್ಚು ಶಕ್ತಿಯುತವಾಗುತ್ತಾರೆ ಹಾಗೂ ಸದೃಢವಾಗುತ್ತಾರೆ. ಈ ದೃಷ್ಟಿಯಿಂದ ಆ ನೂಲು ಬಿಚ್ಚುವವರ ಪರಿಸರದ ನೈರ್ಮಲ್ಯ, ನೂಲು ಬಿಚ್ಚುವ ಕಾರ್ಮಿಕರ ಕಲ್ಯಾಣಕ್ಕಾಗಿ ಈ ಪಿ. ಎಸ್. ಎಫ್. ಫಂಡ್‌ನಿಂದ ಕನಿಷ್ಠ ಪಕ್ಷ ಶೇಕಡ ೧೦ ಭಾಗವನ್ನು ಕೊಟ್ಟರೆ, ಈ ಕಾನೂನಿನಲ್ಲಿ ಏನು ಉದ್ದೇಶ ಇದೆ ಅದು ನಿಜವಾಗಿಯೂ ಸಾರ್ಥಕವಾಗುತ್ತದೆ. ಇದನ್ನು ಸನ್ಮಾನ್ಯ ಸಚಿವರು ಮುಖ್ಯಮಂತ್ರಿಗಳ ಮನವೊಲಿಸಿ ಈ ಕಾನೂನಿಗೆ ತಿದ್ದುಪಡಿಯನ್ನು ತರಬೇಕು. ಇದೊಂದನ್ನು ತಮ್ಮ ಕಾಲದಲ್ಲಿ ನೆರವೇರಿಸಿಕೊಡಬೇಕೆನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ರಾಮನಗರ ಮಾರುಕಟ್ಟೆಯ ಬಗ್ಗೆ ಕಡೆಯದಾಗಿ ಎರಡು ಮಾತನ್ನು ಹೇಳುತ್ತೇನೆ. ಏಕೆಂದರೆ ನಮ್ಮ ಮುಖ್ಯ ಸಚೇತಕರು ಈಗಾಗಲೇ ಬಂದು ನೀವು ಬೇಗ ಮುಗಿಸಿ ಎಂದು ಕಿವಿಯಲ್ಲಿ ಹೇಳಿ ಹೋಗಿದ್ದಾರೆ. ಇದು ಬಹು ದೊಡ್ಡ ಮಾರ್ಕೆಟ್. ಇಲ್ಲಿ ಸರಾಸರಿ ವಹಿವಾಟು ಒಂದು ದಿವಸಕ್ಕೆ ೪೦ ರಿಂದ ೪೫ ಟನ್‌ವರೆಗೆ ಇದೆ. ಇಷ್ಟೊಂದು ವಹಿವಾಟು ಇಡೀ ಏಷ್ಯಾ ಖಂಡದಲ್ಲಿ ಇನ್ಯಾವ ಮಾರ್ಕೆಟ್‌ನಲ್ಲಿಯೂ ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತಾರೆ. ನನಗೆ ಇಂಡಿಯಾ ದೇಶದಲ್ಲಿ ಬಿಟ್ಟರೆ ಬೇರೆ ದೇಶವು ಗೊತ್ತಿಲ್ಲ. ನಮ್ಮ

ಭಾರತದಲ್ಲಿ ಇಷ್ಟು ದೊಡ್ಡ ಮಾರುಕಟ್ಟೆ ಬೇರೆ ಕಡೆ ಇಲ್ಲ. ಮಾನ್ಯ ಸಚಿವರು ಇತ್ತೀಚೆಗೆ ರಾಮನಗರಕ್ಕೆ ಭೇಟಿ ಕೊಟ್ಟಾಗ ಆ ಮಾರುಕಟ್ಟೆಯ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಸಲಹೆಗಳನ್ನು ಮಾಡಿದ್ದೆ. ಅದರಂತೆ ಅಲ್ಲಿ ಕೆಲವಾರು ಕಾಮಗಾರಿ ಕೆಲಸಗಳನ್ನು ನಮ್ಮಿಂದ ಕೇಳಿದ ನಂತರ ಕೂಡಲೇ ಪ್ರಾರಂಭ ಮಾಡಿದ್ದೀರಿ. ನಮಗೆ ಬಹಳ ಮುಖ್ಯವಾಗಿ ಇನ್ನೊಂದು ಯೂನಿಟ್ ಬೇಕಾಗಿದೆ. ಬೆಳಗ್ಗೆ ತಾನೆ ರಾಜೂಗೌಡರು ಮಾತನಾಡುವಾಗ ಮಳವಳ್ಳಿಯಲ್ಲಿ ಕಟ್ಟಿರತಕ್ಕ ಮಾರುಕಟ್ಟೆಯಲ್ಲಿ ಒಂದು ಕೆ. ಜಿ. ಗೂಡಿನ ವ್ಯವಹಾರವೂ ಇಲ್ಲದೆ ಅದು ನಿಷ್ಪ್ರಯೋಜಕವಾಗಿ ಬಿದ್ದಿದೆಯೆಂದು ಹೇಳಿದರು. ಆದರೆ ನಮ್ಮಲ್ಲಿ ಇನ್ನೊಂದು ಯೂನಿಟ್‌ನ ಅವಶ್ಯಕತೆ ಇದೆ. ಮೊನ್ನೆ ೬೪ ಸಾವಿರ ಕೆ. ಜಿ. ಗೂಡು ಬಂದಾಗ, ಗೂಡನ್ನು ಎಲ್ಲಿ ಹಾಕಿಸುವುದು, ಯಾವರೀತಿ ಅದನ್ನು ವಿಲೇವಾರಿ ಮಾಡುವುದು ಅನ್ನತಕ್ಕ ಬಹಳ ದೊಡ್ಡ ಸಮಸ್ಯೆ ಉದ್ಭವವಾಯಿತು. ಆದಕ್ಕೆ ದಯಮಾಡಿ ತಾವು ಪಿ. ಎಸ್. ಎಫ್.ನಿಂದ ಆಗಲಿ ಇಲ್ಲವೇ ವಿಶ್ವ ಬ್ಯಾಂಕಿನ ನೆರವಿನಿಂದಾಗಲಿ, ಈ ವರ್ಷ ಅಲ್ಲಿ ಇನ್ನೊಂದು ಯೂನಿಟ್‌ನ ನಿರ್ಮಾಣ ಕಾರ್ಯವನ್ನು ತಾವು ಮಾಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇತ್ತೀಚೆಗೆ ಈ ರೇಷ್ಮೆ ನೂಲಿನ ದರವು ಬಹಳ ತೀವ್ರವಾಗಿ ಕುಸಿಯುತ್ತಿರುವ ಬಗ್ಗೆ ತಾವು ಆಲೋಚನೆ ಮಾಡಬೇಕು. ಕುಸಿಯುತ್ತಿರುವ ಬೆಲೆಯ ಪರಿಣಾಮವಾಗಿ ರೇಷ್ಮೆ ಗೂಡು ಬೆಳೆಯತಕ್ಕಂಥ ರೈತನಿಗೆ ನಷ್ಟವಾಗಿ ಬಹುಶಃ ಅದೇ ಪರಿಸ್ಥಿತಿ ಮುಂದುವರಿದಾಗ ರೇಷ್ಮೆ ಬೆಳೆಯತಕ್ಕಂಥ ರೈತರುಗಳಲ್ಲಿ ಆಸಕ್ತಿ ಹೋಗಬಹುದು. ಇದರ ಬಗ್ಗೆ ತಾವು ಗಮನವನ್ನು ಹರಿಸಿ ಕನಿಷ್ಟ ಪಕ್ಷ ಒಂದು ಕೆ. ಜಿ. ಗೆ ೧೦೦ ರೂಪಾಯಿಯಾದರೂ ನಿಗದಿ ಪಡಿಸದೇ ಹೋದರೆ ಬೆಳೆದಂತಹ ರೈತನಿಗೆ ಸಾಕಷ್ಟು ಅನುಕೂಲವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಇನ್ನು ಪಿ. ಎಸ್. ಎಫ್. ಬಗ್ಗೆ ಮರೆತಿದ್ದ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ಫೆಬ್ರಿಕ್ ಕಾಯಿಲೆಯನ್ನು ನಿಯಂತ್ರಣ ಮಾಡುವುದಕ್ಕೆ ಇನ್ನೊಂದು ಮಾರ್ಗೋಪಾಯ ನನಗೆ ಹೊಳೆಯುತ್ತಿದೆ. ತಾವು ಮಿಶ್ರ ಬೆಳೆಯನ್ನು ಬೆಳೆಯತಕ್ಕಂಥ ಪ್ರದೇಶದಲ್ಲಿ ಮತ್ತೆ ಬಿತ್ತನೆ ಗೂಡನ್ನು ಬೆಳೆಯತಕ್ಕ ವಲಯದಲ್ಲಿ ಪ್ರತ್ಯೇಕವಾದಂತಹ ರೇಷ್ಮೆ ಗೂಡುಗಳನ್ನು ಬೆಳೆಯತಕ್ಕಂಥ ಮನೆಗಳನ್ನು ಕಟ್ಟಿಸಿಕೊಡದೇ ಹೋದರೆ ಈ ರೋಗವನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನೀವು ಇದರ ಉತ್ತೇಜನಕ್ಕೋಸ್ಕರವಾಗಿ ಪ್ರೋತ್ಸಾಹಕರ ರೂಪದಲ್ಲಿ ಇನ್‌ಸೆಂಟೀವ್ಸ್ ಅನ್ನು ಅಂದರೆ ಸಬ್ಸಿಡಿ ಎನ್ನುತಕ್ಕ ಪದವನ್ನು ಬಳಸುವುದಿಲ್ಲ; ನೀವು ರೈತರುಗಳಿಗೆ ಇನ್‌ಸೆಂಟೀವ್‌ಗಳನ್ನು ಕೊಟ್ಟು ಪ್ರತ್ಯೇಕವಾದ ರೇಷ್ಮೆ ಗೂಡನ್ನು ಬೆಳೆಯತಕ್ಕ ಮನೆಗಳ ನಿರ್ಮಾಣಕ್ಕೆ ತಾವು ಒಂದು ಪರಿಣಾಮಕಾರಿಯಾದ ಮಾರ್ಗೋಪಾಯವನ್ನು ಕಂಡು ಹಿಡಿದು ಅದನ್ನು ಆಚರಣೆಗೆ ತರಬೇಕೆನ್ನುವಂತಹ ಮಾತನ್ನು ಹೇಳುತ್ತೇನೆ. ನಾನು ಅನೇಕ ಸಂದರ್ಭದಲ್ಲಿ ಈ ಫೆಬ್ರಿಕ್ ಕಾಯಿಲೆಯನ್ನು ನಿಯಂತ್ರಣ ಮಾಡುವ ರೀತಿಯಲ್ಲಿ ನಿಮ್ಮ ಮನಸ್ಸಿಗೆ ಹಾಗೂ ಅಧಿಕಾರಿಗಳ ಮನಸ್ಸಿಗೆ ನೋವಾಗುವ ರೀತಿಯಲ್ಲಿ ಮಾತನಾಡಿರುವುದು ನಿಜ. ಆದರೆ ಇವತ್ತು ನಾನು ನಿಜವಾಗಿಯೂ ನಿಮ್ಮ ಇಲಾಖೆಯ ಅಧಿಕಾರಿಗಳನ್ನು ಹಾಗೂ ತಮ್ಮ ಕಾರ್ಯ ವೈಖರಿಯನ್ನು ನಾನು ಮೆಚ್ಚಿ ತಮಗೆ ವಂದನೆಗಳನ್ನು ಹೇಳುತ್ತಾ ...

ಛೇರ್ಮನ್:- ಮಾನ್ಯ ಲಿಂಗಪ್ಪನವರೇ, ತಾವು ಕಾಂಪ್ರಮೈಸ್ ಆಗುತ್ತಿದ್ದೀರಾ?

ಶ್ರೀ ಸಿ. ಎಂ. ಲಿಂಗಪ್ಪ:- ಕಾಂಪ್ರಮೈಸ್ ಅಲ್ಲ, ವಸ್ತುಸ್ಥಿತಿಯನ್ನು ನಾನು ಸ್ಪಷ್ಟವಾಗಿ

ಹೇಳಬೇಕಾಗುತ್ತದೆ. ತಮ್ಮ ಇಲಾಖೆಯ ಮುಖ್ಯ ಅಧಿಕಾರಿಗಳು ಮತ್ತು ತಾಂತ್ರಿಕ ಪರಿಣಿತರಿಗೆಲ್ಲಾ ನಾನು ವಂದನೆಗಳನ್ನು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಚಿಕ್ಕಮಾದು (ಹುಣಸೂರು):- ಮಾನ್ಯ ಉಪಾಧ್ಯಕ್ಷಣಿಯವರೇ, ಈ ದಿನ ಸಭೆಯ ಮುಂದೆ ಮಂಡಿಸಿರತಕ್ಕಂಥ ಸುಮಾರು ೧೦ ಬೇಡಿಕೆಗಳನ್ನು ಅನುಮೋದಿಸುತ್ತಾ, ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಿಸುವುದಕ್ಕೆ ಇಚ್ಛಿಸುತ್ತೇನೆ. ಈ ಸಮಾಜ ಕಲ್ಯಾಣ ಇಲಾಖೆಯನ್ನು ಆ ಹೆಸರಿಗೆ ತಕ್ಕಂತೆ ಆ ಒಂದು ನಾಮಾಂಕಿತದಿಂದ ಹಿಂದಿನ ಹಿರಿಯರು ಕರೆದಿದ್ದಾರೆ. ಈ 'ಕಲ್ಯಾಣ' ಪದ ಇನ್ನೊಂದು ಪವಿತ್ರವಾದಂಥ ಸಂದರ್ಭದಲ್ಲಿ 'ಕಲ್ಯಾಣ' ಎನ್ನತಕ್ಕಂಥಾದ್ದು ಬರುತ್ತದೆ. ಅದು ಸಮಾಜದ ಯಾವುದೇ ಧರ್ಮದ ಒಂದು ಹೆಣ್ಣು ಮತ್ತು ಗಂಡು ಹೊಸ ಜೀವನವನ್ನು ಪ್ರಾರಂಭಿಸತಕ್ಕಂತ ಸಂದರ್ಭದಲ್ಲಿ ಬರುತ್ತದೆ ಕಲ್ಯಾಣ ಎಂಬುದರ ಅರ್ಥವೇನೆಂದರೆ ಒಂದು ಗಂಡು ಮತ್ತು ಒಂದು ಹೆಣ್ಣು ರೂಪಿಸತಕ್ಕಂಥ ಸಂದರ್ಭದಲ್ಲಿ ಈ ಪದವನ್ನು ಉಪಯೋಗಿಸುತ್ತೇವೆ. ಇವೊತ್ತು 'ಸಮಾಜ ಕಲ್ಯಾಣ' ಎಂದರೆ, ಈ ಸಮಾಜದಲ್ಲಿ ತುಳಿತಕ್ಕೆ ಒಳಗಾದಂಥ ಶೋಷಿತ ವರ್ಗಗಳಿಗೆ ಒಂದು ಕಲ್ಯಾಣವನ್ನು ರೂಪಿಸತಕ್ಕಂಥ ಒಂದು ಕಾರ್ಯಕ್ರಮಕ್ಕೆ 'ಸಮಾಜ ಕಲ್ಯಾಣ' ಎಂಬ ಹೆಸರನ್ನು ಬಹಳ ಅರ್ಥಗರ್ಭಿತವಾಗಿ ಅದಕ್ಕೆ ಸ್ಪಂದಿಸತಕ್ಕಂಥ ಹೆಸರಿನಿಂದ ಹಿಂದಿನ ಪೂರ್ವಿಕರು ಬಹಳ ಅನುಭವದಿಂದ ಕರೆದಿದ್ದಾರೆ. ಇಂತಹ ಒಂದು ಇಲಾಖೆ ನಿಜವಾಗಲೂ ಕೂಡ ಈ ಸಮಾಜದಲ್ಲಿ ಸರಿಯಾಗಿ, ಸಮರ್ಪಕವಾಗಿ ಕಾರ್ಯನಿರ್ವಹಿಸಿದರೆ ಇವೊತ್ತು ನಾವು ಯಾವ ಉದ್ದೇಶಕ್ಕಾಗಿ 'ಸಮಾಜ ಕಲ್ಯಾಣ' ವನ್ನು ಸಂವಿಧಾನದಲ್ಲಿ ಅಳವಡಿಸಿಕೊಂಡಿದ್ದಾರೆಯೋ, ಅದು ಖಂಡಿತವಾಗಲೂ ಅಂತಹ ವರ್ಗದ ಜನರಿಗೆ ನೂರಕ್ಕೆ ನೂರರಷ್ಟು ಅನುಕೂಲವಾಗಿ, ಅವರು ಮೇಲೆ ಬರುವುದಕ್ಕೆ ಸಾಧ್ಯವಾಗುತ್ತದೆನ್ನುವ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಿ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗ ಶೇಕಡ ೧೫ರಷ್ಟು ಹರಿಜನರಿಗೆ ಮತ್ತು ಶೇಕಡ ೩ರಷ್ಟು ಗಿರಿಜನರಿಗೆ ಈ ಮೀಸಲಾತಿಯನ್ನು ಹಿಂದಿನಿಂದಲೂ ಅನುಸರಿಸಿಕೊಂಡು ಬಂದಿದ್ದು, ೧೯೯೧-೯೨ನೇ ಸಾಲಿನಲ್ಲೂ ಸಹ ಅನುಸರಿಸುತ್ತಿದ್ದಾರೆ. ಇದು ೧೯-೪-೧೯೭೧ರಿಂದ ಕೇಂದ್ರ ಸರ್ಕಾರ ಈ ರಾಜ್ಯದ ೫ ಜಾತಿಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಿಕೊಳ್ಳುವಾಗಲೂ ಸಹ ಅಷ್ಟೇ ಮೀಸಲಾತಿಯನ್ನು ಮುಂದುವರೆಸುತ್ತಿರುವುದು ಶೋಚನೀಯವಾಗಿದೆ. ಆದಕ್ಕೋಸ್ಕರ ಮಾನ್ಯ ಮಂತ್ರಿಗಳು ಈ ವಿಚಾರದ ಬಗ್ಗೆ ಬಹಳ ಗಂಭೀರವಾಗಿ ಯೋಚಿಸಬೇಕು. ಒಂದು ಪರ್ಯಾಯ ಜಾತಿಗಳನ್ನು ಇದರಲ್ಲಿ ಸೇರಿಸುವಾಗ ಅಂದಿನ ಜನಸಂಖ್ಯೆಗಿಂತ ಇಂದು ೧೦ರಷ್ಟು ಜನಸಂಖ್ಯೆ ಅಧಿಕವಾಗಿದೆ. ಆದುದರಿಂದ, ಕೇಂದ್ರ ಸರ್ಕಾರದಲ್ಲಿ ಪರಿಶಿಷ್ಟ ವರ್ಗದವರಿಗೆ ಯಾವ ರೀತಿ ಏಳೂವರೆ ಪರ್ಸೆಂಟ್ ಮೀಸಲಾತಿ ಇದೆಯೋ, ಹಾಗೆಯೇ ರಾಜ್ಯ ಸರ್ಕಾರದವರು ಕೂಡ ಇವೊತ್ತಿನ ಜನಸಂಖ್ಯೆನುಗುಣವಾಗಿ ಅನುಕರಿಸಿದರೆ ಇತ್ತೀಚೆಗೆ ಸೇರಿದಂಥ ಜಾತಿಗಳಿಗೂ ಕೂಡ ಈ ಸವಲತ್ತುಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

೪.೫೫ ಪಿ. ಎಂ.

ಇನ್ನೊಂದು ವಿಚಾರವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ದಿನಾಂಕ ೧೭-೮-೧೯೮೪ರಲ್ಲಿ ಮತ್ತು ೨೮-೧೧-೧೯೮೪ರಲ್ಲಿ ಈ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಈ ಒಂದು ಜನಾಂಗದ ಪರ್ಯಾಯ ಪದಗಳಾದ 'ನಾಯಕ, ನಾಯಕ್, ಬೇಡ, ಬೇಡರ್, ವಾಲ್ಮೀಕಿ, ಪರಿವಾರ ಮತ್ತು ತಳವಾರ ಜಾತಿಗಳನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಶಿಫಾರಸ್ಸು ಮಾಡಿತ್ತು. ಈ ಶಿಫಾರಸ್ಸಿನ ಮೇರೆಗೆ ಕೇಂದ್ರ ಸರ್ಕಾರ ದಿನಾಂಕ ೧೯-೪-೧೯೯೧ರಿಂದ ಈ ಪದಗಳನ್ನು ಪರಿಶಿಷ್ಟ ಪಂಗಡವೆಂದು ಪರಿಗಣಿಸಿ ಒಂದು ಆಜ್ಞೆಯನ್ನೂ ಕೂಡ ಹೊರಡಿಸಿದೆ. ಇದಾದ ನಂತರ, ಈ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಜಿಲ್ಲೆಯ ವ್ಯಾಪ್ತಿಗೊಳಪಡತಕ್ಕಂಥ 'ಪರಿವಾರ ಮತ್ತು ತಳವಾರ' ಎಂಬ ಎರಡು ಪದಗಳನ್ನು ಕೈಬಿಟ್ಟಿರತಕ್ಕಂಥದ್ದು ನಿಜವಾಗಿಯೂ ವಿಷಾದನೀಯ ವಿಚಾರವಾಗಿದೆ. ಇದರ ಬಗ್ಗೆ ದಿನಾಂಕ ೫-೮-೯೧ರಂದು ಮೈಸೂರು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಈ ಪರ್ಯಾಯ ಪದಗಳಾದ 'ಪರಿವಾರ ಮತ್ತು ತಳವಾರ' ಪದಗಳನ್ನು ಕೈಬಿಟ್ಟಿರುವುದರ ಬಗ್ಗೆ ಮನವಿ ಮಾಡಿದ್ದಾರೆ. ಸರ್ಕಾರ ಈ ಹಿಂದೆ ದಿನಾಂಕ ೧೮-೫-೧೯೭೭ರಲ್ಲಿ ಆಜ್ಞೆ ಹೊರಡಿಸಿ, ಈ ಪರ್ಯಾಯ ಪದಗಳು ಯಾವುವು ಎನ್ನತಕ್ಕಂಥದ್ದರ ಬಗ್ಗೆ ಸ್ಪಷ್ಟೀಕರಣ ಕೇಳಿತ್ತು. ಈ 'ಬೇಡ' ಎಂಬ ಪದದೊಳಗೆ ೧೫ ಉಪ ಜಾತಿಗಳು ಬರುತ್ತವೆ. ಈ ೧೫ ಉಪ ಜಾತಿಗಳಲ್ಲಿ 'ಪರಿವಾರ' ಎನ್ನತಕ್ಕಂಥದ್ದು ಕೂಡ ಒಂದು ಉಪ ಜಾತಿ. ಈ ಪದವನ್ನು ಈ ಭಾಗದ ಜನ ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ನಮಗೆ ಒತ್ತಾಯ ತರುತ್ತಿದ್ದಾರೆಂದು, ಸರ್ಕಾರ ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಸರ್ಕಾರಕ್ಕೆ ದಿನಾಂಕ ೫-೮-೧೯೯೧ರಲ್ಲಿ ಒಂದು ಮನವಿ ಸಲ್ಲಿಸಿದ್ದು, ಇವತ್ತಿನವರೆವಿಗೂ ಈ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಯಾವುದೇ ರೀತಿಯಾದಂಥ ಸ್ಪಷ್ಟೀಕರಣ ಕೊಡದೇ ಇರತಕ್ಕಂಥದ್ದು ನಿಜವಾಗಿಯೂ ವಿಷಾದಕರ ವಿಚಾರ. ಆದುದರಿಂದ, ಈ ತಕ್ಷಣವೇ ಮಾನ್ಯ ಮುಖ್ಯ ಮಂತ್ರಿಗಳು ಈ ವಿಚಾರವನ್ನು ಪರಿಗಣನೆಗೆ ತೆಗೆದುಕೊಂಡು, ಪರಿಶೀಲಿಸಿ, ಇವರೂ ಕೂಡ ಆ ಸವಲತ್ತುಗಳನ್ನು ಪಡೆಯಲಿಕ್ಕೆ ಅರ್ಹರಾಗುವಂತೆ ಆದೇಶ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಈ ರಾಜ್ಯದ ಶ್ರೇಷ್ಠ ನ್ಯಾಯಾಲಯವೂ ಕೂಡ ಒಂದು ತೀರ್ಮಾನವನ್ನು ಈ ಉಪ ಜಾತಿಯ ಬಗ್ಗೆ ಕೊಟ್ಟಿದೆ. ಯಾವುದೇ ಒಂದು ಜಾತಿಗೆ ಒಂದು ಪಂಗಡ ಸೇರಿದಾಗ, ಆ ಜಾತಿಯ ಪರ್ಯಾಯ ಪದಗಳೂ ಕೂಡ ಆ ಪಂಗಡಕ್ಕೆ ಸಂಬಂಧಪಡುತ್ತದೆಂದು ತೀರ್ಮಾನವನ್ನು ಕೊಟ್ಟಿರತಕ್ಕ ಹಲವಾರು ಉದಾಹರಣೆಗಳು ನಮ್ಮ ಗಮನಕ್ಕೆ ಬಂದಿವೆ. ಉದಾಹರಣೆಗಾಗಿ ರಿಟ್ ಪಿಟಿಷನ್ ಸಂ. ೭೪೧/೯೧ರಲ್ಲಿ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಮೋಹನ್‌ರವರು ಒಂದು ತೀರ್ಮಾನವನ್ನು ಕೊಟ್ಟಿದ್ದಾರೆ. ಯಾವುದೇ ಒಂದು ಜಾತಿಯ ಪರ್ಯಾಯ ಪದಗಳು ಒಂದು ಪಂಗಡಕ್ಕೆ ಸೇರಿದಾಗ ಅವೆಲ್ಲವೂ ಕೂಡ ಆ ಒಂದು ಜಾತಿಗೆ ಸೇರುತ್ತದೆಂದು ಅವರು ತೀರ್ಮಾನವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ದಯಮಾಡಿ ಮಾನ್ಯ ಮಂತ್ರಿಗಳು ಗಮನಹರಿಸಿ ಇಂತಹ ಪರ್ಯಾಯ ಪದಗಳೂ ಕೂಡ ಒಂದೇ ಎಂಬ ಭಾವನೆಯನ್ನು ತಾವು ತೋರಿಸಿಕೊಡಬೇಕು ಅಥವಾ ಇಂತಹ ಪರ್ಯಾಯ ಪದಗಳನ್ನೂ ಸೇರಿಸಲು ತಮಗೆ ಏನಾದರೂ ಕಾನೂನಿನಲ್ಲಿ ಅಡಚಣೆ ಬಂದರೆ ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಇದನ್ನು ತಾವು ಶಿಫಾರಸ್ಸು ಮಾಡಬೇಕು. ಜೊತೆಗೆ ೨೩-೧-೧೯೮೭ರಂದು ಅಂದಿನ ಜನತಾ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿತ್ತು. ಏನು ಈ ಪರ್ಯಾಯ ಪದಗಳನ್ನು ನಾವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ, ಇವಕ್ಕೆ ಕೇಂದ್ರ ಸರ್ಕಾರದಿಂದ ಅನುಮೋದನೆ ಸಿಗುವವರೆಗೆ ಈ ಪರ್ಯಾಯ ಪದಗಳ ಜಾತಿಯವರು ತೆಗೆದುಕೊಂಡಿರುವ ಅರ್ಹತಾ ಪತ್ರದ ಆಧಾರದ ಮೇಲೆ ಈ ಸವಲತ್ತುಗಳನ್ನು ಮುಂದುವರಿಸಿಕೊಂಡು ಹೋಗಬೇಕು.

ಈ ರೀತಿ ಸವಲತ್ತುಗಳನ್ನು ಪಡೆದುಕೊಂಡಿರತಕ್ಕ ಅಭ್ಯರ್ಥಿಗಳಿಗಾಗಲೀ, ನೌಕರಿಯಲ್ಲಿರತಕ್ಕವರಿಗಾಗಲೀ, ಯಾವುದೇ ರೀತಿಯ ಕಾನೂನಿನ ಕ್ರಮವನ್ನು ಕೈಗೊಳ್ಳಬಾರದು ಎಂದು ಅವತ್ತೇ ಆಜ್ಞೆಯನ್ನು ಹೊರಡಿಸಿದ್ದಾರೆ. ಅದೇ ಆಜ್ಞೆಯನ್ನು ಇವತ್ತು ನಿಜವಾಗಿಯೂ ಮುಂದುವರಿಸಿದರೆ ಆ ಒಂದು ಪರ್ಯಾಯ ಪದಗಳಾದಂಥ ಪರಿವಾರ, ತಳವಾರ ಮತ್ತು ಇತರೇ ಉಪ ಜಾತಿಗಳಿಗೆ ಕೂಡ ಅನುಕೂಲವಾಗುತ್ತದೆ ಎನ್ನತಕ್ಕ ದೃಷ್ಟಿಯಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮೂಲಕ ತರುತ್ತೇವೆ. ಇವತ್ತು ಹಿಂದುಳಿದ ವರ್ಗಗಳ ಇಲಾಖೆಯ ಬಗ್ಗೆ ಹೇಳಬೇಕೆಂದರೆ ತುಂಬಾ ದುಃಖವಾಗುತ್ತದೆ. ಏಕೆಂದರೆ ದಿವಂಗತ ಶ್ರೀಮಾನ್ ದೇವರಾಜ್ ಅರಸುರವರು ೧೯೭೮ರಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಹಾವನೂರ್ ಆಯೋಗದ ವರದಿ ಜಾರಿಗೆ ಕೊಟ್ಟ ನಂತರ ಈ ರಾಜ್ಯದಲ್ಲಿ ಮತ್ತೊಂದು ಹಿಂದುಳಿದ ವರ್ಗಗಳ ಆಯೋಗ ಜಾರಿಗೆ ತರದೇ ಇರತಕ್ಕದ್ದು ಬಹಳ ವಿಷಾದನೀಯ. ಅವತ್ತು ಹಲವಾರು ಜಾತಿಗಳನ್ನು ಗುರುತಿಸಿ ಸರ್ಕಾರ ಆಜ್ಞೆಯನ್ನು ಹೊರಡಿಸಿತ್ತು. ಅದು ಆದನಂತರ ಇವತ್ತಿನವರೆಗೂ ಈ ರಾಜ್ಯದಲ್ಲಿ ಒಂದು ಹಿಂದುಳಿದ ವರ್ಗಗಳ ಆಯೋಗ ರಚನೆ ಮಾಡದಿರತಕ್ಕದ್ದು ಬಹಳ ವಿಷಾದನೀಯ. ಸಂವಿಧಾನ ಬದ್ಧವಾಗಿ ಈ ಒಂದು ಹಿಂದುಳಿದ ವಂಗಡಗಳನ್ನು ಗುರುತಿಸಲು ಸಂವಿಧಾನದ ಪರಿಚ್ಛೇದ ೧೫(೪) ಮತ್ತು ೧೬(೪)ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕವಾಗಿ ಮತ್ತು ಸರ್ಕಾರ ನೌಕರಿಯಲ್ಲಿ ಸೌಲಭ್ಯವನ್ನು ಕೊಡಬೇಕೆಂದು ಹೇಳಲಾಗಿದೆ. ಆದರೆ ಇಲ್ಲಿಯವರೆಗೂ ಕೂಡ ರಾಜ್ಯದಲ್ಲಿ ಇಂಥ ಒಂದು ಆಯೋಗವನ್ನು ರಚನೆ ಮಾಡದಿರತಕ್ಕದ್ದು ಬಹಳ ಅನ್ಯಾಯಕರವಾಗಿರತಕ್ಕದ್ದು. ಹಾವನೂರ್ ಆಯೋಗದ ನಂತರ ಹಿಂದಿನ ಜನತಾ ಸರ್ಕಾರ ವೆಂಕಟಸ್ವಾಮಿ ಆಯೋಗವನ್ನು ಹಿಂದುಳಿದ ವರ್ಗಗಳಿಗಾಗಿ ನೇಮಕ ಮಾಡಿದರು. ಆದರೆ ವೆಂಕಟಸ್ವಾಮಿ ಆಯೋಗದಲ್ಲಿ ಏನಿದೆ ಎನ್ನತಕ್ಕದನ್ನೇ ಈ ಸದನಕ್ಕೆ ಮಂಡನೆ ಮಾಡುವುದಕ್ಕೆ ಮೊದಲೇ ಕೆಲವು ವರ್ಗಗಳವರು ಅದನ್ನು ಬೀದಿ ಬೀದಿಯಲ್ಲಿ ಬೇಕಾದಷ್ಟು ರಾದ್ಧಾಂತವನ್ನು ಮಾಡಿದ ಕಾರಣ ಆ ಒಂದು ಆಯೋಗದ ವರದಿಯನ್ನು ಜಾರಿಗೆ ಕೊಡದಂಥದ್ದರ ಬಗ್ಗೆ ಕೂಡ ಆಗಿನ ಸರ್ಕಾರ ಗಮನ ಹರಿಸಲಿಲ್ಲ. ಅದನ್ನೂ ಕೂಡ ಸರ್ಕಾರ ಧಿಕ್ಕರಿಸಿತು. ಇದು ಆದ ಮೇಲೆ ಇತ್ತೀಚೆಗೆ ಮೂರನೇ ಆಯೋಗವನ್ನು ನ್ಯಾಯ ಮೂರ್ತಿಗಳಾದ ಚಿನ್ನಪ್ಪರೆಡ್ಡಿಯವರ ನೇತೃತ್ವದಲ್ಲಿ ರಚಿಸಿದರು. ಚಿನ್ನಪ್ಪ ರೆಡ್ಡಿಯವರ ಆಯೋಗವೂ ಸಹ ಈ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿ ಸುಮಾರು ೨-೩ ವರ್ಷಗಳಾಯಿತು. ಈ ಎರಡು ಎರಡೂವರೆ ವರ್ಷಗಳಿಂದ ಈ ಆಯೋಗದ ವರದಿಯಲ್ಲಿ ಏನು ಇದೆ ಎನ್ನತಕ್ಕದ್ದು ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದೇನೆಂದರೆ ಯಾವುದೇ ಒಂದು ವಿಚಾರವನ್ನು ಸಮಾಜದ ಮುಂದೆ ಇಟ್ಟಾಗ ಪರ ಮತ್ತು ವಿರೋಧ ಎರಡೂ ಕಂಡುಬರುತ್ತದೆ. ಆದರೆ ನೀವು ಈ ವರದಿಯನ್ನೇ ಸಾರ್ವಜನಿಕರ ಮುಂದೆ ಇಡದಿದ್ದರೆ, ಆ ವರದಿಯಲ್ಲಿ ಏನಿದೆ ಎನ್ನತಕ್ಕ ವಿಚಾರವು ಸಾರ್ವಜನಿಕರು ತಿಳಿಯದಿದ್ದಾಗ ಇದರ ಬಗ್ಗೆ ಲೋಪದೋಷವಿದೆ ಇದರಲ್ಲಿ ಹಲವಾರು ತೊಂದರೆಗಳಿವೆ ಇದನ್ನು ಜಾರಿಗೆ ತರಲು ಆಗುವುದಿಲ್ಲವೆಂದು ಹೇಳತಕ್ಕ ವಿಚಾರವನ್ನು ನಾನು ವಿರೋಧಿಸುತ್ತೇನೆ. ತಾವು ಮೊದಲು ವರದಿಯನ್ನು ಸಮಾಜದ ಮುಂದೆ ಇಡಿ. ಯಾವುದೇ ವಿಚಾರವಾದರೂ ಸಹ ಪರ ಮತ್ತು ವಿರೋಧ ಎರಡೂ ಇರುತ್ತದೆ. ಆದುದರಿಂದ ಮೊದಲು ಸರ್ಕಾರ ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿ ಏನು ಇದೆ ಎನ್ನತಕ್ಕದ್ದನ್ನು ಸ್ಪಷ್ಟವಾಗಿ ಈ ಸದನದ ಮೂಲಕ ಈ ರಾಜ್ಯದ ಜನತೆಯ ಮುಂದಿಡಬೇಕು ನಂತರ

ಬಂದ್ದಂಥ ಅಭಿಪ್ರಾಯಗಳ ಮೇರಗ ನೀವು ಅದರಲ್ಲಿ ಬದಲಾವಣೆಯನ್ನು ಮಾಡಿ. ಇವತ್ತು ನೀವು ಯಾವುದೇ ಒಂದು ಆಯೋಗವನ್ನು ಜಾರಿಗೆ ತಂದರೂ ಕೂಡ ಅದರಲ್ಲಿ ಸಾಕಷ್ಟು ಲೋಪದೋಷಗಳಿರುತ್ತದೆ. ತಮ್ಮ ಮೂಲಕ ಇವತ್ತು ಮನವಿ ಮಾಡಿಕೊಳ್ಳುವುದೇನೆಂದರೆ ಇವತ್ತಿಗೂ ಕೂಡ ನಮ್ಮ ಸಂವಿಧಾನದಲ್ಲಿ ತಿದ್ದುಪಡಿಯನ್ನು ಮಾಡುತ್ತಿದ್ದೇವೆ. ಸಂವಿಧಾನವನ್ನು ಜಾರಿಗೆ ಕೊಟ್ಟ ತಕ್ಷಣ ಅಲ್ಲಿರತಕ್ಕದ್ದೆಲ್ಲಾ ನೂರಕ್ಕೆ ನೂರು ಸರಿಯಾಗಿದೆ ಎಂದು ಯಾರೂ ಕೂಡ ಈವತ್ತೂ ಒಪ್ಪಿಲ್ಲ. ಇವತ್ತೂ ಕೂಡ ದೇಶದ ಸಂವಿಧಾನದಲ್ಲಿ ತಿದ್ದುಪಡಿ ಆಗತಕ್ಕ ಹಂತದಲ್ಲಿರುವಾಗ ಒಂದು ಆಯೋಗದ ವರದಿಯಲ್ಲಿ ಲೋಪದೋಷಗಳು ಕಂಡುಬರುವುದು ಸಹಜ. ಅಂತಹ ಲೋಪದೋಷಗಳನ್ನು ಸರಿಪಡಿಸತಕ್ಕದ್ದು ಸರ್ಕಾರದ ಹೊಣೆಯಾಗಿದೆ. ಅದನ್ನು ಸರಿಪಡಿಸೋಣ. ಆದರೆ ಆಯೋಗದ ವರದಿಯನ್ನು ಜಾರಿಗೆ ಕೊಡದಿದ್ದರೆ ಅದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಆದರೆ ಈವತ್ತು ಹಿಂದುಳಿದ ವರ್ಗದವರ ಗತಿ ಏನಾಗಿದೆ ಅಂದರೆ, ಯಾರು ಯಾವ ಗುಂಪಿಗೆ ಬರಬೇಕು ಎನ್ನತಕ್ಕದ್ದೇ ಅರ್ಥವಾಗುತ್ತಿಲ್ಲ. ಈವತ್ತು ಎ, ಬಿ, ಸಿ, ಡಿ, ಎಂದು ಗುಂಪುಗಳನ್ನು ಮಾಡಿದ್ದಾರೆ. ಇದರಲ್ಲಿ ಇವತ್ತು ಕೇವಲ ಮೂರು ಜಾತಿಗಳನ್ನು ಕೈಬಿಟ್ಟು ಇನ್ನು ಎಲ್ಲರನ್ನೂ ಕೂಡ ಹಿಂದುಳಿದ ವರ್ಗಕ್ಕೆ ಸೇರಿಸಿದ್ದಾರೆ. ಪಾಪ ಅವರು ಏನು ಮಾಡಿದ್ದರು? ಬ್ರಾಹ್ಮಣರು, ವೈಶ್ಯರು, ಜೈನರು ಈ ಮೂವರನ್ನು ಬಿಟ್ಟರೆ ಕರ್ನಾಟಕದಲ್ಲಿರತಕ್ಕ ಎಲ್ಲಾ ಜಾತಿಯವರೂ ಹಿಂದುಳಿದವರೇ, ಆದಕ್ಕೋಸ್ಕರ ಅವರನ್ನು ಕೂಡ ಇದರಲ್ಲಿ ಸೇರಿಸಿಬಿಟ್ಟರೆ ಮುಂದುವರೆದವರು ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಮಾನ್ಯ ಸಭಾಧ್ಯಕ್ಷಣಿಯವರೇ, ಆದಕ್ಕೋಸ್ಕರ ಇವತ್ತು ತಮ ಮೂಲಕ ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ...

ಛೇರ್ಮನ್:- ಚಿಕ್ಕಮಾದುರವರೇ, ನೀವು ಆಯೋಗದ ಬಗ್ಗೆ ಹೇಳುವುದಕ್ಕೆ ಈಗ ೫ ನಿಮಿಷ ತೆಗೆದುಕೊಂಡಿದ್ದೀರಿ; ಒಟ್ಟು ೧೦ ನಿಮಿಷ ನಿಮಗೆ ಕೊಟ್ಟಿರುವುದು, ನೀವು ಎಷ್ಟು ನಿಮಿಷದಲ್ಲಿ ಮುಗಿಸುತ್ತೀರಿ? ಬೇಗ ಮುಗಿಸಬೇಕು.

ಶ್ರೀ ಎಸ್. ಚಿಕ್ಕಮಾದು:- ಇವತ್ತು ಸುಮಾರು ೧೦ ಇಲಾಖೆಗಳ ಬೇಡಿಕೆಗಳನ್ನು ಮಂಡಿಸಿರುವುದರಿಂದ ನೀವು ಕೊಟ್ಟಿರತಕ್ಕಂತಹ ಕಾಲಾವಕಾಶ ನನಗೆ ಸಾಕಾಗುವುದಿಲ್ಲ. ಒಂದೊಂದು ಇಲಾಖೆಯ ಮೇಲೆ ಎರಡು ದಿನ ಚರ್ಚೆಗೆ ಅವಕಾಶ ಕೊಡಬೇಕೆಂದು ನೀವೇ ಸಭಾ ನಾಯಕರಿಗೆ ಮನವಿ ಮಾಡಿದ್ದೀರಿ. ಆದಕ್ಕೋಸ್ಕರ ನಿಮ್ಮ ಗಮನಕ್ಕೆ ಅದನ್ನು ತರುತ್ತಿದ್ದೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಏಕೆಂದರೆ, ನನಗಿಂತ ಹಿರಿಯ ಸದಸ್ಯರು ಈಗಾಗಲೇ ಎಲ್ಲವನ್ನೂ ಪ್ರಸ್ತಾಪ ಮಾಡಿದ್ದಾರೆ.

ಛೇರ್ಮನ್:- ಆಯಿತು, ಇನ್ನು ಮಾತನಾಡುವುದಕ್ಕೆ ೧೦-೧೨ ಜನರಿದ್ದಾರೆ. ತಾವು ೧೦ ನಿಮಿಷದಲ್ಲಿ ಮುಗಿಸಬೇಕು, ಹೇಳುವುದನ್ನು ಬಹಳ ಚುಟುಕಾಗಿ ಹೇಳಿದರೆ ಒಳ್ಳೆಯದು.

ಶ್ರೀ ಎಸ್. ಚಿಕ್ಕಮಾದು:- ಅಧ್ಯಕ್ಷಿಣಿಯವರೇ, ನನ್ನ ಮನವಿ ಇಷ್ಟೇ; ಇವತ್ತು ಹಿಂದುಳಿದ ವರ್ಗಗಳು ಗೊಂದಲಮಯದಲ್ಲಿ ಸಿಕ್ಕಿಕೊಂಡಿವೆ. ಇದಕ್ಕೆ ತಕ್ಷಣ ಪರಿಹಾರ ಆಗಬೇಕಾದರೆ ಇವತ್ತು ಏನು ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಆಯೋಗದ ವರದಿ ಸರ್ಕಾರದಲ್ಲಿದೆ, ಇದನ್ನು ಆದಷ್ಟು ಬೇಗ ಸಣ್ಣ-ಪುಟ್ಟ ಲೋಪದೋಷಗಳಿದ್ದರೆ, ಅದನ್ನು ಸರಿಪಡಿಸಿ ಯಾವ ಜಾತಿಯವರು ಆ ಪಟ್ಟಿಯಲ್ಲಿ ಸೇರುವುದಕ್ಕೆ ಅರ್ಹರಾಗಿದ್ದಾರೋ ಅಂತಹ ಜಾತಿಗಳನ್ನು ತಕ್ಷಣದಲ್ಲಿ ಸೇರಿಸಿ ಜಾರಿಗೆ ಕೊಟ್ಟರೆ

ಇತ್ತೀಚೆಗೆ ಆಗತಕ್ಕಂತಹ ನೇಮಕಾತಿಗಳಲ್ಲಿ ಹಿಂದುಳಿದವರಿಗೆ ನ್ಯಾಯ ದೊರಕುತ್ತದೆ. ಇವತ್ತು ೭೦೦೦ ಉಪಾಧ್ಯಾಯರನ್ನು ನೇಮಕ ಮಾಡಿಕೊಂಡಿರುವುದರಲ್ಲಿ ಮೀಸಲಾತಿಯನ್ನು ಅನುಸರಿಸದೇ ಇರುವುದರಿಂದ ಎಷ್ಟೋ ವರ್ಗಗಳಿಗೆ ಇವತ್ತು ಅನ್ಯಾಯವಾಗಿದೆ. ಅದಕ್ಕೋಸ್ಕರ ನ್ಯಾಯಮೂರ್ತಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯ ಬಗ್ಗೆ ಸರ್ಕಾರ ಆದಷ್ಟು ಶೀಘ್ರವಾಗಿ ಗಮನಹರಿಸಿ ಜಾರಿಗೆ ಕೊಟ್ಟರೆ ಸೂಕ್ತ ಎನ್ನುವುದನ್ನು ಹೇಳುತ್ತೇನೆ. ಇವತ್ತು ಯಾರನ್ನು ನಾವು ಮುಂದುವರಿದಿದ್ದಾರೆಂದು ಹೇಳುತ್ತೇವೆ, ಅಂದರೆ ನಾನು ಯಾರನ್ನೂ ಕೂಡ ಯಾವ ಜಾತಿಯವರನ್ನೂ ಕೂಡ ಗುರ್ತಿಸಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದರೆ, ಒಂದು ಮನವಿಯನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತೇನೆ, ಯಾರೇ ಆಗಿರಲಿ ಈ ಸಮಾಜದಲ್ಲಿ ಯಾರು ಅಸಮಾನತೆಯಿಂದ ಬಳಲುತ್ತಿದ್ದಾರೆ, ಅಂತಹವರಿಗೆ ಸಮಾನತೆಯನ್ನು ಕೊಡುವುದಕ್ಕೋಸ್ಕರ ಎಲ್ಲಾ ವರ್ಗದವರು ಮುಂದುವರಿದವರು, ಎಲ್ಲಾ ವರ್ಗಗಳ ಮುಖಂಡರುಗಳು, ರಾಜಕೀಯ ಪಕ್ಷಗಳು ಈ ಸದನದ ಸದಸ್ಯರು ಕೂಡ ಈ ವರ್ಗದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಇಂತಹ ಒಂದು ಆಯೋಗದ ವರದಿಯನ್ನು ಜಾರಿಗೆ ಕೊಡುವುದಕ್ಕೆ ಅವರ ಬೆಂಬಲ ಕೂಡ ಅತ್ಯಾವಶ್ಯಕ. ತಮಗೆ ಗೊತ್ತಿರುವಂತೆ ಕೇಂದ್ರದಲ್ಲಿ ಇವತ್ತು ಮಂಡಲ ಆಯೋಗವನ್ನು ಜಾರಿಗೆ ಕೊಟ್ಟಂತಹ ವಿ. ಪಿ. ಸಿಂಗ್‌ರವರು ಸರ್ಕಾರವನ್ನೇ ಕಳೆದುಕೊಂಡಂತಹ ಸಂದರ್ಭವಿದೆ. ಆದರೆ, ನಾನು ಒಂದು ಮನವಿ ಮಾಡುತ್ತೇನೆ; ಯಾರೇ ಆಗಿರಲಿ ಈ ಅಸಮಾನತೆಯನ್ನು ಹೋಗಲಾಡಿಸಬೇಕಾದರೆ ಯಾವುದಾದರೂ ಒಂದು ದಾರಿಯನ್ನು ನಾವು ಅನುಸರಿಸಬೇಕು. ಆ ದಿಕ್ಕಿನಲ್ಲಿ ಸರ್ಕಾರ ಇರಬಹುದು ಅಥವಾ ಸರ್ಕಾರ ಹೋಗಬಹುದು, ಅದು ಇವತ್ತು ನಮಗೆ ಮುಖ್ಯವಲ್ಲ. ಆದರೆ, ಯಾವ ವರ್ಗದ ಬಗ್ಗೆ ಇವತ್ತು ಯಾವುದೇ ಸರ್ಕಾರ ಕಾಳಜಿ ವಹಿಸಿಲ್ಲವೆಂದು ನಾವು ಮಾತನಾಡುತ್ತೇವೆ. ಅವರು ಈ ಜನಕ್ಕೆ ಸಾಮಾಜಿಕ ನ್ಯಾಯ ಕೊಡತಕ್ಕಂಥಾದ್ದು ಅತಿ ಮುಖ್ಯ. ಆದ್ದರಿಂದ, ಇವತ್ತು ಎಲ್ಲಾ ಪ್ರಭಲ ವರ್ಗಗಳು ಅಥವಾ ಮುಂದುವರಿದ ವರ್ಗಗಳೆಲ್ಲರ ಸಹಕಾರದಿಂದ ಅವರೆಲ್ಲರ ಬೆಂಬಲದಿಂದ ಸಮಾನತೆಯನ್ನು ತಂದು ಕೊಡಬೇಕು. ಅದರಲ್ಲೂ ಇವತ್ತು ಈ ರಾಜ್ಯದ ಹಿಂದುಳಿದ ವರ್ಗಗಳ ಏಕೈಕ ಮೊದಲನೆ ಮುಖ್ಯಮಂತ್ರಿಗಳು ಸನ್ಮಾನ್ಯ ಬಂಗಾರಪ್ಪನವರು. ಅಂತಹ ಒಬ್ಬರ ನೇತೃತ್ವದ ಸರ್ಕಾರವೂ ಕೂಡ ಹಿಂದುಳಿದ ವರ್ಗಗಳ ಸಮಾನತೆಗಾಗಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ಕೊಡಲಿಲ್ಲವೆಂದರೆ ಇನ್ನು ಯಾರ ನೇತೃತ್ವದಲ್ಲಿಯೂ ಸಹ ಹಿಂದುಳಿದ ವರ್ಗಗಳನ್ನು ಮೇಲಕ್ಕೆತ್ತಲು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಎಲ್ಲರೂ ಕೂಡಿ ಕೈ ಜೋಡಿಸಿ ಇವರನ್ನು ಬೆಂಬಲಿಸಿ ಈ ಒಂದು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೆ ಕೊಡುವುದಕ್ಕೆ ಹೆಚ್ಚಿನ ರೀತಿಯಲ್ಲಿ ಸಹಕರಿಸಬೇಕೆಂದು ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ):- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಸದನದ ಮುಂದಿಟ್ಟಿರತಕ್ಕಂತಹ ಎಲ್ಲಾ ಬೇಡಿಕೆಗಳಿಗೆ ನನ್ನ ಬೆಂಬಲ ಸೂಚಿಸುತ್ತೇನೆ. ಈಗ ರಾಜ್ಯ ಸರ್ಕಾರದ ಅಧೀನದಲ್ಲಿ ಸುಮಾರು ೨೫ ಬೃಹತ್ ಕಾರ್ಖಾನೆಗಳಿವೆ. ಈ ಕಾರ್ಖಾನೆಗಳು ಬಹುತೇಕ ನಷ್ಟದಲ್ಲಿವೆ. ಕಾರಣ, ಈ ಕಾರ್ಖಾನೆಗಳ ಮ್ಯಾನೇಜ್‌ಮೆಂಟ್ ಮತ್ತು ಕೆಲಸಗಾರರಲ್ಲಿ ಒಡಂಬಡಿಕೆ ಇಲ್ಲದೆ, ಆಸಕ್ತಿ ಇಲ್ಲದೆ ಇವು ನಷ್ಟಕ್ಕೆ ಒಳಪಟ್ಟಿವೆ. ಇಂದು ನಾನಾದರೂ ಹೇಳುತ್ತೇನೆ, ಅಲ್ಲಿಗೆ ಹೋದಂತಹ ಕಾರ್ಯ ನಿರ್ವಾಹಕ ಅಧ್ಯಕ್ಷರಾಗಲಿ ಮತ್ತು ಮಂಡಳಿಯ ಡೈರೆಕ್ಟರ್‌ಗಳಾಗಲೀ,

ಸ್ವಪೂರ್ವಕವಾಗಿ ಆಸಕ್ತಿಯಿಂದ ಈ ಕಾರ್ಖಾನೆಗಳ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗಿದೆ. ಇವತ್ತಿನ ದಿವಸ ಕರ್ನಾಟಕ ಸಾಬೂನು ಕಾರ್ಖಾನೆ ತುಂಬಾ ಹಳೆಯದಾಗಿದೆ. ಆ ಸಾಬೂನು ಕಾರ್ಖಾನೆಯ ಸಾಬೂನು ಇಡೀ ಪ್ರಪಂಚದಲ್ಲಿಯೇ ಹೆಸರುವಾಸಿಯಾಗಿದೆ. ಆದ್ದರಿಂದ ಯಾರೂ ಅದಕ್ಕೆ ಮಧ್ಯಸ್ಥಿಕೆಧಾರರು ಬೇಕಾಗಿಲ್ಲ. ಕಳೆದ ೪-೫ ವರ್ಷಗಳಿಂದೀಚೆಗೆ ಮಾರಾಟದ ಒಂದು ಫರ್ಮ್‌ನ್ನು ನೇಮಿಸಿದ ಮೇಲೆ ಇತ್ತೀಚೆಗೆ ಅದೂ ಸಹ ನಷ್ಟಕ್ಕೊಳಗಾಗಿದೆ. ಇವತ್ತಿನ ದಿವಸ ಮಾರಾಟದ ಸಿಬ್ಬಂದಿಗಳಿಗೆ ಸುಮಾರು ೬-೭ ಪರ್ಸೆಂಟ್ ಖರ್ಚಾಗುತ್ತದೆ. ಆದರೆ, ಹಿಂದೆ ಮಾರಾಟ ಮಾಡುತ್ತಿದ್ದಂತಹ ಏಜೆಂಟರುಗಳು ೩ ಪರ್ಸೆಂಟ್ ಮಾತ್ರ ಪಡೆಯುತ್ತಿದ್ದರು ಮತ್ತು ಮುಂಗಡವಾಗಿ ಕಾರ್ಖಾನೆಗೆ ಹಣವನ್ನು ಕೊಡುತ್ತಿದ್ದರು. ಈಗ ಅದನ್ನು ಬದಲಾವಣೆ ಮಾಡಿ ಇವತ್ತಿನ ದಿವಸ ಬೇರೆ ಮಾರಾಟದ ಸಿಬ್ಬಂದಿಯನ್ನು ನೇಮಿಸಿ, ಅವರು ಸುಮಾರು ೬-೭ ಪರ್ಸೆಂಟ್ ಕಮಿಷನ್ ಪಡೆಯುತ್ತಿರುವುದರಿಂದ ಅದು ನಷ್ಟಕ್ಕೊಳಗಾಗಿದೆ. ಜೊತೆಗೆ ಮ್ಯಾನೇಜ್‌ಮೆಂಟ್‌ನವರು ಸರಿಯಾದಂತಹ, ವ್ಯವಸ್ಥಿತವಾದಂತಹ ಕಚ್ಚಾ ವಸ್ತುಗಳನ್ನು ತರಿಸಬೇಕು. ಕಾರ್ಖಾನೆಯಲ್ಲಿ ಆಡಳಿತವರ್ಗದವರು ಕೆಲಸಗಾರರಿಗೆ ಕೆಲಸವನ್ನು ಕೊಡದೇ ಇರುವುದರಿಂದ ನಷ್ಟವಾಗುತ್ತಿದೆ. ಈ ದಿಸೆಯಲ್ಲಿ ಸರ್ಕಾರ ಯೋಚನೆ ಮಾಡಿ ಅಲ್ಲಿ ಮಾರಾಟದ ಸಿಬ್ಬಂದಿ ಏನಿದೆ ಅದನ್ನು ತಕ್ಷಣ ನಿಲ್ಲಿಸಿ ಅವಕ್ಕೆ ಏಜೆಂಟ್ಸ್ ನೇಮಕ ಮಾಡಿದರೆ ಸುಮಾರು ೪-೫ ಪರ್ಸೆಂಟ್‌ಗಿಂತ ಹೆಚ್ಚು ಹಣ ಈ ಕಾರ್ಖಾನೆಗೆ ಉಳಿತಾಯವಾಗುತ್ತದೆ. ಈ ರೀತಿ ಉಳಿತಾಯ ಮಾಡುವುದರಿಂದ ಕಾರ್ಖಾನೆಯ ನಷ್ಟ ಕಡಿಮೆಯಾಗುತ್ತದೆ ಮತ್ತು ಕೆಲಸಗಾರರಿಗೆ ಹಾಗೂ ಮ್ಯಾನೇಜ್‌ಮೆಂಟ್‌ನವರಿಗೆ ಪರಸ್ಪರ ಸಂಬಂಧ ಕಲ್ಪಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಕೂಡಲೇ ಮಾಡಬೇಕು. ಇನ್ನು ಮೈಸೂರು ಲ್ಯಾಂಪ್ಸ್ ವರ್ಕ್ಸ್ ಹಿಂದೆ ಏನು ನಷ್ಟದಲ್ಲಿತ್ತು ಅದನ್ನು ಮಾನ್ಯ ಮುನಿಸ್ವಾಮಿಯವರು ಹೋದಮೇಲೆ ಲಾಭದಲ್ಲಿ ನಡೆಯುತಕ್ಕ ರೀತಿಯಲ್ಲಿ ಮಾಡಿದ್ದಾರೆ. ಇದೇ ರೀತಿ ಮಾನ್ಯ ಗೋರೆಯವರೂ ಕೂಡ ಉತ್ತಮ ಕೆಲಸ ಮಾಡಿದ್ದಾರೆ. ಎಸ್. ಜಿ. ಎಫ್. ಅನ್ನೂ ಕೂಡ ನಷ್ಟದಿಂದ ಪಾರುಮಾಡಿ ಲಾಭದಲ್ಲಿ ಕೆಲಸ ಮಾಡುವಂತೆ ಮಾನ್ಯ ಬಿ. ಎಸ್. ಮುದ್ದಪ್ಪನವರು ಮಾಡಿದ್ದಾರೆ. ಇಂಥ ದಕ್ಷ ಅಧಿಕಾರಿಗಳನ್ನು ನೇಮಕ ಮಾಡಿ ಕಾರ್ಖಾನೆಯ ಮ್ಯಾನೇಜ್‌ಮೆಂಟ್‌ನ ಮತ್ತು ಕಾರ್ಮಿಕರ ಸಂಬಂಧವನ್ನು ಉತ್ತಮ ಪಡಿಸುವಂಥ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಧಿಕಾರಿಗಳ ಮತ್ತು ಅಧಿಕಾರೇತರರ ಒಂದು ಮಂಡಳಿಯನ್ನು ನೇಮಕ ಮಾಡಿದರೆ ಅವರು ಕಾರ್ಖಾನೆಯ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಚೆನ್ನಾಗಿ ಕೆಲಸ ಮಾಡುತ್ತಾರೆಂದು ಹೇಳಬಯಸುತ್ತೇನೆ. ಇದೇ ರೀತಿ ಮೈಸೂರಿನಲ್ಲಿ ಚಾಮುಂಡಿ ಮೆಷಿನ್ ಟೂಲ್ಸ್ ಎಂಬ ಒಂದು ಫ್ಯಾಕ್ಟರಿ ಇದೆ. ಅಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ಹೆಚ್. ಎಂ. ಟಿ.ಯಿಂದ ಕಚ್ಚಾ ವಸ್ತುಗಳನ್ನು ತರಿಸಿ ಕಾರ್ಮಿಕರಿಗೆ ಕೊಟ್ಟು ಕೆಲಸ ಮಾಡಿಸಬೇಕಾಗಿತ್ತು. ಆದರೆ ಅವರು ಕಚ್ಚಾ ವಸ್ತುಗಳನ್ನು ತರಿಸಿಕೊಡದೇ ಇರುವುದರಿಂದ ಆ ಕಾರ್ಖಾನೆಯ ಕಾರ್ಮಿಕರು ಸುಮ್ಮನೆ ಕೂತಿದ್ದು ಮನೆಗೆ ಹೋಗುತ್ತಿದ್ದಾರೆ. ಇದರ ಬಗ್ಗೆ ತಾವು ಗಮನಹರಿಸಿ ಚಾಮುಂಡಿ ಮೆಷಿನ್ ಟೂಲ್ಸ್ ಕಾರ್ಖಾನೆಯಲ್ಲಿ ಕಾರ್ಮಿಕರಿಗೆ ದಿನನಿತ್ಯದ ಉತ್ಪಾದನೆಗೆ ಅವಶ್ಯಕವಾದಂಥ ಕಚ್ಚಾ ವಸ್ತುಗಳನ್ನು ತರಿಸಿಕೊಡುವಂಥ ಕ್ರಮ ತೆಗೆದುಕೊಳ್ಳಬೇಕು. ಇದೇ ರೀತಿ ಕೆ. ಎಂ. ಐ. ಡಿ. ಬಿ. ಸಂಸ್ಥೆ ಇದೆ. ಅನೇಕ ಅಭಿವೃದ್ಧಿ ಸ್ಥಳಗಳಲ್ಲಿ ಇದನ್ನು ಸ್ಥಾಪನೆ ಮಾಡಿ ಸಣ್ಣ ಕೈಗಾರಿಕೆಗಳಿಗೆ ಹಣವನ್ನು ಹಂಚಿದ್ದಾರೆ. ಆದರೆ ಇವತ್ತು ಅನೇಕ ಸಣ್ಣ ಕೈಗಾರಿಕೆಗಳು ನಷ್ಟಕ್ಕೆ ಒಳಗಾಗಿವೆ.

ಇವುಗಳನ್ನು ಮಾರಾಟ ಮಾಡಿ ಅವರು ಬಿಡಿಸಿಕೊಂಡು ಹೋಗತಕ್ಕ ಸಂದರ್ಭದಲ್ಲಿ ಆ ಜಮೀನಿನ ರೇಟು ಹಿಂದೆ ಏನಿತ್ತು ಅದಕ್ಕಿಂತ ಇವತ್ತು ಹೆಚ್ಚು ಬೆಲೆಯಾಗಿದೆ. ಈ ದಿಸೆಯಲ್ಲಿ ಕೆ. ಎಸ್. ಎಫ್. ಸಿ.ಯಿಂದ ಏನು ಸಾಲವನ್ನು ತೆಗೆದುಕೊಂಡಿರುತ್ತಾರೆ, ಆ ಸಾಲದ ಹಣಕ್ಕೂ ಮತ್ತು ಕೊಡಬೇಕಾಗಿರತಕ್ಕಂಥ ಹಣಕ್ಕೂ ಸರಿಸಮಾನವಾಗಿದ್ದರೆ ಅವರು ಅದನ್ನು ಮಾರಾಟ ಮಾಡಿ ಬೇರೆ ಕಡೆ ಹೋಗುವಾಗ ಆ ಉದ್ಯೋಗಿಗಳು ಅರ್ಜಿ ಹಾಕಿಕೊಂಡರೆ ನೀವು ಬೇರೆ ಎಲ್ಲೂ ಸಾಲವನ್ನು ತೆಗೆದುಕೊಂಡಿಲ್ಲ ಎಂದು ಎನ್. ಓ. ಸಿ.ಯನ್ನು ತೆಗೆದುಕೊಂಡು ಬನ್ನಿ ಎಂದು ಕೆ. ಎ. ಐ. ಡಿ. ಬಿ.ಯವರು ಕೇಳುತ್ತಿದ್ದಾರೆ. ಆದರೆ ಇವರು ನಮಗೆ ಹಣವನ್ನು ಕೊಡುವವರೆಗೂ ಎನ್. ಓ. ಸಿ.ಯನ್ನು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ಕೆ. ಎ. ಐ. ಡಿ. ಬಿ.ಯವರೇ ಇದನ್ನು ಪರಿಶೀಲಿಸಿ ಅವರ ಸಾಲ ಮತ್ತು ಆಸ್ತಿ ಏನಿದೆ ಅವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡು ಅದು ಸರಿಸಮಾನವಾಗಿದ್ದರೆ ಅವರೇ ಆ ಆಸ್ತಿಯನ್ನು ಬೇರೆಯವರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇವತ್ತು ನಾನಾ ರೀತಿಯ ತೊಂದರೆಗಳಿಂದಾಗಿ ಈ ಸಣ್ಣ ಕೈಗಾರಿಕೆಗಳು ಬಹಳ ನಷ್ಟಕ್ಕೆ ಒಳಗಾಗುತ್ತಿವೆ. ಆದುದರಿಂದ ಮಾನ್ಯ ಸಣ್ಣ ಕೈಗಾರಿಕಾ ಸಚಿವರಯವರು ಈ ಬಗ್ಗೆ ಕೆ. ಎ. ಐ. ಡಿ. ಬಿ.ಯವರಿಗೆ ಒಂದು ಆದೇಶವನ್ನು ನೀಡಿ ಅವರು ಯಾರಾದರೂ ಬೇರೆಯವರಿಗೆ ಆಸ್ತಿಯನ್ನು ಪರಭಾರೆ ಮಾಡುತ್ತಾರೆಂದು ಕಂಡುಬಂದರೆ ಸಂಬಂಧಪಟ್ಟವರನ್ನು ಅಲ್ಲಿಗೇ ಕರೆಸಿಕೊಂಡು ಮಾತನಾಡಿ ಅವರೇ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕು. ಆದರೆ ನೀವೇ ಎನ್. ಓ. ಸಿ.ಯನ್ನು ತೆಗೆದುಕೊಂಡು ಬನ್ನಿ ಎಂದರೆ ಬಹಳ ಕಷ್ಟವಾಗುತ್ತದೆ. ಕೈಗಾರಿಕಾ ಇಲಾಖೆಯವರು ಬಹಳ ದಕ್ಷತೆಯಿಂದ. ಚೆನ್ನಾಗಿ ಕೆಲಸ ಮಾಡಬೇಕಾಗಿದೆ. ಈ ಯುವಕರಿಗೆ ಉದ್ಯೋಗವನ್ನು ಕೊಡತಕ್ಕ ಇಲಾಖೆ ಇದಾಗಿದೆ. ಇದಕ್ಕೆ ಒಳ್ಳೆಯ ಸಲಹೆಗಳನ್ನು ಕೊಟ್ಟು ಇಂಥಿಂಥ ಕೆಲಸಗಳನ್ನು ನೀವು ಮಾಡಿ ಎಂದು ತಿಳಿಸಿ ನಿರುದ್ಯೋಗಿ ಯುವಕರಿಗೆ ಉತ್ತೇಜನ ಕೊಡಬೇಕು. ವಿಶ್ವ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ಏನು ತಂದಿದ್ದಾರೆ ಅದರ ಬಗ್ಗೆ ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಬಹಳ ಆಸಕ್ತಿಯನ್ನು ವಹಿಸಿದ್ದಾರೆ. ಆದರೆ ಅಷ್ಟೇ ಆಸಕ್ತಿ ಈ ಇಲಾಖೆಯವರಿಗೆ ಇಲ್ಲ. ಈ ಇಲಾಖೆಯನ್ನು ಚುರುಕು ಮಾಡಲು ಸಣ್ಣ ಕೈಗಾರಿಕಾ ಮಂತ್ರಿಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರದ ಪರವಾಗಿ ಸಾಲವನ್ನು ಕೊಟ್ಟು ಯುವಕರಿಗೆ ತರಬೇತಿ ನೀಡಬೇಕು. ಹಾಗೂ ವಿಶ್ವ ಕಾರ್ಯಕ್ರಮ ಸಮರ್ಪಕವಾಗಿ ಜಾರಿ ಆಗುವಂತೆ ನೋಡಿಕೊಳ್ಳಬೇಕು. ವಿಶ್ವ ಯೋಜನೆಯ ಜೊತೆಯಲ್ಲಿ ಹಿಂದೆ ಇದ್ದಂತಹ ಸ್ವಂತ ಕೆಲಸಗಳನ್ನು ಸಹ ಸೇರಿಸಿ, ಈ ನಿರುದ್ಯೋಗಿ ಯುವಕರಿಗೆ ಒಂದು ಕೆಲಸವನ್ನು ಕೊಡಬೇಕು. ದಿನೇ ದಿನೇ ಈ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಾ ಹೋದರೆ ಸಮಾಜವಲ್ಲಿ ಬೇರೆ ಒಂದು ರೀತಿಯ ಬದಲಾವಣೆಯಾಗುತ್ತದೆ. ಆಗ ಕೆಟ್ಟ ದೃಷ್ಟಿ ಸರ್ಕಾರದ ಮೇಲೆ ಬೀಳುತ್ತದೆ. ಅವರು ಸುಮ್ಮನೆ ಕುಳಿತುಕೊಂಡು ಕೆಟ್ಟ ಆಲೋಚನೆಯನ್ನು ಮಾಡುವಂಥ ಪರಿಸ್ಥಿತಿ ಬರುತ್ತದೆ. ಈ ದಿಸೆಯಲ್ಲಿ ತಾವು ಈ ಇಲಾಖೆಗೆ ಒಂದು ಚುರುಕನ್ನು ಮುಟ್ಟಿಸಿ ಹೆಚ್ಚಿನ ರೀತಿಯಲ್ಲಿ ಅದು ಕೆಲಸ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಸಣ್ಣ ಕೈಗಾರಿಕಾ ಮಂತ್ರಿಗಳಲ್ಲಿ ನಾನು ವಿನಂತಿಸಿಕೊಳ್ಳುತ್ತೇನೆ. ಹಾಗೆಯೇ ರಸ್ತೆ ಸಾರಿಗೆ ಸಂಸ್ಥೆ ಬಗ್ಗೆ ಹೇಳಬೇಕೆಂದರೆ, ಬೆಂಗಳೂರು ನಗರದಲ್ಲಿ ಸ್ವಂತ ವೆಹಿಕಲ್ಸ್ ಇಟ್ಟಿರುವವರು ತಮ್ಮ ಲೂನಾ, ಸ್ಕೂಟರ್‌ಗಳನ್ನೆಲ್ಲಾ ಮನೆಯಲ್ಲಿಯೇ ಇಡುವಂಥ ಪರಿಸ್ಥಿತಿ ಉಂಟಾಗಿದೆ ಏತಕ್ಕೆಂದರೆ, ಪೆಟ್ರೋಲ್ ಬೆಲೆ ಜಾಸ್ತಿಯಾಗಿದೆ. ಜೊತೆಯಲ್ಲಿ ಬೆಂಗಳೂರು ನಗರದ ಜನಸಂಖ್ಯೆ ಹೆಚ್ಚಿರುವ ಕಾರಣ ಬೆಂಗಳೂರು ನಗರದ ನಾಗರೀಕರಿಗೆ ವಾಹನ ಸೌಲಭ್ಯವನ್ನು

ಹೆಚ್ಚಿಸಬೇಕೆಂದು ಮಾನ್ಯ ಸಾರಿಗೆ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಈಗ ಕಛೇರಿಯ ನಿಗದಿತ ವೇಳೆಯಲ್ಲಿ ನಿಯಮದ ಪ್ರಕಾರ ವಾಹನಗಳನ್ನು ಓಡಿಸತಕ್ಕಂಥಾದ್ದನ್ನು ಸರಿಯಾದ ರೀತಿಯಲ್ಲಿ ಮಾಡುತ್ತಿಲ್ಲ. ಚಾಲಕರು ಈ ದಿಸೆಯಲ್ಲಿ ಕಟ್ಟುನಿಟ್ಟಾಗಿ ೭ ಗಂಟೆಗೆ ಕೆಲಸ ಪ್ರಾರಂಭ ಮಾಡಬೇಕೆಂದಿದ್ದರೂ ಸಹ ೭ ಗಂಟೆಗೆ ಬರುವುದು, ಮಧ್ಯದಲ್ಲಿ ಅವರ ಟಾರ್ಗೆಟ್ ವನಿದೆ, ಅದನ್ನು ಮುಗಿಸಬೇಕೆಂದು ಸಿಕ್ಕಾ ಪಟ್ಟೆ ಓಡಿಸಿ, ಯದ್ವಾತದ್ವಾ ಓಡಿಸಿ ಅಪಘಾತಗಳಿಗೆ ಕಾರಣರಾಗುತ್ತಿದ್ದಾರೆ. ಈ ದಿಸೆಯಲ್ಲಿ ಮಾನ್ಯ ಸಾರಿಗೆ ಮಂತ್ರಿಗಳು ಯೋಚನೆ ಮಾಡಿ ಇಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇವತ್ತಿನ ದಿವಸ ಸಾರಿಗೆ ವಾಹನಗಳ ಓಡಾಟ ಇನ್ನೂ ಜಾಸ್ತಿಯಾಗಬೇಕು. ಈಗ ಬಹಳ ಕಡಿಮೆ ಇದೆ. ಹಾಗೆಯೇ ರೋಡ್ ಟ್ರಾನ್ಸ್‌ಪೋರ್ಟ್ ಕಛೇರಿಯಲ್ಲಿ ಸರ್ಕಾರದ ಹಣ ಲಾಸ್ ಆಗುವುದಿಲ್ಲ. ಆದರೆ, ಸಾರ್ವಜನಿಕರ ಹಣ ಲಾಸ್ ಆಗುತ್ತಿದೆ. ಈ ದಿಸೆಯಲ್ಲಿ ಇವತ್ತಿನ ದಿವಸ ಬೆಂಗಳೂರು ನಗರವನ್ನು ೫-೬ ಭಾಗಗಳನ್ನಾಗಿ ಮಾಡಿದ್ದಾರೆ. ಅದೇ ರೀತಿ ಕೆಲಸದ ಒತ್ತಡವೂ ಜಾಸ್ತಿ ಇದೆ. ಆದರೆ, ರೋಡ್ ಟ್ರಾನ್ಸ್‌ಪೋರ್ಟ್ ಆಫೀಸಿನವರು ಅಂದರೆ, ಇಂದಿರಾನಗರದಲ್ಲಿರತಕ್ಕಂಥವರು ನಾವು ಪೋಲೀಸರಿಗೆ ಹಣವನ್ನು ಕೊಡಬೇಕೆಂದು ಒತ್ತಡವನ್ನು ತರುತ್ತಿದ್ದಾರೆ. ಮತ್ತು ವಾಹನಗಳ ಮಾಲೀಕರಿಗೆ ಒತ್ತಡ ತಂದು ಅನೇಕ ರೀತಿಯ ತೊಂದರೆಗಳನ್ನು ಕೊಡುತ್ತಿದ್ದಾರೆಂದು ಎಲ್ಲಾ ಮಾನ್ಯ ಶಾಸಕ ಸ್ನೇಹಿತರುಗಳಿಗೂ ಕೂಡ ಒಂದು ಲೆಟರ್‌ನ್ನು ಕಳುಹಿಸಿರುತ್ತಾರೆ. ಮಾನ್ಯ ಸಾರಿಗೆ ಸಚಿವರು ತಕ್ಷಣ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು. ಸಸ್ಪೆಂಡ್ ಮಾಡಿ ಅವರನ್ನು ತನಿಖೆಗೆ ಒಳಪಡಿಸಬೇಕು. ತಿಮ್ಮಾರೆಡ್ಡಿ ಎಂಬ ಅಧಿಕಾರಿ ತಾನು ಪೋಲಿಸ ಅಧಿಕಾರಿಗೆ ಹಣವನ್ನು ಕೊಡಬೇಕು, ಮಂತ್ರಿಗಳಿಗೆ ಹಣ ಕೊಡಬೇಕೆಂದು ಹೇಳಿ ವಸೂಲಿ ಮಾಡುತ್ತಿದ್ದಾರೆ. ಇಂದಿರಾನಗರದ ಆರ್. ಟಿ. ಓ. ರವರು ಈ ರೀತಿ ಮಾಡುತ್ತಿದ್ದಾರೆ. ಅಂತಹವರನ್ನು ದಯವಿಟ್ಟು ಸಸ್ಪೆಂಡ್ ಮಾಡಿ. ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರತಕ್ಕಂಥ ಅಧಿಕಾರಿಗಳನ್ನು ಸಾರ್ವಜನಿಕ ಸಂಪರ್ಕ ಇರುವಂಥ ಇಲಾಖೆಯಲ್ಲಿ ನೇಮಿಸಬಾರದೆಂದು ಹೇಳಿ, ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

DERRICK M. B. FULLINFAW (Nominated):- Respected Speaker, I have mentioned several times that the plight of the Anglo-Indian Community, almost 90 percent of the Anglo-Indian Community is severaly poverty stricken community. Besides, the condition of atleast fifty percent of the Anglo Indian Community particularly those living in Bangalore City, KGF are in a highly deplorable condition. I therefore, appeal to the Hon'ble Social Welfare Minister to introduce some schemes for the rehabilitation of 40 to 50 percent of the Anglo Indian Community whose condition is miserable. The high cost of living in Bangalore City and other Urban areas in Karnataka where the majority of the Anglo Indian Community resides, makes the life of the Anglo Indian Community all the

more difficult and miserable and very survival of the Anglo Indian is threatened. A good portion of the Anglo Indian Community is homeless seeking temporary shelter in their places of employment. A large number of middle aged and unemployed adults and aged destitutes of the Anglo Indian Community take temporary shelter in railway platforms, bus stands, parks and other places. An enquiry into the living conditions of the anglo Indian community has never been conducted for the past forty years. If you trace the growth of the Anglo Indian community, there is no growth and in fact there is a steep decline. The condition of the Community has been deteriorating from bad to worst and from worst to miserable. I therefore appeal to the Hon'ble Chief Minister and the Hon'ble Social Welfare Minister to conduct an enquiry-cum-census into the living conditions of the anglo Indian community in Karnataka State. I, as a Member of the Community, as a representative of this community, I feel I am entitled to this information, I feel the Government is also entitled to this information and it is only on this basis of this information, will put us in a better position to solve the problems of the Anglo Indian Community. I make an appeal to the Hon'ble Social Welfare Minister as well as to the Chief Minister of Karnataka to conduct an enquiry into the living conditions of the Anglo Indian Community. Such an enquiry is not new. In States like Kerala, there have been several enquiries into the living conditions of the Anglo Indian Community and on the basis of this enquiry report, the Government of Kerala has taken appropriate steps to uplift the community in Kerala. Likewise, I appeal to our Hon'ble Social Welfare Minister that this enquiry should be conducted in Karnataka as soon as possible so that on the basis of the report, the community can hope to achieve some relief. Article 46 of the Constitution which was earlier mentioned me states "The States shall be moved with special care the

educational and economical in the interest of the weaker sections of the Society and protect them from social injustices and other forms of exploitation". Madam has mentioned in her speech also that the Anglo Indian Community without any doubt is a weaker section of the society and that's why the Constitution of India has given us representation in Parliament and the State Legislatures. If you are an affluent community, the need for nominating the MPs and MLAs to represent the Communities interest would not have arisen and continued till today. So definitely under Article 46, the State Government has a responsibility to protect the weaker sections of Society namely the Anglo Indian Community and I call upon the State Government to come forward to come to the rescue of the downtrodden, the Anglo Indian Community. Before 1960, the Anglo Indian Community had employment reservations in Central Government Undertakings like the Railways, Posts and Telegraphs etc. The cessation or stoppage of these concessions in 1960 was virtually a death blow to the Anglo Indian Community. In one of my replies to the questions pertaining to the Social Welfare Department it was stated that only three Anglo Indians employed in the State Government services, one is in KGID, one is in Police Department and one is in Youth Services Department. This clearly demands that the Anglo Indian Community is a very badly neglected community. Sir, it was for the past forty years nothing much has been done for the Anglo Indian Community. I can say only from 1984 to 1990 the previous Governments introduced certain schemes for the welfare of the Anglo Indian Community. One such scheme was free education for Anglo Indian students studying from Standard 1 to Standard 10 and one was the reservation of medical and engineering seats and at that time I criticised these concessions saying that the concessions will only benefit ten percent of the Anglo Indian Community. I therefore request our

Government that something should be done for the Anglo Indian Community. In July 1990 the Social Welfare Minister gave an assurance in the House that special schemes will be introduced for the Anglo Indian Community. I will just quote from the newspaper cutting: 7th July, 1990: under the headlines "Special schemes for Anglo Indians" - the Government will ask the Minority Commission to work out special programmes for the upliftment of the Anglo Indian Community - the Law and Parliamentary Affairs Minister Mr. Veerappa Moily told the Assembly today. Madam almost 2-1/2 years have passed, we have not heard what are those special Schemes. In August 26th, 1990, the Hon'ble Minister for Social Welfare had a meeting of the Anglo Indian Community wherein he agreed to consider their demands. I am quoting a report from the Indian Express dated August 26th, 1990, which reads thus:**"SCHEMES FOR ANGLO-INDIAN'S UPLIFT PROMISED".** "The Social Welfare Minister Mr. B. Shivanna agreed with Mr. Fullinfaw's suggestion for an Anglo Indian Penal and said, he would work out the details for such a Committee. The Social Welfare Minister B. Shivanna on Saturday assured the Anglo-Indian community that the Government would formulate schemes to help them after studying their problems in depth".

I am greatful to the Hon'ble Minister for Social Welfare to come out with his assurance and he has given our community the real hope. However, for the past 2-1/2 years nothing has really reached the community. I would like to know from the Hon'ble Minister as to when he plans to introduce these schemes for the welfare of Anglo Indian Community. I take this opportunity to appeal to the Hon'ble Minister to implement these schemes as soon as possible because there is great sense of urgency since majority of the Anglo Indian Community is suffering and virtually living on a day-to-day basis. I am happy that our Hon'ble Chief Minister has kept in

this year's budget a fairly good amount of Rs. 2 crores for the welfare of the Minorities in Karnataka State. I would like to know, what is the share of the Anglo Indian Community in this. I want the Social Welfare Department to treat this Anglo Indian Community as distinct minority. The Anglo Indian Community is not a distinct community. It is wrong to think that it is a Christian community. The Anglo-Indian is a distinct community recognised by the Constitution and also given protection in the form of representatives in the Parliament and State Legislatures. Therefore, the Anglo-Indian community is a linguistic minority. It is the only minority having its mother-tongue as English. Apart from this we are also a religious minority because majority of them are christians. I request the Hon'ble Minister for Social Welfare to allot a substantial amount of money out of Rs. 2 crores for the welfare of Anglo Indian community, a sizeable amount which will be used for the welfare of the Anglo Indian community.

Lastly, as I mentioned earlier, the State Government should run homes for the aged and for the destitutes as promised by the Hon'ble Minister. It was my suggestion that even if the Government is unable to run, I appeal to the Government to provide lands, buildings and other infrastructure which could help the voluntary organisations who run these homes for the aged. There are so many voluntary organisations who are ready to run but all they need is little assistance. I request the Soical Welfare Department to extend possible assistance to them. I thank Madam Deputy Speaker for having given me an opportunity to speak on this demand.

೨೫.೨೫ ಪಿ. ಎಂ.

+ಶ್ರೀ ಷಫಿ ಅಹಮದ್ (ತುಮಕೂರು):- ಮಾನ್ಯ ಅಧ್ಯಕ್ಷಣಿಯವರೇ, ಇವತ್ತು ಏನು ಹತ್ತು ಡಿಮ್ಯಾಂಡ್‌ಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ ಇವುಗಳಿಗೆ ನನ್ನ ಒಪ್ಪಿಗೆಯನ್ನು ಕೊಡುತ್ತಾ ಪ್ರಥಮವಾಗಿ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವುದಕ್ಕೆ ಇಷ್ಟ ಪಡುತ್ತೇನೆ.

ಇವತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಪ್ರಥಮವಾಗಿ ವಿಶ್ವ ಕಾರ್ಯಕ್ರಮದ ಬಗ್ಗೆ ನಮ್ಮ ಪ್ರಧಾನಿಯವರನ್ನು ಕರೆಸಿ ಈ ಕಾರ್ಯಕ್ರಮವನ್ನು ಇಡೀ ಕರ್ನಾಟಕದಲ್ಲೇ ಅಲ್ಲ, ಭಾರತದಲ್ಲೇ ಪ್ರಸಿದ್ಧಿಯಾಗುವಂತೆ ಮಾಡಿದ್ದಾರೆ. ಇದಕ್ಕಾಗಿ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಇವತ್ತು 'ವಿಶ್ವ' ಕಾರ್ಯಕ್ರಮದಲ್ಲಿ ಸುಮಾರು ೧೫ ಸಾವಿರ ಫಲಾನುಭವಿಗಳನ್ನು ಗುರುತಿಸಿ ೭೫೦೦ ಜನರಿಗೆ ಅವಕಾಶ ಕಲ್ಪಿಸಲಾಗಿದೆ. ಇವತ್ತು ೫ ಲಕ್ಷ ಜನರಿಗೆ ಅಧಿಕ ಉದ್ಯೋಗ ಅವಕಾಶ ಕಲ್ಪಿಸಲಾಗುತ್ತಿದೆ. ಇವತ್ತು ಸುಮಾರು ೧.೧೫ ಲಕ್ಷ ಅತಿ ಸಣ್ಣ ಘಟಕಗಳನ್ನು ಗುಡಿ ಮತ್ತು ಗ್ರಾಮಾಂತರ ವಲಯದಲ್ಲಿ ಐಡೆಂಟಿಫೈ ಮಾಡಿದ್ದೇವೆ. ಅದೇ ರೀತಿ ೫೦ ಸಾವಿರ ಜನರಿಗೆ ಕೆಲಸ ಕೊಟ್ಟಿದ್ದೇವೆ. ವಿಶ್ವ ಕಾರ್ಯಕ್ರಮದ ಅಡಿಯಲ್ಲಿ ಬಡವರ ಬಗ್ಗೆ ವಿಚಾರ ಮಾಡಿ, ಅವರು ತಯಾರು ಮಾಡುವ ಪದಾರ್ಥಗಳನ್ನು ಇವತ್ತು ವಿದೇಶಗಳಿಗೂ ಕೂಡ ರವಾನೆ ಮಾಡಿದ್ದೇವೆ. ವಿಶ್ವ ಯೋಜನೆಯ ಅಡಿಯಲ್ಲಿ ಕಾಯಿರ್ ಇಂಡಸ್ಟ್ರಿ ಕೂಡ ಹೆಚ್ಚಿನ ಪಾತ್ರ ವಹಿಸಿ ಸುಮಾರು ೫೦೦ ಜನರಿಗೆ ಯೂನಿಟ್ಸ್ ಮಾಡಿ ಕೊಟ್ಟಿದ್ದಾರೆ. ಅದೇ ರೀತಿ ೧೫೦೦ ಜನರಿಗೆ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಮುಖಾಂತರ ಕೆಲಸ ಕೊಡಲಾಗಿದೆ. ಅದೇ ರೀತಿ ಇವತ್ತು ಕಾಯಿರ್ ಕಾರ್ಪೋರೇಷನ್‌ಗೆ 'ವಿಶ್ವ' ಕಾರ್ಯಕ್ರಮದಡಿಯಲ್ಲಿ ಬಹಳ ಕಡಿಮೆ ಅವಕಾಶ ಕೊಟ್ಟಿದ್ದೀರಿ. ಅದನ್ನು ಈಗ ಹೆಚ್ಚು ಮಾಡಬೇಕು. ಏಕೆಂದರೆ ಇವತ್ತು ಅಗ್ರಿಕಲ್ಚರ್ ಬೇಸ್ಡ್ ಇಂಡಸ್ಟ್ರೀಸ್‌ಗೆ ಹೆಚ್ಚು ಉತ್ತೇಜನ ಕೊಟ್ಟಷ್ಟೂ ಅದರಿಂದ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡುವುದಕ್ಕಾಗುತ್ತದೆ. ಇವತ್ತು ಅಗ್ರಿಕಲ್ಚರ್ ಬೇಸ್ಡ್ ಇಂಡಸ್ಟ್ರೀಸ್‌ನಲ್ಲಿ ಇಡೀ ದೇಶದಲ್ಲಿ ೪ ಪರ್‌ಸೆಂಟ್ ಸೇಲ್ಸ್ ಟ್ಯಾಕ್ಸ್ ಕಲೆಕ್ಟ್ ಮಾಡಿದರೆ ನಮ್ಮ ರಾಜ್ಯದಲ್ಲಿ ೮ ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಕಲೆಕ್ಟ್ ಮಾಡುತಿದ್ದಾರೆ. ಅದನ್ನು ಕಡಿಮೆ ಮಾಡಿ ಇವತ್ತು ಈ ಇಂಡಸ್ಟ್ರೀಗೆ ಉತ್ತೇಜನ ಕೊಟ್ಟರೆ ಬಹಳ ಒಳ್ಳೆಯದು. ಅದರಲ್ಲೂ ರಬ್ಬರ್ಸ್ ಕಾಯಿರ್ ಇಂಡಸ್ಟ್ರೀ ನಮ್ಮಲ್ಲಿ ಕೆಲವೇ ಇವೆ. ಕನ್‌ಸೈನ್‌ಮೆಂಟ್ ಸೇಲ್ ಅಂತ ಹಾಕಿ ಬೇರೆ ರಾಜ್ಯದವರು ೪ ಪರ್‌ಸೆಂಟ್ ಹಾಕಿರುವುದರಿಂದ ನಮ್ಮ ರಾಜ್ಯಕ್ಕೆ ಇದರಿಂದ ಹಾನಿ ಆಗಿದೆ. ನಮ್ಮ ರಾಜ್ಯದಲ್ಲೂ ೪ ಪರ್ಸೆಂಟ್ ಟ್ಯಾಕ್ಸ್ ವಸೂಲಿ ಮಾಡಿದರೆ ನಮ್ಮ ರಾಜ್ಯಕ್ಕೂ ಹೆಚ್ಚಿನ ವರಮಾನ ಬರುತ್ತದೆ. ಇವತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗೆ ಬಂದರೆ ೧೯೯೧ರಲ್ಲಿ ೫೨೪೪ ಯೂನಿಟ್ಸ್‌ನಲ್ಲಿ ಇನ್‌ವೆಸ್ಟ್ ಮಾಡಿದ್ದು ೯೪೦೮.೮೫ ಲಕ್ಷ ರೂಪಾಯಿಗಳು. ಇದರ ಮುಖಾಂತರ ಪರ್ಸನ್ಸ್ ಎಂಪ್ಲಾಯ್ಡ್ ೩೧೦೮೫. ಆದರೆ ಇವತ್ತು ಈ ಇಂಡಸ್ಟ್ರೀಗಳು ಬಹಳ ಮಟ್ಟಿಗೆ ಸಿಕ್ ಇಂಡಸ್ಟ್ರೀಗಳಾಗಿವೆ. ಇವತ್ತು ನಮ್ಮ ಸಣ್ಣ ಕೈಗಾರಿಕೆ ಮಂತ್ರಿಗಳು ಯುವಕರು ಇದ್ದಾರೆ. ಬಹಳ ಉತ್ಸಾಹದಿಂದ ಅವರು ಕೆಲಸ ಮಾಡುತ್ತಿದ್ದಾರೆ. ಇವತ್ತು ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಸರಿಯಾಗಿ ನಡೆಯಬೇಕಾದರೆ ಅವುಗಳ ಬೇಸಿಕ್ ರಾ ಮೆಟೀರಿಯಲ್ಸ್, ಮಾರ್ಕೆಟಿಂಗ್ ಮತ್ತು ಸರ್ಕಾರದ ಪ್ಲಾನಿಂಗ್ ಬಹಳ ಮುಖ್ಯ. ಇವತ್ತು ನಮ್ಮ ರಾಜ್ಯದಲ್ಲಿ ಈ ಕೈಗಾರಿಕೆಗಳು ಏಕೆ ಸಿಕ್ ಆಗುತ್ತಿವೆ ಎಂದರೆ ನಮ್ಮ ಸರ್ಕಾರದ ರಾಂಗ್ ಪ್ಲಾನಿಂಗ್‌ನಿಂದ. ನಿನ್ನೆ ಮೊನ್ನೆಯಲ್ಲೂ ಕೂಡಾ ಕೆಲವು ಸದಸ್ಯರು ಈ ಬಗ್ಗೆ ಮಾತನಾಡಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟಿರುತ್ತಾರೆ. ಇವತ್ತು ಈ ಕೈಗಾರಿಕೆಗಳಲ್ಲಿ ಎಂಟರ್‌ಪ್ರೂನರ್ಸ್‌ದು ಈಕ್ವಿಟಿ ಶೇಕಡ ೨೫ ಭಾಗ ಇದ್ದರೆ ರಾಜ್ಯದ ಈಕ್ವಿಟಿ ಶೇಕಡ ೭೫ ಭಾಗ ಇರುತ್ತದೆ. ಇವತ್ತು ಏನು ಕೆ. ಎಸ್. ಎಫ್. ಸಿ.ಯವರಾಗಲೀ, ಕೆ. ಎ. ಐ. ಸಿ.ಯವರಾಗಲೀ, ನ್ಯಾಷನಲ್ ಬ್ಯಾಂಕ್‌ನವರಾಗಲೀ ಏನು ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೂ ಅದೆಲ್ಲಾ ದೇಶದ ಹಣ. ಆದರೆ ಈ ಇಂಡಸ್ಟ್ರೀಸ್‌ಗಳಿಗೆ ಸರಿಯಾದ ರೀತಿಯಲ್ಲಿ ಪವರ್ ಸಪ್ಲೈ ಇಲ್ಲದೇ ಇವತ್ತು ಬಹಳ ಇಂಡಸ್ಟ್ರೀಸ್ ಸಿಕ್ ಆಗಿವೆ. ಈ

ಸಿಕ್ ಇಂಡಸ್ಟ್ರೀಸ್‌ಗಳನ್ನು ಸರಿಯಾದ ರೀತಿಯಲ್ಲಿ ನಡೆಸಬೇಕಾದರೆ ಪವರ್ ಸಪ್ಲೈ ಬಹಳ ಮುಖ್ಯ. ಪವರ್ ಸಪ್ಲೈ, ವರ್ಕಿಂಗ್ ಕ್ಯಾಪಿಟಲ್ ಸರಿಯಾದ ರೀತಿಯಲ್ಲಿ ಕೊಟ್ಟರೆ ಈ ಇಂಡಸ್ಟ್ರೀಸ್‌ಗಳನ್ನು ಸರಿಯಾದ ರೀತಿಯಲ್ಲಿ ನಡೆಸುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ದೇಶದ ಎಕಾನಮಿ ಅಗ್ರಿಕಲ್ಚರ್ ಮತ್ತು ಇಂಡಸ್ಟ್ರೀಸ್ ಮೇಲೆ ಡಿಪೆಂಡ್ ಆಗಿರುವುದರಿಂದ ರಾಜ್ಯದ ಮೇಲೆ ಹೆಚ್ಚಿನ ರೀತಿಯಿಂದ ಜವಾಬ್ದಾರಿಯಿದೆ. ಯಾವ ದೇಶದ ಎಕಾನಮಿಯನ್ನು ತೆಗೆದುಕೊಳ್ಳಿ, ತಾವು ಅಮೇರಿಕಾಕ್ಕೆ ಹೋಲಿಸಿ ನೋಡಿಕೊಳ್ಳಿ, ಜಪಾನ್ ಮತ್ತು ಮೊನ್ನೆ ತಾನೇ ಸ್ವಾತಂತ್ರ್ಯಗಳಿಸಿದ ಕೊರಿಯಾ ಅವರೆಲ್ಲಾ ಮುಂದೆ ಬರಬೇಕಾದರೆ ಈ ಕಾಟೇಜ್ ಇಂಡಸ್ಟ್ರೀಸ್, ಸಣ್ಣ ಸಣ್ಣ ಎಲೆಕ್ಟ್ರಾನಿಕ್ ಇಂಡಸ್ಟ್ರೀಸ್‌ಗಳಿಂದ ಬಹುಮಟ್ಟಿಗೆ ಅವರ ಎಕಾನಮಿ ಸುಧಾರಣೆಯಾಗಿದೆ. ಇವತ್ತು ಪವರ್ ಪ್ರಾಬ್ಲಮ್, ವೋಲ್ಟೇಜ್ ಪ್ರಾಬ್ಲಮ್, ಸುಧಾರಣೆಯಾಗಬೇಕಾದರೆ ಡೀಸಲ್ ಅನ್ನು ಸಬ್ಸಿಡೈಸ್ಡ್ ರೇಟ್‌ನಲ್ಲಿ ತಾವೇನು ಸಬ್ಸಿಡಿ ಮೂಲಕ ಕೊಡುತ್ತಾ ಇದ್ದೀರಿ ಅದನ್ನು ಸರಿಯಾದ ರೀತಿಯಲ್ಲಿ ಸರಿಯಾದ ಟೈಮ್‌ನಲ್ಲಿ ಒದಗಿಸಿಕೊಡಬೇಕು. ಇನ್ನು ಸರಿಯಾದ ರೀತಿಯಲ್ಲಿ ಮಾಡಬೇಕೆಂದರೆ.. ಈ ಇಂಡಸ್ಟ್ರೀಸ್ ಏರಿಯಾಗಳಲ್ಲಿ ಸರ್ಕಾರದ ವತಿಯಿಂದ ಡೀಸಲ್ ಜನರೇಟರ್ ಸೆಟ್ಸ್ ಹಾಕಿ ಪವರ್ ಸಪ್ಲೈ ಮಾಡಿದರೆ ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಸಮಸ್ಯೆಗಳನ್ನು ಪರಿಹಾರ ಮಾಡಲು ಸರ್ಕಾರದ ವತಿಯಿಂದ ಕೆಲವು ಸೌಲಭ್ಯಗಳನ್ನು ತಾವು ಒದಗಿಸಿ ಕೊಡಬೇಕು. ರಾಜ್ಯ ಸರ್ಕಾರ ಸಬ್ಸಿಡಿ ಮತ್ತು ಡೆವಲಪ್‌ಮೆಂಟ್ ಲೋನ್ ಏನು ಕೊಡುತ್ತಾ ಇದ್ದೀರಿ ಅದನ್ನು ನೇರವಾಗಿ ಕ್ಯಾಷ್ ಮುಖಾಂತರ ಕೊಡುವ ಬದಲಾಗಿ ತಾವು ಅವರಿಗೆ ಸೇಲ್ಸ್‌ಟ್ಯಾಕ್ಸ್ ಇನ್‌ಸೆಂಟೀವ್ ಮುಖಾಂತರ ಕೊಟ್ಟರೆ ಬಹಳ ಸೂಕ್ತ. ಇವತ್ತು ನಾಲ್ಕೈದು ವರ್ಷಗಳಾದರೂ ಸಬ್ಸಿಡಿ ಸಿಗುವುದಿಲ್ಲ. ತಾವು ಸರಿಯಾದ ರೀತಿಯಲ್ಲಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸರಿಯಾದ ರೀತಿಯಲ್ಲಿ ಸಬ್ಸಿಡಿಯನ್ನು ಕೊಟ್ಟು, ಸರಿಯಾದ ಟೈಮ್‌ನಲ್ಲಿ ಪ್ಯಾಕೇಜ್ ಪ್ರೋಗ್ರಾಂನಲ್ಲಿ ಡೀಲ್ ಮಾಡಿದರೆ ಈ ಇಂಡಸ್ಟ್ರೀಸ್‌ಗಳು ಸರ್‌ವೈವ್ ಆಗುವುದಕ್ಕೆ ಸಾಧ್ಯ.

ಇನ್ನು ಮೀಡಿಯಂ ಇಂಡಸ್ಟ್ರೀಸ್ ಬಗ್ಗೆ ನನ್ನ ಎರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ತಮ್ಮ ಟೋಟಲ್ ಪ್ಲಾನ್ ಔಟ್‌ಲೇ ಏನಿದೆ ಈ ಹಣವನ್ನು ತಾವು ಇಂಡಸ್ಟ್ರೀಸ್ ಡೆವಲಪ್ ಮಾಡುವುದಕ್ಕೆ ಇಟ್ಟುಕೊಂಡಿದ್ದೀರಿ ಅದರಲ್ಲಿ ಕೇಂದ್ರ ಸರ್ಕಾರದಿಂದ ನಮ್ಮ ಜನಪ್ರಿಯ ಪ್ರಧಾನ ಮಂತ್ರಿಗಳು ಒಳ್ಳೆಯ ರೀತಿಯಲ್ಲಿ ಒಳ್ಳೆಯ ಇಂಡಸ್ಟ್ರೀಸ್‌ಗಳು ನಮ್ಮ ರಾಜ್ಯದಲ್ಲಿ ಬೆಳೆಯಬೇಕು ಹಾಗೂ ಈ ದೇಶದಲ್ಲಿ ಇಂಡಸ್ಟ್ರೀಸ್‌ಗಳು ಬೆಳೆಯಬೇಕು ಎನ್ನುವ ಉದ್ದೇಶದಿಂದ ಬಹುಮಟ್ಟಿಗೆ ಇಂಡಸ್ಟ್ರೀಸ್ ಪಾಲಿಸಿಯನ್ನು ಸಡಿಲಗೊಳಿಸಿದ್ದಾರೆ. ಸಿಂಗಲ್ ವಿಂಡೋ ಏಜೆನ್ಸಿಯನ್ನು ಮಾಡಿ ಅಲ್ಲಿಂದ ವರ್ಕಿಂಗ್ ಕ್ಯಾಪಿಟಲ್, ಪವರ್ ಪ್ರಾಬ್ಲಮ್ಸ್ ಇಂತಹ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ತಾವು ನಮ್ಮ ರಾಜ್ಯಸರ್ಕಾರದಿಂದ ಫೈನಾನ್ಸಿಯಲ್ ಇನ್‌ಸ್ಟಿಟ್ಯೂಟ್‌ಗಳಿಂದ ೨೫ ಲಕ್ಷದವರೆಗೂ ವರ್ಕಿಂಗ್ ಕ್ಯಾಪಿಟಲ್ ಕೊಡುತ್ತಿದ್ದಾರೆ. ಆದರೆ ಮೀಡಿಯಂ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ನ್ಯಾಷನಲೈಸ್ಡ್ ಬ್ಯಾಂಕುಗಳಿಂದ ವರ್ಕಿಂಗ್ ಕ್ಯಾಪಿಟಲ್ ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟಪಡಬೇಕಾಗಿದೆ. ಬ್ಯಾಂಕುಗಳಲ್ಲಿ ವರ್ಕಿಂಗ್ ಕ್ಯಾಪಿಟಲ್‌ಗೆ ಇವತ್ತು ಅಪ್ಲೈ ಮಾಡಿದರೆ ಸುಮಾರು ಎರಡು ಮೂರು ತಿಂಗಳು ಅದರೂ ಒಂದು ವರ್ಷವಾದರೂ ಇಂಡಸ್ಟ್ರೀಸ್ ಮಾಡುವವರಿಗೆ ವರ್ಕಿಂಗ್ ಕ್ಯಾಪಿಟಲ್ ಸಿಗುತ್ತಿಲ್ಲ. ಸರ್ಕಾರದ ವತಿಯಿಂದ ವರ್ಕಿಂಗ್ ಕ್ಯಾಪಿಟಲ್ ಒದಗಿಸಿಕೊಟ್ಟರೆ ಸರಿಯಾದ ರೀತಿಯಲ್ಲಿ ಇಂಡಸ್ಟ್ರೀಸ್‌ಗಳು ನಡೆಯುವುದಕ್ಕೆ

ಸಾಧ್ಯವಾಗುತ್ತದೆ. ಮತ್ತು ಇಂಡಸ್ಟ್ರೀಸ್‌ಗಳನ್ನು ರಿವ್ಯೂವ್ ಮಾಡುವಾಗ, ಪ್ರಾಜೆಕ್ಟ್ ಮಾಡುವಾಗ ನಮ್ಮ ತಜ್ಞರು ಏನಿದ್ದಾರೆ ಅವರು ಸರಿಯಾದ ಮಾಹಿತಿಯನ್ನು ಕೊಡಬೇಕು. ಯಾವ ಏರಿಯಾದಲ್ಲಿ ಮಾಡಿದರೆ ಒಳ್ಳೆಯದು ಅದರ ಬಗ್ಗೆ ಸರಿಯಾದ ಮಾಹಿತಿಯನ್ನು ಇವತ್ತು ಕೊಡದಿರುವುದರಿಂದ ಇಂಡಸ್ಟ್ರೀಸ್‌ಗಳು ಸಿಕ್ ಆಗುವುದಕ್ಕೆ ಅವಕಾಶ ಆಗಿದೆ. ಮತ್ತು ಎಲ್ಲಾ ಡಿಸ್ಟ್ರಿಕ್ಟ್‌ಗಳಲ್ಲಿ ಸರ್ಕಾರದ ಜವಾಬ್ದಾರಿ ಹೆಚ್ಚಿನ ರೀತಿಯಲ್ಲಿರುವುದರಿಂದ ಡಿಸ್ಟ್ರಿಕ್ಟ್ ಜನರಲ್ ಮ್ಯಾನೇಜರ್‌ರವರಿಗೆ ಯಾವ ಇಂಡಸ್ಟ್ರೀಸ್‌ನಲ್ಲಿ ಏನು ಕುಂದು ಕೊರತೆಯಿದೆ ಯಾವ ಫೆಸಿಲಿಟೀಸ್‌ನ್ನು ಒದಗಿಸಿಕೊಡಬೇಕು ಎನ್ನುವ ಮಾಹಿತಿಯನ್ನು ಡಿಸ್ಟ್ರಿಕ್ಟ್ ಇಂಡಸ್ಟ್ರೀಸ್ ಸೆಂಟರ್ಸ್‌ಗೆ ಕೊಟ್ಟರೆ ಬಹಳ ಒಳ್ಳೆಯದು. ಅವರ ಕಂಟ್ರೋಲ್‌ನಲ್ಲಿರತಕ್ಕ ಇಂಡಸ್ಟ್ರೀಸ್‌ಗಳಿಗೆ ಕನಿಷ್ಟ ಪಕ್ಷ ೧೫ ದಿವಸಗಳಿಗೊಮ್ಮೆಯಾದರೂ ಆ ಇಂಡಸ್ಟ್ರೀಸ್‌ಗಳಿಗೆ ವಿಸಿಟ್ ಮಾಡಬೇಕು. ಆ ಸೌಲಭ್ಯವನ್ನು ಒದಗಿಸಿ ಕೊಟ್ಟರೆ ಬಹಳ ಒಳ್ಳೆಯದು. ಇವತ್ತು ನಮ್ಮ ತುಮಕೂರು ತಾಲ್ಲೂಕು ಜೋನ್ ೨ರಲ್ಲಿದೆ. ಅಲ್ಲಿ ಎಚ್. ಎಂ. ಟಿ. ಕಾರ್ಖಾನೆ ಇರುವುದರಿಂದ ಎಂಟರ್‌ಪ್ರಿನರ್ಸ್ ಇದ್ದಾರೆ. ಅವರಿಗೆ ಸೌಲಭ್ಯವನ್ನು ರಾಜ್ಯಸರ್ಕಾರ ಒದಗಿಸಿ ಕೊಡುತ್ತಿಲ್ಲ. ಆದ್ದರಿಂದ ಅದನ್ನು ಜೋನ್ ೩ ಎಂದು ಮಾಡಿ. ಈಗ ಕೆಲವು ಪಾಕೆಟ್ಸ್‌ನಲ್ಲಿ ಏನು ಇಂಡಸ್ಟ್ರೀಸ್‌ಗಳಿವೆ ಅದನ್ನು ಬಿಟ್ಟು ಬಾಕಿ ಕಡೆ ಜೋನ್ ೩ ಮಾಡಿದರೆ ಅಲ್ಲಿನ ಎಂಟರ್‌ಪ್ರೂನರ್ಸ್‌ಗೆ ಹೆಚ್ಚಿನ ಅನುಕೂಲ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಇನ್ನು ಸೇಲ್ಸ್‌ಟ್ಯಾಕ್ಸ್ ಏನಿದೆ ಅದನ್ನು ಮೊನ್ನೆ ತಾನೇ ಎಂಟರ್‌ಪ್ರೂನರ್ಸ್‌ಗೆ ಹಾಕಿದ್ದಾರೆ. ಇವತ್ತು ಇಂಡಸ್ಟ್ರಿಯಲ್ ಏರಿಯಾ ತುಮಕೂರು ಟೌನ್ ವ್ಯಾಪ್ತಿಯಿಂದ ಸುಮಾರು ೧೦ ಕಿಲೋಮೀಟರ್ ದೂರದಲ್ಲಿರುತ್ತದೆ. ತಾವು ೫ ಕಿಲೋಮೀಟರ್ ವ್ಯಾಪ್ತಿ ಇಟ್ಟಿದ್ದೀರಿ. ಇದನ್ನು ೧೫ ಕಿಲೋಮೀಟರ್ ವ್ಯಾಪ್ತಿಗೆ ಏರಿಸಿದ್ದರೆ ನಿಮಗೆ ಬರುವ ಎಂಟ್ರಿಟ್ಯಾಕ್ಸ್ ಹೆಚ್ಚಿನ ರೀತಿಯಲ್ಲಿ ಬರುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಕೆಲವು ದೊಡ್ಡ ಇಂಡಸ್ಟ್ರಿಗಳು ಏನಿದೆ ಅವುಗಳು ಟೌನ್‌ಶಿಪ್‌ನಿಂದ ದೂರ ಇರುವುದರಿಂದ ಅವರನ್ನೂ ಇದರಲ್ಲಿ ಒಳಪಡಿಸಿಕೊಂಡರೆ ಹೆಚ್ಚು ಎಂಟ್ರಿಟ್ಯಾಕ್ಸ್ ಸೌಲಭ್ಯ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ಈ ಮೀಡಿಯಂ ಸ್ಕೇಲ್ ಇಂಡಸ್ಟ್ರೀಗಳಲ್ಲಿ ಇನ್ನೊಂದು ದೊಡ್ಡ ತೊಂದರೆ ಏನಾಗಿದೆ ಎಂದರೆ, ಮಾರ್ಕೆಟಿಂಗ್ ಮತ್ತು ರಾ ಮೆಟೀರಿಯಲ್ಸ್ ಸರಿಯಾದ ರೀತಿಯಲ್ಲಿ ಸಿಗುತ್ತಿಲ್ಲ. ಈ ಎರಡು ಸಮಸ್ಯೆಗಳನ್ನು ನಿವಾರಣೆ ಮಾಡಿದರೆ ನಮ್ಮ ರಾಜ್ಯದಲ್ಲಿ ಏನು ಬಹಳ ಪೊಟೆನ್‌ಷಿಯಾಲಿಟಿ ಇದೆ, ಅದರ ಬಗ್ಗೆ ಹೆಚ್ಚಿನ ಸೌಲಭ್ಯವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ವಿದ್ಯುತ್ ವೋಲ್ಟೇಜ್ ಸಮಸ್ಯೆ ಇದೆ. ಪವರ್ ಸರಿಯಾದ ರೀತಿಯಲ್ಲಿ ಸಪ್ಲೈ ಆಗುತ್ತಿಲ್ಲ...

ಉಪಾಧ್ಯಕ್ಷಣಿಯವರು:- ನೀವು ಬೇಗ ಮುಗಿಸಬೇಕು.

ಶ್ರೀ ಷಫಿ ಅಹಮದ್:- ಈ ಸಮಸ್ಯೆಯನ್ನು ಬಗೆ ಹರಿಸಬೇಕು. ಇನ್ನು ವಕ್ಫ್ ಡಿಮ್ಯಾಂಡ್ ಬಗ್ಗೆ ನಾನು ಎರಡು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಮೊನ್ನೆ ತಾನೆ ಸುಮಾರು ೨ ಕೋಟಿ ರೂಪಾಯಿಗಳನ್ನು ವಕ್ಫ್‌ಗೆ ಕೊಟ್ಟಿದ್ದಾರೆ. ವಕ್ಫ್ ಇನ್‌ಸ್ಟಿಟ್ಯೂಷನ್‌ಗೆ ಕಳೆದ ಅಧಿವೇಶನದಲ್ಲಿ ಏನೊಂದು ಸೌಲಭ್ಯವನ್ನು ಕೊಟ್ಟಿದ್ದರು, ಅದಕ್ಕಿಂತ ಕಡಿಮೆ ರೀತಿಯಲ್ಲಿ ಇವತ್ತು ಕೊಟ್ಟಿದ್ದಾರೆ. ನಮ್ಮ ಮಾನ್ಯ ವಕ್ಫ್ ಮಂತ್ರಿಗಳು ಮೊನ್ನೆ ತಾನೇ ಈ ರಾಜ್ಯದ ಮಹಿಳಾ ಕಲ್ಯಾಣಕ್ಕೋಸ್ಕರ ಒಂದು ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಿದ್ದಾರೆ. ಇದು ಬಹಳ ಒಳ್ಳೆಯ ಕಾರ್ಯ. ಇದರಿಂದ ಹೆಚ್ಚಿನ ರೀತಿಯಲ್ಲಿ ಮಹಿಳೆಯರಿಗೆ ಅವಕಾಶ

ಆಗುತ್ತದೆ. ಅದರಲ್ಲಿ ಒಂದು ಕೋಟಿ ಮಾತ್ರ ಒದಗಿಸಿಕೊಟ್ಟಿದ್ದಾರೆ. ಇದಕ್ಕೆ ಎರಡು ಕೋಟಿ ರೂಪಾಯಿ ಕೊಟ್ಟರೆ ಬಹಳ ಒಳ್ಳೆಯದು. ಇವತ್ತು ವಕ್ಫ್ ಮೇಯಿಂಟನೆನ್ಸ್‌ಗೆ ಬರೀ ೪೦ ಲಕ್ಷ ಮಾತ್ರ ಕೊಟ್ಟಿದ್ದಾರೆ. ಇದಕ್ಕೆ ಒಂದು ಕೋಟಿ ಕೊಟ್ಟರೆ ಒಳ್ಳೆಯದು. ಏಕೆಂದರೆ ಹೊಸದಾಗಿ ಮಸೀದಿಗಳನ್ನು ಕಟ್ಟುವುದಕ್ಕಿಂತ, ಹೆಚ್ಚಿನ ರೀತಿಯಲ್ಲಿ ಇರುವ ಹಳೆಯ ಮಸೀದಿಗಳನ್ನು ಮೇಯಿಂಟನೆನ್ಸ್ ಮಾಡುವುದು ಬಹಳ ಮುಖ್ಯವಾದದ್ದು. ಆದ್ದರಿಂದ ಕನಿಷ್ಠ ಪಕ್ಷ ಒಂದು ಕೋಟಿಯಾದರೂ ಇದಕ್ಕಾಗಿ ಪ್ರೊವೈಡ್ ಮಾಡಿಕೊಂಡರೆ ಬಹಳ ಒಳ್ಳೆಯದು. ಇವತ್ತು ರಾಜ್ಯದಲ್ಲಿ ೩೧೧೮೬ ವಕ್ಫ್ ಇನ್‌ಸ್ಟಿಟ್ಯೂಷನ್ಸ್ ಇವೆ. ಮುಜರಾಯಿ ಇನ್‌ಸ್ಟಿಟ್ಯೂಷನ್ಸ್ ೪೫೬ ಇವೆ. ಆದರೆ ಇವರ ಫೈನಾನ್ಸಿಯಲ್ ಪ್ರಾವಿಷನ್ಸ್ ಬಹಳ ಕಡಿಮೆ ಇದೆ. ಇದನ್ನು ಸರಿಯಾದ ರೀತಿಯಲ್ಲಿ ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಇವತ್ತು ಹಜ್ ಕಮಿಟಿಯಲ್ಲಿ ...

ಉಪಾಧ್ಯಕ್ಷಣಿಯವರು:- ಬೇಗ ಮುಗಿಸಿ. ಇನ್ನೂ ಐದಾರು ಜನ ಮಾತನಾಡುವವರಿದ್ದಾರೆ.

ಶ್ರೀ ಷಫಿ ಅಹಮದ್:- ಆಯಿತು ಇನ್ನು ಎರಡು ನಿಮಿಷಗಳಲ್ಲಿ ಮುಗಿಸುತ್ತೇನೆ. ೪೦ ಲಕ್ಷ ಬದಲಾಗಿ ಒಂದು ಕೋಟಿ ಪ್ರೊವೈಡ್ ಮಾಡಿ ಬೊಂಬಾಯಿ, ಬೆಂಗಳೂರಿನಲ್ಲಿ ಇರುವ ಹಜ್ ಹೌಸ್‌ನ್ನು ಸ್ಟ್ರೆಂಥನ್ ಮಾಡಿ ಸರಿಯಾದ ರೀತಿಯಲ್ಲಿ ಮಾಡುತ್ತೇವೆ ಎಂದು ತಾವು ಕಳೆದ ಅಧಿವೇಶನದಲ್ಲಿ ಹೇಳಿದ್ದಿರಿ. ಮುಖ್ಯವಾಗಿ ಇವತ್ತು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಎರಡೂಕಾಲು ವರ್ಷ ಆದರೂ ವಕ್ಫ್ ಬೋರ್ಡ್ ನಮ್ಮ ಕೈಯಲ್ಲಿ ಇಲ್ಲ. ಅಲ್ಲಿ ಮಿಸ್‌ಅಪ್ರಾಪ್ರಿಯೇಷನ್ ಮತ್ತು ಅನಾಹುತಗಳು ಜಾಸ್ತಿಯಾಗುತ್ತಿವೆ. ನಮ್ಮ ಸರ್ಕಾರ ಇದರ ಬಗ್ಗೆ ತಾಳ್ಮೆ ವಹಿಸುತ್ತಿದೆ. ಆದಷ್ಟು ಶೀಘ್ರವಾಗಿ ಅಲ್ಲಿ ಏನು ಮಿಸ್ ಅಪ್ರಾಪ್ರಿಯೇಷನ್ ಆಗುತ್ತಿದೆ, ಇದನ್ನು ತನಿಖೆ ಮಾಡಿ ಅದರ ಮೇಲೆ ಎನ್‌ಕ್ವೈರಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಹಜ್ ಯಾತ್ರಿಗಳು ನಮ್ಮ ರಾಜ್ಯದಿಂದ ೨೩೧ ಜನ ಸಮುದ್ರದ ಮುಖಾಂತರ ಮತ್ತು ೯೫೭ ಜನ ವಾಯುಯಾನ ಮುಖಾಂತರ ಹೋಗುತ್ತಿದ್ದಾರೆ. ಆದರೆ ಎರಡು-ಮೂರು ಸಾವಿರದಷ್ಟು ಅಪ್ಲಿಕೇಷನ್ಸ್ ಬರುತ್ತಿವೆ. ಆದ್ದರಿಂದ ಈ ಕೋಟಾವನ್ನು ಹೆಚ್ಚು ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಉಪಾಧ್ಯಕ್ಷಣಿಯವರು:- ಇನ್ನು ಮುಂದೆ ಮಾತನಾಡುವವರೆಲ್ಲರೂ ಐದು-ಐದು ನಿಮಿಷಗಳಲ್ಲಿ ಮುಗಿಸಬೇಕು.

+ ಶ್ರೀ ಕೆ. ಕುಶಾಲ (ಸುಳ್ಯ):- ಮಾನ್ಯ ಉಪಾಧ್ಯಕ್ಷರೇ, ಈ ದಿನದ ಬೇಡಿಕೆಗಳಾದ ಕೈಗಾರಿಕೆ, ಸಮಾಜ ಕಲ್ಯಾಣ ಹಾಗೂ ಮಹಿಳಾ ಕಲ್ಯಾಣ, ಸಾರಿಗೆ ಮತ್ತು ವಕ್ಫ್ ಇಲಾಖೆಗಳ ಮೇಲೆ ಮಾತನಾಡುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ ಬಗ್ಗೆ ನಾನು ಎರಡು-ಮೂರು ಸಲ ಗಮನ ಸೆಳೆಯುವ ಸೂಚನೆ ಹಾಕಿದ್ದೆ. ಆದರೆ ಅದು ಇನ್ನೂ ಬಂದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕು ಮತ್ತು ಕೊಡಗು ಜಿಲ್ಲೆಯಲ್ಲಿ ಜೇನು ಕೃಷಿ ಇದೆ, ಇದಕ್ಕೆ ವಿಶೇಷವಾಗಿ ದೊಡ್ಡದಾದ European Fow Brood ಎಂಬ ಭೀಕರವಾದ ಕಾಯಿಲೆ ಬಂದು ಇವತ್ತು ಸಾವಿರಾರು ಜೇನು ಸಾಕುವ ಕುಟುಂಬಗಳಿಗೆ ಅನ್ಯಾಯವಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ೫ ಸಾವಿರ ಜೇನು ಕೃಷಿಕರಿದ್ದಾರೆ. ನಿರಕ್ಷರರಲ್ಲಿ ಒಟ್ಟು ಜೇನು

ಕುಟುಂಬಗಳು ೧೨ ಸಾವಿರ ಇದ್ದವು. ವಾರ್ಷಿಕ ಜೇನು ಉತ್ಪಾದನೆ ೬೫ ಸಾವಿರ ಕಿಲೋಗ್ರಾಂ; ೧೯೮೯ರಲ್ಲಿ ೧ ಲಕ್ಷದ ೧೦ ಸಾವಿರ ಕಿಲೋಗ್ರಾಂ ಉತ್ಪತ್ತಿಯಾಗುತಿತ್ತು. ಜೇನು ಕೃಷಿಯನ್ನೇ ಅವಲಂಬಿಸಿ ಬದುಕುತ್ತಿರುವ ಕುಟುಂಬಗಳು ಸಾಧಾರಣವಾಗಿ ೮೦೦ ಕುಟುಂಬಗಳಿವೆ. ಜೇನು ಕೃಷಿಯಿಂದ ಉಂಟಾಗಿರುವ ಸಹೋದ್ಯೋಗಸ್ಥರ ಸಂಖ್ಯೆ ೫ ಸಾವಿರ. ನಮ್ಮ ಜಿಲ್ಲೆಯಲ್ಲಿ ಈ ರೋಗದಿಂದ ೧೯೯೧ನೇ ಜನವರಿ ಮತ್ತು ಫೆಬ್ರವರಿಯಲ್ಲಿ ೧೫೦೦ ಜೇನು ಕುಟುಂಬಗಳು ನಾಶವಾಗಿವೆ. ಈ ರೋಗ ಬಂದ ಮೇಲೆ ೪೫೦೦ ಕುಟುಂಬಗಳು ಸಂಪೂರ್ಣ ನಾಶವಾಗಿವೆ. ೧೯೯೨ರಲ್ಲಿ ನಿರೀಕ್ಷಿಸಲಾದ ಜೇನಿನ ಉತ್ಪತ್ತಿ ೧ ಲಕ್ಷದ ೫೦ ಸಾವಿರ ಕಿಲೋಗ್ರಾಂ. ಆದರೆ ಈ ರೋಗದಿಂದ ಅನೇಕ ಜೇನು ಕುಟುಂಬಗಳು ನಾಶವಾಗುತ್ತಾ ಇದ್ದು, ಜೇನು ಉತ್ಪಾದನೆ ಹಾಗೂ ಜೇನಿನ ಪರಾಗ ಸ್ಪರ್ಶಕ್ಕೆ ಹಾನಿಯಾಗಿ ಬಹುಶಃ ತೋಟಗಾರಿಕೆ ಬೆಳೆಗೂ ಕೂಡ ತುಂಬಾ ಗಂಡಾಂತರವಾಗುವಂಥ ಸಾಧ್ಯತೆ ಇದೆ. ಆದ್ದರಿಂದ ಈ ರೋಗ ಸಂಶೋಧನೆಗೆ ತಜ್ಞರ ನೇಮಕಾತಿ ಮಾಡಬೇಕು. ಈ ಪ್ರದೇಶದಲ್ಲಿ ಪ್ರಯೋಗಶಾಲೆ ಇರುವುದಿಲ್ಲ. ಈಗಿರುವ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಈ ಜೇನು ಕೃಷಿಯನ್ನು, ಅದರ ಸಿಬ್ಬಂದಿಗಳ ಮೂಲಕ ವ್ಯವಸ್ಥಿತವಾಗಿ ನಡೆಸಿಕೊಂಡು ಬರುತ್ತಾ ಇದೆ. ಆದರೂ ಕೂಡ ಈ ಒಂದು ಜೇನು ಕೃಷಿಯನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಬೇರ್ಪಡಿಸಿ ಕೇವಲ ಜೇನು ಕೈಗಾರಿಕೆ ಎಂದು ಮಾರ್ಪಡಿಸಿದರೆ ಮಾತ್ರ ಇದು ಸುಗಮವಾಗಿ ನಡೆಯುವುದಕ್ಕೆ ಸಾಧ್ಯವಿದೆ. ಇದೇ ರೀತಿಯಲ್ಲಿ ಜೇನು ಕೃಷಿಗೂ ಕೂಡ ಒಂದು ಕಾರ್ಪೋರೇಷನ್ ಅಥವಾ ಬೋರ್ಡನ್ನು ನೇಮಿಸಿದರೆ ಬಹುಶಃ ಜೇನು ಕೃಷಿ ಅಭಿವೃದ್ಧಿ ಹೆಚ್ಚಿನ ಲಾಭದಾಯಕವಾಗಿ ಬರುವುದಕ್ಕೆ ಸಾಧ್ಯವಿದೆ. ಈ ಒಂದು ಜೇನು ಕೃಷಿಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದಂಥ ಈ ಜೇನು ಕಾಯಿಲೆಗೆ ಟೆರಾಮೈಸಿನ್ (ಟಿ. ಎಂ. ೫೦) ಎಂದು ಹೇಳುವಂಥ ಇಂಜೆಕ್ಷನ್ ೧:೧೦೦ರಲ್ಲಿ ಸಕಲ ಮಿಶ್ರಣದಲ್ಲಿ ಕೊಡಲಾಗುತ್ತದೆ, ಆದರೂ ಕೂಡ ಇದರಿಂದ ಯಾವುದೇ ಒಂದು ಪ್ರಯೋಜನವಾಗದೇ ಈ ಜೇನು ಕೃಷಿಗೆ ತುಂಬಾ ನಷ್ಟವಾಗಿದೆ. ಕೊಡಗು ಜಿಲ್ಲೆಯಲ್ಲೂ ಕೂಡ ಈ ಜೇನಿನ ಕೃಷಿ ಬಹಳಷ್ಟು ತೊಂದರೆಗಳಿಂದ ಇರುವುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಈ ಜೇನು ಕೃಷಿಯ ತಜ್ಞ ಶಾಖೆ ಕಾನ್ಪುರದಲ್ಲಿ ಒಂದೇ ಒಂದು ಇದೆ. ಇವತ್ತು ದೇಶದ, ಅದರಲ್ಲೂ ಕೂಡ ದಕ್ಷಿಣ ಭಾಗದ ಕಾನ್ಪುರದಲ್ಲಿದ್ದು ಅಲ್ಲಿಂದ ಸಂಶೋಧನೆಗಾರರು ಬಂದು ಈ ಜೇನು ಕೃಷಿಯ ಬಗ್ಗೆ ಅಥವಾ ರೋಗದ ಬಗ್ಗೆ ಪರೀಕ್ಷೆಯನ್ನು ಮಾಡುವಂಥ ಪರಿಸ್ಥಿತಿ ಬಂದಿದೆ. ಮಾತ್ರವಲ್ಲ ಇವತ್ತು ಇದು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಅಧೀನದಲ್ಲಿರುವುದರಿಂದ ಕೇವಲ ಅಸಿಸ್ಟೆಂಟ್ ಡೈರೆಕ್ಟರ್ ಪೋಸ್ಟ್ ಮಾತ್ರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ಬೇರೆ ಯಾವುದೇ ಪೋಸ್ಟುಗಳೂ ಇಲ್ಲ. ಇದರ ಬಗ್ಗೆ ಪರದೇಶದ ತಜ್ಞರಾಗಿ, ತರಬೇತಿಯನ್ನು ಹೊಂದಿ, ಇದರ ಮೆಯಿನ್‌ಟೇನ್ ಮಾಡುತ್ತಿದ್ದಾರೆ. ಇವತ್ತು ಜೇನು ಇಲಾಖೆ ಎಂದು ಇದನ್ನು ಪ್ರತ್ಯೇಕವಾಗಿ ಮಾರ್ಪಡಿಸಿದರೆ ಈ ಜೇನಿಗೆ ಬಂದಿರುವಂಥ ಖಾಯಿಲೆಯನ್ನು ಜಾಗ್ರತೆ ಹೋಗಲಾಡಿಸಬಹುದು. ಮುಖ್ಯವಾಗಿ ಈ ಜೇನು ಕೃಷಿಗೆ ಆಗಿರುವಂಥ ಅನ್ಯಾಯವನ್ನು ಸರಿಪಡಿಸುವುದಕ್ಕೆ ಸಂಬಂಧಪಟ್ಟ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು. ಬಹುಶಃ ಈಗಾಗಲೇ ಇದರ ಬಗ್ಗೆ ಬರೆದುಕೊಂಡಿದ್ದರೂ ಏನೊಂದೂ ಪ್ರಯೋಜನವಾಗಿಲ್ಲ. ಹೊರದೇಶದಿಂದ ಬಂದಂಥ ತಜ್ಞರೂ ಕೂಡ ಇದರ ಬಗ್ಗೆ ಸಂಶೋಧನೆಯನ್ನು ಮಾಡಿದ್ದಾರೆ. European Fow Brood ಖಾಯಿಲೆ ಎಂದು ಹೇಳುವಂಥ ಒಂದು ಖಾಯಿಲೆಯನ್ನು ಪತ್ತೆ ಹಚ್ಚಿದ್ದಾರೆ. ಇದಕ್ಕೆ ಬೇಕಾದ ಔಷಧಿಯನ್ನು

ಸಂಪಾದಿಸಿದರೂ ಕೂಡ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆಯುವಂಥ ಜೇನಿನ ಕೃಷಿಕರಿಗೆ ಸಾಧಾರಣ ನೂರಕ್ಕೆ ಐವತ್ತರಷ್ಟು ನಷ್ಟ ಕೂಡ ಸಂಭವಿಸಿದೆ. ಇದರಿಂದಾಗಿ ಬಹುಶಃ ಇನ್ನು ತೋಟಗಾರಿಕೆ ಬೆಳೆಗೆ, ಹಣ್ಣು ಹಂಪಲಿಗೂ ಕೂಡ ತುಂಬಾ ತೊಂದರೆಯಾಗುವಂಥ ಸಾಧ್ಯತೆ ಇದೆ. ಜೇನು ನೊಣಗಳ ಪರಾಗಸ್ಪರ್ಷದಿಂದ, ಈ ತೋಟಗಾರಿಕೆ ಬೆಳೆಗೂ ಕೂಡ ನಷ್ಟವಾಗಬಹುದು. ಅಷ್ಟು ಮಾತ್ರವಲ್ಲ, ಇದರಿಂದಾಗಿ, ಬಹುಶಃ ಪರಿಸರ ಮಾಲಿನ್ಯಕ್ಕೆ ಕೂಡ ತೊಂದರೆಯಾಗುವಂಥ ಪರಿಸ್ಥಿತಿ ಬರುವುದರಿಂದ ಈಗ ಜೇನು ಕೃಷಿಗೆ ಏನು ತೊಂದರೆಯಾಗಿದೆ ಅದರ ಬಗ್ಗೆ ಸೂಕ್ತ ಕ್ರಮವನ್ನು ಕೈಗೊಳ್ಳುವಂತೆ ಈ ಮೂಲಕ ಒತ್ತಾಯಿಸುತ್ತಿದ್ದೇನೆ. ಇನ್ನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಈಗಾಗಲೇ ಹೆಚ್ಚಿನ ಸದಸ್ಯರು ಮಾತನಾಡಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಹೆಸರಿಗೆ ಮಾತ್ರ ಒಂದು ರೀತಿಯಿಂದ ಪರಿಶಿಷ್ಟ ಜಾತಿ ಜನಾಂಗದವರ, ದಲಿತರ ಕಲ್ಯಾಣದ ಹೆಸರನ್ನು ಹೊತ್ತುಕೊಂಡಿದೆ. ಇವತ್ತು ಈ ಪರಿಶಿಷ್ಟ ಜಾತಿ ಹಾಗೂ ಜನಾಂಗದ ಬಗ್ಗೆ ಅಥವಾ ವಿದ್ಯಾರ್ಥಿ ವಿದ್ಯಾರ್ಥಿನಿಯರ ಬಗ್ಗೆ ಹೇಳುವುದಿದ್ದರೆ; ಅಲ್ಲಿ ಯಾವುದೇ ಒಂದು ಅಡಿಗೆ ಸಹಾಯಕರನ್ನಾಗಲೀ ಅಥವಾ ಮೇಲ್ವಿಚಾರಕರನ್ನಾಗಲೀ ನೇಮಕ ಮಾಡದೇ ಇರುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಸರ್ಕಾರ ಸಾಧಾರಣವಾಗಿ ೧೯೮೯-೯೦ರಲ್ಲಿ ಈ ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿಯನ್ನು ನೇಮಕ ಮಾಡುವುದಕ್ಕೆ ಒಂದು ಕಾನ್‌ಸ್ಟಿಟ್ಯೂಷನ್ ಆಫ್ ಡಿಪಾರ್ಟ್‌ಮೆಂಟಲ್ ರೆಕ್ರೂಟ್‌ಮೆಂಟ್ ಕಮಿಟಿ ಎಂದು ಹೇಳುವುದನ್ನು ಪ್ರಸ್ತಾಪನೆ ಮಾಡಿ, ೧೯೯೦ನೇ ಇಸವಿಯಲ್ಲಿ ಕಳುಹಿಸಿದ್ದರೂ ಕೂಡ ಆ ಪ್ರಸ್ತಾಪನೆ ಮಂಜೂರಾತಿಯಾಗಿ ಬಂದಿರುವುದಿಲ್ಲ. ಬಹುಶಃ ಈ ಸಮಾಜ ಕಲ್ಯಾಣ ಇಲಾಖೆಯಲ್ಲಿ ಇಷ್ಟೊಂದು ಹಣ ಇದ್ದರೂ ಕೂಡ ಇವತ್ತು ಸೋರಿ ಹೋಗುವಂಥ ಪರಿಸ್ಥಿತಿ ಅಥವಾ ಸಮಾಜ ಕಲ್ಯಾಣ ಇಲಾಖೆ ಎಂದು ಹೇಳಿದರೆ ಒಂದು ನಿರ್ಲಕ್ಷ್ಯದಿಂದ ಇರುವಂಥ ಇಲಾಖೆ ಎಂದು ಸರ್ಕಾರ ಕಾಣುತ್ತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಏತಕ್ಕೆಂದರೆ ೧೯೮೯-೯೦ನೇ ಇಸವಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಹಾಯಕರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಮತ್ತು ಮೇಲ್ವಿಚಾರಕರ ಹುದ್ದೆಗೆ ನೇಮಕ ಮಾಡಿಕೊಳ್ಳುವುದಕ್ಕೆ ಒಂದು ಪ್ರಸ್ತಾಪನೆಯನ್ನು ಮಂಜೂರು ಮಾಡುವುದಕ್ಕೆ ಮತ್ತು ಒಂದು ಕಮಿಟಿ ರಚನೆ ಮಾಡುವುದಕ್ಕೆ ಕಳುಹಿಸಿದ್ದರು. ಆದರೆ ಅದು ಇನ್ನೂ ಮಂಜೂರಾಗಿಲ್ಲ ಎಂದು ಹೇಳಿದರೆ ಇದರ ಬಗ್ಗೆ ನಾವು ಇನ್ನು ಹೆಚ್ಚು ಹೇಳುವುದಕ್ಕೆ ಸಾಧ್ಯ ಇಲ್ಲ. ಇದರ ಬಗ್ಗೆ ಸೂಕ್ತ ಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಬಗ್ಗೆ ಇರತಕ್ಕ ಸೌಲಭ್ಯಗಳನ್ನು ಇತರ ಮುಂದುವರಿದ ಜಾತಿಯವರು ಬೋಗಸ್ ಸರ್ಟಿಫಿಕೇಟ್ ಪ್ರೊಡ್ಯೂಸ್ ಮಾಡಿ ಪಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದರ ಬಗ್ಗೆ ಕಳೆದ ೫-೬ ವರ್ಷಗಳಿಂದ ನಮ್ಮ ಪಿಟಿಷನ್ಸ್ ಕಮಿಟಿ ಮೂಲಕ ಅದೇ ರೀತಿ ಸರಕಾರದ ಮೂಲಕ ಪರಿಶಿಷ್ಟ ಜಾತಿ ಆಯೋಗ ರಚನೆ ಆಗಬೇಕೆಂದು ನಾನು ಆಗಾಗ್ಗೆ ಹೇಳುತ್ತಿದ್ದೇನೆ. ಆದರೆ ಇದರ ಬಗ್ಗೆ ಯಾವುದೇ ಒಂದು ಸೂಕ್ತ ಕ್ರಮ ಅರ್ಜಿಗಳ ಸಮಿತಿಯಿಂದಾಗಲೀ, ಸರಕಾರವಾಗಲೀ ಸೂಕ್ತ ಕ್ರಮ ಕೈಗೊಳ್ಳದಿರುವುದು ತುಂಬಾ ಬೇಸರದ ವಿಷಯವಾಗಿದೆ. ಅದೇ ರೀತಿ ಪರಿಶಿಷ್ಟ ಜಾತಿಯವರ ಆಯೋಗ ರಚನೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಡಾ. ಬಿ. ಆರ್. ಅಂಬೇಡ್ಕರ್ ವಿಷಯದಲ್ಲಿ ಹೇಳುವುದಾದರೆ ಇವತ್ತು ಅವರ ಹೆಸರಿನಲ್ಲಿ ಎಷ್ಟೋ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಆದರೂ ಕೂಡ ಕೆಲವು ಕಡೆಯಲ್ಲಿ ಅಂಬೇಡ್ಕರ್ ಸಂಘ ಸಂಸ್ಥೆಗಳನ್ನು ಬೇರೆ ಬೇರೆ ಜನರು ಮಾಡಿಕೊಂಡು

ವಸೂಲಿಯಾದ ಹಣವನ್ನು ಕೆಲವು ರೀತಿ ಪೋಲು ಮಾಡುತ್ತಿದ್ದಾರೆ. ಇದರ ಬಗ್ಗೆ ಸರಿಯಾದ ಸಂಘ ಸಂಸ್ಥೆಗಳ ಮೂಲಕ ಅದನ್ನು ಶೋಧಿಸಿ ಅದು ನಿಜವಾಗಿದ್ದರೆ ಮಾತ್ರ ಅಂಬೇಡ್ಕರ್ ಶತಮಾನೋತ್ಸವ ಕಾರ್ಯಕ್ರಮಗಳಿಗೆ ವೆಚ್ಚ ಮಾಡುವ ಹಣವನ್ನು ಸರಿಯಾದ ರೀತಿ ವೆಚ್ಚಮಾಡಬೇಕೇ ಹೊರತು ಕೇವಲ ಯಾವುದೋ ಸಂಘ ಸಂಸ್ಥೆಯವರು, ನೋಂದಾವಣೆ ಮಾಡಿದ ಸಂಸ್ಥೆ ಎಂದು ಹೇಳಿ, ಸರಕಾರದಿಂದ ಅಂಬೇಡ್ಕರ್ ಹೆಸರಿನಲ್ಲಿ ಹಣವನ್ನು ತೆಗೆದುಕೊಂಡು ಕೆಲವರು ಬಹಳಷ್ಟು ರೀತಿಯಲ್ಲಿ ಪೋಲು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ರೀತಿ ಆಗಬಾರದೆಂಬ ಮಾತನ್ನು ಹೇಳುತ್ತೇನೆ. ಮಹಿಳಾ ಕಲ್ಯಾಣದ ಬಗ್ಗೆ ಹೇಳುವುದು ಇದ್ದರೆ ತಮಗೆಲ್ಲರಿಗೂ ಗೊತ್ತಿದೆ, ರಾಷ್ಟ್ರಾದ್ಯಂತ ಅಂಗನವಾಡಿ ಕಾರ್ಯಕರ್ತರು ಮುಷ್ಕರ ಮಾಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇದು ಕೇಂದ್ರ ಸರಕಾರದ ಯೋಜನೆಯಾಗಿದ್ದರೂ ಕೂಡ ಕೇಂದ್ರ ಸರ್ಕಾರದಿಂದ ಅವರಿಗೆ ಕೊಡುವಂತಹ ಗೌರವ ಧನ ಎಸ್. ಎಸ್. ಎಲ್. ಸಿ. ಪಾಸಾದಂಥ ಕಾರ್ಯಕರ್ತರಿಗೆ ೧೭೫ ರೂಪಾಯಿ ಮತ್ತು ಫೇಲ್ ಆದಂಥ ಕಾರ್ಯಕರ್ತರಿಗೆ ೧೨೫ ರೂಪಾಯಿ ಕೊಡುವಂತಹ ಕಾರ್ಯಕ್ರಮವನ್ನು ಸರಕಾರ ಹಮ್ಮಿಕೊಂಡಿದೆ. ಗೋವಾ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯ ಸರಕಾರಗಳು ಇದಕ್ಕೆ ಪೂರಕವಾಗಿ ಸಂಬಳ ಅಥವಾ ಗೌರವ ಧನವನ್ನು ಕೊಡುವಂತಹ ಕೆಲಸ ಮಾಡುತ್ತಿವೆ. ಕೇರಳ, ಮಹಾರಾಷ್ಟ್ರ ಮತ್ತು ಗೋವಾದಲ್ಲಿ ೧೦೦ ರೂಪಾಯಿಯಿಗಳ ವೇತನ ಕೊಡುವಂತಾದ್ದು ಆಗಿದೆ. ಈ ಒಂದು ಇಲಾಖೆಯಲ್ಲಿ ಇನ್ನೊಂದು ಸರಕಾರಿ ಹಣ ಇದ್ದರೂ ಬೇರೆ ಬೇರೆ ರೀತಿಯಿಂದ ಇನ್ನಿತರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆ ಹಣ ಪೋಲಾಗುತ್ತಿದೆ. ಈ ರೀತಿ ಹಣ ಪೋಲಾಗದಂತೆ ನೋಡಿಕೊಳ್ಳಬೇಕು. ಈ ಮಹಿಳೆಯರು ನಿಜವಾಗಿಯೂ ಒಳ್ಳೆಯ ಕಾರ್ಯಕರ್ತೆಯರಾಗಿದ್ದು ಒಳ್ಳೆಯ ರೀತಿ ಕೆಲಸ ನಡೆಸುತ್ತಿದ್ದಾರೆ. ಅವರಿಗೆ ಸಾಕಷ್ಟು ಸಂಬಳ ಅಥವಾ ಗೌರವ ಧನ ಸಿಗುತ್ತಿಲ್ಲ. ಇತರ ರಾಜ್ಯಗಳು ಕೊಡುವಂತೆ ಸಾಧಾರಣ ಇವರಿಗೆ ೧೦೦ ರೂಪಾಯಿ ಪೂರಕವಾದ ಗೌರವಧನವನ್ನು ಕೊಡುವಂತೆ ಕೇಳಿಕೊಳ್ಳುತ್ತೇನೆ. ಇನ್ನು ಸಾರರಿಗೆ, ವಕ್ಫ್ ಇಲಾಖೆ ಬಗೆ ಗ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಸಾರಿಗೆ ಸಂಸ್ಥೆ ಬಗ್ಗೆ ಹೇಳುವುದು ಇದ್ದರೆ, ನನ್ನ ಕ್ಷೇತ್ರದ ಬಗ್ಗೆ ಮಾತ್ರ ಹೇಳುತ್ತೇನೆ. ಸಾಧಾರಣ ೧೯೮೫ನೇ ಇಸವಿಯಲ್ಲಿ ಸುಳ್ಯದಲ್ಲಿ ಕೆ. ಎಸ್. ಆರ್. ಟಿ. ಸಿ. ಬಸ್ ಸ್ಟ್ಯಾಂಡ್‌ಗೆ ಸರಕಾರ ಖಾಸಗಿ ಜಮೀನನ್ನು ತೆಗೆದುಕೊಳ್ಳಲು ಪ್ರಸ್ತಾವನೆ ಮಾಡಿ ಅದು ಅಕ್ವಿಷಿಷನ್‌ಗೆ ಬಂತು. ಆದರೆ ಇನ್ನೂ ಕೂಡ ಇದರ ಬಗ್ಗೆ ಯಾವುದೇ ಲೀಗಲ್ ಏಡ್ ಮೂಲಕ ವ್ಯವಹಾರ ನಡೆಸದೇ ಡಿಪೋ ಅಥವಾ ಬಸ್ ಸ್ಟ್ಯಾಂಡ್ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಕೇವಲ ೨೦ ಸೆಂಟ್ಸ್ ಜಮೀನಿಗೆ ಈ ಒಂದು ಜಮೀನುದಾರರ ಆಕ್ಷೇಪ ಇರುವುದನ್ನು ಸರಿಯಾದ ರೀತಿ ಸರಕಾರ ವ್ಯವಹಾರ ಮಾಡದೇ ಆ ಭಾಗದ ಜನರಿಗೆ ಬಸ್ ಸ್ಟ್ಯಾಂಡ್ ಹಾಗೂ ಡಿಪೋ ಇಲ್ಲದೆ ಆಗಿರುವ ತೊಂದರೆಯನ್ನು ಪರಿಗಣಿಸಿ ಈ ಕೇಸ್‌ಅನ್ನು ಕೂಡಲೇ ಪೂರ್ಣಗೊಳಿಸುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಕ್ಷಣೆಯವರು:- ೬ ಗಂಟೆಗೆ ಚರ್ಚೆ ಮುಗಿಸಬೇಕು. ಬೇಗ ಮುಗಿಸಿ.

ಶ್ರೀ ಕೆ. ಕುಶಾಲ:- ಇನ್ನು ಒಂದು ನಿಮಿಷ. ವಕ್ಫ್ ಇಲಾಖೆಯಲ್ಲಿ ಕೊಡುವಂತಹ ಹಣವನ್ನು ಶಾಸಕರಿಗೆ ಕ್ಷೇತ್ರವಾರು ರೀತಿ ಹಂಚಿದರೆ ಬಹುಶಃ ಹೆಚ್ಚಿನ ಮಸೀದಿಗಳ ನಿರ್ಮಾಣಕ್ಕೆ ಹಾಗೂ ದುರಸ್ತಿಗೆ ಹೆಚ್ಚಿನ ಅನುಕೂಲವಾಗುತ್ತದೆಂದು ಹೇಳುತ್ತಾ, ತಾವು ನನಗೆ ಮಾತನಾಡಲು ಅವಕಾಶ

ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಾಬುರಾವ್ ಚವಾಣ್(ಶಹಬಾದ್):- ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಂತಹ ಆದೇಶವನ್ನು ನಾನು ಪರಿಪಾಲನೆ ಮಾಡುತ್ತೇನೆ. ಇವತ್ತು ವಿರೋಧಪಕ್ಷದವರು ಸಭೆಗೆ ಬರಬೇಕಾಗಿತ್ತು. ಅವರು ಬಂದಿಲ್ಲ. ಕಾರಣ ಮಾನ್ಯ ಜೀವರಾಜ್ ಆಳ್ವರವರ ಸೋಲಿನಿಂದ ಪಾಪ ಅವರು ಶೋಕದಲ್ಲಿದ್ದಾರೆ. ನನ್ನ ಹೈದರಾಬಾದ್ ಕರ್ನಾಟಕ ಮತ ಭಾಗಕ್ಕೆ ೪ ಹಳ್ಳಿಗಳು ಬರುತ್ತವೆ. ಅಲ್ಲಿ ದೊಡ್ಡದಾದಂತಹ ಕೈಗಾರಿಕೆಗಳನ್ನು ಹಾಕಬೇಕೆಂದು ಮಾನ್ಯಮಂತ್ರಿಗಳಿಗೆ ನಾನು ಸ್ಟಾರ್ ಕ್ವೆಶ್ಚನ್ ಮುಖಾಂತರ ಕೇಳಿಕೊಂಡಿದೆ. ಆಗ ಮಾನ್ಯ ಮಂತ್ರಿಗಳು ಸರ್ಕಾರದ ಆರ್ಥಿಕ ಪರಿಸ್ಥಿತಿ ಸರಿ ಇಲ್ಲದ ಕಾರಣ ಕೊಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದರು. ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಆ ಭಾಗದಲ್ಲಿರತಕ್ಕಂಥ ಸಿಮೆಂಟ್ ಫ್ಯಾಕ್ಟರಿಗಳನ್ನು ಪ್ರೈವೇಟ್‌ನವರು ಹಾಕಿ ಅಲ್ಲಿಂದ ಸುಮಾರು ಕೋಟಿಗಟ್ಟಲೆ ಸಂಪಾದನೆ ಮಾಡಿಕೊಂಡು ಹೋಗುತ್ತಿದ್ದಾರೆ. ನಮ್ಮ ಸರ್ಕಾರದವರು ಏತಕ್ಕೆ ಅಲ್ಲಿ ಫ್ಯಾಕ್ಟರಿಗಳನ್ನು ಹಾಕಬಾರದು? ತಾವು ಫ್ಯಾಕ್ಟರಿ ಹಾಕಿದರೆ ಅಲ್ಲಿನ ಭಾಗದ ಜನಗಳಿಗೆ ಶೋಷಣೆ ಮಾಡಿ ಸಂಪಾದನೆ ಮಾಡುತ್ತಿರುವ ಜನಗಳಿಗೆ ಪಾಠವನ್ನು ಕಲಿಸಬಹುದು. ಇದರ ಜೊತೆಗೆ ಕರ್ನಾಟಕ ರಾಜ್ಯದ ವತಿಯಿಂದ ದೊಡ್ಡದಾದಂತಹ ಫ್ಯಾಕ್ಟರಿ ಹಾಕಿದರೆ ಆ ಭಾಗದ ಜನಗಳಿಗೆ ಕೆಲಸವನ್ನು ಕೊಡಬಹುದು. ಬಹುಶಃ ಅಲ್ಲಿ ಸಿಮೆಂಟ್ ಫ್ಯಾಕ್ಟರಿ ಏನಿದೆ ಅದರಿಂದ ಸರ್ಕಾರಕ್ಕೆ ಲಾಭ ಇದೆ. ಆದುದರಿಂದ ನಾನು ಮಾನ್ಯಮಂತ್ರಿಗಳಿಗೆ ಕೇಳಿಕೊಳ್ಳುತ್ತೇನೆ. ಆ ಭಾಗದಲ್ಲಿ ದೊಡ್ಡದಾದ ಸಿಮೆಂಟ್ ಫ್ಯಾಕ್ಟರಿ ಹಾಕಬೇಕೆಂದು ಹಾಗೂ ಸರ್ಕಾರದ ಕಡೆಯಿಂದ ಅಲ್ಲಿರತಕ್ಕಂಥ ಜನಗಳಿಗೆ ನೌಕರಿ ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಮಾನ್ಯ ಮಂತ್ರಿಗಳಿಗೆ ಒಂದು ಕಿವಿ ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಬಹುಶಃ ಮಾನ್ಯ ಮಂತ್ರಿಗಳಿಗೆ ಗೊತ್ತಿದೆಯೋ ಅಥವಾ ಇಲ್ಲವೋ, ಅದಕ್ಕೆ ನಾನು ಹೇಳುತ್ತಿದ್ದೇನೆ ತಾವು ಪ್ರೈವೇಟ್‌ನವರಿಗೆ ಕೊಡತಕ್ಕಂಥ ಪರ್ಮಿಷನ್‌ನಿಂದ ನನ್ನ ನೇಟೀವ್‌ನಲ್ಲಿರತಕ್ಕಂಥ ನನ್ನ ಸ್ವಂತ ಜಮೀನು ಹೋಗಿದೆ. ಆ ಫ್ಯಾಕ್ಟರಿ ಯಾವುದೆಂದರೆ ರಾಶಿ ಸಿಮೆಂಟ್ ಫ್ಯಾಕ್ಟರಿ; ಈ ವಿಚಾರದಲ್ಲಿ ನಾನು ತಮ್ಮ ಮೂಲಕ ಒಂದು ಮಾತು ಹೇಳುತ್ತೇನೆ, ತಾವು ಕೊಡುವಂತಹ ಪರ್ಮಿಶನ್ ೧೮೦೦ ಟನ್ ಡೈಲಿ ಪ್ರೊಡಕ್ಷನ್ ಸಿಮೆಂಟ್ ಮಾಡಲಿಕ್ಕೆ ಇದೆ. ಆದರೆ ಮಾನ್ಯ ಅಧ್ಯಕ್ಷರೇ, ಅವರು ೩ ಸಾವಿರ ಟನ್ ಸಿಮೆಂಟ್ ಪ್ರೊಡಕ್ಷನ್ ಮಾಡುತ್ತಾರೆ ಅವರು ತಮಗೆ ಲೆಕ್ಕ ಕೊಡುವುದು ೧೮೦೦ ಟನ್‌ಗೆ ಮಾತ್ರ. ಮಿಕ್ಕ ಲೆಕ್ಕ ಅವರು ಕೊಡುವುದಿಲ್ಲ. ಸರ್ಕಾರಕ್ಕೆ ಮೋಸ ಮಾಡುತ್ತಾರೆ ಎಂದು ದಿಟವಾಗಿ ನಾನು ಹೇಳುತ್ತೇನೆ. ಅವರು ಹೆಚ್ಚಿಗೆ ಸಿಮೆಂಟ್ ಪ್ರೊಡಕ್ಷನ್ ಮಾಡಿಕೊಂಡು ಹೊರಗೆ ತೆಗೆದುಕೊಂಡು ಹೋಗತಕ್ಕಂಥ ಹಾದಿಯಲ್ಲಿ ತಮ್ಮ ಅಧಿಕಾರಿಗಳೆಲ್ಲಾ ಅವರಿಗೆ ನೆರವಾಗಿದ್ದಾರೆ. ಅವರು ನೇರವಾಗಿ ಹೇಳುತ್ತಾರೆ, ಅಧಿಕಾರಿಗಳು ನಮಗೆ ಕೋ-ಆಪರೇಟ್ ಮಾಡುತ್ತಾರೆ, ನೀವು ಏನು ಮಾಡುತ್ತೀರೆಂದು, ನಾನು ಒಂದು ಮಾತು ಹೇಳುತ್ತೇನೆ, ನಿಮ್ಮ ಅಧಿಕಾರಿಗಳನ್ನು ಮೊದಲು ನೀವು ಟೈಟ್ ಮಾಡಿ. ಅವರು ಎಷ್ಟು ಟನ್ ಸಿಮೆಂಟ್ ಪ್ರೊಡಕ್ಷನ್ ಮಾಡುತ್ತಾರೆ, ಎಷ್ಟು ಟನ್ ಹೊರಗೆ ಕಳುಹಿಸಿದ್ದಾರೆಂಬ ಬಗ್ಗೆ ಅಧಿಕಾರಿಗಳಲ್ಲಿ ಲೆಕ್ಕ ಇಲ್ಲ. ಆದ್ದರಿಂದ, ನೀವು ಕೊಡತಕ್ಕಂಥ ಪರ್ಮೀಷನ್ ಎಷ್ಟಿದೆ, ಅಷ್ಟೇ ಸಿಮೆಂಟ್‌ನ್ನು ಪ್ರೊಡಕ್ಷನ್ ಮಾಡುವಂತಹ ರೀತಿ ತಾವು ಒಂದು ಕಡಿವಾಣ ಹಾಕಬೇಕು, ಅವರು ನಂಬರ್ ಟೂ ಕ್ವಾಲಿಟಿ ಸಿಮೆಂಟ್ ಏನು ಹೊರಗೆ ಕಳುಹಿಸುತ್ತಾರೆ ಅದಕ್ಕೆ ತಾವು ಕಡಿವಾಣ ಹಾಕಬೇಕು. ಇದರಿಂದ ಸರ್ಕಾರಕ್ಕೆ ಮೋಸವಾಗುತ್ತಿದೆ. ಏನ್ನುತಕ್ಕಂಥ

ಮಾತನ್ನು ನಾನು ತಮಗೆ ಹೇಳುತ್ತೇನೆ. ಕಚ್ಚಾ ಸಿಮೆಂಟ್ ಜಿಪ್ಸಮ್ ಅಂತ ಏನು ತಯಾರು ಮಾಡುತ್ತಾರೆ, ಕಚ್ಚಾ ಸಿಮೆಂಟ್ ಜಿಪ್ಸಮ್ ಏನಿದೆ ಅದಕ್ಕೆ ಟಾಕ್ಸ್ ಅನ್ನೂ ಕೊಡುವುದಿಲ್ಲ. ರಾಯಲ್ಟಿಯನ್ನೂ ಕೊಡುವುದಿಲ್ಲ, ಅದಕ್ಕೆ ಏತಕ್ಕೆ ತಾವು ಪರವಾನಗಿ ಕೊಡುತ್ತೀರಿ? ಕಚ್ಚಾ ಸಿಮೆಂಟ್ ಜಿಪ್ಸಮ್ ಅನ್ನು ಟ್ರಕ್‌ಗಟ್ಟಲೆ ಹೊರಗೆ ಸಾಗಿಸಿ ಮಾರಾಟ ಮಾಡುತ್ತಿದ್ದಾರೆ. ವಿತೌಟ್ ಪರ್ಮಿಷನ್ ವಿತೌಟ್ ಲೈಸೆನ್ಸ್ ಮಾರಾಟ ಮಾಡುತ್ತಿದ್ದಾರೆ. ಅವರು ಏತಕ್ಕೆ ನಮ್ಮ ರಾಜ್ಯದ ಹೊರಗೆ ಸಿಮೆಂಟ್ ಮಾರಾಟ ಮಾಡುತ್ತಾರೆ? ಅವರಿಗೆ ಕಡಿವಾಣ ಹಾಕಬೇಕು. ತಾವೀಗ ಸಿಮೆಂಟ್ ಬ್ಯಾಗ್ ಪ್ರೊಡಕ್ಷನ್‌ಗೆ ಕಡಿವಾಣ ಹಾಕಿದ್ದೀರಿ. ಅದೇ ರೀತಿ ಜಿಪ್ಸಮ್ ಟನ್‌ಗಟ್ಟಲೆ ಹೊರಗೆ ಹೋಗುತ್ತಿದೆ, ಅದಕ್ಕೂ ಕಡಿವಾಣ ಹಾಕಬೇಕು. ಜಿಪ್ಸಮ್ ಅಂದರೆ ಅದು ೯೯ ಪರ್ಸೆಂಟ್ ಸಿಮೆಂಟ್. ಅದಕ್ಕೆ ಇನ್ನು ಒಂದು ಪರ್ಸೆಂಟ್ ಯಾವುದೋ ಕೆಮಿಕಲ್ಸ್ ಮಿಕ್ಸ್ ಮಾಡಿದರೆ ಸಿಮೆಂಟ್ ಆಗುತ್ತದೆ. ಅದು ೯೯ ಪರ್ಸೆಂಟ್ ಸಿಮೆಂಟ್ ಆಗತಕ್ಕಂಥಾದ್ದು. ಜಿಪ್ಸಮ್ ಸಿಮೆಂಟನ್ನು ತಾವು ಹೊರಗಡೆ ವಿತೌಟ್ ಲೈಸೆನ್ಸ್ ವಿತೌಟ್ ಪರ್ಮಿಷನ್ ಸರ್ಕಾರದ ಗಮನಕ್ಕೆ ತರಲಾರದೆ ಟ್ರಕ್ ಗಟ್ಟಲೆ ಬೇರೆ ಫ್ಯಾಕ್ಟರಿಗೆ ಕೊಟ್ಟು ಅಲ್ಲಿ ಸಿಮೆಂಟ್ ಪ್ರೊಡಕ್ಷನ್ ಮಾಡಿ ಹೊರಗಡೆ ಹೋಗುತ್ತಿದೆ. ಅದಕ್ಕೆ ನೀವು ಏತಕ್ಕೆ ಕಡಿವಾಣ ಹಾಕಬಾರದು? ಅವರು ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳಿಗೆ ನಾನು ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಶಾಸಕರಾಗಿ ಅಲ್ಲಿಗೆ ಹೋಗಿ ಕೇಳಿದರೆ ಏನು ಹೇಳುತ್ತಾರೆಂದರೆ ತಾವೇನು ಮಾಡುತ್ತೀರಿ ಎಂ. ಎಲ್. ಎ. ಸಾಹೇಬರೆ, ಮಿನಿಸ್ಟರ್ಸ್ ಎಲ್ಲಾ ನಮ್ಮ ಕಿಸೆಯಲ್ಲಿದ್ದಾರೆ, ತಾವೇನು ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ನಾನು ತಮ್ಮ ಮೇಲೆ ನೇರವಾಗಿ ಹೇಳುತ್ತಿಲ್ಲ. ಅವರು ಎಲ್ಲಾ ಮಂತ್ರಿಗಳನ್ನೂ ಸೇರಿಸಿ ಇದೇ ತರಹ ಮಾತನಾಡುತ್ತಾರೆ. ಬಿರ್ಲಾ ಫ್ಯಾಕ್ಟರಿಯವರು ಪ್ರೈವೇಟ್ ಫ್ಯಾಕ್ಟರಿಯವರು. ಅದಕ್ಕೆ ತಾವು ಕಡಿವಾಣ ಹಾಕಬೇಕು. ಅವರ ಕಿವಿ ಹಿಂಡಬೇಕೆನ್ನುವ ಮಾತನ್ನು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಇನ್ನು ಕೆಲವು ವಿಚಾರಗಳನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರು ಜಾಸ್ತಿ ಟೈಮ್ ಕೊಡುವುದಿಲ್ಲ. ನಾನು ಬೇಗ ಮುಗಿಸುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಾನು ಕ್ವಾರಿ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಶಿವಣ್ಣ:- ಎಲ್ಲಾ ಮಂತ್ರಿಗಳು ನಮ್ಮ ಕಿಸೆಯಲ್ಲಿದ್ದಾರೆಂದು ಅವರು ಹೇಳುವುದು ಸರಿಯಲ್ಲ.

೫.೫೫ ಪಿ. ಎಂ.

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಮಂತ್ರಿಗಳೇ, ಅವರು ಆ ರೀತಿ ಹೇಳುತ್ತಾರೆ. ನಾನು ಹೇಳತಕ್ಕಂಥ ಮಾತು ಅಲ್ಲ. ಅವರೆಲ್ಲಾ ಓಪನ್ ಆಗಿ ಹೇಳುತ್ತಿದ್ದಾರೆ. ಅವರಿಗೆ ನೀವು ಕಡಿವಾಣ ಹಾಕಿ. ಇಲ್ಲದಿದ್ದರೆ ನೀವು ನಮ್ಮ ಸಂಗಡ ಬನ್ನಿ, ನಾನು ಮಾನ್ಯ ಮಂತ್ರಿಗಳನ್ನು ಕರೆದುಕೊಂಡು ಹೋಗುತ್ತೇನೆ. ನಂಬರ್‌ದೋ ಸಿಮೆಂಟ್ ಎಂದು ಎಷ್ಟು ಪ್ರೊಡಕ್ಷನ್ ಮಾಡುತ್ತಿದ್ದಾರೆಂದು ನಾನು ಓಪನ್ ಆಗ ನಿಮಗೆ ತೋರಿಸಿಕೊಡುತ್ತೇನೆ. ನೀವು ನನ್ನ ಸಂಗಡ ಬನ್ನಿ. ನನ್ನ ಮತ ಕ್ಷೇತ್ರದಲ್ಲಿರತಕ್ಕಂಥ ಸಿಮೆಂಟ್ ಫ್ಯಾಕ್ಟರಿಗೆ ಬನ್ನಿ ಅಲ್ಲಿ ನಾನು ಕ್ಲಿಯರ್ ಆಗಿ ಹಿಡಿದು ತೋರಿಸುತ್ತೇನೆ. ಅವರನ್ನು ನೀವು ಹಿಡಿಯಬೇಕು. ಅವರು ನಿಜ ಹೇಳುತ್ತಾರೋ ಸುಳ್ಳು ಹೇಳುತ್ತಾರೋ ನನಗ ಗೊತ್ತಿಲ್ಲ. ಅವರು ಮಾಡತಕ್ಕಂಥಾದ್ದು ಯಾವ ತರಹ ಇದೆ ಎಂದು ನಾನು

ಮಾನ್ಯ ಮಂತ್ರಿಗಳಿಗೆ ತೋರಿಸುವುದಕ್ಕೆ ಇಷ್ಟಪಡುತ್ತೇನೆ. ಅವರ ಬಿಹೇವಿಯರ್, ಅವರ ನೇಚರ್ ಆ ತರಹ ಇದೆ. ಅವರ ವ್ಯಾಪಾರ ಅವರು ಮಾತಾಡತಕ್ಕಂಥ ಮಾತು ಅವರೇನೇನು ಮಾಡುತ್ತಿದ್ದಾರೆ ಅದಕ್ಕೆ ಕಡಿವಾಣ ಹಾಕಬೇಕೆನ್ನುವ ಮಾತನ್ನು ನಾನು ಹೇಳುತ್ತಾ ಇನ್ನು ಶಹಬಾದ್ ಸ್ಟೋನ್ಸ್ ಬಗ್ಗೆ ಹೇಳಬೇಕಾದರೆ, ಎರಡು ಮೂರು ತರಹದ ಶಹಬಾದ್ ಸ್ಟೋನ್ಸ್‌ಗೆ ೨೦ ರೂಪಾಯಿಗಳ ರಾಯಲ್ಟಿ ತೆಗೆದುಕೊಳ್ಳುತ್ತಿದ್ದೀರಿ. ಮಾನ್ಯ ಮಂತ್ರಿಗಳಿಗೆ ನಾನು ಕಳಕಳಿಯಿಂದ ಮನವಿ ಹೇಳಿದ್ದೇನೆ. ಶಹಬಾದ್ ಸ್ಟೋನ್ಸ್ ಅಂಡ್ ಗ್ರಾನೈಟ್ ಎರಡಕ್ಕೂ ರೇಟ್ ೨೦ ರೂಪಾಯಿ ಇದೆ. ಆದರೆ ಮಾರ್ಕೆಟ್‌ನಲ್ಲಿ ಹೋದಾಗ ಅದರ ಕಿಮ್ಮತ್ತು ಜಾಸ್ತಿ ಇದೆ. ಆದರೆ ಶಹಬಾದ ಸ್ಟೋನ್ ಕಿಮ್ಮತ್ತು ಬಹಳ ಕಡಿಮೆ ಇದೆ. ೨೦ ರೂಪಾಯಿ ಇರುವ ರಾಯಲ್ಟಿಯನ್ನು ೧೦ ರೂಪಾಯಿಗಳಿಗೆ ಇಳಿಸಬೇಕೆಂದು ನಾನು ಮಾನ್ಯ ಮಂತ್ರಿಯವರಲ್ಲಿ ಕೇಳುತ್ತಾ, ಚೆಕ್‌ಪೋಸ್ಟ್‌ನ್ನು ತಾವು ಗುಲ್ಬರ್ಗಾದಲ್ಲಿ ಬಹಳಷ್ಟು ರೋಡ್‌ಗೆ ಹಾಕಿಲ್ಲ. ಜಾಂಬೆಗೆ ಹೋಗತಕ್ಕಂಥ ರೋಡ್‌ಗೆ ಮಾತ್ರ ಒಂದು ಚೆಕ್‌ಪೋಸ್ಟ್‌ನ್ನು ಹಾಕಿದ್ದೀರಿ. ಆಳಂದ್‌ಗೆ ಚೆಕ್‌ಪೋಸ್ಟ್ ಹಾಕಿದ್ದೀರಿ. ಮಿಕ್ಕ ಐದಾರು ರೋಡ್‌ಗಳ ಮೂಲಕ ಅವರು ಟ್ರಕ್‌ಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಅದಕ್ಕೆ ಕಡಿವಾಣ ಇಲ್ಲ. ಸರ್ಕಾರದ ದುಡ್ಡು ಸೋರುತ್ತಿದೆ. ರಾಯಲ್ಟಿ ಸೋರುತ್ತಿದೆ. ಅದಕ್ಕೆ ನಾನು ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಪ್ರತಿಯೊಂದು ರೋಡ್‌ಗೂ ತಾವು ಚೆಕ್‌ಪೋಸ್ಟ್‌ನ್ನು ಹಾಕಿ. ರಾಯಲ್ಟಿಯನ್ನು ವಸೂಲಿ ಮಾಡಿ. ಆದರೆ ರಾಯಲ್ಟಿ ವಸೂಲು ಮಾಡುತ್ತಾ ಮಾಡುತ್ತಾ ತಾವು ಪೆನಾಲ್ಟಿ ಹಾಕುವುದು ಬೇಡ. ಏಕೆಂದರೆ ಅಲ್ಲಿ ಗರೀಬರು ಜಾಸ್ತಿ ಇದ್ದಾರೆ. ಇಲ್ಲೀಗಲ್ ಕ್ವಾರಿಗೆ ನೀವು ಕಡಿವಾಣ ಹಾಕಿ. ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರ ಸರಕಾರ ಬಂದ ನಂತರ ದೀನ ದಲಿತರು, ಹಿಂದುಳಿದವರಿಗೆ, ಕಾರ್ಮಿಕರಿಗೆ ಸ್ವಲ್ಪ ಸಹಾಯವಾಗಿದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಪೆನಾಲ್ಟಿ ಹಾಕುವಂತ್ತಾದ್ದು ಬಡವರಿಗೆ ಆಗುತ್ತಿದೆಯೆಯೇ ವಿನಃ ಶ್ರೀಮಂತರಿಗೆ ಆಗುತ್ತಿಲ್ಲ. ನಾನು ಕೇಳಿಕೊಳ್ಳುತ್ತಿದ್ದೇನೆ, ಇಲ್ಲೀಗಲ್ ಕ್ವಾರಿ ಯಾರು ಮಾಡುತ್ತಿದ್ದಾರೆ ಅವರಿಗೆ ಪೆನಾಲ್ಟಿ ಹಾಕಿ. ಅವರನ್ನು ಅರೆಸ್ಟ್ ಮಾಡಿ. ಅವರನ್ನು ಜೈಲಲ್ಲಿ ಇಡಿ. ಆದರೆ ಕೂಲಿಕಾರ, ಬಡ ಕಾರ್ಮಿಕರಿಗೆ ಪೆನಾಲ್ಟಿ ಗೇಟ್‌ನಲ್ಲಿ ತೆಗೆದುಕೊಳ್ಳುವುದು ಬೇಡ ಎಂಬ ಕಳಕಳಿ ಮನವಿಯನ್ನು ಮಾಡುತ್ತಾ ಇಲ್ಲೀಗಲ್ ಕ್ವಾರೀಸ್ ಬಗ್ಗೆ ಸನ್ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಇಲ್ಲೀಗಲ್ ಕ್ವಾರಿಯು ನನ್ನ ಮತ ಕ್ಷೇತ್ರದಲ್ಲಿ ನಡೆಯುತ್ತಿದೆ. ಅಲ್ಲಿ ಅಧಿಕಾರಿಗಳು ಶಾಮೀಲಾಗಿದ್ದಾರೆಂದು ನಾನು ಬಹಳ ಸಲ ಹೇಳಿದ್ದೇನೆ. ಅಧಿಕಾರಿಗಳು ಅಲ್ಲಿ ಬಹಳವೆಂದರೆ ೫೦ ಅಥವಾ ೧೦೦ ಇಲ್ಲೀಗಲ್ ಕ್ವಾರಿ ಇದೆಯೆಂದು ಹೇಳಿದರು. ೫ ಸಾವಿರ ಇಲ್ಲೀಗಲ್ ಕ್ವಾರೀಸ್ ಇದೆಯೆಂದು ತಾವು ಹೇಳುತ್ತೀರಿ. ಅಧಿಕಾರಿಗಳು ಇಲ್ಲೀಗಲ್ ಕ್ವಾರಿಗಳು ಇಲ್ಲವೆಂದು ಹೇಳುತ್ತಾರೆ. ಈ ಒಂದು ವಿಷಯದಲ್ಲಿ ತಾವು ಉತ್ತರ ಕೂಡ ಕೊಟ್ಟಿದ್ದೀರಿ. ನಾನು ಈ ಬಗ್ಗೆ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ, ಅಲ್ಲಿರತಕ್ಕಂಥ ಮೈನ್ಸ್ ಅಂಡ್ ಜಿಯಾಲಜಿ ಅಧಿಕಾರಿಯನ್ನು ಇಮೀಡಿಯಟ್ ಆಗಿ ವರ್ಗಾ ಮಾಡಿ ಸ್ವಾಮಿ, ಅವರಿಗೆ ಗೊತ್ತಿದೆ ಯಾವುದು ಇಲ್ಲೀಗಲ್ ಇದೆ, ಯಾವುದು ಲೀಗಲ್ ಇದೆ ಎಂದು. ಆದರೆ ನಮಗೆ ಲೆಕ್ಕ ಕೊಡುವಾಗ ಇಲ್ಲವೆಂದು ಹೇಳುತ್ತಿದ್ದಾರೆ. ಕರೆಕ್ಟ್ ಲೆಕ್ಕ ಕೊಡುತ್ತಿಲ್ಲ. ಅವರನ್ನು ಕಿತ್ತು ಬೇರೆ ಕಡೆ ವರ್ಗಾ ಮಾಡಬೇಕೆಂದು ಕೇಳುತ್ತಾ, ಇಲ್ಲೀಗಲ್ ಕ್ವಾರಿ ವಿಷಯದಲ್ಲಿ ತಾವು ಲೀಗಲ್ ಮಾಡುತ್ತೇವೆಂಬ ಆಶ್ವಾಸನೆ ಈ ಸದನದಲ್ಲಿ ಕೊಟ್ಟಿದ್ದೀರಿ. ಈ ವಿಷಯದಲ್ಲಿ ನನ್ನ ಮತ ಕ್ಷೇತ್ರಕ್ಕೆ ಬಂದು ಅಲ್ಲಿ ತಮ್ಮ ಅಧಿಕಾರಿಗಳನ್ನು ಕರೆಸಿ ಅಲ್ಲಿ ಒಂದು ಡೇಟ್‌ಅನ್ನು ಫಿಕ್ಸ್ ಮಾಡಿ

ಎಲ್ಲಾ ಇಲ್ಲೀಗಲ್ ಕ್ವಾರಿಯನ್ನು ಲೀಗಲ್ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಆಮೇಲೆ ಸಿಮೆಂಟ್ ಫ್ಯಾಕ್ಟರಿಯವರು ಮೈನ್ಸ್‌ನಿಂದ ಕಲ್ಲು ತೆಗೆದುಕೊಂಡು ಹೋಗಿ ಅವರು ಸಿಮೆಂಟ್ ಮಾಡುತ್ತಿದ್ದಾರೆ. ಸನ್ಮಾನ್ಯ ಮಂತ್ರಿಗಳೇ, ತಮಗೆ ಗೊತ್ತಿದೆ. ಎಷ್ಟು ಸಿಮೆಂಟ್ ತಯಾರು ಮಾಡುತ್ತಿದ್ದಾರೆ ಎಂದು. ನಾನು ಸನ್ಮಾನ್ಯ ಭಾರಿ ಉದ್ಯಮ ಮಂತ್ರಿಯವರಿಗೆ ಈಗ ತಾನೇ ಹೇಳಿದ್ದೇನೆ. ಸಿಮೆಂಟ್ ಬಹಳ ಪ್ರೊಡಕ್ಷನ್ ಮಾಡುತ್ತಿದ್ದಾರೆ. ಅದರಲ್ಲಿ ಶೇಕಡ ಅರ್ಧಕ್ಕೆ ಕೂಡಾ ಲೆಕ್ಕ ಕೊಡುವುದಿಲ್ಲ. ಕಲ್ಲನ್ನು ಎಷ್ಟು ತೆಗೆದುಕೊಳ್ಳುತ್ತಾರೋ ಅಷ್ಟಕ್ಕೆ ರಾಯಲ್ಟಿ ಕೊಡಬೇಕು. ಅವರು ಮೈನ್ಸ್‌ನಿಂದ ಕಲ್ಲು ತೆಗೆದುಕೊಳ್ಳುವುದು ಎರಡು ಪಟ್ಟು ಆದರೆ ನಿಮಗೆ ಕೊಡತಕ್ಕ ರಾಯಲ್ಟಿ ಒಂದು ಪಟ್ಟು. ಅಲ್ಲಿ ಕೂಡ ನಮಗೆ ಅನ್ಯಾಯವಾಗುತ್ತಿದೆ. ಎಷ್ಟು ಕಲ್ಲನ್ನು ತೆಗೆದುಕೊಂಡು ಸಿಮೆಂಟ್ ಮಾಡುತ್ತಿದ್ದಾರೆಂಬುದಕ್ಕೆ ನಿಮ್ಮಲ್ಲಿ ಲೆಕ್ಕಾಚಾರ ಇದೆಯಾ? ಇಲ್ಲಾ ಸ್ವಾಮಿ. ಫ್ಯಾಕ್ಟರಿಯರವು ಬಹಳಷ್ಟು ಎಕ್ಸ್‌ಪರ್ಟ್ ಇದ್ದಾರೆ. ಅಂದರೆ ಎಷ್ಟು ಕಲ್ಲನ್ನು ತೆಗೆದುಕೊಳ್ಳುತ್ತಾರೋ, ಎಷ್ಟು ಸಿಮೆಂಟ್ ತಯಾರು ಮಾಡುತ್ತಿದ್ದಾರೋ ಅದರ ಬಗ್ಗೆ ಸರ್ಕಾರಕ್ಕೆ ಲೆಕ್ಕ ಕೊಡುತ್ತಿಲ್ಲ. ಇದು ಮೈನ್ಸ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು. ಎಷ್ಟು ಕಲ್ಲನ್ನು ತೆಗೆದುಕೊಂಡು ಸಿಮೆಂಟ್ ಮಾಡುತ್ತಿದ್ದಾರೂ ಅಷ್ಟು ಕಲ್ಲಿಗೆ ರಾಯಲ್ಟಿ ಕೊಡಬೇಕು. ಅಲ್ಲಿ ಮೋಸವಾಗುತ್ತಿದೆ. ಅದಕ್ಕೆ ಕೂಡ ತಾವು ಕಡಿವಾಣ ಹಾಕಬೇಕು. ಎಷ್ಟು ಕಲ್ಲನ್ನು ತೆಗೆದುಕೊಳ್ಳುತ್ತಾರೋ ಅಷ್ಟಕ್ಕೂ ರಾಯಲ್ಟಿಯನ್ನು ಪಡೆಯಬೇಕು ಮತ್ತೆ ಮಾನ್ಯ ಹೈದರಾಬಾದ್ ಕರ್ನಾಟಕ ಉಸ್ತುವಾರಿ ಮಂತ್ರಿಗಳಾದ ಸನ್ಮಾನ್ಯ ಬಿ. ಶಿವಣ್ಣನವರಿಗೆ ಎರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ನನಗೆ ಜಾಸ್ತಿ ಮಕ್ಕಳು. ಶಿವಣ್ಣನವರಿಗೆ ಮಕ್ಕಳು ಇರಲಿಕ್ಕಿಲ್ಲ. ಏಕೆಂದರೆ, ಹರಿಜನ ಗಿರಿಜನ ವಿದ್ಯಾರ್ಥಿಗಳೆಲ್ಲರಿಗೂ ಊಟ ಕೊಡುತ್ತಿದ್ದಾರೆಂದೂ ಎಲ್ಲರಿಗೂ ಪುಕ್ಕಟೆ ಊಟ, ಎಲ್ಲರಿಗೂ ವಿದ್ಯಾಭ್ಯಾಸ, ಎಲ್ಲರಿಗೂ ಕೊಡತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ಆದರೆ ನಮ್ಮ ಅಧಿಕಾರಿಗಳನ್ನು ಕರೆಸಿ ಕೇಳಿ. ಅಲ್ಲಿರತಕ್ಕಂಥ ಸ್ಟ್ರೆಂತ್ ಎಷ್ಟು? ೪೦೧ ಹುಡುಗರಿಂದ ಹಾಸ್ಟೆಲ್‌ಗೆ ಅಪ್ಲಿಕೇಷನ್ ಬಂದರೆ ತಾವು ಕೊಡತಕ್ಕಂಥ ಊಟ ೧೦೦ ಸ್ಟೂಡೆಂಟ್ಸ್‌ಗೆ ಮಾತ್ರ. ಹಾಸ್ಟೆಲ್ಸ್‌ಗೆ ಎಷ್ಟು ಅಪ್ಲಿಕೇಷನ್ಸ್ ಬರುತ್ತವೋ, ಹರಿಜನ ಗಿರಿಜನ ವಿದ್ಯಾರ್ಥಿಗಳು ಎಷ್ಟು ಜನ ಹಾಸ್ಟೆಲ್‌ಗೆ ಸೇರ್ಪಡೆಗೆ ಅರ್ಜಿ ಸಲ್ಲಿಸುತ್ತಾರೋ ಎಲ್ಲರಿಗೂ ತಾವು ಊಟ, ವಿದ್ಯಾಭ್ಯಾಸ ಕೊಡಬೇಕು. ಇದಕ್ಕೆ ಕಡಿವಾಣ ಹಾಕಬಾರದು ಅನ್ನುವ ಮಾತನ್ನು ತಮಗೆ ಹೇಳುತ್ತಾ ...

ಉಪಾಧ್ಯಕ್ಷಣೆಯವರು:- ಮಿಸ್ಟರ್ ಚೌಹಾಣ್‌ರವರೇ ಬೇಗ ಮುಗಿಸಿ.

ಶ್ರೀ ಬಾಬುರಾವ್ ಚವಾಣ್:- ಮಾನ್ಯ ಸಾರಿಗೆ ಮಂತ್ರಿಯವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ನಮ್ಮ ಗುಲ್ಬರ್ಗಾದಲ್ಲಿರುವಂಥ ಕೆ. ಎಸ್ ಆರ್. ಟಿ. ಸಿ.ಯು ಲಗಾಮು ಇಲ್ಲದ ಕುದುರೆ ಎಂದು ಹೇಳ ಬಯಸುತ್ತೇನೆ. ಹೀಗೆ ಲಗಾಮು ಇಲ್ಲದ ಕುದರೆ ತನ್ನ ಮನಸ್ಸಿಗೆ ಬಂದ ಹಾಗೆ ಓಡುತ್ತದೆ ಆದ್ದರಿಂಧ ಅದಕ್ಕೆ ಸ್ವಲ್ಪ ಲಗಾಮು ಹಾಕಬೇಕು. ನಮ್ಮ ಟಾಂಗಾಗಳಲ್ಲಿ ಕುಳಿತರೆ ಪ್ಯಾಸೆಂಜರ್ಸ್ ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬಹುದು. ಆದರೆ ಬಸ್ಸಿನಲ್ಲಿ ಕುಳಿತರೆ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಲು ಟಾಪ್ ಮೇಲೆ ಇಂದು ಜನಗಳು ಕುಳಿತುಕೊಂಡು ಹೋಗುತ್ತಿದ್ದಾರೆ. ಅವರ ಎದುರು ನಾವು ಶಾಸಕರಾಗಿ ಕಾರು ತೆಗೆದುಕೊಂಡು ಹೋದರೆ ಜನಗಳು ನಮಗೆ ಎಲ್ಲಿ ಇಳಿದು ಹೊಡೆಯುತ್ತಾರೋ ಏನೋ ಎಂಬ

ಭಯ ನಮಗೆ ಆಗುತ್ತಾ ಇದೆ. ನಿಮ್ಮ ಬಸ್‌ಗಳ ಮೇಲೆ ಜನರು ಕುಳಿತುಕೊಳ್ಳಲು ಪರ್ಮಿಷನ್ ಇದೆಯೇ? ಇದು ತುಂಬಾ ವಿಷಾದಕರವಾದ ವಿಚಾರ, ತಾವುಗಳು ನಮಗೆ ಸಾಕಷ್ಟು ಬಸ್‌ಗಳನ್ನು ಕೊಡುವುದಾದರೆ ಕೊಡಿ, ಇಲ್ಲವಾದರೆ ಬಸ್‌ಗಳನ್ನು ಹಾಕಬೇಡಿ. ನಾವೇ ಟಾಂಗಾಗಳಲ್ಲಿ ಅಥವಾ ಸೈಕಲ್‌ಗಳಲ್ಲಿ ಹೋಗುವ ವ್ಯವಸ್ಥೆ ಮಾಡಿಕೊಳ್ಳುತ್ತೇವೆ. ಏಕೆಂದರೆ ನಮ್ಮ ಜನರಿಂದ ನಾವು ಹೊಡೆಸಿಕೊಳ್ಳುವಂಥ ಪರಿಸ್ಥಿತಿಯು ನಮಗೆ ಬರುವುದು ಬೇಡ. ಮೊನ್ನೆ ಮಾನ್ಯ ವಿಸಾಪುರ್‌ರವರಿಗೆ ಆದ ಪರಿಸ್ಥಿತಿಯನ್ನು ನೀವು ನೋಡಿದ್ದೀರಿ, ಇನ್ನು ಜನರು ನಮ್ಮನ್ನು ಹೀಗೆ ಬಿಡುವುದಿಲ್ಲ, ನಾಳೆ ನಮ್ಮನ್ನು ಕೂಡ ನಮ್ಮ ಜನರು ಬಸ್‌ನಿಂದ ಇಳಿದು ಹಿಡಿದು ಹಾಕಬಹುದು, ಆ ಮೇಲೆ ನೀವು ಬಂದು ಬಿಡಿಸತಕ್ಕಂಥ ಕೆಲಸ ಆಗುತ್ತದೆ. ನಾವು ಹೊಡೆಸಿಕೊಂಡ ಮೇಲೆ, ಅಂಗಿಚಡ್ಡಿ ಹರಿಸಿಕೊಂಡ ನಂತರ ತಾವುಗಳು ಬಂದು ಏನೂ ಉಪಯೋಗವಾಗಲಾರದು. ಆದ್ದರಿಂದ ನನ್ನ ಮತ ಕ್ಷೇತ್ರದಲ್ಲಿ ಜಾಸ್ತಿ ಬಸ್‌ಗಳನ್ನು ಕೊಡಿ ಎಂದು ಕೇಳುತ್ತೇನೆ. ನಮ್ಮ ಚಿತ್ತಾಪುರಕ್ಕೆ ಡಿಪೋವನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಆದರೆ ನಮ್ಮ ಶಹಾಬಾದ್‌ಗೆ ಕೊಡಲಿಲ್ಲ. ನಮ್ಮಲ್ಲಿ ಇಂಡಸ್ಟ್ರೀಸ್‌ಗಳು ಇವೆ, ಜನಸಂಖ್ಯೆ ಜಾಸ್ತಿ ಇದೆ. ಆದ್ದರಿಂದ ಚಿತ್ತಾಪುರ ಡಿಪೋವನ್ನು ಕ್ಯಾನ್ಸಲ್ ಮಾಡಿ ಶಹಾಬಾದ್‌ಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಡ್ರೈವರ್ ಮತ್ತು ಕಂಡಕ್ಟರ್‌ಗಳನ್ನು ತಮ್ಮ ಊರಿಗೆ ಹೋಗುವ ಬಸ್‌ಗಳಿಗೆ ಹಾಕಬೇಡಿ ಎಂದುಹೇಳುತ್ತಿದ್ದರೂ ನಿಮ್ಮ ಅಧಿಕಾರಿಗಳು ಅದನ್ನು ಕೇಳದೇ ಅಲ್ಲಿಗೇ ಹಾಕುತ್ತಿದ್ದಾರೆ. ಡ್ರೈವರ್ ಕಂಡಕ್ಟರ್‌ಗಳು ತಮ್ಮ ಊರಿನ ರೂಟ್‌ಗೆ ಬಸ್‌ಗಳನ್ನು ಹಾಕಿಸಿಕೊಂಡು, ಕುಡಿದು ಅಮಲಿನಲ್ಲಿ ಹೋಗುತ್ತಾರೆ ಹಾಗೂ ತಮ್ಮ ಇಷ್ಟ ಬಂದ ಹಾಗೆ ನಡೆದುಕೊಳ್ಳುತ್ತಾರೆ. ಇದು ಅಧಿಕಾರಿಗಳಿಗೆ ಗೊತ್ತಿದೆ, ಇದನ್ನು ತಪ್ಪಿಸಬೇಕು. ಹೀಗೆ ತಮ್ಮ ಊರಿಗೆ, ತಮ್ಮ ನೆಂಟರ ಊರುಗಳಿಗೆ ಹೋಗುವ ಬಸ್‌ಗಳಿಗೆ ಅವರನ್ನು ಹಾಕುವುದು ಬೇಡ ಎಂದು ಹೇಳ ಬಯಸುತ್ತೇನೆ.

ಇನ್ನು ವಿಜ್ಞಾನ ಮತ್ತು ಪರಿಸರ ಖಾತೆ ಸಚಿವರಿಗೆ ಒಂದು ವಿಚಾರವನ್ನು ಹೇಳ ಬಯಸುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಹಿರಿಯ ಸಚಿವರು, ಅವರಿಗೆ ನಮ್ಮ ವಾಡಿ-ಶಹಾಬಾದ್‌ನ ವಿಚಾರವು ಚೆನ್ನಾಗಿ ಗೊತ್ತಿದೆ. ಅಲ್ಲಿ ಇರತಕ್ಕಂಥ ಜನಗಳು ಊಟ ಮಾಡುವ ಬದಲು ಸಿಮೆಂಟ್ ತಿನ್ನುತ್ತಾ ಇದ್ದಾರೆ. ಆ ಸಿಮೆಂಟ್ ಡಸ್ಟ್‌ನಿಂದ ಎಷ್ಟು ತೊಂದರೆಯಾಗುತ್ತಿದೆ ಅಂದರೆ, ಮನೆಗಳ ಮೇಲೆ, ಮೈಕೈ ಮೇಲೆ ಮುಟ್ಟಿ ನೋಡಿದರೆ ಅದರಲ್ಲಿ ಸಿಮೆಂಟ್ ಸಿಗುತ್ತದೆ. ಗಿಡಮರಗಳ ಮೇಲೆ ಸಹ ಸಿಮೆಂಟ್ ಸಿಗುತ್ತದೆ. ಇಂತಹ ಸಿಮೆಂಟ್ ಫ್ಯಾಕ್ಟರಿಗಳಿಗೆ ತಾವುಗಳು ಒಂದು ಕಡಿವಾಣ ಹಾಕಬೇಕು. ಪೊಲ್ಯೂಷನ್ ಕಂಟ್ರೋಲ್ ಸ್ವಿಚ್‌ನ್ನು ಅವರು ಆಫ್ ಮಾಡುತ್ತಾರೆ, ಇದು ನಿಮ್ಮ ಅಧಿಕಾರಿಗಳಿಗೂ ಗೊತ್ತಿದೆ. ಕರೆಂಟ್‌ನ ಖರ್ಚು ಉಳಿಸಲು ಈ ರೀತಿ ಮಾಡುತ್ತಾರೆ. ಇದರಿಂದಾಗಿ ಸಿಮೆಂಟ್ ಡಸ್ಟ್ ನಮ್ಮ ಊರ ಮೇಲೆ, ಜನಗಳ ಮೇಲೆ ಬೀಸುತ್ತಾ ಇದೆ. ಇದಕ್ಕೆ ಕಡಿವಾಣ ಹಾಕಬೇಕು. ಇಲ್ಲವಾದರೆ ಅಲ್ಲಿಯ ಜನರು ಮಾನ್ಯ ಸಚಿವರ ಮನೆಗೆ ಬಂದು ಕುಳಿತುಕೊಳ್ಳುವುದಕ್ಕೆ ಮೊದಲು ಈ ಬಗ್ಗೆ ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇನ್ನೂ ಹೆಚ್ಚು ಮಾತನಾಡ ಬೇಕೆಂದಿದ್ದರೂ ಕೂಡ ಸಮಯಾವಕಾಶ ಇಲ್ಲವಾದ ಕಾರಣ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಗೀರ್ ಅಹಮ್ಮದ್ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷಣಿಯವರೇ, ಮಾತನಾಡಲು

ಇನ್ನೂ ಬಹಳ ಜನ ಸದಸ್ಯರು ಇದ್ದಾರೆ. ಆದ ಕಾರಣ ನಾಳೆ ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡುವ ಸಂದರ್ಭ ಬಂದಾಗ ನಾಳೆ ಬೆಳಿಗ್ಗೆ ೯ ಗಂಟೆಗೆ ಸಭೆ ಕರೆದರೂ ನಾವು ಬರುವುದಕ್ಕೆ ಸಿದ್ಧರಾಗಿದ್ದೇವೆ. ನಮ್ಮ ನಮ್ಮ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಮನೋಹರ ಐನಾಪುರ (ಬಳ್ಳೊಳ್ಳಿ):- ಮಾನ್ಯ ಅಧ್ಯಕ್ಷಣಿಯವರೇ, ಸಮಾಜಕಲ್ಯಾಣ ಇಲಾಖೆಯ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಎಸ್. ಸಿ, ಎಸ್. ಟಿ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಾಗಲಿ ಅಥವಾ ಕೋಮಿನವರಿಗಾಗಲಿ ಮೇಲೆ ಬರಬೇಕಾದರೆ ಶಿಕ್ಷಣ ಬಹಳ ಮುಖ್ಯ. ಅದಕ್ಕಾಗಿ ಶಾಲೆಗೆ ಹೋಗುತ್ತಿರುವ ಈ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್ ಅನ್ನು ಸಮಾಜ ಕಲ್ಯಾಣ ಇಲಾಖೆಯವರು ಕೊಡುತ್ತಾರೆ. ಎಷ್ಟೆಂದರೆ ಒಂದು ವರ್ಷಕ್ಕೆ ಮಾಧ್ಯಮಿಕ ಶಾಲೆಯವರಿಗೆ ೭೫ ರೂ., ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗೆ ೧೦೦ ರೂ. ಅನ್ನು ಕೊಡುತ್ತಾರೆ. ಅದೇ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಪ್ರವೇಶ ಪಡೆದರೆ ಅವರಿಗೆ ೧೫೦ ರೂ. ಕೊಡಲಾಗುತ್ತದೆ. ಈ ಡಿಸ್‌ಪ್ಯಾರಿಟಿಯನ್ನು ತೆಗೆಯಬೇಕು. ಎಸ್. ಸಿ., ಎಸ್. ಟಿ., ಅಥವಾ ಹಿಂದುಳಿದ ವರ್ಗದ ವಿದ್ಯಾರ್ಥಿ ಶಾಲೆಗೆ ಹೋದರೆ ಕೇವಲ ೭೫ ರೂ. ವರ್ಷಕ್ಕೆ ಕೊಡುವಾಗ ಇನ್ನೊಬ್ಬ ವಿದ್ಯಾರ್ಥಿ ಹಾಸ್ಟೆಲ್‌ಗೆ ಪ್ರವೇಶ ಪಡೆದಾಗ ತಿಂಗಳಿಗೆ ೧೫೦ ರೂ. ಸಿಗುತ್ತದೆ. ಅದಕ್ಕಾಗಿ ಸಚಿವರಲ್ಲಿ ವಿನಂತಿಸುತ್ತೇನೆ, ಕನಿಷ್ಠ ಈ ವಿದ್ಯಾರ್ಥಿಗಳಿಗೆ ತಿಂಗಳಿಗೆ ೨೫ ರೂ ಆದರೂ ಸಿಗುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಒಂದೇ ಕೋಮು, ಜಾತಿಯ ವಿದ್ಯಾರ್ಥಿಗಳು ಹಾಸ್ಟೆಲ್‌ನಲ್ಲಿ ಪ್ರವೇಶ ಪಡೆದಾಗ ಹೆಚ್ಚಿನ ಸೌಲಭ್ಯ, ಆದರೆ ಅದೇ ವಿದ್ಯಾರ್ಥಿ ಹಾಸ್ಟಲ್‌ಗೆ ಹೋಗದಿದ್ದರೆ ವರ್ಷಕ್ಕೆ ೭೫ ರಿಂದ ೧೦೦ ರೂ. ಗಳವರೆಗೆ ಸ್ಕಾಲರ್‌ಶಿಪ್ ಎಂದು ಕೊಡುವುದು ಅಷ್ಟು ಸಮಂಜಸವಲ್ಲ ಎಂಬುದು ನನ್ನ ವಿಚಾರ. ಅದೇ ರೀತಿ ಅನುದಾನಿತ ಮತ್ತು ಸರ್ಕಾರಿ ಹಾಸ್ಟೆಲ್‌ಗಳ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ವಿಶೇಷವಾಗಿ ಅನುದಾನಿತ ಪ್ರೀಮೆಟ್ರಿಕ್ ಹಾಸ್ಟೆಲ್ಸ್‌ಗೆ ಸಮಾಜಕಲ್ಯಾಣ ಇಲಾಖೆಯಿಂದ ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ ೧೫೦ ರೂ. ಕೊಡಲಾಗುತ್ತಿದೆ, ಆದರೆ ಈಗ ಬೆಲೆಗಳು ಮೇಲ್ಮಟ್ಟಕ್ಕೆ ಏರುತ್ತಿರುವುದರಿಂದ ಶಿಕ್ಷಣ ಸಂಸ್ಥೆಗಳು ಮತ್ತು ವಾಲಂಟರಿ ಆರ್ಗನೈಜೇಷನ್ಸ್ ಏನು ಈ ಹಾಸ್ಟೆಲ್‌ಗಳನ್ನು ನಡೆಸುತ್ತಿವೆ ಅವುಗಳ ಪರಿಸ್ಥಿತಿ ಚಿಂತಾಜನಕವಾಗಿದೆ. ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಜೋಳದ ರೊಟ್ಟಿ ಉಪಯೋಗ ಜಾಸ್ತಿ, ಜೋಳದ ಬೆಲೆ ೭೫ ಪೈಸೆಯಿಂದ ೧ ರೂ. ಇದ್ದಾಗ ವಿದ್ಯಾರ್ಥಿಗೆ ೧೦೦ ರಿಂದ ೧೫೦ ರೂ ಕೊಡಲಾಗುತ್ತಿತ್ತು, ಇವತ್ತು ಜೋಳದ ಧಾರಣೆ ಕೆ. ಜಿ.ಗೆ ೮ ರಿಂದ ೯ ರೂ ಆಗಿದೆ. ಆದರೂ ಹಾಸ್ಟೆಲ್‌ಗಳ ಅನುದಾನ ಜಾಸ್ತಿ ಮಾಡಿಲ್ಲ. ಅದೇ ರೀತಿ ಈ ವಸತಿ ನಿಲಯಗಳಲ್ಲಿ ಕೆಲಸ ಮಾಡುತ್ತಿರುವ ಕುಕ್ಸ್ ಅಥವಾ ಸೂಪರಿಂಟೆಂಡೆಂಟ್ ಅಥವಾ ಕಿಚನ್ ಸರ್ವೆಂಟ್ಸ್‌ಗೆ ತಿಂಗಳಿಗೆ ೧೦೦೦ ರೂ ಸಂಬಳ ಕೊಡುತ್ತಾರೆ. ಅದೇ ಸರ್ಕಾರಿ ವಸತಿ ನಿಲಯಗಳಲ್ಲಿ ಸರ್ಕಾರಿ ಸ್ಕೇಲ್‌ನಂತೆ ೧೫೦೦ ರಿಂದ ೨೦೦೦ ರೂ ಸಂಬಳ ಸಿಗುತ್ತದೆ. ಅನುದಾನಿತ ಹಾಸ್ಟಲ್‌ನಲ್ಲಿರುವವರಿಗೆ ಇಷ್ಟು ಕೊಡಲಿಕ್ಕೆ ಆಗದಿದ್ದರೂ ತಿಂಗಳಿಗೆ ೫೦೦ ರೂ. ಆದರೂ ಕೊಡುವ ವ್ಯವಸ್ಥೆಯಾಗಬೇಕು. ಏಕೆಂದರೆ ನೂರು ರೂನಲ್ಲಿ ಯಾರೂ ದುಡಿಯೋಕ್ಕೆ ಬರೋದಿಲ್ಲ. ಅದಕ್ಕೆ ಈ ಅನುದಾನಿತ ಹಾಸ್ಟೆಲ್ಸ್‌ನಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಕನಿಷ್ಠ ೫೦೦ ಆದರೂ ಕೊಡುವ ವ್ಯವಸ್ಥೆ ಈ ಸಮಾಜ ಕಲ್ಯಾಣ ಇಲಾಖೆಯಿಂದ ಆಗಬೇಕೆಂದು ಸಚಿವರಲ್ಲಿ ಕೋರುತ್ತೇನೆ. ಬಿಲ್ಡಿಂಗ್ ರೆಂಟ್, ನನಗ ಗೊತ್ತಿರುವ

ಹಾಗೆ ವರ್ಷಕ್ಕೆ ೧೨೦೦ ರೂ. ಕೊಡುತ್ತಾರೆ. ೫೦ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಕ್ಕೆ ೧೦೦೦ ಎಂದು ಮಾಡಿ ಈ ಅನುದಾನಿತ ಹಾಸ್ಟೆಲ್‌ಗಳಿಗೆ ಸಹಾಯ ಮಾಡಬೇಕು. ಹಿಂದುಳಿದ ವರ್ಗಗಳಲ್ಲಿ ಅಥವಾ ಎಸ್. ಸಿ., ಎಸ್. ಟಿ. ವಿದ್ಯಾರ್ಥಿಗಳ ಶಿಕ್ಷಣ ಮಟ್ಟವನ್ನು ಏರಿಸುವ ಸಲುವಾಗಿ ನನ್ನ ಇನ್ನೊಂದು ಸಲಹೆ ಅಂದರೆ, ವಿಶೇಷವಾಗಿ ಹರಿಜನ ಕೇರಿ ಲಂಬಾಣಿ ತಾಂಡಾಗಳಲ್ಲಿನ ಬಹಳ ಬಡ ಜನರು ಮಹಾರಾಷ್ಟ್ರ ಗೋವಾಗಳಿಗೆ ದುಡೀಲಿಕ್ಕೆ ಹೋಗುತ್ತಾರೆ. ಆಗ ಅವರ ಮಕ್ಕಳು ಮತ್ತು ವಯಸ್ಸಾದ ಜನರನ್ನಷ್ಟೇ ಬಿಟ್ಟು ಹೋಗುತ್ತಾರೆ. ಆಗ ಆ ಮಕ್ಕಳು ಬೀದಿಗಳಲ್ಲಿ ಓಡಾಡುತ್ತಾರೆ. ಅಂಥಹವರಿಗೆ ಶಿಕ್ಷಣ ಕೊಡುವ ಸಲುವಾಗಿ ರೆಸಿಡೆನ್ಷಿಯಲ್ ಸ್ಕೂಲನ್ನು ಪ್ರಾರಂಭ ಮಾಡಿ, ಸೈನಿಕ ಶಾಲೆಗಳ ರೀತಿ ತಾಲ್ಲೂಕಿಗೊಂದರಂತೆ ಪ್ರಾರಂಭ ಮಾಡಿದರೆ ಈ ಎಸ್. ಸಿ., ಎಸ್. ಟಿ., ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣ ಕೊಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಬಯಸುತ್ತೇನೆ. ಇನ್ನು ಎಸ್. ಸಿ. ಮತ್ತು ಎಸ್. ಟಿ. ಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಐ. ಎ. ಎಸ್, ಐ. ಪಿ. ಎಸ್ ಕೋಚಿಂಗ್ ಟ್ರೈನಿಂಗ್ ಸೆಂಟರ್‌ನಲ್ಲಿ ಟ್ರೈನಿಂಗನ್ನು ಕೊಟ್ಟು ಅವರಿಗೆ ಪರೀಕ್ಷೆಗಳಿಗೆ ಕೊಡುವ ಒಂದು ಅವಕಾಶವನ್ನು ಮಾಡಿಕೊಡಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಒಂದು ವಾರದ ಹಿಂದೆ ಹೇಳಿದರು. ಈ ಟ್ರೈನಿಂಗ್‌ನಿಂದ, ಈ ಕ್ಯಾಂಪಿನಿಂದ ಯಾರೂ ಸಹ ಐ. ಎ. ಎಸ್.ನಲ್ಲಿ ಇದುವರೆಗೂ ಪಾಸಾಗಿಲ್ಲದಿರುವುದು ಬಹಳ ವಿಷಾದನೀಯ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ, ಈ ಟ್ರೈನಿಂಗ್ ಸೆಂಟರ್‌ನಲ್ಲಿ ಒಳ್ಳೆಯ ಲೆಕ್ಚರರ್‌ಗಳನ್ನು, ಪ್ರೊಫೆಸರುಗಳನ್ನು ಹಾಕಿ ಕನಿಷ್ಟ ಒಂದು ವರ್ಷಕ್ಕೆ ಇಬ್ಬರು ಮೂವರನ್ನಾದರೂ ನಮ್ಮ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಪಾಸಾಗಿ ಐ. ಎ. ಎಸ್ ಐ. ಪಿ. ಎಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಅವರು ಇತರ ಕೋಮಿನ ಇತರ ಜಾತಿಯ ಮೇಲ್ವರ್ಗದವರ ಜೊತೆಯಲ್ಲಿ ಐ. ಎ. ಎಸ್ ಪರೀಕ್ಷೆ ಪಾಸಾಗಿ ಮುಂದೆ ಬರುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಸ್ವಯಂ ಉದ್ಯೋಗ ತರಬೇತಿ ಬಗ್ಗೆ ಹೇಳುವುದಾದರೆ ಆಟೋರಿಕ್ಷಾ ಮತ್ತು ಲಘು ಚಾಲನೆಯಲ್ಲಿ ನಿರುದ್ಯೋಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಯುವಕರಿಗೆ ತರಬೇತಿಯನ್ನು ನೀಡಿ ಅವರಿಗೆ ಸ್ವಂತ ಉದ್ಯೋಗಗಳನ್ನು ಮಾಡುವ ಹಾಗೆ ನೆರವಾಗುವ ದೃಷ್ಟಿಯಿಂದ ಇಲಾಖೆಯು ಶಿಶುವೇತನವನ್ನು ನೀಡುತ್ತದೆ ಎಂದು ಹೇಳಿದ್ದಾರೆ. ಈವರೆಗೆ ಒಂದು ವರ್ಷದಲ್ಲಿ ಸುಮಾರು ೨೬೬೮ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ. ಇದು ಬಹಳ ಕಡಿಮೆ. ಇದು ಕೇವಲ ಆಟೋರಿಕ್ಷಾ ಅಷ್ಟೇ ಅಲ್ಲ, ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಎಷ್ಟೋ ವಿದ್ಯಾರ್ಥಿಗಳು ಪಾಸಾಗಿ ನೌಕರಿ ಇಲ್ಲದೇ ಓಡಾಡುತ್ತಿದ್ದಾರೆ. ಅವರಿಗೆ ಈ ಹೆವಿ ವೆಹಿಕಲ್ ಡ್ರೈವಿಂಗ್ ಲೈಸೆನ್ಸ್ ಸಿಗಬೇಕಾದರೆ ಏನು ಒಂದು ತರಬೇತಿ ಬೇಕಾಗುತ್ತದೆ, ಆ ಒಂದು ಹೆವಿ ವೆಹಿಕಲ್ ಡ್ರೈವಿಂಗ್ ಲೈಸೆನ್ಸ್‌ನ್ನು ಕೊಡುವ ವ್ಯವಸ್ಥೆಯನ್ನು ಟ್ರೈನಿಂಗ್ ಮೂಲಕ ಕೊಡಿ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಮೊನ್ನೆ ನಾನು ಡಿವಿಜನಲ್ ಕಂಟ್ರೋಲರ್, ಕೆ. ಎಸ್. ಆರ್. ಟಿ. ಸಿ. ಹತ್ತಿರ ಹೋದಾಗ ಅವರು ಡ್ರೈವರ್ ಪೋಸ್ಟ್‌ಗೆ ಎಸ್. ಸಿ. ಮತು ಎಸ್. ಟಿ. ಅಭ್ಯರ್ಥಿಗಳು ಲಭ್ಯವಾಗುವುದಿಲ್ಲ ಎಂದು ಹೇಳಿದರು. ಅದಕ್ಕೋಸ್ಕರ ಈ ಮಾತನ್ನು ನಾನು ಹೇಳಬಯಸುತ್ತಿದ್ದೇನೆ. ಮಾನ್ಯ ಸಚಿವರು ಇದನ್ನು ನೋಟ್ ಮಾಡಿಕೊಂಡು ಹೆವಿ ವೆಹಿಕಲ್ ಲೈಸೆನ್ಸ್ ಪ್ರೋಗ್ರಾಂ ಅನ್ನು ಸ್ಟಾರ್ಟ್ ಮಾಡಬೇಕು. ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಅದನ್ನು ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಎಸ್. ಸಿ. ಮತ್ತು ಎಸ್. ಟಿ. ಡೆವಲಪ್‌ಮೆಂಟ್ ಕಾರ್ಪೋರೇಷನ್, ಇದು ಒಂದು ಅಭಿವೃದ್ಧಿ ನಿಗಮ. ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ವರ್ಗದ ಜನಾಂಗದ ಏಳಿಗೆಗಾಗಿ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದೆ. ಅವರಲ್ಲಿ ವಿಶೇಷವಾಗಿ ನಾವು ಒಂದು ಪಾಯಿಂಟನ್ನು ಹೇಳಬಯಸುತ್ತೇನೆ. ನೀರಾವರಿ, ಕೊಳವೆ ಭಾವಿಗಳನ್ನು ತೋಡುತ್ತಾರೆ. ಬಿಜಾಪುರ ಜಿಲ್ಲೆ ವಿಶೇಷವಾಗಿ ನಮ್ಮ ಕರ್ನಾಟಕದಲ್ಲಿ ಅತೀ ಹಿಂದುಳಿದ ಜಿಲ್ಲೆ ಹಾಗೂ ಬರಗಾಲ ಪೀಡಿತ ಜಿಲ್ಲೆ. ಅಲ್ಲಿ ವಿಶೇಷವಾಗಿ ನನ್ನ ಕ್ಷೇತ್ರ ಸುಮಾರು ಏಳು ವರ್ಷಗಳಿಂದ ಗ್ರೇ ಏರಿಯಾ, ಡಾರ್ಕ್ ಏರಿಯಾ ಎಂದು ಘೋಷಿಸಲ್ಪಟ್ಟಿತ್ತು. ಮೊನ್ನೆ ಕೇವಲ ಮೂರು-ನಾಲ್ಕು ತಿಂಗಳ ಹಿಂದೆ ಅದನ್ನು ಆ ನಿರ್ಬಂಧವನ್ನು ತೆಗೆದು ಹಾಕಿ ಆ ಕೊಳವೆ ಭಾವಿಯನ್ನು ತೋಡಿಸುವ ಕಾರ್ಯ ಪ್ರಾರಂಭವಾಗಿದೆ. ಅಲ್ಲಿ ಇದು ಯಾವ ರೀತಿ ನಡೆಯುತ್ತಿದೆ ಎಂದು ನಮ್ಮ ಮಲ್ಲಾಜಮ್ಮ ಹೇಳಿದರು, ಇದಾದನಂತರ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನವರಿಗೆ ಎಸ್. ಸಿ. ಮತ್ತು ಎಸ್. ಟಿ. ಕಾರ್ಪೋರೇಷನ್‌ನವರು ಹ್ಯಾಂಡ್ ಓವರ್ ಮಾಡಿದ್ದಾರೆ. ಅವರು ಎರಡು ಸಾವಿರ ರೂಪಾಯಿಗಳನ್ನು ಕೇಳುತ್ತಾರೆ. ಅವರಿಗೆ ಕೊಡದಿದ್ದರೆ ಬೋರ್ ವೆಲ್ ಕೊರೆಯುವುದಿಲ್ಲ. ಆದಕ್ಕೋಸ್ಕರವಾಗಿ ಮಾನ್ಯ ಸಚಿವರಲ್ಲಿ ವಿಶೇಷವಾಗಿ ಈ ಮಾತನ್ನು ಹೇಳಬಯಸುತ್ತೇನೆ. ದಯವಿಟ್ಟು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನ್ನು ವಿತ್‌ಡ್ರಾ ಮಾಡಿ ಬೇರೆ ಯಾವುದಾದರೂ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಡಿಪಾರ್ಟ್‌ಮೆಂಟ್‌ನಿಂದ ಬಡವರಿಗೆ ಬಹಳ ತೊಂದರೆ ಆಗುತ್ತಿದೆ. ವಿಶೇಷವಾಗಿ ಈ ನೀರಾವರಿ ಯೋಜನೆಯನ್ನು ಕಾರ್ಯಗತಗೊಳಿಸಬೇಕಾದರೆ ಈ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನನ್ನು ವಿತ್‌ಡ್ರಾ ಮಾಡಿ ಒಂದು ಬೇರೆ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಒಂದೆರಡು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈ ಮಹಿಳಾ ಕಲ್ಯಾಣದ ಬಗ್ಗೆ ಹೇಳಬಯಸುತ್ತೇನೆ. ಈ ಬಿಜಾಪುರ ಜಿಲ್ಲೆಯಾಗಲೀ ಅಥವಾ ತುಮಕೂರು ಜಿಲ್ಲೆಯಾಗಲೀ, ಯಾವುದೇ ಜಿಲ್ಲೆಯಾಗಲೀ ಪ್ರತಿಯೊಂದು ಜಿಲ್ಲೆಗೂ ಪ್ರತಿಯೊಂದು ಜಿಲ್ಲೆಯಲ್ಲೂ ಈ ಹೆಣ್ಣುಮಕ್ಕಳ ಸಂಖ್ಯೆ ನೌಕರಿ ಮಾಡುವಂಥವರಿಗೆ ವರ್ಕಿಂಗ್ ವಿಮೆನ್ ಫೆಸಿಲಿಟೀಸ್, ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ಸ್ ನಾವು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ಸೌಲಭ್ಯವನ್ನು ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದವರು ಒಂದು ವಾಲೆಂಟರಿ ಆರ್ಗನೈಜೇಷನ್ ಮುಂದೆ ಬಂದರೆ ಅವರೇ ವರ್ಕಿಂಗ್ ವಿಮೆನ್ಸ್ ಹಾಸ್ಟೆಲ್ ಅನ್ನು ಕನ್‌ಸ್ಟ್ರಕ್ಟ್ ಮಾಡುವುದಕ್ಕೆ ಮತ್ತು ಹೆಣ್ಣುಮಕ್ಕಳಿಗೆ ಒಂದು ಸವಲತ್ತನ್ನು, ಸೌಲಭ್ಯವನ್ನು ಕೊಡುವುದಕ್ಕೆ ಒಂದು ದಾರಿಯನ್ನು ಮಾಡಿ ಎಂದು ನಾನು ಹೇಳ ಬಯಸುತ್ತೇನೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು ೩-೪ ಅಷ್ಟೇ ಇರಬಹುದು. ನನ್ನ ವಿನಂತಿ ಇಷ್ಟೆ. ಪ್ರತಿಯೊಂದು ಜಿಲ್ಲೆಯಲ್ಲೂ ಕನಿಷ್ಟ ಒಂದು ವರ್ಕಿಂಗ್ ವವಿಮೆನ್ ಹಾಸ್ಟೆಲ್‌ನ್ನು ಹೆಣ್ಣುಮಕ್ಕಳಿಗೆ ವಿಶೇಷವಾಗಿ ಕೆಲಸ ಮಾಡುವ ಹೆಣ್ಣುಮಕ್ಕಳಿಗೆ ಈ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಅಂಗನವಾಡಿ ಕಾರ್ಯಕರ್ತರ ಬಗ್ಗೆ ಪ್ರತಿಯೊಬ್ಬರೂ ಹೇಳಿದ್ದಾರೆ. ನಾನು ಸಹ ಹೇಳಬಯಸುತ್ತೇನೆ. ಏಕೆಂದರೆ ಇತ್ತೀಚೆಗೆ ಸುಮಾರು ಸಾವಿರಾರು ಹೆಣ್ಣು ಮಕ್ಕಳು ಪ್ರತಿಯೊಂದು ಜಿಲ್ಲೆಯಿಂದ ಪ್ರತಿಯೊಂದು ಹಳ್ಳಿಯಿಂದ, ತಮ್ಮ ಬೇಡಿಕೆಗಳನ್ನು ತೆಗೆದುಕೊಂಡು ಬಂದಿದ್ದರು. ಅವರಿಗೆ ಕೊಡುತ್ತಿರುವ ೩೦೦ ರೂಪಾಯಿ ಸಂಬಳ ಸಾಲದು. ಅದನ್ನು ಹೆಚ್ಚಿಗೆ ಮಾಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಅವಶ್ಯವಾಗಿ ಬೇಕೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ ಅಂಗನವಾಡಿ ಕಾರ್ಯಕರ್ತೆಯರ ತೊಂದರೆಯನ್ನು ನಿವಾರಿಸಬೇಕಾದರೆ ಕೇಂದ್ರ ಸರ್ಕಾರದಿಂದ ಸಲಹೆಯನ್ನು ಪಡೆದು ಅವರಿಗೆ

ಸಂಬಳವನ್ನು ಹೆಚ್ಚಿಗೆ ಮಾಡಿ, ಅವರ ಕುಂದು ಕೊರತೆಗಳನ್ನು ಹೋಗಲಾಡಿಸಬೇಕೆಂದು ನಾನು ಮಂತ್ರಿಯವರಲ್ಲಿ ಕೇಳಬಯಸುತ್ತೇನೆ. ಸಮಾಜ ಕಲ್ಯಾಣ ಇಲಾಖೆ ಇನ್ನೂ ಎಫೆಕ್ಟೀವ್ ವರ್ಕ್ ಮಾಡಬೇಕಾದರೆ ಅದನ್ನು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಿಂದ ತೆಗೆದು ಹಾಕಬೇಕು. ಇಲ್ಲದಿದ್ದರೆ ಸಾಧ್ಯವಾಗುವುದಿಲ್ಲ. ಜಿಲ್ಲಾಪರಿಷತ್ತಿನಲ್ಲಿ ನಮ್ಮ ಸಮಾಜ ಕಲ್ಯಾಣ ಇಲಾಖೆ ಬಹಳಷ್ಟು ಹದಗೆಟ್ಟಿದೆ ಎಂಬುದನ್ನು ನಾನು ಘಂಟಾಘೋಷವಾಗಿ ಹೇಳಬಯಸುತ್ತೇನೆ. ಶ್ರೀಮತಿ ಮಲ್ಲಾಜಮ್ಮನವರು ಹಾಗೂ ಇನ್ನೂ ಇತರ ಶಾಸಕರುಗಳು ಇದೇ ಮಾತನ್ನು ಪ್ರಸ್ತಾಪಿಸಿದ್ದಾರೆ. ಆದ್ದರಿಂದ ಈ ಸಮಾಜ ಕಲ್ಯಾಣ ಇಲಾಖೆಯನ್ನು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಿಂದ ತೆಗೆದರೆ ಏನಾದರೂ ಸ್ವಲ್ಪ ಎಫೆಕ್ಟೀವ್ ಆಗಿ, ಅಧಿಕಾರಿಗಳು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳ ಬಯಸುತ್ತೇನೆ. ಅದರಲ್ಲಿಯೂ ವಿಶೇಷವಾಗಿ ಕೊದಂಡರಾಮು ಎಂಬ ಒಬ್ಬರು ಐ. ಎ. ಎಸ್. ಆಫೀಸರ್ ಇದ್ದಾರೆ. ಅವರನ್ನು ಡೈರೆಕ್ಟರ್ ಅಥವಾ ಸೆಕ್ರೆಟರಿಯನ್ನಾಗಿ ಮಾಡಬೇಕು. ಅಂತಹ ಒಳ್ಳೆಯ ಅಧಿಕಾರಿಗಳನ್ನು ಸಮಾಜಕಲ್ಯಾಣ ಇಲಾಖೆಯಲ್ಲಿ ಹಾಕಿದರೆ ಇನ್ನೂ ಹೆಚ್ಚಿನ ಒಳ್ಳೆಯ ಕಾರ್ಯ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಹೇಳಿ ಎರಡು ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಉಪಾಧ್ಯಕ್ಷಣಿಯವರೇ, ಕೊನೆಗೂ ತಾವು ನನಗೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ವಂದಿಸುತ್ತೇನೆ. ಈಗ ಸಭೆಯ ಮುಂದೆ ಇರತಕ್ಕ ೧೦ ಬೇಡಿಕೆಗಳನ್ನು ಬೆಂಬಲಿಸುವುದರ ಜೊತೆಗೆ ನಾನು ನನ್ನ ಸಹಮತವನ್ನು ವ್ಯಕ್ತಪಡಿಸುತ್ತೇನೆ. ಯುವಕ ಸಚಿವರಾದಂತಹ ಮುನಿಯಪ್ಪನವರು, ನಜೀರ್ ರವರು ಮತ್ತು ಉಸ್ತಾದ್‌ರವರು ಸಭೆಯಲ್ಲಿ ಇದ್ದಾರೆ. ಅವರ ಬೇಡಿಕೆಗಳ ಮೇಲೆ ಕೆಲವು ಸಲಹೆಗಳನ್ನು ಮಾತ್ರ ಕೊಡಲಿಕ್ಕೆ ಇಷ್ಟಪಡುತ್ತೇನೆ, ನಾನು ಪ್ರಾಮುಖ್ಯವಾಗಿ ಮಾನ್ಯ ಉಸ್ತಾದ್‌ರವರ ಇಲಾಖೆಗೆ ಸಂಬಂಧಪಟ್ಟಂತೆ ಅವರ ಬೇಡಿಕೆಗೆ ಸಂಬಂಧಪಟ್ಟಹಾಗೆ ಒಂದು ಮಾತನ್ನು ಹೇಳಬೇಕಾದರೆ, ಅದು ಬಹಳ ಪ್ರಾಮುಖ್ಯವಾದಂತಹ ಇಲಾಖೆಯಾಗಿದೆ. ಆ ಇಲಾಖೆಯ ವ್ಯಾಪ್ತಿಯಿಂದ ಸುಧಾರಣೆಗಳನ್ನು ಮಾಡುವುದರ ಮುಖೇನ ರಾಜ್ಯದ ಬೊಕ್ಕಸಕ್ಕೆ ಅನೇಕ ರೀತಿಯಲ್ಲಿ ಹಣ ಬರುವುದಕ್ಕೆ ಅವಕಾಶ ಇದೆ. ಇಲ್ಲಿಯವರೆಗೂ ಕೂಡ ಈ ಇಲಾಖೆ ವಿವಾದಕ್ಕೆ ಸಿಕ್ಕಿ ಕಷ್ಟಪರಿಸ್ಥಿತಿಯನ್ನು ಅನುಭವಿಸುತ್ತಿರತಕ್ಕ ಇಲಾಖೆಯಾಗಿದೆ. ಈವತ್ತು ಏನಾಗಿದೆ ಅಂದರೆ ಇಲ್ಲಿ ವಿರೋಧ ಪಕ್ಷದವರು ಯಾರೂ ಇಲ್ಲ. ಅವರು ಇದ್ದಿದ್ದರೆ ಚೆನ್ನಾಗಿರುತಿತ್ತು. ಅವರು ಒಂದೇ ಒಂದು ಕೂಗನ್ನು ಕೂಗುತ್ತಿದ್ದರು; ಏನು ಈ ಸರ್ಕಾರದಲ್ಲಿ ಗ್ರಾನೈಟ್ ಲೂಟಿಯಾಗುತ್ತಿದೆ; ರಾಜ್ಯದ ಸಂಪತ್ತು ಹಾಳಾಗುತ್ತಿದೆ. ಇವತ್ತು ಈ ಸರ್ಕಾರದವರು ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆ ಅನ್ನತಕ್ಕ ಅನೇಕ ತರಹದ ಆರೋಪಗಳು ಅವರಿಂದ ಬಂದಿವೆ. ನಾನು ಅದಕ್ಕೆ ಪ್ರತ್ಯುತ್ತರವಾಗಿ ಈ ಸಭೆಯ ಮುಖೇನ ಕೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಇವತ್ತು ವಾಸ್ತವಿಕವಾಗಿ ಇರತಕ್ಕಂಥಹ ಪರಿಸ್ಥಿತಿಯ ಬಗ್ಗೆ ಸ್ವಲ್ಪ ಯೋಚನೆ ಮಾಡುವುದಾದರೆ ಇವತ್ತು ಏನು ಗ್ರಾನೈಟ್ ಲೂಟಿ ಅನ್ನತಕ್ಕದ್ದು ನಡೆಯುತ್ತಿದೆ ಇದು ಇವತ್ತು ಮಾತ್ರ ನಡೆದಿರತಕ್ಕದ್ದು ಅಲ್ಲ. ಅದು ಆಗಲೂ ನಡೆಯುತ್ತಿತ್ತು. ಅಂಕಿ ಅಂಶಗಳ ಆಧಾರದ ಮೇಲೆ ನಾವು ಮಾತನಾಡುವುದಾದರೆ ಇವತ್ತು ನಮಗೆ ಎಷ್ಟೆಷ್ಟು ರಾಯಲ್ಟಿ ಮೂಲಕ ರೆವಿನ್ಯೂ ಬರುತ್ತಿದೆ ಎನ್ನತಕ್ಕದ್ದನ್ನು ನಾವು ಯೋಚನೆ ಮಾಡಿದರೆ ೧೯೭೫ರಿಂದ ಇಲ್ಲಿಯವರೆಗೂ ಕೂಡ ಲೆಕ್ಕಕ್ಕೆ ತೆಗೆದುಕೊಂಡರೆ ವರ್ಷ ವರ್ಷಕ್ಕೆ ಕೇವಲ ೧-೨ ಲಕ್ಷ ಮಾತ್ರ ರಾಯಲ್ಟಿ ಇಂಪ್ರೂವ್

ಆಗುತ್ತಿದೆ. ೧೯೮೮ರಲ್ಲಿ ೭೪ ಲಕ್ಷ ರಾಯಲ್ಟಿ ಬಂದಿದೆ. ೧೯೯೦-೯೧ರಿಂದ ೧.೩೩ ಲಕ್ಷ ಬಂದಿದೆ. ಈ ವರ್ಷ ಬಂದಿರತಕ್ಕದ್ದು ಸುಮಾರು ೩ ಕೋಟಿ. ಈ ಅಂಕಿ ಅಂಶಗಳ ಆಧಾರದ ಮೇಲೆ ನಾವು ಹೇಳಬೇಕಾಗುತ್ತದೆ. ಇವತ್ತು ಯಾರು ಯಾರ ಜೊತೆಯಲ್ಲಿ ಶಾಮೀಲಾಗಿದ್ದಾರೆ ಅನ್ನತಕ್ಕದ್ದನ್ನು ನೋಡಬೇಕು. ಗ್ರಾನೈಟ್ ಲೂಟಿ ಈ ಹಿಂದೆ ಕೂಡ ನಡೆಯುತ್ತಿತ್ತು. ಹಿಂದೆ ರಾಯಲ್ಟಿ ಬರುತ್ತಿರಲಿಲ್ಲ. ಇವತ್ತು ರಾಯಲ್ಟಿಯಾದರೂ ಬರುತ್ತಿದೆ. ಇವತ್ತು ಈ ಗ್ರಾನೈಟ್ ಲೂಟಿಯನ್ನು ತಪ್ಪಿಸತಕ್ಕದ್ದು ಸಾಧ್ಯವೇ ಎನ್ನತಕ್ಕದ್ದು ಒಂದು ಪ್ರಶ್ನೆ. ಅದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಅನ್ನುವಂತಹ ಮಟ್ಟಕ್ಕೆ ಹೋಗಿದೆ. ಕಾರಣ ಏನು ? ಇವೊತ್ತು ಪಟ್ಟಾ ಲ್ಯಾಂಡ್‌ನಲ್ಲಿರುವ ಕಲ್ಲು ಗಣಿಗಳಿಗೆ ಸಂಬಂಧಪಟ್ಟಂತೆ ಸುಮಾರು ಒಂದೂವರೆ ಸಾವಿರ ಕೇಸ್‌ಗಳು ಹೈಕೋರ್ಟಿನಲ್ಲಿ ಪೆಂಡಿಂಗ್ ಇವೆ. ಗೌವರ್ನಮೆಂಟ್ ಲ್ಯಾಂಡ್‌ಗೆ ಸಂಬಂಧಪಟ್ಟಂತೆ ಸುಮಾರು ೪೦೦-೫೦೦ ಕೇಸ್‌ಗಳು ಇರತಕ್ಕಂಥಾದ್ದು ಉಂಟು. ಇವೊತ್ತು ಹೈಕೋರ್ಟ್‌ನವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ, ಅವರು ಒಂದು ರಿಟ್ ಪಿಟಿಷನ್ ಹಾಕಿದರೂ ಸಾಕು, ವರ್ಕಿಂಗ್ ಆರ್ಡರ್ ಕೊಡತಕ್ಕಂಥ ಮಟ್ಟಕ್ಕೆ ಹೋದಾಗ ಇರತಕ್ಕಂಥ ವ್ಯವಸ್ಥೆಯಲ್ಲಿ ಯಾವ ಸರ್ಕಾರ ತಾನೆ ಹೇಗೆ ಕೆಲಸ ಮಾಡುವುದಕ್ಕಾಗುತ್ತದೆ ಎನ್ನತಕ್ಕಂಥಾದ್ದನ್ನು ಯೋಚನೆ ಮಾಡಬೇಕು. ಇದನ್ನು ಇವೊತ್ತು ಸರ್ಕಾರದವರು ಮನಗಂಡು ಇವೊತ್ತು ಗ್ರಾನೈಟ್‌ಗೆ ಮಂಜೂರಾತಿಯನ್ನು ಕೊಡಬೇಕಾದರೆ ಯಾವ ಆಧಾರದ ಮೇಲೆ ಕೊಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸಲಹೆ ನೀಡಲು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಮಾಡಿದ್ದಾರೆ. ಈಗಾಗಲೇ ಸಾಕಷ್ಟು ಸಭೆಗಳಾಗಿವೆ ಎನ್ನತಕ್ಕಂಥಾದ್ದು ಕೂಡ ನನಗೆ ತಿಳಿದು ಬಂದಿದೆ. ಈಗ ಸನ್ಮಾನ್ಯ ಸಚಿವರು ಒಂದು ವಿಚಾರ ಮಾಡಬೇಕಾಗಿದೆ. ಇವೊತ್ತು ಗ್ರಾನೈಟ್ ಕಲ್ಲುಗಳು ತಮಿಳುನಾಡಿನಲ್ಲಿದೆ, ಆಂಧ್ರಪ್ರದೇಶದಲ್ಲಿದೆ ಮತ್ತು ಕರ್ನಾಟಕದಲ್ಲಿದೆ. ಆಂಧ್ರಪ್ರದೇಶದಲ್ಲಿ ಇರತಕ್ಕಂಥ ಅಂಕಿ-ಅಂಶಗಳನ್ನು ನೀವು ತೆಗೆದುಕೊಂಡರೆ ಅಲ್ಲಿ ಯಾವುದೇ ಕೇಸ್‌ಗಳು ಪೆಂಡಿಂಗ್ ಇಲ್ಲ, ತಮಿಳುನಾಡಿನಲ್ಲಿಯೂ ಕೂಡ ಪೆಂಡಿಂಗ್ ಇಲ್ಲ. ಆದರೆ, ಕರ್ನಾಟಕದಲ್ಲಿ ಮಾತ್ರ ಪೆಂಡಿಂಗ್ ಇದೆಯೆಂದರೆ, ಮೂಲಭೂತವಾಗಿ ತಾವು ಅರ್ಥಮಾಡಿಕೊಳ್ಳಬೇಕಾಗಿದೆ. ಏನೆಂದರೆ, ನಮ್ಮಲ್ಲಿ ಈಗ ಇರತಕ್ಕಂಥ ಕಾನೂನಿನಲ್ಲಿ ಏನೊಂದು ಲೋಪ ದೋಷಗಳಿವೆ, ಆ ಲೋಪದೋಷಗಳನ್ನು ಸರಿಪಡಿಸತಕ್ಕಂಥ ಒಂದು ಪ್ರಯತ್ನವನ್ನು ನೀವು ಮಾಡಬೇಕಾಗಿದೆ. ಅದಕ್ಕೋಸ್ಕರ ತಾವು ಆಂಧ್ರಪ್ರದೇಶಕ್ಕೆ, ತಮಿಳುನಾಡಿಗೆ ಮತ್ತು ರಾಜಾಸ್ಥಾನಕ್ಕೆ ಹೋಗಿ ಅಲ್ಲಿ ಯಾವ ರೀತಿಯಾದಂಥ ಕಾನೂನನ್ನು ಪರಿಪಾಲನೆ ಮಾಡುತ್ತಿದ್ದಾರೆ ಎನ್ನತಕ್ಕಂಥಾದ್ದನ್ನು ತಾವು ಅರ್ಥ ಮಾಡಿಕೊಂಡು, ಇಲ್ಲಿ ಹೊಸದಾಗಿ ಒಂದು ಕಾನೂನನ್ನು ತರತಕ್ಕಂಥ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಇವೊತ್ತಿನ ದಿವಸ ಇಲ್ಲೀಗಲ್ ಕ್ವಾರಿ ನಡೆಸತಕ್ಕಂಥಹವರು ಯಾರು? ಅದರ ಹಿಂದೆ ಇರತಕ್ಕಂಥವರು ಯಾರು ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಆ ಪಕ್ಷ ಈ ಪಕ್ಷ ಎನ್ನದೆ ಎಲ್ಲಾ ಪಕ್ಷಗಳಲ್ಲಿರತಕ್ಕಂಥ ಮುಖಂಡರು ಇದರಲ್ಲಿ ಶಾಮೀಲಾಗಿರತಕ್ಕಂಥವರಿದ್ದಾರೆ. ಅದಕ್ಕಿಂತ ಬಹಳ ಮುಖ್ಯವಾಗಿ ರೆವಿನ್ಯೂ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಬಹಳಷ್ಟು ಶಾಮೀಲಾಗಿದ್ದಾರೆ. ಉದಾಹರಣೆಗೆ, ತಮಗೆ ಒಂದು ಮಾತನ್ನು ಹೇಳಬೇಕಾದರೆ, ಇವೊತ್ತು ಯಾವುದೇ ಒಂದು ಸರ್ಕಾರಿ ಜಮೀನಿನಲ್ಲಿ ಕಲ್ಲು ಸಿಗುತ್ತಿದ್ದರೆ ಪಕ್ಕದಲ್ಲಿರತಕ್ಕಂಥ ಯಾವುದೋ ಒಂದು ಜಮೀನಿನ ಸರ್ವೇ ನಂಬರ್‌ಗೆ ಒಂದು ಕೋರ್ಟ್ ಆರ್ಡರ್ ತೆಗೆದುಕೊಂಡು ಬಂದು, ಸರ್ಕಾರಿ ಜಮೀನಿನಲ್ಲಿ ಕಲ್ಲನ್ನು ತೆಗೆಯತಕ್ಕಂಥ

ಪದ್ಧತಿ ಇದೆ. ಅದನ್ನು ನಿಯಂತ್ರಿಸುವುದಕ್ಕೆ ಇವೊತ್ತು ರೆವಿನ್ಯೂ ಅಧಿಕಾರಿಗಳು ಪ್ರಯತ್ನ ಮಾಡುತ್ತಿಲ್ಲ, ಪೋಲೀಸ್ ಅಧಿಕಾರಿಗಳು ಪ್ರಯತ್ನ ಮಾಡುತ್ತಿಲ್ಲ, ಜೊತೆಗೆ ನಿಮ್ಮ ಇಲಾಖೆಯವರು ಮೊದಲೇ ಮಾಡುವುದಕ್ಕಾಗುತ್ತಿಲ್ಲ. ಕಾರಣ, ನಿಮ್ಮ ಹತ್ತಿರ ಮೆನ್ ಇಲ್ಲ, ಅದು ನನಗೂ ಕೂಡ ಅರ್ಥವಾಗುತ್ತದೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ. ಇವೊತ್ತು ಇಲ್ಲೀಗಲ್ ಆಗಿ ಹೋಗತಕ್ಕಂಥ ಗ್ರಾನೈಟ್ಸ್ ಏನಿದೆ, ಅಥವಾ ಇನ್ನೊಂದು ಮೈನರ್ ಅಥವಾ ಮೇಜರ್ ಮಿಲ್‌ನಲ್ಲಿರತಕ್ಕಂಥಾದ್ದನ್ನು ಚೆಕ್ ಮಾಡುವುದಕ್ಕೆ, ಚೆಕ್ ಪೋಸ್ಟ್ ಅನ್ನು ಹಾಕಬೇಕು. ಈಗಾಗಲೇ ಇದರ ಬಗ್ಗೆ ಇವೊತ್ತಿನ ದಿವಸದ ದಿನಪತ್ರಿಕೆಯಲ್ಲಿ ಓದಿದ್ದೇನೆ. ಇವೊತ್ತು ಕಮರ್ಷಿಯಲ್ ಟ್ಯಾಕ್ಸ್ ವಸೂಲಿಯನ್ನು ಆ ಇಲಾಖೆಯ ವ್ಯಾಪ್ತಿಗೆ ಕೊಟ್ಟಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ತಾವು ಹೇಳಿದಿರಿ. ಅಷ್ಟು ಸಾಲದು, ತಮ್ಮದೇ ಆದಂಥ ಒಂದು ಚೆಕ್ ಪೋಸ್ಟ್ ಅನ್ನು ಇಡಬೇಕು. ಒಂದು ವಿಜಿಲೆನ್ಸ್ ಅಥವಾ ಒಂದು ಸ್ಕ್ವಾಡ್ ಅನ್ನು ಇಡುವುದರ ಮೂಲಕ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ತಾವು ಬಂದನಂತರ ಅನೇಕ ಸುಧಾರಣೆಗಳನ್ನು ತರುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಆದರೆ, ನನ್ನ ಸಲಹೆಯೇನೆಂದರೆ, ನೀವು ಹೊರ ರಾಜ್ಯಗಳಿಗೆ ಹೋಗಿ, ಜಾಯಿಂಟ್ ಸೆಲೆಕ್ಟ್ ಕಮಿಟಿ ಮೂಲಕ ಹೊಸದಾದಂಥ ಒಂದು ವ್ಯವಸ್ಥೆಯನ್ನು ತಂದರೆ ಬಹುಶಃ ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು ಹಣವನ್ನು ಈ ರಾಜ್ಯದ ಬೊಕ್ಕಸಕ್ಕೆ ವರಮಾನ ತರುವ ಮಟ್ಟಕ್ಕೆ ಪ್ರಯತ್ನ ಮಾಡಬಹುದು. ಇದರ ಬಗ್ಗೆ ಒಂದು ಸಣ್ಣ ಉದಾಹರಣೆ ಕೊಡುವುದಾದರೆ; ನನ್ನ ಕ್ಷೇತ್ರದಲ್ಲಿ ಇವೊತ್ತು ಒಂದು ದಿನಕ್ಕೆ ಮರಳು ತುಂಬಿದ ಸುಮಾರು ೧೦೦ ರಿಂದ ೧೫೦ ಟ್ರಕ್‌ಗಳು ಬರುತ್ತಿವೆ. ಇವೊತ್ತು ವಿಧಾನ ಸಭೆಯಲ್ಲಿ ನಾನು ಇದರ ಬಗೆ ಉಪ ಪ್ರಶ್ನೆ ಹಾಕತಕ್ಕಂಥ ಸಂದರ್ಭದಲ್ಲಿ ನನಗೆ ಉತ್ತರ ಕೊಟ್ಟಿದ್ದೀರಿ. ಏನೆಂದರೆ ಈಗಾಗಲೇ ಆರು ತಿಂಗಳಿನಲ್ಲಿ ಮೂರು ಕೇಸ್‌ಗಳನ್ನು ಹಿಡಿದಿದ್ದೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ನಾನು ಹೇಳತಕ್ಕಂಥಾದ್ದು, ದಿವಸಕ್ಕೆ ೧೦೦ರಿಂದ ೧೫೦ ಟ್ರಕ್ ಲೋಡ್‌ಗಳು ಬರುತ್ತಿವೆ. ಆದರೆ, ನೀವು ೬ ತಿಂಗಳಲ್ಲಿ ಮೂರು ಕೇಸುಗಳನ್ನು ಹಿಡಿದಿದ್ದೇವೆ ಎಂದು ಹೇಳುವುದಾದರೆ ಇದರ ಬಗ್ಗೆ ನೀವು ಯೋಚನೆ ಮಾಡಬೇಕಾಗುತ್ತದೆ. ನೀವು ಕಟ್ಟುನಿಟ್ಟಾಗಿ ರೆವಿನ್ಯೂ ಅಧಿಕಾರಿಗಳಿಗೆ ಮತ್ತು ಪೋಲೀಸ್ ಅಧಿಕಾರಿಗಳಿಗೆ ಆದೇಶ ಕೊಟ್ಟು ಲಾರಿಗಳನ್ನು ಸೀಜ್ ಮಾಡುವಂಥ ಮಟ್ಟಕ್ಕೆ ಬಂದರೆ, ಆಗ ಜನರು ತಂತಾನೇ ಪರ್ಮಿಟ್ಟು ತೆಗೆದುಕೊಳ್ಳುತ್ತಾರೆ, ಜೊತೆಗೆ ರಾಯಲ್ಟಿ ಕೂಡ ಬರುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಕೈಗಾರಿಕಾ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಇವೊತ್ತು ಈ ಇಲಾಖೆ ಬಗ್ಗೆ ಮಾತನಾಡತಕ್ಕಂಥ ಕಾಲದಲ್ಲಿ ಅನೇಕ ಮಾನ್ಯ ಸದಸ್ಯರು, ಅನೇಕ ಕೈಗಾರಿಕೆಗಳು ನಷ್ಟದಲ್ಲಿವೆಯೆಂದು ಹೇಳಿದರು. ಏತಕ್ಕೋಸ್ಕರ ನಷ್ಟವಾಗುತ್ತಿದೆ ಎಂದರೆ ಅಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಅಲ್ಲಿ ಐ. ಎ. ಎಸ್. ಅಧಿಕಾರಿಗಳು ಲೂಟಿ ಮಾಡುತ್ತಿದ್ದಾರೆ ಎನ್ನತಕ್ಕಂಥ ಮಾತುಗಳನ್ನು ಪದೇ ಪದೇ ಹೇಳುತ್ತಿರತಕ್ಕಂಥಾದ್ದನ್ನು ನಾನು ಕೇಳಿದ್ದೇನೆ. ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ಸಾರ್ವಜನಿಕ ಉದ್ದಿಮೆಗಳೇನಿವೆ, ಅವುಗಳು ಮಾಡುತ್ತಿರತಕ್ಕಂಥ ನಷ್ಟ ಕೋಟಿಗಟ್ಟಲೆ ಇದೆ. ನಾವು ಬಂಡವಾಳ ಹೂಡಿರತಕ್ಕಂಥ ಸಾವಿರಾರು ಕೋಟಿ ರೂಪಾಯಿಗಳಲ್ಲಿ ಈಗಾಗಲೇ ಹೆಚ್ಚು ಕಡಿಮೆ ಮುಕ್ಕಾಲು ಭಾಗದಷ್ಟು ಅಂದರೆ, ೭೦೦-೮೦೦ ಕೋಟಿ ರೂಪಾಯಿಗಳು ನಷ್ಟವಾಗಿದ್ದು, ೨೫೦-೩೦೦ ಕೋಟಿ ರೂಪಾಯಿಗಳ ಮಟ್ಟಕ್ಕೆ ಬಂದಿದೆ. ಇವೊತ್ತು ಇಡೀ

ಸಾರ್ವಜನಿಕ ಉದ್ದಿಮೆಗಳು ಸ್ಕ್ರಾಯಲ್ ಆಗತಕ್ಕಂಥ ಮಟ್ಟಕ್ಕೆ ಬಂದಾಗ ಸರ್ಕಾರದವರು ಈಗ ಒಂದು ತೀರ್ಮಾನ ಮಾಡಿದ್ದಾರೆ. ಏನೆಂದರೆ, ರೋಗಗ್ರಸ್ತ ಘಟಕಗಳನ್ನು ಮುಚ್ಚುತ್ತೇವೆಂದು ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ವೀರೇಂದ್ರ ಪಾಟೀಲರು ಕೂಡ ಹೇಳಿದ್ದರು, ಮತ್ತು ಈ ಸಲದ ಆಯವ್ಯಯ ಭಾಷಣದಲ್ಲೂ ಕೂಡ ಇದೇ ಮಾತನ್ನು ಹೇಳಿದ್ದಾರೆ. ಈ ರೀತಿ ಕ್ರಮ ತೆಗೆದುಕೊಳ್ಳಬೇಕಾದರೆ ಪೊಲಿಟಿಕಲ್ ವಿಲ್ ಕೂಡ ಬೇಕಾಗುತ್ತದೆ. ಬಹಳಷ್ಟು ಜನರು ಈ ಮಾತನ್ನು ಹೇಳಿ ಹೋದರು ಆದರೆ ಯಾರೂ ಮಾಡಲಿಲ್ಲ. ಅದನ್ನು ನೀವು ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ವಿಷಯವೇನೆಂದರೆ, ನಾವು ಖಾಸಗೀಕರಣಕ್ಕೆ ಹೋಗಬೇಕೇ ? ಬೇಡವೇ ಎನ್ನತಕ್ಕಂಥದ್ದು ಬಹಳ ಮುಖ್ಯವಾದುದು. ಖಾಸಗೀಕರಣಕ್ಕೆ ಹೋಗುವುದು ಬೇಡ ಎನ್ನತಕ್ಕಂಥ ಒಂದು ಅಭಿಪ್ರಾಯಕ್ಕೆ ಸರ್ಕಾರ ಬರುವುದಾದರೆ, ನಾನು ಹೇಳುತ್ತೇನೆ ಇವೊತ್ತು ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳನ್ನು ಮಂಡಳಿಗಳಿಗೆ ಮತ್ತು ನಿಗಮಗಳಿಗೆ ವ್ಯವಸ್ಥಾಪಕ ನಿರ್ದೇಶಕರಾಗಿ, ಅಧ್ಯಕ್ಷರುಗಳನ್ನಾಗಿ ನೇಮಿಸಿದ್ದೀರಿ, ಅವರಿಗೆ ಒಂದು ಅಕೌಂಟಬಿಲಿಟಿ ಹಾಗೂ ರಸ್ಪಾನ್ಸಿಬಿಲಿಟಿಯನ್ನು ಫಿಕ್ಸ್ ಮಾಡುವುದಾದರೆ, ಸಾರ್ವಜನಿಕ ಉದ್ದಿಮೆಗಳು ಲಾಭ ಮಾಡುವುದಕ್ಕೆ ಸಾಧ್ಯ ಇಲ್ಲದಿದ್ದರೆ ಸಾಧ್ಯವಿಲ್ಲ. ಇವೊತ್ತು ಯಾರು ಎಷ್ಟು ವರ್ಷಗಳ ಕಾಲ ಬೇಕಾದರೂ ಕೆಲಸ ಮಾಡಬಹುದು. ಆದರೆ ಇವತ್ತು ಏನಾದರೂ ಒಳ್ಳೆಯ ಕೆಲಸ ಮಾಡುತ್ತಾರೆಂದು ನಾಳೆ ಅಲ್ಲಿ ಯಾವುದೋ ಒಂದು ಇನ್ನೊಂದು ಕೆಲಸವನ್ನು ಮಾಡಿ ಅವರನ್ನು ಅಲ್ಲಿಂದ ತೆಗೆದು ಹಾಕತಕ್ಕದ್ದು ನಡೆದಿದೆ. ಇವತ್ತು ಎಲ್ಲಿಯವರೆಗೆ ಅವರ ಮೇಲೆ ಜವಾಬ್ದಾರಿ ಫಿಕ್ಸ್ ಮಾಡುವುದಿಲ್ಲವೋ, ಎಲ್ಲಿಯವರೆಗೆ ಅವರ ಮೇಲೆ ಅಕೌಂಟಬಿಲಿಟಿ ಇರುವುದಿಲ್ಲವೋ ಅಲ್ಲಿಯವರೆಗೆ ನೀವು ಲಾಭ ಮಾಡಲು ಸಾಧ್ಯವಿಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಇವತ್ತು ನಮ್ಮಲ್ಲಿ ಟೆಕ್ನಿಕಲ್ ಅಧಿಕಾರಿಗಳು ಏನು ಇದ್ದಾರೆ ಅವರನ್ನು ಹೆಚ್ಚು ಹೆಚ್ಚು ಈ ನಿಗಮಗಳಲ್ಲಿ ತೊಡಗಿಸುವುದರ ಮುಖಾಂತರ ಈ ಉದ್ದಿಮೆಗಳನ್ನು ಲಾಭದಾಯಕವಾಗಿ ಮಾಡಲು ಸಾಧ್ಯವಿದೆ ಎನ್ನತಕ್ಕ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಇವತ್ತು ಯಾವುದೇ ಕಾರ್ಪೊರೇಷನ್ ಕೆಟ್ಟು ಹೋಗತಕ್ಕ ಪರಿಸ್ಥಿತಿಯಲ್ಲಿದ್ದರೆ ಅಲ್ಲಿಗೆ ಟೆಕ್ನಿಕಲ್ ಅಧಿಕಾರಿಗಳನ್ನು ಹಾಕಿ ಅವರ ಗೈಡೆನ್ಸ್‌ನ್ನು ಇಟ್ಟುಕೊಂಡು ನಡೆಸುವುದಾದರೆ ಅದರಲ್ಲಿ ಲಾಭವನ್ನು ಮಾಡಲು ಸಾಧ್ಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇವತ್ತು ಐ. ಎ. ಎಸ್. ಅಧಿಕಾರಿಗಳಿಂದ ನಷ್ಟವಾಗುತ್ತದೆ ಎನ್ನತಕ್ಕದ್ದಲ್ಲ. ಆದರೆ ಅವರ ಮೇಲೆ ಜವಾಬ್ದಾರಿಯನ್ನು ನಿಗದಿ ಮಾಡಿದರೆ ಈ ನಿಗಮಗಳಲ್ಲಿ ಲಾಭ ಬರಲು ಸಾಧ್ಯವಿದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಇನ್ನು ಕೆ. ಎಸ್ ಐ. ಡಿ. ಸಿ. ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಕೆ. ಎಸ್. ಐ. ಡಿ. ಸಿ. ಯಿಂದ ಶೆಡ್‌ಗಳನ್ನು ಕಟ್ಟತಕ್ಕ ಕೆಲಸವನ್ನು ಮಾಡುತ್ತಿದ್ದೀರಿ. ಅದರಲ್ಲಿಯೂ ಕೂಡ ನಮ್ಮ ಮಾನ್ಯ ನಜೀರ್ ಅಹಮದ್‌ರವರು ಬಂದ ಮೇಲೆ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಹೊಸ ಹೊಸ ಏರಿಯಾಗಳನ್ನು ಕೂಡ ಪತ್ತೆ ಮಾಡಿದ್ದಾರೆ. ನಾನು ಇದರ ಬಗ್ಗೆ ಒಂದು ಸಲಹೆಯನ್ನು ಕೊಡುತ್ತೇನೆ. ಇವತ್ತು ಕೆ. ಎಸ್. ಐ. ಡಿ. ಸಿ.ಯಿಂದ ಶೆಡ್‌ನ್ನು ಎಲ್ಲೋ ಒಂದು ಕಡೆ ಕಟ್ಟುಬಿಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ; ಜೊತೆಗೆ ತಾವು ಕಟ್ಟಿದ ಶೆಡ್‌ಗಳ ಹತ್ತಿರ ಕೆಲಸಗಾರರು ಸಿಕ್ಕುವುದಿಲ್ಲ, ಪವರ್ ಸಿಕ್ಕುವುದಿಲ್ಲ, ಆದ್ದರಿಂದ ಯಾವಾಗಲೂ

ಪಟ್ಟಣದ ಹತ್ತಿರದಲ್ಲಿ ಇರತಕ್ಕ ಜಾಗದಲ್ಲಿ ಶೆಡ್‌ಗಳನ್ನು ಕಟ್ಟಬೇಕು. ಇವತ್ತು ತುಮಕೂರಿನ ಅಗ್ರಸ್ ಹಳ್ಳಿ ಹತ್ತಿರ ಜಾಗವಿದೆ. ಅಲ್ಲಿ ಶೆಡ್‌ಗಳನ್ನು ಕಟ್ಟತಕ್ಕ ಪ್ರಯತ್ನಮಾಡಿ. ಈಗಾಗಲೇ ತಮ್ಮಲ್ಲಿ ೧೦೦-೧೫೦ ಇಂಥ ಶೆಡ್‌ಗಳನ್ನು ಕಟ್ಟತಕ್ಕ ಯೋಜನೆ ಇದೆ. ಇದನ್ನು ಬಹಳ ವರ್ಷಗಳಿಂದ ಎಲ್ಲರೂ ಹೇಳುತ್ತಿದ್ದಾರೆ. ಆದರೆ ಇವತ್ತಿನವರೆಗೂ ಕೂಡ ಅದನ್ನು ಕೈಗೊಂಡಿಲ್ಲವೆಂದು ಹೇಳುತ್ತಿದ್ದಾರೆ. ಆದ್ದುದರಿಂದ ಅಲ್ಲಿ ಈ ಕೆಲಸವನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಮಾಡಬೇಕು. ಮತ್ತು ಕೆ. ಎಸ್. ಐ. ಡಿ. ಸಿ. ಮುಖಾಂತರ ಸಾಕಷ್ಟು ಏರಿಯಾಗಳನ್ನು ಗುರುತಿಸಬೇಕು. ಇವತ್ತು ಬೆಂಗಳೂರಿನ ಸುತ್ತಮುತ್ತ ಅನೇಕ ಕೈಗಾರಿಕೆಗಳಿವೆ ಎಂಬ ಕಾರಣದಿಂದ ಬೇರೆ ಕಡೆ ಇವತ್ತು ಕೈಗಾರಿಕೆಯು ಬೆಳೆಯಬೇಕೆಂದು ನೀವು ಬೀದರ್‌ನಲ್ಲೋ, ಗುಲ್ಬರ್ಗದಲ್ಲೋ ಅಥವಾ ಬೇರೆಲ್ಲೋ ಹೋಗಿ ಇಂಡಸ್ಟ್ರಿಯಲ್ ಎಸ್ಟೇಟ್‌ಗಳನ್ನು ಪ್ರಾರಂಭ ಮಾಡಿ ಏರಿಯಾವನ್ನು ಪತ್ತೆ ಮಾಡಿದ್ದೇವೆಂದ ಕೂಡಲೇ ಹೆಚ್ಚಿನ ಕೈಗಾರಿಕೆಗಳು ಬರುತ್ತವೆಂದು ತಾವು ತಿಳಿಯಬಾರದು. ಅಲ್ಲಿಯೂ ಅಭಿವೃದ್ಧಿಯಾಗಬೇಕು, ಅಭಿವೃದ್ಧಿ ಬೇಡವೆಂದು ಹೇಳತಕ್ಕದ್ದಲ್ಲ. ಬಹಳ ಮುಖ್ಯವಾಗಿ ಬೆಂಗಳೂರಿನ ಸುತ್ತಮುತ್ತಲ ಭಾಗಗಳಲ್ಲಿ ಮಾರುಕಟ್ಟೆಯ ಅನುಕೂಲವಿರತಕ್ಕ ಸಾಕಷ್ಟು ಪ್ರದೇಶಗಳನ್ನು, ಸಾಕಷ್ಟು ಏರಿಯಾಗಳನ್ನು ಪತ್ತೆ ಮಾಡಬೇಕು. ಇವತ್ತು ನಮ್ಮ ಕೆ. ಎಸ್. ಐ. ಡಿ. ಸಿ.ನ ಕೆಲಸ ಸಂಪೂರ್ಣ ಸ್ಥಗಿತವಾಗಿದೆ. ಇವತ್ತು ಹೊಸದಾಗಿ ಯಾವ ಏರಿಯಾವನ್ನು ಸ್ವಾಧೀನ ಪಡಿಸಿಕೊಳ್ಳುವ ಕೆಲಸವನ್ನು ಅವರು ಮಾಡಿಲ್ಲ. ೭ ಸಾವಿರ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಹೊರಟಿದ್ದೀರಿ. ನೀವು ಇಲ್ಲಿಯವರೆಗೆ ಅಲಾಟ್ ಮಾಡಿರತಕ್ಕ ೩೫೦ ಎಕರೆ ಮಾತ್ರ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಇದರ ಬಗ್ಗೆ ತಾವು ಹೆಚ್ಚಿನ ನಿಗಾ ವಹಿಸಬೇಕು ಹಾಗೂ ಸಾಕಷ್ಟು ಏರಿಯಾವನ್ನು ಸ್ವಾಧೀನ ಮಾಡಿಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಇನ್ನು ಬಹು ಮುಖ್ಯವಾಗಿ ಇವತ್ತು ಸಣ್ಣ ಕೈಗಾರಿಕೆಗಳಲ್ಲಿರುವ ತೊಂದರೆಗಳ ಬಗ್ಗೆ ಹೇಳುವುದಾದರೆ, ಒಂದು ವರ್ಷಕ್ಕೆ ೪-೫ ಸಾವಿರ ಇಂಥ ಸಣ್ಣ ಕೈಗಾರಿಕೆಗಳನ್ನು ತೆರೆಯುತ್ತಿದ್ದೇವೆ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಆದರೆ ಈ ರೀತಿ ತಾವು ತೆರೆದಿರತಕ್ಕ ಕೈಗಾರಿಕೆಗಳಲ್ಲಿ ಎಷ್ಟು ಕೈಗಾರಿಕೆಗಳು ಮುಚ್ಚಿ ಹೋಗುತ್ತವೆ ಎನ್ನತಕ್ಕ ಅಂಶವನ್ನು ಗಮನಿಸಬೇಕಾಗುತ್ತದೆ. ಈ ಕೈಗಾರಿಕೆಗಳು ಅನುಭವಿಸತಕ್ಕ ತೊಂದರೆಗಳ ಬಗ್ಗೆ ಯಾರು ಕೂಡ ಯೋಚನೆ ಮಾಡುತ್ತಿಲ್ಲ. ಇವತ್ತು ಹೊರದೇಶದಿಂದ ಬಂದು ಯಾರೂ ಸಹ ಕೈಗಾರಿಕೆಗಳನ್ನು ಪ್ರಾರಂಭ ಮಾಡುತ್ತಿಲ್ಲ. ನಮ್ಮ ಲೋಕಲ್ ಎಂಟರ್‌ಪ್ರೂನರ್ಸ್ ಏನಿದ್ದಾರೆ, ಅವರು ಕೈಗಾರಿಕೆಗಳನ್ನು ತೆರೆಯುತ್ತಿದ್ದಾರೆ. ಆದರೆ ಇದರಲ್ಲಿ ೧೦೦ಕ್ಕೆ ೮೫ ರಷ್ಟು ಸಿಕ್ ಆಗಿವೆ. ನೀವು ರಿಹ್ಯಾಬಿಲಿಟೇಷನ್ ಸ್ಕೀಂ ಮಾಡಿ, ಏನೇ ಮಾಡಿ, ಆದರೆ ಅವು ಯಾವುದಕ್ಕೋಸ್ಕರ ಸಿಕ್ ಆಗುತ್ತವೆ ಎನ್ನತಕ್ಕದ್ದನ್ನು ತಾವು ಅರ್ಥ ಮಾಡಿಕೊಳ್ಳದಿದ್ದರೆ ಇನ್ನು ಮುಂದೆ ಕೈಗಾರಿಕೆಗಳು ಬೆಳೆಯಲು ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಇವತ್ತು ಟರ್ಮ್ ಲೋನನ್ನು ಕೊಡುವುದು ಒಂದು ಕಡೆಯಾದರೆ, ವರ್ಕಿಂಗ್ ಕ್ಯಾಪಿಟಲ್ ಸಿಗದೇ ಕೈಗಾರಿಕೆಗಳು ಮುಚ್ಚಿಹೋಗುತ್ತಿರುವುದು ಮತ್ತೊಂದು ತೊಂದರೆಯಾಗಿದೆ. ಆದುದರಿಂದ ವರ್ಕಿಂಗ್ ಕ್ಯಾಪಿಟಲ್ ಅನ್ನು ಕೆ. ಎಸ್. ಎಫ್. ಸಿ.ಯಿಂದ ಹೆಚ್ಚು ಹೆಚ್ಚು ಕೊಡಿಸಲು ಪ್ರಯತ್ನ ಮಾಡಿದರೆ ಖಂಡಿತವಾಗಿ ಇಂಥ ಕೈಗಾರಿಕೆಗಳು ಮುಂದುವರಯಲು ಸಾಧ್ಯವಾಗುತ್ತದೆ.

ಕೊನೆಯದಾಗಿ ಎಸ್. ಪಿ. ಡಿ. ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ದಯಮಾಡಿ

ಇದನ್ನು ಅಬಾಲಿಷ್ ಮಾಡಿ. ಇವತ್ತು ಸ್ಥಳೀಯವಾಗಿ ಸರ್ಕಾರದ ಮಟ್ಟದಲ್ಲಿ ಬೇಕಾಗಿರತಕ್ಕ ಮಾಲುಗಳನ್ನು ತೆಗೆದುಕೊಳ್ಳಬೇಕಾದರೆ ಲೋಕಲ್ ಆಗಿ ಉತ್ಪಾದನೆ ಮಾಡತಕ್ಕ ಕೈಗಾರಿಕೆಗಳ ಮುಖಾಂತರ ನೇರವಾಗಿ ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಮಾಡಬೇಕು. ಇವತ್ತು ಎಸ್. ಪಿ. ಡಿ. ರೇಟನ್ನು ಯಾರೋ ಒಬ್ಬರು ತಮಿಳುನಾಡಿನಿಂದಲೋ, ಆಂಧ್ರಪ್ರದೇಶದಿಂದಲೋ ಬಂದು ಒದಗಿಸತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ಅದನ್ನು ದಯಮಾಡಿ ಅಬಾಲಿಷ್ ಮಾಡಿ, ಲೋಕಲ್ ಎಂಟರ್‌ಪ್ರೂನರ್ಸ್‌ಗಳಿಂದಲೇ ಕೊಂಡುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಬೇಕು.

ಇನ್ನು ಮಾನ್ಯ ಮುನಿಯಪ್ಪನವರ ಇಲಾಖೆಯ ಬಗ್ಗೆ ಹೇಳಬೇಕಾದರೆ, ಅವರ ಇಲಾಖೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ. ಅದರ ಬಗ್ಗೆ ಮಾತನಾಡಲು ನನಗೆ ಸಮಯವಿಲ್ಲ. ಮೊನ್ನೆ ರೇಷ್ಮೆಗೆ ಸಂಬಂಧಪಟ್ಟಂತೆ ಗಂಟು ರೋಗವೆಂದು ಬಂದು ಇಡೀ ರೇಷ್ಮೆ ಉದ್ಯಮವೇ ನಾಶವಾಗತಕ್ಕ ಕಾಲದಲ್ಲಿಯೂ ಕೂಡ ನಿಮ್ಮ ಇಲಾಖೆಯವರು ಒಳ್ಳೆಯಕೆಲಸವನ್ನು ಮಾಡಿ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನಪಟ್ಟಿದ್ದಾರೆ. ಅದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಇದರ ಜೊತೆಗೆ ಇವತ್ತು ರೇಷ್ಮೆಯನ್ನು ಕೇಂದ್ರ ಸರ್ಕಾರದವರು ಆಮದು ಮಾಡಿಕೊಳ್ಳುತ್ತಿದ್ದಾರೆ. ಈಗಾಗಲೇ ರೇಷ್ಮೆಯ ಬೆಲೆಯು ೮೦ ರಿಂದ ೧೦೦ ರೂ. ನಷ್ಟು ಕಡಿಮೆಯಾಗಿದೆ. ಆದಕಾರಣ ರೇಷ್ಮೆ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸದಿದ್ದರೆ ಇವತ್ತು ಒಳ್ಳೆಯ ಬೆಲೆ ನಮ್ಮ ರೇಷ್ಮೆಗೆ ಬರಲು ಸಾಧ್ಯವಿಲ್ಲ. ಇದರಿಂದ ಇನ್ನೊಂದು ರೀತಿಯಾದ ಹೊಡೆತ ರೇಷ್ಮೆಯ ಮೇಲೆ ಬೀಳುತ್ತದೆ. ಆದುದರಿಂದ ರೇಷ್ಮೆಯ ಆಮದನ್ನು ನಿಲ್ಲಿಸತಕ್ಕ ಕೆಲಸವನ್ನು ಆದಷ್ಟು ಬೇಗ ಮಾಡಿದರೆ ಮಾತ್ರ ಈ ಉದ್ಯಮ ಬೆಳೆಯಲು ಸಾಧ್ಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ.

ಈ ಟ್ರೂಸ್ ಅಗ್ರಿಮೆಂಟ್ ಬಗ್ಗೆ ಒಂದು ಪ್ರಸ್ತಾಪವನ್ನು ಮಾಡುತ್ತೇನೆ. ೫ ವರ್ಷಕ್ಕೊಮ್ಮೆ ಟ್ರೂಸ್ ಅಗ್ರಿಮೆಂಟ್ ಆಗತಕ್ಕದ್ದು ಇದೆ. ಅದರಲ್ಲಿ ಈವತ್ತು ಕೆಲವು ಅನಾಮಲೀಸ್ ಇದೆ. ಅದನ್ನು ಫೈನಲೈಸ್ ಮಾಡಲು ೩-೪ ವರ್ಷಗಳನ್ನು ನಿಮ್ಮ ಇಲಾಖೆಯವರು ತೆಗೆದುಕೊಳ್ಳುತ್ತಾರೆಂದರೆ ಅವರಿಗೆ ಎಂಥ ಕಾಳಜಿ ಇದೆ ಎನ್ನತಕ್ಕದ್ದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾನು ಕೂಡ ಅನೇಕ ಸಾರಿ ತಮ್ಮ ಹತ್ತಿರ ಬಂದು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇವತ್ತೂ ಕೂಡ ನಿಮ್ಮ ಜೊತೆ ಚರ್ಚೆ ಮಾಡಿದ್ದೇನೆ. ಆದರೆ ಇಲ್ಲಿಯವರೆಗೆ ಇದರ ಬಗ್ಗೆ ಅಂತಿಮವಾದ ತೀರ್ಮಾನವನ್ನು ಮಾಡಲು ಆಗಿಲ್ಲವೆಂದಾಗ you should pull up your officers, they are really neglecting ಎನ್ನತಕ್ಕದ್ದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಮತ್ತೆ ಶ್ರೀಮಾನ್ ಬಸವಲಿಂಗಪ್ಪನವರು ಎಂದರೆ ನಿಜವಾಗಿಯೂ ಕೂಡ ಅವರು ಕ್ರಾಂತಿಕಾರರು ಎನ್ನುವ ಮಟ್ಟಕ್ಕೆ ಹೆಸರನ್ನು ತೆಗೆದುಕೊಂಡಿದ್ದಾರೆ. ಇವರು ಕ್ರಾಂತಿಯನ್ನು ಮಾಡುವುದಕ್ಕೆ ಹೊರಟಿದ್ದಾರೆ. ಇವರು ಯಾವ ಇಲಾಖೆಗೆ ಹೋದರೂ ಕ್ರಾಂತಿ ಮಾಡುತ್ತಾರೆ, ಬಹಳ ಮುಖ್ಯವಾಗಿ ಕ್ರಾಂತಿ ಕಹಳೆಯನ್ನು ಜೋರಾಗಿ ಕೂಗಿ ಬೆಂಗಳೂರಿನಲ್ಲಿರತಕ್ಕಂಥ ಪರಿಸರವನ್ನು ಉತ್ತಮಪಡಿಸುವುದಕ್ಕೆ ಅವರು ಎಲ್ಲಾ ರೀತಿಯಲ್ಲಿಯೂ ಪ್ರಯತ್ನ ಪಡಬೇಕೆಂದು ಹೇಳಿ ಇವತ್ತು ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಣಿಯವರು:- ಇಂದಿನ ಬೇಡಿಕೆಗಳ ಮೇಲಿನ ಚರ್ಚೆ ಮುಗಿದಿದೆ.

ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಸಮಿತಿಯ ಕಾಲಾವಧಿಯನ್ನು ವಿಸ್ತರಿಸುವ ಬಗ್ಗೆ

ಶ್ರೀ ಎಂ. ಎಲ್ ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು):- ಮಾನ್ಯ ಉಪಾಧ್ಯಕ್ಷಣಿಯವರೇ, ತಮ್ಮ ಅಪ್ಪಣೆ ಕೋರಿ ಈ ಒಂದು ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ, ಮತ್ತು ಸಭೆ ಇದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

''ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸೂಕ್ತವಾಗಿ ರೂಪಿಸುವುದನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಉಭಯ ಸದನಗಳ ಜಂಟಿ ಸಮಿತಿಗೆ ಸಂಬಂಧಿಸಿದಂತೆ ಸಮಿತಿಯು ವರದಿಯನ್ನು ಒಪ್ಪಿಸಲು ೧೯೯೨ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ''

ಉಪಾಧ್ಯಕ್ಷಣಿಯವರು:- ಪ್ರಸ್ತಾವನೆ ಈ ರೀತಿ ಇದೆ:-

''ಸಣ್ಣ ಖನಿಜ ಸಂಪತ್ತಿನ ನೀತಿಯನ್ನು ಸೂಕ್ತವಾಗಿ ರೂಪಿಸುವುದನ್ನು ಖಚಿತ ಪಡಿಸಿಕೊಳ್ಳುವುದಕ್ಕಾಗಿ ಸರ್ಕಾರಕ್ಕೆ ಸಲಹೆ ನೀಡಲು ರಚಿಸಲಾದ ಉಭಯ ಸದನಗಳ ಜಂಟಿ ಸಮಿತಿಗೆ ಸಂಬಂಧಿಸಿದಂತೆ ಸಮಿತಿಯು ವರದಿಯನ್ನು ಒಪ್ಪಿಸಲು ೧೯೯೨ನೇ ಸೆಪ್ಟೆಂಬರ್ ತಿಂಗಳ ಅಂತ್ಯದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ''

ಪ್ರಸ್ತಾವನೆಗೆ ಅನುಮೊದನೆ ನೀಡಲಾಯಿತು ಮತ್ತು ಸಮಿತಿಯ ಕಾಲಾವಧಿ ವಿಸ್ತರಣೆಗೆ ಅನುಮತಿ ದೊರಕಿತು.

ಬೇಡಿಕೆಗಳ ಮೇಲಿನ ಚರ್ಚೆಗಳಿಗೆ ಮಂತ್ರಿಗಳಿಂದ ಉತ್ತರ

ಉಪಾಧ್ಯಕ್ಷಣಿಯವರು:- ಈಗ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು ತಮ್ಮ ಉತ್ತರವನ್ನು ಪ್ರಾರಂಭಿಸಬಹುದು.

+ ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮಂತ್ರಿಗಳು):- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ನನ್ನ ಇಲಾಖೆಯ ಬೇಡಿಕೆಯನ್ನು ಮಂಡಿಸಿದ ಸಂದರ್ಭದಲ್ಲಿ ಮುಖ್ಯವಾಗಿ ಶ್ರೀಯುತರುಗಳಾದ ಶಿವರಾಮೇಗೌಡರು, ಬಾಬುರಾವ್ ಚವಾಣ್‌ರವರು, ಹನುಮೇಗೌಡರು, ಶಫಿ ಅಹಮದ್‌ರವರು ಮತ್ತು ಜಯಚಂದ್ರರವರು ಮಾತನಾಡುತ್ತಾ ಕೆಲವೊಂದು ಸಲಹೆಗಳನ್ನು ಕೂಡ ಸೂಚಿಸಿ ಕೈಗಾರಿಕಾ ಇಲಾಖೆಯಲ್ಲಿರುವ ಕೆಲವು ಲೋಪ-ದೋಷಗಳನ್ನು ಕೂಡ ನಮ್ಮ ಗಮನಕ್ಕೆ ತಂದು ಬೆಳಕನ್ನು ಚೆಲ್ಲಿದ್ದಾರೆ. ಆದಕ್ಕಾಗಿ ಅವರಿಗೆ ನನ್ನ ಪ್ರಪ್ರಥಮ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷಣಿಯವರೇ, ಪ್ರಪ್ರಥಮವಾಗಿ ನಮ್ಮ ಶಿವರಾಮೇಗೌಡರು ಭದ್ರಾವತಿ ಸಕ್ಕರೆ ಕಂಪನಿಯ ೨೫೦ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿ ಆದರಲ್ಲಿ ೨೦೭ ಕಾರ್ಮಿಕರನ್ನು ವಾಪಸ್ಸು ತೆಗೆದುಕೊಂಡು ೪೩ ಮಂದಿ ಕಾರ್ಮಿಕರನ್ನು ಕೆಲಸದಿಂದ ತೆಗೆದಿದ್ದಾರೆಂದು ಹೇಳಿದ್ದಾರೆ. ಅವರು ಕಾಂಟ್ರಾಕ್ಟ್ ಬೇಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರು ನಮ್ಮ ಫ್ಯಾಕ್ಟರಿ ಎಂಪ್ಲಾಯೀಸ್ ಅಲ್ಲ ಭದ್ರಾವತಿ ಸಕ್ಕರೆ ಕಾರ್ಖಾನೆಯಲ್ಲಿ ಅವರು ಸಾಧಾರಣವಾಗಿ ಡಿಸೆಂಬರ್‌ನಲ್ಲಿ ಸ್ಟ್ರೈಕ್ ಮಾಡಿದ್ದರಿಂದ ಕಾರ್ಖಾನೆಗೆ ಬಹಳಷ್ಟು ನಷ್ಟವಾಗಿದೆ. ಅಷ್ಟೇ ಅಲ್ಲದೆ

ಪೋಲೀಸ್ ರಿಪೋರ್ಟ್‌ನ್ನು ಕೇಳಿದಾಗಲೂ ಈ ೩೩ ಮಂದಿಯ ಬಗ್ಗೆ ಅಷ್ಟು ಒಳ್ಳೆಯ ರಿಪೋರ್ಟ್ ಬರದೇ ಇರುವುದರಿಂದ ಅವರನ್ನು ಈಗ ಕೆಲಸದಲ್ಲಿ ಅಮಾನತ್ತಿನಲ್ಲಿ ಇಡಲಾಗಿದೆ. ಆ ೩೩ ಮಂದಿಯ ರೆಕಾರ್ಡ್‌ಗಳನ್ನು ವೆರಿಫೈ ಮಾಡಿ ನಮಗೆ ತಿಳಿಸಬೇಕೆಂದು ಪೋಲೀಸರಿಗೆ ಹೇಳಿದ್ದೇವೆ. ಇನ್ನು ಮಂಡ್ಯ ಜಿಲ್ಲೆಯಲ್ಲಿ ಸರ್‌ಪ್ಲಸ್ ಶುಗರ್‌ಕೇನ್ ಬೆಳೆದು ಅಲ್ಲಿಯ ರೈತರಿಗೆ ಬಹಳ ತೊಂದರೆಯಾಗಿದೆ ಎಂದು ಹೇಳಿದ್ದಾರೆ. ಈ ವರ್ಷ ಬೆಲ್ಲದ ಬೆಲೆ ಇಳಿಮುಖವಾಗಿ ಗಾಣಗಳು ಅಲ್ಲಿ ಕೆಲಸಮಾಡುತ್ತಿಲ್ಲ. ಮತ್ತು ಈ ಸಾರಿ ಜಿಲ್ಲೆಯಲ್ಲಿ ಹೆಚ್ಚುವರಿ ಕಬ್ಬು ಬೆಳೆದಿದೆ. ಇದಕ್ಕೆ ಇನ್ನೊಂದು ಕಾರಣ ಏನೆಂದರೆ ಖಂಡಸಾರಿ ಘಟಕಗಳು ಕಬ್ಬನ್ನು ಅರೆಯುವ ಪರವಾನಿಗೆಯ ಅವಧಿಯನ್ನು ಈ ವರ್ಷ ವಿಸ್ತರಿಸಬೇಕೆಂದು ಕೇಳಿದ್ದಾರೆ, ಮತ್ತು ರಾಜ್ಯದಲ್ಲಿ ಹೆಚ್ಚು ಹೊಸ ಕಾರ್ಖಾನೆಗಳನ್ನು ಸ್ಥಾಪನೆ ಮಾಡಬೇಕೆಂದು ಸಕ್ಕರೆ ಕಾರ್ಖಾನೆಯವರು ಸಲಹೆ ನೀಡಿದ್ದಾರೆ. ಕೇಂದ್ರ ಸರ್ಕಾರ ೫ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗೆ ಪರವಾನಿಗೆ ನೀಡಿದೆ. ಇನ್ನು ರಾಜ್ಯಸರ್ಕಾರ ೯ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆಗಾಗಿ ಶಿಫಾರಸ್ಸು ಮಾಡಿದ್ದು, ಅದು ಸಹ ಕೇಂದ್ರ ಸರ್ಕಾರದ ಮುಂದೆ ಇದೆ. ಅಷ್ಟೇ ಅಲ್ಲದೆ ರಾಜ್ಯದ ಸ್ಕ್ರೀನಿಂಗ್ ಕಮಿಟಿ ಇನ್ನೂ ೫ ಹೊಸ ಕಾರ್ಖಾನೆಗಳ ಸ್ಥಾಪನೆಗಾಗಿ ಶಿಫಾರಸ್ಸು ಮಾಡಿದ್ದು ಕೇಂದ್ರ ಸರ್ಕಾರಕ್ಕೆ ಲೈಸೆನ್ಸ್‌ಗಾಗಿ ಶಿಫಾರಸ್ಸು ಮಾಡುವ ಹಂತದಲ್ಲಿದೆ. ಹೀಗೆ ಹೊಸದಾಗಿ ೧೯ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂದು ಸರ್ಕಾರ ಕ್ರಮ ತೆಗೆದುಕೊಂಡಿದ್ದು ಅವು ವಿವಿಧ ಹಂತದಲ್ಲಿವೆ. ಈ ವರ್ಷ ನಮ್ಮ ಮೈಸೂರು ಷುಗರ್ ಕಂಪನಿ ರಿಜಿಸ್ಟರ್ಡ್ ಏರಿಯಾದಲ್ಲಿ ೧೯೯೧-೯೨ನೇ ಸಾಲಿಗೆ ೭೮೦೪೮೦ ಟನ್ ಕಬ್ಬನ್ನು ಅರೆಯಬೇಕಾಗಿದೆ. ಇದುವರೆಗೆ ೬೬೩೨೭೯ ಟನ್ ಕಬ್ಬನ್ನು ಅರೆದಿದ್ದೇವೆ. ಅಲ್ಲದೆ ಏಪ್ರಿಲ್ ತಿಂಗಳ ಕೊನೆಯೊಳಗೆ ಈ ಕಬ್ಬನ್ನೂ ಕೂಡ ಅರೆಯುವುದಕ್ಕೆ ನಮ್ಮ ಮೈಸೂರು ಷುಗರ್ ಕಂಪನಿ ತಯಾರಾಗಿದೆ. ಇದೂ ಅಲ್ಲದೆ ಧರ್ಮಪುರಿ ಕೋ ಆಪರೇಟೀವ್ ಷುಗರ್ ಫ್ಯಾಕ್ಟರಿಯವರು ತಮಿಳ್ನಾಡಿನಲ್ಲಿ ಪರ್ಚೇಸ್ ಟ್ಯಾಕ್ಸ್‌ನ್ನು ಅಬ್ಯಾಲಿಷ್ ಮಾಡಿದ್ದರಿಂದ ಅವರೂ ಕೂಡ ಮಂಡ್ಯ ಮತ್ತು ಮೈಸೂರು ಏರಿಯಾದಿಂದ ಕಬ್ಬನ್ನು ತೆಗೆದುಕೊಂಡು ಹೋಗುವುದಕ್ಕೆ ಒಪ್ಪಿಕೊಂಡಿದ್ದಾರೆ. ಈ ವರ್ಷ ೩೧ ಲಕ್ಷ ಟನ್ ಕಬ್ಬನ್ನು ಬೆಳೆದಿದ್ದರಿಂದ ಮತ್ತು ಕಳೆದ ವರ್ಷಕ್ಕಿಂತ ಈ ವರ್ಷ ೩ ಲಕ್ಷ ಟನ್ ಜಾಸ್ತಿ ಕಬ್ಬನ್ನು ಬೆಳೆದಿದ್ದರಿಂದ ಈ ಸಮಸ್ಯೆ ಉದ್ಭವಿಸಿದೆ. ಇದು ಮನುಷ್ಯ ಮಾಡಿದ. ತಪ್ಪಲ್ಲದ್ದಿದ್ದರೂ ದೇವರು ಅನುಗ್ರಹಿಸಿ ಹೆಚ್ಚು ಬೆಳೆಯುವುದಕ್ಕೆ ಕಾರಣವಾದ್ದರಿಂದ ಈ ಒಂದು ತೊಂದರೆಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡು ಈಗ ಬೆಳೆದಿರುವಂಥ ಎಲ್ಲಾ ಕಬ್ಬನ್ನೂ ಕೂಡ ಸಾಧ್ಯವಾದಷ್ಟೂ ಅರೆಯಲು ವ್ಯವಸ್ಥೆ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಬಾಬುರಾವ್ ಚವಾಣ್‌ರವರು ತಮ್ಮ ಗುಲ್ಬರ್ಗಾದಲ್ಲಿ ಸರ್ಕಾರಿ ಸ್ವಾಮ್ಯದಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೀರಾ ಎಂದು ಕೇಳಿದ್ದಾರೆ. ಮೊನ್ನೆ ಕೂಡ ಅವರ ಒಂದು ಸ್ಟಾರ್ಡ್ ಕೊಶ್ಚನ್‌ಗೆ ''ಇಲ್ಲ'' ಎಂದು ಹೇಳಿದ್ದೇನೆ. ಏಕೆಂದರೆ ಸರ್ಕಾರದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎಂಬ ದೃಷ್ಟಿಯಿಂದ. ಅಷ್ಟೇ ಅಲ್ಲದೆ ಕೇಂದ್ರ ಸರ್ಕಾರದ ಹೊಸ ಕೈಗಾರಿಕಾ ನೀತಿಯಿಂದಾಗಿ ಹೆಚ್ಚಿನ ಕಾರ್ಖಾನೆಗಳನ್ನು ಖಾಸಗಿಯವರು ನಡೆಸಬೇಕೆಂಬ ದೃಷ್ಟಿಯಲ್ಲಿ ನಾವು ಅವರಿಗೆ ಸಹಕಾರ ಕೊಡುತ್ತಿದ್ದೇವೆ

ಇನ್ನು ರಾಜಶ್ರೀ ಸಿಮೆಂಟ್‌ನವರು ಎಕ್ಸಸ್ ಪ್ರೊಡಕ್ಷನ್ ಮಾಡುತ್ತಿದ್ದಾರೆಂದು ಹೇಳಿದ್ದಾರೆ.

ಈಗಾಗಲೇ ಈ ಕಾರ್ಖಾನೆಗಳಿಗೆ ಡೀ ಲೈಸೆನ್ಸ್ ಮಾಡಿರುವುದರಿಂದ ಅವರು ಎಷ್ಟು ಬೇಕಾದರೂ ಪ್ರೊಡಕ್ಷನ್ ಮಾಡಬಹುದು. ಒಂದು ವೇಳೆ ಅವರು ಸೆಂಟ್ರಲ್ ಟ್ಯಾಕ್ಸ್ ಅಥವಾ ಸೇಲ್ಸ್ ಟ್ಯಾಕ್ಸನ್ನು ಕೊಡದೇ ತಪ್ಪಿಸುತ್ತಿದ್ದರೆ ಅದು ನಮ್ಮ ಇಲಾಖೆಗೆ ಸಂಬಂಧ ಪಡುವುದಿಲ್ಲ. ಆರ್ಥಿಕ ಇಲಾಖೆಯವರು ಇದನ್ನು ನೋಡಬೇಕಾಗುತ್ತದೆ.

ಇನ್ನು ಮಾನ್ಯ ಸದಸ್ಯರಾದ ಶಫಿ ಅಹ್ಮದ್‌ರವರು ತುಮಕೂರನ್ನು ಜೋನ್ ೨ರಿಂದ ಜೋನ್ ೩ಕ್ಕೆ ಪರಿವರ್ತನೆ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಕ್ಲಾಸಿಫೈ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ನಾವು ಪರಿಶೀಲನೆ ಮಾಡುತ್ತೇವೆ.

ಇನ್ನು ೧೯೯೮ರ ಸೆಪ್ಟೆಂಬರ್‌ವರೆಗೆ ಯಾರು ಹೊಸ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದ್ದಾರೆ ಅವರಿಗೆಲ್ಲಾ ಸಬ್ಸಿಡಿಯನ್ನು ಕೊಟ್ಟಿದ್ದಾಗಿದೆ. ೧೯೯೨-೯೩ರ ಸಾಲಿಗೆ ೧೫ ಕೋಟಿ ರೂ ಹಣವನ್ನು ಬ್ಯಾಕ್‌ಲಾಗ್ ಬಗ್ಗೆ ಮಂಜೂರು ಮಾಡುವುದಕ್ಕೆ ಇಟ್ಟಿದ್ದೇವೆ. ಇದರ ಜೊತೆಗೆ ಎಂಟ್ರಿ ಟ್ಯಾಕ್ಸ್ ಬಗ್ಗೆ ಕೂಡ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನಾನು ಈಗಾಗಲೇ ಹೇಳಿದಂತೆ ಇದು ಆರ್ಥಿಕ ಇಲಾಖೆಯವರಿಗೆ ಸಂಬಂಧ ಪಟ್ಟಿರುವುದರಿಂದ ಇದರ ಬಗ್ಗೆ ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಇನ್ನು ಮಾನ್ಯ ಸದಸ್ಯರಾದ ಹನುಮೇಗೌಡರು ಒಂದು ಮಾತನ್ನು ಏನು ಹೇಳಿದ್ದಾರೆಂದರೆ ಹಾಸನದ ಕಿಂಕೋ ಫ್ಯಾಕ್ಟರಿಯನ್ನು ಬಂದ್ ಮಾಡಬಾರದು ಇದನ್ನು ನಡೆಸಿಕೊಂಡು ಹೋಗಬೇಕೆಂದು ಹೇಳಿದ್ದಾರೆ. ಇದು ನಮ್ಮ ರೈತರಿಗೆ ಬೇಕಾದಂಥ ವ್ಯವಸಾಯೋಪಕರಣಗಳನ್ನು ತಯಾರು ಮಾಡುವುದಕ್ಕೆ ಮತ್ತು ಇದಕ್ಕೆ ಒಂದು ಹೊಸ ಕಾಯಕಲ್ಪವನ್ನು ಕೊಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ ಮತ್ತು ಕೆ. ಎಸ್. ಆರ್. ಟಿ. ಸಿ.ಯವರೂ ಕೂಡ ಬಸ್ಸಿನ ಬಾಡಿಯನ್ನು ಕಟ್ಟುವುದಕ್ಕೆ ಚಾಸಿಸ್ ಕೊಡುತ್ತಿದ್ದಾರೆ. ಆದುದರಿಂದ ಈ ಫ್ಯಾಕ್ಟರಿಯನ್ನು ಬಂದ್ ಮಾಡುವ ಅವಶ್ಯಕತೆ ಇಲ್ಲ.

ಇನ್ನು ಕೆ. ಎಸ್. ಅಂಡ್ ಡಿ. ಎಲ್. ವಿಚಾರದಲ್ಲಿ ಮಹೇಂದ್ರ ಕಮಿಷನ್ ಬಗ್ಗೆ ಮಾನ್ಯ ಸದಸ್ಯರಾದ ಶಿವರಾಮೇಗೌಡರು ಕೇಳಿದ್ದಾರೆ. ಈಗಾಗಲೇ ಆ ಕಮಿಷನ್‌ನ ಕೆಲಸ ಪ್ರಾರಂಭವಾಗಿದೆ. ಅದರ ವರದಿಯನ್ನು ಜೂನ್ ೯೨ರೊಳಗೆ ನಿರೀಕ್ಷೆ ಮಾಡುತ್ತಿದ್ದೇವೆ. ಹೊಸ ಷುಗರ್ ಫ್ಯಾಕ್ಟರಿ ತೆರೆಯಬೇಕೆಂದು ಇದೆ. ಮಾನ್ಯ ಸದಸ್ಯರು ಹೇಳಿದ್ದಾರೆ ನಾನು ಈಗಾಗಲೇ ಹೇಳಿದಂತೆ ಸರ್ಕಾರದ ವತಿಯಿಂದ ಪ್ರಾರಂಭ ಮಾಡುವುದಕ್ಕೆ ನಾವು ಮುಂದೆ ಬರುವುದಿಲ್ಲ. ಮಂಡ್ಯ ಭಾಗದಲ್ಲಿ ಎಲ್ಲಿಯಾದರೂ ತೆರೆಯುವುದಕ್ಕೆ ಖಾಸಗಿಯವರು ಯಾರಾದರೂ ಮುಂದೆ ಬಂದರೆ ಅವರಿಗೆ ನಾವು ಪರವಾನಗಿಯನ್ನು ಕೊಡುವುದಕ್ಕೆ ತಯಾರಿದ್ದೇವೆ. ಇದೇ ರೀತಿ ಕೋ-ಆಪರೇಟೀವ್ ಸೆಕ್ಟಾರ್‌ನಲ್ಲಿ ಕೂಡ ಅವರು ಮುಂದೆ ಬರುವುದಾದರೆ ಅವರಿಗೂ ಸಹಾಯ ಮಾಡುತ್ತೇವೆ. ಈಗ ನನ್ನ ನಂತರ ೭ ಜನ ಮಂತ್ರಿಗಳು ತಮ್ಮ ಬೇಡಿಕೆಗಳಿಗೆ ಉತ್ತರವನ್ನು ಕೊಡಬೇಕಾಗಿದೆ. ಮೊದಲೇ ಸಮಯದ ಅಭಾವ. ಆದ್ದರಿಂದ ನಾನು ನನ್ನ ಇಲಾಖೆಯ ಒಂದು ಪಕ್ಷಿ ನೋಟವನ್ನು ಬರಹದ ಮೂಲಕ ಇವತ್ತು ಇಲ್ಲಿ ಇಡುತ್ತಾ ನನ್ನ ಇಲಾಖೆಯ ಬೇಡಿಕೆಗಳಿಗೆ ತಾವೆಲ್ಲರೂ ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಂ. ಎಲ್. ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು):- ಮಾನ್ಯ ಸಭಾಧ್ಯಕ್ಷಣೆಯವರೇ, ನನ್ನ ಇಲಾಖೆಯ ಮೇಲೆ ಮುಖ್ಯವಾಗಿ ಮಾತನಾಡಿದವರು ಮೂರು ಜನ ಮಾನ್ಯ ಶಾಸಕರಾದ ರಾಜುಗೌಡರು, ಮಾನ್ಯ ಚವಾಣ್‌ರವರು ಮತ್ತು ಮಾನ್ಯ ಜಯಚಂದ್ರರವರು. ಮಾನ್ಯ ರಾಜುಗೌಡರು ಕಲ್ಲು ಗಣಿ ಪ್ರದೇಶದ ಕಲ್ಲುಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಬೇಕೆಂದು ಮತ್ತು every year it should be raised ಎಂದು ಹೇಳಿದ್ದು ಒಂದು. ಎರಡನೆಯದಾಗಿ ಗ್ರೌಂಡ್ ವಾಟರ್ ಬಗ್ಗೆ in each taluks survey should be done ಎಂದು ಹೇಳಿದ್ದಾರೆ. ಈ ಗ್ರೌಂಡ್ ವಾಟರ್ ಬಗ್ಗೆ ನಾನು ಹೇಳಬೇಕಾದರೆ ಈ ವರ್ಷ ನಾವು ಎಲ್ಲಾ ೧೭೫ ತಾಲ್ಲೂಕುಗಳಲ್ಲಿ ಸರ್ವೆ ಮಾಡಿಕೊಂಡು ಬಂದಿರುತ್ತೇವೆ. ಎರಡನೆಯದಾಗಿ ತಾವು ಏನು ಹೇಳಿದ್ದೀರಿ, ಕಲ್ಲು ಗಣಿಗಳನ್ನು ಹರಾಜು ಮೂಲಕ ವಿಲೇವಾರಿ ಮಾಡಬೇಕೆಂದು; ಅದರ ಬಗ್ಗೆಯೂ ಕೂಡ ತಮ್ಮ ವಿಚಾರವನ್ನು ಗಮನದಲ್ಲಿಟ್ಟು ಕೊಳ್ಳುತ್ತೇನೆ. ಏತಕ್ಕೆಂದರೆ ಈಗ ತಮಗೆ ಗೊತ್ತಿರುವ ಹಾಗೆ ಮಾನ್ಯ ಅಧ್ಯಕ್ಷರು ಹೋದ ಸಲ ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಮಾಡಿ ಅದರ ಬಗ್ಗೆ ಪಾಲಿಸಿ ಫ್ರೇಮ್ ಮಾಡಿ ರೂಲ್ಸ್ ಫ್ರೇಮ್ ಮಾಡಿ ಎಂದು ಹೇಳಿದ್ದರು. ಅದಕ್ಕೆ ತಮ್ಮ ಒಪೀನಿಯನ್‌ನ್ನು ಗಮನದಲ್ಲಿ ಇಟ್ಟುಕೊಳ್ಳಲಾಗುವುದೆಂದು ಹೇಳಿದ್ದೆ. ನನ್ನ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುವುದಾದರೆ when our Government came to power, ಇಲ್ಲಿಯತನಕ ಯಾವ ಸಾಧನೆಯೂ ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಆಗಿರಲಿಲ್ಲ. ಮುಖ್ಯವಾಗಿ ಹೋದ ಅಸೆಂಬ್ಲಿಯಿಂದ ಹಿಡಿದು ಇವತ್ತಿನವರೆಗೆ ತಾವು ನೋಡಿದರೆ ಎಲ್ಲರೂ ಮಾತನಾಡಿದ್ದು ಗ್ರಾನೈಟ್ ಬಗ್ಗೆ. ಗ್ರಾನೈಟ್ ಲೂಟಿಯಾಗುತ್ತಿದೆ, ಇದರಿಂದಾಗಿ ಯಾವ ಪ್ರಕಾರವಾಗಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಬರಬೇಕಾದ ಇನ್‌ಕಮ್ ಬಾರದೆ ಲೂಟಿಯಾಗುತ್ತಿದೆ ಎಂದು ಹೇಳಿದ್ದಾರೆ. ಈ ದಿಸೆಯಲ್ಲಿ ನಾನು ಒಂದು ವಿಷಯವನ್ನು ಎಲ್ಲರಿಗೂ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಅದೇನೆಂದರೆ ಗ್ರಾನೈಟ್‌ನಲ್ಲಿ not more than Rs. 64 lakhs have been collected so far as far as this granite is concerned upto 1989. ನಾನು ಈ ಇಲಾಖೆಯನ್ನು ವಹಿಸಿಕೊಂಡ ನಂತರ ಹೋದಸಲ ೧೯೯೧ನೇ ಇಸವಿಯಲ್ಲಿ ೧೩೩ ಲಕ್ಷ ರೂಪಾಯಿಗಳನ್ನು ಕಲೆಕ್ಷನ್ ಮಾಡಿದ್ದೇವೆ. ಅಷ್ಟೇ ಅಲ್ಲ, ಮುಂದೆ ಯಾವುದೇ ಹೊಸ ಗಣಿ ಗುತ್ತಿಗೆಯ ಮುಖಾಂತರ ಯಾವುದೇ ಏರಿಯಾ ಎಂದು ಸೆಪರೇಟ್ ಮಾಡಿದ್ದು ಇಲ್ಲ. Only we have collected by strict measures upto the middle of 1990. ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಇನ್ನು ಎರಡನೆಯದಾಗಿ The Department was restructured and by restructuring my Department, powers were vested with the district level officers. ಅಂದರೆ ಮೊದಲ ಕ್ವಾರಿ ಮೇಲೆ ಅಪ್ಲಿಕೇಷನ್ಸ್ ಹೆಡ್ ಆಫೀಸಿಗೆ ಬಂದೇ ಇತ್ಯರ್ಥ ಆಗಬೇಕಾಗಿತ್ತು. ಈಗ ಅದೆಲ್ಲಾ ಡಿಸೆಂಟ್ರಲೈಸ್ ಮಾಡಿ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಕೊಡುತ್ತಿರುವುದರಿಂದ ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಇರುವಂಥ ಆಫೀಸರಿಗೆ ಕ್ವಾರಿ ಲಿಸ್ಟನ್ನು ಕೊಡಬೇಕೆಂದು ಮಾಡಿದೆವು. ಆ ಪ್ರಕಾರವಾಗಿ ೧೯೯೦ರ ಮಧ್ಯೆ ನಾವು ರಿಸ್ಟ್ರಿಕ್ಟ್ ಮಾಡಿದ ನಂತರ ಡಿಸ್ಟ್ರಿಕ್ಟ್ ಲೆವೆಲ್ ಆಫೀಸರ್‌ಗೆ ಪವರ್ಸ್ ಡಿಸೆಂಟ್ರಲೈಸ್ ಮಾಡಿದೆವು. ತದನಂತರ ಜನವರಿ ೧೯೯೨ ಎಂಡ್‌ವರೆಗೆ ,... more than 1800 quarriesleases we have given, that means it is almost 100

%over the leases existing prior to the restructuring the Department. ಎರಡನೆಯದಾಗಿ, ಅನ್ ಅಥರೈಸ್ಡ್ ಕ್ವಾರೀಸ್ ಬಗ್ಗೆ ಬಹಳಷ್ಟು ಹೇಳುತ್ತಿದ್ದರು. ಅನ್‌ಆಥರೈಸ್ಡ್ ಕ್ವಾರಿ ವ್ಯವಹಾರ ಏನು ನಡೆಯುತ್ತಿತ್ತು ಅದು ಕ್ರಮೇಣ ಡಿಕ್ರೀಸ್ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. So far as ornamental granite is concerned efforts have been made by the Government to liberalise the policy. But, due to the litigation the High Court we are not able to move ahead. Recently, you might have heard, the Karnataka High Court has struck down the licences issued in respect of 203 leases. It has been struck down. Now I am thinking of consulting the Law Department in this matter. ಲೀಗಲ್ ಡಿಪಾರ್ಟ್‌ಮೆಂಟ್‌ನವರನ್ನು ಕಾಂಟಾಕ್ಟ್ ಮಾಡಿ ಯಾವ ಪ್ರಕಾರ ರೂಲ್ಸ್ ಮಾಡಬೇಕೆಂದು ವಿಚಾರ ಮಾಡಲಿಕ್ಕೆ ಹತ್ತಿದ್ದೇವೆ. ಏತಕ್ಕೆಂದರೆ ೧೯೬೯ರಲ್ಲಿ ಏನು ರೂಲ್ ಫ್ರೇಂ ಆಗಿ ಬಂತು ಅದು ಹೈಕೋರ್ಟಿನಲ್ಲಿ ಸ್ಟೇ ಆಯಿತು. Rule 79 (3) has also been stayed by the High Court. Now the granting of quarrying has come to a standstill. ತಮಗೆಲ್ಲರಿಗೆ ಗೊತ್ತಿರುವ ಹಾಗೆ ಎರಡೂ ಸದನದ ಸಮಿತಿ ಈಗ ರಚನೆಯಾಗಿದೆ. ಅದರ ಮುಂದೆ series of meetings have been held for suggesting a comprehnsive policy on the minor minerals. ಇವತ್ತು ನಾನು ಮತ್ತೆ ೬ ತಿಂಗಳು ಟೈಂ ತೆಗೆದುಕೊಂಡಿದ್ದೇನೆ. ಜಂಟಿ ಸಲಹಾ ಸಮಿತಿಯಲ್ಲಿ ಎಲ್ಲಾ ಸದಸ್ಯರ ಮನವಿ ಮೇರೆಗೆ ತಮಿಳ್ನಾಡು, ಆಂಧ್ರಪ್ರದೇಶ ಮತ್ತು ಕೆಲವೊಂದು ರಾಜ್ಯಗಳಲ್ಲಿ ತಿರುಗಾಡಿ ಅಲ್ಲಿ ರೂಲ್ಸ್ ಯಾವ ಪ್ರಕಾರ ಇದೆ, ಯಾವ ಪ್ರಕಾರ ಲೀಸ್‌ಗೆ ಕೊಡುತ್ತಾರೆಂದು ನೋಡಿ ಮುಂದಿನ ೬ ತಿಂಗಳಲ್ಲಿ ವರದಿ ಕೊಡುತ್ತೇವೆ. We are going to suggest a comprehensive policy as far as this minor minerals are concerned. ನಮ್ಮ ಚವಾಣರು ಶಹಬಾದ್ ಸ್ಟೋನ್ ಬಗ್ಗೆ ಹೇಳಿದರು. ಶ್ರೀ ಕಮರಲ್ ಇಸ್ಲಾಂ ಮತ್ತಿತರ ಗುಲ್ಬರ್ಗಾ ಶಾಸಕರ ಇಚ್ಛೆ ಮೇರೆಗೆ ಜನವರಿ ೧೮ರಂದು ಗುಲ್ಬರ್ಗಾದಲ್ಲಿ ಎಲ್ಲಾ ಶಾಸಕರ ಮತ್ತು ಅಧಿಕಾರಿಗಳ ಜೊತೆಯಲ್ಲಿ ಮೀಟಿಂಗ್ ಮಾಡಲಾಯಿತು. ಆಗ ಬಹಳಷ್ಟು ಜನ ಇಲ್ಲೀಗಲ್ ಆಗಿ ಶಹಬಾದ್ ಸ್ಟೋನ್ ಹೊರಗಡೆ ಹೋಗುತ್ತಿದೆ, ಮುಖ್ಯವಾಗಿ ಮಹಾರಾಷ್ಟ್ರಕ್ಕೆ ಹೋಗುತ್ತಿದೆ ಎಂದು ಹೇಳುತ್ತಿದ್ದರು. ಅವರ ಸಲಹೆ ಪ್ರಕಾರ ನಾವು ಆಳಂದ್ ರೋಡ್‌ನಲ್ಲಿ ಒಂದು ಚೆಕ್‌ಪೋಸ್ಟ್ ಮಾಡಿದೆವು. ಆದರಿಂದ ಶಹಬಾದ್ ಸ್ಟೋನ್ ಏನು ಇಲ್ಲೀಗಲ್ ಆಗಿ ಸಾಗಣೆಯಾಗುತ್ತಿತ್ತು ಅದು ಸ್ಟಾಪ್ ಆಗಿದೆ ಎಂದು ನನ್ನ ಭಾವನೆ. ಅವರ ಇನ್ನೊಂದು ಸಲಹೆ ಏನೆಂದರೆ ರಾಯಲ್ಟಿ ವಸೂಲ್ಮಾಡಬೇಕು, ಫೆನಾಲ್ಟಿ ಹಾಕಬಾರದು ಎಂದು. We are levying a very minimum charge i.e. per colour Rs. 50 not more than that. Moreover, from this we have collected Rs. 12,000 per day, in one month. ಒಂದೇ ತಿಂಗಳಲ್ಲಿ ಕನಿಷ್ಟ ೧೨ ಸಾವಿರ ರೂಪಾಯಿನಂತೆ ಕಲೆಕ್ಟ್ ಆಗುವುದಕ್ಕೆ ಹತ್ತಿದೆ. ಈಗ ಹಾಕಿರುವುದು ಬಿಟ್ಟು ಇನ್ನೂ ೪-೫ ಚೆಕ್‌ಪೋಸ್ಟ್‌ಗಳನ್ನು ಹಾಕಬೇಕೆಂದು ಹೇಳಿದ್ದಾರೆ.

ಆ ದಿಸೆಯಲ್ಲೂ ಕೆಲಸ ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ರಿನ್ಯೂಯಲ್ ಸಲುವಾಗಿ ೫೦ ಪರ್ಸೆಂಟ್ ಯಾರು ಕೊಡುತ್ತಾರೆ ಅವರಿಗೆ ರಿನ್ಯೂಯಲ್ ಮಾಡಿಕೊಡುತ್ತೇವೆಂದು ಮಾಡಿದ್ದೇವೆ. ಒಂದು ವರ್ಷದಲ್ಲಿ ಅಂದರೆ ೧೯೯೧ರಲ್ಲಿ ಏನು ಶಹಬಾದ್ ಸ್ಟೋನ್‌ನಿಂದ ೧೪ ಲಕ್ಷದ ೭೨ ಸಾವಿರ ರೂಪಾಯಿ ಕಲೆಕ್ಟ್ ಆಗಿತ್ತು ಅದು ಚೆಕ್‌ಪೋಸ್ಟ್ ಹಾಕಿದ ನಂತರ ೧-೧-೯೨ ರಿಂದ ೨೦-೩-೯೨ರ ಅವಧಿಯಲ್ಲಿ ೮ ಲಕ್ಷದ ೫ ಸಾವಿರ ರೂಪಾಯಿ ಕಲೆಕ್ಟ್ ಆಗಿದೆ. ಇನ್ನೂ ಬರುವಂತದ್ದು ಇದೆ ಎಂದು ನನ್ನ ಭಾವನೆ. ಸದ್ಯಕ್ಕೆ ನಮ್ಮ ಇಲಾಖೆಯಲ್ಲಿ ಮಿನಿರಲ್ಸ್ ಟ್ರಾನ್ಸ್‌ಪೋರ್ಟ್ ಪರ್ಮಿಟ್ ಇಂಟ್ರಡ್ಯೂಸ್ ಮಾಡುವವರಿದ್ದೇವೆ. To this, an amendment is necessary to KMMC. To incorporate the above permit system, we are thinking of bringing an amendment. This is being considered and we are doing it shortly. It has been proposed to utilise the services of checkposts and staff of Forest Department, Commercial Taxes Department and Motor Vehicles Department by giving some powers to the officers of these Departments. That is why within a short period I am going to empower the officers of these Departments. ಮಾನ್ಯ ಸದಸ್ಯರಿಗೆ ಗೊತ್ತಿದ್ದ ಹಾಗೆ ನಮ್ಮಲ್ಲಿ ಮ್ಯಾನ್ ಪವರ್ ಇಲ್ಲ. ಆದ್ದರಿಂದ ೧೯೯೧-೯೨ನೇ ಸಾಲಿನಲ್ಲಿ ನಮ್ಮ ಟಾರ್ಗೆಟ್ ೨೦ ಕೋಟಿ ರೂಪಾಯಿ ಏನಿತ್ತು ಅದನ್ನು ನಾವು ತಲುಪಿದ್ದೇವೆ. ಅಷ್ಟೇ ಅಲ್ಲ but this year during 1992-93 we are going to achieve a revenue more than 35 crores of rupees ಎಂದು ನಾನು ಬಹಳ ಹೆಮ್ಮೆಯಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಶಾಸಕರಾದ ಜಯಚಂದ್ರರವರು ಮಾತನಾಡುತ್ತಾ ಈ ಇಲಾಖೆಯ ಸುಧಾರಣೆಯ ಬಗ್ಗೆ ಅಧಿಕಾರಿಗಳು ಸಾಕಷ್ಟು ಕೆಲಸ ಮಾಡಿದ್ದಾರೆ. ವಿರೋಧಪಕ್ಷದವರು ಸಭೆಯಲ್ಲಿ ಇದ್ದಿದ್ದರೆ ಅವರಿಗೆ ನಾನು ಅವರ ಕಾಲದಲ್ಲಿನ ಗ್ರಾನೈಟ್ ಲೂಟಿಯ ಬಗ್ಗೆ ಕೇಳುತ್ತಿದ್ದೆ ಎಂದು ಹೇಳಿದರು. ಅದೇ ಪ್ರಕಾರ ಕೆಲವು ಸಜೆಷನ್ಸ್ ಕೂಡ ಕೊಟ್ಟರು. ಅವರೂ ಸಹ ರಾಯಲ್ಟಿಯ ಬಗ್ಗೆ ಯಾವ ಪ್ರಕಾರ ನಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಹೆಚ್ಚಳವಾಗಿದೆ ಯಾವ ಪ್ರಕಾರ ಸುಧಾರಣೆ ತಂದಿದ್ದೇವೆ ಎಂಬುದನ್ನು ಹೇಳಿದ್ದರು. ಇವತ್ತು ಗ್ರಾನೈಟ್ ವಿಷಯದಲ್ಲಿ ಇನ್ನೊಂದು ಮಾತು ಹೇಳಬೇಕಾದರೆ ಪಟ್ಟಾ ಲ್ಯಾಂಡ್ ಹಾಗೂ ಪ್ರೈವೇಟ್ ಲ್ಯಾಂಡ್‌ನಲ್ಲಿರುವ ಗ್ರಾನೈಟ್ ಕಲ್ಲು ತೆಗೆಯುವ ಬಗ್ಗೆ ವರ್ಕಿಂಗ್ ಪರ್ಮಿಷನ್ ಅನ್ನು ಹೈಕೋರ್ಟಿನಲ್ಲಿ ತೆಗೆದುಕೊಂಡು, ಪಕ್ಕದಲ್ಲಿರುವಂತಹ ಸರ್ಕಾರಿ ಭೂಮಿಯಲ್ಲಿ ಕಲ್ಲು ಕೊರೆಯುವುದು ನಡೆಯುತ್ತಿದೆ. ಅದರ ಸಲುವಾಗಿ we have requested the Revenue Department to demarcate it. ಅಂದರೆ ಅದನ್ನು ಸರ್ವೆ ಮಾಡಿ ಅದನ್ನು ಡೀ-ಮಾರ್ಕೆಟ್ ಮಾಡಿ ಒಂದು ರಿಪೋರ್ಟ್ ಕೊಡಬೇಕೆಂದು ನಾವು ಕೇಳಿಕೊಂಡಿದ್ದೇವೆ. ಈ ಪಟ್ಟಾ ಲ್ಯಾಂಡ್‌ನಲ್ಲಿ in more than 950 cases, they are working by taking the working permission from the High Court, and so far as this Government land is concerned, 65 cases they have taken the working permission. ಎಂದು ಹೇಳುವುದಕ್ಕೆ

ಇಚ್ಛೆಪಡುತ್ತೇನೆ. ಇನ್ನು ಅಂಡರ್‌ಗ್ರೌಂಡ್ ವಾಟರ್ ಬಗ್ಗೆ ಹೇಳಬೇಕಾದರೆ already we have taken the survey and throughout the State, now 9 Taluks have been declared as black because the utilisation of the water is more than 85 per cent and 11 Talukas are under grey i.e. in between 65 to 85 per cent utilisation of water is there. ಬೋರ್‌ವೆಲ್ ಯೀಲ್ಡ್ ಟೆಸ್ಟಿಂಗ್ ಸಕಲುವಾಗಿ ಬಹಳ ಡೇಮ್ಯಾಂಡ್ ಬರಲಿಕ್ಕೆ ಹತ್ತಿದೆ: ಆದರ ಸಲುವಾಗಿ Seven additional yield testing unit equipments are procured and one more fast drilling rigs for the borewells is going to be procured. ಇನ್ನು ಖನಿಜ ಭವನದ ಬಗ್ಗೆ ಹೇಳಬೇಕಾದರೆ, ಈ ಸಲ ಖನಿಜ ಭವನವನ್ನು ೨೦೦ ಲಕ್ಷ ವೆಚ್ಚದಲ್ಲಿ ಪ್ರಾರಂಭ ಮಾಡುತ್ತೇವೆ. ಕೊನೆಯದಾಗಿ ಸನ್ಮಾನ್ಯ ಸದಸ್ಯರುಗಳು ನನ್ನ ಡಿಪಾರ್ಟ್‌ಮೆಂಟ್ ಮೇಲೆ ಕೆಲವು ಸಲಹೆ ಸೂಚನೆಗಳನ್ನು ಏನು ಕೊಟ್ಟಿದ್ದಾರೆ, ಅವುಗಳನ್ನು ಗಮನದಲ್ಲಿಟ್ಟುಕೊಂಡು ಆ ಪ್ರಕಾರ ಕೆಲಸ ಮಾಡುತ್ತೇವೆ. ಆದ್ದರಿಂದ ನನ್ನ ಇಲಾಖಾ ಬೇಡಿಕೆಗಳಿಗೆ ತಾವು ಒಪ್ಪಿಗೆ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

೬.೫೫ ಪಿ. ಎಂ.

+ ಶ್ರೀ ನಜೀರ್ ಅಹ್ಮದ್ (ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷಣಿಯವರೇ, ಸುಮಾರು ಐದಾರು ಜನ ಸದಸ್ಯರು ನನ್ನ ಇಲಾಖೆಯ ಬೇಡಿಕೆಯ ಮೇಲೆ ಈಗಾಗಲೇ ಚರ್ಚೆ ಮಾಡಿದ್ದಾರೆ. ಶ್ರೀಮಾನ್ ಶಿವರಾಮೇಗೌಡರು, ಕಮರಲ್ ಇಸ್ಲಾಂರವರು, ಲಕ್ಕಣ್ಣನವರು, ಷಫಿಅಹ್ಮದ್‌ರವರು, ಜಯಚಂದ್ರರವರು, ಕುಶಾಲರವರು ಹಾಗೂ ಹನುಮೇಗೌಡರು ಮಾತನಾಡಿ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಶಿವರಾಮೇಗೌಡರು ಹಲವಾರು ವರ್ಷಗಳಿಂದ ನಮ್ಮ ಇಲಾಖೆಯಿಂದ ಸಬ್ಸಿಡಿಯನ್ನು ಕೊಡಲಿಲ್ಲವೆಂದು ಟೀಕೆ ಮಾಡಿದರು. ಅದರ ಬಗ್ಗೆ ಹೇಳುವುದಾದರೆ ನಾವು ಸುಮಾರು ೯ ಜಿಲ್ಲೆಗಳಲ್ಲಿ ಮಾರ್ಚಿ ೧೯೯೧ರವರೆಗೂ, ಸುಮಾರು ೬ ಜಿಲ್ಲೆಗಳಲ್ಲಿ ಮಾರ್ಚಿ ೧೯೯೦ರವರೆವಿಗೂ ಮತ್ತು ೩ ಜಿಲ್ಲೆಗಳಲ್ಲಿ ೧೯೮೯ರ ಡಿಸೆಂಬರ್‌ವರೆವಿಗೂ ಈಗಾಗಲೇ ಸಬ್ಸಿಡಿ ಹಣವನ್ನು ಹಂಚಿದ್ದೇವೆ. ಇನ್ನು ಮಾನ್ಯ ಕಮರುಲ್ ಇಸ್ಲಾಂ ಅವರು ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್ ಬಗ್ಗೆ ಮಾತನಾಡುತ್ತಾ ಡಿಸ್ಟ್ರಿಕ್ಟ್ ಜನರಲ್ ಮ್ಯಾನೇಜರ್‌ರವರು ಸರಿಯಾಗಿ ಸೆಲೆಕ್ಷನ್ ಮಾಡುತ್ತಾ ಇಲ್ಲ, ಅವರ ಮೇಲೆ ಯಾವುದೇ ರೀತಿಯ ಕಾರ್ಯಕ್ರಮ ತೆಗೆದುಕೊಳ್ಳುತ್ತಾ ಇಲ್ಲ ಎಂದು ಆರೋಪವನ್ನು ಮಾಡಿದರು. ಇದು ಕೇಂದ್ರ ಸರ್ಕಾರದ ಒಂದು ಯೋಜನೆ. ಇದರಲ್ಲಿ ಬರೀ ಡಿಸ್ಟ್ರಿಕ್ಟ್ ಜನರಲ್ ಮ್ಯಾನೇಜರ್‌ರವರು ಮಾತ್ರ ಡಿಸಿಷನ್ ತೆಗೆದುಕೊಳ್ಳುವುದಿಲ್ಲ. ಹಲವಾರು ಜನರು ಇದರಲ್ಲಿ ಇರುತ್ತಾರೆ. ಇದರ ಬಗ್ಗೆ ಈಗಾಗಲೇ ಸರ್ಕಾರದಿಂದ ಒಂದು ಹೊಸ ಯೋಜನೆಯನ್ನು ಹಾಕಿಕೊಳ್ಳುವುದಕ್ಕೆ ನಾವು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಮೊದಲು ಬೆನಿಫಿಷಿಯರೀಸ್ ಅನ್ನು ಸೆಲೆಕ್ಟ್ ಮಾಡಿದಾಗ ಯಾವುದೇ ರೀತಿಯ ಪ್ಯಾರಾಮೀಟರ್ಸ್ ಫಿಕ್ಸ್ ಮಾಡುತ್ತಾ ಇರಲಿಲ್ಲ. ಈಗ ಸರ್ಕಾರದ ವತಿಯಿಂದ ಒಂದು ಬೆನಿಫಿಷಯರೀಸ್‌ಗಳನ್ನು ಅವರ ಆಪ್ಟಿಟ್ಯೂಡ್ ನೋಡಿ ಯಾವ ಇಲಾಖೆಯಲ್ಲಿ ಯಾವ ಪರಿಯಾಕ್ಕೆ ಇದೆ ಎಂದು ತಿಳಿದುಕೊಂಡು ಮತ್ತು ಎಂಟರ್‌ಪ್ರೂನರ್ ಡೆವಲೆಪ್‌ಮೆಂಟ್ ಪ್ರೋಗ್ರಾಂ ಎಂದು

ಕಂಡಕ್ಟ್ ಮಾಡಿ, ಒಂದು ವರ್ಷಕ್ಕೆ ೬೫೦೦ ಬೆನಿಫಿಷಿಯರೀಸ್‌ಗಳನ್ನು ಐಡೆಂಟಿಫೈ ಮಾಡಬೇಕಾದರೆ ೧೫ ಸಾವಿರ ಜನರನ್ನು ಇದರಲ್ಲಿ ಸೆಲೆಕ್ಟ್ ಮಾಡಿ ಅನ್‌ಎಂಪ್ಲಾಯ್ಡ್ ಗ್ರಾಜುಯೇಟ್ಸ್‌ಗೆ ಮತ್ತೆ ಎಂಟರ್‌ಪ್ರೂನರ್ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಯಾರು ಪಾಸ್ ಆಗುತ್ತಾರೋ ಅವರಿಗೆ ಮಾತ್ರ ಈ ಸ್ಕೀಮ್‌ನಲ್ಲಿ ಹಣ ಸಹಾಯವನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಮತ್ತೆ ಸ್ನೇಹಿತರಾದ ಜಯಚಂದ್ರ ಅವರು ಕರ್ನಾಟಕ ಸ್ಮಾಲ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಸರಿಯಾದ ರೀತಿಯಲ್ಲಿ ನಗರಕ್ಕೆ ಹತ್ತಿರ ಆಗಿರುವ ಪ್ರದೇಶದಲ್ಲಿ ನಾವು ಷೆಡ್‌ಗಳನ್ನು ಕಟ್ಟುತ್ತಿಲ್ಲ, ದೂರದಲ್ಲಿ ಕಟ್ಟುತ್ತಾ ಇರುವುದರಿಂದ ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಕಷ್ಟವಾಗುತ್ತದೆ ಎಂದು ಪ್ರಸ್ತಾಪ ಮಾಡಿದರು. ಈ ಬಗ್ಗೆ ಹೇಳುವುದಾದರೆ ಇಡೀ ರಾಜ್ಯದಲ್ಲಿ ೧೦೪ ಇಂಡಸ್ಟ್ರೀಯಲ್ ಎಸ್ಟೇಟ್‌ಗಳು ಉಂಟು. ಹಲವಾರು ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಈಗಾಗಲೇ ನಮ್ಮ ಸ್ಮಾಲ್ ಇಂಡಸ್ಟ್ರೀಸ್ ಇರಬಹುದು, ಮೀಡಿಯಂ ಇಂಡಸ್ಟ್ರೀಸ್ ಆಗಿರಬಹುದು, ಅವುಗಳು ಇವತ್ತು ಆಪರೇಷನ್‌ನಲ್ಲಿ ಇವೆ. ಅವು ಇವತ್ತು ಕೆಲಸವನ್ನು ಮಾಡುತ್ತಿವೆ. ಈ ವರ್ಷದಲ್ಲಿ ಸುಮಾರು ೧೪-೧೫ ಜಾಗಗಳಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್ ಕಟ್ಟಬೇಕೆಂದು ೧೯೯೨-೯೩ರಲ್ಲಿ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಕರ್ನಾಟಕ ಸ್ಟೇಟ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ಹೇಳಲು ನನಗೆ ನಿಜವಾಗಿಯೂ ಸಂತೋಷವಾಗುತ್ತದೆ. I would like to inform to this august House that the growth rate of the Karnataka State Small Industries Development Corporation has been increased by 35 percent. It is a very phenomenal growth. The turnover is about Rs. 55 crores. I just wanted to compliment my Officers that just within a year they have brought the growth to 35 percent. Likewise,, even Karnataka Industrial Area Development Board. The Hon'ble Member Mr. Hanumegowda has said ಅಕ್ವಿಸಿಷನ್ ಮಾಡಿದಾಗ ಹಾಸನದಲ್ಲಿ ಸರಿಯಾದ ರೀತಿಯಲ್ಲಿ ಕಾಂಪನ್‌ಸೇಷನ್ ಕೊಟ್ಟಿಲ್ಲ, ಆ ಕಾಂಪನ್‌ಸೇಷನ್‌ನ್ನು ಕೊಡಬೇಕೆಂದು ಹೇಳಿ ಮಾನ್ಯ ಹನುಮೇಗೌಡರು ಸಲಹೆ ಕೊಟ್ಟಿದ್ದಾರೆ. ನಾವು ಇಡೀ ರಾಜ್ಯದಲ್ಲಿ ಮೂರು ಗ್ರೋತ್ ಸೆಂಟರ್‌ಗಳನ್ನು ಮಾಡುತ್ತಿದ್ದೇವೆ. ಒಂದು ಹಾಸನದಲ್ಲಿ, ಒಂದು ಧಾರವಾಡದಲ್ಲಿ ಒಂದು ರಾಯಚೂರಿನಲ್ಲಿ. ಇದರಲ್ಲಿ for every growth centre we are going to acquire nearly about 2000 acres of land. ಈಗಾಗಲೇ ಧಾರವಾಡದಲ್ಲಿ more than 1000 acres of land is already under the possession of the Board. Likewise in Hassan the acquisition proceedings have started. I would like to assure the Hon'ble Member that we ar going to have a negotiation across the table with the agriculturists or the affected landlords and we will try to negotiate with them and we will give them the compensation. I wanted to inform to this august House about the Karnataka Handloom Devel-

opment Corporation. The Karnataka Handloom Development Corporation caters to the needs of the weavers of the State. Already we have nearly 38,000 weavers attached to this Corporation and for the first time the Corporation again this year, last year as well as this year has made a nominal profit.I want to bring to the information of this august House that the weavers were demanding for a long time that the interest has to be waived off on their loans. First they demanded that the loan has to be waived off. Later on, when the Hon. Chief Minister took a meeting of the representatives of the Weavers in Vidhana Soudha, they came down with a request that atleast interest on the loand should be waived off. Accordingly, we had a discussion with the K.S.F.C. and it has been decided in the Board meeting that from 12%, we have reduced the interest to 4%. Few thousand weavers will be benefitted by this. We are going to reduce nearly Rs. 65 lakhs burden on weavers. Earlier they were required to payt Rs. 2 crores 10 lakhs to the Corporation. Now, we are going to reduce Rs. 65 lakhs so that they may have to pay only Rs. 1 crore 37 lakhs. Likewise, we have also given lot of benefits to weaver community. When the Hon. Chief Minister took a meeting with the weavers, lot of decisions were taken i.e., Group Insurance Scheme etc. For the first time, we have introduced this scheme in the State. There is no contribution from the weavers. The contribution is from the State Government and the Central Government. The weavers at the time of accidental death, they will get Rs. 6,000/- and in the event of natural death they will get Rs. 3,000/-. Likewise, the Karnataka Handloom Development Corporation has come forward that when a weaver dies irrespective of natural or accidental death, immediately within hours, they will be provided Rs. 1,000/- to the family of the deceased. We have also provided Green Cards to the weavers who are residing in rural areas or semi-urban areas and carrying on their

activities. We have also made a provision of maternity benefit for the women weavers. This has also been introduced for the first time. They will get the benefit of 3 months leave prior to their delivery. We are also going to introduce, for the first time, Awards for the best weavers. The outstanding weavers will get awards from the State Government. Another important decision taken by our Hon. Chief Minister in the weavers meeting i.e. Nekarara Asha Jyothi. The weavers when they weave with concentration, it affects on their eye-sight. Therefore, we have decided to implement Nekarara Asha Jyothi scheme and with this they will get one more additional electrical point. This helps them while weaving and will not damage their eyes. We have also decided to have 25000 living-cum-working sheds for the weavers in the entire State. We are also going to have the Training Institute for Handloom weavers at Jamakhandi. Then coming back to the Karnataka Handicraft Development Corporation, I am proud to inform to this House that after the inception of this corporation, for the first time, we have made a meagre profit of about Rs. 3 lakhs. I also take pride in informing this House that the New Vishwa Programme was launched by our Hon. Chief Minister and it was inaugurated by not less than by our Prime Minister Sri. P.V. Narasimha Rao. The programme was inaugurated on 2nd October last year. Everybody was looking forward for that programme. It was launched in the constituency of Hon. Minister for Environment Constitutency. I am proud to tell that in a short period of 5 months, we have attained very good heights. We have identified about 15,022 beneficiaries have been identified and out of them, 7,500 are under training and 7,500 are already involved in the production. We have already collected nearly Rs. 6 crores worth of material which has been produced by the beneficiaries newly identified under this programme and we have already sold the material worth more than Rs. two crores. Within 5 months. I am really

feel happy for the co-operation we got from the people of the State and particularly from the officers of my Department to implement this programme. Our Hon. Chief Minister was very much satisfied with the performance of my Department. He already mentioned and complimented about this many a time not only in this House but also in the Upper House. He not only complimented me but my Department also. It is on record. Now, I just wanted to give few highlights of this programme. Earlier this programme was meant for 5 years. But, now it has been decided to reduce to 3 years. I am happy to inform this House that this is a unique programme in the entire country. The entire country is watching this programme. Our Hon. Prime Minister, after inaugurating this programme, he has not forgotten. He has deputed Sri Kapoor, Secretary to Govt. of India-Small Scale Industries to visit our State and to go to the production Centres of Vishwa. Mr. Kapoor came himself here and visited some of the production centres of Vishwa and saw how the programme is being taken up, how the beneficiaries are identified, how the training is given, how they are involved in production oriented activity, how marketing is undertaken and how linkages have been done. After visiting few Vishwa Centres, he complimented in the officers meeting with the Chief Secretary that for the first time he could see a real development of cottage industry in rural areas. He said, we are going to see that this kind of programme is being implemented by other States. This programme we have not started just like that. We had so many other schemes. There were nearly about 165 common working sheds available in different parts of the State. They were not being used because there was no marketing facility and just because there was no financial arrangement. After identifying such working sheds, we provided them marketing facilities, we identified beneficiaries. We put lot of inputs there like machinery, raw material and taking the responsibility of marketing. To-day out of 165

working centres, we have made use of 110 working centres in nearly 650 locations. This new programme is a challenge before us. We have decided to construct 1000 common working sheds all over the State within 6 months. This programme is for 1992-93. We are confident to complete this big task. We are going to have a standard model. The same model will be there in every village wherever this kind of working sheds are constructed. Each unit will cost Rs. 2 lakhs. I have alreadyinformed the Hon. Members to identify the beneficiaries in their constituencies and write to me and give their names. Shortly we are going to construct common working sheds. Then coming back to another programme which is being sponsored by the Central Government i.e. TRISEM. When the Zilla Parishads were in power, they used to provide training facilities to beneficiaries. About 70000 beneficiaries were identified under that programme. However, only 18,000 of them could be able to provide self-employment under that programme. You can understand the fall-out from 70000 to 18000 beneficiaries. Sir, crores of Rs. were spent on this TRISEM Programme. After the training, what is that the beneficiary has to do? Where has he to go and avail the loan? After going into the depth of the matter,the Hon. Chief Minister felt, once he is provided training, he should not loose a single day. Before he could complete his training, there should be linkages with the beneficieries. Now, the new programme bring about the linkages not only with the financial institutions, not only from the Institute from where he gets the raw material and not only from the institute where he markets. It is like a TRIPARTITE Agreement. Suppose if he produces something, the person or the institute who is going to finance, he has to sign the agreement along that beneficiery. Similarly, the raw material suppliers and marketeers of the goods will have to sign agreement with the beneficiery. It becomes mandatory on the part of agencies which has linkages and that they have to take care of the beneficiaries.

Once these linkages has been done, I am quite confident and positive that we are going to get very good results. Madam, here I wanted to inform this august House the potentiality of this programme. For example, we have Karnataka Handloom Development Corporation. Since from the inception of the Corporation, only 36,890 that is roughly, if we take the new figures it is roughly 38,000 weavers are attached to this corporation. Under Vishwa we are going to take within 3 years we are going to attach. Again under KHDC i.e. Handloom Development Corporation, the unimaginative number i.e. 22,250 weavers are going to be attached within three years under KHDC under this new programme. The responsibility of Handloom Development Corporation will be not only to provide raw-material but also to take back their finished goods and market. Like-wise in Handicrafts, after the inception you know madam, handicrafts since from 20 years it is there. Since from 20 years nearly 4548 artisans have been identified under Handicrafts Development Corporation. Within 3 years weare going to add 2,500 artisans in Handicrafts Development Corporation. Like LIDKAR, we also have one more Developmental agency called LIDKAR. There at present we have about 14000 beneficieries. We are going to add another 22000 beneficieries in another 3 years. Likewise Coir Development Corporation. A very important area, madam, we have a number of places where coconut is abundantly grown and the coir fibre we call that prone fibre, which used to be exported to neighbouring States like Kerala, Tamilnadu. Now under "Vishwa", we have come out with a very ambitious programme to add nearly 22500 beneficiaries under Coir Development Corporation. Recently, I would like to inform that the delegation under my leadership went to Tirupur. It is about 50-70 Kms. from Coimbatore. After going there, I really felt the way that particular town, a small township, has been developed. Today they are doing export - indirect and direct export - of 1200 crores of export they are doing per one year.

They have grown only in a matter of about 5-6 years. After coming back from Tirupur, we had a meeting with our Bangalore based garment exporters and they were also kind enough and the Government has decided to form a Garment Complex on the lines of Tirupur where they have formed a Garment Complex. Like wise we are also going for Powerloom Complex, we are also going for Knitwear Complex. Another important point is regarding windows of the State. As the Hon'ble Chief Minister mentioned in his budget speech that widows will be taken under this scheme and will ensure that they should get income of Rs. 750/- per month. This is also an ambitious programme and we are already working on that. We are identifying widows. Wherever they come forward, we are going to provide them employment and some of my friends spoke about Bee colonies. I think Mr. Kushala spoke on that subject. It is really heartening to note that a new disease called European Foal Brood that has infected this bee-keeping colony and the Government is already seized of the matter. We conducted the survey. We have already started paying compensation for a colony at the rate of Rs. 250/- and the Government has provided nearly 3 lakhs rupees not only for the compensation but also for the medicine and the Government has taken the services of one foreigner who is already working under this, Mr. John Oleson. He has come from Denmark to have a research of bee keeping. We have taken his services to see that we put an end to this kind of a disease. For the first time in Karnataka State Small Industries Development Corporation, for availability of material we have made a new system. We are issuing a letter called UPDATE. It contains all the information what is the raw material, available in the Corporation, and what is the raw material available with us and we are going to post these cards to all the industries situated in the State and along with that letter there is a form the industrialists have to fill up

regarding what is the material they require and all that. If once we receive that, we process it. We have already made delivery system in computerisation system. Once got, we will immediately process and allot the required allotment. Madam, for the ownership of sheds, this was also very long pending demand from industrialists. Up to 10 years they are not supposed to transfer their sheds. Suppose in case anybody starts industry, he has to wait for 10 years to transfer his shed to other person. Now we have reduced that period to 5 years. Suppose in case in between if the industry goes sick, within five years, he can transfer his shed. After the visit to Singapore of our Industries delegation, we were able to meet number of industrialists there and we were able to have purposeful discussions with them and few big industrial houses in Singapore have assured us that they are going to come here and they are going to see the prospects of investing in Karnataka. Already a big industry, IBM-TATA have already come and they have started their industry near Jalahalli, with an investment of nearly Rs. 100 crore. I am confident to inform this House that many such international, multi-national companies are coming forward and they are looking-forward for the prospective investment in Karnataka. With this, I request the Hon'ble Speaker and Members of this House to kindly pass Demands of my Department.

ಶ್ರೀ ವಿ. ಮುನಿಯಪ್ಪ (ರೇಷ್ಮೆ ಖಾತೆ ರಾಜ್ಯ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಈ ದಿನ ರೇಷ್ಮೆ ಕೃಷಿ ಬೇಡಿಕೆಗಳ ಬಗ್ಗೆ ಅನುಮೋದನೆ ಕೊಡತಕ್ಕಂಥ ಸಂದರ್ಭದಲ್ಲಿ ಅನೇಕ ಜನ ಮಾನ್ಯ ಸದಸ್ಯರುಗಳು ಇದರ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಅದರಲ್ಲೂ ವಿಶೇಷವಾಗಿ ಮಾನ್ಯ ಸದಸ್ಯರಾದಂಥ ಸನ್ಮಾನ್ಯ ರಾಜೂಗೌಡರು ಅವರದೇ ಆದಂಥ ಶೈಲಿಯಲ್ಲಿ ರೇಷ್ಮೆ ಕೃಷಿ ಬಗ್ಗೆ ಅವರದೇ ಆದಂಥ ಮಾತುಗಳಲ್ಲಿ, ರೇಷ್ಮೆಯ ವೈವಿಧ್ಯತೆಯನ್ನು, ರೇಷ್ಮೆಯ ಸೊಬಗು ಹಾಗೂ ಸೌಂದರ್ಯದ ಬಗ್ಗೆ ಬಹಳ ಅಮೋಘವಾಗಿ ವರ್ಣನೆ ಮಾಡಿ, ಅದರಲ್ಲಿರತಕ್ಕಂಥ ಲೋಪದೋಷಗಳ ಬಗ್ಗೆ ಸರಕಾರದ ಗಮನ ಸೆಳೆದಿದ್ದಾರೆ. ಅವರು ಕೊಟ್ಟಿರತಕ್ಕಂಥ ಸಲಹೆಗಳು ಮಹತ್ವವಾದವು. ಅವರು ರೇಷ್ಮೆ ಇಲಾಖೆಯಲ್ಲಿ ಇರತಕ್ಕಂಥ ರಾಜ್ಯದ ರೈತರಿಗೆ ಆಗುತ್ತಿರತಕ್ಕಂಥ ಅನುಕೂಲದ ಬಗ್ಗೆ ವಿಶೇಷ ಬೆಳಕನ್ನು ಚೆಲ್ಲಿ, ರೇಷ್ಮೆ ಕೃಷಿ ಬಗ್ಗೆ, ರೇಷ್ಮೆ ಕೃಷಿಯಿಂದ ರಾಜ್ಯದ ರೈತರಿಗೆ ಆಗುತ್ತಿರುವ ಅನುಕೂಲದ ಬಗ್ಗೆ ಹಾಗೂ ಆಗಬೇಕಾದ ಅನುಕೂಲಗಳ ಬಗ್ಗೆ ಅವರು ವಿಶೇಷವಾದ ಒಂದು

ಬೆಳಕನ್ನು ಚೆಲ್ಲಿದ್ದಾರೆ. ಆದರಲ್ಲಿ ಬಹುಶಃ ಅವರು ರಾಜ್ಯದಲ್ಲಿರತಕ್ಕಂಥ ವಿಶೇಷವಾಗಿ ಕೃಷಿಕರ ಬಗ್ಗೆ, ರೇಷ್ಮೆ ಬೆಳೆಗೆ ಬಂದಿರುವ ರೋಗರುಜಿನಗಳ ಬಗ್ಗೆ ಹಾಗೂ ಹಿಂದಿನ ಅಧಿವೇಶನದಲ್ಲಿ ಆದಂಥ ಚರ್ಚೆ ಏನಿತ್ತು, ಅದರ ಹಿನ್ನೆಲೆಯಲ್ಲಿ ಸರಕಾರ ಹಾಕಿಕೊಂಡ ಕಾರ್ಯಕ್ರಮಗಳು ಏನು ಆ ಒಂದು ಕಾರ್ಯಕ್ರಮಗಳ ಅನುಷ್ಠಾನದಿಂದ ಬಂದಂಥ ಫಲಿತಾಂಶ ಏನು ಎಂದು ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಹಿಂದಿನ ಅಧಿವೇಶನದಲ್ಲಿ ಈ ಒಂದು ರೇಷ್ಮೆ ಬೆಳೆಗೆ ಬಂದಂಥ ಗಂಟುರೋಗ ಹಾಗೂ ಇತರ ಅನೇಕ ರೋಗಗಳಿಂದ ಸ್ವಲ್ಪಮಟ್ಟಿಗೆ ನಮಗೆ ಉತ್ಪತ್ತಿ ಕಡಿಮೆ ಆಯಿತು. ಉತ್ಪತ್ತಿ ಕಡಿಮೆ ಆಗಿದ್ದಕ್ಕೆ ಬೇರೆ ಕಾರಣಗಳೂ ಇಲ್ಲದಿಲ್ಲ. ಬಹುಶಃ ರಾಜ್ಯದಲ್ಲಿ ಹಿಂದೆಂದೂ ಇಲ್ಲದಂಥ ರೀತಿಯಲ್ಲಿ ವಾತಾವರಣದಲ್ಲಿ ವಿಪರೀತ ಏರು ಪೇರಾಯಿತು. ಇದು ಒಂದು ಕಡೆ ಆದರೆ ಅತಿಯಾಗಿ ಮಳೆ ಬಂದಂಥಾದ್ದು ಮತ್ತೊಂದು ಕಡೆ, ಜೊತೆಗೆ ಅಭಾವಕ್ಕೆ ಸಿಕ್ಕಿದಂಥ ಪರಿಸ್ಥಿತಿ ಒಂದು ಕಡೆ, ಈ ಒಂದು ವೈಪರಿತ್ಯಗಳ ಪ್ರಭಾವದಿಂದ ರಾಜ್ಯದಲ್ಲಿ ರೇಷ್ಮೆ ಕೃಷಿಗೆ ಧಕ್ಕೆ ಆಯಿತು. ಹೆಚ್ಚಿನ ಮಳೆ ಬಂದಂಥ ಸಂದರ್ಭದಲ್ಲಿ ಶೈತ್ಯಾಂಶ ಜಾಸ್ತಿಯಾದ ಸಂದರ್ಭದಲ್ಲಿ ಏನು ರೋಗಾಣುಗಳು ಇದ್ದವು ಅವು ಸ್ವಲ್ಪ ಮಟ್ಟಿಗೆ ಉಲ್ಬಣಗೊಂಡು, ರೋಗ ನಿಯಂತ್ರಣ ಕಾರ್ಯಕ್ರಮದಿಂದ ಹತೋಟಿಗೆ ಬರುವ ದಿಸೆಯಲ್ಲಿ ಸ್ವಲ್ಪ ನಿಧಾನವಾಯಿತು. ಈ ಒಂದು ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ನಮ್ಮ ಉತ್ಪನ್ನ ಕಡಿಮೆ ಆಯಿತು. ಈ ದಿಶೆಯಲ್ಲಿ ನಮ್ಮ ಸರ್ಕಾರ ಅನೇಕ ರೀತಿಯಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಈ ರೋಗ ತಡೆಗಟ್ಟುವ ದಿಸೆಯಲ್ಲಿ ಆದರಲ್ಲೂ ವಿಶೇಷವಾಗಿ ಬಿತ್ತನೆ ಪ್ರದೇಶ ಏನಿದೆ ಆ ಬಿತ್ತನೆ ಪ್ರದೇಶದಲ್ಲಿ ಇರತಕ್ಕಂಥ ೭೫ ರೇಂಜ್‌ಗಳನ್ನು ಜೊತೆಗೆ ೧೫೫ ರೇಂಜ್ ಅಧಿಕಾರಿಗಳನ್ನು ಜಾಸ್ತಿ ಮಾಡಿ ಆ ವಲಯದಲ್ಲಿರತಕ್ಕಂಥ ರೈತರ ಒಂದು ಮೇಲು ಉಸ್ತುವಾರಿ ಮಾಡಲು ರೇಷ್ಮೆ ಹುಳ ಸಾಕಾಣಿಕೆ ಮಾಡತಕ್ಕಂಥ ಪ್ರತಿ ರೈತರ ಮನೆಗೂ ನಮ್ಮ ಇಲಾಖಾ ಅಧಿಕಾರಿಗಳು ಹೋಗಿ ಈ ಒಂದು ರೋಗ ನಿಯಂತ್ರಣ ಕಾರ್ಯವನ್ನು ಕೈಗೆತ್ತಿಕೊಂಡು ಇವತ್ತು ಈ ರೋಗ ಬೃಹದಾಕಾರವಾಗಿ ನಮಗೆ ಏನೊಂದು ರೀತಿ ಕಾಡುತ್ತಿತ್ತು ಅಂತಹ ರೋಗವನ್ನು ಇವತ್ತು ಒಂದು ಹತೋಟಿಗೆ ತರತಕ್ಕಂಥ ಒಂದು ಸಾಹಸವನ್ನು ನಮ್ಮ ಅಧಿಕಾರಿಗಳು ಮಾಡಿದ್ದಾರೆ. ಇವತ್ತು ಅಂತಹ ವಿಶೇಷವಾದ ಸಾಹಸ ಮಾಡಿ ಹಾಗೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ಒಂದು ಬಿತ್ತನೆ ಪ್ರದೇಶದಲ್ಲಿರತಕ್ಕಂಥ ರೋಗ ತಡೆಯುವುದರ ಮುಖಾಂತರ ಈ ಒಂದು ಫಲಿತಾಂಶವನ್ನು ಸಹ ನಾವು ಕೊಟ್ಟಿದ್ದೇವೆ. ಇದರಿಂದಾಗಿ ಬಹುಶಃ ಹಿಂದೆಂದೂ ಕಾಣದಂತಹ ಉತ್ಪನ್ನವನ್ನು ನಾವು ರಾಜ್ಯದಲ್ಲಿರತಕ್ಕಂಥ ಪ್ರತಿಯೊಂದು ಮಾರುಕಟ್ಟೆಗಳಲ್ಲಿ ನಾವು ನೋಡುತ್ತಿದ್ದೇವೆ. ಹೋದ ವರ್ಷದಲ್ಲಿ ಇದೇ ಅವಧಿಯಲ್ಲಿ ಏನು ಇಳುವರಿ ಬರುತಿತ್ತು ಏನು ಗೂಡು ಬರುತ್ತಿತ್ತು ಅದಕ್ಕಿಂತ ಜಾಸ್ತಿ ಗೂಡು ಮಾರುಕಟ್ಟೆಗೆ ಮಾರ್ಚಿತಿಂಗಳಲ್ಲಿ ಬಂದಿದ್ದರಿಂದ ಖಂಡಿತವಾಗಿ ನಮ್ಮ ಇಲಾಖೆಗೆ ರೈತರಿಗೂ ಆಶ್ಚರ್ಯಕರವಾದಂತಹ ರೀತಿಯಲ್ಲಿ ಜೊತೆಗೆ ರೀಲರ್ಸ್‌ನಲ್ಲಿ ಇವತ್ತು ಆಶ್ಚರ್ಯ ತರತಕ್ಕಂಥ ರೀತಿಯಲ್ಲಿ ಇವತ್ತು ಗೂಡಿನ ಒಂದು ಉತ್ಪನ್ನ ಜಾಸ್ತಿಯಾಗಿದೆ. ಅದಕ್ಕೆ ಎಲ್ಲಾ ನಿಜವಾಗಿಯೂ ನಾನಾದರೂ ವೈಯುಕ್ತಿಕವಾಗಿ ನಮ್ಮ ಇಲಾಖೆಯ ವಿಶೇಷವಾಗಿ ನಮ್ಮ ಇಲಾಖೆಯ ನಿರ್ದೇಶಕರಾದಂತಹ ಸತ್ಯವಾದಿಗಳಂತಹ ಅಧಿಕಾರಿಗಳು ಬಹಳ ಉತ್ತಮವಾಗಿ ಕೆಲಸ ಮಾಡಿ ಈ ಒಂದು ಇಲಾಖೆಗೆ ಅನುಕೂಲ ಮಾಡಲು ಅವರು ಈ ಪರಿಸ್ಥಿತಿಯನ್ನು ಒಂದು ಹತೋಟಿಗೆ ತಂದರು ಅಂತ ಹೇಳಿದರೆ ನಿಜವಾಗಿಯೂ ನಾನು ವೈಯುಕ್ತಿತವಾಗಿ ನನ್ನ ಪರವಾಗಿ ಸರ್ಕಾರದ ಪರವಾಗಿ ನಮ್ಮ ಅಧಿಕಾರಿಗಳನ್ನು ನಾನು ಅಭಿನಂದಿಸುತ್ತೇನೆ. ಇದು ಒಂದು ತರಹ ಕ್ಲಿಷ್ಟ

ಪರಿಸ್ಥಿತಿಯನ್ನು ತಂದಿತ್ತು. ಆ ಪರಿಸ್ಥಿತಿಯಲ್ಲಿ ಅವರು ಧೃತಿಗೆಡದೆ ಧೈರ್ಯದಿಂದ ಈ ಒಂದು ಕಾರ್ಯಕ್ರಮವನ್ನು ಹಾಕಿ ಈ ಒಂದು ತಾಂತ್ರಿಕವಾದಂತಹ ಸಮಸ್ಯೆಗಳನ್ನು ರೈತರಿಗೆ ಇಂಪ್ಲಿಮೆಂಟ್ ಮಾಡಿಕೊಳ್ಳಲು ಅನುಕೂಲವಾಗುವ ಹಾಗೆ ಒಂದು ರೀತಿಯಾಗಿ ರೈತರ ಮನ ಒಲಿಸಿ ಒಳ್ಳೆಯ ಫಲಿತಾಂಶವನ್ನು ನಮ್ಮ ರಾಜ್ಯಕ್ಕೆ ತಂದುಕೊಟ್ಟಿದ್ದಾರೆ. ಇವತ್ತು ರೇಷ್ಮೆ ಕೃಷಿ ಬಗ್ಗೆ ಉತ್ತಮವಾದ ಒಂದು ಸಾಧನೆಯನ್ನು ಅವರು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಸಹ ಹೇಳಿ ಇಷ್ಟಾದರೂ ಸಹ ಬಹುಶಃ ಇವತ್ತು ಇರತಕ್ಕಂಥ ಪರಿಸ್ಥಿತಿಯಲ್ಲಿ ರೋಗ ತಡೆಗಟ್ಟತಕ್ಕಂಥ ಕೆಲಸ ಸಾಲದು. ಇದಕ್ಕೆ ಬಹಳ ವ್ಯಾಪಕವಾಗಿ ಯೋಜನೆಗಳನ್ನು ಹಾಕಿಕೊಳ್ಳಬೇಕು. ಆ ಹಿನ್ನೆಲೆಯಲ್ಲಿ ಈ ಇಲಾಖೆ ಚೆನ್ನಾಗಿ ಕೆಲಸ ಮಾಡಬೇಕು

೭.೨೫ ಪಿ. ಎಂ.

ಎನ್ನತಕ್ಕಂಥ ದಿಸೆಯಲ್ಲಿ ಸನ್ಮಾನ್ಯ ಎಲ್ಲಾ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲೂ ವಿಶೇಷವಾಗಿ ಸನ್ಮಾನ್ಯ ರಾಜುಗೌಡರು ಈ ಒಂದು ರೇಷ್ಮೆ ಇಲಾಖೆ ಬಗ್ಗೆ ಎಲ್ಲಾ ವಿಚಾರಗಳನ್ನು ಎಲ್ಲಾ ಆಸ್ಪೆಕ್ಟ್ಸ್‌ಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಬಹುಶಃ ವಿಶ್ವ ಬ್ಯಾಂಕಿನ ನೆರವಿನಿಂದ ತಂದಂತಹ ಹಣದಲ್ಲಿ ನಮ್ಮ ಗುರಿ ಏನು ಇತ್ತು, ನಮ್ಮ ಟಾರ್ಗೆಟ್ ಏನಿದೆ ಅದರ ಪ್ರಕಾರ ಸಾಧನೆ ಆಗಿಲ್ಲ ಎನ್ನತಕ್ಕಂಥ ಒಂದು ಮಾತನ್ನು ಅವರು ಪ್ರಸ್ತಾಪ ಮಾಡಿದ್ದರು. ಇವತ್ತು ಏನು ವಿಶ್ವ ಬ್ಯಾಂಕಿನ ನೆರವಿನಿಂದ ಹಣ ಪಡೆದುಕೊಂಡು ರಾಜ್ಯದಲ್ಲಿ ಒಂದು ರೇಷ್ಮೆ ಕೃಷಿ ಅಭಿವೃದ್ಧಿ ಮಾಡುವಂತಹ ಕಾರ್ಯಕ್ರಮ ಹಾಕಿಕೊಂಡಿದ್ದೇವೆ, ಬಹುಶಃ ಆ ಒಂದು ವಿಚಾರದಲ್ಲಿ ಬೈವೋಲ್ಟೀನ್ ತಳಿ ಇಲ್ಲಿ ತಂದು ಅದರಲ್ಲಿ ಒಂದು ಸಾವಿರ ಕೋಟಿ ಟನ್ ರೇಷ್ಮೆಯನ್ನು ಉತ್ಪತ್ತಿ ಮಾಡಬೇಕು ಎನ್ನತಕ್ಕಂಥ ಒಂದು ಗುರಿ ಇತ್ತು, ಅದರ ಒಂದು ಸುಧಾರಣೆಯಲ್ಲಿ ನಾವು ಸ್ವಲ್ಪ ಮಟ್ಟಿಗೆ ವಿಫಲವಾಗಿದ್ದೇವೆ. ಆದರೂ ಸಹ ಮತ್ತೊಂದು ರೀತಿಯಲ್ಲಿ ಒಂದು ಉತ್ತಮವಾಗಿ ಬೈವೋಲ್ಟೀನ್ ತಳಿ ಅಭಿವೃದ್ಧಿಯನ್ನು ಉಪಯೋಗ ಮಾಡಿಕೊಂಡು ನಮ್ಮ ಸ್ಥಳೀಯ ಮೈಸೂರು ಬಿತ್ತನೆ ಗೂಡಿನ ಜೊತೆಯಲ್ಲಿ ಸಂಕೀರ್ಣ ಮಾಡಿ ಉತ್ತಮವಾಗಿ ತಳಿ ಅಭಿವೃದ್ಧಿ ಜೊತೆಯಲ್ಲಿ ಮಿಶ್ರತಳಿ ಗೂಡನ್ನು ಬೆಳೆಯತಕ್ಕಂಥ ಒಂದು ಯೋಜನೆ ಮುಖಾಂತರ ಹೆಚ್ಚು ಇಳುವಳಿ ಬರತಕ್ಕಂಥ ಒಂದು ಯೋಜನೆಯನ್ನು ನಾವು ಮಾಡಿದ್ದೇವೆ. ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಒಂದು ಮಿಶ್ರತಳಿ ಅಭಿವೃದ್ಧಿ ತಳಿ ಇದೆ ಬೈವೋಲ್ಟೀನ್ ಮತ್ತು ಮೈಸೂರು ತಳಿ ಸಂಕೀರ್ಣದಿಂದ ಬರತಕ್ಕಂಥ ತಳಿ ಉತ್ಪತ್ತಿ ಒಳ್ಳೆಯ ರೀತಿಯಲ್ಲಿ ಬರುತ್ತಿದೆ. ಇವತ್ತು ಬಹುಶಃ ಇತ್ತೀಚೆಗೆ ನಾವು ರೋಗ ನಿಯಂತ್ರಣ ಮಾಡತಕ್ಕಂಥ ಒಂದು ಕಾರ್ಯಕ್ರಮದ ಜೊತೆಗೆ ಸಾಮಾನ್ಯವಾಗಿ ಈ ವ್ಯವಸಾಯಕ್ಕೆ ಒತ್ತು ಕೊಟ್ಟು ಕಲ್ಟಿವೇಷನ್ ಬಗ್ಗೆ ಟೆಕ್ನಿಕಲ್ ಆಗಿ ನಾವು ಅಡ್ವೈಸ್ ಕೊಟ್ಟು ಬೇಕಾದಂತಹ ವೈಜ್ಞಾನಿಕ ರೀತಿಯಲ್ಲಿ ಕೆಲಸ ಮಾಡಬೇಕು ಎನ್ನತಕ್ಕಂಥ ಸಲಹೆಯನ್ನು ಕೊಟ್ಟಿದ್ದೇವೆ. ಆ ಸಲಹೆ ದಿಶೆಯಿಂದ ಮತ್ತೆ ಈ ಒಂದು ಫಲಿತಾಂಶದಿಂದ ಇತ್ತೀಚೆಗೆ ಒಂದು ಇಳುವರಿ ಜಾಸ್ತಿಯಾಗಿದೆ. ೧೦೦ ಮೊಟ್ಟೆ ಅಂದಾಜು ಅಂತ ಹೇಳಿದರೆ ಇವತ್ತು ಅದಕ್ಕೆ ೩೫-೪೦ ಕೆ. ಜಿ. ಬರತಕ್ಕಂಥ ಉತ್ಪತ್ತಿ ಇತ್ತು. ಆದರೆ ಇವತ್ತು ೫೦-೬೦ ಕೆ. ಜಿ. ಬರುತ್ತಿದೆ. ಅನೇಕ ಉತ್ತಮವಾದಂತಹ ಬೆಳೆಗೆ ಒತ್ತು ಕೊಟ್ಟು ಮಾಡತಕ್ಕಂಥ ರೈತರು ೭೦-೮೦ ಕೆ. ಜಿ. ಇಳುವರಿ ತರತಕ್ಕಂಥ ಹಂತಕ್ಕೆ ಹೋಗಿದ್ದಾರೆ. ಅದೇ ರೀತಿಯಲ್ಲಿ ಬಹುಶಃ ಇಲಾಖೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಬಿತ್ತನೆ ಪ್ರದೇಶದಲ್ಲಿ ಒತ್ತು ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಇವತ್ತು ಬಿತ್ತನೆ ಪ್ರದೇಶದಲ್ಲಿರತಕ್ಕಂಥ ಪರಿಸ್ಥಿತಿ ಇನ್ನಷ್ಟು ಬಲಪಡಿಸಬೇಕೆಂದು ವಿಶೇಷವಾಗಿ ಸುಮಾರು ೧೧

ಕೋಟಿ ೧೯ ಲಕ್ಷ ಯೋಜನೆ ನಿರೂಪಣೆ ಮಾಡಿದ್ದೇವೆ. ಸ್ಥಳೀಯವಾಗಿ ಬಿತ್ತನೆ ಪ್ರದೇಶದಲ್ಲಿರತಕ್ಕಂಥ ರೈತರು ಅವರಿಗೆ ಬೇಕಾಗುವಂತಹ ಹುಳು ಸಾಕಾಣಿಕೆಗೆ ಮನೆ ಕಟ್ಟಲಿಕ್ಕೆ ಸಾಮಗ್ರಿಗಳಿಗೆ ನೆರವು ಕೊಡಲಿಕ್ಕೆ ವಿಶೇಷವಾಗಿ ನೀರಾವರಿ ಒಂದು ಸಲಹೆ ಒದಗಿಸಲಿಕ್ಕೆ ಸುಮಾರು ೧೧.೧೯ ಲಕ್ಷ ರೂಪಾಯಿಗಳ ಸ್ಕೀಂ ಅನ್ನು ನಿರೂಪಣೆ ಮಾಡಿದ್ದೇವೆ. ಅದನ್ನು ನಬಾರ್ಡ್‌ನ ಮಂಜೂರಾತಿಗೆ ಕಳುಹಿಸಿದ್ದೇವೆ. ಈಗಾಗಲೇ ಸುಮಾರು ೧ ಕೋಟಿ ೨೪ ಲಕ್ಷ ರೂಪಾಯಿಗಳನ್ನು ಈ ಮಾರ್ಚ್ ೩೧ನೇ ತಾರೀಖು ಒಳಗೆ ಖರ್ಚು ಮಾಡತಕ್ಕಂಥ ಒಂದು ಅನುಮತಿಯನ್ನು ಸಹಾ ನಾಬಾರ್ಡನವರು ಕೊಟ್ಟಿದ್ದಾರೆ. ಮುಂಬರುವ ಎರಡು ವರ್ಷಗಳಲ್ಲಿ ಈಗಾಗಲೇ ೧೦ ಕೋಟಿ ರೂಪಾಯಿ ಹಣವನ್ನು ವಿಶೇಷವಾಗಿ ಬಿತ್ತನೆ ಪ್ರದೇಶದ ರೈತರ ಒಂದು ಅಭಿವೃದ್ಧಿಗೋಸ್ಕರ ಖರ್ಚು ಮಾಡತಕ್ಕಂಥ ಒಂದು ಯೋಜನೆಯನ್ನು ನಿರೂಪಣೆ ಮಾಡಿದ್ದೇವೆ. ಇದರ ಜೊತೆಗೆ ಮತ್ತೆ ಬಿತ್ತನೆ ಪ್ರದೇಶದಲ್ಲಿ ಸಹ ನಾವು ಒಂದು ಹೊಸ ಯೋಜನೆಯನ್ನು ನಿರೂಪಣೆ ಮಾಡಿ ವಿಶ್ವ ಬ್ಯಾಂಕ್‌ನ ಒಂದು ಅನುಮತಿಗಾಗಿ ಕಳುಹಿಸಿಕೊಟ್ಟಿದ್ದೇವೆ. ಸುಮಾರು ೮೪೩ ಲಕ್ಷ ರೂಪಾಯಿ ವೆಚ್ಚದಲ್ಲಿ ಅನೇಕ ತರವಾದಂತ ಅಭಿವೃದ್ಧಿ ಕೆಲಸಗಳನ್ನು ಅಲ್ಲಿರತಕ್ಕಂಥ ಮೂಲ ಬಿತ್ತನೆ, ಏನು ಗ್ರೈನೇಜ್ ಇದೆ? ಅದರ ಜೊತೆಗೆ ೨೦ ಚಾಕಿ ಸೆಂಟರ್‌ಗಳನ್ನು ಮತ್ತು ಗೂಡಿನ ಮಾರುಕಟ್ಟೆಗಳನ್ನು, ಅಲ್ಲಿರತಕ್ಕಂಥ ಪಿ-೩ ಬೈಫಾರಂ ಎಂದು ಹೇಳಿ ಏನು ಫಾರಂಗಳು ಇವೆ, ಅವನ್ನು ಅಭಿವೃದ್ಧಿ ಪಡಿಸತಕ್ಕಂಥ ಕೆಲಸಕ್ಕೆ ಸುಮಾರು ೮೪೩ ಲಕ್ಷ ರೂಪಾಯಿ ವೆಚ್ಚದ ಒಂದು ಯೋಜನೆಯನ್ನು ಮಂಜೂರು ಮಾಡುವುದಕ್ಕೆ ನಾವು ನಬಾರ್ಡ್‌ಗೆ ಕಳುಹಿಸಿಕೊಟ್ಟಿದ್ದೇವೆ. ಅದು ಬಹುಶಃ ಮಂಜೂರು ಆಗತಕ್ಕಂಥ ಪರಿಸ್ಥಿತಿಯಲ್ಲಿದೆ. ಇದರ ಜೊತೆಗೆ ಅನೇಕತ ಹೊಸ ಯೋಜನೆಗಳನ್ನು ಈ ಒಂದು ಇಲಾಖೆಯಲ್ಲಿ ಹಾಕಿಕೊಂಡಿದ್ದೇವೆ. ನಮ್ಮ ಪುರಾತನವಾದಂಥ ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ ಮತ್ತು ಮೈಸೂರು ಜಿಲ್ಲೆಗಳನ್ನು ಬಿಟ್ಟು ಹೊಸ ಪ್ರದೇಶದಲ್ಲಿ ಈ ಒಂದು ರೇಷ್ಮೆ ಅಭಿವೃದ್ಧಿ ಬಗ್ಗೆ ಅನೇಕ ತರವಾದಂಥ ಸವಲತ್ತುಗಳನ್ನು ಕೊಟ್ಟು ಉತ್ತೇಜನ ಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಸಹ ನಾವು ಹಾಕಿಕೊಂಡಿದ್ದೇವೆ. ಆ ಹೊಸ ಪ್ರದೇಶದಲ್ಲಿ ಬೆಳೆಯತಕ್ಕಂಥ ಗೂಡಿಗೆ ಒಂದು ಕೆ.ಜಿ.ಗೆ ೫ ರೂಪಾಯಿ ಉತ್ತೇಜನ ಧನ ಕೊಡತಕ್ಕಂಥಾದ್ದು, ಆ ಪ್ರದೇಶದಲ್ಲಿ ರೇಷ್ಮೆ ಉತ್ಪನ್ನ ಮಾಡಿದ ಒಂದು ಕೆ. ಜಿ. ರೇಷ್ಮೆಗೆ ೫೦ ರೂಪಾಯಿ ಉತ್ತೇಜನ ಧನ ಕೊಡತಕ್ಕಂಥಾದ್ದು, ಆ ಪ್ರದೇಶದಲ್ಲಿರತಕ್ಕಂಥ ರೈತರನ್ನು ಈ ರೇಷ್ಮೆ ಕೃಷಿಯಲ್ಲಿ ಹೆಚ್ಚಿನ ರೀತಿಯಲ್ಲಿ ಆಳವಡಿಸಿಕೊಳ್ಳುವ ದಿಸೆಯಲ್ಲಿ ಆ ಒಂದು ಕೃಷಿಯನ್ನು ಹೆಚ್ಚಿಗೆ ಮಾಡುವ ದಿಸೆಯಲ್ಲಿ ಅವರಿಗೆ ಟ್ರೈನಿಂಗ್ ಕೊಡತಕ್ಕಂಥ ಕೆಲಸವನ್ನೂ ಸಹ ನಾವು ಮಾಡಿದ್ದೇವೆ. ಈ ವರ್ಷದ ಅಂತ್ಯದವರೆಗೆ ೫೪೬೭ ರೈತರಿಗೆ ಸುಮಾರು ೨೬೮೨೫ ಮಹಿಳೆಯರಿಗೆ ನಾವು ತರಬೇತಿಯನ್ನು ಈ ಒಂದು ಯೋಜನೆಯ ಅಡಿಯಲ್ಲಿ ಕೊಟ್ಟಿದ್ದೇವೆ. ಮೊನ್ನೆ ಮತ್ತೆ ೩೦ ಸಾವಿರ ರೈತ ಮಹಿಳೆಯರಿಗೆ ತರಬೇತಿ ಕೊಡತಕ್ಕಂಥ ಕೆಲಸವನ್ನೂ ಸಹ ನಾವು ಮಾಡುತ್ತಿದ್ದೇವೆ. ಇದರ ಜೊತೆಗೆ ವಿಶೇಷವಾಗಿ ನಮ್ಮ ರೇಷ್ಮೆ ಕೃಷಿಯಲ್ಲಿ ಇರತಕ್ಕಂಥವರು ಕಡು ಬಡವರು, ಮಧ್ಯಮ ವರ್ಗದವರು, ಹರಿಜನ ಗಿರಿಜನರ ಒಂದು ವಿಶೇಷ ಕಲ್ಯಾಣಕ್ಕಾಗಿ ರೇಷ್ಮೆ ಕೃಷಿಯಲ್ಲಿ ಅವರನ್ನು ವಿಶೇಷವಾಗಿ ತೊಡಗಿಸುವ ಒಂದು ಹಿನ್ನಲೆಯಲ್ಲಿ ಈ ಒಂದು ವಿಶೇಷ ಘಟಕ ಯೋಜನೆ ಮುಖಾಂತರ ಸುಮಾರು ೧೯೮೮-೮೯ರಲ್ಲಿ ಕೇವಲ ೬೩ ಲಕ್ಷ ೫೭ ಸಾವಿರ ರೂಪಾಯಿಗಳನ್ನು ಇಟ್ಟಿದ್ದೆವು. ೧೯೮೯-೯೦ರಲ್ಲಿ ೫೬ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೆವು. ೯೦-೯೧ಕ್ಕೆ ೮೯.೬೦ ಲಕ್ಷ ಇಟ್ಟಿದ್ದೆವು. ೯೧-೯೨ರಲ್ಲಿ ೧೮೩.೫೪ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೆವು. ಅದೇ ಮುಂಬರುವ ೯೨-

೯೩ನೇ ಸಾಲಿನಲ್ಲಿ ಸುಮಾರು ೨೯೭.೫೮ ಲಕ್ಷ ರೂಪಾಯಿಗಳನ್ನು ಇಟ್ಟು ಅವರನ್ನು, ವಿಶೇಷವಾಗಿ ಬಡವರನ್ನು ಈ ಕೃಷಿಯಲ್ಲಿ ಆಕರ್ಷಣೆ ಮಾಡುವ ದಿಶೆಯಲ್ಲಿ ಹೆಚ್ಚಿನ ಹಣವನ್ನು ಕೊಡತಕ್ಕಂಥ ಕೆಲಸವನ್ನು ಸಹ ಈ ಸಂದರ್ಭದಲ್ಲಿ ಮಾಡಿದ್ದೇವೆ. ಜೊತೆಗೆ ಈ ಒಂದು ಕೃಷಿಯಲ್ಲಿ ವಿಶೇಷವಾಗಿ ಎರಡನೇ ಹಂತದ ರಾಷ್ಟ್ರೀಯ ಕೃಷಿ ಯೋಜನೆಯನ್ನು ಜಾರಿಗೆ ತೆಗೆದುಕೊಂಡು ಬಂದಿದ್ದೇವೆ. ಈ ಒಂದು ಎರಡನೇ ರೇಷ್ಮೆ ಕೃಷಿ ಯೋಜನೆ ಏನಿದೆ ಕರ್ನಾಟಕದ ಯೋಜನಾ ಅಡಿಯಲ್ಲಿ, ಸುಮಾರು ೧೧೮ ಲಕ್ಷ ರೂಪಾಯಿಗಳನ್ನು ನಾನು ೭ ವರ್ಷಗಳ ಅವಧಿಯಲ್ಲಿ ಖರ್ಚು ಮಾಡತಕ್ಕಂಥ ಒಂದು ಯೋಜನೆಯನ್ನು ನಿರೂಪಣೆ ಮಾಡಿದ್ದೇವೆ. ಅದರಲ್ಲಿ ವಿಶೇಷವಾಗಿ ಈ ರೈತರಿಗೆ, ಹುಳು ಸಾಕಾಣೆ ಮನೆಗಳನ್ನು ಕಟ್ಟಲು ಜೊತೆಗೆ ನೀರಾವರಿ ಬಾವಿಗಳನ್ನು ತೋಡಲು ಮತ್ತು ಅದಕ್ಕೆ ವೈಜ್ಞಾನಿಕವಾದಂಥ, ರೋಗರಹಿತವಾದ ಮೊಟ್ಟೆಗಳನ್ನು ಒದಗಿಸಿಕೊಡಲು ಸುಮಾರು ೪೧.೩ ಕೋಟಿ ರೂಪಾಯಿಗಳನ್ನು ನಾವು ನಿಗದಿ ಮಾಡಿದ್ದೇವೆ. ಇದಕ್ಕೆ ವಿಶೇಷವಾಗಿ ಇದೇ ಯೋಜನೆಯಲ್ಲಿ ಇವತ್ತು ಏನು ಖಾಸಗಿಯವರು ಈ ರೇಷ್ಮೆ ಮೊಟ್ಟೆಯ ಬಿತ್ತನೆಯ ಬೀಜವನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅವರ ಖಾಸಗಿ ಎಲ್. ಎಸ್. ಪಿ ಗಳಿಗೆ ಬೇಕಾದಂಥ ಸ್ವಚ್ಛವಾದಂಥ ಕಟ್ಟಡಗಳು ಕಟ್ಟಲು, ಅವರಿಗೆ ಕನಿಷ್ಠವಾಗಿ ಬೇಕಾದಂತ ಸಲಕರಣೆಗಳನ್ನು ಕೊಂಡು ಕೊಳ್ಳಲು ಸುಮಾರು ೨ ಕೋಟಿ ೨ ಲಕ್ಷ ರೂಪಾಯಿಗಳನ್ನು ಇದರಲ್ಲಿ ನಿಗದಿ ಮಾಡಿದ್ದೇವೆ. ಇದರ ಜೊತೆಗೆ ಹೊಸ ಪ್ರದೇಶದಲ್ಲಿ ಹಾಗೂ ಇರತಕ್ಕಂಥ ಟ್ರೆಡಿಷನ್ ಏರಿಯಾದಲ್ಲೂ ಇವತ್ತು ಏನು ರೀಲಿಂಗ್ ಟೆಕ್ನಾಲಜಿ ಇದೆ ಅದನ್ನು ಡೆವಲಪ್ ಮಾಡಬೇಕು. ಅದಕ್ಕೆ ಹೆಚ್ಚು ಒತ್ತು ಕೊಟ್ಟು ಇನ್ನೂ ಹೊಸ ಹೊಸ ರೀತಿಯ ಮಲ್ಟಿ ಎಂಡ್ ಸಿಸ್ಟಂನ್ನು ಅನುಸರಿಸತಕ್ಕಂಥ ದಿಸೆಯಲ್ಲಿ ತಮಗೆ ಬೇಕಾದಂಥ ಒಂದು ಸಾಲ ಸೌಲಭ್ಯಗಳ ಬಗ್ಗೆ ಸುಮಾರು ೯.೭ ಕೋಟಿ ರೂಪಾಯಿಗಳನ್ನು ನಾವು ಈ ಒಂದು ಯೋಜನೆಯಲ್ಲಿ ಸೇರಿಸಿಕೊಂಡಿದ್ದೇವೆ. ಇದೇ ರೀತಿಯಲ್ಲಿ ಇನ್ನೂ ಅನೇಕ ವಿಧವಾದಂಥ ಹೊಸ ಯೋಜನೆಗಳನ್ನು ನಾವು ಹಾಕುತ್ತಾ ಇದ್ದೇವೆ. ತಾಂತ್ರಿಕವಾದಂಥ ಸಲಹೆಗಳನ್ನು ಕೊಡುವ ದಿಸೆಯಲ್ಲಿ ಹೆಚ್ಚಿನ ಮಟ್ಟಿಗೆ ಮಹಿಳೆಯರಿಗೆ ಈ ಹುಳು ಸಾಕಾಣಿಕೆ ವ್ಯವಸ್ಥೆಗೆ ನೂಲು ಬಿಚ್ಚ ತಕ್ಕಂಥ ಕೆಲಸಕ್ಕೆ ಹಾಗೂ ಟ್ವಿಸ್ಟಿಂಗ್ ಮಾಡತಕ್ಕಂಥ ಕೆಲಸಗಳಿಗೆ ಅವರನ್ನು ಟ್ರೈನಿಂಗ್ ಮಾಡಬೇಕೆಂದು ಈ ದಿಸೆಯಲ್ಲಿ ಸರಕಾರದವರು ವಿಶೇಷವಾದಂಥ ಹಣವನ್ನು ಇಟ್ಟು ಮಹಿಳೆಯರನ್ನು ಕೂಡ ಈ ಕೆಲಸದಲ್ಲಿ ತೊಡಗಿಸಲು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ವಿಶ್ವ ಬ್ಯಾಂಕ್‌ನ ಧನಸಹಾಯದಿಂದ ಮಾದರಿ ರೇಷ್ಮೆ ಬಿತ್ತನೆ ಕೋಠಿಗಳು ಎಂದು ೧೦ ಬಿತ್ತನೆ ಕೋಠಿಗಳನ್ನು ಕಟ್ಟಿದರು. ಅದರಲ್ಲಿ ಬಹಳ ಮುಖ್ಯವಾಗಿ ಬೇಕಾದಂಥ ಎಲ್ಲಾ ಸವಲತ್ತುಗಳನ್ನು ಕೊಟ್ಟು ಮಾದರಿ ಕೋಠಿಗಳನ್ನು ನಿರ್ಮಾಣ ಮಾಡಿದ್ದಾರೆ, ಆ ಒಂದು ಕಾರ್ಯಕ್ರಮ ಮುಂಬರುವ ೧೯೯೩-೯೪ನೇ ಸಾಲಿನಿಂದ ಒಂದೊಂದು ಮಾದರಿ ಕೇಂದ್ರಕ್ಕೆ ೧೨ ಲಕ್ಷ ರೂಪಾಯಿಗಳ ಬಂಡವಾಳವನ್ನು ಅವರು ಕೊಟ್ಟು ಅವರದ್ದೇ ಆದಂಥ ಆದಾಯವನ್ನು ಅವರು ಉತ್ಪಾದನೆ ಮಾಡಬೇಕು ಎಂದು ಏನು ನಾವು ಗುರಿಯನ್ನು ನಿಗದಿ ಮಾಡಿದ್ದೇವೆ ಅದಕ್ಕೆ ತಕ್ಕ ಹಾಗೆ ಅವರು ಉತ್ಪಾದನೆಯನ್ನು ಮಾಡಿ ತೋರಿಸಬೇಕು ಎಂಬ ಒಂದು ಜವಾಬ್ದಾರಿಯನ್ನು ಹಾಕಿ ಪ್ರತಿಯೊಂದು ಗ್ರೈನೇಜ್‌ಗೂ ೧೨ ಲಕ್ಷ ರೂಪಾಯಿಗಳನ್ನು ಕೊಟ್ಟು ಉತ್ಪಾದನೆ ಮಾಡತಕ್ಕಂಥ ಒಂದು ಕೆಲಸಕ್ಕೆ ಅವರಿಗೆ ಜವಾಬ್ದಾರಿ ಕೊಟ್ಟು ಅದನ್ನು ಅವರೇ ನಿರ್ವಹಿಸತಕ್ಕಂಥ ಒಂದು ಕೆಲಸವನ್ನು ಮಾಡಿದ್ದೇವೆ. ಬರತಕ್ಕಂಥ ಆದಾಯದಲ್ಲಿಯೇ ಅವರು ತಮ್ಮ ಖರ್ಚುವೆಚ್ಚಗಳನ್ನು ಕೂಡ ನಿರ್ವಹಿಸಿಕೊಳ್ಳಬೇಕೆಂಬ ಜವಾಬ್ದಾರಿಯನ್ನು ಕೂಡ ಅವರಿಗೆ ಕೊಟ್ಟಿದ್ದೇವೆ. ಇದರ ಜೊತೆಗೆ ಇಲಾಖೆಯಲ್ಲಿ ಬೆಲೆ ಸ್ಥಿರೀಕರಣ ನಿಧಿ ಎಂದು ಇದೆ. ೧೯೯೪ರಿಂದ

ಇದು ಆಗಿದ್ದು ಈ ಬಗ್ಗೆ ಮಾನ್ಯ ಸದಸ್ಯರುಗಳು ಸಾಕಷ್ಟು ಬೆಳಕನ್ನು ಕೂಡ ಚೆಲ್ಲಿದ್ದಾರೆ. ಬೆಲೆ ಸ್ಥಿರೀಕರಣ ನಿಧಿಯು ಇಲಾಖೆಯನ್ನು ಅಭಿವೃದ್ಧಿ ಪಡಿಸುವ ದಿಕ್ಕಿನಲ್ಲಿ ಪ್ರೈಸಸ್ ಫ್ಲಕ್ಚುಯೇಷನ್ ಅನ್ನೂ ಸ್ಥಿರದಲ್ಲಿಡಬೇಕೆಂಬ ಒಂದು ಉದ್ದೇಶದಿಂದ ಈ ಹಣವನ್ನು ನಿಗದಿ ಮಾಡಿ ಇಟ್ಟಿದ್ದಾರೆ, ಇದರ ಮೂಲಕ ಈ ಇಲಾಖೆಯನ್ನು ಅಭಿವೃದ್ಧಿ ಮಾಡಲು ಮತ್ತು ರೇಷ್ಮೆ ಮಾರಾಟ ಮಂಡಳಿಯ ಮುಖಾಂತರ ಬೆಲೆಯನ್ನು ಸ್ಥಿಮಿತವಾದ ರೀತಿಯಲ್ಲಿ ಇಡಬೇಕೆಂಬ ದಿಶೆಯಲ್ಲಿ ನಾವು ಈ ಹಣವನ್ನು ಉಪಯೋಗ ಮಾಡುತ್ತಾ ಇದ್ದೇವೆ ಎಂಬ ಒಂದು ಮಾತನ್ನು ಹೇಳ ಬಯಸುತ್ತೇನೆ.

೧೯೯೩-೯೪ರಲ್ಲಿ ಹುಳ ಸಾಕಾಣಿಕೆ ಮನೆಗಳ ಬಗ್ಗೆ ಅನೇಕ ಸದಸ್ಯರುಗಳು ಹೇಳಿದ್ದಾರೆ. ರೇಷ್ಮೆಗೆ ಬರುವ ರೋಗಗಳನ್ನು ತಪ್ಪಗಟ್ಟಬೇಕಾದರೆ, ಇವತ್ತು ಪ್ರತ್ಯೇಕವಾದಂಥ ಹುಳು ಸಾಕಾಣಿಕೆ ಮನೆಗಳು ಇರಲೇ ಬೇಕಾಗುತ್ತದೆ. ಅದಿಲ್ಲದಿದ್ದರೆ ರೋಗ ನಿಯಂತ್ರಣ ಕಾರ್ಯವು ಬಹಳ ಕಷ್ಟವಾಗುತ್ತದೆ ಎಂಬ ಒಂದು ಸಲಹೆಯನ್ನು ಸದಸ್ಯರುಗಳು ಕೊಟ್ಟಿದ್ದಾರೆ. ಅದರ ಬಗ್ಗೆ ಇಲಾಖೆಯು ತೀವ್ರವಾಗಿ ಚಿಂತನೆ ಮಾಡಿ, ಬೆಲೆ ಸ್ಥಿರೀಕರಣ ನಿಧಿಯಿಂದ ಮುಂಬರುವ ೧೯೯೩-೯೪ನೇ ಸಾಲಿನಲ್ಲಿ ಮಿಶ್ರತಳಿ ಪ್ರದೇಶದಲ್ಲಿರತಕ್ಕಂಥ ಎಲ್ಲಾ ರೈತರುಗಳಿಗೂ ಸಹ ಈ ಮನೆ ಕಟ್ಟಲು ಉತ್ತೇಜಕವಾಗಿ ಇನ್‌ಸೆಂಟಿವ್ಸ್ ಕೊಡತಕ್ಕಂಥದ್ದು ಜೊತೆಗೆ ತುಂತುರು ನೀರಾವರಿ ಯೋಜನೆಗೆ ನಾವು ಉತ್ತೇಜನಕರವಾಗಿ ಹಣ ಕೊಡತಕ್ಕಂಥ ಕಾರ್ಯಕ್ರಮವನ್ನು ೧೯೯.೩-೯೪ರಲ್ಲಿ ಹಾಕಿಕೊಂಡಿದ್ದೇವೆ ಅದರ ಜೊತೆಗೆ ಇವೊತ್ತು ರಾಜ್ಯದಲ್ಲಿ ಗೂಡಿನ ಉತ್ಪನ್ನವು ಜಾಸ್ತಿಯಾಗಿದೆ, ಇಂತಹ ಸಂದರ್ಭದಲ್ಲಿ ಬೆಲೆಗಳು ಸಹ ಬಹಳಷ್ಟು ಕಡಿಮೆಯಾಗಿವೆ. ಇದರ ಬಗ್ಗೆ ನಾವು ಈಗಾಗಲೇ ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಇವೊತ್ತು ನಮ್ಮ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನಿಂದ ಸುಮಾರು ಹದಿನಾರೂವರೆ ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ೧೯೦ ಟನ್‌ಗಳಷ್ಟು ರೇಷ್ಮೆಯನ್ನು ನಾವು ದಾಸ್ತಾನು ಮಾಡಿದ್ದೇವೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಏನು ಬೆಲೆ ಕೆಳಗೆ ಹೋಗುತ್ತಾ ಇದೆ ಅದನ್ನು ಸಾಕಷ್ಟು ಸ್ಥಿರತೆಯಲ್ಲಿ ಇಡುವುದಕ್ಕೆ ಈಗಾಗಲೆ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ನಮ್ಮ ರಾಜ್ಯದಲ್ಲಿ ಕರ್ನಾಟಕ ರೇಷ್ಮೆ ತಳಿ ಅಭಿವೃದ್ಧಿ ಸಂಸ್ಥೆಯೂ ಇದೆ. ಅಲ್ಲಿ ಅನೇಕ ತರವಾದಂಥ ಹಿಪ್ಪುನೇರಳೆಯ ಹೊಸ ತಳಿಗಳನ್ನು ಕಂಡು ಹಿಡಿಯತಕ್ಕಂತಹ ಕೆಲಸವನ್ನು ಮಾಡುತ್ತಿದ್ದಾರೆ. ತಳಿಗಳಲ್ಲಿ ಇನ್ನೂ ಇಂಪ್ರೂವ್ಡ್ ವೆರೈಟೀಸ್‌ನ್ನು ಜಾರಿಗೆ ತರುವ ಬಗ್ಗೆ ಅವರು ಅಧ್ಯಯನ ಮಾಡುತ್ತಾ ಇದ್ದಾರೆ. ಅದರ ಮುಖಾಂತರ ಒಳ್ಳೆಯ ಹೈಬ್ರಿಡ್ ವೆರೈಟೀಸ್ ಜಾರಿಗೆ ತಂದು ರೈತರಿಗೆ ಕೊಡಲು ಸಂಸ್ಥೆಯವರು ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇತ್ತೀಚೆಗೆ ಅವರು ಹೊಸ ಪದ್ಧತಿಯೊಂದನ್ನು ರೀಸರ್ಚ್ ಮಾಡಿ ಜಾರಿಯಲ್ಲಿ ತಂದಿದ್ದಾರೆ. ಅದರಿಂದ ಒಳ್ಳೆಯ ಫಲಿತಾಂಶವು ರಾಜ್ಯದಲ್ಲಿ ಬರುತ್ತಾ ಇದೆ. ಪ್ರತಿಯೊಬ್ಬ ರೈತರು ತಾವಾಗಿಯೇ ಹೋಗಿ ನೋಡಿ, ಸಂಸ್ಥೆಯ ಮೂಲಕ ಡೆಮಾನ್‌ಸ್ಟ್ರೇಷನ್ಸ್ ಎಲ್ಲಿ ಮಾಡುತ್ತಾ ಇದ್ದಾರೆ, ಅಲೆಲ್ಲಾ ತಾವಾಗಿಯೇ ಹೋಗಿ ನೋಡಿ ಇವೊತ್ತು ಅದನ್ನು ಅಳವಡಿಸಿಕೊಳ್ಳ ತಕ್ಕಂಥ ಕೆಲಸವನ್ನು ಅವರು ಮಾಡುತ್ತಾ ಇದ್ದಾರೆ. ಇದರ ಜೊತೆಗೆ ನಮ್ಮಲ್ಲಿ ಸಿಲ್ಕ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಇದೆ. ಅದು ಬಹುಶಃ ಅನೇಕ ವರ್ಷಗಳಿಂದ ಅನೇಕ ಕಾರಣಗಳಿಂದ ಸ್ವಲ್ಪ ಮಟ್ಟಿಗೆ ನಷ್ಟವನ್ನು ಅನುಭವಿಸುತ್ತಾ ಬಂದರೂ ೧೯೯೧-೯೨ರಲ್ಲಿ ಸಾಕಷ್ಟು ಕಡಿಮೆ ಪ್ರಮಾಣದಲ್ಲಿ ನಷ್ಟ ಮಾಡಿಕೊಂಡಿದೆ. ಮುಖ್ಯವಾಗಿ ಮಾನ್ಯ ಹಿರಿಯ ಸದಸ್ಯರಾದಂತಹ ರಾಜೂಗೌಡರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ವಿಶೇಷವಾಗಿ ಹೇಳಿರತಕ್ಕಂಥ ಸಲಹೆಗಳ ಪೈಕಿ ಬಹುಮುಖ್ಯವಾದುದು ಅಂದರೆ ಬೆಲೆ ಸ್ಥಿರೀಕರಣ

ನಿಧಿಯನ್ನು ಇಟ್ಟುಕೊಳ್ಳಬೇಕೆಂದು ಹೇಳಿದ್ದಾರೆ. ಆ ನಿಧಿಯ ಸಭೆ ಯಾವಾಗಲೂ ನಮ್ಮ ಅಭಿವೃದ್ಧಿ ಪ್ರಾಧಿಕಾರದಲ್ಲೇ ಆಗಬೇಕು ಅನ್ನ ತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಅದರ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದೇನೆ. ಆದಕ್ಕೆ ಅಮೆಂಡ್‌ಮೆಂಟ್ ಅನ್ನು ಸಪರೇಟ್ ಆಗಿ ತರತಕ್ಕಂಡ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಆ ಮೇಲೆ ಮತ್ತೊಂದು ಒಳ್ಳೆಯ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಮ್ಮ ಇಲಾಖೆಗೆ ಸಪರೇಟ್ ಡೈರೆಕ್ಟರೇಟ್ ಇಲ್ಲದಿದ್ದರೆ ನಮ್ಮ ಇಲಾಖೆ ಅಭಿವೃದ್ಧಿಯಾಗುವುದು ಕಷ್ಟವಾಗುತ್ತದೆಂದು ಹೇಳಿದ್ದಾರೆ. ಈ ದಿಸೆಯಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ತಮ್ಮದೇ ಆದಂತಹ ಗೈಡ್‌ಲೈನ್ಸ್ ಅನ್ನು ಅವರು ಹಾಕಿಕಳುಹಿಸಿದ್ದಾರೆ. ಮತ್ತೆ ಬಹು ಮುಖ್ಯವಾಗಿ ಇಂಪೋರ್ಟ್ ಪಾಲಿಸಿಯ ಬಗ್ಗೆ ಅವರು ಮಾತನಾಡಿದ್ದಾರೆ. ಇವತ್ತು ಏನು ಆಮದು ನೀತಿ ಇದೆ ಅದು ಸಂಪೂರ್ಣವಾಗಿ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರತಕ್ಕದ್ದು. ಆದರೆ ಏನು ಇವತ್ತು ಇಂಪೋರ್ಟ್ ಸಿಲ್ಕ್ ನಮ್ಮಲ್ಲಿ ಬರುತ್ತಿದೆ, ಆ ರೇಷ್ಮೆಯಿಂದ ನಮ್ಮ ಉತ್ಪಾದನೆಯ ಮೇಲೆ ಬಹಳಷ್ಟು ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಇವತ್ತು ವಿಶ್ವ ಬ್ಯಾಂಕ್ ಯೋಜನೆಯಿಂದ ಹಣವನ್ನು ತಂದು ಈ ಕ್ಷೇತ್ರವನ್ನು ಅಭಿವೃದ್ಧಿ ಮಾಡತಕ್ಕ ಪರಿಸ್ಥಿತಿಯಲ್ಲಿ ಹಾಗೂ ಉತ್ಪತ್ತಿ ಜಾಸ್ತಿ ಮಾಡುತ್ತಿರತಕ್ಕ ಪರಿಸ್ಥಿತಿಯಲ್ಲಿ ನಾವಿರುವಾಗ ಬೇರೆ ಕಡೆಯಿಂದ ನಾವು ರೇಷ್ಮೆಯನ್ನು ಆಮದು ಮಾಡಿಕೊಂಡರೆ ಖಂಡಿತ ನಮ್ಮ ಉತ್ಪನ್ನದ ಮೇಲೆ ಧಕ್ಕೆ ಆಗುತ್ತದೆ ಎನ್ನತಕ್ಕ ಹಿನ್ನೆಲೆಯಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಒಂದು ಮನವಿಯನ್ನು ಕಳುಹಿಸಿಕೊಡತಕ್ಕ ಕೆಲಸವನ್ನು ಮಾಡುತ್ತೇವೆ. ಈ ಬಗ್ಗೆ ಸನ್ಮಾನ್ಯ ಸದಸ್ಯರು ಏನು ಸಲಹೆ ಮಾಡಿದ್ದಾರೆ, ಅವರ ಸಲಹೆಯ ಮೇರೆಗೆ ಕೇಂದ್ರ ಸರ್ಕಾರಕ್ಕೆ ಮತ್ತೊಂದು ಮನವಿಯನ್ನು ಕಳುಹಿಸಿಕೊಡತಕ್ಕ ಕೆಲಸವನ್ನು ಮಾಡುತ್ತೇವೆ ಎನ್ನತಕ್ಕ ಭರವಸೆಯನ್ನು ಕೊಡುತ್ತೇನೆ. ಇವತ್ತು ಈ ಇಲಾಖೆಗೆ ಸಬಂಧಪಟ್ಟಹಾಗೆ ಇನ್ನೂ ಅನೇಕ ವಿಚಾರಗಳನ್ನು ಹೇಳುವುದಿದ್ದರೂ ಸಹ ಸಮಯದ ಅಭಾವದಿಂದ ನಾನು ಜಾಸ್ತಿ ಹೇಳುವುದಿಲ್ಲ. ಇವತ್ತು ನಮ್ಮ ಇಲಾಖೆಯ ಬೇಡಿಕೆಯ ಬಗ್ಗೆ ಎಲ್ಲಾ ಸದಸ್ಯರುಗಳು ಅನುಮೋದನೆಯನ್ನು ನೀಡಬೇಕೆಂದು ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ. ಬಸವಲಿಂಗಪ್ಪ (ವಿಜ್ಞಾನ ಮತ್ತು ತಾಂತ್ರಿಕ ಹಾಗೂ ಪರಿಸರ ಇಲಾಖೆ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ನಮ್ಮ ಇಲಾಖೆಯ ಬೇಡಿಕೆಗಳನ್ನು ಈ ಸದನದ ಮುಂದೆ ಇಟ್ಟಾಗ ನಾನು ಬೇಡಿಕೆ ಸಂಖ್ಯೆ ೭ಂಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚ ಅಂತ ಹೇಳಿ ನಾನು ಮಂಡಿಸಿದ್ದೇನೆ. ಈ ಸಂಖ್ಯೆಯ ಜೊತೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ಅಂತ ಹೇಳಿ ಬೇಡಿಕೆ ಏನಿದೆ ಅದರ ಜೊತೆಗೆ ಇಕಾಲಾಜಿ ಅಂಡ್ ಎನ್‌ವೈರ್ನಮೆಂಟ್ ಎಂದು ತಾವು ಸೇರಿಸಿಕೊಳ್ಳಬೇಕೆಂದು ನಾನು ತಮ್ಮ ಮುಂದೆ ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಡೀಟೈಲ್ಸ್ ಆಫ್ ಪ್ರಾವಿಷನ್ಸ್ ಫಾರ್ ಪ್ಲಾನ್ ಸ್ಕೀಮ್ ಅಂತ ಹೇಳಿ ಪೇಜ್ ೪ರಲ್ಲಿ ಅನುಮೋದಿಸಲ್ಪಟ್ಟಿದೆ ಆದ್ದರಿಂದ ಇದನ್ನು ಒಟ್ಟಿಗೆ ಓದಬೇಕು. ಈಗ ಸೈನ್ಸ್ ಅಂಡ್ ಟೆಕ್ನಾಲಜಿ ಅಂತ ಇರುವುದನ್ನು ಎಕಾಲಜಿ ಅಂಡ್ ಎನ್‌ವೈರ್ನಮೆಂಟ್ ಅಂತ ಮಾಡಬೇಕು. ಈ ಬಗ್ಗೆ ಅವರೇನು ತಪ್ಪು ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಈ ಇಲಾಖೆ ೧೯೯೧ರಲ್ಲಿ ಸ್ವತಂತ್ರ ಇಲಾಖೆಯಾಯಿತು. ಅದಕ್ಕೆ ಮುಂಚಿತವಾಗಿ ಸೈನ್ಸ್ ಅಂಡ್ ಟೆಕ್ನಾಲಜಿ ಡಿಪಾರ್ಟ್‌ಮೆಂಟ್ ಆಗಿತ್ತು. ಆದ್ದರಿಂದ ಅವರು ಈ ರೀತಿ ಮಾಡಿದ್ದಾರೆ. ಈಗ ಇದನ್ನು ಸೇರಿಸಲು ತಾವು ಒಪ್ಪಿಕೊಂಡು ಸರಿಪಡಿಸಿಕೊಳ್ಳಬೇಕು. ಮಾನ್ಯ ಉಪಾಧ್ಯಕ್ಷರವರೇ, ಸೈನ್ಸ್ ಅಂಡ್ ಟೆಕ್ನಾಲಜಿ ಮತ್ತು ಇಕಾಲಜಿ

ಅಂಡ್ ಎನ್ವೈರ್ನಮೆಂಟ್ ಎಂಬ ಏನೊಂದು ಇಲಾಖೆಗಳಿವೆ ನಾನು ಬರುವ ಪೂರ್ವದಲ್ಲಿ ಅವುಗಳು ಬೇರೆ ಬೇರೆ ಇಲಾಖೆಗಳಾಗಿದ್ದವು. ಈಗ ಒಟ್ಟಾಗಿ ಮಾಡಿದ ಮೇಲೆ ಈ ಇಲಾಖೆಯಲ್ಲಿ ನಾವು ಏನೇನು ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳಿ ಆ ಕೆಲಸಗಳು ನಮ್ಮ ರಾಜ್ಯದಲ್ಲಿಯೇ ಅಲ್ಲ, ಬೇರೆ ಕಡೆಯಲ್ಲೂ ಕೂಡ ಈ ಬಗ್ಗೆ ಜನಗಳಲ್ಲಿ ಒಂದು ತಿಳುವಳಿಕೆ ಬರುವ ರೀತಿಯಲ್ಲಿ ನಾವು ಕೆಲಸವನ್ನು ಮಾಡಿದ್ದೇವೆ. ಈ ಬರೀ ಪರಿಸರದ ಬಗ್ಗೆ ನಾವೆಲ್ಲಾ ಏನು ತಿಳಿದುಕೊಂಡಿದ್ದೇವೆ ಹಾಗೂ ನಮ್ಮ ಉಪಯೋಗಕ್ಕೆ ಪರಿಸರ ಇದೆ ಎಂದು ತಿಳಿದುಕೊಂಡಿದ್ದರೂ ಕೂಡಾ ಪರಿಸರವನ್ನು ಕೆಡಿಸಿ ನಾವು ಜೀವನವನ್ನು ಮಾಡಬೇಕು, ಅನ್ನತಕ್ಕಂತ ಏನು ಒಂದು ವಾದ ಇದೆ ಅದು ಸರಿಯಲ್ಲ ಎಂದು ಹೇಳುತ್ತೇನೆ. ಅದಕ್ಕೆ ಮೊಟ್ಟಮೊದಲನೆಯದಾಗಿ ಈ ಸದನಕ್ಕೆ ಒಂದು ಕಲಂನ್ನು ಹೇಳಬೇಕು ಎಂದು ಇಚ್ಛೆಪಡುತ್ತಿದ್ದೇನೆ. ರಾಜ್ಯಾಂಗದಲ್ಲಿ ಅದು ಹೊಸದಾಗಿ ಇದೆ. ೫೧ (ಎ)ನಲ್ಲಿ ಈ ರೀತಿ ಇದೆ:-

"It shall be the duty of every citizen of India to protect and improve the natural environment including forests, lakes, rivers and wild life and to have compassion for living creatures."

ಇದರ ಪ್ರಕಾರ ಇವತ್ತಿನ ದಿವಸ ನಮ್ಮ ಇಡೀ ಇಂಡಿಯಾ ದೇಶದಲ್ಲಿ ಒಂದು ವಿಧವಾಗಿರತಕ್ಕಂಥ ಗಮನವನ್ನು ನಾವು ಸೆಳೆದಿದ್ದೇವೆ. ಅಲ್ಲಿ ಕೇಂದ್ರ ಸರ್ಕಾರದವರು ಏನೇನು ಕೆಲಸಗಳನ್ನು ಮಾಡುತ್ತಿದ್ದಾರೆ, ಅವರ ಬಗ್ಗೆ ನಾವು ಇಲ್ಲಿ ಗಮನದಲ್ಲಿಟ್ಟುಕೊಂಡು ನಾವು ವಿಶೇಷವಾಗಿ ಇಲ್ಲಿಯೂ ಕೂಡ ಅದರಂತೆ ಕೆಲಸವನ್ನು ಮಾಡುವುದಕ್ಕೆ ನಾವು ಪ್ರಯತ್ನವನ್ನು ಮಾಡಿದ್ದೇವೆ. ಹಲವಾರು ವಿಧದಲ್ಲಿ ಪರಿಸರವನ್ನು ಕೆಡಿಸತಕ್ಕಂಥ ವಿಧಾನಗಳು ಏನಿವೆ ಮುನಿಸಿಪಾಲಿಟಿಯಲ್ಲಿ ಕೊಳಚೆಯನ್ನು ಉತ್ಪತ್ತಿ ಮಾಡತಕ್ಕಂಥದ್ದರ ಜೊತೆಗೆ ಹಲವಾರು ಇಂಡಸ್ಟ್ರೀಗಳು ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಇದ್ದು ಮತ್ತು ದೇಶದಲ್ಲೆಲ್ಲಾ ಇದ್ದು ಕೊಳಚೆ ಮಾಲಿನ್ಯವನ್ನು ಮಾಡುವುದಕ್ಕೆ ಅವರಿಗೆ ಹಕ್ಕು ಇದೆ ಎಂದು ತಿಳಿದುಕೊಂಡು ಕೆಲಸವನ್ನು ಮಾಡುತ್ತಿದ್ದಾರೆ. ಅವರು ಕೆಲಸವನ್ನು ಮಾಡುವಾಗ ಈ ಪರಿಸರವನ್ನು ಉಳಿಸಿಕೊಳ್ಳಬೇಕು ಎನ್ನತಕ್ಕಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ ಎಂದು ಹೇಳಿ ನನಗಂತೂ ಅನಿಸುವುದಿಲ್ಲ. ಬಹಳ ವರ್ಷಗಳಿಂದ ಸ್ವೇಚ್ಛೆಯಾಗಿ ಅವರು ಪರಿಸರವನ್ನು ಕೆಡಿಸಿದ್ದಾರೆ. ಈ ವಾಯು ಮಾಲಿನ್ಯವನ್ನು ಮಾಡುತ್ತಿದ್ದಾರೆ. ನೀರಿನ ಮಾಲಿನ್ಯವನ್ನು ಮಾಡುತ್ತಿದ್ದಾರೆ. ಭೂಮಿಯಲ್ಲಿರತಕ್ಕಂಥ ಸಾರವನ್ನು ಕೆಡಿಸತಕ್ಕಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಭೂಮಿಯಲ್ಲಿ ಹರಿಯತಕ್ಕಂಥ ಏನೊಂದು ಅಂತರಜಲ ಇದೆ ಅದನ್ನು ಕೆಡಿಸತಕ್ಕಂಥ ಒಂದು ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಮತ್ತೆ ಮೇಲೆ ಹರಿಯತಕ್ಕಂಥ ಹೊಳೆಯಾಗಲಿ ಮತ್ತೆ ಗಾಳಿಯಾಗಲೀ ಅದನ್ನು ಮಾಲಿನ್ಯ ಮಾಡಬೇಕು ಎಂದು ಹೇಳುವ ಪ್ರಯತ್ನ ನಡೆಯುತ್ತಿದೆ. ಆದರೆ ಅವರು ಏನು ತಿಳಿದುಕೊಂಡಿದ್ದಾರೆ, ಅದು ನಮ್ಮ ಹಕ್ಕು ಎಂದು ತಿಳಿದುಕೊಂಡಿದ್ದಾರೆ. ಇದು ಹಕ್ಕಲ್ಲ ಎಂದು ಹೇಳಿಬಿಟ್ಟು ನಾವು ಕಾನೂನನ್ನು ಮಾಡಿಕೊಂಡಿದ್ದೇವೆ. ಈ ಒಂದು ಮಾಲಿನ್ಯವನ್ನು ಮಾಡತಕ್ಕಂಥ ಪ್ರಯತ್ನಗಳು ಏನಿವೆ. ನಮ್ಮ ರಾಜ್ಯದಲ್ಲಿ, ಅದಕ್ಕೆ ಸಾಕಷ್ಟು ನಿರ್ಬಂಧವನ್ನು ಹಾಕಬೇಕು. ಮತ್ತೆ ಪರಿಸರವನ್ನು ಉಳಿಸಿಕೊಳ್ಳಬೇಕು. ಮತ್ತೆ ಜನಜೀವನದ ಒಂದು ಆರೋಗ್ಯ

ಏನು ಇದೆ, ಆ ಆರೋಗ್ಯವನ್ನು ಕಾಪಾಡಬೇಕು, ಅದನ್ನು ಕೆಡದ ಹಾಗೆ ಮಾಡಬೇಕು ಎಂದು ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ಇವತ್ತಿನ ದಿವಸ ಈ ಆಸ್ಪತ್ರೆಗಳ ವಿಚಾರದಲ್ಲಿ ಬೇಡಿಕೆಗಳು ಬಹಳ ಇದ್ದಾವೆ. ಶ್ರೀಮಾನ್ ಪುಟ್ಟಸ್ವಾಮಿಗೌಡರು ಇಲ್ಲಿಯೇ ಇದ್ದಾರೆ. ಅವರು ಆಸ್ಪತ್ರೆಗಳ ವ್ಯವಸ್ಥೆಯನ್ನು ಜರಿಯುತ್ತಿದ್ದಾರೆ. ಕಾರಣ ಏನೆಂದರೆ, ಎಲ್ಲಾ ಕಡೆಯಲ್ಲೂ ನೋಡಿದಾಗ ಆರೋಗ್ಯ ಕೆಡತಕ್ಕಂಥ ಒಂದು ಸನ್ನಿವೇಶವನ್ನು ನಾವು ನೋಡುತ್ತಿದ್ದೇವೆ. ನಮ್ಮ ಆರೋಗ್ಯ ಕೆಡುವುದರ ಜೊತೆಗೆ ಮತ್ತೆ ಎಲ್ಲಾ ವಿಧವಾದ ಈ ಮಾಲಿನ್ಯದಿಂದಾಗಿ ಜನರ ಆರೋಗ್ಯ ಕೆಡುತ್ತಿರುವುದನ್ನು ನಾವು ಹೊಸದಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ, ನಾವು ಹೊಸದಾಗಿ ಪ್ರಯತ್ನವನ್ನು ಮಾಡಿರುವುದರಿಂದ ಸದಸ್ಯರಿಗೆ ಅಷ್ಟಾಗಿ ಇದರಲ್ಲಿ ಚರ್ಚೆ ಮಾಡತಕ್ಕಂಥ ಒಂದು ಅವಕಾಶ ಬರಲಿಲ್ಲ. ಈವತ್ತಿನ ದಿವಸ ಶ್ರೀಮಾನ್ ರಾಜೂಗೌಡರು ಮಾತನಾಡಿದ್ದಾರೆ, ನಾವು ಮಾಡಿರುವ ಕೆಲಸಕ್ಕೆ ಬಹಳ ಹೊಗಳಿದ್ದಾರೆ. ಶ್ರೀಮಾನ್ ಕರಿಯಣ್ಣನವರೂ ಹೊಗಳಿದ್ದಾರೆ, ಅವರ ಒಂದು ವಿಚಾರವನ್ನು ಹೇಳಿದ್ದಾರೆ. ಏನೆಂದರೆ ತುಂಗಭದ್ರಾ ನದಿಯಲ್ಲಿ ಬಹಳ ಮೀನುಗಳು ಸತ್ತು ಹೋಗಿವೆ ಎಂದು. ಆ ಮೇಲೆ ಶ್ರೀ ಬಾಬುರಾವ್ ಚವಾಣ್‌ರವರು ವಾಡಿಯಲ್ಲಿ ಸಿಮೆಂಟ್ ಕಾರ್ಖಾನೆಯಿಂದ ಆಗತಕ್ಕಂಥ ಒಂದು ಮಾಲಿನ್ಯದ ಬಗ್ಗೆ ಹೇಳಿದ್ದಾರೆ. ಅವರನ್ನು ಬಿಟ್ಟು ಈ ಚರ್ಚೆಯಲ್ಲಿ ಬೇರೆ ಯಾರೂ ಭಾಗಿಯಾಗಿಲ್ಲ. ಒಂದು ವಿಚಾರವನ್ನು ನಾನು ಹೇಳಬೇಕು. ಈ ಕಾರ್ಖಾನೆಗಳು ಏನು ಪರಿಸರವನ್ನು ಮಾಲಿನ್ಯ ಮಾಡುತ್ತಿವೆ, ಎಲ್ಲಾ ರೀತಿಯಿಂದಲೂ ನಾವು ಅದಕ್ಕೆ ನಿರ್ಬಂಧ ಮಾಡಬೇಕು. ನಮ್ಮಲ್ಲಿ ವಾಟರ್ ಆ್ಯಕ್ಟ್ ಎಂದು ಇದೆ. ಇದರ ಪ್ರಕಾರ ಯಾರ್‍ಯಾರು ಈ ರೀತಿ ಮಾಲಿನ್ಯ ಮಾಡ್ತಿದ್ದಾರೆ ಅಂತಹವರಿಗೆ ೭ ವರ್ಷದವರೆಗೆ ಕಠಿಣ ಶಿಕ್ಷೆ ನೀಡಬಹುದೆಂದು ನಾವು ಕಾನೂನಿನಲ್ಲಿ ಅಳವಡಿಸಿದ್ದೇವೆ. ಆದರೆ ನಾವು ಕಠಿಣವಾದ ಕ್ರಮ ತೆಗೆದುಕೊಂಡಿಲ್ಲ. ಈಗ ಹಲವಾರು ಕಾರ್ಖಾನೆಗಳ ಬಗ್ಗೆ ಸ್ಥಳ ಅಜಮಾಯಿಷಿ ಮಾಡಿದ್ದೇವೆ. ಈ ಕಾರ್ಖಾನೆಗಳವರು ಮಾಲಿನ್ಯವನ್ನು ಕೆಡಿಸುತ್ತಿದ್ದಾರೆ. ನಾವು ಯಾರ ಮೇಲೂ ಕೂಡ ಉಗ್ರ ಕ್ರಮ ತೆಗೆದುಕೊಂಡಿಲ್ಲ. ಇನ್ನು ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ. ಈ ದೊಡ್ಡ ದೊಡ್ಡ ಕಾರ್ಖಾನೆಗಳವರು ಸ್ವೇಚ್ಛೆಯಾಗಿ ಏನು ಈ ದೇಶದಲ್ಲಿ ಮಾಲಿನ್ಯ ಮಾಡುತ್ತಿದ್ದರು ಅಂತಹವರ ಬಗ್ಗೆ ನಾವು ಕಠಿಣವಾದ ಕ್ರಮ ತೆಗೆದುಕೊಳ್ಳಲು ಮನಸ್ಸನ್ನು ಮಾಡಿದ್ದೇವೆ. ಇದುವರೆಗೂ ನಾವು ಏನೂ ಮಾಡಲಿಕ್ಕೆ ಹೋಗಿಲ್ಲ. ಈಗ ಹೊಸದಾಗಿ ನಮ್ಮ ಸರ್ಕಾರ ಕಠಿಣವಾಗಿರತಕ್ಕ ಕ್ರಮ ತೆಗೆದುಕೊಳ್ಳುವ ಒಂದು ಪ್ರಯತ್ನ ಮಾಡುತ್ತಿದೆ. ಇದಕ್ಕೂ ಮೊದಲು ಈ ಬಗ್ಗೆ ಜನಗಳಿಗೆ ತಿಳುವಳಿಕೆ ಹೇಳಬೇಕು, ಕಾರ್ಖಾನೆಗಳವರಿಗೂ ಹೇಳಬೇಕು, ಪ್ರತಿಯೊಬ್ಬರಿಗೂ ಹೇಳಬೇಕು. ಇಂತಹ ಒಂದು ಸದಿಚ್ಛೆಯಿಂದ ಅವರ ಮೇಲೆ ಉಗ್ರಕ್ರಮವನ್ನು ನಾವು ತೆಗೆದುಕೊಂಡಿಲ್ಲ. ಆದರೆ ಇನ್ನು ಮೇಲೆ ಯಾರ್‍ಯಾರು ಪರಿಸರ ಮಾಲಿನ್ಯ ಮಾಡುತ್ತಾರೆ ಅಂತಹವರ ಮೇಲೆ ನಾವು ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆ. ನಮ್ಮಲ್ಲಿ ಅನೇಕ ಸಿಮೆಂಟ್ ಫ್ಯಾಕ್ಟರಿಗಳಿವೆ. ಅವರು ಸಿಮೆಂಟ್ ಧೂಳು ನಿರ್ಮಾಣ ಮಾಡುತ್ತಾರೆ. ಆದ್ದರಿಂದ ಅಕ್ಕಪಕ್ಕದ ಪರಿಸರದ ಮೇಲೆ ಧೂಳು ಹೋಗಿ ಕೂತುಕೊಳ್ಳುತ್ತದೆ. ಅವರು ಸರಿಯಾಗಿ ಪ್ರಿಸಿಪಿಟೇಟರ್ಸ್ ಅಂತ ಹೇಳಿ ಅದನ್ನು ಒದಗಿಸಿಕೊಂಡು, ಆ ಟ್ರೀಟ್‌ಮೆಂಟ್ ಪ್ಲಾಂಟ್ ಹಾಕಿಕೊಂಡು ಧೂಳು ಸುತ್ತಲೂ ಬರದ ಹಾಗೆ ಪ್ರಯತ್ನ ಮಾಡಬೇಕಾಗಿತ್ತು. ಆದರೆ ಅವರು ಹಾಗೆ ಮಾಡುತ್ತಿಲ್ಲ. ಅದೇ ರೀತಿಯಾಗಿ ನಮ್ಮಲ್ಲಿ ಪಲ್ಪ್ ಇಂಡಸ್ಟ್ರೀಸ್, ಪೇಪರ್ಸ್ ಇಂಡಸ್ಟ್ರೀಸ್ ಇವೆ. ಅಲ್ಲಿ ಉತ್ಪತ್ತಿಯಾಗುವ ಮಾಲಿನ್ಯವನ್ನು ಸ್ವೇಚ್ಛೆಯಾಗಿ ನದಿಗೆ ಬಿಡುತ್ತಿದ್ದಾರೆ. ಹಾಗೂ ಅಂತರ್ಜಲಕ್ಕೆ ಬಿಡುತ್ತಿದ್ದಾರೆ. ಅವರಿಗೆ ನಿರ್ಬಂಧ ಏನೂ ಹಾಕಿಲ್ಲ. ಈಗ ಅವರಿಗೆ ನಿರ್ಬಂಧ ಹಾಕಬೇಕೆಂದು ನಾವು

ಪ್ರಯತ್ನ ಮಾಡುತ್ತಿದ್ದೇವೆ. ಈಗ ಹರಿಹರ ಪಾಲಿಫೈಬರ್ಸ್ ಫ್ಯಾಕ್ಟರಿಯವರು ಸ್ವೇಚ್ಛೆಯಾಗಿ ತುಂಗಭದ್ರ ನದಿಯಿಂದ ನೀರು ತೆಗೆದುಕೊಳ್ಳುತ್ತಿದ್ದಾರೆ, ಅದನ್ನು ಉಪಯೋಗಿಸಿಕೊಂಡು ಅದರಿಂದ ಉತ್ಪತ್ತಿಯಾದ ಮಾಲಿನ್ಯವನ್ನು ಸ್ವೇಚ್ಛೆಯಾಗಿ ನದಿಗೇ ಬಿಡುತ್ತಿದ್ದಾರೆ. ಕಳೆದ ೨೦ ವರ್ಷಗಳಿಂದ ಅವರ ಮೇಲೆ ನಾವು ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳುವುದಕ್ಕೆ ಹೋಗಿಲ್ಲ. ಅವರು ಈ ರೀತಿ ಮಾಲಿನ್ಯದ ನೀರನ್ನು ನದಿಗೆ ಬಿಡಲು ಯಾರ ಕನ್‌ಸೆಂಟ್‌ಗಳನ್ನೂ ಸಹ ತೆಗೆದುಕೊಂಡಿಲ್ಲ. ಸ್ವೇಚ್ಛೆಯಾಗಿ ಒಂದಲ್ಲ ಒಂದು ಕಾರಣದಿಂದ ಕೋರ್ಟ್‌ಗೆ ಹೋಗಿ ಅವರು ಅವರ ಕೆಲಸ ಮಾಡಿಕೊಳ್ಳುತ್ತಿದ್ದಾರೆ. ಇದರಿಂದಾಗಿ ನಾವು ಫ್ಯಾಕ್ಟರಿ ನಿಲ್ಲಿಸೋಕೆ ಹೋಗಿಲ್ಲ. ಈಗ ತಾನೇ ನಾವು ನೋಟೀಸ್ ಕೊಡುತ್ತಿದ್ದೇವೆ. ಇದುವರೆಗೂ ಯಾವ ರೀತಿ ಅವರಿಗೆ ನೋಟೀಸ್ ಕೊಡಬೇಕೆಂಬ ಬಗ್ಗೆ ಸರ್ಕಾರಕ್ಕೆ ಜಿಜ್ಞಾಸೆ ಬಂದು ಈಗ ತಾನೇ ನಾವು ಕೊಡಲಿಕ್ಕೆ ಪ್ರಯತ್ನಿಸುತ್ತಿದ್ದೇವೆ. ಇದರ ನಿರ್ಬಂಧವನ್ನು ನಾವು ಮಾಡಲೇ ಬೇಕಾಗುತ್ತದೆ. ಅಲ್ಲಿನ ಮಾಲಿನ್ಯವನ್ನು ನದಿಗೆ ಸ್ವೇಚ್ಛೆಯಿಂದ ಬಿಡುವುದನ್ನು ನಾವು ತಡೆಯದೇ ಹೋದರೆ ಅದರಿಂದ ಜನಗಳಿಗೆ, ಮೀನುಗಳಿಗೆ ಇತರೇ ಜೀವರಾಶಿಗಳಿಗೆ ತೊಂದರೆಯಾಗುತ್ತದೆ. ಮತ್ತು ಅಲ್ಲಿಂದ ಹೊರಡುವ ದುರ್ವಾಸನೆ ಕೂಡ ಕಡಿಮೆಯಾಗಿಲ್ಲ. ನಾನು ಬಹಳ ವರ್ಷದಿಂದ ನೋಡಿದ್ದೇನೆ. ನಾನು ಅದೇ ಊರಿನವನು. ಆದರೆ ಸ್ವೇಚ್ಛೆಯಿಂದ ಮಾಡುತ್ತಿದ್ದಾರೆ. ಇಂತಹವರು ನಮ್ಮ ಕರ್ನಾಟಕ ರಾಜ್ಯದಲಿ ಬಹಳ ಜನ ಇದ್ದಾರೆ, ಬೆಂಗಳೂರು, ಮೈಸೂರು ಜಿಲ್ಲೆಯಲ್ಲಿ ಹೀಗೆ ಎಲ್ಲಾಕಡೆಯೂ ಇದ್ದಾರೆ. ನಮ್ಮ ರಾಜ್ಯದಲ್ಲಿ ಡಿಸ್ಟಿಲರಿಗಳಲ್ಲಿ ಉತ್ಪತ್ತಿಯಾಗುವ ಮಾಲಿನ್ಯ ನದಿಗೆ ಹರಿದುಹೋಗುತ್ತಿರುವುದರ ಜೊತೆಗೆ ಕೆಳಗಿನ ಅಂತರ್ಜಲದಲ್ಲಿ ಸಹ ಸೇರುತ್ತಿದೆ. ಅವರಿಗೆ ಅದನ್ನು ತಡೆಗಟ್ಟಬೇಕೆಂಬ ಬಗ್ಗೆ ಗಮನವಿಲ್ಲ. ಎಷ್ಟು ಹಣ ಮಾಡಬೇಕು, ಎಷ್ಟು ಉಳಿಸಬೇಕೆಂಬ ಬಗ್ಗೆ ಮಾತ್ರ ಗಮನ ಇಟ್ಟುಕೊಂಡು ಹಣ ಮಾಡುತ್ತಿದ್ದಾರೆ. ಇವತ್ತು ಆರ್ಗಾನಿಕ್ ಟ್ರೀಟ್‌ಮೆಂಟ್ ಮತ್ತು ಇನ್-ಆರ್ಗಾನಿಕ್ ಟ್ರೀಟ್‌ಮೆಂಟ್ ಎಂದು ಎರಡು ಭಾಗ ಇದೆ. ಈವತ್ತು ಇನ್-ಆರ್ಗಾನಿಕ್ ಟ್ರೀಟ್‌ಮೆಂಟ್ ಅಂದರೆ ಯಾವುದಾದರೂ ಸಲ್ಯೂಷನ್ ಅಥವಾ ಕೆಮಿಕಲ್ ಹಾಕಿ ಬಿಟ್ಟು ಮಾಲಿನ್ಯ ಆಗುವುದನ್ನು ತಡೆಗಟ್ಟುವ ಬಗ್ಗೆ ಟ್ರೀಟ್ ಮಾಡಬಹುದು ಒಂದು ವಿಧಾನ, ಆದರೆ ಆರ್ಗಾನಿಕ್ ಅಂತ ಹೇಳಿ ಬಹಳ ಪ್ರಮಾಣದಲ್ಲಿ ಉತ್ಪತ್ತಿ ಆಗುವ ಮಾಲಿನ್ಯವನ್ನು ನಾವು ತಡೆಗಟ್ಟಬೇಕಾದರೆ ಅಲಾಯಿದ ನಾವು ಟ್ರೀಟ್‌ಮೆಂಟ್ ಪ್ಲಾಂಟ್ ಹಾಕಬೇಕಾಗುತ್ತದೆ. ಆದರೆ ಇದುವರೆಗೂ ಯಾರೂ ಮಾಡಿಲ್ಲ. ಹಾಗೇನೇ ಭೂಮಿ ಮೇಲೆ ಮಾಲಿನ್ಯ ಏನಿದೆ ಅದನ್ನು ಹಾಗೆಯೇ ಬಿಟ್ಟಿರುತ್ತಾರೆ. ಇದರಿಂದ ಮನುಷ್ಯರಿಗೆ ತೊಂದರೆಯಾದೀತು, ದನಗಳಿಗೆ ತೊಂದರೆಯಾದೀತು, ಕಾಡಿಗೆ ತೊಂದರೆಯಾದೀತು, ಅಥವಾ ಅಕ್ಕಪಕ್ಕದ ಹಳ್ಳಿಗಳಲ್ಲಿ ಇರುವವರಿಗೆ ತೊಂದರೆಯಾದೀತು ಎಂಬುದರ ಕಡೆಗೆ ಅವರ ಗಮನವೇ ಇಲ್ಲ. ಆದುದರಿಂದ ಇಂತಹವರಿಗೆ ನಾವು ಕಡಿವಾಣ ಹಾಕಲೇಬೇಕಾಗುತ್ತದೆ. ನಾವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ನಾನು ಸದನಕ್ಕೆ ಹೇಳ ಬಯಸುತ್ತಿದ್ದೇನೆ. ಇಂತಹ ಕಾರ್ಖಾನೆಗಳು ಈವತ್ತು ಏನು ಸ್ವೇಚ್ಛೆಯಾಗಿ ಕೆಲಸ ಮಾಡುತ್ತಾ ಬಂದಿವೆ, ಇವುಗಳಿಗೆ ಕಡಿವಾಣ ಹಾಕಿ ಇಂತಹದ್ದನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬೇರೆ ವಿಷಯದ ಕುರಿತು ಹೇಳುವುದಾದರೆ ನಗರ-ಪಟ್ಟಣಗಳಲ್ಲಿ ಸ್ವೇಚ್ಛೆಯಾಗಿ ಸ್ಯೂವರೇಜ್ ಏನಿದೆ ಇದರಿಂದ ಮಾಲಿನ್ಯ ಉಂಟಾಗುತ್ತಿದೆ. ಪಾಯಿಖಾನೆ ಮಾಡತಕ್ಕಂಥಾದ್ದು ಮತ್ತು ಹೇಸಿಗೆ ಮಾಡುವುದರಿಂದಲೂ ಮಾಲಿನ್ಯ ಉಂಟಾಗುತ್ತದೆ. ಇವೊತ್ತು ಸಿಂಗಾಪುರದಲ್ಲಿ ನಾನು ನೋಡಿದ್ದೇನೆ. ಅಲ್ಲಿ ನಗರವನ್ನು ಸ್ವಚ್ಛತೆಯಿಂದ ಇಟ್ಟುಕೊಂಡಿದ್ದಾರೆ. ಆದೇ ರೀತಿ ಇಲ್ಲಿಯೂ ಕೂಡ

ಏತಕ್ಕೆ ಸ್ವಚ್ಛವಾಗಿಡಬಾರದು ಎಂಬುದೊಂದು ಪ್ರಶ್ನೆ. ಇದಕ್ಕೆ ನಾವು ನಿರ್ಬಂಧ ಹಾಕಲೇಬೇಕು. ಹಿಂದೆ ನಾನು ಇದೇ ವಿಚಾರದಲ್ಲಿ ಹೇಳಿಕೆ ಕೊಟ್ಟಿದೇನೆ. ನಗರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಇಷ್ಟರಲ್ಲಿಯೇ ಒಂದು ನೋಟಿಫಿಕೇಷನ್ ಹೊರಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಮೂರನೆಯದಾಗಿ, ಗಾಳಿ ಮತ್ತು ಹೊಗೆಯ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ತೀವ್ರವಾಗಿರತಕ್ಕಂಥ ಕ್ರಮ ತೆಗೆದುಕೊಳ್ಳಬೇಕಾಗಿದೆ. ಬಸ್ಸುಗಳಿಂದಾಗಲಿ ಅಥವಾ ಯಾವುದೇ ವಾಹನಗಳಿಂದಾಗಲಿ ನಿಗದಿ ಪಡಿಸಿದ ಪ್ರಮಾಣಕ್ಕಿಂತ ಹೆಚ್ಚು ಹೊಗೆ ಉಗುಳಿದಲ್ಲಿ ಅಂತಹ ವಾಹನಗಳನ್ನು ಪಟ್ಟಣದೊಳಗೆ ಬರುವುದಕ್ಕೆ ಬಿಡಬಾರದು ಎನ್ನತಕ್ಕಂಥಾದ್ದರ ಬಗ್ಗೆ ಉಗ್ರವಾದಂಥ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದುವರೆಗೂ ಸರ್ಕಾರ ಈ ವಿಷಯ ಕುರಿತು ಅಷ್ಟಾಗಿ ಗಮನ ಕೊಟ್ಟಿರಲಿಲ್ಲ. ಈಗ ನಾವು ಗಮನ ಕೊಡುತ್ತಿದ್ದೇವೆ. ನಮ್ಮ ಮಾನ್ಯ ಸದಸ್ಯರಿಗೆ ಏನಾಗುತ್ತದೆಂದರೆ ಏನೋ ಬಸವಲಿಂಗಪ್ಪನವರು ಯಾವುದೋ ಕೆಲಸ ಮಾಡುತ್ತಿದ್ದರು, ಈ ಕೆಲಸವನ್ನು ಮಾಡುವುದಕ್ಕೆ ಇವರು ಪ್ರಯತ್ನ ಮಾಡುತ್ತಿದ್ದಾರೆ ಎಂದು ಅವರಿಗೆ ನಗು ಬರಬಹುದು. ಆದರೆ, ಒಂದಲ್ಲ ಒಂದು ಸಲ ತಮ್ಮ ಗಮನಕ್ಕೆ ಬರಬಹುದು, ಬರುತ್ತದೆ. ಆದುದರಿಂದ, ನಮ್ಮ ಪಟ್ಟಣಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳದೇ ಹೋದರೆ, ಬೀದಿಗಳನ್ನು ಸ್ವಚ್ಛವಾಗಿಟ್ಟುಕೊಳ್ಳದೇ ಹೋದರೆ, ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳದೇ ಹೋದರೆ, ಪರಿಸರವೇ ನಮ್ಮ ವಿರುದ್ಧವಾಗಿ ಸಿಡಿದೆದ್ದಾಗ ನೀವು ಯಾರೂ ಇಗಲು ಆಗುವುದಿಲ್ಲ. ಇವೊತ್ತಿನ ದಿವಸ ಪ್ರಪಂಚದಲ್ಲಿ ಒಂದು 'ಮೂವ್‌ಮೆಂಟ್' ಪ್ರಾರಂಭವಾಗಿದೆ. ಏನೆಂದರೆ, "Save Earth, Save Environment, Save Ecology" ಇಂತಹ ಒಂದು ಚಳುವಳಿ ಎಲ್ಲಾ ಕಡೆ ಕಂಡುಬರುತ್ತಿದೆ. ಇದು ರಾಷ್ಟ್ರದ ಒಂದು ಪ್ರಶ್ನೆಯಾಗುತ್ತಿದ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೃಹದಾಕಾರವಾಗಿ ಈ ಕುರಿತು ಚರ್ಚೆ ಪ್ರಾರಂಭವಾಗಿದೆ, ಕೆಲಸವೂ ಸಹ ಪ್ರಾರಂಭವಾಗಿದೆ. ಅಲ್ಲಿ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ, ನಾವು ವಿಶಾಲ ಮನೋಭಾವನೆಯಿಂದ ವಿಶ್ವದ ಕಡೆಗೆ ನೋಡಬೇಕು. 'ವಿಶ್ವ'ದ ಕಾರ್ಯಕ್ರಮ ಕೂಡ ಶ್ರೀ ನಜೀರ್ ಅಹಮದ್‌ರವರು ಅದರ ಜೊತೆಯಲ್ಲಿಯೇ ನಾವು ವಿಶಾಲವಾಗಿರತಕ್ಕಂಥ ವಿಶ್ವ ಒಂದು ನೋಟವನ್ನು ನೋಡಿ, ಪರಿಸರವನ್ನು ಉಳಿಸುವುದಕ್ಕೆ ನಾವೆಲ್ಲರೂ ಸೇರಿ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ನಾನು ಇದರ ಬಗ್ಗೆ ಮಾತನಾಡುವುದು ಬಹಳವಾಗಿ ಇತ್ತು. ಆದರೆ, ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಇನು ೩-೪ ಜನ ಮಂತ್ರಿಗಳು ಮಾತನಾಡುವವರಿದ್ದಾರೆ. ಆದುದರಿಂದ, ನನ್ನ ಮಾತನ್ನು ಇಷ್ಟಕ್ಕೆ ಮುಕ್ತಾಯಗೊಳಿಸುತ್ತಾ, ನನ್ನ ಇಲಾಖೆಗೆ ಸಂಬಂಧಿಸಿದ ಬೇಡಿಕೆಗಳೇನಿವೆ, ಅವುಗಳಿಗೆ ತಾವು ಅಂಗೀಕಾರ ಕೊಡಬೇಕೆಂದು ತಿಳಿಸುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ನಾನು ಬೇಡಿಕೆಗಳ ಪ್ರಸ್ತಾವಗಳನ್ನು ಈಗ್ಗೆ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

"ದಿನಾಂಕ ೩೧.೩.೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಬೇಡಿಕೆಗಳ ಸಂಖ್ಯೆ ೫, ೬, ೭, ೮ ಮತ್ತು ೬೦ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು

ಮಾಡುವುದು''.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಉಪಾಧ್ಯಕ್ಷರವರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ).

ಅಭಿಯಾಚನೆ ಕ್ರಮಾಂಕ ೫-ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು)

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೯,೬೩,೭೨,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೦೭,೬೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ ೬ ಗಣಿಗಳು ಮತ್ತು ಭೂ ವಿಜ್ಞಾನ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು ಭೂ ವಿಜ್ಞಾನಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೦೮,೦೨,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು''

ಅಭಿಯಾಚನೆ ಕ್ರಮಾಂಕ ೭ ಚಿಕ್ಕ ಪುಟ್ಟ ಉದ್ಯಮಗಳು.

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೬೩,೬೧,೧೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೯,೭೯,೮೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು''.

ಅಭಿಯಾಚನೆ ಕ್ರಮಾಂಕ ೮ ರೇಷ್ಮೆ ವ್ಯವಸಾಯ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೭೬,೯೭,೧೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭,೩೦,೫೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ ೬೦ ವಿಜ್ಞಾನ ಮತ್ತು ಯಂತ್ರ ಕಲೆ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧.೩.೧೯೯೩ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಜ್ಞಾನ ಮತ್ತು ಯಂತ್ರ ಕಲೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಿಂದ ೧,೬೩,೨೨,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು

ಮಂಜೂರು ಮಾಡುವುದು''

ಉಪಾಧ್ಯಕ್ಷಣಿಯವರು:- ಈಗ ಸಭೆ ಮುಂದುವರೆದು ಮತ್ತೆ ನಾಳೆ ಬೆಳಿಗ್ಗೆ ೧೦ ಗಂಟೆಗೆ ಸಮಾವೇಶಗೊಳ್ಳುವುದು.

ಸದನವು ೭.೫೫ ಗಂಟೆಗೆ ಮುಕ್ತಾಯಗೊಂಡು ಪುನಃ ದಿನಾಂಕ ೨೫ನೇ ಮಾರ್ಚಿ ೧೯೯೨ರ ಬುಧವಾರದಂದು ಬೆಳಿಗ್ಗೆ ೧೦.೦೦ ಗಂಟೆಗೆ ಸೇರಲು ನಿಶ್ಚಯಿಸಿತು.

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಕರ್ನಾಟಕ ವಿಧಾನ ಸಭೆ

(ಒಂಬತ್ತನೇಯ ವಿಧಾನ ಸಭೆ)

(ಏಳನೆಯ ಅಧಿವೇಶನ)

ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ವಿಧೇಯಕ; ೧೯೯೨

(೧೯೯೨ರ ವಿಧಾನ ಸಭಾ ವಿಧೇಯಕ-೫)

ಕರ್ನಾಟಕ ಭೂ ಸುಧಾರಣಾ ಅಧಿನಿಯಮ. ೧೯೬೧ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧ (೧೯೬೨ರ ಕರ್ನಾಟಕ ಅಧಿನಿಯಮ ೧೦)ನ್ನು ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಭಾರತ ಗಣರಾಜ್ಯದ ನಲವತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.

೧. ಚಿಕ್ಕ ಹೆಸರು ಮತ್ತು ಪ್ರಾರಂಭ:- (೧) ಈ ಅಧಿನಿಯಮವನ್ನು ಕರ್ನಾಟಕ ಭೂ ಸುಧಾರಣಾ (ತಿದ್ದುಪಡಿ) ಅಧಿನಿಯಮ. ೧೯೯೨ಎಂದು ಕರೆಯತಕ್ಕದ್ದು.

(೨) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕದ್ದು.

೨. ೭೭ನೇ ಪ್ರಕರಣದ ತಿದ್ದುಪಡಿ:- ಕರ್ನಾಟಕ ಭೂ ಸುಧಾರಣಾ ಅಧಿನಿಯಮ,

೧೯೬೧ (೧೯೬೨ರ ಕರ್ನಾಟಕ ಅಧಿನಿಯಮ ೧೦) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾದ), ೭೭ನೇ ಪ್ರಕರಣದ (೧ನೇ) ಉಪ ಪ್ರಕರಣದಲ್ಲಿ ಐವತ್ತರ ಎಂಬ ಪದಕ್ಕೆ 'ಎಪ್ಪತ್ತೈದರ' ಎಂಬ ಪದವನ್ನು ಪ್ರತಿಸ್ಥಾಪಿಸತಕ್ಕದ್ದು.

೩. <u>೧೦೯ನೇ ಪ್ರಕರಣದ ತಿದ್ದುಪಡಿ</u>:- ಮೂಲ ಅಧಿನಿಯಮದ ೧೦೯ನೇ ಪ್ರಕರಣಕ್ಕೆ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕುದು, ಎಂದರೆ:-

<u>೧೦೯. ಕೆಲವು ಭೂಮಿಗಳಿಗೆ ಕೆಲವು ಉಪಬಂಧಗಳಿಂದ ವಿನಾಯಿತಿ</u>:-

೧. ಕರ್ನಾಟಕ ಪಟ್ಟಣ ಮತ್ತು ನಗರ ಗ್ರಾಮೀಣ ಪ್ರದೇಶಗಳ ಯೋಜನೆ ಅಧಿನಿಯಮ ೧೯೬೧ (೧೯೬೩ರ ಕರ್ನಾಟಕ ಅಧಿನಿಯಮ ೧೧)ರ ಉಪಬಂಧಗಳಿಗೆ ಮತ್ತು ನಿರ್ದಿಷ್ಟಪಡಿಸಬಹುದಾದ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ,

(೧) ಕೈಗಾರಿಕಾಭಿವೃದ್ಧಿಗಾಗಿ ಬಳಸಬೇಕಾಗಿರುವ ಯಾವುದೇ ಪ್ರದೇಶದಲ್ಲಿರುವ ಯಾವುದೇ ಭೂಮಿಗೆ ೭೯ಕ ಪ್ರಕರಣಗಳು ಅಥವಾ ೮೦ನೇ ಪ್ರಕರಣದ ೭೯ಖ ಉಪಬಂಧಗಳಿಂದ ವಿನಾಯಿತಿ ನೀಡಬಹುದು; ಅಥವಾ

(ii) ರಾಜ್ಯ ಅಥವಾ ಕೇಂದ್ರ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಯ ಸಂದರ್ಭದಲ್ಲಿ ಬೇಸಾಯೇತರ ಉದ್ದೇಶಕ್ಕಾಗಿ ಬಳಸಬೇಕಾಗಿರುವ ಯಾವುದೇ ಪ್ರದೇಶದಲ್ಲಿರುವ ಯಾವುದೇ ಭೂಮಿಗೆ, ೭೯ರ ಅಥವಾ ೮೦ನೇ ಪ್ರಕರಣಗಳ ಉಪಬಂಧಗಳಿಂದ ವಿನಾಯಿತಿ ನೀಡಬಹುದು:

ಪರಂತು, ವಿನಾಯಿತಿ ನೀಡಲಾದ ಭೂಮಿಯ ವಿಸ್ತೀರ್ಣವು, ಯಾವುದೇ ಸಂದರ್ಭದಲ್ಲೂ, ಕೈಗಾರಿಕಾಭಿವೃದ್ಧಿಗೆ ಎರಡು ಘಟಕಗಳು ಮತ್ತು ಬೇಸಾಯೇತರ ಉದ್ದೇಶಗಳಿಗೆ ಒಂದು ಘಟಕವನ್ನು ಮೀರತಕ್ಕುದ್ದಲ್ಲ.

(೨) (೧)ನೇ ಉಪ-ಪ್ರಕರಣದ ಅಡಿಯಲ್ಲಿಯ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಷರತ್ತು ಅಥವಾ ನಿರ್ಬಂಧವನ್ನು ಉಲ್ಲಂಘಿಸಲಾಗಿದ್ದಲ್ಲಿ, ರಾಜ್ಯ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂತೆ ವಿಚಾರಣೆಯನ್ನು ನಡೆಸಿದ ತರುವಾಯ ಆ ಉಪ-ಪ್ರಕರಣದ ಅಡಿಯಲ್ಲಿ ನೀಡಲಾದ ವಿನಾಯಿತಿಯನ್ನು ರದ್ದುಗೊಳಿಸಬಹುದು ಮತ್ತು ಅಂಥ ರದ್ದಿಯಾತಿಯನ್ನು ಮಾಡಲಾದ ಭೂಮಿಯನ್ನು ದಂಡ ಎಂಬಂತೆ ಮಟ್ಟುಗೋಲು ಹಾಕಿಕೊಳ್ಳತಕ್ಕುದ್ದು ಮತ್ತು ಅದು ಎಲ್ಲ ಋಣಭಾರಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕುದು. ಅದಕ್ಕೆ ಯಾವುದೇ ಹಣವನ್ನು ಸಂದಾಯ ಮಾಡತಕ್ಕುದಲ್ಲ''.

<u>(೪)</u> <u>೧೨೨ರ ಪ್ರಕರಣದ ತಿದ್ದುಪಡಿ</u>:- ಮೂಲ ಅಧಿನಿಯಮದ ೧೨೨ರ ಪ್ರಕರಣದಲ್ಲಿ ''೧೯೯೪ರ ಜೂನ್ ೩೦ನೇ ದಿನಾಂಕದೊಳಗಾಗಿ'' ಎಂಬ ಪದಗಳು, ಅಕ್ಷರಗಳು ಮತ್ತು ಅಂಕಿಗಳಿಗೆ, ''೧೯೯೫ನೇ ಡಿಸೆಂಬರ್ ೩೧ನೇ ದಿನಾಂಕದೊಳಗಾಗಿ'' ಎಂಬ ಪದಗಳು ಅಕ್ಷರಗಳು ಮತ್ತು ಅಂಕಗಳನ್ನು ಪ್ರತಿಸ್ಥಾಪಿಸತಕ್ಕುದು ಮತ್ತು ಯಾವಾಗಲೂ ಪ್ರತಿ ಸ್ಥಾಪಿಸಲಾಗಿದೆಯೆಂದು ಭಾವಿಸತಕ್ಕುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧ರ ೭೭ನೇ ಪ್ರಕರಣದ ಅಡಿಯಲ್ಲಿನ ಹೆಚ್ಚುವರಿ ಭೂಮಿಯ ವಿಲೇವಾರಿಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಶೇಕಡಾ ೫೦ರ ಮಿಸಲಾತಿಗೆ ಒಳಪಟ್ಟಿದೆ. ಸದರಿ ಪ್ರವರ್ಗಕ್ಕೆ ಸೇರಿದ ವ್ಯಕ್ತಿಗಳಿಗೆ ಶೇಕಡಾ ೫೦ರ ಮೀಸಲಾತಿಯು ಸಾಲದೆಂದು ಕಂಡು ಬಂದಿರುವುದರಿಂದ ಮೀಸಲಾತಿಯ ಶೇಕಡಾ ಮಾನವನ್ನು ಶೇಕಡಾ ಎಪ್ಪತ್ತೈದಕ್ಕೆ ಹೆಚ್ಚಿಸಲು ಪ್ರಸ್ತಾವಿಸಲಾಗಿದೆ.

ಸದರಿ ಅಧಿನಿಯಮದ ೧೦೯ನೇ ಪ್ರಕರಣವು ಸರ್ಕಾರಕ್ಕೆ ೬೩ನೇ ಪ್ರಕರಣದ ಉಪಬಂಧಗಳಿಂದ ಮಾತ್ರ ಭೂಮಿಯನ್ನು ವಿನಾಯಿತಿಗೊಳಿಸಲು ಅಧಿಕಾರ ನೀಡುವುದರಿಂದ ಕೈಗಾರಿಕಾ ಅಭಿವೃದ್ಧಿಯ ಪ್ರವರ್ಧನೆಯ ಸಲುವಾಗಿ ಮತ್ತು ಶಿಕ್ಷಣ ಸಂಸ್ಥೆಗಳು ಭೂಮಿಯನ್ನು ಬೇಸಾಯೇತರ ಉದ್ದೇಶಗಳಿಗಾಗಿ ಧಾರಣ ಮಾಡುವುದನ್ನು ಸಾಧ್ಯಗೊಳಿಸಲು ಯಾವುದೇ ಭೂಮಿಯನ್ನು ೭೯ಕ ಅಥವಾ ೭೯ಖ ಪ್ರಕರಣಗಳ ಉಪಬಂಧಗಳಿಂದಲೂ ಸಹ ವಿನಾಯಿತಿಗೊಳಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

೧೨೨ಕ ಪ್ರಕರಣದ ಅಡಿಯಲ್ಲಿ, ಒಂದು ನ್ಯಾಯಾಧಿಕರಣವು, ಅದರಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ಕೆಲವು ಸನ್ನಿವೇಶಗಳಲ್ಲಿ ೬೭ನೇ ಪ್ರಕರಣದ ಅಡಿಯಲ್ಲಿ ತಾನು ಹೊರಡಿಸಿದ ಆದೇಶವನ್ನು ಪುನರವಲೋಕಿಸಬಹುದು. ನ್ಯಾಯೋದ್ದೇಶದ ದೃಷ್ಟಿಯಿಂದ ಸದರಿ ಅವಧಿಯನ್ನು, ೧೯೯೫ರ ಡಿಸೆಂಬರ್ ೩೧ನೇ ದಿನಾಂಕದವರೆಗೆ ವಿಸ್ತರಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ

ಆದ್ದರಿಂದ ವಿಧೇಯಕ.

ಮ. ಇನ್ನಾಸಪ್ಪ
ಕಾರ್ಯದರ್ಶಿಯವರು.

ಮಲ್ಲಿಕಾರ್ಜುನ ಎಂ. ಖರ್ಗೆ,
ಕಂದಾಯ ಮತ್ತು ಗ್ರಾಮೀಣ ಅಭಿವೃದ್ಧಿ
ಮತ್ತು ಪಂಚಾಯತ್ ರಾಜ್ ಸಚಿವರು.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತುತ ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಸರ್ಕಾರಕ್ಕೆ ಹೆಚ್ಚಿನ ವೆಚ್ಚ ತಗಲುವುದಿಲ್ಲ.

ಅನುಬಂಧ

XXXX

ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧ರ ಉದ್ಧೃತ ಭಾಗದ (೧೯೬೨ರ ಕರ್ನಾಟಕ ಅಧಿನಿಯಮ ೧೦)

೭೭. ಹೆಚ್ಚುವರಿ ಭೂಮಿಯ ವಿಲೇವಾರಿ:- (೧) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಹೆಚ್ಚುವರಿ ಭೂಮಿಯನ್ನು ೪೫ನೇ ಪ್ರಕರಣದ (೩)ನೇ ಒಳಪ್ರಕರಣದ, ೫೮, ೫೦, ೬೦ನೇ ಪ್ರಕರಣಗಳ ಮೇರೆಗೆ ವಿಲೇವಾರಿ ಮಾಡಬೇಕೆಂದು ನಿರ್ದೇಶಿಸಲ್ಪಟ್ಟ ಭೂಮಿಯನ್ನು ೭೯ಕ, ೭೯ಖ, ಅಥವಾ ಈ ಅಧಿನಿಯಮದ ಇತರ ಯಾವುದೇ

ಉಪಬಂಧಗಳ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಯನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ತಂಡದ ವ್ಯಕ್ತಿಗಳಿಗೆ ಕೊಡುವ ಸಲುವಾಗಿ ಅದರ ಶೇಕಡಾ ಐವತ್ತರಷ್ಟನ್ನು ಮೀಸಲಾಗಿಟ್ಟು, ಮತ್ತು ಈ ಬಗ್ಗೆ ನಿಯಮಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಈ ಕೆಳಗೆ ಸೂಚಿಸಿದ ವಿಸ್ತೀರ್ಣ ಮತ್ತು ಆದ್ಯತೆಯ ಕ್ರಮದಲ್ಲಿ ಈ ಕೆಳಕಂಡ ವ್ಯಕ್ತಿಗಳಿಗೆ ನ್ಯಾಯಾಧೀಕರಣವು ಕೊಡಬಹುದು.

(i) ಗೇಣಿದಾರಿಕೆ ಕಳೆದುಕೊಂಡ ಭೂಮಿಯಿಲ್ಲವವರಿಗೆ ಪ್ರತಿಯೊಬ್ಬರಿಗೂ ಒಂದು ಘಟಕಕ್ಕೆ ಕಡಿಮೆಯಿಲ್ಲದಷ್ಟು.

(ii) ಭೂಮಿಯಿಲ್ಲದ ಕೃಷಿ ಕಾರ್ಮಿಕರಿಗೆ ಪ್ರತಿಯೊಬ್ಬರಿಗೂ ಒಂದು ಘಟಕಕ್ಕೆ ಕಡಿಮೆಯಿಲ್ಲದಷ್ಟು

(iii) ಎರಡು ಸಾವಿರ ರೂಪಾಯಿಗಳಿಗೆ ಮೀರದ ಒಟ್ಟು ವಾರ್ಷಿಕ ವರಮಾನವುಳ್ಳ ಮಾಜಿ ಸೈನಿಕ ವರ್ಗದವರನ್ನೊಳಗೊಂಡು ಭೂಮಿಯಿಲ್ಲದ ವ್ಯಕ್ತಿಗಳಿಗೆ ಪ್ರತಿಯೊಬ್ಬರಿಗೂ ಒಂದು ಘಟಕಕ್ಕೆ ಕಡಿಮೆಯಿಲ್ಲದಷ್ಟು.

(iv) ಅದೇ ತಾಲ್ಲೂಕಿನ ಅಥವಾ ಪಕ್ಕದ ತಾಲ್ಲೂಕಿನ ಗ್ರಾಮಗಳಲ್ಲಿ ವಾಸವಾಗಿರುವ ಮತ್ತು ಒಂದು ಘಟಕಕ್ಕೆ ಕಡಿಮೆ ಭೂಮಿಯಿರುವ ಮತ್ತು ಸಾವಿರ ರೂಪಾಯಿಗಳಿಗೆ ಮೀರದ ಒಟ್ಟು ವಾರ್ಷಿಕ ವರಮಾನವುಳ್ಳ ಇತರ ವ್ಯಕ್ತಿಗಳು. - ಒಂದು ಘಟಕವಾಗಲು ಆವಶ್ಯವಿರುವಷ್ಟು.

ಪರಂತು, ಈ ಪ್ರಕರಣದ ಮೇರೆಗೆ ಭೂಮಿಯನ್ನು ಕೊಡುವಾಗ, ಭೂಮಿಯು ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವುದಕ್ಕೆ, ನಿಕಟ ಪೂರ್ವದಲ್ಲಿ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ ಮತ್ತು ಈ ಪ್ರಕರಣದ ಮೇರೆಗೆ ಹಂಚಿಕೊಡಬಹುದಾದ ಭೂಮಿಯನ್ನು ಹೊಂದಲು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಪ್ರತಿಬಂಧಿಸಲ್ಪಟ್ಟಿರದ ಗೇಣಿದಾರನಿಗೆ, ಒಳಗೇಣಿದಾರನಿಗೆ ಅಥವಾ ಇತರ ವ್ಯಕ್ತಿಗಳಿಗೆ ನ್ಯಾಯಾಧೀಕರಣವು ಆದ್ಯತೆಯನ್ನು ಕೊಡತಕ್ಕದ್ದು ಮತ್ತು ಹಾಗೆ ಭೂಮಿಯನ್ನು ಪಡೆದವನು ನೋಂದಾಯಿತ ಅಧಿಭೋಗದಾರನಾಗಿ ಅಂಥ ಭೂಮಿಯನ್ನು ಹೊಂದತಕ್ಕುದು.

ಮತ್ತು ಪರಂತು, ಮಾಜಿ ಸೈನಿಕ ವರ್ಗದವರನ್ನು ಬಿಟ್ಟು (೧) (೨) ಮತ್ತು (೩) ಬಾಬುಗಳಲ್ಲಿ ಪ್ರತಿಯೊಂದರಲ್ಲೂ ನಮೂದಿಸಿದ ವ್ಯಕ್ತಿಗಳೊಳಗೆ, ಭೂಮಿಯು ಇರುವ ಗ್ರಾಮದಲ್ಲಿ ವಾಸಿಸುವ ವ್ಯಕ್ತಿಗಳಿಗೆ, ಇತರರ ಮೇಲೆ ಆದ್ಯತೆಯನ್ನು ಕೊಡತಕ್ಕುದ್ದು.

ವಿವರಣೆ:- ಗೇಣಿದಾರಿಕೆ ಕಳೆದುಕೊಂಡ ಗೇಣಿದಾರ ಎಂದರೆ, ತಾನು ಗೇಣಿದಾರನಾಗಿದ್ದ ಕೃಷಿ ಭೂಮಿಯನ್ನು,-

(೧) ಭೂ ಅರ್ಜನೆ ಅಧಿನಿಯಮದ ಮೇರೆಗೆ ಅಂಥ ಭೂಮಿಯನ್ನು ಆರ್ಜಿಸಿದ್ದರಿಂದ ಅಥವಾ

(೨) ಸ್ವಂತ ಸಾಗುವಳಿಗಾಗಿ ಅಂತಹ ಭೂಮಿಯನ್ನು ಸೈನಿಕರು ಅಥವಾ ನಾವಿಕನು ಪುನಃ ಪ್ರಾಪ್ತ ಮಾಡಿಕೊಂಡುದರಿಂದ ಕಳೆದುಕೊಂಡ ವ್ಯಕ್ತಿ.

(೨) ಅನುಸೂಚಿತ ಜಾತಿ ಮತ್ತು ಅನುಸೂಚಿತ ತಂಡಗಳ ವ್ಯಕ್ತಿಗಳಿಗಾಗಿ ಮೀಸಲಿಟ್ಟ ಭೂಮಿಯನ್ನು ಕೊಡುವುದು (೧)ನೇ ಒಳಪ್ರಕರಣದಲ್ಲಿ ಸೂಚಿಸಿದ ವಿಸ್ತೀರ್ಣ ಮತ್ತು ಆದ್ಯತೆಯ ಕ್ರಮಕ್ಕೆ ಒಳಪಟ್ಟಿರತಕ್ಕದ್ದು.

(೩) (೧)ನೇ ಒಳಪ್ರಕರಣದಲ್ಲಿ ಏನೇ ಇದ್ದರೂ, ರಾಜ್ಯ ಸರ್ಕಾರವು ತನ್ನಲ್ಲಿ ನಿಹಿತವಾಗಿರುವ ಯಾವುದೇ ಭೂಮಿಯು ಯಾವುದೇ ಸಾರ್ವಜನಿಕ ಉದ್ದೇಶಕ್ಕೆ ಅಗತ್ಯವೆಂದು ಪರಿಗಣಿಸಿದರೆ, ಅಂತಹ ಭೂಮಿಯನ್ನು ಅಂತಹ ಉದ್ದೇಶಕ್ಕಾಗಿ ಮೀಸಲಾಗಿಡಬಹುದು.

<u>ಬೇಸಾಯದ ಭೂಮಿಗಳನ್ನು ಹೊಂದಲು ಅಥವಾ ವರ್ಗಾವಣೆ ಮಾಡಲು ನಿಬಂಧನೆಗಳು</u>

<u>೭೯(ಎ) ಕೆಲವು ವ್ಯಕ್ತಿಗಳು ಭೂಮಿಯನ್ನು ಆರ್ಜಿಸಲು ನಿಷೇಧ:</u>- ತಿದ್ದುಪಡಿ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ಅಂದಿನಿಂದ ಬೇಸಾಯ ಭೂಮಿಗಳಿಂದಲ್ಲದ ಇತರ ಮೂಲಗಳಿಂದ ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದಷ್ಟು ಖಚಿತ ವಾರ್ಷಿಕ ವರಮಾನವಿರುವ ಒಬ್ಬ ವ್ಯಕ್ತಿಗೆ ಅಥವಾ ಒಂದು ಕುಟುಂಬಕ್ಕೆ ಅಥವಾ ಒಂದು ಅವಿಭಕ್ತ ಕುಟುಂಬಕ್ಕೆ ಭೂ ಒಡೆಯ, ಭೂ ಮಾಲೀಕ, ಗೇಣಿದಾರ ಅಥವಾ ಭೋಗ್ಯದಾರನಾಗಿ ಅಥವಾ ಅನ್ಯಥಾ ಅಥವಾ ಭಾಗಶಃ ಒಂದು ರೂಪದಲ್ಲಿ ಮತ್ತು ಭಾಗಶಃ ಬೇರೊಂದು ರೂಪದಲ್ಲಿ ಯಾವುದೇ ಭೂಮಿಯನ್ನು ಆರ್ಜಿಸುವ ಹಕ್ಕಿರತಕ್ಕದಲ್ಲ.

(೨) (೧)ನೇ ಒಳಪ್ರಕರಣದ ಉದ್ದೇಶಗಳಿಗಾಗಿ,

(೧) ಬೇಸಾಯ ಭೂಮಿಯಿಂದಲ್ಲದ ಇತರ ಮೂಲಗಳಿಂದ ಬಂದ ಒಂದು ಕುಟುಂಬ ಅಥವಾ ಒಂದು ಅವಿಭಕ್ತ ಕುಟುಂಬದಲ್ಲಿರುವ ಎಲ್ಲರ ಆದಾಯವು ಸಂದರ್ಭಾನುಸಾರ ಆ ಕುಟುಂಬ ಅಥವಾ ಆ ಅವಿಭಕ್ತ ಕುಟುಂಬಕ್ಕೆ ಅಂಥ ಮೂಲಗಳಿಂದ ಬಂದ ಆದಾಯವೆಂದು ಪರಿಗಣಿತವಾಗತಕ್ಕದು.

(೨) ಬೇಸಾಯ ಭೂಮಿಯಿಂದಲ್ಲದ ಇತರ ಮೂಲಗಳಿಂದ ಒಬ್ಬ ವ್ಯಕ್ತಿ ಅಥವಾ ಕುಟುಂಬ ಅಥವಾ ಅವಿಭಕ್ತ ಕುಟುಂಬವು ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದಷ್ಟು ಸರಾಸರಿ ವಾರ್ಷಿಕ ವರಮಾನವನ್ನು ಯಾವುದೇ ದಿನದಂದು, ಅಂಥ ದಿನಕ್ಕೆ ಹಿಂದಿನ ನಿರಂತರ ಐದು ವರ್ಷಗಳ ಅವಧಿಯಲ್ಲಿ ಹೊಂದಿದ್ದರೆ. ಅಂಥ ವ್ಯಕ್ತಿ ಅಥವಾ ಕುಟುಂಬ ಅಥವಾ ಅವಿಭಕ್ತ ಕುಟುಂಬವು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಖಚಿತ ವಾರ್ಷಿಕ ವರಮಾನವನ್ನು ಅಂಥ ಮೂಲಗಳಿಂದ ಹೊಂದಿದೆಯೆಂದು ಭಾವಿಸತಕ್ಕದು.

<u>ವಿವರಣೆ</u> - ನಿರಂತರ ಐದು ವರ್ಷಗಳ ಕಾಲ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಒಟ್ಟು ವಾರ್ಷಿಕ ವರಮಾನದ ಮೇಲೆ ವರಮಾನ ತೆರಿಗೆ ಅಧಿನಿಯಮ ೧೯೬೧ರ (೧೯೬೧ರ ೪೩ನೇ ಕೇಂದ್ರಾಧಿನಿಯಮದ) ಮೇರೆಗೆ ಒಬ್ಬ ವ್ಯಕ್ತಿಗೆ ಅಥವಾ ಅವಿಭಕ್ತ ಕುಟುಂಬಕ್ಕೆ ವರಮಾನ ತೆರಿಗೆಯನ್ನು ನಿರ್ಧರಿಸಲಾಗಿದ್ದರೆ, ಅವರಿಗೆ ಬೇಸಾಯ ಭೂಮಿಗಳಿಂದಲ್ಲದೆ ಇತರ ಮೂಲಗಳಿಂದ ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದ ಸರಾಸರಿ ವಾರ್ಷಿಕ ವರಮಾನವಿರುವುದೆಂದು ಭಾವಿಸತಕ್ಕದು.

(೩) ವಾರಸುದಾರಿಕೆ ಅಥವಾ ಮರಣಶಾಸನದಿಂದಲ್ಲದೆ ಅನ್ಯಥಾ ಈ ಪ್ರಕರಣವನ್ನು ಉಲ್ಲಂಘಿಸಿ ಮಾಡಿದ ಪ್ರತಿಯೊಂದು ಭೂ ಆರ್ಜನೆಯು ಶೂನ್ಯವಾಗತಕ್ಕುದು.

(೪) ಯಾವನೇ ವ್ಯಕ್ತಿಯ (೧)ನೇ ಒಳಪ್ರಕರಣವನ್ನು ಉಲ್ಲಂಘಿಸಿ ಭೂಮಿಯನ್ನು ಆರ್ಜಿಸಿದಲ್ಲಿ ಅಥವಾ ಮರಣ ಶಾಸನ ಅಥವಾ ವಾರಸುದಾರಿಕೆಯಿಂದ ಅದನ್ನು ಆರ್ಜಿಸಿದಲ್ಲಿ ಅವನು ಅರ್ಜಿಯ ದಿನಾಂಕದಿಂದ ತೊಂಭತ್ತು ದಿನಗಳೊಳಗಾಗಿ, ಆರ್ಜಿಸಿದ ಭೂಮಿಯ ಅಥವಾ ಅದರ ಹೆಚ್ಚಿನ ಭಾಗವು ಇರುವ ತಾಲ್ಲೂಕಿನ ಮೇಲೆ ಅಧಿಕಾರ ವ್ಯಾಪ್ತಿಯನ್ನುಳ್ಳ, ತಹಸೀಲ್ದಾರನಿಗೆ ಈ ಕೆಳಕಂಡ ವಿವರಗಳುಳ್ಳ ಒಂದು ಘೋಷಣೆಯನ್ನು ಸಲ್ಲಿಸತಕ್ಕದ್ದು. ಎಂದರೆ:-

೧) ಎಲ್ಲ ಭೂಮಿಗಳ ವಿವರಗಳು.

೨) ತನ್ನ ಅಥವಾ ಕುಟುಂಬದ ಸರಾಸರಿ ವಾರ್ಷಿಕ ಆದಾಯ.

೩) ನಿಯಮಿಸಬಹುದಾದಂಥ ಇತರ ವಿವರಗಳು.

೫) (೪)ನೇ ಒಳಪ್ರಕರಣದ ಮೇರೆಗಿನ ಘೋಷಣೆಯು ತಲುಪಿದ ಬಳಿಕ ಮತ್ತು ನಿಯಮಿಸಬಹುದಾದಂಥ ವಿಚಾರಣೆಯ ನಂತರ, ತಹಸೀಲ್ದಾರನು ಅಂಥ ಭೂಮಿಗೆ ಸಂಬಂಧಿಸಿದ ನಿಯಮಿಸಲಾದ ವಿವರಗಳನ್ನೊಳಗೊಂಡ ಹೇಳಿಕೆಯನ್ನು ಡೆಪ್ಯುಟಿ ಕಮೀಷನರಿಗೆ ಕಳುಹಿಸಿಕೊಡತಕ್ಕುದು ಮತ್ತು ಅವನು ಅಧಿಸೂಚನೆ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದ ದಿನಾಂಕದಿಂದ ಅಂಥ ಭೂಮಿಯು ಎಲ್ಲ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟಿದೆಯೆಂದು ಮತ್ತು ಅದರಲ್ಲಿ ನಿಹಿತವಾಗಿದೆಯೆಂದು ಘೋಷಿಸತಕ್ಕುದು. ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಡೆಪ್ಯೂಟಿ ಕಮಿಷನರರನ್ನು ಭೂಮಿಯನ್ನು ನಿಯಮಿಸಬಹುದಾದಂಥ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು.

(೬) ಮರಣಶಾಸನ ಅಥವಾ ವಾರಸುಧಾರಿಕೆಯ ಮೂಲಕ ಭೂಮಿಯ ಆರ್ಜನೆಯಾಗಿರುವಲ್ಲಿ. (೪)ನೇ ಒಳಪ್ರಕರಣದ ಮೇರೆಗೆ ರಾಜ್ಯಸರ್ಕಾರದಲ್ಲಿ ನಿಹಿತವಾಗುವ ಭೂಮಿಯ ಬಗ್ಗೆ ೭೭ನೇ ಪ್ರಕರಣದಲ್ಲಿ ಉಲ್ಲೇಖಿಸಿರುವಂತೆ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಆ ಆರ್ಜನೆಯು ಮರಣಶಾಸನ ಅಥವಾ ವಾರಸುದಾರಿಕೆಯ ಮೂಲಕವಲ್ಲದೆ ಅನ್ಯಥಾ ಆಗಿರುವಲ್ಲಿ, ಅಂಥ ಮೊಬಲಗಿನ ಶೇಕಡಾ ಐವತ್ತರಷ್ಟನ್ನು ಮಾತ್ರ ಸಂದಾಯ ಮಾಡತಕ್ಕುದು.

<u>೭೯ಖ ಕೆಲವು ವ್ಯಕ್ತಿಗಳು ಬೇಸಾಯ ಭೂಮಿಯನ್ನು ಹೊಂದಲು ನಿಷೇಧ</u>:-

(೧) ತಿದ್ದುಪಡಿ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಮತ್ತು ಅಂದಿನಿಂದ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು -

ಎ) ಭೂಮಿಯನ್ನು ಸ್ವಂತ ಸಾಗುವಳಿ ಮಾಡುವ ವ್ಯಕ್ತಿಯ ಹೊರತಾಗಿ ಇತರ ಯಾವನೇ ವ್ಯಕ್ತಿಗೆ ಭೂಮಿಯನ್ನು ಹೊಂದುವ ಹಕ್ಕಿರತಕ್ಕುದಲ್ಲ ಮತ್ತು

ಬಿ) (೧) ಸ್ವತ್ತನ್ನು ಹೊಂದಲು ಸಾಮರ್ಥ್ಯವವುಳ್ಳ ೬೩ನೇ ಪ್ರಕರಣದ (೭)ನೇ ಒಳಪ್ರಕರಣದಲ್ಲಿ ಉಲ್ಲೇಖಿತವಾದ ಸಂಸ್ಥೆ ಅಥವಾ ಸಂಘ ಅಥವಾ ನ್ಯಾಸದ ಹೊರತು ಇತರ

ಶೈಕ್ಷಣಿಕ, ಮತೀಯ ಅಥವಾ ಧಾರ್ಮಿಕ ಸಂಸ್ಥೆ ಅಥವಾ ಸಂಘ ಅಥವಾ ನ್ಯಾಸವು-

(೨) ಕಂಪನಿಯು

(೩) ಸಂಸ್ಥೆ ಅಥವಾ ಅವಿಭಕ್ತ ಕುಟುಂಬದವರಲ್ಲದ ವ್ಯಕ್ತಿಗಳ ಇತರ ನಿಕಾಯ ಅದು ನಿಗಮಿತವಾಗಿರಲಿ ಅಥವಾ ಆಗದಿರಲಿ ಅಥವಾ

(೪) ಸಹಕಾರಿ ಬೇಸಾಯ ಕ್ಷೇತ್ರವಲ್ಲದ ಸಹಕಾರಿ ಸಂಘ, ಇವುಗಳು ಭೂಮಿಯನ್ನು ಹೊಂದುದು ವಿಧಿ ಬದ್ಧವಾಗಿರತಕ್ಕುದಲ್ಲ.

(೨) (ಎ) ತಿದ್ದುಪಡಿ ಅಧಿನಿಯಮದ ಪ್ರಾರಂಭ ದಿನಾಂಕದಂದು ಭೂಮಿಗಳನ್ನು ಹೊಂದಿರುವ ಮತ್ತು (೧)ನೇ ಒಳಪ್ರಕರಣದ ಮೇರೆಗೆ ಭೂಮಿಗಳನ್ನು ಹೊಂದುವ ಹಕ್ಕಿಲ್ಲದ ಪ್ರತಿಯೊಂದು ಸಂಸ್ಥೆ, ಸಂಘ, ನ್ಯಾಸ, ಕಂಪನಿ, ಕೂಟ, ನಿಕಾಯ ಅಥವಾ ಸಹಕಾರಿ ಸಂಘವು ಸದರಿ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಂಥ ಭೂಮಿಯು ಹೆಚ್ಚಿನ ಭಾಗವು ಯಾವ ತಹಸೀಲ್ದಾರನ ಅಧಿಕಾರ ವ್ಯಾಪ್ತಿಯಲ್ಲಿ ಇರುತ್ತದೋ ಆ ತಹಸೀಲ್ದಾರನಿಗೆ ಅಂಥ ಭೂಮಿಯ ವಿವರಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡು ಘೋಷಣೆಯನ್ನು ಸಲ್ಲಿಸತಕ್ಕದು ಮತ್ತು:

(ಬಿ) ಸದರಿ ದಿನಾಂಕದ ತರುವಾಯ ಅಂಥ ಭೂಮಿಯನ್ನು ಆರ್ಜಿಸುವ ಪ್ರತಿಯೊಂದು ಸಂಸ್ಥೆ, ಸಂಘ, ನ್ಯಾಸ, ಕೂಟ, ನಿಕಾಯ ಅಥವಾ ಸಹಕಾರಿ ಸಂಘವು ಅದೇ ರೀತಿಯ ಘೋಷಣೆಯನ್ನು ನಿಯಮಿಸಲಾದ ಅವಧಿಯೊಳಗೆ ಸಲ್ಲಿಸತಕ್ಕುದು.

(೩) (೨)ನೇ ಒಳ ಪ್ರಕರಣದ ಮೇರೆಗಿನ ಘೋಷಣೆಯು ತಲುಪಿದ ಬಳಿಕ ಮತ್ತು ನಿಯಮಿಸಬಹುದಾದಂತಹ ವಿಚಾರಣೆಯ ನಂತರ ತಹಸೀಲ್ದಾರನು ಅಂಥ ಭೂಮಿಗೆ ಸಂಬಂಧಿಸಿದ ನಿಯಮಿಸಲಾದ ವಿವರಗಳನ್ನೊಳಗೊಂಡ ಹೇಳಿಕೆಯನ್ನು ಡೆಪ್ಯುಟಿ ಕಮೀಷನರಿಗೆ ಕಳುಹಿಸತಕ್ಕದು. ಮತ್ತು ಅವನು ಅಂಥ ಭೂಮಿಯ ಎಲ್ಲ ಪೂರ್ವಾದಿಗಳಿಂದ ವಿಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕುದೆಂಬು ಅಧಿಸೂಚನೆಯ ಮೂಲಕ ಘೋಷಿಸತಕ್ಕದು ಮತ್ತು ನಿಯಮಿಸಲಾದ ರೀತಿಯಲ್ಲಿ ಅದರ ಸ್ವಾಧೀನವನ್ನು ತೆಗೆದುಕೊಳ್ಳತಕ್ಕುದು.

(೪) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಭೂಮಿಯ ಸಂಬಂಧದಲ್ಲಿ ೭೨ನೆಯ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಮೊಬಲಗನ್ನು ಸಂದಾಯ ಮಾಡತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ ಸಂಸ್ಥೆ, ನ್ಯಾಸ, ಕಂಪನಿ, ಕೂಟ ಅಥವಾ ನಿಕಾಯ ಇವುಗಳ ಪರವಾಗಿ ಒಬ್ಬ ವ್ಯಕ್ತಿಯು ಭೂಮಿಯನ್ನು ಹೊಂದಿರುವಲ್ಲಿ, ಆ ಭೂಮಿಯನ್ನು ಅವು ಹೊಂದಿರುವುದೆಂದು ಪೂರ್ವಭಾವನೆ ಮಾಡತಕ್ಕುದು.

೮೦ (೧) ಬೇಸಾಯಗಾರರಲ್ಲದವರಿಗೆ ವರ್ಗಾವಣೆಯ ನಿಷೇಧ:-

(೧) ಬೇಸಾಯಗಾರನಲ್ಲದಿರುವ; ಅಥವಾ

(೨) ಬೇಸಾಯಗಾರನಾಗಿದ್ದು ೬೩ ಅಥವಾ ೬೪ನೇ ಪ್ರಕರಣದಲ್ಲಿ ಉಲ್ಲೇಖಿಸಿರುವ ಪರಿಮಿತಿಗಳನ್ನು

ಮೀರುವ ಭೂಮಿಯನ್ನು ಒಡೆಯನಾಗಿ ಅಥವಾ ಗೇಣಿದಾರನಾಗಿ ಅಥವಾ ಭಾಗಶಃ ಒಡೆಯನಾಗಿ ಮತ್ತು ಭಾಗಶಃ ಗೇಣಿದಾರನಾಗಿ ಹೊಂದಿರುವ, ಅಥವಾ

(ಕ) ಕೃಷಿ ಕಾರ್ಮಿಕನಾಗಿರದ; ಅಥವಾ

(ಳ) ೭೯ಕ ಅಥವಾ ೭೯ಖ ಪ್ರಕರಣದ ಮೇರೆಗೆ ಯಾವುದೇ ಭೂಮಿಯನ್ನು ಅರ್ಜಿಸಲು ಅಥವಾ ಹೊಂದಲು ಹಕ್ಕಿಲ್ಲದ;

ವ್ಯಕ್ತಿಗೆ ಮಾಡಿದ

(ಎ) ಯಾವುದೇ ಭೂಮಿಯ ಅಥವಾ ಅದರಲ್ಲಿರುವ ಯಾವುದೇ ಹಿತಾಸಕ್ತಿಯ ಯಾವುದೇ ಮಾರಾಟ ಸಿವಿಲ್ ನ್ಯಾಯಾಲಯದ ಡಿಕ್ರಿಯು ಜಾರಿ ಕ್ರಮದಲ್ಲಿ ಅಥವಾ ಭೂ ಕಂದಾಯದ ಬಾಕಿಯ ವಸೂಲಿ ಅಥವಾ ಭೂಕಂದಾಯದ ಬಾಕಿಗಳಂತೆ ವಸೂಲೀಯವಾದ ಮೊಬಲಗಿಗಾಗಿ ಮಾಡುವ ಮಾರಾಟಗಳನ್ನು ಒಳಗೊಂಡು, ದಾನ ಅಥವಾ ವಿನಿಮಯ ಅಥವಾ ಗುತ್ತಿಗೆಯು, ಅಥವಾ

(ಬಿ) ಅಡಮಾನ ಮಾಡಲಾದ ಸ್ವತ್ತಿನ ಸ್ವಾಧೀನವನ್ನು ಭೋಗ್ಯದಾರನಿಗೆ ಒಪ್ಪಿಸಲಾಗಿದ್ದರೆ ಆ ಯಾವುದೇ ಭೂಮಿಯ ಅಥವಾ ಅದರಲ್ಲಿನ ಹಿತಾಸಕ್ತಿಯ ಯಾವ ಅಡಮಾನವೂ ವಿಧಿಮಾನ್ಯವಾಗತಕ್ಕುದಲ್ಲ.

ಪರಂತು, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ಅಸಿಸ್ಟೆಂಟ್ ಕಮೀಷನರು ಅಥವಾ ಈ ಬಗ್ಗೆ ರಾಜ್ಯ ಸರ್ಕಾರದಿಂದ ಯಾವುದೇ ಪ್ರದೇಶ ಸಂಬಂಧದಲ್ಲಿ ಪ್ರಾಧಿಕೃತನಾದ ಅಸಿಸ್ಟೆಂಟ್ ಕಮೀಷನರ್‌ಗಿಂತ ಕಡಿಮೆ ದರ್ಜೆಯವನಲ್ಲದ ಯಾವನೇ ಅಧಿಕಾರಿಯು ೭೯ಕ ಅಥವಾ ೭೯ಖ ಪ್ರಕರಣದ ಮೇರೆಗೆ ಭೂಮಿಯನ್ನು ಅರ್ಜಿಸಲು ಅಥವಾ ಹೊಂದಲು ಹಕ್ಕಿಲ್ಲದ ವ್ಯಕ್ತಿಯನ್ನು ಹೊರತುಪಡಿಸಿ ಬೇಸಾಯವನ್ನು ಕೈಗೊಳ್ಳಬೇಕೆಂದು ಸದ್ಭಾವನೆಯಿಂದ ಉದ್ದೇಶಿಸಿರುವ ಇತರ ವ್ಯಕ್ತಿಗೆ ಭೂಮಿಯನ್ನು ಅರ್ಜಿಸಲು ಅಥವಾ ಹೊಂದಲು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಅಂಥ ಮಾರಾಟ, ದಾನ, ಅಥವಾ ವಿನಿಮಯ ಮಾಡಲು ನಿಯಮಿಸಬಹುದಾದಂತಹ ಷರತ್ತುಗಳ ಜೊತೆಗೆ ಈ ಕೆಳಗಿನ ಷರತ್ತುಗಳ ಮೇರೆಗೆ ಅನುಮತಿಯನ್ನು ಕೊಡಬಹುದು ಎಂದರೆ:-

(೧) ವರ್ಗಾವಣೆ ಪಡೆದವನು ಆ ಭೂಮಿಯನ್ನು ಅರ್ಜಿಸಿದ ದಿನಾಂಕದಿಂದ ಒಂದು ವರ್ಷದೊಳಗಾಗಿ ಬೇಸಾಯವನ್ನು ಕೈಕೊಳ್ಳಬೇಕು; ಮತ್ತು

(೨) ವರ್ಗಾವಣೆ ಪಡೆದವನು ಬೇಸಾಯವನ್ನು ಐದು ವರ್ಷದೊಳಗಾಗಿ ಬಿಟ್ಟರೆ ಆ ಭೂಮಿಯ ನಿವ್ವಳ ವಾರ್ಷಿಕ ವರಮಾನದ ಎಂಟರಷ್ಟು ಮೊಬಲಿಗೆ ಸರಿಸಮನಾದ ಮೊಬಲಗನ್ನು ಅಥವಾ ಭೂಮಿಯನ್ನು ಕೊಂಡು ಕೊಂಡಿರುವ ಸಂದರ್ಭದಲ್ಲಿ, ಭೂಮಿಗಾಗಿ ಸಂದಾಯ ಮಾಡಿದ ಬೆಲೆಯು ಆ ಭೂಮಿಯ ನಿವ್ವಳ ವಾರ್ಷಿಕ ವರಮಾನದ ಎಂಟರಷ್ಟಕ್ಕಿಂತ ಕಡಿಮೆ ಇದ್ದಲ್ಲಿ ಅದನ್ನು ಆತನಿಗೆ ಸಂದಾಯ ಮಾಡಬೇಕೆಂಬುದಕ್ಕೆ ಒಳಪಟ್ಟು, ಆ ಭೂಮಿಯು ಸರ್ಕಾರದಲ್ಲಿ ನಿಹಿತವಾಗತಕ್ಕದು.

(೨) (೧)ನೇ ಒಳಪ್ರಕರಣದಲ್ಲಿರುವುದು ಯಾವುದೂ ೭೭ನೇ ಪ್ರಕರಣದ ಮೇರೆಗೆ

ಕೊಡಲಾದ ಭೂಮಿಗಳಿಗೆ ಅನ್ವಯಿಸತಕ್ಕದ್ದಲ್ಲ.

XXXXXXX

೧೦. ಕೆಲವು ಭೂಮಿಗಳಿಗೆ ಕೆಲವು ಉಪಬಂಧಗಳಿಂದ ವಿನಾಯಿತಿ:- ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನೆ ಅಧಿನಿಯಮ ೧೯೬೧ರ (೧೯೬೩ರ ೧೧ನೇ ಕರ್ನಾಟಕ ಅಧಿನಿಯಮ) ಉಪಬಂಧಗಳಿಗೊಳಪಟ್ಟು, ಯಾವುದೇ ಪ್ರದೇಶದಲ್ಲಿರುವ ನಗರ ಬೇಸಾಯೇತರ ಅಥವಾ ಕೈಗಾರಿಕಾ ಅಭಿವೃದ್ಧಿಗಾಗಿ ಉಪಯೋಗಿಸಲಾಗುವ ಭೂಮಿಗಳಿಗೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ೮೦ನೇ ಪ್ರಕರಣದ ಉಪಬಂಧಗಳಿಂದ ವಿನಾಯಿತಿ ಕೊಡಬಹುದು.

XXXXXXX

೧೨೨ಕ ನ್ಯಾಯಾಧೀಕರಣದಿಂದ ಪುನರವಲೋಕನ:- ನ್ಯಾಯಾಧೀಕರಣವು ತಾನಾಗಿಯೇ ಅಥವಾ ಅನ್ಯಥಾ, ಅಗತ್ಯವೆಂದು ತಾನು ಪರಿಗಣಿಸುವ ಅಂಥ ವಿಚಾರಣೆಯ ತರುವಾಯ, ೬೭ನೇ ಪ್ರಕರಣ (೧)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಆದೇಶವು ಮೋಸ, ತಪ್ಪು ನಿರೂಪಣೆ ಅಥವಾ ವಾಸ್ತವಾಂಶಗಳ ಹತ್ತಿಕ್ಕುವಿಕೆ, ಅಥವಾ ಸುಳ್ಳು ತಪ್ಪು, ಅಪೂರ್ಣ ಘೋಷಣೆ ನೀಡಿ ಪಡೆಯಲಾಗಿದೆಯೆಂದು ಮನದಟ್ಟು ಮಾಡಿಕೊಂಡಿದ್ದರೆ, ಅದು, ಅಂಥ ಆದೇಶದ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ಅಥವಾ ೧೯೮೪ರ ೩೦ನೇ ದಿನಾಂಕದೊಳಗಾಗಿ ಇದರಲ್ಲಿ ಯಾವುದು ತರುವಾಯವೋ ಆ ಅವಧಿಯೊಳಗೆ ಮೊಕದ್ದಮೆಯನ್ನು ಪುನಃ ಆರಂಭಿಸಬಹುದೆಂದು ಮತ್ತು ಅದಕ್ಕೆ ಸಂಬಂಧಿಸಿದಂತೆ, ತಾವು ಉಚಿತವೆಂದು ಭಾವಿಸುವ ಅಂಥಹ ಆದೇಶವನ್ನು ಹೊರಡಿಸಬಹುದು.

ಪರಂತು, ಅಂಥ ಯಾವುದೇ ಆದೇಶವನ್ನು ಅದರಿಂದ ಬಾಧಿತಗೊಳ್ಳುವ ಸಂಭವವಿರುವ ವ್ಯಕ್ತಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ತರುವಾಯದ ಹೊರತು ಮಾಡತಕ್ಕುದ್ದಲ್ಲ.

WD. 204/GTBPM-680 Copies - 6.11.94

PRINTED BY THE JOINT DIRECTOR,
AT THE GOVERNMENT TEXT BOOK PRESS, MYSORE.

KSA LIBRARY, B'lore
B020648
328.32402 548 LAD,1992
JJ48